

೭

ಜ್ಞಾನ ಗಂಗೋತ್ರಿ

ಭಾರತದ ಕಥೆ






AZAD
HIND
सत्यमेव जयते

Kamala Y.C.

ಜ್ಞಾನ ಗಂಗೋತ್ರಿ

ಕಿರಿಯರ ವಿಶ್ವಕೋಶ

ಸಂಪುಟ ಏಳು

ಭಾರತದ ಕಥೆ

ಬೆಂಗಳೂರು
೧೯೭೪

JNĀNA GANGŌTHRI Vol. VII, entitled Bharathada Kathe being the Seventh Volume of a 7-Volume Junior Encyclopædia in Kannada, published by the Karnataka Co-operative Publishing House Ltd., Bangalore. Editor-in-Chief: Niranjana. First Edition, 1974; pp. 730 + xvi + 21 colour plates. Printer: Director, Government Press, Bangalore.

ಬೆಲೆ: ಐವತ್ತು ರೂಪಾಯಿ

ಜ್ಞಾನ ಪ್ರಯೋಗಾಲಯ

'ಜ್ಞಾನ ಗಂಗೋತ್ರಿ'ಯ ಲೇಖನಗಳ ಒರೆಗಲ್ಲು ಪರೀಕ್ಷೆಗೆ ವ್ಯವಸ್ಥೆ
ಜಯನಗರ ಹೈಸ್ಕೂಲಿನ ಸಹಕಾರದೊಂದಿಗೆ

ಪ್ರಯೋಗಾಲಯದ ಸದಸ್ಯರು :

೮, ೯ ಮತ್ತು ೧೦ನೇ ತರಗತಿಗಳ

ವಿದ್ಯಾರ್ಥಿ ವಿದ್ಯಾರ್ಥಿನಿಯರು ಮತ್ತು ಅಧ್ಯಾಪಕರು

ಸಂಪಾದಕ ಮಂಡಲಿ

ಜ್ಞಾನ ಗಂಗೋತ್ರಿ

ಏಳು ಸಂಪುಟಗಳಲ್ಲಿ

ಸಂಪುಟ ೧

ಮನುಕುಲದ ಕಥೆ

ಗವಿಜೀವನದಿಂದ ಚಂದ್ರಯಾನದ ತನಕ :
ನಾಗರಿಕತೆಗಳು : ಧರ್ಮಗಳು : ತತ್ತ್ವಜ್ಞಾನಗಳು :
ರಾಜ್ಯಗಳ ಉದಯ : ರಾಜಕೀಯ ವ್ಯವಸ್ಥೆಗಳು :
ವ್ಯಾಪಾರ, ವಾಣಿಜ್ಯ, ಕೈಗಾರಿಕೆ : ಭೂಗೋಳ :
ಇತಿಹಾಸ ಪ್ರಸಿದ್ಧ ಸ್ತ್ರೀ–ಪುರುಷರು

ಸಂಪುಟ ೨

ಜೀವಜಗತ್ತು

ಸಸ್ಯವಿಜ್ಞಾನ : ಪ್ರಾಣಿವಿಜ್ಞಾನ : ಶರೀರವಿಜ್ಞಾನ :
ಮನೋವಿಜ್ಞಾನ : ವೈದ್ಯಿಕೆ : ಶಸ್ತ್ರಚಿಕಿತ್ಸೆ : ಕೃಷಿ :
ಮತ್ಸ್ಯೋದ್ಯಮ : ತೋಟಗಾರಿಕೆ : ವಿಖ್ಯಾತ
ಜೀವವಿಜ್ಞಾನಿಗಳು

ಸಂಪುಟ ೩

ಭೌತಜಗತ್ತು

ಭೌತವಿಜ್ಞಾನ : ರಸಾಯನವಿಜ್ಞಾನ: ಖಗೋಲವಿಜ್ಞಾನ :
ಗಣಿತ : ಭೂವಿಜ್ಞಾನ : ಪವನವಿಜ್ಞಾನ : ವ್ಯೋಮಯಾನ:
ಗ್ರಹಾಂತರಯಾನ : ಈ ಕ್ಷೇತ್ರಗಳ ಪ್ರಸಿದ್ಧ
ವಿಜ್ಞಾನಿಗಳು

ಸಂಪುಟ ೪

ಯಂತ್ರಜಗತ್ತು

ಎಂಜಿನಿಯರಿಂಗ್ –ಮಿಲಿಟರಿ, ಸಿವಿಲ್,
ಮೆಕ್ಯಾನಿಕಲ್, ಎಲೆಕ್ಟ್ರಿಕಲ್ : ತಾಂತ್ರಿಕತೆ :
ಘನ, ಲಘು ಮತ್ತು ಬೃಹತ್ ಪ್ರಮಾಣದ
ಕೈಗಾರಿಕೋದ್ಯಮಗಳು : ದೂರ
ಸಂಪರ್ಕ ಸಾಧನ : ಎಲೆಕ್ಟ್ರಾನಿಕ್ಸ್ :
ಈ ಕ್ಷೇತ್ರಗಳ ಕೀರ್ತಿಶಾಲಿಗಳು

ಸಂಪುಟ ೫

ಕಲೆ, ಸಾಹಿತ್ಯ

ನೃತ್ಯ, ಸಂಗೀತ, ನಾಟಕಕಲೆ, ಚಿತ್ರಕಲೆ,
ಶಿಲ್ಪಕಲೆ, ವಾಸ್ತುಶಿಲ್ಪ, ಸಾಹಿತ್ಯ –ಆರಂಭದ
ನಾಗರಿಕತೆಯಿಂದ ಆಧುನಿಕ ಅವಧಿಯತನಕ :
ಭಾರತೀಯ ಮತ್ತು ಗ್ರೀಕ್ ಮಹಾಕಾವ್ಯಗಳು :
ಕರ್ನಾಟಕದ, ಭಾರತದ, ವಿದೇಶಗಳ ಖ್ಯಾತ
ಸಾಹಿತಿಗಳು, ಕಲಾವಿದರು

ಸಂಪುಟ ೬

ಕ್ರೀಡೆ, ಮನೋಲ್ಲಾಸ

ಜಗತ್ತಿನ ಕ್ರೀಡೆಗಳು, ಆಟಗಳು :
ಶರೀರ ಶಿಕ್ಷಣ : ಪ್ರಸಿದ್ಧ ಕ್ರೀಡಾಪಟುಗಳು :
ಒಲಿಂಪಿಕ್ ವೀರರು : ಹವ್ಯಾಸಗಳು :
ಮನೋರಂಜನೆ

ಸಂಪುಟ ೭

ಭಾರತದ ಕಥೆ

ಚರಿತ್ರಪೂರ್ವ ಕಾಲಾವಧಿಯಿಂದ ಗಾಂಧೀಯುಗದ ತನಕ :
ಪ್ರವಾಸಿಗರು ಕಂಡ ಭಾರತ: ಪ್ರಾಚೀನ ಭಾರತದಲ್ಲಿ ವಿಜ್ಞಾನ,
ಸಾಹಿತ್ಯ : ಪುರಾಣ ವ್ಯಕ್ತಿಗಳು : ಧರ್ಮೋಪದೇಶಕರು :
ರಾಷ್ಟ್ರ ನಿರ್ಮಾಪಕರು : ಮಹಾನ್ ಆಡಳಿತಗಾರರು : ದಾಸ್ಯ–
ಸ್ವಾತಂತ್ರ್ಯ : ಭಾರತದ ಭೂಗೋಳ, ಕೃಷಿ, ಕೈಗಾರಿಕೋ-
ದ್ಯಮ : ಭಾರತ ಮತ್ತು ವ್ಯೋಮಯುಗ : ವಿವಿಧತೆಯಲ್ಲಿ ಏಕತೆ

ಈ ಸಂಪುಟದ ಸಮಾಲೋಚಕರು

ಸ್ವಾಮಿ ಆದಿದೇವಾನಂದ
ಅಧ್ಯಕ್ಷ
ಶ್ರೀ ರಾಮಕೃಷ್ಣ ಆಶ್ರಮ
ಬೆಂಗಳೂರು

ಡಾ. ಆ. ನೇ. ಉಪಾಧ್ಯೆ
ಮುಖ್ಯಸ್ಥ
ಜೈನಾಲಜಿ ಮತ್ತು ಪ್ರಾಕೃತ ವಿಭಾಗ
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು

ಡಾ. ಕೆ. ಬಿ. ರಾಮಕೃಷ್ಣರಾವ
ಪ್ರಾಧ್ಯಾಪಕ
ಹಿಂದು ತತ್ತ್ವಜ್ಞಾನ
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು

ಡಾ. ಬಿ. ವಿ. ಸುಬ್ಬರಾಯಪ್ಪ
ಕಾರ್ಯನಿರ್ವಾಹಕ ಕಾರ್ಯದರ್ಶಿ
ಇಂಡಿಯನ್ ನ್ಯಾಷನಲ್ ಸೈನ್ಸ್ ಅಕಾಡೆಮಿ
ನವದೆಹಲಿ

ಪ್ರೊ. ರಾಜಶೇಖರ ಭೂಸನೂರಮಠ
ಮುಖ್ಯಸ್ಥ
ಭೌತವಿಜ್ಞಾನ ವಿಭಾಗ
ಕರ್ನಾಟಕ ಕಾಲೇಜು
ಧಾರವಾಡ

ಚಿ. ನ. ಮಂಗಳ
ಪ್ರಿನ್ಸಿಪಾಲ್
ಎನ್. ಎಂ. ಕೆ. ಆರ್. ವಿ. ಮಹಿಳಾ ಕಾಲೇಜು
ಬೆಂಗಳೂರು

ಡಾ. ಷಡಕ್ಷರಪ್ಪ ಶೆಟ್ಟರ್
ಮುಖ್ಯಸ್ಥ
ಇತಿಹಾಸ ಮತ್ತು ಪುರಾತತ್ತ್ವ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ

ಡಾ. ಸೂರ್ಯನಾಥ ಕಾಮತ್
ಇತಿಹಾಸ ವಿಭಾಗ
ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು

ಪಾಟೀಲ ಪುಟ್ಟಪ್ಪ
ಸಂಪಾದಕ
‘ ಪ್ರಪಂಚ ’
ಹುಬ್ಬಳ್ಳಿ

ಖಾದ್ರಿ ಶಾಮಣ್ಣ
ಸುದ್ದಿ ಸಂಪಾದಕ
‘ ಪ್ರಜಾವಾಣಿ ’
ಬೆಂಗಳೂರು

ಬಿ. ವಿ. ಕೆ. ಶಾಸ್ತ್ರಿ
ಬೆಂಗಳೂರು

ಡಾ. ಬಾಲುರಾವ್
ಸಾಹಿತ್ಯ ಅಕಾದೆಮಿ
ನವದೆಹಲಿ

ಸಯ್ಯದ್ ಸಿರಾಜುಲ್ ಹಸನ್
ಸಹಕಾರ ಸಂಘಗಳ ಅಸಿಸ್ಟೆಂಟ್ ರೆಜಿಸ್ಟ್ರಾರ್
ಕರ್ನಾಟಕ ಸಹಕಾರೀ ಪ್ರಕಾಶನ ಮಂದಿರ
ಬೆಂಗಳೂರು

ಈ ಸಂಪುಟದ ಕೆಲವು ಲೇಖನಗಳನ್ನು/ಲೇಖನಗಳಿಗೆ ಮೂಲಸಾಹಿತ್ಯವನ್ನು ಒದಗಿಸಿದವರು

ಸಯ್ಯದ್ ಸಿರಾಜುಲ್ ಹಸನ್
ಬೆಂಗಳೂರು

ಡಾ. ಕುಂಜ ಬಿಹಾರಿ ದಾಸ್
ಕಟಕ್

ಪ್ರೊ. ಜೆ. ಎಲ್. ಕೌಲ್
ಬರ್ನ್‌ಪುರ

ಗುಲಾಬ್‌ದಾಸ್ ಬ್ರೋಕರ್
ಮುಂಬಯಿ

ವಿ. ಪೆರುಮಾಳ್
ಕೋಲಾರ ಚಿನ್ನದ ಗಣಿ

ಬಿ. ಸುಬ್ಬರಾಯನ್
ಮದರಾಸು

ಡಾ. ಆತಮ್‌ಜಿತ್‌ಸಿಂಗ್
ದೆಹಲಿ

ಡಾ. ಅಲೋಕ್‌ರಂಜನ್ ದಾಸಗುಪ್ತ
ಕಲ್ಕತ್ತಾ

ಚಿ. ನ. ಮಂಗಳ
ಬೆಂಗಳೂರು

ಎನ್. ವಿ. ಕೃಷ್ಣ ವಾರಿಯರ್
ತಿರುವನಂತಪುರ

ಎಂ. ಡಿ. ವಸಂತರಾಜ್
ಮೈಸೂರು

ಡಾ. ಎಂ. ಕೆ. ಜೆಟ್ಲಿ
ದೆಹಲಿ

ಡಾ. ಸೋಮಶೇಖರ ' ಸೋಮ್ '
ಧಾರವಾಡ

ಎಂ. ಎಸ್. ಶ್ರೀಹರ್ಷ
ಬೆಂಗಳೂರು

ಎಂ. ಜಯರಾಮ ಅಡಿಗ
ಬೆಂಗಳೂರು

ದಿವಂಗತ ಕಾ. ರಾ. ಸಾರಂಗ
ಬೆಂಗಳೂರು

ಎನ್. ಸಿ. ದೇಸಾಯಿ
ಮುಂಬಯಿ

ಡಾ. ಸೂರ್ಯನಾಥ ಕಾಮತ್
ಬೆಂಗಳೂರು

ಸಿ. ವಿ. ರಾಜಗೋಪಾಲ್
ಬೆಂಗಳೂರು

ಪ್ರೊ. ಎಸ್. ಗುಪ್ತನ್ ನಾಯರ್
ತಿರುವನಂತಪುರ

ಎಚ್. ವಿ. ಶ್ರೀರಂಗರಾಜ್
ಬೆಂಗಳೂರು

ಬಿ. ವಿ. ಕೆ. ಶಾಸ್ತ್ರೀ
ಬೆಂಗಳೂರು

ಮಿರ್ಜಿ ಅಣ್ಣಾರಾಯ
ಶೇಡಬಾಳ

ಖಾದ್ರಿ ಶಾಮಣ್ಣ
ಬೆಂಗಳೂರು

ಸುರೇಂದ್ರ ದಾನಿ
ಬೆಂಗಳೂರು

ಪಿ. ಎಸ್. ಗೋಪಾಲಕೃಷ್ಣ
ಮದರಾಸು

ದಿವಂಗತ ಭಾಸ್ಕರ ಯೇಸುಪ್ರಿಯ
ಬೆಂಗಳೂರು

ಪಿ. ಕೆ. ನಾರಾಯಣ
ಮಂಗಳೂರು

ಆರ್. ಕೃಷ್ಣ ಪಿಳ್ಳೆ
ತಿರುವನಂತಪುರ

ನು. ನಿಂ. ಬೆಳಗಲಿ
ಬನಹಟ್ಟಿ

ರಾಜಾ ಶೈಲೇಶಚಂದ್ರ ಗುಪ್ತ
ಬೆಂಗಳೂರು

ಡಾ. ಕೆ. ವೇಲಾಯುಧನ್ ನಾಯರ್
ತಿರುವನಂತಪುರ

ಕೆ. ಆರ್. ಮೋಹನ್
ಬೆಂಗಳೂರು

ಗೌರೀಶ ಕಾಯ್ಕಿಣಿ
ಗೋಕರ್ಣ

ಕೆ. ಬಿ. ಶ್ರೀನಿವಾಸನ್
ಬೆಂಗಳೂರು

ಶಂಕರ ಪಾಟೀಲ
ಹುಬ್ಬಳ್ಳಿ

ಕೆ. ಸಿ. ಭೀಮಯ್ಯ
ಬೆಂಗಳೂರು

ಡಾ. ಟಿ. ಎಸ್. ಶಂಕರ
ಮದರಾಸು

ಎನ್. ಎಸ್. ರಂಗಾಚಾರ್
ಬೆಂಗಳೂರು

ಕೆ. ವಿ. ರಾವ್
ಮದರಾಸು

ನನಕ

ಪುಟ ಸಂಯೋಜನೆ ; ರೇಖಾಚಿತ್ರಗಳು :

ಕೆ. ಮುರಲೀಧರ

ಕೆಲವು ರೇಖಾಚಿತ್ರಗಳು :

ಕೆ. ಕೆ. ಹೆಬ್ಬಾರ್ ; ಕೆ. ಬಿ. ಕುಲಕರ್ಣಿ ; ವಿಜಯ್ ; ಪಿ. ಆರ್. ತಿಪ್ಪೇಸ್ವಾಮಿ ; ಎನ್. ಸಿ. ದೇಸಾಯಿ

ಛಾಯಾಚಿತ್ರಗಳು :

ಬಿ. ಕೇಸರ ಸಿಂಗ್; ಟಿ. ಎಲ್. ರಾಮಸ್ವಾಮಿ; ಎನ್. ಸಿ. ದೇಸಾಯಿ : ಪ್ರಹ್ಲಾದ ಕೋನೇರಿ ; ಶಿವರಂಜನ ಆರ್. ಗುಲ್ವಾಡಿ ; ಡಾ. ದೊಡ್ಡೇರಿ ವೆಂಕಟಗಿರಿರಾವ್ ; ಡಾ. ಎಸ್. ವೆಂಕಟರಾವ್ ; ಕೆ. ವಿ. ಎಂ. ಭಕ್ತ ; ಸೂರ್ಯಕಾಂತ ಸಜ್ಜನ ಶೆಟ್ಟಿ ; ದಿ. ಹುಲ್ಲೂರು ಶ್ರೀನಿವಾಸ ಜೋಯಿಸರ ಸಂಗ್ರಹ, ಪಾಂಡುರಂಗ ಜೋಯಿಸ್— ಚಿತ್ರದುರ್ಗ ಪ್ರಾಚ್ಯ ವಸ್ತುಪ್ರದರ್ಶನಾಲಯ ; ಸುರೇಂದ್ರ ಕ್ಷತ್ರಿ

Mme. Devika Rani Roerich, Bangalore
Darpana Academy of Performing Arts, Ahmedabad
Rathin Mitra, Dehra Dun
Press Information Bureau, Government of India, New Delhi
Director of National Archives, New Delhi
Indian National Science Academy, New Delhi
U. S. S. R. Consul General, Madras
M/s D. B. Taraporewala & Co., Bombay
USIS, Madras
Department of Public Relations
Ministry of Defence, New Delhi — Bangalore
Department of Information and Tourism
Government of Andhra Pradesh, Hyderabad
Department of Information and Tourism
Government of Goa, Daman and Diu, Panaji
Public Relations Officer
Government of Himachal Pradesh, Simla
Department of Information
Government of Karnataka, Bangalore
Department of Public Relations
Government of Kerala, Trivandrum
Department of Tourism
Government of Manipur, Imphal
Department of Public Relations
Government of Punjab, Chandigarh
Department of Information and Tourism
Government of Tamil Nadu, Madras
Department of Information and Tourism
Government of Uttar Pradesh, Lucknow
National Book Trust, New Delhi

ವರ್ಣಚಿತ್ರಗಳ ಸಂಯೋಜನೆ :

ವಿಜಯ್

ವರ್ಣಚಿತ್ರಗಳು :

ಸಾಗರ ಪರ್ವತಗಳಾಚೆ ಭಾರತ : ವಿವೇಕಾನಂದ ಶಿಲಾ ಸ್ಮಾರಕ ಸಮಿತಿ, ಮದರಾಸು
ಭಾರತ : ಕೆ. ಮುರಲೀಧರ
ಕೌಶಲ : ಆರ್. ಉದಯಭಾಸ್ಕರರಾವ್ ; ಸುದ್ದಿ ಮತ್ತು ಪ್ರಸಾರ ಸಚಿವ ಶಾಖೆ, ಭಾರತ ಸರಕಾರ
ಬಂಜಾರಿ ನರಿಕುರುವ ಸಂತೆ : ಆರ್. ಉದಯಭಾಸ್ಕರರಾವ್
ಕೃಷಿ : ಆರ್. ಉದಯಭಾಸ್ಕರರಾವ್ ; ಬಿ. ಕೇಸರಸಿಂಗ್
ಉತ್ಸವ ನಿಸರ್ಗ ಧರ್ಮ : ಬಿ. ಕೇಸರಸಿಂಗ್
ಶರಾವತಿ ಕಾಳಿ : ಪ್ರಹ್ಲಾದ ಕೋನೇರಿ
ಮಹಲಿ : ಭಾರತ ಸರಕಾರದ ವಾರ್ತಾ ಕೇಂದ್ರ ; ಬಿ. ಕೇಸರಸಿಂಗ್
ಗಾಂಧೀ : ಬಿ. ಕೇಸರಸಿಂಗ್
ಬೌದ್ಧ ಹಿಂದು ಜೈನ ಕ್ರೈಸ್ತ : ಆರ್. ಉದಯಭಾಸ್ಕರರಾವ್
ಪ್ರಗತಿ ಪರಂಪರೆ : ದಿ ಇಲ್ಲಸ್ಟ್ರೇಟೆಡ್ ವೀಕ್ಲಿ ಆಫ್ ಇಂಡಿಯಾ ; ಪ್ರಹ್ಲಾದ ಕೋನೇರಿ
ಬಿರ್ಲಾ ಗ್ರಹಮ್ಯೂಹ ಭವನ ಸಸ್ಯೋದ್ಯಾನ ಹಿನ್ನೀರು ಸರೋವರ : ಆರ್. ಉದಯಭಾಸ್ಕರರಾವ್
ಪದ್ಮಪಾಣಿ ಬೋಧಿಸತ್ತ್ವ : ಯುನೆಸ್ಕೊ
ವಿವಿಧತೆಯಲ್ಲಿ ಏಕತೆ : ಎನ್. ಸಿ. ದೇಸಾಯಿ
ಭಾರತೀಯ ನೃತ್ಯ : ಆರ್. ಉದಯಭಾಸ್ಕರರಾವ
ಶಿಲ್ಪವೈಭವ : ಬಿ. ಕೇಸರಸಿಂಗ
ಮದುರೈ ಮಥುರಾ ರಥೋತ್ಸವ ಜಾತ್ರೆ : ಬಿ. ಕೇಸರಸಿಂಗ್
ಪತ್ರಲೇಖ : ಬಿ. ಕೇಸರಸಿಂಗ್–ಜಯಚಾಮರಾಜೇಂದ್ರ ಆರ್ಟ್ ಗ್ಯಾಲರಿ
ಶ್ರೀರಂಗಂ ಶಿಲ್ಪ ಬೇಲೂರು ಮಠ ನವರಾತ್ರಿ ದೀಪಾವಳಿ : ಆರ್. ಉದಯಭಾಸ್ಕರರಾವ್
ಕಾಶ್ಮೀರ ವಿಧಾನಸೌಧ ಕನ್ಯಾಕುಮಾರಿ : ರಾಘವೇಂದ್ರರಾವ್ ; ಬಿ. ಕೇಸರಸಿಂಗ್

ಕೆಲವು ಚಿತ್ರಗಳಿಗೆ ಮೂಲ :

'The wonder that was India': A. L. Basham
'ಭಾರತೀಯ ಸಂಸ್ಕೃತಿ' : ಎಸ್. ಶ್ರೀಕಂಠಶಾಸ್ತ್ರಿ
'ಪ್ರವಾಸಿ ಕಂಡ ಇಂಡಿಯಾ' : ಎಚ್. ಎಲ್. ನಾಗೇಗೌಡ
Bhavan's Journal
'Mahatma Gandhi'
'The way of the Buddha'
'Eighteen Fifty Seven' : Surendranath Sen
'Children's History of India' : Sheila Dhar
Yojana : New-Delhi
India Tourism Development Corporation Ltd. New Delhi
Deccan Herald, Bangalore
Shankar's Weekly, New Delhi
The Times of India, Bombay

ವರ್ಣ ಪಡಿಯಚ್ಚು ತಯಾರಿಕೆ :

ಕಲಾಕ್ಷೇತ್ರ, ಮದರಾಸು

ಸೇವೆ ಎರವಲು :

ಅದ್ಯನಡ್ಕ ಕೃಷ್ಣಭಟ್ : ವಿಜಯ ಕಾಲೇಜ್, ಮುಲ್ಕಿ ಮತ್ತು ರಾಜ್ಯದ ಡೈರೆಕ್ಟರ್ ಆಫ್ ಕೊಲಿಜಿಯೇಟ್ ಎಜುಕೇಷನ್, ಬೆಂಗಳೂರು

ಆಕರ ನೆರವು

ಕರ್ನಾಟಕ ವಿಶ್ವವಿದ್ಯಾಲಯ ಗ್ರಂಥಭಂಡಾರ, ಧಾರವಾಡ ; ಬೆಂಗಳೂರು ವಿಶ್ವವಿದ್ಯಾನಿಲಯ ಗ್ರಂಥಭಂಡಾರ ; ಮಿಥಿಕ್ ಸೊಸೈಟಿ ; ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ—ಬೆಂಗಳೂರು

ವಿವಿಧ ಸಹಾಯ :

ಟಿ. ಎಸ್. ನಾರಾಯಣರಾವ್, ಡೈರೆಕ್ಟರ್, ಬ್ಯೂರೋ ಆಫ್ ಇಕನಾಮಿಕ್ಸ್ ಅಂಡ್ ಸ್ಟ್ಯಾಟಿಸ್ಟಿಕ್ಸ್, ಕರ್ನಾಟಕ ಸರಕಾರ ; ಡಾ. ಎಸ್. ವಿ. ದೇಶಿಕಾಚಾರ್, ವಿಶೇಷಾಧಿಕಾರಿ, ಕರ್ನಾಟಕ ರಾಜ್ಯ ಪತ್ರಾಗಾರ ; ಕೆ. ಎಸ್. ರಾಮಕೃಷ್ಣಮೂರ್ತಿ, ಸಂಪಾದಕ, ಕೆ. ಎಸ್. ನಾರಾಯಣಸ್ವಾಮಿ, ಸಹಾಯಕ ಸಂಪಾದಕ, 'ಕನ್ನಡ ಪ್ರಭ' ; ಎಂ. ಬಿ. ಸಿಂಗ್, ಸಂಪಾದಕ, 'ಮಯೂರ' ; ಎಸ್. ನರೇಂದ್ರ, ಶ್ರೀಮತಿ ಎಸ್. ಕೌರ್, ಬಿ. ಕೆ. ಹೆಗ್ಡೆ, ಶಮೀಮ್ ಅಹ್ಮದ್—ಭಾರತ ಸರಕಾರದ ವಾರ್ತಾ ಕೇಂದ್ರ ; ಎಸ್. ರಾಮಚಂದ್ರ ಭಟ್, ನವಕರ್ನಾಟಕ ಪಬ್ಲಿಕೇಷನ್ಸ್ ; ಆರ್. ಎಸ್. ರಾಜಾರಾಮ್ ; ಆರ್. ಎ. ರಾಜಮನ್ನಾರ್ ; ಸಿ. ಎನ್. ವಿಜಯ 'ದಿ ಸ್ಟೇಟ್ಸ್‌ಮನ್' ; ಎಚ್. ಕುಸುಮಾಕರ್ 'ದಿ ಟೈಮ್ಸ್ ಆಫ್ ಇಂಡಿಯಾ' ; ರೆಡ್ ಕ್ರಾಸ್ ಸೊಸೈಟಿ; ಕೆ. ಎಸ್. ತಿಮ್ಮಪ್ಪಗೌಡ ಜಂಟಿ ಕಾರ್ಯದರ್ಶಿ , ಸಿ. ಎಸ್. ಶ್ರೀಧರಮೂರ್ತಿ ಅಧೀನ ಕಾರ್ಯದರ್ಶಿ–ಲೆಜಿಸ್ಲೇಚರ್ ; ಕೆ. ಎಸ್. ನಾರಾಯಣಸ್ವಾಮಿ, ಗಾಂಧೀ ಶಾಂತಿ ಪ್ರತಿಷ್ಠಾನ; ಎಂ. ಎಚ್. ಕೌಜಲಗಿ; ಶ್ರೀಕಾಂತ್ ; ಸುರೇಶ್ ಖಾಂಡೇಕರ್ ; ಡಾ. ನಾರಾಯಣ ಮಹಿಷಿ ; ಪಿ. ಸದಾಶಿವಮೂರ್ತಿ, ಸಿ. ಕೆ. ಪಟ್ಟಣಶೆಟ್ಟಿ, ಎಂ. ಟಿ. ರಾಮಸ್ವಾಮಿ ಗೌಡ, ಜಿ. ಆರ್. ರಾಮಮೂರ್ತಿ, ಟಿ. ಪಿ. ವೆಂಕಟರಮಣಯ್ಯ—ಬೆಂಗಳೂರು ವಿಶ್ವ ವಿದ್ಯಾನಿಲಯದ ಗ್ರಂಥಭಂಡಾರ ; ಎಲ್. ಗುಂಡಪ್ಪ; ಎಸ್. ವೆಂಕಟಾಚಲಪತಿ; ಎಸ್. ಸುಬ್ಬರಾಯ; ಆರ್. ಆನಂದರಾವ್ ; ಕೆ. ಸದಾಶಿವ ; ನಿಟ್ಟೂರು ಶ್ರೀನಿವಾಸರಾವ್ ; ಎ. ಸಿ. ಮಿತ್ರ ; ಸ್ವೆತಸ್ಲಾವ್ ರೋರೀಕ್ ; ಎಂ. ವಿ. ವೆಂಕಟರಾಮಯ್ಯ, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್ ; ಸುರೇಶ ಭಟ್ಕಳ್, ಪಾಪ್ಯುಲರ್ ಬುಕ್ ಡಿಪೊ ; ಸಿ. ಆರ್. ರಾವ್, ಕೆ. ಗೋಪೀನಾಥ್–ರಚನಾ ಅಡ್ವರ್ಟೈಸಿಂಗ್; ಶ್ರೀಮತಿ ವಿಜಯಾ, 'ಉದಯವಾಣಿ'; ವೆ.ಸು.ನಾ. ಮಲ್ಯ, ಸಂಪಾದಕ, 'ವಿಕ್ರಮ'; ರಾಷ್ಟ್ರೋತ್ಥಾನ ಪರಿಷತ್—ಬೆಂಗಳೂರು ; ವರದರಾಜ ಆದ್ಯ, ಮಫತ್‌ಲಾಲ್ ಸರ್ವಿಸಸ್, ಮುಂಬಯಿ ; ಪ್ರೊ. ಕೆ. ಜಿ. ಶೆಣೈ, ಪ್ರಿನ್ಸಿಪಾಲ್, ವಿಜಯ ಕಾಲೇಜು, ಮುಲ್ಕಿ ; ಕೆ. ಟಿ. ವೀರಪ್ಪ, ಮೈಸೂರು ; ಕಾರ್ಯದರ್ಶಿ, ಕರ್ನಾಟಕ ಸಂಘ, ಶಿವಮೊಗ್ಗ; ಎಂ. ಎಸ್. ಭಾರದ್ವಾಜ್, ನವದೆಹಲಿ; ಡಿ. ವಿ. ಕೆ. ಮೂರ್ತಿ, ಮೈಸೂರು; ಸೂರ್ಯರಾವ್, ಮದರಾಸು

ಓದುಗರ ಗಮನಕ್ಕೆ

ಕ್ರಿ.ಪೂ. = ಕ್ರಿಸ್ತ ಪೂರ್ವ. ವರ್ಷ ಮಾತ್ರ ಇದ್ದಾಗ ಕ್ರಿಸ್ತ ಶಕ ಎಂದರ್ಥ

ನಾಮಪದಗಳಿಗೆ ಆಯಾ ಪ್ರದೇಶದಲ್ಲಿ ಅಥವಾ ಭಾಷೆಯಲ್ಲಿ ಬಳಕೆಯಲ್ಲಿರುವ ಉಚ್ಚಾರವನ್ನೇ ಸಾಮಾನ್ಯವಾಗಿ ಬಳಸಿದ್ದೇವೆ. ಕೆಲವೆಡೆ ಬಹಳ ಕಾಲದಿಂದ ಬಳಕೆಯಲ್ಲಿರುವ ರೂಪಗಳನ್ನು ಉಳಿಸಿಕೊಂಡಿದ್ದೇವೆ. ಮೂಲ ರೂಪ ದೊರೆತಲ್ಲೆಲ್ಲ ಕಂಸ ಗುರುತುಗಳ ನಡುವೆ ಆ ಉಚ್ಚಾರವನ್ನೂ ಕೊಟ್ಟಿದ್ದೇವೆ.

ಶೀರ್ಷಿಕೆಗಳ ಅಕ್ಷರಾನುಕ್ರಮ: [illegible] ಪ್ರಚಲಿತವಿರುವ ರೂಪವೇ ಶೀರ್ಷಿಕೆ. ಉದಾಹರಣೆಗೆ, 'ಅಂಬೇಡ್ಕರ್, ಬಿ. ಆರ್.' ಎಂದು ಬರೆದಿಲ್ಲ. 'ಬಿ. ಆರ್. ಅಂಬೇಡ್ಕರ್' ಎಂದು ಕೊಟ್ಟಿದ್ದೇವೆ. ಅಂಬೇಡ್ಕರ್ ಎಂಬ ಶೀರ್ಷಿಕೆ ಸೂಚಿಸಿ, 'ನೋಡಿ : ಬಿ. ಆರ್. ಅಂಬೇಡ್ಕರ್' ಎಂದೂ ತಿಳಿಸಿದ್ದೇವೆ.

ಸಂಪುಟದಲ್ಲಿ ಅಡಕವಾಗಿರುವ ಶೀರ್ಷಿಕೆಗಳು ಸಂದರ್ಭಸೂಚಿಯಲ್ಲಿ **ದಪ್ಪಕ್ಷರ**ದಲ್ಲಿ ಸೂಚಿತವಾಗಿವೆ. ಮತ್ತು ಲೇಖನ ಆರಂಭವಾಗುವ ಪುಟದ ಸಂಖ್ಯೆಯನ್ನು ಶೀರ್ಷಿಕೆಯ ಮಗ್ಗುಲಲ್ಲಿ ಪ್ರಥಮವಾಗಿ ಕೊಟ್ಟಿದೆ.

[illegible] ವಿವರ : [illegible] ಅವರ ಅನಂತರ **ನೆಹರೂ ಪ್ರಶಸ್ತಿ** ಟಾನ್‌ಜಾನಿಯಾದ ಅಧ್ಯಕ್ಷ ಡಾ. ಜೂಲಿಯಸ್ ನೈರೆರಿ ಅವರಿಗೆ ದೊರೆಯಿತು. **ಅಸ್ಸಾಂ** ರಾಜ್ಯದ ಹೊಸ ರಾಜಧಾನಿ ದೀಸ್‌ಪುರ.

ಈ ಸಂಪುಟದಲ್ಲಿ

ಲೇಖನಗಳು : 1373 ರೇಖಾಚಿತ್ರಗಳು : 526 ಛಾಯಾಚಿತ್ರಗಳು : 660 21 ವರ್ಣಪುಟಗಳಲ್ಲಿ ವರ್ಣಚಿತ್ರಗಳು 71

ಸಂದರ್ಭಸೂಚಿಯಲ್ಲಿರುವ ಪದಗಳು : ಸುಮಾರು 6,500

ಒಟ್ಟು ಏಳು ಸಂಪುಟಗಳಲ್ಲಿ

ಪದಗಳು : 17 ಲಕ್ಷ ಲೇಖನಗಳು : 3782 ರೇಖಾಚಿತ್ರಗಳು : 3800 ಛಾಯಾಚಿತ್ರಗಳು : 3750 ವರ್ಣಚಿತ್ರಗಳು : 291

ಸಂದರ್ಭಸೂಚಿಯಲ್ಲಿರುವ ಪದಗಳು : 26000

ಸಂಪುಟಗಳ ಬಿಡುಗಡೆ

[illegible] : 28 [illegible] 1970 ; [illegible] 1971 ; [illegible] 1972 ; [illegible] 1973 ; [illegible] 26 ಆಗಸ್ಟ್ 1973 ; 'ಭಾರತದ ಕಥೆ' : ಕುಮಾರಿ ಕೆ. ಎಸ್. ಸಾವಿತ್ರಿ : 10 ಮಾರ್ಚ್ 1974

ಆಭಾರ ಮನ್ನಣೆ

ಏಳು ಸಂಪುಟಗಳ ಕಿರಿಯರ ವಿಶ್ವಕೋಶ 'ಜ್ಞಾನ ಗಂಗೋತ್ರಿ'ಯ ಕೊನೆಯ ಸಂಪುಟದ ಬಿಡುಗಡೆಯೊಂದಿಗೆ 'ಜ್ಞಾನ ಗಂಗೋತ್ರಿ' ಯೋಜನೆ ಮುಕ್ತಾಯಗೊಳ್ಳುತ್ತಿದೆ. ಈ ಮಂಗಲ ಸಮಯದಲ್ಲಿ ಈ ಯೋಜನೆಯ ಯಶಸ್ಸಿಗೆ ಕಾರಣ ರಾಗಿರಂವ ಎಲ್ಲರನ್ನು ಕೃತಜ್ಞತಾಭಾವದಿಂದ ನಾವು ಸ್ಮರಿಸುತ್ತಿದ್ದೇವೆ.

ಪ್ರಥಮವಾಗಿ ನಮ್ಮ ಕೃತಜ್ಞತೆ ಸಲ್ಲಬೇಕಾಗಿರುವುದು ಕರ್ನಾಟಕ ರಾಜ್ಯ ಸರಕಾರಕ್ಕೆ. 9 ಲಕ್ಷ ರೂಪಾಯಿಗಳ ಬಡ್ಡಿ ರಹಿತ ಸಾಲವನ್ನು ನೀಡಿ, ಮುದ್ರಿಸುವ 20,000 ಪ್ರತಿಗಳಲ್ಲಿ 15,000 ಪ್ರತಿಗಳನ್ನು ಶಾಲಾ ಕಾಲೇಜುಗಳ ಗ್ರಂಥಭಂಡಾರ ಗಳಿಗಾಗಿ ಕೊಳ್ಳಲು ನಿರ್ಧರಿಸಿ, ಸಂಪುಟಗಳ ಬೃಹತ್ ಪ್ರಮಾಣದ ಮುದ್ರಣಕ್ಕೆ ಸರಕಾರಿ ಮುದ್ರಣಾಲಯದಲ್ಲಿ ಅನುಕೂಲ ಮಾಡಿಕೊಟ್ಟು, ಸರಕಾರ ನೆರವಾಗಿದೆ.

ಈ ಯೋಜನೆಯನ್ನು ಕಾರ್ಯಗತಗೊಳಿಸುವುದಕ್ಕೋಸ್ಕರ ಕರ್ನಾಟಕ ಸಹಕಾರ ಪ್ರಕಾಶನ ಮಂಡಲಿಯ ಪ್ರಧಾನ ಸಂಪಾದಕರ ನೇತೃತ್ವದಲ್ಲಿ ರೂಪಿಸಿದ 'ಜ್ಞಾನ ಗಂಗೋತ್ರಿ' ಘಟಕ ಈ ಮೂರು ಮಹತ್ಸಾಧನೆಗಳಿಗೆ ಕಾರಣವಾಗಿದೆ :

1 ಆರು ವರ್ಷಗಳ ಯೋಜನೆಯನ್ನು 4 ವರ್ಷ 9 ತಿಂಗಳಲ್ಲಿ, ನಿರ್ಧರಿಸಿದ್ದ ಅವಧಿಗಿಂತ 15 ತಿಂಗಳು ಮುಂಚೆಯೇ, ಮುಕ್ತಾಯಗೊಳಿಸಿರುವುದು ;

2 ರೂ. 11 ಲಕ್ಷಗಳ ಅಂದಾಜು ಸಂಪಾದಕೀಯ ವೆಚ್ಚವನ್ನು ನಿಷ್ಠುರ ಮಿತವ್ಯಯದ ಮೂಲಕ ಅರ್ಧಕ್ಕೆ — ರೂ. 5.5 ಲಕ್ಷಗಳಿಗೆ — ಇಳಿಸಿರುವುದು ; ಮತ್ತು

3 ಸರಕಾರದಿಂದ ಪಡೆದ ರೂ. 9 ಲಕ್ಷ ಸಾಲವನ್ನು ಅವಧಿಗಿಂತ 15 ತಿಂಗಳು ಮುಂಚೆಯೇ ಮರು ಸಂದಾಯ ಮಾಡಿರುವುದು.

ಈ ಸಂದರ್ಭದಲ್ಲಿ ಒಂದು ಅಂಶವನ್ನು ನಾವು ಸ್ಪಷ್ಟಪಡಿಸಬೇಕು. ಸರಕಾರ ನಮಗೆ ಕೊಟ್ಟುದು ರೂ. 9 ಲಕ್ಷಗಳ ಬಡ್ಡಿ ರಹಿತ ಸಾಲವನ್ನು. ಅದರ, ಏಳು ಸಂಪುಟಗಳ ಮುಖಬೆಲೆಯಾದ 350 ರೂಪಾಯಿಗಳನ್ನು ಸರಕಾರ ಪೂರ್ತಿಯಾಗಿ ನೀಡಿಲ್ಲ. ಬದಲು ರೂ. 260 ಮಾತ್ರ ಕೊಟ್ಟಿದೆ. ಹೀಗೆ ಸಂಪುಟಗಳ ಒಂದೊಂದು ಸೆಟ್ಟಿಗೂ ಸರಕಾರಕ್ಕೆ ದೊರೆಯುವ ರಿಯಾಯಿತಿ 90 ರೂಪಾಯಿ. ಅಂದರೆ, ಎಲ್ಲ ಏಳು ಸಂಪುಟಗಳ 15,000 ಪ್ರತಿಗಳೂ ಸರಕಾರಕ್ಕೆ ಸಂದಾಗ, ರೂ. 13.5 ಲಕ್ಷ ಮೌಲ್ಯದ ಸಂಪುಟಗಳು ಅದಕ್ಕೆ ಉಚಿತವಾಗಿ ದೊರೆತಂತಾಗುತ್ತದೆ.

ಪಡೆದ ಸಾಲದ ಮರುಸಂದಾಯದಷ್ಟೇ ಕ್ರಮಬದ್ಧವಾಗಿ, ಸಂಪುಟಗಳ ಮುದ್ರಕರಾದ ಸರಕಾರಿ ಮುದ್ರಣಾಲಯದ ಬಿಲ್ಲುಗಳನ್ನೂ ಯಾವ ವಿಳಂಬವೂ ಇಲ್ಲದೆ ನಾವು ಸಂದಾಯ ಮಾಡುತ್ತ ಬಂದಿದ್ದೇವೆ.

ಕನ್ನಡ ಪ್ರಕಾಶನ ಪ್ರಪಂಚದ ಹೊಸ ಹೆಜ್ಜೊತ್ತುಗಳಿಗೆ ಹೋಲಿಸಿದರೆ ನಾವು ಒಂದೊಂದು ಸಂಪುಟಕ್ಕೆ ಇಡುತ್ತಿರುವ 50 ರೂಪಾಯಿ ಬೆಲೆ ನಿಸ್ಸಂದೇಹವಾಗಿಯೂ ಕಡಮೆ. ಮುದ್ರಣ ವೆಚ್ಚದ ಮೂರರಷ್ಟು ಬೆಲೆ ಇಡುವುದು ಸಾಮಾನ್ಯ ಪದ್ಧತಿ. ನಾವು ಅದಕ್ಕೆ ಅಪವಾದ.

ಗ್ರಾಹಕರಿಗೆ ಈ ತನಕ ನಾವು ತೋರಿಸುತ್ತಿದ್ದ ಪ್ರಕಟಣಪೂರ್ವ ರಿಯಾಯಿತಿ ಕೊನೆಯ ಸಂಪುಟದ ಬಿಡುಗಡೆಯೊಂದಿಗೆ ಮುಕ್ತಾಯವಾಗುತ್ತದೆ. ಇನ್ನು ಮುಂದೆ 'ಜ್ಞಾನ ಗಂಗೋತ್ರಿ' ಕೊಳ್ಳುವವರು ಪ್ರತಿ ಸೆಟ್ಟಿಗೆ ರೂ. 350 ನೀಡಬೇಕು. ಒಮ್ಮೆಲೆ ಇಷ್ಟು ಕೊಡಲಾಗದವರು ಕೆನರಾ ಬ್ಯಾಂಕ್, ಸಿಂಡಿಕೇಟ್ ಬ್ಯಾಂಕ್, ವಿಜಯ ಬ್ಯಾಂಕ್, ಕರ್ನಾಟಕ ಬ್ಯಾಂಕ್ ಮತ್ತು ವೈಶ್ಯ ಬ್ಯಾಂಕ್‌ಗಳಿಂದ ರೂ. 350 ಸಾಲ ಪಡೆಯಬಹುದು. ಇದರ ಮರುಸಂದಾಯ ಮಾಸಿಕ ಕಂತುಗಳಲ್ಲಿ. ಈ ಸಾಲ ಸೌಲಭ್ಯವನ್ನು 1975 ಮಾರ್ಚ್ ತನಕ ನೀಡಲು ಈ ಬ್ಯಾಂಕುಗಳು ಒಪ್ಪಿವೆ.

ಈ ಯೋಜನೆಯ ಕಾರ್ಯಾರಂಭಕ್ಕೆ ನೆರವಾದ ಆಗಿನ ವಿದ್ಯಾಸಚಿವ ಶ್ರೀ ಕೆ. ವಿ. ಶಂಕರ ಗೌಡರು, ಅರ್ಥಸಚಿವ ಶ್ರೀ ರಾಮಕೃಷ್ಣ ಹೆಗಡೆಯವರು, ಸಹಕಾರ ಸಚಿವ ಶ್ರೀ ಟಿ.ಎಂ. ನಾಡಗೌಡರು,— ಹಿಂದಿನ ಮುಖ್ಯಮಂತ್ರಿ ಶ್ರೀ ವೀರೇಂದ್ರ ಪಾಟೀಲರು ; ಅನಂತರ ಈ ಯೋಜನೆಯ ಬಗೆಗೆ ತೀವ್ರ ಆಸಕ್ತಿ ವಹಿಸಿದ ಮಾಜಿ ವಿದ್ಯಾಸಚಿವ ಶ್ರೀ ಎ. ಆರ್. ಬದರೀನಾರಾಯಣ ಅವರು, ಈಗಿನ ವಿದ್ಯಾಸಚಿವ ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ ಅವರು, ಅರ್ಥಸಚಿವ ಶ್ರೀ ಎಂ. ವೈ. ಘೋರ್ಪಡೆಯವರು, ಮಾಜಿ ಸಹಕಾರ ಸಚಿವ ಶ್ರೀ ಬಿ. ಶಂಕರ ಅಣ್ಣರು, ಈಗಿನ ಸಹಕಾರ ಸಚಿವ ಶ್ರೀ ಕೆ. ಎಚ್. ಪಾಟೀಲರು,— ಮುಖ್ಯ ಮಂತ್ರಿ ಶ್ರೀ ಡಿ. ದೇವರಾಜ ಅರಸರು ಇವರಿಗೆಲ್ಲ ನಮ್ಮ ಕೃತಜ್ಞತೆ ಸಲ್ಲುತ್ತದೆ.

ಆಗಿನ ಶಿಕ್ಷಣ ಕಾರ್ಯದರ್ಶಿ ಶ್ರೀ ಜಯರಾಮನ್, ಅನಂತರದ ಶಿಕ್ಷಣ ಕಾರ್ಯದರ್ಶಿ ಶ್ರೀ ಕೆ. ಆರ್ ರಾಮಚಂದ್ರನ್, ಈಗಿನ ಶಿಕ್ಷಣ ಕಮಿಷನರ್ ಶ್ರೀ ಸ್ಯಾಮುಯಲ್ ಅಪ್ಪಾಜಿ. ಆಗಿನ ಅರ್ಥಕಾರ್ಯದರ್ಶಿ ಶ್ರೀ ಮಣಿ ನಾರಾಯಣ ಸ್ವಾಮಿ ಮತ್ತು ಜತೆ ಕಾರ್ಯದರ್ಶಿ ಶ್ರೀ ಎನ್.ಎಸ್. ಭರತ್ ಹಾಗೂ ಸಹೋದ್ಯೋಗಿಗಳು, ಈಗಿನ ಅರ್ಥ ಕಮಿಷನರ್ ಶ್ರೀ ಟಿ. ಆರ್. ಸತೀಶಚಂದ್ರನ್ ಮತ್ತು ಜತೆ ಕಾರ್ಯದರ್ಶಿ ಶ್ರೀ ಎಂ. ಶಂಕರನಾರಾಯಣನ್ ಹಾಗೂ ಸಹೋದ್ಯೋಗಿಗಳು ಈ ಮಹನೀಯರಿಗೆಲ್ಲ ನಾವು ಆಭಾರಿಗಳು.

ಸಹಕಾರೀ ಕ್ಷೇತ್ರದ ಈ ಅಪೂರ್ವ ಯೋಜನೆಯ ಬಗೆಗೆ ವಿಶೇಷ ಆಸ್ಥೆ ತೋರಿದ ರಾಜ್ಯದ ಸಹಕಾರ ಸಂಘಗಳ ರೆಜಿಸ್ಟ್ರಾರರಾಗಿದ್ದ ಶ್ರೀ ಸಿ. ಜಮಖಂಡಿಮಠ್, ಶ್ರೀ ಎಚ್. ಮಹಾರುದ್ರಯ್ಯ ಮತ್ತು ಈ ಬಗೆಯ ಬೌದ್ಧಿಕ ಚಟುವಟಿಕೆಯ ಬಗೆಗೆ ತೀವ್ರ ಆಸಕ್ತಿ ತೋರಿರುವ ನೂತನ ರೆಜಿಸ್ಟ್ರಾರ್ ಶ್ರೀ ಜಯಕುಮಾರ ಅನಗೋಳ —ಅವರಿಗೆ ನಾವು ಋಣಿಗಳು.

ಯೋಜನೆ ಮೂರ್ತರೂಪ ತಳೆಯುವಾಗಲೂ ಅನಂತರವೂ ನೆರವಾದ ಪಠ್ಯಪುಸ್ತಕಗಳ ನಿರ್ದೇಶಕರು ಶ್ರೀ ಟಿ. ವಿ. ತಿಮ್ಮೇಗೌಡ, ಶ್ರೀ ಎಮ್. ಎಚ್. ನಾಯಕ್ ಮತ್ತು ಶ್ರೀ ಎಚ್. ವಿ. ಶ್ರೀರಂಗರಾಜ್ ಇವರಿಗೆ ವಂದನೆಗಳು.

'ಜ್ಞಾನ ಗಂಗೋತ್ರಿ'ಯ ಸಂಪಾದಕೀಯ ದುಡಿಮೆಯಷ್ಟೇ ಮಹತ್ವದ್ದು ಅದರ ಮುದ್ರಣದ ಹೊಣೆ. ಅದನ್ನು ಅತ್ಯಂತ ದಕ್ಷತೆಯಿಂದ ನಿರ್ವಹಿಸಿದವರು ಸರಕಾರೀ ಮುದ್ರಣಾಲಯದ ಸಮರ್ಥ ನಿರ್ದೇಶಕ ಶ್ರೀ ಬಿ.ಬಿ. ಮಲ್ಲರಾಜೇ ಅರಸರು. ಕೊನೆಕೊನೆಯಲ್ಲಿ ಕಾಗದದ ಅಭಾವ ಮೊದಲ್ಗೊಂಡು ದಟ್ಟೈಸಿದ ತೊಂದರೆಗಳು ಅನೇಕ. ಅವೆಲ್ಲವನ್ನೂ ಬಗೆಹರಿಸಿ, 'ಜ್ಞಾನ ಗಂಗೋತ್ರಿ' ಯೋಜನೆಯ ಯಶಸ್ವೀ ಮುಕ್ತಾಯಕ್ಕೆ ಅವರು ಕಾರಣರಾಗಿದ್ದಾರೆ. ತುಂಬು ಹೃದಯದಿಂದ ನಾವು ಅವರ ಉಪಕಾರವನ್ನು ನೆನೆಯುತ್ತೇವೆ.

'ಜ್ಞಾನ ಗಂಗೋತ್ರಿ' ಆರಂಭವಾದಾಗ ಸರಕಾರೀ ಮುದ್ರಣಾಲಯದ ನಿರ್ದೇಶಕರಾಗಿದ್ದು ನಿವೃತ್ತಿಯ ಬಳಿಕ ವಿಶೇಷಾಧಿಕಾರಿಯಾದ ಶ್ರೀ ಎಂ. ಎ. ಶ್ರೀರಾಮರಿಗೆ, ಅವರು ವಹಿಸಿದ ಏಕಪ್ರಕಾರದ ಆಸ್ಥೆಗಾಗಿ, ನಮ್ಮ ವಂದನೆಗಳು.

'ಜ್ಞಾನ ಗಂಗೋತ್ರಿ' ಯಜ್ಞದಲ್ಲಿ ಸಮರ್ಪಣಭಾವದಿಂದ ಭಾಗಿಯಾದವರು, ವೇಳೆಯ ಪರಿವೆಯಿಲ್ಲದೆ ದುಡಿದು ಈ ಸಪ್ತ ಸಂಪುಟಗಳನ್ನು ಸಿದ್ಧಗೊಳಿಸಿದವರು. ಸರಕಾರೀ ಮುದ್ರಣಾಲಯದ ಉಪನಿರ್ದೇಶಕ ಹಾಗೂ 'ವಿಶ್ವಕೋಶ ವಿಭಾಗ'ದ ಮುಖ್ಯಸ್ಥ ಶ್ರೀ ಆರ್. ನಾರಾಯಣ ಅವರು. ನಾವು ಅವರಿಗೆ ಅತ್ಯಂತ ಕೃತಜ್ಞರು.

ಶ್ರೀ ಆರ್. ನಾರಾಯಣರ ನೇತೃತ್ವದಲ್ಲಿ ಪರಿಶ್ರಮಪಟ್ಟವರು ಶ್ರೀಯುತರಾದ ಆರ್. ಗುರುರಾಜರಾವ್. ಜಿ. ವಿ. ಕೃಷ್ಣಪ್ಪ, ಎಚ್. ಅಪ್ಪಾಜಯ್ಯ. ಪಿ. ಎ. ರಾಘವೇಂದ್ರ, ಎನ್. ಆರ್. ಅನಂತರಾಮಯ್ಯ, ಸಿ. ಹನುಮಪ್ಪ. ಚೌರಪ್ಪ, ಕೆ. ಚಿಕ್ಕಯ್ಯ, ಎ. ಮುರುಗೇಶನ್, ಎಂ. ನಾರಾಯಣಸ್ವಾಮಿ, ಸಿ. ನಾರಾಯಣ ಮತ್ತು ನೂರಾರು ಜನ ಬಂಧುಗಳು. ಅವರಿಗೆ ನಾವು ಋಣಿಗಳು.

'ಜ್ಞಾನ ಗಂಗೋತ್ರಿ'ಯ ಮುದ್ರಣ ಕಾರ್ಯದಲ್ಲಿ ಆಸಕ್ತಿ ತಳೆದ ಹಿರಿಯ ಉಪನಿರ್ದೇಶಕ ಶ್ರೀ ಡಿ. ನರಸಿಂಹಯ್ಯನವರಿಗೆ ನಾವು ಉಪಕೃತರು ; ವಿಶೇಷ ಸೇವೆಗಾಗಿ ಆಫ್‌ಸೆಟ್ ವಿಭಾಗದ ಅಧಿಕಾರಿ, ಮುದ್ರಣಾಲಯದ ಉಪನಿರ್ದೇಶಕ ಶ್ರೀ ಟಿ. ರೇವಣ್ಣ, ಅವರಿಗೂ ಅವರ ನೇತೃತ್ವದಲ್ಲಿ ದುಡಿದ ಶ್ರೀಯುತರಾದ ವಿ. ಜಯರಾಂ. ಕೆ. ಬಲರಾಂಸಿಂಗ್ ಮತ್ತು ಟಿ. ಷಣ್ಮುಗಂ ಅವರಿಗೂ ನಾವು ಆಭಾರಿಗಳು.

'ಜ್ಞಾನ ಗಂಗೋತ್ರಿ'ಯ ಗ್ರಾಹಕರಾಗಲು ಬಯಸುವವರಿಗೆ ಬ್ಯಾಂಕುಗಳು ನೀಡಿರುವ ಸಾಲಸೌಲಭ್ಯ ಸದಾ ಕಾಲ ಸ್ಮರಿಸುವಂಥದು. ಸಾಲಯೋಜನೆಗೆ ಒಪ್ಪಿದ ಕೆನರಾ ಬ್ಯಾಂಕಿನ ಆಗಿನ ಅಧ್ಯಕ್ಷ ಶ್ರೀ ಕೆ. ಪಿ. ಜೆ. ಪ್ರಭು, ಈಗಿನ ಅಧ್ಯಕ್ಷ ಶ್ರೀ ಸಿ. ವಿಶ್ವನಾಥ ಕಾಮತ್. ಸಿಂಡಿಕೇಟ್ ಬ್ಯಾಂಕಿನ ಅಧ್ಯಕ್ಷ ಶ್ರೀ ಕೆ.ಕೆ. ಪೈ. ವಿಜಯಾ ಬ್ಯಾಂಕಿನ ಅಧ್ಯಕ್ಷ ಶ್ರೀ ಎಂ. ಸುಂದರರಾಮ ಶೆಟ್ಟಿ. ಕರ್ನಾಟಕ ಬ್ಯಾಂಕಿನ ಅಧ್ಯಕ್ಷ ಶ್ರೀ ಕೆ. ಸೂರ್ಯನಾರಾಯಣ ಅಡಿಗ ಮತ್ತು ವೈಶ್ಯ ಬ್ಯಾಂಕಿನ ಅಧ್ಯಕ್ಷ ಶ್ರೀ ಎಂ. ಆರ್. ಅರ್ಜುನ್ ಇವರಿಗೆ ನಾವು ಉಪಕೃತರು.

'ಜ್ಞಾನ ಗಂಗೋತ್ರಿ'ಯ ರಚನೆಯ ಸಂದರ್ಭದಲ್ಲಿ ಪ್ರಕಾಶನ ಮಂದಿರದ ಪರವಾಗಿ ಮಂಡಲಿ ಕೈಗೊಂಡ ನೆರವನ್ನೂ, ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಶ್ರೀ ದೇ. ಜವರೇಗೌಡ ಅವರ ಅಧ್ಯಕ್ಷತೆಯಲ್ಲಿ ಸಂಪಾದಕ ಮಂಡಲಿ ನೀಡಿದ ಮಾರ್ಗದರ್ಶನವನ್ನೂ ನಾವು ಕೃತಜ್ಞತಾಪೂರ್ವಕ ನೆನೆಯುತ್ತೇವೆ.

10 ಮಾರ್ಚ್ 1974
ಬೆಂಗಳೂರು

ಜಿ. ಎಸ್. ಬೊಮ್ಮೇಗೌಡ
ಅಧ್ಯಕ್ಷ

ಪಿ. ಎಸ್. ಭಟ್
ಮ್ಯಾನೇಜಿಂಗ್ ಡೈರೆಕ್ಟರ್

ಕರ್ನಾಟಕ ಸಹಕಾರೀ ಪ್ರಕಾಶನ ಮಂದಿರ

ನಿರಂಜನ
ಪ್ರಧಾನ ಸಂಪಾದಕ
'ಜ್ಞಾನ ಗಂಗೋತ್ರಿ'

ಈ ಸಂಪುಟವನ್ನು ಕುರಿತು

ಇದು 'ಜ್ಞಾನ ಗಂಗೋತ್ರಿ'ಯ ಏಳನೆಯ –ಕೊನೆಯ– ಸಂಪುಟ. ಕಳೆದ ಬಾರಿ ಬರೆಯುತ್ತ (1972 ಆಗಸ್ಟ್), "ಮುಂದಿನ ವರ್ಷ ಮಾರ್ಚ್ ವೇಳೆಗೆ —ಯೋಜನಾವಧಿಗಿಂತ 15 ತಿಂಗಳು ಮುಂಚಿತವಾಗಿಯೇ— ಏಳನೆಯ ಹಾಗೂ ಕೊನೆಯ ಸಂಪುಟ ಹೊರಬೀಳುತ್ತದೆ," ಎಂದು ತಿಳಿಸಿದ್ದೆ.

ಆ ಮಾತನ್ನು ನಡೆಸಿಕೊಟ್ಟಿದ್ದೇವೆ ಎಂದು ನಮಗೆ ಸಮಾಧಾನ, ಹರ್ಷ.

'ಮನುಕುಲದ ಕಥೆ' 'ಜೀವಜಗತ್ತು', 'ಭೌತಜಗತ್ತು', 'ಯಂತ್ರಜಗತ್ತು', 'ಕಲೆ, ಸಾಹಿತ್ಯ', 'ಕ್ರೀಡೆ, ಮನೋಲ್ಲಾಸ,' 'ಭಾರತದ ಕಥೆ', —ಇವು 'ಜ್ಞಾನ ಗಂಗೋತ್ರಿ'ಯ ಸಪ್ತ ಸಂಪುಟಗಳು. ಇವುಗಳಲ್ಲಿ 'ಭಾರತದ ಕಥೆ'ಯ ರಚನೆ ಸುಲಭ ಎಂದು ನಾನೂ ನನ್ನ ಸಹೋದ್ಯೋಗಿಗಳೂ ಭಾವಿಸಿದ್ದೆವು. ಈ ಸಂಪುಟದ ಕೆಲಸ ಆರಂಭಿಸಿದ್ದೇ ತಡ ನಮ್ಮ ಭ್ರಮೆ ನಿರಸನವೊಂದಿತು. "ಭಾರತೀಯ ಇತಿಹಾಸದಲ್ಲಿ ಕಾಲ ನಿರ್ಣಯ ಅಸ್ಥಿರ ಸಂಗತಿ" ಎಂದಿದ್ದರು, ಕೌಟಿಲ್ಯನ 'ಅರ್ಥಶಾಸ್ತ್ರ'ವನ್ನು ಪ್ರಕಟಿಸಿದ ಆರ್. ಶಾಮಶಾಸ್ತ್ರಿ. ಇತಿಹಾಸದ ಮಾತಿರಲಿ, ಆಧುನಿಕ ಅಂಶಗಳಿಗೆ ಸಂಬಂಧಿಸಿದಂತೆಯೂ ಆಧಾರಗಳು ದೊರೆಯುವ ಬವಣೆ ನಮ್ಮದು. ಭಾರತಕ್ಕೆ ಸಂಬಂಧಿಸಿದ ಮಾಹಿತಿಗೂ ವಿದೇಶದ ಪುಸ್ತಕಾಲಯಗಳಿಗೆ ಹೋಗಬೇಕಾಗಿದೆಯೆ? ಹೋದೆವು. ಅಲ್ಲಿ ದೊರೆಯುವುದು ಪರರ ಔದಾರ್ಯದಿಂದ ಅವರು ನೀಡುವ ತುಣುಕುಗಳು. ಒಳಗಿಂದಲೇ, ನಮ್ಮ ಊರ ಕೋಶಗಳನ್ನೂ, ಕಾಡುಗಳನ್ನೂ ಸುತ್ತಿ, ಜೇನುತೊಟ್ಟಿಯನ್ನು ತುಂಬಿದೆವು. ಆ ಶ್ರಮದ ಪ್ರತಿಫಲವೇ 'ಭಾರತದ ಕಥೆ.'

ಪ್ರಾಚೀನ ಕಾಲದಿಂದ ಈವರೆಗೆ ಜಗತ್ತಿನಲ್ಲಿ ಭಾರತ ತನ್ನದೇ ರೀತಿಯಲ್ಲಿ ಮಿಂಚಿದೆ. ಅದರ ಗತವೈಭವ ಕಲ್ಪವೃಕ್ಷಸಮಾನವು. ಅದು ನೀಡಿದ್ದುದು ಹೆಚ್ಚು : ಪಡೆದುದ್ದೂ ಉಂಟು. ಭಾರತೀಯ ಸಾಧನೆಗಳು ಲೋಕದ ಸ್ವತ್ತು. ಸರ್ವಕಾಲ ಶ್ರೇಷ್ಠರು ಭಾರತದ ಆಚಾರ್ಯರು. ಅಲ್ಲಿ ಸಾಮ್ರಾಜ್ಯಗಳು ಎದ್ದುವು, ಬಿದ್ದುವು. ಪರರ ಆಕ್ರಮಣ ಪದೇ ಪದೇ ಮಾಮೂಲಾಯಿತು. ಆದರೂ ರಾಷ್ಟ್ರ ನಿರ್ಮಾಣಕಾರ್ಯ ಹಲವು ಬಗೆಯಾಗಿ ನಡೆಯಿತು. ಭಾರತ ಸ್ವತಂತ್ರವಾದುದಂತೂ ಈ ಶತಮಾನದ ಮಹಾಸಂಭವ.

ಭಾರತದ ಈ ಕಥೆಯನ್ನು ವಿಶ್ವದ ಹಿನ್ನೆಲೆಯಲ್ಲಿ ಗುರುತಿಸಿ, ಅದನ್ನು 1373 ಲೇಖನಗಳ ಮೂಲಕ ಬರೆದಿದ್ದೇವೆ. ಕಿರಿಯರಿಗೆ ಮೆಚ್ಚುಗೆಯಾಗುವ ವ್ಯಕ್ತಿಚಿತ್ರಗಳು 652. ಉಳಿದ 721ರಷ್ಟು ಲೇಖನಗಳು ಧರ್ಮ, ಇತಿಹಾಸ ಮತ್ತು ಆಧುನಿಕ ಕಾಲಾವಧಿ —ಇವುಗಳ ಬಗೆಗೆ ಇನ್ನಷ್ಟು ವಿವರ ಒದಗಿಸಿವೆ. ಹೀಗೆ, ಚರಿತ್ರಪೂರ್ವ ಕಾಲದಿಂದ ಗಾಂಧೀ ಯುಗದ ತನಕ ಭಾರತದ ನಡಿಗೆಯ ಹೆಜ್ಜೆಗುರುತುಗಳು ಸಂಪುಟದಲ್ಲಿ ಮೂಡಿವೆ. ಹಿಂದಿನ ಸಂಪುಟಗಳಲ್ಲಿ ಭಾರತದ ವ್ಯಾಪ್ತಿಗೆ ಒಳಪಟ್ಟು ಬಂದಿರುವ ನೂರಾರು ಲೇಖನಗಳು ಈ ಸಂಪುಟಕ್ಕೆ ಪೂರಕ.

'ಭಾರತದ ಕಥೆ'ಯ ಬಹ್ವಂಶ ನಮ್ಮ ಸಂಪಾದಕವರ್ಗದ ಸದಸ್ಯರ ಬರೆಹಗಳೆ. ದೇಶದ ವಿವಿಧ ಭಾಷೆ ಸಾಹಿತ್ಯಗಳನ್ನು ಕುರಿತ ಲೇಖನಗಳನ್ನು ಆಯಾ ಭಾಷಾ ಸಾಹಿತ್ಯಗಳ ಪಂಡಿತರೇ ಬರೆದಿದ್ದಾರೆ. (ಹಿಂದಿನ ಸಂಪುಟದಲ್ಲಿ ಕನ್ನಡ ಸಾಹಿತ್ಯವನ್ನು ಕುರಿತು ದೀರ್ಘ ಲೇಖನವಿದೆ. ಇಲ್ಲಿ ಮತ್ತೆ ಅದರ ಬಗೆಗೆ ಬರೆದಿಲ್ಲ.) ಬೇರೆಯೂ ನೂರರಷ್ಟು ಲೇಖನಗಳನ್ನು ವಿದ್ವಾಂಸ ಮಿತ್ರರಿಂದ ಬರೆಸಿದ್ದೇವೆ.

ಪ್ರತಿ ದಿನ ಸಂಪಾದಕವರ್ಗದ ಸಭೆಯ ಬಳಿಕ ಲೇಖನಗಳ ರಚನೆ, ಪರಿಷ್ಕರಣ, ಮೂರು ತಿಂಗಳಿಗೊಮ್ಮೆ 'ಜ್ಞಾನ ಪ್ರಯೋಗಾಲಯ'ದಲ್ಲಿ ಒರೆಗಲ್ಲು ಪರೀಕ್ಷೆ, ಸಮಾಲೋಚಕರಿಂದ ಪರಿಶೀಲನೆ —ಇದು ಹಿಂದಿನ ಸಂಪುಟಗಳಲ್ಲಿ ನಾವು ರೂಢಿಸಿ ಪರಿಪೂರ್ಣಗೊಳಿಸಿದ ಕಾರ್ಯವಿಧಾನ. ಅದನ್ನೇ ಈ ಸಂಪುಟದಲ್ಲಿಯೂ ಅನುಸರಿಸಿದ್ದೇವೆ. ಎಂದಿನಂತೆ ಈ ಸಲವೂ ಸೂಚಿಕೆ ಇದೆ. ಹೂರಣದ ಬಳಕೆಗೆ ಇದರ ವಾಚನ ಸಹಕಾರಿ.

ಇತರ ಸಂಪುಟಗಳಂತೆ 'ಭಾರತದ ಕಥೆ'ಯೂ ಸಾಮಾನ್ಯಕ್ಕೂ ಹೆಚ್ಚು ಚಿತ್ರಗಳನ್ನು ಒಳಗೊಂಡಿದೆ. 21 ವರ್ಣಫಲಕಗಳಲ್ಲಿ 71 ವರ್ಣಚಿತ್ರಗಳಿವೆ. ಛಾಯಾಚಿತ್ರಗಳನ್ನು ಹಲವಾರು ಮೂಲಗಳಿಂದ ಪಡೆದಿದ್ದೇವೆ.

ಸಮಾಲೋಚಕರಾಗಿ, ಲೇಖನ ಇಲ್ಲವೆ ಮೂಲಸಾಹಿತ್ಯ ಒದಗಿಸಿ, ವರ್ಣಚಿತ್ರ ಛಾಯಾಚಿತ್ರಗಳನ್ನು ಪೂರೈಸಿ —ಹೀಗೆ ಇತರ ಹತ್ತಾರು ವಿಧಗಳಲ್ಲಿ ನಮಗೆ ನೆರವಾದವರಿಗೆಲ್ಲ ಕೃತಜ್ಞತೆ ಅರ್ಪಿಸುತ್ತಿದ್ದೇವೆ.

ಈ ಸಂಪುಟ ಕೊನೆಗೊಂಡಿರುವುದು 'ಹೋಳಿ'ಯಲ್ಲಿ. 'ಜ್ಞಾನ ಗಂಗೋತ್ರಿ' ಯೋಜನೆ ಈಗ ಮುಕ್ತಾಯವಾಗುವುದರಿಂದ, ನನ್ನ ಹಾಗೂ ನನ್ನ ಸಹೋದ್ಯೋಗಿಗಳ ಪಾಲಿಗೆ ಈ ಹೋಳಿ ಹಬ್ಬ ಅರ್ಥಪೂರ್ಣವೇ ಸರಿ!

10 ಮಾರ್ಚ್ 1974
ಬೆಂಗಳೂರು

ನಿರಂಜನ
ಪ್ರಧಾನ ಸಂಪಾದಕ

ಇಂತಿ ನಮಸ್ಕಾರ

೧

ಎಂಬತ್ತೈದು ದಿನಗಳನ್ನು ಬಾಹ್ಯಾಂತರಿಕ್ಷದಲ್ಲಿ ಕಳೆದು ಭೂಮಿಗೆ ಮರಳಿದ ವ್ಯೋಮಯಾತ್ರಿಗಳು ಆರೋಗ್ಯವಂತರಾಗಿಯೇ ಕಂಡರಂತೆ; ಆದರೆ, ನಡೆಯುವಾಗ ತುಸು ತೂರಾಡಿದರಂತೆ. ನಾನು ಮತ್ತು ನನ್ನ ಸಹೋದ್ಯೋಗಿಗಳು (ಅವರಲ್ಲಿ ಹೆಚ್ಚಿನವರು) ನಾಲ್ಕು ವರ್ಷ ಒಂಭತ್ತು ತಿಂಗಳ ಜ್ಞಾನ ಗಂಗೋತ್ರಿ ಯಾತ್ರೆಯ ಬಳಿಕ ಸ್ವಲ್ಪ ಮಟ್ಟಿಗೆ ಆ ವ್ಯೋಮಯಾನಿಗಳಂತೆಯೇ ಇದ್ದೇವೆ!

ಜ್ಞಾನಗಂಗೆಯ ಮೂಲದತ್ತ ಪಯಣ ರೋಮಾಂಚಕಾರೀ ಸಾಹಸ. ಪ್ರಯಾಸದ ಈ ದೂರ ನಡಿಗೆ ಸಹ್ಯವಾಗದವರು ಅಗಲಿದರು. ನಿರ್ದಿಷ್ಟ ಹಂತದ ತನಕ ಬಂದವರು ಅದನ್ನು ತಲಪಿದ ಮೇಲೆ, ನಮಗೆ ಶುಭ ಹಾರೈಸಿ, ಹಿಂದೆ ನಿಂತರು. ಹುಮ್ಮಸ್ಸಿನ ಬೇರೆ ಕೆಲವರು ಹೊಸದಾಗಿ ತಂಡವನ್ನು ಸೇರಿಕೊಂಡರು. ದಾರಿಯಲ್ಲಿ (ಎರಡನೆಯ ಸಂಪುಟದ ರಚನೆ ಮುಗಿಯುವ ವೇಳೆಗೆ), ಉರುಳಿ ಬಂದ ಹಿಮಬಂಡೆಯ ಕೆಳಗೆ ನಾನು ಸಿಲುಕಿಕೊಂಡೆ. ಕಣ್ಮುಚ್ಚಲು ನಿರಾಕರಿಸಿ ಎದ್ದು ನಿಂತವನಿಗೆ, ಸಹೋದ್ಯೋಗಿಗಳು ಊರುಗೋಲಾದರು. ಗುರಿ ಸೇರುವ ದೃಢ ನಿಶ್ಚಯದಿಂದ ಪಯಣ ಮುಂದುವರಿಸಿದೆವು.

ಮುಂದೆ ನನ್ನ ಯುವಕ ಸಹೋದ್ಯೋಗಿಯೊಬ್ಬ ಅಪಮೃತ್ಯುವಿಗೆ ತುತ್ತಾದ. ಬೇರೆ ನಾಲ್ವರು ಬಂಧುಗಳು ಭದ್ರ ಉದ್ಯೋಗ ದೊರೆಯಿತೆಂದು ವಿದಾಯ ನುಡಿದರು.

ಕುಗ್ಗಿದ ಸಂಖ್ಯೆಯ ಬಳಲಿದ ತಂಡ. ಆದರೂ, ಉಳಿದ ದೂರ ಹೆಚ್ಚಲ್ಲ ಎಂದು ಮುಂದೆ ಸಾಗಿದೆವು. (ಆರನೆಯ ಸಂಪುಟವನ್ನು ನೋಡಿ ಮೆಚ್ಚಿದ ಶ್ರೀಸಾಮಾನ್ಯರೊಬ್ಬರು "ಅದ್ಭುತ ಕೆಲಸ! ಸಂಶೋಧಕರ ದೊಡ್ಡ ಬಳಗವೇ ನಿರ್ವಹಿಸಬೇಕು. ನಿಮಗೆಲ್ಲ ಧನ್ಯವಾದಗಳು!" ಎಂದರು.) ಪರ್ವತ ಶ್ರೇಣಿಗಳಲ್ಲಿ ನಮ್ಮ ದೊಂಬರಾಟ. ಕೆಳಗಿನವರ ಚಪ್ಪಾಳೆಯೇ ಆಕ್ಸಿಜನ್...

—ಅಂತೂ 'ಊರು' ಬಿಟ್ಟು 57 ತಿಂಗಳು ಮುಗಿದಿರುವ ಈ ದಿನ —1974 ಮಾರ್ಚ್ 10 ಭಾನುವಾರ— ಜ್ಞಾನ ಗಂಗೋತ್ರಿಯ ಹಿಮರಾಶಿಯಲ್ಲಿ ನಿಂತು ಧನ್ಯತೆಯ ಭಾವನೆಯಿಂದ ಸ್ವಲ್ಪ ಮೈಮರೆತಿದ್ದೇವೆ.

೨

ಈ ಸಾಹಸಕ್ಕೆ ಸಂಬಂಧಿಸಿದ ಕೆಲವು ಚಿತ್ರಗಳನ್ನು ನೆನಪಿನ ಕತ್ತಲು ಕೋಣೆಯಿಂದ ಹೊರತೆಗೆದು ನಾನಿಲ್ಲಿ ಪೋಣಿಸಬೇಕು. (ಪಾರ್ಶ್ವ ವಾಯು ಬಡಿದಾಗ ನನಗೆ ಸ್ಮೃತಿಲೋಪವಾಗಲಿಲ್ಲ. ಬದಲು, ಕೆಲವೇ ದಿನಗಳಲ್ಲಿ, ಸ್ಮರಣಶಕ್ತಿ ಮೊದಲಿಗಿಂತಲೂ ಹೆಚ್ಚು ತೀವ್ರವಾಯಿತು. ಸ್ವಲ್ಪ ನಷ್ಟಭರ್ತಿ, ಪರಿಹಾರ!)

ಮಿತ್ರರಾದ ಪ್ರೊ. ದೇಜಗೌ ಮಾನಸಗಂಗೋತ್ರಿಯ ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾಗಿದ್ದ ಕಾಲ. ಹದಿನಾಲ್ಕು ವರ್ಷ ಕಳೆದರೂ ಮುಗಿಯದೆ ತೆವಳುವ ಸರಕಾರೀ ಯೋಜನೆಯಾದ ಕನ್ನಡ ವಿಶ್ವಕೋಶವನ್ನು ಕನ್ನಡ ಅಧ್ಯಯನ ಸಂಸ್ಥೆಗೆ —ಮೈಸೂರು ವಿಶ್ವವಿದ್ಯಾನಿಲಯಕ್ಕೆ— ಒಪ್ಪಿಸಬೇಕೆಂದು ನಾನು ಪ್ರತಿಪಾದಿಸಿದೆ.

ವಿದ್ಯಾಮಂತ್ರಿ ಮಾನ್ಯ ಕೆ. ವಿ. ಶಂಕರ ಗೌಡರೆಂದರು : "ಏನ್ರೀ, ಆಗುತ್ತೇನ್ರೀ ಅವರಿಂದ?"

ನನ್ನ ಚುಟುಕು ಉತ್ತರ : "ಕೊಟ್ಟು ನೋಡಿ."

× ×   × ×

ಕರ್ನಾಟಕ ಸಹಕಾರೀ ಪ್ರಕಾಶನ ಮಂದಿರದ ಪುಟ್ಟ ಕೊಠಡಿಯಲ್ಲಿ ಒಂದು ಪೂರ್ವಾಹ್ನ. ಜವರೇಗೌಡರು ಮತ್ತು ನಾನು. ಅವರು ಸ್ವಾಧೀನಪಡಿಸಿಕೊಂಡಿದ್ದ ವಿಶ್ವಕೋಶದ ಬಗೆಗೆ ಮಾತುಕತೆ. ಬರೆಯಲಾಗಿದ್ದ ಲೇಖನಗಳು ಕ್ಲಿಷ್ಟ ಎಂದು ಅವರ ಅಭಿಪ್ರಾಯ.

ದೇಜಗೌ : "ಕಿರಿಯರ ಉಪಯೋಗಕ್ಕೆ ಬೇರೆಯೇ ವಿಶ್ವಕೋಶ ಬೇಕು."

ನಾನು : "ಖಂಡಿತ ಮಾಡೋಣ. ಸಂಪಾದಕ ಮಂಡಲಿಗೆ ನೀವು ಅಧ್ಯಕ್ಷರಾಗಿ ಇದ್ದು ಬಿಡಿ."

× ×   × ×

"ನನಗೆ ವಹಿಸಿಕೊಟ್ಟರೆ ಸಂತೋಷದಿಂದ ಕನ್ನಡ ವಿಶ್ವಕೋಶದ ಕೆಲಸ ಮಾಡ್ತೇನೆ," ಎಂದು ಕೆಲವು ವರ್ಷಗಳಿಗೆ ಹಿಂದೆಯೊಮ್ಮೆ ಶಿಕ್ಷಣ ಇಲಾಖೆಯ ಹಿರಿಯ ಅಧಿಕಾರಿ ಮಿತ್ರ ಎಚ್. ವಿ. ಶ್ರೀರಂಗರಾಜ್ ನನ್ನೊಡನೆ ಹೇಳಿದ್ದರು. ಅವರನ್ನು ಕಾಣಲು ಹೋದೆ.

ನಾನು : "ಕಿರಿಯರಿಗೆ ಉಪಯುಕ್ತವಾಗಬೇಕಾದ ವಿಶ್ವಕೋಶ. ಕೊಂಡುಕೊಳ್ಳುವುದು ಶಿಕ್ಷಣ ಇಲಾಖೆಯೇ. ಒಂದು ಕರಡು ನಕಾಶೆ ಸಿದ್ಧಪಡಿಸಿಕೊಡಿ."

ಅವರ ಉತ್ತರ : ಹಸನ್ಮುಖ. ಹರ್ಷ. ಮೌನ. ಇಲ್ಲಿ ಮೌನದ ಅರ್ಥ ಪೂರ್ಣಸಮ್ಮತಿ.

× ×   × ×

ಯೋಜನೆಯ ರೂಪುರೇಷೆಗಳನ್ನು ಸಿದ್ಧಗೊಳಿಸಿ ಪ್ರಕಾಶನ ಮಂದಿರದ ಆಡಳಿತ ಮಂಡಳಿಯ ಮಾನ್ಯ ಸದಸ್ಯರಿಗೆ ವಿವರಿಸುವ ಸಡಗರ...

ಸಂಪಾದಕ ಮಂಡಲಿಯ ಸದಸ್ಯರಾಗಿರುವಂತೆ ಆ ಮಿತ್ರರನ್ನು ಈ ಮಿತ್ರರನ್ನು ಕೇಳಲು ಹೊರಟಾಗ ಸಂತೋಷ...

ಕಿರಿಯರ ವಿಶ್ವಕೋಶಕ್ಕೊಂದು ಹೆಸರು. 'ಜ್ಞಾನ ಗಂಗೋತ್ರಿ' ಎಂದಿಡಬೇಕೆಂದು ಬಯಕೆಯಾಗಿ, ಹತ್ತಾರು ಹೆಸರುಗಳನ್ನು ತೂಗಿ ನೋಡಿದ ಮೇಲೂ 'ಜ್ಞಾನ ಗಂಗೋತ್ರಿ'ಯೇ ಸರಿ ಎನಿಸಿದಾಗ, ತೃಪ್ತಿ...

× ×   × ×

ವರ್ಷಗಳ ಹಿಂದೆ ಅಧಿಕಾರದಲ್ಲಿದ್ದ [illegible] ಅವಧಿಯಲ್ಲಿ, ಜನನಾಯಕ ರಾಮಕೃಷ್ಣ ಹೆಗಡೆಯವರೂ ಕೆ. ವಿ. ಶಂಕರ ಗೌಡರೂ ಸ್ಥಾಪಿಸಿದ ಸಂಸ್ಥೆ ಕರ್ನಾಟಕ ಸಹಕಾರೀ ಪ್ರಕಾಶನ ಮಂದಿರ. ಇದರ ಮೊದಲ ಪ್ರಕಟಣೆ ನನ್ನ '[illegible]'—ಭಾರತವನ್ನು ಚೀನ ಆಕ್ರಮಿಸಿದಾಗ ಬರೆದುದು. ನಾನು ಮಂದಿರದ ಪ್ರಧಾನ ಸಂಪಾದಕನಾದದ್ದು ಈ ಆಕಸ್ಮಿಕ ಸಂಬಂಧದ ಪರಿಣಾಮವಾಗಿ. ಆ ನೆಲೆಯಿಂದ ಜ್ಞಾನ ಗಂಗೋತ್ರಿ ಯೋಜನೆಯೊಂದಿಗೆ ವಿಧಾನ ಸೌಧದ ವಿಶಾಲ ಕೊಠಡಿಗಳ ಬಾಗಿಲುಗಳನ್ನು ನಾನು ತಟ್ಟಲು ಆರಂಭ.

ಮಂತ್ರಿಗಳು [illegible] ಸಂಸ್ಥೆ ಮಂಡಿಸಿದ ಯೋಜನೆ. ಆದರೂ —ಅಥವಾ ಆ ಕಾರಣದಿಂದಲೇ— [illegible] ಅರ್ಥ ಖಾತೆ ಫೈಲಿನ ಅಲೆದಾಟ. ಶಿಕ್ಷಣ ಕಾರ್ಯದರ್ಶಿ ಐ. ಎ. ಎಸ್. ಅಧಿಕಾರಿ ಟಿ. ಆರ್. [illegible] ಮಾತುಕತೆ. ಕೆದಕಿ ನೋಡುವ ಅವರ ದೃಷ್ಟಿ. [illegible] ಐ. ಎ. ಎಸ್. ಅಧಿಕಾರಿ ಟಿ. ಆರ್. ರಾಮಚಂದ್ರನ್ ಆ ಸ್ಥಾನಕ್ಕೆ ಬಂದಾಗ, ಅಂತಿಮ ತೀರ್ಮಾನ.

× ×   × ×

[illegible] ಭರತ್ ಅವರ [illegible] ಪ್ರಕಾಶನ ಸಂಬಂಧದ [illegible] (ನನ್ನೊಂದಿಗೆ ಪ್ರಕಾಶನ ಮಂದಿರದ ಮ್ಯಾನೇಜಿಂಗ್ ಡೈರೆಕ್ಟರ್ ಹಿ.ಎಸ್. ಭಟ್.) ಭರತ್ ಅವರು ತೋರಿದ ವಿಶ್ವಾಸ.

ಶಿಕ್ಷಣ ಶಾಖೆ, ಅರ್ಥ ಶಾಖೆ, ಕಾನೂನು ಶಾಖೆ...

ರಾಮಚಂದ್ರನ್ ಅವರ ಕೊಠಡಿಯಲ್ಲಿ ರೂ. 9 ಲಕ್ಷ ಸಾಲ ಪಡೆಯುವ ಬಗೆಗೆ ಕರಾರು ಪತ್ರಕ್ಕೆ, ಅವರು ತೋರಿದ ಗೆರೆಯ ಮೇಲೆ ಸಹಿ—ಮಂದಿರದ ಅಧ್ಯಕ್ಷ ಜಿ. ಎಸ್. ಬೊಮ್ಮೇಗೌಡರದು ; ಪಿ. ಎಸ್. ಭಟ್ಟರದು ; ನನ್ನದು.

ಐದು ವರ್ಷಗಳಲ್ಲಿ ಮುಗಿಸಬೇಕಾದ ಆರು ಸಂಪುಟಗಳ ಯೋಜನೆ. ಗ್ರಾಂಟ್ ಇಲ್ಲ. ಸಹಾಯಧನ ಇಲ್ಲ. ಸಾಲ—ತೀರಿಸಬೇಕಾದ ಸಾಲ. ಆದರೆ ಅದು ಬಡ್ಡಿರಹಿತ. ಶಾಲಾ–ಕಾಲೇಜು ವಾಚನಾಲಯಗಳಿಗಾಗಿ 15.000 ಪ್ರತಿ ಕೊಳ್ಳುವ ಭರವಸೆ.

ಕೇಂದ್ರದ ಶಿಕ್ಷಣ ಮಂತ್ರಿ ಡಾ. ವಿ. ಕೆ. ಆರ್. ವಿ. ರಾಯರಿಂದ 'ಜ್ಞಾನ ಗಂಗೋತ್ರಿ' ಯೋಜನೆಯ ಉದ್ಘಾಟನೆ, 1969 ಜೂನ್ 10 ರಂದು, ಮಂದಿರದ ಸ್ವಂತ ಕಟ್ಟಡವಾದ ಜಯನಿವಾಸದ ಆವರಣದಲ್ಲಿ. ಆರರ ಜೊತೆಗೆ ಭಾರತಕ್ಕೆ ಮೀಸಲಾದ ಇನ್ನೂ ಒಂದು ಸಂಪುಟ ಇರಲಿ —ಎಂದು ಅವರ ಸಲಹೆ. ಉಪಯುಕ್ತ ಸಂಪುಟ. ''ಆಗಲಿ'' ಎಂದಲ್ಲವೆ ಉತ್ತರ ?

ಯೋಜನೆಯ ಪುನರ್ವಿಮರ್ಶೆ. ಏಳು ಸಂಪುಟಗಳು. ರಚನೆಯ ಕಾಲಾವಧಿ ಆರು ವರ್ಷ.

ದುಡಿಮೆ ......ಸಹೋದ್ಯೋಗಿಗಳ ಆಯ್ಕೆ...... ದುಡಿಮೆ .... ದುಡಿಮೆ. ....

ಪ್ರಥಮ ಸಂಪುಟ 'ಮನುಕುಲದ ಕಥೆ'. 1970 ಸೆಪ್ಟೆಂಬರ್ 23ರಂದು ಬಿಡುಗಡೆಯಾದಾಗ, ಜ್ಞಾನ ಭಿಕ್ಷುಗಳಾದ ನಾವು ಇನ್ನೂ ಹಿಮಾಲಯದ ಬುಡದಲ್ಲೇ ಇದ್ದೇವೆ —ಎಂಬ ಭಾವನೆ.

ವಿಜ್ಞಾನ ಸಂಪಾದಕರಾಗಿ ಆಗ ಆಗಮಿಸಿದವರು ಮುಲ್ಕಿಯ ವಿಜಯ ಕಾಲೇಜಿನ ಅಧ್ಯಾಪಕ ಅಡ್ಯನಡ್ಕ ಕೃಷ್ಣಭಟ್. ಅವರು ಸಂಪಾದಿಸುತ್ತಿದ್ದ 'ವಿಜ್ಞಾನ ಲೋಕ' ಮಾಸಪತ್ರಿಕೆಯ ಪರಿಚಯ ನನಗಿತ್ತು. ಜೊತೆ ದುಡಿಮೆಗೆ ಒಪ್ಪಿಬಂದರು. (ಆದರ್ಶವೆನಿಸುವ ವಾತಾವರಣವಲ್ಲ. ಆದರೂ, ಎರಡು ವರ್ಷಗಳಿಗೆಂದು ಬಂದವರು ಇಮ್ಮಡಿ ಕಾಲ –ಗಂಗೋತ್ರಿ ಯಾತ್ರೆ ಮುಗಿಯುವವರೆಗೂ– ನಿಂತರು.)

'ಜೀವಜಗತ್ತು' ಬಿಡುಗಡೆ 1971 ಮೇ 26 ರಂದು. ದಿನದ ಬಹುಹೊತ್ತು ಆಕಾಶ ದಿಟ್ಟಿಸುತ್ತ ಮಲಗಿರುತ್ತಿದ್ದ ಬೇಸರದ ದಿನಗಳು. ಜಯನಿವಾಸವನ್ನು ಮಾರಲು ಉದ್ದೇಶಿಸಿದ ಕಾರಣ ಆ ಕಟ್ಟಡವನ್ನು ತೆರವು ಮಾಡಬೇಕೆಂದು ಮ್ಯಾನೇಜಿಂಗ್ ಡೈರೆಕ್ಟರರಿಂದ ನಿರ್ದೇಶ ಬಂತು (1971 ಜೂಲೈ 16). ಜಯನಗರದಲ್ಲಿ ಕಡಮೆ ಬಾಡಿಗೆಯ ಮನೆ ಗೊತ್ತುಮಾಡಿ (ತಿಂಗಳಿಗೆ ರೂ. 400), ಹೆಚ್ಚು ಬಾಡಿಗೆಯ (ರೂ. 1.500) ಜಯನಿವಾಸವನ್ನು ಬಿಟ್ಟು ಬಂದೆವು. (ಪರಿಣಾಮವಾಗಿ, ಜ್ಞಾನ ಗಂಗೋತ್ರಿ ಘಟಕ ಬಾಡಿಗೆ ಒಂದರಲ್ಲೇ ರೂ. 36.850 ಉಳಿತಾಯ ಸಾಧಿಸಿತು ; ಹತ್ತಿರದಲ್ಲೇ ಇದ್ದ ಜಯನಗರ ಹೈಸ್ಕೂಲಿನ ನೆರವಿನಿಂದ ಜ್ಞಾನ ಪ್ರಯೋಗಾಲಯ ರೂಪುಗೊಂಡಿತು ; ನಗರದ ಗದ್ದಲದಿಂದ ದೂರವಾದ ಪ್ರಶಾಂತ ಸ್ಥಳದಲ್ಲಿ ಬರೆವಣಿಗೆಯ ವೇಗವೂ ಹೆಚ್ಚಿತು !)

'ಭೌತ ಜಗತ್ತು' ಬಿಡುಗಡೆ 1972 ಜನವರಿ 27 ರಂದು. 'ಯಂತ್ರ ಜಗತ್ತು' ಬಿಡುಗಡೆ 1972 ಆಗಸ್ಟ್ 6 ರಂದು.

ಅದಕ್ಕೆ ನಾಲ್ಕು ತಿಂಗಳ ಮುನ್ನ ಹಿರಿಯ ಪತ್ರಿಕೋದ್ಯಮಿ ಬರೆಹಗಾರ ಮಾ. ನಾ. ಚೌ. ನಮ್ಮ ಬಳಗವನ್ನು ಸೇರಿದರು. ಸಾಹಿತ್ಯ ಸಂಪಾದಕರಾಗಿ ಎಲ್.ಎಸ್. ಶೇಷಗಿರಿರಾಯರ ನಿರ್ಗಮನದಿಂದ ಉಂಟಾಗಿದ್ದ ಕೊರತೆಯನ್ನು ತುಂಬಿದರು.

ಐದನೆಯ ಸಂಪುಟ 'ಕಲೆ, ಸಾಹಿತ್ಯ'ದ ಬಿಡುಗಡೆ 1973 ಮಾರ್ಚ್ 25 ರಂದು.

ಆರನೆಯ ಸಂಪುಟ 'ಕ್ರೀಡೆ, ಮನೋಲ್ಲಾಸ'ದ ಬಿಡುಗಡೆ 1973 ಆಗಸ್ಟ್ 26 ರಂದು.

ಈ ದಿನ ಕೊನೆಯ ಸಂಪುಟ 'ಭಾರತದ ಕಥೆ' ಯ ಪ್ರಕಾಶನ. ಯೋಜನೆಯನ್ನು ಉದ್ಘಾಟಿಸಿದ ಡಾ. ವಿ. ಕೆ. ಆರ್. ವಿ. ರಾಯರ ಮಂಗಲ ಭಾಷಣದೊಂದಿಗೆ ಯೋಜನೆಯ ಮುಕ್ತಾಯ ....

ಸರಕಾರದ ಸಾಲ ತೀರಿಸಿದ್ದೇವೆ. ನಿಷ್ಠುರ ಮಿತ ವ್ಯಯ ಸಾಧಿಸಿ ಸಂಪಾದಕೀಯ ವೆಚ್ಚವನ್ನು 11 ರಿಂದ 5.5 ಲಕ್ಷ ರೂಪಾಯಿಗಳಿಗೆ ಇಳಿಸಿದ್ದೇವೆ. ಕಾರ್ಯಾಲಯದ ವೆಚ್ಚಕ್ಕೆ—ವೇತನ ಇತ್ಯಾದಿಗಳಿಗೆ— ತೊಂದರೆಯಾಗದಿರಲೆಂದು, ಜ್ಞಾನ ಗಂಗೋತ್ರಿಯ ಸಂಪುಟಗಳನ್ನು ನಾವೇ ಮಾರಾಟಮಾಡಿ ರೂ. 2.50 ಲಕ್ಷ ಸಂಪಾದಿಸಿದ್ದೇವೆ. ಇದಲ್ಲದೆ, ನಾವು ಬಳಸಿರುವುದು, ಸರಕಾರಕ್ಕೆ 15.000 ಪ್ರತಿಗಳನ್ನು ಸಲ್ಲಿಸಿ ದೊರೆಯುವ ರೂ. 3.50 ಲಕ್ಷ ಮಾತ್ರ. (ಒಂದು ಸಂಪುಟದ 15,000 ಪ್ರತಿಗಳಿಗೆ ಸರಕಾರದಿಂದ ದೊರೆಯುವುದು ರೂ. 5.50 ಲಕ್ಷ. ಆ ಸಂಪುಟದ ಮುದ್ರಣಕ್ಕಾಗಿ ಸರಕಾರೀ ಮುದ್ರಣಾಲಯಕ್ಕೆ ಸಂದಾಯ ರೂ. 5 ಲಕ್ಷ. ಹೀಗೆ ಒಂದು ಸಂಪುಟದಲ್ಲಿ ಉಳಿಯುವುದು ಸುಮಾರು ರೂ. 50,000) ಅಂತೂ ಕೊನೆಯಲ್ಲಿ, ಜ್ಞಾನ ಗಂಗೋತ್ರಿ ಘಟಕದ [illegible] ಪ್ರಕಾಶನ [illegible]ಕ್ಕೆ ರೂ. [illegible] ಲಕ್ಷ [illegible] 'ಜ್ಞಾನ ಗಂಗೋತ್ರಿ'ಯ ಪ್ರತಿಗಳನ್ನು ಒಪ್ಪಿಸುತ್ತಿದ್ದೇವೆ.

—ಇದು 'ಜ್ಞಾನ ಗಂಗೋತ್ರಿ'ಯ ವ್ಯವಹಾರ ಮುಖ.

ಯೋಜನೆಗೆ ಒಪ್ಪಿಗೆ ನೀಡುವ ಸಂದರ್ಭದಲ್ಲಿ ವಿದ್ಯಾಸಚಿವ ಶಂಕರ ಗೌಡರು ಕೇಳಿದ್ದರು : ''ಏನ್ರಿ, ಮಾಡೋಕೆ ಆಗುತ್ತೇನ್ರಿ ?''

ನನ್ನ ಚುಟುಕು ಉತ್ತರ : ''......... ನೋಡಿ.''

ಕಳೆದ ತಿಂಗಳು ಅವರು ಮಂಡ್ಯದಿಂದ ನಮ್ಮ ಕಾರ್ಯಾಲಯಕ್ಕೆ ಬಂದು, ಹಿರಿಯಣ್ಣನ ವಾತ್ಸಲ್ಯದಿಂದ ನನ್ನನ್ನು ತಬ್ಬಿಕೊಂಡು, ''ಮಾಡಿಯೇ ಬಿಟ್ಟಿರಲ್ರೀ........."ಎಂದರು.

ಡಾಕ್ಟರರ ಅಭಿಪ್ರಾಯದಂತೆ, ನನ್ನ ದೇಹಸ್ಥಿತಿಗೆ ಉಮ್ಮಳ ಒಳ್ಳೆಯದಲ್ಲ. ಆದರೆ ಇಂಥ ಪ್ರಸಂಗಗಳಲ್ಲಿ ಒಸರುವ ಹರ್ಷಾಶ್ರುವನ್ನು ತಡೆಯುವುದು ಹೇಗೆ ?

× × × ×

ಜಯನಗರದ ನಮ್ಮ ಕಾರ್ಯಾಲಯಕ್ಕೆ ಎರಡು ಸಲ ಬಂದು ನಮ್ಮ ದುಡಿಮೆಯ ಸಂತೋಷದಲ್ಲಿ ಭಾಗಿಯಾದ ಇನ್ನೊಬ್ಬರು, ರಾಮಕೃಷ್ಣ ಹೆಗಡೆಯವರು. ಅರ್ಥಮಂತ್ರಿಯಾಗಿದ್ದಾಗ ಅವರು 9 ಲಕ್ಷ ರೂ ಸಾಲ ನೀಡದೇ ಇದ್ದಿದ್ದರೆ ಜ್ಞಾನ ಗಂಗೋತ್ರಿಯ ಕೆಲಸ ಆಗುತ್ತಿರಲಿಲ್ಲ. ಆದರೆ ನಮ್ಮ ಪಾಲಿಗೆ ಅವರು [illegible] (ನಮ್ಮದು [illegible]!). ಅವರು [illegible] (... ರೂ. ಅವಧಿಗೆ ಮುಂಚೆಯೇ ಸಾಲ ಮರುಸಂದಾಯವಾದಾಗ, ಮಾಜಿ ಅರ್ಥಮಂತ್ರಿಗೂ ಸಂತೋಷವಾಗಲೇಬೇಕು.)

ಹೆಗಡೆ–ಶಂಕರ ಗೌಡ ಇಬ್ಬರದೂ ನನ್ನ ಪಾಲಿಗೆ ಔದಾತ್ಯದ, ವಿಶ್ವಾಸದ ಋಣ. ಆ ಋಣದಿಂದ ಮುಕ್ತ ಎಂದು ನನಗೆ ಸಮಾಧಾನ.

೩

ಒಂದು ವಿಶ್ವಕೋಶದಲ್ಲಿ ಈ ಮಾತುಗಳನ್ನೆಲ್ಲ ಹೇಳಬೇಕೆ ?

ಕನ್ನಡ ಕಿರಿಯರ ಜ್ಞಾನವಿಕಾಸದ ಮಹಾಯಜ್ಞಕ್ಕೆ ಅಲ್ಪ ಕಾಣಿಕೆ, ನಾನೂ ನನ್ನ ಸಹೋದ್ಯೋಗಿಗಳೂ ಸಿದ್ಧಗೊಳಿಸಿರುವ 'ಜ್ಞಾನ ಗಂಗೋತ್ರಿ ' ಸಂಪುಟಗಳು. ಅವುಗಳ ರಚನೆಯ ಹಿಂದಿನ ಕಥೆಯನು —ಪೂರ್ಣ ಕಥೆಯಲ್ಲವಾದರೆ ಸ್ವಲ್ಪಾಂಶವನ್ನಾದರೂ— ಕಿರಿಯರೂ ಅವರ ಹಿರಿಯರೂ ತಿಳಿಯುವುದು ಉಚಿತ. ಈ ಭಾವನೆಯಿಂದ ಈ ಕೆಲ ಮಾತುಗಳನ್ನು ಬರೆದಿದ್ದೇನೆ. ಎನ್‌ಸೈಕ್ಲೋಪೀಡಿಯಾ ಅಂದರೆ ಸಮಗ್ರವೃತ್ತದ ಶಿಕ್ಷಣ, ಎಲ್ಲದರ ಅರಿವು. ಅಂದ ಮೇಲೆ......

ಇಲ್ಲಿ ನಾನು ವೈಯುಕ್ತಿಕವಾಗಿಯೂ ಸಾಂಘಿಕವಾಗಿಯೂ ಜ್ಞಾನ ಗಂಗೋತ್ರಿ ಯಾತ್ರೆಯ ನನ್ನೆಲ್ಲ ಸಂಗಡಿಗರನ್ನು ನೆನೆಯಬೇಕು.

ಸಂಪಾದಕವರ್ಗದ ಅದ್ಯನಡ್ಕ ಕೃಷ್ಣಭಟ್, ಮಾ. ನಾ ಚೌಡಪ್ಪ, ಎಮ್. ಎನ್. ಸುಮಿತ್ರ, ಶ್ರೀಮತಿ ಹರಿಪ್ರಸಾದ್, ಎಂ ವಿಜಯ ಭಟ್, ಸಿ. ಗೋಪಾಲಕೃಷ್ಣನ್; ವಿವಿಧ ಕಾಲಾವಧಿಗಳಲ್ಲಿ ಸಂಪಾದಕವರ್ಗದಲ್ಲಿದ್ದ ಎಲ್.ಎಸ್. ಶೇಷಗಿರಿರಾವ್, (ಡಾ.) ವರದರಾಜ ಹುಯಿಲಗೋಳ, ಚಿ.ನ. ಮಂಗಳ, ಪ್ರ.ನ. ಅಲಮೇಲು, ರಾಜಾ ಶೈಲೇಶಚಂದ್ರ ಗುಪ್ತ, ಸಿಂಹ, (ದಿವಂಗತ) ಕಾ.ರಾ. ಸಾರಂಗ, ಎಂ.ಎಸ್. ಶ್ರೀ ಹರ್ಷ, ಎಂ. ಜಯರಾಮ ಅಡಿಗ, ಬಿ. ಅರುಣನಾರಾಯಣ; ಕಲಾವಿಭಾಗದಲ್ಲಿ. ಅಲ್ಪಸಮಯದವರಾದರೂ ಪೂರ್ಣಸಮಯದವರಷ್ಟೇ ಶ್ರದ್ಧೆಯಿಂದ ಬಳಗದವರಾಗಿ ದುಡಿದ ಕಮಲೇಶ್, ಕೆ. ಮುರಲೀಧರ, ಆರಂಭದಲ್ಲಿ ಸ್ವಲ್ಪಕಾಲ 'ಜ್ಞಾನ ಗಂಗೋತ್ರಿ'ಯ ಚಿತ್ರಕಾರರಾಗಿದ್ದ ಜಿ. ವೈ. ಹುಬ್ಳೀಕರ್ ಮತ್ತು ಚಿತ್ರ ರಚನೆಯಲ್ಲಿ ನೆರವಾದ ಇತರ ಹಲವರು ; ಆಡಳಿತ ವಿಭಾಗದ ಟಿ. ಕೆ. ರಂಗರಾಜ ಐಯಂಗಾರ್, ಕೆ. ಕೃಷ್ಣಮೂರ್ತಿ, ಎಂ. ಎಚ್. ಭಟ್, ಬಿ. ಉದಯರಾಮ, ವಿವಿಧ ಅವಧಿಗಳಲ್ಲಿ ಟೈಪಿಸ್ಟರಾಗಿದ್ದ ಜಿ. ಬಿ. ಜಗದೀಶ, ಕೆ. ಎನ್. ನಾಗರಾಜು, ನಾಗರಾಜ, ಯು. ಸಿ. ಭೈರಯ್ಯ, ಎಚ್. ಕೆ. ಗಂಗಗಿಂಡಯ್ಯ, ಎಚ್. ಆರ್. ವತ್ಸಲ, 'ನಾಲ್ಕನೆಯ ವರ್ಗದ ಅಧಿಕಾರಿ'ಗಳಾದ ಕೆಂಪಯ್ಯ, ಟಿ. ವೆಂಕಟಾಚಲಯ್ಯ, ಎನ್. ಗೋವಿಂದ, ಈ ಹುದ್ದೆಗಳಲ್ಲಿ ಹಿಂದೆ ಕೆಲ ಕಾಲವಿದ್ದ ಆರ್. ಶ್ರೀನಿವಾಸ, ಸಿ. ಅಕ್ಕಣ್ಣಪ್ಪ—ಈ ಎಲ್ಲ ಬಂಧುಗಳೂ ಗಂಗೋತ್ರಿಯ ದಾರಿಯಲ್ಲಿ ನಡೆದಿದ್ದಾರೆ. ಜ್ಞಾನ ಗಂಗೋತ್ರಿಯ ಯೋಜನೆಯ ಯಶಸ್ಸಿಗೆ ಇವರೆಲ್ಲರೂ ಕಾರಣರು.

ಯೋಜನೆಯ ಮುಕ್ತಾಯದ ಹೊತ್ತಿನಲ್ಲಿ ನನ್ನೊಂದಿಗಿರುವ ಬಂಧುಗಳಲ್ಲಿ ಕೃಷ್ಣಭಟ್ಟರು ಭೌತವಿಜ್ಞಾನ ವಿಭಾಗದ ಮುಖ್ಯಸ್ಥರಾಗಿ ಮುಲ್ಕಿಯ ವಿಜಯ ಕಾಲೇಜಿನ ತಮ್ಮ ಸ್ಥಾನಕ್ಕೆ ಮತ್ತೆ ಮರಳುತ್ತಾರೆ. ಉಳಿದವರೆಲ್ಲ —ಅವರಲ್ಲಿ ಜವ್ವನಿಗರೇ ಹೆಚ್ಚಿನವರು— ತಮ್ಮ ದಕ್ಷತೆಗೆ ಸರಿಹೋಗುವ ಉದ್ಯೋಗಗಳನ್ನು ಪಡೆದು ಬೆಳಗುವರೆಂಬ ಭರವಸೆ ನನಗಿದೆ.

'ಜ್ಞಾನ ಗಂಗೋತ್ರಿ'ಯ ರಚನೆಯಲ್ಲಿ ಪ್ರೊ. ದೇಜಗೌ ಅವರ ಹಿರಿತನದಲ್ಲಿ ಮಾರ್ಗದರ್ಶನ ನೀಡಿದ ಸಂಪಾದಕ ಮಂಡಲಿ, ನೆರವಾದ ಕರ್ನಾಟಕ ಸಹಕಾರೀ ಪ್ರಕಾಶನ ಮಂದಿರದ ಅಧ್ಯಕ್ಷ ಜಿ. ಎಸ್. ಬೊಮ್ಮೇಗೌಡರು ಹಾಗೂ ಡೈರಕ್ಟರರು, ಕಷ್ಟಸಾಧ್ಯವಾದ ಭಾರೀ ಮುದ್ರಣವನ್ನು ಸುಗಮಗೊಳಿಸಿದ ಸರಕಾರೀ ಮುದ್ರಣಾಲಯದ ಡೈರೆಕ್ಟರ್ ಬಿ.ಪಿ. ಮಲ್ಲರಾಜ ಅರಸರು, ನಮ್ಮ ಸಂಪುಟಗಳ ವಿವಿಧ ಸಮಾಲೋಚಕರು, ನೂರಾರು ಲೇಖನಗಳನ್ನೋ ಮೂಲ ಸಾಹಿತ್ಯವನ್ನೋ ಒದಗಿಸಿದ ಪರಿಣತ ಮಿತ್ರರು —ಜ್ಞಾನ ಪ್ರಯೋಗಾಲಯ ರೂಪಿಸಲು ನೆರವಾದ ಮಾನಸಗಂಗೋತ್ರಿ ವಿಶ್ವವಿದ್ಯಾಲಯದ ಛಾಯಾಗ್ರಾಹಕ ಎಚ್. ಎಸ್. ರಾಮಚಂದ್ರರಾವ್. ಸಂಪುಟಗಳ ಮಾರಾಟ ಕಾರ್ಯದಲ್ಲಿ ಸಹಕರಿಸಿದ ರಚನಾ ಅಡ್ವರ್ಟೈಸಿಂಗ್‌ನ ಸಿ. ಆರ್. ರಾವ್. ಹೆಸರಾಂತ ಛಾಯಾಚಿತ್ರಕಾರ ಬಿ. ಕೇಸರಸಿಂಗ್ —ಇವರೆಲ್ಲರನ್ನೂ ಕೃತಜ್ಞತಾಭಾವದಿಂದ ನೆನೆಯುತ್ತೇನೆ.

ಜ್ಞಾನ ಗಂಗೋತ್ರಿ ಯಾತ್ರೆಯಲ್ಲಿ ಸಹಯಾತ್ರಿಕರಾದವರು, ಬೇರೊಂದು ಕ್ಷೇತ್ರದ –ಸರಕಾರೀ ಮುದ್ರಣಾಲಯದ– ಆರ್. ನಾರಾಯಣ ಹಾಗೂ ಅವರ ನೇತೃತ್ವದಲ್ಲಿ ದುಡಿದವರು. ಈ ಬಂಧುಗಳು ಪ್ರತಿ ಸಂಪುಟವನ್ನೂ ಕೇವಲ ಎರಡೇ ತಿಂಗಳ ಅವಧಿಯಲ್ಲಿ ಅಚ್ಚುಕಟ್ಟಾಗಿ ಮುದ್ರಿಸಿಕೊಟ್ಟ ಪವಾಡಕರ್ತರು. ಇವರು ನಮ್ಮ ಸಂಗಾತಿಗಳಾಗದೇ ಇದ್ದಿದ್ದರೆ, ಯಾತ್ರೆ ಆಹ್ಲಾದಕರವಾಗುತ್ತಿರಲಿಲ್ಲ.

೪

ನಾವು ರಚಿಸಿರುವ ಸಂಪುಟಗಳು ದೋಷರಹಿತ ಎಂದು ಸಾರಲಾರೆ. "ಪರಿಪೂರ್ಣವಾಗಬೇಕೆಂದು ಕಾದರೆ ಈ ಜೀವಮಾನದಲ್ಲೇ ನನ್ನ ಗ್ರಂಥ ರಚನೆ ಮುಗಿಯದು," ಎಂದನಂತೆ, 13ನೆಯ ಶತಮಾನದ ಚೀನೀ ಇತಿಹಾಸಕಾರ ತಾಯ್ ತುಂಗ್.

ಯೋಜನೆಯ ಆರಂಭದಲ್ಲಿ ಆಗ ಸರಕಾರೀ ಮುದ್ರಣಾಲಯದ ಡೈರೆಕ್ಟರರಾಗಿದ್ದ ಎಂ.ಎ. ಶ್ರೀರಾಮರೊಡನೆ ಕಾಗದದ ಬಗೆಗೆ ಚರ್ಚಿಸಿದೆ.
"ಬಟ್ಟೆ ಚಿಂದಿ ಬೆರೆಸಿದ ಪಲ್ಪಿನ ಕಾಗದ ಬಹಳ ಕಾಲ ಬಾಳುತ್ತೆ," ಎಂದರು ಅವರು.
ನಾನು ಕೇಳಿದೆ: "ಅದಲ್ಲದಿದ್ದರೆ—?"
"ಸಾಮಾನ್ಯ ಹೊಳಪು ಕಾಗದ..."
"ನೋಡೋದಕ್ಕೆ ಚೆನ್ನಾಗಿರುತ್ತೆ, ಅಲ್ವೆ ?"
"ಹೌದು. ಬಾಳಿಕೆ ಬರೋದಿಲ್ಲ."
"ಅದೇ ಇರಲಿ. ನೋಡೋಕೆ ಚೆನ್ನಾಗಿದ್ದು ಎಲ್ರೂ ಮುಟ್ಟಿ ಮುಟ್ಟಿ...ಹತ್ತೇ ವರ್ಷಗಳಲ್ಲಿ ಹಾಳಾಗಿ ಹೋಗ್ಬೇಕು.ಪ್ರತಿಗಳು ಸಿಗಬಾರ್ದು. ಆಗ ಈ ಸಂಪುಟಗಳ ಪರಿಷ್ಕಾರ ಆವೃತ್ತಿ ಬರುತ್ತೆ. ಅಥವಾ, ಇನ್ನೊಂದು ತಂಡ ಬಂದು, ಇದಕ್ಕಿಂತಲೂ ಉತ್ತಮವಾದ ಕಿರಿಯರ **ವಿಶ್ವಕೋಶ** ತಯಾರಿಸುತ್ತೆ..."

ಜ್ಞಾನಗಂಗೆ ಹರಿಯುತ್ತಲೇ ಇರುತ್ತದೆ. ಪ್ರತಿ ವರ್ಷ ಏಳು ಸಂಪುಟಗಳಿಗೆ ಸಂಬಂಧಿಸಿದಂತೆ ಏಳು ಅಧ್ಯಾಯಗಳಿರುವ 'ಜ್ಞಾನ ಗಂಗೋತ್ರಿ ಅನುಬಂಧ' ಅಚ್ಚಾಗಲಿ. ಈ ಅನುಬಂಧಗಳ ಆಧಾರದ ಮೇಲೆ ಹತ್ತು ವರ್ಷಗಳಿಗೊಮ್ಮೆ 'ಜ್ಞಾನ ಗಂಗೋತ್ರಿ'ಯ ಪರಿಷ್ಕೃತ ಆವೃತ್ತಿ ಸಿದ್ಧವಾದರೆ, ಚೆನ್ನು. ಈ ಒಳ್ಳೆಯ ಕೆಲಸ ಯಾರಿಂದಲಾದರೂ ಆದೀತು ಎಂಬ ನಂಬುಗೆ ನನಗಿದೆ.

ಯೋಜನೆ ಆರಂಭವಾದಾಗ "ವಿಶ್ವಕೋಶದ ರಚನೆ ಒಬ್ಬಿಬ್ಬರಿಂದ ಆಗುವ ಕೆಲಸವಲ್ಲ" ಎಂದು ಯಾರಿಗೋ ಯಾರೋ ಹೇಳಿದರಂತೆ. ಪ್ರಾಸ್ಪೆಕ್ಟಸ್ ಓದಿದಂತೆ. "ಹಿಂದಿನ ಬರೆಹಗಳಲ್ಲಿ ಬುದ್ಧಿವಂತ. ಆದರೆ ಹಾಗೆ ಏನೂ ಕಾಣದು" ಎಂದು ಒಬ್ಬರು ನುಡಿದರೆ, ಇನ್ನೊಬ್ಬರು "ಲಕ್ಷಾಂತರ ರೂಪಾಯಿ ವ್ಯವಹಾರ, ಭಾರೀ ಹಂಚಿಕೆ!" ಎಂದರಂತೆ. ಬೆನ್ನ ಹಿಂದಿನ ಮಾತುಗಳಿಗೆ ಬೆಲೆಯಿಲ್ಲ.

ಆದರೆ ಒಬ್ಬ ಹಿರಿಯ ಪ್ರಾಧ್ಯಾಪಕ – ಕವಿ "ಈ ಕೆಲಸಕ್ಕೆ ಹತ್ತು ಹದಿನೈದು ವರ್ಷಗಳಾದರೂ ಬೇಕು. ಇದೇನು ಕಥೆ ಕಾದಂಬರಿಯಲ್ಲ," ಎಂದು **ಸ್ವತಃ ನನಗೇ** ಹೇಳಿದರು, 1969ರಲ್ಲಿ.

"ಅಲ್ಲಿ ನಾನಿದ್ದೇನೆ," ಎಂದು ಆಗ ಉತ್ತರಿಸಿದ್ದೆ. (ಅಹಂ, ಅತಿಯಾದ ಹಮ್ಮು, ಅಲ್ಲವೆ ?)
ಸಂಪುಟಗಳ ರಚನೆ ಮುಗಿದಿದೆ —ಹದಿನೈದಲ್ಲ, ಹತ್ತಲ್ಲ, ಐದಲ್ಲ, ನಾಲ್ಕು ವರ್ಷ ಒಂಭತ್ತು ತಿಂಗಳಲ್ಲಿ.
ನಾನು ಕಥೆ ಕಾದಂಬರಿಗಳ ಕ್ಷೇತ್ರದಿಂದ ಬಂದೆ. 'ಲೆಂಟ್ ಹ್ಯಾಂಡ್'! ಅಲ್ಲಿಗೆ ಈಗ ನಾನು ಮರಳಬೇಕು.

10 ಮಾರ್ಚ್ 1974
ಬೆಂಗಳೂರು

ಇಂತಿ ನಮಸ್ಕಾರ
ನಿರಂಜನ

ಭಾರತದ ಕಥೆ

ಸಮೀಕ್ಷೆ

೧

ವಿಶ್ವ—ಭಾರತ

"ಜನನೀ ಜನ್ಮಭೂಮಿಶ್ಚ
ಸ್ವರ್ಗಾದಪಿ ಗರೀಯಸೀ"

—ಸ್ವರ್ಗಕ್ಕಿಂತಲೂ ಮಿಗಿಲು ಜನನಿ. ಜನ್ಮಭೂಮಿ. ಉದಾತ್ತವಾದದ್ದು ಈ ಪ್ರಾಚೀನ ನುಡಿ.


ಅನಾಗರಿಕ ಮಾನವನೂ ಮಾತೆಗೆ ಪ್ರಾಧಾನ್ಯ ನೀಡಿದ್ದ. ಆಗ ಕುಟುಂಬಗಳಿಗೆ ಆಕೆಯದೇ ಒಡೆತನ. ಅನೇಕ ಪುರಾತನ ನಾಗರಿಕತೆಗಳಲ್ಲಿ ಮಾತೃದೇವತೆಯ ಆರಾಧನೆ ಇದ್ದಿತು.

ಹುಟ್ಟೂರಿನ ಮೇಲೆ ಎಲ್ಲರಿಗೂ ಮಮತೆ. ಸಂಚಾರಿ ಮಾನವ ಸಪರಿವಾರನಾಗಿ ಒಂದೆಡೆ ನೆಲೆಸತೊಡಗಿದ ಬಳಿಕ ತನ್ನ ನೆಲದ ಬಗೆಗೆ ಆತನಿಗೆ ಮೋಹ ಉದಿಸಿರಬೇಕು; ಆ ನೆಲದ ರಕ್ಷಣೆ ಪವಿತ್ರ ಹೊಣೆ ಎನಿಸಿರಬೇಕು. ಗ್ರಾಮಗಳು ರಾಜ್ಯವಾದಾಗ, ರಾಜ್ಯಗಳು ಬೆಳೆದು ಸಾಮ್ರಾಜ್ಯವಾದಾಗ, ರಾಷ್ಟ್ರಭಾವನೆ ಮೂರ್ತರೂಪ ತಳೆಯಿತು. ಈಶಸೇವೆಗೆ ಸಮನಾಯಿತು ದೇಶಸೇವೆ. ಮಾತೃಸ್ಥಾನ ಪಡೆಯಿತು ಸ್ವದೇಶ.

ನಮ್ಮ ಪೂರ್ವಜರು ಈ ನೆಲದ ಮೇಲೆ ಓಡಾಡಿದ್ದು ಯಾವ ಕಾಲದಲ್ಲಿ? ನೆಲೆನಿಂತು, ರಾಜ್ಯಕಟ್ಟಿ, ರಾಷ್ಟ್ರ ನಿರ್ಮಿಸಿ, ಜನ್ಮಭೂಮಿಯ ಸ್ತುತಿ ಆರಂಭಿಸಿದ್ದು ಯಾವಾಗ ?

ಭಾರತ ಎಂದು ನಾವು ಈಗ ಕರೆಯುವ ಭೂಭಾಗ 30 ಕೋಟಿ ವರ್ಷಗಳಿಗೆ ಹಿಂದೆ ಈಗಿನ ರೂಪದಲ್ಲಿ ಇರಲಿಲ್ಲ. ಹಿಮಾಲಯವಿರುವ ಜಾಗದಲ್ಲಿ ನೀರು ನಿಂತಿತ್ತು. ಜಲಾವೃತ ನಡುಗಡ್ಡೆಯಾಗಿತ್ತು ಇಂದಿನ ದಖ್ಖಣದ ಪೀಠಭೂಮಿ. ಹಿಮಾಲಯ ಎದ್ದು ಮೆರೆದುದು 3–4 ಕೋಟಿ ವರ್ಷಗಳಿಗೆ ಹಿಂದೆ. ಆ ಪರ್ವತಾವಳಿಯ ದಕ್ಷಿಣಕ್ಕಿರುವ ಪ್ರದೇಶ ಹೆಚ್ಚು ಕಡಮೆ ಈಗಿನ ರೂಪ ಪಡೆದು 10 ಲಕ್ಷ ವರ್ಷಗಳೋ 20 ಲಕ್ಷ ವರ್ಷಗಳೋ ಸಂದಿವೆ.

ಈ ಪ್ರಕೃತಿ ನಿರ್ಮಿತ ನೆಲದಲ್ಲಿ ಆಧುನಿಕ ಭಾರತೀಯನ ಅತ್ಯಂತ ಪ್ರಾಚೀನ ಬಂಧು ಕಾಣಿಸಿಕೊಂಡದ್ದು 1,50,000 ವರ್ಷಗಳಿಗೆ ಮೊದಲು. ಪುರಾತನ ಶಿಲಾಯುಗದ ಈತ ಹಿಮಾಲಯದ



ಮಿಕಗಳು, ಬೇಟೆಗಾರರು :
ನವಶಿಲಾಯುಗದ ಭಿತ್ತಿಚಿತ್ರ



ತಾಮ್ರದ ಆಯುಧಗಳು

1 ಎರಡು ಅಲಗು ಖಡ್ಗ 2 ಮನುಷ್ಯ ರೂಪ 3-4 ಈಟಿ ಗಾಳ 5 ಉಂಗುರ 6 ಎರಡು ಅಲಗು ಕೊಡಲಿ 7 ಕೊಡಲಿ 8 ಪಟ್ಟೆ ಏಣು ಅಸ್ತ್ರ

ಶ್ರೇಣಿಗೆ ಸೇರಿದ ಶಿವಾಲಿಕ ಬೆಟ್ಟಗಳ ತಪ್ಪಲಿನಲ್ಲಿದ್ದ. 50,000 ವರ್ಷ ಹಿಂದಿನದು ಮಧ್ಯ ಶಿಲಾಯುಗ. ಆ ವೇಳೆಗೆ ಮಾನವಕುಲ ಹೆಚ್ಚು ವಿಸ್ತಾರ ಪ್ರದೇಶವನ್ನು ಆವರಿಸಿತ್ತು. 25,000 ವರ್ಷಗಳಿಗೆ ಹಿಂದೆ —ನವಶಿಲಾಯುಗದ ಹೊತ್ತಿಗೆ— ಹಿಮಾಲಯದ ದಕ್ಷಿಣಕ್ಕಿರುವ ಉಪಭೂಖಂಡದ ಹಲವಾರು ಭಾಗಗಳಲ್ಲಿ ನಮ್ಮ ಪೂರ್ವಜರು ವಾಸವಾಗಿದ್ದರು.

ಮುಂದಿನ 20,000 ವರ್ಷ ಮಾನವ ಕ್ರಮಕ್ರಮವಾಗಿ ಪ್ರಗತಿಹೊಂದಿದ. ಭೌಗೋಳಿಕ ಎಲ್ಲೆ ಕಟ್ಟುಗಳಿಲ್ಲದೆ ಪೃಥ್ವಿಯ ಇತರ ಭಾಗಗಳಲ್ಲೂ ಆತ ಸ್ವೇಚ್ಛಾ ವಿಹಾರಿಯಾದ ಕಾಲ ಅದು. ಉರಿಯುವ ಅಗ್ನಿ, ತಿರುಗುವ ಗಾಳಿ ಅವನ ಪಯಣಕ್ಕೆ ಪಥ ನಿರ್ದೇಶ ಮಾಡಿದುವು. ನೈಲ್, ಯೂಫ್ರೆಟೀಸ್–ಟೈಗ್ರೀಸ್, ಸಿಂಧು, ಯಾಂಗ್ಟ್ಸಿ —ಈ ನದೀಪಾತ್ರಗಳಲ್ಲಿ ಆರಂಭದ ಮಾನವ ಸಮಾಜಗಳು ರೂಪುಗೊಂಡುವು. ನೆಲ ಉತ್ತು ಧಾನ್ಯ ಬೆಳೆಸುವುದನ್ನು, ಪ್ರಾಣಿಗಳನ್ನು ಪಳಗಿಸಿ ದುಡಿಸುವುದನ್ನು ಮಾನವ ಕಲಿತ.

ಆ ಬಗೆಯ ವ್ಯವಸ್ಥಿತ ಸಮಾಜ ಕ್ರಿಸ್ತ ಪೂರ್ವ 2000–1750ರ ಕಾಲಾವಧಿಯಲ್ಲಿ ಸಿಂಧು ನದೀಪಾತ್ರವಲ್ಲಿದ್ದಿತು. ನದಿಯುದ್ದಕ್ಕೆ ಮಾತ್ರವಲ್ಲ, ಹೆಚ್ಚು ವ್ಯಾಪಕ



ಮೊಹೆಂಜೊ ದಾರೊ ಬೊಂಬೆ ಆಟಿಗೆಗಳು

A ನಾಯಿ B ಉಗ್ರ ನಾಯಿ C ಕಪಿ D ಹಂದಿ E ಪಾರಿವಾಳ F ಕೋಳಿ G ಬಾತುಕೋಳಿ



ಸಿಂಧೂ ಸಮಕಾಲೀನ ನೈಲ್ ಕಣಿವೆಯಲ್ಲಿ ಉಳುಮೆ : ಆಟಿಗೆ



ಹರಪ್ಪಾ ಮುದ್ರಿಕೆಗಳು



ಮೊಹೆಂಜೊ ದಾರೊ : ಮಾನುಷಾಕೃತಿ



ಲೊಥಲ್ : ಕ್ರಿ.ಪೂ. 2000ದ ದೋಣಿಯ ಮಣ್ಣಿನ ಮಾದರಿ

ಪ್ರದೇಶದಲ್ಲಿ — 8,40,000 ಚದರ ಮೈಲು ವಿಸ್ತಾರದಲ್ಲಿ — ಈ ನಾಗರಿಕತೆ ಇದ್ದಿತು. ಈ ಸಂಸ್ಕೃತಿಯ ಪುರಾವೆ ಪ್ರಧಾನವಾಗಿ ದೊರೆತಿರುವುದು ಹರಪ್ಪಾದಲ್ಲೂ ಮೊಹೆಂಜೊ ದಾರೊದಲ್ಲೂ ನಡೆದ ಪುರಾತತ್ತ್ವ ಶೋಧನೆಯಿಂದ. (ಹರಪ್ಪಾ ಈಗಿನ ಹೆಸರು. ಮೊಹೆಂಜೊ ದಾರೊ ಎಂದರೆ 'ಸತ್ತವರ ದಿಬ್ಬ', ಸುತ್ತಲಿನ ನಿವಾಸಿಗಳು ಅವಶೇಷಗಳ ಸ್ಥಳಕ್ಕೆ ಇಟ್ಟ ಹೆಸರು.) ಪ್ರಾಚೀನ ಹಡಗುಕಟ್ಟೆಯಾದ ಲೊಥಲ್‌ನ ಶೋಧೆ ಹರಪ್ಪಾ ಸಂಸ್ಕೃತಿಯ ಮೇಲೆ ಇನ್ನಷ್ಟು ಬೆಳಕುಬೀರಿತು. ಈ ಜನ ನೆಲಮಾರ್ಗವಾಗಿಯೂ ಜಲಮಾರ್ಗವಾಗಿಯೂ ಬಾಹ್ಯ ಪ್ರಪಂಚದೊಡನೆ ವಾಣಿಜ್ಯ ಸಂಬಂಧವಿರಿಸಿಕೊಂಡಿದ್ದರು. ಹೊರಗಿನವರ ರೀತಿ ನೀತಿಗಳನ್ನು ಇವರು ಅರಿತಿದ್ದರು. ಇವರ ಜೀವನ ಕ್ರಮ ಅವರಿಗೆ ತಿಳಿದಿತ್ತು.

ಮಹಾಪೂರವೆ ? ಬರಗಾಲವೆ ? ಆರ್ಯರ ಆಕ್ರಮಣವೆ ?—ಹರಪ್ಪಾ ಸಂಸ್ಕೃತಿಯನ್ನು ಯಾವುದು ನಾಶಪಡಿಸಿತು ? ಈ ಪ್ರಶ್ನೆಗೆ ಖಚಿತ ಉತ್ತರ ಇನ್ನೂ ಸಾಧ್ಯವಾಗಿಲ್ಲ.



ಹಸ್ತಿನಾಪುರದಲ್ಲಿ ದೊರೆತ ಅವಶೇಷಗಳು

1 ಬಾಗಿಲು ಉಂಗುರ 2 ಸರಪಣಿ ತುಣುಕು 3 ಘಂಟೆ 4 ಚಿಲಕ 5 ಉಂಗುರ ಸರಪಣಿ 6 ಮೊಳೆ 7 ಕಬ್ಬಿಣದ ತೂತು ತಟ್ಟೆ 8 ಕಬ್ಬಿಣ ಕೊಡಲಿಯ ಕೆಳ ಭಾಗ 9 ಪೆಮ್ಮೊಳೆ 10 ಈಟಿ ಮೊನೆ

ಮನುಷ್ಯ ಕಳೆದ ಐದು ಸಾವಿರ ವರ್ಷಗಳಲ್ಲಿ, ಆದಿಮಾನವನಿಗೂ ಇವನಿಗೂ ಸಂಬಂಧವೇ ಇಲ್ಲವೇನೋ ಎನಿಸುವಷ್ಟು, ಪ್ರಗತಿ ಸಾಧಿಸಿದ್ದಾನೆ. ವಿಶ್ವದಲ್ಲಿ ಕ್ರಿಸ್ತ ಪೂರ್ವ 1,000 ವರ್ಷಗಳ ಅವಧಿಯಲ್ಲಿ ಹಿರಿಮೆಯ ಪರಾಕಾಷ್ಠೆಯನ್ನು ತಲಪಿದ ನಾಗರಿಕತೆಗಳು ಎರಡು : ಪಶ್ಚಿಮದಲ್ಲಿ ಗ್ರೀಕರದು ; ಪೂರ್ವದಲ್ಲಿ ಆರ್ಯರದು. ಒಂದೇ ಮೂಲದ ಜನಾಂಗಗಳು ಇವೆರಡೂ. ಮಧ್ಯ ಏಷ್ಯದಿಂದ ಅಲೆಮಾರಿಗಳಾಗಿ ಹೊರಟ ಜನ ಇವರ ಪೂರ್ವಜರು.

ಆರ್ಯರ ಆಗಮನಕ್ಕೆ ಮುನ್ನ, ಹಿಮಾಲಯ ದಕ್ಷಿಣದಲ್ಲಿದ್ದ ಪ್ರದೇಶ ಜಂಬೂದ್ವೀಪ ಎನಿಸಿಕೊಂಡಿತ್ತು. ಆರ್ಯರು ಗಂಗಾ ನದೀಪಾತ್ರದ ವರೆಗೂ ಸಾಗಿಬಂದರು. ಅವರು ನೆಲೆಸಿದ ಪ್ರದೇಶ ಆರ್ಯಾವರ್ತವಾಯಿತು. ಮುಂದೆ ಭರತ ನಾಮಪದದಿಂದ ದೇಶ ಭಾರತ —ಭರತವರ್ಷ— ಎಂಬ ಹೆಸರು ಪಡೆಯಿತು.

150 ಮೈಲು ಅಗಲದ ಪರ್ವತ ಶ್ರೇಣಿ ಹಿಮಾಲಯ. ಉದ್ದ 2,000 ಮೈಲು. ಎತ್ತರ 25,000 ಅಡಿ ಅಥವಾ ಸುಮಾರು ಐದು ಮೈಲು! ಉತ್ತರದೊಡನೆ ಸಂಪರ್ಕ. 30ರಿಂದ 40 ಮೈಲು ನೀಳವಾದ ಎರಡು ಮೂರು ಕಣಿವೆಗಳ ಮೂಲಕ.

ಈ ದಾರಿಯಾಗಿ ಬಂದ ಆರ್ಯರು ಪರಾಕ್ರಮಿಗಳು ಹಾಗೂ ವಿಚಾರಿಗಳು. ಅವರದು ಯಾತ್ರಿಕರಿಗೆ ಸಹಜವಾದ ದೃಷ್ಟಿ : ವೀಕ್ಷಣೆ–ನಿರೀಕ್ಷಣೆ. "ನೋಡುವುದು ಸಾಧ್ಯವಾಗುವಂತೆ ಕಣ್ಣುಗಳಿಗೆ ದೃಷ್ಟಿಕೊಡು. ನಮ್ಮ ಶರೀರಗಳಿಗೆ ದೃಷ್ಟಿ ಕೊಡು. ಪೃಥ್ವಿಯನ್ನು ಒಟ್ಟು ರೂಪದಲ್ಲಿ ನಾವು ಕಾಣುವುದು ಸಾಧ್ಯವಾಗಲಿ; ಬಿಡಿ ಬಿಡಿಯಾಗಿ ಕಾಣುವುದು ಸಾಧ್ಯವಾಗಲಿ" —ಇದು ಅವರು ಸಲ್ಲಿಸುತ್ತಿದ್ದ ಪ್ರಾರ್ಥನೆ. ಸಮುದಾಯಕ್ಕೆ ಅವರ ಸಂದೇಶ ಇದು :

"ಒಂದೆಡೆ ಕಲೆಯಿರಿ ; ನಿಮ್ಮದಾಗಲಿ ಏಕ ಗುರಿ, ಸಮಾನ ಸಮಿತಿ ... ಮನ ವಿಚಾರಗಳಿರಲಿ ಸಮಾನ. ನಿಮ್ಮ ಮುಂದಿಡುವೆ ಏಕೋದ್ದೇಶ. ಪೂಜಿಸಿರಿ ನೀವೆಲ್ಲ ಸಮಾನ ಬಲಿಯನ್ನಿತ್ತು. ನಿಮ್ಮದಾಗಲಿ ಏಕ ಧ್ಯೇಯ. ಇರಲಿ ಹೃದಯಗಳ ಐಕ್ಯ. ಒಂದಾಗಿರಲಿ ನಿಮ್ಮ ಮನ. ಹೀಗೆ ಸರ್ವರೂ ಸುಖವಾಗಿ ಒಟ್ಟಾಗಿ ಬಾಳಿರಿ."

ವಿಶ್ವನಾಗರಿಕತೆಗೆ ಅಮೂಲ್ಯ ಕೊಡುಗೆ : ಆರ್ಯ ವಿರಚಿತ ಋಗ್ವೇದ, ಇತರ ವೇದಗಳು, ಆರಣ್ಯಕ–ಸಂಹಿತೆ–ಬ್ರಾಹ್ಮಣಗಳು, ಉಪನಿಷತ್ತುಗಳು, ರಾಮಾಯಣ, ಮಹಾಭಾರತ......

ತಾತ್ತ್ವಿಕ ಚಿಂತನೆಯಲ್ಲೂ ಅದೆಂಥ ಜ್ವಲಂತ ವೈಖರಿ! ಈಶ್ವರವಾದಿಗಳು, ನಿರೀಶ್ವರ ವಾದಿಗಳು, ಆರಾಧಕರು–ಸ್ತುತಿಪಾಠಕರು, ವಿಮರ್ಶಕರು–ನಿಂದಕರು. ಜಿಜ್ಞಾಸೆ, ಮಂಥನಗಳಿಂದ ಚಿಮ್ಮಿತು ಹೊಸ ಚಿಲುಮೆ. ವೈದಿಕಧರ್ಮಕ್ಕೆ ಆಹ್ವಾನವಾಗಿ ಬಂದುವು ಜೈನಧರ್ಮ, ಬೌದ್ಧಧರ್ಮ. (ಬುದ್ಧನ ಕೊನೆಯ ಕಾಲದಲ್ಲಿ ಗ್ರೀಕನೊಬ್ಬ ಭಾರತದಲ್ಲಿದ್ದ. ಆತ ಹಿರಾಡಟಸ್ – ಜಗತ್ತಿನ ಪ್ರಪ್ರಥಮ ಇತಿಹಾಸಕಾರ...) ವಿಚಾರದ ಅಲೆಗಳು ಹತ್ತು ದಿಕ್ಕುಗಳಿಗೆ ಸಾಗಿದುವು, ಹತ್ತು ದಂಡೆಗಳನ್ನು ತಟ್ಟಿದುವು.

ಗಣಿತ, ಜ್ಯೋತಿಷ್ಯ, ವೈದ್ಯಿಕೆ, ರಸವಿದ್ಯೆ ಮತ್ತಿತರ ಕ್ಷೇತ್ರಗಳಲ್ಲೂ ಸತ್ಯದ ಅನ್ವೇಷಣೆ ನಡೆಯಿತು. ಶಿಲ್ಪ, ವಾಸ್ತುಶಿಲ್ಪ, ಕಲೆ, ಸಾಹಿತ್ಯಗಳಲ್ಲಿ ಸೌಂದರ್ಯದ ಉಪಾಸನೆ ಸಾಗಿತು...ಇವು ವಿಶ್ವದ ಇತರ ಜಾಗೃತ ಜನಾಂಗಗಳ ಗಮನ ಸೆಳೆದುವು.



ಅವರು ಸಲ್ಲಿಸಿದ ಪ್ರಾರ್ಥನೆ...



ಖೈಬರ್ ಕಣಿವೆ : ಅಲೆಗ್ಸಾಂಡರ್ ಸಾಗಿಬಂದುದು ಈ ದಾರಿಯಲ್ಲಿ

ಭಾರತದ ಸಾಹಸಿ ವರ್ತಕರು ಬ್ಯಾಬಿಲಾನ್, ರೋಮ್ ನಗರಗಳಿಗೆ ಯಾನಮಾಡಿ, ನಮ್ಮ ಸುಗಂಧದ್ರವ್ಯಗಳನ್ನು ಅಲ್ಲಿ ಮಾರಿದರು ; ಆ ವಾತಾವರಣದಲ್ಲಿ ಸುವಾಸನೆ ಹಬ್ಬಲು ಕಾರಣರಾದರು. ಹಾಗೆಯೇ ವಿಚಾರಗಳೂ ತತ್ತ್ವಗಳೂ ಲೋಕಸಂಚಾರ ಮಾಡಿದುವು.

ಗ್ರೀಸಿನ ರಾಜಧಾನಿ ಅಥೆನ್ಸ್‌ನಲ್ಲೊಂದು ಫಲಕವಿದೆ:

"ತನ್ನ ದೇಶದ ರಿವಾಜಿನಂತೆ ನಡೆದು ಅಮರತ್ವ ಪಡೆದ ಬರ್ಗೋಸದ ಭಾರತೀಯನೊಬ್ಬ ಇಲ್ಲಿ ಮಲಗಿದ್ದಾನೆ."

ಇದು ಶ್ರಮಣಾಚಾರ್ಯನ ಗೋರಿ. ಈತ ಎರಡು ಸಾವಿರ ವರ್ಷಗಳಿಗೆ ಹಿಂದೆ ಜ್ಞಾನ ಪ್ರಸಾರಕನಾಗಿ ಜ್ಞಾನಭಿಕ್ಕುವಾಗಿ ಪಶ್ಚಿಮಕ್ಕೆ ಪಯಣ ಬೆಳೆಸಿದ ಭಾರತೀಯರಲ್ಲೊಬ್ಬ.

ಜ್ಞಾನಯಜ್ಞಕ್ಕೆ ಶಾಂತಿಯೆಂದಿಲ್ಲ, ಸಮರವೆಂದಿಲ್ಲ. ಪ್ರಬಲ ಸಾಮ್ರಾಜ್ಯವಾದ ಪರ್ಷಿಯ (ಕ್ರಿ.ಪೂ. 6–4ನೆಯ ಶತಮಾನ) ಭಾರತದ ಭೂಭಾಗವನ್ನು ಕಬಳಿಸಿತು; ಆದರೆ ಇಲ್ಲಿನ ಜ್ಞಾನಭಂಡಾರದ ಪ್ರದರ್ಶನಕ್ಕೆ ತಾನೊಂದು ವೇದಿಕೆಯಾಯಿತು.

ಕ್ರಿ.ಪೂ. 5ನೆಯ ಶತಮಾನದಲ್ಲಿ ಪರ್ಷಿಯದ ಸಮ್ರಾಟ ಗ್ರೀಸಿನ ಮೇಲೆ ದಾಳಿ ಮಾಡಿದಾಗ, ಭಾರತೀಯ ಸೈನಿಕರ ಒಂದು ದಳ ಆತನ ಸೈನ್ಯದಲ್ಲಿತ್ತು. ಗ್ರೀಕರಿಗೆ ಇದಿರಾದ ಹೋರಾಟದಲ್ಲಿ ಅದು ಭಾಗವಹಿಸಿತು.

ಕಲೆಯಲ್ಲೂ ವಾಸ್ತುಶಿಲ್ಪದಲ್ಲೂ ಕುಸುರಿ ಕೆಲಸವನ್ನು ಭಾರತೀಯರು ಪರ್ಷಿಯನರಿಂದ ಕಲಿತರು.

ಕ್ರಿಸ್ತ ಪೂರ್ವ 4ನೆಯ ಶತಮಾನದಲ್ಲಿ ಗ್ರೀಕ್ ವೀರ ಅಲೆಗ್ಸಾಂಡರ್ ಪರ್ಷಿಯ ಸಾಮ್ರಾಜ್ಯಕ್ಕೆ ಕುಠಾರಪ್ರಾಯನಾದ. ಅವನದು ಅನಾದೃಶ ಜೈತ್ರಯಾತ್ರೆ. 32ನೆಯ ವಯಸ್ಸಿಗೇ ಸಾವು ಕಾದಿತ್ತು. ಜಾಜ್ವಲ್ಯ ಪ್ರಭೆಯಿಂದ ಉರಿದು ಆರಿಹೋದ. ಆತನ ದಂಡಿನೊಡನೆ ಗ್ರೀಕ್ ತತ್ತ್ವಜ್ಞಾನಿಗಳಿದ್ದರು, ಚಿಂತಕರಿದ್ದರು. ಇಲ್ಲಿಂದ ಕಾಲ್ತೆಗೆದಾಗ ಭಾರತೀಯ ಪಂಡಿತರನ್ನು ಆತ ಕರೆದೊಯ್ದ.

ವಿದ್ಯಾರ್ಥಿ ದೆಸೆಯಲ್ಲಿ ಎಲ್ಲರಿಗೂ ಇದಿರಾಗುತ್ತದೆ. 'ಪೈಥಾಗರಸ್ ಪ್ರಮೇಯ': "ಒಂದು ಸಮಕೋನ ತ್ರಿಕೋನದ ಕರ್ಣದ ವರ್ಗವು ಆದರ ಉಳಿದ ಎರಡು ಬಾಹುಗಳ ವರ್ಗಗಳ ಮೊತ್ತಕ್ಕೆ ಸಮನಾಗಿದೆ."

ಹಲವು ಶತಮಾನಗಳಿಂದ ಜ್ಯಾಮಿತಿಯ ಲೋಕದಲ್ಲಿ ಈ ಪ್ರಮೇಯ ಬೆಳಗಿದೆ. ಈ ದೇಶದಲ್ಲಿ ಈ ಪ್ರಮೇಯವನ್ನು ಕ್ರಿ. ಪೂ. 8ನೆಯ ಶತಮಾನದಲ್ಲೇ ಬೋಧಾಯನ ಗುರುತಿಸಿದ್ದ. ಬೋಧಾಯನನ ಶೋಧ ಎರಡು ಶತಮಾನ ಅನಂತರದ ಪೈಥಾಗರಸನಿಗೆ ತಿಳಿದಿರಬಹುದೇ? ಯಾವುದೋ ನೌಕೆಯಲ್ಲಿ ಲೆಕ್ಕವಿಡುವ ಬುದ್ಧಿವಂತನು ಈ ಬೀಜವನ್ನು ಬೀಸುವ ಗಾಳಿಗೆ ತೂರಿರಬಹುದೆ? ಹೀಗೆ ಆಗಿರಲೂಬಹುದು: ಅಥವಾ ಸಮಾನ ಧೀಶಕ್ತಿಯ ಈ ಆರ್ಯ ಬಂಧುಗಳು ಪ್ರತ್ಯ ಪ್ರತ್ಯೇಕವಾಗಿಯೇ ಆ ಪ್ರಮೇಯವನ್ನು ರೂಪಿಸಿರಲೂಬಹುದು.

ಇಷ್ಟೇ ಕೌತುಕ ಉಂಟುಮಾಡುವಂಥ ಇನ್ನೊಂದು ಅಂಶ, ವಿಶ್ವದ ರಚನೆಗೆ ಸಂಬಂಧಿಸಿದ್ದು.

ಬುದ್ಧನ ಸಮಕಾಲೀನ ಪಕುಧ ಕಾತ್ಯಾಯನ. ಅಣುಗಳು ಸಂಘಟಿಸಿ ವಿಶ್ವ ರಚಿತವಾಗಿದೆ ಎಂದ. ವಸ್ತುವಿನ ಚರಮ ಅವಿಭಾಜ್ಯ ಕಣವೇ ಅಣು — ಎಂದರು ಬೌದ್ಧ ಹಾಗೂ ಜೈನ ಚಿಂತಕರು. ವೈಶೇಷಿಕ ಸಿದ್ಧಾಂತಧಾರೆಯ ಅಧ್ವರ್ಯು ಕಣಾದ, "ಸೃಷ್ಟಿಯಲ್ಲಿ ಸಂಘಟನೆ ಹೊಂದದ ರೂಪದಲ್ಲಿ ಅಣುಗಳ ಅಸ್ತಿತ್ವ ಸಾಧ್ಯವಿಲ್ಲ," ಎಂದು ನುಡಿದ.

ವೈಶೇಷಿಕ ಸೂತ್ರ ಬುದ್ಧಪೂರ್ವದ್ದು. ಕಣಾದ ಕ್ರಿ. ಪೂ. 7ನೆಯ ಶತಮಾನದವನು ಎಂಬ ಹೇಳಿಕೆಯೂ ಇದೆ. ಕಣಭುಜ, ಕಣಭಕ್ಷ ಎಂದೂ ಅವನನ್ನು ಕರೆಯುತ್ತಿದ್ದರು. ಕಣವನ್ನು ಕುರಿತು ತರ್ಕಿಸಿದನೆಂದೇ ಅವನಿಗೆ ಆ ಹೆಸರು. ಮೂಲದಲ್ಲಿ ಈತ ಕಶ್ಯಪ, ಕಣವಿಚಾರದ ಪ್ರತಿಪಾದಕನಾದ ಮೇಲೆ ಕಣಾದನಾದ.

ಕಣಾದನ ಅನಂತರದವನು ಗ್ರೀಕ್ ಜ್ಞಾನಿ ಡೆಮಾಕ್ರಿಟಸ್ (ಕ್ರಿ. ಪೂ. 470–360). ಈತ, "ಅವಿಭಾಜ್ಯ ಕಣಗಳೇ ಎಲ್ಲ ವಸ್ತುಗಳ ಮೂಲ ಘಟಕಗಳು. ಸ್ವರೂಪ ಮತ್ತು ಪರಸ್ಪರ ಸಂಬಂಧಗಳಲ್ಲಿ ಅವು ಭಿನ್ನವಾಗಿರುತ್ತವೆ," ಎಂದ.


ಕಣಾದನ ವಿಚಾರಗಳನ್ನು ಡೆಮಾಕ್ರಿಟಸ್ ಅರಿತಿದ್ದನೆ? ಅಥವಾ ಸ್ವತಂತ್ರವಾಗಿಯೇ ಸತ್ಯದ ಈ ಅನ್ವೇಷಣೆಯನ್ನು ಆತ ಮಾಡಿದನೆ? 'ವಿಜ್ಞಾನದ ಇತಿಹಾಸ' ಗ್ರಂಥದ ಕರ್ತೃ ಜಾರ್ಜ್ ಸಾರ್ಟನ್ ಹೀಗೆ ನುಡಿದಿದ್ದಾನೆ:

"[illegible] ವೈಶೇಷಿಕ [illegible] ತತ್ತ್ವಜ್ಞಾನಿಗಳು [illegible] ಈ [illegible] ಪೂರ್ವದಲ್ಲೂ [illegible] ? [illegible] ? ಅದು ಅಸಾಧ್ಯವಲ್ಲ. [illegible] ಅವುಗಳ ಬಗೆಗೆ ಕೇಳಿ ತಿಳಿದಿರಬಹುದು."

ಈ [illegible] ಗಮನಿಸಬೇಕು. ಅಥವಾ ವೈಶೇಷಿಕ [illegible] ಭಾಷಾಂತರದಲ್ಲೇ [illegible] ಹೇಗೇ ಇರಲಿ. [illegible] ಸಂಬಂಧಿಸಿದ [illegible] ಸ್ಮರಣೆಯಿಂದ [illegible] ಪ್ರಾರಂಭವಾಗುತ್ತದೆ. [illegible]

ಚರಕ, ಸುಶ್ರುತರು ಪ್ರಾಚೀನ ಭಾರತದ ವೈದ್ಯಶ್ರೇಷ್ಠರು. ಕ್ರಿ. ಪೂ. 6ನೆಯ ಶತಮಾನದಲ್ಲೇ ಶಸ್ತ್ರಕ್ರಿಯೆಗೆ [illegible] ಆಗ 100ಕ್ಕೂ ಹೆಚ್ಚು ಬಗೆಯ ಶಸ್ತ್ರಕ್ರಿಯಾ ಉಪಕರಣಗಳು ಬಳಕೆಯಲ್ಲಿದ್ದುವು. ಪಾಶ್ಚಾತ್ಯ ವೈದ್ಯಶಾಸ್ತ್ರದ [illegible] ಹಿಪಾಕ್ರಟೀಸ್ ಭಾರತೀಯ ವೈದ್ಯ ವಿಧಾನವನ್ನು ಅರಿತಿದ್ದ.

ಅಂತರ್ಯುದ್ಧದ ಹೋಲಿಕೆ ನೀಡದೆ ಈ 'ತುಲನಾತ್ಮಕ ಅಭ್ಯಾಸ' ಪೂರ್ಣವಾಗುವುದಿಲ್ಲ. ಕ್ರಿ. ಪೂ. 5ನೆಯ ಶತಮಾನದಲ್ಲಿ ಗ್ರೀಸ್ ಅಂತರ್ಯುದ್ಧದಲ್ಲಿ ಮುಳುಗಿತು. ಸಾಂಸ್ಕೃತಿಕವಾಗಿ ಐಕ್ಯ ಉಳಿದಿದ್ದರೂ ರಾಜಕೀಯವಾಗಿ ಗ್ರೀಸಿನ ಪ್ರದೇಶಗಳು ಪರಸ್ಪರ ಕಡಿದಾಡಿದುವು. ಅದೇ ಕಾಲದಲ್ಲಿ, ಅಶೋಕನಿಗೆ ಮುಂಚೆ ಹಾಗೂ ಅಶೋಕನ ಅನಂತರ ಭಾರತದಲ್ಲೂ ಅಂತರ್ಯುದ್ಧಗಳಾದುವು. ಸಾಂಸ್ಕೃತಿಕವಾಗಿ ಒಂದಾಗಿದ್ದವರು ರಾಜಕೀಯವಾಗಿ ಒಬ್ಬರಿಗೊಬ್ಬರು ಮುಳುವಾದರು. ದಕ್ಷಿಣದಲ್ಲಿ ಆಗ ಚೋಳ, ಪಾಂಡ್ಯ, ಚೇರರ ಆಳ್ವಿಕೆಯ ಕಾಲ. ದ್ರಾವಿಡ ಸಂಸ್ಕೃತಿ ರೂಪುತಳೆದು ವಿಕಾಸ ಹೊಂದುತ್ತಿತ್ತು. ಆದರೆ ದ್ರಾವಿಡರೇ ಪರಸ್ಪರರ ಮೇಲೆ ಒರೆ ಹಿರಿದರು!



ಗಂಧಾರ ಶೈಲಿಯ ಶಿಲ್ಪಮಾಲಿಕೆ —ಗಾಂಧಾರ ಶಿಲ್ಪ

ಮಾನವ ಪಶುವಾಗುವ ಪ್ರವೃತ್ತಿ ಇತರ ದೇಶಗಳಲ್ಲಿದ್ದಂತೆ ಭಾರತದಲ್ಲಿಯೂ ಇತ್ತು. ಅದೇ ವೇಳೆ ಮನುಷ್ಯ ತಾನು ದೇವತೆಯಾಗುವುದಕ್ಕೂ ಯತ್ನಿಸುತ್ತಿದ್ದ. "ಸಾಹಿತ್ಯ ಸಂಗೀತ ಕಲೆಗಳ ಗಂಧಗಾಳಿ ಇಲ್ಲದ ಮಾನವ ಬಾಲ ಕೋಡುಗಳಿಲ್ಲದ ಬರಿ ಪ್ರಾಣಿಯೇ ಸರಿ"—ಎಂಬುದೊಂದು ಪ್ರಾಚೀನ ಭಾರತೀಯ ನಾಣ್ಣುಡಿ. ಸಾಹಿತ್ಯ ಸಂಗೀತ ಕಲೆಗಳಿಗೆ ಪ್ರಾಚೀನ ಭಾರತದ ಸಾಮಾಜಿಕ ಜೀವನದಲ್ಲಿ ಉನ್ನತ ಸ್ಥಾನವಿದ್ದಿತೆನ್ನುವುದಕ್ಕೆ ಇದು ಸಾಕ್ಷ್ಯ.

ಧರ್ಮಸಾಮ್ರಾಜ್ಯವನ್ನು ಸ್ಥಾಪಿಸಬಯಸಿದ ಬುದ್ಧಾನುಯಾಯಿ ಅಶೋಕ, ವಿವಿಧ ದೇಶಗಳಿಗೆ, ಒಲವಿನ ಸಂದೇಶ ಹೊತ್ತ ರಾಯಭಾರಿಗಳನ್ನು ಕಳುಹಿಸಿದ.

ಕ್ರಿ. ಪೂ. 64ರಲ್ಲಿ ಅಗಸ್ಟಸ್ ರೋಮನ್ ಸಾಮ್ರಾಜ್ಯದ ಚಕ್ರವರ್ತಿ ಆದಾಗ, ಅನೇಕ ಭಾರತೀಯ ರಾಜರು ಅಭಿನಂದನೆ ಸಲ್ಲಿಸುವುದಕ್ಕಾಗಿ ತಮ್ಮ ಪ್ರತಿನಿಧಿಗಳನ್ನು ಕಳುಹಿಸಿದ್ದರು. ಪಟ್ಟಾಭಿಷೇಕದ ಸುದ್ದಿ ಭಾರತವನ್ನು ತಲಪಿದ್ದೇ ಆ ಸಮಾರಂಭ ಜರಗಿ ಎಷ್ಟೋ ವರ್ಷಗಳಾದ ಮೇಲೆ. ಅಭಿನಂದಿಸುವುದು ತಡವಾದರೆ ಏನಂತೆ ? ಆ ಕಾರ್ಯಕ್ಕಾಗಿ ಪಾಂಡ್ಯರಾಜ ಕ್ರಿ. ಪೂ. 25ರಲ್ಲಿ ರೋಮ್ ನಗರಕ್ಕೆ ರಾಜ ಪ್ರತಿನಿಧಿಯನ್ನು ಕಳುಹಿಸಿದ. ಹೊರಟು 4 ವರ್ಷಗಳಾದ ಮೇಲೆ ಆ ಪ್ರತಿನಿಧಿ ರೋಮ್ ನಗರವನ್ನು ತಲಪಿದ!

ಕ್ರಿಸ್ತ ಪೂರ್ವ ಕಾಲಾವಧಿಯಲ್ಲಿ ವಿಶ್ವದ ರಾಷ್ಟ್ರಗಳ ಮಾಲಿಕೆಯಲ್ಲಿ ತನ್ನದೇ ಆದ ಸ್ಥಾನವನ್ನು ಗಳಿಸಿಕೊಂಡ ಪ್ರಾಚೀನ ಭಾರತದ ಜನಸಂಖ್ಯೆಯೋ, ಕೇವಲ 10 ಕೋಟಿ.

ಪ್ರವಾಸ ಕಥನಗಳು ಭಾರತದ ಇತಿಹಾಸ ರಚನೆಗೆ ನೆರವಾಗಿವೆ. ಪಶ್ಚಿಮದ ಗ್ರೀಕರಿಂದ ಹಿಡಿದು ಪೂರ್ವದ ಚೀನೀಯರ ತನಕ ಭಾರತಕ್ಕೆ ಬಂದು ಹೋದವರು ಹಲವರು. ಇಂಥವರು ಕ್ರಿಸ್ತ ಪೂರ್ವ ಕಾಲಾವಧಿಯಲ್ಲೂ ಇದ್ದರು, ಅನಂತರವೂ ಇದ್ದರು.



ಅಶೋಕ ಸ್ತಂಭದ ವೃಷಭಶೀರ್ಷ



ಪೂಜ್ಯ ಶೂನ್ಯ : ಸೊನ್ನೆ

ಈ ಕಥನಗಳಲ್ಲದೆ ಇತಿಹಾಸ ಬರೆಯಲು ನೆರವು ದೊರೆತಿರುವುದು ಶಿಲಾಲೇಖಗಳಿಂದ. ಅಶೋಕನಿಗೆ ಇತಿಹಾಸಪ್ರಜ್ಞೆ ಎಷ್ಟರ ಮಟ್ಟಿಗೆ ಇದ್ದಿತೋ ತಿಳಿಯದು. ಆದರೆ ದೇಶದ ನಾನಾ ಭಾಗಗಳಲ್ಲಿ ಶಿಲಾಸ್ತಂಭಗಳನ್ನು ನೆಟ್ಟು ಭಾವೀ ಇತಿಹಾಸಕಾರರಿಗೆ ಆತ ಮಹದುಪಕಾರ ಮಾಡಿದ.

ಕ್ರಿ. ಪೂ. 3ನೆಯ ಶತಮಾನದ ಅಶೋಕನ ಶಿಲಾಲೇಖಗಳಲ್ಲಿ ಅಂಕೆಗಳು ವಿಪುಲವಾಗಿ ಬಳಸಲ್ಪಟ್ಟಿವೆ. 1,000 ವರ್ಷಗಳಾದ ಮೇಲೂ ಐರೋಪ್ಯ ರಾಷ್ಟ್ರಗಳಲ್ಲಿ ಅಂಕೆಗಳು ಬಳಕೆಗೆ ಬಂದಿರಲಿಲ್ಲ.

ಅಂಕೆಗಳು, ದಶಮಾಂಶ, ಭಿನ್ನರಾಶಿ, ಬೀಜಗಣಿತ ಸಮೀಕರಣ —ಇವೆಲ್ಲವೂ ಗಣಿತಕ್ಕೆ ಪ್ರಾಚೀನ ಭಾರತೀಯರು ನೀಡಿದ ಕೊಡುಗೆ.

ಅಂಕೆಗಳು ವಿದೇಶ ಪ್ರವಾಸ ಕೈಗೊಂಡುವು: ಕ್ರಿಸ್ತ ಶಕ 2ನೆಯ ಶತಮಾನದ ವೇಳೆಗೆ ಈಜಿಪ್ಟಿನ ಅಲೆಗ್ಸಾಂಡ್ರಿಯಾ ನಗರವನ್ನು ತಲಪಿದುವು. ಆ ನಗರದಲ್ಲಿ ಭಾರತೀಯ ವರ್ತಕರ ಒಂದು ವಸತಿ ಪ್ರದೇಶವೇ ಇದ್ದಿತು. ಅನೇಕ ಬುದ್ಧಾನುಯಾಯಿಗಳೂ ಅಲ್ಲಿ ವಾಸವಾಗಿದ್ದರು.

ಅಂಕೆಗಳೊಡನೆ ಲೋಕದಾದ್ಯಂತ ಉರುಳಿತು, ಗಣಿತಕ್ಕೆ ಭಾರತದ ಶ್ರೇಷ್ಠತಮ ಕೊಡುಗೆಯಾದ ಶೂನ್ಯ. ಪೂಜ್ಯವೆಂದು ಅದು ಸನ್ಮಾನಿತ. ಸೊನ್ನೆಯನ್ನು ಬರಮಾಡಿಕೊಂಡ ನಾಗರಿಕತೆಗಳಿಗೆ ಸಾಗರದ್ದೋ ಸಾಗರ. ಸಹಸ್ರ, ಲಕ್ಷವಾಯಿತು: ಲಕ್ಷ, ಕೋಟಿ; ಕೋಟಿ, ನೂರು ಕೋಟಿ. ಲೆಕ್ಕಾಚಾರದ ತೊಡಕು ಬಗೆಹರಿಯಿತು. ಗಣಿತ ಪ್ರತಿಭೆ ತನ್ನ ನಾಗಾಲೋಟ ಆರಂಭಿಸಿತು.

ನಾವು ರೋಮನ್ ಅಂಕೆ, ಅರಬೀ ಅಂಕೆ ಎನ್ನುವುದಿಲ್ಲವೆ ? ಅರಬೀ ಅಂಕೆ ಎನ್ನುವುದು ವಾಸ್ತವವಾಗಿ ಭಾರತೀಯ ಅಂಕೆ. ಅರಬರು ನಮ್ಮಿಂದ ಇವನ್ನು ಕಲಿತು ವ್ಯಾಪಕವಾಗಿ ಬಳಸಿದರು. ಅಲ್ಲಿಂದ ಇತರರು ಕಲಿತಾಗ, ಅವನ್ನು ಅರಬೀ ಅಂಕೆ ಎಂದರು. ಆ ಹೆಸರೇ ಉಳಿಯಿತು.

ಏಳು ದಿನಗಳ ವಾರ, ಅರವತ್ತು ಮಿನಿಟುಗಳ ಗಂಟೆ ಪಶ್ಚಿಮದಿಂದ ನಮ್ಮಲ್ಲಿಗೆ ಬಂದುವು. ಇವಕ್ಕೆ ಪ್ರತಿಯಾಗಿ ಅಸಾಮಾನ್ಯ ಕೊಡುಗೆಯನ್ನು ನಾವು ನೀಡಿದೆವು. ಅದು 5ನೆಯ ಶತಮಾನದಲ್ಲಿ ಆರ್ಯಭಟನ ಸಾಧನೆ. ಭೂಮಿ ಗುಂಡಗಿದೆ, ಅದು ತನ್ನ ಅಕ್ಷದಲ್ಲಿ ಉರುಳುತ್ತದೆ –ಎಂದು ಆತ ಮನಗಂಡ. ಸೂರ್ಯಾಸ್ತವೂ ಇಲ್ಲ, ಸೂರ್ಯೋದಯವೂ ಇಲ್ಲ. ಸೂರ್ಯನಿಗೆ ಭೂಮಿ ಸುತ್ತುಬರುತ್ತದೆ –ಎಂದ. ಸೂರ್ಯ ಚಂದ್ರ ಗ್ರಹಣಗಳ ಶಾಸ್ತ್ರೀಯ ಕಾರಣಗಳನ್ನು ವಿವರಿಸಿದ. 23ನೆಯ ವಯಸ್ಸಿನಲ್ಲೇ ತನ್ನ ಸಿದ್ಧಾಂತಗಳನ್ನು ರೂಪಿಸಿ ಆತ ರಚಿಸಿದ ಕೃತಿ 'ಆರ್ಯಭಟೀಯ'. ಆಧುನಿಕ ವಿಜ್ಞಾನದಲ್ಲಿ ಈ ವಾದವನ್ನು ಮಂಡಿಸಿದ ಕೀರ್ತಿ ಸಲ್ಲುವುದು ಇಂದಿಗೆ 5 ಶತಮಾನಗಳ ಹಿಂದಿನ ಕೊಪರ್ನಿಕಸನಿಗೆ. ಅವನಿಗಿಂತ ಹತ್ತು ಶತಮಾನ ಹಿಂದಿನವನು ಆರ್ಯಭಟ. ('ಆರ್ಯಭಟೀಯ' ಕೃತಿಯ ಅರಬೀ ತರ್ಜುಮೆಯನ್ನು ಆಧರಿಸಿದ ಲ್ಯಾಟಿನ್ ಭಾಷಾಂತರ ಕೊಪರ್ನಿಕಸನಿಗೆ ಲಭ್ಯವಾಗಿತ್ತು.)

ಆರ್ಯಭಟನ ಸಿದ್ಧಾಂತದ ಆಧಾರದ ಮೇಲೆ ಪ್ರಾಚೀನ ನಾವಿಕರಿಗೆ ನೆರವಾಗುವುದಕ್ಕಾಗಿ ರೇಖಾಂಶ ನಕಾಶೆಗಳನ್ನು ಉಜ್ಜಯಿನಿಯಲ್ಲಿ ಸಿದ್ಧಗೊಳಿಸಿದರು. ಈ ನಕಾಶೆಗಳು ವಿದೇಶಗಳನ್ನೂ ತಲಪಿದುವು. ಇಂಥದೊಂದು ನಕಾಶೆಯನ್ನು ಬಳಸಿಯೇ 15ನೆಯ ಶತಮಾನದಲ್ಲಿ ವಾಸ್ಕೊ ದ ಗಾಮಾ ಭಾರತದ ಪಶ್ಚಿಮ ತೀರವನ್ನು ಮುಟ್ಟಿದ.

6ನೆಯ ಶತಮಾನದ ಪ್ರತಿಭಾಶಾಲಿ ವರಾಹಮಿಹಿರ. ಇವನ 'ಬೃಹತ್ಸಂಹಿತೆ' ಕೃತಿಯಲ್ಲಿ ಭೂಕಂಪನದ ಪ್ರಸ್ತಾಪವಿದೆ. ಆತನ 'ಪಂಚಸಿದ್ಧಾಂತಿಕಾ' ಕಾಲ ಗಣನೆಯ ಪರಾಮರ್ಶೆ. ರೋಮಕ ಸಿದ್ಧಾಂತವನ್ನೂ ಪೌಲಿಶ ಸಿದ್ಧಾಂತವನ್ನೂ ಆತ ಚರ್ಚಿಸಿದ್ದಾನೆ. ಪೌಲಿಶ ಪದ ಬಂದಿರುವುದು ಅಲೆಗ್ಸಾಂಡ್ರಿಯದಲ್ಲಿದ್ದ ಪೌಲಸನಿಂದ ಎಂಬುದು ಸ್ಪಷ್ಟ.

ಸಿರಿಯದ ಖ್ಯಾತ ಖಗೋಲಜ್ಞ ಸೆವೆರಸ್ ಸೆಬೋಖ್ತ್ ಭಾರತೀಯರ ಖಗೋಲಜ್ಞಾನದ ಬಗೆಗೆ ಗೌರವ ತಳೆದಿದ್ದ. ಭಾರತೀಯ ಗಣಿತವನ್ನಂತೂ ಅರಬರು 'ಭಾರತೀಯ ಕಲೆ' ಎಂದು ಕರೆಯುತ್ತಿದ್ದರು.

8ನೆಯ ಶತಮಾನದಲ್ಲಿ ಪರ್ಷಿಯವನ್ನಾಳುತ್ತಿದ್ದ ಅಬ್ಬಾಸಿದ್ ವಂಶದ ದೊರೆಯೊಬ್ಬ ತನ್ನ ಆಸ್ಥಾನದಲ್ಲಿ ಒಬ್ಬ ಬ್ರಾಹ್ಮಣನನ್ನು ಇರಿಸಿಕೊಂಡಿದ್ದ. ಆತ ಜ್ಯೋತಿಷ್ಯನಿದ್ದಿರಬೇಕು. ಪ್ರಜೆ ಇರಲಿ, ರಾಜನಿರಲಿ –ಭವಿಷ್ಯ ತಿಳಿಯುವುದು ಯಾರಿಗೆ ಇಷ್ಟವಿಲ್ಲ? ಆತ ತನ್ನ ರಾಜವೈದ್ಯ ಬುರ್ಜೋಯನನ್ನು ಭಾರತಕ್ಕೆ ಕೊಟ್ಟು ಕಳುಹಿದ. ಆ ವೈದ್ಯನಿಗೆ ಒಪ್ಪಿಸಿದ ಕೆಲಸ, ಭಾರತದ ವೈದ್ಯಕೀಯ ಸಂಹಿತೆಗಳನ್ನೂ ಪಂಚತಂತ್ರದ ಕತೆಗಳನ್ನೂ ಪಹ್ಲವಿ ಭಾಷೆಗೆ ತರ್ಜುಮೆಮಾಡಿ ತರುವುದು ; ಚದುರಂಗ ಆಟದ ವಿವರಗಳನ್ನು ತಿಳಿದುಬರುವುದು !

ರಾಜನೀತಿಗೆ ಸಂಬಂಧಿಸಿದ 'ನೀತಿಶಾಸ್ತ್ರ' ಮೊದಲು ಭಾಷಾಂತರಗೊಂಡದ್ದು ಅರಬೀ ಭಾಷೆಗೆ. ಅದರಿಂದ ಪ್ರಾಚೀನ ಸಿರಿಯ ಭಾಷೆಗೆ ; ಕ್ರಮೇಣ ಆ ಭಾಷೆಯಿಂದ ಗ್ರೀಕಿಗೆ; ಗ್ರೀಕಿನಿಂದ ಲ್ಯಾಟಿನಿಗೆ; ಅದರಿಂದ ಜರ್ಮನ್‌ಗೆ, ಆ ಭಾಷೆಯಿಂದ ಸ್ಪಾನಿಷ್‌ಗೆ; ಮುಂದೆ ಇಟಾಲಿಯನ್‌ಗೆ; ಅದರಿಂದ ಫ್ರೆಂಚ್ ಭಾಷೆಗೆ ; ಫ್ರೆಂಚ್‌ನಿಂದ ಇಂಗ್ಲಿಷಿಗೆ... ಇಷ್ಟಾಗಲು ಆರೇಳು ಶತಮಾನ ಬೇಕಾಯಿತು.

ಪತಂಜಲಿ ಮೇಧಾವಿ, ಪಾಣಿನಿಯ ವ್ಯಾಕರಣವನ್ನು ಕುರಿತು ಭಾಷ್ಯ ಬರೆದಿದ್ದ ; ಅವನು ರಸಶಾಸ್ತ್ರಜ್ಞನೂ ಲೋಹಶಾಸ್ತ್ರಜ್ಞನೂ ಆಗಿದ್ದ. 'ಲೋಹಶಾಸ್ತ್ರ' ಆತನ ಕೃತಿ.



ಪ್ರಾಚೀನ ಮೂಸೆ :
ಕಬ್ಬಿಣ ಸಾಮಗ್ರಿಗಳ ಫೋರ್ಜನಕ್ಕೆ

ಭಾರತದಲ್ಲಿ [illegible] ಉಕ್ಕನ್ನು ತಯಾರಿಸುತ್ತಿದ್ದರು. [illegible] ಉಕ್ಕು [illegible]. [illegible] ರಾಷ್ಟ್ರಗಳು ಭಾರತದ ಉಕ್ಕನ್ನು 'ವೂಟ್ಸ್' ಎಂದು ಕರೆಯುತ್ತಿದ್ದುದು. [illegible] 'ವೂಟ್ಸ್' ಹುಟ್ಟಿದ್ದು ಕನ್ನಡದ 'ಉಕ್ಕು' ಪದದಿಂದ.

[illegible]

ಭಾರತದ [illegible] ಭಾರತೀಯ [illegible] ಘಟನಿದ್ದ. (ಅವನು ಕನ್ನಡಿಗ ಎಂಬುದು ಒಂದು ಊಹೆ!)

[illegible] ಇವು ಈ ನೆಲದಲ್ಲಿ ಬೇರುಬಿಟ್ಟುವು, ಬೆಳೆದುವು.

ಆ ಅವಧಿಯಲ್ಲಿ ಭಾರತೀಯ [illegible] ಭಾಷೆಗೆ ಅನುವಾದಗೊಂಡುವು.

[illegible] ಮೂಲಕ ಅವರು ಇಣಿಕಿ ನೋಡಿದರು. ಇತ್ತಲಿನ ಗಾಳಿಯನ್ನು ಬರಮಾಡಿಕೊಂಡರು.

ಭಾರತಕ್ಕೆ ಬರತೊಡಗಿದ ಐರೋಪ್ಯರಿಗೆ [illegible] ವಿಂಚಿ [illegible] ಎಲಿಫೆಂಟದ ನಕಾಶೆಯನ್ನು [illegible] (" [illegible] ಎಲಿಫೆಂಟದ ನಕಾಶೆಯನ್ನು ಕಳುಹಿಸಿಕೊಟ್ಟಿದ್ದಾನೆ" ಎಂಬ ಟಿಪ್ಪಣಿ ವಿಂಚಿಯ ದಿನಚರಿ ಪುಸ್ತಕದಲ್ಲಿದೆ.)

ಪ್ರಾಚೀನ ಮಾನವ ನಾಗರಿಕತೆಯತ್ತ ಇರಿಸಿದ ಪ್ರಮುಖ ಹೆಜ್ಜೆಗಳಲ್ಲೊಂದು, ನೌಕಾಯಾನ. ಹರಪ್ಪಾ ಸಂಸ್ಕೃತಿ ಹೊಂದಿದ್ದ ಸಾಗರಾಂತರ ಸಂಪರ್ಕದ ಬೃಹತ್ ಪ್ರಮಾಣವನ್ನು ಕುರಿತು ಲೊಥಲ್ ಬಂದರಿನ ಅವಶೇಷಗಳು ಸಾಕ್ಷ್ಯ ನುಡಿಯುತ್ತವೆ. ಅನಂತರದ ಕಾಲಾವಧಿಯಲ್ಲಿ ಪೂರ್ವ ಕರಾವಳಿಯ ಹಿರಿಯ ರೇವು ತಾಮ್ರಲಿಪ್ತಿ. ದಕ್ಷಿಣದ ಅರಸರೂ ವ್ಯಾಪಕ ಸ್ವರೂಪದ ಸಾಗರಾಂತರ ವಾಣಿಜ್ಯ ಚಟುವಟಿಕೆಗಳನ್ನು ನಡೆಸುತ್ತಿದ್ದರು.



ಲೊಥಲ್ ಹಡಗು ಕಟ್ಟೆಯಲ್ಲಿ ತಂಗುಸ್ಥಳ

ವೇದಕಾಲದ ಸಾಹಿತ್ಯಚಿತ್ರ ಕಂಡವರಿಗೆ, ಆಗಿನ ಜನರೆಲ್ಲ ಆತ್ಮಸಾಕ್ಷಾತ್ಕಾರದ ಗೊಂದಲದಲ್ಲೇ ನಿರತರಾಗಿದ್ದರೇನೋ, ಐಹಿಕ ವಿಷಯಗಳಲ್ಲಿ ಅವರಿಗೆ ಆಸಕ್ತಿ ಇರಲಿಲ್ಲವೇನೋ ಎಂಬ ಶಂಕೆ ಮೂಡಲೂಬಹುದು. ಈ ಶಂಕೆಯನ್ನು ನಿವಾರಿಸಲು ಪ್ರಾಚೀನ ಭಾರತೀಯರ ವಾಣಿಜ್ಯ ಕೌಶಲದ ಪರಿಚಯವೊಂದೇ ಸಾಕು. ಸುಗಂಧದ್ರವ್ಯಗಳು, ಹಸ್ತಿದಂತ, ಅಕ್ಕಿ, ಹತ್ತಿ, ಕರಿಮೆಣಸು, ಕಬ್ಬು, ನವಿಲು ಮತ್ತಿತರ ಹಕ್ಕಿಗಳು, ಹುಲಿ ಸಿಂಹಗಳಂಥ ವನ್ಯಮೃಗಗಳು ಕೂಡಾ— ವಿದೇಶಗಳಿಗೆ ನಿರ್ಯಾತವಾಗುತ್ತಿದ್ದುವು. ಭಾರತೀಯ ವಣಿಕರು ನೂರು ಪಟ್ಟು ಬೆಲೆಗೆ ತಮ್ಮ ಸಾಮಗ್ರಿಗಳನ್ನು ವಿದೇಶಗಳಲ್ಲಿ ಮಾರುತ್ತಿದ್ದರು —ಎಂಬ ಟೀಕೆ ಇತ್ತು. ವಿದೇಶೀ —ಅದರಲ್ಲೂ ಭಾರತದ— ಸಾಮಗ್ರಿಗಳನ್ನು ಕೊಳ್ಳಲು ರೋಮನ್ ಶ್ರೀಮಂತರು ಪರಸ್ಪರ ಸ್ಪರ್ಧಿಸುತ್ತಿದ್ದರು. ಒಂದೇ ವರ್ಷದಲ್ಲಿ ರೋಮನ್ ಸಾಮ್ರಾಜ್ಯದ 700,000 ಪೌಂಡ್ ಹಣ ಭಾರತೀಯ ವರ್ತಕರನ್ನು ಸೇರಿತು. "[illegible] ಭಾರತದ ವಶವಾಗುತ್ತಿದೆ"—ಎಂದು ರೋಮನ್ ಇತಿಹಾಸಕಾರ ಪ್ಲಿನಿ ಗೋಳಾಡಿದ.

ಕ್ರಿ. ಶ. 1ನೆಯ ಶತಮಾನದಲ್ಲಿ ಮುಂಗಾರು ಮಾರುತಗಳನ್ನು ಗುರುತಿಸಿದ ಮೇಲೆ ನೌಕಾಯಾನ ಹೆಚ್ಚು ಕ್ಷಿಪ್ರವಾಯಿತು. [illegible] ಒಂದು ವರ್ಷದಲ್ಲಿ ಅರಬಿ ಕೊಲ್ಲಿಯಿಂದ 20 ಹಡಗುಗಳು ಹೊರಡುತ್ತಿದ್ದುವು; ಮುಂಗಾರು ಮಾರುತಗಳ ಬಳಕೆ ಆರಂಭವಾದ ಮೇಲೆ 120 ಹಡಗುಗಳು ಹೊರಡತೊಡಗಿದುವು.

ಭಾರತೀಯ ನಾವಿಕರು [illegible] ಭಾರತದ [illegible] ದೀಪಸ್ತಂಭಗಳಿರುತ್ತಿದ್ದುವು.

ಕ್ರಿ. ಶ. [illegible] ಭಾರತೀಯ [illegible] ಒಂದು ದೇವಸ್ಥಾನವೂ ಇದ್ದಿತು.

ಕೆಲವು ಶತಮಾನಗಳ ಕಾಲ ಭಾರತೀಯ ಸಾಗರೋತ್ತರ ವಾಣಿಜ್ಯ ಹೆಚ್ಚು ಅಭಿವೃದ್ಧಿ ಹೊಂದಲಿಲ್ಲ. ಭಾರತದ ಮೇಲೆ ಆಗುತ್ತಿದ್ದ ಆಕ್ರಮಣಗಳೂ ಕೊನೆಯಿಲ್ಲದ ಆಂತರಿಕ ಕಲಹಗಳೂ ವರ್ತಕ ವೃಂದ ಊರಿಗೇ ಅಂಟಿಕೊಳ್ಳುವಂತೆ ಮಾಡಿದುವು. ಆದರೂ ಯುದ್ಧದ ಭಾರದಿಂದ ಸಮುದ್ರ ಅವಕಾಶವಿದ್ದು ದೀರ್ಘ ಕಾಲದ ಸಮೃದ್ಧಿ ಸಾಧ್ಯವಾಗಲಿಲ್ಲ. ಸಾಗರೋತ್ತರ ವಾಣಿಜ್ಯವಿದ್ದಿತು. ಉದಾ : ಚೋಳರ ಆಡಳಿತ. ಮುಂದೆ ವಿಜಯನಗರ ಸಾಮ್ರಾಜ್ಯದಲ್ಲಿ, 300 ರೇವುಗಳಿದ್ದುವು.

ಇಟಾಲಿಯನ್ ಪ್ರವಾಸಿ ನಿಕೊಲೊ ದ ಕೊಂತಿ ಹೀಗೆ ಬರೆದಿದ್ದಾನೆ :

"ಭಾರತೀಯ ವರ್ತಕರು ಎಷ್ಟು ಶ್ರೀಮಂತರೆಂದರೆ, ತಮ್ಮದೇ ಆದ —ಪ್ರತಿಯೊಂದಕ್ಕೂ 15,000 ಹೊನ್ನು ಬೆಲೆಯ— 400 ನೌಕೆಗಳಲ್ಲಿ ವಾಣಿಜ್ಯ ನಡೆಸುತ್ತಿದ್ದರು. ನೌಕಾನಿರ್ಮಾಣದಲ್ಲಿ ಭಾರತೀಯರು ದಕ್ಷರಾಗಿದ್ದರು."


× × × × × × × ×

ಸಾಗರಯಾನದಲ್ಲಿ ಭಾರತೀಯರು ನಿಷ್ಣಾತರಾಗಿದ್ದರೂ ಇತರ ರಾಷ್ಟ್ರಗಳನ್ನು ಆಕ್ರಮಿಸುವ, ಶೋಷಿಸುವ ಪ್ರವೃತ್ತಿಯನ್ನು ಅವರೆಂದೂ ತೋರಲಿಲ್ಲ. ಬಾಹುಬಲದಿಂದ ಭಾರತೀಯರು ವಶಪಡಿಸಿಕೊಂಡ ಏಕಮಾತ್ರ ಪ್ರದೇಶ ಲಂಕಾದ್ವೀಪ. ಇದು ನಡೆದದ್ದು ಕ್ರಿ. ಪೂ. 5ನೆಯ ಶತಮಾನದಲ್ಲಿ. ಹಾಗೆ ಸ್ವಾಧೀನಪಡಿಸಿಕೊಂಡರೂ ಅರಸು ಮನೆತನ ಆ ನೆಲದ ಗುಣಗಳನ್ನು ಮೈಗೂಡಿಸಿಕೊಂಡಿತು.



ಬೌದ್ಧಾಲಯ –ಜಾವಾದ ಬೊರೊಬುದೂರ್‌ನಲ್ಲಿ

ಕುಂಭಕರ್ಣನನ್ನು ನಿದ್ರೆಯಿಂದ ಎಬ್ಬಿಸುತ್ತಿರುವುದು —ಜಾವಾ ದೇವಾಲಯದಲ್ಲಿ ಉಬ್ಬು ಶಿಲ್ಪ



ಬೌದ್ಧಧರ್ಮ ಭಾರತದ ಗಡಿಯಾಚೆಗೆ ಟಿಬೆಟ್, ಮಂಗೋಲಿಯ, ಚೀನ, ಕೊರಿಯಾ ಮತ್ತು ಜಪಾನುಗಳಲ್ಲಿ ವ್ಯಾಪಿಸಿತು. ಸಿಂಹಳವೂ ಬೌದ್ಧಧರ್ಮವನ್ನು ಸ್ವೀಕರಿಸಿತು. ವೈದಿಕ ಸಂಸ್ಕೃತಿ ದಕ್ಷಿಣ ಏಷ್ಯದ ವಿವಿಧ ರಾಷ್ಟ್ರಗಳಿಗೆ ಹಬ್ಬಿತು. ಜಾವಾ, ಬಾಲಿ, ಮಲಯ, ಸುಮಾತ್ರ, ಕಂಬುಜ (ಕಾಂಬೋಡಿಯ), ಸಯಾಂ, ಫಿಲಿಪೀನ್‌ಗಳಲ್ಲಿ ಕೆಲವೆಡೆ ಸನಾತನಧರ್ಮವೂ ಕೆಲವೆಡೆ ಬೌದ್ಧಧರ್ಮವೂ ಆಚರಣೆಗೆ ಬಂದುವು. ಕ್ರಿ. ಶ. 1ನೆಯ ಶತಮಾನದಲ್ಲೇ ರೂಪುಗೊಳ್ಳತೊಡಗಿದ ಈ ಸಂಸ್ಕೃತಿ ಮುಂದೆ ಸುಮಾರು 9 ಶತಮಾನಗಳ ಕಾಲ ಆ ಪ್ರದೇಶಗಳ ಜನಜೀವನವನ್ನು ಬೆಳಗಿತು. ಅಲ್ಲಿನ ಹಲವು ದೇಶಗಳಲ್ಲಿ ಸಂಸ್ಕೃತ ಆಡಳಿತ ಭಾಷೆಯಾಯಿತು.

ಭಾರತೀಯ ಸಂಸ್ಕೃತಿಯ ದ್ವೀಪಾಂತರ ಹಾಗೂ ಸಾಗರೋತ್ತರ ಪ್ರವಾಸದ ಕುರುಹಾಗಿ ಸುಂದರ ದೇವಾಲಯಗಳೂ ಶಿಲ್ಪಕೃತಿಗಳೂ ಇಂದಿಗೂ ಅಲ್ಲಿ ಉಳಿದಿವೆ. ನೃತ್ಯಗಳಲ್ಲಿ, ಹಾಡುಗಳಲ್ಲಿ 'ರಾಮಾಯಣ' 'ಮಹಾಭಾರತ'ದ ಕಥೆಗಳು ಜೀವಂತವಾಗಿವೆ.

× × × × × ×

[illegible] ಗಣರಾಜ್ಯಗಳಿದ್ದುವು. [illegible] ವರೆಗೂ ಇವು ಅಸ್ತಿತ್ವದಲ್ಲಿದ್ದುವು.

ಇಂದಿಗೆ 2500 ವರ್ಷಗಳಿಗೆ ಹಿಂದಿನ ಸುಪ್ರಸಿದ್ಧ ಗಣರಾಜ್ಯ ವೈಶಾಲಿ. ಇಲ್ಲಿ ವಾಸಿಸುತ್ತಿದ್ದವರು ಲಿಚ್ಛವಿ ಜನರು. ಈ ಗಣರಾಜ್ಯದ ಪ್ರಮುಖ ಅಧಿಕಾರಿಗಳು : ರಾಜ, ಉಪರಾಜ, ಸೇನಾಪತಿ, ಭಂಡಾರಗಾರಿಕ ಹಾಗೂ ಒಂಬತ್ತು ಗಣರಾಜರು. 7,707 ಸದಸ್ಯರಿದ್ದ ರಾಷ್ಟ್ರೀಯ ಶಾಸನಸಭೆ ಇದ್ದಿತು. ಈ ಸದಸ್ಯರು ಮತ ನೀಡುವ ಹಕ್ಕನ್ನು ಪಡೆದಿದ್ದ ವಯಸ್ಕರು.

ಪಶ್ಚಿಮದ ಗ್ರೀಸಿನಲ್ಲಿದ್ದುವು ಪ್ರಜಾಪ್ರಭುತ್ವ ಪದ್ಧತಿಯನ್ನು ಅವಲಂಬಿಸಿದ ನಗರ ರಾಜ್ಯಗಳು. ಆದರೆ ಅಲ್ಲಿ ಸ್ತ್ರೀಯರಿಗೆ, ಗುಲಾಮರಿಗೆ, ಮತದಾನದ ಹಕ್ಕು ಇರಲಿಲ್ಲ. ವೈಶಾಲಿ, ಈ ಬಗೆಯ ನಿರ್ಬಂಧಗಳಿರದಿದ್ದ ಗಣರಾಜ್ಯ.

ಅಲೆಗ್ಸಾಂಡರ್ ಭಾರತದ ಮೇಲೆ ದಂಡೆತ್ತಿ ಬಂದಾಗ, ಈ ದೇಶದಲ್ಲಿದ್ದ ಗಣರಾಜ್ಯಗಳನ್ನು ಸೋಲಿಸಲು ಅಸಮರ್ಥನಾದ.

× × × × × × × ×

ಕ್ರಿ.ಪೂ. 4ನೆಯ ಶತಮಾನದಲ್ಲಿ ರೂಪುಗೊಂಡ ರಾಜನೈತಿಕ ಗ್ರಂಥ 'ಅರ್ಥಶಾಸ್ತ್ರ'. ಇದು ಮಗಧದ ಅರಸು ಚಂದ್ರಗುಪ್ತ ಮೌರ್ಯನ ಅಮಾತ್ಯ ಕೌಟಿಲ್ಯನದೆಂದು ಪ್ರತೀತಿ.

'ಅರ್ಥಶಾಸ್ತ್ರ'ದ ಪ್ರಕಾರ :

"ಪ್ರಜೆಗಳ ಸುಖದಲ್ಲೇ ರಾಜನ ಸುಖವಿದೆ. ಅವರ ಕಲ್ಯಾಣದಲ್ಲೇ ಅವನ ಕಲ್ಯಾಣ. ತನಗೆ ಇಷ್ಟವೆನ್ನಿಸಿದುದೇ
ತನ್ನ ಒಳಿತು —ಎಂದು ಆತ ಪರಿಗಣಿಸಬಾರದು. ಬದಲು, ತನ್ನ ಪ್ರಜೆಗಳಿಗೆ ಯಾವುದು ಇಷ್ಟವೋ ಅದರಿಂದಲೇ
ತನ್ನ ಒಳಿತು —ಎಂದು ಭಾವಿಸಬೇಕು."

70,000 ಯೋಧರು, 9,000 ಆನೆಗಳು, 10,000 ರಥಗಳು ಇದ್ದ ದೇಶ, ಮಗಧ. ಅಮಾತ್ಯ ಕೌಟಿಲ್ಯನ (ಚಾಣಕ್ಯನ) ಕಾಲದಲ್ಲಿ ಬಲಿಷ್ಠ ಮೌರ್ಯ ಸಾಮ್ರಾಜ್ಯವೇ ನಿರ್ಮಾಣವಾಯಿತು. ಸಾಮ್ರಾಜ್ಯದ ಆಡಳಿತದಲ್ಲಿ ಗೂಢಚಾರರಿಗಿರುವ ಮಹತ್ವವನ್ನು ಕೌಟಿಲ್ಯ ಮನಗಂಡ.

'ತಮ್ಮ ವಿದ್ವತ್ತಿನಿಂದ ಹೊಟ್ಟೆ ಹೊರೆಯಲು ಅಶಕ್ತರಾಗಿರುವ ಬ್ರಾಹ್ಮಣರು, ಕಷ್ಟದಲ್ಲಿರುವ ವರ್ತಕರು, ಕ್ಷೌರಿಕರು, ಜ್ಯೋತಿಷಿಗಳು, ಸಾಮಾನ್ಯ ಸೇವಕರು, ವೇಶ್ಯೆಯರು, ರೈತರು' —ಗೂಢಚಾರಿಕೆಗೆ ಯೋಗ್ಯರೆಂದು ಕೌಟಿಲ್ಯ ಸೂಚಿಸಿದ್ದ.

ರಸ್ತೆಗೆ ಕಸ ಎಸೆಯುವವರಿಗೆ, ಚರಂಡಿಯಲ್ಲಿ ನೀರು ಹರಿಯದಂತೆ ಅಡ್ಡಿ ಮಾಡುವವರಿಗೆ ವಿಧಿಸಬೇಕಾದ ಶಿಕ್ಷೆಗಳ ವಿವರ 'ಅರ್ಥಶಾಸ್ತ್ರ'ದಲ್ಲಿದೆ ಎಂಬುದು ಎಷ್ಟೊಂದು ವಿಸ್ಮಯಕರ ಸಂಗತಿ! (ಭಾರತದಲ್ಲಿ ಪೌರಾಡಳಿತಗಾರರು ಇಂದೂ ಅದೇ ವಿಧಿಗಳನ್ನು ಬಳಸಬಹುದು.)

ಪ್ರಾಚೀನ ಭಾರತೀಯರ ಅಭಿಮತದಂತೆ, ರಾಜನಿಲ್ಲದ್ದು ರಾಷ್ಟ್ರವಲ್ಲ. ಅರಾಜಕತೆ ಸಲ್ಲ. ಆದರೆ, ಅರಸ ದುಷ್ಟನಾದರೂ ಸರಿಯೆ, ಸಹಿಸಿಕೊಳ್ಳಬೇಕು —ಎಂದು ಅವರು ಹೇಳಲಿಲ್ಲ. ಶೋಷಕನಾದ, ಜನರಿಗೆ ರಕ್ಷಣೆ ನೀಡಲು ಅಶಕ್ತನಾದ ಅರಸನ ವಿರುದ್ಧ ಬಂಡಾಯವೇಳುವುದೇ ಸೂಕ್ತ ಎನ್ನುತ್ತದೆ 'ಮಹಾಭಾರತ'. ಅಂಥ ದೊರೆ ದೊರೆಯೇ ಅಲ್ಲ: ಹುಚ್ಚುನಾಯಿಯಂತೆ ಆತನನ್ನು ಕೊಂದು ಹಾಕಬೇಕು —ಎಂದು ಅದು ಸಾರುತ್ತದೆ.

ಪ್ರಜಾಧಿಕಾರ ಭಾರತದಲ್ಲಿ ಯಾವ ಕಾಲಕ್ಕೂ ಕುಂಠಿತವಾಗಿರಲಿಲ್ಲ ಎಂಬುದು ಇತಿಹಾಸದಿಂದ ವ್ಯಕ್ತವಾಗುವ ಅಂಶ.

ಪಾಲ ವಂಶದ ಸ್ಥಾಪಕನಾದ ಗೋಪಾಲನನ್ನು ರಾಜ್ಯದ ಹಿರಿಯರು ದೊರೆಯಾಗಿ ಆಯ್ಕೆಮಾಡಿದರು.

8ನೆಯ ಶತಮಾನದಲ್ಲಿ ಕಂಚಿಯ ಶ್ರೀಮಂತರೂ ಅಮಾತ್ಯರೂ ಸಭೆ ಸೇರಿ ಬಾಲಕ ನಂದಿವರ್ಮನನ್ನು ಪಲ್ಲವ ದೊರೆಯೆಂದು ನೇಮಕ ಮಾಡಿದರು.

'ಅರ್ಥಶಾಸ್ತ್ರ'ವಲ್ಲದೆ ರಾಜ-ಪ್ರಜಾ ಸಂಬಂಧವನ್ನು ಸ್ಪಷ್ಟಪಡಿಸುವ ಇತರ ಭಾರತೀಯ ಕೃತಿಗಳು —'ದಂಡನೀತಿ', 'ರಾಜನೀತಿ', 'ನೀತಿಸಾರ', 'ನೀತಿಶಾಸ್ತ್ರ', 'ನೀತಿವಾಕ್ಯಾಮೃತ'……

× × × × × × × ×

ಆಂಗ್ಲ ವಿದ್ವಾಂಸ ಭಾಷ್ಯಾಮ್ ಲಂಡನ್ ವಿಶ್ವವಿದ್ಯಾನಿಲಯದಲ್ಲಿ ಭಾರತಾಧ್ಯಯನದ ಪ್ರಾಧ್ಯಾಪಕ. ಭಾರತೀಯ ಸಂಸ್ಕೃತಿ ಅಸ್ತಿತ್ವಕ್ಕೆ ಬಂದ ಆರಂಭದ ದಿನಗಳನ್ನು ಅವರು ಹೀಗೆ ಬಣ್ಣಿಸಿದ್ದಾರೆ :

"ಭಾರತ ಆನಂದೋತ್ಸಾಹಗಳ ಭೂಮಿಯಾಗಿತ್ತು. ಜಟಿಲವಾದ, ನಿಧಾನವಾಗಿ ರೂಪುಗೊಳ್ಳುತ್ತಿದ್ದ ಸಾಮಾಜಿಕ ವ್ಯವಸ್ಥೆಯಲ್ಲಿ
ಅಲ್ಲಿನ ಜನರೆಲ್ಲ ತಮ್ಮ ತಮ್ಮ ಸ್ಥಾನಗಳನ್ನು ಕಂಡುಕೊಂಡರು. ತಮ್ಮೊಳಗಿನ ಪರಸ್ಪರ ಸಂಬಂಧಗಳಲ್ಲಿ ಅವರು ತೋರುತ್ತಿದ್ದ
ದಯಾಪೂರ್ಣತೆಯೂ ಉದಾತ್ತತೆಯೂ ಹಿರಿಯ ಮಟ್ಟದ್ದು. ಅದು ಇತರ ಯಾವುದೇ ಪ್ರಾಚೀನ ರಾಷ್ಟ್ರದ ಮಟ್ಟಕ್ಕಿಂತಲೂ
ಉನ್ನತವಾಗಿತ್ತು."

ವಿಶ್ವನಾಗರಿಕತೆಯ ವಿಕಾಸದ ಹಿನ್ನೆಲೆಯಲ್ಲಿ ರೂಪು ತಳೆದ ಪ್ರಾಚೀನ ಭಾರತದ ಗ್ರಾಮಜೀವನ ಒಂದು ಜಾತಕ ಕಥೆಯಲ್ಲಿ ಹೀಗೆ ನಿರೂಪಿತವಾಗಿದೆ :



ಪ್ರಾಚೀನ ಗ್ರಾಮ

"ಒಂದು ದಿನ ಒಂದು ಹಳ್ಳಿಯ ಜನರು ತಮ್ಮ ವ್ಯವಹಾರಗಳನ್ನು ಕುರಿತು ಚರ್ಚಿಸುವುದಕ್ಕೋಸ್ಕರ ತಮ್ಮ ಹಳ್ಳಿಯ ಮಧ್ಯದಲ್ಲಿ ನಿಂತರು. ಒಳ್ಳೆಯ ಕೆಲಸಗಳನ್ನು ಮಾಡಲು ಅವರು ತೀರ್ಮಾನಿಸಿದರು. ಅದರಂತೆ, ಮಾರನೆಯ ದಿನ ಬೆಳಗ್ಗೆ ಬೇಗನೆ ಎದ್ದು ತಮ್ಮ ಕತ್ತಿ, ಕೊಡಲಿ, ಸಲಾಕಿಗಳೊಡನೆ ಹೊರಟರು. (ನಾಲ್ಕು ದಿಕ್ಕುಗಳ ?) ನಾಲ್ಕು ಹೆದ್ದಾರಿಗಳಲ್ಲಿದ್ದ (ದೊಡ್ಡ) ಕಲ್ಲುಗಳನ್ನು ಸಲಾಕಿಗಳ ನೆರವಿನಿಂದ ದೂರ ಉರುಳಿಸಿದರು. ತಮ್ಮ ಗಾಡಿಗಳ ಅಕ್ಷಗಳಿಗೆ ಸಿಲುಕುತ್ತಿದ್ದ ಮರಗಳನ್ನು ಕಡಿದು ಹಾಕಿದರು. (ದಾರಿಯ) ಏರುತಗ್ಗುಗಳನ್ನು ಸಮತಟ್ಟಾಗಿ ಮಾಡಿದರು. (ದಿನವೂ ಹಾಗೆಯೇ ದುಡಿಯುತ್ತ) ಕೆರೆಗೆ ಕಟ್ಟೆ ಕಟ್ಟಿದರು; ಕೆರೆಗಳನ್ನು ತೋಡಿದರು; ಗ್ರಾಮ ಸಭಾಭವನವನ್ನು ನಿರ್ಮಿಸಿದರು. ಅವರು ದಾನಶೀಲರಾದರು. ಬೌದ್ಧ ವಿಧಿಗಳನ್ನು ಪಾಲಿಸಿದರು."



ಗ್ರಾಮೀಣ ಜೀವನ

ವೇದಕಾಲದಲ್ಲಿ ರಾಜರು ನಿರಂಕುಶರಾಗಿರಲಿಲ್ಲ. ಅವರು ಸಮಾಜದ ಮುಖಂಡರಾಗಿದ್ದರು. ಆಗಿನ ಅರಸನು ಯುದ್ಧ ಕಾಲದಲ್ಲಿ ಸೇನಾಪತಿಯಾಗಿರುತ್ತಿದ್ದ. ಶಾಂತಿಕಾಲದಲ್ಲಿ ಆತ ವಿವಾದಗಳನ್ನು ಸಮಾಜದ ಜ್ಯೇಷ್ಠರ ಸಲಹೆಗಳಿಗೆ ಅನುಸಾರವಾಗಿ ತೀರ್ಮಾನಮಾಡುವ ನ್ಯಾಯಾಧೀಶನಾಗಿರುತ್ತಿದ್ದ.

ಗ್ರಾಮ ಪಂಚಾಯಿತಿ, ಸಭಾ, ಸಮಿತಿ, ಮಹಾನಾಡು, ಊರ್, ಪರಿಷತ್ತುಗಳೆಲ್ಲ ಗ್ರೀಕ್ ಪ್ರಜಾಪ್ರಭುತ್ವಕ್ಕಿಂತಲೂ ಮಿಗಿಲಾದ ಪ್ರಜಾಪ್ರಭುತ್ವವಾದೀ ಸಂಸ್ಥೆಗಳು.

ಬೌದ್ಧ, ಜೈನರ ಮತಸಂಬಂಧ ಸಂಘಗಳೂ ಈ ಸಂಸ್ಥೆಗಳ ಮಾದರಿಗಳನ್ನೇ ಅನುಸರಿಸಿದುವು. ಆಧುನಿಕ ಪ್ರಜಾಪ್ರಭುತ್ವವಾದಿಗಳನ್ನೂ ಬೆರಗುಗೊಳಿಸುವಂಥದು ಇವುಗಳ ಕಾರ್ಯವಿಧಾನ :


ಸಭಾಗೃಹದಲ್ಲಿ ಆಸನ ಪ್ರಜ್ಞಾಪಕನೆಂಬ ಅಧಿಕಾರಿ ಇರುತ್ತಿದ್ದ. ಸದಸ್ಯರ ಅರ್ಹತೆಗೆ ತಕ್ಕಂತೆ ಆತ ಆಸನಗಳನ್ನು ಏರ್ಪಡಿಸುತ್ತಿದ್ದ ; ಚುನಾವಣೆಯ ಹಕ್ಕು ಯಾರಿಗಿದೆ ಎಂಬುದನ್ನು ನಿರ್ಧರಿಸುತ್ತಿದ್ದ. ಅನಂತರ, ಕರ್ಮವಾಚಕ ಎಂಬ ಅಧಿಕಾರಿ ಚರ್ಚೆಗೆ ಬಂದ ಸಲಹೆಗಳನ್ನು ಮೂರು ಸಾರಿ ಸಭೆಗೆ ತಿಳಿಸುತ್ತಿದ್ದ. ಸಭೆ ಮೌನವಾಗಿದ್ದರೆ ಅದು ಸಮ್ಮತಿಲಕ್ಷಣ. ಪ್ರತಿಭಟಿಸಿ ಬೇರೆ ಸಲಹೆ ಮುಂದಿಡಲು ಅವಕಾಶವಿತ್ತು. ಸಲಹೆಗಳನ್ನು ಕುರಿತು ನಡೆಯುವ ಚರ್ಚೆಯನ್ನು ಮಧ್ಯಸ್ಥನೆಂಬ ಅಧಿಕಾರಿ ಹತೋಟಿಯಲ್ಲಿಡುತ್ತಿದ್ದ. ಚರ್ಚೆ ಸಂಪೂರ್ಣವಾದ ಮೇಲೆ ಶಲಾಕಾಗ್ರಾಹಕ ಎಂಬ ಅಧಿಕಾರಿ, ಮತ ನೀಡುವುದಕ್ಕಾಗಿ ಎಲ್ಲರಿಗೂ ಶಲಾಕೆಗಳನ್ನು ಹಂಚುತ್ತಿದ್ದ. ನಿರ್ಧಾರ ಕೈಗೊಳ್ಳುತ್ತಿದ್ದುದು ಹೆಚ್ಚು ಜನರ ಅಭಿಮತಕ್ಕೆ ಅನುಸಾರವಾಗಿ. ಸಭೆಗೆ ಬರದಿದ್ದವರಿಗೆ ಮತ ನೀಡಲು ಅವಕಾಶ ಇರಲಿಲ್ಲ. ಸಭೆ ನಡೆಯಲು ಕನಿಷ್ಠಪಕ್ಷ ಇಷ್ಟು ಜನ ಅಗತ್ಯ ಎಂಬ ನಿಯಮವಿತ್ತು. ಆ ನಿಯಮ ಪಾಲನೆಗಾಗಿ ಗಣಪೂರಕ ಎಂಬ ಅಧಿಕಾರಿ ಇರುತ್ತಿದ್ದ.

ಈ ಪದ್ಧತಿ ಬುದ್ಧನಿಗೆ ಮುಂಚೆಯೂ ಆಚರಣೆಯಲ್ಲಿತ್ತು.

ಪ್ರಜಾಪ್ರಭುತ್ವ ತತ್ತ್ವಕ್ಕೆ ಅನುಗುಣವಾಗಿ ಸ್ಥಾನಿಕ ಆಡಳಿತ ಪದ್ಧತಿ ದಕ್ಷಿಣ ದೇಶದಲ್ಲೂ ಪರಿಷ್ಕಾರಗೊಂಡಿತ್ತು.

ಕ್ರಿ.ಶ. 12ನೆಯ ಶತಮಾನದಲ್ಲಿ ಪರಾಂತಕನ ಆಳ್ವಿಕೆ. ಆಗ ಉತ್ತರಮೇರೂರು ಅಗ್ರಹಾರದ ಸ್ಥಾನಿಕ ಆಡಳಿತ ವೈಖರಿ ಈ ರೀತಿಯಾಗಿತ್ತು :

ಪ್ರಾಚೀನ ಭಾರತೀಯ ನಗರ



ಸಾಂಚಿಯ ಸ್ತೂಪ ಮತ್ತು ಭಿಕ್ಷು ಮಂದಿರಗಳು





ಅಮರಾವತಿಯ ಸ್ತೂಪ

ಉಮೇದುವಾರರು ತಮ್ಮ ಕೇರಿಗಳಲ್ಲಿ ಪ್ರಚಾರ ನಡೆಸಿ ಮತ ಕೋರುತ್ತಿದ್ದರು. ಚುನಾವಣೆಯ ದಿನ ದೇವಸ್ಥಾನದ ಮಂಟಪದಲ್ಲಿ ಜನರೆಲ್ಲ ನೆರೆಯುತ್ತಿದ್ದರು. ಪ್ರತಿಯೊಂದು ಕೇರಿಗಾಗಿ ಪ್ರತ್ಯಪ್ರತ್ಯೇಕವಾಗಿ ಮುದ್ರೆಹಾಕಿ ಮುಚ್ಚಿದ 'ಕುಡುವೋಲೈ' ಎಂಬ ಕೊಡಗಳಿರುತ್ತಿದ್ದುವು. ಮತದಾರರು ಓಲೆಯಲ್ಲಿ ತಮಗಿಷ್ಟವಾದ ಹೆಸರುಗಳನ್ನು ಬರೆದು ತಮ್ಮ ಕೇರಿಯ ಕುಡುವೋಲೈಯಲ್ಲಿ ಹಾಕುತ್ತಿದ್ದರು. ಮತದಾನ ಆದಮೇಲೆ ಮಧ್ಯಸ್ಥನು ಒಂದೊಂದಾಗಿ ಕೊಡಗಳನ್ನು ಎತ್ತಿ ಒಬ್ಬ ವೃದ್ಧನ ಕೈಗೆ ಕೊಡುತ್ತಿದ್ದ. ಆ ವೃದ್ಧನು ಕೊಡದ ಮುದ್ರೆಯನ್ನು ಎಲ್ಲರಿಗೂ ತೋರಿಸಿ ಕೊಡವನ್ನು ಚೆನ್ನಾಗಿ ಕುಲುಕುತ್ತಿದ್ದ. ಅನಂತರ ಮುಚ್ಚಳವನ್ನು ತೆರೆದು ಒಂದು ಮಗುವಿನ ಕೈಯಿಂದ ಒಂದು ಓಲೆಯನ್ನು ತೆಗೆಸುತ್ತಿದ್ದ. ಮಧ್ಯಸ್ಥನು ಆ ಓಲೆಯನ್ನೆತ್ತಿಕೊಂಡು ಅದರಲ್ಲಿದ್ದ ಹೆಸರನ್ನು, ಎಲ್ಲರಿಗೂ ಕೇಳಿಸುವಂತೆ ಗಟ್ಟಿಯಾಗಿ ಓದುತ್ತಿದ್ದ. ಅವನ ಸುತ್ತ ಮುತ್ತಲಿನ ಜನರೂ ಅದನ್ನು ಓದುತ್ತಿದ್ದರು. ಹೀಗೆ 30 ಕೇರಿಗಳಿಗೆ 30 ಜನರ ಆಯ್ಕೆ ನಡೆಯುತ್ತಿತ್ತು. ಅವರಲ್ಲಿ ಹನ್ನೆರಡು ಜನರನ್ನು ಸಂವತ್ಸರವಾರಿಯಕ್ಕೆ (ವಾರ್ಷಿಕ ಸಮಿತಿ) ಹನ್ನೆರಡು ಜನರನ್ನು ತೋಟವಾರಿಯಕ್ಕೆ (ತೋಟಗಾರಿಕೆ ಸಮಿತಿ) ಆರು ಜನರನ್ನು ಏರಿವಾರಿಯಕ್ಕೆ (ಕೆರೆ ಸಮಿತಿ) ನೇಮಿಸುತ್ತಿದ್ದರು. ಮಿಕ್ಕ ಹೆಸರುಗಳಿಂದ ಭಂಡಾರಿಗ, ಕರಣಿಕ ಮತ್ತಿತರ ಅಧಿಕಾರಿಗಳನ್ನು ಚುನಾಯಿಸುತ್ತಿದ್ದರು. ವರ್ಷದಲ್ಲಿ ಈ ಸಮಿತಿಗಳ ಅಧಿಕಾರಾವಧಿ 360 ದಿನ. ಉಳಿದ 5 ದಿನ, ಲೆಕ್ಕಗಳ ತನಿಖೆ.

ಈ ಬಗೆಯ ಸ್ಥಾನಿಕ ಆಡಳಿತ ಪದ್ಧತಿ ಆಂಗ್ಲರು ಈ ದೇಶದಲ್ಲಿ ನೆಲೆಯೂರುವ ವರೆಗೂ —19ನೆಯ ಶತಮಾನದ ವರೆಗೂ— ರೂಢಿಯಲ್ಲಿತ್ತು.

× × × × × × × ×

ಕೈ ಕೆಸರಾದರೆ ಬಾಯಿ ಮೊಸರು. ಅದೆಷ್ಟು ಹಳೆಯದೋ ಈ ಗಾದೆ! 12ನೆಯ ಶತಮಾನದಲ್ಲಿ ಬಸವೇಶ್ವರರು "ಕಾಯಕವೇ ಕೈಲಾಸ" ಎಂದರು. ದುಡಿಮೆಯೇ ದೇವರು. ಆದರೆ ಈ ದೇವರು ಒಲಿಯುವ ವಿಧಾನ ಮಾತ್ರ ಎಂದೂ ಏಕರೂಪವಲ್ಲ. (ಯಾವ ದೇಶದಲ್ಲಿಯೂ ಇಲ್ಲವು ಎನ್ನೋಣ ಈ ಏಕರೂಪತೆ.) ಬೇರೆಯ ದೇಶಗಳಂತೆ ಇಲ್ಲಿಯೂ ಇತ್ತು ಪಾಳೆಯಗಾರಿಕೆ. ಭೂಮಿಯಿಲ್ಲದ ಕೃಷಿ ಕೆಲಸಗಾರರು ಮೌರ್ಯರ ಕಾಲದಲ್ಲೂ ಈ ದೇಶದಲ್ಲಿದ್ದರು; 20ನೆಯ ಶತಮಾನದಲ್ಲೂ ಇದ್ದಾರೆ. ಸುಭಿಕ್ಷೆ–ಕ್ಷಾಮಗಳ ಕಣ್ಣು ಮುಚ್ಚಾಲೆಯೂ ಸದಾಕಾಲದ್ದು.

ಆಹಾರಾಭಾವ ತಲೆದೋರಿ ಜನ ಸಂಕಷ್ಟಕ್ಕೆ ಗುರಿಯಾದ ಸಂದರ್ಭಗಳಲ್ಲಿ ಪ್ರಾಚೀನ ಭಾರತದಲ್ಲಿ ಏನು ಮಾಡುತ್ತಿದ್ದರು? ಆಹಾರ ಧಾನ್ಯ ಸಮೃದ್ಧವಾಗಿದ್ದಾಗ, ಅಗ್ಗವಾಗಿದ್ದಾಗ, ಸರಕಾರ ಬಹಿರಂಗ ಪೇಟೆಯಿಂದ ಕೊಂಡು ತನ್ನ ದಾಸ್ತಾನು ಮಳಿಗೆಗಳಲ್ಲಿ ಶೇಖರಿಸುತ್ತಿತ್ತು. ಅಭಾವ ಉಂಟಾದಾಗ ತನ್ನ ದಾಸ್ತಾನನ್ನು ಸಂತೆಯಲ್ಲಿ ಮಾರುತ್ತಿತ್ತು. ಇದರಿಂದಾಗಿ ಪೇಟೆಯಲ್ಲಿ ಧಾರಣೆ ಇಳಿಯುತ್ತಿತ್ತು; ಅರಸನಿಗೆ ತುಸು ಲಾಭವೂ ಆಗುತ್ತಿತ್ತು.

ವಿಶ್ವ ಮಾರುಕಟ್ಟೆಯಲ್ಲಿ ಆಹಾರಧಾನ್ಯಗಳ ಧಾರಣೆಯಲ್ಲಿ ಏರುಪೇರಾಗದಂತೆ ನೋಡಿಕೊಳ್ಳಲು ಈ ಶತಮಾನದಲ್ಲಿ ಸಂಯುಕ್ತರಾಷ್ಟ್ರ ಸಂಘದ ಆಹಾರ–ಕೃಷಿ ಸಂಸ್ಥೆ ಸೂಚಿಸಿದ್ದೂ 2000 ವರ್ಷ ಹಳೆಯದಾದ ಮೇಲಿನ ವಿಧಾನವನ್ನೇ.

ಇತರ ಪ್ರಾಚೀನ ನಾಗರಿಕತೆಗಳಂತೆ ಭಾರತದಲ್ಲಿಯೂ ಉತ್ಪಾದಿಸುತ್ತಿದ್ದವರು ಹಲವರು —ಬಹುಸಂಖ್ಯಾತರು. ಸಾಮಾಜಿಕ ನಿರ್ದೇಶಗಳ ಹೊಣೆ ಹೊತ್ತವರು ಕೆಲವರು—ಅಲ್ಪಸಂಖ್ಯಾತರು. ಉತ್ಪಾದನೆ ವಿಕ್ರಯಗಳಿಗೆ ಸಂಬಂಧಿಸಿದ ಜನವಿಭಾಗಗಳು ಸಂಘಟಿತವಾಗಿರುತ್ತಿದ್ದುವು. ವರ್ತಕರು, ಮನೆಕಟ್ಟುವವರು, ಮರಕೆಲಸಗಾರರು, ದೋಣಿ ನಡೆಸುವವರು —ಎಲ್ಲರಿಗೂ ಅವರದೇ ಸಂಘಗಳಿದ್ದುವು.

'ಶ್ರೇಣಿ' ವರ್ತಕರ ಸಂಘಟನೆ. ಅದರ ಮುಖ್ಯಸ್ಥನನ್ನು ಜ್ಯೇಷ್ಠಕ ಎನ್ನುತ್ತಿದ್ದರು. ಆಧುನಿಕ ಬ್ಯಾಂಕುಗಳು ಮಾಡುವ ಕೆಲಸವನ್ನು ಈ ಶ್ರೇಣಿಗಳು ಮಾಡುತ್ತಿದ್ದುವು. ವರ್ತಕರ ವರ್ತನೆಯ ಹೊಣೆಯೂ ಈ ಶ್ರೇಣಿಯದೇ. ಇಂಥ ಕೆಲ ಶ್ರೇಣಿಗಳು ಎಷ್ಟು ಪ್ರಬಲವಾಗಿದ್ದುವೆಂದರೆ ತಮ್ಮ ರಾಜನಿಗೆ, ಸೇನೆಯ ವೆಚ್ಚಕ್ಕೆ ಅವು ಸಾಲಕೊಡುತ್ತಿದ್ದುವು. ('ಸೆಟ್ಟಿ ಹೋದಲ್ಲಿ ಪಟ್ಟಣ' ಎಂಬ ಗಾದೆ ಖಂಡಿತ ಪ್ರಾಚೀನವಾದದ್ದೇ.)

ಆ ಕಾಲದ 'ಗೃಹನಿರ್ಮಾಣ ತಂಡ'ದ ಸ್ವರೂಪ ವಿಶಿಷ್ಟವಾದದ್ದು. ಅದು ಸಹಕಾರೀ ತತ್ತ್ವದ ತಳಹದಿಯ ಮೇಲೆ ನಡೆಯುತ್ತಿತ್ತು. (ನಾವು ಕಾಣುವ ಸಹಕಾರೀ ಚಟುವಟಿಕೆ ಆಧುನಿಕ ಎಂಬ ಭಾವನೆ ಎಷ್ಟು ತಪ್ಪು!) ದೇವಸ್ಥಾನಗಳನ್ನೂ ಮನೆಗಳನ್ನೂ ಕಟ್ಟುವ ಗುತ್ತಿಗೆ ಹೊಣೆಯನ್ನು ಈ ತಂಡಗಳು ವಹಿಸಿಕೊಳ್ಳುತ್ತಿದ್ದುವು. ಒಪ್ಪಂದದಂತೆ ನಡೆಯದಿದ್ದರೆ ದಂಡನೆ ಇರುತ್ತಿತ್ತು.

× × × × × × × ×

ಮೆಸೊಪೊಟೇಮಿಯಂದಲ್ಲಿ ಇದ್ದಂತೆ ಪ್ರಾಚೀನ ಭಾರತದಲ್ಲೂ ನೀರಾವರಿ ಸೌಕರ್ಯಗಳಿದ್ದುವು. ದೇಶದ 10 ಕೋಟಿ

ಕಂಬದ ಸಾಗಣೆ



ಜನಸಂಖ್ಯೆ 25 ಕೋಟಿ ಇದ್ದಾಗ 20 ಕೋಟಿ 30 ಕೋಟಿಯಾದಂತೆ, ಹೆಚ್ಚು ವಿಸ್ತಾರದ ನೆಲ ಉಳುವುದು ಬೆಳೆ ಬೆಳೆಯುವುದು ಅಗತ್ಯವಾಯಿತು ; ನೀರಾವರಿ ಸೌಕರ್ಯ ಒದಗಿಸುವುದರ ಕಡೆಗೆ ಗಮನಹರಿಸುವುದು ಅನಿವಾರ್ಯವಾಯಿತು.

ಒಂಬತ್ತನೆಯ ಶತಮಾನದಲ್ಲಿ ಕಾಶ್ಮೀರದಲ್ಲಿ ಅವಂತಿವರ್ಮನ ಆಳ್ವಿಕೆಯಲ್ಲಿ ಸುಯ್ಯ ಎಂಬ ಒಬ್ಬ 'ಎಂಜಿನಿಯರ್' ಇದ್ದ. "ಹಾವಾಡಿಗ ಹಾವನ್ನು ಆಡಿಸುವಂತೆ ಅಂಥ ಭೀಕರವಾದ ನದಿಗಳನ್ನು ಸುಯ್ಯ ತನಗಿಷ್ಟಬಂದ ಕಡೆ ಹರಿಸುತ್ತಿದ್ದ"—ಎಂಬುದು ಆತನನ್ನು ಕುರಿತ ಬಣ್ಣನೆ.

ವಿಜಯನಗರದ ದೊರೆ ಕೃಷ್ಣದೇವರಾಯ ಸಾಗುವಳಿಯ ಅನುಕೂಲಕ್ಕಾಗಿ ದೊಡ್ಡ ಜಲಾಶಯವನ್ನು ನಿರ್ಮಿಸಿದ. (ಅದನ್ನು ಕಟ್ಟುವ ಕೆಲಸ ಸುಗಮವಾಗಲಿಲ್ಲ. ದೊರಕಿರುವ ದಾಖಲೆಯಂತೆ, ದೊರೆ ಒಂದು ನರಬಲಿ ಕೊಡಿಸಿ, 20,000 ಆಳುಗಳನ್ನು ನೇಮಿಸಿ, ಪುನಃ ನಿರ್ಮಾಣ ಕಾರ್ಯ ಆರಂಭಿಸಿ ಅದನ್ನು ಮುಕ್ತಾಯಗೊಳಿಸಿದ.)

11ನೆಯ ಶತಮಾನದಲ್ಲಿ ಧಾರಾದ ಭೋಜ ಪರಮಾರ ಕೃಷಿ ಉಪಯೋಗಕ್ಕೆಂದು ಭೋಜಪುರದಲ್ಲಿ 250 ಚದರ ಮೈಲುಗಳ ಕೃತಕ ಸರೋವರ ನಿರ್ಮಿಸಿದ. ಅಂಥ ಕಾರ್ಯದಲ್ಲಿ ಇಂದಿನವರೂ ನಿರತರಾಗಿದ್ದಾರೆ. ಆಹಾರಕ್ಕಾಗಿ ಒಡ್ಡುವ ಕೈಗಳ ಸಂಖ್ಯೆ ಕೋಟಿ ಪ್ರಮಾಣದಲ್ಲೇ ಹೆಚ್ಚುತ್ತಿದೆ. ಅದಕ್ಕೆ ಅನುಗುಣವಾಗಿ ಹೊಸ ನೆಲವನ್ನು ಹಸನುಗೊಳಿಸದೆ ಅನ್ಯ ಗತಿಯೇ ಇಲ್ಲ.

× × × × × × × × × ×

ನಮ್ಮ ಪ್ರಾಚೀನರು ನೀಳಕೇಶಿಗಳು. ಗಂಡಸರೂ ಹೆಂಗಸರೂ. ಈ ವಿಷಯದಲ್ಲಿ ಈಗಿನ ನೀಳಕೇಶಿಗಳಿಗೂ ಅವರಿಗೂ ಹೆಚ್ಚಿನ ವ್ಯತ್ಯಾಸ ಕಾಣದು.

ಕ್ಷೌರಿಕನ ಕತ್ತಿಗೆ ಆಗಾಗ್ಗೆ ಆಗಿನವರೂ ತಲೆಬಾಗುತ್ತಿದ್ದರು. ತಮ್ಮ ವೃತ್ತಿಯಲ್ಲಿ ಆ ಕ್ಷೌರಿಕರು ನಿಷ್ಣಾತರಾಗಿದ್ದರು. ಭರತಖಂಡದ ನಾಪಿತರ ಕೌಶಲವನ್ನು ಪೋರ್ಚುಗೀಸ್ ಪ್ರವಾಸಿಗರು ಮುಕ್ತಕಂಠದಿಂದ ಹೊಗಳಿದ್ದಾರೆ.

ಸಿಂಗಾರಗಾರಿಕೆಯಲ್ಲೂ ಭಾರತೀಯರು ಅಸಮಾನರಾಗಿದ್ದರು. ಆಗ ಗಂಡಸರಿಗೂ ಕಂಠ–ಕಿವಿಗಳಿಗೆ ಆಭರಣ. ತುಟಿಗಳಿಗೆ ಅವರು ಕೆಂಪು ಹಚ್ಚುತ್ತಿದ್ದರು.

ಕವಿ ಕಾಳಿದಾಸ ಶಕುಂತಲೆಯನ್ನು ಬಣ್ಣಿಸಲಿಲ್ಲವೆ ? ಆಕೆ ಲೋಧ್ರದ ಚೂರ್ಣವನ್ನು ಮುಖಕ್ಕೆ ಲೇಪಿಸುತ್ತಿದ್ದಳು ; ತುಟಿಗೆ ಕೆಂಪು ಬಣ್ಣ ಹಚ್ಚುತ್ತಿದ್ದಳು ; ಕಣ್ಣಿಗೆ ಅಂಜನ ಇಡುತ್ತಿದ್ದಳು ; ಮೈಗೆ ಸುಗಂಧ ಪೂಸುತ್ತಿದ್ದಳು. (ಕಣ್ವರ ಆಶ್ರಮದಲ್ಲಿದ್ದಾಗಲೇ ಇಷ್ಟು ಸಿಂಗಾರ !)

ಪ್ರಾಚೀನ ಈಜಿಪ್ಟಿನ ರಾಣಿಯರ ಗೋರಿಗಳಲ್ಲಿ ಶೃಂಗಾರ ಸಾಮಗ್ರಿಗಳು ದೊರೆತಿದ್ದುವು. ಹರಪ್ಪಾ ಅವಶೇಷಗಳಲ್ಲೂ ಕಂಡು ಬಂದುವು : ತುಟಿಗೆ ಬಣ್ಣ, ಕಾಡಿಗೆ, ಬಾಚಣಿಗೆ ಮುಂತಾದ ಶೃಂಗಾರೋಪಕರಣಗಳು.

× × × × × × × × × ×



ಹರಪ್ಪಾ ಪಾತ್ರೆಗಳ ಮೇಲೆ ಅಲಂಕಾರ ಚಿತ್ರ

A [illegible] B [illegible] C [illegible]

ಅಸತ್ತಿನಿಂದ ಸತ್ತಿಗೆ, ತಮಸ್ಸಿನಿಂದ ಜ್ಯೋತಿಗೆ, ಮೃತ್ಯುವಿನಿಂದ ಅಮೃತತ್ವಕ್ಕೆ ಮುನ್ನಡೆಸು ಎಂದು ಪ್ರಾರ್ಥಿಸುತ್ತಿದ್ದರು ಪ್ರಾಚೀನರು.

ಸತ್ಯ –ಸಲೀಸಾಗಿ ಸಿಗುವಂಥದಲ್ಲ. ಅದಕ್ಕೆ ಅನ್ವೇಷಣೆ ಬೇಕು. ಬೆಳಕನ್ನು ಕಾಣಬೇಕಾದರೆ ಜ್ಞಾನಾರ್ಜನೆಯಾಗಬೇಕು. ಈ ಹಂತಗಳನ್ನು ದಾಟಿದ ಮೇಲೆ ಅಮೃತತ್ವದ ಸಾಧ್ಯತೆ.

ಅಂದರೇನು ? ಪ್ರಾಚೀನ ವಿದ್ಯಾರ್ಥಿಗಳು ಹಾಸ್ಯ–ವಿನೋದಗಳಿಲ್ಲದ ನಿಷ್ಠುರ ಜೀವನ ನಡೆಸುತ್ತಿದ್ದರೆಂದೆ ? ತಕ್ಷಶಿಲಾ, ವಿಕ್ರಮ ಶೀಲ, ನಾಲಂದಾ ವಿಶ್ವವಿದ್ಯಾ ನಿಲಯಗಳ ಶಿಕ್ಷಣ ವ್ಯವಸ್ಥೆಯ ದಾಖಲೆಗಳು ಹಾಗೆ ಹೇಳುವುದಿಲ್ಲ.

ಕ್ರಿ.ಪೂ. 8ನೆಯ ಶತಮಾನದಿಂದ ಮೌರ್ಯರ ಕಾಲದವರೆಗಿದ್ದ ತಕ್ಷಶಿಲೆಯ ಗುರುಕುಲದಲ್ಲಿ ವಿದ್ಯಾರ್ಥಿಗಳು ಕೋಳಿ ಕೂಗಿದೊಡನೆ ಎದ್ದು ಪಾಠಗಳನ್ನು ಮನನ ಮಾಡುತ್ತಿದ್ದರು. ಆದರೆ 'ಶೋಂಭೇರಿ'ಗಳಿಲ್ಲದ ವಿದ್ಯಾರ್ಥಿ ಸಮುದಾಯವಾದರೂ ಎಂಥದು ? "ಈ ಹಾಳು ಕೋಳಿಯಿಂದ ನಿತ್ಯವೂ ನಿದ್ರಾಭಂಗ" ಎಂದು ಸೋಮಾರಿ ವಿದ್ಯಾರ್ಥಿಗಳಿಗೆ ಸಿಟ್ಟು. ಆ ಬಡ ಕೋಳಿಯನ್ನು ಅವರು ಕೊಂದುಬಿಡುತ್ತಿದ್ದರು. ಒಂದು ಕೋಳಿಯಾದ ಮೇಲೆ ಮತ್ತೊಂದು ಕೋಳಿ......

ಸೋಮಾರಿಗಳಲ್ಲದ, 'ವಾರಾನ್ನ'ದಿಂದ ಜೀವಿಸುತ್ತಿದ್ದ ವಿದ್ಯಾರ್ಥಿಗಳೂ ಇದ್ದರು. (ಉಚಿತ ವಸತಿ ಗೃಹಗಳು ಹೇರಳವಾಗಿರುವ ಕಾಲದ ವಿದ್ಯಾರ್ಥಿಗಳಿಗೆ 'ವಾರಾನ್ನ' ಎಂದರೇನೆಂಬುದು ತಿಳಿಯದು. ವಾರದಲ್ಲಿ ಒಂದೊಂದು ದಿನ ಒಬ್ಬೊಬ್ಬರ ಮನೆಯಲ್ಲಿ ಊಟ ಮಾಡಿ ವಿದ್ಯೆ ಕಲಿಯುತ್ತಿದ್ದ ಬಡ ವಿದ್ಯಾರ್ಥಿಗಳೇ ವಾರಾನ್ನದವರು.)



ಇಲ್ಲಿ ತಡೆಯಿಲ್ಲದ ದಾನ

ಭಾರತದ ಪ್ರಾಚೀನ ಸಂಸ್ಕೃತಿಯಲ್ಲಿ ವಿದ್ಯೆ ವಿಕ್ರಯದ ವಸ್ತುವಾಗಿರಲಿಲ್ಲ. ವಟುಗಳು ಗುರುಸೇವೆ ಮಾಡುತ್ತಿದ್ದರು; ಶಿಕ್ಷಣ ಪಡೆಯುತ್ತಿದ್ದರು. ಆದರೆ ತಕ್ಷಶಿಲೆಯಲ್ಲಿ ಕೆಲ ಗುರುಗಳು ಹಣ ಸ್ವೀಕರಿಸುತ್ತಿದ್ದರೆಂಬ ಟೀಕೆ ಇತ್ತು. ಶುಲ್ಕ ತೆರದ ಶಿಷ್ಯರನ್ನು ಹೀನಾಯವಾಗಿ ಕಾಣುತ್ತಿದ್ದರು; ಶುಲ್ಕ ತೆತ್ತವರನ್ನು ಹೊಟ್ಟೆಯ ಮಕ್ಕಳಂತೆ ನೋಡಿಕೊಳ್ಳುತ್ತಿದ್ದರು —ಎಂದು ಒಂದು ಜಾತಕ ಕಥೆ ಪರಿಹಾಸ್ಯ ಮಾಡಿದೆ.

ಅದೇನಿದ್ದರೂ ಇರಾನ್ ಮೆಸೊಪೊಟೇಮಿಯಗಳ ಪ್ರಭಾವ ಭಾರತವನ್ನು ಮುಟ್ಟಲು ದಾರಿಮಾಡಿಕೊಟ್ಟ ಹಿರಿಮೆ ತಕ್ಷಶಿಲೆಯದು.

ಕ್ರಿ.ಶ. 6ನೆಯ ಶತಮಾನದಿಂದ 13ರ ತನಕ ವಿಶ್ವವಿಖ್ಯಾತ ವಾಗಿದ್ದ ವಿಶ್ವವಿದ್ಯಾನಿಲಯ ನಾಲಂದಾ (ನ+ಅಲಂ+ದಾ. ತಡೆ ಇಲ್ಲದೆ ವಿದ್ಯಾದಾನ ನಡೆಯುತ್ತಿದ್ದ ಸ್ಥಳವಾದ್ದರಿಂದ ಈ ಹೆಸರು).

ಮರೆಯಲ್ಲಿ ನಿಂತು ಅಧ್ಯಾಪಕರನ್ನು ಅಣಕಿಸುವುದು ನಾಲಂದಾದ ವಿದ್ಯಾರ್ಥಿಗಳಿಗೆ ಪ್ರಿಯವಾಗಿದ್ದ ಹವ್ಯಾಸ! ಅಷ್ಟೇ ಅಲ್ಲ. ಪ್ರಪಂಚದಲ್ಲಿರುವ ಇಲ್ಲದ, ತಮಗೆ ತಿಳಿದಿರುವ ತಿಳಿಯದ, ಎಲ್ಲ ವಿಚಾರಗಳನ್ನೂ ಸರ್ವಜ್ಞರಂತೆ ಚರ್ಚಿಸುತ್ತ ವಿದ್ಯಾರ್ಥಿಗಳು ಕಾಲ ಕಳೆಯುತ್ತಿದ್ದರು.

("ಏನು ಮಹಾ ? ನಾವೂ ಮಾಡುತ್ತಿಲ್ಲವೆ ಹಾಗೆ ?" ಎನ್ನಬಹುದು ನಮ್ಮ ವಿದ್ಯಾರ್ಥಿಗಳು).

ವಿಶ್ವದ ಹಲವು ರಾಷ್ಟ್ರಗಳಿಂದ ನಾಲಂದಾ ವಿಶ್ವವಿದ್ಯಾನಿಲಯಕ್ಕೆ ವಿದ್ಯಾರ್ಥಿಗಳು ಬರುತ್ತಿದ್ದರು. ಇಲ್ಲಿ ವಿದ್ಯಾರ್ಥಿನಿಯರೂ ಇದ್ದುದೊಂದು ವಿಶೇಷ. ವಿದ್ಯಾರ್ಥಿಗಳ ಕೊಠಡಿಗೆ ಬರಲು ಮಾತ್ರ ಈ ಜ್ಞಾನ ಭಿಕ್ಷುಣಿಗಳಿಗೆ ಅನುಮತಿ ಇರಲಿಲ್ಲ.

ಆಧುನಿಕ ಭಾರತದಲ್ಲಿ ಪ್ರಾಥಮಿಕ ಶಿಕ್ಷಕರ ಸಂಖ್ಯೆ 22,00,000 : ಪ್ರೌಢಶಾಲೆಗಳ ಅಧ್ಯಾಪಕರು 6,50,000 : ವಿಶ್ವವಿದ್ಯಾನಿಲಯ ಹಾಗೂ ಕಾಲೇಜು ಅಧ್ಯಾಪಕರು 1,50,000. ಸುಮಾರು ಎರಡು ಸಾವಿರ ಚಿಲ್ಲರೆ ವರ್ಷಗಳ ಬಳಿಕ ಹೀಗಾಗುವುದೆಂದು ಪ್ರಾಚೀನ ಭಾರತದ ಯಾವ ಸಂಖ್ಯಾತಜ್ಞನೂ ಲೆಕ್ಕಹಾಕಿರಲಾರ.

ವಿದ್ಯಾರ್ಥಿ ಸಮುದಾಯದ ಸಂಖ್ಯೆ ಕೇವಲ ಸಹಸ್ರವೇ ಇರಲಿ. ಕೆಲವು ಕೋಟಿಗಳೇ ಇರಲಿ. ಮೂರು ಸಾವಿರ ವರ್ಷಗಳ ಹಿಂದೆ ಸ್ನಾತಕರಿಗೆ ಗುರು ನೀಡುತ್ತಿದ್ದ ಹಿತಬೋಧೆ ಮಾತ್ರ ಎಲ್ಲ ಕಾಲಗಳಿಗೂ ಎಲ್ಲ ದೇಶಗಳಿಗೂ ಅನ್ವಯವಾಗುವಂಥದು :

"ಸತ್ಯವನ್ನು ಹೇಳು. ಧರ್ಮವನ್ನು ಅನುಸರಿಸು. ಇದುವರೆಗೆ ಕಲಿತದ್ದರಿಂದಲೇ ತೃಪ್ತನಾಗಬೇಡ. ಹೆಮ್ಮೆಪಡಬೇಡ. ಮಾತಾಪಿತೃಗಳನ್ನೂ ಆಚಾರ್ಯರನ್ನೂ ದೇವರಂತೆ ಭಾವಿಸು. ಪ್ರಜಾತಂತ್ರವನ್ನು ಛಿನ್ನಮಾಡಬೇಡ. ಆಚಾರ್ಯನಿಂದ ಕಾಲುಭಾಗ ಮಾತ್ರ ಕಲಿತಿರುವೆ. ಸ್ವಮೇಧಾಶಕ್ತಿಯಿಂದ ಕಾಲುಭಾಗವನ್ನೂ ಅನುಭವದಿಂದ ಕಾಲುಭಾಗವನ್ನೂ ಶಾಸ್ತ್ರದಿಂದ ಕಾಲುಭಾಗವನ್ನೂ ಇನ್ನೂ ಕಲಿಯಬೇಕಾಗಿದೆ." ದುಷ್ಟರಿಗೆ ವಿದ್ಯೆಯು ವಿವಾದಕ್ಕಾಗಿ, ಧನವು ಮದಕ್ಕಾಗಿ, ಬಲವು ಪರರನ್ನು ಪೀಡಿಸುವುದಕ್ಕಾಗಿ. ಆದರೆ ಶಿಷ್ಟರಿಗೆ ಇವು (ವಿದ್ಯೆ, ಧನ, ಬಲ) ಜ್ಞಾನಕ್ಕಾಗಿ, ದಾನಕ್ಕಾಗಿ, ಸಂರಕ್ಷಣೆಗಾಗಿ ಎಂಬುದನ್ನು ಮರೆಯಬೇಡ."

* * * * *

ವಿದೇಶಗಳಿಗೆ ನಾವು ಹೋದಾಗ, ಅಥವಾ ವಿದೇಶೀಯರು ನಮ್ಮಲ್ಲಿಗೆ ಬಂದಾಗ, ಸಾಮಾನ್ಯವಾಗಿ ತೋರುವ ಗುಣ ಔದಾರ್ಯ. ಔದಾರ್ಯವಿಲ್ಲದವರ ದೃಷ್ಟಿಯಲ್ಲಿ ಪುಟ್ಟ ಛಿದ್ರಗಳೂ ಬೃಹದಾಕಾರ ತಳೆಯುತ್ತವೆ. ಪರಿಣಾಮ : ಸತ್ಯದ ಸಾವು. ಔದಾರ್ಯ ಅತಿಯಾದಾಗಲೂ ಸತ್ಯಕ್ಕೆ ಊನ ಉಂಟಾಗುತ್ತದೆ.

ಉದಾಹರಣೆಗೆ, ಪ್ರಾಚೀನ ಭಾರತದ ಬಗೆಗೆ ವಿದೇಶೀ ಪ್ರವಾಸಿಯೊಬ್ಬ ಮಾಡಿರುವ ಬಣ್ಣನೆ :

"ಎಲ್ಲ ಭಾರತೀಯರೂ ಸ್ವತಂತ್ರರು. ಅವರಲ್ಲೊಬ್ಬನೂ ಗುಲಾಮನಲ್ಲ. ಭಾರತೀಯರು ಪರದೇಶೀಯರನ್ನು ಕೂಡಾ ದಾಸರಾಗಿ ಬಳಸುವುದಿಲ್ಲ; ದೇಶೀಯರನ್ನಂತೂ ಇಲ್ಲವೇ ಇಲ್ಲ."

[illegible] ಎನ್ನುವಷ್ಟು ಸಮಯಾಗಿರುವ ಪ್ರಶಂಸೆ! ಆದರೆ ಇದು ನಿಜವೆ? [illegible] ಪ್ರಮಾಣದಲ್ಲಿ ನಮ್ಮಲ್ಲಿ ಗುಲಾಮರಿರಲಿಲ್ಲ. ಆದರೆ, ದಾಸದಾಸಿಯರೇ ಇರಲಿಲ್ಲ ಎನ್ನುವುದು ಸರಿಯೆ ?



ಶಂಕರ ರಾಮಾನುಜ ಮಧ್ವರು... ಬಸವಣ್ಣನವರು...



ಗಾಂಧೀಜೀ

ದಾಸದಾಸಿಯರನ್ನು ದಕ್ಷಿಣೆಯಾಗಿ ಕೊಡುತ್ತಿದ್ದ ಪ್ರಸ್ತಾಪ ಋಗ್ವೇದದಲ್ಲಿದೆ. ದುಡಿಮೆಯ ಆಧಾರದ ಮೇಲೆ ವರ್ಣವ್ಯವಸ್ಥೆಯನ್ನು ಇಲ್ಲಿ ರೂಪಿಸಿದರು. ಸಮಾಜದ ಎಡಗೈಗೊಂದು ಕೆಲಸ, ಬಲಗೈಗೊಂದು ಕೆಲಸ. ಕೆಲಸದ ದೃಷ್ಟಿಯಿಂದ ಇಬ್ಬರೂ ಮುಖ್ಯ. ಆದರೆ ಸ್ಥಾನದ ದೃಷ್ಟಿಯಿಂದ? ಅವರು ಅವರೇ. ಇವರು ಇವರೇ.

ಭಾರತದಲ್ಲಿ ಇಪ್ಪತ್ತನೆಯ ಶತಮಾನದಲ್ಲೂ ಮಾಯವಾಗದೇ ಇರುವ ದುಷ್ಟ ಪದ್ಧತಿ ಜೀತ—ಎಂಬ ಅಂಶವನ್ನು ಮರೆಮಾಚುವುದು ಹೇಗೆ? ನಾಗರಿಕತೆಯ ಮೊದಲ ಹಂತಗಳಲ್ಲಿ ಬಲಿಷ್ಠನಾದ ಮಾನವ ಎಲ್ಲ ದೇಶಗಳಲ್ಲೂ ತನ್ನ ಅನುಕೂಲಕ್ಕಾಗಿ ಗುಲಾಮರ ನೆರವು ಪಡೆದಿದ್ದಾನೆ. ಸ್ವಲ್ಪ ಮಟ್ಟಿಗೆ ಭಾರತದಲ್ಲೂ ಕೆಲವರು ಗುಲಾಮರಾಗಿ ದುಡಿದಿದ್ದಾರೆ. ಪಾಳೆಯಗಾರ ಸಮಾಜ ವ್ಯವಸ್ಥೆಯಲ್ಲಿ ಇದು ಸಾಮಾನ್ಯ ಸಂಗತಿ.

ಆದರೆ ಅಸ್ಪೃಶ್ಯತೆ ಎಲ್ಲಿಂದ ಬಂತು? ಹೇಗೆ ಬಂತು? ಜಗತ್ತಿನ ಕೆಲವು ಮುಂದುವರಿದ ಜನಾಂಗಗಳಲ್ಲಿ ಇದೇ ರೀತಿಯ ಕ್ರೌರ್ಯ ಕಂಡುಬರುತ್ತದೆ. ನಿಜ. ಆದರೆ ಮಾನವೀಯತೆಯೇ ಪ್ರಧಾನ ಗುಣ ಎನಿಸಿಕೊಂಡ ಭಾರತೀಯ ಸಮಾಜದಲ್ಲಿ ಯಾಕೆ ಹೀಗಾಯಿತು? ವರ್ಣವ್ಯವಸ್ಥೆ ಆದರ್ಶದ ಹಾದಿಯನ್ನು ಬಿಟ್ಟು ವಿಪರೀತಕ್ಕೆ ಹೋಯಿತೆ? ಕಾಲಕಳೆದಂತೆ ನಿಷ್ಠುರ ಜಾತಿ ಕಟ್ಟಳೆಗಳು ರೂಪುಗೊಂಡುವಲ್ಲ?

ಹಿಂದಿನ ಕಾಲದಲ್ಲಿ ಚಂಡಾಲ ಕನ್ಯೆ ಅಸ್ಪೃಶ್ಯಳಾಗಿರಲಿಲ್ಲ. ರಾಜಸಭೆಯನ್ನು ಆಕೆ ಪ್ರವೇಶಿಸಿದ ಸಂಗತಿ ಬಾಣನ 'ಕಾದಂಬರಿ'ಯಲ್ಲಿದೆ. ನಂದನಾರರಂಥ ಶಿವಭಕ್ತರು ಮತ್ತು ಕೆಲ ಆಳ್ವಾರರು 'ಅಸ್ಪೃಶ್ಯ'ರಾಗಿದ್ದರೂ, ಎಲ್ಲ ವರ್ಣಗಳ ಜನರ ಗೌರವಕ್ಕೆ ಪಾತ್ರರಾಗಿದ್ದರು. ಜ್ಞಾನಿಯಾದವನು ಚಂಡಾಲನಿರಲಿ, ದ್ವಿಜನಿರಲಿ ಅತ ಗುರುವಾಗುತ್ತಾನೆ—ಎಂದರು ಶಂಕರರು. ತಮ್ಮ ಮನೀಷಾಪಂಚಕದಲ್ಲಿ. ರಾಮಾನುಜರು 'ಅಂತ್ಯಜ'ರನ್ನು ತಿರುಕ್ಕುಲತ್ತಾರ್ ಎಂದು ಕರೆದರು. ಬಸವಣ್ಣನವರು ಸ್ಪೃಶ್ಯಾಸ್ಪೃಶ್ಯತೆ ಭೇದವೆಣಿಸಲಿಲ್ಲ. ಹರಿದಾಸ ಕೂಟದವರು ಊರ ಹೊರಗಿರುವವನು ಹೊಲೆಯನಲ್ಲ. ದುಷ್ಕರ್ಮಿಯೇ ಹೊಲೆಯ ಎಂದರು. ಈ ಶತಮಾನದಲ್ಲಿ ಗಾಂಧೀಜೀ 'ಹರಿಜನ'ರು ಎಂದು 'ಅಸ್ಪೃಶ್ಯ'ರನ್ನು ಸಂಬೋಧಿಸಿದರು.

ಆಶ್ಚರ್ಯ! ಇಷ್ಟು ಜನ ದೊಡ್ಡವರು ದಾರಿತೋರಿದರೂ ಭಾರತೀಯ ಸಮಾಜದಿಂದ ಅಸ್ಪೃಶ್ಯತೆ ಮಾಯವಾಗಲಿಲ್ಲ. 'ಜಲಗಾರ'ರು ತಲೆಯ ಮೇಲೆ ಮಲ ಹೊರುವ ಹೇಯ ಪದ್ಧತಿ ನಿರ್ನಾಮವಾಗಲಿಲ್ಲ.

3,000 ಪಂಗಡಗಳಾಗಿರುವ ಸಮಾಜ ಹಿಂದುಗಳದು. ಈ ವಿಭಜನೆ ಕಾಲಕಳೆದಂತೆ ದುರ್ಬಲವಾಗುತ್ತಿದೆ—ಎನ್ನುವವರುಂಟು. ಇಂಥ ಪಂಗಡಗಳೇ ಹಿಂದೂಧರ್ಮಕ್ಕೆ ಆಧಾರ—ಎಂದು ವಾದಿಸುವವರುಂಟು.

ಒಂದು ಮಾತ್ರ ನಿಜ: ಸ್ವಾತಂತ್ರ್ಯಾನಂತರ ಆಧುನಿಕರೂ ಆದರ್ಶಗಳನ್ನು ರೂಪಿಸುವುದರಲ್ಲಿ ಹಿಂದೆ ಬಿದ್ದಿಲ್ಲ! ನಮ್ಮದು ಜಾತ್ಯತೀತ ರಾಷ್ಟ್ರ—ಎಂದು ಘಂಟಾಘೋಷವಾಗಿ ನಾವು ಸಾರಿದ್ದೇವೆ.

× × × × × × × × × ×

ಜಗತ್ತಿನಲ್ಲಿ ಅಹಿಂಸೆಯ ಶ್ರೇಷ್ಠತಮ ಪ್ರತಿಪಾದಕರು ಭಾರತೀಯರು. ತಮ್ಮ ವೃದ್ಧಿಗೆ ಯುದ್ಧ ಮಾಡಿರುವುದು ಎಂದೂ ಅವರ ಜಾಯಮಾನ. ಆದರೆ ಆ ಅಹಿಂಸಾ ಮೂರ್ತಿಯೇ, "[illegible]" ಎಂದು [illegible].

ಭಾರತೀಯ ಚಿಂತನೆಗಳು ಶರೀರ ಸಾಧನವನ್ನೇನೂ ಕಡೆಗಣಿಸಲಿಲ್ಲ. ದುರ್ಬಲ ದೇಹಿಯು ಆತ್ಮದ ಸಾಕ್ಷಾತ್ಕಾರವನ್ನು ಪಡೆಯಲಾರ—ಎಂದು ಸಾರಿತು ಉಪನಿಷತ್ತು. ಶತ್ರುಗಳಿಗೆ ಅಂಜಿ ಪಲಾಯನ ಮಾಡುವುದಕ್ಕಿಂತ ಯುದ್ಧ ಮಾಡುತ್ತಲೇ ಮಡಿದರೆ ಅಕ್ಷಯವಾಗಿ [illegible] ಫಲ ಲಭಿಸುವುದು—ಎನ್ನುವುದು ಪ್ರಾಚೀನರ ಖಚಿತ ಅಭಿಪ್ರಾಯವಾಗಿತ್ತು.

[illegible] ಬೌದ್ಧಧರ್ಮಾನುಯಾಯಿಯಾದ ಸಮ್ರಾಟ ಅಶೋಕ ಶಿಲಾಶಾಸನಗಳ ಮೂಲಕ ಶಾಂತಿ ಅಹಿಂಸೆಗಳ ಸಂದೇಶ ಸಾರಿದ. ಭಗವದ್ಗೀತೆಯಲ್ಲಿ "[illegible] ಕರುಣಾಮಯಿಯಷ್ಟೇ ಅಲ್ಲ, ಶಕ್ತಿಶಾಲಿಯೂ ಆಗಿದ್ದಾನೆ". ಎಂದು [illegible] "[illegible]". [illegible]

[illegible] ಪ್ರತಿಪಾದಿಸಿದ: "[illegible]". [illegible] ಸುವುದನ್ನೂ ಬಿಟ್ಟುಕೊಡಲಿಲ್ಲ.

[illegible] ಪರಾಕ್ರಮಶಾಲಿ ಟಿಪ್ಪು, "ಒಂದು ವರ್ಷದ [illegible] ಒಂದು ದಿವಸದ ಹುಲಿ [illegible] ಲೇಸು." ಎಂದು ಗರ್ಜಿಸಿದ.

ಈ ಶತಮಾನದಲ್ಲಿ ತಾವು ಕಂಡ ಸತ್ಯವನ್ನು ಬೆನ್ನಟ್ಟಿ, ಹುಲಿಯಂತೆ ಹಾರಿದರು ಸುಭಾಷ್ ಚಂದ್ರ ಬೋಸ್. ಗಾಂಧೀಜಿ ಸತ್ಯಾಗ್ರಹದಂಥ ಅಹಿಂಸಾತ್ಮಕ ಅಸ್ತ್ರವನ್ನು ಹೂಡಿದರು. "ಇದು ದುರ್ಬಲರ ಅಸ್ತ್ರವಲ್ಲ" –ಎಂದು ಸಾರಿದರು. ಎಲ್ಲರೂ ಬಲ್ಲರು: ಭಾರತದ ಸ್ವಾತಂತ್ರ್ಯ ಆಂದೋಲನದ ನಿರ್ಣಾಯಕ ಹಂತದಲ್ಲಿ ಅಹಿಂಸೆ ವಹಿಸಿದ್ದು ಸೀಮಿತ ಪಾತ್ರವನ್ನು ಮಾತ್ರ.

ಪೌರುಷ, ಶಕ್ತಿ, ಸಾಮರ್ಥ್ಯಗಳಿಗೆ ಈ ದೇಶದಲ್ಲಿ ಯಾವಾಗಲೂ ಮನ್ನಣೆ ಸಂದಿದೆ ಎಂಬುದು ಸ್ಪಷ್ಟ – ಅಲ್ಲವೆ ?

× × × × × × × × × ×

'ಅರ್ಥಶಾಸ್ತ್ರ'ದಲ್ಲಿ ಚೀನಪಟ್ಟ ಎಂಬ ಪದವಿದೆ. ಚೀನಪಟ್ಟ ಎಂದರೆ ಚೀನಾ ರೇಷ್ಮೆ. ನಮ್ಮ ವರ್ತಕರು ಚೀನಾಯಾತ್ರೆ ಕೈಗೊಂಡು ಅಲ್ಲಿನ ರೇಷ್ಮೆಯನ್ನು ಕೊಂಡು ತರುತ್ತಿದ್ದರು. ರೇಷ್ಮೆ ತಯಾರಿಯನ್ನು ಅವರಿಂದ ನಾವು ಕಲಿತೆವು. ಈ ದಿನವೂ 'ಮೈಸೂರು ರೇಷ್ಮೆ' ವಿದೇಶಗಳಲ್ಲಿ ಹೆಸರು ಪಡೆದಿದೆ.

ಆಧುನಿಕ ಕಾಲದಲ್ಲೂ ಉತ್ತಮ ತಳಿಯ ಕೋಳಿಗಳನ್ನು ಹೊರಗಿನಿಂದ ನಾವು ತರಿಸಿಕೊಳ್ಳುತ್ತೇವೆ. ಚೀನಪಟ್ಟ ಇದ್ದ ಹಾಗೆ, 'ಲೆಗ್ಹಾರ್ನ್.'

ಆದರೆ ಪ್ರಪಂಚದ ಎಲ್ಲ ನಾಗರಿಕತೆಗಳಲ್ಲಿ ಕಾಡುಹಕ್ಕಿಯನ್ನು ಹಿಡಿದು, ಸಾಕಿ, ಪಳಗಿಸಿ ಕೋಳಿಯಾಗಿ —ಬಡವನ ಗಡಿಯಾರವಾಗಿ— ಮಾಡಿದ ಖ್ಯಾತಿ ನಮ್ಮ ಜನರದು. ಕ್ರಿಸ್ತಪೂರ್ವ ಕಾಲಾವಧಿಯಲ್ಲೂ ಅನಂತರವೂ ಸುಮಾರು ಒಂದು ಸಾವಿರ ವರ್ಷ ಕಾಲ ಭಾರತದ ಕೋಳಿ ವಿದೇಶಗಳಲ್ಲಿ ವಿಕ್ರಯವಾಯಿತು. (ನಮ್ಮ ಕೋಳಿ ಅಲ್ಲಿ ಕೂಗಿತು: ಅಲ್ಲಿನವರಿಗೂ ಬೆಳಕು ಹರಿಯಿತು.) ಆ ದಿನ ದೇಶಾಂತರ ಪ್ರವಾಸ ಮಾಡಿದ ನಮ್ಮ ಕುಕ್ಕುಟದ ಅಂಶ ಈಗ ಅಲ್ಲಿಂದ ಇಲ್ಲಿಗೆ ಬಂದಿರುವ ವಿಶೇಷ ತಳಿಯಲ್ಲಿ ಇಲ್ಲವೆಂದೆ ?

ಕೋಳಿ ಮತ್ತು ನಾಯಿ ಆರಂಭ ನಾಗರಿಕತೆಯ ಎರಡು ನಿಶಾನೆಗಳು. ಈಗೇನೋ ವಿದೇಶೀ ತಳಿ ನಾಯಿ ಎಂದರೆ ನಮಗಿಷ್ಟ. ಇಲ್ಲಿನವನ್ನು 'ಕಂತ್ರಿ' ಎಂದು ಜರೆಯುತ್ತೇವೆ. ಆದರೆ ಪುರಾತನ ಕಾಲದಲ್ಲಿ ಭಾರತೀಯ ನಾಯಿಗಳನ್ನು ಕೊಂಡೊಯ್ಯಲು ಹೊರಗಿನವರು ಬಯಸುತ್ತಿದ್ದರು. ಯುದ್ಧದಲ್ಲೂ ಬೇಟೆಯಲ್ಲೂ ಆ ಭಾರತೀಯ ನಾಯಿಗಳು ಅಸಾಧಾರಣ ಕೌಶಲ ತೋರುತ್ತಿದ್ದುವು. ಪ್ರಾಚೀನ ಈಜಿಪ್ಟಿನ ಜನರಿಗೆ ಪರಿಚಿತವಾಗಿದ್ದುವು ನಮ್ಮ ಈ ನಾಯಿಗಳು.

ಹರಪ್ಪಾ ಅವಶೇಷಗಳಲ್ಲಿ ನಾಯಿಯ ತಲೆಬುರುಡೆ ದೊರೆತಿದೆ. ಇದನ್ನು ನೋಡಿ, ಹಿಂದೆ ನಮ್ಮ ದೇಶದಲ್ಲಿ ನಾಯಿಗಳು ಹೇಗಿದ್ದುವೆಂದು ಕಲ್ಪಿಸಿಕೊಳ್ಳಬಹುದು.

ಭಾರತೀಯ ಶ್ವಾನವನ್ನು ಹೆಚ್ಚು ಹೆಚ್ಚಾಗಿ ದೊರಕಿಸಿಕೊಳ್ಳಲು ೫ನೆಯ ಶತಮಾನದಲ್ಲಿ ಪರ್ಷಿಯದ ಸಮ್ರಾಟ ಮೊದಲನೆಯ ಅರ್ಟೋಕ್ಸೆರೆಕ್ಸಿಸ್ ಒಂದು ವಿಶಿಷ್ಟ ಯೋಜನೆಯನ್ನು ಕಾರ್ಯಗತಗೊಳಿಸಿದ. ಬಾಬಿಲಾನಿನ ಸಮೀಪದ ನಾಲ್ಕು ಗ್ರಾಮಗಳಿಗೆ ಈ ಶ್ವಾನ ತಳಿಯನ್ನು ಬೆಳೆಸುವಂತೆ ನಿರ್ದೇಶ ನೀಡಿದ. ಹೀಗೆ ನಾಯಿ ಬೆಳೆಸುವ ಆ ಗ್ರಾಮಗಳ ಜನರು ಕಂದಾಯ ತೆರಬೇಕಾಗಿಲ್ಲ —ಎಂದ. ಪರಿಣಾಮವಾಗಿ, ಭಾರತೀಯ ಶ್ವಾನ ಸಂತಾನ ಅಲ್ಲಿ ಅಭಿವೃದ್ಧಿಗೊಂಡಿತು. ನಮ್ಮ ನಾಯಿಗಳ ಬೊಗಳುದನಿ ಪರ್ಷಿಯ ಸಾಮ್ರಾಜ್ಯದ ಮೂಲೆ ಮೂಲೆಗಳಲ್ಲೂ ಪ್ರತಿಧ್ವನಿಸಿತು.

× × × × × ×

ನಾಯಿ ಕೊಳ್ಳುವವರು ಮರಿಯ ವಂಶವೃಕ್ಷವನ್ನು ಪರಿಶೀಲಿಸದೆ ಕಾಸು ಬಿಚ್ಚುವುದಿಲ್ಲ. ನಮ್ಮಲ್ಲಿ ವಿವಾಹ ಸಂಬಂಧ ಬೆಳೆಸುವಾಗಲೂ ವಂಶವೃಕ್ಷಗಳನ್ನು ಅವಲೋಕಿಸದೆ ಗಂಟು ಹಾಕಿಕೊಳ್ಳುವುದಿಲ್ಲ. ವಾಸ್ತವವಾಗಿ ಇಂಥ ವೃಕ್ಷಗಳ ಹರಪು-ಚಾಚುಗಳು, ಈಗಿನ ಪೀಳಿಗೆಯ ಕಣ್ಣಿಗೆ ಕಾಣಿಸುವಷ್ಟು ಮಾತ್ರ.

ಎಲ್ಲ ಮಾನವ ಕುಲದ ಮೂಲವೂ ಒಂದೇ ಎಂಬ ಬಗೆಗೆ ಎಲ್ಲಿದೆ ಭಿನ್ನಾಭಿಪ್ರಾಯ ?

"ನಡೆವುದೊಂದೇ ಭೂಮಿ । ಕುಡಿವುದೊಂದೇ ನೀರು ।
ಸುಡುವಗ್ನಿಯೊಂದೆ ಇರುತಿರಲು ಕುಲಗೋತ್ರ ।
ನಡುವೆ ಎತ್ತಣದು ?"—ಎಂದ ಸರ್ವಜ್ಞ.




ಹರಪ್ಪಾ ನಾಯಿಯ ತಲೆ ಬುರುಡೆ A ಪಾರ್ಶ್ವ B ಮೇಲ್ಭಾಗ C ಕೆಳಭಾಗ

[illegible] ಧಾರ್ಮಿಕ ಕಟ್ಟಳೆಗಳ ಪಾಲನೆಯಲ್ಲಿ ಭಾರತೀಯರು ಮುಂದು. ಅವರು ಪರಿಶುದ್ಧತೆಯ ಆರಾಧಕರು.

ಆದರೂ ಅವರೀಗ ಮಿಶ್ರತಳಿಯ ಬೀಜಗಳನ್ನು ಬಿತ್ತುತ್ತಾರೆ. ಸೊಗಸಾದ ಫಸಲು ಕಂಡು ಸಂತುಷ್ಟರಾಗುತ್ತಾರೆ. ಮಿಶ್ರತಳಿ ಅಕ್ಕಿಯ ಅನ್ನ ಉಣ್ಣುವಂತೆ, ಮಿಶ್ರತಳಿ ಹಸುವಿನ ಹಾಲನ್ನೂ ಕುಡಿಯುತ್ತಾರೆ.

ಮನುಷ್ಯ ಬೆಳೆಸಿಕೊಂಡಿರುವ ವಿಶಿಷ್ಟ ಅಭಿಮಾನಗಳಲ್ಲಿ ಮುಖ್ಯವಾದದ್ದು ಭಾಷಾಭಿಮಾನ. ಹಲವು ಭಾಷೆಗಳ ಭಾರತದಲ್ಲಂತೂ ಪ್ರತಿಯೊಬ್ಬನಿಗೂ ತನ್ನ ಭಾಷೆಯೇ ಇಷ್ಟ.

ಈ ಭಾಷಾಲಿಪಿಗಳ ಮೂಲ ಎಲ್ಲಿ ಎಂದಾಗ ಅಶೋಕನ ಶಿಲಾಲೇಖಗಳಿಗೆ ಆತುಕೊಳ್ಳುತ್ತೇವೆ.



ಬ್ರಾಹ್ಮೀ ಲಿಪಿ

ವೇದ ಸಾಹಿತ್ಯದ ಭಾಷೆಯಾದ ಸಂಸ್ಕೃತವೂ ಬಾಹ್ಯಮೂಲದ್ದು. ಭಾಷಾತಜ್ಞರ ಪ್ರಕಾರ ನಾಲ್ಕು ಸಾವಿರ ವರ್ಷಗಳ ಹಿಂದೆ ದಕ್ಷಿಣ ರಷ್ಯದ ಹುಲ್ಲುಗಾವಲುಗಳಲ್ಲಿದ್ದ ಜನರ ಆಡುಭಾಷೆಯೇ ಯೂರೋಪಿನ ಬಹ್ವಂಶ ಭಾಷೆಗಳಿಗೆ ಮೂಲ. ಪಶ್ಚಿಮದ ಆ ಭಾಷೆಗಳಿಗೂ ಸಂಸ್ಕೃತಕ್ಕೂ ದಾಯಾದಿ ಸಂಬಂಧ.

ಭಾರತದಲ್ಲಿ ಸಂಸ್ಕೃತ ಉಚ್ಛ್ರಾಯಸ್ಥಿತಿ ಮುಟ್ಟಿತು: ಕ್ರಮೇಣ ಇತರ ಭಾಷೆಗಳು ರೂಪುತಳೆಯತೊಡಗಿದುವು. ಆದರೆ ಮುಹಮ್ಮದೀಯ ಆಕ್ರಮಣದ ವೇಳೆಗಿನ್ನೂ ಆ ಭಾಷೆಗಳಲ್ಲಿ ಸಾಹಿತ್ಯ ಕೃತಿಗಳು ರಚಿತವಾಗಿರಲಿಲ್ಲ. ದಕ್ಷಿಣದಲ್ಲಿ ಮಾತ್ರ ಶತಮಾನಗಳಿಗೂ ಹಿಂದಿನಿಂದಲೇ ದ್ರಾವಿಡಭಾಷೆಗಳು ಅಭಿವೃದ್ಧಿ ಹೊಂದಿದ್ದುವು. ಫಿನ್‌ಲೆಂಡ್–ಹಂಗೆರಿ ದೇಶ ಭಾಷೆಗಳಿಗೂ ದ್ರಾವಿಡ ಭಾಷೆಗಳಿಗೂ ತುಸು ಸಾಮ್ಯವಿದೆ. ದ್ರಾವಿಡರೂ ಹಿಮಾಲಯದಾಚೆಗಿಂದ ಸಾಗಿಬಂದರು ಎಂಬುದನ್ನು ಒಪ್ಪಿಕೊಂಡರೆ, ಫಿನ್‌ಲೆಂಡ್ ಹಂಗೆರಿಗಳ ಜನರ ಪೂರ್ವಜರಿಗೂ ದ್ರಾವಿಡರಿಗೂ ದಾಯಾದಿ ಸಂಬಂಧ ಕಲ್ಪಿಸಿದಂತಾಗುತ್ತದೆ. ಆದರೆ, ಇನ್ನೂ ಇತ್ಯರ್ಥವಾಗದೆ ಉಳಿದಿರುವ ವಾದ ಇದು.

ಅತಿ ಪ್ರಾಚೀನ ಸಂಬಂಧಗಳಿರಲಿ. 2–3000 ವರ್ಷಗಳ ಅವಧಿಯಲ್ಲೇ ಭಾಷೆಗಳ ನಡುವೆ ಕೊಡುವಿಕೆ–ಕೊಳ್ಳುವಿಕೆ ಕಾಣಸಿಗುತ್ತದೆ. ಸಂಸ್ಕೃತದ ಕಪಿ ಹೀಬ್ರೂ ಭಾಷೆಯಲ್ಲಿ ಕೊಪ್ ಆಯಿತು. ಮರಕತ ವೈಢೂರ್ಯ ಪಿಪ್ಪಲಿ, ತಮಿಳಿನ ಅರಿಸಿ (ಅಕ್ಕಿ) ತೋಕೈ (ನವಿಲು)—ಈ ಶಬ್ದಗಳನ್ನು ಆಧರಿಸಿ ಗ್ರೀಕ್ ಪದಗಳು ಸಿದ್ಧವಾದುವು. ಗ್ರೀಕ್ ಶಬ್ದಗಳನ್ನು ಅವಲಂಬಿಸಿ ಸಂಸ್ಕೃತದ ಹೋರಾ, ಕೇಂದ್ರ, ಕೋನಗಳು ಅಣಿಯಾದುವು.

ಮುಹಮ್ಮದೀಯ ಆಕ್ರಮಣಗಳು ತೀವ್ರಗೊಂಡ ಬಳಿಕ ಉತ್ತರ ಭಾರತದಲ್ಲಿ ದಿನನಿತ್ಯದ ವ್ಯವಹಾರಕ್ಕೆ ಅವಶ್ಯವಾದ ಭಾಷೆಯಾಗಿ, ಪಶ್ಚಿಮ ಹಿಂದೀ ಹಾಗೂ ಪಾರಸೀ ಭಾಷೆಗಳ ಮಿಶ್ರಣದಿಂದ ಉರ್ದು ಹುಟ್ಟಿತು.

ಹಿಂದು ಪದದ ಉಗಮವನ್ನು ಪರಿಶೀಲಿಸೋಣ. 'ಸಿಂಧು' ಪದದ ಉಚ್ಚಾರ ಪರ್ಷಿಯದವರಿಗೆ ಕಷ್ಟವಾಯಿತು. ಅವರು ಅದನ್ನು 'ಹಿಂದು' ಎಂದು ಕರೆದರು. ಗ್ರೀಕರ ಬಾಯಿಯಲ್ಲಿ 'ಹಿಂದು' 'ಇಂಡು' ಆಯಿತು. ಇಡಿಯ ದೇಶವನ್ನೇ ಅವರು 'ಇಂಡು' ಎಂದು ಕರೆದರು. ಮುಹಮ್ಮದೀಯ ಆಕ್ರಮಣದೊಂದಿಗೆ ಪರ್ಷಿಯದ ಉಚ್ಚಾರ 'ಹಿಂದು' ಮತ್ತೆ ಬಂತು. ಈ ದೇಶವನ್ನು ಅವರು 'ಹಿಂದೂಸ್ತಾನ' (ನಮ್ಮ ಉಚ್ಚಾರ 'ಹಿಂದೂಸ್ಥಾನ') ಎಂದೂ ಇಲ್ಲಿನ ಜನರನ್ನು 'ಹಿಂದು'ಗಳು ಎಂದೂ ಕರೆದರು. ಜನ ಅನುಸರಿಸುತ್ತ ಬಂದಿದ್ದ ಪ್ರಾಚೀನ ಧರ್ಮ 'ಹಿಂದೂಧರ್ಮ' ಎನಿಸಿಕೊಂಡಿತು.

ಐರೋಪ್ಯರು ಸಮುದ್ರಯಾನ ಕೈಗೊಂಡು ನಮ್ಮ ದೇಶದತ್ತ ಬಂದಾಗ, ಅವರೊಂದಿಗೆ ಗ್ರೀಕ್ ಉಚ್ಚಾರದ 'ಇಂಡು', 'ಇಂಡೀ' 'ಇಂಡಿಯಾ' ಪದಗಳೂ ಬಂದುವು. ಆಂಗ್ಲರ ಪ್ರಭಾವದಿಂದ ಪಾಶ್ಚಾತ್ಯ ಜಗತ್ತಿಗೆ ಈ ದೇಶ ಇಂಡಿಯಾ ಎನಿಸಿತು.

× ×

ಸೋಜಿಗವೆಂದರೆ, ಸುಲಿಗೆಗೆಂದೇ ಬಂದು, ಧೂರ್ತತನದಿಂದಲೂ ನಿಷ್ಕರುಣೆಯಿಂದಲೂ ವರ್ತಿಸಿ ಸಾಮ್ರಾಜ್ಯವನ್ನು ಕಟ್ಟಿದ ಆಂಗ್ಲ ಕುಲದವರೇ ಕೆಲವರು ಈ ನೆಲದ ಪ್ರಾಚೀನ ಭವ್ಯತೆಯನ್ನು ಜಗತ್ತಿಗೆ ತೋರಿಸಿ ಕೊಡಲು ಕಾರಣರಾದದ್ದು.



ವಿಲಿಯಂ ಜೋನ್ಸ್ : ಪ್ರಾತಃಸ್ಮರಣೀಯ


ಅಂಥವರಲ್ಲಿ ಪ್ರಾತಃಸ್ಮರಣೀಯ, ವಿಲಿಯಂ ಜೋನ್ಸ್. ಈಸ್ಟ್ ಇಂಡಿಯಾ ಕಂಪೆನಿಯ ಆಳ್ವಿಕೆಯ ಕಾಲ ಅದು. ವಾರನ್ ಹೇಸ್ಟಿಂಗ್ಸ್ ಗವರ್ನರ್ ಜನರಲ್ ಆಗಿದ್ದ. ರಾಜಧಾನಿ, ಕಲ್ಕತ್ತಾ. ಅಲ್ಲಿಗೆ ಸುಪ್ರೀಂ ಕೋರ್ಟಿನ ನ್ಯಾಯಾಧೀಶನಾಗಿ ಜೋನ್ಸ್ ಬಂದ. ಆತ ಬಹು ಭಾಷಾವಿದನಾದ ಮೇಧಾವಿ. ಹೆಚ್ಚುಕಡಮೆ ಎಲ್ಲ ಐರೋಪ್ಯ ಭಾಷೆಗಳನ್ನೂ ಹೀಬ್ರೂ, ಅರಬೀ, ಪಾರಸೀ, ತುರ್ಕೀ ಭಾಷೆಗಳನ್ನೂ ಕಲಿತಿದ್ದ. ಅಲ್ಪಸ್ವಲ್ಪ ಚೀನೀ ಭಾಷೆಯೂ ಬರುತ್ತಿತ್ತು. ಸಂಸ್ಕೃತ ಕಲಿತಿದ್ದ ಚಾರ್ಲ್ಸ್ ವಿಲ್ಕಿನ್ಸ್ ಮತ್ತು ಬಂಗಾಳೀ ಪಂಡಿತರ ಸಹಾಯದಿಂದ ವಿಲಿಯಂ ಜೋನ್ಸ್ ಸಂಸ್ಕೃತದಲ್ಲಿ ಪ್ರಾವೀಣ್ಯ ಗಳಿಸಿದ.

"ಸಂಸ್ಕೃತ ಭಾಷೆಯ ನುಡಿಗಟ್ಟು ಅದ್ಭುತ. ಅದು ಗ್ರೀಕ್ ಭಾಷೆಗಿಂತ ಹೆಚ್ಚು ನಿಷ್ಕೃಷ್ಟ. ಲ್ಯಾಟಿನ್ ಭಾಷೆಗಿಂತ ಹೆಚ್ಚು ಪದಸಂಪತ್ತಿ ಉಳ್ಳದ್ದು. ಅಲ್ಲದೆ, ಆ ಎರಡು ಭಾಷೆಗಳಿಗಿಂತ ಹೆಚ್ಚು ಪರಿಶುದ್ಧ"—ಎಂದ ನ್ಯಾಯಾಧೀಶ ಜೋನ್ಸ್.

1784ರ ಮೊದಲ ದಿನ ಜೋನ್ಸ್‌ನ ಅಧ್ಯಕ್ಷತೆಯಲ್ಲಿ ಏಷ್ಯಾಟಿಕ್ ಸೊಸೈಟಿ ಸ್ಥಾಪಿತವಾಯಿತು. ಏಷ್ಯದ ದೇಶಗಳ ಮುಖ್ಯವಾಗಿ ಭಾರತದ—ಪ್ರಾಚೀನತೆಯನ್ನೂ ಭಾಷೆ, ಸಾಹಿತ್ಯ, ಸಂಸ್ಕೃತಿಗಳನ್ನೂ ಅಧ್ಯಯಿಸುವುದು ಸಂಸ್ಥೆಯ ಉದ್ದೇಶ. ಪ್ರತಿ ಗುರುವಾರ ಸಂಜೆ 7 ಗಂಟೆಗೆ ಸುಪ್ರೀಂ ಕೋರ್ಟಿನ ಒಂದು ಕೊಠಡಿಯಲ್ಲಿ ಈ ಸಂಸ್ಥೆಯ ಸಭೆ ಜರಗುತ್ತಿತ್ತು. ವಿದ್ವತ್‌ಗೋಷ್ಠಿ ಆ ಸಭೆ. ಜೋನ್ಸ್ ಭಾರತದಲ್ಲಿದ್ದ ಹತ್ತು ವರ್ಷಗಳವರೆಗೂ ಸಂಸ್ಥೆಗೆ ಸ್ವಂತ ಕಟ್ಟಡವಿರಲಿಲ್ಲ. ಈಸ್ಟ್ ಇಂಡಿಯಾ ಕಂಪೆನಿಯ ಡೈರೆಕ್ಟರರ ಸಭೆಯಲ್ಲಿ ಈ 'ಪ್ರಾಚ್ಯವಾದಿಗಳ' ಚಟುವಟಿಕೆಯನ್ನು ಕುರಿತು ಟೀಕೆಯೂ ಕೇಳಿಬಂತು!

ಸಂಸ್ಥೆ ಸ್ಥಾಪಿತವಾದ ಮೊದಲ ವರ್ಷವೇ ವಿಲ್ಕಿನ್ಸನ ಭಾಷಾಂತರ 'ಭಗವದ್ಗೀತಾ' ಸಿದ್ಧವಾಯಿತು. ಇದು ಸಂಸ್ಕೃತದಿಂದ ಇಂಗ್ಲಿಷಿಗೆ ನೇರವಾಗಿ ತರ್ಜುಮೆಗೊಂಡ ಮೊದಲ ಕೃತಿ. ಮುಂದೆ ವಿಲ್ಕಿನ್ಸ್ 'ಹಿತೋಪದೇಶ'ವನ್ನು ಭಾಷಾಂತರಿಸಿದ.

ವಿಲಿಯಂ ಜೋನ್ಸ್ 'ಶಕುಂತಲಾ'ವನ್ನು ಅನುವಾದಿಸಿದ. 'ಗೀತಗೋವಿಂದ', 'ಮನುಧರ್ಮಶಾಸ್ತ್ರ'ಗಳನ್ನೂ ಇಂಗ್ಲಿಷಿನಲ್ಲಿ ಸಿದ್ಧಗೊಳಿಸಿದ. (48ನೆಯ ವಯಸ್ಸಿನಲ್ಲಿ ಆತನ ದೇಹಾವಸಾನವಾಯಿತು.)



ಯೂರೋಪಿನಲ್ಲಿ ಭಾರತಾಧ್ಯಯನದ ಜರ್ಮನ್ ಪ್ರಮುಖರು: ಇಮಾನ್ಯುಅಲ್ ಕಾಂಟ್, ವೋನ್ ಹರ್ಡರ್, ಫ್ರೆಡ್ರಿಕ್ ಹೆಗೆಲ್, ಷಾಪೆನ್‌ಹವರ್, ಮ್ಯಾಕ್ಸ್‌ಮುಲ್ಲರ್

ಭಾರತಾಧ್ಯಯನದ ಆದ್ಯಪ್ರವರ್ತಕರಾದರು, ಜೋನ್ಸ್ ಮತ್ತು ವಿಲ್ಕಿನ್ಸ್.

17ನೆಯ ಶತಮಾನದಲ್ಲಿ ಪಾರಸೀ ಭಾಷೆಯಲ್ಲಿ 50 ಉಪನಿಷತ್ತುಗಳು ಸಿದ್ಧವಾಗಿದ್ದುವು. 19ನೆಯ ಶತಮಾನದ ಆರಂಭದಲ್ಲಿ ಅವುಗಳ ಫ್ರೆಂಚ್ ಭಾಷಾಂತರ ಪೂರ್ತಿಯಾಗಿ ಪ್ರಕಟವಾಯಿತು.

ಯೂರೋಪಿನಲ್ಲಿ ಸಂಸ್ಕೃತ ಸಾಹಿತ್ಯದ ಬಗೆಗೆ ಆಸಕ್ತಿ ಹುಟ್ಟಿ ಬೆಳೆಯಿತು. ಫ್ರೆಂಚರು ಸೆರೆಹಿಡಿದಿದ್ದ ಅಲೆಗ್ಸಾಂಡರ್ ಹ್ಯಾಮಿಲ್ಟನ್—ಏಷ್ಯಾಟಿಕ್ ಸೊಸೈಟಿಯ ಸಂಸ್ಥಾಪಕರಲ್ಲೊಬ್ಬ—ಯೂರೋಪಿನ ಪ್ರಥಮ ಸಂಸ್ಕೃತ ಪ್ರಾಧ್ಯಾಪಕನಾದ. ಜರ್ಮನಿಯ ಮೊದಲ ಸಂಸ್ಕೃತ ವಿದ್ವಾಂಸ ಷ್ಲೇಗೆಲ್, ಹ್ಯಾಮಿಲ್ಟನನ ಶಿಷ್ಯ.

ಲಂಡನ್–ಪ್ಯಾರಿಸ್‌ಗಳಲ್ಲಿ ಏಷ್ಯಾಟಿಕ್ ಸೊಸೈಟಿಗಳು ಸ್ಥಾಪಿತವಾದುವು.

ಇಷ್ಟೇ ಮಹತ್ವದ ಕೆಲಸ ಇನ್ನೊಂದು ಕ್ಷೇತ್ರದಲ್ಲೂ ನಡೆಯಿತು. ಅದು ಪುರಾತತ್ತ್ವಶೋಧನೆ. ಪ್ರಾಚೀನ ದೇವಾಲಯಗಳು, ಗವಿಗಳು, ಶಿಲ್ಪಗಳು, ಶಿಲಾಲೇಖಗಳು, ಅವಶೇಷಗಳು ರೋಮಾಂಚಕಾರಿಯಾದ ಆತ್ಮಕಥನವನ್ನು ನುಡಿದುವು. ಅಲೆಗ್ಸಾಂಡರ್ ಕನ್ನಿಂಗ್ಹಾಮ್, ಜಾನ್ ಮಾರ್ಷಲರು ಮೊಹೆಂಜೊ ದಾರೊ ಹರಪ್ಪಾಗಳನ್ನು ಬೆಳಕಿಗೆ ತಂದರು.

ಲೋಕನಾಗರಿಕತೆಗಳ ನಕಾಶೆಯಲ್ಲಿ 'ಭಾರತ' ರಾರಾಜಿಸಿತು.

× × × ×

ವಿಶ್ವದ ಎಷ್ಟೊಂದು ರಾಷ್ಟ್ರಗಳಿಗೆ, ಮಾನವ ಜನಾಂಗದ ಎಷ್ಟೊಂದು ಶಾಖೆಗಳಿಗೆ ನಾವು ಋಣಿಗಳು!

ವಿಶ್ವದ ಎಷ್ಟೊಂದು ರಾಷ್ಟ್ರಗಳು, ಮಾನವ ಜನಾಂಗದ ಎಷ್ಟೊಂದು ಶಾಖೆಗಳು ನಮಗೆ ಋಣಿಗಳು!

ಜನನಿ ಜನ್ಮಭೂಮಿ ಸ್ವರ್ಗಕ್ಕಿಂತ ಮಿಗಿಲು. ನಮಗೆ ಹಾಗೆನಿಸುತ್ತದೆ. ಲೋಕದ ಇತರ ಎಲ್ಲ ರಾಷ್ಟ್ರಗಳ ಜನರಿಗೂ ಹಾಗೆಯೇ ಅನಿಸುತ್ತದೆ.

ಅದೇ ರೀತಿ, 'ನಾವು ಮೇಲು ಇತರರು ಕೀಳು' ಎಂಬ ಭಾವನೆಯೂ ವಿಶ್ವದಲ್ಲಿ ಅನೇಕರಿಗೆ ಉಂಟಾಗುತ್ತದೆ.

ಬಾವಿಯೊಳಗಿನ ಕಪ್ಪೆಗೆ ಅದೇ ಜಗತ್ತು. ಅಂಥ ಮಂಡೂಕವಾಗಿರಲು ಇಚ್ಛಿಸುವುದು ಶುದ್ಧ ಮೂರ್ಖತನ.

ಲೋಕಸಂಚಾರ ಮಾಡಿದವರು ನಮ್ಮ ಪ್ರಾಚೀನರು. ಅವರು ಸಂತೋಷದಿಂದ ಇನ್ನೊಬ್ಬರಿಗೆ ಕಲಿಸಿಕೊಟ್ಟರು. ಅಷ್ಟೇ ಸಂತೋಷದಿಂದ ಇನ್ನೊಬ್ಬರಿಂದ ಕಲಿತರು.

ಆರನೆಯ ಶತಮಾನದ ಮಹಾಪ್ರತಿಭಾಶಾಲಿ ವರಾಹಮಿಹಿರ ಅನ್ಯ ದೇಶೀಯರನ್ನು ಮ್ಲೇಚ್ಛರೆಂದು ದೂರವಿಡಲು ನಿರಾಕರಿಸಿದ. ಅವರಿಂದ ಅರಿಯಲು, ಅವರೊಡನೆ ಜ್ಞಾನದ ವಿನಿಮಯ ಮಾಡಲು, ಅಪೇಕ್ಷಿಪಟ್ಟ.

ಈ ಶತಮಾನದ ಗಾಂಧೀಜೀ ಅದೇ ಅರ್ಥದ ಮಾತನ್ನು ಅಂದರು :

"ನನ್ನ ಮನೆಯ ಸುತ್ತಲೂ ಪ್ರಾಕಾರ ನಿರ್ಮಿಸಲು, ನನ್ನ ಕಿಟಕಿಗಳನ್ನು ಮುಚ್ಚಿಡಲು ನಾನು ಇಚ್ಛಿಸುವುದಿಲ್ಲ. ಎಷ್ಟು ಸ್ವಚ್ಛಂದವಾಗಿ ಸಾಧ್ಯವೋ ಅಷ್ಟು ಸ್ವಚ್ಛಂದವಾಗಿ ಎಲ್ಲ ದೇಶಗಳ ಸಂಸ್ಕೃತಿಯೂ ನನ್ನ ಮನೆಯ ಸುತ್ತಲೂ ಬೀಸಬೇಕೆಂದು ನಾನು ಬಯಸುವೆ. ಆದರೆ ಆ ಬೀಸಾಟದಿಂದ ಅಡಿತಪ್ಪಿ ನಾನು ಬೀಳದಂತೆ ಮಾತ್ರ ನೋಡಿಕೊಳ್ಳುವೆ."

ನಿನ್ನೆ—ಇಂದು—ನಾಳೆಗಳ ಪ್ರಜ್ಞೆಯಿಂದ ಜವಾಹರಲಾಲ ನೆಹರೂ ನುಡಿದರು :

"ಬದಲಾವಣೆ ಅಗತ್ಯ. ಆದರೆ ಭಗ್ನವಿಲ್ಲದ ಮುಂದುವರಿಕೆಯೂ ಅಷ್ಟೇ ಅವಶ್ಯ. ಗತಕಾಲದ ಮತ್ತು ವರ್ತಮಾನ ಕಾಲದ ಅಡಿಪಾಯಗಳ ಮೇಲೆ ಭವಿಷ್ಯತ್ತನ್ನು ನಿರ್ಮಿಸಬೇಕು".

× × × × × × × × × ×

"ಎಲ್ಲ ಜನರೂ ಸುಖಿಗಳಾಗಲಿ"

—ಇದು ಪ್ರಾಚೀನ ಭಾರತದ ವಾಣಿ.

ಸಮಾಜವಾದವನ್ನು, ಸರ್ವೋದಯವನ್ನು, ಕಲ್ಯಾಣರಾಜ್ಯವನ್ನು ಬಯಸುವ ನಮ್ಮ ದೇಶದ ಆಧುನಿಕರು ಪುನರುಚ್ಚರಿಸುತ್ತಿರುವುದೂ ಆ ಆಶಯವನ್ನೇ.

ಆ ಬಯಕೆ ಈಡೇರಲೆಂದೇ ನವ ರಾಷ್ಟ್ರದ, ನವ ಸಮಾಜದ ನಿರ್ಮಾಣ.

ಅದು ಸಾಧ್ಯವಾದಾಗ, ವಿಶ್ವದ ಪ್ರಮುಖ ರಾಷ್ಟ್ರಗಳ ಶ್ರೇಣಿಯಲ್ಲಿ ಭಾರತ ಕಂಗೊಳಿಸುವುದು : ಅನಂತರದ ಅವಧಿಯಲ್ಲಿ, ತನ್ನ ಕಥೆಯ ಮತ್ತೊಂದು ಉಜ್ವಲ ಅಧ್ಯಾಯವನ್ನು ಅದು ಬರೆಯುವುದು.

—ನಿರಂಜನ





ೇಶ್ವರ, ಅಂಗ್ಕೊರ್‌ಥಾವ್
ಬೋಡಿಯಾ

ಕುಟಿಯಲ್ಲಿ ಯುವಕ ಋಷಿ
ಧ್ಯಏಷ್ಯಾ

ಕೊರ್‌ವಾಟ್ ಮುಖ್ಯದ್ವಾರ
ಬೋಡಿಯಾ

ೆರ – ಪರ್ವತಗಳಾಚೆ
ಭಾರತ



೨

ಭಾರತ ದರ್ಶನ

ನಮ್ಮ ಸಂವಿಧಾನದಲ್ಲಿ ನಮ್ಮ ರಾಷ್ಟ್ರವನ್ನು 'ಇಂಡಿಯಾ ಎಂದರೆ ಭಾರತ' ಎಂದು ಕರೆಯಲಾಗಿದೆ. ಇವೆರಡು ಹೆಸರುಗಳಲ್ಲಿ ಭಾರತ ಎಂಬುದು ಪ್ರಾಚೀನವಾದದ್ದು; ಆಂಗ್ಲೇಯರಿಂದ ಬಂದ ಹೆಸರು ಇಂಡಿಯಾ. ಅಂತರರಾಷ್ಟ್ರೀಯ ರಂಗದಲ್ಲಿ ಇಂದು ಪ್ರಚಾರದಲ್ಲಿರುವ ಹೆಸರು ಇದೇ.

ನಮ್ಮ ರಾಷ್ಟ್ರಕ್ಕೆ ಭಾರತ ಎಂಬ ಹೆಸರು ಏಕೆ ಬಂತು? ವಿಷ್ಣುವಿನ ಅವತಾರವಾದ ಋಷಭನ ಮಗನಾದ ಭರತನು ಆಳಿದ ರಾಷ್ಟ್ರವಾದ್ದರಿಂದ ಇದು ಭರತವರ್ಷವೆನಿಸಿತು; ದುಷ್ಯಂತನ ಮಗ ಭರತನು ಆಳಿದ್ದರಿಂದ ಭರತಖಂಡವಾಯಿತು ಎಂದು ಪುರಾಣಕಥೆಗಳಿವೆ. ಋಷಭ ತೀರ್ಥಂಕರನ ಮಗನಾದ ಭರತನು ಆಳಿದ್ದರಿಂದ ಭರತವರ್ಷವೆಂಬ ಹೆಸರು ಬಂತು. ಎಂಬುದು ಜೈನಪುರಾಣಗಳ ಹೇಳಿಕೆ.

ವೇದಯುಗದಲ್ಲಿ ಪರುಷ್ಣೀ (ರಾವಿ) ವಿಪಾಶಾ (ಬಿಯಾಸ್) ನದೀ ಪ್ರದೇಶದಲ್ಲಿ ಭರತ ಎಂಬ ಜನಾಂಗವೊಂದಿದ್ದಿತೆಂದು ಉಲ್ಲೇಖವಿದೆ. ಈ ಜನಾಂಗದಿಂದ ಭಾರತವೆಂಬ ಹೆಸರು ಬಂದಿರಬೇಕೆಂಬ ಊಹೆಯೂ ಇದೆ. ಕಳಿಂಗದ ಪ್ರಬಲ ರಾಜನಾಗಿದ್ದ ಖಾರವೇಲನ ಹಾತಿಗುಂಫಾ ಶಾಸನದಲ್ಲಿ 'ಭರತವಸ' ಎಂಬ ಮಾತು ಬರುತ್ತದೆಯಾಗಿ ಕ್ರಿಸ್ತ ಶಕಕ್ಕೆ ಕೆಲವು ಶತಮಾನಗಳ ಹಿಂದೆಯೇ ನಮ್ಮ ರಾಷ್ಟ್ರಕ್ಕೆ ಭಾರತವರ್ಷವೆಂಬ ಹೆಸರು ಬಂದಿರಬೇಕೆಂಬುದು ಸ್ಪಷ್ಟವಾಗುತ್ತದೆ.

ಇಂಡಿಯಾ ಎಂಬುದು ಗ್ರೀಕ್ ಮೂಲದಿಂದ ಭಾರತಕ್ಕೆ ದೊರೆತ ಹೆಸರು; ಸಿಂಧು ನದಿಯನ್ನು ಹಿಂದು ಎಂದು ಕರೆದ ಇರಾನಿ ಜನರ ನುಡಿಯಿಂದ ಪ್ರೇರಿತವಾದದ್ದು. ಮುಸ್ಲಿಮರ ಆಡಳಿತ ಕಾಲದಲ್ಲಿ ಭಾರತವನ್ನು 'ಹಿಂದೂಸ್ಥಾನ್' ಎಂದು ಕರೆದರು.

ಭಾರತ ಒಂದು ದೊಡ್ಡ ಭೂಭಾಗ; ಅದು ಏಷ್ಯಾಖಂಡದ ದಕ್ಷಿಣಭಾಗದಲ್ಲಿ 32.80.483 ಚದರ ಕಿ.ಮೀ.ಗಳಷ್ಟು ಭೂಪ್ರದೇಶವನ್ನು ಆವರಿಸಿದೆ. ಪೂರ್ವಪಶ್ಚಿಮವಾಗಿ ಸುಮಾರು 2.933 ಕಿ.ಮೀ.ಗಳಷ್ಟು ದಕ್ಷಿಣೋತ್ತರವಾಗಿ 3.214 ಕಿ.ಮೀ. ಗಳಷ್ಟು ಉದ್ದವಾಗಿದೆ. ಜಗತ್ತಿನ ವಿವಿಧ ರಾಷ್ಟ್ರಗಳನ್ನು ಗಣನೆಗೆ ತಂದುಕೊಂಡರೆ, ವಿಸ್ತಾರದಲ್ಲಿ ಭಾರತ ಏಳನೆಯದು; ಜನಸಂಖ್ಯಾ ದೃಷ್ಟಿಯಿಂದ ಎರಡನೆಯದು: 1971ರ ಜನಗಣತಿಯಂತೆ ಭಾರತದ ಜನಸಂಖ್ಯೆ 54.8 ಕೋಟಿ.

ಇಂದಿನ ಭಾರತಕ್ಕಿಂತ ಇನ್ನೂ ದೊಡ್ಡದಾದ ಪ್ರದೇಶವನ್ನು ಹಿಂದೆ ಭಾರತವೆನ್ನುತ್ತಿದ್ದರು. ಸಮುದ್ರಕ್ಕೆ ಉತ್ತರದಲ್ಲಿ, ಹಿಮಾಲಯದ ದಕ್ಷಿಣಕ್ಕೆ ಇರುವ ಭೂಭಾಗವೇ ಭಾರತ; ಅಲ್ಲಿ ವಾಸಿಸುವ ಜನ ಭಾರತಿಗಳು. ಭಾರತೀಯರು ಎಂದು ವಿಷ್ಣುಪುರಾಣದಲ್ಲಿ ಹೇಳಿದೆ.

ಭಾರತವನ್ನು 'ಚಕ್ರವರ್ತಿಕ್ಷೇತ್ರ'ವೆಂದು ಕರೆದ ಕೌಟಿಲ್ಯ ಅದು ಹಿಮಾಲಯದಿಂದ ಸಮುದ್ರದ ವರೆಗೆ ಒಂದು ಸಾವಿರ ಯೋಜನ ಗಳಷ್ಟಿದೆ ಎಂದಿದ್ದಾನೆ. ಇಂದಿನ ಭಾರತರಾಷ್ಟ್ರ– ಇಂಡಿಯಾ– ಹಿಂದಿನ ಕಾಲದ ಭಾರತ ರಾಷ್ಟ್ರವಷ್ಟು ವಿಸ್ತಾರವಾಗಿಲ್ಲ. ಒಂದು ಉದಾಹರಣೆ ಹೇಳುವುದಾದರೆ ಭಾರತದ ಅತ್ಯಂತ ಪ್ರಸಿದ್ಧ ಚಕ್ರವರ್ತಿಯಾದ ಅಶೋಕನ ಕಾಲದಲ್ಲಿ ಇಂದಿನ ಅಫ್ಘಾನಿಸ್ತಾನ ಅವನ ಆಡಳಿತಕ್ಕೆ ಸೇರಿದ



ಉತ್ತರದಲ್ಲಿ ಹಿಮಾಲಯ

ಭಿನ್ನವಾಗಿತ್ತು. ಪೂರ್ವಕಾಲದ ಮಾತನ್ನು ಬಿಟ್ಟರೂ, ಭಾರತದಲ್ಲಿ ಬ್ರಿಟಿಷ್ ಸಾಮ್ರಾಜ್ಯವಿದ್ದ ಕಾಲದ ಭಾರತರಾಷ್ಟ್ರದ ಗಡಿಯ ಭಾಗಗಳು ಈಗ ಪಾಕಿಸ್ತಾನ, ಬಾಂಗ್ಲಾ ದೇಶಗಳೆಂದು ಭಾರತದಿಂದ ಪ್ರತ್ಯೇಕವಾದ ರಾಷ್ಟ್ರಗಳಾಗಿವೆ.

ಇಂದಿನ ಭಾರತ ರಾಷ್ಟ್ರದ ಮೇರೆಗಳನ್ನು ಈ ರೀತಿ ವಿವರಿಸಬಹುದು :

ಹಿಮಾಲಯದ ಉತ್ತರ ಭಾಗದಲ್ಲಿ ಚೀನ ರಾಷ್ಟ್ರವಿದೆ. ಹಿಮಾಲಯದ ದಕ್ಷಿಣದ ತಪ್ಪಲಿನಲ್ಲಿ ನೇಪಾಳ, ಸಿಕ್ಕಿಂ, ಭೂತಾನ ರಾಜ್ಯಗಳಿವೆ. ನೇಪಾಳ ಸ್ವತಂತ್ರ ರಾಷ್ಟ್ರ. ಸಿಕ್ಕಿಂ ಭಾರತದ ರಕ್ಷಿತ ರಾಷ್ಟ್ರ. ಭೂತಾನ ಒಳ ಆಡಳಿತದಲ್ಲಿ ಸ್ವತಂತ್ರವಾದರೂ ತನ್ನ ವಿದೇಶೀ ವ್ಯವಹಾರದಲ್ಲಿ ಭಾರತ ಸರಕಾರದ ಸಲಹೆಯಂತೆ ನಡೆದುಕೊಳ್ಳುತ್ತದೆ. ಪೂರ್ವ ದಿಕ್ಕಿನಲ್ಲಿ, ಭಾರತದ ಅಸ್ಸಾಂ ಮತ್ತು ಪಶ್ಚಿಮ ಬಂಗಾಳ ರಾಜ್ಯಗಳ ನಡುವೆ ಬಾಂಗ್ಲಾ ದೇಶವಿದೆ. ಭಾರತದ ಪೂರ್ವ ಗಡಿಯಲ್ಲಿರುವ ಬೆಟ್ಟಗಳ ಸಾಲು ಬರ್ಮ ದೇಶವನ್ನು ಭಾರತದಿಂದ ಪ್ರತ್ಯೇಕಿಸಿದೆ. ಭಾರತದ ದಕ್ಷಿಣ ಭಾಗ ಒಂದು ಪರ್ಯಾಯದ್ವೀಪವಾಗಿದ್ದು ಅದಕ್ಕೆ ಪೂರ್ವದಲ್ಲಿ ಬಂಗಾಳ ಕೊಲ್ಲಿ, ಪಶ್ಚಿಮದಲ್ಲಿ ಅರಬಿ ಸಮುದ್ರ ಇವೆ. ದಕ್ಷಿಣ ದಲ್ಲಿರುವ ಹಿಂದೂ ಸಾಗರದಲ್ಲಿ ಶ್ರೀಲಂಕಾ ದ್ವೀಪವಿದೆ. ಬಂಗಾಳ ಕೊಲ್ಲಿಯಲ್ಲಿರುವ ಅಂಡಮಾನ್, ನಿಕೋಬಾರ್ ದ್ವೀಪ ಸಮುದಾಯ ಹಾಗೂ ಅರಬಿ ಸಮುದ್ರದಲ್ಲಿರುವ ಲಕ್ಷದ್ವೀಪ ಭಾರತಕ್ಕೆ ಸೇರಿದುವು. ಭಾರತದ ವಾಯುವ್ಯ ಭಾಗದಲ್ಲಿ ಪಾಕಿಸ್ತಾನವಿದೆ.



ಭಾರತ : ಪ್ರಕೃತಿ ಲಕ್ಷಣ

ಪ್ರಕೃತಿ ಲಕ್ಷಣ

ಭಾರತವನ್ನು ಮೂರು ಪ್ರಧಾನ ಪ್ರದೇಶಗಳಾಗಿ ವಿಂಗಡಿಸಬಹುದು : ಮಹಾಪರ್ವತ ಪ್ರದೇಶ ; ಸಿಂಧು–ಗಂಗಾ ಬಯಲು ಪ್ರದೇಶ ; ದಕ್ಷಿಣದ ಪರ್ಯಾಯದ್ವೀಪ –ಎಂದು.

ಭಾರತದ ಉತ್ತರ ಭಾಗದಲ್ಲಿರುವ ಹಿಮಾಲಯ ಪರ್ವತ ಶ್ರೇಣಿ ಸುಮಾರಾಗಿ ಸಮಾನಾಂತರವಾಗಿರುವ ಮೂರು ಸಾಲುಗಳಲ್ಲಿ ಹಬ್ಬಿದೆ. ಈ ಸಾಲುಗಳ ನಡುವೆ, ಕಾಶ್ಮೀರ, ಕುಲು ಗಳಂಥ ವಿಶಾಲ ಮತ್ತು ಫಲವತ್ತಾದ ಕಣಿವೆಗಳಿವೆ. ಹಿಮಾಲಯದಲ್ಲಿರುವ ಕಣಿವೆ ಮಾರ್ಗಗಳು ತುಂಬ ಎತ್ತರದಲ್ಲಿರುವುದರಿಂದ ಅವೆಲ್ಲವನ್ನೂ ಸಂಚಾರ ಮಾರ್ಗಗಳನ್ನಾಗಿ ಉಪಯೋಗಿಸುವಂತಿಲ್ಲ. ಕೆಲವು ಮಾತ್ರ ಈ ಕೆಲಸಕ್ಕೆ ಒದಗುತ್ತವೆ. ಹಿಮಾಲಯ ಪರ್ವತಶ್ರೇಣಿಯ ಉದ್ದ ಸುಮಾರು 2,000 ಮೈಲು, ಅದರ ಅಡ್ಡಳತೆ ಸುಮಾರು 150 ಮೈಲುಗಳಷ್ಟಿದೆ.

ಭಾರತದ ಪೂರ್ವ ಭಾಗದಲ್ಲಿ, ಭಾರತ–ಬರ್ಮ, ಭಾರತ –ಬಾಂಗ್ಲಾ ದೇಶಗಳ ನಡುವೆ ಕೂಡ ಬೆಟ್ಟಸಾಲುಗಳಿವೆ. ಆದರೆ ಇವು ಹಿಮಾಲಯದಷ್ಟು ಉನ್ನತವಾಗಿಲ್ಲ.

ಸಿಂಧು, ಗಂಗಾ, ಬ್ರಹ್ಮಪುತ್ರ –ಸಿಂಧು–ಗಂಗಾ ಬಯಲು ಪ್ರದೇಶದಲ್ಲಿ ಹರಿಯುವ ಪ್ರಧಾನ ನದಿಗಳು. ಈ ಬಯಲು ಪ್ರದೇಶ ನದಿಗಳು ತಂದುಹಾಕಿದ ಮೆಕ್ಕಲು ಮಣ್ಣಿನಿಂದ ರೂಪಿತವಾಗಿದ್ದು, ತುಂಬ ಫಲವತ್ತಾಗಿದೆ. ಇದು ಜಗತ್ತಿನ ಅತಿ ವಿಸ್ತಾರ ಬಯಲು ಪ್ರದೇಶಗಳಲ್ಲಿ ಒಂದು. ಇಲ್ಲಿನ ಜನಸಾಂದ್ರತೆ ಕೂಡ ಹೆಚ್ಚು.

ಸಿಂಧು–ಗಂಗಾ ಬಯಲು, ದಕ್ಷಿಣ ಪರ್ಯಾಯದ್ವೀಪಗಳ ನಡುವೆ ಅರಾವಳಿ, ವಿಂಧ್ಯ, ಸಾತ್ಪುರ ಮುಂತಾದ ಪರ್ವತ ಶ್ರೇಣಿಗಳಿವೆ. ಪರ್ಯಾಯದ್ವೀಪದ ಪೂರ್ವ ಪಶ್ಚಿಮ ಕರಾವಳಿಗೆ ಸಮವಾಗಿ ಪೂರ್ವ, ಪಶ್ಚಿಮ ಘಟ್ಟಗಳು ಹಬ್ಬಿವೆ. ಈ ಮೂರು ಪರ್ವತಶ್ರೇಣಿಗಳಲ್ಲಿ ಪಶ್ಚಿಮ ಘಟ್ಟಗಳೇ ಎತ್ತರವಾದುವು. ಪೂರ್ವ ಘಟ್ಟ ಮತ್ತು ಬಂಗಾಳ ಕೊಲ್ಲಿಯ ನಡುವೆ ಇರುವ ಕರಾವಳಿ ಪ್ರದೇಶ, ಪಶ್ಚಿಮ ಘಟ್ಟ ಮತ್ತು ಅರಬಿ ಸಮುದ್ರದ ನಡುವೆ ಇರುವ ಕರಾವಳಿ ಪ್ರದೇಶಕ್ಕಿಂತ ಹೆಚ್ಚು ವಿಸ್ತಾರವಾದದ್ದು. ಪರ್ಯಾಯದ್ವೀಪದ ದಕ್ಷಿಣ ಭಾಗದಲ್ಲಿರುವ ನೀಲಗಿರಿ ಬೆಟ್ಟಗಳು ಪೂರ್ವ–ಪಶ್ಚಿಮ ಘಟ್ಟಗಳ ಸಂಧಿಸ್ಥಾನ.

ಭೂ ರಚನೆ

ಭೂರಚನಾ ದೃಷ್ಟಿಯಿಂದ ವ್ಯಕ್ತವಾಗುವಂತೆ ಭಾರತವನ್ನು ಮೂರು ಭಾಗಗಳಾಗಿ ವಿಂಗಡಿಸಬಹುದು : ಹಿಮಾಲಯ ಮತ್ತು ಅದಕ್ಕೆ ಸಂಬಂಧಿಸಿದ ಪರ್ವತಗಳು ; ಸಿಂಧು–ಗಂಗಾ ಬಯಲು ಮತ್ತು ಪುರಾತನವಾದ ದಕ್ಷಿಣ ಪರ್ಯಾಯದ್ವೀಪ.

ಹಿಮಾಲಯ ಮತ್ತು ಅದಕ್ಕೆ ಸಂಬಂಧಿಸಿದ ನಾಗಾ–ಲುಷೈ ಪರ್ವತಗಳು ಅನೇಕ ಕೋಟಿ ವರ್ಷಗಳ ಕಾಲ ಸಮುದ್ರತಳದಲ್ಲಿದ್ದು, ಸುಮಾರು ಏಳು ಕೋಟಿ ವರ್ಷಗಳ ಹಿಂದೆ ಆರಂಭವಾದ ಭೂಚಲನೆಗಳಿಂದ ಸಮುದ್ರದಿಂದ ಮೇಲೆದ್ದುವು.

ಸುಮಾರು ಏಳೂಮುಕ್ಕಾಲು ಲಕ್ಷ ಚದರ ಕಿ.ಮೀ. ಗಳಷ್ಟು ವಿಸ್ತಾರವಾದ ಸಿಂಧು-ಗಂಗಾ ಬಯಲಿನ ಕೆಲವು ಭಾಗಗಳು ರೂಪುಗೊಂಡದ್ದು ಸುಮಾರು ಹತ್ತುಸಾವಿರ ವರ್ಷಗಳ ಹಿಂದೆ. ಈ ಬಯಲು ಉತ್ತರದಿಂದ ದಕ್ಷಿಣದ ಕಡೆಗೆ ಇಳಿಜಾರಾಗಿ ಹಬ್ಬಿದೆ. ಈ ಬಯಲಿನ ಮೆಕ್ಕಲುಮಣ್ಣು ಕೆಲವೆಡೆಗಳಲ್ಲಿ 2000 ಮೀಟರುಗಳಷ್ಟು ದಪ್ಪವಾಗಿದೆ.

ದಕ್ಷಿಣ ಪರ್ಯಾಯದ್ವೀಪ ಪ್ರದೇಶ, ಸಿಂಧು-ಗಂಗಾ ಬಯಲಿಗಿಂತ ಹೆಚ್ಚು ದೃಢವಾದದ್ದು. ಇಲ್ಲಿ ಭೂಕಂಪನ ಅಪರೂಪ. ಈ ಪ್ರದೇಶದ ಬಹುಭಾಗದ ಮೂಲವಿನ್ಯಾಸ, ಅತ್ಯಂತ ಪ್ರಾಚೀನ ಕಾಲದ ಬಂಡೆಗಳ ರೂಪಾಂತರದಿಂದ ಕೂಡಿದೆ.



ಬದರೀನಾಥದಿಂದ ಕೆಳಕ್ಕೆ ಸಾಗುತ್ತಿರುವ ನದಿ

ನದೀಜಾಲ

ಭಾರತದ ನದೀಜಾಲವನ್ನು ಹೀಗೆ ವಿಂಗಡಿಸಬಹುದು :

ಹಿಮಾಲಯದ ನದಿಗಳು ಇವುಗಳಲ್ಲಿ ಒಂದು ವರ್ಗ. ಈ ನದಿಗಳು ಸಾಮಾನ್ಯವಾಗಿ ಹಿಮಕರಗಿದ ನೀರಿನಿಂದ ಪ್ರವಾಹವಾಗುತ್ತವೆ, ಮಳೆಗಾಲದಲ್ಲಿ ಮಳೆಯ ನೀರೂ ಸೇರುತ್ತದೆ. ಹೀಗೆ ಬೇಸಿಗೆ, ಮಳೆಗಾಲಗಳೆರಡರಲ್ಲೂ ಇವುಗಳಲ್ಲಿ ನೀರಿರುತ್ತದೆ. ಮಳೆಗಾಲದಲ್ಲಂತೂ ದೊಡ್ಡ ನೆರೆಗಳುಂಟಾಗುತ್ತವೆ.

ದಕ್ಷಿಣದ ನದಿಗಳಿಗೆ ಮಳೆಯ ನೀರೇ ಆಧಾರ. ಆದ್ದರಿಂದ ಬೇಸಿಗೆಯಲ್ಲಿ ಇವುಗಳಲ್ಲಿ ನೀರು ಬತ್ತುತ್ತದೆ. ಕೆಲವಂತೂ ಪೂರ್ಣವಾಗಿ ಒಣಗಿಹೋಗುವುದೂ ಉಂಟು. ಕರಾವಳಿ ಪ್ರದೇಶಗಳ ನದಿಗಳ ಅದರಲ್ಲೂ ಪಶ್ಚಿಮ ಕರಾವಳಿಯ ನದಿಗಳ ಉದ್ದ ಬಹಳ ಕಡಮೆ.

ಮೇಲೆ ಹೇಳಿದ ವರ್ಗದ ನದಿಗಳು ಸಾಮಾನ್ಯವಾಗಿ ಗುಡ್ಡಗಾಡಿನಲ್ಲಿ ಹುಟ್ಟಿ ಸಮುದ್ರವನ್ನು ಸೇರುತ್ತವೆ. ಆದರೆ ರಾಜಸ್ಥಾನದಲ್ಲಿರುವ ಕೆಲವು ನದಿಗಳು ಸಮುದ್ರವನ್ನು ಸೇರುವುದಿಲ್ಲ; ಸಾಂಭರ್‌ನಂಥ ಸರೋವರವನ್ನು ಸೇರುತ್ತವೆ. ಅಥವಾ ಮರುಳುಗಾಡಿನಲ್ಲಿ ಹರಿಯುತ್ತ ಮರಳಿನಲ್ಲಿ ಇಂಗಿಹೋಗುತ್ತವೆ.

ಭಾರತದ ಎಲ್ಲ ನದಿಗಳಿಗಿಂತ ವಿಸ್ತಾರವಾದದ್ದು ಗಂಗಾನದಿಯ ಜಲಾನಯನ ಭೂಮಿ. ಇದು ಹಿಮಾಲಯದಿಂದ ವಿಂಧ್ಯ ಪರ್ವತದವರೆಗೆ ಹಬ್ಬಿದೆ. ಗೋದಾವರಿ ನದಿಯ ಜಲಾನಯನ ಭೂಮಿ ಇದಕ್ಕೆ ಎರಡನೆಯದು. ಭಾರತದ ಒಟ್ಟು ಭೂಪ್ರದೇಶದಲ್ಲಿ ಹತ್ತನೆಯ ಒಂದು ಭಾಗದಷ್ಟು ಪ್ರದೇಶ ಇದರ ಜಲಾನಯನ ಭೂಮಿಯಾಗಿದೆ. ಕೃಷ್ಣಾ ನದಿಯ ಜಲಾನಯನ ಭೂಮಿ ಇದಕ್ಕಿಂತ ಚಿಕ್ಕದು. ಮಹಾನದಿ, ನರ್ಮದಾ ಮತ್ತು ಕಾವೇರಿ ನದಿಗಳ ಜಲಾನಯನ ಭೂಮಿಯ ಸ್ವರೂಪ ಭಿನ್ನ ಭಿನ್ನವಾಗಿದೆಯಾದರೂ ವಿಸ್ತಾರದಲ್ಲಿ ಇವೆಲ್ಲವೂ ಸ್ವಲ್ಪ ಹೆಚ್ಚು ಕಡಮೆ ಸಮಾನವಾಗಿವೆ.

ಉತ್ತರದಲ್ಲಿ ತಪತಿ ಮತ್ತು ದಕ್ಷಿಣದಲ್ಲಿ ಪೆನ್ನಾರ್ ಅಷ್ಟು ದೊಡ್ಡ ನದಿಗಳಲ್ಲವಾದರೂ ನೀರಾವರಿ ದೃಷ್ಟಿಯಿಂದ ಗಮನೀಯವಾದುವು.

ಇತಿಹಾಸಪೂರ್ವ ಕಾಲ

ಭಾರತದ ಇತಿಹಾಸ ತುಂಬ ಪ್ರಾಚೀನವಾದದ್ದು. ಚರಿತ್ರಪೂರ್ವಕಾಲದಲ್ಲಿ ಅಂದರೆ ಒಂದೂವರೆ ಲಕ್ಷ ವರ್ಷಗಳ ಹಿಂದೆಯೇ ಭಾರತದಲ್ಲಿ ಮಾನವನು ಜೀವಿಸುತ್ತಿದ್ದನೆಂಬುದಕ್ಕೆ ಆಧಾರಗಳು ದೊರೆತಿವೆಯಾದರೂ, ಅತ್ಯಂತ ಪ್ರಾಚೀನ ಕಾಲದಲ್ಲಿ ಭಾರತದಲ್ಲಿ ತಲೆದೋರಿದ ಮಾನವವರ್ಗ ಯಾವುದು, ಅವರ ಸ್ವರೂಪವೇನು ಎಂಬ ಬಗೆಗೆ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳಿವೆ. ಪ್ರಾಚೀನ ಶಿಲಾಯುಗ ಮತ್ತು ಅದರ ಅನಂತರದ ಕಾಲದಲ್ಲಿ ಭಾರತದಲ್ಲಿದ್ದ ಮಾನವರ ಬಗೆಗೆ ನಮಗೆ ಹೆಚ್ಚು ವಿವರಗಳು ಗೊತ್ತಿಲ್ಲದಿದ್ದರೂ ನಮಗೆ ದೊರೆತಿರುವ ಆಧಾರಗಳಿಂದ ಅವರು ಕಲ್ಲಿನಿಂದ ಆಯುಧಗಳನ್ನು ಸಿದ್ಧಗೊಳಿಸಿದರು; ಬೇಟೆಯಿಂದ ಜೀವಿಸುತ್ತಿದ್ದ ಅಲೆಮಾರಿ ವರ್ಗದವರಾಗಿದ್ದು ಗುಹೆಗಳಲ್ಲಿ ವಾಸಿಸುತ್ತಿದ್ದರು; ಅನಂತರ ಬೆಂಕಿಯ ಉತ್ಪಾದನೆ, ಉಪಯೋಗಗಳನ್ನು ಕಲಿತರು; ಕಾಡುಪ್ರಾಣಿಗಳನ್ನು ಪಳಗಿಸಿ



ಸಿಂಧೂ ನಾಗರಿಕತೆಗೂ ಹಿಂದೆ ಘಘರ್ (ಸರಸ್ವತಿ) ಕಣಿವೆಯಲ್ಲಿ



ಪ್ರಾಚೀನ ಮಡಿಕೆ ಕುಡಿಕೆ : ಅವಶೇಷಗಳು

ಕೊಂಡು ವ್ಯವಸಾಯದಲ್ಲಿ ತೊಡಗಿದರು ; ತಾಮ್ರ, ಕಬ್ಬಿಣಗಳನ್ನು ಪತ್ತೆಹಚ್ಚಿ ಅವನ್ನು ಉಪಯೋಗಿಸತೊಡಗಿದರು ; ಮಡಕೆ ಕುಡಿಕೆಗಳನ್ನು ತಯಾರುಮಾಡಿಕೊಂಡರು ; ದೋಣಿಗಳನ್ನು ಕಟ್ಟಿ ನೀರಿನಮೇಲೆ ಸಂಚರಿಸುತ್ತಿದ್ದರು ; ಹತ್ತಿ ಮತ್ತು ಉಣ್ಣೆ ಬಟ್ಟೆಗಳನ್ನು ನೆಯ್ದರು ಮುಂತಾದ ಅಂಶಗಳು ತಿಳಿದುಬರುತ್ತವೆ. ಈ ಪ್ರಗತಿಯನ್ನು ಸಾಧಿಸಲು ಅನೇಕ ಸಹಸ್ರ ವರ್ಷಗಳು ಬೇಕಾದುವು.

ನವಶಿಲಾಯುಗದ ಮಾನವ ನಮ್ಮ ರಾಷ್ಟ್ರದಲ್ಲಿ ನಾಗರಿಕತೆಯ ಮಜಲನ್ನು ಮುಟ್ಟಿದ್ದು ಹೇಗೆ, ಯಾವಾಗ ಎಂಬುದು ಸ್ಪಷ್ಟವಾಗಿ ಗೊತ್ತಿಲ್ಲ. ಪುರಾತತ್ತ್ವ ಶೋಧನೆಗಳಿಂದ ನಮಗೆ ತಿಳಿದುಬಂದಿರುವ ಪ್ರಕಾರ ಕ್ರಿ. ಪೂ. ನಾಲ್ಕನೆಯ ಸಹಸ್ರಾಬ್ದದಿಂದ ಈಚಿನದೆನ್ನಬಹುದಾದ ಸಿಂಧೂಕಣಿವೆ ನಾಗರಿಕತೆ ಆರಂಭವಾಗುವುದಕ್ಕೆ ಮೊದಲು ಈ ಪ್ರದೇಶದ ಜನರು ಹಳ್ಳಿಗಳಲ್ಲಿ ವಾಸಮಾಡುತ್ತ ಸರಳವಾದ ಜೀವನವನ್ನು ನಡೆಸುತ್ತಿದ್ದರೆಂದು ತೋರುತ್ತದೆ. ಈ ಜನರು ಯಾರು ಎಂಬ ಬಗೆಗೆ ಭಿನ್ನಾಭಿಪ್ರಾಯವಿದೆ. ಇವರು ದ್ರಾವಿಡ ಜನಾಂಗ ಎಂಬ ಊಹೆಯಿದೆ.

ಸಿಂಧೂಕಣಿವೆ ಸಂಸ್ಕೃತಿ

ಈಗಿನ ಪಾಕಿಸ್ತಾನದ ಮಾಂಟಗೋಮರಿ ಜಿಲ್ಲೆಯಲ್ಲಿ ರಾವಿ ನದೀತೀರದಲ್ಲಿರುವ ಹರಪ್ಪಾ, ಸಿಂಧ್ ಪ್ರಾಂತದ ಲಾರ್ಖಾನಾದ ಸಮೀಪದಲ್ಲಿರುವ ಮೊಹೆಂಜೊ ದಾರೊಗಳಲ್ಲಿ ನಡೆಸಿದ ಶೋಧನೆಗಳು ಇವೆರಡೂ ಪ್ರದೇಶಗಳಲ್ಲಿ ಸುವ್ಯವಸ್ಥಿತವಾಗಿದ್ದ, ಗಮನಾರ್ಹವಾದ ನಾಗರಿಕತೆಯ ಮಟ್ಟವನ್ನು ಮುಟ್ಟಿದ್ದ, ವ್ಯಾಪಾರಕೇಂದ್ರಗಳಾಗಿದ್ದಿರಬಹುದಾದ ನಗರಗಳು ಇದ್ದುವೆಂಬುದನ್ನು ಸ್ಪಷ್ಟವಾಗಿ ಸೂಚಿಸುತ್ತವೆ. ಅಲ್ಲದೆ ಪರಪ್ರದೇಶಗಳ ಸಾಂಸ್ಕೃತಿಕ ಪ್ರಭಾವಕ್ಕೆ ಒಳಗಾಗದ ತಮ್ಮದೇ ಆದ ಸಂಸ್ಕೃತಿಯನ್ನು ಹೊಂದಿದ್ದುವೆಂಬುದನ್ನು ಸೂಚಿಸುತ್ತವೆ. ಈ ಸಂಸ್ಕೃತಿ ಹರಪ್ಪಾ ಮೊಹೆಂಜೊ ದಾರೊ ಪ್ರದೇಶಗಳಿಗಷ್ಟಕ್ಕೇ ಸೀಮಿತವಾಗಿರದೆ–ಸಿಂಧೂನದೀ ಪ್ರದೇಶದಿಂದ ಬಹುದೂರದ ವರೆಗೆ ಪೂರ್ವಪಶ್ಚಿಮಗಳಿಗೆ ಹರಡಿತ್ತೆಂಬುದು ಈಚಿನ ಸಂಶೋಧನೆಗಳಿಂದ ದೃಢಪಟ್ಟಿದೆ.

ಮುಂದೆ ಹೊರಗಿನಿಂದ ಬಂದ ಜನರು ಈ ಪ್ರದೇಶದಲ್ಲಿ ನೆಲೆಸಿದರು. ಈ ಜನ, ತಮ್ಮನ್ನು ಆರ್ಯರೆಂದು ಕರೆದುಕೊಂಡರು. ಇವರ ಮೂಲನಿವಾಸ ಯಾವುವೆಂಬ ಬಗೆಗೆ ಭಿನ್ನಾಭಿಪ್ರಾಯಗಳಿವೆ.

ಆರ್ಯರ ಆಗಮನ


ಇವರು ಭಾರತಕ್ಕೆ ಬಂದ ಕಾಲದಲ್ಲಿ —ಅಂದರೆ ಸುಮಾರು ಕ್ರಿ.ಪೂ. ಎರಡನೆಯ ಸಹಸ್ರಾಬ್ದಿಯಲ್ಲಿ— ಭಾರತದಲ್ಲಿ ಇವರಿಗಿಂತ ಉತ್ತಮವಾದ ಜೀವನ ವಿಧಾನ, ಸಂಸ್ಕೃತಿ ಇದ್ದಿತೆಂಬುದು ಸಿಂಧೂ ಕಣಿವೆಯಲ್ಲಿ ನಡೆದಿರುವ ಭೂಶೋಧನೆಗಳಿಂದ ವ್ಯಕ್ತವಾಗುತ್ತದೆ. ಸಿಂಧೂ ಕಣಿವೆ ಸಂಸ್ಕೃತಿಯ ಜನ ನಗರನಿರ್ಮಾಣವನ್ನು ಬಲ್ಲವರಾಗಿದ್ದರು ; ಕೋಟೆಗಳನ್ನು ಕಟ್ಟಿ ತಮ್ಮ ನಗರಗಳನ್ನು ರಕ್ಷಿಸಿದ್ದರು ; ವ್ಯಾಪಾರ ನಡೆಸುತ್ತಿದ್ದರು ; ಅವರು ಕಲಾಕುಶಲರಾಗಿದ್ದರಲ್ಲದೆ, ಬರವಣಿಗೆಯನ್ನೂ ಬಲ್ಲವರಾಗಿದ್ದರೆಂಬುದು ನಮಗೆ ದೊರೆತಿರುವ ಅವರ ಮುದ್ರಿಕೆಗಳಿಂದ ವ್ಯಕ್ತವಾಗುತ್ತದೆ.



ಮೊಹೆಂಜೊ ದಾರೊ ಪ್ರಾಣಿಮುದ್ರಿಕೆಗಳು

ಆರ್ಯರು ಭಾರತಕ್ಕೆ ಬಂದಮೇಲೂ ಅವರು ಪ್ರಧಾನವಾಗಿ ಬೇಸಾಯಗಾರರಾಗಿಯೇ ಇದ್ದರು; ಅವರಿಗೆ ಬರಹ ಗೊತ್ತಿರಲಿಲ್ಲ. ಅವರು ಬರಹವನ್ನು ರೂಪಿಸಿಕೊಂಡದ್ದು ಸುಮಾರು ಕ್ರಿ.ಪೂ. 700ರ ಹೊತ್ತಿಗೆ.

ಭಾರತಕ್ಕೆ ಆರ್ಯರಿಂದ ದೊರೆತ ಅಪೂರ್ವ ಕೊಡುಗೆ –ಜಗತ್ತಿನ ಅತ್ಯಂತ ಪ್ರಾಚೀನ ಸಾಹಿತ್ಯವಾದ ವೇದಗಳು. ಇವುಗಳಲ್ಲಿ ಮೊದಲು ರಚಿತವಾದುವು ಋಗ್ವೇದದ ಕೆಲವು ಭಾಗಗಳು. ಋಗ್ವೇದದ ಇತರ ಭಾಗಗಳು ಮತ್ತು ಇತರ ವೇದಗಳು ಅನಂತರ ರಚಿತವಾದುವು. ಸಿಂಧು ಮತ್ತು ಅದರ ಉಪನದಿಗಳ ಪ್ರದೇಶದಲ್ಲಿ ಮೊದಲು ನೆಲೆಯೂರಿದ ಆರ್ಯರು ಕ್ರಮಕ್ರಮವಾಗಿ ಪೂರ್ವದ ಕಡೆಗೆ ಸರಿದು ಗಂಗಾ ಯಮುನಾ ನದಿಗಳ ವಿಸ್ತಾರವಾದ ಬಯಲಿನಲ್ಲಿ ನೆಲೆಸಿದರು. ಇದನ್ನು ಆರ್ಯಾವರ್ತ, ಪುಣ್ಯಭೂಮಿ ಎಂದು ಕರೆದರು. ವೇದಗಳ ಬಹುಭಾಗ ರಚಿತವಾದದ್ದು, ರಾಮಾಯಣ, ಮಹಾಭಾರತಗಳಿಗೆ ಸಂಬಂಧಿಸಿದ ಘಟನೆಗಳು ನಡೆದದ್ದು, ಈ ಪ್ರದೇಶದಲ್ಲಿ; ಆರ್ಯರ ಧಾರ್ಮಿಕ ಭಾವನೆಗಳು, ಸಾಮಾಜಿಕ ವ್ಯವಸ್ಥೆ, ಸಂಸ್ಕೃತಿ ರೂಪುಗೊಂಡದ್ದೂ ಇಲ್ಲೇ.



ಈತ ಚಕ್ರವರ್ತಿ


ಆರ್ಯರ ಜನಸಂಖ್ಯೆ ಬೆಳೆದಂತೆ ಅವರಲ್ಲಿ ಪ್ರತ್ಯೇಕ ಪ್ರತ್ಯೇಕ ಗುಂಪುಗಳು ರೂಪುಗೊಂಡುವು; ಪರಸ್ಪರ ಘರ್ಷಣೆಗಳೂ ನಡೆದುವು. ಕೆಲಕೆಲವು ಗುಂಪುಗಳು ಒಂದುಗೂಡುವುದೂ ನಡೆಯಿತು. ಆರ್ಯರ ವಿಸ್ತರಣೆಯಿಂದ, ಅವರು ಆಕ್ರಮಿಸಿಕೊಂಡ ಪ್ರದೇಶದಲ್ಲಿ ಮೊದಲು ಇದ್ದ ಜನ ದಕ್ಷಿಣಕ್ಕೆ ಸರಿಯಬೇಕಾಯಿತು. ತಮ್ಮ ಮೂಲನಿವಾಸಗಳಲ್ಲೇ ಉಳಿದುಕೊಂಡ ಜನ ಕ್ರಮಕ್ರಮವಾಗಿ ಆರ್ಯರೊಡನೆ ಬೆರೆತುಹೋಗುವುದೂ ನಡೆಯಿತು.

ಆಕ್ರಮಿತ ಪ್ರದೇಶದ ವಿಸ್ತಾರವೂ ಜನಸಂಖ್ಯೆಯೂ ಬೆಳೆದಂತೆ ಜನಪದಗಳು ರೂಪುಗೊಂಡುವು. ಕೆಲವು, ರಾಜರ ಆಡಳಿತಕ್ಕೊಳಗಾದುವು; ಮತ್ತೆ ಕೆಲವು ರಾಜರಿಲ್ಲದ ಜನಪ್ರಮುಖರೇ ಆಡಳಿತ ನಡೆಸುವ 'ಗಣ'ಗಳಾದುವು. ಮಹಾವೀರ ಮತ್ತು ಗೌತಮ ಬುದ್ಧ ಹುಟ್ಟಿದ್ದು ಇಂಥ ಗಣಗಳಲ್ಲಿ.

ಆರ್ಯರು ವಾಸಿಸುತ್ತಿದ್ದ ಮತ್ತು ಅದರಿಂದಾಚೆಯ ಪ್ರದೇಶಗಳನ್ನೆಲ್ಲ ಒಳಗೊಂಡ ಸಾಮ್ರಾಜ್ಯದ ಉಲ್ಲೇಖ ವೇದಗಳಲ್ಲಿ ಕಂಡು ಬರುತ್ತದೆ. ಅವಂತಿ, ವತ್ಸ, ಕೋಸಲ, ಮಗಧದ ಅಧಿಪತಿಗಳು ತಮ್ಮ ರಾಜ್ಯವಿಸ್ತರಣವಾಗಿ ದೊಡ್ಡ ಅರಸೊತ್ತಿಗೆಗಳನ್ನು ಸ್ಥಾಪಿಸಲು ಪ್ರಯತ್ನಿಸಿದರೆಂಬುದಕ್ಕೆ ಆಧಾರಗಳಿವೆ.

ನಂದರು

ಕ್ರಿ.ಪೂ. 326ರಲ್ಲಿ ಮೆಸಿಡೋನಿಯದ ಗ್ರೀಕ್ ದೊರೆ ಅಲೆಗ್ಸಾಂಡರ್ ಭಾರತದ ವಾಯುವ್ಯಭಾಗದಲ್ಲಿ ದಾಳಿಮಾಡುವ ಹೊತ್ತಿಗೆ ನಂದರು ಉತ್ತರ ಭಾರತದ ಬಹುಭಾಗವನ್ನು ತಮ್ಮ ಆಡಳಿತಕ್ಕೆ ಒಳಗುಮಾಡಿದ್ದರು. ಚರಿತ್ರಕಾರರು ನಂದರನ್ನು ಭಾರತದ ಪ್ರಥಮ ಸಾಮ್ರಾಜ್ಯಸ್ಥಾಪಕರು ಎಂದು ಕರೆಯುವುದುಂಟು. ಇವರು ಅಪಾರ ಧನವನ್ನು ಕೂಡಿಟ್ಟಿದ್ದಲ್ಲದೆ, ಬಹು ದೊಡ್ಡ ಸೈನ್ಯವನ್ನೂ ಕಟ್ಟಿದ್ದರು. ಇದರಿಂದಾಗಿಯೇ ಪಂಜಾಬಿನ ನದಿಗಳನ್ನು ದಾಟಿ ಬಂದ ಅಲೆಗ್ಸಾಂಡರ್ ಅಲ್ಲಿಂದ ಮುಂದೆ ಮಗಧದ ಮೇಲೆ ದಾಳಿ ನಡೆಸಲು ಹಿಂದು ಮುಂದು ನೋಡಬೇಕಾಗಿ ಬಂತು.



ಭಾರತದ ಮೇಲೆ ದಂಡೆತ್ತಿ ಬಂದ ಅಲೆಗ್ಸಾಂಡರ್

ನಂದರು ಬಲಶಾಲಿಗಳೂ ಐಶ್ವರ್ಯಸಂಪನ್ನರೂ ಆಗಿದ್ದರೂ, ಅವರು ಬೇಗ ಜನಪ್ರಿಯತೆಯನ್ನು ಕಳೆದುಕೊಂಡರು; ಭಾರವಾದ ತೆರಿಗೆಯ ಹೊರೆ, ನಂದರ ಕೊನೆಯ ಅರಸ ಧನನಂದ ಮತ್ತು ಅವನ ಪ್ರಜೆಗಳ ನಡುವೆ ಅವಿಶ್ವಾಸವನ್ನು ಬೆಳೆಸಿತು; ಅಲೆಗ್ಸಾಂಡರನು ಹಿಂದಿರುಗಿದ ಮೇಲೆ ಚಂದ್ರಗುಪ್ತ ಮೌರ್ಯನು ಮಗಧದ ರಾಜ್ಯಾಧಿಕಾರವನ್ನು ಗಳಿಸಿಕೊಳ್ಳಲು ದಾರಿ ಮಾಡಿಕೊಟ್ಟಿತು.

ಮೌರ್ಯರು

ಅಲೆಗ್ಸಾಂಡರನ ಆಗಮನಕ್ಕಿಂತ ಸುಮಾರು ಎರಡು ಶತಮಾನಗಳ ಹಿಂದೆ ಪರ್ಷಿಯದ ಚಕ್ರವರ್ತಿಗಳು ಅಧೀನ ಭಾರತದ ಗಡಿ ಪ್ರದೇಶವಾಗಿದ್ದ ಗಾಂಧಾರದ ಮೇಲೆ ನಡೆಸಿದ ದಾಳಿ, ಅಲೆಗ್ಸಾಂಡರ್ ಇಂಥಾ ಹೊರ ಪ್ರದೇಶದ ಮೇಲೆ ನಡೆಸಿದ ಆಕ್ರಮಣ ಇವುಗಳಿಂದ ಒಂದು ಅಂಶ ಸ್ಪಷ್ಟವಾಯಿತು: ಐಕ್ಯ ಸಾಮ್ರಾಜ್ಯದ ಸ್ಥಾಪನೆ ಭಾರತದ ರಕ್ಷಣೆಗೆ ಪ್ರಮುಖವಾದ ಅವಶ್ಯ ಎಂಬುದು. ಚಂದ್ರಗುಪ್ತ ಮೌರ್ಯ ಮತ್ತು ಅವನ ರಾಜಕೀಯ ಗುರುವಾದ ಚಾಣಕ್ಯ ಇಂಥ ಸಾಮ್ರಾಜ್ಯ ಸ್ಥಾಪನೆಯ ಪ್ರಯತ್ನವನ್ನು ಕೈಗೊಂಡು ಯಶಸ್ವಿಗಳಾದರು। ಮೌರ್ಯ ಸಾಮ್ರಾಜ್ಯ ಸ್ಥಾಪನೆಯಾಯಿತು. ಈ ವಂಶದ ಚಂದ್ರಗುಪ್ತ, ಬಿಂದುಸಾರ



ಅಶೋಕ

ಅಶೋಕರು ಈ ಸಾಮ್ರಾಜ್ಯವನ್ನು ಬಲಪಡಿಸಿದ್ದಲ್ಲದೆ ಭಾರತದ ನೈಋತ್ಯ ಗಡಿ ಪ್ರದೇಶದಾಚೆ ನೆಲೆಸಿದ್ದ ಗ್ರೀಕ್ ಅಧಿಪತಿಗಳೊಡನೆ (ಯೋನರು, ಯವನರೊಡನೆ) ಸ್ನೇಹವನ್ನು ಬೆಳೆಸಿದರು.

ಮೌರ್ಯ ಸಾಮ್ರಾಜ್ಯ ಸ್ಥಾಪಿತವಾಗುವುದಕ್ಕೆ ಸುಮಾರು ಎರಡು ಶತಮಾನಗಳ ಹಿಂದೆ ಮಹಾವೀರ, ಬುದ್ಧರು ಜೈನ ಮತ್ತು ಬೌದ್ಧ ಧರ್ಮಗಳ ಪ್ರಚಾರ ಮಾಡಿದರು. ಅಂದಿನ ಕಾಲಕ್ಕೆ ಹೆಚ್ಚು ಜನ ವೈದಿಕ ಧರ್ಮವನ್ನು ಅವಲಂಬಿಸಿದ್ದರಾದರೂ ಅನೇಕರು ಜೈನ, ಬೌದ್ಧ ಧರ್ಮಗಳನ್ನೂ ಅಂಗೀಕರಿಸಿದರು. ವೇದದ ಭಾಷೆಯಾಗಿದ್ದ. ಅಂದರೆ ಪಂಡಿತರ ವಿದ್ಯಾವಂತರ ಭಾಷೆಯಾಗಿದ್ದ. ಸಂಸ್ಕೃತವನ್ನು ಬಿಟ್ಟು ಜನರ ಆಡುಭಾಷೆ ಯಾದ ಪ್ರಾಕೃತದಲ್ಲಿ ಧರ್ಮಬೋಧನೆಮಾಡಿದ್ದು ಈ ಮತಗಳ ವೈಶಿಷ್ಟ್ಯ. ತಾವು ಹೇಳುವುದು ಜನರಿಗೆ ಸುಲಭವಾಗಿ ಅರ್ಥವಾಗಬೇಕೆಂಬುದು ಇದರ ಉದ್ದೇಶ.

ಈ ಉದ್ದೇಶದಿಂದಲೇ ಪ್ರೇರೇಪಿತನಾಗಿ ಅಶೋಕ ತನ್ನ ಶಾಸನಗಳನ್ನು ಅವು ಸ್ಥಾಪಿತವಾದ ಪ್ರದೇಶ ದಲ್ಲಿ ಬಳಕೆಯಲ್ಲಿದ್ದ ಲಿಪಿ(ಅಕ್ಷರ)ಯಲ್ಲಿಯೇ ಕೆತ್ತಿಸಿದ; ಈಗ ಪಾಕಿಸ್ತಾನದಲ್ಲಿರುವ ಪೆಷಾವರ್ ಜಿಲ್ಲೆಯ ಷಾಬಾಸ್ ಗಡಿಯಲ್ಲಿರುವ ಶಾಸನ, ಇರಾನ್(ಪರ್ಷಿಯ)ನಲ್ಲಿ ಪ್ರಚಾರದಲ್ಲಿದ್ದ ಖರೋಷ್ಠಿ ಲಿಪಿಯಲ್ಲಿದೆ; ಅಫ್‌ಘಾನಿಸ್ತಾನದ ಕಾಂದಾಹಾರ್ ಪ್ರದೇಶದಲ್ಲಿ (ಇದು ಅಶೋಕನ ಸಾಮ್ರಾಜ್ಯದ ಪಶ್ಚಿಮ ಗಡಿಯಾಗಿತ್ತು) ಸ್ಥಾಪಿಸಿದ ಶಾಸನಗಳು ಗ್ರೀಕ್ ಮತ್ತು ಅರಮಿಾ (ಅರೈಮಿಕ್) ಲಿಪಿಯಲ್ಲಿವೆ : ಭಾರತದ ಇತರ ಭಾಗಗಳಲ್ಲಿರುವ ಶಾಸನಗಳ ಲಿಪಿ ಬ್ರಾಹ್ಮಿ. ಇದು ಕನ್ನಡವೂ ಸೇರಿದಂತೆ ಭಾರತದ ಹಲವಾರು ಲಿಪಿಗಳಿಗೆ ಮೂಲ.

ಅಶೋಕನ ಕಾಲದಲ್ಲಿ ಅವನ ಸಾಮ್ರಾಜ್ಯ ಉತ್ತರ ಭಾರತದಲ್ಲಿ ಮಾತ್ರವಲ್ಲದೆ, ದಕ್ಷಿಣದಲ್ಲಿ ಇಂದಿನ ಚಿತ್ರದುರ್ಗ ಜಿಲ್ಲೆಗೂ ಹಬ್ಬಿತ್ತೆಂಬುದೂ ಆ ಕಾಲಕ್ಕೆ ದಕ್ಷಿಣ ಭಾರತದಲ್ಲಿ ಚೋಳ, ಪಾಂಡ್ಯ, ಸತ್ಯಪುತ್ರ, ಚೇರ ರಾಜ್ಯಗಳಿದ್ದುವೆಂಬುದೂ ವ್ಯಕ್ತವಾಗುತ್ತದೆ.

ದಕ್ಷಿಣ ಭಾರತದ ಇತಿಹಾಸದ ಬಗೆಗೆ ಕೆಲವು ಅಂಶಗಳನ್ನು ಹೇಳಬಹುದು. ಮಾನವವರ್ಗದ ಮೂಲ ಪುರುಷರು ದಕ್ಷಿಣ ಭಾರತದಲ್ಲಿದ್ದಿರಬಹುದೆಂಬ ಒಂದು ಊಹೆಯಿದೆ. ಇದೇನೇ ಆಗಲಿ ಭಾರತದ ಇತಿಹಾಸಕ್ಕೆ ಸಂಬಂಧಿಸಿದಂತೆ, ದಕ್ಷಿಣ ಭಾರತದವರ ಎಂದರೆ ದ್ರಾವಿಡರ ಆದಿಕಾಲದ ವಿಚಾರವಾಗಿ ಖಚಿತವಾಗಿ ಹೇಳುವುದು ಕಷ್ಟ. ಈ ಜನಾಂಗ ಇಡೀ ಭಾರತದಲ್ಲೆಲ್ಲ ಹರಡಿತ್ತೆಂದೂ ಸಿಂಧೂ ಕಣಿವೆಯ ಸಂಸ್ಕೃತಿಗೆ ಕಾರಣರಾದವರು ಅವರೇ ಎಂದೂ ವಾದಗಳಿವೆ.

ಆರ್ಯರು ಉತ್ತರ ಭಾರತದಲ್ಲಿ ಪ್ರಬಲರಾದ ಮೇಲೆ ಅವರು ದಕ್ಷಿಣದ ಕಡೆಗೆ ತಮ್ಮ ದೃಷ್ಟಿಯನ್ನು ಹರಿಸಿದರೆಂಬುದಕ್ಕೆ ಋಗ್ವೇದ, ದಲ್ಲಿ ಹೆಸರಿಸಿರುವ ಅಗಸ್ತ್ಯನನ್ನು ಕುರಿತ ಕಥೆ ಒಂದು ನಿದರ್ಶನ. ದ್ರಾವಿಡರಲ್ಲಿ ಆರ್ಯ ಸಂಸ್ಕೃತಿಯನ್ನು ಹರಡುವ ಉದ್ದೇಶದಿಂದ ಅವನು, ವಿಂಧ್ಯಪರ್ವತವನ್ನು ದಾಟಿ ದಕ್ಷಿಣಕ್ಕೆ ಬಂದ. ತಮಿಳು ಭಾಷಾ ಸಂಸ್ಕೃತಿಗಳ ಪ್ರವರ್ತಕ ಅವನು ಎಂಬ ನಂಬಿಕೆಯಿದೆ. ಕ್ರಿ.ಪೂ. ಒಂದನೆಯ ಶತಮಾನದ ಹೊತ್ತಿಗೆ ದಕ್ಷಿಣ ಭಾರತದಲ್ಲಿ ಒಂದು ಉತ್ತಮ ಸಂಸ್ಕೃತಿ ರೂಪುಗೊಂಡಿತ್ತೆಂದೂ ಇಲ್ಲಿ ಜೈನ, ಬೌದ್ಧ ಧರ್ಮಗಳ ಪ್ರಚಾರವಾಗಿತ್ತೆಂದೂ ದೃಢವಾಗಿ ಹೇಳಬಹುದು. ಅಶೋಕನ ಕಾಲದಲ್ಲಿ ಉತ್ತರ ಭಾರತದಲ್ಲಿ ದೊಡ್ಡ ಸಾಮ್ರಾಜ್ಯವಿದ್ದಂತೆ ದಕ್ಷಿಣದಲ್ಲಿ ಏಕಾಧಿಪತ್ಯವಿರಲಿಲ್ಲ. ಬೇರೆ ಬೇರೆ ರಾಜವಂಶ ಗಳು ತಮ್ಮ ಆಧಿಪತ್ಯವನ್ನು ವಿಸ್ತರಿಸುವ ಪ್ರಯತ್ನಗಳನ್ನು ನಡೆಸುವುದರಲ್ಲೇ ಆಸಕ್ತವಾಗಿದ್ದುವೆನ್ನಬಹುದು.

ಅಶೋಕನ ಅನಂತರ, ಸುಮಾರು ಕ್ರಿ.ಪೂ. 180ರ ಹೊತ್ತಿಗೆ ಅವನು ಕಟ್ಟಿದ ಸಾಮ್ರಾಜ್ಯ ಒಡೆಯಿತು. ಶುಂಗವಂಶ ಸ್ಥಾಪಕನಾದ ಪುಷ್ಯಮಿತ್ರ ಕೊನೆಯ ಮೌರ್ಯ ಚಕ್ರವರ್ತಿಗಳ ಸೇನಾಧಿಪತಿಯಾಗಿದ್ದು ಅನಂತರ ಅವರ ಗದ್ದುಗೆಗೇರಿದ. ಗಾಂಧಾರ, ಪಂಜಾಬ್ ಪ್ರದೇಶದ ಮೇಲೆ ವಿದೇಶೀ ಬಣಗಳ ದಾಳಿ ನಡೆಯಿತು. ದಕ್ಷಿಣದಲ್ಲಿ ಶಾತವಾಹನರು, ಕಳಿಂಗರು ಪ್ರಬಲರಾದರು. ಕಳಿಂಗದ ಖಾರವೇಲನು ದಕ್ಷಿಣ ಭಾರತದ ಮೇಲೂ ದಾಳಿ ಮಾಡಿ ಪಾಂಡ್ಯ ರಾಜ್ಯದ ಕೆಲವು ಭಾಗಗಳನ್ನು ಆಕ್ರಮಿಸಿಕೊಂಡ. ಅವನ ಅನಂತರ ಕಳಿಂಗ ರಾಜ್ಯ ಹಿಂದಕ್ಕೆ ಬಿತ್ತು.

ಶಕರು

ಉತ್ತರ ಭಾರತದ ಪಶ್ಚಿಮ ಭಾಗದ ಮೇಲೆ ದಾಳಿಮಾಡಿ ತಮ್ಮ ಆಡಳಿತ ವನ್ನು ಸ್ಥಾಪಿಸಿದವರು ಶಕರು, ಪಾರ್ಥಿಯನರು, ಕುಶಾನರು, ಶಕರು, ಪಾರ್ಥಿಯನರು ಕ್ರಮಕ್ರಮವಾಗಿ ತಮ್ಮ ರಾಜ್ಯವನ್ನು ವಿಸ್ತರಿಸುತ್ತಾ ಮಥುರಾ, ಉಜ್ಜಯಿನಿ ಮತ್ತು ದಖ್ಖಣದ ಕೆಲವು ಪ್ರದೇಶಗಳನ್ನು ಆಕ್ರಮಿಸಿಕೊಂಡರು.



ಅಶೋಕ ಸಾಮ್ರಾಜ್ಯ

ಶಾತವಾಹನ ವಂಶದ ಗೌತಮೀಪುತ್ರ ಶಾತಕರ್ಣಿ ಶಕರನ್ನು ಸೋಲಿಸಿ ಅವರ ಮುನ್ನಡೆಯನ್ನು ತಡೆದನು. ಶಕರನ್ನೂ ಪಾರ್ಥಿಯನರನ್ನೂ ದಕ್ಷಿಣದ ಕಡೆಗೆ ಒತ್ತಿದ್ದವರು ಕುಶಾನರು. ಈ ವಿದೇಶೀ ಪಂಗಡಗಳವರೆಲ್ಲರೂ ಭಾರತದಲ್ಲಿ ನೆಲೆಸಿದಮೇಲೆ, ಭಾರತದ ಧರ್ಮಗಳನ್ನು ಅವಲಂಬಿಸಿದರು ; ಇಲ್ಲಿನ ರಾಜಮನೆತನಗಳೊಡನೆ ವಿವಾಹ ಸಂಬಂಧವನ್ನು ಬೆಳೆಸಿ ಭಾರತೀಯರೇ ಆದರು. ಭಾರತಕ್ಕೆ ಬಂದಿದ್ದ ಗ್ರೀಕ್ ಸಂತತಿಯ ಮಿನಾಂಡರ್ (ಮಿಳಿಂದ), ಶಕವಂಶದ ರುದ್ರದಾಮ, ಕುಶಾನ ವಂಶದ ಒಂದನೆಯ ಕನಿಷ್ಕ ಭಾರತದ ಚರಿತ್ರೆಯಲ್ಲಿ ಗಣ್ಯವ್ಯಕ್ತಿಗಳು.



ಸಮುದ್ರ ಗುಪ್ತನ ಸಾಮ್ರಾಜ್ಯ

ಗುಪ್ತರು

ಮೌರ್ಯ ಸಾಮ್ರಾಜ್ಯ ಭಗ್ನವಾದ ಮೇಲೆ ಮತ್ತೆ ಇನ್ನೊಂದು ಸಾಮ್ರಾಜ್ಯವನ್ನು ಕಟ್ಟುವ ಹಂಬಲ ತಲೆದೋರಿತು. ಕ್ರಿ.ಶ. 4ನೆಯ ಶತಮಾನದ ಆರಂಭದಲ್ಲಿ ಈ ಭಾವನೆಗೆ ರೂಪುಕೊಟ್ಟವನು ಯಾವ ರಾಜವಂಶಕ್ಕೂ ಸೇರಿದವನಲ್ಲದ ಒಂದನೆಯ ಚಂದ್ರ ಗುಪ್ತ. ಇವನು ತನ್ನ ಕಾಲದಲ್ಲಿ ದೊಡ್ಡ ಸಾಮ್ರಾಜ್ಯವನ್ನು ಕಟ್ಟಲಿಲ್ಲ. ಆದರೆ ಇವನ ಮಗ ಸಮುದ್ರ ಗುಪ್ತ, ತನ್ನ ತಂದೆಯ ಆಡಳಿತಕ್ಕೊಳಗಾಗಿದ್ದ ಮಗಧ ಮತ್ತು ಸಾಕೇತ ಪ್ರದೇಶಗಳಿಂದಾಚೆಗೆ ತನ್ನ ರಾಜ್ಯವನ್ನು ತಕ್ಕಮಟ್ಟಿಗೆ ವಿಸ್ತರಿಸಿದನು. ಇವನ ಮಗ ಎರಡನೆಯ ಚಂದ್ರ ಗುಪ್ತನು ಶಕ ವಂಶದವರನ್ನು ಸೋಲಿಸಿ ಭಾರತದ ಪಶ್ಚಿಮ ಗಡಿಯನ್ನು ಭದ್ರಪಡಿಸಿದನು. ಇಡೀ ಉತ್ತರ ಭಾರತವನ್ನು ವಶಪಡಿಸಿಕೊಂಡನು. ಅಲ್ಲದೆ, ತನ್ನ ನೇರ ಆಡಳಿತದಲ್ಲಿದ್ದ ಪ್ರದೇಶದಿಂದ ಹೊರಗೆ ಇದ್ದ ದಕ್ಷಿಣದ ವಾಕಾಟಕರು ಮುಂತಾದವರೊಡನೆ ವಿವಾಹ ಸಂಬಂಧವನ್ನು ಬೆಳೆಸಿ ತನ್ನ ಶಕ್ತಿಯನ್ನೂ ಪ್ರಭಾವವನ್ನೂ ಹೆಚ್ಚಿಸಿಕೊಂಡನು. ವಿಕ್ರಮಾದಿತ್ಯನೆಂದು ಪ್ರಸಿದ್ಧನಾದ ಇವನು ಅಶ್ವಮೇಧಯಾಗವನ್ನು ಮಾಡಿ ತನ್ನ ಸಾಮ್ರಾಜ್ಯಾಧಿಪತ್ಯಕ್ಕೆ ಇತರ ಅರಸರ ಸಮ್ಮತಿಯನ್ನು ದೊರಕಿಸಿಕೊಂಡನು. ಭಾರತದ ಕವಿಶ್ರೇಷ್ಠ ಕಾಳಿದಾಸ ಇವನ ಆಸ್ಥಾನದಲ್ಲಿದ್ದನು. ಸಮುದ್ರ ಗುಪ್ತ, ಚಂದ್ರ ಗುಪ್ತ ವಿಕ್ರಮಾದಿತ್ಯರು ಸಂಗೀತ, ಸಾಹಿತ್ಯಾದಿ ಕಲೆಗಳಿಗೆ ಅಪಾರ ಪೋಷಣೆಕೊಟ್ಟರು. ನಾಲಂದಾ ವಿಶ್ವವಿದ್ಯಾಲಯ ಸ್ಥಾಪಿತವಾದದ್ದು ಗುಪ್ತರ ಕಾಲದಲ್ಲಿ. ಚಂದ್ರ ಗುಪ್ತ ವಿಕ್ರಮಾದಿತ್ಯನ ಕಾಲದಲ್ಲಿ ಭಾರತಕ್ಕೆ ಬಂದಿದ್ದ ಫಾಹಿಯಾನ್, ಅವನ ರಾಜ್ಯದ ಸುಸ್ಥಿತಿಯನ್ನು ಹೊಗಳಿದ್ದಾನೆ.

ಹೂಣರು

ಶಕರು ಮತ್ತಿತರ ವಿದೇಶೀ ತಂಡಗಳ ದಾಳಿಯಿಂದ ಮೌರ್ಯ ಸಾಮ್ರಾಜ್ಯ ಒಡೆದಂತೆ, ಗುಪ್ತ ಸಾಮ್ರಾಜ್ಯ, ಅದರ ಕೊನೆಗಾಲದಲ್ಲಿ ಮಧ್ಯ ಏಷ್ಯಾದಿಂದ ಬಂದ ಹೂಣರ ದಾಳಿಗೊಳಗಾಯಿತು. ಗುಪ್ತರ ಸಂತತಿಯ ಕುಮಾರ ಗುಪ್ತ, ಸ್ಕಂದ ಗುಪ್ತರು ಈ ದಾಳಿಯನ್ನು ತೀವ್ರವಾಗಿ ಪ್ರತಿಭಟಿಸಿ ನಮ್ಮ ರಾಷ್ಟ್ರವನ್ನು ಹೂಣರಿಂದ ಕೆಲಕಾಲ ರಕ್ಷಿಸಿದರು. ಆದರೆ ಹೂಣರ ದಾಳಿಗಳು ಮೇಲಿಂದ ಮೇಲೆ ನಡೆದುವು. ಗುಪ್ತಸಾಮ್ರಾಜ್ಯ ಬಲಗುಂದಿತಲ್ಲದೆ, ಹೂಣ ನಾಯಕರಾದ ತೋರಮಾನ, ಮಿಹಿರಕುಲರು ಗುಪ್ತಸಾಮ್ರಾಜ್ಯದ ಕೆಲ ಭಾಗವನ್ನು ಆಕ್ರಮಿಸಿಕೊಳ್ಳುವುದೂ ಸಾಧ್ಯವಾಯಿತು. ಹೂಣರ ದಾಳಿಯ ಜೊತೆಗೆ ಗುಪ್ತಸಾಮ್ರಾಜ್ಯಕ್ಕೆ ಅಧೀನರಾಗಿದ್ದವರ ಉಪಟಳವೂ ಸೇರಿ ಸುಮಾರು ಎರಡು ಶತಮಾನಗಳು ಬಾಳಿ ಪ್ರಸಿದ್ಧವಾಗಿದ್ದ ಗುಪ್ತಸಾಮ್ರಾಜ್ಯ ಕೊನೆಗಂಡಿತು.

ಹರ್ಷವರ್ಧನ

ಅನಂತರ ಒಂದು ಶತಮಾನ ಕಳೆದ ಮೇಲೆ, ಏಳನೆಯ ಶತಮಾನದಲ್ಲಿ, ಉತ್ತರ ಭಾರತದಲ್ಲಿ ಇನ್ನೊಂದು ಚಕ್ರಾಧಿಪತ್ಯ ರೂಪುಗೊಂಡಿತು. ಈ ಕಾರ್ಯವನ್ನು ಸಾಧಿಸಿದ ಮಹಾವ್ಯಕ್ತಿ ಹರ್ಷವರ್ಧನ. ತನ್ನ ಹಿರಿಯರಿಂದ ಪೂರ್ವ ಪಂಜಾಬಿನ ಸ್ಥಾನೇಶ್ವರದಲ್ಲಿ ಸ್ಥಾಪಿತವಾದ ಸಣ್ಣ ರಾಜ್ಯವನ್ನು ಹರ್ಷ ಹಿಮಾಲಯದಿಂದ ನರ್ಮದಾ ನದಿಯ ವರೆಗೆ ವಿಸ್ತರಿಸಿದ. ತನ್ನ ರಾಜಧಾನಿಯನ್ನು ಸ್ಥಾನೇಶ್ವರದಿಂದ ಗಂಗಾನದೀ ತೀರದ ಕನ್ನೌಜ್‌ಗೆ ಬದಲಾಯಿಸಿದ. ದಕ್ಷಿಣ ಭಾರತದ ಮೇಲೂ ತನ್ನ ಪ್ರಭುತ್ವವನ್ನು ಸ್ಥಾಪಿಸಲು ಅವನು ನಡೆಸಿದ ಪ್ರಯತ್ನ ಫಲಿಸಲಿಲ್ಲ. ಅವನನ್ನು ನರ್ಮದಾ ನದೀತಟದಲ್ಲಿ ಇದಿರಿಸಿ ಅವನ ದಾಳಿಯನ್ನು ಯಶಸ್ವಿಯಾಗಿ ತಡೆಗಟ್ಟಿದವನು ಕನ್ನಡ ಅರಸರಲ್ಲಿ ಅತ್ಯಂತ ಪ್ರಸಿದ್ಧನಾದ ಚಾಲುಕ್ಯ ವಂಶದ ಎರಡನೆಯ ಪುಲಕೇಶಿ. ಹರ್ಷನ ಕಾಲದಲ್ಲಿ ಭಾರತದಲ್ಲಿ ಸಂಚರಿಸಿದ ಚೀನೀ ಯಾತ್ರಿಕ ಹ್ಯೂಯೆನ್ ತ್ಸಾಂಗ್ ಅಂದಿನ ದಕ್ಷಿಣ ಭಾರತ ಉತ್ತರ ಭಾರತಗಳ ಸ್ಥಿತಿಗತಿಗಳನ್ನು ಕುರಿತು ಬರೆದಿದ್ದಾನೆ.

ಹರ್ಷನು ಅಶೋಕನಂತೆ [illegible] ಧರ್ಮನಿಷ್ಠನೂ ಪರಧರ್ಮಸಹಿಷ್ಣುವೂ ಆಗಿದ್ದ. ಅಲ್ಲದೆ ಸ್ವತಃ ಸಾಹಿತಿಯೂ ಸಾಹಿತ್ಯ, ಕಲಾ ಪ್ರೋತ್ಸಾಹಕನೂ ಆಗಿದ್ದನು. 'ಹರ್ಷ ಚರಿತೆ', 'ಕಾದಂಬರಿ'ಗಳನ್ನು ಬರೆದ ಕವಿ ಬಾಣಭಟ್ಟನು ಹರ್ಷನ



ಹ್ಯುಯೆನ್ ತ್ಸಾಂಗ್‌ನನ್ನು ಇದಿರ್ಗೊಳ್ಳುತ್ತಿರುವ ಹರ್ಷವರ್ಧನ

ಆಸ್ಥಾನದಲ್ಲಿದ್ದ. ಹರ್ಷನು ನಾಲಂದಾ ವಿಶ್ವವಿದ್ಯಾಲಯದ ಪೋಷಕನೂ ಆಗಿದ.

ಸುಮಾರು 40 ವರ್ಷಗಳ ಕಾಲ ದಕ್ಷತೆಯಿಂದ ರಾಜ್ಯಭಾರ ನಡೆಸಿದ ಹರ್ಷನ ಮರಣಾನಂತರ (646) ಅವನು ಕಟ್ಟಿದ ಸಾಮ್ರಾಜ್ಯ ಬಹುಕಾಲ ಬಾಳಲಿಲ್ಲ. ಕಾಶ್ಮೀರದ ಕಾರ್ಕೋಟ ವಂಶದವರು, ಗೌಡದೇಶದ (ಬಂಗಾಳ) ಪಾಲರು, ನೈಋತ್ಯ ಹಾಗೂ ಪಶ್ಚಿಮ ಭಾರತ ಪ್ರದೇಶದ ಪ್ರತಿಹಾರರು, ಗುರ್ಜರರು ಪ್ರಬಲರಾಗಿ ಕಾಲ ಕಾಲಕ್ಕೆ ತಕ್ಕಮಟ್ಟಿಗೆ ಪ್ರಬಲ ರಾಜ್ಯಗಳನ್ನು ಕಟ್ಟಿದರು. ಪ್ರತಿಹಾರರು ಪ್ರಬಲರಾಗಿದ್ದಾಗ, ಭಾರತದ ಮೇಲೆ ಅರಬರು ನಡೆಸಿದ ದಾಳಿಯನ್ನು ಅವರು ತಡೆಗಟ್ಟಿದರು.

ಕಾಶ್ಮೀರದ ಲಲಿತಾದಿತ್ಯ, ಕವಿಗಳಾದ ವಾಕ್ಪತಿರಾಜ, ಭವಭೂತಿಗಳ ಪೋಷಕನಾದ ಕನ್ನೋಜದ ಯಶೋವರ್ಮ, ಪ್ರತಿಹಾರ ವಂಶದ ಒಂದನೆಯ ಭೋಜ, ಪಾಲವಂಶದ ಧರ್ಮಪಾಲ ಮುಂತಾದವರು ಈ ಅವಧಿಯಲ್ಲಿದ್ದ ಪ್ರಮುಖ ಅರಸರು ಮತ್ತು ಸಾಹಿತ್ಯ ಕಲಾ ಪೋಷಕರು. ಮಗಧದ ಪೂರ್ವಕ್ಕೆ ಗಂಗಾನದಿ ತೀರದಲ್ಲಿದ್ದ ವಿಕ್ರಮ ಶೀಲ, ನಾಲಂದಾದ ಸಮೀಪದಲ್ಲಿ ಉದಂಡಪುರ, ಪೂರ್ವ ಬಂಗಾಳದ ಸೋಮಪುರ, ಉತ್ತರ ಬಂಗಾಳದ ಜಗದ್ದಲಗಳಲ್ಲಿದ್ದ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಿದವರು ಪಾಲವಂಶದ ಅರಸರು.

ಅಶೋಕನ ಕಾಲದಲ್ಲಿ ಅವನ ಸಾಮ್ರಾಜ್ಯ ದಕ್ಷಿಣ ಭಾರತದಲ್ಲಿ ಇಂದಿನ ಚಿತ್ರದುರ್ಗ ಜಿಲ್ಲೆಯ ಪ್ರದೇಶವನ್ನು ಒಳಗೊಂಡಿತ್ತೆಂಬುದು ಖಚಿತವಾದ ಅಂಶ. ಅಶೋಕನ ಅನಂತರ ಗುಪ್ತರು ತಮ್ಮ ಚಕ್ರಾಧಿಪತ್ಯವನ್ನು ಕಟ್ಟಿದಾಗ ಅವರು ಇನ್ನೂ ದಕ್ಷಿಣಕ್ಕೆ ಕಂಚಿಯವರೆಗೂ ಬಂದಿದ್ದರು. ಈ ಹೊತ್ತಿಗಾಗಲೇ ದಕ್ಷಿಣದಲ್ಲಿ ಬಲಿಷ್ಠ ರಾಜ್ಯಗಳು ಹುಟ್ಟಿಕೊಂಡಿದ್ದುವು.

ಶಾತವಾಹನರು


ಮಗಧ ಸಾಮ್ರಾಜ್ಯದ ಪತನಾನಂತರ ದಕ್ಷಿಣದಲ್ಲಿ ಶಾತವಾಹನರು ತಮ್ಮ ರಾಜ್ಯವನ್ನು ಕಟ್ಟಿದರು. ಇವರಲ್ಲಿ ಪ್ರಸಿದ್ಧನಾದ ಒಂದನೆಯ ಶಾತಕರ್ಣಿ, ಪಶ್ಚಿಮದ ಮಹಾರಾಷ್ಟ್ರದವರೊಡನೆ ಸೇರಿಕೊಂಡು ತನ್ನ ರಾಜ್ಯವನ್ನು ವಿಸ್ತರಿಸಿ ಅಶ್ವಮೇಧ ಯಾಗವನ್ನು ಮಾಡಿದ. ಅನಂತರ ಈ ರಾಜ್ಯದ [illegible] ರಾಜ್ಯವನ್ನು ಉತ್ತರದ ಮಾಳ್ವ ಪ್ರದೇಶದಿಂದ ದಕ್ಷಿಣದಲ್ಲಿ ಕನ್ನಡನಾಡಿನವರೆಗೆ ವಿಸ್ತರಿಸಿದವನು ಗೌತಮೀಪುತ್ರ ಶಾತಕರ್ಣಿ. ಆಮೇಲೆ ವಾಸಿಷ್ಠೀಪುತ್ರ ಶಾತಕರ್ಣಿ ಆಳಿದ. ಶಕವಂಶದ ರುದ್ರದಾಮನ ಮಗಳನ್ನು ಈತ ಮದುವೆಯಾಗಿ ತನ್ನ ಸ್ಥಾನವನ್ನು ಬಲಪಡಿಸಿಕೊಂಡನಾದರೂ ಇವನ ಅನಂತರ ಶಾತವಾಹನರ ಪ್ರಾಬಲ್ಯ ಕುಗ್ಗಿತು.

ಪಲ್ಲವರು, ಕದಂಬರು, ಚಾಲುಕ್ಯರು

ಇತ್ತ ತಮಿಳು ನಾಡಿನಲ್ಲಿ ಪಲ್ಲವರು, ಚೋಳರು, ಪಾಂಡ್ಯರು ತಲೆಯೆತ್ತಿದರು. ಇಂದಿನ ಕೇರಳ ಪ್ರದೇಶದಲ್ಲಿ ಚೇರರು ಆಳುತ್ತಿದ್ದರು. ಕನ್ನಡ ನಾಡಿನಲ್ಲಿ ಆಳುತ್ತಿದ್ದ ಕದಂಬರನ್ನು ಸೋಲಿಸಿ ವಾತಾಪಿಯ (ಬಾದಾಮಿ) ಚಾಲುಕ್ಯರು ಪ್ರಬಲರಾದರು. ಈ ರಾಜ್ಯಗಳು ಒಂದರೊಡನೊಂದು [illegible] ರಾಜ್ಯ ವಿಸ್ತರಣಕ್ಕಾಗಿ ಪ್ರಬಲವಾದ ಹೋರಾಟಗಳು ನಡೆದುವು. ಒಮ್ಮೊಮ್ಮೆ ಒಬ್ಬೊಬ್ಬರದು ಮೇಲು ಕೈ ಆಯಿತು. ಕೊನೆಗೆ ಬಾದಾಮಿಯ ಚಾಲುಕ್ಯರಿಗೆ ಸೋಲಾಯಿತು –ಎರಡನೆಯ ಪುಲಿಕೇಶಿಯ ಆಡಳಿತ ಅಳಿಯಿತು. ಈ ಸೋಲಿನಿಂದ ಚೇತರಿಸಿಕೊಂಡು ಮತ್ತೆ ತಮ್ಮ ಪ್ರಾಬಲ್ಯವನ್ನು ಸ್ಥಾಪಿಸಲು ಚಾಲುಕ್ಯ ವಂಶದ ಅರಸರಿಗೆ ಕೆಲ ಕಾಲ ಬೇಕಾಯಿತು.

ಎರಡನೆಯ ಪುಲಿಕೇಶಿಯ ಕಾಲದಲ್ಲಿ ಅವನ ಆಧಿಪತ್ಯ ದಕ್ಷಿಣ ಭಾರತದ ಬಹುಭಾಗವನ್ನು ಆವರಿಸಿತ್ತು. ಅವನೊಡನೆ ಯುದ್ಧಮಾಡಿ ಸೋತ ಹರ್ಷವರ್ಧನ ಅವನನ್ನು 'ದಕ್ಷಿಣಾಪಥೇಶ್ವರ' ಎಂದು ಒಪ್ಪಿಕೊಂಡ. ಎರಡನೆಯ ಪುಲಿಕೇಶಿಯ ಕಾಲದಲ್ಲಿ ಅವನ ವಂಶದ ಒಂದು ಶಾಖೆ ವೇಂಗಿಯಲ್ಲೂ ಇನ್ನೊಂದು ಗುಜರಾತಿನಲ್ಲೂ ತಮ್ಮ ಅರಸೊತ್ತಿಗೆಯನ್ನು ಸ್ಥಾಪಿಸಿದುವು. ದಕ್ಷಿಣದಲ್ಲಿ ತಮ್ಮ ರಾಜ್ಯವನ್ನು ಕಟ್ಟಿದ ಕನ್ನಡ ರಾಜವಂಶದವರಾದ ಗಂಗರು ತಮ್ಮ ಆಡಳಿತವನ್ನು ಕಳಿಂಗಕ್ಕೂ ವಿಸ್ತರಿಸಿದರು. ಅಲ್ಲಿ ತಮ್ಮ ಶಾಖೆಯೊಂದನ್ನು ಸ್ಥಾಪಿಸಿದರು.

ಪಲ್ಲವರ ಮೇಲೆ ನಿರಂತರ ಹೋರಾಟ ನಡೆಸುತ್ತ ಕಾಲಕ್ರಮದಲ್ಲಿ ತಮ್ಮ ಪ್ರಾಬಲ್ಯವನ್ನು ಸ್ಥಾಪಿಸಿದ ರಾಜವಂಶ ಪಾಂಡ್ಯರದು. ಕಂಚಿ ಪಲ್ಲವರ ರಾಜಧಾನಿಯಾಗಿದ್ದಂತೆ ಮಧುರೆ ಪಾಂಡ್ಯರ ರಾಜಧಾನಿಯಾಗಿತ್ತು. ಬಾದಾಮಿಯ ಚಾಲುಕ್ಯರ ಅನಂತರ ಕನ್ನಡ ರಾಜ್ಯವನ್ನು ಊರ್ಜಿತಸ್ಥಿತಿಗೆ ತಂದವರು ರಾಷ್ಟ್ರಕೂಟರು ಮತ್ತು ಹೊಯ್ಸಳರು. ಒಂಬತ್ತನೆಯ ಶತಮಾನದಲ್ಲಿ ದೀರ್ಘಕಾಲ ಆಳಿದ ರಾಷ್ಟ್ರಕೂಟ ವಂಶದ ಅಮೋಘವರ್ಷ (ನೃಪತುಂಗ) ಪ್ರಸಿದ್ಧನಾದವನು. ಇವನು ತನ್ನ ಕಾಲದ ಯಾವುದೇ ಚಕ್ರವರ್ತಿಗೆ ಸರಿಸಮನಾದವನೆಂದು ಹೊಗಳಲ್ಪಟ್ಟಿದ್ದಾನೆ.



ಕದಂಬರ ನಾಣ್ಯ



ಮದನಿಕೆ—ಬೇಲೂರು

ಹೊಯ್ಸಳರು

ಹನ್ನೆರಡನೆಯ ಶತಮಾನದಲ್ಲಿ ಪ್ರಾಬಲ್ಯಕ್ಕೆ ಬಂದ ಹೊಯ್ಸಳರು ಕನ್ನಡ ನಾಡನ್ನು ದಕ್ಷಿಣದ ಚೋಳರ ದಾಳಿಯಿಂದ ಪಾರುಮಾಡಿದ್ದಲ್ಲದೆ ತಮಿಳು ಪ್ರದೇಶದಲ್ಲೂ ತಮ್ಮ ಆಡಳಿತವನ್ನು ಸ್ಥಾಪಿಸಿದರು. ಚಾಲುಕ್ಯರಂತೆ ಹೊಯ್ಸಳರೂ ಕಲಾಭಿಮಾನಿಗಳಾಗಿದ್ದು ಚಾಲುಕ್ಯರ ಸಾಂಸ್ಕೃತಿಕ ಪರಂಪರೆಯನ್ನು ಅದರಲ್ಲೂ ಅವರ ವಾಸ್ತುಶಿಲ್ಪ ಸಂಪ್ರದಾಯವನ್ನು ಬೆಳೆಸಿ, ವಿಕಾಸಗೊಳಿಸಿದರು. ಈ ವಂಶದ ವಿಷ್ಣುವರ್ಧನ ಅತ್ಯಂತ ಪ್ರಸಿದ್ಧನಾದ ಅರಸು.

ದಕ್ಷಿಣ ಭಾರತದ ಮೇಲೆ ಉತ್ತರ ಭಾರತದ ಸಾಂಸ್ಕೃತಿಕ ಪ್ರಭಾವ ಬಿದ್ದಿತಾದರೂ ದಕ್ಷಿಣ ಭಾರತ ತನ್ನದೇ ಆದ ವಿಶಿಷ್ಟ ಸಂಸ್ಕೃತಿಯನ್ನೂ ಆಡಳಿತ ವಿಧಾನಗಳನ್ನೂ ಬೆಳೆಸಿಕೊಂಡಿತು. ರಾಜ್ಯರಾಜ್ಯಗಳ ನಡುವೆ ಹೋರಾಟ ನಡೆಯುತ್ತಿದ್ದಿತಾದರೂ ಒಟ್ಟಿನಲ್ಲಿ ಆಡಳಿತ ಸುಭದ್ರವಾಗಿತ್ತು. ಜನರಿಗೆ ಸ್ಥಾನಿಕ ಆಡಳಿತದಲ್ಲಿ ಹೆಚ್ಚಿನ ಸ್ವಾತಂತ್ರ್ಯವಿತ್ತು ಎಂಬುದು ಗಮನಾರ್ಹವಾದ ವಿಚಾರ.

ದಕ್ಷಿಣ ಭಾರತಕ್ಕೆ ವಿಸ್ತಾರವಾದ ಕರಾವಳಿ ಇದ್ದುದರಿಂದ, ಈ ಪ್ರದೇಶದಲ್ಲಿ ಆಳಿದ ರಾಜ್ಯಗಳು ಸಾಗರೋತ್ತರ ವ್ಯಾಪಾರವನ್ನೂ ನೌಕಾಬಲವನ್ನೂ ಬೆಳೆಸಿಕೊಂಡುವು. ಆಗ್ನೇಯ ಏಷ್ಯಾ ಪ್ರದೇಶದಲ್ಲಿ ತಮ್ಮ ಪ್ರಭಾವವನ್ನು ಬೆಳೆಸಿಕೊಂಡು ಚೀನದ ವರೆಗೆ ತಮ್ಮ ವಾಣಿಜ್ಯಕ್ಷೇತ್ರವನ್ನು ಬೆಳೆಸಿಕೊಂಡುವು. ಅದೇ ರೀತಿ ಪಾಶ್ಚಿಮಾತ್ಯ ರಾಜ್ಯಗಳೊಡನೆಯೂ ಈ ರಾಜ್ಯಗಳ ವ್ಯಾಪಾರ ಬೆಳೆಯಿತು. ರೋಮಿನೊಡನೆ ಕೂಡ ವಾಣಿಜ್ಯ ಸಂಬಂಧವಿತ್ತು.

ದಕ್ಷಿಣದ ರಾಜ್ಯಗಳು ಉತ್ತರದಲ್ಲಿ ಗಂಗಾನದಿಯ ವರೆಗೂ ದಾಳಿ ನಡೆಸಿದ್ದುಂಟು. ಕನ್ನಡ ರಾಜಮನೆತನಗಳು ಪೂರ್ವದಲ್ಲಿ ಬಂಗಾಳದಲ್ಲೂ ಉತ್ತರದಲ್ಲಿ ಆರಾವಳಿ ಪರ್ವತ ಪ್ರದೇಶ, ನೇಪಾಳಗಳಲ್ಲೂ ರಾಜ್ಯಗಳನ್ನು ಕಟ್ಟಿದ್ದುಂಟು.

ಮಹಮ್ಮದೀಯರ ಆಗಮನ

ಏಳನೆಯ ಶತಮಾನದ ಆದಿಭಾಗದಿಂದ ಅರಬರು ಭಾರತದ ಪಶ್ಚಿಮ ಕರಾವಳಿಯ ಮೇಲೆ ಆಗಿಂದಾಗ್ಗೆ ದಾಳಿ ನಡೆಸುತ್ತಲೇ ಇದ್ದರು. ಎಂಟನೆಯ ಶತಮಾನದ ಆರಂಭಕಾಲದಲ್ಲಿ ಅರಬರು ಸಿಂಧ್ ಪ್ರಾಂತ್ಯವನ್ನು ಆಕ್ರಮಿಸಿಕೊಂಡರು. ಇದರಿಂದ ಭಾರತೀಯ ರಾಜಕೀಯ ಇತಿಹಾಸದ ಮೇಲೆ ಅಂಥ ಪರಿಣಾಮವೇನೂ ಆಗಲಿಲ್ಲ.

ಹೊರಗಿನ ಮಹಮ್ಮದೀಯ ದಾಳಿಕಾರರ ಬಿಸಿ ಭಾರತಕ್ಕೆ ನಿಜವಾಗಿ ತಟ್ಟಿದ್ದು ಹನ್ನೊಂದನೆಯ ಶತಮಾನದ ಆರಂಭ ಕಾಲದಲ್ಲಿ—ಘಜನಿಯ ಅರಸ ಮಹಮ್ಮೂದ್ ಭಾರತದ ಮೇಲೆ ಪದೇ ಪದೇ ದಾಳಿ ನಡೆಸಿದಾಗ. ಅವನು ಕೊನೆಯ ಪಕ್ಷ 17 ಸಲವಾದರೂ ಭಾರತದ ಮೇಲೆ ದಾಳಿ ನಡೆಸಿದನು ಎಂದು ಹೇಳಲು ಆಧಾರವಿದೆ. ತನ್ನ ರಾಜ್ಯದ ಪಂಡಿತರು, ಕಲಾವಿದರಿಗೆ ಅವನು ಉದಾರ ಪ್ರೋತ್ಸಾಹಕನಾಗಿದ್ದ. ಆದರೆ ಐಶ್ವರ್ಯದ ಆಸೆಯಿಂದ ಭಾರತದ ಮೇಲೆ ದಾಳಿ ನಡೆಸಿದನಾಗಿ, ಅವನು ಭಾರತದ ಮೇಲೆ ಮತ್ತೆ ಬಂದಾಗಲೆಲ್ಲ ಈ ದೇಶವನ್ನು ಕೊಳ್ಳೆಹೊಡೆದ. ಜನರ, ಅರಸರ, ದೇವಾಲಯಗಳ ಸಂಪತ್ತನ್ನು ದೋಚಿಕೊಂಡು ಹೋದ. ಭಾರತದಲ್ಲಿ ರಾಜ್ಯ ಕಟ್ಟಬೇಕೆಂಬುದು ಅವನ ಆಸೆಯಾಗಿರಲಿಲ್ಲ.

ಆದರೆ ಇಂಥ ಆಸೆಯಿಂದ 1190ರಲ್ಲಿ ಭಾರತದ ಮೇಲೆ ದಂಡಯಾತ್ರೆಯನ್ನು ಕೈಗೊಂಡವನು ಮಹಮ್ಮದ್ ಘೋರಿ. ಅವನನ್ನು ಇದಿರಿಸಿ ಹೋರಾಡಿದ ಪೃಥ್ವೀರಾಜ ಚೌಹಾಣನು ಹೋರಾಟದಲ್ಲಿ ಜಯಶೀಲನಾದ. ಆ ಕಾಲಕ್ಕೆ ಉತ್ತರ ಭಾರತದಲ್ಲಿದ್ದ ಹಿಂದೂ ರಾಜರು ಅವನ ನೆರವಿಗೆ ಬಂದಿದ್ದರೆ ಭಾರತ ಇತಿಹಾಸ ಬೇರೆಯಾಗುತ್ತಿತ್ತೇನೋ. ಆದರೆ ಹಾಗಾಗಲಿಲ್ಲ. ಘೋರಿ ಎರಡನೆಯ ಬಾರಿ ಭಾರತದ ಮೇಲೆ ದಂಡಯಾತ್ರೆ ನಡೆಸಿದಾಗ ಅವನನ್ನು ಮತ್ತೆ ಇದಿರಿಸಿದ ಪೃಥ್ವೀರಾಜ ರಣರಂಗದಲ್ಲಿ ಹತನಾದ. ಘೋರಿಯ ದಂಡಯಾತ್ರೆ ಮುಂದುವರೆದು ಯಶಸ್ವಿಯಾಯಿತು. ಉತ್ತರ ಭಾರತದ ಗಣನೀಯ ಭಾಗ ಮಹಮ್ಮದೀಯರ ವಶವಾಯಿತು. ಘೋರಿಯ ಅನಂತರ ಅವನ ಸೇನಾನಿಗಳಲ್ಲೊಬ್ಬನಾಗಿದ್ದ ಕುತುಬುದ್ದೀನ್ 1206ರಲ್ಲಿ ದೆಹಲಿಯ ಸುಲ್ತಾನನಾದನು. ಅವನ ಮರಣಾನಂತರ ಅಧಿಕಾರಕ್ಕೆ ಬಂದವರಲ್ಲಿ ಇಲ್‌ತುತ್‌ಮಿಷ್, ರಜಿಯಾ ಬೇಗಂ, ಬಲ್ಬನ್ ಗಣನೀಯರಾದವರು. ರಜಿಯಾ, ಉತ್ತರ ಭಾರತವನ್ನು ಆಳಿದ ಮೊದಲ ಮಹಮ್ಮದೀಯ ರಾಣಿ.

ಖಲ್ಜಿ ವಂಶ

ಕುತುಬುದ್ದೀನ್ ಪರಂಪರೆ ನಾಶವಾಗಿ ಖಲ್ಜಿವಂಶದವರು ದೆಹಲಿಯ ಸುಲ್ತಾನ ಗದ್ದುಗೆಗೆ ಬಂದ ವೇಳೆಗೆ (1290) ಭಾರತದ ಪಶ್ಚಿಮ ಭಾಗದಲ್ಲಿ ರಾಜಪುತ್ರರು ಪ್ರಬಲರೂ ಸ್ವತಂತ್ರರೂ ಆಗಿದ್ದರು. ಈ ಸಂದರ್ಭದಲ್ಲಿ ರಾಜಪುತ್ರ(ರಜಪೂತ್)ರನ್ನು ಕುರಿತು ಕೆಲವು ಮಾತುಗಳನ್ನು ಹೇಳುವುದು ಅವಶ್ಯ. ಮೌರ್ಯರ ಕಾಲದಲ್ಲಿ



ಘೋರಿ : ಯಶಸ್ವೀ ದಂಡಯಾತ್ರೆ




ಭಾರತದ ಮೊದಲ ಮಹಮ್ಮದೀಯ ರಾಣಿ : ರಜಿಯಾ

ಅನೇಕ ವಿದೇಶೀ ತಂಡಗಳವರು ಭಾರತದ ನೈಋತ್ಯ ಭಾಗದ ವರಗೆ ಬಂದು ನೆಲೆಸಿದರು : ರಾಜ್ಯಗಳನ್ನೂ ಕಟ್ಟಿದರು. ಇವರಲ್ಲಿ ಶಕರು, ಕುಶಾನರು, ಹೂಣರು ಮುಂತಾದವರು ಮುಖ್ಯರು. ಇವರು ಭಾರತದಲ್ಲಿ ನೆಲೆಸಿದ ಮೇಲೆ ಇಲ್ಲಿನ ಸಂಸ್ಕೃತಿ ಧರ್ಮಗಳಿಗೆ ಹೊಂದಿಕೊಂಡು ಭಾರತೀಯರಾದರು. ಇವರು ಮತ್ತು ಇವರೊಡನೆ ವೈವಾಹಿಕ ಸಂಬಂಧ ಬೆಳಸಿಕೊಂಡ ಇತರ ಭಾರತೀಯ ರಾಜರು ರಾಜಪುತ್ರವರ್ಗವಾದರು. ಇಂದಿನ ರಾಜಸ್ಥಾನ ಪ್ರದೇಶ ಈ ವರ್ಗದ ಪ್ರಧಾನ ಕ್ಷೇತ್ರವಾಯಿತು.

ಖಲ್ಜಿವಂಶದವರ ಆಳ್ವಿಕೆ ಆರಂಭವಾದಾಗ ರಾಜಪುತ್ರರು ಪ್ರಬಲರಾಗಿದ್ದರು. ದಕ್ಷಿಣದಲ್ಲಿ ದೇವಗಿರಿಯ ಯಾದವರ ರಾಜ್ಯ ವೈಭವದಿಂದ ಮೆರೆಯುತ್ತಿತ್ತು. ಉತ್ತರದಿಂದ ಮಂಗೋಲರ ದಾಳಿಗಳೂ ಆಗಾಗ ನಡೆಯುತ್ತಿದ್ದುವು.

ಈ ಸನ್ನಿವೇಶದಲ್ಲಿ ಅಲ್ಲಾವುದ್ದೀನ್ ಖಲ್ಜಿ ತಾನು ಸುಲ್ತಾನನಾಗುವುದಕ್ಕೆ ಮೊದಲೇ ದೊಡ್ಡ ಸಾಮ್ರಾಜ್ಯವೊಂದನ್ನು ಕಟ್ಟಲು ನಿರ್ಧರಿಸಿದ. ವಿಂಧ್ಯಪರ್ವತವನ್ನು ದಾಟಿ ದೇವಗಿರಿಯ ಮೇಲೆ ದಾಳಿ ಮಾಡಿ ಅದನ್ನು ಗೆದ್ದು ಅಪಾರ ಐಶ್ವರ್ಯವನ್ನು ಗಳಿಸಿಕೊಂಡು ದೆಹಲಿಗೆ ಹಿಂದಿರುಗಿದ. ತನ್ನ ದೊಡ್ಡಪ್ಪ ಜಲಾಲುದ್ದೀನನನ್ನು ಕೊಂದು ತಾನೇ ದೆಹಲಿಯ ಸುಲ್ತಾನನಾದ. ತನ್ನ ದಾಳಿಗಳನ್ನು ಮುಂದುವರಿಸಿ ರಾಜಪುತ್ರರನ್ನು ಸೋಲಿಸಿದ. ತನ್ನ ಸೇನಾಪತಿ ಮಲ್ಲಿಕ್ ಕಾಫರ್‌ನನ್ನು ದಕ್ಷಿಣಕ್ಕೆ ಕಳುಹಿಸಿ ರಾಮೇಶ್ವರದವರೆಗಿನ ಪ್ರದೇಶವನ್ನು ಆಕ್ರಮಿಸಿದ. ಈ ಪ್ರದೇಶವನ್ನು ಲೂಟಿಮಾಡಿ ಐಶ್ವರ್ಯವನ್ನು ಗುಡ್ಡೆಹಾಕುವುದು ಸಾಧ್ಯವಾಯಿತೇ ಹೊರತು ಅವನ್ನು ತನ್ನ ಆಳ್ವಿಕೆಗೆ ಒಳಗುಮಾಡಿಕೊಳ್ಳುವುದು ಅವನಿಗೆ ಸಾಧ್ಯವಾಗಲಿಲ್ಲ. ಆದರೂ ಉತ್ತರ ಭಾರತದಂತೆ ದಕ್ಷಿಣ ಭಾರತವನ್ನು ತಮ್ಮ ಆಡಳಿತಕ್ಕೆ ಒಳಗು ಮಾಡಿಕೊಳ್ಳಬೇಕೆಂಬ ಆಕಾಂಕ್ಷೆಯನ್ನು ಇದು ಉತ್ತರದ ಮಹಮ್ಮದೀಯ ಅರಸರಲ್ಲಿ ಪ್ರಬಲವಾಗಿ ಪ್ರಚೋದಿಸಿತು. ಅಲ್ಲಾವುದ್ದೀನನ ಉತ್ತರಾಧಿಕಾರಿ ಮುಬಾರಕ್ ಕೂಡ ದೇವಗಿರಿಯ ಮೇಲೆ ತನ್ನ ಹಿಡಿತವನ್ನು ಬಲಪಡಿಸಿ ಅದನ್ನು ತನ್ನ ಸ್ವಾಧೀನಕ್ಕೆ ತಂದುಕೊಂಡ. ತೆಲಂಗಾಣದ ಮೇಲೆಯೂ ದಾಳಿಮಾಡಿದ.



ತುಘಲಕ್ ನಾಣ್ಯ

ತುಘಲಕರು

ಖಲ್ಜಿಗಳ ಅನಂತರ ದೆಹಲಿಯ ಸುಲ್ತಾನ ಪಟ್ಟವನ್ನೇರಿದವರು ತುಘಲಕರು. ಈ ಮನೆತನದ ಸ್ಥಾಪಕನಾದ ಘಿಯಾಸುದ್ದೀನ್ ತನ್ನ ರಾಜ್ಯದ ಗಡಿ ಪ್ರದೇಶಗಳ ಮೇಲೆ ತನ್ನ ಹಿಡಿತವನ್ನು ಬಿಗಿಗೊಳಿಸಿದನು. ಇವನನ್ನು ತಂತ್ರದಿಂದ ಸಾವಿಗೀಡು ಮಾಡಿದ ಇವನ ಮಗ ಮಹಮ್ಮದ್ ಬಿನ್ ತುಘಲಕ್ ಈ ವಂಶದಲ್ಲಿ ತುಂಬ ಪ್ರಸಿದ್ಧನಾದವನು. ಹಿಂದಿನ ಇತಿಹಾಸಕಾರರು ಇವನನ್ನು 'ಹುಚ್ಚುದೊರೆ' ಎಂದಿದ್ದಾರಾದರೂ ಇವನು ತುಂಬ ಬುದ್ಧಿವಂತ, ವಿದ್ಯಾವಂತ. ಹಲವಾರು ವಿಚಾರಗಳಲ್ಲಿ ಇವನ ಯೋಜನೆಗಳು ತುಂಬ ಪ್ರಗತಿಪರವಾಗಿದ್ದರೂ ಅವನ್ನು ಕಾರ್ಯರೂಪಕ್ಕೆ ತರುವುದರಲ್ಲಿ ಇವನು ವಿಫಲನಾದ.

ದಿಲ್ಲಿ ಹಿಂದೂಸ್ಥಾನದ ಕೇಂದ್ರವಾಗುವುದಿಲ್ಲವೆಂದು ಭಾವಿಸಿ, ಇಡೀಯ ದೇಶಕ್ಕೆ ಮಧ್ಯಸ್ಥಾನವಾಗುವ ದೇವಗಿರಿಗೆ ರಾಜಧಾನಿಯನ್ನು ಸ್ಥಳಾಂತರಿಸಲು ತುಘಲಕ್ ನಿರ್ಧರಿಸಿ ದಿಲ್ಲಿಯ ಪ್ರತಿಯೊಬ್ಬ ಪ್ರಜೆಯೂ ದೇವಗಿರಿಗೆ ಹೊರಡಬೇಕೆಂದು ಅಪ್ಪಣೆ ಮಾಡಿದ. ದಾರಿಯುದ್ದಕ್ಕೂ ಜನರು ಕಷ್ಟನಷ್ಟಗಳಿಗೆ ಈಡಾದರು. ತುಘಲಕ್ ತನ್ನ ಛಲ ಬಿಡಲಿಲ್ಲ. ತಾನು ತಪ್ಪು ಮಾಡಿದೆ ಎಂದು ಮನವರಿಕೆಯಾದಾಗ ದೇವಗಿರಿಯಿಂದ ದಿಲ್ಲಿಗೆ ಹಿಂತಿರುಗಬೇಕೆಂದು ಪ್ರಜೆಗಳಿಗೆ ಆಜ್ಞಾಪಿಸಿದ.


ಇವನ ಅನಂತರ ತುಘಲಕ್ ವಂಶದ ಅವನತಿ ಆರಂಭವಾಯಿತು. ತೈಮೂರನ ನಾಯಕತ್ವದಲ್ಲಿ 1398ರಲ್ಲಿ ದೆಹಲಿಯ ಮೇಲೆ ನಡೆದ ದಾಳಿ ಈ ಅರಸೊತ್ತಿಗೆಯನ್ನು ಮುರಿಯಿತು. ಹಾಗೆಯೇ ದೆಹಲಿಯ ಸುಲ್ತಾನರ ಏಕಾಧಿಪತ್ಯವೂ ನಾಶವಾಯಿತು. ಈ ಏಕಾಧಿಪತ್ಯದ ಬೇರೆ ಬೇರೆ ಭಾಗಗಳಲ್ಲಿ ಆಡಳಿತ ನಡೆಸುತ್ತಿದ್ದವರು ಸ್ವತಂತ್ರರಾದರು. ದೆಹಲಿಯಲ್ಲಿ ಸಯ್ಯದರು, ಲೋದಿ ವಂಶದವರು ಕೆಲ ಕಾಲ ಆಳಿದರು.

ಬಹಮನಿ ರಾಜ್ಯ

ತುಘಲಕರ ಅನಂತರ ರೂಪುಗೊಂಡ ಸ್ವತಂತ್ರ ಮುಸಲ್ಮಾನ ರಾಜ್ಯಗಳಲ್ಲಿ ದಕ್ಷಿಣ ಭಾರತದ ಬಹಮನಿ ರಾಜ್ಯ ಅತ್ಯಂತ ಪ್ರಬಲವಾದದ್ದು. ಮಹಮ್ಮದ್ ಬಿನ್ ತುಘಲಕ್‌ನ ಕಾಲದಲ್ಲಿ ಬಂಡಾಯದ ಪರಿಣಾಮವಾಗಿ ದೇವಗಿರಿಯಲ್ಲಿ ತಲೆಯೆತ್ತಿದ ಈ ರಾಜ್ಯವನ್ನು ಬಲಪಡಿಸಿದವನು 1347ರಲ್ಲಿ ಅಧಿಕಾರಕ್ಕೆ ಬಂದ ಹಸನ್ ಬಹಮನಿ. ಇವನು ಬಾಲ್ಯದಲ್ಲಿ ಗಂಗೂ ಎಂಬ ಬ್ರಾಹ್ಮಣನಿಂದ ರಕ್ಷಿಸಲ್ಪಟ್ಟವನಾಗಿ, ಕೃತಜ್ಞತಾಭಾವದಿಂದ ತನ್ನ ಹೆಸರಿಗೆ ಬಹಮನಿ ಎಂಬ ಹೆಸರನ್ನು ಸೇರಿಸಿಕೊಂಡನೆಂದು ಬಗೆಗೆ ಇತಿಹಾಸಕಾರ ಫಿರಿಷ್ತನ ಉಲ್ಲೇಖವಿದೆ. ಆದರೆ ತಾನು ಇರಾನಿನ ಪ್ರಸಿದ್ಧ ಪುರಾಣ ಪುರುಷನಾದ ಬಹಮನ್‌ನ ವಂಶದವನೆಂದು ಇವನು ತನ್ನನ್ನು ಬಹಮನಿ ಎಂದು ಕರೆದುಕೊಂಡನೆಂಬುದು ವಿದ್ವಾಂಸರ ಅಭಿಪ್ರಾಯ.

ವಿಜಯನಗರ ಸಾಮ್ರಾಜ್ಯ

ಇವನು ಅಧಿಕಾರಕ್ಕೆ ಬರುವುದಕ್ಕೆ ಒಂದು ದಶಕಕ್ಕೆ ಮೊದಲೇ ದಕ್ಷಿಣ ಭಾರತದಲ್ಲಿ –ತುಂಗಭದ್ರಾ ತೀರದಲ್ಲಿ ಪ್ರಾಚೀನ ಪಂಪಾಕ್ಷೇತ್ರದಲ್ಲಿ– ಒಂದು ಹೊಸ ರಾಜ್ಯ ಹುಟ್ಟಿಕೊಂಡಿತು. ಹಕ್ಕ (ಹರಿಹರ) ಬುಕ್ಕರಿಂದ ಸ್ಥಾಪಿತವಾದ ವಿಜಯನಗರ ರಾಜ್ಯ ಇದು. ದಕ್ಷಿಣ ಭಾರತದಲ್ಲಿ ಬೆಳೆಯುತ್ತಿದ್ದ ಮುಹಮ್ಮದೀಯ ಪ್ರಭಾವವನ್ನು ತಡೆಗಟ್ಟಲು ಹಿಂದೂ ರಾಜ್ಯವನ್ನು ಸ್ಥಾಪಿಸಿ ಹಿಂದೂಧರ್ಮ, ಸಂಸ್ಕೃತಿಗಳನ್ನು ರಕ್ಷಿಸಬೇಕೆಂಬುದು ಈ ರಾಜ್ಯ ಸ್ಥಾಪನೆಯ ಪ್ರಧಾನ ಉದ್ದೇಶವಾಗಿತ್ತು. ಇದರಿಂದಾಗಿ ಈ ಎರಡು ರಾಜ್ಯಗಳ ನಡುವೆ ನಿರಂತರ ಹೋರಾಟ ನಡೆದದ್ದು ಸಹಜವೇ.



ಕೃಷ್ಣ ದೇವರಾಯ, ಅರಸಿಯರೊಡನೆ



ಭಾರತ –1525

ಹಸನ್‌ನಿಂದ ಆರಂಭವಾದ ಬಹಮನಿ ರಾಜ್ಯ ಸುಮಾರು ಒಂದು ಶತಮಾನ ಕಾಲ ಪ್ರಬಲವಾಗಿತ್ತು. ಮೂರನೆಯ ಮುಹಮ್ಮದ್‌ಷಾನ ಮಂತ್ರಿಯಾಗಿದ್ದ ಮಹಮ್ಮದ್ ಗವಾನ್ ಪರಾಕ್ರಮಿಯೂ ವಿದ್ಯಾಪಕ್ಷಪಾತಿಯೂ ಆಗಿದ್ದು ಬಹಮನಿ ರಾಜ್ಯದ ಉನ್ನತಿಗೆ ಕಾರಣನಾದ. ಆದರೆ ಚಾಡಿಕೋರರ ಮಾತಿಗೆ ಕಿವಿಕೊಟ್ಟ ಸುಲ್ತಾನ ಇವನನ್ನು ಕೊಲ್ಲಿಸಿದ ಮೇಲೆ, ವಿಸ್ತಾರವಾಗಿದ್ದ ಬಹಮನಿ ರಾಜ್ಯ ಐದು ರಾಜ್ಯಗಳಾಗಿ ಒಡೆದುಹೋಯಿತು. ಇವುಗಳ ನಡುವೆ ಪರಸ್ಪರ ಕಾದಾಟವೂ ಹುಟ್ಟಿ ಬೆಳೆಯಿತು.

ಇತ್ತ, ಹರಿಹರ ಬುಕ್ಕರಿಂದ ಸ್ಥಾಪಿತವಾದ ವಿಜಯನಗರ ರಾಜ್ಯ ಬಹಮನಿ ರಾಜ್ಯಗಳಿಂದ ಆಗಾಗ ದಾಳಿಗೊಳಗಾಗುತ್ತಿದ್ದರೂ ಕಾಲಕ್ರಮದಲ್ಲಿ ದಕ್ಷಿಣ ಭಾರತದಲ್ಲಿ ದೊಡ್ಡ ಸಾಮ್ರಾಜ್ಯವನ್ನೇ ಕಟ್ಟಿತು. ಎರಡು ಶತಮಾನಗಳ ಕಾಲ ವೈಭವದಿಂದ ಬಾಳಿತು. ಈ ಸಾಮ್ರಾಜ್ಯ ಉಚ್ಛ್ರಾಯ ಸ್ಥಿತಿಯಲ್ಲಿದ್ದಾಗ ಅಲ್ಲಿಗೆ ಬಂದಿದ್ದ ವಿದೇಶೀ ಪ್ರವಾಸಿಗರನೇಕರು ಅದರ ಸಂಪತ್ತು, ಶಕ್ತಿಗಳನ್ನು ತುಂಬ ಹೊಗಳಿದ್ದಾರೆ.

ವಿಜಯನಗರವು ಸಾಧಿಸಿದ ಉನ್ನತಿ, ಬಹಮನಿ ರಾಜ್ಯಗಳ ಕಣ್ಣನ್ನು ಕೆಂಪು ಮಾಡಿತು. ಒಬ್ಬರೊಡನೊಬ್ಬರು ಕಾದಾಡುತ್ತಿದ್ದ ಈ ರಾಜ್ಯಗಳ ಸುಲ್ತಾನರು ಕೊನೆಗೆ ಒಂದುಗೂಡಿ, ವಿಜಯನಗರದ ಮೇಲೆ ಯುದ್ಧ ಹೂಡಿದರು. 1565ರಲ್ಲಿ ನಡೆದ ರಕ್ಕಸ–ತಂಗಡಿ ಯುದ್ಧದಲ್ಲಿ ವಿಜಯನಗರಕ್ಕೆ ಸೋಲಾಗಿ ವಿಜಯನಗರ ಸಾಮ್ರಾಜ್ಯ ಭಗ್ನವಾಯಿತು.

ಮೊಘಲರು

ಇತ್ತ ಉತ್ತರ ಭಾರತದಲ್ಲಿ, ತೈಮೂರನ ದಾಳಿಯಿಂದ ತುಘಲಕ್ ಅರಸೊತ್ತಿಗೆಗೆ ಕೊಡಲಿಯ ಪೆಟ್ಟು ಬಿದ್ದ 126 ವರ್ಷಗಳ ಅನಂತರ, ತೈಮೂರನ ವಂಶದವನೇ ಆದ ಬಾಬರ್ ಭಾರತದ ಮೇಲೆ ನುಗ್ಗಿ ಬಂದ – –ಇಬ್ರಾಹಿಂ ಲೋದಿಯ ಬಗೆಗೆ ಅಸಂತೃಪ್ತರಾಗಿದ್ದ ಅವನ ಸರದಾರರ ಆಹ್ವಾನದಂತೆ ! ಭಾರತದಲ್ಲಿ ರಾಜ್ಯಸ್ಥಾಪನೆ ಮಾಡುವ ಆಸೆ ತೈಮೂರನಿಗೆ ಅಷ್ಟಾಗಿ ಇರಲಿಲ್ಲ. ಆದರೆ ಬಾಬರನಿಗೆ ಆ ಆಸೆಯಿತ್ತು.

ಪ್ರಬಲ ರಾಷ್ಟ್ರಪ್ರೇಮಿ ನಾಯಕನಾದ ರಾಣಾ ಸಂಗನೊಡನೆ ಇತರ ಮುಹಮ್ಮದೀಯ ಸರದಾರರೂ ಸೇರಿ, ಒಗ್ಗಟ್ಟಾಗಿ ಬಾಬರನನ್ನು ಇದಿರಿಸಿದ್ದರೆ, ಬಾಬರನ ದಾಳಿಯಾಗಲೀ ಆಸೆಯಾಗಲೀ ಫಲಿಸುತ್ತಿರಲಿಲ್ಲ. ಆದರೆ ಹಾಗಾಗಲಿಲ್ಲ. ಬಾಬರ್ ದೆಹಲಿ ಸಮೀಪದ ಪಾಣಿಪತ್‌ನಲ್ಲಿ ಇಬ್ರಾಹಿಂ ಲೋದಿಯನ್ನೂ ಆಗ್ರಾದ ಸಮೀಪದ ಕಾನ್ವಾದಲ್ಲಿ ರಾಣಾ ಸಂಗ ಮತ್ತು ಅವನ ಸಂಗಡಿಗರನ್ನೂ ಸೋಲಿಸಿ ಭಾರತದಲ್ಲಿ ಮೊಘಲ್ ಸಾಮ್ರಾಜ್ಯ ಸ್ಥಾಪನೆಗೆ ತಳಹದಿ ಹಾಕಿದ. ಅಷ್ಟೇ: ಅದನ್ನು ಭದ್ರಪಡಿಸುವಷ್ಟು ಕಾಲ ಅವನು ಬಾಳಲಿಲ್ಲ. ಅವನ ಅನಂತರ ಪಟ್ಟಕ್ಕೆ ಬಂದ ಹುಮಾಯೂನ್, ತನ್ನ ತಮ್ಮಂದಿರ ಹಾಗೂ ತನ್ನ ತಂದೆಯಿಂದ ಸೋಲಿಗೊಳಗಾಗಿದ್ದವರ ವಿರೋಧವನ್ನು ಎದುರಿಸಬೇಕಾಯಿತು. ಈ ಹೋರಾಟದಲ್ಲಿ ಸೋತು ಭಾರತದಿಂದ ಓಡಿಹೋಗಬೇಕಾಯಿತು. ಸುಮಾರು ಹದಿನೈದು ವರ್ಷ

ನೆಲೆಯಿಲ್ಲದೆ ಅಲೆಯಬೇಕಾಯಿತು. ಕೊನೆಗೆ ಇರಾನಿನ ಚಕ್ರವರ್ತಿಯ ನೆರವು ಪಡೆದು ಭಾರತಕ್ಕೆ ಹಿಂದಿರುಗಿ ಮತ್ತೆ ರಾಜ್ಯಕಟ್ಟಲು ಪ್ರಯತ್ನಿಸಿ ಸ್ವಲ್ಪಮಟ್ಟಿಗೆ ಜಯಶೀಲನಾದ.

ಹುಮಾಯೂನ್ ದಿಕ್ಕುಕೆಟ್ಟು ಅಲೆಯುತ್ತಿದ್ದಾಗ, ಷೇರ್‌ಷಾ ಎಂಬ ಅಫ್‌ಘಾನ್ ಸರದಾರನು ಸ್ವಸಾಮರ್ಥ್ಯದಿಂದ ದೊಡ್ಡರಾಜ್ಯವನ್ನು ಕಟ್ಟಿ ಅದನ್ನು ದಕ್ಷತೆಯಿಂದ ಆಳಿದ. ಇವನ ರಾಜ್ಯಾಡಳಿತ ವ್ಯವಸ್ಥೆ, ಭೂವ್ಯವಸ್ಥೆ ಉತ್ತಮವಾಗಿದ್ದು ಹುಮಾಯೂನನ ಮಗ ಅಕ್ಬರನಿಗೆ ಮಾರ್ಗದರ್ಶಕ ವಾದುವು.

ಅಕ್ಬರ್ : ದೊಡ್ಡ ಸಾಮ್ರಾಜ್ಯ

ಭಾರತವನ್ನಾಳಿದ ಮೊಘಲ್ ಚಕ್ರವರ್ತಿಗಳಲ್ಲಿ ಅಕ್ಬರ್ ಅತ್ಯಂತ ಪ್ರಸಿದ್ಧ. ಹರ್ಷವರ್ಧನನಂತೆ ಇವನೂ ತೀರಾ ಚಿಕ್ಕ ವಯಸ್ಸಿನವನಾಗಿದ್ದಾಗ –ಕೇವಲ 13 ವರ್ಷದವನಾಗಿದ್ದಾಗ– ಅಧಿಕಾರಕ್ಕೆ ಬಂದ. ಅವನಂತೆಯೇ ದೊಡ್ಡ ಸಾಮ್ರಾಜ್ಯವನ್ನು ಕಟ್ಟಿದ. ತನ್ನ ಹಿಂದು ಮತ್ತು ಮಹಮ್ಮದೀಯ ಪ್ರಜೆಗಳ ನಡುವೆ ಸೌಹಾರ್ದವನ್ನು ಬೆಳೆಸಲು ಬಲವಾದ ಪ್ರಯತ್ನ ಮಾಡಿದ. ಪಶ್ಚಿಮದಲ್ಲಿ ಅಫ್‌ಘಾನಿಸ್ತಾನದಿಂದ ಪೂರ್ವದಲ್ಲಿ ಅಸ್ಸಾಂ ವರೆಗೆ, ಉತ್ತರದಲ್ಲಿ ಕಾಶ್ಮೀರದಿಂದ ದಕ್ಷಿಣದಲ್ಲಿ ಅಹಮದ್‌ನಗರದ ವರೆಗೆ ಹರಡಿದ್ದ ದೊಡ್ಡ ಸಾಮ್ರಾಜ್ಯವನ್ನು ದಕ್ಷತೆಯಿಂದ ಆಳಿದ.

ಅಕ್ಬರನ ಅನಂತರ ಪಟ್ಟಕ್ಕೆ ಬಂದ ಜಹಾಂಗೀರ್, ಷಾಜಹಾನ್ ಇವರಿಬ್ಬರೂ ಅಕ್ಬರನ ಸಂಪ್ರದಾಯವನ್ನು ಬಹುಮಟ್ಟಿಗೆ ಬೆಳೆಸಿಕೊಂಡು ಬಂದರು. ಆದರೆ ಷಾಜಹಾನನ ಮಗ ಔರಂಗಜೇಬ್ ಮಾತ್ರ ಈ ಪರಂಪರೆಗೆ ವಿರುದ್ಧವಾಗಿ ನಡೆದ. ಹಿಂದುಗಳ ವಿರುದ್ಧವಾಗಿ ವರ್ತಿಸಿ ಅವರ ಹಗೆತನವನ್ನು ಕಟ್ಟಿಕೊಂಡ; ಶಿವಾಜಿಯ ನೇತೃತ್ವದಲ್ಲಿ ಮರಾಠರು ಪ್ರಾಬಲ್ಯಕ್ಕೆ ಬರಲು ಕಾರಣನಾದ; ಮೊಘಲ್ ಸಾಮ್ರಾಜ್ಯವನ್ನು ದಕ್ಷಿಣದಲ್ಲಿ ತಿರುಚಿನಾಪಳ್ಳಿಯ ವರೆಗೆ ವಿಸ್ತರಿಸಿದನಾದರೂ ಆ ಸಾಮ್ರಾಜ್ಯದ ಅವನತಿಗೆ ಅಸ್ತಿಭಾರ ಹಾಕಿದ! ತನ್ನ ಅನಂತರ ಮೊಘಲ್ ಸಾಮ್ರಾಜ್ಯ ಬಹುಕಾಲ ಬಾಳುವುದೆಂಬ ಭರವಸೆ ಔರಂಗಜೇಬನಿಗೆ ಇರಲಿಲ್ಲವೆಂಬುದು ಅವನು ತನ್ನ ಮಗನೊಬ್ಬನಿಗೆ ಬರೆದ ಪತ್ರದಿಂದ ವ್ಯಕ್ತವಾಗುತ್ತದೆ.

ಭಾರತದ ಭವಿಷ್ಯದ ಮೇಲೆ ಪ್ರಬಲವಾದ ಪರಿಣಾಮವನ್ನು ಬೀರಿದ ಒಂದು ಘಟನೆ ಮೊಘಲರ ಆಡಳಿತ ಕಾಲದಲ್ಲಿ ನಡೆಯಿತು. ಅದೆಂದರೆ, ಪಾಶ್ಚಾತ್ಯರು ಭಾರತಕ್ಕೆ ಬಂದು ತಮ್ಮ ವ್ಯಾಪಾರಕ್ಕೆ ಸೌಲಭ್ಯಗಳನ್ನು ಪಡೆಯಲು ಪ್ರಯತ್ನಿಸಿದ್ದು. ಇದು ಮುಂದೆ ಭಾರತದಲ್ಲಿ ಬ್ರಿಟಿಷ್ ಸಾಮ್ರಾಜ್ಯ ಸ್ಥಾಪನೆಗೆ ದಾರಿಮಾಡಿಕೊಟ್ಟಿತು.

ದಕ್ಷಿಣದಲ್ಲಿ ಮಹಮ್ಮದೀಯ ರಾಜ್ಯವಿಸ್ತರಣವನ್ನು ತಡೆಗಟ್ಟಲು ಹಕ್ಕ ಬುಕ್ಕರು 14ನೆಯ ಶತಮಾನದ ಆದಿಭಾಗದಲ್ಲಿ ವಿಜಯನಗರ ರಾಜ್ಯ ಸ್ಥಾಪನೆಮಾಡಿದಂತೆ, ಅದೇ ಉದ್ದೇಶದಿಂದ 17ನೆಯ ಶತಮಾನದ ಆರಂಭದಲ್ಲಿ ಮರಾಠ ರಾಜ್ಯವನ್ನು ಸ್ಥಾಪನೆಮಾಡಿದವನು ಶಿವಾಜಿ. ಇವನು ಇತ್ತ ಬಿಜಾಪುರದ ಸುಲ್ತಾನರೊಡನೆಯೂ ಅತ್ತ ಮೊಘಲರೊಡನೆಯೂ ಏಕಪ್ರಕಾರವಾಗಿ ಸೆಣಸಿದ. ಗುಜರಾತು, ಕಾರವಾರದ ವರೆಗಿನ ಪಶ್ಚಿಮ ಕರಾವಳಿ ಪ್ರದೇಶ, ಮಹಾರಾಷ್ಟ್ರ, ಕರ್ನಾಟಕದ ಕೆಲವು ಭಾಗಗಳನ್ನೊಳಗೊಂಡ ದೊಡ್ಡ ರಾಜ್ಯವನ್ನು ಕಟ್ಟಿದ. ಶಿವಾಜಿಯ ಉದ್ದೇಶ ಮತ್ತು ಕಾರ್ಯದಕ್ಷತೆಗಳನ್ನು ಅರಿತಿದ್ದ ಔರಂಗಜೇಬನು ಅವನ ಪ್ರಭಾವವನ್ನು ಮುರಿಯಲು ಬಹುವಾಗಿ ಪ್ರಯತ್ನಿಸಿದನಾದರೂ ಅದು ಫಲಿಸಲಿಲ್ಲ. 1680ರಲ್ಲಿ ಶಿವಾಜಿಯ ಮರಣವಾದ ಅನಂತರ ಮೊಘಲರು ಮರಾಠ ರಾಜ್ಯವನ್ನು ಹತ್ತಿಕ್ಕಲು ಬಲವಾದ ಪ್ರಯತ್ನಗಳನ್ನು ನಡೆಸಿದರು. ಆದರೆ ಶಿವಾಜಿಯ ರಾಷ್ಟ್ರೀಯ ಧ್ಯೇಯ ಧೋರಣೆಗಳಿಂದ ಪ್ರೇರೇಪಿತರಾಗಿದ್ದ ಅವನ ಸರದಾರರು ಆ ಪ್ರಯತ್ನಗಳನ್ನು ಭಂಗಗೊಳಿಸಿದರು. ಮರಾಠ ಸಿಂಹಾಸನಕ್ಕಾಗಿ ಶಿವಾಜಿಯ ವಂಶಿಕರಲ್ಲಿ ಕಲಹಗಳು ನಡೆದರೂ ಮರಾಠ ರಾಜ್ಯ ಭಗ್ನವಾಗಲಿಲ್ಲ. ಶಿವಾಜಿಯು ಮರಣ ಹೊಂದಿದ ಮೂವತ್ತು ವರ್ಷಗಳ ಅನಂತರ ಸಾಹು ಮಹಾರಾಜನ ಕಾಲದಲ್ಲಿ ಅವನ ಮುಖ್ಯಮಂತ್ರಿ (ಪೇಶ್ವೆ) ಆಗಿ ನಿಯಮಿಸಲ್ಪಟ್ಟ ಬಾಳಾಜಿ ವಿಶ್ವನಾಥನೂ ಅವನ ವಂಶದ ಇತರ ದಕ್ಷ ಪೇಶ್ವೆಯರೂ ಮೊಘಲರ ಅವನತಿಯ ಲಾಭ ಪಡೆದು ಮರಾಠ ಸಾಮ್ರಾಜ್ಯವನ್ನು ಕಟ್ಟಿದರು. ದಕ್ಷಿಣ ಪಶ್ಚಿಮ ಭಾರತದಿಂದ ದೆಹಲಿಯವರೆಗೂ ತಮ್ಮ ಆಧಿಪತ್ಯವನ್ನು ಬೆಳೆಸಿಕೊಂಡರು. ಈ ಮಹತ್ಸಾಧನೆಯಲ್ಲಿ ಬಾಳಾಜಿ ವಿಶ್ವನಾಥನ ಮಗನಾದ ಬಾಜೀರಾಯನ ಪಾತ್ರ ದೊಡ್ಡದು. ಕಾಲಕ್ರಮದಲ್ಲಿ ಮರಾಠರು ಪಂಜಾಬಿನಲ್ಲಿ ತಮ್ಮ ಆಧಿಪತ್ಯವನ್ನು ಸ್ಥಾಪಿಸಿದ್ದೇ ಅವರ ಭಾರತ ಸಾಮ್ರಾಜ್ಯ ಸ್ಥಾಪನೆಯ ಪ್ರಯತ್ನಕ್ಕೆ ದೊಡ್ಡ ಕೊಡಲಿ ಪೆಟ್ಟಾಗಿ ಪರಿಣಮಿಸಿತು.

ಸಾಮಾನ್ಯ ಕುಟುಂಬದಲ್ಲಿ ಹುಟ್ಟಿ, ನಾನಾ ಕಷ್ಟಗಳನ್ನು ಇದಿರಿಸಿ ಕೊನೆಗೆ ಇರಾನಿನ ಅರಸನಾದ ನಾದಿರ್ ಷಾ 1739ರಲ್ಲಿ ಭಾರತದ ಮೇಲೆ ದಾಳಿಮಾಡಿ ದೆಹಲಿಯ ಐಶ್ವರ್ಯವನ್ನು ದೋಚಿಕೊಂಡು ಹೋದನಷ್ಟೆ. ಇವನ ಮರಣಾನಂತರ ಪ್ರಾಬಲ್ಯಕ್ಕೆ ಬಂದ ಇವನ ಸೇನಾಧಿಕಾರಿಗಳಲ್ಲೊಬ್ಬನಾದ ಅಹಮದ್ ಷಾ ಅಬ್ದಾಲಿ ನಾದಿರನ ಮಾದರಿಯನ್ನೇ ಅನುಸರಿಸಿ ಪಂಜಾಬಿನ ಮೇಲೆ ಹಲವಾರು ಬಾರಿ ದಾಳಿ ನಡೆಸಿದ. ಈ ಗಲಿಬಿಲಿಯ ಕಾಲದಲ್ಲೇ ಮರಾಠರು ಪಂಜಾಬನ್ನು ಆಕ್ರಮಿಸಿದ್ದು. ಅಹಮ್ಮದ್ ಷಾ ಐದನೆಯ ಬಾರಿ ದಾಳಿ ನಡೆಸಿದಾಗ 1761ರಲ್ಲಿ ಮರಾಠರು ಇವನನ್ನು ಪಾಣಿಪತ್ ರಣರಂಗದಲ್ಲಿ

ಸಾಮ್ರಾಜ್ಯ ಕಟ್ಟಿದ ಶಿವಾಜಿ

ಇದಿರಿಸಬೇಕಾಯಿತು. ಈ ಯುದ್ಧದಲ್ಲಿ ಮರಾಠರಿಗೆ ಬಲವಾದ ಸೋಲಾಯಿತು. ಆದರೆ ಮರಾಠರು ಇನ್ನೂ ಕೆಲವು ಕಾಲ ತಮ್ಮ ಪ್ರಾಬಲ್ಯವನ್ನು ತಕ್ಕಮಟ್ಟಿಗೆ ಉಳಿಸಿಕೊಂಡಿದ್ದರು. ಬ್ರಿಟಿಷರು ಭಾರತದಲ್ಲಿ ರಾಜ್ಯಕಟ್ಟಲು ನಡೆಸಿದ ಪ್ರಯತ್ನಗಳನ್ನು ಗಣನೀಯ ರೀತಿಯಲ್ಲಿ ಅವರು ವಿರೋಧಿಸಿದರು.

ಹರಪ್ಪಾ–ಮೊಹೆಂಜೊ ದಾರೊ ಸಂಸ್ಕೃತಿಯ ಕಾಲಕ್ಕೇ ಭಾರತೀಯರು ನೌಕಾಯಾನವನ್ನು ಅರಿತಿದ್ದರೆಂದೂ ಪರ ರಾಷ್ಟ್ರಗಳೊಡನೆ ವ್ಯಾಪಾರ ಸಂಬಂಧವನ್ನಿಟ್ಟುಕೊಂಡಿದ್ದರೆಂದೂ ವ್ಯಕ್ತವಾಗಿದೆ. ಶಾತವಾಹನರು, ಚೋಳರು, ಪಾಂಡ್ಯರು ಮುಂತಾದ ಅರಸುಮನೆತನಗಳವರು ನೌಕಾಯಾನ, ಸಾಗರೋತ್ತರ ವ್ಯಾಪಾರವನ್ನು ಪೋಷಿಸಿದರು. ಅರಬರು ಭಾರತದಲ್ಲಿ ಅನೇಕ ವಸ್ತುಗಳನ್ನು ಕೊಂಡು ಅವನ್ನು ಅನೇಕ ಪಾಶ್ಚಿಮಾತ್ಯ ರಾಷ್ಟ್ರಗಳಿಗೆ ಸಾಗಿಸುತ್ತಿದ್ದರು. ತುರ್ಕರ ಪ್ರಾಬಲ್ಯದಿಂದ ಈ ವ್ಯಾಪಾರಕ್ಕೆ ಅಡಚಣೆಯುಂಟಾದಾಗ ಪಾಶ್ಚಿಮಾತ್ಯ ರಾಷ್ಟ್ರಗಳು ಭಾರತಕ್ಕೆ ಸಮುದ್ರಮಾರ್ಗವನ್ನು ಕಂಡುಹಿಡಿಯಲು ತೊಡಗಿದುವು. ಪೋರ್ಚುಗಲ್‌ನ ನಾವಿಕ ವಾಸ್ಕೋ ದ ಗಾಮ ತನ್ನ ದೇಶದಿಂದ ಹೊರಟು 1498ರಲ್ಲಿ ಭಾರತದ ಪಶ್ಚಿಮ ಕರಾವಳಿಯ ಕಲ್ಲಿಕೋಟೆಯನ್ನು ಮುಟ್ಟಿದ. ಭಾರತದೊಡನೆ ವ್ಯಾಪಾರವನ್ನಾರಂಭಿಸಿದ. ಇದಾದ ಅನಂತರ ಪೋರ್ಚುಗೀಸರು ಗೋವಾ ಮತ್ತಿತರ ಪ್ರದೇಶಗಳನ್ನು ತಮ್ಮ ಸ್ವಾಧೀನಪಡಿಸಿಕೊಂಡು ತಮ್ಮ ರಾಜಕೀಯ ಸ್ಥಾನವನ್ನೂ ವ್ಯಾಪಾರವನ್ನೂ ಬೆಳೆಸಿದರು.

6ನೆಯ ಶತಮಾನದ ದೋಣಿ



ಇವರ ಉತ್ಕರ್ಷವನ್ನು ಕಂಡು ಬ್ರಿಟಿಷರು, ಡಚ್ಚರು (ಹಾಲೆಂಡಿನವರು), ಫ್ರೆಂಚರು ಭಾರತದೊಡನೆ ವ್ಯಾಪಾರವನ್ನು ಬಯಸಿಬಂದರು—17ನೆಯ ಶತಮಾನದ ಆದಿಭಾಗದಲ್ಲಿ. ಇವರಲ್ಲಿ, ಬ್ರಿಟಿಷರು ಮತ್ತು ಫ್ರೆಂಚರು ಭಾರತದಲ್ಲಿ ತಮ್ಮ ರಾಜ್ಯವನ್ನು ಕಟ್ಟಲು ಪ್ರಬಲವಾದ ಪ್ರಯತ್ನ ನಡೆಸಿದರು; ಅದಕ್ಕಾಗಿ ಪರಸ್ಪರ ಕಾದಾಡಿದರು. ಈ ಹೋರಾಟದಲ್ಲಿ ಯಶಸ್ವಿಯಾದವರು ಬ್ರಿಟಿಷರು. ಭಾರತದಲ್ಲಿದ್ದ ಅನೇಕ ಮಂದಿ ಅರಸರು, ಸುಲ್ತಾನರಲ್ಲಿ ಒಬ್ಬೊಬ್ಬ್ಮ ಒಬ್ಬೊಬ್ಬರ ಪಕ್ಷವಹಿಸಿ ತಮ್ಮ ಕೈ ಬಲಪಡಿಸಿಕೊಂಡು ತಮ್ಮ ಉದ್ದೇಶವನ್ನು ಸಾಧಿಸಿಕೊಂಡರು.

1757ರಲ್ಲಿ ನಡೆದ ಪ್ಲಾಸಿ ಕದನದಲ್ಲಿ ಬ್ರಿಟಿಷರಿಗೆ ದೊರೆತ ವಿಜಯದಿಂದಾಗಿ ಭಾರತದಲ್ಲಿ ಬ್ರಿಟಿಷರ ಸಾಮ್ರಾಜ್ಯ ಸ್ಥಾಪನೆಯ ಆಸೆ ಮೊಳೆಯಿತು. ಅವರು ಬಂಗಾಳದ ಮೇಲೆ ತಮ್ಮ ಹಿಡಿತವನ್ನು ಬಲಪಡಿಸಿಕೊಂಡು ಅನಂತರ ಭಾರತದ ಇತರ ಭಾಗಗಳನ್ನು ತಮ್ಮ ಹತೋಟಿಗೆ ತೆಗೆದುಕೊಳ್ಳುವ ಪ್ರಯತ್ನವನ್ನು ಕೈಗೊಂಡರು. ಈ ಕಾರ್ಯದಲ್ಲಿ ತೊಡಗಿದ್ದಾಗ ಅವರು ತಮ್ಮ ಪ್ರತಿಸ್ಪರ್ಧಿಗಳಾಗಿದ್ದ ಫ್ರೆಂಚರನ್ನೂ ಮರಾಠರು, ಮೈಸೂರಿನ ಹೈದರ್ ಮತ್ತು ಟಿಪ್ಪುಸುಲ್ತಾನರಂಥ ಪ್ರಬಲ ವಿರೋಧಿಗಳನ್ನೂ ಇದಿರಿಸಿ ದೀರ್ಘ ಕಾಲ ಹೋರಾಡಬೇಕಾಯಿತು. ಸಿಕ್ಖರ ನಾಯಕನಾಗಿದ್ದ ರಣಜಿತ್‌ಸಿಂಗ್‌ನೊಡನೆ ಮೊದಲು ಸ್ನೇಹವನ್ನು ಸಾಧಿಸಿ ಅವನ ಮರಣಾನಂತರ ಸಿಕ್ಖರ ಪ್ರಾಬಲ್ಯವನ್ನು ಮುರಿದರು.



ಹೀಗೆ ಬ್ರಿಟಿಷರು ಭಾರತದ ಗಣನೀಯ ಭಾಗದ ಮೇಲೆ ತಮ್ಮ ಆಧಿಪತ್ಯವನ್ನು ಸ್ಥಾಪಿಸಿದ ಮೇಲೆ, ನಾನಾ ಕಾರಣಗಳಿಂದಾಗಿ ಜನರಿಗೆ ಅವರ ಬಗೆಗೆ ಅಸಮಾಧಾನವುಂಟಾಯಿತು. ಇದರ ಪರಿಣಾಮವಾಗಿ ಪ್ಲಾಸಿ ಕದನ ನಡೆದ ಒಂದು ನೂರು ವರ್ಷಗಳ ಅನಂತರ 1857ರಲ್ಲಿ ಬ್ರಿಟಿಷರ ವಿರುದ್ಧ ಭಾರತದಲ್ಲಿ ದೊಡ್ಡ ದಂಗೆ ನಡೆಯಿತು. ಭಾರತವನ್ನು ಕ್ರಮಕ್ರಮವಾಗಿ ಆಕ್ರಮಿಸಿಕೊಳ್ಳುತ್ತಿದ್ದ ಬ್ರಿಟಿಷರನ್ನು ಇಲ್ಲಿಂದ ಓಡಿಸಲು ಭಾರತೀಯರು ನಡೆಸಿದ ದೊಡ್ಡ ಪ್ರಮಾಣದ ಪ್ರಯತ್ನ ಇದು. ಬ್ರಿಟಿಷರ

ಹಲವಾರು ಭಾರತೀಯರು ಇದರಲ್ಲಿ ಪ್ರಮುಖವಾಗಿ ಭಾಗವಹಿಸಿದರು. ಐಕ್ಯದ ಅಭಾವ, ವೈಯಕ್ತಿಕ ಆಶೋತ್ತರಗಳು, ಉತ್ತಮ ಯುದ್ಧೋಪಕರಣಗಳ ಮತ್ತು ಏಕ ನಾಯಕತ್ವದ ಅಭಾವಗಳಿಂದಾಗಿ ಈ ಪ್ರಯತ್ನ ವಿಫಲವಾಯಿತು. ಆದರೂ ಈ ದಂಗೆ ಭಾರತದಲ್ಲಿ ಬ್ರಿಟಿಷ್ ಆಡಳಿತದ ಮೇಲೆ ಪ್ರಬಲವಾದ ಪರಿಣಾಮವನ್ನುಂಟುಮಾಡಿತು. ಮೊದಲನೆಯದಾಗಿ ಬ್ರಿಟಿಷ್ ವಾಣಿಜ್ಯ ಸಂಸ್ಥೆ ಈಸ್ಟ್ ಇಂಡಿಯಾ ಕಂಪನಿ ಭಾರತದ ಆಡಳಿತ ನಡೆಸುತ್ತಿದ್ದುದು ಕೊನೆಗೊಂಡು, 1858ರಿಂದ ಭಾರತ ಬ್ರಿಟಿಷ್ ಅರಸೊತ್ತಿಗೆಯ ಆಡಳಿತಕ್ಕೆ ಒಳಗಾಯಿತು; ಎರಡನೆಯದಾಗಿ ಭಾರತದ ಸೇನಾ ವ್ಯವಸ್ಥೆಯಲ್ಲಿ ಬದಲಾವಣೆಗಳಾದುವು; ಮೂರನೆಯದಾಗಿ ದೇಶೀಯ ರಾಜರು ಆಳುತ್ತಿದ್ದ ಪ್ರದೇಶಗಳು ಅವರ ಆಳ್ವಿಕೆಯಲ್ಲೇ ಉಳಿದುವು — ಆದರೆ ಅವರು ಬ್ರಿಟಿಷ್ ಸರಕಾರಕ್ಕೆ ಅಧೀನರಾಗಿ ಬಾಳಬೇಕಾಯಿತು.

ನವಜಾಗೃತಿ

1757ರಿಂದ 1857ರ ವರೆಗೆ ಬ್ರಿಟಿಷರು ಭಾರತದಲ್ಲಿ ನಡೆಸಿದ ಆಡಳಿತದ ಪರಿಣಾಮವಾಗಿ ನವಜಾಗೃತಿ ಮೂಡಿತು. ಇಂಗ್ಲಿಷ್ ವಿದ್ಯಾಭ್ಯಾಸ ಇದಕ್ಕೆ ಕಾರಣವಾಯಿತು. ಭಾರತೀಯರಲ್ಲಿ ಸುಧಾರಣೆಯ, ಮುನ್ನಡೆಯ ಭಾವನೆ ಪ್ರಚೋದಿತವಾಯಿತು. ಈ ನೂತನ ಪ್ರೇರಣೆಯ ಮೂರ್ತಸ್ವರೂಪ 1772ರಲ್ಲಿ ಬಂಗಾಳದಲ್ಲಿ ಜನಿಸಿದ, ಸಂಸ್ಕೃತ, ಇಂಗ್ಲಿಷ್, ಪಾರಸೀ ಮುಂತಾದ ಭಾಷೆಗಳಲ್ಲಿ ಅಪೂರ್ವಪಾಂಡಿತ್ಯ ವನ್ನು ಪಡೆದಿದ್ದ ರಾಜಾ ರಾಮಮೋಹನರಾಯ್. ಭಾರತೀಯ ಸಂಸ್ಕೃತಿಯಲ್ಲಿ ಉತ್ತಮವಾದದ್ದನ್ನು ಉಳಿಸಿಕೊಳ್ಳುವ, ಉಪಯುಕ್ತವಾದ ಹೊಸ ಭಾವನೆಗಳನ್ನು ರೂಢಿಸಿಕೊಳ್ಳುವ ದೃಷ್ಟಿಯನ್ನು ಪ್ರಚೋದಿಸಿದರು. ಭಾರತದ ಆಡಳಿತದಲ್ಲಿ ಭಾರತೀಯರಿಗೆ ಹೆಚ್ಚಿನ ಭಾಗ ದೊರೆಯಬೇಕೆಂದು ವಾದಿಸಿದರು. ಸಹಗಮನದಂಥ ಕ್ರೂರ ಪದ್ಧತಿಯನ್ನು ನಿಷೇಧಿಸಲು ಸರಕಾರ ಕೈಗೊಂಡ ಪ್ರಯತ್ನಗಳಿಗೆ ಬೆಂಬಲ ಕೊಟ್ಟರು. ಹೀಗೆ ರಾಮಮೋಹನರಾಯರು ಭಾರತೀಯ ಸಾಮಾಜಿಕ, ರಾಜಕೀಯ ಸುಧಾರಣೆಗಳಿಗೆ ತಳಹದಿ ಹಾಕಿದರು. ಬ್ರಿಟಿಷರು ಭಾರತ ವನ್ನು ಯಾವ ದೃಷ್ಟಿಯಿಂದ ನೋಡಬೇಕು, ಭಾರತ ಏನನ್ನು ಸಾಧಿಸಬೇಕು ಎಂಬುದರ ಮುನ್ನೋಟವನ್ನು ಕೊಟ್ಟರು. ಅವರು ಆರಂಭಿಸಿದ ನವೋದಯ ದೃಷ್ಟಿ ರಾಷ್ಟ್ರದಾದ್ಯಂತ ಹಬ್ಬಿತು.

1857ರ ದಂಗೆಯ ಅನಂತರ, ರಾಮಕೃಷ್ಣ ಪರಮಹಂಸರ ಶಿಷ್ಯರಾದ ವಿವೇಕಾನಂದ, ದಯಾನಂದ ಸರಸ್ವತಿ, ಕೇಶವಚಂದ್ರ ಸೇನ್, ಮಹದೇವ ಗೋವಿಂದ ರಾನಡೆ ಮುಂತಾದವರು ಭಾರತೀಯರಲ್ಲಿ ಆತ್ಮವಿಶ್ವಾಸವನ್ನೂ ಸಾಮಾಜಿಕ ಸುಧಾರಣೆಗಳ ಭಾವನೆಯನ್ನೂ ಬೆಳೆಸಿದರು. ಭಾರತೇಂದು ಹರಿಶ್ಚಂದ್ರ, ಬಂಕಿಮಚಂದ್ರ ಚಟ್ಟೋಪಾಧ್ಯಾಯ ಮುಂತಾದ ಸಾಹಿತಿಗಳು ಜನರಲ್ಲಿ ದೇಶಪ್ರೇಮವನ್ನೂ ಪ್ರಜ್ವಲಗೊಳಿಸಿದರು.



ನವಜಾಗೃತಿಯ ಶಿಲ್ಪಿಗಳು : ರಾಮಮೋಹನರಾಯ್ ಪರಮಹಂಸ ವಿವೇಕಾನಂದ ದಯಾನಂದ ಸರಸ್ವತಿ ರಾನಡೆ

ಕಾಂಗ್ರೆಸ್ಸಿನ ಸ್ಥಾಪನೆ

ಇವೆಲ್ಲದರ ಪರಿಣಾಮವಾಗಿ 1885ನೆಯ ಡಿಸೆಂಬರ್ 28ನೆಯ ತಾರೀಖು ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ರೂಪುಗೊಂಡಿತು. ಇದರ ಸ್ಥಾಪನೆಯಲ್ಲಿ ಮುಖ್ಯ ಪಾತ್ರವಹಿಸಿದವರು ಭಾರತ ಸರಕಾರದಲ್ಲಿ ಉನ್ನತಾಧಿಕಾರದಲ್ಲಿದ್ದ ಎ. ಒ. ಹ್ಯೂಮ್. ಈತನಿಗೆ ವೈಸ್‌ರಾಯ್ ಲಾರ್ಡ್ ಡಫೆರಿನ್‌ನ ಬೆಂಬಲವೂ ಇತ್ತು. ಕಾಂಗ್ರೆಸ್ಸಿನ ಸ್ಥಾಪನೆಯಲ್ಲಿ ಈತ ಆಸಕ್ತಿ ತೋರಿದ್ದಕ್ಕೆ ಕಾರಣ, ಬ್ರಿಟಿಷ್ ಆಡಳಿತದ ಬಗೆಗೆ ಭಾರತೀಯರಲ್ಲೇ ಒಳಗೊಳಗೆ ಕುದಿಯುತ್ತಿದ್ದ ಅಸಮಾಧಾನ ಹೊರಹೊಮ್ಮಲು ಸಹಾಯಕವಾದ ಒಂದು ಸಂಸ್ಥೆಯಿದ್ದರೆ ಒಳ್ಳೆಯದು ಎಂಬುದು. ಭಾರತೀಯರ ಆಸೆ ಆಕಾಂಕ್ಷೆಗಳನ್ನು ಅರಿಯಲು ಇದರಿಂದ ಸರಕಾರಕ್ಕೆ ನೆರವಾಗುತ್ತದೆ ಎಂಬುದು.

ಆರಂಭಕಾಲದಲ್ಲಿ ಕೂಡ ಕಾಂಗ್ರೆಸ್ ಸರಕಾರದ ರೀತಿ ನೀತಿಗಳನ್ನು ಟೀಕಿಸುತ್ತಿತ್ತು. ಆದರೆ ಆಡಳಿತದಲ್ಲಿ ಭಾರತೀಯರಿಗೆ ಹೆಚ್ಚು ಹೆಚ್ಚು ಸ್ಥಾನಮಾನಗಳು ದೊರೆಯಬೇಕೆಂದು, ಸಣ್ಣಪುಟ್ಟ ಸೌಲಭ್ಯಗಳು ಬೇಕೆಂದು ಸರಕಾರವನ್ನು ಬೇಡಿಕೊಳ್ಳುವ ಮಟ್ಟಕ್ಕೆ ಅದು ಬಂದಿತ್ತು. ಆದರೆ ಈ ಪರಿಸ್ಥಿತಿ ಬಹುಕಾಲ ಉಳಿಯಲಿಲ್ಲ.

ಕಾಂಗ್ರೆಸ್ ಕೇವಲ ವಿದ್ಯಾವಂತರ ಮೀಸಲು ಕ್ಷೇತ್ರವಾಗಿ ಉಳಿಯದೆ, ಅದರ ಬೇರು ಜನತೆಯಲ್ಲಿ ವಿಸ್ತಾರವಾಗಿ ಹಬ್ಬಬೇಕು; ಜನರ ಬೆಂಬಲವನ್ನು ಕಾಂಗ್ರೆಸ್ ಗಳಿಸಿಕೊಳ್ಳಬೇಕು ಎಂದು ದೃಢವಾಗಿ ನಂಬಿದ್ದ ಬಾಲಗಂಗಾಧರ ತಿಲಕರು 1889 ಕಾಂಗ್ರೆಸ್ಸನ್ನು ಪ್ರವೇಶಿಸಿದ ನಂತರ ಅದು ತನ್ನ ಧ್ಯೇಯ, ದೃಷ್ಟಿಗಳನ್ನು ಬದಲಾಯಿಸಿಕೊಳ್ಳಬೇಕಾಯಿತು. ಜಪಾನಿನಂಥ ಸಣ್ಣ ರಾಷ್ಟ್ರ ರಷ್ಯದಂಥ ಸಾಮ್ರಾಜ್ಯ ಶಕ್ತಿಯನ್ನು ಸೋಲಿಸಿ ವಿಜಯ ಹೊಂದಿದ್ದು ಭಾರತಕ್ಕೆ ಸ್ಫೂರ್ತಿದಾಯಕವಾಯಿತು: ಭಾರತದಂಥ ದೊಡ್ಡ ರಾಷ್ಟ್ರ ಬ್ರಿಟಿಷರ ಹಿಡಿತದಿಂದ ಪಾರಾಗಲು ಏಕೆ ಬಲವಾದ ಪ್ರಯತ್ನವನ್ನು ನಡೆಸಬಾರದು ಎಂಬ ಭಾವನೆಗೆ ಪುಟಗೊಟ್ಟಿತು. ಬ್ರಿಟಿಷರ ದಬ್ಬಾಳಿಕೆ, ಕ್ಷಾಮಡಾಮರಗಳಿಂದ ಉಂಟಾದ ಅಸಹನೀಯ ಪರಿಸ್ಥಿತಿಗಳು ಬ್ರಿಟಿಷರ ಆಡಳಿತದ ವಿರುದ್ಧ ಜನರ ಅಸಮಾಧಾನವನ್ನು ಹೆಚ್ಚಿಸಿದುವು. ಈ ಸನ್ನಿವೇಶದಲ್ಲಿ (1905) ವೈಸ್‌ರಾಯ್ ಲಾರ್ಡ್ ಕರ್ಜನ್ ಬಂಗಾಳದ ವಿಭಜನೆಯನ್ನು ಘೋಷಿಸಿದಾಗ ಈ ಅಸಮಾಧಾನ ವಿರೋಧದ ರೂಪತಾಳಿತು. ಎಲ್ಲೆಲ್ಲೂ ತೀವ್ರ ಪ್ರತಿಭಟನೆ ಕಾಣಿಸಿಕೊಂಡಿತು. ಬ್ರಿಟಿಷ್ ಸರಕಾರ ಇದನ್ನು ಹತ್ತಿಕ್ಕಲು ನಡೆಸಿದ ಪ್ರಯತ್ನ ಪರಿಸ್ಥಿತಿಯನ್ನು ಇನ್ನಷ್ಟು ಉಲ್ಬಣಗೊಳಿಸಿತು. ಇದು ನಮ್ಮ ರಾಷ್ಟ್ರೀಯ ಚಳುವಳಿಯ ಮೇಲೆ ಇಬ್ಬಗೆಯ ಪರಿಣಾಮವನ್ನುಂಟುಮಾಡಿತು.

ದಾದಾಭಾಯಿ ನವರೋಜಿ, ಗೋಪಾಲಕೃಷ್ಣ ಗೋಖಲೆಯವರಂಥ ಸೌಮ್ಯವಾದಿ ಕಾಂಗ್ರೆಸ್ಸಿಗರು, ಬಾಲಗಂಗಾಧರ ತಿಲಕ್, ಲಾಲಾ ಲಜಪತರಾಯ್, ಬಿಪಿನ್‌ಚಂದ್ರ ಪಾಲ್ ಅವರಂಥ ಉಗ್ರಪಂಥಿ ಕಾಂಗ್ರೆಸ್ಸಿಗರ ನಡುವಿನ ಬಿರುಕು ದೊಡ್ಡದಾಯಿತು. ಉಗ್ರಪಂಥಿಗಳ ಕೈ ಮೇಲಾಯಿತು.

ಭಯೋತ್ಪಾದಕರ ಚಳುವಳಿ

ಬ್ರಿಟಿಷ್ ಅಧಿಕಾರಿಗಳಿಂದ ಅವಹೇಳನ, ದಬ್ಬಾಳಿಕೆಗೆ ಗುರಿಯಾಗಿದ್ದ ಭಾರತದ ಸ್ಥಿತಿ ತರುಣರನ್ನು ರೊಚ್ಚಿಗೆಬ್ಬಿಸಿತು. ಭಯೋತ್ಪಾದನೆ ಮತ್ತು ಹಿಂಸಾತ್ಮಕ ಕಾರ್ಯಗಳಿಂದ ಅವರು ಬ್ರಿಟಿಷರ ಆಡಳಿತವನ್ನು ಕೊನೆಗಾಣಿಸಲು ಪ್ರಯತ್ನಿಸಿದರು. ಬಿಪಿನ್‌ಚಂದ್ರ ಪಾಲ್, ಅರವಿಂದ ಘೋಷ್, ವಿವೇಕಾನಂದರ ತಮ್ಮ ಭೂಪೇಂದ್ರ ದತ್, ಲಾಲಾ ಲಜಪತರಾಯ್ ಮುಂತಾದವರ ಬೆಂಬಲ ಇವರಿಗಿತ್ತು. ಈ ಚಳುವಳಿ ರಾಷ್ಟ್ರದ ಹಲವಾರು ಭಾಗಗಳಿಗೆ ಹರಡಿತು. ಜನತೆ ಈ ಕ್ರಾಂತಿಕಾರರ ತೀವ್ರ ದೇಶಾಭಿಮಾನ, ಅಪ್ರತಿಮ ತ್ಯಾಗ, ಸಾಹಸಗಳನ್ನು ಮೆಚ್ಚಿಕೊಂಡರೂ ಈ ಚಳುವಳಿಗೆ ಅಷ್ಟಾಗಿ ಬೆಂಬಲಕೊಡಲಿಲ್ಲವಾಗಿ ಇದು ಕ್ಷೀಣಿಸಿತು.

ಸುಧಾರಣೆಗಳ ಯುಗ

ಭಾರತದಲ್ಲಿ ರಾಜಕೀಯ ಸುಧಾರಣೆಗಳನ್ನು ಕೈಗೊಳ್ಳಬೇಕೆಂದು ಗೋಪಾಲಕೃಷ್ಣ ಗೋಖಲೆಯಂಥ ಸೌಮ್ಯವಾದಿಗಳು ಕೊಟ್ಟ ಸೂಚನೆಯನ್ನು ಬ್ರಿಟಿಷ್ ಸರಕಾರ ಮೊದಲು ನಿರಾಕರಿಸಿತು. ಆದರೆ, ಉಗ್ರಪಂಥಿಗಳನ್ನೂ ಕ್ರಾಂತಿಕಾರರನ್ನೂ ಸೆರೆಹಿಡಿದು ಶಿಕ್ಷಿಸಿದ ಮೇಲೂ ಪ್ರಕ್ಷುಬ್ಧ ಪರಿಸ್ಥಿತಿ ಮುಂದುವರಿದಾಗ ರಾಜಕೀಯ ಸುಧಾರಣೆ ಮಾಡಲು ನಿರ್ಧರಿಸಿತು. ಪರಿಣಾಮ 1909ರ ಮಾರ್ಲೆ ಮಿಂಟೋ ಸುಧಾರಣೆ. ಇದರಿಂದ ಆಡಳಿತದಲ್ಲಿ ಭಾರತೀಯರಿಗೆ ಹೆಚ್ಚಿನ ಸ್ಥಾನ ದೊರೆಯಲಿಲ್ಲ; ಅಷ್ಟೇ ಅಲ್ಲದೆ ಇವರಲ್ಲಿ ಹಿಂದು-ಮುಸಲ್ಮಾನರ ಐಕ್ಯತೆಗೆ ಭಂಗತರುವ ಅಂಶಗಳೂ ಸೇರಿಕೊಂಡಿದ್ದುವು. ಆದ್ದರಿಂದ ಭಾರತೀಯರ ಅಸಮಾಧಾನ ಇನ್ನಷ್ಟು ಬೆಳೆಯಿತು. ತೀವ್ರವಾದ ಚಳುವಳಿಗಳೂ ನಡೆದುವು.

ಇತ್ತ ಯೂರೊಪಿನಲ್ಲಿ ಮಹಾಯುದ್ಧದ ಕಾರ್ಮೋಡಗಳು ಕೂಡುತ್ತಿದ್ದುದರಿಂದ ಭಾರತದಲ್ಲಿ ಶಾಂತ ಪರಿಸ್ಥಿತಿ ಏರ್ಪಡುವುದೂ ತಮ್ಮ ಯುದ್ಧೋದ್ಯಮಕ್ಕೆ ಭಾರತೀಯರ ಸಹಕಾರವನ್ನು ಪಡೆಯುವುದೂ ಬ್ರಿಟಿಷರಿಗೆ ಅನಿವಾರ್ಯವಾಯಿತು. ಈ ಕಾರ್ಯಸಾಧನೆಗಾಗಿ ಅವರು ಭಾರತೀಯರಿಗೆ ಸಮಾಧಾನವನ್ನು ತರುವಂಥ ಎರಡು ಕಾರ್ಯಗಳನ್ನು ಮಾಡಿದರು: 1911ನೆಯ ಡಿಸೆಂಬರ್‌ನಲ್ಲಿ ನಡೆದ ದೆಹಲಿ ದರ್ಬಾರಿನಲ್ಲಿ ಬಂಗಾಳದ ವಿಭಜನೆಯನ್ನು ರದ್ದುಮಾಡಿರುವುದಾಗಿಯೂ ಭಾರತದ ರಾಜಧಾನಿಯನ್ನು ಕಲ್ಕತ್ತೆಯಿಂದ ದೆಹಲಿಗೆ ಬದಲಾಯಿಸುವುದಾಗಿಯೂ ಘೋಷಿಸಿದರು. ಇವಿಷ್ಟರಿಂದ ಭಾರತದ ಸ್ವಾತಂತ್ರ್ಯ ಹೋರಾಟಗಾರರಿಗೆ ಅಷ್ಟೇನೂ ಸಂತೋಷವಾಗಲಿಲ್ಲವಾದರೂ ಜನರ ಒತ್ತಾಯದ ಬೇಡಿಕೆಗಳಿಗೆ ಮನ್ನಣೆಕೊಡುವುದರ ಅವಶ್ಯತೆಯ ಬಗೆಗೆ ಸರಕಾರಕ್ಕೆ ಅರಿವಾಯಿತೆಂಬ ಸಮಾಧಾನವುಂಟಾಯಿತು.

1914ರಲ್ಲಿ ಮೊದಲನೆಯ ಮಹಾಯುದ್ಧ ಆರಂಭವಾದ ಮೇಲೆ ಬ್ರಿಟಿಷ್ ಸರಕಾರ ಭಾರತದ ಜನಶಕ್ತಿ, ಧನಶಕ್ತಿಗಳನ್ನು ಚೆನ್ನಾಗಿ ಉಪಯೋಗಕ್ಕೆ ತಂದುಕೊಂಡು ವಿಜಯಿಯಾಯಿತು.

ಮೊದಲನೆಯ ಮಹಾಯುದ್ಧಾನಂತರ 1919ರಲ್ಲಿ ಮಾಂಟೆಗೂ–ಚೆಲ್ಮ್ಸ್‌ಫರ್ಡ್ ರಾಜಕೀಯ ಸುಧಾರಣೆಗಳು ರೂಪುಗೊಂಡುವು. ಇವುಗಳಿಂದಾಗಿ ಪ್ರಾಂತೀಯ ಮತ್ತು ಕೇಂದ್ರ ಶಾಸನಸಭೆಗಳಲ್ಲಿ ಚುನಾಯಿತ ಸದಸ್ಯರ ಸಂಖ್ಯೆ ಹೆಚ್ಚಾಯಿತು. ಪ್ರಾಂತಗಳಲ್ಲಿ ಶಾಸನ ಸಭೆಗಳಿಗೆ ಜವಾಬ್ದಾರರಾದ ಮಂತ್ರಿಗಳು ನಿಯಮಿಸಲ್ಪಟ್ಟರೂ ಅವರ ಅಧಿಕಾರವ್ಯಾಪ್ತಿ ಕೆಲವು ಆಡಳಿತ ಶಾಖೆಗಳ ಮೇಲೆ ಮಾತ್ರ ಇತ್ತು. ಗವರ್ನರ್‌ಗಳು, ಗವರ್ನರ್ ಜನರಲ್‌ಗಳ ಅಧಿಕಾರ ನಿರಂಕುಶವಾಗಿಯೇ ಇತ್ತು. ಈ ಸುಧಾರಣೆಯನ್ನು ಅನೇಕರು ಒಪ್ಪಿದರಾದರೂ ಆ ವೇಳೆಗಾಗಲೇ ಕಾಂಗ್ರೆಸ್ಸಿನ ನಾಯಕಪಂಕ್ತಿಗೇರಿದ್ದ ಗಾಂಧೀಜೀ ಇದಕ್ಕೆ ಸಮ್ಮತಿಸದೆ, 1920ರಲ್ಲಿ ತಮ್ಮ ಅಸಹಕಾರ ಆಂದೋಲನಕ್ಕೆ ಕಾಂಗ್ರೆಸ್ಸಿನ ಸಮ್ಮತಿಯನ್ನು

ಜಲಿಯನ್‌ವಾಲಾ ಬಾಗ್ ಹತ್ಯಾಕಾಂಡ

ಗಳಿಸಿಕೊಂಡರು. 1919 ಏಪ್ರಿಲ್ 13ನೆಯ ತಾರೀಖು ಪಂಜಾಬಿನ ಜಲಿಯನ್‌ವಾಲಾ ಬಾಗ್‌ನಲ್ಲಿ ನಡೆದ ಅಮಾನುಷ ಹತ್ಯಾಕಾಂಡ ಈ ನಿರ್ಧಾರಕ್ಕೆ ಪ್ರೇರಕವಾಯಿತೆನ್ನಬಹುದು. ಇಲ್ಲಿಂದ ಮುಂದೆ ಬ್ರಿಟಿಷ್ ಸಾಮ್ರಾಜ್ಯದೊಳಗಿದ್ದುಕೊಂಡು ಅಥವಾ ಅವಶ್ಯವಾದಲ್ಲಿ ಅದರಿಂದ ಹೊರಬಿದ್ದಾದರೂ ಭಾರತದ ಸ್ವಾತಂತ್ರ್ಯವನ್ನು ಸಾಧಿಸಬೇಕೆಂಬುದು ಕಾಂಗ್ರೆಸ್ಸಿನ ಧ್ಯೇಯವಾಯಿತು. ಇದನ್ನು ಸಾಧಿಸುವ ದೃಷ್ಟಿಯಿಂದ ಗಾಂಧೀಜೀ ಹಲವಾರು ಅಹಿಂಸಾತ್ಮಕ ಚಳುವಳಿಗಳನ್ನು ನಡೆಸಿದರು. ಜನರ ಸ್ವಾತಂತ್ರ್ಯಾಕಾಂಕ್ಷೆಯನ್ನು ಉಜ್ವಲಗೊಳಿಸಿದರು. ಸ್ವಾತಂತ್ರ್ಯ ಚಳುವಳಿಯಲ್ಲಿ ಜನರು ದೊಡ್ಡ ಪ್ರಮಾಣದಲ್ಲಿ ಭಾಗವಹಿಸುವಂತೆ ಮಾಡಿದರು.

ಈ ಚಳುವಳಿಯು ಬಿತ್ತರ ಬಲವಾದಾಗಲೆಲ್ಲ ಬ್ರಿಟಿಷ್ ಸರಕಾರ ದಬ್ಬಾಳಿಕೆಯಿಂದ ಅದನ್ನು ಬಗ್ಗುಬಡಿಯಲು ಪ್ರಯತ್ನಿಸುತ್ತಿತ್ತು. ಪರಿಸ್ಥಿತಿ ಕೈಮೀರಿಹೋಗುವುದೆಂದೆನಿಸಿದಾಗ ಅಷ್ಟಿಷ್ಟು ರಾಜಕೀಯ ಸುಧಾರಣೆಗಳನ್ನು ಆಚರಣೆಗೆ ತರಲು ಕಾರ್ಯಕ್ರಮಗಳನ್ನು ಕೈಗೊಳ್ಳುತ್ತಿತ್ತು. 1928ರಲ್ಲಿ ಭಾರತಕ್ಕೆ ಬಂದ ಸೈಮನ್ ಕಮಿಷನ್. 1930ರ ಕೊನೆಯಲ್ಲಿ ಆರಂಭವಾದ ದುಂಡುಮೇಜಿನ ಪರಿಷತ್ತು. 1935 ಇಂಡಿಯಾ ಕಾನೂನು ಇವೆಲ್ಲ ಈ ಕಾರ್ಯಾಚರಣೆಯ ಫಲಗಳು. ಈ ಕಾನೂನು ಭಾರತಕ್ಕೆ ಸ್ವಾತಂತ್ರ್ಯವನ್ನು ಕೊಡಲಿಲ್ಲ. ಪ್ರಾಂತಗಳಿಗೆ ಮಾತ್ರ ಸ್ವಯಂ ಆಡಳಿತಾಧಿಕಾರ ಸಿಕ್ಕಿತು. ಬ್ರಿಟಿಷರ ಆಡಳಿತವಲ್ಲಿದ್ದ ಪ್ರಾಂತಗಳನ್ನೂ ದೇಶೀಯ ಸಂಸ್ಥಾನಗಳನ್ನೂ ಸೇರಿಸಿ ಕೇಂದ್ರೀಯವಾಗಿ ಒಂದು ಸಂಯುಕ್ತ ವ್ಯವಸ್ಥೆಯನ್ನು ಸ್ಥಾಪಿಸಬೇಕೆಂಬ ಉದ್ದೇಶವಿದ್ದಿತಾದರೂ ಅದು ಕಾರ್ಯಗತವಾಗಲಿಲ್ಲ. ಪ್ರಾಂತೀಯ ಸ್ವಯಂ ಆಡಳಿತ ವ್ಯವಸ್ಥೆ 1937ರ ಚುನಾವಣೆಗಳ ಅನಂತರ ಅಸ್ತಿತ್ವಕ್ಕೆ ಬಂತು. ಗವರ್ನರ್‌ಗಳ ಆಡಳಿತಕ್ಕೊಳಪಟ್ಟಿದ್ದ ಹನ್ನೊಂದು ಪ್ರಾಂತಗಳಲ್ಲಿ ಏಳರಲ್ಲೂ ಚೀಫ್ ಕಮಿಷನರ ಆಡಳಿತಕ್ಕೊಳಪಟ್ಟಿದ್ದ ಆರು ಪ್ರಾಂತಗಳಲ್ಲಿ ಒಂದಾದ ಸಿಂಧ್‌ನಲ್ಲೂ ಕಾಂಗ್ರೆಸ್ ಪಕ್ಷ ಬಹುಮತವನ್ನು ಪಡೆದು ಜನಪ್ರಿಯ ಸರಕಾರಗಳನ್ನು ಸ್ಥಾಪಿಸಿತು.

ಈ ಸ್ಥಿತಿಯಲ್ಲಿ ನಡೆದ ಎರಡು ಘಟನೆಗಳು ಗಮನಾರ್ಹವಾದುವು. ಮಹಮ್ಮದಾಲಿ ಜಿನ್ನಾ ಅವರ ನೇತೃತ್ವದಲ್ಲಿ ಬಲಗೊಳ್ಳುತ್ತಿದ್ದ ಮುಸ್ಲಿಂ ಲೀಗ್. ಕಾಂಗ್ರೆಸ್ ಬಹುಮತವಿದ್ದ ಪ್ರಾಂತ್ಯಗಳಲ್ಲಿ ಕೂಡ ಕಾಂಗ್ರೆಸ್ ಒಂದೇ ಮಂತ್ರಿಮಂಡಲವನ್ನು ರಚಿಸುವುದರ ಬದಲು ಮುಸ್ಲಿಂ ಲೀಗಿನ ಪ್ರತಿನಿಧಿಗಳನ್ನೂ ಉಳ್ಳ ಸಮ್ಮಿಶ್ರ ಸರಕಾರಗಳನ್ನು ಸ್ಥಾಪಿಸಬೇಕೆಂದು ಸೂಚಿಸಿತು. ಕಾಂಗ್ರೆಸ್ ಈ ಸಲಹೆಗೆ ಒಪ್ಪಲಿಲ್ಲ. ಕಾಂಗ್ರೆಸ್ ಸರಕಾರಗಳಿಂದ ಮುಸ್ಲಿಮರ ಹಿತರಕ್ಷಣೆ ಆಗುವುದಿಲ್ಲವೆಂಬ ಕೂಗೆಬ್ಬಿಸಿ ಮಹಮ್ಮದೀಯರ ಸಂಘಟನೆ ಮಾಡಲು ಲೀಗ್ ಪ್ರಯತ್ನಿಸಿತು. ಮುಂದೆ ಭಾರತ ಇಬ್ಭಾಗವಾಗಲು ಇದು ಬುನಾದಿ.

ಪ್ರಾಂತಗಳಲ್ಲಿ ಕಾಂಗ್ರೆಸ್ ಸರಕಾರಗಳು ಯಶಸ್ವಿಯಾಗಿಯೇ ಕೆಲಸ ಮಾಡಿದುವು. ಕಾಂಗ್ರೆಸ್ಸಿನ ಜನಪ್ರಿಯತೆಯೂ ಹೆಚ್ಚಿತು. ಆದರೆ ಗಾಂಧೀಜಿಯೊಡನೆ ಭಿನ್ನಾಭಿಪ್ರಾಯ ಬೆಳೆಸಿಕೊಂಡಿದ್ದ ಸುಭಾಷಚಂದ್ರ ಬೋಸರು ಕಾಂಗ್ರೆಸ್ಸಿನಲ್ಲಿ ತಮ್ಮದೇ ಆದ ಒಂದು ಪಕ್ಷವನ್ನು –ಫಾರ್ವರ್ಡ್ ಬ್ಲಾಕ್– ಕಟ್ಟಿದರು.



1939ರಲ್ಲಿ ಎರಡನೆಯ ಮಹಾಯುದ್ಧ ಆರಂಭವಾಗಿ, ಬ್ರಿಟಿಷ್ ಸರಕಾರ, ಭಾರತೀಯರ ಸಮ್ಮತಿಯಿಲ್ಲದೆ ಅದನ್ನು ಯುದ್ಧದಲ್ಲಿ ತೊಡಗಿಸಿದಾಗ, ಕಾಂಗ್ರೆಸ್ ಸರಕಾರಗಳು ಈ ನೀತಿಯನ್ನು ವಿರೋಧಿಸಿ ಆ ವರ್ಷವೇ ರಾಜೀನಾಮೆ ಕೊಟ್ಟುವು.

ಬ್ರಿಟಿಷರ ಮೇಲೆ ಯುದ್ಧದಲ್ಲಿ ತೊಡಗಿದ್ದ ರಾಷ್ಟ್ರಗಳ ನೆರವು ಪಡೆದು ಭಾರತವನ್ನು ಸ್ವತಂತ್ರಗೊಳಿಸಬೇಕೆಂಬ ದೃಷ್ಟಿಯನ್ನು ಬೆಳೆಸಿಕೊಂಡಿದ್ದ ಸುಭಾಷಚಂದ್ರ ಬೋಸರು, ತಮ್ಮನ್ನು ಬಂಧನದಲ್ಲಿಟ್ಟಿದ್ದ ಬ್ರಿಟಿಷರ ಹಿಡಿತದಿಂದ ತಪ್ಪಿಸಿಕೊಂಡು 1941ರಲ್ಲಿ ಜರ್ಮನಿಯನ್ನು ಸೇರಿದರು. ಭಾರತ ವಿಮೋಚನೆಗೆ ಪರದೇಶಗಳಲ್ಲಿ 'ಆಜಾದ್ ಹಿಂದ್'



ಸೇನೆ ಕಟ್ಟುವ ಪ್ರಯತ್ನ ನಡೆಸಿದರು. ಈ ಸೇನೆ ಭಾರತದ ಈಶಾನ್ಯಭಾಗದ ಗಡಿಯ ಮೇಲೆ ದಾಳಿ ನಡೆಸಿತಾದರೂ ಈ ದಂಡಯಾತ್ರೆ ಫಲಿಸಲಿಲ್ಲ.

ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ರಂಗಗಳಲ್ಲಿ ಬಿಕ್ಕಟ್ಟಿಗೆ ಸಿಕ್ಕಿಕೊಂಡಾಗ, ಭಾರತದಲ್ಲಿ ರಾಜಕೀಯ ಸುಧಾರಣೆಯ ಮಾತನ್ನೆತ್ತಿ ಭಾರತೀಯರನ್ನು ಸಮಾಧಾನಗೊಳಿಸುವುದು ಬ್ರಿಟಿಷ್ ಸರಕಾರದ ನೀತಿಯಾಗಿತ್ತಷ್ಟೆ. ಎರಡನೆಯ ಮಹಾಯುದ್ಧದ ಕಾಲದಲ್ಲಿ ಕೂಡ ಅದು ಇದೇ ನೀತಿಯನ್ನು ಅನುಸರಿಸಿತು. ಸ್ವಾತಂತ್ರ್ಯ ಚಳುವಳಿಯನ್ನು ಹತ್ತಿಕ್ಕುವ ಕಾರ್ಯವೂ ಜೊತೆಜೊತೆಯಲ್ಲಿಯೇ ನಡೆಯುತ್ತಿತ್ತು. ಹಾಗೆಯೇ ಹಿಂದು-ಮುಸಲ್ಮಾನರ ನಡುವೆ ಭಿನ್ನತೆಯನ್ನು ಬಲಪಡಿಸುವ ಕಾರ್ಯವೂ ಸಾಗುತ್ತಿತ್ತು. ಜಿನ್ನಾ ತಮ್ಮ 'ಎರಡು ರಾಷ್ಟ್ರ' ಗಳ ಸಿದ್ಧಾಂತವನ್ನು ಘೋಷಿಸಿದರು.

ಈ ಎಲ್ಲ ಪರಿಸ್ಥಿತಿಗಳ ಪರಿಣಾಮವಾಗಿ 1940ರ ಆಗಸ್ಟ್‌ನಲ್ಲಿ ವೈಸ್‌ರಾಯ್ ಮಾಡಿದ ಸುಧಾರಣೆಯ ಘೋಷಣೆ ಕಾಂಗ್ರೆಸ್ಸಿಗೆ ಒಪ್ಪಿತವಾಗಲಿಲ್ಲ. 1942ರ ಕ್ರಿಪ್ಸ್ ಸಂಧಾನವೂ ವಿಫಲವಾಯಿತು. ಕೆಲವು ತಿಂಗಳ ಅನಂತರ ಗಾಂಧೀಜೀ 'ಭಾರತಬಿಟ್ಟು ತೊಲಗಿರಿ' ಚಳುವಳಿ ಆರಂಭಿಸಿದರು. ಕಾಂಗ್ರೆಸ್ ಮುಖಂಡರನ್ನು ಮಿಂಚಿನ ವೇಗದಲ್ಲಿ ಸೆರೆಹಿಡಿಯಲಾಯಿತು. ಸರಕಾರ ಸ್ವಾತಂತ್ರ್ಯ ಚಳುವಳಿಗಾರರ ಮೇಲೆ ಪ್ರಬಲವಾದ ದಬ್ಬಾಳಿಕೆಯನ್ನು ನಡೆಸಿತು.

1945ರಲ್ಲಿ ಬ್ರಿಟಿಷರು ಹಿಟ್ಲರನನ್ನು ಸೋಲಿಸಿದ ಮೇಲೆ, ಹಿಂದು ಮತ್ತು ಮುಸಲ್ಮಾನರಿಗೆ ಸಮಾನ ಸಂಖ್ಯೆಯ ಪ್ರಾತಿನಿಧ್ಯವುಳ್ಳ ಕೇಂದ್ರ ಮಂತ್ರಿಮಂಡಲವನ್ನು ರಚಿಸುವ ಸೂಚನೆ ವೈಸ್‌ರಾಯ್ ವೇವೆಲ್‌ರಿಂದ ಬಂತು. ಆದರೆ ಇದು ಕಾರ್ಯಗತವಾಗಲಿಲ್ಲ.

ಮಹಾಯುದ್ಧಾನಂತರ 1945 ಬ್ರಿಟನಿನಲ್ಲಿ ಅಧಿಕಾರಕ್ಕೆ ಬಂದ ಲೇಬರ್ ಸರಕಾರ ಭಾರತದ ರಾಜಕೀಯದಲ್ಲಿ ಉಂಟಾಗಿದ್ದ ಬಿಕ್ಕಟ್ಟನ್ನು ಪರಿಹರಿಸಲು 1946ರಲ್ಲಿ ಮಹಾಚುನಾವಣೆಗಳನ್ನು ನಡೆಸಿತು. ಸಾರ್ವಜನಿಕ ಚುನಾವಣಾ ಕ್ಷೇತ್ರಗಳಿಂದ ಕಾಂಗ್ರೆಸ್ ಪ್ರತಿನಿಧಿಗಳೂ ಮುಸಲ್ಮಾನ ಮೀಸಲು ಕ್ಷೇತ್ರಗಳಿಂದ ಮುಸ್ಲಿಂ ಪ್ರತಿನಿಧಿಗಳೂ ಬಹುಸಂಖ್ಯಾತರಾಗಿ ಆರಿಸಿಬಂದರು. ಬ್ರಿಟಿಷ್ ಮಂತ್ರಿಮಂಡಲದ ನಿಯೋಗ ಭಾರತಕ್ಕೆ ಬಂದದ್ದು ಈ ಹಿನ್ನೆಲೆಯಲ್ಲಿ. ಈ ಹೊತ್ತಿಗಾಗಲೇ ಭಾರತಕ್ಕೆ ಸ್ವಾತಂತ್ರ್ಯ ಕೊಡಬೇಕೆಂದು ಬ್ರಿಟಿಷ್ ಸರಕಾರ ನಿರ್ಧರಿಸಿತ್ತು. ಭಾರತದ ಆಡಳಿತವನ್ನು ಭಾರತೀಯರಿಗೆ ವಹಿಸುವ ವಿಧಾನವನ್ನು ನಿರ್ಧರಿಸುವ ಕೆಲಸ ನಿಯೋಗದ್ದಾಗಿತ್ತು. ಈ ವಿಚಾರದಲ್ಲಿ ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ್‌ಗಳ ನಡುವೆ ಏಕಾಭಿಪ್ರಾಯ ಏರ್ಪಡಲಿಲ್ಲವಾಗಿ ನಿಯೋಗ ತನ್ನದೇ ಆದ ಯೋಜನೆಯನ್ನು ಸೂಚಿಸಿತು. ಇಡೀ ಭಾರತ ಒಂದು ಸಂಯುಕ್ತರಾಷ್ಟ್ರವಾಗಿರಬೇಕು. ಅದರ ರಾಜ್ಯಾಂಗವನ್ನು ನಿರ್ಧರಿಸಲು ಒಂದು ರಾಜ್ಯಾಂಗ ರಚನಾಸಭೆ ರೂಪುಗೊಳ್ಳಬೇಕು. ಏತನ್ಮಧ್ಯೆ ಭಾರತೀಯ ಪ್ರತಿನಿಧಿಗಳನ್ನೊಳಗೊಂಡ ಒಂದು ಕೇಂದ್ರಾಡಳಿತ ಕಾರ್ಯಕಾರಿ ಮಂಡಲ ಏರ್ಪಡಬೇಕು ಎಂಬುದು ಈ ಸೂಚನೆಗಳ ತಿರುಳು.

ಮುಸ್ಲಿಂ ಲೀಗ್ ಈ ಸೂಚನೆಗಳನ್ನೊಪ್ಪಿತಾದರೂ, ಪಾಕಿಸ್ತಾನ ರಚನೆಯೇ ತನ್ನ ಅಂತಿಮ ಗುರಿ ಎಂದಿತು. ಕಾಂಗ್ರೆಸ್ ತಾನು ರಾಜ್ಯಾಂಗ ರಚನೆಯಲ್ಲಿ ಭಾಗವಹಿಸುವುದಾದರೂ, ಕೇಂದ್ರ ಕಾರ್ಯಕಾರಿ ಮಂಡಲವನ್ನು ಸೇರುವುದಿಲ್ಲವೆಂದಿತು. ಕಾಂಗ್ರೆಸ್ಸನ್ನು ಬಿಟ್ಟು ಮಂಡಲವನ್ನು ರಚಿಸುವಂತೆ ಲೀಗ್ ವೈಸ್‌ರಾಯರನ್ನು ಒತ್ತಾಯಪಡಿಸಿ ವಿಫಲವಾದಾಗ, ಅದು ನಿಯೋಗದ ಸೂಚನೆಗಳಿಗೆ ತಾನು ಕೊಟ್ಟಿದ್ದ ಒಪ್ಪಿಗೆಯನ್ನು ಹಿಂದಕ್ಕೆ ತೆಗೆದುಕೊಂಡಿತು. ವೈಸ್‌ರಾಯ್ 1946ರಲ್ಲಿ ಮುಸ್ಲಿಂ ಲೀಗಿನ ಪ್ರತಿನಿಧಿಗಳಿಲ್ಲದ ಕಾರ್ಯಕಾರಿ ಮಂಡಲವನ್ನು ರಚಿಸುವ ನಿರ್ಧಾರ ಮಾಡಿದಾಗ ಲೀಗ್ ಆಗಸ್ಟ್‌ನಲ್ಲಿ ತನ್ನ 'ನೇರಕಾರ್ಯಕ್ರಮ' ವನ್ನು ಕೈಗೊಂಡಿತು. ಉದ್ರಿಕ್ತ ಮಹ್ಮದೀಯರು ಬಂಗಾಳದಲ್ಲಿ ಹಿಂದುಗಳನ್ನು ಅಮಾನುಷ ರೀತಿಯಲ್ಲಿ ಕೊಲ್ಲಲಾರಂಭಿಸಿದರು. ಇದಕ್ಕೆ ಪ್ರತಿಕ್ರಿಯೆ ಎಂಬಂತೆ ಬಿಹಾರದಲ್ಲಿ ಮುಸ್ಲಿಮರ ಕೊಲೆ ನಡೆಯಿತು. ಆ ಹೊತ್ತಿಗೆ ವೈಸ್‌ರಾಯ್ ಕಾರ್ಯಕಾರಿ ಮಂಡಳಿಯ ಸದಸ್ಯರಾಗಿದ್ದ ಜವಾಹರಲಾಲ ನೆಹರೂ ಬಿಹಾರಿಗೆ ಹೋಗಿ ಪರಿಸ್ಥಿತಿಯನ್ನು ಶಾಂತಗೊಳಿಸಿದರು. ಆದರೂ ದೇಶದಾದ್ಯಂತ



ಪ್ರಕ್ಷುಬ್ಧ ಸನ್ನಿವೇಶ ಏರ್ಪಟ್ಟಿತು. ಈ ಪರಿಸ್ಥಿತಿಯಲ್ಲಿ ಬ್ರಿಟಿಷ್ ಸರಕಾರ 1947 ಫೆಬ್ರುವರಿ 20ನೆಯ ತಾರೀಖು ಒಂದು ಘೋಷಣೆಯನ್ನು ಹೊರಡಿಸಿ 1948ರ ಜೂನ್ ತಿಂಗಳೊಳಗಾಗಿ ಭಾರತದ ಮೇಲೆ ತಮ್ಮ ಅಧಿಕಾರವನ್ನು ಬಿಟ್ಟು ಕೊಡುವುದಾಗಿ ಹೇಳಿತು. ಲಾರ್ಡ್ ಮೌಂಟ್‌ಬ್ಯಾಟನ್‌ರವರನ್ನು ವೈಸ್‌ರಾಯರನ್ನಾಗಿ ನಿಯಮಿಸಿತು. ಮುಸ್ಲಿಂ ಲೀಗ್ ಪಂಜಾಬು, ವಾಯುವ್ಯ ಸರಹದ್ದು ಪ್ರಾಂತಗಳಲ್ಲಿ ತನ್ನ 'ನೇರ ಕಾರ್ಯಕ್ರಮ' ವನ್ನು ಮುಂದುವರಿಸಿತು. ಕೊಲೆ, ಸುಲಿಗೆಗಳು ನಿಲುಗಡೆಯಿಲ್ಲದೆ ನಡೆದುವು.

ರಾಷ್ಟ್ರವಿಭಜನೆ ; ಸ್ವಾತಂತ್ರ್ಯ ಸಾಧನೆ

ಈ ಪರಿಸ್ಥಿತಿಯಲ್ಲಿ ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ್ ಒಂದಾಗಿ ಸೇರಿ ಸ್ವತಂತ್ರ ಭಾರತವನ್ನು ಆಳುವ ಸಂಭವವೇ ಕಾಣಲಿಲ್ಲ. ಲೀಗ್, ಪಾಕಿಸ್ತಾನದ ಬೇಡಿಕೆಯನ್ನೇ ಬಲಪಡಿಸಿತು. ಅಖಂಡ ಸ್ವತಂತ್ರ ಭಾರತವನ್ನು ಅಪೇಕ್ಷಿಸುತ್ತಿದ್ದ ರಾಷ್ಟ್ರೀಯತಾವಾದಿಗಳೂ ಭಾರತ ಇಬ್ಭಾಗವಾಗಲು ಒಪ್ಪಬೇಕಾಯಿತು. ಪಂಜಾಬು ಮತ್ತು ಬಂಗಾಳ ಪ್ರಾಂತ್ಯಗಳನ್ನು ಪೂರ್ಣವಾಗಿ ಒಳಗೊಂಡಂತೆ ಭಾರತದಲ್ಲಿ ಮುಸ್ಲಿಂ ಬಾಹುಳ್ಯವುಳ್ಳ ಎಲ್ಲ ಪ್ರದೇಶಗಳೂ ಪಾಕಿಸ್ತಾನಕ್ಕೆ ಸೇರಬೇಕು: ಪೂರ್ವ ಪಶ್ಚಿಮ ಪಾಕಿಸ್ತಾನಗಳ ನಡುವೆ ನೇರ ಸಂಪರ್ಕ ಸಾಧನೆಗಾಗಿ ಭಾರತದ ನಡುವೆ ಹಾದುಹೋಗುವ ಮಾರ್ಗಪ್ರದೇಶವೂ ತಮಗೆ ದೊರೆಯಬೇಕು ಮುಂತಾಗಿ ಜಿನ್ನಾ ಮತ್ತು ಅವರ ಸಂಗಡಿಗರು ರೂಪಿಸಿಕೊಂಡಿದ್ದ ಪಾಕಿಸ್ತಾನದ ಕಲ್ಪನೆ ಮಾತ್ರ ಭಗ್ನವಾಯಿತು. ಮಹಮ್ಮದೀಯರ ಬಾಹುಳ್ಯವಿದ್ದ ಸಿಂಧ್, ಬಲೂಚಿಸ್ತಾನ, ವಾಯುವ್ಯ ಸರಹದ್ದು ಪ್ರದೇಶ, ಪಂಜಾಬಿನ ಪಶ್ಚಿಮ ಭಾಗ, ಬಂಗಾಳದ ಪೂರ್ವಭಾಗಗಳನ್ನು ಮಾತ್ರ ಸೇರಿಸಿ ಪಾಕಿಸ್ತಾನವನ್ನು ರೂಪಿಸಲಾಯಿತು. ಭಾರತ ಇಬ್ಭಾಗವಾಗುವುದು ಬೇಡವೆಂದು ಗಾಂಧೀಜೀ ಎಷ್ಟು ಕೇಳಿಕೊಂಡರೂ ಜಿನ್ನಾ ಆ ಬೇಡಿಕೆಯನ್ನು ನಿರಾಕರಿಸಿ ಪಾಕಿಸ್ತಾನವನ್ನು ಕಟ್ಟಿದರು. ಆದರೆ ಅದರ ಪೂರ್ವ ಪಶ್ಚಿಮ ಭಾಗಗಳ ಐಕ್ಯ ಬಹುಕಾಲ ಉಳಿದೀತೆಂಬ ಬಗೆಗೆ ಅವರ ಮನಸ್ಸಿನಲ್ಲಿಯೇ ಸಂದೇಹವಿತ್ತು. ಇದೇನೇ ಇರಲಿ. ಅಖಂಡ ಭಾರತವನ್ನು ಭಾರತ, ಪಾಕಿಸ್ತಾನ ಎಂದು ಇಬ್ಭಾಗ ಮಾಡಿ ಎರಡು ಸ್ವತಂತ್ರರಾಷ್ಟ್ರಗಳನ್ನಾಗಿ ರಚಿಸುವ ಮಸೂದೆ 1947 ಜೂಲೈ ಒಂದನೆಯ ತಾರೀಖು ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ಅಂಗೀಕೃತವಾಯಿತು. ಭಾರತ ರಾಜ್ಯಾಂಗ ಸಭೆ ಅದೇ ವರ್ಷ ಜೂಲೈ 22ರಂದು ರಾಷ್ಟ್ರೀಯ ಧ್ವಜವನ್ನು ಅಂಗೀಕರಿಸಿತು: ಆಗಸ್ಟ್ 14–15ರ ಮಧ್ಯರಾತ್ರಿಯಲ್ಲಿ ಭಾರತ ಸ್ವತಂತ್ರವಾಯಿತು. ಜವಾಹರಲಾಲ ನೆಹರೂ ಅವರು ಸ್ವತಂತ್ರ ಭಾರತದ ಪ್ರಥಮ ಪ್ರಧಾನಿಯಾದರು.



ಪ್ರಧಾನಮಂತ್ರಿಯಾಗಿ ಜವಾಹರಲಾಲರಿಂದ ಪ್ರತಿಜ್ಞಾ ಸ್ವೀಕಾರ

ಒಡನೆಯೇ ಭಾರತ ಅನೇಕ ಸಮಸ್ಯೆಗಳನ್ನು ಇದಿರಿಸಬೇಕಾಯಿತು. ಪಾಕಿಸ್ತಾನ ಪ್ರದೇಶದಲ್ಲಿ ಹಿಂಸೆ, ದೌರ್ಜನ್ಯಗಳಿಗೆ ಒಳಗಾದ ಲಕ್ಷಾಂತರ ಮಂದಿ ಹಿಂದುಗಳು ಭಾರತಕ್ಕೆ ಓಡಿಬಂದರು. ಇವರ ದೀನ ಪರಿಸ್ಥಿತಿ ಭಾರತದ ಹಿಂದು ಜನವರ್ಗದ ಉದ್ರೇಕಕ್ಕೆ ಕಾರಣವಾಯಿತು. ಕ್ಷುಬ್ಧ ಪರಿಸ್ಥಿತಿಗೆ ಎಡೆಕೊಟ್ಟಿತು. ಇದನ್ನು ಶಾಂತಗೊಳಿಸುವುದು ದುಸ್ತರವೇ ಆಯಿತು. ಈ ಹಿನ್ನೆಲೆಯಲ್ಲಿ 1948 ಜನವರಿ 30ರಂದು ದೆಹಲಿಯಲ್ಲಿ ಭಾರತ ಸ್ವಾತಂತ್ರ್ಯ ಶಿಲ್ಪಿ ಗಾಂಧೀಜಿಯ ಕೊಲೆಯಾಯಿತು. ಇಡೀ ಭಾರತ ಶೋಕದಲ್ಲಿ ಮುಳುಗಿತು.

1946ರಲ್ಲಿ ಭಾರತಕ್ಕೆ ಬಂದಿದ್ದ ಮಂತ್ರಿಮಂಡಲದ ನಿಯೋಗ, ಸ್ವತಂತ್ರ ಭಾರತದ ಸಂವಿಧಾನವನ್ನು ರೂಪಿಸಲು ಒಂದು ರಾಜ್ಯಾಂಗ ರಚನಾ ಸಭೆ ಏರ್ಪಡಿಸಬೇಕೆಂದು ಸೂಚಿಸಿತ್ತು. ಈ ಸೂಚನೆಯಂತೆ ಅದೇ ವರ್ಷ ಡಿಸೆಂಬರ್ 9ನೆಯ ತಾರೀಖು, ರಾಜ್ಯಾಂಗ ರಚನಾ ಸಭೆ ಸಮಾವೇಶಗೊಂಡಿತು. 1949 ನವೆಂಬರ್ 26ರಂದು ಸಂವಿಧಾನ ಸಿದ್ಧವಾಯಿತು. 1950 ಜನವರಿ 26ರಂದು ಅದು ಆಚರಣೆಗೆ ಬಂದು ಭಾರತ ಸಾರ್ವಭೌಮ ಗಣರಾಜ್ಯವಾಯಿತು. ರಾಜೇಂದ್ರಪ್ರಸಾದರು ಈ ಗಣರಾಜ್ಯದ ಪ್ರಥಮ ಅಧ್ಯಕ್ಷರಾದರು.

ನಮ್ಮ ಸಂವಿಧಾನ ಆಚರಣೆಗೆ ಬಂದ ಅನಂತರ ಆಗಿಂದಾಗ್ಗೆ ಅದಕ್ಕೆ ತಿದ್ದುಪಡಿಗಳು ಆದುವು: ಭಾಷಾವಾರು ಪ್ರಾಂತಗಳ ರಚನೆಯಾಯಿತು: ರಾಜಮಹಾರಾಜರುಗಳ ವಿಶೇಷ ಹಕ್ಕುಗಳನ್ನು ತೆಗೆದುಹಾಕಲಾಯಿತು.



ಬಾಪೂಜಿ ಜೊತೆ ವಲ್ಲಭಭಾಯಿ ಪಟೇಲ್

ಸಂಸ್ಥಾನಗಳ ಸೇರ್ಪಡೆ

ಭಾರತ ಸ್ವತಂತ್ರವಾಗುವುದಕ್ಕೆ ಮುಂಚೆ, ಅದರಲ್ಲಿ ನೇರವಾಗಿ ಬ್ರಿಟಿಷ್ ಆಡಳಿತಕ್ಕೆ ಸೇರಿದ ಪ್ರದೇಶಗಳೂ ದೇಶೀಯ ರಾಜರ ಆಡಳಿತಕ್ಕೆ ಸೇರಿದ್ದ ದೊಡ್ಡ, ಸಣ್ಣ, ಪುಟ್ಟ ಸಂಸ್ಥಾನಗಳೂ ಇದ್ದುವು. ಭಾರತ ಸ್ವತಂತ್ರವಾದಮೇಲೆ ಈ ಸಂಸ್ಥಾನಗಳ ಭವಿಷ್ಯವೇನು ಎಂಬ ಬಗೆಗೆ ಸ್ವಾತಂತ್ರ್ಯಪೂರ್ವದಲ್ಲಿಯೇ ಚರ್ಚೆ ಆರಂಭವಾಗಿತ್ತು. ಈ ಸಮಸ್ಯೆಯ ಪರಿಹಾರಕ್ಕಾಗಿ ಕೆಲವು ಸೂಚನೆಗಳೂ ಬಂದಿದ್ದುವು. ಇವನ್ನನುಸರಿಸಿ ನಡೆಸಿದ ಸಂಧಾನಗಳ ಫಲವಾಗಿ ಹೈದರಾಬಾದ್ ಸಂಸ್ಥಾನವನ್ನುಳಿದು ಉಳಿದೆಲ್ಲ ಸಂಸ್ಥಾನಗಳೂ ಸ್ವತಂತ್ರ ಭಾರತದ ಅಂಗಗಳಾಗಿರಲು ಒಪ್ಪಿದುವು. ಹೈದರಾಬಾದ್ ಮಾತ್ರ ತಾನು ಸ್ವತಂತ್ರ ರಾಷ್ಟ್ರವಾಗಿರಲು ಪ್ರಯತ್ನಪಟ್ಟಿತು; ಭಾರತದ ಒಟ್ಟು ಹಿತಕ್ಕೆ ವಿರುದ್ಧವಾದ ರೀತಿಯಲ್ಲಿ ವರ್ತಿಸಿತು. ಆಗ ಭಾರತ ಸರಕಾರ 'ಪೋಲೀಸ್ ಕಾರ್ಯಾಚರಣೆ' ನಡೆಸಿ ಭಾರತ ಒಕ್ಕೂಟದೊಡನೆ ಅದರ ಸೇರ್ಪಡೆಯನ್ನು ಸಾಧಿಸಿತು. ವಿವಿಧ ದೇಶೀಯ ಸಂಸ್ಥಾನಗಳನ್ನು ಭಾರತ ಒಕ್ಕೂಟದಲ್ಲಿ ಸೇರಿಸಿದ ಮಹಾಕಾರ್ಯದ ಶಿಲ್ಪಿ, ಸ್ವತಂತ್ರ ಭಾರತದ ಪ್ರಥಮ ಗೃಹಸಚಿವ ಸರದಾರ್ ವಲ್ಲಭಭಾಯಿ ಪಟೇಲರು.

ಸ್ವತಂತ್ರ ಭಾರತದ ಮೇಲೆ ದಾಳಿ

ಈ ಸಂದರ್ಭದಲ್ಲಿ ಜಮ್ಮು–ಕಾಶ್ಮೀರ ಸಂಸ್ಥಾನವನ್ನು ಕುರಿತು ಕೆಲವು ಮಾತುಗಳನ್ನು ಹೇಳಬೇಕಾಗಿದೆ. ಈ ಸಂಸ್ಥಾನ ಭಾರತ ಪಾಕಿಸ್ತಾನಗಳೆರಡರ ಗಡಿಗೂ ಅಂಟಿಕೊಂಡಿದ್ದ ಪ್ರದೇಶ. ಇದರ ರಾಜ ಹಿಂದು; ಪ್ರಜೆಗಳಲ್ಲಿ ಬಹುಮಂದಿ ಮಹಮ್ಮದೀಯರು. ಇದು ತನ್ನ ರಾಷ್ಟ್ರದಲ್ಲಿ ಸೇರ್ಪಡೆಯಾಗಬೇಕೆಂಬುದು ಪಾಕಿಸ್ತಾನದ ಅಪೇಕ್ಷೆಯಾಗಿತ್ತು. ತಮ್ಮ ಸಂಸ್ಥಾನ ಯಾವ ರಾಷ್ಟ್ರದೊಡನೆ ಸೇರ್ಪಡೆಯಾಗಬೇಕೆಂಬ ಬಗೆಗೆ ಕಾಶ್ಮೀರದ ಅರಸರು ಇನ್ನೂ ಆಲೋಚಿಸುತ್ತಿದ್ದಾಗಲೇ ಪಾಕಿಸ್ತಾನ ಅವರ ಮೇಲೆ ಒತ್ತಾಯ ಬೆದರಿಕೆಗಳನ್ನು ಹಾಕಿ ತನ್ನ ಕಡೆಗೆ ಸೆಳೆದುಕೊಳ್ಳುವ ಪ್ರಯತ್ನ ನಡೆಸಿತು. ತನ್ನ ಪ್ರದೇಶದ ಗುಡ್ಡಗಾಡು ಜನರಿಗೆ ಬೆಂಬಲಕೊಟ್ಟು ಅವರು ಆ ಸಂಸ್ಥಾನದ ಮೇಲೆ ಪದೇಪದೇ ದಾಳಿ ನಡೆಸಲು ಪ್ರಚೋದಿಸಿತು. ಇದು ಅಪಾಯದ ಹಂತ ಮುಟ್ಟಿದಾಗ, ಕಾಶ್ಮೀರದ ಅರಸರು ತಮ್ಮ ಪ್ರಜಾಪ್ರಮುಖರ ಸಲಹೆ, ಸಮ್ಮತಿ ಪಡೆದು ತಮ್ಮ ಸಂಸ್ಥಾನವನ್ನು ಭಾರತ ಒಕ್ಕೂಟಕ್ಕೆ ಸೇರಿಸಿದರು. ಭಾರತ ಸರಕಾರ ಕಾಶ್ಮೀರದ ನೆರವಿಗೆ ಹೋಗಿ, ದಾಳಿಕಾರರು ಜಮ್ಮು–ಕಾಶ್ಮೀರವನ್ನು ಪೂರ್ಣವಾಗಿ ಆಕ್ರಮಿಸಿಕೊಳ್ಳದಂತೆ ತಡೆಯಿತು. ಪಾಕಿಸ್ತಾನ ತಾನು ಆಗಲೇ ಆಕ್ರಮಿಸಿಕೊಂಡಿದ್ದ ಭಾಗವನ್ನು ಬಿಟ್ಟುಕೊಡಲಿಲ್ಲ. ಅಷ್ಟು ಮಾತ್ರವಲ್ಲ, 1965ರಲ್ಲೂ 1971ರಲ್ಲೂ ಜಮ್ಮು–ಕಾಶ್ಮೀರ ಪ್ರದೇಶದ ಮೇಲೆ ಮತ್ತೆ ದಾಳಿ ಮಾಡಿತು; ಇವನ್ನು ಹಿಮ್ಮೆಡಲಾಯಿತು.

1962ರಲ್ಲಿ ಚೀನ ಜಮ್ಮು–ಕಾಶ್ಮೀರಕ್ಕೆ ಸೇರಿದ ಲಡಾಖ್ ಪ್ರದೇಶದ ಮೇಲೂ ಭಾರತದ ಈಶಾನ್ಯ ಗಡಿಯ ಮೇಲೂ ದಾಳಿ ನಡೆಸಿ ಕೆಲ ಭಾಗಗಳನ್ನು ಆಕ್ರಮಿಸಿಕೊಂಡಿತು. ಈ ಪ್ರದೇಶಗಳು ಇನ್ನೂ ಚೀನದ ಅಧೀನದಲ್ಲಿಯೇ ಇವೆ.

ಹೀಗೆ ಸ್ವತಂತ್ರ ಭಾರತ ಪರಕೀಯ ದಾಳಿಯನ್ನೂ ಅತಿವೃಷ್ಟಿ ಅನಾವೃಷ್ಟಿ ಕ್ಷಾಮ ಮುಂತಾದ ನೈಸರ್ಗಿಕ ಆಪತ್ತುಗಳನ್ನೂ ಪದೇ ಪದೇ ಎದಿರಿಸಬೇಕಾಗಿ ಬಂದಿತಾದರೂ ಅದು ತನ್ನ ಪ್ರಜೆಗಳ ಸರ್ವತೋಮುಖವಾದ ಅಭಿವೃದ್ಧಿಗೆ ನಿರಂತರವಾಗಿ ಪ್ರಯತ್ನ ನಡೆಸಿದೆ. ಅದರಲ್ಲಿ ಬಹುಮಟ್ಟಿನ ಯಶಸ್ಸನ್ನೂ ಗಳಿಸಿದೆ.

ನವ ರಾಷ್ಟ್ರ ನಿರ್ಮಾಣ

ಭಾರತ ಸ್ವಾತಂತ್ರ್ಯಕ್ಕೆ ಅನೇಕ ವರ್ಷಗಳ ಹಿಂದೆಯೇ ಯೋಜನಾಬದ್ಧವಾದ ರೀತಿಯಲ್ಲಿ ರಾಷ್ಟ್ರದ ಅಭಿವೃದ್ಧಿಯನ್ನು ಸಾಧಿಸಬೇಕೆಂಬ ಅಭಿಲಾಷೆ ರಾಷ್ಟ್ರನಾಯಕರಲ್ಲಿ ತುಂಬ ತೀವ್ರವಾಗಿತ್ತು. ಜವಾಹರಲಾಲರು, ಎಂಜಿನಿಯರ್–ರಾಜನೀತಿಜ್ಞ ಸರ್ ಎಂ. ವಿಶ್ವೇಶ್ವರಯ್ಯನವರು ಇದನ್ನು ಪ್ರತಿಪಾದಿಸಿದ್ದರು. ಸ್ವತಂತ್ರ ಭಾರತದ ಪ್ರಧಾನಿಯಾದೊಡನೆಯೇ ಈ ಅಭಿಲಾಷೆಗೆ ಮೂರ್ತರೂಪಕೊಟ್ಟರು. 1950ರಲ್ಲಿ ಒಂದು ಯೋಜನಾ ಆಯೋಗವನ್ನು ಸ್ಥಾಪಿಸಿದರು. ಇದು ರೂಪಿಸಿದ ಮೊದಲನೆಯ ಪಂಚವಾರ್ಷಿಕ ಯೋಜನೆ 1951–52ರಲ್ಲಿ ಜಾರಿಗೆ ಬಂತು. ಅಂದಿನಿಂದ ಈ ವ್ಯವಸ್ಥೆ ಮುಂದುವರಿದುಕೊಂಡು ಬಂದಿದೆ.

ರಾಷ್ಟ್ರೀಯ ಆದಾಯ ಕ್ರಮಕ್ರಮವಾಗಿ ಹೆಚ್ಚುತ್ತ ಹೋಗುವಂತೆ ಮಾಡುವುದು; ರಾಷ್ಟ್ರ ಜೀವನದ ಎಲ್ಲ ರಂಗಗಳಲ್ಲೂ ಸ್ವಾವಲಂಬನೆಯನ್ನು ಸಾಧಿಸುವುದು; ಉದ್ಯೋಗಾವಕಾಶಗಳನ್ನು ಬೆಳೆಸುವುದು; ಜೀವನಮಟ್ಟವನ್ನೂ ಜೀವನ ಸೌಲಭ್ಯಗಳನ್ನೂ ವೃದ್ಧಿಗೊಳಿಸುವುದು; ವಿದ್ಯಾಭ್ಯಾಸ ಮತ್ತು ಸಾಂಸ್ಕೃತಿಕ ಚಟುವಟಿಕೆಗಳನ್ನು ವ್ಯವಸ್ಥಿತ ರೀತಿಯಲ್ಲಿ ವೃದ್ಧಿಗೊಳಿಸುವುದು — ಇವು ಯೋಜನೆಗಳ ಪ್ರಧಾನ ಗುರಿಗಳು. ಇವನ್ನು ಸಾಧಿಸಲು ಬಹುಮುಖವಾದ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಕೇಂದ್ರ ಸರಕಾರ, ರಾಜ್ಯ ಸರಕಾರಗಳು ಇಂಥಲ್ಲಿ ಜವಾಬ್ದಾರಿ

ಭೂ ವ್ಯವಸಾಯದ ಅಭಿವೃದ್ಧಿ ಯೋಜನಾಬದ್ಧ ಬೆಳವಣಿಗೆಯ ಒಂದು ಪ್ರಧಾನ ಅಂಶ. ಭೂ ವ್ಯವಸಾಯ ಭಾರತದಲ್ಲಿ ಬಹು ಹಿಂದಿನಿಂದ ನಡೆದುಕೊಂಡು ಬಂದಿರುವ ವೃತ್ತಿ. ಕ್ರಿ.ಪೂ. 5000 ವರ್ಷಗಳಿಗಿಂತ ಹಿಂದೆಯೇ ಭಾರತದ ಪಶ್ಚಿಮ ಭಾಗವನ್ನು ಪ್ರವೇಶಿಸಿದ ಆಸ್ಟ್ರಿಕ್ ಜನಾಂಗದವರು ನಮ್ಮ ರಾಷ್ಟ್ರದಲ್ಲಿ ಭೂ ವ್ಯವಸಾಯವನ್ನು ಆರಂಭಿಸಿರಬೇಕೆಂದು ವಿದ್ವಾಂಸರ ಊಹೆ. ಹರಪ್ಪಾ–ಮೊಹೆಂಜೊ ದಾರೊ ಸಂಸ್ಕೃತಿಯ ಅವಧಿಯಲ್ಲಿ ಇದು ತುಂಬ ಅಭಿವೃದ್ಧಿ ಹೊಂದಿತ್ತೆಂದು ಭಾವಿಸಲು ಆಧಾರವಿದೆ. ಆರ್ಯರು ಈ ಪರಂಪರೆಯನ್ನು ಮುಂದುವರಿಸಿದರು. ಜನಸಂಖ್ಯೆ ಬೆಳೆದಂತೆ, ವ್ಯವಸಾಯದ ಪ್ರದೇಶ ವಿಸ್ತಾರಗೊಂಡಂತೆ, ಮಿಡತೆಗಳ ಹಾವಳಿ ಮುಂತಾದ ಕುತ್ತುಗಳಿಂದ ಬೆಳೆಗೆ ನಷ್ಟವುಂಟಾಗುತ್ತಿತ್ತು ಎಂಬುದಕ್ಕೆ ವೇದ ಸಾಹಿತ್ಯದಲ್ಲೂ ಕೌಟಿಲ್ಯನ 'ಅರ್ಥಶಾಸ್ತ್ರ' ದಲ್ಲೂ ಸೂಚನೆ ದೊರೆಯುತ್ತದೆ.

ಇತಿಹಾಸಕಾಲದಲ್ಲಿ ರಾಜ್ಯಗಳು ಹುಟ್ಟಿಕೊಂಡ ಮೇಲೆ ಭೂ ಉತ್ಪನ್ನದ ಒಂದು ಭಾಗವನ್ನು ತೆರಿಗೆಯ ರೂಪದಲ್ಲಿ ಸರಕಾರಕ್ಕೆ ಕೊಡಬೇಕಾಗಿ ಬಂತು. ಇದರಿಂದಾಗಿ ರೈತನಿಗೂ ಸರಕಾರಕ್ಕೂ ಸಂಬಂಧ ಏರ್ಪಟ್ಟಿತು. ರೈತನನ್ನೂ ಅವನ ಬೆಳೆಯನ್ನೂ ರಕ್ಷಿಸುವುದು ರಾಜ್ಯದ ಕರ್ತವ್ಯವಾಯಿತು. ಯಾವುದೇ ಕಾರಣದಿಂದ ಕ್ಷಾಮವುಂಟಾದಾಗ, ರಾಜ್ಯ ಉಗ್ರಾಣದಿಂದ ರೈತರ ಆಹಾರಕ್ಕೆ ಮತ್ತು ಬಿತ್ತನೆಗೆ ಧಾನ್ಯ ಒದಗಿಸಬೇಕೆಂಬ ನೀತಿ 'ಅರ್ಥಶಾಸ್ತ್ರ' ದಲ್ಲಿ ಪ್ರತಿಪಾದಿತವಾಗಿದೆ. ಚಂದ್ರಗುಪ್ತ ಮೌರ್ಯನ ಕೊನೆಗಾಲದಲ್ಲಿ ಉಜ್ಜಯಿನಿ ಪ್ರದೇಶದಲ್ಲಿ ಘೋರಕ್ಷಾಮ ಸಂಭವಿಸಿತೆಂದೂ ಚಂದ್ರಗುಪ್ತನು ಭದ್ರಬಾಹುವೆಂಬ ಜೈನಮುನಿ ಮತ್ತು ಅವನ ಅನುಯಾಯಿಗಳೊಡನೆ ದಕ್ಷಿಣಕ್ಕೆ ವಲಸೆ ಬರಬೇಕಾಯಿತೆಂದೂ ಜೈನ ಸಾಹಿತ್ಯದಲ್ಲಿ ಉಲ್ಲೇಖಗಳಿವೆ.

ಭೂ ವ್ಯವಸಾಯ ಮಳೆಯ ನೀರಿನ ಮೇಲೆ ಆಧಾರಪಟ್ಟಿರುವ ತನಕ ಬರಗಾಲ ತಪ್ಪಿದ್ದೇ ಅಲ್ಲ. ಏಕೆಂದರೆ ಅರಬಿ ಸಮುದ್ರ, ಬಂಗಾಳ ಕೊಲ್ಲಿಗಳ ಮೇಲೆ ಹಾದುಬರುವ ಮಾರುತಗಳೇ ನಮ್ಮ ರಾಷ್ಟ್ರದ ಮಳೆಗೆ ಆಧಾರ. ಇವು ವರ್ಷ ವರ್ಷವೂ ಒಂದೇ ರೀತಿ ಮಳೆ ಕೊಡುವುದಿಲ್ಲ. ಒಮ್ಮೊಮ್ಮೆ ತುಂಬ ಹೆಚ್ಚಾಗಿ ಮಳೆಯಾದರೆ ಕೆಲವು ಬಾರಿ ಮಳೆ ತುಂಬ ಕಡಮೆಯಾಗಿ ಬೀಳುತ್ತವೆ. ಇವೆರಡೂ ಬೆಳೆಯನ್ನು ಕೆಡಿಸುತ್ತವೆ.

ಆದ್ದರಿಂದ ಭಾರತೀಯರು ಕ್ರಿ.ಪೂ. 3ನೆಯ ಶತಮಾನದಷ್ಟು ಹಿಂದೆಯೇ ವ್ಯವಸಾಯಕ್ಕಾಗಿ ಸ್ಥಿರವಾದ ನೀರು ಸರಬರಾಜನ್ನು ಪಡೆಯುವ ವ್ಯವಸ್ಥೆಗೆ ಗಮನಗೊಟ್ಟರು. ಮೌರ್ಯರ ಆಡಳಿತ ಕಾಲದಲ್ಲಿ ಜಲಾಶಯಗಳೂ ನೀರಾವರಿ ಕಾಲುವೆಗಳೂ ನಿರ್ಮಿತವಾದುವೆಂದು ತಿಳಿದುಬರುತ್ತದೆ. ಆದರೆ ಅವೆಲ್ಲ ಈಗ ನಾಶವಾಗಿವೆ. ಕ್ರಿ.ಶ. 1ನೆಯ ಶತಮಾನದಲ್ಲಿ ಅವಂತಿವರ್ಮನೆಂಬ ಅರಸು ಕಾಶ್ಮೀರ ಪ್ರದೇಶದಲ್ಲಿ ನೀರಾವರಿ ಕೆಲಸಗಳನ್ನು ನಡೆಸಿದನು.

ಕ್ರಿ.ಶ. 2ನೆಯ ಶತಮಾನದಲ್ಲಿ ಕರಿಕಾಲ ಚೋಳನೆಂಬ ಅರಸು ಶ್ರೀರಂಗಂ ಊರಿಗೆ ಸಮೀಪದಲ್ಲಿ ಕಾವೇರಿ ನದಿಗೆ ನಿರ್ಮಿಸಿದ ದೊಡ್ಡ ಅಣೆಕಟ್ಟು ಇಂದಿಗೂ ಸುಸ್ಥಿತಿಯಲ್ಲಿದ್ದು ತಮಿಳುನಾಡಿನ ಗಣ್ಯ ನೀರಾವರಿ ಯೋಜನೆಯಾಗಿದೆ. ಭಾರತದಲ್ಲಿರುವ ಅತ್ಯಂತ ಪ್ರಾಚೀನ ಅಣೆಕಟ್ಟು ಇದು.

ಅಲ್ಲಿಂದೀಚೆಗೆ ಅನೇಕ ಮಂದಿ ಅರಸರೂ ಸುಲ್ತಾನರೂ ನಮ್ಮ ರಾಷ್ಟ್ರದ ವಿವಿಧ ಭಾಗಗಳಲ್ಲಿ ನೀರಾವರಿ ಸೌಲಭ್ಯಗಳನ್ನು ವಿಸ್ತರಿಸಲು ಶ್ರಮಿಸಿದರು. ಇವರಲ್ಲಿ ನದಿ ನೀರಾವರಿಯನ್ನು ವಿಶೇಷವಾಗಿ ಅಭಿವೃದ್ಧಿ ಪಡಿಸಿದವನು ಹದಿನಾಲ್ಕನೆಯ ಶತಮಾನದ ಫಿರೋಜ್ ಷಾ ತುಘಲಕ್. ತಾನು ನಿರ್ಮಿಸಿದ ನಾಲ್ಕು ನೀರಾವರಿ ವ್ಯವಸ್ಥೆಗಳಿಗಾಗಿ ಇವನು ಸಟ್ಲೆಜ್ (ಶತದ್ರು) ಘಘರ್ (ಸರಸ್ವತಿ), ಯಮುನಾ ನದಿಗಳನ್ನು ಹಾಗೂ ಏಳು ಹಳ್ಳಗಳ ನೀರನ್ನು ಉಪಯೋಗಕ್ಕೆ ತಂದುಕೊಂಡ.

ಬ್ರಿಟಿಷರ ಆಡಳಿತ ಆರಂಭವಾದ ಮೇಲೆ 19ನೆಯ ಶತಮಾನದ ಕೊನೆ ಮತ್ತು 20ನೆಯ ಶತಮಾನದ ಆದಿಭಾಗದಲ್ಲಿ ರಾಷ್ಟ್ರದ ವಿವಿಧ ಭಾಗಗಳ ನದಿಗಳನ್ನು ಉಪಯೋಗಿಸಿಕೊಂಡು ದೊಡ್ಡ ಪ್ರಮಾಣದ ನೀರಾವರಿ ಯೋಜನೆಗಳು ಕಾರ್ಯಗತಮಾಡಲ್ಪಟ್ಟುವು. ಇವುಗಳಿಂದ ಅನೇಕ ಲಕ್ಷ ಎಕರೆ ಜಮೀನಿಗೆ ನೀರಾವರಿ ಸೌಲಭ್ಯ ದೊರೆಯಿತು.

ಭಾರತ ಸ್ವತಂತ್ರವಾಗುವುದಕ್ಕೆ ತುಂಬ ಮೊದಲೇ ಮೈಸೂರು ಸಂಸ್ಥಾನದಲ್ಲಿ ನಿರ್ಮಿತವಾದ ವಾಣಿವಿಲಾಸ ಸಾಗರ (1898) ಮತ್ತು ಕೃಷ್ಣರಾಜಸಾಗರ (1932) ಸುಪ್ರಸಿದ್ಧವಾದುವು. ಮೊದಲನೆಯದರಿಂದ ಸುಮಾರು 25 ಸಾವಿರ, ಎರಡನೆಯದರಿಂದ ಸುಮಾರು ಒಂದು ಲಕ್ಷ ಎಕರೆ ಜಮೀನಿಗೆ ನೀರೊದಗುತ್ತದೆ.

ಭಾರತಕ್ಕೆ ಸ್ವಾತಂತ್ರ್ಯ ಬಂದ ಮೇಲೆ ನೀರಾವರಿ ಸೌಲಭ್ಯಗಳನ್ನು ಹೆಚ್ಚಿಸುವ ಅನೇಕ ಯೋಜನೆಗಳು ಕೈಗೊಳ್ಳಲ್ಪಟ್ಟುವು. ಮೊದಲನೆಯ ಯೋಜನೆಯಿಂದ ನಾಲ್ಕನೆಯ ಯೋಜನೆಯ ಅವಧಿಯಲ್ಲಿ ಸುಮಾರು 90 ದೊಡ್ಡ ಚಿಕ್ಕ ನೀರಾವರಿ ಯೋಜನೆಗಳ ನಿರ್ಮಾಣ ನಡೆಯಿತು.

ನಾಗಾರ್ಜುನ ಸಾಗರ, ಗೋದಾವರಿ, ಕೃಷ್ಣಾ ಮೇಲ್ದಂಡೆ ಯೋಜನೆ ಇವು ಕೆಲವು ಬೃಹತ್ ಯೋಜನೆಗಳು.

ಒಂದು ರಾಷ್ಟ್ರದ ಬೆಳೆ ಅದರ ಮಳೆ, ನೀರಾವರಿಯನ್ನು ಮಾತ್ರವಲ್ಲದೆ ಅಲ್ಲಿನ ಭೂಗುಣ, ಹವಾ ಗುಣಗಳ ಮೇಲೂ ಆಧಾರಪಟ್ಟಿರುತ್ತದೆ. ಭಾರತ ತುಂಬ ವಿಶಾಲ ರಾಷ್ಟ್ರವಾಗಿದ್ದು, ನಾನಾ ಗುಣದ ಮಣ್ಣು ಮತ್ತು ಹವೆ ಉಳ್ಳದ್ದಾಗಿದೆ. ಆದ್ದರಿಂದ ಇಲ್ಲಿ ಬೆಳೆಯುವ ಆಹಾರ ಧಾನ್ಯಗಳು, ಹಣ್ಣು ಹಂಪಲು ಮತ್ತು ಇತರ ವ್ಯವಸಾಯೋತ್ಪನ್ನಗಳಲ್ಲಿ ಅಪಾರ ವೈವಿಧ್ಯವಿದೆ. ಭತ್ತ, ಗೋಧಿ, ರಾಗಿ, ಜೋಳ, ಸಜ್ಜೆ ಮುಂತಾದ ಆಹಾರ ಧಾನ್ಯಗಳು, ಎಳ್ಳು, ಹುಚ್ಚೆಳ್ಳು, ನೆಲಗಡಲೆ, ಕುಸುಮೆ ಮುಂತಾದ ಎಣ್ಣೆಬೀಜಗಳು, ಕಾಫಿ, ಟೀ, ಕಬ್ಬು, ಹೊಗೆಸೊಪ್ಪು, ಹತ್ತಿ, ಸೆಣಬು, ತೆಂಗು, ಅಡಿಕೆ, ಏಲಕ್ಕಿ, ಮೆಣಸು ಮುಂತಾದುವು ಸೀಬೆ, ದ್ರಾಕ್ಷಿ, ಸೇಬು, ಕಿತ್ತಿಳೆ, ಮಾವು, ಬಾಳೆ, ಅನಾನಸ್, ಲಿಚ್ಚಿ ಮುಂತಾದ ರುಚಿಕರವಾದ ಹಣ್ಣುಗಳು, ನಾನಾ ರುಚಿಯ ಕಾಯಿಪಲ್ಲೆಗಳೂ ನಮ್ಮ ರಾಷ್ಟ್ರದಲ್ಲಿ ಬೆಳೆಯುತ್ತವೆ. ಕಾಫಿ, ಟೀ, ಗೋಡಂಬಿ, ಸೆಣಬು, ಹೊಗೆಸೊಪ್ಪು ನಮ್ಮ ರಾಷ್ಟ್ರಕ್ಕೆ ವಿದೇಶೀ ವಿನಿಮಯವನ್ನು ಸಂಪಾದಿಸಿಕೊಡುವ ವ್ಯವಸಾಯೋತ್ಪನ್ನಗಳು. ಭಾರತದಷ್ಟು ವೈವಿಧ್ಯಪೂರ್ಣವಾದ ವ್ಯವಸಾಯೋತ್ಪನ್ನ ಬೇರೆ ಯಾವ ರಾಷ್ಟ್ರದಲ್ಲೂ ಕಾಣುವುದಿಲ್ಲ. ಟೀ ಮತ್ತು ನೆಲಗಡಲೆಯ ಉತ್ಪಾದನೆಯ ಪ್ರಮಾಣದಲ್ಲಿ ನಮ್ಮ ರಾಷ್ಟ್ರ ಜಗತ್ತಿನಲ್ಲೇ ಮೊದಲನೆಯದು. ಹೊಗೆಸೊಪ್ಪಿನಲ್ಲಿ ಮೂರನೆಯದು.

ನಮ್ಮ ಅರಣ್ಯಗಳ ವೃಕ್ಷ ಸಂಪತ್ತು, ಮೃಗವರ್ಗ, ಪಕ್ಷಿ ಜಾತಿಗಳು ಕೂಡ ವೈವಿಧ್ಯಮಯವಾಗಿವೆ.

ಬಹು ದೀರ್ಘಕಾಲದ ನಿರಂತರ ಉಪಯೋಗದಿಂದಲೂ ಮಳೆ, ನೀರು ಕೊಚ್ಚಾಣಿಕೆಗಳಿಂದಲೂ, ಹಳೇ ವ್ಯವಸಾಯ ಪದ್ಧತಿಗಳಿಂದಲೂ ಕುಗ್ಗಿದ್ದ ಭೂ ಸಾರವನ್ನೂ ಇಳುವರಿಯನ್ನೂ ಉತ್ತಮಗೊಳಿಸುವ ಕಡೆಗೆ ನಮ್ಮ ದೇಶದಲ್ಲಿ ದೃಷ್ಟಿ ಹರಿದದ್ದು ಈ ಶತಮಾನದ ಆದಿಭಾಗದಲ್ಲಿ. ಭಾರತ ಸ್ವತಂತ್ರವಾದ ಮೇಲೆ ಈ ವಿಚಾರಗಳಿಗೆ ಹೆಚ್ಚು ಗಮನ ಕೊಡಲಾಗಿದೆ. ಆಧುನಿಕ ಸಂಶೋಧನೆಗಳನ್ನು ಉಪಯೋಗಕ್ಕೆ ತಂದುಕೊಂಡು ನಮ್ಮ ವ್ಯವಸಾಯದ ಗುಣಮಟ್ಟವನ್ನು ಹೆಚ್ಚಿಸುವ ಕೆಲಸ ಪಂಚವಾರ್ಷಿಕ ಯೋಜನೆಗಳ ಅಂಗವಾಗಿ ನಡೆದಿದೆ. ರಾಸಾಯನಿಕ ಗೊಬ್ಬರ, ಹೆಚ್ಚು ರೋಗನಿರೋಧಕ ಶಕ್ತಿಯುಳ್ಳ, ಹೆಚ್ಚು ಇಳುವರಿಕೊಡುವ ಬಿತ್ತನೆ ಬೀಜಗಳು ಹಾಗೂ ವಿನಾಶಕ ಕೀಟಗಳ ನಿವಾರಣೆಗೆ ಸಹಾಯಕವಾದ ರಾಸಾಯನಿಕ ವಸ್ತುಗಳ ತಯಾರಿಕೆ ಮತ್ತು ಉಪಯೋಗ ಹೆಚ್ಚಿದೆ. ಇದರಿಂದಾಗಿ 1949–50ರಲ್ಲಿ ನಾವು ಉತ್ಪಾದಿಸುತ್ತಿದ್ದುದಕ್ಕಿಂತ 100ಕ್ಕೆ 83ರಷ್ಟು ಹೆಚ್ಚು ಆಹಾರ ಧಾನ್ಯಗಳನ್ನು 1970–71ರಲ್ಲಿ ಉತ್ಪಾದಿಸುವುದೂ ಪರದೇಶಗಳಿಂದ ಆಹಾರ ಧಾನ್ಯಗಳ ಆಮದನ್ನು ತಗ್ಗಿಸುವುದೂ ಸಾಧ್ಯವಾಯಿತು.

ಅತಿವೃಷ್ಟಿ, ಅನಾವೃಷ್ಟಿಗಳಂಥ ನೈಸರ್ಗಿಕ ಕ್ಷೋಭೆಗಳನ್ನು ಬಿಟ್ಟರೆ, ಭಾರತ ಆಹಾರದ ವಿಷಯದಲ್ಲಿ ಸ್ವಪೂರ್ಣತೆಯ ಮಟ್ಟವನ್ನು ಮುಟ್ಟಿದೆ.

ಯಾವುದೇ ರಾಷ್ಟ್ರವಾಗಲೀ ಅದು ವರ್ಷವರ್ಷವೂ ಉಪಯೋಗಿಸುವ ಕಬ್ಬಿಣದ ಪ್ರಮಾಣದಿಂದ ಅದರ ಪ್ರಗತಿಶೀಲತೆಯನ್ನು ಅಳೆಯಬಹುದೆಂಬ ಹೇಳಿಕೆ ಒಂದು ಕಾಲದಲ್ಲಿತ್ತು. ಈಗ ಈ ಪ್ರಗತಿಶೀಲತೆಯ ಅಳತೆಗೋಲು ವಿದ್ಯುತ್ತಿನ ಉಪಯೋಗದ ಪ್ರಮಾಣವಾಗಿದೆ. ವಿದ್ಯುತ್ತಿನ ಉತ್ಪಾದನೆಗೆ ಮೂರು ವಿಧಾನಗಳಿವೆ: (1) ಜಲ ಪ್ರವಾಹದಿಂದ (2) ಉಷ್ಣದಿಂದ (3) ಅಣುಶಕ್ತಿಯಿಂದ. ಭಾರತದಲ್ಲಿ ಈ ಮೂರು ವಿಧಾನಗಳೂ ಬಳಕೆಯಲ್ಲಿವೆ.

ಸ್ವಾತಂತ್ರ್ಯ ದೊರೆಯುವುದಕ್ಕೆ ಮೊದಲು ಭಾರತದ ವಿದ್ಯುತ್ ಉತ್ಪಾದನೆ ತೀರ ಕಡಮೆ ಪ್ರಮಾಣದಲ್ಲಿತ್ತು. 1950–51ರಲ್ಲಿ ವಿದ್ಯುತ್ತಿನ ಸರಾಸರಿ ಉಪಯೋಗ ತಲಾ 18 ಯೂನಿಟ್ ಇದ್ದದ್ದು ಇಪ್ಪತ್ತು ವರ್ಷಗಳ ಅವಧಿಯಲ್ಲಿ ತಲಾ 90 ಯೂನಿಟ್‌ಗೆ ಏರಿತು. ಇದರಿಂದ ವಿದ್ಯುತ್ ಉತ್ಪಾದನೆ ಎಷ್ಟು ವೇಗವಾಗಿ ವೃದ್ಧಿಗೊಳ್ಳುತ್ತಿದೆ ಎಂಬುದನ್ನು ನಾವು ಊಹಿಸಿಕೊಳ್ಳಬಹುದು.



1902ಕ್ಕೆ ಮೊದಲೇ ಸ್ಥಾನಿಕ ಉಪಯೋಗಕ್ಕಾಗಿ ಒಂದೆರಡು ಕಡೆ ಜಲವಿದ್ಯುತ್ ಉತ್ಪಾದನೆ ನಡೆದಿತ್ತು. ಆದರೆ ಅದು ದೊಡ್ಡ ಪ್ರಮಾಣದಲ್ಲಿ ನಡೆದದ್ದು ಮತ್ತು 92 ಮೈಲಿ ದೂರದ ಕೋಲಾರದ ಚಿನ್ನದ ಗಣಿಗಳಿಗೆ ತಂತಿಗಳ ಮೂಲಕ ವಿದ್ಯುತ್ತನ್ನು ಸಾಗಿಸಿದ್ದು ಶಿವಸಮುದ್ರದ ಉತ್ಪಾದನಾ ಕೇಂದ್ರ 1902ರಲ್ಲಿ ಸ್ಥಾಪಿತವಾದಾಗಲೇ. ಉತ್ಪಾದನಾ ಕೇಂದ್ರದಿಂದ ಇಷ್ಟು ದೂರದ ಪ್ರದೇಶಕ್ಕೆ ವಿದ್ಯುತ್ ಅನ್ನು ಸಾಗಿಸಿದ್ದು ಇಡೀ ಜಗತ್ತಿನಲ್ಲಿ ಇದೇ ಮೊದಲ ಸಲ !

ಶಿವಸಮುದ್ರ ಕೇಂದ್ರದ ಆರಂಭಕಾಲದ ಉತ್ಪಾದನಾಶಕ್ತಿ ಕೇವಲ 3,600 ಕಿಲೊವಾಟ್. ಆಗ ಅದೇ ದೊಡ್ಡ ಉತ್ಪಾದನೆಯಾಗಿತ್ತು.



ಶಿವಸಮುದ್ರದಲ್ಲಿ ವಿದ್ಯುತ್ ಉತ್ಪಾದನೆ

ಶರಾವತಿ ಯೋಜನೆಯ ಮೊದಲ ಹಂತದ ಉತ್ಪಾದನೆಯಾದ 1,78,200 ಕಿಲೊವಾಟ್‌ಗೆ ಹೋಲಿಸಿದರೆ ಇದು ಅತ್ಯಲ್ಪ. 1972ನೆಯ ಮಾರ್ಚ್ ಅಂತ್ಯದಲ್ಲಿ ನಮ್ಮ ರಾಷ್ಟ್ರದ ವಿವಿಧ ಉತ್ಪಾದನಾ ಕೇಂದ್ರಗಳ ವಿದ್ಯುತ್ ಉತ್ಪಾದನಾ ಸಾಮರ್ಥ್ಯ 177 ಲಕ್ಷ ಕಿಲೊವಾಟ್‌ಗಳು. ಕೈಗಾರಿಕೆ, ವ್ಯವಸಾಯಗಳಿಗೂ ಜನರ ದಿನಬಳಕೆಗೂ ಬೇಡಿಕೆ ಈಗ ಬಹಳವಾಗಿ ಬೆಳೆದಿರುವುದರಿಂದ ಎಲ್ಲ ರಾಜ್ಯಗಳಲ್ಲೂ ವಿದ್ಯುತ್ತಿನ ಅಭಾವ ಇದ್ದೇ ಇದೆ. ನೀರಿನ ಪ್ರವಾಹದ ಸೌಲಭ್ಯವಿಲ್ಲದೆಡೆಗಳಲ್ಲಿ ಉಷ್ಣವನ್ನು ಉಪಯೋಗಿಸಿ ವಿದ್ಯುತ್ತನ್ನು ಉತ್ಪಾದಿಸುತ್ತಾರೆ. ಇಂಥ ಕೇಂದ್ರಗಳು ಬಿಹಾರ, ಪಶ್ಚಿಮ ಬಂಗಾಳ, ಗುಜರಾತ್, ರಾಜಸ್ಥಾನಗಳಲ್ಲಿ ಹೆಚ್ಚು ಸಂಖ್ಯೆಯಲ್ಲಿವೆ. ತಮಿಳು ನಾಡಿನ ನೈವೇಲಿಯಲ್ಲಿರುವ ಉಷ್ಣ ವಿದ್ಯುತ್ ಉತ್ಪಾದನಾ ಕೇಂದ್ರ ಗಮನಾರ್ಹವಾದದ್ದು. ರಾಜಸ್ಥಾನದಲ್ಲಿರುವ ರಾಣಾ ಪ್ರತಾಪ ಸಾಗರ, ತಮಿಳುನಾಡಿನ ಕಲ್ಪಾಕ್ಕಂಗಳಲ್ಲಿ ಪರಮಾಣು ಶಕ್ತಿಯಿಂದ ವಿದ್ಯುತ್ ಉತ್ಪಾದನೆ ನಡೆಸುವ ವ್ಯವಸ್ಥೆಯನ್ನು ರೂಪಿಸಲಾಗಿದೆ. ಮಹಾರಾಷ್ಟ್ರದ ತಾರಾಪುರದಲ್ಲಿ ಕೂಡ ಇಂಥದೊಂದು ಕೇಂದ್ರವಿದೆ.

ನಮ್ಮಲ್ಲಿ ವಿದ್ಯುತ್ತಿನ ಬೇಡಿಕೆ ದಿನ ದಿನಕ್ಕೆ ಹೆಚ್ಚುತ್ತಿದೆಯಾದರೂ ಈ ರಂಗದಲ್ಲಿ ಸ್ವಪೂರ್ಣತೆಯನ್ನು ಪಡೆಯಲು ಬೇಕಾದ ಸಂಪನ್ಮೂಲಗಳೂ ತಂತ್ರಜ್ಞಾನವೂ ಭಾರತದಲ್ಲಿವೆ.

ಖನಿಜ ಸಂಪತ್ತು

ರಾಷ್ಟ್ರಗಳ ಅಭಿವೃದ್ಧಿಯ ದೃಷ್ಟಿಯಿಂದ ಖನಿಜ ಸಂಪತ್ತು ಬಹುಮುಖ್ಯವಾದದ್ದು. ರಾಷ್ಟ್ರಜೀವನದಲ್ಲಿ ಖನಿಜಗಳ ಪಾತ್ರ ಹಿರಿದಾದದ್ದು. ಅನೇಕ ಉದ್ಯಮಗಳು ಇವುಗಳನ್ನೇ ಅವಲಂಬಿಸಿವೆ. ಭಾರತದ ಖನಿಜ ಸಂಪತ್ತು ಅಪಾರವೆಂದು ಹೇಳಲು ಸಾಧ್ಯವಿಲ್ಲವಾದರೂ, ಆಧುನಿಕ ನಾಗರಿಕ ರಾಷ್ಟ್ರಕ್ಕೆ ಬೇಕಾಗುವ ಅನೇಕ ಖನಿಜಗಳು ಭಾರತದಲ್ಲಿ ಗಣನೀಯ ಪ್ರಮಾಣದಲ್ಲಿವೆ.

ಪ್ರಾಚೀನ ಭಾರತೀಯರು ತಾಮ್ರ, ಕಬ್ಬಿಣ ಮುಂತಾದ ಖನಿಜಗಳ ನಿಕ್ಷೇಪಗಳನ್ನು ಗುರುತಿಸಿ ಅವನ್ನು ಉಪಯೋಗಕ್ಕೆ ತಂದುಕೊಂಡಿದ್ದರು. ಚಿನ್ನವೂ ಅವರಿಗೆ ಗೊತ್ತಿತ್ತು.

ಭಾರತದ ಕಬ್ಬಿಣ ನಿಕ್ಷೇಪ ದೊಡ್ಡದು. ಜಗತ್ತಿನ ಒಟ್ಟು ಕಬ್ಬಿಣದ ನಿಕ್ಷೇಪದಲ್ಲಿ ಕಾಲು ಭಾಗದಷ್ಟು ಭಾರತದಲ್ಲಿದೆ. ಮ್ಯಾಂಗನೀಸ್, ಭಾರತದಲ್ಲಿ ಬಹುದೊಡ್ಡ ಪ್ರಮಾಣದಲ್ಲಿ ದೊರೆಯುವ ಖನಿಜ. ನಮ್ಮ ಈ ನಿಕ್ಷೇಪ ಪ್ರಮಾಣ ಜಗತ್ತಿನಲ್ಲಿ ಮೂರನೆಯದು. ಚಿನ್ನ ನಮ್ಮಲ್ಲಿ ಹೆಚ್ಚು ಪ್ರಮಾಣದಲ್ಲಿಲ್ಲ. ಕೋಲಾರ ಮತ್ತು ಹಟ್ಟಿ ಪ್ರದೇಶಗಳಲ್ಲಿ ಚಿನ್ನದ ಗಣಿಗಳಿವೆ ಆಂಧ್ರ ಪ್ರದೇಶದ ರಾಮಗಿರಿ ಪ್ರದೇಶದಲ್ಲೂ ಚಿನ್ನದ ನಿಕ್ಷೇಪಗಳಿವೆ. ಕೆಲವು ನದಿಗಳ ಮೆಕ್ಕಲು ಮಣ್ಣಿನಲ್ಲೂ ಚಿನ್ನದ ಕಣಗಳಿರುವುದು ಕಂಡುಬಂದಿದೆ.

ರಾಜಸ್ಥಾನದ ಪನ್ನ ಪ್ರದೇಶದಲ್ಲಿ ವಜ್ರ, ಜಯಪುರದ ಸಮೀಪದಲ್ಲಿ ಕೆಂಪು, ಉದಯಪುರ ಅಜ್ಮೀರ್‌ಗಳಲ್ಲಿ ಪಚ್ಚೆ, ಕಾಶ್ಮೀರದಲ್ಲಿ ನೀಲ ನಮ್ಮಲ್ಲಿ ದೊರೆಯುವ ರತ್ನಗಳು.

ಭಾರತದ ಖನಿಜ ಸಂಪತ್ತನ್ನು ನಾಲ್ಕು ಗುಂಪುಗಳಾಗಿ ವಿಂಗಡಿಸಬಹುದು : 1 ಜಗತ್ತಿನ ಮಾರುಕಟ್ಟೆಯಲ್ಲಿ ಆದ್ಯತೆಯನ್ನು ಪಡೆಯುವಷ್ಟು ಹೆಚ್ಚಾಗಿ ರಫ್ತು ಮಾಡಬಹುದಾದುವು —ಕಬ್ಬಿಣ ಮತ್ತು ಟೈಟಾನಿಯಂ ಅದಿರು, ಅಭ್ರಕ ಈ ವರ್ಗಕ್ಕೆ ಸೇರಿದುವು; 2 ನಮಗೆ ಬೇಕಾದುದಕ್ಕಿಂತ ಹೆಚ್ಚು ಪ್ರಮಾಣದಲ್ಲಿ ದೊರೆಯುತ್ತಿದ್ದು ವಿದೇಶಗಳಿಗೆ ರಫ್ತು ಮಾಡಬಹುದಾದುವು —ಮ್ಯಾಂಗನೀಸ್, ಬಾಕ್ಸೈಟ್, ಮ್ಯಾಗ್ನಿಸೈಟ್, ಶಾಖ ನಿರೋಧಕ ಖನಿಜಗಳು, ಸ್ಟಿಯಟೈಟ್, ಘರ್ಷಕವಸ್ತುಗಳು, ಸಿಲಿಕ, ಜಿಪ್ಸಂ, ಕಟ್ಟಡದ ಕಲ್ಲುಗಳು, ಮೊನಜೈಟ್, ಕುರುಂದದ ಕಲ್ಲು



ಅದಿರು ಸಾಗಣೆಗೆ ಕನ್ವೇಯರ್
—ಗೋವಾದಲ್ಲಿ



ಮುಂತಾದುವು ಈ ಗುಂಪಿಗೆ ಸೇರಿದುವು; 3 ನಮ್ಮ ಉಪಯೋಗಕ್ಕೆ ಸಾಕಾಗುವಷ್ಟಿರುವ ಖನಿಜಗಳು —ಕಲ್ಲಿದ್ದಲು, ಸೋಡಿಯಂ ಲವಣಗಳು, ಫಾಸ್ಫೇಟ್‌ಗಳು, ನೈಟ್ರೇಟ್‌ಗಳು, ಅಪೂರ್ವ ಮೃತ್ತಿಕೆಗಳು, ಖನಿಜ ವರ್ಣವಸ್ತುಗಳು, ಬೆರೈಲಿಯಂ, ಗಾಜು, ಮರಳು ಮುಂತಾದುವು ಈ ಸಾಲಿನಲ್ಲಿ ಬರುತ್ತವೆ. ಇನ್ನು ನಾವು ನಮ್ಮ ಉಪಯೋಗಕ್ಕೆ ಪರದೇಶಗಳಿಂದ ಆಮದು ಮಾಡಿಕೊಳ್ಳುತ್ತಿರುವ ಖನಿಜಗಳೆಂದರೆ—ಬೆಳ್ಳಿ, ತಾಮ್ರ, ನಿಕ್ಕಲ್, ಗಂಧಕ, ಸೀಸ, ಸತು, ತವರ, ಟಂಗ್‌ಸ್ಟನ್, ಪ್ಲಾಟಿನಮ್, ಪೊಟ್ಯಾಷ್, ಗ್ರಾಫೈಟ್, ಪೆಟ್ರೋಲಿಯಂ ಮುಂತಾದುವು. ಕರ್ನಾಟಕದಲ್ಲಿ ತಾಮ್ರ ಮತ್ತು ಗ್ರಾಫೈಟ್ ನಿಕ್ಷೇಪಗಳು ಇವೆಯೆಂದು ಗೊತ್ತುಹಚ್ಚಲಾಗಿದೆ.



ತೈಲ ಶುದ್ಧೀಕರಣಾಗಾರ

ಖನಿಜಗಳ ಆಮದನ್ನು ತಗ್ಗಿಸಲು ನಮ್ಮ ರಾಷ್ಟ್ರದಲ್ಲಿ ಅವುಗಳ ನಿಕ್ಷೇಪಗಳನ್ನು ಪತ್ತೆಹಚ್ಚುವ ಮತ್ತು ಅವನ್ನು ಉಪಯೋಗಕ್ಕೆ ತಂದುಕೊಳ್ಳುವ ಪ್ರಯತ್ನಗಳು ಸ್ವಾತಂತ್ರ್ಯೋತ್ತರ ಕಾಲದಲ್ಲಿ ತೀವ್ರವಾಗಿ ನಡೆದಿವೆ. ಇಂಥ ಪ್ರಯತ್ನಗಳಲ್ಲಿ ಖನಿಜ ತೈಲ ನಿಕ್ಷೇಪಗಳಿಗೆ ಸಂಬಂಧಿಸಿದ ಸಾಧನೆ ಘನವಾದದ್ದು.

ಅಸ್ಸಾಂ ಪ್ರದೇಶದಲ್ಲಿ ಖನಿಜ ತೈಲ ದೊರೆಯುತ್ತದೆಂಬುದು 1828ರಷ್ಟು ಹಿಂದೆಯೇ ಗೊತ್ತಾಗಿತ್ತಾದರೂ, ಅಲ್ಲಿನ ಡಿಗ್ಬಾಯ್‌ನಲ್ಲಿ ಎಣ್ಣೆ ತೆಗೆಯಲು ಆರಂಭವಾದದ್ದು 1899ರಲ್ಲಿ. ಅಲ್ಲಿಂದಾಚೆಗೆ ಸುಮಾರು 60 ವರ್ಷಗಳ ಕಾಲ ಇದೊಂದೇ ನಮ್ಮ ತೈಲ ಉತ್ಪಾದನಾ ಕೇಂದ್ರವಾಗಿತ್ತು.



ಸಮುದ್ರದ ತಳದಿಂದ ಎಣ್ಣೆ

ಖನಿಜ ತೈಲದಿಂದ ತಯಾರಾದ ಪೆಟ್ರೋಲ್, ಸೀಮೆಎಣ್ಣೆ, ಗ್ರೀಸ್ ಮುಂತಾದ ವಸ್ತುಗಳಿಗೆ ಬೇಡಿಕೆ ದಿನದಿನಕ್ಕೆ ಏರುತ್ತಿದ್ದುದರಿಂದಲೂ ಈ ವಸ್ತುಗಳಿಗೆ ಪರದೇಶಗಳನ್ನು ಅವಲಂಬಿಸುವುದು ಆರ್ಥಿಕ ಮತ್ತು ರಾಷ್ಟ್ರರಕ್ಷಣೆಯ ದೃಷ್ಟಿಯಿಂದ ಹಿತಕರವಲ್ಲವೆಂಬುದರಿಂದಲೂ ಭಾರತ ಸ್ವತಂತ್ರವಾದ ಮೇಲೆ ನಮ್ಮ ರಾಷ್ಟ್ರದಲ್ಲಿ ತೈಲಾನ್ವೇಷಣೆ ಆರಂಭವಾಯಿತು. ಗುಜರಾತ್ ಪ್ರದೇಶದಲ್ಲೂ ಅಸ್ಸಾಂನಲ್ಲೂ ಹೊಸ ತೈಲ ನಿಕ್ಷೇಪಗಳು ಗುರುತಿಸಲ್ಪಟ್ಟುವು. 1948ರಲ್ಲಿ ಕೇವಲ-3 ಲಕ್ಷ ಟನ್ನಿನಷ್ಟಿದ್ದ ವಾರ್ಷಿಕ ಕಚ್ಚಾ ಎಣ್ಣೆ ಉತ್ಪಾದನೆ 1972ರ ಕೊನೆಯ ಹೊತ್ತಿಗೆ 60 ಲಕ್ಷ ಟನ್ನಿನಷ್ಟಾಯಿತು. ಇದೇ ಅವಧಿಯಲ್ಲಿ ತೈಲ ಸಂಸ್ಕರಣ ಸ್ಥಾವರ ಒಂದರಿಂದ 9ಕ್ಕೆ ಏರಿತು–ಬರೌನಿ (ಬಿಹಾರ್), ಕೊಚಿನ್ (ಕೇರಳ), ಕೊಯಲಿ (ಗುಜರಾತ್), ನೂನ್‌ವತಿ (ಅಸ್ಸಾಂ), ಮದರಾಸು (ತಮಿಳುನಾಡು) ಗಳಲ್ಲಿರುವ ತೈಲ ಸಂಸ್ಕರಣ ಸ್ಥಾವರಗಳು ಸಾರ್ವಜನಿಕ (ಸರಕಾರೀ) ಉದ್ಯಮ ಕ್ಷೇತ್ರದಲ್ಲಿವೆ. ಟ್ರಾಂಬೆ (ಮಹಾರಾಷ್ಟ್ರ)ಯಲ್ಲಿ ಎರಡು. ವಿಶಾಖಪಟ್ಟಣ (ಆಂಧ್ರ), ಡಿಗ್ಬಾಯ್ (ಅಸ್ಸಾಂ) ಗಳಲ್ಲಿರುವ ಒಂದೊಂದು ಸ್ಥಾವರಗಳು ಖಾಸಗೀ ಕ್ಷೇತ್ರಕ್ಕೆ ಸೇರಿದುವು.

ಪ್ರಕೃತಿಯಲ್ಲಿ ದೊರೆಯುವ ತೈಲಾನಿಲ ಮತ್ತು ಶುದ್ಧೀಕರಣ ಸ್ಥಾವರಗಳಲ್ಲಿ ಉತ್ಪನ್ನವಾಗುವ ಅನಿಲಗಳನ್ನುಪಯೋಗಿಸಿ ಪೆಟ್ರೋಕೆಮಿಕಲ್ ಉದ್ಯಮಗಳು ಸ್ಥಾಪಿತವಾಗಿವೆ. ಭಾರತದ ತೈಲೋತ್ಪಾದನೆಯನ್ನೂ ಅದಕ್ಕೆ ಸಂಬಂಧಿಸಿದ ಇತರ ಉದ್ಯಮಗಳನ್ನೂ ಅಭಿವೃದ್ಧಿಗೊಳಿಸುವ ಕೆಲಸವನ್ನು ತೈಲ ಮತ್ತು ನಿಸರ್ಗಾನಿಲ ಆಯೋಗ ಕೈಗೊಂಡಿದೆ. ಭಾರತದ ಭೂಭಾಗದಲ್ಲಲ್ಲದೆ, ಕರಾವಳಿಗೆ ಸಮೀಪವಾದ ಸಮುದ್ರ ತಳದಲ್ಲಿರುವ ಖನಿಜ ತೈಲವನ್ನು ಪತ್ತೆಹಚ್ಚುವ ಕೆಲಸವನ್ನು ಈ ಸಂಸ್ಥೆ ಕೈಗೊಂಡಿದ್ದು, ಅದರಲ್ಲಿ ಯಶಸ್ಸನ್ನು ಪಡೆದಿದೆ.

ಈ ಎಲ್ಲ ಪ್ರಯತ್ನಗಳ ಫಲವಾಗಿ ಖನಿಜ ತೈಲದ ಬಗೆಗೆ ಭಾರತದ ಪರಾವಲಂಬನೆ ಗಣನೀಯ ಪ್ರಮಾಣದಲ್ಲಿ ತಗ್ಗಿದೆ.

ವ್ಯವಸಾಯೋತ್ಪನ್ನಗಳ ಹೆಚ್ಚು ಇಳುವರಿಗೆ ಅವಶ್ಯಕವಾದ ರಾಸಾಯನಿಕ ಗೊಬ್ಬರಗಳ ತಯಾರಿಕೆಗೆ ಬೇಕಾದ ಸಾಮಗ್ರಿಗಳು ಖನಿಜ ಮೂಲದವು. ಆದ್ದರಿಂದ ಇಂಥ ಗೊಬ್ಬರಗಳ ಸಂಬಂಧದಲ್ಲಿ ಅವಶ್ಯಕವಾದ ಖನಿಜಗಳಲ್ಲಿ ಸ್ವಪೂರ್ಣತೆಯನ್ನು ಸಾಧಿಸಲು ಕೂಡ ಪ್ರಯತ್ನಗಳು ನಡೆದಿವೆ. ಈ ದೆಸೆಯಲ್ಲಿ ನಡೆದಿರುವ ಒಂದು ದೊಡ್ಡ ಪ್ರಯತ್ನ ರಂಜಕ ಸಂಯುಕ್ತದ ಉತ್ಪಾದನೆ. ಇದಕ್ಕೆ ಬೇಕಾದ ಮೂಲವಸ್ತುವನ್ನು ಬಹುದೊಡ್ಡ ಪ್ರಮಾಣದಲ್ಲಿ ಆಫ್ರಿಕದಿಂದ ಆಮದು ಮಾಡಿಕೊಳ್ಳಲಾಗುತ್ತಿತ್ತು. ಈಗ ಇದನ್ನು ನಮ್ಮ ರಾಷ್ಟ್ರದಲ್ಲೇ ಉತ್ಪಾದಿಸುವ ಪ್ರಯತ್ನ ನಡೆದಿದೆ. ಸುಮಾರು 30 ವರ್ಷಗಳ ಉಪಯೋಗಕ್ಕೆ ಬೇಕಾದಷ್ಟು ಈ ಮೂಲವಸ್ತುವಿನ ನಿಕ್ಷೇಪ ನಮ್ಮಲ್ಲಿದೆ ಎಂದು ಕಂಡುಬಂದಿದೆ. ಪೆಟ್ರೋಕೆಮಿಕಲ್ ಉದ್ಯಮ ಕೂಡ ರಾಸಾಯನಿಕ ಗೊಬ್ಬರಗಳ ತಯಾರಿಕೆಗೆ ಬೇಕಾದ ವಸ್ತುಗಳನ್ನು ಉತ್ಪಾದಿಸುತ್ತಿದೆ.

ಸಾರ್ವಜನಿಕ ಉದ್ಯಮರಂಗದಲ್ಲಿ ಎಂಟು, ಖಾಸಗಿ ರಂಗದಲ್ಲಿ ಆರು ರಾಸಾಯನಿಕ ಗೊಬ್ಬರಗಳ ಕಾರಖಾನೆಗಳು ಇವೆ (1971). ಭಾರತದಲ್ಲಿ ರಾಸಾಯನಿಕ ಗೊಬ್ಬರದ ಉತ್ಪಾದನೆಯನ್ನು ವ್ಯವಸ್ಥೆ ಮಾಡುವ ಮತ್ತು ವಿಸ್ತರಿಸುವ ಉದ್ದೇಶದಿಂದ ಸ್ಥಾಪಿತವಾದ ಫರ್ಟಿಲೈಸರ್ ಕಾರ್ಪೊರೇಷನ್ ಆಫ್ ಇಂಡಿಯಾ ಈ ಉದ್ಯಮದ ವಿಸ್ತರಣವನ್ನು ಸಾಧಿಸುತ್ತಿದೆ. ಪ್ರಕೃತ ನಮ್ಮ ರಾಷ್ಟ್ರದಲ್ಲಿ 13 ಲಕ್ಷ ಟನ್ನುಗಳಿಗಿಂತ ಹೆಚ್ಚು ರಾಸಾಯನಿಕ ಗೊಬ್ಬರ ತಯಾರಾಗುತ್ತಿದೆ.

ಜಗತ್ತಿನ ಎಲ್ಲ ಭಾಗಗಳಲ್ಲೂ ದೊಡ್ಡ ಪ್ರಮಾಣದ ಉದ್ಯಮಗಳು ಆರಂಭವಾದದ್ದು 18ನೆಯ ಶತಮಾನದ ಉತ್ತರಾರ್ಧ ಮತ್ತು 19ನೆಯ ಶತಮಾನದ ಪೂರ್ವಾರ್ಧದಲ್ಲಿ. ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಬ್ರಿಟಿಷರು ಭಾರತದಲ್ಲಿ ಬಲವಾಗಿ ಬೇರು ಬಿಟ್ಟದ್ದೂ ಇದೇ ಕಾಲದಲ್ಲಿ. 1857ರ ವಿಪ್ಲವದ ಅನಂತರ ಭಾರತದಲ್ಲಿ ಬ್ರಿಟಿಷ್ ಸಾಮ್ರಾಜ್ಯ ಸ್ಥಾಪಿತವಾದ ಮೇಲೆ ಮಾತ್ರವಲ್ಲ ಅದಕ್ಕಿಂತ ಸ್ವಲ್ಪಕಾಲ ಮೊದಲಿನಿಂದಲೂ ಅವರು ತಮ್ಮ ತಯಾರಿಕೆಗಳಿಗೆ ಭಾರತವನ್ನು ದೊಡ್ಡ ಗಿರಾಕಿಯಾಗಿ ಇಟ್ಟುಕೊಳ್ಳುವುದರಲ್ಲಿ ಆಸಕ್ತರಾಗಿದ್ದರೇ ವಿನಾ, ಇಲ್ಲಿನ ಉದ್ಯಮಗಳನ್ನು ಉಳಿಸುವುದರಲ್ಲಾಗಲೀ ಬೆಳೆಸುವುದರಲ್ಲಾಗಲೀ ಆಸಕ್ತರಾಗಿರಲಿಲ್ಲ. ವಾಸ್ತವವಾಗಿ, ನಮ್ಮಲ್ಲಿ ಬಹು ಹಿಂದಿನಿಂದ ಬೆಳೆದುಬಂದಿದ್ದ ಮಸ್ಲಿನ್ ತಯಾರಿಕೆಯಂಥ ಉದ್ಯಮಗಳನ್ನು ನಾಶಮಾಡಲೂ ಅವರು ಪ್ರಯತ್ನಿಸಿದರು. ಈ ಕಾರ್ಯನೀತಿಯ ಪರಿಣಾಮವಾಗಿ, ಬ್ರಿಟಿಷರ ಆಡಳಿತ ಕಾಲದಲ್ಲಿ ನಮ್ಮ ಉದ್ಯಮಗಳು ಸಂಖ್ಯೆಯಲ್ಲಾಗಲೀ ಪ್ರಮಾಣದಲ್ಲಿಯಾಗಲೀ ಅಷ್ಟಾಗಿ ಬೆಳೆಯಲಿಲ್ಲ. ಅಂದರೆ ಈ ರಂಗದಲ್ಲಿ ಏನೇನೂ ಕೆಲಸ ನಡೆಯಲಿಲ್ಲವೆಂದಲ್ಲ; ಜೆಮ್‌ಸೇಟ್‌ಜೀ ತಾತಾ ಅಂಥವರು ವಿಶೇಷ ಪ್ರಯತ್ನನಡೆಸಿ ಜವಳಿ, ವಿದ್ಯುತ್, ಕಬ್ಬಿಣ ಮುಂತಾದುವುಗಳಿಗೆ ಸಂಬಂಧಿಸಿದಂತೆ ಉದ್ಯಮಗಳನ್ನು ಸ್ಥಾಪಿಸಿದರು. ಆದರೆ ನಮ್ಮ ರಾಷ್ಟ್ರದ ವಿಸ್ತಾರ, ನೈಸರ್ಗಿಕ ಸಂಪತ್ತು ಹಾಗೂ ಆವಶ್ಯಕತೆಗಳ ದೃಷ್ಟಿಯಿಂದ ಇವು ತೀರ ಚಿಕ್ಕ ಪ್ರಯತ್ನಗಳೆನ್ನಬೇಕು. ಅಲ್ಲದೆ ಹೀಗೆ ಸ್ಥಾಪಿತವಾದ ಉದ್ಯಮಗಳನ್ನು ಬೆಳೆಸುವುದರಲ್ಲೂ ಸರಕಾರಕ್ಕೆ ಆಸಕ್ತಿಯಿರಲಿಲ್ಲ. ಕಾರಣ ಅವುಗಳ ಅಭಿವೃದ್ಧಿಯಿಂದ ಭಾರತದಲ್ಲಿ ತಮ್ಮ ತಯಾರಿಕೆಗಳ ಮಾರಾಟಕ್ಕೆ ಕುಂದು ಬಂದೀತೆಂಬ ಭಯ ಬ್ರಿಟಿಷ್ ಆಳರಸರಿಗೆ ಇದ್ದೇ ಇತ್ತು.

ಆದ್ದರಿಂದ ನಮ್ಮ ರಾಷ್ಟ್ರದಲ್ಲಿ ವ್ಯವಸ್ಥಿತ ರೀತಿಯಲ್ಲಿ ಉದ್ಯಮಾಭಿವೃದ್ಧಿ ಆರಂಭವಾದದ್ದು ಸ್ವಾತಂತ್ರ್ಯಾನಂತರವೇ ಎನ್ನಬೇಕು. ನಮ್ಮ ಪಂಚವಾರ್ಷಿಕ ಯೋಜನೆಗಳಲ್ಲಿ ಉದ್ಯಮಾಭಿವೃದ್ಧಿಗೆ ವಿಶಿಷ್ಟ ಸ್ಥಾನವಿದೆ. ಕಳೆದ ನಾಲ್ಕು ಯೋಜನೆಗಳ ಅವಧಿಯಲ್ಲಿ ನಮ್ಮ ರಾಷ್ಟ್ರದಲ್ಲಿ ಅನೇಕ ಹೊಸ ಉದ್ಯಮಗಳು ಸ್ಥಾಪಿಸಲ್ಪಟ್ಟುವು, ಆ ಮೊದಲೇ ಇದ್ದ ಉದ್ಯಮಗಳ ವಿಸ್ತರಣ, ನವೀನೀಕರಣಗಳೂ ನಡೆದಿವೆ.

ರಾಷ್ಟ್ರರಕ್ಷಣೆಗೆ ಸಂಬಂಧಿಸಿದ, ಹಾಗೂ ಮೂಲಭೂತವಾದ ಉದ್ಯಮಗಳನ್ನು ಸರಕಾರ ಪ್ರಧಾನವಾಗಿ ತನ್ನ ಸ್ವಾಧೀನದಲ್ಲಿ ಇಟ್ಟುಕೊಂಡಿದೆ; ಜನರ ಬಳಕೆಯ ವಸ್ತುಗಳ ತಯಾರಿಕೆಯ ಬಹುಭಾಗವನ್ನು ಖಾಸಗೀ ಉದ್ಯಮವಲಯಕ್ಕೆ ಬಿಟ್ಟುಕೊಟ್ಟಿದೆ. ಸಹಕಾರೀ ಉದ್ಯಮರಂಗ ಕೂಡ ಜನ ಬಳಕೆಯ ವಸ್ತುಗಳ ನಿರ್ಮಾಣ ರಂಗವನ್ನು ಪ್ರವೇಶಿಸಿದೆ. ಹಾಗೆಯೇ ಸರಕಾರವೂ ಈ ವರ್ಗದ ಕೆಲವು ಉದ್ಯಮಗಳನ್ನು ತಾನೂ ಕೈಗೊಂಡಿದೆ.


ಭಾರತ ಸರಕಾರದ ಸ್ವಾಧೀನದಲ್ಲಿರುವ ಕಬ್ಬಿಣ ಮತ್ತು ಉಕ್ಕಿನ ಕಾರಖಾನೆಗಳು ರೂರ್ಕೆಲಾ, ಭಿಲಾಯ್, ದುರ್ಗಾಪುರ, ಬೊಕಾರೊಗಳಲ್ಲಿವೆ. ಹೊಸಪೇಟೆ, ಸೇಲಂ ಮತ್ತು ವಿಶಾಖಪಟ್ಟಣ ಪ್ರದೇಶಗಳಲ್ಲಿ ಕೂಡ ಕಬ್ಬಿಣದ ಕಾರಖಾನೆಗಳು ಸ್ಥಾಪಿತವಾಗಲಿವೆ.

ರಾಷ್ಟ್ರರಕ್ಷಣೆಗೆ ಸಂಬಂಧಿಸಿದಂತೆ ಆಯುಧಗಳು, ವಾಹನಗಳು, ವಿಮಾನಗಳು ಮತ್ತು ಇತರ ಆವಶ್ಯಕ ಉಪಕರಣ ಹಾಗೂ ವಸ್ತುಗಳನ್ನು ತಯಾರಿಸಲು ವರಣಗಾಂ, ತಿರುಚಿರಪಳ್ಳಿ, ಭಾಂಡಾರ, ಅಂಬರ್‌ನಾಥ್, ಚಂದ್ರಪುರ, ಬೆಂಗಳೂರು, ಕಾನ್‌ಪುರ, ನಾಸಿಕ್, ಕೋರಾಪುಟ್, ಆವಡಿ, ಹೈದರಾಬಾದ್‌ಗಳಲ್ಲಿ ಕಾರಖಾನೆಗಳಿವೆ. ಇವೆಲ್ಲವೂ ಸರಕಾರೀ ವಲಯಕ್ಕೆ ಸೇರಿದುವು.

ಮೂಲಭೂತವಾದ ಉದ್ಯಮಗಳಲ್ಲಿ ಕಬ್ಬಿಣ ಮತ್ತು ಉಕ್ಕಿನ ತಯಾರಿಕೆ ಕ್ಷೇತ್ರವನ್ನು ಬಿಟ್ಟು, ಹಡಗು, ರೈಲುಗಾಡಿಗಳು, ರೈಲ್ವೆ ಎಂಜಿನ್‌ಗಳು ಇವುಗಳ ತಯಾರಿಯಲ್ಲೂ ಸರಕಾರ ಆಸಕ್ತಿ ವಹಿಸಿದೆ, ಹಾಗೆಯೇ ಔಷಧಿ ತಯಾರಿಕೆಯಲ್ಲೂ ಕೂಡ. ವಾಸ್ತವವಾಗಿ ಸರಕಾರೀ ವಲಯಕ್ಕೆ –ಕೇಂದ್ರ ಹಾಗೂ ರಾಜ್ಯ– ಸೇರಿದಂತೆ ನೂರಾರು ಉದ್ಯಮಗಳು ನಡೆಯುತ್ತಿವೆ. ತಯಾರಿಕಾ ಕ್ಷೇತ್ರವಲ್ಲದೆ, ಅಂತರರಾಷ್ಟ್ರೀಯ ವ್ಯಾಪಾರದಲ್ಲೂ ಸರಕಾರ ತೊಡಗಿದೆ.

ಬಟ್ಟೆ ತಯಾರಿಕೆ ಪ್ರಧಾನವಾಗಿ ಖಾಸಗೀ ಉದ್ಯಮ ವಲಯಕ್ಕೆ ಸೇರಿದ್ದು.

ರಾಷ್ಟ್ರದ ಉದ್ಯಮಗಳನ್ನು ವ್ಯವಸ್ಥಿತ ರೀತಿಯಲ್ಲಿ ಸರ್ವತೋಮುಖವಾಗಿ ಬೆಳೆಸಿ ಆದಷ್ಟು ಸ್ವಪೂರ್ಣತೆಯನ್ನು ಸಾಧಿಸುವುದು, ರಾಷ್ಟ್ರದ ಆದಾಯ ಕೆಲವೇ ಕೈಗಳಲ್ಲಿ ಕೇಂದ್ರಿತವಾಗುವುದನ್ನು ತಡೆಯುವುದು, ಸಮಾಜವಾದೀ ಸಮಾಜವನ್ನು ಸೃಷ್ಟಿಸಲು ಅನುಕೂಲವಾದ ವಾತಾವರಣವನ್ನು ಕಲ್ಪಿಸುವುದು ನಮ್ಮ ಈ ಉದ್ಯಮ ನೀತಿಯ ಪ್ರಧಾನ ಉದ್ದೇಶ.



ಯಾವುದೇ ರಾಷ್ಟ್ರದ ಉದ್ಯಮಗಳ ನಿರಂತರ ಅಭಿವೃದ್ಧಿ ಸಂಶೋಧನೆಯನ್ನವಲಂಬಿಸಿದೆ. ಸಂಶೋಧನೆಯಿಲ್ಲದೆ ಪ್ರಗತಿಯಿಲ್ಲ. ಈ ಅಂಶವನ್ನು ಗಮನಿಸಿ, ಭಾರತ ಸರಕಾರ ರಾಷ್ಟ್ರದ ವಿವಿಧ ಭಾಗಗಳಲ್ಲಿ ನಾನಾ ರಂಗಗಳಿಗೆ ಸಂಬಂಧಿಸಿದಂತೆ ಸಂಶೋಧನಾ ಸಂಸ್ಥೆಗಳನ್ನೂ ಕೇಂದ್ರಗಳನ್ನೂ ಸ್ಥಾಪಿಸಿದೆ. ಈ ಕ್ಷೇತ್ರ ಭೂವ್ಯವಸಾಯದಿಂದ ಪರಮಾಣುಶಕ್ತಿಯವರೆಗೆ ವಿಸ್ತಾರವಾಗಿ ಹಬ್ಬಿದೆ. ಹಲವಾರು ಖಾಸಗೀ ಉದ್ಯಮಗಳವರೂ ತಮ್ಮ ತಮ್ಮ ಕಾರ್ಯಕ್ಷೇತ್ರಗಳಿಗೆ ಸಂಬಂಧಿಸಿದಂತೆ ಸಂಶೋಧನಾ ವ್ಯವಸ್ಥೆಗಳನ್ನು ಬೆಳೆಸಿಕೊಂಡು ಬಂದಿದ್ದಾರೆ. ವಿಜ್ಞಾನದ ಮೂಲತತ್ತ್ವ ಹಾಗೂ ಅನ್ವಯ ಇವೆರಡೂ ರಂಗಗಳಲ್ಲಿ ಸಂಶೋಧನೆ ನಡೆಯುತ್ತಿದೆ.

ರಾಷ್ಟ್ರವೆಂದರೇನು ? ಪ್ರಜೆಗಳೇ ರಾಷ್ಟ್ರ. ಅವರ ರಕ್ಷಣೆ, ಹಿತಸಾಧನೆಗಳೇ ರಾಷ್ಟ್ರದ ಹಿತ ಸಾಧನೆಯ ಮೂಲ. ಜೀವನಾನುಕೂಲಗಳ ಕಲ್ಪನೆ ಈ ಹಿತಸಾಧನೆಯ ಒಂದು ಅಂಶ ಮಾತ್ರ. ಈ ಭೌತಿಕ ಹಿತವನ್ನು ಸಾಧಿಸುವುದರ ಜೊತೆಗೆ, ಅವರ ಧಾರ್ಮಿಕ, ಸಾಂಸ್ಕೃತಿಕ ಹಿತವನ್ನು ಸಾಧಿಸುವುದು ಅವಶ್ಯ ಎಂಬ ಭಾವನೆಗೆ ಹಿಂದಿನಿಂದಲೂ ಪುರಸ್ಕಾರವಿದೆ. ಸಂಸ್ಕೃತಿಯನ್ನು ಬೆಳೆಸುವುದರಲ್ಲಿ ವಿದ್ಯಾಭ್ಯಾಸದ ಪಾತ್ರ ದೊಡ್ಡದು.

ವಿದ್ಯಾಭ್ಯಾಸದ ಸ್ವರೂಪ ಕಾಲ ಕಾಲಕ್ಕೆ ಬದಲಾಗುತ್ತಲೇ ಇರುತ್ತದೆ –ಜೀವನದ ಆವಶ್ಯಕತೆಗಳನ್ನೂ ಸಮಾಜದ ವ್ಯವಸ್ಥೆಗಳನ್ನೂ ಅವಲಂಬಿಸಿರುತ್ತದೆ. ಹಾಗೆಯೇ ವಿದ್ಯಾಭ್ಯಾಸದ ಗುರಿಯೂ ಕೂಡ.

ವೇದಗಳ ಕಾಲದಲ್ಲಿ ದೇವತಾರಾಧನೆಗೆ ಪ್ರಾಶಸ್ತ್ಯವಿತ್ತು. ದೇವ ದೇವತೆಗಳನ್ನು ತೃಪ್ತಿಪಡಿಸುವುದರಿಂದ ಸಮಾಜಕ್ಕೆ ಹಿತವುಂಟಾಗುವುದೆಂಬ ನಂಬಿಕೆಯಿತ್ತು. ಅದ್ದರಿಂದ ದೇವತಾರಾಧನೆಗೆ ಸಂಬಂಧಿಸಿದ ವೇದವಿದ್ಯೆಯನ್ನು ಕಲಿಸುವ ವ್ಯವಸ್ಥೆ ಏರ್ಪಟ್ಟಿತು. ಇದು ಒಂದು ಭಾಗ. ಹಾಗೆಯೇ ಸಮಾಜವನ್ನು ಹೊರಗಿನವರ ಪೀಡೆಯಿಂದ ತಪ್ಪಿಸುವ ಮತ್ತು ಸಾಮಾಜಿಕ ವ್ಯವಸ್ಥೆಯನ್ನು ನೋಡಿಕೊಳ್ಳುವ ವರ್ಗ ಬೆಳೆದಾಗ ಅವರಿಗೆ ಕ್ಷತ್ರಿಯೋಚಿತ ವಿದ್ಯೆಗಳ ಶಿಕ್ಷಣ ಏರ್ಪಟ್ಟಿತ್ತು. ಜೀವನಾನುಕೂಲ್ಯಗಳ ಪೂರೈಕೆಗಾಗಿ ಅವನ್ನು ನಿರ್ಮಿಸುವ ಗುಂಪು ಹುಟ್ಟಿತು. ಹಿರಿಯರು ಕಿರಿಯರಿಗೆ ಹೇಳಿಕೊಡುವ ಪರಂಪರೆ ಬೆಳೆಯಿತು. ಆರಂಭಕಾಲದಲ್ಲಿ ವೃತ್ತಿ ಬದಲಾವಣೆಗೆ ಅಂಥ ವಿರೋಧವಿರಲಿಲ್ಲ. ಕಾಲ ಕ್ರಮೇಣ ಒಂದೊಂದು ವೃತ್ತಿಯನ್ನವಲಂಬಿಸುವವರು ಒಂದೊಂದು ವರ್ಗವಾದರು. ಆ ವರ್ಗದ ಶಿಕ್ಷಣ ಅವರಿಗೇ ಮೀಸಲಾಯಿತು.

ಮೊದಲು ಮೊದಲು ಕುಟುಂಬದ ಹಿರಿಯರಿಂದ ಕಿರಿಯರಿಗೆ ಶಿಕ್ಷಣ ದೊರೆಯುತ್ತಿತ್ತು. ಪ್ರಜಾಸಂಖ್ಯೆ ಬೆಳೆದು ಕಲಿಯುವವರ ಸಂಖ್ಯೆ ಬೆಳೆದಂತೆ ಗುರುಕುಲಗಳು, ಆಶ್ರಮಗಳು ಹುಟ್ಟಿಕೊಂಡವು. ಅವು ಶಿಕ್ಷಣ ಕೇಂದ್ರಗಳಾದುವು. ಅಲ್ಲಿನ ಶಿಕ್ಷಣಕ್ಕೆ ಒಂದು ರೂಪು, ಕಟ್ಟುಪಾಡು ಬಂತು. ದೇಶಸಂಚಾರ ವಿದ್ಯಾಭ್ಯಾಸದ ಅಂಗವಾಯಿತು. ಅದಿಲ್ಲದೆ ವಿದ್ಯಾಭ್ಯಾಸ ಪೂರ್ಣವಾಗುವುದಿಲ್ಲ ಎಂಬ ಭಾವನೆಯಿತ್ತು.

ಕ್ರಿ.ಪೂ. ಎಂಟನೆಯ ಶತಮಾನದ ಹೊತ್ತಿಗೆ ಕಾಶಿ ತಕ್ಷಶಿಲಾಗಳಲ್ಲಿ ದೊಡ್ಡ ಪ್ರೌಢವಿದ್ಯಾ ಕೇಂದ್ರಗಳು ಸ್ಥಾಪಿತವಾದುವು. ಕಾಲ ಕ್ರಮೇಣ ಇಂಥ ಮಹಾವಿದ್ಯಾಲಯಗಳು –ಘಟಿಕಾಸ್ಥಾನಗಳು– ರಾಷ್ಟ್ರದ ವಿವಿಧ ಭಾಗಗಳಲ್ಲಿ ಬೆಳೆದುವು. ಪಾಟಲೀಪುರ, ವಿದಿಶಾ, ಕಾಂಚಿ, ಧಾರಾನಗರ –ಹೀಗೆ. ಅಧ್ಯಯನ ವಿಷಯ ಕೇವಲ ವೇದವಿದ್ಯೆಗೆ ಮಾತ್ರ ಮೀಸಲಾಗಿರದೆ ವಿಸ್ತಾರಗೊಂಡಿತು: ಅವೈದಿಕ ತತ್ತ್ವಜ್ಞಾನ, ಜ್ಯೋತಿಷ, ವೈದ್ಯ, ನ್ಯಾಯಶಾಸ್ತ್ರ ಮುಂತಾದ ವಿಚಾರಗಳನ್ನು –ಹದಿನೆಂಟು ಮಹಾ ವಿದ್ಯೆಗಳನ್ನು– ಬೋಧಿಸುತ್ತಿದ್ದರು.

ಬೌದ್ಧಧರ್ಮ ಪ್ರಾಬಲ್ಯಕ್ಕೆ ಬಂದಂತೆ, ಅವರ ಶಿಕ್ಷಣ ವ್ಯವಸ್ಥೆಯೂ ವಿಸ್ತಾರಗೊಂಡಿತು. ನಾಲಂದಾ, ಸಾರನಾಥ, ವಲಭಿ, ಅಮರಾವತಿ ಮಹಾ ವಿದ್ಯಾಲಯಗಳು ಪ್ರಸಿದ್ಧವಾದುವು. ಇವು ವಿದೇಶೀಯ ವಿದ್ವಾಂಸರನ್ನೂ ಆಕರ್ಷಿಸುತ್ತಿದ್ದುವು. ಕಾಂಚಿ, ಉಜ್ಜಯಿನಿ, ವಾರಾಣಸಿಗಳು ಹೆಚ್ಚಿನ ವೈದಿಕ ಪ್ರಭಾವವುಳ್ಳ ವಿದ್ಯಾಕೇಂದ್ರಗಳಾಗಿದ್ದುವು. ತುಂಬ ಹಿಂದಿನ ಕಾಲದಿಂದಲೂ ಉಜ್ಜಯಿನಿಯಲ್ಲಿ ಗಣಿತ, ಖಗೋಳಶಾಸ್ತ್ರಗಳ ಅಧ್ಯಯನಕ್ಕೆ ಪ್ರಾಶಸ್ತ್ಯವಿತ್ತು. ಯಾದವ ವಂಶದ ಸಿಂಘಣನ ಕಾಲದಲ್ಲಿ (13ನೆಯ ಶತಮಾನ) ಭಾಸ್ಕರಾಚಾರ್ಯನ ಮೊಮ್ಮಗ ದೇವಗಿರಿಯಲ್ಲಿ ಸ್ಥಾಪಿಸಿದ ಜ್ಯೋತಿಷ ಮಹಾವಿದ್ಯಾಲಯವು ಆ ಕಾಲಕ್ಕೆ ಪ್ರಸಿದ್ಧವಾಗಿತ್ತು.

ಎಂಟನೆಯ ಶತಮಾನದಿಂದೀಚೆಗೆ, ಬಿಹಾರ ಮತ್ತು ಬಂಗಾಳ ಪ್ರದೇಶದಲ್ಲಿ ಉದಯಪುರ, ವಿಕ್ರಮಶೀಲ, ಸೋಮಪುರ, ಜಗದ್ದಳ, ನವದ್ವೀಪಗಳು ಸುಪ್ರಸಿದ್ಧ ವಿದ್ಯಾಕೇಂದ್ರಗಳಾಗಿದ್ದುವು.

ಹನ್ನೊಂದನೆಯ ಶತಮಾನದ ಕನ್ನಡನಾಡಿನಲ್ಲಿ ಬಳ್ಳಿಗಾವೆಯ ಕೋಡಿಮಠ ಒಂದು ಪ್ರಸಿದ್ಧ ವಿದ್ಯಾಕೇಂದ್ರವಾಗಿತ್ತು. ಕಾಳಾಮುಖ ಪಂಥದ ಶೈವಯತಿಗಳು ನಡೆಸಿಕೊಂಡು ಬರುತ್ತಿದ್ದ ಈ ಕೇಂದ್ರದಲ್ಲಿ ನಾಲ್ಕು ವೇದಗಳು, ಅವುಗಳ ಅಂಗಗಳು, ವ್ಯಾಕರಣ, ಷಡ್ದರ್ಶನಗಳು, ಬೌದ್ಧ, ಲಾಕುಲಶೈವ, ಯೋಗಶಾಸ್ತ್ರಗಳ ಪಾಠ ನಡೆಯುತ್ತಿತ್ತೆಂದು ಶಾಸನ ಉಲ್ಲೇಖವಿದೆ. ವೈದ್ಯ ಶಿಕ್ಷಣವೂ ಇಲ್ಲಿ ದೊರೆಯುತ್ತಿದ್ದು ಅದಕ್ಕೆ ಸಂಬಂಧಿಸಿದಂತೆ ಒಂದು 'ಭೈಷಜ್ಯಸ್ಥಾನ' (ಆಸ್ಪತ್ರೆ)ವೂ ಇದ್ದಿತು.

ಪ್ರೌಢವಿದ್ಯಾಭ್ಯಾಸಕ್ಕೆ ಮೀಸಲಾಗಿದ್ದ ದೊಡ್ಡ ವಿದ್ಯಾಲಯಗಳನ್ನು ಬಿಟ್ಟರೆ, ಚಿಕ್ಕ ಚಿಕ್ಕ ಮಠಗಳಲ್ಲಿ ಸಾಮಾನ್ಯರ ವಿದ್ಯಾಭ್ಯಾಸ ನಡೆಯುತ್ತಿತ್ತು.

13ನೆಯ ಶತಮಾನದ ಆದಿಭಾಗದಲ್ಲಿ ಮಹಮ್ಮದೀಯರು ಭಾರತದಲ್ಲಿ ತಮ್ಮ ಆಡಳಿತವನ್ನು ಆರಂಭಿಸಿದ ಮೇಲೆ, ಭಾರತಕ್ಕೆ ಹೊಸ ಭಾಷೆ, ಸಾಹಿತ್ಯಗಳ ಪ್ರವೇಶವಾಯಿತು. ಮಂಗೋಲರ ದಾಳಿಗೊಳಗಾದ ಮಧ್ಯ ಏಷ್ಯಾದಿಂದ ಪಾರಸೀ ಭಾಷೆಯ ವಿದ್ವಾಂಸರು ಭಾರತಕ್ಕೆ ವಲಸೆ ಬಂದರು. ದೆಹಲಿಯ ಸುಲ್ತಾನರು ಇವರಿಗೆ ಆಶ್ರಯ ಕೊಟ್ಟರು. ದೆಹಲಿ, ಜಲಂಧರ್, ಫಿರೋಜಾಬಾದ್ ಮುಂತಾದೆಡೆಗಳಲ್ಲಿ ಮಹಮ್ಮದೀಯ ವಿದ್ಯಾಕೇಂದ್ರಗಳು ಸ್ಥಾಪಿತವಾದುವು.

ಈ ಪರಂಪರೆ ವಿಸ್ತಾರಗೊಂಡದ್ದು ಮೊಘಲರ ಕಾಲದಲ್ಲಿ. ಅಕ್ಬರ್ ಫತೇಪುರ್ ಸಿಕ್ರಿ, ಆಗ್ರಾ ಮತ್ತು ಇನ್ನು ಕೆಲವು ಸ್ಥಳಗಳಲ್ಲಿ ಪ್ರೌಢವಿದ್ಯಾಕೇಂದ್ರಗಳನ್ನು ಸ್ಥಾಪಿಸಿದ. ಸಾಮಾನ್ಯ ಮುಸಲ್ಮಾನರ ವಿದ್ಯಾಭ್ಯಾಸಕ್ಕಾಗಿ 'ಮದರಸಾ' ಗಳನ್ನು ತೆರೆದ.

ಹೀಗೆ ಭಾರತದಲ್ಲಿ ಪಾರಸೀ ಭಾಷೆಯ ಅಭ್ಯಾಸ ಬೆಳೆದ ಮೇಲೆ, ಆ ಭಾಷೆಯ ವಿದ್ವಾಂಸರ ದೃಷ್ಟಿ ಸಂಸ್ಕೃತ ಸಾಹಿತ್ಯದ ಮೇಲೆ ಬಿತ್ತು. ಸಂಸ್ಕೃತ, ಪಾರಸೀ, ಅರಬೀ ಭಾಷೆಗಳಲ್ಲಿ ಪಂಡಿತನಾಗಿದ್ದ ದಾರಾಷುಕೊ –ಷಾಜಹಾನನ ಮಗ –ಉಪನಿಷತ್ತುಗಳು, ಭಗವದ್ಗೀತೆ,

ಯೋಗವಾಸಿಷ್ಠ, ರಾಮಾಯಣಗಳನ್ನು ಪಾರಸೀ ಭಾಷೆಗೆ ಅನುವಾದ ಮಾಡಿದ. ಅವನು ಅಕಾಲ ಮರಣಕ್ಕೆ ಬಳಗಾಗದೆ ಇದ್ದು ಮೊಘಲ್ ಚಕ್ರವರ್ತಿಯಾಗಿ ಆಳಿದ್ದರೆ, ಅಂದಿನ ಭಾರತದ ವಿದ್ಯಾಭ್ಯಾಸ ಪದ್ಧತಿಯ ಸ್ವರೂಪವೇ ಬದಲಾಗುತ್ತಿತ್ತೇನೋ.

ಹದಿನೆಂಟನೆಯ ಶತಮಾನದ ಕೊನೆಯ ಭಾಗದಲ್ಲಿ ಬ್ರಿಟಿಷರು ಬಂಗಾಳದಲ್ಲಿ ಬೇರೂರಿದ ಅನಂತರ ಭಾರತದ ಮೇಲೆ ಇಂಗ್ಲಿಷ್ ಭಾಷೆಯ ಪ್ರಭಾವ ಬಿತ್ತು. ಇಂಗ್ಲಿಷ್ ಕಲಿತ ಜನ ತಮ್ಮ ಪೂರ್ವಿಕರ ವಿಚಾರಗಳನ್ನೂ ಸಂಪ್ರದಾಯಗಳನ್ನೂ ಆಧುನಿಕ ದೃಷ್ಟಿಯಿಂದ ನೋಡಿ ವಿಮರ್ಶಿಸತೊಡಗಿದರು. ರಾಜಾ ರಾಮಮೋಹನರಾಯರಂಥ ವಿಚಾರಶೀಲ ಸುಧಾರಕರು ಹುಟ್ಟಿಕೊಂಡರು. ಭಾರತೀಯರಿಗೆ ಸಾರ್ವತ್ರಿಕವಾಗಿ ಇಂಗ್ಲಿಷ್ ವಿದ್ಯಾಭ್ಯಾಸಕೊಡುವ ಅಭಿಲಾಷೆ ಅಂದಿನ ಬ್ರಿಟಿಷ್ ಆಡಳಿತಗಾರರಿಗೆ ಇರಲಿಲ್ಲ. ರಾಜಾ ರಾಮಮೋಹನರಾಯ್, ಕ್ರೈಸ್ತ ಪಾದ್ರಿ ವಿಲಿಯಂ ಕೇರಿ ಮುಂತಾದವರ ಪ್ರಯತ್ನದಿಂದ ಇಂಗ್ಲಿಷ್ ವಿದ್ಯಾಭ್ಯಾಸ ಪದ್ಧತಿ ಕೊನರೊಡೆಯಿತು. ಲಾರ್ಡ್ ಮೆಕಾಲೆಯ ಪ್ರಯತ್ನದಿಂದ 1835ರಲ್ಲಿ, ಇಂಗ್ಲಿಷ್ ವಿದ್ಯಾಭ್ಯಾಸವನ್ನು ಭಾರತದಲ್ಲಿ ವಿಸ್ತರಿಸುವ ನಿರ್ಣಯವಾಯಿತು. ಇಂಗ್ಲಿಷ್ ವಿದ್ಯಾಭ್ಯಾಸ ಬೆಳೆಯುವುದರಿಂದ, ಬ್ರಿಟಿಷ್ ಆಡಳಿತ ಯಂತ್ರವನ್ನು ನಡೆಸಲು ಬೇಕಾದ, ಇಂಗ್ಲಿಷ್ ಬಲ್ಲ ಕಾರಕೂನರು ತಕ್ಕಷ್ಟು ಸಂಖ್ಯೆಯಲ್ಲಿ ಸಿಗುವಂತಾಗುವುದೆಂಬುದೂ ಮೆಕಾಲೆಯ ನಿರೀಕ್ಷೆಯಾಗಿತ್ತು. ಬ್ರಿಟಿಷ್ ಸರಕಾರದ ಹುದ್ದೆಗಳಿಗೆ ಸೇರಿಕೊಳ್ಳುವಾಗ, ಇಂಗ್ಲಿಷ್ ಬಲ್ಲವರಿಗೆ ಆದ್ಯತೆಯುಂಟೆಂಬ ನಿಯಮ ಏರ್ಪಟ್ಟ ಮೇಲೆ ಇಂಗ್ಲಿಷ್ ಕಲಿಯುವುದಕ್ಕೆ ದೊಡ್ಡ ಪ್ರಚೋದನೆ ದೊರೆಯಿತು.

ಇಂಗ್ಲಿಷ್ ವಿದ್ಯಾಭ್ಯಾಸವನ್ನು ವಿಸ್ತರಿಸುವಲ್ಲಿ ಮೆಕಾಲೆ ಮತ್ತು ಕ್ರೈಸ್ತ ಪಾದ್ರಿಗಳ ಮೂಲ ಉದ್ದೇಶ ಏನೇ ಇರಲಿ – ಅದು ನಮ್ಮ ಜನರ ಮೇಲೆ ಹಂತ ಹಂತವಾಗಿ ಕೆಲವು ಪರಿಣಾಮಗಳನ್ನು ಉಂಟುಮಾಡಿತು; ಬ್ರಿಟಿಷರ ಜೀವನ ವಿಧಾನ, ಸಂಸ್ಕೃತಿಗಳ ಕುರುಡು ಮೆಚ್ಚುಗೆ, ಅನುಕರಣ : ಭಾರತೀಯ ಸಂಸ್ಕೃತಿ, ಜೀವನ ವಿಧಾನಗಳ ಅನವಶ್ಯ ನಿರಾಕರಣೆಗೆ – ಇದು ಮೊದಲ ಹಂತ : ನಮ್ಮ ವಿದ್ಯಾವಂತರಲ್ಲಿ ವಿಮರ್ಶಾತ್ಮಕ ಚಿಂತನೆ ಬೆಳೆದಂತೆ ಈ ಅವಿಚಾರ ಅಭಿಪ್ರಾಯ ತೊಲಗಿ ಸ್ವಾಭಿಮಾನ ಮೂಡಿದ್ದು, ನಮ್ಮ ದೃಷ್ಟಿ ವಿಶಾಲವಾದದ್ದು, ಪಾಶ್ಚಿಮಾತ್ಯ ರಾಷ್ಟ್ರಗಳ ಸ್ವಾತಂತ್ರ್ಯ ಭಾವನೆಗಳು, ಚಳುವಳಿಗಳ ತಿಳಿವಳಿಕೆಯ ಪರಿಣಾಮವಾಗಿ ನಮ್ಮಲ್ಲಿ ಸ್ವಾತಂತ್ರ್ಯಾಕಾಂಕ್ಷೆ ಮೂಡಿದ್ದು – ಇದು ಇನ್ನೊಂದು ಹಂತ.

ಆರಂಭ ಕಾಲದ ಬ್ರಿಟಿಷ್ ಅಧಿಕಾರಿಗಳಲ್ಲಿ ಕೆಲವರು ಅಪೇಕ್ಷಿಸಿದ್ದಂತೆ, ನಮ್ಮ ವಿದ್ಯಾಭ್ಯಾಸ ಪ್ರಾಚೀನ ಭಾರತೀಯ ಜ್ಞಾನಕ್ಷೇತ್ರಕ್ಕೇ ಸೀಮಿತವಾಗಿದ್ದರೆ, ನಾವು ಕೇವಲ 190 ವರ್ಷಗಳ ಅವಧಿಯಲ್ಲಿ ಬ್ರಿಟಿಷರ ಹಿಡಿತವನ್ನು ಕಳಚಿಕೊಂಡು ಸ್ವತಂತ್ರರಾಗುತ್ತಿದ್ದೆವೆ ಎಂಬುದು ಸಂದೇಹಾಸ್ಪದವಾದ ವಿಚಾರ.

ಬ್ರಿಟಿಷ್ ಆಡಳಿತದಲ್ಲಿ ವಿದ್ಯಾಭ್ಯಾಸ ಬಹುಮುಖವಾಗಿ ವಿಸ್ತರಿಸಿತು. ಸ್ತ್ರೀ ವಿದ್ಯಾಭ್ಯಾಸಕ್ಕೆ ತಳಹದಿ ಹಾಕಲಾಯಿತು. 1857ರಲ್ಲಿ ಅಂದರೆ ಸಿಪಾಯಿದಂಗೆ ನಡೆದ ವರ್ಷ ಮದರಾಸು, ಮುಂಬಯಿ, ಕಲ್ಕತ್ತಾಗಳಲ್ಲಿ ವಿಶ್ವವಿದ್ಯಾಲಯಗಳು ಸ್ಥಾಪಿತವಾದುವು. 1898ರಲ್ಲಿ ಭಾರತಕ್ಕೆ ವೈಸ್‌ರಾಯ್ ಆಗಿ ಬಂದ ಲಾರ್ಡ್ ಕರ್ಜನ್ ವಿದ್ಯಾಭ್ಯಾಸದಲ್ಲಿ ತುಂಬಾ ಆಸಕ್ತಿವಹಿಸಿದ. ಪ್ರಾಥಮಿಕ ಶಿಕ್ಷಣದಿಂದ ಆರಂಭ ಮಾಡಿಕೊಂಡು ವಿಶ್ವವಿದ್ಯಾನಿಲಯ ಶಿಕ್ಷಣದ ವರೆಗೆ ಅನೇಕ ಸುಧಾರಣೆಗಳನ್ನು ಸಾಧಿಸಿದ. ಭೂ ವ್ಯವಸಾಯಕ್ಕೆ ಸಂಬಂಧಿಸಿದಂತೆ ಪ್ರೌಢ ಶಿಕ್ಷಣ ಕೊಡಲು ಮತ್ತು ಸಂಶೋಧನೆ ನಡೆಸಲು ಒಂದು ಸಂಸ್ಥೆಯನ್ನು ಸ್ಥಾಪಿಸಿದ. ಹಾಗೆಯೇ ತಾಂತ್ರಿಕ ಶಿಕ್ಷಣ ಪಡೆಯಲು ವಿದೇಶಗಳಿಗೆ ಹೋಗಿಬರಲು ವೇತನಗಳನ್ನು ಕೊಡಿಸಿದ.

ಬ್ರಿಟಿಷ್ ಆಡಳಿತದ ಅವಧಿಯಲ್ಲಿ ಹಾಗೂ ಸ್ವಾತಂತ್ರ್ಯಾನಂತರ ವಿದ್ಯಾಭ್ಯಾಸವನ್ನು ವಿಸ್ತರಿಸುವ ಮತ್ತು ಅದರ ಗುಣಮಟ್ಟವನ್ನು ಉತ್ತಮಗೊಳಿಸುವ ದೃಷ್ಟಿಯಿಂದ ಸಲಹೆಗಳನ್ನು ಕೊಡಲು ಆಗಿಂದಾಗ್ಗೆ ಸಮಿತಿಗಳು ರಚಿಸಲ್ಪಟ್ಟುವು. ಈ ಸಲಹೆಗಳನ್ನು ಸಾಧ್ಯವಾದ ಮಟ್ಟಿಗೆ ಆಚರಣೆಗೆ ತರಲಾಯಿತು. ಇದರ ಫಲವಾಗಿ ನಮ್ಮ ರಾಷ್ಟ್ರದ ವಿದ್ಯಾಭ್ಯಾಸ ಈಗ ಪ್ರಾಥಮಿಕ, ಪ್ರೌಢ, ಸ್ನಾತಕ ಹಾಗೂ ಸ್ನಾತಕೋತ್ತರ ಮಟ್ಟಗಳಲ್ಲಿ ನಡೆಯುತ್ತಿದೆ. ತಾಂತ್ರಿಕ ಮತ್ತು ವೃತ್ತಿಶಿಕ್ಷಣಗಳು ಡಿಪ್ಲೋಮ, ಸ್ನಾತಕ ಮತ್ತು ಸ್ನಾತಕೋತ್ತರ ಹಂತಗಳಲ್ಲಿ ನಡೆಯುತ್ತಿವೆ. ಅಭಿವೃದ್ಧಿಶೀಲವಾದ ರಾಷ್ಟ್ರಗಳಲ್ಲಿ ತಾಂತ್ರಿಕ ಮತ್ತು ವೃತ್ತಿ ಶಿಕ್ಷಣ ಪಡೆದವರ ಸೇವೆ ದೊಡ್ಡ ಪ್ರಮಾಣದಲ್ಲಿ ಬೇಕಾಗುವುದರಿಂದ ಇಂಥ ಶಿಕ್ಷಣವನ್ನು ಸ್ವಾತಂತ್ರ್ಯೋತ್ತರ ಕಾಲದಲ್ಲಿ ತುಂಬ ವಿಸ್ತರಿಸಲಾಯಿತು. ಹಲವಾರು ಉದ್ಯಮ, ವ್ಯವಸಾಯಗಳಿಗೆ ಸಂಬಂಧಿಸಿದಂತೆ, ಹಾಗೂ ಶುದ್ಧ ವಿಜ್ಞಾನದ ವಿವಿಧ ಅಂಗಗಳಿಗೆ ಸಂಬಂಧಿಸಿದಂತೆ ಸಂಶೋಧನೆ ನಡೆಸುವ ಸಂಸ್ಥೆಗಳೂ ಸ್ಥಾಪಿತವಾಗಿವೆ.

1857ರಲ್ಲಿ ನಮ್ಮ ರಾಷ್ಟ್ರದಲ್ಲಿ ಸ್ಥಾಪಿತವಾದದ್ದು ಮೂರೇ ಮೂರು ವಿಶ್ವವಿದ್ಯಾಲಯಗಳು. ಅವಕ್ಕೆ ಸಂಬಂಧಿಸಿದಂತೆ ಕೆಲವೇ ಕಾಲೇಜುಗಳು. ಈಗ ನಮ್ಮಲ್ಲಿ 86 ವಿಶ್ವವಿದ್ಯಾಲಯಗಳೂ ವಿಶ್ವವಿದ್ಯಾಲಯಗಳಿಗೆ ಸಮಾನವೆಂದು ಪರಿಗಣಿಸಲಾದ 10 ವಿದ್ಯಾಸಂಸ್ಥೆಗಳೂ ಇವೆ.

ಲಾರ್ಡ್ ಕರ್ಜನ್‌ನ ಕಾಲಕ್ಕೆ ಆದ ಸುಧಾರಣೆಯಂತೆ ಪ್ರೌಢಶಾಲೆಗಳಲ್ಲಿ ಇಂಗ್ಲಿಷ್ ಶಿಕ್ಷಣಮಾಧ್ಯಮವಾಯಿತು, ಸುಮಾರು 20–25 ವರ್ಷಗಳ ಕಾಲ ಈ ವ್ಯವಸ್ಥೆಯೇ ಆಚರಣೆಯಲ್ಲಿತ್ತು. ಈ ಅವಧಿಯಲ್ಲಿ ದೇಶಭಾಷೆಗಳಲ್ಲಿ ಶಿಕ್ಷಣ ಕೊಡಬೇಕೆಂಬ ಚಳುವಳಿ ಬೆಳೆಯಿತು. ಇದಕ್ಕೆ ಪುರಸ್ಕಾರವೂ ದೊರೆಯಿತು. ಸ್ವಾತಂತ್ರ್ಯೋತ್ತರ ಕಾಲದಲ್ಲಿ



ಉಚ್ಚ ಶಿಕ್ಷಣಕ್ಕೆಂದು ಲಂಡನಿಗೆ ತೆರಳಿದ
ಮೊದಲ ವೈದ್ಯಕೀಯ ಪದವೀಧರರು

ಈ ಭಾಷಾವಾರು ಮಾನ್ಯತೆ ದೊರೆತು. ಪ್ರೌಢಶಾಲೆಗಳಲ್ಲಿ ಮಾತ್ರವಲ್ಲದೆ, ವಿಶ್ವವಿದ್ಯಾಲಯಗಳಲ್ಲಿ ಇಂಗ್ಲಿಷ್ ಜೊತೆಗೆ ದೇಶ ಭಾಷೆಗಳನ್ನು ಕೂಡ ಶಿಕ್ಷಣ ಮಾಧ್ಯಮವನ್ನಾಗಿ ಅಂಗೀಕರಿಸಲಾಗಿದೆ.

ಪ್ರಾಥಮಿಕ ವಿದ್ಯಾಭ್ಯಾಸ ವಿಸ್ತರಣೆಯ ಬಗೆಗೆ ಕಳೆದ ಎರಡು ದಶಕಗಳಿಂದ ನಿರಂತರ ಪ್ರಯತ್ನ ನಡೆದಿದೆ. ಇದರ ಪರಿಣಾಮವಾಗಿ ಪ್ರಾಥಮಿಕ ವಿದ್ಯಾಭ್ಯಾಸ ಪಡೆದವರ ಸಂಖ್ಯೆ 1951ರಲ್ಲಿ ನೂರಕ್ಕೆ 16.6 ಇದ್ದದ್ದು 1971ರಲ್ಲಿ ನೂರಕ್ಕೆ 29.4 ಆಯಿತು. ಅಂದರೆ ನಮ್ಮಲ್ಲಿ ಸುಮಾರು 2/3 ಭಾಗಕ್ಕಿಂತ ಹೆಚ್ಚು ಜನ ಇನ್ನೂ ಅನಕ್ಷರಸ್ಥರಾಗಿಯೇ ಇದ್ದಾರೆ. ವಿದ್ಯಾಭ್ಯಾಸದ ರಂಗದಲ್ಲಿ ಸಾಧಿಸಬೇಕಾಗಿರುವ ಕೆಲಸ ಎಷ್ಟು ದೊಡ್ಡದು ಎಂಬುದು ಇದರಿಂದ ಅರಿವಾಗುತ್ತದೆ.



ಪ್ರಾಚೀನ ರಂಗಮಂದಿರ—2ನೆಯ ಶತಮಾನ

ಸಾಹಿತ್ಯ, ಕಲೆ

ಜಗತ್ತಿನ ಅತ್ಯಂತ ಪ್ರಾಚೀನ ಸಾಹಿತ್ಯವಾದ ವೇದಗಳು ರೂಪುಗೊಂಡದ್ದು ನಮ್ಮ ರಾಷ್ಟ್ರದಲ್ಲಿ. ಅದರಲ್ಲಿ ಸುಂದರವಾದ ಕಾವ್ಯಭಾಗಗಳಿವೆ. ವೇದಗಳ ಭಾಷೆ ವೈದಿಕ ಸಂಸ್ಕೃತ. ಅನಂತರದ ಪ್ರಾಚೀನ ಸಂಸ್ಕೃತಕ್ಕೆ ಒಂದು ಖಚಿತವಾದ ರೂಪುಕೊಟ್ಟವನು ಕ್ರಿ. ಪೂ. 4ನೆಯ ಶತಮಾನದಲ್ಲಿದ್ದ ಪಾಣಿನಿ. ಅವನ 'ಅಷ್ಟಾಧ್ಯಾಯಿ'ಯ ಮೇಲೆ ಕ್ರಿ. ಪೂ. 2ನೆಯ ಶತಮಾನದಲ್ಲಿ ವ್ಯಾಖ್ಯೆ ಬರೆದವನು ಪತಂಜಲಿ. ಕಾಲ ಕ್ರಮದಲ್ಲಿ ಜನರ ಆಡುಭಾಷೆ ಪ್ರಾಚೀನ ಸಂಸ್ಕೃತ ಭಾಷೆಗಿಂತ ಸರಳವಾಯಿತು. ಇದನ್ನೇ ಪ್ರಾಕೃತ ಎನ್ನುವುದು. ಪ್ರಾಕೃತದಲ್ಲಿ ಪ್ರಾದೇಶಿಕ ಪ್ರಭೇದಗಳು –ಪಾಳಿ, ಮಾಗಧೀ, ಶೌರಸೇನೀ– ಇದ್ದುವು.

ಬುದ್ಧ ಮತ್ತು ಮಹಾವೀರರು ತಮ್ಮ ಧರ್ಮವನ್ನು ಜನರು ಆಡುತ್ತಿದ್ದ ಭಾಷೆಯಲ್ಲೇ ಬೋಧಿಸಿದ್ದರಿಂದ ಆ ಭಾಷೆಗಳು ಗೌರವ ಪಾತ್ರವಾದುವು. ತಮ್ಮದೇ ಆದ ಸಾಹಿತ್ಯವನ್ನು ಬೆಳೆಸಿಕೊಂಡುವು; ಇಂದು ಉತ್ತರ ಭಾರತದಲ್ಲಿ ಪ್ರಚಾರದಲ್ಲಿರುವ ಪ್ರಮುಖ ಪ್ರಾದೇಶಿಕ ಭಾಷೆಗಳಿಗೆ ಇವು ತಾಯಿ ಬೇರಾದುವು.



ನಟರಾಜ

ಇತ್ತ ದಕ್ಷಿಣದಲ್ಲಿ ಸಂಸ್ಕೃತದಿಂದ ಬೇರೆಯಾದ ದ್ರಾವಿಡ ಭಾಷೆಯಿತ್ತು. ತಮಿಳು, ಕನ್ನಡ, ತೆಲುಗು, ಮಲಯಾಳಂ, ತುಳು ಈ ಭಾಷಾವರ್ಗಕ್ಕೆ ಸೇರಿದುವು. ಆದರೆ ವಿಪುಲ ಸಾಹಿತ್ಯವುಳ್ಳ ತಮಿಳು, ಕನ್ನಡ, ತೆಲುಗು, ಮಲಯಾಳಂ ಭಾಷೆಗಳ ಮೇಲೆ ವಿವಿಧ ಪ್ರಮಾಣಗಳಲ್ಲಿ ಸಂಸ್ಕೃತದ ಪ್ರಭಾವ ಬಿದ್ದಿರುವುದನ್ನು ಕಾಣಬಹುದು. ಕ್ರಿಸ್ತ ಶಕದ ಆರಂಭದಲ್ಲಿ ರಚಿತವಾದ ತಮಿಳು ಗ್ರಂಥಗಳಲ್ಲಿ ಕೂಡ ಸಂಸ್ಕೃತದಿಂದ ಎರವಲು ಪಡೆದ ಮಾತುಗಳನ್ನು ಕಾಣುತ್ತೇವೆ.

ವೇದ, ಉಪನಿಷತ್ತುಗಳಲ್ಲಿ ಕಾವ್ಯಾಂಶವಿದೆಯಾದರೂ ಅವು ಪ್ರಧಾನವಾಗಿ ಆಧ್ಯಾತ್ಮಿಕ. ಆದ್ದರಿಂದಲೇ ನಮ್ಮಲ್ಲಿ ವಾಲ್ಮೀಕಿಯ ರಾಮಾಯಣವನ್ನು ಆದಿಕಾವ್ಯವೆನ್ನುವುದು. ರಾಮಾಯಣ, ಮಹಾಭಾರತಗಳು ನಮ್ಮ ಮಹಾಕಾವ್ಯಗಳಲ್ಲದೆ, ಅನಂತರದ ಕವಿಗಳಿಗೆ ಸ್ಫೂರ್ತಿದಾಯಕವೂ ವಸ್ತು ಆಕರಗಳೂ ಆದುವು.

ಸಂಸ್ಕೃತದಲ್ಲಿ ಉತ್ತಮ ಸಾಹಿತ್ಯ ಮಾತ್ರವಲ್ಲದೆ, ಅನೇಕ ಧಾರ್ಮಿಕ ಗ್ರಂಥಗಳೂ ಖಗೋಳ, ಗಣಿತ, ವೈದ್ಯ, ರಸಾಯನಶಾಸ್ತ್ರ, ಸಸ್ಯಶಾಸ್ತ್ರ, ಪ್ರಾಣಿಶಾಸ್ತ್ರ ಮುಂತಾದವುಗಳನ್ನು ಕುರಿತ ಅಮೂಲ್ಯ ಗ್ರಂಥಗಳೂ ಇವೆ. ಪ್ರಾದೇಶಿಕ ಭಾಷೆಗಳ ಸಾಹಿತ್ಯಕ್ಕೆ ಸಂಸ್ಕೃತ ಸಾಹಿತ್ಯ ಮಾದರಿಯಾಯಿತೆಂದು ಸ್ಥೂಲವಾಗಿ ಹೇಳಬಹುದು.



ಈಗಾಗಲೇ ಸೂಚಿಸಿರುವಂತೆ, ಭಾರತಕ್ಕೆ ಮಹಮ್ಮದೀಯರ ಪ್ರವೇಶವಾದ ಮೇಲೆ, ಅರಬೀ, ಪಾರಸೀ ಭಾಷೆಗಳು ಭಾರತವನ್ನು ಪ್ರವೇಶಿಸಿದುವು. ಈ ಭಾಷೆಗಳ ವಿದ್ವಾಂಸರು ಸಂಸ್ಕೃತವನ್ನೂ ಸಂಸ್ಕೃತ ಪಂಡಿತರು ಅರಬೀ, ಪಾರಸೀ ಭಾಷೆಗಳನ್ನೂ ಕಲಿತರು. ಗ್ರಂಥಗಳ ಪರಸ್ಪರ ಭಾಷಾಂತರವೂ ನಡೆಯಿತು. ವಿಜ್ಞಾನರಂಗದಲ್ಲೂ ಇಂಥ ವಿನಿಮಯ ನಡೆದಿದೆ. ಉರ್ದು ಭಾಷೆ ಇಂಥ ಸಂಪರ್ಕದ ಪರಿಣಾಮ. ಭಾರತದ ಪಾರಸೀ ಮತ್ತು ಉರ್ದು ಕವಿಗಳು ಉತ್ತಮ ಗ್ರಂಥ ರಚನೆ ಮಾಡಿದ್ದಾರೆ.

ಬ್ರಿಟಿಷರ ಆಡಳಿತದಲ್ಲಿ ಇಂಗ್ಲಿಷ್ ನಮ್ಮ ಪ್ರಾದೇಶಿಕ ಸಾಹಿತ್ಯಗಳ ಮೇಲೆ ತೀವ್ರವಾದ ಪರಿಣಾಮ ವನ್ನುಂಟುಮಾಡಿತು ; ಇದು ಹೊಸ ಸಾಹಿತ್ಯದೃಷ್ಟಿಗೆ, ವಿಮರ್ಶಾ ವಿಧಾನಕ್ಕೆ ದಾರಿ ಮಾಡಿಕೊಟ್ಟಿತು ; ಹೊಸ ಸಾಹಿತ್ಯ ರೂಪಗಳು ಹುಟ್ಟಿಕೊಳ್ಳಲು ಕಾರಣವಾಯಿತು. ಅರವಿಂದರು, ಜವಾಹರಲಾಲರಿಂದ ಆರ್. ಕೆ. ನಾರಾಯಣ್, ಹಾಸನದ ರಾಜಾರಾಯರ ವರೆಗೆ ಅನೇಕ ಮಂದಿ ಭಾರತೀಯರು ಇಂಗ್ಲಿಷಿನಲ್ಲಿ ಕೃತಿರಚನೆ ಮಾಡಿ ಖ್ಯಾತಿಗಳಿಸಿದರು.

ಪ್ರಕೃತಿ ದೇವತೆ

ಸಮೀಕ್ಷೆ


ಸ್ವಾತಂತ್ರ್ಯೋತ್ತರ ಕಾಲದಲ್ಲಿ ವಿವಿಧ ಭಾರತೀಯ ಭಾಷೆ ಸಾಹಿತ್ಯಗಳ ಅಭಿವೃದ್ಧಿಯನ್ನು ಸಾಧಿಸಲು ಕೇಂದ್ರ ಮತ್ತು ರಾಜ್ಯ ಸರಕಾರಗಳು ಸಾಹಿತ್ಯ ಅಕಾಡೆಮಿಗಳ ಮತ್ತು ಶಿಕ್ಷಣ ಶಾಖೆಗಳ ಮೂಲಕ ಹಲವಾರು ಕಾರ್ಯಕ್ರಮಗಳನ್ನು ಕೈಗೊಂಡಿವೆ.

ಶಿಲ್ಪ, ವಾಸ್ತುಶಿಲ್ಪ, ಚಿತ್ರರಚನೆ, ನಾಟ್ಯ, ಸಂಗೀತ ಮುಂತಾದ ಲಲಿತಕಲೆಗಳಲ್ಲಿ ಭಾರತದ ಸಾಧನೆ ಮಹತ್ತರವಾದದ್ದು; ವಿಖ್ಯಾತವಾದದ್ದು. ಈ ಕಲೆಗಳನ್ನು ಕುರಿತ ಸಾಹಿತ್ಯ ಸಂಸ್ಕೃತದಲ್ಲೂ ದೇಶ ಭಾಷೆಗಳಲ್ಲೂ ಬೆಳೆದು ಬಂದಿದೆ. ಅನೇಕ ಪ್ರಾಚೀನ ಶಿಲ್ಪ, ವಾಸ್ತುಶಿಲ್ಪಕಲೆಗಳ ಉತ್ತಮ ಮಾದರಿಗಳನ್ನು ಭಾರತ ವಿವಿಧ ಭಾಗಗಳಲ್ಲಿ ಇಂದಿಗೂ ಕಾಣಬಹುದು. ಈ ಕಲೆಗಳ ಮೇಲೆ ಇತ್ತೀಚೆಗೆ ಪಾಶ್ಚಿಮಾತ್ಯ ಪ್ರಭಾವ ಬಿದ್ದಿದೆ. ಜೀವನ ವಿಧಾನದಲ್ಲಿ ಆಗಿರುವ ಬಹುಮುಖ ಬದಲಾವಣೆ ಹಾಗೂ ವೈಜ್ಞಾನಿಕ ಸಂಶೋಧನೆಗಳಿಂದ ಈ ಪ್ರಭಾವ ವಾಸ್ತುಶಿಲ್ಪದಲ್ಲಿ ಎದ್ದು ಕಾಣುತ್ತದೆ. ಆದರೆ ಸಂಗೀತ ಈ ಪ್ರಭಾವಕ್ಕೆ ಅಷ್ಟಾಗಿ ಒಳಗಾಗಿಲ್ಲ. ಅದು ತನ್ನ ಭಾರತೀಯತ್ವವನ್ನು ಬಹು ಹೆಚ್ಚಿನ ಪ್ರಮಾಣದಲ್ಲಿ ಉಳಿಸಿಕೊಂಡಿದೆ. ಈ ಮಾತು ಸ್ವಲ್ಪ ಹೆಚ್ಚು ಕಡಮೆ ನಮ್ಮ ನಾಟ್ಯ ಸಂಪ್ರದಾಯಗಳಿಗೂ ಅನ್ವಯಿಸುತ್ತದೆ.

13ನೆಯ ಶತಮಾನದಲ್ಲಿ ಉತ್ತರ ಭಾರತದಲ್ಲಿ ಪ್ರಚಾರದಲ್ಲಿದ್ದ ನಮ್ಮ ಸಂಗೀತದ ಮೇಲೆ ಇರಾನಿ ಸಂಗೀತದ ಪ್ರಭಾವ ಬಿದ್ದು ಉತ್ತರಾದಿ



ಕಹಳೆಗಾರರು — ಕಾಂಗ್ರಾ ಶೈಲಿ




ಗಜಗುಹೆ —ಇಂಡೋನೇಷ್ಯದ ಟೀಲಿಯಲ್ಲಿ

ಪರ್ವತ ಝರಿ —ಮೊಘಲ್ ಶೈಲಿ



ಪ್ರಾಚೀನ ಭಾರತದ ಶಿಲ್ಪವೈಭವ






ಶಿಲ್ಪ, ವಾಸ್ತುಶಿಲ್ಪ ಕ್ಷೇತ್ರಗಳಲ್ಲಿ ಭಾರತೀಯ ಸಾಧನೆ

ಸಂಗೀತ ರೂಪುಗೊಂಡಿತು. ಮೊಘಲರ ಆಳ್ವಿಕೆಯ ಆರಂಭ ಕಾಲದಲ್ಲಿ ಭಾರತೀಯ ಚಿತ್ರಕಲೆಯ ಮೇಲೆ ಇರಾನಿನ ಪ್ರಭಾವ ಬಿತ್ತು; ಮೊಘಲ್ ಶೈಲಿ ಹುಟ್ಟಿಕೊಂಡಿತು.

ಬ್ರಿಟಿಷರು ಭಾರತಕ್ಕೆ ಬಂದ ಮೇಲೆ ಪಾಶ್ಚಿಮಾತ್ಯ ಚಿತ್ರಕಲೆಯ ಪರಿಚಯ ನಮ್ಮವರಿಗಾಯಿತು; ಆ ಪ್ರಕಾರದ ಶಿಕ್ಷಣವೂ ಆರಂಭವಾಯಿತು; ಆ ಕಾಲದಲ್ಲಿ ಅನೇಕರು ಅದನ್ನು ಅನುಕರಿಸಿದರು. ಇಂಥವರಲ್ಲಿ ಖ್ಯಾತಿ ಪಡೆದ ವ್ಯಕ್ತಿ ರಾಜಾ ರವಿವರ್ಮ. ಈ ಕಾಲಕ್ಕೇ ಅಬನೀಂದ್ರನಾಥ ಠಾಕೂರ್, ಹ್ಯಾವೆಲ್ ಮುಂತಾದವರ ಪ್ರಯತ್ನದಿಂದಾಗಿ ಭಾರತೀಯ ಚಿತ್ರ ರಚನಾ ತಂತ್ರ, ಸಂಪ್ರದಾಯಗಳ ಪುನರುಜ್ಜೀವನವಾಯಿತು.

ಇತ್ತೀಚೆಗೆ ಹಲವಾರು ರೀತಿಯ ವಿದೇಶೀ ಪ್ರಭಾವಗಳು ನಮ್ಮ ಸಾಹಿತ್ಯ, ಶಿಲ್ಪ, ವಾಸ್ತುಶಿಲ್ಪಾದಿರಂಗಗಳ ಮೇಲೆ ಪರಿಣಾಮ ತೋರಿರುವಂತೆ ನಮ್ಮ ಚಿತ್ರಕಲೆಯ ಮೇಲೆಯೂ ಈ ಪ್ರಭಾವ ಬಿದ್ದಿದೆ. ನಮ್ಮವರ ಅನೇಕ ಕೃತಿಗಳಲ್ಲಿ ಇದನ್ನು ಕಾಣಬಹುದು.



ಭಾರತದ ಪ್ರಾಚೀನ ನೌಕೆಗೆ ಲಂಗರು—ಲೊಥಲ್‌ನಲ್ಲಿ

ನೌಕೋದ್ಯಮ

ಬ್ರಿಟಿಷರು ಭಾರತದಲ್ಲಿ ಬೇರೂರಿದಂದಿನಿಂದ ನಮ್ಮ ಹಲವಾರು ಉದ್ಯಮಗಳಿಗೆ ಕುತ್ತುತಗುಲಿದಂತೆ, ನಮ್ಮ ನೌಕೋದ್ಯಮಕ್ಕೂ ಹೊಡೆತ ಬಿತ್ತು. ಅದು ಪೂರ್ಣವಾಗಿ ನಾಶವಾಯಿತೆಂದರೂ ತಪ್ಪಲ್ಲ. ಆದರೆ ನಮ್ಮ ರಾಷ್ಟ್ರದ ನೌಕಾ ಇತಿಹಾಸ ಕ್ರಿ.ಪೂ. ಎರಡೂವರೆ ಸಾವಿರ ವರ್ಷಗಳ ಹಿಂದಕ್ಕೆ –ಹರಪ್ಪಾ. ಮೊಹೆಂಜೊ ದಾರೊ ಸಂಸ್ಕೃತಿಯ ಕಾಲಕ್ಕೆ– ಹೋಗುತ್ತದೆ. ಗುಜರಾತಿನ ಕ್ಯಾಂಬೆ ಖಾರಿಯ ಲೊಥಲ್ ಎಂಬಲ್ಲಿ ಕ್ರಿ. ಪೂ. 2350ರ ಕಾಲಕ್ಕೇ. ಇಂದಿನ ಮುಂಬಯಿ. ಪಿಶಾಬಿ ಪಟ್ಟಣಗಳ ರೇವುಗಳಿಗೆ ಹೋಲಿಸಬಹುದಾದಷ್ಟು ದೊಡ್ಡ ಬಂದರು ಇತ್ತೆಂಬುದು ಭೂಶೋಧನೆಗಳಿಂದ ವ್ಯಕ್ತವಾಗಿದೆ. ಈ ಬಂದರು ದೊಡ್ಡ ವಿದೇಶೀ ವ್ಯಾಪಾರ ಕೇಂದ್ರವಾಗಿತ್ತೆಂಬುದಕ್ಕೆ ಆಧಾರಗಳು ದೊರೆತಿವೆ. ಇಲ್ಲಿಂದ ಆಫ್ರಿಕದೊಡನೆ ವ್ಯಾಪಾರ ನಡೆಯುತ್ತಿತ್ತು. ಲೊಥಲ್ ಮಾತ್ರವಲ್ಲದೆ, ಪಶ್ಚಿಮ ಕರಾವಳಿಯಲ್ಲಿ ಇನ್ನೂ ಹಲವಾರು ಬಂದರುಗಳೂ ಇದ್ದುವು. ಚಿನ್ನ, ಅಮೂಲ್ಯರತ್ನಗಳು, ದಂತ ಅರಣ್ಯೋತ್ಪನ್ನಗಳು ಮುಂತಾದುವು ಇಲ್ಲಿಂದ ರಫ್ತಾಗುತ್ತಿದ್ದುವು. ಮೌರ್ಯರು, ಶಾತವಾಹನರು ಸಾಗ



ಕಲ್ಲಿನಲ್ಲಿ ಕವಿತೆ

ಕಾವೇರಿಪಟ್ಟಣಂ ರೇವಿನ ಅವಶೇಷ





'ಸಾಬರ್ಮತಿ' ಪ್ರಯಾಣ ನೌಕೆ

ರೋತ್ತರ ವ್ಯಾಪಾರಕ್ಕೆ ತುಂಬ ಪ್ರೋತ್ಸಾಹ ಕೊಟ್ಟರು. ಇದೇ ಕಾಲಕ್ಕೆ ದಕ್ಷಿಣದಲ್ಲೂ ನೌಕೋದ್ಯಮ ಬೆಳೆದಿತ್ತು. ಬಹು ಹಿಂದಿನ ಕಾಲದಿಂದ ಕ್ಯಾಂಬೆ ಖಾರಿಯಿಂದ ದಕ್ಷಿಣಕ್ಕೆ ಅನೇಕ ರೇವುಗಳು ಇದ್ದುವೆಂಬುದಕ್ಕೆ ಆಧಾರಗಳಿವೆ. ಕ್ರಿ. ಶ. ಒಂದನೆಯ ಶತಮಾನದ 'ಪೆರಿಪ್ಲಸ್' ಎಂಬ ಗ್ರಂಥದಲ್ಲಿ ಅನೇಕ ವಾಣಿಜ್ಯ ರೇವುಗಳ ಉಲ್ಲೇಖವಿದೆ. ಗೋಕರ್ಣದ ಸಮೀಪದ ತದರಿ, ಉಡುಪಿಯ ಸಮೀಪದ ಉದ್ಯಾವರ, ಕಾಸರಗೋಡಿನ ಸಮೀಪದ ನೀಲೇಶ್ವರ ಮುಂತಾದುವು ಕ್ರಿ. ಶ. 2–3ನೆಯ ಶತಮಾನದಲ್ಲಿ ಪ್ರಸಿದ್ಧವಾಗಿದ್ದ ರೇವುಗಳು. ಈ ರೇವುಗಳಿಂದ ರೋಮ್‌ನೊಂದಿಗೆ ವ್ಯಾಪಾರ ನಡೆಯುತ್ತಿತ್ತು.

ಇತ್ತ ಪೂರ್ವ ಕರಾವಳಿಯಲ್ಲಿ, ಇದೇ ಕಾಲಕ್ಕೆ ಪುಹಾರ್ ಎಂದು ಪ್ರಸಿದ್ಧವಾಗಿದ್ದ ಕಾವೇರಿಪಟ್ಟಿಣಂ ಒಂದು ಪ್ರಮುಖ ರೇವಾಗಿತ್ತು. ಇಲ್ಲಿ ರೋಮನ್ ವ್ಯಾಪಾರಸ್ಥರ ಒಂದು ವಸಾಹತುವೇ ಇತ್ತು. ಪಾಂಡಿಚೆರಿಯ ಸಮೀಪದಲ್ಲಿದ್ದ ಅರಿಕಮೇಡು, ಕಾರೈಕಾಳ್ ಹತ್ತಿರದ ನಾಗಪಟ್ಟಣ, ಒಡಿಸ್ಸಾ ಕರಾವಳಿಯಲ್ಲಿರುವ ಕೊನಾರಕ್ ಮುಂತಾದುವು ಈ ಕಾಲದ ಪ್ರಸಿದ್ಧ ಬಂದರುಗಳು.

ಕ್ರಿ. ಶ. ಒಂದನೆಯ ಶತಮಾನದಲ್ಲಿ ಭಾರತ ಮತ್ತು ರೋಮ್‌ನ ನಡುವೆ ದೊಡ್ಡ ವ್ಯಾಪಾರ ನಡೆಯುತ್ತಿತ್ತು. ಇದರಿಂದ ಭಾರತಕ್ಕೆ ಹೊನ್ನಿನ ಹೊಳೆಯೇ ಹರಿದುಬರುತ್ತಿತ್ತು ಎಂಬುದಕ್ಕೆ ಸಮಕಾಲೀನ ಲೇಖನಗಳಲ್ಲಿ ಉಲ್ಲೇಖವಿದೆ. ಅಲ್ಲದೆ ಈ ಹೊತ್ತಿಗಾಗಲೇ ಈ ಎರಡು ರಾಷ್ಟ್ರಗಳ ನಡುವೆ ಸಾಂಸ್ಕೃತಿಕ ಸಂಬಂಧಗಳೂ ಬೆಳೆದಿದ್ದುವು.



ನೌಕಾದಳದ ಹಡಗು 'ತೀರ್'



ಪ್ರಾಚೀನರ ಪ್ರವಾಸಕ್ಕೆ ಪಲ್ಲಕ್ಕಿ

ಬ್ರಿಟಿಷರ ಆಡಳಿತದ ಕಾಲದಲ್ಲಿ ನಶಿಸಿಹೋದ ಭಾರತೀಯ ನೌಕೋದ್ಯಮವನ್ನು ಪುನರುಜ್ಜೀವನಗೊಳಿಸಲು ಸ್ವಾತಂತ್ರ್ಯೋತ್ತರ ಕಾಲದಲ್ಲಿ ಬಲವಾದ ಪ್ರಯತ್ನಗಳು ನಡೆದಿವೆ. ವಿಶಾಖಪಟ್ಟಣದಲ್ಲಿ ಒಂದು ನೌಕಾನಿರ್ಮಾಣ ಕೇಂದ್ರವಿದೆ; ಕೊಚ್ಚಿಯಲ್ಲಿ ಇನ್ನೊಂದು ರೂಪುಗೊಳ್ಳಲಿದೆ. ಹಡಗುಗಳ ದುರಸ್ತಿಗೆ ಕಲ್ಕತ್ತಾ, ಮುಂಬಯಿ ಮುಂತಾದೆಡೆಗಳಲ್ಲಿ ವ್ಯವಸ್ಥೆಯಿದೆ.




ಪೂರ್ವಕಾಲದ ರಥ

ಭಾರತೀಯ ನೌಕೋದ್ಯಮ ಈಗ ಎರಡು ಮುಖವಾಗಿ ಬೆಳೆಯುತ್ತಿದೆ: ಸರಕು ಮತ್ತು ಪ್ರಯಾಣಿಕರ ಸಾಗಾಣಿಕೆಗಾಗಿ; ರಾಷ್ಟ್ರ ರಕ್ಷಣೆಗಾಗಿ. ಭಾರತೀಯ ನೌಕೆಗಳು ಕರಾವಳಿ ಪ್ರದೇಶದಲ್ಲಿ ಮಾತ್ರವಲ್ಲದೆ ವಿದೇಶ ಸಂಚಾರದಲ್ಲೂ ತಮ್ಮ ಸೇವೆಯನ್ನು ಸಲ್ಲಿಸುತ್ತಿವೆ. ನಮ್ಮ ನೌಕಾದಳಕ್ಕೆ ಸೇರಿದಂತೆ ಯುದ್ಧ ನೌಕೆಗಳು, ವಿಮಾನವಾಹಕ



ಪಾರಸೀ ರಾಜಕುಮಾರ, ಮನದನ್ನೆಯರು : ಅಜಂತಾ ಭಿತ್ತಿಚಿತ್ರ

ನೌಕೆ, ಜಲಾಂತರ್ಗಾಮಿಗಳು ಇವೆ. 1971ರಲ್ಲಿ ನಮ್ಮ ರಾಷ್ಟ್ರ ಪಾಕಿಸ್ತಾನ ದೊಡನೆ ಹೋರಾಡಬೇಕಾಗಿ ಬಂದಾಗ, ನಮ್ಮ ನೌಕಾಬಲ ತನ್ನ ಶಕ್ತಿ, ಸಾಮರ್ಥ್ಯ, ಯುದ್ಧಕೌಶಲಗಳನ್ನು ಚೆನ್ನಾಗಿ ಪ್ರದರ್ಶಿಸಿತು.



ದುರ್ಗಮ ಪ್ರದೇಶದಲ್ಲಿ ಸಾರಿಗೆ

ಸಂಚಾರ ಸೌಲಭ್ಯ

ಸಂಚಾರ ಸೌಲಭ್ಯಗಳು ಇಂದು ಜೀವನದ ಒಂದು ಮುಖ್ಯ ಆವಶ್ಯಕತೆ. ಪೂರ್ವಕಾಲದಲ್ಲಿ ಜನರು ಸಣ್ಣ ಸಣ್ಣ ಗುಂಪುಗಳಲ್ಲಿ ತಮ್ಮಷ್ಟಕ್ಕೆ ತಾವು ಬಾಳುತ್ತಿದ್ದಾಗ ಅವರ ಓಡಾಟ ಮಿತವಾಗಿತ್ತು. ಆದರೂ ಒಂದು ಪ್ರದೇಶದಿಂದ ಇನ್ನೊಂದಕ್ಕೆ ವಲಸೆ ಹೋಗಬೇಕಾದಾಗ ಅವರು ದೀರ್ಘಪ್ರಯಾಣ ಮಾಡಬೇಕಾಗುತ್ತಿತ್ತು—ತಮ್ಮ ಸಾಮಾನು ಸರಂಜಾಮುಗಳೊಡನೆ. ಹೀಗೆ ಅನೇಕ ತಂಡಗಳು ಹೊರಪ್ರದೇಶದಿಂದ ಭಾರತಕ್ಕೆ ಬಂದುವು. ಇಲ್ಲಿ ಬಂದು ನೆಲಸಿದ ಮೇಲೂ ಈ ತಂಡಗಳು ಬೆಳೆದಂತೆ ಅವು ಮುಂದು ಮುಂದಕ್ಕೆ ಸರಿದುವು. ಕಾಲ್ನಡಿಗೆ ಹಾಗೂ ಪ್ರಾಣಿಗಳು ಸಂಚಾರದ ಮಾಧ್ಯಮವಾದುವು. ಆರ್ಯರ ಕಾಲಕ್ಕೆ ರಥಗಳು ಬಂದುವು. ನಮ್ಮ ರಾಷ್ಟ್ರದಲ್ಲಿ ಸಂಚಾರ ಮಾರ್ಗಗಳೂ ಸೌಲಭ್ಯಗಳೂ ಉತ್ತಮಗೊಂಡದ್ದು, ವಾಣಿಜ್ಯದ ಬೆಳವಣಿಗೆ ಮತ್ತು ಸಾಮ್ರಾಜ್ಯಗಳ ಸ್ಥಾಪನೆ ಆದಾಗ.

ಮಹಮ್ಮದೀಯರು ಇಲ್ಲಿ ದೊಡ್ಡ ರಾಜ್ಯಗಳನ್ನು ಕಟ್ಟಿದ ಮೇಲೆ, ಶೇರ್ ಷಾನಂಥವರು ಉತ್ತರ ಭಾರತದ ಒಂದು ದಿಕ್ಕಿನಿಂದ ಇನ್ನೊಂದು ದಿಕ್ಕಿಗೆ ರಾಜ ಮಾರ್ಗಗಳನ್ನು ನಿರ್ಮಿಸಿದರು. ಆಧುನಿಕ ಕಾಲದಲ್ಲಿ ಮೊದಲು ಮೊದಲು ದೀರ್ಘ ಮಾರ್ಗಗಳು ರೂಪುಗೊಂಡದ್ದು ಇಂಥ ಮಾರ್ಗಗಳನ್ನು ಅನುಸರಿಸಿಯೇ.

ಬ್ರಿಟಿಷರು ಇಲ್ಲಿ ತಮ್ಮ ಅಧಿಪತ್ಯವನ್ನು ವಿಸ್ತರಿಸಿದಂತೆ ಹೆಚ್ಚು ಹೆಚ್ಚು ಮಾರ್ಗಗಳು ನಿರ್ಮಿತವಾದುವು. ಸಂಚಾರ ಸೌಲಭ್ಯಗಳಲ್ಲಿ ದೊಡ್ಡ ಕ್ರಾಂತಿಯಾದದ್ದು, ಈಗ ಸುಮಾರು ಅರವತ್ತು ಸಾವಿರ ಕಿ.ಮೀ.ಗಳಷ್ಟು ಉದ್ದವಿರುವ ನಮ್ಮ ರೈಲ್ವೆ ಮಾರ್ಗದ ರಚನೆ ಆರಂಭವಾದಾಗ. ಕಳೆದ ಶತಮಾನದ ಮಧ್ಯಭಾಗದಲ್ಲಿ; 1853 ಏಪ್ರಿಲ್ 16ರಂದು ಮುಂಬಯಿ – ಕಲ್ಯಾಣ ದಾರಿಯಲ್ಲಿ ಕೇವಲ 13 ಮೈಲಿ ಉದ್ದದ ರೈಲುಮಾರ್ಗದಲ್ಲಿ ಗಾಡಿಗಳು ಓಡಲಾರಂಭವಾದಾಗ. ಅನಂತರ ಇತರ ರೈಲ್ವೆಮಾರ್ಗಗಳು ಕ್ರಮಕ್ರಮವಾಗಿ ರೂಪುಗೊಂಡುವು.

ಆರಂಭಕಾಲದಲ್ಲಿ ರೈಲ್ವೆಗಳಿಗೆ ಬೇಕಾದ ಸಾಮಗ್ರಿಗಳೆಲ್ಲವೂ ಪರದೇಶಗಳಿಂದಲೇ ಬರುತ್ತಿದ್ದುವು. ಈಗ ನಾವೇ ರೈಲು ಹಳಿಗಳು, ಗಾಡಿಗಳು, ಎಂಜಿನ್‌ಗಳನ್ನು ತಯಾರಿಸಿಕೊಳ್ಳುತ್ತಿದ್ದೇವೆ. ಅಷ್ಟು ಮಾತ್ರವಲ್ಲ, ಇವುಗಳಲ್ಲಿ ಕೆಲವು ಸಾಮಗ್ರಿಗಳನ್ನು ಪರದೇಶಗಳಿಗೂ ರಫ್ತು ಮಾಡಲು ಶಕ್ತರಾಗಿದ್ದೇವೆ. ನಮ್ಮ ರೈಲ್ವೆ ವ್ಯವಸ್ಥೆ ಇಂದು ಸರಕಾರೀ ವಲಯದ ಅತ್ಯಂತ ದೊಡ್ಡ ಹಾಗೂ ಅತಿ ಹೆಚ್ಚಿನ ಸಂಖ್ಯೆಯ ಜನರಿಗೆ ಉದ್ಯೋಗವನ್ನು ಒದಗಿಸುವ ಉದ್ಯಮವಾಗಿದೆ.



ವಾಹನ ನಿರ್ಮಾಣ

ಇತ್ತೀಚೆಗೆ ವೇಗವಾಗಿ ಬೆಳೆಯುತ್ತಿರುವ, ಸಂಚಾರ ಮತ್ತು ಸಾಗಾಣಿಕೆಯ ದೃಷ್ಟಿಯಿಂದ ತುಂಬ ಜನಪ್ರಿಯವಾಗುತ್ತಿರುವ, ವಾಹನ ಮಾಧ್ಯಮಗಳು ಎರಡು : ರಸ್ತೆ ಮತ್ತು ವಿಮಾನ ಸಾರಿಗೆ. ಹೆಚ್ಚು ಹೆಚ್ಚು ರಸ್ತೆಗಳು ನಿರ್ಮಾಣವಾದಂತೆ ಮತ್ತು ಮೋಟರ್ ವಾಹನಗಳು ಉಪಯೋಗಕ್ಕೆ ಬಂದಂತೆ ರಸ್ತೆ ಸಾರಿಗೆ ಬೃಹದಾಕಾರದಲ್ಲಿ ಬೆಳೆಯಿತು ; ಇನ್ನೂ ಬೆಳೆಯುತ್ತಿದೆ. ಮೊದಲು ಮೊದಲು ನಮಗೆ ಬೇಕಾದ ಮೋಟರ್ ವಾಹನಗಳನ್ನೆಲ್ಲ ಪರದೇಶಗಳಿಂದ ಆಮದು ಮಾಡಿಕೊಳ್ಳುತ್ತಿದ್ದೆವು. ಈಗ ಇವನ್ನು ನಮ್ಮ ರಾಷ್ಟ್ರದಲ್ಲೇ ತಯಾರು ಮಾಡುತ್ತಿದ್ದೇವೆ. ಆರಂಭದಲ್ಲಿ ಖಾಸಗೀ ಉದ್ಯಮ ಕ್ಷೇತ್ರಕ್ಕೆ ಮೀಸಲಾಗಿದ್ದ ಮೋಟರ್ ಸಾರಿಗೆಯ ರಂಗವನ್ನು ಈಗ ರಾಜ್ಯ ಸರಕಾರಗಳೂ ಪ್ರವೇಶಿಸಿವೆ. ಸಾಮಾನು ಸಾಗಾಣಿಕೆಯನ್ನು ಬಿಟ್ಟು ಪ್ರಯಾಣಿಕರ ಸಾರಿಗೆಯನ್ನು ಕ್ರಮಕ್ರಮವಾಗಿ ರಾಷ್ಟ್ರೀಕರಣ ಮಾಡುವ ಕೆಲಸ ನಡೆಯುತ್ತಿದೆ.



ತಾತಾ ಏರ್‌ಲೈನ್ಸ್, ಇಂಡಿಯನ್ ನ್ಯಾಷನಲ್ ಏರ್‌ವೇಸ್, ಏರ್ ಸರ್ವಿಸಸ್ ಆಫ್ ಇಂಡಿಯಾ ಇವು 1932–36ರ ಅವಧಿಯಲ್ಲಿ ಭಾರತದಲ್ಲಿ ವಿಮಾನ ಸಾರಿಗೆಯನ್ನು ಕೈಗೊಂಡ ಸಂಸ್ಥೆಗಳು. ಈ ಉದ್ಯಮವನ್ನು ವ್ಯವಸ್ಥಿತ ರೀತಿಯಲ್ಲಿ ಬೆಳೆಸುವ ದೃಷ್ಟಿಯಿಂದ 1953 ಆಗಸ್ಟ್ 1ನೆಯ ತಾರೀಖಿನಿಂದ ಈ ಉದ್ಯಮದ ರಾಷ್ಟ್ರೀಕರಣವಾಯಿತು. ಈಗ ಈ ಸಾರಿಗೆ ವ್ಯವಸ್ಥೆಯಲ್ಲಿ ಎರಡು ವಿಭಾಗಗಳಿವೆ : ಭಾರತದ ಒಳಸಾರಿಗೆಗೆ ಸಂಬಂಧಿಸಿದಂತೆ ಇಂಡಿಯನ್ ಏರ್‌ಲೈನ್ಸ್ ; ಅಂತರರಾಷ್ಟ್ರೀಯ ಸಾರಿಗೆಗಾಗಿ ಏರ್ ಇಂಡಿಯಾ. ಅಂತರರಾಷ್ಟ್ರೀಯ

ಭಾರತ ನಿರ್ಮಿತ ಮಿಗ್ ವಿಮಾನಗಳು



ರಕ್ಷಣೆಯಲ್ಲಿ ಸ್ವಾವಲಂಬನೆ : ಟ್ಯಾಂಕ್ ನಿರೋಧ ಕ್ಷಿಪಣಿಗಳು

ವಿಮಾನ ಸಾರಿಗೆಯನ್ನು ಭಾರತ ಪ್ರವೇಶಿಸಿದ್ದು ಕಾಲು ಶತಮಾನದ ಹಿಂದೆ, 1948 ಜೂನ್ 8ನೆಯ ತಾರೀಖು; ಮುಂಬಯಿಯಿಂದ ಲಂಡನಿಗೆ ನಡೆಸಿದ ಯಾನದಿಂದ. ಈಗ ಏರ್ ಇಂಡಿಯಾ ಅತ್ಯಾಧುನಿಕ ಪ್ರಯಾಣಿಕ ವಿಮಾನಗಳಿಂದ ಸಜ್ಜಾಗಿದ್ದು ಜಗತ್ತಿನ ಪ್ರಮುಖ ವಿಮಾನ ಸಾರಿಗೆ ಸಂಸ್ಥೆಗಳಲ್ಲಿ ಒಂದಾಗಿದೆ.

ವಿಮಾನ ರಚನೆಯ ಉದ್ಯಮ ನಮ್ಮಲ್ಲಿ ಆರಂಭವಾದದ್ದು ಎರಡನೆಯ ಮಹಾಯುದ್ಧದ ಕಾಲದಲ್ಲಿ—ಬೆಂಗಳೂರಿನಲ್ಲಿ: ಖಾಸಗಿ ಉದ್ಯಮರಂಗದಲ್ಲಿ ಯುದ್ಧದಲ್ಲಿ ಭಗ್ನವಾದ ವಿಮಾನಗಳನ್ನು ದುರಸ್ತಿ ಮಾಡುವುದೇ ಆಗ ಅದರ ಪ್ರಧಾನ ಕಾರ್ಯವಾಗಿತ್ತು. ಈಗ ಅದು ಹಲವಾರು ವರ್ಗದ ವಿಮಾನಗಳನ್ನು ತಯಾರಿಸುವ ಸರಕಾರೀ ವಲಯದ ಕಾರಖಾನೆಯಾಗಿದೆ. ಇಲ್ಲಿ ತಯಾರಾದ 'ನ್ಯಾಟ್' ಅತ್ಯಂತ ಯಶಸ್ವಿ ವಿಮಾನದಾಳಿ ನಿರೋಧಕ ವಿಮಾನವೆಂದು ಪ್ರಖ್ಯಾತವಾಗಿದೆ. ಇದಲ್ಲದೆ ನಮ್ಮ ರಾಷ್ಟ್ರದಲ್ಲಿ ಎಚ್.ಎಫ್. 24 ಧ್ವನ್ಯತೀತ ವಿಮಾನ, ಹೆಲಿಕಾಪ್ಟರುಗಳು, ಶಿಕ್ಷಣಕ್ಕೆ, ಸಾರಿಗೆಗೆ, ರಕ್ಷಣಾ ವ್ಯವಸ್ಥೆಗೆ ಬೇಕಾದ ವಿಮಾನಗಳು ಮುಂತಾದುವೂ ತಯಾರಾಗುತ್ತಿವೆ.

ಸಂಪರ್ಕ

ರಾಷ್ಟ್ರದ ಜನವರ್ಗ ಪರಸ್ಪರ ಸಂಪರ್ಕವನ್ನು ಸಾಧಿಸಲು ತುಂಬ ಹಿಂದಿನ ಕಾಲದಿಂದಲೂ ಪ್ರಯತ್ನಗಳು ನಡೆದಿವೆ. ಸುವ್ಯವಸ್ಥಿತ ಆಡಳಿತಗಳು ಸ್ಥಾಪಿತವಾದಮೇಲೆ, ಸರಕಾರಗಳು ತಮ್ಮ ಆಡಳಿತ ಪ್ರದೇಶದ ಆಗುಹೋಗುಗಳನ್ನು, ಜನಾಭಿಪ್ರಾಯವನ್ನು ತಿಳಿದುಕೊಳ್ಳಲು ವ್ಯವಸ್ಥೆ ಮಾಡಿದುವು.

ಆದರೆ ಸಾಮಾನ್ಯ ಜನರ ನಡುವೆ ಪರಸ್ಪರ ಸಂಪರ್ಕಕ್ಕೆ ಅನುಕೂಲ ಏರ್ಪಟ್ಟಿದ್ದು 19ನೆಯ ಶತಮಾನದ ಮಧ್ಯಭಾಗದಲ್ಲಿ: ಭಾರತದ ಅಂಚೆ ವ್ಯವಸ್ಥೆ 1854ರಲ್ಲಿ ಅಂಚೆ ಕಚೇರಿಗಳನ್ನು ಸ್ಥಾಪಿಸಿದಾಗ. ಆಗ ಸುಮಾರು 700 ಅಂಚೆ ಕಚೇರಿಗಳು ರಾಷ್ಟ್ರದ ವಿವಿಧ ಭಾಗಗಳಲ್ಲಿ ಸ್ಥಾಪಿತವಾದುವು. ರೈಲು ಮೂಲಕ ಅಂಚೆ ಸಾಗಿಸುವುದು 1907ರಲ್ಲಿ ಆರಂಭವಾಯಿತು. ವಿಮಾನ, ಮೋಟರು ವಾಹನಗಳು, ದೋಣಿಗಳನ್ನು ಅಂಚೆ ಸಾಗಾಣಿಕೆಗಾಗಿ ಉಪಯೋಗಿಸಲಾಗುತ್ತಿದೆ.



ಕೇಂದ್ರ ಉಪಗ್ರಹ ಸಂಪರ್ಕ : ಆರ್ವಿ

ಕ್ರಮಕ್ರಮವಾಗಿ ಅಂಚೆ, ತಂತಿ ಮತ್ತು ದೂರವಾಣಿ ಸೌಲಭ್ಯಗಳು ಅಪಾರ ಪ್ರಮಾಣದಲ್ಲಿ ಬೆಳೆದುವು. 1951ರಲ್ಲಿ ಆರಂಭವಾದ ತಂತಿ ವ್ಯವಸ್ಥೆಯೂ ದೊಡ್ಡದಾಗಿ ಬೆಳೆದಿದೆ.

1881ರಲ್ಲಿ ಕಲ್ಕತ್ತದಲ್ಲಿ ಆರಂಭವಾದ ದೂರವಾಣಿ ವ್ಯವಸ್ಥೆ ಈಗ ದೇಶದ ಎಲ್ಲ ಭಾಗಗಳಿಗೂ ಹರಡಿದೆ.

ನಮ್ಮ ರಾಷ್ಟ್ರದ ವಿವಿಧ ಪ್ರದೇಶಗಳ ನಡುವೆ ಅಲ್ಲದೆ, ವಿದೇಶಗಳೊಡನೆ ಕೂಡ ಅಂಚೆ, ತಂತಿ, ದೂರವಾಣಿ ಸಂಪರ್ಕಕ್ಕೆ ಭಾರತದಲ್ಲಿ ವ್ಯವಸ್ಥೆಯಿದೆ.

ಸಂಸ್ಕೃತಿ ; ಧರ್ಮ

ಭಾರತ ಸ್ವತಂತ್ರವಾದಾಗಿನಿಂದ ಅದು ಸರ್ವತಂತ್ರ ಸ್ವತಂತ್ರವಾದ ಪ್ರಜಾಸತ್ತಾತ್ಮಕ ಗಣರಾಜ್ಯವಾಗಿ ಬೆಳೆಯಲು ಅವಶ್ಯವಾದ ಎಲ್ಲ ಕಾರ್ಯಕ್ರಮಗಳನ್ನೂ ಕೈಗೊಳ್ಳುತ್ತಿದೆ. ಪ್ರಜೆಗಳ ಸ್ವಾತಂತ್ರ್ಯಕ್ಕೆ ಅಡ್ಡಬಾರದೆ ಅವರ ಬಹುಮುಖ ವ್ಯಕ್ತಿತ್ವವನ್ನು ಬೆಳೆಸಲು ಪ್ರಯತ್ನಿಸುತ್ತಿದೆ. ಭಾರತವನ್ನು ಸುಖೀರಾಜ್ಯವನ್ನಾಗಿ ಮಾಡುವುದೇ ಇದೆಲ್ಲದರ ಉದ್ದೇಶ. ಆದ್ದರಿಂದ ರಾಷ್ಟ್ರದ ಸಂಪನ್ಮೂಲಗಳನ್ನೂ ರಾಷ್ಟ್ರ ಮತ್ತು ವ್ಯಕ್ತಿಯ ಆದಾಯವನ್ನೂ ಹೆಚ್ಚಿಸುವ ಹಾಗೂ ಅವರ ಜೀವನಮಟ್ಟ, ಸಂಸ್ಕೃತಿಗಳನ್ನು ಬೆಳೆಸುವ ಕಾರ್ಯದಲ್ಲಿ ತೊಡಗಿದೆ.

ಆದ್ದರಿಂದಲೇ ನಮ್ಮ ಯೋಜನೆಗಳು ಜನರ ಭೌತಿಕ, ಬೌದ್ಧಿಕ ಮತ್ತು ಸಾಂಸ್ಕೃತಿಕ ಜೀವನವನ್ನು ಮೇಲ್ಮಟ್ಟಕ್ಕೇರಿಸಲು ಸಾಧಕವಾದ ಎಲ್ಲ ಅಂಶಗಳನ್ನೂ ಒಳಗೊಂಡಿವೆ.

ಭಾರತೀಯ ಸಂಸ್ಕೃತಿ ಈ ಜಗತ್ತಿನ ಅತ್ಯಂತ ಪ್ರಾಚೀನ ಜೀವಂತ ಸಂಸ್ಕೃತಿ: ಮತ-ಧರ್ಮ ಅದರ ಜೀವನಾಡಿ: ಸಮನ್ವಯ ಅದರ ದೃಷ್ಟಿ: ಸ್ವತಂತ್ರ ಚಿಂತನೆ, ಸಹಿಷ್ಣುತೆ, ವ್ಯಾಪಕತೆಗಳು ಅದರ ಲಕ್ಷಣ. ಇದರಿಂದಾಗಿ ಅದು ಜಗತ್ತಿನ ಇತರ ಪ್ರಾಚೀನ ಸಂಸ್ಕೃತಿಗಳಂತೆ

ಕೆಲಕಾಲ ಬಾಳಿ ನಾಶವಾಗದೆ ಇಂದಿಗೂ ಜೀವಂತವಾಗಿದೆ. ಕಾಲಕಾಲಕ್ಕೆ ಹಲವಾರು ಪ್ರಭಾವಗಳಿಗೆ ಒಳಗಾಗಿದ್ದರೂ ತನ್ನತನವನ್ನು ಉಳಿಸಿಕೊಂಡು ಮುಂದುವರಿದಿದೆ. ಭಾರತದ ಮತ–ಧರ್ಮವಿಕಾಸದ ಇತಿಹಾಸ ಆಕರ್ಷಕವಾದದ್ದು.

ಹರಪ್ಪಾ–ಮೊಹೆಂಜೊ ದಾರೊ ಜನರ ಭೌತಿಕಜೀವನದ ವಿಚಾರವಾಗಿ ನಮಗೆ ಹಲವಾರು ಅಮೂಲ್ಯ ವಿವರಗಳು ದೊರೆತಿವೆಯಾದರೂ, ಅವರ ಆಧ್ಯಾತ್ಮಿಕ ಚಿಂತನೆಗಳನ್ನು ಕುರಿತು ನಮಗೆ ವಿವರವಾದ, ಸ್ಪಷ್ಟವಾದ ತಿಳಿವಳಿಕೆ ಇನ್ನೂ ಲಭಿಸಿಲ್ಲ. ಆದರೆ, ಭಾರತಕ್ಕೆ ಬಂದು ನೆಲೆಸಿದ ಆರ್ಯರು ಈ ಜನರಿಂದಲೂ ಇವರಿಗೆ ಹಿಂದೆ ಇದ್ದ ಆಸ್ಟ್ರಿಕ್ ಬುಡಕಟ್ಟಿನ ಜನರಿಂದಲೂ ಅವರ ಹಲವಾರು ಭೌತಿಕ ಸಾಧನೆಗಳನ್ನೂ ಆಧ್ಯಾತ್ಮಿಕ ಭಾವನೆಗಳನ್ನೂ ಎರವಲು ಪಡೆದರು ; ಅವನ್ನು ತಮ್ಮದನ್ನಾಗಿ ಮಾಡಿಕೊಂಡರು ಎಂದು ತೋರುತ್ತದೆ. ಲಿಂಗಪೂಜೆ, ಕರ್ಮ–ಪುನರ್ಜನ್ಮಗಳ ಭಾವನೆ, ಮಾತೃದೇವತಾ ಪೂಜೆ ಇವೆಲ್ಲ ಆರ್ಯರಿಗೆ ಅವರ ಹಿಂದಿನವರ ಬಳುವಳಿಗಳು.



ಬೆಟ್ಟದ ಮೇಲೆ

ವೇದಯುಗದ ಆರಂಭಕಾಲದಲ್ಲಿ ಆರ್ಯರು ಪ್ರಧಾನವಾಗಿ ಪ್ರಕೃತಿ ಪೂಜಕರಾಗಿದ್ದರು. ಪ್ರಕೃತಿಯ ವಿವಿಧ ರೂಪಗಳ ಚಾಲಕ ಶಕ್ತಿಯಾಗಿ ದೇವತೆಗಳಿದ್ದಾರೆಂದುಕೊಂಡರು. ಅವರ ಮೊದಲ ಕಾಣಿಕೆ ಸೂರ್ಯನಿಗೆ, ಭೂಮಿಗೆ. ಸ್ವಲ್ಪ ಕಾಲಾನಂತರ ಈ ದೇವತೆಗಳು ಹಿಂದೆಬಿದ್ದು ಆಕಾಶಾಧಿಪನಾದ ವರುಣ ಪ್ರಮುಖನಾದ. ಅನಂತರ ಮಳೆ ಗುಡುಗು ಮಿಂಚುಗಳ ಅಧಿಪತಿ ಇಂದ್ರನಿಗೆ ಪ್ರಾಶಸ್ತ್ಯ.... ಹೀಗೆ ದೇವತೆಗಳ ಪಟ್ಟಿಯೂ ಬೆಳೆಯಿತು. ಅವರ ಪ್ರಾಮುಖ್ಯದಲ್ಲೂ ಬದಲಾವಣೆಗಳಾದುವು. ವೇದಗಳಲ್ಲಿ ಉಷಸ್, ಅದಿತಿ ಮುಂತಾದ ಸ್ತ್ರೀ ದೇವತೆಗಳ ಉಲ್ಲೇಖವಿದ್ದರೂ ಗಂಡು ದೇವತೆಗಳದ್ದೇ ಹೆಚ್ಚಳ. ಕಾಲಕ್ರಮದಲ್ಲಿ ಏಕದೇವತಾ ಭಾವನೆ ಕಾಣಿಸಿಕೊಂಡಿತು. ಆದರೂ ಅನೇಕ ದೇವತೆಗಳ ಆರಾಧನೆಯೂ ಅದರ ಜೊತೆಜೊತೆಯಲ್ಲೇ ಉಳಿಯಿತು. ದೇವತಾಪ್ರೀತಿಗಾಗಿ ಯಜ್ಞಯಾಗಾದಿಗಳು ಆಚರಣೆಗೆ ಬಂದುವು: ಆರ್ಯೇತರ ಗುಂಪುಗಳ ಭಾವನೆಗಳೂ ನುಸುಳಿಕೊಂಡುವು. ವೇದಸಾಹಿತ್ಯ ವಿಸ್ತಾರವಾಗಿ ಬೆಳೆಯಿತು. ವೇದಗಳ ಭಾಗವಾದ ಬ್ರಾಹ್ಮಣಗಳ ಮೇಲೆ ಆಧಾರಪಟ್ಟ ಬ್ರಾಹ್ಮಣಮತ ರೂಪುಗೊಂಡು ಬೇರುಬಿಟ್ಟಿತು. ನಾನಾ ಕರ್ಮಗಳು ಆಚರಣೆಗೆ ಬಂದುವು. ವೇದದ ಚೌಕಟ್ಟಿಗೆ ಒಳಗಾಗಿದ್ದರೂ ಕೇವಲ ಯಜ್ಞಯಾಗಾದಿ ಕರ್ಮಗಳ ಮಿತಿಯನ್ನು ದಾಟಿ, ಜಗತ್ತು, ಜೀವ, ಜೀವನದ ಕೋಟಲೆಗಳಿಗೆ ಪರಿಹಾರ ಮುಂತಾದುವನ್ನು ಕುರಿತ ಚರ್ಚಾರೂಪವಾದ ಉಪನಿಷತ್ತುಗಳು ಉದಯಿಸಿದುವು. ಕ್ರಿ. ಪೂ. 7-6ನೆಯ ಶತಮಾನದ ಅವಧಿಯಲ್ಲಿ ಹೊಸ ಚಿಂತನೆಗಳು ಆರಂಭವಾದುವು. ಹಾಗೆಯೇ ವೇದ ಪ್ರಾಮಾಣ್ಯವನ್ನು ಒಪ್ಪದ ಸಾಂಖ್ಯ, ವೈಶೇಷಿಕಗಳಂಥ ದರ್ಶನಗಳು ಮೊಳೆತುವು. ಬ್ರಾಹ್ಮಣ ಮತಕ್ಕೆ ಪ್ರತಿಸ್ಪರ್ಧಿಗಳು ಹುಟ್ಟಿಕೊಂಡವು. ಬುದ್ಧ, ಮಹಾವೀರರು ಹುಟ್ಟಿದ್ದು ಈ ಹಿನ್ನೆಲೆಯಲ್ಲಿ. ಬುದ್ಧನು ಸಾಂಖ್ಯದಲ್ಲಿ ಪ್ರತಿಪಾದಿತವಾಗಿರುವ ಭಾವನೆಗಳಿಂದ ಪ್ರಭಾವಿತನಾದನೆಂದೂ ಅವನ ಅನಂತರ ಬಂದ ಸಾಂಖ್ಯರ ಮೇಲೆ ಅವನ ಭಾವನೆಗಳು ಪರಿಣಾಮವನ್ನುಂಟುಮಾಡಿದುವೆಂದೂ ತೋರುತ್ತದೆ.

ಭಾರತದ ಧಾರ್ಮಿಕ ಜೀವನದಲ್ಲಿ ಇದು ಒಂದು ಮುಖ್ಯ ಘಟ್ಟ. ಭಾವನಾಪ್ರಧಾನವಾಗಿದ್ದ ಆರ್ಯಧರ್ಮ(ಬ್ರಾಹ್ಮಣ ಧರ್ಮ)ದ ಪಕ್ಕದಲ್ಲೇ ತರ್ಕಪ್ರಧಾನವಾದ ದರ್ಶನಗಳು ಹುಟ್ಟಿಕೊಂಡುವು. ವೈಜ್ಞಾನಿಕ ವಿವೇಚನೆ, ತರ್ಕವಿಧಾನಗಳು ಭಾರತೀಯ ತತ್ತ್ವಚಿಂತನೆಯ ರಂಗವನ್ನು ಪ್ರವೇಶಿಸಿದುವು. ತತ್ತ್ವಚಿಂತನೆಯಲ್ಲಿ ವೈದಿಕ, ಅವೈದಿಕ ಎಂಬ ಎರಡು ವರ್ಗಗಳು ಉಂಟಾದುವು. ಆದರೆ ಕಾಲಕಳೆದಂತೆ ಇವು ಪರಸ್ಪರ ಪ್ರಭಾವಕ್ಕೆ ಒಳಗಾದುವು. ಒಂದು ಇನ್ನೊಂದರಿಂದ ಹಲಕೆಲವು ಭಾವನೆಗಳನ್ನು ಅಂಗೀಕರಿಸಿತು : ಯಜ್ಞಯಾಗಾದಿಗಳಲ್ಲಿ ಪಶುಬಲಿ ನಡೆಸುತ್ತಿದ್ದ ಬ್ರಾಹ್ಮಣ ಮತದವರು ಜೈನರ, ಬೌದ್ಧರ ಅಹಿಂಸೆ ತತ್ತ್ವವನ್ನು ಅಂಗೀಕರಿಸಿದಂತೆ ಬೌದ್ಧರು ಬ್ರಾಹ್ಮಣ ಮತದ ವಿಗ್ರಹಾರಾಧನೆಯನ್ನು ಒಪ್ಪಿಕೊಂಡು, ಬುದ್ಧನ ಹಾಗೂ ತಾರಾಭಗವತಿ ಮುಂತಾದ ದೇವತೆಗಳ ಮೂರ್ತಿಪೂಜೆ ಮಾಡಲಾರಂಭಿಸಿದಂತೆ.

ಅಲೆಗ್ಸಾಂಡರ್ ಭಾರತದ ಮೇಲೆ ದಾಳಿನಡೆಸಿದ್ದು ಮಹಾವೀರನ ನಿರ್ವಾಣವಾದ ಎರಡು ಶತಮಾನಗಳ ಅನಂತರ. ಆ ಹೊತ್ತಿಗೆ ಜೈನ ಬೌದ್ಧಧರ್ಮಗಳು ತಕ್ಕಮಟ್ಟಿಗೆ ಬೆಳೆದಿದ್ದುವಾದರೂ ಅವುಗಳ ಪ್ರಭಾವ ಹೆಚ್ಚಾಗಿದ್ದದ್ದು ಅವು ಹುಟ್ಟಿದ ಪ್ರದೇಶದಲ್ಲೇ. ಅದಿನ್ನೂ ಭಾರತದ ವಾಯವ್ಯ ಭಾಗದಲ್ಲಿ ಪ್ರಬಲವಾಗಿರಲಿಲ್ಲ. ಅಲ್ಲಿ ಬ್ರಾಹ್ಮಣಮತ ಬಲವಾಗಿಯೇ ಉಳಿದುಕೊಂಡಿದ್ದು ಅದರಲ್ಲಿ ಏಕದೇವತಾರಾಧನೆಗೆ ಪ್ರಾಶಸ್ತ್ಯ ಹೆಚ್ಚಿತ್ತು : ವಾಸುದೇವ, ಶಿವ, ಸ್ಕಂದ ಈ ದೇವತೆಗಳ ಆರಾಧನೆ ಬೆಳೆದಿತ್ತು. ಭಾಗವತ ಪಂಥ ಬಲಗೊಂಡಿತ್ತು.

ಅಲೆಗ್ಸಾಂಡರನ ಅನಂತರ ಆ ಪ್ರದೇಶದಲ್ಲಿ ಆಳ್ವಿಕೆ ನಡೆಸಿದ ಗ್ರೀಕ್ ಮೂಲದ ಜನ ಭಾಗವತಪಂಥದಿಂದ ಆಕರ್ಷಿತರಾದರು. ಕ್ರಿ. ಪೂ. 2ನೆಯ ಶತಮಾನದಲ್ಲಿದ್ದ ತಕ್ಷಶಿಲೆಯ ಗ್ರೀಕ್ ಅರಸನ ರಾಯಭಾರಿ ಹಿಲಿಯೋಡೊರಸ್ ತನ್ನನ್ನು ಭಾಗವತನೆಂದು ಕರೆದುಕೊಂಡವನು; ಇವನೇ ಪೂರ್ವ ಮಾಳವದ ಬೆಸ್‌ನಗರ(ವಿದಿಶಾನಗರ?)ದಲ್ಲಿ ವಾಸುದೇವನ ಗೌರವಾರ್ಥವಾಗಿ ಒಂದು ಗರುಡಗಂಬವನ್ನು ಸ್ಥಾಪಿಸಿದ.

ಕ್ರಿ. ಶ. ಒಂದನೆಯ ಶತಮಾನದಲ್ಲಿ ಭಾರತದ ಮೇಲೆ ದಾಳಿಯಿಟ್ಟು ಅನಂತರ ಇಲ್ಲಿ ನೆಲೆಸಿದ ಕುಶಾನ ವಂಶದ ಎರಡನೆಯ ಕಾಡ್ಫಿಸಿಸ್ ಶೈವ ಭಾಗವತನಾಗಿ ತನ್ನ ಹೆಸರನ್ನು ಮಹೇಶ್ವರನೆಂದು ಬದಲಾಯಿಸಿಕೊಂಡ. ಅವನ ಮಗನಾದ ಕನಿಷ್ಕನ ಕಾಲಕ್ಕೆ ಬೌದ್ಧಮತ ಪೆಷಾವರ್, ಕಾಶ್ಮೀರಗಳ ವರೆಗೆ ಹಬ್ಬಿತ್ತು. ಕನಿಷ್ಕನು ಬೌದ್ಧಧರ್ಮವನ್ನವಲಂಬಿಸಿ ಚೈತ್ಯಾದಿಗಳನ್ನು ಕಟ್ಟಿಸಿದ. 'ಬುದ್ಧಚರಿತ'ವನ್ನು ಬರೆದ ಅಶ್ವಘೋಷ ಇದ್ದದ್ದು ಇವನ ಆಸ್ಥಾನದಲ್ಲೇ.



ರಾಮಾನಂದರ ಶಿಷ್ಯವೃಂದ:
ರವಿದಾಸ್, ನಾಮದೇವ್, ಕಬೀರ್ ಮತ್ತಿತರರು

ಮೌರ್ಯವಂಶದ ಅಶೋಕನ ಕಾಲದಲ್ಲಿ ಬೌದ್ಧಧರ್ಮ ಭಾರತದಲ್ಲಿ ಮಾತ್ರವಲ್ಲ, ಅದರಿಂದ ಹೊರಗಿನ ಪ್ರದೇಶಗಳಿಗೂ ಹರಡಿತು. ಮೌರ್ಯವಂಶದ ಅವನತಿಯ ಲಾಭಪಡೆದು ತನ್ನ ರಾಜ್ಯಾಧಿಕಾರವನ್ನು ರೂಢಿಸಿಕೊಂಡ ಪುಷ್ಯಮಿತ್ರನ ಕಾಲದಲ್ಲಿ ಬ್ರಾಹ್ಮಣಮತ ಮತ್ತೆ ಪ್ರಾಬಲ್ಯಕ್ಕೆ ಬಂತು; ಗುಪ್ತರ ಕಾಲದಲ್ಲೂ ಆ ಪ್ರಾಬಲ್ಯ ಮುಂದುವರಿಯಿತು. ಗುಪ್ತರ ಕಾಲದಲ್ಲಿ ಅಸಂಗ, ವಸುಬಂಧು ಮುಂತಾದ ಗಣ್ಯ ಬೌದ್ಧ ಮತಾನುಯಾಯಿಗಳಿದ್ದರೂ ಬೌದ್ಧಧರ್ಮ ಭಾರತದಲ್ಲಿ ಹಿಂದೆ ಬಿತ್ತು. ಇದಕ್ಕೆ ಕಾರಣ-ಬ್ರಾಹ್ಮಣಮತದವರು ಬುದ್ಧನು ವಿಷ್ಣುವಿನ ಅವತಾರವೆಂದು ಪರಿಗಣಿಸಿದ್ದು ಹಾಗೂ ಬೌದ್ಧರು ತಂತ್ರಶಾಸ್ತ್ರಗಳಿಂದ ಅನೇಕ ಅಂಶಗಳನ್ನು ಗ್ರಹಿಸಿದ್ದು. ಹೀಗಾಗಿ ಬೌದ್ಧಮತವನ್ನಾಗಲೀ ಬ್ರಾಹ್ಮಣಮತವನ್ನಾಗಲೀ ಅನುಸರಿಸುತ್ತಿದ್ದ ಸಾಮಾನ್ಯರ ಆಚರಣೆಗಳ ನಡುವೆ ವ್ಯತ್ಯಾಸ ಕಾಣದಾಯಿತು. ಹೀಗಾಗಿ ಬೌದ್ಧಮತ ಭಾರತದಲ್ಲಿ ಕ್ರಮಕ್ರಮವಾಗಿ ಕಣ್ಮರೆಯಾಗಲು ದಾರಿಯಾಯಿತು. ಆದರೆ ಜೈನಮತ ಮಾತ್ರ ತನ್ನ ಅಸ್ತಿತ್ವವನ್ನು ಉಳಿಸಿಕೊಂಡು ಬಂತು.

ವೇದಗಳು, ಉಪನಿಷತ್ತು, ದರ್ಶನಗಳು, ಜೈನ, ಬೌದ್ಧ ಧರ್ಮಗಳು ಇವೆಲ್ಲವುಗಳಿಂದ ಪ್ರಭಾವಿತವಾದ ಭಾರತದ ಪ್ರಧಾನ ಧರ್ಮವನ್ನು ಹಿಂದೂಧರ್ಮವೆಂದು ಕರೆಯಬಹುದು. ಎಂಟನೆಯ ಶತಮಾನದಲ್ಲಿದ್ದ ಶಂಕರಾಚಾರ್ಯ, ಹನ್ನೆರಡನೆಯ ಶತಮಾನದ ರಾಮಾನುಜಾಚಾರ್ಯ, ಅವರ ಅನಂತರ ಬಂದ ಮಧ್ವಾಚಾರ್ಯ ಇವರು ಹಿಂದೂಧರ್ಮ ಬಲಪಡಲು ಕಾರಣರಾದರು. ಪ್ರಸ್ಥಾನತ್ರಯವೆಂದು ಪ್ರಸಿದ್ಧವಾದ ಬ್ರಹ್ಮಸೂತ್ರ, ಉಪನಿಷತ್ತು, ಭಗವದ್ಗೀತೆಗಳ ಆಧಾರದ ಮೇಲೆ ಹಿಂದೂಧರ್ಮಕ್ಕೆ ಬಲವಾದ ತಳಹದಿ ಹಾಕಿದರು.

ಇದಾದ ಮೇಲೆ ಅರೇಬಿಯಾದಲ್ಲಿ ಹುಟ್ಟಿದ ಇಸ್ಲಾಂಧರ್ಮ ಭಾರತಕ್ಕೆ ಬಂತು. ತನ್ನ ರಾಷ್ಟ್ರದಲ್ಲಿ ಹುಟ್ಟಿದ ವಿವಿಧ ಮತಗಳನ್ನು ತನ್ನದನ್ನಾಗಿಮಾಡಿಕೊಂಡಿದ್ದ ಹಿಂದೂಧರ್ಮಕ್ಕೆ ಇಸ್ಲಾಂಧರ್ಮವನ್ನು ಪೂರ್ಣವಾಗಿ ಹೀರಿಕೊಳ್ಳಲಾಗಲಿಲ್ಲ. ಪರಸ್ಪರ ವಿಚಾರ ಸ್ವೀಕರಣವಂತೂ ನಡೆಯಿತು. ಇದರ ಪರಿಣಾಮ ಉತ್ತರ ಭಾರತದಲ್ಲಿ ಜಾತಿಗಳ ಕೋಟಲೆಯಿಂದ ದೂರವಾದ ವೈಷ್ಣವ ಭಕ್ತಿ ಪಂಥದ ಜನನ. ಇದಕ್ಕೆ ಹಿಂದೆಯೇ ಕ್ರಿ. ಶ. 7ನೆಯ ಶತಮಾನದಲ್ಲೇ ದಕ್ಷಿಣ ಭಾರತದಲ್ಲಿ ಇಂಥ ಶೈವ, ವೈಷ್ಣವ ಪಂಥಗಳು (ನಾಯನ್ಮಾರ್ ಮತ್ತು ಆಳ್ವಾರ್) ಹುಟ್ಟಿ ಶಿವ, ವಿಷ್ಣು ಭಕ್ತಿಯನ್ನು ಸಾರ್ವತ್ರಿಕವಾಗಿ ಪ್ರಚಾರಮಾಡಿದ್ದುವು ಎಂಬುದು ಗಮನಾರ್ಹ. 12ನೆಯ ಶತಮಾನದಲ್ಲಿ ಕರ್ನಾಟಕದ ಬಸವೇಶ್ವರರೂ ಅವರ ಸಮಕಾಲೀನರೂ ಶೈವ ಭಕ್ತಿಪಂಥವನ್ನೂ ಬೆಳೆಸಿದರು. ಜಾತಿಮತಗಳ ಕೋಟಲೆಯಿಂದ ಜನರನ್ನು ವಿಮುಕ್ತಮಾಡಲು ಪ್ರಯತ್ನಿಸಿದರು. ಸಮಾಜ ಸುಧಾರಣೆಯನ್ನು ಸಾಧಿಸಿದರು.

ಸಾಮರಸ್ಯ ಪ್ರಯತ್ನ


ಉತ್ತರದ ವೈಷ್ಣವ ಭಕ್ತಿಪಂಥದ ಆಚಾರ್ಯರಲ್ಲಿ 14ನೆಯ ಶತಮಾನದಲ್ಲಿದ್ದ ರಾಮಾನಂದರು ಮುಖ್ಯರು. ಕಬೀರ, ರಾಯಿದಾಸರನ್ನೊಳಗೊಂಡಂತೆ ಈತನ ಹನ್ನೆರಡು ಮಂದಿ ಶಿಷ್ಯರಲ್ಲಿ ಹಲವಾರು ಜಾತಿಯ ಜನರಿದ್ದರು. ವಿಷ್ಣುವಿನ ಭಕ್ತಿಯೇ ಇವರೆಲ್ಲರನ್ನೂ ಸಂಬಂಧಿಸಿದ್ದ ಸೂತ್ರ. ಹಿಂದು ಮತ್ತು ಇಸ್ಲಾಂ ಧರ್ಮಗಳ ನಡುವೆ ಸಾಮರಸ್ಯವನ್ನು ಸಾಧಿಸುವ ಪ್ರಯತ್ನದಲ್ಲಿ ಕಬೀರನ ಸಾಧನೆ ದೊಡ್ಡದು. 15ನೆಯ ಶತಮಾನದಲ್ಲಿ ಗುರು ನಾನಕ್, 16ನೆಯ ಶತಮಾನದಲ್ಲಿ ಅಕ್ಬರ್ ಇಂಥ ಪ್ರಯತ್ನ ನಡೆಸಿದರು.

ಭಾರತಕ್ಕೆ ಹೊರಗಿನಿಂದ ಬಂದ ಇನ್ನೊಂದು ಧರ್ಮ ಏಸು ಕ್ರಿಸ್ತ ಪ್ರತಿಪಾದಿಸಿದ್ದು. ಕ್ರಿಸ್ತನ ಸಾಕ್ಷಾತ್ ಶಿಷ್ಯನಾದ ಸಂತ ಥಾಮಸ್ ಒಂದನೆಯ ಶತಮಾನದ ಪೂರ್ವ ಭಾಗದಲ್ಲಿ ಭಾರತಕ್ಕೆ ಬಂದನೆಂದೂ ಗಾಂಧಾರ ಪ್ರದೇಶದಲ್ಲಿ ಆಳುತ್ತಿದ್ದ ಪಾರ್ಥಿಯನ್ ವಂಶದ ಗೊಂಡೋಫರಸ್‌ನನ್ನು ಇವನು ಕ್ರಿಸ್ತ ಧರ್ಮಕ್ಕೆ ಪರಿವರ್ತಿಸಿದನೆಂದೂ ಹೇಳಿಕೆಗಳಿವೆ. 16ನೆಯ ಶತಮಾನದಲ್ಲಿ ಪೋರ್ಚುಗೀಸರು ಭಾರತಕ್ಕೆ ಬಂದ ಮೇಲೆ ಕ್ರಿಸ್ತ ಧರ್ಮ ಭಾರತದಲ್ಲಿ ಬೇರೂರಲಾರಂಭಿಸಿತೆನ್ನಬಹುದು. ಬ್ರಿಟಿಷರ ಆಶ್ರಯದಲ್ಲಿ ಅದು ಬೆಳೆಯಿತು. ವಿದ್ಯಾವಂತರಿಗೆ ಕ್ರಿಸ್ತ ಧರ್ಮದ ಪರಿಚಯವಾಯಿತು. ಭಾರತೀಯರನ್ನು ಧರ್ಮಾಂತರಗೊಳಿಸುವುದೂ ನಡೆಯಿತು.

ಕ್ರಿಸ್ತಧರ್ಮದಿಂದ ಪ್ರಭಾವಿತರಾದ ಬುದ್ಧಿವಂತ ಭಾರತೀಯರಲ್ಲಿ ಕೆಲವರು ಹಿಂದೂ ಧರ್ಮದಲ್ಲಿ ಸೇರಿಕೊಂಡಿದ್ದ ಮೂಢನಂಬಿಕೆಗಳನ್ನು ಪರಿಹರಿಸಿ ಅದನ್ನು ಉಜ್ವಲಗೊಳಿಸುವ ಪ್ರಯತ್ನವನ್ನು ಕೈಗೊಂಡರು. ಸಮಾಜಸುಧಾರಣೆಯೂ ಇವರ ಧ್ಯೇಯವಾಗಿತ್ತು. ಇಂಥವರಲ್ಲಿ ರಾಜಾ ರಾಮಮೋಹನರಾಯರು ಮೊದಲಿಗರು. ಇವರು ಬ್ರಹ್ಮಸಮಾಜವನ್ನು ಸ್ಥಾಪಿಸಿದರು. ಇದು ನಡೆದದ್ದು 19ನೆಯ ಶತಮಾನದ ಆದಿಭಾಗದಲ್ಲಿ. ಇದನ್ನನುಸರಿಸಿ ಕೇಶವ ಚಂದ್ರಸೇನರ ಮಾರ್ಗದರ್ಶನದಲ್ಲಿ ಪ್ರಾರ್ಥನಾ ಸಮಾಜ ರೂಪಿತವಾಯಿತು. ಸ್ವಾಮಿ ದಯಾನಂದರು 1875ರಲ್ಲಿ ಸ್ಥಾಪಿಸಿದ ಆರ್ಯಸಮಾಜ ಹಿಂದೂಧರ್ಮ, ಸಮಾಜಗಳನ್ನು ಬಲಪಡಿಸಿತು. ಅದೇ ರೀತಿ ಸ್ವಾಮಿ ವಿವೇಕಾನಂದರಿಂದ ಸ್ಥಾಪಿತವಾದ ರಾಮಕೃಷ್ಣ ಮಠ ಕೂಡ ಹಿಂದೂಧರ್ಮದ ಪ್ರಚಾರಕ್ಕಾಗಿ ಅಮೂಲ್ಯ ಸೇವೆ ಸಲ್ಲಿಸಿತು. ಹಿಂದೂ ಧರ್ಮದ ಮೂಲ ತತ್ತ್ವಗಳನ್ನು ಪಾಶ್ಚಿಮಾತ್ಯ ದೇಶಗಳಲ್ಲಿ ಹರಡಿತು.

ಭಾರತದ ಇತಿಹಾಸವನ್ನು ನೋಡಿದರೆ, ಭಾರತೀಯರಲ್ಲಿ ಪ್ರಬಲವಾದ ಅಂತಶ್ಶಕ್ತಿಯಿದೆಯೆಂಬುದು ಎದ್ದು ಕಾಣುತ್ತದೆ. ಕಾಲದಿಂದ ಕಾಲಕ್ಕೆ ಅವರು ಪರಕೀಯ ದಾಳಿಗಳನ್ನು ಎದುರಿಸಿದ್ದಾರೆ; ಕಷ್ಟನಷ್ಟಗಳಿಗೆ ಗುರಿಯಾಗಿದ್ದಾರೆ. ಆದರೆ ಅನವಶ್ಯವಾಗಿ ಇತರರನ್ನು ಹಿಂಸಿಸುವ ಗೋಜಿಗೆ ಹೋಗಿಲ್ಲ. ಆತ್ಮ ಪರೀಕ್ಷೆಯಿಂದ ತಮ್ಮ ಲೋಪದೋಷಗಳನ್ನು ತಿದ್ದಿಕೊಂಡಿದ್ದಾರೆ; ತಮ್ಮ ಗುಣಾಂಶಗಳನ್ನು ರಕ್ಷಿಸಿಕೊಂಡು, ಇತರರಲ್ಲಿ ಕಂಡುಬಂದ ಒಳ್ಳೆಯ ಗುಣಗಳನ್ನು ಗ್ರಹಿಸಿ ತಮ್ಮ ಸತ್ವವನ್ನು ಬೆಳೆಸಿಕೊಳ್ಳುವ ಪ್ರಯತ್ನವನ್ನು ನಿರಂತರವಾಗಿ ನಡೆಸಿದ್ದಾರೆ. ಸಹಿಷ್ಣುತೆಯಿಂದ ವರ್ತಿಸಿದ್ದಾರೆ. ಆದ್ದರಿಂದಲೇ ಅವರು ತಮ್ಮ ಧರ್ಮ, ಸಂಸ್ಕೃತಿಗಳನ್ನು ಇನ್ನೂ ಜೀವಂತವಾಗಿಯೇ ಉಳಿಸಿಕೊಂಡಿದ್ದಾರೆ.

—ಮಾ.ನಾ.ಚೌ.


ಭಾರತ
ಶ್ರೀನಗರ
ಜಮ್ಮು-ಕಾಶ್ಮೀರ
ಹಿಮಾಚಲ ಪ್ರದೇಶ
ಸಿಮ್ಲಾ
ಪಂಜಾಬ್
ಚಂಡೀಗಢ
ಪಾಕಿಸ್ತಾನ
ಚೀನ
ಹರಿಯಾಣ
ದೆಹಲಿ
ನೇಪಾಳ
ಉತ್ತರ ಪ್ರದೇಶ
ಲಖನೌ
ರಾಜಸ್ಥಾನ
ಜಯಪುರ
ಭೂತಾನ್
ಅರುಣಾಚಲ ಪ್ರದೇಶ
ಅಸ್ಸಾಂ
ಶಿಲ್ಲಾಂಗ್
ಮೇಘಾಲಯ
ನಾಗಾಲ್ಯಾಂಡ್
ಕೊಹಿಮ
ಮಣಿಪುರ
ಇಂಫಾಲ್
ಪಟ್ನಾ
ಬಿಹಾರ
ಬಾಂಗ್ಲಾದೇಶ
ಗುಜರಾತ್
ಗಾಂಧಿನಗರ
ಭೋಪಾಲ
ಮಧ್ಯಪ್ರದೇಶ
ಪಶ್ಚಿಮ ಬಂಗಾಳ
ಕಲ್ಕತ್ತಾ
ಬರ್ಮ
ದೀವ್ ದಮಾನ್
ಮಹಾರಾಷ್ಟ್ರ
ಒರಿಸ್ಸಾ
ಭುವನೇಶ್ವರ
ಮುಂಬಯಿ
ಹೈದರಾಬಾದ್
ಬಂಗಾಳ ಕೊಲ್ಲಿ
ಅರಬಿ ಸಮುದ್ರ
ಪಣಜಿ
ಗೋವ
ಕರ್ನಾಟಕ
ಆಂಧ್ರಪ್ರದೇಶ
ಬೆಂಗಳೂರು
ಮದರಾಸು
ತಮಿಳುನಾಡು
ಕೇರಳ
ಲಕ್ಷದ್ವೀಪ
ತಿರುವನಂತಪುರ
ಶ್ರೀಲಂಕಾ
ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು


ಅಂಕಲೇಶ್ವರ

ಗುಜರಾತಿನ ಕ್ಯಾಂಬೆ ಕೊಲ್ಲಿಯ ಕರಾವಳಿಯಲ್ಲಿದೆ, ಅಂಕಲೇಶ್ವರ. ಇಲ್ಲಿನ ಖನಿಜ ತೈಲ ನಿಕ್ಷೇಪ ಭಾರತದಲ್ಲೇ ಪ್ರಸಿದ್ಧವಾದದ್ದು.

ಹೊಸ ಹೊಸ ಎಣ್ಣೆ ನಿಕ್ಷೇಪಗಳನ್ನು ಪತ್ತೆಹಚ್ಚಲು ಭಾರತದ ತೈಲ ಮತ್ತು ನೈಸರ್ಗಿಕ ಅನಿಲ ಮಂಡಲಿ ನಡೆಸಿದ ಶೋಧನೆಯಿಂದಾಗಿ, ಅಂಕಲೇಶ್ವರದಲ್ಲಿ ದೊಡ್ಡ ತೈಲ ನಿಕ್ಷೇಪವಿರುವುದು 1961ರಲ್ಲಿ ಗೊತ್ತಾಯಿತು. ಇಲ್ಲಿ ವರ್ಷಕ್ಕೆ 1.8 ದಶಲಕ್ಷ ಟನ್ ನೈಸರ್ಗಿಕ ಎಣ್ಣೆ ಉತ್ಪಾದನೆಯಾಗುವ ಅಂದಾಜಿದೆ. ನಿಕ್ಷೇಪವನ್ನು ಕಂಡುಹಿಡಿದ ಹದಿನೆಂಟು ತಿಂಗಳಲ್ಲೇ ಕಚ್ಚಾ ಎಣ್ಣೆ ಉತ್ಪಾದನೆ ಆರಂಭವಾಯಿತು.

ಅಂಕಲೇಶ್ವರದಿಂದ ಬರೋಡದ ಬಳಿಯ ಕೊಯಲಿಗೆ ತೈಲವಾಹಕ ಕೊಳವೆ ಇದೆ. ಶುದ್ಧೀಕರಣಕ್ಕಾಗಿ ಇದರಲ್ಲಿ ಕಚ್ಚಾ ಎಣ್ಣೆ ರವಾನೆಯಾಗುತ್ತದೆ. ಅಲ್ಲದೆ ಅಂಕಲೇಶ್ವರದಲ್ಲಿ ದೊರೆಯುವ ನೈಸರ್ಗಿಕ ಅನಿಲವನ್ನು ಸಾಗಿಸಲು ಕೂಡ ಕೊಳವೆಗಳನ್ನು ಹಾಕಲಾಗಿದೆ.


ಅಂಕಲೇಶ್ವರದ ಜನಸಂಖ್ಯೆ 26,220.



ಸಾಗಣೆಗೆ ಕೊಳವೆ ಮಾರ್ಗ

ಅಂಡಮಾನ್, ನಿಕೋಬಾರ್ ದ್ವೀಪಗಳು

ದಟ್ಟವಾದ, ದೊಡ್ಡ ದೊಡ್ಡ ಮರಗಳ ಕಾಡು. ಅಲ್ಲಲ್ಲಿ ಭತ್ತದ ಗದ್ದೆಗಳು, ಗೋಡಂಬಿ ಗಿಡ ಬೆಳೆಯುವ ಗುಡ್ಡಗಳು. ಕಡಿದ ಮರಗಳನ್ನು ಸಾಗಿಸುವ ಆನೆಗಳು, ಕೋಣಗಳು. ಇದು ಅಂಡಮಾನಿನಲ್ಲಿ ಸಾಮಾನ್ಯವಾಗಿ ಕಂಡುಬರುವ ದೃಶ್ಯ.



ಅಂಡಮಾನ್ ಸೆರೆಮನೆ : ಬ್ರಿಟಿಷರ ಕಾಲದ ಕರಿನೀರಿನ ಶಿಕ್ಷೆ

ಬಾಯಾರಿಕೆಯೆನಿಸಿದರೆ ತಂಪಾದ ಎಳನೀರು. ಊಟ, ತಿಂಡಿ ಎಲ್ಲದರಲ್ಲೂ ತೆಂಗಿನಕಾಯಿ ಇಲ್ಲದೆ ನಡೆಯದು. ಏನನ್ನಾದರೂ ಕೊಂಡುಕೊಳ್ಳ ಬೇಕೆನಿಸಿದರೆ ತೆಂಗಿನಕಾಯಿಗಳನ್ನು ಮಾರಿ ಬಂದ ದುಡ್ಡಿನಿಂದ ಆಗಬೇಕು. ಹೀಗೆ ನಿಕೋಬಾರ್‌ನಲ್ಲಿ ಜೀವನಕ್ಕೆ ಆಧಾರ ತೆಂಗು.

ವಿಸ್ತೀರ್ಣ : 8293 ಚ. ಕಿ. ಮೀ.

ಜನಸಂಖ್ಯೆ : 1,15,133

ಮುಖ್ಯಪಟ್ಟಣ : ಪೋರ್ಟ್ ಬ್ಲೇರ್

ಅಂಡಮಾನ್–ನಿಕೋಬಾರ್ ಮುನ್ನೂರನಲವತ್ತೆಂಟು ದ್ವೀಪಗಳಿರುವ ದ್ವೀಪಸಮೂಹ; ಒಂದೇ ಘಟಕವಾಗಿ ಕೇಂದ್ರ ಸರಕಾರದ ಆಡಳಿತದ ಪ್ರದೇಶವಾಗಿದೆ. ಪೋರ್ಟ್ ಬ್ಲೇರ್ ಇಲ್ಲಿನ ಮುಖ್ಯ ಪಟ್ಟಣ. ಮದರಾಸಿನಿಂದಲೂ ಕಲ್ಕತ್ತಾದಿಂದಲೂ ಹೆಚ್ಚುಕಡಮೆ ಒಂದೇ ದೂರದಲ್ಲಿ ಬಂಗಾಳಕೊಲ್ಲಿಯಲ್ಲಿದೆ, ಈ ದ್ವೀಪಸಮೂಹ.



ದ್ವೀಪದಲ್ಲಿ ಗ್ರಾಮೀಣ ಜೀವನ

ಮರಗಳಿಂದ ಮೇಜು, ಕುರ್ಚಿ, ಪ್ಲೈವುಡ್ ಮುಂತಾದುವುಗಳನ್ನು ಮಾಡುವುದು, ತೆಂಗಿನ ನಾರಿನಿಂದ ಹುರಿ ತಯಾರಿಸುವುದು ಇಲ್ಲಿನ ಪ್ರಮುಖ ಉದ್ಯಮಗಳು. ಬೇಟೆಯಾಡಿ ಬದುಕುವ ಮೂಲ ನಿವಾಸಿಗಳೂ ಇಲ್ಲಿದ್ದಾರೆ.


ನೋಡಿ : ಪೋರ್ಟ್ ಬ್ಲೇರ್
ಅಂಡಮಾನ್, ನಿಕೋಬಾರ್ ದ್ವೀಪಗಳು—ಸಂಪುಟ ೧

ಅಂದಾನಪ್ಪ ದೊಡ್ಡಮೇಟಿ

ಕನ್ನಡದ ಕಟ್ಟಾ ಅಭಿಮಾನಿ ಅಂದಾನಪ್ಪ ದೊಡ್ಡಮೇಟಿ.

1908 ಮಾರ್ಚ್ 8ರಂದು ಧಾರವಾಡ ಜಿಲ್ಲೆಯ ಗದಗ ತಾಲೂಕಿನ ಜಕ್ಕಲಿಯಲ್ಲಿ ಇವರ ಜನನ. ತಮ್ಮ 22ನೆಯ ವರ್ಷದಲ್ಲಿಯೇ ಸ್ವಾತಂತ್ರ್ಯ ಆಂದೋಲನದಲ್ಲಿ ಧುಮುಕಿದರು. ಅಸಹಕಾರ ಆಂದೋಲನ, ಸತ್ಯಾಗ್ರಹ ಗಳಲ್ಲಿ ಪ್ರಮುಖ ಪಾತ್ರ ವಹಿಸಿದರು. 1933ರಲ್ಲಿ ಸವಿನಯ ಕಾಯಿದೆ ಭಂಗ ಚಳುವಳಿಯಲ್ಲಿ ಭಾಗವಹಿಸಿದ್ದಕ್ಕೆ 2 ಸಾವಿರ ರೂ. ದಂಡ, 6 ತಿಂಗಳ ಶಿಕ್ಷೆ ಆಯಿತು. ಇನ್ನೂ ಅನೇಕ ಸಲ ಶಿಕ್ಷೆ–ದಂಡ ಅನುಭವಿಸಿದರು.

ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಸದಸ್ಯರಾಗಿಯೂ ಕೆಲಸ ಮಾಡಿದರು.



ಕನ್ನಡಾಭಿಮಾನ : ದೊಡ್ಡಮೇಟಿ

ಸ್ವಭಾವತಃ ದಯಾಳು. ತಮ್ಮ ಊರಲ್ಲಿ ಬರಗಾಲ ತಲೆದೋರಿದಾಗ ಶ್ರೀಮಂತ ಜಮೀನುದಾರರಾದ ಇವರು ಜನರಿಗೆ ಕೆಲಸ ಒದಗಿಸಿ ದವಸ ಧಾನ್ಯ ಹಂಚಿದರು. ಸಮಯವನ್ನು ಕಳೆಯಲು ಅವರು ಹಾವುಗಳನ್ನು ಸಾಕುವ ವಿಚಿತ್ರ ಹವ್ಯಾಸ ರೂಢಿಸಿಕೊಂಡಿದ್ದರು. ಚಿಕ್ಕಂದಿನಿಂದಲೂ ಅದನ್ನು ಬೆಳೆಸಿಕೊಂಡು ಬಂದಿದ್ದರು. ಒಂದು ಮಿಡಿ ನಾಗರವನ್ನು ಸಾಕಿದ್ದರು. ಅದು ಸತ್ತಾಗ ಉಪವಾಸ ಕೂಡ ಮಾಡಿದ್ದರು.

ಅವರು ಉಚ್ಚ ಶಿಕ್ಷಣ ಪಡೆಯಲಿಲ್ಲ. ಆದರೆ ಕನ್ನಡ ಸಾಹಿತ್ಯವನ್ನು ಆಳವಾಗಿ ಅಭ್ಯಸಿಸಿದ್ದರು. ಭುವನೇಶ್ವರಿಯನ್ನು ಸ್ತುತಿಸುವ ಅವರ ಕವನಗಳ ಸಂಗ್ರಹ 'ಕರ್ನಾಟಕ ಮಹಿಮಾ ಸ್ತೋತ್ರ'. 'ಕಲ್ಕಿ' ಎಂಬ ಮಾಸಪತ್ರಿಕೆಯನ್ನು ಕೆಲ ಕಾಲ ಗದಗದಿಂದ ಪ್ರಕಟಿಸಿದರು. ಮುಂಬಯಿ ವಿಧಾನ ಸಭೆಯಲ್ಲಿ ಅವರು ಸ್ವಾತಂತ್ರ್ಯ ಪೂರ್ವದಲ್ಲಿಯೇ ಕನ್ನಡದಲ್ಲಿ ಮಾತನಾಡಿದ್ದರು. ಕರ್ನಾಟಕ ಏಕೀಕರಣದ ಪ್ರಯತ್ನವನ್ನು ಬಲಪಡಿಸಲು ಅವರು ತಮ್ಮ ಸದಸ್ಯತ್ವಕ್ಕೆ ರಾಜಿನಾಮೆಯನ್ನು ನೀಡಿದ್ದೂ ಉಂಟು. ಮೈಸೂರು ವಿಧಾನ ಸಭೆಯಲ್ಲಿ ರಾಜ್ಯದ ಹೆಸರನ್ನು ಕರ್ನಾಟಕ ಎಂದು

ಮಾರ್ಪಡಿಸಲು ಶ್ರಮಿಸಿದರು. ಅಂದಾನಪ್ಪ ದೊಡ್ಡಮೇಟಿಯವರು 1970–71ರ ಅವಧಿಯಲ್ಲಿ ಮೈಸೂರು ರಾಜ್ಯದ ನೀರಾವರಿ ಸಹಾಯಕ ಮಂತ್ರಿಯಾಗಿದ್ದರು. [illegible] 1972 ಫೆಬ್ರವರಿ 21ರಂದು ಮರಣ ಹೊಂದಿದರು.

ಅಂಬರನಾಥ

ಮಹಾರಾಷ್ಟ್ರ ರಾಜ್ಯದ ಠಾಣಾ ಜಿಲ್ಲೆಯಲ್ಲಿ ಅಂಬರನಾಥ ನಗರವಿದೆ. ಇಲ್ಲಿರುವ ಅಂಬರನಾಥ ದೇವಾಲಯ 11ನೆಯ ಶತಮಾನದ್ದು. ಉತ್ತರ ಮತ್ತು ದಕ್ಷಿಣ ಭಾರತ ವಾಸ್ತುಶಿಲ್ಪ ಶೈಲಿಗಳ ಮಿಶ್ರಣವಿರುವ ಪ್ರಾಚೀನ ದೇವಾಲಯಗಳಲ್ಲಿ ಇದೊಂದು.

ಇದು ಪಶ್ಚಿಮಾಭಿಮುಖವಾಗಿದ್ದು ನಕ್ಷತ್ರಾಕಾರವಾಗಿದೆ. ಈ ದೇವಾಲಯದಲ್ಲಿ ಪೂಜೆ ಸಲ್ಲುವುದು ಒಂದು ಶಿವ ಲಿಂಗ. ಇದು ಸ್ವಯಂಭೂ ಲಿಂಗ. ಇದನ್ನು ಕರೆಯುವುದು ಅಂಬರನಾಥ ಅಥವಾ ಅಂಬರೇಶ್ವರ ಎಂದು. ದೇವಾಲಯದಲ್ಲಿ ಬಳ್ಳಿಯ ಕೆತ್ತನೆ ಕೆಲಸವುಳ್ಳ ಕಂಬಗಳೂ ಬಗೆ ಬಗೆಯ ಭಂಗಿಗಳ ಸುಂದರ ವಿಗ್ರಹಗಳೂ ಇವೆ. ಇವುಗಳಲ್ಲಿ ಮಹಿಷಾಸುರಮರ್ದಿನಿ, ನಾಗಿಣಿ, ಕಾಮದೇವ, ರೋಹಿಣಿ, ಸರಸ್ವತಿ, ಮಹಾಕಾಳಿ ಮತ್ತು ಪತ್ನಿಯನ್ನು ತೊಡೆಯ ಮೇಲೆ ಕೂಡಿಸಿಕೊಂಡಿರುವ ಬ್ರಹ್ಮ ವಿಗ್ರಹಗಳು ಗಮನೀಯವಾದುವು. ದೇವಾಲಯದ ಬಳಿ ಸಣ್ಣ ಕೊಳವಿದೆ. ಇಲ್ಲಿ ಶಿವರಾತ್ರಿ ಜಾತ್ರೆ ವಿಜೃಂಭಣೆಯಿಂದ ನಡೆಯುತ್ತದೆ.

ದೇವಾಲಯದ ಒಂದು ಬಾಗಿಲ ಬಾಡದ ಮೇಲಿರುವ ಹಾಸುಗಲ್ಲಿನಲ್ಲಿ ಒಂದು ಶಾಸನವಿದೆ. ಶಕ ಸಂವತ್ಸರ 982ರಲ್ಲಿ ಮಹಾಮಂಡಲೇಶ್ವರ ಮಾಮ್ವಾಣಿ ರಾಜದೇವನು ಅಂಬರನಾಥ ದೇವಾಲಯವನ್ನು ಕಟ್ಟಿಸಿದನೆಂದು ಇದರಿಂದ ಗೊತ್ತಾಗುತ್ತದೆ.

ಅಂಬರನಾಥ ನಗರ ಈಗ ಒಂದು ಉದ್ಯಮ ಕೇಂದ್ರವೂ ಆಗಿದೆ.

ಅಂಬಿಕಾ ಚಕ್ರವರ್ತಿ

1930 ಏಪ್ರಿಲ್ 18ನೆಯ ದಿನಾಂಕ. ಅಂದಿನ ಬಂಗಾಳದ ಚಿತ್ತಗಾಂಗ್ ಪ್ರದೇಶದಲ್ಲಿ ಎರಡು ಕ್ರಾಂತಿಕಾರಿ ತಂಡಗಳು [illegible]. ಟೆಲಿಗ್ರಾಫ್ ಕೇಂದ್ರಗಳನ್ನು ಹಾಗೂ ಆಯುಧ ಕೋಠಿಯನ್ನು ವಶಪಡಿಸಿಕೊಂಡವು. ಹತ್ತಿರದ ಜಲಾಲಾಬಾದ್ ಗುಡ್ಡಕ್ಕೆ ತಂಡಗಳು ಸರಿದಾಗ ಅಲ್ಲಿ ಬ್ರಿಟಿಷ್ ಸರಕಾರದ ಸಶಸ್ತ್ರ ಪಡೆಗಳನ್ನು ಎದುರಿಸಿ ಸೋಲನ್ನು ಅನುಭವಿಸಿದವು. ತಂಡಗಳ ನಾಯಕ ತಪ್ಪಿಸಿಕೊಂಡ. ಒಂದು ಹಳ್ಳಿಯಲ್ಲಿ ಆಸರೆ ಪಡೆದ. ಆದರೆ ಹಲವು ತಿಂಗಳ ಅನಂತರ ಸೆರೆಸಿಕ್ಕಿದ. ಸರಕಾರ ಅವನನ್ನು ಜೀವಾವಧಿ ಕಾರಾಗೃಹವಾಸಕ್ಕಾಗಿ ಅಂಡಮಾನಿಗೆ ಕಳುಹಿಸಿತು.

ಆ ಕ್ರಾಂತಿಕಾರಿ — ಅಂಬಿಕಾ ಚಕ್ರವರ್ತಿ.

ಇವರು ಹುಟ್ಟಿದ್ದು ಬರ್ಮಾದಲ್ಲಿ, 1892ರಲ್ಲಿ. ಆಗ ತಂದೆ ನಂದಕುಮಾರ ಚಕ್ರವರ್ತಿ ಅಲ್ಲಿದ್ದರು. ಇವರ ಕುಟುಂಬ ಇದ್ದದ್ದು ಚಿತ್ತಗಾಂಗ್‌ನಲ್ಲಿ. ಚಿಕ್ಕಂದಿನಲ್ಲಿ [illegible] : ತಮ್ಮ ಬಾಳನ್ನು ದೇಶಕ್ಕಾಗಿ ಮೀಸಲಿಡಲು ನಿರ್ಧರಿಸಿದರು. ಅವಿವಾಹಿತರಾಗಿ ಉಳಿದರು. 1911ರ ವೇಳೆಗೆ ಕಾಂಗ್ರೆಸ್ ಸೇರಿದರು. ಚಿತ್ತಗಾಂಗ್ ಗುಂಪಿನ ಪ್ರಮುಖರಾಗಿ ಕ್ರಾಂತಿಕಾರಿ ಚಟುವಟಿಕೆಗಳಲ್ಲಿ ಭಾಗವಹಿಸತೊಡಗಿದರು. ಸುಭಾಷ್ ಚಂದ್ರಬೋಸರ ನಿಲುವಿಗೆ ಬೆಂಬಲ ನೀಡಿದರು.

ಅಂಡಮಾನಿನಲ್ಲಿ ಇದ್ದಾಗ ಮಾರ್ಕ್ಸ್‌ನ ಬರೆಹಗಳನ್ನು ಓದಿದರು. 1946ರಲ್ಲಿ ಬಿಡುಗಡೆಯಾದ ಮೇಲೆ ಕಮ್ಯೂನಿಸ್ಟ್ ಪಕ್ಷ ಸೇರಿದರು. [illegible] ಸಭೆಯ ಸದಸ್ಯರಾಗಿ ಚುನಾಯಿತರಾದರು. ದೇಶದ ವಿಭಜನೆಯ ಬಳಿಕ ಕಲ್ಕತ್ತೆಗೆ ಬಂದ ನಿರಾಶ್ರಿತರ ಪುನರ್ವಸತಿಗಾಗಿ ಅಂಬಿಕಾ ಚಕ್ರವರ್ತಿ ಬಹಳ ಆಸ್ಥೆಯಿಂದ ದುಡಿದರು. ತಮ್ಮ ಆರೋಗ್ಯ ಕುಂದಿದರೂ ಕಡೆಯ ವರೆಗೆ ನಿರಾಶ್ರಿತರ ನಡುವೆ ಕೆಲಸ ಮಾಡಿದರು.

1962 [illegible].

ಅಂಬಿಕಾ ದೇವಾಲಯ

[illegible] ಗಳಲ್ಲಿ ಒಂದು ಎಂಬುದು ಪುರಾಣಕಥೆ.

ಅರಸೂರ್‌ನಲ್ಲಿ ಒಂದು ಪ್ರಾಚೀನ ಅಂಬಿಕಾ ದೇವಾಲಯವಿದೆ. [illegible] ಶತಮಾನದ ಕಾಲಕ್ಕೇ ಇದು ಪ್ರಸಿದ್ಧವಾಗಿತ್ತು.

ಈ ದೇವಸ್ಥಾನದಲ್ಲಿ ಅಂಬಿಕೆಯ ಪ್ರತಿಮೆ ಇಲ್ಲ. ಇಲ್ಲಿ ಪೂಜೆ ನಡೆಯುವುದು ಒಂದು 'ಯಂತ್ರ' ಕ್ಕೆ—ಅಂದರೆ ಶಾಸ್ತ್ರರೀತ್ಯ ರಚಿಸಿರುವ ರೇಖಾವಿನ್ಯಾಸಕ್ಕೆ. ದರ್ಶನ ಸಮಯದಲ್ಲಿ ಇದನ್ನು ಉಡುಗೆ ತೊಡುಗೆಗಳಿಂದ ದೇವತಾಮೂರ್ತಿಯಂತೆ ಅಲಂಕರಿಸುತ್ತಾರೆ. ಈ ಮೂರ್ತಿಯ ಕೈಯಲ್ಲಿ ಒಂದು ಕತ್ತಿಯೂ ಇರುತ್ತದೆ. ಈ ಕತ್ತಿಗೆ ಸಂಬಂಧಿಸಿದ ಕಥೆ ಇದು : ರಾಣಾ ಪ್ರತಾಪನ ರಾಣಿಯರಲ್ಲಿ ಒಬ್ಬಳು [illegible]. ಆಕೆಯನ್ನು ಕಾಣಲು ರಾಣಾ ಇಚ್ಛಿಸಿದ. [illegible] ನೆರವೇರಿದರೆ ತನ್ನ ಖಡ್ಗವನ್ನು ದೇವಿಗೆ ಅರ್ಪಿಸುವುದಾಗಿ ಹರಕೆ ಹೊತ್ತ. ಮೊಘಲರ ಸೇನೆಯ ಕಣ್ಣುತಪ್ಪಿಸಿ ರಾಣಿಯನ್ನು ನೋಡಿಕೊಂಡು, ಸುರಕ್ಷಿತವಾಗಿ [illegible].


[illegible] ಮುಂದುಗಡೆ ಬಯಲಿನಲ್ಲಿ ಗರ್ಬಾ ನೃತ್ಯ ನಡೆಯುತ್ತದೆ.

ಅಂಬೇಡ್ಕರ್

ನೋಡಿ : ಬಿ. ಆರ್. ಅಂಬೇಡ್ಕರ್

ಅಕ್ಬರ್


ಬಾಬರನ ಮಗ ಹುಮಾಯೂನ್ ರಾಜ್ಯ, ಕೋಶಗಳನ್ನು ಕಳೆದುಕೊಂಡು ಅಲೆಯುತ್ತಿದ್ದಾಗ 1542ರಲ್ಲಿ ಅಮರಕೋಟೆಯಲ್ಲಿ ಅವನಿಗೊಂದು ಗಂಡುಮಗು ಹುಟ್ಟಿತು. ಈ ಸುದ್ದಿ ಕೇಳಿದ ಹುಮಾಯೂನ್‌ಗೆ ಸಂತೋಷವಾಯಿತು. ಆದರೆ ಈ ಸಂತೋಷವನ್ನು ರಾಜಯೋಗ್ಯವಾದ ರೀತಿಯಲ್ಲಿ ಪ್ರದರ್ಶಿಸಲು ತಕ್ಕ ಐಶ್ವರ್ಯ ಆಗ ಹುಮಾಯೂನ್‌ನಲ್ಲಿ ಇರಲಿಲ್ಲ. ಆದ್ದರಿಂದ ಅವನು ತನ್ನಲ್ಲಿದ್ದ ಸ್ವಲ್ಪ ಕಸ್ತೂರಿಯನ್ನು ತೆಗೆದು ಜೊತೆಯಲ್ಲಿದ್ದವರಿಗೆ ಹಂಚಿ 'ನನ್ನ ಮಗನ ಕೀರ್ತಿ ಈ ಕಸ್ತೂರಿಯ ಪರಿಮಳದಂತೆ ಎಲ್ಲೆಲ್ಲೂ ಹಬ್ಬಲಿ' ಎಂದು ಆಶಿಸಿದ.



ಅಕ್ಬರ್ ಆಳ್ವಿಕೆಯ ನಾಣ್ಯ

ಹುಮಾಯೂನನ ಮಗ ಅಕ್ಬರ್. ತನ್ನ ತಂದೆಯ ಈ ನಿರೀಕ್ಷಣೆಯನ್ನು ಸಫಲಗೊಳಿಸಿದ. ತಂದೆಯ ಆಕಸ್ಮಿಕ ಮರಣದಿಂದಾಗಿ ಬಾಲ್ಯದಲ್ಲಿಯೇ ಪಟ್ಟಕ್ಕೆ ಬಂದು, ನಾನಾ ರೀತಿಯ ವಿರೋಧಗಳನ್ನು ಇದಿರಿಸಬೇಕಾಗಿ ಬಂದರೂ ಅವನ್ನು ನಿವಾರಿಸಿಕೊಂಡು ಭಾರತದ ಪ್ರಖ್ಯಾತ ದೊರೆಗಳ ಪಂಕ್ತಿಗೇರಿದ. ಅವನು ತನ್ನ ರಾಜ್ಯವನ್ನು ಕಾಬೂಲಿನಿಂದ ಬಂಗಾಳದ ವರೆಗೆ, ಹಿಮಾಲಯದಿಂದ ಗೋದಾವರಿ ವರೆಗೆ ವಿಸ್ತರಿಸಿದ್ದು ಮಾತ್ರವಲ್ಲದೆ ಅದನ್ನು ದಕ್ಷತೆಯಿಂದ ಆಳಿದ. ಅಷ್ಟುಮಾತ್ರವಲ್ಲ, ವಿವಿಧ ವರ್ಗದ ತನ್ನ ಪ್ರಜೆಗಳ ನಡುವೆ ಸಾಮರಸ್ಯವನ್ನು ಸಾಧಿಸಲು ಬಹುವಾಗಿ ಶ್ರಮಿಸಿದ. ಅಕ್ಬರ್ ಸ್ವತಃ ವಿದ್ಯಾವಂತನಾಗಿರಲಿಲ್ಲವಾದರೂ ತುಂಬ ಬುದ್ಧಿವಂತ. ವಿದ್ವಾಂಸರ ದಾದ. ಚರ್ಚೆಗಳನ್ನು ಕೇಳಿ ತನ್ನ ಜ್ಞಾನ ಭಂಡಾರವನ್ನು ಬೆಳೆಸಿಕೊಂಡಿದ್ದ. ಜೊತೆಗೆ ತನ್ನ ವಿಚಾರ ಶಕ್ತಿಯಿಂದ ಸಾಮಾಜಿಕ, ರಾಜಕೀಯ ಸಮಸ್ಯೆಗಳನ್ನು ಸೂಕ್ಷ್ಮವಾಗಿ ವಿವೇಚಿಸಿ, ಅವುಗಳ ಪರಿಹಾರಕ್ಕಾಗಿ ಪ್ರಯತ್ನಿಸಿದ. ಈ ಗುಣಗಳಿಂದಾಗಿ ಅವನು ಕೀರ್ತಿವಂತನಾದ.

ನೋಡಿ : ಅಕ್ಬರ್ –ಸಂಪುಟ ೧



ಬೇಟೆನಿರತ ಸಮ್ರಾಟ

ಅಕಾಲಿ ದಳ

20ನೆಯ ಶತಮಾನದ ಎರಡನೆಯ ದಶಕದ ಅಂತ್ಯದಲ್ಲಿ ಭಾರತದಲ್ಲಿ ಹುಟ್ಟಿದ ಒಂದು ಧಾರ್ಮಿಕ ಹಾಗೂ ರಾಜಕೀಯ ಪಕ್ಷ, ಅಕಾಲಿ ದಳ. 'ಅಕಾಲಿ' ಎಂದರೆ 'ಅಮರರು' ಎಂದರ್ಥ. ಸಿಕ್ಖರು ಮಾತ್ರ ಈ ದಳದ ಸದಸ್ಯರಾಗಬಹುದು.

ಆಗ ಸಿಕ್ಖರ ದೇವಾಲಯಗಳನ್ನೂ ಗುರುದ್ವಾರಗಳನ್ನೂ ಮಹಂತರು – ಅರ್ಚಕರು– ನಿಯಂತ್ರಿಸುತ್ತಿದ್ದರು. ಮೊದಲನೆಯ ಮಹಾಯುದ್ಧ ಮುಗಿದ ಕೂಡಲೆ ಗುರುದ್ವಾರಗಳ ನಿಯಂತ್ರಣ ಪಡೆಯಲು ಕೆಲವು ತೀವ್ರಗಾಮಿಗಳು ಅಕಾಲಿ ದಳವನ್ನು ಸಂಘಟಿಸಿದರು. ಮಹಂತರಿಗೆ ಬ್ರಿಟಿಷ್ ಸರಕಾರದ ಬೆಂಬಲವಿತ್ತು. 1921ರ ಫೆಬ್ರುವರಿಯಲ್ಲಿ ಗುರು ನಾನಕನ ಜನ್ಮಸ್ಥಳದಲ್ಲಿರುವ ನಾನಕಸಾಹೇಬ್ ದೇವಾಲಯದಲ್ಲಿ ಆರಾಧನೆಗೋಸ್ಕರ ಬಂದ ಸಿಕ್ಖರ ಮೇಲೆ ಮಹಂತರ ಪಕ್ಷದವರು ಗುಂಡು ಹಾರಿಸಿದರು. ಸುಮಾರು 130 ಭಕ್ತರು ಆಗ ಮಡಿದರು.

ಈ ದುರಂತದ ಬಳಿಕ ಅಕಾಲಿ ಚಳುವಳಿ ಇನ್ನಷ್ಟು ಬಲವಾಯಿತು. 1922ರಿಂದ 1925ರ ವರೆಗೆ ನಡೆದ ಚಳುವಳಿಯಲ್ಲಿ 30,000ಕ್ಕೂ ಮೇಲ್ಪಟ್ಟು ಜನರು ಬಂಧಿಸಲ್ಪಟ್ಟರು. ಗಾಂಧೀಜೀ ಆರಂಭಿಸಿದ ಅಸಹಕಾರ ಚಳುವಳಿಯಲ್ಲೂ ಅಕಾಲಿಗಳು ಭಾಗವಹಿಸಿದರು. ಅಕಾಲಿಗಳ ಚಳುವಳಿಗೆ ಕಾಂಗ್ರೆಸ್ ಬೆಂಬಲ ಕೊಟ್ಟಿತು.

16 ಮಂದಿ ಚುನಾಯಿತ ಪ್ರತಿನಿಧಿಗಳನ್ನುಳ್ಳ ಸಂಸ್ಥೆಗೆ ಗುರುದ್ವಾರಗಳ ನಿಯಂತ್ರಣಗಳನ್ನು ಒಪ್ಪಿಸುವ ಕಾಯಿದೆ 1925ರಲ್ಲಿ ಜಾರಿಗೆ ಬಂದಿತು.

ಸಿಕ್ಖರ ಹಕ್ಕುಗಳನ್ನು ಕಾಪಾಡುವುದು ಅಕಾಲಿ ದಳದ ಮುಖ್ಯ ಧ್ಯೇಯ. ಸಿಕ್ಖರು ಪ್ರತ್ಯೇಕ ಜನಾಂಗ; ಅವರ ಮತದಲ್ಲಿ ರಾಜಕೀಯ ಹಾಗೂ ಧಾರ್ಮಿಕ ತತ್ತ್ವಗಳ ಪರಸ್ಪರ ಅವಲಂಬನವಿದೆ –ಇದು ಅಕಾಲಿ ದಳದ ನಿಲುವು. ಇದೇ ಕಾರಣದಿಂದ ಅದು ಪಂಜಾಬಿ ಸುಬಾ ಸ್ಥಾಪನೆಗೆ ಹೋರಾಟ ನಡೆಸಿತು. 1967ರಲ್ಲಿ ಪಂಜಾಬ್ ರಾಜ್ಯ ವಿಭಜನೆಯಾಗಿ ಪಂಜಾಬಿ ಆಡಳಿತ ಭಾಷೆಯಾಗಿರುವ ಪ್ರತ್ಯೇಕ ಪಂಜಾಬ್ ರಾಜ್ಯದ ಸ್ಥಾಪನೆಯಾಯಿತು.

1930ರಿಂದ ತಮ್ಮ ಬಾಳಿನ ಕೊನೆಯ ವರೆಗೂ (1967) ಅಕಾಲಿ ದಳದ ನಾಯಕರಾಗಿದ್ದ ತಾರಾಸಿಂಗರೂ ಪಂಜಾಬ್ ರಾಜ್ಯ ಸಾಧನೆಗಾಗಿ ಉಪವಾಸ ಮಾಡಿದ ಸಂತ ಫತೇಸಿಂಗರೂ ಇದರ ಪ್ರಮುಖ ನಾಯಕರಾಗಿದ್ದರು. ಅಮೃತಸರದಲ್ಲಿರುವ ಸುವರ್ಣ ದೇವಾಲಯ ಅಕಾಲಿ ದಳದ ಮುಖ್ಯ ಕಾರ್ಯಕೇಂದ್ರ.

ನೋಡಿ : ತಾರಾಸಿಂಗ್ ; ಫತೇಸಿಂಗ್

ಅಖಿಲ ಭಾರತ ಕ್ರೀಡಾ ಮಂಡಲಿ

ನೋಡಿ : ಸಂಪುಟ ೬

ಅಖಿಲ ಭಾರತ ಕುಶಲಕಲಾ ಮಂಡಲಿ

ಭಾರತದ ರಫ್ತಿನಲ್ಲಿ ಕುಶಲಕಲಾ ವಸ್ತುಗಳಿಗೆ ಆರನೆಯ ಸ್ಥಾನ. ದೇಶದಾದ್ಯಂತ ಹಾಗೂ ವಿದೇಶಗಳಲ್ಲಿ ಇವು ಪ್ರಸಿದ್ಧವಾಗಿವೆ. ಮೂಲೆಗುಂಪಾಗುತ್ತಿದ್ದ ಈ ವಿಶಿಷ್ಟ ಕಲಾವಸ್ತುಗಳ ತಯಾರಿ ಅಖಿಲ ಭಾರತ ಕುಶಲ ಕಲಾ ಮಂಡಲಿಯ ಪ್ರಯತ್ನದಿಂದ ಪುನರುಜ್ಜೀವನಗೊಂಡಿತು.



ಶಿಲೆಗೆ ಉಳಿಯೇಟು




ಬೊಂಬೆಗೆ ಬಣ್ಣ

ಕೌಶಲ

ನಿರ್ಮಾಣ



ಕೋಳಿ ಕಾಳಗ





ಕುಸರಿ ಕೆಲಸ

ಅಖಿಲ ಭಾರತ ಕುಶಲಕಲಾ ಮಂಡಲಿ ಕುಶಲಕಲಾ ಕೈಗಾರಿಕೆಯ ಸಮಸ್ಯೆಗಳನ್ನು ಪರಿಶೀಲಿಸಿ ಭಾರತ ಸರಕಾರಕ್ಕೆ ಸಲಹೆ ನೀಡುತ್ತದೆ. ಕುಶಲ ಕೈಗಾರಿಕಾ ಕೆಲಸಗಳ ಯೋಜನೆಗಳನ್ನು ಕಾರ್ಯ ರೂಪಕ್ಕೆ ತರುವುದರಲ್ಲಿ ರಾಜ್ಯ ಸರಕಾರಗಳಿಗೆ ನೆರವಾಗುತ್ತದೆ. ತಾನೇ ನೇರವಾಗಿಯೂ ಕೆಲ ಯೋಜನೆಗಳನ್ನು ಕಾರ್ಯಗತಗೊಳಿಸುತ್ತದೆ.

ದೆಹಲಿ, ಕಲ್ಕತ್ತಾ, ಬೆಂಗಳೂರು, ಮುಂಬಯಿಗಳಲ್ಲಿ ಮಂಡಲಿಯ ಮುಖ್ಯ ಪ್ರಾದೇಶಿಕ ವಿನ್ಯಾಸರೂಪಣ ಕೇಂದ್ರಗಳಿವೆ. ಪ್ರತಿ ವರ್ಷ ಮಂಡಲಿ 'ಕುಶಲಕಲಾ ಸಪ್ತಾಹ'ವನ್ನು ಆಚರಿಸುತ್ತದೆ. ಪ್ರತಿಭಾವಂತ ಕುಶಲ ಕಸಬುದಾರರಿಗೆ ಈ ಮಂಡಲಿ ಗಣರಾಜ್ಯ ದಿನದಂದು ರಾಷ್ಟ್ರೀಯ ಪ್ರಶಸ್ತಿಗಳನ್ನು ಕೊಡುತ್ತದೆ.

ನೋಡಿ : ಗೃಹ ಕೈಗಾರಿಕೆ-ಸಂಪುಟ ೧ ; ಕುಶಲ ಕೈಗಾರಿಕೆ - ಸಂಪುಟ ೪ ಕುಶಲಕಲೆ-ಸಂಪುಟ ೫

ಅಖಿಲ ಭಾರತ ವಾಕ್‌ಶ್ರವಣ ಸಂಸ್ಥೆ

ಕೆಲಮಕ್ಕಳು ಹುಟ್ಟಿನಿಂದಲೇ ಕಿವುಡರಾಗಿರುತ್ತಾರೆ, ಮೂಕರೂ ಆಗಿರುತ್ತಾರೆ. ಮನಸ್ಸಿಗಾದ ತೀವ್ರ ಆಘಾತದಿಂದ ಕೆಲವರಿಗೆ ವಾಕ್ ಶಕ್ತಿ ಕೆಲ ಕಾಲ ಲೋಪವಾಗುವುದುಂಟು. ಪೆಟ್ಟುಬಿದ್ದು ಕಿವಿಯ ಶ್ರವಣಶಕ್ತಿ ಕಡಮೆಯಾಗಬಹುದು.

ಇಂಥ ತೊಂದರೆಗಳನ್ನು ನಿವಾರಿಸಲು ಯತ್ನಿಸುತ್ತದೆ, ಮೈಸೂರಿನಲ್ಲಿರುವ ಅಖಿಲ ಭಾರತ ವಾಕ್‌ಶ್ರವಣ ಸಂಸ್ಥೆ (ಆಲ್ ಇಂಡಿಯಾ ಇನ್ಸ್‌ಟಿಟ್ಯೂಟ್ ಆಫ್ ಸ್ಪೀಚ್ ಅಂಡ್ ಹಿಯರಿಂಗ್).

1965ರಲ್ಲಿ ಭಾರತ ಸರಕಾರ ಇದನ್ನು ಸ್ಥಾಪಿಸಿತು.

ಆಗ್ನೇಯ ಏಷ್ಯದಲ್ಲಿ ಈ ಬಗೆಯ ಪ್ರಥಮ ಸಂಸ್ಥೆ ಇದು. ವಾಕ್ ಹಾಗೂ ಶ್ರವಣ ದೋಷ ವಿಜ್ಞಾನದಲ್ಲಿ ತರಬೇತಿ ಮತ್ತು ಸಂಶೋಧನೆಗೆ ಇಲ್ಲಿ ಅವಕಾಶವಿದೆ. ಸಂಸ್ಥೆಗೆ ಹೊಂದಿಕೊಂಡು ಚಿಕಿತ್ಸಾಲಯವಿದೆ. ಇಲ್ಲಿ ವಾಕ್‌ಶ್ರವಣ ದೋಷಗಳ ಪರೀಕ್ಷೆ, ಚಿಕಿತ್ಸೆ ನಡೆಯುತ್ತವೆ. ವಾಕ್ ಮತ್ತು ಶ್ರವಣ ಪರಿಣತರು, ವೈದ್ಯರು ಮತ್ತು ಮನೋವಿಜ್ಞಾನಿಗಳು ರೋಗಿಗಳನ್ನು ಪರೀಕ್ಷಿಸಿ ಸಲಹೆ ನೀಡುತ್ತಾರೆ.

ಈ ಸಂಸ್ಥೆ ಮೈಸೂರು ವಿಶ್ವವಿದ್ಯಾನಿಲಯದ ಅಂಗವಾಗಿದೆ. ವಾಕ್ ಮತ್ತು ಶ್ರವಣ ವಿದ್ಯೆಯಲ್ಲಿ 3 ವರ್ಷದ ಪದವಿ ಶಿಕ್ಷಣ, 2 ವರ್ಷದ ಸ್ನಾತಕೋತ್ತರ ಶಿಕ್ಷಣ ಸೌಲಭ್ಯಗಳಿವೆ. ಪದವೀಧರರಾದ ನಂತರ ವಿದ್ಯಾರ್ಥಿಗಳು ಒಂದು ವರ್ಷದ ಪ್ರತ್ಯಕ್ಷ ತರಬೇತಿ ಪಡೆಯಬೇಕು.

ಜನರಿಗೆ ವಾಕ್‌ಶ್ರವಣ ದೋಷದ ಬಗೆಗೆ ತಿಳಿವಳಿಕೆ ನೀಡಲು ಸಂಸ್ಥೆ ಪುಸ್ತಿಕೆಗಳನ್ನು ಪ್ರಕಟಿಸಿದೆ. ಮೈಸೂರಿನ ಕೃಷ್ಣರಾಜೇಂದ್ರ ಆಸ್ಪತ್ರೆಯಲ್ಲಿ ಈ ಸಂಸ್ಥೆ ಚಿಕಿತ್ಸಾಕೇಂದ್ರ ಆರಂಭಿಸಿದೆ.

ನೋಡಿ : ವಾಗ್ದೋಷಗಳು ಮತ್ತು ಚಿಕಿತ್ಸೆ-ಸಂಪುಟ ೨

ಅಗರ್‌ತಲ

ತ್ರಿಪುರಾ ರಾಜ್ಯದ ರಾಜಧಾನಿ ಅಗರ್‌ತಲ. ಇದು ಹೋರಾ ನದಿಯ ಬಳಿ ಇದೆ. ಇಲ್ಲಿಂದ ಭಾರತದ ಇತರ ಪ್ರದೇಶಗಳಿಗೆ ಸಂಪರ್ಕವನ್ನು ಕಲ್ಪಿಸುವ ಮಾರ್ಗ —ಅಸ್ಸಾಂ ರಾಜ್ಯದ ಚಾರಿಬಾರಿಯಿಂದ ಅಗರ್ ತಲಕ್ಕೆ ಇರುವ 126 ಮೈಲಿ ಉದ್ದದ ರಸ್ತೆ ಒಂದೇ. ಕಲ್ಕತ್ತದಿಂದ ಅಗರ್‌ತಲಕ್ಕೆ ವಿಮಾನ ಸಾರಿಗೆ ಇದೆ. ತ್ರಿಪುರಾ ರಾಜ್ಯದ ಪ್ರಮುಖ ರೈಲು ನಿಲ್ದಾಣವೂ ಇಲ್ಲಿದೆ. ಅಗರ್‌ತಲದ ಜನಸಂಖ್ಯೆ 59,625.

ನಗರದ ಮುಖ್ಯ ಆಕರ್ಷಣೆ ತ್ರಿಪುರಾದ ಅರಸರ ಭವ್ಯ ಅರಮನೆ. ಇನ್ನೆರಡು ಪ್ರೇಕ್ಷಣೀಯ ಕಟ್ಟಡಗಳು –ಒಂದು ದೇವಾಲಯ ಹಾಗೂ ಒಂದು ಕಾಲೇಜು. ಇಲ್ಲಿಂದ ಸುಮಾರು 55 ಕಿ.ಮೀ. ದೂರದಲ್ಲಿ ರುದ್ರ ಸಾಗರ ಸರೋವರವಿದೆ. ತ್ರಿಪುರಾ ರಾಜ್ಯದಲ್ಲಿ ಹೆಚ್ಚು ಅಭಿವೃದ್ಧಿ ಹೊಂದಿರುವ ಪ್ರದೇಶಗಳು ಅಗರ್‌ತಲದ ಸಮೀಪದಲ್ಲಿವೆ.

ಅಗರ್‌ತಲ ಭಾರತದ ಗಡಿಪ್ರದೇಶಕ್ಕೆ ಸಮೀಪವಾಗಿರುವುದರಿಂದ ಇಲ್ಲಿ ಸೇನಾಶಿಬಿರಗಳೂ ಇವೆ.

ನೋಡಿ : ತ್ರಿಪುರಾ

ಅಗಸ್ತ್ಯ

ಒಮ್ಮೆ ಭಾರತದ ಮಹರ್ಷಿಗಳೆಲ್ಲರೂ ಹಿಮಾಲಯದ ಬಳಿ ಸಭೆ ಸೇರಿದರು. ಅವರ ವಿದ್ವತ್ತು, ಅಪಾರ ಜ್ಞಾನಗಳ ಭಾರದಿಂದಾಗಿ ಭೂಮಿ ಆ ಡೆಗೆ ವಾಲಲಾರಂಭಿಸಿತು. ಆಗ, ದಕ್ಷಿಣಕ್ಕೆ ಹೋಗಿ ಭಾರವನ್ನು ಸರಿದೂಗಿಸಬೇಕು ಎಂದು ಅಲ್ಲಿದ್ದವರೆಲ್ಲರಿಗಿಂತ ಹೆಚ್ಚು ಜ್ಞಾನಿಯಾಗಿದ್ದ ಅಗಸ್ತ್ಯನನ್ನು ಕೇಳಿಕೊಂಡರು. ಅಗಸ್ತ್ಯ ದಕ್ಷಿಣಕ್ಕೆ ಬಂದ. ಭೂಮಿ ವಾಲುತ್ತಿದ್ದುದು ನಿಂತಿತು.



'ಅಗಸ್ತಿಯರ್'

ಸಪ್ತರ್ಷಿಗಳಲ್ಲಿ ಒಬ್ಬನಾದ ಅಗಸ್ತ್ಯ ದಕ್ಷಿಣಕ್ಕೆ ಬಂದು, ಇಲ್ಲಿ ವಿಜ್ಞಾನ ಸಾಹಿತ್ಯಗಳ ಬೆಳವಣಿಗೆಗೆ ಕಾರಣನಾದ ಎಂಬುದು ಸಾಂಪ್ರದಾಯಿಕವಾಗಿ ಬಂದ ನಂಬಿಕೆ. ಅಗಸ್ತ್ಯ ಕೆಲವು ಋಗ್ವೇದ ಮಂತ್ರಗಳ ದ್ರಷ್ಟಾರ ಎಂದು ಹೇಳಿರುವುದರಿಂದ ಅವನು ಆ ಕಾಲದವನು (ಕ್ರಿ.ಪೂ. 1500-1000) ಎನ್ನಬಹುದು.

ತಮಿಳು ಭಾಷಾ ಸಾಹಿತ್ಯಗಳ ಆದ್ಯ ಪ್ರವರ್ತಕನಾಗಿ ದ್ರಾವಿಡರಿಗೆ ನಾನಾ ವಿದ್ಯೆಗಳನ್ನು ಕಲಿಸಿದ ಅನಂತರ ಅಗಸ್ತ್ಯ ಪೊದಿಯಿಲ್ ಗುಡ್ಡಕ್ಕೆ ಹೋಗಿ ಏಕಾಂಗಿಯಾಗಿ ಜೀವಿಸಿ ವೈದ್ಯ,

[illegible] ಒಂದಕ್ಕೆ ಅಗಸ್ತ್ಯನ ಹೆಸರಿಡಲಾಗಿದೆ.

ನೋಡಿ : ಲೋಪಾಮುದ್ರಾ

ಅಗ್ನಿ



'ಅಗ್ನಿಸಾಕ್ಷಿ'

ಪೂರ್ವ ಮತ್ತು ದಕ್ಷಿಣ ದಿಕ್ಕುಗಳ ನಡುವಣ ಪ್ರದೇಶದ ಪಾಲಕ ಅಗ್ನಿ. ಅವನಿಂದ ಆ ದಿಕ್ಕಿಗೆ ಆಗ್ನೇಯ ಎಂಬ ಹೆಸರು. ಅವನು 3 ತಲೆ, 4 ಅಥವಾ 7 ತೋಳುಗಳು 7 ನಾಲಿಗೆಗಳನ್ನು ಹೊಂದಿದ್ದು ಉರಿಯುತ್ತಿರುವ ಕೋಲು ಹಿಡಿದಿರುತ್ತಾನೆ. ಅಗ್ನಿಯ ವಾಹನ ಟಗರು — ಇದು ಪುರಾಣಗಳಲ್ಲಿ ವಿವರಿಸಿರುವ ಅಗ್ನಿಯ ಚಿತ್ರ.


ಸೂರ್ಯ, ಮಿಂಚು ಮತ್ತು ಯಜ್ಞದ ಬೆಂಕಿಗಳ ಮೂರ್ತ ಸ್ವರೂಪ ಅಗ್ನಿ. ವೇದಗಳ ಮೂಲ ಈತ. ದೇವತೆಗಳು ಮತ್ತು ಮನುಷ್ಯರ ನಡುವೆ ಸಂಬಂಧ ಏರ್ಪಡುವುದು ಅಗ್ನಿಯಿಂದ. ಏಕೆಂದರೆ ಮಾನವರು ಅರ್ಪಿಸುವ ಹವಿಸ್ಸನ್ನು ದೇವತೆಗಳಿಗೆ ಮುಟ್ಟಿಸುವವನೇ ಅಗ್ನಿ. ಮಾನವರ ಮನೆಗಳ ರಕ್ಷಣೆ ಆತನಿಗೆ ಸೇರಿದ್ದು.

ಋಗ್ವೇದದಲ್ಲಿ ಹೆಚ್ಚಿನ ಮಂತ್ರಗಳು ಅಗ್ನಿಯನ್ನು ಕುರಿತವು. ಅಗ್ನಿಯು ಹಿಂದೂ–ಇರಾನಿ ಮೂಲದ ದೇವತೆ ಎಂಬ ಅಭಿಪ್ರಾಯವಿದೆ. ಮಾನವನ ಉಪಯೋಗಕ್ಕೆಂದು ಭೃಗು ಋಷಿಯ ಅಪ್ಪಣೆಯಂತೆ ಮಾತರಿಶ್ವ (ವಾಯು) ಅಗ್ನಿಯನ್ನು ಸ್ವರ್ಗದಿಂದ ಭೂಮಿಗೆ ಕರೆತಂದ ಎಂಬ ನಂಬಿಕೆಯಿದೆ.

ವಿವಾಹ ಕಾರ್ಯಗಳನ್ನು ಅಗ್ನಿಸಾಕ್ಷಿಯಾಗಿ –ಅಗ್ನಿಯನ್ನು ಹೊತ್ತಿಸಿ ಇಟ್ಟುಕೊಂಡು - ನಡೆಸಬೇಕೆಂಬ ನಿಯಮ ಇಂದಿಗೂ ಹಿಂದೂಗಳಲ್ಲಿ ಆಚರಣೆಯಲ್ಲಿದೆ. ವರುಣ ಲೋಕದಲ್ಲಿ ನಡೆದ 12 ವರ್ಷಗಳ ಯಜ್ಞದಲ್ಲಿ ನಿರಂತರವಾಗಿ ಹವಿಸ್ಸನ್ನು ಪಡೆದ ಅಗ್ನಿಗೆ ಅಜೀರ್ಣ ಉಂಟಾಯಿತು. ಈ ವ್ಯಾಧಿಯನ್ನು ನಿವಾರಿಸಿಕೊಳ್ಳಲು ಅವನು ಅರ್ಜುನನ ಸಹಾಯಪಡೆದು ಇಂದ್ರನ ಖಾಂಡವ ವನವನ್ನು ದಹಿಸಿ, ಅದರಲ್ಲಿದ್ದ ಮೂಲಿಕೆಗಳ ಪ್ರಭಾವದಿಂದ ತನ್ನ ರೋಗ ನಿವಾರಣೆಮಾಡಿಕೊಂಡ ಎಂಬ ಕಥೆ ಮಹಾಭಾರತದಲ್ಲಿ ಬರುತ್ತದೆ.

ನೋಡಿ : ಅಗ್ನಿ—ಸಂಪುಟ ೧

ಅಚ್ಯುತ ಪಟವರ್ಧನ್



ಅಚ್ಯುತ ಪಟವರ್ಧನ್

ಮಹಾರಾಷ್ಟ್ರದಲ್ಲಿ 1942ರ ಚಲೇಜಾವ್ ಚಳುವಳಿಯ ನಾಯಕರಾಗಿದ್ದವರು ಅಚ್ಯುತ ಪಟವರ್ಧನ್.

ಸ್ವಾತಂತ್ರ್ಯ ಚಳುವಳಿಯಲ್ಲಿ ಜನಪ್ರಿಯ ನಾಯಕರಾಗಿದ್ದ ಇವರು ಭಾರತ ಸ್ವತಂತ್ರವಾದ ಮೇಲೆ ರಾಜಕೀಯ ರಂಗದಿಂದ ನಿವೃತ್ತರಾದರು. ಸರಕಾರದಲ್ಲಿ ಸ್ಥಾನಮಾನಗಳು ಸಿಗುವಂತಿದ್ದರೂ ಅವುಗಳನ್ನು ಸ್ವೀಕರಿಸಲಿಲ್ಲ. ಅಚ್ಯುತ ಪಟವರ್ಧನರ ಜನನ 1905ರಲ್ಲಿ. ಕಾಂಗ್ರೆಸ್ ಸೋಷಲಿಸ್ಟ್ ಪಕ್ಷದ ಸ್ಥಾಪಕ ಸದಸ್ಯರಲ್ಲಿ ಇವರೊಬ್ಬರು. ಇವರು ಮೊದಲಿಗೆ ಗಾಂಧೀ, ನೆಹರೂ ಅವರ ಪ್ರಭಾವಕ್ಕೆ ಒಳಗಾದರು. ಅನಂತರ ತತ್ತ್ವಜ್ಞಾನಿ ಜೆ. ಕೃಷ್ಣಮೂರ್ತಿಯವರಿಂದ ಆಕರ್ಷಿತರಾಗಿ ಅವರ ಶಿಷ್ಯರಾದರು.

ಅಜಂತಾ ಗುಹೆ



ಅಜಂತಾ

ನೋಡಿ : ಸಂಪುಟ ೧, ೫

ಅಜ್ಮಲ್ ಖಾನ್

ಮಾಸಾಯಿಲ್–ಉಲ್–ಮುಲ್ಕ್ (ರಾಷ್ಟ್ರ ದೇವತೆ) ಎಂದು ಖ್ಯಾತರಾದವರು ಅಜ್ಮಲ್ ಖಾನ್.



'ರಾಷ್ಟ್ರ ದೇವತೆ'

ವೈದ್ಯಕೀಯ ಕ್ಷೇತ್ರದಲ್ಲಿ ಇವರಂಥ ಪ್ರತಿಭಾವಂತರು ಕಡಮೆ. ಹಕೀಮ್ ಅಜ್ಮಲ್ ಖಾನ್ ಎಂದೇ ಪ್ರಸಿದ್ಧಿ. ಇವರು ರಾಜಕೀಯ ಕ್ಷೇತ್ರದಲ್ಲೂ ಕೆಲಸ ಮಾಡಿದರು; ಭಾರತದ ರಾಷ್ಟ್ರೀಯ ಕಾಂಗ್ರೆಸ್ಸಿನ ಮುಖಂಡರಲ್ಲಿ ಒಬ್ಬರಾಗಿದ್ದರು.

ಅಜ್ಮಲ್ ಖಾನ್ ಹುಟ್ಟಿದ್ದು 1865ರಲ್ಲಿ. 1921ರಲ್ಲಿ ಅಹಮದಾಬಾದಿನಲ್ಲಿ ನಡೆದ ಕಾಂಗ್ರೆಸ್ ಅಧಿವೇಶನಕ್ಕೆ ಇವರು ಅಧ್ಯಕ್ಷರಾಗಿದ್ದರು. 1927ರಲ್ಲಿ ಇವರ ದೇಹಾಂತವಾಯಿತು.

ಅಜ್ಮಲ್ ಖಾನ್ ಗಾಂಧೀಜಿಯವರ ಮೆಚ್ಚಿನ ಗೆಳೆಯರಾಗಿದ್ದರು. ಸ್ವರಾಜ್ಯ ಸಾಧನೆಗೆ ಹಿಂದೂ ಮುಸಲ್ಮಾನರ ಐಕ್ಯ ಅತ್ಯವಶ್ಯಕವೆಂಬುದು ಅವರ ದೃಢವಾದ ಅಭಿಪ್ರಾಯವಾಗಿತ್ತು. ಈ ಐಕ್ಯತೆಯನ್ನು ಸಾಧಿಸಲು ಅಜ್ಮಲ್ ಖಾನ್ ಸತತ ಪ್ರಯತ್ನ ಮಾಡಿದರು. ಜಾತೀಯ ಐಕ್ಯತೆಯಂತೆ ಅಹಿಂಸೆ, ಅಸಹಕಾರ ತತ್ತ್ವಗಳಲ್ಲೂ ಅವರಿಗೆ ನಂಬಿಕೆಯಿತ್ತು.

ಅರ್ಜನ್ ಸಿಂಗ್

ಭಾರತೀಯ ವಾಯುದಳದ 'ಏರ್ ಚೀಫ್ ಮಾರ್ಷಲ್' ಅಧಿಕಾರವನ್ನು ವಹಿಸಿದ ಮೊದಲಿಗರು ಅರ್ಜನ್ ಸಿಂಗ್ ಅವರು.

1919 ಏಪ್ರಿಲ್ 15ರಂದು (ಹಿಂದೆ ಪಂಜಾಬಿಗೆ ಸೇರಿದ್ದು ಈಗ ಪಾಕಿಸ್ತಾನದಲ್ಲಿರುವ) ಲೈಯಲ್‌ಪುರದಲ್ಲಿ ಅರ್ಜನ್ ಸಿಂಗ್ ಜನಿಸಿದರು. ತಂದೆ ಕಿಶನ್‌ಸಿಂಗ್ : ತಾಯಿ ತೇಜಿ. ಲೈಯಲ್‌ಪುರದಲ್ಲಿ ಶಾಲಾ ವಿದ್ಯಾಭ್ಯಾಸವಾಯಿತು. ಅನಂತರ ಲಾಹೋರಿನಲ್ಲಿ ಕಾಲೇಜು ಶಿಕ್ಷಣ. ವಿದ್ಯಾರ್ಥಿ ದೆಸೆಯಲ್ಲೇ ಒಳ್ಳೆಯ ಕ್ರೀಡಾಪಟು ಎಂದು ಹೆಸರುವಾಸಿಯಾದರು. ಪಂಜಾಬ್ ಹಾಗೂ ಅಖಿಲ ಭಾರತ ಮಟ್ಟದಲ್ಲಿ ಅನೇಕ ಈಜುಸ್ಪರ್ಧೆಗಳಲ್ಲಿ ಪ್ರಶಸ್ತಿ ಗಳಿಸಿದರು.

ಬ್ರಿಟಿಷ್ ರಾಯಲ್ ಏರ್‌ಫೋರ್ಸ್ (ಆರ್.ಎ.ಎಫ್.) ಕಾಲೇಜಿನಲ್ಲಿ ಅರ್ಜನ್ ವಿಮಾನಚಾಲನ ತರಬೇತಿ ಪಡೆದರು. ಅನಂತರ ಭಾರತೀಯ ವಾಯುದಳದಲ್ಲಿ 1939 ಡಿಸೆಂಬರ್ ತಿಂಗಳಿನಲ್ಲಿ ಆಯುಕ್ತಾಧಿಕಾರಿಯಾದರು. ಭಾರತದ ವಾಯುವ್ಯ ಗಡಿಯಲ್ಲಿ ನಡೆದ ಯುದ್ಧದಲ್ಲಿ(1944) ವಿಮಾನತಂಡದ ಅಧಿಪತಿಯಾಗಿದ್ದರು. ಬರ್ಮ ರಂಗದಲ್ಲಿ ಹೋರಾಡಿದಾಗ ಇವರಿಗೆ ಡಿಸ್ಟಿಂಗ್ವಿಷ್ಡ್ ಫ್ಲೈಯಿಂಗ್ ಕ್ರಾಸ್ ಪ್ರಶಸ್ತಿ ದೊರೆಯಿತು. ಇಂಗ್ಲೆಂಡಿನ ರಾಯಲ್ ಏರ್ ಫೋರ್ಸ್ ಕಾಲೇಜಿನಲ್ಲಿ ಮತ್ತೆ ಶಿಕ್ಷಣ ಪಡೆದು ಬಂದರು. ಅನಂತರ ಒಂದಾದ ಮೇಲೊಂದರಂತೆ ಹಿರಿಯ ಹುದ್ದೆಗಳು ದೊರೆತುವು.

1956ರಲ್ಲಿ ಮೆಲ್ಬರ್ನ್‌ನಲ್ಲಿ ನಡೆದ ಒಲಿಂಪಿಕ್ ಕ್ರೀಡೆಗಳಲ್ಲಿ ಭಾಗವಹಿಸಿದ ಭಾರತೀಯ ಕ್ರೀಡಾಪಟುಗಳ ತಂಡದೊಡನೆ, ಅವರ ಮುಖ್ಯಸ್ಥರಾಗಿ ಅಲ್ಲಿಗೆ ಹೋಗಿದ್ದರು. 1963ರಲ್ಲಿ ವಿಮಾನಬಲದ ಉಪಪ್ರಧಾನಾಧಿಕಾರಿಯಾಗಿದ್ದರು; 1966ರಿಂದ ಏರ್‌ಚೀಫ್ ಮಾರ್ಷಲ್ ಆಗಿದ್ದು, 1969ರಲ್ಲಿ ನಿವೃತ್ತಿ ಹೊಂದಿದರು. 1965ರಲ್ಲಿ ಭಾರತ ಪಾಕಿಸ್ತಾನಗಳ ನಡುವೆ ನಡೆದ ಯುದ್ಧದಲ್ಲಿ ಅರ್ಜನ್ ಸಿಂಗ್ ಅವರು ಸಲ್ಲಿಸಿದ ಅಮೂಲ್ಯ ಸೇವೆಗಾಗಿ ಅವರಿಗೆ ಭಾರತ ಸರಕಾರ ಪದ್ಮವಿಭೂಷಣ ಪ್ರಶಸ್ತಿ ಕೊಟ್ಟು ಗೌರವಿಸಿತು.



ರಾಷ್ಟ್ರಕ್ಕೆ ಅಮೂಲ್ಯ ಸೇವೆ

ನಿವೃತ್ತರಾದ ಮೇಲೆ ಸ್ವಿಟ್ಜರ್‌ಲೆಂಡಿನಲ್ಲಿ ಭಾರತದ ರಾಯಭಾರಿಯಾಗಿ 1973ರ ತನಕ ಸೇವೆ ಸಲ್ಲಿಸಿದರು.

ಅಜಾತಶತ್ರು

'ಮಾಗಧೋವದಂತಿ ಅಜಾತಶತ್ರು ವಿದೇಹಿಪುತ್ರೋ ಭಾಗವತೋಪಾದೆ ಶಿರಸಾವದಂತೆ'—

'ಮಗಧದ ಅಜಾತಶತ್ರು ಬುದ್ಧನ ಪಾದಗಳಲ್ಲಿ ತಲೆಯಿಟ್ಟು ನಮಸ್ಕರಿಸುತ್ತಿದ್ದಾನೆ' ಎಂಬ ಅರ್ಥವುಳ್ಳ ಈ ಶಾಸನ ಮಗಧದ ಪರಾಕ್ರಮಶಾಲಿ ಅರಸು ಅಜಾತಶತ್ರುವನ್ನು ಕುರಿತದ್ದು. ಕ್ರಿ. ಪೂ. 2ನೆಯ ಶತಮಾನದ ಭಾರ್‌ಹುತ್ ಸ್ತೂಪದ ಶಿಲ್ಪದಲ್ಲಿ ಬುದ್ಧನ ಚರಣಗಳಿಗೆ ವಂದಿಸುತ್ತಿರುವ ಅಜಾತಶತ್ರುವಿನ ಚಿತ್ರವಿದೆ.

ಕ್ರಿ. ಪೂ. 6ನೆಯ ಶತಮಾನದಲ್ಲಿ ಮಗಧ ರಾಜ್ಯವನ್ನು ಆಳಿದ ಶಿಶುನಾಗ ವಂಶದ ಬಿಂಬಿಸಾರನ ಮಗ ಅಜಾತಶತ್ರು. ಕುಣಿಕ ಎಂಬ ಇನ್ನೊಂದು ಹೆಸರು. ಇವನ ಆಳ್ವಿಕೆಯ ಕಾಲ ಕ್ರಿ. ಪೂ. [illegible] [illegible]

ಅಜಾತಶತ್ರು ಸಿಂಹಾಸನವೇರಿದ ಎಂಬ ಬಗೆಗೆ ಉಲ್ಲೇಖಗಳಿವೆ. ಸೋದರ ಮಾವ ಪ್ರಸೇನಜಿತನನ್ನು ಈತ ಸೋಲಿಸಿ ಕಾಶಿಯ ಮೇಲೆ ತನ್ನ ಅಧಿಕಾರ ಸ್ಥಾಪಿಸಿದ.

ಅಜಾತಶತ್ರು ಮಗಧ ರಾಜ್ಯವನ್ನು ವಿಸ್ತರಿಸಿಕೊಂಡನು. ಲಿಚ್ಛವಿ ಮುಂತಾದ ಗಣರಾಜ್ಯಗಳನ್ನು ಸೋಲಿಸಿದ. ಅವಂತಿ, ಸೌವೀರ ಹಾಗೂ ವತ್ಸ ರಾಜರೊಡನೆ ಮಿತ್ರ ಮತ್ತು ರಾಜನೈತಿಕ ಸಂಬಂಧ ಬೆಳೆಸಿಕೊಂಡ.

ರಾಜಗೃಹ ಮಗಧದ ರಾಜಧಾನಿಯಾಗಿತ್ತು. ಅಜಾತಶತ್ರು ಪಾಟಲಿಗ್ರಾಮ ಎಂಬ ಹಳ್ಳಿಯಲ್ಲಿ ಕೋಟೆ ಕಟ್ಟಿಸಿ ಅದನ್ನು ರಾಜಧಾನಿ ಮಾಡಿಕೊಂಡ. ಅದೇ ಪಾಟಲಿಪುರ - ಪಾಟಲಿಪುತ್ರ - ಎಂದು ಪ್ರಸಿದ್ಧವಾಯಿತು.

ವೈಶಾಲಿಯ ಮೇಲೆ ನಡೆದ ಯುದ್ಧದಲ್ಲಿ ದೊಡ್ಡ ಕಲ್ಲುಗಳನ್ನೆಸೆಯುವ ಮಹಾಶಿಲಾಕಂಟಕ ಮತ್ತು ತಾನಾಗಿ ಚಲಿಸುವ ರಥಮುಸಲ ಎಂಬ ಮಹಾನ್ ಯುದ್ಧಯಂತ್ರಗಳನ್ನು ಅಜಾತಶತ್ರು ಉಪಯೋಗಿಸಿದ. ರಥಮುಸಲದ ಚಕ್ರಕ್ಕೆ ಜೋಡಿಸಿದ್ದ ಸರಳುಗಳು ಸೈನಿಕರನ್ನು ತುಂಡರಿಸುತ್ತಿದ್ದುವು.

ಅಜಾತಶತ್ರು ಜೈನ ಮತ್ತು ಬೌದ್ಧ ಮತಗಳೆರಡನ್ನೂ ಗೌರವಿಸುತ್ತಿದ್ದ. ಬುದ್ಧನನ್ನು ಪಾಟಲಿಪುತ್ರಕ್ಕೆ ಬರಮಾಡಿಕೊಂಡಿದ್ದ. ಕೋಟೆಯ ಒಂದು ಹೆಬ್ಬಾಗಿಲಿಗೆ ಆತನ ಹೆಸರನ್ನು ಇಟ್ಟಿದ್ದ. ಬುದ್ಧನ ನಿಧನಾನಂತರ ಬೌದ್ಧ ಮಹಾಸಮ್ಮೇಳನವನ್ನು ರಾಜಗೃಹದಲ್ಲಿ ನಡೆಸಿ ಬೌದ್ಧಭಿಕ್ಷುಗಳಿಗೆ ವಿವಿಧ ಸೌಲಭ್ಯಗಳನ್ನು ಕಲ್ಪಿಸಿಕೊಟ್ಟ.

ನೋಡಿ : ಬಿಂಬಿಸಾರ ; ಹರ್ಯಂಕರು

ಅಜಿತನಾಥ

ನೋಡಿ : ತೀರ್ಥಂಕರರು

ಅಜಿತ ವಾಡೇಕರ್

ನೋಡಿ : ಸಂಪುಟ ೬



ಅಜ್ಮೀರ್

ದೆಹಲಿಗೆ ಸುಮಾರು 275 ಮೈಲಿ ದೂರದಲ್ಲಿರುವ ಅಜ್ಮೀರ್ ರಾಜಸ್ಥಾನದ ಹಳೆಯ ಹಾಗೂ ದೊಡ್ಡ ಪಟ್ಟಣ. ಅಜಮೇರು ಎಂಬುದು ಇದರ ಹಿಂದಿನ ಹೆಸರು. ಇದಕ್ಕೆ 1500 ವರ್ಷಗಳಷ್ಟು ದೀರ್ಘ ಇತಿಹಾಸವಿದೆ. 13ನೆಯ ಶತಮಾನದ ವಿಖ್ಯಾತ ಮಹಮ್ಮದೀಯ ಸಂತ ಮುಯಿನ್–ಉದ್–ದೀನನ ಸಮಾಧಿ ಇಲ್ಲಿದೆ. ಇದು ಮಹಮ್ಮದೀಯ ಪ್ರಸಿದ್ಧ ಯಾತ್ರಾಸ್ಥಳ.

12ನೆಯ ಶತಮಾನದಲ್ಲಿ ಚೌಹಾನ್ ಸಂತತಿಯ ಅಜಯಪಾಲನಿಂದ ಇಂದಿನ ಅಜ್ಮೀರ್ ನಗರ ನಿರ್ಮಿತವಾಯಿತು.

ಅಜ್ಮೀರಿನ ಪಶ್ಚಿಮಕ್ಕೆ ಸುಮಾರು 7 ಮೈಲಿ ದೂರದಲ್ಲಿರುವ ಪುಷ್ಕರ ಸರೋವರ ಹಿಂದೂಗಳಿಗೆ ಪವಿತ್ರ ಕ್ಷೇತ್ರ. ಇಲ್ಲಿ ಬ್ರಹ್ಮದೇವನ ಗುಡಿಯಿದೆ.

ಅಜ್ಮೀರದ ಉತ್ತರಕ್ಕೆ ಎರಡು ಗುಡ್ಡಗಳ ನಡುವೆ ಒಡ್ಡು ಹಾಕಿ ರಚಿಸಿರುವ ವಿಶಾಲವಾದ ಆನಾ ಸರೋವರವಿದೆ. ಇದನ್ನು ಕಟ್ಟಿಸಿದವನು ಅಜಯಪಾಲನ ಮಗ ಅರುಣರಾಜ.

ಹಿಂದೆ ಅಜ್ಮೀರ್ ರಾಜ್ಯ 'ಸಪಾದಲಕ್ಷ' ಎಂದು ಖ್ಯಾತಿಗಳಿಸಿತ್ತು. ಬಹುಶಃ ಈ ರಾಜ್ಯದಲ್ಲಿ ಒಂದೂಕಾಲು ಲಕ್ಷ ಪಟ್ಟಣಗಳೂ ಹಳ್ಳಿಗಳೂ ಇದ್ದಿರಬಹುದು.

13ನೆಯ ಶತಮಾನದಲ್ಲಿ ಬಾಳಿದ ಮುಯಿನ್–ಉದ್–ದೀನ್‌ನ ಬಗೆಗೆ ಅಕ್ಬರನಿಗೆ ವಿಶೇಷ ಭಕ್ತಿ ಗೌರವ. ಅವನು ಪುತ್ರಾರ್ಥಿಯಾಗಿ ಈ ಸಂತನ ಗೋರಿಗೆ ಬಂದು ಸೇವೆ ಸಲ್ಲಿಸಿದ. ಅಕ್ಬರನ ಮಗ ಜಹಾಂಗೀರ್, ಮೊಮ್ಮಗ ಷಾಜಹಾನ್ ಕೂಡ ಇಲ್ಲಿಗೆ ಯಾತ್ರಿಕರಾಗಿ ಬಂದಿದ್ದರು. ಹಿಂದೂ ಅಥವಾ ಜೈನ ದೇವಾಲಯದ ಸಾಮಗ್ರಿಗಳನ್ನು ಉಪಯೋಗಿಸಿ ಕಟ್ಟಿದ ಒಂದು ಮಸೀದಿ ಅಜ್ಮೀರದಲ್ಲಿದೆ. ಇದು ತಾರಾಗಡ ಬೆಟ್ಟದ ಇಳಿಜಾರಿನಲ್ಲಿದೆ.

ಅಜ್ಮೀರ್ ಒಂದು ಪ್ರಮುಖ ಆಡಳಿತ ಹಾಗೂ ರೈಲ್ವೆ ಕೇಂದ್ರ. ಉತ್ತಮ ನಗರಯೋಜನೆ ಈ ಊರಿನ ಸೊಬಗನ್ನು ಹೆಚ್ಚಿಸಿದೆ. ಎಣ್ಣೆ, ಹತ್ತಿಬಟ್ಟೆ, ಬಣ್ಣಗಳ ತಯಾರಿಕೆಗೆ ಈ ಪಟ್ಟಣ ಪ್ರಸಿದ್ಧವಾಗಿದೆ.

ಅರ್ಜುನ ಪ್ರಶಸ್ತಿ

ನೋಡಿ : ಸಂಪುಟ ೬

ಅಟಲ್ ಬಿಹಾರಿ ವಾಜಪೇಯಿ

ಭಾರತೀಯ ಜನಸಂಘದ ಮುಖಂಡ ಮತ್ತು ಖ್ಯಾತ ರಾಜಕಾರಣಿ, ಅಟಲ್ ಬಿಹಾರಿ ವಾಜಪೇಯಿ.

ವಾಜಪೇಯಿ ಹುಟ್ಟಿದ್ದು 1926 ಡಿಸೆಂಬರ್ 25 ರಂದು. ಗ್ವಾಲಿಯರ್ ಮತ್ತು ಕಾನ್ಪುರಗಳಲ್ಲಿ ವಿದ್ಯಾಭ್ಯಾಸ ಮಾಡಿ ಎಂ.ಎ. ಪದವಿ ಪಡೆದರು. 14 ವರ್ಷ ವಯಸ್ಸಿನವರಾಗಿದ್ದಾಗಲೇ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಸದಸ್ಯರಾದರು. 1942ರಲ್ಲಿ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿ ಸೆರೆಮನೆ ಸೇರಿದರು. 1951ರಲ್ಲಿ ಭಾರತೀಯ ಜನಸಂಘ ಸ್ಥಾಪನೆಯಾದಾಗ ವಾಜಪೇಯಿ ಅವರ ಸದಸ್ಯರಾದರು ; ಸಂಘದ ಕೆಲಸಕ್ಕಾಗಿ ತಮ್ಮ ಜೀವನವನ್ನು ಮುಡುಪಾಗಿಟ್ಟರು.

ಅಜ್ಮೀರ್ : ಎಂಟು ಶತಮಾನಗಳ ಕಥೆ



1957ರಲ್ಲಿ ಲೋಕಸಭೆಗೆ ಆಯ್ಕೆಯಾದರು. 1962ರಲ್ಲಿ ರಾಜ್ಯ ಸಭಾ ಸದಸ್ಯರಾದರು. 1967ರಲ್ಲೂ 1972ರಲ್ಲೂ ಮತ್ತೆ ಲೋಕಸಭೆಗೆ ಚುನಾಯಿತರಾದರು. ಇವರು ಲೋಕಸಭೆಯಲ್ಲಿ ಜನಸಂಘದ ಮುಖಂಡರು; ಒಳ್ಳೆಯ ವಾಗ್ಮಿ.

ಇವರು 1968 ಫೆಬ್ರವರಿಯಿಂದ ಸುಮಾರು ನಾಲ್ಕು ವರ್ಷ ಜನಸಂಘದ ಅಧ್ಯಕ್ಷರಾಗಿದ್ದರು.

ವಾಜಪೇಯಿ ಕವಿ ಕೂಡಾ. 'ರಾಷ್ಟ್ರ ಧರ್ಮ', 'ಪಾಂಚಜನ್ಯ' ಮತ್ತು 'ಸ್ವದೇಶ್' ಪತ್ರಿಕೆಗಳಿಗೆ ಅವರು ಸಂಪಾದಕರಾಗಿದ್ದರು. ಜನಸಂಘದ ಧೋರಣೆಗಳನ್ನು ಪ್ರತಿಪಾದಿಸುವ ಅನೇಕ ಲೇಖನಗಳನ್ನೂ ಕೆಲವು ಪುಸ್ತಕಗಳನ್ನೂ ಬರೆದಿದ್ದಾರೆ.

[illegible] : ವಾಜಪೇಯಿ

ಅಟಾಮಿಕ್ ಎನರ್ಜಿ ಕಮಿಷನ್

ನೋಡಿ : ಭಾರತೀಯ ಪರಮಾಣುಶಕ್ತಿ ಮಂಡಲಿ

ಅಟ್ಲಿ

ನೋಡಿ : ಕ್ಲೆಮೆಂಟ್ ಅಟ್ಲಿ

ಅಣ್ಣಾದುರೈ

'ಅಣ್ಣಾ' ಎಂದು ಆತ್ಮೀಯವಾಗಿ ಸಂಬೋಧಿಸಲ್ಪಡುತ್ತಿದ್ದ ತಮಿಳು ನಾಡಿನ ರಾಜಕಾರಣಿ ಸಿ. ಎನ್. ಅಣ್ಣಾದುರೈ–ಕಾಂಚೀಪುರಂ ನಟರಾಜನ್ ಅಣ್ಣಾದುರೈ.

1909 ಸೆಪ್ಟೆಂಬರ್ 15ರಂದು ಅಣ್ಣಾದುರೈ ಕಾಂಚೀಪುರದ (ಕಾಂಜೀವರಮ್) ಒಂದು ಮಧ್ಯಮವರ್ಗದ ಕುಟುಂಬದಲ್ಲಿ ಜನಿಸಿದರು. ತಂದೆ ನಟರಾಜನ್. ನೆಯ್ಗೆ ಅವರ ಕಸಬು. ತಾಯಿ ಬಂಗಾರು ಅಮ್ಮಾಳ್. ಅಣ್ಣಾದುರೈಯನ್ನು ಸಾಕಿ, ಓದಿಸಿ, ಮುಂದಕ್ಕೆ ತಂದವರು ಅವರ ತಾಯಿಯ ತಂಗಿ ರಾಜಾಮಣಿ ಅಮ್ಮಾಳ್. ಕಾಂಚೀಪುರದ ಪಾಚ್ಚಯಪ್ಪ ಶಾಲೆಯಲ್ಲಿ ವಿದ್ಯಾಭ್ಯಾಸ. ಅನಂತರ ಸ್ವಲ್ಪ ಕಾಲ ಗುಮಾಸ್ತೆ ನೌಕರಿ. ಬಳಿಕ ಮದರಾಸಿನ ಪಾಚ್ಚಯಪ್ಪ ಕಾಲೇಜಿನಲ್ಲಿ ಓದು ಮುಂದುವರಿಯಿತು. ಅರ್ಥಶಾಸ್ತ್ರ, ರಾಜನೀತಿಶಾಸ್ತ್ರ ಅವರ ಅಧ್ಯಯನ ವಿಷಯಗಳಾಗಿದ್ದುವು. ಬಿ.ಎ. ಆನರ್ಸ್ ಹಾಗೂ ಎಂ.ಎ. (1934) ಪದವಿ ಪಡೆದರು. ಸ್ವಲ್ಪ ಕಾಲ ಉಪಾಧ್ಯಾಯರಾಗಿ ಕೆಲಸ ಮಾಡಿದ ಮೇಲೆ ಪತ್ರಿಕೋದ್ಯಮ ಹಾಗೂ ರಾಜಕೀಯಗಳಲ್ಲಿ ಆಸಕ್ತಿ ವಹಿಸಿದರು.

ಅಣ್ಣಾದುರೈ ಉತ್ತಮ ಪತ್ರಿಕೋದ್ಯಮಿ. 'ವಿಡುದಲೈ' (ಬಿಡುಗಡೆ) ಮುಂತಾದ ತಮಿಳು ಪತ್ರಿಕೆಗಳ ಸಂಪಾದಕರಾಗಿದ್ದರು. 'ಹೋಮ್ ಲ್ಯಾಂಡ್' (1957) ಹಾಗೂ 'ಹೋಮ್‌ರೂಲ್' (1966) ಎಂಬ ಎರಡು ಆಂಗ್ಲ ಸಾಪ್ತಾಹಿಕಗಳನ್ನೂ ಪ್ರಾರಂಭಿಸಿ ನಡೆಸಿದರು.

1917ರಲ್ಲಿ ದಕ್ಷಿಣ ಭಾರತ ಉದಾರವಾದಿ ಸಂಘ ಸ್ಥಾಪಿತವಾಗಿತ್ತು, ಅದನ್ನು ಬಳಕೆಯಲ್ಲಿ ಜಸ್ಟಿಸ್ ಪಾರ್ಟಿ ಎನ್ನುತ್ತಿದ್ದರು. ಇದು ಕಾಂಗ್ರೆಸ್ಸಿನ ವಿರೋಧ ಪಕ್ಷವಾಗಿತ್ತು. ಮುಂದೆ ಯುವಕ ಅಣ್ಣಾದುರೈ ಅದರ ಪತ್ರಿಕೆಯ ಉಪಸಂಪಾದಕರಾಗಿ ಕೆಲಸಮಾಡಿದರು. ಆಗ ಚಿಕ್ಕ ಕಾರ್ಮಿಕ ಸಂಘಗಳನ್ನು ಸ್ಥಾಪಿಸಿ ಕಾರ್ಮಿಕರ ಪ್ರಗತಿಗೋಸ್ಕರ ಪ್ರಯತ್ನಿಸಿದರು. 19[illegible]ರಲ್ಲಿ ಪೆರಿಯಾರ್ ಇ. ವಿ. ರಾಮಸ್ವಾಮಿ ನಾಯಕರನ್ನು ಭೇಟಿಯಾದರು. ಜಸ್ಟಿಸ್ ಪಾರ್ಟಿ ಜನಸಾಮಾನ್ಯರ ಪಕ್ಷವಾಗುವಂತೆ ಪೆರಿಯಾರರೂ ಅಣ್ಣಾದುರೈ ಅವರೂ ಅವಿರತವಾಗಿ ದುಡಿದರು. 1944ರಲ್ಲಿ 'ದ್ರಾವಿಡ ಕಜಗಂ' ಪಕ್ಷವನ್ನು ರಾಮಸ್ವಾಮಿ ನಾಯಕರ್ ಸ್ಥಾಪಿಸಿದರು. ವಿದ್ಯಾರ್ಥಿಗಳು ದೊಡ್ಡ ಸಂಖ್ಯೆಯಲ್ಲಿ ಪಕ್ಷದ ಸದಸ್ಯರಾದರು.



[illegible] ದ್ರಾವಿಡ ನಾಯಕ : ಅಣ್ಣಾ[illegible]

ಸ್ವಾತಂತ್ರ್ಯ ಲಭಿಸಿದಾಗ, ಅದು ದುಃಖಸೂಚಕ ದಿನ ಎಂದು ಪೆರಿಯಾರ್ ನುಡಿದರು. ಅಣ್ಣಾದುರೈಯವರಿಗೆ ಇದು ಒಪ್ಪಿಗೆಯಾಗಲಿಲ್ಲ. 70 ವರ್ಷ ವಯಸ್ಸಿನ ರಾಮಸ್ವಾಮಿ ನಾಯಕರ್ ಕಿರಿವಯಸ್ಸಿನ ಮಣಿ ಅಮ್ಮಾಯಿಯವರನ್ನು [illegible] ಸದಸ್ಯರಲ್ಲಿ ತೀವ್ರ ಅಸಮಾಧಾನ ಉಂಟುಮಾಡಿತು. [illegible]ವಾಗಿ ಸಿ. ಎನ್. ಅಣ್ಣಾದೊರೈ ರಾಮಸ್ವಾಮಿ ನಾಯಕರ ಪಕ್ಷದಿಂದ ಹೊರಬಿದ್ದು, ದ್ರಾವಿಡ ಮುನ್ನೇತ್ರ ಕಳಗಂ (ಡಿ. ಎಂ. ಕೆ.) – ದ್ರಾವಿಡ ಪ್ರಗತಿಶೀಲ ಸಂಘ– ಸ್ಥಾಪಿಸಿದರು. ಇದು ಬೇಗನೆ ಬಲಗೊಂಡಿತು.

ಅಣ್ಣಾದುರೈ 1962ರಲ್ಲಿ ರಾಜ್ಯ ಸಭೆಗೆ ಆಯ್ಕೆಯಾದರು. [illegible]

1967ರ ಸಾರ್ವತ್ರಿಕ ಚುನಾವಣೆಯಲ್ಲಿ [illegible] ಡಿ.ಎಂ.ಕೆ.ಗೆ ಪ್ರಚಂಡ ಬಹುಮತ ಲಭಿಸಿತು. ಅಣ್ಣಾದುರೈ [illegible]

ಅಣ್ಣಾದುರೈ ಅವರ ಪ್ರಥಮ ಒಲವು ದೀನದಲಿತರ ಬಗೆಗೆ. ಅವರ ಮೇಲ್ಮೆಗಾಗಿ ಸಾಮಾಜಿಕ ಸುಧಾರಣೆಗಳಾಗಬೇಕು ಎಂದು ಅಣ್ಣಾದುರೈ ತಾವು ಬರೆದ ಕತೆ ಹಾಗೂ ನಾಟಕಗಳಲ್ಲಿ ಪ್ರತಿಪಾದಿಸುತ್ತಿದ್ದರು.

ಅನ್ನನಾಳದ ಕ್ಯಾನ್ಸರ್‌ನಿಂದಾಗಿ 1969 ಫೆಬ್ರವರಿ 3ರಂದು ಅಣ್ಣಾದುರೈ ನಿಧನರಾದರು.

ಅನು

ನೋಡಿ : ಅನಸೂಯಾ

ಅಥರ್ವವೇದ

ನಾವು 'ಇಂದ್ರಜಾಲ' ಎಂಬ ಮಾತನ್ನು ಕೇಳಿದ್ದೇವೆ. ನಮ್ಮನ್ನು ಭ್ರಮೆಗೊಳಗಾಗಮಾಡುವ ವಿದ್ಯೆ ಅದು. 'ಇಂದ್ರಜಾಲ' ಎಂಬ ಮಾತು ಅಥರ್ವವೇದದ ಕೊಡುಗೆ. ಇಂದ್ರ ತಾನು ಕಲ್ಪಿಸಿದ 'ಜಾಲ'ದಿಂದ–ಮೋಸದಿಂದ –ವಸ್ತುಗಳನ್ನು ಸೋಲಿಸಿದನೆಂದು ಹೇಳುವ ಸಂದರ್ಭದಲ್ಲಿ ಈ ಮಾತು ಬರುತ್ತದೆ. ಅಥರ್ವವು ನಾಲ್ಕು ವೇದಗಳಲ್ಲಿ ಒಂದು ಎಂದು ಹೇಳುತ್ತೇವೆ ಈಗ ರೂಢಿಯಲ್ಲಿದೆಯಾದರೂ ಬಹುಕಾಲದ ವರೆಗೆ ಅದನ್ನು ವೇದವೆಂದು ಪರಿಗಣಿಸುತ್ತಿರಲಿಲ್ಲ. ಅದರಲ್ಲಿ ಆಧ್ಯಾತ್ಮಿಕ ವಿಚಾರಗಳ ಜೊತೆಗೆ, ಮಾಟ, ಜಾದು, ವೈದ್ಯ, ರಾಜನೀತಿ ಮುಂತಾದ ವಿಚಾರಗಳೂ ಸೇರಿದ್ದುದೇ ಇದಕ್ಕೆ ಕಾರಣ.

ಈ ದೃಷ್ಟಿಯಿಂದ ವ್ಯವಹಾರವನ್ನು ತಿಳಿಸುವ ಅಥರ್ವವನ್ನು ಸಾಮಾನ್ಯರ ವೇದ ಎನ್ನಬಹುದು. ಏಕೆಂದರೆ, ಈ ಸೃಷ್ಟಿಯಲ್ಲಿ ಭೂಲೋಕವೇ ಉತ್ತಮ ಎಂಬ ದೃಷ್ಟಿ ಅಥರ್ವವೇದದ್ದು. ಈ ಭೂಮಿಯಲ್ಲಿ ಸುಖವಾಗಿ, ಆರೋಗ್ಯವಾಗಿ ಬಾಳಲು ಅದು ಮಾರ್ಗದರ್ಶನ ಮಾಡುತ್ತದೆ. ಅದರಲ್ಲಿ ವಿಶಾಲ ಮಾನವೀಯತೆಯನ್ನೂ ವೈಜ್ಞಾನಿಕ ಚಿಂತನೆಯನ್ನೂ ಕಾಣಬಹುದು. ಸಾಮಾಜಿಕ ಸುಧಾರಣೆಯ ದೃಷ್ಟಿಯೂ ಅದರಲ್ಲಿ ಇದೆ. ಆರ್ಯಜನಾಂಗದಿಂದ ಹೊರಗಿದ್ದವರನ್ನು ಒಳಕ್ಕೆ ಬರ ಮಾಡಿಕೊಳ್ಳುವ 'ವಿಧಿ'ಗಳನ್ನೂ ಅದರಲ್ಲಿ ಹೇಳಿದೆ. ಅತಿಥಿಗಳನ್ನು ಪ್ರೀತಿಯಿಂದ ಉಪಚರಿಸುವುದರಿಂದ ಯಾಗ ಮಾಡಿದ ಫಲ ದೊರೆಯುತ್ತದೆ ಎಂಬ ಭಾವನೆ ಬೆಳೆದದ್ದು ಅಥರ್ವವೇದದಿಂದ.

ಋಗ್ವೇದದ ಅನೇಕ ಸೂಕ್ತಗಳು, ಮಂತ್ರಗಳು ಅಥರ್ವವೇದದಲ್ಲಿ ಸೇರಿವೆ. ಆದರೆ ಅದರ ಕೊಡುಗೆ, ಪ್ರಧಾನವಾಗಿ ವೈದ್ಯವಿಜ್ಞಾನಕ್ಕೆ. ಅಥರ್ವವೇದದ ಈ ಭಾಗ ಆಯುರ್ವೇದಕ್ಕೆ –ಭಾರತೀಯ ವೈದ್ಯಶಾಸ್ತ್ರಕ್ಕೆ– ತಳಹದಿಯಾಯಿತು. ಅದು ಮಾನವ ದೇಹದ ಒಳ ಹೊರಗಿನ ಅಂಗಾಂಗಗಳನ್ನು ಗುರುತಿಸಿ ಅವಕ್ಕೆ ಹೆಸರುಗಳನ್ನು ಕೊಟ್ಟಿದೆ. ಅಲ್ಲದೆ ಮನುಷ್ಯನಿಗೆ ಬರುವ ಅನೇಕ ರೋಗಗಳ ಮತ್ತು ಅವುಗಳ ಲಕ್ಷಣಗಳ ಪರಿಣಾಮಗಳ ಅಧ್ಯಯನ ನಡೆಸಿದೆ. ಅವುಗಳಿಗೆ ಯಾವ ರೀತಿ ಚಿಕಿತ್ಸೆ ನಡೆಸಬೇಕು ಎಂಬುದನ್ನೂ ಸೂಚಿಸಿದೆ. ರೋಗ ಚಿಕಿತ್ಸೆಗೆ ಸಹಾಯಕವಾದ ಅನೇಕ ಮೂಲಿಕೆಗಳ ಉಲ್ಲೇಖವನ್ನು ಅಥರ್ವವೇದದಲ್ಲಿ ಕಾಣಬಹುದು. ರೋಗ ಚಿಕಿತ್ಸೆಯಲ್ಲಿ ಓಷಧಿ (ಮೂಲಿಕೆ) ಮಾತ್ರವಲ್ಲದೆ, ಮಂತ್ರ ಪ್ರಯೋಗವೂ ಉಪಯುಕ್ತವೆಂಬ ಅಭಿಪ್ರಾಯವೂ ಅಥರ್ವವೇದದಲ್ಲಿ ಕಂಡುಬರುತ್ತದೆ. ಇಂಥ ಮಂತ್ರಗಳು ಅದರಲ್ಲಿವೆ.

ಮಾಟ (ಕೃತ್ಯಾ), ಯಾತು (ಜಾದು) ಇವುಗಳನ್ನು ಕುರಿತ ವಿವರಗಳು ಅಥರ್ವವೇದದಲ್ಲಿ ವಿಪುಲವಾಗಿ ದೊರೆಯುತ್ತವೆ. ಇವುಗಳ ಉದ್ದೇಶ ಎರಡು ಬಗೆ : ಒಂದನೆಯದು ಆತ್ಮರಕ್ಷಣೆ–ಅಂದರೆ ಇತರರಿಂದ ತನಗೆ ಆಗಬಹುದಾದ ತೊಂದರೆಯನ್ನು ನಿವಾರಿಸಿಕೊಳ್ಳುವುದು: ಇನ್ನೊಂದು ವೈರಿನಾಶ –ತನಗೆ ತೊಂದರೆ ಕೊಡುವವರನ್ನು ನಾಶಪಡಿಸುವುದು. ಇದನ್ನು ಸಾಧಿಸುವ ರೀತಿ ಮಂತ್ರಗಳ ಮೂಲಕ. ಹೀಗೆ ಆ ಕಾಲದ ಜನರ ನಂಬಿಕೆಯ ಚಿತ್ರ ಅಥರ್ವವೇದದಿಂದ ನಮಗೆ ದೊರೆಯುತ್ತದೆ.

ಅಥರ್ವವೇದದ ಕಾಲದ ಸಮಾಜದಲ್ಲಿ ರಾಜ ಅತ್ಯಂತ ಪ್ರಬಲ ಮತ್ತು ಪ್ರತಿಷ್ಠಿತ ವ್ಯಕ್ತಿಯಾಗಿದ್ದ. ಆದರೆ ಅವನು ಸಭೆ, ಸಮಿತಿಗಳೆಂಬ ಪ್ರಜಾಪ್ರತಿನಿಧಿ ಸಭೆಗಳ ಅಭಿಪ್ರಾಯಕ್ಕೆ ಮನ್ನಣೆ ಕೊಟ್ಟು ನಡೆಯಬೇಕಾಗಿತ್ತು. ಯಾರಿಗೇ ಆಗಲಿ ಅರಸುತನ ದೊರೆಯುವುದು ವಂಶಪಾರಂಪರ್ಯವಾಗಿ ಅಲ್ಲ; ಜನರ ಅನುಮೋದನೆಯಿಂದ, ಅವರು ಆರಿಸುವುದರಿಂದ ಎಂಬ ಭಾವನೆ ಅಥರ್ವವೇದದಲ್ಲಿದೆ. ರಾಜನೀತಿಯನ್ನು ಕುರಿತು ಇದರಲ್ಲಿ ಕಂಡುಬರುವ ಅನೇಕ ಅಭಿಪ್ರಾಯಗಳನ್ನು ಕೌಟಿಲ್ಯ ಮುಂತಾದ ರಾಜನೀತಿಜ್ಞರು ತಮ್ಮ ಗ್ರಂಥಗಳಲ್ಲಿ ಅಂಗೀಕರಿಸಿದ್ದಾರೆ.

ಸುಖಮಯವಾದ ದಾಂಪತ್ಯಜೀವನ ಸಾಮಾಜಿಕ ಸುಸ್ಥಿತಿಗೆ ಸಂಬಂಧಿಸಿದ ಒಂದು ಮುಖ್ಯ ಅಂಶವಾದ್ದರಿಂದ, ಅಥರ್ವವೇದದಲ್ಲಿ ಈ ವಿಚಾರವೂ ಇದೆ. ಇದು ಮುಂದೆ ಕಾಮಶಾಸ್ತ್ರದ ರಚನೆಗೆ ಪ್ರೇರಕವಾಯಿತು.

ಭಾರತೀಯರ ಚಿಂತನೆ ಬಹುಮುಖವಾಗಿ ಬೆಳೆಯಲು ಅಥರ್ವವೇದದಿಂದ ದೊರೆತ ಪ್ರೇರಣೆ ಗಣನೀಯವಾದದ್ದು.

ನೋಡಿ : ವೇದ —ಸಂಪುಟ ೧, ೫

' ಅರ್ಥಶಾಸ್ತ್ರ '

" ನಾಲ್ಕೂವರೆ ಗಂಟೆ ಕಾಲ ನಿದ್ದೆಗಾಗಿ: ಮೂರು ಗಂಟೆ ಕಾಲ ಊಟ ಮನೋಲ್ಲಾಸಗಳಿಗಾಗಿ: ದಿನದ ಇನ್ನುಳಿದ ಅವಧಿ ರಾಜ್ಯದ ವ್ಯವಹಾರಗಳಿಗಾಗಿ."

ಕೌಟಿಲ್ಯನ 'ಅರ್ಥಶಾಸ್ತ್ರ'ದಲ್ಲಿ ರಾಜನಿಗೋಸ್ಕರ ಸೂಚಿಸಿರುವ ವೇಳಾಪಟ್ಟಿ ಇದು.

" ಪ್ರಜಾಹಿತ ಸಾಧನೆಯೇ ರಾಜನ ವ್ರತ; ರಾಜ್ಯಾಡಳಿತವೇ ಅವನು ಮಾಡುವ ಯಾಗ: ಎಲ್ಲರ ವಿಚಾರದಲ್ಲಿಯೂ ನಿಷ್ಪಕ್ಷಪಾತವಾದ, ಏಕರೀತಿಯ ನಡವಳಿಕೆ......"

ಇದು 'ಅರ್ಥಶಾಸ್ತ್ರ' ವಿವರಿಸಿರುವಂತೆ ರಾಜನ ಕರ್ತವ್ಯ.

ಆಡಳಿತದ ರೀತಿನೀತಿಗಳನ್ನು ತಿಳಿಸುವ ದಂಡನೀತಿ: ದಂಡನೀತಿಗೂ ಇತರ ಶಾಸ್ತ್ರಗಳಿಗೂ ಇರುವ ಸಂಬಂಧ: ರಾಜನಿಗೆ ದೊರೆಯಬೇಕಾದ ಶಿಕ್ಷಣ: ಮಂತ್ರಿಗಳು ಮತ್ತು ಅಧಿಕಾರಿ ವರ್ಗದವರ ಕರ್ತವ್ಯಗಳು; ರಾಜ್ಯಾಡಳಿತದ ವ್ಯವಸ್ಥೆ : ಭೂ ವ್ಯವಸಾಯ, ನಾನಾ ಉದ್ಯಮ, ವಾಣಿಜ್ಯಗಳ ಅಭಿವೃದ್ಧಿಗೆ ಅವಶ್ಯವಾದ ಏರ್ಪಾಟು: ತೆರಿಗೆ: ಯುದ್ಧ ಮತ್ತು ಶಾಂತಿ ನೀತಿ: ರಾಷ್ಟ್ರರಕ್ಷಣೆಗೆ ಸಂಬಂಧಿಸಿದ ಅಂಶಗಳು : ಸಾಮಾಜಿಕ ವ್ಯವಸ್ಥೆ ಮತ್ತು ಅದು ವಿರುಪೇರಾಗದಂತೆ ನೋಡಿಕೊಳ್ಳುವ ರೀತಿ — ಇವೇ ಮುಂತಾದ ರಾಜ್ಯಶಾಸ್ತ್ರಕ್ಕೆ ಸಂಬಂಧಿಸಿದ ಅನೇಕ ಅಂಶಗಳ ವಿವರಣೆ, ವಿವೇಚನೆ ಈ ಮಹಾಗ್ರಂಥದ ವಸ್ತು.

ದಕ್ಷ ಆಡಳಿತವೇ ರಾಷ್ಟ್ರ ಹಾಗೂ ಜನತೆಯ ಹಿತ ಮತ್ತು ಅಭಿವೃದ್ಧಿಯ ಮೂಲ : ರಾಜ ದಕ್ಷನಾಗಿದ್ದರೆ ಆಡಳಿತ ಸುವ್ಯವಸ್ಥಿತವಾಗಿರುತ್ತದೆ. ಆದ್ದರಿಂದ ಅವನು ಪ್ರತಿ ದಿನವೂ ಗೊತ್ತಾದ ಕಾಲವ್ಯವಸ್ಥೆಯನ್ನು ಅನುಸರಿಸಿ ಆಡಳಿತದ ಎಲ್ಲ ಅಂಗಗಳ ಮೇಲ್ವಿಚಾರಣೆ ನೋಡಿಕೊಳ್ಳುವುದು ಅವಶ್ಯ ಎಂಬ ಅಂಶವನ್ನು ಅರ್ಥಶಾಸ್ತ್ರ ಒತ್ತಿ ಹೇಳುತ್ತದೆ.

ಸಾಮಾಜಿಕ ಸುವ್ಯವಸ್ಥೆಯ ಸಂಬಂಧದಲ್ಲಿ 'ಅರ್ಥಶಾಸ್ತ್ರ'ದಲ್ಲಿ ನಿರೂಪಿತವಾಗಿರುವ ಅಂಶಗಳಲ್ಲಿ ಕೆಲವು ಇಂದಿಗೂ ಅನುಕರಣೀಯವಾಗಿವೆ.

ರಾಷ್ಟ್ರ ಜೀವನದ ವಿವಿಧ ಅಂಗಗಳ ಮೇಲೆ ಒಂದಲ್ಲ ಒಂದು ರೀತಿಯಲ್ಲಿ ಸರಕಾರದ ಹಿಡಿತವಿರಬೇಕೆಂಬ ತತ್ತ್ವಕ್ಕೆ 'ಅರ್ಥಶಾಸ್ತ್ರ'ದಲ್ಲಿ ಮನ್ನಣೆಯಿದೆ.

ರಾಷ್ಟ್ರದ ಕೇಂದ್ರಶಕ್ತಿ ರಾಜನಾದರೂ ಅವನು ಮಂತ್ರಿಮಂಡ ಸಲಹೆಗಳಿಗೆ ಮನ್ನಣೆ ಕೊಟ್ಟು ನಡೆಯಬೇಕು. ರಾಷ್ಟ್ರದ ಸಂಪತ್ತನ್ನು ಹಾಳು ಮಾಡದೆ, ಅದನ್ನು ಉಳಿಸಿ, ಬೆಳೆಸಬೇಕು : ಪ್ರಜೆಗಳ ಹಿತವೇ ತನ್ನ ತ ಎಂದು ತಿಳಿದು ನಡೆಯಬೇಕು ಎಂಬ ಸೂಚನೆ 'ಅರ್ಥಶಾಸ್ತ್ರ'ದಲ್ಲಿದೆ. ವೈರಿಗಳ ನಿಗ್ರಹ ಮುಂತಾದ ಅಂಶಗಳಿಗೆ 'ಅರ್ಥಶಾಸ್ತ್ರ'ದಲ್ಲಿ ಮಾಟ ಮಂತ್ರಗಳನ್ನು ಸೂಚಿಸಿರುವುದರಿಂದ, ಅದರ ಲೇಖಕನ ಮೇಲೆ ಅಥರ್ವ ವೇದದ ಪ್ರಭಾವ ಬಿದ್ದಿರಬೇಕೆಂದು ವಿದ್ವಾಂಸರು ಊಹಿಸುತ್ತಾರೆ.

ಈ ಗ್ರಂಥವನ್ನು ಬರೆದವನು ಚಂದ್ರಗುಪ್ತ ಮೌರ್ಯನ ಮಂತ್ರಿಯಾಗಿದ್ದ ಕೌಟಿಲ್ಯ ಎಂಬ ಬಗೆಗೆ ಅನೇಕ ಉಲ್ಲೇಖಗಳು ದೊರೆಯುತ್ತವೆ. ಕೌಟಿಲ್ಯನಿಗೆ ಚಾಣಕ್ಯ, ವಿಷ್ಣುಗುಪ್ತ ಎಂಬ ಹೆಸರುಗಳೂ ಇವೆ. ಇದು ಸುಮಾರು ಕ್ರಿ. ಪೂ. 300ರಲ್ಲಿ ರಚಿತವಾದ ಗ್ರಂಥವಾದರೂ ಇದರ ಪ್ರತಿ ನಮಗೆ ದೊರೆತು, ಪ್ರಕಟವಾದದ್ದು 2,200 ವರ್ಷಗಳ ಅನಂತರ—1909 ರಲ್ಲಿ. ಮೈಸೂರಿನ ಓರಿಯೆಂಟಲ್ ಲೈಬ್ರರಿ ಸಂಗ್ರಹಿಸಿದ್ದ ಹಸ್ತಪ್ರತಿ ಯೊಂದರ ಆಧಾರದ ಮೇಲೆ ಆರ್. ಶ್ಯಾಮಶಾಸ್ತ್ರಿಯವರು ಇದನ್ನು ಪ್ರಕಟಿಸಿದರು.

ಭಾರತೀಯ ರಾಜಕೀಯ ಚಿಂತನೆಯ ಇತಿಹಾಸದಲ್ಲಿ 'ಅರ್ಥಶಾಸ್ತ್ರ'ಕ್ಕೆ ಹಿರಿದಾದ ಸ್ಥಾನವಿದೆ.

ನೋಡಿ : ಅಥರ್ವವೇದ ; ಆರ್. ಶಾಮಶಾಸ್ತ್ರಿ

ಅನಂತಶಯನಂ

ದೊಡ್ಡದೊಂದು ಕಾಡು : ಅಸ್ಪೃಶ್ಯವರ್ಗಕ್ಕೆ ಸೇರಿದ ದಂಪತಿ ಅದರ ಸಮೀಪದಲ್ಲಿ ವ್ಯವಸಾಯ ಮಾಡಿ ಜೀವಿಸುತ್ತಿದ್ದರು.

ಒಂದು ದಿನ ಹತ್ತಿರದಲ್ಲೇ ಮಗು ಅಳುತ್ತಿರುವುದು ಕೇಳಿಸಿತು. ಯಾರೆಂದು ನೋಡಲು ಹೋದಳು ಮನೆಯಾಕೆ : ದಿವ್ಯರೂಪವಿದ್ದ ಮಗುವೊಂದನ್ನು ಕಂಡಳು. ಸ್ನಾನ ಮಾಡಿ ಬಂದು ಮಗುವನ್ನೆತ್ತಿಕೊಂಡು ಹಾಲು ಕುಡಿಸಿದಳು. ಮರದ ನೆರಳಲ್ಲಿ ಮಗುವನ್ನು ಮಲಗಿಸಿ ಕೆಲಸಕ್ಕೆ ಹೋದಳು. ಪುನಃ ಬಂದಾಗ ಐದು ಹೆಡೆಯ ಸರ್ಪ ಮಗುವಿಗೆ ಬಿಸಿಲು ತಾಗದಂತೆ ತನ್ನ ಹೆಡೆಯನ್ನೇ ಛತ್ರಿಯಾಗಿ ಹಿಡಿದಿದ್ದುದನ್ನು ಕಂಡಳು.

ಈ ಘಟನೆ ಗೊತ್ತಾದಮೇಲೆ ತಿರುವಾಂಕೂರು ಮಹಾರಾಜ, ವಿಷ್ಣು ಮಗುವಿನ ರೂಪದಲ್ಲಿ ಕಾಣಿಸಿಕೊಂಡನೆಂದು, ಆ ಸ್ಥಳದಲ್ಲಿ ದೇವಸ್ಥಾನ ಕಟ್ಟಿಸಿದ.

ತಿರುವನಂತಪುರದ ಅನಂತಶಯನಂ ದೇವಾಲಯದ ಬಗೆಗೆ ಪ್ರಚುರ ವಾಗಿರುವ ಕಥೆಗಳಲ್ಲಿ ಇದೂ ಒಂದು.

ಅನಂತಶಯನಂ ದೇವಾಲಯ ಕೇರಳದ ರಾಜಧಾನಿ ತಿರುವನಂತ ಪುರದಲ್ಲಿ ಸಮುದ್ರತೀರದಿಂದ ಸುಮಾರು 2 ಮೈಲು ದೂರದಲ್ಲಿದೆ ; ಒಂದು ಕೋಟೆಯ ನಡುವೆ ಸರೋವರದ ಹತ್ತಿರ ಪೂರ್ವಾಭಿಮುಖವಾಗಿ ಇದೆ.

ಅನಂತ ಎಂಬ ಹೆಸರು ಒಂದು ಮಹಾಸರ್ಪಕ್ಕೂ ವಿಷ್ಣುವಿಗೂ ಅನ್ವಯಿಸುತ್ತದೆ.

ದೇವಾಲಯದಲ್ಲಿ, ಪದ್ಮನಾಭ ಸರ್ಪದ ಮೇಲೆ ಮಲಗಿದ್ದಾನೆ ; ಅನಂತ ಶಯನನಾಗಿದ್ದಾನೆ. ದೇವರ ನಾಭಿಯಿಂದ ಹೊರಟಿರುವ ಕಮಲಪೀಠದ ಮೇಲೆ ಬ್ರಹ್ಮನ ಮೂರ್ತಿಯಿದೆ. ಪದ್ಮನಾಭನ ಬಲಗೈ ಶಿವಲಿಂಗದ ಮೇಲಿದೆ. ಈ ವಿಗ್ರಹ ಯೋಗನಿದ್ರೆಯಲ್ಲಿರುವ ವಿಷ್ಣುವಿನ ಪ್ರತೀಕ. ಪದ್ಮನಾಭನನ್ನು ಶ್ರೀರಮಣ, ಲಕ್ಷ್ಮೀಪತಿ ಎಂದೂ ಕರೆಯುತ್ತಾರೆ.

ದೇವರಿಗೆ ನೈವೇದ್ಯ ಅರ್ಪಿಸುವಾಗ ಚಿನ್ನದ ಪಾತ್ರೆಗಳನ್ನುಪಯೋಗಿಸುವರು. ಅದರ ಆಕೃತಿ ತೆಂಗಿನ ಚಿಪ್ಪಿನಂತೆ (ಕರಟ) ಇರುತ್ತದೆ. ಒಂದು ಕಥೆ : ವಿಷ್ಣು ವನ್ನು ಶಿಶುರೂಪದಲ್ಲಿ ಕಂಡ ಅಸ್ಪೃಶ್ಯ ಸ್ತ್ರೀ ತೆಂಗಿನ ಕರಟದಲ್ಲಿ ಆ ಮಗುವಿಗೆ ಹಾಲು ಕುಡಿಸಿದ್ದರ ನೆನಪಿನ ಸಂಕೇತ ಇದು. ಮಾರ್ಚ್ ಹಾಗೂ ಅಕ್ಟೋಬರ್‌ಗಳಲ್ಲಿ ಇಲ್ಲಿ ಉತ್ಸವಗಳು ಜರಗುತ್ತವೆ.

18ನೆಯ ಶತಮಾನದಲ್ಲಿ ರಾಜರಾಜ ಮಾರ್ತಾಂಡ ವರ್ಮ ತಿರುವಾಂಕೂ ರಿನ ರಾಜನಾಗಿದ್ದ. ದೇಶದಲ್ಲಿ ಅನಾಯಕತ್ವ ತಲೆದೋರಿದಾಗ ಅವನು ಪರಿವಾರದೊಡನೆ ಬಂದು ದೇವರ ಪಾದದ ಮೇಲೆ ತನ್ನ ಕತ್ತಿ ಇಟ್ಟುಬಿಟ್ಟ. ರಾಜ್ಯವನ್ನೇ ದೇವರಿಗರ್ಪಿಸಿ ತಾನು ದೇವರ ಸೇವಕನಾಗಿ ಆಳತೊಡಗಿದ. ಅನಂತರ ರಾಜ್ಯ ಸುಸ್ಥಿತಿಗೆ ಬಂತು. ಅನಂತರ ಅವನ ವಂಶದ ಅರಸರು ತಾವು ಪದ್ಮನಾಭನ ಸೇವಕರೆಂದು ಹೇಳಿಕೊಂಡು ದೇವರ ಹೆಸರಿನಲ್ಲೇ ರಾಜ್ಯವಾಳಿದರು.



ಅನಂತಶಯನಂ ದೇವಾಲಯ

ಪದ್ಮನಾಭನ ಮೂಲ ದೇವಾಲಯ ಪ್ರಾಚೀನವಾದದ್ದು. ಅಲ್ಲಿ ದೊರೆ ತಿರುವ 1165ರ ಒಂದು ಶಾಸನದಲ್ಲಿ ಹಳೆಯ ದೇವಸ್ಥಾನದ ಕೆಲಭಾಗ ದುರಸ್ತಿ ಮಾಡಿದುದರ ಮತ್ತು ಅದಕ್ಕೆ ಹೊಸ ಭಾಗಗಳನ್ನು ಸೇರಿಸಿದುದರ ಉಲ್ಲೇಖವಿದೆ.

ಅನಂತಶಯನಂ ಅಯ್ಯಂಗಾರ್

'ತೀರ್ಪುನ್ಯಾಯದ ಚರಸಂಹಿತೆ'; 'ಕೇಂದ್ರ ವಿಧಾನ ಸಭೆಯ ಎಮ್‌ಡನ್' (ಪ್ರಥಮ ಮಹಾಯುದ್ಧ ಕಾಲದಲ್ಲಿ ಮಿತ್ರರಾಷ್ಟ್ರಗಳ ಅನೇಕ ಹಡಗುಗಳನ್ನು ಮುಳುಗಿಸಿದ ಜರ್ಮನ್ ಸಬ್‌ಮೆರಿನ್ ಎಮ್‌ಡನ್)— ಎಂಬ ಹೊಗಳಿಕೆಗೆ ಪಾತ್ರರಾದವರು ಅನಂತಶಯನಂ ಅಯ್ಯಂಗಾರ್.

ವಕೀಲ ವೃತ್ತಿಯಲ್ಲಾಗಲಿ ವಿಧಾನಸಭೆಯಲ್ಲಾಗಲಿ ಅಯ್ಯಂಗಾರರು ವಹಿಸುತ್ತಿದ್ದುದು ಪ್ರಧಾನವಾದ ಪಾತ್ರ. ಕಾಂಗ್ರೆಸ್ ಸದಸ್ಯರಾಗಿದ್ದು



... ಚಿರ ಸಂಚಿತೆ : ಅನಂತಶಯನಂ

ಅಸಹಕಾರ ಚಳುವಳಿಯ ಕಾಲದಲ್ಲಿ ತಮ್ಮ ವೃತ್ತಿಯನ್ನು ಸಹ ಸ್ವಲ್ಪ ಸಮಯ ಬಿಟ್ಟುಕೊಟ್ಟಿದ್ದರು. ಹರಿಜನೋದ್ಧಾರ ಕಾರ್ಯದಲ್ಲಿ ಗಾಂಧೀಜಿಯ ಅನುಯಾಯಿಯಾಗಿದ್ದರು. 1940ರಲ್ಲಿ ವೈಯಕ್ತಿಕ ಸತ್ಯಾಗ್ರಹ, 1942ರ 'ಕ್ವಿಟ್ ಇಂಡಿಯಾ' ಚಳುವಳಿಗಳಲ್ಲಿ ಭಾಗವಹಿಸಿ ಸೆರೆಮನೆ ವಾಸ ಅನುಭವಿಸಿದರು.

ಸ್ವತಂತ್ರ ಭಾರತದಲ್ಲಿ ಲೋಕಸಭೆಯ ಉಪಾಧ್ಯಕ್ಷರಾಗಿ, ಅಧ್ಯಕ್ಷರಾಗಿ ಹಾಗೂ ಕೆಲಕಾಲ ಬಿಹಾರಿನ ರಾಜ್ಯಪಾಲರಾಗಿ ಸೇವೆ ಸಲ್ಲಿಸಿದರು.

ತಿರುಪತಿ ಬಳಿಯ ತಿರುಚಾನೂರು, ಅನಂತಶಯನಂ ಅಯ್ಯಂಗಾರ್ ಅವರ ಹುಟ್ಟೂರು; ಜನನ 1891 ಫೆಬ್ರುವರಿ 4ರಂದು. ತಂದೆ ವೆಂಕಟವರದಾಚಾರ್ಯ ಸಂಸ್ಕೃತ ಪಂಡಿತರು. ಪ್ರಾರಂಭದ ವಿದ್ಯಾಭ್ಯಾಸ ತಿರುಪತಿಯಲ್ಲಿ. ಮುಂದೆ ಮದರಾಸಿನ ಪಾಚ್ಚಿಯಪ್ಪ ಕಾಲೇಜಿನಲ್ಲಿ ಬಿ. ಎ., ಮದರಾಸು ಲಾ ಕಾಲೇಜಿನಲ್ಲಿ ನ್ಯಾಯಶಾಸ್ತ್ರ ಪದವಿ ಗಳಿಸಿದರು. ಚಿತ್ತೂರಿನಲ್ಲಿ 1915ರಲ್ಲಿ ವಕೀಲವೃತ್ತಿ ಕೈಗೊಂಡರು. ಸಾರ್ವಜನಿಕ ಚಟುವಟಿಕೆಗಳಲ್ಲಿ ಉತ್ಸಾಹ ತೋರಿ, ಸ್ವಾತಂತ್ರ್ಯ ಚಳುವಳಿಯನ್ನು ಸೇರಿದರು.

1934 ಹಾಗೂ ಮರುವರ್ಷ ಕೇಂದ್ರ ಶಾಸನಸಭೆಗೆ ಅವರು ಆಯ್ಕೆಯಾದರು. ವಾದವೈಖರಿಗೆ ಪ್ರಸಿದ್ಧಿ ಪಡೆದರು. 1947ರಲ್ಲಿ ಕಾಂಗ್ರೆಸ್ಸಿನ ಪಾರ್ಲಿಮೆಂಟರಿ ಪಕ್ಷದ ಕಾರ್ಯದರ್ಶಿಯಾದರು. ಕಾರ್ಮಿಕ ಸಮಸ್ಯೆಗಳಲ್ಲಿ ಅವರ ಆಸಕ್ತಿ ತೀವ್ರವಾಗಿದ್ದಿತು. 1949ರಲ್ಲಿ ಲೋಕಸಭೆಯ ಉಪಾಧ್ಯಕ್ಷರಾಗಿ ಒಮ್ಮತದ ಆಯ್ಕೆ; ಮೊದಲ ಸಾರ್ವತ್ರಿಕ ಚುನಾವಣೆಯಾದ ಮೇಲೂ ಮತ್ತೆ ಅದೇ ಪದವಿ; ಮುಂದೆ ಪುನಃ ಲೋಕಸಭೆಯ ಅಧ್ಯಕ್ಷತೆ—ಇವು ಅವರ ದೀರ್ಘ ಸಂಸತ್ ಅನುಭವಕ್ಕೆ ಸಾಕ್ಷಿ. ಅಂತರರಾಷ್ಟ್ರೀಯ ಸಂಸತ್ ಸಮ್ಮೇಳನಗಳಲ್ಲಿಯೂ ಅವರು ಭಾಗವಹಿಸಿದರು.

ಗಾಂಧೀ ಟೋಪಿ, ಸಾಂಪ್ರದಾಯಿಕ ನಾಮ —ಇವುಗಳಿಂದ ಅನಂತಶಯನಂ ಅಯ್ಯಂಗಾರ್ ಎಲ್ಲಿದ್ದರೂ ಎದ್ದು ಕಾಣುತ್ತಿದ್ದರು. ಸಂಸ್ಕೃತದ ಬಗೆಗೆ ಅವರಿಗೆ ಅಪಾರ ಆಸಕ್ತಿ. ತಿರುಪತಿಯ ಕೇಂದ್ರೀಯ ಸಂಸ್ಕೃತ ವಿದ್ಯಾಪೀಠದ ಆಡಳಿತ ಮಂಡಲಿಯ ಅಧ್ಯಕ್ಷರಾಗಿದ್ದರು. ಬೃಂದಾವನದ ವೈಷ್ಣವ ಮತಧರ್ಮ ಶಾಸ್ತ್ರ ವಿಶ್ವವಿದ್ಯಾನಿಲಯ ಇವರಿಗೆ ಗೌರವ ಪ್ರಶಸ್ತಿ ನೀಡಿ ಪುರಸ್ಕರಿಸಿದೆ.

ಇಂಗ್ಲಿಷಿನಲ್ಲಿ 'ನಮ್ಮ ಸಂಸತ್ತು' ಎಂಬ ಸರಳ ಭಾಷೆಯ ಪುಸ್ತಕವನ್ನು ಇವರು ಬರೆದಿದ್ದಾರೆ. ಭಾರತದ ಹಲವು ಭಾಷೆಗಳಿಗೆ ಈ ಪುಸ್ತಕ ಅನುವಾದಗೊಂಡಿದೆ.

1967 ಅಕ್ಟೋಬರ್‌ನಲ್ಲಿ ಬಿಹಾರ್ ರಾಜ್ಯದ ರಾಜ್ಯಪಾಲ ಹುದ್ದೆಯಿಂದ ನಿವೃತ್ತರಾದ ಬಳಿಕ ಅನಂತಶಯನಂ ಅಯ್ಯಂಗಾರರು ತಿರುಪತಿಯಲ್ಲಿ ನೆಲೆಸಿದರು.

ಅನಸೂಯಾ

[illegible] ಎನಿಸಿಕೊಂಡಿದ್ದಳು. ತ್ರಿಮೂರ್ತಿಗಳು ಆಕೆಯ ಪಾತಿವ್ರತ್ಯ ಪರೀಕ್ಷಿಸಲು ಪ್ರಯತ್ನಿಸಿದರು. ಆಗ ಆಕೆ ತನ್ನ ಪಾತಿವ್ರತ್ಯದ ಮಹಿಮೆಯಿಂದ ಅವರನ್ನು ಮಕ್ಕಳಾಗಿ ಪರಿವರ್ತಿಸಿ ಲಾಲಿಸಿದಳು. ಅವರ ಮೆಚ್ಚುಗೆ ಗಳಿಸಿ, ಅವರ ವರಪ್ರಸಾದದಿಂದ ದತ್ತಾತ್ರೇಯ, ದುರ್ವಾಸ ಮತ್ತು ಚಂದ್ರ ಈ ಮೂವರನ್ನು ಮಕ್ಕಳಾಗಿ ಪಡೆದಳು.

ಇವಳೇ ಅತ್ರಿ ಮುನಿಯ ಪತ್ನಿ ಅನಸೂಯಾ.



ಅತ್ರಿ, ಅನಸೂಯಾ —ಜಪಾನೀ ಚಿತ್ರಣ

ಇವಳು ಕರ್ದಮ ಮುನಿಯ ಮಗಳು. ಸತಿಯ ಮಾರ್ಗವನ್ನು ಅನುಸರಿಸಿ ತಪಸ್ಸನ್ನು ಆಚರಿಸುತ್ತಿದ್ದಳು. ಸರಳಜೀವಿಯೂ ಅನುಕಂಪಶೀಲಳೂ ಆದ ಅನಸೂಯಾ ತನ್ನ ತಪಸ್ಸಿನ ಫಲವನ್ನು ಇತರರ ಅನುಕೂಲಕ್ಕಾಗಿ ವಿನಿಯೋಗಿಸುತ್ತಿದ್ದಳು. ಹತ್ತು ವರ್ಷದಿಂದ ಕ್ಷಾಮದ ಹೊಡೆತಕ್ಕೆ ಸಿಕ್ಕಿ ಜನ ನರಳುತ್ತಿದ್ದುದನ್ನು ಅತ್ರಿ ಈಕೆಗೆ ತಿಳಿಸಿದ: ಅನಸೂಯಾ ಅವರ ಆಹಾರಕ್ಕಾಗಿ ಒಡನೆಯೇ ಹಣ್ಣು, ಗೆಡ್ಡೆ, ಗೆಣಸುಗಳನ್ನು ಸೃಷ್ಟಿಸಿದಳು; ಗಂಗಾನದಿಯ ನೀರು ಅವರ ವಾಸ ಪ್ರದೇಶದಲ್ಲಿ ಹರಿಯುವಂತೆ ಮಾಡಿದಳು —ಎಂಬ ಹೇಳಿಕೆ ಇದೆ.

ಶ್ರೀರಾಮ ತನ್ನ ವನವಾಸ ಕಾಲದಲ್ಲಿ ಅತ್ರಿ ಮುನಿಯ ಆಶ್ರಮಕ್ಕೆ ಬಂದಿದ್ದ; ಅನಸೂಯಾ ಸೀತೆಯನ್ನು ಆದರಿಸಿ ಅವಳಿಗೆ ಪತಿವ್ರತಾಧರ್ಮ ತಿಳಿಸಿ, ಮಂಗಳಕರವಾದ ಉಡುಗೊರೆಗಳನ್ನು ಕೊಟ್ಟು ಕಳುಹಿಸಿದಳು—ಎಂದು ವಾಲ್ಮೀಕಿ ರಾಮಾಯಣದಲ್ಲಿ ಉಲ್ಲೇಖವಿದೆ.

ಅನ್ಸಾರಿ

ನೋಡಿ : ಎಂ. ಎ. ಅನ್ಸಾರಿ

ಅಪ್ಪಯ್ಯ ದೀಕ್ಷಿತ

ನೋಡಿ : ಸಂಪುಟ ೫

ಅಪೊಲೋನಿಯಸ್

"ಟಿಯನದ ಅಪೊಲೋನಿಯಸ್ ತಕ್ಷಶಿಲಾದ ಕೋಟೆಯ ಹೊರಗಡೆ ಅಮೃತಶಿಲೆಯ ಸುಂದರ ದೇವಸ್ಥಾನ ನೋಡಿದ...ಆರಾಧನಾ ಮಂದಿರದ ಸುತ್ತ ತಾಮ್ರದ ಫಲಕಗಳ ಮೇಲಿದ್ದ ಚಿತ್ರಗಳು, ಗ್ರೀಕ್ ಕಲೆಗಾರಿಕೆಗೆ ಯಾವ ರೀತಿಯಲ್ಲೂ ಕೀಳಲ್ಲ...ನಗರ ಪ್ರವೇಶಕ್ಕಾಗಿ ರಾಜನ ಅಪ್ಪಣೆ ಕಾದು, ಅವನು ಆ ದೇವಸ್ಥಾನದಲ್ಲಿ ತಂಗಿದ..."

ಅಪೊಲೋನಿಯಸ್‌ನ ಜೀವನ ಚರಿತ್ರೆಯನ್ನು ಬರೆದವನು, ರೋಮನ್ ಚಕ್ರವರ್ತಿನಿ ಜೂಲಿಯ ಡಾಮ್ನಳ ಆಸ್ಥಾನದಲ್ಲಿದ್ದ ಗ್ರೀಕ್ ವಾಗ್ಮಿ ಫ್ಲಾವಿಯಸ್ ಫಿಲೋಸ್ಟ್ರಟಸ್ (ಸುಮಾರು 170—245). ಪೈಥಾಗೊರಸ್ ಪಂಥದ ಸಂತ ಅಪೊಲೋನಿಯಸ್‌ನ ಜೀವನದ ಬಗೆಗೆ ಅವನದು ಏಕೈಕ ಪರಿಪೂರ್ಣ ಆಧಾರ ಗ್ರಂಥ.

ಫಿಲೋಸ್ಟ್ರಟಸ್‌ನ ಪ್ರಕಾರ, ಅಪೊಲೋನಿಯಸ್ ಜನಿಸಿದ್ದು ಏಷ್ಯಾ ಮೈನರಿನ ಟಯಾನದಲ್ಲಿ, ಒಂದನೆಯ ಶತಮಾನದಲ್ಲಿ. ಮದ್ಯ, ಮಾಂಸಗಳನ್ನು ತ್ಯಜಿಸಿದ ಕಠಿಣ ಬ್ರಹ್ಮಚಾರಿ ಆತನು. ಉದ್ದನೆಯ ಜಡೆ, ಗಡ್ಡ;

[illegible]ತ್ಯಮೇಲೆ ತೊಗಲಿನ ಹೊದಿಕೆ ಬರಿಗಾಲಿನಲ್ಲಿ ಓಡಾಟ. ಇಟಲಿ, ಈಜಿಪ್ಟ್, ಭಾರತ, ಪರ್ಷಿಯಗಳಲ್ಲಿ ಸಂಚಾರ. ಭಾರತಕ್ಕೆ ಬಂದಾಗ ಅವನಿಗೆ ಬ್ಯಾಬಿಲೋನಿಯದ ಶಿಷ್ಯ ಡಮಿಸ್ ಜೊತೆಗಾರನಾದ.

ಅಪೊಲೋನಿಯಸ್ ಮತ್ತು ಡಮಿಸ್ ತಮ್ಮ ಪ್ರಯಾಣ ಮುಂದುವರಿಸಿ, ಇಂಡಸ್ (ಸಿಂಧು) ನದಿ ಬಳಿಗೆ ಬಂದರು. ಮೂವತ್ತು ಆನೆಗಳ [illegible]ಂದು ಹಿಂದು ಬೇಟೆಗಾರರಿಂದ ತಪ್ಪಿಸಿಕೊಳ್ಳಲು ನದಿ ದಾಟುತ್ತಿದ್ದುದನ್ನು [illegible]ಂಡರು...ನದಿ ದಾಟಿ ತಕ್ಷಶಿಲೆಗೆ ಹೋದರು.

ತಕ್ಷಶಿಲೆಯ ರಾಜ ಫ್ರೌಟೀಸ್ ಆದರದಿಂದ ಬರಮಾಡಿಕೊಂಡು, ಮಾತನಾಡಿಸಿದ. ತಕ್ಷಶಿಲೆಯಲ್ಲಿ ಅವರು ಕನಿಷ್ಠ 16 ತಿಂಗಳು ಇದ್ದರು.

ಮುಂದೆ ರಾಜ ಅವರನ್ನು ಬ್ರಾಹ್ಮನೀಸ್‌ರು (ಬ್ರಾಹ್ಮಣರು) ವಾಸಿಸುತ್ತಿದ್ದ ನದೀ ತೀರಪ್ರದೇಶಕ್ಕೆ ಕಳುಹಿಸಿದ... ದಾರಿಯಲ್ಲಿ ಅಲೆಗ್ಸಾಂಡರ್–ಪೋರಸ್‌ರ ಕದನ ಸ್ಥಳ ಸಿಕ್ಕಿತು... ನದಿಯ ಬಳಿ ಅಲೆಗ್ಸಾಂಡರ್ ನಿರ್ಮಿಸಿದ್ದ ಒಂದು ವೇದಿಕೆಯನ್ನೂ 'ಇಲ್ಲಿ ಅಲೆಗ್ಸಾಂಡರ್ [illegible]ಂಗಿದ್ದ' ಎಂದು ಕೆತ್ತಿದ್ದ ಕಂಚಿನ ಕಂಬವನ್ನೂ ಕಂಡರು.

ಗಂಗಾನದಿ ಬಳಿ ಒಂದು ಗುಡ್ಡದ ಮೇಲೆ ಋಷಿಗಳ ನೆಲೆ. ಅವರ ಪರಿಚಯ ಆದದ್ದು ಗ್ರೀಕ್ ಬಲ್ಲ ದುಭಾಷಿಯೊಬ್ಬನ ಮೂಲಕ. ಅಲ್ಲೇ ನಾಲ್ಕು ತಿಂಗಳು ನೆಲೆಸಿ, ನಾನಾ ತತ್ತ್ವ ವಿಚಾರ ಚರ್ಚಿಸಿದರು. ಮರಳಿ ಹೊರಟಾಗ ಋಷಿಗಳು ಇವರನ್ನು ಒಂಟೆಗಳ ಮೇಲೆ ಸಮುದ್ರದ ವರೆಗೆ ಕಳುಹಿಸಿಕೊಟ್ಟರು.

ಅಪೊಲೋನಿಯಸ್ 97 ವರ್ಷಕ್ಕಿಂತ ಹೆಚ್ಚು ಕಾಲ ಬಾಳಿದ ಸಂತ–ವಿದ್ವಾಂಸ. ಅತನ ಬಗೆಗೆ ಡಮಿಸ್ ಬರೆದಿದ್ದ ನೆನಪುಗಳ ಆಧಾರದಿಂದ ಫಿಲೋಸ್ಟ್ರಟಸ್ ಅತನ ಜೀವನ ಚರಿತ್ರೆಯನ್ನು ಬರೆದನೆಂದು ಪ್ರತೀತಿ. ಇದೆಲ್ಲ ಕಟ್ಟುಕತೆ ಎಂಬುದು ಬಹುಮಂದಿ ವಿದ್ವಾಂಸರ ಅಭಿಪ್ರಾಯ. ಕ್ರೈಸ್ತ ಧರ್ಮದ ವಿರುದ್ಧ ಪೈಥಾಗೊರಸ್ ಪಂಥದ ಪುನರುತ್ಥಾನಕ್ಕೆ ಚಕ್ರವರ್ತಿನಿಯಿಂದ ಪ್ರೇರೇಪಿತವಾದ ಬರಹ; ಡಮಿಸನೂ ಕಾಲ್ಪನಿಕ ವ್ಯಕ್ತಿ—ಎಂದು ಅವರ ಟೀಕೆ.

ಅಫ್‌ಘಾನಿಸ್ತಾನ

ಏಷ್ಯದ ಹಲವು ರಸ್ತೆಗಳು ಕೂಡುವ ಸಂಧಿಸ್ಥಾನ, ಭಾರತದ ನೆರೆಯ ಸ್ವತಂತ್ರರಾಷ್ಟ್ರ ಅಫ್‌ಘಾನಿಸ್ತಾನ. ಪಶ್ಚಿಮ ಏಷ್ಯದೊಡನೆ ಭಾರತಕ್ಕೆ ಸಂಪರ್ಕ ಕಲ್ಪಿಸುವ ವ್ಯಾಪಾರ ಮಾರ್ಗ ಇದರ ಮೂಲಕ ಹಾದು ಹೋಗುತ್ತದೆ. ಇದರಿಂದಾಗಿ, ಅಫ್‌ಘಾನಿಸ್ತಾನ ಏಷ್ಯದ ಮಹತ್ವದ ಮಾರ್ಗ ಪ್ರದೇಶವಾಯಿತು. ಈಗಲೂ ಕೂಡ ವಿಮಾನ ಸಾರಿಗೆಗೆ ಇದೊಂದು ಸಂಧಿಸ್ಥಾನ.

ಸಂಸ್ಕೃತಿ, ಜೀವನಕ್ರಮ, ಜನಾಂಗ ಮುಂತಾದ ಹಲವು ವಿಷಯಗಳಲ್ಲಿ ಇಂದಿನ ಪಾಕಿಸ್ತಾನದ ವಾಯುವ್ಯದ ಜನರಿಗೂ ಅಫ್‌ಘಾನಿಸ್ತಾನದವರಿಗೂ ಸಾಮ್ಯವಿದೆ. ಹರಪ್ಪಾ ಸಂಸ್ಕೃತಿಯನ್ನು ಹೋಲುವ ಪ್ರಾಚೀನ ಸಂಸ್ಕೃತಿ ಇಲ್ಲಿದ್ದಿತು. ವೇದಕಾಲದ ಆರ್ಯರು ಇಲ್ಲಿಯೂ ನೆಲೆಸಿದ್ದರು ಎಂದು ಸಾಹಿತ್ಯ ಆಧಾರಗಳ ಮೇಲೆ ತರ್ಕಿಸಲಾಗಿದೆ. ಅಲೆಗ್ಸಾಂಡರನ [illegible] ಳಪಟ್ಟಿತ್ತು. ಇಲ್ಲಿ ಅಶೋಕನ ಎರಡು ಶಾಸನಗಳು ದೊರೆತಿವೆ. ಮುಂದೆ ಕುಶಾನರು ಇಲ್ಲಿ ಆಳಿದರು. ಈ ಕಾಲದಲ್ಲಿ ಭಾರತದಲ್ಲಿದ್ದ ಮಿಶ್ರ ಶಿಲ್ಪ ಶೈಲಿಯ —ಗಾಂಧಾರ ಶೈಲಿಯ— ಹಲವು ಅವಶೇಷಗಳು ಇಲ್ಲಿಯೂ ಕಂಡುಬಂದಿವೆ. ಇವುಗಳಲ್ಲಿ ಕೆಲವು ಸ್ತೂಪಗಳು.

ಪರ್ಷಿಯ, ರಷ್ಯ, ಪಾಕಿಸ್ತಾನ—ಇವು ಅಫ್‌ಘಾನಿಸ್ತಾನದ ನೆರೆಯ [illegible] ದೊಡ್ಡ ಸಾಮ್ರಾಜ್ಯದ ರಚನೆ. ಅದು [illegible] ಹೋರಾಡುತ್ತಿದ್ದ [illegible] ಶತಮಾನದಲ್ಲಿಷ್ಟೇ ಇದು ಸಂಪೂರ್ಣ ಸ್ವತಂತ್ರ ರಾಷ್ಟ್ರವಾಯಿತು. 1973ರಲ್ಲಿ ಕ್ಷಿಪ್ರಕ್ರಾಂತಿ ನಡೆದು ಇಲ್ಲಿನ್ನು ಸಂವಿಧಾನಾತ್ಮಕ ರಾಜಪ್ರಭುತ್ವ ಕೊನೆಗೊಂಡಿತು; ಗಣರಾಜ್ಯದ ಉದಯವಾಯಿತು.

ಅಫ್‌ಘಾನಿಸ್ತಾನದಿಂದ ಭಾರತದ ಮೇಲೆ ದಂಡೆತ್ತಿ ಬಂದವರಲ್ಲಿ ಮುಖ್ಯರಾದವರು ಬಾಬರ್, ನಾದಿರ್ ಷಾ ಮತ್ತು ಅಹಮದ್ ಷಾ ಅಬ್ದಾಲಿ. 1756ರಲ್ಲಿ ಅಹಮದ್ ಷಾ ದೆಹಲಿಯನ್ನು ಆಕ್ರಮಿಸಿದ. 1761ರಲ್ಲಿ ಅವನು ಗೆದ್ದ ಪಾಣಿಪತ್ ಯುದ್ಧ ಪ್ರಮುಖವಾದ ನಿರ್ಣಾಯಕ ಯುದ್ಧಗಳಲ್ಲಿ ಒಂದು. ಮರಾಠರು ಇದರಲ್ಲಿ ಸೋತರು. ಅವನ ಮಹಾ ಸಾಮ್ರಾಜ್ಯ ಭಾರತದ ಬಹುಭಾಗವನ್ನು ಆವರಿಸಿತ್ತು. ಅವನ ಮಗ ತೈಮೂರ್ ಷಾನ ಕಾಲದಲ್ಲಿಯೂ ಭಾರತದ ವಾಯವ್ಯ ಭಾಗವೆಲ್ಲ ಅವರ ಅಧೀನದಲ್ಲೇ ಇದ್ದಿತು.

ಸುಮಾರು ಒಂದೂವರೆ ಶತಮಾನಕಾಲ ಅಫ್‌ಘಾನಿಸ್ತಾನವು ಭಾರತ ರಷ್ಯಗಳ ನಡುವಣ ತಡೆರಾಜ್ಯವಾಗಿದ್ದಿತು. 1839ರಲ್ಲಿ ಭಾರತವನ್ನು ಆಕ್ರಮಿಸಿದ್ದ ಬ್ರಿಟಿಷರ ನೀತಿಯಿಂದಾಗಿ ಅಫ್‌ಘಾನಿಸ್ತಾನ ಯುದ್ಧ ನಡೆಯಿತು. ಹೀಗೆ ಮೂರು ಬಾರಿ ಯುದ್ಧಗಳು ನಡೆದುವು. 1880ರಲ್ಲಿ ಕೆಲವು ಷರತ್ತುಗಳ ಮೇಲೆ ಅಫ್‌ಘಾನಿಸ್ತಾನ ಸ್ವತಂತ್ರವಾಯಿತು. 1919ರಲ್ಲಿ ಅದು ಬ್ರಿಟನಿನ ಮೇಲೆ ಮತ್ತೆ ಯುದ್ಧ ಸಾರಿ ಭಾರತವನ್ನು ಆಕ್ರಮಿಸಲು ಪ್ರಯತ್ನಿಸಿತು. ಆದರೆ ಇದು ಫಲಿಸಲಿಲ್ಲ.

ಅಫ್‌ಘಾನಿಸ್ತಾನದ ವಿಸ್ತೀರ್ಣ ಸುಮಾರು 2,50,000 ಚ. ಮೈಲಿ. ಹಿಮಾಲಯ ಪರ್ವತದ ಪಶ್ಚಿಮ ಭಾಗದ ವಿಸ್ತರಣೆಯಾದ ಹಿಂದೂ ಕುಷ್ ಮುಂತಾದ ಪರ್ವತಗಳು. ಜಗತ್ಪ್ರಸಿದ್ಧವಾದ ಖೈಬರ್, ಬೋಲಾನ್ ಕಣಿವೆಗಳ ಮೂಲಕ ಇಲ್ಲಿಂದ ಪಾಕಿಸ್ತಾನಕ್ಕೆ ಬರುವ ಬಾಗಿಲು. ಇಲ್ಲಿನ ಸರಾಸರಿ ಎತ್ತರ ಸಮುದ್ರಮಟ್ಟದಿಂದ 4,000 ಅಡಿ. ಕೃಷಿ ಪ್ರಧಾನ ಕಸಬು. ಪಶುಸಂಪತ್ತು, ಖನಿಜಸಂಪತ್ತುಗಳು ಬೇಕಾದಷ್ಟಿವೆ. ಪಾರಸೀ, ಪುಷ್ತು ಇಲ್ಲಿನ ಮುಖ್ಯ ಭಾಷೆಗಳು.

ಪ್ರಪಂಚದಲ್ಲೇ ದೊಡ್ಡದಾದ ಬುದ್ಧನ ಪ್ರತಿಮೆ ಅಫ್‌ಘಾನಿಸ್ತಾನದ ಬಾಮಿಯಾನದಲ್ಲಿದೆ.

ಪ್ರಾಚೀನ ಶಿಲ್ಪಕೃತಿಗಳು —ಅಫ್‌ಘಾನಿಸ್ತಾನದಲ್ಲಿ



ಕ್ರಿ. ಪೂ. 3500ರಲ್ಲಿ ಒಂದು ಗರುಡ ಅಫ್‌ಘಾನಿಸ್ತಾನದ ಉತ್ತರದಲ್ಲಿರುವ ಬಾಕ್ ಎಂಬಲ್ಲಿ ಮೊತ್ತಮೊದಲ ಆರ್ಯ ಕಿರೀಟವನ್ನು ಯಮನ ತಲೆಯ ಮೇಲೆ ಇಟ್ಟಿತು ಎಂದು ಒಂದು ದಂತಕಥೆಯಿದೆ.

ನೋಡಿ : ಬಾಮಿಯಾನ
ಅಫ್‌ಘಾನಿಸ್ತಾನ – ಸಂಪುಟ ೧

ಅಫನಾಸಿ ನಿಕಿಟಿನ್



ಮೊದಲ ರಷ್ಯನ್ ಪ್ರವಾಸಿ – ಪ್ರತಿನ

ಬಹಳ ದೊಡ್ಡ ಜನಭರಿತ ನಗರ ; ಕುದುರೆ, ರೇಷ್ಮೆ ಮತ್ತಿತರ ನಾನಾ ಸರಕುಗಳ ವ್ಯಾಪಾರ. ಇಲ್ಲಿ ಸುಲ್ತಾನನ ಅರಮನೆಯಲ್ಲಿ ಕಲ್ಲಿನ ಕೆತ್ತನೆ, ಚಿನ್ನದ ಮುಲಾಮಿನ ಲೇಪನ, ಅಲಂಕಾರ ನೋಡಲು ಬಲು ಚಂದ. 'ಮುಸಲ್ಮಾನ ಇಂಡಿಯಾ'ದಲ್ಲಿ ಇದೇ ಅತಿ ಪ್ರಮುಖ ನಗರ.

—ಇದು ಬಿದರೆಯನ್ನು ಕುರಿತು 15ನೆಯ ಶತಮಾನದಲ್ಲಿ ರಷ್ಯದ ನಿಕಿಟಿನ್ ಮಾಡಿದ ವರ್ಣನೆ.

ವರ್ತಕ ಅಫನಾಸಿ ನಿಕಿಟಿನ್‌ನ ಹುಟ್ಟೂರು ತ್ವೈರ್. ಭಾರತದಲ್ಲಿ ಬಗೆಬಗೆಯ ಸರಕುಗಳು ದೊರಕುತ್ತವೆ ಎಂದು ಮಹಮ್ಮದೀಯ ವರ್ತಕರಿಂದ ತಿಳಿದು, ಇವನು 1468ರಲ್ಲಿ ರಷ್ಯದಿಂದ ಭಾರತಕ್ಕೆ ಪ್ರಯಾಣ ಬೆಳೆಸಿದ : ಹೋರ್‌ಮ್‌ಜ್ ಮೂಲಕ ಸಮುದ್ರ ಮಾರ್ಗವಾಗಿ ಭಾರತದ ಗುಜರಾತ್ ಪ್ರದೇಶ ತಲಪಿದ. ಇಂಥ ಪ್ರಯಾಣ ಕೈಗೊಂಡವರಲ್ಲಿ ಇವನೇ ಮೊದಲಿಗ.

ನಿಕಿಟಿನ್ ಭಾರತದಲ್ಲಿ 'ಕಂಬೈತಾ'(ಕ್ಯಾಂಬೆ) 'ಚಿವಿಲ್' (ಮುಂಬಯಿ ದಕ್ಷಿಣಕ್ಕಿರುವ ಚೌಲ್) ಮಾರ್ಗವಾಗಿ, ಅಲ್ಲಲ್ಲಿ ಕೆಲವು ವಾರ ಕಳೆದು 'ಬೀದರ್ '(ಬಿದರೆ) ಗೆ ಬಂದ. ಅಲ್ಲಿ ನಾಲ್ಕು ತಿಂಗಳು ಉಳಿದಾಗ ಸುತ್ತಲಿನ ನಗರಗಳ ಜನಜೀವನದ ವಿಷಯಗಳನ್ನೂ ಪರಿಚಯ ಮಾಡಿಕೊಂಡ. ' ಕ್ಯಾಲಿಕಟ್ ' (ಕಲ್ಲಿಕೋಟೆ) ಮೊದಲಾದ ಇತರ ವ್ಯಾಪಾರ ಕೇಂದ್ರಗಳನ್ನೂ ಸಿಲೋನನ್ನೂ ಕುರಿತು ಪ್ರಸ್ತಾಪಿಸಿರುವ ಇವನು ಇತರರಿಂದ ಅವನ್ನು ಕೇಳಿ ತಿಳಿದಿರಬಹುದು. ' ಕೋಲ್ಬುರ್ಗಾ' (ಕಲ್ಬುರ್ಗಿ) ಮೂಲಕ ' ಸೂರಾತ್ ' (ಸೂರತ್) ಬಂದರು ತಲಪಿ, ಅಲ್ಲಿಂದ ಸಮುದ್ರಮಾರ್ಗವಾಗಿ ಹೋರ್‌ಮ್‌ಜ್‌ಗೆ ಹಿಂದಿರುಗಿದ. ಬಹುಶಃ ಹುಟ್ಟೂರಿಗೆ ಹಿಂದಿರುಗುವ ಮೊದಲೇ ಅಫನಾಸಿ ನಿಕಿಟಿನ್‌ನು ತೀರಿಕೊಂಡ.

ರಷ್ಯನ್, ತುರ್ಕಿಗಳ ಮಿಶ್ರ ಭಾಷೆಯಲ್ಲಿ ಇರುವ ಇವನ ಪ್ರವಾಸ ಕಥನವನ್ನು ಕೆಲವು ವರ್ತಕರು ರಷ್ಯದ ಅರಸನ ಕಾರ್ಯದರ್ಶಿಗೆ 1475ರಲ್ಲಿ ಒಪ್ಪಿಸಿದರು. ಬಹುಮಟ್ಟಿಗೆ ಯಥಾವತ್ತಾದ ನಿರೂಪಣೆಗಾಗಿ ಈ ಬರೆಹ ಮಹತ್ತ್ವ ಪಡೆದಿದೆ.

ಅಬನೀಂದ್ರನಾಥ ಠಾಕೂರ್

ನೋಡಿ : ಸಂಪುಟ ೫

ಅಬ್ಬಕ್ಕ

ರಾಣಿ ಅಬ್ಬಕ್ಕ—ಕರ್ನಾಟಕದ ಧೀರ ಅರಸಿಯರಲ್ಲಿ ಒಬ್ಬಳು. ಇವಳು ಹದಿನೇಳನೆಯ ಶತಮಾನದವಳು.

ಮಂಗಳೂರಿನ ಬಳಿಯ ಉಳ್ಳಾಲದಲ್ಲಿ ಆಳಿದ ಚಿಕ್ಕ ಮನೆತನದ ರಾಣಿ ಈಕೆ. ಇವಳಿಗಿಂತ ಮೊದಲು ತಾಯಿ ಹಿರಿಯ ಅಬ್ಬಕ್ಕ ರಾಣಿಯಾಗಿದ್ದಳು. ಅವಳು ಒಮ್ಮೆ ಪೋರ್ಚುಗೀಸರನ್ನು ಸೋಲಿಸಿದ್ದಳು : ಆದರೆ ಮುಂದೆ ಅವರೊಡನೆ ಒಪ್ಪಂದ ಮಾಡಿಕೊಳ್ಳಬೇಕಾಯಿತು. ಅಬ್ಬಕ್ಕನ ತಂದೆ ಕಾಮರಾಯ ನೆರೆರಾಜ್ಯದ ಅರಸ. ಹಿರಿಯ ಅಬ್ಬಕ್ಕನ ಅನಂತರ ಕಿರಿಯ ಅಬ್ಬಕ್ಕ ಉಳ್ಳಾಲದ ರಾಣಿಯಾದಳು. ಕಾಮರಾಯನ ಸೋದರಳಿಯ ವೀರನರಸಿಂಹ ಇವಳನ್ನು ವಿವಾಹವಾದ. ಆತ ಬಂಗರಾಜ್ಯದ ದೊರೆಯಾಗಿದ್ದ.

ಪರಕೀಯರಾದ ಪೋರ್ಚುಗೀಸರಿಗೆ ಕಪ್ಪಕೊಡುವುದು ಅಬ್ಬಕ್ಕನಿಗೆ ಹಿಡಿಸಲಿಲ್ಲ. ಅದನ್ನು ನಿಲ್ಲಿಸಿ ಹೊರದೇಶಗಳೊಡನೆ ತಾನೇ ನೇರವಾಗಿ ವ್ಯಾಪಾರ ನಡೆಸಲಾರಂಭಿಸಿದಳು. ಇದರಿಂದ ಹೆಚ್ಚು ಲಾಭವನ್ನೂ ಗಳಿಸಿದಳು. ಅವಳ ವ್ಯಾಪಾರೀ ಹಡಗುಗಳು ನಿರಾತಂಕವಾಗಿ ಅರೇಬಿಯಕ್ಕೆ ಹೋಗುತ್ತಿದ್ದುವು. ಈ ಮಧ್ಯೆ ಅವಳಿಗೂ ಪತಿ ಬಂಗರಾಜನಿಗೂ ವಿರಸ ಉಂಟಾಯಿತು. ಅವರಿಬ್ಬರ ನಡುವೆ ಯುದ್ಧಗಳೂ ನಡೆದುವು. ತನ್ನ ರಾಜ್ಯದ ಸುಭದ್ರತೆಗಾಗಿ ಅಬ್ಬಕ್ಕ ಕೆಳದಿಯ ವೆಂಕಟಪ್ಪನಾಯಕನಿಗೆ ಕಪ್ಪ ಸಲ್ಲಿಸಲಾರಂಭಿಸಿದಳು. ಪೋರ್ಚುಗೀಸರ ವೈರಿ ಕಲ್ಲಿಕೋಟೆಯ ಜಾಮೊರಿನ್ ದೊರೆಯ ಮೈತ್ರಿ ಬೆಳೆಸಿದಳು. ಗಂಡ ಬಂಗರಾಜನಿಗೆ ಪೋರ್ಚುಗೀಸರ ಬೆಂಬಲವಿತ್ತು. ಅಬ್ಬಕ್ಕ ಅದನ್ನು ಲಕ್ಷಿಸದೆ ಅನೇಕ ವರ್ಷ ರಾಜ್ಯಭಾರ ಮಾಡಿದಳು.

ಕೊನೆಗೆ ಅವಳ ಮೇಲೆ ಉಗ್ರ ಕಾರ್ಯಕ್ರಮ ಕೈಗೊಳ್ಳಲು ನಿರ್ಧರಿಸಿದ ಪೋರ್ಚುಗೀಸರು ಉಳ್ಳಾಲದ ಒಂದು ವ್ಯಾಪಾರೀ ಹಡಗನ್ನು ವಶಪಡಿಸಿಕೊಂಡರು. ಇದೇ ಕಾರಣಕ್ಕಾಗಿ ಅಬ್ಬಕ್ಕರಾಣಿ ಮಂಗಳೂರಿನ ಅವರ ಕೋಟೆಗೆ ಮುತ್ತಿಗೆ ಹಾಕಿದಳು. ತಾನು ಕಳೆದುಕೊಂಡ ಒಂದು ಹಡಗಿಗೆ ಬದಲಾಗಿ ಅವರ ನಾಲ್ಕು ಹಡಗುಗಳನ್ನು ವಶಪಡಿಸಿಕೊಂಡಳು. ಪೋರ್ಚುಗೀಸರು ಮತ್ತೆ ತಮ್ಮ ದೇಶದಿಂದ ಸಹಾಯ ತರಿಸಿಕೊಳ್ಳುವ



...ನೊವಲೇ ಕೆಳದಿಯ ವೆಂಕಟಪ್ಪನಾಯಕನ ನೆರವು ಕೋರಿದಳು. ಅವನು ...ಕೆಯ ನೆರವಿಗೆ ಬಂದು ಬಂಗರಾಜನನ್ನು ಸೋಲಿಸಿದ (1618). ಅವನ ...ನ್ಯ, ಅಬ್ಬಕ್ಕನ ದಂಡು ಹಾಗೂ ಜಾಮೊರಿನನ ದಂಡು ಒಟ್ಟಿಗೆ ಸೇರಿ ...ದ್ಧ ನಡೆಸಿ, ಪೋರ್ಚುಗೀಸರನ್ನು ಸೋಲಿಸಿದುವು. ಒಬ್ಬಳು ಭಾರತೀಯ ರಾಣಿ ಈ ರೀತಿ ಪೋರ್ಚುಗೀಸರನ್ನು ಸೋಲಿಸಿದ ಸುದ್ದಿ ...ರೋಪಿನಲ್ಲಿ ಕೋಲಾಹಲ ಉಂಟುಮಾಡಿತು.

ಸ್ವಾತಂತ್ರ್ಯಪ್ರೇಮಿ ಅಬ್ಬಕ್ಕ ಹುಟ್ಟು ಹೋರಾಟಗಾತಿ. ಸೈನಿಕರಿಗೆ ಅವಳಲ್ಲಿ ಅತ್ಯಂತ ಗೌರವ, ಅಭಿಮಾನ. ಅವಳು ದಕ್ಷ ಆಡಳಿತಗಾತಿಯಾಗಿದ್ದಳು. ಪ್ರಜೆಗಳನ್ನು ತಾಯಿಯಂತೆ ಕಾಪಾಡುತ್ತಿದ್ದಳು. ಕೃಷಿ, ...ವ್ಯಾಪಾರ ಮುಂತಾದ ಅಭಿವೃದ್ಧಿ ಕಾರ್ಯಗಳ ಮೇಲ್ವಿಚಾರಣೆಯನ್ನು ತಾನೇ ನಡೆಸುತ್ತಿದ್ದಳು. ಈ ರಾಣಿಯ ಬಗೆಗೆ ಇಟಲಿಯ ಪ್ರವಾಸಿ ...ತ್ರೊದಲ್ಲೆವಲ್ಲೆ ವಿವರವಾಗಿ ಬರೆದಿದ್ದಾನೆ.

ಅಬು ಅಬ್ರಹಾಂ

ಇಂಗ್ಲೆಂಡಿನ ಪತ್ರಿಕೆ 'ಅಬ್ಸರ್ವರ್'ನ ಪ್ರಥಮ ರಾಜಕೀಯ ವ್ಯಂಗ್ಯ ಚಿತ್ರಕಾರರಾಗಿದ್ದವರು ಭಾರತೀಯ ಅಬು ಅಬ್ರಹಾಂ. ಲಂಡನ್ನಿನಲ್ಲಿ ಹದಿನೈದು ವರ್ಷ ಕಾಲ ಇದ್ದು ಇವರು ಭಾರತಕ್ಕೆ ಮರಳಿದರು; 'ಇಂಡಿಯನ್ ಎಕ್ಸ್‌ಪ್ರೆಸ್' ಪತ್ರಿಕೆಯನ್ನು ಸೇರಿದರು : ಭಾರತದ ಪ್ರಮುಖ ವ್ಯಂಗ್ಯ ಚಿತ್ರಕಾರರಲ್ಲಿ ಒಬ್ಬರೆನಿಸಿದರು. ಅಬು ಕೇರಳದವರು. ಜನನ 1924 ಜೂನ್ 11ರಂದು. ಕೇರಳ ವಿಶ್ವವಿದ್ಯಾಲಯದಲ್ಲಿ ಇವರ ವಿದ್ಯಾಭ್ಯಾಸ.



' ಅಬುವಿನ ಪ್ರಪಂಚ... '



ಅಮೆರಿಕನ್ ಸಾಮ್ರಾಜ್ಯವಾದಿಗಳಿಗೆ ಚೀನೀ ಸ್ವಾಗತ – ಅಬು ಕೃತಿ

ಪತ್ರಿಕೋದ್ಯಮವನ್ನು ಆರಂಭಿಸಿದ್ದು 'ಬಾಂಬೆ ಕ್ರಾನಿಕಲ್' ವರದಿಗಾರರಾಗಿ. 1951–53ರ ಅವಧಿಯಲ್ಲಿ ಇವರು 'ಶಂಕರ್ಸ್ ವೀಕ್ಲಿ'ಯಲ್ಲಿದ್ದರು. ಲಂಡನ್ನಿನಲ್ಲಿ ಇವರು 'ಅಬ್ಸರ್ವರ್' ಹಾಗೂ 'ಗಾರ್ಡಿಯನ್' ಪತ್ರಿಕೆಗಳಲ್ಲಿ ಕೆಲಸ ಮಾಡಿದರು. ಇವರು 'ಇಂಡಿಯನ್ ಎಕ್ಸ್‌ಪ್ರೆಸ್' ಪತ್ರಿಕೆಯ ವ್ಯಂಗ್ಯ ಚಿತ್ರಕಾರರಾದದ್ದು 1969ರಲ್ಲಿ. ಇವರ 'ಅಬುವಿನ ಪ್ರಪಂಚ' ವ್ಯಂಗ್ಯ ಚಿತ್ರ ಸರಣಿ ದೇಶದಾದ್ಯಂತ ಮನ್ನಣೆ ಪಡೆದಿದೆ.

ಅಬು ಅಬ್ರಹಾಂ ರಾಜ್ಯಸಭೆಯ ನಾಮಕರಣ ಸದಸ್ಯರು.

ಅಬುಲ್ ಕಲಾಂ ಆಜಾದ್



ರಾಷ್ಟ್ರೀಯತೆ : ಆಜಾದ್

ಹಾಲಿ, ಪ್ರಸಿದ್ಧ ಉರ್ದು ಕವಿ. ಪತ್ರಿಕೆಯೊಂದರಲ್ಲಿ ಬರುತ್ತಿದ್ದ ಪಾಂಡಿತ್ಯಪೂರ್ಣ ಬರೆಹಗಳು ಅವರ ಗಮನ ಸೆಳೆದಿದ್ದುವು; ಬರೆಹಗಳ ಸರಳ ಶೈಲಿ ಅವರಿಗೆ ಮೆಚ್ಚುಗೆಯಾಗಿತ್ತು. ಆ ಬರೆಹಗಳ ಕರ್ತೃ, ಕವಿ ಹಾಲಿಯನ್ನು ಭೇಟಿ ಮಾಡಿದಾಗ ಅವರಿಗೆ ಆಶ್ಚರ್ಯವಾಯಿತು. ಏಕೆಂದರೆ ಅವರು ಮೆಚ್ಚಿದ್ದ ಲೇಖನಗಳನ್ನು ಬರೆದಾತ ಕೇವಲ 16 ವರ್ಷಗಳ ಬಾಲಕನಾಗಿದ್ದ. ಆ ಬಾಲಕನೇ ರಾಜನೀತಿಜ್ಞ, ವಾಗ್ಮಿ, ಅಪ್ರತಿಮ ಲೇಖಕನಾಗಿ ಮುಂದೆ ರೂಪುಗೊಂಡ ಅಬುಲ್ ಕಲಾಂ ಆಜಾದ್.

ಜನನ ಮೆಕ್ಕಾದಲ್ಲಿ, 1888ರಲ್ಲಿ. ತಂದೆ ಖ್ಯಾತ ವಿದ್ವಾಂಸ. ತನ್ನ ಮಗನಿಗೆ 'ಘನ ಅದೃಷ್ಟವಂತನು' ಎಂಬರ್ಥ ಬರುವ ಫಿರೋಜ್ ಬಖ್ತ್ ಎಂದು ಹೆಸರಿಟ್ಟರು : ಕರೆಯುತ್ತಿದ್ದ ಹೆಸರು ಮೊಹಿಯುದ್ದೀನ್ ಅಹಮದ್. ತಂದೆ 1898ರಲ್ಲಿ ಕಲ್ಕತ್ತೆಗೆ ಬಂದು ನೆಲೆಸಿದರು. ಸಾಂಪ್ರದಾಯಿಕ ಇಸ್ಲಾಮಿ ಶಿಕ್ಷಣವನ್ನು ತಂದೆಯೇ ಕೊಟ್ಟರು. ತಂದೆಗೆ ತಿಳಿಯದಂತೆ ಹುಡುಗ ತಾನೇ ಇಂಗ್ಲಿಷ್ ಕಲಿತುಕೊಂಡ. ಮುಂದೆ ಕೈರೋದ ಅಲ್ ಅಜ್‌ಹರ್ ವಿಶ್ವವಿದ್ಯಾನಿಲಯದಲ್ಲಿ ಅರಬೀ ಭಾಷೆಯಲ್ಲಿ ಹೆಚ್ಚಿನ ಪರಿಶ್ರಮ ಪಡೆದ.

ರಾಜಕೀಯ ಕ್ಷೇತ್ರ ಪ್ರವೇಶಿಸಿದಾಗ ಅವರಿಗಿನ್ನೂ 20 ವರ್ಷ. 1912ರಲ್ಲಿ 'ಅಲ್ ಹಿಲಾಲ್' ಉರ್ದು ಸಾಪ್ತಾಹಿಕ ಆರಂಭಿಸಿದರು. 'ಅಬುಲ್ ಕಲಾಂ ಆಜಾದ್' ಕಾವ್ಯನಾಮ ಬಳಸಿ ಮತ, ಸಾಹಿತ್ಯಗಳ ಬಗೆಗೆ ಉರ್ದು ಪತ್ರಿಕೆಗಳಲ್ಲಿ ಬರೆಯುತ್ತಿದ್ದರು. ಬಂಗಾಳ ಸರಕಾರ ಈ ಸಾಪ್ತಾಹಿಕ ನಡೆಯದಂತೆ ಇಡುಗಂಟನ್ನು ಮುಟ್ಟುಗೋಲು ಹಾಕಿತು. ಮತ್ತೆ ಆಜಾದ್ 'ಅಲ್–ಬಲಾಗ್' ಸಾಪ್ತಾಹಿಕವನ್ನು ಹೊರಡಿಸತೊಡಗಿದರು. ಬಂಗಾಳ ಸರಕಾರ ಇದರ ಪ್ರಕಟಣೆಯನ್ನು ನಿಷೇಧಿಸಿತು. ಆಜಾದರನ್ನು ಕಲ್ಕತ್ತೆಯಿಂದ ಗಡೀಪಾರು ಮಾಡಿ 1915ರಿಂದ 1920ರ ವರೆಗೆ ರಾಂಚಿಯಲ್ಲಿ ಇರಬೇಕೆಂಬ ನಿರ್ಬಂಧ ಹಾಕಿತು.

ಆಜಾದರ ವಿಚಾರ [illegible]. ಆಜಾದರಿಗೆ ಅಸಹಕಾರ ಚಳವಳಿಯಲ್ಲಿ ಗಾಂಧೀಜಿಯವರ [illegible] ಲಭಿಸಿತು. ಆಜಾದ್ 1942ರಲ್ಲಿ ಕ್ರಿಪ್ಸ್ [illegible] ಸಂಧಾನದಲ್ಲಿ ಭಾಗವಹಿಸಿದರು. ಎರಡು ಬಾರಿ ಭಾರತ ರಾಷ್ಟ್ರೀಯ ಕಾಂಗ್ರೆಸ್ಸಿನ ಅಧ್ಯಕ್ಷರಾಗಿದ್ದರು.

ದೇಶಕ್ಕೆ ಸ್ವಾತಂತ್ರ್ಯ ದೊರೆಯುವುದಕ್ಕೆ ಮೊದಲು ತಾತ್ಕಾಲಿಕ ಕೇಂದ್ರ [illegible] ಧನಸಹಾಯ ಆಯೋಗ ಸ್ಥಾಪಿಸಲು ಕಾರಣರಾದರು.

[illegible] ಅವರು ಹಿಂದುಗಳೊಡನೆ ಸೇರಿ ದೇಶದ ಏಳ್ಗೆಗಾಗಿ ಶ್ರಮಿಸುವಂತೆ ಮಾಡಲು, ಆಜಾದ್ ಪ್ರಯತ್ನಿಸಿದರು.

"[illegible]" —ಇದು ಗಾಂಧೀಜಿಯ ಪ್ರಶಂಸೆ.

1958ರಲ್ಲಿ ಆಜಾದ್ ತೀರಿಕೊಂಡರು.

'ಇಂಡಿಯಾ ವಿನ್ಸ್ ಫ್ರೀಡಂ' ಅವರ ಕೃತಿಗಳಲ್ಲಿ ಒಂದು.

ಅಬುಲ್ ಫಜಲ

"[illegible]" [illegible] ಇತಿಹಾಸಜ್ಞ, ಕವಿ, ವಿಮರ್ಶಕ ಮತ್ತು ಪ್ರಬಂಧಕಾರ.

[illegible] 1574ರಲ್ಲಿ ಅಕ್ಬರನ ಆಸ್ಥಾನಕ್ಕೆ [illegible] 'ಅಕ್ಬರ್‌ನಾಮಾ', 'ಆಯಿನ್–ಎ–ಅಕ್ಬರಿ' ಈತ ಪಾರಸೀ ಭಾಷೆಯಲ್ಲಿ ರಚಿಸಿದ ಕೃತಿಗಳು.

ಸೂಫಿ ತತ್ತ್ವದಲ್ಲಿ ಇವನಿಗೆ ಆಸಕ್ತಿ. ದೀನ್–ಇ–ಇಲಾಹಿ ಎನ್ನುವ ಹೊಸ ಮತವನ್ನು ಅಕ್ಬರ್ ಸ್ಥಾಪಿಸಲು ಹೊರಟಾಗ ಬೆಂಬಲವಿತ್ತ.

ಮುಂದೆ ದಕ್ಷಿಣದಲ್ಲಿ ಸೈನ್ಯಾಧಿಕಾರಿಯಾಗಿ ಫಜಲ್ ನೇಮಕಗೊಂಡ; ಶ್ರೇಷ್ಠ ಸೈನಿಕ ಮತ್ತು ಆಡಳಿತಾಧಿಕಾರಿ ಎಂದು ಖ್ಯಾತಿ ಪಡೆದ.

[illegible] 1602ರಲ್ಲಿ ಕೊಲ್ಲಿಸಿದ. [illegible]

ನೋಡಿ : ಅಕ್ಬರ್

ಅಕ್ಬರ್–ಸಂಪುಟ ೧

ಅಬ್ದುರ್ ರಜಾಕ್

"[illegible] ನೆಳಗಿದವನು"; "ಭೂಮಿಯ ಮಹಾ ಅಧಿಪತಿ".

[illegible]

[illegible] ಪ್ರವಾಸ ಕಥನ 'ಮತ್ಲ–ಅಸ್–ಸಾ–ದಯನ್' ದಲ್ಲಿ ಈ ಕವನವಿದೆ. "ಜಗತ್ತಿನ [illegible]

ಅಬ್ದುರ್ ರಜಾಕನ ಜನನ 1413ರಲ್ಲಿ, ಈಗಿನ ಅಫ್‌ಘಾನಿಸ್ತಾನದ [illegible] ಹೆರಾಟ್ ನಗರದಲ್ಲಿ. [illegible] ರುಖ್ ಮಿರ್ಜಾ(1377–1447)ನ ಆಸ್ಥಾನಿಕ ಇವನು. 1442ರ ಪ್ರಾರಂಭದಲ್ಲಿ ತನ್ನ ದೊರೆಯ ರಾಯಭಾರಿಯಾಗಿ ಭಾರತಕ್ಕೆ ಹೊರಟ. [illegible] 'ಕಾಲಿಕಟ'ನ್ನು (ಕಲ್ಲಿಕೋಟೆ).

'ಕಾಲಿಕಟ್' ರಾಜ ಅಬ್ದುರ್ ರಜಾಕ್‌ನಲ್ಲಿ ಹೆಚ್ಚಿನ ಆಸಕ್ತಿ ತೋರಿಸ [illegible] 'ಬಿಜನಗರ'(ವಿಜಯನಗರ)ಕ್ಕೆ [illegible] ಸ್ವಾಗತಿಸಲ್ಪಟ್ಟ ಅಬ್ದುರ್ ರಜಾಕ್, [illegible] ತಂದಿದ್ದ ಪತ್ರವನ್ನು ಸಲ್ಲಿಸಿದ. ರಾಜ ಸಂತೋಷ ವ್ಯಕ್ತಪಡಿಸಿ ಅವನನ್ನು ಸನ್ಮಾನಿಸಿದ. ಅಲ್ಲಿಯೂ ಇವನು ಆರು ತಿಂಗಳು ಇದ್ದು 1443ರ ನವೆಂಬರ್‌ನಲ್ಲಿ ಅಲ್ಲಿಂದ ಹೊರಟ. ಸ್ವದೇಶಕ್ಕೆ ಮರಳಿದ ಅನಂತರ ತನ್ನ ಪ್ರವಾಸವನ್ನು ಕುರಿತು ಪುಸ್ತಕ ರಚಿಸಿದ. ನಲವತ್ತೊಂಬತ್ತನೆಯ ವಯಸ್ಸಿನಲ್ಲಿ ಧರ್ಮಗುರುವಾಗಿ [illegible] ಸೇವೆ ಸಲ್ಲಿಸಿ. 1482ರಲ್ಲಿ ನಿಧನನಾದ.

"[illegible] ತೊಡುಗೆಗಳು... ಈ ಮಹಾಸಾಮ್ರಾಜ್ಯದಲ್ಲಿ ಮುನ್ನೂರು ಬಂದರು [illegible] ಹನ್ನೊಂದು ಲಕ್ಷ ಸೈನಿಕ [illegible]"—ಇದು ವಿಜಯನಗರವನ್ನು ಕುರಿತ ರಜಾಕ್‌ನ ಬಣ್ಣನೆ.

ನೋಡಿ : ಇಮ್ಮಡಿ ದೇವರಾಯ ; ವಿಜಯನಗರ

ಕೃಷ್ಣದೇವರಾಯ–ಸಂಪುಟ ೧

ಅಬೆ ದುಬಾಯ್

ಸುಮಾರು 31 ವರ್ಷ ಕಾಲ ಭಾರತದಲ್ಲಿದ್ದು, ವಿಶೇಷವಾಗಿ ಮೈಸೂರಿನಲ್ಲಿ ತನ್ನ [illegible] ಹೆಚ್ಚಿನ ಕಾಲವನ್ನು ಕಳೆದ ಅಬೆ ದುಬಾಯ್ ಕ್ರೈಸ್ತ ಧರ್ಮ ಪ್ರಚಾರಕನಾಗಿದ್ದ. ಫ್ರಾನ್ಸಿನ ಮಹಾಕ್ರಾಂತಿಯ ಕಾಲದಲ್ಲಿ ಕೊಲೆಯಾಗುವುದನ್ನು ತಪ್ಪಿಸಿಕೊಂಡ ದುಬಾಯ್. ಭಾರತದಲ್ಲಿ ಧರ್ಮ ಪ್ರಚಾರ ಕಾರ್ಯ [illegible] ಮೊದಲಿಗೆ ಪಾಂಡಿಚೆರಿಗೆ ಬಂದ. ಶ್ರೀರಂಗಪಟ್ಟಣದ [illegible] ಅಲ್ಲಿಗೆ ಈಸ್ಟ್ ಇಂಡಿಯಾ ಕಂಪೆನಿ ಅವನನ್ನು ಆಹ್ವಾನಿಸಿತು.

ದುಬಾಯ್ ಹುಟ್ಟಿದ್ದು 1765ರಲ್ಲಿ. ತನ್ನ 34ನೆಯ ವಯಸ್ಸಿನಲ್ಲಿ (1799) ಶ್ರೀರಂಗಪಟ್ಟಣಕ್ಕೆ ಬಂದ. ಅನಂತರ ಹಾಸನದ ಬಳಿಯ ಸಾತಹಳ್ಳಿಯಲ್ಲಿ, ಹೊಸದಾಗಿ ಕ್ರೈಸ್ತರಾದ ಬೇಸಾಯಗಾರರ ಒಂದು ನೆಲೆ ಸ್ಥಾಪಿಸಿದ. ಈತ ಮೈಸೂರು ಸಂಸ್ಥಾನದಲ್ಲಿ ಸಿಡುಬು ಮದ್ದು ಹಾಕುವ [illegible] ಹೇಳುತ್ತಾರೆ.

'ಭಾರತದ ಜನರ ನಡವಳಿ, ರೀತಿ, ಪದ್ಧತಿ ಹಾಗೂ ಅವರ ಧಾರ್ಮಿಕ [illegible]' ಎಂದು [illegible] ಶೀರ್ಷಿಕೆಯ [illegible] ದುಬಾಯ್. [illegible] ಪ್ರತಿಯನ್ನು ಮದರಾಸು ಸರಕಾರ 1806ರಲ್ಲಿ ಕೊಂಡುಕೊಂಡಿತು. 1816 [illegible]

[illegible]ರಲ್ಲಿ ಫ್ರಾನ್ಸಿಗೆ ಹಿಂದಿರುಗಿ [illegible]. 'ಭಾರತದಲ್ಲಿ ಕ್ರೈಸ್ತಧರ್ಮ ಪ್ರಸಾರದ ಬಗೆಗೆ ವರದಿಗಳು' ಎಂಬ ಬರಹದಲ್ಲಿ, ಹಿಂದೂಗಳನ್ನು ಮತಾಂತರಗೊಳಿಸುವುದು ಅಸಾಧ್ಯ—ಎಂದ, ದುಬಾಯ್.

ಅಭಿನವಗುಪ್ತ

ಮಧ್ಯಯುಗದ ಭಾರತೀಯ ತತ್ತ್ವಜ್ಞಾನಿಗಳಲ್ಲಿ ಪ್ರಮುಖನಾದವನು ಅಭಿನವಗುಪ್ತ. [illegible] ಅಭಿನವಗುಪ್ತ ವ್ಯಾಖ್ಯಾನಕಾರನಾಗಿ ಅಲ್ಲದೆ ಸ್ವತಂತ್ರ ಕೃತಿಗಳಿಂದಲೂ ಕೀರ್ತಿ ಗಳಿಸಿದ್ದಾನೆ.

ತಂದೆ ಚುಖುಲ ಅಥವಾ ನರಸಿಂಹಗುಪ್ತ, ತಾಯಿ ವಿಮಲ. ಇವನು ಸುಮಾರು 950ರಲ್ಲಿ, ಕಾಶ್ಮೀರದಲ್ಲಿ [illegible]. ಬಾಲ್ಯದಿಂದಲೂ ಅಭಿನವಗುಪ್ತ [illegible]. ತನಗೆ ಬೇಕಾದ ಶಾಸ್ತ್ರಗಳನ್ನು ಕಲಿಯಲು [illegible] ಹೋಗಿ ಆಯಾ ಶಾಸ್ತ್ರಗಳ ಘನ ವಿದ್ವಾಂಸರಲ್ಲಿ ಹೋಗಿ ಅಭ್ಯಸಿಸಿದ.

ಅಭಿನವಗುಪ್ತ ಗ್ರಂಥ ರಚನೆ ಮಾಡಿದ್ದು 980ರಿಂದ 1020ರ ಅವಧಿಯಲ್ಲಿ. ತತ್ತ್ವಶಾಸ್ತ್ರ, ಶೈವ ಸಿದ್ಧಾಂತ, ನಾಟ್ಯ, ಕಾವ್ಯಮೀಮಾಂಸೆ, ಸಂಗೀತ, ಸೌಂದರ್ಯಮೀಮಾಂಸೆಗಳನ್ನು ಕುರಿತು ವಿಪುಲವಾಗಿ ಬರೆದ. ಜೀವನ ಪರ್ಯಂತ ಸನ್ಯಾಸಿಯಾಗಿ ಉಳಿದ. ಈತನಿಗೆ ಕೀರ್ತಿ ತಂದುಕೊಟ್ಟ ಗ್ರಂಥ 'ಈಶ್ವರ ಪ್ರತ್ಯಭಿಜ್ಞಾ ವಿಮರ್ಶಿನೀ'. 'ಮಾಲಿನೀ ವಿಜಯ ವಾರ್ತಿಕ,' 'ತಂತ್ರಾಲೋಕ', 'ಶಿವದೃಷ್ಟ್ಯಾಲೋಚನ', 'ಪರಮಾರ್ಥಸಾರ', 'ಅಭಿನವಭಾರತೀ', 'ಧ್ವನ್ಯಾಲೋಕಲೋಚನ' (ಆನಂದವರ್ಧನನ 'ಧ್ವನ್ಯಾಲೋಕ'ದ ಭಾಷ್ಯ), 'ಕ್ರಮಸ್ತೋತ್ರ', 'ಭೈರವ ಸ್ತೋತ್ರ', 'ಅನುಭವ ನಿವೇದನ' ಮೊದಲಾದವು ಈತನ ಪ್ರಸಿದ್ಧ ಗ್ರಂಥಗಳು.

ಅಭಿನವಗುಪ್ತ ಭೈರವಸ್ತೋತ್ರ ಹೇಳುತ್ತ ಶಿಷ್ಯಗಣದ ಸಮೇತನಾಗಿ ಗುಹೆಯನ್ನು ಸೇರಿ ಅಲ್ಲಿಂದ ಕೈಲಾಸ ಪರ್ವತವನ್ನೇರಿದನೆಂದು ಪ್ರತೀತಿ.

ಅಭಿಮನ್ಯು

ಮಹಾಭಾರತ ಯುದ್ಧದಲ್ಲಿ ದ್ರೋಣಾಚಾರ್ಯ ಪದ್ಮವ್ಯೂಹ ರಚಿಸಿದ್ದ. ಆ ವ್ಯೂಹವನ್ನು ಹೊಕ್ಕು ಭೇದಿಸುವ ಬಗೆಗೆ ಗೊತ್ತಿದ್ದುದು ಕೃಷ್ಣ, ಅರ್ಜುನ, ಪ್ರದ್ಯುಮ್ನ ಮತ್ತು ಅಭಿಮನ್ಯು—ಇವರಿಗೆ ಮಾತ್ರ. ಕೃಷ್ಣಾರ್ಜುನರು ಯುದ್ಧರಂಗದಲ್ಲಿರಲಿಲ್ಲ. ಅಭಿಮನ್ಯು ಧರ್ಮರಾಯನ ಒಪ್ಪಿಗೆ ಪಡೆದು ವ್ಯೂಹವನ್ನು ಹೊಕ್ಕು ಹೋರಾಡಿ ಮೃತನಾದ.



ಅರ್ಜುನ ಸುಭದ್ರೆಯರ ಮಗ ಅಭಿಮನ್ಯು. [illegible]. ತಾಯಿಯ ಗರ್ಭದಲ್ಲಿದ್ದಾಗ ಒಮ್ಮೆ ಕೃಷ್ಣ ಸುಭದ್ರೆಗೆ ವ್ಯೂಹಗಳ ವಿಚಾರವನ್ನು ಹೇಳಿದ. ಗರ್ಭದಲ್ಲಿದ್ದ ಶಿಶು ಕೇಳಿಸಿಕೊಂಡಿತ್ತು. ವ್ಯೂಹವನ್ನು ಭೇದಿಸುತ್ತ ಹೊರಟ ಅಭಿಮನ್ಯು ಏಕಾಕಿಯಾಗಿ ಕೌರವ ವೀರರನ್ನು ಎದುರಿಸಬೇಕಾಯಿತು. ಆ ಹೋರಾಟದಲ್ಲಿ ನೂರಾರು ಜನರನ್ನು [illegible]. ದ್ರೋಣ, ಕೃಪ, ಅಶ್ವತ್ಥಾಮ ಮೊದಲಾದವರು [illegible] ಮಾಡಿದ. ಕೊನೆಗೆ ದ್ರೋಣಾಚಾರ್ಯರ ಸಲಹೆಯಂತೆ ಕರ್ಣ [illegible] ಅಭಿಮನ್ಯುವಿನ ಸಾರಥಿಯನ್ನು ಕೊಂದು, ಬಿಲ್ಲನ್ನು ಮುರಿದ. ಈ ಕಡೆ ದ್ರೋಣಾಚಾರ್ಯ ಈತನ ರಥ, ಕುದುರೆಗಳನ್ನು ನಾಶಮಾಡಿದ. [illegible] ಅಭಿಮನ್ಯು [illegible]. ಕೈ ಕತ್ತಿಯಿಂದ [illegible] ಹೋರಾಡಿದ.

ಉತ್ತರೆ ಅಭಿಮನ್ಯುವಿನ ಪತ್ನಿ. ಪರೀಕ್ಷಿತ್ ಇವರ ಮಗ.

ಅಮರಕಂಟಕ

ಕಾಳಿದಾಸನ ಅಮರ ಕಾವ್ಯ 'ಮೇಘದೂತ'ದಲ್ಲಿ ಆಮ್ರಕೂಟ ಎಂಬ ಪರ್ವತದ ಹೆಸರು ಬರುತ್ತದೆ. ಯಕ್ಷ ಪ್ರಿಯೆಗೆ ಸಂದೇಶವನ್ನು ಒಯ್ಯುವ [illegible] ಮಾರ್ಗದರ್ಶನ ಮಾಡುವ [illegible] ಯಕ್ಷ 'ಚಿತ್ರಕೂಟದಲ್ಲಿ ಸ್ವಲ್ಪ ವಿಶ್ರಮಿಸಿ, ಆಮ್ರಕೂಟಕ್ಕೆ ಹೋಗು'—ಎನ್ನುತ್ತಾನೆ.

ಈ ಆಮ್ರಕೂಟವೇ ವಿಂಧ್ಯಪರ್ವತ ಶ್ರೇಣಿಯಲ್ಲಿರುವ ಅಮರಕಂಟಕ ಎಂಬ ಹೇಳಿಕೆ ಇದೆ. ಇದೊಂದು ಪವಿತ್ರ ಕ್ಷೇತ್ರ.

ಶಿವನ ಪರಮ ಭಕ್ತ ಬಾಣ ಆಕಾಶದಲ್ಲಿ ಸುತ್ತುತ್ತಿರುವ ಮೂರು ಪಟ್ಟಣಗಳನ್ನು ನಿರ್ಮಿಸಿದ. ಇವುಗಳಿಂದ [illegible] ತೊಂದರೆಯಾಗುತ್ತದೆಂದು ದೇವತೆಗಳು ಶಿವನಲ್ಲಿ ಬಿನ್ನವಿಸಿಕೊಂಡರು. ಶಿವ ಈ ಪುರಗಳ ಮೇಲೆ ಶರ ಪ್ರಯೋಗ ಮಾಡಿದಾಗ ಎರಡು ನಗರಗಳಿಗೆ ಬೆಂಕಿ ಹತ್ತಿತು. ಆಗ ಬಾಣ ಶಿವನನ್ನು ಪ್ರಾರ್ಥಿಸಿ ತಾನು ಅರ್ಚಿಸುತ್ತಿದ್ದ ಶಿವಲಿಂಗ ನಾಶವಾಗಬಾರದೆಂದು ಬೇಡಿದ. ಹೀಗೆ ಒಂದು ಪುರ ನಾಶವಾಗುವುದು ತಪ್ಪಿತು. ಬೆಂಕಿ ಹೊತ್ತಿಕೊಂಡಿದ್ದ ಎರಡು ಪುರಗಳಲ್ಲಿ ಒಂದು ಶ್ರೀಶೈಲದ ಮೇಲೂ ಇನ್ನೊಂದು ಅಮರಕಂಟಕದ ಮೇಲೂ ಬಿದ್ದವು.—ಇದು ಅಮರಕಂಟಕವನ್ನು ಕುರಿತ ದಂತ ಕಥೆ.

ಅಮರಕಂಟಕ ಮಧ್ಯಪ್ರದೇಶದ ವಿಲಾಸಪುರ ಜಿಲ್ಲೆಯಲ್ಲಿದೆ. ಇದು ಸಮುದ್ರ ಮಟ್ಟದಿಂದ 3,493 ಅಡಿ ಎತ್ತರದಲ್ಲಿದೆ.

ಅಮರಕಂಟಕವನ್ನು ಮೇಖಲ ಎಂದೂ ಕರೆಯುತ್ತಾರೆ. ಇಲ್ಲಿಯ ಪರ್ವತ ಭಾಗದಲ್ಲಿ ನರ್ಮದಾ ನದಿಯ ಉಗಮ. (ಆದ್ದರಿಂದ ಈ ನದಿಗೆ ಮೇಖಲ ಕನ್ಯಕಾ ಎಂಬ ಹೆಸರೂ ಇದೆ.)

ಪರ್ವತದ ಮೇಲೆ ಅಮರನಾಥ, ಮಹಾದೇವ, ನರ್ಮದಾ ದೇವಿ ದೇವಾಲಯಗಳಲ್ಲದೆ ಬೇರೆ ಶೈವ ಹಾಗೂ ವೈಷ್ಣವ ದೇವಾಲಯಗಳೂ ಇವೆ. ಇಲ್ಲಿರುವ ಕೇಶವನಾರಾಯಣ ಮತ್ತು ಮಚ್ಛೇಂದ್ರನಾಥ ದೇವಾಲಯಗಳು ಸುಮಾರು 11ನೆಯ ಶತಮಾನದವು. ಇವುಗಳ ವಾಸ್ತುಶಿಲ್ಪ ನಾಗರಶೈಲಿಗೆ ಸೇರಿದ್ದು.

ಅಮರಕೋಶ

ನೋಡಿ : ಸಂಪುಟ [illegible]

ಮೊಂಡುಗೈ ಹೋರಾಟ :
ಅಭಿಮನ್ಯು



ಅಮರನಾಥದ ಹಿಮನಿರ್ಮಿತ ಲಿಂಗ

ಅಮರನಾಥ

ಸತತ ಸುರಿಯುವ ಹಿಮ. ಶುಭ್ರ ಹಿಮ ರಾಶಿಯ ನಡುವೆ ನಿಸರ್ಗ ನಿರ್ಮಿತ ಗುಹೆ. ಗುಹೆಯ ಬಂಡೆಯಿಂದ ಜಿನುಗಿದ ನೀರು ಒಳಗೆ ಬಿದ್ದು ಅಲ್ಲೇ ಹಿಮವಾಗಿ, ಲಿಂಗದ ಆಕಾರ ತಾಳುತ್ತದೆ.

ಶಿವ ತನ್ನ ತಲೆಯಲ್ಲಿದ್ದ ಚಂದ್ರನನ್ನು ಹಿಚುಕಿ ಅಮೃತ ತೆಗೆದು ದೇವತೆಗಳಿಗೆ ಕೊಟ್ಟು ಅವರನ್ನು ಅಮರರನ್ನಾಗಿ ಮಾಡಿದ್ದು ಈ ಸ್ಥಳದಲ್ಲಿ : ಅಲ್ಲೇ ನೆಲೆಸಬೇಕೆಂದು ದೇವತೆಗಳು ಶಿವನನ್ನು ಬೇಡಿದರು. ಹಿಮ ನಿರ್ಮಿತ ಲಿಂಗಕ್ಕೆ ಅಮರನಾಥ ಎಂದು ಹೆಸರಾಯಿತು —ಇದು ಸ್ಥಳ ಮಹಾತ್ಮೆಯಲ್ಲಿ ಬರುವ ಕಥೆ.

ಅಮರನಾಥ ಗುಹೆ ಕಾಶ್ಮೀರದ ರಾಜಧಾನಿ ಶ್ರೀನಗರದಿಂದ 86 ಮೈಲು ದೂರದಲ್ಲಿ. ಸಮುದ್ರ ಮಟ್ಟದಿಂದ 12.929 ಅಡಿ ಎತ್ತರದಲ್ಲಿ ಇದೆ. ಸುತ್ತಲೂ ಇದಕ್ಕಿಂತ ಎತ್ತರವಾದ ಪರ್ವತಗಳಿವೆ. ಅಮರನಾಥ ಗುಹೆ 50 ಅಡಿ ಅಗಲ. 55 ಅಡಿ ಉದ್ದ ಹಾಗೂ 45 ಅಡಿ ಎತ್ತರ. ಗುಹೆಯ ಉತ್ತರದ ಕಡೆಯ ಬಂಡೆಯಲ್ಲಿರುವ ರಂಧ್ರದಿಂದ ಜಿನುಗುವ ನೀರು ಶೈತ್ಯಾಧಿಕ್ಯದಿಂದ ಹೆಪ್ಪುಗಟ್ಟುತ್ತದೆ. ಪ್ರತಿ ತಿಂಗಳ ಶುಕ್ಲಪಕ್ಷ ಪಾಡ್ಯಮಿಯಿಂದ ದಿನ ದಿನಕ್ಕೆ ಬೆಳೆದು ಪೂರ್ಣಿಮೆ ದಿವಸದ ಹೊತ್ತಿಗೆ 2 ಗಜಕ್ಕಿಂತ ಎತ್ತರದ ಲಿಂಗ ರೂಪುಗೊಳ್ಳುತ್ತದೆ. ಕೃಷ್ಣ ಪಕ್ಷದಲ್ಲಿ ಅದು ಕ್ಷೀಣವಾಗುತ್ತ ಬಂದು ಅಮಾವಾಸ್ಯೆ ದಿನ ಏನೂ ಇಲ್ಲವಾಗುತ್ತದೆ. ಶಿವಲಿಂಗದ ಎಡ ಪಕ್ಕದಲ್ಲಿ ಹೆಪ್ಪುಗಟ್ಟುವ ಇನ್ನೊಂದು ಸಣ್ಣ ಲಿಂಗವನ್ನು ಗಣೇಶ ಲಿಂಗ ಎನ್ನುತ್ತಾರೆ. ಬಲಪಕ್ಕದಲ್ಲಿ ಹಿಮದ ಪಾರ್ವತೀಲಿಂಗ, ಭೈರವಲಿಂಗಗಳು ರೂಪು ತಳೆಯುತ್ತವೆ.

ಗುಹೆಯ ಒಳಗೆ ಎಡಪಕ್ಕದಲ್ಲೊಂದು ಚಿಕ್ಕ ಗುಹೆ ಇದೆ. ಇಲ್ಲಿರುವ ಸೀಮೆಸುಣ್ಣದಂಥ ವಸ್ತುವನ್ನು ಅಮರನಾಥನ ವಿಭೂತಿ ಎಂದು ಭಕ್ತರಿಗೆ ಕೊಡುತ್ತಾರೆ.

ಶ್ರಾವಣ ಮಾಸದ ಪೂರ್ಣಿಮೆಯಂದು ಶಿವ ಇಲ್ಲಿ ಮೊದಲು ಕಾಣಿಸಿಕೊಂಡ ಎಂಬ ನಂಬಿಕೆಯಿದೆ. ಯಾತ್ರಿಕರು ಮೊದಲೇ ಶ್ರೀನಗರದಲ್ಲಿ ಸೇರಿ ಆ ದಿನದ ಹೊತ್ತಿಗೆ ಅಮರನಾಥವನ್ನು ತಲುಪಿ ಹಿಮಲಿಂಗಕ್ಕೆ ಪೂಜೆ ಸಲ್ಲಿಸುತ್ತಾರೆ. ಶ್ರಾವಣ ಮಾಸವನ್ನು ಬಿಟ್ಟು ಇತರ ಕಾಲದಲ್ಲಿ ಈ ಪ್ರದೇಶ ಹಿಮದಿಂದ ಮುಚ್ಚಿ ಹೋಗುವುದರಿಂದ ಇಲ್ಲಿಗೆ ಹೋಗುವುದು ಸಾಧ್ಯವಿಲ್ಲ.

ಅಮರನಾಥಯಾತ್ರೆಗೆ ಭಾರತದ ಎಲ್ಲ ಭಾಗಗಳಿಂದಲೂ ಭಕ್ತರು ಬರುತ್ತಾರೆ.


ಅಮರಾವತಿ

ಮದವೇರಿದ ಒಂದು ಆನೆ ಭಗವಾನ್ ಬುದ್ಧದೇವನ ಕಡೆಗೆ ನುಗ್ಗುತ್ತಿದೆ. ಸುತ್ತಲ ಜನರು ಭೀತರಾಗಿ ನೋಡುತ್ತಿದ್ದಾರೆ. ಆದರೆ ಬುದ್ಧ ದೇವ ಇಡೀ ಸನ್ನಿವೇಶವನ್ನು ಶಾಂತಗೊಳಿಸುವಷ್ಟು ಸಮಾಧಾನ ಚಿತ್ತನಾಗಿ ನಿಂತಿದ್ದಾನೆ.

ಬುದ್ಧನ ಜೀವನವನ್ನು ಕುರಿತು ಅಮರಾವತಿ ಸ್ತೂಪದಲ್ಲಿರುವ ಅನೇಕ ಶಿಲ್ಪ ಕೃತಿಗಳಲ್ಲಿ ಇದೂ ಒಂದು.

ಯಾವುದೇ ಪರಕೀಯ ಪ್ರಭಾವವಿಲ್ಲದ ಶುದ್ಧ ಭಾರತೀಯ ಶೈಲಿಯ ಕಲೆ ಅಮರಾವತಿಯ ಶಿಲ್ಪಗಳಲ್ಲಿ ಕಂಡುಬರುತ್ತದೆ. ಈ ಕೃತಿಗಳಲ್ಲಿ ನೈಜತೆಯಿದೆ. ಅದಕ್ಕಿಂತ ಹೆಚ್ಚಾಗಿ ಶಿಲ್ಪರೂಪ ಪಡೆದ ವಸ್ತುವಿನ ಅಂತಃಸತ್ವ ಎದ್ದು ಕಾಣುತ್ತದೆ. ಭಾರತೀಯ ಶಿಲ್ಪಕಲೆಯಲ್ಲಿ ಅಮರಾವತಿ ಶೈಲಿ ಮಹತ್ತರ ಪ್ರಭಾವ ಬೀರಿದೆ.

ಅಮರಾವತಿ ಆಂಧ್ರ ಪ್ರದೇಶದ ಗುಂಟೂರು ಜಿಲ್ಲೆಯಲ್ಲಿ ಕೃಷ್ಣಾ ನದಿಯ ದಕ್ಷಿಣ ದಂಡೆಯ ಮೇಲಿದೆ. ಮೊದಲು ಇದಕ್ಕೆ ಧಾನ್ಯಕಟಕ ಎಂಬ ಹೆಸರು ಇದ್ದಿತು. ಇದು ಶಾತವಾಹನರ ರಾಜಧಾನಿಯಾಗಿತ್ತು. ಅಮರಾವತಿಯ ಖ್ಯಾತಿಗೆ ಕಾರಣ. ಕ್ರಿ. ಶ. ಒಂದನೆಯ ಶತಮಾನದಿಂದ 3ನೆಯ ಶತಮಾನದ ಅವಧಿಯಲ್ಲಿ ರೂಪುಗೊಂಡ ಮಹಾಸ್ತೂಪ ಮತ್ತು ಅದರ ಸುತ್ತಮುತ್ತ ರಚಿತವಾದ ವಿಹಾರಗಳು. ಈಗ ಇವೆಲ್ಲ ನಾಶವಾಗಿವೆ. ಮಹಾಯಾನ ಬೌದ್ಧಧರ್ಮಕ್ಕೆ ಉತ್ತೇಜನ ದೊರೆತ ಫಲವಾಗಿ ಇಲ್ಲಿನ ಚೈತ್ಯಗಳು, ವಿಹಾರ, ಸ್ತೂಪಗಳು ಕಟ್ಟಲ್ಪಟ್ಟುವು. ಅಮರಾವತಿಯ ಸ್ತೂಪವನ್ನು ಸುಂದರ ಶಿಲಾ ಫಲಕಗಳಿಂದ ಅಲಂಕರಿಸಲಾಗಿತ್ತು.



ಸ್ತೂಪವನ್ನು ಚಿತ್ರಿಸುವ ಅಮರಾವತಿ ಫಲಕ

ಅಮರಾವತಿ ಶಿಲ್ಪಶೈಲಿಯ ಪ್ರಭಾವ ಭಾರತದಿಂದಾಚೆಗೆ ಆಗ್ನೇಯ ಏಷ್ಯದಲ್ಲಿ ಕೂಡ ಕಂಡುಬಂದಿದೆ.

ಕರ್ನಲ್ ಮೆಕೆನ್ಜಿ 1798ರಲ್ಲಿ ಅಮರಾವತಿ ಭಗ್ನಸ್ತೂಪವನ್ನು ಪತ್ತೆ ಹಚ್ಚಿದ. ಅನಂತರ ಅದರ ಶಿಲ್ಪಕಲಾಕೃತಿಗಳ ಪ್ರಾಮುಖ್ಯ ಅರಿವಾಯಿತು. ಈ ಶಿಲ್ಪಕೃತಿಗಳು ನಾಶವಾಗದಂತೆ ಉಳಿಸುವ ಪ್ರಯತ್ನಗಳು ನಡೆದುವು; ಈಗ ಇದರ ಕೆಲವು ಶಿಲ್ಪಕೃತಿಗಳು ಮದರಾಸಿನ ವಸ್ತು ಸಂಗ್ರಹಾಲಯದಲ್ಲೂ ಲಂಡನಿನಲ್ಲಿರುವ ಬ್ರಿಟಿಷ್ ವಸ್ತುಸಂಗ್ರಹಾಲಯದಲ್ಲೂ ಇವೆ.

ಅಮರಾವತಿ ಶಿಲ್ಪ ಬೆಳಕಿಗೆ ಬಂದಂದಿನಿಂದ ಭಾರತೀಯ ವಾಸ್ತುಶಿಲ್ಪ ಚರಿತ್ರೆ ಹೆಚ್ಚು ಸ್ಫುಟವಾಗಿದೆ.

ಅಮರುಕ

'ಗಂಡ ಹೆಂಡಿರು ರಾತ್ರಿ ಆಡಿದ ಮಾತನಾಲಿಸಿ ಮನೆಯ ಗಿಣಿ ಬೆಳಗಿನೊಳು ಹಿರಿಯರ ಮುಂದೆ ಹೇಳಲು ದೊಡ್ಡದನಿಗೈದು ನಾಚಿ ದಾಳಿಂಬೆಯನು ತಿನಿಸುವ ನೆವದೊಳಾ ವಧು ಕಿವಿಯ ಓಲೆಯ ಕೆಂಪು ಹರಳನು ಕೊಕ್ಕಿನೊಳಗಿಟ್ಟದರ ಬಾಯನು ಮುಚ್ಚಿಸಿದಳೆಂದು'

—ಅಮರುಕನ 'ಅಮರು ಶತಕ' ಎಂಬ ಸಂಸ್ಕೃತ ಕಾವ್ಯದ ಒಂದು ಶ್ಲೋಕದ ಅನುವಾದ ಇದು(ಉಲ್ಲೇಖ : ಎಸ್. ವಿ. ಪರಮೇಶ್ವರ ಭಟ್ಟರ ಅನುವಾದದಿಂದ).

ಕವಿಶ್ರೇಷ್ಠ ಅಮರುಕನ ಕಾಲ, ಜೀವನಗಳ ಬಗೆಗೆ ಹೆಚ್ಚು ತಿಳಿದು ಬಂದಿಲ್ಲ. ಅಮರ, ಅಮರು, ಅಮರಕ, ಅಮರುಕ, ಅಮರೂಕ, ಅಮ್ರುಕ ಎಂದು ಅವನ ಹೆಸರಿನಲ್ಲಿ ವ್ಯತ್ಯಾಸಗಳನ್ನು ಗ್ರಂಥದ ವ್ಯಾಖ್ಯಾನಕಾರರು ತೋರಿಸಿದ್ದಾರೆ. ಅಮರುಕನ ಕಾಲ ಸುಮಾರು 650.

ಅಮರುಕ ವಿಕ್ರಮಾದಿತ್ಯನ ಆಸ್ಥಾನದಲ್ಲಿದ್ದವನು : ಆತ ಕಾಳಿದಾಸನ ಸಮಕಾಲೀನ —ಎಂದೂ ಹೇಳಿಕೆಗಳಿವೆ.

'ಅಮರು ಶತಕ' ಅಸಾಧಾರಣ ಪ್ರಣಯಕಾವ್ಯ. ಇದರಲ್ಲಿರುವ ಚಿಕ್ಕ ಚಿಕ್ಕ ಶ್ಲೋಕಗಳಲ್ಲಿ ಪ್ರೇಮದ ವಿವಿಧ ಮುಖಗಳು ಆಕರ್ಷಕವಾಗಿ ಬಣ್ಣಿಸಲ್ಪಟ್ಟಿವೆ. ಒಂದೊಂದು ಪದ್ಯವೂ ಪ್ರೇಮದ ಒಂದು ಮುಖದ ಪೂರ್ಣ ಚಿತ್ರ ಕೊಡುತ್ತದೆ. ಶೈಲಿ ರಮ್ಯ.

'ಅಮರು ಶತಕ'ದ ನಾಲ್ಕು ಪಾಠಾಂತರಗಳು ಸಿಕ್ಕಿವೆ. ಪ್ರತಿ ಪಾಠದಲ್ಲೂ ಸುಮಾರು 100 ಶ್ಲೋಕಗಳಿವೆ. 51 ಶ್ಲೋಕಗಳು ಎಲ್ಲ ಪಾಠಗಳಲ್ಲೂ ಬರುತ್ತವೆ. ಸುಂದರ ಶೈಲಿ, ಭಾವ ಸಂಪತ್ತು, ಸ್ವಾರಸ್ಯಮಯ ಪ್ರಸಂಗಗಳಿಂದ ಈ ಕಾವ್ಯ ಮೈದುಂಬಿಕೊಂಡಿದೆ. ರಸಿಕರಿಗೆ ಪ್ರಿಯವಾಗಿದೆ.

ಅಮೀರ್ ಖುಸರೋ

ಮಳೆಗಾಲದ ಪ್ರಾರಂಭ. ಹಕ್ಕಿ ಪಕ್ಕಿಗಳಲ್ಲಿ ನಲಿವು. ಅಶ್ವತ್ಥ ಮರಗಳ ಕೊಂಬೆಗಳಿಗೆ ಜೋಕಾಲಿ ಕಟ್ಟಿ, ಹುಡುಗ ಹುಡುಗಿಯರ ಆಟದ ಸಂಭ್ರಮ. ಆಗ ಹಾಡುವುದು ಅಮೀರ್ ಖುಸರೋ ಬರೆದ ಗೀತೆಗಳ ಸಾಲುಗಳನ್ನು. ಹಿಂದಿ ಭಾಷಾ ಪ್ರದೇಶದಲ್ಲಿ ಈಗಲೂ ಅಮೀರ್ ಖುಸರೋ ರಚಿಸಿದ ಋತುಗೀತೆಗಳು, ಬಯಕೆಯ ನೋವು ನಲಿವುಗಳ ಹಾಡುಗಳು ಮತ್ತು ಒಗಟುಗಳು ಜನಜೀವನದ ಅಂಗವಾಗಿವೆ. (ನಿಜ ಹೆಸರು ಅಬುಲ್ ಹಸನ್ ಅಮೀನುದ್ದೀನ್ ಖುಸರೋ).

ರಾಜಾಶ್ರಯ, ಮನ್ನಣೆ ದೊರೆತವರೂ ಅಮೀರ್ ಖುಸರೋ ಸಾಮಾನ್ಯ ಜನಜೀವನದ ಅರಿವು ಕಳೆದುಕೊಂಡವನಲ್ಲ. ಪಾರಸಿ ಸಾಹಿತ್ಯ, ಪ್ರಧಾನ ಆಧಾರವಾಗಿದ್ದರೂ ಸ್ಥಳೀಯ [illegible] ಜನರಿಗೆ ಸುತ್ತಲಿನ ಬದುಕೇ ಸೆಲೆ. ಭಾರತೀಯ ನೆಲದಲ್ಲಿ ಮೂಡಿದ ಪಾರಸಿ ಮತ್ತು [illegible] ಸಾಹಿತ್ಯಕ್ಕೆ ಅವನೇ ಆದ್ಯ ವ್ಯಕ್ತಿ. ತಮ್ಮ ಭಾಷೆಯಲ್ಲಿ ಬರೆದ ಹೊರನಾಡಿನ ಶ್ರೇಷ್ಠ ಸಾಹಿತಿ ಎಂದು ಅಮೀರ್ ಖುಸರೋಗೆ ಪಾರಸಿ ಸಾಹಿತ್ಯ ರಂಗದಲ್ಲಿ ಗೌರವ.



'ಹಿಂದೂಸ್ಥಾನದ ಗಿಣಿ' : ಖುಸರೋ

ದೆಹಲಿ ಸುಲ್ತಾನ ಇಲ್‌ತುತ್‌ಮಿಷ್ ಕೈಕೆಳಗಿನ ತುರ್ಕಿ ಮೂಲದ ಅಧಿಕಾರಿಯೊಬ್ಬನ ಮಗ ಅಮೀರ್ ಖುಸರೋ. ಜನನ 1253ರಲ್ಲಿ. ಕಾಲ ಕಾಲಕ್ಕೆ ದಿಲ್ಲಿಯ ಬೇರೆ ಬೇರೆ ಸುಲ್ತಾನರ ಆಸ್ಥಾನದಲ್ಲಿ ಖುಸರೋ ಮನ್ನಣೆ ಪಡೆದ. 1266ರಿಂದ 1286ರ ತನಕ ಆಳಿದ ಮುಹಮ್ಮದ್‌ಖಾನನಿಗೆ ಗುರುವೆನಿಸಿದ್ದ. ಸುಲ್ತಾನ ಕೈ-ಕುಬಾದ ಮತ್ತು ಅವನ ತಂದೆಯ ನಡುವೆ 1287ರಲ್ಲಿ ನಡೆದ ಘರ್ಷಣೆಯೇ ಅಮೀರ್ ಖುಸರೋನ 'ಕಿರಾನ್–ಅಲ್–ಸಾದಯನ್' ('ಎರಡು ತಾರೆಗಳ ಸಂಧಿ') ಚಾರಿತ್ರಿಕ ಕಾವ್ಯದ ವಸ್ತು. ಇದರಿಂದ ಮೊದಲ್ಗೊಂಡು, ತನ್ನ ಇತರ ಆಶ್ರಯದಾತರ ಸಾಹಸಗಳ ಬಗೆಗೆ ಆತ ಕಾವ್ಯ ರಚಿಸಿದ. ಅಲ್ಲಾವುದ್ದೀನ್ ಖಲ್ಜಿಯ (ಆಳ್ವಿಕೆ : 1296–1316) ದಂಡಯಾತ್ರೆಯನ್ನು ಕುರಿತು ಗದ್ಯ ರೂಪದಲ್ಲಿ 'ಖಜೈನ್–ಅಲ್–ಫುತುಹ್' ([illegible]) ಕೃತಿ ರಚಿಸಿದ. 1320ರಲ್ಲಿ ಘಿಯಾಸುದ್ದೀನ್ ತುಘಲಕನು ದೊರೆಯಾದ. ನಸಿರುದ್ದೀನ್ ಖುಸರೋ ಷಾನ ಮೇಲೆ ಹೋರಾಟ ನಡೆಸಿ ಗೆದ್ದ ಸಂಗತಿ ಅವನ 'ತುಘಲಕ್ ನಾಮಾ' ಕಾವ್ಯ ಕೃತಿಯ ಮುಖ್ಯವಸ್ತು. ಈ ಕೃತಿಗಳು ಮಹತ್ವದ ಚಾರಿತ್ರಿಕ ದಾಖಲೆಗಳು.

ಅಮೀರ್ ಖುಸರೋ ಅನೇಕ ಪ್ರಗಾಥ, ಭಾವಗೀತೆಗಳನ್ನು ರಚಿಸಿದ. ತನ್ನ ಗುರು, ಸೂಫಿ ಸಂತ, ನಿಜಾಮುದ್ದೀನ್ ಔಲಿಯಾನ ಜೀವನ ಚರಿತ್ರೆ ಅವನ ಗದ್ಯಬರೆಹಗಳಲ್ಲೊಂದು.

ತತ್ತ್ವಶಾಸ್ತ್ರ, ಸಂಸ್ಕೃತಗಳ ಜ್ಞಾನ ಹೊಂದಿದ್ದ ಅಮೀರ್ ಖುಸರೋ ಖ್ಯಾತ ಸಂಗೀತಜ್ಞನೂ ಹೌದು. ಪಾರಸಿ ಸಂಗೀತದ ಹಲವು ರಾಗಗಳನ್ನು ಭಾರತೀಯ ಸಂಗೀತದಲ್ಲಿ ಸಂಯೋಜಿಸಲು ಪ್ರಯತ್ನಿಸಿ ಹೊಸ ಶೈಲಿ ಸೃಷ್ಟಿಯಾಗಲು ಕಾರಣನಾದ. ಜನಪ್ರಿಯ ವಾದ್ಯವಾದ ಸಿತಾರನ್ನು ಇವನೇ ರೂಪಿಸಿದ ಎಂಬ ಅಭಿಪ್ರಾಯವೂ ಇದೆ. ಅಮೀರ್ ಖುಸರೋ ಸಂಗೀತಶಾಸ್ತ್ರ ಗ್ರಂಥ ಬರೆದಿದ್ದನೆಂದು ಹೇಳಲಾಗಿದೆ. ಅದರ ಪ್ರತಿಗಳು ಯಾವುವೂ ದೊರೆತಿಲ್ಲ. ಕೆಲವು ರಾಗ, ತಾಳಗಳನ್ನು ಇವನು ರೂಪಿಸಿದನೆಂದೂ ಹೇಳಲಾಗಿದೆ. ಉತ್ತಮ ಹಾಡುಗಾರನಾಗಿದ್ದ ಅಮೀರ



ಸಮಾಜ ಸೇವೆ : ಅಮ್ಮು

ಖುಸರೋಗೆ 'ಹಿಂದೂಸ್ಥಾನದ ಗಿಣಿ' ಎಂಬ ಅಡ್ಡಹೆಸರೂ ಇದ್ದಿತು.

1325ರಲ್ಲಿ ಅವನು ಕಾಲವಾದ.

ಅಮ್ಮು ಸ್ವಾಮಿನಾಥನ್

ಕ್ಯಾಪ್ಟನ್ ಲಕ್ಷ್ಮಿ ಸುಭಾಷರ ಆಜಾದ್ ಹಿಂದ್ ಫೌಜನ್ನು (ಸ್ವತಂತ್ರ ಭಾರತ ಸೇನೆ ಅಥವಾ ಭಾರತ ರಾಷ್ಟ್ರೀಯ ಸೇನೆ) ಸೇರಿ ಸ್ವಾತಂತ್ರ್ಯ ಸಮರದಲ್ಲಿ ಹೋರಾಡಿದವರು. ಮೃಣಾಲಿನಿ ಸಾರಭಾಯಿ ಅಂತರರಾಷ್ಟ್ರೀಯ ಖ್ಯಾತಿಯ ಭರತನಾಟ್ಯ ಕಲಾವಿದೆ. ಇವರ ಪುತ್ರಿ. ತಾಯಿ ಅಮ್ಮು ಸ್ವಾಮಿನಾಥನ್. ಕಲೆ, ರಾಜಕೀಯ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿ ಪ್ರಮುಖ ವ್ಯಕ್ತಿ.

ಇವರು ಕೇರಳದವರು. ಜನನ 1894ರಲ್ಲಿ. ಅಂತರರಾಷ್ಟ್ರೀಯ ಮಹಿಳಾ ಸಮ್ಮೇಳನದ ಸ್ಥಾಪಕರಲ್ಲಿ ಅಮ್ಮು ಸ್ವಾಮಿನಾಥನ್ ಒಬ್ಬರು. ಮದರಾಸಿನ ವಕೀಲ ಸ್ವಾಮಿನಾಥನ್ ಅವರನ್ನು ವಿವಾಹವಾದರು. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸಿನ ಸದಸ್ಯರಾಗಿದ್ದು ಇವರು ಸ್ವದೇಶಿ ಚಳವಳಿಗಾಗಿ ದುಡಿದರು. ಹಲವು ಅಂತರರಾಷ್ಟ್ರೀಯ ಸಮ್ಮೇಳನಗಳಲ್ಲಿ ಭಾರತವನ್ನು ಪ್ರತಿನಿಧಿಸಿದರು. ಅಖಿಲ ಭಾರತ ಮಹಿಳಾ ಸಮ್ಮೇಳನದ ಸಂಸ್ಥಾಪಕರಲ್ಲಿ ಇವರೂ ಒಬ್ಬರು.

ಅಮೃತ್ ಕೌರ್

'ರಾಜಕುಮಾರಿ ಅಮೃತ ಕೌರ್' ಎಂದೇ ಖ್ಯಾತರಾಗಿದ್ದ ಅಮೃತ್ ಕೌರ್ ಪಂಜಾಬಿನ ಜಲಂಧರ ವಿಭಾಗದ ಕಪೂರ್ತಲಾ ಸಂಸ್ಥಾನದ ಅಹ್ಲುವಾಲಿಯಾ ರಾಜಮನೆತನದವರು.

ಸ್ತ್ರೀಯರ ಉದ್ಧಾರ ಅಮೃತ್ ಕೌರರ ಜೀವನದ ಧ್ಯೇಯವಾಗಿತ್ತು. ಬಾಲ್ಯವಿವಾಹ, ಪರದಾ ಪದ್ಧತಿ, ಅನಕ್ಷರತೆ ಇವನ್ನು ತೊಡೆದುಹಾಕದೆ ಸ್ತ್ರೀಯರು ಮುಂದುವರಿಯುವುದಿಲ್ಲ ಎಂದು ಅವರ ನಂಬಿಕೆ. "ಹಿಂದೂ ಮನೆಗಳಲ್ಲಿ ವಿಧವೆಯರ ಸ್ಥಿತಿ, ಮದುವೆ ಹಾಗೂ ಸ್ತ್ರೀಯರಿಗೆ ಪಿತ್ರಾರ್ಜಿತ ಆಸ್ತಿ ಹಕ್ಕುಗಳಿಗೆ ಸಂಬಂಧಿಸಿದ ಕಾನೂನುಗಳಲ್ಲಿ ಮೂಲಭೂತ ಬದಲಾವಣೆಯಾಗಬೇಕು" ಎಂದು ಅವರು ವಾದಿಸುತ್ತಿದ್ದರು. ಹರಿಜನೋದ್ಧಾರ, ಅಹಿಂಸಾ ತತ್ತ್ವಗಳಲ್ಲಿ ಅವರಿಗೆ ಅಚಲ ನಂಬಿಕೆ.



ಗಾಂಧೀ ಶಿಷ್ಯೆಯ ರಾಜಕುಮಾರಿ

ಅಮೃತ್ ಕೌರ್ ಗಾಂಧೀಜಿಯ ಆಪ್ತ ಕಾರ್ಯದರ್ಶಿಗಳಲ್ಲಿ ಒಬ್ಬರಾಗಿದ್ದರು. 16 ವರ್ಷ ಕಾಲ ಅವರ ಕಾರ್ಯದರ್ಶಿಯಾಗಿದ್ದರು.

ಕಾಂಗ್ರೆಸ್ ಪರ ಪ್ರಚಾರ ಮಾಡಿದರು. ಅವರು ಮೊದಲಿಗೆ ಬಂಧಿಸಲ್ಪಟ್ಟದ್ದು ಉಪ್ಪು ಸತ್ಯಾಗ್ರಹದಲ್ಲಿ ಭಾಗವಹಿಸಿದಾಗ. ರಾಜದ್ರೋಹದ ಆಪಾದನೆಯ ಮೇಲೆ 1937ರಲ್ಲಿ ಮತ್ತೆ ಅವರ ದಸ್ತಗಿರಿಯಾಯಿತು. 'ಕ್ವಿಟ್ ಇಂಡಿಯಾ' ಚಳುವಳಿಯಲ್ಲೂ ಬಂಧಿಸಲ್ಪಟ್ಟರು.

1930ರಲ್ಲಿ ಅಖಿಲ ಭಾರತ ಮಹಿಳಾ ಸಮ್ಮೇಳನದ ಕಾರ್ಯದರ್ಶಿಯಾಗಿ ಅವರು ಕೆಲಸ ಮಾಡಿದರು. 'ಮಹಿಳಾ ಸಂಘ'ದ ಅಧ್ಯಕ್ಷರಾಗಿ ಮೂರು ವರ್ಷ ಸೇವೆ ಸಲ್ಲಿಸಿದರು. 'ಹಿಂದೂಸ್ಥಾನಿ ತಾಲೀಮಿ ಸಂಘ'ದ (ಮೂಲ ಶಿಕ್ಷಣವನ್ನು ಕುರಿತ ಸಂಘ) ಸದಸ್ಯೆಯಾಗಿದ್ದರು. ಯುನೆಸ್ಕೋ ಸಮ್ಮೇಳನದ ಭಾರತೀಯ ಪ್ರತಿನಿಧಿಯಾಗಿ ಎರಡು ಬಾರಿ ಭಾಗವಹಿಸಿದರು. ಸ್ವಾತಂತ್ರ್ಯ ಬಂದ ಮೇಲೆ ಅವರು ಆರೋಗ್ಯ ಸಚಿವೆಯಾಗಿ ಕೇಂದ್ರ ಸಚಿವ ಸಂಪುಟದಲ್ಲಿ ಇದ್ದರು.

ರಾಜಕುಮಾರಿ ಅಮೃತ್ ಕೌರರ ತಂದೆ ರಾಜಾ ಹರ್‌ನಾಮ್ ಸಿಂಗ್. ಅಮೃತ್ ಕೌರ್ ಲಖನೌದಲ್ಲಿ 1889 ಫೆಬ್ರುವರಿ 2ರಂದು ಜನಿಸಿದರು. ಶಾಲಾ ಕಾಲೇಜು ವಿದ್ಯಾಭ್ಯಾಸಗಳು ಲಂಡನಿನಲ್ಲೇ ಆದುವು. ವ್ಯಾಯಾಮ, ಕ್ರೀಡೆಗಳಲ್ಲಿ ಅವರಿಗೆ ಬಹಳ ಆಸಕ್ತಿ. ಒಳ್ಳೆಯ ಟೆನಿಸ್ ಆಟಗಾರ್ತಿಯಾಗಿದ್ದರು. ಅವರು ರಾಷ್ಟ್ರದ ಕ್ರೀಡಾಪಟುಗಳಿಗೆ ತರಬೇತಿ ಕೊಡುವ ವ್ಯವಸ್ಥೆಯೊಂದನ್ನು ರೂಪಿಸಿದರು.

ಅವಿವಾಹಿತರಾಗಿದ್ದ ಅವರು 1964ರಲ್ಲಿ ಮೃತರಾದರು.

ಅಮೃತಾ ಶೇರ್‌ಗಿಲ್

ಐದು ವರ್ಷದ ಬಾಲಕಿ ತನ್ನಲ್ಲಿದ್ದ ಆಟದ ಸಾಮಾನುಗಳ ಚಿತ್ರ ಬರೆಯುತ್ತಿದ್ದಳು. ಏಳು ವರ್ಷ ವಯಸ್ಸಿನಲ್ಲಿ ಕತೆ ಕೇಳುತ್ತಿದ್ದಂತೆ, ಆಕೆ ಆ ಕತೆಗೆ ಸಂಬಂಧಿಸಿ ಚಿತ್ರ ಬರೆಯಲು ತೊಡಗುತ್ತಿದ್ದಳು. ಶಾಲೆಗೆ ಸೇರಿದ ಬಳಿಕ ಚರಿತ್ರೆಯಲ್ಲಿ ಬರುವ ವಿದ್ಯಮಾನಗಳ, ವ್ಯಕ್ತಿಗಳ ಚಿತ್ರ ಬರೆದಳು. ಬಾಲಕಿಯನ್ನು ಪರೀಕ್ಷಿಸಿದ ಮನಶ್ಶಾಸ್ತ್ರಜ್ಞರು ಚಿತ್ರಕಲೆಯಲ್ಲಿ ಆಕೆಗೆ ಅಸಾಮಾನ್ಯ ಕೌಶಲ ಇದೆ ಎಂದರು.

ಈ ಹುಡುಗಿಯೇ ಮುಂದೆ ಭಾರತದ ಏಕೈಕ ಪ್ರತಿಭಾವಂತ ಮಹಿಳಾ ಚಿತ್ರಗಾರ್ತಿ ಎನಿಸಿದ ಅಮೃತಾ ಶೇರ್‌ಗಿಲ್.

1913ರ ಜನವರಿ 30ರಂದು ಹಂಗೆರಿಯ ಬುಡಾಪೆಸ್ಟಿನಲ್ಲಿ ಜನನ. ತಂದೆ ಉಮ್‌ರಾವ್‌ಸಿಂಗ್ ಶೇರ್‌ಗಿಲ್ —ಸಿಕ್ಖ್; ತಾಯಿ ಕ್ರೈಸ್ತ ಧರ್ಮಾವಲಂಬಿ ಅಂಟೋಯಿನ್‌ನೆಟ್. ಈ ದಂಪತಿ ಭಾರತಕ್ಕೆ ಬಂದು ಸಿಮ್ಲಾದಲ್ಲಿ ಇರತೊಡಗಿದ್ದು 1921ರಲ್ಲಿ. ಪಾಶ್ಚಾತ್ಯ ಸಂಗೀತ, ಚಿತ್ರಕಲೆ ಮತ್ತಿತರ ಪಾಠಗಳಲ್ಲಿ ಶಿಕ್ಷಣ ದೊರೆತರೂ ಬಾಲಕಿ ಅಮೃತಾಳ ಪ್ರಧಾನ ಒಲವು ಚಿತ್ರಕಲೆಯ ಕಡೆಗೇ. ಇಟಲಿಯ ಫ್ಲಾರೆನ್ಸ್ ಹಾಗೂ ಪ್ಯಾರಿಸಿನಲ್ಲಿ ಚಿತ್ರಕಲೆಯಲ್ಲಿ ಶಿಕ್ಷಣ ಪಡೆಯಲು ತಾಯಿ ನೆರವಾದರು. ಅಂತರರಾಷ್ಟ್ರೀಯ ಕೀರ್ತಿ ಗಳಿಸಿ ಅಮೃತಾ ಶೇರ್‌ಗಿಲ್ 1934ರಲ್ಲಿ ಭಾರತಕ್ಕೆ ಹಿಂದಿರುಗಿದಳು.

ಆಕೆ ಭಾರತದಲ್ಲೆಲ್ಲ ಸಂಚರಿಸಿ ಜನಜೀವನವನ್ನು ಕಣ್ಣಾರೆ ಕಂಡರು. ಹಳ್ಳಿಗರ ಕಷ್ಟಮಯ ಬದುಕು ಆಕೆಯಲ್ಲಿ ಮರುಕ ಮೂಡಿಸಿತು. ಸಾಮಾನ್ಯ ಜನಜೀವನ ಆಕೆಯ ಚಿತ್ರಕಲೆಯ ವಸ್ತುವಾಯಿತು. 'ಚೇಗಾಲ', 'ಬ್ರಹ್ಮಚಾರಿ', 'ಸಂತೆಗೆ ಹೋಗುವವರು', 'ಕತೆ ಹೇಳುವವರು', 'ಮದುಮಗಳ ಶೃಂಗಾರ' ಆಕೆಯ ಖ್ಯಾತ ಚಿತ್ರಗಳು.



ಜ್ವಲಂತ ಕಲಾಚೇತನ : ಅಮೃತಾ



'ಭಿಕ್ಷುಕಿ' —ಶೇರ್‌ಗಿಲ್ ಕೃತಿ

ಶೇರ್‌ಗಿಲ್‌ರ ಚಿತ್ರಗಳಲ್ಲಿ ಭಾರತ ಮತ್ತು ಪಾಶ್ಚಿಮಾತ್ಯ ಶೈಲಿಗಳ ಸಂಗಮ ಕಂಡುಬರುತ್ತದೆ. ಅಜಂತಾ ಗುಹೆಯ ಭಿತ್ತಿಚಿತ್ರಗಳಿಂದಲೂ ಆಕೆ ಸ್ಫೂರ್ತಿ ಪಡೆದರು. ಬಣ್ಣಗಳ ಮಿತವಾದ ಬಳಕೆ, ಕೋಮಲ ಆಕೃತಿಗಳು. ಅದಷ್ಟು ಕಡಮೆ ವಿವರಗಳಿಂದ ಆಕೆಯ ಚಿತ್ರಗಳು ಆಕರ್ಷಕವೆನಿಸಿರುವು. ಪ್ಯಾರಿಸಿನಲ್ಲಿ 'ಗ್ರಾಂಡ್ ಸಲೂನ್' ಚಿತ್ರ ಪ್ರದರ್ಶನದಲ್ಲಿ ಆಕೆಯ ಚಿತ್ರ 'ನವಯುವತಿಯರು' ಬಹುಮಾನ ಗಳಿಸಿದಾಗ ಆಕೆಗಿನ್ನೂ 20ವರ್ಷ. ಮುಂದೆ 1929–31ರ ಅವಧಿಯಲ್ಲಿ ಭಾವಚಿತ್ರ ಹಾಗೂ ನಿರ್ಜೀವ ವಸ್ತು ಚಿತ್ರಣದಲ್ಲಿ ಮೂರು ಪ್ರಥಮ ಬಹುಮಾನಗಳನ್ನು ಪಡೆದರು.

ಆದರೆ ಬಹುಮಾನ ಗಳಿಸುವುದರಲ್ಲಾಗಲೀ ಚಿತ್ರ ಮಾರಿ ಹಣ ಸಂಪಾದಿಸುವುದರಲ್ಲಾಗಲೀ ಆಕೆಗೆ ಆಸಕ್ತಿ ಇರಲಿಲ್ಲ.

1941ರಲ್ಲಿ 28ನೆಯ ವಯಸ್ಸಿಗೇ ಅಮೃತಾ ಶೇರ್‌ಗಿಲ್ ನಿಧನರಾದರು.

ಅಮೃತಸರ

ಪಂಜಾಬಿನ ಅತಿ ದೊಡ್ಡ ಪಟ್ಟಣ ಅಮೃತಸರ. ಇದು ಸಿಕ್ಖರ ಪವಿತ್ರ ಕ್ಷೇತ್ರ, ಧಾರ್ಮಿಕ ಕೇಂದ್ರ.

ಸಿಕ್ಖರ ನಾಲ್ಕನೆಯ ಗುರು ರಾಮದಾಸ. ಚಕ್ರವರ್ತಿ ಅಕ್ಬರನಿಂದ ಪಡೆದ ಈ ಪ್ರದೇಶದಲ್ಲಿ ಒಂದು ಊರನ್ನು ಕಟ್ಟಿಸಿದ –1577ರಲ್ಲಿ. ಇವನಿಂದಾಗಿ ಇದಕ್ಕೆ ರಾಮದಾಸಪುರ ಎಂಬ ಹೆಸರು ಬಂತು. ರಾಮದಾಸ ಇಲ್ಲಿದ್ದ ಒಂದು ಕೆರೆಯನ್ನು ವಿಸ್ತರಿಸುವ ಕಾರ್ಯವನ್ನು ಕೈಗೊಂಡ. ಇವನ ಮರಣದಿಂದಾಗಿ ನಿಂತುಹೋಗಿದ್ದ ಕೆಲಸವನ್ನು ಮುಂದಿನ ಗುರು ಅರ್ಜುನದೇವ ಮುಂದುವರಿಸಿದ. ಸರೋವರಕ್ಕೆ ಅಮೃತಸರ ಎಂದು ಹೆಸರಿಟ್ಟ. ಇದರಿಂದಾಗಿ ರಾಮದಾಸಪುರಕ್ಕೆ ಅಮೃತಸರವೆಂದೇ ಹೆಸರಾಯಿತು. ಹರಮಂದಿರವೆಂಬ ಒಂದು ದೇವಾಲಯವನ್ನೂ ಅರ್ಜುನದೇವ ಕಟ್ಟಿಸಿದ.

18ನೆಯ ಶತಮಾನದಲ್ಲಿ ಅಹ್ಮದ್ ಷಾ ಅಬ್ದಾಲಿ ಈ ಪಟ್ಟಣದ ಮೇಲೆ ದಾಳಿ ಮಾಡಿದ. ದೇವಾಲಯ ಭಗ್ನವಾಯಿತು. ಅನಂತರ ಈಗ ಸರೋವರದ ಮಧ್ಯದಲ್ಲಿರುವ ಮಂದಿರ ನಿರ್ಮಾಣಗೊಂಡಿತು. 1802ರಲ್ಲಿ ಮಹಾರಾಜ ರಣಜಿತ್‌ಸಿಂಗ್ ಇಲ್ಲಿನ ಬೃಹತ್ ದೇವಾಲಯದ ಹೊರಭಾಗಕ್ಕೆ ಅಮೃತಶಿಲೆಯ ಹೊದಿಕೆ ತೊಡಿಸಿದ. ದೇವಾಲಯದ ಶಿಖರಕ್ಕೆ ಚಿನ್ನದ ಮುಲಾಮು ಹಾಕಿಸಿದ. ಇದರಿಂದಾಗಿ ಈ ಮಂದಿರಕ್ಕೆ 'ಸ್ವರ್ಣ ದೇವಾಲಯ' ಎಂಬ ಹೆಸರು ಬಂತು.

ಸರೋವರದ ಮಧ್ಯೆ ನಿರ್ಮಿತವಾಗಿರುವ ಈ ದೇವಾಲಯದ ಅಮೃತಶಿಲಾ ಫಲಕಗಳ ಮೇಲೆ ಸುಂದರ ಕೆತ್ತನೆಗಳಿವೆ. ಸಿಕ್ಖರ ಪವಿತ್ರ ಗ್ರಂಥವಾದ 'ಗ್ರಂಥ್ ಸಾಹೇಬ್'ನಿಂದ ಉಲ್ಲೇಖಗಳನ್ನು ಸುಂದರ ಅಕ್ಷರಗಳಲ್ಲಿ ಕೆತ್ತಲಾಗಿದೆ.

ಸಿಕ್ಖರ ಗುರುಪೀಠ 'ಅಕಾಲ್ ತಖ್ತ್' ಅಮೃತಸರದಲ್ಲಿರುವ ಇನ್ನೊಂದು ಪವಿತ್ರ ಸ್ಥಾನ.

ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಪ್ರಾಮುಖ್ಯ ಗಳಿಸಿದ ಜಲಿಯನ್‌ವಾಲಾ ಬಾಗ್ ಸ್ವರ್ಣ ದೇವಾಲಯದ ಸಮೀಪದಲ್ಲಿದೆ.

ಅಮೃತಸರ ಪ್ರಮುಖ ವ್ಯಾಪಾರ ಕೇಂದ್ರ. ಇಲ್ಲಿ ತಯಾರಾಗುವ ಶಾಲುಗಳು, ಜಮಖಾನಗಳು ಪ್ರಸಿದ್ಧಿ ಪಡೆದಿವೆ. ಗುರುನಾನಕ್ ವಿಶ್ವವಿದ್ಯಾನಿಲಯ ಇಲ್ಲಿ ಸ್ಥಾಪನೆಯಾಗಿದೆ. ಅಮೃತಸರದಲ್ಲಿ ದೀಪಾವಳಿ ಸಮಯದಲ್ಲಿ ಭಾರಿ ಉತ್ಸವ ಜರಗುತ್ತದೆ.


ನೋಡಿ : ಜಲಿಯನ್‌ವಾಲಾ ಬಾಗ್

ಅಮೋಘವರ್ಷ

ದೇಶದಲ್ಲೊಮ್ಮೆ ಸಾಂಕ್ರಾಮಿಕ ಜಾಡ್ಯ ಹರಡಿತ್ತು. ಅದರ ನಿವಾರಣೆಗಾಗಿ ಮಹಾಲಕ್ಷ್ಮಿಯ ಎದುರಿಗೆ ತನ್ನ ಎಡಗೈ ಬೆರಳುಗಳನ್ನು ರಾಜ ಕತ್ತರಿಸಿಕೊಂಡ.

ಆ ರಾಜನೇ ಶಾಂತಿಪ್ರಿಯ, ಲಲಿತಕಲಾ ಪ್ರೇಮಿ ಎಂದು ಲೋಕ ವಿಖ್ಯಾತನಾದ ರಾಷ್ಟ್ರಕೂಟ ವಂಶದ ಅಮೋಘವರ್ಷ.

ಮೂರನೆಯ ಗೋವಿಂದ ವಿಂಧ್ಯದಲ್ಲಿ ಯುದ್ಧನಿರತನಾಗಿ ಬೀಡುಬಿಟ್ಟಿದ್ದಾಗ, ಅವನ ಮಗ ಅಮೋಘವರ್ಷನ ಜನನ. 814ರಲ್ಲಿ ತಂದೆ ಮರಣ ಹೊಂದಿದ, 16 ವರ್ಷದ ಅಮೋಘವರ್ಷ ಸಿಂಹಾಸನಕ್ಕೆ ಬಂದ. ಆದರೆ ಚಾಲುಕ್ಯರು, ರಾಷ್ಟ್ರಕೂಟರು, ವೆಂಗಿಯ ವಿಜಯಾದಿತ್ಯ —ಇವರು ಅಮೋಘವರ್ಷನನ್ನು ಅಧಿಕಾರದಿಂದ ಉರುಳಿಸಲು ಪ್ರಯತ್ನಿಸಿ, ಜಯಶೀಲರಾದರು. ರಾಜಮನೆತನದಲ್ಲಿ ತಲೆದೋರಿದ ಒಳಜಗಳದಿಂದಲೂ ಅವನಿಗೆ ತೊಂದರೆಯಾಯಿತು. ಹೀಗಿದ್ದರೂ



ಸ್ವರ್ಣ ದೇವಾಲಯ

[illegible] ವಿಜಯಾದಿತ್ಯನನ್ನು ಸೋಲಿಸಿದ.

ನಾಲ್ಕನೆಯ ಗೋವಿಂದನದು ವಿಶಾಲ ರಾಜ್ಯ. ಪರಾಕ್ರಮಿಯಾದ ಅಮೋಘವರ್ಷ ಈ ರಾಜ್ಯವನ್ನು ಸಮರ್ಥವಾಗಿ ಆಳಿ ಶಾಂತಿ ನೆಲೆಸುವಂತೆ ಮಾಡಿದ. ತಲಕಾಡಿನ ಗಂಗರು, ಪಲ್ಲವರು ಮತ್ತು ಪೂರ್ವದ ಚಾಲುಕ್ಯರಂಥ ಪ್ರಬಲ ಶತ್ರುಗಳನ್ನು ಸೋಲಿಸಿದ. ಗಂಗ ಮತ್ತು ಚಾಲುಕ್ಯ ರಾಜ್ಯಗಳ ಕೆಲವು ಭಾಗಗಳನ್ನು ತನ್ನ ರಾಜ್ಯಕ್ಕೆ ಸೇರಿಸಿಕೊಂಡ. ಪಲ್ಲವ ಹಾಗೂ ಗಂಗರೊಡನೆ ಸಂಬಂಧ ಬೆಳೆಸಿ ಅವರೊಡನಿದ್ದ ವೈರವನ್ನು ಕೊನೆಗಾಣಿಸಿದ. ಮಾನ್ಯಖೇಟ(ಮಳಖೇಡ)ದಲ್ಲಿ ಭವ್ಯವಾದ ರಾಜಧಾನಿಯನ್ನು ಕಟ್ಟಿದ. ಸುಮಾರು 62 ವರ್ಷಗಳಷ್ಟು ದೀರ್ಘ ಕಾಲ ಆಳಿದ.

ಶರ್ವ ಎಂಬುದು ಇವನ ಇನ್ನೊಂದು ಹೆಸರು. ಇವನು ಪ್ರಸಿದ್ಧನಾಗಿರುವುದು ನೃಪತುಂಗನೆಂದೇ. ವೀರ ನಾರಾಯಣ, ಮಾರ್ತಾಂಡ, ಲಕ್ಷ್ಮೀವಲ್ಲಭೇಂದ್ರ, ಅತಿಶಯಧವಳ, ಶ್ರೀವಲ್ಲಭ ಮೊದಲಾದ ಬಿರುದುಗಳು ಇವನಿಗಿದ್ದುವು.

ಕನ್ನಡದಲ್ಲಿ ಲಭ್ಯವಿರುವ ಗ್ರಂಥಗಳಲ್ಲಿ ಅತ್ಯಂತ ಹಳೆಯದಾದ 'ಕವಿರಾಜಮಾರ್ಗ' ಇವನ ಕಾಲದಲ್ಲಿ ರಚಿತವಾಯಿತು. 'ಪ್ರಶ್ನೋತ್ತರ ಮಾಲಿಕಾ' ಎಂಬ ಸಂಸ್ಕೃತ ಗ್ರಂಥವನ್ನು ಈತ ರಚಿಸಿದನೆಂಬ ಹೇಳಿಕೆ ಇದೆ. ಇವನು ವಿದ್ಯಾಪಕ್ಷಪಾತಿಯಾಗಿದ್ದು, ಅನೇಕ ವಿದ್ವಾಂಸರಿಗೆ ಆಶ್ರಯದಾತನಾಗಿದ್ದ. ಸುಪ್ರಸಿದ್ಧ ಪಂಡಿತನಾದ ಜಿನಸೇನಾಚಾರ್ಯ ಇವನ ಗುರು.

ಆ ಕಾಲದಲ್ಲಿ ಭಾರತಕ್ಕೆ ಬಂದಿದ್ದ ಸುಲೇಮಾನ್ ಎಂಬ ಅರಬಿ ವರ್ತಕ ವಲ್ಲಭರಾಜ(ಅಮೋಘವರ್ಷ) ಸಮಕಾಲೀನ ಜಗತ್ತಿನ ಮಹೋನ್ನತ ಚಕ್ರವರ್ತಿಗಳಲ್ಲಿ ಒಬ್ಬನೆಂದೂ ಚೀನ, ಬಾಗ್ದಾದ್ ಮತ್ತು ಕಾನ್‌ಸ್ಟಾಂಟಿನೋಪಲ್‌ನ ಚಕ್ರವರ್ತಿಗಳ ಪಂಕ್ತಿಗೆ ಆತ ಸೇರುತ್ತಾನೆಂದೂ ಹೊಗಳಿದ್ದಾನೆ.

ನೋಡಿ : ಮಾನ್ಯಖೇಟ : ರಾಷ್ಟ್ರಕೂಟರು

ಅಯ್ಯಪ್ಪನ್

ನೋಡಿ : ಶಬರಿಮಲೈ

ಅಯೋಧ್ಯಾ

ಭಕ್ತಕೋಟಿಯ ಆರಾಧ್ಯದೈವ, ರಘುಕುಲ ತಿಲಕ, ದಶರಥನಂದನ ರಾಮನ ರಾಜಧಾನಿ, ಅಯೋಧ್ಯಾ. ಈ ನಗರ ಸರಯೂ ನದಿಯ ದಂಡೆಯ ಮೇಲಿದೆ.

ಅಯೋಧ್ಯಾ ಉತ್ತರ ಪ್ರದೇಶದಲ್ಲಿದೆ. ಸುಮಾರು ಕ್ರಿಸ್ತ ಪೂರ್ವ 3100ರಲ್ಲಿ ಮನು ಇದನ್ನು ಸ್ಥಾಪಿಸಿದ ಎನ್ನುತ್ತಾರೆ. ಇಕ್ಷ್ವಾಕು ಈತನ ಮಗ. ಇವನ ವಂಶದ ಮಾಂಧಾತ, ಹರಿಶ್ಚಂದ್ರ, ರಘು, ಭಗೀರಥ, ಸಗರ, ದಶರಥ, ರಾಮ —ಇವರೆಲ್ಲ ಅಯೋಧ್ಯೆಯನ್ನಾಳಿದ ಮಹಾಪ್ರಭುಗಳು.

ಈ ನಗರ ಮೀನಿನ ಆಕಾರದಲ್ಲಿದ್ದಿತೆಂದು ಸ್ಕಂದ ಪುರಾಣ ಬಣ್ಣಿಸಿದೆ. ಭಾರತದ ಏಳು ಪವಿತ್ರ ಸ್ಥಾನಗಳಲ್ಲಿ ಅಯೋಧ್ಯಾ ಕೂಡ ಒಂದೆಂದು ಭಾವುಕರ ನಂಬಿಕೆ. ಈ ಊರಿನಲ್ಲಿ ಇಂದ್ರನೀಲರತ್ನದ ಹನುಮಂತನ ವಿಗ್ರಹವಿರುವ ದೇವಾಲಯವಿದೆ. ಇಲ್ಲಿಂದ ಸುಮಾರು ಅರ್ಧ ಮೈಲಿ ದೂರದಲ್ಲಿ ರಾಮ ಜನ್ಮ ತಳೆದ ಎನ್ನುತ್ತಾರೆ. 'ಕನಕಭವನ' ದೇವಾಲಯದಲ್ಲಿ ಚಿನ್ನದ ಮುಲಾಮು ಮಾಡಿದ ಸಿಂಹಾಸನದ ಮೇಲೆ, ಚಿನ್ನದ ಕಿರೀಟ ಧರಿಸಿರುವ ರಾಮ ಮತ್ತು ಸೀತೆಯ ಮೂರ್ತಿಗಳಿವೆ. ಈ ಸ್ಥಳದಲ್ಲಿ ಹಿಂದೆ ಕೈಕೇಯಿಯ ಅರಮನೆ ಇತ್ತಂತೆ. ಅಯೋಧ್ಯೆಯಲ್ಲಿ ರಾಮನ ಅನೇಕ ದೇವಾಲಯಗಳಿವೆ.

ಮಹಾಭಾರತದಲ್ಲೂ ಅಯೋಧ್ಯೆಯ ಪ್ರಸ್ತಾಪವಿದೆ. ಆಗ ಅಯೋಧ್ಯೆಯಲ್ಲಿ ಆಳುತ್ತಿದ್ದ ಬೃಹದ್ಬಲನ ಸೈನ್ಯವೂ ಕುರುಕ್ಷೇತ್ರ ಯುದ್ಧಕ್ಕೆ ಹೋಗಿತ್ತು; ಆತ ಅಭಿಮನ್ಯುವಿನಿಂದ ಹತನಾದ –ಎನ್ನಲಾಗಿದೆ.

ಅಯೋಧ್ಯೆ ಜೈನರಿಗೂ ಪವಿತ್ರ ಯಾತ್ರಾಸ್ಥಳ. ತೀರ್ಥಂಕರರಲ್ಲಿ ಮೊದಲನೆಯವನಾದ ವೃಷಭದೇವನ ಜನ್ಮಸ್ಥಳ ಇದು.

ಹ್ಯೂಯೆನ್ ತ್ಸಾಂಗ್ ಮತ್ತು ಫಾಹಿಯಾನ್ ಅಯೋಧ್ಯೆಗೆ ಬಂದಿದ್ದ ಚೀನೀ ಯಾತ್ರಿಕರು. ಇಲ್ಲಿ 20 ಸ್ತೂಪಗಳಿದ್ದುವೆಂದು ಹ್ಯೂಯೆನ್ ತ್ಸಾಂಗ್ ಬರೆದಿದ್ದಾನೆ.

ಅರಬಿ ಸಮುದ್ರ

ಹಿಂದೂ ಮಹಾಸಾಗರದ ಒಂದು ಭಾಗ ಅರಬಿ ಸಮುದ್ರ. ಇದರ ಪೂರ್ವ ಮೇರೆ ಭಾರತ. ಪಾಕಿಸ್ತಾನ, ಇರಾನ್, ಅರೇಬಿಯ, ಆಫ್ರಿಕದ ಸ್ವಲ್ಪ ಭಾಗ ಇದರ ಇತರ ಮೇರೆಗಳು: ಈ ಸಮುದ್ರದ ಬಹುಭಾಗ ಆಳವಾಗಿದೆ. ಆದರೆ ಸಿಂಧೂ ನದಿಯ ಮುಖಜಭೂಮಿ, ಕಚ್, ಕಾಥಿಯಾವಾರಗಳ ಬಳಿ ಇದರ ಆಳ ಕಡಮೆ. ಸಿಂಧು, ನರ್ಮದಾ ಮತ್ತು ತಪತಿ ಈ ಸಮುದ್ರವನ್ನು ಸೇರುವ ದೊಡ್ಡ ನದಿಗಳು. ಪಶ್ಚಿಮ ಘಟ್ಟದಲ್ಲಿ ಹುಟ್ಟುವ ಹಲವಾರು ನದಿಗಳೂ ಈ ಸಮುದ್ರವನ್ನು ಸೇರುತ್ತವೆ. ಬಹು ಪ್ರಾಚೀನ ಕಾಲದಿಂದ ಈ ಸಮುದ್ರದಲ್ಲಿ ನೌಕಾ ಸಂಚಾರ ಗಣನೀಯ ಪ್ರಮಾಣದಲ್ಲಿ ನಡೆಯುತ್ತಿತ್ತು. ಯೂರೋಪ್ ಹಾಗೂ ಭಾರತಗಳ ನಡುವಣ ಜಲಮಾರ್ಗದ ಒಂದು ಭಾಗ ಈ ಸಮುದ್ರದಲ್ಲಿದೆ. ಇದರ ತೀರದ ಮುಖ್ಯ ಭಾರತೀಯ ಬಂದರು ಮುಂಬಯಿ. ಕೊಚ್ಚಿ, ಮಂಗಳೂರು, ಕಾಂಡ್ಲ, ಮರ್ಮಗೋವ ಇತರ ಪ್ರಸಿದ್ಧ ಬಂದರುಗಳು. ಪಾಕಿಸ್ತಾನದ ಕರಾಚಿ ಮತ್ತು ಅರೇಬಿಯದ ಏಡನ್ ಬಂದರುಗಳು ಕೂಡ ಅರಬಿ ಸಮುದ್ರದಲ್ಲಿವೆ.

ಅರಬಿ ಸಮುದ್ರದ ಮಧ್ಯ ಭಾಗದಲ್ಲಿ ದ್ವೀಪಗಳಿಲ್ಲ. ಭಾರತದ ಕರಾವಳಿಗೆ ಸಮೀಪವಾಗಿ ಲಕ್ಷದ್ವೀಪಗಳೂ ಮಾಲ್ಡೀವ್ (ಮಾಲಾ) ದ್ವೀಪಗಳೂ ಇವೆ.

ಸುಯೆಜ್ ಕಾಲುವೆ ಸಿದ್ಧವಾದ ಮೇಲೆ ವಾಣಿಜ್ಯ ಜಲಮಾರ್ಗವಾಗಿ ಈ ಸಮುದ್ರದ ಪ್ರಾಮುಖ್ಯ ಹೆಚ್ಚಿದೆ.

ಮೊದಲಿಗೆ ಅರಬರು ಈ ಸಮುದ್ರದ ಮೂಲಕ ವಾಣಿಜ್ಯಯಾನವನ್ನು ಹೆಚ್ಚಾಗಿ ಮಾಡುತ್ತಿದ್ದರು. ಆದರಿಂದ ಇದಕ್ಕೆ ಅರಬಿ ಸಮುದ್ರ ಎಂಬ ಹೆಸರು ಬಂದಿತು.

ನೋಡಿ : ಹಿಂದೂ ಮಹಾಸಾಗರ–ಸಂಪುಟ ೧

ಅರವಿಂದ ಘೋಷ್

'ಮಹರ್ಷಿ' ಎಂಬ ಹೊಗಳಿಕೆ, ಗೌರವಗಳಿಗೆ ಪಾತ್ರರಾದವರು ಅರವಿಂದ ಘೋಷರು.



ಮಹರ್ಷಿ ಮಾತೆ

ಅವರ ಭಾರತಪ್ರೇಮ ಅಪಾರವಾದದ್ದು. ತಮ್ಮ ದೀರ್ಘಕಾಲದ ತಪಸ್ಸು, ಚಿಂತನೆಗಳಿಂದ ಅವರು ಮಹಾಜ್ಞಾನಿಯಾದರು. ಅವರ ಆಕಾಂಕ್ಷೆ, ದರ್ಶನಗಳನ್ನು ಕಾರ್ಯರೂಪಕ್ಕೆ ತರುವ ಕೆಲಸ ಪಾಂಡಿಚೆರಿಯಲ್ಲಿ ನಡೆಯುತ್ತಿದೆ: ಅವರು 1910ರಲ್ಲಿ ಅಲ್ಲಿ ಸ್ಥಾಪಿಸಿದ ಆಶ್ರಮದ ಅಂಗವಾಗಿ ಅಲ್ಲಿ 'ಅರೊವಿಲ್' ಎಂಬ ಅಂತರರಾಷ್ಟ್ರೀಯ ನಗರ ರೂಪುಗೊಳ್ಳುತ್ತಿದೆ. 1920ರ ಏಪ್ರಿಲ್ 24ರಂದು ಆಶ್ರಮದಲ್ಲಿ ನೆಲೆಸಲು ಬಂದ ಫ್ರೆಂಚ್ ಮಹಿಳೆ ಮೀರಾ ಅಲ್ಫಾನ್ಸ್, ಆಶ್ರಮ ಜನರಿಗೆ ಸ್ಫೂರ್ತಿಯ ಸೆಲೆಯಾಗಿ ಮಾತೆಯಾದರು. ಮಾತೆಯವರು 1973 ನವೆಂಬರ್ 17ರಂದು ತಮ್ಮ 96ನೆಯ ವಯಸ್ಸಿನಲ್ಲಿ ಕಾಲವಾದರು.

ನೋಡಿ : ಪಾಂಡಿಚೆರಿ
ಅರವಿಂದ—ಸಂಪುಟ ೧

ಅರಿಕೇಸರಿ

ಕನ್ನಡದ ಆದಿ ಕವಿ ಪಂಪ ಅಮರಗೊಳಿಸಿದ ಅರಸು ಅರಿಕೇಸರಿ.

ಎಂಟನೆಯ ಶತಮಾನದ ಮಧ್ಯಭಾಗದಲ್ಲಿ ರಾಷ್ಟ್ರಕೂಟರು ಚಾಲುಕ್ಯರನ್ನು ಸೋಲಿಸಿದರು. ಅಂದಿನಿಂದ ಸುಮಾರು 200 ವರ್ಷ ಕಾಲ ಚಾಲುಕ್ಯರು ರಾಷ್ಟ್ರಕೂಟರ ಸಾಮಂತರಾಗಿ ರಾಜ್ಯಭಾರ ಮಾಡಿಕೊಂಡಿದ್ದರು. ಚಾಲುಕ್ಯರ ಬೇರೆ ಬೇರೆ ಶಾಖೆಗಳಲ್ಲಿ ಒಂದಾದ ವೇಮುಲವಾಡ ಚಾಲುಕ್ಯರಲ್ಲಿ ವಿಖ್ಯಾತನಾದವನು ಇಮ್ಮಡಿ ಅರಿಕೇಸರಿ.

ಇವನು ಇಮ್ಮಡಿ ನರಸಿಂಹ ಮತ್ತು ಜಾಕವ್ವೆಯರ ಮಗ.

ಇವನ ರಾಜ್ಯ ಆಂಧ್ರಪ್ರದೇಶದ ನಿಜಾಮಾಬಾದ್, ಕರೀಂನಗರ್, ನಲ್ಗೊಂಡ ಮತ್ತು ಕರ್ನಾಟಕದ ರಾಯಚೂರು ಜಿಲ್ಲೆಯ ಬಹು ಭಾಗದವರೆಗೆ ಹಬ್ಬಿತ್ತು.

ಇಮ್ಮಡಿ ಅರಿಕೇಸರಿಯ ಕಾಲದಲ್ಲಿ ರಾಷ್ಟ್ರಕೂಟ ಚಕ್ರವರ್ತಿಯಾಗಿದ್ದವನು 4ನೆಯ ಗೋವಿಂದ ರಾಜ. ಚಾಲುಕ್ಯರ ವಿಜಯಾದಿತ್ಯ ಈತನ ಕೋಪಕ್ಕೆ ತುತ್ತಾದಾಗ ಅರಿಕೇಸರಿ ಅವನಿಗೆ ಆಶ್ರಯವಿತ್ತ. ಗೋವಿಂದರಾಜ ಅರಿಕೇಸರಿಯೊಡನೆ ಯುದ್ಧ ಮಾಡಲು ತನ್ನ ಸಾಮಂತರನ್ನು ಕಳುಹಿಸಿದ. ಅರಿಕೇಸರಿ ಅವರನ್ನು ಸೋಲಿಸಿದ.

4ನೆಯ ಗೋವಿಂದರಾಜ ಪಟ್ಟಕ್ಕೆ ಬಂದದ್ದು ಅಣ್ಣನನ್ನು ಪದಚ್ಯುತಗೊಳಿಸಿ. ಇದರಿಂದ ಬಂಧುವರ್ಗದಲ್ಲಿ ಹಾಗೂ ಪ್ರಜೆಗಳಲ್ಲಿ ಈತನ ಬಗೆಗೆ ಅಸಂತೃಪ್ತಿ ಇದ್ದಿತು. ಅರಿಕೇಸರಿ ಗೋವಿಂದರಾಜನನ್ನು ಸೋಲಿಸಿ, ಜನಪ್ರಿಯನಾಗಿದ್ದ ಅವನ ಚಿಕ್ಕಪ್ಪ ಮುಮ್ಮಡಿ ಅಮೋಘವರ್ಷನನ್ನು ಪಟ್ಟಕ್ಕೇರಿಸಿದ.

ಇಮ್ಮಡಿ ಅರಿಕೇಸರಿಯ ಆಸ್ಥಾನದಲ್ಲಿದ್ದವನು ಕನ್ನಡದ ಆದಿಕವಿ ಪಂಪ. ತನ್ನ ಆಶ್ರಯದಾತನನ್ನು ಅರ್ಜುನನಿಗೆ ಸಮಾನನೆಂದು ಬಣ್ಣಿಸಿ ಭಾರತದ ಕಥೆಯನ್ನು ಸೂಕ್ತ ಕಂಡಂತೆ ಬದಲಾಯಿಸಿಕೊಂಡು 'ವಿಕ್ರಮಾರ್ಜುನ ವಿಜಯ'(ಪಂಪ ಭಾರತ)ವನ್ನು ಆತ ಬರೆದ.

ಸಾಮಂತ ಚೂಡಾಮಣಿ, ಉದಾತ್ತ ನಾರಾಯಣ, ಅರೂಢ ಸರ್ವಜ್ಞ, ಕದನ ತ್ರಿನೇತ್ರ, ಶರಣಾಗತ ಜಳನಿಧಿ ಮೊದಲಾದ ಬಿರುದುಗಳು ಅರಿಕೇಸರಿಗೆ ಇತ್ತೆಂದು ವೇಮುಲವಾಡ ಶಾಸನ, ಪರಭಣಿ ಶಾಸನಗಳಿಂದ ತಿಳಿದುಬಂದಿದೆ.

ಅರಿಕೇಸರಿ ವೇಮುಲವಾಡದಲ್ಲಿ ಸೂರ್ಯದೇವಾಲಯ ಕಟ್ಟಿಸಿದ.

ನೋಡಿ : ಚಾಲುಕ್ಯರು

ಅರುಣಾ ಆಸಫ್ ಅಲಿ

ಅರುಣಾ ಆಸಫ್ ಅಲಿ ದಿಟ್ಟ ಹೋರಾಟಗಾತಿ. ಗಾಂಧೀಜಿ 1942ರಲ್ಲಿ ಆರಂಭಿಸಿದ 'ಚಲೇ ಜಾವ್' ಚಳವಳಿಯಲ್ಲಿ ಆಕೆಯ ಪಾತ್ರ ಹಿರಿದು. ಪೋಲೀಸರ ಕಣ್ಣು ತಪ್ಪಿಸಿ ನಾನಾ ಚಟುವಟಿಕೆಗಳನ್ನು ಉತ್ತರ ಭಾರತದಲ್ಲಿ ಅದ್ಭುತ ದಕ್ಷತೆಯಿಂದ ನಡೆಸಿದ ಖ್ಯಾತಿ ಆಕೆಯದು. ಸುಮಾರು ನಾಲ್ಕು ವರ್ಷ ಕಾಲ ಪೋಲೀಸರ ಕೈಗೆ ಸಿಕ್ಕದೆ ಗುಪ್ತವಾಗಿದ್ದರು. ಆಕೆಯನ್ನು ಬಂಧಿಸಲು ಸಹಾಯ ಮಾಡಿದವರಿಗೆ 5 ಸಾವಿರ ರೂಪಾಯಿ ಬಹುಮಾನ ಕೊಡುವ ಬ್ರಿಟಿಷ್ ಸರಕಾರದ ಘೋಷಣೆ ವ್ಯರ್ಥವಾಯಿತು. ತಾವಾಗಿ ಪೋಲೀಸರಿಗೆ ಶರಣಾಗತರಾಗಬೇಕೆಂದು ಸೂಚಿಸಿ ಗಾಂಧೀಜೀ ಪತ್ರ ಬರೆದರೂ ಆಕೆ ಅದಕ್ಕೊಪ್ಪಲಿಲ್ಲ. ಕೊನೆಗೆ ಪೋಲೀಸರೇ ಆಕೆಯ ದಸ್ತಗಿರಿ ಆಜ್ಞೆಯನ್ನು ಹಿಂದಕ್ಕೆ ತೆಗೆದುಕೊಳ್ಳಬೇಕಾಯಿತು !

ಅರುಣಾ ಹುಟ್ಟಿದ್ದು 1910ರಲ್ಲಿ. ಬಂಗಾಳದ ಗಂಗೂಲಿ ಮನೆತನದಲ್ಲಿ. ಕಾಂಗ್ರೆಸ್ ಮುಖಂಡರಾಗಿದ್ದ ಆಸಫ್ ಅಲಿಯವರನ್ನು ಅವರು ವಿವಾಹವಾದರು.

ಅರುಣಾ ರಾಜಕೀಯ ರಂಗವನ್ನು ಪ್ರವೇಶಿಸಿದ್ದು ಕಾನೂನು ಭಂಗ ಚಳುವಳಿಯಲ್ಲಿ. ಸರಕಾರದ ಆಜ್ಞೆಗಳಿಗೆ ವಿರುದ್ಧವಾಗಿ ಸಭೆಗಳನ್ನು ನಡೆಸುವುದು, ಮೆರವಣಿಗೆಗಳನ್ನು ಏರ್ಪಡಿಸುವುದು, ಕಾನೂನಿಗೆ ವಿರುದ್ಧವಾಗಿ ಉಪ್ಪು ತಯಾರಿಸುವುದು ಮುಂತಾದ ಕಾರ್ಯಕ್ರಮಗಳಲ್ಲಿ ಆಕೆ ಭಾಗವಹಿಸಿದರು. ಇದಕ್ಕಾಗಿ ಒಂದು ವರ್ಷ ಸೆರೆಮನೆವಾಸವನ್ನು ಅನುಭವಿಸಬೇಕಾಯಿತು. ಸೆರೆಮನೆಯಿಂದ ಬಿಡುಗಡೆ ಹೊಂದಿದ ಮೇಲೆ ರಾಜಕೀಯ ಕೈದಿಗಳ ಬಗೆಗೆ ಸರಕಾರ ಹೀನಾಯವಾಗಿ ವರ್ತಿಸುತ್ತಿರುವುದರ ವಿರುದ್ಧ ಅರುಣಾ ಪ್ರತಿಭಟನಾ ಸತ್ಯಾಗ್ರಹ ಆರಂಭಿಸಿದರು. ಪರಿಣಾಮ... ಮತ್ತೆ ಸೆರೆಮನೆವಾಸ. ಈ ಬಾರಿ ಅಂಬಾಲಾದಲ್ಲಿ ಏಕಾಂತವಾಸ ಶಿಕ್ಷೆ.

ಅರುಣಾ 'ಇಂಕ್ವಿಲಾಬ್' (ಕ್ರಾಂತಿ) ಎಂಬ ಪತ್ರಿಕೆಯನ್ನೂ ನಡೆಸುತ್ತಿದ್ದರು.

1947ರಲ್ಲಿ ಭಾರತಕ್ಕೆ ಸ್ವಾತಂತ್ರ್ಯ ದೊರೆತ ಮೇಲೆ ಅರುಣಾ ರಾಜಕೀಯ ಕ್ಷೇತ್ರದಿಂದ ವಿರಮಿಸಿದರು. ರಚನಾತ್ಮಕ ಕಾರ್ಯಗಳಲ್ಲಿ ತೊಡಗಿದರು. 1958ರಲ್ಲಿ ದೆಹಲಿ ನಗರದ ಮೇಯರ್ ಆಗಿ ಚುನಾಯಿತರಾದರು. 1964ರಲ್ಲಿ ಆಕೆಗೆ ಲೆನಿನ್ ಶಾಂತಿ ಬಹುಮಾನ ದೊರೆಯಿತು.



ಕ್ರಾಂತಿ : ಅರುಣಾ

ಅಖಿಲ ಭಾರತ ಶಾಂತಿ ಮಂಡಲಿ, ಭಾರತ ಮಹಿಳೆಯರ ರಾಷ್ಟ್ರೀಯ ಫೆಡರೇಷನ್. ಈ ಕ್ಷೇತ್ರಗಳಲ್ಲಿ ಅರುಣಾರ ಸೇವೆ ಗಣನೀಯ.

ನೋಡಿ : 'ಚಲೇ ಜಾವ್' ಚಳುವಳಿ

ಅರುಣಾಚಲ ಪ್ರದೇಶ


'ಸೂರ್ಯೋದಯದ ಬೆಟ್ಟ'—ಅರುಣಾಚಲ. 'ನೇಫಾ' (ನಾರ್ತ್ ಈಸ್ಟ್ ಫ್ರಾಂಟಿಯರ್ ಏಜನ್ಸಿ) ಎಂದು ಕರೆಯಲ್ಪಡುತ್ತಿದ್ದ ಈ ಭಾಗ 1972ರ ಜನವರಿ 20ರಂದು 'ಅರುಣಾಚಲ ಪ್ರದೇಶ'ವಾಯಿತು. ಈ ರಾಜ್ಯ ಕಾಡು, ಗುಡ್ಡ, ಬೆಟ್ಟ, ಪರ್ವತಗಳ ಬೀಡು. ಪಶ್ಚಿಮಕ್ಕೆ ಭೂತಾನ, ಉತ್ತರ ಮತ್ತು ಈಶಾನ್ಯ ದಿಕ್ಕುಗಳಲ್ಲಿ ಟಿಬೆಟ್ ಹಾಗೂ ಚೀನ, ದಕ್ಷಿಣಕ್ಕೆ ಅಸ್ಸಾಂ — ಅರುಣಾಚಲ ಪ್ರದೇಶದ ಮೇರೆಗಳು.

ಕಾಳಿಕಾ ಪುರಾಣದಲ್ಲಿ ನರಕಾಸುರ, ಘಟಕನೆಂಬ ಗಿರಿಜನ ಮುಖ್ಯಸ್ಥನನ್ನು ಸೋಲಿಸಿ, ಪ್ರಾಗ್ಜ್ಯೋತಿಷಪುರದಲ್ಲಿ ತನ್ನ ರಾಜಧಾನಿ ಸ್ಥಾಪಿಸಿದನೆಂದು ಹೇಳಿದೆ. ಘಟಕ ಈ ಪ್ರದೇಶದ ಮೂಲನಿವಾಸಿಗಳ ನಾಯಕನಿದ್ದಿರಬಹುದು. ಲೋಹಿತ್ ಜಿಲ್ಲೆಯಲ್ಲಿರುವ ಬ್ರಹ್ಮಕುಂಡದ ಬಗೆಗೂ ಒಂದು ದಂತ ಕಥೆಯಿದೆ. ಪರಶುರಾಮ ತನ್ನ ಕೊಡಲಿಯಿಂದ ಬೆಟ್ಟಗಳ ನಡುವೆ ದಾರಿ ಕಡಿದು ಬ್ರಹ್ಮಪುತ್ರ ಮುಂದಕ್ಕೆ ಹರಿಯಲು ಅವಕಾಶ ಮಾಡಿಕೊಟ್ಟನೆಂದು ಪ್ರತೀತಿ. ಬ್ರಹ್ಮಕುಂಡ ಒಂದು ಯಾತ್ರಾಸ್ಥಳ.

ಭೌಗೋಳಿಕ ಕಾರಣಗಳಿಂದ ಈ ಪ್ರದೇಶದಲ್ಲಿ ಪ್ರಾಚೀನ ನಾಗರಿಕತೆ ಬೆಳೆಯಲಿಲ್ಲ. ಇಲ್ಲಿನ ಜನರಿಗೆ ಭಾರತದ ಇತರ ಭಾಗಗಳಿಗಿಂತಲೂ ಟಿಬೆಟ್, ಬರ್ಮಗಳ ಸಂಪರ್ಕ ಹೆಚ್ಚು. ಭಾಷೆಯೂ ಟಿಬೆಟ್ ಹಾಗೂ ಬರ್ಮಾ ಭಾಷೆಗಳ ಮಿಶ್ರಣ.

ಹದಿಮೂರನೆಯ ಶತಮಾನದಲ್ಲಿ ಅಸ್ಸಾಂನ ಉತ್ತರಭಾಗಕ್ಕೆ ಬಂದು ನೆಲೆಸಿದ ಅಹೋಂ ಜನರಿಗೂ ಅರುಣಾಚಲ ಪ್ರದೇಶದವರಿಗೂ ಸಂಪರ್ಕವಿದ್ದಂತೆ ತೋರುತ್ತದೆ. ಅಹೋಂ ದೊರೆಗಳು ಅಸ್ಸಾಂನ್ನು 16ನೆಯ ಶತಮಾನದಲ್ಲಿ ಆಳಲಾರಂಭಿಸಿದರು. ಅರುಣಾಚಲ ಪ್ರದೇಶವನ್ನು ಅವರು ವಶಪಡಿಸಿಕೊಂಡರು. 1838ರಲ್ಲಿ ಬ್ರಿಟಿಷರು ಅಸ್ಸಾಂನ್ನು ತಮ್ಮ ವಶಕ್ಕೆ ತೆಗೆದುಕೊಂಡರು. ಆಗ ಅರುಣಾಚಲ ಪ್ರದೇಶವೂ ಅವರದಾಯಿತು. ಸ್ವಾತಂತ್ರ್ಯ ಬಂದ ಮೇಲೆ ಭಾರತದ ಈ ಗಿರಿಜನರಿಗೂ ಉಳಿದ ಬಯಲು ಪ್ರದೇಶದವರಿಗೂ ಹೆಚ್ಚಿನ ಸಂಪರ್ಕ ಏರ್ಪಟ್ಟಿತು.

ಅರುಣಾಚಲ ಪ್ರದೇಶದಲ್ಲಿ ಐದು ಜಿಲ್ಲೆಗಳಿವೆ. ಪ್ರಧಾನ ಪಟ್ಟಣಗಳು ಪಾಸೀಘಾಟ್, ಬೊಮ್ಡಿಲಾ, ಜಿರೊ, ಅಲಾಂಗ್, ತೇಜು ಹಾಗೂ ಖೊನ್ಸಾ. ರಾಜಧಾನಿಯ ನಿರ್ಮಾಣ ಚಾರಿತ್ರಿಕ ಮಾಯಾಪುರದಲ್ಲಿ. ಅರುಣಾಚಲ ಕೇಂದ್ರಾಡಳಿತಕ್ಕೆ ಸೇರಿದ ಪ್ರದೇಶ. ಇಲ್ಲಿ 40 ಬುಡಕಟ್ಟುಗಳ ಜನರಿದ್ದಾರೆ. ಐವತ್ತು ಭಾಷಾ ಪ್ರಭೇದಗಳಿವೆ.





ಬೆಟ್ಟದ ಬಾಲಕಿಯರು

ಈ ಜನರ ವಾಸಸ್ಥಾನ ಕಣಿವೆಗಳು, ಗುಡ್ಡಗಳು. ಎತ್ತರವಾಗಿ ನೆಟ್ಟ ಬೊಂಬುಗಳ ತುದಿಯಲ್ಲಿ ಅಟ್ಟಣೆ ರಚಿಸಿ ಅದರ ಮೇಲೆ ಮನೆ ಕಟ್ಟುತ್ತಾರೆ. ನೆಲದ ತೇವವನ್ನೂ ಕಾಡು ಪ್ರಾಣಿಗಳ ಕಾಟವನ್ನೂ ನಿವಾರಿಸುವ ಉಪಾಯ ಇದು. ಮರದ ದಿಮ್ಮಿಯನ್ನು ಅಲ್ಲಲ್ಲಿ ಕೊಚ್ಚಿ ಅದನ್ನು ಓರೆಯಾಗಿ ನಿಲ್ಲಿಸಿ ಮನೆಗೆ ಹತ್ತಿ ಹೋಗುವ ಮೆಟ್ಟಿಲನ್ನಾಗಿ ಉಪಯೋಗಿಸುತ್ತಾರೆ. ಇಂಥ ಒಂದು ಮನೆಯಲ್ಲಿ 60–70 ಜನ ವಾಸಿಸುತ್ತಾರೆ. ಒಂದು ಹಳ್ಳಿಯಲ್ಲಿ ಇರುವುದು ಇಂಥ ಒಂದೆರಡು ಮನೆಗಳು, ಅಷ್ಟೇ.

ಜನರ ಮುಖ್ಯ ಕಸಬು ಬೇಸಾಯ. ಕೆಲವು ಬೆಳೆಗಳನ್ನು ತೆಗೆದ ಮೇಲೆ ಆ ಸ್ಥಳವನ್ನು ಬಿಟ್ಟು ಬೇರೆ ಕಡೆ ಬೇಸಾಯ ಮಾಡುವುದು ಇವರ ಪದ್ಧತಿ. ಇದಕ್ಕೆ 'ಝೂಮ್' ಎನ್ನುತ್ತಾರೆ. ಭತ್ತ, ಜೋಳ, ರಾಗಿ, ಹತ್ತಿ, ಹೊಗೆಸೊಪ್ಪು ಮತ್ತು ತರಕಾರಿಗಳನ್ನು ಬೆಳೆಯುತ್ತಾರೆ.

ಅರುಣಾಚಲ ಪ್ರದೇಶದಲ್ಲಿ ವ್ಯವಸಾಯಯೋಗ್ಯವಾದ ಭೂಮಿ ಕಡಮೆ. ಬೆಳೆಗಳಲ್ಲಿ ವೈವಿಧ್ಯವಿಲ್ಲ. ಆದ್ದರಿಂದ ಪೂರಕ ಆಹಾರಕ್ಕಾಗಿ ಜನ ಬೇಟೆಯಾಡುತ್ತಾರೆ: ಮೀನು ಹಿಡಿಯುತ್ತಾರೆ: ಹಂದಿಗಳನ್ನೂ ಕೋಳಿ ಜಾತಿಯ ಹಕ್ಕಿಗಳನ್ನೂ ಸಾಕುತ್ತಾರೆ. ಹಾಲು ಮಾತ್ರ ಇಲ್ಲಿ ನಿಷಿದ್ಧ. ಅಕ್ಕಿಯಿಂದ ತಯಾರಿಸಿದ ಒಂದು ಮಾದಕ ಪದಾರ್ಥ ಮಾತ್ರ ಇಲ್ಲಿನ ಮುಖ್ಯ ಪಾನೀಯ. ಕೋಣ, ಕಾಡುಹಸುಗಳ ಮಿಶ್ರತಳಿಯಾದ 'ಮಿಥುನ್' ಎಂಬ ಪಶು ಅರುಣಾಚಲದಲ್ಲಿ ಹೆಚ್ಚು ಅಮೂಲ್ಯ. ಇದನ್ನು ಬೇರೆ ಪದಾರ್ಥಗಳೊಡನೆ ವಿನಿಮಯ ಮಾಡಿಕೊಳ್ಳುತ್ತಾರೆ. ಮದುವೆ, ಅಂತ್ಯಕ್ರಿಯೆ, ಹಬ್ಬಗಳಲ್ಲಿ ಇದನ್ನು ಬಲಿ ಕೊಡುತ್ತಾರೆ.

ಕಾಮೆಂಗ್ ಜಿಲ್ಲೆಯ ಬಹುಪಾಲು ಜನರು ಬೌದ್ಧರು. ಇವರು ಮೋಂಪಾ ಬುಡಕಟ್ಟಿನವರು. ಅತಿಥಿಯ ಕತ್ತಿನ ಮೇಲೆ ಬಿಳಿಯ ವಸ್ತ್ರ ಹೊದಿಸಿ ಗೌರವಿಸುವುದು ಇವರ ಪದ್ಧತಿ. ಸುಬನ್‌ಸಿರಿಯಲ್ಲಿ ಡಾಫ್ಲಾ, ಅಪತಾನಿ ಬುಡಕಟ್ಟಿನ ಜನ ವಾಸಿಸುತ್ತಾರೆ. ಸಿಯಾಂಗ್‌ನಲ್ಲಿ ಅಬೋರ್ ಅಥವಾ ಆದಿಗಳಿದ್ದಾರೆ. ಲೋಹಿತ್ ಜಿಲ್ಲೆಯಲ್ಲಿ ಮಿಷ್ಮಿಗಳೂ ತಿರಪ್ ಜಿಲ್ಲೆಯಲ್ಲಿ ವಾಂಚೊ, ನಾಕ್ಟೆಗಳೂ ಇದ್ದಾರೆ. ಸತ್ತವರ ಸಮಾಧಿಯ ಬಳಿ ಅಲಂಕೃತ ಟೊಪ್ಪಿಗೆ, ವರ್ಣಮಯ ಬಟ್ಟೆ, ಈಟಿ, ಬಂದೂಕು, ಆಭರಣಗಳನ್ನು ಇಡುತ್ತಾರೆ. ಸ್ತ್ರೀ ಪುರುಷರ ಉಡುಗೆ ತೊಡುಗೆಗಳು, ಆಭರಣಗಳು ವೈವಿಧ್ಯಮಯವಾಗಿವೆ.

ಅರುಣಾಚಲ ಪ್ರದೇಶದ ಕಾಡುಗಳ ಮುಖ್ಯ ಉತ್ಪನ್ನ ಮರ. ಹಲವು ಬಗೆಯ ಪ್ರಾಣಿ ಪಕ್ಷಿಗಳೂ ಈ ಕಾಡುಗಳಲ್ಲಿವೆ.



ಪುಟಾಣಿಗಳಿಗೆ ಶಿಕ್ಷಣ

ನೂಲುವುದು, ನೇಯುವುದು, ಹೊಲಿಗೆ ಕೆಲಸ, ನೆಲಹಾಸು ತಯಾರಿ, ಮರಗೆಲಸ, ಮರದಲ್ಲಿ ಕೆತ್ತನೆ, ಬೊಂಬು, ಬಿದಿರಿನ ಸಾಮಾನುಗಳು, ಕುಂಭಕೆಲಸ, ಸೋಪು ತಯಾರಿ, ರೇಷ್ಮೆಹುಳು ಬೆಳೆಸುವುದು — ಹೀಗೆ ಅನೇಕ ಗೃಹಕೈಗಾರಿಕೆಗಳು ರೂಢಿಯಲ್ಲಿವೆ. ಅವರ ಬಟ್ಟೆಗಳ ನಮೂನೆಯ ವಿನ್ಯಾಸಗಳು ಕಲಾತ್ಮಕವಾಗಿವೆ. ಮರದ ತುಂಡಿನಿಂದ ಮಾಡುವ ಮೊಗವಾಡ ಹಾಗೂ ಪ್ರತಿಮೆಗಳು ಚೈತನ್ಯಪೂರ್ಣ. ಈ ಗಿರಿಜನರಿಗೆ ಹಾಡು ನೃತ್ಯಗಳಲ್ಲಿ ಅಪಾರ ಆಸಕ್ತಿ. ಹಾಡುಗಳಲ್ಲಿ ಉತ್ತಮ ಕಾವ್ಯಾಂಶವಿದೆ. ಈ ಜನರ ವಿದ್ಯಾಭ್ಯಾಸಕ್ಕಾಗಿ ಈಗ ಅನೇಕ ಶಾಲೆಗಳು ತೆರೆಯಲ್ಪಟ್ಟಿವೆ. ಪ್ರೌಢ ವಿದ್ಯಾಭ್ಯಾಸಕ್ಕೆ ಇವರು ಬೇರೆ ರಾಜ್ಯಗಳಿಗೆ ಹೋಗುತ್ತಾರೆ. ವಿದ್ಯುತ್ ಉತ್ಪಾದನೆ ಹಾಗೂ ಗೃಹಕೈಗಾರಿಕೆಗಳ ಅಭಿವೃದ್ಧಿಗೆ ಯೋಜನೆಗಳಿವೆ.

ತೀವ್ರ ಬದಲಾವಣೆಗಳಾಗುತ್ತಿರುವ ಅರುಣಾಚಲ ಪ್ರದೇಶದಲ್ಲಿ ಪಟ್ಟಣಗಳು ರೂಪುಗೊಳ್ಳುತ್ತಿವೆ. ಭಾರತದ ಉಳಿದ ರಾಜ್ಯಗಳೊಡನೆ ಇದರ ಸಂಪರ್ಕ ಹೆಚ್ಚುತ್ತಿದೆ.

ಅಲ್ ಬಿರುನಿ

"ಐತಿಹಾಸಿಕ ದಾಖಲೆಗಳಲ್ಲಿ ಅವರಿಗೆ ಆಸಕ್ತಿ ಇಲ್ಲ : ಹಿಂದಿನ ಸಂಗತಿಗಳ ಬಗೆಗೆ ಒತ್ತಾಯಮಾಡಿ ಕೇಳಿದ್ದರೆ, ಕಥೆ ಹೇಳಲು ಪ್ರಾರಂಭಿಸುತ್ತಾರೆ..."

ಘಜ್ನಿ ಮಹಮ್ಮದನ ಕಾಲದ ಪಾರಸೀ ಪಂಡಿತ ಅಲ್ ಬಿರುನಿಯ ಮಾತು ಇದು. ಭಾರತೀಯರ ಬೌದ್ಧಿಕ ಸಾಧನೆಗಳ ಉತ್ಕೃಷ್ಟತೆಯನ್ನು ಅವನು ಗೌರವಿಸಿದ. ತನಗೆ ಸರಿಕಾಣದ ಸಂಗತಿಗಳನ್ನು ಟೀಕಿಸಿದ.



ಪ್ರಶಂಸೆ, ಟೀಕೆ : ಅಲ್ ಬಿರುನಿ

"ಹಿಂದುಗಳಲ್ಲಿ ಉತ್ತಮ ವಿಜ್ಞಾನಿಗಳು ಬಹಳ ಮಂದಿ ಇರುವರಾದರೂ ವಿಜ್ಞಾನಕ್ಕೆ ರಾಜಪ್ರೋತ್ಸಾಹ ಹೆಚ್ಚಿದರೆ ಇನ್ನೂ ಒಳ್ಳೆಯದು. ಸಂಕುಚಿತ ದೃಷ್ಟಿ ಇಲ್ಲದಿದ್ದರೂ ಇವರ ಹಿಂದಿನವರ ಗಣಿತ ಮತ್ತು ವಿಜ್ಞಾನ, ಈಗ ಸಾಮಾನ್ಯ ಮೂಢನಂಬಿಕೆಗಳೊಡನೆ ಬೆರೆತು, ರತ್ನ – ಕಲ್ಲು ಹರಳುಗಳ ಮಿಶ್ರಣದಂತಾಗಿದೆ..."

ಇದು ಅಲ್ ಬಿರೂನಿಯ ಅಭಿಪ್ರಾಯ. ಅವನು ಕಷ್ಟಪಟ್ಟು ಸಂಸ್ಕೃತ ಕಲಿತು, ಭಾರತದ ಜ್ಞಾನ ಸಂಪತ್ತಿನ ಬಗೆಗೆ ವಿಮರ್ಶಿಸಿದ. ತನ್ನ ಮಾತೃಭಾಷೆ ಅರಬಿಯಲ್ಲಿ ಅಲ್ ಬಿರೂನಿ ರಚಿಸಿದ ಗ್ರಂಥಗಳು (ಕೆಲವು ಅನುವಾದಗಳೂ ಸೇರಿ) ಸುಮಾರು ಇಪ್ಪತ್ತು; ಇವುಗಳಲ್ಲಿ ಭಾರತ ಕುರಿತದ್ದು ಅವನ ಮೇರುಕೃತಿ. ಅಲ್ ಬಿರೂನಿ ಹುಟ್ಟಿದ್ದು ಖಿವಾದ ಅಬೂ ರೈಹಾನ್(ಈಗ ರಷ್ಯಾದ ...) ನಲ್ಲಿ ಕ್ರಿ.ಶ. 973ರಲ್ಲಿ ಜನಿಸಿದ. ಖಗೋಳವಿಜ್ಞಾನ, ತತ್ತ್ವಜ್ಞಾನಗಳ ಬಗೆಗೆ ಹಲವು ಅರಬೀ ಗ್ರಂಥಗಳನ್ನು ಓದಿ ಪಂಡಿತನಾಗಿ ರಾಜಮನ್ನಣೆ ಗಳಿಸಿದ. ಘಜ್ನಿ ಮಹಮ್ಮದ್ ಕ್ರಿ.ಶ. 1017ರಲ್ಲಿ ಆ ರಾಜ್ಯವನ್ನು ಗೆದ್ದಾಗ ಸೆರೆಹಿಡಿಯಲ್ಪಟ್ಟ ಪ್ರಮುಖ ವ್ಯಕ್ತಿಗಳಲ್ಲಿ ಇವನೂ ಒಬ್ಬ.

ಕ್ರಿ.ಶ. 1030ರ ಸುಮಾರಿಗೆ ಭಾರತದ ಕನೌಜದಲ್ಲಿ ಸ್ವಲ್ಪ ಕಾಲ ಇದ್ದ. ಭಾರತದ ಇತರ ಕೆಲವು ಭಾಗಗಳನ್ನು ಇವನು ಸಂದರ್ಶಿಸಿರಬಹುದು. ಎರಡು ವರ್ಷಗಳ ಅನಂತರ ಘಜ್ನಿಯಲ್ಲಿ ಭಾರತಕ್ಕೆ ಸಂಬಂಧಿಸಿದ ಗ್ರಂಥವನ್ನು ಬರೆದು ಮುಗಿಸಿದ.

ಇವನು ತನ್ನ ಕೃತಿಯಲ್ಲಿ ಪುರಾಣಗಳು, ಶಾಸ್ತ್ರಗ್ರಂಥಗಳು, ಭಗವದ್ಗೀತೆ, ಯೋಗಸೂತ್ರಗಳನ್ನು ಉದಾಹರಿಸಿರುವುದಲ್ಲದೆ, ಜನಜೀವನದಲ್ಲಿನ ಹಬ್ಬ, ವ್ರತ, ಉಪವಾಸ, ಸಂಪ್ರದಾಯಗಳನ್ನು ವಿವೇಚಿಸಿದ್ದಾನೆ.

ಕಾಶ್ಮೀರ, ವಾರಾಣಸಿಗಳನ್ನು ವಿಜ್ಞಾನ ಅಧ್ಯಯನ ಕೇಂದ್ರಗಳೆಂದು ಅವನು ಹೆಸರಿಸಿದ್ದಾನೆ. ಹಿಂದುಗಳ ಅಪಾರ ಸಾಹಿತ್ಯರಾಶಿಯನ್ನು ಅರ್ಥಮಾಡಿಕೊಳ್ಳುವುದು ತನ್ನಿಂದ ಆಗಲಿಲ್ಲ ಎಂದು ವ್ಯಥೆಪಟ್ಟಿದ್ದಾನೆ.

ಅಲ್ ಬಿರೂನಿ ತನ್ನ 75ನೆಯ ವಯಸ್ಸಿನಲ್ಲಿ ನಿಧನನಾದ. 1973ರಲ್ಲಿ ಅವನ ಸಹಸ್ರಾಬ್ದಿ ಆಚರಿಸಲ್ಪಟ್ಟಿತು.

ಅಲ್ ಮಸೂದಿ

ಬಾಗ್ದಾದಿನ ಅಲ್ ಮಸೂದಿ ತನಗೆ ತಿಳಿದಿದ್ದ ದೇಶಗಳಲ್ಲೆಲ್ಲ ಪ್ರವಾಸ ಮಾಡಿದ. ಅವನು ರಚಿಸಿದ ಪ್ರವಾಸಕಥನ, 'ಹೊನ್ನಿನ ಹುಲ್ಲುಗಾವಲು' ಅರಬೀ ಸಾಹಿತ್ಯದಲ್ಲಿ ಇದು ಗೌರವದ ಸ್ಥಾನ ಪಡೆದಿದೆ.

'ಪೂರ್ವದ ಬಗೆಗೆ ಮರೆತೇ ಹೋಗುವಷ್ಟು ದೂರ ಪಶ್ಚಿಮಕ್ಕೆ, ಪಶ್ಚಿಮವನ್ನೇ ಮರೆಯುವಷ್ಟು ದೂರ ಪೂರ್ವಕ್ಕೆ' ತಾನು ಸಂಚರಿಸಿದೆ ಎಂದಿರುವ ಅಲ್ ಮಸೂದಿ, ಹತ್ತನೆಯ ಶತಮಾನದ ಪ್ರಾರಂಭದ ನಲವತ್ತು ವರ್ಷ ಅವಧಿಯಲ್ಲಿ ಬಹುಶಃ ಹಲವಾರು ಸಲ ಭಾರತಕ್ಕೆ ಬಂದಿದ್ದ.

'ಸಮುದ್ರ, ಭೂಮಿ, ಪರ್ವತಗಳೆಲ್ಲ ಸೇರಿರುವ' ಇಂಡಿಯಾ ದೇಶದ ವ್ಯಾಪ್ತಿ ಸಿಂಧ್, ಟಿಬೆಟ್‌ಗಳಿಂದ 'ಜಾಬಜ್' (ಜಾವಾ) ತನಕ ಇದೆ. ಜಾಬಜ್ ಸಹ ಇಂಡಿಯಾದ ಅಂಗ; ಅದರಾಚೆಗೆ ಚೀನೀ ಪ್ರದೇಶ — ಎಂದು

ಅಲ್ ಮಸೂದಿ [illegible] ಅಲ್ ಮಸೂದಿ ಹುಟ್ಟಿದ್ದು ಯಾವಾಗ ಎಂಬುದು ತಿಳಿಯದು ; ಅವನು ಗತಿಸಿದ್ದು 956ರಲ್ಲಿ.

ಅಲಹಾಬಾದ್

ಗಂಗೆ, ಯಮುನೆಗಳು ಸೇರುವಲ್ಲಿ ಬೆಳೆದ ನಗರ, ಅಲಹಾಬಾದ್. ಇದರ ಹಿಂದಿನ ಹೆಸರು ಪ್ರಯಾಗ.

ಚಕ್ರವರ್ತಿ ಅಕ್ಬರ್ 1583ರಲ್ಲಿ ಇಲ್ಲಿ ಒಂದು ಕೋಟೆ ಕಟ್ಟಿಸಿದ. ಅದರಲ್ಲಿನ ಪಟ್ಟಣಕ್ಕೆ 'ಅಲ್ಲಾ ಬಾದ್' ('ಭಗವಂತನ ನಗರ') ಎಂಬ ಹೆಸರು ಕೊಟ್ಟ. ಮೊಘಲರ ಪತನದ ಅನಂತರ ಈ ನಗರ ಹಲವಾರು ಆಳ್ವಿಕೆಗಳಿಗೆ ಒಳಪಟ್ಟಿತು. ಕೊನೆಗೆ 1801ರಲ್ಲಿ ಬ್ರಿಟಿಷರು ಇದನ್ನು ಔಧ್ ನವಾಬನಿಗೆ ಕೊಟ್ಟರು. 1857ರ ಆಂದೋಲನದ ಕಾಲದಲ್ಲಿ ಅಲಹಾಬಾದಿನಲ್ಲಿ ಭೀಕರ ರಕ್ತಪಾತವಾಯಿತು.



ಆನಂದ ಭವನ

ನೆಹರೂ ಮನೆತನದ ನೆಲೆಯಾದ ಈ ನಗರ ಮತ್ತೆ ಸ್ವಾತಂತ್ರ್ಯ ಹೋರಾಟದ ಕಾಲಕ್ಕೆ ರಾಷ್ಟ್ರೀಯ ಚಳುವಳಿಯ ಪ್ರಮುಖ ಕೇಂದ್ರವಾಯಿತು. ಯುವಕ ಜವಾಹರಲಾಲ ನೆಹರೂ ಕೆಲ ಕಾಲ ಈ ನಗರ ಪುರಸಭೆಯ ಅಧ್ಯಕ್ಷರಾಗಿದ್ದರು.

ಗಂಗಾ, ಯಮುನಾ ನದಿಗಳ ಸಂಗಮದಲ್ಲಿರುವ ಈ ಕ್ಷೇತ್ರದಲ್ಲಿ ಪ್ರತಿ ವರ್ಷ ಮಾಘಮೇಳವೂ ಹನ್ನೆರಡು ವರ್ಷಗಳಿಗೊಮ್ಮೆ ಮಹಾ ಕುಂಭಮೇಳವೂ ನಡೆಯುತ್ತವೆ. ಈ ಮೇಳಗಳು ಜರಗುವುದು ಗಂಗಾ, ಯಮುನಾ ನದಿಗಳ ಸಂಗಮ ಸ್ಥಾನದಲ್ಲಿ. ಮಹಾ ಕುಂಭಮೇಳ ಕಾಲದಲ್ಲಿ ಐದಾರು ಲಕ್ಷಕ್ಕಿಂತ ಹೆಚ್ಚು ಮಂದಿ ಯಾತ್ರಿಕರು ಇಲ್ಲಿ ನೆರೆಯುತ್ತಾರೆ.

ಅಲಹಾಬಾದಿನಿಂದ ಭಾರತದ ಹಲವಾರು ಮುಖ್ಯ ನಗರಗಳಿಗೆ ರಸ್ತೆ ಮತ್ತು ರೈಲು ಸಂಪರ್ಕವಿದೆ. ಕಲ್ಕತ್ತಾ, ದೆಹಲಿ, ಅಮೃತಸರಗಳನ್ನು ಸಂಬಂಧಿಸುವ ಗ್ರಾಂಡ್ ಟ್ರಂಕ್ ರಸ್ತೆ ಈ ನಗರದ ಮೂಲಕ ಹಾದು ಹೋಗುತ್ತದೆ.

ಅಲಹಾಬಾದಿನಲ್ಲಿ ಹಿಂದು ಹಾಗೂ ನಗರಗಳೆಂದು ಎರಡು ಭಾಗಗಳಿವೆ. ಆಧುನಿಕ ನಗರದ ಮುಖ್ಯ ಕಟ್ಟಡಗಳು ಸರಕಾರೀ ಭವನ, ಮೇಯೋ ಹಾಲ್, ಜುಮ್ಮಾ ಮಸೀದಿ, ಆನಂದ ಭವನ ಮುಂತಾದುವು. ಇಲ್ಲಿ ಒಂದು ವಸ್ತು ಸಂಗ್ರಹಾಲಯವೂ ಇದೆ. ಹಳೆಯ ಅವಶೇಷಗಳಲ್ಲಿ ಮುಖ್ಯವಾದುವು ಕ್ರಿ. ಪೂ. 242ರಲ್ಲಿ ಸ್ಥಾಪಿಸಲ್ಪಟ್ಟ ಅಶೋಕಸ್ತಂಭ ಹಾಗೂ ಅಕ್ಬರ್ ಕಟ್ಟಿಸಿದ ಕೋಟೆ.

ಅಲಹಾಬಾದ್ ವ್ಯಾಪಾರಕೇಂದ್ರ. ಧಾನ್ಯ, ಎಣ್ಣೆಬೀಜ, ಕಬ್ಬು, ಹತ್ತಿ, ಬೆಣ್ಣೆ ಇವು ವ್ಯಾಪಾರದ ಮುಖ್ಯ ವಸ್ತುಗಳು. ಹಿಟ್ಟಿನಗಿರಣಿ, ಉಣ್ಣೆ ಉದ್ಯಮ, ಇಟ್ಟಿಗೆ, ಸಾಬೂನು ಕೈಗಾರಿಕೆಗಳೂ ಇವೆ. ಹೆಸರಾದ ಅಲಹಾಬಾದ್ ಸೀಬೆ ಹಣ್ಣುಗಳನ್ನು ಸಂಸ್ಕರಿಸಿ ಡಬ್ಬಗಳಲ್ಲಿ ರಕ್ಷಿಸಿಡುವ ಕೈಗಾರಿಕೆಯೂ ನಡೆಯುತ್ತದೆ. ಈ ನಗರದ ಜನಸಂಖ್ಯೆ 5,13,036.

ಅಲಹಾಬಾದ್ ಒಂದು ವಿಶ್ವವಿದ್ಯಾಲಯದ ಕೇಂದ್ರ.

ನೋಡಿ : ಕುಂಭಮೇಳ ; ವಿಶ್ವವಿದ್ಯಾಲಯ

ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರ್

ಚಿಕ್ಕ ವಯಸ್ಸಿನಲ್ಲೇ ವಕೀಲರಾಗಿ ಹೆಸರು ಪಡೆದ ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರ್ ಮದರಾಸಿನ ಅಡ್ವೊಕೇಟ್ ಜನರಲ್ ಪದವಿಯಲ್ಲಿ 15 ವರ್ಷ ಇದ್ದರು. ಮದರಾಸು ವಿಶ್ವವಿದ್ಯಾನಿಲಯದ ಸಿಂಡಿಕೇಟ್, ಸೆನೆಟುಗಳಲ್ಲಿ ಹಲವು ವರ್ಷ ಸದಸ್ಯರಾಗಿದ್ದರು. ಬನಾರಸ್ ಹಿಂದೂ ವಿಶ್ವವಿದ್ಯಾನಿಲಯದ ಆಡಳಿತ ಮಂಡಳಿಯಲ್ಲಿ 23 ವರ್ಷ ಸದಸ್ಯರಾಗಿದ್ದರು.

ಅಲ್ಲಾಡಿಯವರು ಆಗಿನ ಮದರಾಸು ಪ್ರಾಂತದ (ಈಗಿನ ಆಂಧ್ರ ಪ್ರದೇಶದ) ನೆಲ್ಲೂರು ಜಿಲ್ಲೆಯ ನಾಯುಡುಪೇಟೆ ಬಳಿ ಪುದೂರು ಹಳ್ಳಿಯಲ್ಲಿ 1883 ಮೇ 14ರಂದು ಹುಟ್ಟಿದರು. ಇವರ ಮನೆತನ ಪಾಂಡಿತ್ಯಕ್ಕೆ ಹೆಸರಾದದ್ದು. ಅಲ್ಲಾಡಿಯವರ ತಂದೆ ಏಕಾಂಬರ ಶಾಸ್ತ್ರೀ ಮಗನಿಗೆ ಒಳ್ಳೆಯ ವಿದ್ಯಾಭ್ಯಾಸ ಕೊಡಿಸಲು ಬಯಸಿದರು. ಅವರ ಕುಟುಂಬ 1891ರಲ್ಲಿ ಮದರಾಸಿಗೆ ಬಂದು ನೆಲೆಸಿತು.

ಅಲ್ಲಾಡಿಯವರು ಮದರಾಸಿನ ಕ್ರಿಶ್ಚಿಯನ್ ಕಾಲೇಜಿನಿಂದ 1903ರಲ್ಲಿ ಬಿ.ಎ. ಪದವಿಯನ್ನು ಪಡೆದರು. 1905ರಲ್ಲಿ ಬಿ.ಎಲ್. ಮುಗಿಸಿದರು. ಸ್ವಲ್ಪ ಕಾಲ ಇತಿಹಾಸ ಅಧ್ಯಾಪಕರಾಗಿದ್ದರು. ಅನಂತರ ವಕೀಲಿ ವೃತ್ತಿ ಕೈಗೊಂಡರು. ಒಂದು ಅಪೀಲು ವಿಷಯವಾಗಿ 1933ರಲ್ಲಿ ಇಂಗ್ಲೆಂಡಿಗೆ ಹೋಗಿದ್ದಾಗ ಅಲ್ಲಿ ಬ್ರಿಟಿಷ್ ನ್ಯಾಯಾಂಗದ ಕಾರ್ಯಪದ್ಧತಿಯನ್ನು ಸೂಕ್ಷ್ಮವಾಗಿ ಅಭ್ಯಾಸ ಮಾಡಿದರು.

ಅಲ್ಲಾಡಿಯವರು 1920ರ ವೇಳೆಗೆ ಮದರಾಸಿನ ಪ್ರಮುಖ ವಕೀಲರೆನಿಸಿ ಪ್ರಸಿದ್ಧಿಗೆ ಬಂದರು.

1938ರಲ್ಲಿ ಅಲ್ಲಾಡಿಯವರು ಕಾಂಗ್ರೆಸ್ ಪಕ್ಷ ಸೇರಿದರು. ಕಡೆಯವರೆಗೂ ಆ ಪಕ್ಷದ ಸದಸ್ಯರಾಗಿದ್ದರು.

ಬ್ರಿಟಿಷರ ಕಾಲದಲ್ಲಿ ಕೈಸರ್ ಹಿಂದ್, ದಿವಾನ್ ಬಹದ್ದೂರ್, ನೈಟ್ ಪದವಿ ಮುಂತಾದ ಪ್ರಶಸ್ತಿಗಳು ಅವರಿಗೆ ಲಭಿಸಿದ್ದುವು.

ಸ್ವತಂತ್ರ ಭಾರತದ ಸಂವಿಧಾನ ರಚನಾ ಸಮಿತಿಯ ಸದಸ್ಯರಾಗಿ ಅಲ್ಲಾಡಿಯವರು ಪ್ರಶಂಸನೀಯ ಕೆಲಸ ಮಾಡಿದರು. ಭಾರತ ರಾಜ್ಯಾಂಗ ಸಭೆಯ ಸದಸ್ಯರಾಗಿಯೂ ಇದ್ದರು.

1953ರಲ್ಲಿ ಅವರು ನಿಧನರಾದರು.

ಅಲ್ಲಾವುದ್ದೀನ್ ಖಿಲ್ಜಿ

ಖಿಲ್ಜಿ ಸಂತತಿಯ ಪ್ರತಾಪಶಾಲಿ ಸುಲ್ತಾನ ಅಲ್ಲಾವುದ್ದೀನ್ ಖಿಲ್ಜಿ. ಇವನು ಫಿರೋಜ್ ಜಲಾಲುದ್ದೀನನ ತಮ್ಮನ ಮಗ ಮತ್ತು ಅಳಿಯ. ಈಗಿನ ಅಲಹಾಬಾದ್ ಜಿಲ್ಲೆಯಲ್ಲಿರುವ ಕಾರ ಮತ್ತು ಮಾಳ್ವ ಪ್ರದೇಶಗಳ ಪ್ರಾಂತಾಧಿಕಾರಿಯಾಗಿದ್ದ.

8,000 ಅಶ್ವಸೇನೆ ತೆಗೆದುಕೊಂಡು ಅಲ್ಲಾವುದ್ದೀನ್ ವಿಂಧ್ಯಪರ್ವತದ ದಕ್ಷಿಣಕ್ಕಿದ್ದ ದೇವಗಿರಿಯನ್ನು ಆಕ್ರಮಿಸಿದ. ರಾಜ ರಾಮಚಂದ್ರದೇವ ಕಪ್ಪ ಕೊಡಲು ಸಮ್ಮತಿಸಿದ. ಅಲ್ಲಿಂದ ಖಿಲ್ಜಿ ಅಪಾರ ಧನ, ಚಿನ್ನ, ಬೆಳ್ಳಿ ದೋಚಿಕೊಂಡು ಬಂದ. ತನಗೆ ಸ್ವಾಗತ ಬಯಸಲು ಬಂದ ಜಲಾಲುದ್ದೀನನನ್ನು ಕುತಂತ್ರದಿಂದ ಕೊಲೆ ಮಾಡಿಸಿದ. 1296ರಲ್ಲಿ ಅಲ್ಲಾವುದ್ದೀನ್ ಪಟ್ಟಕ್ಕೆ ಬಂದ.



ಶೌರ್ಯ ಸಾಮರ್ಥ್ಯ : ಅಲ್ಲಾವುದ್ದೀನ್

ಗಡಿನಾಡಿನಲ್ಲಿ ಸಮರ್ಪಕ ರಕ್ಷಣಾ ವ್ಯವಸ್ಥೆ ಮಾಡಿದ. ಮಂಗೋಲರು ವಾಯವ್ಯ ಪ್ರದೇಶದಿಂದ ನಡೆಸುತ್ತಿದ್ದ ದಾಳಿಯನ್ನು ತಡೆದ. ಅಲ್ಲಾವುದ್ದೀನ್ ಕ್ರೂರಿ. ವಿರೋಧಿಗಳನ್ನು ಮಟ್ಟಹಾಕಿದ, ರಕ್ತದ ಕಾಲುವೆ ಹರಿಸಿ 20 ವರ್ಷ ಆಳಿದ.

ಅಲ್ಲಾವುದ್ದೀನ್ ಮಹತ್ವಾಕಾಂಕ್ಷಿ. ಭಾರತವನ್ನೆಲ್ಲ ಜಯಿಸಬೇಕೆಂಬುದು ಅವನ ಆಸೆ. ಅವನು ಮೊದಲು ಜಯಿಸಿದ್ದು ಗುಜರಾತ್, ರಣತಂಬೂರ್ ಮತ್ತು ಮೇವಾಡ. 1305ರ ವೇಳೆಗೆ ಉತ್ತರ ಭಾರತವೆಲ್ಲ ಅವನ ಅಧೀನವಾಯಿತು. ದಕ್ಷಿಣವತ್ತ ಮಲ್ಲಿಕ್ ಕಾಫರನ ನಾಯಕತ್ವದಲ್ಲಿ ಸೇನೆಯನ್ನು ಕಳುಹಿಸಿದ. ಆ ಸೇನೆ ದೇವಗಿರಿಯನ್ನು ಮತ್ತೆ ಮುತ್ತಿ ಲೂಟಿ ಮಾಡಿತು. ವಾರಂಗಲ್ಲಿನ ಪ್ರತಾಪರುದ್ರ, ಹೊಯ್ಸಳರ 3ನೆಯ ವೀರಬಲ್ಲಾಳ ಇವನಿಗೆ ಸೋತರು. ದೋರಸಮುದ್ರವನ್ನು ದೋಚಿದ. ಪಾಂಡ್ಯ ರಾಜನನ್ನು ಸೋಲಿಸಲು ಇವನ ಸೇನೆ ಮಧುರೆ, ರಾಮೇಶ್ವರಗಳ ವರೆಗೂ ಹೋಯಿತು. ಈ ದಾಳಿಗಳಿಂದ ರಾಜ್ಯ ವಿಸ್ತರಣೆಯಾಯಿತು. ಅತುಲ ಐಶ್ವರ್ಯ ಅಲ್ಲಾವುದ್ದೀನನ ಕೈಸೇರಿತು. ಅನೇಕ ದೇವಾಲಯಗಳು, ಪಟ್ಟಣಗಳು ನಾಶವಾದುವು. ಅಪಾರ ಜನ ಹಾನಿಯಾಯಿತು. ಅರಮನೆಯ ಒಳಜಗಳ, ದಂಗೆ ಅಲ್ಲಾವುದ್ದೀನನನ್ನು ಧೃತಿಗೆಡಿಸಿದುವು. 1316ರಲ್ಲಿ ಆತ ತೀರಿಕೊಂಡ.

ಅಲ್ಲಾವುದ್ದೀನನ ರಾಜ್ಯಭಾರ ಭಯಕಾರಕವಾಗಿತ್ತು. ಆದರೆ ಆಡಳಿತ, ಆರ್ಥಿಕ ರಂಗ ಮತ್ತು ಸೇನೆಯಲ್ಲಿ ವಿಷ್ಟೋ ಒಳ್ಳೆಯ ಮಾರ್ಪಾಟುಗಳನ್ನು ಮಾಡಿದ. ಜೀವನಾಧಾರ ವಸ್ತುಗಳ ಮಾರಾಟದ ಮೇಲೆ ಹತೋಟಿ ಜಾರಿಗೆ ತಂದ. ಮಾದಕ ವಸ್ತುಗಳನ್ನು ಸೇವಿಸುವುದು, ಜೂಜಾಟ ಅಕ್ರಮವೆಂದು ಸಾರಿದ. ಯಾರಾದರೂ ತಪ್ಪಿತಸ್ಥರೆಂದು ಕಂಡುಬಂದರೆ ಉಗ್ರ ಶಿಕ್ಷೆ ವಿಧಿಸುತ್ತಿದ್ದ. ಹಿಂದೂಗಳ ಮೇಲೆ ಬಹುವಾಗಿ ತೆರಿಗೆ ವಿಧಿಸಿದ.

ನೋಡಿ : ಪದ್ಮಿನಿ

ಅಲ್ಲಾವುದ್ದೀನ್ ಖಾನ್

ನೋಡಿ : ಸಂಪುಟ ೫



ಪತ್ನಿ ಮದೀನಾರೊಂದಿಗೆ ಉಸ್ತಾದರು


ಅಲಿ ಅಕ್ಬರ್ ಖಾನ್

ಸರೋದ್, ಹಿಂದೂಸ್ತಾನಿ ಸಂಗೀತದ ವಿಶಿಷ್ಟ ವಾದ್ಯ. ಇದರಲ್ಲಿ ಅಪ್ರತಿಮ ಕಲಾಪ್ರೌಢಿಮೆ ಸಾಧಿಸಿದ ಕೀರ್ತಿ ಅಲಿ ಅಕ್ಬರ್ ಖಾನ್ ಅವರದು.

ಈಗಿನ ಬಾಂಗ್ಲಾದೇಶದಲ್ಲಿರುವ ಶಿವಪುರದಲ್ಲಿ 1922 ಏಪ್ರಿಲ್ 14ರಂದು ಜನನ. ತಂದೆ ಖ್ಯಾತ ಸಿತಾರ್‌ವಾದಕ ಉಸ್ತಾದ್ ಅಲ್ಲಾವುದ್ದೀನ್ ಖಾನ್. ಅವರ ಬಳಿಯೇ ಶಿಷ್ಯವೃತ್ತಿ.

14ನೆಯ ವಯಸ್ಸಿನಲ್ಲೇ ಅಲಿ ಅಕ್ಬರ್ ಖಾನರು ಅಲಹಾಬಾದಿನಲ್ಲಿ ನಡೆದ ಅಖಿಲ ಭಾರತ ಸಂಗೀತ ಸಮ್ಮೇಳನದಲ್ಲಿ ತಮ್ಮ ಸರೋದ್ ವಾದನದಿಂದ ಶ್ರೋತೃಗಳನ್ನು ದಂಗುಬಡಿಸಿದರು. ಅಲ್ಲಿಂದ ಕೀರ್ತಿಯ ಶಿಖರದತ್ತ ಅವರು ಹಿಡಿದದ್ದು ನೇರಹಾದಿಯನ್ನು.

ಜೋಧಪುರದ ಆಸ್ಥಾನದಲ್ಲಿ ಕೆಲಕಾಲ ಇದ್ದರು. ಟೋಕಿಯೊ ಮಾಂಟ್ರೀಲ್ ಮುಂತಾದ ನಗರಗಳಲ್ಲಿ ನಡೆದ ಪೂರ್ವ–ಪಶ್ಚಿಮ ಸಂಗೀತ ಸಮ್ಮೇಳನಗಳಲ್ಲಿ ಅವರು ಭಾರತೀಯ ಸಂಗೀತದ ಪ್ರತಿನಿಧಿಯಾಗಿದ್ದರು. ಮಾಂಟ್ರೀಲ್‌ನ ಮೆಕ್‌ಗಿಲ್ ವಿಶ್ವವಿದ್ಯಾನಿಲಯದ ಸಂದರ್ಶಕ ಪ್ರಾಧ್ಯಾಪಕರಾದರು. ಪ್ರಪಂಚದ ಮುಖ್ಯ ಸಾಂಸ್ಕೃತಿಕ ಕೇಂದ್ರಗಳಲ್ಲೆಲ್ಲ ಇವರು ಸರೋದ್ ವಾದನ ಕಚೇರಿನಡೆಸಿದ್ದಾರೆ. ರವಿಶಂಕರರಂತೆಯೇ ಭಾರತೀಯ ಸಂಗೀತವನ್ನು ವಿದೇಶಗಳಲ್ಲಿ ಪ್ರಚಾರ ಮಾಡಿದ ಕೀರ್ತಿ ಅಲಿ ಅಕ್ಬರ್ ಖಾನರಿಗೆ ಸಲ್ಲುತ್ತದೆ. 1963ರಲ್ಲಿ ಕಲ್ಕತ್ತೆಯಲ್ಲಿ ಅಲಿ ಅಕ್ಬರ್ ಕಾಲೇಜ್ ಆಫ್ ಮ್ಯೂಸಿಕ್ ಸ್ಥಾಪಿತವಾಯಿತು.



ಸರೋದ್ : ಅಲಿ ಅಕ್ಬರ್

ಇವರ ಶಾಖೆಗಳು ಸಾನ್‌ಫ್ರಾನ್ಸಿಸ್ಕೋ, ಕ್ಯಾಲಿಫೋರ್ನಿಯಾಗಳ ಹಲವು ಮುಖ್ಯ ನಗರಗಳಲ್ಲಿ ಇವೆ.

ಚಂದ್ರನಂದನ, ಗೌರಿಮಂಜರಿ, ಲಾಜವಂತಿ ಮುಂತಾದ ರಾಗಗಳ ಸೃಷ್ಟಿಕರ್ತರು ಅಲಿ ಅಕ್ಬರ್ ಖಾನ್. ರಾಗ, ತಾಳ, ಲಯಗಳಲ್ಲಿ ಇವರ ಮನೋಧರ್ಮ ಅತಿ ಮನೋಜ್ಞ.

'ಆಂಧಿ' ಎಂಬ ಚಿತ್ರಕ್ಕೆ ಇವರು ರಚಿಸಿದ ಗೀತೆಗಳು ಭಾವನಾತ್ಮಕವಾಗಿವೆ. 'ಹಂಗ್ರಿ ಸ್ಟೋನ್ಸ್' (ಹಸಿದ ಕಲ್ಲುಗಳು) ಎಂಬ ಚಿತ್ರದ ಅವರ ಸಂಗೀತ ರಚನೆಗೆ ಪ್ರಶಸ್ತಿ ದೊರೆತಿದೆ.

1963ರಲ್ಲಿ ಸಂಗೀತ ನಾಟಕ ಅಕಾಡೆಮಿಯ ಪ್ರಶಸ್ತಿ ಲಭಿಸಿತು. 1966ರಲ್ಲಿ ಅವರಿಗೆ ಭಾರತ ಸರಕಾರ ಪದ್ಮಭೂಷಣ ಪ್ರಶಸ್ತಿ ನೀಡಿತು.

ಅಲಿ ಸಹೋದರರು

1921ರ ಅಸಹಕಾರ ಆಂದೋಲನ ದೇಶದಲ್ಲಿ ಕಾಳ್ಗಿಚ್ಚಿನಂತೆ ಹಬ್ಬುವಂತೆ ಮಾಡಿದವರಲ್ಲಿ ಪ್ರಮುಖರು ಅಲಿ ಸಹೋದರರು — ಮೌಲಾನಾ ಮಹಮ್ಮದ್ ಅಲಿ ಮತ್ತು ಮೌಲಾನಾ ಶೌಕತ್ ಅಲಿ.



ಮಹಮ್ಮದ್ ಅಲಿ

ಮಹಾತ್ಮಾ ಗಾಂಧೀಜೀ ಅಲಿ ಸಹೋದರರೊಡನೆ ದೇಶದಾದ್ಯಂತ ಸಂಚರಿಸಿ ಸರಕಾರಕ್ಕೆ ದಿಗ್ಭ್ರಮೆಯಾಗುವಂತೆ ಚಳುವಳಿಯನ್ನು ತೀವ್ರಗೊಳಿಸಿದರು.

ಅಲಿ ಸಹೋದರರು 19ನೆಯ ಶತಮಾನದ ಎಂಟನೆಯ ದಶಕದಲ್ಲಿ ಜನಿಸಿದರು. ಇವರ ತಂದೆ, ತಾತಂದಿರು ರಾಮಪುರ ಸಂಸ್ಥಾನದಲ್ಲಿ ಉಚ್ಚ ಅಧಿಕಾರದಲ್ಲಿದ್ದರು. ಶಾಲಾ ವಿದ್ಯಾಭ್ಯಾಸ ಅಲ್ಲಿಯೇ ಆಯಿತು. ಅನಂತರ ಅಲಿಘರ್ ಕಾಲೇಜಿನಲ್ಲಿ ವಿದ್ಯಾಭ್ಯಾಸ. ಮಹಮ್ಮದ್ ಅಲಿ ಅವರು ಉನ್ನತ ವಿದ್ಯಾಭ್ಯಾಸಕ್ಕಾಗಿ ಇಂಗ್ಲೆಂಡಿಗೆ ಹೋದರು.

ಅಲ್ಲಿಂದ ಭಾರತಕ್ಕೆ ಬಂದು ಕೆಲ ಕಾಲ ನೌಕರಿಯಲ್ಲಿದ್ದರು; 1910ರ ವೇಳೆಗೆ ಸಾರ್ವಜನಿಕ ಕಾರ್ಯದಲ್ಲಿ ತೊಡಗಿದರು. ಮುಸ್ಲಿಂ ಲೀಗ್ ಸ್ಥಾಪನೆಗಾಗಿ ಈ ಸೋದರರಿಬ್ಬರೂ ಶ್ರಮಿಸಿದರು.

1913ರಲ್ಲಿ ಕಾನ್ಪುರದಲ್ಲಿ ಒಂದು ಮಸೀದಿಯ ಭಾಗವನ್ನು ರಸ್ತೆಯ ನಿರ್ಮಾಣಕ್ಕಾಗಿ ಸರಕಾರ ಕೆಡವಿದಾಗ ಮಹಮ್ಮದ್ ಅಲಿಯವರು ತೀವ್ರವಾಗಿ ಪ್ರತಿಭಟಿಸಿದರು. ಇಂಗ್ಲೆಂಡಿಗೆ ಹೋಗಿ ಅದರ ವಿರುದ್ಧ ಚಳುವಳಿ ಹೂಡಿದರು. ಕೊನೆಗೆ ಸರಕಾರ ಮಸೀದಿಯನ್ನು ಮತ್ತೆ ಕಟ್ಟಿಸಿಕೊಡಲು ಒಪ್ಪಬೇಕಾಯಿತು.

ದೆಹಲಿ ಬ್ರಿಟಿಷ್ ಭಾರತದ ರಾಜಧಾನಿಯಾಗಿ ಮಾರ್ಪಟ್ಟ ಮೇಲೆ ಅಲಿ ಸಹೋದರರಿಬ್ಬರೂ ಅಲ್ಲಿ ನೆಲೆಸಿದರು. ದೆಹಲಿಯಿಂದ 'ಹಮ್‌ದರ್ದ್' ಉರ್ದು ಪತ್ರಿಕೆ ಆರಂಭಿಸಿದರು. 1914ರಲ್ಲಿ ನಡೆಯುತ್ತಿದ್ದ ಬಾಲ್ಕನ್–ತುರ್ಕಿ ಯುದ್ಧದಲ್ಲಿ ತುರ್ಕಿಯ ಪರವಾಗಿ ಬರೆದದ್ದರಿಂದ ಮಹಮ್ಮದ್ ಅಲಿ ಸೆರೆಮನೆವಾಸ ಅನುಭವಿಸಬೇಕಾಯಿತು. ಮಹಮ್ಮದ್ ಅಲಿ ಒಳ್ಳೆಯ ವಾಗ್ಮಿ ಮತ್ತು ಲೇಖಕರು. 'ಕಾಮ್ರೇಡ್' ಎಂಬ ಪತ್ರಿಕೆಯನ್ನು 1919ರಲ್ಲಿ ಆರಂಭಿಸಿ ಜನರಲ್ಲಿ ತಮ್ಮ ಅಭಿಪ್ರಾಯಗಳನ್ನು ಪ್ರಚುರಪಡಿಸಿದರು.

ಸಹೋದರರಿಬ್ಬರೂ ಅಲಿಘರ್ ವಿಶ್ವವಿದ್ಯಾಲಯ ರೂಪಿಸುವುದಕ್ಕಾಗಿ ಧನ ಸಂಗ್ರಹಿಸಿದರು. ಅಲಿ ಸೋದರರಲ್ಲಿ ಮಹಮ್ಮದ್ ಅಲಿಯವರದು ತುಂಬ ಪ್ರಭಾವಶಾಲೀ ವ್ಯಕ್ತಿತ್ವ.

1920ರ ಖಿಲಾಫತ್ ಚಳುವಳಿ, ಅಸಹಕಾರ ಚಳುವಳಿಯೊಡನೆ ಬೆರೆಯಿತು. ಮರುವರ್ಷ ನಡೆದ ಖಿಲಾಫತ್ ಪರಿಷತ್ತಿನಲ್ಲಿ ಮಹಮ್ಮದ್ ಅಲಿಯವರು ಮಹಮ್ಮದೀಯ ಸಿಪಾಯಿಗಳು ಬ್ರಿಟಿಷರ ನೌಕರಿಯನ್ನು ಬಿಡಬೇಕು ಎಂಬ ಕರೆಯಿತ್ತರು. ಸರಕಾರ ಅವರನ್ನು ಮತ್ತೆ ಬಂಧಿಸಿತು. ಎರಡು ವರ್ಷಗಳಾದ ಮೇಲೆ ಬಿಡುಗಡೆ ಹೊಂದಿದರು. 1923ರ ಕಾಂಗ್ರೆಸ್ ಅಧಿವೇಶನಕ್ಕೆ ಅಧ್ಯಕ್ಷರಾಗಿ ಆರಿಸಲ್ಪಟ್ಟರು. ಸ್ವಾತಂತ್ರ್ಯಕ್ಕಾಗಿ ತ್ಯಾಗ ಅಗತ್ಯ ಎಂದು ಸಾರಿದರು. ಹಿಂದೂ–ಮುಸಲ್ಮಾನ ಐಕ್ಯದ ಸಂದೇಶವಿತ್ತರು. ಮುಂದೆ ನಡೆದ ಜಾತೀಯ ಗಲಭೆ ಅವರ ಮನಸ್ಸಿಗೆ ಬಹಳ ನೋವುಂಟುಮಾಡಿತು. ಇಂಥ ಗಲಭೆಯ ವಿರುದ್ಧ ಗಾಂಧೀಜೀ 21 ದಿನಗಳ ಉಪವಾಸ ವ್ರತವನ್ನು ಮಹಮ್ಮದ್ ಅಲಿಯವರ ದೆಹಲಿಯ ಮನೆಯಲ್ಲೇ ಕೈಗೊಂಡರು.

1930ರಲ್ಲಿ ಲಂಡನಿನಲ್ಲಿ ನಡೆದ ದುಂಡುಮೇಜಿನ ಪರಿಷತ್ತಿನಲ್ಲಿ ಮಹಮ್ಮದ್ ಅಲಿಯವರು, ಭಾರತಕ್ಕೆ ಸ್ವಾತಂತ್ರ್ಯ ದೊರೆಯುವವರೆಗೆ ತಾವು ಸ್ವದೇಶಕ್ಕೆ ಮರಳುವುದಿಲ್ಲವೆಂದು ಸಭೆಯಲ್ಲಿ ಹೇಳಿದರು. 1931ರಲ್ಲಿ ಲಂಡನಿನಲ್ಲಿಯೇ ಮಹಮ್ಮದ್ ಅಲಿಯವರು ಮೃತರಾದರು.



ಶೌಕತ್ ಅಲಿ

ನೋಡಿ : ಖಿಲಾಫತ್ ಚಳುವಳಿ

ಅಲೆಗ್ಸಾಂಡರ್ ಕನಿಂಗ್ಹಾಮ್

ಭಾರತದ ಪ್ರಾಚೀನ ಸಂಸ್ಕೃತಿಗಳಲ್ಲಿ ಒಂದಾದ ಹರಪ್ಪಾ ಸಂಸ್ಕೃತಿಯ ಮೊತ್ತ ಮೊದಲ ಕುರುಹುಗಳನ್ನು ಕಂಡುಹಿಡಿದವರು ಸರ್ ಅಲೆಗ್ಸಾಂಡರ್ ಕನಿಂಗ್ಹಾಮ್ (1814–93). ಇವರನ್ನು ಭಾರತೀಯ ಪುರಾತತ್ತ್ವ ಶೋಧನೆಯ ಜನಕ ಎಂದು ಕರೆಯಲಾಗಿದೆ.

ಕನಿಂಗ್ಹಾಮ್ 1831ರಲ್ಲಿ ಭಾರತಕ್ಕೆ ಎಂಜಿನಿಯರ್ ಆಗಿ ಬಂದರು. ಏಷ್ಯಾಟಿಕ್ ಸೊಸೈಟಿಯ ಕಾರ್ಯದರ್ಶಿಯಾಗಿದ್ದ ಜೇಮ್ಸ್ ಪ್ರಿನ್ಸೆಪ್ ನೇತೃತ್ವದಲ್ಲಿ ಭಾರತಕ್ಕೆ ಸಂಬಂಧಿಸಿದ ವಿಷಯಗಳ ಅಧ್ಯಯನ ಕೈಗೊಂಡರು. 1862ರಲ್ಲಿ ಭಾರತ ಸರಕಾರದ ಪುರಾತತ್ತ್ವ ಶೋಧನಾ ಇಲಾಖೆ ಸ್ಥಾಪಿತ



...ತೀಯ ಪುರಾತತ್ತ್ವ ಶೋಧನೆಯ ಜನಕ'

ವಾದಾಗ ಸರ್ವೇಯರ್ ಹುದ್ದೆಗೆ ಇವರು ನೇಮಕವಾದರು. 1885ರಲ್ಲಿ ಇಲಾಖೆಯ ಡೈರೆಕ್ಟರ್ ಜನರಲ್ ಆಗಿ, ನಿವೃತ್ತರಾಗುವವರೆಗೆ 23 ವರ್ಷ ಕಾಲ ಅತ್ಯಂತ ಶ್ರದ್ಧೆಯಿಂದ ತಮ್ಮ ಸಂಶೋಧನೆಗಳನ್ನು ನಡೆಸಿದರು. ಈ ಅವಧಿಯಲ್ಲಿ ಪುರಾತತ್ತ್ವ ಶೋಧನೆಯ ಇಲಾಖೆಯ ಕಾರ್ಯವ್ಯಾಪ್ತಿಯನ್ನು ವಿಸ್ತರಿಸಿದರು. ಅನೇಕ ಮಂದಿ ಸಂಶೋಧಕರಿಗೆ ಪ್ರೋತ್ಸಾಹ ಕೊಟ್ಟರು.

ಭಾರತಾಧ್ಯಯನದ ಪ್ರವರ್ತಕರಲ್ಲಿ ಇವರ ಹೆಸರು ಗಣನೀಯ. ಆಗಿನ ಕಾಲಕ್ಕೆ ದೊರೆತ ಅಲ್ಪಸ್ವಲ್ಪ ಸೌಲಭ್ಯಗಳಿಂದಲೇ ಉತ್ತಮ ರೀತಿಯಲ್ಲಿ ಕಾರ್ಯನಿರ್ವಹಣೆ ಮಾಡಿ ಅನೇಕ ವರದಿಗಳನ್ನು ಅವರು ಪ್ರಕಟಿಸಿದರು.

ನೋಡಿ : ಜೇಮ್ಸ್ ಪ್ರಿನ್ಸೆಪ್ : ಹರಪ್ಪಾ

ಅಲೆಗ್ಸಾಂಡರ್ ಹ್ಯಾಮಿಲ್ಟನ್

ಭಾರತದಲ್ಲಿ ವ್ಯಾಪಾರ ಮಾಡಲು ಬಂದ ಈಸ್ಟ್ ಇಂಡಿಯಾ ಕಂಪೆನಿ ಬಂಗಾಳದಲ್ಲಿ ನೆಲೆಯೂರಿ, ಅದರ ಆಡಳಿತವನ್ನು ತನ್ನ ಕೈಗೆ ತೆಗೆದುಕೊಂಡ ಮೇಲೆ, ಕಂಪೆನಿಯ ಅಧಿಕಾರಿಗಳಲ್ಲಿ ಕೆಲವರು ಸ್ಥಳೀಯ ಭಾಷೆ, ಸಂಸ್ಕೃತಿ ಹಾಗೂ ಭಾರತೀಯ ಇತಿಹಾಸ-ಸಂಸ್ಕೃತಿಗಳ ಅಭ್ಯಾಸ ಕೈಗೊಂಡರು. ಇಂಥ ಹಲವರು ಸೇರಿ, 1784ರಲ್ಲಿ ಬಂಗಾಳದ ಏಷ್ಯಾಟಿಕ್ ಸೊಸೈಟಿಯನ್ನು ಸ್ಥಾಪಿಸಿದರು. ಭಾರತಕ್ಕೆ ಸಂಬಂಧಿಸಿದ ವಿಚಾರಗಳ ಅಧ್ಯಯನ ಈ ಸಂಸ್ಥೆಯ ಪ್ರಧಾನ ಉದ್ದೇಶ. ಸಂಸ್ಥೆಯ ಸ್ಥಾಪಕ ಸದಸ್ಯರಲ್ಲಿ ಅಲೆಗ್ಸಾಂಡರ್ ಹಾಮಿಲ್ಟನ್(1762-1824) ಒಬ್ಬರು.

ನೆಪೋಲಿಯನನ ಮೇಲೆ ಬ್ರಿಟಿಷರು ನಡೆಸಿದ ಹೋರಾಟದಲ್ಲಿ ಹಾಮಿಲ್ಟನ್ ಫ್ರೆಂಚರಿಗೆ ಸೆರೆ ಸಿಕ್ಕಿದರು. ಯುದ್ಧಾನಂತರ, ಫ್ರಾನ್ಸಿನಲ್ಲೇ ಉಳಿದುಕೊಂಡರು. ಫ್ರಾನ್ಸಿನ ಸರಕಾರ ಸ್ಥಾಪಿಸಿದ್ದ ಪ್ರಾಚ್ಯ ಭಾಷಾ ಅಧ್ಯಯನ ಸಂಸ್ಥೆಯಲ್ಲಿ 1803ರಲ್ಲಿ ಸಂಸ್ಕೃತ ಅಧ್ಯಾಪಕರಾದರು. ಯೂರೋಪಿನ ಸಂಸ್ಕೃತ ಶಿಕ್ಷಕರಲ್ಲಿ ಮೊದಲನೆಯವರಾದರು. ಫ್ರೆಡರಿಕ್ ಶ್ಲೇಗೆಲ್ ಸಂಸ್ಕೃತಾಭ್ಯಾಸ ಮಾಡಿದ್ದು ಇವರಲ್ಲೇ.

ನೋಡಿ : ಶ್ಲೇಗೆಲ್ ಸಹೋದರರು

ಅಶ್ವತ್ಥಾಮ

ಮಹಾಭಾರತ ಯುದ್ಧದ ಕೊನೆಯಲ್ಲಿ ದುರ್ಯೋಧನ ಭೀಮನಿಂದ ತೊಡೆ ಮುರಿಸಿಕೊಂಡು ಬಿದ್ದಾಗ, ಸೇಡು ತೀರಿಸಲು ಬಯಸಿದವನು ಅಶ್ವತ್ಥಾಮ. ಕೌರವ ತನ್ನ ಅಳಿದುಳಿದ ಸೇನೆಯ ಅಧಿಪತ್ಯವನ್ನು ಇವನಿಗೆ ವಹಿಸಿದ. ಅಶ್ವತ್ಥಾಮ ಮಹಾಭಾರತ ಯುದ್ಧದ ಕೊನೆಯ ಸೇನಾನಾಯಕ. ಚಿರಂಜೀವಿಗಳು —ಇಂದಿಗೂ ಸಾಯದವರು— ಎನಿಸಿ ಖ್ಯಾತರಾದ ಏಳು ಮಂದಿಯಲ್ಲಿ ಇವನೂ ಒಬ್ಬ.

ಅಶ್ವತ್ಥಾಮ ದ್ರೋಣಾಚಾರ್ಯನ ಮಗ; ತಾಯಿ, ಕೃಪಿ. ಇವನು ಶಿವಾಂಶಸಂಭೂತನೆಂದು ಹೇಳಿಕೆ.

ಹುಟ್ಟಿದೊಡನೆಯೇ ಕುದುರೆಯಂತೆ ಕೂಗಿಕೊಂಡಿದ್ದರಿಂದ ಇವನಿಗೆ ಅಶ್ವತ್ಥಾಮನೆಂದು ಹೆಸರು ಬಂತು.

ಇವನು ಮಹಾಭಾರತ ಯುದ್ಧದಲ್ಲಿ ಅತ್ಯಂತ ಶೌರ್ಯದಿಂದ ಹೋರಾಡಿದ. ಪಾಂಡವರು ತನ್ನ ತಂದೆಯನ್ನು ಮೋಸದಿಂದ ಕೊಂದರೆಂದು ಇವನಿಗೆ ಅವರ ಮೇಲೆ ವೈರವುಂಟಾಗಿತ್ತು. ದುರ್ಯೋಧನನಿಗೆ ಭೀಮನಿಂದ ಆದ ಪರಾಭವವೂ ಇವನನ್ನು ಕೆರಳಿಸಿತ್ತು. ಇದರಿಂದಾಗಿ ಪಾಂಡವರನ್ನೂ ಅವರ ಸೇನಾಪತಿಯಾದ ದೃಷ್ಟದ್ಯುಮ್ನ ಮತ್ತು ಅವನ ಸಹೋದರ ಶಿಖಂಡಿ ಇವರನ್ನೂ ಕೊಲ್ಲಲು ನಿರ್ಧರಿಸಿದ. ಅವರು ನಿದ್ರಿಸುತ್ತಿದ್ದ ಕಾಲದಲ್ಲಿ ಶಿಬಿರದ ಮೇಲೆ ದಾಳಿ ಮಾಡಿದ. ದೃಷ್ಟದ್ಯುಮ್ನ, ಶಿಖಂಡಿ ಕೊಲೆಗೀಡಾದರು. ಆಗ ಪಾಂಡವರು ಶಿಬಿರದಲ್ಲಿರಲಿಲ್ಲ. ದ್ರೌಪದಿಯ ಐದು ಮಕ್ಕಳನ್ನೇ ಪಾಂಡವರೆಂದು ಭ್ರಮಿಸಿ ಅಶ್ವತ್ಥಾಮ ಅವರನ್ನು ಕೊಂದ. ಇದರಿಂದಾಗಿ ಅಶ್ವತ್ಥಾಮನಿಗೆ 'ಸುಪ್ತಘಾತಕ'— ಮಲಗಿದ್ದವರನ್ನು ಕೊಂದವನು— ಎಂಬ ಕೆಟ್ಟ ಹೆಸರೂ ಕೃಷ್ಣನಿಂದ ಶಾಪವೂ ಬಂತು.

ಸಾವಿಲ್ಲದವನಾದ ಅಶ್ವತ್ಥಾಮ ಇಂದಿಗೂ ಒಂಟಿಯಾಗಿ ಅಲೆಯುತ್ತಿದ್ದಾನೆ ಎಂಬ ಮಾತಿದೆ.

ಅಶ್ವಮೇಧ

ಕಳೆದು ಹೋಗಿದ್ದ ವೇದಗಳು ಮತ್ತೆ ದೊರಕಿದುದರ ಸ್ಮರಣಾರ್ಥವಾಗಿ ಬ್ರಹ್ಮ ಪ್ರಯಾಗದಲ್ಲಿ ಅಶ್ವಮೇಧಯಾಗ ಮಾಡಿದ. ಅದೇ ಮೊದಲನೆಯ ಅಶ್ವಮೇಧಯಾಗ ಎಂದು ಹೇಳುತ್ತಾರೆ. ಬ್ರಹ್ಮ ಎರಡನೆಯ ಬಾರಿ ಹತ್ತು ಯಜ್ಞಾಶ್ವಗಳನ್ನಿಟ್ಟುಕೊಂಡು ಕಾಶಿಯಲ್ಲಿ ಅಶ್ವಮೇಧಯಾಗ ಮಾಡಿದ; ಆ ಯಜ್ಞ ನಡೆದ ಸ್ಥಳಕ್ಕೆ ದಶಾಶ್ವಮೇಧಘಾಟ್ ಎಂದು ಹೆಸರು ಬಂತೆಂಬ ಕಥೆಯೂ ಇದೆ.

ಭಾರತದಲ್ಲಿ ರಾಜರು ಸಾಮ್ರಾಜ್ಯ ವಿಸ್ತರಣೆ, ಸ್ಥಾಪನೆಗಳ ಉದ್ದೇಶದಿಂದ ಅಶ್ವಮೇಧಯಾಗ ಮಾಡುತ್ತಿದ್ದರು. ಸಲ್ಲಕ್ಷಣಗಳ ಕುದುರೆಯನ್ನು ಆಯ್ಕೆ ಮಾಡಿ ಅದನ್ನು ಅಲೆದಾಡಲು ಬಿಡುತ್ತಿದ್ದರು. ಕುದುರೆಯ ಬೆಂಗಾವಲಿಗೆ ಸೈನ್ಯವಿರುತ್ತಿತ್ತು. ಕುದುರೆ ನಿರಾತಂಕವಾಗಿ ಹಾದುಹೋದ ರಾಜ್ಯಗಳೆಲ್ಲ ಈ ರಾಜನ ಅಧಿಪತ್ಯಕ್ಕೆ ಒಳಪಟ್ಟಂತೆ ಭಾವಿಸಲಾಗುತ್ತಿತ್ತು. ಯಾರಾದರೂ ಕುದುರೆಯನ್ನು ಕಟ್ಟಿಹಾಕಿದರೆ, ಬೆಂಗಾವಲಿಗೆ ಇದ್ದವರು ಯುದ್ಧ ಮಾಡಿ ಅವರನ್ನು ಸೋಲಿಸಬೇಕಾಗುತ್ತಿತ್ತು.

ರಾಜ ವಿಜೇತನಾಗಿ ಹಿಂದಿರುಗಿದ ಬಳಿಕ ಅಶ್ವಮೇಧಯಾಗ ನಡೆಯುತ್ತಿತ್ತು. ಈ ಯಜ್ಞದಲ್ಲಿ ರಾಜನೂ ಅವನ ಪಟ್ಟಮಹಿಷಿಯೂ ಪ್ರಧಾನ ಪಾತ್ರ ವಹಿಸುತ್ತಿದ್ದರು. ಯಜ್ಞಕ್ಕೆ ಸಂಬಂಧಿಸಿದ ಪೂರ್ವಭಾವಿ ಕಾರ್ಯಕಲಾಪಗಳೆಲ್ಲವೂ ನಡೆದಮೇಲೆ, ಕೊನೆಯಲ್ಲಿ ಕುದುರೆಯನ್ನು ಆಹುತಿ ಕೊಡುತ್ತಿದ್ದರು.

ರಾಮ, ಧರ್ಮರಾಯರಂಥ ಪುರಾಣ ವ್ಯಕ್ತಿಗಳಲ್ಲದೆ, ಇತಿಹಾಸದ ಹಲವಾರು ಅರಸರು ಅಶ್ವಮೇಧ ಯಾಗ ನಡೆಸಿದ ಉಲ್ಲೇಖಗಳು ದೊರೆತಿವೆ. ಇಂಥವರಲ್ಲಿ ಶುಂಗವಂಶದ ಪುಷ್ಯಮಿತ್ರ, ಕಳಿಂಗದ ಖಾರವೇಲ, ಶಾತವಾಹನ ವಂಶದ ಮೊದಲನೆಯ ಶಾತಕರ್ಣಿ, ವಾಕಾಟಕ ವಂಶದ ಪ್ರವರಸೇನ, ಭಾರಶಿವ ವಂಶದ ಭವನಾಗ, ಗುಪ್ತ ಸಾಮ್ರಾಟ ಸಮುದ್ರ ಗುಪ್ತ ಇವರು ಮುಖ್ಯರು.

ಗುಪ್ತರ ಕಾಲದ ಅನಂತರವೂ ಅಶ್ವಮೇಧಯಾಗ ನಡೆದದ್ದುಂಟು. ರಾಜಸ್ಥಾನದ ಜಯಪುರದ ಅರಸನೊಬ್ಬ 18ನೆಯ ಶತಮಾನದಲ್ಲಿ ಈ ಯಾಗ ನಡೆಸಿದ ಬಗೆಗೆ ಉಲ್ಲೇಖವಿದೆ.

ಅಶ್ವಿನೀ ಕುಮಾರರು

ಅಶ್ವಿನೀ ಕುಮಾರರು ಸ್ಫುರದ್ರೂಪಿಗಳು, ತೇಜಸ್ವಿಗಳು, ವೇಗವಾದ ಚಲನೆಯುಳ್ಳವರು. ಮೂರು ಚಕ್ರಗಳ ಹೊಂಬಣ್ಣದ ಅವರ ರಥವನ್ನು ಕುದುರೆಗಳೂ ಪಕ್ಷಿಗಳೂ ಎಳೆಯುತ್ತವೆ. ಬಿಸಿನೀರಿನ ಊಟೆಯು ಪರಿಸರ ಅವರ ಮೆಚ್ಚಿನ ತಾಣಗಳಲ್ಲಿ ಒಂದು. ಯಾವಾಗಲೂ ಅವರ ಬಳಿ ಜೇನುತುಪ್ಪದ ಒಂದು ಸಂಚಿ. ಅವರು ತಮ್ಮ ಭಕ್ತರ ಮೇಲೆ ನಯವಾಗಿ ಬೀಸುವ ಚಾಟಿಯೂ ಮಧುವಿನದು. ಜೇನುನೊಣಕ್ಕೆ ಮಧು ನೀಡಿದವರು ಅಶ್ವಿನೀ ಕುಮಾರರು —ಇದು ಅಶ್ವಿನೀ ಕುಮಾರರ ಬಣ್ಣನೆ.

ಅಶ್ವಿನೀ ಕುಮಾರರನ್ನು ಅಶ್ವಿನೀ ದೇವತೆಗಳೆಂದೂ ಕರೆಯುತ್ತಾರೆ. ಅವರು ದೇವತೆಗಳ ವೈದ್ಯರು. ಸರ್ವರೋಗ ನಿವಾರಕರೆಂದು ಪ್ರಸಿದ್ಧರು. ಅವಳಿ ಮಕ್ಕಳಾದ ಅಶ್ವಿನೀ ಕುಮಾರರ ತಂದೆ ಸೂರ್ಯ. ತಾಯಿ ಸಂಜ್ಞಾದೇವಿ. ಉಷಃಕಾಲದಲ್ಲಿ ಮೊತ್ತಮೊದಲು ತೋರುವ ಕಾಂತಿಯೇ ಮೂರ್ತಿವೆತ್ತ ರೂಪ ಇವರು ಎನ್ನುತ್ತಾರೆ. ದಸ್ರ (ಅದ್ಭುತ) ಹಿರಿಯವನು. ನಾಸತ್ಯ (ಅಸತ್ಯವನ್ನು ನಿರಾಕರಿಸುವವನು) ಕಿರಿಯವನು.

ಅಶ್ವಿನೀ ಕುಮಾರರ ಮಹಿಮೆಯ ಬಗೆಗೆ ಋಗ್ವೇದದಲ್ಲೂ ಪುರಾಣಗಳಲ್ಲೂ ಹಲವಾರು ಪ್ರಸ್ತಾಪಗಳಿವೆ. ಚ್ಯವನನೆಂಬ ವೃದ್ಧ ಋಷಿಯ ಪತ್ನಿ ಸುಕನ್ಯೆಯ ಪಾತಿವ್ರತ್ಯ ಮೆಚ್ಚಿ ಆ ಋಷಿಗೆ ಸೌಂದರ್ಯವೂ ತಾರುಣ್ಯವೂ ಪ್ರಾಪ್ತವಾಗುವಂತೆ ಮಾಡಿದರು. ಇದಕ್ಕೆ ಬದಲಾಗಿ ಚ್ಯವನ ಯಜ್ಞಯಾಗಾದಿಗಳಲ್ಲಿ ಅವರೆಗೆ ಯಾರಿಗೂ ದೊರೆಯದಿದ್ದ 'ಹವಿಸ್ಸು' ಅವರಿಗೆ ಸಿಗುವಂತೆ ಮಾಡಿದ. ಕುರುಡನಾಗಿದ್ದ ಉಪಮನ್ಯು ಎಂಬವನಿಗೆ ದೃಷ್ಟಿ ಬರುವಂತೆ ಮಾಡಿದವರೂ ಅಶ್ವಿನೀ ಕುಮಾರರೇ. ಪಾಂಡುರಾಜನ ಹೆಂಡತಿ ಮಾದ್ರಿಯಲ್ಲಿ ನಕುಲ ಸಹದೇವರು ಹುಟ್ಟಿದ್ದು ಇವರ ಅನುಗ್ರಹದಿಂದಲೇ.



ಅಶ್ವಿನೀ ದೇವತೆಗಳು

ಅಶುತೋಷ್ ಮುಖರ್ಜಿ



ಬಹುಮುಖ ಪ್ರತಿಭೆ : ಅಶುತೋಷ್

ವಕೀಲರಾಗಿ, ನ್ಯಾಯಾಧೀಶರಾಗಿ, ವಿಶ್ವವಿದ್ಯಾಲಯದ ಉಪಕುಲಪತಿಯಾಗಿ ಹಲವು ಸಾಧನೆಗಳನ್ನು ಕೈಗೂಡಿಸಿಕೊಂಡ ಪ್ರತಿಭಾಶಾಲಿ ಅಶುತೋಷ್ ಮುಖರ್ಜಿ.

ಅಶುತೋಷರು ಹುಟ್ಟಿದ್ದು 1864ರಲ್ಲಿ, ಸಂಪ್ರದಾಯಸ್ಥ ಬಂಗಾಳಿ ಮನೆತನದಲ್ಲಿ. ಕಲ್ಕತ್ತಾ ವಿಶ್ವವಿದ್ಯಾನಿಲಯದಲ್ಲಿ ವ್ಯಾಸಂಗಮಾಡಿ 1884ರಲ್ಲಿ ಗಣಿತದಲ್ಲಿ ಎಂ.ಎ. ಪದವಿ ಪಡೆದರು. ತಮ್ಮ 19ನೆಯ ವಯಸ್ಸಿನಲ್ಲೇ ಅಶುತೋಷರು ಬರೆದ ಗಣಿತ ಪುಸ್ತಕ ಪಠ್ಯಗ್ರಂಥವಾಯಿತು. 1894ರಲ್ಲಿ 'ಡಾಕ್ಟರ್ ಆಫ್ ಲಾಸ್' ಪ್ರಶಸ್ತಿ ಪಡೆದರು. ಇದಕ್ಕೆ ಮೊದಲೇ, ವಕೀಲ ವೃತ್ತಿ ಕೈಗೊಂಡಿದ್ದರು. ವಿಶ್ವವಿದ್ಯಾನಿಲಯದ ಸದಸ್ಯರೂ ಶಾಸನಸಭೆಯ ಸದಸ್ಯರೂ ಆಗಿದ್ದರು.

ಹತ್ತೊಂಬತ್ತು ವರ್ಷಕಾಲ ಕಲ್ಕತ್ತ ಉಚ್ಚನ್ಯಾಯಾಲಯದ ನ್ಯಾಯಾಧೀಶರಾಗಿ ಸೇವೆಸಲ್ಲಿಸಿದ ಕೀರ್ತಿ ಅಶುತೋಷ್ ಮುಖರ್ಜಿ ಅವರದು. ಒಳ್ಳೆಯ ನ್ಯಾಯಪರ ಹಾಗೂ ದಕ್ಷ ನ್ಯಾಯಾಧೀಶರೆಂದು ಅವರು ಹೆಸರಾಗಿದ್ದರು. ಎಂಟು ವರ್ಷ ಕಾಲ ಏಕಪ್ರಕಾರವಾಗಿ ಕಲ್ಕತ್ತಾ ವಿಶ್ವವಿದ್ಯಾನಿಲಯದ ಉಪಕುಲಪತಿಯಾಗಿ, ಅದನ್ನು ಅಭಿವೃದ್ಧಿಗೊಳಿಸಲು ನಿರಂತರವಾಗಿ ದುಡಿದರು. ವಿಶ್ವವಿದ್ಯಾನಿಲಯಗಳ ಮೇಲೆ ಸರಕಾರ ಆಡಳಿತ ನಿಯಂತ್ರಣ ಹೊಂದಿರಬೇಕು ಎಂಬುದನ್ನು ಅವರು ಪ್ರತಿಭಟಿಸಿದರು.

ಅವರ ಮಾನವೀಯತೆ, ವಿದ್ಯಾಪಕ್ಷಪಾತ ಗಾಢವಾದುವು. ಕಲ್ಕತ್ತಾ ವಿಶ್ವವಿದ್ಯಾಲಯಕ್ಕೆ ಭಾರತದ ವಿವಿಧ ಭಾಗಗಳಿಂದ ಬಂದ ಅನೇಕ ಮಂದಿ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಅವರು ವಿವಿಧ ರೀತಿಗಳಲ್ಲಿ ನೆರವು ನೀಡುತ್ತಿದ್ದರು. ಕಲ್ಕತ್ತೆಯಲ್ಲಿ ಅಸಿಸ್ಟೆಂಟ್ ಅಕೌಂಟೆಂಟ್ ಜನರಲ್ ಆಗಿ ಕೆಲಸ ಮಾಡುತ್ತಿದ್ದ ಸಿ.ವಿ. ರಾಮನ್ ಅವರ ಪ್ರತಿಭೆಯನ್ನು ಗುರುತಿಸಿ ಅವರನ್ನು ಕಲ್ಕತ್ತಾ ವಿಶ್ವವಿದ್ಯಾಲಯದ ಭೌತವಿಜ್ಞಾನ ಪ್ರಾಧ್ಯಾಪಕರನ್ನಾಗಿ ನಿಯಮಿಸಿ, ಸಂಶೋಧನೆಗಳ ಬಗೆಗೆ ಅವರನ್ನು ಪ್ರೋತ್ಸಾಹಿಸಿದವರು ಅಶುತೋಷ್ ಮುಖರ್ಜಿಯವರೇ.

ಅವರು 1913ರಲ್ಲಿ ಇಂಡಿಯನ್ ಸೈನ್ಸ್ ಕಾಂಗ್ರೆಸ್ಸಿನ ಸಮ್ಮೇಳನಾಧ್ಯಕ್ಷರಾಗಿದ್ದರು.

ತಮ್ಮ ಬಹುಮುಖ ಸೇವೆಯಿಂದ ಜನತೆಯ ಗೌರವವನ್ನೂ ಪ್ರೀತಿಯನ್ನೂ ಗಳಿಸಿದರು. 1924ರಲ್ಲಿ ಅಶುತೋಷರು ನಿಧನರಾದರು.

ಅಶೋಕ

ನೋಡಿ : ಸಂಪುಟ ೧

ಅಶೋಕ ಚಕ್ರ


ಸಮ್ರಾಟ ಅಶೋಕ ಸಾರನಾಥದಲ್ಲಿ ನಿರ್ಮಿಸಿದ ಸ್ತಂಭದಲ್ಲಿ ಕೆತ್ತಿದ ಚಕ್ರ —ಅಶೋಕಚಕ್ರ.



ಬೋಧಿ ಸತ್ತ್ವ : ಅಶೋಕ

ಸ್ತಂಭದ ಸಿಂಹ ಶೀರ್ಷದ ಪೀಠದ ಮೇಲೆ ನಾಲ್ಕು ಚಕ್ರಗಳಿವೆ. ಸಿಂಹಶೀರ್ಷದ ಮೇಲೆ ಇನ್ನೊಂದು ಚಕ್ರ ಇದ್ದಿರಬೇಕೆಂದೂ ಅದು ಪೀಠದಲ್ಲಿರುವ ಚಕ್ರಗಳಿಗಿಂತ ದೊಡ್ಡದಾಗಿದ್ದಿರಬೇಕೆಂದೂ ಊಹೆ. ಪೀಠದ ಮೇಲಿರುವ ಚಕ್ರಗಳಲ್ಲಿ 24 ಅರಗಳಿವೆ; ಶೀರ್ಷಿಕೆಯ ಮೇಲಿದ್ದ ಚಕ್ರದಲ್ಲಿ ಮೂವತ್ತೆರಡು ಅರಗಳಿದ್ದಿರಬೇಕು.

1947ನೆಯ ಜೂಲೈ 22ರಂದು ಭಾರತದ ರಾಷ್ಟ್ರಧ್ವಜವನ್ನು ಅಂಗೀಕರಿಸಿದಾಗ, ತ್ರಿವರ್ಣ ಧ್ವಜದ ಮಧ್ಯಭಾಗದ ಬಿಳಿಯ ಪಟ್ಟಿಯ ನಡುವೆ, ಗಾಢ ನೀಲಿಯಲ್ಲಿ ಅಶೋಕ ಚಕ್ರದ ಚಿಹ್ನೆ ಇರಬೇಕೆಂದು ನಿರ್ಧರಿಸಲಾಯಿತು. ಸಾರನಾಥದ ಸ್ತಂಭದ ಶೀರ್ಷಪೀಠದ ಮೇಲಿರುವ ಚಕ್ರದ ರೂಪವನ್ನು ಭಾರತದ ರಾಷ್ಟ್ರಧ್ವಜದಲ್ಲಿ ಅಳವಡಿಸಲಾಯಿತು.



ಭಾರತದ ಸಿಂಹಶೀರ್ಷ ಮುದ್ರೆ

ಸಾರನಾಥದ ಸ್ತಂಭದ ಶೀರ್ಷದ ಪೀಠ ಗುಂಡಾಗಿದೆ. ಇದರ ಎತ್ತರ ಸುಮಾರು ಒಂದು ಅಡಿ; ಸುತ್ತಳತೆ 2 ಅಡಿ 10 ಅಂಗುಲ. ಈ ಪೀಠದ ನಾಲ್ಕು ದಿಕ್ಕುಗಳಲ್ಲೂ ಒಂದೊಂದು ಚಕ್ರವಿದೆ. ಈ ಚಕ್ರಗಳ ನಡುವೆ, ಆನೆ, ಗೂಳಿ, ಕುದುರೆ, ಸಿಂಹಗಳ ಚಿತ್ರಣವಿದೆ. ಜಾತಕ ಕಥೆಗಳ ಆಧಾರದ ಮೇಲೆ ಈ ಪ್ರಾಣಿಗಳು ಬುದ್ಧನ ಹಿಂದಿನ ಜನ್ಮಗಳ ಸಂಕೇತವೆಂದು ಭಾವಿಸಲಾಗಿದೆ. ಅಶೋಕ ಸ್ತಂಭದ ಶೀರ್ಷಪೀಠದಲ್ಲಿರುವ ಚಕ್ರವನ್ನು ಧರ್ಮಚಕ್ರವೆಂದೂ ಕರೆಯುತ್ತಾರೆ.

ನೋಡಿ : ಸಾರನಾಥ

ಅಶೋಕ ಮೆಹತಾ


ಖ್ಯಾತ ರಾಜನೀತಿಜ್ಞರಾಗಿ ಅರ್ಥಶಾಸ್ತ್ರಜ್ಞರಾಗಿ ಪ್ರಖ್ಯಾತರಾಗಿರುವವರು ಅಶೋಕ ಮೆಹತಾ.

1911, ಅಕ್ಟೋಬರ್‌ನಲ್ಲಿ ಇವರ ಜನನ. ಮುಂಬಯಿಯಲ್ಲಿ ವಿದ್ಯಾಭ್ಯಾಸ. ಕಾಲೇಜಿನ ವಿದ್ಯಾರ್ಥಿ ದೆಸೆಯಿಂದಲೇ ಸ್ವಾತಂತ್ರ್ಯ ಆಂದೋಲನದಲ್ಲಿ ಧುಮುಕಿ, ಹಲವು ವರ್ಷಗಳ ಕಾಲ ಸೆರೆಮನೆವಾಸ ಅನುಭವಿಸಿದರು. ರಾಜಕೀಯ ಚಟುವಟಿಕೆಗಳಲ್ಲಿ ಸಕ್ರಿಯ ಪಾತ್ರ ವಹಿಸಿದರು.

ಅಶೋಕ ಮೆಹತಾ, ತಮ್ಮ 23 ವರ್ಷ ವಯಸ್ಸಿನಲ್ಲೇ (1934) ಕಾಂಗ್ರೆಸ್ ಸೋಷಲಿಸ್ಟ್ ಪಕ್ಷದ ಸಂಸ್ಥಾಪಕ ಸದಸ್ಯರಾದರು. 1949ರಲ್ಲಿ ಹಿಂದ್ ಮಜ್ದೂರ್ ಸಭಾ ಸ್ಥಾಪಿಸಿ ಅದರ ಪ್ರಥಮ ಪ್ರಧಾನ ಕಾರ್ಯದರ್ಶಿಯಾದರು.

1950ರಿಂದ ಮೂರು ವರ್ಷಗಳ ಕಾಲ ಪ್ರಜಾ ಸೋಷಲಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿಯಾದರು. 1959ರಿಂದ 63ರ ವರೆಗೆ ಪ್ರಜಾ ಸೋಷಲಿಸ್ಟ್ ಪಕ್ಷದ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದರು.

1954ರಲ್ಲಿ ಇವರು ಪ್ರಥಮ ಬಾರಿಗೆ ಲೋಕಸಭೆಗೆ ಚುನಾಯಿತರಾದರು. 1970ರ ವರೆಗೂ ಸಂಸತ್ತಿನ ಸದಸ್ಯರಾಗಿದ್ದರು. 1963ರಿಂದ 1966ರ ವರೆಗೆ ಯೋಜನಾ ಸಮಿತಿ ಉಪಾಧ್ಯಕ್ಷರಾಗಿದ್ದರು.



ಸಂಸ್ಥಾ ಕಾಂಗ್ರೆಸ್ ನಾಯಕ : ಅಶೋಕ ಮೆಹತಾ

ಇವರು ಕಾಂಗ್ರೆಸ್ ಸೇರಿದ ಮೇಲೆ ಕೇಂದ್ರ ಮಂತ್ರಿಮಂಡಲದಲ್ಲಿ ಸಚಿವರಾದರು. ಕಾಂಗ್ರೆಸ್ ಇಬ್ಭಾಗವಾದಾಗ ಇವರು ಸಂಸ್ಥಾ ಕಾಂಗ್ರೆಸ್‌ನಲ್ಲಿ ಉಳಿದರು. 1973ರಲ್ಲಿ ಅದರ ಅಧ್ಯಕ್ಷರಾದರು. ಇವರು ಅವಿವಾಹಿತರು.

ಅಶೋಕ ಮೆಹತಾ ಆರ್ಥಿಕ ಮತ್ತು ರಾಜಕೀಯ ವಿಷಯಗಳ ಮೇಲೆ ಗ್ರಂಥಗಳನ್ನು ರಚಿಸಿದ್ದಾರೆ. ಅವುಗಳಲ್ಲಿ 'ಇಂಡಿಯನ್ ಷಿಪ್ಪಿಂಗ್', 'ಕಮ್ಯೂನಲ್ ಟ್ರ್ಯಾಂಗ್ಲ್ ಇನ್ ಇಂಡಿಯಾ', 'ಗ್ರೇಟ್ ರಿಬೆಲಿಯನ್', 'ಸ್ಟಡೀಸ್ ಇನ್ ಸೋಷಲಿಸಂ' ಮುಖ್ಯವಾದುವು.

ಅಷ್ಟದಿಕ್ಪಾಲಕರು

ಪೂರ್ವ, ಆಗ್ನೇಯ, ದಕ್ಷಿಣ, ನೈಋತ್ಯ, ಪಶ್ಚಿಮ, ವಾಯುವ್ಯ, ಉತ್ತರ ಮತ್ತು ಈಶಾನ್ಯ —ಈ ಒಂದೊಂದು ದಿಕ್ಕಿಗೂ ಒಬ್ಬೊಬ್ಬ ಅಧಿಪತಿ ಇದ್ದಾನೆ ಎಂದು ನಂಬಿಕೆ. ಅವರೇ ಅಷ್ಟದಿಕ್ಪಾಲಕರು.

ಇಂದ್ರ ಪೂರ್ವದಿಕ್ಕಿಗೆ ಅಧಿಪತಿ. ಸಿಡಿಲು ಈತನ ಆಯುಧ. ಅಗ್ನಿ ಆಗ್ನೇಯದ ಒಡೆಯ. ಧರ್ಮಕ್ಕೆ ಅಧಿಕಾರಿಯಾದ ಯಮ ದಕ್ಷಿಣದ ದಿಕ್ಪಾಲಕ; ಈತನ ರಾಜಧಾನಿ ಶೈಮಿನಿ. ನೈಋತ್ಯ ದಿಕ್ಕಿನ ಅಧಿಪತಿ ನಿಋುತಿ. ಪಶ್ಚಿಮ ದಿಕ್ಕಿನ ಅಧಿಪತಿ ವರುಣ. ಈತ ಸಮುದ್ರ ರಾಜ. ಮೊಸಳೆ ಇವನ ವಾಹನ. ವಾಯುವ್ಯದ ಒಡೆಯ ವಾಯು. ಪುಲಸ್ತ್ಯನ ಮಗ ಕುಬೇರ, ಐಶ್ವರ್ಯಕ್ಕೆ ಒಡೆಯ; ಉತ್ತರ ದಿಕ್ಕಿಗೆ ಅಧಿಪತಿ. ಈಶ್ವರ ಈಶಾನ್ಯ ದಿಕ್ಕಿನ ಅಧಿದೇವತೆ.

ನೋಡಿ : ಅಗ್ನಿ : ಇಂದ್ರ ; ಕುಬೇರ : [illegible]

ಅಸಹಕಾರ ಚಳುವಳಿ

"ಮಹಾತ್ಮರು ವಿದೇಶೀ ಬಟ್ಟೆಯ ರಾಶಿಗೆ ಬೆಂಕಿ ಹಚ್ಚಿದರು. ಆ ನೋಟ ಬಲು ರೋಮಾಂಚಕಾರಿಯಾಗಿತ್ತು—ದಟ್ಟವಾಗುತ್ತಿದ್ದ ಕತ್ತಲೆಯಲ್ಲಿ ಸೇರಿದ್ದ ಭಾರಿ ಜನಸ್ತೋಮ. [illegible] ಭಾವೋದ್ರಿಕ್ತ ಘೋಷಣೆಗಳು. . . . ."

—1921ರಲ್ಲಿ ಅಸಹಕಾರ ಚಳವಳಿಯ ಅಂಗವಾಗಿ ನಡೆದ ವಿದೇಶಿ ವಸ್ತ್ರಗಳ ದಹನವನ್ನು ಕುರಿತು ಪ್ರತ್ಯಕ್ಷದರ್ಶಿಯ ವರ್ಣನೆ ಇದು.

[illegible]



ಸರದಾರರ ಮುಖಂಡತ್ವದ ಬಾರ್ದೋಲಿ ರೈತರ ಕರನಿರಾಕರಣೆ — ಆ ಕಾಲದ ಜರ್ಮನ್ ಪತ್ರಿಕೆಯಲ್ಲಿ ಚಿತ್ರ

ಘಟನೆಗಳ ಘೋರತನದ ಬಗೆಗೆ ಜನತೆಗೆ ಉಂಟಾಗಿದ್ದ ಕ್ರೋಧವನ್ನು ವ್ಯಕ್ತಪಡಿಸಲು ಗಾಂಧೀಜೀಯವರು ಅಸಹಕಾರ ಚಳುವಳಿಯನ್ನು ರೂಪಿಸಲು ನಿರ್ಧರಿಸಿದರು.

1920ರ ಸಪ್ಟೆಂಬರ್‌ನಲ್ಲಿ ಕಲ್ಕತ್ತೆಯಲ್ಲಿ ರಾಷ್ಟ್ರೀಯ ಕಾಂಗ್ರೆಸ್ಸಿನ ವಿಶೇಷ ಅಧಿವೇಶನ ಸೇರಿತು. ಚಳುವಳಿಯ ಬಗೆಗೆ ತಿಳಿಸಿದ ಗಾಂಧೀಜೀ ಆಗ ಮಾಡಬೇಕಾದ ಕಾರ್ಯಕ್ರಮಗಳ ವಿವರವನ್ನೂ ಕೊಟ್ಟರು. ಸರಕಾರೀ ನೌಕರಿಗೆ ಬಹಿಷ್ಕಾರ ಹಾಕುವುದು, ಬ್ರಿಟಿಷ್ ಸರಕಾರ ಕೊಟ್ಟಿರುವ ಪದವಿಗಳನ್ನು ತ್ಯಜಿಸುವುದು. ಸರಕಾರಕ್ಕೆ ಕಂದಾಯ ಕೊಡಲು ನಿರಾಕರಿಸುವುದು. ಸರಕಾರದ ಶಾಲಾ ಕಾಲೇಜುಗಳಿಂದ ಮಕ್ಕಳನ್ನು ಬಿಡಿಸುವುದು. ಸರಕಾರೀ ಸಮಾರಂಭಗಳಿಗೆ ಹೋಗಲು ನಿರಾಕರಿಸುವುದು. ನ್ಯಾಯಾಲಯಗಳಿಗೆ ಬಹಿಷ್ಕಾರ ಹಾಕುವುದು, ಇರಾಕಿನಲ್ಲಿ ಬ್ರಿಟಿಷ್ ಸೇನೆಯಲ್ಲಿರುವ ಭಾರತೀಯರು ಸೇವೆ ಸಲ್ಲಿಸದಿರುವುದು — ಇವು ಗಾಂಧೀಜೀ ನಿರ್ಧರಿಸಿದ ಅಸಹಕಾರ ಕಾರ್ಯಕ್ರಮಗಳು. ಅಲ್ಲದೆ ಚುನಾವಣೆಯಲ್ಲಿ ಉಮೇದುವಾರರಾಗಿ ಅಥವಾ ಮತದಾರರಾಗಿ ಭಾಗವಹಿಸಿ ಸರಕಾರದ ಆಡಳಿತಕ್ಕೆ ಸಹಕಾರ ನೀಡಬಾರದೆಂದೂ ಗಾಂಧೀಜೀ ತಿಳಿಸಿದರು. ಅದೇ ವರ್ಷ ಡಿಸೆಂಬರ್‌ನಲ್ಲಿ ನಡೆದ ನಾಗಪುರ ಕಾಂಗ್ರೆಸ್ ಅಧಿವೇಶನದಲ್ಲಿ ಚಳುವಳಿಗೆ ಒಪ್ಪಿಗೆ ದೊರಕಿತು. ಚಳುವಳಿಯಲ್ಲಿ ಭಾಗವಹಿಸಲು ಜನರು ಅಧಿಕ ಸಂಖ್ಯೆಯಲ್ಲಿ ಮುಂದೆ ಬಂದರು.

ಅಸಹಕಾರ ಚಳುವಳಿಯನ್ನು ಸತ್ಯ, ಅಹಿಂಸೆಗಳ ತಳಹದಿಯ ಮೇಲೆ ನಡೆಸಬೇಕೆಂಬುದು ಗಾಂಧೀಜಿಯ ಅಪೇಕ್ಷೆಯಾಗಿತ್ತು. ಆದರೆ ಉತ್ತರ ಪ್ರದೇಶದ ಚೌರಿಚೌರಾ ಎಂಬಲ್ಲಿ ಉದ್ರಿಕ್ತ ಜನ ಪೋಲೀಸ್ ಠಾಣೆಗೆ ಬೆಂಕಿ ಹಚ್ಚಿದ ಪ್ರಕರಣದಿಂದ ನೊಂದ ಗಾಂಧೀಜೀ ಅಸಹಕಾರ ಚಳುವಳಿಯನ್ನು ತಾತ್ಕಾಲಿಕವಾಗಿ ನಿಲ್ಲಿಸಿಬಿಟ್ಟರು. ಆದರೂ ಆಗಿಂದಾಗ್ಗೆ ಹರತಾಳಗಳು, ಅಸಹಕಾರ ಕಾರ್ಯಗಳು ನಡೆಯುತ್ತಲೇ ಇದ್ದುವು.

ಉಪ್ಪಿನ ಮೇಲೆ ಸರಕಾರ ಹೇರಿದ್ದ ಕರದ ವಿರುದ್ಧ ಪ್ರತಿಭಟಿಸಲು ಗಾಂಧೀಜೀ ಉಪ್ಪಿನ ಸತ್ಯಾಗ್ರಹ ಪ್ರಾರಂಭಿಸಿದರು. 1930 ಮಾರ್ಚ್ 12ರಂದು ಅವರು ತಮ್ಮ ಸಾಬರಮತಿ ಆಶ್ರಮದಿಂದ ಹೊರಟು 24 ದಿನ ಕಾಲ್ನಡಿಗೆಯಲ್ಲಿ 241 ಮೈಲಿ ದೂರ ಪ್ರಯಾಣ ಬೆಳೆಸಿ, ದಂಡಿಯ ಬಳಿ ಸಮುದ್ರ ದಡದಲ್ಲಿ ಉಪ್ಪು ತಯಾರಿಸಿ ಕಾನೂನು ಭಂಗ ಮಾಡಿದರು. ಇದೇ ಸುಪ್ರಸಿದ್ಧ ದಂಡೀಯಾತ್ರೆ. ಪುಷ್ಕರ, ಸವಿನಯ ಕಾನೂನು ಭಂಗ, ಬ್ರಿಟಿಷ್ ವಸ್ತುಗಳ ಬಹಿಷ್ಕಾರ ದೇಶದ ಎಲ್ಲ ಕಡೆಗಳಲ್ಲೂ ನಡೆದುವು. ಗಾಂಧೀಜಿಯನ್ನು ಅನುಸರಿಸಿ ಅನೇಕ ಕಡೆ ಜನ ಉಪ್ಪು ತಯಾರಿಸಿ ಕಾನೂನು ಉಲ್ಲಂಘಿಸಿದರು.

ಭಾರತದ ಸ್ವಾತಂತ್ರ್ಯ ಸಾಧನೆಯಲ್ಲಿ ಅಸಹಕಾರ ಚಳುವಳಿಗಳು ಪ್ರಮುಖ ಹೆಜ್ಜೆಗಳು. ಸ್ವಾತಂತ್ರ್ಯ ಹೋರಾಟ ಜನತಾ ಚಳುವಳಿಯ ರೂಪ ಪಡೆದದ್ದು ಅಸಹಕಾರ ಕಾರ್ಯಕ್ರಮದಿಂದ.


ಅಸ್ಸಾಂ

ಎತ್ತರತಗ್ಗುಗಳ, ಗುಡ್ಡಗಳ ಭೂಮಿ. ಆಳವಾದ ಕಮರಿಗಳು. ಧಾವಿಸಿ ಹರಿಯುವ ನದಿಗಳು. ದಟ್ಟ ಕಾಡು. ಇಂಥ ರಮಣೀಯ ನೋಟಗಳ ನಾಡು ಅಸ್ಸಾಂ ರಾಜ್ಯ. (ಸ್ಥಳೀಯ ಉಚ್ಚಾರ: ಆಸಾಮ್) ಇದರ ಜೀವನದಿ ಬ್ರಹ್ಮಪುತ್ರಾ. ಇದು ಪ್ರಪಂಚದ ದೊಡ್ಡ ನದಿಗಳಲ್ಲಿ ಒಂದು. 'ಕೆಂಪು ನದಿ' ಎಂದೂ ಇದಕ್ಕೆ ಹೆಸರಿದೆ. ನೆರೆಯುಕ್ಕಿ ಬಂದಾಗ ಅದು ಕೆಂಪಾಗಿ ಕಾಣುತ್ತದೆ. ನೆರೆಯ ಹಾವಳಿಯಷ್ಟೇ ಅಲ್ಲ; ಭೂಕಂಪವೂ ಆಗಾಗ್ಗೆ ಅಸ್ಸಾಮನ್ನು ಕಾಡುತ್ತದೆ. ಆದರೂ ಅದೊಂದು ಅತ್ಯುತ್ತಮ ಕೃಷಿರಾಜ್ಯ. ಚಹಾ ಬೆಳೆಯುವ ರಾಜ್ಯಗಳಲ್ಲಿ ಅಸ್ಸಾಮಿಗೆ ಮೊದಲ ಸ್ಥಾನ.

ಈಶಾನ್ಯ ಭಾರತದಲ್ಲಿರುವ ಅಸ್ಸಾಮಿನ ಚರಿತ್ರೆಯನ್ನು ಅರಿಯಲು ಬ್ರಹ್ಮಪುತ್ರಾ ನದಿ ಬಗೆಗೆ ಇತಿಹಾಸ ತಿಳಿಯಬೇಕು.

ಪ್ರಾಚೀನ ಕಾಲದಲ್ಲಿ ಅಸ್ಸಾಮಿಗೆ ಪ್ರಾಗ್ಜ್ಯೋತಿಷ ಎಂಬ ಹೆಸರಿದ್ದಿತು. ಮಹಾಭಾರತದ ಕಾಲದಲ್ಲಿ ಭಗದತ್ತ ಇದನ್ನು ಆಳುತ್ತಿದ್ದ. 'ಕಾಮರೂಪ' ಎಂಬುದು ಇದರ ಇನ್ನೊಂದು ಹೆಸರು. ಕ್ರಿಸ್ತ ಶಕದ ಆರಂಭ ಕಾಲದಲ್ಲಿ ಆರ್ಯರು ಇಲ್ಲಿಗೆ ಬಂದು ನೆಲೆಸಿದರು. 4ರಿಂದ 7ನೆಯ ಶತಮಾನದ ವರೆಗೆ ಪುಷ್ಯವರ್ಮ ರಾಜವಂಶದ ಆಳ್ವಿಕೆ ನಡೆಯಿತು. 640ರಲ್ಲಿ ಚೀನೀ ಯಾತ್ರಿಕ ಹ್ಯೂಯೆನ್ ತ್ಸಾಂಗ್ ಇಲ್ಲಿಗೆ ಬಂದಿದ್ದ. ಅಸ್ಸಾಮಿನ ಚರಿತ್ರೆಯಲ್ಲಿ ಬಹಳ ಕಾಲದಿಂದ ನದೀ ಕಣಿವೆಯ ಜನರಿಗೂ ಗುಡ್ಡಗಾಡು ನಿವಾಸಿಗಳಿಗೂ ಕಾದಾಟಗಳು ಆಗುತ್ತಲೇ ಇದ್ದುವು. ಹದಿಮೂರನೆಯ ಶತಮಾನದಲ್ಲಿ ಬರ್ಮದ ಕಡೆಯಿಂದ ಬಂದ ಅಹೋಂ ಕುಲದ ಜನರು ಸ್ಥಳೀಯರೊಂದಿಗೆ ಹೋರಾಡಿ, ಗೆದ್ದು, ತಮ್ಮ ರಾಜ್ಯ ಸ್ಥಾಪಿಸಿದರು. ಈ ಪ್ರದೇಶಕ್ಕೆ 'ಅಸ್ಸಾಂ' ಎಂಬ ಹೆಸರು ಬಂದದ್ದು ಇವರಿಂದ. ಮೊಘಲರ ಕಾಲದಲ್ಲಿ ಇವರು ಮಹಮ್ಮದೀಯ ದಾಳಿಗಳನ್ನು ಎದುರಿಸಿದರು. ಇವರ ರಾಜ ರುದ್ರಸಿಂಹ (17ನೆಯ ಶತಮಾನ) ಹಿಂದೂಧರ್ಮವನ್ನು ಸ್ವೀಕರಿಸಿದ. ಮತ್ತೆ ಗುಡ್ಡಗಾಡು ಜನರ ಹಾವಳಿ: ಅಂತಃಕಲಹದಲ್ಲಿ ಒಂದು ಪಕ್ಷಕ್ಕೆ ನೆರವು ಕೊಡಲು ಬಂದ ಬರ್ಮಾಯರಿಂದ ಲೂಟಿ, ಕೊಲೆ — ಹೀಗೆ ಅಸ್ಸಾಮಿನಲ್ಲಿ ಶಾಂತಿಭಂಗವಾಗುತ್ತಲೇ ಇದ್ದಿತು. 1874ರಲ್ಲಿ ಇದು ಬ್ರಿಟಿಷರ ವಶವಾಯಿತು.

ಅಸ್ಸಾಂ ರಾಜ್ಯದಿಂದ ಕೆಲ ಭಾಗಗಳನ್ನು ಬೇರ್ಪಡಿಸಿ 1942ರಲ್ಲಿ ನಾಗಾಲ್ಯಾಂಡ್ ಹಾಗೂ ಅರುಣಾಚಲ ಪ್ರದೇಶಗಳನ್ನು ರೂಪಿಸಲಾಯಿತು.



ಅಸ್ಸಾಮಿನ ಮೇರೆಗಳೆಂದರೆ ಅರುಣಾಚಲ ಪ್ರದೇಶ, ನಾಗಾಲ್ಯಾಂಡ್, ಮಣಿಪುರ, ಮಿಜೋರಾಮ್, ತ್ರಿಪುರಾ, ಬಾಂಗ್ಲಾದೇಶ, ಮೇಘಾಲಯ ಹಾಗೂ ಭೂತಾನ.

ಹಿಮಾಲಯದ ತಪ್ಪಲಿನಲ್ಲಿರುವುದರಿಂದ ಅಸ್ಸಾಂನಲ್ಲಿ ಹೇರಳವಾಗಿ ಮಳೆಯಾಗುತ್ತದೆ. ಪ್ರಪಂಚದ ಅತ್ಯಧಿಕ ಮಳೆ ಬೀಳುವ ಚಿರಾಪುಂಜಿ ಪ್ರದೇಶದಲ್ಲಿ ಗುಡ್ಡಗಳು ಕಮರಿಗಳು ಅಧಿಕವಾಗಿವೆ. ಮಳೆಗಾಲದಲ್ಲಿ ಇಲ್ಲಿ ಅನೇಕ ಜಲಪಾತಗಳು ರೂಪುಗೊಳ್ಳುತ್ತವೆ. ಪ್ರವಾಸಿಗರಿಗೆ ಇದೊಂದು ಭವ್ಯ ದೃಶ್ಯ. ಷಿಲ್ಲಾಂಗ್ ಅಸ್ಸಾಮಿನ ರಾಜಧಾನಿ; ಇದು ಭಾರತದ ಪ್ರಸಿದ್ಧ ಪರ್ವತ ಧಾಮಗಳಲ್ಲಿ ಒಂದು. ಇಲ್ಲಿನ ಕೃತಕ ಸರೋವರ, ಗಾಲ್ಫ್ ಕ್ರೀಡಾ ಮೈದಾನ ಹಾಗೂ ಇಲ್ಲಿ ಆಡಲ್ಪಡುವ 'ತೀರ್' ಕ್ರೀಡೆಗಳು ಮುಖ್ಯ ಆಕರ್ಷಣೆಗಳು.

ಕಾಡುಮೃಗಗಳ ಪ್ರಿಯ ಆಶ್ರಯಸ್ಥಾನ ಅಸ್ಸಾಂ. ಆನೆ. ಕಾಡೆಮ್ಮೆ. ಕಾಡುಕೋಣ. ಘೇಂಡಾಮೃಗ. ಹುಲಿ. ಹಳದಿ ಹಾಗೂ ಕೃಷ್ಣವರ್ಣದ ಚಿರತೆಗಳು. ಸಾಂಬಾರ್ ಜಿಂಕೆ. ಮಚ್ಚೆ ಜಿಂಕೆ. ಬೊಗಳುವ ಜಿಂಕೆ. ಮೊಸಳೆಗಳು, ಅನೇಕ ಅಪೂರ್ವ ಪಕ್ಷಿಗಳು. ನಾಗರಹಾವು ಮೊದಲಾದ ಉರಗಗಳು —ಇವೆಲ್ಲ ಅಸ್ಸಾಮಿನ ವನ್ಯ ಜಂತುಗಳು. ಈ ರಾಜ್ಯದಲ್ಲಿ ಕಾಜಿರಂಗ ಮತ್ತು ಮಾನಸ್ ಎಂಬ ಎರಡು ಅಭಯಾರಣ್ಯಗಳಿವೆ. ಆಫ್ರಿಕವನ್ನು ಬಿಟ್ಟರೆ ವನ್ಯ ಪ್ರಾಣಿಗಳ ವೈವಿಧ್ಯಕ್ಕೆ ಅಸ್ಸಾಂ ಹೆಸರುವಾಸಿ.

ಸಾಲ. ತೇಗ. ಬಿದಿರು. ಹುಲ್ಲು. ಔಷಧಿಗಳು ಹಾಗೂ ಇತರ ಉಪಯುಕ್ತ ಸಸ್ಯಗಳು ಇಲ್ಲಿನ ಅರಣ್ಯ ಉತ್ಪನ್ನಗಳು. ಭತ್ತ. ಸಾಸಿವೆ. ಧಾನ್ಯ. ಕಿತ್ತಳೆ. ಆಲೂಗಡ್ಡೆ. ಕಬ್ಬು. ಮೆಕ್ಕೆ ಜೋಳ. ಕುರಿಗಳ ಮೇವಿಗಾಗಿ ಮತ್ತು ಎಣ್ಣೆ ಬೀಜಕ್ಕಾಗಿ ಬೆಳೆಸುವ ರೇಪ್ ಮುಖ್ಯ ಬೆಳೆಗಳು. ಮುಖ್ಯ ವಾಣಿಜ್ಯ ಬೆಳೆಗಳು : ಚಹ (ಟೀ). ಸೆಣಬು. ಹತ್ತಿ. ಹೊಗೆಸೊಪ್ಪು. ಚಹ ವ್ಯವಸಾಯ ಮತ್ತು ಸಂಸ್ಕರಣ ಇಲ್ಲಿನ ಮುಖ್ಯ ಉದ್ಯಮ. ಅಸ್ಸಾಂ ಟೀ ದೇಶ ವಿದೇಶಗಳಲ್ಲಿ ಹೆಸರುವಾಸಿ. ವಿದೇಶೀ ವಿನಿಮಯ ಗಳಿಸಿ ಕೊಡುವುದರಲ್ಲಿ ಪ್ರಮುಖವಾದ ವ್ಯವಸಾಯೋತ್ಪನ್ನ ಇದು.

ಖನಿಜ ತೈಲ ಭಾರತದಲ್ಲಿ ಮೊತ್ತಮೊದಲಿಗೆ ದೊರೆತದ್ದು ಅಸ್ಸಾಮಿನಲ್ಲಿ. ಡಿಗ್ಬಾಯ್, ನಾಹರ್‌ಕಾಟಿಯಾ, ಮೊರಾನ್, ರುದ್ರಸಾಗರ, ಲಾಕ್ವಾ ಈ ರಾಜ್ಯದ ತೈಲಕ್ಷೇತ್ರಗಳು. ಡಿಗ್ಬಾಯ್‌ನ ನೂನಮಾತಿ ಎಂಬಲ್ಲಿ ತೈಲ ಶುದ್ಧೀಕರಣಾಗಾರವಿದೆ. ರೇಷ್ಮೆ ತಯಾರಿ, ದಂತ ಹಾಗೂ ಬಿದಿರಿನ ಕೆಲಸ, ಬಿದಿರು ಮತ್ತು ಕಂಚಿನ ಸಾಮಾನುಗಳನ್ನು ತಯಾರಿಸುವುದು ಈ ರಾಜ್ಯದ ಮುಖ್ಯ ಗೃಹಕೈಗಾರಿಕೆಗಳು.



ಅಸ್ಸಾಮೀ ಮಹಿಳೆ : ನಾನಾ ದೇಸಾಯಿ ಕೃತಿ

ರಾಜ್ಯದಲ್ಲಿ ಬಹ್ವಂಶ ಜನ ಆಡುವ ಭಾಷೆ ಅಸ್ಸಾಮಿ. ಇದನ್ನು ಅವರು ಅಸಮೀಯ ಎಂದು ಉಚ್ಚರಿಸುತ್ತಾರೆ. ಗಣ್ಯ ಇತಿಹಾಸವುಳ್ಳ ಭಾರತೀಯ ಭಾಷೆಗಳಲ್ಲಿ ಇದೂ ಒಂದು.



ಅಸ್ಸಾಮಿನ ಉಮ್‌ಟಿನ್ ಅಣೆಕಟ್ಟು

ಹೆಚ್ಚಿನ ಜನರು ಹಳ್ಳಿಗಳಲ್ಲಿ ವಾಸಿಸುತ್ತಾರೆ. ತೆಂಗಿನ ತೋಪು. ಬಿದಿರು. ಮೆಳೆಗಳ ನಡುವೆ ಅಡಗಿರುವ ಈ ಹಳ್ಳಿಗಳು ಎಲ್ಲಾ ಋತುಗಳಲ್ಲೂ ಇನ್ನೊಂದು ಆರಂಭವಾದಂತೆ ಕಾಣುತ್ತವೆ. ಪ್ರತಿಹಳ್ಳಿಗೂ 'ನಾಮಘರ್' ಎಂಬ ಪ್ರಾರ್ಥನಾಮಂದಿರವಿದೆ. ಈ ಹಳ್ಳಿಗಳ ಮನೆಗಳಲ್ಲಿ ಸಾಮಾನ್ಯವಾಗಿ ಕೈಮಗ್ಗ ಇದ್ದೇ ಇರುತ್ತದೆ. ವರ್ಷಕ್ಕೆ ಮೂರು ಬಾರಿ 'ಬಿಹು' ಹಬ್ಬ ಆಚರಿಸುವುದು ಪದ್ಧತಿ. ಏಪ್ರಿಲ್ ತಿಂಗಳ 'ಬಿಹು' ಹೊಸ ವರ್ಷವನ್ನು ಸ್ವಾಗತಿಸುವ ಹಬ್ಬ. ಆಗ ಬೀಸಿದ ಬಿರುಗಾಳಿಗೆ ಮರಗಿಡಗಳು ಅಲುಗುವುದನ್ನು ತೋರಿಸುವ ನೃತ್ಯ ಮಾಡುತ್ತಾರೆ. ದನಗಳಿಗೆ ಬದನೆ ಕಾಯಿ. ಸೋರೆಕಾಯಿಗಳ ಮಾಲೆ ಹಾಕುತ್ತಾರೆ.

ಷಿಲ್ಲಾಂಗ್. ಗೌಹತಿ. ದಿಬ್ರೂಘರ್. ಸಿಲ್ಚಾರ್. ನೌಗಾಂಗ್. ಡಿಗ್ಬಾಯ್‌ಗಳು ಅಸ್ಸಾಮಿನ ಮುಖ್ಯ ಪಟ್ಟಣಗಳು. ರಾಜ್ಯದ ಗೌಹತಿ. ದಿಬ್ರೂಘರ್‌ಗಳಲ್ಲಿ ಎರಡು ವಿಶ್ವವಿದ್ಯಾನಿಲಯಗಳಿವೆ. ಜೋರ್‌ಹಾಟ್‌ನಿಂದ ಸ್ವಲ್ಪ ದೂರದಲ್ಲಿ ಶಿವಸಾಗರ (ಸಿಬ್‌ಸಾಗರ್) ಮತ್ತು ಜಯ್‌ಸಾಗರಗಳಿವೆ. ಇಲ್ಲಿ ಭವ್ಯವಾದ ಪ್ರಾಚೀನ ದೇವಾಲಯಗಳು ಅನೇಕವಿವೆ. ಗೌಹತಿಯಲ್ಲಿ ಸುಪ್ರಸಿದ್ಧ ಕಾಮಾಖ್ಯ ದೇವಸ್ಥಾನ ಮತ್ತು ಇನ್ನು ಕೆಲವು ದೇವಾಲಯಗಳೂ ತೇಜಪುರದಲ್ಲಿ ಮಹಾಭೈರವ ದೇವಸ್ಥಾನ ಇವೆ. ಲೋಹಿತ್ ನದಿಯ ದಡದಲ್ಲಿ ಪರಶುರಾಮ ಕುಂಡವಿದೆ. ಇವೆಲ್ಲ ಭಾರತೀಯ ಯಾತ್ರಿಗಳಿಗೆ ಪವಿತ್ರ ಸ್ಥಳಗಳು.

ನೋಡಿ : ಕಾಮಾಖ್ಯ ದೇವಾಲಯ ; ಡಿಗ್ಬಾಯ್ : ಷಿಲ್ಲಾಂಗ್

ಅಸ್ಸಾಮಿ ಭಾಷೆ, ಸಾಹಿತ್ಯ

ಭಾರತದ ಸಂವಿಧಾನದಲ್ಲಿ ದಾಖಲಾಗಿರುವ ಭಾಷೆಗಳಲ್ಲಿ ಅಕ್ಷರಾನುಕ್ರಮವಾಗಿ ಅಸ್ಸಾಮಿ (ಭಾಷಾ ಉಚ್ಚಾರ : ಅಸಮೀಯ) ಮೊದಲಿನದು. ಅಸ್ಸಾಂ ರಾಜ್ಯದ ಈ ಭಾಷೆ ಅಲ್ಲಿನ ಬಹುಜನರ ಮಾತೃಭಾಷೆ.

ಮಾಗಧೀ ಅಥವಾ ಗೌಡ ಅಪಭ್ರಂಶದಿಂದ ಅಸ್ಸಾಮಿ ಭಾಷೆ ಹುಟ್ಟಿರಬೇಕೆಂದು ವಿದ್ವಾಂಸರ ಅಭಿಪ್ರಾಯ. ದೇವನಾಗರಿ ಲಿಪಿಯಿಂದಲೇ ಇದರ ಲಿಪಿಯೂ ಹುಟ್ಟಿದೆ. ಅಸ್ಸಾಮಿ ಭಾಷೆಯ ಪ್ರಾಚೀನತೆ ಸುಮಾರು ಕ್ರಿ.ಶ. 7–8ನೆಯ ಶತಮಾನಗಳ ಹಿಂದಿನ ವರೆಗೂ ಹೋಗುವುದೆಂದು ನಂಬಲಾಗಿದೆ.

ಜಾನಪದ ರೂಪದಲ್ಲಿ ಅಸ್ಸಾಮಿ ಸಾಹಿತ್ಯ ಬಹು ಹಿಂದಿನಿಂದ ಇದ್ದರೂ ಅದರ ಇತಿಹಾಸವನ್ನು ಕ್ರಿ.ಶ. 13ನೆಯ ಶತಮಾನದಿಂದ ಸ್ಪಷ್ಟವಾಗಿ ಗುರುತಿಸಬಹುದು. ಈ ಶತಮಾನದ ಉತ್ತರಾರ್ಧದಲ್ಲಿದ್ದ ಹೇಮ

ಸರಸ್ವತಿ ರಚಿಸಿದ 'ಪ್ರಹ್ಲಾದ ಚರಿತೆ' ಈ ಭಾಷೆಯ ಮೊದಲ ಕೃತಿ. ಈ ಕೃತಿಯಲ್ಲಿ ಸಂಸ್ಕೃತದ ಪ್ರಭಾವ ಸ್ಪಷ್ಟವಾಗಿದೆ. ಹರಿಹರ ವಿಪ್ರ, ಕವಿರತ್ನ ಸರಸ್ವತಿ ಇವನ ಅನಂತರ ಬಂದ ಕವಿಗಳಲ್ಲಿ ಪ್ರಮುಖರು.

14ನೆಯ ಶತಮಾನದ ಮಾಧವ ಕಂದಲಿ, ವಾಲ್ಮೀಕಿ ರಾಮಾಯಣವನ್ನು ಅಸ್ಸಾಮಿ ಭಾಷೆಗೆ ತಂದ. ಇವನ ಮತ್ತೊಂದು ಕಾವ್ಯ 'ದೇವಜಿತ್' (ಅಸ್ಸಾಮಿ ಭಾಷೆಯ ಪ್ರಥಮ ಸ್ವತಂತ್ರ ಕೃತಿ). ಅನಂತರದ ಕವಿಗಳು ಇವನಿಂದ ಪ್ರಭಾವಿತರು. 15ನೆಯ ಶತಮಾನದ ಶಂಕರದೇವ ಭಾಗವತ ಪುರಾಣವನ್ನು ಭಾಷಾಂತರಿಸಿದ: 12 ಕಾವ್ಯಗಳನ್ನೂ 6 ನಾಟಕಗಳನ್ನೂ 240 ಭಕ್ತಿಗೀತೆಗಳನ್ನೂ ರಚಿಸಿದ. ಇವನ ವಿಪುಲ ಕೃತಿಗಳು ಅಸ್ಸಾಮಿ ಸಾಹಿತ್ಯಕ್ಕೆ ಭದ್ರ ಅಡಿಪಾಯ ಹಾಕಿದವು. 'ರುಕ್ಮಿಣೀಹರಣ ಕಾವ್ಯ', 'ವೈಷ್ಣವಾಮೃತ', 'ಕೀರ್ತನ ಘೋಷ' ಮೊದಲಾದ ಇವನ ಕೃತಿಗಳು ಅಸ್ಸಾಮಿ ಸಾಹಿತ್ಯದಲ್ಲಿ ವೈಷ್ಣವ ಯುಗವನ್ನು ಪ್ರಾರಂಭಿಸಿದುವು. ಅಸ್ಸಾಮಿ ನಾಟಕ ಪ್ರಕಾರಕ್ಕೂ ಇವನೇ ಮೂಲಪುರುಷ ಎನ್ನಬಹುದು.

ಶಂಕರದೇವನ ಶಿಷ್ಯ ಮಾಧವದೇವ (1492—1596) ವೈಷ್ಣವ ಯುಗದ ಮತ್ತೊಬ್ಬ ಪ್ರಮುಖ ಕವಿ. ರಾಮಾಯಣವನ್ನು ಭಾಗಶಃ ಭಾಷಾಂತರಿಸಿದ ಇವನ 'ನಾಮಘೋಷ', 'ಭಕ್ತಿ ರತ್ನಾವಳಿ', 'ವೈಷ್ಣವ ಕೀರ್ತನ' ಮೊದಲಾದ ಕೃತಿಗಳನ್ನು ರಚಿಸಿದ. 'ಚೋರಧರ', 'ಅರ್ಜುನ ಭಂಜನ' ಮೊದಲಾದ ನಾಟಕಗಳೂ ಇವನವು. ಇವನ 180 'ಬರ್‌ಗೀತ'ಗಳು (ಭಕ್ತಿ ಗೀತೆಗಳು) ಇವನಿಗೆ ಅಪಾರ ಕೀರ್ತಿ, ಜನಪ್ರಿಯತೆಯನ್ನು ಗಳಿಸಿಕೊಟ್ಟುವು.

'ಮಹಾಭಾರತ'ವನ್ನು ಅಸ್ಸಾಮಿ ಭಾಷೆಗೆ ತಂದು ಇಡೀ ಭಾಷಾ ಸಂಪತ್ತನ್ನೇ ಹೆಚ್ಚಿಸಿ, ಕವಿಗಳಿಗೆ ಜ್ಞಾನ ಭಂಡಾರವನ್ನು ತೋರಿಸಿದ ಕೀರ್ತಿ ರಾಮಸರಸ್ವತಿಗೆ ಸಲ್ಲುತ್ತದೆ.

ಅಸ್ಸಾಮಿ ಗದ್ಯಸಾಹಿತ್ಯದ ಪಿತಾಮಹ ಭಟ್ಟದೇವ (1558-1631). ಭಾಗವತ, ಭಗವದ್ಗೀತೆಗಳನ್ನು ಗದ್ಯದಲ್ಲಿ ರಚಿಸಿ ಗದ್ಯಪ್ರಕಾರಕ್ಕೆ ಭದ್ರ ಬುನಾದಿ ಹಾಕಿದ. ಇವನ ವಿಶಿಷ್ಟ ಗದ್ಯಕ್ಕೆ ಶೈಲಿಗೆ 'ಭಕ್ಕೇಯ' ಎಂಬ ಹೆಸರು ಬಂತು. ಇದು ಇಂದಿಗೂ ಗುರುಶಿಷ್ಯರ ಉಪದೇಶ ಮಾಧ್ಯಮವಾಗಿದೆ.

ಭಟ್ಟದೇವನ ಪರಂಪರೆ ರಘುನಾಥ ಮಹಂತ (17–18ನೆಯ ಶತಮಾನ) ನಿಂದ ಮುಂದುವರಿಯಿತು. ಇವನ 'ಕಥಾ ರಾಮಾಯಣ', 'ಶತ್ರುಂಜಯ', 'ಅದ್ಭುತ ರಾಮಾಯಣ' ಗಳು ಪ್ರಮುಖ ಕೃತಿಗಳು.

'ಗೀತ ಗೋವಿಂದ'ವನ್ನು ಅಸ್ಸಾಮಿ ಭಾಷೆಗೆ ಅನುವಾದಿಸಿದ ಕವಿರಾಜ ಚಕ್ರವರ್ತಿ (18ನೆಯ ಶತಮಾನ) 'ಬ್ರಹ್ಮ ಭೈರವಪುರಾಣ'ವನ್ನೂ ಭಾಷಾಂತರಿಸಿದ. 'ಶಾಕುಂತಲ ಕಾವ್ಯ' ಇವನ ಇನ್ನೊಂದು ಕೃತಿ. ಇವನ ಅನಂತರ ವೈಷ್ಣವ ಸಾಹಿತ್ಯದ ಪ್ರಭಾವ ಕೊಂಚ ಕಡಮೆಯಾಗಿ ರಾಜಾಶ್ರಯದಲ್ಲಿ ಶಾಕ್ತಸಾಹಿತ್ಯಕ್ಕೆ ಉತ್ತೇಜನ ಸಿಕ್ಕಿತು. ಅನಂತಾಚಾರ್ಯನ 'ಅನಂತ ಲಹರಿ' ಆ ವಾತಾವರಣದಲ್ಲಿ ಸೃಷ್ಟಿಯಾಯಿತು.

ಬ್ರಿಟಿಷರು ಭಾರತಕ್ಕೆ ಬಂದು ಅಸ್ಸಾಮಿನಲ್ಲಿ ನೆಲೆಸಿದಾಗ, ಎಲ್ಲ ಕಡೆಗಳಂತೆ ಅಲ್ಲೂ ಕ್ರೈಸ್ತಮತ ಪ್ರಚಾರ ದೇಶಭಾಷೆಯಲ್ಲಿ ನಡೆಯಿತು. ಆತ್ಮಾರಾಮ್ ಶರ್ಮ 1813ರಲ್ಲಿ ಬೈಬಲನ್ನು ಅಸ್ಸಾಮಿ ಭಾಷೆಗೆ ತರ್ಜುಮೆಮಾಡಿ ಕಲ್ಕತ್ತೆಯಲ್ಲಿ ಮುದ್ರಿಸಿದರು; ಸಾಹಿತ್ಯ ಪ್ರಚಾರಕ್ಕೆ ಮುದ್ರಣದ ನೆರವು ದೊರೆಯಿತು. ವ್ಯಾಕರಣ, ನಿಘಂಟುಗಳ ರಚನೆಯೂ ಮೊದಲಾಯಿತು.

ಆಧುನಿಕ ಅಸ್ಸಾಮಿ ಸಾಹಿತ್ಯದ ಆರಂಭಕಾಲದ ಪ್ರಮುಖ ಲೇಖಕ ಲಕ್ಷ್ಮೀಕಾಂತ ಬೆಜ್ ಬರುವ (1864—1938). ಪತ್ರಿಕೋದ್ಯಮ ಇವರ ಉದ್ಯೋಗ ಕ್ಷೇತ್ರವಾದರೂ ಕಾದಂಬರಿ, ಕಥೆ, ಕವನ, ನಾಟಕ, ಪ್ರಬಂಧ ಮೊದಲಾದ ಪ್ರಕಾರಗಳಲ್ಲೂ ಇವರು ಕೃತಿ ರಚನೆ ಮಾಡಿದ್ದಾರೆ. ಸಮಕಾಲೀನ ಸಮಾಜದ ಸುಂದರ ಚಿತ್ರಣ ಇವರ ಕೃತಿಗಳಲ್ಲಿ ಸಿಗುತ್ತದೆ. 'ಬೇಲಿಮಾರ್' ಇವರ ಐತಿಹಾಸಿಕ ನಾಟಕ. ಇವರ ಕಾವ್ಯಗಳಲ್ಲಿ ರಾಷ್ಟ್ರಪ್ರೇಮ ಉತ್ಕಟವಾಗಿರುವುದನ್ನು ಕಾಣಬಹುದು. ಇವರ ಅನಂತರ ಬಂದ ಜತೀಂದ್ರನಾಥ ದುವಾರಾ (1892—1965) ರಮ್ಯ ಕಾವ್ಯಗಳನ್ನು ರಚಿಸಿದರು; ಉಮರನ ಕವನಗಳನ್ನು ಭಾಷಾಂತರಿಸಿದರು. 'ಬನಫೂಲ್' ಇವರ ಪ್ರಮುಖ ಕವನ ಸಂಕಲನ. ಕಾದಂಬರಿ, ನಾಟಕ, ವಿಮರ್ಶೆ ಮೊದಲಾದ ಹಲವಾರು ಕ್ಷೇತ್ರಗಳಲ್ಲಿ ಹೆಸರು ಗಳಿಸಿರುವ ಮತ್ತೊಬ್ಬ ಲೇಖಕ ಬಿರಿಂಚಿ ಕುಮಾರ್ ಬರುವ (1910—1964). ಆಧುನಿಕ ಅಸ್ಸಾಮಿ ಸಾಹಿತ್ಯದ ಮೇಲೆ ಆಂಗ್ಲ ಸಾಹಿತ್ಯ ಸಾಕಷ್ಟು ಪ್ರಭಾವ ಬೀರಿದೆ.

ಸಮಕಾಲೀನ ನಾಟಕಕಾರರಲ್ಲಿ ಬೇಣುಧರ ರಾಜಖೋವ, ಚಂದ್ರಧರ ಬರುವ, ಜ್ಯೋತಿ ಪ್ರಸಾದ ಅಗರವಾಲ್ ಮೊದಲಾದವರು ಪ್ರಮುಖರು. ಅಸ್ಸಾಮಿ ರಂಗಭೂಮಿಯ ಬಗೆಗೆ ಅತುಲ್‌ಚಂದ್ರ ಹಜಾರಿಕಾ ಪ್ರಮುಖ ಗ್ರಂಥವೊಂದನ್ನು ರಚಿಸಿದ್ದಾರೆ.


ಕಾದಂಬರಿಕಾರರಲ್ಲಿ ರಜನೀಕಾಂತ ಬರ್ದೊಲಾಯ್, ಬೀರೇಂದ್ರ ಕುಮಾರ್ ಭಟ್ಟಾಚಾರ್ಯ, ಸೈಯ್ಯದ್ ಅಬ್ದುಲ್ ಮಾಲಿಕ್ ಮೊದಲಾದವರು ಪ್ರಮುಖರು. ಸಣ್ಣಕಥೆಗಾರರಲ್ಲಿ ಲಕ್ಷ್ಮೀಧರ ಶರ್ಮ, ದೀನನಾಥ ಶರ್ಮ, ಬೀನಾ ಬರುವ, ತ್ರೈಲೋಕ್ಯ ಗೋಸ್ವಾಮಿ ಮೊದಲಾದವರು ಗಮನಾರ್ಹರು.

ಆಧುನಿಕ ಕವಿಗಳಲ್ಲಿ ಅಂಬಿಕಾ ಗಿರಿರಾಯ್‌ಚೌಧರಿ, ನಲಿನೀಬಾಲಾದೇವಿ, ಗೋಸ್ವಾಮಿ, ಬೇಣುಧರ ಶರ್ಮ, ತ್ರೈಲೋಕ್ಯನಾಥ ಮೊದಲಾದವರು ಖ್ಯಾತರು. ವೈಚಾರಿಕ ಸಾಹಿತ್ಯದ ಸೃಷ್ಟಿಕರ್ತರಲ್ಲಿ ಬಿರಿಂಚಿ ಕುಮಾರ್ ಬರುವ, ತ್ರೈಲೋಕ್ಯನಾಥ ಗೋಸ್ವಾಮಿ, ಅತುಲ್‌ಚಂದ್ರ ಹಜಾರಿಕಾ, ಲಕ್ಷ್ಮೀನಾಥ ಫುಕನ್ ಮೊದಲಾದವರು ಪ್ರಮುಖರು.

ಅಸ್ಸಾಮಿ ಸಾಹಿತ್ಯ ಆಧುನಿಕ ಹಾಗೂ ಸಮಕಾಲೀನ ಪ್ರಭಾವಗಳನ್ನು ಜೀರ್ಣಿಸಿಕೊಂಡು ಸರ್ವತೋಮುಖವಾಗಿ ಬೆಳೆಯುತ್ತಿದೆ.

ಅಹಮದಾಬಾದ್

ಗುಜರಾತಿನ ಕೈಗಾರಿಕಾ ಕೇಂದ್ರ, ಐತಿಹಾಸಿಕ ನಗರ –ಅಹಮದಾಬಾದ್.



ರಾಣಿ ಸಿಪ್ರಿ ಸಮಾಧಿ

ಸ್ವಾತಂತ್ರ್ಯಸಂಗ್ರಾಮದ ಅಸ್ಮರಣೀಯ ಅಧ್ಯಾಯವೊಂದು ಅಹಮದಾಬಾದಿನಲ್ಲಿ ಆರಂಭವಾಯಿತು. ಸಾಬರಮತಿ ನದಿಯ ದಂಡೆಯ ಆಶ್ರಮದಲ್ಲಿದ್ದ ಮಹಾತ್ಮ ಗಾಂಧಿಯವರು ಕರಾವಳಿಯ ದಂಡಿಯವರೆಗೆ ಯಾತ್ರೆ ಕೈಗೊಂಡದ್ದು ಇಲ್ಲಿಂದಲೇ.

ಅಹಮದಾಬಾದ್ ಹತ್ತಿ ಬಟ್ಟೆ ಉದ್ಯಮಕ್ಕೆ ಸುಪ್ರಸಿದ್ಧವಾಗಿದೆ. ಇಲ್ಲಿ ತಯಾರಾಗುವ ಬಗೆ ಬಗೆಯ ಸೊಗಸಾದ ಹತ್ತಿ ಬಟ್ಟೆಗಳು ಭಾರತ ಹಾಗೂ ವಿದೇಶಗಳಲ್ಲಿ ಹೆಸರಾಗಿವೆ. ನಗರದ ಸುಮಾರು ಅರ್ಧದಷ್ಟು ಜನರಿಗೆ ಈ ಉದ್ಯಮದಲ್ಲೇ ಉದ್ಯೋಗ. ಇಲ್ಲಿ ಸುಮಾರು ಎಪ್ಪತ್ತು ಹತ್ತಿಗಿರಣಿಗಳಿವೆ. ಅಹಮದಾಬಾದಿನ ಇತರ ಪ್ರಧಾನ ಕೈಗಾರಿಕೆಗಳು : ಉಣ್ಣೆ, ಬಟ್ಟೆ, ರೇಷ್ಮೆ, ಗಿರಣಿ, ಸಾಬೂನು, ಬೆಂಕಿಕಡ್ಡಿ, ಗಾಜು, ಹೊಗೆಸೊಪ್ಪು, ನೆಲಹಾಸು, ನೆಯ್ಗೆ, ತೊಗಲು ಸಂಸ್ಕರಣೆ ಮುಂತಾದುವು. ವಿಶಿಷ್ಟ ಮಾದರಿಯ ಲೇಸುಗಳು, ಮಿಶ್ರಿತರ ವಿಶಿಷ್ಟ ನೆಯ್ಗೆಯ ವಸ್ತ್ರಗಳು, ತಾಮ್ರ ಹಾಗೂ ಹಿತ್ತಾಳೆ ಸಾಮಾನುಗಳು, ಆಭರಣಗಳು ಮತ್ತು ಮರಕೆತ್ತನೆ ವಸ್ತುಗಳು —ಇಲ್ಲಿನ ಇತರ ತಯಾರಿಕೆಗಳು.

ಹಲವು ಮುಖ್ಯ ರೈಲುಮಾರ್ಗಗಳು ಕೂಡುವ ಸಂಧಿ ಸ್ಥಳ ಅಹಮದಾಬಾದ್. ಇಲ್ಲಿ ವಾಣಿಜ್ಯ ಚಟುವಟಿಕೆ ಬಹಳ ಹೆಚ್ಚು. ಇದು ಒಳನಾಡಿನ ಅತ್ಯಂತ ದೊಡ್ಡ ಕೈಗಾರಿಕಾಕೇಂದ್ರ. ಭಾರತದ ದೊಡ್ಡ ಪಟ್ಟಣಗಳಲ್ಲಿ ಆರನೆಯದು.

1411ರಲ್ಲಿ ಅಹಮದಾಬಾದನ್ನು ಸ್ಥಾಪಿಸಿದವನು ಸುಲ್ತಾನ್ ಅಹಮದ್ ಷಾ; ಇದಕ್ಕೆ ಮೊದಲು ಇದರ ಬಳಿ ಆಶಾವಾಲ ಎಂಬ ನಗರವಿದ್ದಿತು. ಅಹಮದನ ಮೊಮ್ಮಗ ಮಹಮದ್ ಬೇಗಾರನ ಕಾಲದಲ್ಲಿ ಈ ನಗರ ಉನ್ನತಿ ಹೊಂದಿತು. ಅಕ್ಬರ್ ಚಕ್ರವರ್ತಿ 1572ರಲ್ಲಿ ಇದನ್ನು ವಶಪಡಿಸಿಕೊಂಡ ಮೇಲೆ ಮತ್ತೊಮ್ಮೆ ಇದರ ಪ್ರಾಶಸ್ತ್ಯ ಹೆಚ್ಚಿತು. 1818ರಲ್ಲಿ ಬ್ರಿಟಿಷರು ಇದನ್ನು ತಮ್ಮ ಸ್ವಾಧೀನಕ್ಕೆ ತೆಗೆದುಕೊಂಡರು. ವಸ್ತ್ರೋದ್ಯಮವನ್ನು ಬೆಳೆಸಿದರು.

ಮುಂಬಯಿ ರಾಜ್ಯ ವಿಭಜನೆಯಾಗಿ ಮಹಾರಾಷ್ಟ್ರ–ಗುಜರಾತ್ ರಾಜ್ಯಗಳು ರೂಪುಗೊಂಡಾಗ, 1960ರಲ್ಲಿ ಅಹಮದಾಬಾದ್ ಗುಜರಾತಿನ ತಾತ್ಕಾಲಿಕ ರಾಜಧಾನಿಯಾಯಿತು. 1970ರಲ್ಲಿ ಇಲ್ಲಿಂದ 24 ಕಿ.ಮೀ. ದೂರದಲ್ಲಿರುವ ಗಾಂಧೀನಗರಕ್ಕೆ ರಾಜಧಾನಿ ವರ್ಗಾಯಿಸಲ್ಪಟ್ಟಿತು.

ಹಿಂದು, ಜೈನ ಮಹಮ್ಮದೀಯ ರಾಜ ವಂಶಗಳು ಆಳಿದ ಅಹಮದಾಬಾದಿನಲ್ಲಿ ಈ ಎಲ್ಲ ಬಗೆಯ ವಾಸ್ತುಶಿಲ್ಪ ಸಂಪ್ರದಾಯಗಳ ಕಟ್ಟಡಗಳು ಕಂಡುಬರುತ್ತವೆ. ಇಲ್ಲಿನ ಜುಮ್ಮಾ ಮಸೀದಿಯ ಸಾಲಂಕೃತ ಕಂಬಗಳು ಹಿಂದೂ ದೇವಾಲಯಗಳನ್ನು ನೆನಪಿಗೆ ತರುತ್ತವೆ. 260 ಕಂಬಗಳುಳ್ಳ ಈ ಚೆಲುವಾದ ಮಸೀದಿ ಗುಜರಾತಿನ ಹೆಮ್ಮೆಯ ಕಟ್ಟಡ. ಇಲ್ಲಿ ಒಂದು ಕೋಟೆಯೂ ಇದೆ. ರಾಣಿ ಸಿಪ್ರಿ ಮೊದಲಾದವರ ಗೋರಿಗಳೂ ಇಲ್ಲಿವೆ.

ಸಾಬರಮತಿ ನದಿಯ ಎರಡೂ ದಂಡೆಗಳ ಮೇಲೆ ಅಹಮದಾಬಾದ್ ಬೆಳೆಯುತ್ತಿದೆ. ಇವುಗಳನ್ನು ಸೇರಿಸುವ ನಾಲ್ಕು ಸೇತುವೆಗಳಿವೆ. ಚಿಕ್ಕ ಸ್ವತಂತ್ರ ಪಟ್ಟಣಗಳಂತೆ ಕಾಣುವ ಘಟಕಗಳನ್ನುಳ್ಳ ಒಂದು ಬಗೆಯ ನಗರಯೋಜನೆ ಅಹಮದಾಬಾದಿಗೆ ವಿಶಿಷ್ಟವಾದದ್ದು. [illegible] ಕಂಕಾರಿಯಾ ಸರೋವರದ ಪರಿಸರ ಇಲ್ಲಿನ ಆಕರ್ಷಣೆಗಳಲ್ಲಿ ಒಂದು.

ಅಹಮದಾಬಾದ್ ನಗರ, ಗುಜರಾತ್ ವಿಶ್ವವಿದ್ಯಾನಿಲಯದ ಕೇಂದ್ರ.

ಇಲ್ಲಿನ ಜನಸಂಖ್ಯೆ 18,03,085

ನೋಡಿ : ಗುಜರಾತ್

ಅಹಲ್ಯಾ

ಆಕೆಯದು ಅನುಪಮ ಸೌಂದರ್ಯ. ಬ್ರಹ್ಮ ಆಕೆಯನ್ನು ದೀರ್ಘ ಕಾಲ ಗೌತಮ ಮುನಿಯ ಗಣದಲ್ಲಿ ಇಟ್ಟ. ಗೌತಮ ಆಕೆಯನ್ನು ಎಚ್ಚರಿಕೆಯಿಂದ ರಕ್ಷಿಸಿ ಬ್ರಹ್ಮನ ಬಳಿಗೆ ಕಳುಹಿಸಿಕೊಟ್ಟ. ಗೌತಮನ ಸಚ್ಚಾರಿತ್ರ್ಯವನ್ನು ಮೆಚ್ಚಿದ ಬ್ರಹ್ಮ ಆಕೆಯನ್ನು ಗೌತಮನಿಗೇ ಕೊಟ್ಟು ವಿವಾಹ ಮಾಡಿದ. ಆ ಸುಂದರಿ ಅಹಲ್ಯಾ. ಹಲ ಎಂದರೆ ಕುರೂಪ. ಆಕೆಯ ಸೌಂದರ್ಯದಲ್ಲಿ ಯಾವ ದೋಷವೂ ಇಲ್ಲದ್ದರಿಂದ ಬ್ರಹ್ಮ ಆಕೆಯನ್ನು ಅಹಲ್ಯಾ ಎಂದು ಕರೆದ.



ರಾಮ ದರ್ಶನ, ಶಾಪ ಮುಕ್ತಿ

ಪ್ರಾತಃಸ್ಮರಣೀಯರಾದ ಪಂಚಕನ್ಯೆಯರಲ್ಲಿ ಒಬ್ಬಳಾದ ಅಹಲ್ಯಾ ಯಾರ ಮಗಳೆಂಬ ಬಗೆಗೆ ಬೇರೆ ಬೇರೆ ಹೇಳಿಕೆಗಳಿವೆ. ಈಕೆ ಬ್ರಹ್ಮನ ಮಾನಸಪುತ್ರಿ ಎಂಬುದು ಒಂದು ಅಭಿಪ್ರಾಯ.

ಮದುವೆಯಾದ ತರುವಾಯವೂ ಅಹಲ್ಯಾ, ಗೌತಮರು ಆಶ್ರಮವಾಸಿಗಳಾಗಿ ತಪಶ್ಚರ್ಯೆಯಲ್ಲಿ ಕಾಲ ಕಳೆಯುತ್ತಿದ್ದರು.

ಇಂದ್ರನಿಗೆ ಅಹಲ್ಯೆಯನ್ನು ಮದುವೆಯಾಗುವ ಹಂಬಲವಿತ್ತು. ಆಕೆ ಗೌತಮನನ್ನು ಮದುವೆಯಾದಮೇಲೆ ಇಂದ್ರನಿಗೆ ಅಸೂಯೆ ಉಂಟಾಯಿತು. ಗೌತಮನಿಲ್ಲದ ಸಮಯದಲ್ಲಿ ಅವನ ರೂಪಧರಿಸಿ ಆಶ್ರಮಕ್ಕೆ ಬಂದ. ಅಹಲ್ಯೆಯನ್ನು ದುರ್ಮಾರ್ಗಕ್ಕೆ ಎಳೆದ. ಇದನ್ನು ತಿಳಿದ ಗೌತಮ ಇಬ್ಬರಿಗೂ ಶಾಪವಿತ್ತ. ಅಹಲ್ಯೆ ಆ ಆಶ್ರಮದಲ್ಲೇ ಇತರರಿಗೆ ಅಗೋಚರಳಾಗಿ ಆಶ್ರಮವನ್ನು ರಕ್ಷಿಸಿಕೊಂಡಿರಬೇಕು ಎಂದು ತಿಳಿಸಿ, ತಾನು ತಪಸ್ಸು ಮಾಡಲು ಹಿಮಾಲಯದೆಡೆಗೆ ಹೋದ. ಶ್ರೀರಾಮನ ದರ್ಶನವಾದಾಗ ಶಾಪವಿಮುಕ್ತಳಾಗುವಳೆಂದೂ ತಿಳಿಸಿದ. ತಪಸ್ಸು ಮಾಡುತ್ತ ಅಹಲ್ಯೆ ಕಾಲಕಳೆದಳು. ಸೀತಾ ಸ್ವಯಂವರಕ್ಕಾಗಿ ಶ್ರೀರಾಮನು ಮಿಥಿಲಾಪಟ್ಟಣಕ್ಕೆ ಬರುವ ದಾರಿಯಲ್ಲಿ ಗೌತಮನ ಆಶ್ರಮಕ್ಕೆ ಬಂದ. ಅವನ ದರ್ಶನದಿಂದ ಅಹಲ್ಯೆಗೆ ಶಾಪ ವಿಮೋಚನೆ ಆಯಿತು. ದೀರ್ಘಕಾಲದ ತಪಸ್ಸಿನಿಂದ ಉಜ್ವಲ ಕಾಂತಿಯುಕ್ತವಾಗಿದ್ದ

[illegible] ಆಕೆಗೆ [illegible] ಹೇಳಿಕೊಟ್ಟಳು.

[illegible] ಸುಂದರ ವೃತ್ತಾಂತಗಳಲ್ಲೊಂದು.

ಅಹಲ್ಯಾಬಾಯಿ ಹೋಳ್ಕರ್

ಉತ್ತಮ ಆಡಳಿತ, ಧರ್ಮಪರತೆಗಾಗಿ ಹೆಸರಾದ ಧೀರ ಮಹಿಳೆ— ಇಂದೂರಿನ ಅಹಲ್ಯಾಬಾಯಿ ಹೋಳ್ಕರ್.



ರಾಜ್ಯವಾಳಿದ ಕೈ : ಅಹಲ್ಯಾಬಾಯಿ

ಔರಂಗಾಬಾದ್ ಜಿಲ್ಲೆಯ ಚೌಂಡ್‌ನ ಮಾನಕೋಜಿ ಶಿಂಧೆಯ ಮಗಳು ಅಹಲ್ಯಾಬಾಯಿ. ಜನನ : 1735. ಅಹಲ್ಯಾಬಾಯಿ ಎಂಟು ವರ್ಷದವಳಾಗಿದ್ದಾಗ ಪೇಶ್ವೆ ಬಾಳಾಜಿ ಬಾಜೀರಾಯ ಚೌಂಡ್‌ನ ಸಮೀಪದಲ್ಲಿ ಸೈನ್ಯದೊಡನೆ ಬಿಡಾರ ಮಾಡಿದ್ದ. ಆಗ ಅಹಲ್ಯಾಬಾಯಿಯನ್ನು ಕಂಡ ಪೇಶ್ವೆ ಅವಳ ಗಾಂಭೀರ್ಯ, ಬುದ್ಧಿಶಕ್ತಿಗಳನ್ನು ಮೆಚ್ಚಿಕೊಂಡು ತನ್ನೊಡನೆ ಬಂದಿದ್ದ ಮಲ್ಹಾರರಾವ್ ಹೋಳ್ಕರನ ಮಗ ಖಂಡೇರಾಯನಿಗೆ ಅವಳನ್ನು ಮದುವೆ ಮಾಡಿಸಿದ. ಖಂಡೇರಾಯ ವಿಲಾಸಿ. ಆಡಳಿತದಲ್ಲಿ ಅವನಿಗೆ ಆಸಕ್ತಿ ಇರಲಿಲ್ಲ. ಇದನ್ನು ಕಂಡ ತಂದೆ ಮಲ್ಹಾರರಾವ್ ಕಂದಾಯ ವಸೂಲಿ, ಸೈನ್ಯ ನಿರ್ವಹಣೆ ಮೊದಲಾದ ಆಡಳಿತ ವಿಚಾರಗಳಲ್ಲಿ ಅಹಲ್ಯಾಬಾಯಿಗೆ ಶಿಕ್ಷಣ ಕೊಟ್ಟ.



ಸೋಮನಾಥ ದೇವಾಲಯ

1754ರಲ್ಲಿ ರಾಘೋಬ ಕುಂಭೇರ ದುರ್ಗವನ್ನು ಮುತ್ತಿದ. ಆಗ ಗುಂಡು ತಗಲಿ ಖಂಡೇರಾಯ ಮೃತನಾದ. ಅಹಲ್ಯಾಬಾಯಿ ಸಹಗಮನ ಮಾಡಲು ನಿರ್ಧರಿಸಿದಳು. ಆದರೆ ಮಲ್ಹಾರರಾವ್ ಸೊಸೆಯನ್ನು ತಡೆದ. ಅನಂತರ ಅಹಲ್ಯಾಬಾಯಿ ಸಂಸ್ಥಾನದ ಆಡಳಿತದತ್ತ ಮನಸ್ಸು ಹಾಕಿದಳು.

ಮಲ್ಹಾರರಾಯನ ನಿಧನಾನಂತರ ಅವನ ಮಗ ಮಾಲೇರಾವ್ ಸುಭೇದಾರನಾದ. ಇವನು ದುರ್ಬಲನಾಗಿದ್ದುದರಿಂದ ಅಹಲ್ಯಾಬಾಯಿಯೇ ಆಡಳಿತ ನಡೆಸುತ್ತಿದ್ದಳು. ಆಕೆ ದಕ್ಷ ಆಡಳಿತಗಾತಿ. ದಯಾಳುವಾದರೂ ದರ್ಪಶಾಲಿ. ಮಾಲೇರಾವ್ ಅಕಾಲಮರಣಕ್ಕೆ ಒಳಗಾದ. ಇಂದೂರು ಸಂಸ್ಥಾನಕ್ಕೆ ಉತ್ತರಾಧಿಕಾರಿ ಇರದಿದ್ದುದನ್ನು ಕಂಡು ಆಗಿನ ಪೇಶ್ವೆಯ ಚಿಕ್ಕಪ್ಪ ರಾಘೋಬ ದಂಡೆತ್ತಿ ಬಂದ. ಶೋಕತಪ್ತಳಾಗಿದ್ದರೂ ಸ್ವಾಭಿಮಾನಿಯಾಗಿದ್ದ ಅಹಲ್ಯಾಬಾಯಿ ಸ್ತ್ರೀಯರ ಸೈನ್ಯವನ್ನು ಕೂಡಿಸಿದಳು. 'ಸ್ತ್ರೀಯರ ಮೇಲೆ ಯುದ್ಧ ಮಾಡಿ ನೀನು ಗೆದ್ದರೂ ಅದು ಹೊಗಳಿಕೆಗೆ ಪಾತ್ರವಾಗುವುದಿಲ್ಲ : ಸೋತರೆ ಮಾತ್ರ ಪರಿಣಾಮ ಏನಾಗುತ್ತದೆ, ಯೋಚಿಸು' ಎಂದು ಹೇಳಿಕಳುಹಿಸಿದಳು. ರಾಘೋಬ ತಾನು ಸಂತಾಪ ಸೂಚಿಸಲು ಬಂದಿರುವುದಾಗಿ ತಿಳಿಸಿ ಪಾರಾದ. ತನ್ನ ರಾಜ್ಯಕ್ಕೆ ಸಂಭವಿಸಿದ್ದ ಆಪತ್ತನ್ನು ಹೀಗೆ ಚಾಕಚಕ್ಯತೆಯಿಂದ ಅಹಲ್ಯಾಬಾಯಿ ಪರಿಹರಿಸಿದಳು. ತನ್ನ ಮಗಳು ಮುಕ್ತಾಬಾಯಿ ಪತಿಯೊಡನೆ ಸಹಗಮನ ಮಾಡಿದ್ದು ಅಹಲ್ಯಾಬಾಯಿಗೆ ತುಂಬ ದುಃಖವನ್ನುಂಟುಮಾಡಿತು. ಇದು ಅವಳಲ್ಲಿ ಮೊದಲಿನಿಂದಲೂ ಇದ್ದ ಧಾರ್ಮಿಕ ಶ್ರದ್ಧೆಯನ್ನು ಇನ್ನಷ್ಟು ಬಲಗೊಳಿಸಿತು. ಧ್ಯಾನ, ಆಧ್ಯಾತ್ಮಿಕ ಚಿಂತನೆ, ತೀರ್ಥಯಾತ್ರೆಗಳಲ್ಲಿ ಆಸಕ್ತಳಾದಳು. 1795 ಆಗಸ್ಟ್ 13ರಂದು ಕಾಲವಾದಳು.

ಕಲ್ಕತ್ತ–ಕಾಶಿ ಹೆದ್ದಾರಿಯನ್ನು ಮಾಡಿಸಿದವಳು, ಸೋಮನಾಥ ದೇವಾಲಯ, ಕಾಶಿ ವಿಶ್ವೇಶ್ವರ ದೇವಾಲಯ, ಗಯೆಯ ವಿಷ್ಣು ದೇವಾಲಯ ಜೀರ್ಣೋದ್ಧಾರ ಮಾಡಿಸಿದವಳು ಈಕೆ. ಇಂದೂರ್ ಪಟ್ಟಣ ಅಭಿವೃದ್ಧಿ ಹೊಂದಿದ್ದು ಈಕೆಯ ಪ್ರಯತ್ನದಿಂದಲೇ. ಅಹಲ್ಯಾಬಾಯಿಯ ಕಾಲದ ಸ್ಥಿತಿಗತಿಗಳನ್ನು ಚೆನ್ನಾಗಿ ಬಲ್ಲ ಆಂಗ್ಲ ಅಧಿಕಾರಿ – ಲೇಖಕ ಸರ್ ಜಾನ್ ಮಾಲ್ಕಂ, "ಆಕೆಯ ಆಡಳಿತ ಅದ್ಭುತವಾಗಿತ್ತು," ಎಂದಿದ್ದಾನೆ.

ಆಂಗ್ಕೋರ್‌ವಾಟ್

ಪ್ರಾಚೀನ ಭಾರತೀಯ ಕಲೆ, ಸಂಸ್ಕೃತಿಗಳ ಪ್ರಭಾವದ ಪ್ರತೀಕ ಆಂಗ್ಕೋರ್‌ವಾಟ್ ವಿಷ್ಣು ದೇವಾಲಯ. ಇದು ಇಂದಿನ ಕಾಂಬೋಡಿಯದಲ್ಲಿದೆ. ಹಿಂದೆ ಈ ಪ್ರದೇಶ ಕಂಬುಜ ರಾಜ್ಯಕ್ಕೆ ಸೇರಿತ್ತು.

ಆಗಿನ ಕಂಬುಜದ ವಾಸ್ತುಶಿಲ್ಪ ಕಲೆಗೆ ಇದು ಶಿಖರಪ್ರಾಯವಾಗಿದೆ. ಇವರಲ್ಲಿ ಭಾರತೀಯ ಹಾಗೂ ಸ್ಥಳೀಯ ಶೈಲಿಗಳ ಮಿಶ್ರಣವನ್ನು ಕಾಣಬಹುದು. ಗಾಢವಾದ ಕಾಡಿನ ಮಧ್ಯೆ ಮರಗಳನ್ನು ಕಡಿದು ರೂಪಿಸಿದ ಪ್ರಶಸ್ತ ಸ್ಥಳದಲ್ಲಿ ಈ ದೇವಾಲಯವನ್ನು ಕಟ್ಟಲಾಗಿದೆ. ಇದರಲ್ಲಿ ಮೂರು ಅಂತಸ್ತುಗಳಿವೆ. ಸುತ್ತಲೂ 700 ಅಡಿಗಳಷ್ಟು ಅಗಲವಾದ ಕಂದಕ; ಅನಂತರ ಪ್ರಾಕಾರ. ಇದರ ಉದ್ದ ಸುಮಾರು ಐದೂವರೆ ಫರ್ಲಾಂಗ್. ಅಗಲ ನಾಲ್ಕು ಫರ್ಲಾಂಗ್. ಕಂದಕದ ಮೇಲೆ 36 ಅಡಿಗಳಷ್ಟು ಅಗಲವಾದ, ಎರಡು ಕಡೆಗಳಲ್ಲೂ ಕಟಕಟೆಗಳಿರುವ ಸೇತುವೆ. ಸೇತುವೆಯ ಕೊನೆಯಲ್ಲಿ ಪ್ರಾಕಾರದ ಮಹಾದ್ವಾರ. ಅಲ್ಲಿಂದ ಮುಂದಕ್ಕೆ ದೇವಾಲಯ ಹೆಬ್ಬಾಗಿಲ ವರೆಗೆ ಸುಮಾರು 2 ಫರ್ಲಾಂಗಿನಷ್ಟು ದೂರ ಹಾಸುಗಲ್ಲು ಕೂಡಿಸಿದ ಮಾರ್ಗವಿದೆ. ಪ್ರತಿ ಅಂತಸ್ತಿನಲ್ಲೂ ವಿಪುಲ ಕೆತ್ತನೆ ಕೆಲಸ, ಉಬ್ಬು ಶಿಲ್ಪಗಳಿವೆ. ಅಂತಸ್ತಿನಿಂದ ಅಂತಸ್ತಿಗೆ ಹೋಗಲು ಮೆಟ್ಟಿಲುಗಳು. ಮೂರನೆಯ ಅಂತಸ್ತಿನಲ್ಲಿ 180 ಅಡಿ ಎತ್ತರದ ಎಂಟು ಗೋಪುರಗಳಿವೆ. ಗರ್ಭಗುಡಿ ಇರುವುದು ಈ ಅಂತಸ್ತಿನಲ್ಲೇ. ಇದರ ಗೋಪುರ ಭೂಮಟ್ಟದಿಂದ 215 ಅಡಿ ಎತ್ತರವಿದೆ.

ದೇವಾಲಯದ ಎಲ್ಲೆಡೆಗಳಲ್ಲಿಯೂ, ಸುಂದರವಾದ ಶಿಲ್ಪಕೃತಿಗಳನ್ನು ಕಾಣಬಹುದು. ಪುರಾಣಗಳು ರಾಮಾಯಣ, ಮಹಾಭಾರತಗಳಿಂದ

ಅಲ್ಲಿನ ಸಣ್ಣ ದೇವತೆಗಳು ಆಕೃತಿಗಳಲ್ಲಿ ಮೂಡಿವೆ. ಇಲ್ಲಿರುವ ಅಪ್ಸರೆಯರ ವಿಗ್ರಹಗಳು ಮನೋಹರವಾದವು. ಕೆಲವು ಶಿಲ್ಪಗಳು ಬಂಗಾರ ಚಿತ್ರವಿರುವುದೂ ಉಂಟು. ಅರ್ಧಮೈಲಿ ದೂರ ನಿರಂತರವಾಗಿ ಹಬ್ಬಿರುವ ಶಿಲ್ಪ ಪಂಕ್ತಿ ಯಾರಿಗಾದರೂ ಅಚ್ಚರಿಯನ್ನುಂಟುಮಾಡುತ್ತದೆ. ಮೂರ್ತಿಗಳ ಮುಖಗಳ ಭಾವ, ಅಲಂಕರಣದ ಸೊಗಸು ಆಕರ್ಷಕ.

ಅಂಗ್ಕೋರ್ ವಾಟ್ 12ನೆಯ ಶತಮಾನದಲ್ಲಿ 2ನೆಯ ಸೂರ್ಯವರ್ಮನ ಕಾಲದಲ್ಲಿ ನಿರ್ಮಿತವಾಯಿತು. ಅದೇ ಕಾಲಕ್ಕೆ ಕಟ್ಟಲ್ಪಟ್ಟ ಪ್ಯಾರಿಸಿನ ನಾತರ್‌ಡಾಮ್, ಇಂಗ್ಲೆಂಡಿನ ಲಿಂಕನ್ ಕೆಥಿಡ್ರಲ್ ಮುಂತಾದ ಶ್ರೇಷ್ಠ ಕಟ್ಟಡಗಳಿಗಿಂತ ಇದು ಹೆಚ್ಚು ಭವ್ಯವಾಗಿದೆ.

ಆಂಜನೇಯ

ನೋಡಿ : ಹನುಮಂತ-ಸಂಪುಟ ೬

ಆಂಡಾಳ್

ಅಧರ್ಮ ಎಲ್ಲೆಲ್ಲೂ ತಾಂಡವವಾಡುತ್ತಿತ್ತು. ಇದು ಸಂತರಿಗೆ ಅಪಾರ ವೇದನೆ ಉಂಟುಮಾಡಿತ್ತು. ಪರಿಸ್ಥಿತಿಯನ್ನು ಕೊನೆಗಾಣಿಸಲು ಇವರು ದೇವರನ್ನು ಬೇಡುತ್ತಿದ್ದರು. ಅವರ ವೇದನೆಯನ್ನು ಕಂಡು ಲಕ್ಷ್ಮಿ ತಾನು ಸಖಿಯರೊಡನೆ ಅವತಾರವೆತ್ತಲು ಅನುಮತಿ ಕೊಡಬೇಕೆಂದು ನಾರಾಯಣನನ್ನು ಕೇಳಿದಳು. ಆತ ಒಪ್ಪಿಕೊಂಡ. ಆಗ ಲಕ್ಷ್ಮಿ, ಲೋಕೋದ್ಧಾರಕ್ಕಾಗಿ ಭೂಮಿಯಲ್ಲಿ ಆಂಡಾಳ್ ಆಗಿ ಅವತರಿಸಿದಳು.

—ಇದು ಆಂಡಾಳ್ ಜನನವನ್ನು ಕುರಿತ ಕಥೆ.

ಪೆರಿಯಾಳ್ವಾರ್ ಅಥವಾ ವಿಷ್ಣುಚಿತ್ತರು ತಮಿಳುನಾಡಿನ ಖ್ಯಾತ ವೈಷ್ಣವ ಸಂತರು. ಶ್ರೀವಿಲ್ಲಿ ಪುತ್ತೂರಿನ ವಟಪತ್ರಶಾಯಿಯ ಅಪ್ರತಿಮ ಭಕ್ತರು. ಪ್ರತಿದಿನವೂ ಆ ದೇವರಿಗೆ ಹೂಮಾಲೆಯನ್ನು ಅರ್ಪಿಸುವುದು ಪದ್ಧತಿ. ಇದಕ್ಕಾಗಿ ಹೂ ತೋಟವನ್ನೇ ಬೆಳೆಸಿದ್ದರು. ಒಂದು ದಿನ ತಮ್ಮ ತೋಟದ ತುಳಸೀಗಿಡದ ಕೆಳಗೆ ಹೆಣ್ಣುಶಿಶುವೊಂದು ಮಲಗಿದ್ದುದನ್ನು ಕಂಡು ಮನೆಗೆ ಕರೆತಂದರು. ಆಂಡಾಳ್ ಎಂದು ಹೆಸರಿಟ್ಟು ಮಗುವನ್ನು ಪ್ರೀತಿ, ಆದರಗಳಿಂದ ಆಧ್ಯಾತ್ಮಿಕ ವಾತಾವರಣದಲ್ಲಿ ಬೆಳೆಸಿದರು. ಶ್ರೀಕೃಷ್ಣನ ವಿಚಾರದಲ್ಲಿ ಆಂಡಾಳ್‌ಗೆ ಅಪ್ರತಿಮ ಭಕ್ತಿ, ಪ್ರೇಮ ಮೂಡಿದುವು.

ದೇವರಿಗೆ ಅರ್ಪಿಸುವುದಕ್ಕಾಗಿ ಆಂಡಾಳ್ ಪ್ರತಿದಿನವೂ ಹೂಮಾಲೆ ಕಟ್ಟುತ್ತಿದ್ದಳು. ಹೂಮಾಲೆಯಲ್ಲಿ ಕೂದಲು ಬೆರತಿರುವುದನ್ನು ಅವರು ಒಂದು ದಿನ ಕಂಡರು. ದೇವರಿಗೆ ಅರ್ಪಿಸಲು ಕೊಡುವ ಮೊದಲು ಆಂಡಾಳ್ ಅದನ್ನು ತಾನು ಮುಡಿದು ನೋಡಿಕೊಳ್ಳುತ್ತಿದ್ದಳೆಂದು ಅವರಿಗೆ ಗೊತ್ತಾಯಿತು. ಮಗಳ ಮೇಲೆ ಕೋಪಗೊಂಡು ಅದನ್ನು ದೇವರಿಗೆ ಅರ್ಪಿಸಲಿಲ್ಲ. ದೇವರು ವಿಷ್ಣುಚಿತ್ತರ ಕನಸಿನಲ್ಲಿ ಕಾಣಿಸಿಕೊಂಡು, ಆಂಡಾಳ್ ಮುಡಿದುಕೊಟ್ಟ ಮಾಲೆಯೇ ತನಗೆ ಪ್ರಿಯವೆಂದೂ ಅದನ್ನೇ ತನಗೆ ಅರ್ಪಿಸಬೇಕೆಂದೂ ಹೇಳಿದಂತಾಯಿತು. ತಮ್ಮ ಮಗಳು ಆಂಡಾಳ್ ದೇವರ ಅನುಗ್ರಹಕ್ಕೆ ಪಾತ್ರಳಾದವಳೆಂದು ಅವರು ಆನಂದಿಸಿದರು. ಈ ಪ್ರಸಂಗದಿಂದಾಗಿ ಆಂಡಾಳ್‌ಗೆ 'ಚೂಡಿ ಕುಡುತ್ತ ನಾಚಿಯಾರ್' (ಮುಡಿದು ಕೊಟ್ಟ ನಾಯಕಿ) ಎಂದು ಹೆಸರಾಯಿತು.

ದಿನಗಳೆದಂತೆ ತನ್ನ ಸ್ವಾಮಿಯಿಂದ ಬೇರೆಯಾಗಿರುವುದು ಆಂಡಾಳ್‌ಗೆ ಅಸಹ್ಯವಾಯಿತು. ದೇವ ದೇವನನ್ನು ಸೇರಲು ಬಯಸಿದ ಆಂಡಾಳ್ ಕೊನೆಗೆ ಶ್ರೀರಂಗಕ್ಕೆ ಹೋಗಿ ಅಲ್ಲಿ ರಂಗನಾಥನಲ್ಲಿ ಐಕ್ಯಳಾದಳೆಂದು ಪ್ರತೀತಿ.

ಆಳ್ವಾರರುಗಳಲ್ಲಿ ಪ್ರಸಿದ್ಧಳಾದ ಆಂಡಾಳ್ ಕಾಲ ಸುಮಾರು ಕ್ರಿ.ಶ. 9ನೆಯ ಶತಮಾನ. ಅಂದರೆ, ರಾಮಾನುಜಾಚಾರ್ಯರಿಗಿಂತ ಮೂರು ನಾಲ್ಕು ಶತಮಾನ ಮುಂಚೆ. ಆಕೆ 'ತಿರುಪ್ಪಾವೈ' ಮತ್ತು 'ನಾಚ್ಚಿಯಾರ್ ತಿರುಮೊಳಿ' ಎಂಬ ಸೊಗಸಾದ 'ಪ್ರಬಂಧ' (ಹಾಡು)ಗಳನ್ನು ರಚಿಸಿದ್ದಾಳೆ. ಇವುಗಳಲ್ಲಿ ಆಕೆಯ ಭಕ್ತಿಯ ಪರಾಕಾಷ್ಠೆಯನ್ನು ಕಾಣಬಹುದು.

ನೋಡಿ : ಆಳ್ವಾರರು–ಸಂಪುಟ ೫

ಆಂಡ್ರೂಸ್

ನೋಡಿ : ಸಿ.ಎಫ್. ಆಂಡ್ರೂಸ್

ಆಂಧ್ರ ಪ್ರದೇಶ

'ನದೀ ರಾಜ್ಯ', 'ದಕ್ಷಿಣ ಭಾರತದ ಕಣಜ' ಎಂಬ ಹೆಸರು ಪಡೆದಿರುವ ರಾಜ್ಯ ಆಂಧ್ರ ಪ್ರದೇಶ. ಫಲವತ್ತಾದ ಭೂಮಿ, ನಾಲೆಗಳು, ನದಿ– ಇವುಗಳಿಂದಾಗಿ ಇಲ್ಲಿ ಉತ್ತಮ ಫಸಲು ದೊರೆಯುತ್ತದೆ.


ಆಂಧ್ರ ಪ್ರದೇಶ ಭಾರತದ ಐದನೆಯ ದೊಡ್ಡ ರಾಜ್ಯ.



ಉತ್ತರದಲ್ಲಿ ಒಡಿಸ್ಸಾ–ಮಧ್ಯಪ್ರದೇಶ, ಪಶ್ಚಿಮದಲ್ಲಿ ಮೈಸೂರು–ಮಹಾರಾಷ್ಟ್ರ, ದಕ್ಷಿಣದಲ್ಲಿ ತಮಿಳುನಾಡು, ಪೂರ್ವದಲ್ಲಿ ಬಂಗಾಳಕೊಲ್ಲಿ —ಇವು ಇದರ ಮೇರೆಗಳು. ರಾಜ್ಯಕ್ಕೆ ಆರು ನೂರು ಮೈಲು ಉದ್ದದ ಕರಾವಳಿ ಇದೆ. ವಿಶಾಖಪಟ್ಟಣ, ಕಾಕಿನಾಡ, ಮಚಲೀಪಟ್ಟಣ ಇವು ಮುಖ್ಯ ಬಂದರುಗಳು. ಆಂಧ್ರ ಪ್ರದೇಶದಲ್ಲಿ 20 ಜಿಲ್ಲೆಗಳಿವೆ. ಆಂಧ್ರ ಪ್ರದೇಶದ

ಭಿತ್ತಿಚಿತ್ರ–
ಲೇಪಾಕ್ಷಿ ದೇವಾಲಯ






ಬ್ರಹ್ಮಾನಂದ ರೆಡ್ಡಿ : ಸಮರ್ಥ ಮುಖ್ಯಮಂತ್ರಿತ್ವ



ಚೆನ್ನಾರೆಡ್ಡಿ : ತೆಲಂಗಾಣ ಆಕ್ರೋಶ



ಪಿ. ವಿ. ಸುಬ್ಬಾರೆಡ್ಡಿ :
ಸಂಧಾನ, ಸಮಾಧಾನ



ಜೆ. ವೆಂಗಳರಾವು : ಮುಖ್ಯ ಮಂತ್ರಿ - 1973

ರಾಜಧಾನಿ ಹೈದರಾಬಾದ್. ಇಲ್ಲಿನ ಚಾರ್‌ಮಿನಾರ್ (ನಾಲ್ಕು ಗೋಪುರಗಳು), ಸಾಲಾರ್ ಜಂಗ್ ವಸ್ತು ಸಂಗ್ರಹಾಲಯ. ಗೋಲ್ಕೊಂಡ ಕೋಟೆ ಮುಂತಾದುವು ಪ್ರವಾಸಿಗರಿಗೆ ದೊಡ್ಡ ಆಕರ್ಷಣೆ. ಆಂಧ್ರ ಪ್ರದೇಶದಲ್ಲಿ ಹರಿಯುವ ನದಿಗಳಲ್ಲಿ ಗೋದಾವರಿ, ಕೃಷ್ಣಾ, ಪೆನ್ನಾರ್, ವಂಶಧಾರಾ, ನಾಗವಲ್ಲಿ —ಇವು ಮುಖ್ಯವಾದುವು. ಗೋದಾವರಿ ಹಾಗೂ ಕೃಷ್ಣಾ ನದೀ ಮುಖಜ ಭೂಮಿಗಳು ಫಲವತ್ತಾದ ಬಯಲು ಪ್ರದೇಶಗಳು. ಭತ್ತ ಆಂಧ್ರ ಪ್ರದೇಶದ ಒಂದು ಮುಖ್ಯ ಬೆಳೆ. ದ್ವಿದಳಧಾನ್ಯಗಳು, ಜೋಳ, ಹತ್ತಿ, ಹರಳು, ಕಬ್ಬು, ಮೆಣಸಿನಕಾಯಿ, ಕಡಲೆಕಾಯಿ, ಬಾಳೆಹಣ್ಣು, ಹೊಗೆಸೊಪ್ಪು ಇತರ ಬೆಳೆಗಳು. ಇಲ್ಲಿ ಬೆಳೆಯುವ ಅನಬ್–ಎ–ಷಾಹಿ ದ್ರಾಕ್ಷಿ ಪ್ರಸಿದ್ಧವಾದದ್ದು. ದೀರ್ಘ ಕರಾವಳಿ ಇರುವುದರಿಂದ ಮೀನುಗಾರಿಕೆ ಒಂದು ಮುಖ್ಯ ಉದ್ಯಮ.

ಬಿದ್ರಿ ಕೆಲಸ, ಬೆಳ್ಳಿಕುಸುರಿ ಕೆಲಸ, ಅರಗಿನ ಕುಶಲ ಕೆಲಸದ ಸಾಮಾನುಗಳು, ನಿರ್ಮಲ್ ಕಲಾಕೃತಿಗಳು, ಕಲಂಕಾರಿ ಚಿತ್ರಿತ ವಸ್ತ್ರಗಳು. ಆಟದ ಬೊಂಬೆಗಳು, ನೆಲಹಾಸುಗಳು ಆಂಧ್ರದ ಕೆಲವು ಪ್ರಸಿದ್ಧ ಕುಶ ಕೈಗಾರಿಕಾ ವಸ್ತುಗಳು. ತಂಬಾಕು, ಭತ್ತದ ಗಿರಣಿ, ಹತ್ತಿ ವಸ್ತ್ರೋದ್ಯಮ, ಹಡಗು ನಿರ್ಮಾಣ, ಅಡುಗೆ ಎಣ್ಣೆಗಳು. ಲೋಹ. ಅಲೋಹ ಪದಾರ್ಥಗಳು, ಯಂತ್ರಗಳು, ಕಾಗದ, ಸಿಮೆಂಟ್, ಕುಂಭ ಪದಾರ್ಥಗಳು ರಾಜ್ಯದ ಹಿರಿಯ ಕೈಗಾರಿಕೆಗಳು. ನಾಗಾರ್ಜುನಸಾಗರ, ತುಂಗಭದ್ರಾ ಮೊದಲಾದ ಯೋಜನೆಗಳೂ ಸೇರಿದಂತೆ ರಾಜ್ಯದಲ್ಲಿ ಒಳ್ಳೆಯ ನೀರಾವರಿ ವ್ಯವಸ್ಥೆಯಿದೆ. ಹಲವು ವಿದ್ಯುದಾಗಾರಗಳಿವೆ. ಕಲ್ಲಾರು, ಕಬ್ಬಿಣ ಮತ್ತು ಮ್ಯಾಂಗನೀಸ್ ಅದುರು, ಸುಣ್ಣ ಕಲ್ಲು, ಬೇರಿಯಂ ಸಲ್ಫೇಟ್, ಅಭ್ರಕ ಇವು ಆಂಧ್ರ ಪ್ರದೇಶದಲ್ಲಿ ದೊರೆಯುವ ಖನಿಜಗಳು.

ಆಂಧ್ರಪ್ರದೇಶದ ಬಹುಪಾಲು ಜನರ ಭಾಷೆ ತೆಲುಗು. ತೆಲುಗು ಸಾಹಿತ್ಯ ಚರಿತ್ರೆ 11ನೆಯ ಶತಮಾನದಿಂದ ಆರಂಭವಾಯಿತು. ತೆಲುಗು, ಸಂಸ್ಕೃತಗಳಲ್ಲಿ ಅಪಾರ ಪಾಂಡಿತ್ಯ ಗಳಿಸಿದ ಅನೇಕರು ಈ ಸಾಹಿತ್ಯಕ್ಕೆ ತಮ್ಮ ಸೇವೆ ಸಲ್ಲಿಸಿದ್ದಾರೆ. ಆಂಧ್ರದಲ್ಲಿ ನಾಲ್ಕು ವಿಶ್ವವಿದ್ಯಾನಿಲಯಗಳಿವೆ. ಇವುಗಳಲ್ಲಿ ಒಂದು ಕೃಷಿ ವಿಶ್ವವಿದ್ಯಾನಿಲಯ.

ಕರ್ಣಾಟಕ ಸಂಗೀತದ ಅಭಿವೃದ್ಧಿಗೆ ಆಂಧ್ರ ಪ್ರದೇಶದ ಕೊಡುಗೆ ದೊಡ್ಡದು. ತ್ಯಾಗರಾಜರೇ ಮುಂತಾಗಿ ಅನೇಕರು ರಚಿಸಿರುವ ಕರ್ಣಾಟಕ ಸಂಗೀತ ಕೃತಿಗಳಲ್ಲಿ ಬಹುಮಟ್ಟಿನವು ತೆಲುಗಿನಲ್ಲಿವೆ. ಭರತನಾಟ್ಯದ ಕೂಚಿಪುಡಿ ಸಂಪ್ರದಾಯ ಆಂಧ್ರ ಪ್ರದೇಶಕ್ಕೆ ವಿಶಿಷ್ಟವಾದದ್ದು. ಯಕ್ಷಗಾನ, ಬುರ್ರಕಥಾ, ತೊಗಲು ಬೊಂಬೆಯಾಟ ಇಲ್ಲಿನ ಜಾನಪದ ಕಲೆಗಳು. ವಾಸ್ತುಶಿಲ್ಪ ಶಿಲ್ಪದ ದೃಷ್ಟಿಯಿಂದಲೂ ಆಂಧ್ರ ಪ್ರದೇಶದ ಸಾಧನೆ ದೊಡ್ಡದು. ಕ್ರಿ.ಪೂ. ಎರಡನೆಯ ಶತಮಾನದಲ್ಲಿ ಕಟ್ಟಿದ ಅಮರಾವತಿಯ ಸ್ತೂಪ ಇಂಥ ಸಾಧನೆಗಳಲ್ಲಿ ಒಂದು. ವಾರಂಗಲ್ಲಿನಲ್ಲಿ ಕಾಕತೀಯರು ಕಟ್ಟಿಸಿದ ಪ್ರಸಿದ್ಧ ದೇವಾಲಯವಿದೆ. ಆಂಧ್ರ ಪ್ರದೇಶದ ವಾಸ್ತುಶಿಲ್ಪದಲ್ಲಿ ಉತ್ತರ–ದಕ್ಷಿಣ ಶೈಲಿಗಳೆರಡರ ಪ್ರಭಾವವನ್ನೂ ಕಾಣಬಹುದು.

ಪ್ರಕೃತಿಯ ರಮಣೀಯ ದೃಶ್ಯಗಳಿಗೆ ಹೆಸರಾದದ್ದು ವಾಲ್ಟೇರ್. ತಿರುಪತಿ, ಶ್ರೀಶೈಲ, ಕಾಳಹಸ್ತಿ, ಸಿಂಹಾಚಲ, ಭದ್ರಾಚಲ, ಸುಪ್ರಸಿದ್ಧ ಯಾತ್ರಾಸ್ಥಳಗಳು. ಲೇಪಾಕ್ಷಿ ದೇವಾಲಯದ ಭಿತ್ತಿಚಿತ್ರಗಳೂ ನಂದಿ ವಿಗ್ರಹವೂ ಪ್ರಸಿದ್ಧವಾದುವು.

ಚಾರಿತ್ರಿಕವಾಗಿ ಮೆಗಾಸ್ತನೀಸನ ಬರೆವಣಿಗೆಯಲ್ಲಿ ಆಂಧ್ರದ ಪ್ರಸ್ತಾಪ ಮೊದಲು ಕಂಡುಬರುತ್ತದೆ. ಕ್ರಿ. ಪೂ. 236ರಿಂದ ಇದರ ಚರಿತ್ರೆಯನ್ನು ಸರಿಯಾಗಿ ಗುರುತಿಸಬಹುದು. ಅದು ಅಶೋಕ ಮೃತನಾದ ವರ್ಷ. ಆಗಿನ ಗೊಂದಲದಲ್ಲಿ, ಶಾತವಾಹನನು ಚಿಕ್ಕ ರಾಜ್ಯ ಕಟ್ಟಿದ. 450 ವರ್ಷ ಕಾಲ ಇವನ ಮನೆತನದ 30 ದೊರೆಗಳು ಆಳಿದರು. ಈ ವಂಶದ ಗೌತಮೀಪುತ್ರ ಶಾತಕರ್ಣಿ ತನ್ನ ರಾಜ್ಯವನ್ನು ಬಹಳವಾಗಿ ವಿಸ್ತರಿಸಿದ ದೊರೆ. ಶಾತವಾಹನರ ಕಾಲದಲ್ಲಿ ಬಂದರುಗಳು ವಾಣಿಜ್ಯ ಕೇಂದ್ರಗಳಾಗಿದ್ದುವು. ನಾಗಾರ್ಜುನಕೊಂಡದ ಬೌದ್ಧ ಸ್ತೂಪ ನಿರ್ಮಾಣವಾದದ್ದು ಈ ಕಾಲದಲ್ಲಿ. ಬಾದಾಮಿ ಚಾಲುಕ್ಯರ ಒಂದು ಕವಲಾದ ಪೂರ್ವ ಚಾಲುಕ್ಯರು ಸುಮಾರು ನಾಲ್ಕು ಶತಮಾನ ಕಾಲ ಈ ಪ್ರದೇಶದಲ್ಲಿ ಆಳಿ ಮಹತ್ತರ ಸಾಧನೆಗಳನ್ನು ಮಾಡಿದರು. ತೆಲುಗು ಸಂಸ್ಕೃತಿಗೆ ಭದ್ರ ಅಡಿಪಾಯ ಹಾಕಿದರು.

13ನೆಯ ಶತಮಾನದಲ್ಲಿ ಕಾಕತೀಯರು ಆಂಧ್ರವನ್ನು ಆಳಲು ಆರಂಭಿಸಿದರು. ಗಣಪತಿದೇವ ಈ ವಂಶದ ಪ್ರಮುಖ ದೊರೆ. ಆಂಧ್ರ ಚರಿತ್ರೆಯಲ್ಲಿ ಕಾಕತೀಯರ ಕಾಲ ಉಜ್ವಲವಾದದ್ದು. ವಿಜಯನಗರ ಸಾಮ್ರಾಜ್ಯದ ಭವ್ಯಕಾಲದಲ್ಲಿ ಆಂಧ್ರದ ಬಹುಭಾಗ ಅದಕ್ಕೆ ಸೇರಿತ್ತು. ಕಲೆ, ಸಾಹಿತ್ಯಗಳಿಗೆ ಉದಾರ ಪ್ರೋತ್ಸಾಹ ದೊರೆಯಿತು. ವಿಜಯನಗರ ಕ್ಷೀಣಿಸುವ ವೇಳೆಗೆ ಷಾಹಿರಾಜ ತೆಲಂಗಾಣವನ್ನು ಆಳುತ್ತಿದ್ದ. 17ನೆಯ ಶತಮಾನದಲ್ಲಿ ನಿಜಾಮರ ಆಳ್ವಿಕೆ ಆಂಧ್ರದಲ್ಲಿ ಆರಂಭವಾಯಿತು. ಅನಂತರ



ದೆಹಲಿ ಆಕಾಶವಾಣಿ ಕೇಂದ್ರ

ಆಂಧ್ರದ ಕೆಲ ಭಾಗ ಬ್ರಿಟಿಷರ ಆಡಳಿತಕ್ಕೂ ಇನ್ನು ಕೆಲವು ಭಾಗ ನಿಜಾಮರ ಆಳ್ವಿಕೆಗೂ ಒಳಪಟ್ಟಿತ್ತು. ಭಾರತ ಸ್ವತಂತ್ರವಾದ ಮೇಲೆ 1953ರಲ್ಲಿ ಆಂಧ್ರ ರಾಜ್ಯ ಅಸ್ತಿತ್ವಕ್ಕೆ ಬಂದಿತು. 1956ರಲ್ಲಿ ಅದು ತೆಲಂಗಾಣ ಪ್ರದೇಶವನ್ನು ಕೂಡಿ ವಿಶಾಲಾಂಧ್ರವಾಗಿ — ಇಂದಿನ ಆಂಧ್ರ ಪ್ರದೇಶವಾಗಿ — ರೂಪುಗೊಂಡಿತು.

ನೋಡಿ : ತಿರುಪತಿ ; ನಾಗಾರ್ಜುನ ಕೊಂಡ ; ನಾಗಾರ್ಜುನ ಸಾಗರ ; ಭದ್ರಾಚಲಂ ; ವಾರಂಗಲ್ ; ವಿಶಾಖಪಟ್ಟಣ ; ಶ್ರೀಶೈಲ

ಆಂಭಿ

ಭಾರತದ ಚರಿತ್ರೆಯಲ್ಲಿ ದೇಶದ್ರೋಹದ ಅಪಾದನೆಗೆ ಮೊತ್ತಮೊದಲು ಗುರಿಯಾದ ಭಾರತೀಯ ಅರಸು ಆಂಭಿ.

ಕ್ರಿ.ಪೂ. 326ರಲ್ಲಿ ಅಲೆಗ್ಸಾಂಡರ್ ಚಕ್ರವರ್ತಿ ಭಾರತಕ್ಕೆ ದಂಡೆತ್ತಿಬಂದ. ಆಗ ವಾಯವ್ಯ ಭಾರತದಲ್ಲಿ ಅವನನ್ನು ಎದುರಿಸಬಹುದಾಗಿದ್ದ ಇಬ್ಬರು ಪ್ರಬಲ ದೊರೆಗಳು ತಕ್ಷಶಿಲೆಯ ರಾಜ ಆಂಭಿ ಮತ್ತು ಜೀಲಂ, ಚೀನಾಬ್ ನಡು ಪ್ರದೇಶವನ್ನು ಆಳುತ್ತಿದ್ದ ಪೌರವ (ಪೋರಸ್).

ಪೌರವನ ಪ್ರಾಬಲ್ಯ ಸಹಿಸದ ಆಂಭಿ ಅಲೆಗ್ಸಾಂಡರನಿಗೆ ಪ್ರತಿಭಟನೆ ಒಡ್ಡಲೇ ಇಲ್ಲ. ಬದಲಾಗಿ, ಅಲೆಗ್ಸಾಂಡರನಿಗೆ ಸಹಾಯ ಮಾಡುವುದಾಗಿ ಮುಂದಾಗಿಯೇ ಸಂದೇಶ ಕಳುಹಿಸಿದ. ಅನೇಕ ಆನೆಗಳು, ಉತ್ತಮ ತಳಿಯ ಕುರಿಗಳು, ಸಾವಿರಾರು ಹೋರಿಗಳನ್ನು ಬಹುಮಾನವಾಗಿ ಅವನಿಗೆ ಕಳುಹಿಸಿದ. ಅವನನ್ನು ತನ್ನ ರಾಜಧಾನಿಗೆ ವೈಭವದಿಂದ ಸ್ವಾಗತಿಸಿದ. ಅಲೆಗ್ಸಾಂಡರ್ ಅಲ್ಲಿ ಸ್ವಲ್ಪ ಕಾಲ ವಿಶ್ರಮಿಸಿಕೊಂಡು, ತನ್ನ ದಂಡಯಾತ್ರೆ ಮುಂದುವರಿಸಿದ. ಅಲೆಗ್ಸಾಂಡರ್ ಗ್ರೀಸಿಗೆ ಹಿಂದಿರುಗಿದಾಗ ತನ್ನ ಒಂದು ಸತ್ರಪದ (ಮಂಡಲದ) ಅಧಿಕಾರಿಯನ್ನಾಗಿ ಆಂಭಿಯನ್ನು ನೇಮಿಸಿದ. ಪರಕೀಯ ಸಮ್ರಾಟನಿಗೆ ಅಧೀನನಾಗಿ ಆಂಭಿ ಆಳಬೇಕಾಯಿತು.

ಆಕಾಶವಾಣಿ

'ಆಕಾಶವಾಣಿ'—ಇದು ಸ್ವತಂತ್ರ ಭಾರತದ ರೇಡಿಯೋ ವ್ಯವಸ್ಥೆಯ ಹೆಸರು. ಇಂಗ್ಲಿಷಿನಲ್ಲಿ ಇದು 'ಆಲ್ ಇಂಡಿಯಾ ರೇಡಿಯೋ'.

ಸ್ವಾತಂತ್ರ್ಯ ಬಂದಾಗ ಭಾರತದಲ್ಲಿದ್ದ ರೇಡಿಯೋ ಕೇಂದ್ರಗಳು ಆರು: ದೆಹಲಿ, ಮುಂಬಯಿ, ಕಲ್ಕತ್ತಾ, ಮದರಾಸು, ಲಖನೌ ಹಾಗೂ ತಿರುಚಿರಪಳ್ಳಿ. ಕೇಂದ್ರ ಸರಕಾರದ ಒಂದು ಇಲಾಖೆಯಾದ ಆಕಾಶವಾಣಿಯಲ್ಲಿ ಈಗ 37 ರೇಡಿಯೋ ಕೇಂದ್ರಗಳಿವೆ. ಇವುಗಳನ್ನು ಉತ್ತರ, ದಕ್ಷಿಣ, ಪೂರ್ವ, ಪಶ್ಚಿಮ ವಲಯಗಳನ್ನಾಗಿ ವಿಂಗಡಿಸಿದೆ. ಉತ್ತರದಲ್ಲಿ ದೆಹಲಿ, ದಕ್ಷಿಣದಲ್ಲಿ ಮದರಾಸು, ಪಶ್ಚಿಮದಲ್ಲಿ ಮುಂಬಯಿ ಹಾಗೂ ಪೂರ್ವದಲ್ಲಿ ಕಲ್ಕತ್ತಾ ಪ್ರಧಾನ ಕೇಂದ್ರಗಳು. ಕರ್ನಾಟಕದಲ್ಲಿ ಬೆಂಗಳೂರು ಹಾಗೂ ಧಾರವಾಡಗಳಲ್ಲಿ ಮುಖ್ಯ ಕೇಂದ್ರಗಳೂ ಅವುಗಳಿಗೆ ಸಂಬಂಧಿಸಿದಂತೆ ಕ್ರಮವಾಗಿ ಭದ್ರಾವತಿ, ಗುಲ್ಬರ್ಗಗಳಲ್ಲಿ ಉಪಕೇಂದ್ರಗಳೂ ಇವೆ. ಸಾಧಾರಣವಾಗಿ ಮಧ್ಯಮ ತರಂಗದಲ್ಲಿ ಪ್ರಸಾರವಾಗುವ **'ವಿವಿಧ ಭಾರತಿ'** ದೇಶದ ಯುವ ಪೀಳಿಗೆಯ ಮೆಚ್ಚಿನ ಕಾರ್ಯಕ್ರಮ. ಇದರಲ್ಲಿ ಜಾಹೀರಾತುಗಳನ್ನು ಕೂಡ ಪ್ರಸಾರ ಮಾಡುತ್ತಾರೆ. ಇದು ಪ್ರಕೃತ 35 ಸ್ಥಳಗಳಿಂದ ಪ್ರಸಾರವಾಗುತ್ತದೆ. ಬೆಂಗಳೂರು, ಧಾರವಾಡಗಳಿಂದ ಈ ಬಗೆಯ ಕಾರ್ಯಕ್ರಮ 1970ರಲ್ಲಿ ಆರಂಭವಾಯಿತು.

ಭಾರತೀಯ ಅಧಿಕೃತ ಭಾಷೆಗಳ ಸಂಖ್ಯೆ 16. ಇವಲ್ಲದೆ ಇನ್ನೂ ಅನೇಕ ಒಳನುಡಿಗಳಲ್ಲಿ ಆಕಾಶವಾಣಿ ಪ್ರಸಾರವೂ ಇರುತ್ತದೆ. ಆಕಾಶವಾಣಿಯಲ್ಲಿ ದಿನ ದಿನವೂ 18 ಭಾಷೆಗಳಲ್ಲಿ, 33 ಒಳನುಡಿಗಳಲ್ಲಿ ವಾರ್ತೆಗಳನ್ನು ಕೂಡ ಪ್ರಸಾರ ಮಾಡುತ್ತಾರೆ. ವಿದೇಶದವರಿಗಾಗಿ, ವಿದೇಶದಲ್ಲಿರುವ ಭಾರತೀಯರಿಗಾಗಿ ಒಟ್ಟು 19 ಭಾಷೆಗಳಲ್ಲಿ ವಾರ್ತೆಗಳು ಪ್ರಸಾರವಾಗುತ್ತವೆ. ದೇಶದೊಳಗೆ, ಹೊರಗೆ ಆಕಾಶವಾಣಿಯ ವರದಿಗಾರರಿದ್ದಾರೆ. ಏಷ್ಯಾ, ಆಸ್ಟ್ರೇಲಿಯ, ನ್ಯೂಜಿಲೆಂಡ್, ಆಫ್ರಿಕ, ಯೂರೋಪಿನ ಶ್ರೋತೃಗಳಿಗಾಗಿ 6 ಭಾರತೀಯ, 15 ವಿದೇಶೀ ಭಾಷೆಗಳ ಕಾರ್ಯಕ್ರಮಗಳಿವೆ.

ಆಕಾಶವಾಣಿಯ ಕಾರ್ಯಕ್ರಮಗಳಲ್ಲಿ ಕಲೆ, ಸಂಗೀತ, ಸಾಹಿತ್ಯ, ಸಂಸ್ಕೃತಿ, ಕೈಗಾರಿಕೆ, ವಿಜ್ಞಾನ, ರಾಜಕೀಯ, ಶಿಕ್ಷಣ, ಕೃಷಿ ಹೀಗೆ ಅನೇಕ ಆಸಕ್ತಿಗಳಿಗೆ ಸ್ಥಾನವಿದೆ. ನಮ್ಮ ರಾಷ್ಟ್ರ ಕೃಷಿಪ್ರಧಾನವಾದ್ದರಿಂದ ರೈತರ ಅಭಿವೃದ್ಧಿಗೆ ಸಾಧಕವಾದ ನಾನಾ ಅಂಶಗಳನ್ನು ಕುರಿತು ದಿನ ದಿನವೂ ಕಾರ್ಯಕ್ರಮಗಳು ಪ್ರಸಾರವಾಗುತ್ತವೆ. ಯುವಜನರು, ಮಹಿಳೆಯರು, ವಿದ್ಯಾರ್ಥಿಗಳು,



ಪ್ರಸಾರಕ್ಕೆ ಸಂಗೀತ

[illegible] ಕಾರ್ಯಕ್ರಮ ಗಳಿಗೆ ನಾಟಕ ಪ್ರಸಾರಕ್ಕೆ ಗಣ್ಯಸ್ಥಾನವನ್ನು ಕೊಡಲಾಗಿದೆ. ಕ್ರೀಡಾವೀಕ್ಷಕ ವಿವರಣೆಗಳೂ ಒಂದು ಆಕರ್ಷಕ ಕಾರ್ಯಕ್ರಮ.

ಕಾರ್ಯಕ್ರಮಗಳ ರೂಪುರೇಷೆಗಳನ್ನು ಕುರಿತು ಸಲಹೆ ನೀಡುವ ಕೇಂದ್ರ ಮತ್ತು ಸ್ಥಳೀಯ ಸಮಿತಿಗಳಿವೆ. ಆಕಾಶವಾಣಿ ತನ್ನದೇ ಮೂಲಭೂತ ಸಂಶೋಧನೆ, ಕೇಳುಗರ ಪ್ರತಿಕ್ರಿಯೆ ಅಧ್ಯಯನ ಕಾರ್ಯಗಳನ್ನೂ ನಡೆಸುತ್ತದೆ. ಕಾರ್ಯಕ್ರಮ ವಿವರಗಳನ್ನು ಒಳಗೊಂಡ ನಿಯತ ಕಾಲಿಕಗಳು ಆಕಾಶವಾಣಿಯ ವತಿಯಿಂದ ಹಲವು ಭಾಷೆಗಳಲ್ಲಿ ಪ್ರಕಟವಾಗುತ್ತವೆ.

ಟೆಲಿವಿಷನ್ ಕಾರ್ಯಕ್ರಮಗಳನ್ನು 1959ರಿಂದ ದೆಹಲಿಯಲ್ಲಿ ಪ್ರಾರಂಭಿಸಲಾಯಿತು. ಕ್ರಮೇಣ ಇದು ಇತರ ಮುಖ್ಯ ನಗರಗಳಿಗೆ ವಿಸ್ತರಿಸಿತು.

ನೋಡಿ : ಆಕಾಶವಾಣಿ—ಸಂಪುಟ ೧

ಆರ್ಕಾಟ್ ರಾಮಸ್ವಾಮಿ ಮುದಲಿಯಾರ್

ರಾಜಕಾರಣ, ಆಡಳಿತ, ಅರ್ಥನಿರ್ವಹಣೆ ಹಾಗೂ ಕೈಗಾರಿಕಾ ವಿಷಯಗಳಲ್ಲಿ ಪರಿಣತರು ಆರ್ಕಾಟ್ ರಾಮಸ್ವಾಮಿ ಮುದಲಿಯಾರ್. ಹಲವು ಉನ್ನತ ಹುದ್ದೆಗಳಲ್ಲಿ ಸಮರ್ಥವಾಗಿ ದುಡಿದ ಕೀರ್ತಿ ಇವರದು.

1887 ಅಕ್ಟೋಬರ್ 14ರಂದು ರಾಮಸ್ವಾಮಿ ಮುದಲಿಯಾರ್ ಜನಿಸಿದರು. ಇವರ ಅವಳಿ ಸಹೋದರ, ಲಕ್ಷ್ಮಣಸ್ವಾಮಿ ಮುದಲಿಯಾರ್. ಕರ್ನೂಲಿನಲ್ಲಿ ಶಾಲಾ ವಿದ್ಯಾಭ್ಯಾಸ. ಅನಂತರ ಮದರಾಸಿನ ಕ್ರಿಶ್ಚಿಯನ್ ಕಾಲೇಜು ಮತ್ತು ಲಾ ಕಾಲೇಜುಗಳಲ್ಲಿ ಶಿಕ್ಷಣ. ಮದರಾಸಿನಲ್ಲೇ ವಕೀಲಿ ವೃತ್ತಿ ಕೈಗೊಂಡರು.

ಆರ್ಕಾಟ್ ರಾಮಸ್ವಾಮಿ ಮುದಲಿಯಾರರ ಕಾರ್ಯಕ್ಷೇತ್ರ ವಿಶಾಲವಾದದ್ದು. ಮದರಾಸಿನ ಮೇಯರ್ ಆಗಿ, ಶಾಸನಸಭೆಯ ಸದಸ್ಯರಾಗಿ, ಕೇಂದ್ರ ಶಾಸನಸಭೆಯ ಸದಸ್ಯರಾಗಿ ರಾಮಸ್ವಾಮಿ ಮುದಲಿಯಾರರು ಗಮನಾರ್ಹ ಕೆಲಸ ಮಾಡಿದರು. ಲಂಡನಿನಲ್ಲಿ ನಡೆದ ದುಂಡುಮೇಜು ಪರಿಷತ್ತಿನಲ್ಲಿ ಅವರು ಭಾರತೀಯ ಪ್ರತಿನಿಧಿಯಾಗಿದ್ದರು. ಭಾರತದಲ್ಲಿ ವೈಸರಾಯರ ಕಾರ್ಯಕಾರಿ ಸಮಿತಿಯ ಸದಸ್ಯರಾಗಿಯೂ ಅವರು ಕೆಲಸ ಮಾಡಿದರು. 1942–43ರಲ್ಲಿ ಇಂಪೀರಿಯಲ್ ಸಮರ ಸಂಪುಟ ಹಾಗೂ ಪೆಸಿಫಿಕ್ ಸಮರ ಸಮಿತಿಯ ಸದಸ್ಯರಾಗಿದ್ದರು. ವಿಶ್ವಸಂಸ್ಥೆಯಲ್ಲಿ ಭಾರತದ ಪ್ರತಿನಿಧಿಯಾಗಿದ್ದರು. 1945ರಲ್ಲಿ ಅಮೆರಿಕಕ್ಕೆ, 1946ರಲ್ಲಿ ಮತ್ತೆ ಅಮೆರಿಕ ಬ್ರಿಟನ್‌ಗಳಿಗೆ ಅವರು ಭಾರತೀಯ ಪ್ರತಿನಿಧಿಯಾಗಿ ಹೋಗಿದ್ದರು. 1946–49 ಅವಧಿಯಲ್ಲಿ ಮೈಸೂರು ಸಂಸ್ಥಾನದ ದಿವಾನರಾಗಿದ್ದರು.

ಬಲಾತ್ಕಾರದ ದುಡಿಮೆಯ ಬಗೆಗೆ ಪರಿಶೀಲಿಸಲು ವಿಶ್ವಸಂಸ್ಥೆ ರಚಿಸಿದ ಸಮಿತಿಯ ಸದಸ್ಯರಾಗಿಯೂ ಅಂತರರಾಷ್ಟ್ರೀಯ ಪೌರಸೇವಾ ಮಂಡಲಿಯ ಸದಸ್ಯರಾಗಿಯೂ ಇದ್ದರು. ಕೆಲಕಾಲ ರಾಜ್ಯಸಭೆಯ ಸದಸ್ಯರಾಗಿ ಇದ್ದರು. ತಿರುವಾಂಕೂರು ವಿಶ್ವವಿದ್ಯಾನಿಲಯದ ಉಪಕುಲಪತಿಯಾಗಿಯೂ ಅವರು ಕೆಲಸ ಮಾಡಿದರು. ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯ ಅವರಿಗೆ 'ಡಾಕ್ಟರ್ ಆಫ್ ಸಿವಿಲ್ ಲಾ' ಎಂಬ ಗೌರವ ಪದವಿಯಿತ್ತು ಗೌರವಿಸಿತು.

ವಯಸ್ಸು 85 ದಾಟಿದ ಮೇಲೂ ಅವರ ಅಮೂಲ್ಯ ಮಾರ್ಗದರ್ಶನವನ್ನು ಬಯಸಿ ಅನೇಕ ಸಮಿತಿ–ಸಂಸ್ಥೆಗಳು ಅವರಿಗೆ ಅಧ್ಯಕ್ಷ ಸ್ಥಾನದ ಗೌರವ ಸಲ್ಲಿಸಿವೆ. ಅವರ ಪ್ರತಿಷ್ಠಿತ ಸೇವೆಗಾಗಿ ಭಾರತ ಸರಕಾರ 1970ರಲ್ಲಿ ಅವರಿಗೆ ಪದ್ಮವಿಭೂಷಣ ಪ್ರಶಸ್ತಿ ನೀಡಿ ಗೌರವಿಸಿತು.



ಆಡಳಿತದ ಬಗಿ :
ರಾಮಸ್ವಾಮಿ...

ಆರ್ಕಾಟ್ ಲಕ್ಷ್ಮಣಸ್ವಾಮಿ ಮುದಲಿಯಾರ್

ಸ್ವಿಟ್ಜರ್‌ಲೆಂಡಿನ ಲಿಯೊ ಬರ್ನಾರ್ಡ್ ಫೌಂಡೇಷನಿನ 1970ರ ಪದಕ ಒಬ್ಬ ಭಾರತೀಯನಿಗೆ ದೊರೆಯಿತು. ಪ್ರಸವವಿಜ್ಞಾನ, ಸ್ತ್ರೀ ರೋಗ ವಿಜ್ಞಾನ, ಶಿಕ್ಷಣ, ಆಡಳಿತ, ರಾಜತಂತ್ರ ಕ್ಷೇತ್ರಗಳಲ್ಲಿ ಆತನ ಉತ್ತಮ ಸಾಧನೆಗಳನ್ನು ಮನ್ನಿಸಿ ಈ ಪ್ರಶಸ್ತಿ ನೀಡಲಾಯಿತು.

ಈ ಗೌರವಕ್ಕೆ ಪಾತ್ರರಾದವರು ಆರ್ಕಾಟ್ ಲಕ್ಷ್ಮಣಸ್ವಾಮಿ ಮುದಲಿಯಾರ್. ಇವರು ಆರ್ಕಾಟ್ ರಾಮಸ್ವಾಮಿ ಮುದಲಿಯಾರರ ಅವಳಿ ಸಹೋದರ.

ಇಬ್ಬರೂ ಚಿಕ್ಕಂದಿನಲ್ಲೇ ಮೇಧಾವಿಗಳೆಂದು ಹೆಸರಾಗಿದ್ದರು. ಉಡುಗೆ–ತೊಡುಗೆ ಮುಖಲಕ್ಷಣಗಳಲ್ಲಿ ಸಾಮ್ಯವಿರುವಂತೆಯೇ ಸಾರ್ವಜನಿಕ ಜೀವನದಲ್ಲಿಯೂ ಇಬ್ಬರದೂ ಒಂದೇ ಬಗೆಯ ಖ್ಯಾತಿ.

ಲಕ್ಷ್ಮಣಸ್ವಾಮಿ ಮುದಲಿಯಾರರು 1887 ಅಕ್ಟೋಬರ್ 14ರಂದು ಜನಿಸಿದರು. ಕರ್ನೂಲಿನಲ್ಲಿ ಶಾಲಾ ವಿದ್ಯಾಭ್ಯಾಸ. ಅನಂತರ ಮದರಾಸಿನ ಮೆಡಿಕಲ್ ಕಾಲೇಜಿನಲ್ಲಿ ಅಧ್ಯಯನ. 22ನೆಯ ವಯಸ್ಸಿಗೆಲ್ಲ ವೈದ್ಯವೃತ್ತಿ ಕೈಗೊಂಡರು. ಮೆಡಿಕಲ್ ಕಾಲೇಜು ಹಾಗೂ ಸರಕಾರೀ ಆಸ್ಪತ್ರೆಗಳಲ್ಲಿ ಪ್ರಮುಖ ಅಧಿಕಾರದಲ್ಲಿದ್ದರು. ಭಾರತೀಯರೊಬ್ಬರಿಗೆ ಈ ಸ್ಥಾನಗಳು ದೊರೆತದ್ದು ಇದೇ ಮೊದಲು. ಅನಂತರ ಒಂದು ವರ್ಷ ಕಾಲ ತಮ್ಮ ಪಾಂಡಿತ್ಯ ಹೆಚ್ಚಿಸಿಕೊಳ್ಳಲು ಬ್ರಿಟನ್ ಹಾಗೂ ಇತರ ವಿದೇಶಗಳಿಗೆ ಹೋಗಿ ಬಂದರು. ಮುಂದೆ ಸುಮಾರು 40 ವರ್ಷಕಾಲ ವೈದ್ಯಕೀಯ ಕ್ಷೇತ್ರದ ಸಂಬಂಧದಲ್ಲಿ ಒಂದಲ್ಲ ಒಂದು ಕಾರಣಕ್ಕಾಗಿ ಅವರು ಹೊರದೇಶಗಳಲ್ಲಿ ಪ್ರವಾಸ ಮಾಡಿದ್ದಾರೆ.

ಭಾರತೀಯ ವೈದ್ಯಕೀಯ ಮಂಡಲಿ (ಇಂಡಿಯನ್ ಮೆಡಿಕಲ್ ಕೌನ್ಸಿಲ್), ಆರಂಭವಾದಂದಿನಿಂದ ಅದರ ಸದಸ್ಯ; ಅಖಿಲ ಭಾರತ ತಾಂತ್ರಿಕ ಶಿಕ್ಷಣ ಸಮಿತಿ, ವೈಜ್ಞಾನಿಕ ಮತ್ತು ಔದ್ಯೋಗಿಕ ಸಂಶೋಧನಾ ಮಂಡಲಿಯ ಸದಸ್ಯ; 1948ರಲ್ಲಿ ಕಾಮನ್‌ವೆಲ್ತ್ ವಿಶ್ವವಿದ್ಯಾನಿಲಯ ಸಂಘದಲ್ಲಿ ಕಾರ್ಯನಿರ್ವಾಹಕ; ಮದರಾಸು ಸಂಸ್ಥಾನ ಸ್ಕೌಟ್ ಸಂಘದ ಪ್ರಧಾನ ಕಾರ್ಯಮಂಡಲಿಯ ಅಧ್ಯಕ್ಷ; ವಿಶ್ವ ಆರೋಗ್ಯ ಸಂಸ್ಥೆಯ ಅಧ್ಯಕ್ಷ; 1961ರ ಜಾಗತಿಕ ಆರೋಗ್ಯ ಸಮ್ಮೇಳನದ ಅಧ್ಯಕ್ಷ; ಮದರಾಸಿನ ನ್ಯಾಯವಿಧಾಯಕ ಸಭೆಯ ಸದಸ್ಯ; ಮದರಾಸು



ಅಸಾಧಾರಣ ಸಾಧನೆ
ಲಕ್ಷ್ಮಣಸ್ವಾಮಿ :...

ವಿಶ್ವವಿದ್ಯಾನಿಲಯದ ಉಪಕುಲಪತಿ — ಹೀಗೆ ನಿರ್ವಹಿಸಿದ ಅಧಿಕಾರಗಳೇ ಲಕ್ಷ್ಮಣಸ್ವಾಮಿ ಮುದಲಿಯಾರರ ಹಿರಿಮೆಯನ್ನು ಸಾರುತ್ತವೆ. 27 ವರ್ಷ ಕಾಲ ಅವರು ಮದರಾಸು ವಿಶ್ವವಿದ್ಯಾನಿಲಯದ ಉಪಕುಲಪತಿಯಾಗಿ ಕೆಲಸ ಮಾಡಿದ್ದು ಪ್ರಪಂಚದಲ್ಲೇ ಒಂದು ದಾಖಲೆ.

'ಪ್ರಸವವಿಜ್ಞಾನ ಪ್ರಯೋಗ ಶಿಕ್ಷಣ', 'ಜನನಕ್ಕೆ ಮುಂಚೆ, ಜನಿಸಿದ ಹೊಸತರಲ್ಲೇ ಮಕ್ಕಳ ಮರಣ ಸಂಖ್ಯೆ', 'ಸೂಲಗಿತ್ತಿಯರಿಗಾಗಿ ರೋಗ ವಿವರಣ ಪುಸ್ತಕ' — ಇವು ಲಕ್ಷ್ಮಣಸ್ವಾಮಿ ಮುದಲಿಯಾರರ ಕೆಲವು ಗ್ರಂಥಗಳು.

ಭಾರತ ಸರಕಾರ ಅವರಿಗೆ ಪದ್ಮವಿಭೂಷಣ ಪ್ರಶಸ್ತಿ ನೀಡಿದೆ.

ಆಗಾಖಾನ್

ಅಪರೂಪ ಗುಣಗಳು ಮೇಳೈಸಿದ ವ್ಯಕ್ತಿತ್ವ ಮೂರನೆಯ ಆಗಾಖಾನ್ ಅವರದು.

ಇವರು ಮುಹಮ್ಮದೀಯರ ಇಸ್ಮೇಲಿ ಪಂಗಡದ ಧರ್ಮಗುರು, ರಾಜತಂತ್ರಜ್ಞ, ಒಳ್ಳೆಯ ಕ್ರೀಡಾಪಟು ಮತ್ತು ಕ್ರೀಡಾಭಿಮಾನಿ. ಪರಮತದವರೊಡನೆ ಸೌಹಾರ್ದದಿಂದ ವರ್ತಿಸುತ್ತಿದ್ದರು.

'ಆಗಾಖಾನ್' ಎಂಬುದು ಇವರ ತಾತನವರಿಗೆ ಪರ್ಷಿಯದ ಷಾ ಕೊಟ್ಟ ಬಿರುದು. ಆಗಾ ಎಂದರೆ ಹಿರಿಯ ಅಧಿಕಾರಿ, ಗಣ್ಯವ್ಯಕ್ತಿ ಎಂದು ಅರ್ಥ. ಈತ ಪರ್ಷಿಯದಿಂದ ಸಿಂಧ್ ಪ್ರದೇಶಕ್ಕೆ ಬಂದು ನೆಲೆಸಿದರು.

ಮೂರನೆಯ ಆಗಾಖಾನರ ಪೂರ್ಣ ಹೆಸರು ಆಗಾ ಸುಲ್ತಾನ್ ಮುಹಮ್ಮದ್ ಷಾ. ಇವರು ಹುಟ್ಟಿದ್ದು ಕರಾಚಿಯಲ್ಲಿ, 1877ರಲ್ಲಿ. ಧರ್ಮಗುರುವಾದಾಗ ಅವರಿಗೆ ಕೇವಲ 8 ವರ್ಷ ವಯಸ್ಸು. ಧಾರ್ಮಿಕ ತರಬೇತಿ, ಪಾಶ್ಚಿಮಾತ್ಯ ಶಿಕ್ಷಣ ದೊರೆತುವು. ಪಾರಸೀ, ಅರಬೀ, ಇಂಗ್ಲಿಷ್, ಫ್ರೆಂಚ್ ಮುಂತಾದ ಹಲವು ಭಾಷೆಗಳಲ್ಲಿ ಪರಿಣತಿ ಪಡೆದರು. ಇಂಗ್ಲೆಂಡ್, ಫ್ರಾನ್ಸ್, ಜರ್ಮನಿಗಳಲ್ಲಿ ಪ್ರವಾಸ ಮಾಡಿದರು.

ಅಲೀಘರ್ ವಿಶ್ವವಿದ್ಯಾಲಯ ರೂಪುಗೊಳ್ಳುವುದಕ್ಕೆ ಕಾರಣರಾದ ವ್ಯಕ್ತಿಗಳಲ್ಲಿ ಇವರೂ ಒಬ್ಬರು. ಸ್ವಲ್ಪಕಾಲ ಅದರ ಪ್ರೊ-ಛಾನ್ಸ್‌ಲರ್ ಆಗಿದ್ದರು. ಮುಹಮ್ಮದೀಯರಿಗೆ ಪ್ರತ್ಯೇಕ ಚುನಾವಣಾಕ್ಷೇತ್ರ ಇರಬೇಕೆಂದು ಕೇಳಲು ಇಂಗ್ಲೆಂಡಿಗೆ ಹೋದ ನಿಯೋಗಕ್ಕೆ ಇವರು ನಾಯಕರಾಗಿದ್ದರು. ಮುಹಮ್ಮದೀಯರ, ವಿಶೇಷತಃ ತಮ್ಮ ಪಂಥದ ಮುಸಲ್ಮಾನರ, ಉನ್ನತಿಗಾಗಿ ನಿರಂತರವಾಗಿ ಶ್ರಮಿಸಿದರು.

[illegible]



1931–32ರಲ್ಲಿ ದುಂಡು ಮೇಜು ಪರಿಷತ್ತಿನಲ್ಲಿ ಭಾಗವಹಿಸಿದರು. ನಾಲ್ಕು ಬಾರಿ 'ಲೀಗ್ ಆಫ್ ನೇಷನ್ಸ್'ಗೆ ಬ್ರಿಟಿಷ್ ಭಾರತದ ಅಧಿಕೃತ ಪ್ರತಿನಿಧಿಯಾಗಿ ಹೋಗಿದ್ದರು. 1937ರಲ್ಲಿ ಅದೇ ಸಂಸ್ಥೆಯ ಅಧ್ಯಕ್ಷತೆ ವಹಿಸಿದ ಪ್ರಥಮ ಭಾರತೀಯರಾದರು.



ಮೊದಲ ಆಗಾಖಾನರ ಚಿತ್ರದೆದುರು ನಾಲ್ಕನೆಯ ಆಗಾಖಾನ್

ಪಾಶ್ಚಾತ್ಯ ಸಾಮಾಜಿಕ ಜೀವನದಲ್ಲಿ ಆಗಾಖಾನ್ ಬಹು ನಿಕಟವಾಗಿ ಪಾಲುಗೊಂಡರು. ಶುದ್ಧತಳಿಯ ಕುದುರೆಗಳನ್ನು ಸಾಕುವುದರಲ್ಲೂ ಕುದುರೆ ಪಂದ್ಯದಲ್ಲೂ ಅವರಿಗೆ ಅತೀವ ಆಸಕ್ತಿ. ಹಲವು ಪ್ರಶಸ್ತಿಗಳನ್ನು ಗಳಿಸಿದ್ದರು. ಅವರು ಒಳ್ಳೆಯ ಗಾಲ್ಫ್ ಆಟಗಾರರೂ ಆಗಿದ್ದರು. ಭಾರತದಲ್ಲಿ ಕ್ರಿಕೆಟ್ ಹಾಗೂ ಹಾಕಿ ಆಟಗಳನ್ನು ಅಭಿವೃದ್ಧಿಗೊಳಿಸಿದರು.

ಅವರು ನಾಲ್ಕು ಬಾರಿ ವಿವಾಹವಾದರು. ಆ ಪತ್ನಿಯರಲ್ಲಿ ಒಬ್ಬಾಕೆ ಇಟಾಲಿಯನ್, ಇಬ್ಬರು ಫ್ರೆಂಚರು.

'ಸಂಧಿಕಾಲದಲ್ಲಿರುವ ಭಾರತ' ಹಾಗೂ 'ಆಗಾಖಾನರ ನೆನಹುಗಳು' ಇವು ಆಗಾಖಾನರು ಬರೆದ ಪುಸ್ತಕಗಳು. ಮೂರನೆಯ ಆಗಾಖಾನ್ 1957 ಜುಲೈ 11ರಂದು ನಿಧನರಾದರು.

ಆ ಬಳಿಕ ಇಸ್ಮೇಲಿಗಳ ಪಂಗಡದ ನಾಯಕರಾದವರು ಮೂರನೆಯ ಆಗಾಖಾನರ ಮೊಮ್ಮಗ ಕರೀಂಖಾನರು.

ಆಗ್ರಾ

ಪ್ರಪಂಚಕ್ಕೆ ಆಗ್ರಾದ ಪರಿಚಯವಾಗಿರುವುದು ತಾಜಮಹಲ್‌ನ ಮೂಲಕ. ಆಧುನಿಕ ಅದ್ಭುತಗಳಲ್ಲಿ ಒಂದೆಂದು ಪರಿಗಣಿಸಲಾಗಿರುವ ಈ ಅಮೃತಶಿಲೆಯ ಸುಂದರ ಕಟ್ಟಡವನ್ನು ಮೊಘಲ್ ಚಕ್ರವರ್ತಿ ಷಾಜಹಾನ್ ಆಗ್ರಾದ ಸಮೀಪದಲ್ಲಿ ಯಮುನಾ ನದಿಯ ದಡದಲ್ಲಿ ಕಟ್ಟಿಸಿದ.

ಮೊಘಲರಿಗೆ ಮೊದಲೇ ಸಿಕಂದರ್ ಲೋದಿ ಈ ನಗರವನ್ನು ಕಟ್ಟಿಸಿ ತನ್ನ ರಾಜಧಾನಿಯಾಗಿ ಮಾಡಿಕೊಂಡನೆಂದೂ ಒಂದು ಹೇಳಿಕೆಯಿದೆ. ಆದರೆ ಆಗ್ರಾ ಅಭಿವೃದ್ಧಿಗೆ ಬಂದದ್ದು ಮೊಘಲರಿಂದ. 16–17ನೆಯ ಶತಮಾನದಲ್ಲಿ 100 ವರ್ಷಗಳ ಕಾಲ ಇದು ಅವರ ರಾಜಧಾನಿಯಾಗಿತ್ತು. ಅಕ್ಬರ್ ಇಲ್ಲಿ ಒಂದು ಭವ್ಯ ಕೋಟೆಯನ್ನು ಕಟ್ಟಿಸಿದ. ಕೆಂಪು ಕಲ್ಲಿನ ಈ ಕೋಟೆ 70 ಅಡಿ ಎತ್ತರವಿದೆ; ಸುತ್ತಳತೆ ಒಂದೂವರೆ ಮೈಲು. ಕೋಟೆಯೊಳಗಿರುವ ಮೋತಿ ಮಸೀದಿ, ಜಹಾಂಗೀರ್ ಮಹಲ್‌ಗಳು ಸುಂದರ ಕಟ್ಟಡಗಳು. ಷಾಜಹಾನನ ಮಗಳು ಜಹನಾರಾ ಕಟ್ಟಿಸಿದ



ಜುಮ್ಮಾ ಮಸೀದಿಯೂ ಆಕರ್ಷಕವಾಗಿದೆ. ಅಕ್ಬರನ ಸಮಾಧಿ ಸ್ಥಳ ಇಲ್ಲಿಗೆ ಹತ್ತಿರದ ಸಿಕಂದ್ರದಲ್ಲಿದೆ.

ಅಕ್ಬರ್, ಜಹಾಂಗೀರ್, ಷಾಜಹಾನರು ಇಲ್ಲಿಂದ ಆಳಿದರು. 1658ರಲ್ಲಿ ಔರಂಗಜೇಬ್ ತನ್ನ ರಾಜಧಾನಿಯನ್ನು ದೆಹಲಿಗೆ ವರ್ಗಾಯಿಸಿದ.

ಮೊಘಲ್ ಶೈಲಿಯ ವರ್ಣ ಚಿತ್ರಕಲೆ ಆರಂಭವಾಗಿ ಪರಾಕಾಷ್ಠೆ ತಲಪಿದ್ದೂ ಆಗ್ರಾದಲ್ಲಿ.

ಆಧುನಿಕ ಆಗ್ರಾ ಒಂದು ಮುಖ್ಯ ಸಂಪರ್ಕ ಕೇಂದ್ರ. ಹಲವು ಪ್ರಮುಖ ರೈಲ್ವೆ ಮಾರ್ಗಗಳು ಇದರ ಮೂಲಕ ಹಾಯುತ್ತವೆ. ಇದರಿಂದ ಇದು ವಾಣಿಜ್ಯ ಕೇಂದ್ರವೂ ಆಗಿದೆ. ದೆಹಲಿಯಿಂದ ಇಲ್ಲಿಗೆ 123 ಮೈಲು ದೂರ. ಆಧುನಿಕ ಆಗ್ರಾದಲ್ಲಿ ಹಲವು ಭವ್ಯ ಕಟ್ಟಡಗಳಿವೆ. ದಂಡು ಮತ್ತು ನಗರ ಗಳೆಂದು ಎರಡು ವಿಭಾಗಗಳಿವೆ. ಇಲ್ಲಿ ಸೈನಿಕ ಹಾಗೂ ವಾಯುದಳ ತರಬೇತಿ ಕೇಂದ್ರವಿದೆ. ಆಗ್ರಾ ವಿಶ್ವವಿದ್ಯಾನಿಲಯ ಕೇಂದ್ರವೂ ಇಲ್ಲಿದೆ.

ಹತ್ತಿ ಹಿಂಜುವುದು, ನೆಲಹಾಸು, ನೆಯ್ಗೆ, ತೊಗಲು ಸಂಸ್ಕರಣ ಹಾಗೂ ಪಾದರಕ್ಷೆಗಳ ತಯಾರಿ ಇಲ್ಲಿನ ಮುಖ್ಯ ಕೈಗಾರಿಕೆಗಳು. ಅಮೃತಶಿಲೆ ಯಲ್ಲಿ ಒಳಕುಸುರಿ ಕೆಲಸ, ಬೆಳ್ಳಿಯ ಎಳೆಗಳಿಂದ ಮಾಡಿದ ಕಲಾಕೃತಿಗಳಿಗೆ ಆಗ್ರಾ ಹೆಸರುವಾಸಿ.

ನೋಡಿ : ತಾಜಮಹಲ್—ಸಂಪುಟ ೧

ಆಗುಂಬೆ

ಸಂಜೆಯ ಸೂರ್ಯ ದಿಗಂತದ ಕಡೆಗೆ ಸರಿಯುತ್ತಿರುತ್ತಾನೆ. ನಾನಾ ಆಕೃತಿಗಳ ಅಸಂಖ್ಯ ಮೋಡಗಳು ಬಗೆಬಗೆಯ ಬಣ್ಣಗಳನ್ನು ತಳೆಯುತ್ತಿರುತ್ತವೆ. ಎದುರಿಗೆ ವಿಶಾಲ ಸಾಗರದ ನೋಟ. ಸಾವಿರಾರು ಅಡಿಗಳ ಕೆಳಗಿನ ದೃಶ್ಯ.

ವರ್ಣರಂಜಿತ ಸೂರ್ಯಾಸ್ತದ ಅಪೂರ್ವ ದರ್ಶನಕ್ಕೆ ಆಗುಂಬೆ, ಸುಪ್ರಸಿದ್ಧ. ಸೂರ್ಯಾಸ್ತವನ್ನು ನೋಡುವವರಿಗಾಗಿ ಇಲ್ಲಿ ಒಂದು ಪೀಠ ನಿರ್ಮಿಸಿದ್ದಾರೆ.

ಆಗುಂಬೆ ಸಹ್ಯಾದ್ರಿ ಪರ್ವತಗಳ ಉನ್ನತ ಶ್ರೇಣಿಗಳಲ್ಲಿ ಒಂದು. ಇದು ಶಿವಮೊಗ್ಗೆಯಿಂದ ಸುಮಾರು 50 ಮೈಲು ದೂರದಲ್ಲಿದೆ.

ಕ್ಷತ್ರಿಯ ವರ್ಗವನ್ನು ನಾಶಮಾಡುವ ಶಪಥ ಕೈಗೊಂಡ ಪರಶುರಾಮ ಇಪ್ಪತ್ತೊಂದು ಬಾರಿ ಭೂಮಿಯನ್ನು ಸುತ್ತಿ ಅವರನ್ನು ಕೊನೆಗಾಣಿಸಿದ. ಈ ಪಾಪ ವಿಮೋಚನೆಗಾಗಿ ಅಶ್ವಮೇಧಯಾಗ ಮಾಡಿ ಇಡೀ ಭೂಮಿ ಯನ್ನೇ ಕಶ್ಯಪಋಷಿಗೆ ದಾನ ಮಾಡಿದ. ಆಗ, ತನಗಾಗಿ ಸ್ವಲ್ಪ ಸ್ಥಳ ಬೇಕೆಂದು, ಆಗುಂಬೆಯ ಬೆಟ್ಟದ ತುದಿಯಲ್ಲಿ ನಿಂತು, ತಾನು ಎಸೆಯುವ ಕೊಡಲಿ ಬೀಳುವವರೆಗಿನ ಸ್ಥಳವನ್ನು ಬಿಟ್ಟು ಕೊಡುವಂತೆ ಸಮುದ್ರರಾಜ ನನ್ನು ಪ್ರಾರ್ಥಿಸಿ, ಕೊಡಲಿಯನ್ನು ಎಸೆದ. ಆತ ಕೊಡಲಿ ಎಸೆದ ಆಗುಂಬೆ ಮತ್ತು ಕೊಡಲಿ ಬಿದ್ದ ಸ್ಥಳದ ನಡುವಣ ಪ್ರದೇಶ ಪರಶುರಾಮಕ್ಷೇತ್ರ ಎಂದು ಹೆಸರು ಪಡೆಯಿತು.

—ಇದು ಆಗುಂಬೆಗೆ ಸಂಬಂಧಿಸಿದ ಪುರಾಣ ಕಥೆ.

ಆಗುಂಬೆಯಲ್ಲಿ ಮಧ್ಯಾಹ್ನದ ಸೂರ್ಯ ಬೆಳಗುವ ನೋಟವೂ ಸುಂದರ. ಮಳೆಗಾಲದ ದೃಶ್ಯ ಎದೆ ಝಲ್ಲೆನಿಸುವಂಥದು. ಸೂರ್ಯನ ಬೆಳಕು ಕಾಣದೆ ತಿಂಗಳುಗಳೇ ಉರುಳಬಹುದು.

ಭಾರತದ ಅಧಿಕ ಮಳೆ ಬೀಳುವ ಜಾಗಗಳಲ್ಲಿ ಇದೂ ಒಂದು. ಇದನ್ನು ದಕ್ಷಿಣದ ಚಿರಾಪುಂಜಿ ಎನ್ನುತ್ತಾರೆ.

ನೂರಾರು ಅಡಿಗಳಷ್ಟು ಎತ್ತರದ ಹೆಮ್ಮರಗಳಿಂದ ಕೂಡಿದ ಇಲ್ಲಿನ ಕಾನನಗಳ ಗಂಭೀರ ಚೆಲುವು ಮನಮೋಹಕ.

ನೋಡಿ : ಚಿರಾಪುಂಜಿ

ಆಜಾದ್ ಹಿಂದ್ ಫೌಜ್

ಶಸ್ತ್ರಬಲದಿಂದ ಭಾರತದ ವಿಮೋಚನೆ ಸಾಧಿಸಬೇಕೆಂಬ ಉದ್ದೇಶದಿಂದ ಸಂಘಟಿತವಾದ ಸೇನೆ 'ಆಜಾದ್ ಹಿಂದ್ ಫೌಜ್' (ಸ್ವತಂತ್ರ ಭಾರತ ಸೇನೆ) ಅಥವಾ ಐ. ಎನ್. ಎ. (ಇಂಡಿಯನ್ ನ್ಯಾಷನಲ್ ಆರ್ಮಿ –ಭಾರತೀಯ ರಾಷ್ಟ್ರೀಯ ಸೇನೆ). ಈ ಸೇನೆಯ ಬಾವುಟದ ಲಾಂಛನ ಹುಲಿ. 'ಜಯ್ ಹಿಂದ್ !' (ಭಾರತಕ್ಕೆ ಜಯವಾಗಲಿ) ಈ ಸೇನೆಯ ವಂದನಾ ಘೋಷ.

ಬ್ರಿಟಿಷ್ ಸರಕಾರದಿಂದ ಗೃಹಬಂಧನಕ್ಕೊಳಗಾಗಿದ್ದ ಸುಭಾಷರು 1941 ಜನವರಿ 26ರಂದು ಅಲ್ಲಿಂದ ಹೊರಬಿದ್ದು ಕಾಬೂಲು ಮಾರ್ಗ ವಾಗಿ ಜರ್ಮನಿ ತಲಪಿದರು. ಅದೇ ವರ್ಷ ಜಪಾನ್ ಎರಡನೆಯ ಜಾಗತಿಕಯುದ್ಧದಲ್ಲಿ ಬ್ರಿಟಿಷರ ವಿರುದ್ಧಪಕ್ಷವನ್ನು ಸೇರಿ ಕೊಂಡಿತು. ಆ ಸನ್ನಿವೇಶದಲ್ಲಿ ಜಪಾನಿನಲ್ಲಿ ನೆಲೆಸಿದ್ದ ಕ್ರಾಂತಿ ಕಾರಿ ರಾಸ್ ಬಿಹಾರಿ ಬೋಸ್ ಭಾರತದ ದಾಸ್ಯ ವಿಮೋ ಚನೆಗಾಗಿ ಐ.ಎನ್.ಎ. ಕಟ್ಟಲು ಆರಂಭಿಸಿದರು. ಜಪಾನ್ ಆಕ್ರಮಿಸಿದ್ದ ಮಲಯ, ಬರ್ಮ, ಸಿಂಗಪುರಗಳಲ್ಲಿ ರಾಸ್ ಬಿಹಾರಿಯವರು ಪ್ರವಾಸ ಮಾಡಿ ಫೌಜಿಗೆ ಜನರನ್ನು ಭರ್ತಿ ಮಾಡಿದರು. ಈ ಪ್ರದೇಶಗಳಲ್ಲಿದ್ದ ಭಾರತೀಯರೂ ಜಪಾನಿಯರಿಗೆ ಸೆರೆಸಿಕ್ಕಿದ ಬ್ರಿಟಿಷ್ ಸೇನೆಯ ಭಾರತೀಯ





ಆಜಾದ್ ಹಿಂದ್ ಫೌಜ್ ಧ್ವಜ

ಸೇನಾಧಿಕಾರಿಗಳೂ ಈ ರಾಷ್ಟ್ರೀಯ ಸೇನೆಗೆ ಸೇರಿಕೊಂಡರು. 1943ರಲ್ಲಿ ನೇತಾಜಿ ಸಿಂಗಪುರಕ್ಕೆ ಬಂದಾಗ ರಾಸ್ ಬಿಹಾರಿಯವರು ಅವರಿಗೆ ಈ ಸೇನೆಯ ನಾಯಕತ್ವ ವಹಿಸಿಕೊಟ್ಟರು. ಸುಭಾಷ್ ಚಂದ್ರ ಬೋಸ್ ಐ.ಎನ್.ಎ.ಯ ಮಹಾ ಸೇನಾನಿಯಾದರು. ಬ್ರಿಟಿಷರ ವಿರುದ್ಧ ಯುದ್ಧ ಸಾರಿದರು. ' ದಿಲ್ಲಿ ಚಲೋ ! ' ಎಂಬ ರಣಘೋಷದೊಡನೆ ಸೈನ್ಯ ಭಾರತ ದೆಡೆಗೆ ಸಾಗಿತು.

ಬರ್ಮದ ಮೂಲಕ ಭಾರತ ಗಡಿ ಪ್ರವೇಶಿಸಿ, ಭಾರತವನ್ನು ಆಕ್ರಮಿಸುವುದು ಆಜಾದ್ ಹಿಂದ್ ಫೌಜಿನ ಗುರಿಯಾಗಿದ್ದಿತು. ಸೈನ್ಯದಲ್ಲಿ ವೀರ ಮಹಿಳೆಯರ ಒಂದು ದಳವೂ ಇತ್ತು. ಇದಕ್ಕೆ ಝಾನ್ಸಿ ರಾಣಿ ದಳ ಎಂಬ ಹೆಸರು. ಈ ದಳದ ಸ್ತ್ರೀಯರಿಗೂ ಎಲ್ಲ ಬಗೆಯ ಸೈನಿಕ ತರಬೇತಿ ನೀಡಲಾಗಿತ್ತು. ಇದರ ಮುಖ್ಯಸ್ಥೆ ಕ್ಯಾಪ್ಟನ್ ಲಕ್ಷ್ಮಿ. ಆಜಾದ್ ಹಿಂದ್ ಫೌಜ್ [illegible] ಬರ್ಮ–ಭಾರತ ಗಡಿಯಲ್ಲಿ ಬ್ರಿಟಿಷರ ಮೇಲೆ ಸೈನ್ಯದ ಗಾಢವಾದ ದಾಳಿ ನಡೆಸಿತು. ಅನಂತರ ಆಜಾದ್ ಹಿಂದ್ ಫೌಜ್ ' ಜಯ್ ಹಿಂದ್ ' ಘೋಷಣೆಯೊಡನೆ ಮಾತೃಭೂಮಿಯನ್ನು ಪ್ರವೇಶಿಸಿ ಧ್ವಜ ಸ್ಥಾಪನೆ ಮಾಡಿತು. ಸುಮಾರು 1,500 ಚದರ ಮೈಲು ಗಳಷ್ಟು ಭಾರತ ಪ್ರದೇಶವನ್ನು ಆಕ್ರಮಿಸಿಕೊಂಡಿತು. ಅಲ್ಲಿ ಆಜಾದ್ ಹಿಂದ್ ಸರಕಾರ ಸ್ಥಾಪಿತವಾಯಿತು. 1944ರಲ್ಲಿ ಜಪಾನ್ ತಾನು ಆಕ್ರಮಿಸಿಕೊಂಡಿದ್ದ ಅಂಡಮಾನ್, ನಿಕೋಬಾರ್‌ಗಳನ್ನು ಈ ಸರಕಾರಕ್ಕೆ ಒಪ್ಪಿಸಿತು. ಮುಂದೆ ಇಂಫಾಲಕ್ಕೆ ನೇತಾಜಿಯವರ ಸೇನೆ ಮುತ್ತಿಗೆ ಹಾಕಿತು. ಆದರೆ ಈ ವೇಳೆಗೆ ಜಪಾನೀಯರು ಯುದ್ಧರಂಗದಲ್ಲಿ ಹಿಮ್ಮೆಟ್ಟುತ್ತಿದ್ದರು; ಆಯುಧ ಪೂರೈಕೆ, ಆಹಾರ ಸರಬರಾಜು ಮುಂತಾದ ಸಮಸ್ಯೆಗಳು ತಲೆದೋರಿದುವು. ಹೀಗಾಗಿ ಆಜಾದ್ ಹಿಂದ್ ಫೌಜ್ ಹಿಮ್ಮೆಟ್ಟಬೇಕಾಯಿತು. ಜಪಾನೀಯರು ಸೋಲನ್ನೊಪ್ಪಿಕೊಂಡ ಮೇಲೆ, ಬ್ರಿಟಿಷರು ಸಾವಿರಾರು ಮಂದಿ ಐ.ಎನ್.ಎ. ಸೈನಿಕರನ್ನೂ ಅಧಿಕಾರಿಗಳನ್ನೂ ಸೆರೆಹಿಡಿದರು.

ಆಜಾದ್ ಹಿಂದ್ ಫೌಜಿನ ಕೆಲವು ನಾಯಕರಾದ ಕ್ಯಾಪ್ಟನ್ ಷಾ ನವಾಜ್ ಖಾನ್, ಕ್ಯಾಪ್ಟನ್ ಲಕ್ಷ್ಮಿ, ಲೆಫ್ಟಿನೆಂಟ್ ಧಿಲ್ಲಾನ್ ಮುಂತಾದವರನ್ನು ದೆಹಲಿಯ ಕೆಂಪುಕೋಟೆಯಲ್ಲಿ ಬ್ರಿಟಿಷರು ಮಿಲಿಟರಿ ನ್ಯಾಯಸ್ಥಾನದಲ್ಲಿ ವಿಚಾರಣೆಗೆ ಗುರಿಮಾಡಿದರು. ಇದನ್ನು ಭಾರತೀಯರು ಪ್ರತಿಭಟಿಸಿದರು. " ಕೆಂಪುಕೋಟೆ ಒಡೆಯಿರಿ ! ಆಜಾದ್ ಫೌಜ್ ಮುಕ್ತವಾಗಲಿ ! " ಎಂಬ ಘೋಷ ಕೇಳಿಬಂತು. ಬ್ರಿಟಿಷ್ ಸರಕಾರ ಜನತೆಯ ಒತ್ತಾಯಕ್ಕೆ ಮಣಿದು ಬಂಧಿತರನ್ನು ಬಿಡುಗಡೆ ಮಾಡಿತು. ಈ ಕಾಲದಲ್ಲಿ ಬ್ರಿಟಿಷ್ ಸೇನೆಯಲ್ಲಿದ್ದ ಭಾರತೀಯ ಸಿಪಾಯಿಗಳು ಕೆಲವೆಡೆ ಬಂಡೆದ್ದರೂ ಭಾರತ ತ್ಯಜಿಸುವ ಬ್ರಿಟಿಷರ ಯೋಚನೆ ಬಲವಾಯಿತು.

' ಐಕ್ಯ–ವಿಶ್ವಾಸ–ಬಲಿದಾನ '— ಆಜಾದ್ ಹಿಂದ್ ಫೌಜಿನ ಧ್ಯೇಯ ವಾಗಿದ್ದಿತು. ಸ್ವದೇಶ–ಪರದೇಶಗಳಲ್ಲಿ ಕ್ರಾಂತಿಭಾವನೆ ಎಬ್ಬಿಸಿದ ಈ ಸೇನೆ ಭಾರತದ ಇತಿಹಾಸದಲ್ಲಿ ಚಿರಸ್ಥಾನ ಗಳಿಸಿದೆ.

ನೋಡಿ : ಕ್ಯಾಪ್ಟನ್ ಲಕ್ಷ್ಮಿ ; ರಾಸ್ ಬಿಹಾರಿ ಬೋಸ್ ; ಸುಭಾಷ್ ಚಂದ್ರ ಬೋಸ್

ಆದಿಲ್‌ಷಾಹಿ

ಬಿಜಾಪುರದ ಗೋಲಗುಂಬಜನ್ನು ಕಟ್ಟಿಸಿದವನು ಆದಿಲ್‌ಷಾಹಿ ವಂಶದ ಒಬ್ಬ ರಾಜ. 1489ರಿಂದ 1686ರ ವರೆಗೆ ಬಿಜಾಪುರದಿಂದ ಆಳಿದ ಈ ವಂಶದ ಮೂಲಪುರುಷ, ಮೊದಲು ಬಹಮನಿ ಸುಲ್ತಾನರ ಮಾಂಡಲಿಕ ನಾಗಿದ್ದು ಮುಂದೆ ಸ್ವತಂತ್ರನಾದ ಯೂಸುಫ್ ಆದಿಲ್ ಷಾ.

1510ರಲ್ಲಿ ಈತನು ವಿಜಯನಗರದ ವಿರುದ್ಧ ನಡೆದ ಯುದ್ಧದಲ್ಲಿ ತೀರಿಕೊಂಡಾಗ ಇವನ ಮಗ ಇಸ್ಮಾಯಿಲ್‌ಗೆ ಪಟ್ಟವಾಯಿತು. ಈ ವಂಶದವರು ವಿಜಯನಗರ, ಅಹ್ಮದ್‌ನಗರದ ನಿಜಾಂಷಾಹಿ, ಗೋಲ್ಕೊಂಡದ ಕುತುಬ್‌ಷಾಹಿ ಹಾಗೂ ಬೀದರಿನ ಬರೀದ್‌ಷಾಹಿಗಳ ಜೊತೆ ಸದಾ ಸೆಣಸುತ್ತಲಿದ್ದರು.

1565ರಲ್ಲಿ ರಕ್ಕಸತಂಗಡಿಯ ಯುದ್ಧದಲ್ಲಿ ವಿಜಯನಗರವನ್ನು ಸೋಲಿಸುವುದರಲ್ಲಿ ಒಂದನೆಯ ಅಲಿ ಆದಿಲ್ ಷಾ ಮಹತ್ವದ ಪಾತ್ರ ವಹಿಸಿದ್ದ.

ಇವನ ಉತ್ತರಾಧಿಕಾರಿ ಎರಡನೆಯ ಇಬ್ರಾಹಿಂ (1580–1626) ಈ ವಂಶದಲ್ಲೇ ಶ್ರೇಷ್ಠ ದೊರೆ. ಈತ ಬೀದರಿನ ಬರೀದ್‌ಷಾಹಿ ರಾಜ್ಯವನ್ನು 1619ರಲ್ಲಿ ತನ್ನ ರಾಜ್ಯದಲ್ಲಿ ಸೇರಿಸಿಕೊಂಡ. ಈತನು ಹಿಂದೂಗಳ ಬಗೆಗೆ ತೋರಿದ ಸಹಿಷ್ಣುತೆಗಾಗಿ ಅವನನ್ನು 'ಜಗತ್‌ಗೀರ್' (ಜಗದ್ಗುರು) ಎಂದು ಕರೆದಿದ್ದಾರೆ. ಖ್ಯಾತ ಇತಿಹಾಸಕಾರ ಫಿರಿಷ್ತ ಮತ್ತು ಸಿರಾಜ ಇವನ ಆಶ್ರಿತರು. ಬಿಜಾಪುರದ ಖ್ಯಾತ ಸುಂದರ ಕಟ್ಟಡ 'ಇಬ್ರಾಹಿಂ ರೋಜ' ಇವನ ರಚನೆ.

ಇವನ ಉತ್ತರಾಧಿಕಾರಿ ಮಹಮ್ಮದ್ (1626–56) ಗೋಲ ಗುಂಬಜವನ್ನು ಕಟ್ಟಿಸಿದ. ಇವನ ಕಾಲದಲ್ಲೇ ಬೆಂಗಳೂರನ್ನು ಗೆದ್ದು, ಅದನ್ನು ಷಾಜಿ ಭೋಸ್ಲೆಗೆ (ಶಿವಾಜಿಯ ತಂದೆ) ಜಹಗೀರಾಗಿ ನೀಡ ಲಾಯಿತು.

1686ರಲ್ಲಿ ಔರಂಗಜೇಬನು ಬಿಜಾಪುರವನ್ನು ಗೆದ್ದು ಸಿಕಂದರ್ ಆದಿಲ್ ಷಾನನ್ನು ಬಂಧಿಸಿ ಈ ವಂಶವನ್ನು ಕೊನೆಗಾಣಿಸಿದ.

ಪಾರಸೀ ಸಾಹಿತ್ಯ ಮತ್ತು ವಾಸ್ತುಶಿಲ್ಪಗಳ ಕ್ಷೇತ್ರಕ್ಕೆ 200 ವರ್ಷ ಆಳಿದ ಆದಿಲ್‌ಷಾಹಿಗಳ ಕೊಡುಗೆ ಹಿರಿದು. ಇವರ ಕಾಲದ ಅನೇಕ ಸುಂದರ ಕಟ್ಟಡಗಳು ಬಿಜಾಪುರದಲ್ಲಿ ಇಂದಿಗೂ ಇವೆ.

ಆದಿವಾಸಿಗಳು

ಆದಿವಾಸಿಗಳು ಎಂದರೆ, 'ಮೊದಲು ವಾಸಿಸುತ್ತಿದ್ದವರು' ಎಂದರ್ಥ. ಈ ಜನರ ವಂಶದವರನ್ನು ಈಗ ಇದೇ ಹೆಸರಿನಿಂದ ಕರೆಯುವುದು ವಾಡಿಕೆ.



ತೋಡ ಮಹಿಳೆ : ಸ್ಫುರದ್ರೂಪಿ ಜನಾಂಗ

ಆರ್ಯರು ಭಾರತಕ್ಕೆ ಬಂದು ಆದಿವಾಸಿಗಳ ನೆಲೆಗಳನ್ನು ಆಕ್ರಮಿಸಿಕೊಂಡ ಮೇಲೆ ಆ ಜನ ತಮ್ಮ ಮೂಲಸ್ಥಾನಗಳಿಂದ ದೂರ ಸರಿಯಬೇಕಾಯಿತು. ಹೀಗೆ ಆಕ್ರಮಿತ ಪ್ರದೇಶದ ಗಡಿಗಳನ್ನು ಸೇರಿದವರ ಮತ್ತು ಆಕ್ರಮಣಕಾರರ ನಡುವೆ ದೀರ್ಘಕಾಲ ಹೋರಾಟ ನಡೆಯುತ್ತಲೇ ಇತ್ತು. ಕಾಲಕ್ರಮದಲ್ಲಿ ಆದಿವಾಸಿಗಳಲ್ಲಿ ಕೆಲವರು ಆಕ್ರಮಣಕಾರರೊಡನೆ ಬೆರೆತುಹೋದರು. ಕೆಲವರು ಕಾಡು, ಬೆಟ್ಟಗಳಿಗೆ ಓಡಿಹೋಗಿ ಅಲ್ಲೇ ನೆಲೆಸಿದರು. ತಮ್ಮ ಸಾಮಾಜಿಕ ಪದ್ಧತಿ, ಆಚಾರ, ಜೀವನ ವಿಧಾನಗಳನ್ನು ಮೊದಲಿನಂತೆಯೇ ಉಳಿಸಿಕೊಂಡರು. ಈ ಪರಂಪರೆಯ ಜನ ಇನ್ನೂ ನಮ್ಮ ದೇಶದಲ್ಲಿ ಮೂರು ಕೋಟಿಗಿಂತ ಹೆಚ್ಚಾಗಿದ್ದಾರೆ.

ತೋಡರು, ಗೋಂಡರು, ಭಿಲ್ಲರು, ನಾಗಾ ಜನ, ಕೋತರು, ಅಪತನಿಗಳು ಮುಂತಾದ ಅನೇಕ ಆದಿವಾಸಿಗಳು ಭಾರತದಲ್ಲಿದ್ದಾರೆ. ಸೋಲಿಗರು, ಕಾಡುಕುರುಬರು, ಕಾಡುಗೊಲ್ಲರು, ಕೊಡಗಿನ ಎರವರು, ದಕ್ಷಿಣ ಕನ್ನಡ ಜಿಲ್ಲೆಯ ಕೊರಗರು, ಕುಡಿಯರು, ಬಳ್ಳಾರಿಯ ತೋಡರು, ಪನಿಯರು ಕರ್ನಾಟಕದ ಆದಿವಾಸಿಗಳು.



ಸ್ವಿಲಿ ಕಣಿವೆಯ ಮಹಿಳೆ

ಆದಿವಾಸಿಗಳ ವಸತಿ, ಭಾಷೆ, ಉಡುಗೆ-ತೊಡುಗೆ, ವಿವಾಹ ಪದ್ಧತಿ, ಅಂತ್ಯಕ್ರಿಯೆ ಮುಂತಾದುವು ವಿಶಿಷ್ಟವಾದುವು. ಒಂದೊಂದು ವರ್ಗದ ಬಗೆಗೂ ಸ್ವಾರಸ್ಯವಾದ ಕಥೆಗಳಿವೆ.

ಉದಾಹರಣೆಗೆ ಸೋಲಿಗರ ವಿಷಯವಾಗಿ ಇರುವ ಒಂದು ಕಥೆ ಇದು : ಸೋಲಿಗರ ಯಜಮಾನನಿಗೆ ಏಳು ಜನ ಹೆಣ್ಣುಮಕ್ಕಳು. ಇವರಲ್ಲಿ ಕೊನೆಯವಳ ಹೆಸರು ಕುಸುಮಾಲೆ. ಆಕೆ ರೂಪವತಿ. ತನ್ನನ್ನು ವರಿಸುವಂತೆ ಬಿಳಿಗಿರಿರಂಗನನ್ನು ಬೇಡಿಕೊಂಡಳು. ರಂಗ ಅವಳನ್ನು ವರಿಸಿದ. ಬಿಳಿಗಿರಿರಂಗನನ್ನು ಇವರು ಭಾವ, ಭಾವಾಜಿ ಎಂದೇ ಕರೆಯುತ್ತಾರೆ !

ಆದಿವಾಸಿಗಳ ನಡವಳಿಕೆಗಳೂ ವಿಶಿಷ್ಟವಾದುವು ; ಹೈನುಗಾರಿಕೆಯೇ ಪ್ರಧಾನ ವೃತ್ತಿಯಾದ ನೀಲಗಿರಿಯ ತೋಡರಲ್ಲಿ ಹೆಣ್ಣುಮಕ್ಕಳು

ಏಳೆಯ ಆದಿವಾಸಿ ಮತ್ತು ತಾ



ಉತ್ತರ ಪ್ರದೇಶದ ಭೋರಿಯಾ ಯುವತಿಯರು







ಸಂತೆ



[illegible] ಕೊಡುವುದಾಗಿ [illegible] ಹೋಗಿ [illegible] ಮಾಡಿಕೊಳ್ಳುತ್ತಾರೆ. ಇವರಲ್ಲಿ ಬಹು ಪತಿತ್ವವೂ ಆಚರಣೆಯಲ್ಲಿದೆ.

ಭಾರತದ ಪೂರ್ವ ವಿಭಾಗದಲ್ಲಿರುವ ಸಂತಾಲರಲ್ಲಿ ಮದುವೆ [illegible] ವಾದ ಮೇಲೆ ಮದುಮಗಳು ನೀರು ತರಲು ಹೋಗುತ್ತಾಳೆ. ಹುಡುಗನ ಕಡೆಯವರು ಅವಳನ್ನು [illegible] ಅಪಹರಿಸುತ್ತಾರೆ. ಮುಂದೆ ಎರಡೂ ಪಂಗಡದವರ ನಡುವೆ ಹೋರಾಟ [illegible] ಆಗುತ್ತದೆ. ಹೆಣ್ಣಿನ ಕಡೆಯವರು ಸೋತಂತೆ ನಟಿಸಿ ಮದುವೆಗೆ ಒಪ್ಪಿಕೊಳ್ಳುತ್ತಾರೆ.

ಅಪತಾನಿಗಳು ಅರುಣಾಚಲ ಪ್ರದೇಶ ನಿವಾಸಿಗಳು. ಸಾಮಾನ್ಯವಾಗಿ ಆದಿವಾಸಿಗಳಲ್ಲಿ ಕಾಣಬರದ ಗ್ರಾಮವ್ಯವಸ್ಥೆ ಇವರಲ್ಲಿ ಸ್ವಲ್ಪಮಟ್ಟಿಗೆ ತೋರಿಬರುತ್ತವೆ. ಸಾಧಾರಣವಾಗಿ ಕಣಿವೆಗಳಲ್ಲಿ ಇವರ ವಾಸ.

ಕಾಡರ ವಾಸ ಪಶ್ಚಿಮಘಟ್ಟ ಮತ್ತು ಅಣ್ಣಾಮಲೈ ಬೆಟ್ಟಗಳಲ್ಲಿ. ದಕ್ಷಿಣ ಭಾರತದ ಅತ್ಯಂತ ಪ್ರಾಚೀನ ಆದಿವಾಸಿಗಳಲ್ಲಿ ಇವರದು ಒಂದು ಬುಡಕಟ್ಟು. ಶಿಲಾಯುಗದ ಸಂಸ್ಕೃತಿ ಇವರಲ್ಲಿ ಕಂಡುಬರುತ್ತದೆ.



ಉತ್ತರ ಪ್ರದೇಶದ ಯೂಡೂ ಮಹಿಳೆಯರು

ಇವರು ವ್ಯವಸಾಯ ಮಾಡುವುದಿಲ್ಲ. ಅಲೆದಾಡಿ ಆಹಾರ ಸಂಗ್ರಹಿಸುತ್ತಾರೆ. ಕಬ್ಬಿಣದ ತುದಿಯುಳ್ಳ ಅಗೆಯುವ ಕೋಲು, ಕವಣೆ, ಬೆಂಕಿ ಹೊತ್ತಿಸುವ ಸಾಧನ, ಬುಟ್ಟಿ ಮುಂತಾದುವನ್ನು ಅವರು ತಮ್ಮೊಡನೆ ಕೊಂಡೊಯ್ಯುತ್ತಾರೆ. ಸಾಮಾಜಿಕ ವ್ಯವಸ್ಥೆಗಳು ಅವರಿಗೆ ತಿಳಿದಿಲ್ಲವೆಂದೇ ಹೇಳಬಹುದು. ಈಗ ಕಾಡರರು ಅರಣ್ಯ ಇಲಾಖೆಯಲ್ಲಿ ಕೆಲಸಕ್ಕೆ ಸೇರತೊಡಗಿದ್ದಾರೆ.

ಗೊಂಡರು ಹೆಚ್ಚಾಗಿ ಮಧ್ಯಪ್ರದೇಶದಲ್ಲಿ ವಾಸಿಸುತ್ತಾರೆ. ಇವರ ರಾಜವಂಶವೂ ಇತ್ತು. ಇವರಲ್ಲಿ ಕೃಷಿ ರೂಢಿಯಲ್ಲಿದೆ. ನಾಗಪೂಜೆ, ಸೂರ್ಯಪೂಜೆಗಳಿವೆ. ಕೆಲವು ಕಸುಬುಗಳನ್ನೂ ಕಲಿತಿದ್ದಾರೆ.

ತೋಡರು ನೀಲಗಿರಿಯ ಜನಾಂಗ. ಇವರು ಸ್ಫುರದ್ರೂಪಿಗಳು. ಇವರಲ್ಲಿ ಎಮ್ಮೆಗೆ ಬಹು ಗೌರವದ ಸ್ಥಾನ. ಅದು ಪವಿತ್ರ ಪ್ರಾಣಿ ಎಂಬ ನಂಬಿಕೆ.

[illegible] ಮಧ್ಯಪ್ರದೇಶದಲ್ಲಿದ್ದಾರೆ. [illegible] ಶಿಸ್ತಿನಿಂದ ಪಾಲಿಸುತ್ತಾರೆ.

ನಾಗಾ [illegible] ಪ್ರದೇಶವನ್ನೊಳಗೊಂಡ ಈ ಹೆಸರಿನ [illegible] ರಾಜ್ಯವನ್ನು ರೂಪಿಸಲಾಗಿದೆ. ವಿದೇಶೀಯ ಹಾಗೂ ಭಾರತೀಯ ಸಂಪರ್ಕದಿಂದ ಇವರ ಹಿಂದಿನ [illegible] ಈಗ [illegible] ಮತಾಂತರ ಹೊಂದಿದ ಕ್ರೈಸ್ತರಾಗಿದ್ದಾರೆ.

ಕೊಂಡದೊರರು ಆಂಧ್ರದ ಕೆಲವು ಭಾಗಗಳಲ್ಲಿ ಹಾಗೂ ಒರಿಸ್ಸಾದಲ್ಲಿ ಕಾಣಬರುತ್ತಾರೆ. ಭೂಮಿ ಇವರ [illegible] ಒಂದೇ ಪರಿವರ್ತನ [illegible] ಅನುಸರಿಸುತ್ತಿದ್ದರು. [illegible] ಗಳಿವೆ. [illegible] ತಮ್ಮತಮ್ಮಲ್ಲಿ [illegible] ಕೊಂಡು ಓಡಿಹೋಗುತ್ತಾರೆ. ಅನಂತರ [illegible] ಸಮ್ಮತಿಸಿ, ವಿವಾಹ ನಡೆಯುತ್ತದೆ.

ಕೊಂಡರು ಬಿಹಾರ್, ಒರಿಸ್ಸಾ ರಾಜ್ಯಗಳಲ್ಲಿದ್ದಾರೆ. ಬಹಳ ಕಾಲದ ವರೆಗೆ ನರಬಲಿ ಇವರಲ್ಲಿ ಸಾಮಾನ್ಯ ಪದ್ಧತಿಯಾಗಿತ್ತು. ಈಗ ಇದು ನಿಂತಿದೆ.

ಚೆಂಚು : ಅತಿ ಪ್ರಾಚೀನ ಭಾರತೀಯ ಆದಿವಾಸಿಗಳ ಒಂದು ಗುಂಪು. ಆಂಧ್ರದ ಪೂರ್ವಘಟ್ಟದಲ್ಲಿ ಇವರ ವಾಸ.

ಒರಾಯನರು ಬಿಹಾರ, ಬಂಗಾಳ, ಒಡಿಸ್ಸಾಗಳಲ್ಲಿ ಇರುವ ಆದಿವಾಸಿಗಳು. ಯುವಕ, ಯುವತಿಯರಿಗಾಗಿ ಪ್ರತ್ಯೇಕ ವಿಶ್ರಾಂತಿ ಗೃಹಗಳು ಇವರಲ್ಲಿವೆ.

ಹೀಗೆಯೇ ಸವೋರರು, ನೀಲಗಿರಿಯ ಬಡಗರು ಮತ್ತು ಕೊತರು, ಅತಿ ಪ್ರಾಚೀನ ಆದಿವಾಸಿ ಗುಂಪಿನಲ್ಲಿ ಒಂದಾದ ಕೋಲರು ಮುಂತಾದ ಅನೇಕ ಬುಡಕಟ್ಟಿನ ಆದಿವಾಸಿಗಳು ಭಾರತದಲ್ಲಿದ್ದಾರೆ.

ಭಾರತದಲ್ಲಿ ಒಟ್ಟು ಸುಮಾರು 500 ಆದಿವಾಸಿ ಪಂಗಡಗಳಿವೆ.

ಬ್ರಿಟಿಷರು ಆಳುತ್ತಿದ್ದಾಗ ಆದಿವಾಸಿಗಳ ಹಿತಸಾಧನೆಯ ಬಗೆಗೆ ಅಷ್ಟಾಗಿ ಅವರು ದೃಷ್ಟಿ ಹರಿಸಿರಲಿಲ್ಲ. ಸ್ವಾತಂತ್ರ್ಯ ಬಂದ ಮೇಲೆ ಆದಿವಾಸಿಗಳ ಜೀವನ ಸೌಕರ್ಯಗಳನ್ನು ಉತ್ತಮಗೊಳಿಸುವ, ಅವರ ಆರ್ಥಿಕಾಭಿವೃದ್ಧಿಗೆ ನೆರವಾಗುವ ಕಾರ್ಯಕ್ರಮಗಳನ್ನು ಎಲ್ಲ ರಾಜ್ಯ ಸರಕಾರಗಳೂ ಕೈಗೊಂಡಿವೆ.

ಈ ವರ್ಗಗಳಲ್ಲಿ ವಿದ್ಯಾಭ್ಯಾಸವೂ ಹರಡುತ್ತಿದೆ. ಇತರ ಪ್ರಜಾ ವರ್ಗದವರೊಡನೆ ಇವರ ಸಂಪರ್ಕವೂ ಬೆಳೆಯುತ್ತಿದೆ.

ನೋಡಿ : ಆದಿವಾಸಿ-ಸಂಪುಟ ೧

ಆನಂದ ಕುಮಾರಸ್ವಾಮಿ

[illegible] ವಿಜ್ಞಾನ [illegible] ಸಂಶೋಧನಾ [illegible] ಡಾಕ್ಟರೇಟ್ ಪಡೆದ ವ್ಯಕ್ತಿ. ಆತ ತನ್ನ ಉದ್ಯೋಗದ ಸಲುವಾಗಿ ಕಾಡುಮೇಡುಗಳಲ್ಲಿ ತಿರುಗುತ್ತಿದ್ದಾಗ ಅಲ್ಲಿನ [illegible] ಸೌಂದರ್ಯಕ್ಕೆ ಮರುಳಾದ. ಭಾರತೀಯ ಕಲಾಪ್ರಪಂಚದ ಅಧ್ಯಯನ [illegible]. ಮುಂದೆ ವಿಖ್ಯಾತ ಕಲಾ[illegible] ಸ್ವಾಮಿ ವಿವೇಕಾನಂದ[illegible] ಪಶ್ಚಿಮಕ್ಕೆ ಭಾರತದ ಆಧ್ಯಾತ್ಮಿಕ [illegible] ಕಲಾ ರಾಯಭಾರಿಯಾದ. ಈ ವ್ಯಕ್ತಿಯೇ ಡಾ. ಆನಂದ ಕೆ. ಕುಮಾರಸ್ವಾಮಿ.

[illegible] ಕುಮಾರಸ್ವಾಮಿ ಹಾಗೂ ಆಂಗ್ಲ ಮಹಿಳೆ ಎಲಿಜಬೆತ್ ಇವರ ಮಗನಾಗಿ



ಭಾರತೀಯ ಕಲೆಗೆ ವ್ಯಾಖ್ಯೆ :
ಆನಂದ ಕುಮಾರಸ್ವಾಮಿ

ಆನಂದ ಕೆಂಟಿಷ್ ಕುಮಾರಸ್ವಾಮಿ 1877ರ ಆಗಸ್ಟ್ 22ರಂದು ಸಿಂಹಳ ದಲ್ಲಿ ಜನಿಸಿದರು.

ಇಂಗ್ಲೆಂಡಿನಲ್ಲಿ ವಿದ್ಯಾಭ್ಯಾಸ ನಡೆಯಿತು. ಮುಂದೆ ಕುಮಾರಸ್ವಾಮಿ ಖನಿಜ ಸಂಶೋಧನಾ ಇಲಾಖೆಯ ಡೈರೆಕ್ಟರಾದರು. ಅನಂತರದ ಒಂದೆರಡು ವರ್ಷಗಳಲ್ಲಿ ಲಂಡನ್ ವಿಶ್ವವಿದ್ಯಾನಿಲಯದ ಡಾಕ್ಟರೇಟ್ ಪಡೆದರು.

ಖನಿಜ ಸಂಶೋಧನೆಗೆಂದು ಸುತ್ತಾಡುತ್ತಿದ್ದ ಕುಮಾರಸ್ವಾಮಿಗೆ ಸಿಂಹಳದ ಶಿಲ್ಪ–ಚಿತ್ರಗಳ ಪರಂಪರೆಯ ಪರಿಚಯವಾಯಿತು. ಮುಂದೆ ಈ ಆಸಕ್ತಿ ಭಾರತೀಯ ಕಲಾಪರಂಪರೆಯ ಕಡೆಗೆ ತಿರುಗಿತು. 1908ರ ವೇಳೆಗೆ ಇವರ 'ಭಾರತೀಯ ಕಲೆಯ ಉದ್ದೇಶ' ಎಂಬ ಕೃತಿ ಪ್ರಕಟವಾಯಿತು.

ಈ ಹೊತ್ತಿಗೆ ಇವರು ಭಾರತೀಯ ಕಲೆಯ ಬಗೆಗೆ ಅಧಿಕಾರಯುತವಾಗಿ ಮಾತನಾಡಲು ಶಕ್ತರಾಗಿದ್ದರು. 1908ರಲ್ಲಿ ಕೋಪನ್‌ಹೇಗನ್‌ನಲ್ಲಿ ನಡೆದ 'ಕಾಂಗ್ರೆಸ್ ಆಫ್ ದಿ ಓರಿಯಂಟಲಿಸ್ಟ್ಸ್' ಅಧಿವೇಶನದಲ್ಲಿ ಭಾಗವಹಿಸಿದರು.

"ಭಾರತೀಯ ಕಲೆಯ ಮೇಲೆ ಗ್ರೀಕರ ಪ್ರಭಾವ ಇದ್ದರೂ ಅದು ಬಹಳ ಗೌಣ: ಅದಕ್ಕೆ ಐತಿಹಾಸಿಕ ಪ್ರಾಮುಖ್ಯವಿದೆಯೇ ಹೊರತು ಕಲಾ ಪ್ರಾಮುಖ್ಯವಲ್ಲ" ಎಂಬುದು ಅವರ ಅಭಿಪ್ರಾಯ.

1927ರಲ್ಲಿ ಪ್ರಕಟವಾದ ಇವರ 'ಭಾರತೀಯ ಮತ್ತು ಇಂಡೋನೇಷ್ಯ ಕಲೆಯ ಇತಿಹಾಸ' ಒಂದು ಪ್ರಮಾಣ ಗ್ರಂಥ. 'ಹಿಂದೂಧರ್ಮ ಮತ್ತು ಬೌದ್ಧ ಧರ್ಮ', 'ಶಿವನರ್ತನ' —ಇವು ಇವರ ಇತರ ಪ್ರಮುಖ ಗ್ರಂಥಗಳು. ಅಸಂಖ್ಯ ಲೇಖನಗಳನ್ನು ಬರೆದು ಭಾರತೀಯ ಸಂಸ್ಕೃತಿ ಕಲೆಗಳ ಮಹತ್ವವನ್ನು ವಿಶ್ವಕ್ಕೆ ಪರಿಚಯ ಮಾಡಿಸಿಕೊಟ್ಟರು. "ರಾಷ್ಟ್ರವನ್ನು ಸೃಷ್ಟಿಸುವವರು ಕಲಾವಿದರು ಹಾಗೂ ಕವಿಗಳು ; ರಾಜಕಾರಣಿ, ವ್ಯಾಪಾರಿಗಳಲ್ಲ. ಕಲೆಯಲ್ಲಿ ಜೀವನದ ಆಳವಾದ ತತ್ತ್ವಗಳು ಅಡಗಿವೆ" ಎಂಬುದು ಇವರ ನಿಲುವಾಗಿತ್ತು. ಎಂದೇ ವಿಶ್ವಕ್ಕೆ ಭಾರತ ತನ್ನ ಕಲೆಯ ಮೂಲಕ ಸಾರಿದ ಸಂದೇಶಕ್ಕೆ ಇವರು ವ್ಯಾಖ್ಯೆ ನೀಡಿದರು.

1947ರಲ್ಲಿ ಆನಂದ ಕುಮಾರಸ್ವಾಮಿ ನಿಧನರಾದರು.

ಆನಂದತೀರ್ಥ

ನೋಡಿ : ಮಧ್ವಾಚಾರ್ಯ—ಸಂಪುಟ ೧

ಆನಂದವರ್ಧನ

ನೋಡಿ : ಸಂಪುಟ ೨.

ಆನಿ ಬೆಸೆಂಟ್

ಆಕೆ ಹುಟ್ಟಿನಿಂದ ಭಾರತೀಯಳಲ್ಲ. ಆದರೆ ಭಾರತವನ್ನು ತನ್ನ ನಾಡಾಗಿ ಸ್ವೀಕರಿಸಿದಳು. ಭಾರತೀಯ ಮಹಿಳೆಯಂತೆ ಸೀರೆ ಉಟ್ಟಳು. ಅವರ ಜೀವನ ರೀತಿಯನ್ನೇ ಅನುಸರಿಸಿದಳು. ತಮ್ಮ ಪೂರ್ವಿಕರ ಹಿರಿಮೆಯನ್ನು ಮರೆತಿದ್ದ ಭಾರತೀಯ ಜನತೆಗೆ ಅದರಲ್ಲಿ ಆಸಕ್ತಿ ಮೂಡುವಂತೆ ಮಾಡಿದಳು. ಭಾರತದ ಜನತೆಯ ಮುಂದೆ ಹೊಸ ಆಶೋತ್ತರಗಳನ್ನು ಇರಿಸಿದಳು. ಅವರ ಸ್ವಾತಂತ್ರ್ಯ ಸಾಧನೆಗಾಗಿ ದುಡಿದಳು. ಹೀಗೆ ಭಾರತಕ್ಕೆ ಬಹುಮುಖ ಸೇವೆ ಸಲ್ಲಿಸಿದ ಮಹಾವ್ಯಕ್ತಿ ಆನಿ ಬೆಸೆಂಟ್.



ಭಾರತ ಸೇವೆ : ಆನಿ ಬೆಸೆಂಟ್

1847 ಅಕ್ಟೋಬರ್ 1ರಂದು ಲಂಡನಿನಲ್ಲಿ ಆನಿ ಬೆಸೆಂಟ್ ಜನನ. ತಂದೆ ವಿಲಿಯಂ ವುಡ್. ಕ್ರೈಸ್ತ ಪಾದ್ರಿ ಫ್ರಾಂಕ್ ಬೆಸೆಂಟ್‌ರೊಡನೆ ಆದ ಆಕೆಯ ವಿವಾಹ ಕೆಲವು ವರ್ಷಗಳ ಅನಂತರ ವಿಚ್ಛೇದನದಲ್ಲಿ ಕೊನೆಗಂಡಿತು.

ಬೆಸೆಂಟ್ 1893ರಲ್ಲಿ ಭಾರತಕ್ಕೆ ಬರುವುದಕ್ಕೆ ಮೊದಲು ಇಂಗ್ಲೆಂಡಿನಲ್ಲಿ ಸಮಾಜ ಸುಧಾರಕರೆಂದು, ವಾಗ್ಮಿಯೆಂದು, ಲೇಖಕಿಯೆಂದು ಪ್ರಖ್ಯಾತರಾಗಿದ್ದರು. ನಿರೀಶ್ವರವಾದಿಯಾಗಿದ್ದ ಆನಿ ಬೆಸೆಂಟರ ಮನಸ್ಸು ಧರ್ಮ ಜಿಜ್ಞಾಸೆಯ ಕಡೆಗೆ ತಿರುಗಿದ್ದು ಥಿಯಸಾಫಿಕಲ್ ಸೊಸೈಟಿಯ ಸ್ಥಾಪಕಿ ಮೇಡಂ ಬ್ಲಾವಟ್‌ಸ್ಕಿಯ ಪ್ರಭಾವಕ್ಕೆ ಒಳಗಾದ ಮೇಲೆ. ಪುನರ್ಜನ್ಮದಲ್ಲಿ ನಂಬಿಕೆಯನ್ನು ಬೆಳೆಸಿಕೊಂಡ ಅವರು ತಾವು ಪೂರ್ವಜನ್ಮದಲ್ಲಿ ಭಾರತದಲ್ಲಿ ಜನಿಸಿದ್ದುದಾಗಿ ಭಾವಿಸಿದರು. ಭಾರತಕ್ಕೆ ಬಂದು ಥಿಯಸಾಫಿಕಲ್ ಸೊಸೈಟಿಯ ಚಟುವಟಿಕೆಗಳನ್ನು ಅವರು ವಿಸ್ತರಿಸಿದರು. ಹಿಂದೂ ಧರ್ಮ, ಸಂಸ್ಕೃತಿಗಳ ಪುನರುಜ್ಜೀವನಕ್ಕಾಗಿ ವಿಶೇಷವಾಗಿ ಶ್ರಮಿಸಿದರು. ಇದಕ್ಕಾಗಿ ವಿದ್ಯಾಸಂಸ್ಥೆಗಳನ್ನು ಆರಂಭಿಸಿದರು. ಯುವಜನ ಸಂಘಗಳನ್ನು ಸ್ಥಾಪಿಸಿದರು. ಮದನಪಲ್ಲಿಯಲ್ಲಿ ಕಾಲೇಜು. ಕಾಶಿಯಲ್ಲಿ ಸೆಂಟ್ರಲ್ ಹಿಂದೂ ಕಾಲೇಜು ಮತ್ತು ಹೆಣ್ಣುಮಕ್ಕಳ ಶಾಲೆ ಅವರ ಪ್ರಯತ್ನದ ಫಲಗಳು.

ಭಾರತ ಸ್ವತಂತ್ರವಾಗುವುದು ಅವಶ್ಯವೆಂದು ಭಾವಿಸಿ ಆಕೆ ರಾಜಕೀಯ ರಂಗವನ್ನೂ ಪ್ರವೇಶಿಸಿದರು. 1916ರಲ್ಲಿ ಹೋಂ ರೂಲ್ ಲೀಗ್ ಸ್ಥಾಪಿಸಿದರು. 'ನ್ಯೂ ಇಂಡಿಯಾ' ಎಂಬ ಪತ್ರಿಕೆ ಆರಂಭಿಸಿ, ಚಳುವಳಿಯನ್ನು ಪೋಷಿಸಿದರು. ಮೊದಲನೆಯ ಮಹಾಯುದ್ಧ ಸಮಯದಲ್ಲೂ ಈ ಚಳುವಳಿ ನಿಲ್ಲಿಸದಿದ್ದುದಕ್ಕಾಗಿ 1917ರಲ್ಲಿ ಸೆರೆಮನೆ ಸೇರಬೇಕಾಯಿತು.

1917ರಲ್ಲಿ ಕಲ್ಕತ್ತೆಯಲ್ಲಿ ನಡೆದ ಭಾರತ ರಾಷ್ಟ್ರೀಯ ಕಾಂಗ್ರೆಸ್ಸಿನ ಅಧ್ಯಕ್ಷೆಯಾಗಿ ಆನಿ ಬೆಸೆಂಟ್ ಆಯ್ಕೆಯಾದರು.

ಸತ್ಯಾಗ್ರಹ ಹಾಗೂ ಅಸಹಕಾರ ಆಂದೋಲನ ಬೆಸೆಂಟರಿಗೆ ಒಪ್ಪಿತವಾಗಲಿಲ್ಲ. ಆದ್ದರಿಂದ ಆಕೆ ಗಾಂಧೀಜಿಯ ಸ್ವಾತಂತ್ರ್ಯ ಚಳುವಳಿಯಿಂದ ದೂರ ಸರಿದರು.

ಆನಿ ಬೆಸೆಂಟ್ ತಮ್ಮ ಕಾಲದ ಅತ್ಯಂತ ಶ್ರೇಷ್ಠ ವಾಗ್ಮಿ. ಧ್ವನಿ ಮಧುರ; ವಾಗ್ವೈಖರಿ ಸುಂದರ, ಸರಳ, ಅತ್ಯಂತ ಪರಿಣಾಮಕಾರಿ. ಅವರ ಭಾಷಣಗಳನ್ನು ಕೇಳಲು ಜನ ಕಿಕ್ಕಿರಿದು ಸೇರುತ್ತಿದ್ದರು. ಧರ್ಮ, ಇತಿಹಾಸ ಮುಂತಾದ ವಿಷಯಗಳನ್ನು ಕುರಿತು ಅವರು ಅನೇಕ ಗ್ರಂಥಗಳನ್ನು ಬರೆದಿದ್ದಾರೆ.

ಬೆಸೆಂಟ್ 1933 ಸೆಪ್ಟೆಂಬರ್ 20ರಂದು ಮದರಾಸಿನ ಸಮೀಪದಲ್ಲಿರುವ ಅಡ್ಯಾರ್‌ನಲ್ಲಿ ನಿಧನರಾದರು.

ಗಾಂಧೀಜೀ ಹೇಳಿದಂತೆ "ಭಾರತ ಇರುವ ವರೆಗೂ ಅವರು ಸಲ್ಲಿಸಿದ ಮಹತ್ತರ ಸೇವೆಯ ನೆನಪು ಉಳಿಯುತ್ತದೆ. ಭಾರತವನ್ನು ತಮ್ಮ ನಾಡಾಗಿ ಸ್ವೀಕರಿಸಿ, ತಮ್ಮದೆಲ್ಲವನ್ನೂ ಅದಕ್ಕೆ ಅರ್ಪಿಸಿದ ಅವರು ಭಾರತಕ್ಕೆ ಪ್ರಿಯರಾಗಿದ್ದಾರೆ."

ನೋಡಿ : [illegible]

[illegible]

[illegible] ಸೌಂದರ್ಯಪ್ರೇಮಿಗಳಿಗೆ ಕೂಡ ಇದು ಅತ್ಯಂತ ಆಕರ್ಷಕ ತಾಣ.

ಪುರಾಣಗಳಲ್ಲಿ ಇದನ್ನು ಅರ್ಬುದ, ಅರ್ಬುದಾಚಲ ಎಂದು ಕರೆದಿದ್ದಾರೆ. ರಮಣೀಯ ವನಗಳು, ಸರೋವರಗಳು, ಮನಮೋಹಕ ಶಿಲ್ಪದಿಂದ ಕೂಡಿದ ದೇವಾಲಯಗಳು ಈ ಪ್ರದೇಶದಲ್ಲಿವೆ. ಅಬೂ ಪ್ರಸಿದ್ಧ ಗಿರಿಧಾಮ ಕೂಡ.

ರಾಜಸ್ಥಾನದ ಅಗ್ನಿಕುಲ ರಾಜಪುತ್ರರ ಮೂಲ ಪುರುಷರು ಆರ್ಯ ಧರ್ಮದ ರಕ್ಷಣೆಗಾಗಿ ಇಲ್ಲಿದ್ದ ಒಂದು ಅಗ್ನಿಕುಂಡದಿಂದ ಉದಿಸಿದರು ಎಂಬ ಪುರಾಣ ಕಥೆಯಿದೆ. ಇದರಿಂದಾಗಿ ರಾಜಪುತ್ರ ಪಂಗಡದವರಿಗೆ ಈ ಪರ್ವತದ ಬಗೆಗೆ ಬಹಳ ಗೌರವ. ಇಲ್ಲಿ ವಸಿಷ್ಠಮುನಿಯ ಆಶ್ರಮವಿದ್ದಿತೆಂಬುದು ಇನ್ನೊಂದು ಪುರಾಣ ಕಥೆ. ಹನ್ನೊಂದನೆಯ ಶತಮಾನದಲ್ಲಿ ಜೈನ ದೇವಾಲಯಗಳ ರಚನೆಗೆ ಮೊದಲು ಇಲ್ಲಿ ವಿಷ್ಣು



[illegible]



[illegible]

ಮತ್ತು ಶಿವನ ಆರಾಧನೆ ನಡೆಯುತ್ತಿತ್ತೆಂದು ತೋರುತ್ತದೆ. ಜೈನ ಧರ್ಮದ ಕೊನೆಯ ತೀರ್ಥಂಕರನೂ ಗೌತಮ ಬುದ್ಧನ ಸಮಕಾಲೀನನೂ ಆದ ಮಹಾವೀರ ತನ್ನ ಸಂಚಾರಕಾಲದಲ್ಲಿ ಈ ಕ್ಷೇತ್ರಕ್ಕೆ ಬಂದಿದ್ದನೆಂದು ಪ್ರತೀತಿ. ಇತಿಹಾಸ ಕಾಲದಲ್ಲಿ ಇಲ್ಲಿ ಮೊದಲ ಜೈನ ದೇವಾಲಯವನ್ನು ನಿರ್ಮಿಸಿದವನು 11ನೆಯ ಶತಮಾನದ ವಿಮಲ ಷಹ. ಇವನು ಗುಜರಾತಿನಲ್ಲಿ ಆಳಿದ ಚಾಲುಕ್ಯವಂಶದ ಮೊದಲನೆಯ ಭೀಮನ ದಂಡನಾಯಕನಾಗಿದ್ದ.

ವಿಮಲ ಷಹ ಕಟ್ಟಿಸಿದ ತೀರ್ಥಂಕರ ಆದಿನಾಥ(ವೃಷಭದೇವ)ನ ಆಲಯಕ್ಕೆ 'ವಿಮಲ ವಸಹಿ' ಎಂದು ಹೆಸರು. ಈ ಜಿನಾಲಯದ ಕೆತ್ತನೆಯ ಕೆಲಸ ಈ ವರ್ಗದ ಕೃತಿಗಳಲ್ಲಿ ಅತ್ಯಂತ ಮೋಹಕವಾದದ್ದು. "ಇದು ಜಿನಾಲಯಗಳ ಪರಿಪೂರ್ಣಮಾದರಿ" ಎಂದು ಸುಪ್ರಸಿದ್ಧ ವಾಸ್ತುಕಲಾ ವಿಮರ್ಶಕ ಫರ್ಗುಸನ್ ಅಭಿಪ್ರಾಯ ಪಟ್ಟಿದ್ದಾರೆ. ಇತರ ಆಲಯಗಳಲ್ಲೂ ಉತ್ತಮ ಹಾಗೂ ವೈವಿಧ್ಯಮಯ ಶಿಲ್ಪಕೃತಿಗಳನ್ನು ಕಾಣಬಹುದು. ಇವುಗಳಲ್ಲೊಂದಾದ ಪಿತ್ತಲ್‌ಹರ ಆಲಯದಲ್ಲಿರುವ 108 ಮಣ (40,000 ಗ್ರಾಂ) ತೂಕದ ಬೃಹತ್ ಜಿನ ವಿಗ್ರಹ ಪ್ರೇಕ್ಷಣೀಯವಾದದ್ದು.

ಸೂರ್ಯಾಸ್ತದ ಭವ್ಯ ದೃಶ್ಯ ಇಲ್ಲಿ ಕಾಣಸಿಗುತ್ತದೆ. ಅಬೂದಲ್ಲಿರುವ ನಖಿ ಸರೋವರವೂ ಅದರ ಪರಿಸರವೂ ಆಹ್ಲಾದಕರವಾಗಿವೆ.

ನೋಡಿ : ರಾಜಸ್ಥಾನ

ಆಭೀರರು

ಆಭೀರರು ಪ್ರಾಚೀನ ಭಾರತದಲ್ಲಿ ಬಂದು ನೆಲೆಸಿದ ಅನಾರ್ಯ ಪಂಗಡದವರು. ಇವರ ಮೂಲದ ಬಗೆಗೆ ನಾನಾ ಊಹೆಗಳಿವೆ.

ವಾಯವ್ಯದಿಂದ ಬಂದ ಇವರನ್ನು ದಸ್ಯುಗಳು, ಮ್ಲೇಚ್ಛರು ಎಂದು 'ಮಹಾಭಾರತ'ದಲ್ಲಿ ಉಲ್ಲೇಖಿಸಲಾಗಿದೆ. ಕೃಷ್ಣನಿಗೆ ಸಂಬಂಧಿಸಿದ

ಪೌರಾಣಿಕ ಕಥೆಗಳಲ್ಲಿ ಇವರ ಪ್ರಸ್ತಾಪವಿದೆ. ಈ ಕಥೆಗಳಲ್ಲಿ ಇವರನ್ನು ಶೂದ್ರರೆಂದೂ, ಗೋಪಾಲಕರೆಂದೂ ಕರೆಯಲಾಗಿದೆ. ಇವರು ಮಧ್ಯ ಏಷ್ಯದ ಸಿಥಿಯನ್ ಮೂಲದ ಅಲೆಮಾರಿಗಳೆಂದು ಕೆಲವರು ಊಹಿಸಿದ್ದಾರೆ. ಬೇರೆ ಕೆಲವರ ಅಭಿಪ್ರಾಯದಂತೆ, ಇವರು ಅಲೆಗ್ಸಾಂಡರನ ಮರಣಾನಂತರ ಭಾರತಕ್ಕೆ ಬಂದು ಸಿಂಧೂ ನದಿಯ ಪಡದಲ್ಲಿ ನೆಲೆಸಿದವರು.

ಪ್ರಾರಂಭದಲ್ಲಿ ಇವರು ಅಹಿಚ್ಛತ್ರ (ಅಹಿರಕ್ಷೇತ್ರ ಅಥವಾ ಅಭೀರ ಕ್ಷೇತ್ರ) ರಾಜ್ಯವನ್ನು ರಾಜಧಾನಿಯನ್ನು ಕಟ್ಟಿದರು. ಅನಂತರ ಉತ್ತರ ಪಾಂಚಾಲವನ್ನು ವಶಪಡಿಸಿಕೊಂಡರು.

ಅಭೀರರು ಅಲೆದಾಡುತ್ತ ಸರಸ್ವತಿ ನದಿಯ ಬಳಿ ಬಂದಾಗ ಇವರ ಬಗೆಗೆ ಸರಸ್ವತಿ ನದಿ ಅಸಹ್ಯಪಟ್ಟು ಭೂಗತವಾಗಿ ಮಾಯವಾದಳೆಂದು ದಂತ ಕಥೆ ಇದೆ. ಕ್ರಮೇಣ ಇವರು ಸೌರಾಷ್ಟ್ರ, ಮಾಳ್ವಗಳಲ್ಲಿ ರಾಜ್ಯಸ್ಥಾಪನೆ ಮಾಡಿದರು. ಇವರು ನಾಸಿಕ ಪ್ರದೇಶದಲ್ಲಿ ಕಟ್ಟಿದ ರಾಜ್ಯ ಬಹು ಕಾಲ ಬಾಳಲಿಲ್ಲ. ಅನಂತರ ಚೇದಿ, ಕಳಚುರಿ ರಾಜವಂಶಗಳೊಡನೆ ಇವರ ಸಂಬಂಧವಿದ್ದಂತೆ ಕಾಣುತ್ತದೆ.

ಈ ಕುಲದ ಕೆಲವು ನಾಯಕರು ಸೇನಾಪತಿಗಳಾಗಿದ್ದರು. ಅಭೀರ ಮಾಹೀಪುತ್ರ ಈಶ್ವರಸೇನ ಮೂರನೆಯ ಶತಮಾನದಲ್ಲಿ ನಾಸಿಕ ಪ್ರದೇಶ ವಲ್ಲಿ ಆಳಿದನೆಂದು ಶಾಸನವೊಂದರಲ್ಲಿ ಉಲ್ಲೇಖವಿದೆ.

ಅಭೀರರು ಪಶ್ಚಿಮ, ಮಧ್ಯ ಹಾಗೂ ದಕ್ಷಿಣ ಭಾರತದಲ್ಲಿ ಆಳಿದ ಅನೇಕ ರಾಜರ ಕಾಲದಲ್ಲಿ ಕಾಣಿಸಿಕೊಳ್ಳುತ್ತಾರೆ. ಮಯೂರವರ್ಮನ ಚಂದ್ರವಳ್ಳಿ ಶಾಸನದಲ್ಲಿ ಕದಂಬರಾಜ ಅಭೀರರನ್ನು ಜಯಿಸಿದನೆಂದು ಹೇಳಿದೆ. ಸಮುದ್ರ ಗುಪ್ತನಿಂದ ಪರಾಭವ ಹೊಂದಿದವರಲ್ಲಿ ಆಭೀರರ ಹೆಸರೂ ಇದೆ. ಉತ್ತರ ಭಾರತದಲ್ಲಿ ಬಿಹಾರಿನವರೆಗೆ ಚೆದರಿದಂತೆ ಇರುವ ಆಹೀರ ಪಂಗಡದವರು ಆಭೀರರ ಸಂತತಿಯವರೆಂದು ಭಾವಿಸಲಾಗಿದೆ. ಇವರು ಪ್ರಧಾನವಾಗಿ ಪಶುಪಾಲನೆ, ಬಡಗಿಕೆಲಸ, ಚಿನಿವಾರಿಕೆಗಳಿಂದ ಜೀವಿಸುತ್ತಾರೆ.

ಆಮ್ರಪಾಲಿ

ವೈಶಾಲಿ ನಗರದ ಶ್ರೀಮಂತ ಮಹಾನಾಮ. ಇವನು ಒಂದು ದಿನ ತನ್ನ ಉದ್ಯಾನದಲ್ಲಿ ತಿರುಗುತ್ತಿದ್ದಾಗ ಅಲ್ಲೊಂದು ಅನಾಥ ಶಿಶುವಿದ್ದುದನ್ನು ಕಂಡ. ಮಕ್ಕಳಿಲ್ಲದ ಮಹಾನಾಮನು ಆ ಹೆಣ್ಣುಮಗುವನ್ನು ತಂದು ತನ್ನ ಮಗಳೇ ಎಂಬಂತೆ ಸಾಕಿದ. ಅವಳು ಲಾವಣ್ಯವತಿಯಾಗಿ ಬೆಳೆದಳು. ಅನೇಕ ಮಂದಿ ಶ್ರೀಮಂತ ತರುಣರು ಆಕೆಯನ್ನು ಮದುವೆಯಾಗಲು ಬಯಸಿದರು. ಇವರಲ್ಲಿ ಯಾರನ್ನೂ ಅಸಮಾಧಾನಗೊಳಿಸಲು ಇಷ್ಟವಿರದ ಮಹಾನಾಮ, ಅವಳಿಗೆ ತಕ್ಕ ವರನನ್ನು ಆರಿಸುವಂತೆ ಹಿರಿಯರ ಸಭೆಯನ್ನು ಕೇಳಿಕೊಂಡ. ಆಕೆಯ ಮದುವೆಯ ಸಮಸ್ಯೆಗೆ ಲಿಚ್ಛವಿಗಳ ಸಭೆ ಕೊಟ್ಟ ಪರಿಹಾರ : ಅವಳು ವೇಶ್ಯೆಯಾಗಿ ಬಾಳಬೇಕು ಎಂಬುದು. ಆಕೆ ಕೆಲವು ಷರತ್ತುಗಳನ್ನು ಹಾಕಿ ಆ ನಿರ್ಣಯವನ್ನು ಒಪ್ಪಿಕೊಂಡಳು.

ನಗರದ ಉತ್ತಮ ಸ್ಥಳದಲ್ಲಿ ಆಕೆಗೊಂದು ಭವ್ಯವಾದ ಭವನ ನಿರ್ಮಾಣವಾಯಿತು. ಅಲ್ಲಿ ಅವಳು ಜೀವಿಸತೊಡಗಿದಳು; ಅಪಾರ ಧನವನ್ನು ಸಂಪಾದಿಸಿದಳು. ಒಬ್ಬ ಮಗನೂ ಹುಟ್ಟಿದ. ಮುಂದೆ ಅವನು ಬೌದ್ಧ ಸನ್ಯಾಸಿಯಾದ. ಆತನ ಹೆಸರು ವಿಮಲಕೊಂಡಣ್ಣ.

ಆಕೆಗೆ ಬುದ್ಧನಲ್ಲಿ ತುಂಬ ಭಕ್ತಿ. ಒಮ್ಮೆ ಬುದ್ಧ ವೈಶಾಲಿಯ ಸಮೀಪಕ್ಕೆ ಬಂದಾಗ ಅವಳು ಬುದ್ಧನನ್ನೂ ಅವನೊಡನಿದ್ದ ಭಿಕ್ಷುಗಳನ್ನೂ ತನ್ನ ಮನೆಗೆ ಆಹ್ವಾನಿಸಿದಳು. ಅವರನ್ನು ಸತ್ಕರಿಸಿ ತನ್ನ ಮಾವಿನ ತೋಟವನ್ನು ಭಿಕ್ಷು ಸಂಘಕ್ಕೆ ದಾನ ಮಾಡಿದಳು. ಇದರಿಂದ, ಅಂದಿನಿಂದ ಆಕೆಯ ಹೆಸರು ಆಮ್ರಪಾಲಿ ಎಂದು ಪ್ರಸಿದ್ಧವಾಯಿತು.

ತನ್ನ ಮಗ ವಿಮಲಕೊಂಡಣ್ಣನ ಉಪನ್ಯಾಸ ಕೇಳಿದ ಮೇಲೆ ಆಮ್ರಪಾಲಿ ಭಿಕ್ಷುಣಿ ಆದಳು. ಪ್ರಪಂಚದ ಸುಖಸಂಪತ್ತು ಎಂದಿಗೂ ಉಳಿಯುವುದಿಲ್ಲ ಎಂಬುದನ್ನು ಕಂಡುಕೊಂಡು, ಆಧ್ಯಾತ್ಮಿಕ ಸಾಧನೆಯಿಂದ 'ಅರ್ಹತ್' ಸ್ಥಿತಿಯನ್ನು ಪಡೆದಳು. ತನ್ನ ಅಂತರಂಗದ ಭಾವನೆಗಳನ್ನು ಸುಂದರವಾದ ಕವನಗಳಲ್ಲಿ ಆಕೆ ಹೊರಗೆಡವಿದ್ದಾಳೆ.

ಆರ್ಯಭಟ

ನೋಡಿ : ಸಂಪುಟ ೩.

ಆರ್ಯರು

ಪ್ರಪಂಚದ ಅತಿ ಪ್ರಾಚೀನ ಸಾಹಿತ್ಯ ಕೃತಿಯಾದ ಋಗ್ವೇದವನ್ನು ರಚಿಸಿದವರು ಆರ್ಯರು.

ಆರ್ಯರ ಮೂಲದ ಬಗೆಗೆ ಇನ್ನೂ ತರ್ಕ ನಡೆದೇ ಇದೆ. ಇಂದಿನ ರಷ್ಯ ಮತ್ತು ಅಫ್‌ಘಾನಿಸ್ತಾನಗಳ ನಡುವಣ ಗಡಿಯಲ್ಲಿರುವ ಅಮುವರ್ಯ (ಪ್ರಾಚೀನ ಹೆಸರು ಆಕ್ಸಸ್) ನದೀ ಪ್ರದೇಶದಿಂದ ಭಾರತಕ್ಕೆ ಇವರು ವಲಸೆ ಬಂದಿರಬೇಕೆಂದು ಅನೇಕ ಮಂದಿ ವಿದ್ವಾಂಸರ ಅಭಿಪ್ರಾಯ. ಸುಮಾರು ಕ್ರಿ.ಪೂ. 1500ರ ವೇಳೆಗೆ ಅವರು ಭಾರತದ ಸಟ್ಲೆಜ್ ಹಾಗೂ ಯಮುನಾ ನದಿಗಳ ನಡುವಿನ ಪ್ರದೇಶದಲ್ಲಿ ನೆಲೆಸಿದರು. ಅನಂತರ ಗಂಗಾನದಿಯ ಬಯಲಿಗೆ ಬಂದರು. ಈ ಪ್ರದೇಶದ



ಭಿಕ್ಷು ಸಂಘಕ್ಕೆ ಮಾವಿನ ತೋಟದ ದಾನ

ಮೂಲನಿವಾಸಿಗಳಿಗೂ ಆರ್ಯರಿಗೂ ಆಗಾಗ ಅಲ್ಪಸ್ವಲ್ಪ ಕದನಗಳಾಗುತ್ತಿದ್ದುವು. ಮೊದಲು ಪಶುಪಾಲನೆ ಆರ್ಯರ ಮುಖ್ಯ ಕಸುಬಾಗಿತ್ತು. ಕ್ರಮೇಣ ವ್ಯವಸಾಯದಲ್ಲೂ ಪಳಗಿದರು. ಹಲವು ಬಗೆಯ ಧಾನ್ಯಗಳನ್ನು ಆರ್ಯರು ಬೆಳೆಯುತ್ತಿದ್ದರು. ಕಬ್ಬಿಣ ಮುಂತಾದ ಲೋಹಗಳ ಉಪಯೋಗವನ್ನು ಅವರು ಅರಿತಿದ್ದರು. ಮರ ಅವರ ಎಲ್ಲ ಕೆಲಸಗಳಿಗೂ ಒದಗಿದ ಮುಖ್ಯ ಸಾಮಗ್ರಿ. ಅವರ ಸಮಾಜದಲ್ಲಿ ಬಡಗಿಗೆ ಪ್ರಾಶಸ್ತ್ಯವಿತ್ತು. ಇತರ ಕೆಲಸಗಾರರು: ತಾಮ್ರ, ಕಂಚು ಕಬ್ಬಿಣಗಳ ಸಾಮಾನು ಮಾಡುವವರು, ಕುಂಬಾರರು, ಮೇದರು ಹಾಗೂ ನೇಕಾರರು.

ಆರ್ಯರ ಸಮಾಜ ವ್ಯವಸ್ಥೆಯಲ್ಲಿ ಕುಟುಂಬವೇ ಮೂಲ ಘಟಕ. ಅವರ ವಾಸದ ಮನೆ, ಉಡುಗೆ ತೊಡುಗೆ ಸರಳವಾಗಿದ್ದುವು. ಕುಟುಂಬಕ್ಕೆ ತಂದೆ ಯಜಮಾನ. ಕಾಲಕ್ರಮದಲ್ಲಿ ದುಡಿಮೆಯ ಆಧಾರದ ಮೇಲೆ ಕ್ಷತ್ರಿಯ, ಬ್ರಾಹ್ಮಣ, ವೈಶ್ಯ, ಶೂದ್ರ — ಈ ನಾಲ್ಕು ವರ್ಣಗಳು ಏರ್ಪಟ್ಟುವು. ಆರ್ಯರ ಗುಂಪುಗಳ ನಾಯಕ 'ರಾಜ'. ಇವನದು ನಿರಂಕುಶ ಪ್ರಭುತ್ವವಲ್ಲ. ಸಭೆ ಹಾಗೂ ಸಮಿತಿಗಳೆಂಬ ಎರಡು ಪ್ರಾತಿನಿಧಿಕ ಸಂಸ್ಥೆಗಳು ರಾಜ್ಯಾಡಳಿತದಲ್ಲಿ ಮುಖ್ಯ ಪಾತ್ರ ವಹಿಸುತ್ತಿದ್ದುವು. ಯುದ್ಧಕಾಲದಲ್ಲಿ ರಾಜನು ಸೇನಾಧಿಪತ್ಯ ನಿರ್ವಹಿಸುತ್ತಿದ್ದ. ಜನರಲ್ಲಿ ವಾದವಿವಾದ ಉಂಟಾದಾಗ ಅವನು ಸಮಾಜದ ಹಿರಿಯರ ಸಲಹೆಗಳಿಗೆ ಅನುಸಾರವಾಗಿ ತೀರ್ಮಾನ ಕೊಡುವ ನ್ಯಾಯಾಧೀಶನೂ ಆಗಿದ್ದ. ಜನಾಂಗದ ಶ್ರೇಯಸ್ಸಿಗಾಗಿ ಯಜ್ಞ ಯಾಗಾದಿಗಳನ್ನು ನಡೆಸುವುದು ಪುರೋಹಿತನ ಕರ್ತವ್ಯ. ಪಶುಗಳನ್ನು ಹಿರಿಯ ಸಂಪತ್ತು ಎಂದು ಆರ್ಯರು ಪರಿಗಣಿಸುತ್ತಿದ್ದರು. ಯುದ್ಧದಲ್ಲಿ ಗೆದ್ದವರು ಸೋತವರ ಪಶುಗಳನ್ನು ಸ್ವಾಧೀನಪಡಿಸಿಕೊಳ್ಳುವುದು ಸಾಮಾನ್ಯವಾಗಿದ್ದಿತು. ಯಾರಲ್ಲಿ ಎಷ್ಟು 'ಗೋಧನ' ಇದೆ ಎಂಬುದರ ಮೇಲೆ ಅವರ ಸಂಪತ್ತನ್ನು ಲೆಕ್ಕ ಹಾಕುತ್ತಿದ್ದರು. ಗೋವುಗಳ ಅನಂತರ ಕುದುರೆಗೆ ಪ್ರಾಶಸ್ತ್ಯ. ಆರ್ಯರು ವೇಗವಾಗಿ ಚಲಿಸುವ ಹಗುರವಾದ ರಥಗಳನ್ನು ಶಾಂತಿಕಾಲ ಯುದ್ಧಕಾಲಗಳೆರಡರಲ್ಲೂ ಉಪಯೋಗಿಸುತ್ತಿದ್ದರು. ರಥವನ್ನು ಎಳೆಯಲು ಕುದುರೆಗಳನ್ನು ಕಟ್ಟುತ್ತಿದ್ದರು. ಕುರಿ ಸಾಕಣೆಯೂ ಇತ್ತು. ಉಣ್ಣೆ ಅವರ ಮುಖ್ಯ ವಸ್ತ್ರಸಾಮಗ್ರಿಗಳಲ್ಲಿ ಒಂದು.

ಆರ್ಯರಿಗೆ ಸಂಗೀತ ಪ್ರಿಯವಾಗಿತ್ತು. ಕೊಳಲು ಮುಂತಾದ ಸಂಗೀತ ವಾದ್ಯಗಳನ್ನು ಅವರು ಬಳಸುತ್ತಿದ್ದರು. ಸಾಮಗಾನ ಹುಟ್ಟಿದ್ದು ಆರ್ಯರಲ್ಲಿ. ಪಗಡೆಯಾಟ ಅವರ ಮೆಚ್ಚಿನ ಮನೋಲ್ಲಾಸ. ರಥ ಸ್ಪರ್ಧೆ ಅವರ ವಿನೋದಗಳಲ್ಲಿ ಒಂದು.

ಆರ್ಯರು ಪ್ರಕೃತಿಶಕ್ತಿಗಳನ್ನು ಪೂಜಿಸುತ್ತಿದ್ದರು. ಅವರ ಪೂಜೆಯಲ್ಲಿ ಅಗ್ನಿಗೆ ಪ್ರಥಮ ಸ್ಥಾನವಿತ್ತು. ಯಜ್ಞಯಾಗಾದಿಗಳಲ್ಲಿ ದೇವರಿಗೆ ಅಗ್ನಿಯ ಮೂಲಕ ಹವಿಸ್ಸನ್ನು ಅರ್ಪಿಸುತ್ತಿದ್ದರು. ಮದುವೆ ಅಗ್ನಿ ಸಾಕ್ಷಿಯಾಗಿಯೇ ನೆರವೇರುತ್ತಿತ್ತು. ಇಂದ್ರ, ಸೂರ್ಯ, ಸೋಮ, ವರುಣ, ಮಿತ್ರ, ಯಮ, ಅಶ್ವಿನಿ ಮುಂತಾದ ಹಲವಾರು ದೇವ ದೇವತೆಗಳನ್ನು ಆರ್ಯರು ಆರಾಧಿಸುತ್ತಿದ್ದರು. ಮೊದಮೊದಲು ಸತ್ತವರನ್ನು ಹೂಳುತ್ತಿದ್ದರು. ಅನಂತರ ಸುಡುವುದು ರೂಢಿಗೆ ಬಂದಿತು. ಈಗಲೂ ಪ್ರಚಲಿತವಿರುವ ಕರ್ಮ, ಧರ್ಮ, ಜನ್ಮಾಂತರ ಮುಂತಾದ ಹಲವಾರು ವಿಚಾರಗಳು ಆರ್ಯ ಸಂಸ್ಕೃತಿಯಲ್ಲಿ ಮೂಡಿದ ಭಾವನೆಗಳು.

ಭಾರತದಲ್ಲಿ ಆರ್ಯರು ಬಂದು ನೆಲೆಸಿದ ಮತ್ತು ವೇದಗಳು ರೂಪುಗೊಂಡ ಕಾಲವನ್ನು ವೇದಕಾಲವೆಂದು ಕರೆಯುತ್ತಾರೆ. ಈ ಅವಧಿ ಸುಮಾರು ಕ್ರಿ.ಪೂ. 3000ರಿಂದ ಕ್ರಿ.ಪೂ. 1000 ವರೆಗೆ. ಪ್ರಾಗೈತಿಹಾಸಪೂರ್ವ ಕಾಲದಿಂದ ಇತಿಹಾಸ ಕಾಲಕ್ಕೆ ಸೇರಿದವರನ್ನು ಭಾರತದ ಆದಿವಾಸಿಗಳು ಎನ್ನಬಹುದು. ಅವರೊಂದಿಗೆ ಆರ್ಯ ಹಾಗೂ ದ್ರಾವಿಡ ಸಮ್ಮಿಳನವಾಯಿತು.

ನೋಡಿ : ಋಗ್ವೇದ ; ಯಜುರ್ವೇದ ; ಸಾಮವೇದ ; ಅಥರ್ವವೇದ ; ವರ್ಣಾಶ್ರಮ ; ಆರ್ಯರು — ಸಂಪುಟ ೧

ಆರ್ಯ ಸಮಾಜ

ಹತ್ತೊಂಬತ್ತನೆಯ ಶತಮಾನದ ಕೊನೆಯ ಭಾಗದಲ್ಲಿ ಭಾರತದ ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ ಹಾಗೂ ರಾಜಕೀಯ ಜೀವನದ ಮೇಲೆ ಪ್ರಬಲ ಪ್ರಭಾವ ಬೀರಿದ ಸಂಘಟನೆಗಳಲ್ಲಿ ಆರ್ಯ ಸಮಾಜ ಪ್ರಮುಖವಾದದ್ದು. ರಾಜಾರಾಮ್ ಮೋಹನರಾಯ್ ಅವರ ಬ್ರಹ್ಮ ಸಮಾಜ ಮತ್ತು ಕ್ರೈಸ್ತಧರ್ಮದ ವ್ಯವಸ್ಥಾ ವಿಧಾನಗಳು ಇದರ ಮೇಲೆ ಪ್ರಭಾವ ಬೀರಿರಬಹುದಾದರೂ ಆರ್ಯ ಸಮಾಜದ ಎಲ್ಲ ಚಟುವಟಿಕೆಗಳಿಗೂ ಮೂಲ ಸ್ಫೂರ್ತಿ ಬಂದದ್ದು ವೇದಗಳಿಂದ.

1875 ಏಪ್ರಿಲ್ 10ರಂದು ಮುಂಬಯಿಯಲ್ಲಿ ಆರ್ಯ ಸಮಾಜವನ್ನು ಸ್ಥಾಪಿಸಿದ ಮಹಾವ್ಯಕ್ತಿ ಸ್ವಾಮಿ ದಯಾನಂದ ಸರಸ್ವತಿ. ಅನಂತರ ಪಂಜಾಬು ಅದರ ಮುಖ್ಯ ಕಾರ್ಯಕ್ಷೇತ್ರವಾಯಿತು. ಆಧುನಿಕ ವಿಜ್ಞಾನದ ಸಂಶೋಧನೆಗಳ ಮೂಲ ತತ್ತ್ವವನ್ನು ವೇದಗಳಲ್ಲೇ ಕಾಣಬಹುದು ಎಂದು ದಯಾನಂದರು ನಂಬಿದ್ದರು. ಅಷ್ಟೇ ಅಲ್ಲ, ಎಲ್ಲ ಸಾಮಾಜಿಕ, ಧಾರ್ಮಿಕ ಸಮಸ್ಯೆಗಳಿಗೂ ವೇದಗಳಲ್ಲಿ ಸೂಕ್ತ ಉತ್ತರ ದೊರೆಯುತ್ತದೆ ಎಂದು ಅವರು ಭಾವಿಸಿದ್ದರು. ಮೂರ್ತಿಪೂಜೆ, ಜಾತಿಪದ್ಧತಿ, ಬಾಲ್ಯವಿವಾಹ, ಅಸ್ಪೃಶ್ಯತೆಗಳಿಗೆ ವೇದಗಳಲ್ಲಿ ಆಧಾರವಿಲ್ಲ; ಇವೆಲ್ಲ ವೇದ ಕಾಲದ ಅನಂತರ ಹಿಂದೂಧರ್ಮಕ್ಕೆ ಬಂದು ಸೇರಿದ ಆಚರಣೆಗಳು ಎಂದು ದಯಾನಂದರು ವಾದಿಸಿದರು.

ಪ್ರತಿಯೊಂದು ಊರಿನಲ್ಲೂ ಒಂದೊಂದು ಸ್ಥಳೀಯ ಆರ್ಯ ಸಮಾಜವನ್ನು ಸ್ಥಾಪಿಸಿ, ಇವರ ಪ್ರತಿನಿಧಿಗಳಿಂದ ಕೂಡಿದ ಒಂದು ಪ್ರಾಂತೀಯ ಆರ್ಯ ಸಮಾಜವನ್ನು ಸಂಘಟಿಸಬೇಕು ; ಇಂಥ ಪ್ರಾಂತೀಯ ಆರ್ಯ ಸಮಾಜಗಳ ಪ್ರತಿನಿಧಿಗಳು ಒಟ್ಟಾಗಿ ಅಖಿಲ ಭಾರತ ಆರ್ಯ ಸಮಾಜವನ್ನು ಸಂಘಟಿಸಬೇಕು — ಎಂಬುದು ದಯಾನಂದರ ಯೋಜನೆಯಾಗಿತ್ತು.

ಭಾರತ ವಿದೇಶೀಯರ ಆಳ್ವಿಕೆಗೆ ಒಳಗಾಗಿರಕೂಡದು : ಅದು ಸ್ವತಂತ್ರವಾಗಬೇಕು ಎಂಬ ಧೋರಣೆಯನ್ನು ಆರ್ಯ ಸಮಾಜ ತಳೆಯಿತು. ಹೀಗೆ ರಾಜಕೀಯ ಚಟುವಟಿಕೆಗಳ ಮೇಲೂ ಆರ್ಯ ಸಮಾಜ ಪ್ರಭಾವ ಬೀರಿತು.

ತರುಣ ತರುಣಿಯರಲ್ಲಿ ವೈದಿಕ ಸಂಸ್ಕೃತಿಯನ್ನು ಬೆಳೆಸಲು ಆರ್ಯ ಸಮಾಜ ಅನೇಕ ಉತ್ತಮ ಶಾಲೆ, ಕಾಲೇಜುಗಳನ್ನೂ ಆಶ್ರಮ, ಅನಾಥಾಲಯಗಳನ್ನೂ ಸ್ಥಾಪಿಸಿದೆ. ಹರಿದ್ವಾರದ ಬಳಿ ಕಾಂಗ್ರಿಯಲ್ಲಿ ಆರ್ಯಸಮಾಜ ಗುರುಕುಲವಿದೆ. ಇಲ್ಲಿ ಸ್ನಾತಕೋತ್ತರ ತರಗತಿಗಳಿಗೂ ಹಿಂದೀ ಭಾಷೆಯೇ ಮಾಧ್ಯಮ. ವೈದಿಕ ಹಾಗೂ ಸಂಸ್ಕೃತ ಸಾಹಿತ್ಯಗಳ ಜೊತೆಗೆ ಆಧುನಿಕ ವಿಜ್ಞಾನ, ಕಲೆಗಳ ಅಧ್ಯಯನಕ್ಕೂ ಇಲ್ಲಿ ಅವಕಾಶವಿದೆ.

ನೋಡಿ : ಸ್ವಾಮಿ ದಯಾನಂದ ಸರಸ್ವತಿ

ಆಯುರ್ವೇದ

ನೋಡಿ : ಸಂಪುಟ ೨



[illegible] ಕೋಟು : ಕಚ್ಚೆಪಂಚೆ [illegible] 'ಕಾಮನ್‌ಮ್ಯಾನ್'ನ ಒಂದು ವಿಶಿಷ್ಟ [illegible] ಚಿತ್ರ. ಇವನ್ನು ಸೃಷ್ಟಿಸಿ, ಅವನು ಎಲ್ಲ ಬಗೆಯ ಸಂದರ್ಭ ಸನ್ನಿವೇಶಗಳಲ್ಲಿ ವೀಕ್ಷಕನಾಗಿಯೋ ಪಾಲುಗಾರನಾಗಿಯೋ ಇರುವಂತೆ ಕಲ್ಪಿಸಿದವರು ಪ್ರಸಿದ್ಧ ವ್ಯಂಗ್ಯ ಚಿತ್ರಕಾರ ಆರ್.ಕೆ. ಲಕ್ಷ್ಮಣ್.

'ಕಾಮನ್‌ಮ್ಯಾನ್' ಇವರ ವ್ಯಂಗ್ಯಚಿತ್ರಕಲೆಯ ಒಂದು ಮುಖ ಮಾತ್ರ. ಅತಿ ಸಾಮಾನ್ಯ ಸನ್ನಿವೇಶವಲ್ಲಾಗಲೀ ಗಂಭೀರ ಸನ್ನಿವೇಶವಲ್ಲಾಗಲೀ ಜನರು ಸಾಮಾನ್ಯವಾಗಿ ಕಾಣದ ಸೂಕ್ಷ್ಮ ವ್ಯಂಗ್ಯ ಎಳೆಯನ್ನು ಗುರುತಿಸಬಲ್ಲ ಕಲೆಗಾರಿಕೆ ಇವರದು.

ಆರ್. ಕೆ. ಲಕ್ಷ್ಮಣ್ 1924ರಲ್ಲಿ ಹುಟ್ಟಿದರು. ದಕ್ಷ ಹೈಸ್ಕೂಲ್ ಮುಖ್ಯೋಪಾಧ್ಯಾಯ ಖ್ಯಾತರಾಗಿದ್ದ ಆರ್. ಕೃಷ್ಣಸ್ವಾಮಿ ಅಯ್ಯರ್ ಇವರ ತಂದೆ. ಖ್ಯಾತ ಬರೆಹಗಾರ ಆರ್.ಕೆ. ನಾರಾಯಣ್ ಇವರ ಅಣ್ಣ. ಕಲಾವಿದನಾಗಬೇಕೆಂಬ ಹಂಬಲ ಲಕ್ಷ್ಮಣ್ ಅವರಲ್ಲಿ ಬಾಲ್ಯದಿಂದಲೇ ಮನೆ ಮಾಡಿತ್ತು. ಕನ್ನಡದ ಹೆಸರಾಂತ ವ್ಯಂಗ್ಯ ನಿಯತಕಾಲಿಕ 'ಕೊರವಂಜಿ'ಯಲ್ಲಿ (ಸಂಪಾದಕರು 'ರಾ.ಶಿ.') ಇವರ ಚಿತ್ರಗಳು ಪ್ರಕಟವಾಗಲಾರಂಭಿಸಿದುವು. ಕಾರ್ಟೂನ್ ಚಲಚ್ಚಿತ್ರ ರಚನೆಗೂ ಕೈಹಾಕಿದರು. ಅನಂತರ ಮುಂಬಯಿಗೆ ಪ್ರಯಾಣ. ಅಲ್ಲಿ 1947ರಲ್ಲಿ 'ಫ್ರೀ ಪ್ರೆಸ್ ಜರ್ನಲ್' ಸೇರಿದರು. ಮುಂದೆ 'ಟೈಮ್ಸ್ ಆಫ್ ಇಂಡಿಯಾ' ಪತ್ರಿಕೆಯ ವ್ಯಂಗ್ಯಚಿತ್ರಕಾರರಾದರು. ಭಾರತದ ವ್ಯಂಗ್ಯಚಿತ್ರಕಾರರಲ್ಲಿ ಅಗ್ರಗಣ್ಯರೆನಿಸಿದರು. ಮೈಸೂರು ವಿಶ್ವವಿದ್ಯಾನಿಲಯದ ಪದವೀಧರರಾದ ಲಕ್ಷ್ಮಣ್ ಒಳ್ಳೆಯ ಬರೆಹಗಾರ ಕೂಡ.

ಲಕ್ಷ್ಮಣ್ ಅವರ ಕಲೆಗೆ ಸ್ವತಃ ಅವರೇ ಗುರು. ಕೇವಲ ಮೂರು ವರ್ಷದವರಾಗಿದ್ದಾಗ ಮನೆಯ ನೆಲ, ಗೋಡೆಗಳ ಮೇಲೆ ಚಿತ್ರಗಳನ್ನು ಬರೆಯುವುದರೊಂದಿಗೆ ಇವರ ಈ ಹವ್ಯಾಸ ಆರಂಭವಾಯಿತು. ಶ್ರೇಷ್ಠ ವ್ಯಂಗ್ಯಚಿತ್ರಕಾರ ಡೇವಿಡ್ ಲೋ ಅವರ ಪ್ರಭಾವಕ್ಕೆ ಲಕ್ಷ್ಮಣ್ ಚಿಕ್ಕಂದಿನಲ್ಲೇ ಒಳಗಾದರು.

ದುಡಿಯುವವನಿಗೆ ಗಳಿಕೆ ಹೆಚ್ಚಿತು. ಆದರೆ, ಅತಿಪ್ರಸರಣ ಭೂತದ ಕಾಟ. ನಾಯಕರ ದೃಷ್ಟಿಯಲ್ಲಿ ಅತಿ [illegible] ಮುಖ್ಯ. — ಲಕ್ಷ್ಮಣ್ ಕೃತಿ



ಅತಿ ಅವಶ್ಯವಾದ ಕೆಲವೇ ಗೆರೆಗಳನ್ನು ಎಳೆದು ಸತ್ತ್ವಪೂರ್ಣ ಚಿತ್ರ ಮೂಡಿಸುವುದು ಲಕ್ಷ್ಮಣ್ ಅವರ ವೈಶಿಷ್ಟ್ಯ. ಈ ಶೈಲಿಯಲ್ಲಿ ಇವರು ಬರೆದಿರುವ ವ್ಯಕ್ತಿಚಿತ್ರಗಳು ಬಹಳ ಜನಪ್ರಿಯವಾಗಿವೆ. ಚಿತ್ರಕ್ಕಾಗಿ ಆರಿಸಿಕೊಂಡ ವ್ಯಕ್ತಿ ಅಥವಾ ಸನ್ನಿವೇಶದ ಜೀವಾಳವನ್ನು ಪರಿಣಾಮಕಾರಿಯಾಗಿ ಬಿಂಬಿಸುವ ಅವರ ಚಿತ್ರಗಳು ಅಂತರರಾಷ್ಟ್ರೀಯ ಮನ್ನಣೆ ಗಳಿಸಿವೆ.

1973ರಲ್ಲಿ ಲಕ್ಷ್ಮಣ್ ಅವರಿಗೆ ಶ್ರೇಷ್ಠ ವ್ಯಂಗ್ಯಚಿತ್ರಕ್ಕಾಗಿ ದುರ್ಗಾ ರತನ್ ಪಾರಿತೋಷಕ ದೊರೆಯಿತು.

ಆರ್. ಜಿ. ಭಾಂಡಾರ್‌ಕರ್

ಭಾರತದ ಇತಿಹಾಸ, ಧರ್ಮ, ಸಂಸ್ಕೃತಿಗಳನ್ನು ಕುರಿತು ಆಳವಾಗಿ ಅಧ್ಯಯನ ನಡೆಸಿದ ವಿದ್ವಾಂಸ ವರ್ಗದಲ್ಲಿ ಮೊದಲನೆಯ ಪಂಕ್ತಿಗೆ ಸೇರಿದವರು ರಾಮಕೃಷ್ಣ ಗೋಪಾಲ ಭಾಂಡಾರ್‌ಕರ್. ಅವರಿಗೆ ಸಂಸ್ಕೃತ ಮತ್ತು ಭಾರತದ ಕೆಲವು ಭಾಷೆಗಳಲ್ಲಿ ಒಳ್ಳೆಯ ತಿಳಿವಳಿಕೆ ಇತ್ತು. ಅವರ ವಂಶದ ಮೂಲ ನಿವಾಸ ಇಂದಿನ ಮಹಾರಾಷ್ಟ್ರ ರಾಜ್ಯಕ್ಕೆ ಸೇರಿದ ಭಾಂಡಾರ.

ರಾಮಕೃಷ್ಣ ಗೋಪಾಲ ಭಾಂಡಾರ್‌ಕರ್ ಹುಟ್ಟಿದ್ದು 1837ರಲ್ಲಿ. ತಂದೆ ಸರಕಾರೀ ನೌಕರಿಯಲ್ಲಿದ್ದರು. ನಿರಂತರ ಪರಿಶ್ರಮದಿಂದ ಅಪಾರ ವಿದ್ವತ್ತನ್ನು ಗಳಿಸಿದ ಆರ್. ಜಿ. ಭಾಂಡಾರ್‌ಕರ್ ಅವರು ಭಾರತ ಇತಿಹಾಸದ ಸಂಶೋಧನೆಯಲ್ಲಿ ಆಸಕ್ತಿ ವಹಿಸಿದರು. ವೈಷ್ಣವ. ಶೈವ ಮತ್ತಿತರ ಮತಗಳನ್ನು ಕುರಿತು ಅವರು ಬರೆದಿರುವ ಗ್ರಂಥ ವಿದ್ವಾಂಸರೆಲ್ಲರ ಮೆಚ್ಚುಗೆಗೆ ಪಾತ್ರವಾಗಿದೆ. ಭಾರತದ ಪ್ರಾಚೀನ ಸಂಪ್ರದಾಯ ಧರ್ಮಗಳನ್ನು ಕುರಿತು ದೀರ್ಘವಾಗಿ ಆಳವಾಗಿ ಅಧ್ಯಯನ ಮಾಡಿದ್ದರಾದರೂ ಅವರು ಕಂದಾಚಾರಕ್ಕೆ ಕಟ್ಟು ಬಿದ್ದವರಾಗಿರಲಿಲ್ಲ. ಅವರ ದೃಷ್ಟಿ ವಿಶಾಲ, ಸುಧಾರಣಾತ್ಮಕ. ಭಾಂಡಾರ್‌ಕರ್ ಬ್ರಹ್ಮ ಸಮಾಜದ ಕೇಶವಚಂದ್ರಸೇನರ ಬೋಧನೆಗಳಿಂದ ಪ್ರಚೋದಿತವಾದ 'ಪ್ರಾರ್ಥನಾ ಸಮಾಜ'ದ ಪ್ರಮುಖ ನಾಯಕರಲ್ಲೊಬ್ಬರಾದರು. ಜಾತಿ ಪದ್ಧತಿ, ಬಾಲ್ಯ ವಿವಾಹಗಳನ್ನು ವಿರೋಧಿಸಿದರು. ಸ್ತ್ರೀ ವಿದ್ಯಾಭ್ಯಾಸ, ವಿಧವಾ ವಿವಾಹಗಳಿಗೆ ಬೆಂಬಲಕೊಟ್ಟರು.

ಸಂಸ್ಕೃತ ವಿದ್ಯಾಭ್ಯಾಸವನ್ನು ವಿಸ್ತಾರಗೊಳಿಸುವುದಕ್ಕೆ ಅವರು ಸಲ್ಲಿಸಿದ ಸೇವೆ ಅಮೂಲ್ಯವಾದದ್ದು. ಹೊಸದಾಗಿ ಸಂಸ್ಕೃತವನ್ನು ಅಭ್ಯಾಸ ಮಾಡುವವರ ಉಪಯೋಗಕ್ಕಾಗಿ ಅವರು ರಚಿಸಿದ ಕ್ರಮಿಕ ಪಠ್ಯಪುಸ್ತಕಗಳು ಸುಪ್ರಸಿದ್ಧವಾದುವು. ಅವರ ಅಪಾರ ಸಂಸ್ಕೃತ ಪಾಂಡಿತ್ಯವನ್ನು ಮನ್ನಿಸಿ ಭಾರತದ ವಿದ್ವತ್ ಸಂಘಗಳು ಮಾತ್ರವಲ್ಲ ಇಂಗ್ಲೆಂಡ್, ಜರ್ಮನಿ, ಅಮೆರಿಕ, ಇಟಲಿ, ಫ್ರಾನ್ಸ್ ಮುಂತಾದ ರಾಷ್ಟ್ರಗಳ ವಿದ್ವತ್ ಸಂಘಗಳು ಕೂಡ ಅವರನ್ನು ತಮ್ಮ ಗೌರವ ಸದಸ್ಯರನ್ನಾಗಿ ಮಾಡಿಕೊಂಡಿದ್ದುವು.

ವಿಯೆನ್ನಾದಲ್ಲಿ ನಡೆದ ಪ್ರಾಚ್ಯ ವಿದ್ಯಾ ವಿಶಾರದರ ಸಮ್ಮೇಳನಕ್ಕೆ ಭಾಂಡಾರ್‌ಕರ್ ಮುಂಬಯಿ ಪ್ರಾಂತದ ಪ್ರತಿನಿಧಿಯಾಗಿ ಹೋಗಿದ್ದರು. 1872ರಲ್ಲಿ ಅವರು 'ಇಂಡಿಯನ್ ಆಂಟಿಕ್ವರಿ' ಎಂಬ ಪ್ರಾಚೀನ ವಿಷಯ ಅನ್ವೇಷಣಾ



ನಿಯತಕಾಲಿಕವನ್ನು ಸ್ಥಾಪಿಸಿದರು. ಇದು ಭಾರತದ ಖ್ಯಾತ ಸಂಶೋಧನಾ ಪತ್ರಿಕೆಯಾಗಿ ರೂಪುಗೊಂಡಿತು. ಇವರು 1884ರಲ್ಲಿ ಪ್ರಕಟಿಸಿದ 'ದಕ್ಷಿಣದ ಆರಂಭಕಾಲದ ಇತಿಹಾಸ' ಕೂಡ ಭಾರತ ಇತಿಹಾಸ ಕ್ಷೇತ್ರಕ್ಕೆ ಅಮೂಲ್ಯ ಕೊಡುಗೆ. ಇವರ ವಿದ್ವತ್ತನ್ನೂ ಅಪಾರ ಸಂಶೋಧನಾ [illegible]ವನ್ನೂ ಲಕ್ಷಿಸಿ ಬ್ರಿಟಿಷ್ ಸರಕಾರ ಇವರಿಗೆ 'ಸರ್' ಪ್ರಶಸ್ತಿ ಕೊಟ್ಟು ಗೌರವಿಸಿತು. 88 ವರ್ಷಗಳ ಸಾರ್ಥಕ ಬಾಳನ್ನು ನಡೆಸಿದ ಭಾಂಡಾರ್‌ಕರ್ 1925ರಲ್ಲಿ ನಿಧನಹೊಂದಿದರು.

ಅವರ ಜ್ಞಾಪಕಾರ್ಥವಾಗಿ ರೂಪುಗೊಂಡ ಪುಣೆಯ 'ಭಾಂಡಾರ್‌ಕರ್ ಪ್ರಾಚ್ಯ ಸಂಶೋಧನಾ ಸಂಸ್ಥೆ' ಇವರು ಆರಂಭಿಸಿದ ಐತಿಹಾಸಿಕ ಮತ್ತು ಸಾಂಸ್ಕೃತಿಕ ವಿಚಾರಗಳ ಸಂಶೋಧನೆಯನ್ನು ಮುಂದುವರಿಸಿಕೊಂಡು ಬರುತ್ತಿದೆ.

ಆರ್.ಡಿ. ಕಟಾರಿ

ಭಾರತ ನೌಕಾಪಡೆಯ ಹಿರಿಯ ಅಧಿಕಾರ ಸ್ಥಾನಕ್ಕೆ ನೇಮಿತರಾದ ಪ್ರಥಮ ಭಾರತೀಯ. ವೈಸ್ ಅಡ್ಮಿರಲ್ ರಾಮದಾಸ್ ಕಟಾರಿ.

ಇವರು 1911 ಅಕ್ಟೋಬರ್ 8ರಂದು ಮದರಾಸಿನ ಚಿಂಗಲ್‌ಪೇಟ್‌ನಲ್ಲಿ ಹುಟ್ಟಿದರು. ವಿದ್ಯಾಭ್ಯಾಸ ಹೈದರಾಬಾದಿನಲ್ಲಿ. 1927ರಲ್ಲಿ 'ಡಫರಿನ್' ನೌಕಾ ತರಬೇತಿ ಕೇಂದ್ರ ಸ್ಥಾಪಿತವಾದಾಗ, ಕಟಾರಿಯವರು ಅಲ್ಲಿಯ ಪ್ರವೇಶ ಪರೀಕ್ಷೆಯಲ್ಲಿ ಮೊದಲನೆಯವರಾಗಿ ತೇರ್ಗಡೆಹೊಂದಿ. ಆ ಕೇಂದ್ರದ ಪ್ರಥಮ ವಿದ್ಯಾರ್ಥಿಯಾದರು. ವೈಸರಾಯರ ಸುವರ್ಣಪದಕ ಪಡೆದವರಲ್ಲಿಯೂ ಇವರೇ ಪ್ರಥಮರು.

ತರಬೇತಿಯ ಅನಂತರ ಭಾರತೀಯ ನೌಕಾದಳ ಸೇರಿದ ಕಟಾರಿ ಅವರು ಎರಡನೆಯ ಜಾಗತಿಕ ಯುದ್ಧದ ಸಮಯದಲ್ಲಿ ಅಟ್ಲಾಂಟಿಕ್ ಮತ್ತು ಹಿಂದೂ ಮಹಾಸಾಗರಗಳಲ್ಲಿ ವಿವಿಧ ಅಧಿಕಾರಗಳಲ್ಲಿದ್ದು ಸಮರ್ಥ ಸೇವೆ ಸಲ್ಲಿಸಿದರು. ಮುಂದೆ ಜಲಾಂತರ್ಗಾಮಿ ವಿನಾಶ ಕೆಲಸದಲ್ಲಿ ಪರಿಣತಿ ಪಡೆದು, ಆ ವಿಷಯದ ಶಿಕ್ಷಕರೂ ಆಗಿದ್ದರು. ಐ.ಎನ್.ಎಸ್. 'ರಜಪೂತ್' ನೌಕೆಯಲ್ಲಿ 1951-52ರ ವರೆಗೆ ಉನ್ನತ ಅಧಿಕಾರದಲ್ಲಿದ್ದರು. ಮರುವರ್ಷ ಲಂಡನಿನ ಇಂಪೀರಿಯಲ್ ಡಿಫೆನ್ಸ್ ಕಾಲೇಜಿನಲ್ಲಿ ಪ್ರೌಢ ತರಬೇತಿ ಪಡೆದರು. ನೌಕಾ ಬಲದ ಡೆಪ್ಯುಟಿ ಚೀಫ್, ಫ್ಲ್ಯಾಗ್ ಆಫೀಸರ್ ಕಮಾಂಡಿಂಗ್—ಈ ಹುದ್ದೆಗಳಾದ ಬಳಿಕ 1958ರಲ್ಲಿ ಭಾರತ ನೌಕಾಬಲಾಧಿಪತಿಯಾದರು.

ಈ ಅಧಿಕಾರದಿಂದ ನಿವೃತ್ತಿಯಾದ ಮೇಲೂ ಕಟಾರಿಯವರು ಹಲವು ಸಂಸ್ಥೆಗಳಲ್ಲಿ ಸಕ್ರಿಯ ಪಾತ್ರ ವಹಿಸಿದರು. 1961-69ರ ಅವಧಿಯಲ್ಲಿ ಅವರು ಬರ್ಮಾದಲ್ಲಿ ಭಾರತೀಯ ರಾಯಭಾರಿಯಾದರು. ಅನಂತರ ಮಜಗಾಂವ್ ಹಡಗುಕಟ್ಟೆ ಹಾಗೂ ಗೋವಾ ನೌಕಾಂಗಣ ಸಂಸ್ಥೆಗಳ ಗೌರವ ಅಧ್ಯಕ್ಷರಾಗಿದ್ದರು.

ಆರ್.ಡಿ. ರಾನಡೆ

'ಒಬ್ಬ ದೇವರು—ಒಂದು ಜಗತ್ತು—ಒಂದು ಮಾನವತೆ' ಎಂಬ ಸೂತ್ರವನ್ನು ಪ್ರತಿಪಾದಿಸಿದವರು ಡಾ. ರಾಮಭಾವು ರಾನಡೆ.

ಅವರು ಆತ್ಮಜ್ಞಾನದ ಸಾಧಕರಾಗಿ, ತತ್ತ್ವಜ್ಞಾನದ ಬೋಧಕರಾಗಿ 'ಗುರುದೇವ' ಎನಿಸಿದ್ದರು.

ರಾಮಭಾವು ಜನಿಸಿದ್ದು 1886ರಲ್ಲಿ. ಜಮಖಂಡಿಯಲ್ಲಿ ಬಾಲ್ಯ [illegible] ಇವರು ಹಿರಿಯ ಸಂತ ಭಾವುಸಾಹೇಬ್ ಮಹಾರಾಜರಿಂದ ಪ್ರಭಾವಿತರಾದರು. ಪುಣೆಯ ಫರ್ಗುಸನ್ ಕಾಲೇಜಿನಲ್ಲಿ, ತತ್ತ್ವಜ್ಞಾನದಲ್ಲಿ ಎಂ.ಎ. ಪದವಿ ಪಡೆದರು. ಪೌರಸ್ತ್ಯ—ಪಾಶ್ಚಾತ್ಯ ತತ್ತ್ವಜ್ಞಾನಗಳೆರಡನ್ನೂ ಚೆನ್ನಾಗಿ ಅಭ್ಯಸಿಸಿದರು. ಆ ಕಾಲೇಜಿನಲ್ಲೇ ಅಧ್ಯಾಪಕರೂ ಪ್ರಾಧ್ಯಾಪಕರೂ ಆದರು.



ಸಾಧಕ, ಬೋಧಕ : ರಾಮಭಾವು

ಕೆಲವು ವರ್ಷಗಳ ಬಳಿಕ ಅಲಹಾಬಾದಿನ ವಿಶ್ವವಿದ್ಯಾನಿಲಯ ಸೇರಿದರು. ಅಲ್ಲಿ ಡೀನ್ ಮತ್ತು ವೈಸ್ ಛಾನ್ಸಲರ್ ಆದರು. 1946ರಲ್ಲಿ ನಿವೃತ್ತಿಯ ವರೆಗೂ ಅಲ್ಲಿ ಕೆಲಸ ನಿರ್ವಹಿಸಿದರು. ಇವರ ವಿದ್ವತ್ ಸೇವೆಯನ್ನು ಮನಗಂಡು, ಈ ವಿಶ್ವವಿದ್ಯಾನಿಲಯ, 1947ರಲ್ಲಿ ವಿಶೇಷ ಘಟಿಕೋತ್ಸವ ಏರ್ಪಡಿಸಿ ಅವರಿಗೆ ಡಾಕ್ಟರೇಟ್ ಪದವಿ ನೀಡಿ ಗೌರವಿಸಿತು. ಅಧ್ಯಾಪಕವೃತ್ತಿಯಿಂದ ನಿವೃತ್ತರಾದ ಮೇಲೆ ಕರ್ನಾಟಕದಲ್ಲಿ —ಬಿಜಾಪುರ ಜಿಲ್ಲೆಯ ನಿಂಬಾಳದಲ್ಲಿ— ನೆಲೆಸಿದರು. ಇಲ್ಲಿ ಅಧ್ಯಾತ್ಮ ವಿದ್ಯಾಲಯವನ್ನು ಸ್ಥಾಪಿಸಿದರು.

ಇವರ ಪ್ರಖ್ಯಾತ ಕೃತಿಗಳು : 'ಮಹಾರಾಷ್ಟ್ರದಲ್ಲಿ ಅನುಭಾವ', 'ಹಿಂದಿ ಸಾಹಿತ್ಯದಲ್ಲಿಯ ಪರಮಾರ್ಥ ಪಥ' ಮತ್ತು 'ಕನ್ನಡ ಸಾಹಿತ್ಯದಲ್ಲಿ ಅನುಭಾವ'.

ಗುರುದೇವ ರಾನಡೆಯವರು 1957ರಲ್ಲಿ ನಿಧನರಾದರು.

ಆರ್. ಶ್ಯಾಮಶಾಸ್ತ್ರಿ

ಮೈಸೂರಿನ ಪ್ರಾಚ್ಯ ಗ್ರಂಥಭಂಡಾರದ ಪ್ರಯತ್ನದಿಂದಾಗಿ ಕೌಟಿಲ್ಯನ 'ಅರ್ಥಶಾಸ್ತ್ರ' ಬೆಳಕಿಗೆ ಬಂದಿತು, ಇಂಗ್ಲಿಷಿನಲ್ಲಿ ಅನುವಾದಗೊಂಡಿತು. ಭಾರತೀಯ ಇತಿಹಾಸ ರಚನೆಯಲ್ಲಿ ಒಂದು ಮಹತ್ವದ ಘಟನೆ. ಆ ಗ್ರಂಥದ ಪ್ರತಿಯನ್ನು ಗುರುತಿಸಿ ಅದನ್ನು ಅನುವಾದಿಸಿದವರು ಆರ್. ಶ್ಯಾಮಶಾಸ್ತ್ರೀ.

ಶ್ಯಾಮಶಾಸ್ತ್ರೀ 1868ರಲ್ಲಿ ರುದ್ರಪಟ್ಟಣದಲ್ಲಿ ಜನಿಸಿದರು. ಇವರು ಪಂಡಿತ ಮನೆತನದವರು. ಮೈಸೂರಿನ ಮಹಾರಾಜರ ಸಂಸ್ಕೃತ ಕಾಲೇಜಿನಲ್ಲಿ ಮೊದಲು ಶಿಕ್ಷಣ ಪಡೆದರು. ಅನಂತರ [illegible] ಸೆಂಟ್ರಲ್ ಕಾಲೇಜಿನಲ್ಲಿ ವ್ಯಾಸಂಗ ಮಾಡಿ [illegible] 1890ರಲ್ಲಿ ಪದವೀಧರರಾದರು. ಆಗ ದಿವಾನರಾಗಿದ್ದ ಶೇಷಾದ್ರಿ ಅಯ್ಯರ್ ಇವರ ಪಾಂಡಿತ್ಯವನ್ನು ಮೆಚ್ಚಿ, [illegible] ಹೇಳಲು ಅವರನ್ನು ಸ್ವಂತ ಅಧ್ಯಾಪಕರನ್ನಾಗಿ ನಿಯಮಿಸಿಕೊಂಡರು.

ಅನಂತರ ಶ್ಯಾಮಶಾಸ್ತ್ರೀ ಮೈಸೂರಿನ ಪ್ರಾಚ್ಯ ಗ್ರಂಥ ಭಂಡಾರದಲ್ಲಿ ಗ್ರಂಥಾಲಯ ಅಧಿಕಾರಿಯಾದರು. ಅಲ್ಲಿ ಸಂಸ್ಕೃತ ಬರೆಹಗಳ ಪ್ರಕಟಣೆಯನ್ನೂ ಭಾರತಾಧ್ಯಯನವನ್ನೂ ಕೈಗೊಂಡರು. [illegible] ಮಾಡುವ ಕೆಲಸವೂ ಇವರ ಪಾಲಿಗೆ ಬಂದಿತು. ಆಗ ಕೌಟಿಲ್ಯನ 'ಅರ್ಥಶಾಸ್ತ್ರ' ಇವರ ಕೈಗೆ ಸಿಕ್ಕಿತು. [illegible] ಪ್ರಕಟಿಸಿದರು. 1912ರಲ್ಲಿ [illegible]

ಅನಂತರ ಶ್ಯಾಮಶಾಸ್ತ್ರಿಯವರು ಪರ್ಷಿಯಾದ ರಾಜನೀತಿಯ ಬಗೆಗೆ ಹಲವಾರು ಲೇಖನಗಳನ್ನು ಬರೆದರು.

ಸ್ವಲ್ಪ ಕಾಲ ಹಾಸನದಲ್ಲಿನ ಸಂಸ್ಕೃತ ಕಾಲೇಜಿನ ಪ್ರಿನ್ಸಿಪಾಲರಾಗಿ, ಅನಂತರ ಮೈಸೂರಿನ ಪ್ರಾಚ್ಯ ಗ್ರಂಥಭಂಡಾರದ ಮೇಲ್ವಿಚಾರಕರಾಗಿ, ಮೈಸೂರಿನ ಪುರಾತತ್ತ್ವ ಶೋಧನಶಾಖೆಯ ನಿರ್ದೇಶಕರಾಗಿ, ಮೈಸೂರು ವಿಶ್ವವಿದ್ಯಾನಿಲಯದ ಇತಿಹಾಸ ಪ್ರಾಧ್ಯಾಪಕರಾಗಿ ಶ್ಯಾಮಶಾಸ್ತ್ರಿಯವರು ಕೆಲಸ ಮಾಡಿದರು. 1936ರಲ್ಲಿ 'ವೇದಾಂಗ ಜ್ಯೋತಿಷ'ವನ್ನು ಆಂಗ್ಲಭಾಷೆಗೆ ಅನುವಾದಿಸಿದರು. ಶ್ಯಾಮಶಾಸ್ತ್ರಿಯವರ ದುಡಿಮೆಗೆ, ಅಧ್ಯಯನಕ್ಕೆ ವಿರಾಮವೆಂಬುದೇ ಇರಲಿಲ್ಲ. ಕ್ರಿ. ಶ. ಒಂದು, ಎರಡನೆಯ ಶತಮಾನದ ಗ್ರೀಕ್ ಕೃತಿ 'ಎಕ್ಸರಿಂಕಸ್ ಪೆಪಿರಿ'ಯನ್ನು ಕುರಿತ ಒಂದು ಲೇಖನ ಬರೆಯುವುದಕ್ಕಾಗಿ ಅವರು ಗ್ರೀಕ್ ಭಾಷೆ ಕಲಿತರು.

1921ರಲ್ಲಿ ಕಲ್ಕತ್ತಾ ವಿಶ್ವವಿದ್ಯಾಲಯ ಅವರಿಗೆ ಗೌರವ ಪಿ ಎಚ್.ಡಿ. ಪ್ರಶಸ್ತಿಯನ್ನು ಕೊಟ್ಟಿತು. 1925ರಲ್ಲಿ ಮೈಸೂರು ಮಹಾರಾಜರು ಅವರಿಗೆ 'ಅರ್ಥಶಾಸ್ತ್ರ ವಿಶಾರದ' ಎಂಬ ಬಿರುದು ಕೊಟ್ಟರು. 1930ರಲ್ಲಿ ಬ್ರಿಟಿಷ್ ಸರಕಾರ 'ಮಹಾಮಹೋಪಾಧ್ಯಾಯ' ಎಂಬ ಪ್ರಶಸ್ತಿ ಕೊಟ್ಟು ಅವರನ್ನು ಗೌರವಿಸಿತು.

1943ರಲ್ಲಿ ಶಾಸ್ತ್ರಿಯವರು ನಿಧನರಾದರು.

ಆರ್. ಸಿ. ಬೋಸ್

18ನೆಯ ಶತಮಾನದ ಜರ್ಮನಿಯ ಪ್ರಸಿದ್ಧ ಗಣಿತಜ್ಞ ಆಯ್ಲರ್ ಹೊಸ ರೀತಿಯ ಮಾಯಾಚೌಕವನ್ನು ಕಲ್ಪಿಸಿದ. ಇದರಲ್ಲಿ ಸಂಖ್ಯೆಗಳ ಬದಲಾಗಿ ಅಕ್ಷರಗಳನ್ನು ಅಳವಡಿಸಿದ: ಸಂಖ್ಯೆಗಳ ಮೊತ್ತ ಎಲ್ಲ ಸಾಲುಗಳಲ್ಲೂ ಒಂದೇ ತೆರನಾಗಿರಬೇಕೆಂಬ ನಿಯಮದ ಬದಲು ಒಂದು ಸಾಲಿನಲ್ಲಿ ಒಂದೇ ಅಕ್ಷರ ಒಮ್ಮೆ ಮಾತ್ರ ಬರಬೇಕು ಎಂಬ ನಿಯಮವನ್ನು ರೂಪಿಸಿದ. ವಿವಿಧ ಅಂಕಣಗಳಲ್ಲಿ a, b, c, ಅಥವಾ α, β, γ ಮೊದಲಾದ ಅಕ್ಷರಗಳಿರುವ ಚೌಕಗಳನ್ನಷ್ಟೇ ಅಲ್ಲದೆ $a\alpha, b\beta, c\gamma$ ಮೊದಲಾದ ಸಮ್ಮಿಲಿತ ಅಕ್ಷರಗಳಿರುವ ಗ್ರೆಕೊ-ರೋಮನ್ ಚೌಕಗಳನ್ನು ಅವನು ರಚಿಸಿದ. ಇಂಥ ಚೌಕ ರಚನೆಗಳನ್ನು ಅಧ್ಯಯನ ಮಾಡಿದ ಆಯ್ಲರ್, 2ರಿಂದ ಎರಡು ಬಾರಿ ಭಾಗಿಸಲ್ಪಡುವ 6, 10, 14 ಸಂಖ್ಯೆಗಳಷ್ಟು ಉದ್ದಕ್ಕೂ ಅಡ್ಡಕ್ಕೂ ಅಂಕಣಗಳಿರುವ ಗ್ರೆಕೊ-ರೋಮನ್ ಚೌಕಗಳನ್ನು ರಚಿಸಲು ಅಸಾಧ್ಯ ಎಂದ. ಆಯ್ಲರನ ಈ ಕಲ್ಪನೆ ತಪ್ಪು ಎಂದು ತೋರಿಸಿಕೊಟ್ಟ ಗಣಿತಜ್ಞ ಆರ್.ಸಿ. ಬೋಸ್.



ರಾಜಚಂದ್ರ ಬೋಸ್ 1901 ಜೂನ್ 19ರಂದು ಜನಿಸಿದರು. ಬಾಲ್ಯದಲ್ಲಿಯೇ ಹೆತ್ತವರನ್ನು ಕಳೆದುಕೊಂಡಿದ್ದರು. ಕಾಲೇಜಿನ ವಿದ್ಯಾಭ್ಯಾಸ ವಿದ್ಯಾರ್ಥಿವೇತನದ ನೆರವಿನಿಂದ ನಡೆಯಿತು. ಶುದ್ಧಗಣಿತ ಬಹಳ ಮೆಚ್ಚಿನ ವಿಷಯವಾಗಿತ್ತು. ಕಲ್ಕತ್ತಾ ವಿಶ್ವವಿದ್ಯಾನಿಲಯದಲ್ಲಿ ಎಂ. ಎಸ್‌ಸಿ. ಹಾಗೂ ಡಿ. ಲಿಟ್. ಪದವಿಗಳನ್ನು ಪಡೆದರು. ಸ್ವಲ್ಪಕಾಲ ಗಣಿತ ಅಧ್ಯಾಪಕರಾಗಿದ್ದರು. ಅನಂತರ ಸಂಖ್ಯಾವಿಜ್ಞಾನ ಸಂಸ್ಥೆಗೆ ಮಹಾಲನೋಬಿಸ್ ಆಮಂತ್ರಿಸಿದಾಗ ಅಲ್ಲಿ ಹೋಗಿ ಸೇವೆ ಸಲ್ಲಿಸಿದರು. ಮುಂದೆ ಕಲ್ಕತ್ತಾ ವಿಶ್ವವಿದ್ಯಾನಿಲಯದಲ್ಲಿ ಸಂಖ್ಯಾವಿಜ್ಞಾನ ವಿಭಾಗದ ಮುಖ್ಯಸ್ಥರಾದರು. 1947ರಲ್ಲಿ ಕೊಲಂಬಿಯಾ ವಿಶ್ವವಿದ್ಯಾನಿಲಯದ ಸಂದರ್ಶಕ ಪ್ರಾಧ್ಯಾಪಕರಾಗಿದ್ದರು. 1949ರಲ್ಲಿ ಬೋಸರು ಅಮೆರಿಕ ಸಂಯುಕ್ತ ಸಂಸ್ಥಾನದ ನಾರ್ತ್ ಕೆರೊಲೀನ್ ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರಾದರು.

ಟೆಲಿಗ್ರಾಫ್ ಸಂಪರ್ಕದಲ್ಲಿ ಬಳಸುವ ಸಂಕೇತ —ಚುಕ್ಕೆ ಗೀಟುಗಳದ್ದು. ಇಂಥ ಸಂಕೇತಗಳು ಸೆಕೆಂಡಿಗೆ 2,000ದಂತೆ ಸಾಗುವಾಗ ಮಿನಿಟಿಗೆ ಒಂದರಂತೆ ತಪ್ಪಾಗುವ ಸಾಧ್ಯತೆಯಿದೆ. ಸಮುಚ್ಚಯ ಸಿದ್ಧಾಂತ ಹಾಗೂ ಪ್ರಕ್ಷೇಪ ರೇಖಾಗಣಿತಗಳ ಕಲ್ಪನೆಗಳನ್ನು ಅಳವಡಿಸಿ ಆರ್. ಸಿ. ಬೋಸ್ ಪಡೆದ ಹೊಸ ವ್ಯವಸ್ಥೆಯಲ್ಲಿ ತಪ್ಪುಗಳಾಗುವ ಸಾಧ್ಯತೆ ಬಹಳ ವಿರಳ. ತಪ್ಪು ಆದರೂ 300 ವರ್ಷಕ್ಕೆ ಒಂದು ಆಗಬಹುದು!

ಗಣಿತದ ವಿವಿಧ ಕ್ಷೇತ್ರಗಳಲ್ಲಿ ಪರಿಶ್ರಮವಿರುವ ಬೋಸ್ ಇಂದಿನ ಮಹಾಗಣಿತಜ್ಞರಲ್ಲಿ ಒಬ್ಬರು.

ಆರ್. ಸಿ. ಮಜುಮ್‌ದಾರ್

ಅಂತರರಾಷ್ಟ್ರೀಯ ಖ್ಯಾತಿ ಪಡೆದಿರುವ ಭಾರತೀಯ ಇತಿಹಾಸಕಾರ— ಆರ್. ಸಿ. ಮಜುಮ್‌ದಾರ್.

ರಮೇಶ ಚಂದ್ರ ಮಜುಮ್‌ದಾರ್ 1888 ಡಿಸೆಂಬರ್ 4ರಂದು ಈಗಿನ ಬಾಂಗ್ಲಾ ದೇಶದಲ್ಲಿರುವ ಖಂಡರಪುರದಲ್ಲಿ ಜನಿಸಿದರು. ಕಲ್ಕತ್ತಾ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ವಿದ್ಯಾಭ್ಯಾಸ ನಡೆಯಿತು. ಏಳು ವರ್ಷ ಕಾಲ ಕಲ್ಕತ್ತಾ ವಿಶ್ವವಿದ್ಯಾನಿಲಯದಲ್ಲಿ ಇತಿಹಾಸ ಅಧ್ಯಾಪಕರಾಗಿ ಕೆಲಸ ಮಾಡಿದರು. ಅನಂತರ ಢಾಕಾ ವಿಶ್ವವಿದ್ಯಾನಿಲಯದಲ್ಲಿ ಪ್ರಾಧ್ಯಾಪಕರಾದರು. 1937-42 ಅವಧಿಯಲ್ಲಿ ಆ ವಿಶ್ವವಿದ್ಯಾನಿಲಯದ ವೈಸ್ ಛಾನ್ಸಲರ್ ಆಗಿದ್ದರು. ಮುಂದೆ ವಾರಾಣಸಿಯ ಹಿಂದೂ ವಿಶ್ವವಿದ್ಯಾನಿಲಯದ ಭಾರತಾಧ್ಯಯನ ಕಾಲೇಜಿನ ಪ್ರಿನ್ಸಿಪಾಲರಾಗಿ ಕೆಲಸ ಮಾಡಿದರು. 1956–67ರಲ್ಲಿ ಅಮೆರಿಕದ ಷಿಕಾಗೊ, ಪೆನ್ಸಿಲ್‌ವೇನಿಯಾ ವಿಶ್ವವಿದ್ಯಾನಿಲಯಗಳ ಸಂದರ್ಶಕ ಪ್ರಾಧ್ಯಾಪಕರಾಗಿದ್ದರು. 1967–68ರಲ್ಲಿ ಕಲ್ಕತ್ತೆಯ ಷೆರೀಫ್ ಆಗಿಯೂ ಮಜುಮ್‌ದಾರ್ ಕೆಲಸಮಾಡಿದರು.

ಅಖಿಲ ಭಾರತ ಇತಿಹಾಸ ಅಧಿವೇಶನ, ಅಖಿಲ ಭಾರತ ಪ್ರಾಚ್ಯ ಅಧಿವೇಶನ, 22ನೆಯ ಅಂತರರಾಷ್ಟ್ರೀಯ ಪ್ರಾಚ್ಯ ಸಂಶೋಧಕರ ಅಧಿವೇಶನದ ಭಾರತಾಧ್ಯಯನ ವಿಭಾಗ–ಇವುಗಳ ಅಧ್ಯಕ್ಷರೂ ಆಗಿದ್ದರು ಮಜುಮ್‌ದಾರ್.

ಮಜುಮ್‌ದಾರ್ ಅವರಿಗೆ ಗ್ರಿಫಿತ್ ಸ್ಮಾರಕ ಬಹುಮಾನ ದೊರೆತಿದೆ. 1973ರಲ್ಲಿ ವಿಶ್ವಭಾರತಿ ವಿಶ್ವವಿದ್ಯಾನಿಲಯ ಅವರನ್ನು ದೇಶಿಕೋತ್ತಮ ಪ್ರಶಸ್ತಿ ಕೊಟ್ಟು ಗೌರವಿಸಿತು. ಮುಂಬಯಿ ಹಾಗೂ ಕಲ್ಕತ್ತಾ ಏಷ್ಯಾಟಿಕ್ ಸೊಸೈಟಿ, ರಾಯಲ್ ಏಷ್ಯಾಟಿಕ್ ಸೊಸೈಟಿ ಆಫ್ ಗ್ರೇಟ್ ಬ್ರಿಟನ್–ಈ ಸಂಸ್ಥೆಗಳ ಗೌರವ ಸದಸ್ಯರಾಗಿದ್ದಾರೆ. ಪುರಾತತ್ತ್ವ ಶೋಧನೆಯ ಸಾಂಸ್ಕೃತಿಕ ಸಲಹಾ ಮಂಡಲಿ, ಭಾರತೀಯ ಐತಿಹಾಸಿಕ ದಾಖಲೆಗಳ ಆಯೋಗ, ಅಂತರ ವಿಶ್ವವಿದ್ಯಾನಿಲಯ ಮಂಡಲಿ ಮುಂತಾದ ಅನೇಕ ಸಂಸ್ಥೆಗಳಲ್ಲಿ ಇವರು ಸಕ್ರಿಯ ಪಾತ್ರವಹಿಸಿದ್ದಾರೆ. 20ಕ್ಕೂ ಹೆಚ್ಚು ಐತಿಹಾಸಿಕ ಗ್ರಂಥಗಳನ್ನು ಬರೆದಿದ್ದಾರೆ. 'ಮಾನವನ ಇತಿಹಾಸ: ಸಾಂಸ್ಕೃತಿಕ ಮತ್ತು ವೈಜ್ಞಾನಿಕ ಬೆಳವಣಿಗೆ' ಈ ಕೃತಿ ಹೊರತರಲು ನೇಮಕವಾದ

ಸಂಕೇತ–ಚುಕ್ಕಿ : ರಾಜಚಂದ್ರ

[illegible] ಮಜುಂದಾರರ 'ಭಾರತದಲ್ಲಿ ಸ್ವಾತಂತ್ರ್ಯ ಚಳುವಳಿಯ ಇತಿಹಾಸ' (ಮೂರು ಸಂಪುಟ), 'ದೂರ ಪ್ರಾಚ್ಯದಲ್ಲಿ ಪ್ರಾಚೀನ ಭಾರತೀಯ ವಸಾಹತುಗಳು', '1857ರ ಸಿಪಾಯಿ ದಂಗೆ ಮತ್ತು ಕ್ರಾಂತಿ', 'ಭಾರತೀಯ ಧರ್ಮ' ಇವು ಅವರ ಕೃತಿಗಳಲ್ಲಿ ಕೆಲವು.

ಆರಣ್ಯಕ

ವೇದಸಾಹಿತ್ಯವನ್ನು ನಾಲ್ಕು ಭಾಗಗಳಾಗಿ ವಿಂಗಡಿಸುತ್ತಾರೆ : ಸಂಹಿತೆ, ಬ್ರಾಹ್ಮಣ, ಆರಣ್ಯಕ ಮತ್ತು ಉಪನಿಷತ್ತು. ಬ್ರಾಹ್ಮಣ ಮತ್ತು ಉಪನಿಷತ್ತುಗಳ ನಡುವೆ ಬರುವ ಆರಣ್ಯಕದಲ್ಲಿ ಇವೆರಡರ ಲಕ್ಷಣಗಳನ್ನೂ ಕಾಣಬಹುದು. ಇವರ ಬೋಧನೆ ಮತ್ತು ಮನನ ಅರಣ್ಯಗಳಲ್ಲಿ ನಡೆಯುತ್ತಿದ್ದುದರಿಂದ ಇದಕ್ಕೆ ಆರಣ್ಯಕ ಎಂಬ ಹೆಸರು ಬಂತು.

ಯಜ್ಞದಲ್ಲಿ ಅಡಗಿರುವ ಆಧ್ಯಾತ್ಮತತ್ತ್ವ, ದಾರ್ಶನಿಕ ವಿಚಾರಗಳು ಆರಣ್ಯಕದಲ್ಲಿ ವಿವೇಚಿಸಲ್ಪಟ್ಟಿವೆ. ಪ್ರಕೃತಿ, ಮಾನವವರ್ಗ, ಈ ಜಗತ್ತಿನಲ್ಲಿ ಮಾನವನ ಕರ್ತವ್ಯ, ಪರಲೋಕದಲ್ಲಿ ಅವನ ಗತಿ –ಇವು ಇದರ ವಸ್ತು : ಇವರಲ್ಲಿ ಚರ್ಚಿಸಿರುವ ವಿಚಾರಗಳು ಬ್ರಾಹ್ಮಣಗಳಲ್ಲಿ ಬರುವ ವಿಚಾರಗಳಿಗಿಂತ ಭಿನ್ನವಾಗಿದೆ. ಆರಣ್ಯಕಗಳಿಗೂ ಉಪನಿಷತ್ತುಗಳಿಗೂ ಹೆಚ್ಚಿನ ಭಾವಸಂಬಂಧವಿದೆ.

ವಿಮರ್ಶಕರ ಮತದಂತೆ ಆರಣ್ಯಕಗಳು ಸುಮಾರು ಕ್ರಿ.ಪೂ. 2500ರಿಂದ 550ರ ಅವಧಿಯಲ್ಲಿ ರಚಿತವಾದುವು.

ಋಗ್ವೇದಕ್ಕೆ ಸೇರಿದ ಐತರೇಯ ಬ್ರಾಹ್ಮಣದ ಕೆಲವು ಭಾಗಗಳು ಆರಣ್ಯಕಗಳಲ್ಲಿ ಎಲ್ಲಕ್ಕಿಂತ ಪ್ರಾಚೀನವಾದುವು ಎಂಬ ಅಭಿಪ್ರಾಯವಿದೆ. ತೈತ್ತಿರೀಯ ಆರಣ್ಯಕವೇ ಅತ್ಯಂತ ಪ್ರಾಚೀನವಾದದ್ದೆಂದು ಇನ್ನು ಕೆಲವರ ಮತ. ಋಗ್ವೇದದಲ್ಲಿರುವ ಇನ್ನೊಂದು ಆರಣ್ಯಕ ಶಾಂಖಾಯನ.

ಮೈತ್ರಾಯಣೀಯ, ತೈತ್ತಿರೀಯ ಆರಣ್ಯಕಗಳು ಕೃಷ್ಣಯಜುರ್ವೇದಕ್ಕೆ ಸೇರಿದುವು. ಬೃಹದಾರಣ್ಯಕ ಶುಕ್ಲಯಜುರ್ವೇದದ್ದು.

ತಲವಕಾರ ಆರಣ್ಯಕ ಸಾಮವೇದದ್ದು.

ಅಥರ್ವವೇದಕ್ಕೆ ಸೇರಿದಂತೆ ಉಪನಿಷತ್ತುಗಳು ಇವೆಯಾದರೂ ಆರಣ್ಯಕಗಳಿಲ್ಲ.

ನೋಡಿ : ಉಪನಿಷತ್ತು ; ಯಜುರ್ವೇದ : ವೇದ

ಆರತಿ ಸಹಾ

ನೋಡಿ : ಸಂಪುಟ–೬

ಆರಾವಳಿ ಪರ್ವತ

ಭಾರತದ ಮುಖ್ಯ ಪರ್ವತ ಶ್ರೇಣಿಗಳಲ್ಲೊಂದು ಆರಾವಳಿ. ಸುಮಾರು 350 ಮೈಲುಗಳಷ್ಟು ಉದ್ದಕ್ಕೆ ಹಬ್ಬಿರುವ ಈ ಪರ್ವತಮಾಲೆ ಪ್ರಧಾನವಾಗಿ ರಾಜಸ್ಥಾನದಲ್ಲಿದೆ.

ಥಾರ್ ಮರುಭೂಮಿಯನ್ನು ಅದರ ಪೂರ್ವಕ್ಕಿರುವ ಫಲವತ್ತಾದ ಪ್ರದೇಶಗಳಿಂದ ಆರಾವಳಿ ಪ್ರತ್ಯೇಕಿಸುತ್ತದೆ. ಹೀಗಾಗಿ ಬಿಕಾನೇರ್, ಜೋಧಪುರ, ಜೈಸಲ್ಮೇರ ಮರಳುಗಾಡಿನ ಪ್ರದೇಶವಾಗಿವೆ; ಜಯಪುರ ಉದಯಪುರಗಳು ಫಲವತ್ತಾಗಿವೆ.

ಆರಾವಳಿಯ ಸರಾಸರಿ ಎತ್ತರ 1,000ದಿಂದ 3,000 ಅಡಿ. ಅದರ ಅತ್ಯಂತ ಉನ್ನತ ಶಿಖರ ಆಬೂವಿನ ಗುರುಶಿಖರ. ಇದರ ಎತ್ತರ 5,650 ಅಡಿ. [illegible] ಉನ್ನತ ಶಿಖರಗಳಿವೆ.

ಸಾಂಭರ್ ಸರೋವರದಿಂದ ಪಶ್ಚಿಮಕ್ಕೆ ಅನೇಕ ಸಮಾಂತರ ಶ್ರೇಣಿಗಳಾಗಿ ಆರಾವಳಿ ಹರಡಿದೆ. ಇಲ್ಲಿಂದ ಈ ಪರ್ವತಮಾಲೆಯ ಅಗಲ 10ರಿಂದ 100 ಮೈಲುಗಳಷ್ಟು. ಪರ್ವತದ ಕೆಲವೆಡೆ ಶಿಖರಗಳು ಗುಲಾಬಿವರ್ಣದ ಕ್ವಾರ್ಟ್ಸೈಟ್ ಶಿಲೆಯಿಂದ ಕೂಡಿದ್ದು, ದೂರಕ್ಕೆ ಝಗಝಗಿಸುವಂತೆ ಕಾಣುತ್ತವೆ. ಆರಾವಳಿಯಲ್ಲಿ ಹಲವು ಖನಿಜ ನಿಕ್ಷೇಪಗಳಿವೆ. ಸೀಸ, ಸತು, ಡಾಲೊಮೈಟ್, ಕ್ವಾರ್ಟ್ಜೈಟ್, ಶ್ರೇಷ್ಠ ಸುಣ್ಣಕಲ್ಲು, ಹಾಸುಗಲ್ಲುಗಳು ದೊರೆಯುತ್ತವೆ. ಉದಯಪುರದ ಬಳಿ ಇರುವ ಭಾರತದ ಏಕಮಾತ್ರ ಸೀಸ ಮತ್ತು ಸತುವಿನ ಗಣಿ –ಜಾವರ್ ಗಣಿ– ಆರಾವಳಿ ಶ್ರೇಣಿಗೆ ಸೇರಿದ್ದು.

ಗಂಗಾ ಯಮುನಾ ನದೀ ಪ್ರದೇಶವನ್ನು ಸಿಂಧೂ ನದೀ ಪ್ರದೇಶದಿಂದ ಆರಾವಳಿ ಪರ್ವತ ಪ್ರತ್ಯೇಕಿಸುತ್ತದೆ. ಆರಾವಳಿಯಿಂದ ಹರಿಯುವ ಲೂನಿ ಮತ್ತು ಸಾಬಿ ನದಿಗಳು ನೈಋತ್ಯಕ್ಕೆ ತಿರುಗಿ ಕಚ್‌ನ ಕೊಲ್ಲಿಯನ್ನು ಸೇರುತ್ತವೆ. ಆರಾವಳಿ ಪರ್ವತದಿಂದ ಹರಿದುಬರುವ ಅನೇಕ ಉಪನದಿಗಳಿಂದಾಗಿ, ವಿಂಧ್ಯಪರ್ವತದಲ್ಲಿ ಹುಟ್ಟಿ ಗಂಗಾ ನದಿಯನ್ನು ಸೇರುವ ಚಂಬಲ್ ದೊಡ್ಡ ನದಿಯಾಗಿ ರೂಪುಗೊಳ್ಳುತ್ತದೆ.

ಆರಾವಳಿ ಪರ್ವತದ ಬಹು ಭಾಗ ಬೋಗಾಡು. ಕಣಿವೆಗಳೂ ಅಷ್ಟೆ. ಅಜ್ಮೀರ್ ಕಣಿವೆ ಪ್ರದೇಶ ಮಾತ್ರ ಇದಕ್ಕೆ ಅಪವಾದ. ಆರಾವಳಿಯ ವಾಯುವ್ಯ ಇಳಿಜಾರು ಆಗ್ನೇಯಕ್ಕಿಂತ ಹೆಚ್ಚು ಕಡಿದು. ವಾಯುವ್ಯ ಇಳಿಜಾರಿನಲ್ಲಿ ಹೆಚ್ಚು ಮಳೆಯಾಗುವುದರಿಂದ ದಟ್ಟವಾದ ಅರಣ್ಯಗಳಿವೆ. ಈ ಪರ್ವತಶ್ರೇಣಿಯ ದಕ್ಷಿಣ ಭಾಗದಲ್ಲಿ ಭಿಲ್ಲರು ವಾಸಿಸುತ್ತಾರೆ.

ಅತ್ಯಂತ ಪುರಾತನ ಯುಗದಲ್ಲಿ (5–7 ಕೋಟಿ ವರ್ಷಗಳ ಹಿಂದೆ) ಆರಾವಳಿ ರೂಪುಗೊಂಡಿತು; ಹಿಮಾಲಯಕ್ಕಿಂತ ಇದು ತುಂಬ ಪ್ರಾಚೀನ ಎಂದು ಭೂವಿಜ್ಞಾನಿಗಳ ಅಭಿಪ್ರಾಯ.

ಆಲ್ ಇಂಡಿಯಾ ಟ್ರೇಡ್ ಯೂನಿಯನ್ ಕಾಂಗ್ರೆಸ್

ಮೊದಲನೆಯ ಮಹಾಯುದ್ಧದ ಬಳಿಕ ಈ ಶತಮಾನದ ಎರಡು–ಮೂರನೆಯ ದಶಕಗಳ ಸಂಧಿಕಾಲದಲ್ಲಿ ಜೀವನ ನಿರ್ವಹಣೆ ಕಷ್ಟವೆನಿಸಿತು. ಶ್ರಮಜೀವಿಗಳು ತಮ್ಮ ಬೇಡಿಕೆಗಳನ್ನು ಮುಂದಿರಿಸುವುದಕ್ಕಾಗಿ ವೃತ್ತಿ ಸಂಘ ಅಥವಾ ಟ್ರೇಡ್ ಯೂನಿಯನ್‌ಗಳಲ್ಲಿ ಸಂಘಟಿತರಾದರು.

ಅಖಿಲ ಭಾರತ ಮಟ್ಟದಲ್ಲಿ ಮೊದಲು ಆರಂಭವಾದ ಇಂಥ ಸಂಘಟನೆ ಆಲ್ ಇಂಡಿಯಾ ಟ್ರೇಡ್ ಯೂನಿಯನ್ ಕಾಂಗ್ರೆಸ್ (ಎ.ಐ.ಟಿ.ಯು.ಸಿ. ಅಥವಾ ಐಟಕ್). ಇದನ್ನು 1920ರಲ್ಲಿ ಸಂಘಟಿಸಿದವರು ನಾರಾಯಣ ಮಲ್ಹಾರ ಜೋಶಿ. ಇದರ ಉದ್ಘಾಟನಾ ಅಧಿವೇಶನಕ್ಕೆ ಲಾಲಾ ಲಜಪತ ರಾಯ್ ಅಧ್ಯಕ್ಷರಾದರು. 1926ರಲ್ಲಿ ಈ ಸಂಘಟನೆಗೆ ಕಾಯಿದೆಯ ಮಾನ್ಯತೆಯೂ ದೊರೆಯಿತು.

ಈ ಸಂಘಟನೆಯ ಅನೇಕ ಪ್ರಮುಖರೂ ಕಾರ್ಯಕರ್ತರೂ ಕಮ್ಯೂನಿಸ್ಟರಾಗಿದ್ದರು. 1929ರಲ್ಲಿ ನಡೆದ ಆಲ್ ಇಂಡಿಯಾ ಟ್ರೇಡ್ ಯೂನಿಯನ್ ಕಾಂಗ್ರೆಸ್‌ನ ವಾರ್ಷಿಕಾಧಿವೇಶನದಲ್ಲಿ ಕಮ್ಯೂನಿಸ್ಟರದೇ ಮೇಲುಗೈ ಆಯಿತು. ಎ.ಐ.ಟಿ.ಯು.ಸಿ. ಅವರ ನಾಯಕತ್ವದ ಸಂಘಟನೆ ಆಯಿತು.

ನೋಡಿ : ಎನ್. ಎಂ. ಜೋಶಿ ; ಇಂಡಿಯನ್ ನ್ಯಾಷನಲ್ ಟ್ರೇಡ್ ಯೂನಿಯನ್ ಕಾಂಗ್ರೆಸ್

ಆಲೂರ ವೆಂಕಟರಾಯ

ನೋಡಿ : ಸಂಪುಟ ೫

ಆಳ್ವಾರರು

ನೋಡಿ : ಸಂಪುಟ ೫

ಇಂಟೆಗ್ರಲ್ ಕೋಚ್ ಫ್ಯಾಕ್ಟರಿ

ಇಂಟೆಗ್ರಲ್ ಕೋಚ್ ಎಂದರೆ ಸಮಗ್ರ ರೈಲು ಡಬ್ಬಿ. ಇದನ್ನು ತಯಾರಿಸುವ ಕಾರಖಾನೆ ಮದರಾಸಿನ ಪೆರಂಬೂರಿನಲ್ಲಿದೆ.

ಇದರಲ್ಲಿ ಡಬ್ಬಿಯ ಚೌಕಟ್ಟಿನ ತಯಾರಿಕಾ ವಿಭಾಗ, ಒಳಗಿನ ಇತರ ಜೋಡಣೆಗಳ ತಯಾರಿಕಾ ವಿಭಾಗ —ಎಂದು ಎರಡು ವಿಭಾಗಗಳಿವೆ.

1955 ಅಕ್ಟೋಬರ್ 2ರಂದು ಈ ಕಾರಖಾನೆ ಆರಂಭವಾಯಿತು. ಪ್ರಯಾಣಿಕ ರೈಲು ಡಬ್ಬಿಗಳು ಇಲ್ಲಿನ ಪ್ರಧಾನ ತಯಾರಿಕೆ. 7.35 ಕೋಟಿ ರೂಪಾಯಿ ಆರಂಭ ವೆಚ್ಚದಿಂದ ಈ ಕಾರಖಾನೆ ಸ್ಥಾಪಿತವಾಯಿತು. 1973ರ ವರೆಗೆ ಅದು ತಯಾರಿಸಿದ ಸುಸಜ್ಜಿತ ಡಬ್ಬಿಗಳ ಸಂಖ್ಯೆ 5,418.



'ಸಮಗ್ರ ರೈಲು ಡಬ್ಬಿ' ನಿರ್ಮಾಣ

ಪೆರಂಬೂರಿನ ಈ ಕಾರಖಾನೆ ಸರಕಾರಿ ರಂಗಕ್ಕೆ ಸೇರಿದ ಉದ್ಯಮ. ಮಾಮೂಲು ರೀತಿಯ ಮೂರನೆಯ ತರಗತಿ ಮತ್ತು ಮೊದಲನೆಯ ದರ್ಜೆಯ ಗಾಡಿಗಳು, ನಿದ್ರೆಗೆ ಸೌಕರ್ಯವಿರುವ 'ಸ್ಲೀಪರ್' ಡಬ್ಬಿಗಳು ಬ್ರಾಡ್‌ಗೇಜ್ ಹಾಗೂ ಮೀಟರ್‌ಗೇಜ್ ಎರಡೂ ಅಂತರಗಳಲ್ಲಿ ತಯಾರಾಗುತ್ತವೆ. ಇದಲ್ಲದೆ ಡೀಸೆಲ್ ರೈಲು ಬಂಡಿ ಮತ್ತು ಹವಾನಿಯಂತ್ರಿತ ಡಬ್ಬಿಗಳೂ ಇಲ್ಲಿ ತಯಾರಾಗುತ್ತವೆ.

ನೋಡಿ : ರೈಲು ಬಂಡಿ —ಸಂಪುಟ ೪

ಇಂಡಿಯನ್ ಅಡ್ಮಿನಿಸ್ಟ್ರೇಟಿವ್ ಸರ್ವಿಸ್

ಸ್ವತಂತ್ರ ಭಾರತದ ರಾಷ್ಟ್ರೀಯ ಮಟ್ಟದ ಸೇವಾ ವರ್ಗಗಳಲ್ಲೊಂದು, ಇಂಡಿಯನ್ ಅಡ್ಮಿನಿಸ್ಟ್ರೇಟಿವ್ ಸರ್ವಿಸ್ (ಭಾರತೀಯ ಆಡಳಿತ ಸಂಬಂಧ ಸೇವೆ). ಐ. ಎ. ಎಸ್. ಇದರ ಸಂಕ್ಷಿಪ್ತನಾಮ.

ದೇಶ ಸ್ವತಂತ್ರವಾದಾಗ ಕೆಲವು ಬ್ರಿಟಿಷ್ ಅಧಿಕಾರಿಗಳು ನಿವೃತ್ತರಾದರು; ಇನ್ನು ಕೆಲವು ಮಂದಿ ಪಾಕಿಸ್ತಾನಕ್ಕೆ ಹೋದರು. ಇದರ ಪರಿಣಾಮವಾಗಿ ಅನೇಕ ಹುದ್ದೆಗಳು ತೆರವಾದುವು. ಆ ಪದವಿಗಳನ್ನು ಭರ್ತಿ ಮಾಡುವ ಸಮಸ್ಯೆಯನ್ನು ಸರಕಾರ ಎದುರಿಸಬೇಕಾಯಿತು. ಆ ತನಕ ಇದ್ದ ಇಂಡಿಯನ್ ಸಿವಿಲ್ ಸರ್ವಿಸ್ (ಐ.ಸಿ.ಎಸ್.) ಅನ್ನು ಇಂಡಿಯನ್ ಅಡ್ಮಿನಿಸ್ಟ್ರೇಟಿವ್ ಸರ್ವಿಸ್ ಎಂದು ಪುನರ್‌ರಚನೆ ಮಾಡಲಾಯಿತು. ಕೆಲವರನ್ನು ಐ. ಎ. ಎಸ್.ಗಾಗಿ ಪರೀಕ್ಷೆ ನಡೆಸಿಯೂ ಕೆಲವರನ್ನು ತುರ್ತು ನೇಮಕದ ಮೂಲಕವೂ ಆಡಳಿತಾಧಿಕಾರಿಗಳಾಗಿ ನೇಮಿಸಲಾಯಿತು.

ಐ.ಎ.ಎಸ್. ಹುದ್ದೆಗಳಿಗೆ ಈಗ ಭಾರತೀಯ ಲೋಕ ಸೇವಾ ಆಯೋಗ ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ಹಾಗೂ ಭಡ್ತಿಯ ಮೂಲಕ ತೆಗೆದುಕೊಳ್ಳುತ್ತಾರೆ. ಸರಕಾರದ ಕಾರ್ಯನೀತಿಯನ್ನು ಆಚರಣೆಗೆ ತರುವುದು ಈ ಅಧಿಕಾರಿಗಳ ಹೊಣೆ.

ಸ್ಪರ್ಧಾ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ, ಐ.ಎ.ಎಸ್. ಹುದ್ದೆಗೆ ನೇಮಕರಾದವರಿಗೆ ಆಡಳಿತ ತರಬೇತಿ ಕೊಡುವುದಕ್ಕೋಸ್ಕರ 1947ರಲ್ಲಿ ಐ.ಎ.ಎಸ್. ಅಧಿಕಾರಿವರ್ಗದ ತರಬೇತಿ ಕಾಲೇಜು ಆರಂಭವಾಯಿತು. ಈ ಶಾಲೆ, ಕಾಲೇಜುಗಳೆರಡೂ ಒಂದಾಗಿರುವ ನ್ಯಾಷನಲ್ ಅಕಾಡೆಮಿ ಆಫ್ ಅಡ್ಮಿನಿಸ್ಟ್ರೇಷನ್ 1959ರಲ್ಲಿ ಡೆಹ್ರಾಡೂನ್‌ನಲ್ಲಿ ಕಾರ್ಯಾರಂಭಮಾಡಿತು.

ಸ್ವತಂತ್ರ ಭಾರತದ ರಾಯಭಾರಿ ಕಚೇರಿಗಳಲ್ಲಿ ಕೆಲಸ ಮಾಡುವ ಅಧಿಕಾರಿಗಳನ್ನು ಐ.ಎ.ಎಸ್. ಗೋಸ್ಕರ ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಯಲ್ಲೇ ಆಯ್ಕೆ ಮಾಡುತ್ತಾರೆ. ಈ ಸೇವಾ ವಿಭಾಗವನ್ನು ಐ. ಎಫ್. ಎಸ್. —ಇಂಡಿಯನ್ ಫಾರಿನ್ ಸರ್ವಿಸ್— ಎಂದು ಕರೆಯುತ್ತಾರೆ.

ನೋಡಿ : ಇಂಡಿಯನ್ ಸಿವಿಲ್ ಸರ್ವಿಸ್

ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ

ಖರಗ್‌ಪುರ, ಮುಂಬಯಿ, ಮದರಾಸು, ಕಾನ್ಪುರ ಹಾಗೂ ನವದೆಹಲಿಗಳಲ್ಲಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ಐ.ಐ.ಟಿ.) ಅಥವಾ ಭಾರತೀಯ ತಂತ್ರವಿಜ್ಞಾನ ಸಂಸ್ಥೆಗಳಿವೆ. ಭಾರತದ ಕೈಗಾರಿಕೋದ್ಯಮವನ್ನು ಬೆಳೆಸಲು, ತಾಂತ್ರಿಕ ಪರಿಣತಿಯುಳ್ಳ ಪದವೀಧರರನ್ನು ತಯಾರಿ ಮಾಡುವುದು ಈ ಸಂಸ್ಥೆಗಳ ಉದ್ದೇಶ.

ಮೊದಲನೆಯದಾಗಿ ಐ.ಐ.ಟಿ. ಸ್ಥಾಪಿತವಾದದ್ದು ಖರಗ್‌ಪುರದಲ್ಲಿ—1951ರಲ್ಲಿ. ಅನಂತರ 1958, 1959, 1960ರಲ್ಲಿ ಕ್ರಮವಾಗಿ ಮುಂಬಯಿ, ಮದರಾಸು ಹಾಗೂ ಕಾನ್ಪುರಗಳಲ್ಲಿ ಐ.ಐ.ಟಿ.ಗಳು ಆರಂಭವಾದುವು. ದೆಹಲಿಯಲ್ಲಿನ ಎಂಜಿನಿಯರಿಂಗ್ ಮತ್ತು ಟೆಕ್ನಾಲಜಿ ಕಾಲೇಜನ್ನು 1963ರಲ್ಲಿ ಐ.ಐ.ಟಿ. ಮಟ್ಟಕ್ಕೆ ಏರಿಸಲಾಯಿತು.

ಈ ಸಂಸ್ಥೆಗಳಲ್ಲಿ ಸ್ನಾತಕೋತ್ತರ ಹಾಗೂ ಸ್ನಾತಕಪೂರ್ವ—ಈ ಎರಡು ಮಟ್ಟಗಳಲ್ಲೂ ತಾಂತ್ರಿಕ ಶಿಕ್ಷಣ ದೊರೆಯುತ್ತದೆ. ಇವು ಸ್ವಯಮಾಡಳಿತ ಸಂಸ್ಥೆಗಳು. ಇಲ್ಲಿ ಸಂಶೋಧನೆಗೂ ಅವಕಾಶವಿದೆ.

ಇಂಡಿಯನ್ ಏರ್‌ಲೈನ್ಸ್

ಭಾರತ ಮತ್ತು ಅದರ ನೆರೆರಾಜ್ಯಗಳಲ್ಲಿ ವಿಮಾನ ಸಾರಿಗೆ ಕೈಕೊಂಡಿರುವ ಸಂಸ್ಥೆ ಇಂಡಿಯನ್ ಏರ್‌ಲೈನ್ಸ್ ಕಾರ್ಪೊರೇಷನ್ (ಐ.ಎ.ಸಿ.). ಇದು ಅಸ್ತಿತ್ವಕ್ಕೆ ಬಂದದ್ದು 1953 ಜೂನ್ 15ರಂದು. ನಿಯಮಿತವಾಗಿ ಪ್ರಯಾಣಿಕ ಮತ್ತು ಸರಕುಯಾನಗಳನ್ನೂ ಕೆಲವು ಪ್ರಮುಖ ಕೇಂದ್ರಗಳಿಂದ ರಾತ್ರಿ ವಿಮಾನ ಅಂಚೆ ಸಾರಿಗೆಯನ್ನೂ ಇದು ನಡೆಸುತ್ತದೆ.

ಹಾರಾಟ, ಎಂಜಿನಿಯರಿಂಗ್ ಮತ್ತು ನಿರ್ವಾಹಕ ಸಿಬ್ಬಂದಿಯವರಿಗೆ ತರಬೇತಿ ಕೊಡುವ ವ್ಯವಸ್ಥೆಯನ್ನೂ ಈ ಸಂಸ್ಥೆ ಏರ್ಪಡಿಸಿದೆ. ಕಡಮೆ ವೇತನ ಪಡೆಯುವ ತನ್ನ ಉದ್ಯೋಗಿಗಳ ಪ್ರತಿಭಾವಂತ ಮಕ್ಕಳಿಗೆ ವಿದ್ಯಾರ್ಥಿ ವೇತನ ಕೊಡುವ ಏರ್ಪಾಟಿದೆ.

ಇದು ತನ್ನ ಕಾರ್ಯಕ್ಷೇತ್ರಗಳನ್ನು ದೆಹಲಿ, ಮುಂಬಯಿ, ಮದರಾಸು ಮತ್ತು ಕಲ್ಕತ್ತಾ ಎಂದು ನಾಲ್ಕು ವಲಯಗಳಾಗಿ ವಿಭಾಗಿಸಿದೆ.

ಅಂತರರಾಷ್ಟ್ರೀಯ ವಾಯುಸಾರಿಗೆ ಸಂಘದ ಸದಸ್ಯತ್ವವನ್ನೂ ಇಂಡಿಯನ್ ಏರ್‌ಲೈನ್ಸ್ ಹೊಂದಿದೆ.

ಇಂಡಿಯನ್ ಕಾಫಿ ಬೋರ್ಡ್

ಕಾಫಿ ಬೋರ್ಡ್ ಶಾಸನಬದ್ಧವಾಗಿ ರೂಪುಗೊಂಡು ಭಾರತ ಸರಕಾರದ ಆಡಳಿತಕ್ಕೆ ಒಳಪಟ್ಟ ಸಂಸ್ಥೆ.

ಭಾರತದ ತೋಟದ ಉತ್ಪತ್ತಿಗಳಲ್ಲಿ ಕಾಫಿ ಒಂದು ಪ್ರಮುಖ ಬೆಳೆ. ಇದು ಹೆಚ್ಚಾಗಿ ಬೆಳೆಯುವುದು ಮೈಸೂರು, ಮದರಾಸು ಮತ್ತು ಕೇರಳ ರಾಜ್ಯಗಳಲ್ಲಿ; ಬಿಹಾರಿನಲ್ಲೂ ಸ್ವಲ್ಪಮಟ್ಟಿಗೆ ಬೆಳೆಯುತ್ತದೆ.

ಕಾಫಿಯ ಮಾರಾಟ, ಭಾರತ ಮತ್ತು ಹೊರದೇಶಗಳಲ್ಲಿ ಅದರ ಬಳಕೆಯನ್ನು ಪ್ರಚಾರಗೊಳಿಸುವುದು ಮಂಡಲಿಯ ಮುಖ್ಯ ಕಾರ್ಯಕ್ರಮ. ಕಾಫಿ ಉದ್ಯಮದ ಹಿತದೃಷ್ಟಿಯಿಂದ ಕೃಷಿ ಮತ್ತು ತಾಂತ್ರಿಕ ಸಂಶೋಧನೆಗೆ ಬೆಂಬಲ ಕೊಡುವುದು, ಕಾಫಿ ತೋಟಗಳ ಅಭಿವೃದ್ಧಿಗೆ ಸಹಾಯ ಮಾಡುವುದು, ಕೆಲಸಗಾರರಿಗೆ ಸೌಕರ್ಯ ಒದಗಿಸುವುದು, ಪ್ರೋತ್ಸಾಹ ನೀಡುವುದು ಮುಂತಾದುವು ಮಂಡಲಿಯ ಕೆಲಸ.

ಈ ಸಂಸ್ಥೆಯ ಪ್ರಧಾನ ಕಾರ್ಯಾಲಯ ಬೆಂಗಳೂರಿನಲ್ಲಿದೆ.

ಇಂಡಿಯನ್ ಟೀ ಬೋರ್ಡ್

ಇಂಡಿಯನ್ ಟೀ ಬೋರ್ಡ್ ಶಾಸನಬದ್ಧ ಮಂಡಲಿ.

ವಿಶ್ವದ ಚಹ ಉತ್ಪಾದನೆಯಲ್ಲಿ ಭಾರತಕ್ಕೆ 2ನೆಯ ಸ್ಥಾನ. ಪ್ರಪಂಚದ ಬೇಡಿಕೆಯಲ್ಲಿ ಶೇಕಡಾ 40ಕ್ಕಿಂತ ಹೆಚ್ಚು ಭಾಗ ಪೂರೈಕೆ ಆಗುವುದು ಭಾರತದಿಂದ. ಭಾರತದಲ್ಲಿರುವ 8,000ಕ್ಕೂ ಹೆಚ್ಚು ಚಹ ತೋಟಗಳಲ್ಲಿ ಬಹು ಪಾಲು ಅಸ್ಸಾಂನಲ್ಲಿದೆ. 1971ರಲ್ಲಿ ಬೆಳೆದ 4[illegible] ಮಿಲಿಯ ಕಿಲೋಗ್ರಾಂ ಚಹದಲ್ಲಿ 212.6 ಮಿಲಿಯ ಕಿಲೋಗ್ರಾಂ ರಫ್ತಾಯಿತು.

ಚಹ ಮಾರಾಟದ ಮೇಲೆ ನಿಗಾವನ್ನಿಟ್ಟುಕೊಂಡು ಅದನ್ನು ಕ್ರಮಬದ್ಧವಾಗಿ ನಡೆಸಿಕೊಂಡು ಹೋಗುವುದು ಮಂಡಲಿಯ ಹೊಣೆ. ಚಹದ ಗುಣಮಟ್ಟ ನಿಯಂತ್ರಣವೂ ದಳ್ಳಾಳಿಗಳಿಗೆ ಮತ್ತು ಮಿಶ್ರಕರಿಗೆ ಲೈಸೆನ್ಸ್ ಕೊಡುವ ಅಧಿಕಾರವೂ ಇದಕ್ಕೆ ಸೇರಿದೆ. ಚಹ ರಫ್ತಿನ ಮೇಲಿನ ತೆರಿಗೆಯ ವರಮಾನದಿಂದ ಮಂಡಲಿಯ ಕೆಲಸ ಕಾರ್ಯಗಳು ನಡೆಯುತ್ತವೆ.

ಇಂಡಿಯನ್ ಟೆಲಿಫೋನ್ ಇಂಡಸ್ಟ್ರೀಸ್ ಲಿಮಿಟೆಡ್

ನಮ್ಮ ದೇಶದಲ್ಲಿ ಆರಂಭವಾದ ಮೊತ್ತಮೊದಲ ಸಾರ್ವಜನಿಕ ವಲಯ ಉದ್ಯಮ ಇಂಡಿಯನ್ ಟೆಲಿಫೋನ್ ಇಂಡಸ್ಟ್ರೀಸ್. ಎಲ್ಲ ಬಗೆಯ ಟೆಲಿಫೋನುಗಳನ್ನೂ ದೂರಸಂಪರ್ಕ ಉಪಕರಣಗಳನ್ನೂ ಇದು ತಯಾರಿಸುತ್ತದೆ. 1948ರಲ್ಲಿ ಬ್ರಿಟಿಷ್ ಒಂದು ಕಂಪೆನಿಯ ಸಹಕಾರದೊಡನೆ ಆರಂಭಿಸಿದಾಗ ಇದು ಸರಕಾರದ ನೇರ ಆಡಳಿತಕ್ಕೆ ಸೇರಿತ್ತು. 1950ರಲ್ಲಿ ಇದು ಷೇರು ಬಂಡವಾಳವುಳ್ಳ ಸಂಸ್ಥೆಯಾಯಿತು. ಆರಂಭಕ್ಕೆ ಇದರಲ್ಲಿ ತೊಡಗಿಸಿದ ಬಂಡವಾಳ 2ಕೋಟಿ ರೂಪಾಯಿ: ಇದರಲ್ಲಿ ಶೇಕಡಾ 90ರಷ್ಟು ಭಾರತ ಸರಕಾರದ್ದು: ಉಳಿದದ್ದು ಮೈಸೂರು ರಾಜ್ಯ ಸರಕಾರ ಮತ್ತು ಈ ಉದ್ಯಮಕ್ಕೆ ಸಹಯೋಗ ನೀಡಿದ ಬ್ರಿಟಿಷ್ ಕಂಪೆನಿಯದು. ಈ ಸಂಸ್ಥೆ ಐ.ಟಿ.ಐ. ಎಂದು ಪ್ರಸಿದ್ಧವಾಗಿದೆ.

ದೂರಸಂಪರ್ಕ ಸಾಧನೆಗಳಿಗೆ ಬೇಕಾದ ಉಪಕರಣಗಳು, ಸ್ವಯಂ ನಿಯಂತ್ರಿತ ವಾಹನಸಂಚಾರ ಮಾರ್ಗ ನಿರ್ದೇಶಕಗಳು, ಇಂಥ ಉಪಕರಣಗಳು ಮುಂತಾದುವು ಇಲ್ಲಿ ತಯಾರಾಗುತ್ತವೆ. ಬಯಲಿನಲ್ಲಿ ಉಪಯೋಗಿಸಬಹುದಾದ ಟೆಲಿಫೋನು, ಗೋಡೆಗೆ ಹತ್ತಿಕೊಂಡಂತೆ ಅಳವಡಿಸುವ ಟೆಲಿಫೋನು, ಟೆಲಿಫೋನಿನಲ್ಲಿ ಉಪಯೋಗಿಸುವ ಹೊಸ ಬಗೆಯ ವಿದ್ಯುದ್ದೀಯ ಸುರುಳಿ ಮುಂತಾದ ಹಲವು ಬಗೆಯ ಹೊಸ ಉಪಕರಣಗಳನ್ನೂ ಐ.ಟಿ.ಐ. ತಯಾರಿಸಿದೆ.

ಟೆಲಿಸಂಪರ್ಕ ಸಾಧನಗಳಿಗೆ ಇರುವ ವಿಶೇಷ ಬೇಡಿಕೆಯನ್ನು ಪೂರೈಸುವುದಕ್ಕಾಗಿ ಅಲಹಾಬಾದಿನ ಬಳಿ ನೈನಿಯಲ್ಲಿ ಎರಡು ಹೊಸ ಕಾರ್ಖಾನೆಗಳು ಸ್ಥಾಪಿಸಲ್ಪಟ್ಟಿವೆ. ಈಗ ಹಲವು ದೇಶಗಳು ಐ.ಟಿ.ಐ. ತಯಾರಿಕೆಯ ಉಪಕರಣಗಳನ್ನು ಕೊಳ್ಳುತ್ತವೆ.

ಇಂಡಿಯನ್ ನ್ಯಾಷನಲ್ ಟ್ರೇಡ್ ಯೂನಿಯನ್ ಕಾಂಗ್ರೆಸ್

1947ರಲ್ಲಿ ಆರಂಭವಾದ ಅಖಿಲ ಭಾರತ ಕಾರ್ಮಿಕ ಸಂಘಟನೆ—ಇಂಡಿಯನ್ ನ್ಯಾಷನಲ್ ಟ್ರೇಡ್ ಯೂನಿಯನ್ ಕಾಂಗ್ರೆಸ್ (ಐ. ಎನ್. ಟಿ. ಯು. ಸಿ. ಅಥವಾ ಇಂಟಕ್).

ಆರಂಭದಲ್ಲಿ ಕಮ್ಯೂನಿಸ್ಟ್ ಮುಖಂಡತ್ವದಿಂದ ಕಾರ್ಮಿಕರನ್ನು ಬೇರ್ಪಡಿಸಿ ಅವರ ಮೇಲೆ ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ಸಿನ ನಾಯಕತ್ವ ಸ್ಥಾಪಿಸುವುದಕ್ಕೋಸ್ಕರ ಈ ಸಂಘಟನೆ ಹುಟ್ಟಿತು.

ಕಾರ್ಮಿಕರು ಕೆಲಸಕಾರ್ಯಗಳನ್ನು ನಿಲ್ಲಿಸದೆ, ತಮ್ಮ ಕುಂದುಕೊರತೆಗಳ ಬಗೆಗೆ ಪರಿಹಾರ ಕೇಳುವುದು, ಅದನ್ನು ಪಡೆಯುವುದು; ಎಲ್ಲ ಬಗೆಯ ಕಾರ್ಮಿಕರಿಗೆ ಇಂಥ ಸಂಘಟನೆಯ ನೆರವು ದೊರಕುವುದು; ಕಾರ್ಮಿಕರ ಜೀವನವನ್ನು ಸ್ವಾವಲಂಬನಗೊಳಿಸಿ ಸುಧಾರಿಸುವುದು ಮುಂತಾದುವು ತನ್ನ ಧ್ಯೇಯವೆಂದು ಈ ಸಂಸ್ಥೆ ಘೋಷಿಸಿದೆ.

ಶಾಂತಿಯುತ ಮಾರ್ಗದಿಂದ ತನ್ನ ಧ್ಯೇಯಗಳನ್ನು ಸಾಧಿಸಿಕೊಳ್ಳುವುದು ಸಂಸ್ಥೆಯ ಉದ್ದೇಶ. ಅತ್ಯಂತ ಪ್ರಾತಿನಿಧಿಕ ಸಂಘಟನೆಯೆಂದು ಸರಕಾರ ಈ ಸಂಸ್ಥೆಗೆ ಮಾನ್ಯತೆ ನೀಡಿದೆ.

ಇಂಡಿಯನ್ ನ್ಯಾಷನಲ್ ಸೈನ್ಸ್ ಅಕಾಡೆಮಿ

ಭಾರತದ ಜನತೆ ಹಾಗೂ ವಿಜ್ಞಾನಿಗಳ ಮಧ್ಯೆ ಹೆಚ್ಚಿನ ಸಂಪರ್ಕ, ಸಹಕಾರ ಏರ್ಪಡಿಸುವ ಉದ್ದೇಶದಿಂದ ಸ್ಥಾಪಿತವಾದ ಸಂಸ್ಥೆ ಇಂಡಿಯನ್ ನ್ಯಾಷನಲ್ ಸೈನ್ಸ್ ಅಕಾಡೆಮಿ. ಪ್ರಧಾನ ಕಾರ್ಯಾಲಯ ದೆಹಲಿಯಲ್ಲಿದೆ.

1935ರಲ್ಲಿ ನ್ಯಾಷನಲ್ ಇನ್ಸ್‌ಟಿಟ್ಯೂಟ್ ಆಫ್ ಸೈನ್ಸಸ್ ಆಫ್ ಇಂಡಿಯಾ ಎಂಬ ಹೆಸರಿನಿಂದ ಸ್ಥಾಪಿತವಾದ ಈ ಸಂಸ್ಥೆ 1970ರಲ್ಲಿ ಇಂಡಿಯನ್ ನ್ಯಾಷನಲ್ ಸೈನ್ಸ್ ಅಕಾಡೆಮಿ ಎಂಬ ಹೆಸರು ಪಡೆಯಿತು. ವಿವಿಧ ವಿಜ್ಞಾನ ಸಂಸ್ಥೆಗಳ ನಡುವೆ ಸಹಕಾರ ಹೆಚ್ಚಿಸುವುದು, ವಿಜ್ಞಾನಿಗಳ ಸಂಶೋಧನೆಯ ಕಾರ್ಯದಲ್ಲಿ ಅಗತ್ಯವಿರುವ ಸಹಾಯ ಮಾಡುವುದು, ವಿಜ್ಞಾನಿಗಳ ಸಾಧನೆಗಳನ್ನು ಗುರುತಿಸಿ ಗೌರವಿಸುವುದು, ಹೊಸ ಸಂಶೋಧನೆಗಳನ್ನು ಒಳಗೊಂಡ ಪತ್ರಿಕೆ, ಹೊತ್ತಗೆಗಳನ್ನು ಪ್ರಕಟಿಸುವುದು—ಇವು ಅಕಾಡೆಮಿಯ ಕಾರ್ಯಕ್ರಮಗಳಲ್ಲಿ ಕೆಲವು. ಅಂತರರಾಷ್ಟ್ರೀಯ ವಿಜ್ಞಾನ ಸಮ್ಮೇಳನಗಳಿಗೆ ಭಾರತೀಯ ಪ್ರತಿನಿಧಿಗಳನ್ನು ಆಯ್ಕೆಮಾಡಿ ಕಳುಹಿಸುವ ಹೊಣೆ ಇವರದ್ದು. ದೇಶದ ವಿವಿಧ ಭಾಗಗಳಲ್ಲಿ ಶೈಕ್ಷಣಿಕ ಭಾಷಣಗಳನ್ನು ಇದು ಏರ್ಪಡಿಸುತ್ತದೆ.

ಪ್ರಮುಖ ವಿಜ್ಞಾನಿಗಳು ಅಕಾಡೆಮಿಯ ಫೆಲೋಗಳಾಗಿ ಆಯ್ಕೆಯಾಗುತ್ತಾರೆ. ಇವರು ಒಬ್ಬ ಅಧ್ಯಕ್ಷನನ್ನು ಆರಿಸುತ್ತಾರೆ. ವಿ. ಆರ್. ಖಾನೋಲ್ಕರ್ (1965-66), ಟಿ. ಆರ್. ಶೇಷಾದ್ರಿ (1967-68), ಆತ್ಮಾರಾಮ್ (1969-70), ಬಿ. ಆರ್. ಶೇಷಾಚಾರ್ (1971-72) ಇಂಡಿಯನ್ ನ್ಯಾಷನಲ್ ಸೈನ್ಸ್ ಅಕಾಡೆಮಿಯ ಅಧ್ಯಕ್ಷರಾಗಿದ್ದರು. 1973ರಲ್ಲಿ ಡಿ. ಎಸ್. ಕೊಠಾರಿ ಅಧ್ಯಕ್ಷರಾದರು.

ಇಂಡಿಯನ್ ಪೋಲೀಸ್ ಸರ್ವಿಸ್

ಅಖಿಲ ಭಾರತ ಮಟ್ಟದ ಸೇವಾ ವ್ಯವಸ್ಥೆಗಳಲ್ಲಿ ಪೋಲೀಸ್ ವಿಭಾಗವೂ ಒಂದು. ಇದನ್ನು ಇಂಡಿಯನ್ ಪೋಲೀಸ್ ಸರ್ವಿಸ್ ಎನ್ನುತ್ತಾರೆ.

1861ರಲ್ಲಿ ಇಂಡಿಯನ್ ಪೋಲೀಸ್ ಶಾಸನ ಜಾರಿಗೆ ಬಂತು. ಪ್ರತಿ ರಾಜ್ಯಕ್ಕೂ ಪ್ರತ್ಯೇಕ ಪೋಲೀಸ್ ಪಡೆ ಇರುವುದು ಭಾರತ ಪೋಲೀಸ್ ವ್ಯವಸ್ಥೆಯ ವೈಶಿಷ್ಟ್ಯ. ಒಂದು ರಾಜ್ಯದ ಪೋಲೀಸ್ ವ್ಯವಸ್ಥೆಯ ವರಿಷ್ಠ ಅಧಿಕಾರಿ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೋಲೀಸ್.

ಇಂಡಿಯನ್ ಪೋಲೀಸ್ ಸರ್ವಿಸ್ (ಐ.ಪಿ.ಎಸ್.) ಅಧಿಕಾರಿಗಳಿಗೆ ರಾಜಸ್ಥಾನದ ಅಬೂಬೆಟ್ಟದಲ್ಲಿರುವ ನ್ಯಾಷನಲ್ ಪೋಲೀಸ್ ಅಕಾಡೆಮಿಯಲ್ಲಿ ತರಬೇತಿ ದೊರೆಯುತ್ತದೆ. ಇದು 1948ರಲ್ಲಿ ಸೆಂಟ್ರಲ್ ಪೋಲೀಸ್ ಟ್ರೇನಿಂಗ್ ಕಾಲೇಜ್ ಎಂಬ ಹೆಸರಿನಲ್ಲಿ ಆರಂಭವಾಯಿತು: 1967ರಲ್ಲಿ ನ್ಯಾಷನಲ್ ಪೋಲೀಸ್ ಅಕಾಡೆಮಿ ಆಯಿತು. ನ್ಯಾಷನಲ್ ಅಕಾಡೆಮಿ ಆಫ್ ಅಡ್ಮಿನಿಸ್ಟ್ರೇಷನ್ ಸಂಸ್ಥೆಯಲ್ಲಿ ಪ್ರಥಮ ಹಂತದ ತರಬೇತಿ ಪಡೆದ ಐ.ಪಿ.ಎಸ್. ಪ್ರೊಬೇಷನರಿ ಅಧಿಕಾರಿಗಳಿಗೆ ಅಬೂಬೆಟ್ಟದ ತರಬೇತಿ ಕೇಂದ್ರದಲ್ಲಿ ಶಿಕ್ಷಣ ದೊರೆಯುತ್ತದೆ. ಅಪರಾಧಗಳಿಗೆ ಸಂಬಂಧಿಸಿದ ಕಾನೂನು, ಅಪರಾಧ ಪತ್ತೆಹಚ್ಚುವುದರಲ್ಲಿ ವೈಜ್ಞಾನಿಕ ವಿಧಾನ, ವೈದ್ಯಕೀಯ ನ್ಯಾಯಶಾಸ್ತ್ರ ಮುಂತಾದ ವಿಷಯಗಳಲ್ಲಿ ಶಿಕ್ಷಣವನ್ನೂ ಪೋಲೀಸ್ ವೈರ್‌ಲೆಸ್ ಉಪಯೋಗ, ಮೋಟರ್ ವಾಹನಗಳನ್ನು ನಡೆಸುವುದು, ವಾಹನಸಂಚಾರ ನಿರ್ವಹಣೆ, ನಕ್ಷೆ ಓದುವ ಕ್ರಮ, ಪ್ರಥಮ ಚಿಕಿತ್ಸೆ ಮುಂತಾದ ವಿಷಯಗಳಲ್ಲಿ ತರಬೇತಿಯನ್ನೂ ಇಲ್ಲಿ ಕೊಡುತ್ತಾರೆ.

ನೋಡಿ : ಪೋಲೀಸ್—ಸಂಪುಟ ೧

ಇಂಡಿಯನ್ ಫಿಲಸಾಫಿಕಲ್ ಕಾಂಗ್ರೆಸ್

ತತ್ತ್ವಜ್ಞಾನಿಗಳೊಳಗೆ ಪರಸ್ಪರ ಸಂಪರ್ಕ ಬೆಳೆಸಲು, ಸಂಬಂಧಿತ ವಿಚಾರ ಸಮಸ್ಯೆಗಳನ್ನು ಒಟ್ಟಿಗೆ ಕಲೆತು ಚರ್ಚಿಸುವ ಅವಕಾಶ ನೀಡಲು ಸ್ಥಾಪಿಸಲ್ಪಟ್ಟದ್ದು, ಇಂಡಿಯನ್ ಫಿಲಸಾಫಿಕಲ್ ಕಾಂಗ್ರೆಸ್.

ಆಗ ಪ್ರಾಧ್ಯಾಪಕರಾಗಿದ್ದ ಸರ್ವಪಲ್ಲಿ ರಾಧಾಕೃಷ್ಣನ್ ಮತ್ತು ಡಾ. ಎನ್. ಎನ್. ಸೇನ್‌ಗುಪ್ತ ಅವರ ಪ್ರಯತ್ನದಿಂದ ಇಂಡಿಯನ್ ಫಿಲಸಾಫಿಕಲ್ ಕಾಂಗ್ರೆಸ್ 1925ರಲ್ಲಿ ಅಸ್ತಿತ್ವಕ್ಕೆ ಬಂತು. ರಾಧಾಕೃಷ್ಣನ್ ಇದರ ಪ್ರಥಮ ಅಧ್ಯಕ್ಷರಾದರು. 1937ರ ವರೆಗೆ ಇವರು ಈ ಸ್ಥಾನದಲ್ಲಿದ್ದರು.

ಫಿಲಸಾಫಿಕಲ್ ಕಾಂಗ್ರೆಸಿನ ಸದಸ್ಯರು ಪ್ರತಿ ವರ್ಷ ಒಂದೆಡೆ ಕಲೆತು ವಿಚಾರ ವಿನಿಮಯ ಮಾಡುತ್ತಾರೆ.

ತತ್ತ್ವಜ್ಞಾನವನ್ನು ಕುರಿತು ಉತ್ತಮ ಸಾಹಿತ್ಯವನ್ನು ಪ್ರಕಟಿಸುವ ಕಾರ್ಯವನ್ನೂ ಕಾಂಗ್ರೆಸ್ ಮಾಡುತ್ತದೆ.

ಇಂಡಿಯನ್ ಫೆಡರೇಷನ್ ಆಫ್ ವರ್ಕಿಂಗ್ ಜರ್ನಲಿಸ್ಟ್ಸ್

ಭಾರತದಲ್ಲಿ ಪತ್ರಿಕೆ ನಡೆಸುವುದು ಭಾರಿ ವ್ಯಾಪಾರೋದ್ಯಮವಾಗಿ ಬೆಳೆದು ಲಾಭ ಸಂಪಾದಿಸತೊಡಗಿದರೂ ಅದರಿಂದ ಪತ್ರಿಕೋದ್ಯೋಗಿಗಳಿಗೆ ಅಷ್ಟೇನೂ ಪ್ರಯೋಜನವಾಗಲಿಲ್ಲ. ಅವರಿಗೆ ನ್ಯಾಯವಾಗಿ ದೊರೆಯಬೇಕಾದ ಸೌಲಭ್ಯಗಳು ದೊರೆಯಲಿಲ್ಲ. ಇವನ್ನು ದೊರಕಿಸಿಕೊಳ್ಳಲು ಸಂಘಟಿತರಾಗುವುದು ಅವಶ್ಯವೆನಿಸಿತು. ಇದರ ಪರಿಣಾಮವಾಗಿ 1950ರಲ್ಲಿ ನಡೆದ ಕಾರ್ಯನಿರತ ಪತ್ರಕರ್ತರ ರಾಷ್ಟ್ರೀಯ ಸಮಾವೇಶನದಲ್ಲಿ 'ಇಂಡಿಯನ್ ಫೆಡರೇಷನ್ ಆಫ್ ವರ್ಕಿಂಗ್ ಜರ್ನಲಿಸ್ಟ್ಸ್' (ಭಾರತ ಕಾರ್ಯನಿರತ ಪತ್ರಕರ್ತರ ಒಕ್ಕೂಟ) ರೂಪುಗೊಂಡಿತು. ಈ ಸಂಸ್ಥೆ ವೃದ್ಧಿಗೊಂಡು, ಅದರ ಚಟುವಟಿಕೆ ಎಲ್ಲ ರಾಜ್ಯಗಳಿಗೂ ಹರಡಿತು.

ಕಾರ್ಯನಿರತ ಪತ್ರಕರ್ತರು, ತಮ್ಮನ್ನು ಕಾರ್ಮಿಕರೆಂದು ಅಂಗೀಕರಿಸಬೇಕೆಂದೂ ತಾವು ಕೈಗಾರಿಕಾ ವಿವಾದಗಳ ಕಾಯಿದೆಯ ವ್ಯಾಪ್ತಿಗೊಳಗಾಗಬೇಕೆಂದೂ ಇಚ್ಛಿಸಿದರು. ಆದರೆ ಇವರನ್ನು ಬುದ್ಧಿಕರ್ಮಿಗಳು ಅಥವಾ ಮೇಲ್ವಿಚಾರಣಾ ಉದ್ಯೋಗಿಗಳೆಂದು ಸರಕಾರ ಪರಿಗಣಿಸಿದ್ದರಿಂದ, ಕೈಗಾರಿಕಾ ವಿವಾದಗಳ ಕಾಯಿದೆ ಇವರಿಗೆ ಅನ್ವಯವಾಗಲಿಲ್ಲ.

ಈ ಕಾಯಿದೆಯ ಲಾಭ ಪಡೆಯಲು, ಕೈಗಾರಿಕಾ ವಿವಾದಗಳ ಕಾಯಿದೆಯನ್ನು ತಿದ್ದುಪಡಿ ಮಾಡಲು, ಕಾರ್ಯನಿರತ ಪತ್ರಕರ್ತರು ಚಳುವಳಿ ಆರಂಭಿಸಿದರು. ಇದು ಯಶಸ್ವಿಯಾಯಿತು: ಕೇಂದ್ರ ಸರಕಾರ ಪ್ರೆಸ್ ಕಮಿಷನ್ ಸ್ಥಾಪಿಸಿತು. ಈ ಕಮಿಷನಿನ ಶಿಫಾರಸಿನ ಮೇರೆಗೆ 1955ರಲ್ಲಿ ಕಾರ್ಯನಿರತ ಪತ್ರಕರ್ತರ ಕಾಯಿದೆ ಜಾರಿಗೆ ಬಂತು. ಅನಂತರ ಕಾರ್ಯನಿರತ ಪತ್ರಕರ್ತರ ಮೊದಲನೆಯ ವೇತನ ಮಂಡಲಿಯನ್ನು ರಚಿಸಲಾಯಿತು. ಆದರೆ ವೇತನ ಮಂಡಲಿ ಮಾಡಿದ ಶಿಫಾರಸುಗಳನ್ನು ವರಿಷ್ಠ ನ್ಯಾಯಾಲಯ ರದ್ದುಗೊಳಿಸಿತು. ಇದರಿಂದಾಗಿ 1958ರಲ್ಲಿ ಸರಕಾರ 'ಕಾರ್ಯನಿರತ ಪತ್ರಕರ್ತರ ವೇತನ ನಿರ್ಣಯ ಕಾಯಿದೆ'ಯನ್ನು ಆಚರಣೆಗೆ ತಂದಿತು.

ಕಾರ್ಯನಿರತ ಪತ್ರಿಕೋದ್ಯಮಿಗಳ ಸೇವಾಸ್ಥಿತಿ, ಸೌಲಭ್ಯ, ವೇತನ ಮುಂತಾದವನ್ನು ಉತ್ತಮಗೊಳಿಸುವುದು. ಅವರ ಹಿತರಕ್ಷಣೆ ಮಾಡುವುದು, ಪತ್ರಿಕಾಕರ್ತರ ವೃತ್ತಿಶಿಕ್ಷಣವನ್ನು ಏರ್ಪಡಿಸುವುದು, ಅವರ ವೃತ್ತಿಕೌಶಲವನ್ನು ಉತ್ತಮಗೊಳಿಸಲು ಶ್ರಮಿಸುವುದು ಫೆಡರೇಷನಿನ ಮುಖ್ಯ ಧ್ಯೇಯಗಳು.

ಇಂಡಿಯನ್ ಮಿಲಿಟರಿ ಅಕಾಡೆಮಿ

ಡೆಹ್ರಾಡೂನಿನ ರಮ್ಯ ಪ್ರಕೃತಿಯ ಮಡಿಲಲ್ಲಿ ಇರುವ ಇಂಡಿಯನ್ ಮಿಲಿಟರಿ ಅಕಾಡೆಮಿ ಭಾರತದ ಸೇನೆಯ ಅಧಿಕಾರಿಗಳಿಗೆ ತರಬೇತಿ ಕೊಡುವ ಪ್ರಧಾನ ಸಂಸ್ಥೆ.

ಇದು 1932ರ ಡಿಸೆಂಬರ್‌ನಲ್ಲಿ ಆರಂಭವಾಯಿತು. ತರಬೇತಿಗಾಗಿ ಅರ್ಧದಷ್ಟು ಜನರನ್ನು ಸ್ಪರ್ಧೆಯಿಂದಲೂ ಇನ್ನರ್ಧ ಜನರನ್ನು ಸೇನೆಯಿಂದಲೂ ಆರಿಸುತ್ತಿದ್ದರು. ಆಗಿನ ಫೆಡರಲ್ ಲೋಕಸೇವಾ ಆಯೋಗ ಈ ಸ್ಪರ್ಧೆಯನ್ನು ಏರ್ಪಡಿಸುತ್ತಿತ್ತು. ವಿದ್ಯಾರ್ಥಿಗಳಲ್ಲಿ ಮುಂದಾಳುತನ, ಶಿಸ್ತು, ದೇಶಭಕ್ತಿ ಗುಣಗಳನ್ನು ಬೆಳೆಸುವುದು : ರಾಷ್ಟ್ರದ ಸೇನೆಯ ಸಂಬಂಧದಲ್ಲಿ ತಮ್ಮ ಹೊಣೆಯನ್ನು ಅರಿಯುವಂತೆ ಮಾಡುವುದು : ಕರ್ತವ್ಯಪರತೆ ಹಾಗೂ ಆತ್ಮಗೌರವಗಳು ವೃದ್ಧಿಗೊಳ್ಳುವಂತೆ ಮಾಡುವುದು : ಸೈನ್ಯದಲ್ಲಿ ಕೆಲಸಕ್ಕೆ ಸೇರಿದ ಮೇಲೆ ತಮ್ಮ ಅಧಿಕಾರಸ್ಥಾನದ ಕರ್ತವ್ಯಗಳನ್ನು ಸರಿಯಾಗಿ ನಿರ್ವಹಿಸುವಂತೆ ತರಬೇತಿ ಕೊಡುವುದು ಇಂಡಿಯನ್ ಮಿಲಿಟರಿ ಅಕಾಡೆಮಿಯ ಉದ್ದೇಶ.

ಸ್ವಾತಂತ್ರ್ಯೋತ್ತರ ಭಾರತದಲ್ಲಿಯೂ ಡೆಹ್ರಾಡೂನಿನ ಈ ಸಂಸ್ಥೆಯಲ್ಲಿ ತರಬೇತಿ ಕಾರ್ಯ ಮುಂದುವರಿದಿದೆ. ನ್ಯಾಷನಲ್ ಡಿಫೆನ್ಸ್ ಅಕಾಡೆಮಿ ಕ್ಯಾಡೆಟುಗಳು, ಸೇನಾ ಪಡೆಗಳ ಆಯ್ಕೆ ಮಂಡಳಿ ಹಾಗೂ ಭಾರತದ ಲೋಕಸೇವಾ ಆಯೋಗ ಆರಿಸಿದ ಅಭ್ಯರ್ಥಿಗಳು, ಪದವೀಧರ ಎನ್. ಸಿ. ಸಿ. ಕ್ಯಾಡೆಟ್‌ಗಳು —ಇವರುಗಳಿಗೆ ಇಂಡಿಯನ್ ಮಿಲಿಟರಿ ಅಕಾಡೆಮಿಯಲ್ಲಿ ಪ್ರವೇಶಾವಕಾಶವಿದೆ. ಸೇನೆಯ ವಿವಿಧ ವಿಭಾಗಗಳಿಗೆ ಸಂಬಂಧಿಸಿದಂತೆ ತರಬೇತಿಯ ಅವಧಿ ಬೇರೆ ಬೇರೆ. ಇಲ್ಲಿ ತರಬೇತಿ ಹೊಂದಿದವರು ಸೇನೆಯ ಆಯುಕ್ತಾಧಿಕಾರಿಗಳಾಗುತ್ತಾರೆ.

ಇಂಡಿಯನ್ ರೆಡ್ ಕ್ರಾಸ್

1920ರಲ್ಲಿ ಇಂಡಿಯನ್ ರೆಡ್ ಕ್ರಾಸ್ ಸಂಸ್ಥೆ ಸಂಘಟಿಸಲ್ಪಟ್ಟಿತು. ಇದರ ಕೇಂದ್ರ ಕಚೇರಿ ಇರುವುದು ನವದೆಹಲಿಯಲ್ಲಿ.

ಇತರ ರಾಷ್ಟ್ರಗಳಲ್ಲಿರುವ ರೆಡ್ ಕ್ರಾಸ್ ಸಂಸ್ಥೆಗಳಂತೆ ಭಾರತೀಯ ರೆಡ್‌ಕ್ರಾಸ್ ಸಂಸ್ಥೆಯೂ ಅಂತರರಾಷ್ಟ್ರೀಯ ರೆಡ್ ಕ್ರಾಸ್ ಲೀಗಿನ ಸದಸ್ಯತ್ವ ಪಡೆದಿದೆ. ಭಾರತದ ರಾಷ್ಟ್ರಪತಿ ಇದರ ಅಧ್ಯಕ್ಷರು. ಆದರೆ ಕಾರ್ಯನಿರ್ವಾಹಕ ಮಂಡಲಿಯ ಅಧ್ಯಕ್ಷ ಸ್ಥಾನಕ್ಕೆ ಬೇರೊಬ್ಬ ವ್ಯಕ್ತಿಯನ್ನು ರಾಷ್ಟ್ರಪತಿ ನೇಮಿಸಬಹುದು. ಸಾಮಾನ್ಯವಾಗಿ ಈ ಅಧ್ಯಕ್ಷತೆಯನ್ನು ಕೇಂದ್ರ ಆರೋಗ್ಯ ಸಚಿವರು ವಹಿಸುತ್ತಾರೆ.

ಮುಂದಿನ ಕಾರ್ಯಕಲಾಪಗಳನ್ನು ನೋಡಿಕೊಳ್ಳಲು ಒಬ್ಬ ಮಹಾ ಕಾರ್ಯದರ್ಶಿ, ಅವರಿಗೆ ಸಹಾಯಕರಾಗಿ ವಿವಿಧ ಇಲಾಖೆಯ ನಿರ್ದೇಶಕರು ಇರುತ್ತಾರೆ.

ಆಸ್ಪತ್ರೆ, ತಾಯಿ ಮತ್ತು ಮಕ್ಕಳ ಯೋಗಕ್ಷೇಮ, ಪ್ರಚಾರ, ರಕ್ತ ದಾನ, ಆರ್ತರಿಗೆ ನೆರವು, ಕುಟುಂಬ ಯೋಜನೆ, ಇವಕ್ಕೆ ಸಂಬಂಧಿಸಿದ ವಿವಿಧ ವಿಭಾಗಗಳಿವೆ. ಜೂನಿಯರ್ ರೆಡ್ ಕ್ರಾಸ್ ಸಂಘಟನೆಯೂ ಇದೆ.

ಭಾರತದಲ್ಲಿನ ಪ್ರತಿ ರಾಜ್ಯದಲ್ಲೂ ರಾಷ್ಟ್ರೀಯ ರೆಡ್ ಕ್ರಾಸ್‌ನ ಶಾಖೆ ಇರುತ್ತದೆ. ಈಗ ಒಟ್ಟು 21 ರಾಜ್ಯಶಾಖೆಗಳು ರೆಡ್ ಕ್ರಾಸ್‌ನ ನಿರ್ದಿಷ್ಟ ಕಾರ್ಯಗಳನ್ನು ಭಾರತದ ಆದ್ಯಂತ ನೋಡಿಕೊಳ್ಳುತ್ತಿವೆ. ಆರೋಗ್ಯಾಭಿವೃದ್ಧಿ, ರೋಗ ನಿವಾರಣಾಕ್ರಮ ಮತ್ತು ವಿಪತ್ತು ಒದಗಿದಾಗ ನೊಂದವರಿಗೆ ನೆರವು — ಇವು ರೆಡ್ ಕ್ರಾಸ್‌ನ ಕಾರ್ಯಗಳು.

ನೋಡಿ : ರೆಡ್ ಕ್ರಾಸ್–ಸಂಪುಟ ೧

ಇಂಡಿಯನ್ ರೈಲ್ವೇಸ್

1970-71ರ ಅಂಕೆ ಸಂಖ್ಯೆಯಂತೆ ಭಾರತದ ರೈಲುಮಾರ್ಗ 59,790 ಕಿಲೊಮೀಟರ್ ಉದ್ದವಾಗಿದೆ. ಇದು ಏಷ್ಯದಲ್ಲೇ ಅತಿ ದೀರ್ಘವಾದ ರೈಲುಮಾರ್ಗ. ಇದರ ಒಡೆತನ ಕೇಂದ್ರ ಸರಕಾರದ್ದು.

ಮುಂಬಯಿ ಮತ್ತು ಥಾಣಾ ನಡುವಿನ 33 ಕಿ.ಮೀ. ಉದ್ದದ ಹಾದಿಯೇ ಭಾರತದಲ್ಲಿ ನಿರ್ಮಾಣವಾದ ಪ್ರಥಮ ರೈಲು ಮಾರ್ಗ. ಇದರ ಮೇಲೆ ಸಂಚಾರ ಆರಂಭವಾದದ್ದು 1853ರ ಏಪ್ರಿಲ್ 16ರಂದು. 1854ರಲ್ಲಿ ಕಲ್ಕತ್ತಾ ಮತ್ತು ಪಾಂಡುವಾ ನಡುವೆ ರಚಿಸಿದ ಮಾರ್ಗ ಎರಡನೆಯದು. ಭಾರತದ ಆದ್ಯಂತ ಎಲ್ಲ ದೊಡ್ಡ ನಗರಗಳಿಗೂ ರೈಲು ಸಂಪರ್ಕವಿದೆ. ಮುಂಬಯಿಯ ಉಪನಗರಗಳನ್ನು ಸಂಬಂಧಿಸುವ ರೈಲುಮಾರ್ಗ 1925 ಫೆಬ್ರುವರಿ 3ರಂದು ಕಾರ್ಯಾಚರಣೆ ಆರಂಭಿಸಿತು. ಸುಮಾರು 4,000 ಕಿ.ಮೀ. ಗಳಷ್ಟು ಮಾರ್ಗದಲ್ಲಿ ವಿದ್ಯುತ್ ಟ್ರೇನುಗಳು ಓಡುತ್ತವೆ.

ಭಾರತದಲ್ಲಿ ಸುಮಾರು 7,200 ರೈಲು ನಿಲ್ದಾಣಗಳಿವೆ. ಜಗತ್ತಿನಲ್ಲೇ ಉದ್ದವಾದ ರೈಲು ನಿಲ್ದಾಣ ಖರಗ್‌ಪುರದಲ್ಲಿದೆ: ಇದರ ಉದ್ದ 2,733 ಅಡಿ. ಶೋಣಾನದಿಯ ರೈಲ್ವೆ ಸೇತುವೆ 10,052 ಅಡಿ ಉದ್ದವಿದೆ. ಇದು ಅತ್ಯಂತ ಉದ್ದವಾದ ರೈಲು ಸೇತುವೆ. $\frac{3}{4}$ ಮೈಲು ಉದ್ದದ ಟಾರ್ಸಿ ಸುರಂಗ ಅತ್ಯಂತ ದೀರ್ಘ ಸುರಂಗ. ಪ್ರತಿದಿನ ಸುಮಾರು 58 ಲಕ್ಷ ಜನ ರೈಲು ಪ್ರಯಾಣ ಮಾಡುತ್ತಾರೆ.

ರೈಲ್ವೆಯ ಆಡಳಿತ ಮತ್ತು ಹತೋಟಿ 1905ರಲ್ಲಿ ಸ್ಥಾಪಿತವಾದ ರೈಲ್ವೆ ಮಂಡಲಿಗೆ ಸೇರಿದೆ. ರೈಲ್ವೆಯ ಆಯವ್ಯಯವನ್ನು 1925ರಲ್ಲಿ ಭಾರತ ಸರಕಾರದ ಇತರ ಆಯವ್ಯಯ ಪಟ್ಟಿಯಿಂದ ಬೇರ್ಪಡಿಸಲಾಯಿತು.



ನಮ್ಮ ರೈಲು ಮಾರ್ಗ : ಏಷ್ಯದಲ್ಲೇ ಅತ್ಯಂತ ದೀರ್ಘ

ಪ್ರಪಂಚದ ರೈಲು ವ್ಯವಸ್ಥೆಗಳಲ್ಲಿ ಎರಡನೆಯದಾದ ಭಾರತದ ರೈಲು ವ್ಯವಸ್ಥೆಯನ್ನು ಆಡಳಿತಾತ್ಮಕವಾಗಿ ಅದನ್ನು 9 ವಲಯಗಳನ್ನಾಗಿ ವಿಂಗಡಿಸಿದ್ದಾರೆ.

ರೈಲಿನಲ್ಲಿ ಹವಾನಿಯಂತ್ರಿತ, ಉತ್ತಮ ದರ್ಜೆ, ಸಾಮಾನ್ಯ ದರ್ಜೆ ಸೌಲಭ್ಯವಿರುತ್ತದೆ. ಬ್ರಾಡ್ ಗೇಜ್, ಮೀಟರ್ ಗೇಜ್ ಮತ್ತು ನ್ಯಾರೊ ಗೇಜ್ ಮಾರ್ಗಗಳಿವೆ.

ರೈಲ್ವೆ ಅಧಿಕಾರಿಗಳು ಮತ್ತು ಸಿಬ್ಬಂದಿಯವರಿಗೆ ತರಬೇತಿ ಕೊಡಲು ಬರೋಡದಲ್ಲಿ ತರಬೇತಿ ಕಾಲೇಜಿದೆ. 50 ತರಬೇತಿ ಶಾಲೆಗಳಿವೆ. ಲಖನೌವಲ್ಲಿ ರೈಲ್ವೆ ಪರೀಕ್ಷೆ ಮತ್ತು ಸಂಶೋಧನಾ ಕೇಂದ್ರವಿದೆ.

ಕಲ್ಕತ್ತೆಯ ಸಮೀಪದಲ್ಲಿರುವ ಚಿತ್ತರಂಜನ್ ಲೋಕೊಮೋಟಿವ್ ವರ್ಕ್ಸ್, ಜಮ್‌ಷೆಡ್‌ಪುರದಲ್ಲಿರುವ ತಾತಾ ಎಂಜಿನಿಯರಿಂಗ್ ಮತ್ತು ಲೋಕೊಮೋಟಿವ್ ಕಂಪನಿ, ಮದರಾಸಿನ ಇಂಟೆಗ್ರಲ್ ಕೋಚ್ ಫ್ಯಾಕ್ಟರಿ, ಬೆಂಗಳೂರಿನ ಭಾರತ ಅರ್ಥ್ ಮೂವರ್ಸ್, ರೈಲ್ವೆ ಕೋಚ್ ವಿಭಾಗ, ವಾರಾಣಸಿಯ ಡೀಸೆಲ್ ಲೋಕೊಮೋಟಿವ್ ವರ್ಕ್ಸ್ ಇವು ಅಗತ್ಯವಾದ ಎಂಜಿನ್, ಬೋಗಿ ಮತ್ತು ವ್ಯಾಗನ್‌ಗಳನ್ನು ತಯಾರಿಸುತ್ತವೆ.

ನಮ್ಮ ರಾಷ್ಟ್ರದ ವಿವಿಧ ಉದ್ಯಮಗಳಲ್ಲಿ ಎಲ್ಲಕ್ಕಿಂತಲೂ ಹೆಚ್ಚು ಜನರಿಗೆ ರೈಲ್ವೆ ಉದ್ಯಮ ಉದ್ಯೋಗವನ್ನೊದಗಿಸಿದೆ, ಇದರಲ್ಲಿ ಸುಮಾರು 15 ಲಕ್ಷ ಉದ್ಯೋಗಿಗಳಿದ್ದಾರೆ.

ಇಂಡಿಯನ್ ಸಿವಿಲ್ ಸರ್ವಿಸ್

ಐ.ಸಿ.ಎಸ್. ಎಂದು ಭಾರತದಲ್ಲಿ ಪ್ರಸಿದ್ಧವಾಗಿದ್ದ ಅಧಿಕಾರಿ ವರ್ಗ ಇಂಡಿಯನ್ ಸಿವಿಲ್ ಸರ್ವಿಸ್.

ಭಾರತದಲ್ಲಿ ಇಂಥ ಒಂದು ಕ್ರಮಬದ್ಧ ಅಧಿಕಾರಿ ವರ್ಗ ಇರಬೇಕೆಂದು ಈಸ್ಟ್ ಇಂಡಿಯಾ ಕಂಪೆನಿ 18ನೆಯ ಶತಮಾನದಲ್ಲಿ ಮನಗಂಡಿತು. ಆ ಬಗೆಗೆ ವ್ಯವಸ್ಥೆಮಾಡಲು ಉದ್ಯುಕ್ತನಾದ ಮೊದಲಿಗ, ಗವರ್ನರ್ ಜನರಲ್ ಲಾರ್ಡ್ ಕಾರ್ನ್‌ವಾಲಿಸ್. ಇದರ ಅಧಿಕಾರಿಗಳು ವ್ಯಾಪಾರದಲ್ಲಿ ಭಾಗವಹಿಸಬಾರದು, ಯಾವುದೇ ಕಾಣಿಕೆಗಳನ್ನು ಸ್ವೀಕರಿಸಬಾರದು ; ಅವರಿಗೆ ಒಳ್ಳೆಯ ವೇತನ ನೀಡಬೇಕು ; ಸೇವಾ ಕರಾರಿಗೆ ಒಳಪಟ್ಟ ಅಧಿಕಾರಿಗಳಾಗಿ ಅವರು ಆಡಳಿತದ ಮುಖ್ಯ ಪದವಿಗಳಲ್ಲಿ ಇರಬೇಕು ಎಂಬ ಸೂತ್ರವನ್ನು ಆಗ ರೂಪಿಸಲಾಯಿತು.

ಮೊದಲು ನಾಮಕರಣದಿಂದ ಹುದ್ದೆಗಳನ್ನು ಭರ್ತಿಮಾಡಲಾಗುತ್ತಿತ್ತು. 1855ರಿಂದ ಸ್ಪರ್ಧಾತ್ಮಕ ಪರೀಕ್ಷೆಗಳ ಆಧಾರದ ಮೇಲೆ ನೇಮಕ ಆರಂಭವಾಯಿತು. ಮೊದಲು ಪರೀಕ್ಷೆ ನಡೆಯುತ್ತಿದ್ದುದು ಇಂಗ್ಲೆಂಡಿನಲ್ಲಿ. ಇದರಿಂದಾಗಿ ಐ.ಸಿ.ಎಸ್. ವರ್ಗದಲ್ಲಿ ಭಾರತೀಯರ ಸಂಖ್ಯೆ ಕಡಮೆಯಾಗಿಯೇ ಇತ್ತು. ಈ ಲೋಪವನ್ನು ಪರಿಹರಿಸಲು ಭಾರತದಲ್ಲೂ ಈ ಪರೀಕ್ಷೆಗಳನ್ನು ನಡೆಸುವ ವ್ಯವಸ್ಥೆ ಅನಂತರ ಆಚರಣೆಗೆ ಬಂತು.

ಭಾರತ ಸ್ವತಂತ್ರವಾದ ಮೇಲೆ ಐ.ಸಿ.ಎಸ್.ವರ್ಗಕ್ಕೆ ಬದಲು ಐ.ಎ.ಎಸ್. (ಇಂಡಿಯನ್ ಅಡ್ಮಿನಿಸ್ಟ್ರೇಟಿವ್ ಸರ್ವಿಸ್) ವ್ಯವಸ್ಥೆ ರೂಪುಗೊಂಡಿತು.

ನೋಡಿ : ಇಂಡಿಯನ್ ಅಡ್ಮಿನಿಸ್ಟ್ರೇಟಿವ್ ಸರ್ವಿಸ್

ಇಂಡಿಯನ್ ಸೈನ್ಸ್ ಕಾಂಗ್ರೆಸ್

"ವಿಜ್ಞಾನ ಸಂಬಂಧವಾದ ಕೆಲಸಗಳಲ್ಲಿ ತೊಡಗಿರುವವರು ಪರಸ್ಪರ ಸಂಧಿಸುವುದರಿಂದ, ಫಲಪ್ರದ ವಿಚಾರ ವಿನಿಮಯವಷ್ಟೇ ಅಲ್ಲದೆ ಇನ್ನೂ ಹೆಚ್ಚಿನ ಪರಿಣಾಮಗಳು ಉಂಟಾಗುತ್ತವೆ. ವಿಜ್ಞಾನಕ್ಷೇತ್ರದ ಕೆಲಸಗಾರರು ಈ ರೀತಿ ನಿರ್ದಿಷ್ಟ ಅವಧಿಗೊಮ್ಮೆ ಸಭೆ ಸೇರುವುದರಿಂದ, ವಿಚಾರ ಗೋಷ್ಠಿಯಲ್ಲಿ ಭಾಗವಹಿಸುವುದರಿಂದ ತಮ್ಮ ವಿಚಾರ ಹಾಗೂ ಧ್ಯೇಯಗಳನ್ನು ಸಾರ್ವಜನಿಕರ ಗಮನಕ್ಕೆ ತರಬಹುದು ; ಸರಕಾರದ ಗಮನವನ್ನೂ ಸೆಳೆಯಬಹುದು..."

—ಹೀಗೆಂದು 1914 ಜನವರಿಯಲ್ಲಿ ಇಂಡಿಯನ್ ಸೈನ್ಸ್ ಕಾಂಗ್ರೆಸ್ ಅಸೋಸಿಯೇಷನಿನ —ಭಾರತೀಯ ವೈಜ್ಞಾನಿಕ ಕೂಟದ —ಮೊದಲ ಸಭೆಯಲ್ಲಿ ಅದರ ಅಧ್ಯಕ್ಷ ಅಶುತೋಷ ಮುಖರ್ಜಿ ಹೇಳಿದರು. ಈ ವೇಳೆಗೆ ಭಾರತದಲ್ಲಿ ಬೇರೆಬೇರೆ ಭಾಗಗಳಲ್ಲಿ ವೈಜ್ಞಾನಿಕ ಸಂಸ್ಥೆಗಳು ತಲೆ ಎತ್ತಿದ್ದುವು. ಆದ್ದರಿಂದ, ಆಗಾಗ್ಗೆ ವಿಜ್ಞಾನಿಗಳು ಸಭೆ ಸೇರಿ ವಿಷಯ ವಿನಿಮಯ ಮಾಡಿಕೊಳ್ಳುವ ಅವಶ್ಯಕತೆ ಉಂಟಾಗಿತ್ತು. ಇದರ ಫಲವೇ 1914ರಲ್ಲಿ ಕಲ್ಕತ್ತೆಯಲ್ಲಿ ನಡೆದ ಸಭೆ.

ಈ ಮೊದಲ ಸಭೆಯಲ್ಲಿ 35 ಸಂಶೋಧನಾ ಪ್ರಬಂಧಗಳು ಓದಲ್ಪಟ್ಟುವು. ರಸಾಯನವಿಜ್ಞಾನ, ಭೌತವಿಜ್ಞಾನ, ಭೂವಿಜ್ಞಾನ, ಪ್ರಾಣಿವಿಜ್ಞಾನ, ಸಸ್ಯವಿಜ್ಞಾನ ಹಾಗೂ ಮಾನವವಿಜ್ಞಾನ —ಈ ಆರು ವಿಭಾಗಗಳಲ್ಲಿ ಪ್ರಬಂಧಗಳ ಮಂಡನೆ, ಚರ್ಚೆ ನಡೆದುವು. ರಾಷ್ಟ್ರದ ಎಲ್ಲ ಕಡೆಗಳಿಂದ ಬಂದಿದ್ದ ನೂರಕ್ಕೂ ಹೆಚ್ಚು ಮಂದಿ ವಿಜ್ಞಾನಿಗಳು ಈ ಅಧಿವೇಶನದಲ್ಲಿ ಭಾಗವಹಿಸಿದರು.

ಪ್ರತಿ ವರ್ಷ ಜನವರಿಯಲ್ಲಿ ಇಂಡಿಯನ್ ಸೈನ್ಸ್ ಕಾಂಗ್ರೆಸ್ ಸಭೆ ಸೇರುತ್ತದೆ. ದೇಶದಲ್ಲಿ ವೈಜ್ಞಾನಿಕ ಸಂಶೋಧನೆಯ ಪ್ರಗತಿಗೆ ಈ ಕಾಂಗ್ರೆಸ್ಸಿನ ಚಟುವಟಿಕೆಗಳು ಪೋಷಕವಾಗಿವೆ.

ಇಂಡಿಯನ್ ಹಿಸ್ಟರಿ ಕಾಂಗ್ರೆಸ್

ಭಾರತೀಯ ಚರಿತ್ರೆಯ ಅಧ್ಯಯನ, ಸಂಶೋಧನೆಗಳಿಗೆ ಬೆಂಬಲ ನೀಡುವ ಉದ್ದೇಶದಿಂದ 1937ರಲ್ಲಿ ಆರಂಭವಾದದ್ದು ಇಂಡಿಯನ್ ಹಿಸ್ಟರಿ ಕಾಂಗ್ರೆಸ್. ಇದರ ವಾರ್ಷಿಕ ಸಮ್ಮೇಳನದಲ್ಲಿ ದೇಶದ ಪ್ರಮುಖ ಚರಿತ್ರಕಾರರು ಭಾಗವಹಿಸುತ್ತಾರೆ, ಪರಸ್ಪರ ವಿಚಾರ ವಿನಿಮಯ ನಡೆಸುತ್ತಾರೆ.

ಹಿಸ್ಟರಿ ಕಾಂಗ್ರೆಸ್ ಇತಿಹಾಸಕಾರರ ನಿಬಂಧಗಳನ್ನು ಪ್ರಕಟಿಸುತ್ತದೆ.

ರಾಷ್ಟ್ರದ ಬೇರೆ ಬೇರೆ ಕಡೆಗಳಲ್ಲಿ ರಾಜ್ಯಮಟ್ಟದಲ್ಲಿ ಇಂಥ ಇನ್ನಿತರ ಸಂಸ್ಥೆಗಳನ್ನು ಸ್ಥಾಪಿಸಲು ಇದು ಪ್ರೇರಣೆ ನೀಡಿದೆ. ವಿದೇಶಗಳಲ್ಲಿರುವ ಈ ಬಗೆಯ ಸಂಸ್ಥೆಗಳೊಡನೆಯೂ ಇಂಡಿಯನ್ ಹಿಸ್ಟರಿ ಕಾಂಗ್ರೆಸ್ ಸಂಪರ್ಕ ಹೊಂದಿದೆ.

ಇಂಡಿಯನ್ ಹಿಸ್ಟಾರಿಕಲ್ ರೆಕಾರ್ಡ್ಸ್ ಕಮಿಷನ್

ದೇಶದ ಚರಿತ್ರೆಯ ಅಧ್ಯಯನಕ್ಕೆ ಬೇಕಾದ ದಾಖಲೆಗಳನ್ನು ಕಂಡು ಹಿಡಿದು, ಸಂರಕ್ಷಿಸಿ ಅವನ್ನು ಸಂಶೋಧಕರಿಗೆ ಒದಗಿಸಿಕೊಡುವ ಕಾರ್ಯವನ್ನು ಕೈಗೊಂಡಿರುವ ಸಂಸ್ಥೆ, ಇಂಡಿಯನ್ ಹಿಸ್ಟಾರಿಕಲ್ ರೆಕಾರ್ಡ್ಸ್ ಕಮಿಷನ್.

ಕಮಿಷನ್ ರೂಪುಗೊಂಡದ್ದು 1919ರಲ್ಲಿ. ಕೆಲವು ಸರಕಾರೀ ಅಧಿಕಾರಿಗಳಲ್ಲದೆ ಪ್ರೊ. ಜದುನಾಥ್ ಸರ್ಕಾರ್, ಡಬ್ಲ್ಯು. ಕೆ. ಫರ್ಮಿಂಗರ್, ಪ್ರೊ. ಎಲ್. ಎಫ್. ರಷ್‌ಬ್ರೂಕ್ ವಿಲಿಯಮ್ಸ್ ಮತ್ತು ಬಿ. ಕೆ. ಠಾಕೂರರಂಥ ಪ್ರಸಿದ್ಧ ಇತಿಹಾಸಕಾರರು ಇದರಲ್ಲಿದ್ದರು. ದಾಖಲೆಗಳನ್ನು ಸಾರ್ವಜನಿಕ ಪತ್ರಾಗಾರದಲ್ಲಿ ಕ್ರಮಬದ್ಧವಾಗಿ ಇರಿಸಿ ಅವನ್ನು ಮುದ್ರಿಸುವ ಕೆಲಸವನ್ನು ಕಮಿಷನ್ ಮಾಡಿತು.

ಇಂಡಿಯನ್ ಹಿಸ್ಟಾರಿಕಲ್ ರೆಕಾರ್ಡ್ಸ್ ಕಮಿಷನ್ ಚಾರಿತ್ರಿಕ ಸ್ಥಳಗಳೊಂದರಲ್ಲಿ ಪ್ರತಿ ವರ್ಷ ಸಮ್ಮೇಳನವನ್ನು ಏರ್ಪಡಿಸಿ ಇತಿಹಾಸಕಾರರ ನಡುವೆ ವಿಚಾರ ವಿನಿಮಯಕ್ಕೆ ಅವಕಾಶ ಮಾಡಿಕೊಡುತ್ತದೆ: ಸಂಶೋಧನೆ ನಡೆಸಬೇಕಾಗಿರುವ ಅಂಶದ ಕಡೆಗೆ ಸಂಶೋಧಕರ ಗಮನ ಹರಿಯುವಂತೆ ಮಾಡುತ್ತದೆ.

ಕಮಿಷನ ಸಮ್ಮೇಳನ ನಡೆಯುವಾಗಲೇ ಚಾರಿತ್ರಿಕ ದಾಖಲೆಗಳ ಅಖಿಲ ಭಾರತ ವಸ್ತುಪ್ರದರ್ಶನವೂ ನಡೆಯುತ್ತದೆ.

ಇಂಡಿಯಾ ಸೆಕ್ಯೂರಿಟ ಪ್ರೆಸ್

ನಾಸಿಕ್ ನಗರದ ಸಮೀಪದಲ್ಲಿದೆ ಇಂಡಿಯಾ ಸೆಕ್ಯೂರಿಟಿ ಪ್ರೆಸ್. ನಮ್ಮ ರಾಷ್ಟ್ರದಲ್ಲಿ ಚಲಾವಣೆಗೆ ಬರುವ ನೋಟುಗಳನ್ನು ಮತ್ತು ಅಂಚೆ ಹಾಗೂ ಇತರ ಉದ್ದೇಶಗಳಿಗೆ ಬೇಕಾದ ಸ್ಟಾಂಪುಗಳನ್ನು ಮುದ್ರಿಸುವ ಕೆಲಸ ಇಲ್ಲಿ ನಡೆಯುತ್ತದೆ.

ಇಂಡಿಯಾ ಸೆಕ್ಯೂರಿಟಿ ಪ್ರೆಸ್ 1925ರಲ್ಲಿ ಆರಂಭವಾಯಿತು.

ಮಧ್ಯಪ್ರದೇಶದಲ್ಲಿರುವ ದಿವಾಸ್‌ನಲ್ಲಿ ಇಂಥದೇ ಒಂದು ಮುದ್ರಣಾಲಯವನ್ನು ಸ್ಥಾಪಿಸುವ ಯೋಜನೆಯಿದೆ. ಈ ಯೋಜನೆ ಪೂರ್ಣಗೊಂಡಾಗ ಈ ಮುದ್ರಣಾಲಯ, ನಾಸಿಕದ ಮುದ್ರಣಾಲಯಕ್ಕಿಂತ ದೊಡ್ಡದೂ ಅತ್ಯಾಧುನಿಕ ಯಂತ್ರೋಪಕರಣಗಳುಳ್ಳದ್ದೂ ಆಗುತ್ತದೆ.



ಸಮರ ದೇವತೆ : ಇಂದ್ರ

ಇಂದ್ರ

ದೇವೇಂದ್ರ, ಮಹೇಂದ್ರ, ಸುರಪತಿ, ಸ್ವರ್ಗಾಧಿಪತಿ, ವಜ್ರಪಾಣಿ ಹೀಗೆ ಬಗೆಬಗೆಯಾಗಿ ವರ್ಣಿಸಲ್ಪಟ್ಟಿರುವ ಇಂದ್ರ ವೈದಿಕ ಸಂಸ್ಕೃತಿಯ ಕಾಲದ ಆರ್ಯರ ಮುಖ್ಯ ದೇವತೆ. ವೇದಗಳಲ್ಲಿ ಹಾಗೂ ಪುರಾಣಗಳಲ್ಲಿ ಈತನಿಗೆ ವಿಶಿಷ್ಟ ಸ್ಥಾನ.

ವೇದಗಳಲ್ಲಿ ಬರುವ ಇಂದ್ರ ಸಮರದೇವತೆ. ಅವನದು ಭವ್ಯಮೂರ್ತಿ. ಸಿಡಿಲೇ ಅವನ ವಜ್ರಾಯುಧ. ಕಾಮನಬಿಲ್ಲು ಧನುಸ್ಸು. ವೃತ್ತ ಎಂಬ ಮೇಘಾಸುರನನ್ನು ಎದುರಿಸಿ ಜಗತ್ತಿಗೆ ಮಳೆ ದೊರಕಿಸಿಕೊಟ್ಟ. 'ಮಳೆರಾಯ'ನೆಂಬ ಹೆಸರೂ ಅವನಿಗೆ ಸಲ್ಲುತ್ತದೆ. ಋಗ್ವೇದದಲ್ಲಿ ಇಂದ್ರನನ್ನು ಕುರಿತು ಅನೇಕ ಋಕ್ಕುಗಳಿವೆ.

ಪುರಾಣಗಳಲ್ಲಿ ಇಂದ್ರ, ದೇವತೆಗಳ ವೈಭವೋಪೇತ ಅಧಿಪತಿ. ಅಮರಾವತಿಯಲ್ಲಿ ಇವನ ವಾಸ. ಇಂದ್ರಸಭೆಯದು ಕಣ್ಣು ತಣಿವ ರಮಣೀಯ ನೋಟ. ಅಲ್ಲಿ ಸಪ್ತ ಋಷಿಗಳು. ಅಷ್ಟದಿಕ್ಪಾಲಕರು, ಆಸ್ಥಾನಿಕರು ಇರುತ್ತಾರೆ. ಅತಿ ಲಾವಣ್ಯವತಿಯರಾದ ಊರ್ವಶಿ, ಮೇನಕಾ, ರಂಭಾ, ತಿಲೋತ್ತಮೆ ಮುಂತಾದವರು ಅಲ್ಲಿನ ನರ್ತಕಿಯರು. ಐರಾವತ ಆನೆ, ಉಚ್ಚೈಶ್ರವಸ್ಸು ಕುದುರೆ ಮತ್ತು ಕಲ್ಪತರು, ಇಂದ್ರನ ಬಳಿ ಇವೆ. ಇಂದ್ರನ ಪಟ್ಟಮಹಿಷಿ ಶಚೀದೇವಿ. ತಾಯಿ ಅದಿತಿ, ತಂದೆ ಕಶ್ಯಪ. ಕಶ್ಯಪನ ಇನ್ನೊಬ್ಬ ಹೆಂಡತಿ ದಿತಿಯ ಮಕ್ಕಳು ದೈತ್ಯರಿಗೂ (ಅಸುರರು) ಇಂದ್ರನ ಅಧೀನದಲ್ಲಿರುವ ಸುರರಿಗೂ ಯಾವಾಗಲೂ ಕಲಹ. ಇಂದ್ರನಿಗೆ ಇದೊಂದು ಮುಗಿಯದ ಸಮಸ್ಯೆ.

ವಾಸ್ತವವಾಗಿ 'ಇಂದ್ರ' ಎಂಬುದು ದೇವತೆಗಳ ಅರಸನ ಪದವಿಯಲ್ಲಿರುವವನ ಹೆಸರು. ಬ್ರಹ್ಮನ ಒಂದು ಹಗಲಿನಲ್ಲಿ 14 ಮಂದಿ ಇಂದ್ರರು ಆಗುವರೆಂದೂ ಈಗ ಆಳುತ್ತಿರುವವನು ಪುರಂದರ ಇಂದ್ರನಾಗಿರುವನೆಂದೂ ಪುರಾಣಗಳ ಹೇಳಿಕೆ. ಕಠಿಣ ತಪಸ್ಸು ಅಥವಾ ನೂರು ಯಜ್ಞಗಳನ್ನು ನಡೆಸಿದವರು ಈ ಇಂದ್ರ ಪದವಿಗೆ ಅರ್ಹರು. ಇಂಥ ಮಹತ್ತರ ಸಾಧನೆಗಳನ್ನು ಮಾಡಿದವರಿಗೆ ತನ್ನ ಪದವಿ ಬಿಟ್ಟುಕೊಡಬೇಕಾಗುತ್ತದೆಂದು ಇಂದ್ರ ಅವರ ತಪೋಭಂಗ. ಯಾಗಭಂಗಗಳಿಗಾಗಿ ಉಪಾಯ ಹೂಡುತ್ತಲೇ ಇರುತ್ತಾನೆ.

ಇಂದ್ರ ಪೂರ್ವದಿಕ್ಕಿನ ಅಧಿದೇವತೆ.

ಇಂದ್ರಪ್ರಸ್ಥ

ಹಳೆ ದೆಹಲಿಯ ಪುರಾನಾ ಕಿಲಾ (ಹಳೆಯ ಕೋಟೆ) ಇರುವಲ್ಲಿ ಪಾಂಡವರ ರಾಜಧಾನಿ ಇಂದ್ರಪ್ರಸ್ಥ ಇದ್ದಿತೆಂದು ಪ್ರತೀತಿ. ಇಂದ್ರ ಪ್ರಸ್ಥದ ವೈಭವದ ವರ್ಣನೆ ಮಹಾಭಾರತದಲ್ಲಿದೆ.

ಪಾಂಡವರು ದ್ರೌಪದಿಯನ್ನು ವಿವಾಹವಾದ ಮೇಲೆ ಅವರನ್ನು ಬರಮಾಡಿಕೊಂಡು ಧೃತರಾಷ್ಟ್ರ ಅವರಿಗೆ ಅರ್ಧ ರಾಜ್ಯ ಕೊಡಿಸಿದ. ಅವರಿಗೋಸ್ಕರ ರಚಿಸಲ್ಪಟ್ಟ ರಾಜಧಾನಿ ಇಂದ್ರಪ್ರಸ್ಥ. ಇದು ಹಸ್ತಿನಾವತಿಗೆ ಸಮೀಪವಾಗಿಯೇ ಯಮುನೆಯ ದಂಡೆಯ ಮೇಲೆ ಇದ್ದಿತು. ಶ್ರೀಕೃಷ್ಣನ ಆದೇಶದ ಮೇರೆಗೆ ವಿಶ್ವಕರ್ಮ ಈ ಪಟ್ಟಣವನ್ನು ಕಟ್ಟಿದ. ಇಂದ್ರನ ಅಪೇಕ್ಷೆಯಂತೆ ಇದಕ್ಕೆ ಇಂದ್ರಪ್ರಸ್ಥವೆಂಬ ಹೆಸರು ಬಂದಿತು. ಇಂದ್ರನ ಅಮರಾವತಿ ನಗರಕ್ಕೆ ಸಮಾನವಾದ ಸೊಗಸಿನಿಂದ, ಸೌಧ, ಪ್ರಾಕಾರಗಳಿಂದ, ಸಂಪದ್ಭರಿತವಾಗಿ ಇಂದ್ರಪ್ರಸ್ಥ ಮೆರೆಯಿತು. ಮಯನು ನಿರ್ಮಿಸಿದನೆಂದು ಹೇಳಲಾದ ಇಂದ್ರಪ್ರಸ್ಥದ ಅರಮನೆಯ ರಚನೆ ಅನೇಕ ವೈಚಿತ್ರ್ಯಗಳಿಂದ ಕೂಡಿದ್ದು, ಎಲ್ಲರನ್ನೂ ಬೆರಗುಗೊಳಿಸುತ್ತಿತ್ತು.

ಪಾಂಡವರು ಸ್ವರ್ಗಾರೋಹಣಕ್ಕೆ ಹೊರಡುವ ಮುನ್ನ ಶ್ರೀಕೃಷ್ಣನ ಮರಿಮೊಮ್ಮಗ ವಜ್ರನಿಗೆ ಇಲ್ಲಿ ಪಟ್ಟಕಟ್ಟಿದರು.



ಹಳೆಯ ನೃತ್ಯ ಪ್ರಕಾರಕ್ಕೆ ಹೊಸ ಕಳೆ: ಇಂದ್ರಾಣಿ

ಇಂದ್ರಾಣಿ ರೆಹಮಾನ್

ಬಾಲ್ಯ ನ್ಯೂಯಾರ್ಕ್‌ನಲ್ಲಿ. ಮೊದಲ ಶಿಕ್ಷಣ ಬ್ಯಾಲೆ ನೃತ್ಯದಲ್ಲಿ. ಎಂಟನೆಯ ವಯಸ್ಸಿಗೇ ಲಂಡನ್ನಿನಲ್ಲಿ ಬ್ಯಾಲೆ ನೃತ್ಯ ಪ್ರದರ್ಶನ. ಅನಂತರ ಭಾರತದಲ್ಲಿ ಭರತನಾಟ್ಯ; ಮೋಹಿನಿ ಆಟ್ಟಂ, ಕೂಚುಪುಡಿ, ಒಡಿಸಿ, ಕಥಕ್‌ಗಳ ಅಭ್ಯಾಸ; ಆ ನೃತ್ಯಗಳಲ್ಲಿ ಪರಿಣತಿ. ಅನೇಕ ಬಾರಿ ವಿದೇಶಗಳಲ್ಲಿ ಸಂಚರಿಸಿ ಭಾರತೀಯ ನೃತ್ಯವನ್ನು ಜನಪ್ರಿಯಗೊಳಿಸಿದವರು ಇಂದ್ರಾಣಿ ರೆಹಮಾನ್.

ಇಂದ್ರಾಣಿ ಪ್ರಸಿದ್ಧ ನೃತ್ಯ ಕಲಾವಿದೆ ರಾಗಿಣಿ ದೇವಿಯವರ ಪುತ್ರಿ. ರಾಗಿಣಿ ಅಮೆರಿಕದ ಮಹಿಳೆ; ದಕ್ಷಿಣ ಭಾರತದ ವಿವಿಧೆಡೆ ನೆಲೆಸಿ ನೃತ್ಯಾಭ್ಯಾಸ ಮಾಡಿದವರು. ಹೀಗೆ ಇಂದ್ರಾಣಿಗೆ ನೃತ್ಯ ರಕ್ತಗತವಾಗಿ ಬಂದದ್ದು. ಹಬೀಬ್ ರೆಹಮಾನ್ ಎಂಬ ಭಾರತೀಯ ವಾಸ್ತುಶಿಲ್ಪಿಯನ್ನು ವಿವಾಹವಾಗಿ ಭಾರತಕ್ಕೆ ಬಂದ ಇಂದ್ರಾಣಿ ಮದನಪಲ್ಲೂರು ಚೊಕ್ಕಲಿಂಗಂ ಪಿಳ್ಳೆಯವರಲ್ಲಿ ಶಿಷ್ಯವೃತ್ತಿ ಕೈಗೊಂಡರು. ತಮ್ಮ ಪ್ರತಿಭೆಯಿಂದ ಹಳೆಯ ನೃತ್ಯ ಪ್ರಕಾರಗಳಿಗೆ ಹೊಸ ಕಳೆ ಕೊಟ್ಟು ಅವನ್ನು ಜನಪ್ರಿಯಗೊಳಿಸಿದರು. ಇವರ ನೃತ್ಯದ ಪ್ರತಿ ಕ್ಷಣವೂ ಆಕರ್ಷಕ, ಅರ್ಥಪೂರ್ಣ.

ಇಂದಿರಾ ಗಾಂಧೀ

ಸ್ವತಂತ್ರ ಭಾರತದ ಮೂರನೆಯ ಪ್ರಧಾನಿ ಇಂದಿರಾ ಗಾಂಧೀ.

ಜವಾಹರಲಾಲ ನೆಹರೂ ಮತ್ತು ಕಮಲಾ ನೆಹರೂ ಅವರ ಏಕಮಾತ್ರ ಪುತ್ರಿ ಇಂದಿರಾ ಪ್ರಿಯದರ್ಶಿನಿ. 1917 ನವೆಂಬರ್ 19ರಂದು ಅಲಹಾಬಾದಿನಲ್ಲಿ ಇವರ ಜನನ.

ಐದು ವರ್ಷದ ಮಗುವಾಗಿದ್ದಾಗ ಅಜ್ಜ ಮೋತಿಲಾಲರ ತೊಡೆಯ ಮೇಲೆ ಕುಳಿತುಕೊಂಡೇ ರಾಜಕೀಯ ಕೈದಿಯೊಬ್ಬರ ವಿಚಾರಣೆಯನ್ನು ಬಾಲಿಕೆ ಇಂದಿರಾ ಕಂಡಿದ್ದಳು. ಆ ವಯಸ್ಸಿನಲ್ಲೇ ಗಯೆಯಲ್ಲಿ ಜರಗಿದ ಕಾಂಗ್ರೆಸ್ ಅಧಿವೇಶನವನ್ನೂ ನೋಡಿದಳು. ಒಂಬತ್ತನೆಯ ವರ್ಷದಲ್ಲಿ ಹೆತ್ತವರೊಂದಿಗೆ ಯೂರೋಪು, ರಷ್ಯ ದೇಶಗಳಲ್ಲಿ ಪ್ರವಾಸ ಮಾಡಿದಳು. ಹನ್ನೊಂದನೆಯ ವಯಸ್ಸಿನಲ್ಲಿ ಚರಖಾ ಸಂಘದ ಮಕ್ಕಳ ಶಾಖೆಯನ್ನು ಪ್ರಾರಂಭಮಾಡಿದಳು. ಹನ್ನೆರಡನೆಯ ವಯಸ್ಸಿನಲ್ಲಿ ತನ್ನ ತಂದೆಯು ಅಜ್ಜನಿಂದ ಕಾಂಗ್ರೆಸ್ ಅಧ್ಯಕ್ಷತೆಯ ಅಧಿಕಾರ ಸ್ವೀಕರಿಸಿದ್ದನ್ನು ಕಂಡಳು. 1930ರಲ್ಲಿ ಕಿರಿಯರ ವಾನರಸೇನೆಯನ್ನಾರಂಭಿಸಿ, ಅಸಹಕಾರ ಚಳುವಳಿಯ ಕಾಲದಲ್ಲಿ ಸೇವೆ ಸಲ್ಲಿಸಿದಳು. ಈ ಎಲ್ಲ ಚಟುವಟಿಕೆಗಳು ಆಕೆಯನ್ನು ಧೀರೆಯನ್ನಾಗಿ ಮಾಡಿದುವು.

ಇಂದಿರಾ ಶಿಕ್ಷಣ ಪಡೆದದ್ದು ಮೊದಲು ಪುಣೆಯ ಶಾಲೆಯೊಂದರಲ್ಲಿ; ಅನಂತರ ಶಾಂತಿನಿಕೇತನದಲ್ಲಿ: ಬಳಿಕ ಸ್ವಿಟ್ಜರ್‌ಲೆಂಡಿನಲ್ಲಿ: ಆಮೇಲೆ ಆಕ್ಸ್‌ಫರ್ಡಿನಲ್ಲಿ. ಈ ಮೊದಲೇ ತಂದೆಯು ಸೆರೆಮನೆಯಿಂದ ಬರೆಯುತ್ತಿದ್ದ ಪತ್ರಗಳಿಂದ ಜಗತ್ತಿನ ಸಾಮಾನ್ಯ ಜ್ಞಾನವನ್ನು ಆಕೆ ಪಡೆದಿದ್ದಳು. ಆಕೆಯ 19ನೆಯ ವಯಸ್ಸಿನಲ್ಲಿ ತಾಯಿ ಕಮಲಾ ನೆಹರೂ ನಿಧನರಾದರು.

ಇಂದಿರಾ ಪ್ರಿಯದರ್ಶಿನಿ 1938ರಲ್ಲಿ ಅಖಿಲ ಭಾರತ ರಾಷ್ಟ್ರೀಯ ಕಾಂಗ್ರೆಸ್ಸಿನ ಸದಸ್ಯೆಯಾದರು.

ಇಂದಿರಾ ಪ್ರಿಯದರ್ಶಿನಿಗೂ ಫಿರೋಜ್ ಗಾಂಧಿಗೂ ಮೊದಲಿನಿಂದಲೇ ಪರಿಚಯವಿದ್ದು, ಪರಿಚಯ ಸಲಿಗೆಯ ಸ್ನೇಹವಾಗಿ, ಸ್ನೇಹ ಅನುರಾಗವಾಗಿ ಮಾರ್ಪಟ್ಟಿತ್ತು. 1942ರಲ್ಲಿ ಇವರಿಗೆ ಮದುವೆಯಾಯಿತು. ವಿವಾಹವಾಗಿ ಕೆಲವೇ ತಿಂಗಳುಗಳಲ್ಲಿ 'ಚಲೇ ಜಾವ್' ಚಳುವಳಿಯಲ್ಲಿ ಭಾಗವಹಿಸಿದ್ದಕ್ಕಾಗಿ ಸತಿಪತಿಯರ ಬಂಧನವಾಯಿತು. ಹದಿಮೂರು ತಿಂಗಳು ಕಾರಾಗೃಹದಲ್ಲಿದ್ದರು.

ಇವರಿಗೆ ಇಬ್ಬರು ಗಂಡುಮಕ್ಕಳು: 1944ರಲ್ಲಿ ಹುಟ್ಟಿದ ಮಗ ರಾಜೀವ ಮತ್ತು 1946ರಲ್ಲಿ ಜನಿಸಿದ ಮಗ ಸಂಜಯ.

1947ರಲ್ಲಿ ಜವಾಹರಲಾಲ ನೆಹರೂ ಭಾರತದ ಪ್ರಧಾನಿಯಾದ ಮೇಲೆ ಮನೆಗೆ ಬಂದ ಅತಿಥಿಗಳನ್ನು ಉಪಚರಿಸುವ ಹೊಣೆಯನ್ನು ಇಂದಿರಾ ಗಾಂಧೀ ಹೊತ್ತರು. 1955ರಲ್ಲಿ ಇಂದಿರಾ ಗಾಂಧಿಯವರು ಕಾಂಗ್ರೆಸ್ ಕಾರ್ಯಸಮಿತಿಗೆ ಆಯ್ಕೆಯಾದರು. 1959ರಲ್ಲಿ ಕಾಂಗ್ರೆಸ್ ಅಧ್ಯಕ್ಷರಾದರು. 1961ರಲ್ಲಿ ಕಾಂಗ್ರೆಸ್ ಪಕ್ಷದ ಕೇಂದ್ರ ಚುನಾವಣಾ ಸಮಿತಿಯ ಸದಸ್ಯರೂ ಆದರು. ಭಾರತದ ಮೇಲೆ ಚೀನ ದಾಳಿ ಮಾಡಿದಾಗ, ಗಡಿ ಪ್ರದೇಶಕ್ಕೆ ಹೋಗಿ ನಮ್ಮ ಯೋಧರನ್ನು ಹುರಿದುಂಬಿಸಿದರು. 1960ರಲ್ಲಿ ಪತಿಯನ್ನು ಕಳೆದುಕೊಂಡ ಇಂದಿರಾ ಗಾಂಧೀ 1964ರಲ್ಲಿ ತಂದೆಯನ್ನೂ ಕಳೆದುಕೊಂಡರು.

ಲಾಲ್ ಬಹಾದ್ದೂರ್ ಶಾಸ್ತ್ರಿಯವರು ಪ್ರಧಾನ ಮಂತ್ರಿಯಾಗಿದ್ದಾಗ ಇಂದಿರಾ ಗಾಂಧಿಯವರು ಕೇಂದ್ರ ಸರಕಾರದ ವಾರ್ತಾ ಮತ್ತು ಪ್ರಸಾರ ಖಾತೆಯ ಮಂತ್ರಿಯಾದರು. ಶಾಸ್ತ್ರಿಯವರ ಮರಣಾನಂತರ 1966ರಲ್ಲಿ ಭಾರತದ ಪ್ರಧಾನ ಮಂತ್ರಿಯಾಗಿ ಪ್ರತಿಜ್ಞೆ ಸ್ವೀಕರಿಸಿದರು.

1969ರಲ್ಲಿ ಕಾಂಗ್ರೆಸ್ ಕಾರ್ಯ ಸಮಿತಿಯು ಬೆಂಗಳೂರಿನಲ್ಲಿ ಸೇರಿದಾಗ ಕಾಂಗ್ರೆಸ್ಸಿನೊಳಗಿನ ಭಿನ್ನಾಭಿಪ್ರಾಯ ತೀವ್ರವಾಯಿತು. ರಾಷ್ಟ್ರಪತಿಯ ಚುನಾವಣೆಯ ಕಾಲದಲ್ಲಿ ಕಾಂಗ್ರೆಸ್ ಇಬ್ಭಾಗವಾಯಿತು.



ಬಾಪೂ ಮತ್ತು ಪ್ರಿಯದರ್ಶಿನಿ



ತಂದೆ ಮಗಳು

ಲೋಕಸಭೆ ವಿಸರ್ಜಿಸಲ್ಪಟ್ಟು 1971ರಲ್ಲಿ ಮರು ಚುನಾವಣೆ ನಡೆಯಿತು. ಇಂದಿರಾ ಗಾಂಧಿಯವರ ಕಾಂಗ್ರೆಸ್ ಪಕ್ಷ ಅಧಿಕ ಮತ ಗಳಿಸಿತು. ಅವರು ಮತ್ತೊಮ್ಮೆ ಪ್ರಧಾನಿಯಾಗಿ ಆಯ್ಕೆಯಾದರು. ಈ ಮೊದಲು ನಡೆದ ರಾಷ್ಟ್ರದ ಹದಿನಾಲ್ಕು ಬ್ಯಾಂಕುಗಳ ರಾಷ್ಟ್ರೀಕರಣ, ಇಂದಿರಾ ನಾಯಕತ್ವದಲ್ಲಿ ಕಾಂಗ್ರೆಸ್ ಸರಕಾರ ತಳೆದ ಸಮಾಜವಾದೀ ನಿಲುವಿಗೆ ನಿದರ್ಶನವಾಗಿತ್ತು. ದಾರಿದ್ರ್ಯ ನಿರ್ಮೂಲನ—'ಗರೀಬಿ ಹಟಾವೋ' ಕಾಂಗ್ರೆಸ್ಸಿನ ಕಾರ್ಯಕ್ರಮಗಳ ಧ್ಯೇಯವಾಯಿತು.

ಪಾಕಿಸ್ತಾನದ ಮಿಲಿಟರಿ ಆಡಳಿತಗಾರರು ಪೂರ್ವ ಪಾಕಿಸ್ತಾನದಲ್ಲಿ ನಡೆಸಿದ ದಬ್ಬಾಳಿಕೆಯ ಫಲವಾಗಿ ಅಲ್ಲಿ ಬಂಧವಿಮೋಚನೆಯ ಹೋರಾಟ ತೀವ್ರಗೊಂಡಿತು. ಈ ಹೋರಾಟದ ವಿಷಯದಲ್ಲಿ ಭಾರತಕ್ಕೆ ಪೂರ್ಣ ಸಹಾನುಭೂತಿ ಇದ್ದಿತು.

1971ರ ಡಿಸೆಂಬರ್ 4ರಂದು ಪಾಕಿಸ್ತಾನ ಇದ್ದಕ್ಕಿದ್ದಂತೆ ಭಾರತದ ಮೇಲೆ ವಿಮಾನ ದಾಳಿ ನಡೆಸಿತು. ಭಾರತ ಪಡೆಗಳು ಬಾಂಗ್ಲಾದೇಶ ದೊಳಕ್ಕೆ ನುಗ್ಗಿ ಹದಿಮೂರೇ ದಿನಗಳಲ್ಲಿ ಪಾಕಿಸ್ತಾನದ ಸೇನೆ ಶರಣಾಗು ವಂತೆ ಮಾಡಿದುವು. ಹದಿನೇಳು ದಿನಗಳ ಯುದ್ಧದ ಬಳಿಕ ಪಶ್ಚಿಮ ರಂಗ ದಲ್ಲೂ ಪಾಕಿಸ್ತಾನ ಸೋಲನ್ನೊಪ್ಪಿತು. ಭಾರತದ ನಾಯಕಶಕ್ತಿಯೂ ಸೇನಾಶಕ್ತಿಯೂ ಜಗತ್ತಿನ ಹೊಗಳಿಕೆಗೆ ಪಾತ್ರವಾದುವು. ರಾಷ್ಟ್ರಪತಿ ಯವರು 'ಭಾರತ ರತ್ನ' ಎಂಬ ದೇಶದ ಶ್ರೇಷ್ಠ ಪ್ರಶಸ್ತಿಯನ್ನು ಇಂದಿರಾ ಗಾಂಧೀ ಅವರಿಗಿತ್ತು ಅವರ ನಾಯಕತ್ವ, ಧೈರ್ಯ, ಧೀಶಕ್ತಿಗಳನ್ನು ಶ್ಲಾಘಿಸಿ ದರು. ರಾಷ್ಟ್ರದಲ್ಲೂ ಅಂತರರಾಷ್ಟ್ರ ಕ್ಷೇತ್ರದಲ್ಲೂ ಪ್ರಧಾನಿ ಇಂದಿರಾ ಗಾಂಧಿಯವರ ಪ್ರತಿಷ್ಠೆ ಹೆಚ್ಚಿತು.

ಇಂದೂರು

ಹಿಂದೆ ನರ್ಮದಾ ಕಣಿವೆಗೆ ಹೋಗುತ್ತಿದ್ದ ವ್ಯಾಪಾರಿಗಳಿಗೆ ಈಗಿನ ಇಂದೂರು ಇರುವ ಸ್ಥಳ ಒಂದು ಮುಖ್ಯ ಪ್ರಯಾಣಘಟ್ಟವಾಗಿದ್ದಿತು. 1741ರಲ್ಲಿ ಕೆಲವು ಜಮೀನ್ದಾರರು ಸೇರಿ ಇಲ್ಲಿ ಇಂದ್ರೇಶ್ವರ ದೇವಸ್ಥಾನ ವನ್ನು ಕಟ್ಟಿಸಿದರು. ಇದರ ಸುತ್ತ ಬೆಳೆದ ಊರು 'ಇಂದೂರು' ಆಯಿತು.

ಇದು ಮಧ್ಯಪ್ರದೇಶದ ಅತ್ಯಂತ ದೊಡ್ಡ ಪಟ್ಟಣ. ಹಿಂದೆ ಇಂದೂರು ಒಂದು ಸಂಸ್ಥಾನವಾಗಿತ್ತು. ಇದನ್ನು ಆಳಿದವರು ಹೋಳ್ಕರ್ ಮನೆತನದ ಅರಸರು. ಮಲ್ಹಾರರಾವ್ ಹೋಳ್ಕರರಿಗೆ 18ನೆಯ ಶತಮಾನದಲ್ಲಿ ದೊರೆತ ಜಹಗೀರಿಯಿಂದ ಈ ಮನೆತನದ ಆಳ್ವಿಕೆ ಆರಂಭವಾಯಿತು. ಇವರಲ್ಲಿ 1766ರಿಂದ 1795ರ ವರೆಗೆ ಆಳಿದ ಅಹಲ್ಯಾಬಾಯಿ ಹೋಳ್ಕರ್ ಈ ವಂಶದಲ್ಲಿ ತುಂಬ ಖ್ಯಾತಳು. ಈಕೆಯ ಅನಂತರ ಅನಾಯಕತ್ವ ಆರಂಭವಾಯಿತು. ಬಲಶಾಲಿಯಾದ ಸೇನಾನಿ ತುಕೋಜಿ ಹೋಳ್ಕರ್ ಇಂಗ್ಲಿಷರೊಡನೆ ಹೋರಾಡಿದ. ಅವನು ಸತ್ತ ಮೇಲೆ ರಾಜ್ಯ ಇಂಗ್ಲಿಷರ ಪಾಲಾಯಿತು.

ಇಂದೂರು ಒಂದು ಮುಖ್ಯ ವಾಣಿಜ್ಯ ಹಾಗೂ ಕೈಗಾರಿಕಾ ಕೇಂದ್ರ. ವಸ್ತ್ರೋದ್ಯಮ, ಎಣ್ಣೆ ಕೈಗಾರಿಕೆ ಹಾಗೂ ಎಂಜಿನಿಯರಿಂಗ್ ಉದ್ಯಮಗಳು ಇಲ್ಲಿವೆ. ಸರಸ್ವತಿ ಹಾಗೂ ಖಾನ್ ನದಿಗಳ ದಂಡೆಯ ಮೇಲೆ ಇಂದೂರು ನಗರವಿದೆ. ಇಲ್ಲಿನ ಪ್ರೇಕ್ಷಣೀಯ ಸ್ಥಳಗಳು ಹಲವಾರು : ಲಾಲ್‌ಬಾಗ್ ಅರಮನೆ, ಮಾಣಕ್‌ಬಾಗ್ ಅರಮನೆ, ಹಳೆಯ ಅರಮನೆ, ಹೊಸ ಅರಮನೆ ಮುಂತಾದುವು. 'ಕಾಂಚ್ ಮಂದಿರ್' ಎಂಬುದು ನಗರದ ಬಹಳ ಸುಂದರ ಕಟ್ಟಡ ; ಇದು ಜೈನ ದಿಗಂಬರ ಪಂಥದವರ ಆಲಯ. ಗೋಡೆ, ಛಾವಣಿಗಳ ಒಳಮೈ ಮೇಲೆಲ್ಲ ಮೋಹಕವಾದ ಕನ್ನಡಿಚೂರು, ಗಾಜು ಮತ್ತು ರಂಗುರಂಗಿನ ಮಣಿಗಳನ್ನು ಹೊದಿಸಲಾಗಿದೆ. ಗೋಡೆಗಳ ಮೇಲೆ ನರಕದಲ್ಲಿ ದೊರೆಯುವ ಶಿಕ್ಷೆಗಳ ಚಿತ್ರವಿದೆ. ಅತ್ಯಂತ ನಾಜೂಕಿನ ಕೆಲಸ ಮಾಡಿದ ಬೆಳ್ಳಿಯ ಮೂರು ಮೇಜುಗಳ ಮೇಲೆ ಕರಿ ಶಿಲೆಯ ಒಂದು ವಿಗ್ರಹ ಹಾಗೂ ಬಿಳಿ ಅಮೃತಶಿಲೆಯ ಎರಡು ವಿಗ್ರಹಗಳನ್ನು ಇರಿಸ ಲಾಗಿದೆ. ಈ ವಿಗ್ರಹಗಳು ತೀರ್ಥಂಕರರವು. ಸಭಾಂಗಣದ ಕಂಬಗಳ ಮೇಲೆ ಕೆಂಪು, ಹಸಿರು, ನೀಲಿ, ಕಿತ್ತಳೆ ಮಣಿಗಳನ್ನು ತುಂಬಿಸಲಾಗಿದೆ. ದೊಡ್ಡ ದೊಡ್ಡ ತೂಗು ಗೊಂಚಲು ದೀಪಗಳಿವೆ. ಗೋಡೆ, ಕಂಬಗಳ ಮೇಲೆ ಬಿದ್ದ ಬೆಳಕು ಪ್ರತಿಫಲಿಸಿ ರಮಣೀಯ ಸನ್ನಿವೇಶ ಉಂಟಾಗುತ್ತದೆ.

ಛತ್ರಿಬಾಗ್ ಎಂಬಲ್ಲಿ ಹೋಳ್ಕರ್ ರಾಜರ ಸ್ಮಾರಕ ಸಮಾಧಿಗಳಿವೆ.

ಇಂದೂರಿನಲ್ಲಿರುವ ಸಸ್ಯೋದ್ಯಮ ಸಂಸ್ಥೆ ಏಷ್ಯಾ ಖಂಡದ ಹೆಸರಾಂತ ಕೃಷಿ ಸಂಶೋಧನಾ ಸಂಸ್ಥೆಗಳಲ್ಲಿ ಒಂದು. ಅನೇಕ ವಿದ್ಯಾ ಸಂಸ್ಥೆಗಳೂ ನಗರದಲ್ಲಿವೆ.

ಇಂದೂರಿನ ಜನಸಂಖ್ಯೆ 5,60,936.

ನೋಡಿ : ಅಹಲ್ಯಾಬಾಯಿ

ಇಂಫಾಲ್

ಮಣಿಪುರ ರಾಜ್ಯದ ರಾಜಧಾನಿ ಇಂಫಾಲ್. ಇದು ರಾಜ್ಯದ ವಾಣಿಜ್ಯ ಹಾಗೂ ವ್ಯಾಪಾರಕೇಂದ್ರ ಕೂಡ. ರಾಜ್ಯದ ಪ್ರೌಢ ವಿದ್ಯಾಸಂಸ್ಥೆಗಳು ಇರುವುದೂ ಇಲ್ಲೇ.

ಇಂಫಾಲ್ ಉನ್ನತ ಪರ್ವತ ಪ್ರದೇಶದಲ್ಲಿದೆ. ಇಲ್ಲಿನ ಜನ ಬಹುತೇಕ ವೈಷ್ಣವ ಪಂಥಕ್ಕೆ ಸೇರಿದ ಹಿಂದುಗಳು. ಇದರಿಂದಲೇ ಇಲ್ಲಿರುವ ಗೋವಿಂದಜೀ ಸುವರ್ಣ ದೇವಸ್ಥಾನಕ್ಕೆ ಬಹಳ ಪ್ರಾಶಸ್ತ್ಯ. ಶಾಸ್ತ್ರೀಯ ಶೈಲಿಯ ಮಣಿಪುರಿ ನೃತ್ಯ ಹಾಗೂ ಸಂಗೀತ ಇಂಫಾಲ್‌ನಲ್ಲಿ ಪ್ರಚಲಿತ. ಗೋವಿಂದಜೀ ದೇವಸ್ಥಾನದ ನೃತ್ಯಾಂಗಣದಲ್ಲಿ ವಸಂತ ಹುಣ್ಣಿಮೆ ಹಾಗೂ ಕಾರ್ತಿಕ ಹುಣ್ಣಿಮೆಯ ರಾತ್ರಿಗಳಲ್ಲಿ ರಾಸಲೀಲಾ ನೃತ್ಯ ನಡೆಯುತ್ತದೆ.

ಇಂಫಾಲದಲ್ಲಿ ಜವಾಹರಲಾಲ್ ನೆಹರೂ ಮಣಿಪುರ ಡ್ಯಾನ್ಸ್ ಅಕಾಡೆಮಿ ಇದೆ. ರಾಷ್ಟ್ರೀಯ ಸಂಗೀತ ನಾಟಕ ಅಕಾಡೆಮಿ ಇದನ್ನು ನಡೆಸುತ್ತದೆ.

ಭಾರತದಲ್ಲಿ ಸ್ತ್ರೀಯರೇ ನಡೆಸುವ ಅತಿ ದೊಡ್ಡ ಬಜಾರು ಇರುವುದು ಇಂಫಾಲಿನಲ್ಲಿ. ಕುಶಲಕಲಾ ವಸ್ತುಗಳು, ಕೈಮಗ್ಗದಲ್ಲಿ ನೆಯ್ದ ಕಲಾತ್ಮಕ ವಸ್ತ್ರಗಳು ಮತ್ತು ಇತರ ಅನ್ಯ ಪದಾರ್ಥಗಳು ಈ ಬಜಾರಿನಲ್ಲಿ ಮಾರಾಟ ವಾಗುತ್ತವೆ.

[illegible]
[illegible] ಹಾಡುತ್ತಾರೆ. [illegible]ವಿದೆ.

ಇಂಫಾಲ್ ಸಮೀಪದಲ್ಲಿರುವ ಪ್ರೇಕ್ಷಣೀಯ ಸ್ಥಳಗಳು : ಹಳೆಯ ವಿಷ್ಣು ದೇವಾಲಯವಿರುವ ಬಿಷ್ಣುಪುರ; [illegible] ಪ್ರಸಿದ್ಧವಾದ ಮೊಯಿರಾಂಗ್ ಹಳ್ಳಿ ; ಲೊಕ್ಟಕ್ ಸರೋವರ; ಹಲವು ದೇವಾಲಯಗಳಿರುವ ಲೋಂಗೆ ತಬಾಲ್ ; ಮಣಿಪುರ ಕಣಿವೆಯ ಸಮಗ್ರನೋಟ ಸಿಗುವ ತಂಗನೊಪಾಲ್; ಸುಂದರ ತಾಣವಾದ ಚೌಸ್ರ; ಮಣಿಪುರದ ಮೊದಲಿನ ಮಹಾರಾಜರ ಹೆಸರಿರುವ ಹಳ್ಳಿ, ನವ್ ಚೂರ್‌ಚಾಂದ್‌ಪುರ (ಇದು ಇರುವುದು ಬೆಟ್ಟದ ಮೇಲೆ) ; ಭಾರತ–ಬರ್ಮ ಹೆದ್ದಾರಿಯ ಮೇಲಿರುವ ಅತ್ಯುನ್ನತ ಪ್ರದೇಶ ಮಾವೊ ಮುಂತಾದುವು.

ಇಂಫಾಲ್ ಕದನ ಒಂದು ಚರಿತ್ರಾರ್ಹ ಘಟನೆ. 1945ರಲ್ಲಿ, ಎರಡನೆಯ ಮಹಾಯುದ್ಧ ಕಾಲದಲ್ಲಿ, ಜಪಾನೀಯರು ಆಜಾದ್ ಹಿಂದ್ ಫೌಜ್ ನೊಡಗೂಡಿ ಬರ್ಮದ ಕಡೆಯಿಂದ ಭಾರತಕ್ಕೆ ನುಗ್ಗಲು ಯತ್ನಿಸಿದರು.

1945ನೇ ಮೇ ತಿಂಗಳಲ್ಲಿ ನಡೆದ ಇಂಫಾಲ್ ಕದನದಲ್ಲಿ ಅವರಿಗೆ ಸೋಲಾಯಿತು. ಅವರು ಹಿಂದೆ ಸರಿಯಬೇಕಾಯಿತು.

ನೋಡಿ : ಮಣಿಪುರ

ಇ. ಎಂ. ಎಸ್. ನಂಬೂದಿರಿಪಾದ್

ತೀಕ್ಷ್ಣ ಬುದ್ಧಿಶಕ್ತಿ ಹಾಗೂ ನಿರರ್ಗಳ ಶೈಲಿಯ ಬರೆವಣಿಗೆ: ಜೊತೆಗೆ, ಸಂಘಟನಾ ಸಾಮರ್ಥ್ಯ — ಇವು ಭಾರತದ ಕಮ್ಯೂನಿಸ್ಟ್ ಚಳುವಳಿಯ ಒಬ್ಬ ಪ್ರಧಾನ ವ್ಯಕ್ತಿ ಇಳಕಳತ್ತ್ ಮನ ಶಂಕರನ್ ನಂಬೂದಿರಿಪಾದರ ಗುಣಗಳು. ಇವರಿಗೆ ಇಂಗ್ಲಿಷ್, ಮಲಯಾಳಂ ಎರಡು ಭಾಷೆಗಳ ಮೇಲೂ ಪ್ರಭುತ್ವವಿದೆ.

ನಂಬೂದಿರಿಪಾದರು 1909 ಜೂನ್ 14ರಂದು ಒಂದು ಶ್ರೀಮಂತ ಕುಟುಂಬದಲ್ಲಿ ಜನಿಸಿದರು. ತಿರುಚ್ಚೂರು ಕಾಲೇಜಿನಲ್ಲಿ ಓದುತ್ತಿದ್ದಾಗಲೇ ಸಕ್ರಿಯ ರಾಜಕಾರಣದಲ್ಲಿ ಆಸಕ್ತರಾದರು ; ಓದಿಗೆ ತಿಲಾಂಜಲಿ ಇತ್ತರು.

ಇವರು ಭಾಗವಹಿಸಿದ ಮೊದಲ ರಾಜಕೀಯ ಆಂದೋಲನ 1932ರ ಕಾನೂನು ಭಂಗ ಚಳುವಳಿ. 1934ರಲ್ಲಿ ಭಾರತದ ಕಾಂಗ್ರೆಸ್ ಸಮಾಜವಾದೀಪಕ್ಷ ಸ್ಥಾಪಿಸಿದವರಲ್ಲಿ ಇವರೂ ಒಬ್ಬರು. ಕೇರಳ ಪ್ರದೇಶ ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿ ಆಗಿದ್ದರು. ಮದರಾಸಿನ ಶಾಸನ ಸಭೆಯ ಸದಸ್ಯರಾಗಿ ದುಡಿದರು. ಮುಂದೆ ಕಮ್ಯೂನಿಸ್ಟ್ ಪಕ್ಷ ಸೇರಿಕೊಂಡರು. 1941ರಿಂದ ಭಾರತ ಕಮ್ಯೂನಿಸ್ಟ್ ಪಕ್ಷದ ಕೇಂದ್ರ ಸಮಿತಿಯ ಸದಸ್ಯರಾದರು. ಹಾಗೂ 1950 ರಿಂದ ಅದರ 'ಪೊಲಿಟ್ ಬ್ಯೂರೋ'ದ ಸದಸ್ಯರಾದರು.

ಇ.ಎಂ.ಎಸ್.



ನಂಬೂದಿರಿಪಾದರು 1957–59, 1967–69ರಲ್ಲಿ ಕೇರಳದ ಮುಖ್ಯ ಮಂತ್ರಿಯಾಗಿದ್ದರು. ಜಗತ್ತಿನಲ್ಲೇ ಮೊದಲ ಬಾರಿಗೆ ಮತ ಪೆಟ್ಟಿಗೆಯ ಮೂಲಕ ಅಧಿಕಾರಕ್ಕೆ ಬಂದ ಕಮ್ಯೂನಿಸ್ಟ್ ನಾಯಕ ಇವರು. ಆ ರಾಜ್ಯದ ಶಾಸನಸಭೆಗೆ ಅವರು ಮೂರು ಬಾರಿ ಆಯ್ಕೆಯಾಗಿದ್ದಾರೆ. 19[illegible]ರಿಂದ ಅವರು ಭಾರತ ಕಮ್ಯೂನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿಯಾಗಿದ್ದರು. ಭಾರತದ ಕಮ್ಯೂನಿಸ್ಟ್ ಪಕ್ಷ [illegible] ಅವರು ಭಾರತ ಮಾರ್ಕ್ಸಿಸ್ಟ್ ಕಮ್ಯೂನಿಸ್ಟ್ ಪಕ್ಷದ ಪ್ರಮುಖರಾದರು. 1978ರಲ್ಲಿ ಆ ಪಕ್ಷದ ಪ್ರಧಾನ ಕಾರ್ಯದರ್ಶಿಯಾದರು.

'ಕೇರಳದ ರೈತರ ಹೋರಾಟದ ಕತೆ', 'ಕೇರಳದಲ್ಲಿ ರೈತ ಸಮಸ್ಯೆ', 'ರಾಷ್ಟ್ರೀಯ ಪುನರ್ನಿರ್ಮಾಣ ಕಾರ್ಯದಲ್ಲಿ ರೈತ', 'ಸೋಷಿಯಲ್ ಡೆಮಾಕ್ರಸಿ ಹಾಗೂ ಕಮ್ಯೂನಿಸಂ', 'ಕಾಂಗ್ರೆಸ್ ಆಳ್ವಿಕೆಯಲ್ಲಿ ಭಾರತ', 'ಕೇರಳ—ನಿನ್ನೆ, ಇಂದು ಮತ್ತು ನಾಳೆ' —ಇವು ಅವರು ಬರೆದ ಕೆಲವು ಪುಸ್ತಕಗಳು.

ಇಡಿಕ್ಕಿ ಯೋಜನೆ

ಕೇರಳದ ಅತಿ ದೊಡ್ಡ ಜಲವಿದ್ಯುತ್ ಉತ್ಪಾದನಾ ವ್ಯವಸ್ಥೆ—ಇಡಿಕ್ಕಿ ಯೋಜನೆ. ಕೆನಡದ ನೆರವಿನಿಂದ ಇದು ಕಾರ್ಯಗತವಾಗುತ್ತಿದೆ.

ಪೆರಿಯಾರ್ ನದೀ ಕಣಿವೆಯ ಮೇಲುಭಾಗದ ಪ್ರದೇಶ ಈ ಯೋಜನೆಯ ಸ್ಥಾನ. ವಿದ್ಯುದಾಗಾರ ಇರುವುದು ಕೊಟ್ಟಾಯಮ್ ಹಾಗೂ ಪೆರಿಯಾರ್ ಜಿಲ್ಲೆಗಳ ನಡುವೆ. ಯೋಜನೆ ಪೂರ್ಣಗೊಂಡಾಗ ಇಲ್ಲಿ 7,80,000 ಕಿಲೊವಾಟ್ ವಿದ್ಯುತ್ತು ಉತ್ಪಾದನೆಯಾಗುತ್ತದೆ ಮತ್ತು ತೊಡುಪುಳ, ಮೀನಾಚಿಲ್ ಹಾಗೂ ವೈಕಮ್‌ಗಳ ಬಳಿಯ 1,15,000 ಎಕರೆಯಷ್ಟು ಸಾಗುವಳಿ ಭೂಮಿಗೆ ನೀರಾವರಿ ಸೌಲಭ್ಯ ಒದಗುತ್ತದೆ.

ಇ-ತ್ಸಿಂಗ್

"ತಮ್ಮ ಶುಚಿ, ರುಚಿ ವಿಷಯದಲ್ಲಿ ಅವರಿಗೆ ಹೆಮ್ಮೆ. ಕೆಲಸಗಳನ್ನು ನಿಶ್ಚಿತ ಸಮಯಕ್ಕೆ ಅಚ್ಚುಕಟ್ಟಾಗಿ ಮಾಡುತ್ತಾರೆ. ಅದು ಮಹಾನ್ ಅಥವಾ ಉದಾತ್ತ ದೇಶ ಎಂಬ ಅರ್ಥದಲ್ಲಿ ಪ್ರಚಲಿತವಿರುವ 'ಆರ್ಯದೇಶ' ಎಂಬ ಹೆಸರು ಬಹಳ ಸೂಕ್ತ..."

—ಭಾರತದ ಬಗೆಗೆ ಕ್ರಿ.ಶ. 7ನೆಯ ಶತಮಾನದ ಚೀನೀ ಯಾತ್ರಿಕ ಇ-ತ್ಸಿಂಗ್ ಬರೆದ ಮಾತುಗಳಿವು.

ಚೀನೀ ಭಾಷಾ ವಿದ್ಯಾರ್ಥಿ ಇ-ತ್ಸಿಂಗ್. ತನ್ನ ಹನ್ನೆರಡನೆಯ ವಯಸ್ಸಿನಲ್ಲಿ ಗುರುವಿನ ಮರಣದ [illegible] ಧಾರ್ಮಿಕ ವಿಚಾರಗಳಿಗೆ ಮನಸ್ಸು ಕೊಟ್ಟ.

ಕ್ರಿ.ಶ. 635ರಲ್ಲಿ ಜನಿಸಿದ ಇ-ತ್ಸಿಂಗ್. ಇಪ್ಪತ್ತರ ಹೊಸ್ತಿಲಲ್ಲಿದ್ದಾಗಲೇ ಭಾರತ ಯಾತ್ರೆಯ ಕನಸು ಕಾಣುತ್ತಿದ್ದ. ಹ್ಯೂಯೆನ್ ತ್ಸಾಂಗನ ಯಶಸ್ವೀ ಭಾರತಯಾತ್ರೆಯ ಅನಂತರ ಅವನ ಆಸೆಗೆ ಗರಿ ಮೂಡಿತು. ಧರ್ಮ ಜಿಜ್ಞಾಸೆಯಲ್ಲಿ ಧೂಳಿನಂತೆ ಏಳುತ್ತಿದ್ದ ನೂರಾರು ಅನುಮಾನಗಳನ್ನು ಪರಿಹರಿಸಿಕೊಳ್ಳುವ ಉದ್ದೇಶದಿಂದ 671ರಲ್ಲಿ ಅವನು ಭಾರತಕ್ಕೆ ಹೊರಟ. ಪರ್ಷಿಯಕ್ಕೆ ಬರುತ್ತಿದ್ದ ಹಡಗನ್ನೇರಿ ಪ್ರಯಾಣ ಪ್ರಾರಂಭಿಸಿದ. ಸಂಸ್ಕೃತವನ್ನು ಕಲಿಯತೊಡಗಿದ್ದ ಇ-ತ್ಸಿಂಗ್ ದಾರಿಯಲ್ಲಿ ಭೋಗ(ಈಗಿನ ಮಲಯ)ದಲ್ಲಿ ಆರು ತಿಂಗಳು ಇದ್ದು 'ಶಬ್ದ ವಿದ್ಯೆ' (ಸಂಸ್ಕೃತ ವ್ಯಾಕರಣ) ಕಲಿತ. ಅನಂತರ 'ನಗ್ನರ ದ್ವೀಪ'ದ (ನಿಕೋಬಾರ್) ಮೂಲಕ 673ರಲ್ಲಿ ತಾಮ್ರಲಿಪ್ತಿ(ಹುಗ್ಲಿ ನದಿ ದಡದ ಬಂದರು-ಈಗಿನ ಕಲ್ಕತ್ತಕ್ಕೆ ಸಮೀಪ) ತಲುಪಿದ. ಅಲ್ಲಿ [illegible] ತಿಂಗಳು 'ಬ್ರಹ್ಮವಿದ್ಯೆ' ಕಲಿತು. 'ಮಧ್ಯದೇಶ'ದತ್ತ ಮುಂದುವರಿದ.

ವೈಶಾಲಿ, ಕುಶಿನಗರ, ವಾರಾಣಸಿ, ಕಪಿಲವಸ್ತು, ಶ್ರಾವಸ್ತಿ, ಕೌಶಾಂಬಿ ಅವನು ಕಂಡ ಪುಣ್ಯಕ್ಷೇತ್ರಗಳು.

[illegible] ಜನರಲ್ಲಿದೆ. ಒಂದು ಯೋಜನ (ಸುಮಾರು ಒಂಬತ್ತು ಮೈಲು) ಹೋಗು ವಷ್ಟರಲ್ಲಿ ಇಪ್ಪತ್ತು-ಮೂವತ್ತು ಸ್ನಾನದ ಕೊಳಗಳು ಸಿಗುತ್ತವೆ... ಸಂಘಾರಾಮಗಳ ಬಳಿ ಕೊಳಗಳಲ್ಲಿ ನಿರ್ದಿಷ್ಟ ಸಮಯದಲ್ಲಿ ಸಾವಿರಾರು ಭಿಕ್ಕುಗಳು ಸ್ನಾನ ಮಾಡುತ್ತಾರೆ. ಜನರು ಸ್ನಾನಮಾಡದೆ ಊಟ ಮಾಡುವುದೇ ಇಲ್ಲ. ಬೆಳಗ್ಗೆ ಹಲ್ಲುಜ್ಜುವ ಕಡ್ಡಿಯಿಂದ ಹಲ್ಲು, ನಾಲಿಗೆ ತಿಕ್ಕಿ, ತೊಳೆದ ಅನಂತರವೇ ಇನ್ನೊಬ್ಬರನ್ನು ನಮಸ್ಕರಿಸುವ ಅರ್ಹತೆ ಬರುತ್ತದೆ.

[illegible] ಸ್ಥಾಪಿಸುವುದೊಳಿತು"—ಎಂದಿದ್ದಾನೆ.

[illegible] ಭಾಷಾಂತರಿಸಲು ಇಚ್ಛಿಸಿದ.

689ರಲ್ಲಿ ಚೀನಕ್ಕೆ ಹೋಗಿ ಅದೇ ವರ್ಷ ಮತ್ತೆ ಭಾರತಕ್ಕೆ ಹಿಂದಿರುಗಿದ. ಭಾಷಾಂತರಗಳನ್ನೂ ಯಾತ್ರಾಕಥನಗಳನ್ನೂ ಬರೆದು [illegible] ರಾಜಸ್ವಾಗತ ದೊರೆಯಿತು. ಅಲ್ಲಿ ಮತ್ತೆ 230 ಗ್ರಂಥಗಳನ್ನು ಭಾಷಾಂತರಿಸಿದ. 79ನೆಯ ವಯಸ್ಸಿನಲ್ಲಿ, 713ರಲ್ಲಿ ಗತಿಸಿದ.

ಇ-ತ್ಸಿಂಗ್‌ನ [illegible] ಸಂಗ್ ಚಕ್ರವರ್ತಿಯದೇ ಮುನ್ನುಡಿ. ಅದರಲ್ಲಿ ಇ–ತ್ಸಿಂಗ್‌ನ ಜೀವನ, ಕೃತಿಗಳ ಬಗೆಗೆ [illegible]

ಇಬ್ನ್ ಬತೂತ

"ದಿಲ್ಲಿ (ದೆಹಲಿ) ದೊಡ್ಡದೂ ಭವ್ಯವೂ ಆದ ರಾಜಧಾನಿ; ಸೌಂದರ್ಯ, ಶಕ್ತಿ ಎರಡೂ ಕೂಡಿರುವ ಸ್ಥಳ. ಪೂರ್ವ ಭಾಗದ ಇಸ್ಲಾಮಿ ಜಗತ್ತಿನಲ್ಲೇ ಇಷ್ಟು ದೊಡ್ಡ ನಗರ ಬೇರೆ ಇಲ್ಲ.''

14ನೆಯ [illegible] ಮಹಮ್ಮದ್ ಇಬ್ನ್ ಅಬ್ದುಲ್ಲ ಇಬ್ನ್ ಬತೂತ.

[illegible] ನಲ್ಲಿ. ಅವನು ತನ್ನ ಇಪ್ಪತ್ತೆರಡನೆಯ ವಯಸ್ಸಿನಲ್ಲಿ ಮಕ್ಕಾ ಯಾತ್ರೆಗೆ [illegible]



ಮಹಾಪ್ರವಾಸಿ : ಬತೂತ

1333ರಲ್ಲಿ ಭಾರತವನ್ನು ತಲಪಿದ. "ಹೊರ ದೇಶದ ಆಗಂತುಕರ ಬಗೆಗೆ [illegible] ಅಧಿಕಾರಿಗಳು ಆಮೂಲಾಗ್ರ ವಿವರ ಸಂಗ್ರಹಿಸಿ, ತಿಳಿಸಿ, ಸುಲ್ತಾನನಿಂದ ನಿರ್ದೇಶನ ದೊರೆತ ಬಳಿಕ ಮಾತ್ರ ಗಡಿಯೊಳಗೆ ಪ್ರವೇಶಕ್ಕೆ ಅವಕಾಶ ಇದ್ದಿತು." ಮಹಮ್ಮದ್ ಬಿನ್ ತುಘಲಕ್‌ನ ಗೌರವಕ್ಕೆ ಪಾತ್ರನಾದ ಇಬ್ನ್ ಬತೂತ ದೆಹಲಿಯಲ್ಲಿ ಏಳು [illegible]

"[illegible] ಇಬ್ನ್ ಬತೂತ ಹೇಗೋ ಅವನ ಅವಕೃಪೆಗೆ ಗುರಿ ಆದದ್ದೂ ಉಂಟು. [illegible] ಬೂರ್ (ಈಗಿನ ಗೋವ), ಹೆನಾವರ್ (ಹೊನ್ನಾವರ್), ಮಂಜೂರೂರು (ಮಂಗಳೂರು), ಖಾಲ್ಕೋಟ್ (ಕಲ್ಲಿಕೋಟೆ)—ಮೊದಲಾದುವು ಇಬ್ನ್ ಬತೂತ ಕಂಡ ಬಂದರು ಪಟ್ಟಣಗಳು. ಫಾಕನೂರ್ ಎಂದು ಅವನು ಪ್ರಸ್ತಾಪಿಸಿರುವ ಊರು ಬಹುಶಃ ದಕ್ಷಿಣ ಕನ್ನಡ ಜಿಲ್ಲೆಯ ಚಾರಿತ್ರಿಕ ಸ್ಥಳ ಬಾರಕೂರು. ಚೀನ ಪ್ರಯಾಣಕ್ಕೆ ನಾನಾ ವಿಘ್ನಗಳು ಬಂದುದರಿಂದ ಪಶ್ಚಿಮ ಕರಾವಳಿಯಲ್ಲೇ ಅವನು ಸ್ವಲ್ಪಕಾಲ ಸಂಚರಿಸಿದ. ತನ್ನ ಅತಿಥೇಯ ಹೊನ್ನಾವರದ ಸುಲ್ತಾನನ ಪರವಾಗಿ ಸ್ಥಳೀಯ ಯುದ್ಧವೊಂದರಲ್ಲಿ ಭಾಗ ವಹಿಸಿದ.

ಮುಂದೆ ಮಾಲ್ಡೀವ್ ದ್ವೀಪದಲ್ಲಿದ್ದಾಗ ಅಲ್ಲಿನ ವಜೀರನ ಮಗಳನ್ನೂ ಇನ್ನು ಮೂವರು ಹೆಂಗಸರನ್ನೂ ಮದುವೆಯಾದ. ಅಲ್ಲಿ ಧರ್ಮಗುರು ಆಗಿದ್ದು, ಸ್ವಲ್ಪ ಕಾಲಾನಂತರ ಸಿಂಹಳಕ್ಕೆ ಹೋಗಿ, ಅಲ್ಲಿಂದ ಪುನಃ ಮಾಬಾರ್ (ಕೋರಮಂಡಲ ಕರಾವಳಿ), ಹರ್ಕಾಟ್ (ಆರ್ಕಾಟ್), ಕ್ಯುಲಾವ್ (ಕ್ವಿಲಾನ್), ಖಾಲ್ಕೋಟ್‌ಗಳಿಗೆ ಭೇಟಿಕೊಟ್ಟ. ಆಮೇಲೆ ಪೂರ್ವಾಭಿಮುಖವಾಗಿ ಬಂಗಾಳಕೊಲ್ಲಿಯಲ್ಲಿ ಸಂಚರಿಸಿ ಬಂಗಾಳದ ಸುದ್ಕಾವಾನ್ (ಚಿತ್ತಗಾಂಗ್) ಸೇರಿದ. ಸಮುದ್ರ ಮಾರ್ಗ ಹಿಡಿದು, ಜಾವಾ [illegible] ದೆಹಲಿಗೆ ಮರಳಲಿಲ್ಲ. ಸಮುದ್ರ ಮಾರ್ಗವಾಗಿ ಯೆಮನ್, ಅಲ್ಲಿಂದ ಬಾಗ್ದಾದ್ [illegible] 1368ರಲ್ಲಿ 64ನೆಯ ವಯಸ್ಸಿನಲ್ಲಿ ಕಾಲವಾದ.

[illegible]

ಬಾರ(ಮಲಬಾರ್)ನ ಫಲಭರಿತ ತೋಟಗಳು. ಫಾರ್ಮೋಸಿನ ಕಪ್ಪು ನ ಜೆಲಿ, ಹಡಗು ಪಡೆ. ಮುತ್ರಾ(ಮಧುರೈ)ದ ಸುಲ್ತಾನನಾಗಿದ್ದ ಘಿಯಾಸುದ್ದೀನ್ ಮಹಮದ್ ಷಾ ಹಿಂದೂಗಳ ಮೇಲೆ ನಡೆಸಿದ ಅತ್ಯಾಚಾರ ಇತ್ಯಾದಿ ಹಲವಾರು ವಿಷಯಗಳು ಇಬ್ನ್ ಬತೂತನ ಪ್ರವಾಸ ಕಥನದಲ್ಲಿ ಸೇರಿವೆ.

ಇಬ್ರಾಹಿಂ ಆದಿಲ್ ಷಾ

ಬಿಜಾಪುರದ ಆದಿಲ್ ಷಾ ಮನೆತನದಲ್ಲಿ ಇಬ್ರಾಹಿಂ ಹೆಸರಿನ ಇಬ್ಬರು ಪ್ರಮುಖ ಸುಲ್ತಾನರು ಆಳಿದರು. ಇವರಲ್ಲಿ ಮೊದಲನೆಯ ಇಬ್ರಾಹಿಂ ಆದಿಲ್ ಷಾ 1534ರಿಂದ 1557ರ ವರೆಗೂ ಅವನ ಮೊಮ್ಮಗ ಎರಡನೆಯ ಇಬ್ರಾಹಿಂ ಆದಿಲ್ ಷಾ 1580ರಿಂದ 1626ರ ವರೆಗೂ ರಾಜ್ಯಭಾರ ಮಾಡಿದರು.

ಮೊದಲನೆಯ ಇಬ್ರಾಹಿಂ ಆದಿಲ್ ಷಾ ಬಿಜಾಪುರದ ಸುಲ್ತಾನ ಮನೆತನ ಸ್ಥಾಪಕನೂ ದಕ್ಷಿಣದ ಶ್ರೇಷ್ಠ ದೊರೆಗಳಲ್ಲಿ ಒಬ್ಬನೂ ಆದ ಯೂಸುಫ್ ಆದಿಲ್ ಷಾನ ಮೊಮ್ಮಗ. ಇವನು ಪಟ್ಟಕ್ಕೆ ಬಂದಮೇಲೆ ವಿಜಯನಗರದ ರಾಮರಾಯನೊಡನೆ ಗೆಳೆತನ ಬೆಳೆಸಿದ. ಈತ ಮಾಡಿದ ಕೆಲವು ಸುಧಾರಣೆಗಳು ಗಮನಾರ್ಹ. ತನ್ನ ರಾಜ್ಯದ ಜನರಿಗೆ ಸರಕಾರೀ ಹುದ್ದೆಗಳನ್ನು ಕೊಡಬೇಕೆಂಬ ಉದ್ದೇಶದಿಂದ, ಹೊರನಾಡಿನಿಂದ ಬಂದ ಅಧಿಕಾರಿಗಳನ್ನೂ ಸೈನಿಕರನ್ನೂ ಹಿಂದಕ್ಕೆ ಕಳುಹಿಸಿದ. ಪಾರಸೀ ಭಾಷೆಗೆ ಬದಲಾಗಿ ಕನ್ನಡ ಹಾಗೂ ಮರಾಠೀ ಭಾಷೆಗಳನ್ನು ಆಡಳಿತದಲ್ಲಿ ಬಳಸಿದ.

ಎರಡನೆಯ ಇಬ್ರಾಹಿಂ ಆದಿಲ್ ಷಾ, ಅಕ್ಬರನ ಖ್ಯಾತ ಕಂದಾಯ ಮಂತ್ರಿ ತೋಡರಮಲ್ಲನ ಕಂದಾಯ ಪದ್ಧತಿಯನ್ನು ಕೆಲವು ಸೂಕ್ತ ಬದಲಾವಣೆಗಳೊಡನೆ ತನ್ನ ರಾಜ್ಯದಲ್ಲಿ ಆಚರಣೆಗೆ ತಂದ. ಗೋವೆಯ ಪೋರ್ಚುಗೀಸರೊಡನೆ ಸ್ನೇಹ ಬೆಳೆಸಿದ. ಆಡಳಿತ ಹಾಗೂ ಸೇನಾ ಅಧಿಕಾರಗಳಿಗೆ ಹಿಂದುಗಳನ್ನು ನೇಮಿಸಿಕೊಂಡ. ಅನೇಕ ಭವ್ಯ ಕಟ್ಟಡಗಳನ್ನು ಕಟ್ಟಿಸಿದ. ಇವನು ಕಟ್ಟಿಸಿದ ಇಬ್ರಾಹಿಂ ರೋಜಾದ ಅಲಂಕರಣ ಕೆಲಸ ಅತ್ಯುತ್ತಮವಾದದ್ದೆಂದು ತಜ್ಞರ ಅಭಿಮತ.

ಎರಡನೆಯ ಇಬ್ರಾಹಿಂ ಆದಿಲ್ ಷಾ ಪಟ್ಟಕ್ಕೆ ಬಂದಾಗ ಅವನಿಗೆ ಇನ್ನೂ ಒಂಬತ್ತು ವರ್ಷ ವಯಸ್ಸು. ಅವನು ಪ್ರಬುದ್ಧನಾಗಿ ರಾಜ್ಯಭಾರ ವಹಿಸಿಕೊಂಡ ಮೇಲೆ ಕಲೆಗಳನ್ನು ಅಪಾರವಾಗಿ ಪೋಷಿಸಿದ. 'ಕಿತಾಬ್ ನವರಸ್' ಎಂಬ ಕೃತಿಯ ಕರ್ತೃ ಈತ ಎನ್ನುತ್ತಾರೆ. ಇದು ರಚಿತವಾದದ್ದು ಸುಮಾರು 1600ರಲ್ಲಿ. ನವರಸ್ ಎಂಬುದು ಇಬ್ರಾಹಿಮನ ಪ್ರೀತಿಯ ಪದವಾಗಿದ್ದಿತು. ಪಟ್ಟದ ಆನೆ, ಒಂಬತ್ತು ಲಾಂಛನಗಳಿಗೆ ನವರಸ್ ಎಂಬ ಹೆಸರು ಕೊಟ್ಟಿದ್ದ. ನವರಸಪುರವೆಂದು ಇವನು ಹೆಸರಿಸಿದ್ದ ಒಂದು ನಗರದಲ್ಲಿ ಸಾವಿರಾರು ಕಲಾವಿದರು ವಾಸಿಸುತ್ತಿದ್ದರು.

ಇಬ್ರಾಹಿಂ ಪರಮತ ಸಹಿಷ್ಣು. ಪರ್ಷಿಯಾದಿಂದ, ಭಾರತದ ಹಲವಾರು ಕಡೆಗಳಿಂದ ಲೇಖಕರೂ ಕವಿಗಳೂ ಸಂಗೀತಗಾರರೂ ಇವನ ರಾಜಧಾನಿಗೆ ಬರುತ್ತಿದ್ದರು.

ಇ. ಬಿ. ಹ್ಯಾವೆಲ್

'ಭಾರತದಲ್ಲಿ ಒಳ್ಳೆಯ ಕಲಾ ಪರಂಪರೆ ಇದೆ : ಅದನ್ನು ಮುಂದುವರಿಸಿ : ಅನುಕರಣೆ ಬೇಡ '—ಎಂದು ಕರೆ ನೀಡಿ ಭಾರತೀಯ ಕಲಾ ಪರಂಪರೆಯ ಬಗೆಗೆ ನಮ್ಮ ಕಲಾವಿದರಲ್ಲಿ ಜಾಗೃತಿ ಉಂಟುಮಾಡಿದವರು, ಇ.ಬಿ. ಹ್ಯಾವೆಲ್. ಇಪ್ಪತ್ತನೆಯ ಶತಮಾನದಲ್ಲಿ ಭಾರತೀಯ ಕಲೆ ಇವರಿಂದ ಪುನರುತ್ಥಾನಗೊಂಡಿತು. ದೇಶದ ಶ್ರೇಷ್ಠ ಚಿತ್ರಕಾರರು ಬೆಳಕಿಗೆ ಬಂದರು.

ಭಾರತದ ಕಲೆಯನ್ನು ಹೀಗೆ ಮೆಚ್ಚಿ, ಅದನ್ನು ವಿವೇಚಿಸುವ ಹೊಸತೊಂದು ಮಾನದಂಡವನ್ನು ರೂಪಿಸಿಕೊಟ್ಟ ಕೆಲವೇ ಆಂಗ್ಲರಲ್ಲಿ ಹ್ಯಾವೆಲ್ ಮುಖ್ಯರು. ಇವರು 1896ರಲ್ಲಿ ಕಲ್ಕತ್ತದ ಸರಕಾರೀ ಕಲಾಶಾಲೆಗೆ ಪ್ರಿನ್ಸಿಪಾಲರಾಗಿ ಬಂದರು. ಭಾರತೀಯ ಕಲೆಯ ಆದರ್ಶಗಳನ್ನು ಎತ್ತಿ ಹಿಡಿದರು. ದೇಶೀಯ ಕಲಾ ಶೈಲಿಯನ್ನು ಮುಂದುವರಿಸಿಕೊಂಡು ಹೋಗಲು ಅನುಕೂಲ ಪರಿಸರ ಸೃಷ್ಟಿಸಿಕೊಟ್ಟರು. ವಿಶೇಷವಾಗಿ ಅಜಂತಾ ಮತ್ತು ರಜಪೂತ ಚಿತ್ರಕಲಾ ಶೈಲಿಯನ್ನು ಹ್ಯಾವೆಲ್ ಪ್ರೋತ್ಸಾಹಿಸಿದರು. ಭಾರತೀಯ ಕಲೆಯನ್ನು ಹ್ಯಾವೆಲರು ಆಳವಾಗಿ ಅಭ್ಯಾಸಮಾಡಿ ಅದರ ಇತಿಹಾಸದ ಮಹತ್ವದ ಅವಧಿಗಳನ್ನು ಗುರುತಿಸಿಕೊಟ್ಟರು.

ಹ್ಯಾವೆಲ್ಲರು ಭಾರತೀಯರಿಗೆ ನೀಡಿದ ಈ ಪ್ರೋತ್ಸಾಹ ಅನೇಕ ಪಾಶ್ಚಿ ಮಾತ್ಯರಿಗೆ ಹಿಡಿಸಲಿಲ್ಲ. ಹ್ಯಾವೆಲ್ ಅವರ ಟೀಕೆಗೆ ಒಳಗಾದರು. ಟೀಕೆಗಳಿಗೆ ಮಣಿಯದೆ ಪ್ರಸಿದ್ಧ ಕಲಾವಿದ ಅಬನೀಂದ್ರನಾಥ ಠಾಕೂರರ ನೆರವಿನಿಂದ ದೇಶೀಯ ಶೈಲಿಯ ಚಿತ್ರಗಳನ್ನು ಬರೆಸಿದರು. ಹತ್ತು ವರ್ಷಕ್ಕೂ ಹೆಚ್ಚು ಕಾಲ ಹೀಗೆ ದುಡಿದು ತಾವು ಬರೆಸಿದ ಈ ಚಿತ್ರಗಳನ್ನು ಆಗಿನ ಕಲಾ ಕೇಂದ್ರಗಳಾಗಿದ್ದ ಲಂಡನ್, ಪ್ಯಾರಿಸ್‌ಗಳಲ್ಲಿ ಪ್ರದರ್ಶನಕ್ಕಿಟ್ಟರು. ಚಿತ್ರಗಳು ವಿಮರ್ಶಕರ ಮೆಚ್ಚುಗೆ ಪಡೆದುವು.

'ಭಾರತೀಯ ಕಲೆಯ ಆದರ್ಶಗಳು', 'ಪ್ರಾಚೀನ ಹಾಗೂ ಮಧ್ಯಕಾಲೀನ ಭಾರತದ ವಾಸ್ತುಶಿಲ್ಪ ' ಮುಂತಾದುವು ಹ್ಯಾವೆಲರು ರಚಿಸಿದ ಗ್ರಂಥಗಳು.

1907ರಲ್ಲಿ ಹ್ಯಾವೆಲ್ ತಮ್ಮ ತಾಯ್ನಾಡಿಗೆ ತೆರಳಿದರು.

ಇಮ್ಮಡಿ ದೇವರಾಯ

ವಿಜಯನಗರದ ಖ್ಯಾತ ಅರಸು ಇಮ್ಮಡಿ ದೇವರಾಯ. ಈತನ ಆಳ್ವಿಕೆ ಹೆಸರುವಾಸಿಯಾದದ್ದು. ಭಾರತದ ಪ್ರಸಿದ್ಧ ರಾಜರ ಸಾಲಿನಲ್ಲಿ ಒಬ್ಬನೆಂದು ಇಮ್ಮಡಿ ದೇವರಾಯ ಪರಿಗಣಿಸಲ್ಪಟ್ಟಿದ್ದಾನೆ.

ಇವನ ಆಡಳಿತಾವಧಿ 1424ರಿಂದ 1446ರ ವರೆಗೆ. ತಂದೆ ವೀರವಿಜಯ ರಾಯನ ಅನಂತರ ಇವನು ಪಟ್ಟಕ್ಕೆ ಬಂದ. ಅನೇಕ ಯುದ್ಧಗಳನ್ನು ನಡೆಸಬೇಕಾಯಿತಾದರೂ ಕಲೆ, ಸಾಹಿತ್ಯಗಳಿಗೆ ಇವನ ಕಾಲದಲ್ಲಿ ಪ್ರೋತ್ಸಾಹ ದೊರೆಯಿತು. ಈತ ಬಹುಪಾಲು ಯುದ್ಧಗಳಲ್ಲಿ ಜಯಶೀಲನಾದ. ಕಾಡಾನೆಯೊಡನೆ ಹೋರಾಡಿ, ಅದನ್ನು ತನ್ನ ನಿಯಂತ್ರಣಕ್ಕೆ ತಂದುಕೊಳ್ಳಬಲ್ಲ ಸಾಹಸಿಯಾಗಿದ್ದ. 'ಗಜ ಬೇಂಟೆಕಾರ' ಎಂಬ ಬಿರುದು ಇವನಿಗಿದ್ದಿತು. ಭವ್ಯವಾದ ಆಕಾರ, ಅಗಾಧ ಬಲ, ದೃಢತೆ, ಆತ್ಮವಿಶ್ವಾಸ, ಸಮಯಸ್ಫೂರ್ತಿಗಳನ್ನು ಈತ ಪಡೆದಿದ್ದ. ಪ್ರಜೆಗಳು ಇವನನ್ನು ಗೌರವ, ಆದರಗಳಿಂದ ಕಾಣುತ್ತಿದ್ದರು.

ಇಮ್ಮಡಿ ದೇವರಾಯನ ಕಾಲಕ್ಕೆ ವಿಜಯನಗರ ಸಾಮ್ರಾಜ್ಯವನ್ನು ವಿದೇಶೀ ಪ್ರವಾಸಿಗಳಾದ ಅಬ್ದುರ್ ರಜಾಕ್ ಸಂದರ್ಶಿಸಿದ್ದ. ದೇವರಾಯನನ್ನು ಕೊಲೆಮಾಡಲು ನಡೆದ ಒಳಸಂಚು, ಅದರಿಂದ ಅವನು ಪಾರಾದ ಬಗೆಯನ್ನು ರಜಾಕ್ ಬಣ್ಣಿಸಿದ್ದಾನೆ.

ಸಿಂಹಳದಿಂದ ಕಲಬುರ್ಗಿಯ ವರೆಗೆ, ಬಂಗಾಳದಿಂದ ಮಲಬಾರಿನ ವರೆಗೆ ಇಮ್ಮಡಿ ದೇವರಾಯನ ಸಾಮ್ರಾಜ್ಯ ಹಬ್ಬಿತ್ತೆಂದು ಅಬ್ದುಲ್ ರಜಾಕನ ಹೇಳಿಕೆ. ತನ್ನ ಸೈನ್ಯದಲ್ಲಿ ಒಳ್ಳೆಯ ಬಿಲ್ಲುಗಾರರ ಪಡೆಯನ್ನು ಸಂಘಟಿಸುವುದಕ್ಕೋಸ್ಕರ ನಿಪುಣರಾದ ಮಹಮ್ಮದೀಯ ಬಿಲ್ಲುಗಾರರನ್ನು ಅವನು ಬರಮಾಡಿಕೊಂಡಿದ್ದ.

ಯಾವುದೇ ಒಂದು ಭಾಷೆ ಅಥವಾ ಮತಕ್ಕೆ ಮಾತ್ರ ಆಶ್ರಯ ನೀಡುವ ಪಕ್ಷಪಾತಿ ಅವನಾಗಿರಲಿಲ್ಲ. ಇಮ್ಮಡಿ ದೇವರಾಯನ ಆಸ್ಥಾನದಲ್ಲಿ ಪಂಡಿತರು, ಕವಿಗಳು, ತತ್ತ್ವವೇತ್ತರು ಮುಂತಾದ ಮೇಧಾವಿಗಳಿದ್ದರು. ಕಲೆಯಲ್ಲಿ, ಪಾಂಡಿತ್ಯದಲ್ಲಿ ತಮ್ಮ ಮೇಲ್ಮೆಯನ್ನು ಸಾರಲು ಅವರು ಚರ್ಚೆಯಲ್ಲಿ ತೊಡಗುತ್ತಿದ್ದರು. ಕನ್ನಡ 'ಮಹಾಭಾರತ' ರಚಿಸಿದ ಕುಮಾರವ್ಯಾಸ, 'ಪ್ರಭುಲಿಂಗ ಲೀಲೆ' ಬರೆದ ಚಾಮರಸ ಅವನ ಕಾಲದವರು. ಆಂಧ್ರಕವಿ ಶ್ರೀನಾಥನಿಗೆ ಅವನು ಕನಕಾಭಿಷೇಕ ಮಾಡಿಸಿದ. ಇಮ್ಮಡಿ ದೇವರಾಯ ಸ್ವಯಂ ಕವಿಯಾಗಿದ್ದ; ಸಂಸ್ಕೃತದಲ್ಲಿ ಅವನು ರಚಿಸಿದ ಕೃತಿಗಳು 'ಮಹಾನಾಟಕ ಸುಧಾನಿಧಿ' ಹಾಗೂ 'ಬಾದರಾಯಣ ಬ್ರಹ್ಮಸೂತ್ರ ವೃತ್ತಿ'.

ದಾನ ಮಾಡುವುದರಲ್ಲೂ ಅವನು ಎತ್ತಿದ ಕೈ. ತನ್ನ ತೂಕದಷ್ಟು ಬಂಗಾರವನ್ನು ಒಮ್ಮೆ ದಾನ ಮಾಡಿದ. ಇನ್ನೊಂದು ಬಾರಿ, ಪ್ರಶಸ್ತ ರತ್ನಗಳನ್ನು ಕೂಡಿಸಿದ್ದ ಬಂಗಾರದ ಗೋವನ್ನು ದಾನ ಕೊಟ್ಟ. ಹೊರಗಿನಿಂದ ಬಂದ ರಾಯಭಾರಿಗಳಿಗೆ ಬೇಕಾದ ಸೌಕರ್ಯಗಳನ್ನು ಉದಾರವಾಗಿ ಒದಗಿಸುತ್ತಿದ್ದ. ತನ್ನ ಪ್ರಜೆಗಳ ದೂರುಗಳನ್ನು ಗಮನವಿಟ್ಟು ಕೇಳುತ್ತಿದ್ದ. ಸೂಕ್ತ ಕಂಡ ಸಂದರ್ಭಗಳಲ್ಲಿ ಕಂದಾಯವನ್ನು ಬಿಟ್ಟುಬಿಡುತ್ತಿದ್ದ.

ಇವನ ಕಾಲದಲ್ಲಿ ವಿಜಯನಗರದ ನೌಕಾದಳ ಪ್ರಬಲವಾಗಿದ್ದಿತು. ಹಂಪೆಯ ಹಜಾರರಾಮ ದೇವಾಲಯದಲ್ಲಿನ ವರ್ಣಚಿತ್ರಗಳು ಇವನ ಕಾಲದ ಕಲಾ ವೈಭವವನ್ನು ಸಾರುತ್ತವೆ.

ನೋಡಿ : ವಿಜಯನಗರ

ಇಮ್ಮಡಿ ಪುಲಿಕೇಶಿ

ನೋಡಿ : ಪುಲಿಕೇಶಿ–ಸಂಪುಟ ೧

ಇಮಾದ್ ಷಾಹಿ

ಬಹಮನಿ ರಾಜ್ಯವು ಒಡೆದು ಕಾಣಿಸಿಕೊಂಡ ಐದು ರಾಜ್ಯಗಳಲ್ಲಿ ಒಂದು, ಬಿರಾರಿನ ಇಮಾದ್ ಷಾಹಿ ರಾಜವಂಶ. ಈಗಿನ ಮಹಾರಾಷ್ಟ್ರದ ವಿದರ್ಭ ಪ್ರದೇಶವೇ ಬಿರಾರ್.

ಫತ್ತುಲ್ಲಾ ಇಮಾದ್ ಷಾ ಎಂಬ ಬಹಮನಿ ದಳಪತಿ 1484ರಲ್ಲಿ ಬಹಮನಿಗಳ ವಿರುದ್ಧ ಬಂಡಾಯ ಹೂಡಿದ; ಸ್ವತಂತ್ರ ರಾಜ್ಯ ಸ್ಥಾಪಿಸಿದವರಲ್ಲಿ ಇವನು ಮೊದಲಿಗನಾದ. ಈ ರಾಜ್ಯ 1574ರಲ್ಲಿ ಅಹ್ಮದ್ ನಗರದ ನಿಜಾಂ ಷಾಹಿ ರಾಜ್ಯದಲ್ಲಿ ಸೇರಿಹೋಯಿತು.

ನೋಡಿ : ನಿಜಾಂ ಷಾಹಿ

ಇರಾವತಿ ಕರ್ವೆ



ಮಾನವ ವಿಜ್ಞಾನ : ಇರಾವತಿ

ಭಾರತದಲ್ಲಿ ಮಾನವವಿಜ್ಞಾನವನ್ನು ಪುರುಷರೇ ಹೆಚ್ಚಾಗಿ ಅಭ್ಯಸಿಸುತ್ತಿದ್ದ ಕಾಲದಲ್ಲಿ ಆ ವಿಜ್ಞಾನದ ಬಗೆಗೆ ಆಸಕ್ತಿ ವಹಿಸಿದ ಮಹಿಳೆ ಇರಾವತಿ ಕರ್ವೆ. ನಾಸಿಕದಲ್ಲಿ [illegible] ಹೋಗಿ ಜನರ ತಲೆಯ ಅಳತೆ ತೆಗೆದುಕೊಂಡರು; [illegible] ನಡೆಯುತ್ತಿದ್ದಲ್ಲಿಗೆ ಹೋಗಿ ಬಂದರು; ಭಿಲ್ಲರ ವಾಸಸ್ಥಾನಕ್ಕೆ ಹೋಗಿ ಪರಿಶೀಲನೆ ನಡೆಸಿದರು. ಹರಿಜನರ ಜೀವನ ರೀತಿಗಳನ್ನು ಅಭ್ಯಸಿಸಿದರು. ಮಹಾರಾಷ್ಟ್ರದ ಸಾಹಿತ್ಯ ಕ್ಷೇತ್ರದಲ್ಲೂ ದುಡಿದು ಒಳ್ಳೆಯ ಸ್ಥಾನ ಗಳಿಸಿಕೊಂಡರು.

ಇರಾವತಿ ಜನಿಸಿದ್ದು 1905 ಡಿಸೆಂಬರ್ 15. ತಂದೆ ಜಿ.ಎಚ್. ಕರಮರ್‌ಕರ್. ಇರಾವತಿ ತತ್ತ್ವಶಾಸ್ತ್ರದ ಬಿ.ಎ., ಮುಂದೆ ಸಮಾಜಶಾಸ್ತ್ರದ ಎಂ. ಎ. ಪದವಿ ಪಡೆದರು. ಬರ್ಲಿನ್ ವಿಶ್ವವಿದ್ಯಾನಿಲಯದಲ್ಲಿ ಪಿಎಚ್. ಡಿ. ತೆಗೆದುಕೊಂಡದ್ದು ಮಾನವವಿಜ್ಞಾನದಲ್ಲಿ. ಬರ್ಲಿನ್‌ನಲ್ಲಿದ್ದಾಗ ಅವರಿಗೆ ಡಿ.ಡಿ.ಕರ್ವೆಯವರ ಪರಿಚಯವಾಯಿತು. ಭಾರತಕ್ಕೆ ಬಂದ ಮೇಲೆ ಅವರನ್ನು ಮದುವೆಯಾದರು.

ಇರಾವತಿ ಸಂಪ್ರದಾಯಶರಣೆಯಲ್ಲ. ತಮ್ಮ ಅಭಿಪ್ರಾಯ ವ್ಯಕ್ತಪಡಿಸಲು ಎಂದೂ ಹಿಂತೆಗೆದವರಲ್ಲ: ಬಹುಪತ್ನಿತ್ವದ ಬಗೆಗೆ ಅವರ ಅಭಿಪ್ರಾಯ ಕೇಳಿದಾಗ ತಮಗೆ ಅದರಲ್ಲಿ ತಪ್ಪೇನೂ ಕಾಣಲಿಲ್ಲ ಎಂದರು.

ಸಂಶೋಧನೆ ಆಕೆಗೆ ಬಹು ಪ್ರಿಯ. ರಕ್ತಸಂಬಂಧ, ಮಾನವವಿಜ್ಞಾನ, ಜಾತಿ ಪಂಗಡಗಳು ಮತ್ತು ಜನಪದ ಗೀತೆಗಳಲ್ಲಿ ಸಂಶೋಧನೆ ಮಾಡಿದ್ದಾರೆ.

ಕರ್ವೆ ಅವರು ಪುಣೆಯ ಡೆಕ್ಕನ್ ಕಾಲೇಜಿನ ಸಮಾಜವಿಜ್ಞಾನ ಮತ್ತು ಮಾನವವಿಜ್ಞಾನ ವಿಭಾಗದ ಮುಖ್ಯಸ್ಥೆಯಾಗಿದ್ದರು. 'ಭಾರತೀಯ ವಿಜ್ಞಾನ ಕಾಂಗ್ರೆಸ್'ನ ಮಾನವವಿಜ್ಞಾನ ವಿಭಾಗದ ಅಧ್ಯಕ್ಷರಾಗಿ ಚುನಾಯಿತರಾದರು. 1955ರಲ್ಲಿ ಭಾರತ ಸರಕಾರದ ಪ್ರತಿನಿಧಿಯಾಗಿ ಆಫ್ರಿಕದಲ್ಲಿ ಜರಗಿದ 'ಚರಿತ್ರಪೂರ್ವಅವಧಿ ಅಧಿವೇಶನ'ದಲ್ಲಿ ಭಾಗವಹಿಸಿದರು. ಅದೇ ವರ್ಷ ಲಂಡನ್ ವಿಶ್ವವಿದ್ಯಾನಿಲಯದಲ್ಲಿ ಒಂದು ವರ್ಷ ಉಪನ್ಯಾಸಕರಾಗಿದ್ದರು.

ಇರಾವತಿ ಕರ್ವೆ ಖ್ಯಾತ ಲೇಖಕಿ. ಮರಾಠಿಯಲ್ಲಿ 'ಮಹಾಭಾರತ'ವನ್ನು ಕುರಿತ ಇವರ ವಿಮರ್ಶಾಗ್ರಂಥ 'ಯುಗಾಂತ್' ವಿವಾದಗಳಿಗೆ ಎಡೆ ಕೊಟ್ಟಿತು. 'ಪರಿಪುತ್ರಿ' ಮರಾಠಿ ಪ್ರಬಂಧ ಸಂಕಲನ. ಇಂಗ್ಲಿಷಿನಲ್ಲಿ 'ಹಿಂದೂ ಸೊಸೈಟಿ—ಎನ್ ಇಂಟರ್‌ಪ್ರಿಟೇಷನ್', 'ಕಿನ್‌ಶಿಪ್ ಆರ್ಗನೈಸೇಷನ್ ಇನ್ ಇಂಡಿಯಾ' ಮತ್ತು 'ಮಹಾರಾಷ್ಟ್ರ: ಲ್ಯಾಂಡ್ ಅಂಡ್ ಪೀಪ್‌ಲ್' ಅವರು ಬರೆದ ಪುಸ್ತಕಗಳು. ಇವು ಭಾರತದಲ್ಲದೆ ಪಶ್ಚಿಮ ರಾಷ್ಟ್ರಗಳಲ್ಲೂ ಖ್ಯಾತವಾಗಿವೆ.

ಇರಾವತಿ 1970ರ ಆಗಸ್ಟ್ 11ರಂದು ನಿಧನರಾದರು.

ಇ. ಸಿ. ಜಿ. ಸುದರ್ಶನ

ನೋಡಿ : ಸುದರ್ಶನ–ಸಂಪುಟ ೨

ಇ. ವಿ. ರಾಮಸ್ವಾಮಿ ನಾಯಕರ್

[illegible]

ಈರೋಡಿನ ವೆಂಕಟರಾಮಸ್ವಾಮಿ ನಾಯಕರ್ ಅವರ ಜನನ 1879 ಸೆಪ್ಟೆಂಬರ್ 17ರಂದು. ಇವರು ಶಾಲೆಗೆ ಹೋಗಿ ಶಿಕ್ಷಣ ಪಡೆಯಲಿಲ್ಲ. ಈರೋಡಿನ ಮುನ್ಸಿಪಾಲಿಟಿ ನಾಯಕರಾದರು. ಪುರಸಭೆಯ ಅಧ್ಯಕ್ಷರಾಗಿ, ಸ್ವಾತಂತ್ರ್ಯ ಚಳವಳಿಯಲ್ಲಿ ಮುಖಂಡರಾಗಿ, ಜನಪ್ರಿಯತೆ ಗಳಿಸಿದರು. ಅಸ್ಪೃಶ್ಯರ ಹಕ್ಕುಗಳಿಗಾಗಿ ಹೋರಾಡಿದರು.

ಇವರು ರಾಜಕೀಯರಂಗವನ್ನು ಪ್ರವೇಶಿಸಿದ್ದು ಕಾಂಗ್ರೆಸ್ ಪಕ್ಷದ ಮೂಲಕ. ಆದರೆ ಜಾತಿವ್ಯವಸ್ಥೆಯ ದ್ವೇಷಿಯಾಗಿದ್ದ ರಾಮಸ್ವಾಮಿ ನಾಯಕರ್ ಅವರಿಗೆ ಹೆಚ್ಚು ಕಾಲ ಕಾಂಗ್ರೆಸ್ಸಿನಲ್ಲಿರಲಾಗಲಿಲ್ಲ. ಪರಿಣಾಮವಾಗಿ 'ದ್ರಾವಿಡ ಕಜಗಂ' ಸಂಘ ಸ್ಥಾಪಿಸಿದರು.

'ದ್ರಾವಿಡ ಕಜಗಂ'ನ ಪಿತಾಮಹರಾಗಿ ರಾಮಸ್ವಾಮಿ ನಾಯಕರ್ ಅಪಾರ ಜನಪ್ರಿಯತೆ ಗಳಿಸಿದರು. ಜನ ಇವರನ್ನು ಪ್ರೀತಿ, ಗೌರವಗಳಿಂದ 'ಪೆರಿಯಾರ್' ಎಂದು (ಹಿರಿಯರು) ಕರೆದರು. ಭಾರತೀಯ ಸಂಸ್ಕೃತಿಯಲ್ಲಿ ದ್ರಾವಿಡ ಸಂಸ್ಕೃತಿಗೆ ತನ್ನದೇ ಆದ ತೀರ ವಿಶಿಷ್ಟ ಸ್ಥಾನವಿದೆ: ಇದರ ಹಿರಿಮೆಯನ್ನು ಆರ್ಯರ ಕಾಲದಿಂದಲೂ ಕಡೆಗಣಿಸಲು, ಹತ್ತಿಕ್ಕಲು ಪ್ರಯತ್ನಿಸಲಾಗುತ್ತಿದೆ-ಎಂಬುದು ಪೆರಿಯಾರ್‌ರ ಅಭಿಪ್ರಾಯ. ಅವರ ಪ್ರಕಾರ ರಾಮಾಯಣ ಕಾವ್ಯ ದ್ರಾವಿಡ ಸಂಸ್ಕೃತಿಯನ್ನು ಅವಹೇಳನ ಮಾಡುವ 'ಕೀಳುಕೃತಿ'. ರಾಮಸ್ವಾಮಿ ನಾಯಕರ್ ರಾಮನ ಬಗೆಗೆ ಮತ್ತು ಹಿಂದೂಗಳ ಇತರ ದೇವತೆಗಳ ಬಗೆಗೆ ಅಸಹ್ಯ ಹುಟ್ಟಿಸುವಂಥ ಪ್ರದರ್ಶನಗಳನ್ನು ನಡೆಸಿದ್ದುಂಟು.



ಪೆರಿಯಾರ್ : ನಾಯಕರ್

'ದ್ರಾವಿಡ ಕಜಗಂ'ನಲ್ಲಿ ಭಿನ್ನಾಭಿಪ್ರಾಯಗಳು ಮೂಡಿ ಸಂಘ ಎರಡಾಗಿ ಒಡೆಯಿತು. 'ಹೊಸ 'ದ್ರಾವಿಡ ಮುನ್ನೇತ್ರ ಕಜಗಂ' ಕೂಡ ಜನಪ್ರಿಯವಾಗಿ, ಅಣ್ಣಾದುರೈ ನಾಯಕತ್ವದಲ್ಲಿ ತಮಿಳು ನಾಡಿನ ರಾಜಕೀಯದಲ್ಲಿ ಬಲವಾದ ಅಡಿಪಾಯ ಹಾಕಿಕೊಂಡಿತು.

ಆದರೆ ಈ ಘಟನೆಗಳಿಂದ ಇ. ವಿ. ಆರ್. ಹತಾಶರಾಗಲಿಲ್ಲ; ತಮ್ಮದೇ ಆದ ಹೋರಾಟವನ್ನು ನಿಲ್ಲಿಸಲಿಲ್ಲ.

ಮದರಾಸಿನಲ್ಲಿ ಹಿಂದೀ ವಿರೋಧಿ ಚಳುವಳಿಯನ್ನು ಆರಂಭಿಸಿದವರು ಇ. ವಿ. ಆರ್. ಅಂಗಡಿಗಳಲ್ಲಿ ದೇವನಾಗರಿ ಅಕ್ಷರಗಳಿರುವ ಹೆಸರು ಹಲಗೆಗಳನ್ನು ಅಳಿಸಿದರು. ಭಾರತ ಸಂವಿಧಾನವನ್ನು ವಿರೋಧಿಸಿ ಅದರ ಪ್ರತಿಗಳನ್ನು ಇವರು ಸಾರ್ವಜನಿಕ ಸ್ಥಳಗಳಲ್ಲಿ ಸುಟ್ಟರು. ಇವರು ಹಿಂದೊಮ್ಮೆ ಕಮ್ಯೂನಿಸಂ ಪಕ್ಷಪಾತಿಯಾಗಿದ್ದುದೂ ಉಂಟು.

ಬಿಳಿಗಡ್ಡದ ಹಣ್ಣುಹಣ್ಣು ಮುದುಕ ರಾಮಸ್ವಾಮಿ ನಾಯಕರ್ 1973ರಲ್ಲಿ ಪ್ರತ್ಯೇಕ ತಮಿಳು ರಾಷ್ಟ್ರಕ್ಕಾಗಿ ಮತ್ತೆ ಚಳುವಳಿ ಪ್ರಾರಂಭಿಸಿದರು.

ನಾಯಕರು 1973 ಡಿಸೆಂಬರ್ 4ರಂದು ನಿಧನರಾದರು.

ನೋಡಿ : ಅಣ್ಣಾದುರೈ

ಈಲಿಯನ್

"ಇಂಡಿಯನರಿಗೆ ಆನೆ, ಕುದುರೆಗಳ ಬಗೆಗೆ ಅತ್ಯಂತ ಆಸಕ್ತಿ. ರಾಜರು ಆನೆಗಳನ್ನು ಪಳಗಿಸಿಕೊಂಡು ಸಾಕುತ್ತಾರೆ. ಪ್ರಜೆಗಳು ರಾಜರಿಗೆ ಪಳಗಿಸಿದ ಹುಲಿ, ಚಿರತೆ ಮತ್ತು ಇತರ ವಿಚಿತ್ರ ಪ್ರಾಣಿಗಳ ಕಾಣಿಕೆ ನೀಡುತ್ತಾರೆ..." ರೋಮನ್ ವಿದ್ವಾಂಸ ಈಲಿಯನ್ ರಚಿಸಿದ ಪ್ರಾಣಿಗಳ ಜೀವನವನ್ನು ಕುರಿತ ಗ್ರಂಥದಲ್ಲಿ ಭಾರತದ ಪ್ರಾಣಿಗಳು ಮತ್ತು ಅವುಗಳ ಉಪಯೋಗದ ಬಗೆಗೆ ವಿವರಣೆ ಇದೆ.

ಈ ರೋಮನ್ ಲೇಖಕ ಕ್ರಿ.ಶ. 170ರಲ್ಲಿ ಜನಿಸಿದ. ಇವನ ಪೂರ್ಣ ಹೆಸರು ಕ್ಲಾಡಿಯಸ್ ಈಲಿಯಾನಸ್. ಗ್ರೀಕ್ ಭಾಷೆಯಲ್ಲಿ ಪಾಂಡಿತ್ಯ ಸಂಪಾದಿಸಿದ್ದ. ಅವನದು 'ಜೇನಿನಂಥ ಮಾತು', 'ಜೇನಿನಂಥ ಸ್ವರ'. ಈಲಿಯನ್ 235ರಲ್ಲಿ ನಿಧನನಾದ.

ಈಶ್ವರಚಂದ್ರ ವಿದ್ಯಾಸಾಗರ

"ವಿದ್ಯಾಸಾಗರರು ಒಬ್ಬ ಮಹಾನ್ ಸನ್ಯಾಸಿ. ತಮ್ಮ ಭವಿಷ್ಯ, ಸುಖ, ಸಂತೋಷಗಳೆಲ್ಲವನ್ನೂ ಮಾನವಕುಲದ ಒಳಿತಿಗಾಗಿ ತ್ಯಾಗ ಮಾಡಿದ್ದಾರೆ. ತಮ್ಮ ಆತ್ಮೋದ್ಧಾರವನ್ನು ಕೂಡ ಕಡೆಗಾಣಿಸಿ ಬೇರೆಯವರಿಗೆ ಒಳ್ಳೆಯದನ್ನು ಮಾಡುತ್ತಿದ್ದಾರೆ."

—ಇದು ಈಶ್ವರಚಂದ್ರ ವಿದ್ಯಾಸಾಗರರನ್ನು ಕುರಿತು ರಾಮಕೃಷ್ಣ ಪರಮಹಂಸರು ಹೇಳಿದ ಮಾತು. ಸ್ತ್ರೀಯರ ಉದ್ಧಾರ, ವಿದ್ಯಾಭ್ಯಾಸ ಸುಧಾರಣೆಗಳಿಗಾಗಿ ಅವರು ಅವಿರತವಾಗಿ ದುಡಿದರು.

'ವಿದ್ಯಾಸಾಗರ' ಈಶ್ವರಚಂದ್ರರಿಗೆ ದೊರೆತ ಪ್ರಶಸ್ತಿ. ಅವರು ಹುಟ್ಟಿದ್ದು 1820ರಲ್ಲಿ, ಬಂಗಾಳದ ಮಿಡ್ನಾಪುರ (ಮೇದಿನೀಪುರ) ಜಿಲ್ಲೆಯ ಒಂದು ಬಡಕುಟುಂಬದಲ್ಲಿ. ವಿದ್ಯಾಭ್ಯಾಸಕ್ಕಾಗಿ ಚಿಕ್ಕ ವಯಸ್ಸಿನಲ್ಲೇ ಕಲ್ಕತ್ತಾ ನಗರಕ್ಕೆ ಬಂದರು. ಸಂಸ್ಕೃತದಲ್ಲಿ ಪಾಂಡಿತ್ಯ ಪಡೆದರು. ಮೊದಲಿಗೆ ಕಲ್ಕತ್ತೆಯ ಫೋರ್ಟ್ ವಿಲಿಯಂ ಕಾಲೇಜಿನಲ್ಲಿ ಮುಖ್ಯ ಪಂಡಿತರಾಗಿ, ಅನಂತರ ಪ್ರಿನ್ಸಿಪಾಲರಾದರು. ಆಗ ಇವರು ಮಾಡಿದ ಮಹತ್ವದ ಸುಧಾರಣೆ —ಜಾತಿಭೇದವಿಲ್ಲದೆ ಯಾರು ಬೇಕಾದರೂ ಸಂಸ್ಕೃತವನ್ನು ಕಲಿಯುವ ಅವಕಾಶಕೊಟ್ಟದ್ದು.

1857–1858 ಅವಧಿಯಲ್ಲಿ ಈಶ್ವರಚಂದ್ರ ವಿದ್ಯಾಸಾಗರರು ಹೆಣ್ಣು ಮಕ್ಕಳ 35 ಶಾಲೆಗಳನ್ನು ಸ್ಥಾಪಿಸಿದರು. ವಿಧವಾ ವಿವಾಹಕ್ಕೆ ಬೆಂಬಲಕೊಟ್ಟರು. ಅವರ ಪ್ರಚಾರದ ಪರಿಣಾಮವಾಗಿ 1856ರಲ್ಲಿ ಹಿಂದೂ ವಿಧವೆಯರ ಪುನರ್ವಿವಾಹ ಶಾಸನ ರೂಪುಗೊಂಡಿತು. ಬಹುಪತ್ನಿತ್ವವನ್ನು ತೊಡೆದುಹಾಕಲು ಸಾವಿರಾರು ಜನರ ಸಹಿಯಿದ್ದ ಮನವಿಯನ್ನು ಸರಕಾರಕ್ಕೆ ಕಳುಹಿಸಿದರು. ಸಮಾಜ ಸುಧಾರಣೆಗಾಗಿ ತಮ್ಮ ಜೀವನವನ್ನೇ ಮುಡಿಪಾಗಿಟ್ಟರು.

ಈಶ್ವರಚಂದ್ರರನ್ನು 'ಭಾರತದ ಆಧುನಿಕ ಯುಗದ ಪ್ರಥಮ ಪುರುಷ' ಎಂದು ಮೈಕೆಲ್ ಮಧುಸೂದನದತ್ತರು ಕರೆದಿದ್ದಾರೆ.

1891 ಜುಲೈ 29ರಂದು ಅವರು ಗತಿಸಿದರು.

'ಬೇತಾಳ ಪಂಚವಿಂಶತಿ', 'ಭ್ರಾಂತಿವಿಲಾಸ', 'ಶಾಕುಂತಲ' ಹಾಗೂ 'ಸೀತಾ ಪರಿತ್ಯಾಗ' ಅವರು ರಚಿಸಿದ ಗ್ರಂಥಗಳು.

ಬಂಕಿಮಚಂದ್ರ ಚಟ್ಟೋಪಾಧ್ಯಾಯರ ಅನೇಕ ಕಾದಂಬರಿಗಳನ್ನು ಕನ್ನಡಿಸಿದ ಬಿ. ವೆಂಕಟಾಚಾರ್ಯರು ಬಂಗಾಳಿ ಭಾಷೆಯನ್ನು ಕಲಿಯಲು



ವಿದ್ಯಾಸಾಗರ : ಈಶ್ವರಚಂದ್ರ

ನೆರವು ಕೊಟ್ಟವರು ಈಶ್ವರಚಂದ್ರ ವಿದ್ಯಾಸಾಗರರು. ವೆಂಕಟಾಚಾರ್ಯರು ಬಂಗಾಳಿಯಿಂದ ಕನ್ನಡಕ್ಕೆ ಅನುವಾದಿಸಿದ ಮೊದಲ ಗ್ರಂಥ ವಿದ್ಯಾಸಾಗರರ 'ಭ್ರಾಂತಿವಿಲಾಸ'.

ನೋಡಿ : [illegible]

ಈಶಾವಾಸ್ಯೋಪನಿಷತ್

ಹದಿನೆಂಟು ಶ್ಲೋಕಗಳಿರುವ ಈಶಾವಾಸ್ಯೋಪನಿಷತ್ ಗಾತ್ರದಲ್ಲಿ ಚಿಕ್ಕದು; ಆದರೂ ಮಹತ್ವದ ವಿಷಯಗಳನ್ನೊಳಗೊಂಡಿದೆ.

ಮೊದಲನೆಯ ಶ್ಲೋಕ "ಈಶಾವಾಸ್ಯಮಿದಂ ಸರ್ವಂ" ಎಂದು ಪ್ರಾರಂಭವಾಗುತ್ತದೆ. ಇದರ ಅರ್ಥ ಎಲ್ಲವೂ ಈಶ್ವರನಿಂದ ವ್ಯಾಪಿಸಲ್ಪಟ್ಟಿದೆ ಎಂದು. ಈಶ್ವರನ ವ್ಯಾಪಕತೆಯ ತತ್ವವನ್ನು ಕುರಿತು ಈ ಉಪನಿಷತ್ ಚರ್ಚಿಸುತ್ತದೆ. ಇದನ್ನು ಈಶೋಪನಿಷತ್ ಎಂದೂ ಕರೆಯುತ್ತಾರೆ. ಇದು ಶುಕ್ಲ ಯಜುರ್ವೇದದ ವಾಜಸನೇಯ ಸಂಹಿತೆಯಲ್ಲಿದೆ. ಆದ್ದರಿಂದ ಇದಕ್ಕೆ 'ವಾಜಸನೇಯ ಸಂಹಿತೋಪನಿಷತ್' ಎಂದೂ ಹೆಸರಿದೆ.

ಎಲ್ಲವೂ ಭಗವಂತನಿಗೆ ಸೇರಿದ್ದು [illegible] ಸಾಕ್ಷಾತ್ಕಾರ [illegible] ನಿತ್ಯಕರ್ಮಗಳನ್ನು ಪರಮಾತ್ಮನ [illegible] ಮಾಡಿದರೆ ಕರ್ಮದೋಷ ಅಂಟುವುದಿಲ್ಲ; ಬ್ರಹ್ಮವಿದ್ಯೆಗೂ ನಿತ್ಯಕರ್ಮಕ್ಕೂ ಸಮಾನ ಪ್ರಾಶಸ್ತ್ಯ, [illegible]. ಜ್ಞಾನ-ಕರ್ಮ, ಪ್ರವೃತ್ತಿಮಾರ್ಗ-ನಿವೃತ್ತಿಮಾರ್ಗ, ಸಗುಣ-ನಿರ್ಗುಣಗಳ ಸಾಮರಸ್ಯದ ಬೋಧನೆ ಇದರಲ್ಲಿದೆ. [illegible] ಭಗವಂತನ ಕೃಪೆಗಳ ಮಹತ್ವವನ್ನೂ ಇದರಲ್ಲಿ ತಿಳಿಸಿದೆ.

ಈಸ್ಟ್ ಇಂಡಿಯಾ ಕಂಪೆನಿ

ನೋಡಿ : ಸಂಪುಟ ೧

ಉಚ್ಚ ನ್ಯಾಯಾಲಯ

ಒಂದು ರಾಜ್ಯದ ನ್ಯಾಯಾಂಗ ವ್ಯವಸ್ಥೆಯಲ್ಲಿ [illegible] ಉಚ್ಚ ನ್ಯಾಯಾಲಯ – ಹೈಕೋರ್ಟ್. ಪ್ರತಿ ರಾಜ್ಯಕ್ಕೂ ಒಂದು ಉಚ್ಚ ನ್ಯಾಯಾಲಯ ಇರುತ್ತದೆ.

ಉಚ್ಚ ನ್ಯಾಯಾಲಯದಲ್ಲಿ ನ್ಯಾಯಾಧೀಶರ ಸಂಖ್ಯೆಯನ್ನು ಆಯಾ ರಾಜ್ಯದ ಅಗತ್ಯಕ್ಕೆ ಅನುಸಾರವಾಗಿ ರಾಷ್ಟ್ರಪತಿ ನಿರ್ಧರಿಸುತ್ತಾರೆ. ಭಾರತದ ಮುಖ್ಯ ನ್ಯಾಯಾಧೀಶ ಹಾಗೂ ಆಯಾ ರಾಜ್ಯದ ರಾಜ್ಯಪಾಲರೊಡನೆ ಸಮಾಲೋಚಿಸಿ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶನನ್ನು ರಾಷ್ಟ್ರಪತಿ ನೇಮಕಮಾಡುತ್ತಾರೆ. ಇತರ ನ್ಯಾಯಾಧೀಶರ ನೇಮಕದಲ್ಲಿ ರಾಷ್ಟ್ರಪತಿ ಮುಖ್ಯ ನ್ಯಾಯಾಧೀಶರ ಸಲಹೆಯನ್ನೂ ಪಡೆಯುತ್ತಾರೆ.

ಉಚ್ಚ ನ್ಯಾಯಾಲಯದ ನ್ಯಾಯಾಧೀಶ ಭಾರತದ ಪ್ರಜೆ ಆಗಿರಬೇಕು. ರಾಜ್ಯದ ಯಾವುದೇ ನ್ಯಾಯಾಲಯದ ಅಧಿಕಾರಿಯಾಗಿ 10 ವರ್ಷ ಅನುಭವ ಪಡೆದಿರಬೇಕು. ಅಥವಾ 10 ವರ್ಷ ಉಚ್ಚ ನ್ಯಾಯಾಲಯದಲ್ಲಿ ನ್ಯಾಯವಾದಿಯಾಗಿ ಕೆಲಸ ಮಾಡಿರಬೇಕು. ತನಗೆ ನ್ಯಾಯಾಧೀಶ [illegible]. ನ್ಯಾಯಾಧೀಶರ ನಿವೃತ್ತಿ ವಯಸ್ಸು 60 ವರ್ಷ.

ನ್ಯಾಯಾಧೀಶರನ್ನು ಒಂದು ರಾಜ್ಯದಿಂದ ಬೇರೊಂದು ರಾಜ್ಯಕ್ಕೆ ವರ್ಗ ಮಾಡಬಹುದು. ಅಲ್ಲದೆ ಹೆಚ್ಚುವರಿ ನ್ಯಾಯಾಧೀಶರನ್ನಾಗಿಯೂ ನೇಮಕ ಮಾಡಬಹುದು.

ತನ್ನ ವ್ಯಾಪ್ತಿಗೊಳಪಟ್ಟ ರಾಜ್ಯದ ಇತರ ನ್ಯಾಯಾಲಯಗಳ ಬಗೆಗೆ ಉಚ್ಚನ್ಯಾಯಾಲಯಕ್ಕೆ ಕೆಲವು ಅಧಿಕಾರಗಳಿವೆ. ಅಲ್ಲಿನ ಕಾರ್ಯಕಲಾಪಗಳ [illegible]. ಅಲ್ಲಿನ ಆಡಳಿತದ ಉಸ್ತುವಾರಿಯ ಹೊಣೆಯೂ ಉಚ್ಚ ನ್ಯಾಯಾಲಯದ್ದು. ಅಲ್ಲಿಯ ಅಧಿಕಾರಿಗಳ [illegible]. ಅಗತ್ಯವಾದಾಗ ಅಲ್ಲಿಯ [illegible].

ಉಜ್ಜಯಿನಿ

ಮಧ್ಯಪ್ರದೇಶದಲ್ಲಿರುವ ಉಜ್ಜಯಿನಿ ಭಾರತದ ಪುರಾತನ ಪಟ್ಟಣಗಳಲ್ಲಿ ಒಂದು. ಇದಕ್ಕೆ ಅವಂತಿ ಎಂಬ ಹೆಸರೂ ಇತ್ತು. ಭಾರತದ [illegible] ಪುಣ್ಯಕ್ಷೇತ್ರಗಳಲ್ಲಿ ಅವಂತಿಯೂ ಒಂದು.

ಶಂಕರನು ತ್ರಿಪುರಾಸುರ [illegible] ಇದಕ್ಕೆ [illegible] ಹೆಸರಾಯಿತೆಂದೂ ಅದು ಕಾಲಕ್ರಮದಲ್ಲಿ ಉಜ್ಜಯಿನಿ ಎಂದು ರೂಪಾಂತರ ಹೊಂದಿತೆಂದೂ ಪ್ರತೀತಿ.

ಉಜ್ಜಯಿನಿ [illegible] ರಾಜಧಾನಿಯಾಗಿತ್ತು. [illegible] ಉಜ್ಜಯಿನಿ ವಿಕ್ರಮಾದಿತ್ಯನ ರಾಜಧಾನಿಯಾಗಿ [illegible]. ಮೌರ್ಯರು ಮತ್ತು ಗುಪ್ತರ ಕಾಲದಲ್ಲಿ ಈ ನಗರ ಅವರ ರಾಜಪ್ರತಿನಿಧಿಗಳ ವಾಸಸ್ಥಾನವಾಗಿತ್ತು. ಅಶೋಕನು ಇಲ್ಲಿ ರಾಜಪ್ರತಿನಿಧಿಯಾಗಿದ್ದನೆಂದೂ ಮುಂದೆ ಭಿಕ್ಷು, ಭಿಕ್ಷುಣಿಯರಾಗಿ ಸಿಂಹಳದಲ್ಲಿ ಬೌದ್ಧಮತ ಪ್ರಚಾರ ಮಾಡಿದ ಮಹೇಂದ್ರ, ಸಂಘಮಿತ್ರೆಯರು ಇಲ್ಲೇ ಹುಟ್ಟಿದರೆಂದೂ ಉಲ್ಲೇಖವಿದೆ.

ಶಂಕರನ ಹನ್ನೆರಡು ಜ್ಯೋತಿರ್ಲಿಂಗಗಳಲ್ಲಿ ಒಂದಾದ 'ಮಹಾಕಾಲ' ಇಲ್ಲಿದೆ. ಉಜ್ಜಯಿನಿಯಲ್ಲಿರುವ ಮಹಾಕಾಳ ದೇವಾಲಯ ಐದು ಅಂತಸ್ತುಗಳ ನಿರ್ಮಾಣ. ಮಹಾಕಾಲ ಲಿಂಗ ಭೂಮಟ್ಟದಿಂದ ಕೆಳಗಿದೆ.

ಉಜ್ಜಯಿನಿಯಲ್ಲಿರುವ ಇನ್ನೊಂದು ಪ್ರಮುಖ ದೇವಾಲಯ ಹರಸಿದ್ಧಿದೇವಿಯದು.

[illegible] ಉಜ್ಜಯಿನಿಯ [illegible]. [illegible] ಹೇಳುತ್ತಾರೆ.

12 ವರ್ಷಗಳಿಗೆ ಒಮ್ಮೆ [illegible] ಇಲ್ಲಿ ಮಹಾ ಕುಂಭಮೇಳ ನಡೆಯುತ್ತದೆ.

ಕೃಷ್ಣ, ಬಲರಾಮ, ಸುದಾಮರು [illegible] ಮುನಿಯ ಆಶ್ರಮ ಉಜ್ಜಯಿನಿಯ ಸಮೀಪದಲ್ಲಿತ್ತೆಂದು ಹೇಳುತ್ತಾರೆ.

[illegible] 17ನೆಯ ಶತಮಾನದಲ್ಲಿ [illegible] ಉಜ್ಜಯಿನಿಯದೂ ಒಂದು.

ಉಜ್ವಲಾ

1934ರ [illegible] ಇಳಿಮುಖವಾಗಿದ್ದುವು. ಮುಖಂಡರಲ್ಲಿ ಬಹು ಮಂದಿ ಸೆರೆಮನೆ



ಕ್ರಾಂತಿಯ ಸೋದರಿ : ಉಜ್ವಲಾ

ಬಂದಿದ್ದರು. ಅಥವಾ ಮೃತರಾಗಿದ್ದರು. ಇಂಥ ಹೊತ್ತಿನಲ್ಲಿ ಮೂರು ಜನ ಹುಡುಗರು ಹಾಗೂ ಒಬ್ಬಳು ಹುಡುಗಿ ಒಬ್ಬ ಗವರ್ನರನ ಹತ್ಯೆ ನಡೆಸಲು ಯತ್ನಿಸಿದರು.

ಆ ಹುಡುಗಿ —ಉಜ್ವಲಾ— ಢಾಕ್ಕಾದಲ್ಲಿ 1914ರಲ್ಲಿ ಜನಿಸಿದಳು. ತಂದೆ ಜಮೀನುದಾರ ನಾಗಿದ್ದೂ ಕ್ರಾಂತಿಕಾರಿಯಾದವನು. ವಿದ್ಯಾರ್ಥಿನಿಯಾಗಿದ್ದ 14 ವರ್ಷದ ಉಜ್ವಲಾ ತಂದೆಯ ಸೂಚನೆಯಂತೆ ಶಸ್ತ್ರಾಸ್ತ್ರಗಳನ್ನು ಹೊತ್ತು ಊರಿಂದೂರಿಗೆ ತಿರುಗುತ್ತಿದ್ದಳು.

ಡಾರ್ಜಿಲಿಂಗ್‌ನಲ್ಲಿ ಕುದುರೆ ಜೂಜಿನ ದಿವಸ ಗವರ್ನರನ ಕೊಲೆ ಮಾಡಬೇಕೆಂದು ನಿರ್ಧರಿಸಲಾಯಿತು. ಭವಾನಿ ಭಟ್ಟಾಚಾರ್ಯ ಮತ್ತು ರವಿ ಬ್ಯಾನರ್ಜಿ ಪಾಶ್ಚಾತ್ಯ ಉಡುಪು ತೊಟ್ಟು ಬಟ್ಟೆಯೊಳಗೆ ಶಸ್ತ್ರಗಳನ್ನು ಅಡಗಿಸಿಟ್ಟುಕೊಂಡು ಹೊರಟರು. ಉಜ್ವಲಾ ಹಾಗೂ ಮನೋರಂಜನ್ ಬ್ಯಾನರ್ಜಿ ಅವರನ್ನು ಹಿಂಬಾಲಿಸಿದರು. ಕಲ್ಕತ್ತೆಗೆ ರೈಲು ಹತ್ತಿದರು. ರೈಲು ಸಿಲಿಗುರಿಗೆ ಬಂದಾಗ ಪೊಲೀಸರು ಬಣ್ಣದ ಸೀರೆ ಉಟ್ಟು ದಪ್ಪ ಕನ್ನಡಕ ಹಾಕಿದ್ದ ಹುಡುಗಿಯನ್ನು ಅದರಲ್ಲಿ ಹುಡುಕತೊಡಗಿದರು. ಆದರೆ ಆ ಹೊತ್ತಿಗೆ ಉಜ್ವಲಾ ಸೀರೆ ಬದಲಾಯಿಸಿದ್ದಲ್ಲದೆ ಕನ್ನಡಕ ತೆಗೆದು ಬಿಟ್ಟಿದ್ದಳು. ಪೋಲೀಸರಿಗೆ ಆಕೆಯ ಗುರುತು ಸಿಗಲಿಲ್ಲ. ಕಲ್ಕತ್ತಾ ಸೇರಿದ್ದಾಯಿತು. ಆದರೆ, ಶೋಭಾರಾಣಿ ದತ್ತರ ಮನೆಯಲ್ಲಿ ಈಕೆಯ ಮತ್ತು ಇನ್ನಿಬ್ಬರ ಬಂಧನವಾಯಿತು. ವಿಚಾರಣೆ ನಡೆದು ಭವಾನಿ ಮತ್ತು ರವಿಗೆ ಮರಣದಂಡನೆ ವಿಧಿಸಲ್ಪಟ್ಟಿತು. ಉಜ್ವಲಾಗೆ ಆಜೀವ ಕಾರಾಗೃಹವಾಸ ಶಿಕ್ಷೆಯಾಯಿತು.

1939ರಲ್ಲಿ ಆಕೆಯ ಬಿಡುಗಡೆಯಾಯಿತು.

1942ರಲ್ಲಿ ಪುನಃ ಈಕೆಯನ್ನು ಬಂಧಿಸಿದರು. ಮೂರು ವರ್ಷಗಳಿಗೂ ಹೆಚ್ಚುಕಾಲ ಸೆರೆಮನೆಯಲ್ಲಿದ್ದ ಮೇಲೆ 1946ರಲ್ಲಿ ಬಿಡುಗಡೆಯಾಯಿತು. ಅವರು ನೇತಾಜಿ ಸುಭಾಷ್‌ಚಂದ್ರ ಬೋಸರ ರಾಜಕೀಯ ಪಕ್ಷ ಫಾರ್ವರ್ಡ್ ಬ್ಲಾಕ್‌ನಲ್ಲಿ ಕೆಲಸ ಮಾಡಿದರು. ನೌಖಾಲಿಯಲ್ಲಿ ಮತೀಯ ಗಲಭೆಯಿಂದ ನೊಂದಿದ್ದ ಜನತೆಯ ಸಹಾಯಕ್ಕೆ ಹೋಗಿದ್ದ ಉಜ್ವಲಾ ಸಮಾಜಸೇವೆಯಲ್ಲಿ ಆಸಕ್ತರಾದರು. ಅವರೊಂದು ಜನತಾ ಕಲ್ಯಾಣಸಂಸ್ಥೆಯನ್ನು ಪ್ರಾರಂಭಿಸಿದರು.

ಕ್ರಾಂತಿಕಾರಿ ಭೂಪೇಂದ್ರ ಕಿಶೋರರಕ್ಷಿತ ರಾಯ್‌ರನ್ನು 1948ರಲ್ಲಿ ಆಕೆ ವಿವಾಹವಾದರು.

ಉಡುಪಿ

ಸಾಮಾನ್ಯವಾಗಿ, ದೇವಸ್ಥಾನಗಳಲ್ಲಿ ಮೂಲ ದೇವಮೂರ್ತಿ ಮಹಾದ್ವಾರದ ಎದುರಿಗೆ ಇರುತ್ತದೆ. ಆದರೆ ಉಡುಪಿಯ ಶ್ರೀಕೃಷ್ಣ ದೇವಾಲಯದಲ್ಲಿ ಹೀಗಿಲ್ಲ. ಇಲ್ಲಿ ದೇವರ ದರ್ಶನವಾಗುವುದು ದೇವಸ್ಥಾನದ ಒಂದು ಬದಿಯ ಗೋಡೆಯಲ್ಲಿರುವ ಚಿಕ್ಕ ಕಿಟಕಿಯ ಮೂಲಕ. ಮಹಾಭಕ್ತ ಕನಕದಾಸನಿಗೆ ಶ್ರೀಕೃಷ್ಣನ ದರ್ಶನ ಮಾಡಲು ಅವಕಾಶ ಸಿಗಲಿಲ್ಲ; ಆಗ ದೇವರ ವಿಗ್ರಹ ಪಕ್ಕಕ್ಕೆ ತಿರುಗಿತು; ಆ ಬದಿಯ ಗೋಡೆಯ ಕಿಂಡಿಯಿಂದ ಕನಕದಾಸನಿಗೆ ಶ್ರೀಕೃಷ್ಣ ಮೂರ್ತಿಯ ದರ್ಶನವಾಯಿತು —ಎಂದು ಹೇಳಿಕೆ.

ಉಡುಪಿ ಒಂದು ಪ್ರಮುಖ ಪುಣ್ಯಕ್ಷೇತ್ರ. ಜನಸಂಖ್ಯೆ 29,753. ಪಶ್ಚಿಮ ಕರಾವಳಿಯ ಸುಂದರ ಪ್ರಕೃತಿ ಸನ್ನಿವೇಶದ ನಡುವೆ ಉಡುಪಿ ಇದೆ. ಶಾಪಗ್ರಸ್ತನಾಗಿದ್ದ ಚಂದ್ರ ಇಲ್ಲಿಗೆ ಬಂದು ತಪಸ್ಸು ಮಾಡಿದ್ದರಿಂದ ಈ ಕ್ಷೇತ್ರಕ್ಕೆ ಅವನ ಹೆಸರು (ಉಡುಪ —ಎಂದರೆ ನಕ್ಷತ್ರಗಳ ಒಡೆಯ: ಚಂದ್ರ) ಬಂದಿತೆಂಬುದು ಸ್ಥಳ ಪುರಾಣ. ಇಲ್ಲಿ ಸುಪ್ರಸಿದ್ಧ ಚಂದ್ರಮೌಳೀಶ್ವರ ದೇವಾಲಯವೂ ಇದೆ.

ಉಡುಪಿ ಹೆಸರಾಂತ ವಿದ್ಯಾಕ್ಷೇತ್ರ. ಉಡುಪಿಯ ಅನಂತೇಶ್ವರ ದೇವಸ್ಥಾನ ಮೊದಲಿನಿಂದಲೂ ಸಂಸ್ಕೃತ ಅಧ್ಯಯನಕ್ಕೆ ಕೇಂದ್ರವಾಗಿತ್ತು. ದ್ವೈತಮತ ಸ್ಥಾಪಕರಾದ ಮಧ್ವಾಚಾರ್ಯರು ಅಧ್ಯಯನ ಮಾಡಿದ, ತಮ್ಮ ಧರ್ಮವನ್ನು ಸಾರಿದ ಊರು ಇದು.

ಶಿಕ್ಷಣತಜ್ಞ ಟಿ. ಎಂ. ಎ. (ತೋನ್ಸೆ ಮಾಧವ ಅನಂತ) ಪೈ ಅವರ ಪರಿಶ್ರಮದಿಂದ ಉಡುಪಿಯಿಂದ 6 ಮೈಲು ದೂರದಲ್ಲಿರುವ ಮಣಿಪಾಲ ಈಗ ಮಹಾವಿದ್ಯಾಕೇಂದ್ರವಾಗಿದೆ. ವೈದ್ಯವಿಜ್ಞಾನ, ದಂತವಿಜ್ಞಾನ ಕಾಲೇಜುಗಳೂ ಅವಕ್ಕೆ ಸಂಬಂಧಿಸಿದಂತೆ ಸುಸಜ್ಜಿತವಾದ ಆಸ್ಪತ್ರೆಯೂ ಇಲ್ಲಿವೆ. ಇಲ್ಲಿ ಒಂದು ಎಂಜಿನಿಯರಿಂಗ್ ಕಾಲೇಜೂ ಇದೆ.

ಉಡುಪಿಯಲ್ಲಿ ಎಂ.ಜಿ.ಎಂ. (ಮಹಾತ್ಮ ಗಾಂಧೀ ಮೆಮೋರಿಯಲ್) ಕಾಲೇಜು, ಪೂರ್ಣಪ್ರಜ್ಞ ಕಾಲೇಜುಗಳೂ ಲಾ ಕಾಲೇಜು ಇವೆ.


ಉಡುಪಿಯಿಂದ ಮೂರು ಮೈಲು ದೂರದ ಮಲ್ಪೆ ನೈಸರ್ಗಿಕ ಬಂದರು; ಮೀನುಗಾರಿಕೆ ಮತ್ತು ಮೀನುಸಂಸ್ಕರಣ ಕೇಂದ್ರ. ಇಲ್ಲಿನ ಕಾರಖಾನೆಗಳಲ್ಲಿ ಸಂಸ್ಕರಿಸಿ ಡಬ್ಬಿಗಳಲ್ಲಿ ತುಂಬಿದ ಮೀನು ಉತ್ಪನ್ನಗಳಿಗೆ ದೇಶ ವಿದೇಶಗಳಲ್ಲಿ ಚೆನ್ನಾಗಿ ಗಿರಾಕಿ ಇದೆ.

ಮಲ್ಪೆಯ ಕಡಲ ತೀರ ಪ್ರಕೃತಿ ಸೌಂದರ್ಯಕ್ಕೆ ಪ್ರಖ್ಯಾತ. ಇಲ್ಲಿಂದ ತುಸು ದೂರದಲ್ಲಿರುವ ಸೇಂಟ್ ಮೇರೀಸ್ ದ್ವೀಪ ಒಂದು ವಿಹಾರ ತಾಣ. ಮಲ್ಪೆಯ ಹತ್ತಿರವಿರುವ ವಡಭಾಂಡೇಶ್ವರ ದೇವಸ್ಥಾನ ಪ್ರಖ್ಯಾತವಾದದ್ದು.

ಉಡುಪಿಯಲ್ಲಿ ತಾವು ಸ್ಥಾಪಿಸಿದ ಶ್ರೀಕೃಷ್ಣನಿಗೆ ನಿರಂತರವಾಗಿ ಪೂಜೆ ನಡೆಯಲೆಂದು ಮಧ್ವಾಚಾರ್ಯರು ತಾವು ಸನ್ಯಾಸದೀಕ್ಷೆ ಕೊಟ್ಟ ಎಂಟು ಜನ ಶಿಷ್ಯರಿಗೆ ಈ ಕೆಲಸವನ್ನು ವಹಿಸಿದರು. ಒಬ್ಬೊಬ್ಬ ಶಿಷ್ಯರ

ಕನಕನ ಕಿಂಡಿ

ರಥೋತ್ಸವಕ್ಕೆ ಸಿದ್ಧ



ಪರಂಪರೆಗೆ ಸೇರಿದ ಮಠದ ಸ್ವಾಮಿಗಳಿಗೂ ಎರಡೆರಡು ವರ್ಷ ಶ್ರೀಕೃಷ್ಣನ ಪೂಜೆ ಮಾಡುವ ಹಕ್ಕು. ಒಂದು ಮಠದ ಸ್ವಾಮಿಗಳು ಪೂಜಾಧಿಕಾರವನ್ನು ಇನ್ನೊಂದು ಮಠದವರಿಗೆ ವಹಿಸಿಕೊಡುವ ಸಮಾರಂಭವೇ ಪರ್ಯಾಯ ಮಹೋತ್ಸವ. ಉಡುಪಿಯಲ್ಲಿ ಇದು ಅತ್ಯಂತ ದೊಡ್ಡ ಹಬ್ಬದಂತೆ ಆಚರಿಸಲ್ಪಡುತ್ತದೆ. ಲಕ್ಷದೀಪೋತ್ಸವ, ಶ್ರೀಕೃಷ್ಣ ಜಯಂತಿ ಮುಂತಾದ ಸಮಾರಂಭಗಳಲ್ಲೂ ಉಡುಪಿಯಲ್ಲಿ ಸಹಸ್ರಾರು ಭಕ್ತರು ಸೇರುತ್ತಾರೆ.

ಕರ್ನಾಟಕದ ಶ್ರೇಷ್ಠ ಜಾನಪದ ಕಲೆ ಯಕ್ಷಗಾನದಲ್ಲಿ ತರಬೇತಿ ನೀಡುವ ಯಕ್ಷಗಾನ ಶಿಕ್ಷಣಕೇಂದ್ರ ಉಡುಪಿಯಲ್ಲಿದೆ.

ನೋಡಿ : ಟಿ.ಎಂ.ಎ. ಪೈ ; ಯಕ್ಷಗಾನ

ಉತ್ತರ ಪ್ರದೇಶ

ರಾಮಾಯಣ, ಮಹಾಭಾರತಗಳ ರಾಮ, ಕೃಷ್ಣ ಮುಂತಾದ ಮಹಾ ವ್ಯಕ್ತಿಗಳು ಉತ್ತರ ಪ್ರದೇಶದಲ್ಲಿ ವಾಸ ಮಾಡಿದರು, ಸಂಚರಿಸಿದರು ಎಂದು ನಂಬಿಕೆ. ಚಿರಂಜೀವಿಗಳಾದ ಅಶ್ವತ್ಥಾಮ ಹಾಗೂ ಹನುಮಂತರು ಇಂದಿಗೂ ಅಲ್ಲಿನ ದ್ರೋಣಗಿರಿಯಲ್ಲಿ ಸಂಚರಿಸುತ್ತಿರುವರೆಂಬ ಭಾವನೆ ಕೆಲವು ಜನಸಾಮಾನ್ಯರಲ್ಲಿದೆ. ಕೃಷ್ಣ ತನ್ನ ಕಿರುಬೆರಳಿನಲ್ಲಿ ಎತ್ತಿದ ಗೋವರ್ಧನ ಗಿರಿ, ಅರಾವಳಿಯ ಒಂದು ಅಂಚಿನಲ್ಲಿದೆ ಎನ್ನುತ್ತಾರೆ. ಬೃಂದಾವನ, ಮಥುರಾ ಅವನ ರಾಸಲೀಲೆಯ ಹಾಗೂ ಪವಾಡ ಕಥೆಗಳ ಕೇಂದ್ರ. ತ್ರಿವೇಣೀ ಸಂಗಮ ಸ್ಥಳ ಅಲಹಾಬಾದ್(ಪ್ರಯಾಗ)ನಲ್ಲಿ ಕುಂಭಮೇಳ ಜರಗುತ್ತದೆ.

ಗಂಗಾ ಯಮುನಾ ಬಯಲಿನ ಒಂದು ಭಾಗ ಉತ್ತರ ಪ್ರದೇಶದಲ್ಲಿದೆ. ಇದರ ಇತಿಹಾಸ ವೈವಿಧ್ಯಮಯ. ರಾಷ್ಟ್ರದ ಚರಿತ್ರೆಯಲ್ಲಿ ಇದು ಪ್ರಮುಖ ಪಾತ್ರ ವಹಿಸಿದೆ. ಇಲ್ಲಿನ ಅಕ್ಬರ್ ಭದ್ರನಾಗಿದ್ದಾಗಲೆಲ್ಲ ರಾಷ್ಟ್ರಕ್ಕೆ ಸುಭದ್ರತೆ ಇರುತ್ತಿದ್ದಿತು. 'ಸಿಪಾಯಿದಂಗೆ'ಯೆಂದು ಕರೆಯಲ್ಪಡುತ್ತಿದ್ದ ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ 1857ರಲ್ಲಿ ಆರಂಭವಾದದ್ದು ಇಲ್ಲಿಯೇ. ಹಲವಾರು ಮತೀಯ ಹಾಗೂ ಸಾಮಾಜಿಕ ಕ್ರಾಂತಿಗಳ ಹುಟ್ಟೂರು ಉತ್ತರ ಪ್ರದೇಶ. ಭಾರತದ ಎಲ್ಲ ಮುಖ್ಯ ಚಕ್ರಾಧಿಪತ್ಯಗಳೂ ಈ ಪ್ರದೇಶವನ್ನು ಒಳಗೊಂಡಿದ್ದವು.



ತ್ರಿವೇಣೀ ಸಂಗಮ


ಉತ್ತರ ಪ್ರದೇಶ ಭಾರತದ ನಾಲ್ಕನೆಯ ದೊಡ್ಡ ರಾಜ್ಯ; ಜನಸಂಖ್ಯೆಯ ದೃಷ್ಟಿಯಿಂದ ರಾಷ್ಟ್ರದ ಪ್ರಥಮ ರಾಜ್ಯ. ಎಲ್ಲ ದಿಕ್ಕುಗಳಲ್ಲೂ ಇದು ಭೂಭಾಗದಿಂದ ಆವೃತವಾಗಿದೆ. ಉತ್ತರದಲ್ಲಿ ಟಿಬೆಟ್, ನೇಪಾಳ, ಪೂರ್ವದಲ್ಲಿ ಬಿಹಾರ, ದಕ್ಷಿಣದಲ್ಲಿ ಮಧ್ಯಪ್ರದೇಶ, ಪಶ್ಚಿಮದಲ್ಲಿ ರಾಜಸ್ಥಾನ ಪಂಜಾಬ್, ಹರ್ಯಾಣ, ಹಿಮಾಚಲ ಪ್ರದೇಶಗಳು ಇದರ ಮೇರೆಗಳು.

ಇಲ್ಲಿನ ಹಲವಾರು ಮುಖ್ಯ ಪಟ್ಟಣಗಳು, ಕ್ಷೇತ್ರಗಳು ನದೀ ದಡದಲ್ಲಿವೆ. ಯಮುನಾ ನದಿಯ ದಂಡೆಯ ಮೇಲೆ ಮಥುರಾ, ಆಗ್ರಾ, ಹಮೀರಪುರಗಳಿವೆ. ಗಂಗಾನದಿಯ ದಂಡೆಯಲ್ಲಿ ಹರ್ದ್ವಾರ, ಹಸ್ತಿನಾಪುರ, ಕನ್ನೌಜ್, ಕಾನ್ಪುರ, ವಾರಾಣಸಿಗಳಿವೆ. ಗಂಗಾ ಯಮುನಾ ಸಂಗಮದಲ್ಲಿ ಅಲಹಾಬಾದ್, ರಾಮಗಂಗಾ ತಡಿಯಲ್ಲಿ ಮೊರಾದಾಬಾದ್ ಮತ್ತು ಬರೈಲಿ, ಗೋಮತೀ ತಟದಲ್ಲಿ ಲಖನೌ, ಜೌನ್‌ಪುರ, ಸರಯೂ ತೀರದಲ್ಲಿ ಫೈಜಾಬಾದ್ ಮತ್ತು ಅಯೋಧ್ಯಾಗಳಿವೆ. ಈ ನದಿಗಳಲ್ಲದೆ ಚಂಬಲ್, ಪಾರ್ವತಿ, ಬೆತ್ವ, ಶೋಣಾ ಮುಂತಾದ ನದಿಗಳು ಉತ್ತರ ಪ್ರದೇಶದಲ್ಲಿ ಹರಿಯುತ್ತವೆ. ಹಿಮಾಲಯದ ನಂದಾದೇವಿ ಶಿಖರ ಉತ್ತರ ಪ್ರದೇಶದಲ್ಲಿದೆ. ನೈನಿತಾಲ್, ರಾಣೀಖೇಟ, ಅಲ್ಮೋರ, ಮುಸ್ಸೋರಿ –ಇವು ಇಲ್ಲಿನ ಮುಖ್ಯ ಗಿರಿಧಾಮಗಳು.

ಹಿಮಾಲಯ ಪ್ರದೇಶವನ್ನು ಬಿಟ್ಟರೆ ರಾಜ್ಯದ ಬಯಲುಭಾಗಗಳಲ್ಲಿ ಉಷ್ಣವಲಯದ ಮುಂಗಾರು ಮಳೆಯ ಹವೆಯಿದೆ. ಚಳಿಗಾಲದಲ್ಲಿ ಬಹಳ ಚಳಿ: ಬೇಸಗೆಯಲ್ಲಿ ಬಹಳ ಧಗೆ. ಉತ್ತರಕ್ಕೆ ಹೋದಂತೆ ದೇವದಾರು, ಫೈನ್, ಫರ್ ಮರಗಳಿಂದ ಕೂಡಿದ ಹಸಿರುಕಾಡುಗಳಿವೆ. ಸುಂದರ ಪುಷ್ಪರಂಜಿತ ವೃಕ್ಷಗಳೂ ಇವೆ. ಇಲ್ಲಿನ ಕಾಡುಗಳಲ್ಲಿ ಆನೆ, ಹುಲಿ, ಚಿರತೆ, ಕತ್ತೆಕಿರುಬ (ಹೈನಾ), ಸಾಂಬಾರ್, ಕೃಷ್ಣಮೃಗ, ಮಚ್ಚೆಜಿಂಕೆಗಳಿವೆ. ಹಿಮಾಲಯದ ಕಪ್ಪುಕರಡಿ, ನವಿಲು, ಸುಂದರ ಕಾಡುಕೋಳಿಗಳು ಇಲ್ಲಿನ ಇತರ ಮುಖ್ಯ ಜೀವಿಗಳು.

ಗಂಗಾ ಯಮುನಾ ಬಯಲು ಪ್ರದೇಶ ಮೆಕ್ಕಲು ಮಣ್ಣಿನಿಂದಾಗಿ ಅತ್ಯಂತ ಫಲವತ್ತಾಗಿದೆ. ಒಳ್ಳೆಯ ನೀರಾವರಿ ಸೌಲಭ್ಯವಿರುವುದರಿಂದ ವ್ಯಾಪಕವಾಗಿ ಬೇಸಾಯ ನಡೆಯುತ್ತದೆ. ಈ ಭಾಗದಲ್ಲಿ ಜನಸಾಂದ್ರತೆಯೂ ಹೆಚ್ಚು. ದ್ವಿದಳಧಾನ್ಯಗಳು, ಗೋಧಿ, ಕಬ್ಬು, ಭತ್ತ, ಎಣ್ಣೆ ಬೀಜಗಳು, ಹತ್ತಿ, ಜೋಳ, ಬಾರ್ಲಿ, ಧಾನ್ಯ ಬೆಳೆಯುತ್ತವೆ. ಇಲ್ಲಿನ ಪ್ರಮುಖ ವ್ಯವಸಾಯೋತ್ಪನ್ನ ಸಕ್ಕರೆ. ಗಸಗಸೆ ಕಾಯಿಯಿಂದ ಅಫೀಮು ಪಡೆದು, ಒದಗಿಸುವ ರಾಜ್ಯವೆಂದರೆ ಇದೊಂದೇ.

ಖನಿಜ ಸಂಪನ್ಮೂಲ ಉತ್ತರ ಪ್ರದೇಶದಲ್ಲಿ ಕಡಮೆ. ಸುಣ್ಣಕಲ್ಲು, ಸಿಲಿಕ —ಇವೆರಡು ಮಾತ್ರ ಕೈಗಾರಿಕೆಗೆ ಬೇಕಾಗುವಷ್ಟು ದೊಡ್ಡ ಪ್ರಮಾಣದಲ್ಲಿ





ಪದ್ಮನಾಭ ಮಂದಿರ –ಚಮೋಲಿಯಲ್ಲಿ



ಕಣಿವೆ–ಗರ್‌ವಾಲ್ ಪ್ರದೇಶದಲ್ಲಿ

ಜ್ಞಾನ ಗಂಗೋತ್ರಿ

ಹಲವು ಕೋಟೆ ಗಳು, ಕಾಶಿಯ ವಿಶ್ವ ನಾಥ ಹಾಗೂ ವೃಂದಾವನದ ಗೋವಿಂದ ದೇವ ದೇವಾಲಯಗಳು ಮಸೀದಿಗಳು ಬೌದ್ಧ ಸ್ತೂಪಗಳು ಇಲ್ಲಿನ ವಾಸ್ತುಶಿಲ್ಪದ ಹಲವು ಉತ್ತಮ ಉದಾಹರಣೆಗಳು. ಆಗ್ರಾದಲ್ಲಿರುವ



ಡಾ. ಸಂಪೂರ್ಣಾನಂದ : ಮುಖ್ಯಮಂತ್ರಿತ್ವ

ದೊರೆಯುತ್ತವೆ. ತಾಮ್ರ, ಮರಳುಗಲ್ಲು, ಸ್ಲೇಟ್ ಕಲ್ಲು ಮುಂತಾದುವುಗಳ ನಿಕ್ಷೇಪಗಳನ್ನು ಇಲ್ಲಿ ಪತ್ತೆಹಚ್ಚಲಾಗಿದೆ. ಅಲ್ಯೂಮಿನಿಯಂ ವಸ್ತುಗಳು, ಟೆಲಿವಿಷನ್ ಗ್ರಾಹಕ ಸೆಟ್‌ಗಳು, ಕೃತಕ ರಬ್ಬರ್, ವಿದ್ಯುತ್ ಉಪಕರಣಗಳು, ಭಾರತೀಯ ಔಷಧಿಗಳು, ಡೀಸೆಲ್ ಎಂಜಿನ್, ಪಿಂಗಾಣಿ ಸಾಮಾನುಗಳ ತಯಾರಿಕೆಗಳು ಇಲ್ಲಿನ ಉದ್ಯಮಗಳು. ಕುಶಲಕಲಾ ವಸ್ತುಗಳ ತಯಾರಿಕೆಗೆ ಉತ್ತರ ಪ್ರದೇಶ ಹಿಂದಿನಿಂದಲೂ ತುಂಬ ಪ್ರಸಿದ್ಧಿ. ಆಗ್ರಾದಲ್ಲಿ ರತ್ನ ಗಂಬಳಿಗಳ, ವಾರಾಣಸಿ(ಕಾಶಿ)ಯಲ್ಲಿ ರೇಷ್ಮೆಬಟ್ಟೆ, ಹಿತ್ತಾಳೆ ಸಾಮಾನುಗಳ, ಮೊರಾದಾಬಾದ್‌ನಲ್ಲಿ ಬೆಳ್ಳಿಯ ಮುಲಾಮು ಕೊಟ್ಟ ವಸ್ತುಗಳ, ಕನ್ನೌಜ್‌ನಲ್ಲಿ ಅತ್ತರ್, ಲಖನೌದಲ್ಲಿ ಬೆಳ್ಳಿ, ಎನಾಮಲ್ ಸಾಮಾನುಗಳ, ಕಾನ್ಪುರದಲ್ಲಿ ತೊಗಲಿನ ಸಾಮಾನುಗಳ ತಯಾರಿಕೆ ಇಂದಿಗೂ ಅಭಿವೃದ್ಧಿ ಸ್ಥಿತಿಯಲ್ಲಿದೆ. ಮರಕೆತ್ತನೆ, ದಂತಕೆಲಸ, ಕುಂಭ, ಕಲ್ಲಿನ ಪದಾರ್ಥಗಳು, ಕೊಂಬು ಮತ್ತು ಬಿದಿರಿನ ವಸ್ತುಗಳು, ಸಂಗೀತ ವಾದ್ಯಗಳ ತಯಾರಿಕೆ ಗೃಹಕೈಗಾರಿಕೆಗಳಾಗಿದ್ದು ಇಲ್ಲಿನ ಕುಶಲ ಕಲೆಗೆ ಸಾಕ್ಷಿಯಾಗಿದೆ.



ಮುಖ್ಯಮಂತ್ರಿ ಚಂದ್ರಭಾನು ಗುಪ್ತ



ಮುಖ್ಯಮಂತ್ರಿ ಬಹುಗುಣ (1973)

ಪ್ರಪಂಚದ ಅದ್ಭುತಗಳಲ್ಲಿ ಒಂದಾದ ತಾಜ್‌ಮಹಲ್ ಲೋಕವಿಖ್ಯಾತ. ರಾಜಧಾನಿ ಲಖನೌ ಒಂದು ಸೊಗಸಾದ ನಗರ. ಹಿಂದೂಸ್ತಾನಿ ಸಂಗೀತ, ಉತ್ತರ ಭಾರತದ ನೃತ್ಯಗಳು ಇಲ್ಲಿ ಬಹಳ ಮಟ್ಟಿಗೆ ಪ್ರೋತ್ಸಾಹಿಸಲ್ಪಟ್ಟಿವೆ.

ಪ್ರಾಚೀನ ಕಾಲದಲ್ಲಿ ಸೂರ್ಯವಂಶ, ಚಂದ್ರವಂಶದ ದೊರೆಗಳು ಈ ಪ್ರದೇಶದಲ್ಲಿ ಆಳಿದರು. ವಿಶ್ವಾಮಿತ್ರ, ವಸಿಷ್ಠ, ಭರದ್ವಾಜ, ವಾಲ್ಮೀಕಿ, ವ್ಯಾಸ ಮುಂತಾದ ವೇದಕಾಲೀನ ಋಷಿಗಳು ಇಂದು ಉತ್ತರಪ್ರದೇಶವೆಂದು ಕರೆಯಲ್ಪಡುವ ಪ್ರದೇಶದಲ್ಲಿ ಹುಟ್ಟಿ ಬಾಳಿದವರು.

ಬುದ್ಧನ ಊರು ಕಪಿಲವಸ್ತು ಉತ್ತರ ಪ್ರದೇಶದ ಬಸ್ತಿ ಜಿಲ್ಲೆಯಲ್ಲಿ ಇದ್ದಿತು. ಬುದ್ಧ ಮೊದಲು ಬೋಧಿಸಿದ ತಾಣ ಸಾರನಾಥ ಇರುವುದು ಈ ರಾಜ್ಯದಲ್ಲಿ. ಜೈನತೀರ್ಥಂಕರ ಋಷಭದೇವ ಹುಟ್ಟಿದ್ದು ಉತ್ತರ ಪ್ರದೇಶದಲ್ಲಿ. ಇತರ ಕೆಲ ತೀರ್ಥಂಕರರ ಇಲ್ಲಿನವರು ಎಂಬ ಹೇಳಿಕೆಯಿದೆ.

ಮೌರ್ಯರ ಕಾಲದಲ್ಲಿ ಅಶೋಕನ ವರೆಗೆ ಉತ್ತರ ಪ್ರದೇಶ ಅವರ ಸಾಮ್ರಾಜ್ಯದಲ್ಲಿದ್ದಿತು. ಅನಂತರ ಪುಷ್ಯಮಿತ್ರ ಆಳಿದ. ಮುಂದೆ ಸಿಥಿಯನರು, ಕುಶಾನರು, ನಾಗರು, ಗುಪ್ತರ ಅಧೀನದಲ್ಲಿತ್ತು ಈ ಪ್ರದೇಶ. ಗುಪ್ತರ ಕಾಲದಲ್ಲಿ ಮಥುರಾ, ವಾರಾಣಸಿಗಳು ಉನ್ನತ ಸ್ಥಿತಿಯಲ್ಲಿದ್ದುವು. ಹರ್ಷವರ್ಧನ ಕನ್ನೌಜ್‌ಅನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡಿದ್ದ. ಗುರ್ಜರ, ಪ್ರತೀಹಾರ ದೊರೆಗಳು, ಅನಂತರ ಚಂದೆಲ್ಲರು. ಬಹುಕಾಲ ಉತ್ತರ ಪ್ರದೇಶದ ಬಹು ಭಾಗವನ್ನು ಆಳಿದರು.

12ನೆಯ ಶತಮಾನದಲ್ಲಿ ಮುಸಲ್ಮಾನರು ಉತ್ತರ ಪ್ರದೇಶವನ್ನು ಗೆದ್ದುಕೊಂಡರು. 1765ರಿಂದ ಆರಂಭವಾಗಿ 1856ರ ವರೆಗೆ ಉತ್ತರ ಪ್ರದೇಶದ ಒಂದೊಂದೇ ಭಾಗ ಬ್ರಿಟಿಷರ ಆಳ್ವಿಕೆಗೆ ಅಧೀನವಾಗುತ್ತ ಬಂತು.

ಭಾರತಕ್ಕೆ ಸ್ವಾತಂತ್ರ್ಯ ದೊರೆಯುವುದಕ್ಕೆ ಮೊದಲು ಉತ್ತರ ಪ್ರದೇಶಕ್ಕೆ ಸಂಯುಕ್ತ ಪ್ರಾಂತ (ಯುನೈಟೆಡ್ ಪ್ರಾವಿನ್ಸ್) ಎಂಬ ಹೆಸರಿತ್ತು. 1950ರಲ್ಲಿ ಅದನ್ನು ಉತ್ತರ ಪ್ರದೇಶವೆಂದು ಕರೆಯಲಾಯಿತು.


ನೋಡಿ : ಅಲಹಾಬಾದ್ ; ಆಗ್ರಾ ; ಕನ್ನೌಜ್ ; ಕಾನ್ಪುರ ; ನಂದಾದೇವಿ ಪರ್ವತ ; ನೈನಿತಾಲ್ ; ಮಥುರಾ ; ಲಖನೌ ; ವಾರಾಣಸಿ ; ಸಾರನಾಥ ; ಹರ್ದ್ವಾರ ; ಹಸ್ತಿನಾಪುರ

ಉದಕಮಂಡಲ

ಉದಕಮಂಡಲದಲ್ಲಿ ವರ್ಷವಿಡೀ ವಸಂತಕಾಲ ಎನ್ನುತ್ತಾರೆ. ಇಲ್ಲಿ ಉಷ್ಣತೆ 16° ಸೆಂ.ಗ್ರೇ. ಯನ್ನು ಮೀರುವುದಾಗಲೀ 10° ಸೆಂ.ಗ್ರೇ. ಗಿಂತ



ಸಸ್ಯೋದ್ಯಾನ



ಊಟಿ ರೇಡಿಯೋ ದೂರದರ್ಶಕ

ಕೆಳಕ್ಕೆ ಇಳಿಯುವುದಾಗಲೀ ಅಪರೂಪ. ಅತಿ ಚಳಿಯೂ ಇಲ್ಲ; ಉರಿಬಿಸಿಲೂ ಇಲ್ಲ. ಮಳೆ ಬಂದರೂ ತುಂತುರು ತುಂತುರು ಮಾತ್ರ. ಉದಕಮಂಡಲ ಸಮುದ್ರಮಟ್ಟದಿಂದ ಸುಮಾರು 7,250 ಅಡಿ ಎತ್ತರದಲ್ಲಿ ನಿಸರ್ಗ ಸೌಂದರ್ಯಕ್ಕೆ ಹೆಸರಾದ ನೀಲಗಿರಿ ಬೆಟ್ಟಸಾಲಿನ ನಡುವೆ ಇದೆ. ಇದನ್ನು ದಕ್ಷಿಣ ಭಾರತದ 'ಗಿರಿಧಾಮಗಳ ರಾಣಿ' ಎನ್ನುತ್ತಾರೆ. ತಮಿಳುನಾಡಿನ ನೀಲಗಿರಿ ಜಿಲ್ಲೆಯ ಮುಖ್ಯ ಪಟ್ಟಣವಾದ ಉದಕಮಂಡಲಕ್ಕೆ ಊಟಕಮಂಡ್ (ಇಂಗ್ಲಿಷ್ ರೂಪಾಂತರ) ಮತ್ತು ಅದರ ಹ್ರಸ್ವರೂಪ ಊಟಿ ಎಂಬ ಹೆಸರುಗಳೂ ಪ್ರಚಾರದಲ್ಲಿವೆ.

ಹಿಂದೆ ಇದು ಮದರಾಸು ರಾಜ್ಯದ ಬೇಸಿಗೆ ಕಾಲದ ರಾಜಧಾನಿಯಾಗಿತ್ತು. ಮೈಸೂರು ನಗರದಿಂದ ಉದಕಮಂಡಲಕ್ಕೆ ನೂರು ಮೈಲು ದೂರ. ಏಪ್ರಿಲ್‌ನಿಂದ ಜೂನ್ ವರೆಗೆ ಅಧಿಕ ಸಂಖ್ಯೆಯಲ್ಲಿ ಪ್ರವಾಸಿಗಳು ಇಲ್ಲಿಗೆ ಬರುತ್ತಾರೆ.

ಭಾರತದ ಅತ್ಯಂತ ಸುಂದರ ದೃಶ್ಯಗಳಲ್ಲೊಂದು, ಉದಕಮಂಡಲದ ಸಸ್ಯೋದ್ಯಾನ. ಲಂಡನಿನ ಕ್ಯೂ ಉದ್ಯಾನದಲ್ಲಿನ ಪರಿಣತನೊಬ್ಬ ಸುಮಾರು 1850ರಲ್ಲಿ ಇದನ್ನು ನಿರ್ಮಿಸಿದ. ಮೆಟ್ಟಿಲು–ಮೆಟ್ಟಿಲಾಗಿರುವ ನೆಲದಲ್ಲಿರುವ ಈ ಉದ್ಯಾನವಲ್ಲಿ 650ಕ್ಕೂ ಹೆಚ್ಚು ಬಗೆಯ ಗಿಡ ಮರಗಳಿವೆ. ಸಸ್ಯವಿಜ್ಞಾನದ ವಿದ್ಯಾರ್ಥಿಗಳಿಗೆ ಇದು ಅಭ್ಯಾಸ ಕೇಂದ್ರ. ಪ್ರವಾಸಿಗರು ಉದ್ಯಾನದ ಸೌಂದರ್ಯವನ್ನು ಸವಿಯುತ್ತಾರೆ. ವಸಂತ ಕಾಲದಲ್ಲಿ ಇಲ್ಲಿ ಪುಷ್ಪ ಪ್ರದರ್ಶನ ನಡೆಯುತ್ತದೆ.

ಉದಕಮಂಡಲದಲ್ಲಿ ಕೃತಕವಾಗಿ ನಿರ್ಮಿಸಿದ 2 ಮೈಲು ಉದ್ದದ ಒಂದು ಸರೋವರವಿದೆ. ಇಲ್ಲಿ ದೋಣಿವಿಹಾರಕ್ಕೆ ಅವಕಾಶವಿದೆ. ಇಲ್ಲೇ ಸಮೀಪದಲ್ಲಿ ಕುದುರೆ ಸವಾರಿಗೆ ವ್ಯವಸ್ಥೆಯಿದೆ. ಉದಕಮಂಡಲದಲ್ಲಿ ವರ್ಷದಲ್ಲಿ ಒಂದೆರಡು ತಿಂಗಳು ಕುದುರೆ ಪಂದ್ಯಗಳು ನಡೆಯುತ್ತವೆ. ಭಾರತ ಶ್ವಾನ ಪಾಲಕರ ಸಂಘದ ಮುಖ್ಯ ಕಚೇರಿ ಇಲ್ಲಿದೆ. ಪ್ರತಿ ಮೇ ತಿಂಗಳಲ್ಲಿ ಇಲ್ಲಿ ನಾಯಿ ಪ್ರದರ್ಶನ ನಡೆಯುತ್ತದೆ.

ಉದಕಮಂಡಲದ ಸುತ್ತಲಿನ ಗುಡ್ಡಗಳಲ್ಲಿ ವಾಸಿಸುವವರಲ್ಲಿ ಹೆಚ್ಚಿನವರು ತೋಡ ಆದಿವಾಸಿಗಳು.

ಉದಕಮಂಡಲದ ಸಮೀಪದಲ್ಲಿರುವ ಕೂನೂರು, ಕೋಟಗಿರಿ, ವೆಲಿಂಗ್ಟನ್, ಕೇಟಿ ಇತರ ಗಿರಿಧಾಮಗಳು. ಉದಕಮಂಡಲದಿಂದ 6 ಮೈಲು ದೂರದ ದೊಡ್ಡಬೆಟ್ಟ, ನೀಲಗಿರಿ ಶ್ರೇಣಿಯಲ್ಲೆಲ್ಲ ಅತ್ಯಂತ ಎತ್ತರದ ಶಿಖರ (8,640 ಅಡಿ ಎತ್ತರ). ಇಲ್ಲಿಂದ ಕಾಣಬರುವ ಬೆಟ್ಟಬಯಲುಗಳ ದೃಶ್ಯ ಅತಿ ಮನೋಹರ.

ಸಂಶೋಧನೆಗಾಗಿ 530 ಮೀಟರ್ ಉದ್ದ, 30 ಮೀಟರ್ ಅಗಲದ ಒಂದು ರೇಡಿಯೋ ದೂರದರ್ಶಕವನ್ನು ಉದಕಮಂಡಲದಲ್ಲಿ ಸ್ಥಾಪಿಸಿದ್ದಾರೆ.

ಉದಯಪುರ

ಭಾರತದ ರಮಣೀಯ ನಗರಗಳಲ್ಲಿ ಒಂದು ಉದಯಪುರ.

ಮೇವಾಡದ ರಾಜಧಾನಿ ಚಿತೋಡಗಡ (ಚಿತ್ತೂರ್) 1568ರಲ್ಲಿ ಅಕ್ಬರನ ವಶವಾದ ಮೇಲೆ, ಉದಯಸಿಂಹ ಉದಯಪುರವನ್ನು ಸ್ಥಾಪಿಸಿ ಅದನ್ನು ತನ್ನ ರಾಜಧಾನಿಯಾಗಿ ಮಾಡಿಕೊಂಡ. ಆರಾವಳಿ ಪರ್ವತಶ್ರೇಣಿಯ ಒಂದು ಬೆಟ್ಟದ ಮೇಲಿರುವ ಈ ನಗರ ಪಿಚೋಡಾ ಸರೋವರದ ಪೂರ್ವ ದಂಡೆಯಲ್ಲಿದೆ. ಸುತ್ತ ಕೋಟೆಯಿದೆ.

ಪಿಚೋಡಾ ಸರೋವರದ ಸುತ್ತಲೂ ದೇವಾಲಯ, ಅರಮನೆ, ಚಿಕ್ಕ ಪುಟ್ಟ ಗುಡ್ಡಗಳಿವೆ. 1570ರಲ್ಲಿ ಕಟ್ಟಿ ಅನಂತರ ಕಾಲಕಾಲಕ್ಕೆ ವಿಸ್ತರಿಸಲಾದ ಮಹಾರಾಣನ ಅರಮನೆ ರಾಜಸ್ಥಾನದಲ್ಲೇ ಅತ್ಯಂತ ದೊಡ್ಡದು.

ಸರೋವರದಲ್ಲಿ ಎರಡು ದ್ವೀಪಗಳಿವೆ. ಇವುಗಳ ಮೇಲೆಯೂ ಅಮೃತಶಿಲೆಯ ಅರಮನೆಗಳು ಕಟ್ಟಲ್ಪಟ್ಟಿವೆ. ಒಂದು ಜಗನಿವಾಸ

ಉದಯೇಶ್ವರ ದೇವಾಲಯ





ಉದಯಪುರ ಅರಮನೆ

ಇನ್ನೊಂದು ಜಗಮಂದಿರ. ಜಗನಿವಾಸದ ಒಳಭಾಗದಲ್ಲಿ ಬದಲಾವಣೆ ಮಾಡಿ ಈಗ ಅದನ್ನು ಒಂದು ಹೋಟಲನ್ನಾಗಿ ಪರಿವರ್ತಿಸಿದ್ದಾರೆ.

ಉದಯಪುರಕ್ಕೆ ಸ್ವಲ್ಪ ದೂರದಲ್ಲಿ ಹಲವಾರು ಕೃತಕ ಸರೋವರಗಳಿವೆ: ಫತೇಸಾಗರ, ರಾಜ ಸಮುಂದ್ ಸರೋವರ, ಧೇಬರ್ (ಜಯ ಸಮುಂದ್) ಹಾಗೂ ಉದಯಸಾಗರಗಳು ಮುಖ್ಯವಾದುವು. ಧೇಬರ್ ಪ್ರಪಂಚದಲ್ಲೇ ದೊಡ್ಡ ಮಾನವ ನಿರ್ಮಿತ ಸರೋವರ. ರಾಜ ಸಮುಂದ್ ಸರೋವರದ ಪಕ್ಕಕ್ಕೆ ಹೊದಿಸಿರುವ ಅಮೃತಶಿಲೆಯ ಹಾಸುಗಲ್ಲುಗಳ ಮೇಲೆ ಇರುವ 1675ರ ಸಂಸ್ಕೃತ ಶಾಸನ ನಮ್ಮ ದೇಶದ ಶಾಸನಗಳಲ್ಲಿ ಅತ್ಯಂತ ದೀರ್ಘವಾದದ್ದು. ಮೇವಾಡದ ಇತಿಹಾಸ ಈ ಶಾಸನದ ವಸ್ತು.

ಮೇವಾಡ ಅರಸರ ಮನೆದೇವರಾದ ಏಕಲಿಂಗಜೀ ದೇವಸ್ಥಾನ, ಪಟ್ಟಣದಿಂದ 14 ಮೈಲು ದೂರದಲ್ಲಿದೆ.

ಉದಯಪುರದ ಅರಸರು ಸಿಸೋದಿಯಾ ಎಂಬ ಶ್ರೇಷ್ಠ ರಜಪೂತ ವಂಶದವರು. ಒಳಜಗಳಗಳಿಂದ 18ನೆಯ ಶತಮಾನದಲ್ಲಿ ಉದಯಪುರ ಸಂಸ್ಥಾನ ಬಲಗುಂದಿತು. 1818ರಲ್ಲಿ ಇದು ಬ್ರಿಟಿಷರ ಕೈಸೇರಿತು.

ಉರ್ದು ಭಾಷೆ, ಸಾಹಿತ್ಯ

'ಉರ್ದು' ಎಂದರೆ ತುರ್ಕಿ ಭಾಷೆಯಲ್ಲಿ 'ಸೈನ್ಯದ ಬಿಡಾರ' ಅಥವಾ ಸೈನ್ಯ ಶಿಬಿರ. ಪಾರಸೀ ಭಾಷೆ ಮಾತನಾಡುತ್ತಿದ್ದ ಮುಸಲ್ಮಾನ ಸೈನಿಕರು ಸ್ಥಳೀಯ ಜನರೊಡನೆ ವ್ಯವಹರಿಸಿದಾಗ ರೂಪುಗೊಂಡ ಭಾಷೆಯನ್ನು 'ಉರ್ದು' ಎಂದು ಕರೆಯಲಾಯಿತು. 'ಉರ್ದು' ಮುಸಲ್ಮಾನರ ಭಾಷೆ ಎಂಬ ವಾದದಲ್ಲಿ ಹುರುಳಿಲ್ಲ ಎಂಬುದನ್ನು ಈ ಭಾಷೆಯ ಉಗಮದ ಬಗೆಗೆ ನಡೆದ ಸಂಶೋಧನೆಗಳು ತೋರಿಸಿವೆ.

'ಖಾರಿ ಬೋಲಿ' [illegible] ಎಂಬ ಪ್ರಾಚೀನ ಭಾಷೆಯಿಂದ [illegible] ಹಿಂದಿಯಿಂದ ಉರ್ದು ಹುಟ್ಟಿತು. [illegible] ಶತಮಾನದ [illegible] ಭಾರತದ [illegible] ಮುಸಲ್ಮಾನರು ದೆಹಲಿಯ ಸುತ್ತಮುತ್ತ ನೆಲೆಸತೊಡಗಿದರು. ಇಬ್ಬರ ನ್ನೊಬ್ಬರು ಅರ್ಥಮಾಡಿಕೊಳ್ಳಲು ಸ್ಥಳೀಯ ಜನರು ಮತ್ತು ಸೈನಿಕರು ಪರಸ್ಪರರ ಭಾಷೆಗಳ ಪದಗಳನ್ನು ವಿನಿಮಯ ಮಾಡಿಕೊಂಡರು. ಭಾರತೀಯ ಸಂಪ್ರದಾಯ ಸಂಸ್ಕೃತಿಗಳ ಅಭಿವ್ಯಕ್ತಿಗಾಗಿ ಪಾರಸೀ ಭಾ ಕ್ರಮಕ್ರಮವಾಗಿ ದೇಶೀಯ ಭಾಷೆಗಳೊಡನೆ ಬೆರೆಯಿತು. ಜನರು ಬ ಮಟ್ಟಿಗೆ ಮಾತನಾಡುತ್ತಿದ್ದ ಭಾಷೆಗಳು ಹರ್‍ಯಾಣೀ ಪಂಜಾಬೀ ಮತ್ತು ಬ್ರಜ್ ಭಾಷಾ. 14–15ನೆಯ ಶತಮಾನದಲ್ಲಿದ್ದ ಕಬೀರ್‌ದಾಸನ ಕೃತಿಗಳ ಪಂಜಾಬೀ, ಅರಬೀ, ಪಾರಸೀ ಮತ್ತು ಬ್ರಜ್ ಭಾಷೆಗಳ ಪ್ರಭಾವವಿದೆ.

ಉರ್ದು ಬೆಳೆಯಲು ಅತ್ಯಂತ ಸಹಾಯಕಾರಿಯಾದದ್ದು ಬ್ರಜ್ ಭಾಷೆ. ಮೊಘಲ್ ದೊರೆಗಳು, ಇವರ ರಜಪೂತ ರಾಣಿಯರು, ಹಿಂದೀ ಗಾಯಕರು ಈ ಭಾಷೆಗೆ ಪ್ರೋತ್ಸಾಹವಿತ್ತರು. ಅಕ್ಬರನ ಮಂತ್ರಿಗಳಾದ ರಾಜಾತೋಡ ಮಲ್, ಅಬುಲ್‌ಫಜಲ್, ಖಾನ್‌ಖಾನ (ಬೈರಾಮ್ ಖಾನನ ಮಗ) ಮೊದಲಾದವರು ಉತ್ತಮ ಹಿಂದೀ ಕವಿಗಳು. ಇವರ ಕಾಲದಲ್ಲಿ, ಪಾರಸಿ ಪದಪುಂಜಗಳನ್ನು ಎರವಲು ಪಡೆದ ಕಾವ್ಯ, ಪಾರಸೀ ಛಂದಸ್ಸಿನಲ್ಲೇ ರೂಪ ಗೊಂಡಿತು. ಪ್ರಾಚೀನ ಹಿಂದೀಕವಿ ಚಾಂದ್ ಬರದಾಯಿಯ 'ಪೃಥ್ವಿರಾಜ ರಾಸೋ' ಒಂದು ಉನ್ನತ ಸಾಹಿತ್ಯಕ ಕೃತಿ. ಅದರಲ್ಲಿ ಪಾರಸೀ ಪದಗಳಿವೆ.

ಮಹಮ್ಮದ್ ಬಿನ್ ತುಘಲಕ್ 1327ರಲ್ಲಿ ತನ್ನ ರಾಜಧಾನಿಯನ್ನು ದೆಹಲಿಯಿಂದ ದೇವಗಿರಿಗೆ ಬದಲಾಯಿಸಿದಾಗ, ಜನರು ತಮ್ಮ ಜೊತೆ ದಕ್ಷಿಣಕ್ಕೆ ಈ ಹೊಸ ಭಾಷೆಯನ್ನೂ ತಂದರು. ಸ್ವತಃ ಹಿಂದೀ ಕವಿಗಳಾಗಿದ್ದ ಗೋಲ್ಕೊಂಡ, ಬಿಜಾಪುರ ಮತ್ತು ಬಹಮನಿ ದೊರೆಗಳೂ ಈ ಹೊಸ ಭಾಷೆಯ ಬೆಳವಣಿಗೆಗೆ ಕಾರಣರಾದರು. ಮಹಾನ್ ಕವಿ ವಲಿ ದಖ್ಖನಿ ಉರ್ದು ಸಾಹಿತ್ಯದ ಉಗಮಕ್ಕೆ ಕಾರಣನಾದ. ಇವನ 'ದಿವಾನ್' ಎಂ ಸರಳ ಕವನ ಸಂಕಲನ ಜನಪ್ರಿಯವಾಯಿತು; ಖ್ಯಾತಿ ಉತ್ತರ ಭಾರತಕ್ಕೂ ಹಬ್ಬಿತು. ದೆಹಲಿಯ ವಿದ್ವಾಂಸರೂ ಈ ಕೃತಿಯನ್ನು ಹಾಡಿಹೊಗಳಿದರು.

ಷಾಜಹಾನನ ಕಾಲದಲ್ಲಿ ಚಂದ್ರಭಾನ್ ಬ್ರಾಹ್ಮನ್ ಎಂಬ ಮಹಾಕವಿ ಸಾವಿರಾರು ಹಿಂದೀ ದ್ವಿಪದಿಗಳನ್ನು ರಚಿಸಿದ. ಮುಂದೆ, 1540ರಲ್ಲಿ ಮಲಿಕ್ ಮುಹಮದ್ ಜಾಯಸಿ ಹಿಂದೀ ಮತ್ತು ಪಾರಸೀ ಭಾಷೆಯ ಪದಗಳ ಮಿಶ್ರಣವುಳ್ಳ 'ಪದ್ಮಾವತ್' ಎಂಬ ಕೃತಿಯನ್ನು ರಚಿಸಿದ.

ಇತರ ಎಲ್ಲ ಭಾಷೆಗಳಂತೆ ಉರ್ದುವಿನಲ್ಲೂ ಕಾವ್ಯದಿಂದಲೇ ಸಾಹಿತ್ಯ ಪ್ರಾರಂಭವಾಯಿತು. ದೆಹಲಿಯ ಮಹಾ ಸಂತ ಅಮೀರ್ ಖುಸರೊ ಹಿಂದೀ ಪದಗಳಿಂದ ತುಂಬಿದ ಉರ್ದು ಘಜಲ್‌ಗಳನ್ನು ರಚಿಸಿದ.

ಆರಜೂ, ಹಾತಿಂ, ಮೀರ್, ಸೌದ ಮತ್ತು ಇನ್‌ಷಾ ಮೊದಲಾದ ದೆಹಲಿಯ ಕವಿಗಳು ಸೂಫಿ ತತ್ತ್ವ, ಪ್ರಣಯ ಹಾಗೂ ಉದಾತ್ತ ಚಿಂತನೆಗಳಿಂದ ಕೂಡಿದ ಹೊಸ ಶೈಲಿಯನ್ನು ಸೃಷ್ಟಿಸಿದರು. ಮುಂದೆ ಖ್ಯಾತ ಕವಿಗಳಾದ ನಸೀರ್, ಅತಿಶ್ ಮತ್ತು ನವಾಬ್ ವಾಜಿದ್ ಅಲಿ ಷಾ ಅವರ ಕೈಯಲ್ಲಿ ಉರ್ದು ನವ್ಯರೂಪಗೊಂಡಿತು. ಇದು ಘಜಲ್ ಮತ್ತು ಮುಶೈರಾಗಳ ಕಾಲ. ಪಂಡಿತ್ ದಯಾಶಂಕರ್ ಕೌಲ್ ಅವರು ಉರ್ದುವಿನಲ್ಲಿ ಬರೆದ 'ಗುಲ್ಜಾರೇ ನಸೀಂ' ಶ್ರೇಷ್ಠ ಕೃತಿ.

ಘಾಲಿಬ್ ಮತ್ತು ಜಾಕ್ ಅವರದು ಉರ್ದು ಸಾಹಿತ್ಯದ ಮಧ್ಯ ಕಾಲ. ಸೂಕ್ಷ್ಮವಾದ ರೂಪಕಗಳನ್ನೂ ಸೊಗಸಾದ ಉಪಮೆಗಳನ್ನೂ ಇವರ ಕೃತಿಗಳಲ್ಲಿ ಕಾಣುತ್ತೇವೆ. ವಾಸ್ತವ ಸನ್ನಿವೇಶಗಳ ಚಿತ್ರಣಕ್ಕೆ ಇವರದು ಎತ್ತಿದ ಕೈ. ಅವರ ಭಾಷೆಯಲ್ಲಿ ಪಾರಸೀ ಭಾಷೆ ಕಂಡು ಬರುತ್ತದೆ. ಇದು ಕವಿತಾಪ್ರಕಾರಗಳಾದ ಘಜಲ್ ಮತ್ತು ಕವನಗಳ ಸುವರ್ಣಯುಗ.

ದೇಶೀಯ ಸಂಸ್ಥಾನಗಳಾಗಿದ್ದ ರಾಮ್‌ಪುರ ಮತ್ತು ಹೈದರಾ ಾದ್ ರಾಜ್ಯಗಳು 1857ರ ಬಂಡಾಯದ ಬಳಿಕ ವಿದ್ವಾಂಸರಿಗೆ ಸ್ಥಾನ ೀಟ್ಟುವು. ಮಹಾರಾಜ. ಚಂದೂಲಾಲ್, ಹೈದರಾಬಾದಿನ ರಾಜಾ ರ್‌ಧಾರಿ ಪ್ರಸಾದ್, ಮಹಾರಾಜಾ ಕಿಷನ್ ಪ್ರಸಾದ್ ಉರ್ದುವಿನ ್ರೋತ್ಸಾಹಕರಾಗಿದ್ದರು. ಹೊಸ ಕಲ್ಪನೆ, ಹೊಸ ಚಿಂತನೆ, ಹೊಸ ಭಾಷೆ ಾಹಿತ್ಯದಲ್ಲಿ ತಲೆಹಾಕಿದುವು. ಹೈದರಾಬಾದಿನಲ್ಲಿ ಉಸ್ಮಾನಿಯಾ ವಿಶ್ವ ದ್ಯಾನಿಲಯ ಮತ್ತು ಉರ್ದು ಭಾಷಾಂತರ ಸಂಸ್ಥೆ ಸ್ಥಾಪಿತವಾಗಿ ಉರ್ದು ಾಷೆಗೆ ಪ್ರಾಧಾನ್ಯ ದೊರೆಯಿತು.

ಉರ್ದು ಭಾಷಾಂತರ ಸಂಸ್ಥೆಯ ಆಶ್ರಯದಲ್ಲಿ ಉರ್ದು ಭಾಷೆಯ ಭಿವೃದ್ಧಿ ಮತ್ತು ಹೊಸ ಪದಗಳ ಸೃಷ್ಟಿಗಾಗಿ ಡಾ. ಮೌಲ್ವಿ ಅಬ್ದುಲ್ ಕ್ ತಮ್ಮ ಜೀವನವನ್ನೇ ಮುಡುಪಾಗಿಟ್ಟು ಕೆಲಸ ಮಾಡಿದರು.

1857ರ ಅನಂತರ ದೆಹಲಿಯಲ್ಲಿ ಸರ್ ಸಯ್ಯದ್ ಅಹ್ಮದ್ ಖಾನ್. ಂ. ಇಕ್ಬಾಲ್. ಹಾಲಿ. ಶಿಬ್ಲಿ ಮೊದಲಾದವರು ಉರ್ದು ಸಾಹಿತ್ಯಕ್ಕೆ ಹೊಸ ಲ್ಪನೆ, ವಿಶಿಷ್ಟ ಚಿಂತನೆಗಳ ಮೆರುಗು ಕೊಟ್ಟರು. ಈ ಕಾಲದಲ್ಲಿ ಕಾವ್ಯ ಲಿ ಸುಧಾರಣೆ ಕಂಡಿತು.

ಉರ್ದು ಗದ್ಯಸಾಹಿತ್ಯ ಬೆಳೆದದ್ದು 19ನೆಯ ಶತಮಾನದ ಆದಿಯಲ್ಲಿ, ಲ್ಕತ್ತದ ಫೋರ್ಟ್ ವಿಲಿಯಂ ಕಾಲೇಜಿನಲ್ಲಿ. ಬ್ರಿಟಿಷ್ ಅಧಿಕಾರಿಗಳಿಗೆ ಡಳಿತ ಉದ್ದೇಶಗಳಿಗಾಗಿ ಸ್ಥಳೀಯ ಭಾಷೆಯಲ್ಲಿ ತರಬೇತಿ ನೀಡಲು ರ್ದು ಭಾಷಾಂತರ ಮತ್ತು ಗದ್ಯ ಸಾಹಿತ್ಯ ಸೃಷ್ಟಿಸಬೇಕೆಂದು, ಸ್ಥೆಯ ಪ್ರಮುಖ ಡಾ. ಜಾನ್ ಗಿಲ್‌ಕ್ರಿಸ್ಟ್ ಕೆಲವು ವಿದ್ವಾಂಸರಿಗೆ ಕರೆ ಡಿದರು. ಆಗ ಗದ್ಯದಲ್ಲಿ ನೂರಾರು ಗ್ರಂಥಗಳೂ ಭಾಷಾಂತರಗಳೂ ಚಿತವಾದುವು. ಪ್ರಾರಂಭದಲ್ಲಿ ಉರ್ದು ಗದ್ಯ ಲಯಬದ್ಧವಾಗಿದ್ದರೂ ನಂತರ ಸರಳವಾಯಿತು.

ಗದ್ಯಸಾಹಿತ್ಯದಲ್ಲಿ ಮಾಸ್ಟರ್ ರಾಮಚಂದ್ರ, ಪ್ಯಾರೆಲಾಲ್, ಬಿಷನ್ ರಾಯಣ್, ಮುನ್ಷಿ, ಮೊತ್ತಮೊದಲ ಉರ್ದು ಮುದ್ರಕ ಮತ್ತು ದ್ರಾಂಸ ನವಲ್‌ಕಿಶೋರ್, ಪಂಡಿತ್ ರತನನಾಥ್ ಸರ್ಕಾರ್, ಬ್ರಿಜ್ ರಾಯಣ್ ಚಕ್‌ಬಸ್ತ್, ಕೃಷ್ಣಚಂದರ್, ಕನ್ಹಯ್ಯಾಲಾಲ್ ಕಪೂರ್, ಷನ್ ಮೋಹನ್, ದೆಹಲಿಯ 'ಬೀಸ್ವೀ ಸದೀ' ಪತ್ರಿಕೆಯ ಸಂಪಾದಕ ಷ್ತರ್ ಗಿರಾಮಿ (ರಾಮ್ ರಖಾಮಲ್) ಮೊದಲಾದವರು ಪ್ರಮುಖ ವವರು. ಇವರ ಕೃತಿಗಳು ಉರ್ದು ಸಾಹಿತ್ಯವನ್ನು ಶ್ರೀಮಂತಗೊಳಿಸಿವೆ.

ಉರ್ದು ನಾಟಕ 19ನೆಯ ಶತಮಾನದ ಮಧ್ಯದಿಂದ ಬೆಳೆದು ಬಂದಿದೆ. ಸ್ಕೃತದ ಅನೇಕ ನಾಟಕಗಳನ್ನು ಉರ್ದು ಭಾಷೆಗೆ ಭಾಷಾಂತರಿಸಲಾಗಿದೆ. ೇಕ ಕಾವ್ಯಗಳು ಮತ್ತು ಲಯಬದ್ಧ ಗದ್ಯ ಕೃತಿಗಳು ಜನತೆಯ ಎಲ್ಲ ರ್ಗಗಳಿಂದಲೂ ಮೆಚ್ಚುಗೆ, ಜನಪ್ರಿಯತೆ ಗಳಿಸಿವೆ.

ಇಂದು ಉರ್ದು ಭಾಷೆಯು ಬೆಳವಣಿಗೆಯಲ್ಲಿ ಚಲಚ್ಚಿತ್ರಗಳೂ ಪ್ರಮುಖ ಾತ್ರ ವಹಿಸುತ್ತಿವೆ.

ನೋಡಿ : ಅಮೀರ್ ಖುಸ್ರೋ ; ಫಿರಾಕ್ ಗೋರಖಪುರಿ

ಉಪನಿಷತ್

ಇಂದ್ರ ಮತ್ತು ವಿರೋಚನ ಆತ್ಮೋಪದೇಶ ಪಡೆಯಲು ಪ್ರಜಾ ತಿಯ ಬಳಿ ಬರುತ್ತಾರೆ. "ಕಣ್ಣಿನಲ್ಲಿ ಕಾಣಬರುವ ಬಿಂಬ ಪ್ರತಿಬಿಂಬವೇ ್ಮ. ಅದೇ ಅಮರವಾದ್ದು. ಅದೇ ಬ್ರಹ್ಮ." ಎಂದು ಅವನು ಪದೇಶಿಸುತ್ತಾನೆ.

ವಿರೋಚನ ತೃಪ್ತನಾಗಿ ಹೊರಟು ಹೋಗುತ್ತಾನೆ. ಇಂದ್ರನ ಮನಸ್ಸಿನಲ್ಲಿ ಒಂದು ಸಂದೇಹ ಹುಟ್ಟುತ್ತದೆ. "ದೇಹ ನಶಿಸಿಹೋಗುತ್ತದೆ. ಆಗ ಪ್ರತಿ ಬಿಂಬವೂ ನಶಿಸಿಹೋಗಬೇಕಲ್ಲ; ಇದು ಹೇಗೆ ಬ್ರಹ್ಮವಾಗಲು ಸಾಧ್ಯ?" ಎಂದು ಪುನಃ ಪ್ರಜಾಪತಿಯನ್ನು ಕೇಳುತ್ತಾನೆ. ಶಿಷ್ಯನ ವಿಚಾರಶಕ್ತಿಯನ್ನು ಮೆಚ್ಚಿದ ಗುರು, ಮೆಟ್ಟಿಲು ಮೆಟ್ಟಿಲಾಗಿ ಅವನಿಗೆ ಆತ್ಮೋಪದೇಶ ಕೊಡುತ್ತಾನೆ.

ಗುರು–ಶಿಷ್ಯ ಸಂಬಂಧದ ಜಿಜ್ಞಾಸೆಯ ಇಂಥ ಸುಂದರ ಸ್ವರೂಪ ಕಂಡುಬರುವುದು ಉಪನಿಷತ್ತುಗಳಲ್ಲಿ.

ಉಪನಿಷತ್ತುಗಳ ಪ್ರಧಾನ ವಸ್ತು ಬ್ರಹ್ಮನನ್ನು ಕುರಿತ ಚಿಂತನೆ. ಬ್ರಹ್ಮನ ಸ್ವರೂಪವನ್ನೂ ಅದನ್ನು ಅರಿತುಕೊಳ್ಳುವ ಮಾರ್ಗವನ್ನೂ ಋಷಿ ಮುನಿ ಗಳು ತಮ್ಮ ಆ ಜ್ಞಾನವನ್ನು ಶಿಷ್ಯರಿಗೆ ತಿಳಿಸಿಕೊಡುವುದನ್ನು ಉಪನಿಷತ್ತು ಗಳಲ್ಲಿ ಕಾಣುತ್ತೇವೆ. ಅವರು ನಿರೂಪಿಸಿದ ವಿಷಯ ಕ್ಲಿಷ್ಟವಾದದ್ದು. ಆದರೆ ಅದನ್ನು ತಿಳಿಸಿಕೊಡುವ ವಿಧಾನ ಆಕರ್ಷಕವಾದದ್ದು. ಉಪಮಾನ ಗಳ, ಸರಳ ಪ್ರಶ್ನೋತ್ತರಗಳ ಮೂಲಕ ಅವರು ಉಪನಿಷತ್ತು ಗಳಲ್ಲಿ ಈ ಕಾರ್ಯವನ್ನು ಯಶಸ್ವಿಯಾಗಿ ನಿರ್ವಹಿಸಲು ಯತ್ನಿಸಿದ್ದಾರೆ. ಇದು ಉಪನಿಷತ್ತುಗಳ ವೈಶಿಷ್ಟ್ಯ.

ಉಪನಿಷತ್ತುಗಳು ಜಗತ್ತಿನ ಎಲ್ಲ ರಾಷ್ಟ್ರಗಳ ವಿಚಾರವಂತರ ಗಮನ ಸೆಳೆದಿದೆ.

ನೋಡಿ : ಈಶಾವಾಸ್ಯೋಪನಿಷತ್ ; ಐತರೇಯೋಪನಿಷತ್ ; ಕಠೋಪ ನಿಷತ್ ; ಕೇನೋಪನಿಷತ್ ; ಕೌಷೀತಕೀ ಉಪನಿಷತ್ ; ಛಾಂದೋಗ್ಯೋಪನಿಷತ್ ; ತೈತ್ತಿರೀಯೋಪನಿಷತ್ ; ನಾರಾ ಯಣೋಪನಿಷತ್ ; ಪ್ರಶ್ನೋಪನಿಷತ್ ; ಬೃಹದಾರಣ್ಯ ಕೋಪನಿಷತ್ ; ಮಾಂಡೂಕ್ಯೋಪನಿಷತ್ ; ಮುಂಡಕೋಪ ನಿಷತ್ ; ಶ್ವೇತಾಶ್ವತರೋಪನಿಷತ್
ಉಪನಿಷತ್ತು—ಸಂಪುಟ ೧ ; ಸಂಪುಟ ೫

ಉಪರಾಷ್ಟ್ರಪತಿ

ಭಾರತದಲ್ಲಿ ರಾಷ್ಟ್ರಪತಿ, ಉಪರಾಷ್ಟ್ರಪತಿ ಸ್ಥಾನಗಳನ್ನು ತುಂಬುವುದು ಆಯ್ಕೆಯ ಮೂಲಕ. ಉಪರಾಷ್ಟ್ರಪತಿಯನ್ನು ಲೋಕಸಭೆ ಹಾಗೂ ರಾಜ್ಯ ಸಭೆಗಳ ಸಂಯುಕ್ತ ಸಭೆಯಲ್ಲಿ ಚುನಾಯಿಸುತ್ತಾರೆ. ಉಪರಾಷ್ಟ್ರಪತಿಯ ಸ್ಥಾನಕ್ಕೆ ಉಮೇದುವಾರರಾಗುವವರಿಗೆ, ರಾಜ್ಯಸಭೆಯ ಉಮೇದುವಾರ ರಿಗೆ ಇರಬೇಕಾದ ಅರ್ಹತೆಗಳಿರಬೇಕು. ವಯಸ್ಸು 35 ವರ್ಷ ತುಂಬಿದ್ದು ಯಾವುದೇ ಲಾಭವಿರುವ ಸರಕಾರೀ ಹುದ್ದೆಯಲ್ಲಿರಕೂಡದು. ಉಪರಾಷ್ಟ್ರ ಪತಿಯಾಗಿ ಆಯ್ಕೆಯಾದ ಯಾವುದೇ ವ್ಯಕ್ತಿ ಅಧಿಕಾರ ವಹಿಸಿಕೊಂಡಮೇಲೆ ಯಾವುದೇ ಶಾಸನ ಸಭೆಯ ಸದಸ್ಯನಾಗಿರಕೂಡದು.

ಉಪರಾಷ್ಟ್ರಪತಿಯ ಅಧಿಕಾರಾವಧಿ 5 ವರ್ಷ. ಈ ಅವಧಿಯಲ್ಲಿ ಅವರು ರಾಜಿನಾಮೆ ಕೊಡಲು ಅವಕಾಶವಿದೆ. ಅಲ್ಲದೆ ಉಪರಾಷ್ಟ್ರಪತಿಯನ್ನು ಅಧಿಕಾರದಿಂದ ತೆಗೆಯಬೇಕೆಂದು ಒಟ್ಟು ಸದಸ್ಯಸಂಖ್ಯೆಯಲ್ಲಿ ಬಹುಮತ ದಿಂದ ರಾಜ್ಯಸಭೆಯು ನಿರ್ಣಯವನ್ನು ಅಂಗೀಕರಿಸಿ, ಅದಕ್ಕೆ ಲೋಕಸಭೆಯ ಸಮ್ಮತಿ ದೊರೆತರೆ, ಅವರನ್ನು ಅಧಿಕಾರದಿಂದ ತೆಗೆಯಲಾಗುವುದು.

ಉಪರಾಷ್ಟ್ರಪತಿ ರಾಜ್ಯಸಭೆಯ ಪದನಿಮಿತ್ತ ಸಭಾಪತಿ ಕೂಡ. ಆ ಅಧಿಕಾರಕ್ಕೆ ಸಂಬಂಧಿಸಿದ ಎಲ್ಲ ಕೆಲಸಗಳನ್ನೂ ಅವರು ಮಾಡಬೇಕಾಗುತ್ತದೆ.

ಯಾವುದೇ ಸಂದರ್ಭದಲ್ಲಿ ರಾಜ್ಯಸಭೆಯಲ್ಲಿ ಪರ ಮತ್ತು ವಿರೋಧವಾಗಿ ಸಮಮತಗಳು ಬಂದಾಗ ಉಪರಾಷ್ಟ್ರಪತಿ ತಮ್ಮ ನಿರ್ಣಾಯಕ ಮತವನ್ನು ಕೊಡುವ ಅಧಿಕಾರವಿದೆ.

ರಾಷ್ಟ್ರಪತಿಯ ಅನಾರೋಗ್ಯ ಅಥವಾ ಗೈರುಹಾಜರಿಯಲ್ಲಿ ಉಪರಾಷ್ಟ್ರಪತಿ ಅವರ ಅಧಿಕಾರ ನಿರ್ವಹಿಸುತ್ತಾರೆ. ರಾಷ್ಟ್ರಪತಿಯ ನಿಧನ, ರಾಜೀನಾಮೆ ಅಥವಾ ಪದಚ್ಯುತಿ ಸಂದರ್ಭದಲ್ಲಿ, ಹೊಸ ರಾಷ್ಟ್ರಪತಿ ಆಯ್ಕೆಗೊಂಡು ಅಧಿಕಾರ ಸ್ವೀಕರಿಸುವ ವರೆಗೆ, ಉಪರಾಷ್ಟ್ರಪತಿಯೇ ರಾಷ್ಟ್ರಪತಿಯಾಗಿ ಕೆಲಸ ಮಾಡಬೇಕಾಗುತ್ತದೆ.

ಸರ್ವಪಲ್ಲಿ ರಾಧಾಕೃಷ್ಣನ್ ಭಾರತದ ಪ್ರಥಮ ಉಪರಾಷ್ಟ್ರಪತಿ. ಅನಂತರ ಉಪರಾಷ್ಟ್ರಪತಿಗಳಾದವರು ಜಾಕಿರ್ ಹುಸೇನ್, ವಿ. ವಿ. ಗಿರಿ, ಜಿ. ಎಸ್. ಪಾಠಕ್.

ಉಮಾಶಂಕರ ಜೋಶಿ

ಗುಜರಾತಿನ ಶ್ರೇಷ್ಠ ಕವಿ, ವಿಮರ್ಶಕ ಮತ್ತು ಪ್ರಬಂಧಕಾರ ಉಮಾಶಂಕರ್ ಜೇಠಾಲಾಲ್ ಜೋಶಿ. ಭಾರತೀಯ ಸಾಹಿತ್ಯಕ್ಷೇತ್ರದ ಅತ್ಯುನ್ನತ ಪ್ರಶಸ್ತಿಯಾದ ಜ್ಞಾನಪೀಠ ಸಾಹಿತ್ಯ ಪಾರಿತೋಷಕ 'ನಿಶೀಥ' ಕೃತಿಗಾಗಿ ಇವರಿಗೆ ದೊರೆತಿದೆ.

ಗುಜರಾತಿನ ಬಮ್ನಾದಲ್ಲಿ 1911 ಜುಲೈ 21ರಂದು ಜನನ. ಬಾಲ್ಯದಿಂದಲೇ ಭಾವಜೀವಿ. ಗಾಂಧೀವಾದದಿಂದ ಆಕರ್ಷಿತರಾಗಿ ಸ್ವಾತಂತ್ರ್ಯ ಸಮರದಲ್ಲಿ ಭಾಗವಹಿಸಿದರು; ಎರಡು ಬಾರಿ ಸೆರೆಮನೆ ವಾಸ ಅನುಭವಿಸಿದರು. ಜೊತೆಯಲ್ಲೇ ಕಾವ್ಯಾಭ್ಯಾಸ. ಮುಂಬಯಿಯ ಎಲ್ಫಿನ್‌ಸ್ಟನ್ ಕಾಲೇಜಿನಲ್ಲಿ ಎಂ. ಎ. ಪದವಿ ಪಡೆದರು. ಅಧ್ಯಾಪಕರಾದರು.

1947ರಿಂದ 'ಸಂಸ್ಕೃತಿ'ಯ ಸಂಪಾದಕ. 'ವಿಶ್ವಶಾಂತಿ', 'ನಿಶೀಥ', 'ಸಾಪ್ನಾಭಾರಾ', 'ಶಹೀದ್', 'ಶ್ರಾವಣೀ ಮೇಳೋ', 'ಸಮ–ಸಂವೇದನ' 'ಗಂಗೋತ್ರಿ', 'ಅಭಿಜ್ಞಾ', 'ವಸಂತವರ್ಷಾ', 'ಮಹಾಪ್ರಸ್ಥಾನ', 'ಪರೀಕ್ಷಾ' ಕೃತಿಗಳನ್ನು ಗುಜರಾತಿಯಲ್ಲಿ ಬರೆದಿದ್ದಾರೆ. 'ಉತ್ತರ ರಾಮ ಚರಿತ' ಮತ್ತು 'ಶಾಕುಂತಲಾ' ಇವರ ಭಾಷಾಂತರಗಳು. ಕವಿತೆ ಮಾತ್ರವಲ್ಲದೆ ಕತೆ, ಕಾದಂಬರಿ, ಪ್ರಬಂಧ, ನಾಟಕ ಕ್ಷೇತ್ರಗಳಲ್ಲೂ ಸಾಹಿತ್ಯ ರಚನೆ ಮಾಡಿದ್ದಾರೆ. ಗುಜರಾತಿಯ ಜೊತೆ ಇಂಗ್ಲಿಷ್, ಸಂಸ್ಕೃತ, ಹಿಂದೀ, ಮರಾಠೀ, ಬಂಗಾಳೀ ಭಾಷೆಗಳ ಜ್ಞಾನವೂ ಇದೆ.

ಚೀನ, ಮಲಯ, ಅಮೆರಿಕ, ಇಂಗ್ಲೆಂಡ್‌ಗಳಿಗೆ ಭೇಟಿ ಕೊಟ್ಟಿದ್ದಾರೆ. ರಷ್ಯಕ್ಕೆ ಭಾರತೀಯ ಸಾಂಸ್ಕೃತಿಕ ನಿಯೋಗದ ಸದಸ್ಯರಾಗಿ ಹೋಗಿ ಬಂದರು. ಜಪಾನಿನಲ್ಲಿ ನಡೆದ ಪಿ. ಇ.ಎನ್. ಕಾಂಗ್ರೆಸ್ಸಿನಲ್ಲಿ ಭಾಗವಹಿಸಿದರು.

ನ್ಯಾಷನಲ್ ಬುಕ್ ಟ್ರಸ್ಟ್, ಸಾಹಿತ್ಯ ಅಕಾದೆಮಿ, ಇನ್ಸ್‌ಟಿಟ್ಯೂಟ್ ಆಫ್ ಅಡ್ವಾನ್ಸ್‌ಡ್ ಸ್ಟಡೀಸ್ —ಮತ್ತಿತರ ಸಂಸ್ಥೆಗಳಿಗೆ ಇವರು ಸದಸ್ಯರು. 1966ರಲ್ಲಿ ಗುಜರಾತ್ ವಿಶ್ವವಿದ್ಯಾನಿಲಯದ ಉಪಕುಲಪತಿ ಆದರು; 1973ರಲ್ಲಿ ಆಸ್ಥಾನಕ್ಕೆ ರಾಜಿನಾಮೆ ನೀಡಿದರು.

ಬೆಂಗಳೂರು ವಿಶ್ವವಿದ್ಯಾನಿಲಯ ಇವರಿಗೆ ಗೌರವ ಡಾಕ್ಟರೇಟ್ ನೀಡಿದೆ.



'ನಿಶೀಥ': ಉಮಾಶಂಕರ

1967ರಲ್ಲಿ ರಾಷ್ಟ್ರಕವಿ ಕುವೆಂಪು ಮತ್ತು ಉಮಾಶಂಕರ ಜೋಶಿ ಇಬ್ಬರಿಗೂ ಜೊತೆಯಾಗಿ ಜ್ಞಾನಪೀಠ ಪ್ರಶಸ್ತಿ ದೊರೆಯಿತು.

ಉಮೇಶಚಂದ್ರ ಬ್ಯಾನರ್ಜಿ

"ಸ್ವತಂತ್ರ ಆಡಳಿತವಿರುವ ದೇಶದಲ್ಲಾಗಿದ್ದರೆ, ಅವರು ನಿಸ್ಸಂಶಯವಾಗಿ ಪ್ರಧಾನ ಮಂತ್ರಿ ಆಗುತ್ತಿದ್ದರು . . . . ."

—ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸಿನ ಪ್ರಥಮ ಅಧಿವೇಶನದ ಅಧ್ಯಕ್ಷ ಉಮೇಶಚಂದ್ರ ಬ್ಯಾನರ್ಜಿ ಅವರನ್ನು ಕುರಿತು ಗೋಪಾಲಕೃಷ್ಣ ಗೋಖಲೆ ಹೇಳಿದ ಮಾತುಗಳು ಇವು.

ಬಂಗಾಳದ ಖ್ಯಾತ ವಕೀಲರ ಮನೆತನದಲ್ಲಿ, 1844 ಡಿಸೆಂಬರ್ 29ರಂದು ಕಿದರ್‌ಪುರ್‌ದಲ್ಲಿ ಜನಿಸಿದ ಉಮೇಶಚಂದ್ರ ಪ್ರತಿಭಾವಂತ ವಿದ್ಯಾರ್ಥಿ. ಇಂಗ್ಲೆಂಡಿನಲ್ಲಿ ಕಾಯಿದೆ ಅಭ್ಯಾಸ ಮಾಡಲು ಮುಂಬಯಿಯ ರುಸ್ತುಮ್ ಜಿಮ್‌ಸೇಟ್‌ಜೀ ವಿದ್ಯಾರ್ಥಿವೇತನ ಸಿಕ್ಕಿತು; ಇಪ್ಪತ್ತನೆಯ ವಯಸ್ಸಿನಲ್ಲಿ ಇಂಗ್ಲೆಂಡಿಗೆ ಹೋಗಿ ಬಾರ್-ಅಟ್-ಲಾ ಪದವಿ ಪಡೆದು, 1868ರಲ್ಲಿ ಹಿಂದಿರುಗಿ, ವಕಾಲತ್ತು ಪ್ರಾರಂಭಿಸಿದರು.

ಕಲ್ಕತ್ತೆಯ ಖ್ಯಾತ ಬಾರಿಸ್ಟರ್ ಆಗಿದ್ದ ಉಮೇಶಚಂದ್ರ ಬ್ಯಾನರ್ಜಿಯವರಿಗೆ ಭಾರಿ ಆದಾಯ ಇದ್ದಿತು. ಅವರ ಪ್ರತಿಭೆಯನ್ನು ಸರಕಾರ ಗುರುತಿಸಿ ಹೈಕೋರ್ಟಿನ ನ್ಯಾಯಾಧೀಶರಾಗಲು ಎರಡು ಸಲ ಆಹ್ವಾನಿಸಿತು. ಆದರೆ ಅವರು ಒಪ್ಪದೆ, ತಮ್ಮ ವೃತ್ತಿಯಲ್ಲೇ ಮುಂದುವರಿದರು. ರಾಷ್ಟ್ರೀಯ ಧುರೀಣ ಸುರೇಂದ್ರನಾಥ ಬ್ಯಾನರ್ಜಿಯವರು ನಡೆಸುತ್ತಿದ್ದ ಪತ್ರಿಕೆ 'ಬಂಗಾಳಿ' ನ್ಯಾಯಸ್ಥಾನಕ್ಕೆ ಅಪಮಾನ ಮಾಡಿತೆಂದು ಕಲ್ಕತ್ತಾ ಹೈಕೋರ್ಟು ಮೊಕದ್ದಮೆ ಹೂಡಿದಾಗ, ಸುರೇಂದ್ರನಾಥರ ಪರ ವಾದಿಸಿದವರು ಉಮೇಶಚಂದ್ರರು. 'ಬಂಗಾಳಿ'ಯೊಡನೆ ಅವರ ಸಂಬಂಧ ಅದಕ್ಕೂ ಹಿಂದಿನದು. ಮಿತ್ರ ಗಿರೀಶಚಂದ್ರರು ಈ ಪತ್ರಿಕೆಯನ್ನು ಸ್ಥಾಪಿಸಿ, ನಡೆಸಲು, ಉಮೇಶಚಂದ್ರರು ವಿದ್ಯಾರ್ಥಿಯಾಗಿದ್ದಾಗಲೇ ಸಹಾಯ ಮಾಡಿದ್ದರು.

ಮುಂಬಯಿಯಲ್ಲಿ 1885ರಲ್ಲಿ ಪ್ರಥಮ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷರಾಗಿ ದೇಶದ ವಿವಿಧ ಭಾಗಗಳ ಸಂಪರ್ಕ, ಐಕ್ಯಗಳಿಗಾಗಿ ಅವರು ಕರೆ ನೀಡಿದರು. ಕಾಂಗ್ರೆಸ್ಸಿನ ಪ್ರತಿನಿಧಿಯಾಗಿ 1886ರಲ್ಲಿ ಇಂಗ್ಲೆಂಡಿಗೆ ಹೋಗಿ ಅದರ ಉದ್ದೇಶ, ವ್ಯಾಪ್ತಿಗಳನ್ನು ವಿವರಿಸಿದರು. ಕಾಂಗ್ರೆಸ್ ಎಂದರೆ 'ಭಾರತೀಯ ರಾಷ್ಟ್ರೀಯ ಸಮಾವೇಶ' ಎಂದು ವಿವರಣೆ ನೀಡಿದರು. 1892ರಲ್ಲಿ ಅಲಹಾಬಾದ್‌ನಲ್ಲಿ ಎರಡನೆಯ ಸಲ ಕಾಂಗ್ರೆಸ್ ಅಧಿವೇಶನಕ್ಕೆ ಅಧ್ಯಕ್ಷರಾದಾಗ ಕಾಂಗ್ರೆಸ್ಸಿಗೆ ಅದರ ರಾಜಕೀಯ ಹೊಣೆಗಾರಿಕೆಯನ್ನು ಕುರಿತು ಮಾರ್ಗದರ್ಶನ ನೀಡಿದರು. "ಅಧಿವೇಶನಕ್ಕೆ ಬಂದ ಮಾತ್ರಕ್ಕೆ ದೇಶಸೇವೆ ಮಾಡಿದಂತಲ್ಲ" ಎಂದು ಪ್ರತಿನಿಧಿಗಳನ್ನು ಎಚ್ಚರಿಸಿದರು.

1902ರಲ್ಲಿ ಇಂಗ್ಲೆಂಡಿನಲ್ಲಿ ನೆಲೆಸಿದ ಬ್ಯಾನರ್ಜಿಯವರು ಪ್ರಿವಿ ಕೌನ್ಸಿಲ್‌ನಲ್ಲಿ ವಕೀಲಿ ನಡೆಸುತ್ತ, ಕಾಂಗ್ರೆಸ್ಸಿಗೆ ಅಲ್ಲಿನ ಸಹಾನುಭೂತಿ ದೊರಕಿಸಲು ಶ್ರಮಿಸಿದರು. ಅನಂತರ ಪಾರ್ಲಿಮೆಂಟ



'ಪ್ರಧಾನ ಮಂತ್ರಿ': ಉಮೇಶಚಂದ್ರ

ಸದಸ್ಯರಾಗಬೇಕೆಂಬ ಪ್ರಯತ್ನದಲ್ಲಿದ್ದಾಗಲೇ 1906 ಜುಲೈ 21ರಂದು ನಿಧನರಾದರು. ಜೀವನದ ಕೊನೆಯ ಎರಡು ವರ್ಷಗಳಲ್ಲಿ ದೃಷ್ಟಿಹೀನರಾಗಿ ಅವರು ಕಷ್ಟಪಡಬೇಕಾಯಿತು.

ನೋಡಿ : ಭಾರತ ರಾಷ್ಟ್ರೀಯ ಕಾಂಗ್ರೆಸ್

ಊಟಿ

ನೋಡಿ : ಉದಕಮಂಡಲ

ಋಗ್ವೇದ

'ಋಕ್' ಎಂದರೆ ದೇವತಾಸ್ತುತಿರೂಪವಾದ ಛಂದೋಬದ್ಧವಾದ ರಚನೆ. ಇಂಥ ಋಕ್ಕುಗಳ ಸಮುದಾಯವನ್ನು 'ಸೂಕ್ತ'ಗಳೆಂದು ಕರೆಯುತ್ತಾರೆ. ಋಗ್ವೇದದಲ್ಲಿ ಸಾವಿರಕ್ಕೂ ಹೆಚ್ಚು ಸೂಕ್ತಗಳಿವೆ. ಈ ಸ್ತೋತ್ರಗಳಿಂದ ದೇವತೆಗಳು ಸುಪ್ರೀತರಾಗಿ, ತಮ್ಮ ಹಿತವನ್ನು ರಕ್ಷಿಸುತ್ತಾರೆ, ತಮಗೆ ವರಗಳನ್ನು ಕೊಡುತ್ತಾರೆ ಎಂಬುದು ಇವುಗಳ ರಚನೆ, ಪಠಣಗಳಿಗೆ ಪ್ರೇರಕ. ಋಗ್ವೇದದಲ್ಲಿ ದೇವತಾಸ್ತೋತ್ರಗಳು ಮಾತ್ರವಲ್ಲದೆ ಯಜ್ಞಗಳಿಗೆ ಸಂಬಂಧಿಸಿದ ವಿಷಯಗಳು, ತತ್ತ್ವಜಿಜ್ಞಾಸೆ, ಐತಿಹಾಸಿಕ ಮತ್ತು ಸಾಮಾಜಿಕ ವಿಚಾರಗಳು ಇವೆ.

ಋಗ್ವೇದದ ಮಂತ್ರಗಳನ್ನು ಧಾರ್ಮಿಕ, ಲೌಕಿಕ ಎಂದು ವಿಂಗಡಿಸಬಹುದು.

ಧಾರ್ಮಿಕ ವರ್ಗದಲ್ಲಿ ಭಕ್ತಿಯಿಂದ ತುಂಬಿದ ಋಷಿಹೃದಯದ ನಿವೇದನೆಗಳನ್ನು ಕಾಣಬಹುದು. ಅಲ್ಲದೆ, ಧರ್ಮ, ಧಾರ್ಮಿಕ ಸಾಧನೆ, ಅನುಷ್ಠಾನ ತತ್ತ್ವಜಿಜ್ಞಾಸೆ, ಪ್ರತಿಪಾದನೆಗಳೂ ಈ ವರ್ಗದಲ್ಲಿ ಸೇರಿವೆ.

ಲೌಕಿಕ ಭಾಗದಲ್ಲಿ ಆಗಿನ ಕಾಲದ ದಾನಶೀಲರು ಮತ್ತು ಅವರು ಮಾಡಿದ ದಾನಗಳ ವಿವರಗಳು ದೊರೆಯುತ್ತವೆ: ಇದಲ್ಲದೆ ಆ ಕಾಲದ ಸಮಾಜ ಜೀವನಕ್ಕೆ ಸಂಬಂಧಿಸಿದ ಅನೇಕ ವಿವರಗಳನ್ನೂ ಕಾಣಬಹುದು. ಸತ್ತವರನ್ನು ಹೂಳುವುದು, ಸುಡುವುದು — ಎರಡೂ ಆಚರಣೆಯಲ್ಲಿ ಇದ್ದುವು. ಜೂಜಾಡುವುದರಿಂದ ಆಗುವ ಅನೇಕ ತೊಂದರೆಗಳ ಅರಿವು ಇದ್ದರೂ ಸಮಾಜ ಜೀವನದಲ್ಲಿ ಜೂಜಿಗೆ ಸ್ಥಾನವಿತ್ತು. ಜೂಜಾಡುವುದರ ಬದಲು ಕೃಷಿಯಿಂದ ಐಶ್ವರ್ಯ ಗಳಿಸಿ ಸುಖಿಯಾಗಿ ಬಾಳಬೇಕೆಂಬ ಅಭಿಪ್ರಾಯವೂ ಇತ್ತು. ಋಗ್ವೇದದ ಸಂವಾದ ಸೂಕ್ತಗಳಲ್ಲಿ ಗಂಡು ಹೆಣ್ಣುಗಳ ಕಾಮ ಸಮಸ್ಯೆ, ಗೋಧನವನ್ನು ಕದಿಯುತ್ತಿದ್ದ ಪ್ರಸಂಗಗಳ ಉಲ್ಲೇಖಗಳಿವೆ. ರಾಜರು, ಅವರ ವೈಭವ, ಪರಾಕ್ರಮ, ವಂಶಾವಳಿ ಮುಂತಾದ ವಿವರಗಳನ್ನು ಕೊಡುವ ಸೂಕ್ತಗಳೂ ಋಗ್ವೇದದಲ್ಲಿವೆ. ನದಿ ಪರ್ವತಗಳ ವರ್ಣನೆಯೂ ಇವೆ. ಋಗ್ವೇದ ಮಂತ್ರಗಳನ್ನು ಬರೆದ ಋಷಿಗಳ ಹೆಸರುಗಳೂ ಅದರಲ್ಲಿವೆ.

ಹೀಗೆ ಋಗ್ವೇದ ಆಧ್ಯಾತ್ಮಿಕ ವಿಚಾರಗಳಲ್ಲದೆ, ಇತಿಹಾಸದಲ್ಲಿ ಆಸಕ್ತಿಯುಳ್ಳವರಿಗೂ ಒಂದು ಅಮೂಲ್ಯ ಆಕರವಾಗಿದೆ. ಆರ್ಯರ ಧಾರ್ಮಿಕ ಭಾವನೆಗಳು, ಸಮಾಜ ಜೀವನ, ಸಂಸ್ಕೃತಿ ಹೇಗೆ ಬೆಳೆಯಿತೆಂಬುದರ ರಮ್ಯ ಚಿತ್ರವನ್ನೂ ನಾವು ಋಗ್ವೇದದಲ್ಲಿ ಕಾಣುತ್ತೇವೆ.

ವೇದಗಳಲ್ಲಿ ಪ್ರಾಚೀನವಾದ ಋಗ್ವೇದದ ಕಾಲ ಖಚಿತವಿಲ್ಲ. ಕ್ರಿ.ಪೂ. 2000ದಿಂದ 1200ರ ವರೆಗಿನ ಅವಧಿಯಲ್ಲಿ ಋಗ್ವೇದದ ವಿವಿಧ ಭಾಗಗಳು ಬೇರೆ ಬೇರೆ ಕಾಲದಲ್ಲಿ ರಚಿತವಾಗಿದ್ದುವು ಎಂಬುದು ವಿದ್ವಾಂಸರ ಅಭಿಪ್ರಾಯ. ಇದರಲ್ಲಿ ಒಟ್ಟು 10.552 ಮಂತ್ರಗಳಿವೆ.

ಋಷಿಕೇಶ

ನೋಡಿ : ಹೃಷೀಕೇಶ

ಎಂ. ಆರ್. ಜಯಕರ್

ಪ್ರಮುಖ ವಕೀಲ ಎಂ. ಆರ್. ಜಯಕರ್ ಭಾರತೀಯ ಸ್ವಾತಂತ್ರ್ಯ ಆಂದೋಲನದಲ್ಲಿ ಪಾಲುಗೊಂಡ ಪ್ರತಿಭಾವಂತ ವ್ಯಕ್ತಿ.

ಮುಕುಂದ ರಾಮರಾವ್ ಜಯಕರ್ ಹುಟ್ಟಿದ್ದು 1873ರ ನವೆಂಬರ್ 13ರಂದು.

ಪ್ರೌಢ ವಿದ್ಯಾಭ್ಯಾಸ ಪಡೆದ ಅನಂತರ ವಕೀಲ ವೃತ್ತಿ ಅವಲಂಬಿಸಿದರು. ಕಾಂಗ್ರೆಸ್ ಸದಸ್ಯರಾದರು. ಜಯಕರ್ 1923–25 ಅವಧಿಯಲ್ಲಿ ಮುಂಬಯಿಯ ನ್ಯಾಯವಿಧಾಯಕ ಸಭೆಯಲ್ಲಿ ಸ್ವರಾಜ್ಯ ಪಕ್ಷದ ನಾಯಕರಾಗಿದ್ದರು. ಆ ಪಕ್ಷದವರು ಪ್ರಾಂತಗಳಲ್ಲಿ ಸಚಿವ ಸಂಪುಟ ರಚಿಸುವ ಬಗೆಗೆ ಉಂಟಾದ ಭಿನ್ನಾಭಿಪ್ರಾಯಗಳ ಫಲವಾಗಿ, ಸ್ವರಾಜ್ಯ ಪಕ್ಷವನ್ನು ತೊರೆದರು. ರಾಜಕೀಯ ಸೌಮ್ಯವಾದಿಗಳ ನ್ಯಾಷನಲ್ ಲಿಬರಲ್ ಫೆಡರೇಷನ್ ಎಂಬ ರಾಜಕೀಯ ಪಕ್ಷವನ್ನು ಸಂಘಟಿಸಲು ತುಂಬ ಆಸಕ್ತಿಯಿಂದ ಶ್ರಮಿಸಿದರು.

ಜಯಕರ್ 1926–30ರ ವರೆಗೆ ಭಾರತೀಯ ಕೇಂದ್ರ ಶಾಸನ ಸಭೆಯ ಸದಸ್ಯರೂ ಆ ಸಭೆಯಲ್ಲಿ ನ್ಯಾಷನಲ್ ಲಿಬರಲ್ ಫೆಡರೇಷನ್ ಪಕ್ಷದ ಉಪನಾಯಕರೂ ಆಗಿದ್ದರು. 1930–34ರ ಅವಧಿಯಲ್ಲಿ ಭಾರತೀಯ ದುಂಡು ಮೇಜಿನ ಪರಿಷತ್ತಿನಲ್ಲಿ ಹಾಗೂ ಭಾರತೀಯ ಸಂವಿಧಾನ ಸುಧಾರಣೆಯ ಜಂಟಿ ಸಂಸದೀಯ ಸಮಿತಿಗಳಲ್ಲಿ ಪ್ರತಿನಿಧಿಯಾಗಿ ಭಾಗವಹಿಸಿದರು. 1937ರಲ್ಲಿ ಫೆಡರಲ್ ನ್ಯಾಯಸ್ಥಾನದ ನ್ಯಾಯಾಧೀಶರಾಗಿ ನೇಮಕಗೊಂಡರು. ಅನಂತರ 1939ರಿಂದ 1942ರ ವರೆಗೆ ಪ್ರಿವಿ ಕೌನ್ಸಿಲ್ ಸದಸ್ಯರಾಗಿದ್ದರು. ಕಾಂಗ್ರೆಸ್ಸಿನ ಅಸಹಕಾರ ಚಳವಳಿಯಲ್ಲಿ ಇವರಿಗೆ ನಂಬಿಕೆ ಇರಲಿಲ್ಲ. ತೇಜ್‌ಬಹದ್ದೂರ್ ಸಪ್ರು ಅವರೊಡನೆ ಸೇರಿ ಕಾಂಗ್ರೆಸ್ ಪಕ್ಷ ಮತ್ತು ಬ್ರಿಟಿಷ್ ಸರಕಾರಗಳ ನಡುವೆ ಸೌಹಾರ್ದ ಕುದುರಿಸಲು ಶ್ರಮಿಸಿದರು. 1947ರ ವರೆಗೆ ಭಾರತದ ಸಂವಿಧಾನ ರಚನಾ ಸಭೆಯ ಸದಸ್ಯರಾಗಿದ್ದು ಅನಂತರ ರಾಜೀನಾಮೆ ಕೊಟ್ಟರು.

1959 ಮಾರ್ಚ್ 10ರಂದು ಜಯಕರ್ ನಿಧನರಾದರು.

ಎಂ. ಎ. ಅನ್ಸಾರಿ

ಲಂಡನಿನಲ್ಲಿ ಹೆಸರು ಗಳಿಸಿದ ವೈದ್ಯರು ಸ್ವದೇಶಕ್ಕೆ ಮರಳಿ, ದೆಹಲಿಯಲ್ಲಿ ನೆಲೆಸಿದಾಗ ರಾಜ, ಮಹಾರಾಜರೂ ಶ್ರೀಮಂತರೂ ಅವರನ್ನು ತಮ್ಮ ಆಪ್ತ ವೈದ್ಯನನ್ನಾಗಿ ಮಾಡಿಕೊಳ್ಳಲು ಹಾತೊರೆದರು. ಆದರೆ ಆ ವೈದ್ಯರಿಗೆ ತಮ್ಮ ವೃತ್ತಿಗಿಂತಲೂ ರಾಷ್ಟ್ರೀಯ ಚಳವಳಿಯಲ್ಲಿ ಆಸಕ್ತಿ ವಿಶೇಷವಾಗಿತ್ತು. ಅವರೇ ಡಾ. ಎಂ. ಎ. ಅನ್ಸಾರಿ.

ಮಿಕ್ಕೆಲ್ಲ ವರ್ಗಗಳ ಜನರಂತೆ ಭಾರತದ ಮಹಮ್ಮದೀಯರು ಕೂಡ ರಾಷ್ಟ್ರಜೀವನದಲ್ಲಿ ಸಮಾನವಾಗಿ ಬೆರೆತು ಅದರಲ್ಲಿ ಭಾಗವಹಿಸಬೇಕು ಎಂಬ ದೃಢ ಅಭಿಪ್ರಾಯ ಡಾ. ಮುಖ್ತಾರ್ ಅಹ್ಮದ್ ಅನ್ಸಾರಿ ಅವರದು. 1930 ಹೊತ್ತಿಗೆ ಅವರ ಮನೆ ಸ್ವಾತಂತ್ರ್ಯ ಹೋರಾಟದ ಒಂದು ಮುಖ್ಯ ಕೇಂದ್ರವಾಯಿತು. ಗಾಂಧೀಜೀ ದೆಹಲಿಗೆ ಬಂದಾಗ ಅನೇಕ ವೇಳೆ ಅಲ್ಲೇ



ಜಾತೀಯತೆಗೆ ಚಿಕಿತ್ಸೆ : ಡಾ. ಅನ್ಸಾರಿ

ತಂಗುತ್ತಿದ್ದರು. ಗಾಂಧೀಜೀ ಉಪವಾಸ ಕೈಗೊಂಡ ಸಂದರ್ಭಗಳಲ್ಲಿ ಅವರನ್ನು ಉಪಚರಿಸುತ್ತಿದ್ದವರು ಕೂಡ ಅನ್ಸಾರಿಯವರೇ; ಅನ್ಸಾರಿಯವರ ತೊಡೆಯ ಮೇಲೆ ತಮ್ಮ ಜೀವ ಸುರಕ್ಷಿತವಾಗಿದೆ –ಎಂದು ಗಾಂಧೀಜೀ ಒಮ್ಮೆ ಹೇಳಿದ್ದುಂಟು.

ಸಂಯುಕ್ತ ಪ್ರಾಂತದ (ಇಂದಿನ ಉತ್ತರ ಪ್ರದೇಶ) ಒಂದು ಶ್ರೀಮಂತ ಕುಟುಂಬದಲ್ಲಿ ಅನ್ಸಾರಿ 1880ರಲ್ಲಿ ಜನಿಸಿದರು; ಕಾಶಿ, ಅಲಹಾಬಾದ್‌ಗಳಲ್ಲಿ ವಿದ್ಯಾಭ್ಯಾಸವಾದ ಬಳಿಕ ಹೈದರಾಬಾದಿಗೆ ಬಂದು ಕಾಲೇಜು ವಿದ್ಯಾರ್ಥಿಯಾದರು. 20ನೆಯ ವಯಸ್ಸಿನಲ್ಲಿ ಮದರಾಸು ವಿಶ್ವವಿದ್ಯಾನಿಲಯದ ಬಿ. ಎ. ಪದವಿ ಗಳಿಸಿದ ಮೇಲೆ ಇಂಗ್ಲೆಂಡಿಗೆ ತೆರಳಿ, ವೈದ್ಯಕೀಯ ಶಿಕ್ಷಣ ಪಡೆದರು. ಆರೇಳು ವರ್ಷ ಅಲ್ಲಿನ ಆಸ್ಪತ್ರೆಗಳಲ್ಲಿ ವೈದ್ಯಾಧಿಕಾರಿಯಾಗಿ ಸೇವೆ ಸಲ್ಲಿಸಿ, 1911ರಲ್ಲಿ ಭಾರತಕ್ಕೆ ಮರಳಿದರು.

ಅವರು ವಿದ್ಯಾರ್ಥಿಯಾಗಿದ್ದಾಗಲೇ 1898ರಲ್ಲಿ ಮದರಾಸಿನಲ್ಲಿ ಜರಗಿದ ಕಾಂಗ್ರೆಸ್ ಅಧಿವೇಶನಕ್ಕೆ ಹೋಗಿದ್ದರು. ದೆಹಲಿಯಲ್ಲಿ ವೈದ್ಯಕೀಯ ವೃತ್ತಿ ಕೈಗೊಂಡ ಅನಂತರ 1915ರಲ್ಲಿ ರಾಷ್ಟ್ರೀಯ ಚಳುವಳಿಯ ಕಾಲದಲ್ಲಿ ಅಲಿ ಬಂಧುಗಳು, ಆಜಾದ್ ಮೊದಲಾದ ಧುರೀಣರನ್ನು ಸರಕಾರ ಸ್ಥಾನಬದ್ಧತೆಯಲ್ಲಿಟ್ಟಾಗ, ಅವರ ಕುಟುಂಬಗಳ ಸಹಾಯ ಸಮಿತಿಗೆ ಅನ್ಸಾರಿ ಅಧ್ಯಕ್ಷರಾದರು. 1917–18 ಅವಧಿಯಲ್ಲಿ ಹೋಂ ರೂಲ್ ಚಳುವಳಿಯಲ್ಲಿ ಭಾಗವಹಿಸಿದರು. ರೌಲೆಟ್ ಕಾಯಿದೆ ವಿರುದ್ಧ ದೆಹಲಿಯಲ್ಲಿ ನಡೆದ ಚಳುವಳಿಯಲ್ಲಿ ಅನ್ಸಾರಿಯವರದೇ ಅಗ್ರ ಪಾತ್ರ. 1919ರಿಂದ ಕಾಂಗ್ರೆಸ್ ಅಧಿವೇಶನಗಳಲ್ಲಿ ಸತತವಾಗಿ ಭಾಗವಹಿಸಿದರು.

1920ರಲ್ಲಿ ಅಖಿಲ ಭಾರತ ಮುಸ್ಲಿಂ ಲೀಗ್ ಸಮ್ಮೇಳನದ ಅಧ್ಯಕ್ಷರಾದರು. ಅವರು ಆಗಿನ ರಾಜಕೀಯ ಪರಿಸ್ಥಿತಿಯಲ್ಲಿ ಗಾಂಧೀಜಿಯವರ ಕಾರ್ಯಕ್ರಮಗಳನ್ನು ಬೆಂಬಲಿಸುತ್ತಿದ್ದರು. ಸತ್ಯಾಗ್ರಹ ಸಮಿತಿಯ ಸದಸ್ಯರಾದರು. 1923ರಲ್ಲಿ ಗಯೆಯಲ್ಲಿ ಖಿಲಾಫತ್ ಪರಿಷತ್ತಿನ ಅಧ್ಯಕ್ಷತೆ ವಹಿಸಿದ ಅವರು "ರಾಷ್ಟ್ರ ಜೀವನದಲ್ಲಿ ಯಾವ ಬಿರುಕೂ ಉಂಟಾಗದಂತೆ ಹಿಂದೂ–ಮುಸಲ್ಮಾನರ ಐಕ್ಯ ಶಾಶ್ವತವಾಗಬೇಕು" ಎಂದು ಕರೆ ನೀಡಿದರು. 1927ರಲ್ಲಿ ಮದರಾಸಿನಲ್ಲಿ ತಾವು ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷತೆ ವಹಿಸಿದಾಗ "ಸ್ವರಾಜ್ಯದ ಮಾರ್ಗದಲ್ಲಿ ಜಾತೀಯತೆಯೇ ಅಡ್ಡಗಲ್ಲು" ಎಂದು ವಿಷಾದಪಟ್ಟರು.

1930ರಲ್ಲಿ ಸರಕಾರ ಕಾಂಗ್ರೆಸ್ಸನ್ನು ಅಕ್ರಮ ಸಂಸ್ಥೆ ಎಂದು ಸಾರಿತು. ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಅನ್ಸಾರಿಯವರ ಮನೆಯಲ್ಲಿ ಸಭೆ ಸೇರಿದ್ದಾಗ ಸಮಿತಿಯ ಸದಸ್ಯರೆಲ್ಲ ಬಂಧಿತರಾಗಿ, ಆರು ತಿಂಗಳ ಶಿಕ್ಷೆ ವಿಧಿಸಲ್ಪಟ್ಟಿತು. ಬಿಡುಗಡೆಯಾದ ಅನಂತರ ಅನ್ಸಾರಿಯವರು ಹಿಂದೂ–ಮುಸಲ್ಮಾನರ ಐಕ್ಯಕ್ಕಾಗಿ ದುಡಿದರು. ರಾಜಕೀಯ ಚಟುವಟಿಕೆಗಳಿಗಾಗಿ ಮತ್ತೊಮ್ಮೆ 1932ರಲ್ಲಿ ಬಂಧನಕ್ಕೊಳಗಾಗಿ ಆರು ತಿಂಗಳು ಜೈಲಿನಲ್ಲಿದ್ದರು. ಹೊರ ಬಂದಾಗ ಅವರ ಆರೋಗ್ಯ ಕೆಟ್ಟಿತ್ತು. ಆದರೂ ಕಾಂಗ್ರೆಸ್ ಶಾಸನ ಸಭೆಗಳಲ್ಲಿ ಭಾಗವಹಿಸಬೇಕೆಂಬ ಬಗೆಗೆ ತುಂಬ ವಾದ ನಡೆಸಿ ತಮ್ಮ ಅಭಿಪ್ರಾಯಕ್ಕೆ ಕಾಂಗ್ರೆಸ್ಸಿನ ಸಮ್ಮತಿ ಪಡೆದರು. 1934ರ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳ ಜಯಕ್ಕಾಗಿ ದುಡಿದರು.

ಅಸ್ವಸ್ಥತೆಯಿಂದಾಗಿ ರಾಜಕೀಯ ರಂಗದಿಂದ ನಿರ್ಗಮಿಸಿದ ಅವರು 1936 ಮೇ 10ರಂದು ತಮ್ಮ 56ನೆಯ ವಯಸ್ಸಿನಲ್ಲಿ ನಿಧನರಾದರು.

ನೋಡಿ : ಖಿಲಾಫತ್ ಚಳುವಳಿ

ಎಂ. ಎನ್. ರಾಯ್

ಆಧುನಿಕ ಭಾರತದಲ್ಲಿ ವಿಶಿಷ್ಟ ಪ್ರೌಢಿಮೆಯಿಂದ ಬೆಳಗಿದ ವ್ಯಕ್ತಿ, ಎಂ. ಎನ್. ರಾಯ್. ಅವರು ರಾಷ್ಟ್ರಜೀವನದಲ್ಲಿ ಮಹತ್ವದ ಹಾಗೂ ವ್ಯಾಪಕವಾದ ಪಾತ್ರ ವಹಿಸಿದ ಧುರೀಣ.

ಮಾನವೇಂದ್ರನಾಥ ರಾಯರ ಹುಟ್ಟು ಹೆಸರು ನರೇಂದ್ರ ಭಟ್ಟಾಚಾರ್ಯ. ಜನನ 1887 ಫೆಬ್ರುವರಿ 6ರಂದು. ವಿದ್ಯಾರ್ಥಿ ದೆಸೆಯಿಂದಲೂ ಕ್ರಾಂತಿಕಾರಿ ಪ್ರವೃತ್ತಿ ತೋರಿದ ಅವರು ವಿವೇಕಾನಂದ, ರಾಮತೀರ್ಥ, ದಯಾನಂದ ಸರಸ್ವತಿ, ಬಿಪಿನ್‌ಚಂದ್ರ ಪಾಲ್, ಅರವಿಂದ ಘೋಷ್ ಮತ್ತು ವೀರ ಸಾವರ್ಕರರ ಪ್ರಭಾವಕ್ಕೆ ಒಳಪಟ್ಟು, 'ಒಂದು ಕೈಯಲ್ಲಿ ಗೀತೆ ಇನ್ನೊಂದು ಕೈಯಲ್ಲಿ ಬಾಂಬು ಹಿಡಿದರು' ಎಂಬಂತೆ, ಭಯೋತ್ಪಾದಕ ಚಟುವಟಿಕೆಗಳಿಗೆ ತೊಡಗಿದರು. 'ಯುಗಾಂತರ' ಕ್ರಾಂತಿಕಾರಿ ಗುಂಪಿನೊಂದಿಗೆ ಸಹಕರಿಸಿ ಜತಿನ್ ಮುಖರ್ಜಿ ಜೊತೆಗೆ ಕೆಲಸ ಮಾಡಿದರು.

1910ರಲ್ಲಿ ಹೌರಾ ಒಳಸಂಚಿನ ಪ್ರಕರಣದಲ್ಲಿ ಸೆರೆಮನೆ ಕಂಡರು. 1915ರಲ್ಲಿ ಕಲ್ಕತ್ತೆಯಲ್ಲಿ ರಾಜಕೀಯ ಡಕಾಯಿತಿಗಾಗಿ ಬಂಧಿಸಲ್ಪಟ್ಟರು. ಆದರೆ ಪಾರಾಗಿ ಡಚ್-ಇಂಡೀಸ್ ದ್ವೀಪಗಳಿಗೆ ಓಡಿಹೋದರು. ಅಲ್ಲಿಂದ ಜಾವಾ, ಫಿಲಿಪೀನ್ಸ್, ಕೊರಿಯ, ಮಂಚೂರಿಯ ಸುತ್ತಿ ಅಮೆರಿಕವನ್ನು ಸೇರಿ, ಮೆಕ್ಸಿಕೋಕ್ಕೆ ಹೋದರು. ಅಲ್ಲಿಯ ರಾಜ್ಯಕ್ರಾಂತಿಯಲ್ಲಿ ಭಾಗವಹಿಸಿದರು. ಕಮ್ಯೂನಿಸ್ಟರಾಗಿದ್ದ ಎಂ. ಎನ್. ರಾಯ್ ಬಾಲ್ಶೆವಿಕ್ ಕ್ರಾಂತಿಯ ಅನಂತರ ಲೆನಿನ್‌ರ ಕರೆಯಂತೆ 1920ರಲ್ಲಿ ಮಾಸ್ಕೋಕ್ಕೆ ತೆರಳಿದರು.

ಮಾಸ್ಕೋದಲ್ಲಿ ಲೆನಿನ್‌ರ ಸಹಕಾರಿಗಳಾಗಿ, ಪಕ್ಷದ ಪ್ರಮುಖ ಸಮಿತಿಗಳ ಸದಸ್ಯರಾಗಿ, 1926ರ ವರೆಗೂ ಕೆಲಸ ಮಾಡಿದರು. 1922ರಲ್ಲಿ ಭಾರತದಲ್ಲಿ ಗಯಾ ಕಾಂಗ್ರೆಸ್ಸಿನ ಅಧ್ಯಕ್ಷ ಸಿ. ಆರ್. ದಾಸರಿಗೆ ಭಾರತದ ಸಾಮಾಜಿಕ ಆರ್ಥಿಕ ವಿಮೋಚನೆಯ ಕಾರ್ಯಕ್ರಮವನ್ನು ಸೂಚಿಸಿದರು. 1926ರಲ್ಲಿ ಕಾಮಿಂಟರ್ನ್ ಪ್ರತಿನಿಧಿಯಾಗಿ ಚೀನಕ್ಕೆ ಹೋಗಿ 1927ರ ಮಧ್ಯದ ತನಕ ಅಲ್ಲಿನ ಕಮ್ಯೂನಿಸ್ಟ್ ಪಕ್ಷದ ಸಂಘಟನೆಗೆ ಮಾರ್ಗದರ್ಶನ ಮಾಡಿದರು.



ವೈಚಾರಿಕ ಕ್ರಾಂತಿ :
ಮಾನವೇಂದ್ರ

ಆದರೆ ಬೇರೆ ಕಮ್ಯೂನಿಸ್ಟರು ಅವರ ನಿರ್ದೇಶನದಂತೆ ನಡೆಯಲಿಲ್ಲ. ಈ ಅಭಿಪ್ರಾಯಭೇದದಿಂದಾಗಿ ಸ್ಟಾಲಿನ್‌ರೊಂದಿಗೆ ರಾಯ್ ಅವರಿಗೆ ತೀವ್ರ ಮತ ಭೇದವಾಯಿತು. ಮುಂದೆ ಎಂ. ಎನ್. ರಾಯರು ಸೋವಿಯೆತ್ ಕಮ್ಯೂನಿಸ್ಟ್ ಪಕ್ಷದಿಂದ ಹೊರತಳ್ಳಲ್ಪಟ್ಟರು.

ಭಾರತದಲ್ಲಿ ಸೈಮನ್ ಕಮಿಷನ್ ಬಂದಾಗಲೇ ಅವರು ಭಾರತ ಸ್ವಂತ ಸಂವಿಧಾನ ರೂಪಿಸಿಕೊಳ್ಳಲು ಪ್ರಪ್ರಥಮ ರಾಜ್ಯಾಂಗ ರಚನಾ ಪರಿಷತ್ತನ್ನು ರೂಪಿಸುವ ಸೂಚನೆ ಮಾಡಿದ್ದರು. 1931ರ ಕರಾಚಿ ಕಾಂಗ್ರೆಸ್ಸಿನಲ್ಲಿ ಡಾ. ಮಹಮೂದ್ ಎಂಬ ಹೆಸರಿನಲ್ಲಿ ಮಾನವೇಂದ್ರರು ಭಾಗವಹಿಸಿದರು; ಪ್ರಸಿದ್ಧ ಕರಾಚಿ ಗೊತ್ತುವಳಿಗೆ ಪ್ರೇರಕರಾದರು. ಆಗ ಬ್ರಿಟಿಷ್ ಸರಕಾರ ಅವರನ್ನು ಬಂಧಿಸಿ 6 ವರ್ಷ ಸೆರೆಮನೆಯಲ್ಲಿಟ್ಟಿತು. ಹೊರಬಂದ ಮೇಲೆ ತಮಗಾಗಿ ಕಾಯುತ್ತಿದ್ದ ಅಮೆರಿಕನ್ ಪ್ರೇಯಸಿ ಎಲೆನ್ ಅವರನ್ನು ರಾಯ್ ಮದುವೆಯಾದರು.

ಕಾಂಗ್ರೆಸ್ ಸೇರಿ ಅದನ್ನು ಕ್ರಾಂತಿಕಾರಿ ಜನತಾ ಪಕ್ಷವಾಗಿಸಲು ಅವರು ದುಡಿದರು. 1937ರಲ್ಲಿ 'ಇಂಡಿಪೆಂಡೆಂಟ್ ಇಂಡಿಯಾ' ಸಾಪ್ತಾಹಿಕ ಆರಂಭಿಸಿದರು. ಅದು 1949ರಲ್ಲಿ 'ರ್‍ಯಾಡಿಕಲ್ ಹ್ಯೂಮನಿಸ್ಟ್' ಎಂದು ಹೆಸರು ಪಡೆಯಿತು. ಇದಲ್ಲದೆ 'ಮಾರ್ಕ್ಸಿಯನ್ ವೇ' ತ್ರೈಮಾಸಿಕ, 'ವ್ಯಾನ್ ಗಾರ್ಡ್' ದೈನಿಕ — ಇವನ್ನು ನಡೆಸಿದರು. ಅವರು ಪ್ರಭಾವೀ ಭಾಷಣ ಕಾರರು, ಪರಿಣಾಮಕಾರಿ ಲೇಖಕರು.

1940ರಲ್ಲಿ ಕಾಂಗ್ರೆಸ್ ಅಧ್ಯಕ್ಷ ಸ್ಥಾನಕ್ಕಾಗಿ ಸ್ಪರ್ಧಿಸಿದರು. ಸೋತು ಪಕ್ಷದಿಂದ ಹೊರಬಿದ್ದು ರ್‍ಯಾಡಿಕಲ್ ಡೆಮಕ್ರಾಟಿಕ್ ಪಕ್ಷ ಕಟ್ಟಿದರು. ಇಂಡಿಯನ್ ಫೆಡರೇಷನ್ ಆಫ್ ಲೇಬರ್‌ನ ಸ್ಥಾಪಕರು ಇವರು. ಆ ವೇಳೆಗೆ ಅವರು ಮಾರ್ಕ್ಸಿಸ್ಟರಾಗಿ ಉಳಿದಿರಲಿಲ್ಲ; ಮೂಲಗಾಮಿ ಮಾನವ ವಾದಿಗಳಾಗಿದ್ದರು. ನವ ಮಾನವತಾವಾದವನ್ನು (ನ್ಯೂ ಹ್ಯೂಮನಿಸಂ) ಘೋಷಿಸಿದರು. ಪಕ್ಷರಹಿತ ರಾಜಕಾರಣವನ್ನು ಬೋಧಿಸಿದರು. ತಮ್ಮ ಪಕ್ಷವನ್ನು ವಿಸರ್ಜಿಸಿದರು.

2ನೆಯ ಮಹಾಯುದ್ಧದಲ್ಲಿ ಅವರು ಮಿತ್ರ ರಾಷ್ಟ್ರಗಳ ಪರವಾಗಿದ್ದರು. ಕಾಂಗ್ರೆಸ್ಸಿನ ಆಗಸ್ಟ್ ಚಳುವಳಿ ಹಿಟ್ಲರನಿಗೂ ಮುಸೋಲಿನಿಗೂ ಅನುಕೂಲ ವೆಂದು ಅದನ್ನು ಧಿಕ್ಕರಿಸಿದರು. ಯುದ್ಧದ ಅನಂತರ ಭಾರತಕ್ಕೆ ಸ್ವಾತಂತ್ರ್ಯ ಸಿಗುವುದೆಂದು ಸಾರಿದ್ದರು. ಸಕ್ರಿಯ ರಾಜಕಾರಣದಿಂದ ದೂರವಿದ್ದು ಡೆಹ್ರಾಡೂನಿನಲ್ಲಿ ಬೇಸಗೆ ಶಿಬಿರಗಳನ್ನು ನಡೆಯಿಸಿ ಮಾನವತಾ ವಾದದ ಪ್ರತಿಪಾದನೆ, ಪ್ರಸಾರ ಕೈಗೊಂಡರು. ಅನೇಕ ವಿಚಾರಬೋಧಕ ಗ್ರಂಥಗಳನ್ನು ಪ್ರಕಟಿಸಿದರು.

1954 ಜನವರಿ 25ರಂದು ಪಾರ್ಶ್ವವಾಯು ಆಘಾತದಿಂದ ನಿಧನ ಹೊಂದಿದರು. ಕೆಲವೇ ವರ್ಷಗಳಲ್ಲಿ ಅವರ ಪತ್ನಿ ಎಲೆನ್ ರಾಯ್ ಕಳ್ಳರ ಕೈಯಲ್ಲಿ ಕೊಲೆಯಾದರು.

ಎಂ. ಎನ್. ಶ್ರೀನಿವಾಸ್

ಸಮಾಜವಿಜ್ಞಾನ ಕ್ಷೇತ್ರದಲ್ಲಿ ಗಮನಾರ್ಹ ಕೊಡುಗೆ ನೀಡಿ ರಾಷ್ಟ್ರೀಯ, ಅಂತಾರಾಷ್ಟ್ರೀಯ ಮಾನ್ಯತೆಗೆ ಪಾತ್ರರಾದವರು ಡಾ. ಎಂ. ಎನ್. ಶ್ರೀನಿವಾಸ್.

ಮೈಸೂರು ನರಸಿಂಹಾಚಾರ್ ಶ್ರೀನಿವಾಸ್ ಅವರ ಜನನ 1916ರಲ್ಲಿ. ಬಿ.ಎ. (ಆನರ್ಸ್), ಎಂ.ಎ., ಎಲ್‌ಎಲ್.ಬಿ.ಗಳ ಅನಂತರ 1945ರಲ್ಲಿ ಮುಂಬಯಿ ವಿಶ್ವವಿದ್ಯಾಲಯದ ಪಿಎಚ್.ಡಿ. ಗಳಿಸಿದರು. 1947ರಲ್ಲಿ ಇಂಗ್ಲೆಂಡಿನ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದ ಡಾಕ್ಟರ್ ಆಫ್ ಫಿಲಾಸಫಿ ಪಡೆದರು. ಅಲ್ಲೇ 1948ರಿಂದ 1951ರ ವರೆಗೆ ಭಾರತೀಯ ಸಮಾಜ ವಿಜ್ಞಾನದ ಪ್ರಾಧ್ಯಾಪಕರಾಗಿ ಕೆಲಸ ಮಾಡಿದರು. ಅನಂತರ 8 ವರ್ಷ ಕಾಲ ಬರೋಡಾ ಮಹಾರಾಜಾ ಸಯ್ಯಾಜಿ ರಾವ್ ವಿಶ್ವವಿದ್ಯಾಲಯದ ಪ್ರಾಧ್ಯಾಪಕರಾದರು. 1957ನೆಯ ಇಂಡಿಯನ್ ಸೈನ್ಸ್ ಕಾಂಗ್ರೆಸ್ಸಿನಲ್ಲಿ ಮಾನವಿಕ ವಿಜ್ಞಾನ ಮತ್ತು ಪುರಾತತ್ತ್ವಶೋಧನಾ ವಿಭಾಗದ ಅಧ್ಯಕ್ಷರಾಗಿದ್ದರು. ಮುಂದೆ ಒಂದೇ ಸಮನೆ ಅವರು ಸಾಮಾಜಿಕ ಹೊರಾಂಗಣ ಕ್ಷೇತ್ರದಲ್ಲಿ ಕೊಡಗು, ತಮಿಳುನಾಡು, ಆಂಧ್ರ, ರಾಮಪುರ(ಮೈಸೂರು)ಗಳಲ್ಲಿ ಕೆಲಸ ಮಾಡಿದರು.



ಎಂ. ಎನ್. ಶ್ರೀನಿವಾಸ್

1955 ರಿವರ್ಸ್ ಸ್ಮಾರಕ ಪದಕ, 1971 ಎಸ್. ಸಿ. ರಾಯ್ ಸ್ಮಾರಕ ಪದಕ ಹಾಗೂ ದಾದಾಭಾಯಿ ನವರೋಜಿ ಪದಕ ಇವರಿಗೆ ದೊರೆತವು. ಷಿಕಾಗೋ, ಫ್ರಾನ್ಸ್, ವಿಶ್ವವಿದ್ಯಾಲಯಗಳ ಗೌರವ ಡಾಕ್ಟರೇಟ್ ಪದವಿ ಪ್ರಾಪ್ತವಾಯಿತು. ಭಾರತ ಹಾಗೂ ಗ್ರೇಟ್ ಬ್ರಿಟನ್ ಮತ್ತು ಐರ್‌ಲೆಂಡ್‌ಗಳಲ್ಲಿನ ಉನ್ನತ ಸಮಾಜವಿಜ್ಞಾನ ಸಂಸ್ಥೆಗಳ ಸದಸ್ಯತ್ವ ಇವರಿಗೆ ಲಭಿಸಿದೆ.

'ಮೈಸೂರಿನ ವಿವಾಹ ಮತ್ತು ಕುಟುಂಬ'; 'ದಕ್ಷಿಣ ಭಾರತದ ಕೊಡವರಲ್ಲಿ ಧರ್ಮ ಮತ್ತು ಸಮಾಜ'; 'ಆಧುನಿಕ ಭಾರತದಲ್ಲಿ ಜಾತಿ ಮತ್ತು ಇತರ ಪ್ರಬಂಧಗಳು' ಅವರ ಪ್ರಖ್ಯಾತ ಬರೆಹಗಳು.

ಎಂ. ಎಫ್. ಹುಸೇನ್

ಹಗಲು ಬೃಹದಾಕಾರದ ಸಿನಿಮಾ ಪೋಸ್ಟರುಗಳನ್ನು ಬರೆದು, ರಾತ್ರಿ ಫುಟ್‌ಪಾತಿನ ಮೇಲೆ ಬಿದ್ದು ವ್ಯಕ್ತಿ ಮಲಗುತ್ತಿದ್ದ. ಆ ವ್ಯಕ್ತಿಗೆ ತೀರಾ ವಾಸ್ತವಿಕ ಚಿತ್ರಗಳನ್ನು ರಚಿಸುವುದರಲ್ಲಿ ಸಂಪೂರ್ಣ ಪರಿಣತಿ. ಬದುಕಿನ ನೇರ ಅನುಭವ. ಈ ಕಲಾವಿದ ಸ್ವತಂತ್ರ ಹಾದಿ ಹಿಡಿದು ತನ್ನ ಕಲಾಪ್ರತಿಭೆಯನ್ನು ಪ್ರದರ್ಶಿಸತೊಡಗಿದ. ಆಧುನಿಕ ಚಿತ್ರಕಲೆಯಲ್ಲಿ ಈತನ ಹೆಸರು ವಿಶ್ವವಿಖ್ಯಾತವಾಯಿತು.

ಈ ವ್ಯಕ್ತಿಯೇ ಚಿತ್ರಕಾರ ಎಂ. ಎಫ್. ಹುಸೇನ್.

ಹುಸೇನ್ ಮಹಾರಾಷ್ಟ್ರದ ಸೊಲ್ಲಾಪುರದಲ್ಲಿ, 1915ರಲ್ಲಿ ಜನಿಸಿದರು. ಇಂದೂರು ಕಲಾಶಾಲೆಯಲ್ಲಿ ವಿದ್ಯಾಭ್ಯಾಸ. ತೀರಾ ಬಡತನದಲ್ಲಿದ್ದ ಹುಸೇನ್ ಸಿನಿಮಾ ಪೋಸ್ಟರುಗಳನ್ನು ಬರೆದು, ಮೊಬಿಲು-ಆಟಿಕೆ ಸಾಮಾನುಗಳನ್ನು ಮಾಡಿ ಜೀವನ ನಡೆಸಬೇಕಾಯಿತು.



ಸಾಂಕೇತಿಕತೆ : ಹುಸೇನ್

ಭಾರತಕ್ಕೆ ಸ್ವಾತಂತ್ರ್ಯ ಬಂದ ಮೇಲಷ್ಟೆ ಮುಂಬಯಿಯಲ್ಲಿ ಕೆಲವು ಕಲಾವಿದರು ತಮ್ಮ ಸ್ವತಂತ್ರ ಶೈಲಿಯ ಚಿತ್ರಗಳನ್ನು ಪ್ರದರ್ಶಿಸಲು ಒಂದು ಕಲಾವಿದರ ಬಳಗ ಕಟ್ಟಿದರು. ಆಗ ಅವರ ಕೃತಿಗಳನ್ನು ಜನ



'ಸಂಗೀತಗಾರ' –ಹುಸೇನ್ ಕೃತಿ

ಟೀಕಿಸಿದರೂ ಅವರು ಜನರಿಗೆಪರಿಚಿತರಾದರು. ಹುಸೇನರ ಜೀವನದ ಕಷ್ಟಸಹಿಷ್ಣುತೆ ಅವರಿಗೆ ವಿಶೇಷ ದೃಷ್ಟಿಕೋನವನ್ನು ಕೊಟ್ಟಿತು. ಕ್ಷಣ ಕಾಲ ಜನರನ್ನು ಬೆರಗಾಗಿಸುವ ಕಲಾ ಸಂಪ್ರದಾಯಗಳಿಗೆ ಬೆಲೆ ಇಲ್ಲ ಎಂದು ಭಾವಿಸಿ, ಸ್ವಂತಿಕೆಯ ಭದ್ರ ನೆಲದ ಮೇಲೆ ಇವರು ನಿಂತರು. ಕಲೆಯಲ್ಲಿ ಸಮಗ್ರದೃಷ್ಟಿ ಮುಖ್ಯ ಎನ್ನುವ ಇವರ ಚಿತ್ರಗಳಲ್ಲಿ ಕುಸುರಿ ಕೆಲಸ ಇರುವುದಿಲ್ಲ. ಕತ್ತಲು ಬೆಳಕಿನ ಪರಿಣಾಮ ಗೌಣ. ಆಕಾರ ಕೊಡುವ ರೇಖೆಗಳು, ಗಾಢವರ್ಣ ಎದ್ದು ಕಾಣುತ್ತವೆ. ಇವರ ಬಹುಮಟ್ಟಿನ ಚಿತ್ರಗಳೆಲ್ಲವೂ ಸಾಂಕೇತಿಕ ಅರ್ಥಗಳಿಂದ ಕೂಡಿದುವು.

ಕಲಾವಿದ ತನ್ನ ಮೊದಲ ಭಾವನೆ, ಪ್ರತಿಕ್ರಿಯೆಗಳನ್ನು ಗುರುತುಮಾಡಿಕೊಳ್ಳಲು 'ಸ್ಕೆಚ್' ಪುಸ್ತಕ ಉಪಯೋಗಿಸುವಂತೆ ಇವರು ಕ್ಯಾಮರಾ ಉಪಯೋಗಿಸುತ್ತಾರೆ. "ಎರಡರ ಉದ್ದೇಶವೂ ಒಂದೇ" ಎಂದು ಇವರ ಅಭಿಪ್ರಾಯ. ಇವರಿಗೂ ಕ್ಯಾಮರಾಕ್ಕೂ ನಂಟು. ಇವರು ಕೆಲವು ಚಿಕ್ಕ ಚಲಚ್ಚಿತ್ರಗಳನ್ನೂ ತಯಾರಿಸಿದ್ದುಂಟು. 'ಕಲಾವಿದನ ಕಣ್ಣಿನಲ್ಲಿ ರಾಜಸ್ಥಾನ' ಎಂಬ ಇವರ ಚಲಚ್ಚಿತ್ರಕ್ಕೆ 1967ರ ಬರ್ಲಿನ್ ಚಿತ್ರೋತ್ಸವದಲ್ಲಿ 'ಗೋಲ್ಡನ್ ಬೇರ್' ಪ್ರಶಸ್ತಿ ಸಿಕ್ಕಿತು. ಇದು ಮಾತು, ಕಥೆ ಇಲ್ಲದ ಚಲಚ್ಚಿತ್ರ. 'ಮುದ್ರೆ', 'ಮಾನವರು ಮತ್ತು ದೇವತೆಗಳು' ಇವರ ಇತರ ಪ್ರಮುಖ ಚಲಚ್ಚಿತ್ರಗಳು.

ಇಂದು ಭಾರತದಲ್ಲಿ ರಾಷ್ಟ್ರಮಟ್ಟದ ಕಲಾಕೃತಿಗಳ ಪ್ರದರ್ಶನ ನಡೆದರೆ ಇವರ ಚಿತ್ರ ಇದ್ದೇ ಇರುತ್ತದೆ. ಇಲ್ಲದಿದ್ದರೆ ಆ ಪ್ರದರ್ಶನ ಅಪೂರ್ಣ ಎನ್ನುವ ಭಾವನೆ ಹುಟ್ಟಿಸುವಂಥ ಪ್ರಭಾವಶಾಲಿ ಕಲಾವಿದರು ಇವರು. ವೆನಿಸ್, ಟೋಕಿಯೋ, ಲಂಡನ್, ನ್ಯೂಯಾರ್ಕ್‌ಗಳಲ್ಲಿ ನಡೆದ ನವ್ಯ ಚಿತ್ರಗಳ ಪ್ರದರ್ಶನದಲ್ಲಿ ಇವರ ಕೃತಿಗಳು ಅಪಾರ ಜನಪ್ರಿಯತೆ ಗಳಿಸಿದುವು. ಜ್ಯೂರಿಕ್, ಪ್ರಾಗ್, ಫ್ರಾಂಕ್‌ಫರ್ಟ್, ರೋಮ್, ಟೋಕಿಯೋ ಹಾಗೂ ಭಾರತದ ಮುಂಬಯಿ, ದೆಹಲಿ, ಕಲ್ಕತ್ತಾ, ಬೆಂಗಳೂರುಗಳಲ್ಲಿ ಇವರ 'ಏಕ ವ್ಯಕ್ತಿ ಕಲಾಪ್ರದರ್ಶನ'ಗಳು ನಡೆದಿವೆ.

ಆಧುನಿಕ ಸಂಪ್ರದಾಯದ ಸಮಕಾಲೀನ ಭಾರತೀಯ ಕಲಾವಿದರಲ್ಲಿ ಅತ್ಯಂತ ಪ್ರಮುಖರೆನಿಸಿರುವ ಹುಸೇನ್ ಅಂತರ್ಮುಖ ವ್ಯಕ್ತಿ. ಜೀವನದಲ್ಲಿ ಕಲೆಗೆ, ಆಯಾಮಗಳಿಗೆ ಹೊಸ ಅರ್ಥವನ್ನು, ಒಳನೋಟವನ್ನು ತೋರಿಸುವ ವ್ಯಕ್ತಿತ್ವ ಅವರದು.

ಎಂ. ಎಸ್. ಕೃಷ್ಣನ್

ಭಾರತದ ಖ್ಯಾತ ಭೂವಿಜ್ಞಾನಿ, ಎಂ. ಎಸ್. ಕೃಷ್ಣನ್. ಇವರು ಹಿಮಾಲಯದಿಂದ ಕನ್ಯಾಕುಮಾರಿಯ ವರೆಗೆ, ಅಸ್ಸಾಮಿನಿಂದ ಬಲೂಚಿಸ್ತಾನದ ವರೆಗೆ ಭೂ ಸಂಶೋಧನೆ ನಡೆಸಿದ ಪ್ರತಿಭಾವಂತ.

ಇವರ ಪೂರ್ಣ ನಾಮಧೇಯ ಮಹಾರಾಜಪುರಂ ಸೀತಾರಾಮ್ ಕೃಷ್ಣನ್. 1898 ಆಗಸ್ಟ್ 24 ತಂಜಾವೂರಿನ ಮಹಾರಾಜಪುರಂನಲ್ಲಿ ಜನನ. ಭೂ ವಿಜ್ಞಾನದಲ್ಲಿ 1919ರಲ್ಲಿ ಪದವೀಧರರಾದರು. 1921ರಲ್ಲಿ ಎಂ.ಎ. ಪಡೆದರು. ಲಂಡನಿನ ಇಂಪೀರಿಯಲ್ ಕಾಲೇಜ್ ಆಫ್ ಸೈನ್ಸ್ ಅಂಡ್ ಟೆಕ್ನಾಲಜಿಯಲ್ಲಿ ಹೆಚ್ಚಿನ ವ್ಯಾಸಂಗಕ್ಕಾಗಿ ಸರಕಾರ ವಿದ್ಯಾರ್ಥಿ ವೇತನಕೊಟ್ಟು ಕಳುಹಿಸಿತು. ಅಲ್ಲಿಂದ ಬಂದ ಮೇಲೆ ಗುಜರಾತಿನ ಕಾಥೇವಾಡದಲ್ಲಿರುವ ಗಿರ್ನಾರ್, ಓಷಾಂಗಳ ಶಿಲೆಗಳ ಬಗೆಗೆ ಸಂಶೋಧನೆ ಮಾಡಿ ಪಿಎಚ್.ಡಿ. ಪಡೆದರು.

ಭೂವಿಜ್ಞಾನಿ : ಎಂ. ಎಸ್. ಕೃಷ



ಅನಂತರ ಕೃಷ್ಣನ್ ಅವರಿಗೆ ಭೂವಿಜ್ಞಾನ ಇಲಾಖೆಯಲ್ಲಿ ಅಧಿಕಾರಿ ಕೆಲಸ ದೊರೆಯಿತು. ಸರಕಾರ ಇವರನ್ನು ಮತ್ತೆ ವಿದೇಶಕ್ಕೆ ಕಳುಹಿಸಿತು. ಇಂಗ್ಲೆಂಡ್, ಅಮೆರಿಕಗಳಲ್ಲಿ ಅಧ್ಯಯನ ಮುಗಿಸಿ ಕೃಷ್ಣನ್ ಹಿಂದಿರುಗಿದರು. ಭಾರತದಲ್ಲಿ ವ್ಯಾಪಕ ಭೂ ಸಂಶೋಧನೆ ನಡೆಸಿದರು. ನೈವೇಲಿ ಲಿಗ್ನೈಟ್ ಯೋಜನೆಗೆ ಇವರೇ ಕಾರಣರು. ಅಧಿಕಾರದಿಂದ ನಿವೃತ್ತರಾದ ಮೇಲೆ ಧನಬಾದ್‌ನಲ್ಲಿರುವ ರಾಷ್ಟ್ರೀಯ ಗಣಿ ವಿಜ್ಞಾನ ಮತ್ತು ಅನ್ವಯ ಭೂವಿಜ್ಞಾನ ಸಂಶೋಧನಾಲಯದ ನಿರ್ದೇಶಕರಾಗಿದ್ದರು. ಅನಂತರ ಆಂಧ್ರ ವಿಶ್ವವಿದ್ಯಾನಿಲಯದಲ್ಲಿ ಪ್ರಾಧ್ಯಾಪಕರಾಗಿ ಕೆಲಸ ಮಾಡಿದರು. ಹೈದರಾಬಾದಿನಲ್ಲಿ ಭೂಭೌತ ಸಂಶೋಧನಾ ಕೇಂದ್ರದ ಸ್ಥಾಪನೆಗೆ ಕಾರಣರಾದರು. ಹಲವು ವಿಜ್ಞಾನ ಸಂಸ್ಥೆಗಳ ಸದಸ್ಯತ್ವ ಇವರಿಗೆ ದೊರೆತಿತ್ತು. 450 ಸಂಶೋಧನಾ ಲೇಖನಗಳನ್ನೂ 8-10 ಪುಸ್ತಕಗಳನ್ನೂ ಬರೆದಿದ್ದಾರೆ. 'ಜಿಯಾಲಜಿ ಆಫ್ ಇಂಡಿಯಾ' ಎಂಬ ಇವರ ಪುಸ್ತಕ ರಷ್ಯನ್ ಭಾಷೆಗೂ ಅನುವಾದಗೊಂಡಿದೆ.

ಭಾರತ ಸರಕಾರ ಇವರಿಗೆ 1970ರಲ್ಲಿ ಪದ್ಮಭೂಷಣ ಪ್ರಶಸ್ತಿ ನೀಡಿತು. ಸಾಹಿತ್ಯ, ಸಂಗೀತಗಳಲ್ಲೂ ಇವರಿಗೆ ಆಸಕ್ತಿ ಇತ್ತು.

ಕೃಷ್ಣನ್ ಅವರು 1970 ಏಪ್ರಿಲ್ 21ರಂದು ಗತಿಸಿದರು.

ಎಂ. ಎಸ್. ಗೋಳವಲಕರ್

ಮೂರು ದಶಕಗಳಿಗೂ ಹೆಚ್ಚು ಕಾಲ ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರ್.ಎಸ್.ಎಸ್.) ಮುಖಂಡರಾಗಿ, 'ಗುರೂಜಿ' ಎಂದು ಖ್ಯಾತರಾದವರು–ಮಾಧವ ಸದಾಶಿವ ಗೋಳವಲಕರ್. ಆಜನ್ಮ ಬ್ರಹ




ಪೈರಿಗೆ ನೀರು



ಸಕ್ಕರೆಗೆ ಕಬ್ಬು







ಚಾರಿಯಾಗಿದ್ದ ಇವರು ಅರವತ್ತಕ್ಕೂ ಹೆಚ್ಚು ಸಲ ಭಾರತ ಪರ್ಯಟನ ಮಾಡಿದರು. ರಾಷ್ಟ್ರ ಪುನರ್ನಿರ್ಮಾಣ ಕಾರ್ಯಗಳಿಗಾಗಿ, ಜನಜಾಗೃತಿಗಾಗಿ ಸತತ ಶ್ರಮಿಸಿದರು.

ಗೋಳವಲಕರ್ ಅವರ ಜನನ 1906 ಫೆಬ್ರವರಿ 18ರಂದು. ನಾಗಪುರ ಹಾಗೂ ಬನಾರಸ್ ಹಿಂದು ವಿಶ್ವವಿದ್ಯಾನಿಲಯದಲ್ಲಿ ಇವರ ಪ್ರೌಢ ವ್ಯಾಸಂಗ ನಡೆಯಿತು. ಎಮ್.ಎಸ್‌ಸಿ. ಮತ್ತು ಎಲ್‌ಎಲ್.ಬಿ. ಪದವಿಗಳನ್ನು ಪಡೆದರು. ಸ್ವಲ್ಪ ಕಾಲ ಬನಾರಸ್ ಹಿಂದು ವಿಶ್ವವಿದ್ಯಾನಿಲಯದಲ್ಲಿ ಅಧ್ಯಾಪಕರಾಗಿದ್ದರು. ಆಗ ರಾಷ್ಟ್ರೀಯ ಸ್ವಯಂಸೇವಕ ಸಂಘದ ಸ್ಥಾಪಕ ಡಾಕ್ಟರ್ ಕೇಶವ ಬಲಿರಾಮ ಹೆಡಗೇವಾರ್ ಅವರ ಪರಿಚಯವಾಯಿತು. ಅವರ ಕಾರ್ಯದಲ್ಲಿ ಗೋಳವಲಕರ್ ಅವರಿಗೆ ಆಸಕ್ತಿ ಹುಟ್ಟಿತು. ಮುಂದೆ ರಾಮಕೃಷ್ಣಾಶ್ರಮ ಸೇರಿದರು. ಸ್ವಾಮಿ ಅಖಂಡಾನಂದಜೀಯವರಿಂದ ದೀಕ್ಷೆಯನ್ನೂ ಪಡೆದರು.

1940ರಲ್ಲಿ ಹೆಡಗೇವಾರರ ದೇಹಾಂತವಾಯಿತು. ಆಗ ಗೋಳವಲಕರ್ ಅವರು ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಸರಸಂಘಚಾಲಕರಾಗಿ ನೇಮಿಸಲ್ಪಟ್ಟರು.

ಗೋಳವಲಕರ್ ಅವರ ಬರೆವಣಿಗೆ ಮುಖ್ಯವಾದವು : 'ನಾವು ಅಥವಾ ನಮ್ಮ ರಾಷ್ಟ್ರೀಯತ್ವದ ವಿಶದೀಕರಣ', 'ಈಗಿನ ಸನ್ನಿವೇಶದಲ್ಲಿ ಸ್ವಾಮಿ ವಿವೇಕಾನಂದರ ಉಪನ್ಯಾಸಗಳು', 'ಚಿಂತನ ಗಂಗಾ'.

1973 ಜೂನ್ 5ರಂದು ಗೋಳವಲಕರ್ ಕಾಲವಾದರು.

ಎಂ. ಎಸ್. ಸ್ವಾಮಿನಾಥನ್

ಭಾರತದಲ್ಲಿ ಕೃಷಿ ಸಂಶೋಧನಾ ಕಾರ್ಯಕ್ರಮದ ಅಭಿವೃದ್ಧಿಗಾಗಿ ರೂಪಿತವಾದ ಭಾರತೀಯ ಕೃಷಿ ಸಂಶೋಧನಾ ಮಂಡಲಿಯ (ಐ.ಸಿ.ಎ.ಆರ್.) ಮುಖ್ಯಸ್ಥರು ಡಾ. ಎಂ. ಎಸ್. ಸ್ವಾಮಿನಾಥನ್. ಕೃಷಿ ವಿಜ್ಞಾನದ ವಿವಿಧ ಕ್ಷೇತ್ರಗಳಲ್ಲಿ ಇವರ ಸಾಧನೆ ಗಮನಾರ್ಹ. ಅಂತರರಾಷ್ಟ್ರೀಯ ಹಾಗೂ ರಾಷ್ಟ್ರೀಯ ಪ್ರಶಸ್ತಿಗಳು ಇವರಿಗೆ ದೊರೆತಿವೆ.



ಕೃಷಿ ಸಂಶೋಧನೆ : ಸ್ವಾಮಿನಾಥನ್

1925 ಆಗಸ್ಟ್ 7ರಂದು ಕುಂಭಕೋಣದಲ್ಲಿ ಮಾನ್‌ಕೊಂಬು ಸಾಂಬಶಿವನ್ ಸ್ವಾಮಿನಾಥನ್ ಜನಿಸಿದರು.

ಕೇಂಬ್ರಿಜ್‌ನಲ್ಲಿ ಪಿಎಚ್.ಡಿ. ಪಡೆದ ಬಳಿಕ ಕಟಕ್‌ನಲ್ಲಿರುವ ಕೇಂದ್ರ ಭತ್ತ ಸಂಶೋಧನಾ ಸಂಸ್ಥೆಯಲ್ಲಿ ಸಂಶೋಧನೆ ನಡೆಸಿದರು. ಅನಂತರ ಭಾರತೀಯ ಕೃಷಿ ಸಂಶೋಧನಾ ಮಂಡಲಿಯ ನಿರ್ದೇಶಕರಾದರು. ಭಾರತದಲ್ಲಿ ಕುಳ್ಳು ತಳಿಯ ಗೋಧಿ ಬೆಳೆಯನ್ನು ಆಚರಣೆಗೆ ತಂದು, ಅಧಿಕ ಫಸಲು ನೀಡುವ ತಳಿಗಳನ್ನು ರೂಪಿಸುವ ಕಾರ್ಯಕ್ರಮ ಆರಂಭಿಸಿದರು.

1961ರ ಶಾಂತಿಸ್ವರೂಪ್ ಭಟ್ನಾಗರ್ ಪ್ರಶಸ್ತಿ, 1965ರಲ್ಲಿ ಮೆಂಡೆಲ್ ಮೆಮೋರಿಯಲ್ ಪ್ರಶಸ್ತಿ, 1966ರ ಬೀರಬಲ್ ಸಾಹ್ನಿ ಪ್ರಶಸ್ತಿಗಳು ಅವರಿಗೆ ದೊರೆತುವು. 1967ರಲ್ಲಿ ಪದ್ಮಶ್ರೀ ಪ್ರಶಸ್ತಿ ನೀಡಿ ಅವರನ್ನು ಗೌರವಿಸಲಾಯಿತು. 1971ರಲ್ಲಿ ಸಾಮಾಜಿಕ ನಾಯಕತ್ವಕ್ಕಾಗಿ ಮ್ಯಾಗಸೆಸೆ ಪ್ರಶಸ್ತಿ ದೊರಕಿತು.

ಎಂ. ಎಸ್. ಸುಬ್ಬುಲಕ್ಷ್ಮಿ

ಎಂ. ಎಸ್. ಸುಬ್ಬುಲಕ್ಷ್ಮಿ ಅವರು ಭಾವನಾತ್ಮಕವಾಗಿ ಹಾಡುವುದರಲ್ಲಿ ಅದ್ವಿತೀಯರು. ಮಾಧುರ್ಯ, ಶ್ರುತಿ, ಸ್ಪಷ್ಟ ಉಚ್ಚಾರಣೆ, ತನ್ಮಯತೆ — ಇವರ ಹಾಡುಗಾರಿಕೆಯ ಗುಣಗಳು. ಕರ್ನಾಟಕ ಸಂಗೀತ ಇವರ ಕ್ಷೇತ್ರ. ಹಿಂದೂಸ್ಥಾನಿ ಸಂಗೀತ ಶೈಲಿಯನ್ನು ಸ್ವಲ್ಪಮಟ್ಟಿಗೆ ಅಳವಡಿಸಿಕೊಂಡು ಭಕ್ತಿಗೀತೆಗಳನ್ನು ಹಾಡಿದ್ದಾರೆ.

ಮಧುರೈ ಷಣ್ಮುಗವಡಿವು ಸುಬ್ಬುಲಕ್ಷ್ಮಿ 1916 ಸೆಪ್ಟೆಂಬರ್ 16ರಂದು ಜನಿಸಿದರು. ತಾಯಿ ಷಣ್ಮುಗವಡಿವು ಅವರಿಂದಲೇ ಸಂಗೀತ ಪಾಠವಾಯಿತು. ಇತರರು ಆಟವಾಡುವ ವಯಸ್ಸಿನಲ್ಲಿ ಕಿರಿಯ ಸುಬ್ಬುಲಕ್ಷ್ಮಿ ಸಂಗೀತ ಲೋಕದ ತಾರೆಯಾದರು. 13ನೆಯ ವಯಸ್ಸಿನಲ್ಲಿ ಅವರ ಪ್ರಥಮ ಧ್ವನಿಮುದ್ರಿಕೆ ಸಿದ್ಧವಾಯಿತು. 18ನೆಯ ವಯಸ್ಸಿಗೆ ಸುಬ್ಬುಲಕ್ಷ್ಮಿ ತಮ್ಮ ಕಚೇರಿ ಆರಂಭಿಸಿದರು.

ಇವರು ಪಾತ್ರವಹಿಸಿ, ಅಭಿನಯಿಸಿ, ಮೀರಾ ಭಜನೆಗಳನ್ನು ಹಾಡಿದ ಹಿಂದೀ ಚಿತ್ರ 'ಮೀರಾ' ದೇಶದ ಆದ್ಯಂತ ಜನಪ್ರಿಯವಾಯಿತು. 1946ರಲ್ಲಿ ನೇಪಾಳದಲ್ಲಿ ಸಂಗೀತ ಪ್ರವಾಸ ಕೈಗೊಂಡರು. 1963ರಲ್ಲಿ ಎಡಿನ್‌ಬರೋದಲ್ಲಿ ನಡೆದ ಅಂತರರಾಷ್ಟ್ರೀಯ ಕಲೆಗಳ ಉತ್ಸವದಲ್ಲಿ ಕರ್ನಾಟಕ ಸಂಗೀತ ವಿಭಾಗದ ಪರವಾಗಿ ಭಾಗವಹಿಸಿ ಹಾಡಿದರು. ಅನಂತರ ಲಂಡನ್, ಫ್ರಾಂಕ್‌ಫರ್ಟ್, ಜಿನೀವಾ, ಕೈರೋಗಳಲ್ಲಿ ಸಂಗೀತ ಕಚೇರಿ ನಡೆಸಿದರು. ವಿಶ್ವಸಂಸ್ಥೆಯ ದಿನಾಚರಣೆಯಲ್ಲಿ, 1966 ಅಕ್ಟೋಬರ್ 23ರಂದು ಒಂದು ವಿಶೇಷ ಸಂಗೀತ ಸಭೆಯಲ್ಲಿ ಹಾಡಬೇಕೆಂಬ ಆಹ್ವಾನವನ್ನು ಸ್ವೀಕರಿಸಿ ನ್ಯೂಯಾರ್ಕಿಗೆ ಹೋದರು. ಅಮೆರಿಕದಲ್ಲಿ 7 ವಾರಗಳ ಸಂಗೀತ ಕಚೇರಿ ಪ್ರವಾಸ ಕೈಗೊಂಡರು.

1954ರಲ್ಲಿ ಭಾರತ ಸರಕಾರ ಎಂ. ಎಸ್. ಸುಬ್ಬುಲಕ್ಷ್ಮಿ ಅವರಿಗೆ ಪದ್ಮಭೂಷಣ ಪ್ರಶಸ್ತಿ ನೀಡಿ ಗೌರವಿಸಿತು. ಆಗ ಪ್ರಧಾನಿ ಜವಾಹರಲಾಲರು ಸುಬ್ಬುಲಕ್ಷ್ಮಿಯವರನ್ನು 'ಭಾರತೀಯ ಸಂಗೀತದ ರಾಣಿ' ಎಂದು ಹೊಗಳಿದರು. ಸಂಗೀತ ನಾಟಕ ಅಕಾಡೆಮಿ 1956ರ ಕರ್ನಾಟಕ ಸಂಗೀತ ಹಾಡುಗಾರಿಕೆಯ ಪ್ರಶಸ್ತಿಯನ್ನು ಇವರಿಗೆ ಸಲ್ಲಿಸಿತು. ರವೀಂದ್ರ ಭಾರತಿ ವಿಶ್ವವಿದ್ಯಾನಿಲಯ 1967ರಲ್ಲಿ ಇವರಿಗೆ ಗೌರವ ಡಾಕ್ಟರೇಟ್ ಪದವಿ ನೀಡಿತು. 1968ರಲ್ಲಿ ಮದರಾಸು ಮ್ಯೂಸಿಕ್ ಅಕಾಡೆಮಿಯ ಸಂಗೀತ ಸಮ್ಮೇಳನಕ್ಕೆ ಅಧ್ಯಕ್ಷೆಯಾಗಿ ಆರಿಸಲ್ಪಟ್ಟವರು ಎಂ. ಎಸ್. ಸುಬ್ಬುಲಕ್ಷ್ಮಿ ಅವರು. ಆ



'ಭಾರತೀಯ ಸಂಗೀತದ ರಾಣಿ' : ಎಂ. ಎಸ್.

ಸ್ಥಾನ ಅಲಂಕರಿಸಿದ ಪ್ರಥಮ ಮಹಿಳೆ. ಆ ಸಂದರ್ಭದಲ್ಲಿ ಅಕಾಡೆಮಿ ಅವರಿಗೆ 'ಸಂಗೀತ ಕಲಾನಿಧಿ' ಬಿರುದು ಕೊಟ್ಟು ಪುರಸ್ಕರಿಸಿತು. 1973ರಲ್ಲಿ ದೆಹಲಿ ವಿಶ್ವವಿದ್ಯಾಲಯ ಅವರಿಗೆ ಗೌರವ ಡಾಕ್ಟರೇಟ್ ಪ್ರಶಸ್ತಿ ನೀಡಿತು.

ನೂರಕ್ಕೂ ಹೆಚ್ಚು ಸಹಾಯಾರ್ಥ ಸಂಗೀತ ಕಚೇರಿಗಳನ್ನು ನಡೆಸಿ ರಾಷ್ಟ್ರೀಯ, ಸಾಮಾಜಿಕ ಹಾಗೂ ಧಾರ್ಮಿಕ ಕಾರ್ಯಗಳಿಗೆ ಎಂ. ಎಸ್. ಸುಬ್ಬಲಕ್ಷ್ಮಿ ಧನಸಹಾಯ ಮಾಡಿದ್ದಾರೆ. ಇವರ ಗಾಯನವನ್ನು ಮೆಚ್ಚಿದ ಜನತೆ ಇವರಿಗೆ 'ಇಸೈರಾಣಿ' (ಸಂಗೀತ ಸರಸ್ವತಿ) ಎಂಬ ಬಿರುದನ್ನು ಕೊಟ್ಟು ಸನ್ಮಾನಿಸಿದೆ.

'ಕಲ್ಕಿ' ತಮಿಳು ಸಾಪ್ತಾಹಿಕದ ವ್ಯವಸ್ಥಾಪಕ ಸದಾಶಿವಮ್, ಸುಬ್ಬಲಕ್ಷ್ಮಿ ಅವರ ಪತಿ. ಮಗಳು ರಾಧಾ ಒಳ್ಳೆಯ ಹಾಡುಗಾರ್ತಿ. ಸುಬ್ಬಲಕ್ಷ್ಮಿಯನ್ನು ಅವರ ಅಭಿಮಾನಿ ಬಳಗ 'ಎಂ. ಎಸ್.' ಎಂದು ಕರೆಯುತ್ತದೆ.

ಎಂ. ಚಲಪತಿರಾವ್

ಭಾರತೀಯ ಪತ್ರಿಕೋದ್ಯಮಿಗಳಲ್ಲಿ ಪ್ರಥಮ ಪಂಕ್ತಿಯ ಪ್ರಖ್ಯಾತರು ಚಲಪತಿರಾವ್. ಇವರು ಕೇವಲ ಲೇಖನಿ ವೀರರಲ್ಲ, ಸಂಘಟನಾ ಶೂರರು ಕೂಡ. ಕಾರ್ಯನಿರತ ಪತ್ರಿಕೋದ್ಯೋಗಿಗಳ ಪರವಾಗಿ ಹೋರಾಡಿ ಅವರ ಸ್ಥಿತಿಗತಿಗಳ ಸುಧಾರಣೆಗೆ ಕಾರಣರಾದರು.

ಜವಾಹರಲಾಲ್ ನೆಹರೂ ಅವರಿಂದ ಸ್ಥಾಪಿತವಾದ ಅಲಹಾಬಾದಿನ 'ನ್ಯಾಷನಲ್ ಹೆರಾಲ್ಡ್' ಇಂಗ್ಲಿಷ್ ದಿನಪತ್ರಿಕೆಯಲ್ಲಿ 1938ರಲ್ಲಿ ಪತ್ರಿಕಾ ವೃತ್ತಿ ಆರಂಭಿಸಿದರು.

ಆಗ ಆ ಪತ್ರಿಕೆಯ ಸಂಪಾದಕರಾಗಿದ್ದ ಕೆ. ರಾಮರಾವ್ ಯುವಕ ಚಲಪತಿರಾಯರಿಗೆ ಮಾರ್ಗದರ್ಶಿಯಾದರು. ಸ್ವಾತಂತ್ರ್ಯಪೂರ್ವದಲ್ಲಿ ಸರಕಾರದ ವಿರುದ್ಧ ಬರೆಯುತ್ತಿದ್ದ ಚಲಪತಿರಾಯರ ಲೇಖನಿ ಕೇವಲ ಆವೇಶಪೂರ್ಣವಾಗಿರುತ್ತಿರಲಿಲ್ಲ; ತರ್ಕಪೂರ್ಣವೂ ಸಮಾಜವಾದ ಧ್ಯೇಯ ಪ್ರೇರಿತವೂ ಆಗಿರುತ್ತಿತ್ತು. 1946ರಲ್ಲಿ ಅವರು 'ನ್ಯಾಷನಲ್ ಹೆರಾಲ್ಡ್'ನ ಸಂಪಾದಕರಾದರು.

1950ರಲ್ಲಿ ಅಖಿಲ ಭಾರತ ಕಾರ್ಯನಿರತ ಪತ್ರಕರ್ತರ ಒಕ್ಕೂಟದ ಮಹಾ ಮಂಡಳದ ಸ್ಥಾಪನೆ, ಪ್ರಗತಿಗಾಗಿ ಶ್ರಮಿಸಿದರು. 1955ರ ವರೆಗೂ ಅದರ ಅಧ್ಯಕ್ಷರಾಗಿದ್ದರು. ಭಾರತೀಯ ಪತ್ರಿಕಾಪ್ರಪಂಚದ ಸ್ಥಿತಿಗತಿಗಳನ್ನು ಅಭ್ಯಸಿಸಿ ಅದರ ಸುಧಾರಣೆಗೆ ತಕ್ಕ ಶಿಫಾರಸುಗಳನ್ನು ಮಾಡಲು ಭಾರತ ಸರಕಾರ 1952ರಲ್ಲಿ ಪತ್ರಿಕಾ ಆಯೋಗವನ್ನು ನೇಮಿಸಿತು. ಚಲಪತಿರಾವ್ ಅದರ ಸದಸ್ಯರಾಗಿದ್ದರು. ಪತ್ರಿಕೋದ್ಯಮದ ಅಭಿವೃದ್ಧಿಗಾಗಿ ಪ್ರಯತ್ನಿಸುವ ಇಂಡಿಯನ್ ಪ್ರೆಸ್ ಇನ್‌ಸ್ಟಿಟ್ಯೂಟಿನ ಸಂಸ್ಥಾಪಕ ಸಮಿತಿಯ ಸದಸ್ಯರಲ್ಲಿ ಚಲಪತಿರಾವ್ ಒಬ್ಬರು.

1952ರಲ್ಲಿ ಚೀನಕ್ಕೆ ಭೇಟಿನೀಡಿದ ಭಾರತೀಯ ನಿಯೋಗದ ಸದಸ್ಯರಾಗಿದ್ದರಲ್ಲದೆ, 1955ರಲ್ಲಿ ನೆಹರೂರವರೊಡನೆ ಸೋವಿಯೆತ್ ರಷ್ಯ ಮೊದಲಾದ ರಾಷ್ಟ್ರಗಳಿಗೆ ತೆರಳಿದ ಪತ್ರಿಕಾ ಪ್ರತಿನಿಧಿವರ್ಗದಲ್ಲೂ ಇದ್ದರು. ಹೆಲ್ಸಿಂಕಿಯಲ್ಲಿ ಸೇರಿದ್ದ ಪತ್ರಿಕೋದ್ಯೋಗಿಗಳ ಅಂತರರಾಷ್ಟ್ರೀಯ ಸಮ್ಮೇಳನದ ಸಂಘಟನಾ ಸಮಿತಿಯ ಸದಸ್ಯರಾಗಿದ್ದರು. ವಿಶ್ವಸಂಸ್ಥೆಯ ಮಹಾಧಿವೇಶನಕ್ಕೂ ಒಮ್ಮೆ ಭಾರತದ ಪ್ರತಿನಿಧಿಯಾಗಿ ತೆರಳಿದ್ದರು.



ಭೂಷಣಪ್ರಾಯ :
ಚಲಪತಿರಾವ್

ಚಲಪತಿರಾವ್ ಅವರು ನೆಹರೂ ಸ್ಮಾರಕ ಪ್ರಮುಖಟ್ರಸ್ಟಿನ ಕಾರ್ಯ ಸಮಿತಿ ಮತ್ತು ಅಂತರರಾಷ್ಟ್ರೀಯ ಸೌಹಾರ್ದ ಸಾಧನೆಗಾಗಿ ನೀಡಲಾಗುವ ನೆಹರೂ ಪಾರಿತೋಷಕ ತೀರ್ಪುಗಾರರ ಮಂಡಳಿಯ ಸದಸ್ಯರಾಗಿದ್ದಾರೆ. ಭಾರತೀಯ ಪತ್ರಿಕೋದ್ಯಮಕ್ಕೆ ಸಂಬಂಧಪಟ್ಟ ಹಲವಾರು ಗ್ರಂಥಗಳನ್ನು ಬರೆದಿದ್ದಾರೆ.

ಎಂ. ಜಿ. ಕೆ. ಮೆನನ್

ದೇಶದ ಪ್ರಖ್ಯಾತ ಭೌತ ವಿಜ್ಞಾನಿ ಎಂ. ಜಿ. ಕೆ. ಮೆನನ್. 1966ರಿಂದ ಮುಂಬಯಿಯ ತಾತಾ ಮೂಲಭೂತ ಸಂಶೋಧನಾ ಸಂಸ್ಥೆಯ ನಿರ್ದೇಶಕರಾಗಿದ್ದಾರೆ. ಅಲ್ಲಿ ವಿಶ್ವಕಿರಣಗಳ ಅಧ್ಯಯನ ಇವರ ನೇತೃತ್ವದಲ್ಲಿ ನಡೆಯುತ್ತಿದೆ. 1971ರಲ್ಲಿ ಭಾರತ ಸರಕಾರ ಇವರನ್ನು ಎಲೆಕ್ಟ್ರಾನಿಕ್ಸ್ ಕಮಿಷನಿನ ಅಧ್ಯಕ್ಷರನ್ನಾಗಿ ನೇಮಿಸಿತು.

ಮಾಂಬಿಲ್ಲಿಕಲತ್ತಿಲ್ ಗೋವಿಂದ ಕುಮಾರ ಮೆನನ್ ಹುಟ್ಟಿದ್ದು ಮಂಗಳೂರಿನಲ್ಲಿ, 1928 ಆಗಸ್ಟ್ 28ರಂದು. ತಂದೆ ಶಂಕರ ಮೆನನ್ ನ್ಯಾಯಾಧೀಶರು : ಆಗ ಮಂಗಳೂರಿನಲ್ಲಿದ್ದರು. ತಾಯಿ, ನಾರಾಯಣಿ ಅಮ್ಮ.

ಮೆಟ್ರಿಕ್ಯುಲೇಷನ್ ಪರೀಕ್ಷೆಯಿಂದ ಹಿಡಿದು ಸ್ನಾತಕೋತ್ತರ ಪದವಿ ಪರೀಕ್ಷೆಯ ವರೆಗೆ ಪಂಜಾಬ್, ರಜಪುತಾನ, ಆಗ್ರಾ, ಮುಂಬಯಿ ಮುಂತಾದ ನಾನಾ ಭಾಗಗಳಲ್ಲಿ ವಿದ್ಯಾಭ್ಯಾಸವಾಯಿತು. ಅನಂತರ ಇಂಗ್ಲೆಂಡಿಗೆ ಹೋಗಿ ಸಂಶೋಧನೆ ನಡೆಸಿ 1952ರಲ್ಲಿ ಬ್ರಿಸ್ಟಲ್ ವಿಶ್ವವಿದ್ಯಾನಿಲಯದಿಂದ ಡಾಕ್ಟರೇಟ್ ಪಡೆದರು.

ಅನೇಕ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ವಿಜ್ಞಾನ ಸಂಸ್ಥೆಗಳು ಇವರ ಪ್ರತಿಭೆಯನ್ನು ಗುರುತಿಸಿ ಇವರನ್ನು ತಮ್ಮ ಸದಸ್ಯರನ್ನಾಗಿ ಮಾಡಿಕೊಂಡಿವೆ. ಅನೇಕ ವಿಜ್ಞಾನ ಸಂಸ್ಥೆಗಳಿಗೆ ಇವರು ಅಧ್ಯಕ್ಷರು. ಇಂಡಿಯನ್ ಅಕಾಡೆಮಿ ಆಫ್ ಸೈನ್ಸಸ್, ರಾಯಲ್ ಸೊಸೈಟಿ, ಇಂಡಿಯನ್ ನ್ಯಾಷನಲ್ ಸೈನ್ಸ್ ಅಕಾಡೆಮಿ ಮುಂತಾದ ಸಂಸ್ಥೆಗಳ ಫೆಲೋ ಆಗಿದ್ದಾರೆ.

ವಿಶ್ವಕಿರಣಗಳು ಮತ್ತು ಮೂಲ ಕಣಗಳ ಬಗೆಗೆ 60ಕ್ಕಿಂತ ಹೆಚ್ಚು ಲೇಖನಗಳನ್ನು ಬರೆದಿದ್ದಾರೆ. ಈ ವಿಷಯವಾಗಿ ಅನೇಕ ಪ್ರಖ್ಯಾತ ಸಂಸ್ಥೆಗಳಲ್ಲಿ ಉಪನ್ಯಾಸ ಮಾಡಿದ್ದಾರೆ. ವಿಜ್ಞಾನದಲ್ಲಿ ನಡೆಸಿದ ಸಂಶೋಧನೆಗಳಿಗಾಗಿ ರಾಯಲ್ ಕಮಿಷನಿನ ಹಿರಿಯ ಪ್ರಶಸ್ತಿ, ಭೌತಿಕ - ಜ್ಞಾನಗಳಿಗಾಗಿ ಕೊಡುವ ಶಾಂತಿ ಸ್ವರೂಪ್ ಭಟ್ನಾಗರ್ ಪ್ರಶಸ್ತಿ, ಏಷ್ಯಾಟಿಕ್ ಸೊಸೈಟಿಯ ಕೈತಾನ್ ಪದಕಗಳು ಇವರಿಗೆ ದೊರೆತಿವೆ.

ಭಾರತ ಸರಕಾರ 1961ರಲ್ಲಿ ಪದ್ಮಶ್ರೀ ಮತ್ತು 1968ರಲ್ಲಿ ಪದ್ಮಭೂಷಣ ಪ್ರಶಸ್ತಿಗಳನ್ನು ನೀಡಿ ಇವರನ್ನು ಗೌರವಿಸಿದೆ. ಜೋಧಪುರ ಮತ್ತು ದೆಹಲಿ ವಿಶ್ವವಿದ್ಯಾನಿಲಯಗಳು ಗೌರವ ಡಾಕ್ಟರೇಟ್ ನೀಡಿವೆ.

ಬಿಡುವಿನ ಸಮಯದಲ್ಲಿ ಇವರ ಹವ್ಯಾಸಗಳು —ಪಕ್ಷಿವೀಕ್ಷಣೆ ಮತ್ತು ಸಿನಿಫೊಟೋಗ್ರಫಿ.



ಭೌತವಿಜ್ಞಾನಿ :
ಎಂ. ಜಿ. ಕೆ. ಮೆನನ್

ಎಂ. ಜಿ. ರಾನಡೆ

"ಮಹಾರಾಷ್ಟ್ರದ ಸಾರ್ವಜನಿಕ ಮುಂದಾಳುಗಳಲ್ಲಿ ನಿರ್ಭೀತಿ, ನೇರ ಮಾತು —ಈ ಗುಣಗಳು ಕಂಡುಬಂದರೆ, ಅದು ಇಪ್ಪತ್ತೈದು ವರ್ಷಕ್ಕಿಂತ ಹೆಚ್ಚು ಕಾಲ ರಾನಡೆ ಪಟ್ಟ ಪರಿಶ್ರಮದ ಫಲ."

ರಾನಡೆಯವರು ತಮ್ಮ 59ನೆಯ ವಯಸ್ಸಿನಲ್ಲಿ ತೀರಿಕೊಂಡಾಗ ಮಹಾರಾಷ್ಟ್ರದ ಇನ್ನೊಬ್ಬ ರಾಷ್ಟ್ರೀಯ ಧುರೀಣ ಬಾಲಗಂಗಾಧರ ತಿಲಕ್ ಹೇಳಿದ ಮಾತು ಇದು.

1842ರ ಜನವರಿ 18ರಂದು ನಾಸಿಕ ಜಿಲ್ಲೆಯಲ್ಲಿ ಜನಿಸಿದ ಮಹಾದೇವ ಗೋವಿಂದ ರಾನಡೆ ಮುಂಬಯಿಯ ಎಲ್‌ಫಿನ್‌ಸ್ಟನ್ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮುಗಿಸಿದರು. ಅನಂತರ 1866ರಿಂದ ಸ್ವಲ್ಪಕಾಲ ಸರಕಾರೀ ಶಿಕ್ಷಣ ಇಲಾಖೆಯಲ್ಲಿ ಉದ್ಯೋಗದಲ್ಲಿದ್ದರು. ಬಳಿಕ ನ್ಯಾಯಾಧೀಶರಾಗಿ 1871ರಲ್ಲಿ ಪುಣೆಗೆ ಹೋಗಿ, ಅಲ್ಲಿನ ಸಾಮಾಜಿಕ ಜೀವನದಲ್ಲಿ ಪ್ರಮುಖ ಪಾತ್ರ ವಹಿಸಿದರು. ಆಗಿನ ಮುಂಬಯಿ ಶಾಸನ ಮಂಡಲಿಗೆ ಕೆಲವು ಸಲ ಆಯ್ಕೆ ಹೊಂದಿದ ರಾನಡೆ 1893ರಲ್ಲಿ ಮುಂಬಯಿ ಹೈಕೋರ್ಟಿನ ನ್ಯಾಯಾಧೀಶರಾದರು. 1901 ಜನವರಿ 16ರಂದು ಅವರು ನಿಧನರಾದರು.

ಭಾರತದ ಕೈಗಾರಿಕಾಭಿವೃದ್ಧಿಗೆ ಕಾರಣವಾಗುವಂಥ ವಾಣಿಜ್ಯ ಮತ್ತು ಆರ್ಥಿಕ ಧೋರಣೆಯನ್ನು ಸರಕಾರ ಅನುಸರಿಸಬೇಕೆಂಬುದು ರಾನಡೆ ಅವರ ವಾದವಾಗಿತ್ತು. ಮುಂದೆ ಸ್ವಾವಲಂಬನೆ, ಸ್ವದೇಶೀ ತತ್ತ್ವಗಳ ಅಗತ್ಯವನ್ನು ಅವರು ಪ್ರತಿಪಾದಿಸಿದರು. ಲೇಖನಗಳ ಮೂಲಕ ಆರ್ಥಿಕ ಕಾರ್ಯಕ್ರಮಗಳ ಬಗ್ಗೆ ಜನತೆಗೂ ಸರಕಾರಕ್ಕೂ ಸಲಹೆಮಾಡುತ್ತಿದ್ದರು.

ವಿಧವಾ ವಿವಾಹ ಮೊದಲಾದ ಸಾಮಾಜಿಕ ಸುಧಾರಣೆಗಳನ್ನು ಕೈಗೊಂಡ ಮುಂಬಯಿಯ 'ಪ್ರಾರ್ಥನಾ ಸಮಾಜ'ದ ಸ್ಥಾಪಕರಲ್ಲಿ (ಸ್ಥಾಪನೆ 1867) ರಾನಡೆಯವರೂ ಒಬ್ಬರು. ಪುಣೆಯಲ್ಲಿ 'ಡೆಕ್ಕನ್ ಎಜುಕೇಷನಲ್ ಸೊಸೈಟಿ'ಯನ್ನು ಅವರು ಸ್ಥಾಪಿಸಿದರು. ಮೊದಲನೆಯ ಪತ್ನಿ ನಿಧನರಾದ ಮರುವರ್ಷ 32ನೆಯ ವಯಸ್ಸಿನಲ್ಲಿ ತಾವು ಮದುವೆ ಮಾಡಿಕೊಂಡ ಎಳೆಯ ಹುಡುಗಿ ರಮಾಬಾಯಿಗೆ ತಾವೇ ಶಿಕ್ಷಣ ನೀಡಿದರು. ಮುಂದೆ ರಮಾಬಾಯಿ ರಾನಡೆಯವರೂ ಪುಣೆಯ 'ಸೇವಾಸದನ'ದ ಮೂಲಕ ಉತ್ತಮ ಸಾಮಾಜಿಕ ಸೇವೆ ಸಲ್ಲಿಸಿದರು.

ರಾನಡೆಯವರಿಗೆ ಇತಿಹಾಸದಲ್ಲೂ ಆಸಕ್ತಿ. 1900ರಲ್ಲಿ ಪ್ರಕಟವಾದ 'ಮರಾಠರ ಅಭ್ಯುದಯ' ಅವರ ಪ್ರಸಿದ್ಧ ಕೃತಿ. ನಿಧನದ ವೇಳೆಗೆ ಮರಾಠರ ಅವನತಿಯ ಇತಿಹಾಸಕ್ಕೆ ಸಂಬಂಧಿಸಿದ ವಿಷಯ ಸಂಗ್ರಹಿಸುತ್ತಿದ್ದರು. ಭಾರತದ ಆರ್ಥಿಕ, ಧಾರ್ಮಿಕ ಮತ್ತು ಸಾಮಾಜಿಕ ಸುಧಾರಣೆ ಇತ್ಯಾದಿಗಳ ಬಗೆಗೆ ಅವರ ಲೇಖನ ಸಂಗ್ರಹಗಳು ಪ್ರಕಟವಾಗಿವೆ.



ನಿರ್ಭೀತಿ, ನೇರಮಾತು : ರಾನಡೆ

ಭಾರತ ರಾಷ್ಟ್ರೀಯ ಕಾಂಗ್ರೆಸಿನ ಸ್ಥಾಪಕರಲ್ಲೊಬ್ಬರಾದ ರಾನಡೆ ಸರಕಾರೀ ಉದ್ಯೋಗದಲ್ಲಿದ್ದರೂ ಕಾಂಗ್ರೆಸ್ ಅಧಿವೇಶನಗಳಲ್ಲಿ ಭಾಗ ವಹಿಸುತ್ತಿದ್ದರು. ಬ್ರಿಟಿಷ್ ಆಡಳಿತ ವ್ಯವಸ್ಥೆಯಲ್ಲಿ ಗೌರವ ಇಟ್ಟಿದ್ದರು. 'ಇರುವ ವ್ಯವಸ್ಥೆಯ ತಳಹದಿಯ ಮೇಲೆ ಸುಧಾರಣೆಗಳು ಚಿಗುರೊಡೆಯಬೇಕಲ್ಲದೆ, ಮೂಲದಿಂದ ಬೇರೆಯಾಗಿ ಅಲ್ಲ' ಎಂದು ಅವರು ನಂಬಿದ್ದರು. ಕಿರಿಯರಾದ ಗೋಪಾಲಕೃಷ್ಣ ಗೋಖಲೆ ಮೊದಲಾದವರಿಗೆ ಉತ್ತೇಜನ ನೀಡಿ ಅವರನ್ನು ರಾಷ್ಟ್ರೀಯ ರಾಜಕೀಯ ಕಾರ್ಯಕರ್ತರನ್ನಾಗಿ ಮಾಡಿದರು.

'ಮಹಾರಾಷ್ಟ್ರದ ಸಾಮಾಜಿಕ ಚಟುವಟಿಕೆಗಳ ಪಿತಾಮಹ' ಎಂದು ಅವರು ಗೌರವಿಸಲ್ಪಟ್ಟಿದ್ದಾರೆ.

ಎಂ. ವಿಶ್ವೇಶ್ವರಯ್ಯ

ನೋಡಿ : ವಿಶ್ವೇಶ್ವರಯ್ಯ–ಸಂಪುಟ ೧, ೪

ಎಂ. ಸಿ. ಛಗ್ಲಾ

ಭಾರತದ ವಿದ್ಯಾರಂಗದಲ್ಲಿ, ನ್ಯಾಯ ವಿತರಣೆ ರಂಗದಲ್ಲಿ, ರಾಜಕೀಯ ಕ್ಷೇತ್ರದಲ್ಲಿ ಹೆಸರಾಂತ ವ್ಯಕ್ತಿ. ಮಹಮದಾಲಿ ಕರೀಂ ಛಗ್ಲಾ.

1900 ಸೆಪ್ಟೆಂಬರ್ 30ರಂದು ಜನನ. ಆಕ್ಸ್‌ಫರ್ಡಿನ ಲಿಂಕನ್ ಕಾಲೇಜಿನಲ್ಲಿ ವಿದ್ಯಾಭ್ಯಾಸ. ಕೆಲಕಾಲ ವಕೀಲ ವೃತ್ತಿ ನಡೆಸಿದ ಬಳಿಕ ಮುಂಬಯಿಯ ಉಚ್ಚನ್ಯಾಯಾಲಯದ ನ್ಯಾಯಾಧೀಶರೂ (1941–42) ಅನಂತರ ಮುಖ್ಯ ನ್ಯಾಯಾಧೀಶರೂ (1947–58) ಆದರು. ಬ್ರಿಟನಿನಲ್ಲಿ ಭಾರತದ ಹೈಕಮಿಷನರ್ ಆಗಿ, ಅಮೆರಿಕದಲ್ಲಿ ಭಾರತದ ರಾಯಭಾರಿಯಾಗಿ ಸೇವೆ ಸಲ್ಲಿಸಿದರು.



ನ್ಯಾಯ ನಿಷ್ಠ : ಛಗ್ಲಾ

ದಕ್ಷಿಣ ಆಫ್ರಿಕದಲ್ಲಿದ್ದ ಭಾರತೀಯರ ಪರ ವಾದಿಸಲು 1946ರಲ್ಲಿ ವಿಶ್ವಸಂಸ್ಥೆಗೆ ಹೋದ ನಿಯೋಗದಲ್ಲಿ ಛಗ್ಲಾ ಇದ್ದರು. ಹೇಗ್‌ನಲ್ಲಿರುವ ಅಂತರರಾಷ್ಟ್ರೀಯ ನ್ಯಾಯಾಲಯದ ಅಡ್‌ಹಾಕ್ ನ್ಯಾಯಾಧಿಪತಿಯಾಗುವ ಗೌರವ ಇವರದಾಯಿತು. ಕಾಶ್ಮೀರ ವಿವಾದದ ಸಂದರ್ಭದಲ್ಲಿ ಭದ್ರತಾ ಸಮಿತಿಗೆ ತೆರಳಿದ ನಿಯೋಗದ ಮುಖಂಡರಾಗಿದ್ದರು. ಕೇಂದ್ರ ಸರಕಾರದಲ್ಲಿ ವಿದ್ಯಾಮಂತ್ರಿ (1963-66) ಮತ್ತು ವಿದೇಶಾಂಗ ಮಂತ್ರಿ (1966-67) ಆಗಿದ್ದರು.

ಭಾರತೀಯ ಮತ್ತು ವಿದೇಶೀ ವಿಶ್ವವಿದ್ಯಾನಿಲಯಗಳು ಗೌರವ ಡಾಕ್ಟರ್ ಆಫ್ ಲಾಸ್ ಪದವಿ ನೀಡಿ ಛಗ್ಲಾರನ್ನು ಗೌರವಿಸಿವೆ.

ಯೌವನದಲ್ಲಿ ಅವರು ಮಹಮ್ಮದಾಲಿ ಜಿನ್ನಾ ಅವರ ಒಡನಾಡಿಯಾಗಿದ್ದರು. ಮುಸ್ಲಿಂ ಲೀಗ್ ದ್ವಿರಾಷ್ಟ್ರ ಸಿದ್ಧಾಂತವನ್ನು ಪ್ರತಿಪಾದಿಸಿದಾಗ ಆ ಸಂಸ್ಥೆಯಿಂದ ದೂರವಾದರು.

'ಇಂಡಿಯನ್ ಕಾನ್ಸ್‌ಟಿಟ್ಯೂಷನ್', 'ಆನ್ ಅಂಬಾಸಿಡರ್ ಸ್ಪೀಕ್ಸ್', 'ಯೂನಿಟಿ ಅಂಡ್ ಲ್ಯಾಂಗ್ವೇಜ್' ಮೊದಲಾದ ಪುಸ್ತಕಗಳನ್ನು ಇವರು ಬರೆದಿದ್ದಾರೆ. 'ರೋಸಸ್ ಇನ್ ಡಿಸೆಂಬರ್' ಅವರ ಆತ್ಮಕಥೆ.

ಎಂ. ಹಿದಾಯತ್ತುಲ್ಲಾ

ಭಾರತದ ವರಿಷ್ಠ ನ್ಯಾಯಾಲಯದ ಪ್ರಧಾನ ನ್ಯಾಯಾಧೀಶರಾಗಿದ್ದವರು ಎಂ. ಹಿದಾಯತ್ತುಲ್ಲಾ. 1969ರ ಆಗಸ್ಟ್ ತಿಂಗಳಲ್ಲಿ ಅವರು ಭಾರತದ ಹಂಗಾಮಿ ರಾಷ್ಟ್ರಾಧ್ಯಕ್ಷರಾಗಿಯೂ ಕೆಲಸ ಮಾಡಿದರು.

ಇವರು ವಕೀಲ ವೃತ್ತಿ ಆರಂಭಿಸಿದ್ದು 1930ರಲ್ಲಿ. ಕೆಲ ಕಾಲಾನಂತರ ಮಧ್ಯ ಪ್ರದೇಶದ ಅಡ್ವೊಕೇಟ್ ಜನರಲ್ ಆದರು. ಆಮೇಲೆ ನಾಗಪುರದ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರಾಗಿದ್ದರು. 1958–68 ಅವಧಿಯಲ್ಲಿ ವರಿಷ್ಠ ನ್ಯಾಯಾಲಯದ ನ್ಯಾಯಾಧೀಶರಾಗಿದ್ದರು. ಅನಂತರ ಅದೇ ನ್ಯಾಯಾಲಯದ ಪ್ರಧಾನ ನ್ಯಾಯಾಧೀಶರಾಗಿ ನಿವೃತ್ತರಾದರು.

ಹಿದಾಯತ್ತುಲ್ಲಾ ಅವರು ಕಾಯಿದೆ ವಿಚಾರಗಳಿಗೆ ಸಂಬಂಧಪಟ್ಟ ಅನೇಕ ಸಂಸ್ಥೆಗಳಿಗೆ ತಮ್ಮ ಸೇವೆ ಸಲ್ಲಿಸಿದ್ದಾರೆ. ವಿಶ್ವವಿದ್ಯಾಲಯಗಳ ಕಾಯಿದೆ ವಿಭಾಗ, ಅಂತರರಾಷ್ಟ್ರೀಯ ವ್ಯೋಮ ಕಾನೂನು ಸಂಸ್ಥೆ, ಜಾಗತಿಕ ನ್ಯಾಯಾಧೀಶರ ಸಂಘ, ಅಂತರರಾಷ್ಟ್ರೀಯ ಕಾಯಿದೆ ಸಂಘಗಳು, ವಿಶ್ವ ನ್ಯಾಯಾಧೀಶರ ಸಮ್ಮೇಳನದ ಕಾರ್ಯಕಾರಿ ಸಮಿತಿ ಇವುಗಳಲ್ಲೆಲ್ಲ ಹಿದಾಯತ್ತುಲ್ಲಾ ಸದಸ್ಯರಾಗಿದ್ದರು. ಸ್ಕೌಟು ಚಳವಳಿಯಲ್ಲಿ ಅವರಿಗೆ ತುಂಬ ಆಸಕ್ತಿ. ಮಧ್ಯ ಪ್ರದೇಶದ ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್ ಸಂಸ್ಥೆಯ ಚೀಫ್ ಕಮಿಷನರ್ ಆಗಿದ್ದರು.

ಹುಟ್ಟಿದ್ದು 1905 ಡಿಸೆಂಬರ್ 17ರಂದು. ರಾಯಪುರದಲ್ಲಿ ವಿದ್ಯಾಭ್ಯಾಸ. ನಾಗಪುರದಲ್ಲಿ ಕಾಲೇಜು ವ್ಯಾಸಂಗ. ಮುಂದೆ ಇಂಗ್ಲೆಂಡಿನ ಕೇಂಬ್ರಿಜ್ ಟ್ರಿನಿಟಿ ಕಾಲೇಜಿನಲ್ಲಿ ಅಧ್ಯಯನ. ಲಿಂಕನ್ಸ್ ಇನ್‌ನಲ್ಲಿ ಕಾನೂನು ಶಿಕ್ಷಣ ಪಡೆದರು.

‘ಭಾರತದಲ್ಲಿ ಪ್ರಜಾಪ್ರಭುತ್ವ ಮತ್ತು ನ್ಯಾಯ ವಿಧಾಯಕ ವಿಧಾನ’ ‘ನೈರುತ್ಯ ಆಫ್ರಿಕದ ಮೊಕದ್ದಮೆ’ —ಇವು ಅವರ ಗಮನಾರ್ಹ ಕೃತಿಗಳು.

ಎ. ಆರ್. ಗೋಪಾಲಯ್ಯಂಗಾರ್

ಜೀವವಿಜ್ಞಾನದಲ್ಲಿ– ವಿಶೇಷವಾಗಿ ಕೋಶಿಕಾವಿಜ್ಞಾನದಲ್ಲಿ–ಗಮನಾರ್ಹ ಸಾಧನೆ ಮಾಡಿದವರು ಆನೆಕಲ್ ರಾಮಸ್ವಾಮಿ ಗೋಪಾಲಯ್ಯಂಗಾರ್ ಅವರು.

ಜೀವವಿಜ್ಞಾನಿಯಾಗಿ ಅವರು ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಖ್ಯಾತಿ ಪಡೆದಿದ್ದಾರೆ. ಕೋಶಿಕಾವಿಜ್ಞಾನ, ಕೋಶಿಕಾ ರಸಾಯನ ವಿಜ್ಞಾನ, ಕ್ಯಾನ್ಸರ್ ಸಂಶೋಧನೆ, ವಿಕಿರಣ ಜೀವವಿಜ್ಞಾನ ಈ ವಿಭಾಗಗಳಲ್ಲಿ ಅವರ ಅನೇಕ ವೈಜ್ಞಾನಿಕ ಬರಹಗಳು ಪ್ರಕಟವಾಗಿವೆ. 1962ರಿಂದ ಗೋಪಾಲಯ್ಯಂಗಾರ್ ಅವರು ಟ್ರಾಂಬೆಯಲ್ಲಿರುವ ಭಾಭಾ ಪರಮಾಣು ಸಂಶೋಧನಾ ಕೇಂದ್ರದ ಜೀವ–ವೈದ್ಯವಿಜ್ಞಾನ ವಿಭಾಗದ ನಿರ್ದೇಶಕರಾಗಿದ್ದಾರೆ.

ಜನನ 1909, ಜನವರಿ 1ರಂದು. ಮೈಸೂರು ವಿಶ್ವವಿದ್ಯಾನಿಲಯ ಹಾಗೂ ಕೆನಡದ ಟೊರಾಂಟೊ ವಿಶ್ವವಿದ್ಯಾನಿಲಯಗಳಲ್ಲಿ ಪ್ರೌಢ ವ್ಯಾಸಂಗ ನಡೆಸಿದ ಮೇಲೆ ಗೋಪಾಲಯ್ಯಂಗಾರ್ ಒಂದು ವರ್ಷ ಕಾಲ ವಿನ್ಸೆಂಟ್ ಮಾಸ್ಸೆ ಫೆಲೋ ವೇತನ ಪಡೆದರು. 1941ರಲ್ಲಿ ಎಲಿಜಬೆತ್ ಆನ್ ವಿಂಟರ್‌ಕಾರ್ಟಿನ್ ಪ್ರಶಸ್ತಿ. 1948ರಲ್ಲಿ ಎಚ್. ಜೆ. ಭಾಭಾ ಬಹುಮಾನ ದೊರೆಯಿತು.

ರಾಷ್ಟ್ರೀಯ, ಅಂತರರಾಷ್ಟ್ರೀಯ ವೈಜ್ಞಾನಿಕ ಸಂಸ್ಥೆಗಳಲ್ಲಿ ಇವರು ವಿವಿಧ ಸ್ಥಾನಗಳಲ್ಲಿ ಕೆಲಸ ಮಾಡಿದ್ದಾರೆ. ಅಂತರರಾಷ್ಟ್ರೀಯ ಕೋಶಿಕಾ ಜೀವ ವಿಜ್ಞಾನ ಸಂಸ್ಥೆ, ನ್ಯೂಯಾರ್ಕ್ ಅಕಾಡೆಮಿ ಆಫ್ ಸೈನ್ಸಸ್, ಅಮೆರಿಕನ್ ಅಸೋಸಿಯೇಷನ್ ಫಾರ್ ಕ್ಯಾನ್ಸರ್ ರಿಸರ್ಚ್ ಮುಂತಾದ ಸಂಸ್ಥೆಗಳಲ್ಲಿ ದುಡಿದಿದ್ದಾರೆ. 1956ರಲ್ಲಿ ವಿಶ್ವಸಂಸ್ಥೆಯ ವೈಜ್ಞಾನಿಕ ಸಮಿತಿಯ ಅಧ್ಯಕ್ಷರಾದರು. ವಿಕಿರಣ ಸಮಿತಿಯಲ್ಲಿ ವಿಶ್ವ ಆರೋಗ್ಯ ಸಂಸ್ಥೆಯ ತಜ್ಞರಾಗಿ 10 ವರ್ಷ ಕೆಲಸ ಮಾಡಿದರು. ಅಂತರರಾಷ್ಟ್ರೀಯ ಜೀವಭೌತ ವಿಜ್ಞಾನ ಸಮಿತಿಯ ಸದಸ್ಯರಾಗಿ 6 ವರ್ಷ ಸೇವೆ ಸಲ್ಲಿಸಿದರು. ಆಗ್ನೇಯ ಏಷ್ಯಾದ ಪ್ರತಿನಿಧಿಯಾಗಿ 1958ರಿಂದ 1969 ವರೆಗೆ ಅಂತರರಾಷ್ಟ್ರೀಯ ಜೀವ ವಿಜ್ಞಾನ ಒಕ್ಕೂಟದ ತಳಿವಿಜ್ಞಾನ ವಿಭಾಗದಲ್ಲಿದ್ದರು.

ವರ್ಣಸೂತ್ರ (ಕ್ರೋಮೊಸೋಮ್) ಸಂಶ್ಲೇಷಣೆ, ಜೀನಿ (ವಂಶವಾಹಿ) ವಿಭಜನೆ. ತೀವ್ರ ವಿಕಿರಣ ಪ್ರದೇಶದ ಜೀವ ವೈಜ್ಞಾನಿಕ ಸಂಶೋಧನೆ —ಇವು ಅವರ ಕೆಲವು ಮುಖ್ಯ ಸಂಶೋಧನಾ ಕ್ಷೇತ್ರಗಳು.

1967ರಲ್ಲಿ ಭಾರತ ಸರಕಾರ ಇವರಿಗೆ ಪದ್ಮಶ್ರೀ ಪ್ರಶಸ್ತಿ ನೀಡಿತು. ಮೈಸೂರು ವಿಶ್ವವಿದ್ಯಾನಿಲಯ 1970ರಲ್ಲಿ ಗೌರವ ಡಾಕ್ಟರೇಟ್ ನೀಡಿ ಇವರನ್ನು ಗೌರವಿಸಿತು.

ಎ. ಎನ್. ರಾಯ್

ಭಾರತದ ಶ್ರೇಷ್ಠ ನ್ಯಾಯಾಧೀಶರಾಗಿ ಅಜಿತನಾಥ ರಾಯ್ ಅವರು (ನಿವೃತ್ತರಾದ ಎಸ್. ಎಂ. ಸಿಕ್ರಿ ಅವರ ಸ್ಥಾನಕ್ಕೆ) 197 ಏಪ್ರಿಲ್ 25ರಂದು ನೇಮಕಗೊಂಡರು.

1912ರಲ್ಲಿ ಕಲ್ಕತ್ತೆಯಲ್ಲಿ ಜನಿಸಿದ ರಾಯ್ ಅವರು ಅಲ್ಲಿನ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಅಭ್ಯಸಿಸಿ ಎಂ. ಎ. ಪದವಿ ಪಡೆದರು. ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯ ಸೇರಿ ಕಾನೂನು ಓದಿ ಇಂಗ್ಲೆಂಡಿನಲ್ಲೇ ವೃತ್ತಿನಿರತರಾದರು. ಅನಂತರ ಕಲ್ಕತ್ತೆಗೆ 1936ರಲ್ಲಿ ಹಿಂದಿರುಗಿ ವಕೀಲವೃತ್ತಿ ನಡೆಸ ತೊಡಗಿದರು. 1957ರಲ್ಲಿ ಅವರು ಕಲ್ಕತ್ತಾ ಹೈಕೋರ್ಟಿನ ನ್ಯಾಯಾಧೀಶರಾಗಿ ನೇಮಕಗೊಂಡರು. 1969 ಆಗಸ್ಟ್ 1ರಂದು ವರಿಷ್ಠ ನ್ಯಾಯಾಲಯದ ನ್ಯಾಯಮೂರ್ತಿ ಆದರು.



ವಾದವಿವಾದ : ಅಜಿತನಾ

ಆಗ ತಮ್ಮ ಸೇವಾಹಿರಿತನವನ್ನು ಕಡೆಗಣಿಸಿ ಅಜಿತನಾಥ ರಾಯ್ ಅವರನ್ನು ಶ್ರೇಷ್ಠ ನ್ಯಾಯಾಧೀಶರಾಗಿ ನೇಮಿಸಲಾಯಿತೆಂದು. ಅವರಿಗಿ ಹೆಚ್ಚು ಸೇವಾಹಿರಿತನವಿದ್ದ ಮೂವರು ನ್ಯಾಯಾಧೀಶರು ಪ್ರತಿಭಟಿ ತಮ್ಮ ಸ್ಥಾನಗಳಿಗೆ ರಾಜೀನಾಮೆ ಕೊಟ್ಟರು.

ಎ. ಒ. ಹ್ಯೂಮ್

“ದಕ್ಷ ವಿದ್ಯಾವಂತ ತರುಣರು ಕೆಲವರೇ ಆದರೂ ವೈಯಕ್ತಿಕ ಆಕಾ ಬದಿಗಿಟ್ಟು, ಸ್ವದೇಶದ ಹಿತಕ್ಕಾಗಿ ದುಡಿಯಲು ಮುಂದೆ ಬಾರದಿದ್ದ ಸ್ವಾರ್ಥ ಹೊರಗಿನವರ ದಾಳಿಗಳಿಂದ ಸಂಘರ್ಷ . . . ವಿದ್ಯಾವಂತರು ಕ್ರಿ



ಕಾಂಗ್ರೆಸ್ ಸ್ಥಾಪನೆ : ಹ್ಯೂಮ್

ಶೀಲರಾಗಿ, ವೈಯಕ್ತಿಕ ಮತ್ತು ದೇಶದ ಸ್ವಾತಂತ್ರ್ಯಕ್ಕಾಗಿ ನೈತಿಕ ಧೈರ್ಯದಿಂದ, ಶಿಸ್ತಿನಿಂದ ಸಂಘಟಿತರಾಗದಿದ್ದರೆ ದೇಶಕ್ಕೆ ಭವಿಷ್ಯವಿಲ್ಲ."

1883 ಮಾರ್ಚ್ 1ರಂದು ಕಲ್ಕತ್ತಾ ವಿಶ್ವವಿದ್ಯಾನಿಲಯದ ಪದವೀಧರರನ್ನು ಉದ್ದೇಶಿಸಿ ಎ. ಒ. ಹ್ಯೂಮ್ ಬರೆದ ದೀರ್ಘ ಪತ್ರದ ಕೆಲವು ಸಾಲುಗಳಿವು. ಹ್ಯೂಮ್ ಮುಂದೆ ಎರಡು ವರ್ಷಗಳಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸಿನ ಸ್ಥಾಪನೆಗೂ ಕಾರಣರಾದರು. ಅವರ ಆಶಯದಂತೆ ಕ್ರಿಯಾಶೀಲ ಸಂಘಟನೆಯಾಗಿ ಬೆಳೆದ ಆ ಸಂಸ್ಥೆಯೇ ಮುಂದೆ ಸ್ವಾತಂತ್ರ್ಯ ಚಳವಳಿಯ ಮುಂಚೂಣಿಯಾಯಿತು.

ಅಲೆನ್ ಆಕ್ಟೇವಿಯನ್ ಹ್ಯೂಮ್ ಹುಟ್ಟಿದ್ದು ಇಂಗ್ಲೆಂಡಿನಲ್ಲಿ, 1829 ಜೂನ್ 6ರಂದು. ತಂದೆ ಜೋಸೆಫ್ ಹ್ಯೂಮ್ ಬ್ರಿಟಿಷ್ ಪಾರ್ಲಿಮೆಂಟಿನ ತೀವ್ರಗಾಮಿ ಸದಸ್ಯ; ನಿರ್ದಾಕ್ಷಿಣ್ಯ ನಿಲುವಿಗೆ ಹೆಸರಾಗಿದ್ದ ಅವರು ಹಲವು ಸಲ ಭಾರತೀಯ ಹಿತಾಸಕ್ತಿಗಳನ್ನು ಎತ್ತಿಹಿಡಿದದ್ದುಂಟು. ಲಂಡನ್ ವಿಶ್ವವಿದ್ಯಾನಿಲಯದ ಶಿಕ್ಷಣದ ಅನಂತರ 1849ರಲ್ಲಿ ಇಂಡಿಯನ್ ಸಿವಿಲ್ ಸರ್ವಿಸ್ ಅಧಿಕಾರಿ ಆಗಿ ನೇಮಕಗೊಂಡ ಹ್ಯೂಮ್, ಭಾರತದ ವಿವಿಧ ಪ್ರದೇಶಗಳಲ್ಲಿ ಹಲವಾರು ಹುದ್ದೆಗಳನ್ನು ನಿರ್ವಹಿಸಿದರು. ಪ್ರಾಮಾಣಿಕ ವ್ಯಕ್ತಿಯಾದ ಹ್ಯೂಮ್, ಸರಕಾರದೊಡನೆ ತಮ್ಮ ಭಿನ್ನಾಭಿಪ್ರಾಯಗಳಿಂದಾಗಿ, 1882ರಲ್ಲಿ ತಮ್ಮ ಕೆಲಸಕ್ಕೆ ರಾಜಿನಾಮೆ ಸಲ್ಲಿಸಿದರು.

ಭಾರತೀಯರ ಆರ್ಥಿಕ ಹಿನ್ನೆಲೆಯ ಬಗೆಗೆ ಹ್ಯೂಮ್‌ರಿಗೆ ಮರುಕ ಇದ್ದಿತು. ತಾವು ಕಂದಾಯಶಾಖೆ ಕಾರ್ಯದರ್ಶಿಯಾಗಿದ್ದಾಗಲೇ, "ಸರಕಾರದ ಎಲ್ಲ ಆದಾಯ ಪಾಪದ ಹಣ," ಎಂದು ಟೀಕೆ ಮಾಡಿದ್ದರು, ಆ ಹುದ್ದೆ ಬಿಡುವ ವೇಳೆಗೆ ವ್ಯವಸಾಯ ಸುಧಾರಣೆಯ ಯೋಜನೆಯೊಂದನ್ನು ಆಗತಾನೆ ರೂಪಿಸಿದ್ದರು. 'ಜನತಾ ಮಿತ್ರ' ಎಂಬ ಪತ್ರಿಕೆಯ ಸ್ಥಾಪನೆಗೆ ಅವರು ಮುಖ್ಯ ಪ್ರೇರಕರು.

ನಿವೃತ್ತಿಯ ಅನಂತರ ಇಂಗ್ಲೆಂಡಿಗೆ ತೆರಳಿ ಅಲ್ಲಿನ ಪ್ರಮುಖರೊಡನೆ ಭಾರತದ ಆವಶ್ಯಕತೆಗಳ ಬಗೆಗೆ ಚರ್ಚಿಸಿ ಸಹಾನುಭೂತಿ ಮೂಡಿಸಿದರು. ಹಿಂದಿರುಗಿದ ಅನಂತರ ಇಲ್ಲಿನ ಪ್ರಮುಖರೊಡನೆ ವಿಚಾರ ವಿನಿಮಯ ನಡೆಸಿ, ರಾಷ್ಟ್ರೀಯ ಕಾಂಗ್ರೆಸ್ಸಿನ ಸ್ಥಾಪನೆಗೆ ಕಾರಣರಾದರು. ಕಾಂಗ್ರೆಸ್ಸಿನ ಮೊತ್ತ ಮೊದಲ ಅಧಿವೇಶನದಲ್ಲಿ ಪ್ರಪ್ರಥಮ ಭಾಷಣಕಾರರು ಹ್ಯೂಮ್. ಅವರು ತಮ್ಮ ಕೊನೆಯ ತನಕವೂ ಕಾಂಗ್ರೆಸ್ಸಿನಲ್ಲಿ ಆಸಕ್ತಿ ವಹಿಸಿದರು. ಕೆಲ ಕಾಲ ಅದರ ಕಾರ್ಯದರ್ಶಿಯೂ ಆಗಿದ್ದರು.

ಹ್ಯೂಮ್ ಪಕ್ಷಿವಿಜ್ಞಾನಿ ಕೂಡ. ಭಾರತ, ಬರ್ಮ, ಸಿಂಹಳಗಳ ಪಕ್ಷಿಗಳ ಅಧ್ಯಯನ ನಡೆಸಿ ಗ್ರಂಥ ರಚಿಸಿದರು. ತಮ್ಮ ಪಕ್ಷಿ ಸಂಗ್ರಹವನ್ನು ಮುಂದೆ ಬ್ರಿಟಿಷ್ ಮ್ಯೂಸಿಯಮ್‌ಗೆ ಅರ್ಪಿಸಿದರು. ಸಸ್ಯ ಸಮೀಕ್ಷೆ ಮತ್ತು ಪಕ್ಷಿ ಅಧ್ಯಯನಕ್ಕಾಗಿ ಅವರು ಸುಮಾರು 20 ಸಾವಿರ ಪೌಂಡ್ ಸ್ವಂತ ಹಣವನ್ನು ವ್ಯಯಿಸಿದ್ದರು.

ಎ. ಒ. ಹ್ಯೂಮ್ 1912 ಜುಲೈ 31ರಂದು 83ನೆಯ ವಯಸ್ಸಿನಲ್ಲಿ ನಿಧನರಾದರು.

ಎ. ಕೆ. ಗೋಪಾಲನ್



ನಿರಂತರ ಹೋರಾಟ : ಎ. ಕೆ. ಜಿ.

ಮಾರ್ಕ್ಸ್ ಸಿದ್ಧಾಂತವನ್ನು ಕೇರಳದ ಸಹಸ್ರಾರು ಸುಶಿಕ್ಷಿತರ ಹಾಗೂ ಅನಕ್ಷರಸ್ಥರ ಮನೆಬಾಗಿಲಿಗೆ ಒಯ್ದವರು ಎ.ಕೆ. ಗೋಪಾಲನ್. ಮಲಬಾರಿನ ಕಾರ್ಮಿಕರು ಮತ್ತು 'ಕುಡಿಕಿಡಪ್ಪುಕಾರ'ರ (ಗುಡಿಸಲು ವಾಸಿಗಳು) ಜನಪ್ರಿಯ ನಾಯಕರು ಇವರು. ಗುರುವಾಯೂರು ದೇವಸ್ಥಾನಕ್ಕೆ ಎಲ್ಲರಿಗೂ ಪ್ರವೇಶ ಸಿಗಬೇಕು ಎಂದು ಒತ್ತಾಯಪಡಿಸಲು ಇವರು ಕಣ್ಣಾನೂರಿನಿಂದ 750 ಮೈಲು ದೂರದ ಮದರಾಸಿಗೆ ಪಾದಯಾತ್ರೆ ಮಾಡಿದರು. ಅಖಿಲ ಭಾರತ ಕಿಸಾನ್ ಸಭಾ ಅಧ್ಯಕ್ಷರಾಗಿದ್ದ ಇವರು ಕಾಸರಗೋಡಿನಿಂದ ತಿರುವನಂತಪುರಕ್ಕೆ ಕಾಲುನಡಿಗೆಯಲ್ಲಿ ಹೋದ ರೈತ ತಂಡದ ಮುಂದಾಳುತ್ವವನ್ನು ವಹಿಸಿದ್ದರು.

ಕೇರಳದ ಕಣ್ಣಾನೂರು ಜಿಲ್ಲೆಯಲ್ಲಿ 1904 ಅಕ್ಟೋಬರ್ 1ರಂದು ಗೋಪಾಲನ್ ಹುಟ್ಟಿದರು. ಉದ್ಯೋಗವನ್ನು ಆರಂಭಿಸಿದ್ದು ಉಪಾಧ್ಯಾಯರಾಗಿ. ಇವರು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್, ಕಾಂಗ್ರೆಸ್ ಸೋಷಲಿಸ್ಟ ಪಕ್ಷ ಮತ್ತು ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಸದಸ್ಯರಾಗಿದ್ದರು. ಕೇರಳ ಪ್ರದೇಶ ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿ ಮತ್ತು ಅಧ್ಯಕ್ಷರಾಗಿಯೂ ಕೆಲಸ ಮಾಡಿದರು. ಸ್ವಾತಂತ್ರ್ಯಸಮರದಲ್ಲಿ ಭಾಗವಹಿಸಿ ಹಲವು ಬಾರಿ ಸೆರೆಮನೆ ಕಂಡರು. ಬಹು ವರ್ಷ ಕಾಲ ಭೂಗತರಾಗಿದ್ದುಕೊಂಡೇ ತಮ್ಮ ಚಟುವಟಿಕೆಗಳನ್ನು ನಡೆಸಿದರು. 1952ರಿಂದ ಗೋಪಾಲನ್ ಲೋಕ ಸಭೆಯ ಸದಸ್ಯರು.

ಭಾರತದ ಕಮ್ಯೂನಿಸ್ಟ್ ಪಕ್ಷ ಇಬ್ಭಾಗವಾದಾಗ ಗೋಪಾಲನ್ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸಿಸ್ಟ್)ದ ಪ್ರಮುಖ ನಾಯಕರಾದರು.

ಎ. ಕೆ. ಚಟರ್ಜಿ


ಭಾರತೀಯ ನೌಕಾಬಲಾಧಿಪತಿಯಾಗಿ ನಿವೃತ್ತರಾದವರು ಅಧರ್ ಕುಮಾರ್ ಚಟರ್ಜಿ—ಎ. ಕೆ. ಚಟರ್ಜಿ.

ಜನನ 1914 ನವೆಂಬರ್ 22. ವಿದ್ಯಾಭ್ಯಾಸ ಕಲ್ಕತ್ತೆಯ ಪ್ರೆಸಿಡೆನ್ಸಿ ಕಾಲೇಜಿನಲ್ಲಿ. ನೌಕಾದಳ ಸೇರಿದ್ದು 1933ರಲ್ಲಿ. ಯುದ್ಧನೌಕೆಗಳ ವಿದ್ಯುತ್ ಕಾರ್ಯದಲ್ಲಿ ಇಂಗ್ಲೆಂಡಿನಲ್ಲಿ ತರಬೇತಿ ಪಡೆದ ಚಟರ್ಜಿ ಎರಡನೆಯ ಮಹಾಯುದ್ಧದಲ್ಲಿ ಭಾಗವಹಿಸಿದರು.

1947ರಲ್ಲಿ ಮತ್ತೆ ಇಂಗ್ಲೆಂಡಿಗೆ ಹೋಗಿ ತರಬೇತಿ ಮುಗಿಸಿ ಬಂದು ನೌಕಾ ಬಲದ ಪ್ರಧಾನ ಕಚೇರಿಯಲ್ಲಿ ನೌಕಾಯೋಜನೆಯ ಡೈರೆಕ್ಟರ್ ಆದರು.

1950ರಲ್ಲಿ ಐ.ಎನ್.ಎಸ್. 'ದೆಹಲಿ'ಯ ಕಮಾಂಡರ್ ಸ್ಥಾನ ದೊರೆಯಿತು. ಕ್ರೂಸರ್ ಯುದ್ಧ ಹಡಗೊಂದರ ಅಧಿಪತಿಯಾದ ಪ್ರಥಮ ಭಾರತೀಯ ಅವರು. ಲಂಡನಿನಲ್ಲಿ ಭಾರತದ ಹೈಕಮಿಷನರಿಗೆ ನೌಕಾ ಸಲಹೆಗಾರ

ನೌಕಾ ನಿರ್ವಹಣೆ : ಚಟರ್ಜಿ



ರಾಗಿದ್ದು ಭಾರತಕ್ಕೆ ಹಿಂತಿರುಗಿದ ಮೇಲೆ ಮತ್ತೆ ಐ. ಎನ್. ಎಸ್. 'ದೆಹಲಿ'ಯ ಮುಖ್ಯಾಧಿಕಾರಿಯಾದರು. 1954ರಲ್ಲಿ ಮುಂಬಯಿ ನೌಕಾ ನೆಲೆಯ ಕಮಾಂಡರ್ ಇನ್ ಛಾರ್ಜ್ ಆಗಿ ಎರಡು ವರ್ಷ ಕಾಲ ಅನೇಕ ನೌಕೆಗಳ ಆಡಳಿತ ಜವಾಬ್ದಾರಿ ನಿರ್ವಹಿಸಿದರು.

ಮತ್ತೆ ಇಂಗ್ಲೆಂಡಿಗೆ ಹೋಗಿ ಇಂಪೀರಿಯಲ್ ಡಿಫೆನ್ಸ್ ಕಾಲೇಜಿನಲ್ಲಿ ಶಿಕ್ಷಣ ಪಡೆದು ಭಾರತಕ್ಕೆ ಮರಳಿದರು. 1959ರಲ್ಲಿ ರಿಯರ್ ಅಡ್ಮಿರಲ್ ಆಗಿ ಬಡ್ತಿ ದೊರೆಯಿತು. ಫ್ಲಾಗ್ ಆಫೀಸರ್ ಆದ ತರುವಾಯ ಐ. ಎನ್. ಎಸ್. 'ಮೈಸೂರಿ'ನಲ್ಲಿ ಫ್ಲೈತೆಂಡ್ ಹಾಗೂ ಇತರ ದೇಶಗಳಿಗೆ ಸೌಹಾರ್ದ ಭೇಟಿ ನೀಡಿದರು. ದೆಹಲಿಯ ನ್ಯಾಷನಲ್ ಡಿಫೆನ್ಸ್ ಕಾಲೇಜಿನ ಕಮಾಂಡೆಂಟ್ ಆದರು.

1966ರಲ್ಲಿ ಬಿ. ಎಸ್. ಸೋಮನ್ ಅವರಿಂದ ನೌಕಾಬಲಾಧಿಪತಿಯ ಅಧಿಕಾರ ವಹಿಸಿಕೊಂಡರು; 1968ರಲ್ಲಿ ಅಡ್ಮಿರಲ್ ಆದರು. 1970ರಲ್ಲಿ ಈ ಅಧಿಕಾರದಿಂದ ನಿವೃತ್ತರಾದರು.

ಆಡಳಿತ ಮತ್ತು ಸಮರ ಕ್ಷೇತ್ರಗಳೆರಡರಲ್ಲೂ ಚಟರ್ಜಿ ದಕ್ಷರು. ನೌಕಾ ನಿರ್ವಹಣೆಯಲ್ಲಿ, ಇಡೀ ಕಾಮನ್‌ವೆಲ್ತ್‌ನ ಶ್ರೇಷ್ಠರಲ್ಲೊಬ್ಬರು ಎಂಬ ಖ್ಯಾತಿ ಇವರದು.

ಸಾಹಿತ್ಯ, ವಿಜ್ಞಾನ, ತೋಟಗಾರಿಕೆ, ವ್ಯಾಯಾಮ, ಕ್ರೀಡೆಗಳಲ್ಲಿ ಇವರಿಗೆ ತುಂಬ ಆಸಕ್ತಿ.

ಎಚ್. ಎಂ. ಟಿ.

ನೋಡಿ : ಹಿಂದೂಸ್ಥಾನ್ ಮೆಷಿನ್ ಟೂಲ್ಸ್

ಎಚ್. ಎ. ಎಲ್.

ನೋಡಿ : ಹಿಂದೂಸ್ಥಾನ್ ಏರೊನಾಟಿಕ್ಸ್

ಎಚ್. ಎನ್. ಕುಂಜ್ರು

ಉಜ್ವಲ ದೇಶಭಕ್ತ, ಸಾಮಾಜಿಕ ಕಾರ್ಯಕರ್ತ ಹಾಗೂ ರಾಜನೀತಿಜ್ಞ – ಹೃದಯನಾಥ ಕುಂಜ್ರು.



ಸಮಾಜ ಕಾರ್ಯ : ಹೃದಯನಾಥ

ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿಯ ಆಜೀವ ಸದಸ್ಯರಾದ ಕುಂಜ್ರು ಆ ಸಂಸ್ಥೆಯ ಅಧ್ಯಕ್ಷರು. ಇವರು ಹಲವಾರು ಶೈಕ್ಷಣಿಕ ಮತ್ತು ಸಾಮಾಜಿಕ ಸಂಸ್ಥೆಗಳ ಸದಸ್ಯರು, ಅಧ್ಯಕ್ಷರು ; ಹತ್ತು ವರ್ಷ ಕಾಲ ರಾಜ್ಯಸಭೆಯ ಸದಸ್ಯ ; ದಕ್ಷಿಣ ಆಫ್ರಿಕಕ್ಕೆ ತೆರಳಿದ್ದ ಭಾರತ ನಿಯೋಗದ ಮುಖಂಡರು.

ಕುಂಜ್ರು 1887 ಅಕ್ಟೋಬರ್ 1ರಂದು ದೆಹಲಿಯಲ್ಲಿ ಜನಿಸಿದರು. ಅಲಹಾಬಾದ್ ವಿಶ್ವವಿದ್ಯಾನಿಲಯದಲ್ಲಿ ಮತ್ತು ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್‌ನಲ್ಲಿ ವಿದ್ಯಾಭ್ಯಾಸ ಪಡೆದರು.

ರಾಜಕೀಯದಲ್ಲಿ ಸ್ವತಂತ್ರ ವಿಚಾರಗಳಿಗೆ ಖ್ಯಾತರು. ಸ್ವತಂತ್ರ ಭಾರತದಲ್ಲಿ ನೇಮಕಗೊಂಡ ರಾಜ್ಯ ಪುನರ್ರಚನಾ ಆಯೋಗದ ಮೂವರು ಸದಸ್ಯರಲ್ಲಿ ಕುಂಜ್ರು ಒಬ್ಬರಾಗಿದ್ದರು.

ಎಚ್. ಎನ್. ಸೇಠ್ನಾ

ಟ್ರಾಂಬೆಯಲ್ಲಿ ಇರುವ ಪ್ಲುಟೋನಿಯಂ ಸ್ಥಾವರದ ರೂಪುರೇಷೆ ನಿರ್ಮಾಣಗಳಿಗೆ ಕಾರಣರಾದ ಡಾ. ಎಚ್. ಎನ್. ಸೇಠ್ನಾ ಭಾರತೀಯ ಪರಮಾಣುಶಕ್ತಿ ಮಂಡಲಿಯ ಅಧ್ಯಕ್ಷರು ಹಾಗೂ ಭಾರತ ಸರಕಾರದ ಪರಮಾಣುಶಕ್ತಿ ಇಲಾಖೆಯ ಕಾರ್ಯದರ್ಶಿ.

ಅವರು ಇಂಡಿಯನ್ ಅಕಾಡೆಮಿ ಆಫ್ ಸೈನ್ಸಸ್ ಸಂಸ್ಥೆಯ ಆಜೀವ ಸದಸ್ಯರು. ಅಂತರರಾಷ್ಟ್ರೀಯ ಅಟಾಮಿಕ್ ಎನರ್ಜಿ ಏಜೆನ್ಸಿಯ ವೈಜ್ಞಾನಿಕ ಸಲಹಾ ಸಮಿತಿಯ ಸದಸ್ಯರು.



ವಿಜ್ಞಾನ ಪ್ರಶಸ್ತಿ : ಸೇಠ್ನಾ

ಪರಮಾಣು ಶಕ್ತಿಯ ಶಾಂತಿಯುತ ಬಳಕೆಗಾಗಿ ಜಿನೀವಾದಲ್ಲಿ 1958ರಲ್ಲಿ ನಡೆದ ವಿಶ್ವಸಂಸ್ಥೆಯ ಎರಡನೆಯ ಅಧಿವೇಶನದ ಉಪ ಪ್ರಧಾನ ಕಾರ್ಯದರ್ಶಿಯಾಗಿದ್ದರು.

ಹೋಮಿ ನೌಸರವಾನ್‌ಜಿ ಸೇಠ್ನಾ ಅವರು 1923 ಆಗಸ್ಟ್ 24ರಂದು ಜನಿಸಿದರು. ಮುಂಬಯಿ ಮತ್ತು ಅಮೆರಿಕದ ಮಿಚಿಗನ್ ವಿಶ್ವವಿದ್ಯಾನಿಲಯಗಳಲ್ಲಿ ಪ್ರೌಢ ವ್ಯಾಸಂಗ ಮುಗಿಸಿದರು. 1959ರಲ್ಲಿ ಭಾರತದ ಪರಮಾಣು ಶಕ್ತಿ ಮಂಡಲಿಯನ್ನು ಸೇರಿದರು. ಮೊನಜೈಟ್ ಅದಿರು ಮಿಶ್ರಿತ ಮರಳಿನಿಂದ ಪರಮಾಣು ರಿಯಾಕ್ಟರಿಗೆ ಬೇಕಾದ ಥೋರಿಯಂ ಮೊದಲಾದ ಅಪೂರ್ವ ಮೃತ್ತಿಕೆಗಳನ್ನು ಬೇರ್ಪಡಿಸುವ ಸ್ಥಾವರವನ್ನು ಕೇರಳದ ಆಲ್ವಾಯ್‌ನಲ್ಲಿ ಸ್ಥಾಪಿಸಿದರು. ಅನಂತರ ಟ್ರಾಂಬೆ ಸ್ಥಾವರ, ಜದುಗೊಡದ ಯುರೇನಿಯಂ ಉತ್ಪಾದನಾ ಕೇಂದ್ರಗಳನ್ನು ರೂಪಿಸಿದರು.

ಸರಕಾರ ಇವರಿಗೆ 1959ರಲ್ಲಿ ಪದ್ಮಶ್ರೀ, 1966ರಲ್ಲಿ ಪದ್ಮಭೂಷಣ ಪ್ರಶಸ್ತಿಗಳನ್ನು ನೀಡಿ ಗೌರವಿಸಿತು. 1959ರ ಶಾಂತಿಸ್ವರೂಪ್ ಭಟ್ನಾಗರ್ ಪ್ರಶಸ್ತಿ (ವಿಜ್ಞಾನ ಪ್ರಶಸ್ತಿ) ಅವರಿಗೆ ದೊರೆಯಿತು. 1967ರಲ್ಲಿ ಅಮೆರಿಕದ ಮಿಚಿಗನ್ ವಿಶ್ವವಿದ್ಯಾನಿಲಯ ತನ್ನ 150ನೆಯ ವಾರ್ಷಿಕೋತ್ಸವದ ಸಂದರ್ಭದಲ್ಲಿ ನೀಡಿದ ವಿಶೇಷ ಪ್ರಶಸ್ತಿ ಗಳಿಸಿದವರಲ್ಲಿ ಸೇಠ್ನಾ ಅವರೂ ಒಬ್ಬರು.

ಎಚ್. ಕೆ. ವೀರಣ್ಣಗೌಡ

ಗಾಂಧೀಜೀ ಬೆಂಗಳೂರಿಗೆ ಬಂದಿದ್ದಾಗ ಯುಂಪಕ ವೀರಣ್ಣಗೌಡರನ್ನು ರಾಜಾಜಿ ಪರಿಚಯ ಮಾಡಿಕೊಟ್ಟದ್ದು ಉತ್ತಮ ಕೆಲಸಗಾರ ಎಂದು



ಅರ್ಧ ಶತಮಾನದ ಸೇವೆ : ವೀರಣ್ಣಗೌಡ

ಜನನ 1899 ಮೇ ಮೊದಲ ದಿನ, ಚೆನ್ನಪಟ್ಟಣ ತಾಲೂಕು ಹೊಸಹಳ್ಳಿಯಲ್ಲಿ. ಪ್ರಾಥಮಿಕ ವಿದ್ಯಾಭ್ಯಾಸ ಅಲ್ಲಿಯೇ. ಚೆನ್ನಪಟ್ಟಣದಲ್ಲಿ ಪ್ರೌಢಶಾಲಾ ಶಿಕ್ಷಣ ಮುಗಿಸಿ, ಮೈಸೂರಿನಲ್ಲಿ ಯೂನಿವರ್ಸಿಟಿ ಎನ್ಟ್ರೆನ್ಸ್ ತರಗತಿ ಸೇರಿದರು. ಆದರೆ ಎನ್ಟ್ರೆನ್ಸ್ ಶಿಕ್ಷಣ ಮುಗಿಸಲಿಲ್ಲ. ಮೈಸೂರಿನಲ್ಲಿದ್ದಾಗ ...ತಂತ್ರ್ಯ ಹೋರಾಟಗಾರ ... ಕೃಷ್ಣರಾಯರ ... ಭಾವಿತರಾದರು.

ವಿದ್ಯಾರ್ಥಿಯಾಗಿದ್ದಾಗಲೇ ವಿದ್ಯಾರ್ಥಿಗಳಿಗಾಗಿ ಕನ್ನಡ ತ್ರೈಮಾಸಿಕ ...ತ್ರಿಕೆಯೊಂದನ್ನು ನಡೆಸುತ್ತಿದ್ದ ಗೌಡರು ಮುಂದೆ ಅನೇಕ ಪತ್ರಿಕೆಗಳ ...ಾಲಕ ಪತ್ರಿಕೋದ್ಯಮವನ್ನು ರಾಷ್ಟ್ರೀಯ ಚಳುವಳಿಯ ಸಾಧನವಾಗಿ ...ಂಡುಮುಂದುವರಿಸಿದರು. ಮಕ್ಕಳ ಮನಸ್ಸನ್ನು ರೂಪಿಸುವ ಆಸೆ ಹೊಂದಿದ್ದ ...ರಣ್ಣಗೌಡರು ಮಾಧ್ಯಮಿಕ ಶಾಲಾ ಮುಖ್ಯೋಪಾಧ್ಯಾಯರಾಗಿಯೂ ... ಕಾಲ ಕೆಲಸ ಮಾಡಿದರು. ಆದರೆ ಒಲವು ಪತ್ರಿಕೋದ್ಯಮದ ...ಗೇ ಇತ್ತು. ಕೆಲಸ ಬಿಟ್ಟು 'ಒಕ್ಕಲಿಗರ ಪತ್ರಿಕೆ' ಸಂಪಾದಕರಾದರು. ...28ರಲ್ಲಿ 'ಚಿತ್ರಗುಪ್ತ' ಆರಂಭಿಸಿದರು.

1921ರಲ್ಲಿಯೇ ಕಾಂಗ್ರೆಸ್ ಸಂಸ್ಥೆಯ ಸದಸ್ಯರಾಗಿದ್ದ ಹೊಸಹಳ್ಳಿ ಕೆಂಚೇ...ಡ ವೀರಣ್ಣಗೌಡರು ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿ ನಾಲ್ಕು ಬಾರಿ ...ಟ್ಟು ಸುಮಾರು ಆರು ವರ್ಷ ಕಾಲ ಕಠಿಣ ಸಜಾ ಅನುಭವಿಸಿದರು.

193...ರಲ್ಲಿ ನಡೆದ ಶಿವಪುರ ಕಾಂಗ್ರೆಸ್ ಅಧಿವೇಶನ ಆಗಿನ ಮೈಸೂರು ...ಜ್ಯದ ಕಾಂಗ್ರೆಸ್ ಚಳುವಳಿಯಲ್ಲಿ ಒಂದು ಪ್ರಮುಖ ಘಟ್ಟ. ಆ ...ಧಿವೇಶನದ ಸ್ವಾಗತ ಸಮಿತಿಯ ಪ್ರಧಾನ ಕಾರ್ಯದರ್ಶಿಯಾಗಿದ್ದ ...ರಣ್ಣಗೌಡರು 1952ರಲ್ಲಿ ಮೈಸೂರು ಪ್ರದೇಶ ಕಾಂಗ್ರೆಸಿನ ಅಧ್ಯಕ್ಷ...ದರು. 1935ರಲ್ಲಿ ಪ್ರಥಮ ಬಾರಿಗೆ ಪ್ರಜಾಪ್ರತಿನಿಧಿ ಸಭಾಸದಸ್ಯರಾದ ...ವರು ಐದು ಬಾರಿ ಶಾಸಕರಾಗಿ ಆಯ್ಕೆಯಾದರು. ಜಿಲ್ಲಾ ಬೋರ್ಡ ...ದಸ್ಯರಾಗಿ, ಮೈಸೂರು ರಾಜ್ಯಾಂಗ ಸಭೆ ಸದಸ್ಯರಾಗಿ ಸೇವೆ ಸಲ್ಲಿಸಿದರು. ...ತರ ಸ್ಥಿತಿಗತಿ ಸುಧಾರಿಸಲು, ಜನರ ರಾಜಕೀಯ ಪ್ರಜ್ಞೆ ಬೆಳೆಸಲು ...ಮಿಸಿದರು. ಅವರದು ಅರ್ಧ ಶತಮಾನಕ್ಕೂ ಹೆಚ್ಚಿನ ಸೇವೆ.

ರಾಜ್ಯ ಪುನರ್ವಿಂಗಡಣೆಯ ಅನಂತರ ವಿಶಾಲ ಮೈಸೂರು ರಾಜ್ಯದಲ್ಲಿ. ...56 ಮತ್ತು 1959ರಲ್ಲಿ ನಿಜಲಿಂಗಪ್ಪನವರ ಮಂತ್ರಿಮಂಡಲದಲ್ಲಿ. 1961...ಲ್ಲಿ ಜತ್ತಿಯವರ ಮಂತ್ರಿಮಂಡಲದಲ್ಲಿ ಮಂತ್ರಿಯಾಗಿದ್ದರು.

[illegible]

ಎಚ್. ಡಿ. ಸಂಕಾಲಿಯ

ರಾಷ್ಟ್ರದ ಹಲವು ಭಾಗಗಳಲ್ಲಿ ಪುರಾತತ್ತ್ವ ಸಂಶೋಧನೆ ನಡೆಸಿದ [illegible]



ಪುರಾತತ್ತ್ವಶೋಧೆ : ಸಂಕಾಲಿಯ

ಜನನ 1908 ಡಿಸೆಂಬರ್ 10ರಂದು. ಮುಂಬಯಿಯಲ್ಲಿ. ಎಂ. ಎ. ಮತ್ತು ಕಾನೂನು ಪದವೀಧರರಾಗಿ, ಲಂಡನಿನ ಯೂನಿವರ್ಸಿಟಿ ಕಾಲೇಜಿನಲ್ಲಿ ಹೆಚ್ಚಿನ ಶಿಕ್ಷಣ ಪಡೆದರು.

ಗುಜರಾತ್, ಮಹಾರಾಷ್ಟ್ರ, ಮಧ್ಯಪ್ರದೇಶ, ರಾಜಸ್ಥಾನ, ಕಾಶ್ಮೀರ, ಪಂಜಾಬ್ ಕರ್ನಾಟಕ ಮತ್ತು ಆಂಧ್ರಗಳಲ್ಲಿ ಪುರಾತತ್ತ್ವ ಸಂಶೋಧನೆ ನಡೆಸಿ ಚರಿತ್ರಪೂರ್ವ ಮತ್ತು ಪ್ರಾಚೀನ ಚರಿತ್ರೆಗೆ ಸಂಬಂಧಿಸಿದ ಮಾಹಿತಿಗಳನ್ನು ಶೇಖರಿಸಿದ್ದಾರೆ. ಸಂಕಾಲಿಯ 1966ರಲ್ಲಿ ಯುಗೊಸ್ಲಾವಿಯಾಕ್ಕೆ ತೆರಳಿದ ಭಾರತೀಯ ಸಾಂಸ್ಕೃತಿಕ ನಿಯೋಗದಲ್ಲಿದ್ದರು. ಅಂತರರಾಷ್ಟ್ರೀಯ ಮಟ್ಟದಲ್ಲಿ ನಡೆದ ಚರಿತ್ರೆಗೆ ಸಂಬಂಧಿಸಿದ ಸಮ್ಮೇಳನಗಳಲ್ಲಿ ಭಾರತ ಸರಕಾರದ ಪ್ರತಿನಿಧಿಯಾಗಿದ್ದರು. ಭಾರತ ಪುರಾತತ್ತ್ವ ಸಂಸ್ಥೆಯ ಪ್ರಥಮ ಸಮ್ಮೇಳನದ ಪ್ರಧಾನ ಅಧ್ಯಕ್ಷರಾಗುವ ಗೌರವ ಇವರದಾಯಿತು. ಮಹಾರಾಷ್ಟ್ರ ಹಿಸ್ಟರಿ ಕಾಂಗ್ರೆಸ್, ಗುಜರಾತ್ ಇತಿಹಾಸ ಪರಿಷತ್ತುಗಳು ನಡೆಸಿದ ಸಮ್ಮೇಳನಗಳ ಅಧ್ಯಕ್ಷರಾಗಿದ್ದರು. 1971ರಲ್ಲಿ ಪುಣೆಯ ಡೆಕ್ಕನ್ ಕಾಲೇಜಿನ ಸಂಶೋಧನ ಸಂಸ್ಥೆಯ ನಿರ್ದೇಶಕ ಹುದ್ದೆಯನ್ನು ಸಂಕಾಲಿಯ ಸ್ವೀಕರಿಸಿದರು.

'ದಿ ಯೂನಿವರ್ಸಿಟಿ ಆಫ್ ನಾಲಂದಾ', 'ಪ್ರಿ ಹಿಸ್ಟರಿ ಅಂಡ್ ಪ್ರೋಟೊ ಹಿಸ್ಟರಿ ಇನ್ ಇಂಡಿಯಾ ಅಂಡ್ ಪಾಕಿಸ್ತಾನ್' ಮೊದಲಾದ ಪುಸ್ತಕಗಳನ್ನು ಇವರು ಬರೆದಿದ್ದಾರೆ.

ಎಚ್. ಸಿದ್ದಯ್ಯ

ಮೈಸೂರು ಸಂಸ್ಥಾನದ ರಾಜಕೀಯದಲ್ಲಿ 1940ರಿಂದ 1942ರ ಅವಧಿ, ಸಂಧಾನ ಮತ್ತು ಸಿದ್ಧತೆಗಳ ಕಾಲವಾಗಿತ್ತು: ಜವಾಬ್ದಾರಿ ಸರಕಾರದ ಬೇಡಿಕೆಯನ್ನು ಪಡೆಯುವುದಕ್ಕೆ ಮಹಾರಾಜರ ಸರಕಾರದೊಡನೆ ಸಂಧಾನ, ಅದು ಈಡೇರದೇ ಹೋದರೆ ಹೋರಾಟಕ್ಕೆ ಸಿದ್ಧತೆ—ಇವೆರಡೂ ಒಟ್ಟಿಗೆ ನಡೆದುವು.

ಇತರ ಪ್ರಾಂತಗಳಲ್ಲಿ ಹರಿದು ಹಂಚಿಹೋಗಿದ್ದ ಕನ್ನಡ ಪ್ರದೇಶಗಳನ್ನು ಮತ್ತು ಮೈಸೂರು ಸಂಸ್ಥಾನವನ್ನು ಸೇರಿಸಿ ಕನ್ನಡನಾಡಿನ ರಚನೆ ಮಾಡಬೇಕು ಎಂಬ ಬಯಕೆ ಪ್ರಾಮುಖ್ಯ ಪಡೆದಿತ್ತು.



ಜನತಾ ಹೋರಾಟಗಾರ : ಸಿದ್ದಯ್ಯ

ಆ ಕಾಲದಲ್ಲಿ ಹಾಲಯ್ಯ ಸಿದ್ದಯ್ಯ ಅವರು ಮೈಸೂರು ಕಾಂಗ್ರೆಸಿನ ಅಧ್ಯಕ್ಷರಾದರು. 1941ರಲ್ಲಿ ಸಂಸ್ಥಾನದಲ್ಲೆಲ್ಲ ಪ್ರವಾಸ ಕೈಗೊಂಡರು.

ಒಂದು ಕಡೆ ದಿವಾನರೊಡನೆ ಸಂಧಾನ, ಇನ್ನೊಂದು ಕಡೆ ಜನರನ್ನು ಹುರಿದುಂಬಿಸಿ ಸಂಘಟಿಸುವ ಕೆಲಸ—ಇವರದಾಯ್ತು.

ಈಡೇರಿಸಿದ ರಾಜಕೀಯ ಮುತ್ಸದ್ದಿ ಸಿದ್ದಯ್ಯನವರು. 1938ರಲ್ಲಿ ಶಿವಪುರದಲ್ಲಿ ನಡೆದ ಧ್ವಜ ಸತ್ಯಾಗ್ರಹದಲ್ಲಿ ಭಾಗವಹಿಸಿದಾಗ, ಸರಕಾರ ಅವರನ್ನು ಬಂಧಿಸಿತು. ಇನ್ನೊಮ್ಮೆ 1939ರಲ್ಲಿ ನಡೆದ ಸತ್ಯಾಗ್ರಹ ಕಾಲದಲ್ಲೂ ಅವರನ್ನು ಬಂಧಿಸಲಾಯಿತು.

ಆಗ ರಾಜಕಾರಣಕ್ಕಾಗಿ ಜೈಲಿಗೆ ಹೋದವರಿಗೆ ಚಿತ್ರಹಿಂಸೆ ಕೊಡಲಾಗುತ್ತಿತ್ತು. ರಾಜಕೀಯ ಕೈದಿಗಳನ್ನು ಇತರ ಬಗೆಯ ಅಪರಾಧಿಗಳಂತೆ ಕಾಣುತ್ತಿದ್ದರು. ರಾಗಿ ಬೀಸುವುದು, ಹಗ್ಗ ಹೊಸೆಯುವುದು ಇವನ್ನೆಲ್ಲ ರಾಜಕೀಯ ಬಂದಿಗಳು ಮಾಡಬೇಕಾಗಿತ್ತು. ನಾಯಕರಾದ ಎಚ್. ಸಿದ್ದಯ್ಯ, ಟಿ. ಸುಬ್ರಹ್ಮಣ್ಯ ಮತ್ತಿತರರು ಇವನ್ನೆಲ್ಲ ಸಹಿಸಿದರು: ಸರಕಾರಕ್ಕೆ ಶರಣಾಗತರಾಗಲಿಲ್ಲ.

ಜವಾಬ್ದಾರಿ ಸರಕಾರ ಸ್ಥಾಪನೆಗೋಸ್ಕರ ದಿವಾನರೊಡನೆ ಸಂಧಾನ ನಡೆಸಬೇಕು ಎಂದು ಮೈಸೂರು ಕಾಂಗ್ರೆಸ್ ಸಮಿತಿ ಅಧ್ಯಕ್ಷರಿಗೆ ಆಣತಿ ನೀಡಿತು. ಅದಕ್ಕೆ ಅನುಸಾರವಾಗಿ ಸಿದ್ದಯ್ಯನವರು ದಿವಾನರನ್ನು ಭೇಟಿ ಮಾಡಿದರು —ಒಂದು ಸಲವಲ್ಲ, ನಾಲ್ಕು ಬಾರಿ.

ಸಂಧಾನ ಸಸೂತ್ರವಾಗಿ ನಡೆದರೂ, ಪೂರ್ಣ ಜವಾಬ್ದಾರಿ ಸರಕಾರದ ನೀಡಿಕೆಯ ಹಂತ ಮುಟ್ಟಿದಾಗ ವಿಫಲವಾಯಿತು. ಸಿದ್ದಯ್ಯನವರು ಎಡೆಬಿಡದೆ ಸಂಸ್ಥಾನದ ಮೂಲೆಮೂಲೆಗಳಲ್ಲೂ ಸಂಚರಿಸಿ ಜನರನ್ನು ಸಂಘಟಿಸಿದರು. ಅಧ್ಯಕ್ಷರಾಗಿ ಸಿದ್ದಯ್ಯನವರು ಮಾಡಿದ ಆ ಕೆಲಸ ಮುಂದಿನ ಹೋರಾಟಕ್ಕೆ ಸಂಸ್ಥೆಯನ್ನು ಸಜ್ಜುಗೊಳಿಸಿತು.

ಸಿದ್ದಯ್ಯನವರು ವೈಯಕ್ತಿಕವಾಗಿ ಗುರುಮನೆ ಮತ್ತು ಅರಮನೆಗಳಿಗೆ ನಿಷ್ಠರಾಗಿದ್ದವರು. ಮೈಸೂರಿನಲ್ಲಿ ಮಹಾರಾಜರ ಅಧಿಕಾರ, ಜವಾಬ್ದಾರಿ ಸರಕಾರ ಸ್ಥಾಪನೆಯಾದ ಮೇಲೂ ಇರಬೇಕು, ಸಂಸ್ಥಾನವನ್ನು ವಿಲೀನಗೊಳಿಸುವುದು ಬೇಡ ಎಂಬ ಅಭಿಪ್ರಾಯದವರೂ ಇದ್ದರು; ಕರ್ನಾಟಕ ಆಗಬೇಕು, ಅದರಲ್ಲಿ ಮೈಸೂರು ಸಂಸ್ಥಾನ ವಿಲೀನಗೊಳ್ಳಬೇಕು ಎಂದು ವಾದಿಸುವವರೂ ಇದ್ದರು. ಆ ಎರಡೂ ಅಭಿಪ್ರಾಯಗಳನ್ನು ಅರಿತ ಅಧ್ಯಕ್ಷ ಸಿದ್ದಯ್ಯನವರು ಒಂದು ಬಹಿರಂಗ ಸಭೆಯಲ್ಲಿ ಹೀಗೆ ಹೇಳಿದರು: "ನಾವು ಸಂಪೂರ್ಣ ಜವಾಬ್ದಾರಿ ಸರಕಾರ ಬೇಕೆಂದು ಒತ್ತಾಯ ಮಾಡುತ್ತಿರುವುದು ಪ್ರಭು ಮತ್ತು ಪ್ರಜೆಗಳೆಲ್ಲರ ಪರಾಧೀನತೆಯನ್ನು ಹೋಗಲಾಡಿಸುವುದಕ್ಕೋಸ್ಕರ: ಜವಾಬ್ದಾರಿ ಸರಕಾರ ಏರ್ಪಡಿಸಿ ಶ್ರೀಮನ್ಮಹಾರಾಜರು ಪುನಃ ಕರ್ನಾಟಕ ರತ್ನ ಸಿಂಹಾಸನಾಧೀಶ್ವರರಾಗಬೇಕು. ಅದಕ್ಕೋಸ್ಕರವೇ ಅವರು ಜನರ ಆಶೋತ್ತರವನ್ನು ಈಡೇರಿಸಿಕೊಡಬೇಕಾದದ್ದು ಅತ್ಯಂತ ಅಗತ್ಯ."

ಸಿದ್ದಯ್ಯನವರು ಚತುರತೆಯಿಂದ ಸಾಮರಸ್ಯವನ್ನು ಬೆಳೆಸುತ್ತಿದ್ದರು: ಪರಸ್ಪರ ವಿರೋಧಕ್ಕೆ ಅವಕಾಶ ನೀಡುತ್ತಿರಲಿಲ್ಲ.

ಸ್ವಾತಂತ್ರ್ಯಾನಂತರ ಕಾಲದಲ್ಲಿ ಸಿದ್ದಯ್ಯನವರು ಮೈಸೂರಿನ ಮಂತ್ರಿಯಾಗಿಯೂ ವಿಧಾನಸಭಾಧ್ಯಕ್ಷರಾಗಿಯೂ ಕೆಲಸ ಮಾಡಿದರು.

1952 ಮೇ ತಿಂಗಳಲ್ಲಿ ನಿಧಾನರಾದರು.

ನೋಡಿ : ಜವಾಬ್ದಾರಿ ಸರಕಾರ

ಎಚ್. ಸಿ. ದಾಸಪ್ಪ

ಮೈಸೂರು ಸಂಸ್ಥಾನದ ಕಾಂಗ್ರೆಸ್ ರೂಪುಗೊಳ್ಳುವುದಕ್ಕೂ ಮುಂದೆ ಅದು ಸಂಸ್ಥಾನದ ಏಕೈಕ ರಾಜಕೀಯ ಪಕ್ಷವಾಗಿ ಬೆಳೆಯುವುದಕ್ಕೂ ಶ್ರಮಿಸಿದ ಪ್ರಮುಖ ನಾಯಕರಲ್ಲೊಬ್ಬರು, ಹೀರಳ್ಳಿ ಚೆನ್ನಯ್ಯ ದಾಸಪ್ಪ—ಎಚ್. ಸಿ. ದಾಸಪ್ಪ. ಕಾಂಗ್ರೆಸ್ಸಿಗೆ ಸೇರುವುದಕ್ಕೆ ಮುನ್ನ ಇವರು ಸಂಯುಕ್ತ ಪ್ರಜಾಪಕ್ಷದ ಮುಖಂಡರಾಗಿದ್ದರು.



ಗಾಂಧೀಸಾನ್ನಿಧ್ಯ : ಹೀರಳ್ಳಿ

ಜನನ 1894 ಡಿಸೆಂಬರ್ [illegible]ರಂದು. ಮಡಿಕೇರಿಯಲ್ಲಿ (ಆಗ ಅವರ ತಂದೆ ಅಲ್ಲಿ ಉದ್ಯೋಗದಲ್ಲಿದ್ದರು.) ಮುಂಬಯಿಯಲ್ಲಿ ಕಾನೂನು ಪದವಿ ಪಡೆದರು. 1919ರಲ್ಲಿ ವಕೀಲ ವೃತ್ತಿ ಆರಂಭಿಸಿದರು. 1924ರಲ್ಲೇ ಸಾರ್ವಜನಿಕ ಕ್ಷೇತ್ರದಲ್ಲಿ ತಮ್ಮ ಚಟುವಟಿಕೆ ಪ್ರಾರಂಭಿಸಿದರು.

1926ರಲ್ಲಿ ಅವರು ಯಶೋಧರಮ್ಮನವರನ್ನು ವಿವಾಹವಾದರು. ಅನಂತರ ಕಾಂಗ್ರೆಸ್ಸಿಗೆ ಸೇರಿದರು.

ಇಂದಿನ ಮಂಡ್ಯ ಜಿಲ್ಲೆಯ ಮದ್ದೂರಿನ ಬಳಿಯ ಶಿವಪುರದಲ್ಲಿ ನಡೆದ ಮೈಸೂರು ಕಾಂಗ್ರೆಸ್ ಅಧಿವೇಶನ ಒಂದು ಮಹತ್ವದ ಘಟನೆ. ಆ ಅಧಿವೇಶನದ ಮೊದಲನೆಯ ದಿನ ಟಿ. ಸಿದ್ಧಲಿಂಗಯ್ಯನವರು ಕಾಂಗ್ರೆಸ್ ತ್ರಿವರ್ಣ ಧ್ವಜವನ್ನು ಹಾರಿಸಲು ಉದ್ಯುಕ್ತರಾದಾಗ ಪೋಲೀಸರು ಅವರನ್ನು ದಸ್ತಗಿರಿ ಮಾಡಿದರು. ಮಾರನೆಯ ದಿನ ದಾಸಪ್ಪನವರು ಅಧಿವೇಶನದ ಅಧ್ಯಕ್ಷತೆ ವಹಿಸಲು ಒಪ್ಪಿ ಬೆಳಗ್ಗೆ ಧ್ವಜಾರೋಹಣ ಮಾಡಿದಾಗ, ಪೋಲೀಸರು ಅವರನ್ನೂ ಬಂಧಿಸಿದರು. ಅದೇ ಕ್ರಮೇಣ ಪ್ರಸಿದ್ಧ ಧ್ವಜ ಸತ್ಯಾಗ್ರಹವಾಗಿ ಪರಿಣಮಿಸಿತು.

1939ನೆಯ ಏಪ್ರಿಲ್ ತಿಂಗಳಲ್ಲಿ ವಿದುರಾಶ್ವತ್ಥದಲ್ಲಿ ನಡೆದ ಮೈಸೂರು ಕಾಂಗ್ರೆಸ್ಸಿನ ಎರಡನೆಯ ಅಧಿವೇಶನಕ್ಕೆ ದಾಸಪ್ಪನವರು ಅಧ್ಯಕ್ಷರಾಗಿ ಚುನಾಯಿತರಾದರು. ಸಂಸ್ಥಾನದ ಎಲ್ಲ ಕಡೆಗಳಲ್ಲೂ ಸಂಚರಿಸಿ ಕಾಂಗ್ರೆಸ್ಸನ್ನು ಬಲಪಡಿಸಿದರು. ಇದು ಸರಕಾರವನ್ನು ಕೆರಳಿಸಿತು. ದಾಸಪ್ಪನವರ ಹೈಕೋರ್ಟಿನ ವಕೀಲಿ ಸನ್ನದು ರದ್ದಾಯಿತು. ದಾಸಪ್ಪನವರು ತಮ್ಮ ಪೂರ್ಣ ಕಾಲವನ್ನು ಸ್ವಾತಂತ್ರ್ಯ ಹೋರಾಟಕ್ಕೆ ಮೀಸಲಾಗಿಟ್ಟರು. ಅವರ ಈ ಚಟುವಟಿಕೆಗಳಿಂದ ಕ್ರುದ್ಧವಾದ ಮೈಸೂರು ಸರಕಾರ ಅವರನ್ನು ದೇಶದ್ರೋಹದ ಅಪಾದನೆಯ ಮೇಲೆ ಬಂಧಿಸಿತು.

ಅವರಿಗೆ ರಾಜಕೀಯದಲ್ಲಿ ಆಸಕ್ತಿ ಇದ್ದಂತೆ, ವಿಧಾಯಕ ಕಾರ್ಯಕ್ರಮಗಳಲ್ಲೂ ಅಪಾರ ಶ್ರದ್ಧೆಯಿತ್ತು. ಅವರು ಕೆಲ ಕಾಲ ತಮ್ಮ ಪತ್ನಿ ಯಶೋಧರಮ್ಮನವರೊಡನೆ ಗಾಂಧೀಜಿಯ ಸೇವಾಗ್ರಾಮದಲ್ಲಿದ್ದರು. ಅಲ್ಲಿಂದ ಮೈಸೂರಿಗೆ ಬಂದಮೇಲೆ ಹರಿಜನರ ಉದ್ಧಾರ, ಮಹಿಳೆಯರ ಏಳಿಗೆ ಮತ್ತು ಹಿಂದೀ ಪ್ರಚಾರ — ಈ ರಚನಾತ್ಮಕ ಕಾರ್ಯಕ್ರಮಗಳನ್ನು ಕೈಗೊಂಡರು.

ಮೈಸೂರಿನಲ್ಲಿ ಜವಾಬ್ದಾರಿ ಸರಕಾರ ಸ್ಥಾಪನೆಯಾದಾಗ ಅವರು ಅರ್ಥ ಮಂತ್ರಿಯಾದರು. ಆಮೇಲೆ ಲೋಕಸಭಾ ಸದಸ್ಯರಾಗಿ 1963ರಲ್ಲಿ ಕೇಂದ್ರ ಸರಕಾರದ ರೈಲ್ವೆ ಮಂತ್ರಿಯಾದ್ದರು. 1964ರಲ್ಲಿ ಕೈಗಾರಿಕಾ ಖಾತೆಯನ್ನು ವಹಿಸಿಕೊಂಡರು. ಆ ಸ್ಥಾನದಲ್ಲಿದ್ದಾಗಲೇ, 1964ರ ಅಕ್ಟೋಬರ್ 29ರಲ್ಲಿ, ಅವರು ಮರಣ ಹೊಂದಿದರು.

ನೋಡಿ : ಜವಾಬ್ದಾರಿ ಸರಕಾರ ; ಯಶೋಧರಾ ದಾಸಪ್ಪ

ಎಚ್. ಸಿ. ಬಕ್

ನೋಡಿ : ಸಂಪುಟ ೬

ಎಡ್ವರ್ಡ್ ಟೆರ್ರಿ

"ಮೊಘಲ್ ಚಕ್ರವರ್ತಿಯ ವಿಶಾಲ ಚಕ್ರಾಧಿಪತ್ಯವನ್ನು 'ಹಿಂದೂಸ್ತಾನ' ಎಂದು ಕರೆಯುತ್ತಾರೆ. ಇದರಲ್ಲಿ 37 ರಾಜ್ಯಗಳಿವೆ. ಇಲ್ಲಿ ಜೀವನಕ್ಕೆ ಅವಶ್ಯವಾದುದೆಲ್ಲ ಸಿಗುತ್ತವೆ: ಇನ್ನೊಂದು ದೇಶವನ್ನು ಆಶ್ರಯಿಸಬೇಕಾಗಿಲ್ಲ. ಗೋಧಿ, ಅಕ್ಕಿ, ಬಾರ್ಲಿ ರೊಟ್ಟಿಗೆ ಬೇಕಾದ ಇತರ ಧಾನ್ಯಗಳು ಸಮೃದ್ಧಿಯಾಗಿ ಬೆಳೆಯುತ್ತವೆ. ಅಲ್ಲದೆ ಇವೆಲ್ಲ ತೀರ ಅಗ್ಗ..."

—ಜಹಾಂಗೀರನ ಕಾಲದಲ್ಲಿ ಭಾರತಕ್ಕೆ ಬಂದಿದ್ದ ಬ್ರಿಟಿಷ್ ಪ್ರವಾಸಿ ಎಡ್ವರ್ಡ್ ಟೆರ್ರಿ ಹೀಗೆ ಬರೆದಿದ್ದಾನೆ.

ಇವನು ಹುಟ್ಟಿದ್ದು 1560ರಲ್ಲಿ. ವಿದ್ಯಾಭ್ಯಾಸ ಆಕ್ಸ್‌ಫರ್ಡ್‌ನ ಕ್ರೈಸ್ಟ್ ಕಾಲೇಜಿನಲ್ಲಿ. 1616ರಲ್ಲಿ ಇಂಗ್ಲೆಂಡಿನಿಂದ ಹೊರಟ ಹಡಗಿನಲ್ಲಿ ಪಾದ್ರಿಯಾಗಿ ಟೆರ್ರಿ ಸೂರತ್ ತಲಪಿದ. ಆತ ಭಾರತದಲ್ಲಿ ಇದ್ದುದು ಎರಡೂವರೆ ವರ್ಷ ಕಾಲ. ತಾನು ಬರೆದ ಪ್ರವಾಸ ಸಾಹಿತ್ಯವನ್ನು 1622ರಲ್ಲಿ ಪ್ರಿನ್ಸ್ ಆಫ್ ವೇಲ್ಸ್‌ಗೆ (ಅನಂತರ ಮೊದಲನೆಯ ಚಾರ್ಲ್ಸ್) ಅರ್ಪಿಸಿದ.

ಈತ 1660ರಲ್ಲಿ ತೀರಿಕೊಂಡ.

ಉತ್ತಮ ಬೋಧಕ, ಬುದ್ಧಿವಂತ, ಮಾತುಗಾರ, ನಮ್ರ ಸ್ವಭಾವದವನು ಎಂಬ ಪ್ರಶಂಸೆಗೆ ಟೆರ್ರಿ ಪಾತ್ರನಾಗಿದ್ದ.

ಎನ್.ಎಂ. ಜೋಶಿ

ಭಾರತದಲ್ಲಿ ಕಾರ್ಮಿಕ ಚಳುವಳಿಯ ಪಿತಾಮಹ ಎನ್. ಎಂ. ಜೋಶಿ.

ನಾರಾಯಣ ಮಲ್ಹಾರ ಜೋಶಿ ಜನಿಸಿದ್ದು 1879ರಲ್ಲಿ, ಮಹಾರಾಷ್ಟ್ರದಲ್ಲಿ. ಪ್ರಾರಂಭದಲ್ಲಿ ಇವರು ಮೂರು ವರ್ಷ ವೈದಿಕ ಶಿಕ್ಷಣ ಪಡೆದರು. ಅನಂತರ ಪುಣೆಯ ಇಂಗ್ಲಿಷ್ ಶಾಲೆಯಲ್ಲಿ ವಿದ್ಯಾಭ್ಯಾಸ. ಡೆಕ್ಕನ್ ಕಾಲೇಜಿನಲ್ಲಿ ಬಿ.ಎ. ಮಾಡಿದರು. ಪುಣೆ, ಮುಂಬಯಿ, ರತ್ನಗಿರಿಗಳಲ್ಲಿ ಅಧ್ಯಾಪಕರಾಗಿದ್ದರು.

1909ರಲ್ಲಿ ಇವರು ಗೋಖಲೆಯವರು ಸ್ಥಾಪಿಸಿದ್ದ 'ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿ' ಸೇರಿದರು.

1916ರಲ್ಲಿ 'ಜ್ಞಾನ ಪ್ರಕಾಶ' ಪತ್ರಿಕಾ ಪ್ರತಿನಿಧಿಯಾಗಿ ಮೆಸೊಪೊಟೇಮಿಯಾಕ್ಕೆ ಹೋಗಿದ್ದರು.

ಜೋಶಿ ಕೇಂದ್ರೀಯ ವಿಧಾನ ಸಭೆಯ ಸದಸ್ಯರಾಗಿ 24 ವರ್ಷ ಸೇವೆ ಸಲ್ಲಿಸಿದರು. 'ಸದನದ ಪಿತ' ಎಂಬ ಗೌರವದ ಸಂಬೋಧನೆಗೆ ಅವರು ಪಾತ್ರರಾಗಿದ್ದರು. ದುಂಡು ಮೇಜಿನ ಪರಿಷತ್ತು ಮತ್ತು ಕಾರ್ಮಿಕ ಸಮ್ಮೇಳನಗಳ ಸಂಬಂಧದಲ್ಲಿ 16 ಬಾರಿ ಯೂರೋಪ್ ಪ್ರವಾಸ ಕೈಗೊಂಡರು.

ಕಾರ್ಮಿಕ ಚಳುವಳಿಯಲ್ಲಿ ಅವರು ವಹಿಸಿದ ಪಾತ್ರ ಮಹತ್ವದ್ದು. ಅವರು 'ಮುಂಬಯಿ ಗಿರಣಿ ಕಾಮಗಾರ್ ಸಂಘ' ಮತ್ತು 'ಇಂಡಿಯನ್ ನ್ಯಾಷನಲ್ ಟ್ರೇಡ್ ಯೂನಿಯನ್ ಕಾಂಗ್ರೆಸ್'ನ ಸಂಸ್ಥಾಪಕರು.

ಎನ್. ಎಂ. ಜೋಶಿ 1952ರ ವರೆಗೂ ರಾಜಕೀಯ ರಂಗದಲ್ಲಿ ಸಕ್ರಿಯ ಪಾತ್ರ ವಹಿಸಿದರು.

1955ರಲ್ಲಿ ಎನ್. ಎಂ. ಜೋಶಿ ನಿಧನರಾದರು.

ನೋಡಿ : ಇಂಡಿಯನ್ ನ್ಯಾಷನಲ್ ಟ್ರೇಡ್ ಯೂನಿಯನ್ ಕಾಂಗ್ರೆಸ್

ಎನ್.ಎ.ಎಲ್.

ನೋಡಿ : ರಾಷ್ಟ್ರೀಯ ವಾಯು ಯಾನ ವಿಜ್ಞಾನ ಪ್ರಯೋಗಾಲಯ

ಎನ್. ಗೋಪಾಲಸ್ವಾಮಿ ಅಯ್ಯಂಗಾರ್

ದಕ್ಷ ಆಡಳಿತಗಾರ, ರಾಜಕಾರಣ ಮುತ್ಸದ್ದಿ, ದಿಟ್ಟ, ಹಿಡಿದ ಕೆಲಸ ಸಾಧಿಸುವ ಗಡಸುಗಾರ — ಎನ್. ಗೋಪಾಲಸ್ವಾಮಿ ಅಯ್ಯಂಗಾರ್.

ಭಾರತದ ವಿಭಜನೆಯ ಅನಂತರ ಪಾಕಿಸ್ತಾನ ಕಾಶ್ಮೀರವನ್ನು ಆಕ್ರಮಿಸಲು ಯತ್ನಿಸಿದಾಗ ಕಾಶ್ಮೀರ ಭಾರತದಲ್ಲಿ ಸೇರಲು ಬಯಸಿತು. ಈ ಸೇರ್ಪಡೆ ಅಂತಿಮವಾದದ್ದು ಎಂದು ಸಾಧಿಸಿದವರು ಗೋಪಾಲಸ್ವಾಮಿ ಅಯ್ಯಂಗಾರ್. ಭಾರತ ಉಪಖಂಡದ ವಿಭಜನೆಗೆ ಮುಂಚೆ ಅವರು ಆರು ವರ್ಷ ಕಾಲ ಕಾಶ್ಮೀರದ ದಿವಾನರಾಗಿದ್ದರು.



ಚಿತ್ರ : ಗೋಪಾಲಸ್ವಾಮಿ ಅಯ್ಯಂಗಾರ್

ಗೋಪಾಲಸ್ವಾಮಿ ಅಯ್ಯಂಗಾರ್ ಹುಟ್ಟಿದ್ದು 1882 ಮಾರ್ಚ್ 31ರಂದು. ಮದರಾಸಿನಲ್ಲಿ ಬಿ.ಎ. ಬಿ.ಎಲ್. ಶಿಕ್ಷಣ ಮುಗಿಸಿದರು. 1905ರಲ್ಲಿ ಸರಕಾರೀ ಉದ್ಯೋಗಕ್ಕೆ ಸೇರಿ ಮದರಾಸು ಪ್ರಾಂತದಲ್ಲಿ ಕಲೆಕ್ಟರ್ ಆಗಿ, ಲೋಕೋಪಯೋಗಿ ಖಾತೆ ಕಾರ್ಯದರ್ಶಿಯಾಗಿ ಅವರು ಉನ್ನತ ಪದವಿಗೇರಿದರು. ಅನಂತರ 1937ರಲ್ಲಿ ಕಾಶ್ಮೀರದ ದಿವಾನರಾದರು.

1946ರಲ್ಲಿ ಭಾರತೀಯ ರಾಜ್ಯಾಂಗ ರಚನಾ ಸಭೆಯ ಸದಸ್ಯರಾದರು. ಸ್ವಾತಂತ್ರ್ಯಾನಂತರ ನೆಹರೂ ಅವರು ರಚಿಸಿದ ಪ್ರಥಮ ಸಚಿವ ಸಂಪುಟದಲ್ಲಿ ಖಾತೆರಹಿತ ಸಚಿವರಾದರು. 1948ರಲ್ಲಿ ಕಾಶ್ಮೀರದ ವಿವಾದದ ಬಗೆಗೆ ವಾದಿಸಲು ವಿಶ್ವಸಂಸ್ಥೆಯ ಭದ್ರತಾ ಸಮಿತಿಗೆ ಹೋದ ಭಾರತ ನಿಯೋಗದ ನಾಯಕತ್ವ ವಹಿಸಿದರು. ಅಲ್ಲಿಂದ ಮರಳಿ ಕೇಂದ್ರ ರೈಲ್ವೆ ಮಂತ್ರಿ ಆದರು. 1952ರಲ್ಲಿ ರಚಿತವಾದ ಎರಡನೆಯ ಕೇಂದ್ರ ಸಚಿವ ಸಂಪುಟದಲ್ಲಿ ಶಿಕ್ಷಣ ಮಂತ್ರಿ ಆದರು.

ಅಯ್ಯಂಗಾರ್ ಅವರು 1953 ಫೆಬ್ರವರಿ 10ರಂದು ನಿಧನರಾದರು.

ಎನ್.ಜಿ. ರಂಗ

ಗಾಂಧೀತತ್ತ್ವದ ಪ್ರತಿಪಾದಕರು. ರೈತರ ಪ್ರಮುಖ ನೇತಾರರು– ಎನ್. ಜಿ. ರಂಗ.

ಜನಿಸಿದ್ದು 1900, ನವೆಂಬರ್‌ನಲ್ಲಿ, ಆಂಧ್ರಪ್ರದೇಶದ ನಿಡುಬ್ರೋಲು ಎಂಬಲ್ಲಿ. ಆಕ್ಸ್‌ಫರ್ಡ್‌ನಲ್ಲಿ ವ್ಯಾಸಂಗ ಮಾಡಿದರು. ಭಾರತದ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದರು: ಭಾರತೀಯ ರೈತ ಚಳುವಳಿಯ ಸಂಸ್ಥಾಪಕರೆಂದು ಹೆಸರು ಪಡೆದರು. ಗಾಂಧೀತತ್ತ್ವ ಮತ್ತು ವಿಚಾರಗಳನ್ನು ಬೋಧಿಸಲು ಅಮೆರಿಕ ಮತ್ತು ಯುರೋಪ್ ದೇಶಗಳಲ್ಲಿ ವ್ಯಾಪಕ ಪ್ರವಾಸಗಳನ್ನು ಕೈಗೊಂಡರು.



ಆಚಾರ್ಯ ರಂಗ

1947–51ರ ಅವಧಿಯಲ್ಲಿ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸದಸ್ಯರಾಗಿದ್ದ ರಂಗ 1951ರಲ್ಲಿ ಕಾಂಗ್ರೆಸ್ಸನ್ನು ಬಿಟ್ಟು ಭಾರತ್ ಕೃಷಿಕ್ ಲೋಕಪಕ್ಷವನ್ನು ಸ್ಥಾಪಿಸಿದರು. ಅನಂತರ ಪುನಃ 1955ರಲ್ಲಿ ಕಾಂಗ್ರೆಸ್ ಪಕ್ಷ ಸೇರಿ. ಕಾಂಗ್ರೆಸ್ ಪಾರ್ಲಿಮೆಂಟರಿಪಕ್ಷದ ಪ್ರಧಾನಕಾರ್ಯದರ್ಶಿ ಆದರು. 1959ರಲ್ಲಿ ಭಿನ್ನಾಭಿಪ್ರಾಯ ತಲೆದೋರಿ. ಕಾಂಗ್ರೆಸ್ಸನ್ನು ತ್ಯಜಿಸಿ ಸ್ವತಂತ್ರಪಕ್ಷ ಸೇರಿದರು. ಅದೇ ವರ್ಷ ಅವರ ನಾಯಕರಾದರು. ಅನಂತರ 1969ರ ವರೆಗೆ ಆ ಪಕ್ಷದ ಅಧ್ಯಕ್ಷರಾಗಿದ್ದರು. ಇವರು ನಿಡುಬ್ರೋಲು ಭಾರತ ರೈತರ ವಿದ್ಯಾಲಯದ ಪ್ರಿನ್ಸಿಪಾಲರೂ ಆಗಿದ್ದರು.

1967ರಲ್ಲಿ ಶ್ರೀಕಾಕುಲಂನಿಂದ ಲೋಕಸಭೆಗೆ ರಂಗ ಆರಿಸಿಬಂದರು.

ಕಾಂಗ್ರೆಸ್ ಇಬ್ಭಾಗವಾದ ಮೇಲೆ ಇಂದಿರಾ ಗಾಂಧಿ ನೇತೃತ್ವದ ಕಾಂಗ್ರೆಸ್ಸನ್ನು ಸೇರಿದರು.

ರಾಜಕೀಯ ವಿಷಯಗಳನ್ನು ಕುರಿತು ರಂಗ ಗ್ರಂಥಗಳನ್ನು ಬರೆದಿದ್ದಾರೆ.

ಎನ್. ಮಾಧವರಾವ್

ಮೈಸೂರು ಸಂಸ್ಥಾನದ ದಿವಾನರ ಸರಣಿಯಲ್ಲಿ ಮಿರ್ಜಾ ಇಸ್ಮಾಯಿಲ್ ಅವರ ಅನಂತರ ದಕ್ಷ ಆಡಳಿತ ನಡೆಸಿದವರು, ನ್ಯಾಪತಿ ಮಾಧವರಾಯರು.

ಇವರು ಮದರಾಸು ಸರಕಾರದ ರೆವಿನ್ಯೂ ಅಧಿಕಾರಿಯಾಗಿದ್ದ ನ್ಯಾಪತಿ ಶೇಷಗಿರಿರಾಯರ ಪುತ್ರ. ಮಚಲೀಪಟ್ಟಣದಲ್ಲಿ 1887ರ ಜೂನ್ 8ರಂದು ಜನನ. ಹುಟ್ಟೂರಿನಲ್ಲೂ ಮದರಾಸಿನಲ್ಲೂ ಓದಿ ಬಿ. ಎ., ಬಿ. ಎಲ್. ಮುಗಿಸಿದ ಇವರು 1907ರಲ್ಲಿ ಪ್ರೊಬೇಷನರಿ ಅಸಿಸ್ಟೆಂಟ್ ಕಮಿಷನರ್ ಆಗಿ ಮೈಸೂರು ಸಂಸ್ಥಾನದ ಸೇವೆಗೆ ಸೇರಿದರು. ಭದ್ರಾವತಿಯ ಕಬ್ಬಿಣ ಮತ್ತು ಉಕ್ಕು ಕಾರಖಾನೆ ಸ್ಥಾಪಿತವಾದಾಗ ಇವರು ಅದರ ಆಡಳಿತ ಮಂಡಳಿಯ ಕಾರ್ಯದರ್ಶಿ ಆದರು. ಅನಂತರ ಒಂದು ವರ್ಷ ಸರಕಾರದ ಪ್ರಧಾನ ಕಾರ್ಯದರ್ಶಿ ಆಗಿದ್ದರು.

ಆಗ ತಾನೆ ಲಂಡನಿನಲ್ಲಿ ಸ್ಥಾಪಿತವಾಗಿದ್ದ ಮೈಸೂರು ವಾಣಿಜ್ಯ ಆಯೋಗದ ಅಧಿಕಾರಿಯಾಗಿ ಒಂದು ವರ್ಷ ಕಾಲ ಇದ್ದರು. ಅಲ್ಲಿಂದ ಮರಳಿ ಮತ್ತೆ ಸರಕಾರದ ಪ್ರಧಾನ ಕಾರ್ಯದರ್ಶಿ ಆಗಿ ಮುಂದುವರಿದರು ; ರೆವಿನ್ಯೂ ಕಮಿಷನರ್ ಆದರು. ಅನಂತರ ಅವರು ಮೈಸೂರು ಸಂಸ್ಥಾನದ ಎಕ್ಸಿಕ್ಯುಟಿವ್ ಕೌನ್ಸಿಲಿನ ಸದಸ್ಯರಾದರು.



ಆಡಳಿತ ವಿಚಕ್ಷಣೆ :
ನ್ಯಾಪತಿ ಮಾಧವರಾವ್

ಮಾಧವರಾಯರು 1941ರಲ್ಲಿ ದಿವಾನರಾದರು. ಆಗ ಎರಡನೆಯ ಮಹಾಯುದ್ಧ ನಡೆಯುತ್ತಿತ್ತು. ಆ ಕಷ್ಟ ಕಾಲದಲ್ಲಿ ಅವರು ವಿಚಕ್ಷಣೆಯಿಂದ ಕಾರ್ಯ ನಿರ್ವಹಿಸಿದರು.

ಮೊದಲಿನಿಂದಲೂ ಮಾಧವರಾಯರು ಸಂಸ್ಥಾನದ ಕೈಗಾರಿಕಾಭಿವೃದ್ಧಿಯಲ್ಲಿ ಆಸಕ್ತಿ ವಹಿಸಿದ್ದರು. ಎರಡನೆಯ ಮಹಾಯುದ್ಧ ಕಾಲದಲ್ಲಿ ಬೆಂಗಳೂರಿನ ವಿಮಾನ ಕಾರಖಾನೆ ಉಸ್ತುವಾರಿಯ ಗುರುತರ ಜವಾಬ್ದಾರಿಯನ್ನು ಇವರು ಹೊತ್ತಿದ್ದರು.

ದಿವಾನ್ ಪದವಿಯಿಂದ ನಿವೃತ್ತರಾದಮೇಲೆ ಭದ್ರಾವತಿ ಕಬ್ಬಿಣ ಮತ್ತು ಉಕ್ಕು ಕಾರಖಾನೆಯ ಒಂದು ಸಮಾರಂಭದಲ್ಲಿ (1951) ಮಾತನಾಡುತ್ತ, ಜೋಗ್ ಜಲ ವಿದ್ಯುದಾಗಾರದ ವಿಸ್ತರಣೆ ಬಗೆಗೆ ಪ್ರಸ್ತಾಪಿಸಿ, "ಇಂಥ ವಿಸ್ತರಣೆ ಕ್ರಮಗಳನ್ನು ಕೈಗೊಳ್ಳುವಾಗ ತಕ್ಷಣ ಎಷ್ಟು ಲಾಭ ಇದೆ ಎನ್ನುವುದನ್ನು ನಾವು ಯೋಚಿಸಬಾರದು. ದೂರದೃಷ್ಟಿಯ ಯೋಜನೆ ನಮಗೆ ಬೇಕು" ಎಂದರು. ತಮ್ಮ ಅಧಿಕಾರಾವಧಿಯಲ್ಲಿ ಇವರಿಗೆ ಎಲ್ಲ ಕೈಗಾರಿಕೆಗಳ ಬಗೆಗೆ ಇದ್ದುದು ಇದೇ ದೂರದೃಷ್ಟಿ.

1946ರಲ್ಲಿ ನಿವೃತ್ತರಾದ ಮೇಲೆ ಮೈಸೂರು ಮಾತ್ರವಲ್ಲದೆ ರಾಜಸ್ಥಾನ, ಒರಿಸ್ಸಾ. ಬಂಗಾಳ ಮುಂತಾದೆಡೆಗಳಲ್ಲಿ ಸಲಹೆಗಾರರಾಗಿದ್ದರು.

ಸ್ವಾತಂತ್ರ್ಯಾನಂತರ ರಾಜ್ಯಾಂಗರಚನಾ ಸಭೆಯ ಸದಸ್ಯರಾದರು : ಸಂವಿಧಾನದ ಕರಡುಪ್ರತಿಯನ್ನು ಸಿದ್ಧಗೊಳಿಸಿದ ಸಮಿತಿಯ ಸದಸ್ಯರಾಗಿ ಕೆಲಸ ಮಾಡಿದರು. ರಚನಾಸಭೆ ಸಂಸತ್ತಾಗಿ ಪರಿವರ್ತನೆಗೊಂಡಾಗ, ಚುನಾಯಿತ ಪ್ರತಿನಿಧಿಗಳು ಬರುವ ವರೆಗೆ ಇವರು ಅದರ ಒಬ್ಬ ಸದಸ್ಯರಾಗಿದ್ದರು. 1972 ಆಗಸ್ಟ್ 28ರಂದು ಇವರು ಕಾಲವಾದರು.

ಎನ್. ಸಿ. ಕೇಳ್ಕರ್

ಬಾಲಗಂಗಾಧರ ತಿಲಕರು ಆರಂಭಿಸಿದ 'ಕೇಸರಿ' ಮತ್ತು 'ಮರಾಠಾ' ಪತ್ರಿಕೆಗಳು ಹಲವು ವರ್ಷ ಸ್ವಾತಂತ್ರ್ಯ ಹೋರಾಟಗಾರರ ಆಯುಧಗಳಾಗಿದ್ದುವು : ಸರಕಾರದ ಅನ್ಯಾಯದ ನೀತಿಗಳನ್ನು ಖಂಡಿಸುವ, ಜನತೆಯಲ್ಲಿ ಐಕ್ಯವನ್ನು ಪ್ರೇರೇಪಿಸುವ ಮಾಧ್ಯಮಗಳಾಗಿದ್ದುವು. ತಿಲಕರು ತೀರಿಹೋದ ಮೇಲೆ ಇಪ್ಪತ್ತೈದು ವರ್ಷಗಳ ವರೆಗೆ ಈ ಪತ್ರಿಕೆಗಳ ಪ್ರಭಾವ ಕುಗ್ಗದಂತೆ ನೋಡಿಕೊಂಡ ಕೀರ್ತಿ ಕೇಳ್ಕರರದು. ಇವರು ಉಜ್ವಲ ದೇಶಾಭಿಮಾನಿ. ಪ್ರಬಂಧಕಾರ. ನಾಟಕಕಾರ, ಕಾದಂಬರಿಕಾರ, ಕತೆಗಾರ ಹಾಗೂ ಕವಿಯಾಗಿದ್ದರು ; ವಾಗ್ಮಿಯೆಂದೂ ಹೆಸರಾಗಿದ್ದರು.

ನರಸಿಂಹ ಚಿಂತಾಮಣಿ ಕೇಳ್ಕರರು ಹುಟ್ಟಿದ್ದು 1872ರಲ್ಲಿ. ಸತಾರಾದಲ್ಲಿ ವಕೀಲರಾಗಿ ತಮ್ಮ ಜೀವನ ಆರಂಭಿಸಿದರು. ಸಾಹಿತ್ಯಲೋಕ ಪ್ರವೇಶಿಸಿದ್ದೂ ಆಗಲೇ. ರವೀಂದ್ರನಾಥ ಠಾಕೂರರ ಅಣ್ಣ ಸತ್ಯೇಂದ್ರನಾಥ ಠಾಕೂರರು ಆಗ ಸತಾರಾದಲ್ಲಿ ನ್ಯಾಯಾಧೀಶರಾಗಿದ್ದರು. ಅವರು ಒಳ್ಳೆಯ ಬರೆಹಗಾರ ಕೂಡಾ. ಅವರ ಒಂದು ಬಂಗಾಳಿ ನಾಟಕವನ್ನು ಕೇಳ್ಕರ್ ಮರಾಠಿಗೆ ಭಾಷಾಂತರಿಸಿದರು.

ಇದೇ ಕಾಲದಲ್ಲಿ ಕೇಳ್ಕರ್ ತಿಲಕರ ಪ್ರಭಾವಕ್ಕೆ ಒಳಗಾದರು. ತಿಲಕರ ಆಹ್ವಾನವನ್ನು ಸ್ವೀಕರಿಸಿ ಕೇಳ್ಕರರು 'ಮರಾಠಾ' ಪತ್ರಿಕೆಯ ಸಂಪಾದಕರಾದರು. ತಿಲಕರು ನಡೆಸುತ್ತಿದ್ದ ಕಾನೂನು ತರಗತಿಗಳಲ್ಲಿ ಪಾಠವನ್ನೂ ಹೇಳುತ್ತಿದ್ದರು.

ಬಾಲಗಂಗಾಧರರ ಬಲಗೈಯಂತಿದ್ದರು, ಕೇಳ್ಕರ್. ಆದರೆ ಅವರ ವಿಚಾರಗಳನ್ನು ವಿವೇಚನೆಯಿಲ್ಲದೆ ಒಪ್ಪಿಕೊಳ್ಳುತ್ತಿರಲಿಲ್ಲ. ಕೇಳ್ಕರರ



ವಾದಕ್ಕೆ ತಲೆದೂಗಿ ತಿಲಕರೇ ತಮ್ಮ ಧೋರಣೆಗಳನ್ನು ಬದಲಾಯಿಸಿದ್ದೂ ಉಂಟು.

ತಿಲಕರು 6 ವರ್ಷ ಬರ್ಮದ ಮಾಂಡಲೇ ಕಾರಾಗೃಹದಲ್ಲಿದ್ದಾಗ ಅವರ ಪತ್ರಿಕೆಗಳನ್ನು ನಡೆಸುವ ಸಂಪೂರ್ಣ ಹೊಣೆ ಕೇಳ್ಕರರ ಮೇಲೆ ಬಿತ್ತು. ಆಗ ತಾವು ದಕ್ಷ ವ್ಯವಸ್ಥಾಪಕ ಎಂಬುದನ್ನು ಕೇಳ್ಕರರು ತೋರಿಸಿಕೊಟ್ಟರು. 'ಸ್ವರಾಜ್ಯ ಪಕ್ಷ'ದ ಸ್ಥಾಪನೆಯಾದ ಮೇಲೆ ಕೇಳ್ಕರ್ ಕೇಂದ್ರ ನ್ಯಾಯ ವಿಧಾಯಕ ಸಭೆಯ ಸದಸ್ಯರೂ ಆದರು.

'ಭೀತಿ ಇಲ್ಲ' : ಕೇಳ್ಕರ್

ವರ್ಷ 75 ಆದರೂ ಕೇಳ್ಕರರು ವಿಶ್ರಾಂತಿ ಪಡೆಯಲಿಲ್ಲ. ಪತ್ರಿಕೆಗಳ ಸಂಪಾದಕತ್ವದಿಂದ ನಿವೃತ್ತಿ ಹೊಂದಿದರೂ ಬರೆಯುವುದನ್ನು ನಿಲ್ಲಿಸಲಿಲ್ಲ. ಒಂದು ರಾತ್ರಿ ಇವರು ಕವಿತೆಯೊಂದನ್ನು ಬರೆದು ಮೇಜಿನ ಮೇಲಿಟ್ಟು ನಿದ್ರೆ ಹೋದರು. ನಿದ್ರೆಯಲ್ಲಿ ಹೃದಯಾಘಾತದಿಂದ ಮರಣಹೊಂದಿದರು. ಮೇಜಿನ ಮೇಲಿದ್ದ ಕವನದ ಆರಂಭ ಹೀಗೆ :


"ಮೃತ್ಯು ನೋಡುತಿದೆ ನನ್ನನು ದುರುಗುಟ್ಟಿ.
ಆದರೂ ಇಲ್ಲ ನನಗೆ ಭೀತಿ."

ಎ. ರಂಗಸ್ವಾಮಿ ಅಯ್ಯಂಗಾರ್

ಎ. ರಂಗಸ್ವಾಮಿ ಅಯ್ಯಂಗಾರ್ ವಕೀಲ ವೃತ್ತಿಗೆ ತಿಲಾಂಜಲಿ ಇತ್ತು ಪತ್ರಿಕೋದ್ಯಮಕ್ಕಿಳಿದು. ಪ್ರಭಾವಪೂರ್ಣ ಬರೆಹಗಾರರೆಂದೂ ದೇಶಪ್ರೇಮಿ ಪತ್ರಿಕಾಕರ್ತರೆಂದೂ ಹೆಸರು ಪಡೆದವರು: ಸ್ವಾತಂತ್ರ್ಯ ಆಂದೋಲನದಲ್ಲಿ ಭಾಗವಹಿಸಿದವರು.

1877ರಲ್ಲಿ ಜನಿಸಿದ ರಂಗಸ್ವಾಮಿ ವಕೀಲ ವೃತ್ತಿ ಕೈಗೊಂಡುದಕ್ಕೆ ಮೊದಲು ಗುಮಾಸ್ತೆಯಾಗಿದ್ದರು. ಅನಂತರ ನ್ಯಾಯಶಾಸ್ತ್ರ ಪದವೀಧರರಾಗಿ. ತಂಜಾವೂರಿನಲ್ಲಿ ವಕೀಲರಾದರು.

ಮದರಾಸಿನಲ್ಲಿ ಪ್ರಕಟವಾಗುತ್ತಿದ್ದ ಪ್ರಸಿದ್ಧ 'ಹಿಂದು' ದಿನಪತ್ರಿಕೆಯ ಸಂಪಾದಕ ಕಸ್ತೂರಿ ರಂಗ ಅಯ್ಯಂಗಾರ್ ಅವರ ಕರೆಗೆ ಮನ್ನಣೆಕೊಟ್ಟು ವಕೀಲ ವೃತ್ತಿಯನ್ನು ಬಿಟ್ಟು 'ಹಿಂದು' ಪತ್ರಿಕೆಯ ಸಂಪಾದಕ ವರ್ಗವನ್ನು ಸೇರಿದರು. 1905–15 ಅವಧಿಯಲ್ಲಿ ಅದರ ಸಹಾಯಕ ಸಂಪಾದಕರಾಗಿಯೂ 1928ರಿಂದ ಸಂಪಾದಕರಾಗಿಯೂ ದುಡಿದರು. ಈ ಮಧ್ಯೆ 'ಸ್ವದೇಶ ಮಿತ್ರನ್' ಪತ್ರಿಕೆಯ ಸಂಪಾದಕತ್ವ ವಹಿಸಿಕೊಂಡು ಅದರ ರೂಪುರೇಷೆಗಳಲ್ಲಿ ಹಲವಾರು ಬದಲಾವಣೆಗಳನ್ನು ಮಾಡಿದರು. 'ಹಿಂದು' ಪತ್ರಿಕೆಗೆ ಅಂತರರಾಷ್ಟ್ರೀಯ ಖ್ಯಾತಿ ಬರಲು ಕಾರಣರಾದರು.



'ಹಿಂದು' : ರಂಗಸ್ವಾಮಿ

ಅವರ ಸಂಪಾದಕತ್ವದಲ್ಲಿ 'ಹಿಂದು', ರಾಷ್ಟ್ರೀಯ ಅಭಿಪ್ರಾಯದ ಪ್ರಬಲ ಪ್ರಾತಿನಿಧಿಕ ಪತ್ರಿಕೆಯಾಯಿತು. ಈ ಪತ್ರಿಕೆಯಲ್ಲಿ ಪ್ರಕಟವಾಗುತ್ತಿದ್ದ ರಂಗಸ್ವಾಮಿ ಅಯ್ಯಂಗಾರ್ ಅವರ ಲೇಖನ, ಅಭಿಪ್ರಾಯಗಳಿಗೆ ದೇಶದಾದ್ಯಂತ ಮನ್ನಣೆ ಇದ್ದಿತು. ಅಂದಿನ ಸರಕಾರವೂ ಅದನ್ನು ಗೌರವದಿಂದ ಕಾಣುತ್ತಿತ್ತು.

ಗಾಂಧೀಜೀ ಭಾಗವಹಿಸಿದ ಎರಡನೆಯ ದುಂಡುಮೇಜಿನ ಪರಿಷತ್ತಿಗೆ ರಂಗಸ್ವಾಮಿ ಅಯ್ಯಂಗಾರ್ಯರೂ ಭಾರತದ ಪ್ರತಿನಿಧಿಯಾಗಿ ಹೋದರು; ಗಾಂಧೀಜಿಯ ರಾಜಕೀಯ ಕಾರ್ಯದರ್ಶಿಯಾಗಿ ಕೆಲಸ ಮಾಡಿದರು.

1934ರಲ್ಲಿ ಅವರು ನಿಧನಹೊಂದಿದರು.

ಎಲ್. ಕೆ. ಅದ್ವಾನಿ

1973ರಲ್ಲಿ ಭಾರತೀಯ ಜನಸಂಘದ ಅಧ್ಯಕ್ಷರಾದವರು ಲಾಲ್ ಕೃಷ್ಣ ಅದ್ವಾನಿ. ಇವರು ಸಂವಿಧಾನತಜ್ಞ, ಬರೆಹಗಾರ ಹಾಗೂ ಪತ್ರಿಕೋದ್ಯಮಿ.

ಅದ್ವಾನಿ 1927 ನವೆಂಬರ್‌ನಲ್ಲಿ ಕರಾಚಿಯಲ್ಲಿ ಜನಿಸಿದರು. ಮುಂಬಯಿಯಲ್ಲಿ ಎಂ. ಎ. ಹಾಗೂ ಕಾನೂನು ಪದವಿಗಳನ್ನು ಪಡೆದರು. ವಿದ್ಯಾರ್ಥಿಯಾಗಿದ್ದಾಗಲೇ ರಾಷ್ಟ್ರೀಯ ಸ್ವಯಂಸೇವಕ ಸಂಘದ ಸದಸ್ಯರಾದರು. ಭಾರತದ ವಿಭಜನೆಯಾದಾಗ ರಾಜಸ್ಥಾನದಲ್ಲಿ ನೆಲೆಸಿದರು. 1951ರಲ್ಲಿ ಅವರು ಜನಸಂಘದ ಸದಸ್ಯರಾದರು. ರಾಜಸ್ಥಾನದಲ್ಲಿ ಭಾರತೀಯ ಜನಸಂಘವನ್ನು ಕಟ್ಟಿ ಅದರ ನಾಯಕರಾದರು.



ಜನಸಂಘ : ಅದ್ವಾನಿ

ಪತ್ರಿಕೋದ್ಯಮಿಯಾಗಿ ದೆಹಲಿಗೆ ಬಂದ ಅದ್ವಾನಿ 1958ರಿಂದ 1972ರ ವರೆಗೆ ದೆಹಲಿ ಪ್ರದೇಶ ಜನಸಂಘದ ಕಾರ್ಯದರ್ಶಿ, ಅಧ್ಯಕ್ಷಸ್ಥಾನಗಳಲ್ಲಿದ್ದರು. 1966ರಲ್ಲಿ ಜನಸಂಘದ ರಾಷ್ಟ್ರೀಯ ಕಾರ್ಯಸಮಿತಿಯ ಸದಸ್ಯರಾದರು. 1966–67ರಲ್ಲಿ ದೆಹಲಿಯ ಮಧ್ಯಕಾಲೀನ ಮೆಟ್ರೊಪಾಲಿಟನ್ ಕೌನ್ಸಿಲ್‌ನಲ್ಲಿ ವಿರೋಧ ಪಕ್ಷದ ನಾಯಕರಾದರು. 1967ರಲ್ಲಿ ಈ ಕೌನ್ಸಿಲ್‌ನ ಸಭಾಧ್ಯಕ್ಷರಾದರು. 1970ರಲ್ಲಿ ರಾಜ್ಯಸಭೆಗೆ ಚುನಾಯಿತರಾದ ಮೇಲೆ ಈ ಸ್ಥಾನಕ್ಕೆ ರಾಜೀನಾಮೆ ನೀಡಿ. ಜನಸಂಘದ ಸಂಸದೀಯ ಗುಂಪಿನ ಕಾರ್ಯದರ್ಶಿಯಾದರು.

ಎಲಿಫೆಂಟ

ಶ್ರೇಷ್ಠ ಗುಹಾಶಿಲ್ಪವೆಂದು ಪರಿಗಣಿಸಲ್ಪಟ್ಟಿರುವ ಗುಹಾಲಯಗಳು ಎಲಿಫೆಂಟ ದ್ವೀಪದಲ್ಲಿವೆ. ಕಲ್ಲು ಗುಡ್ಡಗಳಿಂದ ಕೂಡಿದ ಈ ದ್ವೀಪ ಮುಂಬಯಿಯಿಂದ ಏಳು ಮೈಲು ದೂರದಲ್ಲಿದೆ. ಬಂಡೆಯೊಳಗಿರುವ ಗುಹೆಗಳು ಒಟ್ಟು ಆರು.

180 ಅಡಿ ಉದ್ದ ಮತ್ತು ಸುಮಾರು ಅಷ್ಟೇ ಅಗಲವಾಗಿರುವ ಇಲ್ಲಿನ 'ದೊಡ್ಡಗವಿ'ಯಲ್ಲಿ ಮೂರು ಮುಖಗಳ ಮಹೇಶಮೂರ್ತಿ ಇದೆ. ಈ ಮೂರ್ತಿ ಜಗತ್ಪ್ರಸಿದ್ಧ. ಇದು ಸೃಷ್ಟಿ, ಸ್ಥಿತಿ, ಲಯ ಸೂಚಕ ಎನ್ನುತ್ತಾರೆ.



ಸೃಷ್ಟಿ, ಸ್ಥಿತಿ, ಲಯ : ಮಹೇಶಮೂರ್ತಿ

ಎದೆಯಿಂದ ಮೇಲ್ಭಾಗವನ್ನು ಮಾತ್ರ ಕೆತ್ತಿರುವ ಈ ಭವ್ಯ ಮೂರ್ತಿ— ಸುಮಾರು 21 ಅಡಿ ಅಗಲ, 18 ಅಡಿ ಎತ್ತರ. ಮುಖಗಳು ಭಾವಪೂರ್ಣ. ಪೂರ್ವ, ಪಶ್ಚಿಮ, ದಕ್ಷಿಣಗಳಲ್ಲಿ ವಿಶಾಲ ಮುಖಮಂಟಪಗಳಿವೆ, ಕಂಬಗಳಿರುವ ಹಜಾರವಿದೆ. ಗವಿಯ ಪಶ್ಚಿಮ ಭಾಗದಲ್ಲಿ ಶಿವಲಿಂಗ ಇರುವ ಗರ್ಭಗುಡಿಯಿದೆ. ಗವಿಯ ಮುಂಬಾಗಿಲಿನಲ್ಲಿ ನಿಂತರೆ ನೇರವಾಗಿ ಮಹೇಶಮೂರ್ತಿಯ ದರ್ಶನವಾಗುತ್ತದೆ. ಈ ಬೃಹತ್ ಉಬ್ಬುಶಿಲ್ಪ ಕೃತಿ ಬಹಳ ಪರಿಣಾಮಕಾರಿಯಾಗಿದೆ. ಶಿವ, ಪಾರ್ವತಿ, ಬ್ರಹ್ಮ, ವಿಷ್ಣು ಮತ್ತು ಇತರ ದೇವತೆಗಳ ಪ್ರತಿಮೆಗಳೂ ಇಲ್ಲಿವೆ.

ಎಲಿಫೆಂಟದ ಒಂದೆರಡು ಗುಹೆಗಳು ಅಪೂರ್ಣ ಸ್ಥಿತಿಯಲ್ಲಿವೆ. ಪೋರ್ಚುಗೀಸರು ಇಲ್ಲಿಗೆ ಬಂದಾಗ 1673ರಲ್ಲಿ ಈ ಗುಹೆಗಳನ್ನು ದನದ ಕೊಟ್ಟಿಗೆಯಾಗಿ ಉಪಯೋಗಿಸಿದರಂತೆ. ಅದಕ್ಕೆ ಮೊದಲು ಇದು ಕ್ರಮವಾಗಿ ಮೌರ್ಯರು, ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣದ ಚಾಲುಕ್ಯರು, ದೇವಗಿರಿ ಯಾದವರು ಮತ್ತು ಅಹಮಬಾದಿನ ಸುಲ್ತಾನರು– ಇವರ ಅಧೀನದಲ್ಲಿ ಇದ್ದಿತು. ಪೋರ್ಚುಗೀಸರು ದೊಡ್ಡ ಗುಹೆಯತ್ತ ಫಿರಂಗಿಗಳನ್ನು ಕೂಡ ಹಾರಿಸಿದರು. 1682ರಲ್ಲಿ ಮರಾಠರು. ಅನಂತರ 1774ರಲ್ಲಿ ಬ್ರಿಟಿಷರು. ಎಲಿಫೆಂಟವನ್ನು ವಶಪಡಿಸಿಕೊಂಡರು. 1864ರಲ್ಲಿ ದ್ವೀಪದ ದಕ್ಷಿಣ ತುದಿಯಲ್ಲಿದ್ದ ಕಲ್ಲಿನ ಆನೆಯನ್ನು ಮುಂಬಯಿಯ ವಿಕ್ಟೋರಿಯ ಉದ್ಯಾನಕ್ಕೆ ಸಾಗಿಸಲಾಯಿತು. ದ್ವೀಪದ ಆಧುನಿಕ ಹೆಸರು 'ಎಲಿಫೆಂಟ': ಇದು ಬಂದಿರುವುದು ಈ ಆನೆಯಿಂದಲೇ. ಅದಕ್ಕೆ ಮುಂಚೆ ಇದಕ್ಕೆ ಶ್ರೀಪುರಿ ಎಂಬ ಹೆಸರು ಇದ್ದಿತು. ಸ್ಥಳೀಯವಾಗಿ ಇದನ್ನು ಘಾರಾಪುರಿ ಎಂದು ಕರೆಯುತ್ತಾರೆ. 1909ರಿಂದ ಎಲಿಫೆಂಟ ಗುಹೆಗಳು ಪುರಾತನ ಅವಶೇಷಗಳೆಂದು ರಕ್ಷಿಸಲ್ಪಟ್ಟಿವೆ.

ಎಲಿಫೆಂಟದಲ್ಲಿರುವ ಗುಹಾಂತರ್ದೇವಾಲಯಗಳು ಶೈವ ಪಂಥದವು. ಇವುಗಳ ಕಾಲ ಸುಮಾರು 6–8ನೆಯ ಶತಮಾನ ಎಂದು ತರ್ಕಿಸಲಾಗಿದೆ.

ಎಲ್ಲೋರ

ನೋಡಿ : ಸಂಪುಟ ೧, ೫

ಎ. ವಿ. ಬಾಳಿಗಾ

ಡಾಕ್ಟರ್ ಎ. ವಿ. ಬಾಳಿಗಾ ಭಾರತದ ಪ್ರಮುಖ ಶಸ್ತ್ರಚಿಕಿತ್ಸಕರಲ್ಲಿ ಒಬ್ಬರಾಗಿದ್ದರು. ಮೆದುಳು ಮತ್ತು ಎದೆಗೂಡಿನ ಶಸ್ತ್ರಚಿಕಿತ್ಸೆಯಲ್ಲಿ ಇವರು ಪರಿಣತರು; ಹಾಗೆಯೇ ಪ್ರಮುಖ ರಾಷ್ಟ್ರೀಯವಾದಿಯೂ ಸಮಾಜ ಸೇವಕರೂ ಆಗಿದ್ದರು.



ದಾನಶೀಲ : ಅಣ್ಣಪ್ಪ

ಅಣ್ಣಪ್ಪ ವಿಟ್ಟಪ್ಪ ಬಾಳಿಗಾರವರ ಜನನ ದಕ್ಷಿಣ ಕನ್ನಡ ಜಿಲ್ಲೆಯ ಕಲ್ಯಾಣಪುರದಲ್ಲಿ, 1903ರಲ್ಲಿ. ಅವರ ಬಾಲ್ಯ ಕಷ್ಟದಲ್ಲಿ ಕಳೆಯಿತು. 1919ರಲ್ಲಿ ಅಸಹಕಾರ ಆಂದೋಲನದಲ್ಲಿ ಧುಮುಕಿ ಶಾಲೆಗೆ ಶರಣು ಹೊಡೆದರು. ಮುಂದೆ ಗುಜರಾತ್ ವಿದ್ಯಾಪೀಠದಿಂದ ಮೆಟ್ರಿಕ್ಯುಲೇಷನ್ ಪಾಸಾಗಿ ಮುಂಬಯಿಯ ನ್ಯಾಷನಲ್ ಮೆಡಿಕಲ್ ಕಾಲೇಜಿನಲ್ಲಿ ಶಿಕ್ಷಣ ಪಡೆದರು. ಜನಪ್ರಿಯ ವೈದ್ಯಕೀಯ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದ್ದಲ್ಲದೆ ಉತ್ತಮ ಸರ್ಜನರೆಂದು ಹೆಸರಾದರು.

ಅವರು ಭಾರತ-ರಷ್ಯ ಸಾಂಸ್ಕೃತಿಕ ಸಂಘದ ಸಂಸ್ಥಾಪಕ ಅಧ್ಯಕ್ಷರು. ಲೇಖಕರು, ಕಲಾವಿದರು, ವಿಜ್ಞಾನಿಗಳು, ರಾಜಕಾರಣಿಗಳು —ಹೀಗೆ ಬಗೆ ಬಗೆಯ ಜನ ಇವರ ಮಿತ್ರರಾಗಿದ್ದರು.

ಬಾಳಿಗಾ ಅವರದು ದಾನಶೀಲ ಪ್ರವೃತ್ತಿ. ಉತ್ತರ ಕನ್ನಡ ಜಿಲ್ಲೆಯ ಡಾ. ಎ. ವಿ. ಬಾಳಿಗಾ ಆರ್ಟ್ಸ್ ಅಂಡ್ ಸೈನ್ಸ್ ಕಾಲೇಜ್, ಡಾ. ಎ. ವಿ. ಬಾಳಿಗಾ ಕಾಮರ್ಸ್ ಕಾಲೇಜ್, ಶ್ರೀಮತಿ ಕಮಲಾಬಾಯಿ ಸ್ಮಾರಕ ಕಾಲೇಜು ಮೊದಲಾದ ಹಲವು ವಿದ್ಯಾಸಂಸ್ಥೆಗಳು ಅವರ ಔದಾರ್ಯದ ಸಜೀವ ಸ್ಮಾರಕಗಳು.

1964ರಲ್ಲಿ ಡಾ. ಬಾಳಿಗಾ ಸರ್ಜನರ ಪರಿಷತ್ತಿಗಾಗಿ ಲಂಡನಿಗೆ ಹೋಗಿದ್ದಾಗ ಅಲ್ಲಿಯೇ ನಿಧನರಾದರು.

ಎಸ್. ಆರ್. ರಂಗನಾಥನ್

"ಭಾರತದಲ್ಲಿ ಗ್ರಂಥಾಲಯದ ಜನಕ; ಜಗತ್ತಿನ ಗ್ರಂಥಾಲಯ ನಕ್ಷೆಯಲ್ಲಿ ಭಾರತಕ್ಕೆ ಸ್ಥಾನ ಕಲ್ಪಿಸಿಕೊಟ್ಟವರು."

—ಈ ಪ್ರಶಂಸೆಗೆ ಪಾತ್ರರಾದವರು ಡಾ. ಎಸ್. ಆರ್. ರಂಗನಾಥನ್.

ವೈಯಕ್ತಿಕ ಪ್ರತಿಭೆ, ಗ್ರಂಥಾಲಯ ಚಳುವಳಿಯಲ್ಲಿ ಅವರು ತೋರಿದ ಅಪಾರ ಆಸಕ್ತಿ, ಗ್ರಂಥಾಲಯದ ವ್ಯವಸ್ಥೆ ನಿರ್ವಹಣೆಗಳಲ್ಲಿ ಅವರು ಕಲ್ಪಿಸಿದ ಹೊಸ ವಿಧಾನಗಳಿಗಾಗಿ ರಂಗನಾಥನ್ ಜಗತ್ಪ್ರಖ್ಯಾತ ಹೆಸರು ಪಡೆದರು. ಇವರು ರೂಪಿಸಿದ ಗ್ರಂಥಾಲಯ ಪುಸ್ತಕಗಳ ವರ್ಗೀಕರಣ ಪದ್ಧತಿ —ಕೋಲನ್ ಕ್ಲಾಸಿಫಿಕೇಷನ್ ಅಥವಾ ದ್ವಿಬಿಂದು ವರ್ಗೀಕರಣ ಪದ್ಧತಿ— ಹಲವು ರಾಷ್ಟ್ರಗಳಲ್ಲಿ, ವಿಶೇಷವಾಗಿ ಇಂಗ್ಲೆಂಡಿನಲ್ಲಿ ಬಳಸಲ್ಪಡುತ್ತಿದೆ.

ರಾಮಾಮೃತ ರಂಗನಾಥನ್ ಹುಟ್ಟಿದ್ದು ಆಗಸ್ಟ್ 12, 1892ರಲ್ಲಿ ತಮಿಳುನಾಡಿನ ಶಿಯಾಳಿಯಲ್ಲಿ. 1916ರಲ್ಲಿ ಗಣಿತದಲ್ಲಿ ಎಂ. ಎ. ಅನಂತರ ಎಲ್.ಟಿ. ಪದವಿಗಳನ್ನು ಪಡೆದರು. ಗಣಿತ ಪ್ರಾಧ್ಯಾಪಕರಾಗಿ



ಥಾಲಯದ ಜನಕ : ರಂಗನಾಥನ್

ಬಳಿಕ ಮದರಾಸು ವಿಶ್ವವಿದ್ಯಾನಿಲಯದ ಗ್ರಂಥಭಂಡಾರಿಯಾಗಿ ಸೇವೆ ಸಲ್ಲಿಸಿದರು.

ಇಂಗ್ಲೆಂಡಿಗೆ ಹೋಗಿ ಗ್ರಂಥಾಲಯ ವಿಷಯ ತರಬೇತಿ ಪಡೆದ ಭಾರತೀಯರಲ್ಲಿ ರಂಗನಾಥನ್ ಮೊದಲಿಗರು. ಅಂದಿನಿಂದ ಗ್ರಂಥಾಲಯ ಸಂಘಟನೆ, ಸ್ಥಾಪನೆಗಳ ವಿಷಯವಾಗಿ ವೈಜ್ಞಾನಿಕ ಸಂಶೋಧನೆಗಳಲ್ಲಿ ತೊಡಗಿದರು. ಗ್ರಂಥಾಲಯಗಳ ವಿಷಯವಾಗಿ ರಂಗನಾಥನ್ ಐವತ್ತಕ್ಕೂ ಹೆಚ್ಚು ಗ್ರಂಥಗಳನ್ನು ಬರೆದಿದ್ದಾರೆ. ಅವರಲ್ಲಿ ಅನೇಕ ಆವೃತ್ತಿಗಳನ್ನು ಕಂಡಿರುವ 'ಕೋಲನ್ ಕ್ಲಾಸಿಫಿಕೇಷನ್' (ಕೋಲನ್ ವರ್ಗೀಕರಣ), 'ರೆಫರೆನ್ಸ್ ಸರ್ವಿಸ್' (ಆಕರ ಸಾಹಿತ್ಯ ಸೇವೆ) ಮತ್ತು 'ಲೈಬ್ರರಿ ಅಡ್ಮಿನಿಸ್ಟ್ರೇಷನ್' (ಗ್ರಂಥಾಲಯ ಆಡಳಿತ ವ್ಯವಸ್ಥೆ) ಮುಖ್ಯವಾದುವು. ಅವರು ಹಲವಾರು ಭಾರತೀಯ ಮತ್ತು ವಿದೇಶೀ ವಿಶ್ವವಿದ್ಯಾನಿಲಯಗಳಲ್ಲಿ ಗ್ರಂಥಭಂಡಾರ ವಿಜ್ಞಾನದ ಪ್ರಾಧ್ಯಾಪಕರಾಗಿ ಕೂಡ ಕೆಲಸ ಮಾಡಿದರು. ಗ್ರಂಥಭಂಡಾರ ಸಂಬಂಧವಾದ ಅಂತರರಾಷ್ಟ್ರೀಯ ಸಂಸ್ಥೆ, ಸಮಿತಿಗಳ ಸದಸ್ಯರಾಗಿಯೂ ಸೇವೆ ಸಲ್ಲಿಸಿದರು. ಇವರ ಅಪೂರ್ವ ಸೇವೆ, ಸಾಧನೆಗಳನ್ನು ಗಮನಿಸಿ ದೆಹಲಿ ಮತ್ತು ಅಮೆರಿಕದ ಪಿಟ್ಸ್‌ಬರ್ಗ್ ವಿಶ್ವವಿದ್ಯಾಲಯಗಳು ಇವರಿಗೆ ಡಿ. ಲಿಟ್. ಪದವಿ ಕೊಟ್ಟು ಗೌರವಿಸಿದುವು.

ತಮ್ಮ ಜೀವನಪರ್ಯಂತ ಭಾರತೀಯ ಗ್ರಂಥಾಲಯ ಚಟುವಟಿಕೆಯ ಪ್ರಗತಿಗೆ ರಂಗನಾಥನ್ ಶ್ರಮಿಸಿದರು. ವಿಜ್ಞಾನ ಸಂಶೋಧಕರಿಗೆ ಅತಿ ಅವಶ್ಯವಾಗಿರುವ ಇಂಡಿಯನ್ ನ್ಯಾಷನಲ್ ಸೈಂಟಿಫಿಕ್ ಡಾಕ್ಯುಮೆಂಟೇಷನ್ ಸೆಂಟರ್ (ಇನ್ಸ್‌ಡಾಕ್) ಸಂಸ್ಥೆಯ ಸ್ಥಾಪನೆಗೂ ರಂಗನಾಥನ್ ಕಾರಣರು. ಕಾಮನ್‌ವೆಲ್ತ್ ರಾಷ್ಟ್ರಗಳಲ್ಲಿ ಗ್ರಂಥಾಲಯ ವಿಜ್ಞಾನದ ಸ್ನಾತಕೋತ್ತರ ಹಾಗೂ ಡಾಕ್ಟರೇಟ್ ಪದವಿ ಮಟ್ಟದ ಶಿಕ್ಷಣ ಭಾರತದಲ್ಲಿ ಮೊತ್ತಮೊದಲು ಸ್ಥಾಪಿತವಾದದ್ದು ಇವರ ಪ್ರೇರಣೆಯಿಂದಲೇ.

ಗ್ರಂಥಾಲಯ ವಿಜ್ಞಾನದಲ್ಲಿ ಪ್ರಾಧ್ಯಾಪಕಪೀಠ ಸ್ಥಾಪಿಸಲೆಂದು ಮದರಾಸು ವಿಶ್ವವಿದ್ಯಾನಿಲಯಕ್ಕೆ ಅವರು ತಮ್ಮ ಜೀವಿತದ ಗಳಿಕೆಯಾದ ಒಂದು ಲಕ್ಷ ರೂಪಾಯಿ ನೀಡಿದರು.

1957ರಲ್ಲಿ ರಂಗನಾಥನ್ ಅವರಿಗೆ ಪದ್ಮಶ್ರೀ ನೀಡಿ ಗೌರವಿಸಲಾಯಿತು. 1972 ಸೆಪ್ಟೆಂಬರ್ 27ರಂದು ಬೆಂಗಳೂರಿನಲ್ಲಿ ತಮ್ಮ ಮಗನ ಮನೆಯಲ್ಲಿ ರಂಗನಾಥನ್ ನಿಧನ ಹೊಂದಿದರು.

ಎಸ್. ಎಂ. ಜೋಶಿ

ರಾಜಕೀಯ ತಜ್ಞ, ಸಾಮಾಜಿಕ ಕಾರ್ಯಕರ್ತ, ಕಾರ್ಮಿಕರ ಸಂಘಟಕ ಎಂದೆನಿಸಿದವರು ಶ್ರೀಧರ ಮಹದೇವ ಜೋಶಿ ಅವರು.

ಎಸ್. ಎಂ. ಜೋಶಿ ಜನಿಸಿದ್ದು 1904 ನವೆಂಬರ್ 11ರಂದು. ಬಿ.ಎ., ಎಲ್‌ಎಲ್.ಬಿ. ಪದವಿಗಳನ್ನು ಗಳಿಸಿದರು. 1930ರಲ್ಲಿ ಭಾರತ ರಾಷ್ಟ್ರೀಯ ಕಾಂಗ್ರೆಸ್ ಸೇರಿದರು. ಸಮಾಜವಾದಿ ಧ್ಯೇಯಗಳಿಗೆ ಮಾರುಹೋದರು. 1934ರಲ್ಲಿ ಹುಟ್ಟಿದ ಕಾಂಗ್ರೆಸ್ ಸೋಷಲಿಸ್ಟ್ ಪಕ್ಷದ ಸ್ಥಾಪಕರಲ್ಲಿ ಒಬ್ಬರಾಗಿ 1948ರ ತನಕ ಕಾಂಗ್ರೆಸ್ ಸೋಷಲಿಸ್ಟ್ ಪಕ್ಷದಲ್ಲಿದ್ದರು. ಸ್ವಾತಂತ್ರ್ಯ ಚಳುವಳಿಗಳಲ್ಲಿ ಭಾಗವಹಿಸಿ ಸೆರೆಮನೆವಾಸ ಅನುಭವಿಸಿದರು. 1941–42 ಮತ್ತು 1947ರಲ್ಲಿ ರಾಷ್ಟ್ರಸೇವಾದಳದ ಪ್ರಧಾನ ಸಂಚಾಲಕರಾದರು. ಇವರು 1963ರ ವರೆಗೆ ಅಖಿಲ ಭಾರತ ರೈಲ್ವೆ ಕೆಲಸಗಾರರ ಸಂಘದ ಪ್ರಧಾನ ಕಾರ್ಯದರ್ಶಿಯಾಗಿದ್ದು ಅನಂತರ ಅದರ ಉಪಾಧ್ಯಕ್ಷರೂ ಆದರು. 1959ರಲ್ಲಿ ಮುಂಬಯಿ ವಲಯ ಸ್ಟೇಟ್ ಬ್ಯಾಂಕ್ ನೌಕರರ ಸಂಘದ, 1960ರಲ್ಲಿ ಅಖಿಲ ಭಾರತ ಸ್ಟೇಟ್ ಬ್ಯಾಂಕ್ ನೌಕರರ ಸಂಘದ ಅಧ್ಯಕ್ಷರಾಗಿದ್ದರು.

ಜೋಶಿ ಮುಂದೆ ಪ್ರಜಾಸೋಷಲಿಸ್ಟ್ ಪಕ್ಷ ಮತ್ತು ಸಂಯುಕ್ತ ಸಮಾಜವಾದೀ ಪಕ್ಷಗಳ ಅಧ್ಯಕ್ಷರಾದರು.

1957ರಲ್ಲಿ ಅವಿಭಕ್ತ ಮುಂಬಯಿ ವಿಧಾನ ಸಭಾ ಸದಸ್ಯರಾಗಿ ಸಂಯುಕ್ತ ಮಹಾರಾಷ್ಟ್ರ ನಿರ್ಮಾಣಕ್ಕಾಗಿ ಶ್ರಮಿಸಿದರು. 1967ರಲ್ಲಿ ಇವರು ಲೋಕಸಭೆಗೆ ಆರಿಸಿಬಂದು, 1970ರ ವರೆಗೆ ಅದರ ಸದಸ್ಯರಾಗಿದ್ದರು.

ಸುಳ್ಳು ಹೇಳಲಾಗದ ರಾಜಕಾರಣಿ — ಎಂದು ವಿನೋಬಾ ಇವರ ಬಗೆಗೆ ಆಡಿದ್ದಾರೆ.

ಎಸ್. ಎಂ. ನಂದಾ

ಸ್ವತಂತ್ರ ಭಾರತದ ನೌಕಾ ಪಡೆಯಲ್ಲಿ ಗಣನೀಯ ಸೇವೆ ಸಲ್ಲಿಸಿ ನಿವೃತ್ತರಾದವರು ಸರ್ದಾರಿಲಾಲ್ ಮಥುರಾದಾಸ್ ನಂದಾ.

ಜನನ 1915 ಅಕ್ಟೋಬರ್ 10. ವಿದ್ಯಾಭ್ಯಾಸ ಕರಾಚಿಯಲ್ಲಿ. ಕರಾಚಿಯ ಪೋರ್ಟ್ ಟ್ರಸ್ಟ್‌ನಲ್ಲಿದ್ದ ನಂದಾ, 1941ರಲ್ಲಿ ರಾಯಲ್ ಇಂಡಿಯನ್ ನೇವಲ್ ವಾಲಂಟಿಯರ್ ರಿಸರ್ವ್ ದಳಕ್ಕೆ ಸೇರಿದರು.

ಸ್ವಾತಂತ್ರ್ಯಾನಂತರ 1948ರಲ್ಲಿ ಭಾರತೀಯ ನೌಕಾಪಡೆಯ ಪ್ರಥಮ ಯುದ್ಧನೌಕೆ ಐಎನ್‌ಎಸ್ 'ದೆಹಲಿ'ಯಲ್ಲಿ ಅಧಿಕಾರಿಯಾದರು. ಅನಂತರ ಪ್ರಧಾನ ನೌಕಾ ಕಚೇರಿಯಲ್ಲಿ ಸಿಬ್ಬಂದಿ ವರ್ಗದ ನಿರ್ದೇಶಕರಾಗಿ ಎರಡು ವರ್ಷ ಕೆಲಸ ಮಾಡಿದರು. ಮುಂದೆ ಈ ಇಲಾಖೆಯ ಮುಖ್ಯಸ್ಥರಾದರು.

ಐಎನ್‌ಎಸ್ 'ರಣಜಿತ್' ಮತ್ತು ಐಎನ್‌ಎಸ್ 'ಮೈಸೂರ್'ಗಳಲ್ಲಿ ಸೇವೆಸಲ್ಲಿಸಿದ ನಂದಾ ಮುಂಬಯಿಯ ಹಡಗುಕಟ್ಟೆ ವಿಸ್ತರಣಾ ಯೋಜನೆಗೆ ಡೈರೆಕ್ಟರ್ ಜನರಲ್ ಆಗಿ ನೇಮಕ ಹೊಂದಿದರು. ಈ ಸ್ಥಾನದಲ್ಲಿ ಅವರು ಸಲ್ಲಿಸಿದ ಅಮೂಲ್ಯ ಸೇವೆಗಾಗಿ 1961ರಲ್ಲಿ ಅತಿ ವಿಶಿಷ್ಟ ಸೇವಾ ಪದಕ ದೊರೆಯಿತು.

ಲಂಡನಿನ ಇಂಪೀರಿಯಲ್ ಡಿಫೆನ್ಸ್ ಕಾಲೇಜಿನಲ್ಲಿ ಶಿಕ್ಷಣ ಪಡೆದು ಮರಳಿದ ನಂದಾಗೆ ಕಮೋಡೋರ್ ದರ್ಜೆಯ ಹುದ್ದೆ ಸಿಕ್ಕಿತು. ನೌಕಾ ಪಡೆಯ ಉಪ ಮುಖ್ಯಾಧಿಕಾರಿಯಾಗಿ, ಮುಂಬಯಿಯ ಮಜಗಾಂವ್ ಹಡಗುಕಟ್ಟೆಯ ಮ್ಯಾನೇಜಿಂಗ್ ಡೈರೆಕ್ಟರ್ ಆಗಿ ಉತ್ತಮ ಸೇವೆ ಸಲ್ಲಿಸಿದರು. 1966ರಲ್ಲಿ ಪರಮ ವಿಶಿಷ್ಟ ಸೇವಾ ಪದಕ ಲಭಿಸಿತು.

ಭಾರತೀಯ ನೌಕಾಪಡೆಯ ಫ್ಲಾಗ್ ಆಫೀಸರ್ ಕಮಾಂಡಿಂಗ್ ಆಗಿ ಕೆಲ ಕಾಲ



ಪದ್ಮವಿಭೂಷಣ : ನಂದಾ

ಇದ್ದರು. ಉಪ ನೌಕಾಬಲಾಧಿಪತಿ ಆಗಿದ್ದ ನಂದಾ 1970ರಲ್ಲಿ ಎ. ಕೆ. ಚಟರ್ಜಿಯವರಿಂದ ನೌಕಾಬಲಾಧಿಪತಿ ಅಧಿಕಾರವನ್ನು ವಹಿಸಿಕೊಂಡರು.

1971ರ ಪಾಕ್-ಭಾರತ ಯುದ್ಧದಲ್ಲಿ ತೋರಿದ ಅಸಾಮಾನ್ಯ ನಾಯಕತ್ವಕ್ಕಾಗಿ ಅವರಿಗೆ ಪದ್ಮವಿಭೂಷಣ ಪ್ರಶಸ್ತಿ ದೊರೆಯಿತು.

1973 ಮಾರ್ಚ್‌ನಲ್ಲಿ ನಂದಾ ನೌಕಾಬಲಾಧಿಪತಿ ಅಧಿಕಾರದಿಂದ ನಿವೃತ್ತರಾದರು.

ಎಸ್. ಎಂ. ಸಿಕ್ರಿ

ಸರ್ವ ಮಿತ್ರ ಸಿಕ್ರಿ ಅವರು ಜನವರಿ 1971ರಿಂದ 1973ರ ತನಕ ಭಾರತದ ಪ್ರಧಾನ ನ್ಯಾಯಾಧೀಶರಾಗಿದ್ದರು.

ಇವರು ಹುಟ್ಟಿದ್ದು ಲಾಹೋರಿನಲ್ಲಿ, 1908 ಏಪ್ರಿಲ್ 26ರಂದು. ತಂದೆ ನಿಹಾಲ್ ಚಂದ್. ಎಸ್. ಎಂ. ಸಿಕ್ರಿ ಕೇಂಬ್ರಿಜ್ ಬಿ.ಎ. ತೇರ್ಗಡೆಯಾದರು. ಲಿಂಕನ್ಸ್ ಇನ್‌ನಲ್ಲಿ ಬ್ಯಾರಿಸ್ಟರ್–ಅಟ್–ಲಾ ಆದರು. ಲಾಹೋರಿನ ಉಚ್ಚ ನ್ಯಾಯಾಲಯದಲ್ಲಿ 1930ರಲ್ಲಿ ವಕೀಲ ವೃತ್ತಿ ಪ್ರಾರಂಭಿಸಿದರು. 1964ರಲ್ಲಿ ವರಿಷ್ಠ ನ್ಯಾಯಾಲಯದ ನ್ಯಾಯಾಧೀಶರಾದರು : 1971 ಜನವರಿಯಲ್ಲಿ ಪ್ರಧಾನ ನ್ಯಾಯಾಧೀಶರಾಗಿ 1973 ಏಪ್ರಿಲ್ ವರೆಗೆ ಆ ಸ್ಥಾನದಲ್ಲಿದ್ದರು.


ಸಿಕ್ರಿ ಅನೇಕ ಸಂಘ ಸಮಿತಿಗಳಲ್ಲಿ ದುಡಿದಿದ್ದಾರೆ. ವಿಶ್ವಸಂಸ್ಥೆಯ ಅಂತರರಾಷ್ಟ್ರೀಯ ಕಾನೂನು ಕ್ರೋಡೀಕರಣ ಸಮಿತಿಯಲ್ಲಿ ಭಾರತದ ಪರ್ಯಾಯ ಪ್ರತಿನಿಧಿಯಾಗಿದ್ದರು. ಅಂತರರಾಷ್ಟ್ರೀಯ ನದಿಗಳಿಗೆ ಸಂಬಂಧಿಸಿದ ಕಾಯಿದೆ ಸಮಿತಿಯಲ್ಲಿ ಸದಸ್ಯರು; ಜಿನೀವಾದಲ್ಲಿ 1958ರಲ್ಲಿ ನಡೆದ ಸಾಗರ ಸಂಬಂಧದ ಕಾಯಿದೆಯ ಅಧಿವೇಶನಕ್ಕೆ ಪ್ರತಿನಿಧಿ; ಟೋಕಿಯೋದಲ್ಲಿ (1961) ಹಾಗೂ ಅಥೆನ್ಸಿನಲ್ಲಿ (1963) ನಡೆದ 'ಕಾಯಿದೆ ಮೂಲಕ ಜಾಗತಿಕ ಶಾಂತಿಸಾಧನೆಯ ಅಧಿವೇಶನ'ದಲ್ಲಿ ಪ್ರತಿನಿಧಿ— ಹೀಗೆ ಅವರು ಹಲವು ಪಾತ್ರಗಳನ್ನು ವಹಿಸಿದ್ದಾರೆ.



ಫೀಲ್ಡ್ ಮಾರ್ಷಲ್ ಗೌರವ

ಎಸ್. ಎಚ್. ಎಫ್. ಜೆ. ಮಣೆಕ್‌ಷಾ

ಸೇನೆಯ ಅತ್ಯುಚ್ಚ ಪದವಿ ಫೀಲ್ಡ್ ಮಾರ್ಷಲ್. ಭಾರತದ ಮೊದಲ ಫೀಲ್ಡ್ ಮಾರ್ಷಲ್ ಎಸ್.ಎಚ್.ಎಫ್.ಜೆ. ಮಣೆಕ್‌ಷಾ. ದಂಡನಾಯಕ ಹುದ್ದೆಯಿಂದ ನಿವೃತ್ತರಾದ ಬಳಿಕ— 1972 ಡಿಸೆಂಬರ್ 31ರಂದು –ಮಣೆಕ್‌ಷಾ ಅವರಿಗೆ ಈ ಪದವಿ ನೀಡಲಾಯಿತು.



ಸಮರ ನಾಯಕತ್ವ : ಮಣೆಕ್‌ಷಾ

ಅವರ ಪೂರ್ಣ ಹೆಸರು ಸಾಮ್ ಹೊರ್ಮುಸ್‌ಜಿ ಫ್ರಾಮ್‌ಜಿ ಜೆಮ್‌ಷೆಡ್‌ಜಿ ಮಣೆಕ್‌ಷಾ.

1914 ಏಪ್ರಿಲ್ 3 ಮಣೆಕ್‌ಷಾರ ಜನನ. ನೈನಿತಾಲ್ ಕಾಲೇಜಿನಲ್ಲಿ ವಿದ್ಯಾಭ್ಯಾಸ ಪಡೆದ ಮೇಲೆ 1934ರಲ್ಲಿ ರಕ್ಷಣಾದಳದ ಆಯುಕ್ತಾಧಿಕಾರಿ ಆದರು. ಡೆಹ್ರಡೂನಿನಲ್ಲಿರುವ ಇಂಡಿಯನ್ ಮಿಲಿಟರಿ ಅಕಾಡೆಮಿ, ಕ್ವೆಟ್ಟಾದ ಸ್ಟಾಫ್ ಕಾಲೇಜ್ (1943) ಹಾಗೂ ಲಂಡನಿನ ಇಂಪೀರಿಯಲ್ ಡಿಫೆನ್ಸ್ ಕಾಲೇಜು (1957)ಗಳಲ್ಲಿ ಅಧ್ಯಯನ, ತರಬೇತಿ. ಎರಡನೆಯ ಮಹಾಯುದ್ಧ ಕಾಲದಲ್ಲಿ ಬರ್ಮ ಹಾಗೂ ಫ್ರೆಂಚ್ ಇಂಡೊ ಚೀನಗಳಲ್ಲಿ ನಡೆದ ಯುದ್ಧದಲ್ಲಿ ಭಾಗವಹಿಸಿದರು. ಬರ್ಮದಲ್ಲಿ ಇವರು ಗಾಯಗೊಂಡರು. ಹಾಗಿದ್ದರೂ ಹಿಂದೇಟು ಹಾಕದೆ ತಮ್ಮ ಸಂಗಡಿಗರೊಡನೆ ಮುಂದುವರಿದರು, ಆಗ ಕ್ಯಾಪ್ಟನ್ ಹುದ್ದೆಯಲ್ಲಿದ್ದ ಇವರಿಗೆ ಪದಕ-ಪ್ರಶಸ್ತಿಗಳು ದೊರೆತುವು. 1946–47ರಲ್ಲಿ ಮಿಲಿಟರಿ ಕಾರ್ಯಾಚರಣೆಯ ನಿರ್ದೇಶನಾಲಯದ ಅಧಿಕಾರಿಯಾಗಿದ್ದರು. 1957ರಲ್ಲಿ ಮೇಜರ್ ಜನರಲ್ ಆದರು ; ವಿವಿಧ ಪ್ರದೇಶಗಳಲ್ಲಿ ಮುಖ್ಯ ಸೇನಾಧಿಕಾರಿಯಾಗಿದ್ದರು. 1969ರಲ್ಲಿ ಅವರು ಜನರಲ್ ದರ್ಜೆಯನ್ನು ಪಡೆದು ಮಹಾ ದಂಡನಾಯಕರಾದರು. ಸಂಪೂರ್ಣವಾಗಿ ಭಾರತದಲ್ಲೇ ಸೈನಿಕ ಶಿಕ್ಷಣ ಪಡೆದು ಆಯುಕ್ತಾಧಿಕಾರಿಯಾಗಿ ಅನಂತರ ಭಾರತೀಯ ಸೈನ್ಯದ ಮಹಾ ದಂಡನಾಯಕರಾದವರಲ್ಲಿ ಮಣೆಕ್‌ಷಾ ಮೊದಲಿಗರು.

ಮಣೆಕ್‌ಷಾ ಅವರಿಗೆ ಭಾರತ ಸರಕಾರ 1968ರಲ್ಲಿ ಪದ್ಮಭೂಷಣ, 1972ರಲ್ಲಿ ಪದ್ಮವಿಭೂಷಣ ಪ್ರಶಸ್ತಿಗಳನ್ನು ನೀಡಿತು.

1971ರಲ್ಲಿ ಪಾಕಿಸ್ತಾನದೊಡನೆ ನಡೆದ ಸಮರದಲ್ಲಿ ಪೂರ್ವ ಹಾಗೂ ಪಶ್ಚಿಮ ಗಡಿಗಳ ಕಾರ್ಯಾಚರಣೆಗೆ ಮಣೆಕ್‌ಷಾ ಮಾರ್ಗದರ್ಶನ ನೀಡಿದರು. ಸಾವಿರಾರು ಪಾಕ್ ಸೈನಿಕರು ಶರಣಾಗತರಾಗಿ, ಬಾಂಗ್ಲಾದೇಶ ಶತ್ರು ಹಿಡಿತದಿಂದ ಬಿಡುಗಡೆ ಹೊಂದುವಂತೆ ಮಾಡುವುದರಲ್ಲಿ ಮಣೆಕ್‌ಷಾ ಪ್ರಮುಖ ಪಾತ್ರ ವಹಿಸಿದರು.

ಎಸ್. ಎ. ಡಾಂಗೆ

ಭಾರತ ಕಮ್ಯೂನಿಸ್ಟ್ ಪಕ್ಷದ ಅಧ್ಯಕ್ಷರು —ಶ್ರೀಪಾದ ಅಮೃತ ಡಾಂಗೆ.

ಇವರು 1899 ಅಕ್ಟೋಬರ್ 10ರಂದು ನಾಸಿಕದಲ್ಲಿ ಜನಿಸಿದರು. ಕಾಲೇಜ್ ಬಿಟ್ಟು ಅಸಹಕಾರ ಚಳುವಳಿ ಸೇರಿದರು. ಚಳುವಳಿ ಅಯಶಸ್ವಿಯಾದಾಗ ಭ್ರಮೆನಿರಸನಗೊಂಡವರಲ್ಲಿ ಇವರೂ ಒಬ್ಬರು. ಮಾರ್ಕ್ಸ್‌ವಾದದತ್ತ ಆಕರ್ಷಿತರಾದರು. ಆಗ ಅವರು ಬರೆದ ಪುಸ್ತಕ 'ಗಾಂಧೀ ಮತ್ತು ಲೆನಿನ್'. ಕಮ್ಯೂನಿಸ್ಟರಾಗಿ, ಪಕ್ಷದ ಪ್ರಮುಖರಲ್ಲಿ ಒಬ್ಬರಾದರು. 'ದಿ ಸೋಷಿಯಲಿಸ್ಟ್' ಎಂಬ ಭಾರತದ ಪ್ರಥಮ ಕಮ್ಯೂನಿಸ್ಟ್ ಪತ್ರಿಕೆಯನ್ನು ಆರಂಭಿಸಿದರು.



ಸಿ. ಪಿ. ಐ. : ಡಾಂಗೆ

ಕಾನ್ಪುರದ ಪಿತೂರಿ ಮೊಕದ್ದಮೆಯಲ್ಲಿ ಇವರಿಗೆ 4 ವರ್ಷ ಸೆರೆಮನೆ ಶಿಕ್ಷೆ ಲಭಿಸಿತು. ಮತ್ತೆ 1929ರಲ್ಲಿ ಮೀರತ್ ಪಿತೂರಿ ಮೊಕದ್ದಮೆಯಲ್ಲಿ ಆರು ವರ್ಷ ಶಿಕ್ಷೆ ದೊರೆಯಿತು.

ಭಾರತ ಕಮ್ಯೂನಿಸ್ಟ್ ಪಕ್ಷದ ರಾಷ್ಟ್ರೀಯ ಮಂಡಳಿಯ ಅಧ್ಯಕ್ಷರಾಗಿ, ಆಲ್ ಇಂಡಿಯಾ ಟ್ರೇಡ್ ಯೂನಿಯನ್ ಕಾಂಗ್ರೆಸ್ಸಿನ ಪ್ರಧಾನ ಕಾರ್ಯದರ್ಶಿಯಾಗಿ, ವರ್ಲ್ಡ್ ಫೆಡರೇಷನ್ ಆಫ್ ಟ್ರೇಡ್ ಯೂನಿಯನ್ಸ ಉಪಾಧ್ಯಕ್ಷರಾಗಿ ಕೆಲಸ ಮಾಡಿದ್ದಾರೆ. ಮುಂಬಯಿಯ ವಿಧಾನಸಭಾ ಸದಸ್ಯತ್ವವೂ ಇವರಿಗೆ ಲಭಿಸಿತು. ಲೋಕಸಭಾ ಸದಸ್ಯರೂ ಆಗಿದ್ದರು.

1962ರಲ್ಲಿ ಭಾರತ-ಚೀನ ಯುದ್ಧವಾದ ಬಳಿಕ ಕಮ್ಯೂನಿಸ್ಟ್ ಪಕ್ಷದಲ್ಲಿ ಭಿನ್ನಾಭಿಪ್ರಾಯ ಉಂಟಾಗಿ, ಭಾರತ ಕಮ್ಯೂನಿಸ್ಟ್ ಪಕ್ಷ ಒಡೆಯಿತು. ಕಮ್ಯೂನಿಸ್ಟ್ ಪಾರ್ಟಿ ಆಫ್ ಇಂಡಿಯಾ (ಮಾರ್ಕ್ಸಿಸ್ಟ್) ಎಂದು ಹೊಸ ಪಕ್ಷದ ಉದಯವಾಯಿತು.

ಡಾಂಗೆ ಭಾರತ ಕಮ್ಯೂನಿಸ್ಟ್ ಪಕ್ಷದ ಅಧ್ಯಕ್ಷರಾಗಿ ಉಳಿದರು.

ಡಾಂಗೆ ಶ್ರೇಷ್ಠ ವಾಗ್ಮಿ. ಸರಳ ಶೈಲಿಯ ಬರಹಗಾರ. ಸಂಸ್ಕೃತದಲ್ಲಿ ಪಾಂಡಿತ್ಯವಿದೆ. ವೇದಕಾಲೀನ ಭಾರತದ ಬಗೆಗೆ ಇವರು ಮಾರ್ಕ್ಸ್‌ವಾದಿ ವ್ಯಾಖ್ಯೆಯನ್ನು ನೀಡಿದ್ದಾರೆ. ಈ ಕೃತಿಯ ಹೆಸರು 'ಇಂಡಿಯಾ ಫ್ರಂ ಪ್ರಿಮಿಟಿವ್ ಕಮ್ಯೂನಿಸಂ ಟು ಸ್ಲೇವರಿ'.

ಎಸ್.ಎನ್. ಕೊಹ್ಲಿ

1971 ಭಾರತ-ಪಾಕಿಸ್ತಾನ ಯುದ್ಧದ ಕಾಲಕ್ಕೆ ಅರಬಿ ಸಮುದ್ರದ ಉತ್ತರ ಭಾಗದ ಎಲ್ಲ ನೌಕಾ ಚಲನವಲನ ಜವಾಬ್ದಾರಿ. ಪಾಕಿಸ್ತಾನದ ಕರಾವಳಿಯಿಂದ ಗೋವ ವರೆಗಿನ ಬಂದರುಗಳ ರಕ್ಷಣೆ, ಭಾರತದ ಸರಕು ಹಡಗುಗಳ ಸುರಕ್ಷತೆಯ ಹೊಣೆ— ಇವೆಲ್ಲ ವೈಸ್ ಅಡ್ಮಿರಲ್ ಆಗಿದ್ದ ಕೊಹ್ಲಿಯವರ ಪಾಲಿಗೆ ಬಂದಿತ್ತು. ಅವರು ಈ ಕೆಲಸವನ್ನು ದಕ್ಷತೆಯಿಂದ ನಿರ್ವಹಿಸಿದರು. ಪಾಕಿಸ್ತಾನದ ನೌಕಾದಳಕ್ಕೆ ಬಲವಾದ ಪೆಟ್ಟು ಕೊಟ್ಟು ಅದನ್ನು ಬಲಹೀನವಾಗಿ ಮಾಡಿದರು. ಪಾಕಿಸ್ತಾನದ ಕರಾಚಿಯ ಮೇಲೆ ಚರಿತ್ರಾರ್ಹ ದಾಳಿ ನಡೆಸಿ ಯಶಸ್ವಿಯಾದರು.

ಸೌರೇಂದ್ರನಾಥ ಕೊಹ್ಲಿ ಹುಟ್ಟಿದ್ದು 1916 ಜೂನ್ 21 ರಂದು. ಬಿ.ಎ.(ಆನರ್ಸ್) ಪದವಿ ಪಡೆದ ಮೇಲೆ 1936ರಲ್ಲಿ ನೌಕಾದಳ ಸೇರಿದರು. 1942-43 ಅವಧಿಯಲ್ಲಿ ಬ್ರಿಟನ್ನಿನಲ್ಲಿ ತುರ್ತು ಸಾಗಣೆ ಕ್ಷೇತ್ರದಲ್ಲಿ ವಿಶಿಷ್ಟ ತರಬೇತಿ ಪಡೆದರು. ಎರಡನೆಯ ಮಹಾಯುದ್ಧ ಕಾಲದಲ್ಲಿ ಬರ್ಮಾ ಕೊಲ್ಲಿ ಹಾಗೂ ದೂರಪ್ರಾಚ್ಯ ಪ್ರದೇಶಗಳಲ್ಲಿ ಭಾಗವಹಿಸಿದರು. ಭಾರತ ಸ್ವತಂತ್ರವಾದ ಮೇಲೆ ಐಎನ್‌ಎಸ್ 'ರಾಣಾ', ಐಎನ್‌ಎಸ್ 'ಗೋದಾವರಿ', ಐಎನ್‌ಎಸ್ 'ಮೈಸೂರ್'ಗಳಲ್ಲಿ ಉನ್ನತ ಪದವಿಗಳಲ್ಲಿದ್ದರು. 1967–69ರಲ್ಲಿ ಐಎನ್‌ಎಸ್ 'ವಿಕ್ರಾಂತ್'ನ ನೇತೃತ್ವ ವಹಿಸಿದ್ದರು.

ನೌಕಾ ತಂಡದ ರಿಯರ್ ಅಡ್ಮಿರಲ್ ಆಗಿದ್ದಾಗ ಅವರ ಸಾಧನೆಗಳಿಗಾಗಿ ಪರಮ ವಿಶಿಷ್ಟ ಸೇವಾ ಪದಕ ದೊರೆಯಿತು. ಅನಂತರ ಕೆಲ ಕಾಲ ನ್ಯಾಷನಲ್ ಡಿಫೆನ್ಸ್ ಕಾಲೇಜಿನ ಮುಖ್ಯಸ್ಥರಾಗಿದ್ದರು. 1971ರಿಂದ ಪಶ್ಚಿಮ ನೌಕಾ ವಲಯದ ಫ್ಲಾಗ್ ಆಫೀಸರ್ ಕಮಾಂಡಿಂಗ್ ಇನ್ ಚೀಫ್ ಆಗಿದ್ದರು.



ನೌಕಾಬಲ : ಕೊಹ್ಲಿ

1971 ಯುದ್ಧದ ಅನಂತರ ಅವರಿಗೆ ಭಾರತ ಸರಕಾರ ಪದ್ಮಭೂಷಣ ಪ್ರಶಸ್ತಿ ನೀಡಿತು. 1973 ಮಾರ್ಚ್ 1ರಂದು ಅಡ್ಮಿರಲ್ ಕೊಹ್ಲಿ ಅವರು ಚೀಫ್ ಆಫ್ ನೇವಲ್ ಸ್ಟಾಫ್ –ನೌಕಾಬಲಾಧಿಪತಿ— ಆಗಿ ನೇಮಕಗೊಂಡರು.

ಎಸ್. ಕೆ. ಪಾಟೀಲ್

ಸ್ವಾತಂತ್ರ್ಯ ಸಂಗ್ರಾಮದ ಸಮಯದಲ್ಲೂ ಸ್ವಾತಂತ್ರ್ಯಾನಂತರವೂ ಮುಂಬಯಿ ಮಹಾನಗರದಲ್ಲಿ ಭಾರತ ರಾಷ್ಟ್ರೀಯ ಕಾಂಗ್ರೆಸ್ಸಿನ ನಿಷ್ಣಾತ ಸಂಘಟಕ ಎಂಬ ಖ್ಯಾತಿ ಸಂಪಾದಿಸಿದ ಕಾನ್ಹೋಜಿ ಪಾಟೀಲ ಅವರದು.

1900 ಆಗಸ್ಟ್ 14ರಂದು ಹುಟ್ಟಿದ ಪಾಟೀಲರು ಕರಾವಳಿ ಜಿಲ್ಲೆಯಾದ ರತ್ನಾಗಿರಿಯವರು. ಮುಂಬಯಿ ಹಾಗೂ ಲಂಡನ್ ವಿಶ್ವವಿದ್ಯಾನಿಲಯಗಳಲ್ಲಿ ವಿದ್ಯಾಭ್ಯಾಸ. 1920ರಲ್ಲಿ ಮಹಾತ್ಮಾ ಗಾಂಧಿ ಅವರ ಅಸಹಕಾರ ಆಂದೋಲನದಲ್ಲಿ ಪಾಲು. 1921–24 ಅವಧಿಯಲ್ಲಿ ರಾಷ್ಟ್ರೀಯ ಶಾಲೆ ನಡೆಸಿದರು. 1935ರಿಂದ 1952ರ ವರೆಗೆ ಮುಂಬಯಿ ನಗರ ಕಾರ್ಪೊರೇಷನ್ ಸದಸ್ಯ. 1949ರಿಂದ 1952ರ ವರೆಗೆ ಮುಂಬಯಿಯ ಮೇಯರ್. 1929ರಿಂದ 1946ರ ವರೆಗೆ ಮುಂಬಯಿ ಪ್ರದೇಶ ಕಾಂಗ್ರೆಸ್ ಸಮಿತಿಯ ಪ್ರಧಾನ ಕಾರ್ಯದರ್ಶಿ: 1946ರಿಂದ 1956ರ ವರೆಗೆ ಅದೇ ಸಮಿತಿಯ ಅಧ್ಯಕ್ಷ. 1937ರಿಂದ 1946ರ ತನಕ ಮುಂಬಯಿ ಪ್ರಾಂತ ಶಾಸನ ಸಭೆಯ ಸದಸ್ಯ. 1947ರಿಂದ 1950ರ ತನಕ ಭಾರತದ ಸಂವಿಧಾನ ಸಭೆಯ ಸದಸ್ಯ. 1952ರಿಂದ 1967ರ ವರೆಗೆ ಲೋಕಸಭಾ ಸದಸ್ಯ. 1969 ಮಹಾಚುನಾವಣೆಯಲ್ಲಿ ಸೋತರು. ಮತ್ತೆ ಅದೇ ವರ್ಷ ಗುಜರಾತಿನ ಕ್ಷೇತ್ರವೊಂದರಿಂದ ಮರು ಚುನಾವಣೆಯಲ್ಲಿ ಆಯ್ಕೆ ಹೊಂದಿದರು.

1957ರಿಂದ ಕೇಂದ್ರ ಸರಕಾರದ ಮಂತ್ರಿಯಾಗಿ. ನೀರಾವರಿ ಹಾಗೂ ವಿದ್ಯುತ್ ಖಾತೆಯನ್ನು ನಿರ್ವಹಿಸಿದರು. ಅನಂತರ 1958ರಿಂದ 1959ರ ವರೆಗೆ ಸಾರಿಗೆ ಹಾಗೂ ಸಂಪರ್ಕ ಖಾತೆ ಸಚಿವರಾಗಿದ್ದರು. 1959ರಿಂದ 1963ರ ವರೆಗೆ ಆಹಾರ



ನಿಷ್ಣಾತ ಸಂಘಟಕ : ಸದಾಶಿವ ಕಾನ್ಹೋಜಿ

ಹಾಗೂ ಕೃಷಿಖಾತೆಯ ಸಚಿವರಾಗಿದ್ದರು. 1964ರಿಂದ 1967ರ ವರೆಗೆ ರೈಲ್ವೆ ಮಂತ್ರಿ ಆಗಿದ್ದರು.

ಸರಕಾರದ ಕಾರ್ಯನಿರ್ವಹಣೆಗಿಂತ ಕಾಂಗ್ರೆಸ್ ಸಂಸ್ಥೆಯ ಸಂಘಟನೆಯಲ್ಲಿ ಪಾಟೀಲರಿಗೆ ಆಸಕ್ತಿ, ಕೌಶಲ ಹೆಚ್ಚು. 1960ರಿಂದ 1964ರ ವರೆಗೆ ಮತ್ತು 1968ರಿಂದ 1971ರ ವರೆಗೆ ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಕೋಶಾಧಿಕಾರಿ. 1963ರಿಂದ ಕೇಂದ್ರ ಪಾರ್ಲಿಮೆಂಟರಿ ಮಂಡಲಿ ಸದಸ್ಯ. 1969ರಲ್ಲಿ ಕಾಂಗ್ರೆಸ್ ಇಬ್ಭಾಗ ಆದಾಗ ಸಂಸ್ಥಾ ಕಾಂಗ್ರೆಸ್ಸಿನವರಾದವರು. ಚುನಾವಣೆಗಳಿಗೆ ಹುರಿಯಾಳುಗಳನ್ನು ಆರಿಸುವುದು, ಚುನಾವಣೆ ಪ್ರಚಾರ ವ್ಯವಸ್ಥೆ, ಪಕ್ಷಕ್ಕೆ ಹಣ ಸಂಗ್ರಹಿಸುವುದರಲ್ಲಿ ಎಸ್. ಕೆ. ಪಾಟೀಲರು ಎತ್ತಿದ ಕೈ.

ಸ್ವತಃ ಮರಾಠೀ ಮಾತೃಭಾಷೆಯವರಾದರೂ ಮುಂಬಯಿ ನಗರ ದ್ವಿಭಾಷಾ ಪ್ರಾಂತದ ರಾಜಧಾನಿ ಆಗಿಯೇ ಇರಬೇಕೆಂದು ಪ್ರತಿಪಾದಿಸಿದವರು ಪಾಟೀಲರು. ಮುಂಬಯಿ ಮಹಾನಗರದ ವಿವಿಧ ಭಾಷೆಗಳನ್ನಾಡುವ ಜನರೆಲ್ಲರ ವಿಶ್ವಾಸಕ್ಕೂ ಅವರು ಪಾತ್ರರಾಗಿದ್ದರು.

ಪಾಟೀಲರು ಚಲಚ್ಚಿತ್ರೋದ್ಯಮ ವಿಚಾರಣೆ ಸಮಿತಿಯ ಅಧ್ಯಕ್ಷರಾಗಿದ್ದರು. ಮುಂಬಯಿಯ ರಾಷ್ಟ್ರಭಾಷಾ ಪ್ರಚಾರ ಸಮಿತಿ, ಬೃಹತ್ ಭಾರತೀಯ ಸಮಾಜ, ವಿಶ್ವಸಂಸ್ಥೆಯ ಭಾರತೀಯ ಸಂಘಗಳ ಮಹಾಮಂಡಲ ಹಾಗೂ ವಲ್ಲಭಭಾಯಿ ಪಟೇಲ ಸ್ಮಾರಕ ಟ್ರಸ್ಟ್‌ಗಳೊಡನೆ ಪಾಟೀಲರದು ಗಾಢ ಸಂಬಂಧ.

ಎಸ್. ಚಂದ್ರಶೇಖರ್

ನೋಡಿ : ಚಂದ್ರಶೇಖರ್—ಸಂಪುಟ ೩

ಎಸ್. ಧಾವನ್

ಬೆಂಗಳೂರಿನಲ್ಲಿರುವ, ದೇಶದ ಪ್ರಮುಖ ವೈಜ್ಞಾನಿಕ ಸಂಸ್ಥೆಗಳಲ್ಲಿ ಒಂದಾದ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಸಂಸ್ಥೆಗೆ ಎಸ್. ಧಾವನ್ ನಿರ್ದೇಶಕರು.

ಸತೀಶ್ ಧಾವನ್ ಶ್ರೀನಗರದಲ್ಲಿ 1920 ಸೆಪ್ಟೆಂಬರ್ 25ರಂದು ಹುಟ್ಟಿದರು. ಪ್ರಥಮತಃ ಸ್ನಾತಕೋತ್ತರ ಪದವಿ ಪಡೆದದ್ದು ಸಾಹಿತ್ಯದಲ್ಲಿ. ಅನಂತರ ಬಿ. ಎಸ್‌ಸಿ. (ಎಂಜಿನಿಯರಿಂಗ್) ಪರೀಕ್ಷೆಯಲ್ಲಿ ಪ್ರಥಮ ಸ್ಥಾನ ಪಡೆದರು. ಅಮೆರಿಕದ ಮಿನ್ನೆಸೋಟಾ ವಿಶ್ವವಿದ್ಯಾಲಯ ಮತ್ತು ಕ್ಯಾಲಿಫೋರ್ನಿಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಗಳಲ್ಲಿ ಅಭ್ಯಾಸ ಮಾಡಿ ಎಮ್. ಎಸ್. (ಏರೋನಾಟಿಕಲ್ ಎಂಜಿನಿಯರಿಂಗ್) ಮತ್ತು ಪಿಎಚ್.ಡಿ. ಪಡೆದರು. 1951ರಲ್ಲಿ ಧಾವನ್ ಅವರು ಬೆಂಗಳೂರಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ (ಭಾರತೀಯ ವಿಜ್ಞಾನ ಮಂದಿರ) ಸೇರಿದರು. 1963ರಲ್ಲಿ ಇದರ ನಿರ್ದೇಶಕರಾದರು.



ವ್ಯೋಮ ಸಂಶೋಧನೆ :
ಸತೀಶ್ ಧಾವನ್

ಡಾ. ಸತೀಶ್ ಧಾವನ್‌ರಿಗೂ ಭಾರತದ ವ್ಯೋಮ ಸಂಶೋಧನೆಯ ಬೆಳವಣಿಗೆಗೂ ಮೊದಲಿನಿಂದಲೂ ನಿಕಟ ಸಂಬಂಧ. 1972ರಲ್ಲಿ ಇವರು ಭಾರತ ಸರಕಾರದ ವ್ಯೋಮ ವಿಭಾಗದ ಕಾರ್ಯದರ್ಶಿಯಾದರು. ಭಾರತದ ವ್ಯೋಮ ಸಂಶೋಧನಾ ಸಂಸ್ಥೆ ಮತ್ತು ವ್ಯೋಮ ಆಯೋಗಗಳಿಗೆ ಇವರು ಅಧ್ಯಕ್ಷರು. ಪರಮಾಣು ಶಕ್ತಿ ಕಮಿಷನಿನಲ್ಲೂ ಧಾವನ್ ಸದಸ್ಯರಾಗಿದ್ದಾರೆ. ರಾಯಲ್ ಏರೋನಾಟಿಕಲ್ ಸೊಸೈಟಿ ಮತ್ತು ಇಂಡಿಯನ್ ಅಕಾಡೆಮಿ ಆಫ್ ಸೈನ್ಸಸ್‌ಗಳ ಸದಸ್ಯರಾಗಿರುವ ಧಾವನ್ ವಾಯುಬಲ ವಿಜ್ಞಾನ ಕುರಿತು ಹಲವು ಪ್ರೌಢ ಪ್ರಬಂಧಗಳನ್ನು ಬರೆದಿದ್ದಾರೆ.

1966ರಲ್ಲಿ ಪದ್ಮಶ್ರೀ ಹಾಗೂ 1971ರಲ್ಲಿ ಪದ್ಮಭೂಷಣ ಪ್ರಶಸ್ತಿ ಇವರಿಗೆ ದೊರೆತುವು. 1972ರಲ್ಲಿ ರೂರ್ಕಿ ವಿಶ್ವವಿದ್ಯಾಲಯ ಇವರಿಗೆ ಗೌರವ ಡಾಕ್ಟರೇಟ್ ಪ್ರಶಸ್ತಿ ನೀಡಿತು.

ವಿಜ್ಞಾನ ಇತಿಹಾಸದ ಅಧ್ಯಯನ ಧಾವನ್ ಅವರ ಹವ್ಯಾಸ. ಜೊತೆಗೆ ಮಕ್ಕಳಿಗಾಗಿ ಗೊಂಬೆ ತಯಾರಿಯಲ್ಲೂ ವಿಶೇಷ ಆಸಕ್ತಿ.

ನೋಡಿ : ವ್ಯೋಮ ಆಯೋಗ

ಎಸ್. ಭಗವಂತಂ

ಬೆಳಕು ಮತ್ತು ಸ್ಫಟಿಕ ಸಂಶೋಧನೆಯಲ್ಲಿ ಹೆಸರಾಂತ ಭಾರತೀಯ ಭೌತ ವಿಜ್ಞಾನಿ ಡಾ. ಸೂರಿ ಭಗವಂತಂ. ಅವರು 1909 ಅಕ್ಟೋಬರ್ 14ರಂದು ಆಂಧ್ರ ಪ್ರದೇಶದ ಗುಡಿವಾಡದಲ್ಲಿ ಜನಿಸಿದರು. ತಂದೆ ಎಸ್.ವಿ.ಎಸ್. ಶಾಸ್ತ್ರೀ; ತಾಯಿ ಸೀತಮ್ಮ.

ಹೈದರಾಬಾದಿನ ನಿಜಾಮ್ ಕಾಲೇಜ್, ಮದರಾಸ್ ವಿಶ್ವವಿದ್ಯಾನಿಲಯ ಮತ್ತು ಕಲ್ಕತ್ತೆಯ ಇಂಡಿಯನ್ ಅಸೋಸಿಯೇಷನ್ ಫಾರ್ ದಿ ಕಲ್ಟಿವೇಷನ್ ಆಫ್ ಸೈನ್ಸ್(ವಿಜ್ಞಾನದ ಅಭ್ಯಾಸಕ್ಕಾಗಿರುವ ಭಾರತೀಯ ಸಂಸ್ಥೆ)ಗಳಲ್ಲಿ ಇವರು ಶಿಕ್ಷಣ ಪಡೆದರು.

ಓದು ಮುಗಿದಮೇಲೆ 1932ರಲ್ಲಿ ಆಂಧ್ರ ವಿಶ್ವವಿದ್ಯಾನಿಲಯದಲ್ಲಿ ಕೆಲಸಕ್ಕೆ ಸೇರಿದರು. 'ರಾಮನ್ ಪರಿಣಾಮ' ಕಂಡು ಹಿಡಿಯಲ್ಪಟ್ಟ ಹೊಸದರಲ್ಲಿ ಅದರ ಬಗೆಗೆ ನಡೆದ ತೀವ್ರ ಸಂಶೋಧನಾ ಚಟುವಟಿಕೆಗಳಲ್ಲಿ ಆಂಧ್ರ ವಿಶ್ವವಿದ್ಯಾನಿಲಯವೂ ಒಂದು ಕೇಂದ್ರವಾಯಿತು. 1948ರ ವರೆಗೆ ಅಲ್ಲೇ ಭೌತವಿಜ್ಞಾನದ ಪ್ರಾಧ್ಯಾಪಕರಾಗಿ, ಪ್ರಿನ್ಸಿಪಾಲರಾಗಿ ಭಗವಂತಂ ಕೆಲಸ ಮಾಡಿದರು. ಅನಂತರ ಒಂದು ವರ್ಷ ಲಂಡನಿನಲ್ಲಿ ಇಂಡಿಯದ ಹೈಕಮಿಷನರಿಗೆ ವಿಜ್ಞಾನ ಸಲಹೆಗಾರರಾಗಿದ್ದರು. 1949–52ರಲ್ಲಿ ಉಸ್ಮಾನಿಯಾ ವಿಶ್ವವಿದ್ಯಾನಿಲಯಕ್ಕೆ ಸೇರಿದ ಭೌತ ವಿಜ್ಞಾನಾಲಯಗಳ ನಿರ್ದೇಶಕರಾಗಿದ್ದರು. 1952–57ರಲ್ಲಿ ಉಸ್ಮಾನಿಯಾ ವಿಶ್ವವಿದ್ಯಾನಿಲಯದ ವೈಸ್–ಛಾನ್ಸಲರ್ ಆಗಿದ್ದರು. ಅನಂತರ ಬೆಂಗಳೂರಿಗೆ ಬಂದು 1957–62ರಲ್ಲಿ ಭಾರತೀಯ ವಿಜ್ಞಾನ ಮಂದಿರದ ನಿರ್ದೇಶಕರಾದರು.

1961 ಜೂಲೈಯಲ್ಲಿ ಭಾರತ ಸರಕಾರದ ರಕ್ಷಣಾ ಸಚಿವ ಶಾಖೆಗೆ ವಿಜ್ಞಾನ ಸಲಹೆಗಾರರಾಗಿ ಮತ್ತು ರಕ್ಷಣಾ ಸಂಶೋಧನೆ ಹಾಗೂ ಅಭಿವೃದ್ಧಿ ಶಾಖೆಯ ಮಹಾನಿರ್ದೇಶಕರಾಗಿ ನೇಮಕಗೊಂಡರು.

1946ರಲ್ಲಿ ನಡೆದ ಇಂಡಿಯನ್ ಸೈನ್ಸ್ ಕಾಂಗ್ರೆಸ್‌ನ



ವಿಜ್ಞಾನ ಸಲಹೆ :
ಭಗವಂತಂ

ಭೌತವಿಜ್ಞಾನ ವಿಭಾಗದ ಅಧ್ಯಕ್ಷರಾಗಿದ್ದರು. ಶುದ್ಧ ಹಾಗೂ ಅನ್ವಯ ಭೌತವಿಜ್ಞಾನದ ಅಂತರರಾಷ್ಟ್ರೀಯ ಸಂಸ್ಥೆಯ ಉಪಾಧ್ಯಕ್ಷರಾಗಿದ್ದರು. ಕೆಲವು ಕಾಲ ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್ ಮತ್ತು ಹಿಂದೂಸ್ಥಾನ್ ಏರೋನಾಟಿಕ್ಸ್ ಲಿಮಿಟೆಡ್ ಸಂಸ್ಥೆಗಳ ಅಧ್ಯಕ್ಷರಾಗಿದ್ದರು.

ಇವರು ಅನೇಕ ಸಂಶೋಧನಾ ಪ್ರಬಂಧಗಳನ್ನೂ ಪುಸ್ತಕಗಳನ್ನೂ ಬರೆದಿದ್ದಾರೆ. 'ಬೆಳಕಿನ ಚದುರುವಿಕೆ ಮತ್ತು ರಾಮನ್ ಪರಿಣಾಮ', 'ಗುಂಪುಗಳ ಸಿದ್ಧಾಂತ ಮತ್ತು ಭೌತ ಸಮಸ್ಯೆಗಳಲ್ಲಿ ಅವುಗಳ ಪಾತ್ರ', 'ಸ್ಫಟಿಕದ ಸಮಾಂಗತೆ ಮತ್ತು ಭೌತ ಗುಣಗಳು' ಇವು ಅವರ ಪ್ರಮುಖ ಕೃತಿಗಳು.

1969 ಅಕ್ಟೋಬರ್‌ನಲ್ಲಿ ಭಗವಂತಂ ನಿವೃತ್ತರಾದರು.

ಎಸ್. ರಾಮಾನುಜಂ

ನೋಡಿ : ರಾಮಾನುಜಂ —ಸಂಪುಟ ೩

ಎಸ್. ವಿ. ಕೃಷ್ಣಮೂರ್ತಿರಾವ್

ಹತ್ತು ವರ್ಷ ಕಾಲ ರಾಜ್ಯಸಭೆಯ ಉಪಾಧ್ಯಕ್ಷರೂ ಅನಂತರ ಕೆಲ ಸಮಯ ಲೋಕಸಭೆಯ ಉಪಾಧ್ಯಕ್ಷರೂ ಆಗಿದ್ದ ಸಂತೇಬೆನ್ನೂರು ವಾದಿರಾಜಾಚಾರ್ ಕೃಷ್ಣಮೂರ್ತಿರಾಯರು ದೆಹಲಿಯಲ್ಲಿ ಕನ್ನಡ ಚಟುವಟಿಕೆಗಳ ಕೇಂದ್ರವೂ ಆಗಿದ್ದರು. ತಮ್ಮ ರಾಜಕೀಯ ಚಟುವಟಿಕೆಗಳ ಮಧ್ಯೆ ಸಾಹಿತ್ಯಸೇವೆಗೂ ಬಿಡುವು ಮಾಡಿಕೊಳ್ಳುತ್ತಿದ್ದರು.

ಜನನ 1902 ನವೆಂಬರ್ 15ರಂದು. ಶಿವಮೊಗ್ಗ ಜಿಲ್ಲೆಯ ನಲ್ಲೂರಿನಲ್ಲಿ. ಬೆಂಗಳೂರಿನಲ್ಲಿ ಕಾಲೇಜು ವಿದ್ಯಾಭ್ಯಾಸ ಮಾಡಿ ಬಿ.ಎಸ್‌ಸಿ. ಪದವಿ ಪಡೆದರು. ಇವರ ನ್ಯಾಯಶಾಸ್ತ್ರದ ಶಿಕ್ಷಣ ನಡೆದದ್ದು ಪುಣೆಯಲ್ಲಿ.

ಇವರು ತಮ್ಮ ಸ್ನೇಹಿತರೊಂದಿಗೆ ಸೇರಿ ಶಿವಮೊಗ್ಗೆಯಲ್ಲಿ ಕಟ್ಟಿದ ಕರ್ನಾಟಕ ಸಂಘ ಹಲವು ಶ್ರೇಷ್ಠ ಸಾಹಿತ್ಯ ಕೃತಿಗಳನ್ನು ಪ್ರಕಟಿಸಿತು.

ಕೃಷ್ಣಮೂರ್ತಿರಾಯರ 'ದಕ್ಷಿಣ ಆಫ್ರಿಕದಲ್ಲಿ ಸತ್ಯಾಗ್ರಹ' ಮತ್ತು 'ಮಹಿಳೆಯರಿಗಾಗಿ' ಎಂಬ ಕೃತಿಗಳು ಗಾಂಧೀಜಿಯ ಗ್ರಂಥಗಳ ಭಾಷಾಂತರ. ನೆಹರೂ ಅವರ 'ಡಿಸ್ಕವರಿ ಆಫ್ ಇಂಡಿಯಾ'ವನ್ನು ಇವರು 'ಭಾರತದರ್ಶನ' ಎಂಬ ಹೆಸರಿನಲ್ಲಿ ಕನ್ನಡಕ್ಕೆ ಅನುವಾದಿಸಿದರು. ಮಹಾ ವಿಜ್ಞಾನಿ ಲೂಯಿ ಪಾಶ್ಚರನ ಜೀವನಚರಿತ್ರೆಯನ್ನು ಕನ್ನಡದಲ್ಲಿ ರಚಿಸಿದರು. 'ದಿಲ್ಲಿಯ ಪತ್ರಗಳು' ರಾಜ್ಯಾಂಗ ರಚನಾ ಸಭೆಯ ಸದಸ್ಯರಾಗಿ ದೆಹಲಿಗೆ ಹೋದ ಕಾಲದಲ್ಲಿ ಅಲ್ಲಿ ತಾವು ಕಂಡದ್ದನ್ನು ಕುರಿತು ತಮ್ಮ ಮಕ್ಕಳಿಗೆ ಬರೆದ ಓಲೆಗಳ ಸಂಕಲನ. ಆಲ್ಬರ್ಟ್ ಐನ್‌ಸ್ಟೀನ್‌ನನ್ನು ಕುರಿತು ಅವರು ಬರೆದ ಪುಸ್ತಕ ಅವರ ಮರಣಾನಂತರ ಪ್ರಕಟವಾಯಿತು.



ಸಂತೆಬೆನ್ನೂರಿನಿಂದ ದೆಹಲಿಗೆ : ಎಸ್. ವಿ. ಕೆ.

ಸ್ವತಂತ್ರ ಭಾರತದ ಹಲವಾರು ನಿಯೋಗಗಳ ಸದಸ್ಯರಾಗಿ ಎಸ್. ವಿ. ಕೃಷ್ಣಮೂರ್ತಿರಾಯರು ಅನೇಕ ಬಾರಿ ವಿದೇಶಗಳಿಗೆ ಹೋಗಿ ಬಂದರು.

1968ರಲ್ಲಿ ದೆಹಲಿಯಲ್ಲಿ ಇವರ ದೇಹಾಂತವಾಯಿತು.

ಎಸ್. ವಿ. ಘಾಟೆ

ಭಾರತದ ಕಮ್ಯೂನಿಸ್ಟ್ ಪಕ್ಷದ ಬೆನ್ನೆಲುಬು ಆಗಿದ್ದವರು ಎಸ್. ವಿ. ಘಾಟೆ. ಪಕ್ಷದ ಕೆಲಸವೇ ಇವರ ಜೀವನ; ಸಹೋದ್ಯೋಗಿಗಳೇ ಇವರ ಕುಟುಂಬ. ಭಾರತದ ಕಮ್ಯೂನಿಸ್ಟ್ ಪಕ್ಷ ಆರಂಭವಾದಾಗಿನಿಂದ ಅದಕ್ಕಾಗಿ ದುಡಿದ ಘಾಟೆ, ತಮ್ಮ ಜೀವನದ ಕೊನೆಯ ದಿನ ಕೂಡ ತಮ್ಮ ಕಚೇರಿಯಲ್ಲಿ ಕುಳಿತು ಕೆಲಸ ಮಾಡಿದವರು.

ಸಚ್ಚಿದಾನಂದ ವಿಷ್ಣು ಘಾಟೆ ಮಂಗಳೂರಿನಲ್ಲಿ 1896 ಸೆಪ್ಟೆಂಬರ್ 14ರಂದು ಹುಟ್ಟಿದರು. ಕಾಲೇಜು ವಿದ್ಯಾಭ್ಯಾಸಕ್ಕಾಗಿ ಇವರು ಮುಂಬಯಿಗೆ ತೆರಳಿದರು. 1919–20ರಲ್ಲಿ ಗಾಂಧೀಜೀ ಪ್ರಥಮ ಅಸಹಕಾರ ಚಳುವಳಿ ಆರಂಭಿಸಿದಾಗ ಘಾಟೆ ಅದರಿಂದ ಆಕರ್ಷಿತರಾದರು. ಗಾಂಧೀಜಿಯ ಮುಂದಾಳುತನದಲ್ಲಿ ಕಾಂಗ್ರೆಸ್ ಅಹಿಂಸೆಯ ಮಾರ್ಗವನ್ನು ಅನುಸರಿಸಲು ಆರಂಭಿಸಿದಾಗ ಬಿಸಿರಕ್ತದ ಘಾಟೆ ಅದರಿಂದ ದೂರ ಸರಿದರು. ಎಸ್.ಎ. ಡಾಂಗೆ, ಕೆ. ಎನ್. ಜೋಗ್ಳೇಕರ್ ಮುಂತಾದವರೊಡನೆ ಸೇರಿಕೊಂಡು ಕಮ್ಯೂನಿಸ್ಟ್ ಪಕ್ಷವನ್ನು ಕಟ್ಟಿದರು. 1925ರಲ್ಲಿ ಕಾನ್ಪುರದಲ್ಲಿ ಪ್ರಥಮ ಕಮ್ಯೂನಿಸ್ಟ್ ಸಮ್ಮೇಳನ ಜರಗಿದಾಗ ಘಾಟೆ ಪ್ರಧಾನ ಕಾರ್ಯದರ್ಶಿಗಳಲ್ಲಿ ಒಬ್ಬರಾಗಿ ಆಯ್ಕೆಯಾದರು.



ಬೆನ್ನೆಲುಬು : ಘಾಟೆ


ಕಾರ್ಮಿಕರನ್ನು ಸಂಘಟಿಸುವುದರಲ್ಲಿ ಘಾಟೆಯವರಿಗೆ ವಿಶೇಷ ಜಾಣ್ಮೆ. ಮುಂಬಯಿಯ ಗಿರಣಿ ಕಾರ್ಮಿಕ ವರ್ಗದಲ್ಲಿ ಘಾಟೆ ವಿಶೇಷವಾಗಿ ಜನಪ್ರಿಯರಾದರು. ಕೆಲಸಗಾರರ ಹಲವು ಮುಷ್ಕರಗಳಿಗೆ ಇವರು ಮುಖಂಡರಾದರು. ಆಗಾಗ್ಗೆ ಬಂಧಿತರಾಗುತ್ತಿದ್ದ ಘಾಟೆ ಕೆಲವು ವರ್ಷಗಳನ್ನು ಸೆರೆಮನೆಗಳಲ್ಲಿ ಕಳೆದರು.

ಜೈಲುವಾಸದ ಬಳಿಕ ಘಾಟೆ ಮದರಾಸಿನಲ್ಲಿ ನೆಲೆಸಿ ತಮಿಳುನಾಡು, ಕೇರಳ, ಆಂಧ್ರ ಮತ್ತು ಕರ್ನಾಟಕಗಳಲ್ಲಿ ಕಮ್ಯೂನಿಸ್ಟ್ ಪಕ್ಷವನ್ನು ಸಂಘಟಿಸುವ ಕಾರ್ಯ ಕೈಗೊಂಡರು.

ಕಮ್ಯೂನಿಸ್ಟ್ ಪಕ್ಷದ ಹಲವು ಪ್ರಮುಖ ಅಧಿಕಾರ ಸ್ಥಾನಗಳಲ್ಲಿ ಸೇವೆ ಸಲ್ಲಿಸಿದ ಘಾಟೆ 1970 ನವೆಂಬರ್ 28ರಂದು ತೀರಿಕೊಂಡಾಗ ಪಕ್ಷದ 'ಕಂಟ್ರೋಲ್ ಕಮಿಷನ್'ನ ಅಧ್ಯಕ್ಷರಾಗಿದ್ದರು.

ಎಸ್. ಸದಾನಂದ

ಭಾರತ ಪತ್ರಿಕೋದ್ಯಮದ ಇತಿಹಾಸದಲ್ಲಿ ಚಿರಸ್ಥಾಯಿಯಾದ ಹೆಸರು —ಎಸ್. ಸದಾನಂದರದು. ಪತ್ರಿಕೋದ್ಯಮಿಯಾಗಿ ಅವರು ತೋರಿದ ಸ್ಥೈರ್ಯ, ಸಾಹಸ, ರಾಷ್ಟ್ರಪ್ರೇಮ ಅದ್ವಿತೀಯವಾದುವು.



ಭಾರತೀಯ ಪತ್ರಿಕೋದ್ಯಮಿ : ಸದಾನಂದ

ಸದಾನಂದರ ತಂದೆ ಸ್ವಾಮಿನಾಥನ್ ತಮಿಳು ಪತ್ರಿಕೋದ್ಯಮಿಯಾಗಿದ್ದರು. ಅವರಿಂದಾಗಿ ಸದಾನಂದರಿಗೆ ಚಿಕ್ಕ ವಯಸ್ಸಿನಿಂದಲೂ ಪತ್ರಿಕೋದ್ಯಮದಲ್ಲಿ ಆಸಕ್ತಿ ಮೂಡಿತು. ಜೊತೆಜೊತೆಯಲ್ಲಿಯೇ ಸ್ವಾತಂತ್ರ್ಯ ಚಳುವಳಿಯೂ ಅವರನ್ನು ಆಕರ್ಷಿಸಿತು. ಸದಾನಂದರು ಅದರಲ್ಲಿ ಭಾಗವಹಿಸಿದರು.

ಪತ್ರಿಕಾಪ್ರಪಂಚದಲ್ಲಿ ಸದಾನಂದರ ಹೆಸರು ಪ್ರಸಿದ್ಧಿ ಪಡೆದದ್ದು ಈ ಶತಮಾನದ ಎರಡು, ಮೂರನೆಯ ದಶಕಗಳಲ್ಲಿ —ಸ್ವಾತಂತ್ರ್ಯ ಚಳುವಳಿ ಬಿರುಸಾಗಿದ್ದ ಕಾಲದಲ್ಲಿ. ಆಗ ಪತ್ರಿಕೆಗಳಿಗೆ ಸುದ್ದಿಗಳನ್ನು ಒದಗಿಸುತ್ತಿದ್ದ ವಾರ್ತಾ ಸಂಸ್ಥೆಗಳು ವಿದೇಶೀಯರ ಹಿಡಿತಕ್ಕೆ ಒಳಗಾಗಿದ್ದುವು. ಅವುಗಳ ಮೇಲೆ ಸರಕಾರದ ಪ್ರಭಾವವೂ ಬಲವಾಗಿತ್ತು. ಇದರಿಂದಾಗಿ ಈ ಸಂಸ್ಥೆಗಳ ಸುದ್ದಿ ವರದಿಗಳಲ್ಲಿ ಸರಕಾರದ ಹಿತದೃಷ್ಟಿಯೇ ಮೇಲುಗೈ ಆಗಿರುತ್ತಿತ್ತು : ಸ್ವಾತಂತ್ರ್ಯ ಹೋರಾಟಕ್ಕೆ ಸಂಬಂಧಿಸಿದ ಸುದ್ದಿಗಳಿಗೆ, ಅವುಗಳಿಗೆ ನ್ಯಾಯವಾಗಿ ಸಲ್ಲಬೇಕಾದ ಪ್ರಾಮುಖ್ಯ ಸಿಗುತ್ತಿರಲಿಲ್ಲ : ವಿವರಗಳೂ ಇರುತ್ತಿರಲಿಲ್ಲ.

ಈ ಪರಿಸ್ಥಿತಿಯಲ್ಲಿ ರಾಷ್ಟ್ರೀಯ ದೃಷ್ಟಿಯಿಂದ ಪ್ರೇರಿತವಾದ ಭಾರತೀಯ ವಾರ್ತಾಸಂಸ್ಥೆಯ ಸ್ಥಾಪನೆಯ ಅವಶ್ಯತೆಯನ್ನು ಮನಗಂಡವರು ಸದಾನಂದರು; ಈ ಉದ್ದೇಶ ಸಾಧನೆಗಾಗಿ ಅವರು 1925ರ ಹೊತ್ತಿಗೆ 'ಫ್ರೀ ಪ್ರೆಸ್ ಆಫ್ ಇಂಡಿಯಾ' ವಾರ್ತಾಸಂಸ್ಥೆಯನ್ನು ಸ್ಥಾಪಿಸಿದರು. ಸ್ವಾತಂತ್ರ್ಯ ಚಳುವಳಿಯ ಬೃಹದ್ ಸ್ವರೂಪವನ್ನೂ ಸರಕಾರದ ನೀತಿ, ಕಾರ್ಯಕ್ರಮಗಳ ಬಗೆಗೆ ಪ್ರಜಾಭಿಪ್ರಾಯವನ್ನೂ ಪ್ರಚುರಗೊಳಿಸುವುದರಲ್ಲಿ ಈ ವಾರ್ತಾಸಂಸ್ಥೆ ಯಶಸ್ವಿಯಾಯಿತು. ಅಂತೆಯೇ ಈ ಸಂಸ್ಥೆಯ ಬಗೆಗೆ ಸರಕಾರದ ವಿರೋಧವೂ ಏರ್ಪಟ್ಟಿತು. ಭಾರತದಲ್ಲಿದ್ದ ವಿದೇಶೀ ವಾರ್ತಾಸಂಸ್ಥೆಗಳೂ 'ಫ್ರೀ ಪ್ರೆಸ್ ಆಫ್ ಇಂಡಿಯಾ' ಸಂಸ್ಥೆಯನ್ನು ಮುರಿಯಲು ಪ್ರಯತ್ನಿಸಿದುವು.

ಈ ಸನ್ನಿವೇಶದಲ್ಲಿ ಸದಾನಂದರು, ತಮ್ಮ ವಾರ್ತಾಸಂಸ್ಥೆಯ ಸುದ್ದಿಗಳನ್ನು ಪ್ರಕಟಿಸುವುದಕ್ಕಾಗಿ 'ಫ್ರೀ ಪ್ರೆಸ್ ಜರ್ನಲ್' ದಿನಪತ್ರಿಕೆಯನ್ನೂ ಇನ್ನು ಕೆಲವು ಪತ್ರಿಕೆಗಳನ್ನೂ ಸ್ಥಾಪಿಸಿದರು. ಬೇರೆಬೇರೆ ದೇಶಗಳಲ್ಲಿದ್ದ ವಾರ್ತಾಸಂಸ್ಥೆಗಳೊಡನೆ ಸಂಧಾನ ನಡೆಸಿ ಅವುಗಳ ಮೂಲಕ ವಿದೇಶೀ ವಾರ್ತೆಗಳನ್ನು ತರಿಸಿಕೊಳ್ಳಲು ವ್ಯವಸ್ಥೆ ಮಾಡಿದರು. 'ಫ್ರೀ ಪ್ರೆಸ್ ಆಫ್ ಇಂಡಿಯಾ' ಸಂಸ್ಥೆಯನ್ನು ಅಂತರರಾಷ್ಟ್ರೀಯ ವಾರ್ತಾಸಂಸ್ಥೆಯನ್ನಾಗಿ ಮಾಡಿದರು.

ಸದಾನಂದರ ಈ ಎಲ್ಲ ಚಟುವಟಿಕೆಗಳನ್ನು ವಕ್ರದೃಷ್ಟಿಯಿಂದ ನೋಡುತ್ತಿದ್ದ ಸರಕಾರ ಅವರ ವಾರ್ತಾಸಂಸ್ಥೆ ಮತ್ತು ಪತ್ರಿಕೆಗಳಿಂದ ಪದೇಪದೇ ಸಹಸ್ರಾರು ರೂಪಾಯಿಗಳ ಠೇವಣಿ ವಸೂಲುಮಾಡಿ, ಮುಟ್ಟುಗೋಲು ಹಾಕಿಕೊಂಡಿತು. ಮೊದಲೇ ಆರ್ಥಿಕ ದುರ್ಬಲತೆಯಿಂದ ನರಳುತ್ತಿದ್ದ ಈ ಸಂಸ್ಥೆಗಳಿಗೆ ಇದರಿಂದ ಅಪಾರ ನಷ್ಟ ಉಂಟಾಯಿತು. ಕೊನೆಗೆ 1932ರಲ್ಲಿ ವಾರ್ತಾಸಂಸ್ಥೆಯನ್ನು ಮುಚ್ಚಬೇಕಾಯಿತು. ಆದರೂ ಸದಾನಂದರು ಧೃತಿಗೆಡದೆ ತಮ್ಮ ಪತ್ರಿಕೆಗಳನ್ನು ದಕ್ಷತೆಯಿಂದ ನಡೆಸಿಕೊಂಡುಬಂದರು ; 1953ನೆಯ ನವೆಂಬರ್ 12ರಂದು ನಿಧನರಾದರು. ಸದಾನಂದರದು ವೀರ ಪತ್ರಿಕೋದ್ಯಮಿಯ ತ್ಯಾಗಜೀವನ.

ಏಕನಾಥ


ಸಂತನೊಬ್ಬ ದೇವರ ಪೂಜೆಗಾಗಿ ಗೋದಾವರಿ ನದಿಯಿಂದ ನೀರು ತರುತ್ತಿದ್ದ. ಬಾಯಾರಿಕೆಯಿಂದ ಒದ್ದಾಡುತ್ತಿದ್ದ ಕತ್ತೆಯನ್ನು ನೋಡಿ ಪೂಜೆಗೆಂದು ತಂದಿದ್ದ ಜಲವನ್ನೇ ಕತ್ತೆಗೆ ಕುಡಿಸಿದ.

ಆ ದಯಾವಂತ ಸಂತನೇ 'ಪ್ರಾಣಿಮಾತ್ರದಲ್ಲಿ ದೇವರನ್ನು ಕಾಣುವುದು ಭಕ್ತಿ' ಎಂದು ಬೋಧಿಸಿದ ಏಕನಾಥ.

ಏಕನಾಥ ಹದಿನಾರನೆಯ ಶತಮಾನದ ಮಧ್ಯಭಾಗದಲ್ಲಿದ್ದವರು. ಅವರು ಮಹಾರಾಷ್ಟ್ರದ ಪ್ರಸಿದ್ಧ ಸಂತಕವಿ. ಅವರ ಮಹಿಮೆಗಳನ್ನು ಕುರಿತಾದ ಅನೇಕ ಕಥೆಗಳಿವೆ. ಪೈಠಣಕರ್ ಅವರ ಅಡ್ಡ ಹೆಸರು.

ಜನಾರ್ದನ ಸ್ವಾಮಿ, ಗುರು. ಏಕನಾಥನಿಗೆ ಆತ 'ಜ್ಞಾನೇಶ್ವರೀ, ಅಮೃತಾನುಭವ' ಗ್ರಂಥಗಳನ್ನು ಅಭ್ಯಾಸಮಾಡಿಸಿದ. ದೇವಗಡ ಬೆಟ್ಟದಲ್ಲಿ ಒಮ್ಮೆ ಗುರು ಧ್ಯಾನಮಗ್ನರಾಗಿದ್ದಾಗ ಶತ್ರುಗಳು ಅದನ್ನು ಮುತ್ತಿದರು. ಏಕನಾಥ ಶೌರ್ಯದಿಂದ ಶತ್ರುಗಳನ್ನು ಎದುರಿಸಿ ಅವರನ್ನು ಓಡಿಸಿದ.

ಏಕನಾಥ 6 ವರ್ಷ ಪರ್ಯಂತ ದೇವಗಡ ಬೆಟ್ಟದಲ್ಲಿ ತಪಸ್ಸು ಮಾಡಿದ. ವಿವಾಹವಾಗಿ ಸಂಸಾರದಲ್ಲಿದ್ದೂ ಪರಮಾರ್ಥ ಸಾಧನೆ ಮಾಡಬಹುದೆಂದು ತೋರಿಸಿದ ; ಹಾಗೆಂದು ಬೋಧಿಸಿದ.



ದಯಾಮಯ ಸಂತ : ಏಕನಾಥ

ಹಲವಾರು ಮರಾಠೀ ಗ್ರಂಥಗಳನ್ನು ಏಕನಾಥ ರಚಿಸಿದ್ದಾನೆ. 'ಭಾಗವತ ಪುರಾಣ'ದ 11ನೆಯ ಸ್ಕಂದಕ್ಕೆ ಪದ್ಯರೂಪದ ವಿವರಣೆ ಬರೆದಿದ್ದಾನೆ. 'ರುಕ್ಮಿಣೀ ಸ್ವಯಂವರ' 18 ಅಧ್ಯಾಯಗಳ ಮರಾಠೀ ಕಾವ್ಯ. ಇವಲ್ಲದೆ 'ಪ್ರಹ್ಲಾದ ಚರಿತ್ರೆ', 'ಶುಕಾಷ್ಟಕ' ಮೊದಲಾದ ಆಖ್ಯಾನಗಳನ್ನೂ 'ಭಾವಾರ್ಥ ರಾಮಾಯಣ', 'ಬಾಲಕ್ರೀಡಾ', 'ಭಾಗವತ ಚತುಃಶ್ಲೋಕೀ' ವ್ಯಾಖ್ಯಾನಗಳನ್ನೂ ಬರೆದಿದ್ದಾನೆ. ಅದ್ವೈತ ವೇದಾಂತದ ಬಗೆಗೆ 'ಸ್ವಾತ್ಮಸುಖ' ಎಂಬ ಗ್ರಂಥ ರಚಿಸಿದ್ದಾನೆ. ಸಂತ ಜ್ಞಾನೇಶ್ವರನ 'ಜ್ಞಾನೇಶ್ವರೀ' ಗ್ರಂಥದಲ್ಲಿ ಸುಮಾರು ಒಂದು ಶತಮಾನದ ಅವಧಿಯಲ್ಲಿ ಸೇರಿಕೊಂಡಿದ್ದ ದೋಷಗಳನ್ನು ಸರಿಪಡಿಸಿ ಆ ಗ್ರಂಥವನ್ನು ಅವನು ಪರಿಷ್ಕರಿಸಿದ.

ತನ್ನ ಕಾಲದಲ್ಲಿದ್ದ ಜಾತಿಮತಗಳ ಕಟ್ಟುಗಳನ್ನು ಮುರಿದು ನೀಚ ಉಚ್ಚವರ್ಗದ ಭೇದವನ್ನೂ ಲಕ್ಷಿಸದೆ ಎಲ್ಲರನ್ನೂ ಸಮನಾಗಿ ಕಂಡದ್ದು ಇವನ ವೈಶಿಷ್ಟ್ಯ.

ನೋಡಿ : ಜ್ಞಾನೇಶ್ವರ

ಏಕಲವ್ಯ

ನೋಡಿ : ಸಂಪುಟ ೬

ಏರ್ ಇಂಡಿಯಾ

ಅಂತರರಾಷ್ಟ್ರೀಯ ವಿಮಾನ ಸಾರಿಗೆಯಲ್ಲಿ ಉದ್ಯುಕ್ತವಾಗಿರುವ ಭಾರತೀಯ ಸಂಸ್ಥೆ ಏರ್ ಇಂಡಿಯಾ.

1953 ಜೂನ್ 15ರಂದು ಸ್ಥಾಪಿತವಾದ ಈ ಸಂಸ್ಥೆ, ಆ ಮೊದಲು ಇದ್ದ ಏರ್ ಇಂಡಿಯಾ ಇಂಟರ್‌ನ್ಯಾಷನಲ್ ಲಿಮಿಟೆಡ್ ಸಂಸ್ಥೆಯ ಆಸ್ತಿ ಪಾಸ್ತಿಗಳನ್ನೂ ಕಾರ್ಯ ವ್ಯವಹಾರವನ್ನೂ ವಹಿಸಿಕೊಂಡು ಕಾರ್ಯಾರಂಭ ಮಾಡಿತು. ಕೇಂದ್ರ ಸರಕಾರ ಈ ಸಂಸ್ಥೆಗಾಗಿ 26.82 ಕೋಟಿ ರೂಪಾಯಿ ಬಂಡವಾಳ ಒದಗಿಸಿದೆ.

ಜೆಟ್ ವರ್ಗದ ವಿಮಾನಗಳಿಂದ ಸುಸಜ್ಜಿತವಾದ ಏರ್ ಇಂಡಿಯಾ ಸಂಸ್ಥೆ ಭಾರತದಿಂದ ಅನೇಕ ಪರದೇಶಗಳಿಗೆ ವಿಮಾನಯಾನ ನಡೆಸುತ್ತದೆ. ಪ್ರವಾಸೋದ್ಯಮ ಮತ್ತು ನಾಗರಿಕ ವಿಮಾನ ಸಾರಿಗೆಯ ಮಂತ್ರಿ ಶಾಖೆಗೆ ಒಳಪಟ್ಟು ಈ ಸಂಸ್ಥೆ ಕೆಲಸ ಮಾಡುತ್ತದೆ. ಜೆ.ಆರ್.ಡಿ. ತಾತಾ ಏರ್ ಇಂಡಿಯಾ ಸಂಸ್ಥೆಯ ಅಧ್ಯಕ್ಷರು.

ನೋಡಿ : ಇಂಡಿಯನ್ ಏರ್‌ಲೈನ್ಸ್ ; ಜೆ.ಆರ್.ಡಿ. ತಾತಾ

ಏಷ್ಯಾಟಿಕ್ ಸೊಸೈಟಿ

ಏಷ್ಯದ ಕಲೆ, ಸಾಹಿತ್ಯ, ವಿಜ್ಞಾನ, ಇತಿಹಾಸ ಮತ್ತು ಪ್ರಾಚೀನ ಸಂಪ್ರದಾಯಗಳ ಬಗೆಗೆ ಸಂಶೋಧನೆ ಹಾಗೂ ಜ್ಞಾನ ಪ್ರಸಾರ ಮಾಡುವ ಉದ್ದೇಶದಿಂದ 1784 ಜನವರಿ 15ರಂದು ಕಲ್ಕತ್ತೆಯಲ್ಲಿ ಸ್ಥಾಪಿತವಾದ ಸಂಸ್ಥೆ ಏಷ್ಯಾಟಿಕ್ ಸೊಸೈಟಿ. ಇದರ ಸ್ಥಾಪಕ ಮತ್ತು ಮೊದಲ ಅಧ್ಯಕ್ಷ ಸರ್ ವಿಲಿಯಂ ಜೋನ್ಸ್. ಈ ಸಂಸ್ಥೆಯ ದೀರ್ಘ ಇತಿಹಾಸದಲ್ಲಿ ಇದರ ಹೆಸರನ್ನು ಒಮ್ಮೆ 'ಏಷ್ಯಾಟಿಕ್ ಸೊಸೈಟಿ ಆಫ್ ಬೆಂಗಾಲ್' ಎಂದೂ ಮುಂದೆ 'ರಾಯಲ್ ಏಷ್ಯಾಟಿಕ್ ಸೊಸೈಟಿ ಆಫ್ ಬಂಗಾಲ್' ಎಂದೂ ಬದಲಾಯಿಸಲಾಯಿತು. ಈಗ ಏಷ್ಯಾಟಿಕ್ ಸೊಸೈಟಿ ಎಂದೇ ಕರೆಯುತ್ತಾರೆ. ಈ ಸಂಸ್ಥೆ ಆರಂಭವಾದಾಗ ಗವರ್ನರ್ ಜನರಲ್ ಸಂಸ್ಥೆಯ ಪೋಷಕರಾಗಿದ್ದರು. ಈಗ ಬಂಗಾಳದ ರಾಜ್ಯಪಾಲರು ಅಧ್ಯಕ್ಷರು. ಆರಂಭದಲ್ಲಿ ಸದಸ್ಯತ್ವ ಆಂಗ್ಲರಿಗೆ ಮಾತ್ರ ಸೀಮಿತವಾಗಿತ್ತು. ಆಮೇಲೆ ಭಾರತೀಯರಿಗೂ ಅದು ಲಭ್ಯವಾಯಿತು.

ಭಾರತದ ಇತಿಹಾಸ, ಕಲೆ ಮುಂತಾದ ವಿಚಾರಗಳಲ್ಲಿ ಸಂಶೋಧನೆ ನಡೆಸಲು ಈ ಸಂಸ್ಥೆಯಿಂದ ದೊರೆತ ಪ್ರೇರಣೆ – ನೆರವು ಗಣನೀಯ. ಇದು ನಡೆಸುತ್ತಿದ್ದ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿದ್ದ ಲೇಖನಗಳು ಭಾರತದ ಬಗೆಗೆ ದೇಶ ವಿದೇಶಗಳ ವಿದ್ವಾಂಸರ ಗಮನವನ್ನೂ ಆಸಕ್ತಿಯನ್ನೂ ಪ್ರಚೋದಿಸಿದುವು. ಪತ್ರಿಕೆಗಳಲ್ಲದೆ ಅನೇಕ ಅಮೂಲ್ಯ ಗ್ರಂಥಗಳನ್ನೂ ಈ ಸಂಸ್ಥೆ ಪ್ರಕಟಿಸಿದೆ. ಈಗಲೂ ಒಂದು ವಿದ್ವತ್ಪೂರ್ಣ ಪತ್ರಿಕೆಯನ್ನು ಪ್ರಕಟಿಸುತ್ತಿದೆ.

ಈ ಸಂಸ್ಥೆ ಪುರಾತತ್ತ್ವ ಸಂಶೋಧನೆ, ಪ್ರಾಣಿವಿಜ್ಞಾನ, ಸಸ್ಯವಿಜ್ಞಾನ, ಭೂಗರ್ಭವಿಜ್ಞಾನಗಳಿಗೆ ಸಂಬಂಧಿಸಿದಂತೆ ಸಂಗ್ರಹಿಸಿದ ಅಪೂರ್ವ ವಸ್ತುಗಳು ಕಲ್ಕತ್ತೆಯಲ್ಲಿರುವ ಇಂಡಿಯನ್ ಮ್ಯೂಸಿಯಂ (1866) ರೂಪುಗೊಳ್ಳಲು ಕಾರಣವಾದುವು. ಏಷ್ಯಾಟಿಕ್ ಸೊಸೈಟಿಯ ಪ್ರಯತ್ನಗಳ ಫಲವಾಗಿ ಇಂಡಿಯನ್ ಸೈನ್ಸ್ ಕಾಂಗ್ರೆಸ್ ಅಸೋಸಿಯೇಷನ್ (1914) ಇಂಡಿಯನ್ ನ್ಯಾಷನಲ್ ಸೈನ್ಸ್ ಅಕಾಡೆಮಿ (1935) ಸ್ಥಾಪಿಸಲ್ಪಟ್ಟುವು. 1804ರಲ್ಲಿ 'ಏಷ್ಯಾಟಿಕ್ ಸೊಸೈಟಿ ಆಫ್ ಬಾಂಬೆ' ಆರಂಭವಾಯಿತು.

ನೋಡಿ : ವಿಲಿಯಂ ಜೋನ್ಸ್

ಐ. ಎ. ಎಸ್.

ನೋಡಿ : ಇಂಡಿಯನ್ ಅಡ್ಮಿನಿಸ್ಟ್ರೇಟಿವ್ ಸರ್ವಿಸ್

ಐ. ಎನ್. ಎ.

ನೋಡಿ : ಆಜಾದ್ ಹಿಂದ್ ಫೌಜ್

ಐ ಎನ್‌ಎಸ್ 'ವಿಕ್ರಾಂತ್'

ಐಎನ್‌ಎಸ್ ಎಂದರೆ ಇಂಡಿಯನ್ ನೇವಿ ಷಿಪ್ ಅಥವಾ ಭಾರತೀಯ ನೌಕಾದಳದ ಹಡಗು. ಐಎನ್‌ಎಸ್ 'ವಿಕ್ರಾಂತ್' ಭಾರತದ ಮೊತ್ತಮೊದಲ ವಿಮಾನವಾಹಕ ನೌಕೆ.

1957ರಲ್ಲಿ ಇಂಗ್ಲೆಂಡಿನಿಂದ ಪಡೆಯಲಾದ ಹರ್ಕ್ಯುಲೀಸ್ ನೌಕೆಯ ಹೊಸ ರೂಪ ಐಎನ್‌ಎಸ್ 'ವಿಕ್ರಾಂತ್'. ಇದು 1961 ಮಾರ್ಚ್ 4ರಂದು ಈ ಹೆಸರಿನಿಂದ ಕಾರ್ಯಾರಂಭ ಮಾಡಿತು. ಸೀ ಹಾಕ್ ಹಾಗೂ ಅಲಿಜ್ ಎಂಬ ವಿಮಾನಗಳನ್ನು ಹೊತ್ತು ಮುಂಬಯಿಗೆ 1961 ನವೆಂಬರ್ 3ರಂದು ಬಂದ 'ವಿಕ್ರಾಂತ್' ನೌಕೆ ಭಾರತೀಯ ರಕ್ಷಣಾಪಡೆಗಳ ಚರಿತ್ರೆಯಲ್ಲಿ ಹೊಸ ಅಧ್ಯಾಯವನ್ನು ತೆರೆಯಿತು.

ಹೊಸ ಅಧ್ಯಾಯ : ವಿಮಾನವಾಹಕ 'ವಿಕ್ರಾಂತ್'



ಈ ನೌಕೆ ಒಂದೇ ಬಾರಿಗೆ 30 ವಿಮಾನಗಳನ್ನು ಸಾಗಿಸಬಲ್ಲುದು. ದೂರ ವ್ಯಾಪ್ತಿಗೆ ಮದ್ದು ಹಾರಿಸಬಲ್ಲ ಫಿರಂಗಿಗಳೂ ಜಲಾಂತರ್ಗಾಮಿನಾಶಕ ವ್ಯವಸ್ಥೆಗಳೂ ಇದರಲ್ಲಿವೆ. ಇದು ಏಳು ಅಂತಸ್ತುಗಳ ಹಡಗು. ಇದರಲ್ಲಿ ಕೆಲಸ ಮಾಡುವ ಅಧಿಕಾರಿಗಳು ಮತ್ತು ನೌಕರರ ಸಂಖ್ಯೆ 1,700. ವಿಮಾನಗಳು ಬಂದು ನಿಲ್ಲುವುದು ಮತ್ತು ಉಡ್ಡಯನ ಮಾಡುವುದು ಮೇಲಂತಸ್ತಿನಲ್ಲಿ. ಈ ಅಂತಸ್ತಿನ ಮೇಲೆ ವಿಮಾನಗಳು ಬಂದಿಳಿದಾಗ ಅವುಗಳ ನಿಲುಗಡೆಗಾಗಿ ದರ್ಪಣ ವ್ಯವಸ್ಥೆ ಇದೆ.

ಭಾರತ ನೌಕಾದಳದ ಧ್ವಜಾಧಿಕಾರಿಯ ಬಾವುಟವನ್ನು ಐಎನ್ಎಸ್ 'ವಿಕ್ರಾಂತ'ದ ಮೇಲೆ ಹಾರಿಸುತ್ತಾರೆ.

ಐ. ಐ. ಟಿ.

ನೋಡಿ : ಇಂಡಿಯನ್ ಇನ್ಸ್‌ಟಿಟ್ಯೂಟ್ ಆಫ್ ಟೆಕ್ನಾಲಜಿ

ಐ. ಟಿ. ಐ.

ನೋಡಿ : ಇಂಡಿಯನ್ ಟೆಲಿಫೋನ್ ಇಂಡಸ್ಟ್ರೀಸ್

ಐತರೇಯೋಪನಿಷತ್

ಋಗ್ವೇದಕ್ಕೆ ಸೇರಿದ ಐತರೇಯೋಪನಿಷತ್ ಐತರೇಯಾರಣ್ಯಕದ ಭಾಗವಾಗಿದೆ. ಇದರಲ್ಲಿ 33 ಗದ್ಯಮಂತ್ರಗಳಿವೆ.

ಮಹೀದಾಸ ಐತರೇಯ ಋಷಿ, ಇತರಾ ಋಷಿಪತ್ನಿಯ ಮಗ. ಆದರಿಂದ ಇವನಿಗೆ ಐತರೇಯ ಎನ್ನುವ ಹೆಸರು; ಈತನಿಂದ ಬಂದದ್ದು ಐತರೇಯೋಪನಿಷತ್.

ಸೃಷ್ಟಿಗೆ ಮೊದಲು ಇದ್ದುದು ಆತ್ಮವೊಂದೇ. ಅದು ಜಗತ್ತನ್ನು ಸೃಷ್ಟಿಸಲು ಸಂಕಲ್ಪಿಸಿತು; ಜಗತ್ತನ್ನು ಸೃಷ್ಟಿಸಿತು. ಯಾವ ಕ್ರಮದಲ್ಲಿ ಈ ಸೃಷ್ಟಿ ನಡೆಯಿತು, ಆತ್ಮ ಹೇಗೆ ಈ ಸೃಷ್ಟಿಯಲ್ಲಿ ತಾನೇ ಪ್ರವೇಶಿಸಿತು, ಎಂಬುದನ್ನೂ ಆತ್ಮ ಎಂದರೆ ಯಾವುದು, ಅದನ್ನು ಅರಿಯುವುದು ಹೇಗೆ ಎಂಬುದನ್ನೂ ಈ ಉಪನಿಷತ್ತಿನಲ್ಲಿ ವಿವೇಚಿಸಲಾಗಿದೆ.

'ಪ್ರಜ್ಞಾನಂ ಬ್ರಹ್ಮಂ' - 'ಅರಿವೇ ಬ್ರಹ್ಮ' - ಎಂಬುದೇ ಈ ಉಪನಿಷತ್ತಿನ ಸಂದೇಶ.

ಐ. ಪಿ. ಎಸ್.

ನೋಡಿ : ಇಂಡಿಯನ್ ಪೋಲೀಸ್ ಸರ್ವಿಸ್

ಐರಾವತ

ಸ್ವಚ್ಛ ಬಿಳುಪಿನ ಆನೆ ಐರಾವತ. ಇದು ಇಂದ್ರನ ಪಟ್ಟದ ಆನೆ. ಅಭ್ರಮೂ ಎಂಬ ಹೆಣ್ಣಾನೆಯೊಡನೆ ಪೂರ್ವ ದಿಕ್ಕನ್ನು ರಕ್ಷಿಸುತ್ತಿರುವ ಐರಾವತ ದಿಗ್ಗಜಗಳಲ್ಲಿ ಒಂದು.

ಸಮುದ್ರ ಮಥನ ಕಾಲದಲ್ಲಿ ಇದು ಉದ್ಭವಿಸಿತು ಎಂಬುದು ಒಂದು ಹೇಳಿಕೆ. ಭದ್ರಮನಸ ಎಂಬ ಆನೆಯಿಂದ ಹುಟ್ಟಿದ್ದು ಎಂತಲೂ ಹೇಳುತ್ತಾರೆ. 'ನೀರಿನಿಂದ ಕೂಡಿದ್ದು'... 'ಶ್ವೇತವಾಗಿರುವ' ಎಂಬ ಅರ್ಥ ಬರುವ ಐರಾವತ ಪದದಿಂದ ಇದಕ್ಕೆ ಹೆಸರು ಬಂದಿದೆ ಎನ್ನುತ್ತಾರೆ. ಇದಕ್ಕೆ 4 ಕೋರೆದಾಡೆಗಳಿವೆ.

ಗರುಡನ ಜನನವಾದ ಮೇಲೆ ಎರಡಾಗಿ ಒಡೆದಿದ್ದ ಮೊಟ್ಟೆಯ ತುಂಡುಗಳನ್ನು ಬ್ರಹ್ಮ ಕೈಯಲ್ಲಿ ಹಿಡಿದಿದ್ದ; ಬಲಗೈಲಿ ಹಿಡಿದಿದ್ದ ತುಂಡಿನಿಂದ ಐರಾವತ ಮತ್ತು ಏಳು ಸಲಗಗಳು ಉತ್ಪತ್ತಿಯಾದುವು; ಹಾಗೆಯೇ ಎಡಗೈಯಲ್ಲಿದ್ದ ತುಂಡಿನಿಂದ ಎಂಟು ಹೆಣ್ಣಾನೆಗಳು ಬಂದುವು; ಈ ಎಂಟು ಜೊತೆಗಳು ಎಂಟು ದಿಕ್ಕುಗಳ ರಕ್ಷಕರಾದುವು —ಎಂಬ ಕಥೆ ಇದೆ.

ಐ. ಸಿ. ಎಸ್.

ನೋಡಿ : ಇಂಡಿಯನ್ ಸಿವಿಲ್ ಸರ್ವಿಸ್

ಐಹೊಳೆ

ನೋಡಿ : ಸಂಪುಟ ೫

ಒಡಿಯಾ ಭಾಷೆ, ಸಾಹಿತ್ಯ

ಭಾರತದ ಸಂವಿಧಾನದಲ್ಲಿ ಅಂಗೀಕರಿಸಲಾದ 15 ಭಾಷೆಗಳಲ್ಲಿ ಒಡಿಯಾ ಭಾಷೆಯೂ ಒಂದು. ಮೈಥಿಲೀ ಭಾಷೆಗೆ ಹತ್ತಿರವಾದ ಒಡಿಯಾ, ಪೂರ್ವ ಮಾಗಧೀ ಗುಂಪಿಗೆ ಸೇರುತ್ತದೆ. ಈ ಭಾಷೆಯನ್ನು ಒಂದೂವರೆ ಕೋಟಿಗೂ ಹೆಚ್ಚು ಜನ ಆಡುತ್ತಿದ್ದು ಅವರೆಲ್ಲರೂ ಬಹುಮಟ್ಟಿಗೆ ಪೂರ್ವ ಭಾರತದಲ್ಲಿ ನೆಲೆಸಿದ್ದಾರೆ; ಶೇಕಡಾ 85 ರಷ್ಟು ಮಂದಿ ಒಡಿಸ್ಸಾ ರಾಜ್ಯದಲ್ಲೇ ಇದ್ದಾರೆ. ಒಡಿಯಾ ಭಾಷೆಗೆ ತನ್ನದೇ ಶಬ್ದ ಸಂಪತ್ತು ಇದ್ದು ಅದರ ಜೊತೆಗೆ ಸಂಸ್ಕೃತ ಪದಗಳೂ ಸೇರಿಕೊಂಡಿವೆ. ಭಾರತದ ಹಾಗೂ ಇತರ ದೇಶ ಭಾಷೆಗಳ ಪದಗಳೂ ಸೇರಿವೆ. ಆಸ್ಟ್ರಿಕ್, ದ್ರಾವಿಡ, ಪಾರಸೀ ಅರಬ್ಬೀ, ಪೋರ್ಚುಗೀಸ್ ಪದಗಳನ್ನೂ ಒಡಿಯಾ ಭಾಷೆ ಸೇರಿಸಿಕೊಂಡಿದೆ.

ಒಡಿಯಾ ಭಾಷೆಯ ಅತಿ ಪ್ರಾಚೀನ ಮೂಲವನ್ನು ಅಶೋಕನ ಧೌಳಿ ಮತ್ತು ಜವುಗಡ (ಕ್ರಿ.ಪೂ. 3ನೆಯ ಶತಮಾನ) ಶಾಸನಗಳಲ್ಲಿ ಹಾಗೂ ಖಾರವೇಲನ ಹಾಥಿಗುಂಫಾ ಶಾಸನಗಳಲ್ಲಿ (ಕ್ರಿ. ಪೂ. 1ನೆಯ ಶತಮಾನ) ಕಾಣಬಹುದು. ಕ್ರಿ. ಶ. 10ನೆಯ ಶತಮಾನದ ಅನಂತರದ ವಿವಿಧ ದೇವಾಲಯ ಶಾಸನಗಳಲ್ಲಿ ಒಡಿಯಾದ ಲಿಪಿ ಸ್ಪಷ್ಟವಾಗಿ ಗೋಚರಿಸುತ್ತದೆ.

ಧಾರ್ಮಿಕ ಹಾಗೂ ಆಲಂಕಾರಿಕ ಕವನಗಳು, ಐತಿಹಾಸಿಕ ಕಥನಗಳು ಪ್ರಾಚೀನ ಮತ್ತು ಮಧ್ಯಕಾಲೀನ ಯುಗಗಳಲ್ಲಿ ಯಥೇಚ್ಛವಾಗಿದ್ದುವು. ಅನಂತರ ಸಾಹಿತ್ಯ, ಜೀವನಕ್ಕೆ ಹತ್ತಿರ ಬಂದಿತು. ಗಂಗರ ಮತ್ತು ಸೂರ್ಯ ಮನೆತನದವರ (ಕ್ರಿ.ಶ. 1100–1500) ರಾಜ್ಯಭಾರದ ಕಾಲದಲ್ಲಿ ಒಡಿಯಾ ಸಾಹಿತ್ಯ ಜಾನಪದ ಹಾಗೂ ಅಲಿಖಿತರೂಪದಲ್ಲಿ ಅಸ್ತಿತ್ವದಲ್ಲಿತ್ತು. ಒಡಿಯಾ ಮಹಾಭಾರತ, ಚಂಡೀಪುರಾಣ ಮತ್ತು ಬಿಲಂಕಾ ರಾಮಾಯಣಗಳ ಕರ್ತೃ ಸರಳದಾಸ್ ಒಡಿಯಾ ಸಾಹಿತ್ಯದ ಪಿತಾಮಹ. ಕಪಿಲೇಂದ್ರ ದೇವನ (1435–67) ಆಡಳಿತದ ಕಾಲದಲ್ಲಿ ಇವನು ಜೀವಿಸಿದ್ದನೆಂದು ನಂಬಿಕೆ. ಸೂರ್ಯ ವಂಶದ ಕೊನೆಯ ಖ್ಯಾತ ದೊರೆ ಪ್ರತಾಪರುದ್ರ ದೇವನ ಕಾಲದಲ್ಲಿ ಪುರಿಕ್ಷೇತ್ರ ವೈಷ್ಣವ ಸಂಸ್ಕೃತಿಯ ಕೇಂದ್ರವೆನಿಸಿಕೊಂಡಿತು. ಈ ಕಾಲದಲ್ಲಿ 'ಪಂಚಸಖ'ರೆಂಬ ಐವರು ಸಂತರು ಪ್ರಖ್ಯಾತರಾಗಿದ್ದರು. ಇವರಲ್ಲಿ 'ಜಗಮೋಹನ್ ರಾಮಾಯಣ'ದ ಕರ್ತೃ ಬಲರಾಮ್‌ದಾಸ್ (1470–1540) ಮತ್ತು ಒಡಿಯಾ ಭಾಗವತ ರಚಿಸಿದ ಜಗನ್ನಾಥದಾಸ್ (16ನೆಯ ಶತಮಾನ) ಪ್ರಮುಖರು. ಇವರ ಕೃತಿಗಳು ಜನಸಾಮಾನ್ಯರ ಮೇಲೆ ಮತ್ತು ಅನಂತರದ ಲೇಖಕರ ಮೇಲೆ ಪ್ರಭಾವ ಬೀರಿವೆ.

ಅಕ್ಬರನ ಕಾಲದಲ್ಲಿ ಒಡಿಸ್ಸಾದ ಸ್ವಲ್ಪ ಭಾಗ ಮೊಘಲ್ ಆಡಳಿತಕ್ಕೆ ಒಳಗಾಯಿತು. ಆದರೆ ಹೆಚ್ಚಿನ ಪ್ರದೇಶ ಸ್ಥಳೀಯ ದೊರೆಗಳ ಹಿಡಿತದಲ್ಲಿತ್ತು. ಇವರಲ್ಲಿ ಅನೇಕರು ಕಲೆ, ಸಾಹಿತ್ಯಕ್ಕೆ ಆಶ್ರಯವಿತ್ತರು. ಇವರ

ಅಸ್ಥಾನ ಕವಿಗಳಲ್ಲಿ ಅತ್ಯಂತ ಪ್ರಮುಖನಾದವನು ಉಪೇಂದ್ರ ಭಂಜ (1680–1740). ಸಂಸ್ಕೃತ ಸಾಹಿತ್ಯದ ಅವನತಿಯ ಕಾಲದಲ್ಲಿದ್ದ ಶ್ರೀಹರ್ಷ, ಭಾರವಿ ಮತ್ತು ಮಾಘರಂತೆ ಉಪೇಂದ್ರ ಕೂಡ ಕಾವ್ಯಸತ್ವಕ್ಕಿಂತ ಶೈಲಿ, ಶಬ್ದ ಸಂಯೋಜನೆಗಳಿಗೆ ಹೆಚ್ಚು ಗಮನ ಕೊಟ್ಟ. ಇವನ ಸುಮಾರು 52 ಕೃತಿಗಳಲ್ಲಿ 'ವೈದೇಹೀಶ ವಿಲಾಸ': 'ಕೋಟಿ ಬ್ರಹ್ಮಾಂಡ ಸುಂದರಿ', 'ಲಾವಣ್ಯವತಿ' ಗಮನಾರ್ಹವಾದುವು. ಈ ಕವಿಯಿಂದಾಗಿ, ಅವನ ಸಾಹಿತ್ಯ ಯುಗವನ್ನು ರೀತಿಯುಗ ಅಥವಾ ಭಂಜಯುಗ ಎಂದು ಕರೆಯುತ್ತಾರೆ. ದೀನಕೃಷ್ಣದಾಸ್ (1660–1725), ಅಭಿಮನ್ಯು ಸಾಮಂತ ಸಿಂಘಾರ (1757–1807), ಕವಿಸೂರ್ಯ ಬಲದೇವ್ ರಥ (1789–1845), ಗೋಪಾಲಕೃಷ್ಣ (1782–1862) ಈ ಕಾಲದ ಇತರ ಕವಿಗಳು. 18ನೆಯ ಶತಮಾನದ ಅತ್ಯಂತ ವಿಶಿಷ್ಟ ಲೇಖಕ ಬ್ರಜನಾಥ್ ಬಡಜೇನ (1730–95). ಇವನ ಗದ್ಯಕೃತಿ 'ಚತುರ ವಿನೋದ' (ನಾಲ್ಕು ಮನೋರಂಜನೆಗಳು) ಮತ್ತು 'ಸಮರ ತರಂಗ' ಎಂಬ ಐತಿಹಾಸಿಕ ಕಥನ ಪ್ರಮುಖ ಕೃತಿಗಳು. 'ಸಮರ ತರಂಗ'ದಲ್ಲಿ ಕಟಕ್‌ನ ಮರಾಠ ದೊರೆಗಳ ಹಾಗೂ ಧೆಂಕನಾಲ್ ದೊರೆಯ ನಡುವಣ ಯುದ್ಧದ ಸಾಕ್ಷಾತ್ ವರ್ಣನೆಯಿದೆ.

ಒಡಿಸ್ಸಾಗೆ 1803ರಲ್ಲಿ ಇಂಗ್ಲಿಷಿನ ಪ್ರವೇಶವಾಯಿತು. ಅದರೊಂದಿಗೆ ಸಾಹಿತ್ಯದ ಮೇಲೆ ಆಧುನಿಕ ಪ್ರಭಾವಗಳೂ ಆದುವು. ಒಡಿಯಾ ಗದ್ಯದ ಪ್ರವರ್ತಕ ಫಕೀರ್‌ಮೋಹನ ಸೇನಾಪತಿ (1843–1918), ಹೊಸ ಮಹಾಕಾವ್ಯ ಹಾಗೂ ಹಾಡುಗಬ್ಬಗಳ ಕವಿ ರಾಧಾನಾಥರಾಯ್ (1848–1908), ಪ್ರಬಂಧಕಾರ ಹಾಗೂ ಭಾವಗೀತೆಗಳ ಕರ್ತೃ ಮಧುಸೂಧನ ರಾವ್ (1858–1912) 19ನೆಯ ಶತಮಾನದ ಅಂತಿಮ ಭಾಗದ ಖ್ಯಾತ ಲೇಖಕ ತ್ರಯರು.

ಇಪ್ಪತ್ತನೆಯ ಶತಮಾನದಲ್ಲಿ ರಾಷ್ಟ್ರೀಯತೆ ಮತ್ತು ನವೋದಯ ಪ್ರಜ್ಞೆಗಳು ಒಡಿಯಾ ಸಾಹಿತ್ಯದ ಗಡಿಗಳನ್ನು ವಿಸ್ತರಿಸಿದುವು. 'ಸತ್ಯವಾದಿ ಯುಗ'ವೆಂದು ಹೆಸರಾದ ಈ ಅವಧಿಯ ಕೇಂದ್ರವ್ಯಕ್ತಿ ಗಾಂಧೀಜಿಯ ಅನುಯಾಯಿ ಉತ್ಕಲಮಣಿ ಗೋಪಬಂಧುದಾಸ್. ನೀಲಕಂಠದಾಸ್, ಗೋದಾವರೀಶ ಮಿಶ್ರ ರಾಷ್ಟ್ರೀಯ ದೃಷ್ಟಿಯುಳ್ಳ ಈ ಕಾಲದ ಖ್ಯಾತ ಲೇಖಕರು.


ಎರಡು ಮಹಾಯುದ್ಧಗಳ ಕಾಲದಲ್ಲಿ ನಡೆದ ಸಾಹಿತ್ಯ ಪ್ರಯೋಗಗಳು ಸ್ವಾತಂತ್ರ್ಯಾನಂತರ ಇನ್ನಷ್ಟು ಹೆಚ್ಚಾಗಿ ನಡೆದುವು. ಇದಕ್ಕೆ ಸರಕಾರದ ಪ್ರೋತ್ಸಾಹವೂ ಕಾರಣ. ಜೀವನದ ಎಲ್ಲ ಕ್ಷೇತ್ರಗಳ ವ್ಯಕ್ತಿಗಳೂ ಸಾಹಿತ್ಯ ಕ್ಷೇತ್ರವನ್ನು ಪ್ರವೇಶಿಸಿದ್ದಾರೆ. ಕಾಳಿಂದೀ ಚರಣ್ ಪಾಣಿಗ್ರಾಹೀ (1901-), ವೈಕುಂಠ ನಾಥ್ ಪಟ್ಟನಾಯಕ (1904-), ಮಾಯಾಧರ್ ಮಾನಸಿಂಘ್ (1916-73), ರಾಧಾಮೋಹನ್ ಗಡನಾಯಕ (1911-), ಗೋಪೀನಾಥ ಮೊಹಂತಿ (1914—), ಸಚಿ ರಾವುತರಾಯ್ (1914—) ಸಮಕಾಲೀನ ಒಡಿಯಾ ಸಾಹಿತ್ಯ ಕ್ಷೇತ್ರದಲ್ಲಿ ಹೆಸರಾಂತವರು.

ಒಡಿಸ್ಸಾ

ಒಡಿಸ್ಸಾ (ಒರಿಸ್ಸ) ಪ್ರಾಚೀನ ಭಾರತದಲ್ಲಿ 'ಉತ್ಕಲ ದೇಶ' ಎಂಬ ಹೆಸರು ಪಡೆದಿದ್ದಿತು. ಉತ್ಕಲ ಎಂದರೆ 'ಉತ್ತಮ ಕಲೆಗಳು'. ಒರಿಸ್ಸದ ವಾಸ್ತುಶಿಲ್ಪ ರಚನೆಗಳು ಇದರ ಪ್ರತೀಕ. ಪುರಿಯ ಜಗನ್ನಾಥ, ಕೋಣಾರಕದ ಸೂರ್ಯ ದೇವಾಲಯ, ಭುವನೇಶ್ವರದ ಲಿಂಗರಾಜ ದೇವಾಲಯ ಒಡಿಸ್ಸಾ ವಾಸ್ತುಶಿಲ್ಪ ಶೈಲಿಯ ಉತ್ತಮ ದೃಷ್ಟಾಂತಗಳು. ಭಾರತದ ಆದ್ಯಂತ ಯಾತ್ರಾರ್ಥಿಗಳು ಈ ಸ್ಥಳಗಳನ್ನು ಸಂದರ್ಶಿಸುತ್ತಾರೆ.

ಒಡಿಸ್ಸಾದ ಒಡಿಸ್ಸಿ ಶೈಲಿಯ ನೃತ್ಯ, ಶ್ರೇಷ್ಠ ಸಾಂಪ್ರದಾಯಿಕ ಕಲೆ, ಕುಸುರಿ ಕೆಲಸದ ಸಾಮಾನುಗಳು, ಮರದ ಕೆತ್ತನೆ ಕೆಲಸ, ಬಿದಿರಿನ ಬುಟ್ಟಿ ಕೆಲಸ ಹಾಗೂ ಕೊಂಬಿನ ಕೆಲಸದ ಅಂದವಾದ ವಸ್ತುಗಳಿಗೆ ಒಡಿಸ್ಸಾ ಹೆಸರಾಗಿದೆ. ನೃತ್ಯಕ್ಕೆ ಗಾಂಭೀರ ಹಾಗೂ ಕುಶಲ ವಸ್ತುಗಳ ಉತ್ಪಾದನೆಯಲ್ಲಿ ಇದು ಹಿಂದಿನಿಂದಲೂ ಖ್ಯಾತಿ ಪಡೆದ ರಾಜ್ಯ.

ಈಶಾನ್ಯಕ್ಕೆ ಪಶ್ಚಿಮ ಬಂಗಾಳ, ಉತ್ತರಕ್ಕೆ ಬಿಹಾರ, ಪಶ್ಚಿಮಕ್ಕೆ ಮಧ್ಯಪ್ರದೇಶ, ದಕ್ಷಿಣಕ್ಕೆ ಆಂಧ್ರ ಪ್ರದೇಶ ಇದರ ನೆರೆಗಳು. ಪೂರ್ವದಲ್ಲಿ ಬಂಗಾಳ ಕೊಲ್ಲಿಯಿದೆ. ಭಾರತದ ಪೂರ್ವ ತೀರದಲ್ಲಿರುವ ಈ ರಾಜ್ಯದ ಎರಡು ಜಿಲ್ಲೆಗಳು ಕರಾವಳಿಯಲ್ಲಿವೆ. ಈ ರಾಜ್ಯದಲ್ಲಿ ಒಟ್ಟು 13 ಜಿಲ್ಲೆಗಳಿವೆ.



ಒಡಿಸ್ಸಾದ ಒಟ್ಟು ಪ್ರದೇಶದ ಶೇಕಡಾ 40ಕ್ಕಿಂತ ಹೆಚ್ಚು ಭಾಗ ಕಾಡು. ಸಾಲ, ಕರಿಪುರ, ಹಲ್ದಿ ಮುಂತಾದ ಶ್ರೇಷ್ಠ ಮರಗಳೂ ಬಿದಿರು, ಬೀಡಿ ಕಟ್ಟಲು ಉಪಯೋಗಿಸಲ್ಪಡುವ 'ಕೆಂದು' ಎಲೆಗಳೂ ಅರಣ್ಯದಲ್ಲಿ ದೊರೆಯುತ್ತವೆ. ಅತೀವ ರಕ್ತ ಒತ್ತಡ ಚಿಕಿತ್ಸೆಗಾಗಿ ಉಪಯೋಗಿಸುವ ರಾವೊಲ್ಫಿಯಾ ಸರ್ಪೆಂಟೀನ (ಸರ್ಪಗಂಧಿ) ಎಂಬ ಇಲ್ಲಿನ ಮೂಲಿಕೆ ಅಂತರರಾಷ್ಟ್ರೀಯ ಖ್ಯಾತಿ ಪಡೆದಿದೆ. ಅರಗು ಸಹ ಒಡಿಸ್ಸಾ ಅರಣ್ಯಗಳಲ್ಲಿ ದೊರೆಯುತ್ತದೆ. ಹುಲಿ, ತೋಳ, ಕರಡಿ, ಸಾಂಬಾರ ಹಾಗೂ ಮಚ್ಚೆ ಜಿಂಕೆಗಳು, ಕೃಷ್ಣ ಮೃಗ, ಕಾಡು ಹಂದಿ, ಅನೇಕ ಬಗೆಯ ಚೆಲುವಾದ ಕಾಡುಕೋಳಿಗಳು ಒಡಿಸ್ಸಾದ ಕಾಡಿನಲ್ಲಿವೆ. ಆದರೆ ಒಡಿಸ್ಸಾ ಎಲ್ಲಕ್ಕಿಂತ ಹೆಚ್ಚಾಗಿ ಆನೆಗೆ ಪ್ರಸಿದ್ಧ. ಒಡಿಸ್ಸಾದ ನದಿಗಳಲ್ಲಿ ಮೊಸಳೆಗಳು ಹೆಚ್ಚು.

ಸುಮಾರು ನೂರಕ್ಕೆ ಎಂಬತ್ತು ಜನ ಬೇಸಾಯವನ್ನು ಅವಲಂಬಿಸಿದ್ದಾರೆ. ಇಲ್ಲಿಯ ನದಿಗಳಲ್ಲಿ ಮುಖ್ಯವಾದುವು ಮಹಾನದಿ, ಬ್ರಾಹ್ಮಣಿ ಹಾಗೂ ವೈತರಣಿ. ಸ್ವರ್ಣರೇಖಾ, ಋಷಿಕುಲ್ಯ, ಬೂರಾ ಬಲಾಂಗ್, ವಂಶಧಾರಾ ಇಂದ್ರಾವತೀ ಮುಂತಾದ ಇತರ ಚಿಕ್ಕ ನದಿಗಳಿವೆ. ಈ ರಾಜ್ಯದ ಎಲ್ಲ ಜಿಲ್ಲೆಗಳಲ್ಲೂ ಒಂದಲ್ಲ ಒಂದು ನದಿ ಹರಿಯುತ್ತದೆ. ಆದ್ದರಿಂದ ಇದನ್ನು 'ನದಿಗಳ ರಾಜ್ಯ' ಎನ್ನುವುದುಂಟು.

'ಮಹಾನದಿ' ಹೆಸರಿಗೆ ತಕ್ಕಂತೆ ದೊಡ್ಡ ನದಿ. ಮಳೆಗಾಲದಲ್ಲಿ ಪ್ರಚಂಡ ಮಹಾಪೂರ ಬರುತ್ತಿದ್ದುದರಿಂದ ಇದನ್ನು 'ಶೋಕನದಿ' ಎನ್ನುತ್ತಿದ್ದರು. ಹಿರಾಕುಡ್ ವಿವಿಧೋದ್ದೇಶ ಅಣೆಕಟ್ಟು ಈ ತೊಂದರೆಯನ್ನು ಬಹುಮಟ್ಟಿಗೆ ನಿವಾರಿಸಿದೆ. ಸುಮಾರು 16 ಮೈಲು ಉದ್ದವಿರುವ ಈ ಅಣೆಕಟ್ಟು ಪ್ರಪಂಚದಲ್ಲೇ ಅತಿ ದೀರ್ಘವಾದದ್ದು.



ರಾಜ್ಯದಲ್ಲಿ ಅತ್ಯಂತ ಫಲವತ್ತಾದ ಭೂಮಿ ಇದೆ. ಇಲ್ಲಿ ಜನವಸತಿ ಹೆಚ್ಚು. ಭತ್ತ, ಜೋಳ, ಮೆಕ್ಕೆ ಜೋಳ, ರಾಗಿ, ಗೋಧಿ, ಬಾರ್ಲಿ, ಸಜ್ಜೆ ಇವು ಮುಖ್ಯ ಕೃಷಿ ಉತ್ಪನ್ನಗಳು. ಅಕ್ಕಿ ಇಲ್ಲಿನ ಜನರ ಮುಖ್ಯ ಆಹಾರ. ದ್ವಿದಳಧಾನ್ಯಗಳು, ಸಂಬಾರಪದಾರ್ಥಗಳು, ಎಣ್ಣೆ ಬೀಜಗಳು, ನಾರುಗಳು, ತರಕಾರಿ ಹಾಗೂ ಹಣ್ಣುಗಳು ಇಲ್ಲಿ ಅಧಿಕವಾಗಿ ಬೆಳೆಯುತ್ತವೆ. ಕಬ್ಬು, ಹೊಗೆಸೊಪ್ಪು ಮುಖ್ಯ ವಾಣಿಜ್ಯ ಬೆಳೆಗಳು.


ಅಂದವಾದ ವಿನ್ಯಾಸದ ಕೈಮಗ್ಗದ ಬಟ್ಟೆಗಳಿಗೆ ಒಡಿಸ್ಸಾ ಹೆಸರು ಪಡೆದಿದೆ. ಮೇಣದಬತ್ತಿ, ಇಟ್ಟಿಗೆ, ಕಲ್ಲುಗಡಿಗೆ, ಪೆಟ್ಟಿಗೆ, ಸುಣ್ಣದ ತಯಾರಿಕೆ ಮುಂತಾದ ಹಲವು ಸಣ್ಣ ಉದ್ಯಮಗಳಿವೆ. ಸಿಮೆಂಟ್, ಕಬ್ಬಿಣ, ಹೆಂಚು, ಫೆರೊಕ್ರೋಮ್, ಕೇಬಲ್‌ಗಳನ್ನು ತಯಾರಿಸುವ ಕಾರಖಾನೆಗಳಿವೆ. ರೂರ್ಕೆಲಾದಲ್ಲಿ ದೊಡ್ಡ ಉಕ್ಕು ಕಾರಖಾನೆಯಿದೆ. ಮಿಗ್ ವಿಮಾನ ಎಂಜಿನ್‌ಗಳನ್ನು ತಯಾರಿಸುವ ಕಾರಖಾನೆ ಕೊರಾಪುಟ್‌ನಲ್ಲಿದೆ. ಉತ್ತಮ ದರ್ಜೆಯ ಮ್ಯಾಂಗನೀಸ್ ಒಡಿಸ್ಸಾದ ಮುಖ್ಯ ಖನಿಜ. ಭಾರತದಿಂದ ರಫ್ತಾಗುವ ಮ್ಯಾಂಗನೀಸ್ ಹಾಗೂ ಕಬ್ಬಿಣದ ಅದಿರಿನ ಪ್ರಧಾನ ಭಾಗ ಒಡಿಸ್ಸಾದಿಂದ ಬರುತ್ತದೆ. ಕ್ರೋಮೈಟ್, ಕಲ್ಲಿದ್ದಲು, ಸುಣ್ಣಕಲ್ಲು, ಗ್ರಾಫೈಟ್, ಹಲವು ಬಗೆಯ ಜೇಡಿಮಣ್ಣುಗಳು ಒಡಿಸ್ಸಾದಲ್ಲಿ ದೊರೆಯುವ ಇತರ ಖನಿಜಗಳು. ಒಡಿಸ್ಸಾದ ಪರದೀಪ ಬಂದರು ಭಾರತದ ಮುಖ್ಯ ಬಂದರುಗಳಲ್ಲೊಂದು.

ಈ ರಾಜ್ಯದಲ್ಲಿ ಹಲವಾರು ಬುಡಕಟ್ಟಿನ ಆದಿವಾಸಿಗಳಿದ್ದಾರೆ. ಅವರೆಲ್ಲ ತಮ್ಮ ಸಂಪ್ರದಾಯ ಆಡುನುಡಿಗಳನ್ನು ಉಳಿಸಿಕೊಂಡಿದ್ದಾರೆ.

ಒಂದು ಕೃಷಿವಿದ್ಯಾಲಯವೂ ಸೇರಿದಂತೆ ಒಡಿಸ್ಸಾದಲ್ಲಿ ನಾಲ್ಕು ವಿಶ್ವವಿದ್ಯಾಲಯಗಳಿವೆ.

ಈ ರಾಜ್ಯದ ಇತಿಹಾಸ ಪುರಾತನವಾದದ್ದು. ಮಹಾಭಾರತ, ಮನುಸಂಹಿತಾ, ಬೃಹತ್ ಸಂಹಿತಾಗಳಲ್ಲಿ ಉಲ್ಲೇಖಿಸಿರುವ ಓಢ್ರ ಹಾಗೂ ಉತ್ಕಲ ಜನರು ಆರ್ಯರಿಗಿಂತ ಮೊದಲು ಇಲ್ಲಿ ಇದ್ದವರೆಂದು ತಿಳಿಯಲಾಗಿದೆ. ಓಢ್ರರು ದಕ್ಷಿಣದಲ್ಲಿ ತೆಲುಗು ನುಡಿಯುವ ಪ್ರದೇಶದ ವರೆಗೆ ತಮ್ಮ ರಾಜ್ಯವನ್ನು ವಿಸ್ತರಿಸಿದ್ದರು. ನಂದರೂ ಮೌರ್ಯರೂ ಕಳಿಂಗ (ವೈತರಣೀ ಕೃಷ್ಣಾ ನದಿಗಳ ನಡುವಣ ಪ್ರದೇಶ)ವನ್ನು ಆಳಿದರು. ಕಳಿಂಗ ಒಳ್ಳೆಯ ಸೇನಾಬಲ ಹೊಂದಿದ್ದಿತು. ಹೊರದೇಶಗಳೊಡನ ಸಾಗರೋತ್ತರ ಸಂಪರ್ಕ ಬೆಳೆಸಿಕೊಂಡಿತ್ತು. 2,000 ವರ್ಷಗಳ ಕೆಳಗೆ ಅಶೋಕ ಚಕ್ರವರ್ತಿಯುದ್ಧ ಪ್ರವೃತ್ತಿಯನ್ನು ಬಿಟ್ಟುಕೊಟ್ಟುದು ಈ ನಾಡಿನಲ್ಲಿ. ಖಾರವೇಲನಿಂದ ಕಳಿಂಗ ಕ್ರಿ. ಪೂ. 183ರಲ್ಲಿ ಸ್ವತಂತ್ರ ರಾಜ್ಯವಾಯಿತು. ಇವನು ತನ್ನ ರಾಜ್ಯವನ್ನು ಬಹಳ ವಿಸ್ತರಿಸಿದ. ಇವನ ಅನಂತರ ಆಂಧ್ರದ ಶಾತವಾಹನರು ಒಡಿಸ್ಸಾದ ಬಹುಭಾಗವನ್ನು ಗೆದ್ದುಕೊಂಡರು.

ಕಾಂಗ್ರೆಸ್ಸೇತರ ಮುಖ್ಯ ಮಂತ್ರಿತ್ವ : ಸಿಂಗ್‌ದೇವ್




2ನೆಯ ಶತಮಾನದಿಂದ 7ನೆಯ ಶತಮಾನದ ವರೆಗಿನ ಒಡಿಸ್ಸಾದ ಇತಿಹಾಸ ಅಸ್ಪಷ್ಟ. ಅನಂತರ ಗೌಡದೇಶದ ಶಶಾಂಕನಿಗೆ ಇದು ಸಾಮಂತ ರಾಜ್ಯವಾಗಿತ್ತು. 640ರಲ್ಲಿ ಹ್ಯೂಯನ್ ತ್ಸಾಂಗ್ ಇಲ್ಲಿಗೆ ಭೇಟಿ ನೀಡಿದ. 8ನೆಯ ಶತಮಾನದ ಮಧ್ಯಕಾಲದಲ್ಲಿ ಪಟ್ಟಕ್ಕೆ ಬಂದ ಕೇಸರಿ ಮನೆತನದ ರಾಜರು ಒಡಿಸ್ಸಾದ ಕಳಿಂಗ, ಓಢ್ರ, ಉತ್ಕಲಗಳನ್ನು ಸೇರಿಸಿ ಆಳಿದರು. ಲಿಂಗರಾಜ ದೇವಾಲಯ ಮುಂತಾದ ಭವ್ಯ ಶೈವ ದೇಗುಲಗಳು ಇವರ ಕಾಲದಲ್ಲಿ ನಿರ್ಮಾಣಗೊಂಡುವು. ಕೇಸರಿಗಳ ಅನಂತರ ಕನ್ನಡನಾಡಿನ ಗಂಗ ಮನೆತನದವರು ಬಂದರು. ಇವರಲ್ಲಿ ಚೋಡ ಗಂಗದೇವನ ಕಾಲದಲ್ಲಿ (ಸುಮಾರು 12ನೆಯ ಶತಮಾನದ ಪೂರ್ವಾರ್ಧ) ಪುರಿಯ ಜಗನ್ನಾಥ ದೇವಾಲಯ ಸ್ಥಾಪಿತವಾಯಿತು. ಇದೇ ಮನೆತನದ ಒಂದನೆಯ ನರಸಿಂಹದೇವ ಕೊನಾರಕ ದೇವಾಲಯ ಕಟ್ಟಿಸಿದ. ಅನಂತರ ಮುಸಲ್ಮಾನರ ದಾಳಿಗಳು ಆಗುತ್ತಲೇ ಇದ್ದವು. 15ನೆಯ ಶತಮಾನದಲ್ಲಿ ಸೂರ್ಯವಂಶದ ಅರಸು ಕಪಿಲೇಂದ್ರದೇವ ಬಹಳ ದಕ್ಷನಾಗಿ ಆಳಿದ. ರಾಜ್ಯವನ್ನು ವಿಸ್ತರಿಸಿದ. ಇವನ ಮಗ ಪ್ರತಾಪರುದ್ರ ಗಜಪತಿಯ ಕಾಲಕ್ಕೆ ರಾಜ್ಯಾಡಳಿತ ಶಿಥಿಲವಾಯಿತು. ಅನೇಕ ಭಾಗಗಳು ಶತ್ರುಗಳ ವಶವಾದುವು: ರಾಜ್ಯ ಗೊಂದಲಗಳ ಆಗರವಾಯಿತು. ಪ್ರತಾಪರುದ್ರನ ಅನಂತರ ಭೋಯಿ ಮನೆತನದ ಆಡಳಿತ ನಡೆಯಿತು. 1576ರಿಂದ ಮೊಘಲರ ಆಳ್ವಿಕೆ ಆರಂಭವಾಯಿತು. ಸುಮಾರು ಒಂದು ಶತಮಾನ ಕಾಲ ಅವರು ಆಳಿದರು. ಮಧ್ಯೆ ದಂಗೆಗಳಾಗುತ್ತಲೇ ಇದ್ದುವು. ಮೊಘಲರ ಅನಂತರ, ನವಾಬರು ಆಳಿದರು. 1751ರಲ್ಲಿ ಒಡಿಸ್ಸಾ ಮರಾಠರ ಆಳ್ವಿಕೆಗೆ ಬಂದಿತು. 19ನೆಯ ಶತಮಾನದ ಆದಿಯಲ್ಲಿ ರಾಜ್ಯ ಬ್ರಿಟಿಷರ ವಶವಾದರೂ ಅವರ ವಿರುದ್ಧ ಬಂಡಾಯಗಳಾದುವು. ಅವರು ಕಟಕ್, ಪುರಿ, ಬಾಲಾಸೂರ್ ಜಿಲ್ಲೆಗಳೆಂದು ವಿಭಾಗಿಸಿ ರಾಜ್ಯವನ್ನು ಬಂಗಾಳಕ್ಕೆ ಸೇರಿಸಿದರು. ಒಡಿಯಾ ಆಡುವ ಜನರ ರಾಜ್ಯ ಹಂಚಿಹೋಯಿತು. 20ನೆಯ ಶತಮಾನದಲ್ಲಿ 'ಉತ್ಕಲ ಸಮ್ಮೇಳನ' ಒಡಿಸ್ಸಾ ಭಾಷೆ ಆಡುವ ಜನರ ಪ್ರತ್ಯೇಕ ಪ್ರಾಂತ್ಯ ಚಳುವಳಿಗಾಗಿ ಕರೆ ನೀಡಿತು. 1936ರಲ್ಲಿ ಒಡಿಸ್ಸಾ ಪ್ರತ್ಯೇಕ ಪ್ರಾಂತ್ಯವಾಯಿತು. ಸ್ವತಂತ್ರ ಭಾರತದಲ್ಲಿ ರಾಜ್ಯಗಳ ಪುನರ್ರಚನೆಯಾದಾಗ ಒಡಿಸ್ಸಾದ ಎಲ್ಲೆಗಳನ್ನು ಈಗಿರುವಂತೆ ಗೊತ್ತುಪಡಿಸಿದರು.

ನೋಡಿ : ಕಳಿಂಗ ; ಕೊನಾರಕ್ ; ಖಾರವೇಲ ; ಪರದೀಪ್ ; ಪುರಿಜಗನ್ನಾಥ ; ಭುವನೇಶ್ವರ

ಒಡಿಸಿ ನೃತ್ಯ

ದೇವದಾಸಿಯರು ದೇವತಾ ಸೇವೆಯಾಗಿ ದೇವಾಲಯಗಳಲ್ಲಿ ಪ್ರದರ್ಶಿಸುತ್ತಿದ್ದ ಒಂದು ನೃತ್ಯಪ್ರಕಾರ ಒಡಿಸಿ. ಭುವನೇಶ್ವರದ ಶಿವಾಲಯ, ಪುರಿಯ ಜಗನ್ನಾಥ ದೇವಾಲಯಗಳು ಸುಮಾರು 7ನೆಯ ಶತಮಾನದಿಂದ ಈ ನೃತ್ಯ ವಿಧಾನದ ಪೋಷಕ ಕೇಂದ್ರಗಳಾಗಿದ್ದುವು. ದೇವದಾಸಿಯರಿಗೆ ಸಮಾಜದಲ್ಲಿ ಗೌರವವಿದ್ದಿತು. ಸ್ತ್ರೀಯರಲ್ಲದೆ ಪುರುಷರೂ ನೃತ್ಯ ಮಾಡುತ್ತಿದ್ದುದುಂಟು. ಒಡಿಸಿ ನೃತ್ಯಶೈಲಿ ಸೊಬಗಿನಿಂದ ಕೂಡಿದ್ದು. ಆ ಸೊಬಗು ಅದರ ಸರಳತೆಯಲ್ಲಿದೆ. ಕೊನಾರಕನ ಸೂರ್ಯಮಂದಿರದ ನಾಟ್ಯಮಂಟಪದಲ್ಲಿರುವ ಶಿಲ್ಪಸುಂದರಿಯರು ಒಡಿಸಿ ಶೈಲಿಯ ಹಲವು ಭಾವ ಭಂಗಿಗಳಲ್ಲಿ ಮೆರೆಯುವುದನ್ನು ಕಾಣಬಹುದು. ಒಡಿಸಿ ಪ್ರಕಾರದ 'ತ್ರಿಭಂಗಿ' ವಿಶಿಷ್ಟವಾದದ್ದು. ಆಂಗಿಕಾಭಿನಯವೂ ಇದರಲ್ಲಿ ಬೇರೆ ರೀತಿಯದು.

18–19ನೆಯ ಶತಮಾನದವುಗಳಾದ 'ಅಭಿನಯ ಚಂದ್ರಿಕಾ', 'ಅಭಿನಯ ದರ್ಪಣ', 'ನಾಟ್ಯಮನೋರಮಾ', 'ಸಂಗೀತ ನಾರಾಯಣ', 'ಸಂಗೀತ



ಸೊಬಗು : ಒಡಿಸಿ ನೃತ್ಯ

ಸರಣಿ' ಮತ್ತು 'ಗೀತ ಪ್ರಕಾಶ' ಒಡಿಸಿ ನೃತ್ಯದ ಕೆಲವು ಲಕ್ಷಣಗ್ರಂಥಗಳು. ಇವುಗಳಲ್ಲಿ ಕೆಲವು ಇನ್ನೂ ಮುದ್ರಿತವಾಗಿಲ್ಲ. ಭರತನ 'ನಾಟ್ಯಶಾಸ್ತ್ರ', ನಂದಿಕೇಶ್ವರನ 'ಅಭಿನಯ ದರ್ಪಣ'ಗಳನ್ನೇ ಒಡಿಸಿ ಸಂಪ್ರದಾಯ ಹೆಚ್ಚಾಗಿ ಅವಲಂಬಿಸಿದೆ.

ಒಡಿಸಿ ನೃತ್ಯಪ್ರದರ್ಶನಕ್ಕೆ ಹಿಮ್ಮೇಳದಲ್ಲಿ 'ಗಿನಿ' ಎಂಬ ಮೃದಂಗವನ್ನೂ ಕೊಳಲನ್ನೂ ಬಾರಿಸುತ್ತಾರೆ. ರಾಧಾ, ಕೃಷ್ಣರು ಪ್ರಮುಖ ಪಾತ್ರಗಳಾದ ಜಯದೇವನ 'ಗೀತಗೋವಿಂದ' ಒಡಿಸಿ ನೃತ್ಯ ಶೈಲಿಯಲ್ಲಿ ಸುಮಾರು 13ನೆಯ ಶತಮಾನದಿಂದಲೂ ಪ್ರದರ್ಶಿತವಾಗುತ್ತಿದೆ.

ಒ. ಪಿ. ಮೆಹರಾ

ಭಾರತದ ವಿಮಾನ ಬಲಾಧಿಪತಿ; ಒ. ಪಿ. ಮೆಹರಾ.

ಓಂ ಪ್ರಕಾಶ್ ಮೆಹರಾ ಹುಟ್ಟಿದ್ದು 1919 ಜನವರಿ 19ರಂದು. ಪಂಜಾಬ್ ವಿಶ್ವವಿದ್ಯಾನಿಲಯದ ಎಂ.ಎ. ಪದವಿ ಪಡೆದಮೇಲೆ 1940ರಲ್ಲಿ ವಾಯುದಳ ಸೇರಿದರು. ವಾಲ್ಟನ್ ಮತ್ತು ಅಂಬಾಲಾಗಳಲ್ಲಿ ವಿಮಾನ ಶಿಕ್ಷಣ ಪಡೆದರು. ಅನಂತರ ವಾಯವ್ಯ ಗಡಿನಾಡಿನಲ್ಲೂ ಎರಡನೆಯ ಮಹಾಯುದ್ಧದಲ್ಲಿ ಬರ್ಮದಲ್ಲೂ ಸೇವೆ ಸಲ್ಲಿಸಿದರು.

ಭಾರತ ಸ್ವತಂತ್ರವಾದಮೇಲೆ ಅವರು ವಿಮಾನ ಪಡೆಯ ಶಿಕ್ಷಣ ಕೇಂದ್ರಗಳಾದ ತಾಂಬರಂನ ಏರ್‌ಫೋರ್ಸ್ ಅಕಾಡೆಮಿ ಮತ್ತು ಗ್ರೌಂಡ್ ಟ್ರೇನಿಂಗ್ ಸ್ಕೂಲುಗಳಲ್ಲಿ ಸೇವೆ ಸಲ್ಲಿಸಿದರು. ಅನಂತರ ವಿಮಾನ ಪಡೆಯ ಪ್ರಧಾನ ಕಾರ್ಯಾಲಯದಲ್ಲಿ ಶಿಕ್ಷಣ ನಿರ್ದೇಶಕರಾದರು. ಅವರು ವಾಯುದಳದ ಹಲವು ಮುಖ್ಯ ಪದವಿಗಳಲ್ಲಿ ಸೇವೆ ಸಲ್ಲಿಸಿದ್ದಾರೆ.

ವಿಮಾನ ಬಲಾಧಿಪತಿ : ಓಂ ಪ್ರಕಾಶ್



1967ರಲ್ಲಿ ಅವರು ಮೇಂಟೆನೆನ್ಸ್ ಶಾಖೆಯ ಏರ್ ಆಫೀಸರ್ ಕಮಾಂಡಿಂಗ್ – ಇನ್ – ಚೀಫ್ ಹುದ್ದೆಗೆ ನಿಯಮಿತರಾದರು. ಈ ಅಧಿಕಾರದಲ್ಲಿ ಅವರು ಸಲ್ಲಿಸಿದ ಸೇವೆಗಾಗಿ 1968ರಲ್ಲಿ ಪರಮ ವಿಶಿಷ್ಟ ಸೇವಾಪದಕ ದೊರೆಯಿತು. ಅನಂತರ ಡೆಪ್ಯೂಟಿ ಚೀಫ್ ಆಫ್ ಏರ್ ಸ್ಟಾಫ್ ಆಗಿದ್ದರು.

1973 ಜನವರಿ 1ರಿಂದ ಒ. ಪಿ. ಮೆಹರಾ ಏರ್ ಚೀಫ್ ಮಾರ್ಷಲ್ (ವಿಮಾನ ಬಲಾಧಿಪತಿ) ಆದರು. ಭಾರತದ ವಿಮಾನ ಬಲಕ್ಕೆ ಸಂಬಂಧಿಸಿದ ಕಾರ್ಯನಿರ್ವಹಣೆಗಾಗಿ ಅವರು ಹಲವಾರು ರಾಷ್ಟ್ರಗಳಿಗೆ ಹೋಗಿ ಬಂದಿದ್ದಾರೆ.

ಕ್ರೀಡೆಯಲ್ಲಿ ಮೆಹರಾ ಅವರಿಗೆ ಅಪಾರ ಆಸಕ್ತಿ. ಭಾರತದ ಒಲಿಂಪಿಕ್ ಅಸೋಸಿಯೇಷನ್ ಹಾಗೂ ಹಾಕಿ, ಅಥ್ಲೆಟಿಕ್ಸ್ ಮತ್ತು ಬಾಸ್ಕೆಟ್ ಬಾಲ್‌ಗಳ ಅಖಿಲ ಭಾರತ ಸಂಘಗಳೊಡನೆ ಇವರಿಗೆ ಸಂಬಂಧವಿದೆ. 1956ರಲ್ಲಿ ಮೆಲ್‌ಬರ್ನ್‌ನಲ್ಲಿ ನಡೆದ ಒಲಿಂಪಿಕ್ ಕ್ರೀಡೆಗಳಿಗೆ ಭಾರತದ ಹಾಕಿ ತಂಡದ ಮ್ಯಾನೇಜರ್ ಆಗಿದ್ದರು.

'ಓಂ'

"ಓಮಿತ್ಯೇತದಕ್ಷರ ಮಿದಗ್ಂ ಸರ್ವಂ" (ಇದೆಲ್ಲವೂ 'ಓಂ' ಎಂಬ ಈ ಅಕ್ಷರ) ಎಂಬ ಮಾತುಗಳಿಂದ ಮಾಂಡೂಕ್ಯೋಪನಿಷತ್ ಆರಂಭವಾಗುತ್ತದೆ. 'ಇದೆಲ್ಲವೂ' ಎಂದರೆ ಏನು ಎಂಬುದನ್ನೂ ಆ ಉಪನಿಷತ್ತಿನಲ್ಲಿ ವಿವರಿಸಲಾಗಿದೆ. 'ಇದೆಲ್ಲವೂ' ಎಂದರೆ ಹಿಂದೆ ಆದದ್ದು, ಈಗ ಇರುವುದು, ಮುಂದಿನದು, ಈ ಮೂರು ಕಾಲಗಳಿಗೂ ಮೀರಿದ್ದು ಯಾವುದೋ ಅದು ಕೂಡ —ಎಂದಿದೆ.

'ಓಂ' ಒಂದು ಬೀಜಾಕ್ಷರ. ಇದು ಅ, ಉ, ಮ ಧ್ವನಿಗಳ ಸಂಯೋಗದಿಂದ ಆಗಿದೆ. ಉಪನಿಷತ್ತಿನಲ್ಲಿ ಇದನ್ನು ಪರಬ್ರಹ್ಮ ಸ್ವರೂಪ ಎಂದು ಹೇಳಿದ್ದಾರೆ.



ಅ, ಉ, ಮ ಗಳು ವಿಷ್ಣು, ಶಿವ, ಬ್ರಹ್ಮರ ಪ್ರತಿರೂಪವೆಂದು ಭಾವಿಸುವುದರಿಂದ 'ಓಂ' ತ್ರಿಮೂರ್ತಿಗಳ ಏಕತೆಯನ್ನು ಸೂಚಿಸುತ್ತದೆ ಎಂಬ ಅಭಿಪ್ರಾಯವಿದೆ. ವೇದ, ಪವಿತ್ರ ಗ್ರಂಥಗಳು, ದೇವರ ಸ್ತೋತ್ರಗಳನ್ನು ಹೇಳುವ ಮೊದಲು 'ಓಂ' ಎಂದು ಉಚ್ಚರಿಸುವುದು ಸಂಪ್ರದಾಯ.

ಇದನ್ನು ಓಂಕಾರ, ಪ್ರಣವ ಎಂದೂ ಕರೆಯುತ್ತಾರೆ. ಸ್ತುತಿಸು ಅಥವಾ ಶಬ್ದಮಾಡು ಎಂಬ ಅರ್ಥವುಳ್ಳ ಧಾತುವಿನಿಂದ ಪ್ರಣವ ಶಬ್ದ ಹುಟ್ಟಿದೆ ಎಂದೂ ನಮಸ್ಕರಿಸು ಎನ್ನುವ ಅರ್ಥ ಕೊಡುವ ನಮ್ ಧಾತುವಿನಿಂದ ಉತ್ಪತ್ತಿಯಾಗಿದೆ ಎಂದೂ ಹೇಳಿಕೆಗಳಿವೆ. 'ಓಂ' ಪರಬ್ರಹ್ಮನ ಸ್ತುತಿ; ಅವನಿಗೆ ನಮಿಸುವುದರ ಸಂಕೇತ.

ಓಂಕಾರನಾಥ ಠಾಕೂರ್

ಪ್ರಣವ ಅಕ್ಷರವಾದ ಓಂಕಾರವನ್ನೇ ಮಗನಿಗೆ ಹೆಸರಾಗಿ ಇಟ್ಟರು ಗೌರೀಶಂಕರ ಠಾಕೂರರು. ಮಗ ಓಂಕಾರನಾಥ ಠಾಕೂರರು ಭಾರತೀಯ ಸಂಗೀತದಲ್ಲಿ —ಹಿಂದೂಸ್ತಾನಿ ಶೈಲಿಯಲ್ಲಿ— ಹೆಸರಾದ ವ್ಯಕ್ತಿ. ಸಂಗೀತವನ್ನು ಜನಪ್ರಿಯಗೊಳಿಸಲು ಅವರು ಶ್ರಮಿಸಿದರು.

1898 ಜೂನ್ 24ರಂದು ಓಂಕಾರನಾಥರು ಬಡೋದೆಯ ಬಳಿಯ ಒಂದು ಹಳ್ಳಿಯಲ್ಲಿ ಜನಿಸಿದರು. ಅನಂತರ ಇವರ ಮನೆತನದವರು ನರ್ಮದಾ ನದೀದಂಡೆಯ ಮೇಲಿನ ಒಂದು ಆಶ್ರಮದಲ್ಲಿ ನೆಲೆಸಿದರು.



ಉಪಾಸನೆ, ಸಂಶೋಧನೆ : ಓಂಕಾರನಾಥ

ಓಂಕಾರನಾಥರಿಗೆ ಸಂಗೀತದಲ್ಲಿ ಮೊದಲಿನಿಂದಲೂ ಆಸಕ್ತಿ. ಇವರ ಕಂಚಿನಂಥ ಕಂಠವನ್ನು ಕೇಳಿದ ಮಹನೀಯರೊಬ್ಬರು ಇವರಿಗೆ ಪಂಡಿತ ವಿಷ್ಣು ದಿಗಂಬರ ಪಲೂಸ್ಕರ್ ಅವರ ಬಳಿ ತರಬೇತಿಗಾಗಿ ವ್ಯವಸ್ಥೆ ಮಾಡಿದರು.

ಹಲವು ವರ್ಷಗಳ ಕಾಲ ಸಂಗೀತ ಸಾಧನೆ ನಡೆಸಿ ಸಂಗೀತರಂಗದಲ್ಲಿ ಖ್ಯಾತರಾದ ಬಳಿಕ ಲಾಹೋರಿನ ಗಂಧರ್ವ ಮಹಾವಿದ್ಯಾಲಯದಲ್ಲಿ ಓಂಕಾರನಾಥರು ಪ್ರಿನ್ಸಿಪಾಲರಾದರು. ಈ ಕಾಲದಲ್ಲಿ ಸಂಗೀತವನ್ನು ಎಲ್ಲ ವರ್ಗಗಳ ಜನರಲ್ಲಿ ಪ್ರಚಾರ ಮಾಡಲು ದುಡಿದರು.

ಭಾರತೀಯ ಸಂಗೀತವನ್ನು ಅಂತರರಾಷ್ಟ್ರೀಯವಾಗಿ ಜನಪ್ರಿಯಗೊಳಿಸುವುದಕ್ಕಾಗಿ ಓಂಕಾರನಾಥರು ಎಲ್ಲ ಮುಖ್ಯ ಅಂತರರಾಷ್ಟ್ರೀಯ ಸಂಸ್ಕೃತಿ ಅಧಿವೇಶನಗಳಲ್ಲಿ ಭಾಗವಹಿಸುತ್ತಿದ್ದರು. ಫ್ಲಾರೆನ್ಸ್, ಆಸ್ಟ್ರಿಯ ಹಂಗರಿ ಮುಂತಾದ ಪ್ರಮುಖ ಸಂಸ್ಕೃತಿ ಕೇಂದ್ರಗಳಿಗೆ ಈ ಉದ್ದೇಶದಿಂದ ಭೇಟಿಯಿತ್ತರು; ಅಲ್ಲಿನ ಸಂಗೀತಪ್ರೇಮಿಗಳಿಗೆ. ವೈದಿಕ ಸ್ತೋತ್ರಗಳಿಂದ ಹಿಡಿದು ಜಟಿಲ ಶಾಸ್ತ್ರೀಯ ಸಂಗೀತ ರಚನೆಗಳ ವರೆಗೆ ನಾನಾ ಪ್ರಕಾರದ ಕೃತಿಗಳ ಪರಿಚಯ ಮಾಡಿಕೊಟ್ಟರು. ರೋಮ್‌ನಲ್ಲಿ ಒಮ್ಮೆ ಉದಾಹರಣಾಪೂರ್ವಕ ಸಂಗೀತ ಉಪನ್ಯಾಸ ಮಾಲಿಕೆಯನ್ನೇ ನಡೆಸಿದರು. ಇಟಲಿಯ ಸರ್ವಾಧಿಕಾರಿ ಮುಸೋಲಿನಿಯ ಆಹ್ವಾನದಂತೆ ಆತನಿಗೆ ಭಾರತೀಯ ಸಂಗೀತದ ರಾಗ, ಭಾವಗಳ ಪರಿಚಯ ಮಾಡಿಕೊಟ್ಟರು. ಸ್ವಿಟ್ಜರ್‌ಲೆಂಡ್, ಹಾಲೆಂಡ್, ಬೆಲ್ಜಿಯಂ, ಜರ್ಮನಿ, ಇಂಗ್ಲೆಂಡ್ ಮುಂತಾದೆಡೆಗಳಲ್ಲಿ ಸಂಚರಿಸಿ ಬಂದರು. 1952, 1953, 1954ರಲ್ಲಿ ಅಫ್‌ಘಾನಿಸ್ತಾನ, ಹಂಗೆರಿ ಮತ್ತು ಜರ್ಮನಿಗಳಲ್ಲಿ ನಡೆದ ವಿಶ್ವ ಶಾಂತಿ ಸಮ್ಮೇಳನಗಳಲ್ಲಿ ಭಾಗವಹಿಸಿದರು.

1950ರಲ್ಲಿ ಅವರು ವಾರಾಣಸಿಯಲ್ಲಿ, ಬನಾರಸ್ ಹಿಂದೂ ವಿಶ್ವವಿದ್ಯಾನಿಲಯದ ಶ್ರೀ ಕಲಾ ಸಂಗೀತ ಭಾರತಿ ಕಾಲೇಜಿನ ಪ್ರಿನ್ಸಿಪಾಲರಾದರು. ಸಂಗೀತದಲ್ಲಿ ಸಂಶೋಧನೆಯನ್ನು ಪ್ರೋತ್ಸಾಹಿಸಿದರು.

'ಸಂಗೀತ ಸಮ್ರಾಟ'. 'ಸಂಗೀತ ಮಾರ್ತಾಂಡ' ಮುಂತಾದ ಬಿರುದುಗಳೂ ರಾಷ್ಟ್ರೀಯ ಸಂಗೀತ ನಾಟಕ ಅಕಾದೆಮಿಯ ಪ್ರಶಸ್ತಿಯೂ ಇತರ ಗೌರವಗಳು ದೊರೆತುವು. ಭಾರತ ಸರಕಾರ 'ಪದ್ಮಶ್ರೀ'ನೀಡಿ ಇವರನ್ನು ಗೌರವಿಸಿತು. ರೋಮ್‌ನ ರಾಯಲ್ ಅಕಾಡೆಮಿ ಆಫ್ ಮ್ಯೂಸಿಕ್‌ನಲ್ಲಿ ಮಾನವನ ಭಾವನೆ ಹಾಗೂ ಮನಸ್ಸಿನ ಸ್ಥಿತಿಗಳ ಮೇಲೆ ಸಂಗೀತ ಪರಿಣಾಮವನ್ನು ಗೊತ್ತುಹಚ್ಚುವ ಸಂಶೋಧನೆಗಾಗಿ ಹೊಸದಾಗಿ ಸ್ಥಾಪಿತವಾದ ಆಚಾರ್ಯಪೀಠಕ್ಕೆ ಪ್ರಾಧ್ಯಾಪಕರಾಗಿ ನಿಯಮಿತರಾಗಿದ್ದರು.

ಸಂಗೀತ ಸಿದ್ಧಾಂತಗಳ ಬಗೆಗೆ. ಸಮಾಜದಲ್ಲಿ ಸಂಗೀತದ ಸ್ಥಾನ ಮತ್ತು ಅದರ ಪರಿಣಾಮಗಳ ಬಗೆಗೆ ಇವರ ಹಲವಾರು ಬರೆಹಗಳು ಪ್ರಕಟವಾಗಿವೆ.

1967 ಡಿಸೆಂಬರ್ 28ರಂದು ಅವರು ನಿಧನರಾದರು.

ಓಟ್ಟಂ ತುಳ್ಳಲ್

ರಾಜನ ಆಸ್ಥಾನದಲ್ಲಿ ತನ್ನ ಕಲಾಪ್ರೌಢಿಮೆಯನ್ನು ಪ್ರದರ್ಶಿಸಲು ಅವಕಾಶ ದೊರೆಯದೇ ಹೋದುದರಿಂದ ಖಿನ್ನನಾದ ಕಲಾವಿದ ಕುಂಜನ್ ನಂಬಿಯಾರ್ ಈಗ್ಗೆ ಒಂದೂವರೆ ಶತಮಾನದ ಹಿಂದೆ ರೂಪಿಸಿದ ನೃತ್ಯ ಪ್ರಕಾರ ಓಟ್ಟಂ ತುಳ್ಳಲ್. ಇದು ಕೇರಳದ ಜಾನಪದಪ್ರಕಾರದ ಏಕ ಪಾತ್ರಾಭಿನಯ ನೃತ್ಯ.



ಶ್ರೀಸಾಮಾನ್ಯರ 'ತುಳ್ಳಲ್'

ದೇವಾಲಯಗಳ ಹೊರಾಂಗಣದಲ್ಲೋ ಬೀದಿಯ ಬದಿಯಲ್ಲೋ ಹಗಲಲ್ಲಿ ಈ ನೃತ್ಯ ಪ್ರದರ್ಶನ ನಡೆಯುತ್ತದೆ. ನೆರೆಯುವ ಪ್ರೇಕ್ಷಕರಿಗೆ ಕೇಂದ್ರಬಿಂದುವಾಗಿ ಓಟ್ಟಂ ತುಳ್ಳಲ್ ಪಾತ್ರಧಾರಿ ನರ್ತಿಸುತ್ತಾನೆ. ಮದ್ದಳೆ ಹಾಗೂ ತಾಳಗಳ ಹಿನ್ನಲೆಯಲ್ಲಿ ರಾಮಾಯಣ, ಮಹಾಭಾರತ ಹಾಗೂ ಪುರಾಣ ಕಥಾವಸ್ತುವನ್ನು ಸರಳವಾದ ಕಾವ್ಯ ರೂಪದಲ್ಲಿ ಹಾಡಲಾಗುತ್ತದೆ. ನರ್ತಕ ಅದನ್ನೇ ಪುನರುಚ್ಚರಿಸಿ ಸೂಕ್ತ ಅಭಿನಯದ ಮೂಲಕ ಕಥೆಯನ್ನು ಸ್ಫುಟಪಡಿಸುತ್ತಾನೆ.

ಕಥಾವಸ್ತು ಪೌರಾಣಿಕವಾದರೂ ಇದರಲ್ಲಿ ಸಮಾಜದ ವಿಮರ್ಶೆ, ವಿಡಂಬನೆಗಳೂ ಬೆರೆತಿರುತ್ತವೆ. ಜನಸಾಮಾನ್ಯರನ್ನು ಕೆಣಕುವ ತಿಳಿ ಹಾಸ್ಯವೂ ಇರುತ್ತದೆ.

ಇದರ ವೇಷಭೂಷಣಗಳು ಸ್ವಲ್ಪಮಟ್ಟಿಗೆ ಕಥಕಳಿಯನ್ನು ಹೋಲುತ್ತವೆ.

ಓಣಂ

ಬಣ್ಣಗಳ ಹಬ್ಬ ಓಣಂ. ಜನರಿಗೆ ಬೆಡಗಿನ ಉಡುಗೆ; ಮನೆಗಳಿಗೆ ಹೂವಿನ ಅಲಂಕರಣ. ಇದು ಸುಗ್ಗಿಯ ಸಮಯದ ಹಿಗ್ಗಿನ ಹಬ್ಬ; ಕೇರಳದ ಅತ್ಯಂತ ಪ್ರಮುಖ ಸಾಮೂಹಿಕ ಹಬ್ಬ.

ಕೇರಳದ ಪಂಚಾಂಗದ ಪ್ರಥಮ ತಿಂಗಳಾದ ಚಿಂಗಮ್‌ನಲ್ಲಿ (ಆಗಸ್ಟ್–ಸೆಪ್ಟೆಂಬರ್) ಓಣಂ ಹಬ್ಬ ನಡೆಯುತ್ತದೆ. ಹಿಂದೆ ಸಮಾರಂಭಗಳು ಒಂದು ತಿಂಗಳ ಕಾಲ ನಡೆಯುತ್ತಿದ್ದುವು. ಈಗ ಓಣಂ ಅನ್ನು ಸಾಮಾನ್ಯವಾಗಿ ಒಂದು ವಾರ ಕಾಲ ಆಚರಿಸುತ್ತಾರೆ.

ಓಣಂ ಹಬ್ಬವನ್ನು ಕುರಿತು ಹಲವಾರು ಕಥೆಗಳಿವೆ. ಇವುಗಳಲ್ಲಿ ಹೆಚ್ಚು ಜನಪ್ರಿಯವಾದದ್ದು ಬಲಿ (ಮಹಾಬಲಿ) ಚಕ್ರವರ್ತಿಗೆ ಸಂಬಂಧಿಸಿದ್ದು; ಇವನು ಪ್ರಾಚೀನ ಕೇರಳದ ಅತ್ಯಂತ ಜನಪ್ರಿಯ ಅರಸನಾಗಿದ್ದ. ವಿಷ್ಣುವಿನ ಅವತಾರವಾದ ವಾಮನನಿಗೆ ಇವನು ಮೂರು ಹೆಜ್ಜೆ ನೆಲವನ್ನು ದಾನ ಮಾಡಿದ ಸಂದರ್ಭದಲ್ಲಿ ವಾಮನ ಒಂದು ಹೆಜ್ಜೆಯಿಂದ ಭೂಮಿಯನ್ನೂ ಇನ್ನೊಂದರಿಂದ ಆಕಾಶವನ್ನೂ ಅಳೆದು, ಮೂರನೆಯ ಹೆಜ್ಜೆಯನ್ನು ಎಲ್ಲಿ ಇಡಬೇಕೆಂದು ಕೇಳಿದ. "ಅದನ್ನು ನನ್ನ ತಲೆಯ ಮೇಲೆ ಇಡು" ಎಂದ ಬಲಿ. ವಾಮನ ತನ್ನ ಹೆಜ್ಜೆಯನ್ನು ಅವನ ತಲೆಯ ಮೇಲಿಟ್ಟು ಅವನನ್ನು ಪಾತಾಳಕ್ಕೆ ತುಳಿದ. ವರ್ಷದಲ್ಲಿ ಒಂದು ದಿನ ಮಾತ್ರ ತನ್ನ ರಾಜ್ಯವನ್ನು ಸಂದರ್ಶಿಸಲು ಆತನಿಗೆ ಅವಕಾಶ ಕೊಟ್ಟ. ಈ ವ್ಯವಸ್ಥೆಯಂತೆ



ಅಂಗಳದಲ್ಲಿ ಸುಂದರ ಪುಷ್ಪಾಲಂಕಾರ

ವರ್ಷಕ್ಕೆ ಒಮ್ಮೆ ಬರುವ ಮಹಾಬಲಿಯನ್ನು ಸ್ವಾಗತಿಸುವುದಕ್ಕಾಗಿಯೇ ಇಷ್ಟು ಸಂಭ್ರಮ.

ಮಹಾಬಲಿ ಪ್ರತಿಯೊಬ್ಬರ ಮನೆಗೂ ಬರುತ್ತಾನೆಂದು ನಂಬಿಕೆ. ಆದ್ದರಿಂದ ಅವನನ್ನು ಸ್ವಾಗತಿಸಲು ಜನರು ತಮ್ಮ ಮನೆಗಳನ್ನು ಚೊಕ್ಕಟಗೊಳಿಸುತ್ತಾರೆ. ಅಂಗಳದಲ್ಲಿ ಸುಂದರ ಪುಷ್ಪಾಲಂಕಾರ ಮಾಡುತ್ತಾರೆ. ಹಿರಿಯರೂ ಕಿರಿಯರೂ ಹೊಸ ಬಟ್ಟೆ ತೊಡುತ್ತಾರೆ. ಹಾಡುತ್ತಾ ಉಯ್ಯಾಲೆ ಆಡುವುದು, ಈ ಹಬ್ಬದಲ್ಲಿ ಸರ್ವಸಾಮಾನ್ಯ. ಬಂಧುಗಳ, ಗೆಳೆಯರ ಮನೆಗಳಿಗೆ ಭೇಟಿ ಕೊಡುತ್ತಾರೆ. ಸಾರ್ವಜನಿಕ ಉತ್ಸವಗಳನ್ನು ನಡೆಸುತ್ತಾರೆ.

ದೋಣಿಪಂದ್ಯ ಓಣಂನ ಪ್ರಮುಖ ಆಕರ್ಷಣೆ. ಕೇರಳದ ಹಿನ್ನೀರು ಪ್ರದೇಶಗಳಲ್ಲಿ ಹಲವು ದೋಣಿ ಪಂದ್ಯಗಳು ನಡೆಯುತ್ತವೆ. ಒಂದೊಂದು ದೋಣಿಯಲ್ಲೂ ಹತ್ತಾರು ಜನ ಹುಟ್ಟು ಹಾಕುವವರಿರುತ್ತಾರೆ.

ಕೇರಳದ ಹೊರಗೆ ಇರುವ ಕೇರಳೀಯರೂ ಓಣಂ ಆಚರಿಸುತ್ತಾರೆ.

1956ರಿಂದ ಕೇರಳ ಸರಕಾರ ಈ ಹಬ್ಬದ ಆಚರಣೆಗೆ ಪ್ರೋತ್ಸಾಹ ಕೊಡುತ್ತಿದೆ.

ಓಬವ್ವ

ಹದಿನೆಂಟನೆಯ ಶತಮಾನ. ಚಿತ್ರದುರ್ಗದ ಕೋಟೆ ಮದಕರಿನಾಯಕನ ಆಳ್ವಿಕೆಯಲ್ಲಿತ್ತು. ಹೈದರ್ ಅಲಿ ಆ ಕೋಟೆಗೆ ಮುತ್ತಿಗೆ ಹಾಕಿದ. ತಿಂಗಳುಗಳು ಉರುಳಿದುವು. ಕೋಟೆ ಕೈವಶವಾಗಲಿಲ್ಲ. ಭೇದೋಪಾಯದಿಂದ ದುರ್ಗವನ್ನು ಪ್ರವೇಶಿಸಬೇಕೆಂದು ನಿರ್ಧರಿಸಿ, ಕಳ್ಳದಾರಿ ಹುಡುಕಬೇಕೆಂದು ಹೈದರ್ ಜನರನ್ನು ಕಳುಹಿಸಿದ. ಕಳ್ಳದಾರಿಯನ್ನು ಅವರು ಗುರುತಿಸಿದರು. ಆದರೇನು ? ವೀರ ವನಿತೆಯೊಬ್ಬಳ ಸಮಯಸ್ಫೂರ್ತಿಯಿಂದ ಹೈದರನ ಹಂಚಿಕೆ ಮುರಿದುಬೀಳುವಂತಾಯಿತು.

ಆಕೆಯೇ ಚಿತ್ರದುರ್ಗದ ಇತಿಹಾಸದಲ್ಲಿ ಚಿರಸ್ಮರಣೀಯಳಾದ ಓಬವ್ವ.

ಹೆಂಗಸೊಬ್ಬಳು ಮೊಸರಿನ ಮಡಕೆ ಹೊತ್ತುಕೊಂಡು ದುರ್ಗದ ಒಳಗೆ ಹೋಗುವುದನ್ನು ಹೈದರನ ಕಡೆಯವರು ಕಂಡರು. ಆಕೆಯನ್ನು ಹಿಂಬಾಲಿಸಿ ಬಂದವರಿಗೆ, ಎರಡು ಬಂಡೆಗಳ ನಡುವೆ ಒಬ್ಬರು ನುಸುಳಿ ಹೋಗಬಹುದಾದಷ್ಟು ಅವಕಾಶ ಇದ್ದುದು ಕಾಣಿಸಿತು. ಅದರ ಮೂಲಕ ಒಬ್ಬೊಬ್ಬರೇ ಒಳಗೆ ಹೋಗತಕ್ಕದ್ದೆಂದು ತೀರ್ಮಾನಿಸಿದರು.

ಆ ಕಿಂಡಿಯ ಬಳಿ ಕಾವಲುಗಾರನ ಬುರುಜು ಮತ್ತು ಒಂದು ಕೊಳ ಇದ್ದುವು. ಬುರುಜಿನಲ್ಲಿ ಕಾವಲಿರುತ್ತಿದ್ದವನು ಊಟಕ್ಕೆ ಮನೆಗೆ ಹೋಗಿದ್ದ. ಆತನ ಪತ್ನಿ ಓಬವ್ವ ನೀರು ತರಲೆಂದು ಕೊಳಕ್ಕೆ ಬಂದಳು. ಕಿಂಡಿಯ ಬಳಿ ಪಿಸುಮಾತು ಕೇಳಿಸಿತು. ಕುತೂಹಲದಿಂದ ಆಲಿಸಿದಳು. ವೈರಿಗಳ ಸಂಚು ಆಕೆಗೆ ತಿಳಿದುಹೋಯಿತು. ಮನೆಗೆ ಓಡಿಹೋಗಿ, ಊಟ ಮಾಡುತ್ತಿದ್ದ ಪತಿಗೆ ಏನೂ ಹೇಳದೆ, ಒಂದು ಒನಕೆಯನ್ನು ತೆಗೆದುಕೊಂಡು ಬಂದು ಕಿಂಡಿಯ ಹತ್ತಿರ ನಿಂತಳು. ವೈರಿಗಳು ಒಬ್ಬೊಬ್ಬರಾಗಿ ಕಿಂಡಿಯಿಂದ ಹೊರಕ್ಕೆ ತಲೆ ಇಡುತ್ತಿದ್ದಂತೆಯೇ ಆಕೆ ಒನಕೆಯಿಂದ ಅವರನ್ನು ಬಡಿದು ಎಳೆದು ಹಾಕಿದಳು.

ಅವಳನ್ನು ಹುಡುಕಿಕೊಂಡು ಬಂದ ಪತಿ ಎಚ್ಚರಿಕೆಯ ಕಹಳೆ ಊದಿದ. ದುರ್ಗದ ಸೈನಿಕರು ಬಂದು ವೈರಿಗಳನ್ನು ಎದುರಿಸಿದರು. ಹೈದರನ ಕಡೆಯವರು ಹಿಮ್ಮೆಟ್ಟಬೇಕಾಯಿತು. ಹೋರಾಟದ ಮಧ್ಯದಲ್ಲಿ ಓಬವ್ವ ವೈರಿಗಳ ಏಟಿನಿಂದ ಮೃತಳಾದಳು. ದುರ್ಗವನ್ನು ವಿಪತ್ತಿನಿಂದ ಪಾರುಮಾಡಿದ ಓಬವ್ವನ ಮರಣಕ್ಕಾಗಿ ಜನ ಮರುಗಿದರು. ಆ ಕಿಂಡಿಗೆ 'ಒನಕೆ ಕಿಂಡಿ' ಎಂಬ ಹೆಸರು ಉಳಿಯಿತು.

ನೋಡಿ : ಮದಕರಿನಾಯಕ

ಔರಂಗಜೇಬ್

"... ಹಸನ್ಮುಖಿಯಾಗಿ, ಸುಂದರ ಸ್ವಹಸ್ತಾಕ್ಷರದಲ್ಲಿ ಅರ್ಜಿಗಳ ಮೇಲೆ ತೀರ್ಮಾನ ಬರೆಯುತ್ತ, ಆ ಕೆಲಸದಲ್ಲಿ ಪೂರ್ಣ ತೃಪ್ತಿಯಿಂದ ತಲ್ಲೀನನಾಗಿದ್ದ ಅವನನ್ನು ಕಂಡು ಸಂತೋಷವಾಯಿತು..."

—ಇದು ಔರಂಗಜೇಬನ ಬಗೆಗೆ ಇಟಲಿಯಿಂದ ಬಂದ ಪ್ರವಾಸಿ ಗ್ಯಾಮೆಲಿ ಕ್ಯಾರೆರಿಯ ವರ್ಣನೆ.

ವಿದ್ವಾಂಸನೂ ಕಟ್ಟುನಿಟ್ಟಿನ ನಡತೆಯವನೂ ಆದ ಔರಂಗಜೇಬನ ದಕ್ಷತೆ ಅಸಾಮಾನ್ಯವಾದದ್ದು. ಆದರೆ ಮತಾಂಧ, ಮೊಂಡ, ಅರಸಿಕ, ದಯಾಹೀನ ಎಂದೂ ಮೊಘಲ್ ಸಾಮ್ರಾಜ್ಯದ ಅವನತಿಗೆ ಕಾರಣನಾದನೆಂದೂ ಇವನು ಕುಖ್ಯಾತ.

ಮೊಘಲ್ ಸಂತತಿಯ ಐದನೆಯ ಚಕ್ರವರ್ತಿ ಷಾಜಹಾನನ ನಾಲ್ವರು ಗಂಡು ಮಕ್ಕಳಲ್ಲಿ ಮೂರನೆಯವನು ಔರಂಗಜೇಬ್. 1618ರಲ್ಲಿ ಈತನ ಜನನ.

ತಂದೆ 1647ರಲ್ಲಿ ಕಾಯಿಲೆ ಬೀಳುವ ಮೊದಲು ಇವನು ದಖ್ಖಿಣ, ಗುಜರಾತ್, ಮುಲ್ತಾನ್ ಮೊದಲಾದ ಪ್ರದೇಶಗಳಲ್ಲಿ ಆಡಳಿತದ ಹೊಣೆ ನಿರ್ವಹಿಸಿದ್ದ. ಷಾಜಹಾನ್ ಅಸ್ವಸ್ಥನಾದಾಗ ಸಿಂಹಾಸನಕ್ಕಾಗಿ ಮಕ್ಕಳಲ್ಲಿ ಕಾದಾಟ ನಡೆಯಿತು. ಔರಂಗಜೇಬ್ ಕುಟಿಲೋಪಾಯದಿಂದ ನಿರ್ದಾಕ್ಷಿಣ್ಯವಾಗಿ ಎಲ್ಲ ಸ್ಪರ್ಧಿಗಳನ್ನು ನಿರ್ನಾಮ ಮಾಡಿ ಅಧಿಕಾರ ವಶಪಡಿಸಿಕೊಂಡ. ಹಿರಿಯ ಅಣ್ಣ ದಾರಾ ಷುಕೋನನ್ನು ಕೊಲ್ಲಿಸಿದ್ದ; ಷಾಜಹಾನನ್ನು ಆಮರಣಾಂತ ನಿರ್ಬಂಧಕ್ಕೊಳಪಡಿಸಿದ.



'ಒಂಟಿ' ಪ್ರವಾಸ : ಔರಂಗಜೇಬ್

1658ರಲ್ಲಿ ದೊಡ್ಡ ದರ್ಬಾರು ನಡೆಸಿ 'ಆಲಂಗೀರ್' —ವಿಶ್ವವಿಜೇತ— ಎಂಬ ಬಿರುದನ್ನು ಧರಿಸಿಕೊಂಡ.

ಔರಂಗಜೇಬ್ ತನ್ನ ಆಳ್ವಿಕೆಯ ಮೊದಲ ಎರಡು ದಶಕಗಳಲ್ಲಿ ಹೆಚ್ಚು ಕಾಲ ಉತ್ತರ ಭಾರತದಲ್ಲಿ ಸಾಮ್ರಾಜ್ಯ ವಿಸ್ತರಿಸುವುದರಲ್ಲೂ ತನ್ನ ಅಧಿಕಾರವನ್ನು ಭದ್ರಪಡಿಸುವುದರಲ್ಲೂ ತೊಡಗಿದ್ದ. ಅನಂತರ ದಕ್ಷಿಣದಲ್ಲೂ ದಂಡಯಾತ್ರೆ ನಡೆಸಿದ. ಮರಾಠರ ಆಡಳಿತಕ್ಕೊಳಪಟ್ಟಿದ್ದ ಭಾಗಗಳನ್ನು ಬಿಟ್ಟು ವಾಯುವ್ಯ ಪ್ರಾಂತ್ಯದಿಂದ ತಂಜಾವೂರು, ತಿರುಚಿರಪಳ್ಳಿಗಳ ತನಕ ಭಾರತದ ವಿಶಾಲ ಭಾಗ ಇವನಿಗೆ ಅಧೀನವಾಗಿತ್ತು.

ಔರಂಗಜೇಬನ ವೈಯಕ್ತಿಕ ಧಾರ್ಮಿಕ ನಂಬಿಕೆ, ಆಡಳಿತ ಧೋರಣೆಗಳಿಂದ, ಸಾಮ್ರಾಜ್ಯದ ವಿವಿಧ ಜನವರ್ಗಗಳ ನಡುವೆ ಸಾಮರಸ್ಯ ತಪ್ಪಿತು. ಸಂಶಯ ಪ್ರವೃತ್ತಿಯ ಆತನಿಗೆ ತನ್ನ ಅಧಿಕಾರಿಗಳ ಮೇಲೆಯೇ ಅಪನಂಬಿಕೆ. ಅಲ್ಲದೆ ದೀರ್ಘಕಾಲದ ಯುದ್ಧದಿಂದಾಗಿ, ಸರಕಾರದ ಸಂಪನ್ಮೂಲಗಳು ಬತ್ತಿಹೋದುವು. ಸೈನ್ಯವ್ಯವಸ್ಥೆ ಹದಗೆಟ್ಟಿತು. ಕ್ರಮೇಣ ಈ ಎಲ್ಲ ಭಾಗದ ಮೇಲೆ ಹತೋಟಿ ಇಟ್ಟುಕೊಳ್ಳುವುದೇ ಅಸಾಧ್ಯವಾಯಿತು.

ಔರಂಗಜೇಬ್ ಮೊದಲಿಗೆ ಹಿಂದೂ ವಿರೋಧಿ ಆಗಿರಲಿಲ್ಲ; ಕ್ರಮೇಣ ಮತಬೋಧಕರ ಕೈಗೊಂಬೆಯಾಗಿ ಆತ ಹಿಂದುಗಳಿಗೆ ಕೆಡುಕು ಮಾಡಿದ —ಎಂಬ ಅಭಿಪ್ರಾಯವಿದೆ. ಮುಹಮ್ಮದೀಯರಲ್ಲದವರ ಮೇಲಿನ 'ಜೆಜಿಯಾ' ತಲೆಗಂದಾಯವನ್ನು ಅಕ್ಬರ್ ರದ್ದುಪಡಿಸಿದ್ದ; ಔರಂಗಜೇಬ್ ಅದನ್ನು ಪುನಃ ಜಾರಿಗೆ ತಂದ.

ಔರಂಗಜೇಬನ ಕೊನೆಗಾಲದಲ್ಲಿ ಮರಾಠರು, ರಜಪೂತರು, ಸಿಕ್ಖರು, ಜಾಟರು ಬಂಡಾಯ ನಡೆಸಿದರು. ಸಾಮ್ರಾಜ್ಯದ ಪತನವನ್ನು ಕಾಣುತ್ತ 1707ರಲ್ಲಿ, ತನ್ನ 89ನೆಯ ವಯಸ್ಸಿನಲ್ಲಿ, ಆತ ನಿಧನನಾದ.

ಉತ್ತರಾಧಿಕಾರಕ್ಕಾಗಿ ಪರಸ್ಪರ ದ್ವೇಷ ಸಾಧಿಸುತ್ತಿದ್ದ ತನ್ನ ಮಕ್ಕಳಲ್ಲೊಬ್ಬನಾದ ಅಜಂನಿಗೆ ಔರಂಗಜೇಬ್ ಕೊನೆಗಾಲದಲ್ಲಿ ಬರೆದ ಪತ್ರದಲ್ಲಿ, "ನಾನು ಒಂಟಿಯಾಗಿ ಬಂದೆ; ಹಾಗೆಯೇ ತೆರಳುತ್ತಿದ್ದೇನೆ. ದೇಶಕ್ಕಾಗಲೀ ಜನತೆಗಾಗಲೀ ಒಳಿತನ್ನೇನೂ ಮಾಡಿಲ್ಲ. ಭವಿಷ್ಯದ ಬಗೆಗೆ ನನ್ನಲ್ಲಿ ಭರವಸೆ ಉಳಿದಿಲ್ಲ" ಎಂದಿದ್ದಾನೆ.

ನೋಡಿ : ದಾರಾ ಷುಕೋ ; ಷಾಜಹಾನ್

ಕಂಚಿ

ಗೌರಿಯೊಡನೆ ಶಿವ ಪಗಡೆ ಆಡುತ್ತಿದ್ದಾಗ ಅವರಿಬ್ಬರ ನಡುವೆ ಮನಸ್ತಾಪ ಉಂಟಾಯಿತು. ತನ್ನನ್ನು ನಿಂದಿಸಿದ ಗೌರಿಗೆ, ಕುರೂಪಿಯಾಗೆಂದು ಶಿವ ಶಾಪವಿತ್ತ. ಆದರೆ ವಿಷ್ಣುವಿನ ಅನುಗ್ರಹದಿಂದ ಗೌರಿ ಸುಂದರ ಕಣ್ಣುಗಳುಳ್ಳ ರೂಪವತಿಯಾದ ಕಾಮಾಕ್ಷಿಯಾದಳು. ಕಂಚಿಯಲ್ಲಿ ಒಂಟಿ ಮಾವಿನ ಮರದ ಕೆಳಗೆ ಶಿವನನ್ನು ಆರಾಧಿಸಲಾರಂಭಿಸಿದಳು. ಅವಳನ್ನು ಪರೀಕ್ಷಿಸಲು ಶಿವ ಗಂಗೆಯನ್ನು ಹರಿಯಬಿಟ್ಟ. ನುಗ್ಗಿಬರುತ್ತಿದ್ದ ಪ್ರವಾಹವನ್ನು ಕಂಡು ಗೌರಿ, ತಾನು ಪೂಜಿಸುತ್ತಿದ್ದ ಶಿವ ಲಿಂಗಕ್ಕೆ ಭಕ್ತಿಯಿಂದ ಅತುಕೊಂಡಳು. ಶಿವನಿಗೆ ಸಂತೋಷವಾಯಿತು. ಶಿವ ಒಂಟಿ ಮಾವಿನ ಮರದ ಕೆಳಗೆ ಅವಳಿಗೆ ದರ್ಶನಕೊಟ್ಟು ಅಲ್ಲೇ ಇರಲು ಒಪ್ಪಿಕೊಂಡ. ಈ ಕಾರಣದಿಂದ ಅವನಿಗೆ ಏಕಾಮ್ರನಾಥ —ಒಂಟಿ ಮಾವಿನ ಒಡೆಯ —ಎಂಬ ಹೆಸರು ಬಂತು.

ಕಂಚಿಯಲ್ಲಿರುವ ಏಕಾಮ್ರನಾಥನನ್ನು (ಏಕಾಮ್ರೇಶ್ವರ) ಕುರಿತ ಈ ಕಥೆ ಬ್ರಹ್ಮಾಂಡ ಪುರಾಣದಲ್ಲಿದೆ. ಕಂಚಿ ಮತ್ತು ಕಾಶಿ ಶಿವನ ಎರಡು ಕಣ್ಣುಗಳಂತಿವೆ ಎನ್ನುತ್ತದೆ ಬ್ರಹ್ಮಾಂಡ ಪುರಾಣ. ಕಂಚಿಗೆ ಕಾಂಚೀಪುರ, ಕಾಂಜೀವರಂ ಎಂಬ ಹೆಸರುಗಳೂ ಇವೆ.

ಕಂಚಿ ತಮಿಳುನಾಡಿನ ಚೆಂಗಲ್‌ಪಟ್ ಜಿಲ್ಲೆಗೆ ಸೇರಿದೆ. ಇದು ಪುರಾತನ ನಗರ. ಬೌದ್ಧ. ಜೈನ. ಶೈವ, ವೈಷ್ಣವ ಧರ್ಮಗಳು ಇಲ್ಲಿ ಬೆಳೆದುವು. 9ನೆಯ ಶತಮಾನದ ಮಧ್ಯಭಾಗದ ವರೆಗೆ ಇದು ಪಲ್ಲವರ ರಾಜಧಾನಿಯಾಗಿತ್ತು. ಸುಮಾರು 300 ವರ್ಷ ಕಾಲ ಚೋಳರು ಇಲ್ಲಿ ಆಳಿದರು.



ಕಂಚಿಯ ವರದರಾಜ ದೇವಾಲಯದಲ್ಲಿ ಕೆತ್ತನೆ ಕೆಲಸ

ಕೆಲ ಕಾಲ ಮುಸಲ್ಮಾನರ ಆಳ್ವಿಕೆಯಲ್ಲಿದ್ದು 14ನೆಯ ಶತಮಾನದಲ್ಲಿ ಇದು ವಿಜಯನಗರ ಸಾಮ್ರಾಜ್ಯಕ್ಕೆ ಸೇರಿತು. 1753ರಲ್ಲಿ ರಾಬರ್ಟ್ ಕ್ಲೈವ್ ಕಂಚಿಯನ್ನು ವಶಪಡಿಸಿಕೊಂಡ.



ಏಕಾಮ್ರೇಶ್ವರ ದೇವಾಲಯ

ಏಕಾಮ್ರೇಶ್ವರ ದೇವಾಲಯದ ಗೋಪುರ 188 ಅಡಿ ಎತ್ತರ. ಇದರ ಪಕ್ಕದಲ್ಲಿ ಕಾಮಾಕ್ಷಿ ದೇವಾಲಯವಿದೆ. ಶಂಕರಾಚಾರ್ಯರು ಇಲ್ಲಿರುವ ದೇವೀಯಂತ್ರವನ್ನು ಸ್ಥಾಪಿಸಿ, ಉಗ್ರ ರೂಪಿಯಾಗಿದ್ದ ದೇವಿಯನ್ನು ಶಾಂತ ಸ್ವರೂಪಳಾಗಿ ಮಾಡಿದರು —ಎನ್ನುತ್ತಾರೆ. ಈ ದೇವಸ್ಥಾನದಲ್ಲಿ ಶಂಕರಾಚಾರ್ಯರ ಮೂರ್ತಿ ಇದೆ. ಕಂಚಿಯ ಕೈಲಾಸನಾಥ ದೇವಸ್ಥಾನವನ್ನು ಪಲ್ಲವ ಅರಸು ರಾಜಸಿಂಹ 670ರಲ್ಲಿ ಕಟ್ಟಿಸಿದ. ವೈಕುಂಠ ಪೆರುಮಾಳ್ ದೇವಾಲಯವನ್ನು ಪಲ್ಲವರ ನಂದಿವರ್ಮಮಲ್ಲ 755-790ರಲ್ಲಿ ನಿರ್ಮಿಸಿದ. ಈ ಎರಡೂ ದೇವಾಲಯಗಳು ಪಲ್ಲವ ಶೈಲಿ ವಾಸ್ತುಶಿಲ್ಪಕ್ಕೆ ಒಳ್ಳೆಯ ಉದಾಹರಣೆಗಳು. ರಾಮಾನುಜಾಚಾರ್ಯರು ಸೇವೆ ಸಲ್ಲಿಸಿದ ವರದರಾಜಸ್ವಾಮಿ ದೇವಾಲಯ 1,200 ಅಡಿ ಉದ್ದ, 800 ಅಡಿ ಅಗಲ. 100 ಕಂಬಗಳಿರುವ ಮಂಟಪವಿದೆ.

ಕಂಚಿನಗರದಲ್ಲಿ ಎರಡು ಭಾಗಗಳಿವೆ: ಶಿವಕಂಚಿ ಅಥವಾ ದೊಡ್ಡ ಕಂಚಿ : ವಿಷ್ಣು ಕಂಚಿ ಅಥವಾ ಚಿಕ್ಕ ಕಂಚಿ. ಈ ಪ್ರದೇಶದಲ್ಲಿರುವ ಶಾಸನಗಳು ದಕ್ಷಿಣ ಭಾರತದ ಹಿಂದಿನ ಇತಿಹಾಸದ ಮೇಲೆ ಬೆಳಕು ಚೆಲ್ಲಿವೆ.

ಬುದ್ಧ ಕಂಚಿಗೆ ಬಂದಿದ್ದ ಎಂದು ಹ್ಯೂಯೆನ್ ತ್ಸಾಂಗ್ ಬರೆದಿದ್ದಾನೆ. ಅಶೋಕ ಅನೇಕ ಸ್ತೂಪಗಳನ್ನು ಇಲ್ಲಿ ಕಟ್ಟಿಸಿದನೆಂದೂ ಕಂಚಿ ಧರ್ಮಪಾಲ ಬೋಧಿಸತ್ತ್ವನ ಜನ್ಮಸ್ಥಳವೆಂದೂ ಆತ ತಿಳಿಸಿದ್ದಾನೆ.

ರೇಷ್ಮೆ ಸೀರೆಗಳಿಗೆ ಕಂಚಿ ಪ್ರಸಿದ್ಧವಾಗಿದೆ.

ಕಂಬ

ಶ್ರೀರಾಮನ ಅಯೋಧ್ಯೆಯಲ್ಲಿ ಶ್ರೀಮಂತರೇ ಇರಲಿಲ್ಲ. ಏಕೆಂದರೆ, ಅಲ್ಲಿ ಬಡವರೇ ಇರದಿದ್ದ ಕಾರಣ ಶ್ರೀಮಂತರು ಇಂಥವರು ಎಂದು ಗುರುತಿಸುವಂತಿರಲಿಲ್ಲ. ಅಲ್ಲಿ ಎಲ್ಲರೂ ಸರಿಸಮಾನರೇ!

—ಇಂಥ ಚತುರೋಕ್ತಿಗಳಿಂದ ಕೂಡಿದ ಮಹಾಕಾವ್ಯ ಕಂಬ ರಾಮಾಯಣ : ಸಂಸ್ಕೃತದಲ್ಲಿ ವಾಲ್ಮೀಕಿ ರಾಮಾಯಣ ಹೇಗೋ ಹಾಗೆ ತಮಿಳಿನಲ್ಲಿ ಇದು ಪ್ರಖ್ಯಾತ. ಇದರ ಕವಿ ಕಂಬ (ಕಂಬನ್, ಕಂಬರ್).

ಚೋಳರಾಜ್ಯದ ತಿರುವಲಂದೂರು ಎಂಬಲ್ಲಿ ಕಂಬ ಅವರ ಜನನ. ಕಾಲ ಸುಮಾರು 12ನೆಯ ಶತಮಾನ. ಕೆಲವರ ಪ್ರಕಾರ 9ನೆಯ ಶತಮಾನ.

ಬಾಲ್ಯದಲ್ಲೇ ತಂದೆ ತಾಯಿಯರನ್ನು ಕಳೆದುಕೊಂಡ ಕಂಬರನ್ನು ಶ್ರೀಮಂತ ರೈತರಾಗಿದ್ದ ಸಡೆಯಪ್ಪ ವಲ್ಲಲ ಎಂಬವರು ಸಾಕಿದರು. ಚಿಕ್ಕಂದಿನಲ್ಲೇ ಕಂಬರು ಕವಿತೆ ರಚಿಸಿ ತೋರಿದ ಪ್ರತಿಭೆಯಿಂದಾಗಿ ವಲ್ಲಲರು ಅವರನ್ನು ಅಪಾರ ವಿಶ್ವಾಸ ಗೌರವಗಳಿಂದ ಕಾಣುತ್ತಿದ್ದರು. ವಲ್ಲಲರು ದಕ್ಷಿಣದ ಚೋಳರಾಜನ ಬಳಿಗೆ ಆಗಾಗ ಹೋಗುತ್ತಿದ್ದರು. ಕಂಬರನ್ನೂ ಆ ರಾಜನ ಆಸ್ಥಾನಕ್ಕೆ ಒಮ್ಮೆ ಕರೆದೊಯ್ದರು. ಕಂಬರ ಪ್ರತಿಭೆ ಅವರಿಗೆ ಆಸ್ಥಾನ ಕವಿಯ ಸ್ಥಾನವನ್ನು ದೊರಕಿಸಿಕೊಟ್ಟಿತು.

ಚೋಳ ರಾಜ ಹಾಗೂ ವಲ್ಲಲರ ಪ್ರೋತ್ಸಾಹದಿಂದ ಕಂಬರು ವಾಲ್ಮೀಕಿ ರಾಮಾಯಣದ ಕಥೆಯ ರೂಪುರೇಷೆಗಳನ್ನಿಟ್ಟುಕೊಂಡು ತಮ್ಮದೇ ಆದ ದೃಷ್ಟಿಯಿಂದ ತಮಿಳಿನಲ್ಲಿ ರಾಮಾಯಣ ರಚಿಸತೊಡಗಿದರು. ತಮಿಳು ನಾಡಿನ ಸಂಸ್ಕೃತಿ, ಸಂಪ್ರದಾಯ, ನಂಬಿಕೆ, ರೀತಿ-ನೀತಿಗಳ ಹಿನ್ನೆಲೆಯನ್ನೊಳಗೊಂಡು ಈ ರಾಮಾಯಣ ರಚಿತವಾಯಿತು. ಮೂಲ ರಾಮಾಯಣದ ನಿಷಾದ, ಗುಹ ಮೊದಲಾದವರ ಪಾತ್ರಗಳು ಇಲ್ಲಿ ವಿಶಿಷ್ಟ ರೂಪು ತಳೆದು ನಿಂತಿವೆ.

ಕಂಬರು ಇನ್ನೂ ಹಲವಾರು ಕೃತಿಗಳನ್ನು ರಚಿಸಿದ್ದಾರೆಂದು ಪ್ರತೀತಿ. 'ಸರಸ್ವತೀ ಅಂದಾದಿ,' 'ಶಠಗೋಪ ಅಂದಾದಿ,' 'ಏರ ಎಳುಪತ್', 'ಶಿಲೈ ಎಳುಪತ್' ಮೊದಲಾದುವು ಕಂಬರ ಇತರ ಪ್ರಮುಖ ಕೃತಿಗಳು.

ತಮ್ಮನ್ನು ಸಾಕಿ ಸಲುಹಿದ ವಲ್ಲಲ, ಪ್ರೋತ್ಸಾಹಿಸಿ ಗೌರವಿಸಿದ ಚೋಳ ರಾಜರ ಬಗೆಗೆ ಕಂಬರಿಗೆ ಅಪಾರ ಕೃತಜ್ಞತೆ. ಕೊನೆಯ ಘಳಿಗೆಯಲ್ಲಿ ಅವರು ವಲ್ಲಲರನ್ನೇ ನೆನೆಯುತ್ತ ಇದ್ದರು.

ಸಂಸ್ಕೃತದ ವಾಲ್ಮೀಕಿ ರಾಮಾಯಣ, ಹಿಂದಿಯ ತುಳಸೀ ರಾಮಾಯಣ, ಬಂಗಾಳಿಯ ಕೃತ್ತಿವಾಸ ರಾಮಾಯಣಗಳಂತೆ ತಮಿಳಿನ ಕಂಬ ರಾಮಾಯಣವೂ ಭಾರತದ ಜನಪ್ರಿಯ ಕಾವ್ಯವೆನಿಸಿದೆ.

ನೋಡಿ : ತಮಿಳು ಭಾಷೆ, ಸಾಹಿತ್ಯ

ಕರ್ಜನ್

ಭಾರತದಲ್ಲಿ ಪುರಾತತ್ತ್ವ ಸಂಶೋಧನೆಗೂ ಪುರಾತನ ಕಟ್ಟಡಗಳ ಪ್ರಾಚೀನ ನಿವೇಶನಗಳ ರಕ್ಷಣೆಗೂ ಭದ್ರ ತಳಹದಿ ಹಾಕಿದವನು ಲಾರ್ಡ್ ಕರ್ಜನ್. ಭಾರತದ ಸಾಂಸ್ಕೃತಿಕ, ಆಡಳಿತ ಕ್ಷೇತ್ರಗಳಲ್ಲೂ ವ್ಯವಸಾಯ, ನೀರಾವರಿ ರಂಗಗಳಲ್ಲೂ ಅಭಿವೃದ್ಧಿ ಸಾಧಿಸಿದ ಗಣ್ಯ ವ್ಯಕ್ತಿ ಆತ.

ಇಂಗ್ಲೆಂಡಿನ ಡರ್ಬಿಷೈರ್‌ನಲ್ಲಿ 1859 ಜನವರಿ 11ರಂದು ಜನಿಸಿದ ಕರ್ಜನ್ ಈಟನ್, ಆಕ್ಸ್‌ಫರ್ಡ್‌ಗಳಲ್ಲಿ ವಿದ್ಯಾಭ್ಯಾಸ ಮಾಡಿದ. ಈ ಸಮಯದಲ್ಲಿ ಅಂಟಿದ ಬೆನ್ನುರೋಗ ಬಾಳಿನುದ್ದಕ್ಕೂ ಅವನನ್ನು ಕಾಡಿತು.

1886ರಲ್ಲಿ ಕರ್ಜನ್ ಬ್ರಿಟನಿನ ಸಂಸತ್ ಸದಸ್ಯನಾದ. ಐದು ವರ್ಷಗಳ ಅನಂತರ ಭಾರತಕ್ಕೆ ಸಂಬಂಧಿಸಿದ ಶಾಖೆಯ ಅಧೀನ ಕಾರ್ಯದರ್ಶಿಯಾದ. 1898ರಲ್ಲಿ ಭಾರತದ ವೈಸ್‌ರಾಯ್ ಆಗಿ ನೇಮಕಗೊಂಡ.

ಭಾರತದ ಪ್ರಾಚೀನ ಸ್ಮಾರಕಗಳ ರಕ್ಷಣೆ ಕರ್ಜನನ ಮಹತ್ವದ ಸಾಧನೆ. ಪುರಾತನ ಅರಮನೆಗಳಲ್ಲಿ ಕಟ್ಟಡಗಳಲ್ಲಿ ತಮ್ಮ ಕಚೇರಿಗಳನ್ನು ಸ್ಥಾಪಿಸಿದ್ದ



ಚಿತ್ರ : ಕರ್ಜನ್

ಬ್ರಿಟಿಷ್ ಅಧಿಕಾರಿಗಳನ್ನು ಅಲ್ಲಿಂದ ಎಬ್ಬಿಸಿದಾಗ, ಕರ್ಜನ್ ತನ್ನವರದೇ ನಿರ್ಧಾರಗಳನ್ನು ವಿರೋಧಿಸಬೇಕಾಯಿತು.

ಭಾರತದ ರೈಲ್ವೆ, ನೀರಾವರಿ ಕ್ಷೇತ್ರಗಳಲ್ಲೂ ಕರ್ಜನ್ ತುಂಬ ಚಟುವಟಿಕೆಯಿಂದ ಕೆಲಸಮಾಡಿದ. ನೇಪಾಳದ ಅನುಮತಿ ಪಡೆದು ಹಿಮಾಲಯ ಪರ್ವತಾರೋಹಣಕ್ಕೆ ಪ್ರೋತ್ಸಾಹವಿತ್ತ.

1905ರಲ್ಲಿ ಕೆಲವು ವಿವಾದಗಳಿಂದಾಗಿ ಕರ್ಜನ್ ಇಂಗ್ಲೆಂಡಿಗೆ ಹಿಂತಿರುಗಿದ. ಅಲ್ಲಿಯ ರಾಜಕೀಯದಲ್ಲಿ ಸಕ್ರಿಯ ಪಾತ್ರವಹಿಸಿದ.

ಅವನ ಕೆಲವು ಧೋರಣೆಗಳು ಭಾರತದ ರಾಷ್ಟ್ರೀಯವಾದಿಗಳನ್ನು ಕೆರಳಿಸಿದುವು. ವಿಶ್ವವಿದ್ಯಾನಿಲಯ ಶಿಕ್ಷಣ ಆಯೋಗದಲ್ಲಿ ಭಾರತೀಯರಿಗೆ ಸ್ಥಾನ ಕೊಡದೆ ಇದ್ದುದು, ಬಂಗಾಳವನ್ನು ವಿಭಜಿಸುವ ಕ್ರಮಕ್ಕೆ ಕೈ ಇಟ್ಟುದು, ಕಾಂಗ್ರೆಸ್ಸಿನ ಬಗೆಗೆ ತಿರಸ್ಕಾರದ ದೃಷ್ಟಿ —ಇವು ಟೀಕೆಗೆ ಒಳಗಾದುವು.

ಜೀವನದಲ್ಲಿ ಅನೇಕ ಸಾಧನೆಗಳನ್ನು ಕೈಗೂಡಿಸಿಕೊಂಡರೂ ಕರ್ಜನ್ ಅಷ್ಟರಿಂದ ತೃಪ್ತಿಪಡೆದವನಲ್ಲ.

1925 ಮಾರ್ಚ್ 20ರಂದು ಅವನು ನಿಧನನಾದ.

ಕಠೋಪನಿಷತ್

ಕೃಷ್ಣ ಯಜುರ್ವೇದದ ಕಾಠಕ ಶಾಖೆಯಲ್ಲಿ ಈ ಉಪನಿಷತ್ ಬಂದಿರುವುದರಿಂದ ಕಠೋಪನಿಷತ್ ಅಥವಾ ಕಾಠಕೋಪನಿಷತ್ ಎನಿಸಿಕೊಂಡಿದೆ. ಇದರಲ್ಲಿ ಎರಡು ಅಧ್ಯಾಯಗಳಿವೆ.

ನಚಿಕೇತನೆಂಬ ಬ್ರಹ್ಮಚಾರಿಗೆ ಯಮ ನೀಡುವ ಉಪದೇಶದ ರೂಪದಲ್ಲಿದೆ, ಕಠೋಪನಿಷತ್. ವಿಶ್ವಜಿತ್ ಯಜ್ಞ ಮಾಡುತ್ತಿದ್ದಾಗ ತಂದೆ ವಾಜಶ್ರವಸ್ ಮಗ ನಚಿಕೇತನ ಮಾತಿಗೆ ಕೋಪಗೊಂಡು, "ನಿನ್ನನ್ನು ಯಮನಿಗೆ ಕೊಟ್ಟಿದ್ದೇನೆ," ಎಂದ. ನಚಿಕೇತ ಯಮಲೋಕಕ್ಕೆ ಹೋಗಿ ಯಮನನ್ನು ನಿರೀಕ್ಷಿಸುತ್ತ ಮೂರು ದಿನ ನಿರಾಹಾರಿಯಾಗಿ ಕುಳಿತ. ತನ್ನ ಲೋಕಕ್ಕೆ ಮರಳಿದ ಯಮ ವಂದ್ಯನಾದ ಅತಿಥಿಗೆ ತನ್ನಿಂದಾದ ತೊಂದರೆಗೆ ಕ್ಷಮೆಕೋರಿದ; ಮೂರು ವರಗಳನ್ನು ಕೊಡುವುದಾಗಿ ನುಡಿದ. ತಾನು ಹಿಂದಿರುಗಿ ಹೋದಾಗ ತಂದೆ ಕೋಪ ಬಿಟ್ಟು ತನ್ನನ್ನು ಗುರುತಿಸಬೇಕು ಎಂಬುದು ನಚಿಕೇತ ಕೇಳಿದ ಮೊದಲನೆಯ ವರ. ಎರಡನೆಯ ವರ ಸ್ವರ್ಗಕ್ಕೆ ಸಾಧನವಾದ ಅಗ್ನಿವಿದ್ಯೆ. ಮೂರನೆಯ ವರ ಆತ್ಮತತ್ತ್ವದ ಜ್ಞಾನದ ಉಪದೇಶ. ಮೊದಲಿನ ಎರಡು ವರಗಳನ್ನು ಯಮ ನೀಡಿದ. ಮೂರನೆಯದರ ಬದಲಾಗಿ ದೀರ್ಘಾಯುಸ್ಸು, ಅತುಳೈಶ್ವರ್ಯವೇ ಮೊದಲಾದುವನ್ನು ಕೊಡಲು ಮುಂದೆ ಬಂದ. ಆದರೆ ನಚಿಕೇತ ಒಪ್ಪಲಿಲ್ಲ. ಕೊನೆಗೆ ಯಮ ಬ್ರಹ್ಮಜ್ಞಾನವನ್ನು ವಿವರವಾಗಿ ತಿಳಿಯಹೇಳಿದ.

ಇಂದ್ರಿಯಗಳನ್ನು ಹೊರಗಿನ ಪ್ರಪಂಚದಿಂದ ಬಿಡಿಸಿ, ತನ್ನ ವಶದಲ್ಲಿಟ್ಟುಕೊಂಡು ಅಂತರ್ಮುಖಿಯಾದಾಗ ಆತ್ಮಜ್ಞಾನ ಲಭಿಸುತ್ತದೆ; ಶೋಕ ನಿವಾರಣೆಯಾಗುತ್ತದೆ; ಸ್ಥಿರವಾದ ಇಂದ್ರಿಯ ಧಾರಣೆಯೇ ಯೋಗ – ಎಂಬುದು ಈ ಉಪನಿಷತ್ತಿನ ಸಂದೇಶ.

ಕರ್ಣ

ಬಹಳ ಉದಾರಿಯಾದವನನ್ನು 'ದಾನಶೂರ ಕರ್ಣ' ಎನ್ನುತ್ತಾರೆ. ಏನನ್ನೇ ಆಗಲಿ, ವಚನವಿತ್ತ ಅನಂತರ ಕೊಟ್ಟೇ ತೀರಬೇಕೆಂಬುದು ಕರ್ಣನ ಆದರ್ಶ.

ಕರ್ಣ ಕುಂತಿಯ ಮೊದಲನೆಯ ಮಗ ಎಂಬುದು, ಅವನು ಬದುಕಿದ್ದಾಗ ಕೆಲವರಿಗೆ ಮಾತ್ರ ತಿಳಿದಿದ್ದ ವಿಷಯ. ಕುಂತಿ ಒಂದು ಮಂತ್ರೋಚ್ಚಾರಣೆಯಿಂದ ಸೂರ್ಯನ ಅನುಗ್ರಹ ಪಡೆದು ಕರ್ಣನನ್ನು ಹೆತ್ತಳು. ಆಗ ತಾನಿನ್ನೂ ಅವಿವಾಹಿತಳಾಗಿದ್ದುದರಿಂದ, ಅಪವಾದಕ್ಕೆ ಹೆದರಿ ಮಗುವನ್ನು ಒಂದು ಪೆಟ್ಟಿಗೆಯಲ್ಲಿಟ್ಟು ನದಿಯಲ್ಲಿ ತೇಲಿಬಿಟ್ಟಳು. ಅದು ಅತಿರಥನೆಂಬ ಸೂತನಿಗೆ ಸಿಕ್ಕಿತು. ಮಕ್ಕಳಿಲ್ಲದ ಅವನೂ ಅವನ ಪತ್ನಿ ರಾಧೆಯೂ ಮಗುವನ್ನು ಪ್ರೀತಿಯಿಂದ ಬೆಳೆಸಿದರು. ಇದರಿಂದಾಗಿ ಜನ ಅವನನ್ನು ಸೂತಪುತ್ರ, ರಾಧೇಯ ಎಂದು ಕರೆದರು. ಕರ್ಣನೆಂಬುದು ಅವನ



ದಾನಶೂರ ಕರ್ಣ

[illegible] ಸೂತಪುತ್ರನಾದ ಅವನಿಗೆ ಯಾರೂ ಬಿಲ್ಲುವಿದ್ಯೆ ಹೇಳಿ ಕೊಡಲು [illegible] ಈ ಗುಟ್ಟು ಬಯಲಾದಾಗ, "ಬೇಕಾದಾಗ ಯುದ್ಧಕಾಲದಲ್ಲಿ ನೀನು ನನ್ನಿಂದ ಕಲಿತದ್ದೆಲ್ಲ ಮರೆತು ಹೋಗಲಿ" ಎಂದು ಪರಶುರಾಮ ಶಾಪಕೊಟ್ಟ.

ದ್ರೋಣಾಚಾರ್ಯರನ್ನಿಂದ ಶಸ್ತ್ರವಿದ್ಯೆ ಕಲಿತ ಪಾಂಡವ, ಕೌರವರೆಲ್ಲರ ಶೈಪುಣ್ಯ ಪ್ರದರ್ಶನ ನಡೆಸಿದಾಗ, ಅರ್ಜುನ ಸರ್ವಶ್ರೇಷ್ಠ ಎನ್ನಿಸಿದ. ಆಗ ಅಲ್ಲಿಗೆ ಬಂದ ಕರ್ಣ, "ನಾನು ಅರ್ಜುನನೊಡನೆ ಸ್ಪರ್ಧಿಸಬಲ್ಲೆ," ಎಂದ. "ಸೂತಪುತ್ರನಿಗೆ ಸ್ಪರ್ಧೆಯಲ್ಲಿ ಭಾಗವಹಿಸಲು ಅವಕಾಶವಿಲ್ಲ" ಎಂದ ದ್ರೋಣಾಚಾರ್ಯ. ಪಾಂಡವ ದ್ವೇಷಿಯಾದ ದುರ್ಯೋಧನ ಅರ್ಜುನನಿಗೆ ಪ್ರತಿಸ್ಪರ್ಧಿಯಾಗಬಲ್ಲ ಕರ್ಣನನ್ನು ಗೌರವಿಸಿ, ಅಂಗರಾಜ್ಯದ ಅರಸನನ್ನಾಗಿ ಮಾಡಿದ. ದುರ್ಯೋಧನ, ಕರ್ಣ ಪ್ರಾಣ ಸ್ನೇಹಿತರಾದರು.

ಮುಂದೆ ಅರ್ಜುನನಿಗೆ ಪ್ರತಿಸ್ಪರ್ಧಿ ಎನಿಸಿದ ಕರ್ಣನನ್ನು ದುರ್ಬಲಗೊಳಿಸಲು ಇಂದ್ರ ಬ್ರಾಹ್ಮಣವೇಷದಲ್ಲಿ ಬಂದು, ಹುಟ್ಟಿನಿಂದಲೇ ಕರ್ಣನ ಕಿವಿಯಲ್ಲಿದ್ದ ಕುಂಡಲವನ್ನೂ ಹೃದಯ ಕವಚಗಳನ್ನೂ ಬೇಡಿದ. ಅವುಗಳನ್ನು ಕೊಡುವುದರಿಂದ ತನಗೆ ಅಪಾಯವೆಂಬುದು ಗೊತ್ತಿದ್ದರೂ ಕರ್ಣ ಅವನ್ನು ದಾನ ಮಾಡಿದ.

ಮಹಾಭಾರತ ಯುದ್ಧಕಾಲದಲ್ಲಿ ಕುಂತಿಯೂ ಕೃಷ್ಣನೂ ಕರ್ಣನನ್ನು ಬೇರೆ ಬೇರೆಯಾಗಿ ಕಂಡು ಅವನ ಜನ್ಮ ವೃತ್ತಾಂತ ತಿಳಿಸಿ ಪಾಂಡವರೊಡನೆ ಸೇರಲು ಸೂಚಿಸಿದರು. ಆದರೆ ಕರ್ಣ ತನ್ನ ಮಿತ್ರ ದುರ್ಯೋಧನನನ್ನು ಕೈಬಿಡಲು ಒಪ್ಪಲಿಲ್ಲ. ತನ್ನ ಒಡೆಯನಿಗಾಗಿ ಯುದ್ಧರಂಗದಲ್ಲಿ ಹೋರಾಡುತ್ತ ಪ್ರಾಣಬಿಟ್ಟ. ಅವನ ವೀರಮರಣದಿಂದ ಪಾಂಡವ ಕೌರವರಿಬ್ಬರೂ ತುಂಬ ದುಃಖಿಸಿದರು.

ಮಹಾಭಾರತದಲ್ಲಿ ಚಿತ್ರಿತವಾಗಿರುವ ಘನವ್ಯಕ್ತಿಗಳ ಮಾಲೆಯಲ್ಲಿ ಕರ್ಣನಿಗೆ ಗೌರವ ಸ್ಥಾನವಿದೆ.

ಕಣಾದ

ಹಗಲೆಲ್ಲ ಗಹನ ವಿಷಯಗಳ ಬಗೆಗೆ ಚಿಂತಿಸುತ್ತ, ರಾತ್ರಿ ಊಟ- [illegible] ದಾರ್ಶನಿಕ ಕಣಾದ. ಈತ ಭಾರತದ ಆರು ದರ್ಶನಗಳಲ್ಲೊಂದಾದ ವೈಶೇಷಿಕ ದರ್ಶನದ ಪ್ರತಿಪಾದಕ: ಪರಮಾಣುಗಳ ಬಗೆಗೆ ವಿವರಣೆ ಕೊಟ್ಟ ಭಾರತದ ಆದಿ ವಿಜ್ಞಾನಿಗಳಲ್ಲೊಬ್ಬ.

ಇವನ ಕಾಲ ಯಾವುದೆಂಬ ಬಗೆಗೆ ನಿಖರವಾಗಿ ತಿಳಿದುಬಂದಿಲ್ಲ. ವೈಶೇಷಿಕ ಸೂತ್ರಗಳ ರಚನೆ ನಡೆದದ್ದು ಸುಮಾರು ಕ್ರಿ. ಪೂ. 6ನೆಯ ಶತಮಾನದಲ್ಲಿರಬಹುದು. ಕಣಾದನ ಕಾಲವೂ ಅದೇ ಆಗಿರಬಹುದೆಂದು ಊಹೆ. ವಿಶ್ವದ ಪ್ರತಿಯೊಂದು ವಸ್ತುವೂ ಕಣಗಳಿಂದ ಆಗಿದ್ದು ಆ ವಸ್ತುಗಳ ರೂಪ ಬದಲಾದರೂ ಕಣಗಳು ಮೂಲತಃ ಬದಲಾಗದೇ ಉಳಿಯುತ್ತವೆ ಎಂದು ಕಣಾದ ಹೇಳಿದ. ಕಣಗಳ ವಿವಿಧ ಸಂಯೋಗದಿಂದ ವಿವಿಧ ವಸ್ತುಗಳಾಗುತ್ತವೆ; ಈ ಕಣ ಅಥವಾ ಪರಮಾಣು ಅವಿನಾಶಿ; ಬೆಳಕು ಮತ್ತು ಶಾಖ ಒಂದೇ ವಸ್ತುವಿನ ಬೇರೆ ಬೇರೆ ರೂಪಗಳು; ಪರಮಾಣು ಮತ್ತು ಶೂನ್ಯವನ್ನು ಬಿಟ್ಟರೆ ಬೇರೆ ಯಾವುದಕ್ಕೂ ಅಸ್ತಿತ್ವವಿಲ್ಲ; ಪರಮಾಣುಗಳ ಚಲನೆ ಯಾವುದೇ ದೈವಿಕ ಪ್ರಭಾವಕ್ಕೆ ಅನುಗುಣವಾಗಿ [illegible] —ಇದು ಕಣಾದನ ಪರಮಾಣು ಕಲ್ಪನೆ.

[illegible]

ಪರಮಾಣುಗಳ ಬಗೆಗೆ ವಿವರಣೆ ಕೊಟ್ಟ ಕಾರಣ ಅವನನ್ನು ಕಣಭಕ್ಷ, [illegible]

[illegible] ಪ್ರಮುಖ ಸ್ಥಾನಗಳಿಸಿದ್ದಾನೆ.

ಕಥಕ್

[illegible] ನರ್ತಕಿ, ಹಿನ್ನಲೆಯಲ್ಲಿ ಸಾರಂಗಿ, ತಬಲಾ ಪಕ್ಕವಾದ್ಯಗಳು —ಇದು ಕಥಕ್ ಪ್ರದರ್ಶನದ ಸಾಮಾನ್ಯ ನೋಟ.

'ಕಥಕ್' ಎಂಬ ಹೆಸರು ಭಾರತದ ಪುರಾಣ ಕಥೆಗಳನ್ನು ಹಾಡಿ, ಅಭಿನಯಿಸುತ್ತಿದ್ದ ಕಥಕರು ಎಂಬ ಸಂಪ್ರದಾಯದಿಂದ ಬಂದದ್ದು. ಶ್ರೀಕೃಷ್ಣ, ಕಥಕ್ ಕಲಾವಿದರ ಆರಾಧ್ಯದೈವ. ಅವರು ಕೃಷ್ಣನನ್ನು 'ನಟವರ' ಎಂದು ಕರೆಯುತ್ತಾರೆ. ಧಾರ್ಮಿಕ ತಳಹದಿಯಲ್ಲಿ ಬೆಳೆದ ಈ ನೃತ್ಯಕಲೆ ಕ್ಷೀಣಿಸುತ್ತ ಬಂದು ಮೊಘಲರ ಕಾಲದಲ್ಲಿ ಕೇವಲ ನೃತ್ಯ ಸಂಪ್ರದಾಯವನ್ನು ಉಳಿಸಿಕೊಂಡಿತು. [illegible]

ಉತ್ತರ ಪ್ರದೇಶದ ಲಖನೌ ಮತ್ತು ರಾಜಸ್ಥಾನದ ಜಯಪುರ ಕಥಕ್ ನೃತ್ಯಶೈಲಿಯ ಪ್ರಸಿದ್ಧ ಕೇಂದ್ರಗಳು. [illegible] ಕಥಕ್ ಶೈಲಿ [illegible] ಲಖನೌನಲ್ಲಿ ರೂಪುಗೊಂಡಿತು. ಪ್ರಕಾಶ್‌ಜೀ ಮತ್ತು ಅವರ ಮಗ ಠಾಕೂರ್‌ಪ್ರಸಾದ್ ಇದರ ಪ್ರವರ್ತಕರು. [illegible] ಈ ಶೈಲಿಗೆ ರೂಪುಕೊಟ್ಟರು. ಜಯಪುರ ಘರಾನಾದಲ್ಲಿ ಗಿರಿಧರಜೀ ಶ್ರೇಷ್ಠ ಗುರು. ಅವರ ಮಕ್ಕಳಾದ ಹರಿಪ್ರಸಾದ್, ಹನುಮಾನ್ ಪ್ರಸಾದ್ ಈ ಶೈಲಿಯನ್ನು ಬೆಳೆಸಿದರು. ಇಂದು ಈ ಎರಡು ಪ್ರಕಾರಗಳೂ ಅಖಿಲ ಭಾರತ ವ್ಯಾಪ್ತಿ ಪಡೆದು ಜನಪ್ರಿಯವಾಗಿವೆ. [illegible]



ತಾಂಡವ, ಲಾಸ್ಯ ಸಮನ್ವಯ : ಕಥಕ್



ಕಥೆ, ನೃತ್ಯ : ಕಥಕಳಿ

ಕಥಕಳಿ

ಪಶ್ಚಿಮ ಕರಾವಳಿಯ ಮಲಯಾಳ ಪ್ರದೇಶದ ನೃತ್ಯಕಲೆ –ಕಥಕಳಿ. ಸರ್ವಸಾಧಾರಣವಾಗಿ ಬೇಸಗೆಯ ಹುಣ್ಣಿಮೆಯ ರಾತ್ರಿ, ಸುಮಾರು ಐದಾರು ಮೈಲು ವರೆಗಿನ ಹಳ್ಳಿಗರನ್ನು ಬಡಿದೆಬ್ಬಿಸುವಂತೆ ಕೇಳುತ್ತದೆ ಚಂಡೆಯ ಹೊಡೆತ. ಇದು ಕಥಕಳಿ ನೃತ್ಯನಾಟಕ ಪ್ರದರ್ಶನಕ್ಕೆ ಆಹ್ವಾನ. ಜನ ಗುಂಪುಗುಂಪಾಗಿ ಬಂದು ಪ್ರದರ್ಶನದ ಸ್ಥಳದಲ್ಲಿ ಸೇರುತ್ತಾರೆ. ನಾಲ್ಕಡಿ ಎತ್ತರದ ಎಣ್ಣೆಯ ದೀಪಸ್ತಂಭಗಳ ಬೆಳಕಿನಲ್ಲಿ ಈ ಕಾರ್ಯಕ್ರಮ. ಎಂಟರಿಂದ ಹತ್ತು ಗಂಟೆಗಳ ಕಾಲ ಇದು ನಡೆಯುತ್ತದೆ.

ಕಥಕಳಿಯಲ್ಲಿ ವೇಷಭೂಷಣಗಳ ಗಾಂಭೀರ್ಯವಿದೆ; ಪಾತ್ರಧಾರಿ ತುಟಿ ತೆರೆಯದೆ, ತನ್ನ ಅಂಗಾಂಗಗಳ ಚಲನೆಯ ಮೂಲಕ ಕಥಾ ನಿರೂಪಣೆ ಮಾಡುತ್ತಾನೆ ; ಹಿನ್ನೆಲೆಯಲ್ಲಿ ಕಥೆಯ ನಿರೂಪಣೆ ಹಾಡುಗಳ ಮೂಲಕ ನಡೆಯುತ್ತದೆ. ಪಕ್ಕವಾದ್ಯಗಳೂ ಇರುತ್ತವೆ. ಸಾಮಾನ್ಯವಾಗಿ ಪುರುಷರೇ ಇಲ್ಲಿ ಸ್ತ್ರೀಪಾತ್ರ ವಹಿಸುತ್ತಾರೆ.

ಹಲವು ಪುರಾತನ ಜಾನಪದ ನೃತ್ಯಗಳ ಸಮ್ಮಿಲನ ಕಥಕಳಿ; ಮುಖ್ಯವಾಗಿ ರಾಮನಾಟ್ಯ ಎಂಬ ಜಾನಪದ ನೃತ್ಯವೇ ಅಭಿವೃದ್ಧಿ ಹೊಂದಿ ಕಥಕಳಿಯಾಗಿದೆ ಎನ್ನುವವರಿದ್ದಾರೆ. ಸಾಹಿತ್ಯಕ್ಕೂ ಇದರಲ್ಲಿ ಹೆಚ್ಚಿನ ಪ್ರಾಮುಖ್ಯ ಇದೆ. ಸಂಸ್ಕೃತದ ಪದಗಳು ಹೇರಳವಾಗಿರುವ ಮಲಯಾಳಂ ಭಾಷೆಯಲ್ಲಿ ಈ ಸಾಹಿತ್ಯ ರಚಿತವಾಗಿರುತ್ತದೆ. 'ಹಸ್ತಲಕ್ಷಣ ದೀಪಿಕಾ' ಎಂಬ ಗ್ರಂಥದಲ್ಲಿ ಕಥಕಳಿಯ ಮುದ್ರೆಗಳ ಹಾಗೂ ಅವುಗಳ ಉಪಯೋಗದ ವಿವರವಿದೆ.

ಪುರಾಣೇತಿಹಾಸಗಳ ಕಥೆಗಳೇ ಕಥಕಳಿಯ ವಸ್ತು. 17ನೆಯ ಶತಮಾನದ ಉತ್ತರಾರ್ಧದಲ್ಲಿ ಕೊಟ್ಟಾಯವನ್ನು ಆಳುತ್ತಿದ್ದ ತಂಬುರಾನ್ (ತಂಪುರನ್) ಮೊದಲ ಕಥಕಳಿ ಸಾಹಿತ್ಯವನ್ನು ರಚಿಸಿದ.

ಕದಂಬರು

ಕರ್ನಾಟಕದ ತರುಣನೊಬ್ಬ ಶಿಕ್ಷಣಕ್ಕಾಗಿ ಕಂಚಿಗೆ ಹೋದ. ಕಂಚಿಯಲ್ಲಿ ಆಳುತ್ತಿದ್ದ ಪಲ್ಲವರಿಂದ ಅವಮಾನಿತನಾದ. ಇದರಿಂದ ರೊಚ್ಚಿಗೆದ್ದು ಪಲ್ಲವರ ವಿರುದ್ಧ ಬಂಡಾಯ ಹೂಡಿ, ಕರ್ನಾಟಕದ ಬನವಾಸಿಯಲ್ಲಿ ಒಂದು ಸ್ವತಂತ್ರ ರಾಜಸತ್ತೆಯನ್ನು ಆ ಯುವಕ ಸ್ಥಾಪಿಸಿದ.

ಆ ತರುಣನೇ ಕದಂಬ ವಂಶದ ಸ್ಥಾಪಕನಾದ ಮಯೂರಶರ್ಮ.

ಸುಮಾರು 360ರಲ್ಲಿ ಅವನ ಪಟ್ಟಕ್ಕೆ ಆರೋಹ. ಇವನ ಅನಂತರ ಕಂಙ್ಞ ವರ್ಮ, ಭಗೀರಥ, ರಘು, ಕಾಕುತ್ಸ್ಥ ಮುಂತಾದವರು ಆಳಿದರು. ಕೊನೆಯವನು ಗುಪ್ತರು, ವಾಕಾಟಕರು ಮತ್ತಿತರ ಭಾರತದ ಹಿರಿಯ ರಾಜವಂಶಗಳ ಅರಸುಕುಮಾರರಿಗೆ ತನ್ನ ಕುವರಿಯರನ್ನು ಮದುವೆ ಮಾಡಿಕೊಟ್ಟ.

ಇವನ ಬಳಿಕ ಕದಂಬ ವಂಶದಲ್ಲಿ ಒಡಕು ಮೂಡಿ ಎರಡು ಶಾಖೆಗಳಾದಂವು. ಕಾಕುತ್ಸ್ಥನ ಹಿರಿಮಗ ಶಾಂತಿವರ್ಮನ ಮಗ ಮೃಗೇಶ, ಮೊಮ್ಮಗ ರವಿ, ಮರಿಮಗ ಹರಿ ಬನವಾಸಿಯಿಂದ ಆಳಿದರು. ಶಾಂತಿವರ್ಮನ ಸೋದರ ಕೃಷ್ಣ ಉಚ್ಚಂಗಿಯಿಂದ ಆಳಲಾರಂಭಿಸಿದ. ಕೃಷ್ಣನ ಮಗ ವಿಷ್ಣು, ಮೊಮ್ಮಗ ಸಿಂಹರ ಅನಂತರ ಆಳಿದ ಎರಡನೆಯ ಕೃ ಬನವಾಸಿಯನ್ನು ಗೆದ್ದು ಎರಡೂ ಶಾಖೆಗಳನ್ನು ಒಟ್ಟುಗೂಡಿಸಿದ.

540ರ ಸುಮಾರಿಗೆ ಬನವಾಸಿಯು ವಾತಾಪಿ ಚಾಲುಕ್ಯರ ವಶವಾ ಕದಂಬರ ಸ್ವತಂತ್ರ ಆಡಳಿತ ಮುಂದುವರಿಯಿತು. ಮುಂದೆ ಕದಂಬ ಗೋವೆಯ ಒಂದು ಶಾಖೆಯವರು ಕಲ್ಯಾಣದ ಅರಸರ ಸಾಮಂತರಾ ಹದಿಮೂರನೆಯ ಶತಮಾನದ ವರೆಗೆ ಚಂದ್ರಪುರ(ಚಾಂದೋರ್)ದಿ ಆಳಿದರು. ನಮಗೆ ದೊರೆತಿರುವ ಕನ್ನಡ ಭಾಷೆಯ ಶಾಸನಗಳಲ್ಲಿ ಅತ್ಯ ಪ್ರಾಚೀನವಾದ ಹಲ್ಮಿಡಿ ಶಾಸನ (ಸುಮಾರು 450) ಕದಂಬರ ಕಾಲದ

ಬನವಾಸಿಯ ಮಧುಕೇಶ್ವರ, ಹಲಸಿಯ ಕಲ್ಲೇಶ್ವರ ದೇವಾಲಯಗ ಕದಂಬರ ರಚನೆಗಳು. ಕದಂಬರು ಸಿಂಹಲಾಂಛನರು.

ಕನಕದಾಸ

ನೋಡಿ : ಸಂಪುಟ ೫

ಕನ್ನಡ ಭಾಷೆ, ಸಾಹಿತ್ಯ

ನೋಡಿ : ಸಂಪುಟ ೫

ಕನ್ನಡ ಸಾಹಿತ್ಯ ಪರಿಷತ್ತು

ನೋಡಿ : ಸಂಪುಟ ೫

ಕರ್ನಾಟಕ

ವಿವಿಧ ಪ್ರಾಂತಗಳಲ್ಲಿ ಹಂಚಿಹೋಗಿದ್ದ ಕನ್ನಡ ಪ್ರದೇಶಗಳ ಒಗ್ಗೂಡಿಸಿ ರಚಿಸಿದ ರಾಜ್ಯ ಕರ್ನಾಟಕ. ವಿಸ್ತೀರ್ಣದಲ್ಲಿ ಭಾರತದ ಆರನೆ ರಾಜ್ಯ.

ಕರ್ನಾಟಕವನ್ನು ಪ್ರಸ್ಥಭೂಮಿ, ಪಶ್ಚಿಮ ಘಟ್ಟ ಹಾಗೂ ತೀರಪ್ರದೇ ಗಳೆಂದು ಮೂರು ಭಾಗಗಳಾಗಿ ವಿಂಗಡಿಸಬಹುದು. ಹೆಚ್ಚು ಭಾಗ ಪ್ರ ಭೂಮಿ ಅಥವಾ ಬಯಲು ಪ್ರದೇಶ. ಪಶ್ಚಿಮ ಘಟ್ಟದ ಪ್ರದೇಶ ಮಲೆನಾಡು. ಅರಬಿ ಸಮುದ್ರ ಹಾಗೂ ಪಶ್ಚಿಮ ಘಟ್ಟಗಳ ನಡುವಿನ ತೀರಪ್ರದೇಶ. ಕರ್ನಾಟಕ ಭೂಪ್ರದೇಶದ ಸರಾಸರಿ ಎತ್ತರ ಸುಮಾ 2,000ದಿಂದ 3,000 ಅಡಿಗಳಷ್ಟು.

ಉನ್ನತ ಪರ್ವತಗಳೂ ದಟ್ಟ ಕಾಡುಗಳೂ ಇವೆ. ಹಲವು ಜಲಪಾ ಗಳೂ ಈ ರಾಜ್ಯದಲ್ಲಿವೆ. ಪ್ರಪಂಚದ ಉನ್ನತ ಜಲಪಾತಗಳಲ್ಲಿ ಒಂದು ಗೇರುಸೊಪ್ಪೆ ಅಥವಾ ಜೋಗ್ ಜಲಪಾತ ಈ ರಾಜ್ಯದಲ್ಲಿದೆ. ಭಾರ ಬಹುಪಾಲು ಚಿನ್ನ, ಕಾಫಿಗಳ ಉತ್ಪಾದನೆ ಕರ್ನಾಟಕದಲ್ಲಿ. ಪ್ರಪಂಚ ದೊರೆಯುವ ಗಂಧದ ಮರದ ಹೆಚ್ಚು ಭಾಗ ಕರ್ನಾಟಕದ್ದು. ಬೊ ತೇಗ, ಹೊನ್ನೆ, ಬೀಟೆ ಮುಂತಾದ ಶ್ರೇಷ್ಠ ಮರಗಳು ಇಲ್ಲಿನ ಕಾಡುಗ ದೊರೆಯುತ್ತವೆ.

ಉತ್ಸವ–ನಿಸರ್ಗ–ಧರ್ಮ



ದಸರ ಮೆರವಣಿಗೆ



ಕೆಮ್ಮಣ್ಣುಗುಂಡಿ ಗಿರಿಧಾಮ

ಗೊಮ್ಮಟನ ಪದತಲದಲ್ಲಿ



ತಲಕಾವೇರಿ ತೀರ್ಥಸ್ನಾನ



ಕಾವೇರಿ, ಕೃಷ್ಣಾ ಹಾಗೂ ತುಂಗಭದ್ರಾ ರಾಜ್ಯದ ಧಾನ ನದಿಗಳು. ಹೇಮಾವತಿ, ಕಪಿಲಾ, ಭೀಮಾ, ...ತೀರ್ಥ, ಮಲಪ್ರಭಾ, ಘಟಪ್ರಭಾ, ಶರಾವತಿ, ಳಿ, ನೇತ್ರಾವತಿ, ಅರ್ಕಾವತಿ ನದಿಗಳೂ ಕರ್ನಾಟಕದಲ್ಲಿ ಯುತ್ತವೆ. ಜಲವಿದ್ಯುತ್ ಉತ್ಪಾದನೆಯಲ್ಲಿ ರಾಜ್ಯ ಮುಂದುವರಿದಿದೆ. ಶರಾವತಿ ಮತ್ತು ಕಾಳಿ ವಿದ್ಯುತ್ ಉತ್ಪಾದನಾ ಯೋಜನೆಗಳು ಬೃಹತ್ ಪ್ರಮಾಣದವು.

ಈ ರಾಜ್ಯದ ಪ್ರಾಣಿಸಂಪತ್ತು, ಖನಿಜಸಂಪತ್ತು ವೈವಿಧ್ಯಮಯ. ಪಂಚದಲ್ಲಿ ಅತ್ಯಂತ ಸುಂದರವೆನಿಸುವ ಆನೆಗಳು ಕರ್ನಾಟಕದ ಕಾಡುಗಳಲ್ಲಿವೆ. ಹುಲಿ, ಚಿರತೆ, ಕಾಡುಕೋಣ, ಕಾಡೆಮ್ಮೆ, ಜಿಂಕೆಗಳೂ ಇವೆ. ಚಿನ್ನ, ಕಬ್ಬಿಣ, ಮ್ಯಾಂಗನೀಸ್, ಸುಣ್ಣಕಲ್ಲು, ಚೈನಾ ಮಣ್ಣು, ಕಲ್ನಾರು, ಮ್ಯಾಗ್ನಸೈಟ್, ಫಲಸ್ಪಾರ್, ಕ್ವಾರ್ಟ್ಸ್, ಮುಂತಾದ ಖನಿಜಗಳು ಇಲ್ಲಿ ದೊರೆಯುತ್ತವೆ. ಈ ಖನಿಜಗಳಿಂದ ಲೋಹ ಪಡೆಯುವ ಉದ್ಯಮಗಳಲ್ಲಿ ಮುಖ್ಯವಾದುವು; ಅತಿ ಆಳದ (9,000 ಅಡಿಗೂ ಮೀರಿ) ಕೋಲಾರದ ಚಿನ್ನದ ಗಣಿ ಹಾಗೂ ಭದ್ರಾವತಿಯ ಕಬ್ಬಿಣ ಮತ್ತು ಉಕ್ಕಿನ ಕಾರಖಾನೆ.





ಕೆ. ಹನುಮಂತಯ್ಯ



ಕಡಿದಾಳ್ ಮಂಜಪ್ಪ



ಎಸ್. ನಿಜಲಿಂಗಪ್ಪ



ಬಿ. ಡಿ. ಜತ್ತಿ

ರಾಜ್ಯದಲ್ಲಿರುವ ಇನ್ನೂ ಕೆಲವು ಮುಖ್ಯ ಕೈಗಾರಿಕೆಗಳು : ಸಿಮೆಂಟ್, ಬೆಂಕಿಕಡ್ಡಿ, ಸಕ್ಕರೆ, ಕಾಗದ, ಗಂಧದೆಣ್ಣೆ, ವಿದ್ಯುತ್ ಸಲಕರಣೆಗಳು, ಸಾಬೂನು, ಕೃಷಿ ಉಪಕರಣಗಳು, ಹತ್ತಿ, ಉಣ್ಣೆ, ರೇಷ್ಮೆ ಬಟ್ಟೆ ತಯಾರಿ ಮುಂತಾದುವು. ಸಾರ್ವಜನಿಕ ವಲಯದ ಬೃಹತ್ ಕೈಗಾರಿಕೆಗಳು : ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್, ಹಿಂದೂಸ್ಥಾನ್ ಮೆಷಿನ್ ಟೂಲ್ಸ್, ಭಾರತ್ ಎಲೆಕ್ಟ್ರಾನಿಕ್ಸ್, ಇಂಡಿಯನ್ ಟೆಲಿಫೋನ್ ಇಂಡಸ್ಟ್ರೀಸ್, ಭಾರತ್ ಅರ್ಥ್ ಮೂವರ್ಸ್. ಮೈಸೂರಿನ ರೇಷ್ಮೆ, ಗಂಧದ ಮರ, ಕಾಫಿ —ಜಗತ್ಪ್ರಸಿದ್ಧವಾದುವು. ಪಶ್ಚಿಮ ಕರಾವಳಿಯಲ್ಲಿ ಮೀನುಗಾರಿಕೆ ಮತ್ತು ಅದಕ್ಕೆ ಸಂಬಂಧಿಸಿದ ಉದ್ಯಮಗಳು ಬೆಳೆದಿವೆ.



ಎಸ್. ಆರ್. ಕಂಠಿ

ಭಟ್ಕಳ, ಕಾರವಾರ ಹಾಗೂ ಮಂಗಳೂರು –ಮುಖ್ಯ ಮೂರು ಬಂದರುಗಳು. ಮಂಗಳೂರನ್ನು ಸರ್ವಋತು ಬಂದರಾಗಿ ಮಾಡುವ ನಿರ್ಮಾಣಕಾರ್ಯಗಳು ನಡೆಯುತ್ತಿವೆ.

ಭತ್ತ, ರಾಗಿ, ಜೋಳ ಮುಂತಾದ ಧಾನ್ಯಗಳು, ದ್ವಿದಳ ಧಾನ್ಯಗಳು– ಮುಖ್ಯ ಬೆಳೆಗಳು. ತೆಂಗು, ಏಲಕ್ಕಿ, ಅಡಿಕೆ, ಕಡಲೆಕಾಯಿ, ಹತ್ತಿ, ಹೊಗೆಸೊಪ್ಪು, ಕಬ್ಬು, ಎಣ್ಣೆಬೀಜಗಳು ಇತರ ಮುಖ್ಯ ಬೆಳೆಗಳು. ಕರ್ನಾಟಕದಲ್ಲಿ ಹಲವಾರು ಕೈಗಾರಿಕೋದ್ಯಮಗಳು ಇವೆಯಾದರೂ ಬಹುಪಾಲು ಜನರ ಕಸಬು ಭೂ ವ್ಯವಸಾಯ.




ವೀರೇಂದ್ರ ಪಾಟೀಲ್

ಕನ್ನಡ ಭಾಷೆ ಆಡುವವರ ನಾಡಿಗೆ ಬಹಳ ಮೊದಲೇ ಕರ್ನಾಟಕವೆಂಬ ಹೆಸರು ಇದ್ದಿತು. 'ಮಹಾಭಾರತ'ದಲ್ಲಿ ಕರ್ನಾಟಕದ ಪ್ರಸ್ತಾಪ ಇದೆ. ಕರ್ನಾಟಕದ ಕೆಲಭಾಗಗಳು ಪ್ರಾಚೀನ ಭಾರತದ

ದೇವರಾಜ ಅರಸು





ವಿಸ್ತೀರ್ಣ : 1,91,773 ಚ.ಕಿ.ಮೀ.

ಜನಸಂಖ್ಯೆ : 2,92,99,014

ರಾಜಧಾನಿ : ಬೆಂಗಳೂರು

ಮುಖ್ಯ ಭಾಷೆ : ಕನ್ನಡ



ರಾಜ್ಯ ಲಾಂಛನ

ರಾಜವಂಶಗಳಾದ ನಂದ ಹಾಗೂ ಮೌರ್ಯರ ಆಳ್ವಿಕೆಗೆ ಒಳಪಟ್ಟಿದ್ದುವು. ಅಶೋಕನ ಕಾಲದಲ್ಲಿ ಬೌದ್ಧ ಮತವೂ ಅನಂತರ ಜೈನಮತವೂ ಈ ನಾಡಿನಲ್ಲಿ ಹಬ್ಬಿದುವು. ಶಾತವಾಹನರು ಕ್ರಿಸ್ತಶಕದ ಆರಂಭದಲ್ಲಿ ಈ ರಾಜ್ಯವನ್ನು ಆಳಿದರು. ಅನಂತರ ಕದಂಬ ರಾಜರು ಬನವಾಸಿಯಲ್ಲೂ ಗಂಗರಸರು ತಲಕಾಡಿನಲ್ಲೂ ಆಳಿ ಪ್ರಖ್ಯಾತರಾದರು. ಮಯೂರ ವರ್ಮ ಕದಂಬ ರಾಜರಲ್ಲಿ ಪ್ರಮುಖ; ಬಾದಾಮಿಯ ಚಾಲುಕ್ಯರು ಆರನೆಯ ಶತಮಾನದಲ್ಲಿ ಗಂಗರು ಮತ್ತು ಕದಂಬರನ್ನು ಸೋಲಿಸಿದರು. ಇವರು ಬಾದಾಮಿಯಲ್ಲಿ ಕೋಟೆ ಕಟ್ಟಿದರು. ದೇವಾಲಯದ ವಾಸ್ತುಶಿಲ್ಪ ಇವರ ಕಾಲದಲ್ಲಿ ಆರಂಭವಾಗಿ ವಿಕಾಸಗೊಂಡಿತು. ಇದಕ್ಕೆ ದೃಷ್ಟಾಂತವಾಗಿ ಐಹೊಳೆ, ಬಾದಾಮಿ, ಪಟ್ಟದಕಲ್ಲು ದೇವಾಲಯಗಳನ್ನು ಇಲ್ಲಿ ಹೆಸರಿಸಬಹುದು. ಎರಡನೆಯ ಪುಲಿಕೇಶಿ ಇವರಲ್ಲಿ ಹೆಸರಾದ ದೊರೆ.

8ನೆಯ ಶತಮಾನದಲ್ಲಿ ರಾಷ್ಟ್ರಕೂಟರು ಬಾದಾಮಿಯ ಚಾಲುಕ್ಯರನ್ನು ಸೋಲಿಸಿ ಕರ್ನಾಟಕದಲ್ಲಿ ಮತ್ತೆ ಪ್ರಬಲರಾದರು. ಇವರ ಕಾಲದಲ್ಲಿ ಎಲ್ಲೋರದ ಕೈಲಾಸನಾಥ ದೇವಾಲಯ ನಿರ್ಮಾಣವಾಯಿತು. ಇವರ ಜೈನವಿದ್ವಾಂಸರಿಗೆ, ಕವಿಗಳಿಗೆ ಆಶ್ರಯವಿತ್ತರು. ಪಂಪ, ಪೊನ್ನರು ಈ ಕಾಲದವರು. ಮತ್ತೊಮ್ಮೆ ಉನ್ನತಿಹೊಂದಿದ ಚಾಲುಕ್ಯರು –ಕಲ್ಯಾಣ ಚಾಲುಕ್ಯರು– 973ರಲ್ಲಿ ರಾಷ್ಟ್ರಕೂಟರನ್ನು ಬದಿಗೊತ್ತಿದರು. ಈ ವಂಶ ಒಂದನೆಯ ಸೋಮೇಶ್ವರ ಹಾಗೂ ಆರನೆಯ ವಿಕ್ರಮಾದಿತ್ಯ ಸಾಹಿತ್ಯ ಅಪಾರ ಮನ್ನಣೆ ಇತ್ತರು. ವಾಸ್ತುಶಿಲ್ಪದಲ್ಲಂತೂ ಇವರ ಕಾಲದ ಶೈ ಹೆಸರುವಾಸಿ. ಹೊಯ್ಸಳ ವಾಸ್ತುಶಿಲ್ಪ ಇವರಿಂದ ವಿಕಾಸಗೊಂಡಿತು.


ಗೋಕಾಕದ ಜಲಪಾತ






ಸೂಜಿ ಕೋಡುಗಲ್ಲು –ಉತ್ತರ ಕನ್ನಡದಲ್ಲಿ

12ನೆಯ ಶತಮಾನದಲ್ಲಿ ಕಳಚುರಿಯರು ಪ್ರಬಲರಾದರು. ಬಸವೇಶ್ವರರ ನಾಯಕತ್ವದಲ್ಲಿ ವೀರಶೈವ ಧರ್ಮ ಬೆಳೆದದ್ದು, ಅಪಾರ ವಚನ ಸಾಹಿತ್ಯ ಸೃಷ್ಟಿಯಾದದ್ದು, ಈ ಕಾಲದಲ್ಲಿ. ಕಲ್ಯಾಣದ ಚಾಲುಕ್ಯರನ್ನು ಮೂಲೆಗುಂಪಾಗಿ ಮಾಡಿದವರಲ್ಲಿ ಕಳಚುರಿಯರೂ ದೇವಗಿರಿಯ ಯಾದವರೂ ದ್ವಾರಸಮುದ್ರದ ಹೊಯ್ಸಳರೂ ಮುಖ್ಯರು. ಹೊಯ್ಸಳರು ನಿರ್ಮಿಸಿದ ಬೇಲೂರು, ಹಳೇಬೀಡು, ಸೋಮನಾಥಪುರದ ದೇವಾಲಯಗಳು ಇಂದಿಗೂ ಅವರ ಕಾಲದ



ಗರುಡ :
ಬೇಲೂರು ಶಿಲ್ಪದಲ್ಲಿ



ಮಳಲಿ ಸುರಂಗ

ವಿದ್ಯುತ್ ಕೇಂದ್ರ







ಹಿನ್ನೆಲೆ-ಗಿರಿಕಂದರ

ಅಂಬುಗ ಸುರಂಗ

ವೈಭವಯುತ ಶಿಲ್ಪ, ವಾಸ್ತುಶಿಲ್ಪ ಶೈಲಿಯ ಸ್ಮಾರಕಗಳಾಗಿ ನಿಂತಿವೆ. ಜನ್ನ, ಹರಿಹರ, ರಾಘವಾಂಕರು ಇವರ ಕಾಲದ ಪ್ರಮುಖ ಕನ್ನಡ ಕವಿವರ್ಯರು.

ಈ ವೇಳೆಗೆ ಮಹಮ್ಮದೀಯರು ಉತ್ತರದಲ್ಲಿ ಪ್ರಬಲರಾಗಿ ದಕ್ಷಿಣಕ್ಕೂ ಸೇನೆಗಳನ್ನು ಕಳುಹಿಸಿ ಹೊಯ್ಸಳ ಮತ್ತು ಯಾದವ ರಾಜ್ಯಗಳ ಮೇಲೆ ಪ್ರಬಲ ದಾಳಿ ಮಾಡಿದರು. ಇದಕ್ಕೆ ಪ್ರತಿಕ್ರಿಯೆ ಎಂಬಂತೆ ಮತ್ತೊಂದು ಬೃಹತ್ ವಿಜಯನಗರ ಸಾಮ್ರಾಜ್ಯ ತಲೆಯೆತ್ತಿತು. ಈ ಸಾಮ್ರಾಜ್ಯದ ಅವಧಿಯಲ್ಲಿ ಹಿಂದೂ ಧರ್ಮ, ಭಾರತೀಯ ಸಂಸ್ಕೃತಿಗಳಿಗೆ ಅಪಾರ ಪೋಷಣೆ ದೊರೆಯಿತು. ಕೃಷಿ, ವಾಣಿಜ್ಯ, ಸಾಹಿತ್ಯ, ಸಂಗೀತ, ವಾಸ್ತುಶಿಲ್ಪ, ಶಿಲ್ಪಗಳಿಗೆ ಪ್ರೋತ್ಸಾಹ ಸಿಕ್ಕಿತು. ಈ ವಂಶದ ಖ್ಯಾತ ಅರಸರು ಇಮ್ಮಡಿ ದೇವರಾಯ ಮತ್ತು ಕೃಷ್ಣದೇವರಾಯ. ಬಿಜಾಪುರದ ಸುಲ್ತಾನ್ ಅಹಮ್ಮದ್ ಆದಿಲ್‌ಷಾ ಕಟ್ಟಿಸಿದ ಗೋಳಗುಮ್ಮಟ ಜಗತ್ತಿನ ವಿಖ್ಯಾತ ಕಟ್ಟಡಗಳಲ್ಲೊಂದು.

1637ರಲ್ಲಿ ಶಿವಾಜಿಯ ತಂದೆ ಷಾಜಿ ಕರ್ನಾಟಕದ ಕೆಲವು ಭಾಗಗಳನ್ನು ಜಹಗೀರಾಗಿ ಪಡೆದ. ಆಗ ಸುಮಾರು ಅರ್ಧ ಶತಮಾನದ ಕಾಲ ಬೆಂಗಳೂರು ಮರಾಠರ ಅಧೀನವಾಗಿದ್ದಿತು. ಈ ವೇಳೆಗೆ ಮೈಸೂರು ಒಂದು ಸ್ವತಂತ್ರ ರಾಜ್ಯವಾಗಿ ತಲೆಯೆತ್ತಿತ್ತು. ಕೆಳದಿಯ ನಾಯಕರೂ ಈ ಕಾಲಕ್ಕೆ ಪ್ರಬಲವಾಗಿದ್ದರು. ಇವರಲ್ಲಿ ಶಿವಪ್ಪನಾಯಕ ಹಾಗೂ ಆತನ ಸೊಸೆ ಚೆನ್ನಮ್ಮಾಜಿ ಗಣ್ಯರು.

ಮೈಸೂರು ಅರಸರಲ್ಲಿ ಸೇನಾಧಿಕಾರಿಯಾಗಿದ್ದ ಹೈದರ್ ಕ್ರಮಕ್ರಮವಾಗಿ ಪ್ರಬಲನಾಗಿ ಮೈಸೂರು ಸೀಮೆಯನ್ನು ವಿಸ್ತರಿಸಿದ್ದಲ್ಲದೆ, ಅವರ ಆಡಳಿತ ಸೂತ್ರಗಳನ್ನೂ ತನ್ನ ಕೈಗೆ ತೆಗೆದುಕೊಂಡ. ಅವನ ಮಗ ಟಿಪ್ಪು ಆಂಗ್ಲರನ್ನು ಪ್ರತಿಭಟಿಸಿದ. 1799ರ ಯುದ್ಧದಲ್ಲಿ ಟಿಪ್ಪುವಿನ ಮರಣಾನಂತರ ಬ್ರಿಟಿಷರು ಅವನ ಆಡಳಿತದಲ್ಲಿದ್ದ ವಿಶಾಲ ಮೈಸೂರು ಸಂಸ್ಥಾನವನ್ನು ಒಡೆದು ಕೆಲಭಾಗವನ್ನು ತಾವು ಉಳಿಸಿಕೊಂಡರು. ಇನ್ನು ಕೆಲವು ಭಾಗಗಳನ್ನು ಹೈದರಾಬಾದಿನ ನಿಜಾಮರಿಗೂ ಮರಾಠರಿಗೂ ಬಿಟ್ಟುಕೊಟ್ಟರು. ಉಳಿದದ್ದನ್ನು ಮೈಸೂರು ರಾಜಮನೆತನಕ್ಕೆ ವಹಿಸಿದರು. ಹೀಗಾಗಿ ಕನ್ನಡನಾಡು ಹಲವು ಆಡಳಿತಗಳಲ್ಲಿ ಹಂಚಿಹೋಯಿತು.

ಭಾರತಕ್ಕೆ ಸ್ವಾತಂತ್ರ್ಯ ಬಂದು 1956ರಲ್ಲಿ ಭಾಷಾವಾರು ತಳಹದಿಯ ಮೇಲೆ ರಾಜ್ಯಗಳ ಪುನರ್ವಿಂಗಡಣೆಯಾದಾಗ ಕನ್ನಡ ಮಾತನಾಡುವ ಜನರ ಮೈಸೂರು ರಾಜ್ಯ ಆ ವರ್ಷ ನವೆಂಬರ್ 1ರಂದು ನಿರ್ಮಾಣಗೊಂಡಿತು. 1973 ನವೆಂಬರ್ 1ರಂದು ಅಧಿಕೃತವಾಗಿ 'ಕರ್ನಾಟಕ' ಎನಿಸಿಕೊಂಡಿತು.

ಕರ್ನಾಟಕದಲ್ಲಿ ಪ್ರೇಕ್ಷಣೀಯ ಸ್ಥಳಗಳು ಅನೇಕ. ಒಡೆಯರ ಕಾಲದಲ್ಲಿ ಸಂಸ್ಥಾನದ ರಾಜಧಾನಿಯಾಗಿ ಮೆರೆದ ಮೈಸೂರು ನಗರದಲ್ಲಿ ಹಲವು ಪ್ರೇಕ್ಷಣೀಯ ಸ್ಥಳಗಳೂ ಕಟ್ಟಡಗಳೂ ಇವೆ. ಬೆಂಗಳೂರು ಹೊಸತು, ಹಳೆಯದರ ಸಂಗಮ ಸ್ಥಾನ. ಈ ರಾಜ್ಯದಲ್ಲಿ ಶ್ರೀರಂಗಪಟ್ಟಣ, ಕೃಷ್ಣರಾಜಸಾಗರ–ಬೃಂದಾವನ, ಬೇಲೂರು, ಹಳೇಬೀಡು, ಸೋಮನಾಥಪುರದ ದೇವಾಲಯಗಳು, ನಂದಿಬೆಟ್ಟ, ಕೆಮ್ಮಣ್ಣುಗುಂಡಿ, ಶ್ರವಣಬೆಳಗೊಳ, ಶೃಂಗೇರಿ, ಗೇರುಸೊಪ್ಪೆಯ ಜಲಪಾತ, ಆಗುಂಬೆ, ಮಲೆನಾಡಿನ ಭವ್ಯದೃಶ್ಯಗಳು, ನೀಲಗಿರಿಯ ಅಂಚಿನಲ್ಲಿರುವ ಬಂಡೀಪುರ, ಅಭಯಾರಣ್ಯ, ಚಿತ್ರದುರ್ಗದ ಐತಿಹಾಸಿಕ ಕೋಟೆ, ಉಡುಪಿ, ಗೋಕರ್ಣ, ಧರ್ಮಸ್ಥಳ ಮುಂತಾದ ಅನೇಕ ಸ್ಥಳಗಳಿವೆ. ಶ್ರವಣಬೆಳಗೊಳದಲ್ಲಿ ನಡೆಯುವ ಗೊಮ್ಮಟೇಶ್ವರನ ಮಹಾಮಸ್ತಕಾಭಿಷೇಕಕ್ಕೆ ಭಾರತದ ವಿವಿಧ ಭಾಗಗಳಿಂದ ಯಾತ್ರಿಕರು ಬರುತ್ತಾರೆ. ಕೊಡಗು ನಿಸರ್ಗದ ಚೆಲುವಿನ ವಿಶಿಷ್ಟ ಸಂಸ್ಕೃತಿಯ ಜಿಲ್ಲೆ. ಕಾವೇರಿ ನದಿಯ ಉಗಮ ಈ ಜಿಲ್ಲೆಯಲ್ಲಿ.

ರಾಜ್ಯದಲ್ಲಿ ಮೈಸೂರು, ಬೆಂಗಳೂರು ಹಾಗೂ ಕರ್ನಾಟಕ ವಿಶ್ವವಿದ್ಯಾನಿಲಯಗಳೂ ಹೆಬ್ಬಾಳದಲ್ಲಿ ಒಂದು ಕೃಷಿ ವಿಶ್ವವಿದ್ಯಾನಿಲಯವೂ ಇವೆ.





ವಿದ್ಯಾ ಸಚಿವ : ಕೆ. ವಿ. ಶಂಕರಗೌಡ   ಅರ್ಥ ಸಚಿವ : ರಾಮಕೃಷ್ಣ ಹೆಗಡೆ

ಇವರ ಅಧಿಕಾರಾವಧಿಯಲ್ಲಿ 'ಜ್ಞಾನ ಗಂಗೋತ್ರಿ' ಯೋಜನೆ ಆರಂಭವಾಯಿತು. 'ಕನ್ನಡ ವಿಶ್ವಕೋಶ' ರಚನೆಗೆ ಚಾಲನೆ ದೊರೆಯಿತು. 'ವಿಷಯ ವಿಶ್ವಕೋಶ' ಯೋಜನೆಗೆ ಒಪ್ಪಿಗೆ ಲಭಿಸಿತು.



[illegible] ಸಹಾಯಕ ಸಚಿವೆ : [illegible]



ಅಧಿಕಾರ, ನಾಯಕತ್ವ : ಎಂ. ವಿ. ಕೃಷ್ಣಪ್ಪ

ಕನ್ನಡ, ಸಮಾಜವಾದ : ಶಾಂತವೇರಿ ಗೋಪಾಲ ಗೌಡ



ಒಕ್ಕೂಟ ಮಂತ್ರಿತ್ವ : ಟೋಣ್ಸೆ ಅನಂತ ಪೈ




ಬೆಂಗಳೂರು, ಬೆಳಗಾವಿ, ಮಂಗಳೂರುಗಳಲ್ಲಿ ವಿಮಾನ ನಿಲ್ದಾಣಗಳಿವೆ. ಕರ್ನಾಟಕಕ್ಕೆ ಸುಮಾರು 200 ಮೈಲು ಉದ್ದದ ಕರಾವಳಿಯಿದೆ. ಇದರ ಮೇರೆಗಳು ಗೋವ, ಮಹಾರಾಷ್ಟ್ರ, ಆಂಧ್ರ ಪ್ರದೇಶ, ತಮಿಳುನಾಡು, ಕೇರಳ ಹಾಗೂ ಅರಬಿ ಸಮುದ್ರ.

ನೋಡಿ : ಆಗುಂಬೆ ; ಉಡುಪಿ ; ಕನ್ನಡ ಭಾಷೆ, ಸಾಹಿತ್ಯ ; ಕುದುರೆಮುಖ ; ಕೆಮ್ಮಣ್ಣು ಗುಂಡಿ ; ಕೋಡಿಮಠ ; ಗೋಕರ್ಣ ; ಚಂದ್ರವಳ್ಳಿ ; ಜೋಗ್ ; ತಲಕಾಡು ; ದಾಂಡೇಲಿ ; ನಂದಿಬೆಟ್ಟ ; ನಾಗಾವಿ ; [illegible] ; ಬಂಕಾಪುರ ; ಬನವಾಸಿ ; ಬಸವಕಲ್ಯಾಣ ; ಬಳ್ಳಿಗಾವೆ ; ಬಿಜಾಪುರ ; ಬೃಂದಾವನ ; ಬೆಂಗಳೂರು ; ಬೇಲೂರು ; ಭದ್ರಾವತಿ ; ಮಂಗಳೂರು ; ಮಡಿಕೇರಿ ; ಮಾನ್ಯಖೇಟ ; ಮೇಲುಕೋಟೆ ; ಮೈಸೂರು ; ರಕ್ಕಸತಂಗಡಿ ; ಶ್ರವಣಬೆಳಗೊಳ ; ಶ್ರೀರಂಗಪಟ್ಟಣ ; ಶೃಂಗೇರಿ ; ಸೋಮನಾಥಪುರ ; ಹಂಪೆ ; ಹಳೇಬೀಡು ; ಹುಬ್ಬಳ್ಳಿ–ಧಾರವಾಡ

ಕರ್ನಾಟಕ ಏಕೀಕರಣ

ಕರ್ನಾಟಕದಲ್ಲಿ ಪ್ರಬಲ ರಾಜ್ಯಗಳಿದ್ದಾಗ, ಕನ್ನಡ ಮಾತನಾಡುವ ಜನರು ವಾಸಿಸುವ ಎಲ್ಲ ಪ್ರದೇಶಗಳು ಅಥವಾ ಅದರ ಬಹುಭಾಗ ಒಂದೇ ರಾಜಕೀಯ ಆಡಳಿತಕ್ಕೆ ಒಳಗಾಗಿದ್ದುದು ಒಂದು ಸಾಮಾನ್ಯ ಲಕ್ಷಣವಾಗಿತ್ತು.








ಡೆಪ್ಯುಟಿ ಚೆನ್ನಬಸಪ್ಪ ಗದಿಗೆಯ್ಯ ಹೊನ್ನಾಪುರಮಠ ಹರ್ಡೇಕರ್ ಮಂಜಪ್ಪ

ಕರ್ನಾಟಕದ ಏಕೀಕರಣದ ಮೊದಲ ಕನಸು ಕಂಡವರು ಡೆಪ್ಯುಟಿ ಚೆನ್ನಬಸಪ್ಪನವರು. 1856ರಷ್ಟು ಹಿಂದೆಯೇ ಅವರು ಏಕೀಕರಣ ಚಳುವಳಿಯನ್ನು ಆರಂಭಿಸಿದರು. ಸಾಂಸ್ಕೃತಿಕವಾಗಿ ಕರ್ನಾಟಕ ಏಕೀಕರಣವನ್ನು ಸಾಧಿಸಲು 1890ರಲ್ಲಿ ಕರ್ನಾಟಕ ವಿದ್ಯಾವರ್ಧಕ ಸಂಘ ಸ್ಥಾಪಿತವಾಯಿತು. 1903ರಲ್ಲಿ ಬೆನಗಲ್ ರಾಮರಾಯರೂ 1907ರಲ್ಲಿ ಆಲೂರರೂ ಕರ್ನಾಟಕ ಏಕೀಕರಣವನ್ನು ಪ್ರತಿಪಾದಿಸಿದರು.

ಕರ್ನಾಟಕದ ರಾಜಕೀಯ ಏಕೀಕರಣ ಚಳುವಳಿ ಆರಂಭವಾದದ್ದು 1917ರಲ್ಲಿ —ಕರ್ನಾಟಕ ಸಭೆಯ ಸ್ಥಾಪನೆಯಿಂದ. ಈ ಸಂಸ್ಥೆಯನ್ನು ಕಟ್ಟಿದವರು ಕಡಪಾ ರಾಘವೇಂದ್ರರಾಯರು, ಮುದವೀಡು ಕೃಷ್ಣರಾಯರು, ಗದಿಗೆಯ್ಯ ಹೊನ್ನಾಪುರಮಠ ಮುಂತಾದವರು. 1920ರಲ್ಲಿ ಮೊದಲನೆಯ ಕರ್ನಾಟಕ ರಾಜಕೀಯ ಸಮ್ಮೇಳನ ನಡೆಯಿತು. ಕರ್ನಾಟಕ ಪ್ರಾಂತ ನಿರ್ಮಾಣವಾಗಬೇಕೆಂಬ ನಿರ್ಣಯವನ್ನು ಈ ಸಮ್ಮೇಳನ ಅಂಗೀಕರಿಸಿತು. ಅಲ್ಲಿಂದಾಚೆಗೆ ನಡೆದ ಹಲವಾರು ಸಮ್ಮೇಳನಗಳು ಕರ್ನಾಟಕ ಏಕೀಕರಣವನ್ನು ಸಮರ್ಥಿಸಿದುವು. ಬೆಳಗಾವಿಯಲ್ಲಿ 1924ರಲ್ಲಿ ಗಾಂಧೀಜಿಯ ಅಧ್ಯಕ್ಷತೆಯಲ್ಲಿ ನಡೆದ ಕಾಂಗ್ರೆಸ್ ಅಧಿವೇಶನ,





ಆಲೂರ ವೆಂಕಟರಾಯ ಬಿ. ಎಂ. ಶ್ರೀ. ಮಾಸ್ತಿ ಯು. ರಾಮರಾವ್ ಬೆನಗಲ್ ಶಿವರಾವ್ ಬೆನಗಲ್ ರಾಮರಾವ್

ಕರ್ನಾಟಕ ಏಕೀಕರಣಕ್ಕೆ ಪುಷ್ಟಿಯನ್ನೊದಗಿಸಿತು : ಈ ಬಗೆಗೆ ತೀವ್ರ ಜನಜಾಗೃತಿಯನ್ನುಂಟುಮಾಡಿತು.

ಆಧುನಿಕ ಕಾಲದಲ್ಲಿ ಈ ಐಕ್ಯಕ್ಕೆ ಭಂಗ ಬಂದದ್ದು 1799ರಲ್ಲಿ ಟಿಪ್ಪು ಸುಲ್ತಾನ ಮರಣಹೊಂದಿದ ಅನಂತರ. ಬ್ರಿಟಿಷರು ಟಿಪ್ಪುವಿನ ರಾಜ್ಯವನ್ನು ಗೆದ್ದುಕೊಂಡ ಮೇಲೆ ಅದು ಅನೇಕ ಆಡಳಿತಗಳಿಗೆ ಸೇರಿ ಹೋಯಿತು. 1956 ನವೆಂಬರ್ 1ರಂದು ವಿಸ್ತೃತ ಮೈಸೂರು ರಾಜ್ಯ ರೂಪುಗೊಳ್ಳುವ ವರೆಗೂ ಇದೇ ಸ್ಥಿತಿಯಿತ್ತು.

ಹೀಗೆ ಬೇರೆಬೇರೆ ಆಡಳಿತಗಳಿಗೆ ಹಂಚಿ ಹೋಗಿದ್ದರೂ ಕನ್ನಡ ಮಾತನಾಡುವ ಜನರಿರುವ ಪ್ರದೇಶಗಳೆಲ್ಲವೂ ಒಂದು ಆಡಳಿತಕ್ಕೆ ಒಳಪಡಬೇಕು ಎನ್ನುವ ಬಯಕೆ ಟಿಪ್ಪುವಿನ ಮರಣಾನಂತರ 50-60 ವರ್ಷ ಕಳೆಯುವ ಹೊತ್ತಿಗೆ ಮೊಳೆಯಲಾರಂಭಿಸಿತು. ಈ ಕಾಲದಲ್ಲೇ ಭಾರತವನ್ನು ಭಾಷೆಗಳ ಆಧಾರದ ಮೇಲೆ ಪ್ರಾಂತಗಳನ್ನಾಗಿ ವಿಂಗಡಿಸಬೇಕೆಂಬ ಒಂದು ವಾದವೂ ಬೆಳೆದಿತ್ತು.

ಸಾರ್ವಜನಿಕ ಚಳವಳಿಯ ಜೊತೆಗೆ ಶಾಸನಸಭೆಗಳಲ್ಲೂ ಕರ್ನಾಟಕ ಏಕೀಕರಣದ ಬಗೆಗೆ ನಿರ್ಣಯಗಳನ್ನು ಮಂಡಿಸಲಾಯಿತು. 1928ರಲ್ಲಿ ಡಾ. ಯು. ರಾಮರಾಯರು ಕೇಂದ್ರ ಶಾಸನಸಭೆಯಲ್ಲೂ 1929ರಲ್ಲಿ ವಿಶ್ವನಾಥರಾವ್ ಜೋಗ್ ಅವರು ಮುಂಬಯಿ ಶಾಸನಸಭೆಯಲ್ಲೂ ಏಕೀಕರಣ ನಿರ್ಣಯಗಳನ್ನು ಮಂಡಿಸಿದರು.


1931ರಲ್ಲಿ ನಡೆದ ದುಂಡುಮೇಜಿನ ಪರಿಷತ್ತಿನಲ್ಲಿ ಕೂಡ ಕರ್ನಾಟಕ ಏಕೀಕರಣ ಪ್ರಸ್ತಾಪಿಸಲ್ಪಟ್ಟಿತು. ಬೆನಗಲ್ ಶಿವರಾಯರು ಈ ವಿಚಾರವನ್ನು ಕುರಿತು ಒಂದು ಜ್ಞಾಪಕಪತ್ರವನ್ನು ಸಲ್ಲಿಸಿದರು. ಬಿ. ಎಂ. ಶ್ರೀ.,


ಕುವೆಂಪು ಶಿವಮೂರ್ತಿ ಶಾಸ್ತ್ರೀ ಮುದವೀಡು ಕೃಷ್ಣರಾವ್ ಕಡಪಾ ರಾಘವೇಂದ್ರರಾವ್ ದೇಶಪಾಂಡೆ ಗಂಗಾಧರ











...ಲಗೋಳ ...ಣರಾವ್ ಕಾರ್ನಾಡು ಸದಾಶಿವರಾವ್ ಎಸ್. ನಿಜಲಿಂಗಪ್ಪ

ಕುವೆಂಪು ಮುಂತಾದ ಕವಿಗಳು ಏಕೀಕೃತ ಕರ್ನಾಟಕದ ಭವ್ಯ ಚಿತ್ರವನ್ನು ಜನರ ಮುಂದಿಟ್ಟು ಅವರನ್ನು ಹುರಿದುಂಬಿಸಿದರು. ಇಷ್ಟೆಲ್ಲ ಚಳುವಳಿ ನಡೆದರೂ ಏಕೀಕರಣದ ಬಗೆಗೆ ಬ್ರಿಟಿಷ್ ಸರಕಾರ ಆಸಕ್ತಿ ವಹಿಸಲಿಲ್ಲ. ಭಾರತಕ್ಕೆ ಸ್ವಾತಂತ್ರ್ಯ ದೊರೆತಲ್ಲದೆ ಈ ಕಾರ್ಯ ಸಿದ್ಧಿಸುವ ಸಂಭವವಿಲ್ಲ ಎಂದೆನಿಸಿತು. ಈ ಸನ್ನಿವೇಶದಲ್ಲಿ ಕಾಂಗ್ರೆಸ್ 1938ರಲ್ಲಿ ಭಾಷಾನುಗುಣ ಪ್ರಾಂತ ರಚನೆಯ ತತ್ತ್ವಕ್ಕೆ ತನ್ನ ಒಪ್ಪಿಗೆ ಕೊಟ್ಟಿತು. ಅದೇ ವರ್ಷ ಬೆನಗಲ್ ರಾಮರಾಯರೂ ಬಿ. ಶಿವಮೂರ್ತಿ ಶಾಸ್ತ್ರಿಗಳೂ ಬೆಂಗಳೂರಿನಲ್ಲಿ ಏಕೀಕರಣ ಸಂಘವನ್ನು ಸ್ಥಾಪಿಸಿ ಮೈಸೂರು ಸಂಸ್ಥಾನದಲ್ಲಿ ಏಕೀಕರಣ ಚಳುವಳಿಯನ್ನು ಬಲಗೊಳಿಸಿದರು.

ಕರ್ನಾಟಕ ಏಕೀಕರಣಕ್ಕೆ ಸಂಬಂಧಿಸಿದಂತೆ ಕೆಲವು ಸಮಸ್ಯೆಗಳಿದ್ದುವು. ಇವು ಐತಿಹಾಸಿಕ ಘಟನೆಗಳ ಪರಿಣಾಮ. ಮೈಸೂರು ಸಂಸ್ಥಾನ ಕರ್ನಾಟಕದ ಒಂದು ದೊಡ್ಡ ಭಾಗವಾಗಿದ್ದು ಅದು ಮೈಸೂರು ಒಡೆಯರ ರಾಜಮನೆತನದ ಆಳ್ವಿಕೆ ಒಳಪಟ್ಟಿತ್ತು. ಕರ್ನಾಟಕದ ಇನ್ನು ಕೆಲವು ಭಾಗಗಳು ಹೈದರಾಬಾದಿನ ನಿಜಾಮರ ಆಡಳಿತಕ್ಕೆ ಒಳಪಟ್ಟಿದ್ದುವು.







ಕೆ. ಆರ್. ಕಾರಂತ್ ಜನರಾಜ ಹೆಗ್ಗೆ

ಮದರಾಸು ಮತ್ತು ಮುಂಬಯಿ ಪ್ರಾಂತ್ಯಗಳಿಗೆ ಕೆಲವು ಭಾಗಗಳು ಸೇರಿದ್ದುವು. ಅನೇಕ ಚಿಕ್ಕಪುಟ್ಟ ಪ್ರದೇಶಗಳು ಸಂಸ್ಥಾನಿಕರ ಆಡಳಿತದಲ್ಲಿದ್ದುವು. ಇವೆಲ್ಲವನ್ನೂ ಒಂದು ರಾಜಕೀಯ ಆಡಳಿತಕ್ಕೆ ಒಳಪಡಿಸುವುದು ಹೇಗೆ ಎಂಬುದೇ ದೊಡ್ಡ ಸಮಸ್ಯೆಯಾಗಿತ್ತು. ಈ ಸಮಸ್ಯೆ ಭಿನ್ನಾಭಿಪ್ರಾಯಗಳಿಗೆ ಎಡೆಕೊಟ್ಟಿತು. ಬ್ರಿಟಿಷ್ ಆಡಳಿತಕ್ಕೊಳಗಾಗಿದ್ದ ಕನ್ನಡ ಸೀಮೆಯನ್ನು ಒಂದು ಪ್ರಾಂತ್ಯವಾಗಿಯೂ ಮೈಸೂರು ಸಂಸ್ಥಾನವನ್ನು ಇನ್ನೊಂದು ಪ್ರಾಂತ್ಯವನ್ನಾಗಿಯೂ ರೂಪಿಸಿ, ಎರಡು ಕರ್ನಾಟಕ ಪ್ರಾಂತಗಳನ್ನು ರೂಪಿಸಬೇಕೆಂಬ ಸಲಹೆಯೂ ಬಂತು.

1953 ಅಕ್ಟೋಬರ್ 1ರಂದು ಆಂಧ್ರಪ್ರದೇಶದ ರಚನೆಯ ಸಂದರ್ಭದಲ್ಲಿ ಬಳ್ಳಾರಿ ಜಿಲ್ಲೆಯ ಕೆಲವು ಪ್ರದೇಶಗಳನ್ನು ಕರ್ನಾಟಕದ ಭಾಗವೆಂದು

...ವಾಕರ ಡಾ. ನಾಗನಗೌಡ ಅಂದಾನಪ್ಪ ದೊಡ್ಡಮೇಟಿ







ನಿರ್ಧರಿಸಿ ಅವನ್ನು ಅಂದಿನ ಮೈಸೂರು ಸಂಸ್ಥಾನಕ್ಕೆ ಸೇರಿಸಲಾಯಿತು. ಅದೇ ವರ್ಷ ಡಿಸೆಂಬರ್ 29ರಂದು ರಚಿತವಾದ ಫಜಲ್ ಅಲಿ ಸಮಿತಿ ಕರ್ನಾಟಕ ರಾಜ್ಯ ನಿರ್ಮಾಣವನ್ನೂ ಯಾವ ಯಾವ ಪ್ರದೇಶಗಳು ಈ ರಾಜ್ಯಕ್ಕೆ ಸೇರಬೇಕು ಎಂಬುದನ್ನೂ ಸೂಚಿಸಿತು. ಕೇಂದ್ರ ಸರಕಾರ ಈ ಸೂಚನೆಯನ್ನು ಪರಿಶೀಲಿಸಿ ಅದರಲ್ಲಿ ಕೆಲವು ಬದಲಾವಣೆಗಳನ್ನು ಮಾಡಿ ಒಂದು ಮಸೂದೆಯನ್ನು ರಚಿಸಿತು. ಕೇಂದ್ರ ಶಾಸನ ಸಭೆಗಳು ಅದಕ್ಕೆ ಒಪ್ಪಿಗೆ ನೀಡಿದುವು. 1956 ಆಗಸ್ಟ್ 31ರಂದು ರಾಷ್ಟ್ರಪತಿಗಳ ಸಮ್ಮತಿ ದೊರೆತು ಇದು ಕಾಯಿದೆಯಾಯಿತು. ಅದೇ ವರ್ಷ ನವೆಂಬರ್ 1ರಂದು ವಿಶಾಲ ಮೈಸೂರು ರಾಜ್ಯ ಸ್ಥಾಪಿತವಾಯಿತು.

1973 ನವೆಂಬರ್ 1ರಂದು ಈ ರಾಜ್ಯಕ್ಕೆ ಕರ್ನಾಟಕ ಎಂದು ಹೆಸರಿಡಲಾಯಿತು. ಕನ್ನಡ ಮಾತನಾಡುವ ಜನರಿರುವ ಪ್ರದೇಶದ ಬಹುಭಾಗ ಈ ರಾಜ್ಯಕ್ಕೆ ಸೇರಿದೆ.

ಕರ್ನಾಟಕ ವಿದ್ಯಾವರ್ಧಕ ಸಂಘ

ನೋಡಿ : ಸಂಪುಟ ೫

ಕರ್ನಾಟಕ ಸಂಗೀತ

ನೋಡಿ : ಸಂಪುಟ ೫

ಕನ್ಯಾಕುಮಾರಿ

ಬಾಣಾಸುರ ಎಂಬ ರಾಕ್ಷಸ ಈಶ್ವರನನ್ನು ಕುರಿತು ತಪಸ್ಸುಮಾಡಿ, ಕನ್ಯೆಯಿಂದಲ್ಲದೆ ಇತರರಿಂದ ಸಾವು ಉಂಟಾಗದಂಥ ವರ ಪಡೆದ. ತನ್ನ ಶಕ್ತಿಯನ್ನು ದುರುಪಯೋಗಪಡಿಸಿಕೊಂಡು ಹಿಂಸಾಚಾರಿಯಾದ. ದೇವತೆಗಳು ಮಾಡಿದ ಯಜ್ಞದ ಫಲವಾಗಿ ಶಕ್ತಿದೇವತೆ ಕುಮಾರಿಯಾಗಿ ಅವತರಿಸಿದಳು. ತನ್ನನ್ನು ಮೋಹಿಸಿ ಬಂದ ಬಾಣಾಸುರನನ್ನು ಕುಮಾರಿ ವಧಿಸಿದಳು.

ಇದು ಕನ್ಯಾಕುಮಾರಿಯಲ್ಲಿ ಸ್ಥಾಪಿತವಾಗಿರುವ ದೇವಿಯನ್ನು ಕುರಿತ ಪುರಾಣಕಥೆ.

ಕನ್ಯಾಕುಮಾರಿ, ಭಾರತದ ದಕ್ಷಿಣ ಅಂಚಿನಲ್ಲಿ ಮೂರು ಸಮುದ್ರಗಳು ಕೂಡುವ ಸ್ಥಳದಲ್ಲಿರುವ ಕ್ಷೇತ್ರ.

ಕನ್ಯಾಕುಮಾರಿ ಪಶ್ಚಿಮ ಘಟ್ಟಕ್ಕೆ ಸೇರಿದ ಏಲಕ್ಕಿ ಗುಡ್ಡದ ದಕ್ಷಿಣ ಕೊನೆಯಲ್ಲಿದೆ. ಇಲ್ಲಿಂದ ಕಾಣುವ ಸೂರ್ಯೋದಯ, ಸೂರ್ಯಾಸ್ತಗಳ

ಕನ್ಯಾಕುಮಾರಿ ದೇವಾಲಯ



ದೃಶ್ಯ ರಮಣೀಯ. ಕಡಲತಡಿಯ ಮರಳುರಾಶಿ ಮುತ್ತು, ರತ್ನಗಳಂತೆ ಹೊಳೆಯುತ್ತಿರುತ್ತದೆ. ಕನ್ಯಾಕುಮಾರಿ ದೇವಾಲಯದಿಂದಾಗಿ ಈ ಊರಿಗೆ ಅದೇ ಹೆಸರು. ಮಾತೃ ತೀರ್ಥ, ಪಿತೃ ತೀರ್ಥ, ಗಾಯತ್ರಿ ತೀರ್ಥ ಹಾಗೂ ಸಾವಿತ್ರಿ ತೀರ್ಥಗಳಿವೆ. ಇಂದ್ರಕಾಂತ ವಿನಾಯಕ ಮಂದಿರದ ಮೂರ್ತಿಯನ್ನು ಇಂದ್ರ ಪ್ರತಿಷ್ಠಾಪಿಸಿದ್ದು ಎನ್ನುತ್ತಾರೆ.

ಕನ್ಯಾಕುಮಾರಿಗೆ ಹತ್ತಿರದಲ್ಲೇ ಸಮುದ್ರದ ನಡುವೆ ಎದ್ದು ನಿಂತಿರುವ ಬಂಡೆಯ ಮೇಲೆ ಭವ್ಯವಾದ ವಿವೇಕಾನಂದ ಸ್ಮಾರಕವನ್ನು ಕಟ್ಟಿದ್ದಾರೆ. ವಿವೇಕಾನಂದರು ಸಂಚಾರ ಕಾಲದಲ್ಲಿ ಇಲ್ಲಿಗೆ ಬಂದಿದ್ದಾಗ, ಸಮುದ್ರದಲ್ಲಿ ಈಜಿ ಹೋಗಿ ಈ ಬಂಡೆಯ ಮೇಲೆ ಕುಳಿತು ಧ್ಯಾನಮಗ್ನರಾಗಿದ್ದರು. ಮುಂದೆ ಈ ಬಂಡೆಗೆ ವಿವೇಕಾನಂದ ಬಂಡೆ ಎಂಬ ಹೆಸರು ಬಂತು.

ಸಮುದ್ರವಿಜ್ಞಾನದ ವಿದ್ಯಾರ್ಥಿಗಳು ಅಪೂರ್ವ ಸಾಗರ ಸಸ್ಯ, ಪ್ರಾಣಿ, ಚಿಪ್ಪು ಸಂಗ್ರಹಕ್ಕಾಗಿ ಕನ್ಯಾಕುಮಾರಿಗೆ ಬರುತ್ತಾರೆ.

ಕನಿಷ್ಕ

ಭಾರತದ ಅತಿ ಶ್ರೇಷ್ಠ ದೊರೆಗಳಲ್ಲಿ ಒಬ್ಬನಾದ ಕನಿಷ್ಕ ಕುಶಾನ ವಂಶದವನು.

ಈತನು ಒಂದು ಶಕೆಯನ್ನು ಆರಂಭಿಸಿದನೆಂದೂ ಕ್ರಿ.ಶ. 78ರಿಂದ ಆರಂಭವಾದ ಶಕೆಯೇ ಇದೆಂದೂ ಭಾವಿಸಲಾಗಿದೆ. ಒಟ್ಟಿನಲ್ಲಿ ಈತ 1–2ನೆಯ ಶತಮಾನದಲ್ಲಿ ಇದ್ದಿರಬೇಕು.

ಕನಿಷ್ಕ ಆಳುತ್ತಿದ್ದ ರಾಜ್ಯ ಪುರುಷಪುರ(ಪೆಷಾವರ)ದಿಂದ ಪೂರ್ವ ದಿಕ್ಕಿಗೆ ಹರಡಿತ್ತು. ಪಂಜಾಬ್, ಕಾಶ್ಮೀರ, ಸಿಂಧ್, ಗುಜರಾತ್‌ಗಳೆಲ್ಲ ಇವನ ಅಧೀನದಲ್ಲಿದ್ದುವು. ಕುಶಾನರ ತವರಾದ ಮಧ್ಯ ಏಷ್ಯದ ಗಣನೀಯ ಭಾಗಗಳು ಕನಿಷ್ಕನಿಗೆ ಸೇರಿದ್ದುವು. ಕನಿಷ್ಕ ನಡೆಸಿದ ಯುದ್ಧಗಳು ಅನೇಕ.



ಕನಿಷ್ಕನದೆನ್ನಲಾದ ಭಗ್ನ ಶಿಲ್ಪ

ಅಶ್ವಘೋಷನೆಂಬ ಬೌದ್ಧ ಪಂಡಿತ, ಕವಿ ಹಾಗೂ ದಾರ್ಶನಿಕನಿಂದಾಗಿ ಕನಿಷ್ಕನಲ್ಲಿ ಬೌದ್ಧ ಧರ್ಮದ ಬಗೆಗೆ ಒಲವು ಮೂಡಿತು. ಅನಂತರ ಇವನು ಬೌದ್ಧ ಧರ್ಮ ಪ್ರಚಾರಕ್ಕಾಗಿ ಅನೇಕ ಕಾರ್ಯಗಳನ್ನು ಕೈಗೊಂಡ. ಬುದ್ಧ ಪ್ರತಿಮೆಗಳನ್ನು ಮಾಡಿಸಿದ. ಭವ್ಯ ಚೈತ್ಯಗಳನ್ನು ಕಟ್ಟಿಸಿದ. ಬೌದ್ಧ ಧರ್ಮದ ನಾಲ್ಕನೆಯ ಮಹಾಸಭೆಯನ್ನು (ಸಂಗೀತಿಯನ್ನು) ಸೇರಿಸಿ ಬೌದ್ಧ ಧರ್ಮ ಗ್ರಂಥಗಳ ಮೇಲೆ ವ್ಯಾಖ್ಯಾನಗಳ ರಚನೆಗೆ ಕಾರಣನಾದ. ತಾನು ಬೌದ್ಧನಾದರೂ ಇತರ ಧರ್ಮಗಳಿಗೂ ಪ್ರೋತ್ಸಾಹ ಕೊಟ್ಟ.



ಕನಿಷ್ಕ ನಾಣ್ಯಗಳು

ಪಾರ್ಶ್ವ, ವಸುಮಿತ್ರರೆಂಬ ಬೌದ್ಧ ವಿದ್ವಾಂಸರು, ಪ್ರಾಚೀನ ಭಾರತದ ಸುಪ್ರಸಿದ್ಧ ವೈದ್ಯ ಚರಕ, ಹೆಸರಾದ ರಾಜನೀತಿಜ್ಞ ಮಾಠರ, ತತ್ತ್ವವೇತ್ತ ನಾಗಾರ್ಜುನ, ಗ್ರೀಕ್ ವಾಸ್ತುಶಿಲ್ಪಿ ಅಜಿಸೀಲಿಯಸ್ ಇವನ ಆಸ್ಥಾನದಲ್ಲಿದ್ದರು. ಪೆಷಾವರದಲ್ಲಿ ಕನಿಷ್ಕ ಕಟ್ಟಿಸಿದ ಚೈತ್ಯ ಬಹಳ ಕಾಲದ ವರೆಗೆ ಒಂದು ಕೌತುಕವೆನಿಸಿತ್ತು. 13 ಅಂತಸ್ತುಗಳ ಈ ಚೈತ್ಯದ ಗೋಪುರ 400 ಅಡಿ ಎತ್ತರವಿದ್ದಿತು. ಗಾಂಧಾರ ಶಿಲ್ಪಶೈಲಿ ಕನಿಷ್ಕನ ಕಾಲದಲ್ಲಿ ರೂಪುಗೊಂಡಿತು.

ಬೌದ್ಧಧರ್ಮದ ಚರಿತ್ರೆಯಲ್ಲಿ ಕನಿಷ್ಕ ಗೌರವಪಾತ್ರನಾಗಿದ್ದಾನೆ. ಸಂಸ್ಕೃತದಲ್ಲಿ ಈತನ ಹೆಸರು ಕನಿಷ್ಠ ಎಂದು ಬಳಸಲ್ಪಟ್ಟಿದೆ. ಕನಿಷ್ಕ 23 ವರ್ಷ ಕಾಲ ರಾಜ್ಯವಾಳಿದ. ಕೊನೆಯಲ್ಲಿ ಅವನ ಕೊಲೆಯಾಯಿತು.

ಕನ್ಹೋಜೀ ಆಂಗ್ರೆ

ಭಾರತೀಯ ನೌಕಾ ಇತಿಹಾಸದ ವರ್ಣರಂಜಿತ ವ್ಯಕ್ತಿ, ಕನ್ಹೋಜೀ ಆಂಗ್ರೆ. 17-18ನೆಯ ಶತಮಾನದಲ್ಲಿ ಮರಾಠ ನೌಕಾಧಿಪತಿಯಾಗಿದ್ದ ಈತ ಕೊಂಕಣ ಕರಾವಳಿಯನ್ನು ತನ್ನ ಹಿಡಿತದಲ್ಲಿಟ್ಟುಕೊಂಡಿದ್ದ ರೀತಿ, ಆತನ ಸುಸಂಘಟಿತ ನೌಕಾನೆಲೆ, ನೌಕಾಸೇನೆ ಹಾಗೂ ಆಕ್ರಮಣ ವಿಧಾನ ಉಲ್ಲೇಖನೀಯ.

ಕನ್ಹೋಜೀ ಹುಟ್ಟಿದ್ದು ನಾವಿಕರ ಕುಟುಂಬದಲ್ಲಿ. ಆತನ ತಂದೆ ತುಕಾಜಿ ಶಿವಾಜಿಯ ನೌಕಾಪಡೆಯಲ್ಲಿದ್ದು ಪ್ರಖ್ಯಾತಿಗೆ ಬಂದಿದ್ದ. ಮರಾಠ ನೌಕಾಪಡೆಯಲ್ಲಿ ಕನ್ಹೋಜೀ ಚಿಕ್ಕ ಕೆಲಸಕ್ಕೆ ಸೇರಿ ತನ್ನ ಶೌರ್ಯ ಸಾಹಸಗಳಿಂದ ಉನ್ನತ ಸ್ಥಾನಗಳಿಗೇರಿ, ನೌಕಾಧಿಪತಿ ರಾಜಾರಾಮನ ಕಾಲದಲ್ಲಿ ಉಪನೌಕಾಧಿಪತಿಯಾದ. ರಾಜಾರಾಮನ ಅನಂತರ 1699ರಲ್ಲಿ ತಾನು ನೌಕಾಧಿಪತಿಯಾದ. ರತ್ನಗಿರಿ ಪ್ರದೇಶದ ವಿಜಯದುರ್ಗವೆಂಬ ನೈಸರ್ಗಿಕ ಬಂದರಿನಲ್ಲಿ ಕನ್ಹೋಜೀ 17ನೆಯ ಶತಮಾನದ ಅಂತ್ಯದಲ್ಲಿ ನೌಕಾನೆಲೆಯನ್ನೂ ಶಸ್ತ್ರಸಜ್ಜಿತ ನೌಕೆ ಕಟ್ಟುವ ನೌಕಾ ನಿರ್ಮಾಣ ಕೇಂದ್ರವನ್ನು ಸ್ಥಾಪಿಸಿದ. ಅವನ ಚಿಕ್ಕ ಹಡಗುಗಳು ವಿಜಯದುರ್ಗದ



ಉಜ್ವಲ ನೌಕಾಧಿಪತಿ : ಕನ್ಹೋಜೀ

[illegible]
ವನ್ನು ಬಹಳ ಜಾಗರೂಕತೆಯಿಂದ ಕಾಯುತ್ತಿದ್ದರು.

18ನೆಯ ಶತಮಾನದಲ್ಲಿ ಸಾವಂತವಾಡಿಯಿಂದ ಹಿಡಿದು ಮುಂಬಯಿಯ ವರೆಗಿನ ಕರಾವಳಿ ಕನ್ಹೋಜಿಯ ಹಿಡಿತದಲ್ಲಿತ್ತು. [illegible] ಈ ಪ್ರದೇಶದಲ್ಲಿ [illegible] ಅವನ ಅನುಮತಿಪತ್ರವಿಲ್ಲದೆ ಯಾವುದೇ ನೌಕೆ ಅಲ್ಲಿ ಹಾದುಹೋಗುತ್ತಿರಲಿಲ್ಲ.

1717ರಲ್ಲಿ 'ಸಕ್ಸೆಸ್' ಎಂಬ ಬ್ರಿಟಿಷ್ ನೌಕೆಯ ಮೇಲೆ ದಾಳಿ ನಡೆಸಿದ. 1720ರಲ್ಲಿ 'ಚಾರ್ಲೊಟ್' ಎಂಬ ನೌಕೆಯನ್ನು ಕನ್ಹೋಜಿ ತನ್ನ [illegible] ಕೊಂಡ. ಬ್ರಿಟಿಷರು ಎರಡು ಬಾರಿಯೂ [illegible] ನಷ್ಟಕ್ಕೊಳಗಾದರು. ಪೋರ್ಚುಗೀಸರೊಡನೆ ಸೇರಿ ಮತ್ತೊಮ್ಮೆ 1722ರಲ್ಲಿ ಅವನ ಮೇಲೆ ದಾಳಿಮಾಡಿ ವಿಫಲರಾದರು. ಎರಡು ಡಚ್ ವ್ಯಾಪಾರಿ ನೌಕೆಗಳನ್ನು ಕನ್ಹೋಜಿ ವಶಪಡಿಸಿಕೊಂಡಾಗ, ಡಚ್ ನೌಕಾದಳವೂ [illegible] ಮೇಲೆ 1724ರಲ್ಲಿ ದಾಳಿ ನಡೆಸಲು ಪ್ರಯತ್ನಿಸಿ ವಿಫಲವಾಯಿತು. 1727ರ ಹೊತ್ತಿಗೆ ಕನ್ಹೋಜಿಯ ನೌಕಾ ಪ್ರಾಬಲ್ಯ ಅತ್ಯುನ್ನತ ಮಟ್ಟಕ್ಕೇರಿತು.

ಕನ್ಹೋಜಿ ಯಾವಾಗ ಮರಣ ಹೊಂದಿದ ಎಂಬ ಬಗೆಗೆ ಭಿನ್ನಾಭಿಪ್ರಾಯ ಇದೆ. 1728—31 ಅವಧಿಯಲ್ಲಿ ಅವನ ಅವಸಾನವಾಗಿರಬಹುದು ಎಂದು ಊಹೆ. ಅವನ ಅನಂತರ ಮರಾಠಾ ನೌಕಾದಳ ವರ್ಚಸ್ಸನ್ನು ಕಳೆದುಕೊಂಡಿತು.

ವಿದೇಶೀ ಚರಿತ್ರಕಾರರು ಕೆಲವರು ಸಾಹಸಿ ಕನ್ಹೋಜಿಯನ್ನು ಕಡಲ್ಗಳ್ಳ ಎಂದು ಕರೆದಿರುವುದೂ ಉಂಟು. ಆದರೆ ಈ ಆಪಾದನೆ ಸತ್ಯದೂರ ವಾದದ್ದು. ಈ ಅದ್ವಿತೀಯ ನೌಕಾಧಿಪತಿಗೆ ಭಾರತದ ಇತಿಹಾಸ ದಲ್ಲಿ ಶಾಶ್ವತ ಸ್ಥಾನವಿದೆ.

ಈಚಿನ ದಿನಗಳಲ್ಲಿ ಸ್ವತಂತ್ರ ಭಾರತ ಮುಂಬಯಿಯಲ್ಲಿರುವ ತನ್ನ ಒಂದು ನೌಕಾನೆಲೆಗೆ ಐ.ಎನ್.ಎಸ್. 'ಆಂಗ್ರೆ' ಎಂದು ಹೆಸರಿಟ್ಟಿದೆ.

ಕನ್ನೌಜ್

ಕುಶನಾಭ ದೊರೆಯ [illegible] ಹೆಣ್ಣುಮಕ್ಕಳು. ಅವರೆಲ್ಲರನ್ನೂ ವಿವಾಹವಾಗಲು ಬಯಸಿ ಹತಾಶನಾದ ವಾಯು ಅವರನ್ನು ಕುಬ್ಜೆಯರಾಗುವಂತೆ ಮಾಡಿದ. ಹೀಗೆ ಮಹೋದಯಕ್ಕೆ ಕಾನ್ಯಕುಬ್ಜ—ಕುಬ್ಜಕನ್ಯೆಯರ ಊರು—ಎಂಬ ಹೆಸರು ಬಂದಿತು.

—ಇದು ರಾಮಾಯಣದಲ್ಲಿ ಬರುವ ಒಂದು ಕಥೆ.

ಗಂಗಾ ಮತ್ತು ಇಕ್ಷುಮತಿ (ಕಾಳಿ) ನದಿಗಳ ಸಂಗಮದಲ್ಲಿರುವ ಪ್ರಾಚೀನ ಭಾರತದ ಪ್ರಮುಖ ನಗರಗಳಲ್ಲಿ ಒಂದು ಕಾನ್ಯಕುಬ್ಜ. ಮುಂದೆ ಅದರ ಹೆಸರು ಕನ್ನೌಜ್. ಕ್ರಿ.ಪೂ. 900ರಷ್ಟರಲ್ಲೇ [illegible] ತಿಳಿದುಬರುತ್ತದೆ. ಅಲ್ಲಿಂದ ಸುಮಾರು 2000 ವರ್ಷ ಕಾಲ ಅದರ ಪ್ರಾಮುಖ್ಯ ಒಂದೇ ಸಮನಾಗಿತ್ತು.

ಕಾನ್ಯಕುಬ್ಜ ವಿಶ್ವಾಮಿತ್ರನ ತಂದೆಯಾದ ಗಾಧಿಯ ರಾಜಧಾನಿಯಾಗಿತ್ತು ಎಂದು ಮಹಾಭಾರತದಲ್ಲಿ ಹೇಳಿದೆ.

ಪತಂಜಲಿ, ಟಾಲೆಮಿ, ಫಾಹಿಯಾನ್, ಹ್ಯೂಯೆನ್ ತ್ಸಾಂಗರ ಬರವಣಿಗೆಗಳಲ್ಲಿ ಕಾನ್ಯಕುಬ್ಜದ ಉಲ್ಲೇಖವಿದೆ.

[illegible]

ಸುಮಾರು 400 ವರ್ಷ ಕಾಲ ಕಾನ್ಯಕುಬ್ಜ ಗುಪ್ತಸಾಮ್ರಾಜ್ಯಕ್ಕೆ ಸೇರಿದ್ದಿತು.

[illegible] ಅವನಿಗೆ ಸೇರಿತು.

ಮುಂದೆ ಅವನು ಇದನ್ನೇ ತನ್ನ ರಾಜಧಾನಿಯಾಗಿ ಮಾಡಿಕೊಂಡ. ಆಗ ಈ ನಗರ [illegible]. ಸರೋವರ, ಉದ್ಯಾನಗಳಿಂದ ಕೂಡಿತ್ತು. ಇಲ್ಲಿ ಅನೇಕ ಹಿಂದೂ ದೇವಾಲಯಗಳೂ ಬೌದ್ಧ ವಿಹಾರಗಳೂ ಇದ್ದುವು. ಈ ಕಾಲದಲ್ಲಿ ಅಲ್ಲಿ ಒಂದು ಧರ್ಮ ಸಮ್ಮೇಳನವೂ ನಡೆಯಿತು. ಚೀನೀ ಯಾತ್ರಿಕ ಹ್ಯೂಯೆನ್ ತ್ಸಾಂಗ್ ಕನ್ನೌಜಿನಲ್ಲಿ ಕೆಲ ಕಾಲ ಇದ್ದನು.

ಹರ್ಷನ ಅನಂತರ ಈ ನಗರ ಅವನತಿ ಹೊಂದಿತು. ಮತ್ತೆ [illegible] ಶತಮಾನದಲ್ಲಿ ಯಶೋವರ್ಮನ ಆಳ್ವಿಕೆಯಲ್ಲಿ [illegible]. 816ರಿಂದ ಆಳಿದ ಪ್ರತಿಹಾರ ವಂಶದವರಿಗೆ ಇದು ರಾಜಧಾನಿಯಾಯಿತು. 1018ರಲ್ಲಿ ಮಹಮೂದ್ ಘಜ್ನಿಯ ದಾಳಿಗೆ ಗುರಿಯಾಯಿತು. ಆ ಕಾಲದಲ್ಲಿ ಕಾನ್ಯಕುಬ್ಜ ರಜಪೂತರಾದ ರಾಥೋಡರಿಗೆ ಸೇರಿತ್ತು: ಜಯಚಂದ್ರನೇ ಇವರ ಕೊನೆಯ ಅರಸ. 1540ರಲ್ಲಿ ಹುಮಾಯೂನ್ ಮತ್ತು ಶೇರ್ ಷಾ ರೊಳಗೆ ಯುದ್ಧವಾದಾಗ ಕಾನ್ಯಕುಬ್ಜ ನಾಶವಾಯಿತು.

ಈಗಿನ ಕನ್ನೌಜ್ ಉತ್ತರ ಪ್ರದೇಶ [illegible]: ಸುಗಂಧ ದ್ರವ್ಯ ಹಾಗೂ ಹೊಗೆಸೊಪ್ಪಿನ ತಯಾರಿಕೆಗೆ ಹೆಸರು ವಾಸಿ.

ಇಲ್ಲಿ ನಾಲ್ಕು ಮೈಲಿ ವ್ಯಾಸದಷ್ಟು ಪ್ರದೇಶ ಪುರಾತನ ಹಾಗೂ [illegible] ಕಾನ್ಯಕುಬ್ಜದಲ್ಲಿದೆ.

ಕಪಿಲ

[illegible] ದರ್ಶನದ ಮೂಲ ಕರ್ತೃ ಕಪಿಲ.

[illegible] ಋಷಿಗಳು ಅದನ್ನು ಆಸುರಿಯಿಂದ ಅರಿತುಕೊಂಡರು ಎಂದು ಪ್ರತೀತಿ. [illegible] ದರ್ಶನ ಬಗೆಗೆ ಬರೆದಿದ್ದಾರೆ.

ಕಪಿಲನ ಪ್ರಕಾರ, ಅಸ್ತಿತ್ವವಿರುವುದು ಪ್ರಕೃತಿ ಮತ್ತು ಪುರುಷ ಎಂಬ ಎರಡು ತತ್ತ್ವಗಳಿಗೆ ಮಾತ್ರ: ಪ್ರಕೃತಿಯೇ ವಿಶ್ವದ ಎಲ್ಲ ವಿದ್ಯಮಾನಗಳಿಗೆ



ಕಾರಣ : ಸತ್ತ್ವ, ರಜಸ್ ಮತ್ತು ತಮಸ್‌ಗಳಿಂದಾದದ್ದು ಪ್ರಕೃತಿ ; ಅವುಗಳ ಅಂತರ ಕ್ರಿಯೆಯೇ ಪ್ರಕೃತಿಯ ವಿದ್ಯಮಾನಗಳಿಗೆ ಕಾರಣ ; ಪುರುಷ ತತ್ತ್ವದ ಸಾನಿಧ್ಯದಿಂದ ಪ್ರಕೃತಿ ಚೈತನ್ಯಯುಕ್ತವಾಗುತ್ತದೆ; ಆದರೆ ಪುರುಷ ಇದರಿಂದ ಯಾವ ವಿಧದಲ್ಲೂ ಪ್ರಭಾವಿತನಾಗುವುದಿಲ್ಲ. ಈ ಸತ್ಯವನ್ನು ಅರಿತುಕೊಳ್ಳುವುದೇ ಮೋಕ್ಷಕ್ಕೆ ಮಾರ್ಗ.

"ನೋವನ್ನು ಸಂಪೂರ್ಣವಾಗಿ ನಿವಾರಿಸುವುದೇ ಮಾನವನ ಸಮಗ್ರ ಗುರಿ." ಎಂದ ಕಪಿಲ. ಅವನ ಸಿದ್ಧಾಂತ ಬೌದ್ಧ ತತ್ತ್ವಗಳ ಮೇಲೂ ಪ್ರಭಾವ ಬೀರಿದೆ ಎಂಬುದು ಕೆಲವು ವಿದ್ವಾಂಸರ ಅಭಿಪ್ರಾಯ.

ನೋಡಿ : ಸಾಂಖ್ಯದರ್ಶನ

ಕಪಿಲವಸ್ತು

ನೇಪಾಲದ ತಪ್ಪಲಿನಲ್ಲಿರುವ ಲುಂಬಿನೀವನದಲ್ಲಿ 1896ರಲ್ಲಿ ಸ್ತಂಭವೊಂದು ದೊರಕಿತು. ಬುದ್ಧನ ಜನ್ಮಸ್ಥಳವನ್ನು ಗುರುತಿಸುವ ಸಲುವಾಗಿ ಆ ಸ್ತಂಭವನ್ನು ಲುಂಬಿನೀವನದಲ್ಲಿ ನೆಡಿಸಿದ್ದರು ಎಂಬುದು ಅದರ ಮೇಲೆ ಕೆತ್ತಿದ ಶಾಸನದಿಂದ ತಿಳಿದುಬಂತು. ಮಧ್ಯದಲ್ಲಿ ಸ್ತಂಭ ಸೀಳಿ ಹೋಗಿತ್ತು.

ಲುಂಬಿನೀವನ ಮತ್ತು ಅದರ ಸಮೀಪವಿದ್ದ ಪ್ರಾಚೀನ ನಗರ ಕಪಿಲವಸ್ತು ಇದ್ದ ಸ್ಥಳಗಳನ್ನು ಗುರುತಿಸಲು ಈ ಸ್ತಂಭ ಸಹಕಾರಿಯಾಯಿತು. ಈಗಿನ ಚಿತ್ರಾದೆ, ರಾಮಘಾಟ್, ಸಾಂದ್ವಾ ಮತ್ತು ತಿಲೌರಾ ಹಳ್ಳಿಗಳಿರುವ ಪ್ರದೇಶದಲ್ಲಿ ಕಪಿಲವಸ್ತುವಿತ್ತು ಎಂದು ಗುರುತಿಸುತ್ತಾರೆ. ಜ್ಞಾನಾರ್ಜನೆಗಾಗಿ ಕಪಿಲವಸ್ತುವನ್ನು ಬಿಟ್ಟುಹೋದ ಗೌತಮ, ತನ್ನ ಸಾಧನೆಯಲ್ಲಿ ಸಫಲನಾಗಿ ಬುದ್ಧನಾದ ಮೇಲೆ, ಮತ್ತೆ ಕಪಿಲವಸ್ತುವಿಗೆ ಬಂದು ತನ್ನ ತಂದೆ, ಹೆಂಡತಿ, ಮಗ ಇವರಿಗೆ ಧರ್ಮಬೋಧೆ ಮಾಡಿದ.

ಕಪಿಲವಸ್ತು ಪ್ರಾಚೀನ ಶಾಕ್ಯರ ರಾಜಧಾನಿಯಾಗಿತ್ತು. ಶಾಕ್ಯರ ಅರಮನೆ ಕೋಟೆ ಎಲ್ಲ ಇದ್ದುದು ಈಗಿನ ತಿಲೌರಾ ಹಳ್ಳಿ ಇರುವಲ್ಲಿ.

ಬುದ್ಧನ ಜನ್ಮಸ್ಥಳವಾದ್ದರಿಂದ ಇದು ಬೌದ್ಧರಿಗೆ ಪವಿತ್ರ ಯಾತ್ರಾಸ್ಥಳವಾಯಿತು. 7ನೆಯ ಶತಮಾನದಲ್ಲಿ ಭಾರತದ ಸಂದರ್ಶನಕ್ಕೆ ಬಂದಿದ್ದ ಚೀನೀ ಯಾತ್ರಿಕ ಹ್ಯೂಯೆನ್ ತ್ಸಾಂಗ್ ಅಶೋಕನ ಸ್ತಂಭಕ್ಕೆ ಸಿಡಿಲು ಬಡಿದಿತ್ತೆಂದೂ ಕಪಿಲವಸ್ತು ಸಂಪೂರ್ಣವಾಗಿ ಹಾಳಾಗಿತ್ತೆಂದೂ ಬರೆದಿದ್ದಾನೆ.

ಬುದ್ಧ ಇದ್ದಾಗ ಕಪಿಲವಸ್ತುವಿನ ಮೇಲೆ ಕೋಸಲ ದೇಶದ ರಾಜ ವಿರೂಪಾಕ್ಷ ದಂಡೆತ್ತಿ ಬಂದಿದ್ದ ; ಸೋಲು ಅನುಭವಿಸಿದ. ಬುದ್ಧನ ನಿರ್ವಾಣವಾದ ಬಳಿಕ ವಿರೂಪಾಕ್ಷ ಮತ್ತೆ ದಂಡೆತ್ತಿ ಬಂದು ಎಲ್ಲವನ್ನೂ ನಾಶ ಮಾಡಿದ.

ಮುಂದೆ ಅಶೋಕ ಕಪಿಲವಸ್ತುವಿಗೆ ಭೇಟಿ ನೀಡಿದ. ಅದರ ಕುರುಹಾಗಿ ಸ್ಮಾರಕಗಳನ್ನು ನಿರ್ಮಿಸಿದ.

ಕಪಿಲವಸ್ತು ಈಗ ನೇಪಾಳದಲ್ಲಿದೆ.

ಕಬೀರ

"ದೇವನ ಆರಾಧಕ ಸ್ವತಃ ದೇವನಿಗಿಂತಲೂ ಶ್ರೇಷ್ಠ. ಇಡೀ ಜಗತ್ತೇ ದೇವನಲ್ಲಿ ಅಡಕವಾಗಿದೆ. ಆದರೆ ದೇವನ ವಾಸಸ್ಥಳ ಭಕ್ತನ ಹೃದಯ."

—ಹೀಗೆ ಹೇಳಿದ ಮಹಾಭಕ್ತ, ಕಬೀರ.

ಇವನು ಜೀವಿಸಿದ್ದು ಸಾಮಾನ್ಯ ಕಾರ್ಮಿಕನಂತೆ. ಹೊಟ್ಟೆ ಹೊರೆಯಲು ನೇಕಾರನಾಗಿ ಕೆಲಸ ಮಾಡುತ್ತಿದ್ದ. ಸಾಧುಸಂತರ ಸಹವಾಸದಲ್ಲಿ ಕಾಲ ಕಳೆದರೂ ಇವನು ಗೃಹಸ್ಥನಾಗಿಯೇ ಉಳಿದ. ಅಕ್ಷರವಿದ್ಯೆ ಕಲಿತವನಲ್ಲದಿದ್ದರೂ ತಾನು ರಚಿಸಿದ ಸುಂದರ ಭಕ್ತಿಗೀತೆಗಳಿಂದ ಪಂಡಿತ-ಪಾಮರರಿಬ್ಬರ ಮನ್ನಣೆಗೂ ಪಾತ್ರನಾದ.

ಕಬೀರ ಹುಟ್ಟಿದ್ದು ಬ್ರಾಹ್ಮಣ ಕುಲದಲ್ಲಿ ; ಆದರೆ ಹೆತ್ತವರು ಆಗತಾನೇ ಜನಿಸಿದ್ದ ಶಿಶುವನ್ನು ಕಾಶಿಯ ಸರೋವರದ ಸಮೀಪದಲ್ಲಿ ಬಿಟ್ಟುಬಿಟ್ಟರು. ಕಮಲದ ಎಲೆಯ ಮೇಲೆ ಮಲಗಿ ಹೆಬ್ಬೆರಳನ್ನು ಬಾಯಿಯಲ್ಲಿ ಇಟ್ಟುಕೊಂಡಿದ್ದ ಮಗುವನ್ನು ಬಡ ಮುಸಲ್ಮಾನ ನೇಕಾರನೊಬ್ಬ ನೋಡಿದ. ಸಂತತಿಯಿಲ್ಲದ ಈತ ಮಗುವನ್ನು ತನ್ನ ಮನೆಗೆ ಕೊಂಡೊಯ್ದು ಕಬೀರನೆಂದು ನಾಮಕರಣ ಮಾಡಿ ತನ್ನ ಮಗನಂತೆಯೇ ಸಾಕಿದ.

ಮನೆಯ ಮಗ್ಗದಲ್ಲಿ ಕಬೀರ ನೇಯುವುದನ್ನು ಕಲಿತ. ಹಿಂದೂಧರ್ಮದಿಂದ ಆಕರ್ಷಿತನಾದ. ಸ್ವಾಮಿ ರಾಮಾನಂದರ ಶಿಷ್ಯನಾಗಲು ಬಯಸಿದ. ಅದುವರೆಗೆ ಹಿಂದೂ ಶಿಷ್ಯರನ್ನು ಮಾತ್ರ ಸ್ವೀಕರಿಸುತ್ತಿದ್ದ ಸ್ವಾಮಿ ರಾಮಾನಂದರು ಕಬೀರನನ್ನೂ ಶಿಷ್ಯನನ್ನಾಗಿ ಮಾಡಿಕೊಂಡರು.

ಕಬೀರ ಆಡುಭಾಷೆಯಾದ ಸರಳ ಹಿಂದಿಯಲ್ಲಿ ಹಾಡುಗಳನ್ನು ರಚಿಸುತ್ತ ದೇಶಸಂಚಾರ ಮಾಡಿದ. ಇವನು ಬೋಧಿಸಿದ್ದು ಭಕ್ತಿಮಾರ್ಗವನ್ನು. ಇವನ ಮಿತ್ರವರ್ಗದಲ್ಲಿ ಸಾಧುಗಳೂ ಫಕೀರರೂ ಇದ್ದರು. ಕಬೀರನ ಚಿಂತನೆಯಲ್ಲಿ ಹಿಂದೂಧರ್ಮದ ಹಿನ್ನೆಲೆ ಎದ್ದುಕಾಣುತ್ತದೆಯಾದರೂ ಸೂಫಿ ದಾರ್ಶನಿಕರ ಪ್ರಭಾವವೂ ಅವನ ಮೇಲಾಗಿತ್ತೆಂಬುದನ್ನು ಗುರುತಿಸಬಹುದು. ಇವನು ಸ್ಥಾಪಿಸಿದ ಹೊಸ ಪಂಥಕ್ಕೆ ಹಿಂದುಗಳಿಗೂ ಮುಸಲ್ಮಾನರಿಗೂ ಸ್ವಾಗತವಿತ್ತು. ಈ ಪಂಥದ ಲಕ್ಷಾಂತರ ಜನ ಉತ್ತರ ಭಾರತದಲ್ಲಿ ಈಗಲೂ ಇದ್ದಾರೆ.



ರಾಮ-ರಹೀಮ : ಕಬೀರ

ಮನುಷ್ಯರಲ್ಲಿ ಉತ್ತಮ ಕುಲದವರು, ನೀಚ ಕುಲದವರು ಎಂಬುದಿಲ್ಲ: ಸಮಾಜದಲ್ಲಿ ಎಲ್ಲರೂ ಸಮಾನರು: ರಾಮ–ರಹೀಮರಲ್ಲಿ ವ್ಯತ್ಯಾಸವಿಲ್ಲ ಎಂಬುದು ಕಬೀರನ ಬೋಧನೆ. ಸಂಪ್ರದಾಯವಾದಿಗಳಿಗೆ ಇಂಥ ವಾದ ಸರಿಬೀಳಲಿಲ್ಲ. ಕಾಶಿಯ ಜನರ ಕೋಪದಿಂದ ಪಾರಾಗಲು ಕಬೀರ ತನ್ನ ಕೊನೆಗಾಲದಲ್ಲಿ ಅಲ್ಲಿಂದ ಹೊರಟು ಗೋರಖ್‌ಪುರದ ಸಮೀಪದ ಮಾಘಾರ್‌ಗೆ ಹೋಗಬೇಕಾಯಿತು. ಈತ ದೀರ್ಘ ಕಾಲ ಬದುಕಿದ್ದ; 1518ರಲ್ಲಿ ಮಾಘಾರ್‌ನಲ್ಲಿ ಮರಣಹೊಂದಿದ —ಎನ್ನುತ್ತಾರೆ.

ಕಮಲಾದೇವಿ ಚಟ್ಟೋಪಾಧ್ಯಾಯ

ಸ್ವಾತಂತ್ರ್ಯ ಹೋರಾಟದಲ್ಲಿ ಸೆರೆಮನೆಗೆ ಹೋದ, ರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿ ಗಳಿಸಿರುವ, ಪ್ರಥಮ ಕನ್ನಡಿತಿ — ಕಮಲಾದೇವಿ. 1903ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಜನನ. ಲಂಡನಿನ ಸ್ಕೂಲ್ ಆಫ್ ಎಕನಾಮಿಕ್ಸ್‌ನಲ್ಲಿ ಶಿಕ್ಷಣ. ಚಿಕ್ಕ ವಯಸ್ಸಿಗೇ ವಿಧವೆಯಾದ ಕಮಲಾದೇವಿ, ಸಂಪ್ರದಾಯವನ್ನು ಮುರಿದು ಕವಿ–ಸ್ವಾತಂತ್ರ್ಯಯೋಧ ಹರೀಂದ್ರನಾಥ ಚಟ್ಟೋಪಾಧ್ಯಾಯರನ್ನು ಮದುವೆಯಾದರು.


ಯೂರೋಪಿನ ಆದ್ಯಂತ ಪತಿಯೊಡನೆ ಪ್ರವಾಸ. ಆಗ ಅಲ್ಲಿನ ನಾಟಕಗಳ ಬಗೆಗೆ ಅಧ್ಯಯನ ಮಾಡಿದರು. ಭಾರತಕ್ಕೆ ಹಿಂತಿರುಗಿದ ಮೇಲೆ ನಾಟಕಗಳಲ್ಲಿ ಪಾತ್ರ ವಹಿಸಿದರು ; ನಾಟಕ ಆಡಿಸುವುದರಲ್ಲಿ ಪತಿಗೆ ಸಹಾಯ ಮಾಡಿದರು. ಮೈಸೂರು ಸಂಸ್ಥಾನದಲ್ಲಿ ತಯಾರಾದ ಮೂಕಚಿತ್ರ 'ವಸಂತಸೇನಾ'ದಲ್ಲಿ ಅಭಿನಯಿಸಿದರು.

ನಾಟಕ ಕಲೆಯ ಅಭಿವೃದ್ಧಿಗೆ ಮೀಸಲಾದ ಇಂಡಿಯನ್ ನ್ಯಾಷನಲ್ ಥಿಯೇಟರ್, ಭಾರತೀಯ ನಾಟ್ಯಸಂಘ ಮತ್ತು ಇಂಟರ್‌ನ್ಯಾಷನಲ್ ಥಿಯೇಟರ್ ಇನ್ಸ್‌ಟಿಟ್ಯೂಟ್‌ನ ಸ್ಥಾಪನೆ—ಪುರೋಭಿವೃದ್ಧಿಯಲ್ಲಿ ಕಮಲಾದೇವಿಯವರ ಪಾತ್ರ ದೊಡ್ಡದು.

ಕುಶಲಕಲೆಯಲ್ಲಿ ಅವರ ಆಸಕ್ತಿ ಅಪಾರ. ಅವನತಿಹೊಂದಿದ್ದ ಗ್ರಾಮೀಣ ಕುಶಲ ಕಲೆಗಳ ಪುನರುಜ್ಜೀವನ ಮಾಡಿದ ಕೀರ್ತಿ ಅವರದು. ಅಖಿಲ ಭಾರತ ಕುಶಲಕಲಾ ಮಂಡಲಿಯ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದಾರೆ.

'ಭಾರತದ ಕೋಗಿಲೆ' ಎಂದು ಪ್ರಸಿದ್ಧರಾದ ಸರೋಜಿನಿ ನಾಯ್ಡು ಈಕೆಯ ಅತ್ತಿಗೆ. ಆಕೆಯಿಂದಲೂ ಗಾಂಧೀಜೀ ಮೊದಲಾದವರಿಂದಲೂ ಪ್ರಭಾವಿತರಾಗಿ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ ಕಮಲಾದೇವಿ ಅನೇಕ ಬಾರಿ ಸೆರೆಮನೆವಾಸ ಅನುಭವಿಸಿದರು. ಅಖಿಲ ಭಾರತ ಕಾಂಗ್ರೆಸ್ಸಿನ ಮತ್ತು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸದಸ್ಯೆಯಾಗಿದ್ದರು. 1948ರಲ್ಲಿ ಕಾಂಗ್ರೆಸ್ ಸೋಷಲಿಸ್ಟ್ ಪಕ್ಷ ಸೇರಿದರು.

ಕಮಲಾದೇವಿ ರಾಜಕೀಯ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಅಪಾರ ಸೇವೆ ಸಲ್ಲಿಸಿದ್ದಾರೆ. ವಾಟುಮಲ್ (ವಾಟುಮಲ್—ಅಮೆರಿಕದ ಸಂಯುಕ್ತ ಸಂಸ್ಥಾನದಲ್ಲಿ ನೆಲೆಸಿದ ಭಾರತೀಯ) ಪಾರಿತೋಷಕ ಹಾಗೂ ಫಿಲಿಪ್ಪೀನ್ಸಿನ ಮ್ಯಾಗ್ಸೇಸೇ ಪಾರಿತೋಷಕ ಇವರಿಗೆ ದೊರೆತಿವೆ.



ರಾಷ್ಟ್ರೀಯ ಖ್ಯಾತಿ :
ಕಮಲಾದೇವಿ

ಪ್ರತಿವರ್ಷ ಭಾರತದ ಶ್ರೇಷ್ಠ ನಾಟಕ ಕೃತಿಗೆ [illegible] 5,000 [illegible]

ಕರಗ ನೃತ್ಯ

ಸುಂದರವಾಗಿ ಅಲಂಕರಿಸಿದ ಕುಂಭವನ್ನು —ಕೊಡವನ್ನು— ತಲೆಯ ಮೇಲೆ ಹೊತ್ತು ನರ್ತಿಸುವುದೇ ಕರಗ ನೃತ್ಯ. 'ಕರಗ' ಎಂದರೆ ಕೊಡ. ಕೇರಳ ಮತ್ತು ತಮಿಳುನಾಡುಗಳಲ್ಲಿ ಇದು ಹೆಚ್ಚಾಗಿ ಪ್ರಚಲಿತ. ಇದು ಕೃಷ್ಣನ ಪ್ರೀತ್ಯರ್ಥವಾಗಿ ನಡೆಸಲ್ಪಡುವ ಒಂದು ನೃತ್ಯ ಎಂಬ ಭಾವನೆ ಇದೆ. ಇದನ್ನು ತಮಿಳು ನಾಡಿನಲ್ಲಿ 'ಕರಗಮ್' ಎಂದೂ ಕೇರಳದಲ್ಲಿ 'ಕುಡುತ್ತು' ಎಂದೂ ಕರೆಯುತ್ತಾರೆ.

ಕರಗ ನೃತ್ಯದ ಚಮತ್ಕಾರ ಅದ್ಭುತವಾದದ್ದು. ನರ್ತಕ ಅಥವಾ ನರ್ತಕಿ ತಲೆಯ ಮೇಲೆ ಕರಗವನ್ನು ಹೊತ್ತು ಅದನ್ನು ಕೈಗಳಿಂದ ಹಿಡಿಯದೆ ಕೈಬಿಟ್ಟು ಕುಣಿಯುತ್ತಾರೆ. ತಲೆಯ ಮೇಲೆ ಕರಗವಿದೆಯೆಂಬ ಅರಿವೂ ಇಲ್ಲದಂತೆ ಕುಣಿಯುವ ಅವರನ್ನು ಕಂಡಾಗ ಇದು ಮಾಂತ್ರಿಕ ವಿದ್ಯೆಯೋ ಎನಿಸುತ್ತದೆ. ಕರಗಗಳನ್ನು ತಲೆಯಿಂದ ಎತ್ತರಕ್ಕೆ ಹಾರಿಸಿ ಮತ್ತೆ ಯಥಾಸ್ಥಾನಕ್ಕೆ ಸೇರಿಸುವುದು ಮತ್ತು ಇದ್ದೆಡೆಯೇ ಗರಗರನೆ ತಿರುಗುವಂತೆ ಮಾಡುವುದು ಮುಂತಾದ ಚಮತ್ಕಾರಗಳೂ ಇವೆ. ಹಿನ್ನೆಲೆವಾದ್ಯಗಳು ಮೊಳಗಿದಾಗ ಅವುಗಳಿಗೆ ಅನುಗುಣವಾಗಿ ಬದಲಾಗುವ ನರ್ತನದ ಗತಿ ವಿಶಿಷ್ಟವಾದದ್ದು.

ಕೇರಳ ಪ್ರದೇಶದಲ್ಲಿ ಕಂಡುಬರುವ ಶಿಲಾಕೃತಿಗಳು ಈ ನರ್ತನ ಕಲೆಯ ಪ್ರಾಚೀನತೆಯನ್ನು ಸಾರುತ್ತವೆ.

ಮೈಸೂರು ರಾಜ್ಯದ ಬೆಂಗಳೂರು, ತುಮಕೂರು, ಕೋಲಾರ ಮುಂತಾದ ಕೆಲವು ಸ್ಥಳಗಳಲ್ಲಿ ನಡೆಯುವ ಶಕ್ತಿ ಆರಾಧನಾರೂಪದ ಕರಗ ಉತ್ಸವಗಳು ಪ್ರಧಾನವಾಗಿ ಧಾರ್ಮಿಕ ಆಚರಣೆ. ಪ್ರತಿ ವರ್ಷ ಚೈತ್ರ ಹುಣ್ಣಿಮೆಯ ರಾತ್ರಿ. ಬೆಂಗಳೂರಿನಲ್ಲಿ ನಡೆಯುವ ಕರಗದ ಉತ್ಸವ ತುಂಬ ಪ್ರಸಿದ್ಧವಾದದ್ದು ಮತ್ತು ಜನಪ್ರಿಯವಾದದ್ದು. ಈ ಉತ್ಸವ ಕಾಲದಲ್ಲಿ 'ವೀರ ಕುಮಾರ'ರು ನಡೆಸುವ ಅಲಗು ಸೇವೆ (ಆರಾಧನೆಯ ಅಂಗವಾಗಿ ಕತ್ತಿಯಿಂದ ಎದೆಗೆ ಹೊಡೆದುಕೊಳ್ಳುವುದು) ಒಂದು ಅಪೂರ್ವ ಸಾಧನೆ.



ಕರಗ :
ಚಮತ್ಕಾರ



ಕಲ್ಕತ್ತೆಯ ವಿಕ್ಟೋರಿಯಾ ಸ್ಮಾರಕ ಭವನ

ಕಲ್ಕತ್ತಾ

ನೋಡಿ : ಸಂಪುಟ ೧

ಕಲ್ಪ

ಪ್ರಾಚೀನ ಭಾರತದಲ್ಲಿ ಪ್ರಚಲಿತವಿದ್ದ ದೀರ್ಘ ಕಾಲಗಣನೆಯಲ್ಲಿ ಮುಖ್ಯ ಮಾನ, ಕಲ್ಪ.

ಸೃಷ್ಟಿಕರ್ತ ಬ್ರಹ್ಮನ ಪಾಲಿಗೆ ಕಲ್ಪ ಒಂದು ಹಗಲು ಮಾತ್ರ. ಮನುಷ್ಯನ ಒಂದು ಹಗಲನ್ನೂ ಒಂದು ರಾತ್ರಿಯನ್ನೂ —ಅಹೋರಾತ್ರಿ— ಒಂದು ದಿನ ಎನ್ನುತ್ತೇವೆ. ಇದು ಭೂಮಿ ತನ್ನ ಅಕ್ಷದ ಮೇಲೆ ಒಂದು ಬಾರಿ ತಿರುಗುವ ಅವಧಿ. ಮನುಷ್ಯನ ಇಂಥ ಅಹೋರಾತ್ರಿಗಳ ಒಂದು ಚಾಂದ್ರಮಾಸ, ಪಿತೃಗಳ ಒಂದು ಅಹೋರಾತ್ರಿ.

ಮನುಷ್ಯನ ಒಂದು ಸೌರಮಾನ ವರ್ಷಕ್ಕೆ ದೇವತೆಗಳ ಒಂದು ಅಹೋರಾತ್ರಿ ಎಂದು ಹೆಸರು. ದೇವತೆಗಳ ಪಾಲಿಗೆ ಇಂಥ 360 ದಿನಗಳಿಗೆ, ಎಂದರೆ 360 ಸೌರವರ್ಷಗಳಿಗೆ ಒಂದು ಸ್ವರ್ಗೀಯ ವರ್ಷ. 12000 ಸ್ವರ್ಗೀಯ ವರ್ಷಗಳು ಒಂದು ಚತುರ್ಯುಗ ಅಥವಾ ಮಹಾಯುಗ. ಕೃತ, ತ್ರೇತಾ, ದ್ವಾಪರ ಹಾಗೂ ಕಲಿಯುಗ ಎಂದು ನಾಲ್ಕು ಯುಗಗಳು. ಈ ಮಹಾಯುಗದಲ್ಲಿ ಮನುಷ್ಯಲೆಕ್ಕದಿಂದ 43,20,000 ಸೌರವರ್ಷಗಳು ಇರುತ್ತವೆ.

ಒಂದು ಸಾವಿರ ಮಹಾಯುಗಗಳು ಒಂದು 'ಕಲ್ಪ', ಎಂದರೆ, ಬ್ರಹ್ಮನ ಒಂದು ಹಗಲು. ಇಷ್ಟೇ ದೀರ್ಘವಾದದ್ದು ಬ್ರಹ್ಮನ ರಾತ್ರಿ. ನಮ್ಮ ಲೆಕ್ಕದಿಂದ ಬ್ರಹ್ಮನ ಒಂದು ದಿನಕ್ಕೆ 864 ಕೋಟಿ ಸೌರವರ್ಷಗಳಾಗುತ್ತವೆ.

ಬ್ರಹ್ಮನ ಆಯುಸ್ಸು ಕಲ್ಪಗಳ ಲೆಕ್ಕದಲ್ಲಿ ನೂರು ವರ್ಷ. ಅವನ ಈ ಆಯುಸ್ಸನ್ನು 'ಪರ' ಎನ್ನುತ್ತಾರೆ. ಈಗ ಬ್ರಹ್ಮನಿಗೆ ಐವತ್ತೊಂದನೆಯ ವರ್ಷದ ಮೊದಲನೆಯ ಹಗಲು, ಎಂದರೆ ಮೊದಲನೆಯ ಕಲ್ಪ. ಇದನ್ನು ಶ್ವೇತವರಾಹ ಕಲ್ಪ ಎಂದು ಕರೆಯುತ್ತಾರೆ.

ಪ್ರತಿ ಮಹಾಯುಗದ ಕೊನೆಯಲ್ಲಿ (ಒಂದು ಬಾರಿ ಕೃತ, ತ್ರೇತಾ, ದ್ವಾಪರ ಹಾಗೂ ಕಲಿಯುಗಗಳಾದ ಮೇಲೆ) ಪ್ರಪಂಚವು ಅಗ್ನಿ ಹಾಗೂ ಪ್ರವಾಹಗಳಿಗೆ ತುತ್ತಾಗುತ್ತದೆ. ಇದಕ್ಕೆ ಲಯವೆಂದು ಹೆಸರು. ಪ್ರತಿ ಪರ ಅಂದರೆ ಬ್ರಹ್ಮನ ನೂರು ವರ್ಷಗಳ ಆಯುಸ್ಸಿನ ಅನಂತರ ಒಂದು ಮಹಾಪ್ರಳಯವಾಗುತ್ತದೆ. ಇಡೀ ವಿಶ್ವ ನಾಶವಾಗುತ್ತದೆ. ಬ್ರಹ್ಮನೂ ನಾಶವಾಗುತ್ತಾನೆ. ಮತ್ತೊಂದು ಪರ ಕಳೆದಮೇಲೆ ಈ ಮಹಾ ಕ್ಷೋಭೆಯು ಕ್ರಮೇಣ ಅಡಗಿ, ಇನ್ನೊಬ್ಬ ಬ್ರಹ್ಮ ಹುಟ್ಟುತ್ತಾನೆ. ಮತ್ತೆ ವಿಶ್ವಸೃಷ್ಟಿ ಕಾರ್ಯ ಆರಂಭವಾಗುತ್ತದೆ. ಹೀಗೆ ಸೃಷ್ಟಿ, ಲಯ, ಮಹಾಪ್ರಳಯಗಳು ಒಂದಾದ ಮೇಲೊಂದರಂತೆ ನಡೆಯುತ್ತಲೇ ಇರುತ್ತವೆ.

ಇದು ಕಾಲವನ್ನು ಕುರಿತ ಪ್ರಾಚೀನ ಭಾರತದ ಕಲ್ಪನೆ.

ನೋಡಿ : ಮನ್ವಂತರ

ಕಲ್ಪನಾ ದತ್


ಚಿತ್ತಗಾಂಗ್ ಕ್ರಾಂತಿದಳದ ಸದಸ್ಯೆಯಾಗಿದ್ದವರು –ಕಲ್ಪನಾ ದತ್.

ಕಲ್ಪನಾ ದತ್ ಹುಟ್ಟಿದ್ದು 1913ರಲ್ಲಿ. 1929ರಲ್ಲಿ ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಕಾಲೇಜು ಸೇರಿದರು. ಆಗ ಚಿತ್ತಗಾಂಗ್ ಕ್ರಾಂತಿಕಾರರ ಗುಂಪಿನ ಪರಿಚಯವಾಯಿತು. ಬೇಕಾದ ಸಾಮಾನುಗಳನ್ನು ಇವರು ಕಲ್ಕತ್ತೆಯಿಂದ ತಂದು, ಚಿತ್ತಗಾಂಗಿನಲ್ಲಿ ಸಿಡಿಮದ್ದು ತಯಾರಿಸುತ್ತಿದ್ದರು. ಈಕೆಯ ಬಗೆಗೆ ಪೋಲೀಸರಿಗೆ ಅನುಮಾನಬಂತು. ಸರಕಾರ ಅವರ ಚಲನವಲನದ ಮೇಲೆ ನಿರ್ಬಂಧ ಹಾಕಿತು. ಕಾಲೇಜಿಗಲ್ಲದೆ ಇನ್ನೆಲ್ಲಿಗೂ ಹೋಗುವಂತಿರಲಿಲ್ಲ. ಆದರೂ ಆಕೆ ರಾತ್ರಿಯ ಹೊತ್ತು ಗುಟ್ಟಾಗಿ ಮಾಸ್ಟರ್‌ದಾ ಎಂದು ಪ್ರಖ್ಯಾತರಾಗಿದ್ದ ಸೂರ್ಯಸೇನ್‌ರನ್ನು ಭೇಟಿ ಮಾಡುತ್ತಿದ್ದರು. ಪ್ರೀತಿ ವದ್ದೇದಾರ್ ಎಂಬ ಜೊತೆಗಾತಿಯೊಡನೆ ಗುಂಡು ಹಾರಿಸುವುದನ್ನೂ ಅಭ್ಯಾಸ ಮಾಡಿದರು. ಇವರಿಬ್ಬರು ಮಹಿಳೆಯರ ನೇತೃತ್ವದಲ್ಲಿ ಆಂಗ್ಲರ ಕ್ಲಬ್ಬಿನ ಮೇಲೆ ದಾಳಿ ನಡೆಯಬೇಕೆಂದು ನಿಶ್ಚಯವಾಯಿತು.

ಒಮ್ಮೆ ಮಾಸ್ಟರ್‌ದಾ ಅವರನ್ನು ಭೇಟಿ ಮಾಡಿ ಹಿಂದಿರುಗುತ್ತಿದ್ದಾಗ ಪುರುಷವೇಷಧಾರಿ ಕಲ್ಪನಾ ಸೆರೆಸಿಕ್ಕರು; ಅಲೆಮಾರಿ ಎಂದು ಅವರನ್ನು ಪೋಲೀಸರು ಬಂಧಿಸಿದರು. ಒಂದು ತಿಂಗಳ ಅನಂತರ ಜಾಮೀನಿನ ಮೇಲೆ ಬಿಡುಗಡೆ ಆಯಿತು. ಒಡನೆಯೇ ಆಕೆ ತಲೆಮರೆಸಿಕೊಂಡರು.

1933ರ ಫೆಬ್ರವರಿಯಲ್ಲಿ ಕಲ್ಪನಾ, ಮಾಸ್ಟರ್‌ದಾ ಮತ್ತಿತರರು ಸ್ನೇಹಿತರ ಮನೆಯಲ್ಲಿ ಗುಪ್ತವಾಗಿ ಸೇರಿದ್ದರು. ಮಾಸ್ಟರ್‌ದಾರನ್ನು ಹಿಡಿದು ಕೊಟ್ಟವರಿಗೆ 10,000 ರೂಪಾಯಿ ಬಹುಮಾನ ಎಂದು ಸರಕಾರ ಘೋಷಿಸಿತ್ತು. ಅದರ ಆಸೆಯಿಂದ ಒಬ್ಬಾತ ಸುಳಿವು ಕೊಟ್ಟಿದ್ದರಿಂದ ಪೋಲೀಸರು ಆ ಮನೆಯ ಮೇಲೆ ದಾಳಿ ಮಾಡಿದರು. ಎರಡು ಗಂಟೆ ಕಾಲ ಘರ್ಷಣೆ ನಡೆದು ಮಾಸ್ಟರ್‌ದಾ ಸೆರೆಸಿಕ್ಕರು; ಕಲ್ಪನಾ ತಪ್ಪಿಸಿಕೊಂಡರು. ಅವರು ಕೆಲವು ತಿಂಗಳುಗಳ ಅನಂತರ ಗಾಹಿರಾ ಹಳ್ಳಿಯಲ್ಲಿ ಸೈನಿಕರ ಕೈಗೆ ಸಿಕ್ಕಿಬಿದ್ದರು. ಗಡೀಪಾರು ಶಿಕ್ಷೆಯಾಯಿತು.

1939ರಲ್ಲಿ ಕಲ್ಪನಾ ಬಿಡುಗಡೆ ಹೊಂದಿದಾಗ ರವೀಂದ್ರನಾಥ ಠಾಕೂರರು—ಬಹಳ ಕಾಲದ ಬಳಿಕ ನೀನು ನಿನ್ನ ಸ್ವಾತಂತ್ರ್ಯ ಪಡೆದಿರುವೆ. ನಿನ್ನ ಕಷ್ಟದ



ಕ್ರಾಂತಿ ಕನ್ಯೆ : ಕಲ್ಪನಾ ದತ್

[illegible]
ಆಶೀರ್ವಾದ' ಎಂದು ಆಕೆಗೆ ಕಾಗದ ಬರೆದರು.

1943ರಲ್ಲಿ ಕಲ್ಪನಾ ಭಾರತ ಕಮ್ಯೂನಿಸ್ಟ್ ಪಕ್ಷದ ಪ್ರಧಾನಕಾರ್ಯದರ್ಶಿ [illegible]

ನೋಡಿ : ಪ್ರೀತಿ ವಡ್ಡೇದಾರ್ ; ಸೂರ್ಯಸೇನ್

ಕಲ್ಪವೃಕ್ಷ

[illegible] —ಕಲ್ಪವೃಕ್ಷ. [illegible] ಕಲ್ಪತರು. ಕಲ್ಪದ್ರುಮ ಎಂದೂ ಕರೆಯುತ್ತಾರೆ.

ಅದನ್ನು ಕುರಿತ ಕಥೆ ಇದು :

ಪ್ರಾಚೀನ ಕಾಲದಲ್ಲಿ ಜನರ ನಡವಳಿಕೆ ಅತ್ಯಂತ ಶುದ್ಧವಾಗಿದ್ದಾಗ, ಕಲ್ಪವೃಕ್ಷ ನಮ್ಮ ಭೂಮಿಯ ಮೇಲೆ ಇತ್ತು. ಜನರು ಬಯಸಿದ್ದನ್ನೆಲ್ಲ ಕಲ್ಪವೃಕ್ಷ ಅವರಿಗೆ ಕೊಡುತ್ತಿದ್ದುದರಿಂದ ಅವರು ಸಂತೃಪ್ತರಾಗಿದ್ದರು. ತಮಗೆ ಬೇಕಾದುದಕ್ಕಿಂತ ಹೆಚ್ಚಿನದನ್ನು ಬಯಸುತ್ತಲೂ ಇರಲಿಲ್ಲ, ಕೂಡಿಡುತ್ತಲೂ ಇರಲಿಲ್ಲ.

ಯುಗಗಳು ಕಳೆದಂತೆ ಜನರ ದುರಾಸೆಯೂ ದುಷ್ಟ ಬೇಡಿಕೆಗಳೂ ಹೆಚ್ಚಿದುವು. ತತ್ಪರಿಣಾಮವಾಗಿ ಕಲ್ಪತರು ಇಲ್ಲಿಂದ ಸ್ವರ್ಗವನ್ನು ಸೇರಿತು ಎಂಬುದು ಕಥೆ.

ಕಲ್ಹಣ

"ಚರಿತ್ರಕಾರನ ಭಾಷೆ, ನ್ಯಾಯಾಧೀಶನ ಭಾಷೆಯಂತೆ ಸ್ಪಷ್ಟವಾಗಿದ್ದು, ಚರಿತ್ರೆಯ ಘಟನೆಗಳನ್ನು ಸ್ಪಷ್ಟವಾಗಿ ಪೂರ್ವಾಗ್ರಹವಿಲ್ಲದೆ ಹೇಳುವಂತಿರಬೇಕು. ಹಿಂದೆ ಏನು ನಡೆಯಿತು ಎಂದು ಹೇಳುವುದು ಮತ್ತು ಅದರಿಂದ ಕಲಿಯಬೇಕಾದ ನೈತಿಕ ಹಾಗೂ ರಾಜಕೀಯ ಪಾಠಗಳನ್ನು ಸೂಚಿಸುವುದು ಅವನ ಉದ್ದೇಶ."

—ಹೀಗೆ ಹೇಳಿದವನು 12ನೆಯ ಶತಮಾನದಲ್ಲಿದ್ದ ಕಾಶ್ಮೀರದ ಕವಿ, ಚರಿತ್ರಕಾರ ಕಲ್ಹಣ.

ಕಲ್ಹಣನ ಕಾಲ ಸುಮಾರು 1095ರಿಂದ 1170 [illegible] ಎಂದು ಊಹೆ. ಹುಟ್ಟಿದ್ದು ಪರಿಹಾಸಪುರದಲ್ಲಿ. ಇವನ ತಂದೆ ಚಂಪಕ, ಕಾಶ್ಮೀರದ ಲೋಹರ ರಾಜವಂಶದ ದೊರೆ ಹರ್ಷ (1089–1101)ನ ಬಳಿ ಅಮಾತ್ಯನಾಗಿದ್ದ. ಕಲ್ಹಣ ಪ್ರವಾಸ ವ್ಯಾಸಂಗಗಳಲ್ಲಿ ತೊಡಗಿ, ಅಂದಿಗೆ [illegible] ಚಾರಿತ್ರಿಕ ದಾಖಲೆ, [illegible] ಪರಿಚಯ ಮಾಡಿಕೊಂಡ.

ಕಲ್ಹಣನ ಎಂಟು ಭಾಗಗಳ ಇತಿಹಾಸ ಗ್ರಂಥ 'ರಾಜತರಂಗಿಣಿ' ಯಲ್ಲಿ, ಅಶೋಕನಿಂದ ಹಿಡಿದು ತನ್ನ ಸಮಕಾಲೀನ ದೊರೆ ಜಯಸಿಂಹನ ವರೆಗಿನ ಚರಿತ್ರೆ ಇದೆ. ಮೊದಲ ಮೂರು ಭಾಗಗಳಲ್ಲಿ ಪರಂಪರಾಗತ ಪೌರಾಣಿಕ ಸಂಗತಿಗಳೇ ತುಂಬಿವೆ. ರಾಜನೊಬ್ಬ 300 ವರ್ಷಗಳ ಕಾಲ ಆಳಿದ್ದು; [illegible] ಇಂಥ ಕಥೆಗಳು ಅದರಲ್ಲಿ ಸೇರಿವೆ. ಅಶೋಕನ ಬಗೆಗೆ ಕೊಟ್ಟಿರುವ ವಿವರ [illegible] ಸಾವಿರ ವರ್ಷಗಳಷ್ಟು [illegible] [illegible] [illegible] 'ರಾಜತರಂಗಿಣಿ' ಯಲ್ಲಿ ಕಲ್ಹಣನ ಸಮಕಾಲೀನ [illegible] ಕಾಶ್ಮೀರದ [illegible] ಬಗೆಗೆ [illegible] [illegible] [illegible]

[illegible] ಸ್ಪಷ್ಟ ಚಿತ್ರಣಗಳಿಂದ ಕೂಡಿ 'ರಾಜ ತರಂಗಿಣಿ' ಇತಿಹಾಸ ಕಾವ್ಯವಾಗಿ ರೂಪುಗೊಂಡಿದೆ.

ಕಲ್ಹಣನಿಗೆ ರಾಜ ಜಯಸಿಂಹನ ಆಸ್ಥಾನದಲ್ಲಿ ಗೌರವದ ಸ್ಥಾನ ದೊರಕಿತು. ಅನಂತರ ಅವನು 'ಜಯಸಿಂಹಾಭ್ಯುದಯ' ಎಂಬ ಕಾವ್ಯವನ್ನು ರಚಿಸಿದ.

ಕಲ್ಪಾಕ್ಕಮ್ ಪರಮಾಣುಶಕ್ತಿಕೇಂದ್ರ

ಭಾರತದ ಪ್ರಥಮ ಪರಮಾಣುಶಕ್ತಿ ಕೇಂದ್ರ ಮಹಾರಾಷ್ಟ್ರದ ತಾರಾಪುರದಲ್ಲಿ ಅಮೆರಿಕದ ವಿಜ್ಞಾನಿಗಳ ಸಹಾಯದಿಂದ ನಿರ್ಮಿತವಾಯಿತು. [illegible] ಕಲ್ಪಾಕ್ಕಮ್ ಪರಮಾಣು ಶಕ್ತಿ ಕೇಂದ್ರ. [illegible] ಸ್ವಪೂರ್ಣತೆ ಸಾಧಿಸುವ ಪ್ರಯತ್ನದಲ್ಲಿ ಕಲ್ಪಾಕ್ಕಮ್ ಕೇಂದ್ರದ ರಚನೆ ಮಹತ್ವದ ಹೆಜ್ಜೆ.

[illegible] 60 ಕಿಲೊಮೀಟರು [illegible] ದಲ್ಲಿ ಕಲ್ಪಾಕ್ಕಮ್ ಕೇಂದ್ರವಿದೆ. ವಿದ್ಯುಚ್ಛಕ್ತಿ ಉತ್ಪಾದನಾ ಸಾಮರ್ಥ್ಯ ಒಟ್ಟು 400 ಮೆಗಾವಾಟ್. ಈ ಕೇಂದ್ರದ ನಿರ್ಮಾಣದಲ್ಲಿ ವಿದೇಶೀ ಸಾಮಗ್ರಿಗಳ ಉಪಯೋಗದ ಪ್ರಮಾಣ ಸುಮಾರು ಶೇಕಡಾ 20 ಮಾತ್ರ.

ಕಲ್ಯಾಣ ಕ್ರಾಂತಿ

ನೋಡಿ : ಸಂಪುಟ ೧

ಕವಿರಾಜಮಾರ್ಗಂ

ನೋಡಿ : [illegible]

ಕರ್ವೆ

ನೋಡಿ : ಡಿ. ಕೆ. ಕರ್ವೆ

ಕಸಿನ್ಸ್

ನೋಡಿ : [illegible]

ಕಸ್ತೂರ ಬಾ

ಆಕೆ [illegible]

ಕಸ್ತೂರ ಬಾ [illegible]



ಮಹಾತ್ಮನ ಪತ್ನಿ ಕಸ್ತೂರ ಬಾ

ಬಯಸಿದರೂ ಅದು ಸಾಧ್ಯವಾಗ ಲಿಲ್ಲ. ಸ್ವಲ್ಪಮಟ್ಟಿಗೆ ಗುಜರಾತೀ ಕಲಿತರು, ಅಷ್ಟೆ.

ಗಾಂಧೀಜೀ ದಕ್ಷಿಣ ಆಫ್ರಿಕದಲ್ಲಿ ಭಾರತೀಯರಿಗೆ ಅಮೂಲ್ಯ ಸೇವೆ ಸಲ್ಲಿಸಿ ಹಿಂದಿರುಗಲಿದ್ದ ಸಂದರ್ಭ ದಲ್ಲಿ ಅವರ ಮನೆಯವರಿಗೆ ಅನೇಕ ಬೆಲೆ ಬಾಳುವ ಉಡುಗೊರೆಗಳು ಬಂದುವು. ಅವೆಲ್ಲವನ್ನೂ ಜನರ ಹಿತಕ್ಕಾಗಿ ಉಪಯೋಗಿಸ ಬೇಕೆಂಬುದು ಗಾಂಧೀಜೀ ಅಪೇಕ್ಷೆ. ಕಸ್ತೂರ ಬಾ ಸ್ವತಃ ಒಡವೆಗಳನ್ನು ಧರಿಸುತ್ತಿರಲಿಲ್ಲವಾದರೂ, ಮುಂದೆ ಬರಲಿರುವ ಸೊಸೆಯರಿಗಾಗಿ ಇರ ಲೆಂದು ಕೆಲವು ಒಡವೆಗಳನ್ನು ತೆಗೆದಿಟ್ಟುಕೊಂಡರು. ಗಾಂಧೀಜೀ ಬಿಡುತ್ತಾರೆಯೆ? ಕಡೆಗೊಂದು ದಿನ ಒಡವೆಗಳನ್ನು ಕೊಟ್ಟು ಬಿಡಲು ಒಪ್ಪಿಸಿದರು.

ಮನೆಗೆಲಸಕ್ಕೆ ಬೇರೆ ಜನ ಇಟ್ಟುಕೊಳ್ಳುವುದು ಗಾಂಧೀಜೀಗೆ ಇಷ್ಟವಿರ ಲಿಲ್ಲ. ಆ ಕಾರಣದಿಂದ ಕಸ್ತೂರ ಬಾ ಎಲ್ಲ ಕೆಲಸಗಳನ್ನೂ ಸದ್ದುಗದ್ದಲ ವಿಲ್ಲದೆ, ಶಾಂತವಾಗಿ ಮಾಡಿಕೊಳ್ಳುತ್ತಿದ್ದರು.

ಒಮ್ಮೆ ಆಕೆಯ ಸಹನೆಯನ್ನು ಪರೀಕ್ಷಿಸುವ ಘಟನೆ ನಡೆಯಿತು. ಮನೆ ಯಲ್ಲಿ ಬಹಳ ಜನ. ಪ್ರತಿ ಕೊಠಡಿಯಲ್ಲೂ ಕಕ್ಕಸ್ ಪಾತ್ರೆ. ಯಾರವರೇ ಅವನ್ನು ಶುಚಿಮಾಡಬೇಕಾಗಿತ್ತು. ಕ್ರೈಸ್ತನಾಗಿ ಮತಾಂತರ ಹೊಂದಿದ್ದ ಅಸ್ಪೃಶ್ಯ ಭಾರತೀಯನೊಬ್ಬ ಗಾಂಧೀಜಿಯ ಮನೆಯಲ್ಲಿದ್ದ. ಬಾ ಆತನ ಕಕ್ಕಸು ಪಾತ್ರೆ ತೊಳೆಯಲು ಒಪ್ಪಲಿಲ್ಲ. ಗಾಂಧೀಜಿಗೆ ಸಿಟ್ಟು ಬಂದು ಆಕೆಯನ್ನು ಮನೆಯಿಂದ ಹೊರಗೆ ತಳ್ಳಲು ಉದ್ಯುಕ್ತರಾದರು. ಬಾ, ಗಾಬರಿಗೊಂಡು ಮನೆಯ ಜಗಳ ಬೀದಿಗೆ ಬರುವುದು ಬೇಡ ಎಂದಾಗ, ಆಕೆಯನ್ನು ಒಳಕ್ಕೆ ಕರೆದುಕೊಂಡರು. ಸಾಬರಮತಿ ಆಶ್ರಮ, ಸೇವಾಗ್ರಾಮ ಗಳಲ್ಲಿ ಆಶ್ರಮವಾಸಿಗಳನ್ನು ತಾಯಿಯಂತೆ ನೋಡಿಕೊಂಡರು. ಕಸ್ತೂರಬಾ ಸತ್ಯಾಗ್ರಹದಲ್ಲಿ ಭಾಗವಹಿಸಿದರು. ಅನೇಕ ಬಾರಿ ಸೆರೆಮನೆಗೆ ನಡೆದರು.

1942ರ ಸ್ವಾತಂತ್ರ್ಯ ಚಳುವಳಿಯಲ್ಲಿ ಗಾಂಧೀಜೀ ಬಂಧಿಸಲ್ಪಟ್ಟಾಗ ಕಸ್ತೂರ ಬಾ ಅವರ ಸ್ಥಾನದಲ್ಲಿ ಭಾಷಣ ಮಾಡಲು ಸಿದ್ಧರಾಗಿದ್ದರು. ಆದರೆ ಆಕೆಯನ್ನೂ ಆಗಾಖಾನ್ ಅರಮನೆಯಲ್ಲಿ ಬಂಧಿಸಿಟ್ಟರು.

ಸೆರೆಮನೆಯಲ್ಲಿ 1943ರ ಮಾರ್ಚ್ 12ರಂದು ಹೃದಯರೋಗದ ಎರಡು ಬಾರಿ ಕಾಣಿಸಿಕೊಂಡಿತು. ಆಕೆ ದುರ್ಬಲರಾಗತೊಡಗಿದರು. ಗಾಂಧೀಜಿಯ ಸಹಚರಿಯಾಗಿದ್ದು ತಾಯಿಯಂತೆ ಸೇವಕಿಯಂತೆ ಅವರ ಶುಶ್ರೂಷೆ ಮಾಡುತ್ತಿದ್ದ ಕಸ್ತೂರ ಬಾ 1944 ಫೆಬ್ರುವರಿ 22ರಂದು ತೀರಿಕೊಂಡರು.

ಮಹಾನ್ ವ್ಯಕ್ತಿಯೊಬ್ಬನ ಮಡದಿಯಾಗಿ ಆಕೆ ಕೀರ್ತಿದಿಂದ ಬಾಳಿ, ಜನಮನದಲ್ಲಿ ಶಾಶ್ವತ ಸ್ಥಾನ ಗಳಿಸಿಕೊಂಡರು.

ಕಸ್ತೂರಿ ರಂಗ ಅಯ್ಯಂಗಾರ

ಮದರಾಸಿನ 'ಹಿಂದು' ಈಗ ಪತ್ರಿಕೆ ಪತ್ರಿಕಾ ಪ್ರಪಂಚದಲ್ಲಿ ಮಹತ್ವ ಸ್ಥಾನವಿದೆ. ಈ ಪತ್ರಿಕೆಗೆ ಇಂಥ ಸ್ಥಾನ ದೊರೆಯಲು ಮೂಲ ಕಾರಣರಾದವರು ದಿವಂಗತ ಕಸ್ತೂರಿ ರಂಗ ಅಯ್ಯಂಗಾರ್.

ತಮಿಳು ನಾಡಿನ ತಂಜಾವೂರಿ ನಲ್ಲಿ ಹುಟ್ಟಿದ ಅವರು ಕುಂಭ ಕೋಣಂನಲ್ಲಿ ಇಂಗ್ಲಿಷ್ ಶಾಲಾ ಅಭ್ಯಾಸ ಮುಗಿಸಿ ಮದರಾಸಿನ ಪ್ರೆಸಿಡೆನ್ಸಿ ಕಾಲೇಜ್ ಸೇರಿ ಪದವೀಧರರಾದರು. ವಕೀಲ ವೃತ್ತಿ ಅವಲಂಬಿಸಿದರೂ ಆ ಕಾಲದ ದೇಶದ ರಾಜಕೀಯ ದಿಂದ ಬಹು ಬೇಗನೆ ಆಕರ್ಷಿತರಾದರು.



ರಾಷ್ಟ್ರೀಯ ಪತ್ರಿಕೋದ್ಯಮ : ಕಸ್ತೂ

ಜಿ. ಸುಬ್ರಹ್ಮಣ್ಯಂ ಅಯ್ಯರ್ ಪ್ರಾರಂಭಿಸಿದ 'ಹಿಂದು' ಪತ್ರಿಕೆಗೆ ಇವರು ಮೊದಲು ಕಾನೂನು ಸಲಹೆಗಾರರಾಗಿದ್ದರು. 1905ರಲ್ಲಿ ಅದರ ಒಡೆಯರಾದರು. ಅವರೆಗೆ ಅವರಿಗೆ ಪತ್ರಿಕೋದ್ಯಮದ ಅನುಭವ ಇರಲಿಲ್ಲ. ಆದರೆ ಒಮ್ಮೆ ಕ್ಷೇತ್ರಕ್ಕೆ ಇಳಿದ ಮೇಲೆ ಅದರಲ್ಲಿ ಅದ್ಭುತ ಪ್ರತಿಭೆ ತೋರಿಸಿದರು. ಸ್ವದೇಶೀ ಚಳುವಳಿಯ ಪುರಸ್ಕಾರ ಮತ್ತು ವಿದೇಶೀ ಸರಕಾರದ ದಬ್ಬಾಳಿಕೆಯ ತಿರಸ್ಕಾರ ಇವುಗಳಿಗೆ 'ಹಿಂದು' ಪತ್ರಿಕೆ ಕೈಗನ್ನಡಿ ಎನಿಸಿತು. ಆಗಿನ ಕಾಲದ ರಾಜಕೀಯ ಮತ್ತು ಸಾಮಾಜಿಕ ಚಳುವಳಿಗಳಲ್ಲೆಲ್ಲ ಕಸ್ತೂರಿಯವರದು ಪ್ರಮುಖ ಪಾತ್ರ. ಕಾಂಗ್ರೆಸ್ಸಿಗರಾಗಿ ರಾಷ್ಟ್ರೀಯ ಚಳುವಳಿಯಲ್ಲಿ ಮಹತ್ವದ ಪಾತ್ರ ವಹಿಸಿದರು. ಮೊದಲು ಉದಾರವಾದಿ ಎನಿಸಿದ್ದರು. ಹೋಂ ರೂಲ್ ಲೀಗ್ ಸ್ಥಾಪನೆ ಮತ್ತು ಸಂಘಟನೆಯಲ್ಲಿ ಶ್ರೀಮತಿ ಆನಿ ಬೆಸೆಂಟರೊಡನೆ ಸಹಕರಿಸಿ ದುಡಿದರು. ಗಾಂಧೀಜಿಯವರ ಅಸಹಕಾರ ಚಳುವಳಿಯ ಬಗೆಗೆ ಮೊದಲು ಭಿನ್ನಾಭಿ ಪ್ರಾಯ ತೋರಿದರೂ ಕ್ರಮೇಣ ಅದರ ಮುಂದಾಳುವೆನಿಸಿದರು.

ಮದರಾಸಿನಲ್ಲಿದ್ದ ಅರ್ಬತ್ನಾಟ್ ಅಂಡ್ ಕಂಪೆನಿ ಎಂಬ ಹಣಕಾಸಿನ ಸಂಸ್ಥೆಯೊಂದು 1905ರಲ್ಲಿ ದಿವಾಳಿ ಆದಾಗ. ಅದರಲ್ಲಿ ಹಣವಿಟ್ಟ ಅಸಂಖ್ಯ ಜನರು ಬೀದಿಭಿಕಾರಿಗಳಾದರು. ಅರ್ಬತ್ನಾಟ್ ಕಂಪೆನಿಯ ಮೇಲೆ ಕ್ರಮ ಕೈಕೊಳ್ಳಬೇಕೆಂದು 'ಹಿಂದು' ಪತ್ರಿಕೆ ಪ್ರಬಲವಾಗಿ ಪ್ರತಿಪಾದಿಸಿತು. ಸರಕಾರ ಅದಕ್ಕೆ ಕಿವಿಗೊಡಲೇಬೇಕಾಯಿತು. ಅಲ್ಲದೆ, ದೇಶೀ ಬ್ಯಾಂಕೊಂದನ್ನು ಪ್ರಾರಂಭಿಸಬೇಕು ಎಂಬ ವಿಚಾರಕ್ಕೆ ಚಾಲನೆ ದೊರೆಯಿತು. ಇಂಡಿಯನ್ ಬ್ಯಾಂಕ್ ಸ್ಥಾಪಿತವಾಯಿತು. ಅದು ಮೇಲಿನ ಪ್ರಕರಣದ ಒಂದು ಮಹತ್ವದ ಪ್ರತಿಕ್ರಿಯೆ.

1911ರಲ್ಲಿ ದೆಹಲಿಯಲ್ಲಿ ಪಂಚಮ ಜಾರ್ಜ್ ದೊರೆ ದರ್ಬಾರು ನಡೆಸಿ ದಾಗ ಕಸ್ತೂರಿ ರಂಗ ಅಯ್ಯಂಗಾರರಿಗೆ ಆಹ್ವಾನ ಬಂತು. ಆದರೆ ಸರಕಾರ ಬಿಳಿಯರಿಗೂ ಭಾರತೀಯರಿಗೂ ತೋರಿಸುತ್ತಿದ್ದ ತಾರತಮ್ಯ ನೀತಿಯನ್ನು ಪ್ರತಿಭಟಿಸಿ ಅದನ್ನು ಅವರು ತಿರಸ್ಕರಿಸಿದರು.

1918ರಲ್ಲಿ ಬ್ರಿಟಿಷ್ ಸರಕಾರ ಮೊದಲನೆಯ ಮಹಾಯುದ್ಧದ ರಣ ರಂಗ ವೀಕ್ಷಣೆಗಾಗಿ ಭಾರತೀಯ ಪತ್ರಿಕಾ ಸಂಪಾದಕರ ನಿಯೋಗ ವೊಂದನ್ನು ಆಹ್ವಾನಿಸಿತು. ಅದರಲ್ಲಿ ಕಸ್ತೂರಿಯವರೂ ಇದ್ದರು. ಈ ಅವಕಾಶದ ಉಪಯೋಗ ಪಡೆದುಕೊಂಡು ಅವರು ಬ್ರಿಟನ್ನಲ್ಲಿ

ಭಾರತೀಯರ ಸ್ವರಾಜ್ಯ ಬೇಡಿಕೆಯ ಬಗೆಗೆ ಪ್ರಚಾರ ನಡೆಸಿದರು: ಜನರಲ್ ಡಾಯರ್ ಆಕ್ರಮಣವನ್ನು ಹಾಗೂ ಭಾರತೀಯರ ಬಗೆಗೆ ಭೇದ ಭಾವದ ನೀತಿ ತೊರೆಯಬೇಕೆಂದು ಮನವಿ ಸಲ್ಲಿಸಿದರು.

ಬಹು ವರ್ಷದ ಅನಾರೋಗ್ಯದ ಅನಂತರ, 1923ರಲ್ಲಿ. ಕಸ್ತೂರಿ ರಂಗ ಅಯ್ಯಂಗಾರ್ ನಿಧನ ಹೊಂದಿದರು.

ಕಳಚುರಿಯರು

ಪ್ರಾಚೀನ ಹೈಹಯ ವಂಶದ ಕಳಚುರಿಯರು ಚೇದಿರಾಜ್ಯವೆಂದು ಪರಿಚಿತವಾದ ಡಾಹಳ ಮಂಡಲದ ತ್ರಿಪುರಿ(ಜಬ್ಬಲಪುರದ ಬಳಿಯ ತೆವರ್) ಯಿಂದ ಆಳುತ್ತಿದ್ದರು. ಈ ವಂಶದ ಮೊದಲ ದೊರೆ ಲಕ್ಷ್ಮಣ ರಾಜ ರಾಷ್ಟ್ರಕೂಟ ಗೋವಿಂದನ ಮಾಂಡಲಿಕನಾಗಿದ್ದ.

ಈ ವಂಶದ ಗಾಂಗೇಯದೇವನು ವಿಕ್ರಮಾದಿತ್ಯ ಎಂಬ ಬಿರುದು ಧರಿಸಿ ರಾಜ್ಯವನ್ನು ವಿಸ್ತರಿಸಿದ. ಪ್ರಯಾಗ ಮತ್ತು ಕಾಶಿ ಇವನ ವಶಕ್ಕೆ ಬಂದುವು. ಲಕ್ಷ್ಮೀಕರ್ಣನ ಆಳ್ವಿಕೆಯ ಕಾಲದಲ್ಲಿ ರಾಜ್ಯವು ಉತ್ತರ ಬಿಹಾರಿನ ಚಂಪಾರಣ್ಯದ ವರೆಗೂ ದಕ್ಷಿಣದಲ್ಲಿ ಆಂಧ್ರದ ವರೆಗೂ ವಿಸ್ತರಿಸಿತು. ಆದರೆ ಕಲ್ಯಾಣದ ಐದನೆಯ ವಿಕ್ರಮಾದಿತ್ಯನ ಸೇನೆ ಇವನನ್ನು 1081ರಲ್ಲಿ ಸೋಲಿಸಿತು. ಪರಮಾರ ಲಕ್ಷ್ಮಣದೇವನು ಇವನ ರಾಜಧಾನಿಯನ್ನು ಆಕ್ರಮಿಸಿ ಲೂಟಿ ಮಾಡಿದ. 1211ರಲ್ಲಿ ಚಂದೆಲ್ಲ ದೊರೆ ತ್ರೈಲೋಕ್ಯ ವರ್ಮ ಡಾಹಳ ಮಂಡಲವನ್ನು ವಶಪಡಿಸಿಕೊಂಡ : ತ್ರಿಪುರಿಯ ಆಡಳಿತವನ್ನು ಕೊನೆಗಾಣಿಸಿದ.

ಸರಯುಪಾರ : ಎಂಟನೆಯ ಶತಕದ ಕೊನೆಯ ಭಾಗದಿಂದ ಕಳಚುರಿಯರ ಸರಯುಪಾರ ಶಾಖೆ ಉತ್ತರ ಪ್ರದೇಶದ ಗೋಗ್ರದಿಂದ ಆಳತೊಡಗಿತು. ರಾಜಪುತ್ರ ವಂಬವನು ಈ ವಂಶದ ಮೊದಲ ದೊರೆ. ಹನ್ನೊಂದನೆಯ ಶತಕದಲ್ಲಿ ಆಳಿದ ಸೋಢದೇವ ಈ ವಂಶದ ಕೊನೆಯ ದೊರೆ. ಇವನ ರಾಜ್ಯವು ಸರಯೂ (ಗೋಗ್ರ) ನದಿಯಿಂದ ಗಂಡಕಿ ನದಿಯ ವರೆಗೆ ವಿಸ್ತರಿಸಿತ್ತು; ಬಹರೇಜ್, ಗೊಂಡ, ಬಸ್ತಿ ಮತ್ತು ಗೋರಕ್‌ಪುರ ಜಿಲ್ಲೆಯ ಪ್ರದೇಶಗಳನ್ನು ಒಳಗೊಂಡಿತ್ತು.

ರತ್ನಪುರಿ : ಬಿಲಾಸಪುರ ಜಿಲ್ಲೆಯ ತುಮ್ಮಾಣ (ಈಗಿನ ತುಮಾನ) ದಿಂದ ಕಳಚುರಿಯರ ಇನ್ನೊಂದು ಶಾಖೆ ಆಳುತ್ತಿತ್ತು. ಮುಂದೆ ಇವರು ತಮ್ಮ ರಾಜಧಾನಿಯನ್ನು ಬಿಲಾಸಪುರದ ಬಳಿಯ ರತ್ನಪುರಕ್ಕೆ ಬದಲಾಯಿಸಿದರು. ಹತ್ತನೆಯ ಶತಕದ ಕೊನೆಯಿಂದ ಹದಿಮೂರನೆಯ ಶತಕದ ಆರಂಭದ ವರೆಗೆ ಆಳಿದ ಈ ಶಾಖೆಯವರು ಆರಂಭದಲ್ಲಿ ತ್ರಿಪುರಿಯ ಕಳಚುರಿಯರ ಮಾಂಡಲಿಕರಾಗಿದ್ದರು. ಜಾಜಲ್ಲದೇವನು 1120ರ ಸುಮಾರಿಗೆ ಸ್ವಾತಂತ್ರ್ಯ ಘೋಷಿಸಿದ. ಈ ವಂಶದ ಕೊನೆಯ ದೊರೆ ಪ್ರತಾಪಮಲ್ಲ. 1218ರಲ್ಲಿ ಇವನ ಅವಸಾನವಾಯಿತು.

ಕರ್ನಾಟಕ : ಕಲ್ಯಾಣದಿಂದ ಆಳಿದ ಬಿಜ್ಜಳ. ಕಾಲಂಜರದ ಕಳಚುರಿ ವಂಶದವನು. ಇವರಿಗೂ ಕಲ್ಯಾಣದ ಚಾಲುಕ್ಯರಿಗೂ ಬೀಗತನವಿತ್ತು. ಆರನೆಯ ವಿಕ್ರಮಾದಿತ್ಯನ ಮಗಳ ಮಗನೂ ಮಂಗಳವೇಡೆಯಿಂದ ಆಳುತ್ತಿದ್ದ ಮಾಂಡಲಿಕನೂ ಆದ ಬಿಜ್ಜಳ, 1162ರಲ್ಲಿ ಚಾಲುಕ್ಯ ಮೂರನೆಯ ತೈಲಪನನ್ನು ಬದಿಗೊತ್ತಿ ಪಟ್ಟವೇರಿದ. ಈತನ ಕಾಲದಲ್ಲಿಯೇ ಕಲ್ಯಾಣವು ಬಸವೇಶ್ವರ, ಅಲ್ಲಮ, ಅಕ್ಕಮಹಾದೇವಿ ಮುಂತಾದವರ ಚಟುವಟಿಕೆಯ ಕೇಂದ್ರವಾಯಿತು. ಈತನ ವರ್ತನೆ ಸರಿತೋರದೆ ಬಸವಣ್ಣನವರು ಕಲ್ಯಾಣವನ್ನು ತ್ಯಜಿಸಿದರು.

1168ರಲ್ಲಿ ಬಿಜ್ಜಳನ ಕೊಲೆಯಾಯಿತು. ಅನಂತರ ಇವನ ಹಿರಿಯ ಮಗ ಸೋಮದೇವ. ಮೂರನೆಯ ಮಗ ಸಂಗಮ, ನಾಲ್ಕನೆಯ ಮಗ ಸಂಕಮ, ಐದನೆಯ ಮಗ ಆಹವಮಲ್ಲ ಹಾಗೂ ಆರನೆಯ ಮಗ ಸಿಂಘಣ ಅನುಕ್ರಮವಾಗಿ ಆಳಿದರು. 1184ರಲ್ಲಿ ಚಾಲುಕ್ಯ ವಂಶದ ನಾಲ್ಕನೆಯ ಸೋಮೇಶ್ವರನು ಸಿಂಘಣನನ್ನು ಸೋಲಿಸಿ ಕಲ್ಯಾಣವನ್ನು ವಶಪಡಿಸಿಕೊಂಡ. ಅಲ್ಲಿಗೆ ಕಳಚುರಿಯರ ಆಳ್ವಿಕೆ ಕೊನೆಗಂಡಿತು.

ನೋಡಿ : ಚೇದಿ

ಕಳಿಂಗ

ಭಾರತದ ಪ್ರಾಚೀನ ರಾಜ್ಯ ಕಳಿಂಗ. ಇದು ಮೊದಲು ನಂದರ ಅಧೀನದಲ್ಲಿತ್ತು. ಮೌರ್ಯವಂಶದ ಅಶೋಕನ ಕಾಲದಲ್ಲಿ ಪ್ರಸಿದ್ಧಿಗೆ ಬಂತು. ಆಗ ಕಳಿಂಗರಾಜ್ಯ ಆಂಧ್ರದ ಉತ್ತರ ಭಾಗದಿಂದ ಮಹಾನದಿಯ ದಕ್ಷಿಣಕ್ಕೆ ಒಡಿಸ್ಸಾ ತೀರ ಪ್ರದೇಶದ ವರೆಗೆ ಹಬ್ಬಿತ್ತು.

ತನ್ನ ಪೂರ್ವಿಕರಂತೆಯೇ ಅಶೋಕನೂ ಯುದ್ಧಾಸಕ್ತನಾಗಿ ರಾಜ್ಯವನ್ನು ವಿಸ್ತರಿಸಬಯಸಿ ಕ್ರಿ.ಪೂ. 261ರಲ್ಲಿ ಕಳಿಂಗ ರಾಜ್ಯದ ಮೇಲೆ ದಂಡೆತ್ತಿ ಹೋದ. ಆದರೆ ಆ ಘೋರ ಯುದ್ಧದ ಅನಾಹುತಗಳು ಅವನ ಮನಸ್ಸಿನ ಮೇಲೆ ತುಂಬ ಪರಿಣಾಮ ಉಂಟುಮಾಡಿದುವು.

ಅಶೋಕನ ನಿಧನದ ಅನಂತರ ತನ್ನ ಸ್ವಾತಂತ್ರ್ಯವನ್ನು ಗಳಿಸಿಕೊಂಡ ಕಳಿಂಗವನ್ನು ಆಳಿದ ಖ್ಯಾತ ದೊರೆ. ಖಾರವೇಲ. ಇವನು ಕಳಿಂಗರಾಜ್ಯವನ್ನು ಎಲ್ಲ ದಿಕ್ಕುಗಳಲ್ಲಿಯೂ ವಿಸ್ತರಿಸಿದ. ಇವನ ಆಳ್ವಿಕೆಯಲ್ಲಿ ಕಳಿಂಗ ಉಚ್ಛ್ರಾಯ ಸ್ಥಿತಿ ಮುಟ್ಟಿತು.

ಆಗ್ನೇಯ ಏಷ್ಯಾ ಪ್ರದೇಶದಲ್ಲಿ ಕಳಿಂಗದವರು, ರಾಜ್ಯಕಟ್ಟಿದರು.

ಕಳಿಂಗ ರಾಜಸತ್ತೆ ಮುಂದೆ ಚಾಲುಕ್ಯರು, ವಾಕಾಟಕರು, ಪಲ್ಲವರು ಮತ್ತು ವಿಜಯನಗರದವರ ದಾಳಿಗೆ ತುತ್ತಾಗಿ ನಶಿಸಿಹೋಯಿತು.

ನೋಡಿ : ಖಾರವೇಲ

ಕಾಂಚನಗಂಗಾ

ಕಾಂಗ್–ಚೆನ್–ಡ್ಜೋ–ಙ್ಗ ಈ ಟಿಬೆಟ್‌ಮೂಲದ ಹೆಸರಿನ ಶಿಖರ ಕಾಂಚನಗಂಗಾ. ಸಿಕ್ಕಿಂ ಭಾಷೆಯಲ್ಲಿ ಇದರ ಅರ್ಥ ಐದು ಮಹಾ ಹಿಮಸಂಚಯ ಎಂದು.

ಇದು ಪ್ರಪಂಚದ ಮೂರನೆಯ ಉನ್ನತ ಶಿಖರ: ನೇಪಾಳ - ಸಿಕ್ಕಿಂ ಗಡಿಯಲ್ಲಿದೆ. ಎತ್ತರ 28,209 ಅಡಿ. ಅತಿ ಭವ್ಯವೂ ಸುಂದರವೂ ಆದ ಕಾಂಚನಗಂಗಾ ಪರ್ವತ ದುರ್ಗಮವಾದದ್ದು.

1905ರಿಂದೀಚೆಗೆ ಇದನ್ನು ಏರಲು ಹಲವಾರು ಯತ್ನಗಳು ನಡೆದುವು. ಇದರಲ್ಲಿ ಗಮನಾರ್ಹ ಪ್ರಯತ್ನಗಳನ್ನು ಮಾಡಿದವರು ಬವೇರಿಯದ ಪಾಲ್ ಬವರ್ ಹಾಗೂ ಸಂಗಡಿಗರು. ಬವರ್ 1929 ಹಾಗೂ 1931ರಲ್ಲಿ ಪೂರ್ವ ದಿಕ್ಕಿನಿಂದ —ಜೆಮು ಎಂಬ ಹಿಮನದಿ ಇರುವ ಕಡೆಯಿಂದ— ಮಾಡಿದ ಪ್ರಯತ್ನಗಳು ಹಿಮಾಲಯ ಪರ್ವತಾರೋಹಣದಲ್ಲಿ ಅತ್ಯಂತ ಸಾಹಸಮಯ. ಆದರೆ ಬವರ್ ಮತ್ತು ಸಂಗಡಿಗರು 26,263 ಅಡಿ ಎತ್ತರಕ್ಕಿಂತ ಹೆಚ್ಚು ಏರಲಿಲ್ಲ.

ಕಾಂಚನಗಂಗಾವನ್ನು ಪ್ರಥಮವಾಗಿ ಹತ್ತಿದ ಗೌರವ ಚಾರ್ಲ್ಸ್ ಇವಾನ್ಸನ ನೇತೃತ್ವದ ಬ್ರಿಟಿಷ್ ತಂಡಕ್ಕೆ ಸಲ್ಲುತ್ತದೆ. ಸಿಕ್ಕಿಮೀಯರ ಪವಿತ್ರ ಭಾವನೆಗಳ ಗೌರವಾರ್ಥವಾಗಿ ಈ ಆರೋಹಿಗಳು ಶಿಖರದ



'ಪಂಚ ಮಹಾಹಿಮಸಂಚಯ'

ಅತ್ಯುನ್ನತ ಸ್ಥಾನವನ್ನು ಮೆಟ್ಟದೆ, ಇನ್ನೂ ಏಳು ಅಡಿ ಇರುವಾಗಲೇ ಆರೋಹಣ ನಿಲ್ಲಿಸಿ ಹಿಂದಿರುಗಿದರು.

ಕಾಂಚನಗಂಗಾದ ನಕ್ಷೆಯನ್ನು ಮೊತ್ತ ಮೊದಲು ತಯಾರಿಸಿದ್ದು — 18 ನೆಯ ಶತಮಾನದ ರಿನ್‌ಜಿನ್ ನಾಮಗ್ಯಾಲ್ ಎಂಬಾತ. ಅನಂತರ ಕೆಲವರು ಐರೋಪ್ಯರು ಈ ಪ್ರದೇಶವನ್ನು ಸಂದರ್ಶಿಸಿ ವಿವರ ಬರೆದಿಟ್ಟರು.

ಕಾಂಚನಗಂಗಾ ಶಿಖರಸಮೂಹ ಒಂದು ಬೃಹತ್ ಶಿಲುಬೆಯಂತೆ ಕಾಣುತ್ತದೆ. ಶಿಲುಬೆಯ ಬಾಹುಗಳು ಉತ್ತರ–ದಕ್ಷಿಣ ಹಾಗೂ ಪೂರ್ವ–ಪಶ್ಚಿಮವಾಗಿ ಚಾಚಿವೆ. ನಾಲ್ಕು ಶಿಖರಗಳಲ್ಲಿ ಅತ್ಯಂತ ಎತ್ತರವಾದದ್ದು ಶಿಲುಬೆಯ ಆಕಾರದ ಮಧ್ಯಭಾಗದಲ್ಲಿರುವ ಶಿಖರ.

ಕಾಂಚನಗಂಗಾ ಹಾಗೂ ನೆರೆಯ ಶಿಖರಗಳನ್ನು ಕೂಡಿಸುವ ನಾಲ್ಕು ಹಿಮನದಿಗಳು ಹರಿಯುತ್ತವೆ. ಜೆಮು, ತಾಲುಂಗ್, ಕಾಂಚನಗಂಗಾ ಹಾಗೂ ಯಾಲುಂಗ್–ಇವೇ ಆ ನಾಲ್ಕು ನದಿಗಳು.

ಭಾರತದ ಗಿರಿಧಾಮ ಡಾರ್ಜಿಲಿಂಗಿನಿಂದ ಕಾಂಚನಗಂಗಾದ ಉತ್ತಮ ನೋಟ ಕಾಣಸಿಗುತ್ತದೆ. ಇಲ್ಲಿಂದ ವಾಯುವ್ಯಕ್ಕೆ 46 ಮೈಲು ದೂರದಲ್ಲಿ ಈ ಪರ್ವತವಿದೆ.

ಕಾಂಡ್ಲಾ

ಭಾರತದ ಐದು ಪ್ರಮುಖ ಬಂದರುಗಳಲ್ಲಿ ಒಂದು —ಕಾಂಡ್ಲಾ. ಕರಾಚಿ ಬಂದರು ಪಾಕಿಸ್ತಾನಕ್ಕೆ ಸೇರಿದ ಮೇಲೆ, ಕರಾಚಿ, ಮುಂಬಯಿಗಳ ನಡುವಿನ 1,000 ಮೈಲು ಕರಾವಳಿಯಲ್ಲಿ ದೊಡ್ಡ ಮುಖ್ಯ ಬಂದರೂ ಇರಲಿಲ್ಲ. ಇದರಿಂದ 1948ರಲ್ಲಿ ಭಾರತ ಸರಕಾರ ಗುಜರಾತಿನ ಕಾಂಡ್ಲಾದಲ್ಲಿ ಒಂದು ದೊಡ್ಡ ಬಂದರು ಕಟ್ಟಲು ನಿರ್ಧರಿಸಿತು. ಅದು ಪ್ರಧಾನ ಬಂದರು ಎಂಬ ಘೋಷಣೆ 1955ರಲ್ಲಿ ಹೊರಟಿತು.

ಇದನ್ನು ಪ್ರಧಾನ ಬಂದರುಗಳ ಗುಂಪಿಗೆ ಸೇರಿಸಿದ ಮೇಲೆ ಕಾಂಡ್ಲಾ ಪ್ರದೇಶದಲ್ಲಿ ಅಭಿವೃದ್ಧಿ ಕಾರ್ಯಗಳು ಭರದಿಂದ ಸಾಗಿದುವು. ಕಾಂಡ್ಲಾ–ಅಹಮದಾಬಾದ್ ನಡುವೆ ಬ್ರಾಡ್‌ಗೇಜು ರೈಲುಮಾರ್ಗ ನಿರ್ಮಾಣವಾಯಿತು. ಬಂದರಿನ ಹಿಂಬದಿಯಲ್ಲಿರುವ ವಿಸ್ತಾರ ಪ್ರದೇಶದಲ್ಲಿ ಎಂಜಿನಿಯರಿಂಗ್ ಉಪಕರಣ ಮತ್ತು ಅವಕ್ಕೆ ಸಂಬಂಧ ವಸ್ತು ಉತ್ಪಾದನೆ, ರಾಸಾಯನಿಕ ಕೈಗಾರಿಕೆಗಳು, ನೂಲುಗಿರಣಿ ಸ್ಥಾಪಿತವಾದುವು.

ಬಂದರು ಮತ್ತು ಅದರ ಸುತ್ತಮುತ್ತಲ ಪ್ರದೇಶ 1965ರಿಂದ ಮುಕ್ತ ವ್ಯಾಪಾರವಲಯವಾದುವು. ಇದು ಈ ಬಂದರಿನಲ್ಲಿ ದೊರೆಯುವ ವಿಶಿಷ್ಟ ಸೌಲಭ್ಯ. ಭಾರತದ ರಫ್ತು ಸಾಮರ್ಥ್ಯ ಹೆಚ್ಚಿಸಿ, ಹೆಚ್ಚು ವಿದೇಶಿ ವಿನಿಮಯ ಗಳಿಸುವುದು ಈ ಮುಕ್ತವ್ಯಾಪಾರ ವಲಯದ ಉದ್ದೇಶ. ದೇಶದಲ್ಲಿ ಇದು ಈ ರೀತಿಯ ಪ್ರಥಮ ವಲಯ.

ಕಡಿಮೆ ಮಳೆಯೂ ಬಿಸಿ ಹವೆಯೂ ಇರುವ ಇಲ್ಲಿನ ಪರಿಸರ ಉಪ್ಪಿನ ಬೆಳವಣಿಗೆಗೆ ಅನುಕೂಲವಾಗಿದೆ. ಬಂದರಿನಲ್ಲಿ ಆಧುನಿಕ ಯಂತ್ರ ಸೌಲಭ್ಯಗಳಿವೆ.

ತೈಲ, ಖನಿಜ, ಆಹಾರಧಾನ್ಯ, ಯಂತ್ರೋಪಕರಣಗಳು, ರಾಸಾಯನಿಕ ಪದಾರ್ಥ, ಕೃತಕ ಗೊಬ್ಬರ ಈ ಬಂದರಿಗೆ ಆಮದಾಗುವ ಪದಾರ್ಥಗಳು. ಹತ್ತಿ, ಉಪ್ಪು, ಖನಿಜ, ಸಕ್ಕರೆ, ತೈಲಗಳು ಇಲ್ಲಿಂದ ರಫ್ತಾಗುತ್ತವೆ. ವರ್ಷಕ್ಕೆ 25 ಲಕ್ಷ ಟನ್ ಪದಾರ್ಥಗಳ ಸಾಗಾಣಿಕೆಯನ್ನು ಕಾಂಡ್ಲಾ ಬಂದರು ನಿರ್ವಹಿಸುತ್ತದೆ. 736 ಅಡಿಗಳಿಗಿಂತಲೂ ಹೆಚ್ಚು ಉದ್ದದ ಹಡಗುಗಳು ಕೂಡ ಈ ಬಂದರನ್ನು ಸುಲಭವಾಗಿ ಪ್ರವೇಶಿಸಬಹುದು.

ರಾಜಸ್ಥಾನ, ಪಂಜಾಬ್, ದೆಹಲಿ, ಉತ್ತರ ಮತ್ತು ಮಧ್ಯ ಗುಜರಾತ್, ಮಧ್ಯಪ್ರದೇಶ ರಾಜ್ಯದ ಪಶ್ಚಿಮಭಾಗ, ಜಮ್ಮು ಮತ್ತು ಕಾಶ್ಮೀರ, ಉತ್ತರ ಪ್ರದೇಶ ರಾಜ್ಯದ ಪಶ್ಚಿಮ ಹಾಗೂ ಕೇಂದ್ರ ಭಾಗಗಳು — ಇವು ಕಾಂಡ್ಲಾದ ಹಿನ್ನಾಡು ಪ್ರದೇಶಗಳು. ಕಾಂಡ್ಲಾ ಬಳಿಯ ಹೊಸ ಪಟ್ಟಣ ಗಾಂಧೀಧಾಮ ತ್ವರಿತಗತಿಯಿಂದ ಬೆಳೆಯುತ್ತಿರುವ ಕೈಗಾರಿಕಾ ನಗರವಾಗಿದೆ. ಕಾಂಡ್ಲಾದ ಜನಸಂಖ್ಯೆ 17,995.

ಕಾಂಬೋಡಿಯ

ನೋಡಿ : ಸಂಪುಟ ೧

ಕಾಂಭೋಜ

ಕ್ರಿ. ಪೂ. ಏಳನೆಯ ಶತಮಾನದಲ್ಲಿ 'ಷೋಡಶ ಮಹಾಜನಪದ'ಗಳೆಂಬ ಹದಿನಾರು ರಾಜ್ಯಗಳು ವಾಯವ್ಯ ಭಾರತದಲ್ಲಿ ಇದ್ದುವು. ಹಿಮಾಲಯದ ತಪ್ಪಲಿನಲ್ಲಿದ್ದ ಈ ರಾಜ್ಯಗಳಲ್ಲೊಂದು —ಕಾಂಭೋಜ. ಇಲ್ಲಿ ಆಡಳಿತ ಆಯ್ಕೆಯ ಮೂಲಕ ನಡೆಯುತ್ತಿತ್ತು.

ಕಾಂಭೋಜ ಬುಡಕಟ್ಟಿನ ಜನರ ಬಗೆಗೆ ಮನು ಬರೆದಿದ್ದಾನೆ. ಕುರುಕ್ಷೇತ್ರ ಯುದ್ಧದಲ್ಲಿ ಅವರು ಕೌರವರ ಕಡೆಗಿದ್ದರು. ಅವರ ರಾಜ ಸುದಕ್ಷಿಣ ಅರ್ಜುನನಿಂದ ಹತನಾಗುವ ವರೆಗೆ ಅವರು ಅಪಾರ ಧೈರ್ಯ, ಸಾಹಸ ತೋರಿದರು. ಜಾತಕ ಕತೆಗಳಲ್ಲಿಯೂ ಅವರ ಬಗೆಗೆ ಉಲ್ಲೇಖವಿದೆ. ಸಗರ ರಾಜನಿಗೆ ಅವರು ವೈರಿಗಳಾಗಿದ್ದರು.

ಅವರನ್ನು ಹೆಸರಿಸುವಾಗ ಯವನರು, ಗ್ರೀಕರು, ಗಾಂಧಾರರು, ಶಕರು ಮುಂತಾದವರೊಡನೆ ಸೇರಿಸಲಾಗುತ್ತಿತ್ತು. ಅವರ ಭಾಷೆ ವೈದಿಕ ಹಾಗೂ ಅವೆಸ್ತ ಭಾಷೆಗಳಿಗೆ ಮಧ್ಯಸ್ಥವಾಗಿದ್ದಿತು.

ಕಾಂಭೋಜ ಮೊದಲು ರಾಜಪ್ರಭುತ್ವವಾಗಿದ್ದು ಅನಂತರ ಗಣರಾಜ್ಯವಾಯಿತು. ಅಶೋಕ ಚಕ್ರವರ್ತಿ ಇವರಲ್ಲಿಗೆ ಬೌದ್ಧ ಮತ ಪ್ರಚಾರಕರನ್ನು ಕಳುಹಿಸಿದ. ಆ ಬಗೆಗೆ ಒಂದು ಶಿಲಾಶಾಸನವಿದೆ.

ಮುಂದೆ ಕಾಂಭೋಜರ ಒಂದು ಗುಂಪು ಹಿಮಾಲಯ [illegible] ನೆಗೆ. ಅನಂತರ ಗಂಗಾ ಬಯಲು ಪ್ರದೇಶಕ್ಕೆ. ವಲಸೆ ಹೋಯಿತು. 9ನೆಯ ಶತಮಾನದಲ್ಲಿ ಇವರು ಬಂಗಾಳದ ಪಾಲರಾಜರೊಡನೆ [illegible]

[illegible]
ದ್ದಾರೆ.

ತೊಗಲಿನ ಮೇಲೆ ಚಿನ್ನದ ಎಳೆಗಳಿಂದ ನೇಯ್ದ ಕಸೂತಿ, ಉಣ್ಣೆಯ ಹೊದಿಕೆ, ತುಪ್ಪಳ, ಉತ್ತಮ ಕುದುರೆಗಳು ಹಾಗೂ ಸುಂದರ ಸ್ತ್ರೀಯರಿಗೆ ಕಾಂಭೋಜ ಹೆಸರಾಗಿತ್ತು. ರಾಮಾಯಣ, ಮಹಾಭಾರತ ಕಾಲದ ವೇಳೆಗೆ ವೈದಿಕ ಗುರುಪರಂಪರೆಗೆ, ವಿದ್ಯೆಗೆ ಈ ನಾಡು ಹೆಸರಾಗಿತ್ತು.

ನೋಡಿ : ಷೋಡಶ ಮಹಾ ಜನಪದಗಳು

ಕಾಕತೀಯರು

ಕರಿಕಾಲ ಚೋಳನ ವಂಶಸ್ಥರೆಂದು ತಮ್ಮನ್ನು ಕರೆದುಕೊಂಡ ಕಾಕತೀಯರು ಹನ್ನೊಂದನೆಯ ಶತಮಾನದ ಆರಂಭದಿಂದ ಹದಿನಾಲ್ಕನೆಯ ಶತಮಾನದ ಆದಿಭಾಗದ ವರೆಗೆ ಆಂಧ್ರದಲ್ಲಿ ಆಳಿದವರು.

ಈ ವಂಶದ ಮೊದಲ ದೊರೆ ಬೇತ. ಪಲ್ಲವರ ಸಾಮಂತನಾಗಿದ್ದ. ಇವನ ಅನಂತರ ಆಳಿದ ಪ್ರೋಲ, ಕಲ್ಯಾಣದ ಚಾಲುಕ್ಯ ಸೋಮೇಶ್ವರನ ಮಾಂಡಲಿಕನಾದ. ಇವನ ಸೇನಾಸೇವೆಗೆ ಪ್ರತಿಯಾಗಿ ಚಾಲುಕ್ಯರು ಇವನಿಗೆ ಹನುಮಕೊಂಡವನ್ನು ಕೊಟ್ಟರು.

ಪ್ರೋಲನ ಮಗನಾದ ತ್ರಿಭುವನಮಲ್ಲ-ಬೇತನೆಯು ಚೇರ-ಕಲ್ಯಾಣದ ಅರಸನೆಯ ವಿಕ್ರಮಾದಿತ್ಯನ ಸಾಮಂತನಾಗಿದ್ದು ಹನುಮಕೊಂಡವನ್ನು ತನ್ನ ರಾಜಧಾನಿಯಾಗಿ ಮಾಡಿಕೊಂಡ. ಇವನ ಮಗ ಎರಡನೆಯ ಪ್ರೋಲನ (1115–58) ಕಾಲದಲ್ಲಿ ಕಾಕತೀಯರು ಚಾಲುಕ್ಯರಿಂದ ಸ್ವತಂತ್ರರಾಗಿ ಪರಮಾಧಿಕಾರಿಗಳಾಗಿ ಆಳುತ್ತಿದ್ದರು. ಚಾಲುಕ್ಯ ಮೂರನೆಯ ತೈಲಪನನ್ನು ಪ್ರೋಲ ಸೋಲಿಸಿದ. ಇವನ ಹಿರಿಯಮಗ ರುದ್ರ ಧೀರ. ರಾಜ್ಯವನ್ನು ವಿಸ್ತರಿಸಿದ. ಹನುಮಕೊಂಡ, ಪಿಲ್ಲಮರಿ, ಮಂತ್ರಕೂಟಗಳಲ್ಲಿ ಸುಂದರ ದೇವಾಲಯಗಳನ್ನು ಕಟ್ಟಿಸಿದ. ಸಂಸ್ಕೃತದಲ್ಲಿ 'ನೀತಿಸಾರ' ಎಂಬ ಗ್ರಂಥವನ್ನು ಬರೆದ.

ರುದ್ರನ ಸೋದರ ಮಹಾದೇವನ (1195–98) ಕಾಲದಲ್ಲಿ ದೇವಗಿರಿಯ ಸೇವುಣ ಜೈತುಗಿಯು ದಂಡೆತ್ತಿ ಬಂದು ಮಹಾದೇವನನ್ನು ಕೊಂದು, ಮಹಾದೇವನ ಮಗ ಗಣಪತಿಯನ್ನು ಬಂಧಿಸಿದ. ಮುಂದೆ ಗಣಪತಿಯ ಬಿಡುಗಡೆಯಾಗಿ ಆತ ಪಟ್ಟವೇರಿದಾಗ ರಾಜಧಾನಿ ಓರಂಗಲ್ (ವಾರಂಗಲ್) ಅಥವಾ ಏಕಶಿಲಾನಗರಕ್ಕೆ ಸ್ಥಳಾಂತರಗೊಂಡಿತು. ಅವನ ಅನಂತರ ಮಗಳಾದ ರುದ್ರಾಂಬೆ 1261ರಲ್ಲಿ ಪಟ್ಟವೇರಿದಳು. ರುದ್ರದೇವ ಎಂಬ ಪುರುಷನಾಮದಿಂದ, ಗಂಡಸು ವೇಷ ಧರಿಸಿ ಆಳುತ್ತಿದ್ದ ಈ ರಾಣಿ ಸೇವುಣ ಮಹಾದೇವ ಮತ್ತು ತನ್ನ ಸಾಮಂತ ಅಂಬದೇವನ ಕೈಯಲ್ಲಿ ಸೋಲು ಅನುಭವಿಸಬೇಕಾಯಿತು. ಇವಳ ರಾಜ್ಯವನ್ನು ಸಂದರ್ಶಿಸಿದ ಇಟಾಲಿಯನ್ ಪ್ರವಾಸಿ ಮಾರ್ಕೊ ಪೋಲೋ ಈಕೆಯ ದಕ್ಷ ಆಡಳಿತ ವ್ಯವಸ್ಥೆಯನ್ನು ಪ್ರಶಂಸಿಸಿದ್ದಾನೆ.

ರುದ್ರಾಂಬೆಯ ಅನಂತರ ಆಕೆಯ ಮಗಳ ಮಗ ಪ್ರತಾಪರುದ್ರ ಪಟ್ಟವೇರಿದ. ಮಹಾ ಪರಾಕ್ರಮಿಯಾದ ಈತ. ಬಂಡೆದ್ದ ಮಾಂಡಲಿಕ ಅಂಬದೇವನನ್ನು ನೆಲ್ಲೂರಿನ ದೊರೆಯನ್ನೂ ಕೊಂದ. ಆದರೆ 1309–10ರಲ್ಲಿ ದಿಲ್ಲಿಯ ದಂಡನಾಯಕ ಮಾಲಿಕ್ ಕಾಫರ್ ವಾರಂಗಲ್‌ನ ಮೇಲೆ ದಂಡೆತ್ತಿ ಬಂದ. ಪ್ರತಾಪರುದ್ರನಿಂದ ಅಪಾರ ಹಣ ಪಡೆದು ಮರಳಿದ. ಮುಂದೆ 1322ರಲ್ಲಿ ದೆಹಲಿಯ ಸುಲ್ತಾನ ಘಿಯಾಸುದ್ದೀನನ ಮಗ ಜುನಾ ಖಾನ್ ದಾಳಿ ಮಾಡಿ ಪ್ರತಾಪರುದ್ರನನ್ನು ಸೆರೆಹಿಡಿದು ಬಂಧಿಸಿ ಒಯ್ದ. ಇಲ್ಲಿಗೆ ಕಾಕತೀಯರ ಪರಮಾಧಿಕಾರ ಕೊನೆಗೊಂಡಿತು.

ಪ್ರತಾಪರುದ್ರನ ಆಸ್ಥಾನದಲ್ಲಿದ್ದ ವಿದ್ಯಾನಾಥನೆಂಬ ಕವಿ 'ಪ್ರತಾಪರುದ್ರ ಯಶೋಭೂಷಣಂ' ಎಂಬ ಅಲಂಕಾರ ಗ್ರಂಥವನ್ನು ಸಂಸ್ಕೃತದಲ್ಲಿ ಬರೆದಿದ್ದಾನೆ.

ಕಾರ್ಕೋಟರು

ಕಾಶ್ಮೀರ, ಪ್ರಾಬಲ್ಯದ ತುಟ್ಟತುದಿ ತಲಪಿದ್ದು ಕಾರ್ಕೋಟ ರಾಜ ಲಲಿತಾದಿತ್ಯನ ಕಾಲದಲ್ಲಿ. ಕಾರ್ಕೋಟರು 627ರಿಂದ 855ರ ವರೆಗೆ ಕಾಶ್ಮೀರ ದೇಶವನ್ನು ಆಳಿದರು.

ಈ ವಂಶದ ಮೂಲಪುರುಷ ದುರ್ಲಭ ವರ್ಧನ. ಇವನ ಕಾಲದಲ್ಲಿ ಕಾಶ್ಮೀರಕ್ಕೆ ಬಂದ ಹ್ಯೂಯೆನ್ ತ್ಸಾಂಗ್ ಅಲ್ಲಿನ ಸಾಮಾಜಿಕ, ಆರ್ಥಿಕ ಮತ್ತು ಬೌದ್ಧಿಕ ಪರಿಸ್ಥಿತಿಗಳ ಬಗೆಗೆ ಬರೆದಿದ್ದಾನೆ. ಇದರಲ್ಲಿ ದುರ್ಲಭ ವರ್ಧನನ ರಾಜ್ಯ ವ್ಯಾಪ್ತಿಯ ವಿವರಗಳು ದೊರೆಯುತ್ತವೆ.

ದುರ್ಲಭ ವರ್ಧನನ ಮಗ ದುರ್ಲಭಕ. ಇವನು ದೀರ್ಘ ಕಾಲ ಆಳಿದ. ಇವನ ಮಕ್ಕಳು ಚಂದ್ರಾಪೀಡ, ತಾರಾಪೀಡ, ಹಾಗೂ ಮುಕ್ತಾಪೀಡ. ಚಂದ್ರಾಪೀಡ (ವಜ್ರಾದಿತ್ಯ) ಒಳ್ಳೆಯ ರಾಜನೆಂದು ಪ್ರಸಿದ್ಧನಾಗಿದ್ದ. ಇವನ ತಮ್ಮ ತಾರಾಪೀಡ ದುರ್ಗುಣಿ. ಅನಂತರ ಬಂದವನೇ ಲಲಿತಾದಿತ್ಯನೆಂದು ಕೀರ್ತಿವಂತನಾದ ಅರಸು, ಮುಕ್ತಾಪೀಡ. ಕಾಶ್ಮೀರ ಚರಿತ್ರಕಾರ ಕಲ್ಹಣ ತನ್ನ 'ರಾಜತರಂಗಿಣಿ'ಯಲ್ಲಿ ಲಲಿತಾದಿತ್ಯನ ಬಗೆಗೆ ವಿವರವಾಗಿ ತಿಳಿಸಿದ್ದಾನೆ.

ಅನಂತರ ಕ್ರಮವಾಗಿ ಅವನ ಹಿರಿಯ ಮಗ ಕುವಲಯಾಪೀಡ, ಅವನ ತಮ್ಮ ವಜ್ರಾದಿತ್ಯ ರಾಜರಾದರು. ಇವನ ಮಕ್ಕಳಲ್ಲಿ ಜಯಾಪೀಡ ವಿನಯಾದಿತ್ಯ ಮುಖ್ಯನಾದವನು. ಅಜ್ಜ ಲಲಿತಾದಿತ್ಯನಂತೆ ಈತ ಪ್ರಬಲನಾಗಿದ್ದ ; ರಾಜ್ಯ ವಿಸ್ತರಿಸಿದ ; ಸಾಹಿತ್ಯ ಪೋಷಣೆ ಮಾಡಿದ. ಕ್ಷೀರಸ್ವಾಮಿನ್, ಉದ್ಭಟ, ವಾಮನ ಮತ್ತು ದಾಮೋದರ ಗುಪ್ತ ಇವನ ಆಸ್ಥಾನದಲ್ಲಿದ್ದ ಖ್ಯಾತ ಪಂಡಿತರು. ಜಯಾಪೀಡನ ಅನಂತರ ಕಾರ್ಕೋಟರ ಆಡಳಿತ ಅಶಕ್ತವಾಯಿತು. ಅವನ ಮಕ್ಕಳಾದ ಲಲಿತಾಪೀಡ, ಸಂಗ್ರಾಮಾಪೀಡರು ಆಳಿದಮೇಲೆ, ಬಾಲಕ ಚಿಪ್ಪಟ ಜಯಾಪೀಡನ ಕಾಲದಲ್ಲಿ ಅಂತಃಕಲಹಗಳು ಉಂಟಾದುವು. ಉತ್ಪಲ ವಂಶದ ದೊರೆ ಅವಂತಿವರ್ಮ ಈ ವಂಶದ ಆಡಳಿತವನ್ನು ಕೊನೆಗಾಣಿಸಿದ.

ನೋಡಿ : ಕಲ್ಹಣ ; ರಾಜತರಂಗಿಣಿ ; ಲಲಿತಾದಿತ್ಯ

ಕಾಣ್ವರು

ಮಗಧದಲ್ಲಿ ಆಳಿದ ಮೌರ್ಯರ ಉತ್ತರಾಧಿಕಾರಿಗಳಲ್ಲಿ ಶುಂಗರು ಮತ್ತು ಕಾಣ್ವರು ಗಣ್ಯರು. ಶುಂಗವಂಶದ ದೇವಭೂತಿಯ ಬ್ರಾಹ್ಮಣ ಮಂತ್ರಿ ವಾಸುದೇವ ಕ್ರಿ. ಪೂ. 75ರಲ್ಲಿ ತನ್ನ ಅರಸನನ್ನು ಬದಿಗೊತ್ತಿ ಪಾಟಲಿಪುತ್ರದಿಂದ ಆಳಲಾರಂಭಿಸಿದ. ಈತನು ಕಣ್ವ ಗೋತ್ರದವನಾದುದರಿಂದ ಇವನ ವಂಶವನ್ನು ಕಾಣ್ವ ಅಥವಾ ಕಾಣ್ವಾಯನ ವಂಶ ಎಂದು ಕರೆಯುತ್ತಾರೆ.

ವಾಸುದೇವನ ಒಂಬತ್ತು ವರ್ಷಗಳ ಆಳ್ವಿಕೆಯ ಅನಂತರ ಈ ವಂಶದ ಇನ್ನೂ ಮೂರು ದೊರೆಗಳು ರಾಜ್ಯಭಾರ ಮಾಡಿದರು : ಭೂಮಿಮಿತ್ರ (14 ವರ್ಷ ಕಾಲ), ನಾರಾಯಣ (12 ವರ್ಷ ಕಾಲ) ಮತ್ತು ಸುಶರ್ಮ

(10 ವರ್ಷ ಕಾಲ). ಕ್ರಿ. ಪೂ. 30ರಲ್ಲಿ ಆಂಧ್ರರು (ಶಾತವಾಹನರು) ಅವರನ್ನು ಅಧಿಕಾರದಿಂದ ಕಿತ್ತೊಗೆದರು.

ನೋಡಿ : ಪಿ. ವಿ. ಕಾಣೆ

ಕಾರ್ತಿಕೇಯ

ತಾರಕನೆಂಬ ಅಸುರ ಬ್ರಹ್ಮನನ್ನು ಕುರಿತು ತಪಸ್ಸುಮಾಡಿ, ಅಂದಿನ ವರೆಗೆ ಅವತರಿಸಿದ್ದ ಯಾವ ದೇವತೆಯಿಂದಲೂ ತನಗೆ ಸಾವು ಬಾರದಂತೆ ವರ ಪಡೆದು, ಲೋಕಕಂಟಕನಾದ. ಇವನ ಸಂಹಾರಕ್ಕಾಗಿಯೇ ಹುಟ್ಟಿದ ದೇವತೆ ಕಾರ್ತಿಕೇಯ. ಇವನು ಶಿವ, ಪಾರ್ವತಿಯರ ಪುತ್ರ. ಇವನನ್ನು ಸ್ಕಂದನೆಂದೂ ಕುಮಾರನೆಂದೂ ಕರೆಯುತ್ತಾರೆ.



ಮುರುಗನ್, ಕುಮಾರಸ್ವಾಮಿ, ಸುಬ್ರಹ್ಮಣ್ಯ : ಕಾರ್ತಿಕೇಯ

ಇವನನ್ನು ಸಾಕಿ ಸಲಹಿದವರು ಕೃತ್ತಿಕಾ ನಕ್ಷತ್ರದ ದೇವತೆಗಳು. ಇವರೆಲ್ಲರೂ ಅವನಿಗೆ ಸಾಕು ತಾಯಿಯರಾದ್ದರಿಂದ ಇವನಿಗೆ ಕಾರ್ತಿಕೇಯ ಎಂದು ಹೆಸರಾಯಿತು.

ಇವನು ವಯಸ್ಕನಾದ ಮೇಲೆ ದೇವತೆಗಳ ಸೇನಾಪತಿಯಾಗಿ ನಿಂತು ತಾರಕನನ್ನೂ ಅವನ ಸಂಗಡಿಗರನ್ನೂ ಸಂಹರಿಸಿದ. ಕ್ರಿಸ್ತಶಕದ ಆರಂಭದಲ್ಲಿ ಸ್ಕಂದನ ಆರಾಧನೆ ಉತ್ತರ ಭಾರತದಲ್ಲಿ ವ್ಯಾಪಕವಾಗಿತ್ತು.

ದಕ್ಷಿಣ ಭಾರತದಲ್ಲಿ ಈಗಲೂ ಸ್ಕಂದನ ಪೂಜಿಸುತ್ತಾರೆ. ಮುರುಗನ್, ಕುಮಾರಸ್ವಾಮಿ, ಕುರುಂಜಿಯಾಂಡವನ್, ಸುಬ್ರಹ್ಮಣ್ಯ ಎಂಬ ಹೆಸರುಗಳಿಂದ ಪೂಜೆ ಸಲ್ಲಿಸುತ್ತಾರೆ. ಈ ದೇವತೆಗೆ ಮೀಸಲಾದ ಕ್ಷೇತ್ರಗಳಲ್ಲಿ ಮಧುರೆ ಹತ್ತಿರದಲ್ಲಿರುವ ಪಳನಿ ಅತ್ಯಂತ ಪ್ರಸಿದ್ಧವಾದದ್ದು. ಕರ್ನಾಟಕದ ಸೊಂಡೂರಿನ ಹತ್ತಿರ ಇರುವ ಕಾರ್ತಿಕೇಯ ದೇವಾಲಯ ಪ್ರಖ್ಯಾತ.

ಕಾರ್ತಿಕೇಯನು ಮಂಗಳ ಗ್ರಹದ ಅಧಿದೇವತೆಯೆಂದು ಪರಿಗಣಿಸಲ್ಪಟ್ಟಿದ್ದಾನೆ.

ಕಾರ್ನಾಡು ಸದಾಶಿವರಾವ



ಕಾರ್ನಾಡು ಸದಾಶಿವರಾವ

ಸದಾಶಿವ ಶಾಲೆಯಿಂದ ಮರಳಿದಾಗ ಕೈಯಲ್ಲಿ ಪುಸ್ತಕಗಳಿರಲಿಲ್ಲ; "ಬಡ ಹುಡುಗನಿಗೆ ಕೊಟ್ಟೆ"—ಎಂದ. ಚಳಿಗಾಲದಲ್ಲಿ ಒಂದು ಸಂಜೆ ಶಾಲೆಯಿಂದ ಹಿಂದಿರುಗಿದಾಗ ಕೋಟು ಇರಲಿಲ್ಲ; "ಚಳಿಯಿಂದ ನಡುಗುತಿದ್ದ ಒಬ್ಬ ಬಡ ಹುಡುಗನಿಗೆ ಕೊಟ್ಟೆ" —ಎಂದ.

ಹೀಗೆ ಬಾಲ್ಯದಿಂದಲೂ ಅತ್ಯಂತ ಉದಾರಿಯಾಗಿ ನಡೆದುಕೊಂಡವರು ದೇಶಭಕ್ತ ಕಾರ್ನಾಡು ಸದಾಶಿವರಾಯರು. ಜನನ 1881 ಏಪ್ರಿಲ್‌ನಲ್ಲಿ, ಮಂಗಳೂರಿನಲ್ಲಿ. ಇವರ ತಂ[illegible] ಕಾರ್ನಾಡು ರಾಮಚಂದ್ರರಾಯರು ಆಗರ್ಭ ಶ್ರೀಮಂತರು ಮತ್ತು ಗ[illegible] ವಕೀಲರು. ತಾಯಿ ರಾಧಾಬಾಯಿ.

ಹೈಸ್ಕೂಲು ಮತ್ತು ಎಫ್.ಎ. ವರೆಗಿನ ಶಿಕ್ಷಣವನ್ನು ಮಂಗಳೂರ[illegible] ಪಡೆದಮೇಲೆ ಸದಾಶಿವರಾಯರು ಮದರಾಸಿನ ಪ್ರೆಸಿಡೆನ್ಸಿ ಕಾಲೇಜಿನ[illegible] ಪದವೀಧರರಾದರು. ವಿವಾಹವಾದ ಬಳಿಕ ಮುಂಬಯಿಯಲ್ಲಿ ನ್ಯಾ[illegible] ಶಾಸ್ತ್ರ ಕಲಿತು ವಕೀಲರಾಗಿ, 1906ರಲ್ಲಿ ಮಂಗಳೂರಿಗೆ ಹಿಂದಿರುಗಿದರು.

ವಿಧವಾವಿವಾಹ ಹಾಗೂ ಇತರ ಸಮಾಜ ಸುಧಾರಣಾ ಕಾರ್ಯಗಳ[illegible] ಸದಾಶಿವರಾಯರು ತೀವ್ರ ಆಸಕ್ತಿ ವಹಿಸಿದರು. ಈ ಕಾರ್ಯದಲ್ಲಿ ಪ[illegible] ಶಾಂತಾಬಾಯಿ ಪತಿಗೆ ಸಹಾಯಕರಾದರು. ದೀನದಲಿತರ ಸೇ[illegible] ಕಾರ್ನಾಡರಿಗೆ ಮೊದಲಿನಿಂದಲೂ ಇಷ್ಟ. ಗಾಂಧೀಜೀ ಹರಿಜನೋದ್ಧಾ[illegible] ಚಳುವಳಿಯನ್ನು ಆರಂಭಿಸುವ ಮೊದಲೇ ಸಮಾಜದ ದಲಿತವರ್ಗ[illegible] ಹಲವು ಮಕ್ಕಳಿಗೆ ಸದಾಶಿವರಾಯರು ಮನೆಯಲ್ಲಿ ಊಟ ಹಾಕುತ್ತಿದ್ದರು. ದಕ್ಷಿಣ ಕನ್ನಡ ಜಿಲ್ಲೆಯ ಹಲವು ಕಡೆಗಳಲ್ಲಿ ಹರಿಜನರಿಗಾಗಿ ಶಿಕ್ಷ[illegible] ಕೇಂದ್ರಗಳನ್ನು ತೆರೆದರು; ಪ್ರಾಣಿಬಲಿಯನ್ನು ವಿರೋಧಿಸಿದರು.

1920ರಲ್ಲಿ ಮಹಾತ್ಮ ಗಾಂಧಿಯವರು ಅಸಹಕಾರ ಚಳುವಳಿಗೆ [illegible] ನೀಡಿದಾಗ ಸದಾಶಿವರಾಯರು ರಾಜಕೀಯ ರಂಗಕ್ಕಿಳಿದರು. ಜಿ[illegible] ಯಲ್ಲೆಲ್ಲ ಸಂಚರಿಸಿ, ಜನಜಾಗೃತಿ ಉಂಟುಮಾಡಿದರು. ಖಾದಿ ಉತ್ಪತ್ತಿ[illegible] ಪ್ರೋತ್ಸಾಹವಿತ್ತರು.

ಕರ್ನಾಟಕ ಕಾಂಗ್ರೆಸ್ ಸಮಿತಿಯ ರಚನೆಯಲ್ಲಿ ಅವರು ಪ್ರಮುಖ ಪಾ[illegible] ವಹಿಸಿದರು. ನಾಲ್ಕು ಬಾರಿ ಅದರ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದರು. ಕರ್ನಾಟಕದ ಗಣ್ಯ ಕಾಂಗ್ರೆಸ್ ಮುಂದಾಳಾದರು. ಮಂಗಳೂ[illegible] ಬಂದ ರಾಷ್ಟ್ರನಾಯಕರಿಗೆಲ್ಲ ಸದಾಶಿವರಾಯರ ಮನೆಯೇ ಬಿಡಾರ.

ಸದಾಶಿವರಾಯರು ತಮ್ಮ ಜೀವನದಲ್ಲಿ ಹಲವಾರು ವಿಯೋಗಗಳ[illegible] ಅನುಭವಿಸಬೇಕಾಯಿತು. ಒಬ್ಬರಮೇಲೊಬ್ಬರಂತೆ [illegible] ಮಕ್ಕ[illegible] ಅನಂತರ ಪತ್ನಿ ತೀರಿಕೊಂಡಮೇಲೆ ವರ್ಧಾಕ್ಕೆ ಹೋಗಿ ಗಾಂಧೀಜಿ[illegible] ಸಾನ್ನಿಧ್ಯದಲ್ಲಿ ಕಾರ್ಯನಿರತರಾದರು. 1923ರಲ್ಲಿ [illegible] ನೆರೆಯ ಹಾವಳಿಗೆ ಒಳಗಾದಾಗ, ವರ್ಧಾದಿಂದ [illegible] ಊಟ, ವಸತಿಗಳ ವ್ಯವಸ್ಥೆ ಮಾಡಿದರು.

ಉಪ್ಪಿನ ಸತ್ಯಾಗ್ರಹದ ಕಾಲದಲ್ಲಿ ಸದಾಶಿವರಾಯರ ದಸ್ತ[illegible]ಯಾಯಿತು. ಗಾಂಧೀ, ಇರ್ವಿನರ ಒಪ್ಪಂದವಾದಾಗ ಅವರು ಬಿಡು[illegible]

[illegible] ಆರೋಗ್ಯ ಕೆಟ್ಟಿತ್ತು. [illegible] ಕರನಿರಾಕರಣೆ ಚಳುವಳಿಯನ್ನು ಸಂಘಟಿಸಿದರು. ಮತ್ತೆ ಸತ್ಯಾಗ್ರಹದಲ್ಲಿ ಭಾಗವಹಿಸಿದಾಗ, ಅವರನ್ನು [illegible] ಶಿಕ್ಷೆ ವಿಧಿಸಲಾಯಿತು. ಆರೋಗ್ಯ ಕೆಟ್ಟುದರಿಂದ ಬೇಗನೆ ಬಿಡುಗಡೆಯಾಯಿತು.

1936ರ ಫೈಜ್‌ಪುರ ಕಾಂಗ್ರೆಸ್ ಅಧಿವೇಶನದಲ್ಲಿ ಭಾಗವಹಿಸಲು ಹೋಗಿದ್ದಾಗ [illegible]; [illegible] ಜ್ವರ ಕಾಣಿಸಿಕೊಂಡಿತು. ಮುಂಬಯಿ ಮುಟ್ಟುವ ವೇಳೆಗೆ ಅದು ವಿಪರೀತವಾಯಿತು.

1937 ಜನವರಿ 9ರಂದು ಮುಂಬಯಿಯಲ್ಲಿ ದೇಶಭಕ್ತ ಕಾರ್ನಾಡು ಸದಾಶಿವರಾಯರ [illegible] ಜೀವನ ಕೊನೆಗೊಂಡಿತು. ಮಂಗಳೂರಿನಲ್ಲಿ ಅವರ ಮನೆ ಇದ್ದ ರಸ್ತೆಗೆ ಕಾರ್ನಾಡು ಸದಾಶಿವರಾವ್ ರಸ್ತೆ ಎಂದು ಹೆಸರಿಟ್ಟಿದ್ದಾರೆ.

ಕಾನ್ಪುರ

ಉತ್ತರ ಪ್ರದೇಶದ ಅತಿ ದೊಡ್ಡ ವಾಣಿಜ್ಯ ಹಾಗೂ ಉದ್ಯಮ ಕೇಂದ್ರ. ಕಾನ್ಪುರ. ಇದು ಗಂಗಾನದಿಯ ದಡದಲ್ಲಿದೆ.

ಕಾನ್ಪುರ ರೈಲು, ರಸ್ತೆ ಮಾರ್ಗಗಳ ಸಂಧಿಸ್ಥಳ; ವಿಮಾನ ನಿಲ್ದಾಣವೂ ಇಲ್ಲಿದೆ. ಉತ್ತರ ಪ್ರದೇಶದ ರಾಜಧಾನಿ ಲಖನೌದಿಂದ ಇಲ್ಲಿಗೆ 43 ಮೈಲು.

1857ರಲ್ಲಿ ಸಿಪಾಯಿದಂಗೆಯ ಅಂಗವಾಗಿ ನಡೆದ ಕಾನ್ಪುರದ ಬಂಡಾಯ ಇತಿಹಾಸ ಪ್ರಸಿದ್ಧ.

ಮೊದಲಿಗೆ ಕಾನ್ಪುರಕ್ಕೆ ಕನ್ಹಯಾಪುರವೆಂಬ ಹೆಸರಿದ್ದಿತು. ಅನಂತರ ಕಾನ್ಹಪುರ, ಕಾನ್ಪುರ ಎಂದು ಮಾರ್ಪಾಟು ಹೊಂದಿತು. 19ನೆಯ ಶತಮಾನದ ಆರಂಭದಲ್ಲಿ ಬ್ರಿಟಿಷರು ಇದನ್ನು ಔಧ್ ನವಾಬನಿಂದ ಪಡೆದುಕೊಂಡ ಮೇಲೆ ಇದು ಅವರ ಸೈನ್ಯದ ಠಾಣೆಯಾಯಿತು.

19ನೆಯ ಶತಮಾನದ ಉತ್ತರಾರ್ಧದಲ್ಲಿ ಭಾರತದ ಮೊದಲ ಹತ್ತಿ ಗಿರಣಿಗಳು ಆರಂಭವಾದದ್ದು ಇಲ್ಲಿ. ಹತ್ತಿ ವ್ಯಾಪಾರ ಮತ್ತು ವಸ್ತ್ರೋದ್ಯಮಗಳು ಕಾನ್ಪುರದ ಬೆಳವಣಿಗೆಗೆ ಕಾರಣವಾದುವು. ಕ್ರಮೇಣ ಇಲ್ಲಿ ಧಾನ್ಯ ಸಂಸ್ಕರಣೆ, ಉಣ್ಣೆ, ನಾರುಗಳ ಉದ್ಯಮ, ತೊಗಲು ಉದ್ಯಮ, ಬೂಟುಗಳ ಹಾಗೂ ಪಾದರಕ್ಷೆಗಳ ತಯಾರಿ, ರಾಸಾಯನಿಕ ವಸ್ತುಗಳು, ಯಂತ್ರೋಪಕರಣಗಳು, [illegible], ಪ್ಲಾಸ್ಟಿಕ್ ಉದ್ಯಮಗಳು ಬೆಳೆದುವು.

ಕಾನ್ಪುರದ ಬೀದಿ



ಹತ್ತಿಬಟ್ಟೆ, ಸಕ್ಕರೆ, ಸಾಬೂನು, [illegible] ಹೆಸರಾಗಿದೆ. ಪಟ್ಟಣದ ಜನಸಂಖ್ಯೆ [illegible].

ಕಾನ್ಪುರದಲ್ಲಿ ಕೃಷಿ ಮತ್ತು ವಸ್ತ್ರೋದ್ಯಮ ವಿಜ್ಞಾನ, ವೈದ್ಯ ವಿಷಯದ ಕಾಲೇಜುಗಳಿವೆ. ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಇದೆ. ಕಮಲಾ ವಿಶ್ರಾಂತಿ ಭವನ, ಗಾಜಿನ ದೇವಾಲಯ ರಾಧಾಕೃಷ್ಣ ಮಂದಿರ, ಈ ನಗರದಲ್ಲಿ ನೋಡತಕ್ಕ ಕೆಲವು ಸ್ಥಳಗಳು.

ಕಾಮಂದಕ

ಕ್ರಿ.ಪೂ. ನಾಲ್ಕನೆಯ ಶತಮಾನದ ರಾಜನೀತಿಶಾಸ್ತ್ರ 'ನೀತಿಸಾರ' ಇದನ್ನು ಬರೆದವನು ಕಾಮಂದಕ. ಇವನ ಈ ಕೃತಿಯನ್ನು 'ಕಾಮಂದಕೀಯ' ಎಂದೂ ಕರೆಯುತ್ತಾರೆ. ಈತ [illegible].

'ನೀತಿಸಾರ'ದಲ್ಲಿ ವಿಶೇಷವಾಗಿ ರಾಜ ಮತ್ತು ಅವನ ಸೇನಾಧಿಕಾರಿಗಳ ಬಗೆಗೆ ವಿವರಗಳು ದೊರೆಯುತ್ತವೆ. ಅಪರಾಧಗಳನ್ನು ಗೊತ್ತುಹಚ್ಚುವುದು, ಸೈನ್ಯದ ನಿಯಂತ್ರಣ ಇತ್ಯಾದಿ ವಿಷಯಗಳು ಇದರಲ್ಲಿವೆ. ಜನರು ಸರಿಯಾದ ಮಾರ್ಗದಲ್ಲಿ ನಡೆದುಕೊಳ್ಳುವಂತೆ ಮಾಡಲು ಕೈಗೊಳ್ಳಬೇಕಾದ ಶಿಕ್ಷಾ ಕ್ರಮಗಳೂ ಇವೆ. ರಾಜನ ಹಿತವೇ ಪ್ರಜೆಗಳ ಹಿತ ಎಂದು 'ನೀತಿಸಾರ' ಸಾರುತ್ತದೆ. ಕಾಮಂದಕ ಅನೇಕ ಅಂಶಗಳಲ್ಲಿ ಕೌಟಿಲ್ಯನ ಅಭಿಪ್ರಾಯಗಳನ್ನೇ ಪ್ರತಿಪಾದಿಸಿದ್ದಾನೆ.

ಕಾಮಂದಕನ 'ನೀತಿಸಾರ' ಪದ್ಯರೂಪದಲ್ಲಿ ರಚಿತವಾದ ಪ್ರಥಮ ರಾಜನೀತಿಶಾಸ್ತ್ರ ಎನ್ನುತ್ತಾರೆ.

ಕಾಮಧೇನು

ಕ್ಷೀರಸಮುದ್ರ ಮಥನ ನಡೆದಾಗ ಮೊದಲು ಉದ್ಭವಿಸಿದ್ದು ಹಾಲಾಹಲ. ಅನಂತರ ಬಂದದ್ದು ಸಕಲ ಇಷ್ಟಾರ್ಥಗಳನ್ನೂ ಪೂರೈಸಬಲ್ಲಂಥ ಹಸು—ಕಾಮಧೇನು.

ಕಾಮಧೇನುವನ್ನು ಪಡೆದ ದೇವತೆಗಳು ಈ ಹಸುವನ್ನು ಸಪ್ತರ್ಷಿಗಳಿಗೆ ಕೊಡಿಸಿದರು. ಅದು ವಸಿಷ್ಠನ ಬಳಿ ಉಳಿಯಿತು. ರಾಜ ವಿಶ್ವಾಮಿತ್ರ ಪರಿವಾರದೊಡನೆ ವಸಿಷ್ಠನ ಆಶ್ರಮಕ್ಕೆ ಬಂದಿದ್ದ. ಕಾಮಧೇನುವಿನ ಸಹಾಯದಿಂದ ವಸಿಷ್ಠ ಅವನಿಗೂ ಅವನ ಪರಿವಾರದವರಿಗೂ ರಾಜೋಚಿತ ಸತ್ಕಾರ ನೀಡಿದ. ಇದು ಸಾಧ್ಯವಾದದ್ದು ಕಾಮಧೇನುವಿನಿಂದ ಎಂದು ತಿಳಿದ ವಿಶ್ವಾಮಿತ್ರ ಆ ಹಸುವನ್ನು ತಾನೇ ಪಡೆಯ ಬಯಸಿದ. ವಸಿಷ್ಠನನ್ನು ಕೇಳಿದ. ಅದಕ್ಕೆ ವಿನಿಮಯವಾಗಿ ತನ್ನ ಐಶ್ವರ್ಯವನ್ನೆಲ್ಲ ಕೊಡುವೆನೆಂದ. ವಸಿಷ್ಠ ಒಪ್ಪಲಿಲ್ಲ. ಆಗ ಅವನು ಬಲಾತ್ಕಾರದಿಂದ ಕಾಮಧೇನುವನ್ನು ಕರೆದುಕೊಂಡು ಹೊರಟ. ವಿಶ್ವಾಮಿತ್ರನ ಹಿಡಿತದಿಂದ ಬಿಡಿಸಿಕೊಂಡ ಕಾಮಧೇನು, ವಸಿಷ್ಠನ ಸಹಾಯಕ್ಕೆ ಸೈನಿಕರನ್ನು ಸೃಜಿಸಿತು. ಅವರೊಡನೆ ನಡೆದ ಹೋರಾಟದಲ್ಲಿ ವಿಶ್ವಾಮಿತ್ರ ಸೋಲು ಅನುಭವಿಸಿದ.

—ಇದು ಕಾಮಧೇನುವಿನ ಕಥೆ.

ಕಾಮಧೇನುವಿಗೆ ಸುರಭಿ, ಶವಲಾ, ನಂದಿನಿ ಮೊದಲಾದ ಹೆಸರುಗಳೂ ಇವೆ.

ಕಾಮನ್‌ವೆಲ್ತ್

ಇಪ್ಪತ್ತನೆಯ ಶತಮಾನದ ಆದಿಭಾಗದಲ್ಲಿ ಬ್ರಿಟಿಷ್ ಸಾಮ್ರಾಜ್ಯ ಬಹು ವಿಸ್ತಾರವಾಗಿತ್ತು. ಎರಡನೆಯ ಮಹಾಯುದ್ಧದ ಬಳಿಕ ಬ್ರಿಟಿಷ್ ಸಾಮ್ರಾಜ್ಯದ ಹಲವು ರಾಷ್ಟ್ರಗಳು ಬ್ರಿಟನಿನ ಆಳ್ವಿಕೆಯಿಂದ ಬಿಡುಗಡೆ ಹೊಂದಿದುವು. ಆದರೂ ಬ್ರಿಟನಿನೊಡನೆ ಬಾಂಧವ್ಯ ಉಳಿಸಿಕೊಳ್ಳಬೇಕೆಂಬ ಉದ್ದೇಶ ಇಂಥ ಅನೇಕ ರಾಷ್ಟ್ರಗಳಿಗೆ ಇತ್ತು. ಇಂಥ ಸ್ವತಂತ್ರ ರಾಷ್ಟ್ರಗಳೂ ಬ್ರಿಟನಿನ ಅಧೀನ, ಆಶ್ರಿತ ಹಾಗೂ ಆಳ್ವಿಕೆಗೊಳಪಟ್ಟ ಪ್ರದೇಶಗಳೂ ಒಟ್ಟುಗೂಡಿ ರಚಿಸಿಕೊಂಡಿರುವ ಕೂಟವೇ 'ಕಾಮನ್‌ವೆಲ್ತ್ ಆಫ್ ನೇಷನ್ಸ್'.

ಇದರಲ್ಲಿ ಭಾರತ, ಪಾಕಿಸ್ತಾನ, ಶ್ರೀಲಂಕಾ ಸೇರಿದಂತೆ 29 ಸ್ವತಂತ್ರ ರಾಷ್ಟ್ರಗಳು ಹಾಗೂ 31 ಆಶ್ರಿತ ಪ್ರದೇಶಗಳು ಸದಸ್ಯತ್ವ ಪಡೆದಿವೆ: ಅಧ್ಯಕ್ಷರು ಬ್ರಿಟನಿನ ರಾಜ ಅಥವಾ ರಾಣಿ. ಈ ಒಕ್ಕೂಟಕ್ಕೆ ಸೇರಿರುವ ರಾಷ್ಟ್ರಗಳು ತಮಗೆ ಬೇಕಾದಾಗ ಅದನ್ನು ಬಿಟ್ಟು ಹೊರಬರಬಹುದಾಗಿದೆ. ಯಾವುದಾದರೂ ರಾಷ್ಟ್ರ ಹೊಸದಾಗಿ ಈ ಒಕ್ಕೂಟವನ್ನು ಸೇರಬೇಕಾದರೆ ಉಳಿದ ಸದಸ್ಯ ರಾಷ್ಟ್ರಗಳ ಒಪ್ಪಿಗೆ ಅವಶ್ಯ.

ಕಾಮನ್‌ವೆಲ್ತ್ ಕಾರ್ಯಾಲಯ ಲಂಡನಿನಲ್ಲಿ 1965ರಲ್ಲಿ ಆರಂಭವಾಯಿತು. ಸಭೆ ಸಾಮಾನ್ಯವಾಗಿ ಇಂಗ್ಲೆಂಡಿನಲ್ಲೇ ಸಮಾವೇಶಗೊಳ್ಳುತ್ತದೆ. 1973ರಲ್ಲಿ ಈ ಸಭೆ ಕೆನಡದಲ್ಲಿ ಜರಗಿತು.

ಕಾಮನ್‌ವೆಲ್ತ್ ಒಂದು ಅನೌಪಚಾರಿಕ ಸಂಸ್ಥೆ. ಕಾಮನ್‌ವೆಲ್ತ್ ಸಭೆಗಳಲ್ಲಿ ಇತರ ಸಂಸ್ಥೆಗಳಲ್ಲಿರುವಂತೆ ಯಾವುದೇ ಅಭಿಪ್ರಾಯವನ್ನು ಮತಕ್ಕೆ ಹಾಕಿ ಶೀರ್ಮಾನಕ್ಕೆಗೊಳ್ಳುವುದಿಲ್ಲ. ಚರ್ಚೆ, ವಿಚಾರ ವಿನಿಮಯ ನಡೆಸಿ ನಿರ್ಧಾರಕ್ಕೆ ಬರುತ್ತಾರೆ. ವಿವಾದಾಸ್ಪದ ವಿಷಯಗಳನ್ನು ಚರ್ಚೆಗೆ ತೆಗೆದುಕೊಳ್ಳುವುದಿಲ್ಲ.

ಕಾಮನ್‌ವೆಲ್ತ್‌ನ ಯಾವುದೇ ಸದಸ್ಯ ರಾಷ್ಟ್ರ ಇನ್ನೊಂದು ಸದಸ್ಯ ರಾಷ್ಟ್ರದಲ್ಲಿ ತನ್ನ ರಾಯಭಾರಿ ಕಚೇರಿ ಇಡಬಹುದು. ಇದನ್ನು ಹೈಕಮಿಷನ್ ಎನ್ನುತ್ತಾರೆ. ಪ್ರತಿನಿಧಿಯನ್ನು ಹೈಕಮಿಷನರ್ ಎನ್ನುತ್ತಾರೆ.

ಅನ್ಯೋನ್ಯ ಸೌಹಾರ್ದ ಸಹಕಾರಗಳಿಂದ ವ್ಯಾಪಾರ, ಆರ್ಥಿಕ ಪ್ರಗತಿಯ ಮೂಲಕ ಪರಸ್ಪರರ ಕಲ್ಯಾಣ ಸಾಧಿಸಬೇಕೆಂಬುದು ಕಾಮನ್‌ವೆಲ್ತ್‌ನ ಪ್ರಧಾನ ಉದ್ದೇಶ.

ನೋಡಿ : ಕಾಮನ್‌ವೆಲ್ತ್—ಸಂಪುಟ ೧

ಕಾಮನ ಹುಣ್ಣಿಮೆ

"ಕಾಮನ ಕಬ್ಬಿಗೆ, ಭೀಮನ ಬೆರಣಿ, ಅಡಿಕೆ ಗೋಟು, ಎಕ್ಕದಲೆಕಟು.... ಏನೇನು ಕದ್ದರು? ಸೌದೆ ಬೆರಣಿ ಕದ್ದರು; ಯಾತಕ್ಕೆ ಕದ್ದರು? ಕಾಮನ್ನ ಸುಡೋಕೆ" —ಎಂದು ಹೇಳಿ ಬಾಯಿ ಬಡಿದುಕೊಳ್ಳುವುದು ಕಾಮನ ಹಬ್ಬದ ಒಂದು ಪರಿಚಿತ ನೋಟ.

ಕರ್ನಾಟಕದ ಹಲವು ಭಾಗಗಳಲ್ಲಿ ಕಾಮನ ಹುಣ್ಣಿಮೆಯನ್ನು ದೊಡ್ಡ ಹಬ್ಬವಾಗಿ ಆಚರಿಸುತ್ತಾರೆ. ಹುಡುಗರು ಬಹು ಮುಂಚಿತವಾಗಿಯೇ ಸೌದೆ, ಹಳೆಯ ನಿರುಪಯುಕ್ತ ಮರದ ಸಾಮಾನು, ಬೆರಣಿ ಮುಂತಾದುವನ್ನು ಎಲ್ಲರನ್ನೂ ಬೇಡಿ, ಕಾಡಿ ಸಂಗ್ರಹಿಸುತ್ತಾರೆ. ಫಾಲ್ಗುಣಮಾಸದ ಪೂರ್ಣಿಮೆಯೇ ಕಾಮನ ಹುಣ್ಣಿಮೆ.

ಕಾಮನ ಈ ದಹನ ಸಾಂಕೇತಿಕವೆಂದೂ ಕಾಮನೆಗಳನ್ನು ನಿಯಂತ್ರಣದಲ್ಲಿಡಬೇಕು ಎಂಬುದು ಇದರ ಸಂದೇಶವೆಂದೂ ಹೇಳುತ್ತಾರೆ.

ಕಾಮದಹನ ಕಥೆ ಹೀಗಿದೆ : ಶಿವ ತಪಸ್ಸು ಮಾಡುತ್ತಿದ್ದ; ಲೋಕಕಂಟಕನಾದ ತಾರಕಾಸುರನ ಸಂಹಾರಕ್ಕಾಗಿ ಶಿವನಿಗೆ ಒಬ್ಬ ಮಗ ಹುಟ್ಟಬೇಕಾಗಿತ್ತು. ತಪಸ್ಸನ್ನು ಆಚರಿಸುತ್ತಿದ್ದ ಶಿವನನ್ನು ಪಾರ್ವತಿಯಲ್ಲಿ ಆಸಕ್ತನನ್ನಾಗಿ ಮಾಡಲು ಕಾಮದೇವ ಪ್ರಯತ್ನಿಸಿ ಶಿವನ ತಪೋಭಂಗ ಮಾಡಿದ. ಶಿವ ಕೋಪಗೊಂಡು ತನ್ನ ಹಣೆಗಣ್ಣಿನಿಂದ ಕಾಮನನ್ನು ದಹಿಸಿದ. ಇದರ ನೆನಪಿನ ಹಬ್ಬ ಕಾಮನ ಹುಣ್ಣಿಮೆ.

ಈ ಹಬ್ಬವನ್ನು ಫಾಲ್ಗುಣಮಾಸದ ಶುದ್ಧ ಬಿದಿಗೆಯಿಂದ ಕೃಷ್ಣಪಕ್ಷದ ಪಂಚಮಿಯ ವರೆಗೆ ಆಚರಿಸುತ್ತಾರೆ. ಕಾಮನ ಮೂರ್ತಿಯನ್ನು ಅಲಂಕರಿಸಿ, ಅದರ ಮುಂದೆ ಮನೋರಂಜನೆಯ ಕಾರ್ಯಕ್ರಮಗಳನ್ನು ನಡೆಸುತ್ತಾರೆ. ಹುಣ್ಣಿಮೆಯ ದಿನ ಕಾಮದಹನ ನಡೆಯುತ್ತದೆ.

ಹೋಳಿಯ ಹಬ್ಬವೂ ಇದೇ ಅವಧಿಯಲ್ಲಿ ನಡೆಯುವುದರಿಂದ ಇವೆರಡು ಹಬ್ಬಗಳ ಸಂಪ್ರದಾಯಗಳು ಒಂದರಲ್ಲೊಂದು ಬೆರೆತುಹೋಗಿವೆ.

ನೋಡಿ : ಹೋಳಿ

ಕಾಮಸೂತ್ರ

ನೋಡಿ : ವಾತ್ಸ್ಯಾಯನ

ಕಾಮಾ

ನೋಡಿ : ಮದಾಂ ಕಾಮಾ

ಕಾಮಾಖ್ಯ ದೇವಾಲಯ

ಕಾಮಾಖ್ಯ ದೇವಾಲಯ ಇರುವುದು ಅಸ್ಸಾಮಿನ ಗೌಹತಿಯಿಂದ ಮೂರು ಮೈಲು ದೂರದಲ್ಲಿ; ನೀಲಾಚಲ ಬೆಟ್ಟದ ಮೇಲೆ.

ಈ ದೇವಾಲಯದಲ್ಲಿ ದೇವಿಯ ವಿಗ್ರಹವಿಲ್ಲ: ದೇವಾಲಯದ ಒಳಗೊಂದು ಗುಹೆ. ಗುಹೆಯ ಮೂಲೆಯೊಂದರಲ್ಲಿರುವ, ಕಲ್ಲಿನ ಮೇಲೆ ಯೋನಿಯ ಚಿಹ್ನೆಯನ್ನು ಕೆತ್ತಿದ್ದಾರೆ. ಗುಹೆಯಲ್ಲಿರುವ ನೈಸರ್ಗಿಕ ಚಿಲುಮೆಯಿಂದ ಒಸರುವ ನೀರಿನಿಂದಾಗಿ ಈ ಕಲ್ಲು ತೇವವಾಗಿರುತ್ತದೆ. ಭಕ್ತರು ಪೂಜಿಸುವುದು ಈ ಚಿಹ್ನೆಯನ್ನು.

ಕಾಮಾಖ್ಯ ಒಂದು ಪ್ರಸಿದ್ಧ ಶಕ್ತಿಪೀಠ.

ದಕ್ಷ ಯಜ್ಞದ ಸಂದರ್ಭದಲ್ಲಿ ದೇಹತ್ಯಾಗ ಮಾಡಿದ ತನ್ನ ಪತ್ನಿ ಸತೀದೇವಿಯ ದೇಹವನ್ನು ಹೊತ್ತು ಶಿವ ಶೋಕಿಸುತ್ತ ತಿರುಗುತ್ತಿದ್ದಾಗ, ವಿಷ್ಣು ಚಕ್ರವನ್ನು ಪ್ರಯೋಗಿಸಿ ಸತಿಯ ದೇಹವನ್ನು ತುಂಡರಿಸಿದ; ತುಂಡಾದ ಭಾಗಗಳು ಬೇರೆ ಬೇರೆ ಕಡೆಗಳಲ್ಲಿ ಬಿದ್ದುವು: ಅಂಥ ಸ್ಥಳಗಳು ಶಕ್ತಿಪೀಠಗಳಾದುವು —ಎಂಬ ಪುರಾಣ ಕಥೆಯಿದೆ. ಕಾಮಾಖ್ಯ ಅಂಥ ಶಕ್ತಿ ಪೀಠಗಳಲ್ಲೊಂದು ಎನ್ನುತ್ತಾರೆ.

ಮೂಲ ದೇವಸ್ಥಾನವನ್ನು ಮ್ಲೇಚ್ಛರು 16ನೆಯ ಶತಮಾನದ ಆರಂಭದಲ್ಲಿ ನಾಶಗೊಳಿಸಿದರು. ಈಗಿರುವ ದೇವಾಲಯವನ್ನು ಕೂಚ್ ಬಿಹಾರಿನ ದೊರೆ ನರನಾರಾಯಣ 1665ರಲ್ಲಿ ಜೀರ್ಣೋದ್ಧಾರ ಮಾಡಿದ.

ಕಾರ್ಯಪ್ಪ

ನೋಡಿ : ಕೆ. ಎಂ. ಕಾರ್ಯಪ್ಪ

ಕಾಲಟಿ

ನಿಸರ್ಗ ರಮಣೀಯ ಕೇರಳದ ಮಡಿಲಲ್ಲಿರುವ ಕಾಲಟಿ ಒಂದು ಪುಣ್ಯ ಕ್ಷೇತ್ರ. ಅದ್ವೈತ ಸಿದ್ಧಾಂತ ಪ್ರವರ್ತಕ ಶಂಕರಾಚಾರ್ಯರ ಜನ್ಮ ಸ್ಥಳವು.



ಕಾಲಟಿ ಶಾರದಾ ದೇವಾಲಯ.

ಆಲ್ವಾಯ್‌ನಿಂದ ಸುಮಾರು 8 ಮೈಲು ದೂರದಲ್ಲಿ ಪೆರಿಯಾರ್ ಅಥವಾ ಪೂರ್ಣಾ ನದಿಯ ದಡದಲ್ಲಿರುವ ಸಣ್ಣ ಊರು —ಕಾಲಟಿ. ಇಲ್ಲಿ ಶಂಕರಾಚಾರ್ಯರ ಮಂದಿರ, ಶಾರದಾ ದೇವಾಲಯ ಮತ್ತು ಪ್ರಾಚೀನವಾದ ಕೃಷ್ಣ ದೇವಾಲಯಗಳಿವೆ. ಆಚಾರ್ಯರು ತಮ್ಮ ತಾಯಿಯ ದೇಹಕ್ಕೆ ಅಗ್ನಿ ಸಂಸ್ಕಾರ ನಡೆಸಿದ ಸ್ಥಳದಲ್ಲಿ ವೃಂದಾವನವಿದೆ.

ಶಂಕರ ಜಯಂತಿ, ನವರಾತ್ರಿ, ಶಿವರಾತ್ರಿಗಳ ಸಂದರ್ಭದಲ್ಲಿ ದೊಡ್ಡ ಉತ್ಸವಗಳು ನಡೆಯುತ್ತವೆ. ಸಹಸ್ರಾರು ಮಂದಿ ಭಕ್ತರು ಈ ಉತ್ಸವಗಳಲ್ಲಿ ಭಾಗವಹಿಸುತ್ತಾರೆ.

ಕಾರ್ಲಿ ಗುಹಾಲಯ

ಕಾರ್ಲಿಯ ಗುಹಾ ಚೈತ್ಯಾಲಯ ಭಾರತೀಯ ವಾಸ್ತುಶಿಲ್ಪ ಇತಿಹಾಸದಲ್ಲಿ ಮಹತ್ವದ ಸ್ಥಾನವಿದೆ. ಭಾರತೀಯ ವಾಸ್ತುಶಿಲ್ಪದಲ್ಲಿ ಚೈತ್ಯ ನಿರ್ಮಾಣ ಒಂದು ಘಟ್ಟ. ದೊಡ್ಡ ಬಂಡೆಗಳಲ್ಲಿ ಕೊರೆದ ಚೈತ್ಯಾಲಯಗಳು ಮೊದಲಿಗೆ ಕೇವಲ ಆಯತಾಕಾರದ ಗವಿಗಳಾಗಿ ಇದ್ದುವು. ಬರಬರುತ್ತ ಇವುಗಳಲ್ಲಿ ಕಂಬಗಳೂ ವಿಶದವಾದ ಶಿಲ್ಪ ಕೆಲಸವೂ ಕಾಣಿಸಿಕೊಂಡುವು.

ಪುಣೆಯ ಬಳಿಯ ಕಾರ್ಲಿಯಲ್ಲಿರುವ ಚೈತ್ಯಾಲಯ ಅತಿ ಭವ್ಯ. ಅತಿ ದೊಡ್ಡದು. ಇದು ಉಳಿದ ಚೈತ್ಯಗಳಿಗಿಂತ ಉತ್ತಮ ಸ್ಥಿತಿಯಲ್ಲಿ ಸಂರಕ್ಷಿಸಲ್ಪಟ್ಟಿದೆ. ಇದರ ನಿರ್ಮಾಣವಾದದ್ದು ಕ್ರಿಸ್ತ ಶಕದ ಆರಂಭ ಕಾಲದಲ್ಲಿ.

ಒಂದು ದೊಡ್ಡ ಬಂಡೆಯನ್ನು ಕೊರೆದು ರಚಿಸಿರುವ ಈ ಚೈತ್ಯ 124 ಅಡಿ ಉದ್ದ, 46½ ಅಡಿ ಅಗಲ ಇದೆ; ಎತ್ತರ 45 ಅಡಿ. ಇದರ ಆಕೃತಿ ಕುದುರೆಯ ಲಾಳದಂತೆ.



ಕಾರ್ಲಿ ಚೈತ್ಯಾಲಯ

ಕಾರ್ಲಿ ಚೈತ್ಯದ ದ್ವಾರದ ಮುಂದುಗಡೆ ಒಂದು ಬೃಹತ್ ಸ್ತಂಭವಿದೆ. ಇದರ ಶಿರೋಭಾಗದಲ್ಲಿ ನಾಲ್ಕು ಸಿಂಹಗಳಿವೆ. ಈ ಗುಹಾಲಯಕ್ಕೆ ಮೂರು ದ್ವಾರಗಳು, ಎರಡು ಅಂತಸ್ತುಗಳ ಮುಖಮಂಟಪ ಇವೆ. ಒಳಗೆ ಪ್ರವೇಶಿಸಿದರೆ ಎರಡು ಕಡೆಗಳಲ್ಲೂ ಕಂಬಗಳ ಸಾಲು. ಕಂಬಗಳ ಮೇಲೆ ಅಲಂಕರಣ ಶಿಲ್ಪಗಳಿವೆ. ಕಾರ್ಲಿ ಚೈತ್ಯದ ಪ್ರಧಾನ ನೋಟ ಈ ಕಂಬಗಳು. ಇವುಗಳ ಬುಡ ಸ್ವಲ್ಪ ಉಬ್ಬಿದಂತಿದೆ, ಕಂಬಕ್ಕೆ ಎಂಟು ಮುಖಗಳಿವೆ. ಮೇಲೆ ಬೋದಿಗೆಯ ಸ್ಥಾನದಲ್ಲಿ ಕಮಲಗಳನ್ನು ಕೆತ್ತಿದ್ದಾರೆ. ಕಂಬಗಳ ಅಗ್ರಭಾಗದಲ್ಲಿ ಕುದುರೆಗಳು, ಆನೆಗಳು ಮತ್ತು ಸವಾರರ ಆಕೃತಿಗಳಿವೆ. ಈ ಸವಾರರ ಮೂರ್ತಿಗಳು ಛಾವಣಿಗೆ ಆಸರೆಯಾಗಿರುವಂತೆ ಕಾಣುತ್ತವೆ. ಕಾರ್ಲಿ ಚೈತ್ಯದ ಮುಖ್ಯ ದ್ವಾರದ ಒಳಬದಿಯ ಬಂಡೆಗೋಡೆಗಳ ಮೇಲೆ ಉತ್ತಮ ಶಿಲ್ಪಗಳಿವೆ. ಇವನ್ನು ಕೆತ್ತಿಸಿದವನು ಬನವಾಸಿಯ ಭೂತಪಾಲ ಸೆಟ್ಟಿ.

ಕಾರ್ಲಿ ಚೈತ್ಯಾಲಯದ ಒಳಗೆ ಕಲ್ಲಿನಲ್ಲಿ ಕೆತ್ತಿರುವ ಸ್ತೂಪದ ಗಾತ್ರ ದೊಡ್ಡದು. ಇದರ ಮೇಲೆ ಮರದ ಛತ್ರಿ ಇದೆ.

ಕಾವೇರಿ

ಕೊಡಗಿನ ಬ್ರಹ್ಮಗಿರಿ ಪ್ರದೇಶದಲ್ಲಿ ಭಾಗಮಂಡಲದ ಬಳಿ ತಲಕಾವೇರಿಯಲ್ಲಿ ಹುಟ್ಟುವ ಕಾವೇರಿ 'ದಕ್ಷಿಣ ಗಂಗೆ' ಎಂದು ಪ್ರಸಿದ್ಧವಾಗಿದೆ. ಈ ನದಿ ಆಗ್ನೇಯ ದಿಕ್ಕಿನಲ್ಲಿ ಕರ್ನಾಟಕ ಮತ್ತು ತಮಿಳುನಾಡು ರಾಜ್ಯಗಳಲ್ಲಿ ಹಾದು ಬಂಗಾಳಕೊಲ್ಲಿಯನ್ನು ಸೇರುತ್ತದೆ. ಇದರ ಉದ್ದ ಸುಮಾರು 475 ಮೈಲು; ಇದರ ಪ್ರವಾಹ ಮಾರ್ಗದಲ್ಲಿ ಹಲವಾರು ಚಿಕ್ಕ, ದೊಡ್ಡ ಜಲಪಾತಗಳಿವೆ. ಕಿರಿದಾದ ಕಮರಿಗಳಲ್ಲಿ ಹರಿಯುವಂತೆ, ವಿಶಾಲ ಬಯಲು ಪ್ರದೇಶದಲ್ಲೂ ಇದು ಹರಿಯುತ್ತದೆ.



ಅಗ್ನೇಯ ಪುರಾಣ ಮತ್ತು ಸ್ಕಾಂದ ಪುರಾಣಗಳಲ್ಲಿ ಕಾವೇರಿಯನ್ನು ಕುರಿತು ಕಥೆಗಳಿವೆ : ಬ್ರಹ್ಮನ ಮಗಳಾದ ವಿಷ್ಣುಮಾಯೆಯೇ ಕಾವೇರಿ. ಕವೇರ ನೆಂಬ ಋಷಿ ಅವಳನ್ನು ಸಾಕಿದ್ದರಿಂದ ಕಾವೇರಿ ಎಂಬ ಹೆಸರು. ಅಗಸ್ತ್ಯ ಋಷಿಯನ್ನು ಮದುವೆಯಾದ ಲೋಪಾಮುದ್ರಾ ಈಕೆಯೇ. ದಕ್ಷಿಣ ಭಾರತ ದಲ್ಲಿ ಸರಿಯಾಗಿ ಮಳೆಯಾಗದೆ ಜನರಿಗೆ ತುಂಬ ಕಷ್ಟ ಉಂಟಾದ್ದರಿಂದ ಅವಳು ನದೀರೂಪದಲ್ಲಿ ಹರಿದು ಒಣಭೂಮಿಯನ್ನು ಸಸ್ಯ ಸಮೃದ್ಧವಾಗಿ ಮಾಡಿದಳು—ಎಂಬುದು ಈ ಕಥೆಗಳ ಸಾರಾಂಶ.

ಕರ್ನಾಟಕ ಮತ್ತು ತಮಿಳುನಾಡುಗಳ ಸಂಪದಭಿವೃದ್ಧಿಯಲ್ಲಿ ಈ ನದಿಯ ಪಾತ್ರ ಬಲು ದೊಡ್ಡದು. ತಮಿಳುನಾಡಿನಲ್ಲಿ ಈ ನದಿಯನ್ನು 'ಪೊನ್ನಿ' (ಚಿನ್ನದಂಥವಳು ; ಶ್ರೇಷ್ಠಳು) ಎಂದು ಕರೆಯುತ್ತಾರೆ.

ತಲಕಾವೇರಿ ಇದರ ಉಗಮಸ್ಥಾನ. ಇಲ್ಲಿ ಕಾವೇರಿ ದೇವಾಲಯವಿದೆ. ಕೊಡಗು ಜಿಲ್ಲೆಯಲ್ಲಿ ಕೆಲವು ಉಪನದಿಗಳನ್ನು ಪಡೆದಮೇಲೆ ಕಾವೇರಿ, ಅರಕಲಗೂಡು ತಾಲೂಕಿನಲ್ಲಿ ಹರಿದು ಅನಂತರ ಮೈಸೂರು ಜಿಲ್ಲೆಯನ್ನು ಪ್ರವೇಶಿಸುತ್ತದೆ. ಕರ್ನಾಟಕ ರಾಜ್ಯದ ಗಡಿಯನ್ನು ದಾಟಿದ ಮೇಲೆ ತಮಿಳು ನಾಡಿನಲ್ಲಿ ಹರಿಯುತ್ತದೆ. ಶ್ರೀರಂಗಂ ದ್ವೀಪವನ್ನು ಬಳಸಿ, ಮುಂದುವರಿದು, ಕೊನೆಯಲ್ಲಿ ಬಂಗಾಳ ಕೊಲ್ಲಿಯನ್ನು ಸೇರುತ್ತದೆ.

ಹಲವು ಶತಮಾನಗಳಿಂದ ಕಾವೇರಿಯ ನೀರು ವ್ಯವಸಾಯಕ್ಕೆ ವಿಪುಲವಾಗಿ ಉಪಯೋಗಿಸಲ್ಪಡುತ್ತಿದೆ. ಕರ್ನಾಟಕದಲ್ಲೂ ತಮಿಳುನಾಡಿನಲ್ಲೂ ಈ ನದಿ ಯುದ್ದಕ್ಕೂ ಅನೇಕ ಅಣೆಕಟ್ಟುಗಳಿವೆ ; ಇವುಗಳಿಂದ ಹೊರಡುವ ಕಾಲುವೆ ಗಳು ಒಂದೊಂದೆಡೆಯಲ್ಲೂ ಸಹಸ್ರಾರು ಎಕರೆ ಜಮೀನಿಗೆ ನೀರೊದಗಿ ಸುತ್ತವೆ.

ಕರ್ನಾಟಕ ರಾಜ್ಯದಲ್ಲಿರುವ ಹಳೆಯ ಅಣೆಕಟ್ಟುಗಳಲ್ಲಿ 17ನೆಯ ಶತ ಮಾನದ ಚಿಕ್ಕದೇವರಾಯನ ಅಣೆಕಟ್ಟು ದೊಡ್ಡದು.

ಎರಡನೆಯ ಶತಮಾನದಲ್ಲಿ ಚೋಳ ಪ್ರದೇಶದಲ್ಲಿ ಶ್ರೀರಂಗಂ ಸಮೀಪದಲ್ಲಿ ಕರಿಕಾಲ ಚೋಳ ಬೃಹತ್ ಅಣೆಕಟ್ಟು ಕಟ್ಟಿದ. ಕಾವೇರಿ ನದಿಯ ದಡ ಕೊಚ್ಚಿಹೋಗುತ್ತಿದ್ದುದನ್ನು ತಪ್ಪಿಸಲು ಇದೇ ರೀತಿ ಈ ನದಿಯ ದಡವನ್ನು ಭದ್ರಪಡಿಸಿದ. ಕಾವೇರಿ ಸಮುದ್ರವನ್ನು ಸೇರುವೆಡೆಯಲ್ಲಿ ಆ ಕಾಲಕ್ಕೆ ಪೂಂಪುಹಾರ್, ವಿದೇಶಗಳಿಂದ ಇಲ್ಲಿಗೆ ಹಡಗುಗಳು ಬರುತ್ತಿದ್ದುವು. ಆ ಕಾಲದಲ್ಲಿ ಇದು ದೊಡ್ಡ ವ್ಯಾಪಾರ ಕೇಂದ್ರವಾಗಿತ್ತು.

20ನೆಯ ಶತಮಾನದಲ್ಲಿ ಕಟ್ಟಿದ ಅಣೆಕಟ್ಟುಗಳಲ್ಲಿ ಮೈಸೂರಿನ ಸಮೀಪ ದಲ್ಲಿರುವ ಕೃಷ್ಣರಾಜಸಾಗರ ಮತ್ತು ತಮಿಳುನಾಡುಗಳಲ್ಲಿರುವ ಮೆಟ್ಟೂರು ಅಣೆಕಟ್ಟುಗಳು ಪ್ರಸಿದ್ಧವಾದುವು.

ಕಾವೇರಿ ಹರಿದುಬರುವ ಮಾರ್ಗದಲ್ಲಿ ಮೂರು ದ್ವೀಪಗಳು ರೂಪು ಗೊಂಡಿವೆ : ಶ್ರೀರಂಗಪಟ್ಟಣ, ಶಿವಸಮುದ್ರ, ಶ್ರೀರಂಗಂ. ಇವನ್ನು ಆದಿರಂಗ, ಮಧ್ಯರಂಗ, ಅಂತ್ಯರಂಗಗಳೆಂದು ಕರೆಯುತ್ತಾರೆ. ಈ ಮೂರು ಕ್ಷೇತ್ರಗಳಲ್ಲೂ ರಂಗನಾಥಸ್ವಾಮಿಯ ದೇವಾಲಯಗಳಿವೆ.

ಶಿವಸಮುದ್ರ ದ್ವೀಪದ ಬಳಿಯಿರುವ ಜಲಪಾತಗಳು ಗಗನಚುಕ್ಕಿ ಮತ್ತು ಭರಚುಕ್ಕಿ. ಈ ಜಲಪಾತಗಳಲ್ಲಿ ಒಂದರ ಮೇಲುಭಾಗದಲ್ಲಿ ಅಣೆಕಟ್ಟು ನಿರ್ಮಿಸಿ, ಅದರಿಂದ ಪಡೆಯುವ ನೀರಿನಿಂದ ಬ್ಲಫ್ ಮತ್ತು ಶಿಂಷಾ ವಿದ್ಯುತ್ ಉತ್ಪಾದನಾಕೇಂದ್ರ ನಿರ್ಮಿಸಿದ್ದಾರೆ.

ಮೆಟ್ಟೂರಿನಲ್ಲೂ ವಿದ್ಯುತ್ ಉತ್ಪಾದನೆಯಾಗುತ್ತದೆ ; ಇಲ್ಲಿ ಹಲವಾರು ಕೈಗಾರಿಕೆಗಳು ಇವೆ. ಮೆಟ್ಟೂರಿನಿಂದ ಮುಂದೆ ಕಾವೇರಿ ಹಲವಾರು ಉಪನದಿಗಳಿಂದ ಕೂಡಿ ಸಮುದ್ರವನ್ನು ಸೇರುತ್ತದೆ.

ಕಾವೇರಿಯ ಮಾರ್ಗದುದ್ದಕ್ಕೂ ಹಲವಾರು ಸುಂದರ ತಾಣಗಳೂ ಪುಣ್ಯ ಕ್ಷೇತ್ರಗಳೂ ಇವೆ. ತಲಕಾವೇರಿಯಲ್ಲಿ ತುಲಾಸಂಕ್ರಮಣದ ದಿನ ದೊಡ್ಡ ಜಾತ್ರೆ ನಡೆಯುತ್ತದೆ. ಸಾಲಿಗ್ರಾಮ ಕೆಲ ಕಾಲ ರಾಮಾನುಜಾಚಾರ್ಯರ ನಿವಾಸವಾಗಿದ್ದು ಅವರ ಅನುಯಾಯಿಗಳಿಗೆ ಅದು ಪುಣ್ಯಕ್ಷೇತ್ರವೆನಿಸಿದೆ. ಚುಂಚನಕಟ್ಟೆಯ ಸಮೀಪದಲ್ಲಿರುವ ಜಲಪಾತ ರಮ್ಯವಾದದ್ದು. ಶ್ರೀರಂಗಪಟ್ಟಣ, ಶ್ರೀರಂಗಂ ಕೂಡ ಸುಪ್ರಸಿದ್ಧ ವೈಷ್ಣವ ಕ್ಷೇತ್ರಗಳು. ಸೋಸಲೆಯಲ್ಲಿ ಸುಪ್ರಸಿದ್ಧ ವ್ಯಾಸರಾಯ ಮಠವಿದೆ. ಸೋಮನಾಥಪುರ ಹೊಯ್ಸಳ ವಾಸ್ತುಶಿಲ್ಪ, ಶಿಲ್ಪಗಳಿಗೆ ಪ್ರಸಿದ್ಧವಾದದ್ದು. ತಲಕಾಡಿನಲ್ಲಿ ನಡೆಯುವ ಪಂಚಲಿಂಗದರ್ಶನ ಯಾತ್ರಿಕರನ್ನು ಆಕರ್ಷಿಸುತ್ತದೆ. ತ್ಯಾಗರಾಜರ ಸಮಾಧಿಯಿರುವ ತಿರುವಯ್ಯಾರ್‌ನಲ್ಲಿ ನಡೆಯುವ ತ್ಯಾಗರಾಜ ಆರಾಧನೆ – ಸಂಗೀತೋತ್ಸವಗಳು ಪ್ರಖ್ಯಾತವಾದುವು.

ಹೀಗೆ ಕಾವೇರಿಯ ತಟದಲ್ಲಿ ಕಲೆ, ಸಾಹಿತ್ಯ, ಧರ್ಮ, ಸಂಸ್ಕೃತಿಗಳೂ ವ್ಯವಸಾಯ, ಉದ್ಯಮಗಳೂ ಬೆಳೆದುಬಂದಿವೆ. ಹಲವಾರು ದೃಷ್ಟಿಗಳಿಂದ ಕಾವೇರಿ ಭಾರತದ ಪ್ರಮುಖ ನದಿಗಳಲ್ಲೊಂದು.

ನೋಡಿ : ಕೃಷ್ಣರಾಜಸಾಗರ ; ತಲಕಾಡು ; ಬೃಂದಾವನ ; ಶ್ರೀರಂಗಂ ; ಶ್ರೀರಂಗಪಟ್ಟಣ

ಕಾಶಿ

ಕಾಶಿ ಎಂದರೆ ಪ್ರಕಾಶ, ಬೆಳಕು ಎಂದರ್ಥ. ಪರಮಾತ್ಮನ ಪ್ರಕಾಶ ದಿಂದ ಬೆಳಗುವ ಕ್ಷೇತ್ರವಾದ್ದರಿಂದ ಆ ಪ್ರದೇಶಕ್ಕೆ ಕಾಶಿ ಎಂದು ಹೆಸರಾಯಿತು ಎಂಬ ಹೇಳಿಕೆ ಸ್ಕಾಂದಪುರಾಣದಲ್ಲಿದೆ.

'ಮೂರು ಲೋಕಗಳೂ ಸೇರಿ ನನ್ನ ನಗರ; ಅದರಲ್ಲಿ ಕಾಶಿ ನನ್ನ ಅರಮನೆ' ಎಂದು ಶಿವ ಹೇಳುತ್ತಾನೆ—ಎನ್ನುವ ಅರ್ಥ ಬರುವ ಶ್ಲೋಕ ಅದೇ ಪುರಾಣದ ಕಾಶೀಖಂಡದಲ್ಲಿದೆ. ಈ ಹೇಳಿಕೆಗಳು ಕಾಶೀಕ್ಷೇತ್ರದ ಮಹಿಮೆಯನ್ನು ಸೂಚಿಸುವಂಥವು.

ಉತ್ತರ ಪ್ರದೇಶದಲ್ಲಿರುವ ಕಾಶಿ ಹಿಂದೂಗಳಿಗೆ ಪವಿತ್ರ ಯಾತ್ರಾಸ್ಥಳ. ತಮ್ಮ ಜೀವಿತಕಾಲದಲ್ಲಿ ಒಮ್ಮೆಯಾದರೂ ಕಾಶಿಗೆ ಹೋಗಿ ಗಂಗಾನದಿಯಲ್ಲಿ ಸ್ನಾನ ಮಾಡಿ ವಿಶ್ವೇಶ್ವರನ ದರ್ಶನ ಮಾಡಬೇಕೆಂಬುದು ಅನೇಕ ಹಿಂದೂಗಳ ಬಯಕೆ. ವಾರಾಣಸಿ, ಅವಿಮುಕ್ತ, ಆನಂದಕಾ

ಮಹಾಸ್ಮಶಾನ ಇವು ಕಾಶಿಗೆ ಇರುವ ಇತರ ಹೆಸರುಗಳು. ವಾರಾಣಸಿಯ ಇಂಗ್ಲಿಷ್ ರೂಪ ಬನಾರಸ್.

ಕಾಶಿ ನಗರ ವರುಣ ಮತ್ತು ಅಸೀ ನದಿಗಳ ನಡುವೆ, ಗಂಗಾತಟದಲ್ಲಿದೆ. ಕಾಶಿಯಲ್ಲಿ ಮುಖ್ಯವಾದದ್ದು ವಿಶ್ವೇಶ್ವರ ದೇವಾಲಯ. ವಿಶ್ವೇಶ್ವರನನ್ನು ಯಾರು ಬೇಕಾದರೂ ಸ್ವತಃ ಪೂಜಿಸಬಹುದು. ವಿಶ್ವೇಶ್ವರನ ದೇವಾಲಯ ಹಲವಾರು ಬಾರಿ ದಾಳಿಗೊಳಗಾಗಿ ನಾಶವಾದರೂ ಅದನ್ನು ಮತ್ತೆ ಮತ್ತೆ ಕಟ್ಟಲಾಯಿತು. ಈಗ ಇರುವ ದೇವಾಲಯವನ್ನು ರಾಣಿ ಅಹಲ್ಯಾಬಾಯಿ 1783ರಲ್ಲಿ ಕಟ್ಟಿಸಿದಳು. ಕಾಲಭೈರವ, ವಿಶಾಲಾಕ್ಷಿ, ಸೂರ್ಯನಾರಾಯಣ, ಕೇಶವ, ಅನ್ನಪೂರ್ಣಾ, ಬಿಂದುಮಾಧವ ದೇವಾಲಯಗಳು ಇಲ್ಲಿರುವ 1,500 ದೇವಾಲಯಗಳಲ್ಲಿ ಪ್ರಮುಖವಾದುವು.

ಯಾತ್ರಿಕರಿಗೆ ಅನುಕೂಲವಾಗುವಂತೆ ಇಲ್ಲಿ ಸ್ನಾನಘಟ್ಟಗಳಿವೆ. ಮಣಿಕರ್ಣಿಕಾ ಘಾಟ್, ದಶಾಶ್ವಮೇಧ ಘಾಟ್, ಪಂಚಗಂಗಾ ಘಾಟ್ ಮುಖ್ಯ ಘಟ್ಟಗಳು.

ಪ್ರಾಚೀನ ಕಾಲದಿಂದಲೂ ಕಾಶಿ ಸುಪ್ರಸಿದ್ಧ ವಿದ್ಯಾಕೇಂದ್ರವಾಗಿತ್ತು. ತಮ್ಮ ವಿದ್ವತ್ತನ್ನು ಪ್ರದರ್ಶಿಸಲು, ಅದಕ್ಕೆ ಮನ್ನಣೆ ಪಡೆಯಲು ಭಾರತದ ವಿವಿಧ ಭಾಗಗಳಿಂದ ವಿದ್ವಾಂಸರು ಇಲ್ಲಿಗೆ ಬರುತ್ತಿದ್ದರು; ವಿದ್ವತ್ ಸಭೆಗಳಲ್ಲಿ ಭಾಗವಹಿಸುತ್ತಿದ್ದರು.

ಬನಾರಸ್ ಹಿಂದೂ ವಿಶ್ವವಿದ್ಯಾನಿಲಯ ಇಲ್ಲಿದೆ. ಕಾಶಿ ಅನೇಕ ಶತಮಾನಗಳಿಂದ ರೇಷ್ಮೆ ಬಟ್ಟೆಗಳ ತಯಾರಿಕೆಗೆ ಪ್ರಸಿದ್ಧವಾದ ನಗರ. ಇಲ್ಲಿ ಉತ್ತಮ ಕಂಚಿನ ವಸ್ತುಗಳೂ ತಯಾರಾಗುತ್ತವೆ. ಭಾರತಕ್ಕೆ ಸ್ವಾತಂತ್ರ್ಯ ಬಂದಮೇಲೆ ಇಲ್ಲಿ ಸ್ಥಾಪಿತವಾದ ಡೀಸೆಲ್ ರೈಲ್ವೇ ಎಂಜಿನ್ ಕಾರಖಾನೆ 1964ರಿಂದ ಎಂಜಿನ್‌ಗಳನ್ನು ತಯಾರಿಸುತ್ತಿದೆ.



ಕಾಶ್ಮೀರ

'ಭೂಲೋಕದ ಸ್ವರ್ಗ' ಎಂದು ಕಾಶ್ಮೀರವನ್ನು ಕುರಿತು ಮೊಘಲ್ ದೊರೆ ಜಹಾಂಗೀರ್ ಉದ್ಗರಿಸಿದ. ಇಲ್ಲಿನವರು ಸುಂದರರೂಪಿ ಜನರು; ಇಲ್ಲಿನದು ಸೊಬಗಿನ ಪ್ರಕೃತಿ.

ಪ್ರಪಂಚದ ಅತ್ಯಂತ ಬೆಡಗಿನ ತಾಣಗಳಲ್ಲಿ ಕಾಶ್ಮೀರ ಒಂದು. ಚಳಿಗಾಲವಾಗಲಿ, ಬೇಸಗೆಯಾಗಲಿ, ಶರತ್ಕಾಲವಾಗಲಿ ಕಾಶ್ಮೀರದ ನಿಸರ್ಗ ರಮ್ಯ. ಹಿಮದಿಂದ ಮುಚ್ಚಿದ ಹಿಮಾಲಯ ಪರ್ವತ ಶ್ರೇಣಿಗಳ ನಡುವೆ ಹಸುರಾಗಿ ಕಾಣುವ ಕಾಶ್ಮೀರ ಕಣಿವೆ ಮುತ್ತುಗಳ ನಡುವೆ ಇರಿಸಿದ ಪಚ್ಚೆಯ ಕಲ್ಲಿನಂತೆ ಕಾಣುತ್ತದೆ ಎಂದು ಬಣ್ಣಿಸುತ್ತಾರೆ.




ಮಹಾಭಾರತದಲ್ಲಿ ಕಾಶ್ಮೀರ ಉಲ್ಲೇಖಿಸಲ್ಪಟ್ಟಿದೆ. ಭಾರತದ ಪ್ರಥಮ ಐತಿಹಾಸಿಕ ಕೃತಿ 'ರಾಜತರಂಗಿಣಿ'ಯಲ್ಲಿ ಕಾಶ್ಮೀರದ ಚರಿತ್ರೆ ಲಭ್ಯ.

ಅಶೋಕನ ಕಾಲದಲ್ಲಿ ಇಲ್ಲಿ ಬೌದ್ಧಮತದ ಪ್ರಚಾರ ನಡೆಯಿತು. ಹಿಂದೂ, ಬೌದ್ಧ ಮತಗಳೆರಡೂ ಆಚರಣೆಯಲ್ಲಿದ್ದ ಆ ಕಾಲದಲ್ಲಿ ದೇವಾಲಯಗಳೂ ಬೌದ್ಧವಿಹಾರಗಳೂ ಕಟ್ಟಲ್ಪಟ್ಟುವು. ಕಾರ್ಕೋಟ ರಾಜ ಲಲಿತಾದಿತ್ಯ (8ನೆಯ ಶತಮಾನ) ಕಾಶ್ಮೀರದ ಖ್ಯಾತ ರಾಜರಲ್ಲಿ ಒಬ್ಬ. ಶಂಕರಾಚಾರ್ಯರ ಕಾಲಕ್ಕೆ ಕಾಶ್ಮೀರ ಸುಪ್ರಸಿದ್ಧ ವಿದ್ಯಾಕೇಂದ್ರವಾಗಿತ್ತು. ಅನೇಕ ಪಂಡಿತೋತ್ತಮರು ಇಲ್ಲಿದ್ದರು ಎಂಬ ಉಲ್ಲೇಖವಿದೆ. 6-7ನೆಯ ಶತಮಾನಗಳಲ್ಲಿ ಚೀನೀ ಯಾತ್ರಿಕರು ಇಲ್ಲಿಗೆ ಭೇಟಿ ನೀಡಿದರು.

ಔರಂಗಜೇಬನ ಮಸೀದಿ





ದಲ್ ಸರೋವರದಲ್ಲಿ ವಿಹಾರ

1586ರಲ್ಲಿ ಅಕ್ಬರ್ ಇದನ್ನು ಗೆದ್ದ. ಷಾಜಹಾನ್, ಜಹಾಂಗೀರರು ಉದ್ಯಾನಗಳನ್ನು ನಿರ್ಮಿಸಿ ಇಲ್ಲಿನ ಚೆಲುವನ್ನೂ ಆಕರ್ಷಣೆಯನ್ನೂ ಹೆಚ್ಚಿಸಿದರು. ಅನಂತರ ಇದು ಬ್ರಿಟಿಷರ ವಶವಾಯಿತು. ಕಾಶ್ಮೀರದ ಅರಸು ಮನೆತನದವರು ಇದನ್ನು ಬ್ರಿಟಿಷರಿಂದ ಪಡೆದರು. ಭಾರತ ಸ್ವತಂತ್ರವಾದಮೇಲೆ ಪಾಕಿಸ್ತಾನ ಕಾಶ್ಮೀರದ ಮೇಲೆ ದಾಳಿ ನಡೆಸಿತು. ಕಾಶ್ಮೀರ ಭಾರತ ಒಕ್ಕೂಟವನ್ನು ಸೇರಿತು.

ಕಾಶ್ಮೀರ ಕಣಿವೆಯಲ್ಲಿ ಅನೇಕ ಸರೋವರಗಳಿವೆ. ಇವುಗಳಲ್ಲಿ ದಲ್ ಸರೋವರ ಅತ್ಯಂತ ಪ್ರಸಿದ್ಧವಾದುದು. ಶ್ರೀನಗರ ಇಲ್ಲಿನ ರಾಜಧಾನಿ. ಕುಂಕುಮ ಕೇಸರಿ ಇಲ್ಲಿನ ಹೆಮ್ಮೆಯ ಉತ್ಪನ್ನ. ಕಾಶ್ಮೀರದ ಶಾಲು ಜಗತ್ಪ್ರಸಿದ್ಧ. ಕಾಶ್ಮೀರದಲ್ಲಿ ದೊರೆಯುವ ಫಲಪುಷ್ಪಗಳು ವೈವಿಧ್ಯಮಯ.

ಕೃಪೆ : [illegible] : '[illegible]' : ಶ್ರೀನಗರ

ಕಾಶ್ಮೀರೀ ಭಾಷೆ, ಸಾಹಿತ್ಯ

ಕಾಶ್ಮೀರೀ (ಕಶ್ಮೀರಿ) ಭಾಷೆಯ ಮೂಲದ ಬಗೆಗೆ ವಿದ್ವಾಂಸರು ಖಚಿತ ಅಭಿಪ್ರಾಯವನ್ನು ಇನ್ನೂ ವ್ಯಕ್ತಪಡಿಸಿಲ್ಲ: ಇದು ಮೂಲತಃ ಭಾರತಾರ್ಯನ್ ಅಥವಾ ಭಾರತ ಇರಾನೀ ವರ್ಗದ ದಾರ್ದಿಕ್ ಉಪಕುಟುಂಬಕ್ಕೆ ಸೇರಿದ್ದ ಭಾಷೆ ಎಂದು ಸಂಶೋಧನೆಗಳಿಂದ ಊಹಿಸಿದ್ದಾರೆ. 12ನೆಯ ಶತಮಾನದ ಮೊದಲ ಭಾಗಕ್ಕೆ ಸೇರಿದ ಕಲ್ಹಣನ 'ರಾಜತರಂಗಿಣಿ'ಯಲ್ಲಿ ಕಾಶ್ಮೀರೀ ವಾಕ್ಯವೊಂದನ್ನು ಉಲ್ಲೇಖಿಸಲಾಗಿದೆ: 13ನೆಯ ಶತಮಾನದ ಉತ್ತರಾರ್ಧದಿಂದ ಈಚೆಗೆ ಕಾಶ್ಮೀರೀ ಸಾಹಿತ್ಯ ನಿರಂತರವಾಗಿ ಬೆಳೆದು ಬಂದಿದೆ.

ಕಾಶ್ಮೀರೀ ಸಾಹಿತ್ಯದ ಮೊದಲ ಯುಗ 1250ರಿಂದ 1420ರ ವರೆಗೆ. ಲಲ್ಲ್ಯಾ ರಚನೆ 'ವಾಖ್' ಈ ಕಾಲದ ಪ್ರಮುಖ ಕೊಡುಗೆ. ಇವು ಭಾವನಾಪೂರ್ಣ ಸಾರೋಕ್ತಿಗಳಿಂದ ಕೂಡಿದ ಪದ್ಯಗಳು. ಲಲ್ ದೈದ್ [illegible]. ಆಕೆಯ 'ಲಲ್ಲ ವಾಖ್'ನಲ್ಲಿ ಅಧ್ಯಾತ್ಮದ [illegible] ಪ್ರತಿಪಾದನೆ [illegible]. [illegible] 'ಬಾಣಾಸುರವಧ' ಮತ್ತು ಶೇಖ್ ನೂರುದ್ದೀನರ 'ನೂರ್ ನಾಮ' ಇತರ ಪ್ರಮುಖ ಕೃತಿಗಳು [illegible] 'ವಾಖ್' ಛಂದಸ್ಸಿನಲ್ಲಿವೆ.

1420ರಿಂದ 1555ರ ವರೆಗಿನ ದ್ವಿತೀಯ ಯುಗದಲ್ಲಿ [illegible] ಲೌಕಿಕ ಕಾವ್ಯಗಳು ರಚಿತವಾದುವು: [illegible] 'ಬಾಣಾಸುರವಧ', ಗಣಕಪ್ರಶಸ್ತನ 'ಸುಖದುಃಖ ಚರಿತಂ' ಇತ್ಯಾದಿ.

1555ರಿಂದ 1800ರ ವರೆಗಿನ ಮೂರನೆಯ ಯುಗದಲ್ಲಿ 'ಲೋಲ್' ಭಾವಗೀತೆಗಳ ರಚನೆ ಪ್ರಮುಖವಾಗಿ ಕಂಡುಬರುತ್ತದೆ. ವಿವಿಧ ಸನ್ನಿವೇಶಗಳಲ್ಲಿ ಮಾನವನ ಹಂಬಲ, ಒಲುಮೆಗಳನ್ನು ವರ್ಣಿಸುವ ಈ ಚಿಕ್ಕ ಕವನಗಳು—ಹಾಡುಗಬ್ಬಗಳು. ಹಬ ಖಾತೂನ್ ಈ ಕಾಲದ ಪ್ರಮುಖ ಕವಯಿತ್ರಿ. ಈಕೆ ಹಲವು ತ್ರಿಪದಿಗಳಿಂದ ಕೂಡಿದ, ಪಲ್ಲವಿಯನ್ನುಳ್ಳ 'ವಚನ್' ಎಂಬ ದೀರ್ಘ ಕವನಗಳನ್ನು ಬರೆದಳು. ಖ್ವಾಜ ಹಬೀಬ್, ರೂಪಾ ಭವಾನಿ ಇವರು ವಾಖ್ ಮತ್ತು ವಚನ್ ರೂಪಗಳನ್ನು ಬಳಸಿ ಅನುಭಾವಿ ಕವನಗಳನ್ನು ರಚಿಸಿದರು. 18ನೆಯ ಶತಮಾನದ ಕೊನೆಯ ಭಾಗದಲ್ಲಿದ್ದ ಅರ್ನಿಮಾಲ್ ಚುರುಕಾದ, ಕಟುವಾದ ಲೋಲ್ ಭಾವಗೀತೆಗಳನ್ನು ಬರೆದಳು.

1800ರಿಂದ 1925ರ ವರೆಗಿನ ಕಾಶ್ಮೀರೀ ಸಾಹಿತ್ಯ ಪಾರಸೀ ಭಾಷಾ ಸಾಹಿತ್ಯಗಳಿಂದ ಪ್ರಭಾವಿತವಾಗಿ ಸಮೃದ್ಧವಾಗಿ ಬೆಳೆಯಿತು. ಘಜಲ್, ಮಸ್ನವಿ (ಅರ್ಥಪೂರ್ಣವಾದ ದ್ವಿಪದಿ), ಮರ್ಸಿಯ, ಶಹರಾಶೋಬ್ ಗಳಂಥ ಪ್ರಕಾರಗಳು ಪಾರಸಿಯಿಂದ ಕಾಶ್ಮೀರೀ ಭಾಷೆಗೆ ಬಂದುವು. ಮಹ್‌ಮೂದ್ 'ಯೂಸುಫ್ ಜುಲೈಖಾ', 'ಶೀರೀನ್ ಖುಸರೊ' ಗಳಿಂದ ಈ ಹೊಸ ಶೈಲಿಯನ್ನು ಜನಪ್ರಿಯಗೊಳಿಸಿದ. ವಲಿಗಾಮಿ ಉಲ್ಲಾಹ್ ಅವರ ಸ್ಥಳೀಯ ಕಥೆಯ ಆಧಾರಿತ 'ಹೀಮಾಲ್', ಪ್ರಕಾಶ್‌ರಾಮ್ ಅವರ 'ರಾಮಾಯಣ', ಮಖ್ಬೂಲ್ ಷಾ ಅವರ ಖ್ಯಾತ 'ಗುಲ್ರೇಜ್', ಲಕ್ಷ್ಮಣ್ ರೈನಾರ 'ನಳ್–ಓ–ದಮನ್' (ನಳ ದಮಯಂತಿ) ಮತ್ತು 'ಸಾಮ್‌ನಾಮಾ' ಇತರ ಮಸ್ನವಿಗಳು. ಘಜಲ್ ಮತ್ತು ವಚನ್‌ಗಳನ್ನು ರಚಿಸಿದ ರಸುಲ್ ಮಿರಾರ್ ಅತ್ಯುತ್ತಮ ಶೃಂಗಾರ ಗೀತೆಗಳನ್ನು ಸೃಷ್ಟಿಸಿದ. ಸೂಫಿ ಕವಿಗಳ 'ರಾಜ' ರಮ್‌ಸ್ ಫಕೀರ್. ಈ ಅವಧಿಯ ಉತ್ತರಾರ್ಧದಲ್ಲಿ (1885–1925) ಅಜೀಜುಲ್ಲಾ ಹಕ್ಕಾನಿ ಸಮಕಾಲೀನ ಘಟನೆಗಳನ್ನು—ನೆರೆಹಾವಳಿ, ಅಗ್ನಿಪ್ರಮಾದ—ಆಧರಿಸಿ ವರ್ಣನಾತ್ಮಕ ಕವನಗಳನ್ನು ಬರೆದ. ಫಿರ್ದೂಸಿಯ 'ಶಾಹನಾಮ' ವನ್ನು ನಾಲ್ಕು ಸಂಪುಟಗಳಲ್ಲಿ ವಹಾಬ್ ಪರೇ ಭಾಷಾಂತರಿಸಿದ.

ಈ ಕಾಲದಲ್ಲಿ ಲೀಲಾ ಪಂಥದ ಕವಿಗಳೂ ಖ್ಯಾತರಾದರು. ವಚನ್ ಶೈಲಿಯಲ್ಲಿ ದೇವರ (ಮುಖ್ಯವಾಗಿ ಶಿವ ಅಥವ ಕೃಷ್ಣ) ಲೀಲೆಯನ್ನು ಭಕ್ತಿಗೀತೆ ಅಥವಾ ದೀರ್ಘ ಕವನದ ರೂಪದಲ್ಲಿ ಹಾಡುವುದೇ ಲೀಲಾ ಕಾವ್ಯ. ಈ ಪ್ರಕಾರದಲ್ಲಿ ಪರಮಾನಂದ್ (ನಿಧನ: 1885) ಖ್ಯಾತ ಕವಿ. ಇವರ 'ಸುದಾಮ ಚರಿತೆ' ಮತ್ತು 'ರಾಧಾ ಸ್ವಯಂವರ' ಉನ್ನತ ಕೃತಿಗಳು. 'ಶಿವ ಪರಿಣಯ' ವನ್ನು ರಚಿಸಿದ ಕೃಷ್ಣ ರಾಜ್ದಾನ್ (ನಿಧನ : 1925) ಮತ್ತೊಬ್ಬ ಖ್ಯಾತ ಲೀಲಾ ಕವಿ.

ಕಾಶ್ಮೀರಿ ಸಾಹಿತ್ಯದ ಆಧುನಿಕ ಯುಗ ಸ್ವಲ್ಪ ತಡವಾಗಿಯೇ ಪ್ರಾರಂಭವಾಯಿತು. ಏಕೆಂದರೆ ಆಧುನಿಕ ಯುಗದ ಪ್ರೇರಕಶಕ್ತಿಗಳಾದ ಇಂಗ್ಲಿಷ್ ಸಾಹಿತ್ಯ ಮತ್ತು ವಿಜ್ಞಾನಗಳ ಬೆಳಕು ಈ ಗಡಿನಾಡಿಗೆ ತಲುಪಿದ್ದು ತಡವಾಗಿಯೇ. 1925 – 1947ರ ಅವಧಿಯ ಕವಿಗಳಲ್ಲಿ ಹೊಸ ದೃಷ್ಟಿ, ತೀವ್ರ ಸಂವೇದನೆ, ಸಾಮಾಜಿಕ ಪ್ರಜ್ಞೆಗಳನ್ನು ಕಾಣಬಹುದು. ಗುಲಾಂ ಅಹ್ಮದ್ ಮಹಜೂರ್ (ನಿಧನ : 1952), ಅಬ್ದುಲ್ ಅಹದ್ ಆಜಾದ್ (ನಿಧನ : 1948), ಜಿಂದ ಕೌಲ್ (ನಿಧನ : 1965) ಮತ್ತು ಮಿರ್ಜಾ ಆಗ್ ಆರಿಫ್ (ಜನನ : 1910) ಈ ಯುಗದ ಪ್ರಮುಖ ಕವಿಗಳು. ನಂದಲಾಲ್ ಕೌಲ್ ಅವರ ಗದ್ಯಸಾಹಿತ್ಯ ಸೃಷ್ಟಿ ಮತ್ತು 'ಸತುಚ್ ಕಹ್‌ವತ್' ಎಂಬ ನಾಟಕ ಗಮನಾರ್ಹವಾದುವು.

1947ರ [illegible] ವಾಳಿ ಕಾಶ್ಮೀರಿಗಳ ಮೇಲೆ ಭಾರಿ ಪರಿಣಾಮ ಉಂಟುಮಾಡಿತು. ಸ್ವಾತಂತ್ರ್ಯ ರಕ್ಷಣೆಯ ಉದ್ದೇಶದಿಂದ ಇದ್ದಕ್ಕಿದ್ದಂತೆ ಹೊಸ ಸಾಹಿತ್ಯದ ಸೃಷ್ಟಿಯೂ ಪ್ರಾರಂಭವಾಯಿತು. ಆದರೆ 1955–56ರ ವೇಳೆಗೆ ಈ ಉದ್ರೇಕ ಇಳಿಯಿತು.

[illegible] ತಮ್ಮ ಅನುಭವದ ಮೌಲ್ಯದಲ್ಲಿ ದೃಢಸಂಚಿಕೆ, ಮಾತು, ನುಡಿಗಟ್ಟುಗಳ ಮೇಲೆ ಪ್ರಭುತ್ವ ಇರುವುದನ್ನು ಕಾಣಬಹುದು. ಅವರು ಆರಿಸಿಕೊಳ್ಳುವ ವಸ್ತುಗಳು ಕೂಡ ಕೇವಲ ಸಮಕಾಲೀನವಲ್ಲ.

ಹೊಸ ಪ್ರಯೋಗ[illegible] ಛಂದಸ್ಸು, ಸುನೀತ, ಆಪೆರಗಳನ್ನು ರಚಿಸಿ, ಕಾವ್ಯಕ್ಕೆ ಹೊಸ ತಿರುವು ಕೊಟ್ಟರು. [illegible] ರಹಮಾನ್ ರಾಹೀ ಮತ್ತು ಅಮೀನ್ ಕಾಮಿಲ್ ಪ್ರಮುಖರು. ಅಖ್ತರ್ ಮೊಹಿಯುದ್ದೀನರ 'ಸತ್‌ಸಂಗರ್' (ಪ್ರಶಸ್ತಿ ವಿಜೇತ) ಮತ್ತು 'ಸ್ವಂಜಾಲ್' ಖ್ಯಾತ ಸಣ್ಣಕಥೆಗಳ ಸಂಕಲನಗಳು. ಅಖ್ತರ್ ಅವರ 'ದೋದ್ ದಾಗ್' ಮತ್ತು 'ಜ್ಞುವ್ ತ ಜೊಲಾನ' ಜನಪ್ರಿಯ ಕಾದಂಬರಿಗಳು. 'ಸುಯ್ಯ' [illegible] ಪ್ರಶಸ್ತಿ ವಿಜೇತ ನಾಟಕ. ಮೊಹಿಯುದ್ದೀನ್ ಹಾಜಿನೀ ಅವರ 'ಮಕ್ಕಾಲಾತ್' ಪ್ರಬಂಧಕ್ಕೆ ಪ್ರಶಸ್ತಿ ದೊರೆತಿದೆ.

ಕಾಸ್‌ಮಸ್ ನ 'ಇಂಡಿಕೋ ಪ್ಲೂಸ್ಟಸ್'

"ಆನೆಗಳ ಗಾತ್ರವನ್ನು ಮೊಳಹಾಕಿ ಅಳೆದು, ಮೊಳಕ್ಕೆ ಇಷ್ಟೆಂದು ದರ ನಿರ್ಧರಿಸಿ, ಬೆಲೆ ಕಟ್ಟುತ್ತಾರೆ; ಇಂಡಿಯಾದಿಂದ ಸಿಲೇಬಿದಿ (ಈಗಿನ ಶ್ರೀ ಲಂಕಾ)ಗೆ ಈ ರೀತಿಯಲ್ಲಿ ಆನೆಗಳನ್ನು ಮಾರುತ್ತಾರೆ," ಎಂದು ಅಲೆಗ್ಸಾಂಡ್ರಿಯದ ಕಾಸ್‌ಮಸ್ ಆರನೆಯ ಶತಮಾನದಲ್ಲಿ ಬರೆದ. ಮಲಬಾರ್ ತೀರ, ಶ್ರೀಲಂಕಾಗಳನ್ನು ಈತ ಕಂಡಿದ್ದ. 'ಇಂಡಿಕೋ ಪ್ಲೂಸ್ಟಸ್'—ಭಾರತ ಪ್ರವಾಸಿ— ಎಂಬುದು ಅವನ ಉಪನಾಮ.

"ಇಂಡಿಯಾದ ಮೇಲ್ಭಾಗವನ್ನು (ಉತ್ತರ) ಬಿಳಿಯ ಹೂಣರು ಆಕ್ರಮಿಸಿದ್ದಾರೆ. ಇಂಡಿಯದ ಬರ್ಹೋಥಾ (ಸೌರಾಷ್ಟ್ರ), ಕಲ್ಲಿಯಾಣ (ಮಹಾರಾಷ್ಟ್ರದ ಕಲ್ಯಾಣ) ಸಿಂಧು ಹೀಗೆ ನಾನಾ ಭಾಗಗಳಲ್ಲಿ ಬೇರೆ ಬೇರೆ ರಾಜರಿದ್ದಾರೆ; ಮೆಣಸು ಇಂಡಿಯಾದ ರಫ್ತು; ಕಬೇರ್ (ಕಾವೇರಿಪಟ್ಟಿಣಂ) ದಿಂದ ಪ್ರಶಸ್ತ ಶಿಲೆಗಳೂ ಕರಾವಳಿಯಲ್ಲಿ ಅದಕ್ಕಿಂತ ಮೊದಲು ಸಿಗುವ ಮರಲ್ಲೊ ಪಟ್ಟಣದಿಂದ ಶಂಖಗಳೂ ರಫ್ತಾಗುತ್ತವೆ.

"ಇಂಡಿಯಾದ ಘೇಂಡಾಮೃಗಕ್ಕೆ ಮೂತಿಯ ಮೇಲೆ ಕೊಂಬಿರುವುದರಿಂದ ಆ ಹೆಸರು; ಚಮರೀಮೃಗದ ಬಾಲದಿಂದ ಚೌರಿ, ಕಸ್ತೂರಿ ಮೃಗದಿಂದ ಕಸ್ತೂರಿ ಪಡೆಯುತ್ತಾರೆ.

"ಸಿಲೇಬಿದಿ, ಮಲೆ, ಕಲ್ಲಿಯಾಣಗಳಲ್ಲಿ ಚರ್ಚುಗಳಿವೆ; ಪರ್ಷಿಯದಿಂದ ನೇಮಕಗೊಂಡ ಬಿಷಪ್ ಇದ್ದಾರೆ. ಕ್ರೈಸ್ತರೇ ನೆಲೆಸಿರುವ ಪಶ್ಚಿಮ ಕರಾವಳಿ ಸಮೀಪದ ಒಂದು ದ್ವೀಪದ ಜನ ಮೆಸಿಡೋನಿಯದಿಂದ ವಲಸೆ ಬಂದವರು; ಗ್ರೀಕ್ ಭಾಷೆ ಮಾತನಾಡುತ್ತಾರೆ."

—ಇವೆಲ್ಲ [illegible] ಕಾಸ್‌ಮಸ್‌ನ 'ಇಂಡಿಕೋ ಪ್ಲೂಸ್ಟಸ್' ಮಾಡಿರುವ ವರ್ಣನೆ.



ಕಾಳಿಯ ಸೌಮ್ಯರೂಪ – ಶಿಲ್ಪಕೃತಿ

ರಕ್ತದಿಂದ ಒದ್ದೆಯಾದ ಕಪ್ಪು ಮುಖ, ಕತ್ತಿನಲ್ಲಿ ರುಂಡಗಳ ಮಾಲೆ; ನಾಲ್ಕು [illegible] ಬಾಕು; ಉಳಿದೆರಡರಲ್ಲಿ ರಕ್ತ ಸುರಿಯುತ್ತಿರುವ ರುಂಡಗಳು, ಹೊರಚಾಚಿರುವ ದೊಡ್ಡ ನಾಲಿಗೆ.

–ಕಾಳಿಯ ಸಾಮಾನ್ಯ ಚಿತ್ರ ಇದು. ಶಿವನ ಪತ್ನಿ ಪಾರ್ವತಿ (ಶಕ್ತಿ)ಯ ಉಗ್ರ ರೂಪ ಕಾಳಿ ಎಂಬ ನಂಬಿಕೆ ಇದೆ.

ಭಾರತದ ಅನೇಕ ಕಡೆ ಕಾಳಿ ದೇವಾಲಯಗಳಿವೆ. ಕಲ್ಕತ್ತೆಯಲ್ಲಿರುವ ಕಾಳಿಘಾಟ್‌ನಲ್ಲಿರುವ ಕಾಳಿ ದೇವಾಲಯ [illegible]. ದುರ್ಗಾಷ್ಟಮಿಯಲ್ಲಿ ಕಾಳಿಗೆ ವಿಶೇಷ ಪೂಜೆ ನಡೆಯುತ್ತದೆ.

ಕಾಪಾಲಿಕರು ಮತ್ತು ಶಾಕ್ತರು ಕಾಳಿಯ ಉಪಾಸಕರು.

ಕಾಳಿದಾಸ

ನೋಡಿ : ಸಂಪುಟ ೫

ಕಾಳೀನದಿ ಯೋಜನೆ

ಕರ್ನಾಟಕ ರಾಜ್ಯದ ವಿದ್ಯುದುತ್ಪಾದನೆಯ ವಿಸ್ತರಣದಲ್ಲಿ ಮಹತ್ವದ ಪ್ರಯತ್ನ ಕಾಳೀನದಿ ಜಲವಿದ್ಯುತ್ ಯೋಜನೆ. ಈ ನದಿ ಹುಟ್ಟಿ, ಹರಿಯುವ ಬಹುಭಾಗ ಪರ್ವತ ಪ್ರದೇಶವಾದದ್ದರಿಂದ ಇದರ ನೀರು ವ್ಯವಸಾಯಕ್ಕಿಂತ ವಿದ್ಯುದುತ್ಪಾದನೆಗೇ ಹೆಚ್ಚು ಉಪಯುಕ್ತ.



ಕಾಳೀನದಿ ಪಶ್ಚಿಮ ಘಟ್ಟದಲ್ಲಿ (ಉತ್ತರ–ಕನ್ನಡ ಜಿಲ್ಲೆ) 3,000 ಅಡಿ [illegible] ಅನಂತರ ಕಾರವಾರದ ಹತ್ತಿರ ಅರಬಿ ಸಮುದ್ರವನ್ನು ಸೇರುತ್ತದೆ. ಇದರ

[illegible] ಸಾರ್ದಿ. ಇಡೀ ನದಿಯ ಉದ್ದ ನೂರು ಮೈಲು ಮಾತ್ರ.

[illegible] ಕಟ್ಟೆಗಳನ್ನು ಕಟ್ಟಿ [illegible] ವಿದ್ಯುತ್ ಉತ್ಪಾದನಾ ಕೇಂದ್ರಗಳನ್ನು ಸ್ಥಾಪಿಸಲು ಯೋಜನೆ ರೂಪಿಸಿದ್ದಾರೆ. [illegible] ನಾಗರ್ಸೂರಿ ಬಳಿ ವಿದ್ಯುತ್ ಉತ್ಪಾದನೆಯೂ ಈ ಯೋಜನೆಯ ಮುಖ್ಯ ಭಾಗ. 1973ರಲ್ಲಿ ಪ್ರಧಾನಿ ಇಂದಿರಾಗಾಂಧಿ ಈ ಕಟ್ಟೆಯ ಶಂಕುಸ್ಥಾಪನೆ ಮಾಡಿದರು. ಈ ಯೋಜನೆಯಿಂದ ಒಟ್ಟು 13 ಲಕ್ಷ ಕಿ. ವಾ. ವಿದ್ಯುತ್ ಉತ್ಪಾದನೆಯಾಗುವ ನಿರೀಕ್ಷೆ ಇದೆ.

ಕ್ಯಾಂಬೆ

ಭಾರತದ ಪ್ರಾಚೀನ ಬಂದರುಗಳಲ್ಲಿ ಒಂದಾದ ಕ್ಯಾಂಬೆ ಪಶ್ಚಿಮ ಕರಾವಳಿ ಪ್ರದೇಶದಲ್ಲಿದೆ. ಇಲ್ಲಿ ಅರಬೀಸಮುದ್ರ ಕೊಳವೆ ಆಕಾರದಲ್ಲಿ ಭೂಮಿಯೊಳಕ್ಕೆ ನುಗ್ಗಿದೆ. ಇದೇ ಕ್ಯಾಂಬೆ ಖಾರಿ. ಈ ಖಾರಿಯ ತೀರದಲ್ಲೇ ಕ್ಯಾಂಬೆ ಪಟ್ಟಣವಿದೆ. ಇದು ಗುಜರಾತಿನ ಕೈರಾ ಜಿಲ್ಲೆಗೆ ಸೇರಿದೆ.

ಕ್ಯಾಂಬೆ ಬಂದರು ಹಿಂದೆ ಒಂದು ಪ್ರಮುಖ ಬಂದರಾಗಿದ್ದಿತು. ಇಲ್ಲಿಂದ ಭೂಮಧ್ಯ ಸಮುದ್ರ ಪ್ರದೇಶಗಳು ಹಾಗೂ ಪಶ್ಚಿಮ ಏಷ್ಯದೊಡನೆ ವ್ಯಾಪಾರ ನಡೆಯುತ್ತಿತ್ತು.

ಕ್ಯಾಂಬೆಯ ಬಗೆಗೆ ಮಾರ್ಕೊ ಪೋಲೊ ಮುಂತಾದ ಪ್ರವಾಸಿಗಳು ಬರೆದಿದ್ದಾರೆ. 913ರಲ್ಲಿ ಇಲ್ಲಿಗೆ ಬಂದಿದ್ದ ಅರಬಿ ಪ್ರವಾಸಿ ಇದನ್ನು ವರ್ಣಿಸಿದ್ದಾನೆ. 15-16ನೆಯ ಶತಮಾನಗಳಲ್ಲಿ ಇದು ಮಹಮ್ಮದೀಯರ ಆಳ್ವಿಕೆಯಲ್ಲಿತ್ತು. ಕ್ಯಾಂಬೆ ಎಂಬುದು ಸ್ವತಂತ್ರ ಸಂಸ್ಥಾನವಾಗಿಯೂ ಇದ್ದಿತು.


ಇಲ್ಲಿ 30-40 ಅಡಿಗಳ ಎತ್ತರದ ಅಲೆಗಳು ವೇಗವಾಗಿ ಬಂದು ದಡಕ್ಕೆ ಅಪ್ಪಳಿಸುತ್ತವೆ. ಇದರಿಂದಾಗಿ ತೀರದಲ್ಲಿ ಹೂಳು ಮಣ್ಣು ಸಂಗ್ರಹವಾಗಿ ಹಡಗು ನಿಲ್ಲುವುದಕ್ಕೆ ಅನನುಕೂಲವಾಗುತ್ತದೆ. ಹೀಗಾಗಿ ಕ್ಯಾಂಬೆ ಬಂದರಿನ ಪ್ರಾಮುಖ್ಯ ಕ್ರಮೇಣ ತಗ್ಗಿತು. ಕ್ಯಾಂಬೆ ಪಟ್ಟಣದ ಎದುರಿಗೆ, ಖಾರಿಯ ಆಚೆ ಬದಿಗೆ ಇರುವ ಭಾವನಗರದಲ್ಲಿ ಹೂಳು ಅಷ್ಟಾಗಿ ಸಂಗ್ರಹವಾಗುವುದಿಲ್ಲ. ಈಗ ಅದು ಶೀಘ್ರ ಪಟ್ಟಣವಾಗಿ ಅಭಿವೃದ್ಧಿಗೊಳ್ಳುತ್ತಿದೆ.

ಹತ್ತಿ, ದಂತ, ಧಾನ್ಯಗಳು, ಹೊಗೆಸೊಪ್ಪು ಕ್ಯಾಂಬೆಯ ವ್ಯಾಪಾರೀ ಸರಕುಗಳು. ಇಲ್ಲಿನ ಕೆಲವು ಬಗೆಯ ರತ್ನಖಚಿತ ಆಭರಣ ಕೆಲಸ ಪ್ರಸಿದ್ಧವಾದದ್ದು. ಬೆಂಕಿಕಡ್ಡಿ, ಸಿಲಿಹಾಸು, ಉಪ್ಪು, ಕೈಮಗ್ಗ ವಸ್ತ್ರ ಮುಂತಾದ ಉದ್ಯಮಗಳೂ ಇವೆ. ಮಸೀದಿಗಳೂ ಹಿಂದೂ ಹಾಗೂ ಜೈನ ದೇವಾಲಯಗಳೂ ಇವೆ. ಗುಜರಾತಿನಲ್ಲಿ ವಿಕಾಸಗೊಂಡ ಹಿಂದೂ ಮಹಮ್ಮದೀಯ ಮಿಶ್ರ ವಾಸ್ತುಶಿಲ್ಪಶೈಲಿ. ಕ್ಯಾಂಬೆಯ ಜುಮ್ಮಾ ಮಸೀದಿಯ ರಚನೆಯಿಂದ (1325) ಆರಂಭವಾಯಿತೆನ್ನಬಹುದು. ಇಲ್ಲಿ ಒಂದು ಇಟ್ಟಿಗೆ ಕೋಟೆಯೂ ಇದೆ.

1958ರಿಂದ ಈಚೆಗೆ ಕ್ಯಾಂಬೆ ಖಾರಿ ಪ್ರದೇಶದಲ್ಲಿ ಖನಿಜ ತೈಲ ಹಾಗೂ ನೈಸರ್ಗಿಕ ಅನಿಲಗಳನ್ನು ಪತ್ತೆ ಹಚ್ಚಿ, ಉತ್ಪಾದನೆ ಪ್ರಯತ್ನಕೈಗೊಳ್ಳಲಾಗಿದೆ.

ನೋಡಿ : ಅಂಕಲೇಶ್ವರ

[illegible] — ಕ್ಯಾಂಬೆ ಖಾರಿಯ [illegible]



ಕ್ಯಾಪ್ಟನ್ ಲಕ್ಷ್ಮಿ

ಕ್ಯಾಪ್ಟನ್ ಲಕ್ಷ್ಮಿ ಎಂದು ಪ್ರಸಿದ್ಧರಾದ ವೀರಮಹಿಳೆ ಮದರಾಸಿನಲ್ಲಿ ವಕೀಲರಾಗಿದ್ದ ಸ್ವಾಮಿನಾಥನ್ ಮತ್ತು ಸಾಮಾಜಿಕ ಕಾರ್ಯಕರ್ತೆ ಅಮ್ಮು ಸ್ವಾಮಿನಾಥನ್ ಅವರ ಮಗಳು. ನೇತಾಜಿ ಸುಭಾಷ ಚಂದ್ರ ಬೋಸರು ಎರಡನೆಯ ಮಹಾ ಯುದ್ಧ ಕಾಲದಲ್ಲಿ ಸಿಂಗಪುರಕ್ಕೆ ಬಂದು ಆಜಾದ್ ಹಿಂದ್ ಫೌಜ್‌ನ ರಚನೆಯಲ್ಲಿ ತೊಡಗಿದಾಗ ಈಕೆ ಅಲ್ಲಿದ್ದರು. ತುಂಬ ಉತ್ಸಾಹದಿಂದ ಸುಭಾಷರ ಈ ಪ್ರಯತ್ನದಲ್ಲಿ ಸಹಕರಿಸಿದರು. ಆಜಾದ್ ಹಿಂದ್ ಫೌಜ್‌ನ ಸ್ತ್ರೀ ದಳವಾದ 'ಝಾನ್ಸಿರಾಣಿಯ ರೆಜಿಮೆಂಟ್' ರೂಪುಗೊಂಡಾಗ ಅದರ ನಾಯಕಿಯಾಗಿ ನಿಯಮಿಸಲ್ಪಟ್ಟರು; ಹೋರಾಟದಲ್ಲಿ ಭಾಗ ವಹಿಸಿದರು. 1944ರಲ್ಲಿ ಆಜಾದ್ ಹಿಂದ್ ಸರಕಾರ ಸ್ಥಾಪಿತವಾದಾಗ ಅದರ ಮಂತ್ರಿ ಮಂಡಲದಲ್ಲಿ ವೈದ್ಯ ಮತ್ತು ಸಮಾಜ ಕಲ್ಯಾಣ ಶಾಖೆಯ ಸಚಿವೆಯಾದರು.

ಬ್ರಿಟಿಷರೊಡನೆ ನಡೆಸಿದ ಹೋರಾಟದಲ್ಲಿ ಆಜಾದ್ ಹಿಂದ್ ಫೌಜ್‌ಗೆ ಸೋಲಾದ ಸಂದರ್ಭದಲ್ಲಿ ಈಕೆ ಶರಣಾಗತರಾಗಲು ನಿರಾಕರಿಸಿದ್ದರಿಂದ ಬ್ರಿಟಿಷ್ ಸೇನಾಧಿಕಾರಿಗಳು ಈಕೆಯನ್ನು ಬಂಧಿಸಿ ರಂಗೂನ್ ಸೆರೆಮನೆ



ದಳನಾಯಕಿ : ಲಕ್ಷ್ಮಿ

ಬಿಟ್ಟರು. ಈ ನಾಯಕಿಯ ಬಿಡುಗಡೆ ... ಬ್ರಿಟಿಷ್ ಸರಕಾರ ಸಾರ್ವಜನಿಕ ಭಾಷಣ ಮಾಡಕೂಡದೆಂಬ ಶರತ್ತು ವಿಧಿಸಿ ಈಕೆಯನ್ನು ಬಿಡುಗಡೆಮಾಡಿತು.

ಆದರೆ ಈಕೆ ಆ ನಿರ್ಬಂಧವನ್ನು ಮುರಿದು [illegible] ಅಕ್ಟೋಬರ 21ರಂದು, ಆಜಾದ್ ಹಿಂದ್ ಫೌಜ್‌ನ ವಾರ್ಷಿಕೋತ್ಸವ ಸಂದರ್ಭದಲ್ಲಿ ಬಹಿರಂಗ ಭಾಷಣ ಮಾಡಿದರು. ಫೌಜಿನ ಸೇನಾ ಅಧಿಕಾರಿಗಳ ಮೇಲೆ ಬ್ರಿಟಿಷ್ ಸರಕಾರ ಹೂಡಿದ್ದ ಮೊಕದ್ದಮೆಯ ವಿರುದ್ಧ ಚಳುವಳಿ ನಡೆಸಿದರು. ಸರಕಾರ ಲಕ್ಷ್ಮಿ ಅವರನ್ನು ಮತ್ತೆ ಬಂಧಿಸಿತು. ಮರುವರ್ಷ ಅವರ ಬಿಡುಗಡೆಯಾಯಿತು. ಅನಂತರ ಅವರು ಭಾರತಕ್ಕೆ ಹಿಂದಿರುಗಿ ಆಜಾದ್ ಹಿಂದ್ ಫೌಜಿನ ಕ್ಯಾಪ್ಟನ್ ಸೆಹಗಾಲ್ ಅವರನ್ನು ವಿವಾಹವಾದರು.

ಕಿಟ್ಟೆಲ್

“ತುತೂರಿ tutūri = ತುತ್ತೂರಿ, ತುತ್ತೂರಿ. A Long trumpet. ತುತೂರಿಯೂದಿದರೆ ತುಪಟ ಬಂದೀತೆ? ತುತೂರಿ ಧ್ವನಿ ಕೇಳಿ, ತುರಿಸಿಕೊಂಡು ಓಡಿ ಹೋದ”

—ಕಿಟ್ಟೆಲರ ಕನ್ನಡ–ಇಂಗ್ಲಿಷ್ ನಿಘಂಟಿನಲ್ಲಿ ತುತೂರಿ ಎಂಬ ಪದಕ್ಕೆ ಕೊಟ್ಟಿರುವ ಅರ್ಥ ಇದು. ಆ ಪದಕ್ಕೆ ಸಂಬಂಧಿಸಿದ ಹಾಗೆ ಇರುವ ಗಾದೆಯ ಮಾತನ್ನೂ ಈ ವಿವರಣೆಯಲ್ಲಿ ಸೇರಿಸಿದ್ದಾರೆ.



ನಿಘಂಟು : ಕಿಟ್ಟೆಲ್

ಫರ್ಡಿನೆಂಡ್ ಕಿಟ್ಟೆಲ್‌ರ ಜನನ 1832, ಜರ್ಮನಿಯ ರೋಸ್ಸರ್‌ಹಾಫ್ ಎಂಬಲ್ಲಿ. ವಿದ್ಯಾಭ್ಯಾಸ ಸ್ವಿಟ್ಜರ್‌ಲೆಂಡಿನಲ್ಲಿ; ಬಾಸೆಲ್‌ನ ಮಿಷನ್ ಕಾಲೇಜಿನಲ್ಲಿ. ಭಾರತಕ್ಕೆ ಪಾದ್ರಿಯಾಗಿ ಬಂದು 1853ರಲ್ಲಿ ಧಾರವಾಡದಲ್ಲಿದ್ದರು.

ಕಿಟ್ಟೆಲ್ ಕನ್ನಡ ಕಲಿತದ್ದು ಮಂಗಳೂರಿಗೆ ಬಂದ ತರುವಾಯ. ಆಗ ಅವರಿಗೆ 22 ವರ್ಷ. ಬಹುಬೇಗ ಕನ್ನಡದಲ್ಲೂ ಪಾಂಡಿತ್ಯ ಸಂಪಾದಿಸಿದರು. ಇದು ಆಗಿನ ಆಂಗ್ಲ ಅಧಿಕಾರಿಗಳ ಗಮನ ಸೆಳೆಯಿತು. ಬಾಸೆಲ್ ಮಿಷನಿನವರು ಮತ್ತು ಸರಕಾರದಲ್ಲಿ ಉನ್ನತಾಧಿಕಾರದಲ್ಲಿದ್ದವರು ಕನ್ನಡ–ಇಂಗ್ಲಿಷ್ ನಿಘಂಟೊಂದನ್ನು ರಚಿಸುವ ಹೊಣೆಗಾರಿಕೆಯನ್ನು ಕಿಟ್ಟೆಲರಿಗೆ ವಹಿಸಿದರು.

ತಮ್ಮ ಬಿಡುವಿನ ಸಮಯವನ್ನು ನಿಘಂಟಿನ ಕೆಲಸಕ್ಕಾಗಿ ಮೀಸಲಿಟ್ಟು ಕಿಟ್ಟೆಲ್ ದುಡಿದರು. 1877ರಲ್ಲಿ ನಿಘಂಟಿನ ಹಸ್ತಪ್ರತಿಯೊಂದಿಗೆ ಜರ್ಮನಿಗೆ ಮರಳಿದ ಕಿಟ್ಟೆಲ್ 1883ರ ವರೆಗೆ ನಿಘಂಟಿನ ಕೆಲಸವನ್ನು ಮುಂದುವರಿಸಿ ಅದನ್ನು ಪೂರೈಸಿದರು. ಭಾರತಕ್ಕೆ ಮರಳಿ ಬಂದು ವಿದ್ವಾಂಸರೊಂದಿಗೆ ಸಮಾಲೋಚನೆ ನಡೆಸಿ ಮುದ್ರಣ ಕಾರ್ಯವನ್ನು ಮಂಗಳೂರಿನ ಬಾಸೆಲ್ ಮಿಷನ್‌ಗೆ ವಹಿಸಿಕೊಟ್ಟರು. ನಿಘಂಟು ಬಿಡುಗಡೆಯಾದದ್ದು 1894ರಲ್ಲಿ. ಕನ್ನಡ ಭಾಷೆಗೆ ಕಿಟ್ಟೆಲ್ ಸಲ್ಲಿಸಿರುವ ಅಮೋಘ ಕಾಣಿಕೆ ಈ ನಿಘಂಟು. ಖಚಿತ ಪ್ರಮಾಣಿತ ನಿಘಂಟು ಎಂದು ಇದು ಪ್ರಸಿದ್ಧವಾಯಿತು.

ಮೈಸೂರು ವಿಶ್ವವಿದ್ಯಾನಿಲಯ ಕ್ರಿ. ಶ. [illegible] ರಲ್ಲಿ ಈ ನಿಘಂಟಿನ ಪರಿಷ್ಕೃತ ಆವೃತ್ತಿ ಹೊರತರಲು ನಿರ್ಧರಿಸಿತು. ನಾಲ್ಕು ಸಂಪುಟಗಳಲ್ಲಿ ನಿಘಂಟನ್ನು ಪರಿಷ್ಕರಿಸಿ ಮುದ್ರಿಸುವ ಯೋಜನೆ ಹಾಕಿಕೊಂಡು 1971ರಲ್ಲಿ ಪ್ರಕಟಣೆಯ ಯೋಜನೆಯನ್ನು ಪೂರ್ಣಗೊಳಿಸಿತು.

'ಶಬ್ದಮಣಿದರ್ಪಣ' ಹಾಗೂ 'ಛಂದೋಂಬುಧಿ'ಯ ಸಂಪಾದನ ಕಾರ್ಯವನ್ನೂ ಕಿಟ್ಟೆಲ್ ನಿರ್ವಹಿಸಿದರು. ಅವರ ಇಂಗ್ಲಿಷ್ ಲೇಖನಗಳು 'ಇಂಡಿಯನ್ ಆಂಟಿಕ್ವೆರಿ'ಯಲ್ಲಿ ಬೆಳಕು ಕಂಡವು. ಇಂಗ್ಲಿಷಿನಲ್ಲಿ ಕನ್ನಡ ವ್ಯಾಕರಣ ಬರೆದರು. ಇದಕ್ಕೆ ಪೀಠಿಕೆ ಬರೆದ ಕಿಟ್ಟೆಲ್ ಅದು ಪ್ರಕಟವಾದ ಮರುದಿನವೇ, 1903 ಡಿಸೆಂಬರ್‌ನಲ್ಲಿ, ನಿಧನರಾದರು.

ಜರ್ಮನಿಯ ಟೂಬಿಂಗೆನ್‌ನಲ್ಲಿ ಕಿಟ್ಟೆಲ್‌ರ ಸಮಾಧಿ ಇದೆ.

ಕಿತ್ತೂರ ಚನ್ನಮ್ಮ

ತನ್ನ ರಾಜ್ಯದ ಸಂರಕ್ಷಣೆಗಾಗಿ ಆಂಗ್ಲರೊಡನೆ ಹೋರಾಡಿದ ಪ್ರಥಮ ಭಾರತೀಯ ಮಹಿಳೆ ಕಿತ್ತೂರ ಚೆನ್ನಮ್ಮ. ಕಿತ್ತೂರು, ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲ್ಲೂಕಿನಲ್ಲಿದೆ.

ಕಲಬುರ್ಗಿಯಿಂದ ಬಿಜಾಪುರ ದಂಡಿನೊಡನೆ ಕಿತ್ತೂರಿಗೆ ಬಂದ ಹಿರೇ ಮಲ್ಲಶೆಟ್ಟಿ ಮತ್ತು ಚಿಕ್ಕಮಲ್ಲಶೆಟ್ಟಿ ಕ್ರಿ. ಶ. 1585ರಲ್ಲಿ ಕಿತ್ತೂರು ದೇಸಾಯಿಯನ್ನು ಸಂಪಾದಿಸಿದರು. 1772ರಿಂದ 1816ರ ವರೆಗೆ ಈ ರಾಜ್ಯವನ್ನಾಳಿದ ಮಲ್ಲಸರ್ಜ ದೇಸಾಯಿ ಕಿತ್ತೂರಿನ ಅರಸರಲ್ಲಿ ಮುಖ್ಯನಾದವನು. ಮಲ್ಲಸರ್ಜ ದೊರೆಗೆ ಇಬ್ಬರು ಹೆಂಡಂದಿರು. ಹಿರಿಯವಳು ರುದ್ರಮ್ಮ. ಕಿರಿಯವಳು ಚೆನ್ನಮ್ಮ. ಚೆನ್ನಮ್ಮ ಕಾಕತಿ ದೇಸಾಯಿಯ ಮಗಳು. ಇವಳು ಸುಂದರಿ, ಯುದ್ಧ ಕಲೆಯನ್ನು ಚೆನ್ನಾಗಿ ಅರಿತಿದ್ದಳು. ಚೆನ್ನಮ್ಮನಿಗೆ ಮಕ್ಕಳಾಗಲಿಲ್ಲ.

ವೀರ ರಮಣಿ : ಚೆನ್ನಮ್ಮ — ಸೆರೆಮನೆಯಲ್ಲಿ



ಮಲ್ಲಸರ್ಜ ತೀರಿದ ಬಳಿಕ ರುದ್ರವ್ವೆಯ ಹಿರಿಯ ಮಗ ಶಿವಲಿಂಗ ರುದ್ರಸರ್ಜ ಪಟ್ಟಕ್ಕೆ ಬಂದ.

ಮಕ್ಕಳಿಲ್ಲದ ಶಿವಲಿಂಗ ರುದ್ರಸರ್ಜ ಬಹಳ ದಿನಗಳಿಂದ ಅನಾರೋಗ್ಯ ದಿಂದ ಬಳಲುತ್ತಿದ್ದು 1824ರಲ್ಲಿ ನಿಧನನಾದ; ಅದಕ್ಕೆ ಮೊದಲು ಮಾಸ್ತ ಮರಡಿ ಬಾಳಪ್ಪಗೌಡರ ಮಗ ಶಿವಲಿಂಗ ಎಂಬ ಬಾಲಕನನ್ನು ದತ್ತು ತೆಗೆದುಕೊಂಡಿದ್ದ.

ಕಿತ್ತೂರು ಸಂಸ್ಥಾನವನ್ನು ತಮ್ಮ ವಶಕ್ಕೆ ತೆಗೆದುಕೊಳ್ಳಲು ಬ್ರಿಟಿಷರು ಹೊಂಚುಹಾಕುತ್ತಿದ್ದರು. ಆದ್ದರಿಂದ ಅವರು ಈ ದತ್ತಕವನ್ನೊಪ್ಪಲು ನಿರಾಕರಿಸಿದರು. ಇದರಿಂದ ಉಂಟಾಗಬಹುದಾದ ಘರ್ಷಣೆಯಲ್ಲಿ ಬ್ರಿಟಿಷರ ವಿರುದ್ಧ ಹೋರಾಡಲು ಚೆನ್ನಮ್ಮ ಸಿದ್ಧತೆ ಮಾಡಿಕೊಂಡಳು. ಅರಮನೆಯ ಕಾರುಭಾರಿಗಳಾಗಿದ್ದ ಮಲ್ಲಪ್ಪಶೆಟ್ಟಿ, ವೆಂಕಟರಾಯ ಎಂಬ ದ್ರೋಹಿಗಳಿಂದ ಈ ಸಂಗತಿ ಧಾರವಾಡದ ಕಲೆಕ್ಟರ್ ಥ್ಯಾಕರೆಗೆ ತಿಳಿಯಿತು.

1824 ಅಕ್ಟೋಬರ್ 21ರಂದು ಥ್ಯಾಕರೆ ಹಠಾತ್ತಾಗಿ ಕಿತ್ತೂರಿನ ಕೋಟೆಯ ಮೇಲೆ ಏರಿಬಂದ.

ದಿನಾಂಕ 23ರಂದು ಕೋಟೆಯ ಹೆಬ್ಬಾಗಿಲನ್ನು ಒಡೆಯಲು ಥ್ಯಾಕರೆ ಕ್ಯಾಪ್ಟನ್ ಬ್ಲ್ಯಾಕನಿಗೆ ಆಜ್ಞೆಯಿತ್ತ. ಅಷ್ಟರಲ್ಲಿ ಕಿತ್ತೂರಿನ ಯೋಧ ಅಮಟೂರ ಬಾಳಪ್ಪ ಥ್ಯಾಕರೆಯನ್ನು ಗುಂಡಿಕ್ಕಿ ಕೊಂದ. ಬ್ಲ್ಯಾಕ್, ಇನ್ನಿತರ ಅಧಿಕಾರಿಗಳು ಹೋರಾಟದಲ್ಲಿ ಮಡಿದರು. ನೂರಾರು ಬ್ರಿಟಿಷ್ ಸೈನಿಕರು ಸೆರೆಸಿಕ್ಕರು. ಈ ಸೆರೆಯಾಳುಗಳನ್ನು ಚೆನ್ನಮ್ಮ ಉದಾರವಾಗಿ ನಡೆಸಿಕೊಂಡಳು.

ಅನಂತರ ಮೈಸೂರು, ಮದರಾಸು, ಮುಂಬಯಿ, ಸೊಲ್ಲಾಪುರ ಇನ್ನಿತರ ಕಡೆಗಳಿಂದ ಬಂದ ಬ್ರಿಟಿಷ್ ಸೈನ್ಯ ಕಿತ್ತೂರಿನ ಮೇಲೆ ನುಗ್ಗಿತು. ಕೋಟೆಗೆ ಕೈ ಹಚ್ಚಿದರೆ ಸೆರೆಯಾಳುಗಳನ್ನು ನಾಶಪಡಿಸುವುದಾಗಿ ಕಿತ್ತೂರಿನ ವೀರರು ಬೆದರಿಕೆ ಹಾಕಿದರು. ದೇಶಗತಿಯನ್ನೂ ದತ್ತು ಪುತ್ರನನ್ನೂ ಮಾನ್ಯ ಮಾಡುವುದಾಗಿ ಚಾಪ್ಲಿನ್ ಮಾತುಕೊಟ್ಟಾಗ, ಚೆನ್ನಮ್ಮ ಬಂದಿಗಳನ್ನು ಬಿಡುಗಡೆ ಮಾಡಿದಳು. ಕೃತಘ್ನನಾದ ಚಾಪ್ಲಿನ್ ಕೋಟೆ ಮುತ್ತಲು ತನ್ನ ಸೇನೆಗೆ ಅಪ್ಪಣೆಯಿತ್ತ. ಚೆನ್ನಮ್ಮ ಕೆರಳಿ ತನ್ನ ಶೂರ ಸೇನೆಯೊಡನೆ ತಾನೇ ಕಾಳಗಕ್ಕೆ ನಿಂತಳು. ಬ್ರಿಟಿಷರ ಸುಸಜ್ಜಿತ ಆಯುಧ ಗಳೆದುರು ಕಿತ್ತೂರು ಪಕ್ಷಕ್ಕೆ ಸೋಲಾಯಿತು. ಚೆನ್ನಮ್ಮ ಮತ್ತು ಸೊಸೆ ವೀರಮ್ಮ ಪಾರಾಗಿ ಹೋಗಲು ಮಾಡಿದ ಪ್ರಯತ್ನ ವಿಫಲವಾಯಿತು.

ಚೆನ್ನಮ್ಮನೂ ವೀರಮ್ಮನೂ ಬಂದಿಗಳಾದರು. ಅವರನ್ನು ಬೈಲಹೊಂಗಲದ ಸೆರೆಮನೆಯಲ್ಲಿಡಲಾಯಿತು. ಸೆರೆವಾಸದಲ್ಲಿದ್ದರೂ ಚೆನ್ನಮ್ಮ, ಮರಳಿ ತನ್ನ ರಾಜ್ಯ ಪಡೆಯುವ ಕನಸು ಕಾಣುತ್ತ, ಸಂಗೊಳ್ಳಿ ರಾಯಣ್ಣನಂಥ ವೀರ ಯೋಧರ ಗುಪ್ತ ಸಂಪರ್ಕ ಪಡೆದಳು. ಕಿತ್ತೂರಿನ ಬಿಡುಗಡೆಗಾಗಿ ಪ್ರಯತ್ನಿಸಲು ತನ್ನ ಆಭರಣ, ಹಣ ಕಳುಹಿಸುತ್ತ ಅವರನ್ನು ಹುರಿದುಂಬಿ ಸಿದಳು. 1829 ಫೆಬ್ರುವರಿ 2ರಂದು ಚೆನ್ನಮ್ಮ ನಿಧನಳಾದಳು. ಆಗ ಆಕೆಗೆ 57 ವರ್ಷ ವಯಸ್ಸು. ಸಕಲ ಸೇನಾ ಮರ್ಯಾದೆಗಳೊಂದಿಗೆ ಆಕೆಯ ಅಂತ್ಯ ಕ್ರಿಯೆ ಬೈಲಹೊಂಗಲದ ಕಲ್ಮಠದಲ್ಲಿ ನಡೆಯಿತು.

ನೋಡಿ : ಸಂಗೊಳ್ಳಿ ರಾಯಣ್ಣ

ಕಿರ್ಲೋಸ್ಕರ ಲಕ್ಷ್ಮಣರಾವ್

[illegible] ಚಿತ್ರಕಲೆಯ ಅಭ್ಯಾಸ ಮುಂದುವರಿಸಲು ಅಸಮರ್ಥನಾದ ಯುವಕ ಮುಂಬಯಿಯಲ್ಲಿ ಹೊಟ್ಟೆಪಾಡಿಗಾಗಿ ಕೆಲಸ ಹುಡುಕುತ್ತಿದ್ದ. ಆಗ ತಾನೇ ಪ್ರಾರಂಭವಾಗಿದ್ದ ತಾಂತ್ರಿಕ ಶಾಲೆಯೊಂದರಲ್ಲಿ ಯಂತ್ರಗಳ ಚಿತ್ರ ಬರೆಯುವ ಕಲಾವಿದನ ಕೆಲಸ ಖಾಲಿ ಇದೆಯೆಂದು ತಿಳಿಯಿತು. ಅರ್ಜಿ ಹಾಕಿದ. ಸಂದರ್ಶನ ಕಾಲದಲ್ಲಿ ಅಧಿಕಾರಿಗಳು "ಕಲಾ ಶಾಲೆಯಲ್ಲಿ ಕಲಿತ ಚಿತ್ರಕಲೆಯಿಂದ ಯಂತ್ರಗಳ ರಚನೆಯ ನಕಾಶೆ ತೆಗೆಯುವ ಜ್ಞಾನ ಪ್ರಾಪ್ತವಾದೀತೆ? ಇದು ನಿನ್ನಿಂದ ಹೇಗೆ ಸಾಧ್ಯ ?" ಎಂದು ಸಂಶಯ ವ್ಯಕ್ತಪಡಿಸಿದರು. ಅದಕ್ಕೆ ಆ ಯುವಕ, "ನೀವು ನನಗೊಂದು ಕೆಲಸ ಕೊಟ್ಟು ಪ್ರತ್ಯಕ್ಷ ಪರೀಕ್ಷೆ ನಡೆಸಬಹುದು." ಎಂದ. ಪ್ರತ್ಯಕ್ಷ ಪರೀಕ್ಷೆ ನಡೆದು, ಅವನಿಗೆ ಆ ಕೆಲಸ ದೊರಕಿತು.



"...ನಿನ್ನನ್ನು ನೋಡಿ ; ಕಾರ್ಯ ಮಾಡ

ಈ ಯುವಕನೇ ಕಿರ್ಲೋಸ್ಕರ ಲಕ್ಷ್ಮಣರಾವ್. ಕೆಲಸ ದೊರೆತದ್ದರಿಂದ ಅವರು ತೃಪ್ತಿ ಹೊಂದಲಿಲ್ಲ. ತಮ್ಮ ಜೀವನದಾದ್ಯಂತ ಅವರು ಹೊಸ ಹೊಸ ಸವಾಲುಗಳನ್ನು ಎದುರಿಸುತ್ತಲೇ ಹೋದರು. ಅವುಗಳಲ್ಲಿ ಯಶಸ್ವಿಯಾಗುತ್ತ, ಕೀರ್ತಿಯ ಶಿಖರವನ್ನು ಏರಿದರು.

ಧಾರವಾಡ ಜಿಲ್ಲೆಯ ಗುರ್ಲಹೊಸೂರು ಗ್ರಾಮದಲ್ಲಿ ಕಿರ್ಲೋಸ್ಕರರದು ಒಂದು ಮಧ್ಯಮ ವರ್ಗದ ಕುಟುಂಬ. ಆ ಮನೆತನದ ಕಾಶೀನಾಥ ಪಂತರ ಎರಡನೆಯ ಮಗನಾಗಿ 1869 ಜೂನ್ 20ರಂದು ಲಕ್ಷ್ಮಣರಾಯರ ಜನನ. 15ನೆಯ ವಯಸ್ಸಿನಲ್ಲೇ ಚಿತ್ರಕಲೆಯ ಹುಚ್ಚಿನಿಂದ ಮುಂಬಯಿಗೆ ಪ್ರಯಾಣ. ಜೆ. ಜೆ. ಕಲಾಶಾಲೆಯಲ್ಲಿ ಚಿತ್ರಕಲೆಯ ಅಭ್ಯಾಸ ಮಾಡಿದರೂ ಅದನ್ನು ಮುಂದುವರಿಸಲು ಸಾಧ್ಯವಾಗಲಿಲ್ಲ. ಅದೇ ಕಾಲಕ್ಕೆ ಯಂತ್ರ ಕೆಲಸದಲ್ಲಿ ಆಸ್ಥೆ.

ಮುಂಬಯಿಯಲ್ಲಿ ಜೀವನ ಅಸಾಧ್ಯವೆನಿಸಿ ಬೆಳಗಾಂವಿಗೆ ಬಂದು ಒಂದು ಸೈಕಲ್ ಅಂಗಡಿ ತೆರೆದರು. ಅದೇ ಕ್ರಮೇಣ ರಂಟೆ ಕುಂಟೆಗಳ ಕಾರಖಾನೆಯಾಗಿ ಪರಿವರ್ತನೆ ಹೊಂದಿತು. ಭಾರತದ ಬೇಸಾಯದಲ್ಲಿ ಕಬ್ಬಿಣದ ರಂಟೆಗಳ ಪ್ರಥಮ ಪ್ರಯೋಗ ಮಾಡಿದ ಶ್ರೇಯಸ್ಸು ಕಿರ್ಲೋಸ್ಕರರದು. ಇವರ ಸತತೋದ್ಯೋಗ ಮತ್ತು ಯಂತ್ರ ಕೌಶಲಗಳಿಂದ ಆಕರ್ಷಿತರಾದವರಲ್ಲಿ ಆಗಿನ ಔಂಧ್ ಸಂಸ್ಥಾನದ ಅಧಿಪತಿಯೂ ಒಬ್ಬರು. ತಮ್ಮ ಸೀಮೆಗೆ ಬಂದು ಕಾರಖಾನೆ ಸ್ಥಾಪಿಸುವುದಾದರೆ ಸ್ಥಳ ಮತ್ತು ಬಂಡವಾಳದ ನೆರವು ನೀಡುವೆ ಎಂದರು. ಲಕ್ಷ್ಮಣರಾಯರು ಅವರ ಆಮಂತ್ರಣವನ್ನು ಸ್ವೀಕರಿಸಿದರು. ಉದ್ಯಮ ಸ್ಥಾಪನೆಗಾಗಿ ಕುಂಡಲ ಗ್ರಾಮವನ್ನು ಆರಿಸಿಕೊಂಡರು. ಆ ಗ್ರಾಮವೇ ಕಿರ್ಲೋಸ್ಕರ್‌ವಾಡಿಯಾಗಿ ಬೆಳೆಯಿತು.

1910ರಲ್ಲಿ ರಂಟೆ ಕುಂಟೆಗಳನ್ನು ತಯಾರಿಸಲೆಂದು ಪ್ರಾರಂಭವಾದ ಈ ಕಾರಖಾನೆ ಕೆಲವೇ ವರ್ಷಗಳಲ್ಲಿ ದೊಡ್ಡದಾಗಿ ಬೆಳೆಯಿತು. ವಿವಿಧ ಉಪಕರಣ ಮತ್ತು ವಸ್ತುಗಳನ್ನು ತಯಾರಿಸತೊಡಗಿತು. ಅಲ್ಲದೆ ಹರಿಹರದಲ್ಲಿ ಯಂತ್ರೋಪಕರಣಗಳ ಕಾರಖಾನೆಯೂ ಪುಣೆಯಲ್ಲಿ ಆಯಿಲ್

ಎಂಜಿನ್ ಮತ್ತು ನ್ಯೂಮಾಟಿಕ್ ಪಂಪುಗಳ ತಯಾರಿಕೆ ಕಂಪೆನಿಗಳೂ ಬೆಂಗಳೂರಿನಲ್ಲಿ ಎಲೆಕ್ಟ್ರಿಕ್ ಮೋಟರುಗಳ ಕಾರಖಾನೆಯೂ ಸ್ಥಾಪಿತವಾದುವು.

ಲಕ್ಷ್ಮಣರಾಯರು ಕೆಲ ಕಾಲ ಜಿಂಧ್ ಸಂಸ್ಥಾನದ ದಿವಾನರೂ ಆಗಿದ್ದು, [illegible]

"ಈ ಜಗತ್ತಿನಲ್ಲಿ ನೀನು ಯಶಸ್ವಿಯಾಗಬೇಕೆಂದು ಬಯಸುತ್ತಿದ್ದರೆ ನಿನ್ನನ್ನು ಮರೆ; ಕಾರ್ಯ ಮಾಡು"–ಇದು ಅವರು ತಮ್ಮ 86ನೆಯ ವಯಸ್ಸಿನಲ್ಲಿ, [illegible]

ಕ್ರಿಪ್ಸ್

ನೋಡಿ : ಸ್ಟಾಫರ್ಡ್ ಕ್ರಿಪ್ಸ್

ಕ್ರಿಸ್ಮಸ್

ಡಿಸೆಂಬರ್ 25ರಂದು ಆಚರಿಸುವ ಹಬ್ಬ–ಕ್ರಿಸ್ಮಸ್.

[illegible] ನಕ್ಷತ್ರ ಮೊದಲಾದ ಆಕೃತಿಗಳು, ಅಲ್ಲಲ್ಲಿ ಕಟ್ಟಿರುವ ಚಿಕ್ಕ ಕಾಗದದ ಪೆಟ್ಟಿಗೆಗಳು....ಕ್ರಿಸ್ಮಸ್ ಸಮಯದಲ್ಲಿ ಕ್ರೈಸ್ತರ ಮನೆಗಳಲ್ಲಿ ಈ ಬಗೆಯ ಕ್ರಿಸ್ಮಸ್ ಮರ ಇರುತ್ತದೆ. ಕ್ರೈಸ್ಟ್ಸ್ ಮಾಸ್ ಎಂದರೆ ಏಸುಕ್ರಿಸ್ತನಿಗೆ ಸಂಬಂಧಪಟ್ಟ ಹಬ್ಬ ಎಂದರ್ಥ. ಇದರಿಂದ ಬಂದ ಪದ ಕ್ರಿಸ್ಮಸ್. ಕ್ರಿಸ್ತನ ಹುಟ್ಟುಹಬ್ಬದ ವಾರ್ಷಿಕೋತ್ಸವ—ಕ್ರಿಸ್ಮಸ್. ಇದರ ಅನಂತರ ಕ್ರಿಶ್ಚಿಯನ್ ಕ್ಯಾಲೆಂಡರಿನ ಹೊಸ ವರ್ಷ ದಿನ ಬರುತ್ತದೆ.

ಕ್ರಿಸ್ಮಸ್‌ಗೆ ಸಿದ್ಧತೆ ಒಂದು ವಾರ ಮೊದಲೇ ಆರಂಭವಾಗುತ್ತದೆ. ನೆಂಟರು, ಆಪ್ತರಿಗೆ ಕ್ರಿಸ್ಮಸ್ ಕಾರ್ಡು ಕಳುಹಿಸುವುದು, ಕೇಕ್ ಮೊದಲಾದ ತಿನಿಸುಗಳ ತಯಾರಿಕೆ, ಕ್ರಿಸ್ಮಸ್ ಮರ ಶೃಂಗರಿಸುವುದು, ಉಡುಗೊರೆಗಳನ್ನು ಕೊಂಡು ತರುವುದೇ ಮೊದಲಾದ ಕೆಲಸಗಳು ಈ ಕಾಲದಲ್ಲಿ ಆಗುತ್ತವೆ.

ಕ್ರಿಸ್ಮಸ್ ದಿನ ಮಧ್ಯರಾತ್ರಿ ಇಗರ್ಜಿಯಲ್ಲಿ ಪ್ರಾರ್ಥನೆ ನಡೆಯುತ್ತದೆ. ಮರುದಿನವೂ ಕ್ರಿಸ್ಮಸ್ ಹಾಡುಗಳನ್ನು ಹೇಳುತ್ತಾರೆ. ಉತ್ತರ ಭಾರತದ ಹಳ್ಳಿಗಳಲ್ಲಿ ಕ್ರೈಸ್ತರು ಗುಂಪಾಗಿ ಕುಳಿತು ವಾದ್ಯ ಹಿಮ್ಮೇಳದೊಡನೆ ಸ್ಥಳೀಯ ಹಾಡುಗಳನ್ನು ಹಾಡುತ್ತಾರೆ.

ಕ್ರಿಸ್ಮಸ್ ಹಬ್ಬದಲ್ಲಿ ಸಂತ ಕ್ಲಾಸ್ ಮಕ್ಕಳಿಗೆ ಉಡುಗೊರೆ ಕೊಡುವನೆಂಬ ನಂಬಿಕೆ. ಸಂತ ಕ್ಲಾಸ್ ಗುಂಡಗೆ, ದಪ್ಪನಾದ ಸಂತೋಷಚಿತ್ತ ವ್ಯಕ್ತಿ ಎಂದು ಭಾವನೆ.

ಸಂತ ಕ್ಲಾಸನನ್ನು ಕುರಿತ ಕತೆ ಹೀಗಿದೆ :

ಜರ್ಮನಿಯಲ್ಲಿ ಒಂದೆಡೆ ವರದಕ್ಷಿಣೆ ಕೊಡಲು ಹಣವಿಲ್ಲದೆ ಮೂರು ಹುಡುಗಿಯರ ಮದುವೆ ನಿಂತುಹೋಗಲಿತ್ತು. ಇದು ತಿಳಿದ ಸಂತ ನಿಕೊಲಾಸ್ ಮೂರು ಥೈಲಿ ಹಣವನ್ನು ಕ್ರಿಸ್ಮಸ್ ಹಬ್ಬದಂದು ಕಿಟಕಿಯ ಮೂಲಕ ಒಳಗೆಸೆದು ಅವರಿಗೆ ಸಂತೋಷ ಉಂಟು ಮಾಡಿದನಂತೆ. ಅವನ ಹೆಸರಿನ ರೂಪಾಂತರವೇ ಸಂತ ಕ್ಲಾಸ್. ಈಗಲೂ ನಿದ್ರೆ ಮಾಡುತ್ತಿರುವ ಮಕ್ಕಳ ಹಾಸಿಗೆ ಬದಿಯಲ್ಲಿ ಕ್ರಿಸ್ಮಸ್ ಬಹುಮಾನಗಳನ್ನು ಇಟ್ಟು ಹೋಗುವುದು ಪದ್ಧತಿ.

ಕ್ರೈಸ್ತರಲ್ಲದವರೂ ಈ ಹಬ್ಬದಲ್ಲಿ ಕ್ರೈಸ್ತರೊಡನೆ ಸೇರಿ ಸಂತೋಷವಾಗಿ ಕಾಲಕಳೆಯುವುದುಂಟು.

ಕ್ವಿಟ್ ಇಂಡಿಯಾ

ನೋಡಿ : 'ಚಲೇ ಜಾವ್'

ಕೀಲು ಕುದುರೆ ನೃತ್ಯ

ಕುದುರೆಯೊಂದು ನೃತ್ಯಾಭ್ಯಾಸ ಮಾಡಿದರೆ ಹೇಗೆ? ಆಬಾಲವೃದ್ಧರಿಗೂ ಕುತೂಹಲ ಕೆರಳಿಸುವ ವಿಚಾರ ಇದು. ಆದರೆ ವಾಸ್ತವವಾಗಿ ಕೀಲು ಕುದುರೆಯ ನೃತ್ಯದಲ್ಲಿ ಕುದುರೆಗಳೇ ಇಲ್ಲ.

ಬಿದಿರನ್ನು ಸಿಗಿದು ಅದರಲ್ಲಿ ತಯಾರಿಸಿದ ಕುದುರೆಯ ಆಕಾರಕ್ಕೆ ಅಲಂಕಾರ ಮಾಡುತ್ತಾರೆ. ಅದು ನಿಜವಾದ ಕುದುರೆಯಂತೆಯೇ ಕಾಣುತ್ತದೆ. ಸವಾರ ಕುದುರೆಯ ಮೇಲೆ ಕುಳಿತುಕೊಳ್ಳುವ ಬೆನ್ನಿನ ಭಾಗದಲ್ಲಿ ಒಬ್ಬ ತೂರಿಬರಬಹುದಾದಷ್ಟು ದೊಡ್ಡ ತೂತಿರುತ್ತದೆ. ಆ ತೂತಿನಿಂದ ನರ್ತಕ ಮೇಲಕ್ಕೆ ಬಂದು ಕುದುರೆಯ ಆಕಾರವನ್ನು ಪಟ್ಟಿಯ ಮೂಲಕ ಕೊರಳಿಗೆ ತೂಗಹಾಕಿಕೊಳ್ಳುತ್ತಾನೆ. ನೋಡುವವರಿಗೆ ಆತ ಕುದುರೆ ಸವಾರನಂತೆ ಕಾಣಿಸುತ್ತಾನೆ. ಮರದ ಕಾಲಿನ ಮೇಲೆ ನಿಂತು ನರ್ತಿಸುವುದು ಈ ನರ್ತಕನ ವೈಶಿಷ್ಟ್ಯ. ಸಾಮಾನ್ಯವಾಗಿ ವಾದ್ಯ ಹಿಮ್ಮೇಳದ ಜೊತೆ ಹಾಡುವುದೂ ಉಂಟು. ಇತಿಹಾಸ ಪುರಾಣಗಳ ಕಥೆಗಳನ್ನು ಮನಮುಟ್ಟುವಂತೆ ನಿರೂಪಿಸುವ ಈ ನೃತ್ಯರೂಪಕ ಹೆಚ್ಚಾಗಿ ಧಾರ್ಮಿಕ ಹಾಗೂ ಸಾಂಸ್ಕೃತಿಕ ಉತ್ಸವಗಳಲ್ಲಿ ನಡೆಯುತ್ತದೆ.

ಚೋಳ, ಚೇರ, ಪಾಂಡ್ಯ ರಾಜರ ಕಾಲದಿಂದಲೂ ದಕ್ಷಿಣ ಭಾರತದಲ್ಲಿ ಪ್ರಚಾರದಲ್ಲಿರುವ ಒಂದು ಪ್ರಾಚೀನ ನೃತ್ಯ ಸಂಪ್ರದಾಯ ಇದು. ಮೈಸೂರು ರಾಜ್ಯದ ಕೆಲವು ಭಾಗಗಳಲ್ಲಿ [illegible] ಯಾಗಿದೆ.



ಆಬಾಲವೃದ್ಧರಿಗೂ ಕುತೂಹಲ : ಕೀಲು-ಕುದುರೆ ನೃತ್ಯ

ಕುಂಞಾಲಿ ಮರಕ್ಕಾರ್

16ನೆಯ ಶತಮಾನದ [illegible] ಕಾಲ ನಮ್ಮ ದೇಶದ ಪೂರ್ವ, ಪಶ್ಚಿಮ ಕರಾವಳಿಯಲ್ಲಿ ಪೋರ್ಚುಗೀಸ್ ನೌಕಾ [illegible] ಕುಂಞಾಲಿ.

[illegible] ನೌಕಾ ಪ್ರಾಬಲ್ಯಕ್ಕೆ ಸವಾಲು ಹಾಕಿದರು.

[illegible] ತಬ್ಬಿಬ್ಬಾದರೂ ಅನಂತರ ಅವರಿಗೆ ಭಾರೀ ಕಷ್ಟನಷ್ಟ ಉಂಟುಮಾಡಿತು.

[illegible] ಸಮುದ್ರಭಾಗದಲ್ಲಿ ಚಲಿಸುವ [illegible] ಕುಂಞಾಲಿ ಪೋರ್ಚುಗೀಸರಿಗೆ ಬಹಳ ಉಪಟಳ ನೀಡಿದ.

ಪೊನ್ನಾನಿ ಮರಕ್ಕಾರರ ಪ್ರಬಲ ನೌಕಾನೆಲೆಯಾಗಿತ್ತು. ಇದರ ಮೇಲೆ ಪೋರ್ಚುಗೀಸರು ದಾಳಿಮಾಡಲು ಯತ್ನಿಸಿದರು. 1528ರಲ್ಲಿ ಪೋರ್ಚುಗೀಸರು ಮರಕ್ಕಾರ್ ನೌಕಾತಂಡಕ್ಕೆ ಸಾಕಷ್ಟು ನಷ್ಟವನ್ನುಂಟು ಮಾಡಿದರು.

ಅನಂತರ ಮತ್ತೆ ಎರಡನೆಯ ಕುಂಞಾಲಿಯ ನಾಯಕತ್ವದಲ್ಲಿ ಮರಕ್ಕಾರ್ ನೌಕಾಪಡೆ ಪೋರ್ಚುಗೀಸರ ಬಂದರುಗಳಾಗಿದ್ದ ಗೋವ—ಕೊಚ್ಚಿ ನಡುವೆ ಸಂಪರ್ಕ ಕಡಿದುಹಾಕಿತು. ಪೋರ್ಚುಗೀಸರೂ ಇದರ ವಿರುದ್ಧ ಕ್ರಮ ಕೈಗೊಂಡು ಕಲ್ಲಿಕೋಟೆ ಮತ್ತು ಅರಬರ ನಡುವಿನ ವ್ಯಾಪಾರಕ್ಕೆ ಅಡ್ಡಿಯುಂಟು ಮಾಡಲು ಯತ್ನಿಸಿದರು. ಆಗ ಕಲ್ಲಿಕೋಟೆಯ ಅರಸ ಜಾಮೊರಿನನ ನೌಕಾ ತಂಡ ಸ್ವಲ್ಪ ಬಲಹೀನವಾಯಿತು.

ಮೂರನೆಯ ಕುಂಞಾಲಿಯ ಕಾಲದಲ್ಲಿ ಪುನಃ ಮರಕ್ಕಾರ್ ನೌಕಾತಂಡ ಪೋರ್ಚುಗೀಸರನ್ನು ಎದುರಿಸಿತು. 1564ರಲ್ಲಿ ಕಣ್ಣಾನೂರಿನಲ್ಲಿ, ಅನಂತರ ಭಟ್ಕಳದಲ್ಲಿ ಪೋರ್ಚುಗೀಸ್ ನೌಕಾಬಲಕ್ಕೆ ಬಲವಾದ ಪೆಟ್ಟು ಕೊಟ್ಟಿತು. 1569ರಲ್ಲಿ ಗೋವದಿಂದ ಬಂದ 36 ಹಡಗುಗಳನ್ನು ಒಳಗೊಂಡ ಪೋರ್ಚುಗೀಸ್ ನೌಕಾದಳವನ್ನು ಕೂಡ ಕುಂಞಾಲಿ ಭಗ್ನಗೊಳಿಸಿದ. ಅನಂತರ ದೀವ್ ಬಳಿ ನಡೆದ ಯುದ್ಧದಲ್ಲಿ ಅವನು ವಿಜಯ ಗಳಿಸಿದ. 1595ರಲ್ಲಿ ಕುಂಞಾಲಿ ಕಾಲವಾಗುವ ವರೆಗೆ ಸುಮಾರು ನಾಲ್ಕು ದಶಕಗಳ ಕಾಲ ಪೋರ್ಚುಗೀಸರು ಅನೇಕ ಬಾರಿ ನಷ್ಟ ಅನುಭವಿಸಿದರು.

ಮೂರನೆಯ ಕುಂಞಾಲಿಯ ಸಾಹಸದ ನೆನಪಿಗಾಗಿ ಮುಂಬಯಿಯಲ್ಲಿರುವ ಸ್ವತಂತ್ರ ಭಾರತದ ಒಂದು ನೌಕಾಸ್ವಾಸ್ಥ್ಯಕ್ಕೆ ಐಎನ್‌ಎಸ್ ' ಕುಂಞಾಲಿ 'ಎಂದು ಹೆಸರಿಡಲಾಗಿದೆ.

ಕುಂತಿ

ಕುಂತಿದೇಶದ ಅರಸು ಕುಂತಿಭೋಜ. ಇವನಿಗೆ ಮಕ್ಕಳಿರಲಿಲ್ಲ. ಶೂರಸೇನ ಮಹಾರಾಜನ ಮಗಳು ಅವನ ಸಾಕುಮಗಳಾದಳು, ಕುಂತಿಯಾದಳು.

ದೂರ್ವಾಸ ಮುನಿ ಒಂದು ವರ್ಷ ಕುಂತಿಭೋಜನ ಅರಮನೆಯಲ್ಲಿದ್ದಾಗ ಕುಂತಿ ಅವರ ಸೇವೆ ಮಾಡಿ ಅನುಗ್ರಹಕ್ಕೆ ಪಾತ್ರಳಾದಳು. ದೂರ್ವಾಸರು ಆಕೆಗೆ ಮಂತ್ರೋಪದೇಶ ಮಾಡಿ, ಇದರಿಂದ ಯಾವ ದೇವತೆಯನ್ನಾದರೂ ಪ್ರಸನ್ನಗೊಳಿಸಿ ಮಕ್ಕಳನ್ನು ಪಡೆಯಬಹುದು ಎಂದು ತಿಳಿಸಿದರು. [illegible] ಸೂರ್ಯನ ಅನುಗ್ರಹದಿಂದ ಒಬ್ಬ ಮಗನನ್ನು ಪಡೆದಳು.

ಕುಂತಿಯ ವಿವಾಹ ಹಸ್ತಿನಾಪುರದ ರಾಜ ಪಾಂಡುವಿನೊಡನೆ ಜರಗಿತು. ಮಾದ್ರಿ ಪಾಂಡುವಿನ ಕಿರಿಯ ರಾಣಿಯಾದಳು. ಕೆಲ ಕಾಲ ರಾಜ್ಯಭಾರ ಮಾಡಿದ ಮೇಲೆ ಪಾಂಡು ತನ್ನ ಪತ್ನಿಯರೊಡನೆ ಹಿಮಾಲಯದಲ್ಲಿ ಹಲವು ವರ್ಷ ಕಳೆದ. ತನಗೆ ಮಕ್ಕಳಾಗಲಿಲ್ಲವೆಂದು ಕೊರಗುತ್ತಿದ್ದ ಪಾಂಡು ಕುಂತಿಯಿಂದ ಮಂತ್ರೋಪದೇಶದ ವಿಚಾರ ತಿಳಿದು, ಅವರಿಂದ ಮಕ್ಕಳನ್ನು ಪಡೆಯಲು ಕುಂತಿ, ಮಾದ್ರಿಯರಿಗೆ ಸೂಚನೆಕೊಟ್ಟ. ಕುಂತಿಗೆ ಯುಧಿಷ್ಠಿರ, ಭೀಮ, ಅರ್ಜುನರೂ ಮಾದ್ರಿಗೆ ನಕುಲ, ಸಹದೇವರೂ ಜನಿಸಿದರು. ಪಾಂಡು ಮೃತನಾದಾಗ ಮಾದ್ರಿ ಸಹಗಮನ ಮಾಡಿದಳು.

ಐವರು ಮಕ್ಕಳೊಡನೆ ಕುಂತಿ ಹಸ್ತಿನಾಪುರಕ್ಕೆ ಹಿಂದಿರುಗಿದಳು. ಆಗಾಗ್ಗೆ ಕೌರವರ ಅಸೂಯೆಗೆ ತುತ್ತಾಗಿ ಪಾಂಡವರು ಅನೇಕ ಕಷ್ಟಗಳನ್ನು ಅನುಭವಿಸಬೇಕಾಯಿತು. ಸಹನೆ, ಧೈರ್ಯಗಳಿಂದ ಕುಂತಿ ಈ ಕಷ್ಟ ಪರಂಪರೆಗಳನ್ನು ಎದುರಿಸಿದಳು. ತನ್ನ ಮಕ್ಕಳು ವೀರರೆಂದು ಪ್ರಸಿದ್ಧರಾಗಿ ಇಂದ್ರಪ್ರಸ್ಥದಲ್ಲಿ ವೈಭವದಿಂದ ರಾಜ್ಯಭಾರ ಮಾಡಿದ್ದನ್ನು ಕಂಡಳು.

ಪಾಂಡವರು ವನವಾಸಕ್ಕೆ ಹೋಗಬೇಕಾಗಿ ಬಂದಾಗ ಅವರ ಸೂಚನೆಯಂತೆ, ಕಾಡಿಗೆ ಹೋಗದೆ ವಿದುರನೊಡನೆ ಇದ್ದಳು. ಶ್ರೀ ಕೃಷ್ಣ ತನ್ನ ಮಕ್ಕಳನ್ನು ಕಾಪಾಡುತ್ತಾನೆ ಎಂಬ ಅಚಲ ವಿಶ್ವಾಸ ಆಕೆಗೆ. ವನವಾಸದಿಂದ ಹಿಂದಿರುಗಿದ ಪಾಂಡವರಿಗೆ ಅರ್ಧ ರಾಜ್ಯ ಕೊಡಲು ಕೌರವರು ಒಪ್ಪದಿದ್ದಾಗ, ಅವಮಾನ ಸಹಿಸಿಕೊಂಡು ಸಂಧಿಗೆ ಯತ್ನಿಸುವುದಾದರೂ ಏಕೆ ? ಯುದ್ಧ ಮಾಡುವುದೇ ಸರಿ —ಎಂದು ಅವಳು ಭಾವಿಸಿದಳು.



ಸೂರ್ಯಾನುಗ್ರಹಕ್ಕಾಗಿ ಕುಂತಿಯ ಪ್ರಾರ್ಥನೆ

ಪಾಂಡವರ ವಿಜಯದಿಂದ ಕುಂತಿ ರಾಜಮಾತೆಯಾದಳು. ವೃದ್ಧರಾದ ಧೃತರಾಷ್ಟ್ರ, ಗಾಂಧಾರಿಯರು ಅರಣ್ಯವಾಸಿಗಳಾಗಿರಲು ಬಯಸಿ ಹೊರಟಾಗ ತಾನು ಅರಮನೆಯ ಸುಖವನ್ನು ಅನುಭವಿಸಿಕೊಂಡಿರಲು ಕುಂತಿ ಒಪ್ಪದೆ. ದುಃಖಿತರಾಗಿರುವ ಹಿರಿಯರ ಸೇವೆಯೇ ತನ್ನ ಕರ್ತವ್ಯವೆಂದು ಸಾರಿ,

ಅವರೊಡನೆ ಕಾಡಿಗೆ ಹೋದಳು. ಅಲ್ಲೇ ಕಾಳ್ಗಿಚ್ಚಿಗೆ ಸಿಕ್ಕಿ ತನ್ನ ಬಾಳು ಮುಗಿಸಿದಳು.

ನೋಡಿ : ಕರ್ಣ ; ಧರ್ಮರಾಜ ; ಪಾಂಡವರು

ಕುಂಭಕೋಣಂ

ಕಾವೇರಿ ತನ್ನ ನದೀಮುಖಜ ಭೂಮಿಯಲ್ಲಿ ಎರಡು ಕವಲುಗಳಾಗಿ ಹರಿಯುತ್ತದೆ. ಇವುಗಳ ನಡುವೆ ಇರುವ ಪಟ್ಟಣ ಕುಂಭಕೋಣಂ. ಇದು ತಂಜಾವೂರಿನಿಂದ 24 ಮೈಲು ದೂರದಲ್ಲಿದೆ.

ಪ್ರಳಯಕಾಲದಲ್ಲಿ ಮೂಲ ಪದಾರ್ಥವೆಲ್ಲ ನಾಶವಾದರೆ ಮತ್ತೆ ಸೃಷ್ಟಿ ಮಾಡುವ ಬಗೆ ಹೇಗೆ ಎಂಬ ಚಿಂತೆಯುಂಟಾಯಿತು ಬ್ರಹ್ಮನಿಗೆ. ಆಗ ಶಿವನ ಸಲಹೆಯಂತೆ ಅವನು ಮಣ್ಣನ್ನು ಅಮೃತ ಮತ್ತು ನೀರಿನೊಡನೆ ಕಲಸಿ ಒಂದು ಕುಂಭ ತಯಾರಿಸಿದ. ಮೇರು ಪರ್ವತದ ಮೇಲೆ ಅದನ್ನು ತೂಗಬಿಟ್ಟು ಪೂಜಿಸಿದ. ಪ್ರಳಯದ ಮಹಾಪೂರದಲ್ಲಿ ಈ ಕುಂಭವೂ ಸೆಳೆಯಲ್ಪಟ್ಟು, ಮಹಾಪೂರ ಇಳಿದಾಗ ಅದು ಒಂದೆಡೆ ನಿಂತಿತು. ಶಿವ ಕಿರಾತನಾಗಿ ಅದಕ್ಕೆ ಒಂದು ಬಾಣ ಹೊಡೆದ. ಕುಂಭ ಬಿರಿದು ಅಮೃತ ಸುರಿಯಿತು. ಆ ಕ್ಷೇತ್ರ ಕುಂಭಕೋಣಂ ಎನಿಸಿತು—ಇದು ಪುರಾಣ ಕಥೆ.

ಕುಂಭಕೋಣಂನಲ್ಲಿ ದ್ರಾವಿಡ ಶೈಲಿಯ ಕೆಲವು ದೇವಾಲಯಗಳಿವೆ. ಇಲ್ಲಿರುವ ಕುಂಭೇಶ್ವರ ದೇವಾಲಯದ ಗೋಪುರದ ಎತ್ತರ 128 ಅಡಿ. ಇಂಥದೇ ಬೃಹತ್ ಗೋಪುರವಿರುವ ಇನ್ನೊಂದು ದೇವಾಲಯ ಸಾರಂಗ ಪಾಣಿ –ಶಾರ್ಙಪಾಣಿ– ವಿಷ್ಣುವಿನದು. ಇದರ ಗೋಪುರ 147 ಅಡಿ ಎತ್ತರ. ಕುಂಭಕೋಣಂನಲ್ಲಿ ಒಂದು ಬ್ರಹ್ಮದೇವಾಲಯವೂ ಇದೆ.

ಕುಂಭಕೋಣಂ ಚೋಳರ ರಾಜಧಾನಿಯಾಗಿದ್ದಿತು. ಇಲ್ಲಿನ ನಾಗೇಶ್ವರವೇ ಮೊದಲಾದ ದೇವಾಲಯಗಳು ಆ ಕಾಲದವು. ನಾಗೇಶ್ವರ ದೇವಾಲಯದಲ್ಲಿ ಸೂರ್ಯನ ಗುಡಿಯಿದೆ. ವರ್ಷದ ಕೆಲವು ದಿನ ಸೂರ್ಯ ಕಿರಣಗಳು ಲಿಂಗದ ಮೇಲೆ ಬೀಳುವಂತೆ ಈ ಗುಡಿಯನ್ನು ಕಟ್ಟಲಾಗಿದೆ.

ಕುಂಭಕೋಣಂನ ಒಂದು ದೊಡ್ಡ ಆಕರ್ಷಣೆ ಇಲ್ಲಿನ ಮಹಾಮಾಘಂ ಸರೋವರ. ಬ್ರಹ್ಮನ ಕುಂಭ ಒಡೆದು ಅಮೃತ ಸುರಿದ ಸ್ಥಳ ಇದೆಂದೂ ಗಂಗೆಯ ನೀರು ಭೂಮಿಯೊಳಗೆ 1,200 ಮೈಲು ಹರಿದು ಬಂದು ಮಹಾಮಾಘಂ ತೀರ್ಥಕ್ಕೆ ಸೇರುತ್ತದೆಂದೂ ನಂಬಿಕೆ. 12 ವರ್ಷಗಳಿಗೊಮ್ಮೆ ಗುರುಚಂದ್ರರು ಮಖಾ ನಕ್ಷತ್ರದಲ್ಲಿ ಸೇರಿದಾಗ ಇಲ್ಲಿ ಮಹಾಮಾಘ ಮೇಳ ನಡೆಯುತ್ತದೆ. ಸರೋವರದ ಸುತ್ತಲೂ ಸುಂದರ ಮಂಟಪಗಳಿವೆ.

ಕುಂಭಕೋಣಂ ರೈಲು ಹಾಗೂ ರಸ್ತೆಗಳ ಸಂಧಿಸ್ಥಳ ; ಕೈಗಾರಿಕಾ ಕೇಂದ್ರ. ಅಕ್ಕಿ ಮತ್ತು ಕೊಬ್ಬರಿಎಣ್ಣೆ ಗಿರಣಿಗಳಿವೆ. ರೇಷ್ಮೆ ಸೀರೆ, ಹತ್ತಿ ಬಟ್ಟೆಗಳು, ಹಿತ್ತಾಳೆ, ತಾಮ್ರ ಪಾತ್ರೆಗಳ ತಯಾರಿಕೆಯುಂಟು. ಹಲವು ವಿದ್ಯಾಸಂಸ್ಥೆಗಳಿವೆ. ಈ ಪಟ್ಟಣದ ಜನಸಂಖ್ಯೆ 1,19,655.

ಮೊದಲು ಕಂಚಿಯಲ್ಲಿದ್ದ ಕಾಮಕೋಟಿ ಪೀಠವೆಂಬ ಅದ್ವೈತಮತದ ಮಠವನ್ನು 1743ರಲ್ಲಿ ಕುಂಭಕೋಣಂಗೆ ಸ್ಥಳಾಂತರಿಸಲಾಯಿತು.

ಕಾವೇರಿ ಕವಲುಗಳ ನಡುವಣ ಕುಂಭಕೋಣಂ



ಕುಂಭಮೇಳ

ದೇವತೆಗಳು ಮತ್ತು ದಾನವರು ಕ್ಷೀರ ಸಮುದ್ರವನ್ನು ಕಡೆಯುತ್ತಿದ್ದಾಗ ಅಮೃತ ಉದ್ಭವಿಸಿತು. ರಾಕ್ಷಸರು ಅಮೃತ ತುಂಬಿದ್ದ ಕುಂಭವನ್ನು ಎತ್ತಿಕೊಂಡು ಓಡತೊಡಗಿದಾಗ ದೇವತೆಗಳು ಅವರನ್ನು ಬೆನ್ನಟ್ಟಿದರು. ಹೀಗೆ ಓಡುತ್ತಿರುವಾಗ ಅಮೃತದ ಹನಿಗಳು ಭೂಮಿಯ ಮೇಲೆ ನಾಲ್ಕು ಕಡೆ ಬಿದ್ದುವು. ಹಾಗೆ ಅಮೃತ ಬಿದ್ದ ಸ್ಥಳಗಳಲ್ಲಿ ಕುಂಭಮೇಳ ನಡೆಯುತ್ತದೆ—ಇದೊಂದು ಹಳೆಯ ನಂಬಿಕೆ.

ಗುರು ಕುಂಭರಾಶಿಯಲ್ಲಿ ಮತ್ತು ರವಿ ಮೇಷರಾಶಿಯಲ್ಲಿ ಏಕಕಾಲದಲ್ಲಿ ಇರುವಾಗ ಪ್ರಯಾಗದಲ್ಲಿ ಕುಂಭಮೇಳ ಉತ್ಸವ ನಡೆಯುತ್ತದೆ. ಹನ್ನೆರಡು ವರ್ಷಕ್ಕೊಮ್ಮೆ ನಡೆಯುವ ಈ ಉತ್ಸವ, ಗುರು, ಸಿಂಹ, ಕರ್ಕಾಟಕ ಮತ್ತು ಕುಂಭರಾಶಿಗಳಲ್ಲಿರುವಾಗ ಅನುಕ್ರಮವಾಗಿ ನಾಸಿಕ, ಉಜ್ಜಯಿನಿ, ಹರ್ದ್ವಾರಗಳಲ್ಲಿ ನಡೆಯುತ್ತದೆ. ಇಂಥ ಪರ್ವಕಾಲದಲ್ಲಿ ಆಯಾ ಕ್ಷೇತ್ರದ ಪವಿತ್ರ ತೀರ್ಥದಲ್ಲಿ ಸ್ನಾನ ಮಾಡುವುದು ಪುಣ್ಯಕರ ಎಂದು ನಂಬಿಕೆ. ಅಂದು ಸನ್ಯಾಸಿಗಳು, ಬೈರಾಗಿಗಳಲ್ಲದೆ ಲಕ್ಷಾಂತರ ಜನರೂ ಪವಿತ್ರ ತೀರ್ಥದಲ್ಲಿ ಸ್ನಾನ ಮಾಡುತ್ತಾರೆ.

ಸೂರ್ಯ ಕುಂಭರಾಶಿ ಪ್ರವೇಶಿಸಿದಾಗ ಉತ್ತರ ಭಾರತದಲ್ಲಿ ಬಿತ್ತನೆ ಹಬ್ಬ ಆಚರಿಸುತ್ತಿದ್ದರೆಂದು ತಿಳಿದುಬರುತ್ತದೆ. ಮಡಕೆಯಲ್ಲಿ ಬಿತ್ತನೆ ಮಾಡುವ ಧಾನ್ಯವನ್ನು ತುಂಬಿ, ಸೂರ್ಯ ಕುಂಭರಾಶಿ ಪ್ರವೇಶಿಸುವ ಸಮಯದಲ್ಲಿ ಅದನ್ನು ನೀರಿನಲ್ಲಿ ಅದ್ದಿ ತೆಗೆದು, ಉಳಿದ ಬಿತ್ತನೆ ಧಾನ್ಯದೊಡನೆ ಬೆರೆಸಿ ಬಿತ್ತಿದರೆ ಫಸಲು ಚೆನ್ನಾಗಿ ಆಗುವುದೆಂದು ಭಾವನೆ.

ಕುಂಭಮೇಳ 7ನೆಯ ಶತಮಾನಕ್ಕೂ ಮುಂಚಿನಿಂದ ಆಚರಣೆಯಲ್ಲಿತ್ತು. ಚೀನೀ ಯಾತ್ರಿಕ ಹ್ಯೂಯೆನ್ ತ್ಸಾಂಗನನ್ನು ಶ್ರೀಹರ್ಷ ಪ್ರಯಾಗದ ಕುಂಭಮೇಳ ಉತ್ಸವಕ್ಕೆ ಕರೆದುಕೊಂಡು ಬಂದಿದ್ದನೆಂದು ಉಲ್ಲೇಖವಿದೆ. ಆಗ ಶ್ರೀಹರ್ಷ ಎಲ್ಲ ಪಂಥಗಳ ಪಂಡಿತರಿಗೂ ವಿರಾಗಿಗಳಿಗೂ ಉದಾರವಾಗಿ ದಾನ ಮಾಡಿದ.

ಶಂಕರಾಚಾರ್ಯರು ತಮ್ಮ ದಿಗ್ವಿಜಯ ಕಾಲದಲ್ಲಿ ಜರಗಿದ ಕುಂಭಮೇಳದಲ್ಲಿ ಭಾಗವಹಿಸಿದ್ದರೆಂದು ಪ್ರತೀತಿ.



ಪ್ರಯಾಗದಲ್ಲ ಕುಂಭಮೇಳ

ಕುಂಭಮೇಳ ಕಾಲದಲ್ಲಿ ಹಿಂದೂಧರ್ಮ ಸಮ್ಮೇಳನಗಳು ನಡೆಯುತ್ತವೆ. ಆಧ್ಯಾತ್ಮಿಕ ವಿಷಯಗಳಿಗೆ ಸಂಬಂಧಿಸಿದ ವಿವಿಧ ಪಂಥಗಳವರು ವಿಚಾರ ವಿನಿಮಯ ನಡೆಸುತ್ತಾರೆ.

ಕುಂಭಮೇಳದ ಪ್ರತಿರೂಪ ಎಂಬಂತೆ ದಕ್ಷಿಣ ಭಾರತದ ಕುಂಭಕೋಣಂನಲ್ಲಿ ಮಹಾಮಾಘಂ ಉತ್ಸವ ನಡೆಯುತ್ತದೆ.

ಕುಟುಂಬ ಯೋಜನೆ

ನೋಡಿ : ಸಂಪುಟ ೨

ಕುತುಬ್ ಮಿನಾರ್

ದೆಹಲಿಯ ಒಂದು ಹೆಗ್ಗುರುತು ಕುತುಬ್ ಮಿನಾರ್.

ನವದೆಹಲಿಯಿಂದ ೮ ಮೈಲು ದಕ್ಷಿಣಕ್ಕಿದೆ. ಕೆಂಪು ಮರಳುಗಲ್ಲು ಮತ್ತು ಬಿಳಿ ಅಮೃತ ಶಿಲೆಯ ಹೊದಿಕೆಗಳಿಂದ ಕೂಡಿದ 238 ಅಡಿ ಎತ್ತರದ ಭವ್ಯ ಗೋಪುರ ಇದು. ಇಡೀ ಜಗತ್ತಿನಲ್ಲೇ ಅತ್ಯಂತ ಪರಿಪೂರ್ಣ ರೂಪದ ಗೋಪುರವೆಂಬ ಖ್ಯಾತಿ ಇದಕ್ಕಿದೆ. ನೆಲಮಟ್ಟದಲ್ಲಿ 47 ಅಡಿ ವ್ಯಾಸ: ತುದಿಯಲ್ಲಿ 9 ಅಡಿ. ಕುತುಬ್‌ಮಿನಾರ್‌ಗೆ ಐದು ಅಂತಸ್ತುಗಳಿವೆ. ಪ್ರತಿ ಅಂತಸ್ತಿನಲ್ಲೂ ಸುಂದರ ಶಿಲ್ಪ ಕೆಲಸದಿಂದ ಅಲಂಕೃತವಾದ ಮೊಗಸಾಲೆ. ಮಿನಾರ್‌ನ ತುದಿಯನ್ನು ತಲಪಲು 376 ಮೆಟ್ಟಲು ಏರಬೇಕು.

ಇದು ಮೊದಲಿಗೆ ಹಿಂದುಗಳಿಂದ ಕಟ್ಟಲ್ಪಟ್ಟ ಗೋಪುರವಾಗಿತ್ತು; ಸಮುದ್ರಗುಪ್ತನ ಮಗನಾದ ಎರಡನೆಯ ಚಂದ್ರಗುಪ್ತ ಇದನ್ನು ಕಟ್ಟಿಸಿರಬೇಕು; ಇದು ಒಂದು ವೀಕ್ಷಣಾಲಯವಾಗಿತ್ತು –ಎಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಸುಮಾರು 1200ರ ಹೊತ್ತಿಗೆ ದೆಹಲಿಯ ಸುಲ್ತಾನ ಕುತುಬುದ್ದೀನ್ ಐಬಕ್ ಇದರಲ್ಲಿ ಬದಲಾವಣೆಗಳನ್ನು ಮಾಡಲು ಆರಂಭಿಸಿದ. ಈ ಕೆಲಸ 1220ರಲ್ಲಿ ಇಲ್ತುತ್‌ಮಿಷ್‌ನಿಂದ ಪೂರ್ಣವಾಯಿತು. ಕುತುಬ್ ಮಿನಾರ್ ಎಂದು ಹೆಸರು ಪಡೆಯಿತು. 1368ರಲ್ಲಿ ಇದು ಸಿಡಿಲು ಹೊಡೆತಕ್ಕೆ ಸಿಕ್ಕಿ ಭಗ್ನವಾದಾಗ ಫಿರೋಜ್‌ಷಾ ಇದರ ಪುನರ್ನಿರ್ಮಾಣ ಮಾಡಿದ. 1782 ಮತ್ತು 1803ರಲ್ಲಿ ಭೂಕಂಪಗಳಿಂದ ಇದಕ್ಕೆ ಆದ ನಷ್ಟವನ್ನು 1829ರಲ್ಲಿ ಸರಿಪಡಿಸಲಾಯಿತು. ಈಗ ಕುತುಬ್ ಮಿನಾರಿನ ತುದಿ ಆಗ್ನೇಯ ದಿಕ್ಕಿಗೆ 24 ಅಂಗುಲಗಳಷ್ಟು ವಾಲಿದೆ ಎಂದು ಅಂದಾಜು ಮಾಡಿದ್ದಾರೆ.



238 ಅಡಿ ಎತ್ತರದ ಗೋಪುರ

ಕುತುಬ್‌ಮಿನಾರ್‌ನ ಪಕ್ಕದಲ್ಲಿ ಕುವತ್– ಉಲ್– ಇಸ್ಲಾಂ ಎಂಬ ದೊಡ್ಡ ಮಸೀದಿಯಿದೆ. ಇದು ನಿಂತಿರುವುದು ಹಿಂದೆ ಒಂದು ದೇವಸ್ಥಾನ ಇದ್ದ ಸ್ಥಳದಲ್ಲಿ. 27 ದೇವಸ್ಥಾನಗಳನ್ನು ಕೆಡವಿದ್ದರಿಂದ ದೊರೆತ ಸಾಮಗ್ರಿಗಳನ್ನು ಉಪಯೋಗಿಸಿ ಇದನ್ನು ಕಟ್ಟಲಾಯಿತು ಎಂಬ ಬಗೆಗೆ ಉಲ್ಲೇಖಗಳಿವೆ. ಇದರಿಂದ ಮಸೀದಿಗೆ ಸ್ವಲ್ಪ ಮಟ್ಟಿಗೆ ಹಿಂದೂ ವಾಸ್ತುಶಿಲ್ಪದ ಛಾಯೆ ಬಂದಿದೆ.

4ನೆಯ ಶತಮಾನದ ಭಾರತೀಯರಿಗೆ ಲೋಹವಿಜ್ಞಾನವನ್ನು ಕುರಿತು ಇದ್ದ ಜ್ಞಾನದ ಕುರುಹಾಗಿ ಇದೇ ಆವರಣದಲ್ಲಿ ಒಂದು ಕಬ್ಬಿಣದ ಕಂಬವಿದೆ: ಎತ್ತರ ಸುಮಾರು 24 ಅಡಿ. ವ್ಯಾಸ 16 ಅಂಗುಲ, ತೂಕ ಆರು ಟನ್. ಈ ಕಂಬವನ್ನು ನಿರ್ಮಿಸಿ 16 ಶತಮಾನ ಕಳೆದಿದ್ದರೂ ಮಳೆ–ಬಿಸಿಲು. ಗಾಳಿ ಹೊಡೆತಕ್ಕೆ ಗುರಿಯಾಗಿದ್ದರೂ ಸ್ವಲ್ಪವಾದರೂ ಇದಕ್ಕೆ ತುಕ್ಕು ಹಿಡಿದಿಲ್ಲ. ಇದರ ಮೇಲೆ ಚಂದ್ರಗುಪ್ತ ವಿಕ್ರಮಾದಿತ್ಯನ (ಸುಮಾರು 380–413) ವಿಜಯಗಳನ್ನು ಕುರಿತು ಕೆತ್ತಿರುವ ಶಾಸನಗಳಿವೆ. ಇವೂ ಮಾಸಿಲ್ಲ.

ಕುತುಬ್ ಷಾಹಿ

ಬಹಮನಿ ಸುಲ್ತಾನರ ಕಾಲದಲ್ಲಿ ಅವರ ಮಂತ್ರಿ ಮಹಮ್ಮದ್ ಗವಾನನು ಕುಲೀ ಕುತುಬ್ ಎಂಬವನನ್ನು ವಾರಂಗಲ್ ಪ್ರದೇಶದ ಮಾಂಡಲಿಕನಾಗಿ ನೇಮಿಸಿದ್ದ. ಆತ 1512ರ ಸುಮಾರಿಗೆ ಸ್ವತಂತ್ರನಾಗಿ ಕುತುಬ್‌ಷಾಹಿ ರಾಜವಂಶವನ್ನು ಸ್ಥಾಪಿಸಿದ. ಇವನ ರಾಜಧಾನಿ ಗೋಲ್ಕೊಂಡ.

ಕುಲೀ ಕುತುಬ್ ದೀರ್ಘಕಾಲ ಆಳಿ ರಾಜ್ಯವನ್ನು ವಿಸ್ತರಿಸಿದ. ಇವನ ಅನಂತರ ಇವನ ಮಕ್ಕಳಾದ ಜಮ್ ಷಿದ್ (1543–50) ಮತ್ತು ಇಬ್ರಾಹಿಂ (1550–81) ಆಳಿದರು.

ವಿಜಯನಗರದ ರಾಮರಾಯನ ನೆರವಿನಿಂದ ಪಟ್ಟವೇರಿದ ಇಬ್ರಾಹಿಂ ಮುಂದೆ ಆತನಿಗೆ ದ್ರೋಹ ಬಗೆದ. 1565ರಲ್ಲಿ ರಕ್ಕಸತಂಗಡಿ ಯುದ್ಧದಲ್ಲಿ ಆತನಿಗಿದಿರಾಗಿ ಹೋರಾಡಿದ.

ಇಬ್ರಾಹಿಮನ ಮಗ ಕುಲೀ ಕುತುಬ್ ಷಾ 1589ರಲ್ಲಿ ಆಧುನಿಕ ಹೈದರಾಬಾದ್ ನಗರವನ್ನು ನಿರ್ಮಿಸಿದ.

ಹದಿನೇಳನೆಯ ಶತಮಾನದಲ್ಲಿ ಕುತುಬ್‌ಷಾಹಿ ಅರಸರು ಮೊಘಲರ ಜೊತೆ ದೀರ್ಘಕಾಲ ಹೋರಾಟ ನಡೆಸಬೇಕಾಯಿತು. 1687ರಲ್ಲಿ ಔರಂಗಜೇಬ್ ಗೋಲ್ಕೊಂಡವನ್ನು ವಶಪಡಿಸಿಕೊಂಡು ಈ ರಾಜವಂಶವನ್ನು ಕೊನೆಗಾಣಿಸಿದ: ಕೊನೆಯ ದೊರೆ ಅಬುಲ್ ಹಸನ್ (1672–87) ನನ್ನು ದೌಲತಾಬಾದ್‌ಗೆ ಕಳುಹಿಸಿ ವರ್ಷಾಶನ ನೀಡಿದ. ಮಿರ್ ಜುಮ್ಲಾ ಎಂಬ ಕುತುಬ್ ಷಾಹಿಗಳ ಸೇನಾನಿ ಮೊಘಲರ ಸೇವೆಗೆ ಸೇರಿ ಖ್ಯಾತನಾದ.

ಕುದುರೆಮುಖ

ಪಶ್ಚಿಮ ಘಟ್ಟದ ಸಾಲಿನಲ್ಲಿ ಚಿಕ್ಕಮಗಳೂರು ಜಿಲ್ಲೆಯ ನೈಋತ್ಯ ಅಂಚಿನಲ್ಲಿರುವ ಪರ್ವತಭಾಗ ಕುದುರೆಮುಖ. ಪಶ್ಚಿಮ ಕರಾವಳಿಯ ದಕ್ಷಿಣ ಕನ್ನಡ ಜಿಲ್ಲೆಯ ಕಡೆಯಿಂದ ನೋಡಿದಾಗ ಇದು ಕುದುರೆಯ ಮುಖದ ಆಕಾರದಲ್ಲಿ ಕಾಣಿಸುತ್ತದೆ.

ಕುದುರೆಮುಖ ಶಿಖರ ಸಮುದ್ರ ಮಟ್ಟದಿಂದ 6215 ಅಡಿಗಿಂತ ಎತ್ತರವಿದೆ. ಇದು ಕರ್ನಾಟಕ ರಾಜ್ಯದ ಅತ್ಯುನ್ನತ ಶಿಖರಗಳಲ್ಲಿ ಎರಡನೆಯದು. ರಾಜ್ಯದ ಪರ್ವತಾರೋಹಣ ಅಭ್ಯಾಸಿಗಳಿಗೆ ಈ ಶಿಖರವನ್ನೇರುವುದು ಆರೋಹಣದ ರಂಗಪ್ರವೇಶ ಇದ್ದ ಹಾಗೆ.

ಕುದುರೆಮುಖ ಶಿಖರವಿರುವ ಪರ್ವತ ಪ್ರದೇಶದಲ್ಲಿ ಪ್ರಕೃತಿ ಸಂಪತ್ತು ಹೇರಳವಾಗಿದೆ. ಈ ಪ್ರದೇಶದಲ್ಲಿ ಕಬ್ಬಿಣದ ಅದಿರಿನ ದೊಡ್ಡ ನಿಕ್ಷೇಪವಿದೆ. ರಾಷ್ಟ್ರೀಯ ಖನಿಜ ಅಭಿವೃದ್ಧಿ ಸಂಸ್ಥೆ (ಎನ್.ಎಂ.ಡಿ.ಸಿ. – ನ್ಯಾಷನಲ್ ಮಿನರಲ್ ಡೆವೆಲಪ್‌ಮೆಂಟ್ ಕಾರ್ಪೊರೇಷನ್) ಕುದುರೆಮುಖ ಪ್ರದೇಶದಲ್ಲಿ ವ್ಯಾಪಕ ಸಮೀಕ್ಷೆ ನಡೆಸಿದೆ.

ಕುದುರೆಮುಖ ಶ್ರೇಣಿಯಲ್ಲಿ 10 ಕೋಟಿ ಟನ್ ವಿಶಿಷ್ಟ ಕಾಂತಾ ಕರ್ಣಶಿಲೆಯ ಕಬ್ಬಿಣ ಅದಿರು ದೊರೆಯುತ್ತದೆಯೆಂದು ಅಂದಾಜು ಮಾಡಲಾಗಿದೆ.

ಕುಬೇರ

ಬ್ರಹ್ಮನನ್ನು ಕುರಿತು ಆತ ಸಾವಿರ ವರ್ಷ ತಪಸ್ಸು ಮಾಡಿದ. ಅಮರತ್ವ ಕೊಡುವುದಲ್ಲದೆ, ಜಗತ್ತಿನ ಪಾಲಕರಲ್ಲಿ ಒಬ್ಬನಾಗಿ ಮಾಡುವುದಾಗಿ ಬ್ರಹ್ಮ ವಚನ ಕೊಟ್ಟ. ಸ್ವಯಂಚಾಲಿತವಾದ, ಆಕಾಶದಲ್ಲಿ ಚಲಿಸುವಂಥ ಪುಷ್ಪಕ ವಿಮಾನವನ್ನೂ ಆತನಿಗೆ ನೀಡಿದ.

ಈತನೇ ನವನಿಧಿಗಳಿಗೆ ಒಡೆಯನೂ ಉತ್ತರ ದಿಕ್ಪಾಲಕನೂ ಆದ ಕುಬೇರ.

—ಈ ಕುಬೇರನ ಪ್ರಸ್ತಾಪ 'ರಾಮಾಯಣ'ದಲ್ಲಿ ಮತ್ತು 'ಮಹಾಭಾರತ'ದಲ್ಲಿ ಬರುತ್ತದೆ.

ವಿಶ್ರವಸ ಮತ್ತು ಇಲಬಿಲೆಯರ ಮಗ ಕುಬೇರ. ಇವನನ್ನು ಸೋಮ ಎಂತಲೂ ಕರೆಯುತ್ತಾರೆ. ಉತ್ತರ ದಿಕ್ಕನ್ನು ಸೌಮ್ಯ ಎನ್ನುವುದು ಈ ಕಾರಣದಿಂದ. ರಾವಣ ಮತ್ತು ಕುಂಭಕರ್ಣ ಇವನ ಮಲಸೋದರರು. ಇವನ ತಪಸ್ಸಿನಿಂದ ಈಶ್ವರ ಪ್ರೀತನಾಗಿ ಲಂಕೆಗೆ ಕುಬೇರನನ್ನು ಅಧಿಪತಿಯಾಗಿ ಮಾಡಿದ. ಆದರೆ ಲಂಕಾಧಿಪತ್ಯವನ್ನು ರಾವಣ ಇವನಿಂದ ಕಿತ್ತುಕೊಂಡ. ಪುಷ್ಪಕವೂ ಅವನ ಪಾಲಾಯಿತು. ಮತ್ತೆ ಕೈಲಾಸ ಪರ್ವತದಲ್ಲಿ ಅಲಕಾನಗರಿ ಮಾಡಿಕೊಂಡು ಇರಲು ಶಿವ ಸಮ್ಮತಿ ಕೊಟ್ಟ. ಕುಬೇರ ಯಕ್ಷರ ಒಡೆಯನಾದ.

ಶ್ವೇತವರ್ಣ, 8 ಹಲ್ಲು, 3 ಕಾಲು ಮತ್ತು ಆಭರಣಗಳಿಂದ ಅಲಂಕೃತವಾದ ವಿಕಾರದೇಹದವನೆಂದು ಕುಬೇರ ಸಾಮಾನ್ಯವಾಗಿ ಚಿತ್ರಿತನಾಗಿದ್ದಾನೆ.

ಇಂದ್ರಕೀಲ ಪರ್ವತದಲ್ಲಿ ಅರ್ಜುನ ತಪಸ್ಸಿನಲ್ಲಿ ಮಗ್ನನಾಗಿದ್ದಾಗ ಕುಬೇರ ಅವನಿಗೆ ದಿವ್ಯ ಅಸ್ತ್ರಗಳನ್ನು ಕೊಟ್ಟ ; ಭೀಮ ಸೌಗಂಧಿಕಾ ಪುಷ್ಪವನ್ನು ತರಲು ಬಂದಾಗ, ಕುಬೇರನ ಅನುಚರರೊಡನೆ ಸೆಣಸಿ ಅವರನ್ನು ಕೊಂದ : ಕುಬೇರ ಭೀಮನಿಗೆ ಸೌಗಂಧಿಕಾಪುಷ್ಪವನ್ನು ಕೊಟ್ಟು ಕಳುಹಿಸಿದ — ಎಂಬ ಪ್ರಸ್ತಾಪ ಮಹಾಭಾರತದಲ್ಲಿದೆ.

ಕುಮಾರನ್ ಆಶಾನ್

ಸ್ವಾತಂತ್ರ್ಯವಿಲ್ಲದೆ ಅಮೃತವಿಲ್ಲ
ಸ್ವಾತಂತ್ರ್ಯವಿಲ್ಲದೆ ಜೀವನವೇ ಇಲ್ಲ
ಬಂಧನ ಸಜ್ಜನರಿಗೆ
ಭಯಾನಕ, ಸಾವಿಗಿಂತ

ಇದು ಮಲಯಾಳಂ ಕವಿ ಕುಮಾರನ್ ಆಶಾನ್‌ರ ಕವನವೊಂದರ ಸಾಲುಗಳು. ಆಧುನಿಕ ಮಲಯಾಳಂ ಕಾವ್ಯದ ನಿರ್ಮಾಪಕ, ಆಶಾನ್.

ಕುಮಾರನ್ 1873ರಲ್ಲಿ ತಿರುವನಂತಪುರದ ಬಳಿ ಕಯಿಕ್ಕಾರ ಹಳ್ಳಿಯಲ್ಲಿ ಬಡ 'ಎಳವ' ಕುಟುಂಬದಲ್ಲಿ ಜನಿಸಿದರು. ಅವರು ಶಾಲೆಯ ಮೆಟ್ಟಲೇರಲಿಲ್ಲ. ಮನೆಯೋ ಶಾಲೆಯಾಯಿತು. ಸಂಸ್ಕೃತ, ಮಲಯಾಳಂ ಕಲಿತರು. 17ನೆಯ ವಯಸ್ಸಿನಲ್ಲಿ ನಡೆದ ನಾರಾಯಣ ಗುರು (1854–1928) ಭೇಟಿ ಅವರ ಜೀವನದ ಮಾರ್ಗವನ್ನೇ ಬದಲಿಸಿತು. ಕುಮಾರನ್ ಅವರೊಡನೆ 2 ವರ್ಷ ಇದ್ದರು. ಗುರು ಇವರನ್ನು ವಿದ್ಯಾಭ್ಯಾಸಕ್ಕಾಗಿ ಬೆಂಗಳೂರು, ಮದರಾಸು, ಕಲ್ಕತ್ತೆಗಳಿಗೆ ಕಳುಹಿಸಿದರು. ಕುಮಾರನ್ ಸಂಸ್ಕೃತ ಹಾಗೂ ಹಿಂದೂ ತತ್ತ್ವಜ್ಞಾನ ಅಭ್ಯಾಸ ಮಾಡಿದರು. ಈ ಕಾಲದಲ್ಲೇ ಇಂಗ್ಲಿಷ್ ಭಾಷೆ ಸಾಹಿತ್ಯಗಳನ್ನೂ ಅಭ್ಯಸಿಸಿದರು.



ಆಧುನಿಕತೆ : ಆಶಾನ್

ಅವರನ್ನು ಜನ ಕುಮಾರನ್ ಆಶಾನ್ ಎಂದು ಕರೆದರು. ಆಶಾನ್ ಎಂದರೆ ಉಪಾಧ್ಯಾಯ ಎಂದರ್ಥ.

ಅವರು 1900ರಲ್ಲಿ ಕೇರಳಕ್ಕೆ ಹಿಂದಿರುಗಿ ಗುರುವಿಗೆ ಸಹಾಯಕರಾಗಿ ನಿಂತರು. 1903ರಲ್ಲಿ 'ಶ್ರೀ ನಾರಾಯಣ ಧರ್ಮ ಪರಿಪಾಲನ ಯೋಗಂ' ಸಂಸ್ಥೆ ಆರಂಭವಾದಾಗ ಅದರ ಕಾರ್ಯದರ್ಶಿಯಾಗಿ ಕುಮಾರನ್ ಸಾರ್ವಜನಿಕ ಕ್ಷೇತ್ರಕ್ಕೆ ಕಾಲಿಟ್ಟರು. ಗುರುಗಳ ಸಂದೇಶವನ್ನು ಹರಡುವುದು ಸಂಘದ ಉದ್ದೇಶ. ಭಾಷಣ, ಸಂಚಾರ, ಸಂಘಟನಾ ಕೆಲಸಗಳಲ್ಲಿ ಆಶಾನ್ 16 ವರ್ಷ ಕಳೆದರು. ಇವರು 'ವಿವೇಕೋದಯಂ' ಪತ್ರಿಕೆಯ ಸಂಪಾದಕರಾಗಿದ್ದರು. 1913ರಲ್ಲಿ ತಿರುವಾಂಕೂರು ಶಾಸನಸಭೆಯಲ್ಲಿ ಎಳವ ಪಂಗಡದ ನಾಮಕರಣ ಸದಸ್ಯರಾದರು.

1918ರಲ್ಲಿ ಕುಮಾರನ್‌ರ ವಿವಾಹವಾಯಿತು. ಅನಂತರ 1920ರಲ್ಲಿ ಸಂಘದ ಕಾರ್ಯದರ್ಶಿ ಕೆಲಸವನ್ನು ಬಿಟ್ಟುಕೊಟ್ಟು, ತೋಣಕ್ಕಲ್ ಎಂಬಲ್ಲಿ ಗುಡಿಸಲು ಕಟ್ಟಿಕೊಂಡು ಇರತೊಡಗಿದರು. ದೋಣಿ ದುರಂತದಲ್ಲಿ ಕುಮಾರನ್ 1924 ಜನವರಿ 16ರಂದು ನಿಧನರಾದರು. ಅವರ ಸಮಾಧಿ ಇರುವ ಸ್ಥಳವನ್ನು ಕುಮಾರಕೋಡಿ ಎನ್ನುತ್ತಾರೆ.

1907ರಲ್ಲಿ ಪ್ರಕಟವಾದ 'ಬಿದ್ದ ಹೂ' ಎಂಬ ಹೊಸ ಜಾಡಿನ ಕವಿತೆ ಅವರಿಗೆ ಪ್ರಸಿದ್ಧಿ ತಂದುಕೊಟ್ಟಿತು. ಮಾನವನ ಬದುಕಿನ [illegible] ಮತ್ತು ಬದುಕಿನ ಅವಿಭಾಜ್ಯ ಅಂಗವಾದ ದುಃಖವನ್ನು ಹೂವಿನ ಸಂಕೇತದ ಮೂಲಕ ನಿರೂಪಿಸಿದ್ದಾರೆ. 'ಸೀತೆಯ ಚಿಂತನೆ', 'ವಿಲಾಪ', 'ನಳಿನಿ', 'ಲೀಲಾ', 'ದುರವಸ್ಥಾ', 'ಚಂಡಾಲ ಭಿಕ್ಷುಕಿ' ಮತ್ತು 'ಕರುಣ' ಅವರ ಇತರ ಕೃತಿಗಳು. ಎಡ್ವಿನ್ ಅರ್ನಾಲ್ಡರ 'ಲೈಟ್ ಆಫ್ ಏಷ್ಯ'ದ ಸ್ವಲ್ಪ ಭಾಗವನ್ನು ಇವರು ಮಲಯಾಳಂ ಭಾಷೆಗೆ ಅನುವಾದ ಮಾಡಿದ್ದಾರೆ.

ಇವರನ್ನು ಅನುರಾಗದ ಕವಿ ಎನ್ನುತ್ತಾರೆ. ಸಾಮಾಜಿಕ ಸ್ವಾತಂತ್ರ್ಯ ಅವರ ಕಾವ್ಯಗಳ ಪ್ರಧಾನ ವಸ್ತು. ವ್ಯಕ್ತಿಯ ಗೌರವ, ಸಾಮಾಜಿಕ ಸಮಾನತೆ ಮತ್ತು ಮಾನವ ಭ್ರಾತೃತ್ವವನ್ನು ಕುರಿತು ಭಾವನಾಮಯವಾಗಿ ಬರೆದಿದ್ದಾರೆ.

ಇವರ ಸಮಕಾಲೀನ ಕವಿಗಳು ವಳ್ಳತ್ತೋಳ್ ನಾರಾಯಣ ಮೆನನ್, ಉಳ್ಳೂರ್ ಪರಮೇಶ್ವರ ಅಯ್ಯರ್ ಮತ್ತು ಬಾಲಕೃಷ್ಣ ಪಣಿಕ್ಕರ್.

ತೋಣಕ್ಕಲ್ಲಿನ ಇವರ ಮನೆಯನ್ನು ಸರಕಾರದವರು 1966ರಲ್ಲಿ ಸ್ಮಾರಕ ಭವನವಾಗಿ ಮಾಡಿದರು. ಇವರ ಜನ್ಮಸ್ಥಳದಲ್ಲೂ ಒಂದು ಸ್ಮಾರಕ ಕಟ್ಟಡವಿದೆ.

ಕುಮಾರನ್ ಆಶಾನ್‌ರ [illegible] 1873ರಲ್ಲಿ [illegible]
[illegible] : [illegible] : [illegible]

ಕುಮಾರ ರಾಮ

ದೆಹಲಿಯ ಸುಲ್ತಾನ ಮಹಮದ್ ಬಿನ್ ತುಘಲಕ್ ಕರ್ನಾಟಕದ ಗಂಗಾವತಿಯ ಬಳಿ ಇರುವ ಕುಮ್ಮಟದುರ್ಗದ ಅರಸ ಕಂಪಿಲನನ್ನು ನಾಶ ಮಾಡಬೇಕೆಂದು ಸಂಕಲ್ಪಿಸಿದ. ಇದನ್ನು ಹೇಗೆ ಸಾಧಿಸಬೇಕೆಂದು ನಿರ್ಧರಿಸಲು ಮಂತ್ರಾಲೋಚನಾ ಸಭೆ ನಡೆಯಿತು. ಸೈನ್ಯವನ್ನು ಕೊಟ್ಟರೆ ತಾನು ಕಂಪಿಲನ ಪುತ್ರ ಕುಮಾರ ರಾಮನ ತಲೆಯನ್ನು ತಂದು ಒಪ್ಪಿಸುವೆನೆಂದು ಮಾತಂಗಿ ಎಂಬವಳು ಶಪಥ ಮಾಡಿದಳು.

ಸುಲ್ತಾನ ಆಕೆಯೊಡನೆ ಭಾರಿ ಸೈನ್ಯವನ್ನು ಕಳುಹಿಸಿದ. ಕುಮಾರ ರಾಮನ ಪೌರುಷದೆದುರು ಶತ್ರುಗಳು ತತ್ತರಿಸಿದರು. ಮಾತಂಗಿ ತಾನೇ ಪುರುಷವೇಷ ಧರಿಸಿ ರಣರಂಗಕ್ಕೆ ನಡೆದಳು. ಕುಮಾರ ರಾಮನನ್ನೇ ಅರಸುತ್ತ ಬಂದ ಮಾತಂಗಿಗೂ ಕುಮಾರ ರಾಮನಿಗೂ ಕೆಲ ಕಾಲ ಭಯಂಕರ ಹೋರಾಟ ನಡೆಯಿತು. ತಾನು ಪರಸ್ತ್ರೀಯೊಬ್ಬಳೊಡನೆ ಹೋರಾಡುತ್ತಿದ್ದೇನೆಂದು ತಿಳಿದೊಡನೆ ಕುಮಾರ ರಾಮ ತಟಸ್ಥನಾಗಿ ನಿಂತ. ಆಗ ಸಮಯ ಸಾಧಿಸಿ ಮಾತಂಗಿ ಕುಮಾರ ರಾಮನನ್ನು ಇರಿದು ಕೊಂದಳು.

ಹೀಗೆ ಕನ್ನಡನಾಡಿನ ಕಡುಗಲಿ, ಪರದಾರಾಸೋದರನೆಂದು ಹೆಸರು ಗಳಿಸಿದ್ದ ಕುಮಾರ ರಾಮನ ಅಂತ್ಯವಾಯಿತು.

ಕುಮಾರ ರಾಮ, ಕಂಪಿಲ ಹರಿಹರದೇವಿಯರ ಮಗ. ರಾಮನಾಥ, ರಾಮುಗ, ಚೆನ್ನಿಗರಾಮ ಇವನ ಇತರ ಹೆಸರುಗಳು. ಎಳೆವಯಸ್ಸಿಗೇ ಬೇಟೆ, ಆಟ ಮೊದಲಾದ ವಿದ್ಯೆಗಳಲ್ಲಿ ಪರಿಣತನಾದ. ತಂದೆಗೆ ಬೆಂಬಲವಾಗಿದ್ದ. ಕಂಪಿಲ ಹೊಸಮಲೆದುರ್ಗ ಮತ್ತು ಕಮ್ಮಟದುರ್ಗದಲ್ಲಿ ಪಾಳೆಯ ಮಾಡಿಕೊಂಡು ಬಲಿಷ್ಠನಾಗಿದ್ದ. ಕಾಕತೀಯ ಪ್ರತಾಪರುದ್ರ, ಹೊಯ್ಸಳ ವೀರಬಲ್ಲಾಳ ಮೊದಲಾದ ಶತ್ರುಗಳನ್ನು ಕುಮಾರ ರಾಮ ಯಶಸ್ವಿಯಾಗಿ ಸದೆಬಡೆದಿದ್ದ.

ದೆಹಲಿಯ ಸುಲ್ತಾನನ ಅವಕೃಪೆಗೆ ಪಾತ್ರನಾದ ಸರದಾರ ಬಹಾವುದ್ದೀನನಿಗೆ ಕಂಪಿಲ ಆಶ್ರಯವಿತ್ತ. ಸುಲ್ತಾನನ ಸೈನ್ಯ ಕಮ್ಮಟದುರ್ಗವನ್ನು ಮುತ್ತಿತು. ಕುಮಾರ ರಾಮ ಸಾಹಸದಿಂದ ಹೋರಾಡಿ ಶತ್ರುಗಳನ್ನು ಹಿಮ್ಮೆಟ್ಟಿಸಿದ; ಶತ್ರುಗಳಿಗೆ ಸಿಂಹಸ್ವಪ್ನನಾದ.

ಕಂಪಿಲನ ಕಿರಿಯ ರಾಣಿ ರತ್ನಾಜಿ ಕುಮಾರ ರಾಮನ ಮೇಲೆ ಮೋಹಗೊಂಡು ಅನುಚಿತವಾಗಿ ವರ್ತಿಸಿದಳು. ಆಕೆ ತನಗೆ ಮಾತೃಸಮಾನಳೆಂದು ಹೇಳಿ ಕುಮಾರರಾಮ ತಪ್ಪಿಸಿಕೊಂಡು ಬಂದುಬಿಟ್ಟ. ಕುಪಿತಳಾದ ರತ್ನಾಜಿ ಕಂಪಿಲನಿಗೆ ಕುಮಾರರಾಮನ ವಿರುದ್ಧ ಚಾಡಿ ಹೇಳಿದಳು. ಕುಮಾರ ರಾಮನನ್ನು ವಧಿಸಬೇಕೆಂದು ಕಂಪಿಲ ಮಂತ್ರಿಗೆ ಆಜ್ಞೆ ಮಾಡಿದ. ನಡೆದುದನ್ನು ಕುಮಾರ ರಾಮ ಮಂತ್ರಿಗೆ ತಿಳಿಸಿದ. ಮಂತ್ರಿ ಕುಮಾರ ರಾಮನನ್ನು ರಹಸ್ಯವಾಗಿ ಬಚ್ಚಿಟ್ಟು ಯಾರದೋ ತಲೆಯನ್ನು ಕಂಪಿಲನಿಗೆ ತಂದೊಪ್ಪಿಸಿ ಕುಮಾರರಾಮನ ವಧೆಯಾಯಿತೆಂದು ತಿಳಿಸಿದ. ರತ್ನಾಜಿಗೆ ತೃಪ್ತಿಯಾಯಿತು.

ದೆಹಲಿಯ ಸುಲ್ತಾನನಿಗೆ ಕುಮಾರ ರಾಮನ ಮರಣದ ವಾರ್ತೆ ತಿಳಿದು ಬಂತು. ಆತ ಮತ್ತೆ ಕಮ್ಮಟದುರ್ಗಕ್ಕೆ ಸೈನ್ಯ ಕಳುಹಿಸಿಕೊಟ್ಟ. ಯಾರೋ ವೀರನನ್ನು ಕರೆತರುವುದಾಗಿ ಕಂಪಿಲನಿಗೆ ಹೇಳಿ ಮಾರುವೇಷದಿಂದಿದ್ದ ಕುಮಾರ ರಾಮನನ್ನು ಮಂತ್ರಿ ಯುದ್ಧಕ್ಕೆ ಕರೆತಂದ. ಹೊಸ ವೀರನೆದುರು ಶತ್ರುಗಳು ಕಾದಾಡಲಾರದೆ ಹಿಮ್ಮೆಟ್ಟಬೇಕಾಯಿತು. ಅನಂತರ, ಹೊಸ ವೀರನೇ ಕುಮಾರರಾಮ ಎಂದು ಕಂಪಿಲನಿಗೆ ಮಂತ್ರಿ ಹೇಳಿದ.

ಮಾತಂಗಿಯ ಕೈಯಲ್ಲಿ ಆತನ ಅವಸಾನವಾದದ್ದು ಆ ಬಳಿಕ ನಡೆದ ಯುದ್ಧದಲ್ಲಿ.

ಕುಮ್ಮಟದುರ್ಗದಲ್ಲಿ ವೈಶಾಖ ಶುದ್ಧ ಪೂರ್ಣಿಮೆಯ ದಿನ ಕುಮಾರ ರಾಮನ ಜಾತ್ರೆ ನಡೆಯುತ್ತದೆ.

ಕುಮಾರ ವ್ಯಾಸ

ನೋಡಿ : ಸಂಪುಟ ೫

ಕುಮಾರಿಲ ಭಟ್ಟ

ಜೈನರು, ಬೌದ್ಧರು ಮತ್ತು ಚಾರ್ವಾಕ (ಲೋಕಾಯತ)ರು ಪ್ರಬಲರಾಗಿ ವೈದಿಕ ಧರ್ಮ ಶಿಥಿಲವಾಗುತ್ತಿದ್ದ ಕಾಲದಲ್ಲಿ ಆ ಧರ್ಮವನ್ನು ಉದ್ಧಾರ ಮಾಡಿದವರಲ್ಲಿ ಪ್ರಮುಖನಾದವನು ಕುಮಾರಿಲ ಭಟ್ಟ. ಕುಮಾರಿಲ, ಕುಮಾರಿಲ ಸ್ವಾಮಿ ಎಂದೂ ಇವರನ್ನು ಕರೆಯುವುದುಂಟು. ಭಾರತೀಯ ಷಡ್ದರ್ಶನಗಳಲ್ಲಿ ಒಂದಾದ ಪೂರ್ವಮೀಮಾಂಸೆಯಲ್ಲಿ ಕುಮಾರಿಲ ವೇದ ಪ್ರಾಮಾಣ್ಯವನ್ನು ಸಾಧಿಸಿ, ಸನಾತನ ಧರ್ಮವನ್ನು ಸಮರ್ಥಿಸಿದ.

ಈತನ ಕಾಲ ಸುಮಾರು 590–650 ಎಂದು ಕೆಲವರ ಅಭಿಪ್ರಾಯ.

ಕುಮಾರಿಲನ ಬಗೆಗೆ ಪ್ರಚಲಿತವಿರುವ ಕಥೆ ಹೀಗಿದೆ :

ಚಿಕ್ಕಂದಿನಲ್ಲಿ ಬಲವಂತವಾಗಿ ಬೌದ್ಧಮತ ಸ್ವೀಕರಿಸಬೇಕಾಯಿತು; ವೇದದ ಬಗೆಗೆ ಅನನ್ಯ ಭಕ್ತಿಯಿದ್ದ ಕುಮಾರಿಲ ತನ್ನ ಬೌದ್ಧಗುರು ವೇದಗಳನ್ನು ಟೀಕೆ ಮಾಡಿದಾಗಲೆಲ್ಲ ಏಕಾಂತದಲ್ಲಿ ಕಣ್ಣೀರು ಸುರಿಸುತ್ತಿದ್ದ. ಗುರುವಿಗೆ ಮಾತ್ರ ಇವನನ್ನು ಕಂಡರೆ ಬಹಳ ಮೆಚ್ಚುಗೆ. ಇದರಿಂದ ಮತ್ಸರಗೊಂಡ ಇತರ ಶಿಷ್ಯರು ಒಂದು ದಿನ ಇವನನ್ನು ಎತ್ತರ ಪ್ರದೇಶದಿಂದ ಕೆಳಕ್ಕೆ ತಳ್ಳಿದರು. ಆಗ ಕುಮಾರಿಲ "ವೇದಗಳು ಸತ್ಯವೇ ಆಗಿದ್ದರೆ ಅಪಾಯದಿಂದ ನನಗೆ ರಕ್ಷಣೆ ದೊರೆಯುತ್ತದೆ" ಎಂದು ಕೂಗಿಕೊಂಡ. ರಕ್ಷಣೆ ದೊರೆಯಿತು. ಆದರೆ 'ಸತ್ಯವೇ ಆಗಿದ್ದರೆ' ಎಂಬ ಮಾತಿನಲ್ಲಿ ಸ್ವಲ್ಪ ಶಂಕೆಯ ಛಾಯೆಯಿದ್ದುದರಿಂದ–ಆತನ ಒಂದು ಕಣ್ಣಿಗೆ ಪೆಟ್ಟಾಯಿತು –ಇದು ಕುಮಾರಿಲನನ್ನು ಕುರಿತ ಕಥೆ.

ಮುಂದೆ ಕುಮಾರಿಲ ಹಿಂದೂಧರ್ಮದ ಪ್ರಚಾರದಲ್ಲಿ ತೊಡಗಿದ. ಬೌದ್ಧಮತವನ್ನು ಖಂಡಿಸಿದ. ಇದರಿಂದಾಗಿ ತನ್ನ ಬೌದ್ಧ ಗುರುವಿಗೆ ದ್ರೋಹ ಮಾಡಿದಂತಾಯಿತೆಂದು ಭಾವಿಸಿ, ಅದಕ್ಕೆ ಪ್ರಾಯಶ್ಚಿತ್ತವಾಗಿ ಅಗ್ನಿಪ್ರವೇಶ ಮಾಡಿದ.

ಜೈಮಿನಿಯ ಪೂರ್ವಮೀಮಾಂಸಾ ಸೂತ್ರಗಳಿಗೆ ಶಬರಸ್ವಾಮಿ ಬರೆದ ಭಾಷ್ಯದ ಅಂಶಗಳನ್ನು ಕುಮಾರಿಲ ಭಟ್ಟ ಹೆಚ್ಚು ಸ್ಫುಟಗೊಳಿಸಿ ಬರೆದಿದ್ದಾನೆ.

ಕುಮ್ಮಿ ನೃತ್ಯ

ಕುಮ್ಮಿ ಎಂಬ ಹೆಸರಿನ ಎರಡು ನೃತ್ಯ ಪ್ರಕಾರಗಳಿವೆ. ಒಂದು ಜಾನಪದ ಶೈಲಿಯಲ್ಲಿ ಸರಳ ನೃತ್ಯ : ಇದು ಪ್ರಧಾನವಾಗಿ ಪ್ರಚಾರದಲ್ಲಿರುವುದು. ತಮಿಳು ನಾಡಿನಲ್ಲಿ. ಇನ್ನೊಂದು ಕಥಕಳಿ ಸಂಪ್ರದಾಯವನ್ನು ಅನುಸರಿಸಿದ್ದು : ಇದು ಕೇರಳ ರಾಜ್ಯದಲ್ಲಿ ಪ್ರಚಾರದಲ್ಲಿದೆ. ಇವೆರಡು ನಾಟ್ಯಗಳನ್ನು ಪ್ರದರ್ಶಿಸುವವರು ಸಾಮಾನ್ಯವಾಗಿ ಸ್ತ್ರೀಯರು



ವೃತ್ತಾಕಾರದಲ್ಲಿ ಚಲನೆ : ಕುಮ್ಮಿ

ಕೈಚಪ್ಪಾಳೆ ಹಾಕುತ್ತ, ವೃತ್ತಾಕಾರದಲ್ಲಿ ಚಲಿಸುತ್ತ ಪಕ್ಕದಿಂದ ಪಕ್ಕಕ್ಕೆ ನೆಗೆಯುತ್ತ ಸಂತೋಷವಾಗಿ ನರ್ತಿಸುವುದು ಈ ನೃತ್ಯದ ಸ್ವರೂಪ. ಹೀಗೆ ನರ್ತಿಸುವಾಗ ಹಾಡುಗಳನ್ನು ಹೇಳುವುದೂ ಉಂಟು. ಆದರೆ ಹಾಡಿನ ಸಾಹಿತ್ಯದ ಅರ್ಥಕ್ಕೂ ನೃತ್ಯಕ್ಕೂ ಸಂಬಂಧ ಇರಲೇಬೇಕೆಂಬ ನಿಯಮವೇನೂ ಇಲ್ಲ.

ಕುರುಕ್ಷೇತ್ರ

ಕುರು ಎಂಬ ದೊರೆ ತನ್ನ ಯಜ್ಞಶಾಲೆಯನ್ನು ನಿರ್ಮಿಸುವುದಕ್ಕಾಗಿ ಚಿನ್ನದ ನೇಗಿಲಿನಿಂದ ಏಳು ಕ್ರೋಶ ಭೂಮಿಯನ್ನು ಉತ್ತ. ಕುರು ಉತ್ತ ಭೂಮಿ ಕುರುಕ್ಷೇತ್ರ ಎನಿಸಿತು. ಇದು ಸರಸ್ವತಿ ಮತ್ತು ದೃಷದ್ವತಿ ನದಿಗಳ ನಡುವಣ ಪ್ರದೇಶ. ಕೌರವ–ಪಾಂಡವರ ನಡುವೆ ಯುದ್ಧ ನಡೆದದ್ದು, ಅರ್ಜುನನಿಗೆ ಶ್ರೀಕೃಷ್ಣ ಗೀತೋಪದೇಶ ಮಾಡಿದ್ದು ಈ ಪ್ರದೇಶದಲ್ಲೇ. ಇದನ್ನು ಧರ್ಮಕ್ಷೇತ್ರವೆಂದೂ ಕರೆಯುತ್ತಾರೆ.

ಕುರುಕ್ಷೇತ್ರ ದೆಹಲಿಯಿಂದ 97 ಮೈಲು ದೂರದಲ್ಲಿ ಈಗಿನ ಹರ್ಯಾಣ ರಾಜ್ಯದ ಕರ್ನಾಲ್ ಜಿಲ್ಲೆಯಲ್ಲಿದೆ.

ಕುರುಕ್ಷೇತ್ರ ವೇದಕಾಲದಲ್ಲೇ ಪವಿತ್ರ ಕ್ಷೇತ್ರ ಎನಿಸಿತ್ತು. ಇಂದಿಗೂ ಕುರುಕ್ಷೇತ್ರ ಪವಿತ್ರಭೂಮಿಯೆಂದು ಪರಿಗಣಿಸಲ್ಪಟ್ಟಿದೆ. ಸೂರ್ಯಗ್ರಹಣ ಕಾಲದಲ್ಲಿ ಲಕ್ಷಾಂತರ ಮಂದಿ ಯಾತ್ರಿಕರು ಇಲ್ಲಿನ ಕೊಳದಲ್ಲಿ ಸ್ನಾನ ಮಾಡುತ್ತಾರೆ.

ಇಲ್ಲಿ ಗೀತಾ ಭವನವೂ ಬಿರ್ಲಾ ಕಟ್ಟಿಸಿದ ದೇವಾಲಯವೂ ಇವೆ. 1956 ರಲ್ಲಿ ಕುರುಕ್ಷೇತ್ರದಲ್ಲಿ ಒಂದು ವಿಶ್ವವಿದ್ಯಾನಿಲಯ ಸ್ಥಾಪಿತವಾಯಿತು.

ಪುರಾಣಗಳಲ್ಲಿ. ಕುರುಕ್ಷೇತ್ರದ ಸುತ್ತಮುತ್ತ ಪವಿತ್ರ ಕಾಮ್ಯಕ ವನ ಮುಂತಾದ ಏಳು ವನಗಳಿದ್ದುವು ಎಂಬ ಹೇಳಿಕೆಯಿದೆ. ಕುರುಕ್ಷೇತ್ರ ಪ್ರದೇಶದಲ್ಲಿ ನೂರಕ್ಕೂ ಹೆಚ್ಚು ತೀರ್ಥಗಳಿವೆ.

ಯಾವುದೇ ಕಲಹ ನಡೆದ ಕುರುಕ್ಷೇತ್ರಕ್ಕೆ ದಾಯಾದಿಗಳು ಜೊತೆಯಾಗಿ ಬರುವುದಿಲ್ಲ. ಹಾಗೆ ಬಂದರೆ ಜಗಳ ಆಗುತ್ತದೆ ಎಂಬ ಭಾವನೆ ಇದೆ.

ನೋಡಿ : ಪಾಣಿಪತ್

ಕುಲಪತಿ

ನೋಡಿ : ಸಂಪುಟ

ಕುವೆಂಪು

ನೋಡಿ : ಸಂಪುಟ

ಕುಶಾನರು

ವಾಯುವ್ಯ ಭಾರತದಲ್ಲಿ ಸಾಮ್ರಾಜ್ಯ ಸ್ಥಾಪಿಸಿದ ಮಧ್ಯಏಷ್ಯದ ಸಂಚಾರಿ ಜನಾಂಗ ಯುಚಿ. ಕುಶಾನರು ಇವರ ಒಂದು ಶಾಖೆ.

ಈ ಶಾಖೆಯಲ್ಲಿ ಕುಜುಲ ಕ್ಯಾಡ್‌ಫಿಸಸ್ ಎಂಬವನು ಒಂದನೆಯ ಶತಮಾನದಿಂದ ಆಳಲಾರಂಭಿಸಿದ. ಇವನ ಮಗ ವೀಮ ಕ್ಯಾಡ್‌ಫಿಸಸ್. ಅಫ್‌ಘಾನಿಸ್ತಾನ ಮತ್ತು ಪಂಜಾಬ್‌ಗಳಲ್ಲಿ ಈತನ ರಾಜ್ಯ ಹಬ್ಬಿತ್ತು.

ಕುಶಾನರ ಶ್ರೇಷ್ಠ ದೊರೆ ಕನಿಷ್ಕ. ಈತ ಕ್ರಿ. ಶ. 78ರಲ್ಲಿ ಪಟ್ಟವೇರಿದ. ಇವನ ರಾಜಧಾನಿ ಪುರುಷಪುರ (ಪೆಷಾವರ್). ಮಧ್ಯಭಾರತ ಮತ್ತು ಮಥುರಾಗಳವರೆಗೂ ಅವನ ರಾಜ್ಯ ವಿಸ್ತರಿಸಿತ್ತು. ಈ ದೊರೆಯ ಅನಂತರ ವಶಿಷ್ಕ, ಹುವಿಷ್ಕ, ಎರಡನೆಯ ಕನಿಷ್ಕ ಮುಂತಾದವರು ಆಳಿದರು. ಕೊನೆಯ ಶ್ರೇಷ್ಠ ದೊರೆ ವಾಸುದೇವ (145-76). ಕುಶಾನರು ಪೂರ್ತಿಯಾಗಿ ಭಾರತೀಕರಣಕ್ಕೆ ಒಳಗಾದರೆಂಬುದನ್ನು ಈ ಹೆಸರು ಸೂಚಿಸುತ್ತದೆ. ಇವನ ಅನಂತರ ವಾಯುವ್ಯದಲ್ಲಿ ಪಾರಸೀಕರೂ ಪೂರ್ವದಲ್ಲಿ ನಾಗರೂ ಇವರ ರಾಜ್ಯವನ್ನು ಕಬಳಿಸಿದರು. ಹೀಗಿದ್ದರೂ ವಾಯುವ್ಯ ಭಾರತದಲ್ಲಿ ಈ ವಂಶದ ದೊರೆಗಳ ಆಡಳಿತ ನಾಲ್ಕನೆಯ ಶತಮಾನದವರೆಗೆ ನಡೆಯಿತು. 'ದೈವಪುತ್ರ'ರೆಂದು ಇವರು ಪರಿಚಿತರಾಗಿದ್ದರು.

ಕುಶಾನರ ಕಾಲದಲ್ಲಿ ಬೌದ್ಧಧರ್ಮ ಚೀನದಲ್ಲಿ ಪ್ರಸಾರವಾಯಿತು. ಗ್ರೀಕ್ ಮತ್ತು ಭಾರತೀಯ ಶೈಲಿಯ ಮಿಶ್ರಣವಾದ ಗಾಂಧಾರ ಎಂಬ ಶಿಲ್ಪಶೈಲಿ ರೂಪುಗೊಂಡಿತು. ನಾಗಾರ್ಜುನ ಮತ್ತು ಅಶ್ವಘೋಷರೆಂಬ ಸಂಸ್ಕೃತ ವಿದ್ವಾಂಸರು ಇವರ ಆಸ್ಥಾನದಲ್ಲಿ ಇದ್ದವರು. ಕುಶಾನರ ಆಡಳಿತದಿಂದಾಗಿ ಭಾರತೀಯ ಸಂಸ್ಕೃತಿ ಮಧ್ಯ ಮತ್ತು ಪೂರ್ವ ಏಷ್ಯಕ್ಕೆ ಹಬ್ಬಿತು. •

ನೋಡಿ : ಕನಿಷ್ಕ

ಕ್ಷುಧೀರಾಮ್ ಬೋಸ್

ಭಾರತೀಯ ಸ್ವಾತಂತ್ರ್ಯ ಸಂಗ್ರಾಮದ ಹುತಾತ್ಮ ಕೇವಲ ಹತ್ತೊಂಬತ್ತನೆಯ ವಯಸ್ಸಿನ ಕ್ಷುಧೀರಾಮ್ ಬೋಸ್ ಅವರು ಹುಟ್ಟಿದ್ದು 1889ರಲ್ಲಿ. 1908 ಆಗಸ್ಟ್ 11ರಂದು ಗಲ್ಲಿಗೇರಿಸಲ್ಪಟ್ಟರು. ಜುಗಾಂತರ್ ಗುಂಪು ಆಗಿನ ಬಂಗಾಳದ ಕ್ರಾಂತಿಕಾರಿ ದಳ. ಅದರ ಕಾರ್ಯಕ್ರಮದಂತೆ ಅವರು ಆತ್ಮಾರ್ಪಣೆ ಮಾಡಿದರು.

ಶಾಲೆಯಲ್ಲಿ ಓದುತ್ತಿದ್ದಾಗಲೇ ಸಾಹಸದ ಕೆಲಸದಲ್ಲಿ ಅವರು ತೊಡಗಿದ್ದರು. " ದೇಶಕ್ಕಾಗಿ ನಿನ್ನ ಜೀವವನ್ನೇ ಬಲಿದಾನಗೈಯುತ್ತೀಯಾ ? " ಎಂದು ಗೆಳೆಯನೊಬ್ಬ ಸವಾಲು ಹಾಕಿದಾಗ, ಕ್ಷುಧೀರಾಮ್ ಹಿಂದುಮುಂದು ನೋಡದೆ ಒಪ್ಪಿ, ಶಾಲೆಬಿಟ್ಟರು. ಅವರಿಗೆ ಆಗಿನ ಯುವಕರ ನಾಯಕ ಸತ್ಯೇನ್ ಬೋಸ್‌ರ ಪರಿಚಯವಾಯಿತು.

ಕ್ಷುಧೀರಾಮ್, ಸ್ವಯಂಸೇವಕರ ಗೋಪ್ಯ ವಸತಿಯಲ್ಲಿ ದೈಹಿಕ, ನೈತಿಕ ಹಾಗೂ ರಾಜಕೀಯ ಶಿಕ್ಷಣ, ಜಗತ್ತಿನ ಮುಂದಾಳುಗಳ ಬಗೆಗೆ ಪರಿಚಯ ಪಡೆದರು. ಭಗವದ್ಗೀತೆಯನ್ನು ಅಭ್ಯಾಸ ಮಾಡಿದರು. ಬ್ರಿಟಿಷರ ವಿರುದ್ಧ ಚಟುವಟಿಕೆಗಳಲ್ಲಿ ಭಾಗವಹಿಸಿದರು. ಒಮ್ಮೆ 1908ರಲ್ಲಿ 'ಸೋನಾರ್ ಬಾಂಗ್ಲಾ' ಎಂಬ ಕರಪತ್ರಿಕೆ ಹಂಚುತ್ತಿದ್ದಾಗ ಬಂಧಿತರಾದರು. ಆಗ ಸತ್ಯೇನ್ ಬೋಸ್ ಅವರನ್ನು ಬಿಡಿಸಿಕೊಂಡರು.

ಅದೇ ವರ್ಷ ಕ್ಷುಧೀರಾಮ್ ಮತ್ತು ಪ್ರಫುಲ್ಲ ಚಾಕಿಯವರನ್ನು ಮುಜಫರ್ ಪುರದಲ್ಲಿದ್ದ ಕಿಂಗ್ಸ್‌ಫರ್ಡ್ ಎಂಬ ಆಂಗ್ಲ ಅಧಿಕಾರಿಯನ್ನು ಕೊಲ್ಲಲು ಕಳುಹಿಸಲಾಯಿತು. ಈ ಅಧಿಕಾರಿ ರಾಷ್ಟ್ರೀಯ ಆಂದೋಲನವನ್ನು ಹತ್ತಿಕ್ಕಲು ಕ್ರೂರ ವಿಧಾನಗಳನ್ನು ಅನುಸರಿಸುತ್ತಿದ್ದ. ಕ್ಷುಧೀರಾಮ್ ಹಾಗೂ ಚಾಕಿ, ಕಿಂಗ್ಸ್‌ಫರ್ಡನದೆಂದು ತಾವು ಭಾವಿಸಿದ ಸಾರೋಟಿನಲ್ಲಿ



ಬಲಿದಾನ : ಕ್ಷುಧೀರಾಮ್

ಬಾಂಬು ಎಸೆದರು. ಆದರೆ ಅದು ಅವನ ಸಾರೋಟ್ ಆಗಿರಲಿಲ್ಲ. ಆದ್ದರಿಂದ ಅಧಿಕಾರಿ ಅದೃಷ್ಟವಶಾತ್ ಅಪಘಾತಕ್ಕೊಳಗಾಗದೆ ಬದುಕಿಕೊಂಡ. ಇದು ನಡೆದದ್ದು 1908 ಏಪ್ರಿಲ್ 30ರಂದು. ಮಾರನೆಯ ದಿನ ಬೆಳಗೆ ಪೋಲೀಸರು ಕ್ಷುಧೀರಾಮ್‌ರನ್ನು ವೈನೀ ರೈಲ್ವೆ ನಿಲ್ದಾಣದಲ್ಲಿ ಬಂಧಿಸಿದರು. ಬಾಂಬ್ ಪ್ರಕರಣದ ಎಲ್ಲ ಜವಾಬ್ದಾರಿಯನ್ನು ಕ್ಷುಧೀರಾಮ ತಮ್ಮ ಮೇಲೆ ಹಾಕಿಕೊಂಡರು. ಮರಣ ದಂಡನೆ ಅನುಭವಿಸಿ ಹುತಾತ್ಮನಾದರು.

ಕೂಚಿಪುಡಿ ನೃತ್ಯ

ಕೂಚಿಪುಡಿ ನೃತ್ಯ ಪ್ರಕಾರದ ಮೂಲ ಕೇಂದ್ರ ಆಂಧ್ರ ಪ್ರದೇಶದ ಕೃಷ್ಣಾ ಜಿಲ್ಲೆಯ ಕೂಚಿಪುಡಿ ಎಂಬ ಹಳ್ಳಿ. ಇಲ್ಲಿ ಇಂದಿಗೂ ಈ ನೃತ್ಯ ಪದ್ಧತಿಯ ಶಾಸ್ತ್ರೀಯ ಶಿಕ್ಷಣವನ್ನು ಕೊಡಲಾಗುತ್ತಿದೆ. ಇಂದು 'ಕೂಚಿಪುಡಿ' ಎಂದು ಪ್ರಚಲಿತವಿರುವ ನೃತ್ಯ ಪರಂಪರೆಯನ್ನು ಆರಂಭಿಸಿದವರು ಸಿದ್ಧೇಂದ್ರಯೋಗಿ. ಈ ನೃತ್ಯದ ಮೇಲೆ ಯಕ್ಷಗಾನದ ಸ್ಪಷ್ಟ ಪ್ರಭಾವವಿದೆ.

1000ದ ಸುಮಾರಿಗೆ ನೃತ್ಯಕಲೆಯ ಗುಣಮಟ್ಟವನ್ನು ಉಳಿಸಿಕೊಳ್ಳಲು ವಿದ್ವಾಂಸರು, ಕಲಾವಿದರು ಪ್ರಬಲ ಪ್ರಯತ್ನ ನಡೆಸಿದರು. ಇದರ ಫಲವಾಗಿ ರೂಪುಗೊಂಡ ಭಾಗವತ ಮೇಳಗಳು ವಿಜಯನಗರ ಸಾಮ್ರಾಜ್ಯದಲ್ಲಿ –16ನೆಯ ಶತಮಾನದ ಆರಂಭಕಾಲದಲ್ಲಿ– ತುಂಬ ಪ್ರಸಿದ್ಧಿಗೆ ಬಂದುವು.

ಭರತನ 'ನಾಟ್ಯ ಶಾಸ್ತ್ರ', ನಂದಿಕೇಶ್ವರನ 'ಅಭಿನಯ ದರ್ಪಣ', ಜಯದ ಸೇನಾನಿಯ 'ನೃತ್ತ ರತ್ನಾವಳಿ'ಗಳಿಂದ ಆಯ್ದ ಉತ್ತಮಾಂಶಗಳನ್ನು ಅಳವಡಿಸಿಕೊಂಡಿರುವ ಈ ನೃತ್ಯ ಪದ್ಧತಿ ಪರಿಪುಷ್ಟವಾಗಿದೆ.

'ಭಾಮಾ ಕಲಾಪ' ಹಾಗೂ 'ಗೊಲ್ಲ ಕಲಾಪ'ಗಳು ಜನಪ್ರಿಯ ಕೂಚಿಪುಡಿ ನೃತ್ಯನಾಟಕಗಳು. ಇವುಗಳಲ್ಲಿ ತಾತ್ತ್ವಿಕ ಗುಣವಿದೆ; ಭಾವ ಪ್ರದರ್ಶನಕ್ಕೆ ಬೇಕಾದಷ್ಟು ಅವಕಾಶವಿದೆ.

ಸರಳ ವೇಷಭೂಷಣವಿರುವ ಈ ನೃತ್ಯಪದ್ಧತಿಯಲ್ಲಿ ಮುಖದ ಅಲಂಕರಣವೂ ಸರಳವಾಗಿಯೇ ಇರುತ್ತದೆ. ಗ್ರಾಮದ ದೇವಾಲಯದ ಬಳಿ ತೆಂಗಿನ ಗರಿಗಳಿಂದ ಅಲಂಕರಿಸಿದ ಚಪ್ಪರದ ಕೆಳಗೆ ಈ ನೃತ್ಯ ಪ್ರದರ್ಶನ ನಡೆಯುತ್ತಿದ್ದುದು ಸಂಪ್ರದಾಯವಾದರೂ ಈಗ ಇದನ್ನು ರಂಗಮಂದಿರಗಳಲ್ಲೂ ಪ್ರದರ್ಶಿಸುತ್ತಾರೆ. ಹಾಗೆಯೇ ಸ್ತ್ರೀಪಾತ್ರವನ್ನು ಪುರುಷರೇ ಅಭಿನಯಿಸುವುದು ಸಂಪ್ರದಾಯವಾಗಿದ್ದರೂ ಈಗ ಸ್ತ್ರೀಯರೂ ಈ ನೃತ್ಯ ಪ್ರದರ್ಶನದಲ್ಲಿ ತೊಡಗಿದ್ದಾರೆ.

'ಭಾಮಾ ಕಲಾಪ'ದಲ್ಲಿ ಆರಂಭ ದೃಶ್ಯ



ಕೃಪಲಾನಿ

ನೋಡಿ : ಜೆ.ಬಿ.ಕೃಪಲಾನಿ

ಕೃಷ್ಣ


ಲೋಕಪ್ರಿಯ ನಾಯಕ ಕೃಷ್ಣ. 'ಮಹಾಭಾರತ' ಕಥೆಯಲ್ಲಿ ಅವನದು ಪ್ರಮುಖ ಪಾತ್ರ. ವಿಷ್ಣುವಿನ ದಶಾವತಾರಗಳಲ್ಲಿ ಕೃಷ್ಣನ ಅವತಾರ ಎಂಟನೆಯದು. ಕೃಷ್ಣ ಚತುರ ರಾಜಕಾರಣಿ, ಧರ್ಮಜ್ಞ, ಸ್ನೇಹಶೀಲ, ವೀರ, ರಸಿಕ.

ಕೃಷ್ಣ ವಸುದೇವ, ದೇವಕಿಯರ ಮಗ. ಕಂಸನ ಸೆರೆಮನೆಯಲ್ಲಿ ಮಧ್ಯರಾತ್ರಿ ಜನನ. ಬಿರುಸಾದ ಮಳೆಯಲ್ಲಿ ಅಲ್ಲಿಂದ ಗೋಕುಲಕ್ಕೆ ಸ್ಥಳಾಂತರ. ಗೋಕುಲದಲ್ಲಿ ಯಶೋದೆ–ನಂದರ ಮನೆಯಲ್ಲಿ ಕೃಷ್ಣ ಬೆಳೆದ. ಮಕ್ಕಳ ಹುಡುಗಾಟಿಕೆಯಿಂದ ಹಿಡಿದು ರಾಕ್ಷಸರ ಸಂಹಾರ, ಕಾಳಿಂಗಮರ್ದನದವರೆಗೆ ಕೃಷ್ಣನ ಬಾಲಲೀಲೆಗಳು ಅನೇಕ.

ದೇವಕಿಯ ಮಗನಿಂದ ತನಗೆ ಮರಣ ಎಂದು ಕಂಸ ಅರಿತಿದ್ದ. ದೇವಕಿಗೆ ಮಕ್ಕಳು ಹುಟ್ಟಿದೊಡನೆಯೇ ಆ ಮಕ್ಕಳನ್ನು ಆತ ಕೊಲ್ಲುತ್ತಿದ್ದ. ಕೃಷ್ಣ ಮಾತ್ರ ಈ ದುರಂತದಿಂದ ಪಾರಾಗಿ ಗೋಕುಲದಲ್ಲಿ ಬೆಳೆದು ಕಂಸನನ್ನು ವಧಿಸಿದ; ಕಂಸನ ತಂದೆ ಉಗ್ರಸೇನನನ್ನು ಸೆರೆಯಿಂದ ಬಿಡಿಸಿ ರಾಜನನ್ನಾಗಿ ಮಾಡಿ ಮಥುರೆಯಲ್ಲಿ ನೆಲೆಸಿದ. ಕಂಸನ ಸೋದರಮಾವ ಜರಾಸಂಧ. ಕಂಸನ ವಧೆಯಾದ ವಿಚಾರ ತಿಳಿದು ಆತ ಮಥುರೆಯನ್ನು ಸುಟ್ಟುಬಿಟ್ಟ. ಅನಂತರ ಕೃಷ್ಣ ದ್ವಾರಕೆಯನ್ನು ಕಟ್ಟಿಸಿ, ಅದನ್ನು ಯಾದವರ ರಾಜಧಾನಿಯನ್ನಾಗಿ ಮಾಡಿದ.

ಗೋಪಾಲಕ : ಕೃಷ್ಣ





ಕೃಷ್ಣ ಲೀಲೆ

ಕೃಷ್ಣ ಪಾಂಡವರ ಬಂಧು. ಎಷ್ಟೋ ಬಾರಿ ಅವರನ್ನು ಕಷ್ಟದಿಂದ ಪಾರುಮಾಡಿದ. ಕುರುಕ್ಷೇತ್ರ ಯುದ್ಧದಲ್ಲಿ ಅರ್ಜುನನಿಗೆ ಸಾರಥಿಯಾಗಿ ಪಾಂಡವರಿಗೆ ವಿಜಯವನ್ನು ಗಳಿಸಿಕೊಟ್ಟ.

ಗೋಪಿಯರೊಂದಿಗೆ ಕೃಷ್ಣನ ಸಂಬಂಧ ನಿಕಟ. ಅವರಲ್ಲಿ ರಾಧೆಯ ಪ್ರೇಮ ಮಿಗಿಲಾದದ್ದು. ರಾಧಾ–ಕೃಷ್ಣರ ಪ್ರೇಮ ಅನೇಕ ಕವಿ, ಚಿತ್ರಕಾರರಿಗೆ ಸ್ಫೂರ್ತಿನೀಡಿದೆ. ಧಾರ್ಮಿಕ ಪಂಥಗಳಿಗೆ ಪ್ರೇರಕವಾಗಿದೆ. ಸತ್ಯಭಾಮಾ, ರುಕ್ಮಿಣಿ ಅವನ ಮೆಚ್ಚಿನ ಪತ್ನಿಯರು.

ಮಹಾಭಾರತ, ಭಾಗವತ ಪುರಾಣ ಮತ್ತು ಹರಿವಂಶಗಳಲ್ಲಿ ಕೃಷ್ಣ ಕಥೆಯು ಉಲ್ಲೇಖವಿದೆ. ಕೃಷ್ಣ ಅರ್ಜುನನಿಗೆ ಕೊಟ್ಟ ಧಾರ್ಮಿಕ ಉಪದೇಶ ' ಭಗವದ್ಗೀತೆ '.

ನೋಡಿ : ಕೃಷ್ಣಜನ್ಮಾಷ್ಟಮಿ.

ಕೃಷ್ಣಜನ್ಮಾಷ್ಟಮಿ

ಮಹಾವಿಷ್ಣುವಿನ ಹತ್ತು ಅವತಾರಗಳಲ್ಲಿ ಎಂಟನೆಯದು ಕೃಷ್ಣಾವತಾರ. ಕೃಷ್ಣನ ಹುಟ್ಟು ಹಬ್ಬ ಕೃಷ್ಣಜನ್ಮಾಷ್ಟಮಿ ಅಥವಾ ಗೋಕುಲಾಷ್ಟಮಿ. ಕೃಷ್ಣ ಹುಟ್ಟಿದ್ದು ಬಹುಳ ಅಷ್ಟಮಿಯ ದಿನ ಎಂದು ಎಲ್ಲರೂ ಒಪ್ಪುವರಾದರೂ ಅವನು ಹುಟ್ಟಿದ್ದು ಯಾವ ತಿಂಗಳಲ್ಲಿ ಎಂಬ ಬಗೆಗೆ ಭಿನ್ನಾಭಿಪ್ರಾಯವಿದೆ. ಏಕೆಂದರೆ ದಕ್ಷಿಣ ಭಾರತ ಪ್ರದೇಶದಲ್ಲಿ ಕೃಷ್ಣನ ಜನ್ಮದಿನವನ್ನು ಶ್ರಾವಣ ಮಾಸದಲ್ಲೂ ಉತ್ತರದಲ್ಲಿ ಭಾದ್ರಪದ ಮಾಸದಲ್ಲೂ ಆಚರಿಸುತ್ತಾರೆ. ಮಥುರಾ, ಉಡುಪಿಗಳಲ್ಲಿ ಇದು ವೈಭವದ ಹಬ್ಬ.

ಕೃಷ್ಣಜನ್ಮಾಷ್ಟಮಿಯನ್ನು ಸಾಮಾನ್ಯವಾಗಿ ಹಿಂದೂಗಳೆಲ್ಲರೂ ಆಚರಿಸುತ್ತಾರೆ. ವೈಷ್ಣವರಿಗೆ ಇದು ತುಂಬ ದೊಡ್ಡ ಹಬ್ಬ : ಅಂದು ಸಂಜೆ ಕೃಷ್ಣನ ಪೂಜೆ ವೈಭವದಿಂದ ನಡೆಯುತ್ತದೆ. ಈ ಪೂಜೆಗಾಗಿ ದೊಡ್ಡ ಮಂಟಪವನ್ನು ಕಟ್ಟಿ ಅದನ್ನು ಸುಂದರವಾಗಿ ಅಲಂಕರಿಸುತ್ತಾರೆ. ಹಲವಾರು ಭಕ್ಷ್ಯಗಳನ್ನು ತಯಾರಿಸಿ ನೈವೇದ್ಯ ಮಾಡುತ್ತಾರೆ. ಈ ಸಂದರ್ಭದಲ್ಲಿ ಬಂಧುಗಳನ್ನು, ನೆರೆಹೊರೆಯವರನ್ನು ಮನೆಗೆ ಕರೆಯುವ ಸಂಪ್ರದಾಯವೂ ಇದೆ.

ಕೃಷ್ಣದೇವರಾಯ

'ಪರಿಪೂರ್ಣ ಚಕ್ರವರ್ತಿ', 'ಕರ್ಣಾಟಕಾಂಧ್ರ ಸಾರ್ವಭೌಮ,' 'ಆಂಧ್ರ ಭೋಜ' ಈ ಬಗೆಯ ಹೆಗ್ಗಳಿಕೆಗೆ ಪಾತ್ರನಾದ ಕೃಷ್ಣದೇವರಾಯ ವಿಜಯನಗರದ ಕೀರ್ತಿಯನ್ನು ಉತ್ತುಂಗ ಶಿಖರಕ್ಕೇರಿಸಿದ ಅರಸ. 1509ರಲ್ಲಿ ಕೃಷ್ಣದೇವರಾಯ ವಿಜಯನಗರದ ಗದ್ದುಗೆ ಏರಿದಾಗ ರಾಜ್ಯ ಪ್ರಕ್ಷುಬ್ಧ ಸ್ಥಿತಿಯಲ್ಲಿತ್ತು. ರಾಜಕೀಯ ಮುತ್ಸದ್ದಿತನದಿಂದ ವರ್ತಿಸಿ ಕೃಷ್ಣದೇವರಾಯ ವೈರಿಗಳನ್ನು ಹಣ್ಣುಮಾಡಿದ. 21 ವರ್ಷಗಳ ಅವನ ಆಳ್ವಿಕೆಯಲ್ಲಿ ವಿಜಯನಗರ ಬಲಿಷ್ಠ ಸಾಮ್ರಾಜ್ಯವಾಯಿತು.

ಕೃಷ್ಣದೇವರಾಯ ಕಲಾಪ್ರೇಮಿ. ಸ್ವತಃ ಕವಿ. ಖ್ಯಾತ ಕವಿಗಳಿಗೆ ಆಶ್ರಯದಾತ. ಪರಮತ ಸಹಿಷ್ಣು. ಕೃಷ್ಣದೇವರಾಯನ ಕಾಲ ವಿಜಯನಗರ ಸಾಮ್ರಾಜ್ಯದ ಸುವರ್ಣಯುಗ ಎಂದು ಬಣ್ಣಿಸಲ್ಪಟ್ಟಿದೆ.

ನೋಡಿ : ಅಬ್ದುರ್ ರಜಾಕ್ : ನೂನಿಜ್ : ಪಾಯೆಸ್ ; ವಿಜಯನಗರ ಅರಸರು
ಕೃಷ್ಣದೇವರಾಯ —ಸಂಪುಟ ೧

ಕೃಷ್ಣಾ

ಕಾವೇರಿ, ಗೋದಾವರಿಗಳಂತೆ ಕೃಷ್ಣಾ ದಕ್ಷಿಣ ಭಾರತದ ಒಂದು ಪ್ರಮುಖ ನದಿ. ಪುರಾಣ ಸಾಹಿತ್ಯದಲ್ಲಿ ಇದನ್ನು ಕೃಷ್ಣವೇಣೀ ಎಂದು ಕರೆದಿದ್ದಾರೆ. ಜಾತಕಗಳಲ್ಲಿ ಇದು ' ಕಣ್ಣಾಪೆಣ್ಣ ' ಎಂದು ಕರೆಯಲ್ಪಟ್ಟಿದೆ. 3ನೆಯ ಶತಮಾನದ ಖಾರವೇಲನ ಹಾತಿಗುಂಫಾ ಶಾಸನದಲ್ಲಿ ಇದು ' ಕನ್ಹಾಪೆಮ್ನ '.

ಸಹ್ಯಾದ್ರಿಯಲ್ಲಿ ಹುಟ್ಟುವ ಐದು ನದಿಗಳನ್ನು ಸಾಮೂಹಿಕವಾಗಿ ಗಂಗಾ ಎನ್ನುತ್ತಾರೆ. ಅವು ಕೃಷ್ಣಾ, ವೇಣಾ, ಕಕುದ್ಮತಿ, ಸಾವಿತ್ರಿ ಮತ್ತು ಗಾಯತ್ರಿ. ಇವುಗಳಲ್ಲಿ ಕೃಷ್ಣಾನದಿ ಪ್ರಮುಖ. ಈ ನದಿಗಳ ಬಗೆಗೆ ' ಮಹಾಬಲೇಶ್ವರ ಮಹಾತ್ಮೆ ' ಯಲ್ಲಿ ಉಲ್ಲೇಖವಿದೆ.

ಮಹಾಬಲೇಶ್ವರ ಗಿರಿಯ ಪೂರ್ವಭಾಗದಲ್ಲಿ, ಅರಬಿ ಸಮುದ್ರದಿಂದ ಸುಮಾರು 40 ಮೈಲು ದೂರದಲ್ಲಿ, ಈ ನದಿಯ ಉಗಮ. ಬಂಗಾಳ ಕೊಲ್ಲಿಯನ್ನು ಸೇರುವ ತನ್ನ ಪ್ರವಾಹ ಮಾರ್ಗದಲ್ಲಿ ಕೊಯ್ನಾ, ವರ್ಣಾ, ಪಂಚಗಂಗಾ, ಘಟಪ್ರಭಾ, ಮಲಪ್ರಭಾ ನದಿಗಳು ಕೃಷ್ಣೆಯನ್ನು ಸೇರುತ್ತವೆ. ಭೀಮಾ ಮತ್ತು ತುಂಗಭದ್ರಾ ಕೃಷ್ಣೆಯ ಪ್ರಮುಖ ಉಪನದಿಗಳು



ಕೃಷ್ಣಾ ನದಿಗೆ ಅಡ್ಡವಾಗಿ ಅಣೆಕಟ್ಟುಗಳನ್ನು ಕಟ್ಟಿ ಅದರ ನೀರನ್ನು ಭೂ-ವ್ಯವಸಾಯಕ್ಕಾಗಿ ಉಪಯೋಗಿಸಲಾಗುತ್ತಿದೆ : ವಿದ್ಯುತ್ತನ್ನೂ ಉತ್ಪಾದಿಸಲಾಗುತ್ತಿದೆ. ಆಂಧ್ರ ಪ್ರದೇಶದ ನಲಗೊಂಡ ಜಿಲ್ಲೆಯ ಕೊಂಡ ಗ್ರಾಮದ ಬಳಿ ಈ ನದಿಗೆ ನಿರ್ಮಿಸಲಾಗಿರುವ ನಾಗಾರ್ಜುನಸಾಗರ ಕಟ್ಟೆಯಲ್ಲಿ 110 ಚ. ಮೈ. ವಿಸ್ತೀರ್ಣದಲ್ಲಿ ನೀರು ಶೇಖರಣೆ ಸಾಧ್ಯ. ಇದು ಭಾರತದ ಅತ್ಯಂತ ದೊಡ್ಡ ಹಾಗೂ ವಿಶ್ವದಲ್ಲಿಯೇ ಮೂರನೆಯ ದೊಡ್ಡ ಮಾನವ ನಿರ್ಮಿತ ಜಲಾಶಯ.

ಯಾವಾಗಲೂ ಬರಗಾಲಕ್ಕೆ ತುತ್ತಾಗುವ ಕನ್ನಡನಾಡಿನ ಉತ್ತರ ಭಾಗದ ಪ್ರದೇಶಗಳಿಗೆ ಕರ್ನಾಟಕದ ಕೃಷ್ಣಾ ಮೇಲ್ದಂಡೆ ಯೋಜನೆ ಒಂದು ವರ.

ಕೆಂಗಲ್ ಹನುಮಂತಯ್ಯ

ಬೆಂಗಳೂರು ಪುರಸಭೆಯ ಅಧ್ಯಕ್ಷರಾಗಿ, ಆಮೇಲೆ ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿ, ಆ ಸಭೆಯ ಕಾಂಗ್ರೆಸ್ ಪಕ್ಷದ ನಾಯಕರಾಗಿ, ಭಾರತ ರಾಜ್ಯಾಂಗ ಸಭೆಯ ಸದಸ್ಯರಾಗಿ, ಹಂತಹಂತವಾಗಿ, ಮೇಲೇರಿದ ರಾಜಕೀಯ ನಾಯಕ, ಕೆಂಗಲ್ ಹನುಮಂತಯ್ಯ.

ಇವರು ಬೆಂಗಳೂರುಜಿಲ್ಲೆ ಲಕ್ಕಪ್ಪನಹಳ್ಳಿಯವರು. ಜನನ 1906ರಲ್ಲಿ. ವಿದ್ಯಾರ್ಥಿಯಾಗಿದ್ದಾಗಿನಿಂದಲೇ ರಾಜಕೀಯದಲ್ಲಿ ತೀವ್ರ ಆಸಕ್ತಿ. 1927ರಷ್ಟು ಹಿಂದೆಯೇ ಮದರಾಸಿನಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ ಭಾಗವಹಿಸಿದ ಮುಂದಾಳುಗಳ ಪೈಕಿ ಹನುಮಂತಯ್ಯ ಒಬ್ಬರು. ಬಿ.ಎ., ಎಲ್‌ಎಲ್.ಬಿ. ಪರೀಕ್ಷೆಯಲ್ಲಿ ಉತ್ತೀರ್ಣರಾದ ಮೇಲೆ ವಕೀಲ ವೃತ್ತಿ ಕೈಗೊಂಡರು. ಜೊತೆ ಜೊತೆಯಲ್ಲೇ ಸಾರ್ವಜನಿಕ ಚಟುವಟಿಕೆಗಳಲ್ಲಿ ಆಸಕ್ತಿ ವಹಿಸಿದರು. ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿ ಹಲವು ಬಾರಿ ಶಿಕ್ಷೆಗೆ ಗುರಿಯಾದರು.

ಕೆಂಗಲ್ ಹನುಮಂತಯ್ಯ ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿ ಪ್ರತಿಭಾನ್ವಿತ ಶಾಸಕರೆಂಬ ಹೆಸರು ಪಡೆದರು. ಮೈಸೂರು ಸಂಸ್ಥಾನದಲ್ಲಿ ಜವಾಬ್ದಾರಿ ಸರಕಾರ ಸ್ಥಾಪನೆಗೋಸ್ಕರ ನಡೆದ ಹೋರಾಟದಲ್ಲಿ ಅವರು ವಹಿಸಿದ ಪಾತ್ರ ಗಣನೀಯವಾದದ್ದು.

ಮೈಸೂರಿನಲ್ಲಿ ಜವಾಬ್ದಾರಿ ಸರಕಾರ ಸ್ಥಾಪನೆಯಾದ ಮೇಲೆ ಹನುಮಂತಯ್ಯನವರು ವಿಧಾನಸಭೆಯ ಸದಸ್ಯರಾಗಿ ಮುಂದುವರಿದರು ; 1949ರಲ್ಲಿ ಮುಖ್ಯಮಂತ್ರಿಯಾದರು.

ಹಲವಾರು ಆಡಳಿತಗಳಿಗೆ ಹಂಚಿಹೋಗಿದ್ದ ಕನ್ನಡ ನಾಡು ಶೀಘ್ರವಾಗಿ ಒಂದಾಗುವುದೆಂದೂ ಬೆಂಗಳೂರು ಕನ್ನಡರಾಜ್ಯದ ಆಡಳಿತ ಕೇಂದ್ರವಾಗುವುದೆಂದೂ ಮನಗಂಡು ಅದಕ್ಕಾಗಿ ಪೂರ್ವಭಾವಿಸಿದ್ಧತೆಗಳನ್ನು ಮಾಡಿದವರಲ್ಲಿ ಹನುಮಂತಯ್ಯ ಅಗ್ರಗಣ್ಯರು.



ಇವರು ಮೈಸೂರು ಸಂಸ್ಥಾನದ ಮುಖ್ಯಮಂತ್ರಿಯಾಗಿದ್ದಾಗ ಕನ್ನಡನಾಡಿನ ವಿವಿಧ ಭಾಗಗಳಲ್ಲಿ ಸಂಚರಿಸಿ ಕನ್ನಡಿಗರಲ್ಲಿ ಭಾವೈಕ್ಯ ಬೆಳೆಸಿದರು. ವಿಧಾನಸೌಧದ ರಚನೆಯನ್ನು ಆರಂಭಿಸಿ ಪೂರ್ಣಗೊಳಿಸಿದರು. ಅವರು ಮುಖ್ಯಮಂತ್ರಿಯಾಗಿದ್ದಾಗಲೇ ಬಳ್ಳಾರಿ ಜಿಲ್ಲೆ ಮೈಸೂರಿನಲ್ಲಿ ವಿಲೀನವಾಗಿ ಕರ್ನಾಟಕ ರಾಜ್ಯಸ್ಥಾಪನೆಗೆ ನಾಂದಿಯಾಯಿತು.

ವಿಧಾನಸೌಧ :
ಕೆಂಗಲ್

ಹನುಮಂತಯ್ಯನವರು ಲೋಕಸಭೆಯ ಸದಸ್ಯರೂ ಆಗಿದ್ದರು. ವಿದೇ[ಶ]ಗಳಲ್ಲಿ ಭಾರತದ ಪ್ರತಿನಿಧಿಯಾಗಿ ಸೇವೆ ಸಲ್ಲಿಸಿದರು. ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷರಾಗಿ ಸರಕಾರದ ಆಡಳಿತವನ್ನು ಉತ್ತಮ[ಪ]ಡಿಸುವುದಕ್ಕೆ ಪರಿಣಾಮಕಾರಿಯಾದ ಸಲಹೆಗಳನ್ನು ಮಾಡಿದರು. ಅವ[ರ] ಕರ್ತವ್ಯ ನಿರ್ವಹಣೆ ಎಲ್ಲರ ಮೆಚ್ಚುಗೆ ಪಡೆಯಿತು.

1971ರಲ್ಲಿ ಲೋಕಸಭೆಗೆ ನಡೆದ ಮಧ್ಯಂತರ ಚುನಾವಣೆಯಲ್ಲಿ ಚುನಾಯಿತರಾದ ಹನುಮಂತಯ್ಯನವರು ಕೆಲ ಕಾಲ ಕೇಂದ್ರ ಸರಕಾರದ ರೈಲ್ವೆ ಮಂತ್ರಿಗಳಾಗಿಯೂ ಸೇವೆ ಸಲ್ಲಿಸಿದರು.

ಕೆಂಪುಕೋಟೆ

ಪ್ರತಿ ಆಗಸ್ಟ್ 15ರಂದು ಭಾರತದ ತ್ರಿವರ್ಣಧ್ವಜವನ್ನು ಹಾರಿಸಿ ಭಾರತ ಸ್ವತಂತ್ರವಾದ ದಿನವನ್ನು ಸ್ಮರಿಸುವುದು ದೆಹಲಿಯ ಸುಪ್ರಸಿದ್ಧ ಕೆಂಪುಕೋಟೆಯಲ್ಲಿ. ಇತಿಹಾಸದ ಹಲವು ಘಟನೆಗಳು ಈ ಕೋಟೆಯ ಆವರಣದಲ್ಲಿ ನಡೆದಿದೆ.



ಕೆಂಪುಕೋಟೆ ; ತ್ರಿವರ್ಣ ಧ್ವಜ

ಕೆಂಪು ಮರಳುಗಲ್ಲಿನಿಂದ ನಿರ್ಮಿತವಾಗಿರುವುದರಿಂದ ಇದು 'ಕೆಂಪು ಕೋಟೆ'. ಈ ಕೋಟೆಯನ್ನು ಕಟ್ಟಿಸಿದವನು ಷಾಜಹಾನ್. 1715ರಲ್ಲಿ ಭೂಕಂಪದಿಂದ ಇದಕ್ಕೆ ಸ್ವಲ್ಪ ಧಕ್ಕೆಯಾಯಿತು. ಮರಾಠರು ಇದರ ಮೇಲೆ ದಾಳಿ ಮಾಡಿದರು. 1739ರಲ್ಲಿ ನಾದಿರ್ ಷಾ ಇಲ್ಲಿದ್ದ ಮಯೂರಾಸನ ಹಾಗೂ ಇತರ ಅಮೂಲ್ಯವಸ್ತುಗಳನ್ನು ಕೊಳ್ಳೆಹೊಡೆದ. 1857ರ ಸಿಪಾಯಿ ದಂಗೆಯಲ್ಲಿ ಬ್ರಿಟಿಷ್ ಕಾವಲುಗಾರರು ಕೋಟೆಯ ಕೆಲವು ಭಾಗಗಳನ್ನು ನಾಶಮಾಡಿದ್ದೂ ಉಂಟು. ಆದರೂ ಈ ಕೆಂಪುಕೋಟೆ ಒಂದು ಸುಂದರ ಸ್ಮಾರಕ.

ದೆಹಲಿಯ ಚಾಂದನಿ ಚೌಕಕ್ಕೆ ಎದುರಾದ ಲಾಹೋರ್ ಗೇಟ್ ಕೆಂಪುಕೋಟೆಯ ಮುಖ್ಯದ್ವಾರ. ಇಲ್ಲಿಂದ ಛಾವಣಿಯಿರುವ ಒಂದು ರಸ್ತೆಯನ್ನು

ಬಾಟಿನ ಉದ್ಯಾನದ ಮೂಲಕ ಹಾಯುವ ರಸ್ತೆ ಸಿಗುತ್ತದೆ. ಇದರ ಕೊನೆಯಲ್ಲಿ ದಿವಾನ್-ಇ-ಆಮ್ ಇದೆ. ಸಾರ್ವಜನಿಕರಿಗೆ ಚಕ್ರವರ್ತಿ ಭೇಟಿ ಕೊಡುತ್ತಿದ್ದುದು ಇಲ್ಲಿ. ಇಲ್ಲಿನ ಜಗತಿಯಂಥ ಸಿಂಹಾಸನ ಪೀಠ. ಇದು ಅತ್ಯಂತ ಕಲಾಪೂರ್ಣವಾದ ಒಳಕುಸುರಿ ಕೆಲಸಗಳಿಂದ ಕೂಡಿದೆ. ಬಳ್ಳಿ, ಹೂವು, ಪಕ್ಷಿಯ ವಿನ್ಯಾಸಗಳನ್ನು ಇಲ್ಲಿ ಬಿಡಿಸಲಾಗಿದೆ. ಈ ಜಾಗದಿಂದ ಉತ್ತರಕ್ಕೆ ದಿವಾನ್-ಇ-ಖಾಸ್ ಭವನವಿದೆ. ಇದು, ಹೆಸರೇ ಸೂಚಿಸುವಂತೆ ಖಾಸಗಿ ಭೇಟಿಗೆ ಮೀಸಲಾಗಿದ್ದಿತು. ಇಲ್ಲಿಯ ಅರೆ ಪ್ರಶಸ್ತ ರತ್ನಗಳನ್ನು ಗೋಡೆಯ ಎಲ್ಲ ಭಾಗದಲ್ಲೂ ಹುಗಿಯಲಾಗಿದ್ದಿತು —ಎನ್ನುತ್ತಾರೆ.



ದಿವಾನ್-ಇ-ಆಮ್

ವೈಭವದ ಕಾಲದಲ್ಲಿ, 'ನೌಬತ್'ನಲ್ಲಿ ದಿನಕ್ಕೆ 5 ಬಾರಿ ಸಂಗೀತ ಇತ್ತು. ದಿವಾನ್-ಇ-ಆಮ್‌ನಲ್ಲಿ, ಅಮೃತ ಶಿಲೆಯ ಛತ್ರಿಯ ಕೆಳಗೆ ದಿವ್ಯಾಲಂಕಾರ ಭೂಷಿತನಾಗಿ ಷಾಜಹಾನ್ ಚಕ್ರವರ್ತಿ ಮಯೂರ ಸಿಂಹಾಸನದ ಮೇಲೆ ಕುಳಿತು ದಿನಕ್ಕೆ ಎರಡು ಸಲ ದರ್ಬಾರು ನಡೆಸುತ್ತಿದ್ದ. ಕೆಳಗೆ ವಜೀರರು ಆಸ್ಥಾನದ ಉತ್ತಮ ಕುಲೀನರು, ರಾಜರು, ರಾಯಭಾರಿಗಳು, ಸೇನೆಯ ಉನ್ನತ ಅಧಿಕಾರಿಗಳು, ಜಾಗೀರುದಾರರು ತಮ್ಮ ತಮ್ಮ ಅಧಿಕೃತ ಉಡುಗೆಯಲ್ಲಿ ಶಿಸ್ತಿನಿಂದ ನಿಂತಿರುತ್ತಿದ್ದರು. ಇಲ್ಲಿ ಬಹಿರಂಗ ರಾಜಕಾರ್ಯಗಳು ಜರಗುತ್ತಿದ್ದುವು.

ಯಮುನಾ ನದಿಗೆ ಎದುರಾದ ಮುಸಮ್ಮನ್ ಬುರ್ಜ್ ಎಂಬ ಮಾಳಿಗೆಯಲ್ಲಿ ನಿಂದು ಸಾಮಾನ್ಯ ಜನರ ಕುಂದುಕೊರತೆಗಳನ್ನು ಷಾಜಹಾನ್ ಕೇಳುತ್ತಿದ್ದ. ನದಿಯ ಬದಿಯ ಮರಳಿನ ಮೇಲಿನ ಆನೆ ಕಾಳಗವನ್ನು ನೋಡಲು ಚಕ್ರವರ್ತಿ ಬಯಸುತ್ತಿದ್ದ. ಅವನ ಜನಾನಾದ ಸ್ತ್ರೀಯರು ಅಮೃತ ಶಿಲೆಯ ಜಾಲಂಧ್ರದ ಮೂಲಕ ದೃಶ್ಯಗಳನ್ನು ನೋಡಿ ಸಂತೋಷಪಡುತ್ತಿದ್ದರು.

ದಿವಾನ್-ಇ-ಖಾಸ್‌ನ ಬಳಿ ಅರಮನೆಯ ಸ್ನಾನಗೃಹಗಳಿವೆ. ಸುಂದರ ಕೋಣೆಗಳು: ಮೂರರಲ್ಲೂ ಪರಿಮಳ ನೀರಿನ ಚಿಲುಮೆಗಳಿರುತ್ತಿದ್ದುವು. ಛಾವಣಿಯಲ್ಲಿ ಬಣ್ಣದ ಗಾಜುಗಳು. ಸ್ನಾನಗೃಹಗಳ ಎದುರಿಗೆ ಸುಂದರ ಮೋತಿ ಮಸೀದಿ ಇದೆ. ಇದನ್ನು ಔರಂಗಜೇಬ್ 1657ರಲ್ಲಿ ಕಟ್ಟಿಸಿದ. ಸಾವನ್ ಮತ್ತು ಭಾದೋ ಎಂಬ ಜಲ ಆಸರೆಗಳಿರುವ 'ಹಯಾತ್ ಬಕ್ಷ್ ಉದ್ಯಾನ' ಇಲ್ಲಿಂದ ಸ್ವಲ್ಪ ಮುಂದಕ್ಕಿದೆ. ಇಲ್ಲಿ ಸಮಾರಂಭಗಳೂ ಸಂಗೀತ, ನೃತ್ಯಾದಿ ಹಬ್ಬಗಳೂ ಜರಗುತ್ತಿದ್ದುವು.

ದೆಹಲಿ ಕೆಂಪುಕೋಟೆಯ ಇನ್ನೊಂದು ಸುಂದರ ಕಟ್ಟಡ ರಂಗ್ ಮಹಲ್- ಬಣ್ಣಗಳ ಅರಮನೆ.

ದೆಹಲಿಯ ಕೆಂಪುಕೋಟೆ ನಿರ್ಮಾಣ ಕಾರ್ಯ 1639ರಲ್ಲಿ ಆರಂಭವಾಗಿ, 9 ವರ್ಷ ಕಾಲ ನಡೆಯಿತು.

ಆಗ್ರಾದಲ್ಲೂ ಒಂದು ಕೆಂಪುಕೋಟೆಯಿದೆ. ಇದು ದೆಹಲಿ ಕೆಂಪುಕೋಟೆಗಿಂತಲೂ ಪ್ರಾಚೀನವಾದದ್ದು. ಅದನ್ನು ಕಟ್ಟಿಸಿದವನು ಅಕ್ಬರ್. 1565ರಲ್ಲಿ ನಿರ್ಮಾಣಕಾರ್ಯ ಆರಂಭವಾಗಿ ಎಂಟು ವರ್ಷ ನಡೆಯಿತು.

ದೆಹಲಿ-ಆಗ್ರಾಗಳ ಕೆಂಪುಕೋಟೆಗಳೆರಡೂ ಯಮುನಾ ನದಿಯ ದಂಡೆಯ ಮೇಲಿವೆ.

ಕೆಂಪೇಗೌಡ

ಆತ ರಾಜಧಾನಿಗಾಗಿ ಸೂಕ್ತ ಸ್ಥಳ ಹುಡುಕುತ್ತ ಹೊರಟಿದ್ದ. ಹಾಗೆ ಹೋಗುತ್ತಿದ್ದಾಗ ಆತನ ಬೇಟೆನಾಯಿಯನ್ನು ಒಂದು ಮೊಲ ಎದುರಿಸಿತು. ಈ ಗಂಡುಮೆಟ್ಟಿನ ಸ್ಥಳವೇ ತನ್ನ ರಾಜಧಾನಿಗೆ ಸರಿಯಾದ ಸ್ಥಾನ ಎಂದು ಆತ ನಿಶ್ಚಯಿಸಿದ. ಮೊದಲಿಗೆ ಅಲ್ಲಿದ್ದ ಊರನ್ನು ವಿಸ್ತರಿಸಿ ಹೊಸ ಊರು ಕೋಟೆಗಳನ್ನು ಕಟ್ಟಿಸಿದ. ಅದನ್ನು ತನ್ನ ರಾಜಧಾನಿಯಾಗಿ ಮಾಡಿಕೊಂಡ.

ಆತನೇ ಬೆಂಗಳೂರು ನಗರದ ಸಂಸ್ಥಾಪಕ ಇಮ್ಮಡಿ ಕೆಂಪೇಗೌಡ.

ಕೆಂಪೇಗೌಡನ ಪೂರ್ವಜರು ವಿಜಯನಗರದ ಅರಸರ ಸಾಮಂತರು. ಕೆಂಪೇಗೌಡ 1513ರಿಂದ 69ರ ವರೆಗೆ ಮಾಗಡಿಯ ಪಾಳೆಯಗಾರನಾಗಿದ್ದ. ವಿಜಯನಗರದ ಕೃಷ್ಣದೇವರಾಯ ಹಾಗೂ ಅನಂತರ ಪಟ್ಟಕ್ಕೆ ಬಂದ ಅಚ್ಯುತರಾಯನ ಗೌರವಾದರಗಳಿಗೆ ಆತ ಪಾತ್ರನಾಗಿದ್ದ. ಅಚ್ಯುತರಾಯ ಅವನಿಗೆ 12 ಹೋಬಳಿಗಳನ್ನು ಬಳುವಳಿಯಾಗಿ ಕೊಟ್ಟ.

ಬೆಂಗಳೂರಿನ ಗವಿ ಗಂಗಾಧರೇಶ್ವರ, ಬಸವಣ್ಣನ ದೇವಸ್ಥಾನಗಳನ್ನು ಮತ್ತು ಹತ್ತಿರದಲ್ಲೇ ಕೆಂಪಾಂಬುಧಿ ಕೆರೆಯನ್ನು ಕೆಂಪೇಗೌಡ ಕಟ್ಟಿಸಿದ. ತನ್ನದೇ ಆದ ಭೈರವ ನಾಣ್ಯಗಳನ್ನು ಟಂಕಿಸಿ ಚಲಾವಣೆಗೆ ತಂದ.

1550ರಲ್ಲಿ ಶಿವಗಂಗೆ ಕೆಂಪೇಗೌಡನ ವಶವಾಯಿತು. ಅಲ್ಲಿಯೂ ದೇವಾಲಯಗಳ ಜೀರ್ಣೋದ್ಧಾರದತ್ತ ಗಮನಹರಿಸಿದ.

ವಿಜಯನಗರದ ಮುಂದಿನ ಸಮ್ರಾಟ ಸದಾಶಿವರಾಯನ ಕಾಲದಲ್ಲಿ ಕೆಂಪೇಗೌಡನ ವಿರುದ್ಧ ಒಳಸಂಚು ನಡೆಯಿತು. ಇದರ ಪರಿಣಾಮವಾಗಿ ಕೆಂಪೇಗೌಡ ಸೆರೆಮನೆ ಸೇರಬೇಕಾಯಿತು. ವಿಜಯನಗರದ ಅಳಿಯ ರಾಮರಾಯನ ಪ್ರಯತ್ನದಿಂದಾಗಿ ಕೆಂಪೇಗೌಡನ ಸತ್ಯ, ನ್ಯಾಯಭಕ್ತಿ ಸಮ್ರಾಟನ ಅರಿವಿಗೆ ಬಂದಿತು. 5 ವರ್ಷಗಳ ಸೆರೆವಾಸವಾದ ಬಳಿಕ ಕೆಂಪೇಗೌಡನ ಬಿಡುಗಡೆಯಾಗಿ ಪುನಃ ರಾಜ್ಯಸೂತ್ರ ಅವನ ಕೈಗೆ ಬಂತು. ಅವನದು ಸುವ್ಯವಸ್ಥಿತ ಆಡಳಿತ: ಧರ್ಮದಿಂದ ರಾಜ್ಯಭಾರ.

1569ರಲ್ಲಿ ಕೆಂಪೇಗೌಡ ನಿಧನನಾದ.



ರಾಷ್ಟ್ರೀಯ ಶಿಲ್ಪ : ಜನರಲ್ ಕಾರ್ಯಪ್ಪ

ಕೆ. ಎಂ. ಕಾರ್ಯಪ್ಪ

ಭಾರತ ಸ್ವತಂತ್ರವಾದ ಮೇಲೆ ಭಾರತೀಯ ಸೈನ್ಯದ ಪ್ರಥಮ ಕಮಾಂಡರ್-ಇನ್-ಚೀಫ್ ಆದವರು, ಜನರಲ್ ಕೆ. ಎಂ. ಕಾರ್ಯಪ್ಪ. 1949–1953ವರೆಗೆ ಅವರು ಸೈನ್ಯದ ಅತ್ಯುನ್ನತ ಹುದ್ದೆಯಲ್ಲಿದ್ದರು. ಈ ಕಾಲದಲ್ಲಿ ಸೈನ್ಯದಲ್ಲಿ ಹಲವು ಸುಧಾರಣೆಗಳನ್ನು ಸಾಧಿಸಿದರು.

ಕೋದಂಡೇರ ಮಾದಪ್ಪ ಕಾರ್ಯಪ್ಪನವರ ತಾಯಿ ಕಾವೇರಿ: ತಂದೆ ಮಾದಪ್ಪ. 1900 ಜನವರಿ 28ರಂದು ಕೊಡಗಿನಲ್ಲಿ ಜನಿಸಿದರು. ಸೈನ್ಯದಲ್ಲಿ ಆಯುಕ್ತಾಧಿಕಾರಿಯಾಗಿ, 1920–21ರಲ್ಲಿ ಇರಾಕ್‌ನಲ್ಲಿ, ಅನಂತರ ವಾಯವ್ಯಗಡಿ ಪ್ರಾಂತ್ಯದಲ್ಲಿ ಸೇವೆಸಲ್ಲಿಸಿದರು. 1933ರಲ್ಲಿ ಕ್ವೆಟ್ಟಾ ಸ್ಟಾಫ್ ಕಾಲೇಜಿಗೆ ತರಬೇತಿಗಾಗಿ ಕಳುಹಿಸಲ್ಪಟ್ಟರು. ಅವರೇ ಆ ತರಬೇತಿ ಪಡೆದ ಮೊತ್ತ ಮೊದಲ ಭಾರತೀಯ. ದ್ವಿತೀಯ ಮಹಾಯುದ್ಧದ ವೇಳೆ ಇರಾಕ್, ಸಿರಿಯಾ, ಇರಾನ್, ಬರ್ಮ ಯುದ್ಧಗಳಲ್ಲಿ ಭಾಗವಹಿಸಿದರು.

1944ರಲ್ಲಿ ಸೈನ್ಯ ಪುನರ್ವ್ಯವಸ್ಥಾ ಸಮಿತಿ ಸದಸ್ಯರಾಗಿಯೂ 1947ರಲ್ಲಿ ಸೇನಾ ಬಲಗಳ ಪುನರ್ಘಟನಾ ಸಮಿತಿಯ ಸದಸ್ಯರಾಗಿಯೂ ಕಾರ್ಯಪ್ಪನವರು ನೇಮಕಗೊಂಡರು. ಅವರು ಜನರಲ್ ಆಗಿ, ಸೈನ್ಯದ ಉನ್ನತ ಅಧಿಕಾರ ವಹಿಸಿಕೊಂಡದ್ದು 1949 ಜನವರಿ 15ರಂದು. ಈ ಅಧಿಕಾರದಿಂದ ನಿವೃತ್ತರಾದ ಬಳಿಕ, 1953–56 ವರೆಗೆ ಅವರು ಆಸ್ಟ್ರೇಲಿಯ ಹಾಗೂ ನ್ಯೂಜಿಲೆಂಡ್‌ಗಳಲ್ಲಿ ಭಾರತದ ಹೈಕಮಿಷನರ್ ಆಗಿದ್ದರು. ಸಾರ್ವಜನಿಕ ಸಂಘ, ಸಂಸ್ಥೆಗಳಲ್ಲಿ ಕಾರ್ಯಪ್ಪನವರು ಈಗಲೂ ಕ್ರಿಯಾಶೀಲರಾಗಿದ್ದಾರೆ. 1949ರಲ್ಲಿ ಅಮೆರಿಕದ ಆಗಿನ ರಾಷ್ಟ್ರಾಧ್ಯಕ್ಷ ಟ್ರೂಮನ್ ಅವರು ಕಾರ್ಯಪ್ಪನವರಿಗೆ 'ಲೀಜನ್ ಆಫ್ ಮೆರಿಟ್' ಗೌರವ ನೀಡಿದರು. 1952ರಲ್ಲಿ ನೇಪಾಳದ ರಾಜರು ಅವರನ್ನು ನೇಪಾಳೀ ಸೇನೆಯ ಗೌರವ ಜನರಲ್‌ರನ್ನಾಗಿ ಅಂಗೀಕರಿಸಿ ಗೌರವಿಸಿದರು. ಆಗ್ರಾ ವಿಶ್ವವಿದ್ಯಾನಿಲಯ ಅವರಿಗೆ ಗೌರವ ಡಾಕ್ಟರೇಟ್ ಪ್ರಶಸ್ತಿ ನೀಡಿತು.

ಕಾರ್ಯಪ್ಪನವರು ರಾಷ್ಟ್ರಜೀವನದಲ್ಲಿ ಶಿಸ್ತನ್ನೂ ಸುವ್ಯವಸ್ಥೆಯನ್ನೂ ಸದಾ ಪ್ರತಿಪಾದಿಸುತ್ತಾರೆ. ಅವರು ಒಳ್ಳೆಯ ವಾಗ್ಮಿ. ವ್ಯಾಯಾಮ, ಕ್ರೀಡೆಗಳಲ್ಲೂ ಅವುಗಳ ಅಭಿವೃದ್ಧಿಯಲ್ಲೂ ಅವರಿಗೆ ಅಪಾರ ಆಸಕ್ತಿ.



ರಾಜತಂತ್ರ : ಪಣಿಕ್ಕರ್

ಕೆ.ಎಂ. ಪಣಿಕ್ಕರ್

ಕಾವಲಮ್ ಮಾಧವ ಪಣಿಕ್ಕರ್ ಉತ್ತಮ ರಾಜತಂತ್ರಜ್ಞ, ವಿದ್ವಾಂಸ.

ಪಣಿಕ್ಕರ್ ತಿರುವಾಂಕೂರಿನವರು. ಹುಟ್ಟಿದ್ದು 1895ರಲ್ಲಿ. ಮದರಾಸಿನ ಕ್ರಿಶ್ಚಿಯನ್ ಕಾಲೇಜಿನಲ್ಲೂ ಆಕ್ಸ್‌ಫರ್ಡ್‌ನಲ್ಲಿ ಕ್ರೈಸ್ತ ಚರ್ಚ್ ಕಾಲೇಜಿನಲ್ಲೂ ವಿದ್ಯಾಭ್ಯಾಸ ನಡೆಸಿದರು. ನ್ಯಾಯಶಾಸ್ತ್ರ ಶಿಕ್ಷಣವನ್ನೂ ಪಡೆದರು. ಅನಂತರ ಅಲಿಗಡ ಹಾಗೂ ಕಲ್ಕತ್ತಾ ವಿಶ್ವವಿದ್ಯಾನಿಲಯಗಳಲ್ಲಿ ಸ್ವಲ್ಪ ಕಾಲ ಶಿಕ್ಷಕರಾಗಿದ್ದರು. ಮುಂದೆ 'ಹಿಂದೂಸ್ಥಾನ್ ಟೈಮ್ಸ್' ಪತ್ರಿಕೆಯ ಸಂಪಾದಕರಾದರು.

ತಮ್ಮ ರಾಜನೀತಿ ಪರಿಣತಿಯಿಂದಾಗಿ, ಭಾರತೀಯ ರಾಜರ ಮಂಡಲಿಯ ಅಧಿಪತಿಗೆ ಕಾರ್ಯದರ್ಶಿಯೆಂದು ಪಣಿಕ್ಕರ್ ನೇಮಕಗೊಂಡರು. ಸ್ವಾತಂತ್ರ್ಯಪೂರ್ವ ಕಾಲದಲ್ಲಿ ಪಾಟಿಯಾಲ ಸಂಸ್ಥಾನದ ಮಂತ್ರಿಯಾಗಿಯೂ ಬಿಕಾನೇರ್ ಸಂಸ್ಥಾನದ ಮುಖ್ಯಮಂತ್ರಿಯಾಗಿಯೂ ಅವರು ಸೇವೆ ಸಲ್ಲಿಸಿದರು.

ಸ್ವತಂತ್ರ ಭಾರತದಲ್ಲಿ ಅವರು ನಿರ್ವಹಿಸಿದ ಗುರುತರ ಹೊಣೆ ಭಾರತದ ರಾಯಭಾರಿ ಕೆಲಸ. ಚೀನ (1948–52), ಈಜಿಪ್ಟ್ (1952–53), ಫ್ರಾನ್ಸ್ (1956–59) ಗಳಲ್ಲಿ ಅವರು ಭಾರತದ ರಾಯಭಾರಿಯಾಗಿದ್ದರು. ರಾಜ್ಯ ಪುನರ್ರಚನಾ ಆಯೋಗದ ಸದಸ್ಯರಾಗಿ ಭಾರತ ಸರಕಾರ ಅವರನ್ನು ನೇಮಿಸಿತು. ಜಮ್ಮು ಮತ್ತು ಕಾಶ್ಮೀರ ವಿಶ್ವವಿದ್ಯಾನಿಲಯದ ವೈಸ್ ಛಾನ್ಸಲರ್ ಆಗಿದ್ದರು. ಕೊನೆಯಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ವೈಸ್ ಛಾನ್ಸಲರ್ ಆಗಿದ್ದರು. ಈ ಅಧಿಕಾರದಲ್ಲಿದ್ದಾಗ, 1963 ಡಿಸೆಂಬರ್ 10ರಂದು, ಮೈಸೂರಿನಲ್ಲಿ ಕಾಲವಾದರು.

ಪಣಿಕ್ಕರ್ ಇತಿಹಾಸ, ರಾಜಕಾರಣಗಳನ್ನು ಕುರಿತ ಬರೆಹಗಳಿಗೆ ಹೆಸರಾದವರು. ಅವರ 24 ಪುಸ್ತಕಗಳು ಇಂಗ್ಲಿಷಿನಲ್ಲಿವೆ. 'ಏಷ್ಯಾ ಮತ್ತು ಪಾಶ್ಚಾತ್ಯ ಪ್ರಾಬಲ್ಯ', 'ಎರಡು ಚೀನಗಳು' ಅವರ ಗಮನಾರ್ಹ ಕೃತಿಗಳು. ಮಲಯಾಳಂ ಭಾಷೆಯಲ್ಲಿ ಇವರ ಹನ್ನೊಂದು ಕವಿತಾ ಸಂಗ್ರಹಗಳು, ಐದು ಕಾದಂಬರಿಗಳು, ಐದು ನಾಟಕಗಳು ಮತ್ತಿತರ ಸಾಹಿತ್ಯ ಕೃತಿಗಳು ಪ್ರಕಟವಾಗಿವೆ.

ಕೆ. ಎಂ. ಮುನ್ಷಿ

ಖ್ಯಾತ ಸಾಹಿತಿ, ರಾಜಕಾರಣಿ ಹಾಗೂ ವಕೀಲ ಎಂದು ಹೆಸರು ಗಳಿಸಿದವರು ಕೆ. ಎಂ. ಮುನ್ಷಿ.

ಕನ್ಹಯ್ಯಾಲಾಲ್ ಮಾಣಿಕ್‌ಲಾಲ್ ಮುನ್ಷಿ ಹುಟ್ಟಿದ್ದು ಗುಜರಾತಿನ ಬರೂಚ್‌ನಲ್ಲಿ, 1887 ಡಿಸೆಂಬರ್ 30ರಂದು. ಬರೋಡ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡಿ 1913ರಲ್ಲಿ ಮುಂಬಯಿಯಲ್ಲಿ ವಕೀಲ ವೃತ್ತಿ ಪ್ರಾರಂಭಿಸಿದರು. ಆನಿ ಬೆಸೆಂಟ್ ಹೋಂ ರೂಲ್ ಚಳುವಳಿ ಪ್ರಾರಂಭಿಸಿದಾಗ ಮುನ್ಷಿ ಅದನ್ನು ಸೇರಿದರು; ಕಾಂಗ್ರೆಸ್ಸಿಗರಾದರು; ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದರು. 1930ರಲ್ಲಿ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಆರಿಸಲ್ಪಟ್ಟರು.

1937ರಲ್ಲಿ ಮುಂಬಯಿ ಪ್ರಾಂತದ ಕಾಂಗ್ರೆಸ್ ಮಂತ್ರಿಮಂಡಲದ ಗೃಹಮಂತ್ರಿಯಾಗಿದ್ದರು. ಭಾರತಕ್ಕೆ ಸ್ವಾತಂತ್ರ್ಯ ದೊರೆತ ಮೇಲೆ ಸಂವಿಧಾನ ರಚಿಸುವುದರಲ್ಲಿ ಇವರು ಸಕ್ರಿಯ ಪಾತ್ರ ವಹಿಸಿದರು. ಕೇಂದ್ರದ ಆಹಾರ ಮತ್ತು ಕೃಷಿ ಮಂತ್ರಿಯಾಗಿದ್ದರು. ಆಗ 'ವನಮಹೋತ್ಸವ' ಕಾರ್ಯಕ್ರಮ ಆರಂಭಿಸಿದರು. ಉತ್ತರ ಪ್ರದೇಶದ ರಾಜ್ಯಪಾಲರೂ ಆಗಿದ್ದರು.

ಮುಂದೆ ಮುನ್ಷಿ ಕಾಂಗ್ರೆಸ್ ಪಕ್ಷ ತ್ಯಜಿಸಿ, ಸ್ವತಂತ್ರ ಪಕ್ಷ ಸೇರಿದರು.

ಆಧುನಿಕ ಗುಜರಾತಿ ಸಾಹಿತ್ಯದ ಶ್ರೇಷ್ಠರಲ್ಲೊಬ್ಬರು ಎಂಬ ಪ್ರಖ್ಯಾತಿ ಅವರದು. ಕತೆ, ಕಾದಂಬರಿ, ನಾಟಕ ಪ್ರಕಾರಗಳಲ್ಲಿ ಸಿದ್ಧಹಸ್ತರು. ಪೌರಾಣಿಕ, ಐತಿಹಾಸಿಕ, ಸಾಮಾಜಿಕ ಎಲ್ಲ ಕ್ಷೇತ್ರಗಳಿಂದಲೂ ವಸ್ತುಗಳನ್ನು



...ತೀಯ ವಿದ್ಯಾಭವನ : ಕನ್ಹಯ್ಯಾಲಾಲ್

ಆಯ್ದುಕೊಂಡಿದ್ದಾರೆ. 'ಪೃಥ್ವಿ ವಲ್ಲಭ', 'ಸ್ವಪ್ನದ್ರಷ್ಟ', 'ಜಯ ಸೋಮನಾಥ', 'ಸ್ನೇಹ ಸಂಭ್ರಮ', 'ಭಗ್ನ ಪಾದುಕಾ' ಮೊದಲಾದುವು ಇವರ ಗುಜರಾತಿ ಕೃತಿಗಳು. ಇಂಗ್ಲಿಷ್‌ನಲ್ಲಿ 'ಗುಜರಾತ್ ಅಂಡ್ ಇಟ್ಸ್ ಲಿಟರೇಚರ್', 'ಭಗವದ್ಗೀತ ಅಂಡ್ ಮಾಡರ್ನ್ ಲೈಫ್', 'ಕೃಷ್ಣಾವತಾರ' ಮುಂತಾದ ಗ್ರಂಥಗಳನ್ನು ಬರೆದಿದ್ದಾರೆ.

1938ರಲ್ಲಿ ಭಾರತೀಯ ವಿದ್ಯಾಭವನ ಆರಂಭಿಸಿ ಭಾರತದ ಸಂಸ್ಕೃತಿ, ನಾಗರಿಕತೆ, ಚರಿತ್ರೆಗಳ ಪ್ರಸಾರಕ್ಕೆ ಉತ್ತಮ ತಳಹದಿ ಹಾಕಿದರು. ಮುನ್ಷಿಯವರು ಈ ಸಂಸ್ಥೆಯ ಕುಲಪತಿಯಾಗಿದ್ದರು. 'ಭವನ್ಸ್ ಜರ್ನಲ್' ಪಾಕ್ಷಿಕ ಪತ್ರಿಕೆ ಆರಂಭಿಸಿದರು. ಭಾರತೀಯ ಚರಿತ್ರೆ, ನಾಗರಿಕತೆ, ಸಂಸ್ಕೃತಿಗಳನ್ನು ಕುರಿತು ಅನೇಕ ಗ್ರಂಥಗಳು ಭಾರತೀಯ ವಿದ್ಯಾ ಭವನದ ವತಿಯಿಂದ ಪ್ರಕಟವಾಗಿವೆ.

ಕನ್ಹಯ್ಯಾಲಾಲ್ ಮುನ್ಷಿಯವರ ಪತ್ನಿ ಲೀಲಾವತಿಯವರೂ ದೇಶಪ್ರೇಮಿ. ಸಾಂಸ್ಕೃತಿಕ ವಿಚಾರಗಳಲ್ಲಿ ಅಪಾರ ಆಸಕ್ತಿಯುಳ್ಳವರು. ಮುನ್ಷಿಯವರು 1971 ಫೆಬ್ರುವರಿ 8ರಂದು ನಿಧನರಾದರು.

ನೋಡಿ : ಭಾರತೀಯ ವಿದ್ಯಾಭವನ
ವನಮಹೋತ್ಸವ—ಸಂಪುಟ ೨

ಕೆ. ಎಫ್. ನರಿಮನ್



ವೀರ : ನರಿಮನ್

'ಮುಂಬಯಿಯ ಸಿಂಹ' ಎನಿಸಿಕೊಂಡವರು ಖುರ್ಷಿದ್ ಫ್ರಾಮ್‌ಜಿ ನರಿಮನ್. ವೀರ ನರಿಮನ್ ಎಂದೇ ಇವರು ಪ್ರಖ್ಯಾತರಾಗಿದ್ದರು.

ನರಿಮನ್ ಸ್ವಾತಂತ್ರ್ಯ ಸಮರದಲ್ಲಿ ಭಾಗಿಯಾಗಿ ಸೆರೆಮನೆ ಕಂಡರು. ಗಾಂಧೀಜಿಯ ಕಾರ್ಯನೀತಿಗಳಲ್ಲಿ ಕೆಲವು ತಮಗೆ ಸರಿ ಬೀಳದಿದ್ದಾಗ ಅವನ್ನು ಖಂಡಿಸಲು ಇವರು ಹಿಂಜರಿಯಲಿಲ್ಲ.

ಮೈಸೂರು ರಾಜ್ಯದಲ್ಲಿ 1938ರಲ್ಲಿ ಧ್ವಜ ಸತ್ಯಾಗ್ರಹ ಆರಂಭಿಸಿ ಜನಜಾಗೃತಿಗೆ ಕಾರಣರಾದವರು ನರಿಮನ್.

ಹುಟ್ಟಿದ್ದು 1883ರಲ್ಲಿ. ವಕೀಲರಾಗಿ ಇವರು ಪ್ರಸಿದ್ಧಿಗೆ ಬಂದರು. ಮುಂಬಯಿಯ ಮೇಯರ್ ಆಗಿ ಜನಪ್ರಿಯರಾದರು.


ಕ್ರಮೇಣ ನರಿಮನ್ ರಾಜಕೀಯ ರಂಗದಿಂದ ಹಿಂದೆ ಸರಿದರು. 1948ರಲ್ಲಿ ಕೆ. ಎಫ್. ನರಿಮನ್ ನಿಧನರಾದರು.

ಕೆ. ಎಸ್. ಕೃಷ್ಣನ್

ನೋಡಿ : ಕೃಷ್ಣನ್—ಸಂಪುಟ ೩

ಕೆ. ಎಸ್. ತಿಮ್ಮಯ್ಯ

ಸೇನಾದಳದ ಮುಖಂಡನಾಗಿ ಯುದ್ಧರಂಗದಲ್ಲಿ ಕಾರ್ಯನಿರ್ವಹಣೆ ಮಾಡಿದ ಮೊತ್ತಮೊದಲ ಭಾರತೀಯ ಕೆ. ಎಸ್. ತಿಮ್ಮಯ್ಯನವರು. ಬರ್ಮಾದ ಆರಕಾನ್ ಕದನದಲ್ಲಿ ಅವರು ಹೋರಾಡಿದ ರೀತಿ ಅವರಿಗೆ ಪ್ರಶಸ್ತಿ ತಂದಿತು.



ಸಮರ–ಶಾಂತಿ : ಜನರಲ್ ತಿಮ್ಮಯ್ಯ

ಕೋಡಂದೇರ ಸುಬ್ಬಯ್ಯ ತಿಮ್ಮಯ್ಯ 1906ರಲ್ಲಿ ಕೊಡಗಿನಲ್ಲಿ ಹುಟ್ಟಿದರು.

1948ರಲ್ಲಿ, ಕಾಶ್ಮೀರದಲ್ಲಿ ಅವರು ವೈರಿಗಳ ಭದ್ರನೆಲೆಯನ್ನು ಮುರಿದ ರೀತಿ ಪ್ರಶಂಸನೀಯ. 1953ರಲ್ಲಿ ಅವರು ಕೊರಿಯದಲ್ಲಿ ಶಾಂತಿರಕ್ಷಣೆಗಾಗಿ ರೂಪಿಸಲ್ಪಟ್ಟ ತಟಸ್ಥ ರಾಷ್ಟ್ರಗಳ ಸಮಿತಿಯ ಅಧ್ಯಕ್ಷರಾಗಿದ್ದರು. ಈ ಸಮಿತಿಯಲ್ಲಿ ಅವರು ಕೆಲಸ ನಡೆಸಿದ ಬಗೆ ಎಲ್ಲರ ಗೌರವಕ್ಕೂ ಪಾತ್ರವಾಯಿತು.

1957–60 ವರೆಗೆ ಅವರು ಭಾರತದ ಪ್ರಧಾನ ಸೇನಾಪತಿ ಆಗಿದ್ದರು. ಈ ಕಾಲದಲ್ಲಿ ಟೀಕೆಗೆ ಗುರಿಯಾದಾಗ ಒಂದು ಬಾರಿ ರಾಜಿನಾಮೆ ಕೊಟ್ಟುದೂ ಉಂಟು. ಆದರೆ ಪ್ರಧಾನಿ ನೆಹರೂ ತಿಮ್ಮಯ್ಯನವರು ತಮ್ಮ ರಾಜಿನಾಮೆ ಹಿಂದಕ್ಕೆ ತೆಗೆದುಕೊಳ್ಳುವಂತೆ ಮಾಡಿದರು. 1964ರಲ್ಲಿ ಸೈಪ್ರಸ್‌ನ ವಿಶ್ವಸಂಸ್ಥೆಯ ಶಾಂತಿದಳದ ಮುಖಂಡರಾಗಿ ತಿಮ್ಮಯ್ಯನವರು ನೇಮಿಸಲ್ಪಟ್ಟರು.

ಈ ಹುದ್ದೆಯಲ್ಲಿದ್ದಾಗ ನಿಕೊಸಿಯಾದಲ್ಲಿ, 1965ರಲ್ಲಿ, ಜನರಲ್ ತಿಮ್ಮಯ್ಯನವರು ಹೃದಯಾಘಾತದಿಂದ ಕಾಲವಾದರು. ಅವರ ದೇಹವನ್ನು ಅಲ್ಲಿಂದ ಬೆಂಗಳೂರಿಗೆ ತಂದು ಅಂತ್ಯಕ್ರಿಯೆ ನಡೆಸಲಾಯಿತು.

ಕೆ. ಕಾಮರಾಜ್

ಹುಟ್ಟಿದ್ದು ಸಾಮಾನ್ಯ ಹಳ್ಳಿಗರ ಮನೆತನದಲ್ಲಿ. ತೀರಾ ಕಡಮೆ ವಿದ್ಯಾಭ್ಯಾಸ; ಇಂಗ್ಲಿಷ್ ಭಾಷೆಯ ಪರಿಶ್ರಮವಿಲ್ಲ. ಹೀಗಿದ್ದೂ ಮದರಾಸಿನಂಥ (ತಮಿಳುನಾಡು) ದೊಡ್ಡ ರಾಜ್ಯದ ಮುಖ್ಯಮಂತ್ರಿಯಾಗಿ ದಕ್ಷತೆಯಿಂದ ಆಡಳಿತ ನಡೆಸಿದರು; ಅಷ್ಟೇ ಅಲ್ಲ, ಭಾರತ ರಾಷ್ಟ್ರೀಯ ಕಾಂಗ್ರೆಸ್ಸಿನ ಅಧ್ಯಕ್ಷರೂ ಆದರು.

ಹೀಗೆ ಅನೇಕ ಮಹತ್ವದ ಸಾಧನೆಗಳನ್ನು ಕೈಗೂಡಿಸಿಕೊಂಡವರು ಕುಮಾರಸ್ವಾಮಿ ಕಾಮರಾಜ್.

ಜನನ 1903ರಲ್ಲಿ, [illegible] ಹದಿನೇಳನೆಯ ಕಿರು ಹರೆಯದಲ್ಲೇ ಸಾರ್ವಜನಿಕ ಜೀವನಕ್ಕೆ ಇಳಿದು [illegible] ನಾಡು ಪ್ರಾಂತೀಯ ಕಾಂಗ್ರೆಸ್ ಕಾರ್ಯಸಮಿತಿ ಹಾಗೂ ಅಖಿಲ ಭಾರತ



ಸರಳತೆ, ಆಳ : ಕಾಮರಾಜ್

ಕಾಂಗ್ರೆಸ್ ಸಮಿತಿಗಳ ಸದಸ್ಯತ್ವ ಪಡೆದರು. 1935ರಲ್ಲಿ ಪ್ರಾಂತ ಕಾಂಗ್ರೆಸ್ ಕಾರ್ಯದರ್ಶಿಯಾದರು. 1937ರಲ್ಲಿ 1946ರಲ್ಲಿ ಮದರಾಸ್ ಶಾಸನಸಭೆಗೆ ಆರಿಸಿ ಬಂದರು. ಪ್ರಾಂತ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾಗಿದ್ದಾಗ 1942ರಿಂದ 45ರ ತನಕ ಜೈಲುವಾಸ. 1947ರಲ್ಲಿ ಭಾರತದ ಸಂವಿಧಾನ ಸಭೆಯ ಸದಸ್ಯರಾದರು.

1954ರಿಂದ 63ರ ವರೆಗೆ ತಮಿಳುನಾಡಿನ ಮುಖ್ಯಮಂತ್ರಿಯಾಗಿ, ಆಡಳಿತ ನಿರ್ವಹಿಸಿದರು. 1952ರಲ್ಲಿ, 1970ರ ಮರುಚುನಾವಣೆಯಲ್ಲಿ, ಲೋಕಸಭೆಗೆ ಚುನಾಯಿತರಾದರು.

1963ರಲ್ಲಿ ಕಾಂಗ್ರೆಸ್ ಪಕ್ಷದ ಸಂಘಟನೆಗಾಗಿ ದುಡಿಯಲು, ಅಧಿಕಾರ ಸ್ಥಾನ ಬಿಡಬೇಕೆಂಬ 'ಕಾಮರಾಜ್ ಸೂತ್ರ'ದ ಪ್ರವರ್ತಕರಾಗಿ ಮುಖ್ಯಮಂತ್ರಿಸ್ಥಾನ ಬಿಟ್ಟುಕೊಟ್ಟರು. 1963ರಲ್ಲಿ ಅಖಿಲ ಭಾರತ ಕಾಂಗ್ರೆಸ್ ಅಧ್ಯಕ್ಷರಾಗಿ ಆರಿಸಲ್ಪಟ್ಟು 1968ರ ವರೆಗೆ ಆ ಸ್ಥಾನದಲ್ಲಿದ್ದರು.

1964ರಲ್ಲಿ ಜವಾಹರಲಾಲ ನೆಹರೂ ನಿಧನ ಹೊಂದಿದಾಗ ಅವರ ಉತ್ತರಾಧಿಕಾರಿಯನ್ನಾಗಿ ಲಾಲ್ ಬಹದ್ದೂರ್ ಶಾಸ್ತ್ರೀ ಅವರ ಆಯ್ಕೆಯಲ್ಲೂ 1966ರಲ್ಲಿ ಇಂದಿರಾ ಗಾಂಧೀ ಅವರ ಆಯ್ಕೆಯ ಸಂದರ್ಭದಲ್ಲೂ ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಕಾಮರಾಜ್ ಅವರ ಪಾತ್ರ ನಿರ್ಣಾಯಕವಾಗಿ ಪರಿಣಮಿಸಿತು.


1967 ಮಹಾ ಚುನಾವಣೆಯಲ್ಲಿ ವಿರುಧುನಗರದ ಕ್ಷೇತ್ರದಿಂದ ತಮಿಳುನಾಡು ವಿಧಾನಸಭೆಗೆ ಸ್ಪರ್ಧಿಸಿ ಪರಾಜಿತರಾದರು. 1969ರಲ್ಲಿ ಪ್ರಧಾನ ಮಂತ್ರಿ ಇಂದಿರಾಗಾಂಧೀ ಅವರೊಡನೆ ಭಿನ್ನಾಭಿಪ್ರಾಯ ತಳೆದು ಕಾಂಗ್ರೆಸ್ ಇಬ್ಭಾಗವಾದಾಗ ಸಂಸ್ಥಾ ಕಾಂಗ್ರೆಸ್‌ನಲ್ಲೇ ಉಳಿದರು. 1971ರಲ್ಲಿ ಲೋಕಸಭೆಗೆ ಆರಿಸಲ್ಪಟ್ಟರು.

ಕಾಮರಾಜರು ಮಿತಭಾಷಿ. ಸದಾ ಕಾರ್ಯನಿರತ. ಸಂಸ್ಥೆಯ ಸಂಘಟನೆಯಲ್ಲಿ ತೀವ್ರ ಆಸಕ್ತಿ. ಶ್ರೀಸಾಮಾನ್ಯನಂತೆಯೇ ಇರುವ ಸರಳ ಜೀವಿ. ಮೊದಲಿನಿಂದಲೂ ರಾಷ್ಟ್ರೀಯ ಸ್ವಾತಂತ್ರ್ಯಸಂಗ್ರಾಮದಲ್ಲಿ ಸಕ್ರಿಯ ಪಾತ್ರ ನಿರ್ವಹಿಸಿರುವ ಕಾಮರಾಜ್ ರಾಷ್ಟ್ರೀಯವಾದಿ; ಸಮಾಜವಾದೀ ಪ್ರಜಾತಂತ್ರದಲ್ಲಿ ಅಚಲ ನಂಬಿಕೆಯುಳ್ಳ ವ್ಯಕ್ತಿ.

ಕೆ. ಕೆ. ಹೆಬ್ಬಾರ್

ಅರ್ಧ ಮೈಮುಚ್ಚುವಷ್ಟು ಬಟ್ಟೆಯುಟ್ಟು ಕುಳಿತಿರುವ ಒಬ್ಬ ಭಿಕ್ಷುಕಿ; ಸನಿಯದಲ್ಲೇ ನಿಂತ ಭಿಕ್ಷುಕ. ಇಬ್ಬರ ಕೈಯಲ್ಲೂ ಬರಿದಾದ ಪಾತ್ರೆ–ಇದು ಹೆಬ್ಬಾರರ 'ಭಿಕ್ಷುಕರು' ಎಂಬ ಸುಪ್ರಸಿದ್ಧ ಚಿತ್ರ. ಪ್ಯಾರಿಸಿನ ಮ್ಯೂಸಿಯಮಿನಲ್ಲಿ ಈ ಕೃತಿಯನ್ನು ಶಾಶ್ವತ ಪ್ರದರ್ಶನಕ್ಕೆಂದು ಇಡಲಾಗಿದೆ. ಈ ಗೌರವವನ್ನು ಮೊದಲ ಬಾರಿಗೆ ಗಳಿಸಿದ ಭಾರತೀಯ ಕಲಾವಿದ ಹೆಬ್ಬಾರರು. ಭಾರತದಲ್ಲೂ ವಿದೇಶಗಳಲ್ಲೂ ತಮ್ಮ ಚಿತ್ರಗಳ 'ಏಕ ಕಲಾವಿದ ಕೃತಿ ಪ್ರದರ್ಶನ' ನಡೆಸಿದ ಕೀರ್ತಿ ಇವರದು.

ಭಾರತೀಯ ಹಾಗೂ ಪಾಶ್ಚಾತ್ಯ ಕಲಾಶೈಲಿಗಳೆರಡನ್ನೂ ಅಭ್ಯಸಿಸಿರುವ ಹೆಬ್ಬಾರರು ತಮ್ಮದೇ ಆದ ಶೈಲಿಯನ್ನು ಬೆಳೆಸಿಕೊಂಡಿದ್ದಾರೆ. ಸ್ವಂತಿಕೆಯ ಲಕ್ಷಣಗಳನ್ನುಳ್ಳ ನವ್ಯಪಂಥ ಇವರದು. ಉಜ್ವಲ ಬಣ್ಣಗಳು, ಚಲನಶೀಲ ರೇಖೆಗಳು, ಭಾವಪೂರ್ಣತೆ ಇವರ ಚಿತ್ರಗಳ ವೈಶಿಷ್ಟ್ಯ.



ಸ್ವಂತಿಕೆ : ಕಟ್ಟಿಂಗೇರಿ

ಕೃಷ್ಣ ಹೆಬ್ಬಾರರು 1912 ಜೂನ್ 15ರಂದು ದಕ್ಷಿಣ ಕನ್ನಡ ಜಿಲ್ಲೆಯ ಕಟ್ಟಿಂಗೇರಿಯಲ್ಲಿ ಹುಟ್ಟಿದರು. ತಂದೆ ನಾರಾಯಣ ಹೆಬ್ಬಾರ್, ತಾಯಿ ಸೀತಮ್ಮ. ಉಡುಪಿಯಲ್ಲಿ ಶಾಲಾ ವಿದ್ಯಾಭ್ಯಾಸ. ಕಲೆಯೆಂದರೆ ಆಗಲೇ ಅವರಿಗೆ ವಿಶೇಷ ಒಲವು. ಕಡುಬಡತನದಿಂದಾಗಿ ಚಿಕ್ಕಂದಿನಲ್ಲೇ ಜೀವನ ನಿರ್ವಹಣಕ್ಕೋಸ್ಕರ ದುಡಿಯಬೇಕಾದಾಗ, ಯಾರ ಮಾರ್ಗದರ್ಶನವೂ ಇಲ್ಲದೆ ಅವರು ಚಿತ್ರ ಬರೆಯಲಾರಂಭಿಸಿದರು : ಫೋಟೋ ತಿದ್ದುವ ಕೆಲಸವನ್ನು ಮಾಡಿದರು. ಅನಂತರ ಮೈಸೂರಿನ ಚಾಮರಾಜೇಂದ್ರ ಕಲಾಶಾಲೆಯಲ್ಲಿ ಕಲೆಯ ಅಧ್ಯಯನ ; ಮುಂದ ಮುಂಬಯಿಯ ಜೆ. ಜೆ. ಸ್ಕೂಲ್ ಆಫ್ ಆರ್ಟ್ಸ್‌ನಲ್ಲಿ ಕಲಿತು ಡಿಪ್ಲೊಮ ಪಡೆದರು. ಅಲ್ಲಿ ಏಳು ವರ್ಷ ಕಾಲ ಅಧ್ಯಾಪಕರಾಗಿಯೂ ಕೆಲಸ ಮಾ ದರು. ಈ ವೇಳೆಗೆ ತನ್ನದೇ ಶೈಲಿ ರೂಢಿಸಿಕೊಳ್ಳಬೇಕೆಂಬ ನಿರ್ಧಾರಕ ಬಂದರು. ಇವರ ಕಾರ್ಯಕ್ಷೇತ್ರ ಮುಂಬಯಿಯಾಯಿತು. ಮುಂಬಯಿ ಕಲಾಸಂಘ, ಕಲ್ಕತ್ತಾ ಕಲಾ ಸಂಘ, ಅಂತರ ಏಷ್ಯನ್ ಪ್ರದರ್ಶನಗಳ ಇವರ ಕೃತಿಗಳು ಬಹುಮಾನ ಪಡೆದುವು. ಅವರ ಪ್ರಥಮ 'ಏಕಕಲಾವಿ ಕೃತಿ ಪ್ರದರ್ಶನ' 1945ರಲ್ಲಿ ನಡೆಯಿತು.

1949ರಲ್ಲಿ ಹೆಬ್ಬಾರರು ಪಾಶ್ಚಾತ್ಯ ದೇಶಗಳ ಪ್ರವಾಸ ಕೈಗೊಂಡರು ಅಲ್ಲೆಲ್ಲ ಇವರ ಕಲಾಕೃತಿಗಳಿಗೆ ಮನ್ನಣೆ ದೊರೆಯಿತು.

ಲಂಡನ್, ಪ್ಯಾರಿಸ್, ಸ್ವಿಟ್ಜರ್‌ಲೆಂಡ್, ನ್ಯೂಯಾರ್ಕ್‌ಗಳಲ್ಲಿ ಹೆಬ್ಬಾರರ ತಮ್ಮ ಕೃತಿಗಳನ್ನು ಪ್ರದರ್ಶಿಸಿದ್ದಾರೆ. ಯೂರೋಪ್, ಸೋವಿಯೆತ ಒಕ್ಕೂಟ, ಪೋಲೆಂಡ್, ಅಮೆರಿಕ, ಮೆಕ್ಸಿಕೋ, ಜಪಾನ್ ಮುಂತಾ ದೇಶಗಳಲ್ಲಿ ಪರ್ಯಟನ ಮಾಡಿದ್ದಾರೆ. ಅಂತರರಾಷ್ಟ್ರೀಯ ಕಲಾ ಮೇ ಗಳಲ್ಲಿ ಭಾಗವಹಿಸಿದ್ದಾರೆ. ಇಟಲಿಯ ಥೊಮಾಸ್ಸೊ ಸಂಸ್ಥೆ 1970ರ ಅವರಿಗೆ ಪ್ರಶಸ್ತಿಯಿತ್ತು ಗೌರವಿಸಿತು. ಜರ್ಮನಿಯ ಹೈಡೆಲ್‌ಬರ್ಗ್

'ಗುಡಿಸುವವರು' –ಹೆಬ್ಬಾರ್ ಕೃತಿ



ವಿದ್ಯಾರ್ಥಿನಿಯೊಬ್ಬರು ಹೆಬ್ಬಾರರ ಕಲೆಯನ್ನೇ ವಿಷಯವಾಗಿ [illegible] ಸಂಶೋಧನಾ ಪ್ರಬಂಧವನ್ನು 1963ರಲ್ಲಿ ಬರೆದರು.

ಹೆಬ್ಬಾರರು ಉತ್ತಮ ಭಿತ್ತಿಚಿತ್ರಗಳನ್ನು ರಚಿಸಿದ್ದಾರೆ. ಇವರ [illegible] ಹೆಸರಾದ ಕಲಾಕೃತಿಗಳು : 'ಪ್ರೇಮ–ಶ್ರೀ', 'ಹೋಳಿಯ ಬಣ್ಣ', 'ಬಸ್ತಾರಿನ ತಾಯಿ', 'ಗೋವರ್ಧನ ಗಿರಿ', 'ಕೋಳಿ ಕಾಳಗ', 'ವಿಜಯ 1972', 'ಬಾಂಗ್ಲಾದೇಶ'. ಅನೇಕ ಖಾಸಗಿ ಹಾಗೂ ಸಾರ್ವಜನಿಕ ಕಲಾಸಂಗ್ರಹಗಳಲ್ಲಿ ಹೆಬ್ಬಾರರ ಚಿತ್ರಗಳಿವೆ. ಇವರು ಕೇಂದ್ರ ಲಲಿತಕಲಾ ಅಕಾಡೆಮಿಯ ಸದಸ್ಯರು : ಮೂರು ಬಾರಿ ಪ್ರಶಸ್ತಿ ವಿಜೇತರು. 1961ರಲ್ಲಿ ಭಾರತ ಸರಕಾರ ಇವರಿಗೆ ಪದ್ಮಶ್ರೀ ಪ್ರಶಸ್ತಿಯಿತ್ತು ಪುರಸ್ಕರಿಸಿತು. 'ಹೆಬ್ಬಾರರ ರೇಖಾಚಿತ್ರಗಳು ಮತ್ತು ವರ್ಣಚಿತ್ರಗಳು' ; 'ಚಿತ್ರಗಳು –ಹಾಡುವ ರೇಖೆ' ಇವು ಹೆಬ್ಬಾರರ ಕೃತಿ ಸಂಕಲನಗಳು.

ಕೆ. ಕೇಳಪ್ಪನ್

ಕೇರಳದ ಅಪ್ರತಿಮ ಸ್ವಾತಂತ್ರ್ಯ ಹೋರಾಟಗಾರ ಹಾಗೂ ಅತ್ಯಂತ ಜನಪ್ರಿಯ ನಾಯಕರಾಗಿದ್ದವರು ಕೊಜಪ್ಪಲ್ಲಿ ಕೇಳಪ್ಪನ್. ಗಾಂಧೀಜಿಯ ತತ್ತ್ವವನ್ನು ಕೇರಳದಲ್ಲಿ ಹರಡಿ ಬಹುಮುಖ ಜನಜಾಗೃತಿ ಉಂಟು ಮಾಡಿದವರಲ್ಲಿ ಇವರು ಪ್ರಮುಖರು.

ಕೇಳಪ್ಪನ್ ಹುಟ್ಟಿದ್ದು ಹಿಂದಿನ ಮಲಬಾರ್ ಜಿಲ್ಲೆಗೆ ಸೇರಿದ್ದ ಮೂರಿಯೂರ್‌ನಲ್ಲಿ, 1889 ಆಗಸ್ಟ್ 24ರಂದು. ತಾಯಿ ಕುಂಜಮ್ಮ. ತಂದೆ ಕಣೂರನ್ ನಾಯರ್. ಹೈಸ್ಕೂಲು ಶಿಕ್ಷಣದ ಬಳಿಕ ಇವರು ಮದರಾಸಿಗೆ ಹೋಗಿ ಕಾಲೇಜು ಶಿಕ್ಷಣ ಪಡೆದರು. ತುಸು ಕಾಲ ಶಾಲಾಶಿಕ್ಷಕರಾಗಿ ಕೆಲಸ ಮಾಡುತ್ತಿದ್ದು ಅನಂತರ ಕಾಂಗ್ರೆಸ್ ಪಕ್ಷವನ್ನು ಸೇರಿದರು. ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದರು : ಕಾರಾಗೃಹ ವಾಸ ಅನುಭವಿಸಿದರು. 1924ರಿಂದ 30 ಮತ್ತು 1945ರಿಂದ 50ರ ವರೆಗೆ ಕೇಳಪ್ಪನ್ ಕೇರಳ ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿದ್ದರು.

ಹರಿಜನೋದ್ಧಾರಕ್ಕಾಗಿ ಕೇಳಪ್ಪನ್ ಸಲ್ಲಿಸಿದ ಸೇವೆ ಘನವಾದದ್ದು. ಹರಿಜನರಿಗೆ ದೇವಸ್ಥಾನ ಪ್ರವೇಶದ ಹಕ್ಕು ದೊರಕಿಸಲು 1932ರಲ್ಲಿ ಅವರು ಗುರುವಾಯೂರಿನಲ್ಲಿ ಉಪವಾಸ ಸತ್ಯಾಗ್ರಹ ನಡೆಸಿದರು. ಅನಂತರ ಹನ್ನೆರಡನೆಯ ದಿನ ಗಾಂಧೀಜಿಯ ಸೂಚನೆಯಂತೆ ಅದನ್ನು ನಿಲ್ಲಿಸಿದರು.


ದೀನ ದಲಿತರ ವಿಚಾರದಲ್ಲಿ ಕೇಳಪ್ಪನ್ ಅವರಿಗೆ ತೀವ್ರ ಅನುಕಂಪ. ಮಲಬಾರು ಜಿಲ್ಲಾ ಬೋರ್ಡಿನ ಅಧ್ಯಕ್ಷರಾಗಿದ್ದ ಅವಧಿಯಲ್ಲಿ ಆ ಜಿಲ್ಲೆಯ ಹರಿಜನರ ಸ್ಥಿತಿಗತಿಗಳನ್ನು ಉತ್ತಮಗೊಳಿಸಲು ಬಹಳವಾಗಿ ಶ್ರಮಿಸಿದರು.

ಕೇಳಪ್ಪನ್ ಪ್ರಭಾವಶಾಲಿ ಲೇಖಕರೂ ಹೌದು. ಹಲವು ವರ್ಷ ಅವರು ಕೇರಳದ ಜನಪ್ರಿಯ ವೃತ್ತಪತ್ರಿಕೆ 'ಮಾತೃಭೂಮಿ'ಯ ಸಂಪಾದಕರಾಗಿದ್ದರು.

ಸ್ವಾತಂತ್ರ್ಯಾನಂತರ ಕಾಂಗ್ರೆಸ್ ಗಾಂಧೀತತ್ತ್ವದಿಂದ ದೂರ ಸರಿಯುತ್ತಿದೆ ಎಂದು ಕೇಳಪ್ಪನ್ ಅವರಿಗೆ ಅನಿಸಿತು. ಅವರು 1951ರಲ್ಲಿ ಕಾಂಗ್ರೆಸ್ ಪಕ್ಷವನ್ನು ಬಿಟ್ಟು ಕಿಸಾನ್ ಮಜ್ದೂರ್ ಪ್ರಜಾಪಕ್ಷವನ್ನು ಸೇರಿದರು. ಈ ಪಕ್ಷದ ಪರವಾಗಿ ಚುನಾವಣೆಗೆ ನಿಂತು ಲೋಕಸಭೆಯ ಸದಸ್ಯರಾದರು. 1957ರಲ್ಲಿ ಕೇಳಪ್ಪನ್ ಸರ್ವೋದಯ ಚಳುವಳಿಯನ್ನು ಸೇರಿದರು.

ಕೊನೆಗಾಲದಲ್ಲಿ ಅವರು [illegible] ದಂಡೆಯ ಮೇಲಿರುವ ತವನೂರಿನಲ್ಲಿ ನೆಲಸಿ ಅದನ್ನು ಗಾಂಧೀಜಿಯ ಆದರ್ಶಕ್ಕೆ ಅನುಸಾರವಾಗಿ ಒಂದು ಗ್ರಾಮವನ್ನಾಗಿ ರೂಪಿಸಲು ದುಡಿದರು.

ತ್ಯಾಗಮಯ ಆದರ್ಶ ಜೀವನದಿಂದಾಗಿ ಜನ [illegible] ಮನ್ನಣೆ, ಗೌರವಗಳಿಗೆ ಪಾತ್ರರಾಗಿದ್ದ ಕೇಳಪ್ಪನ್ 1971 ಅಕ್ಟೋಬರ್ 7ರಂದು, ತಮ್ಮ 83ನೆಯ ವಯಸ್ಸಿನಲ್ಲಿ, ನಿಧನರಾದರು.



ಆದರ್ಶ : ಕೇಳಪ್ಪನ್

ಕೆ. ಟಿ. ತೆಲಂಗ್

ಭಾರತ ರಾಷ್ಟ್ರೀಯ ಕಾಂಗ್ರೆಸ್ ಸಂಸ್ಥೆಯ ಸ್ಥಾಪಕ ಸದಸ್ಯರಾಗಿದ್ದವರು ಕೆ. ಟಿ. ತೆಲಂಗ್.

ತೆಲಂಗ್ ಅವರು 1850ರಲ್ಲಿ ಜನಿಸಿದರು. ಎಲ್ಫಿನ್‌ಸ್ಟನ್ ಕಾಲೇಜಿನಲ್ಲಿ 1867–72 ಅವಧಿಯಲ್ಲಿ ಶಿಕ್ಷಣವೃತ್ತಿ ನಡೆಸಿ, ಅನಂತರ ವಕೀಲರಾದರು. ಅವರು ಸಂಸ್ಕೃತ ವಿದ್ವಾಂಸರೂ ಆಗಿದ್ದರು. ಹಿಂದೂ ಕಾಯಿದೆಯ ವಿಷಯದಲ್ಲಿ ನ್ಯಾಯಾಧೀಶರು ಇವರ ಸಲಹೆ ಕೇಳುತ್ತಿದ್ದರು.

ಹತ್ತೊಂಬತ್ತನೆಯ ಶತಮಾನದಲ್ಲಿ ಭಾರತದಲ್ಲಿ ಜಾಗೃತಿಯ ಭಾವನೆ ಮೂಡಲು ಕಾರಣರಾದ ಪ್ರಮುಖರಲ್ಲಿ ತೆಲಂಗ್ ಒಬ್ಬರು. ಭಾರತೀಯ ಸಂಸ್ಕೃತಿಯ ಶ್ರೀಮಂತಿಕೆಯನ್ನು ತೋರಿಸಿಕೊಡುವ ಕಾರ್ಯಕ್ರಮಗಳಲ್ಲಿ ತೆಲಂಗ್ ಪಾತ್ರವಹಿಸಿದರು. ರಾಷ್ಟ್ರದ ತರುಣರಲ್ಲಿ ರಾಷ್ಟ್ರೀಯ ಮನೋಭಾವ ಬೆಳೆಸುವ ಸಲುವಾಗಿ 1885ರಲ್ಲಿ 'ಬಾಂಬೆ ಪ್ರೆಸಿಡೆನ್ಸಿ ಅಸೋಸಿಯೇಷನ್' ಎಂಬ ಸಂಸ್ಥೆಯನ್ನು ತೆಲಂಗ್, ಫಿರೋಜ್ ಷಾ ಮೆಹತಾ ಮತ್ತು ಬದ್ರುದ್ದೀನ್ ತಯಾಬ್ಜಿ ಅವರು ಪ್ರಾರಂಭಿಸಿದರು. ಪುರೋಗಾಮಿ ವಿಚಾರ ಸರಣಿಯ 'ಇಂದು ಪ್ರಕಾಶ್' ಎಂಬ ಪತ್ರಿಕೆಯಲ್ಲಿ ತೆಲಂಗ್ ಅವರ ಲೇಖನಗಳು ಪ್ರಕಟವಾಗುತ್ತಿದ್ದುವು.

1884ರಲ್ಲಿ ತೆಲಂಗ್ ಅವರು ಮುಂಬಯಿ ನ್ಯಾಯವಿಧಾಯಕ ಸಭೆಯ ಸದಸ್ಯರಾದರು. 1889ರಲ್ಲಿ ಮುಂಬಯಿ ಉಚ್ಚನ್ಯಾಯಾಲಯದ ನ್ಯಾಯಾಧೀಶರಾದರು. 1893ರಲ್ಲಿ ಕಾಲವಾದರು.

ಕೆ. ಟಿ. ಭಾಷ್ಯಂ

ಮೈಸೂರು ಸಂಸ್ಥಾನದಲ್ಲಿ ಜನಜಾಗೃತಿಯನ್ನುಂಟುಮಾಡಿ, ಹತ್ತಿಗಿರಣಿ, [illegible] ಕಾರಖಾನೆಗಳಲ್ಲಿ ದುಡಿಯುತ್ತಿದ್ದ ಕೆಲಸಗಾರರಲ್ಲಿ ಐಕಮತ್ಯ ಮತ್ತು [illegible]ಕ್ಕಾಗಿ ಶ್ರಮಿಸಿದ ಅಗ್ರಗಣ್ಯ ಕೆ. ತಿರುವೆಂಗಡ[illegible] ಅಯ್ಯಂಗಾರ್ ಭಾಷ್ಯಂ.

ಜನನ 1895. 1926ರಲ್ಲಿ ಬೆಂಗಳೂರಿನ ಬಿನ್ನಿ ಮಿಲ್ ಕೆಲಸಗಾರರು [illegible]



ಜನಜಾಗೃತಿ : ಭಾಷ್ಯಂ

ಬಿನ್ನಿ ಮಿಲ್ ಕಾರ್ಮಿಕರು ತಮ್ಮ ಬೇಡಿಕೆ ಈಡೇರಿಸಿಕೊಳ್ಳುವುದಕ್ಕೆ ಮತ್ತೊಮ್ಮೆ ಮುಷ್ಕರ ಹೂಡಿದಾಗ, ಸರಕಾರ ಭಾಷ್ಯಂ ಅವರನ್ನು ಬಂಧಿಸಿತು. ಅದನ್ನು ಖಂಡಿಸಿ ಬೆಂಗಳೂರಿನ ಎಲ್ಲ ಕಾರ್ಮಿಕರು —ಸುಮಾರು ಹತ್ತು ಸಹಸ್ರಕ್ಕೆ ಮೇಲ್ಪಟ್ಟು— ಮುಷ್ಕರ ಹೂಡಿದರು ; ಭದ್ರಾವತಿ ಮತ್ತು ಚಿನ್ನದ ಗಣಿಗಳ ಕಾರ್ಮಿಕರೂ ಸಹಾನುಭೂತಿ ತೋರಿದರು. ಪರಿಣಾಮವಾಗಿ ಯಾವ ಷರತ್ತೂ ಹಾಕದೆ ಭಾಷ್ಯಂರನ್ನು ಬಿಡುಗಡೆ ಮಾಡಲಾಯಿತು.

ಕಾರ್ಮಿಕರು ಸಂಘ ಸ್ಥಾಪಿಸಿಕೊಂಡರೆ ಅಂತಹ ಸಂಘಗಳಿಗೆ ಸರಕಾರ ಮಾನ್ಯತೆ ನೀಡಬೇಕು ಎಂಬುದು ಕೆಲಸಗಾರರ ಮುಖ್ಯ ಬೇಡಿಕೆ. ಆ ಹಕ್ಕನ್ನು ನೀಡುವಂತೆ ಭಾಷ್ಯಂ ಸರಕಾರವನ್ನು ಒತ್ತಾಯ ಮಾಡುತ್ತ ಬಂದರು. ಆಗ ಬ್ರಿಟಿಷ್ ಪ್ರಾಂತಗಳಲ್ಲಿ ಕೂಡ, ಆ ಹಕ್ಕು ದೊರೆತಿರಲಿಲ್ಲ. ಭಾಷ್ಯಂ ನಡೆಸಿದ ತೀವ್ರ ಪ್ರಯತ್ನಗಳಿಂದ ಮೈಸೂರು ಸಂಸ್ಥಾನದಲ್ಲಿ ಮೊದಲ ಬಾರಿಗೆ 'ಮೈಸೂರು ಕಾರ್ಮಿಕ ಕಾನೂನು' ಜಾರಿಗೆ ಬಂತು.

ಸಂಸ್ಥಾನದ ಜನರ ಆಶೋತ್ತರಗಳನ್ನು ಈಡೇರಿಸಲು ಪ್ರಾರಂಭಿಸಲ್ಪಟ್ಟ ಮೈಸೂರು ಕಾಂಗ್ರೆಸ್ ಸಂಸ್ಥೆಯ ಬೆಳವಣಿಗೆಗೋಸ್ಕರ ಕೂಡ ಭಾಷ್ಯಂ ನಿರಂತರವಾಗಿ ದುಡಿದರು.

ಮೈಸೂರಿನ ರಾಜಕೀಯದಲ್ಲಿ 1937 ಅಕ್ಟೋಬರ್ 15ರಂದು ಮಹತ್ವದ ಘಟನೆ ನಡೆಯಿತು. ಪ್ರಜಾಪ್ರತಿನಿಧಿ ಸಭೆಯ ಅಧಿವೇಶನದಲ್ಲಿ ಭಾಗವಹಿಸುವುದಕ್ಕೋಸ್ಕರ ಮೈಸೂರಿಗೆ ಹೋದ ಭಾಷ್ಯಂ ಅವರನ್ನು ಸರಕಾರ ಆ ರಾತ್ರಿ ಬಂಧಿಸಿತು. ಮಾರನೆಯ ದಿನ ಇದನ್ನು ಖಂಡಿಸಿ, ಪ್ರಜಾಪ್ರತಿನಿಧಿ ಸಭೆಯಲ್ಲಿ ಸಭಾತ್ಯಾಗ ನಡೆಯಿತು. ಆ ಘಟನೆ ಮೈಸೂರು ಕಾಂಗ್ರೆಸ್ಸಿನ ಶಕ್ತಿ ಸಂಚಯಕ್ಕೆ ಪ್ರೇರಕವಾಯಿತು.

1940ರಲ್ಲಿ ಮೈಸೂರು ಕಾಂಗ್ರೆಸ್ ಅಧ್ಯಕ್ಷರಾದ ಭಾಷ್ಯಂ 1941ರಲ್ಲಿ ಪ್ರಜಾಪ್ರತಿನಿಧಿ ಸಭೆ ಚುನಾವಣೆಗೆ ಕಾಂಗ್ರೆಸ್ ಅಭ್ಯರ್ಥಿಗಳನ್ನು ನಿಲ್ಲಿಸಿ, ಸಂಸ್ಥಾನದಲ್ಲೆಲ್ಲ ಬಿರುಗಾಳಿ ಪ್ರವಾಸ ಕೈಗೊಂಡು ಜನರ ಬೆಂಬಲ ಪಡೆದರು. ಅವರ ರಾಜಕಾರಣ ಚತುರತೆಯಿಂದ 173 ಸ್ಥಾನಗಳ ಪೈಕಿ 119 ಸ್ಥಾನಗಳು ಮೈಸೂರು ಕಾಂಗ್ರೆಸ್ಸಿಗೆ ಲಭ್ಯವಾದುವು. ಅವರಲ್ಲಿ 39 ಮಂದಿ ಅವಿರೋಧವಾಗಿ ಆಯ್ಕೆಯಾದವರು.


ಕಾರ್ಮಿಕರ ಮತ್ತು ಕಾಂಗ್ರೆಸ್ಸಿನ ಚಳುವಳಿಯಲ್ಲಿ ಭಾಗವಹಿಸಿದ್ದಕ್ಕಾಗಿ ಭಾಷ್ಯಂ ಹತ್ತು ಸಲ ಸೆರೆಮನೆ ವಾಸ ಅನುಭವಿಸಬೇಕಾಯಿತು.

1947ರಲ್ಲಿ ಮೈಸೂರಿನಲ್ಲಿ ಜವಾಬ್ದಾರಿ ಸರಕಾರ ಸ್ಥಾಪನೆಯಾದ ಮೇಲೆ ಅವರು ಕೈಗಾರಿಕಾ ಮತ್ತು ಕಾರ್ಮಿಕ ಮಂತ್ರಿಯಾದರು. ದುಡಿಯುವ ಜನರಿಗೆ ಸೌಲಭ್ಯ ಕಲ್ಪಿಸುವಂಥ ಮುಖ್ಯ ಕಾನೂನುಗಳನ್ನು ರಚಿಸಿ ಜಾರಿಗೆ ತಂದರು.

ಮುಂದೆ ಮೈಸೂರು ವಿಧಾನ ಪರಿಷತ್ತಿನ ಅಧ್ಯಕ್ಷರಾಗಿ ಭಾಷ್ಯಂ ಸೇವೆ ಸಲ್ಲಿಸಿದರು.

ಭಾಷ್ಯಂ 1956 ಮೇ 24ರಂದು ನಿಧನರಾದರು.

ಕೆ. ಪಿ. ಎಸ್. ಮೆನನ್



ಸೋವಿಯೆತ್ ಮೈತ್ರಿ : ಕೆ. ಪಿ. ಎಸ್.

ರಾಷ್ಟ್ರದಲ್ಲೂ ವಿದೇಶಗಳಲ್ಲೂ ಹಲವು ಸರಕಾರೀ ಹುದ್ದೆಗಳಲ್ಲಿ ಭಾರತೀಯ ಅಧಿಕಾರಿಯಾಗಿ ಯಶಸ್ವಿಯಾಗಿ ಸೇವೆ ಸಲ್ಲಿಸಿದವರು, ಕುಮಾರ ಪದ್ಮನಾಭ ಶಿವಶಂಕರ ಮೆನನ್.

ಕುಮಾರ ಮೆನನ್ ಮತ್ತು ಜಾನಕಿ ಅಮ್ಮ ಇವರ ತಂದೆ, ತಾಯಿ; 1892 ಅಕ್ಟೋಬರ್ 18ರಂದು ಕೇರಳದ ಕೊಟ್ಟಾಯಮ್‌ನಲ್ಲಿ ಜನಿಸಿದರು. ಮದರಾಸು, ಆಕ್ಸ್‌ಫರ್ಡ್‌ಗಳಲ್ಲಿ ವಿದ್ಯಾಭ್ಯಾಸ. ಅನಂತರ ಇಂಡಿಯನ್ ಸಿವಿಲ್ ಸರ್ವಿಸ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ವಿದೇಶ ಹಾಗೂ ರಾಜಕೀಯ ಇಲಾಖೆಯ ಅಧಿಕಾರಿಯಾಗಿ ಕೆಲಸಕ್ಕೆ ಸೇರಿದರು.

1929–33ರಲ್ಲಿ ಸಿಂಹಳದಲ್ಲಿ ಭಾರತದ ಪ್ರತಿನಿಧಿಯಾಗಿದ್ದರು. ಅನಂತರ ಜಾಂಜಿಬಾರ್, ಕೀನ್ಯ ಹಾಗೂ ಉಗಾಂಡಗಳಲ್ಲಿ ಭಾರತೀಯರ ಸ್ಥಿತಿಗತಿಗಳ ಪರಿಶೀಲನೆಗಾಗಿ ಆಫ್ರಿಕಕ್ಕೆ ಹೋದರು. ಮುಂದೆ ಮೂರು ವರ್ಷಕಾಲ ಭರತಪುರದ ದಿವಾನರಾದರು. 1943–47ರ ಅವಧಿಯಲ್ಲಿ ಚೀನದಲ್ಲಿ ಭಾರತ ಸರಕಾರದ ಪ್ರಧಾನ ಪ್ರತಿನಿಧಿಯಾಗಿಯೂ ಅನಂತರ ರಾಯಭಾರಿಯಾಗಿಯೂ ಇದ್ದರು. 1952–61ರ ಅವಧಿಯಲ್ಲಿ ರಷ್ಯ, ಹಂಗೆರಿ ಹಾಗೂ ಪೋಲೆಂಡ್‌ಗಳಲ್ಲಿ ಭಾರತೀಯ ರಾಯಭಾರಿಯಾಗಿ ಕೆಲಸಮಾಡಿದರು.

1946ರಲ್ಲಿ ಸಾನ್‌ಫ್ರಾನ್ಸಿಸ್ಕೊದಲ್ಲಿ ವಿಶ್ವಸಂಸ್ಥೆಯ ಮಹಾಸಭಾ ಅಧಿವೇಶನದಲ್ಲಿ ಭಾಗವಹಿಸಿದರು. 1948ರಲ್ಲಿ ಕೊರಿಯಾ ಆಯೋಗದ ಅಧ್ಯಕ್ಷರಾಗಿದ್ದರು. ಇವರು ಭಾರತ ಸೋವಿಯೆತ್ ಸಾಂಸ್ಕೃತಿಕ ಸಂಘ ಹಾಗೂ ರಾಷ್ಟ್ರೀಯ ಸಂಗೀತ ನಾಟಕ ಅಕಾಡೆಮಿಗಳ ಅಧ್ಯಕ್ಷರು ಕೂಡಾ.

1958ರಲ್ಲಿ ಭಾರತ ಸರಕಾರ ಇವರಿಗೆ ಪದ್ಮಭೂಷಣ ಪ್ರಶಸ್ತಿ ನೀಡಿತು. ಇವರು ಒಳ್ಳೆಯ ವಾಗ್ಮಿ ಹಾಗೂ ಲೇಖಕ. ' ರಷ್ಯದ ಸಮ್ಯಕ್ ದೃಶ್ಯ ', ' ದೆಹಲಿ–ಚುಂಗ್‌ಕಿಂಗ್ ', ' ಹಲವು ಲೋಕಗಳು ', ' ಜಗತ್ತಿನ ಸುತ್ತ ಪಯಣ ', ' ದೀಪ ಹಾಗೂ ದೀಪದ ನಿಲುವು '—ಇವು ಮೆನನರ ಕೃತಿಗಳಲ್ಲಿ ಮುಖ್ಯವಾದುವು.

ಕೆಮ್ಮಣ್ಣುಗುಂಡಿ

ಕೆಂಪಾದ ಮಣ್ಣನ್ನು ಹೊಂದಿರುವ ಬೆಟ್ಟ ಕೆಮ್ಮಣ್ಣುಗುಂಡಿ : ಚಿಕ್ಕಮಗಳೂರು ಜಿಲ್ಲೆಗೆ ಸೇರಿರುವ ಪಶ್ಚಿಮ ಘಟ್ಟದ ಬಾಬಾಬುಡನ್‌ಗಿರಿ ಶ್ರೇಣಿಯ ಒಂದು ಭಾಗ ಇದು : ಬಾಬಾಬುಡನ್‌ಗಿರಿಯ ದತ್ತಾತ್ರೇಯಪೀಠದಿಂದ ಸುಮಾರು 18 ಮೈಲು ದೂರದಲ್ಲಿದೆ. ಇಲ್ಲಿ ಕಬ್ಬಿಣದ ಅದಿರಿನ ಗಣಿಗಳಿವೆ. ಈಗ ಈ ಪ್ರದೇಶ ಹಿತಕರ ಗಿರಿಧಾಮವಾಗಿಯೂ ಅಭಿವೃದ್ಧಿಗೊಂಡಿದೆ.

ಕೆಮ್ಮಣ್ಣುಗುಂಡಿಯಲ್ಲಿ ತೆಗೆದ ಕಬ್ಬಿಣ ಅದಿರನ್ನು ಬೆಟ್ಟದ ತಪ್ಪಲಲ್ಲಿರುವ ತಣಿಗೆಬೈಲಿಗೆ ಕಳುಹಿಸುತ್ತಾರೆ. ಇದಕ್ಕಾಗಿ ಉಕ್ಕಿನ ಹಗ್ಗಗಳ ಹೊರಜಿದಾರಿ



ಗಿರಿಧಾಮದಲ್ಲಿ ಹೊರಜುದಾರಿ

ಇದೆ. ಅದಿರು ತುಂಬಿದ ಬಾನೆಗಳು ಈ ಹೊರಜಿದಾರಿಯಲ್ಲಿ ಬೆಟ್ಟದಿಂದ ಕೆಳಕ್ಕಿಳಿಯುತ್ತವೆ: ಅಲ್ಲಿ ಅದಿರನ್ನು ಖಾಲಿ ಮಾಡಿದ ಮೇಲೆ ಅದೇ ಮಾರ್ಗವಾಗಿ ಮತ್ತೆ ಗಣಿಯ ಪ್ರದೇಶಕ್ಕೆ ಹಿಂದಿರುಗುತ್ತವೆ. ಈ ಚಲನೆ ತುಂಬ ಕುತೂಹಲಕಾರಿ ನೋಟ. ಮೂರು ಮೈಲು ಉದ್ದದ ಹೊರಜಿದಾರಿಯಲ್ಲಿ ಬಾನೆಗಳ ಚಲನೆ ಕೇವಲ ಭೂಆಕರ್ಷಣೆಯ ತತ್ತ್ವ ಆಧರಿಸಿ ಸಾಗುತ್ತದೆ. ಅದಿರು ಸಾಗಣೆಗಾಗಿ ಈ ವಿಧಾನವನ್ನು ಸೂಚಿಸಿದವರು ಸರ್ ಎಂ. ವಿಶ್ವೇಶ್ವರಯ್ಯನವರು.

ಕೆಮ್ಮಣ್ಣುಗುಂಡಿಯ ಕಬ್ಬಿಣ ಅದಿರು ನಿಕ್ಷೇಪ ಈ ಶತಮಾನದ ಆದಿ ಭಾಗದಲ್ಲೇ ಬೆಳಕಿಗೆ ಬಂದಿತು. 1918ರಲ್ಲಿ ಮೈಸೂರು ಸಂಸ್ಥಾನದ ಸರಕಾರ ಭದ್ರಾವತಿಯಲ್ಲಿ ಕಬ್ಬಿಣ ಉತ್ಪಾದಿಸುವ ನಿರ್ಧಾರಕೈಗೊಂಡಿತು. ಅಲ್ಲಿನ ಕಾರಖಾನೆಗೆ ಅದಿರು ಸರಬರಾಜು ನಡೆಯುವುದು ಕೆಮ್ಮಣ್ಣುಗುಂಡಿಯಿಂದ. ತಣಿಗೆಬೈಲಿಗೆ ಬಂದ ಅದಿರನ್ನು ರೈಲುಮಾರ್ಗದಿಂದ ಭದ್ರಾವತಿಗೆ ಸಾಗಿಸುತ್ತಾರೆ.

ಕೆಮ್ಮಣ್ಣುಗುಂಡಿ ಗಿರಿಧಾಮ. ಕಬ್ಬಿಣದ ಗಣಿಗೆ ಸಮೀಪವಾಗಿ ಸುಂದರ ನೈಸರ್ಗಿಕ ಸನ್ನಿವೇಶದಲ್ಲಿದೆ. ಇಲ್ಲಿ ಗಿರಿಧಾಮವನ್ನು ನಿರ್ಮಿಸುವ ಯೋಜನೆ ರೂಪಿಸಿ, ಅದನ್ನು ಕಾರ್ಯಗತ ಗೊಳಿಸಿದವರು ಮೈಸೂರು ಅರಸು ನಾಲ್ವಡಿ ಕೃಷ್ಣರಾಜ ಒಡೆಯರು. ಇಲ್ಲಿ ವಿಶ್ರಾಂತಿಗೃಹಗಳಿವೆ. ತರಕಾರಿ ಬೆಳೆಗಳ ಅಭಿವೃದ್ಧಿ ಕೇಂದ್ರ ಕೂಡ ಇಲ್ಲಿದೆ.

ನೋಡಿ : ಬಾಬಾ ಬುಡನ್‌ಗಿರಿ

ಕೆ. ಶೇಷಾದ್ರಿ ಅಯ್ಯರ್

ಬೆಂಗಳೂರು ನಗರದ ಕಬ್ಬನ್‌ಪಾರ್ಕಿನಲ್ಲಿ 1913ರ ಒಂದು ದಿನ ಭಾರಿ ಸಮಾರಂಭ. ವೈಸ್‌ರಾಯ್ ಲಾರ್ಡ್ ಹಾರ್ಡಿಂಗ್ ಬಂದಿದ್ದರು. ಮೈಸೂರು ಸಂಸ್ಥಾನಕ್ಕೆ ಚಿರಸ್ಮರಣೀಯ ಸೇವೆ ಸಲ್ಲಿಸಿದ ಮಹನೀಯರೊಬ್ಬರ ಸ್ಮರಣಾರ್ಥ ಜನರು ಅಲ್ಲಿ ಸ್ಥಾಪಿಸಿದ ಪ್ರತಿಮೆಯನ್ನು ಅವರು ಅನಾವರಣ ಮಾಡಿದರು; "ಇವರು ಸಲ್ಲಿಸಿದ ಮಹತ್ತರ ಸೇವೆಯನ್ನು ಆ ಕಾಲದ ಮೈಸೂರು ಇತಿಹಾಸದ ಪ್ರತಿ ಪುಟದಲ್ಲೂ ಕಾಣಬಹುದು" ಎಂದರು. ಈ ಪ್ರತಿಮೆಗೆ ಭಾಜನರಾದವರು ದಿವಂಗತ ಸರ್ ಕುಮಾರಪುರಂ ಶೇಷಾದ್ರಿ ಅಯ್ಯರ್.

ಶೇಷಾದ್ರಿ ಅಯ್ಯರ್ 18 ವರ್ಷ ಮೈಸೂರು ಸಂಸ್ಥಾನದ ದಿವಾನರಾಗಿದ್ದರು. ಅವರು ಸಾಧಿಸಿದ ಜನಹಿತ ಕಾರ್ಯಗಳು ಅನೇಕ. ಶಿವಸಮುದ್ರದಲ್ಲಿ ಕಾವೇರಿ ಜಲವಿದ್ಯುತ್ ಉತ್ಪಾದನಾ ಕೇಂದ್ರದ ಸ್ಥಾಪನೆಗೆ ಕಾರಣರಾದರು. ಶೀಘ್ರಸಾರಿಗೆ ಸಂಪರ್ಕ ಸಾಧನಗಳಿಲ್ಲದಿದ್ದ ಆ ಕಾಲದಲ್ಲಿ ಹಲವಾರು ವಿದೇಶಗಳಿಂದ ಯಂತ್ರೋಪಕರಣಗಳನ್ನೂ ತಜ್ಞರನ್ನೂ ಪಡೆದು ಅತ್ಯಲ್ಪ ಕಾಲದಲ್ಲಿ ಇದನ್ನು ಕಾರ್ಯಗತ ಮಾಡಿದರು.



ಆಡಳಿತ : ಶೇಷಾದ್ರಿ ಅಯ್ಯರ್

ಮಾರೀಕಣಿವೆ ಜಲಾಶಯ (ಈಗಿನ ವಾಣೀವಿಲಾಸ ಸಾಗರ) ನಿರ್ಮಾಣಕ್ಕೂ ಇವರೇ ಕಾರಣ. ಈ ಜಲಾಶಯ ಚಿತ್ರದುರ್ಗ ಜಿಲ್ಲೆಯ ಒಂದು ಭಾಗಕ್ಕೆ ನೀರಾವರಿ ಸೌಲಭ್ಯ ಒದಗಿಸಿತು. ಇವರು ಅಧಿಕಾರ ವಹಿಸಿಕೊಂಡಾಗ 10 ಲಕ್ಷ ರೂಪಾಯಿ ಇದ್ದ ಸಂಸ್ಥಾನದ ಆದಾಯ ಇವರು ನಿವೃತ್ತರಾಗುವ ಹೊತ್ತಿಗೆ 18 ಲಕ್ಷಕ್ಕೆ ಏರಿತು.

ಶೇಷಾದ್ರಿಅಯ್ಯರ್ ಅವರ ಮತ್ತೊಂದು ಕೊಡುಗೆ ಸರಕಾರೀ ನೌಕರರಿಗೆ ಅನ್ವಯಿಸುವ ಜೀವವಿಮೆ ಯೋಜನೆಯನ್ನು ಜಾರಿಗೆ ತಂದದ್ದು.

1845ರ ಜೂನ್ 1ರಂದು ಜನಿಸಿದ ಶೇಷಾದ್ರಿ ಅಯ್ಯರ್ 1865ರಲ್ಲಿ ಬಿ.ಎ. ಪದವಿಯನ್ನೂ 1874ರಲ್ಲಿ ಬಿ.ಎಲ್. ಪದವಿಯನ್ನೂ ಪಡೆದರು. ಅದೇ ವರ್ಷ ಕಲ್ಲಿಕೋಟೆಯ ಕಲೆಕ್ಟರ್ ಕಚೇರಿಯಲ್ಲಿ ಅನುವಾದಕರಾಗಿ ಸೇರಿದರು. ಮುಂದೆ ಮೈಸೂರು ಸಂಸ್ಥಾನದ ಸೇವೆಗೆ ಬಂದು ಅಷ್ಟಗ್ರಾಮ ವಿಭಾಗದ ನ್ಯಾಯಾಂಗ ಶಿರಸ್ತೇದಾರ, ನ್ಯಾಯಾಂಗ ಅಸಿಸ್ಟೆಂಟ್ ಕಮಿಷನರ್ ಆದರು. 1879ರಲ್ಲಿ ತುಮಕೂರಿನ ಜಿಲ್ಲಾಧಿಕಾರಿಯಾದರು. ಎರಡು ವರ್ಷಗಳ ಬಳಿಕ ಮೈಸೂರು ಜಿಲ್ಲಾಧಿಕಾರಿಯಾಗಿ, 1883ರಲ್ಲಿ ಚಾಮರಾಜ ಒಡೆಯರ ಆಳ್ವಿಕೆಯಲ್ಲಿ ದಿವಾನ ಹುದ್ದೆಗೇರಿದರು.

ಮೈಸೂರು ಸಂಸ್ಥಾನದ ಸರ್ವತೋಮುಖ ಅಭಿವೃದ್ಧಿಗಾಗಿ ಇವರು ಶ್ರಮಿಸಿದರು. ದಕ್ಷ ಆಡಳಿತಗಾರರೆಂದು ಪ್ರಖ್ಯಾತರಾದರು. ಬ್ರಿಟಿಷ್ ಸರಕಾರ ಇವರಿಗೆ 1887ರಲ್ಲಿ ಸಿ.ಎಸ್.ಐ. (ಕಂಪಾನಿಯನ್ ಆಫ್ ದಿ ಆರ್ಡರ್ ಆಫ್ ಸ್ಟಾರ್ ಆಫ್ ಇಂಡಿಯಾ) ಮತ್ತು 1893ರಲ್ಲಿ ಕೆ.ಸಿ.ಎಸ್.ಐ (ನೈಟ್ ಕಮಾಂಡರ್ ಆಫ್ ದಿ ಸ್ಟಾರ್ ಆಫ್ ಇಂಡಿಯಾ) ಪ್ರಶಸ್ತಿಗಳನ್ನು ನೀಡಿ ಗೌರವಿಸಿತು.

ಮೈಸೂರು, ಬೆಂಗಳೂರುಗಳನ್ನು ವಿಸ್ತರಿಸಿ ನೀರಿನ ಕೊಳಾಯಿಗಳನ್ನು ಹಾಕಿಸಿದ್ದು, ಸ್ಥಳೀಯ ಸರಕಾರದ ಆಡಳಿತ ವ್ಯವಸ್ಥೆಯಲ್ಲಿ ಸುಧಾರಣೆಗಳನ್ನು ಮಾಡಿದ್ದು, ಸರಕಾರದ ಗಣ್ಯ ಹುದ್ದೆಗಳಿಗೆ ಪ್ರತಿಭಾವಂತ ಯುವಕರನ್ನು ನಿಯೋಜಿಸುವುದಕ್ಕಾಗಿ ಮೈಸೂರು ಸಿವಿಲ್ ಸರ್ವಿಸ್ ಆರಂಭಿಸಿದ್ದು ಇವರ ಇನ್ನು ಕೆಲವು ಸಾಧನೆಗಳು. ಈ ಕ್ರಮಗಳು ಮೈಸೂರಿನ ಜನಜಾಗೃತಿ ಉಂಟಾಗಲು ಕಾರಣವಾದುವು. ಮೈಸೂರು ಸಂಸ್ಥಾನದಲ್ಲಿ ಸುವ್ಯವಸ್ಥಿತ ವೈಜ್ಞಾನಿಕ ಪುರಾತತ್ತ್ವ ಶೋಧನೆ ನಡೆಯಲು ವ್ಯವಸ್ಥೆ ಮಾಡಿದವರು, ಶೇಷಾದ್ರಿ ಅಯ್ಯರ್.

1901ರ ಮಾರ್ಚ್ 18ರಂದು ಅನಾರೋಗ್ಯ ನಿಮಿತ್ತ ಅಧಿಕಾರದಿಂದ ನಿವೃತ್ತರಾದರು. ಆರು ತಿಂಗಳ ಬಳಿಕ ಸೆಪ್ಟೆಂಬರ್ 13ರಂದು ಕಾಲವಾದರು.

ಬೆಂಗಳೂರಿನ ಕಬ್ಬನ್ ಪಾರ್ಕಿನಲ್ಲಿರುವ ರಾಜ್ಯ ಗ್ರಂಥ ಭಂಡಾರ ಭವನಕ್ಕೆ ಶೇಷಾದ್ರಿ ಅಯ್ಯರ್ ಅವರ ಹೆಸರು ಇಡಲಾಗಿದೆ. ಅವರ ಬಳಿಯಲ್ಲೇ ಶೇಷಾದ್ರಿ ಅಯ್ಯರ್ ಅವರ ಕಂಚಿನ ಪ್ರತಿಮೆಯಿದೆ.

ಕೆ. ಸಿ. ರಾಯ್

ಭಾರತೀಯ ಪತ್ರಿಕೋದ್ಯಮದ ಇತಿಹಾಸದಲ್ಲಿ 'ಸುದ್ದಿ ಸಂಸ್ಥೆಗಳ ಜನಕ' ಎಂಬ ಕೀರ್ತಿ ಕೇಶವ ಚಂದ್ರ ರಾಯ್ ಅವರಿಗೆ ಸಲ್ಲುತ್ತದೆ.

ಇವರ ಪರಿಶ್ರಮದ ಫಲವಾಗಿ 1910ರಲ್ಲಿ, ಕಲ್ಕತ್ತಾ ನಗರದಲ್ಲಿ, 'ಅಸೋಸಿಯೇಟೆಡ್ ಪ್ರೆಸ್ ಆಫ್ ಇಂಡಿಯಾ' ಎಂಬ ಸುದ್ದಿ ಸಂಸ್ಥೆ ಪ್ರಾರಂಭವಾಯಿತು: ಅನಂತರ ಇವರ ಉಪಶಾಖೆಗಳನ್ನು ಮದರಾಸ್, ಮುಂಬಯಿಗಳಲ್ಲೂ ತೆರೆದರು.

ರಾಯ್ ಈ ಸುದ್ದಿ ಸಂಸ್ಥೆಯನ್ನು ಪ್ರಾರಂಭಿಸುವ ಮುನ್ನ ಕೆಲವು ಪತ್ರಿಕೆಗಳ ವಿಶೇಷ ಸುದ್ದಿಗಾರರಾಗಿದ್ದರಲ್ಲದೆ, ಲಂಡನಿನ 'ಸೆಂಟ್ರಲ್ ಪ್ರೆಸ್ ನ್ಯೂಸ್ ಏಜೆನ್ಸಿ' ಎಂಬ ಸಮಾಚಾರ ಸಂಸ್ಥೆಯ ಪ್ರತಿನಿಧಿ ಆಗಿದ್ದರು.

ತಮ್ಮ ಸುದ್ದಿ ಸಂಸ್ಥೆಯನ್ನು ಆರಂಭಿಸುವ ಮೊದಲು ರಾಯ್, ಸುದ್ದಿ ಸಂಸ್ಥೆಗಳು ಹೇಗೆ ಕೆಲಸ ಮಾಡುತ್ತವೆ ಎಂಬುದನ್ನು ಆಳವಾಗಿ ಅಭ್ಯಾಸ ಮಾಡಿದರು. ಭಾರತದ ವೃತ್ತಪತ್ರಿಕೆಗಳಿಗೆ ಆದಷ್ಟು ಕಡಮೆ ದರದಲ್ಲಿ ತಂತಿಮೂಲಕ ಸುದ್ದಿ ಒದಗಿಸಬೇಕೆಂಬುದು ಅವರ ಅಪೇಕ್ಷೆಯಾಗಿತ್ತು. ಇದಕ್ಕಾಗಿ ಅವರು ಪ್ರಯತ್ನಪಟ್ಟು, ಭಾರತದ ಅಂಚೆ ಮತ್ತು ತಂತಿ ಕಾನೂನಿನಲ್ಲಿ ತಿದ್ದುಪಡಿ ಮಾಡಿಸಿದರು.

ಆದರೆ ರಾಯ್ ಅವರ ಉದ್ಯಮಕ್ಕೆ ತಕ್ಕಷ್ಟು ಪ್ರೋತ್ಸಾಹ ದೊರೆಯಲಿಲ್ಲ. ಅವರು ನಷ್ಟಕ್ಕೆ ಒಳಗಾದರು. ಕೊನೆಗೆ ತಮ್ಮ ಸುದ್ದಿ ಸಂಸ್ಥೆಯನ್ನು ರಾಯಟರ್ ಸಂಸ್ಥೆಗೆ ಬಿಟ್ಟುಕೊಟ್ಟರು. ಈ ಕ್ರಮದಿಂದ ಅವರು ಆರಂಭಿಸಿದ ಸಂಸ್ಥೆ ತನ್ನ ಕೆಲಸ ಮುಂದುವರಿಸುವುದು ಸಾಧ್ಯವಾಯಿತು. 1931ರಲ್ಲಿ ತಮ್ಮ ನಿಧನದವರೆಗೂ ರಾಯ್ ಈ ಸುದ್ದಿಸಂಸ್ಥೆಯ ಪ್ರಧಾನ ಸಂಪಾದಕರಾಗಿ ಕೆಲಸ ಮಾಡಿದರು. ಭಾರತದಲ್ಲಿ ಸುದ್ದಿಸಂಸ್ಥೆಯೊಂದನ್ನು ಕಟ್ಟಲು ರಾಯ್ ನಡೆಸಿದ ಪ್ರಯತ್ನಗಳು ಚರಿತ್ರಾರ್ಹವಾದುವು.

ಕೇಂದ್ರ ಶಾಸನಸಭೆಯ ಸದಸ್ಯರಾಗಿ ರಾಯ್ ಅವರು ರಾಜಕೀಯದಲ್ಲೂ ಪ್ರಮುಖ ಪಾತ್ರ ವಹಿಸಿದರು. 'ಭಾರತದ ಪತ್ರಿಕಾ ಪ್ರಪಂಚ ನೀಡಿದ ವಿಶೇಷ ಸುದ್ದಿಗಾರ' ಎಂಬ ಪ್ರಶಂಸೆಗೆ ರಾಯ್ ಪಾತ್ರರಾದರು.

ಕೆ. ಸಿ. ರೆಡ್ಡಿ



ಅಗ್ರ ಪಂಕ್ತಿ : ಕ್ಯಾಸಂಬಳ್ಳಿ

ಮೈಸೂರು ಸಂಸ್ಥಾನದ ರಾಜಕೀಯ ಜೀವನವನ್ನು ರೂಪಿಸಲು ಕಾರಣರಾದವರಲ್ಲಿ ಕ್ಯಾಸಂಬಳ್ಳಿ ಚೆಂಗಲರಾಯ ರೆಡ್ಡಿ ಅಗ್ರಪಂಕ್ತಿಗೆ ಸೇರಿದವರು.

ಇವರು ಕೋಲಾರ ಜಿಲ್ಲೆಯ ಕ್ಯಾಸಂಬಳ್ಳಿಯವರು. ಜನನ 1902 ಮೇ 4ರಂದು; ರಾಜುಪೇಟೆಯಲ್ಲಿ. ಮದರಾಸಿನಲ್ಲಿ ವಿದ್ಯಾಭ್ಯಾಸ ನಡೆಸಿ ಬಿ.ಎ., ಬಿ.ಎಲ್. ಪದವಿ ಗಳಿಸಿದರು. ವಕೀಲ ವೃತ್ತಿ ಕೈಗೊಂಡರು. ಮೊದಲಿನಿಂದಲೂ ಸಾರ್ವಜನಿಕ ಸೇವೆಯಲ್ಲಿ ಆಸಕ್ತರಾಗಿದ್ದ ರೆಡ್ಡಿಯವರು ರಾಜಕೀಯರಂಗ ಪ್ರವೇಶಿಸಿ 1930ರಲ್ಲಿ ಮೈಸೂರು ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾದರು. ಐದು ವರ್ಷಗಳ ಅನಂತರ ಸಂಯುಕ್ತ ಪ್ರಜಾಪಕ್ಷದ ಅಧ್ಯಕ್ಷರಾದರು. ಈ ಅಧಿಕಾರದಲ್ಲಿದ್ದಾಗ ಅವರ ಗಣನೀಯ ಸಾಧನೆ —ಸಂಯುಕ್ತ ಪ್ರಜಾಪಕ್ಷವನ್ನು ಮೈಸೂರು ಕಾಂಗ್ರೆಸ್ ಪಕ್ಷದೊಡನೆ 1937ರಲ್ಲಿ ವಿಲೀನಗೊಳಿಸಿದ್ದು. ಇದರಿಂದ ಮೈಸೂರು ಸಂಸ್ಥಾನದ ರಾಜಕೀಯದಲ್ಲಿ ರಾಷ್ಟ್ರೀಯ ದೃಷ್ಟಿ ಬಲಗೊಂಡಿತಲ್ಲದೆ, ಕಾಂಗ್ರೆಸ್ ಬಲವಾಗಿ, ವಿಸ್ತಾರವಾಗಿ ಬೇರೂರಲು ಅವಕಾಶ ಏರ್ಪಟ್ಟಿತು. ಆಗಲೇ ರೆಡ್ಡಿಯವರು ಮೈಸೂರು ಕಾಂಗ್ರೆಸ್ಸಿನ ಅಧ್ಯಕ್ಷರಾದದ್ದು.

ಮೈಸೂರಿನಲ್ಲಿ ಪ್ರಜಾಪ್ರಭುತ್ವ ಏರ್ಪಡಬೇಕೆಂಬ ಚಳುವಳಿ ನಡೆಸಿದಾಗ ಅವರು ಸೆರೆಮನೆವಾಸ ಅನುಭವಿಸಬೇಕಾಯಿತು. ಮೈಸೂರು ಸಂಸ್ಥಾನದಲ್ಲಿ ಪ್ರಜಾಪ್ರಭುತ್ವ ಸ್ಥಾಪಿಸುವ ಬಗೆಗೆ ಭಾರತ ರಾಷ್ಟ್ರೀಯ ನಾಯಕರ ಬೆಂಬಲವನ್ನು ಗಳಿಸಿಕೊಳ್ಳಲು ರೆಡ್ಡಿಯವರು ಪ್ರಯತ್ನಿಸಿದರು. ಮೈಸೂರು ಶಾಸನ ಸಭೆಗಳಲ್ಲಿ ವಿರೋಧಪಕ್ಷವನ್ನು ಕಟ್ಟಿ ಬೆಳೆಸಲು ಯತ್ನಿಸಿದರು.

ರೆಡ್ಡಿಯವರು 1947ರಿಂದ 52ರ ವರೆಗೆ ಮೈಸೂರು ಸಂಸ್ಥಾನದ ಮುಖ್ಯಮಂತ್ರಿಯಾಗಿದ್ದರು. ಅನಂತರ ರಾಜ್ಯಸಭೆಯ ಸದಸ್ಯರಾದರು; ಕೇಂದ್ರ ಸರಕಾರದ ಮಂತ್ರಿಯಾದರು. ಆಮೇಲೆ, ಮಧ್ಯ ಪ್ರದೇಶದ ರಾಜ್ಯಪಾಲರಾಗಿ ನಿಯಮಿತರಾದರು. 1971ರಲ್ಲಿ ಆ ಅಧಿಕಾರದಿಂದ ನಿವೃತ್ತರಾದರು.

ರೆಡ್ಡಿಯವರು ದೂರದೃಷ್ಟಿಯುಳ್ಳವರು, ಯಾವುದೇ ವಿಚಾರವನ್ನು ಆಳವಾಗಿ ಅಭ್ಯಾಸಮಾಡಿ ನಿರ್ಣಯಕ್ಕೆ ಬರುವ ಸ್ವಭಾವ. ಸಾಂಸ್ಕೃತಿಕ ವಿಚಾರಗಳಲ್ಲಿ ಆಸಕ್ತಿಯುಳ್ಳವರು.

ಕೆಳದಿಯ ನಾಯಕರು

ಚೌಡಪ್ಪ ಮತ್ತು ಭದ್ರಪ್ಪ ಸಾಗರದ ಬಳಿಯ ಪಳ್ಳಿಬಯಲು ಗ್ರಾಮದ ರೈತ ಸಹೋದರರು. ಅವರಿಗೆ ತಮ್ಮ ಹೊಲದಲ್ಲಿ ನಿಧಿ ದೊರೆಯಿತು. ಕ್ರಮೇಣ ಚೌಡಪ್ಪ ಗ್ರಾಮದ ಮುಖಂಡನಾಗಿ ಪ್ರಬಲನಾದ. ಅವನ ಕೀರ್ತಿ ವಿಜಯನಗರವನ್ನು ಮುಟ್ಟಿತು. ಕೃಷ್ಣದೇವರಾಯ ಈ ಸಹೋದರರನ್ನು ಕರೆಸಿ ತನ್ನ ವಿರೋಧಿಯಾಗಿದ್ದ ಬಲಿಹಾಳು ಪ್ರಾಂತದ ನಾಯಕನನ್ನು ಅಡಗಿಸುವ ಕೆಲಸಕ್ಕೆ ಅವರನ್ನು ನೇಮಿಸಿದ. ಅವರ ಶೌರ್ಯ, ಪರಾಕ್ರಮವನ್ನು ಮೆಚ್ಚಿ ಚೌಡಪ್ಪನಿಗೆ ಮಲೆದೇಶ (ಮಲೆನಾಡು ಪ್ರಾಂತ)ವನ್ನು ಉಂಬಳಿಯಾಗಿ ಕೊಟ್ಟ. 'ಕೆಳದಿ ಮೂಲಸಂಸ್ಥಾನದ ಚೌಡಪ್ಪನಾಯಕ' ಎಂದು ಅವನನ್ನು ಗೌರವಿಸಿದ. ಕೆಳದಿಯ ನಾಯಕ ವಂಶದ ಸ್ಥಾಪನೆಯಾದದ್ದು ಹೀಗೆ. ಸ್ವಲ್ಪ ಕಾಲಾನಂತರ ಚೌಡಪ್ಪ ನಾಯಕ ಇಕ್ಕೇರಿಯನ್ನು ಕಟ್ಟಿ ಅದನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡ. ಗಂಡಭೇರುಂಡವನ್ನು ದೊಡ್ಡಸಂಕಣ್ಣ ನಾಯಕ ತನ್ನ ಲಾಂಛನದಾಗಿ ಮಾಡಿಕೊಂಡ. ಮುಂದೆ ಈ ವಂಶದ ಹಿರಿಯ ವೆಂಕಟಪ್ಪ ನಾಯಕನ (1582–1629) ಕಾಲದಲ್ಲಿ ಬಿದನೂರು ಈ ವಂಶದವರ ರಾಜಧಾನಿಯಾಯಿತು.

1499ರಿಂದ 1763ರ ವರೆಗೆ ಆಳಿದ ಕೆಳದಿಯ ರಾಜಮನೆತನ ಕರ್ನಾಟಕದ ಅಗ್ರ ಅರಸು ಮನೆತನಗಳಲ್ಲಿ ಒಂದಾಗಿತ್ತು. ವಿಜಯನಗರದ ರಾಜರ ಸಾಮಂತರಾಗಿದ್ದ ಕೆಳದಿಯ ನಾಯಕರು ವಿಜಯನಗರದ ಪ್ರಾಬಲ್ಯ ಕುಂದಿದ ಮೇಲೆ ಸ್ವತಂತ್ರ ರಾಜರಾಗಿ ಹಿಂದೂಧರ್ಮ ಸಂಸ್ಕೃತಿಗಳ ಪೋಷಕರಾಗಿದ್ದರು.

ಉತ್ತರದಲ್ಲಿ ಗೋವದಿಂದ ದಕ್ಷಿಣದಲ್ಲಿ ಕಣ್ಣಾನೂರಿನ ಪರ್ಯಂತ ವ್ಯಾಪ್ತವಾಗಿತ್ತು ಇವರ ರಾಜ್ಯ. ಅದು ಪ್ರಬಲ, ಸಮೃದ್ಧ ರಾಜ್ಯವಾಗಿತ್ತು. ಕೃಷಿ ವಾಣಿಜ್ಯಗಳು ಅಭಿವೃದ್ಧಿಗೊಂಡಿದ್ದುವು. ರಾಜ್ಯದಲ್ಲಿ ಸುರಕ್ಷತೆಯಿತ್ತು. ಶಿವಪ್ಪನಾಯಕ, ಸದಾಶಿವನಾಯಕ, ಚೆನ್ನಮ್ಮಾಜಿಯಂಥ ದಕ್ಷ ಅರಸ ಅರಸಿಯರು ಈ ವಂಶದವರು. ಮರಾಠ ಅರಸ ರಾಜಾರಾಮನಿಗೆ ಚೆನ್ನಮ್ಮಾಜಿ ಆಶ್ರಯ ನೀಡಿ ಮೊಘಲರ ವಿರುದ್ಧ ಹೋರಾಡಿದಳು. ಹೈದರ್ ಅಲಿ 1763ರಲ್ಲಿ ದಂಡೆತ್ತಿ ಬಂದು ಕೆಳದಿ ರಾಜ್ಯವನ್ನು ನಿರ್ನಾಮ ಮಾಡಿದ.

ಆಸ್ಥಾನ ಕವಿ ಲಿಂಗಣ್ಣನ 'ಕೆಳದಿ ನೃಪವಿಜಯ', ಬಸವರಾಜ ವಿರಚಿತ 'ಶಿವತತ್ತ್ವ ರತ್ನಾಕರ', ಶಾಸನಗಳು ಮತ್ತು ವಿದೇಶೀ ಪ್ರವಾಸಿಗಳ ಲೇಖನಗಳಲ್ಲಿ ಕೆಳದಿಯ ರಾಜ್ಯ ಮತ್ತು ನಾಯಕರನ್ನು ಕುರಿತ ಅನೇಕ ವಿವರಗಳು ದೊರೆಯುತ್ತವೆ.

ನೋಡಿ : ಚೆನ್ನಮ್ಮಾಜಿ ; ಶಿವಪ್ಪನಾಯಕ ; ಸದಾಶಿವನಾಯಕ

ಕ್ಲಮೆಂಟ್ ಅಟ್ಲಿ

ಭಾರತ ಸ್ವತಂತ್ರವಾದಾಗ ಇಂಗ್ಲೆಂಡಿನ ಪ್ರಧಾನಿಯಾಗಿದ್ದವರು ಕ್ಲಮೆಂಟ್ ಅಟ್ಲಿ. ಆಗ ಅಲ್ಲಿ ಲೇಬರ್ ಪಕ್ಷ ಅಧಿಕಾರದಲ್ಲಿತ್ತು.

ಅಟ್ಲಿ 1883 ಜನವರಿ 3ರಂದು ಲಂಡನಿನ ಪುಟ್ನಿಯಲ್ಲಿ ಜನಿಸಿದರು. ವಿದ್ಯಾಭ್ಯಾಸ ಹೇಲ್‌ಬರಿ ಕಾಲೇಜು ಮತ್ತು ಆಕ್ಸ್‌ಫರ್ಡ್‌ನಲ್ಲಿ. ನ್ಯಾಯ ಶಾಸ್ತ್ರದಲ್ಲಿ ಪದವಿ ಪಡೆದು ನಾಲ್ಕು ವರ್ಷ ವಕೀಲವೃತ್ತಿ ನಡೆಸಿದರು. ಮೊದಲನೆಯ ಮಹಾಯುದ್ಧದಲ್ಲಿ ಸೇನೆಯಲ್ಲಿ ಸೇವೆ ಸಲ್ಲಿಸಿದರು. ಅಲ್ಲಿಂದ ಹಿಂದಿರುಗಿದ ಮೇಲೆ ಪಾರ್ಲಿಮೆಂಟಿನ ಸದಸ್ಯರಾದರು. ರ್‍ಯಾಮ್‌ಸೆ ಮೆಕ್ಡೊನಾಲ್ಡ್ 1924ರಲ್ಲಿ ಮೊದಲನೆಯ ಲೇಬರ್ ಪಕ್ಷದ ಮಂತ್ರಿಮಂಡಲ ರಚಿಸಿದಾಗ ಅಟ್ಲಿ ಯುದ್ಧಖಾತೆಯ ಉಪಕಾರ್ಯದರ್ಶಿ ಯಾದರು.

1927ರಲ್ಲಿ ಕಾನೂನು ರೀತ್ಯ ರಚಿತವಾದ ಭಾರತೀಯ ಮಂಡಲಿಯ ಸದಸ್ಯರಾದರು. ಲೇಬರ್ ಪಕ್ಷ 1932ರಲ್ಲಿ ಪರಾಭವಗೊಂಡರೂ ಅಟ್ಲಿ ಪಾರ್ಲಿಮೆಂಟಿನಲ್ಲಿ ತಮ್ಮ ಸ್ಥಾನ ಉಳಿಸಿಕೊಂಡರು.

1935ರಲ್ಲಿ ಲೇಬರ್ ಪಕ್ಷದ ನಾಯಕತ್ವ ಇವರಿಗೆ ಲಭಿಸಿತು. ಎರಡನೆಯ ಮಹಾಯುದ್ಧ ಕಾಲದಲ್ಲಿ ಚರ್ಚಿಲ್ ಮಂತ್ರಿಮಂಡಲ ರಚಿಸಿದಾಗ ಅವರಲ್ಲಿ ಲಾರ್ಡ್ ಪ್ರಿವಿ ಸೀಲ್ ಆದರು. 1942ರಲ್ಲಿ ಉಪ ಪ್ರಧಾನಮಂತ್ರಿ ಮತ್ತು ಡೊಮಿನಿಯನ್ ವ್ಯವಹಾರ ಖಾತೆಯ ಕಾರ್ಯದರ್ಶಿ ಆದರು. ಅಂತರರಾಷ್ಟ್ರೀಯ ವ್ಯವಸ್ಥೆ ಕುರಿತ ವಿಶ್ವಸಂಸ್ಥೆ ಸಮ್ಮೇಳನ ಸಾನ್‌ಫ್ರಾನ್ಸಿಸ್ಕೊದಲ್ಲಿ ನಡೆದಾಗ ಬ್ರಿಟಿಷ್ ಪ್ರತಿನಿಧಿಯಾಗಿ ಅದರಲ್ಲಿ ಭಾಗವಹಿಸಿದರು.

ಯುದ್ಧಾನಂತರ ಇಂಗ್ಲೆಂಡಿನಲ್ಲಿ ನಡೆದ ಸಾರ್ವತ್ರಿಕ ಚುನಾವಣೆಯಲ್ಲಿ ಲೇಬರ್ ಪಕ್ಷ ಭಾರಿ ಬಹುಮತ ಗಳಿಸಿತು. ಆಗ ಪ್ರಧಾನಿಯಾದರು.

ಸಾಮ್ರಾಜ್ಯವಾದಿ ಚರ್ಚಿಲರ ಬದಲು ಅಟ್ಲಿ ಪ್ರಧಾನಿಯಾಗಿದ್ದಾಗ ಭಾರತಕ್ಕೆ ಸ್ವಾತಂತ್ರ್ಯ ಲಭಿಸಿದ್ದು ಆಕಸ್ಮಿಕವಲ್ಲ. ಬ್ರಿಟಿಷ್ ಸಾಮ್ರಾಜ್ಯದ ಕಥೆ ಮುಗಿಯುತ್ತಿರುವುದನ್ನು ಮನಗಂಡ ಅಟ್ಲಿ ಭಾರತಕ್ಕೆ ಸ್ವಾತಂತ್ರ್ಯ ನೀಡಿ ಅದರ ಸ್ನೇಹ ಉಳಿಸಿಕೊಳ್ಳಲು ಮುಂದಾದರು. 1947 ಆಗಸ್ಟ್ 15ರಂದು ಬ್ರಿಟಿಷರು ಭಾರತದಿಂದ ಕಾಲ್ತೆಗೆದರು.



ಕ್ಲಮೆಂಟ್ ರಿಚರ್ಡ್ ಅಟ್ಲಿ

ಅಟ್ಲಿಯವರ ಅಧಿಕಾರಾವಧಿಯಲ್ಲಿ ಬ್ಯಾಂಕ್ ಆಫ್ ಇಂಗ್ಲೆಂಡ್, ಕಲ್ಲಿದ್ದಲು ಗಣಿ, ವಿದ್ಯುತ್ ಮತ್ತು ಉಕ್ಕಿನ ಕೈಗಾರಿಕೆಗಳು, ಸಾರಿಗೆ ಸಂಪರ್ಕಗಳ ರಾಷ್ಟ್ರೀಕರಣ ನಡೆಯಿತು. ಅವರು ಆರಂಭಿಸಿದ ರಾಷ್ಟ್ರೀಯ ಆರೋಗ್ಯ ಯೋಜನೆಯಲ್ಲಿ ಎಲ್ಲ ಪ್ರಜೆಗಳಿಗೂ ವೈದ್ಯಕೀಯ ನೆರವು ಉಚಿತವಾಗಿ ದೊರೆಯುವಂತಾಯಿತು.

ಅಟ್ಲಿಯವರ ಸಾರ್ವಜನಿಕ ಸೇವೆಗಾಗಿ ಅವರಿಗೆ ಅರ್ಲ್ ಪ್ರಶಸ್ತಿ ಕೊಡಲಾಯಿತು. 'ಆಸ್ ಇಟ್ ಹ್ಯಾಪನ್ಡ್' – ಅವರ ಸ್ವಾನುಭವ ಕೃತಿ. 'ವಿಲ್ ಅಂಡ್ ದಿ ವೇ ಟು ಸೋಷಲಿಸಮ್', 'ಲೇಬರ್ ಪಾರ್ಟಿ ಇನ್ ಪರ್ಸ್ಪೆಕ್ಟಿವ್' ಎಂಬ ಎರಡು ಪುಸ್ತಕಗಳನ್ನೂ ಕ್ಲೆಮೆಂಟ್ ಅಟ್ಲಿ ಅವರು ಬರೆದಿದ್ದಾರೆ.

ಕ್ಲೆಮೆಂಟ್ ಅಟ್ಲಿ 1967ರಲ್ಲಿ ತಮ್ಮ 84ನೆಯ ವಯಸ್ಸಿನಲ್ಲಿ ಲಂಡನಿನಲ್ಲಿ ನಿಧನರಾದರು.

ಕ್ಲೆಮೆನ್ಸ್ ಅಲೆಗ್ಸಾಂಡ್ರಿನಸ್

ಬೌದ್ಧ ಭಿಕ್ಕುಗಳ ಬಗೆಗೆ ಪ್ರಸ್ತಾಪಿಸಿರುವ ಪಾಶ್ಚಾತ್ಯರಲ್ಲಿ ಗ್ರೀಕ್ ದೇಶದ ಕ್ರೈಸ್ತ ಧರ್ಮಬೋಧಕ ಮತ್ತು ಪಂಡಿತ ಅಲೆಗ್ಸಾಂಡ್ರಿಯದ ಕ್ಲೆಮೆನ್ಸ್ ಮೊದಲಿಗ.

ಅವನ ಅಭಿಪ್ರಾಯದಂತೆ, ಭಾರತದ ಬೌದ್ಧ ಭಿಕ್ಕುಗಳು ಸತ್ಯೋಪಾಸಕರು. ಬೌದ್ಧಸ್ತೂಪಗಳನ್ನು 'ಪಿರಮಿಡ್‌ಗಳಂಥ ಕಟ್ಟಡಗಳು ......' ಎಂದು ಆತ ಬಣ್ಣಿಸಿದ್ದಾನೆ "ಅವುಗಳ ಅಡಿಯಲ್ಲಿ ಯಾವನೋ ದೈವಾಂಶ ಸಂಭೂತನ ಮೂಳೆಗಳಿವೆಯಂತೆ" ಎಂದು ಕ್ಲೆಮನ್ಸ್ ಅಲೆಗ್ಸಾಂಡ್ರಿನಸ್ ತಿಳಿಸಿದ್ದಾನೆ.

ಟೆಟಸ್ ಫ್ಲಾವಿಯಸ್ ಕ್ಲೆಮೆನ್ಸ್ ಅಲೆಗ್ಸಾಂಡ್ರಿನಸ್‌ನ ಜನನ ಅಥೆನ್ಸ್‌ನಲ್ಲಿ, ಸುಮಾರು 150ರಲ್ಲಿ. ಶಿಕ್ಷಣ ಪಡೆದದ್ದು, ಅನಂತರ ಬೋಧನೆ ನಡೆಸಿದ್ದು, ಅಲೆಗ್ಸಾಂಡ್ರಿಯದಲ್ಲಿ. ಆದುದರಿಂದ ಅಲೆಗ್ಸಾಂಡ್ರಿಯದ ಕ್ಲೆಮೆನ್ಸ್ ಎಂದೇ ಅವನಿಗೆ ಹೆಸರಾಯಿತು.

ಕೇಂದ್ರ ಎಲೆಕ್ಟ್ರಾನಿಕ್ಸ್ ಎಂಜಿನಿಯರಿಂಗ್ ಸಂಶೋಧನಾಲಯ

ಎಲೆಕ್ಟ್ರಾನಿಕ್ ಸಾಧನಗಳ ಬಗೆಗೆ ಸಂಶೋಧನೆ ನಡೆಸುವ ಒಂದು ಸಂಸ್ಥೆ ರಾಜಸ್ಥಾನದ ಪಿಲಾನಿಯಲ್ಲಿದೆ. ಅದು ಕೇಂದ್ರ ಎಲೆಕ್ಟ್ರಾನಿಕ್ಸ್ ಎಂಜಿನಿಯರಿಂಗ್ ಸಂಶೋಧನಾಲಯ. ಈ ಸಂಸ್ಥೆ 1953ರಲ್ಲಿ ಸ್ಥಾಪಿತವಾಯಿತು.

ಕೈಗಾರಿಕೆಗಳಲ್ಲಿ ಎಲೆಕ್ಟ್ರಾನಿಕ್ ಸರ್ಕ್ಯೂಟ್ ಪಾತ್ರ ಹೆಚ್ಚಾದಂತೆಲ್ಲ ಇದಕ್ಕೆ ಬೇಕಾದ ವಿಶಿಷ್ಟ ಎಲೆಕ್ಟ್ರಾನಿಕ್ ಸಾಧನಗಳು, ರೇಡಾರ್ ಮುಂತಾದ ಉಪಕರಣಗಳ ಬಗೆಗೆ ಸಂಶೋಧನೆಗಾಗಿ ಈ ಸಂಸ್ಥೆ ಆರಂಭವಾಯಿತು. ಪ್ರಾದೇಶಿಕ ಎಂಜಿನಿಯರಿಂಗ್, ಸೂಕ್ಷ್ಮ ತರಂಗಗಳು, ಎಲೆಕ್ಟ್ರಾನಿಕ್ ಸಾಧನಗಳ ಅಧ್ಯಯನ ಮತ್ತು ಅವುಗಳ ವಿನ್ಯಾಸ, ಘನಸ್ಥಿತಿ ಸಾಧನಗಳು, ಎಲ್ಲದರ ಬಳಕೆಯ ವಿಧಾನ ಬಗೆಗೆ ಹಾಗೂ ನಿಯಂತ್ರಣಕ್ಕಾಗಿ ಸಾಧನ ಭಾಗಗಳು ಇವನ್ನು ಕುರಿತ ಪ್ರಯೋಗ ಸಂಶೋಧನೆ ನಡೆಸುವ ವಿಭಾಗಗಳು ಈ ಸಂಸ್ಥೆಯಲ್ಲಿವೆ.

ಟೆಲಿವಿಷನ್ ಗ್ರಾಹಕ ಹಾಗೂ ಕಡಮೆ ವೆಚ್ಚದ ರೇಡಿಯೋ ಗ್ರಾಹಕಗಳ ಬಗೆಗೆ ಈ ಸಂಸ್ಥೆ ಸಂಶೋಧನೆ ನಡೆಸಿದೆ. ನವದೆಹಲಿಯಲ್ಲಿ ಟೆಲಿವಿಷನ್ ಕೇಂದ್ರ ಒಂದನ್ನು ಈ ಸಂಸ್ಥೆಯ ಪರವಾಗಿ ಸ್ಥಾಪಿಸಲಾಗಿದೆ. ಕೇಂದ್ರದಲ್ಲಿ ಟೆಲಿವಿಷನ್ ಕುರಿತು ಮಾಹಿತಿ ಕೊಡಲಾಗುತ್ತದೆ. ಪಿಲಾನಿಯ ಸಂಸ್ಥೆಯಲ್ಲಿ ಅಗ್ಗವಾದ ಹೊಸ ಟೆಲಿವಿಷನ್ ಗ್ರಾಹಕಗಳನ್ನು ಅಳವಡಿಸಿಕೊಡುವುದು, ಗ್ರಾಹಕಗಳ ದುರಸ್ತಿ ಇತ್ಯಾದಿ ಕಾರ್ಯಗಳನ್ನೂ ಈ ಕೇಂದ್ರ ಕೈಗೊಳ್ಳುತ್ತದೆ.

ಭಾರತದ ವೈಜ್ಞಾನಿಕ ಮತ್ತು ಔದ್ಯೋಗಿಕ ಸಂಶೋಧನಾ ಮಂಡಲಿಯ ರಾಷ್ಟ್ರೀಯ ಪ್ರಯೋಗಾಲಯಗಳಲ್ಲೊಂದು ಈ ಸಂಸ್ಥೆ.

ಕೇಂದ್ರ ಔಷಧ ಸಸ್ಯ ಸಂಸ್ಥೆ

ಔಷಧ ಸಸ್ಯ ಹಾಗೂ ಸುಗಂಧ ಒದಗಿಸುವ ಸಸ್ಯ ಸಂಪನ್ಮೂಲ ದೇಶದಲ್ಲಿ ಎಷ್ಟಿದೆ ? ಅದನ್ನು ಅಭಿವೃದ್ಧಿಗೊಳಿಸುವ ಬಗೆ ಏನು ? ಎಂಬುದರ ಸರ್ವೆ ನಡೆಸಲು 1959ರಲ್ಲಿ ಭಾರತೀಯ ಔಷಧ ಸಸ್ಯ ಸಂಸ್ಥೆ (ಸೆಂಟ್ರಲ್ ಇಂಡಿಯನ್ ಮೆಡಿಸಿನಲ್ ಪ್ಲಾಂಟ್ಸ್ ಆರ್ಗನೈಸೇಷನ್) ಸ್ಥಾಪಿತವಾಯಿತು. ಇದು ಲಖನೌದಲ್ಲಿದೆ.

ಔಷಧಿ ಹಾಗೂ ಸುಗಂಧ ಸಸ್ಯಗಳನ್ನು ಬೆಳಸುವ ಸುಧಾರಿತ ವಿಧಾನಗಳನ್ನು ರೂಪಿಸುವುದು ; ಹೆಚ್ಚು ಔಷಧೀಯವಾಗಿ ಪಟುತ್ವ ಇರುವ ವಿದೇಶೀ ಸಸ್ಯಗಳನ್ನು ಒಗ್ಗಿಸಿ ಬೆಳಸುವುದು : ಸಸ್ಯ ಬೆಳಸುವವರಿಗೆ ಸೂಕ್ತ ನೆರವು ಮಾಹಿತಿಗಳನ್ನು ಒದಗಿಸುವುದು —ಈ ಸಂಸ್ಥೆಯ ಉದ್ದೇಶಗಳು.

ಎರಡು ವಲಯ ಕೇಂದ್ರ ಮತ್ತು ನಾಲ್ಕು ವ್ಯಾಪಾರೀ ಕೇಂದ್ರಗಳು ಈ ಸಂಸ್ಥೆಯ ಆಶ್ರಯದಲ್ಲಿ ಕೆಲಸಮಾಡುತ್ತಿವೆ. ದಕ್ಷಿಣ ವಲಯದ ಕೇಂದ್ರ ಬೆಂಗಳೂರಿನಲ್ಲಿದೆ. ಸಂಶೋಧನಾಲಯದ ನಾಲ್ಕು ವ್ಯಾಪಾರೀ ಕೇಂದ್ರಗಳು ಸಸ್ಯಗಳನ್ನು ವೃದ್ಧಿಪಡಿಸಿ, ಬೆಳೆಯುವವರಿಗೆ ಹಂಚುತ್ತವೆ. ಜಮ್ಮು ಮತ್ತು ಶ್ರೀನಗರಗಳಲ್ಲಿ ಈ ಸಂಶೋಧನಾಲಯಕ್ಕೆ ಸೇರಿದ ಎರಡು ಔಷಧ ಕಾರಖಾನೆಗಳಿವೆ.

ವೈಜ್ಞಾನಿಕ ಹಾಗೂ ಕೈಗಾರಿಕಾ ಸಂಶೋಧನಾ ಸಮಿತಿಯ ರಾಷ್ಟ್ರೀಯ ಪ್ರಯೋಗಾಲಯಗಳಲ್ಲಿ ಇದೂ ಒಂದು.

ಕೇಂದ್ರ ಕಟ್ಟಡ ಸಂಶೋಧನಾಲಯ

ಕಡಮೆ ವೆಚ್ಚದಲ್ಲಿ ಬಹುಕಾಲ ಬಾಳಿಕೆ ಬರುವ ಕಟ್ಟಡಗಳ ರಚನೆ : ನಮ್ಮ ದೇಶದ ಹವೆಗೆ, ನಮ್ಮಲ್ಲಿ ದೊರೆಯುವ ಸಾಮಗ್ರಿಗಳಿಗೆ ಹೊಂದಿಕೊಂಡು ಕಟ್ಟಡಗಳ ನಿರ್ಮಾಣ : ಇವುಗಳ ಅಭಿವೃದ್ಧಿ–ಕೇಂದ್ರ ಕಟ್ಟಡ ಸಂಶೋಧನಾಲಯದ ಮುಖ್ಯ ಧ್ಯೇಯಗಳಲ್ಲಿ ಕೆಲವು. ಈ ಸಂಸ್ಥೆ ಉತ್ತರ ಪ್ರದೇಶದ ರೂರ್ಕಿಯಲ್ಲಿದೆ.

ಕಟ್ಟಡ ಸಾಮಗ್ರಿ, ಮೃತ್ತಿಕಾವಿಜ್ಞಾನ ಮತ್ತು ಅಡಿಪಾಯ ಎಂಜಿನಿಯರಿಂಗ್, ಕಾರ್ಯಾನುಕೂಲ ಮುಖ್ಯವಾಗಿರುವ ಕಟ್ಟಡ ಕಟ್ಟುವ ವಿಧಾನ, ವಾಸ್ತುಶಿಲ್ಪ ವಿಜ್ಞಾನ ಮುಂತಾದ ಮುಖ್ಯ ಕ್ಷೇತ್ರಗಳಲ್ಲಿ ಸಂಸ್ಥೆ ಕೆಲಸ ನಡೆಸುತ್ತಿದೆ. ಕಟ್ಟಡ ಮತ್ತು ಸಂಬಂಧಪಟ್ಟ ಸಿವಿಲ್ ಎಂಜಿನಿಯರಿಂಗ್ ವಿಷಯಗಳು, ಕಟ್ಟಡ ವಿನ್ಯಾಸ ಮತ್ತು ಅದರ ಸಾಮರ್ಥ್ಯ, ಕಟ್ಟಡ ರಚನೆಯಲ್ಲಿ ಮಿತವ್ಯಯ, ಕಟ್ಟಡ ಬಳಸುವವರ ಅವಶ್ಯತೆ —ಇವುಗಳ ಬಗೆಗೂ ಸಂಸ್ಥೆ ಸಂಶೋಧನೆ ನಡೆಸುತ್ತದೆ. ಕಡಮೆ ವೆಚ್ಚದ, ಪೂರ್ವಭಾವಿಯಾಗಿ ತಯಾರಾದ ಬಿಡಿಭಾಗಗಳನ್ನು ಹೊಂದಿಸಿ ತ್ವರಿತವಾಗಿ ಶಾಲಾ ಕಟ್ಟಡಗಳನ್ನು ನಿರ್ಮಿಸುವುದು ಈ ಸಂಸ್ಥೆ ಅಭಿವೃದ್ಧಿಪಡಿಸಿರುವ ಇನ್ನೊಂದು ಯಶಸ್ವೀ ನಿರ್ಮಾಣತಂತ್ರ.

ರೂರ್ಕಿಯ ಥಾಮ್ಸನ್ ಎಂಜಿನಿಯರಿಂಗ್ ಕಾಲೇಜಿನಲ್ಲಿ (ಈಗ ಇದು ತಾಂತ್ರಿಕ ವಿಶ್ವವಿದ್ಯಾನಿಲಯವಾಗಿದೆ) 1941ರಲ್ಲಿ ಕಟ್ಟಡ ಸಂಶೋಧನಾ ವಿಭಾಗವನ್ನು ತೆರೆಯಲಾಯಿತು. ಇದನ್ನೇ ವೈಜ್ಞಾನಿಕ ಮತ್ತು ಔದ್ಯೋಗಿಕ ಸಂಶೋಧನಾ ಮಂಡಲಿಗೆ–1953ರಿಂದ ವಹಿಸಿಕೊಡಲಾಯಿತು. ಆಗಿನಿಂದ ಇದು ಕೇಂದ್ರ ಕಟ್ಟಡ ಸಂಶೋಧನಾಲಯ ಎಂದು ಕರೆಯಲ್ಪಟ್ಟಿದೆ.

ಕೇಂದ್ರ ಗಣಿ ಸಂಶೋಧನಾ ಸಂಸ್ಥೆ

ವೈಜ್ಞಾನಿಕ ಮತ್ತು ಔದ್ಯೋಗಿಕ ಸಂಶೋಧನಾ ಮಂಡಲಿಗೆ ಸೇರಿದ ಈ ಸಂಸ್ಥೆ ಬಿಹಾರ್ ರಾಜ್ಯದ ಧನಬಾದ್‌ನಲ್ಲಿದೆ. ಇದು 1956ರಲ್ಲಿ ಸ್ಥಾಪಿಸಲ್ಪಟ್ಟಿತು.

ಗಣಿ ಕೆಲಸದ ಬಗೆಗೆ ಪರಿಶೀಲನೆ, ಗಣಿ ತೋಡುವ ವಿಧಾನಗಳು, ಅಲ್ಲಿ ಕೆಲಸಗಾರರ ಸುರಕ್ಷತೆ, ಗಣಿ ಕೆಲಸಗಳನ್ನು ಸಮರ್ಪಕವಾಗಿ ನಡೆಸುವಿಕೆ ಹಾಗೂ ಕೆಲಸಗಾರರ ಆರೋಗ್ಯಕ್ಕೆ ಒದಗುವ ಅಪಾಯಗಳು, ಅವುಗಳ ನಿವಾರಣಾ ವಿಧಾನ, ಕೈಗಾರಿಕೆಗಳಲ್ಲಿ ಉಪಯೋಗಿಸುವ ಉಪಕರಣಗಳ ಅಭಿವೃದ್ಧಿ ಹಾಗೂ ಪರೀಕ್ಷೆ —ಇವು ಕೇಂದ್ರ ಗಣಿ ಸಂಶೋಧನಾ ಕೇಂದ್ರದ ಕಾರ್ಯಕ್ಷೇತ್ರ.

ಗಣಿ ತಾಂತ್ರಿಕತೆ, ಗಣಿ ಸುರಕ್ಷತೆ, ಗಣಿ ಕೆಲಸಗಾರರ ಆರೋಗ್ಯ, ಗಣಿ ಎಂಜಿನಿಯರಿಂಗ್ ಹಾಗೂ ಗಣಿಯ ವಾತಾವರಣ ಮಾಲಿನ್ಯ —ಇವು ಸಂಸ್ಥೆಯ ಐದು ಮುಖ್ಯ ವಿಭಾಗಗಳು.

ಪರದೇಶದಿಂದ ಆಮದಾಗುತ್ತಿರುವ ಉಪಕರಣ ಯಂತ್ರಗಳಿಗೆ ಬದಲಾಗಿ ಇರುವ ಯಂತ್ರಗಳನ್ನು ಸುಧಾರಿಸುವುದು, ಹೊರದೇಶದಿಂದ ತರಿಸಿಕೊಳ್ಳುತ್ತಿರುವ ಯಂತ್ರೋಪಕರಣಗಳನ್ನು ನಮ್ಮಲ್ಲೇ ತಯಾರಿಸುವುದು, ಕಲ್ಲಿದ್ದಲಿನಿಂದ ಇಂಧನ ತೈಲ ಪಡೆಯುವುದು —ಈ ಬಗೆಗೆ ಕೇಂದ್ರದಲ್ಲಿ ಸಂಶೋಧನೆಗಳು ನಡೆಯುತ್ತಿವೆ.

ಕೇಂದ್ರ ಗಾಜು ಮತ್ತು ಕುಂಭವಸ್ತು ಸಂಶೋಧನಾಲಯ

ಭಾರತದಲ್ಲಿ ಗಾಜು ಮತ್ತು ಕುಂಭವಸ್ತುಗಳ ಹೆಚ್ಚಿನ ಉತ್ಪಾದನೆಗಾಗಿ ನೆರವು ನೀಡಲು ವೈಜ್ಞಾನಿಕ ಮತ್ತು ಔದ್ಯೋಗಿಕ ಸಂಶೋಧನಾ ಮಂಡಲಿ 1950ರಲ್ಲಿ ಕೇಂದ್ರ ಗಾಜು ಮತ್ತು ಕುಂಭವಸ್ತು ಸಂಶೋಧನಾಲಯವನ್ನು (ಸೆಂಟ್ರಲ್ ಗ್ಲಾಸ್ ಅಂಡ್ ಸೆರಮಿಕ್ ರಿಸರ್ಚ್ ಇನ್‌ಸ್ಟಿಟ್ಯೂಟ್) ತೆರೆಯಿತು. ಇದು ಕಲ್ಕತ್ತೆಯ ಜಾಧವಪುರದಲ್ಲಿದೆ.

ಈ ಸಂಸ್ಥೆಯಲ್ಲಿ ಗಾಜು ಮತ್ತು ಕುಂಭ ಪದಾರ್ಥಗಳಿಗೆ ಸಂಬಂಧಿಸಿದಂತೆ ಅನ್ವಯ ಹಾಗೂ ಮೂಲಭೂತ ಸಂಶೋಧನೆಗಳು ನಡೆಯುತ್ತವೆ. ಈ ಉದ್ಯಮಕ್ಕೆ ಬೇಕಾಗುವ ಕಚ್ಚಾ ಪದಾರ್ಥಗಳು ; ಅವನ್ನು ಪಡೆಯುವ ಬಗೆ, ಉಪಯೋಗ : ಗಾಜು, ಕುಂಭವಸ್ತುಗಳನ್ನು ತಯಾರಿಸುವ ವಿಧಾನದಲ್ಲಿ ಸುಧಾರಣೆ ; ಕೈಗಾರಿಕೆಯಲ್ಲಿ ವ್ಯರ್ಥವಾಗುವ ಪದಾರ್ಥವನ್ನು ಈ ಉತ್ಪನ್ನಗಳಲ್ಲಿ ಬಳಸುವುದು ; ಕಚ್ಚಾ ಪದಾರ್ಥ ಮತ್ತು ಪರಿಷ್ಕೃತ ಪದಾರ್ಥ ಮಟ್ಟದ ನಿಗದಿ. ಉದ್ಯಮದಲ್ಲಿ ಅಳವಡಿಸಿಕೊಳ್ಳಬಹುದಾದ ಪರೀಕ್ಷಣ ವಿಧಾನಗಳು : ಯುದ್ಧತಂತ್ರದಲ್ಲಿ ಅವಶ್ಯವಾದ ಕೆಲವು ವಸ್ತುಗಳು —ಇವಕ್ಕೆ ಸಂಬಂಧಿಸಿದ ಸಂಶೋಧನೆಗಳು ಈ ಸಂಸ್ಥೆಯಲ್ಲಿ ನಡೆಯುತ್ತವೆ.

ಕೇಂದ್ರ ಜಲ ಮತ್ತು ಶಕ್ತಿ ಸಂಶೋಧನಾಲಯ

ಅರವತ್ತು ವರ್ಷಗಳಿಗೂ ಹಿಂದೆ ನದಿ ನಿಯಂತ್ರಣ ಮತ್ತು ನಾಲೆ ನಿರ್ಮಾಣಗಳ ಅನುಸಂಧಾನಕ್ಕಾಗಿ ಒಂದು ಸಣ್ಣ ಸಂಸ್ಥೆ ಸ್ಥಾಪಿಸಲ್ಪಟ್ಟಿತು. 1974ರ ವೇಳೆಗೆ ವಿಶ್ವದಲ್ಲಿಯೇ ದೊಡ್ಡ ಸಂಶೋಧನಾ ಕೇಂದ್ರವಾಗಿ ಅದು ರೂಪುಗೊಂಡಿತು. ಅದೇ ಕೇಂದ್ರ ಜಲ ಮತ್ತು ಶಕ್ತಿ ಸಂಶೋಧನಾಲಯ (ಸೆಂಟ್ರಲ್ ವಾಟರ್ ಅಂಡ್ ಪವರ್ ರಿಸರ್ಚ್ ಸ್ಟೇಷನ್).

ಕೇಂದ್ರವನ್ನು ಆರಂಭಿಸಿದ ಶ್ರೇಯಸ್ಸು ಐರಿಷ್ ಎಂಜಿನಿಯರ್ ಕ್ಲಾಡ್ ಇಂಗ್ಲಿಸ್‌ರದು. ಸಂಸ್ಥೆಯ ಮಟ್ಟವನ್ನು ಏರಿಸಿದ ಕೀರ್ತಿಗೆ ನಿರ್ದೇಶಕರಾಗಿದ್ದ ಡಿ. ವಿ. ಜೋಗಳೇಕರ್ ಪಾತ್ರರು.

ಸಂಸ್ಥೆ ಖಿಡಕ್‌ವಾಸ್ಲಾ ಅಣೆಕಟ್ಟಿಗೆ ಹತ್ತಿರದಲ್ಲಿ, ಪುಣೆಯಿಂದ 14 ಮೈಲು ದೂರದಲ್ಲಿ 5 ಚ.ಕಿ.ಮೀ. ಪ್ರದೇಶವನ್ನು ಆವರಿಸಿದೆ. ನದಿಗಳ ಪ್ರತಿಕೃತಿಗಳು, ಪ್ರಯೋಗಾಲಯಗಳು, ಜಲಾಶಯ-ಬಂದರುಗಳ ಪ್ರತಿಕೃತಿಗಳು -ಇವನ್ನು ಅವುಗಳ ಪರಿಸರಕ್ಕೆ ಅನುಗುಣವಾಗಿ ರಚಿಸಿರುತ್ತಾರೆ. ಇವುಗಳನ್ನು ಆಧರಿಸಿ ಪ್ರವಾಹ ನಿಯಂತ್ರಣ, ಮಣ್ಣು ಸವಕಳಿ, ಭೂಕಂಪ, ಮಣ್ಣು ಪರೀಕ್ಷಣ ಮುಂತಾದ ವಿಷಯಗಳಲ್ಲಿ ಸಂಶೋಧನೆ ನಡೆಯುತ್ತದೆ.


ನದಿ ಮತ್ತು ನಾಲೆಗಳ ಜಲಶಾಸ್ತ್ರ ವಿಭಾಗ, ಬಂದರು ವಿಭಾಗ, ಮಣ್ಣು ಪರೀಕ್ಷಣ ವಿಭಾಗ, ಯಂತ್ರಕರ್ಮಾಗಾರ. ಉಪಕರಣ ವಿಭಾಗ, ಅಂಕಿಸಂಖ್ಯೆಗಳ ವಿಭಾಗಗಳು ಕೆಲಸ ಮಾಡುತ್ತಿವೆ. ಸಮುದ್ರಯಾನ ಮಾಡುವ ಹಡಗಿನ ಪ್ರತಿಕೃತಿಗಳನ್ನು ಪರಿಶೀಲಿಸಿ ಸಲಹೆ ನೀಡುವ ವಿಭಾಗವೊಂದಿದೆ. ಇದಕ್ಕಾಗಿ ಸಿಮೆಂಟ್ ಕಟ್ಟೆ ಕಟ್ಟಿ 86 ಅಡಿಗಳಷ್ಟು ನೀರು ತುಂಬಿ ಹಡಗಿನ ಪ್ರತಿಕೃತಿಯನ್ನು ತೂಗುಬಿಟ್ಟು ಪರಿಶೀಲಿಸುವ ವ್ಯವಸ್ಥೆ ಇದೆ.

ಪಾಶ್ಚಿಮಾತ್ಯ ದೇಶಗಳಿಂದ ಎಂಜಿನಿಯರುಗಳು ತಂತ್ರವನ್ನು ಅಭ್ಯಸಿಸಲು ಇಲ್ಲಿಗೆ ಬರುತ್ತಾರೆ. ಶ್ರೀಲಂಕಾ, ಇಂಡೊನೇಷ್ಯ, ಮಲಯ, ಬರ್ಮಗಳು ತಮ್ಮ ಸಮಸ್ಯೆಗಳ ಪರಿಹಾರಕ್ಕಾಗಿ ಈ ಕೇಂದ್ರದ ನೆರವನ್ನು ಕೋರಿವೆ. ಅಲ್ಲಿನ ಸಮಸ್ಯೆಯನ್ನು ಅಭ್ಯಸಿಸಲು ಕೇಂದ್ರ ಆ ದೇಶಗಳಿಗೆ ಅಧಿಕಾರಿಗಳನ್ನು ಕಳುಹಿಸಿ ನೆರವು ನೀಡಿದೆ. ಶ್ರೀಲಂಕಾದಲ್ಲಿ ಪ್ರಯೋಗಾಲಯ ಸ್ಥಾಪಿಸಲು ಈ ಕೇಂದ್ರ ಸಹಾಯ ಮಾಡಿದೆ.

ಕೇಂದ್ರ ತೊಗಲು ಸಂಶೋಧನಾ ಸಂಸ್ಥೆ

1953ರಲ್ಲಿ ವೈಜ್ಞಾನಿಕ ಮತ್ತು ಔದ್ಯೋಗಿಕ ಸಂಶೋಧನಾ ಮಂಡಲಿ ಮದರಾಸಿನಲ್ಲಿ ಕೇಂದ್ರ ತೊಗಲು ಸಂಶೋಧನಾಲಯವನ್ನು (ಸೆಂಟ್ರಲ್ ಲೆದರ್ ರಿಸರ್ಚ್ ಇನ್ಸ್‌ಟಿಟ್ಯೂಟ್) ಆರಂಭಿಸಿತು. ದೇಶದಲ್ಲಿ ದೊರಕುವ ಚರ್ಮವನ್ನು ಸಂಸ್ಕರಿಸಿ ರಫ್ತು ಮಾಡಲು ಯೋಗ್ಯವಾದ ತೊಗಲು ತಯಾರಿಸಿ ದೇಶಕ್ಕೆ ಸಾಕಷ್ಟು ಆದಾಯ ಗಳಿಸಲು ಸೂಕ್ತ

ತೊಗಲಿಗೆ ಮೆರುಗು



ಸಂಶೋಧನಾ ಕಾರ್ಯಕ್ರಮಗಳನ್ನು ಈ ಸಂಸ್ಥೆ ಕೈಗೊಂಡಿದೆ. ತೊಗಲಿನಿಂದ ನಾನಾ ಬಗೆಯ ಪದಾರ್ಥಗಳ ತಯಾರಿಕೆ ಮತ್ತು ಸಂಬಂಧಿತ ಕೈಗಾರಿಕೆಗಳಲ್ಲಿ ತಾಂತ್ರಿಕ ಅಭಿವೃದ್ಧಿ ; ಸಂಸ್ಥೆಯಲ್ಲಿ ರೂಪುಗೊಂಡ ವಿಧಾನ ಮತ್ತು ತಯಾರಿಸಲ್ಪಟ್ಟ ಉತ್ಪನ್ನಗಳ ಬಗೆಗೆ ಮಾಹಿತಿ ಒದಗಿಸುವುದು ; ತೊಗಲು ಉದ್ಯಮದ ತಾಂತ್ರಿಕ ಸಮಸ್ಯೆಗಳಿಗೆ ಪರಿಹಾರ — ಇವು ಸಂಸ್ಥೆಯ ಮುಖ್ಯ ಉದ್ದೇಶಗಳು. ಶುದ್ಧ ವೈಜ್ಞಾನಿಕ ಸಂಶೋಧನೆಗಳೂ ಈ ಕೇಂದ್ರದಲ್ಲಿ ನಡೆಯುತ್ತವೆ. ಉದ್ಯಮಕ್ಕೆ ಬೇಕಾದ ನೆರವು ಇಲ್ಲಿ ದೊರೆಯುತ್ತದೆ. ಒಂದು ಮಾದರಿ ತೊಗಲು ಸಂಸ್ಕರಣಾಗಾರವೂ ಸಂಸ್ಥೆಯ ಆಶ್ರಯದಲ್ಲಿ ನಡೆಯುತ್ತಿದೆ. ಮದರಾಸು ವಿಶ್ವವಿದ್ಯಾನಿಲಯದ ಸಹಕಾರದಿಂದ ತೊಗಲು ತಾಂತ್ರಿಕ ವಿಜ್ಞಾನದಲ್ಲಿ ಬಿ.ಟೆಕ್ ಹಾಗೂ ಎಂ. ಟೆಕ್ ಪದವಿ ಶಿಕ್ಷಣವನ್ನು ಸಹ ಸಂಸ್ಥೆ ನೀಡುತ್ತದೆ.

ಕೇಂದ್ರ ಮದ್ದು ಸಂಶೋಧನಾಲಯ

ಭಾರತದಲ್ಲಿರುವ ಅನೇಕ ಔಷಧ ಕೈಗಾರಿಕೆಗಳ ನಡುವೆ ಸಮನ್ವಯ. ಸಹಕಾರಗಳನ್ನು ಬೆಳೆಸುವ ಉದ್ದೇಶದಿಂದ ಲಖನೌದಲ್ಲಿ 1951ರಲ್ಲಿ ಕೇಂದ್ರ ಮದ್ದು ಸಂಶೋಧನಾಲಯವನ್ನು (ಸೆಂಟ್ರಲ್ ಡ್ರಗ್ ರಿಸರ್ಚ್ ಇನ್ಸ್‌ಟಿಟ್ಯೂಟ್) ಸ್ಥಾಪಿಸಲಾಯಿತು. ಇದು ವೈಜ್ಞಾನಿಕ ಮತ್ತು ಔದ್ಯೋಗಿಕ ಸಂಶೋಧನಾ ಮಂಡಲಿಗೆ ಸೇರಿದ ರಾಷ್ಟ್ರೀಯ ಪ್ರಯೋಗಾಲಯ.

ದೇಶೀಯ ವೈದ್ಯಪದ್ಧತಿಗಳಿಗೆ ಉಪಯುಕ್ತವಾದ ವನಸ್ಪತಿ ಔಷಧ ವಸ್ತುಗಳಿಂದ ಆರಂಭವಾಗಿ, ಅತ್ಯಾಧುನಿಕ ಸಂಶ್ಲೇಷಿತ ಔಷಧಗಳು ಹಾಗೂ ಜೀವಿ ನಿರೋಧಕಗಳವರೆಗೆ ವಿವಿಧ ಸಂಶೋಧನೆಗಳನ್ನು ಈ ಸಂಸ್ಥೆ ನಡೆಸುತ್ತದೆ.

ಲಾಭದಾಯಕವಾದ ರೀತಿಯಲ್ಲಿ ಔಷಧಗಳ ತಯಾರಿಕೆಯ ವಿಧಾನ, ಅವಕ್ಕೆ ಬೇಕಾದ ಕಚ್ಚಾ ಪದಾರ್ಥಗಳನ್ನು ಸುಲಭವಾಗಿ ದೊರಕಿಸಿಕೊಳ್ಳುವುದು, ಔಷಧ ಸಂಶೋಧನೆ ಹಾಗೂ ಉತ್ಪಾದನೆಯ ವಿವರಗಳ ಪ್ರಚಾರ —ಇವು ಉದ್ಯಮಗಳಿಗೆ ದೊರೆಯುವ ನೆರವು. ಔಷಧಿ ಉದ್ಯಮ, ವೈಜ್ಞಾನಿಕ ಸಂಸ್ಥೆ ಹಾಗೂ ವಿಶ್ವವಿದ್ಯಾನಿಲಯಗಳ ಸಂಶೋಧಕರಿಗೆ ವಿಶಿಷ್ಟ ವಿಷಯಗಳಲ್ಲಿ ತರಬೇತಿ ಸೌಲಭ್ಯವನ್ನು ಈ ಸಂಸ್ಥೆಯಲ್ಲಿ ನೀಡಲಾಗುತ್ತದೆ.

ಈ ಸಂಶೋಧನಾ ಸಂಸ್ಥೆಯಲ್ಲಿ ಔಷಧೀಯ ಸಸ್ಯಾಗಾರವಿದೆ. ಸಸ್ಯಮೂಲ ಮದ್ದುಗಳ ಸಂಗ್ರಹಾಲಯವೂ ಇದೆ. ಔಷಧೀಯ ಸಸ್ಯಗಳ ಕೂಲಂಕಷ ಪರೀಕ್ಷೆ ಸಂಸ್ಥೆಯಲ್ಲಿ ನಡೆಯುತ್ತದೆ. ಹೊಸ ಜೀವನಿರೋಧಕಗಳನ್ನು ತಯಾರಿಸುವ ಸಂಶೋಧನೆಯ ಅಂಗವಾಗಿ ಮಣ್ಣಿನ ಮಾದರಿಗಳ ಪರೀಕ್ಷೆ ನಡೆಯುತ್ತದೆ. ಹೃದಯ ರೋಗಗಳ ಬಗೆಗೆ ಅಧ್ಯಯನ ನಡೆಯುತ್ತದೆ.

ಮದ್ದುಗಳ ಗುಣಮಟ್ಟ, ಅಪಾರ ಸಂಖ್ಯೆಯ ಔಷಧೀಯ ಸಸ್ಯಗಳ ಪರಿಶೀಲನಾ ಕೆಲಸಗಳಲ್ಲೂ ಸಂಸ್ಥೆ ತೊಡಗಿದೆ. ಕುಟುಂಬ ಯೋಜನೆ ಮತ್ತು ಜನಸಂಖ್ಯಾ ನಿಯಂತ್ರಣ ಸಮಸ್ಯೆ ಸಂಸ್ಥೆಯ ಒಂದು ಮುಖ್ಯ ಸಂಶೋಧನಾ ಕಾರ್ಯಕ್ಷೇತ್ರ.

ಕೇಂದ್ರ ಮೆಕ್ಯಾನಿಕಲ್ ಎಂಜಿನಿಯರಿಂಗ್ ಸಂಶೋಧನಾ ಸಂಸ್ಥೆ

ಭಾರತದ ಎಂಜಿನಿಯರಿಂಗ್ ಉದ್ಯಮದ ಬೆಳವಣಿಗೆಗಾಗಿ ಮುಖ್ಯ ಯಂತ್ರಗಳನ್ನು ರೂಪಿಸುವುದು, ಯಂತ್ರ ಭಾಗಗಳ ಅಧ್ಯಯನ ಮತ್ತು

ಅವುಗಳನ್ನು ಉತ್ತಮಗೊಳಿಸುವುದು ದುರ್ಗಾಪುರದ ಕೇಂದ್ರ ಮೆಕ್ಯಾನಿಕಲ್ ಎಂಜಿನಿಯರಿಂಗ್ ಸಂಶೋಧನಾ ಸಂಸ್ಥೆಯ (ಸೆಂಟ್ರಲ್ ಮೆಕ್ಯಾನಿಕಲ್ ಎಂಜಿನಿಯರಿಂಗ್ ರಿಸರ್ಚ್ ಇನ್ಸ್ಟಿಟ್ಯೂಟ್) ಮುಖ್ಯ ಕಾರ್ಯಗಳು.

ವೈಜ್ಞಾನಿಕ ಮತ್ತು ಔದ್ಯೋಗಿಕ ಸಂಶೋಧನಾ ಮಂಡಲಿಗೆ ಸೇರಿದ ಈ ಸಂಸ್ಥೆ 1958ರಲ್ಲಿ ಸ್ಥಾಪಿಸಲ್ಪಟ್ಟಿತು.

ಹವಾನಿಯಂತ್ರಣ ಮತ್ತು ಶೈತ್ಯೀಕರಣ, ಉಷ್ಣವರ್ಗಾವಣೆ ಮತ್ತು ತರಲಬಲವಿಜ್ಞಾನ, ಯಂತ್ರರಚನೆ, ಆಟೋಮೊಬೈಲ್ ಎಂಜಿನಿಯರಿಂಗ್, ಅಂತರ್ದಹನ ಎಂಜಿನು, ವಿನ್ಯಾಸ ರೂಪಣೆ, ವೈಜ್ಞಾನಿಕ ಉಪಯೋಗ, ಉತ್ಪಾದನಾ ತಾಂತ್ರಿಕತೆ —ಇವು ಸಂಸ್ಥೆಯ ಮುಖ್ಯ ವಿಭಾಗಗಳು. ಬೇರೆ ಬೇರೆ ಉದ್ಯಮಗಳ ಬೇಡಿಕೆಗೆ ಅನುಗುಣವಾದ ಯಂತ್ರ, ಯಂತ್ರ ವಿಭಾಗಗಳ ಅಭಿವೃದ್ಧಿ ಕಾರ್ಯಕ್ರಮವನ್ನೂ ಈ ಸಂಸ್ಥೆ ನಡೆಸುತ್ತದೆ. ಉಕ್ಕಿನ ಮಿತಬಳಕೆಯಿಂದ, ಸಮರ್ಥ ಯಂತ್ರಗಳನ್ನು ಕಟ್ಟುವುದರಲ್ಲಿ ಸಂಸ್ಥೆ ಗಮನಾರ್ಹ ಕೆಲಸಮಾಡಿದೆ. ದೊಡ್ಡ ಯಂತ್ರಗಳನ್ನು ನಿಯಂತ್ರಿಸುವ ಉಪಕರಣಗಳ ಬಗೆಗೂ ಇಲ್ಲಿ ಪರಿಶೀಲನೆ ನಡೆಯುತ್ತದೆ.

ಅಂತರ್ದಹನ ಎಂಜಿನುಗಳಿಗೆ ಗಾಳಿ, ಇಂಧನ ಹಾಗೂ ಮೃದುಚಾಲಕ ತೈಲಗಳ ಸೋಸುಕಗಳನ್ನು ಅಳವಡಿಸುವುದು, ಬಹಳ ಶೈತ್ಯದಲ್ಲಿಯೂ ವಾಹನ ಎಂಜಿನುಗಳು ಕೆಲಸ ಮಾಡುವುದು, ಪಾರಾಷೂಟ್ ತೆರೆಯುವ ವಿಶಿಷ್ಟ ವಿಧಾನ —ಇವು ರಕ್ಷಣಾ ಉಪಯುಕ್ತತೆಗಾಗಿ ಕೈಗೊಂಡ ಕಾರ್ಯಕ್ರಮಗಳು.

ಕೇಂದ್ರ ರಸ್ತೆ ಸಂಶೋಧನಾಲಯ

ಕಡಮೆ ವೆಚ್ಚದಲ್ಲಿ ಹೆಚ್ಚು ಕಾಲ ಬಾಳಿಕೆ ಬರುವ ರಸ್ತೆಗಳ ನಿರ್ಮಾಣ, ಅವುಗಳ ದುರಸ್ತಿ —ಇವನ್ನು ಕುರಿತ ಸಂಶೋಧನೆ ನವದೆಹಲಿಯಲ್ಲಿರುವ ಕೇಂದ್ರ ರಸ್ತೆ ಸಂಶೋಧನಾಲಯದಲ್ಲಿ (ಸೆಂಟ್ರಲ್ ರೋಡ್ ರಿಸರ್ಚ್ ಇನ್ಸ್ಟಿಟ್ಯೂಟ್) ನಡೆಯುತ್ತದೆ. ವಾಹನ ಸಂಚಾರ ಮತ್ತು ರಸ್ತೆಯಲ್ಲಿ ಸುರಕ್ಷತೆಗಳ ವಿಷಯದಲ್ಲೂ ಇಲ್ಲಿ ಸಂಶೋಧನೆ ಆಗುತ್ತಿದೆ.

ರಸ್ತೆಗಳ ಬಗೆಗೆ ವಿವಿಧ ರಾಷ್ಟ್ರಗಳಲ್ಲಿ ನಡೆದಿರುವ ಸಂಶೋಧನಾ ಮಾಹಿತಿಯನ್ನು ಸಂಗ್ರಹಿಸಿ ಭಾರತದಲ್ಲಿ ಅವುಗಳ ಅನ್ವಯ ಸಾಧ್ಯತೆ: ಈಗಿನ ರಸ್ತೆ ನಿರ್ಮಾಣ ವಿಧಾನದಲ್ಲಿ -ಅದರಲ್ಲಿಯೂ ಆಯಾ ಪ್ರದೇಶಗಳಲ್ಲಿ ದೊರೆಯುವ ರಸ್ತೆನಿರ್ಮಾಣ ವಸ್ತುಗಳಿಗೆ ತಕ್ಕಂತೆ –ಸುಧಾರಣೆ: ಕಡಮೆ ವೆಚ್ಚದ ಪದಾರ್ಥಗಳಿಂದ ರಸ್ತೆ ನಿರ್ಮಾಣ : ಸಿಮೆಂಟ್ ಮುಂತಾದ ಬಂಧಕ ಪದಾರ್ಥಗಳ ಉಪಯೋಗ: ರಸ್ತೆ ನಿರ್ಮಾಣ ಯಂತ್ರಗಳ ರೂಪಣ ರಸ್ತೆಯಲ್ಲಿ ಸುರಕ್ಷತೆಯ ಬಗೆಗೆ ಪರಿಶೀಲನೆ — ಇವು ಕೇಂದ್ರ ರಸ್ತೆ ಸಂಶೋಧನಾಲಯದ ಚಟುವಟಿಕೆಗಳು.

ಭಾರತದ ಮುಖ್ಯ ಗಡಿನಾಡು ರಸ್ತೆಗಳಲ್ಲಿ ಭೂಪಾತ ನಿವಾರಣೆ ; ರಸ್ತೆ ನಿರ್ಮಾಣ ಸಾಮಗ್ರಿ ಸರ್ವೆ : ಗಡಿನಾಡಿನಲ್ಲಿ ತ್ವರಿತವಾಗಿ ರಸ್ತೆ ನಿರ್ಮಿಸುವ ವಿಧಾನ : ಟ್ಯಾಂಕುಗಳಿಗೆ ತುತ್ತಾದ ರಸ್ತೆಗಳ ಹಾಗೂ ವಿಮಾನ ನಿಲ್ದಾಣಗಳ ತುರ್ತು ರಿಪೇರಿ. ವಿಮಾನ ಬಂದರಲ್ಲಿ ಇಳಿಸುವುದಕ್ಕೆ ಅನುವಾಗುವಂಥ ಅಲ್ಲಿಂದಿಲ್ಲಿಗೆ ಸಾಗಿಸಬಹುದಾದ ಇಳಿದಾಣ ಹಾಸು —ಮುಂತಾದ ರಕ್ಷಣಾ ಖಾತೆಗೆ ಸಂಬಂಧಪಟ್ಟ ಸಂಶೋಧನೆಗಳನ್ನೂ ಈ ಸಂಸ್ಥೆ ನಡೆಸುತ್ತದೆ.

ವೈಜ್ಞಾನಿಕ ಮತ್ತು ಔದ್ಯೋಗಿಕ ಸಂಶೋಧನಾ ಮಂಡಲಿಯ ರಾಷ್ಟ್ರೀಯ ಸಂಸ್ಥೆಗಳಲ್ಲಿ ಈ ಸಂಶೋಧನಾಲಯವೂ ಒಂದು. ಇದು 1952ರಲ್ಲಿ ನವದೆಹಲಿಯಲ್ಲಿ ಸ್ಥಾಪಿಸಲ್ಪಟ್ಟಿತು.

ಕೇಂದ್ರ ಲಲಿತ ಕಲಾ ಅಕಾದೆಮಿ

ನೋಡಿ : ಲಲಿತ ಕಲಾ ಅಕಾದೆಮಿ—ಸಂಪುಟ ೫

ಕೇಂದ್ರ ಲವಣ ಮತ್ತು ಸಾಗರ ರಾಸಾಯನಿಕ ಸಂಶೋಧನಾಲಯ

1954ರಲ್ಲಿ, ವೈಜ್ಞಾನಿಕ ಮತ್ತು ಔದ್ಯೋಗಿಕ ಸಂಶೋಧನಾ ಮಂಡಲಿಯ ಆಶ್ರಯದಲ್ಲಿ ಗುಜರಾತಿನ ಭಾವನಗರದಲ್ಲಿ ಕೇಂದ್ರ ಲವಣ ಮತ್ತು ಸಾಗರ ರಾಸಾಯನಿಕ ಸಂಶೋಧನಾಲಯ (ಸೆಂಟ್ರಲ್ ಸಾಲ್ಟ್ ಅಂಡ್ ಮೆರೀನ್ ಕೆಮಿಕಲ್ಸ್ ರಿಸರ್ಚ್ ಇನ್ಸ್ಟಿಟ್ಯೂಟ್) ಸ್ಥಾಪಿಸಲ್ಪಟ್ಟಿತು.

ಸಾಗರದಿಂದ ಪಡೆದ ಸೋಡಿಯಂ ಕ್ಲೋರೈಡ್, ಸಾಗರ ರಾಸಾಯನಿಕಗಳ ಉತ್ಪಾದನೆ ಹಾಗೂ ಸರಿಯಾದ ಉಪಯೋಗ —ಇವು ಸಂಸ್ಥೆಯ ಮುಖ್ಯ ಕಾರ್ಯಕ್ಷೇತ್ರ. ನೀರಿನ ನಿರ್ಲವಣೀಕರಣ, ಬೇಸಾಯಕ್ಕೆ ಸಮುದ್ರದ ನೀರಿನ ಬಳಕೆ, ಕಡಲ ಕಳೆ, ಶೈವಲಗಳಿಂದ ಕೆಲವು ಆಹಾರ ಹಾಗೂ ರಾಸಾಯನಿಕ ಪದಾರ್ಥಗಳನ್ನು ಪಡೆಯುವುದು ಈ ಬಗೆಗೂ ಇಲ್ಲಿ ಸಂಶೋಧನೆ ಜರಗುತ್ತದೆ.

ದಿನಬಳಕೆಯ ಹಲವು ಲವಣಗಳ ತಯಾರಿಕಾ ವಿಧಾನಗಳನ್ನು ರೂಪಿಸುವಂಥ ಅನ್ವಯ ಸಂಶೋಧನೆ ಸಂಸ್ಥೆಯಲ್ಲಿ ನಡೆಯುತ್ತದೆ. ಒಳನಾಡಿನ ಸರೋವರ ಲವಣಗಳ ಭೌತ ಮತ್ತು ರಾಸಾಯನಿಕ ಗುಣಗಳ ಪರಿಶೀಲನೆ, ಬಿಸಿಲಲ್ಲಿ ಒಣಗಿಸಿ ಪಡೆದ ಉಪ್ಪಿನಲ್ಲಿರುವ ಕಲ್ಮಶಗಳ ಪರಿಶೀಲನೆ ಮೊದಲಾದ ಮೂಲಭೂತ ಸಂಶೋಧನೆಗಳೂ — ಈ ಸಂಸ್ಥೆಯಲ್ಲಿ ನಡೆಯುತ್ತವೆ.

ಕೇಂದ್ರ ವಿದ್ಯುತ್ ರಾಸಾಯನಿಕ ಸಂಶೋಧನಾಲಯ

ಸಾವಯವ ಮತ್ತು ನಿರವಯವ ರಾಸಾಯನಿಕಗಳನ್ನು ವಿದ್ಯುತ್ ವಿಭಜನೆಯಿಂದ ಪಡೆಯುವುದು, ವಿದ್ಯುತ್ ಲೋಹವಿಜ್ಞಾನ, ವಿದ್ಯುತ್ ಕುಲುಮೆಯಲ್ಲಿ ಪಡೆಯಬಹುದಾದ ಉತ್ಪನ್ನಗಳು, ಬ್ಯಾಟರಿಗಳು, ರಾಸಾಯನಿಕ ಕೊರೆತ, ವಿದ್ಯುಲ್ಲೇಪನ, ಲೋಹ ಮೇಲ್ಮೈಗಳ ಒಪ್ಪ ಕೆಲಸ, ವಿದ್ಯುತ್ ವಿಶ್ಲೇಷಣೆ, ಅನಿಲಗಳ ವಿದ್ಯುತ್ ರಸಾಯನವಿಜ್ಞಾನ, ವಿದ್ಯುತ್ ರಾಸಾಯನಿಕ ಉಪಕರಣಗಳು —ಈ ಎಲ್ಲ ಕಾರ್ಯಕ್ಷೇತ್ರಗಳಲ್ಲಿ ಕೆಲಸ ಮಾಡುವ ಸಂಸ್ಥೆ ಕಾರೈಕುಡಿಯಲ್ಲಿರುವ ಕೇಂದ್ರ ವಿದ್ಯುತ್ ರಾಸಾಯನಿಕ ಸಂಶೋಧನಾಲಯ (ಸೆಂಟ್ರಲ್ ಎಲೆಕ್ಟ್ರೊ ಕೆಮಿಕಲ್ ರಿಸರ್ಚ್ ಇನ್ಸ್ಟಿಟ್ಯೂಟ್). ವೈಜ್ಞಾನಿಕ ಮತ್ತು ಕೈಗಾರಿಕಾ ಸಂಶೋಧನಾ ಮಂಡಲಿಗೆ ಸೇರಿದ ಈ ಸಂಶೋಧನಾಲಯ ಆರಂಭವಾದದ್ದು 1953ರಲ್ಲಿ.

ಅವಶ್ಯವಾದ ರಾಸಾಯನಿಕ ಹಾಗೂ ಲೋಹ ವಸ್ತುಗಳನ್ನು ಪಡೆಯುವ ವಿಧಾನಗಳನ್ನು ಇಲ್ಲಿ ರೂಪಿಸಲಾಗಿದೆ. ಬ್ಯಾಟರಿಗಳ ಪರೀಕ್ಷೆ ಮುಂತಾದ ಕಾರ್ಯಗಳನ್ನೂ ವಿಧಾನಗಳನ್ನೂ ಸಂಸ್ಥೆ ನಿಗದಿಗೊಳಿಸುತ್ತದೆ.

ರಕ್ಷಣೆಗೆ ಸಂಬಂಧಿಸಿದ ಸಂಶೋಧನೆಗಳೂ ಇಲ್ಲಿ ನಡೆಯುತ್ತವೆ. ಸಾವಯವ ರಾಸಾಯನಿಕಗಳನ್ನು ಮಿತ ವೆಚ್ಚದಲ್ಲಿ, ಆದರೆ ಪರಿಣಾಮಕಾರಿಯಾಗಿ ಉತ್ಪಾದಿಸುವ ವಿಧಾನಗಳನ್ನು ಸಂಸ್ಥೆ ರೂಪಿಸಿದೆ. ಮೂಲಭೂತ ಸಂಶೋಧನೆಗಳೂ ಇಲ್ಲಿ ಆಗುತ್ತಿವೆ.



ರಾಷ್ಟ್ರದ ಪ್ರಧಾನಿ ಇಂದಿರಾ ಗಾಂಧೀ ಮತ್ತು ಜನತೆ

ರಾಷ್ಟ್ರಪತಿ ವಿ.ವಿ. ಗಿರಿ ಅವರಿಂದ ವಿದೇಶೀ ರಾಯಭಾರಿಯೊಬ್ಬರ ಅಧಿಕಾರ ಪತ್ರ ಸ್ವೀಕಾರ



ರಾಷ್ಟ್ರಾಧ್ಯಕ್ಷ ; ರಾಷ್ಟ್ರದ ಪ್ರಧಾನಿ

ಕೇಂದ್ರ ವೈಜ್ಞಾನಿಕ ಉಪಕರಣ ಸಂಸ್ಥೆ

ಅವಶ್ಯವಿರುವ ವೈಜ್ಞಾನಿಕ ಉಪಕರಣಗಳನ್ನು ದೇಶದಲ್ಲೇ ತಯಾರಿಸುವುದಕ್ಕಾಗಿ ಸೂಕ್ತ ಪರಿಶೀಲನೆ ಕೈಗೊಳ್ಳುವುದು ಕೇಂದ್ರ ವೈಜ್ಞಾನಿಕ ಉಪಕರಣಗಳ ಸಂಸ್ಥೆಯ (ಸೆಂಟ್ರಲ್ ಸೈನ್‌ಟಿಫಿಕ್ ಇನ್ಸ್‌ಟ್ರುಮೆಂಟ್ಸ್ ಆರ್ಗನೈಸೇಷನ್) ಧ್ಯೇಯ. ಇಂಥ ಉಪಕರಣಗಳು ಪ್ರೌಢ ಶಿಕ್ಷಣ, ಸಂಶೋಧನೆ, ಕೈಗಾರಿಕೆ ಹಾಗೂ ಕೆಲವು ಅಗತ್ಯ ಸೇವಾ ಇಲಾಖೆಗಳಿಗೆ ಬೇಕಾಗುತ್ತವೆ. ಎಲೆಕ್ಟ್ರಾನಿಕ್ ಮತ್ತು ವಿದ್ಯುತ್ ಚಿಕಿತ್ಸೆ, ವಿದ್ಯುತ್ ಹಾಗೂ ದ್ಯುತಿ ಉಪಕರಣಗಳನ್ನು ಅಭಿವೃದ್ಧಿಗೊಳಿಸುವುದು, ವೈಜ್ಞಾನಿಕ ಉಪಕರಣಗಳ ರಿಪೇರಿ ಮತ್ತು ಅವು ಒಳ್ಳೆಯ ಸ್ಥಿತಿಯಲ್ಲಿರುವಂತೆ ಕಾಪಾಡುವುದು, ನಿಖರವಾದ ಕೆಲಸಗಳಿಗೆ ಬೇಕಾಗುವ ಸೂಕ್ಷ್ಮ ಉಪಕರಣಗಳನ್ನು ಉಪಯೋಗಿಸುವವರಿಗೆ ತರಬೇತಿ ನೀಡುವುದು—ಇವು ಸಂಸ್ಥೆ ಕೈಗೊಂಡಿರುವ ಮುಖ್ಯ ಕಾರ್ಯಗಳು.

ವಿನ್ಯಾಸ ಹಾಗೂ ನಿರ್ಮಾಣಗಳಿಗೆ ಸಂಬಂಧಿಸಿ ವೈಜ್ಞಾನಿಕ ಉಪಕರಣ ತಯಾರಿಕಾ ಕೈಗಾರಿಕೆಯ ಅವಶ್ಯತೆಗಳನ್ನು ಈ ಸಂಸ್ಥೆ ಪೂರೈಸುತ್ತದೆ.

ವೈಜ್ಞಾನಿಕ ಮತ್ತು ಔದ್ಯೋಗಿಕ ಸಂಶೋಧನಾ ಮಂಡಲಿಯ ಈ ಸಂಸ್ಥೆ 1959ರಲ್ಲಿ ಚಂಡೀಗಡದಲ್ಲಿ ಆರಂಭವಾಯಿತು.

ಕೇಂದ್ರ ಸಂಗೀತ ನಾಟಕ ಅಕಾದೆಮಿ

ನೋಡಿ : ಸಂಗೀತ ನಾಟಕ ಅಕಾದೆಮಿ—ಸಂಪುಟ ೫

ಕೇಂದ್ರ ಸರಕಾರ

ಭಾರತ ಪ್ರಜಾಸತ್ತಾತ್ಮಕ ಗಣರಾಜ್ಯ. ಇದರ ಆಡಳಿತಕ್ಕಾಗಿ ಒಂದು ಕೇಂದ್ರ ಸರಕಾರವೂ 21 ರಾಜ್ಯ ಸರಕಾರಗಳೂ ಇವೆ. ಇಡೀ ರಾಷ್ಟ್ರದ ಆಡಳಿತ ಕೇಂದ್ರ ಸರಕಾರದ ಜವಾಬ್ದಾರಿ. ರಾಜ್ಯ ಸರಕಾರಗಳು ರಾಜ್ಯಗಳಿಗೆ ಸೇರಿದ ಪ್ರದೇಶಗಳ ಆಡಳಿತವನ್ನು ನೋಡಿಕೊಳ್ಳುತ್ತವೆ. ರಾಜ್ಯಗಳಿಗೆ ಸೇರದ ಕೆಲವು ಪ್ರದೇಶಗಳ ಆಡಳಿತವನ್ನು ಕೇಂದ್ರ ಸರಕಾರವೇ ನೇರವಾಗಿ ನೋಡಿಕೊಳ್ಳುತ್ತದೆ.

ಕೇಂದ್ರ ಮತ್ತು ರಾಜ್ಯ ಸರಕಾರಗಳ ನಡುವೆ ಆಡಳಿತ ವಿಚಾರದಲ್ಲಿ ಸಾಮರಸ್ಯವಿರುವಂತೆ ನಮ್ಮ ರಾಷ್ಟ್ರದ ಸಂವಿಧಾನವನ್ನು ರಚಿಸಲಾಗಿದೆ. ಕೆಲವು ಆಡಳಿತಾಂಶಗಳಲ್ಲಿ ರಾಜ್ಯಗಳಿಗೆ ಸ್ವಾತಂತ್ರ್ಯವಿದೆ. ಇನ್ನು ಕೆಲವು ಆಡಳಿತಾಂಶಗಳು ಕೇಂದ್ರ ಸರಕಾರದ ವ್ಯಾಪ್ತಿಗೊಳಗಾಗಿವೆ. ಕೆಲವು ಆಡಳಿತ ವಿಚಾರಗಳು ರಾಜ್ಯ, ಕೇಂದ್ರ ಎರಡೂ ಸರಕಾರಗಳ ವ್ಯಾಪ್ತಿಗೊಳಪಟ್ಟಿವೆ. ಇಂಥ ವಿಚಾರಗಳಲ್ಲಿ ರಾಜ್ಯ-ಕೇಂದ್ರ ಸರಕಾರಗಳ ನಡುವೆ ಭಿನ್ನಾಭಿಪ್ರಾಯ ಉಂಟಾದರೆ, ಕೇಂದ್ರ ಸರಕಾರದ ಶಾಸನಕ್ಕೆ ಪ್ರಾಮುಖ್ಯ ದೊರೆಯುತ್ತದೆ. ರಾಜ್ಯ, ಕೇಂದ್ರ ಹಾಗೂ [illegible] [illegible] ಶಾಸನಪಟ್ಟಿಯಲ್ಲಿ ಸೇರದಿರುವ ವಿಚಾರಗಳಲ್ಲಿ [illegible] ಅಧಿಕಾರ ಕೇಂದ್ರ ಸರಕಾರಕ್ಕೆ ಸೇರಿದ್ದು.

ಕೇಂದ್ರ ಸರಕಾರದ ವ್ಯಾಪ್ತಿಗೆ ಒಳಪಡುವಂತೆ 97 ವಿಷಯಗಳಿವೆ. ರಾಷ್ಟ್ರ ರಕ್ಷಣೆ, ವಿದೇಶ ವ್ಯವಹಾರ, ಸಾರಿಗೆ–ಸಂಪರ್ಕ, ನಾಣ್ಯ ಚಲಾವಣೆ, [illegible] [illegible] ತೆರಿಗೆ, [illegible] ಕೇಂದ್ರ ಸರಕಾರದ ವ್ಯಾಪ್ತಿಗೆ ಸೇರಿರುವ ಕೆಲವು ಮುಖ್ಯ ವಿಷಯಗಳು.



ನಾಳೆಯ ಇತಿಹಾಸಕಾರನಿಗೆ ನೆರವು ; ಭೂಗರ್ಭಕ್ಕೆ ಕಾಲಕೋಶ

ಕೇಂದ್ರ ಸರಕಾರದ ಆಡಳಿತ [illegible] ರಾಷ್ಟ್ರಪತಿ, ಉಪರಾಷ್ಟ್ರಪತಿ ಮತ್ತು ಪ್ರಧಾನಿಯವರ ನಾಯಕತ್ವದಲ್ಲಿರುವ ಕೇಂದ್ರ ಮಂತ್ರಿಮಂಡಲಕ್ಕೆ ಸೇರಿದ್ದು. ಮಂತ್ರಿಮಂಡಲ ಲೋಕಸಭೆ ಮತ್ತು ರಾಜ್ಯಸಭೆಗಳಿಗೆ ಜವಾಬ್ದಾರಿ ಹೊತ್ತಿರುತ್ತದೆ. ಈ ಸಭೆಗಳ ಅಭಿಪ್ರಾಯದಂತೆ ಕೇಂದ್ರ ಸರಕಾರ ರಾಷ್ಟ್ರದ ಆಡಳಿತ ನಡೆಸುತ್ತದೆ.

ಕೇಂದ್ರ ಸಾರ್ವಜನಿಕ ಆರೋಗ್ಯ ಎಂಜಿನಿಯರಿಂಗ್ ಸಂಶೋಧನಾಲಯ

[illegible]

ಕಾರ್ಯ ವ್ಯಾಪ್ತಿಗೆ ಸೇರಿವೆ.

[illegible] ಇದು 1958ರಲ್ಲಿ ಆರಂಭವಾಯಿತು.

ನದಿ, ಹೊಳೆ, ಜಲಾಶಯಗಳಿಗೆ ಬಿಡುವ –ವಿಶೇಷವಾಗಿ ಚರಂಡಿ ರೊಚ್ಚು – ಮತ್ತು ಕೈಗಾರಿಕೆಗಳಲ್ಲಿ ಉಪಯೋಗಿಸಿದ ನೀರಿನ ಮಾಲಿನ್ಯಮಟ್ಟದ ಬಗೆಗೂ ನದಿಗಳ ನೀರಿನಲ್ಲಿರುವ ನೈಸರ್ಗಿಕ ಶುದ್ಧೀಕರಣ ಸಾಮರ್ಥ್ಯದ ಬಗೆಗೂ ಈ ಸಂಸ್ಥೆ ಸರ್ವೆ ನಡೆಸುತ್ತದೆ. ರಸಾಯನವಿಜ್ಞಾನ, ಸೂಕ್ಷ್ಮಜೀವಿ ವಿಜ್ಞಾನ ಮತ್ತು ವೈರಸ್‌ಗಳ ಬಗೆಗೆ ಮೂಲಭೂತ ಸಂಶೋಧನೆಗಳು ಈ ಸಂಸ್ಥೆಯಲ್ಲಿ ನಡೆಯುತ್ತವೆ.

ಕೇಂದ್ರ ಸಾಹಿತ್ಯ ಅಕಾದೆಮಿ

ನೋಡಿ : ಸಾಹಿತ್ಯ ಅಕಾದೆಮಿ–ಸಂಪುಟ ೫

ಕೇದಾರನಾಥ

ನರಸಿಂಹನ ಅಂಶದಿಂದ ಹುಟ್ಟಿದ ನರ, ನಾರಾಯಣ ಎಂಬ ಇಬ್ಬರು ಋಷಿಗಳು ಬದರಿಕಾಶ್ರಮದಲ್ಲಿ ಮಣ್ಣಿನಲ್ಲಿ ಲಿಂಗವನ್ನು ಮಾಡಿ ಪೂಜಿಸು ತ್ತಿದ್ದರು. ಇವರ ಭಕ್ತಿ, ಶ್ರದ್ಧೆ, ಪೂಜೆಗಳಿಗೆ ಶಿವ ಮೆಚ್ಚಿದ. ಅವರ ಅಪೇಕ್ಷೆಯಂತೆ ಕೇದಾರದಲ್ಲಿ ಜ್ಯೋತಿರ್ಲಿಂಗದ ರೂಪದಲ್ಲಿ ನೆಲೆಸಿ. ಮಾನವರಿಗೆ ದರ್ಶನಲಾಭ ಕೊಡಲು ಒಪ್ಪಿಕೊಂಡ.

—ಈ ಕಥೆ ಶಿವ ಪುರಾಣ, ಕೋಟಿರುದ್ರ ಸಂಹಿತೆಗಳಲ್ಲಿ ಬರುತ್ತದೆ.

ಹಿಮಾಲಯ ಶ್ರೇಣಿಯಲ್ಲಿ ಸಮುದ್ರಮಟ್ಟದಿಂದ 11,735 ಅಡಿ ಎತ್ತರ ದಲ್ಲಿರುವ ಕೇದಾರ ಹರ್ದ್ವಾರದಿಂದ 152 ಮೈಲು ದೂರದಲ್ಲಿದೆ. ಇಲ್ಲಿನ ಪರ್ವತ ಶ್ರೇಣಿಗೆ ರುದ್ರ ಹಿಮಾಲಯ ಎನ್ನುತ್ತಾರೆ.

ಅತಿಯಾದ ಹಿಮವರ್ಷದ ಕಾರಣ ಚಳಿಗಾಲದಲ್ಲಿ ಕೇದಾರದಲ್ಲಿ ವಾಸಿ ಸುವುದು ತುಂಬ ಕಷ್ಟ. ಆದ್ದರಿಂದ ಸೂರ್ಯ ಮೇಷರಾಶಿಯನ್ನು ಪ್ರವೇಶಿಸುವ ವೈಶಾಖ ಮಾಸದಲ್ಲಿ ಕೇದಾರನಾಥನ ದೇವಾಲಯದ ಬಾಗಿಲನ್ನು ತೆರೆಯುತ್ತಾರೆ. ಅಂದು ಜ್ಯೋತಿದರ್ಶನಕ್ಕೆಂದು ಸಾವಿರಾರು ಭಕ್ತರು ಸೇರುತ್ತಾರೆ. ಕಾರ್ತಿಕ ಮಾಸದಲ್ಲಿ ಸೂರ್ಯ ವೃಶ್ಚಿಕರಾಶಿ ಪ್ರವೇಶಿಸಿದಾಗ ದೇವಾಲಯವನ್ನು ಮುಚ್ಚಿಬಿಡುತ್ತಾರೆ. ಕೇದಾರನಾಥನ ಉತ್ಸವಮೂರ್ತಿಯನ್ನು ಉಖಿಮಠ ಎಂಬಲ್ಲಿಗೆ ತೆಗೆದುಕೊಂಡು ಹೋಗು ತ್ತಾರೆ. ಪುನಃ ದೇವಸ್ಥಾನ ತೆರೆಯುವ ವರೆಗೆ ದೇವರಿಗೆ ಅಲ್ಲೇ ಪೂಜೆ

ರುದ್ರ ಹಿಮಾಲಯ ಶ್ರೇಣಿಯಲ್ಲಿ ಕೇದಾರನಾಥ



ಕೇದಾರಕ್ಕೆ ಹೋಗುವವರು ಹೃಷೀಕೇಶ(ಋಷಿಕೇಶ ಎಂದೂ ಹೇಳು ತ್ತಾರೆ)ದಿಂದ ದೇವಪ್ರಯಾಗ, ಶ್ರೀನಗರ, ರುದ್ರಪ್ರಯಾಗ, ಉಖಿಮಠದ ದಾರಿಯಿಂದಾಗಲೀ ದೇವಪ್ರಯಾಗ, ತೆಹರಿ, ಧರಸು ಮಾರ್ಗದಿಂದಾಗಲೀ ಪ್ರಯಾಣ ಬೆಳೆಸುತ್ತಾರೆ.

ಕೇದಾರೇಶ್ವರ ಬಂಡೆಯ ರೂಪದಲ್ಲಿದೆ. ಯಾತ್ರಿಕರು ಇದಕ್ಕೆ ತುಪ್ಪ, ಸವರಿ, ಗಂಧ ಹೂವುಗಳಿಂದ ಪೂಜಿಸುತ್ತಾರೆ.

ಶಂಕರಾಚಾರ್ಯರು ಈ ಕ್ಷೇತ್ರದಲ್ಲಿ ಕಾಲವಾದರೆಂಬ ಹೇಳಿಕೆ ಇದೆ.

ಕೇನೋಪನಿಷತ್

ಕೇನೋಪನಿಷತ್ತಿನ ಮೊದಲ ಮಂತ್ರ 'ಕೇನ' ಎಂಬ ಪದದಿಂದ ಆರಂಭ ವಾಗುತ್ತದೆ. 'ಕೇನ' ಎಂದರೆ 'ಯಾರ ?' ಇಲ್ಲಿ ಈ ಪದ ಬ್ರಹ್ಮವನ್ನು ಸೂಚಿ ಸುತ್ತದೆ. ಈ 'ಯಾರ ?' ಎಂಬುದನ್ನು ಕುರಿತದ್ದು ಕೇನೋಪನಿಷತ್. ಇದನ್ನು ತಲವಕಾರೋಪನಿಷತ್ ಎಂದೂ ಕರೆಯುತ್ತಾರೆ. ಇದು ಸಾಮ ವೇದದಲ್ಲಿ ಬರುವ ತಲವಕಾರ ಬ್ರಾಹ್ಮಣ ಅಥವಾ ಜೈಮಿನೀಯ ಬ್ರಾಹ್ಮಣ ದಲ್ಲಿದೆ. ಈ ಉಪನಿಷತ್ತು ನಾಲ್ಕು ಖಂಡಗಳನ್ನು ಒಳಗೊಂಡಿದೆ.

ದೃಷ್ಟಿಗೆ ಅಗೋಚರವಾದ ಪರಬ್ರಹ್ಮವನ್ನು ಅರಿಯುವುದು ಹೇಗೆ ? ಕಣ್ಣಿಗೆ ಕಾಣಿಸದಿದ್ದರೂ ಒಳಗಣ್ಣು ಅದನ್ನು ಕಾಣುವಂತೆ ಯಾವುದು ಮಾಡುತ್ತದೋ ಅದೇ ಬ್ರಹ್ಮ. ಬ್ರಹ್ಮ ಇದೆ, ಆದರೆ ವರ್ಣಿಸ ಲಾಗುವುದಿಲ್ಲ ಎನ್ನುವ ತಿಳಿವಳಿಕೆಯನ್ನು ಮಾನವ ಪಡೆಯಬೇಕು. ಬ್ರಹ್ಮ ಮಿಂಚಿನಂತೆ ಹೊಳೆದು ಮಾಯವಾಗುತ್ತದೆ. ತಪಸ್ಸಿನಿಂದ, ಮನೋ ನಿಗ್ರಹದಿಂದ, ಮಾತು, ಶರೀರ ಮನಸ್ಸುಗಳಲ್ಲಿ ಕುಟಿಲತೆಯಿಲ್ಲದ ಸತ್ಯಾಚರಣೆ ಯಿಂದ ಮನುಷ್ಯರು ಈ ಬ್ರಹ್ಮಜ್ಞಾನವನ್ನು ಪಡೆಯಬೇಕು ಎಂಬುದು ಕೇನೋಪನಿಷತ್ತಿನ ಸಾರ.

ಕೇರಳ

ನೂರಾರು ಮೈಲುಗಳ ಕರಾವಳಿ. ಕನ್ನಡಿ ಹಾಸಿದಂತೆ ಕಾಣುವ ಹಿನ್ನೀರು ಜಲರಾಶಿ. ಬದಿಯಲ್ಲಿ ಎತ್ತರವಾಗಿ ಸೆಟೆದು ನಿಂತಿರುವ ತೆಂಗಿನಮರಗಳು. ಕೇರಳ ಇಂಥ ಮೋಹಕ ನಿಸರ್ಗದ ನಾಡು.



ಜಲಕ್ರೀಡೆಯ ನಾಡು

' ಕೇರಮ್ ' ಎಂದರೆ ತೆಂಗಿನಕಾಯಿ ; ತೆಂಗಿನ ನಾಡು ಕೇರಳ. ಅರಬಿ ಸಮುದ್ರಕ್ಕೂ ಪಶ್ಚಿಮಘಟ್ಟಗಳಿಗೂ ನಡುವೆ ಕಿರಿದಾದ ದಕ್ಷಿಣ ಭೂಭಾಗವಷ್ಟೇ ಕೇರಳ. ಇದರ ಉತ್ತರ ಮತ್ತು ಈಶಾನ್ಯಕ್ಕೆ ಕರ್ನಾಟಕ ರಾಜ್ಯ, ಪೂರ್ವ ಮತ್ತು ದಕ್ಷಿಣಕ್ಕೆ ತಮಿಳುನಾಡು ರಾಜ್ಯಗಳಿವೆ.

ಕೇರಳದ ಕೊಟ್ಟಾಯಂ ಜಿಲ್ಲೆಯಲ್ಲಿ 8,837 ಅಡಿ ಎತ್ತರದ ಆನೆಮುಡಿ, ಹಿಮಾಲಯವನ್ನು ಬಿಟ್ಟು ಭಾರತದ ಅತ್ಯುನ್ನತ ಶಿಖರ. ಘಟ್ಟಗಳಿಂದಾಗಿ ಕೇರಳದಲ್ಲಿ ಒಳ್ಳೆಯ ಮಳೆ ಬರುತ್ತದೆ. ಕೊಟ್ಟಾಯಂ ಜಿಲ್ಲೆಯಲ್ಲಿ ವರ್ಷಕ್ಕೆ 200 ಅಂಗುಲ ಮಳೆ ಬೀಳುತ್ತದೆ.



ಕೋವಲಂ ಕಡಲ ತೀರ


ಕೇರಳದಲ್ಲಿ ಜನಸಾಂದ್ರತೆ ಹೆಚ್ಚು. ಅಕ್ಷರಸ್ಥರ ಸಂಖ್ಯೆಯೂ ಹೆಚ್ಚು. ಕೇರಳದ ಇನ್ನೊಂದು ಹೆಸರು ಮಲಯಾಳ: ಎಂದರೆ, ಮಲೆ–ಬೆಟ್ಟಗಳ ನೆಲ. ಜನ ಮಲಯಾಳಿಗಳು ಅಥವಾ ಕೇರಳೀಯರು.

ಕೇರಳದ ಭೂಭಾಗವನ್ನು ವಿಷ್ಣುವಿನ ಅವತಾರವಾದ ಪರಶುರಾಮ ಸಮುದ್ರದಿಂದ ಮೇಲಕ್ಕೆತ್ತಿದನೆಂಬ ಐತಿಹ್ಯವಿದೆ. ಸಮುದ್ರದ ನೀರು ಸ್ವಲ್ಪ ಸ್ವಲ್ಪವಾಗಿ ಹಿಂದೆ ಸರಿದು ಘಟ್ಟಗಳಿಗೂ ಸಮುದ್ರಕ್ಕೂ ನಡುವೆ ಈ ನಾಡು ಹುಟ್ಟಿತೆಂದು ಭೂವಿಜ್ಞಾನಿಗಳ ಅಭಿಪ್ರಾಯ.

ಇತಿಹಾಸದಲ್ಲಿ ಕೇರಳದ ಬಗೆಗೆ ಮೊತ್ತಮೊದಲು ನೇರ ಪ್ರಸ್ತಾಪ ದೊರೆಯುವುದು ಅಶೋಕನ ಶಾಸನಗಳಲ್ಲಿ. ಒಂಬತ್ತನೆಯ ಶತಮಾನದಲ್ಲಿ ಮಲಯಾಳ ಭಾಷೆ ಆಡುವ ಜನರು ಒಂದಾಗಬೇಕು ಎಂಬ ಭಾವನೆ ಜಾಗೃತಗೊಂಡಿತು. 825ರಲ್ಲಿ ಕೊಲ್ಲ ಎಂಬ ಶಕೆಯ ಎಣಿಕೆ ಆರಂಭವಾಯಿತು. ಈಗಲೂ ಕೇರಳದ ಧಾರ್ಮಿಕ ಮತ್ತು ಸಾಂಸ್ಕೃತಿಕ ದಿನಾಚರಣೆಗಳಲ್ಲಿ ಈ ಕಾಲಗಣನೆಯನ್ನೇ ಅನುಸರಿಸುತ್ತಾರೆ.

ಕೇರಳದಲ್ಲಿ ರಾಜಕೀಯ ಐಕ್ಯ ಏರ್ಪಟ್ಟದ್ದು. ಅಲ್ಲಿನ ಚಿಕ್ಕಪುಟ್ಟ ಪಾಳೆಯಗಾರರೆಲ್ಲ ಚೇರವಂಶದವರ ಮೇಲಧಿಕಾರವನ್ನೊಪ್ಪಿದಾಗ. ಈ ವಂಶದ ರಾಜರಿಗೆ ಚೇರಮಾನ್ ಪೆರುಮಾಳರು ಎಂದು ಕರೆಯುತ್ತಾರೆ. ಇವರ ಕಾಲದಲ್ಲಿ ರಾಜ್ಯ ಬಹಳ ಏಳಿಗೆಹೊಂದಿತು.

ಕ್ರಿಸ್ತ ಪೂರ್ವ ಕಾಲದಿಂದಲೂ ರೋಮ್ ಹಾಗೂ ಚೀನಗಳೊಡನೆ ಕೇರಳ ವ್ಯಾಪಾರ ನಡೆಸುತ್ತಿತ್ತು. ಈಜಿಪ್ಟ್, ಏಷ್ಯ ಮೈನರ್, ಅಸ್ಸೀರಿಯ, ಬ್ಯಾಬಿಲೋನಿಯ ಸಾಮ್ರಾಜ್ಯಗಳೊಡನೆಯೂ ಕೇರಳದ ಸಂಪರ್ಕವಿದ್ದಿತು. ಮಲಯಾ, ಫಿಲಿಪೀನ್ಸ್, ಜಾವಾ, ಸುಮಾತ್ರಗಳೊಡನೆ ವ್ಯಾಪಾರವಿದ್ದಿತು. ದಂತ, ಸಾಂಬಾರು ಪದಾರ್ಥ, ಗಂಧದ ಮರ ಹಾಗೂ ನವಿಲು ಪರದೇಶಗಳಿಗೆ ರಫ್ತಾಗುತ್ತಿದ್ದುವು. ವಿದೇಶಗಳಿಂದ ಬಂದವರೂ ಇಲ್ಲಿ ನೆಲೆಸಿದರು. ಇವರ ಸಂತತಿಯವರನ್ನು ಈಗಲೂ ಇಲ್ಲಿ ಕಾಣಬಹುದು.



15ನೆಯ ಶತಮಾನದ ಕೊನೆಯ ವೇಳೆಗೆ ಕೇರಳದ ಅರ್ಧಭಾಗ ಕಲ್ಲಿಕೋಟೆಯ ಜಾಮೊರಿನರ ಆಡಳಿತಕ್ಕೆ ಒಳಪಟ್ಟಿತು. ಪೋರ್ಚುಗೀಸರು ಕಲ್ಲಿಕೋಟೆಗೆ ಬಂದಿಳಿದದ್ದು ಈ ಕಾಲದಲ್ಲೇ. ವಾಸ್ಕೊ ದ ಗಾಮನಿಗೆ ಜಾಮೊರಿನ್ ದೊರೆ ಸತ್ಕಾರಕೂಟ ಏರ್ಪಡಿಸಿದ್ದ.

ಕೊಚ್ಚಿನ್‌ನಲ್ಲಿ 'ರಾಜ' ಎಂಬ ಬಿರುದುಳ್ಳ ಮನೆತನದ ದೊರೆಗಳು ಆಳುತ್ತಿದ್ದರು. ಇಲ್ಲಿಯೂ ಪೋರ್ಚುಗೀಸರು, ಅನಂತರ ಡಚ್ಚರು, ತಮ್ಮ ವ್ಯಾಪಾರ ಕುದುರಿಸಿಕೊಂಡರು. 1776ರಲ್ಲಿ ಹೈದರಾಲಿ ಆಕ್ರಮಣ ಮಾಡಿದಾಗ ಅವನಿಗೆ ಸಾಮಂತನಾಗಿರಲು ಕೊಚ್ಚಿಯ ಅರಸು ಒಪ್ಪಿಕೊಂಡ. ಈಸ್ಟ್ ಇಂಡಿಯಾ ಕಂಪೆನಿಯವರು ಪ್ರಬಲರಾದ ಮೇಲೆ ಆತ ಅವರ ಆಶ್ರಿತನಾದ. ತಿರುವಾಂಕೂರಿನ ರಾಜವಂಶವೂ ಬ್ರಿಟಿಷರಿಗೆ ಅಧೀನವಾಗಿ 1947ರ ವರೆಗೆ ಕಪ್ಪ ಸಲ್ಲಿಸುತ್ತಿತ್ತು. 1936ರಲ್ಲಿ ಈ ಮಹಾರಾಜರು ರಾಜ್ಯದ ಎಲ್ಲ ದೇವಸ್ಥಾನಗಳಲ್ಲಿ ಹರಿಜನರ ಪ್ರವೇಶಕ್ಕೆ ಅವಕಾಶ ಕೊಟ್ಟರು. ಗಾಂಧೀಜೀ ಇದನ್ನು 'ಆಧುನಿಕ ಯುಗದ ಪವಾಡ' ಎಂದು ಕರೆದರು. ಭಾರತಕ್ಕೆ ಸ್ವಾತಂತ್ರ್ಯ ಬಂದ ಮೇಲೆ ಕೊಚ್ಚಿ–ತಿರುವಾಂಕೂರು ರಾಜ್ಯ ರೂಪುಗೊಂಡಿತು. ರಾಜ್ಯ ಪುನರ್ವಿಂಗಡಣೆಯ ಕಾಲದಲ್ಲಿ, ಹಿಂದೆ ಬ್ರಿಟಿಷರ ಆಡಳಿತದಲ್ಲಿದ್ದ ಮಲಬಾರ್ ಜಿಲ್ಲೆ ಮತ್ತು ಕಾಸರಗೋಡು ತಾಲ್ಲೂಕುಗಳನ್ನೂ ಕೊಚ್ಚಿ–ತಿರುವಾಂಕೂರು ರಾಜ್ಯವನ್ನೂ ಸೇರಿಸಿ ಕೇರಳ ರಾಜ್ಯವನ್ನು ರಚಿಸಲಾಯಿತು.

ಬಹುಪಾಲು ಜನ ಗ್ರಾಮದಲ್ಲಿ ವಾಸಿಸುತ್ತಾರೆ. ಓಣಂ ಹಬ್ಬ ಕೇರಳದ ಪ್ರಮುಖ ಹಬ್ಬ.

ರಾಜ್ಯದ ಅತಿ ದೊಡ್ಡ ನದಿ ಪೆರಿಯಾರ್. ಹೆಚ್ಚಿನ ನದಿಗಳಲ್ಲಿ ಜಲಪಾತಗಳಿವೆ. ಇದರಿಂದ ಜಲ ವಿದ್ಯುದಾಗಾರಗಳನ್ನು ಸ್ಥಾಪಿಸಲು ಒಳ್ಳೆಯ ಅವಕಾಶ. ಮೀನುಗಾರಿಕೆ ಇಲ್ಲಿನ ಒಂದು ಮುಖ್ಯ ಉದ್ಯಮ. ಪಾರ್ಕ್ ಲಿವರ್ ಎಣ್ಣೆ, ಆವೆಯ ಎಣ್ಣೆ ಇಲ್ಲಿನ ಉತ್ಪನ್ನಗಳು; ಶ್ರಿಂಪಾಂಗ್ ಎಂಬ ಸಮುದ್ರಜಂತು, ಸಮುದ್ರದ ಕಳೆ, ಅಯೊಡಿನ್‌ಗಾಗಿ ಬೇಕಾಗುವ ಸಾರ್ಗಾಸಮ್, ಮುತ್ತಿನ ಮಳಿ, ಸಿಗಡಿ ಮುಂತಾಗಿ ಅನೇಕ ಸಾಗರೋತ್ಪನ್ನಗಳು ಕೇರಳದ ಕೆಲವು ಸಂಪನ್ಮೂಲಗಳು.

ನಿಬಿಡವಾದ ಕಾಡುಗಳೂ ಕೇರಳದಲ್ಲಿವೆ. ಆನೆ, ಕಾಡೆಮ್ಮೆ, ಚಿರತೆ, ಕಾಡುಹಂದಿ, ಸಾಂಬಾರ್, ಜಿಂಕೆ, ಮಂಗ ಇವು ಮುಖ್ಯ ವನ್ಯ ಪ್ರಾಣಿಗಳು. ತೇಗ, ಕರಿಮರ, ಎಬನಿ, ಮೆದುಮರ, ಜೊಂಡು, ಶ್ರೀಗಂಧ, ಬಿದಿರು, ಜೇನು, ಔಷಧಿ ಮೂಲಿಕೆಗಳು, ಬಿದಿರು–ಇವು ಕೇರಳದ ಕಾಡಿನ



ಅಲೆಪ್ಪಿ ಹಿನ್ನೀರು

ಉತ್ಪನ್ನಗಳು. ಮೊನಜೈಟ್, ಇಲ್ಮನೈಟ್, ಕೆಯೋಲಿನ್ ಜೇಡಿ, ಕ್ಯಾಲ್ಸಿಯಂ ಕಾರ್ಬೊನೇಟ್ ಇವು ಇಲ್ಲಿನ ಖನಿಜಸಂಪತ್ತು. ಕೃಷಿ, ಉತ್ಪನ್ನಗಳೆಂದರೆ ಭತ್ತ, ದ್ವಿದಳ ಧಾನ್ಯಗಳು, ಮರಗೆಣಸು, ಬಾಳೆ, ಹಲಸು, ಮಾವು, ಅನಾನಸ್ ಮುಂತಾದ ಹಣ್ಣುಗಳು. ತೆಂಗು, ಮೆಣಸು, ಗೇರುಬೀಜ, ಅಡಿಕೆ, ಶುಂಠಿ, ಕಬ್ಬು, ಮೊಸರುಹುಲ್ಲು, ರಬ್ಬರ್, ಚಹಾ, ಕಾಫಿ, ಏಲಕ್ಕಿ ಇಲ್ಲಿನ ವಾಣಿಜ್ಯ ಬೆಳೆಗಳು. ಬೈಸಿಕಲ್ ಭಾಗಗಳು, [illegible], [illegible] ಪದಾರ್ಥಗಳು, ಸಾಬೂನು, ದಂತದ ಕೆಲಸ, ಕೈಮಗ್ಗದ ಬಟ್ಟೆ, ತೆಂಗಿನನಾರಿನ ಸಾಮಾನುಗಳು ಕೇರಳದ ಮುಖ್ಯ ಉದ್ಯಮಗಳು. ಹಿಂದೂಸ್ಥಾನ್ ಮೆಷಿನ್ ಟೂಲ್ಸ್‌ನ ಶಾಖೆ ಕೇರಳದ ಕಲಮಸ್ಸೇರಿಯಲ್ಲಿದೆ.

ಪೆರಿಯಾರ್ ಅಭಯಾರಣ್ಯ ಪ್ರದೇಶ ಪ್ರವಾಸಿಗರನ್ನು ಆಕರ್ಷಿಸುತ್ತದೆ. ತಿರುವನಂತಪುರದ ಪದ್ಮನಾಭಸ್ವಾಮಿ ದೇವಸ್ಥಾನ ದಕ್ಷಿಣ ಭಾರತದ ಒಂದು ಮುಖ್ಯ ದೇವಾಲಯ. ಗುರುವಾಯೂರು, ಶ್ರೀ ಅಯ್ಯಪ್ಪ ದೇವರ ಶಬರಿಮಲೈ ಮುಖ್ಯ ಯಾತ್ರಾಸ್ಥಳಗಳು. ಅದ್ವೈತ ಮತಸ್ಥಾಪಕ ಶಂಕರಾಚಾರ್ಯರ ಜನ್ಮಸ್ಥಳ ಕೇರಳದ ಕಾಲಟಿ. ಕ್ವಿಲಾನ್, ಅಲೆಪ್ಪಿ, ಕೋವಲಂ, ತೇಕ್ಕಡಿ ಮುಂತಾದುವು ಕೇರಳದ ಪ್ರೇಕ್ಷಣೀಯ ಸ್ಥಳಗಳು. ಮೂನಾರ್ (ಮನ್ನಾರ್) ಪೊನ್‌ಮುಡಿಗಳಂಥ ಸುಂದರ ಗಿರಿಧಾಮಗಳು ಈ ರಾಜ್ಯದಲ್ಲಿವೆ. ತಿರುಚ್ಚೂರಿನ ಬಳಿ ವಲ್ಲತ್ತೋಳರು ಸ್ಥಾಪಿಸಿದ ಕೇರಳ ಕಲಾಮಂಡಲಿ ಕಥಕಳಿ ನಾಟ್ಯ ಶಿಕ್ಷಣಕ್ಕೆ ಹೆಸರಾಂತ ಕೇಂದ್ರ. ಕೇರಳದ ಭಾಷೆ ಮಲಯಾಳಂ. ಕಥಕಳಿ ಇಲ್ಲಿನ ವಿಖ್ಯಾತ ನೃತ್ಯ. ಕರ್ಣಾಟಕ ಸಂಗೀತ ಇಲ್ಲಿನ ಸಂಗೀತ ಪದ್ಧತಿಯಾದರೂ ತನ್ನದೇ ಆದ ನಿಧಾನಗತಿಯ ಸೋಪಾನ ಶೈಲಿಯ ಸಂಗೀತವನ್ನೂ ಕೇರಳ ಬೆಳೆಸಿಕೊಂಡಿದೆ. ತಿರುವಾಂಕೂರಿನ ಅರಸ ಸ್ವಾತಿ ತಿರುನಾಳ್ ಸುಪ್ರಸಿದ್ಧ ವಾಗ್ಗೇಯಕಾರರಾಗಿದ್ದರು. ವಿಖ್ಯಾತ ಚಿತ್ರಕಲಾವಿದರಾಗಿದ್ದ ರಾಜಾ ರವಿ ವರ್ಮ ತಿರುವಾಂಕೂರಿನವರು.



ಕಮ್ಯೂನಿಸ್ಟ್ ಮುಖ್ಯಮಂತ್ರಿ : ಅಚ್ಯುತ ಮೆನನ್

ರಾಜ್ಯದಲ್ಲಿ ಹಲವಾರು ರೇವು ಪಟ್ಟಣಗಳಿವೆ. ಕಣ್ಣನೂರು, ಕಲ್ಲಿಕೋಟೆ (ಕೋಳಿಕೋಡ್) ಇವುಗಳಲ್ಲಿ ಮುಖ್ಯವಾದುವು. ಕೃಷಿ ವಿಶ್ವವಿದ್ಯಾನಿಲಯವೂ ಸೇರಿ ರಾಜ್ಯದಲ್ಲಿ ನಾಲ್ಕು ವಿಶ್ವವಿದ್ಯಾನಿಲಯಗಳಿವೆ.

ನೋಡಿ : ಅನಂತಶಯನ ; ಓಣಂ ; ಕಾಲಟಿ ; ಕೊಚ್ಚಿ ; ಗುರುವಾಯೂರು ; ತಿರುವನಂತಪುರ ; ಪೆರಿಯಾರ್ ; ಮಲಯಾಳಂ ಭಾಷೆ, ಸಾಹಿತ್ಯ ; ಶಬರಿಮಲೈ

ಏಕಪಾತ್ರಾಭಿನಯದ ಓಟ್ಟಂ ತುಳ್ಳಲ್



ನಾಯಕ, ನಾಯಿಕೆ—ಕಥಕಳಿ



ಕೇಶವ ಚಂದ್ರಸೇನ

ಅಪರಿಮಿತ ಉತ್ಸಾಹಕ್ಕೆ ಮತ್ತೊಂದು ಹೆಸರು—ಕೇಶವ ಚಂದ್ರಸೇನ. ಮಾತೃಭಾಷೆಯಾದ ಬಂಗಾಳಿಗಿಂತ ಇಂಗ್ಲಿಷಿನಲ್ಲೇ ಹೆಚ್ಚು ಪ್ರೌಢಿಮೆ ಪಡೆದಿದ್ದ ಕೇಶವ ಚಂದ್ರರು ಇಂಗ್ಲಿಷಿನಲ್ಲಿ ಭಾಷಣ ಮಾಡಿದರೆ ಜನ ರೋಮಾಂಚಗೊಳ್ಳುತ್ತಿದ್ದರು. ಭೋರ್ಗರೆಯುವ ಮಹಾಪ್ರವಾಹದಂಥ



ಸಮಾಜ. ನವ ವಿಧಾನ : ಕೇಶವ ಚಂದ್ರ

ಭಾಷಣಗಳಿಂದ ಇವರು 'ಬ್ರಹ್ಮ ಸಮಾಜ'ದ ಪ್ರಭಾವವನ್ನು ಎಲ್ಲೆಲ್ಲೂ ಹಬ್ಬಿಸಿದರು.

ಕಲ್ಕತ್ತೆಯಲ್ಲಿ 1838 ನವೆಂಬರ್ 19ರಂದು ಕೇಶವ ಚಂದ್ರರು ಜನಿಸಿದರು. ಇವರ ಅಜ್ಜ ರಾಜಾ ರಾಮ ಮೋಹನ ರಾಯರ ಮಿತ್ರರು. ಆದರೆ ಅವರಿಗೆ 'ಬ್ರಹ್ಮ ಸಮಾಜ'ದ ಬಗೆಗೆ ಒಲವೇನೂ ಇರಲಿಲ್ಲ.

ಇಂಗ್ಲಿಷ್ ಭಾಷೆ ಕೇಶವ ಚಂದ್ರರಿಗೆ ಚಿಕ್ಕಂದಿನಲ್ಲೇ ಕರಗತವಾಯಿತು. ಇವರು ಹಿಂದೂ ಕಾಲೇಜಿನಲ್ಲಿ ಕೊಂಚಕಾಲ ಗಣಿತ ಅಭ್ಯಸಿಸಿ ಬಿಟ್ಟುಬಿಟ್ಟರು.

ಹತ್ತೊಂಬತ್ತನೆಯ ವಯಸ್ಸಿಗೇ 'ಬ್ರಹ್ಮಸಮಾಜ'ದಿಂದ ಆಕರ್ಷಿತರಾಗಿ ಆ ಸಮಾಜದ ಕ್ರಿಯಾಶೀಲ ಸದಸ್ಯರಾದರು. ತಮ್ಮ ಹೆಂಡತಿಯನ್ನು ಬ್ರಹ್ಮ ಸಮಾಜದ ಕಾರ್ಯಕ್ರಮವೊಂದಕ್ಕೆ ಕರೆದುಕೊಂಡು ಹೋದುದಕ್ಕಾಗಿ ಹಿರಿಯರು ಕೇಶವ ಚಂದ್ರರನ್ನು ಮನೆಗೆ ಸೇರಿಸಲಿಲ್ಲ. ಆಗ ಅವರು ದೇವೇಂದ್ರನಾಥ ಠಾಕೂರರ ಮನೆಗೆ ಬಂದು ಅಲ್ಲಿಯೇ ಇದ್ದುಬಿಟ್ಟರು. ಆಗ ಕೇಶವ ಚಂದ್ರರು ದೇವೇಂದ್ರನಾಥ ಠಾಕೂರರರ ಪ್ರಿಯ ಶಿಷ್ಯರಾಗಿದ್ದರು.

ಕೇಶವ ಚಂದ್ರ ಅವರದು ಸ್ವತಂತ್ರ ಮನೋವೃತ್ತಿ. 'ಬ್ರಹ್ಮ ಸಮಾಜ'ದ ಸದಸ್ಯರು ಯಜ್ಞೋಪವೀತ ಧರಿಸಬಾರದೆಂದು ವಾದಿಸಿದರು. ಅವರೂ ಅವರ ಕೆಲವು ತರುಣ ಮಿತ್ರರೂ ಸೇರಿ, 1866ರಲ್ಲಿ, 'ದೇವರೇ ತಂದೆ, ಮಾನವರೆಲ್ಲರೂ ಅಣ್ಣತಮ್ಮಂದಿರು' ಎಂಬ ಭಾವನೆಯ ಆಧಾರದ ಮೇಲೆ 'ಭಾರತವರ್ಷೀಯ ಬ್ರಹ್ಮ ಸಮಾಜ' ಎಂಬ ಹೊಸ ಸಂಘಟನೆಯನ್ನೇ ಪ್ರಾರಂಭಿಸಿದರು. ಇದರಲ್ಲಿ ಎಲ್ಲ ಜಾತಿ ಜನಾಂಗಗಳ ಜನರಿಗೂ ಪ್ರವೇಶವಿತ್ತು.

ಕೇಶವ ಚಂದ್ರರು ತಮ್ಮ ಬ್ರಹ್ಮ ಸಮಾಜಕ್ಕೆ ಇಸ್ಲಾಂ ಹಾಗೂ ಕ್ರೈಸ್ತ ಮತಗಳ ಕೆಲವು ತತ್ತ್ವಗಳನ್ನು ಸೇರಿಸಿ ಅದನ್ನು ಸರ್ವಧರ್ಮಗಳ ಅಡಿಪಾಯದ ಮೇಲೆ ನಿಲ್ಲಿಸಲು ಪ್ರಯತ್ನಿಸಿದರು. ಅವರಿಗೆ ಕ್ರೈಸ್ತಧರ್ಮದ ಬಗೆಗೆ ಅಪಾರ ಅಭಿಮಾನ; ಕೇಶವರು ಕ್ರೈಸ್ತಧರ್ಮಕ್ಕೆ ಸೇರುವರೆಂಬ ಸುದ್ದಿ ಹರಡುವಷ್ಟು ಅವರು ಆ ಧರ್ಮದ ಕಡೆಗೆ ವಾಲಿದ್ದರು. ಕೇಶವ ಚಂದ್ರರಿಗೆ ಸಮಾಜ ಸುಧಾರಣೆಯಲ್ಲಿ ತೀವ್ರ ಆಸಕ್ತಿ ಇತ್ತು. ಆ ಬಗೆಗೆ ಪ್ರಬಲ ಪ್ರಚಾರ ನಡೆಸಿದರು.

ಬಾಲ್ಯವಿವಾಹವನ್ನು ಕಟುವಾಗಿ ಟೀಕಿಸುತ್ತಿದ್ದ ಅವರು ಸ್ವತಃ ತಾವೇ 1878ರಲ್ಲಿ ತಮ್ಮ 13 ವರ್ಷ ವಯಸ್ಸಿನ ಮಗಳಿಗೆ ಮದುವೆ ಮಾಡಿದರು. ಅವರ ಅನುಯಾಯಿಗಳು ಇದನ್ನು ತೀವ್ರವಾಗಿ ವಿರೋಧಿಸಿದರಲ್ಲದೆ, ಇವರಿಂದ ಬೇರೆಯಾಗಿ, 'ಸಾಧಾರಣ ಬ್ರಹ್ಮಸಮಾಜ'ವೆಂಬ ಹೊಸ ಸಂಘಟನೆಯನ್ನು ಪ್ರಾರಂಭಿಸಿದರು.

ತಮ್ಮ ಪ್ರಚಂಡ ವಾಗ್ಮಿತೆ, ಅಪರಿಮಿತ ಉತ್ಸಾಹಗಳಿಂದಾಗಿ ಬ್ರಹ್ಮ ಸಮಾಜದ ಪ್ರಭಾವವನ್ನು ವಿಸ್ತರಿಸಿ ಬೆಳೆಸಿದ ಕೇಶವ ಚಂದ್ರರೇ, ಬ್ರಹ್ಮ ಸಮಾಜ ಇಳಿಮುಖವಾದದ್ದನ್ನೂ ಕಾಣುವಂತಾಯಿತು.

ಅವರು ತಮ್ಮ ವಿಶ್ವಧರ್ಮದ ಧ್ಯೇಯವನ್ನು ಮುಂದುವರಿಸಿ, 1881ರಲ್ಲಿ ಸಂಸ್ಥೆಯ ಹೆಸರನ್ನು 'ನವ ವಿಧಾನ' ಎಂದು ಬದಲಾಯಿಸಿದರು. ಜನರು ಅವರನ್ನು ಗೌರವಿಸುತ್ತಿದ್ದರಾದರೂ ಕೊನೆಕೊನೆಗೆ ಅವರ ಪ್ರಭಾವ ತಗ್ಗಿತು. 1884 ಜನವರಿ 8ರಂದು ಇವರು ನಿಧನರಾದ ಬಳಿಕ ಆ ಸಂಘಟನೆಯೂ ಕ್ಷಯಿಸಿತು.

ಕೇಳ್ಕರ್

ನೋಡಿ : ಎನ್. ಸಿ. ಕೇಳ್ಕರ್

ಕೈಕೇಯಿ:

ದಶರಥ ದೇವ–ದಾನವರ ಯುದ್ಧದಲ್ಲಿ ಭಾಗವಹಿಸುತ್ತಿದ್ದ. ಕಿರಿಯ ರಾಣಿ ಕೈಕೇಯಿ ದಶರಥನ ಜೊತೆಯಲ್ಲಿದ್ದಳು. ದಶರಥ ಯುದ್ಧದಲ್ಲಿ ಅಪಾಯಕ್ಕೊಳಗಾದಾಗ ತನ್ನ ಚತುರತೆಯಿಂದ ಅವನನ್ನು ರಕ್ಷಿಸಿದಳು.

ಆಕೆಯ ಸಾಹಸ, ಶ್ರದ್ಧೆಗಳನ್ನು ಮೆಚ್ಚಿದ ದಶರಥ "ನಿನ್ನ ಎರಡು ಅಭೀಷ್ಟಗಳನ್ನು ತಿಳಿಸು; ಪೂರೈಸುತ್ತೇನೆ" ಎಂದ. ಆಕೆ ಆಗ ಯಾವ ವರಗಳನ್ನೂ ಬೇಡಲಿಲ್ಲ. ಮುಂದೆ ರಾಮನ ಯುವರಾಜ ಪಟ್ಟಾಭಿಷೇಕದ ಸಮಯದಲ್ಲಿ ಎರಡು ವರಗಳನ್ನು ನೆರವೇರಿಸುವಂತೆ ದಶರಥನನ್ನು ಆಕೆ ಕೇಳಿದಳು. ರಾಮ 14 ವರ್ಷ ವನವಾಸ ಹೋಗಬೇಕು: ಭರತನಿಗೆ ಯುವರಾಜ ಪಟ್ಟಾಭಿಷೇಕವಾಗಬೇಕು—ಎಂದಳು.

ಕೈಕೇಯಿ ಒಳ್ಳೆಯ ಸ್ವಭಾವದವಳೇ. ರಾಮನಿಗೆ ಯುವರಾಜ ಪಟ್ಟ ದೊರಕಲಿದೆ ಎಂದು ತಿಳಿದಾಗ ಆಕೆಗೆ ಸಂತೋಷವೇ ಆಗಿತ್ತು. ಆದರೆ ಸೇವಕಿ ಮಂಥರೆಯ ಬೋಧನೆಗೆ ಒಳಗಾಗಿ ತನ್ನ ಮಗ ಭರತನಿಗೆ ರಾಜ್ಯ ದೊರೆಯುವಂತೆ ಮಾಡಬೇಕೆಂದು ನಿರ್ಧರಿಸಿದಳು; ವರಗಳನ್ನು ಬೇಡಿದಳು. ದಶರಥ ಅವಳ ಅಪೇಕ್ಷೆಯಂತೆ ನಡೆದುಕೊಂಡ; ಆದರೆ ದುಃಖಪಟ್ಟು ಆತ ಸತ್ತೂ ಹೋದ.

ಈ ಘಟನೆಗಳು ನಡೆದಾಗ ಭರತ ಅಯೋಧ್ಯೆಯಲ್ಲಿರಲಿಲ್ಲ. ಸೋದರ ಮಾವನ ಮನೆಗೆ ಹೋಗಿದ್ದ. ಹಿಂದಿರುಗಿ, ನಡೆದುದೆಲ್ಲವನ್ನೂ ತಿಳಿದ ಮೇಲೆ, ತಾಯಿಯ ಮೇಲೆ ಕೋಪಗೊಂಡ. ರಾಜ್ಯಾಭಿಷೇಕವನ್ನು ನಿರಾಕರಿಸಿದ. ಕಾಡಿಗೆ ಹೋಗಿದ್ದ ರಾಮನನ್ನು ಕರೆತರಲು ಹೊರಟ. ಆ ವೇಳೆಗೆ ಕೈಕೇಯಿಗೆ ತಾನು ಮಾಡಿದ್ದು ಎಷ್ಟು ದೊಡ್ಡ ತಪ್ಪು ಎಂಬುದರ ಅರಿವಾಗಿತ್ತು. ಭರತನೊಂದಿಗೆ ತಾನೂ ಹೊರಟಳು. ರಾಮ ನಾಡಿಗೆ

ಮಹತ್ವಾಕಾಂಕ್ಷಿ ಕೈಕೇಯಿ ; ಅಸಹಾಯ ದಶರಥ



ಬರಲು ಒಪ್ಪಲಿಲ್ಲ. ಕೈಕೇಯಿಯನ್ನು ಚೆನ್ನಾಗಿ ನೋಡಿಕೊಳ್ಳಬೇಕೆಂದು ಭರತನಿಗೆ ಹೇಳಿದ. ವಿವೇಕ ಮೂಡಿದ ಕೈಕೇಯಿ ಮುಂದೆ ಕೌಸಲ್ಯೆಯ ಅನುವರ್ತಿಯಾಗಿ ಕಾಲಕಳೆದಳು.

ಈ ಕಥೆಯನ್ನು ಕೃತಿ ಎಂದು ಕೂಡ ಉಲ್ಲೇಖಿಸುವುದುಂಟು.

ಕೈಲಾಸನಾಥ್ ವಾಂಛೂ

ಭಾರತದ ವರಿಷ್ಠ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರಾಗಿ ನಿವೃತ್ತರಾದ ಕೈಲಾಸನಾಥ್ ವಾಂಛೂ ಅವರು ದಕ್ಷ ನ್ಯಾಯವಾದಿ.



ನ್ಯಾಯವಾದಿ : ವಾಂಛೂ

ಮಧ್ಯಪ್ರದೇಶದ ಮಂಡ್‌ಸೌರ್‌ನಲ್ಲಿ ಅವರ ಜನನ, 1903 ಫೆಬ್ರುವರಿ 25ರಂದು. ಅಲಹಾಬಾದ್, ಕೇಂಬ್ರಿಜ್‌ನ ವಾಧಾಮ್ ಕಾಲೇಜಿನಲ್ಲಿ ಪ್ರೌಢ ವ್ಯಾಸಂಗದ ಮೇಲೆ ಐ.ಸಿ.ಎಸ್. ಪರೀಕ್ಷೆಯಲ್ಲಿ ಉತ್ತೀರ್ಣರಾದರು. 1926–47ರ ಅವಧಿಯಲ್ಲಿ ಉತ್ತರ ಪ್ರದೇಶದ ನ್ಯಾಯಾಧೀಶರಾಗಿ ಸೇವೆ ಸಲ್ಲಿಸಿದರು. ಅನಂತರ ಅಲಹಾಬಾದ್ ಉಚ್ಚ ನ್ಯಾಯಾಲಯದ ನ್ಯಾಯಾಧೀಶರಾದರು. 1951ರಿಂದ 1958ರ ವರೆಗೆ ರಾಜಸ್ಥಾನದ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರಾದರು. 1958–67ರ ಅವಧಿಯಲ್ಲಿ ವರಿಷ್ಠ ನ್ಯಾಯಾಲಯದ ನ್ಯಾಯಾಧೀಶ ಪದವಿದೊರೆಯಿತು. 1967–68ರಲ್ಲಿ ಅಲ್ಲಿನ ಪ್ರಧಾನ ನ್ಯಾಯಾಧೀಶರಾದರು.

ಆಂಧ್ರ ರಾಜ್ಯ ರೂಪುಗೊಂಡಾಗ, ಬಳ್ಳಾರಿ ಜಿಲ್ಲೆಯು ಆಂಧ್ರಕ್ಕೆ ಸೇರದೆ ಮೈಸೂರಿನೊಂದಿಗೆ ಸೇರಬೇಕೆಂಬ ನಿರ್ಣಯವನ್ನು ವಾಂಛೂ ಅವರ ಏಕಸದಸ್ಯ ಸಮಿತಿ ನೀಡಿತು.

ವಾಂಛೂ ಅವರು ಕಾರ್ಮಿಕ ಸಚಿವ ಶಾಖೆಯ ಪಂಚನಿರ್ಣಯ ಮಂಡಲಿಯ ಅಧ್ಯಕ್ಷರೂ ಪ್ರತ್ಯಕ್ಷ ತೆರಿಗೆ ವಿಚಾರಣಾ ಸಮಿತಿಯ ಅಧ್ಯಕ್ಷರೂ ಆಗಿದ್ದರು. ಕಾಯಿದೆ ಮಂಡಲಿ, ರೈಲು ಆಕಸ್ಮಿಕಗಳ ವಿಚಾರಣೆ ಮುಂತಾದ ಸಮಿತಿಗಳಲ್ಲಿ ಯಶಸ್ವಿಯಾಗಿ ಕೆಲಸ ಮಾಡಿದ್ದಾರೆ. ಆಗ್ರಾ ವಿಶ್ವವಿದ್ಯಾನಿಲಯ ಅವರಿಗೆ ಗೌರವ ಎಲ್‌ಎಲ್.ಡಿ. ಪದವಿ ನೀಡಿದೆ.

ಕೊಚ್ಚಿ

ಪ್ರಪಂಚದ ಅತಿ ಸುಂದರ ನೈಸರ್ಗಿಕ ಬಂದರುಗಳಲ್ಲೊಂದು ಕೊಚ್ಚಿ. ಪಶ್ಚಿಮ ಕರಾವಳಿಯಲ್ಲಿರುವ ಇದು ಭಾರತದ ಒಟ್ಟು ಮುಖ್ಯ ಬಂದರುಗಳಲ್ಲಿ ಒಂದು.

ಕೊಚ್ಚಿಯ ಮೂಲಕ ರಫ್ತಾಗುವ ಪದಾರ್ಥಗಳು : ಚಹಾ, ಕಾಫಿ, ಗೋಡಂಬಿ, ಸಾಗರೋತ್ಪನ್ನ ಆಹಾರಗಳು, ಅದಿರುಗಳು, ಮೆಣಸು, ಶುಂಠಿ, ರಬ್ಬರ್, ನಾರಿನ ಉತ್ಪನ್ನ, ತೆಂಗಿನ ನಾರಿನ ವಸ್ತುಗಳು. ಖನಿಜ, ರಾಸಾಯನಿಕ ವಸ್ತುಗಳು, ಧಾನ್ಯಗಳು, ಪೆಟ್ರೋಲ್ ಮುಂತಾದುವು ಆಮದಾಗುತ್ತವೆ. ಕೊಚ್ಚಿ ಸರ್ವಋತು ಬಂದರು. ಇಲ್ಲಿ ಮುಂಗಾರು ಮಳೆ ಬಹಳ ಹೆಚ್ಚು. ಅತ್ಯಧಿಕ ಮುಂಗಾರು ಮಳೆ ಇದ್ದಾಗ ಕೂಡ ಹಡಗುಗಳು ಇಲ್ಲಿಗೆ ಬಂದು ಹೋಗಲು ಅನುಕೂಲವಿದೆ.

ಭಾರತದಲ್ಲಿ ಐರೋಪ್ಯರು ಬಂದು ಮೊತ್ತಮೊದಲು ನೆಲೆಸಿದ್ದು ಕೊಚ್ಚಿಯಲ್ಲಿ. 1500ರಲ್ಲಿ ಪೋರ್ಚುಗಲಿನ ಕಬ್ರಾಲ್ ಇಲ್ಲಿಗೆ ಬಂದ. ವಾಸ್ಕೊ ದ ಗಾಮಾ 1502ರಲ್ಲಿ ಇಲ್ಲೊಂದು ಮಳಿಗೆಯನ್ನು ಸ್ಥಾಪಿಸಿದ. ಅವನು 1524ರಲ್ಲಿ ಮೃತನಾದದ್ದು ಕೊಚ್ಚಿಯಲ್ಲೇ. ಭಾರತದಲ್ಲಿ ಮೊತ್ತಮೊದಲ ಐರೋಪ್ಯ ಕಟ್ಟಡವನ್ನು —ಒಂದು ಮಳಿಗೆಯನ್ನು— ಇಲ್ಲಿ ರಚಿಸಿದವನು ಅಲ್ಬುಕರ್ಕ್.

1663ರಲ್ಲಿ ಕೊಚ್ಚಿ ಡಚ್ಚರ ವಶವಾಯಿತು ; 1795ರಲ್ಲಿ ಬ್ರಿಟಿಷರಿಗೆ ಸೇರಿತು. ಮಧ್ಯೆ ಹೈದರನಿಗೂ ಟಿಪ್ಪುವಿಗೂ ಸೇರಿದ್ದಿತು. ಕೊಚ್ಚಿ ಬ್ರಿಟಿಷರ ಕಾಲದಲ್ಲಿ ಆಶ್ರಿತ ಸಂಸ್ಥಾನವಾಗಿದ್ದು ರಾಮವರ್ಮನೆಂಬ ರಾಜನ ಆಳ್ವಿಕೆಯಲ್ಲಿ ಅಭಿವೃದ್ಧಿಗೊಂಡಿತು. ಸ್ವಾತಂತ್ರ್ಯ ಬಂದ ಅನಂತರ ಕೊಚ್ಚಿ, ತಿರುವಾಂಕೂರು ಸಂಸ್ಥಾನದ ಭಾಗದಾಯಿತು. ಕೊಚ್ಚಿ ಬಂದರು ಮತ್ತು ಎರ್ನಾಕುಲಂ ನಡುವೆ ವಿಲಿಂಗ್ಡನ್ ದ್ವೀಪವಿದೆ. ಇಲ್ಲಿಂದ ಕೊಚ್ಚಿ, ಎರ್ನಾಕುಲಂ ಎರಡಕ್ಕೂ ಸೇತುವೆ ಸಂಬಂಧವಿದೆ.

1920ರಲ್ಲಿ ಕೊಚ್ಚಿಯ ಆಧುನಿಕ ರೇವಿನ ನಿರ್ಮಾಣಕಾರ್ಯ ಆರಂಭವಾಯಿತು. ಮೊದಲು ಹಡಗು ಪ್ರವೇಶಿಸಿದ್ದು 1928ರಲ್ಲಿ. ಭಾರತ ಸರಕಾರದವರು 1936ರಲ್ಲಿ ಇದನ್ನು ವಶಪಡಿಸಿಕೊಂಡರು. ಎರಡನೆಯ ಮಹಾಯುದ್ಧದ ವೇಳೆಗೆ ಇದರಲ್ಲಿ ತಂಗುವ ಹಡಗುಗಳ ಸಂಖ್ಯೆ ಹೆಚ್ಚಿತು. ಸುಯೆಜ್ ಕಾಲುವೆ ಹಾಗೂ ಆಗ್ನೇಯ ಏಷ್ಯಾ ರೇವುಗಳ ನಡುವೆ ಇರುವುದರಿಂದ ಕೊಚ್ಚಿ ಬಂದರಿಗೆ ಪ್ರಾಶಸ್ತ್ಯವಿದೆ. ಕೊಚ್ಚಿ ನೌಕಾಕೇಂದ್ರವೂ ಹೌದು. ವಿಲಿಂಗ್ಡನ್ ದ್ವೀಪದಲ್ಲಿ ವಿಮಾನ ನಿಲ್ದಾಣವಿದೆ. ನೌಕಾ ತರಬೇತಿ ನೆಲೆಯಿದೆ. ಕೊಚ್ಚಿಯ ಜನಸಂಖ್ಯೆ 4,39,066.

ಕೊಚ್ಚಿಯಲ್ಲಿನ ಕ್ರೈಸ್ತ ಜನರ ಪರಂಪರೆ ದೀರ್ಘವಾದದ್ದು. ಸಂತ ಥಾಮಸ್ ಕ್ರೈಸ್ತಧರ್ಮ ಪ್ರಚಾರಕ್ಕಾಗಿ ಕ್ರಿ. ಶ. 52ರಲ್ಲಿ ಎರ್ನಾಕುಲಂಗೆ ಬಂದಿದ್ದನೆಂಬ ನಂಬಿಕೆಯಿದೆ. ಕೊಚ್ಚಿಯ ಪಕ್ಕದಲ್ಲಿರುವ ಮಟ್ಟಂಚೇರಿಯಲ್ಲಿ ಹಿಂದೆ ಚೀನೀ ವಸತಿ ಪ್ರದೇಶ ಇದ್ದಿತು. ಇಲ್ಲಿ ಯೆಹೂದ್ಯರ ಸುಂದರವಾದ ಒಂದು ಆರಾಧನಾಮಂದಿರವೂ ಇವೆ.

ಕೊಡೈಕನಾಲ್

ಗುಡ್ಡ–ಬೆಟ್ಟಗಳು, ಕಾಡು–ಕಣಿವೆಗಳು, ಸುಂದರ ಸರೋವರ, ಶುದ್ಧವಾದ ತಂಪು ಹವೆ, ಆಧುನಿಕ ಹೋಟೆಲುಗಳು, ಕ್ರೀಡೆ-ಮನೋಲ್ಲಾಸದ ಸೌಲಭ್ಯಗಳು ಇವೆಲ್ಲವೂ ಇರುವ ಆಕರ್ಷಕ ಗಿರಿಧಾಮ ಕೊಡೈಕನಾಲ್.

ಕೊಡೈ ಇರುವುದು ಪಳನಿಬೆಟ್ಟಗಳ ಪ್ರದೇಶದಲ್ಲಿ, ಸಮುದ್ರಮಟ್ಟದಿಂದ 7,400 ಅಡಿ ಎತ್ತರದಲ್ಲಿದೆ. ರೈಲು ಮಾರ್ಗವಾಗಿ ಬಂದ ಪ್ರವಾಸಿಗಳು ಮಧುರೆಯಿಂದ 25 ಮೈಲು ದೂರದ ಕೊಡೈಕನಾಲ್ ರೋಡ್ ಎಂಬ ನಿಲ್ದಾಣದಲ್ಲಿಳಿದು 60 ಮೈಲು ರಸ್ತೆಯ ಪ್ರಯಾಣ ಮಾಡಬೇಕು. ಮಾರ್ಚ್‌ನಿಂದ ಮೇ ವರೆಗೆ ಪ್ರವಾಸಿಗಳು ಅತ್ಯಧಿಕ ಸಂಖ್ಯೆಯಲ್ಲಿ ಬರುತ್ತಾರೆ. ಇಲ್ಲಿನ ಜನಸಂಖ್ಯೆ 16,473.

ಸಮೃದ್ಧ ಸಸ್ಯರಾಶಿ. ಸಮೀಪದಲ್ಲೇ ನಾಲ್ಕೈದು ಸುಂದರ ಜಲಪಾತಗಳು. ಕೊಡೈಯಲ್ಲಿರುವ ಸರೋವರದ ಸುತ್ತಿನ ಮೂರು ಮೈಲು ಉದ್ದದ ರಸ್ತೆಯಲ್ಲಿ ನಡೆಯುವುದೇ ಒಂದು ಆಹ್ಲಾದಕರ ಅನುಭವ. ಇಲ್ಲಿ ದೋಣಿ ವಿಹಾರದ ಸೌಲಭ್ಯವೂ ಇದೆ.



ಸರೋವರದಲ್ಲಿ ದೋಣಿ ವಿಹಾರ —ಕೊಡೈಯಲ್ಲಿ

ಸೌರಭೌತವಿಜ್ಞಾನದ ಅಭ್ಯಾಸಕ್ಕಾಗಿ ಕೊಡೈಕನಾಲ್‌ನಲ್ಲಿ ಒಂದು ಸುಸಜ್ಜಿತ ವೀಕ್ಷಣಾಲಯವಿದೆ.

ನೋಡಿ : ಭಾರತೀಯ ಖಭೌತವಿಜ್ಞಾನ ಸಂಸ್ಥೆ

ಕೊನಾರಕ್

ಇಡೀ ದೇವಸ್ಥಾನ ಸೂರ್ಯದೇವನ ರಥದಂತೆ ಇರುವುದು ಕೊನಾರಕ್ ಸೂರ್ಯ ದೇವಾಲಯದ ವೈಶಿಷ್ಟ್ಯ. ಭಾರತದ ಭವ್ಯ ಹಾಗೂ ದೊಡ್ಡ ದೇವಾಲಯಗಳಲ್ಲಿ ಇದು ಒಂದು. ಹದಿಮೂರನೆಯ ಶತಮಾನದಲ್ಲಿದ್ದ ಗಂಗವಂಶದ ಒಂದನೆಯ ನರಸಿಂಹನ ಆಳ್ವಿಕೆಯಲ್ಲಿ ಈ ಸುಂದರ ದೇವಾಲಯ ರಚಿಸಲ್ಪಟ್ಟಿತು.

ಕೊನಾರಕ್ ದೇವಾಲಯ ಒಡಿಸಿ ವಾಸ್ತುಶಿಲ್ಪ ಶೈಲಿಯ ಅತ್ಯುತ್ತಮ ರಚನೆ. ಶಿಖರದ ಕೆಳಗೆ ಗರ್ಭಗೃಹ. ಅದರ ಮುಂದೆ ಜಗನ್ಮೋಹನ ಎಂಬ ವಿಶಾಲ ಅಂಗಣ. ಇದನ್ನು ತಲುಪಬೇಕಾದರೆ ಕಲ್ಲಿನ ಮೆಟ್ಟಿಲುಗಳ ಸಾಲು. ಜಗನ್ಮೋಹನದ ಮುಂದೆ ನಟಮಂಟಪ. ದೇವಾಲಯ ಎತ್ತರವಾದ ವೇದಿಕೆಯ ಮೇಲಿದೆ. ಈ ವೇದಿಕೆಯ ಸುತ್ತ 10 ಅಡಿ ವ್ಯಾಸದ 24 ರಥದ ಗಾಲಿಗಳು ತುಂಬ ಸುಂದರವಾಗಿ ಕೊರೆಯಲ್ಪಟ್ಟಿವೆ; ವೇದಿಕೆಯ ಮೇಲಿನ ರಚನೆ ರಥವನ್ನು ಹೋಲುತ್ತದೆ. ಏಳು ಕುದುರೆಗಳು ರಥವನ್ನು ಎಳೆಯುವಂತೆ ನಿರೂಪಿತವಾಗಿದೆ. ಸುಮಾರು 100 ಚದರ ಅಡಿ ವಿಶಾಲವಾದ ಈ ಜಗನ್ಮೋಹನ ಅಂಗಣದಲ್ಲಿ ಶಿಲ್ಪ ಕೆಲಸವಿಲ್ಲ. ಆದರೆ ದೇವಾಲಯದ ಹೊರಮೈ ಆಕರ್ಷಕ ಶಿಲ್ಪಕೃತಿಗಳಿಂದ ತುಂಬಿದೆ.


ಕೊನಾರಕ್ ಹಳ್ಳಿಗೆ ಸಮೀಪವಾಗಿರುವ ಈ ದೇವಾಲಯ ಬಂಗಾಳ ಕೊಲ್ಲಿಯ ಕರಾವಳಿಯಲ್ಲಿದೆ. ಇದು ಪುರಿಯಿಂದ ಈಶಾನ್ಯಕ್ಕೆ 18 ಮೈಲು ದೂರ; ಭುವನೇಶ್ವರದಿಂದ ಆಗ್ನೇಯಕ್ಕೆ 20 ಮೈಲು ದೂರ.



ಶಿಲೆಯಲ್ಲಿ ಆನೆ —13ನೆಯ ಶತಮಾನ

ಕೊನಾರಕ್ ಸೂರ್ಯ ದೇವಾಲಯ ಈಗ ಭಗ್ನಸ್ಥಿತಿಯಲ್ಲಿದೆಯಾದರೂ ಅದು ಇಂದಿಗೂ ತನ್ನ ಆಕರ್ಷಣೆಯನ್ನೂ ಭವ್ಯತೆಯನ್ನೂ ಕಳೆದುಕೊಂಡಿಲ್ಲ.

ಸೂರ್ಯರಥದ ಕಲ್ಪನೆ ಕಾಲಮಾನದ ಭಾವನೆಯನ್ನು ಅನುಸರಿಸಿದೆ. ಅದರ 24 ಚಕ್ರಗಳು ವರ್ಷದ 24 ಪಕ್ಷಗಳ ಸಂಕೇತ; ಅದನ್ನೆಳೆಯುವ



[illegible]

ಕೊಲಾಬಾ ವೀಕ್ಷಣಾಲಯ

ನೂರೈವತ್ತು ವರ್ಷಗಳಿಂದ ಒಂದೇ ಸಮನೆ ಭೂಮಿಯ ಕಾಂತಕ್ಷೇತ್ರದ ದಾಖಲೆಗಳನ್ನು ಸಂಗ್ರಹಿಸಿರುವ ಅಂತರರಾಷ್ಟ್ರೀಯ ಖ್ಯಾತಿಯ ವೀಕ್ಷಣಾಲಯ ಮುಂಬಯಿಯ ಕೊಲಾಬಾದಲ್ಲಿದೆ. ಕೊಲಾಬಾ ವೀಕ್ಷಣಾಲಯ ಎಂದೇ ಜನಪ್ರಿಯ ಹೆಸರಾಗಿದ್ದು ಈ ಸಂಸ್ಥೆಯನ್ನು ಅಂಗ ಸಂಸ್ಥೆಗಳೊಡನೆ ಸೇರಿಸಿ ಭಾರತೀಯ ಭೂಕಾಂತ ಸಂಸ್ಥೆ (ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಜಿಯೊಮ್ಯಾಗ್ನೆಟಿಸಮ್) ಎಂದು ಕರೆಯಲಾಗಿದೆ.

ಕೊಲಾಬಾ ವೀಕ್ಷಣಾಲಯದ ಕಟ್ಟಡಗಳು 1826ರಲ್ಲೇ ಸಿದ್ಧವಾದುವು. ಆದರೆ ಇಲ್ಲಿ ಕಾರ್ಯ ಆರಂಭವಾದದ್ದು 1840ರಲ್ಲಿ. ಮೊದಲ ಬಾರಿ ಬಂದ ವೀಕ್ಷಣಾಲಯದ ಉಪಕರಣ ತೃಪ್ತಿಕರವಾಗಿರಲಿಲ್ಲವೆಂದು, ಕರ್ನಲ್ ಎಂಬ ಬ್ರಿಟಿಷ್ ಅಧಿಕಾರಿ ಅದನ್ನು ಹಿಂದಕ್ಕೆ ಕಳುಹಿಸಿದ. ಬ್ರಿಟಿಷ್ ಸರಕಾರ ಹೊಸ ವೀಕ್ಷಣಾಲಯಕ್ಕೆಂದು ಸಂಗ್ರಹಿಸಿದ್ದ ಉಪಕರಣಗಳನ್ನು 1840ರಲ್ಲಿ ಕೊಲಾಬಾಕ್ಕೆ ಕಳುಹಿಸಿತು. ವೀಕ್ಷಣಾಲಯದಲ್ಲಿ ಮಾರನೆಯ ವರ್ಷ ಕಾರ್ಯ ಅರಂಭವಾಯಿತು.

1896ರಲ್ಲಿ ಈ ವೀಕ್ಷಣಾಲಯವನ್ನು ಅಭಿವೃದ್ಧಿಗೆ ತಂದವರು ಇದರ ಮುಖ್ಯಾಧಿಕಾರಿ ಡಾ. ನಾನಾಭಾಯಿ ಮೂಸ್. ಅವರ ಕಾಲದಲ್ಲಿ ಮುಂಬಯಿಯಿಂದ 19 ಮೈಲು ದೂರದಲ್ಲಿ ಕೊಲಾಬಾ ವೀಕ್ಷಣಾಲಯಕ್ಕೆ ಸೇರಿದಂತೆ ಅಲಿಬಾಗ್ ವೀಕ್ಷಣಾಲಯದ ನಿರ್ಮಾಣವಾಯಿತು (1904). ಇದನ್ನು ಪೋರ್‌ಬಂದರಿನಲ್ಲಿ ದೊರಕುವ ಶಿಲೆಯಿಂದ ಕಟ್ಟಲಾಗಿದೆ. ಪ್ರತಿ ಒಂದೊಂದು ಕಲ್ಲನ್ನೂ ಪರೀಕ್ಷಿಸಿ ಅದರಲ್ಲಿ ಕಾಂತಗುಣವಿರುವ ವಸ್ತುಗಳಿಲ್ಲ ಎಂಬುದನ್ನು ಖಚಿತ ಮಾಡಿಕೊಳ್ಳಲಾಗಿದೆ. ಅಲಿಬಾಗ್ ವೀಕ್ಷಣಾಲಯ ಪ್ರಪಂಚದ ಪ್ರಮುಖ ಕಾಂತೀಯ ವೀಕ್ಷಣಾಲಯಗಳಲ್ಲಿ ಒಂದು. ಮೂಸ್ ಅವರು ಬರೆದ 'ಕೊಲಾಬಾದಲ್ಲಿ ದಾಖಲಾದ ಕಾಂತೀಯ ಅಂಕಿ ಅಂಶಗಳು' ಎಂಬ ಪುಸ್ತಕ ಅಂತರರಾಷ್ಟ್ರೀಯ ಮಾನ್ಯತೆ ಪಡೆದಿದೆ.

ಕೊಲಾಬಾ ವೀಕ್ಷಣಾಲಯ ಸಲ್ಲಿಸಿರುವ ದೀರ್ಘಕಾಲದ ಅಮೂಲ್ಯ ಸೇವೆಯನ್ನು ಗಮನಿಸಿ ಅಂತರರಾಷ್ಟ್ರೀಯ ಭೂಕಾಂತತಾ ಸಂಸ್ಥೆ, ಕೊಲಾಬಾ ವೀಕ್ಷಣಾಲಯದ ದಾಖಲಾತಿಗಳ ಕೆಲವು ಮೈಕ್ರೊಫಿಲ್ಮ್ ಪ್ರತಿಗಳನ್ನು ಜಾಗತಿಕ ಅಂಕಿ ಅಂಶ ಕೇಂದ್ರಗಳಲ್ಲಿ ಸಂಗ್ರಹಿಸಿ ಇಡಬೇಕು ಎಂದು ಶಿಫಾರಸು ಮಾಡಿದೆ.

ಕೊಲ್ಹಾಪುರ

ದೇವಾಲಯ, ಅರಮನೆ, ಆಧುನಿಕ ಕಟ್ಟಡಗಳ ಪಟ್ಟಣ ಕೊಲ್ಹಾಪುರ.

ಕೊಲ್ಹಾಪುರದ ಮಹಾಲಕ್ಷ್ಮೀ ದೇವಾಲಯ ಪ್ರಸಿದ್ಧವಾದದ್ದು. ಆಸುಪಾಸಿನಲ್ಲಿ ಬೌದ್ಧ ನಿರ್ಮಾಣಗಳ ಅವಶೇಷಗಳು ಕಂಡುಬಂದಿವೆ. ಇಲ್ಲಿ ಹಲವು ಕನ್ನಡ ಶಾಸನಗಳು ದೊರೆಯುತ್ತವೆ. ಕ್ರಿ.ಶ. 2ನೆಯ ಶತಮಾನದ ಈಜಿಪ್ಟಿನ ಭೂಗೋಳಜ್ಞ ಟಾಲೆಮಿ ಇದು ವ್ಯಾಪಾರ ಕೇಂದ್ರ ಎಂದು ಹೇಳಿದ್ದಾನೆ.

ಕಬ್ಬು, ಭತ್ತ, ಧಾನ್ಯಗಳು, ಎಣ್ಣೆಬೀಜ, ಹೊಗೆಸೊಪ್ಪು, ಹತ್ತಿ ಕೊಲ್ಹಾಪುರ ಜಿಲ್ಲೆಯಲ್ಲಿ ಬೆಳೆಯುತ್ತವೆ. ಮೆಣಸಿನಕಾಯಿ, ಕಡಲೆಕಾಯಿ, ಬೆಲ್ಲ, ಗೋಧಿ, ಪ್ರಧಾನ ವ್ಯಾಪಾರ ವಸ್ತುಗಳು. ಅತಿ ದೊಡ್ಡ ಪ್ರಮಾಣದ ಬೆಲ್ಲದ ವ್ಯಾಪಾರವೂ ಇಲ್ಲಿ ನಡೆಯುತ್ತದೆ. ಎಣ್ಣೆ, ಸಕ್ಕರೆ ಕಾರಖಾನೆಗಳೂ ಇವೆ. ಬೆಂಗಳೂರು–ಪುಣೆ ಹೆದ್ದಾರಿ ಇದರ ಮೂಲಕ ಹಾಯುತ್ತದೆ. ಪಂಚಗಂಗಾ ನದಿಯ ದಂಡೆಯಲ್ಲಿ ಇರುವ ಈ ಪಟ್ಟಣದ ಸ್ನಾನಘಟ್ಟ ಪ್ರಸಿದ್ಧವಾದದ್ದು.

ಶಿವಾಜಿ ವಿಶ್ವವಿದ್ಯಾನಿಲಯದ ಕೇಂದ್ರ ಕೊಲ್ಹಾಪುರ. ಮರಾಠೀ ಚಲಚ್ಚಿತ್ರಗಳ ತಯಾರಿಕೆ ಪ್ರಪ್ರಥಮವಾಗಿ ಇಲ್ಲಿ ಆರಂಭವಾಯಿತು.

ಶಿಲಾಹಾರ ವಂಶದವರು 2ನೆಯ ಶತಮಾನದಲ್ಲಿ ಕೊಲ್ಹಾಪುರವನ್ನು ಆಳುತ್ತಿದ್ದರು. ಅನಂತರ 13ನೆಯ ಶತಮಾನದಲ್ಲಿ ದೇವಗಿರಿಯ ಯಾದವರು ಇದನ್ನು ವಶಪಡಿಸಿಕೊಂಡರು. ಇವರಾದ ಮೇಲೆ ಬಹಮನಿ ರಾಜರೂ ಬಿಜಾಪುರದ ಸುಲ್ತಾನರೂ ಇದನ್ನು ಆಳಿದರು. ಮುಂದೆ ಕೊಲ್ಹಾಪುರ ಕ್ರಮವಾಗಿ ಶಿವಾಜಿಯ, ಮೊಘಲರ ಹಾಗೂ ಶಿವಾಜಿ ವಂಶಸ್ಥರ ಆಡಳಿತಕ್ಕೆ ಒಳಗಾಯಿತು. 1760ರ ಅನಂತರ ಭೋಂಸ್ಲೆಯವರ ಆಳ್ವಿಕೆ ಆರಂಭವಾಯಿತು.

ದರೋಡೆಕೋರರನ್ನು ಓಡಿಸುವುದಕ್ಕಾಗಿ ಬ್ರಿಟಿಷರು 1792ರಲ್ಲಿ ಕೊಲ್ಹಾಪುರಕ್ಕೆ ಸೈನ್ಯ ಕಳುಹಿಸಿದರು. 1862ರಲ್ಲಿ ಕೊಲ್ಹಾಪುರ ಬ್ರಿಟಿಷರ ನಿಯಂತ್ರಣಕ್ಕೊಳಗಾಗಿ ಆಶ್ರಿತರಾಜ್ಯವಾಯಿತು. ಈಗ ಮಹಾರಾಷ್ಟ್ರದಲ್ಲಿದೆ. ಇಲ್ಲಿನ ಜನಸಂಖ್ಯೆ 2,59,050.

ಕೊಲ್ಹಾಪುರದ ನಿಬಿಡಾರಣ್ಯಗಳಲ್ಲಿ ಶ್ರೇಷ್ಠ ಮರಗಳೂ, ಹುಲಿ, ಚಿರತೆ, ಮುಂತಾದ ಪ್ರಾಣಿಗಳೂ ಇವೆ. ಸರಸ್ವತಿ, ಘಟಪ್ರಭಾ, ಮಲಪ್ರಭಾ ನದಿಗಳು ಇಲ್ಲಿ ಹರಿಯುತ್ತವೆ; ಇಲ್ಲಿ ಸುಮಾರು ಮೂವತ್ತೈದು ಕೋಟೆಗಳಿವೆ.

ದಕ್ಷಿಣದ ರಾಜ್ಯಗಳಲ್ಲಿ ಕೊಲ್ಹಾಪುರ ಅತಿ ದೊಡ್ಡ ಸಂಸ್ಥಾನವಾಗಿದ್ದಿತು.

ಕೊಹಿಮ

ಕೊಹಿಮ, ನಾಗಲ್ಯಾಂಡಿನ ರಾಜಧಾನಿ. ಸಮುದ್ರಮಟ್ಟದಿಂದ ಸುಮಾರು 1,500 ಮೀ. ಎತ್ತರದಲ್ಲಿದೆ. ಜನಸಂಖ್ಯೆ 21,545. ಚಳಿಗಾಲದಲ್ಲಿ ಇಲ್ಲಿ ನೀರು ಹೆಪ್ಪುಗಟ್ಟುತ್ತದೆ. ಬೇಸಗೆಯಲ್ಲಿ ಹವೆ ಹಿತಕರ.

ಯೂರೋಪಿನಲ್ಲಿ ನೈಸರ್ಗಿಕ ಚೆಲುವಿಗೆ ಹೆಸರಾದ ಪರ್ವತಮಯ ಸ್ವಿಟ್ಜರ್‌ಲೆಂಡಿನಂತೆ ಇದೆಯೆಂದು, ಕೊಹಿಮ ಪ್ರದೇಶವನ್ನು 'ಪೂರ್ವದ ಸ್ವಿಟ್ಜರ್‌ಲೆಂಡ್' ಎಂದು ಕರೆಯುವುದುಂಟು.

ಎರಡನೆಯ ಮಹಾಯುದ್ಧ ಸಮಯದಲ್ಲಿ, ಜಪಾನಿಯರು 1944ರ ಏಪ್ರಿಲ್‌ನಲ್ಲಿ ಕೊಹಿಮ ನಗರವನ್ನು ವಶಪಡಿಸಿಕೊಳ್ಳಲು ಯತ್ನಿಸಿದರು.




ಕೊಹಿಮ : ನಾಗಾ ರಾಜಧಾನಿ

[illegible] ಕೋಡಿಮಠಕ್ಕೆ [illegible] ದೀಮಾಪುರದಲ್ಲಿವೆ.

ಕೋಕ ಸುಬ್ಬರಾವ್

1967ರಲ್ಲಿ ಮುಖ್ಯ ನ್ಯಾಯಾಧೀಶ ಪದವಿಗೆ ರಾಜೀನಾಮೆಯಿತ್ತು ವರಿಷ್ಠ ನ್ಯಾಯಾಲಯದಿಂದ ಹೊರಬಂದು ಭಾರತದ ರಾಷ್ಟ್ರಾಧ್ಯಕ್ಷ ಸ್ಥಾನಕ್ಕೆ ಡಾ. ಜಾಕೀರ್ ಹುಸೇನರ ವಿರುದ್ಧ ಸ್ಪರ್ಧಿಸಿದವರು ಕೋಕ ಸುಬ್ಬರಾವ್.



ರಾಷ್ಟ್ರಪತಿ ಸ್ಪರ್ಧೆ : ಕೋಕ

ಕೋಕ ಸುಬ್ಬರಾವ್ ಆಂಧ್ರ ಪ್ರದೇಶದವರು. ರಾಜಮಹೇಂದ್ರಿಯಲ್ಲಿ 1902 ಜೂಲೈ 15ರಂದು ಹುಟ್ಟಿದರು. ತಂದೆ ಸುಬ್ರಹ್ಮಣ್ಯೇಶ್ವರರಾವ್. ಬಿ.ಎ. ಹಾಗೂ ಎಲ್‌ಎಲ್.ಬಿ. ಪದವಿಗಳನ್ನು ಪಡೆದ ಮೇಲೆ ಸುಬ್ಬರಾಯರು ವಕೀಲವೃತ್ತಿ ಕೈಗೊಂಡರು. ಮದರಾಸಿನ ಉಚ್ಚ ನ್ಯಾಯಾಲಯದಲ್ಲಿ 22 ವರ್ಷ ವಕೀಲರಾಗಿದ್ದರು. ಅನಂತರ ಮದರಾಸು ಉಚ್ಚ ನ್ಯಾಯಾಲಯದ ನ್ಯಾಯಾಧೀಶ. ಆಂಧ್ರ ಪ್ರದೇಶದ ಮುಖ್ಯ ನ್ಯಾಯಾಧೀಶರಾದರು. 1958–66 ಅವಧಿಯಲ್ಲಿ ವರಿಷ್ಠ ನ್ಯಾಯಾಲಯದ ನ್ಯಾಯಾಧೀಶರೂ 1966–1967ರಲ್ಲಿ ಅಲ್ಲಿಯ ಪ್ರಧಾನ ನ್ಯಾಯಾಧೀಶರೂ ಆಗಿದ್ದರು.

ಕೋಕ ಸುಬ್ಬರಾಯರು ಅನೇಕ ಸಂಘ, ಸಂಸ್ಥೆಗಳಲ್ಲಿ ಕಾರ್ಯಶೀಲರು. ವೆಂಕಟೇಶ್ವರ ವಿಶ್ವವಿದ್ಯಾನಿಲಯದ ಛಾನ್ಸಲರ್ ಆಗಿಯೂ ದೆಹಲಿ ವಿಶ್ವವಿದ್ಯಾನಿಲಯದ ಪ್ರೊ–ಛಾನ್ಸಲರ್ ಆಗಿಯೂ ಇವರು ಸೇವೆ ಸಲ್ಲಿಸಿದ್ದಾರೆ. ಉಸ್ಮಾನಿಯಾ ವಿಶ್ವವಿದ್ಯಾನಿಲಯ ಅವರನ್ನು ಗೌರವಿಸಿ ಡಾಕ್ಟರೇಟ್ ಪದವಿ ನೀಡಿದೆ. ರಾಷ್ಟ್ರಪತಿ ಸ್ಪರ್ಧೆಯಲ್ಲಿ ಪರಾಜಿತರಾದ ಮೇಲೆ ಕೋಕ ಸುಬ್ಬರಾಯರು ಬೆಂಗಳೂರಲ್ಲಿ ನೆಲೆಸಿದರು.

ರಾಷ್ಟ್ರದ ಸಂವಿಧಾನ ಹಾಗೂ ಆಡಳಿತ ಸಮಸ್ಯೆಗಳ ಬಗೆಗೆ ಅವರು ಪುಸ್ತಕಗಳನ್ನು ಬರೆದಿದ್ದಾರೆ.

ಕೋಡಿಮಠ

ಎಂಟು ನೂರು ವರ್ಷಗಳಿಗೆ ಹಿಂದೆ ಕರ್ನಾಟಕದಲ್ಲಿ ವಿದ್ಯೆಗೆ, ಕಲೆಗೆ, ಧರ್ಮಕ್ಕೆ ಪೋಷಕವಾಗಿದ್ದ ವಿದ್ಯಾಕೇಂದ್ರ ಕೋಡಿಮಠ.

ಬಳ್ಳಿಗಾವೆಯ ದಕ್ಷಿಣಕ್ಕೆ ಕೇದಾರೇಶ್ವರ ದೇವಾಲಯಕ್ಕೆ ಸೇರಿದಂತೆ ಈ ಮಠ ಇತ್ತು. ತಾವರೆಗೆರೆ ಕೋಡಿಯ ಪಕ್ಕದಲ್ಲಿ ಇದ್ದುದರಿಂದ ಇದಕ್ಕೆ 'ಕೋಡಿಮಠ' ಎಂದು ಹೆಸರು ಬಂತು. ಕರ್ನಾಟಕದಲ್ಲಿ ದೊರೆತಿರುವ ಹಲವು ಶಾಸನಗಳು ಕೋಡಿಮಠದ [illegible] ಸಾರುತ್ತವೆ.

[illegible] ವೈದ್ಯಶಾಲೆ ಇತ್ತು. ವೇದ, ವೇದಾಂಗ, ವ್ಯಾಕರಣ, ದರ್ಶನ, ಧರ್ಮಶಾಸ್ತ್ರ, ಯೋಗಶಾಸ್ತ್ರ, ಶೈವಧರ್ಮಗಳ ವ್ಯಾಸಂಗಕ್ಕೆ ಇಲ್ಲಿ ಅವಕಾಶ ಇದ್ದಿತು.

ಕಾಳಾಮುಖ ಶೈವಶಾಖೆಯ ಆಚಾರ್ಯರ ನೇತೃತ್ವದಲ್ಲಿ ಕೋಡಿಮಠ ಬೆಳಗಿತು. [illegible] ಕೇಂದ್ರೀಕೃತಗೊಂಡ ವ್ಯಕ್ತಿಯಾಗಿದ್ದ ಎಂದು ವರ್ಣಿಸಲಾಗಿದೆ. ಈ ವಿದ್ಯಾಪೀಠದ ಅಧ್ಯಕ್ಷರು ಪ್ರಸಿದ್ಧ ವಿದ್ವಾಂಸರಾಗಿದ್ದು ಭಾರತದ ವಿವಿಧ ಭಾಗಗಳಲ್ಲಿ ಶಾಖಾ ಮಠಗಳನ್ನು ಸ್ಥಾಪಿಸಿ ಸುಮಾರು 200 ವರ್ಷ ಕಾಲ ಅನೇಕರಿಗೆ ವಿದ್ಯಾದಾನ ಮಾಡಿದರು.

ನೋಡಿ : ಬಳ್ಳಿಗಾವೆ

ಕೋಲಾಟ

ನೋಡಿ : ಸಂಪುಟ ೬

ಕೋಲಾರದ ಚಿನ್ನದ ಗಣಿ

1964ರ ಅಂತ್ಯದ ವರೆಗೆ 2 ಕೋಟಿ ಲಕ್ಷ ಔನ್ಸ್ ಚಿನ್ನವನ್ನು ನೀಡಿದೆ, ಕೋಲಾರದ ಚಿನ್ನದ ಗಣಿಯನ್ನು ಸಮುದ್ರಮಟ್ಟದಿಂದ 10,500 ಅಡಿಗಳ ಆಳದ ವರೆಗೆ ಇಲ್ಲಿ ತೋಡಲಾಗಿದೆ. ಪ್ರಪಂಚದಲ್ಲಿಯೇ ಅತಿ ಆಳದ ಗಣಿ ಇಲ್ಲಿದೆ. ಭಾರತದ ಶೇಕಡಾ 99ರಷ್ಟು ಚಿನ್ನವನ್ನು ಒದಗಿಸುವುದು ಕೋಲಾರದ ಚಿನ್ನದ ಗಣಿ.

ಕೋಲಾರದ ಚಿನ್ನದ ಗಣಿ ಪ್ರದೇಶ ಕೋಲಾರ ಜಿಲ್ಲೆಯ ಬಂಗಾರಪೇಟೆ ತಾಲ್ಲೂಕಿನ ದಕ್ಷಿಣದಲ್ಲಿರುವ ಬೇಟರಾಯನ ಬೆಟ್ಟಸಾಲಿಗೆ ಪೂರ್ವದಿಕ್ಕಿಲ್ಲಿದೆ.

ನಾಲ್ಕುನೂರು ವರ್ಷಗಳಿಗೂ ಹಿಂದೆಯೇ ಇಲ್ಲಿ ಚಿನ್ನವನ್ನು ತೆಗೆಯುತ್ತಿದ್ದುದಕ್ಕೆ ಕುರುಹು ಸಿಕ್ಕಿದೆ. ಕೆಲವು ಗಣಿಗಳು 2,000 ವರ್ಷಗಳಿಗೆ ಹಿಂದಿನವು ಎಂದೂ ಭಾವಿಸಲಾಗಿದೆ. ಹಿಂದಿನವರು ಸುಮಾರು 300 ಅಡಿ ಆಳದ ವರೆಗೆ ತೋಡಿದ್ದರು.

18ನೆಯ ಶತಮಾನದಲ್ಲಿ ಟಿಪ್ಪುಸುಲ್ತಾನ ಇಲ್ಲಿ ಚಿನ್ನಕ್ಕಾಗಿ ಗಣಿ ತೋಡಿಸಿದ ದಾಖಲೆ ಇದೆ. ಆಧುನಿಕ ಗಣಿ ಕೆಲಸ ಆರಂಭವಾದದ್ದು 1871ರ ಅನಂತರ. ಗಣಿ ವಿಷಯದಲ್ಲಿ ಪರಿಣತ ಮೈಕೆಲ್ ಎಫ್. ಲಾವೆಲ್ ಎಂಬಾತ ಆ ವರ್ಷ ಕೋಲಾರದ ಗಣಿ ಪ್ರದೇಶವನ್ನು ಪರಿಶೀಲಿಸಿದ. [illegible] ಚಿನ್ನ ತೆಗೆಯುವ [illegible] ಹಕ್ಕನ್ನು ಪಡೆದ. ಲಾವೆಲ್ ಉರಿಗಾಂನಲ್ಲಿ ಕಾರ್ಯಾರಂಭ ಮಾಡಿದ. 1877ರಲ್ಲಿ ಚಿನ್ನ ತೆಗೆಯುವ ಹಕ್ಕನ್ನು ಬೇರೆಯವರಿಗೆ ಮಾರಿದ. [illegible] ಟೇಯ್ಲರ್ ಕಂಪೆನಿ ಗಣಿ ನಿರ್ವಹಣೆ ವಹಿಸಿತು.

[illegible] ರಾಷ್ಟ್ರೀಕರಿಸಿತು. ಭಾರತ ಸರಕಾರ 1962ರಿಂದ ಇದರ ಕೆಲಸವನ್ನು



ಕೋಲಾರ ಚಿನ್ನದ ಗಣಿ — ಗಣಿಯೊಳಗೆ ಹೋಗಿ ಬರಲು ವ್ಯವಸ್ಥೆ

ತಾನು ವಹಿಸಿಕೊಂಡಿತು. 1972ರಲ್ಲಿ ಇದಕ್ಕಾಗಿ ಪ್ರತ್ಯೇಕ ಸಂಸ್ಥೆಯೊಂದು ರಚಿಸಲ್ಪಟ್ಟಿತು. ಇಲ್ಲಿ ಗಣಿ ಕೆಲಸಗಾರರ ಸಂಖ್ಯೆ 11,000.

ಕೋಲಾರದ ಚಿನ್ನದ ಗಣಿಗೆ ಬೇಕಾದ ವಿದ್ಯುತ್ತು ಶಿವಸಮುದ್ರದಿಂದ ಒದಗುತ್ತದೆ. ಈ ಗಣಿ ಪ್ರದೇಶದ ಸಮೀಪದಲ್ಲಿ ಭಾರತ್ ಅರ್ಥ್ ಮೂವರ್ಸ್ ಲಿಮಿಟೆಡ್ ಸಂಸ್ಥೆಯ ಕಾರಖಾನೆ ಇದೆ.

ಈ ಪ್ರದೇಶದಲ್ಲಿ ನಡೆದ ಸರ್ವೆಯಿಂದ ಚಿನ್ನದ ಪ್ರದೇಶದಲ್ಲಿ ತಾಮ್ರ ಮತ್ತು ಬೆಳ್ಳಿ ಕೂಡ ತಕ್ಕ ಪ್ರಮಾಣದಲ್ಲಿ ದೊರೆಯುತ್ತದೆಂಬುದು ಗೊತ್ತಾಗಿದೆ.

ಕೋಲಿ ನೃತ್ಯ

"ಆಹಾರವನ್ನರಸುತ್ತ ನಾವು ಸಾಗರದ ತಳಕ್ಕೆ ಇಳಿದೆವು ; ಮುಗಿಲಿನ ಎತ್ತರಕ್ಕೂ ಏರಿದೆವು."

—ತಮ್ಮ ನರ್ತನದ ಕೊನೆಯಲ್ಲಿ ಕೋಲಿ ನರ್ತಕರು ಕೈಗಳನ್ನು ಮೇಲೆತ್ತಿ ಸಮುದ್ರರಾಜನನ್ನು ಪ್ರಾರ್ಥಿಸುವಾಗ ಹೇಳುವ ಮಾತುಗಳಿವು.

ಕೋಲಿ —ಮೀನುಗಾರರ ನೃತ್ಯ ; ಮಹಾರಾಷ್ಟ್ರದ ಕರಾವಳಿಯ ಜನಪ್ರಿಯ ನೃತ್ಯ. ಇದು ತಲೆತಲಾಂತರಗಳಿಂದ ಬಂದದ್ದು.

ಸಮುದ್ರದ ತೆರೆಗಳ ಹೊಡೆತ ಹೊಯ್ದಾಟಗಳನ್ನು ಲೆಕ್ಕಿಸದೆ ಮೀನು ಹಿಡಿಯಲು ಹೋಗುವವರ ಬದುಕಿನ ನಿರೂಪಣೆ ಈ ನೃತ್ಯ.

ಎರಡು ಸಾಲುಗಳಾಗಿ ನಿಂತ ಗಂಡಸರು, ಹುಟ್ಟನ್ನು ಹೋಲುವ ಆಕೃತಿಯನ್ನು ಕೈಯಲ್ಲಿ ಹಿಡಿದು, ದೋಣಿ ನಡೆಸುವಂತೆ ನರ್ತಿಸುತ್ತಾರೆ.

ಜೀವನದ ಪ್ರತಿಬಿಂಬ : ಕೋಲಿ ನೃತ್ಯ



ಸ್ವಲ್ಪ ಹೊತ್ತಿನ ಬಳಿಕ ಹೆಂಗಸರೂ ಬಂದು ಈ ನೃತ್ಯದಲ್ಲಿ ಭಾಗ ವಹಿಸುತ್ತಾರೆ. ಇಬ್ಬರೂ ಸೇರಿ ಸಾಗರದ ಅಲೆಗಳ ಚಲನೆ, ದೋಣಿಯ ಸಾಗಾಟ, ಮೀನನ್ನು ಹಿಡಿಯುವ ಸಾಹಸದ ಚಿತ್ರಣವನ್ನು ಹಂತ ಹಂತವಾಗಿ, ಕಣ್ಣಿಗೆ ಕಟ್ಟುವಂತೆ, ಅಭಿನಯಿಸುತ್ತಾರೆ.

ಮೀನುಗಾರರ ಬಾಳಿನ ಆಶೋತ್ತರಗಳನ್ನೂ ಮೀನು ಹಿಡಿಯುವವರ ಕಷ್ಟದ ಜೀವನವನ್ನೂ ಈ ನೃತ್ಯ ಪ್ರತಿಬಿಂಬಿಸುತ್ತದೆ.

ಕೋಸಿ

ಕೋಸಿ ಬಿಹಾರಿನ ಶೋಕನದಿ. ಇದರ ದಡದಲ್ಲಿ ವಾಸಿಸುವವರಿಗೆ ಮಹಾಪೂರದ ಭಯ ತಪ್ಪಿದ್ದೇ ಇಲ್ಲ. 24 ಗಂಟೆಗಳ ಅವಧಿಯಲ್ಲಿ ಕೋಸಿಯ ನೀರು 30 ಅಡಿಗಳಷ್ಟು ಏರಿದ್ದೂ ಉಂಟು.

ಬಹಳ ಚಂಚಲ ನದಿ. ಕೋಸಿ. ಇದು ಒಮ್ಮೆ ಒಂದು ಪಾತ್ರದಲ್ಲಿ ಹರಿಯುತ್ತಿದ್ದರೆ ಮತ್ತೊಮ್ಮೆ ಬೇರೆ ದಾರಿಯೇ ಹಿಡಿದಿರುತ್ತದೆ. ಪ್ರವಾಹ ಕಾಲದಲ್ಲಿ ವ್ಯವಸಾಯದ ಭೂಮಿಯ ಮೇಲೆ ಮರಳನ್ನು ತಂದೆಳೆದು ಬೆಳೆಗಳನ್ನು ಹಾಳುಗೆಡವುತ್ತದೆ.

ಕೋಸಿ ಹುಟ್ಟುವುದು ನೇಪಾಳದ ಹಿಮಾಲಯ ಪರ್ವತ ಪ್ರದೇಶದಲ್ಲಿ. ಏಳು ನದಿಗಳು ಸೇರಿ ಆದ 'ಸಪ್ತ ಕೋಸಿ ನದಿ' ಇದು. ಬಯಲಿಗೆ ಇಳಿದ ಮೇಲೆ ಅಗಲವಾಗಿ ಹರಿಯುತ್ತದೆ. ಹಲವು ಕವಲುಗಳಾಗಿ ಒಡೆದು ಮತ್ತೆ ಒಂದಾಗಿ ಮುಂದುವರಿದು ಬಿಹಾರಿನ ಕುರ್ಸೇಲದ ಬಳಿ ಗಂಗಾ ನದಿಯನ್ನು ಸೇರುತ್ತದೆ. ಮಳೆಯಿಂದ ಹಾಗೂ ಹಿಮಾಲಯದಲ್ಲಿ ಹಿಮ ಕರಗುವುದರಿಂದ ಕೋಸಿಯಲ್ಲಿ ಯಾವಾಗಲೂ ನೀರು ತುಂಬಿರುತ್ತದೆ; ಪ್ರವಾಹದ ವೇಗವೂ ಹೆಚ್ಚು.



ಕೋಸಿಯ ಪ್ರವಾಹವನ್ನು ನಿಯಂತ್ರಿಸಲು ಮತ್ತು ಅದನ್ನು ನೀರಾವರಿಗೆ ಉಪಯೋಗಿಸಿಕೊಳ್ಳಲು ಯೋಜನೆಗಳು ರೂಪಿತವಾಗಿವೆ. ನೇಪಾಳದ ಹನುಮಾನ್‌ನಗರದ ಹತ್ತಿರದ ಅಣೆಕಟ್ಟಿನ ಎರಡೂ ತುದಿಗಳಿಂದ ಹೊರಡುವ ಕಾಲುವೆಗಳಿಂದ 10 ಲಕ್ಷ ಎಕರೆ ಭೂಮಿಗೆ ನೀರು ಒದಗುತ್ತದೆ. ಬಿಹಾರ ರಾಜ್ಯ ಮತ್ತು ನೇಪಾಳ ಗಡಿಯ ಸಮೀಪದ ಅಣೆಕಟ್ಟು ಇನ್ನಷ್ಟು ಉಪಯುಕ್ತವಾದದ್ದು. ಈ ಯೋಜನೆಗಳಿಂದ ದೊಡ್ಡ ಪ್ರಮಾಣದಲ್ಲಿ ವಿದ್ಯುತ್ತು ಸಿಗುತ್ತದೆ.

ಮಹಾಪೂರವನ್ನು ತಡೆಯಲು ಅಲ್ಲಲ್ಲಿ ಕೋಸಿಯ ಎರಡೂ ದಡಗಳಲ್ಲಿ ಏರಿಗಳನ್ನು ಹಾಕಿದ್ದಾರೆ. ಇದರ ಒಟ್ಟು ಉದ್ದ ಸುಮಾರು 150 ಮೈಲು.

ಕೋಹಿನೂರ್

ವಿಶ್ವವಿಖ್ಯಾತ ವಜ್ರಗಳಲ್ಲಿ ಅಗ್ರಸ್ಥಾನ ಕೋಹಿನೂರ್‌ಗೆ. ಕೋಹಿನೂರ್ ಎಂದರೆ 'ಬೆಳಕಿನ ಬೆಟ್ಟ' ಎಂದರ್ಥ.

ಕೋಹಿನೂರ್ ವಜ್ರ ಭವ್ಯ. ಅದರ ಇತಿಹಾಸ ಅದ್ಭುತ. ಅದು ಎಲ್ಲಿ ಸಿಕ್ಕಿತು? ಮೊದಲು ಯಾರ ಕೈಗೆ ಬಂತು?—ಇದು ಮೊದಲಾದ ಸಂಗತಿಗಳು ಅಸ್ಪಷ್ಟ.

ಪ್ರಥಮ ಪಾಣಿಪತ್ ಯುದ್ಧವಾದ ಬಳಿಕ ಗ್ವಾಲಿಯರ್ ರಾಜ 1526ರಲ್ಲಿ ಹುಮಾಯೂನನಿಗೆ ಕೊಟ್ಟ ವಜ್ರ ಇದು ಎಂದು ಹೇಳುತ್ತಾರೆ. ಕರ್ನಾಟಕದ ಕೊಲ್ಲೂರು ಗಣಿಯಲ್ಲಿ ದೊರೆತ ವಜ್ರವನ್ನು 1656ರಲ್ಲಿ ಮಿರ್ ಜುಮ್ಲಾ ಎಂಬಾತ ಷಾಜಹಾನನಿಗೆ ಕಾಣಿಕೆಯಾಗಿ ಕೊಟ್ಟ ಎಂಬ ಇನ್ನೊಂದು ಅಭಿಪ್ರಾಯವಿದೆ.

1739ರಲ್ಲಿ ಕೋಹಿನೂರ್ ಮೊಘಲ್ ಬಾದಶಹರ ಬಳಿ ಇತ್ತು. ಪರ್ಷಿಯದ ನಾದಿರ್ ಷಾ ದೆಹಲಿಯ ಮಹಮದ್ ಷಾನನ್ನು ಸೋಲಿಸಿ ಕೊಳ್ಳೆ ಹೊಡೆದ ಕಾಲದಲ್ಲಿ ಕೋಹಿನೂರನ್ನೂ ತೆಗೆದುಕೊಂಡುಹೋದ. ನಾದಿರ್ ಷಾ ಕಾಲವಾದ ಮೇಲೆ ಅದು ಅಫ್‌ಘಾನಿಸ್ತಾನದ ದುರಾನಿ ಅರಸರ ಕೈಸೇರಿತು. ಆ ವಂಶದ ಅಹಮದ್ ಷಾ ಭಾರತಕ್ಕೆ ಓಡಿ ಬಂದಿದ್ದಾಗ ಪಂಜಾಬಿನ ರಣಜಿತ್ ಸಿಂಗ್ 1813ರಲ್ಲಿ ಕೋಹಿನೂರನ್ನು ವಶಪಡಿಸಿಕೊಂಡ. ರಣಜಿತ್‌ಸಿಂಗ್ ಮೃತನಾದ ಮೇಲೆ ಪಂಜಾಬ್ ಈಸ್ಟ್ ಇಂಡಿಯಾ ಕಂಪೆನಿಯ ವಶವಾದಾಗ, ವಜ್ರ ಅವರ ಕೈಸೇರಿತು. ಅವರು ಕೋಹಿನೂರನ್ನು 1849ರಲ್ಲಿ ವಿಕ್ಟೋರಿಯಾ ರಾಣಿಗೆ ಕಾಣಿಕೆಯಾಗಿ ಕೊಟ್ಟರು.

ಅದನ್ನು 1851ರಲ್ಲಿ ಲಂಡನ್ ವಸ್ತುಪ್ರದರ್ಶನದಲ್ಲಿ ಇಟ್ಟಿದ್ದರು.

191 ಕ್ಯಾರಟ್ ತೂಕವಿದ್ದ ಕೋಹಿನೂರನ್ನು 1852ರಲ್ಲಿ ಸಾಣೆ ಹಿಡಿದ ಮೇಲೆ ಅದರ ತೂಕ 108 ಕ್ಯಾರಟ್ಟಿಗೆ ಇಳಿಯಿತು.

ಈಗ ಕೋಹಿನೂರ್ ಬ್ರಿಟಿಷ್ ಮನೆತನದ ವಶದಲ್ಲಿರುವ ಅಮೂಲ್ಯ ವಜ್ರವಾಗಿದೆ.

ಕೌಜಲಗಿ ಹಣಮಂತರಾಯ

1921ರ ಜೂನ್ ತಿಂಗಳು. ಬಿಜಾಪುರ ಜಿಲ್ಲಾ ಮ್ಯಾಜಿಸ್ಟ್ರೇಟರ ನ್ಯಾಯಾಲಯ. ಐರೋಪ್ಯನೊಬ್ಬ ನ್ಯಾಯಾಧೀಶ. ಅವನೆದುರು ಆರೋಪಿಯನ್ನು ವಿಚಾರಣೆಗೆ ತಂದು ನಿಲ್ಲಿಸಲಾಯಿತು. ಆರೋಪಿಯ ತಲೆಯ ಮೇಲಿದ್ದ ಗಾಂಧೀ ಟೋಪಿ ಕಂಡ ನ್ಯಾಯಾಧೀಶರು ಸಿಟ್ಟಾದರು.

"ಗಾಂಧೀ ಟೊಪ್ಪಿಗೆಯನ್ನು ತೆಗೆದಿಟ್ಟೇ ನನ್ನೆದುರು ವಿಚಾರಣೆಗೆ ಬರಬೇಕು" –ನ್ಯಾಯಾಧೀಶರ ಆಜ್ಞೆ.

ಪೋಲೀಸರು ಆರೋಪಿಯನ್ನು ಹೊರಗೆ ಕರೆದೊಯ್ದರು. ಐದು ಮಿನಿಟಿನ ಅನಂತರ ಮತ್ತೆ ಆರೋಪಿ ಒಳಗೆ ಬಂದಾಗ ತಲೆಯ ಮೇಲೆ ಟೋಪಿ ಹಾಗೇ ಇತ್ತು. ನ್ಯಾಯಾಧೀಶರು ದರ್ಪದಿಂದ ನುಡಿದರು: "ನನ್ನ ಆಜ್ಞೆಯ ಉಲ್ಲಂಘನೆಯೆ? 200ರೂ. ದಂಡ ವಿಧಿಸಿದ್ದೇನೆ. ಇನ್ನೊಂದು ಅವಕಾಶ ನೀಡುತ್ತೇನೆ. ಟೊಪ್ಪಿಗೆ ತೆಗೆದಿಟ್ಟು ಬಾ."

ಐದು ಮಿನಿಟುಗಳ ಅನಂತರ ಮತ್ತೆ ಆರೋಪಿ ಒಳಗೆ ಬಂದಾಗ ತಲೆಯ ಮೇಲೆ ಟೋಪಿ ಹಾಗೇ ಇತ್ತು; ನ್ಯಾಯಾಧೀಶರ ಕಣ್ಣು ಕೆಂಪಾಯಿತು.

"ನನ್ನ ಆಜ್ಞೆ ಉಲ್ಲಂಘಿಸುವ ಔದ್ಧತ್ಯವೇ?"

"ಇದು ಔದ್ಧತ್ಯವಲ್ಲ. ನನಗೆ ಇಷ್ಟಬಂದ ಉಡುಪು ಧರಿಸುವ ನನ್ನ ಹಕ್ಕನ್ನು ಕಾಪಾಡಿಕೊಳ್ಳುವ ನಿರ್ಧಾರ."

—ಆರೋಪಿಯ ಸೌಜನ್ಯದ ಉತ್ತರ.

"ಬುದ್ಧಿಪೂರ್ವಕ ಆಜ್ಞಾಭಂಗ ಮಾಡಿದ್ದಕ್ಕೆ ಮತ್ತೆ 300 ರೂ. ದಂಡ ವಿಧಿಸಿದ್ದೇನೆ."

"ಈ ಆಜ್ಞೆಗಳ ಪ್ರತಿಗಳನ್ನು ಕೊಡಬೇಕು. ನಾನು ಅಪೀಲು ಮಾಡುತ್ತೇನೆ."

"ಟೊಪ್ಪಿ ಬದಲಿಸಿ ಬಂದು ಅರಿಕೆ ಮಾಡಿಕೊ."

ಮತ್ತೆ ಪೋಲೀಸರು ಆರೋಪಿಯನ್ನು ಹೊರಗೆ ಕರೆದೊಯ್ದು ಐದು ಮಿನಿಟುಗಳ ಅನಂತರ ಒಳಗೆ ಬಂದಾಗ ಆರೋಪಿಯ ತಲೆಯ ಮೇಲಿನ ಟೋಪಿ ಸರಿದಿರಲಿಲ್ಲ. ಆಗ ನ್ಯಾಯಾಧೀಶರ ಸಹನೆ ಮೀರಿತು. ಗಾಂಧೀ ಟೋಪಿ ಧರಿಸಿ ನ್ಯಾಯಾಲಯಕ್ಕೆ ಅಪಮಾನ ಮಾಡಿದ ಮತ್ತೊಂದು ಆರೋಪ ಹೊರಿಸಿ, ಅವರನ್ನು ಬೇರೊಂದು ನ್ಯಾಯಾಲಯದಲ್ಲಿ ವಿಚಾರಣೆಗೆ ಗುರಿಪಡಿಸಿದರು.



ವಿಧಾಯಕ ಕಾರ್ಯ : ಕೌಜಲಗಿ

ಗಾಂಧೀ ಟೋಪಿ ಧರಿಸಿ ಸತ್ಯಾಗ್ರಹ ನಡೆಸಿದ ವ್ಯಕ್ತಿ ಕೌಜಲಗಿ ಹಣಮಂತರಾಯರು. ಇವರೇ ಮುಂದೆ ಉತ್ತರ ಕರ್ನಾಟಕದಲ್ಲೆಲ್ಲ 'ಖಾದಿ ಹಣಮಂತರಾಯ'ರೆಂದು ಹೆಸರಾದರು.

ಮುಧೋಳ ಇಂದು ಬಿಜಾಪುರ ಜಿಲ್ಲೆಯ ಒಂದು ತಾಲೂಕು. ಹಿಂದೆ ಅದೊಂದು ಚಿಕ್ಕ ಸಂಸ್ಥಾನವಾಗಿತ್ತು. ಹಣಮಂತರಾಯರು ಹುಟ್ಟಿದ್ದು ಈ ಊರಲ್ಲಿ, 1890ರಲ್ಲಿ. ಶಾಲೆ ಕಾಲೇಜುಗಳಲ್ಲಿದ್ದಾಗಲೇ ಸ್ವಾತಂತ್ರ್ಯ ಚಳುವಳಿಯ ಪ್ರಭಾವಕ್ಕೆ ಒಳಗಾದರು. ಶಾಲೆಯಲ್ಲಿದ್ದಾಗ ಕೆಲ ಸ್ನೇಹಿತರೊಡನೆ ದೇಶೀಬಾಂಬು ತಯಾರಿಸುವ ಪ್ರಯೋಗ ಸಹ ಹಣಮಂತರಾಯರು ನಡೆಸಿದ್ದರು.

ವ್ಯಾಸಂಗ ಮುಗಿಸಿ ಬಿಜಾಪುರದಲ್ಲಿ ವಕೀಲರಾಗಿ ನೆಲೆಸಿದರು. ಆದರೆ ಮಹಾತ್ಮ ಗಾಂಧೀಜಿಯ ಅಸಹಕಾರ ಚಳುವಳಿಯ ಕರೆ ಅವರನ್ನು ಬಹುದಿವಸ ಆ ವೃತ್ತಿಯಲ್ಲಿ ಇರಗೊಡಲಿಲ್ಲ. ಅದಕ್ಕೆ ತಿಲಾಂಜಲಿ ಇತ್ತು ದೇಶ ಸೇವೆಗೆ ತಮ್ಮನ್ನು ಸಮರ್ಪಿಸಿಕೊಂಡರು. ಕಾಂಗ್ರೆಸ್ ನಡೆಸಿದ ಪ್ರತಿಯೊಂದು ಹೋರಾಟದಲ್ಲೂ ಅವರು ಜೈಲುವಾಸ ಅನುಭವಿಸಿದರು. 1931ರಲ್ಲಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಕರನಿರಾಕರಣ ಚಳುವಳಿ ನಡೆಯಿತು. ಇದರ ಸಂಘಟನೆಯಲ್ಲಿ ಕೌಜಲಗಿಯವರು ಮಹತ್ವದ ಪಾತ್ರವಹಿಸಿದರು.

ಹಣಮಂತರಾಯರದು ಮೂಲತಃ ವಿಧಾಯಕ ಕಾರ್ಯಪ್ರವೃತ್ತಿ. ಹಾಗೆಂದೇ ಅವರು ಖಾದಿ ಪ್ರಚಾರ ಕಾರ್ಯದಲ್ಲಿ ನಿರತರಾದರು. ಕರ್ನಾಟಕ ಚರಖಾ ಸಂಘ ರಚನೆಯಾದಾಗ ಅದರ ಕಾರ್ಯದರ್ಶಿಯಾಗಿ ನೇಮಕಗೊಂಡರು.

1943ರಲ್ಲಿ ಬಿಜಾಪುರ ಜಿಲ್ಲೆ ಭೀಕರ ಬರಗಾಲಕ್ಕೆ ತುತ್ತಾಯಿತು. ಆಗ ಬಡಜನರ ಬವಣೆ ನೀಗಲು ಹಣಮಂತರಾಯರು ಪಟ್ಟ ಪರಿಶ್ರಮ ಅಪ್ರತಿಮ. ಅವರು ಬರಗಾಲ ಪರಿಹಾರ ಯೋಜನೆಯೊಂದು ಹಳ್ಳಿಗರಿಗೆ ಚರಖಾ ಹಂಚಿ ಜೀವನೋಪಾಯದ ಹಾದಿ ತೋರಿಸಿದರು.

[illegible] ಆಗಿದ್ದರು. [illegible] ಆತ್ಮಕಥೆ ಈ ಬಾಕ್ಕಿ ಕುರಿತು ಲೇಖನಗಳನ್ನು ಪ್ರಕಟಿಸಿದ್ದಾರೆ. [illegible] ಹರಿಜನ ಲೇಖನಗಳನ್ನೂ ಬರೆದಿದ್ದಾರೆ.

ಕಸ್ತೂರಿಬಾಯಿಯವರು ಆರೋಗ್ಯ ಸರಿಯಾಗಿರದಿದ್ದರೂ ಪರಿಹಾರ ಕಾರ್ಯದಲ್ಲಿ ಬಹಳ ದುಡಿದರು. ಅನಾರೋಗ್ಯ ಇನ್ನಷ್ಟು ಹೆಚ್ಚಿತು. 1945ರಲ್ಲಿ ಅವರು ನಿಧನ ಹೊಂದಿದಾಗ ಗಾಂಧೀಜೀ "ಇನ್ನು ಅವರ ಕಾರ್ಯವನ್ನು ನಿರ್ವಹಿಸುವವರು ಯಾರು ?" ಎಂದು ಉದ್ಗಾರ ತೆಗೆದರು.

ಕೌಟಿಲ್ಯ

ರಾಜಪುತ್ರನಾಗಿ ಜನಿಸಿದ್ದರೂ ಚಂದ್ರಗುಪ್ತ ಧರ್ಮಛತ್ರವೊಂದರ ಅಧಿಕಾರಿಯಾಗಿ ಬಾಳಬೇಕಾಯಿತು. ಒಮ್ಮೆ ಒಬ್ಬ ವ್ಯಕ್ತಿ ನಡೆದು ಬರುತ್ತಿದ್ದಾಗ ಬೆಳೆದಿದ್ದ ಗರಿಕೆಯೊಂದು ಅವನ ಕಾಲಿಗೆ ತೊಡರಿ ಅವನು ಬಿದ್ದ. ಅದರಿಂದ ಆತ ಕುಪಿತನಾಗಿ, ಆ ಗರಿಕೆಯನ್ನು ಸಮೂಲವಾಗಿ ಅಗೆದು ಕಿತ್ತೆಸೆದು ಮುಂದೆ ನಡೆದ. ಅದನ್ನು ನೋಡಿದ ಚಂದ್ರಗುಪ್ತ ತನ್ನ ಕಾರ್ಯ ಸಾಧನೆಗೆ ಇಂಥ ಛಲವಂತನ ನೆರವು ಸಿಕ್ಕಿದರೆ ಒಳ್ಳೆಯದು ಎಂದು ಆತನನ್ನು ಆಶ್ರಯಿಸಿದ. ಆ ವ್ಯಕ್ತಿ ಚಂದ್ರಗುಪ್ತನ ಭ್ರಾತೃಗಳೂ ಪ್ರಬಲರೂ ಆಗಿದ್ದ ನಂದರನ್ನು ಯುದ್ಧದಲ್ಲಿ ನಾಶ ಪಡಿಸಿದ; ಅವರ ಸ್ಥಾನದಲ್ಲಿ ಚಂದ್ರಗುಪ್ತನನ್ನು ರಾಜನನ್ನಾಗಿ ಮಾಡಿದ.

ಈ ಮಹತ್ಕಾರ್ಯವನ್ನು ಸಾಧಿಸಿದವನು ಶ್ರೇಷ್ಠ ರಾಜನೀತಿಜ್ಞ ಕೌಟಿಲ್ಯ ಎಂಬ ಕಥೆ ಜನಜನಿತವಾಗಿದೆ.

ಕೌಟಿಲ್ಯನನ್ನು ವಿಷ್ಣುಗುಪ್ತ, ಚಾಣಕ್ಯ ಎಂದೂ ಕರೆಯುತ್ತಾರೆ. ಈತ ಸುಮಾರು ಕ್ರಿ.ಪೂ. 311—300 ಅವಧಿಯಲ್ಲಿ ರಚಿತವಾದ 'ಅರ್ಥಶಾಸ್ತ್ರ' ಗ್ರಂಥದ ಕರ್ತೃ. ಇದರಲ್ಲಿ 15 ಅಧಿಕರಣಗಳಿವೆ. ರಾಜನೀತಿ, ಜನಜೀವನಗಳನ್ನು ಕುರಿತು ಕೌಟಿಲ್ಯ ಬರೆದಿದ್ದಾನೆ. ರಾಜನ ಕರ್ತವ್ಯ, ಆತನಿಗೆ ಕೊಡಬೇಕಾದ ತರಬೇತಿ, ಮಂತ್ರಿಗಳು ಹೇಗಿರಬೇಕು, ಸೈನ್ಯ ವ್ಯವಸ್ಥೆ, ಯುದ್ಧದಲ್ಲಿ ಅನುಸರಿಸಬೇಕಾದ ತಂತ್ರಗಳು, ಬೇಹುಗಾರಿಕೆ ಮುಂತಾದ ಅನೇಕ ವಿಚಾರಗಳು ಈ ಗ್ರಂಥದಲ್ಲಿವೆ.

ನೋಡಿ : ಅರ್ಥಶಾಸ್ತ್ರ
ಕೌಟಿಲ್ಯ—ಸಂಪುಟ ೮

ಕೌರವರು

ಗಾಂಧಾರ ದೇಶದ ರಾಜ ಸುಬಲನ ಪುತ್ರಿ ಗಾಂಧಾರಿ. ಈಕೆ ವ್ಯಾಸ ಮಹರ್ಷಿಗೆ ಒಮ್ಮೆ ಆತಿಥ್ಯ ನೀಡಿದಳು. ಸಂತುಷ್ಟನಾದ ಮುನಿ ಆಕೆ ಇಚ್ಛಿಸಿದ ವರವನ್ನು ಕೊಡುವುದಾಗಿ ಹೇಳಿದ. ಗಾಂಧಾರಿ ನೂರು ಮಕ್ಕಳನ್ನು ಬೇಡಿದಳು.

ಗಾಂಧಾರಿಯ ವಿವಾಹ ಕುರುಡ ಧೃತರಾಷ್ಟ್ರನೊಂದಿಗೆ ಆಯಿತು. ಗಾಂಧಾರಿಯ ಅಪೇಕ್ಷೆಯಂತೆ ನೂರು ಜನ ಗಂಡುಮಕ್ಕಳೂ ಒಬ್ಬ ಮಗಳೂ ಅವಳಿಗೆ ಹುಟ್ಟಿದರು. ಕುರುವಂಶದ ಅವರು ಕೌರವರೆನಿಸಿಕೊಂಡರು.

ಪಾಂಡುರಾಜ ನಿಧನನಾದಾಗ ಧೃತರಾಷ್ಟ್ರ ಹಸ್ತಿನಾಪುರದ ಅರಸನಾದ. ಪಾಂಡವರನ್ನು ಪ್ರೀತಿಯಿಂದ ಕಾಣುತ್ತ ತನ್ನ ಮಕ್ಕಳೊಡನೆ ಅವರಿಗೆ ವಿದ್ಯಾಭ್ಯಾಸ ಮಾಡಿಸಿದ. ಪ್ರಾಪ್ತವಯಸ್ಕರಾದ ಮೇಲೆ ಅವರಿಗೆ ಅರ್ಧ ರಾಜ್ಯವನ್ನೂ ಧೃತರಾಷ್ಟ್ರ ಕೊಟ್ಟ.

ಆದರೆ ಕೌರವರಿಗೆ ಪಾಂಡವರ ಏಳಿಗೆ ಸಹ್ಯವಾಗಲಿಲ್ಲ. ಅವರನ್ನು ಜೂಜಿನ ಆಟಕ್ಕೆ ಕರೆದು ಸೋಲಿಸಿ, ವನವಾಸಕ್ಕೆ ಕಳುಹಿಸಿದರು. 13 ವರ್ಷಗಳ ಅನಂತರ ಪಾಂಡವರು ಹಿಂದಿರುಗಿದಾಗ ಅವರಿಗೆ ಅರ್ಧ ರಾಜ್ಯ ಕೊಡಲು ಒಪ್ಪದೆ, ಕುರುಕ್ಷೇತ್ರದ ಯುದ್ಧಕ್ಕೆ ಕಾರಣರಾದರು. 18 ದಿನಗಳ ಕಾಲ ಘನಘೋರವಾದ ಯುದ್ಧ ನಡೆದು ಅದರಲ್ಲಿ ಕೌರವರು ನಾಶವಾದರು.

ನೋಡಿ : ಗಾಂಧಾರಿ : ಧೃತರಾಷ್ಟ್ರ ; ಪಾಂಡವರು

ಕೌಷೀತಕಿ ಉಪನಿಷತ್

ಪುಣ್ಯಾತ್ಮರು ಹೋಗುವ ದಾರಿ ದೇವಯಾನ. ಇದರಲ್ಲಿ ಹೋದವನಿಗೆ ಅಪ್ಸರೆಯರು ಹೂಮಾಲೆ, ವಸ್ತ್ರ ಮುಂತಾದವುಗಳಿಂದ ಬ್ರಹ್ಮಾಲಂಕಾರ ಮಾಡುತ್ತಾರೆ. ಅನಂತರ ಆತನಿಗೆ ಬ್ರಹ್ಮತೇಜಸ್ಸು ಉಂಟಾಗುತ್ತದೆ.

—ಈ ವರ್ಣನೆ ಕೌಷೀತಕಿ ಉಪನಿಷತ್ತಿನಲ್ಲಿ ಬರುವ ವಿಶೇಷಾಂಶ.

ಇದು ಋಗ್ವೇದಕ್ಕೆ ಸೇರಿದ್ದು. ಕೌಷೀತಕಿ ಎಂಬ ಆಚಾರ್ಯನಿಂದ ಉಪದೇಶಿಸಲ್ಪಟ್ಟದ್ದರಿಂದ ಕೌಷೀತಕಿ ಉಪನಿಷತ್ತು ಎನಿಸಿತು. ಕೌಷೀತಕಿಗಳು ಸನ್ಯಾಸಾಶ್ರಮಕ್ಕೆ ಹೆಚ್ಚಿನ ಬೆಲೆ ಕೊಟ್ಟಿದ್ದರು. ಈ ಉಪನಿಷತ್ತಿನಲ್ಲಿ ಸನ್ಯಾಸಧರ್ಮದ ಹೊಗಳಿಕೆ ಇದೆ ; ಸಾಧಕನು ಮಾಡಬೇಕಾದ ವ್ರತಗಳ ವಿವರವಿದೆ.

ಕೌಸಲ್ಯಾ

ಕೋಸಲ ದೇಶದ ಅರಸ ಭಾನುಮಂತನ ಮಗಳು ಕೌಸಲ್ಯಾ. ಈಕೆ ದಶರಥನ ಹಿರಿಯ ರಾಣಿ ಹಾಗೂ ರಾಮನ ತಾಯಿ.

ದಿನದ ಬಹುಭಾಗವನ್ನು ಪೂಜೆ, ಧ್ಯಾನಗಳಲ್ಲಿ ಕೌಸಲ್ಯಾ ಕಳೆಯುತ್ತಿದ್ದಳು. ರಾಮನಿಗೆ ಯುವರಾಜ್ಯಾಭಿಷೇಕ ಆಗುತ್ತದೆಂಬ ಸುದ್ದಿ ಕೇಳಿದ ದಿನ ರಾತ್ರೆಯೆಲ್ಲ ರಾಮನ ಶ್ರೇಯಸ್ಸಿಗಾಗಿ ಧ್ಯಾನ ಮಾಡಿ, ಬೆಳಗಾದ ಮೇಲೆ ವಿಷ್ಣುಪೂಜೆ ಮಾಡಿದಳು.

ಪತಿಭಕ್ತಿ ಪರಾಯಣೆ ಕೌಸಲ್ಯೆ. ರಾಮ ಕಾಡಿಗೆ ಹೊರಟ ಅನಂತರ ದಶರಥ ಬಂದದ್ದು ಕೌಸಲ್ಯೆಯ ಅರಮನೆಗೆ. ಆಕೆಗೆ ತಾನು ಸಮಾಧಾನ ಹೇಳಬೇಕು ಹಾಗೂ ಆಕೆಯಿಂದ ತಾನು ಸಾಂತ್ವನ ಪಡೆಯಬೇಕು ಎಂಬುದು ಆತನ ಆಶಯವಾಗಿತ್ತು.

ರಾಮನಿಗೆ ವನವಾಸ ಪ್ರಾಪ್ತವಾದದ್ದರಿಂದ ತುಂಬ ನೊಂದಿದ್ದಾಗ ಆಕೆ ದಶರಥನನ್ನು ನಿಂದಿಸಿದರೂ ಒಡನೆಯೇ ಸೈರಣೆ ತಂದುಕೊಂಡು, ಅವನ ಕ್ಷಮೆ ಬೇಡಿದಳು.

ಖಜುರಾಹೊ

ಒಂದು ಸರೋವರ. ಅದರ ಪಕ್ಕದಲ್ಲೇ ಒಂದು ಮೂಲೆಯಲ್ಲಿ ಚಿಕ್ಕ ಹಳ್ಳಿ. ಆ ಹಳ್ಳಿಯ ಸುತ್ತಮುತ್ತ ಹಲವಾರು ದೇವಾಲಯಗಳು. ಹತ್ತಿರದಲ್ಲೇ ಖುದಾರ್ ನದಿ ; ಅದರ ದಂಡೆಯಲ್ಲೂ ಕೆಲವು ದೇವಾಲಯಗಳು. ದೇವಾಲಯಗಳಲ್ಲಿ ಭಗ್ನವಾದವೂ ಉಂಟು ; ಒಳ್ಳೆಯ ಸ್ಥಿತಿಯಲ್ಲಿ ಇರುವವೂ ಉಂಟು.

ಇದು ಒಂದು ಕಾಲಕ್ಕೆ ರಾಜಧಾನಿಯಾಗಿ, ಶಿಲ್ಪಕಲಾ ವೈಭವದ ಶಿಖರವಾಗಿ ಮೆರೆದ ಖಜುರಾಹೊ ಹಳ್ಳಿಯ ಪರಿಸರದ ಇಂದಿನ ಚಿತ್ರ. ಈ ಹಳ್ಳಿ ಮಧ್ಯಪ್ರದೇಶದಲ್ಲಿದೆ.

ದೇವಾಲಯಗಳನ್ನು ಪಶ್ಚಿಮ ಗುಂಪು, ವಾಯುವ್ಯ ಗುಂಪು, ಪೂರ್ವ ಗುಂಪು ಹಾಗೂ ಆಗ್ನೇಯ ಗುಂಪುಗಳಾಗಿ ವಿಂಗಡಿಸಬಹುದು. ಪಶ್ಚಿಮ ಗುಂಪಿನಲ್ಲಿ

ವಿಷ್ಣು ಮತ್ತು ಶಿವ ದೇವಾಲಯಗಳಿವೆ. ಪೂರ್ವ ಮತ್ತು ಆಗ್ನೇಯದ ಗುಂಪಿನಲ್ಲಿ ಕೆಲವು ಜೈನ ದೇವಾಲಯಗಳಿವೆ.

ವಾಯುವ್ಯ ಭಾಗದ ಗುಂಪಿನಲ್ಲಿ ಖಂಡರಿಯ ಮಹಾದೇವ ದೇವಾಲಯ ಅತಿ ದೊಡ್ಡದು. ಇದರಲ್ಲಿ ಖಜುರಾಹೊ ವಾಸ್ತುಶಿಲ್ಪ ಶೈಲಿಯ ಪೂರ್ಣ ವಿಕಾಸವನ್ನು ಕಾಣಬಹುದು. ಎತ್ತರದ ಜಗತಿಯ ಮೇಲೆ ಕಟ್ಟಿರುವ ಈ ದೇವಾಲಯದಲ್ಲಿ ಅರ್ಧ ಮಂಟಪ, ಮಂಟಪ, ಮಹಾಮಂಟಪ, ಅಂತರಾಳ, ಗರ್ಭಗುಡಿ ಮತ್ತು ಪ್ರದಕ್ಷಿಣ ಮಂಟಪಗಳಿವೆ. ಗರ್ಭಗುಡಿಯಲ್ಲಿ ಅಮೃತಶಿಲೆಯ ಶಿವಲಿಂಗವಿದೆ. ಈ ದೇವಾಲಯದ ಮೂರ್ತಿಶಿಲ್ಪ ತುಂಬ ಸುಂದರ. ಹಾಗೆಯೇ ವಾಸ್ತುಶಿಲ್ಪದ ದೃಷ್ಟಿಯಿಂದಲೂ ಇದು ಗಮನಾರ್ಹ. ಇದರ ಶಿಖರ ಸಮೂಹ ಭವ್ಯವಾದದ್ದು.

ಚಿತ್ರಗುಪ್ತ ದೇವಾಲಯದಲ್ಲಿರುವ, ಏಳು ಕುದುರೆಗಳ ರಥವನ್ನು ನಡೆಸುತ್ತಿರುವ ಐದಡಿಯ ಸೂರ್ಯ ಮೂರ್ತಿ, 11 ತಲೆಗಳಿರುವ ವಿಷ್ಣು ವಿಗ್ರಹ (ಮಧ್ಯದ ತಲೆ ವಿಷ್ಣುವಿನದು, ಉಳಿದ ಹತ್ತು ಆತನ ಅವತಾರಗಳದು), ಆಕರ್ಷಕವಾದುವು. ಲಕ್ಷ್ಮಣ ದೇವಾಲಯದಲ್ಲಿ ಸುಂದರ ಶಿಲ್ಪಗಳಿವೆ. ಈ ಗುಂಪಿನಲ್ಲಿರುವ ಚೌಸತ್ ಯೋಗಿನಿ –ಅರವತ್ತು ನಾಲ್ಕು ಮಂದಿ ಯೋಗಿನಿಯರ– ದೇವಾಲಯ ಇಲ್ಲಿರುವ ಮಂದಿರಗಳಲ್ಲಿ ಅತ್ಯಂತ ಪ್ರಾಚೀನ.

ಇದರ ದಕ್ಷಿಣದಲ್ಲಿರುವ ಚತುರ್ಭುಜ ದೇವಾಲಯ ವಿಷ್ಣುಮಂದಿರ. ಈ ಆಲಯದ ಗರ್ಭಗುಡಿಯ ದ್ವಾರದ ಮೇಲೆ ನವಗ್ರಹಗಳನ್ನು ಕೆತ್ತಿದ್ದಾರೆ. ಖಜುರಾಹೊ ಹಳ್ಳಿಗೆ ಸಮೀಪದಲ್ಲಿರುವ ಜೈನ ದೇವಾಲಯಗಳು ವಾಸ್ತುಶಿಲ್ಪದಲ್ಲಿ ವಾಯುವ್ಯದ ಗುಂಪಿನ ದೇವಾಲಯಗಳನ್ನು ಹೋಲುತ್ತವೆ. ಇವುಗಳಲ್ಲಿ ಆದಿನಾಥ, ಪಾರ್ಶ್ವನಾಥ ದೇವಾಲಯಗಳು ಮುಖ್ಯವಾದುವು. ಬೌದ್ಧಧರ್ಮದ ಕುರುಹಾಗಿ ಖಜುರಾಹೊನಲ್ಲಿ ಉಳಿದಿರುವ ಒಂದೇ ಶಿಲ್ಪ, 9ನೆಯ ಶತಮಾನದ ಶಾಸನವುಳ್ಳ ಬೃಹದಾಕಾರದ ಬುದ್ಧನ ಮೂರ್ತಿ.

ಖಜುರಾಹೊ 9ರಿಂದ 13ನೆಯ ಶತಮಾನದ ವರೆಗೆ ಚಂದೆಲ್ಲ ವಂಶದ ಅರಸರ ರಾಜಧಾನಿಯಾಗಿತ್ತು. ಅವರ ಉತ್ಕರ್ಷದ ಕಾಲದಲ್ಲಿ ಖಜುರಾಹೊ ಸುಮಾರು ಎಂಟು ಚದರ ಮೈಲಿ ವಿಸ್ತಾರದ ನಗರವಾಗಿತ್ತು. 10-11ನೆಯ ಶತಮಾನದಲ್ಲಿ ಇಲ್ಲಿ ಸುಮಾರು 85 ದೇವಾಲಯಗಳು ಕಟ್ಟಲ್ಪಟ್ಟವು. ಈಗ 22 ಉಳಿದಿವೆ. ಖಜುರಾಹೊವನ್ನು ಶಾಸನಗಳಲ್ಲಿ ಖರ್ಜುರವಾಹಕ ಎಂದು ಕರೆದಿದ್ದಾರೆ. "ನಗರದ ಮಹಾದ್ವಾರವನ್ನು ಚಿನ್ನದಲ್ಲಿ ಮಾಡಿದ ಎರಡು ಖರ್ಜೂರ ವೃಕ್ಷಗಳಿಂದ ಅಲಂಕರಿಸಿದ್ದರು. ಸುತ್ತಮುತ್ತಲೂ ಖರ್ಜೂರ ಮರಗಳು ಹೇರಳವಾಗಿದ್ದುವು" ಎಂಬ ಹೇಳಿಕೆಯಿದೆ.

ಖಜುರಾಹೊದಲ್ಲಿ ಒಂದು ಮೈಲಿ ಉದ್ದದ ಕೆರೆಯಿದೆ, ಸುತ್ತ ದೇವಾಲಯಗಳೂ ಮೂರ್ತಿಗಳೂ ಇವೆ; ಮಧ್ಯದಲ್ಲಿ ಮೂರು ಗುಮ್ಮಟಗಳು; ಇವುಗಳಲ್ಲಿ ಯೋಗಿಗಳಿದ್ದಾರೆ –ಎಂದು 1334ರಲ್ಲಿ ಇಲ್ಲಿಗೆ ಭೇಟಿ ನೀಡಿದ ಪ್ರವಾಸಿ ಇಬ್ನ್ ಬತೂತ ಹೇಳಿದ್ದಾನೆ.

ಈಗ ಖಜುರಾಹೊ ಸಾಗರ ಅಥವಾ ಸಿನೋರ ತಾಲ್ ಎನ್ನುವುದು ಅವನು ಹೇಳುವ ಸರೋವರವೇ ಆಗಿರಬಹುದು. ಇದಕ್ಕೆ ಮೊದಲು 11ನೆಯ ಶತಮಾನದ ಆದಿಭಾಗದಲ್ಲಿ ಮುಸ್ಲಿಮ್ ಪ್ರವಾಸಿ ಅಲ್ ಬಿರೂನಿ [illegible] [illegible] ಖಜುರಾಹೊ [illegible]

ಭಗ್ನ ದೇವಾಲಯಗಳಿಂದ ಸಂಗ್ರಹಿಸಿದ ಉತ್ತಮ ಕೃತಿಗಳನ್ನು ಒಂದು ಬಯಲಿನಲ್ಲಿ ಇಟ್ಟಿದ್ದಾರೆ.

ಶೈವ, ವೈಷ್ಣವ, ಜೈನ ಮತ್ತು ಬೌದ್ಧ ವಸ್ತುಗಳು ಸುಂದರ ಶಿಲ್ಪಗಳ ಆಗರವಾದ ಖಜುರಾಹೊ ಇಲ್ಲಿಯ ರಾಜರ ಧರ್ಮಸಹಿಷ್ಣುತೆಯ ಪ್ರತೀಕ.

ನೋಡಿ : ಅಲ್ ಬಿರೂನಿ; ಇಬ್ನ್ ಬತೂತ; ಚಂದೆಲ್ಲರು



ಲಕ್ಷ್ಮಣ ದೇವಾಲಯದ ಪ್ರದಕ್ಷಿಣ ಪಥದಲ್ಲಿ ಸ್ತ್ರೀ ಶಿಲ್ಪ

ಖಿಲ್ಜಿಯರು


ದೆಹಲಿಯಲ್ಲಿ ಆಳುತ್ತಿದ್ದ ಗುಲಾಮ ವಂಶದ ಸುಲ್ತಾನ ಕೈಕುಬಾದ್‌ನನ್ನು ಕೊಂದು ಖಿಲ್ಜಿ ಗುಂಪಿನ ಜಲಾಲುದ್ದೀನ್ ಫಿರೂಜ್ ಎಂಬ ನಾಯಕ 1290ರಲ್ಲಿ ಪಟ್ಟವೇರಿದ. ಇವನು ಖಿಲ್ಜಿ ಸಂತತಿ ಸ್ಥಾಪಕ. ಈತನ ಸೋದರಪುತ್ರ ಈ ವಂಶದ ಪ್ರಖ್ಯಾತ ದೊರೆ ಅಲ್ಲಾವುದ್ದೀನ್. 1296ರಲ್ಲಿ ಈತ ರಾಜನಾದ. 1305ರ ಹೊತ್ತಿಗೆ ಇಡೀ ಉತ್ತರ ಭಾರತ ಇವನ ವಶವಾಯಿತು. 1307ರಲ್ಲಿ ಇವನು ಮಲ್ಲಿಕ್ ಕಾಫರನ ಕೈಕೆಳಗೆ ದಕ್ಷಿಣ ಭಾರತಕ್ಕೆ ದಂಡು [illegible] ಕಳುಹಿಸಿದ. [illegible] ಅಮೀರ್ ಖುಸರೋ ಇವನ [illegible]. ಅಲ್ಲಾವುದ್ದೀನ್ ಸಮರ್ಥ ಆಡಳಿತಗಾರ. [illegible]

ಇವನ ಅನಂತರ ಇವನ ಮಗ ಮುಬಾರಕ್ ಕೇವಲ ನಾಲ್ಕೇ ವರ್ಷ ರಾಜ್ಯವಾಳಿ ಕೊಲೆಗೀಡಾದ. [illegible] (1320) [illegible] 30 ವರ್ಷಗಳ ಖಿಲ್ಜಿಯರ ಆಳ್ವಿಕೆ [illegible] ಭಾರತ ದೆಹಲಿಯ ಸುಲ್ತಾನನಿಗೆ ತಲೆಬಾಗುವಂತಾಗಿತ್ತು.

ನೋಡಿ : ಅಮೀರ್ ಖುಸರೋ ; ಗುಲಾಮರು

ಖಾನ್ ಅಬ್ದುಲ್ ಗಫರ್ ಖಾನ್

'ಗಡಿನಾಡಿನ ಗಾಂಧಿ' ಎಂದು ಪ್ರಸಿದ್ಧರಾದವರು ಖಾನ್ ಅಬ್ದುಲ್ ಗಫರ್ ಖಾನ್. ಇವರು [illegible] 1890ರಲ್ಲಿ ಹುಟ್ಟಿದರು. [illegible]



ದೇವಕಿಂಕರ : 'ಗಡಿನಾಡಿನ ಗಾಂಧಿ'

ಯಲ್ಲಿ ಮುಲ್ಲಾರಿಂದ ಕುರಾನ್ ಪಾಠ ವಾಯಿತು. ಕ್ಯಾಂಪ್‌ಬೆಲ್ ಮತ್ತು ಪೆಷಾವರಗಳಲ್ಲಿ ಹೈಸ್ಕೂಲು ಮತ್ತು ಕಾಲೇಜು ಶಿಕ್ಷಣ ದೊರೆಯಿತು.

ಬ್ರಿಟಿಷ್ ಸರಕಾರ ಫಖ್ತೂನಿಗಳಿಗೆ ಸರಿಯಾಗಿ ಶಿಕ್ಷಣವೀಯುವ ವ್ಯವಸ್ಥೆ ಮಾಡಿರಲಿಲ್ಲ. ಅಬ್ದುಲ್ ಗಫರ್ ಖಾನರು 1910ರಲ್ಲಿ ಉತ್ಮಾನ್‌ಜಯ್ ಯಲ್ಲೊಂದು ರಾಷ್ಟ್ರೀಯ ಪ್ರಾಥಮಿಕ ಶಾಲೆ ಆರಂಭಿಸಿದರು. 1921ರಲ್ಲಿ ಆಜಾದ್ ಹೈಸ್ಕೂಲನ್ನು ತೆರೆದರು. ಜನಜಾಗೃತಿ ಉಂಟುಮಾಡುತ್ತಿದ್ದ ಈ ಪಠಾಣ ತರುಣನ ಮೇಲೆ ಬ್ರಿಟಿಷ್ ಸರಕಾರದ ಕಣ್ಣುಬಿತ್ತು. ಗಫರ್ ಸೆರೆಮನೆ ಸೇರಬೇಕಾಯಿತು. ಮೂರು ವರ್ಷಗಳ ಅನಂತರ ಬಿಡುಗಡೆಯಾಯಿತು.

ಜನಜಾಗೃತಿಯಾಗಬೇಕಾದರೆ ಜನತೆಯ ಭಾಷೆಯಲ್ಲೇ ಪ್ರಚಾರ ನಡೆಯಬೇಕೆಂದು ಅಬ್ದುಲ್ ಗಫರ್‌ಖಾನರು 1928ರಲ್ಲಿ 'ಫಖ್ತೂನ' ಪತ್ರಿಕೆ ಆರಂಭಿಸಿದರು. ಅದೇ ವರ್ಷ ಗಾಂಧೀಜಿಯನ್ನೂ ಜವಾಹರಲಾಲ ನೆಹರೂರನ್ನೂ ಲಖನೌದಲ್ಲಿ ಮೊದಲ ಬಾರಿಗೆ ಭೇಟಿಯಾದರು. ಗಾಂಧೀಜಿಯ ಅಹಿಂಸಾ ಹೋರಾಟವನ್ನು ಮೆಚ್ಚಿಕೊಂಡು ಮರುವರ್ಷವೇ ಖುದಾ ಇ ಖಿದ್ಮತ್‌ಗಾರ್ (ದೇವರ ಕಿಂಕರರು) ಎಂಬ ಸಂಸ್ಥೆಯನ್ನು ಸ್ಥಾಪಿಸಿದರು; ತಮ್ಮ ಅನುಯಾಯಿಗಳೊಡನೆ ಕಾಂಗ್ರೆಸ್ಸನ್ನು ಸೇರಿದರು.

ಖಾನ್ ಅಬ್ದುಲ್ ಗಫರ್ ಖಾನರನ್ನು ಕಾಂಗ್ರೆಸ್ಸಿನ ಅಧ್ಯಕ್ಷರಾಗಲು 1934ರಲ್ಲಿ ಕೇಳಿಕೊಳ್ಳಲಾಯಿತು. "ಸೇವಕನಾದ ನಾನು ಅಧ್ಯಕ್ಷನಾಗಲಾರೆ" ಎಂದರು. ಭಾರತ ಸ್ವಾತಂತ್ರ್ಯ ಚಳುವಳಿಯ ಸಂಬಂಧದಲ್ಲಿ ಖಾನರು ಅನೇಕ ಬಾರಿ ಸೆರೆಮನೆವಾಸ ಅನುಭವಿಸಬೇಕಾಯಿತು.

ಭಾರತದ ವಿಭಜನೆಯಾಗಿ ಪಾಕಿಸ್ತಾನದ ಉದಯವಾದ ಮೇಲೆ, ಪಾಕಿಸ್ತಾನ ಸರಕಾರ ಖಾನರನ್ನು ಬಂಧಿಸಿತು. ಬ್ರಿಟಿಷರ ಆಳ್ವಿಕೆಯ ಕಾಲದಲ್ಲಿ ಖಾನರು 15 ವರ್ಷ ಜೈಲುವಾಸ ಅನುಭವಿಸಿದ್ದರು. ಮತ್ತೆ ಪಾಕಿಸ್ತಾನವೂ ಒಟ್ಟು 15 ವರ್ಷಗಳ ವರೆಗೆ ಅವರನ್ನು ಬಂಧನದಲ್ಲಿಟ್ಟಿತು. ಕೊನೆಯಲ್ಲಿ, 1964ರಲ್ಲಿ ಅವರ ಬಿಡುಗಡೆ ಮಾಡಿತು. ಬಿಡುಗಡೆಯಾಗಿ ಕಾಬೂಲಿಗೆ ಬಂದಾಗ ಅವರನ್ನು ಪಠಾಣರು ಸ್ವಾಗತಿಸಿ ಗೌರವಿಸಿದರು. 1969ರಂದು ಗಾಂಧೀ ಜನ್ಮಶತಾಬ್ದಿಯ ಆಚರಣೆಯ ಕಾಲದಲ್ಲಿ ಖಾನ್ ಅಬ್ದುಲ್ ಗಫರ್ ಖಾನ್ ಭಾರತಕ್ಕೆ ಬಂದು ಇಲ್ಲಿನ ಸಮಾರಂಭಗಳಲ್ಲಿ ಭಾಗವಹಿಸಿ ಹಿಂದಿರುಗಿದರು.

'ಬಾದ್ ಷಾ ಖಾನ್', 'ಗಡಿನಾಡಿನ ಗಾಂಧೀ' ಎಂದೂ ಅಬ್ದುಲ್ ಗಫರ್ ಖಾನರನ್ನು ಕರೆಯುತ್ತಾರೆ.

ಖಾರವೇಲ

ಅಶೋಕನ ಕಾಲದಲ್ಲಿ ಕಳೆಗುಂದಿದ್ದ ಕಳಿಂಗ ರಾಜ್ಯವನ್ನು ಅಲ್ಪಾವಧಿಯಲ್ಲಿ ಉಚ್ಛ್ರಾಯ ಸ್ಥಿತಿಗೆ ತಂದ ಅರಸು ಖಾರವೇಲ ([illegible] ಕ್ರಿ. ಪೂ. ಒಂದನೆಯ ಶತಮಾನ). ಇವನು ಚೇದಿ ವಂಶದವನು.

ಖಾರವೇಲ ಜೈನಧರ್ಮಾನುಯಾಯಿ. ಜೈನಧರ್ಮವನ್ನು ಬಹು ಪ್ರೋತ್ಸಾಹಿಸಿದ. ಪಟ್ಟಕ್ಕೆ ಬಂದಾಗ ಇವನಿಗೆ 24 ವರ್ಷ.

ತನ್ನ ಕಾಲದಲ್ಲಿ ಅವನು ಒಂದು ಸಾಮ್ರಾಜ್ಯವನ್ನೇ ಕಟ್ಟಿದ. ಮಗಧ ರಾಜ್ಯದ ಪ್ರಾಬಲ್ಯ ತಗ್ಗಿಸಿದ. ದಕ್ಷಿಣದಲ್ಲಿ ಪಾಂಡ್ಯರ ರಾಜ್ಯದ ಕೆಲವು ಭಾಗಗಳನ್ನು ಗೆದ್ದುಕೊಂಡ. ಭಾರತದ ವಾಯುವ್ಯ ಭಾಗದಲ್ಲಿದ್ದ ಗ್ರೀಕರ ಮೇಲೆ ದಾಳಿ ನಡೆಸಿದ. ಇವನ ಈ ವಿಜಯ ಸಾಧನೆಗಳು ಹಾಗೂ ಆಡಳಿತ ವೈಭವಗಳನ್ನು ಒಡಿಸ್ಸಾದ ಉದಯಗಿರಿ ಪ್ರದೇಶದಲ್ಲಿರುವ ಹಾಥಿ ಗುಂಫಾ (ಗಜ ಗುಹೆ) ಶಾಸನ ಸಾರುತ್ತದೆ. ಇದು ಭಾರತೀಯ ಚರಿತ್ರೆಯ ಅತಿ ಪುರಾತನ ಶಾಸನಗಳಲ್ಲಿ ಒಂದು.

ಕಳಿಂಗದ ಪುನರುದ್ಧಾರ, ಪರರಾಜ್ಯಗಳಿಗೆ ದಂಡೆತ್ತಿ ಹೋಗುವುದು, ಜನರ ಮನೋರಂಜನೆಗಾಗಿ ನೃತ್ಯ ಗೀತ ವಾದ್ಯಾದಿ ಪ್ರದರ್ಶನಗಳ ವ್ಯವಸ್ಥೆ, ನಂದರು ತೋಡಿಸಿದ ಕಾಲುವೆಯ ವಿಸ್ತರಣೆ, ಜನರಿಗೆ ಧನಕನಕಾದಿಗಳ ದಾನ, ರಾಜಗೃಹದ ಮುತ್ತಿಗೆ, ಬ್ರಾಹ್ಮಣರಿಗೆ ಕರ ಪರಿಹಾರ ಇತ್ಯಾದಿ ಸಾಧನೆಗಳ ವಿವರ ಖಾರವೇಲನ ಈ ಶಾಸನದಲ್ಲಿ ದೊರೆಯುತ್ತದೆ.

ಖಾರವೇಲ ಸ್ಥಾಪಿಸಿದ ವಿಶಾಲ ಕಳಿಂಗ ಸಾಮ್ರಾಜ್ಯ ಬಹಳ ಕಾಲ ಉಳಿಯಲಿಲ್ಲ.

ಖಾಸಾ ಸುಬ್ಬರಾವ್

1965ರಲ್ಲಿ ಆರಂಭವಾದ 'ಸ್ವರಾಜ್ಯ' ಇಂಗ್ಲಿಷ್ ವಾರಪತ್ರಿಕೆಯ ಸ್ಥಾಪಕ–ಸಂಪಾದಕ ಖಾಸಾ ಸುಬ್ಬರಾವ್. ಅವರು 'ಸಕ' ಎಂಬ ಕಾವ್ಯನಾಮದಲ್ಲಿ 'ಸೈಡ್‌ಲೈಟ್' ಎಂಬ ಶೀರ್ಷಿಕೆಯಲ್ಲಿ ಪ್ರತಿ ವಾರವೂ ಇದರಲ್ಲಿ ಬರೆಯುತ್ತಿದ್ದರು. ಈ ಬರವಣಿಗೆ ಬಹಳ ಜನಪ್ರಿಯವಾಗಿತ್ತು.

ಸುಬ್ಬರಾಯರ ಜನನ 1896ರಲ್ಲಿ. 'ಸ್ವರಾಜ್ಯ' ವಾರಪತ್ರಿಕೆಯ ಸಂಪಾದಕರಾಗುವ ಮೊದಲು ಅದೇ ಹೆಸರಿನ ಇಂಗ್ಲಿಷ್ ದಿನಪತ್ರಿಕೆಯಲ್ಲಿ ಸುಬ್ಬರಾವ್ ಕೆಲಸ ಮಾಡುತ್ತಿದ್ದರು. ಆರ್ಥಿಕ ಕಾರಣಗಳಿಗಾಗಿ ಆ ದಿನಪತ್ರಿಕೆ ನಿಂತಾಗ 'ಇಂಡಿಯನ್ ಎಕ್ಸ್‌ಪ್ರೆಸ್' ಪತ್ರಿಕೆಯ ಸಂಪಾದಕ ಮಂಡಲಿಯಲ್ಲಿ ಸೇರಿಕೊಂಡರು. 'ಫ್ರೀ ಪ್ರೆಸ್ ಜರ್ನಲ್'ನಲ್ಲೂ ಇವರು ಕೆಲಸ ಮಾಡಿದ್ದಾರೆ. 'ಸ್ವತಂತ್ರ' ಸ್ವತಃ ಸುಬ್ಬರಾವ್ ಆರಂಭಿಸಿದ ವಾರಪತ್ರಿಕೆ.

ಸ್ವಾತಂತ್ರ್ಯಪೂರ್ವ ಕಾಲದಲ್ಲಿ ಸುಬ್ಬರಾಯರು ಕಾಂಗ್ರೆಸ್ ಸದಸ್ಯರೂ ಆ ಪಕ್ಷದ ಪ್ರಬಲ ಬೆಂಬಲಿಗರೂ ಆಗಿದ್ದರು. 1961ರಲ್ಲಿ ಅವರು ಸ್ವತಂತ್ರ ಪಕ್ಷ ಸೇರಿದರು. ಅದೇ ವರ್ಷ ನಿಧನರಾದರು.

ಖಾಸಾ ಸುಬ್ಬರಾಯರು ನಿಷ್ಠ ಸುಧಾರಕರು; ಹಾಗೆಯೇ ಕೆಚ್ಚೆದೆಯ ಪತ್ರಿಕೋದ್ಯಮಿ.

ಅವರಿಗೆ ಆಂಗ್ಲ ಭಾಷೆಯ ಮೇಲೆ ಒಳ್ಳೆಯ ಪ್ರಭುತ್ವವಿತ್ತು. ಇವರು ಇಂಗ್ಲಿಷಿನಲ್ಲಿ ಕೆಲವು ಪುಸ್ತಕಗಳನ್ನು ಬರೆದಿದ್ದಾರೆ; 'ಮೆನ್ ಇನ್ ದಿ ಲೈಮ್ ಲೈಟ್', 'ಸೈಡ್‌ಲೈಟ್ಸ್ ಆನ್ ರಾಜಾಜಿ', 'ರಿವೈವ್ಡ್ ಮೆಮರೀಸ್' ಮುಂತಾದುವು.



ಕೆಚ್ಚೆದೆ : ಖಾಸಾ

ಖಿಲಾಫತ್ ಚಳುವಳಿ

ಮೆಸೊಪೊಟೇಮಿಯಾ, ಅರೇಬಿಯಾ, ಪ್ಯಾಲೆಸ್ಟೈನ್‌ಗಳನ್ನೂ ಅಲ್ಲಿನ ಪವಿತ್ರ ಕ್ಷೇತ್ರಗಳನ್ನೂ ಟರ್ಕಿಯ ಸುಲ್ತಾನ ಆಳುತ್ತಿದ್ದ. ಅವನಿಗೆ ಖಲೀಫ ಎಂದು ಹೆಸರಿತ್ತು. ಜಗತ್ತಿನ ಎಲ್ಲ ಭಾಗಗಳ ಮುಸಲ್ಮಾನರೂ ಖಲೀಫನನ್ನು ತಮ್ಮ ಧರ್ಮಗುರು ಎಂದು ಪರಿಗಣಿಸಿದ್ದರು. ಒಂದನೆಯ ಮಹಾಯುದ್ಧದಲ್ಲಿ ಖಲೀಫ ಜರ್ಮನ್ ಚಕ್ರವರ್ತಿಯ ಜೊತೆಗೆ ಸೇರಿದ. 1918ರಲ್ಲಿ ಮೊದಲನೆಯ ಮಹಾಯುದ್ಧ ಮುಗಿದ ಮೇಲೆ ಮಿತ್ರ ರಾಷ್ಟ್ರಗಳು ಖಲೀಫನ ಅಧಿಕಾರವನ್ನು ಮೊಟಕು ಮಾಡುವುವೆಂಬ ಆತಂಕ ಮುಸಲ್ಮಾನರಲ್ಲಿ ಮೂಡಿತು. ಈ ಸಂದರ್ಭದಲ್ಲಿ ಖಲೀಫನ ಪದವಿ, ಅಧಿಕಾರಗಳಿಗೆ ಚ್ಯುತಿ ಬರಕೂಡದೆಂದು ಭಾರತದ ಮುಸಲ್ಮಾನರು ನಡೆಸಿದ ಆಂದೋಲನವೇ ಖಿಲಾಫತ್ ಚಳುವಳಿ. ಇದನ್ನು ಆರಂಭಿಸಿದವರಲ್ಲಿ ಪ್ರಮುಖರು ಅಲಿ ಸಹೋದರರು.

1920ರಲ್ಲಿ ಒಂದು ದಿನವನ್ನು ರಾಷ್ಟ್ರೀಯ ದುಃಖಸೂಚಕ ದಿನವೆಂದು ಗೊತ್ತುಮಾಡಿದರು. ಖಿಲಾಫತ್ ನಾಯಕರು ಯಾವ ರೀತಿ ತಮ್ಮ ಚಳುವಳಿಯನ್ನು ಮುಂದುವರಿಸಬೇಕು ಎಂದು ಗಾಂಧೀಜಿಯೊಡನೆ ಸಮಾಲೋಚನೆ ನಡೆಸಿದರು. ಭಾರತದ ರಾಷ್ಟ್ರೀಯ ಕಾಂಗ್ರೆಸ್ ಗಾಂಧೀಜಿಯ ಸಲಹೆಯಂತೆ ಖಿಲಾಫತ್ ಚಳುವಳಿಗೆ ಬೆಂಬಲ ನೀಡಿತು. ಅಹಿಂಸಾತ್ಮಕವಾದ ಖಿಲಾಫತ್ ಚಳುವಳಿ ಹಿಂದೂ ಮುಸಲ್ಮಾನರ ಐಕ್ಯಕ್ಕೆ ಕಾರಣವಾಗುತ್ತದೆಂದು ಗಾಂಧೀಜೀ ಭಾವಿಸಿದರು.

ಖಿಲಾಫತ್ ಚಳುವಳಿ ತೀವ್ರವಾಗಿದ್ದ ಮಲಬಾರಿನಲ್ಲಿ ಹಿಂಸಾತ್ಮಕ ಕಾರ್ಯಗಳು ನಡೆದುವು. ಇದು ಮತೀಯ ರೂಪ ತಾಳಿತು. ಇದರ ಫಲವಾಗಿ ಮುಲ್ತಾನ್, [illegible], ಮುಂಬಯಿ, ಕಾನ್ಪುರ, ಕರತಾರಪುರ ಮತ್ತು ಇತರ ಸ್ಥಳಗಳಲ್ಲೂ ಮತೀಯ ಗಲಭೆಗಳಾದವು.

ಈ ವೇಳೆಗೆ, ಎಂದರೆ 1922ರಲ್ಲಿ, ತುರ್ಕಿಯಲ್ಲಿ ಕ್ರಾಂತಿ ನಡೆಯಿತು. ಖಲೀಫನ ಅಧಿಕಾರ ಕೊನೆಗೊಂಡು ಕೆಮಾಲ್ ಪಾಷಾ ನಾಯಕನಾದ. ತುರ್ಕಿ ಗಣರಾಜ್ಯವಾಯಿತು. ಖಿಲಾಫತ್ ಚಳುವಳಿ ನಂದಿಹೋಯಿತು.

ಖ್ಮೆರ್

ಇಂದಿನ ಕಾಂಬೋಡಿಯಾದಲ್ಲಿ ಹಿಂದೆ ವಾಸಿಸುತ್ತಿದ್ದ ಒಂದು ಪ್ರಾಚೀನ ಜನಾಂಗ ಖ್ಮೆರ್. ಇವರು ಚೀನೀ ಮೂಲದವರೆಂದೂ ಅನಂತರ ಹಿಂದೂ ಸಂಸ್ಕೃತಿಯ ಪ್ರಭಾವಕ್ಕೆ ಒಳಗಾಗಿ ಹಿಂದೂಗಳ ಜೀವನ ವಿಧಾನವನ್ನು ಅನುಸರಿಸಿದರೆಂದೂ ಹೇಳುತ್ತಾರೆ. ಇವರನ್ನು ಕಂಬುಜರೆಂದೂ ಕರೆಯುವುದುಂಟು. ಇವರ ಮೂಲಪುರುಷ ಕಂಬು ಎಂಬ ಋಷಿ ಹಾಗೂ ಮೇರಾ ಎಂಬ ಅಪ್ಸರೆಗೆ ಹುಟ್ಟಿದವನೆಂದು ನಂಬಿಕೆ. ಈ ಎರಡು ಹೆಸರುಗಳಿಂದ ಖ್ಮೆರ್ ಪದ ಬಂದಿರಬಹುದು ಎಂದು ತರ್ಕ. ಕಂಬುಜದಲ್ಲಿದ್ದ ಅನಾಗರಿಕ ಜನರಲ್ಲಿ ನಾಗರಿಕತೆಯನ್ನು ಬೆಳೆಸಿದವರು ಭಾರತೀಯರೆಂದು ಚೀನೀ ಲೇಖನಗಳಿಂದ ತಿಳಿದುಬಂದಿದೆ.

ಖ್ಮೆರರಲ್ಲಿ ನಾಗಪೂಜೆಗೆ ಪ್ರಾಶಸ್ತ್ಯವಿದ್ದಿತು. ಕಾಂಬೋಡಿಯಾದ ಕಲೆಯಲ್ಲಿ ನಾಗನ ಹೆಡೆಯ ಚಿತ್ರ ಬಹಳ ವ್ಯಾಪಕವಾಗಿ ಕಂಡುಬಂದಿದೆ. ಬ್ರಹ್ಮ, ವಿಷ್ಣು, ಶಿವ — ಈ ತ್ರಿಮೂರ್ತಿಗಳ ಆರಾಧನೆಯೂ ಇವರಲ್ಲಿ ಇದ್ದಿತು. ಕಾಲಕ್ರಮೇಣ ಬುದ್ಧನ ಆರಾಧನೆಯೂ ಆಚರಣೆಗೆ ಬಂದಿತು. ಇವುಗಳಿಗೆ ಸಂಬಂಧಿಸಿದ ಖ್ಮೆರರ ದೇವಾಲಯಗಳಲ್ಲಿ ಅತಿ ಪ್ರಾಚೀನವಾದದ್ದು ಬೇಯಾನ್ ಎಂಬ ಶಿವದೇವಾಲಯ. ಇಲ್ಲಿನ ಶಿಲೆಗಳನ್ನು ಯಾವುದೇ ಬಂಧನ ಪದಾರ್ಥಗಳಿಲ್ಲದೆ ಕೂಡಿಸಲಾಗಿದೆ. ಇದನ್ನು ಕಟ್ಟಿದ ಮೂರು ಶತಕಗಳ ತರುವಾಯ ಪ್ರಸಿದ್ಧ ಆಂಗ್ಕೋರ್‌ವಾಟ್ ದೇವಾಲಯದ ನಿರ್ಮಾಣವಾಯಿತು. ಆಂಗ್ಕೋರ್‌ವಾಟ್ ದೇವಾಲಯ ಪ್ರಪಂಚದ ಅದ್ಭುತಗಳಲ್ಲಿ ಒಂದು ಎಂದು ಪರಿಗಣಿತವಾಗಿದೆ.

ಖ್ಮೆರರ ರಾಜಧಾನಿ ಯಶೋಧರಪುರ. ಇದನ್ನು 9ನೆಯ ಶತಮಾನದ ಅಂತ್ಯದಲ್ಲಿ ಯಶೋವರ್ಮ ಕಟ್ಟಿಸಿದ. 11ನೆಯ ಶತಮಾನದಲ್ಲಿದ್ದ ಸೂರ್ಯವರ್ಮನ ಕಾಲದಲ್ಲಿ ಖ್ಮೆರ್ ಸಂಸ್ಕೃತಿ ಸುತ್ತಮುತ್ತಲ ಪ್ರದೇಶಗಳಲ್ಲಿ ಹರಡಿತು. ಅವನ ಅನಂತರದ ಇನ್ನೊಬ್ಬ ಪ್ರಮುಖ ದೊರೆ 12ನೆಯ ಶತಮಾನದ ಇಮ್ಮಡಿ ಸೂರ್ಯವರ್ಮ. ಸುಮಾರು 13ನೆಯ ಶತಮಾನದ ಅಂತ್ಯದಲ್ಲಿ ಸಯಾಮಿಗಳು ಖ್ಮೆರರನ್ನು ಸೋಲಿಸಿದರು. ಅವರ ಪಟ್ಟಣಗಳನ್ನೂ ಭವ್ಯ ದೇವಾಲಯಗಳನ್ನೂ ಲೂಟಿ ಮಾಡಿದರು.

ಖ್ಮೆರರ ರಾಜ್ಯವನ್ನು ಕುಬ್ಲಾಯ್‌ಖಾನನ ರಾಯಭಾರಿ ಚೇಯೂತ್ ಗ್ವಾನ್ ಎಂಬಾತ ಸಂದರ್ಶಿಸಿದ್ದ. ಅವರ ಪ್ರಬಲ ಸರಕಾರ, ಅಪಾರ ಚಿನ್ನ, ಬೆಳ್ಳಿ, ಸಂಪತ್ತು, ವಿನೋದ ವಿಲಾಸ ಸಾಧನಗಳು, ಅದ್ಭುತ ಮುಂತಾದುವುಗಳ ಬಗೆಗೆ ಇವನು ವರ್ಣಿಸಿದ್ದಾನೆ. ಖ್ಮೆರರ ಬರೆಹಗಳನ್ನೂ ಪ್ರಸ್ತಾಪಿಸಿದ್ದಾನೆ.

ನೋಡಿ : ಆಂಗ್ಕೋರ್‌ವಾಟ್

ಗಂಗರು

ಕರ್ನಾಟಕದ ಪ್ರಮುಖ ರಾಜವಂಶಗಳಲ್ಲಿ ಗಂಗವಂಶವೂ ಒಂದು. 350ರಿಂದ 550ರ ವರೆಗೆ ಪರಮಾಧಿಕಾರವುಳ್ಳ ದೊರೆಗಳಾಗಿಯೂ ಮುಂದೆ ವಾತಾಪಿಯ ಚಾಲುಕ್ಯರ ಹಾಗೂ ರಾಷ್ಟ್ರಕೂಟರ ಸಾಮಂತರಾಗಿಯೂ ಗಂಗರು ಬೆಂಗಳೂರು, ಕೋಲಾರ, ಮೈಸೂರು ಜಿಲ್ಲೆಗಳ ಪ್ರದೇಶವನ್ನು ಆಳುತ್ತಿದ್ದರು. ಆ ಪ್ರದೇಶವೇ ಆಗಿನ ಗಂಗವಾಡಿ. ಮೊದಲು ಕೋಲಾರ ಇವರ ರಾಜಧಾನಿಯಾಗಿತ್ತು. ಮುಂದೆ ತಲಕಾಡಿಗೆ ಅದನ್ನು ಬದಲಾಯಿಸಿದರು.

ತಾವು ಜಾಹ್ನವೇಯ ಕುಲದವರೆಂದೂ ಕಾಣ್ವಾಯನ ಗೋತ್ರದವರೆಂದೂ ಹೇಳಿಕೊಂಡ ಗಂಗರ ಲಾಂಛನ ಆನೆ. ಕೊಂಗಣಿವರ್ಮ ಅಥವಾ ದಡಿಗ ಈ ವಂಶದ ಮೊದಲ ದೊರೆ. ಈ ವಂಶದಲ್ಲಿ ಬಂದ ಎರಡನೆಯ ಮಾಧವ ಎಂಬ ದೊರೆ ಕದಂಬ ಕೃಷ್ಣವರ್ಮನ ಸೋದರಿಯನ್ನು ವರಿಸಿದ. ಈ ದಂಪತಿಯ ಪುತ್ರ ಅವಿನೀತ. ಅವನ ಪುತ್ರ ದುರ್ವಿನೀತ. ಗಂಗವಂಶದ ಖ್ಯಾತ ದೊರೆಯಾದ ಈತ ಕನ್ನಡದ ಮೊದಲ ಕವಿಗಳಲ್ಲಿ ಒಬ್ಬ ಎನ್ನುತ್ತಾರೆ. ಇವನ ಕೃತಿಗಳು ಮಾತ್ರ ದೊರೆತಿಲ್ಲ. ಪೂಜ್ಯಪಾದ (ದೇವನಂದಿ) ಎಂಬ ಪ್ರಖ್ಯಾತ ಜೈನಗುರುವಿಗೆ ಶಿಷ್ಯ ಇವನು.

ಇವನ ಅನಂತರ ಮುಷ್ಕರ, ಪೊಲವೀರ, ಶ್ರೀವಿಕ್ರಮ, ಭೂವಿಕ್ರಮ ಮುಂತಾದ ದೊರೆಗಳು ಆಳಿದರು. ಇವರು ಪಲ್ಲವರೊಡನೆ ಹೋರಾಡಿದರು.

ಭೂವಿಕ್ರಮ ವಿಳಂದೆ ಎಂಬಲ್ಲಿ 670ರಲ್ಲಿ ಪಲ್ಲವ ಪರಮೇಶ್ವರವರ್ಮನನ್ನು ಯುದ್ಧದಲ್ಲಿ ಕೊಂದ. 750ರ ಅನಂತರ ಗಂಗರು ರಾಷ್ಟ್ರಕೂಟರ ಸಾಮಂತರಾದರು. ಹೀಗೆ ಸಾಮಂತನಾದ ದೊರೆ ಶ್ರೀಪುರುಷ ಸಂಸ್ಕೃತದಲ್ಲಿ 'ಗಜಶಾಸ್ತ್ರ' ಎಂಬ ಕೃತಿ ರಚಿಸಿದ. ಶಿವಮಾರನೆಂಬ ಈ ವಂಶದ ದೊರೆ (788–816) [illegible] 'ಗಜಾಷ್ಟಕ'ವನ್ನು ಕನ್ನಡದಲ್ಲಿ ರಚಿಸಿದ.

ಶಿವಮಾರ, ರಾಚಮಲ್ಲ, ನೀತಿಮಾರ್ಗ, ಎರಡನೆಯ ರಾಚಮಲ್ಲ, ಎರಡನೆಯ ನೀತಿಮಾರ್ಗ, ಸತ್ಯವಾಕ್ಯದೇವ, ರಾಚಮಲ್ಲ, ಸತ್ಯವಾಕ್ಯ, ಇಮ್ಮಡಿ ನೀತಿಮಾರ್ಗ, ಎರಡನೆಯ ಬೂತುಗ — ಇವರು ಮುಂದೆ ಆಳಿದರು. ಬೂತುಗ ಚೋಳ ರಾಜ ರಾಜಾದಿತ್ಯನನ್ನು ತಕ್ಕೋಳಂ ಎಂಬಲ್ಲಿ ಯುದ್ಧದಲ್ಲಿ ಕೊಂದು ರಾಷ್ಟ್ರಕೂಟರ ವಿಜಯಕ್ಕೆ ಕಾರಣನಾದ. ಬೂತುಗನ ಅನಂತರ ಮರುಳಗಂಗ, ಮಾರಸಿಂಹ, ನಾಲ್ಕನೆಯ ರಾಚಮಲ್ಲ ಮತ್ತು ಐದನೆಯ ರಾಚಮಲ್ಲ ಎಂಬ ರಾಜರು ಆಳಿದರು. ಕೊನೆಯವನ ಕಾಲದಲ್ಲಿ 999ರಲ್ಲಿ ಚೋಳರು ಗಂಗವಾಡಿಯನ್ನು ಗೆದ್ದರು.

ಸಂಸ್ಕೃತ ಕವಿಗಳಾದ ಭಾರವಿ, ಹೇಮಸೇನ (ವಿದ್ಯಾಧನಂಜಯ), ವಾದಿಘಂಗಲರು ಗಂಗರಾಜರ ಆಶ್ರಿತರು. ಶ್ರವಣಬೆಳಗೊಳದ ಗೊಮ್ಮಟೇಶ್ವರನನ್ನು ಸ್ಥಾಪಿಸಿದ ಕವಿಮಂತ್ರಿ ಚಾವುಂಡರಾಯ, ಕವಿ ನಾಗವರ್ಮ ಮುಂತಾದವರೂ ಗಂಗರ ಆಸ್ಥಾನದಲ್ಲಿ ಇದ್ದವರು. ಕೋಲಾರದ ಕೋಲಾರಮ್ಮನ ದೇವಾಲಯ, ಮಣ್ಣೆ, ಕದಂಬಹಳ್ಳಿ, ಶ್ರವಣ ಬೆಳಗೊಳದ ಅನೇಕ ದೇವಾಲಯಗಳು ಗಂಗರ ಕಾಲದ ರಚನೆಗಳು.

ಗಂಗರ ಒಂದು ಶಾಖೆ ಕಳಿಂಗವನ್ನೂ ಇನ್ನೊಂದು ನೇಪಾಳವನ್ನೂ ಕೆಲ ಕಾಲ ಆಳಿದುವು. ಈ ಎರಡು ವಂಶಗಳವರೂ ತಾವು ಕರ್ನಾಟಕದ ಗಂಗರ ವಂಶಜರೆಂದು ಹೇಳಿಕೊಂಡಿದ್ದಾರೆ.

ಗಂಗಾ

ಭಾರತದ ನದಿಗಳಲ್ಲೆಲ್ಲ ಗಂಗಾನದಿ ಅತ್ಯಂತ ಪವಿತ್ರವಾದುದೆಂದು ಭಾವಿಸಲ್ಪಟ್ಟಿದೆ. ಗಂಗಾಸ್ನಾನವೂ ಗಂಗಾಪಾನವೂ ಪಾಪ ಪರಿಹಾರಕ ವೆಂಬ ನಂಬಿಕೆ ಇದೆ.

ದೇವಲೋಕದಲ್ಲಿದ್ದ ಗಂಗೆಯನ್ನು ಭಗೀರಥ ಭೂಲೋಕಕ್ಕೆ ಕರೆತಂದ ಎಂಬುದು ಪುರಾಣ ಕಥೆ.

ಗಂಗಾನದಿ ಹುಟ್ಟುವುದು ಹಿಮಾಲಯ ಪರ್ವತಶ್ರೇಣಿಯ 3.900 ಮೀಟರ್ ಎತ್ತರದ ಗಂಗೋತ್ರಿ ಹಿಮರಾಶಿಯ ಗೋಮುಖ ಹಿಮ ಗವಿಯಲ್ಲಿ. ಭಗೀರಥ ತಪಸ್ಸು ಮಾಡಿದನೆಂದು ಹೇಳುವಸ್ಥಳ ಈ ಗವಿಗೆ ಸಮೀಪವಾಗಿದೆ.

ಗೋಮುಖದಿಂದ ದೇವಪ್ರಯಾಗದ ವರೆಗೆ ಹರಿಯುವ ಗಂಗೆಯನ್ನು ಭಾಗ್ಗೀರ್ಥಿ ಎಂದು ಕರೆಯುತ್ತಾರೆ. ಟಿಬೆಟ್ ಗಡಿಯ ಸಮೀಪದಿಂದ ಹುಟ್ಟಿಬರುವ ಅಲಕನಂದ ದೇವಪ್ರಯಾಗದಲ್ಲಿ ಭಾಗೀರಥಿಯನ್ನು ಕೂಡುತ್ತದೆ. ಅಲ್ಲಿಂದ ಮುಂದೆ ಇದು ಹೃಷೀಕೇಶವನ್ನು ದಾಟಿ ಹರಿದ್ವಾರದ ಸಮೀಪದಲ್ಲಿ ಬಯಲು ಪ್ರದೇಶಕ್ಕೆ ಇಳಿದು ಬರುತ್ತದೆ. ಯಮುನಾನದಿ ಗಂಗೆಯನ್ನು ಸೇರುವುದು ಅಲಹಾಬಾದ್‌ನಲ್ಲಿ. ಇದು ಗಂಗೆಯ ಉಪನದಿಗಳಲ್ಲೆಲ್ಲ ದೊಡ್ಡದು.



ಅನಂತರ ಗಂಗಾನದಿ ಕಾಶಿ, ಪಟ್ನಾಗಳನ್ನು ದಾಟಿ ಬಂಗಾಳವನ್ನು ಪ್ರವೇಶಿಸುತ್ತದೆ. ಈ ಪ್ರದೇಶದಲ್ಲಿರುವ ಧೂಲಿಯಾನ್‌ನಲ್ಲಿ ಗಂಗಾನದಿ ಇಬ್ಭಾಗವಾಗಿ ಒಂದು (ಪದ್ಮಾ) ಬಾಂಗ್ಲಾದೇಶದ ಕಡೆ ಹೋಗುತ್ತದೆ. ಭಾರತದಲ್ಲಿ ಹರಿಯುವ ಭಾಗವನ್ನು ಭಾಗೀರಥಿ ಎಂದು ಕರೆಯುತ್ತಾರೆ. ಮುರ್ಷಿದಾಬಾದ್, ನಾದಿಯಾ, ಕಲ್ಕತ್ತಾ ಈ ನದಿಯ ದಂಡೆಯಲ್ಲಿರುವ ಮುಖ್ಯ ಪಟ್ಟಣಗಳು. ಇಲ್ಲಿಂದ ಮುಂದೆ ನದೀಮುಖಜಭೂಮಿಯಲ್ಲಿ ಹರಿಯುವ ಈ ನದಿ ಸುಂದರಬನದಲ್ಲಿರುವ ಗಂಗಾಸಾಗರದಲ್ಲಿ ಸಮುದ್ರವನ್ನು ಸೇರುತ್ತದೆ.

ಗಂಗಾನದಿ ತುಂಬ ಫಲವತ್ತಾದ ಬಯಲು ಪ್ರದೇಶದಲ್ಲಿ ಹರಿಯುವುದರಿಂದ ಅದರ ನೀರು ವ್ಯವಸಾಯಕ್ಕೆ ಸಹಾಯಕವಾಗಿದೆ.

ಜವಾಹರಲಾಲರು ಹೇಳಿರುವಂತೆ, "ಗಂಗೆಯ ಕಥೆ ಭಾರತದ ನಾಗರಿಕತೆ ಮತ್ತು ಸಂಸ್ಕೃತಿಯ, ಸಾಮ್ರಾಜ್ಯಗಳ ಉದಯಾಸ್ತಗಳ, ಮಹಾ ನಗರಗಳ,- ಮನುಷ್ಯ ಸಾಹಸದ, ಅವನ ಭೌದ್ಧಿಕ ಅನ್ವೇಷಣೆಗಳ ಚರಿತ್ರೆ."

ಗಂಡಕೀ ಯೋಜನೆ

ಭಾರತ ಮತ್ತು ನೇಪಾಳಗಳು ಪರಸ್ಪರ ಸಹಕರಿಸಿ ಕೈಗೊಂಡಿರುವ ದೊಡ್ಡ ಯೋಜನೆಗಳಲ್ಲೊಂದು, ಗಂಡಕೀ ನೀರಾವರಿ ಯೋಜನೆ.

ಗಂಡಕ್ ನದಿಗೆ ಅಣೆಕಟ್ಟು, ಬಿಹಾರಿನ ಭಾಯ್ಸಲೋಥನ್‌ನಲ್ಲಿ. ಈ ನದಿಯ ಮೇಲೆ ರೈಲು–ರಸ್ತೆ ಸೇತುವೆ, ನೇಪಾಳದಲ್ಲಿ ಒಂದು ವಿದ್ಯುತ್ ಉತ್ಪಾದನಾಕೇಂದ್ರ, ನೀರಾವರಿಗಾಗಿ ಎರಡು ಪ್ರಧಾನ ನಾಲೆಗಳು ಗಂಡಕೀ ಯೋಜನೆಯ ಅಂಗಗಳು. ಗಂಡಕ್ ನದಿ, ನೇಪಾಳ ಪ್ರಾಂತ್ಯದ ಹಿಮಾಲಯದಲ್ಲಿ ಹುಟ್ಟಿ, ಹರಿದು, ಭಾರತವನ್ನು ಪ್ರವೇಶಿಸುತ್ತದೆ. ಈ ನದಿಯಲ್ಲಿ ಆಗಾಗ ಮಹಾಪೂರ ಬರುತ್ತದೆ.

ಗಂಡಕೀ ಯೋಜನೆಯ ಬಗೆಗೆ ನೇಪಾಳ ಮತ್ತು ಭಾರತ 1959ರಲ್ಲಿ ಒಪ್ಪಂದ ಮಾಡಿಕೊಂಡುವು. ನೇಪಾಳದ ಮಹಾರಾಜರು 1964 ಮೇ 1ರಂದು ಯೋಜನೆಯನ್ನು ಉದ್ಘಾಟಿಸಿದರು. ಇದರ ಪ್ರಧಾನ ಉದ್ದೇಶ ನೀರಾವರಿಯಾದರೂ ಸ್ವಲ್ಪಮಟ್ಟಿಗೆ ವಿದ್ಯುತ್ ಉತ್ಪಾದನೆಯೂ ಆಗುತ್ತದೆ.

ಗಜೇಂದ್ರಗಡಕರ್

ನೋಡಿ : ಬಿ. ಪಿ. ಗಜೇಂದ್ರಗಡಕರ್

ಗಣರಾಜ್ಯೋತ್ಸವ

ಭಾರತದಲ್ಲಿ ಸಾರ್ವಭೌಮ ಪ್ರಜಾಪ್ರಭುತ್ವ ಗಣರಾಜ್ಯ ಸ್ಥಾಪನೆಗೋಸ್ಕರ ಅವಿರತವಾಗಿ ಶ್ರಮಿಸಬೇಕೆಂದು ಭಾರತ ರಾಷ್ಟ್ರೀಯ ಕಾಂಗ್ರೆಸ್ ಪಕ್ಷ 1929 ಜನವರಿ 26ರಂದು ಪ್ರತಿಜ್ಞೆ ಮಾಡಿತು. ಈ ಕನಸು ನನಸಾದದ್ದು 1950 ಜನವರಿ 26ರಂದು.

ದೆಹಲಿ

ಗಣರಾಜ್ಯೋತ್ಸವ

...ಮೂರ್ತಿ ಭವನ-ಜವಾಹರರ ಕೊಠಡಿ

ರಾಜಘಾಟ್-ಗಾಂಧೀ ಸಮಾಧಿ







ರಾಷ್ಟ್ರಪತಿಯವರು ಉಚಿತ ಮರ್ಯಾದೆ. ಅಂಗರಕ್ಷಕರೊಡನೆ ಸಾರೋಟಿನಲ್ಲಿ ತಮ್ಮ ಭವನದಿಂದ ಹೊರಬಂದಾಗ ಮೆರವಣಿಗೆಯ ಆರಂಭ. ರಾಜಪಥದ ಒಂದು ಬದಿಯಲ್ಲಿ ಅವರಿಗಾಗಿಯೇ ವಿಶೇಷ ವೇದಿಕೆ ಇರುತ್ತದೆ. ರಾಷ್ಟ್ರಪತಿಯವರು ವೇದಿಕೆಯನ್ನೇರಿದ ಮೇಲೆ ಬೃಹತ್ ಮೆರವಣಿಗೆಯ ಸಾಲು ಹರಿಯುತ್ತದೆ. ಅಂದವಾದ ಛತ್ರಿಯ ಕೆಳಗೆ ನಿಂತ ರಾಷ್ಟ್ರಪತಿಯವರು ಮೆರವಣಿಗೆಯಲ್ಲಿ ಸಾಗುವ ರಕ್ಷಣಾಪಡೆಗಳಿಂದ, ಎನ್.ಸಿ.ಸಿ. ದಳದಿಂದ ಗೌರವ ವಂದನೆ ಸ್ವೀಕರಿಸುತ್ತಾರೆ. ಈ ಒಂದೊಂದು ಪಡೆಯವರೂ ಸೈನಿಕ ಸಂಗೀತದ ಬ್ಯಾಂಡುಗಳವರ ಹಿಂಬದಿಯಲ್ಲಿ ಶಿಸ್ತಿನಿಂದ ನಡೆಯುತ್ತಾರೆ. ಅನಂತರ, ವಿಮಾನ ನಿರೋಧಕ ಫಿರಂಗಿಗಳನ್ನು ಹೊತ್ತ ವಾಹನಗಳು, ಆನೆಗಳ ಸಾಲುಗಳು, ಆಮೇಲೆ ಸಾಂಸ್ಕೃತಿಕ ಮೆರವಣಿಗೆ. ಪುರಾತನ–ಆಧುನಿಕ ಭಾರತಗಳ ಇತಿಹಾಸ ಪ್ರಸಿದ್ಧ ಸನ್ನಿವೇಶಗಳನ್ನು ನಿರೂಪಿಸುವ ದೊಡ್ಡ ದೊಡ್ಡ ಮೂಕ ದೃಶ್ಯಗಳು, ರಾಷ್ಟ್ರದ ಬೇರೆಬೇರೆ ರಾಜ್ಯಗಳ ಸ್ವಾತಂತ್ರ್ಯೋತ್ತರ ಸಾಧನೆಗಳ ಪ್ರತಿಮಾ ಚಿತ್ರಣವುಳ್ಳ ವಾಹನಗಳು. ಈ ಸಾಂಸ್ಕೃತಿಕ ಮೆರವಣಿಗೆಯು ಏಕದೇಶದ ಭಾವ ಪ್ರತೀಕವಾದ ಬಾಲಕ ಬಾಲಿಕೆಯರು ಸಮವಸ್ತ್ರಧಾರಿಗಳಾಗಿ ಶಿಸ್ತಿನಿಂದ ನಡೆಯುತ್ತಾರೆ. ಇದು ಮುಗಿಯುವಷ್ಟರಲ್ಲೇ ವಿಮಾನಗಳು ವಿವಿಧ ವಿನ್ಯಾಸಗಳಲ್ಲಿ ಸಾಲುಗಟ್ಟಿ




ಗಣರಾಜ್ಯೋತ್ಸವದಲ್ಲಿ ಮೈಸೂರು ಖೆಡ್ಡಾ ಮಾದರಿಯ ಮೆರವಣಿಗೆ

ಅಂದು ಗಣರಾಜ್ಯ ಸಂವಿಧಾನ ಜಾರಿಗೆ ಬಂದಿತು. ಆ ದಿನ ಚರಿತ್ರಾರ್ಹಕವಾಯಿತು. ಅದರ ನೆನಪಿಗಾಗಿ ಪ್ರತಿ ವರ್ಷ ಜನವರಿ ೨೬ರಂದು ಭಾರತ ರಾಷ್ಟ್ರದಾದ್ಯಂತ ಗಣರಾಜ್ಯ ದಿನವನ್ನು – ಗಣರಾಜ್ಯೋತ್ಸವವನ್ನು–ಆಚರಿಸುತ್ತಾರೆ.

ವಿವಿಧ ಕಾರ್ಯಕ್ಷೇತ್ರಗಳಲ್ಲಿ ಉತ್ತಮ ಸೇವೆ ಸಲ್ಲಿಸಿದವರಿಗೆ, ಆ ದಿನ ಪಾರಿತೋಷಕಗಳು ಸಲ್ಲುತ್ತವೆ. ಮೆರವಣಿಗೆ, ಧ್ವಜಾರೋಹಣ, ಕೂಟ–ಕವಾಯತು ಮನೋರಂಜನೆಯ ಕಾರ್ಯಕ್ರಮಗಳು ನಡೆಯುತ್ತವೆ.

ರಾಷ್ಟ್ರದ ರಾಜಧಾನಿಯಾದ ದೆಹಲಿಯಲ್ಲಿ ನಡೆಯುವ ಗಣರಾಜ್ಯ ದಿನಾಚರಣೆಯ ಮೆರವಣಿಗೆ (ರಿಪಬ್ಲಿಕ್ ಡೇ ಪರೇಡ್) ಭವ್ಯ ಹಾಗೂ ಪ್ರೇಕ್ಷಣೀಯ. ಮೆರವಣಿಗೆಯನ್ನು ನೋಡಲು ಲಕ್ಷಾಂತರ ಮಂದಿ ರಾಜಪಥದ (ರಾಷ್ಟ್ರಪತಿಭವನದಿಂದ ಇಂಡಿಯಾ ಗೇಟ್ ವರೆಗಿನ ಮಾರ್ಗ) ಇಕ್ಕೆಲಗಳಲ್ಲಿ ನೆರೆದಿರುತ್ತಾರೆ. ಸಾಲು ಮರಗಳ ಮೇಲೆಲ್ಲ ಹತ್ತಿ ಕುಳಿತುಕೊಳ್ಳುತ್ತಾರೆ.



ಗಣರಾಜ್ಯೋತ್ಸವದ ಮುಕ್ತಾಯ ಸಮಾರಂಭ

ದೇಶದ ನಾಲ್ದೆಸೆಯ ಜಾನಪದ ನೃತ್ಯ



ಹಾರುತ್ತವೆ; ಬಣ್ಣಬಣ್ಣದ ಹೊಗೆ ಬಿಡುತ್ತ ಆಕಾಶದಲ್ಲಿ ರಾಷ್ಟ್ರ ಧ್ವಜದ ತ್ರಿವರ್ಣ ಪಟ್ಟಿಗಳನ್ನು ರಚಿಸುತ್ತವೆ.

ರಾಷ್ಟ್ರೀಯ ಕ್ರೀಡಾಂಗಣದಲ್ಲಿ ರಾಷ್ಟ್ರದ ವಿವಿಧ ಭಾಗಗಳವರ ಜಾನಪದ ನೃತ್ಯಗಳ ಪ್ರದರ್ಶನ ನಡೆಯುತ್ತದೆ. ಅಂದು ಸಂಜೆ ರಾಷ್ಟ್ರಪತಿಭವನದ ಪ್ರಖ್ಯಾತ ಮೊಘಲ್ ಉದ್ಯಾನದಲ್ಲಿ ಬಾಣಬಿರುಸುಗಳ ರಮಣೀಯ ಪ್ರದರ್ಶನವಿರುತ್ತದೆ.

ರಾಜ್ಯಗಳ ರಾಜಧಾನಿಗಳಲ್ಲಿ ಕೂಡ ಮೆರವಣಿಗೆಗಳೂ ಪರೇಡುಗಳೂ ಸಾಂಸ್ಕೃತಿಕ ಕಾರ್ಯಕ್ರಮಗಳೂ ಅಂದು ನಡೆಯುತ್ತವೆ. ಈ ಉತ್ಸವದ ಅಂಗವಾಗಿ ದೇಶದಾದ್ಯಂತ ಸಂಘಸಂಸ್ಥೆಗಳಲ್ಲಿ ವಿಶೇಷ ಕಾರ್ಯಕ್ರಮಗಳಿರುತ್ತವೆ.

ಗಣೇಶ

ಭಾರತದ ಆದ್ಯಂತ ಎಲ್ಲೆಲ್ಲೂ ಪೂಜೆಗೊಳ್ಳುವ ದೇವರು ಗಣೇಶ. ಯಾವುದೇ ಹೊಸ ಕೆಲಸ ಕೈಗೊಳ್ಳುವ ಮೊದಲು ಗಣೇಶನ ಪೂಜೆ ಮಾಡಬೇಕು; ಯಾವ ದೇವರ ಪೂಜೆ ನಡೆಸಬೇಕಾದರೂ ಮೊದಲು ಗಣೇಶನ ಪೂಜೆ ನಡೆಯಬೇಕು, ಎಂದು ನಂಬಿಕೆ.

ಗುಪ್ತರ ಕಾಲದಲ್ಲಿ ಎಂದರೆ ಸುಮಾರು 4, 5ನೆಯ ಶತಮಾನಗಳಲ್ಲಿ ಗಣೇಶನನ್ನು ಪೂಜಿಸುವುದು ಆರಂಭವಾಯಿತು. ಬೌದ್ಧರೂ ಗಣೇಶ ಪೂಜೆಯನ್ನು ತಮ್ಮದಾಗಿಸಿಕೊಂಡರು. ದೂರ ಪ್ರಾಚ್ಯದಲ್ಲಿ ಬೌದ್ಧ ಸಂಪ್ರದಾಯದ ದೇವರಾಗಿ ಗಣಪತಿ ಪೂಜೆಗೊಳ್ಳುತ್ತಾನೆ.

ಕಾಬೂಲಿಗೆ ಹತ್ತು ಮೈಲು ದೂರದಲ್ಲಿರುವ ಶಕರ್‌ಧಾರ್‌ನಲ್ಲಿ ಸಿಕ್ಕಿರುವ ಅಮೃತಶಿಲೆಯ ಗಣೇಶಮೂರ್ತಿ 4ನೆಯ ಶತಮಾನದ್ದೆಂದು ತರ್ಕಿಸಿದ್ದಾರೆ. ಕಾಬೂಲಿನ ಶೋರ್ ಬಜಾರ್‌ನಲ್ಲಿಟ್ಟಿರುವ ಈ ವಿಗ್ರಹವನ್ನು ಅಲ್ಲಿಯ ಹಿಂದುಗಳು ಈಗಲೂ ಪೂಜಿಸುತ್ತಾರೆ.

ಅಶೋಕನ ಮಗಳು ಚಾರುಮತಿ ನೇಪಾಳದಲ್ಲಿ ಗಣೇಶ ದೇವಾಲಯ ಕಟ್ಟಿಸಿದಳೆಂದು ದಂತಕಥೆ ಇದೆ. ಆದರೆ ಇಲ್ಲಿ ದೊರೆತಿರುವ ಗಣೇಶ ಮೂರ್ತಿಗಳ ಆಧಾರದಿಂದ, ಆ ಪ್ರದೇಶದಲ್ಲಿ 8ನೆಯ ಶತಮಾನದಲ್ಲಿ ಗಣೇಶ ಪೂಜೆ ಆರಂಭವಾಯಿತೆಂದು ಊಹಿಸಲಾಗಿದೆ.



ಗಣೇಶನಿಗೆ ಪೂಜೆ

ರಾಕ್ಷಸರು, ದುಷ್ಟ ಶಕ್ತಿಗಳ ವಿರುದ್ಧ ರಕ್ಷಣೆ ಕೊಡುವವನು ಗಣೇಶ ಎಂದು ಟಿಬೆಟ್‌ನವರ ಭಾವನೆ. ದೇವಾಲಯದ ಮುಖ್ಯದ್ವಾರದ ಮೇಲೆ ಗಣೇಶ ವಿಗ್ರಹವಿರುತ್ತದೆ. ಟಿಬೆಟಿನ ಬೌದ್ಧರು ಗಣೇಶನನ್ನು ಸ್ತ್ರೀ ರೂಪದಲ್ಲೂ ನಿರೂಪಿಸಿದ್ದಾರೆ.

ಮಂಗೋಲಿಯಾದಲ್ಲಿ ಕಂಡುಬರುವುದು ನೃತ್ಯ ಗಣಪತಿ.

ಸಿಂಹಳದ ಪೋಲೋನ್ನರುವ ಶಿವದೇವಾಲಯದ ಕಂಬದ ಮೇಲೆ ಗಣಪತಿ ವಿಗ್ರಹವಿದೆ; ಕಟರ್‌ಗಾಮದ ಗಣಪತಿ ದೇವಾಲಯದಲ್ಲಿರುವ ಗಣೇಶನಿಗೆ ಹಿಂದುಗಳಲ್ಲದೆ ಮುಸಲ್ಮಾನರು ಮತ್ತು ಕ್ರಿಶ್ಚಿಯನ್ನರೂ ಪೂಜೆ ಸಲ್ಲಿಸುತ್ತಾರೆ.

ಮಹಾ ಗಣಪತಿ ವೀರ ಗಣಪತಿ ತರುಣ ಗಣಪತಿ ಭಕ್ತ ಗಣಪತಿ ತೃಪ್ತ ಗಣಪತಿ ಧ್ವಜ ಗಣಪತಿ ಭುವನೇಶ ಗಣಪತಿ ಲಕ್ಷ್ಮೀ ಗಣ



ಊರ್ಧ್ವ ಗಣಪತಿ ನೃತ್ಯ ಗಣಪತಿ ಉಚ್ಛಿಷ್ಟ ಗಣಪತಿ ಹೇರಂಬ ಗಣಪತಿ ಸಿದ್ಧಿ ಗಣಪತಿ ವಿಘ್ನರಾಜ ಗಣಪತಿ ಬಾಲ ಗಣಪತಿ ಶಕ್ತಿ ಗಣ



ಮೊಸಳೆ ಮತ್ತು ಆಮೆಗಳನ್ನು ಪೀಠದ ಸುತ್ತಮುತ್ತ ಕಡೆದಿರುವ ಗಣೇಶ ವಿಗ್ರಹವೊಂದು ಬರ್ಮದ ವಸ್ತುಸಂಗ್ರಹಾಲಯದಲ್ಲಿದೆ.

ಸಯಾಂ, ಕಾಂಬೋಡಿಯ, ಬೋರ್ನಿಯೋ, ಜಾವಾಗಳಲ್ಲೂ ಗಣೇಶ ವಿಗ್ರಹಗಳು ದೊರೆತಿವೆ. ಚೀನ, ಜಪಾನುಗಳಲ್ಲೂ ಗಣೇಶನ ಆರಾಧನೆ ನಡೆಯುತ್ತಿತ್ತೆಂಬುದಕ್ಕೆ ಆಧಾರಗಳಿವೆ. ಬಾಲಿಯಲ್ಲಿ ಗಣೇಶ ಬಲು ಜನಪ್ರಿಯ ದೇವತೆಯಾಗಿದ್ದ. ಮೂರು ಕಣ್ಣುಗಳಿರುವ, ಒನಕೆ ಹಿಡಿದಿರುವ ಗಣೇಶನ ಗಂಭೀರ ಮೂರ್ತಿಗಳಿವೆ.

ಗಣೇಶ ಪಾರ್ವತಿಯಿಂದ ಸೃಷ್ಟಿಸಲ್ಪಟ್ಟು ಶಿವನ ಅನುಗ್ರಹಕ್ಕೆ ಪಾತ್ರನಾದ ದೇವತೆ. ಈತ ಗಣಗಳ ಈಶ —ಗಣೇಶ. ಇವನಿಗೆ ವಿಘ್ನೇಶ್ವರ, ವಿಘ್ನರಾಜ ಎಂಬ ಹೆಸರುಗಳೂ ಇವೆ. ಇವನ ಕೃಪೆಯಿಂದ ವಿಘ್ನಗಳು ನಿವಾರಣೆಯಾಗುತ್ತವೆಂದು ಭಕ್ತರ ನಂಬಿಕೆ.

ಗಣೇಶ ಚತುರ್ಥಿ

ಗಣೇಶ ಮೋದಕ – ಸಿಹಿ ಕಡುಬು – ಪ್ರಿಯ. ಹೊಟ್ಟೆ ಬಿರಿಯುವಂತೆ ಕಡುಬು ತಿಂದು ಇಲಿಯ ಮೇಲೆ ಕುಳಿತು ಗಣಪತಿ ಹೊರಟ. ದಾರಿಯಲ್ಲಿ ಹಾವನ್ನು ಕಂಡು ಹೆದರಿದ ಇಲಿ ನೆಗೆಯಿತು. ಗಣಪತಿ ಕೆಳಗೆ ಬಿಟ್ಟ. ಹೊಟ್ಟೆ ಬಿರಿಯಿತು. ಆ ಹಾವನ್ನೇ ಹಿಡಿದು ಹೊಟ್ಟೆಗೆ ಬಿಗಿದುಕೊಂಡ. ಗಣೇಶನ ಅವಸ್ಥೆಯನ್ನು ನೋಡಿ ಚಂದ್ರ ನಕ್ಕುಬಿಟ್ಟ. ಕೆರಳಿದ ಗಣೇಶ "ಚೌತಿ ದಿನ ನಿನ್ನನ್ನು ನೋಡಿದವರಿಗೆ ಮಿಥ್ಯಾಪವಾದ ಬರಲಿ" ಎಂದು ಚಂದ್ರನಿಗೆ ಶಾಪಕೊಟ್ಟ. ಚಂದ್ರ ಕ್ಷಮೆ ಕೇಳಿದ. ಆಗ ಗಣಪತಿ, "ಚತುರ್ಥಿ ದಿವಸ ಗಣಪತಿ ವ್ರತ ಮಾಡಿದರೆ ಮಿಥ್ಯಾಪವಾದ ಬರುವುದಿಲ್ಲ: ಇಂಥ ಅಪವಾದ ಬಂದ ಮೇಲೆ ಕೂಡ ಭಕ್ತಿಯಿಂದ ಈ ವ್ರತ ಮಾಡಿದರೆ, ಅಪವಾದ ನಿವಾರಣೆಯಾಗುತ್ತದೆ" —ಎಂದು ತನ್ನ ಶಾಪಕ್ಕೆ ಪರಿಹಾರ ಸೂಚಿಸಿದ.

ಇದು ಗಣೇಶ ಚತುರ್ಥಿಗೆ ಸಂಬಂಧಿಸಿದ ಕಥೆ.

ಭಾದ್ರಪದ ಮಾಸದ ಶುದ್ಧ ಚೌತಿಯಂದು ಗಣೇಶನ ಹಬ್ಬವನ್ನು ಆಚರಿಸುತ್ತಾರೆ. ಇದು ಗಣೇಶನ ಹುಟ್ಟುಹಬ್ಬವೆಂದು ನಂಬಿಕೆ. ಅಂದು ಜೇಡಿಮಣ್ಣಿನಿಂದ ಮಾಡಿದ ಗಣೇಶನ ಹೊಸ ವಿಗ್ರಹವನ್ನು ಪೂಜಿಸುವುದು ವಾಡಿಕೆ. ಭಾರತದ ಎಲ್ಲ ಭಾಗಗಳಲ್ಲೂ ಹಿಂದುಗಳು ಈ ಹಬ್ಬವನ್ನು ಭಕ್ತಿಯಿಂದ ಆಚರಿಸುತ್ತಾರೆ.

ಗಣೇಶ ಚತುರ್ಥಿಯ ಹಿಂದಿನ ದಿನ ಗೌರೀ ಪೂಜೆ ನಡೆಯುತ್ತದೆ. ತೌರಿಗೆ ಬಂದ ಗೌರಿಯನ್ನು ಹಿಂದಕ್ಕೆ ಕರೆತರಲು ಶಿವ ಗಣಪತಿಯನ್ನು ಮರುದಿನವೇ ಕಳುಹಿಸುತ್ತಾನೆ ಎಂದು ಹೇಳಿಕೆ. ಗೌರಿ ಬಂದ 3, 5 ಅಥವಾ ವಿಷಮ ದಿನವೊಂದರಲ್ಲಿ ಗೌರಿಯನ್ನೂ ಗಣಪತಿಯನ್ನು ನದಿ, ಕೆರೆ ಅಥವಾ ಕೊಳಕ್ಕೆ ಒಯ್ದು ವಿಸರ್ಜಿಸುತ್ತಾರೆ. "ಗಣೇಶ ಬಂದ, ಕಾಯ್ಕಡುಬು ತಿಂದ, ದೊಡ್ಡ ಕೆರೇಲಿ ಬಿದ್ದ ಚಿಕ್ಕ ಕೆರೇಲಿ ಎದ್ದ" ಎಂದು ಹೇಳುತ್ತ ಹುಡುಗರು ಗಣಪತಿಯ ಮೂರ್ತಿಯನ್ನು ನೀರಿನಲ್ಲಿ ಬಿಡುತ್ತಾರೆ. ನೀರಿನಲ್ಲಿ ವಿಸರ್ಜಿಸಲು ಗಣೇಶನನ್ನು ವೈಭವದ ಮೆರವಣಿಗೆಯಲ್ಲಿ ಕರೆದೊಯ್ಯುತ್ತಾರೆ.

ಮಹಾರಾಷ್ಟ್ರದಲ್ಲಿ ಗಣೇಶ ಉತ್ಸವಕ್ಕೆ ಬಹಳ ಮಹತ್ವ. ಬಾಲಗಂಗಾಧರ ತಿಲಕರ ನೇತೃತ್ವದಲ್ಲಿ ಈ ಉತ್ಸವದ ಆಚರಣೆ ಒಂದು ಸಾರ್ವಜನಿಕ ಕಾರ್ಯಕ್ರಮವಾಗಿ ರೂಪುಗೊಂಡಿತು. ಸಾಮಾಜಿಕ, ರಾಜಕೀಯ ಉದ್ದೇಶಗಳಿಗಾಗಿಯೂ ಅದನ್ನು ಪರಿಣಾಮಕಾರಿಯಾಗಿ ಉಪಯೋಗಿಸಿದರು. ಅಲ್ಲಿ ಈ ಉತ್ಸವ ಹತ್ತು ಹನ್ನೆರಡು ದಿನಗಳನ್ನು ಅದ್ಧೂರಿಯಾಗಿ ನಡೆಯುವುದುಂಟು.

ಗಣೇಶ ಶಂಕರ ವಿದ್ಯಾರ್ಥಿ

"ಅಪಾಯದಲ್ಲಿರುವವರನ್ನು ಪಾರುಮಾಡಲು, ಶಾಂತಿಯನ್ನು ನೆಲೆಗೊಳಿಸಲು, ಕಾದಾಡುತ್ತಿದ್ದವರ ನಡುವೆ ಸೌಹಾರ್ದ ಉಂಟುಮಾಡಲು ಪ್ರಯತ್ನಿಸಿ ತನ್ನ ಅಮೂಲ್ಯ ಜೀವವನ್ನು ತೆತ್ತ ಪ್ರಥಮ ದರ್ಜೆಯ ಪ್ರಮುಖ ಕಾರ್ಯಕರ್ತ."

—ಇದು, 1931ರಲ್ಲಿ ಕರಾಚಿಯಲ್ಲಿ ಸಮಾವೇಶಗೊಂಡ ಕಾಂಗ್ರೆಸ್ ಅಧಿವೇಶನದಲ್ಲಿ ಸ್ವೀಕೃತವಾದ ನಿರ್ಣಯದಲ್ಲಿ ಗಣೇಶಶಂಕರ ವಿದ್ಯಾರ್ಥಿಯವರನ್ನು ಕುರಿತು ಮಾಡಲಾದ ಪ್ರಶಂಸೆ.

1931ರಲ್ಲಿ ಕಾನ್ಪುರದಲ್ಲಿ ಹಿಂದೂ ಮುಸಲ್ಮಾನ ಗಲಭೆ ತಡೆಗಟ್ಟಲು ಮಧ್ಯೆ ಪ್ರವೇಶಿಸಿ ಪ್ರಾಣ ತೆತ್ತವರು, ಯುವಕ ಗಣೇಶ ಶಂಕರ ವಿದ್ಯಾರ್ಥಿ.

"ಅವರು ಅತ್ಯಂತ ಪ್ರಿಯರಾದ ಸಂಗಾತಿ–ಸ್ನೇಹಿತ, ಧೀರ–ನಿರ್ಭೀತ ದೂರದೃಷ್ಟಿಯವರು, ವಿವೇಕಿ ; ಎಂದೂ ನಿರಾಸೆಯಿಂದ ಕುಗ್ಗಿದವರಲ್ಲ. ಪ್ರಸಿದ್ಧಿ–ಅಧಿಕಾರವನ್ನು ತೃಣೀಕರಿಸಿ, ಸದ್ದಿಲ್ಲದೆ ದುಡಿದವರು .... ಒಂದಿಷ್ಟೂ ತಡವರಿಸದೆ ಕೀರ್ತಿಶಾಲಿಯಾಗಿ ಅವರು ಸಾವನ್ನು ಇದಿರಿಸಿದರು."—ಹೀಗೆಂದು ಜವಾಹರಲಾಲ ನೆಹರೂ ತಮ್ಮ ಆತ್ಮವೃತ್ತದಲ್ಲಿ, ಅಗಲಿದ ಸಹೋದ್ಯೋಗಿ ಗಣೇಶ ಶಂಕರ ವಿದ್ಯಾರ್ಥಿಗೆ ಶ್ರದ್ಧಾಂಜಲಿ ಅರ್ಪಿಸಿದ್ದಾರೆ. 1890ರಲ್ಲಿ ಜನಿಸಿದ ಗಣೇಶ ಶಂಕರ ವಿದ್ಯಾರ್ಥಿ ಉದ್ಯೋಗ ಬಿಟ್ಟು ಲೇಖಕರೂ ಪತ್ರಿಕೋದ್ಯಮಿಯೂ ರಾಜಕೀಯ ಕಾರ್ಯಕರ್ತರೂ ಆಗಿದ್ದರು.

ಗದರ್ ಪಕ್ಷ

'ಗದರ್' ಎಂದರೆ ದಂಗೆ. ಬ್ರಿಟಿಷರನ್ನು ಭಾರತದಿಂದ ಹೊರಕ್ಕೆ ಅಟ್ಟಿ, ಸ್ವಾತಂತ್ರ್ಯ ಸ್ಥಾಪಿಸಲು ಪಣತೊಟ್ಟ ರಾಜಕೀಯ ಪಕ್ಷ, ಗದರ್ ಪಕ್ಷ. ಆದರೆ ಇದು ಸ್ಥಾಪಿತವಾದದ್ದು ಭಾರತದಲ್ಲಲ್ಲ: ಇಲ್ಲಿಂದ ಸಾವಿರಾರು ಮೈಲಿಗಳಾಚೆ ಅಮೆರಿಕ ಸಂಯುಕ್ತ ಸಂಸ್ಥಾನದಲ್ಲಿ, 1913 ಮೇ 10 ರಂದು.

ಅಲ್ಲಿದ್ದ ಸಿಕ್ಖರು ಗದರ್ ಪಕ್ಷ ಕಟ್ಟುವುದರಲ್ಲಿ ಪ್ರಮುಖ ಪಾತ್ರವಹಿಸಿದರು. ಲಾಲಾ ಹರದಯಾಲ್, ಬಾಬಾ ಸೋಹನ್ ಸಿಂಗ್ ಭಾಕ್ನ, ಪಂಡಿತ್ ಕಾಂಶಿರಾಮ್, ಕರ್ತಾರ್ ಸಿಂಗ್ ಶರಭ, ಸಂತೋಖ್ ಸಿಂಗ್ ಪಕ್ಷದ ಪ್ರಮುಖ ವ್ಯಕ್ತಿಗಳು. ಸಶಸ್ತ್ರ ಕ್ರಾಂತಿ ಈ ಪಕ್ಷದ ನೀತಿಯಾಗಿತ್ತು.

ವಿದೇಶದಲ್ಲಿರುವ ಭಾರತೀಯರನ್ನು ಒಟ್ಟುಗೂಡಿಸುವ ಉದ್ದೇಶದಿಂದ 'ಗದರ್' ಎಂಬ ಒಂದು ಪತ್ರಿಕೆಯನ್ನು ಈ ಪಕ್ಷ ಆರಂಭಿಸಿತು. ಹಾಂಗ್‌ಕಾಂಗ್, ಮನಿಲಾ, ಬ್ಯಾಂಗ್‌ಕಾಕ್, ಷಾಂಘಾಯ್ ಮತ್ತು ಪನಾಮಾಗಳಲ್ಲಿ ಇದರ ಶಾಖೆಗಳು ಆರಂಭವಾದುವು. ಈ ಪಕ್ಷದವರು ತ್ರಿವರ್ಣ ಧ್ವಜವನ್ನು ರೂಪಿಸಿಕೊಂಡರು. ರಾಷ್ಟ್ರಧ್ವಜದ ಅಡಿಯಲ್ಲಿ ಹೋರಾಡಿ ಪ್ರಾಣ ಬಿಡುತ್ತೇವೆ —ಎಂಬ ಪ್ರತಿಜ್ಞೆ ಕೈಗೊಂಡರು. ಈ ಧ್ವಜವನ್ನು ಮೊದಲ ಬಾರಿಗೆ ಕ್ಯಾಲಿಫೋರ್ನಿಯದ ಸ್ಟಾಕ್‌ಟನ್ ಎಂಬಲ್ಲಿ 1914 ಫೆಬ್ರವರಿ 15ರಂದು ಹಾರಿಸಿದರು.

ಪ್ರಥಮ ಮಹಾಯುದ್ಧದ ಕಾಲದಲ್ಲಿ ಭಾರತದ ಸ್ವಾತಂತ್ರ್ಯ ಹೋರಾಟವನ್ನು ಸಂಘಟಿಸಲು ಪಕ್ಷದ ಸಾವಿರಾರು ಸದಸ್ಯರು ಭಾರತಕ್ಕೆ ಹಿಂದಿರುಗಿದರು. ಹೀಗೆ ಬಂದವರಲ್ಲಿ ಅನೇಕರನ್ನು ಬ್ರಿಟಿಷ್ ಸರಕಾರ

[illegible] ಬಾಂಬುಗಳನ್ನು ತಯಾರಿಸಿದರು.

[illegible] ಮಾಡುವುದು ಅವರ ಉದ್ದೇಶವಾಗಿತ್ತು. ಆದರೆ ಅವರ ರಹಸ್ಯ ಬಯಲಾಯಿತು. ಗದರ್ ಪಕ್ಷದವರು ನೂರಾರು ಸಂಖ್ಯೆಯಲ್ಲಿ ಬಂಧಿಸಲ್ಪಟ್ಟರು. 145 ಮಂದಿ ಗಲ್ಲಿಗೇರಿಸಲ್ಪಟ್ಟರು. 300ಕ್ಕೂ [illegible] ಸ್ವಾತಂತ್ರ್ಯ ಸಾಧನೆಯ [illegible] ಗದರ್ ಪಕ್ಷದವರ ಈ ತ್ಯಾಗ ಸ್ಫೂರ್ತಿದಾಯಕವಾಯಿತು.

ಗದರ್ ವೀರರ [illegible] 'ದೇಶ್ ಭಗತ್ ಸ್ಮಾರಕ ಭವನ'ವನ್ನು ಕಟ್ಟಲಾಗಿದೆ.

ನೋಡಿ : ಲಾಲಾ ಹರದಯಾಲ್ ; ಬಾಬಾ ಬಾಕ್ನಾ ಸೋಹನ್ ಸಿಂಗ್

ಗರ್ಬಾ ನೃತ್ಯ

ನವರಾತ್ರಿಯ ಕಾಲದಲ್ಲಿ ಅಂದವಾಗಿ ಅಲಂಕರಿಸಿದ ಗರಬಿ (ಮಡಕೆ) ಯನ್ನು ಮನೆಯ ಮುಂಭಾಗದಲ್ಲಿರಿಸಿ ಅದರೊಳಗೆ ದೀಪವಿಡುವುದನ್ನು ಗುಜರಾತಿನ ಹಳ್ಳಿಗಳಲ್ಲಿ ಎಲ್ಲೆಡೆಯೂ ಕಾಣಬಹುದು. ತರುಣಿಯರು ತಮ್ಮ ಮನೆಯ ಗರಬಿಗಳನ್ನು ಹೊತ್ತು ಪ್ರತಿ ಮನೆಯ ಮುಂದಿರುವ ಗರಬಿಯ, ಎಂದರೆ ಮನೆಯ ಹೆಬ್ಬಾಗಿಲಿಗೆ ನೇತು ಹಾಕಿರುವ ಚಿತ್ರರಂಜಿತ ಕುಂಭದ, ಸುತ್ತ ಹಾಡುತ್ತ ಕುಣಿಯುತ್ತಾರೆ. ಆ ಗುಂಪಿನಲ್ಲಿ ಇಂಪಾದ ಧ್ವನಿಯುಳ್ಳಾಕೆ ಹಾಡಿನ ಚರಣಗಳನ್ನು ಮೊದಲು ಹೇಳುತ್ತಾಳೆ. ಉಳಿದವರು ಅವನ್ನು ಪುನರುಚ್ಚರಿಸುತ್ತಾರೆ. ಕೃಷ್ಣನ ಮೊಮ್ಮಗ ಅನಿರುದ್ಧನ ಹೆಂಡತಿ ಉಷಾ ಈ ನೃತ್ಯವನ್ನು ಸೌರಾಷ್ಟ್ರದ ಸ್ತ್ರೀಯರಿಗೆ ಹೇಳಿಕೊಟ್ಟಳೆಂದು ನಂಬಿಕೆ.

ಬಣ್ಣಬಣ್ಣದ ಅಚ್ಚುಚಿತ್ರಗಳಿಂದ ಕಣ್ಣಿಗೆ ಹಬ್ಬವಾಗುವಂಥ ಬಟ್ಟೆಯ ಉಡುಪು ಧರಿಸಿದ ಗರ್ಬಾ ನರ್ತಕಿಯರು ಅತ್ಯಂತ ಸರಳವಾದ ಚಲನೆಗಳನ್ನು ಅವಲಂಬಿಸಿ, ವೃತ್ತಾಕಾರದಲ್ಲಿ ಸುತ್ತುತ್ತಾರೆ. ಈ ನೃತ್ಯಕ್ಕೆ ಉಪಯೋಗಿಸುವ ವಾದ್ಯ ಡೋಲಕ್. ಹಾರ್ಮೋನಿಯಂ, ದಿಲ್‌ರುಬಾ ಮೊದಲಾದುವನ್ನು ಬಾರಿಸಿದಾಗ ನೃತ್ಯ ಹೆಚ್ಚು ಪರಿಣಾಮಕಾರಿಯಾಗುತ್ತದೆ.

ಸೌರಾಷ್ಟ್ರಕ್ಕೆ ವಿಶಿಷ್ಟವಾದ ಈ ನೃತ್ಯ ಸಂಪ್ರದಾಯ ರಾಜಸ್ಥಾನ ಮತ್ತು ಮಧ್ಯ ಭಾರತಗಳಲ್ಲೂ ಪ್ರಚಾರದಲ್ಲಿದೆ.

ಉಷಾ ಕಲಿಸಿದ ನೃತ್ಯ : ಗರ್ಬಾ



ಗಯಾ

ಗಯ ಎಂಬ ರಾಕ್ಷಸ ವಿಷ್ಣುವಿನಿಂದ ವರ ಪಡೆದು ಜನಪೀಡಕನಾಗಿದ್ದ. ಇವನನ್ನು ನಿಗ್ರಹಿಸಲು ಯೋಜಿಸಿದ ಬ್ರಹ್ಮ ಇವನಲ್ಲಿಗೆ ಬಂದು, "ನಾನು ಮಾಡಲಿರುವ ಯಜ್ಞದಲ್ಲಿ ಯಜ್ಞವೇದಿಕೆಗಾಗಿ ಉಪಯೋಗಿಸಲು ನಿನ್ನ ದೇಹವನ್ನು ಕೊಡು" ಎಂದು ಕೇಳಿದ, ಗಯಾ ಅದಕ್ಕೆ ಒಪ್ಪಿದ. ಉತ್ತರ ದಿಕ್ಕಿಗೆ ತಲೆಮಾಡಿಕೊಂಡು ಮಲಗಿದ. ಅವನ ಮೈಮೇಲೆ ಧರ್ಮಶಿಲೆಯನ್ನಿಟ್ಟು ಯಜ್ಞ ಆರಂಭಿಸಿದರು. ಗಯನ ಮೈ ಅಲ್ಲಾ[illegible]ದಾಗ ವೇದಿಕೆಯೂ ಅಲುಗಾಡುತ್ತಿತ್ತು. ಅದನ್ನು ಸ್ಥಿರವಾಗಿಡಲು ದೇವತೆಗಳೆಲ್ಲ ಶಿಲೆಯ ಮೇಲೆ ನಿಂತರೂ ಪ್ರಯೋಜನವಾಗಲಿಲ್ಲ. ವಿಷ್ಣು ಬಂದು ನಿಂತ ಮೇಲೆ ಸರಿಹೋಯಿತು. ಆಗ ಗಯನಿಗೆ ವಿಪರೀತ ಯಾತನೆಯಾಯಿತು. ಆತ ವಿಷ್ಣು ಸರ್ವದಾ ತನ್ನ ತಲೆಯಮೇಲೆ ನಿಂತಿರಬೇಕೆಂದೂ ಈ ಸ್ಥಳ ತನ್ನ ಹೆಸರಿನಿಂದ ಪ್ರಸಿದ್ಧವಾಗಬೇಕೆಂದೂ ಬೇಡಿದ. ವಿಷ್ಣು ಒಪ್ಪಿದ. ಅದರಿಂದ ಆ ಕ್ಷೇತ್ರಕ್ಕೆ ಗಯಾ ಎಂಬ ಹೆಸರು ಬಂತು —ಇದು ಪುರಾಣ ಕಥೆ.

ಬಿಹಾರ್ ರಾಜ್ಯದಲ್ಲಿ, ಕಲ್ಕತ್ತಾದಿಂದ 192 ಮೈಲು ದೂರದಲ್ಲಿ ಗಯಾ. ಇದೊಂದು ಪ್ರಸಿದ್ಧ ವಿಷ್ಣುಕ್ಷೇತ್ರ. ಅಲ್ಲಿ ಪಿತೃಗಳಿಗೆ ಶ್ರಾದ್ಧ ಮಾಡುತ್ತಾರೆ.

ಬುದ್ಧ ದೇವಾಲಯ : ಗಯಾ





ಬುದ್ಧ ಗಯಾ : ಬೋಧಿ ವೃಕ್ಷ ಮತ್ತು ದೇವಾಲಯ

ಗಯಾದಿಂದ ಏಳು ಮೈಲು ದೂರದಲ್ಲಿ ಬುದ್ಧಗಯಾ ಇದೆ. ಬುದ್ಧನಿಗೆ ಜ್ಞಾನೋದಯವಾದದ್ದು ಇಲ್ಲಿರುವ ಅರಳೀಮರದಡಿಯಲ್ಲಿ. ಈ ಪ್ರದೇಶದಲ್ಲಿ ಬುದ್ಧನ ದೇವಾಲಯವಿದೆ.

ನೋಡಿ : ಗಯೆ—ಸಂಪುಟ ೧

'ಗ್ರಂಥ್ ಸಾಹೇಬ್'

"ನಾನೇ ಕೊನೆಯ ಗುರು ನನ್ನ ಅನಂತರ ಬೇರೆ ಗುರುಗಳಿಲ್ಲ. ಏಕೆಂದರೆ ಈಗ ಶಾಶ್ವತಗುರು ಗ್ರಂಥ ಸಾಹೇಬ್ ಇದೆ".

–ಹೀಗೆ ಘೋಷಿಸಿದವರು ಸಿಕ್ಖರ 10ನೆಯ ಗುರು ಗೋವಿಂದ ಸಿಂಗ್. ಸಿಕ್ಖರ ಧಾರ್ಮಿಕ ಗ್ರಂಥ 'ಗ್ರಂಥ್ ಸಾಹೇಬ್' ಅಥವಾ ಗುರುಗ್ರಂಥ. 'ಗ್ರಂಥ್ ಸಾಹೇಬ್' ಅನ್ನು ಆದಿಗ್ರಂಥವೆಂದೂ ಕರೆಯುತ್ತಾರೆ. ಗುರುಗ್ರಂಥವನ್ನು ಹಳೆಯ ಪಂಜಾಬೀ, ಹಳೆಯ ಹಿಂದೀ/ಮರಾಠೀ ಭಾಷೆಗಳಲ್ಲೂ ಕೆಲವು ಭಾಗಗಳನ್ನು ಪಾರಸೀ ಭಾಷೆಯಲ್ಲೂ ಬರೆಯಲಾಗಿದೆ. ಸಿಕ್ಖ್ ಧರ್ಮಸ್ಥಾಪಕರಾದ ನಾನಕರಿಗೆ ಹಿಂದೆ ಜೀವಿಸಿದ ಗುರುಗಳು, ಸಂತರು ಹಾಗೂ ಸುಧಾರಕರು ಬರೆದ ಮತ್ತು ಆಡಿದ ನುಡಿಗಳ ಸಂಕಲನ 'ಗ್ರಂಥ್ ಸಾಹೇಬ್'; ಇದರಲ್ಲಿ 3,384 ಸ್ತೋತ್ರ ಗೀತೆಗಳಿವೆ.

ಜಯದೇವ, ನಾಮದೇವ, ರಾಮಾನಂದ, ಕಬೀರ, ಪೀಪಾ, ರಾಯಿದಾಸ, ಮೀರಾಬಾಯಿ, ಫರೀದ್, ಭಿಖಾನ್, ಸೂರದಾಸ್ ಮತ್ತು ಇತರ ಕೆಲವು ಮಂದಿ ಸಂತಗಾಯಕರ ಕೃತಿಗಳೂ ಇದರಲ್ಲಿ ಸೇರಿವೆ.

ಗಾಂಧಾರಿ

ತನ್ನ ಪತಿ ಕುರುಡನೆಂದು ಗೊತ್ತಾದಾಗ ಅವನಿಗಿಲ್ಲದ ಕಣ್ಣಿನ ಸುಖ ತನಗೂ ಬೇಡ ಎಂದು ತನ್ನ ಕಣ್ಣಿಗೆ ದಪ್ಪ ಬಟ್ಟೆ ಕಟ್ಟಿಕೊಂಡಳು. ಹೀಗೆ ಜೀವನಪರ್ಯಂತ ಕಣ್ಣಿದ್ದೂ ಕುರುಡಳಾಗಿಯೇ ಕಾಲ ಕಳೆದಳು. ಧೃತರಾಷ್ಟ್ರನ ಮಡದಿ ಗಾಂಧಾರಿಯು ಅಂಧ ತ್ಯಾಗ. ಗಾಂಧಾರ ರಾಜ್ಯದ ದೊರೆ ಸುಬಲನ ಮಗಳು ಗಾಂಧಾರಿ. ದುರ್ಯೋಧನನೇ ಮೊದಲಾದ ನೂರು ಮಕ್ಕಳ ತಾಯಿ ಈಕೆ. ಪಾಂಡವರ ವಿಷಯವಲ್ಲಿ ತನ್ನ ಮಕ್ಕಳ ವೈರ ಆಕೆಗೆ ಸರಿಬರುತ್ತಿರಲಿಲ್ಲ. ಜೂಜಿನಲ್ಲಿ ಪಾಂಡವರು ಸಕಲವನ್ನು ಕಳೆದುಕೊಂಡಾಗ ಆಕೆ ತುಂಬ ದುಃಖಿಪಟ್ಟಳು. ಕುರುಕ್ಷೇತ್ರ ಯುದ್ಧ ಹೊಗೆಯಾಡುತ್ತಿದ್ದಾಗ ಗಾಂಧಾರಿ ರಾಜಸಭೆಗೆ ಹೋಗಿ, ಯುದ್ಧ ಬೇಡವೆಂದು ತನ್ನ ಮಕ್ಕಳಿಗೆ ಬುದ್ಧಿ ಹೇಳಿದಳು. ಆದರೆ ಅವರು ಕೇಳಲಿಲ್ಲ; ಕುರುಕ್ಷೇತ್ರ ಯುದ್ಧದಲ್ಲಿ ಮಕ್ಕಳೆಲ್ಲ ತೀರಿಕೊಂಡಾಗ ಅವಳ ತಾಯಿಕರುಳು ನೊಂದಿತಾದರೂ, ಅವರು ಪಾಪದ ಫಲ ಅನುಭವಿಸಿದರು ಎಂದು ಸಮಾಧಾನ ತಂದುಕೊಂಡಳು. ಮಹಾಭಾರತ ಯುದ್ಧಾನಂತರ ಪಾಂಡವರು ರಾಜ್ಯಭಾರ ವಹಿಸಿಕೊಂಡ ಮೇಲೆ ಗಾಂಧಾರಿ, ಧೃತರಾಷ್ಟ್ರ 16 ವರ್ಷ ಕಾಲ ಅವರ ಅರಮನೆಯಲ್ಲೇ ಇದ್ದರು. ಅನಂತರ ಇವರು ವಾನಪ್ರಸ್ಥಾಶ್ರಮಕ್ಕಾಗಿ ಕಾಡಿಗೆ ಹೊರಟರು. ಆಗ ಕುಂತಿ ಹಾಗೂ ವಿದುರ ಜೊತೆಯಲ್ಲೇ ಹೋದರು. ಒಂದು ದಿನ ಗಂಗಾಸ್ನಾನ ಮಾಡಿ ಬರುತ್ತಿದ್ದಾಗ ವಿದುರನನ್ನುಳಿದು ಮಿಕ್ಕವರು ಕಾಳ್ಗಿಚ್ಚಿಗೆ ತುತ್ತಾದರು. 'ಮಹಾಭಾರತ'ದ ಸ್ತ್ರೀ ಪಾತ್ರಗಳಲ್ಲಿ ಗಾಂಧಾರಿಯದು ಘನ ವ್ಯಕ್ತಿತ್ವ.



ಕುರುಡನ ಮಡದಿ : ಗಾಂಧಾರಿ ತ್ಯಾಗ

ನೋಡಿ : ಕುಂತಿ ; ಕೌರವರು

ಗಾಂಧಿ

ಮೋಹನದಾಸ ಕರಮಚಂದ ಗಾಂಧಿ (ಜನನ ಪೋರಬಂದರಿನಲ್ಲಿ, 1869 ಅಕ್ಟೋಬರ್ 2ರಂದು) 'ರಾಷ್ಟ್ರಪಿತ' ಎಂದು ಭಾರತದಲ್ಲಿ ಪೂಜ್ಯರು; 'ಮಹಾತ್ಮ' ಎಂದು ಜಗತ್ತಿಗೆ ಖ್ಯಾತರು.



ಮಹಾತ್ಮ

ಅವರು ಸಾಟಿಯಿಲ್ಲದ ಜನನಾಯಕ. ದಾಸ್ಯದಲ್ಲಿ ತೊಳಲುತ್ತಿದ್ದ ಈ ಶತಮಾನದ ಭಾರತೀಯರನ್ನು ಅವರು ಸೂಜಿಗಲ್ಲಿನಂತೆ ತಮ್ಮೆಡೆಗೆ ಸೆಳೆದರು ; ಜನಕೋಟಿಯ ಪಾಲಿಗೆ ಚಿರಂಜೀವಿ ಯೋಗಿಯಾದರು. ಅವರ ನಾಯಕತ್ವದಲ್ಲಿ, ಭಾರತದಲ್ಲಿ ಹೊಸ ಶಕ್ತಿಯ ಸಂಚಾರವಾಯಿತು.

ಆಳುವವರ ಪಾಶವೀ ಶಕ್ತಿಗಿದಿರು ಪ್ರಯೋಗಿಸಲೆಂದು ಭಾರತದ ಜನರಿಗೆ ಅವರು ನೀಡಿದ ನೂತನ ಅಸ್ತ್ರ–ಸತ್ಯಾಗ್ರಹ.

ವಿದೇಶೀ ವಸ್ತುಗಳಿಗೆ ಬಹಿಷ್ಕಾರ, ಸ್ವದೇಶೀ ವಸ್ತುಗಳಿಗೆ ಪುರಸ್ಕಾರ, ಗ್ರಾಮೀಣ ಸ್ವಾವಲಂಬನ, –ಅಸ್ಪೃಶ್ಯತೆಯ ನಿವಾರಣೆ, ಮದ್ಯಪಾನ ನಿಷೇಧ, ಹಿಂದೂ ಮುಸಲ್ಮಾನ ಐಕ್ಯ, ಹಿಂದೂಸ್ಥಾನಿಯ ಪ್ರಚಾರ, ದೇಶೀಯ ಭಾಷೆಗಳಿಗೆ ಉತ್ತೇಜನ –ಇದು ದೇಶದ ಮುಂದೆ ಅವರು ಇರಿಸಿದ ವಿಧಾಯಕ ಕಾರ್ಯಕ್ರಮ. ಚರಖಾ, ಗಾಂಧೀ ಟೋಪಿ ಸ್ವಾತಂತ್ರ್ಯ ಸಂಗ್ರಾಮದ ಸಂಕೇತಗಳಾದುವು.

ಅವರ ಬೋಧನೆಯ ಬೀಜ ಮಂತ್ರಗಳು : ಸತ್ಯ ಮತ್ತು ಅಹಿಂಸೆ.

ಉಪ್ಪಿನ ಸತ್ಯಾಗ್ರಹ, ಕರನಿರಾಕರಣೆ, ಅಸಹಕಾರ ಚಳುವಳಿ, ಕಾಯಿದೆ ಭಂಗ ಹೋರಾಟ, ಆಮರಣ ಉಪವಾಸ –ಗಾಂಧೀಜೀ ಮುನ್ನಡೆಸಿದ ಸ್ವಾತಂತ್ರ್ಯ ಸಮರದ ವಿವಿಧ ಹಂತಗಳು. ಕೊನೆಯಲ್ಲಿ ಗಾಂಧೀಜೀ ಆಂಗ್ಲರಿಗೆ "ಭಾರತ ಬಿಟ್ಟು ತೊಲಗಿ". ಎಂದರು. ಪ್ರತಿಯೊಬ್ಬ ಭಾರತೀಯನಿಗೂ "ಮಾಡು ಇಲ್ಲವೆ ಮಡಿ", ಎಂದು ಕರೆ ನೀಡಿದರು.

"ಬಲ ಶಾರೀರಕ ಸಾಮರ್ಥ್ಯದಿಂದ ಬರುವುದಿಲ್ಲ : ಅದಮ್ಯ ಇಚ್ಛಾ ಶಕ್ತಿಯಿಂದ ಬರುತ್ತದೆ". ಎನ್ನುತ್ತಿದ್ದರು ಗಾಂಧೀಜೀ. ಸರ್ವೋದಯವನ್ನು ಅವರು ಬಯಸಿದರು ; ರಾಮರಾಜ್ಯದ ಸ್ಥಾಪನೆಗಾಗಿ ಹಂಬಲಿಸಿದರು. ಅಂತೂ, ದೀರ್ಘ ಹೋರಾಟದ ಬಳಿಕ ದೇಶಕ್ಕೆ ಸ್ವಾತಂತ್ರ್ಯ ಬಂತು. ಆದರೆ ಅದರ ಜೊತೆಯಾಗಿ ದೇಶದ ವಿಭಜನೆಯಾಯಿತು.

ಆ ಸಂದರ್ಭದಲ್ಲಿ ನಡೆದ ಕೋಮು ಗಲಭೆಗಳೂ ರಕ್ತಪಾತವೂ ಗಾಂಧೀಜಿಗೆ ವ್ಯಥೆ ಉಂಟುಮಾಡಿದುವು.

ಅಂಥ ವೇಳೆಯಲ್ಲಿ ದೆಹಲಿಯಲ್ಲಿ ಒಂದು ಸಂಜೆ (1948 ಜನವರಿ 30) ಪ್ರಾರ್ಥನಾ ಸಭೆಗೆ ಗಾಂಧೀಜೀ ಹೋಗುತ್ತಿದ್ದಾಗ ಹಂತಕನೊಬ್ಬನ ಗುಂಡಿಗೆ ನೆಲಕ್ಕುರುಳಿ, ಕಣ್ಮುಚ್ಚಿದರು. ಬಾಪೂ ಅಮರರಾದರು.

ನೋಡಿ : ಅಸಹಕಾರ ಚಳುವಳಿ ; ಕಸ್ತೂರಬಾ ; ಗಾಂಧೀ-ಇರ್ವಿನ್ ಒಪ್ಪಂದ ; ಚರಖಾ ; 'ಚಲೇಜಾವ್' ದಂಡೀಯಾತ್ರೆ ; ಸ್ವಾತಂತ್ರ್ಯ ಸಂಗ್ರಾಮ

ಗಾಂಧೀ–ಇರ್ವಿನ್ ಒಪ್ಪಂದ

ಭಾರತೀಯ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಗಾಂಧೀ–ಇರ್ವಿನ್ ಒಪ್ಪಂದ ಒಂದು ಪ್ರಮುಖ ಘಟ್ಟ. 1931 ಮಾರ್ಚ್ 5ರಂದು ಈ ಒಪ್ಪಂದ ಗಾಂಧೀಜೀ ಹಾಗೂ ಆಗಿನ ವೈಸ್‌ರಾಯ್ ಇರ್ವಿನ್ ನಡುವೆ ಆಯಿತು.

ಒಪ್ಪಂದದ ಹಿನ್ನೆಲೆ ಇದು : ಉಪ್ಪಿನ ಮೇಲಿನ ತೆರಿಗೆಯನ್ನು ಪ್ರತಿಭಟಿಸುವುದಕೋಸ್ಕರ, ಗಾಂಧೀಜೀ 1930 ಮಾರ್ಚ್‌ನಲ್ಲಿ ದಂಡೀಯಾತ್ರೆ ಆರಂಭಿಸಿದರು. ಸಮುದ್ರ ದಂಡೆಯ ದಂಡಿಯಲ್ಲಿ ಉಪ್ಪು ತಯಾರಿಸುವುದು ಕಾಯಿದೆಭಂಗ ಚಳುವಳಿಯ ಕಾರ್ಯಕ್ರಮ. ಈ ನಿರ್ಧಾರ ಕೈಗೊಳ್ಳುವ ಮೊದಲು ಗಾಂಧೀಜೀ ಇರ್ವಿನ್ ಅವರಿಗೆ ಪತ್ರ ಬರೆದಿದ್ದರು. ಗಾಂಧೀಯವರ ನಿರ್ಧಾರ ಶಾಸನ ವಿರುದ್ಧ ಎಂದು ಇರ್ವಿನ್ ತಿಳಿಸಿದರು.


ಉಪ್ಪಿನ ಸತ್ಯಾಗ್ರಹ ಆರಂಭವಾಯಿತು. ಬಿರುಗಾಳಿಯಂತೆ ಆಂದೋಲನ ಎಲ್ಲೆಲ್ಲೂ ಹಬ್ಬಿತು. ಜನರ ಹರತಾಳ, ಉಪ್ಪುತಯಾರಿ, ವಿದೇಶೀ ಸಾಮಗ್ರಿಗಳ ಬಹಿಷ್ಕಾರ. ಬ್ರಿಟಿಷ್ ಸರಕಾರಕ್ಕೆ ಆತಂಕ ತಂದಿತು. ಬ್ರಿಟಿಷ್ ಸರಕಾರ ಸತ್ಯಾಗ್ರಹಿಗಳನ್ನು ಬಂಧಿಸಿತು; ಅನೇಕರನ್ನು ತೀವ್ರ ಶಿಕ್ಷೆಗೆ ಒಳಪಡಿಸಿತು. ಹಿಂದುಮುಂದು ನೋಡದೆ ಸತ್ಯಾಗ್ರಹಿಗಳನ್ನು ಬಡಿಯುವುದು ಸರಕಾರದ ನೀತಿಯಾಯಿತು. ಆದರೂ ಈ ಬಗೆಯ ಬಲಪ್ರಯೋಗದಿಂದ ಆಂದೋಲನವನ್ನು ಹತ್ತಿಕ್ಕಲಾಗಲಿಲ್ಲ. ಗಾಂಧೀ–ಇರ್ವಿನ್ ಅವರ ನಡುವೆ ಪತ್ರವ್ಯವಹಾರ ನಡೆಯಿತು. ಕಡೆಗೆ ಸರಕಾರ ಚಳುವಳಿಗಾರರೊಡನೆ 1931 ಮಾರ್ಚ್ 5ರಂದು ಒಪ್ಪಂದ ಮಾಡಿಕೊಳ್ಳಬೇಕಾಯಿತು.

ಗಾಂಧೀ–ಇರ್ವಿನ್ ಒಪ್ಪಂದದ ಮೇರೆಗೆ ಕಾಂಗ್ರೆಸ್ ತನ್ನ ಸವಿನಯ ಕಾಯಿದೆಭಂಗ ಚಳುವಳಿಯನ್ನು ಬಿಟ್ಟುಕೊಡಲು ಸಮ್ಮತಿಸಿತು. ದುಂಡು ಮೇಜು ಪರಿಷತ್ತಿನಲ್ಲಿ ಭಾಗವಹಿಸಲು ಒಪ್ಪಿಕೊಂಡಿತು. ಸತ್ಯಾಗ್ರಹ ಬಂದಿಗಳನ್ನು ಬಿಡುಗಡೆ ಮಾಡಲು, ತಾನು ಮುಟ್ಟುಗೋಲು ಹಾಕಿಕೊಂಡಿದ್ದ ರಾಜಕೀಯ ಕಾರ್ಯಕರ್ತರ ಆಸ್ತಿಪಾಸ್ತಿಗಳನ್ನು ಹಿಂದಿರುಗಿಸಲು ಮತ್ತು ಉಪ್ಪಿನ ಮೇಲಿನ ತೆರಿಗೆ ಮತ್ತು ಕಾಂಗ್ರೆಸ್ಸಿನ ಮೇಲಿನ ಪ್ರತಿಬಂಧಗಳನ್ನು ತೆಗೆಯಲು ಸರಕಾರ ಒಪ್ಪಬೇಕಾಯಿತು.

ಅನಂತರ ಗಾಂಧೀಜೀ ಕಾಂಗ್ರೆಸ್ಸಿನ ಏಕೈಕ ಪ್ರತಿನಿಧಿಯಾಗಿ 1931ರಲ್ಲಿ ಲಂಡನಿನಲ್ಲಿ ನಡೆದ ಎರಡನೆಯ ದುಂಡುಮೇಜು ಪರಿಷತ್ತಿನಲ್ಲಿ ಭಾಗವಹಿಸಿದರು. ಈ ಪರಿಷತ್ತನ್ನು ಮುಗಿಸಿಕೊಂಡು ಗಾಂಧೀಜೀ ಭಾರತಕ್ಕೆ ಹಿಂದಿರುಗುವ ಹೊತ್ತಿಗೆ, ಸ್ವಾತಂತ್ರ್ಯ ಚಳುವಳಿಗಾರರ ಮೇಲೆ ಸರಕಾರ ಮತ್ತೆ ದಬ್ಬಾಳಿಕೆ ಆರಂಭಿಸಿತ್ತು. ಇದರಿಂದಾಗಿ ಗಾಂಧೀ-ಇರ್ವಿನ್ ಒಪ್ಪಂದ ಮುರಿದುಬಿದ್ದು ಕಾಂಗ್ರೆಸ್ ಕಾನೂನುಭಂಗ ಚಳುವಳಿ ಕೈಗೊಂಡಿತು.

ಗಾಂಧೀನಗರ

1971ರಿಂದ ಗಜರಾತ್ ರಾಜ್ಯದ ರಾಜಧಾನಿಯಾಗಿರುವ ಪಟ್ಟಣ ಗಾಂಧೀನಗರ. ಹಿಂದಿನ ರಾಜಧಾನಿ ಅಹಮದಾಬಾದಿನಿಂದ ಇದು 24 ಕಿಲೊಮೀಟರ್ ದೂರದಲ್ಲಿದೆ.



MK Gandhi

ಸ್ವತಂತ್ರ ಭಾರತದ ಗುಜರಾತ್ ರಾಜ್ಯ ರಚನೆಯಾದದ್ದು 1960ರಲ್ಲಿ. ಆಗ ರಾಜಧಾನಿಯಾದ ಅಹಮದಾಬಾದ್ ಕೆಲವು ಕಾರಣಗಳಿಂದ ರಾಜಧಾನಿಗೆ ಸೂಕ್ತವಲ್ಲವೆಂದು ಕಂಡಿತು. ಇದರಿಂದ ಹೊಸ ರಾಜಧಾನಿಯ ನಿರ್ಮಾಣವನ್ನು ಕೈಗೊಳ್ಳಲಾಯಿತು. ಗಾಂಧೀನಗರವನ್ನು ರಾಜಧಾನಿ, ಔದ್ಯೋಗಿಕ, ನಗರ, ಸಾರ್ವಜನಿಕ ಸಂಸ್ಥೆಗಳು ಮತ್ತು ಮಾರುಕಟ್ಟೆ ಹಾಗೂ ವಾಸ್ತವ್ಯದ ಮನೆಗಳು ವಿಭಾಗಗಳೆಂದು ವಿಂಗಡಿಸಿ ರಚಿಸಲಾಗಿದೆ. ನಗರದ ಒಟ್ಟು ವಿಸ್ತಾರ ಸುಮಾರು 115 ಚ. ಮೈಲು.

ಗಾಂಧೀನಗರದ ಸುಂದರ ಪರಿಸರ ಕೆಡದಂತೆ ಇದರ ನಿರ್ಮಾಣ ನಡೆದಿದೆ. ಅಹಮದಾಬಾದಿನಿಂದ ಇಲ್ಲಿಗೆ [illegible] ಇದೆ. ಈ ಎರಡೂ ನಗರಗಳ ನಡುವೆ ಅಹಮದಾಬಾದ್ ವಿಮಾನ ನಿಲ್ದಾಣವಿದೆ.

ಯಾವುದೇ ರಸ್ತೆಯಲ್ಲಿ ವಾಹನದಲ್ಲಿ ಸಂಚರಿಸುವ ಪ್ರಯಾಣಿಕರಿಗೆ ಸೂರ್ಯಕಿರಣಗಳಿಂದ ತೊಂದರೆಯಾಗದಂತೆ ರಚಿಸಿರುವುದು ಗಾಂಧೀ ನಗರದ ರಸ್ತೆಗಳ ಒಂದು ವೈಶಿಷ್ಟ್ಯ.

ಇಲ್ಲಿನ ಜನಸಂಖ್ಯೆ 24,049.

ಗಾಂಧೀ ಶಾಂತಿ ಪ್ರತಿಷ್ಠಾನ

ಸತ್ಯ, ಅಹಿಂಸೆ ಮತ್ತು ಸಾಧನ ಶುದ್ಧಿಗಳನ್ನು ಗಾಂಧೀಜೀ ಬಲವಾಗಿ ಪ್ರತಿಪಾದಿಸಿದರು. ವೈಯಕ್ತಿಕ ಜೀವನದಲ್ಲಿ ಮಾತ್ರವಲ್ಲ, ಸಾಮಾಜಿಕ ಮತ್ತು ರಾಜಕೀಯ ಜೀವನದಲ್ಲೂ ಈ ಮಾರ್ಗಗಳಿಂದ ಮಹತ್ ಸಾಧನೆ ಸಾಧ್ಯವೆಂದು ಅವರು ಪ್ರತ್ಯಕ್ಷ ತೋರಿಸಿದರು.

ಹೀಗೆ ಮಾನವ ಜನಾಂಗದ ಜೀವನದಲ್ಲೇ ಒಂದು ನೂತನ ಕ್ರಾಂತಿಯ ಬೀಜವನ್ನು ಗಾಂಧೀಜೀ ಬಿತ್ತಿದರು. ತನ್ನ ವಿರಾಟ್ ಸ್ವರೂಪ ತಳೆಯಲು ಎಲ್ಲ ಕ್ರಾಂತಿಗಳಂತೆ ಇದಕ್ಕೂ ಕೆಲ ಸಮಯ ಬೇಕಾಗಬಹುದು; ಗಾಂಧೀಜೀ ಪ್ರತಿಪಾದಿಸಿದ ವಿಚಾರಗಳಲ್ಲಿ ಶ್ರದ್ಧೆ ಇರುವವರು ಅಂಥ ದಿನ ಬೇಗನೇ ಬರುವಂತೆ ಪರಿಶ್ರಮ ಪಡಬೇಕು: ಅಂದರೆ ಗಾಂಧೀಜೀ ಹೇಳಿದ ವಿಚಾರಗಳ ಬಗೆಗೆ ಆಳವಾದ ಮತ್ತು ಶಾಸ್ತ್ರೀಯ ಅಭ್ಯಾಸ, ವಿಚಾರ, ವಿಮರ್ಶೆ ನಡೆಸಬೇಕು ; ಪ್ರಚಾರ –ಪ್ರಸಾರ ನಡೆಯಬೇಕು. ಈ ಚಟುವಟಿಕೆಗಳನ್ನು ಸುಸಂಘಟಿತವಾಗಿ ಮತ್ತು ಸುವ್ಯವಸ್ಥಿತವಾಗಿ ನಡೆಸಲೆಂದು 1962ರಲ್ಲಿ ಗಾಂಧೀ ಶಾಂತಿ ಪ್ರತಿಷ್ಠಾನ ಪ್ರಾರಂಭವಾಯಿತು.

ಪರಮಾಣು ಅಸ್ತ್ರ ಸ್ಪರ್ಧೆ ಮಾನವ ಜನಾಂಗ ಮತ್ತು ನಾಗರಿಕತೆಗಳು ಎಲ್ಲಿ ಸರ್ವನಾಶ ಹೊಂದುವವೋ ಎಂಬ ಪರಿಸ್ಥಿತಿ ಗಾಂಧೀ ಶಾಂತಿ ಪ್ರತಿಷ್ಠಾನದ ಸ್ಥಾಪನೆಗೆ ಪ್ರೇರಣೆ ನೀಡಿತು. ಇದರ ಮುಖ್ಯ ಕಚೇರಿ ದೆಹಲಿಯಲ್ಲಿದೆ. ಆರ್. ಆರ್. ದಿವಾಕರರು ಇದರ ಮೊದಲ ಅಧ್ಯಕ್ಷರು. ಡಾ. ಎಸ್. ರಾಧಾಕೃಷ್ಣನ್, ಜವಾಹರಲಾಲ ನೆಹರೂ, ಜಯಪ್ರಕಾಶ ನಾರಾಯಣ, ಚಕ್ರವರ್ತಿ ರಾಜಗೋಪಾಲಾಚಾರಿ, ಡಾ. ಜಾಕೀರ್ ಹುಸೇನ್, ಆಚಾರ್ಯ ಕೃಪಲಾನಿ ಮೊದಲಾದವರು ಇದರ ಸಂಸ್ಥಾಪಕ ಸದಸ್ಯರಲ್ಲಿ ಕೆಲವರು.

1962ರಲ್ಲಿ ಇದು ಪರಮಾಣು ಅಸ್ತ್ರಗಳ ಪರೀಕ್ಷೆ ಪ್ರಯೋಗ ಮತ್ತು ತಯಾರಿಕೆಗಳ ವಿರುದ್ಧ ಅಂತರರಾಷ್ಟ್ರೀಯ ಸಮ್ಮೇಳನ ಏರ್ಪಡಿಸಿತು. 1968ರಲ್ಲಿ ಶಾಂತಿಗಾಗಿ ಧಾರ್ಮಿಕ ನಾಯಕರು ಯಾವ ಪ್ರಯತ್ನ ನಡೆಸಬಹುದೆಂಬ ಬಗೆಗೆ ವಿಚಾರ ವಿನಿಮಯ ನಡೆಸಲು ಒಂದು ಜಾಗತಿಕ ಸಮ್ಮೇಳನ ಸೇರಿಸಿತು.

ಗಾಂಧೀಜಿಯ ವಿಚಾರಗಳ ಬಗೆಗೆ ಹೆಚ್ಚಿನ ವ್ಯಾಸಂಗ, ಸಂಶೋಧನೆ ನಡೆಸುವವರಿಗೆ ಅಥವಾ ಸಂಶೋಧಕ ಪ್ರಬಂಧ ಸಿದ್ಧಪಡಿಸುವವರಿಗೆ ಪ್ರತಿಷ್ಠಾನ ಒಕ್ಕ ನೆರವು ನೀಡುತ್ತದೆ. ಭಾರತದಲ್ಲಿ ಇದರ [illegible] ಕೇಂದ್ರಗಳು ಕಾರ್ಯನಿರತವಾಗಿವೆ.

ಗಾರ್ಗಿ

ಯಾಜ್ಞವಲ್ಕ್ಯಮುನಿ ಬ್ರಹ್ಮಜ್ಞಾನಿ. ತನ್ನ ಗುರುವಾದ ವೈಶಂಪಾಯನನೊಡನೆ ವಾದ ಮಾಡಿ ಅವರ ಕೋಪಕ್ಕೆ ಗುರಿಯಾದವನು. ಮಹಾ ಮೇಧಾವಿ.

ವಾಚಕ್ನು ಎಂಬ ಮುನಿಯ ಮಗಳಾದ ಗಾರ್ಗಿ ಇರುವಿಕೆಯ ಮೂಲವನ್ನು ಕುರಿತು ಯಾಜ್ಞವಲ್ಕ್ಯನನ್ನು ಒಮ್ಮೆ ಎಡೆಬಿಡದೆ ಪ್ರಶ್ನಿಸಿದಳು. ಆಕೆಯ ಪ್ರಶ್ನೆಗಳಿಂದ ತನ್ನ ಮನಶ್ಶಾಂತಿಯನ್ನು ಕಳೆದುಕೊಂಡ ಅವನು ಕೋಪಗೊಂಡು, "ಹೀಗೆಲ್ಲ ತುಂಬ ಪ್ರಶ್ನೆಗಳನ್ನು ಕೇಳಬೇಡ. ನಿನ್ನ ತಲೆ ಕೆಳಗುರುಳೀತು. ದೇವತ್ವವನ್ನು ಕುರಿತು ಬಹಳ ಪ್ರಶ್ನಿಸಬಾರದು". ಎಂದು ಗದರಿಸಿದ.

ಈ ಗದರಿಕೆಗೆ ಗಾರ್ಗಿ ಅಂಜಲಿಲ್ಲ; ಸುಮ್ಮನಾಗಲಿಲ್ಲ. ಬ್ರಹ್ಮನನ್ನು ಕುರಿತು ಜನಕ ಮಹಾರಾಜನ ಮುಂದೆ ವಾದ ನಡೆದಾಗ, ಅವಳು ಮತ್ತೆ ಯಾಜ್ಞವಲ್ಕ್ಯನ ಇದಿರು ಬಂದಳು. "ಶೂರನಾದ ಯೋಧನು ವೈರಿಗೆ ವ್ಯಥೆಯನ್ನುಂಟುಮಾಡುವಂಥ ಎರಡು ಬಾಣಗಳನ್ನು ತನ್ನ ಹೆದೆಯೇರಿಸಿದ ಬಿಲ್ಲಿಗೆ ಹೂಡಿ ವೈರಿಯನ್ನು ಸಮೀಪಿಸುವಂತೆ, ನಾನು ಎರಡು ಪ್ರಶ್ನೆಗಳಿಂದ ನಿನ್ನನ್ನು ಸಮೀಪಿಸುತ್ತೇನೆ". ಎಂದು, ಎರಡು ಪ್ರಶ್ನೆಗಳನ್ನು ಹಾಕಿದಳು. ಯಾಜ್ಞವಲ್ಕ್ಯ ನೀಡಿದ ಉತ್ತರಗಳು ಸಮರ್ಪಕವೆಂದು ಆಕೆಗೆ ತೋರಿದಾಗ, ಅವಳು ಆತನ ಜ್ಞಾನ ಸಂಪತ್ತನ್ನು ಮೆಚ್ಚಿ, ಬ್ರಹ್ಮನನ್ನು ಕುರಿತ ವಾದದಲ್ಲಿ ಅವನನ್ನು ಯಾರೂ ಜಯಿಸಲಾರರು ಎಂದು ಸಾರಿದಳು; ತನ್ನ ಸೋಲನ್ನು ಒಪ್ಪಿಕೊಂಡಳು.

ಗಾರ್ಗಿಯ ವಿದ್ಯಾಪ್ರೌಢಿಮೆ, ವಾದಚತುರತೆ, ಸ್ಥೈರ್ಯ ಯಾರ ಪ್ರಶಂಸೆಗಾದರೂ ಪಾತ್ರವಾಗುವಂಥವು.

ಗಾಡಗೀಳ

ನೋಡಿ : ಡಿ. ಆರ್. ಗಾಡಗೀಳ

ಗ್ವಾಲಿಯರ್

ಈಗಿನ ಗ್ವಾಲಿಯರ್ ಕೋಟೆ ಇರುವ ಗುಡ್ಡದ ಮೇಲೆ ಗ್ವಾಲಿಪನೆಂಬ ಸನ್ಯಾಸಿ ಧ್ಯಾನಮಗ್ನನಾಗಿದ್ದ. ಬಾಯಾರಿಕೆಯಿಂದ ಬಳಲುತ್ತ ಅಲ್ಲಿಗೆ ಬಂದ ಪಾಳೆಯಗಾರ ಸೂರಜ್ ಸೇನ್ ಗ್ವಾಲಿಪನ ಬಳಿಸಾರಿ. ಅತ್ಯಂತ



ನಗರ : ಗ್ವಾಲಿಯರ್



ಮಾನ್ ಮಂದಿರ

ಪರಿಚಿತನಾಗಿ ಹೇಳಿದ. ಸನ್ಯಾಸಿ ಹತ್ತಿರದ ಕೊಳದಿಂದ ನೀರು ತಂದು ಅಭಿಮಂತ್ರಿಸಿಕೊಟ್ಟ. ನೀರು ಕುಡಿದ ಕೂಡಲೇ ಸೂರಜ್ ಸೇನನನ್ನು ಕಾಡುತ್ತಿದ್ದ ಕುಷ್ಠರೋಗ ಮಾಯವಾಯಿತು. ಗ್ವಾಲಿಪ ಸೂರಜ್ ಸೇನನಿಗೆ ಅಲ್ಲಿಯೇ ಕೋಟೆ ಕಟ್ಟಿಸಲು, ಕೊಳ ದೊಡ್ಡದು ಮಾಡಿಸಲು ಆದೇಶಿಸಿದ. ಸೂರಜ್ ಅದರಂತೆ ನಡೆದುಕೊಂಡ. ಗ್ವಾಲಿಯರ್ ಕೋಟೆ, ಸೂರಜ್ ಕುಂಡಗಳನ್ನು ಕುರಿತ ಪ್ರಚಲಿತ ದಂತಕಥೆ ಇದು. ಗ್ವಾಲಿಯರ್‌ನ ಕೋಟೆಯನ್ನು 'ಭಾರತದ ದುರ್ಗಗಳ ಕೊರಳ ಹಾರದ ಮುತ್ತು' ಎಂದು ಕರೆದಿದ್ದಾರೆ. ಅಷ್ಟು ಅಂದವಾದದ್ದು ಅದು. ಗ್ವಾಲಿಯರ್ ಕೋಟೆ ಕಡಿದಾದ ಗುಡ್ಡದ ಮೇಲೆ ಕಟ್ಟಲ್ಪಟ್ಟಿದೆ. ಇದಕ್ಕೆ



ಬಾತು ದೇವಾಲಯ

ಏಳು ದ್ವಾರಗಳಿವೆ. ಕೋಟೆಯಲ್ಲಿ ಹಲವು ಭವ್ಯ ಕಟ್ಟಡಗಳನ್ನೂ ವಿಗ್ರಹಗಳನ್ನೂ ಕಾಣಬಹುದು. ಗ್ವಾಲಿಯರನ್ನು 15–16ನೆಯ ಶತಮಾನಗಳಲ್ಲಿ ಆಳಿದ ಮಾನಸಿಂಹ ತನ್ನ ಮೆಚ್ಚಿನ ರಾಣಿ ಮೃಗನಯನೆಗಾಗಿ ಕಟ್ಟಿಸಿದ ಎರಡಂತಸ್ತಿನ ಅರಮನೆ, ಗುಜಾರಿ ಮಹಲ್. ಸುಂದರ ಕಮಾನುಗಳುಳ್ಳ ಪ್ರವೇಶ ದ್ವಾರಗಳ [illegible] ಮುಂದೆ ಹಾಯ್ದು ಚಾಚುಪೀಠಗಳಿಗೆ ಇದು ಹೆಸರಾಗಿದೆ. ಈಗ ಅಲ್ಲಿ ಮಧ್ಯಪ್ರದೇಶದ ಪ್ರಾಚೀನ ವಸ್ತುಸಂಗ್ರಹಾಲಯವಿದೆ.

ಗಜದ್ವಾರವೆಂಬ ಹೆಬ್ಬಾಗಿಲಿನ ಬಳಿ ಮಾನಸಿಂಹನು ಕಟ್ಟಿಸಿರುವ ಮಾನ್ ಮಂದಿರ್ ಅರಮನೆ ಮತ್ತೊಂದು ಪ್ರಸಿದ್ಧ ಕಟ್ಟಡ. ಇದನ್ನು ವರ್ಣಚಿತ್ರದ ಅರಮನೆ ಎಂದೇ ಕರೆಯುತ್ತಾರೆ. ಇಲ್ಲಿರುವ ತಂಪಾದ ಎರಡು ನೆಲಮಾಳಿಗೆಗಳು ಮಾನಸಿಂಹನ ಬೇಸಿಗೆ ನಿವಾಸವಾಗಿತ್ತು.

ಜೈನಧರ್ಮಕ್ಕೆ ಸಂಬಂಧಿಸಿದ ಐದು ವಿಗ್ರಹಗಳು ಈ ಕೋಟೆಯಲ್ಲಿವೆ. ಇವುಗಳಲ್ಲಿ 57 ಅಡಿ ಎತ್ತರದ ಪ್ರಥಮ ತೀರ್ಥಂಕರ ಆದಿನಾಥನ ಪ್ರತಿಮೆ ಅತಿ ದೊಡ್ಡದು. ಎರಡು ಜೈನ ದೇವಾಲಯಗಳಿವೆ. ಕೋಟೆಯ ಹೊರಗೆ ಮಹಮದ್ ಗೌಸ್ ಎಂಬ ಸನ್ಯಾಸಿಯ ಸಮಾಧಿಯೂ ಅಕ್ಬರನ ಆಸ್ಥಾನ ರತ್ನಗಳಲ್ಲಿ ಒಬ್ಬನಾದ ಸಂಗೀತಗಾರ ತಾನ್‌ಸೇನನ ಸಮಾಧಿಯೂ ಇವೆ.

ಹಿಂದೆ ಗ್ವಾಲಿಯರನ್ನು ತೋಮಾರರೂ, ಮೊಘಲರೂ, ಮರಾಠರೂ ಆಳಿದರು. 1857ರಲ್ಲಿ ಝಾನ್ಸಿಯ ರಾಣಿ ಲಕ್ಷ್ಮೀಬಾಯಿಯ ನೇತೃತ್ವದಲ್ಲಿ ಗ್ವಾಲಿಯರ್ ಸ್ವಾತಂತ್ರ್ಯ ಸಂಗ್ರಾಮದ ಮುಖ್ಯ ಕೇಂದ್ರವಾಯಿತು. ಆವಳಿಗಾಗಿ ಕಟ್ಟಿದ ಸ್ಮಾರಕ ಗ್ವಾಲಿಯರ್ ನಿಲ್ದಾಣದ ಬಳಿ ಇದೆ.

1809ರಲ್ಲಿ ದೌಲತ್‌ರಾವ್ ಸಿಂಧ್ಯನ ಸೇನೆ ಗ್ವಾಲಿಯರ್ ಕೋಟೆಯ ದಕ್ಷಿಣಕ್ಕೆ ಬೀಡು ಬಿಟ್ಟಿತು. ಇಲ್ಲಿ ಹೊಸದಾಗಿ ಬೆಳೆದ ನಗರವನ್ನು 'ಲಷ್ಕರ್' ಎನ್ನುತ್ತಾರೆ. ಇದು ಕೂಡ ಗ್ವಾಲಿಯರ್ ನಗರಪ್ರದೇಶಕ್ಕೆ ಸೇರಿದೆ. ಹಿಂದೆ ಗ್ವಾಲಿಯರ್ ಮಧ್ಯ ಭಾರತದ ರಾಜಧಾನಿಯಾಗಿತ್ತು. ಇದು ಮುಂಬಯಿ –ದೆಹಲಿಗಳ ನಡುವಿನ ಒಂದು ಮುಖ್ಯ ರೈಲ್ವೆ ನಿಲ್ದಾಣ.

ವಸ್ತ್ರೋದ್ಯಮ, ಪಾದರಕ್ಷೆ, ರೇಷ್ಮೆ, ನೆಲಹಾಸು, ಬಿಸ್ಕತ್ತು, ಪ್ಲಾಸ್ಟಿಕ್, ರೇಯಾನ್, ಗಾಜು, ಬೆಂಕಿಕಡ್ಡಿ, ಉದ್ಯಮಗಳಿವೆ. ಆದರೆ ಗ್ವಾಲಿಯರ್‌ನ ಕುಂಭ ಪದಾರ್ಥಗಳು ಅಂತರರಾಷ್ಟ್ರೀಯ ಖ್ಯಾತಿ ಪಡೆದಿವೆ. ಗ್ವಾಲಿಯರ್‌ನ ಜನಸಂಖ್ಯೆ 4.06.140.

ನೋಡಿ : ರಾಜಸ್ಥಾನ

ಗಿದ್ದಾ ನೃತ್ಯ

"ನಮ್ಮ ಹಳ್ಳಿಗೂ ಬಾ, ಓ ಗಿದ್ದಾ ನೃತ್ಯ,
ಮತ್ತೆ ತೊರೆಯದಿರು ಹಿಂಬಾಗಿಲಿನಿಂದ ಈ ನಾಡ......"

—ಹೀಗೆ ಹಾಡುತ್ತ ಪಂಜಾಬಿನ ಹೆಂಗಳೆಯರು ವೃತ್ತಾಕಾರದಲ್ಲಿ ನಿಂತು ಹಿಂದಕ್ಕೆ ಮುಂದಕ್ಕೆ ತೂಗುತ್ತ, ಸುತ್ತಿಸುತ್ತಿ ಕುಣಿಯುತ್ತಾರೆ. ಭಾಂಗ್ರಾ ಪಂಜಾಬಿನ ಗಂಡಸರ ಜಾನಪದ ನೃತ್ಯವಾಗಿರುವಂತೆ 'ಗಿದ್ದಾ' ಪಂಜಾಬಿ ಸ್ತ್ರೀಯರಿಗೆ ಮೀಸಲಾದದ್ದು.

ಹೆಣ್ಣಿನ ಕುಸುರಿಯ ಲಂಗ, ರೇಷ್ಮೆಯ [illegible] ಆಭರಣಗಳು ಅವರ ಸರಳ ಚಲನೆಗೆ ಆಕರ್ಷಕ ಕಳೆಯನ್ನು ನೀಡುತ್ತವೆ.



ಗಿಡ್ಡಾ ನೃತ್ಯ . . . . .


[illegible]
ಕಳಚಿಕೊಂಡು ನಡುಭಾಗದಲ್ಲಿ ಸೇರುತ್ತಾರೆ; ಕೈಕೈಹಿಡಿದು ಕಾಲನ್ನು ಹತ್ತಿರ, ಹತ್ತಿರ ಸೇರಿಸಿ ಗರಗರನೆ ಸುತ್ತುತ್ತಾರೆ. ವೃತ್ತಾಕಾರದಲ್ಲಿದ್ದ ನರ್ತಕಿಯರು ಚಪ್ಪಾಳೆ ತಟ್ಟುತ್ತಾರೆ — ಇದು ಗಿಡ್ಡಾ ನೃತ್ಯದ ನೋಟ.

ಇದೊಂದು ಸಮೂಹ ನೃತ್ಯ.

ಗೀತ ಗೋವಿಂದ

ನೋಡಿ : ಜಯದೇವ—ಸಂಪುಟ ೫

ಗೀತೆ



ಅರ್ಜುನನಿಗೆ ಗೀತೋಪದೇಶ -ಗಂಧದ ಕೆತ್ತನೆ

ನೋಡಿ : ಭಗವದ್ಗೀತೆ—ಸಂಪುಟ ೧


ಗುಜರಾತ್

[illegible]

ಒಂದು ಕಾಲಕ್ಕೆ ಅಲೆಮಾರಿಗಳಾಗಿದ್ದ ಈ ಜನ ಉತ್ತರ ಭಾರತಕ್ಕೆ ಬಂದರು. ಅಲ್ಲಿಂದ ಒಂದು ತಂಡ ಸುಮಾರು 700ರಲ್ಲಿ ಪಶ್ಚಿಮ ಕರಾವಳೀ ಪ್ರದೇಶ ತಲಪಿ ಅಲ್ಲಿ ನೆಲೆಸಿತು.

ಪ್ರಪಂಚದಲ್ಲಿ ಸಿಂಹಗಳು ಸ್ವಾಭಾವಿಕವಾಗಿ ವಾಸಿಸುವ ಎರಡು ಪ್ರದೇಶಗಳಲ್ಲಿ ಆಫ್ರಿಕ ಒಂದನೆಯದು, ಗುಜರಾತಿನ ಗಿರ್ ಅರಣ್ಯ ಎರಡನೆಯದು. ಇಲ್ಲಿನ ಸಿಂಹಗಳನ್ನು ಏಷ್ಯದ ಸಿಂಹಗಳು ಎಂದೇ ಕರೆಯುತ್ತಾರೆ. ಫ್ಲೆಮಿಂಗೊ ಎಂಬ ನೀಳಕತ್ತು, ಉದ್ದ ಕಾಲಿನ ಹಕ್ಕಿಗಳ ಅತಿ ದೊಡ್ಡ ಆವಾಸವಾದ 'ಫ್ಲೆಮಿಂಗೊ ನಗರ' ಗುಜರಾತಿನ ಕಚ್ ಪ್ರದೇಶದಲ್ಲಿದೆ. ಗುಜರಾತಿನ ಲೊಥಲ್ ಪ್ರದೇಶದಲ್ಲಿ ನಡೆದ ಭೂಶೋಧನೆಗಳಿಂದ ಅಲ್ಲಿ ಹರಪ್ಪಾ ನಾಗರಿಕತೆ ಹರಡಿದ್ದಿತೆಂಬುದು ಸ್ಪಷ್ಟವಾಗಿದೆ. ಗಾಂಧೀಜೀ ಹುಟ್ಟಿದ ಊರು -ಪೋರ್‌ಬಂದರ್– ಗುಜರಾತಿನಲ್ಲಿದೆ.

1960ರಲ್ಲಿ ಮುಂಬಯಿ ರಾಜ್ಯ ವಿಭಜನೆಯಾದಾಗ ಗುಜರಾತ್ ರಾಜ್ಯ ಅಸ್ತಿತ್ವಕ್ಕೆ ಬಂತು. ಬರೋಡ ಮುಂತಾದ ಗುಜರಾತಿ ಸಂಸ್ಥಾನಗಳನ್ನೊಳಗೊಂಡಿದ್ದ ಸೌರಾಷ್ಟ್ರ ರಾಜ್ಯ ಆ ಹೊತ್ತಿಗಾಗಲೇ ರೂಪುಗೊಂಡಿದ್ದು, ಅದನ್ನು ಸಹಾ ಅನಂತರ ಗುಜರಾತ್ ರಾಜ್ಯಕ್ಕೆ ಸೇರಿಸಲಾಯಿತು. ಈ ರಾಜ್ಯದ ಮೇರೆಗಳು :



ಅರಬಿ ಸಮುದ್ರ, ಸಿಂಧ್ (ಪಾಕಿಸ್ತಾನ), ರಾಜಸ್ಥಾನ, ಮಧ್ಯಪ್ರದೇಶ, ಮಹಾರಾಷ್ಟ್ರ. ಗುಜರಾತ್ ಪ್ರದೇಶದಲ್ಲಿರುವ ದಾದ್ರ, ನಗರ ಹವೇಲಿ, ದೀವ್, ದಮಾನ್‌ಗಳು ಕೇಂದ್ರಾಡಳಿತಕ್ಕೆ ಒಳಪಟ್ಟಿವೆ.

ಗುಜರಾತಿನ ಮೇಲ್ಮೈ ಪ್ರದೇಶ ಮೂರು ಸ್ಪಷ್ಟ ವಿಂಗಡಣೆಗೆ ಒಳಪಡುತ್ತದೆ. ಒಂದು, ಉತ್ತರಕ್ಕಿರುವ ಜೌಗುಪ್ರದೇಶ ಕಚ್. ಎರಡನೆಯದು, ಕಾಥೇವಾಡ ಪರ್ಯಾಯ ದ್ವೀಪಪ್ರದೇಶ. ಗಿರ್ ಅರಣ್ಯ ಇರುವುದು ಇಲ್ಲಿ. ಮೂರನೆಯದು, ಫಲವತ್ತಾದ ಗುಜರಾತಿನ ಪ್ರಧಾನ ಭೂಭಾಗ.

ಗುಜರಾತಿನಲ್ಲಿ ಹರಿಯುವ ಮುಖ್ಯ ನದಿಗಳು : ಸಾಬರಮತಿ, ಮಾಹಿ, ನರ್ಮದಾ ಹಾಗೂ ತಪತಿ. ಗುಜರಾತಿನಲ್ಲಿ ನೀರಿನ ಅಭಾವವಿದೆ. ಮಳೆ ಕಡಮೆ. ಚಳಿಗಾಲದಲ್ಲಿ ಬಹಳ ಚಳಿ. ಬೇಸಿಗೆಯಲ್ಲಿ ವಿಪರೀತ ಸೆಕೆ.

ಇಲ್ಲಿನ ಮುಖ್ಯ ಬೆಳೆಗಳು ಅಕ್ಕಿ, ಭತ್ತ, ಜೋಳ, ಗೋಧಿ. ಹತ್ತಿ, ಕಬ್ಬು, ಹೊಗೆಸೊಪ್ಪು, ಕಡಲೆಕಾಯಿ, ಎಣ್ಣೆಬೀಜಗಳು, ದ್ವಿದಳಧಾನ್ಯಗಳು ಮುಖ್ಯ ವಾಣಿಜ್ಯ ಬೆಳೆಗಳು. ಬಹುಜನರಿಗೆ ಬೇಸಾಯವೇ ಮುಖ್ಯ ವೃತ್ತಿ. ನಮ್ಮ ರಾಷ್ಟ್ರದಲ್ಲಿ ಹತ್ತಿ ಬೆಳೆಯುವ ಭೂಮಿಯ ಐದರಲ್ಲಿ ಒಂದು ಭಾಗ ಗುಜರಾತಿನಲ್ಲಿದೆ. ರಾಜ್ಯದ ಅರಣ್ಯ ಪ್ರದೇಶದಲ್ಲಿ ತೇಗ, ಬೊಂಬು, ಗಂಧದ ಮರಗಳು ದೊರೆಯುತ್ತವೆ.

ಶ್ರೇಷ್ಠ ಸುಣ್ಣಕಲ್ಲು, ಬಾಕ್ಸೈಟ್, ಜಿಪ್ಸಮ್, ಪಿಂಗಾಣಿ ಜೇಡಿ, ಕ್ಯಾಲ್ಸೈಟ್, ಮ್ಯಾಂಗನೀಸ್, ಕ್ವಾರ್ಟ್ಸ್ —ರಾಜ್ಯದ ಖನಿಜಸಂಪತ್ತು. [illegible]

ನಾಶವನ್ನು [illegible]. ಗುಜರಾತಿನಲ್ಲಿ ವಸ್ತ್ರೋದ್ಯಮ ಪ್ರಮುಖ ವಾದದ್ದು. ಸೂರತ್, ಬರೋಚ್, ಬರೋಡ, ಅಹಮದಾಬಾದ್ ಈ ಉದ್ಯಮದ ಕೇಂದ್ರಗಳು. ಉಪ್ಪು, ಸಿಮೆಂಟ್, ಔಷಧ ಪದಾರ್ಥ ಗಳು, ರಂಗು ಪದಾರ್ಥ, ಕಾಂಥ ಪದಾರ್ಥ, ವನಸ್ಪತಿ, ರಾಸಾಯನಿಕಗಳು, [illegible] ಮತ್ತು [illegible]. ಎಣ್ಣೆ ಗಿರಣಿ, ಕೈಮಗ್ಗ, ಹಾಲು ಉತ್ಪಾದನೆ, ಹತ್ತಿ ಗಿರಣಿ ಯಂತ್ರಗಳ ಬಿಡಿಭಾಗ ತಯಾರಿ ಮುಂತಾದ ಇನ್ನೂ ಅನೇಕ ಕೈಗಾರಿಕೆಗಳಿವೆ. ವಿದ್ಯುತ್ ಉತ್ಪಾದನೆ ಹಾಗೂ ನೀರಾವರಿಯ ಬಗೆಗೆ ಅನೇಕ ಯೋಜನೆಗಳನ್ನು ಕೈಗೊಳ್ಳಲಾಗಿದೆ. ಬಾವಿ ನೀರಿನ ನೀರಾವರಿ ವ್ಯವಸಾಯಕ್ಕೆ ಗುಜರಾತ್ ಸುಪ್ರಸಿದ್ಧವಾಗಿದೆ. ಇಲ್ಲಿನ ಬಹುಪಾಲು ನೀರಾವರಿ ವ್ಯವಸ್ಥೆ ಈ ಬಗೆಯದು.

ಕ್ರಿ. ಪೂ. 319ರಲ್ಲಿ ಸೌರಾಷ್ಟ್ರ ಮೌರ್ಯ ಸಾಮ್ರಾಜ್ಯಕ್ಕೆ ಸೇರಿತ್ತು. ಮುಂದೆ ಶಕರು, ಗುಪ್ತರು, ವಲಭಿಗಳು ಆಳಿದರು.

8ನೆಯ ಶತಮಾನದಲ್ಲಿ ಗುಜರಾತಿನಲ್ಲಿ ನಡೆದ ಒಂದು ಮುಖ್ಯ ಘಟನೆ, ಪಾರಸೀಕರ ಪ್ರವೇಶ. ತಮ್ಮ ಧರ್ಮಕ್ಕೆ ಪರ್ಷಿಯಾದಲ್ಲಿ ಆಸರೆ ತಪ್ಪಿದ್ದರಿಂದ 760ರ ಸುಮಾರಿನಲ್ಲಿ ಅವರು ಗುಜರಾತಿಗೆ ಬಂದು, ಸಾಂಜನ್ ಎಂಬ ರಾಜನ ಆಶ್ರಯ ಪಡೆದರು.

ಚಾಲುಕ್ಯ ಮನೆತನದ ಒಂದು ಶಾಖೆ 10ರಿಂದ 13ನೆಯ ಶತಮಾನದ ವರೆಗೆ ಗುಜರಾತನ್ನು ಆಳಿತು. 1025ರಲ್ಲಿ ಘಜ್ನಿ ಮಹಮದ್ ಸುಪ್ರಸಿದ್ಧ ಸಂಪದ್ಯುಕ್ತ ಸೋಮನಾಥ ದೇವಾಲಯವನ್ನು ಕೊಳ್ಳೆಹೊಡೆದ. ಅನಂತರ ಕೂಡ ಈ ದೇವಾಲಯ ಹಲವು ಬಾರಿ ದಾಳಿಗೆ ಗುರಿಯಾಯಿತು. ಚಾಲುಕ್ಯರಾದ ಮೇಲೆ ವಾಘೇಲರೂ ಮೊಘಲರೂ ಆಳಿದರು. ಮೊಘಲರ ಕಾಲದಲ್ಲಿ ಸೂರತ್ ಮುಖ್ಯ ಬಂದರಾಗಿದ್ದಿತು.

ಮೊಘಲರ ಅನಂತರ ಮರಾಠರು ಬಂದರು. ಗಾಯಕವಾಡರು ಆಳಿದರು. ಇವರ ಮನೆತನವೇ ಮುಂದೆ ಬರೋಡ ರಾಜರ ಮನೆತನವಾಯಿತು.

1612ರಲ್ಲಿ ಬ್ರಿಟಿಷರು ಭಾರತದಲ್ಲಿ ತಮ್ಮ ವಾಣಿಜ್ಯ ವ್ಯವಸ್ಥೆಗೆ ಸೂರತ್‌ನಲ್ಲಿ ಮೊತ್ತಮೊದಲ ಅಸ್ತಿವಾರ ಹಾಕಿದರು. 1818ರ ವೇಳೆಗೆ ಗುಜರಾತಿನ ಬಹುಭಾಗ ಅವರಿಗೆ ಸೇರಿತು. 19ನೆಯ ಶತಮಾನದಲ್ಲಿ ಅಹಮದಾಬಾದ್ ಮುಖ್ಯ ಹತ್ತಿ ಪೇಟೆಯಾಯಿತು.

1960 ಮೇ ಒಂದರಂದು ಗುಜರಾತ್ ಪ್ರತ್ಯೇಕ ರಾಜ್ಯವಾದಾಗ ಅಹಮದಾಬಾದ್ ತಾತ್ಕಾಲಿಕ ರಾಜಧಾನಿಯಾಗಿತ್ತು. ಅಲ್ಲಿಂದ 15 ಮೈಲು ದೂರದಲ್ಲಿ ರೂಪುಗೊಂಡ ಗಾಂಧೀನಗರ ಈಗ ಗುಜರಾತಿನ ರಾಜಧಾನಿಯಾಗಿದೆ.

ರಾಜ್ಯದ ಮುಖ್ಯ ಬಂದರು ಕಾಂಡ್ಲಾ. ಇದಲ್ಲದೆ 10 ಮಧ್ಯಮ ದರ್ಜೆಯ 40 ಚಿಕ್ಕ ಬಂದರುಗಳು ಗುಜರಾತ್ ರಾಜ್ಯದಲ್ಲಿವೆ. ರಾಜ್ಯದಲ್ಲಿ ಒಟ್ಟು ನಾಲ್ಕು ವಿಶ್ವವಿದ್ಯಾನಿಲಯಗಳಿವೆ.

ರಾಜ್ಯದ ಜನರ ಉಡುಗೆ ತೊಡುಗೆಗಳು ವಿಶಿಷ್ಟವಾಗಿವೆ. ಗುಜರಾತಿ ಮಹಿಳೆಯರ ಗರ್ಬಾ ನೃತ್ಯ ಹೆಸರಾದದ್ದು. ಸಾಧಾರಣವಾಗಿ ಗುಜರಾತಿನ ಎಲ್ಲ ಮನೆಗಳಲ್ಲೂ ಉಯ್ಯಾಲೆ ಇದೆ.

ಜೈನಸಂಸ್ಕೃತಿ ಇಲ್ಲಿ ಪ್ರಾಚೀನವಾದದ್ದು. ಬಂಧಿನಿ ಎಂಬ ಕುಶಲ [illegible]. [illegible]. [illegible] ಈ ಜನರ ಕೈ ಕಸಬುಗಳಲ್ಲಿ ಮುಖ್ಯವಾದುವು.

[illegible] ಗುಜರಾತಿನಲ್ಲಿದೆ [illegible].

ಸೋಪಾನಗಳಿರುವ ಬಾವಿ, ಕಂಕಾರಿಯಾ ಸರೋವರ, ರಾಣಿ ರೂಪಮತಿಯ ಗೋರಿ, ಬರೋಡದ ಅರಮನೆಗಳು, ಜುನಾಘಡದ ಕೋಟೆ, ಭಾವನಗರ, ರಾಜಕೋಟೆ, ಸೋಮನಾಥ ದೇವಾಲಯ, ಗಿರ್ ಅರಣ್ಯ, ಮೊಧೇರಾದ ಸೂರ್ಯದೇವಾಲಯ ಮುಂತಾದುವು ಇಲ್ಲಿನ ಪ್ರೇಕ್ಷಣೀಯ ಸ್ಥಳಗಳು.

ಕಂಪಿಸುವ ಗೋಪುರಗಳುಳ್ಳ ಅಹಮದಾಬಾದಿನ ಸಿದಿಬಷೀರ್ ಮಸೀದಿ ಆಕರ್ಷಕವಾದದ್ದು. ಪ್ರತಿ ಗೋಪುರಕ್ಕೂ 3 ಅಂತಸ್ತುಗಳೂ ಕಲ್ಲಿನಲ್ಲಿ ರಚಿಸಿದ ಮಹಮಂಟಪಗಳೂ ಇವೆ. ಒಂದು ಗೋಪುರದಲ್ಲಿ ಕಂಪನ ಉಂಟುಮಾಡಿದರೆ ಉಳಿದ ಗೋಪುರದಲ್ಲೂ ಕಂಪನ ಉಂಟಾಗುತ್ತದೆ. ಹಿಂದೂ ಹಾಗೂ ಜೈನ ದೇವಾಲಯಗಳಿಗೆ ಗಿರಿನಾರ್ ಪ್ರಸಿದ್ಧವಾಗಿದೆ. ಶತ್ರುಂಜಯಗಿರಿ, ಜೈನರ ಪವಿತ್ರ ಕ್ಷೇತ್ರ. ಇಲ್ಲಿ 863 ದೇವಾಲಯಗಳಿವೆ.

ಗುಜರಾತ್ ಭಾರತದ ಪಶ್ಚಿಮ ಕರಾವಳಿಯಲ್ಲಿದೆ. 1,000 ಮೈಲುಗಳ ಸಮುದ್ರತೀರ ಗುಜರಾತಿಗಿದೆ.

ನೋಡಿ : ಅಂಕಲೇಶ್ವರ ; ಅಹಮದಾಬಾದ್ ; ಕ್ಯಾಂಬೆ ; ಗಾಂಧೀನಗರ

ಗುಜರಾತೀ ಭಾಷೆ, ಸಾಹಿತ್ಯ

ಗುಜರಾತ್ ರಾಜ್ಯದ ಒಂದು ಭಾಗವಾದ ಕಚ್ ಪ್ರದೇಶದ ಜನರು 'ಕಚ್ಚಿ' ಒಳನುಡಿ ಮಾತನಾಡಿದರೂ, ಬಹುಮಟ್ಟಿನ ಜನರು ಆಡುವುದು ಗುಜರಾತೀ ಭಾಷೆ. ಬರೆವಣಿಗೆಗೂ ಇತರ ವ್ಯವಹಾರಕ್ಕೂ ಕಚ್ ಪ್ರದೇಶದವರೂ ಗುಜರಾತಿಯನ್ನೇ ಬಳಸುತ್ತಾರೆ.

ಭಾರತಾರ್ಯ ಭಾಷಾ ಕುಟುಂಬಕ್ಕೆ ಸೇರಿದ ಗುಜರಾತೀ ಭಾಷೆಯ ಮೂಲ 1250ಕ್ಕೂ ಹಿಂದಕ್ಕೆ ಹೋಗುತ್ತದೆ ಈ ಕಾಲದಿಂದ ಗುಜರಾತೀ ಈ ಪ್ರದೇಶದ ಭಾಷೆಯಾಯಿತು. ಅಲ್ಲಿಂದ ಮುಂದೆ ಗುಜರಾತೀ ಕಾಲ ಕಾಲಕ್ಕೆ ತನ್ನ ರೂಪವನ್ನು ಬದಲಿಸಿಕೊಳ್ಳುತ್ತಲೇ ಇದೆ.

ಗುಜರಾತೀ ಸಾಹಿತ್ಯವನ್ನು ಸಾಮಾನ್ಯವಾಗಿ ಮೂರು ಹಂತಗಳನ್ನಾಗಿ ಮಾಡಿ ಅಭ್ಯಸಿಸಬಹುದು. 1250ರಿಂದ 1850ರ ವರೆಗಿನ ಮೊದಲ ಹಂತ : 1850ರಿಂದ 1947ರ ವರೆಗಿನ ಆಧುನಿಕ ಹಂತ ; 1947ರಿಂದ ಇಂದಿನ ವರೆಗಿನ ಸಮಕಾಲೀನ ಸಾಹಿತ್ಯ. ಈ ಮೂರೂ ಹಂತಗಳಲ್ಲೂ ಅಮೂಲ್ಯ ಕೃತಿಗಳು ಸೃಷ್ಟಿಯಾಗಿವೆ.

ಗುಜರಾತೀ ಸಾಹಿತ್ಯದ ಮೊದಲ ಹಂತಗಳಲ್ಲಿ ಜೈನ ಸನ್ಯಾಸಿಗಳು ಹಾಗೂ ವಿದ್ವಾಂಸರು ಮಹತ್ವಪೂರ್ಣ ಕೊಡುಗೆ ನೀಡಿದರು. ಆದರೆ ಈ ಭಾಷೆಯ ಪ್ರಥಮ ಮಹಾಕವಿ ನರಸಿ ಮೆಹತಾ (1416–80). ಇವನು ಅನೇಕ ತಾತ್ತ್ವಿಕ ಹಾಗೂ ಭಕ್ತಿಕವನಗಳನ್ನು ರಚಿಸಿದ. ಇವನ ಜೀವನದ ಸುತ್ತ ಹಲವು ಪವಾಡಗಳನ್ನು ಹೆಣೆದಿದ್ದರೂ ಇವನು ಮಹಾಕವಿಗಳಲ್ಲೊಬ್ಬ.

ಮೆಹತಾ ಅನಂತರ ಬಂದ ಮೀರಾಬಾಯಿ (1499–1547) ಭಾರತದಾದ್ಯಂತ ಖ್ಯಾತಳಾದ ಕವಯಿತ್ರಿ. ಪ್ರಾಚೀನ ಪಶ್ಚಿಮ ರಾಜಸ್ಥಾನಿ ಎಂದೂ ಕರೆಯಲ್ಪಡುತ್ತಿದ್ದ ಪ್ರಾಚೀನ ಗುಜರಾತೀ ಭಾಷೆಯಲ್ಲಿ ಈಕೆ ಕಾವ್ಯರಚನೆ ಮಾಡಿದಳು. ಈಕೆ ತಮ್ಮ ಕವಯಿತ್ರಿ ಎಂದು ಹಿಂದೀ ಮತ್ತು ಗುಜರಾತಿನವರಿಬ್ಬರೂ ಹೇಳಿಕೊಳ್ಳುತ್ತಾರೆ.

ತತ್ತ್ವಜ್ಞಾನಿ ಅಖೋ (1591–1656) ತನ್ನನ್ನು ಕವಿ ಎಂದು ಕರೆಸಿಕೊಳ್ಳಲು ಇಷ್ಟಪಡದಿದ್ದರೂ ಮಹಾಕಾವ್ಯಗಳನ್ನು ರಚಿಸಿದ. ಗುಜರಾತಿನ ಅತ್ಯಂತ ಶ್ರೇಷ್ಠ ಕವಿ ಪ್ರೇಮಾನಂದ್ (1636–1734). ಈತ ಪುರಾಣಗಳ ಘಟನೆಗಳನ್ನು ಚಿತ್ರಿಸುವ ಆಖ್ಯಾನಗಳನ್ನು ರಚಿಸಿದ. ಈ ಕೃತಿಗಳಲ್ಲಿ

ಬರುವ ಪಾತ್ರಗಳು ಪೌರಾಣಿಕವಾದರೂ ಗುಜರಾತಿಗಳ ಲಕ್ಷಣಗಳೂ ಅವುಗಳಲ್ಲಿ ಸೇರಿವೆ. ಶಾಮಲ್ (1700–1765) ಲೌಕಿಕ ಕಥನ ಕವನಗಳನ್ನು ರಚಿಸಿದ ಗಮನಾರ್ಹ ಕವಿ. ಧರ್ಮ ತತ್ತ್ವಜ್ಞಾನ ಮತ್ತು ಭಕ್ತಿಗಳನ್ನು ಬೆರಸಿ ಅತ್ಯಂತ ಆಹ್ಲಾದಕರವಾದ ಭಾವಗೀತೆಗಳನ್ನು ರಚಿಸಿದ ಕವಿ ದಯಾರಾಮ್ (1777–1852).

ಕವಿ ದಯಾರಾಮನ ಬದುಕಿನ ಕೊನೆಗೆ ಹೊಸ ಯುಗ ರೂಪುಗೊಳ್ಳುತ್ತಿತ್ತು. ಭಾರತದಲ್ಲಿ ಬ್ರಿಟಿಷ್ ಆಡಳಿತ ಸ್ಥಾಪಿತವಾಗಿ ಅದು ತನ್ನೊಂದಿಗೆ ಹೊಸ ಜೀವನ ವಿಧಾನ, ಚಿಂತನೆ, ಮೌಲ್ಯಗಳನ್ನು ತಂದಿತ್ತು. ಈ ಹೊಸ ಜೀವನದ ಸತ್ವವನ್ನು ಸಾಹಿತ್ಯದಲ್ಲಿ ತಮ್ಮದೇ ಆದ ವೈಶಿಷ್ಟ್ಯಗಳೊಂದಿಗೆ ತಂದ ಇಬ್ಬರು ಕವಿಗಳು — 'ನರ್ಮದ್' ಎಂದು ಜನಪ್ರಿಯರಾಗಿದ್ದ ನರ್ಮದಾಶಂಕರ್ ಲಾಲ್‌ಶಂಕರ್ ದವೆ (1833–1886) ಮತ್ತು ದಲಪತ್‌ರಾಮ್ ಡಾಹ್ಯಾಭಾಯ್ (1820–1898). ಇವರು ವ್ಯಕ್ತಿನಿಷ್ಠ ಭಾವಗೀತೆಗಳನ್ನು ರಚಿಸಿದರು. ಗುಜರಾತಿನ ಸಾಹಿತ್ಯದಲ್ಲಿ ಹೊಸ ಯುಗ ಪ್ರಾರಂಭಿಸಿದರು. ಈ ಹೊಸ ಯುಗ 1850ರಿಂದ 1947ರ ವರೆಗೆ ಮುಂದುವರಿಯಿತು. ಅತ್ಯಂತ ವೈಶಿಷ್ಟ್ಯಪೂರ್ಣವೆನಿಸಿದ ಆತ್ಮಕಥೆಯನ್ನು ರಚಿಸಿದ ನರ್ಮದ್ ಗುಜರಾತೀ ಗದ್ಯ ಸಾಹಿತ್ಯದ ಮೂಲಪುರುಷ. ಇವರಿಬ್ಬರು ರಚಿಸಿದ ಕವನಗಳು ಮಹತ್ವಪೂರ್ಣ ಎನ್ನಲಾಗದಿದ್ದರೂ ಸಾಹಿತ್ಯದಲ್ಲಿ ಹೊಸತನ್ನು ತಂದುವು.

1858ರಲ್ಲಿ ಮುಂಬಯಿ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಿದಾಗ ಹೊಸ ಪ್ರತಿಭಾವಂತ ಲೇಖಕರಿಗೆ ನವಚೇತನ ನೀಡಿದಂತಾಯಿತು. ಗುಜರಾತಿಯ ಅತ್ಯಂತ ಮಹತ್ವಪೂರ್ಣ ಕಾದಂಬರಿ 'ಸರಸ್ವತೀಚಂದ್ರ' ರಚಿಸಿದ ಗೋವರ್ಧನ್‌ರಾಮ್ ಮಾಧವರಾಮ್ ತ್ರಿಪಾಠಿ (1855–1907), ಕ್ರಾಂತಿಕಾರಿ ಕವನಗಳ ಸಂಕಲನ 'ಕುಸುಮ್ಮಾಳಾ'ದ ಕರ್ತೃ ನರಸಿಂಹರಾವ್ ಡಿವೇಟಿಯ(1855–1937), ಮಹತ್ವಪೂರ್ಣ ಕವಿಗಳಾದ ಕಾಂತ್ (1867–1933), ಬಲವಂತರಾಯ್ ಠಾಕೂರ್ (1869–1950). ಕಲಾಪಿ (1874–1900) ಮತ್ತು ನಾನಾಲಾಲ್ (1877–1946). ಸಂಸ್ಕೃತ ವಿದ್ವಾಂಸರೂ ತತ್ತ್ವಜ್ಞಾನಿಗಳೂ ಆಗಿದ್ದ ಮಣಿಲಾಲ್ ಲಾಭೂಭಾಯ್ (1858–1898) ಮತ್ತು ಆನಂದ ಶಂಕರ್ ಬಾಪೂಭಾಯ್ ಧ್ರುವ (1869–1942)–ಈ ಕಾಲದ ಮಹತ್ವದ ಲೇಖಕರು. ಇವರು ಗುಜರಾತೀ ಸಾಹಿತ್ಯಕ್ಕೆ ಆಧುನಿಕ ಕಾವ್ಯ, ಸೊಗಸಾದ ಗದ್ಯ, ಮಹತ್ವಪೂರ್ಣ ಕಾದಂಬರಿ, ಕೆಲವು ತಾತ್ತ್ವಿಕ ಲೇಖನಗಳನ್ನು ಇತ್ತರಲ್ಲದೆ, ಸಣ್ಣಕಥೆಯ ಪ್ರಕಾರವನ್ನೂ ಆರಂಭಿಸಿದರು.

1915ರಲ್ಲಿ ಭಾರತದ ರಾಜಕೀಯ ಸಾಮಾಜಿಕ ಕ್ಷೇತ್ರಗಳಲ್ಲಿ ಪ್ರವೇಶಿಸಿದ ಮಹಾತ್ಮ ಗಾಂಧೀ (1869–1948) ಗುಜರಾತೀ ಸಾಹಿತ್ಯದಲ್ಲಿ ಕ್ರಾಂತಿ ಉಂಟು ಮಾಡಿದರು. ಇದೇ ಸಮಯದಲ್ಲಿ ಕೆ. ಎಂ. ಮುನ್ಷಿ (1887–1971) ತಮ್ಮ ಅದ್ಭುತ ಗದ್ಯ ಶೈಲಿಯಿಂದ ಸೃಷ್ಟ್ಯಾತ್ಮಕ ಸಾಹಿತ್ಯ ಪ್ರಕಾರದಲ್ಲಿ ಕ್ರಾಂತಿ ಉಂಟುಮಾಡಿದರು. ಮುನ್ಷಿ ಕೆಲವು ಕಾದಂಬರಿಗಳು ಹಾಗೂ ಇತರ ಸಾಹಿತ್ಯ ಪ್ರಕಾರಗಳನ್ನೂ ರಚಿಸಿದ್ದರು.

ಗಾಂಧೀಜಿಯ ಸುಲಲಿತ ಗದ್ಯಶೈಲಿ. ಅನಂತರ ಬಂದ ಅನೇಕ ಬರೆಹಗಾರರ ಮೇಲೆ ಗಾಢ ಪ್ರಭಾವ ಬೀರಿತು. ಎಂದೇ 1915ರಿಂದ 1947ರ ವರೆಗಿನ ಗುಜರಾತೀ ಸಾಹಿತ್ಯವನ್ನು ಗಾಂಧೀಯುಗ ಎಂದು ಗುರುತಿಸುವುದುಂಟು. ಮಹಾದೇವ ದೇಸಾಯಿ (1892–1942), ಕಿಶೋರ್‌ಲಾಲ್ ಮಶ್ರುವಾಲಾ (1890–1952), ಮತ್ತು ಪ್ರಮುಖ ಶಿಕ್ಷಣತಜ್ಞ ಹಾಗೂ ಬುದ್ಧಿಜೀವಿ ಕಾಕಾ ಕಾಲೇಲ್ಕರ್ (1885–) ಗಾಂಧೀ ಅನುಯಾಯಿಗಳಲ್ಲಿ ಪ್ರಮುಖರು. ಗಾಂಧೀ ಅನುಯಾಯಿಗಳಲ್ಲದಿದ್ದರೂ ಗಾಂಧೀಜಿಯಿಂದ ಪ್ರಭಾವಿತರಾದವರಲ್ಲಿ ಕಾದಂಬರಿಕಾರ ರಮಣಲಾಲ್ ವಿ. ದೇಸಾಯಿ (1892–1954) : ಕವಿ, ಕಾದಂಬರಿಕಾರ ಹಾಗೂ ಜಾನಪದತಜ್ಞ ಝವೇರ್ ಚಂದ್ ಮೇಘಾಣಿ ಮತ್ತು ಸಣ್ಣಕತೆಗಾರ ಹಾಗೂ ಖ್ಯಾತ ವಿಮರ್ಶಕ ರಾಮ್‌ನಾರಾಯಣ್ ವಿ. ಪಾಠಕ್ ಪ್ರಮುಖರು. ಇದೇ ಕಾಲಕ್ಕೆ ಸೇರಿದ ಆದರೆ ಗಾಂಧೀಜಿಯಿಂದ ನೇರವಾಗಿ ಪ್ರಭಾವಿತಗೊಳ್ಳದ ಲೇಖಕ 'ಧೂಮಕೇತು' (ಗೌರೀಶಂಕರ್ ಜಿ. ಜೋಷಿ 1892–1965) ಗುಜರಾತಿನ ಸಣ್ಣಕಥೆಯ ಆದ್ಯಪ್ರವರ್ತಕರಲ್ಲೊಬ್ಬರು. ಇವರು ಕೆಲವು ಕಾದಂಬರಿಗಳು ಹಾಗೂ ಗಮನಾರ್ಹ ಆತ್ಮಚರಿತ್ರೆ ರಚಿಸಿದ್ದಾರೆ.

ಈ ಯುಗದಲ್ಲಿ ಗುಜರಾತೀ ಸಾಹಿತ್ಯ ಹಲವು ಪ್ರಕಾರಗಳಲ್ಲಿ ಸಮೃದ್ಧವಾಗಿ ಬೆಳೆಯಿತು. ಉಮಾಶಂಕರ ಜೋಷಿ (1911–) ಹಾಗೂ ಸುಂದರಂ (ತ್ರಿಭುವನ್ ದಾಸ್ ಲುಹಾರ್ 1907–) ಅವರ ಸುಂದರ ಕಾವ್ಯ, ಸಣ್ಣಕತೆ ಮತ್ತು ಸೊಗಸಾದ ವಿಮರ್ಶೆ ಈ ಯುಗಕ್ಕೆ ಕಳೆ ಕಟ್ಟಿವೆ. ಸಿ.ಸಿ. ಮೆಹತಾ (ಜ1901) ಅವರ ನಾಟಕಗಳನ್ನೂ ಜ್ಯೋತೀಂದ್ರ ದವೆ (1901–) ಅವರ ಸೊಗಸಾದ ಹಾಸ್ಯವನ್ನೂ ಈ ಯುಗ ಕಂಡಿದೆ. ಗುಲಾಬ್‌ದಾಸ್ ಬ್ರೋಕರ್ (1909–) ಅವರ ಜನಪ್ರಿಯ ಸಣ್ಣಕತೆಗಳೂ ಪನ್ನಾಲಾಲ್ ಪಟೇಲ್ ಅವರ ಖ್ಯಾತ ಪ್ರಾದೇಶಿಕ ಕಾದಂಬರಿಗಳೂ ಈ ಯುಗದ ಫಲಗಳೇ. ಚುನಿಲಾಲ್ ಮಡಿಯ (1922–68) ಅವರ ಕಾದಂಬರಿ, ಪ್ರಾದೇಶಿಕ ವಸ್ತುಗಳ ಕಥೆಗಳು ; ಜಯಂತಿ ದಲಾಲ್ (1909–70) ಅವರ ಹಾಗೂ ಜಯಂತ್ ಖತ್ರಿ ಅವರ ಸಣ್ಣ ಕತೆಗಳು ; ಮನುಭಾಯಿ ಪಂಚೋಲಿ ದರ್ಶಕ್ ಅವರ ಕಾದಂಬರಿಗಳು ಈ ಕಾಲಕ್ಕೆ ಸೇರುತ್ತವೆ. ಈಶ್ವರ್ ಪೆಟ್ಲೀಕರ್ (1916–) ಇನ್ನೊಬ್ಬ ಖ್ಯಾತ ಕಾದಂಬರಿಕಾರ. ಎಂ. ಎಂ. ಝುವೇರಿ (1907–) ಮತ್ತು ಸುಂದರ್‌ಜಿ ಬೆಟಾಯ್ (1905–) ಗಮನಾರ್ಹ ಕವಿಗಳು. ಪಂಡಿತ್ ಸುಖ್‌ಲಾಲ್‌ಜಿ (1880–) ಈ ಯುಗದ ಅತ್ಯಂತ ಗಮನಾರ್ಹ ಚಿಂತಕ.

ಈ ಕಾಲದ ಸಾಕಷ್ಟು ಶಿಶು ಸಾಹಿತ್ಯವೂ ರಚಿತವಾಯಿತು. ಹಾಗೆಯೇ ಪಾಂಡಿತ್ಯಪೂರ್ಣ ಮತ್ತು ವಿಮರ್ಶಾತ್ಮಕ ಕೃತಿಗಳೂ ಬಂದುವು. ಒಟ್ಟಿನಲ್ಲಿ ಈ ಸಾಹಿತ್ಯಯುಗದಲ್ಲಿ ಅತ್ಯಂತ ಅಮೂಲ್ಯ ಕೃತಿಗಳು ಹುಟ್ಟಿವೆ. ಬಹುಮಟ್ಟಿನ ಸಾಹಿತ್ಯ ಮಾನವೀಯತಾಪರವಾಗಿದ್ದರೂ ಅನಂತರದ ಕೃತಿಗಳು ಮಾನವ ಸಮತಾವಾದದ ಹಾಗೂ ಬಂಡಾಯದ ಧೋರಣೆಗಳನ್ನು ವ್ಯಕ್ತಪಡಿಸಿವೆ.

1947ರ ಅನಂತರ ಅತ್ಯಂತ ಆಧುನಿಕ —ಸಮಕಾಲೀನ— ಸಾಹಿತ್ಯಯುಗ ಪ್ರಾರಂಭವಾಯಿತು. ಜನರು ಸ್ವಾತಂತ್ರ್ಯದ ಫಲಗಳ ಬಗೆಗೆ ಅಪಾರ ಆಸೆಗಳಿಟ್ಟುಕೊಂಡಿದ್ದು ಅವೆಲ್ಲ ವಿಫಲವಾದುವು. ನಿರಾಸೆ, ಭ್ರಮನಿರಸನಗಳ ವಾತಾವರಣ ಹುಟ್ಟಿಕೊಂಡಿತು. ಸಾಹಿತ್ಯದಲ್ಲಿ ಹೊಸ ಪ್ರಯೋಗ, ಹೊಸ ಚಿಂತನೆಗಳು ಬಂದುವು. ಸುರೇಶ್ ಜೋಷಿ (1921–) ಈ ಕಾಲದ ಕವಿ, ವಿಮರ್ಶಕ ಹಾಗೂ ಸಣ್ಣಕತೆಗಾರ. ಕಾದಂಬರಿ ಕ್ಷೇತ್ರದಲ್ಲಿ ಚಂದ್ರಕಾಂತ ಭಕ್ಷಿ (1932–) ಹಾಗೂ ಮಧುರಾಯ್ ಗಮನಾರ್ಹರು. ಶಿವಕುಮಾರ ಜೋಷಿ (1916–) ನಾಟಕಕಾರ ಹಾಗೂ ಜನಪ್ರಿಯ ಕಾದಂಬರಿಕಾರ. ಧೀರುಬೆನ್ ಪಟೇಲ್, ಕುಂದನಿಕಾ ಕಾಪಡಿಯಾ ಹಾಗೂ ಸರೋಜ್ ಪಾಠಕ್ ಗಮನಾರ್ಹ ಸ್ತ್ರೀ ಲೇಖಕಿಯರಾಗಿದ್ದಾರೆ.

[illegible] ಮತ್ತು [illegible] ಕಾದಂಬರಿಕಾರರು ಸಹ. ಹಾಸ್ಯ ಕಾವ್ಯ ಪರಂಪರೆಯನ್ನು ರಾಜೇಂದ್ರ ಶಾ (1913–) ಹಾಗೂ ನಿರಂಜನ್ ಭಗತ್ (1926–) ಪ್ರಾರಂಭಿಸಿದರು. ಪ್ರಾರಂಭದಲ್ಲಿ ಈ ಪರಂಪರೆಗೆ ಸೇರಿದ ಸುರೇಶ್ ದಲಾಲ್ (1932–) ಮತ್ತು ಹರೀಂದ್ರ ದವೆ (1930–) ಈಗ ಹಿಂದಿನ ಜನಾಂಗಕ್ಕೆ ಸೇರಿಹೋಗಿದ್ದಾರೆ. ಲಭಶಂಕರ್ ಥಾಕರ್, ರಮೇಶ್ ಪಾರೇಖ್, ಅನಿಲ್ ಜೋಶಿ ಮತ್ತು ಸಿತಾಂಶು ಯಶಶ್ಚಂದ್ರ ಹೊಸ ವರ್ಗದ ಕವಿಗಳು. ಕಿಶೋರ್ ಜಾಧವ್ ಗುಜರಾತಿ ಸಣ್ಣಕಥೆಗಳಲ್ಲಿ ಅತಿ ವಾಸ್ತವವಾದ ತಂದರು. ಇಂದಿನ ಸಾಹಿತ್ಯಕ ಚರ್ಚೆಗಳಲ್ಲಿ ಅಸ್ತಿತ್ವವಾದ ಅತಿವಾಸ್ತವವಾದ, ಪ್ರತಿಮಾವಾದ ಮೊದಲಾದ ವಾದಗಳು ಸಾಮಾನ್ಯವಾಗಿವೆ.

ನೋಡಿ : ಉಮಾಶಂಕರ ಜೋಶಿ ; ನರಸಿ ಮೆಹತಾ

ಗುರ್ಜರ ಪ್ರತಿಹಾರರು

ಗುರ್ಜರ ಜನಾಂಗಕ್ಕೆ ಸೇರಿದ ಹರಿಚಂದ್ರ 550ರ ಸುಮಾರಿಗೆ ಒಂದು ರಾಜ್ಯ ಸ್ಥಾಪಿಸಿ ತನ್ನ ನಾಲ್ಕು ಪುತ್ರರನ್ನು ನಾಲ್ಕು ಭಾಗಗಳ ಮಾಂಡಲಿಕರನ್ನಾಗಿ ನೇಮಿಸಿದ.

ಈ ಮಕ್ಕಳಲ್ಲಿ ನಾಲ್ಕನೆಯವನಾದ ದದ್ದನು ನಂದೀಪುರಿ (ನಾಂದೋಡ್) ಎಂಬ ರಾಜಧಾನಿಯಿಂದ ಆಳತೊಡಗಿ ಗುಜರಾತ್ ಶಾಖೆಯನ್ನು ಆರಂಭಿಸಿದ. ಮುಂದೆ 735ರಲ್ಲಿ ಅವಂತಿ (ಉಜ್ಜಯಿನಿ)ಯ ಪ್ರತಿಹಾರರು ಈ ಶಾಖೆಯ ಆಳ್ವಿಕೆಯನ್ನು ಕೊನೆಗಾಣಿಸಿದರು.

ಹರಿಚಂದ್ರನ ಮಗ ರಜ್ಜಿಲ ಮಾಂಡೋರ್ (ಮಾಂಡವ್ಯಪುರ)ದಲ್ಲಿ ಗುರ್ಜರ ಪ್ರತಿಹಾರರ ರಾಜಪುತಾನ ಶಾಖೆಯನ್ನು ಆರಂಭಿಸಿದ. ಮುಂದೆ ಅವರ ರಾಜಧಾನಿ ಮೇಡಂತಕ (ಈಗಿನ ಮೆರ್ತ)ಕ್ಕೆ ಸ್ಥಳಾಂತರಗೊಂಡಿತು. ಈ ವಂಶದ ತಾತ ಎಂಬಾತ ಬೌದ್ಧಧರ್ಮೀಯನಾಗಿದ್ದ. ಮುಂದೆ ವಿರಕ್ತನಾಗಿ ರಾಜ್ಯವನ್ನು ತನ್ನ ಸೋದರ ಭೋಜನಿಗೆ ಒಪ್ಪಿಸಿದ. ಅರಬರ ದಾಳಿಯಿಂದಾಗಿ ಈ ವಂಶ ಶೀಘ್ರವೇ ಕೊನೆಗಂಡಿತು.

ಸಮ್ರಾಟ ಪ್ರತಿಹಾರರೆಂದು ಪರಿಚಿತರಾದ ಗುರ್ಜರ ಪ್ರತಿಹಾರರು ಮಾಳವ ಶಾಖೆಯ ದೊರೆಗಳು. ಅವಂತಿ (ಉಜ್ಜಯಿನಿ)ಯಿಂದ ಆಳುತ್ತಿದ್ದರು. ಈ ಶಾಖೆಯ ದೊರೆ ನಾಗಭಟನೆಂಬುವನು ಎಂಟನೆಯ ಶತಮಾನದಲ್ಲಿ ಪ್ರಸಿದ್ಧಿಗೆ ಬಂದ. ರಾಜಪುತಾನದ ಪ್ರತಿಹಾರರ ನಾಶಕ್ಕೆ ಕಾರಣವಾದ ಅರಬರ ದಂಡಯಾತ್ರೆಯನ್ನು ಈತ ಯಶಸ್ವಿಯಾಗಿ ಎದುರಿಸಿದ. ಹರಿಚಂದ್ರನ ಮಕ್ಕಳಲ್ಲಿ ಒಬ್ಬಾತ ಈ ವಂಶದ ಮೂಲ ಪುರುಷನಿದ್ದಿರಬೇಕು. ಗುಜರಾತ್ ಮತ್ತು ರಾಜಪುತಾನದ ಗುರ್ಜರ ರಾಜ್ಯಗಳ ಮೇಲೆ ಸ್ವಾಮ್ಯವನ್ನು ನಾಗಭಟ ಸ್ಥಾಪಿಸಿದ.

ಈ ವಂಶದ ಭೋಜ (836–885) ಪ್ರತಿಹಾರರಲ್ಲಿ ಶ್ರೇಷ್ಠ ದೊರೆ. ಕನ್ನೌಜ್ ಇವನ ವಶವಾಯಿತು. ಬಂಗಾಳದ ಪಾಲರನ್ನೂ ಇವನು ಸೋಲಿಸಿದ. ಇವನ ರಾಜ್ಯವನ್ನು ಸಂದರ್ಶಿಸಿದ ಅರಬ್ ಪ್ರವಾಸಿ ಸುಲೇಮಾನ್, "ಈತನು ಘನವಂತ ದೊರೆ, ಅರಬರ ಶತ್ರು, ಒಳ್ಳೆಯ ಅಶ್ವದಳ ಉಳ್ಳವನು", ಎಂದಿದ್ದಾನೆ. ಮುಂದೆ ರಾಷ್ಟ್ರಕೂಟ, ಚಂದೆಲ್ಲ ಮತ್ತು ಚೌಹಾಣರ ಒತ್ತಡದಿಂದಾಗಿ ಹನ್ನೊಂದನೆಯ ಶತಮಾನದ ಆರಂಭದ ಹೊತ್ತಿಗೆ ಗುರ್ಜರ ಪ್ರತಿಹಾರರ ಅರಸೊತ್ತಿಗೆ ಅಳಿಯಿತು.

ಇವರ ರಾಜ್ಯದ ಬಹುಭಾಗವು ಪರಮಾರರ ವಶವಾಯಿತು. ಹರ್ಷನ ಅನಂತರ ಭಾರತದ ಕನ್ನೌಜ್ ಅಧಿರಾಜತ್ವದ ಪೀಠಸ್ಥಾನವಾಗಿತ್ತು. ಅದರ ಸ್ವಾಮಿತ್ವಕ್ಕಾಗಿ ಪಾಲರ ಮತ್ತು ರಾಷ್ಟ್ರಕೂಟರ ಜೊತೆ ಸೆಣಸಿದ ಪ್ರತಿಹಾರರು ಒಂದು ಶತಮಾನದ ಕಾಲ (750—850) ವಿಶಾಲ ಸಾಮ್ರಾಜ್ಯವನ್ನು ಆಳಿದರು. ರಾಜಶೇಖರ, ಕ್ಷೇಮೀಶ್ವರ ಮುಂತಾದ ಸಂಸ್ಕೃತ ವಿದ್ವಾಂಸರು ಇವರ ಆಸ್ಥಾನದಲ್ಲಿದ್ದರು. ಅರಬರ ದಂಡಯಾತ್ರೆಯಿಂದ ಭಾರತವನ್ನು ರಕ್ಷಿಸಿದ ಕೀರ್ತಿ ಈ ಸಾಮ್ರಾಜ್ಯಕ್ಕೆ ಸಲ್ಲುತ್ತದೆ.

ಗುದ್ಲೆಪ್ಪ ಹಳ್ಳಿಕೇರಿ


ಭಾರತ ಮತ್ತು ಕರ್ನಾಟಕದ ಶ್ರೇಯಸ್ಸಿಗಾಗಿ ಅನುಪಮ ಸೇವೆ ಸಲ್ಲಿಸಿದ ನಾಯಕರು ಹಳ್ಳಿಕೇರಿ ಗುದ್ಲೆಪ್ಪ. ರಾಷ್ಟ್ರೀಯ ಹೋರಾಟದಲ್ಲಿ ಅವರು ಮುಂಚೂಣಿಯಲ್ಲಿ ಭಾಗವಹಿಸಿದವರು.

ವಿದ್ಯಾರ್ಥಿ ದೆಸೆಯಲ್ಲಿಯೇ ಗಾಂಧೀಜೀ ಕರೆಯ ಮೇರೆಗೆ ಕಾಲೇಜ್ ತೊರೆದರು. ದಂಡೀಯಾತ್ರೆಯಲ್ಲಿ ಕರ್ನಾಟಕದ ಸತ್ಯಾಗ್ರಹಿ ತಂಡದ ನಾಯಕರಾಗಿ ಪಾಲ್ಗೊಂಡರು. ಬಾಗಲಕೋಟೆಯಲ್ಲಿ ಕರ್ನಾಟಕ ರಾಜಕೀಯ ಪರಿಷತ್ತಿನ ಸಂಘರ್ಷದಲ್ಲಿ ಇವರು ಬಂಧಿತರಾದರು. ತಮ್ಮ 25ನೆಯ ವಯಸ್ಸಿನಲ್ಲಿ, 1931ರಲ್ಲಿ, ಧಾರವಾಡ ಜಿಲ್ಲಾ ಕಾಂಗ್ರೆಸ್ ಸಮಿತಿಯ ಪ್ರಧಾನ ಕಾರ್ಯದರ್ಶಿಯಾದರು. ಮುಂದೆ 1946ರಿಂದ 14 ವರ್ಷ ಕಾಲ ಈ ಸಮಿತಿಯ ಅಧ್ಯಕ್ಷರಾಗಿದ್ದರು. 1940ರಲ್ಲಿ ವೈಯಕ್ತಿಕ ಸತ್ಯಾಗ್ರಹದಲ್ಲಿ ಭಾಗವಹಿಸಿದ್ದರು. 1942ರಲ್ಲಿ ಚಲೇಜಾವ್ ಚಳುವಳಿ ಪ್ರಾರಂಭವಾದಾಗ ಭಾರತ ಸಂರಕ್ಷಣಾ ಶಾಸನದ ಮೇರೆಗೆ ಬಂಧಿತರಾದರು.

1952ರಲ್ಲಿ ಇವರು ಮುಂಬಯಿ ವಿಧಾನಸಭಾ ಸದಸ್ಯರಾಗಿದ್ದರು. ಆಗ ಚುನಾವಣೆಯಲ್ಲಿ ಪರಾಭವಹೊಂದಿದ ಮೊರಾರಜಿಯವರನ್ನು ಮುಖ್ಯಮಂತ್ರಿಯಾಗಿಸಲು ಯತ್ನ ನಡೆದಾಗ, ಇವರು ಈ ರೀತಿ ಮಾಡುವುದು ಸರಿಯಲ್ಲವೆಂದು ದಿಟ್ಟತನದಿಂದ ಹೇಳಿದರು. 1961ರಲ್ಲಿ ಮೈಸೂರು ವಿಧಾನ ಪರಿಷತ್ತಿನ ಸಭಾಪತಿಯಾಗಿ ಉತ್ತಮ ರೀತಿಯಲ್ಲಿ ಕಾರ್ಯನಿರ್ವಹಿಸಿದರು.

1906ರಲ್ಲಿ ಧಾರವಾಡ ಜಿಲ್ಲೆಯ ಹಾವೇರಿ ತಾಲ್ಲೂಕಿನ ಹೊಸರಿತ್ತಿಯಲ್ಲಿ ಒಂದು ರೈತ ಕುಟುಂಬದಲ್ಲಿ ಇವರ ಜನನ. ಪ್ರಾಥಮಿಕ ಶಿಕ್ಷಣ ಅಲ್ಲಿಯೇ ಆಯಿತು. ಧಾರವಾಡದ ಮುರುಘಾಮಠದಲ್ಲಿ ಇದ್ದುಕೊಂಡು ಹೈಸ್ಕೂಲು ಶಿಕ್ಷಣ ಪೂರೈಸಿ ಕಾಲೇಜು ಸೇರಿದರು. ಗಣಿತದಲ್ಲಿ ಅತ್ಯಂತ ಮೇಧಾವಿ ವಿದ್ಯಾರ್ಥಿ ಎನಿಸಿದ್ದರು. ವಿದೇಶಕ್ಕೆ ಹೋಗಿ ಹೆಚ್ಚಿನ ಶಿಕ್ಷಣ ಪಡೆಯುವ ಅವಕಾಶವೂ ಲಭ್ಯವಾಗಿತ್ತು. ಆದರೆ ಗಾಂಧೀಜೀ ದರ್ಶನದಿಂದ ಪ್ರಭಾವಿತರಾಗಿ ರಾಷ್ಟ್ರೀಯ ಹೋರಾಟದಲ್ಲಿ ಅವರು ಧುಮುಕಿದರು. ಭಾರತೀಯ ತರುಣರ ಸಂಘ, ವರದಾಗಾಂಧೀ ಆಶ್ರಮ ಹೀಗೆ ಹಲವು ಸಂಸ್ಥೆಗಳನ್ನು ಸಂಘಟಿಸಿದ್ದಲ್ಲದೆ, ಹಾವೇರಿಯಲ್ಲಿ ಕೆ.ಎಲ್.ಇ. ಸಂಸ್ಥೆಯ ನೆರವಿನಿಂದ ಕಾಲೇಜು ಸ್ಥಾಪಿಸಿದರು.

ಜನರ ಕಷ್ಟ–ನಷ್ಟಗಳನ್ನು ನಿವಾರಿಸುವಲ್ಲಿ ಅವರು ಯಾವಾಗಲೂ ಮುಂದಿರುತ್ತಿದ್ದರು. ಅವರದು ಅತ್ಯಂತ ಸರಳವಾದ ಜೀವನ. 1971 ಮೇ 15ರಂದು ಅವರು ಮರಣಹೊಂದಿದರು.



ಮುಂಚೂಣಿ ಪಾತ್ರ : ಗುದ್ಲೆಪ್ಪ

ಗುಪ್ತರು

ಗುಪ್ತರು 319 ಹೊಸಶಕದಿಂದ ಪಾಟಲೀಪುತ್ರದಿಂದ ಮಗಧವನ್ನು ಆಳಲಾರಂಭಿಸಿದ ಸಮ್ರಾಟರು.

ಚಂದ್ರ ಗುಪ್ತ ಈ ವಂಶದ ಮೊದಲ ದೊರೆ. ಇವನ ಮಗ ಸಮುದ್ರ ಗುಪ್ತ ಭಾರತದಲ್ಲಿ ದಂಡಯಾತ್ರೆ ನಡೆಸಿ ಅಶ್ವಮೇಧಯಾಗ ಮಾಡಿದ ಪರಾಕ್ರಮಿ. ಇವನ ಬಳಿಕ ರಾಜ್ಯವಾಳಿದ ಚಂದ್ರ ಗುಪ್ತ (ಸುಮಾರು 380–413) ವಿಕ್ರಮಾದಿತ್ಯನೆಂದು ಪ್ರಸಿದ್ಧನಾಗಿದ್ದ. ಚೀನೀ ಪ್ರವಾಸಿ ಫಾಹಿಯಾನ್ ಇವನ ಆಸ್ಥಾನವನ್ನು ಸಂದರ್ಶಿಸಿದ್ದ.

ಆರನೆಯ ಶತಮಾನದ ಹೊತ್ತಿಗೆ ಗುಪ್ತರ ಸಾಮ್ರಾಜ್ಯ ಛಿದ್ರವಾಗಿ ಹೋಯಿತು.

ಗುಪ್ತರ ಆಡಳಿತದ ಕಾಲವು ಭಾರತದ ಇತಿಹಾಸದಲ್ಲಿ ಸ್ವರ್ಣಯುಗ ಎನಿಸಿದೆ. ಇದು ಅಸಾಧಾರಣ ಸಾಂಸ್ಕೃತಿಕ ಸಾಧನೆಗಳ ಕಾಲ. ರಾಜ್ಯ ಶಾಸ್ತ್ರಜ್ಞ ಕಾಮಂದಕನೂ ಸಂಸ್ಕೃತ ಕವಿ, ನಾಟಕಕಾರರಾದ ಕಾಳಿದಾಸ, ವಿಶಾಖದತ್ತ, ಶೂದ್ರಕರೂ ಗಣಿತಶಾಸ್ತ್ರಜ್ಞರಾದ ಆರ್ಯಭಟ, ವರಾಹ ಮಿಹಿರ, ಬ್ರಹ್ಮಗುಪ್ತರೂ ಇದೇ ಕಾಲದಲ್ಲಿ ಇದ್ದವರು. ವೈದಿಕ ಸಂಪ್ರದಾಯ ಈ ಕಾಲದಲ್ಲಿ ಪುನರುಜ್ಜೀವನಗೊಂಡಿತು.

ನೋಡಿ : ಚಂದ್ರ ಗುಪ್ತ ವಿಕ್ರಮಾದಿತ್ಯ ; ಸಮುದ್ರ ಗುಪ್ತ

ಗುರುಕುಲ

ನೋಡಿ : ಸಂಪುಟ ೧

ಗುರು ಗೋವಿಂದ ಸಿಂಗ್

"ನೀನು ಸಜ್ಜನರನ್ನು ಕಾಪಾಡಿ ಹರಸುತ್ತೀಯೆ ;
ದುಷ್ಟರನ್ನು ಹೆದರಿಸುತ್ತೀಯೆ ;
ಓ, ಸೃಷ್ಟಿಯ ಸಂರಕ್ಷಕ,
ಓ, ಪವಿತ್ರ ಕತ್ತಿ ! "

—ಇದು ಗುರು ಗೋವಿಂದರ ವಾಣಿ. ಮೊಘಲ ಅರಸರ ಆಳ್ವಿಕೆಯಲ್ಲಿ ಸಿಕ್ಖ ಧರ್ಮ ಅಪಾಯ ಸ್ಥಿತಿಯಲ್ಲಿದ್ದಾಗ ಧರ್ಮರಕ್ಷಣೆಗಾಗಿ ಧೈರ್ಯದಿಂದ ಕಾದಾಡುವಂತೆ ತನ್ನ ಮತಬಾಂಧವರನ್ನು ಹುರಿದುಂಬಿಸಿದವರು ಗುರು ಗೋವಿಂದ ಸಿಂಗ್.

'ಸಿಂಗ್' ಎಂದರೆ ಸಿಂಹ. ಗುರು ಗೋವಿಂದರು ಸ್ಥಾಪಿಸಿದ ಸಂತ–ಸೈನಿಕ ಸಂಘದ ಸದಸ್ಯರ ಹೆಸರಿನ ಕೊನೆಯಲ್ಲಿ ಈ ಪದ ಇರುತ್ತದೆ. ಇವರು 'ಖಾಲ್ಸಾ' (ಪವಿತ್ರ) ದಳದವರು. ಸದಾ ಕಾಲ ಒಂದು ಚಿಕ್ಕ ಕತ್ತಿಯನ್ನು ತಮ್ಮೊಡನೆ ಇಟ್ಟುಕೊಳ್ಳುತ್ತಾರೆ. ತಲೆಗೂದಲು, ಗಡ್ಡ–ಮೀಸೆ ಕತ್ತರಿಸುವುದಿಲ್ಲ. ಗುರು ಗೋವಿಂದರ ನೇತೃತ್ವದಲ್ಲಿ ಸಿಕ್ಖ ಮತೀಯರು ತಮ್ಮ ಸಮಾಜವನ್ನು ರೂಪಿಸಿದರು.

ಗೋವಿಂದ ಸಿಂಗರ ಜನನ 1666ರಲ್ಲಿ, ಪಟ್ನಾದಲ್ಲಿ. ಇವರ ತಂದೆ ಗುರು ತೇಜ್‌ಬಹದ್ದೂರ್. ಆಗ ಭಾರತದಲ್ಲಿ ಅತ್ಯಂತ ಪ್ರಬಲ ಚಕ್ರವರ್ತಿ ಔರಂಗಜೇಬ್. ಇವನಿಗೆ ಇಸ್ಲಾಂ ಬಿಟ್ಟು ಬೇರೆ ಯಾವ ಧರ್ಮದವರನ್ನು ಕಂಡರೂ ಸಹನೆ ಇರಲಿಲ್ಲ. ಔರಂಗಜೇಬನ ಆಜ್ಞೆಯಂತೆ ತೇಜ್ ಬಹದ್ದೂರರ ಬಂಧನವಾಯಿತು. ಸಿಕ್ಖ ಧರ್ಮದ ಪ್ರಚಾರವನ್ನು ಬಿಟ್ಟುಬಿಡುವಂತೆ ಔರಂಗಜೇಬ್ ಒತ್ತಾಯ ಮಾಡಿದ. ತನ್ನ ಮಾತಿಗೆ ಬಹದ್ದೂರ್ ಒಪ್ಪದಿದ್ದಾಗ ತಲೆ ಕತ್ತರಿಸಲು ಅಪ್ಪಣೆ ಮಾಡಿದ.



ಧರ್ಮಯುದ್ಧ : ಗುರುಗೋವಿಂದ ಸಿಂಗ

ಆಗ ಒಂಬತ್ತು ವರ್ಷ ವಯಸ್ಸಿನ ಬಾಲಕ ಗೋವಿಂದ ಸಿಂಗ್ ತನ್ನ ತಂದೆಯ ಕಾರ್ಯವನ್ನು ಮುಂದುವರಿಸಲು ಪಣತೊಟ್ಟ. ಗೋವಿಂದ ಸಿಂಗ್ ಸಿಕ್ಖರ ಹತ್ತನೆಯ ಗುರು.

ಗುರು ಗೋವಿಂದರ ಧರ್ಮಯುದ್ಧದಲ್ಲಿ ತಾಯಿಯನ್ನೂ ನಾಲ್ವರು ಮಕ್ಕಳನ್ನೂ ಕಳೆದುಕೊಂಡರು. ಔರಂಗಜೇಬನ ಸುಸಜ್ಜಿತ ಸೇನೆಯಿಂದ ಖಾಲ್ಸಾ ದಳದವರು ಸೋಲಿನ ಮೇಲೆ ಸೋಲು ಅನುಭವಿಸಬೇಕಾಯಿತು. ಆದರೆ ಗುರು ಗೋವಿಂದರು ಶರಣಾಗತರಾಗಲಿಲ್ಲ. ಔರಂಗಜೇಬನಿಗೆ ಬರೆದ 'ಜಾಫರ್ ನಾಮಾ'(ವಿಜಯ ಪತ್ರ) ಗುರು ಗೋವಿಂದಸಿಂಗರ ಅಸಾಮಾನ್ಯ ಧೈರ್ಯಕ್ಕೊಂದು ಉದಾಹರಣೆ. ಮೊಘಲ್ ಚಕ್ರವರ್ತಿ ಗುರುವನ್ನು ತನ್ನ ಆಸ್ಥಾನಕ್ಕೆ ಆಮಂತ್ರಿಸಿದ. ಆದರೆ ಗುರು ಗೋವಿಂದರು ಆಸ್ಥಾನವನ್ನು ತಲಪುವುದಕ್ಕೆ ಮೊದಲೇ ಚಕ್ರವರ್ತಿ ಕೊನೆಯ ಉಸಿರು ಎಳೆದಿದ್ದ.

'ವಿಚಿತ್ರ ನಾಟಕ್' ಗುರು ಗೋವಿಂದರ ಆತ್ಮವೃತ್ತ. 1708ರಲ್ಲಿ ಇವರು ತೀರಿಕೊಂಡರು. ಗೋವಿಂದಸಿಂಗ್ ಸಿಕ್ಖರ ಕೊನೆಯ ಗುರು. ಇವರ ಸೂಚನೆಯಂತೆ ಸಿಕ್ಖರು ಮುಂದೆ ಪವಿತ್ರ ಗ್ರಂಥ, 'ಗ್ರಂಥ್ ಸಾಹೇಬ'ನ್ನು ತಮ್ಮ ಗುರು ಎಂದು ಸ್ವೀಕರಿಸಿದರು.

ನೋಡಿ : 'ಗ್ರಂಥ್ ಸಾಹೇಬ್'

ಗುರು ನಾನಕ್

ಹಿಂದುಗಳಿಂದ ಗುರು, ಮುಸಲ್ಮಾನರಿಂದ ಪೀರ್ ಎಂಬ ಮನ್ನಣೆ ಪಡೆದ ನಾನಕ್ ಷಾ ಫಕೀರ್ ಸಿಕ್ಖ ಮತದ ಸಂಸ್ಥಾಪಕರು.

ಹಿಂದೂ ಮುಸಲ್ಮಾನರ ನಡುವೆ ಸ್ನೇಹ ಸೌಹಾರ್ದ ಬೆಳೆಯಲು ಪ್ರಯತ್ನಿಸುವುದರಲ್ಲೇ ತಮ್ಮ ಜೀವನವನ್ನು ಸವೆಸಿದವರು ಗುರು ನಾನಕ್. ಅವರು ಹಿಂದೂ ಪುಣ್ಯಕ್ಷೇತ್ರಗಳಾದ ವಾರಾಣಸಿ, ಹರ್ದ್ವಾರಗಳ ಯಾತ್ರೆ ಮಾಡಿದರು. ಮಕ್ಕಾ–ಮದೀನಾಗಳಿಗೂ ಹೋಗಿ ಬಂದರು. ಹಿಂದು ಮತ್ತು ಇಸ್ಲಾಂ ಧರ್ಮಗಳ ಒಳ್ಳೆಯ ಅಂಶಗಳನ್ನು ಆರಿಸಿಕೊಂಡು ಸಿಕ್ಖ ಧರ್ಮವನ್ನು ಸ್ಥಾಪಿಸಿದರು.

ಪಂಜಾಬಿನ ಹಳ್ಳಿ ತಲ್ವಂಡಿಯಲ್ಲಿ ನಾನಕ್ 1469ರಲ್ಲಿ ಹುಟ್ಟಿದರು. ಚಿಕ್ಕಂದಿನಿಂದಲೇ ಇವರಿಗೆ ಧಾರ್ಮಿಕ ವಿಚಾರಗಳಲ್ಲಿ ಆಸಕ್ತಿ ಇತ್ತು. ಶಾಲೆಯಲ್ಲಿ ಕುಳಿತಿದ್ದಾಗಲೂ ಮನಸ್ಸು ಆಧ್ಯಾತ್ಮಿಕ ಚಿಂತನೆಯಲ್ಲೇ ಮಗ್ನ



ಗುರು, ಪೀರ್ : ನಾನಕ್



ಶಾಲೆಯಲ್ಲಿ ಕಿರಿಯ ವಿದ್ಯಾರ್ಥಿ ನಾನಕ್—
'ಜನಮ್‌ಸಖಿ' ಹಸ್ತಪ್ರತಿಯಲ್ಲಿ ಚಿತ್ರ

ನಾಗಿರುತ್ತಿತ್ತು. ನಾನಕರ ಉಪನ್ಯಾಸಗಳನ್ನು ಕೇಳಿ ಶಾಲೆಯ ಅಧ್ಯಾಪಕರೇ ಇವರ ಶಿಷ್ಯರಾದರು.

"ದೇವರು ನಿನ್ನ ಜಾತಿ, ಮತವನ್ನು ವಿಚಾರಿಸುವುದಿಲ್ಲ: ನೀನು ಒಳ್ಳೆಯ ಕೆಲಸವನ್ನು ಮಾಡಿದ್ದೀ ಎಂದು ಕೇಳು ತ್ತಾನೆ" ಎಂದು ನಾನಕ್ ಘೋಷಿಸಿದರು. ನೈತಿಕ ಜೀವನವೇ ಮನುಷ್ಯನ ಧ್ಯೇಯವಾಗಬೇಕು ಎಂದು ಸಾರಿದರು. ಜಾತಿಯ ಹೆಸರಿನಲ್ಲಿ ಅಸ್ಪೃಶ್ಯತೆ ಎಸಗುವವರು ಇವರ ದೃಷ್ಟಿಯಲ್ಲಿ ಖಂಡನೆಗೆ ಅರ್ಹರು. ಪಂಥಗಳು ಎಷ್ಟಿದ್ದರೂ ದೇವನೊಬ್ಬನೇ ಎಂಬುದು ಇವರ ಮತ. "ನನಗೆ ಒಂದು ಲಕ್ಷ ನಾಲಿಗೆಗಳಿದ್ದರೂ ಆ ಎಲ್ಲ ನಾಲಿಗೆಗಳಿಂದಲೂ ಒಬ್ಬನೇ ದೇವನನ್ನು ಸ್ಮರಿಸುತ್ತೇನೆ," ಎಂದು ಇವರು ಹಾಡಿದರು. ಸುಂದರ ಹಾಡುಗಳ ರೂಪದಲ್ಲಿ ಗುರು ನಾನಕ್ ತಮ್ಮ ಸಂದೇಶವನ್ನು ಜನರಿಗೆ ಉಪದೇಶಿಸಿದರು. ಉತ್ತರದಲ್ಲಿ ಟಿಬೆಟ್, ಕಾಶ್ಮೀರ, ಪೂರ್ವದಲ್ಲಿ ಬಂಗಾಳ, ಅಸ್ಸಾಂ, ದಕ್ಷಿಣದಲ್ಲಿ ಕನ್ಯಾಕುಮಾರಿ, ಶ್ರೀಲಂಕಾ ಹಾಗೂ ಪಶ್ಚಿಮದಲ್ಲಿ ಮಕ್ಕಾ, ಬಾಗ್‌ದಾದ್‌ಗಳ ವರೆಗೂ ಇವರು ಕಾಲ್ನಡಿಗೆ ಯಲ್ಲಿ ಸಂಚರಿಸಿದರು. ನಾನಕರ ಉಪದೇಶಗಳು ಸಿಕ್ಖರ ಪವಿತ್ರ ಪುಸ್ತಕ ವಾದ 'ಗ್ರಂಥ್ ಸಾಹೇಬ್' ನಲ್ಲಿವೆ.

ಗುರು ನಾನಕ್ 1539ರಲ್ಲಿ ನಿಧನರಾದರು. ಇವರ ಅಂತ್ಯಕ್ರಿಯೆಯನ್ನು ಯಾವ ರೀತಿಯಲ್ಲಿ ಮಾಡಬೇಕು ಎಂಬುದರ ಬಗೆಗೆ ಅವರ ಹಿಂದು ಮತ್ತು ಮುಸಲ್ಮಾನ ಅನುಯಾಯಿಗಳಲ್ಲಿ ಕಲಹವಾಯಿತು: ಗುರುವಿನ ದೇಹವನ್ನು ಮುಚ್ಚಿದ ಬಟ್ಟೆಯನ್ನು ಮೇಲಕ್ಕೆ ಎತ್ತಿದಾಗ ಅಲ್ಲಿ ಬರಿ ಹೂವಿನ ರಾಶಿ ಮಾತ್ರ ಇತ್ತು: ರಾಶಿಯಲ್ಲಿ ಒಂದು ಭಾಗವನ್ನು ಮುಸಲ್ಮಾನರು ಒಯ್ದು ಅದಕ್ಕೆ ಗೋರಿ ರಚಿಸಿದರು: ಇನ್ನೊಂದು ಭಾಗಕ್ಕೆ ಹಿಂದುಗಳು ದಹನಕ್ರಿಯೆ ನಡೆಸಿದರು —ಎಂದು ಹೇಳಿಕೆಯಿದೆ.

ತಮ್ಮ ದೇಶಸಂಚಾರದಲ್ಲಿ ನಾನಕರು ಕರ್ನಾಟಕಕ್ಕೂ ಬಂದಿದ್ದರು. ಅವರು ಸ್ವಲ್ಪ ಕಾಲ ತಂಗಿದ್ದರೆಂದು ಹೇಳುವ ಸ್ಥಳವನ್ನು ನಾನಕ್ ಝೀರಾ ಎಂದು ಕರೆಯುತ್ತಾರೆ.

ನೋಡಿ : ನಾನಕ್ ಝೀರಾ

ನಾನಕ್—ಸಂಪುಟ ೮

ಗುರುವಾಯೂರು

ಶ್ರೀ ಕೃಷ್ಣನ ಪ್ರಸಿದ್ಧ ದೇವಾಲಯವಿರುವ ಸ್ಥಳ ಗುರುವಾಯೂರು. ಬ್ರಹ್ಮ ತಾನು ಪೂಜಿಸುತ್ತಿದ್ದ ವಿಗ್ರಹವನ್ನು ವಿಷ್ಣುವಿಗೆ ಕೊಟ್ಟ. ವಿಷ್ಣುವಿನ ಅವತಾರವಾದ ಕೃಷ್ಣ ದ್ವಾರಕೆಗೆ ಬಂದಾಗ ಈ ವಿಗ್ರಹವೂ ಅವನೊಡನೆ ಅಲ್ಲಿಗೆ ಬಂತು. ಮಹಾಭಾರತ ಯುದ್ಧದ ಬಳಿಕ ಯಾದವರು ತಮ್ಮ ತಮ್ಮಲ್ಲಿ ಕಾದಾಡಿ ನಾಶವಾದರು. ದ್ವಾರಕೆ ಸಮುದ್ರದಲ್ಲಿ ಮುಳುಗಿ ಹೋಗುತ್ತದೆಂದು ತಿಳಿದ ಕೃಷ್ಣ ತನ್ನ ಮಂತ್ರಿಗಳಲ್ಲಿ ಒಬ್ಬನಾದ ಉದ್ಧವನನ್ನು ಕರೆದು, ಈ ವಿಗ್ರಹವನ್ನು ಬೇರೆ ಕಡೆ ಸ್ಥಾಪಿಸಬೇಕೆಂದು ಗುರು (ಬೃಹಸ್ಪತಿ) ಮತ್ತು ವಾಯುವಿಗೆ ಹೇಳುವಂತೆ ಆದೇಶಕೊಟ್ಟ. ಗುರು, ವಾಯು ಸೇರಿ ಈ ವಿಗ್ರಹವನ್ನು ಸ್ಥಾಪಿಸಿದ ಸ್ಥಳ, 'ಗುರು ವಾಯೂರು'.

—ಇದು ಗುರುವಾಯೂರು ಬಗೆಗಿರುವ ಕಥೆ.

ಜನಮೇಜಯ ಸರ್ಪಯಾಗ ಮಾಡಿ ಅನೇಕ ಸರ್ಪಗಳನ್ನು ಆಹುತಿ ಕೊಟ್ಟದ್ದರ ಫಲವಾಗಿ ಅವನಿಗೆ ಕುಷ್ಠರೋಗ ಬಂತು. ದ್ವಾರಕೆಯಲ್ಲಿದ್ದ ಕೃಷ್ಣ ವಿಗ್ರಹವನ್ನು ಪೂಜಿಸುವುದರಿಂದ ಈ ರೋಗ ಪರಿಹಾರವಾಗುವು ದೆಂದು ಗೊತ್ತಾದಾಗ ಅವನು ಸಮುದ್ರದಲ್ಲಿ ಮುಳುಗಿಹೋಗಿದ್ದ ದ್ವಾರಕೆ ಯಿಂದ ಈ ವಿಗ್ರಹವನ್ನು ಹೊರತೆಗೆಸಿ ಗುರು, ವಾಯುಗಳ ನೆರವಿನಿಂದ ಅದನ್ನು ಪ್ರತಿಷ್ಠಾಪಿಸಿದ ಸ್ಥಳವೇ ಗುರುವಾಯೂರು.

—ಇದು ಇನ್ನೊಂದು ಕಥೆ.

ಗುರುವಾಯೂರು ಕೃಷ್ಣನ ಆರಾಧನೆಯಿಂದ ಹಲವು ಬಗೆಯ ರೋಗ ಗಳು ಗುಣವಾಗುತ್ತವೆಂದು ನಂಬಿಕೆ.

16ನೆಯ ಶತಮಾನದಲ್ಲಿ ಪೆರುಮಾನಮ್ ಹಳ್ಳಿಯಲ್ಲಿ ನಾರಾಯಣಭಟ್ಟ ಎಂಬ ಬ್ರಾಹ್ಮಣನಿದ್ದ. ಆತನಿಗೆ ವಾತರೋಗ ತಗಲಿತು. ಆತ ಗುರುವಾಯೂರು ಕೃಷ್ಣನನ್ನು ಎಡೆಬಿಡದೆ ಆರಾಧಿಸಿ ತನ್ನ ರೋಗದಿಂದ ಮುಕ್ತನಾದನಂತೆ. ಪ್ರತಿ ದಿನ ಹತ್ತು ಶ್ಲೋಕದಂತೆ ಇವನು ನಾರಾಯಣ ಅಥವಾ ಶ್ರೀಕೃಷ್ಣನನ್ನು ಕೊಂಡಾಡುವ 1,936 ಶ್ಲೋಕಗಳನ್ನು ರಚಿಸಿದ. ಈ ಸ್ತೋತ್ರ 'ನಾರಾಯಣೀಯಮ್' ಎಂದು ಪ್ರಸಿದ್ಧವಾಗಿದೆ.

ಟಿಪ್ಪುಸುಲ್ತಾನ್ ಗುರುವಾಯೂರು ಪ್ರದೇಶದಲ್ಲಿ ದಾಳಿ ನಡೆಸಲು ಬಂದಾಗ ಈ ವಿಗ್ರಹವನ್ನು ಗುರುವಾಯೂರಿನಿಂದ ತಿರುವಾಂಕೂರಿನ ಅಂಬಲಪ್ಪುಳ ಎಂಬಲ್ಲಿಗೆ ಸಾಗಿಸಲಾಯಿತು. ಅನಂತರ 1789ರಲ್ಲಿ ಗುರುವಾಯೂರಿನಲ್ಲಿ ಅದನ್ನು ಪುನಃ ಸ್ಥಾಪಿಸಲಾಯಿತು.

ಗುರುವಾಯೂರಿನ ಮುದ್ದಾದ ಕೃಷ್ಣ ವಿಗ್ರಹಕ್ಕೆ ನಾಲ್ಕು ಕೈಗಳಿವೆ. ಅವುಗಳಲ್ಲಿ ಶಂಖ. ಚಕ್ರ. ಗದೆ. ಪದ್ಮಗಳಿವೆ.

ಗುರುವಾಯೂರಿನ ಕೃಷ್ಣ ದೇವಾಲಯದ ಪೂಜಾವಿಧಿಯನ್ನು ಮೊತ್ತ ಮೊದಲಿಗೆ ರೂಪಿಸಿದವರು ಆದಿ ಶಂಕರಾಚಾರ್ಯರು. ಇಲ್ಲಿನ 41 ದಿನಗಳ ಮಂಡಲದ ಉತ್ಸವ ಹಾಗೂ ಮಾಘಮಾಸದ 10 ದಿನದ ಪೂಜೆ ಪ್ರಮುಖವಾದುವು. ಮಾಘಮಾಸದ ಉತ್ಸವದ ಅಂಗವಾಗಿ ಇಲ್ಲಿ ಆನೆ ಪಂದ್ಯ ಕೂಡ ನಡೆಯುತ್ತದೆ.

ಕೇರಳದ ಗಾಂಧೀ ಅನುಯಾಯಿಗಳಲ್ಲಿ ಪ್ರಮುಖರಾಗಿದ್ದ ಕೆ. ಕೇಳಪ್ಪನ್ ಗುರುವಾಯೂರು ದೇವಸ್ಥಾನದಲ್ಲಿ ಹರಿಜನರಿಗೂ ಪ್ರವೇಶ ದೊರೆಯ ಬೇಕೆಂದು 1931ರಲ್ಲಿ ಸತ್ಯಾಗ್ರಹ ನಡೆಸಿದರು.

ಗುರುವಾಯೂರು ತ್ರಿಶೂರಿನಿಂದ 19 ಕಿ.ಮೀ. ದೂರದಲ್ಲಿದೆ. ಶಬರಿಮಲೆ ಬಿಟ್ಟರೆ ಕೇರಳದಲ್ಲಿಯೇ ಅಧಿಕ ಸಂಖ್ಯೆಯ ಭಕ್ತಾದಿಗಳು ಈ ದೇವಾಲಯಕ್ಕೆ ಬರುತ್ತಾರೆ. ಗುರುವಾಯೂರಿನ ಜನಸಂಖ್ಯೆ 15,863.

ನೋಡಿ : ಕೆ. ಕೇಳಪ್ಪನ್

ಗುಲ್‌ಮಾರ್ಗ್

ಗುಲ್‌ಮಾರ್ಗ್ ಎಂದರೆ ' ಪುಷ್ಪಗಳ ಬಯಲು '.

ಬೇಸಗೆಯಲ್ಲಿ ಎಲ್ಲೆಲ್ಲಿಯೂ ವರ್ಣರಂಜಿತ ಪುಷ್ಪಗಳು ; ಸುತ್ತಲೂ ಬೆಳೆಯುತ್ತಿರುವ ದೇವದಾರು, ಭವ್ಯದಾರುಗಳಂಥ ಮರಗಳು ; ಚಳಿಗಾಲದಲ್ಲಿ ದಟ್ಟವಾದ ಹಿಮ ; ಹೇಮಂತದ ಹಿಮಕ್ರೀಡೆಗಳಾದ ಸ್ಕೀಯಿಂಗ್, ಟೊಬೊಗಾನ್ ಸವಾರಿಗಳಿಗೆ ಅಪೂರ್ವ ಪರಿಸರ — ಹೀಗೆ ಕಾಶ್ಮೀರದ ಗುಲ್‌ಮಾರ್ಗ್ ಬೇಸಿಗೆಯಲ್ಲೂ ಚಳಿಗಾಲದಲ್ಲೂ ಏಕಪ್ರಕಾರವಾಗಿ ಪ್ರವಾಸಿಗರನ್ನು ಆಕರ್ಷಿಸುತ್ತದೆ.

ಶ್ರೀನಗರದಿಂದ 45 ಕಿ. ಮೀ. ದೂರದಲ್ಲಿ ಗುಲ್‌ಮಾರ್ಗ್ ಗಿರಿಧಾಮ ಇದೆ. ಗಾಲ್ಫ್ ಆಟಗಾರರಿಗೆ ಇದು ಸ್ವರ್ಗ ಸಮಾನ. ಇಲ್ಲಿಂದ ಹಿಮಾಲಯದ ಎರಡನೆಯ ಉನ್ನತ ಶಿಖರ ನಂಗ ಪರ್ವತದ ಭವ್ಯ ನೋಟ ಕಾಣುತ್ತದೆ. ಇಲ್ಲಿನ ಹವೆ ಬಹಳ ಹಿತಕರ.

ಖಿಲಾನ್‌ಮಾರ್ಗ್, ಅಪರ್‌ವಾತ್ ಸರೋವರ, ಬಾಬಾ ಋಷಿ, ಕಾಂಚಾರ್‌ನಾಗ್ ವಿಹಾರ ತಾಣಗಳು ಗುಲ್‌ಮಾರ್ಗದ ಸಮೀಪದಲ್ಲಿವೆ.

ಗುಲ್‌ಮಾರ್ಗ್ ಮತ್ತು ಖಿಲಾನ್‌ಮಾರ್ಗಗಳಲ್ಲಿರುವ 3,000 ಅಡಿ ಎತ್ತರದ ಸ್ಕೀಯಿಂಗ್ ಬಯಲು ಪ್ರಪಂಚದಲ್ಲೇ ಅತಿ ವಿಸ್ತಾರವಾದದ್ದು.

ಗುಲಾಮಿ ಅರಸರು

ದೆಹಲಿಯಲ್ಲಿ ಸುಮಾರು 84 ವರ್ಷ ಆಳಿದ ತುರ್ಕಿ ಮೂಲದ ರಾಜರ ಗುಂಪನ್ನು ' ಗುಲಾಮ ಸಂತತಿ ' ಎಂದು ಕರೆಯುತ್ತಾರೆ.

ದೆಹಲಿಯನ್ನು ಗೆದ್ದ ಮಹಮ್ಮದ್ ಘೋರಿ ತನ್ನ ಗುಲಾಮನಾದ ಕುತುಬುದ್ದೀನ್ ಐಬಕ್‌ನನ್ನು ದೆಹಲಿಯ ಆಡಳಿತ ನೋಡಿಕೊಳ್ಳಲು ನೇಮಿಸಿದ. ಈತ 1206ರಲ್ಲಿ ಸ್ವತಂತ್ರನಾಗಿ ಸುಲ್ತಾನನೆಂದು ಕರೆದು ಕೊಂಡು ಆಳ್ವಿಕೆ ಆರಂಭಿಸಿದ.



ಗುಲಾಮಿ : ಕುತುಬುದ್ದೀನ್

ಇವನು 1210ರಲ್ಲಿ ತೀರಿಕೊಂಡಾಗ ಈತನ ಗುಲಾಮನಾಗಿದ್ದ ಇಲ್ತುತ್‌ಮಿಷ್ ಸುಲ್ತಾನನಾದ. ಈತ ಐಬಕ್‌ನ ಕಾಲದಲ್ಲಿ ಒಂದು ಪ್ರಾಂತದ ಮಾಂಡಲಿಕನಾಗಿ ನೇಮಿಸಲ್ಪಟ್ಟವನು ; ಮೂಲತಃ ತುರ್ಕಿಸ್ತಾನದ ಇಲ್ಬಾರಿ ಪಂಗಡದವನು. ಇಲ್ತುತ್‌ಮಿಷನ ಕಾಲದಲ್ಲಿ ದೆಹಲಿಯ ರಾಜ್ಯ ವಿಸ್ತರಿಸಿ, ಮಾಳ್ವವನ್ನು ಒಳಗೊಂಡಿತು.

1236ರಲ್ಲಿ ಈತ ತೀರಿಕೊಂಡಾಗ ಅವನ ಮಗಳಾದ ರಜಿಯಾ ಪಟ್ಟವೇರಿದಳು. 1240ರಲ್ಲಿ ಅವಳು ಕೊಲೆಯಾದಳು. ಇಲ್ತುತ್‌ಮಿಷನ ಮಗನಾದ ನಾಸಿರುದ್ದೀನ್ ಮಹಮೂದ್ ರಾಜನಾದ. ಅವನ ಮಂತ್ರಿಯಾದ ಬಲ್ಬನ್ ಆಡಳಿತವನ್ನು ಚೆನ್ನಾಗಿ ನಿರ್ವಹಿಸಿದ.

1266ರಲ್ಲಿ ನಾಸಿರುದ್ದೀನ್ ಮಕ್ಕಳಿಲ್ಲದೆ ತೀರಿಕೊಂಡಾಗ ಬಲ್ಬನನಿಗೆ ಪಟ್ಟವಾಯಿತು. ಈತನೂ ತುರ್ಕಿಸ್ತಾನದ ಇಲ್ಬಾರಿ ಪಂಗಡಕ್ಕೆ ಸೇರಿದವನು ; ಬಾಲ್ಯದಲ್ಲಿ ನಾಸಿರುದ್ದೀನನ ಗುಲಾಮನಾಗಿದ್ದವನು. ಉತ್ತಮ ಆಡಳಿತಗಾರನಾದ ಬಲ್ಬನ್ ಮಂಗೋಲರ ದಾಳಿಯಿಂದಲೂ ಮಾಂಡಲಿಕರ ಹಾಗೂ ಹಿಂದೂಗಳ ದಂಗೆಯಿಂದಲೂ ರಾಜ್ಯವನ್ನು ರಕ್ಷಿಸಿದ. ತನ್ನ ಆಸ್ಥಾನದಲ್ಲಿ ಪಾರಸೀಕ ಸಂಪ್ರದಾಯಗಳನ್ನು ಜಾರಿಗೆ ತಂದ. ಇವನ ಬಳಿಕ ಪಟ್ಟವೇರಿದ ಇವನ ಮೊಮ್ಮಗ ಕೈಕುಬಾದ್ 1290ರಲ್ಲಿ ಕೊಲ್ಲಲ್ಪಟ್ಟ ; ಖಿಲ್ಜಿ ವಂಶದ ಫಿರೂಜ್ ಪಟ್ಟವೇರಿದ. ಅಲ್ಲಿಗೆ ಗುಲಾಮರ ಆಡಳಿತ ಕೊನೆಗಂಡಿತು.

ದಿಲ್ಲಿಯ ಕುವ್ವತ್–ಉಲ್ –ಇಸ್ಲಾಂ ಮಸೀದಿ ಮತ್ತು ಕುತುಬ್ ಮಿನಾರ್ ಸ್ತಂಭ ಈ ಸುಲ್ತಾನರ ಕಾಲದ ರಚನೆಗಳು. ಅಮೀರ್ ಖುಸರೋ ಬಲ್ಬನನ ಕಾಲದಲ್ಲಿದ್ದ ಖ್ಯಾತ ಕವಿ.

ನೋಡಿ : ಅಮೀರ್ ಖುಸರೋ ; ರಜಿಯಾ ಬೇಗಂ

ಗುಹಿಲರು

ರಜಪೂತರಲ್ಲಿ ಶ್ರೇಷ್ಠ ವೀರಪರಂಪರೆಯನ್ನು ಹೊಂದಿದ ರಾಜವಂಶದವರು ಗುಹಿಲರು ಅಥವಾ ಗುಹಿಲೋಟರು. ಆರನೆಯ ಶತಮಾನದ ಮಧ್ಯ ಭಾಗದಿಂದಲೇ ಗುಹದತ್ತನೆಂಬ ರಾಜನಿಂದ ಈ ವಂಶದ ಆಳ್ವಿಕೆ ಪ್ರಾರಂಭವಾಯಿತು.

ಈ ವಂಶದ ಒಂಬತ್ತನೆಯ ದೊರೆ ಖೊಮ್ಮಣ ಎಂಟನೆಯ ಶತಮಾನದ ಮಧ್ಯಭಾಗದಲ್ಲಿ ಅರಬರ ದಾಳಿಯಿಂದ ತನ್ನ ರಾಜ್ಯವನ್ನು ರಕ್ಷಿಸಿ 'ಬಾಪ್ಪಾ ರಾವಳ್' ಎಂಬ ಬಿರುದು ಧರಿಸಿದ. ಈ ವಂಶದವರನ್ನು ಮೇದಪಾದ ಗುಹಿಲರು ಅಥವಾ ಮೇವಾಡದ ಗುಹಿಲರು ಎಂದು ಕರೆಯುತ್ತಾರೆ.

954ರಲ್ಲಿ ದೇವಪಾಲನೆಂಬ ಕನ್ನೋಜದ ಪ್ರತಿಹಾರ ದೊರೆಯನ್ನು ಅಲ್ಲಟನೆಂಬ ಗುಹಿಲ ದೊರೆ ಕೊಂದು ಪ್ರಸಿದ್ಧನಾದ. ಅಲ್ಲಟನು ಹರಿಯದೇವಿ ಎಂಬ ಹೂಣ ಸ್ತ್ರೀಯನ್ನು ಮದುವೆಯಾದ.

ಇದೇ ಕಾಲಕ್ಕೆ ಧವಗರ್ತ (ದೋಡ್) ದಿಂದ ಇನ್ನೊಂದು ಗುಹಿಲ ಶಾಖೆ ಆಳುತ್ತಿತ್ತು. ಈ ವಂಶದ ಹರ್ಷನು ಪ್ರತಿಹಾರ ಭೋಜನ ಮಾಂಡಲಿಕನಾಗಿದ್ದ. ಬಾಲಾದಿತ್ಯ ದೊರೆಯ ಅನಂತರ ಈ ವಂಶ ಕಣ್ಮರೆಯಾಯಿತು.

ಹತ್ತನೆಯ ಶತಮಾನದಲ್ಲಿ ಆಘಾ–ಟ (ಅಹರ್) ಮೇವಾಡ ಶಾಖೆಯ ರಾಜಧಾನಿಯಾಯಿತು. ಜೈತ್ರ ಸಿಂಹನೆಂಬ ಈ ವಂಶದ ರಾಜ (1213–52) ದೆಹಲಿಯ ಇಲ್ತುತ್‌ಮಿಷನ ಸೇನೆಯನ್ನು ಸೋಲಿಸಿ ಹಿಂದಕ್ಕಟ್ಟಿದ.

ರಾಣಾ ರತನ ಸಿಂಹನೆಂಬ ರಾಜನ ಕಾಲದಲ್ಲಿ ಅಲ್ಲಾವುದ್ದೀನ್ ಖಿಲ್ಜಿಯು ಮೇವಾಡವನ್ನು ಗೆಲ್ಲಲು ಉದ್ದೇಶಿಸಿ ಆ ರಾಜನನ್ನು ಬಂಧಿಸಿದ. ಆದರೆ ರಜಪೂತರು ಅವನನ್ನು ಉಪಾಯದಿಂದ ಬಿಡುಗಡೆ ಮಾಡಿಸಿದರು. ಪದ್ಮಿನಿ ಈ ರಾಜನ ರಾಣಿ. ರಾಜಧಾನಿ ಚಿತ್ತೋಡವನ್ನು ಖಿಲ್ಜಿ ವಶಪಡಿಸಿಕೊಂಡರೂ ಒಂದೇ ವರ್ಷದಲ್ಲಿ ಅದನ್ನು ತ್ಯಜಿಸಬೇಕಾಯಿತು. ಹೀಗೆ ಅದನ್ನು ಗೆದ್ದ ರಾಜ ಹಮೀರಸಿಂಹ.

ಈ ವಂಶದ ರಾಣಾ ಕುಂಭ (1431–69) ಮಾಳ್ವದ ಮತ್ತು ಗುಜರಾತಿನ ಸುಲ್ತಾನರ ವಿರುದ್ಧ ಹೋರಾಡಿ ರಾಜ್ಯವನ್ನು ರಕ್ಷಿಸಿದನಲ್ಲದೆ ತನ್ನ

ರಾಜ್ಯದ ಭದ್ರತೆಗೆ 32 ಕೋಟೆಗಳನ್ನು ಕಟ್ಟಿಸಿದ. ಇಲ್ಲದೆ ಚಿತ್ತೋಡದ ಪ್ರಖ್ಯಾತ ವಿಜಯಸ್ತಂಭವನ್ನು ಅವನು ಸ್ಥಾಪಿಸಿದ.

ರಾಣಾ ಸಂಗ ಅಥವಾ ಸಂಗ್ರಾಮ ಸಿಂಹ (1509) ಈ ವಂಶದ ಇನ್ನೊಬ್ಬ ಖ್ಯಾತ ದೊರೆ. ನೂರು ಕದನಗಳ ವೀರನಾದ ಈತನ ದೇಹದಲ್ಲಿ, ರಣರಂಗದಲ್ಲಿ ಹೊಂದಿದ 80 ಗಾಯಗಳ ಕಲೆಗಳಿದ್ದುವು. ದೆಹಲಿ, ಮಾಳ್ವ, ಗುಜರಾತಿನ ಸುಲ್ತಾನರ ವಿರುದ್ಧ ಅವನು ಸತತವಾಗಿ ಹೋರಾಡಿದ; ದೆಹಲಿ ಸುಲ್ತಾನರ ರಾಜ್ಯವನ್ನು ಧ್ವಂಸಗೊಳಿಸಿದ. 1526ರಲ್ಲಿ ಬಾಬರನು ದೆಹಲಿಯನ್ನು ಗೆದ್ದ ಮರುವರ್ಷ ಅವನನ್ನು ಖಾದ್ವಾದಲ್ಲಿ ರಜಪೂತರ ಸಂಘಟಿತ ಸೇನೆಯೊಂದಿಗೆ ಎದುರಿಸಿದ. ಈ ಯುದ್ಧದಲ್ಲಿ ಆದ ಭಾರೀ ಸೋಲಿನ ಅನಂತರ ಅವನು ಎರಡೇ ವರ್ಷದಲ್ಲಿ ತೀರಿಕೊಂಡ.

ಇವನ ಬಳಿಕ ರಾಣಾ ಉದಯ ಸಿಂಹ, ಅವನ ಮಗ ರಾಣಾ ಪ್ರತಾಪ ಮೊಘಲರ ವಿರುದ್ಧ ತಮ್ಮ ಹೋರಾಟ ಮುಂದುವರಿಸಿದರು. ಕೊನೆ ತನಕವೂ ಮೊಘಲರಿಗೆ ತಲೆಬಾಗದ ಪ್ರತಾಪ ರಜಪೂತರ ಸ್ವಾಭಿಮಾನದ ಪ್ರತೀಕ. ಇವನ ಮಗನಾದ ಅಮರ ಸಿಂಹ ಜಹಾಂಗೀರನ ಕಾಲದಲ್ಲಿ ಮೊಘಲರ ಸಾಮಂತನಾದ. ಉದಯಪುರ ರಾಜ್ಯ 1947ರ ವರೆಗೂ ಇದೇ ವಂಶದ ಆಡಳಿತಕ್ಕೆ ಒಳಪಟ್ಟಿತ್ತು.

ನೋಡಿ : ಚಿತ್ತೋಡ ಗಡ ; ರಾಣಾ ಪ್ರತಾಪ ಸಿಂಹ

ಗೊಮ್ಮಟೇಶ್ವರ

ನೋಡಿ : ಸಂಪುಟ ೫

ಗೋಕರ್ಣ

ಗೋಕರ್ಣದ ಬಗೆಗೆ ಪುರಾಣ ಕಥೆ ಹೀಗಿದೆ :

ಒಮ್ಮೆ ರುದ್ರನು ಸೃಷ್ಟಿಗಾಗಿ ಪಾತಾಳದಲ್ಲಿ ತಪಸ್ಸು ಮಾಡುತ್ತಿದ್ದ. ಆದರೆ ಬ್ರಹ್ಮ ರುದ್ರನಿಗಿಂತಲೂ ಮೊದಲು ಬ್ರಹ್ಮಾಂಡವನ್ನು ನಿರ್ಮಿಸಿದ. ಇದರಿಂದ ಕೋಪಗೊಂಡ ರುದ್ರ, ಭೂಮಿಯ ದಪ್ಪ ಕವಚವನ್ನು ಸೀಳಿ ಪಾತಾಳದಿಂದ ಹೊರಬರಲು ತವಕಿಸಿದ. ಆಗ ಭೂದೇವಿ ತಾನು ಗೋರೂಪ ಧರಿಸುವುದಾಗಿಯೂ ರುದ್ರ ಚಿಕ್ಕ ರೂಪ ತಾಳಿ ತನ್ನ ಕರ್ಣದ ಮೂಲಕ ಹೊರಬರಬೇಕೆಂದೂ ಪ್ರಾರ್ಥಿಸಿದಳು. ಹೀಗೆ ರುದ್ರ ಗೋವಿನಕರ್ಣದಿಂದ ಹೊರಬಂದ ಸ್ಥಳ 'ಗೋಕರ್ಣ' ಆಯಿತು. ಗೋಕರ್ಣ ಕ್ಷೇತ್ರದಲ್ಲಿ ಶಿವಲಿಂಗವಿರುವ ಒಂದು ಕುಂಡವಿದೆ. ರುದ್ರ ಹೊರಬಂದ ಸ್ಥಳವಾದ್ದರಿಂದ ಗೋಕರ್ಣವನ್ನು ರುದ್ರಯೋನಿ ಎಂದೂ ಸುತ್ತಲೂ ಸಾಗರವಿರುವುದರಿಂದ ವರುಣಾವರ್ತ ಎಂದೂ ಕರೆಯುವುದುಂಟು.



ಕೋಟಿತೀರ್ಥ : ಗೋಕರ್ಣ

ಗೋಕರ್ಣ ಪ್ರಸಿದ್ಧವಾಗಿರುವುದು ಶಿವನ ಆತ್ಮಲಿಂಗವಿರುವ ಸ್ಥಳ –ಎಂದು.

ಆ ಆತ್ಮಲಿಂಗದ ಬಗೆಗಿನ ಪುರಾಣಕಥೆ ಇದು :

ಹಿಂದೆ ರಾವಣನು ತನ್ನ ತಾಯಿಗೆ ಈಶ್ವರನ ಆತ್ಮಲಿಂಗವನ್ನು ತಂದು ಕೊಡುವುದಾಗಿ ಮಾತು ಕೊಟ್ಟು ಉಗ್ರ ತಪಸ್ಸು ಮಾಡಿದ. ಶಿವನು ಒಲಿಯದಿರಲು ತನ್ನ ತಲೆಗಳನ್ನು ಒಂದೊಂದಾಗಿ ಕತ್ತರಿಸಿ ಅರ್ಪಿಸಲಾರಂಭಿಸಿದ. ಕೊನೆಯ ರುಂಡ ಆಹುತಿ ಕೊಡುವ ವೇಳೆಗೆ ಶಿವ ಪ್ರತ್ಯಕ್ಷನಾಗಿ ರಾವಣನಿಗೆ ತನ್ನ ಆತ್ಮಲಿಂಗವನ್ನು ಕೊಟ್ಟ. ಅದನ್ನು ಎಲ್ಲಿಯೂ ಕೆಳಗೆ ಇಡಕೂಡದೆಂದೂ ಪಾದಚಾರಿಯಾಗಿಯೇ ಲಂಕೆಗೆ ತೆಗೆದುಕೊಂಡು ಹೋಗಬೇಕೆಂದೂ ಶರತ್ತು ಹಾಕಿದ. ಶಿವನ ಸತ್ವಸ್ವರೂಪವಾಗಿದ್ದ ಆತ್ಮಲಿಂಗವನ್ನು ರಾವಣ ಲಂಕೆಗೆ ತೆಗೆದುಕೊಂಡು ಹೋಗುವುದನ್ನು ತಪ್ಪಿಸಲು ದೇವತೆಗಳು ತಂತ್ರ ಹೂಡಿದರು. ರಾವಣ ಗೋಕರ್ಣದ ಬಳಿ ಬಂದಾಗ ಗಣಪತಿ ವಟುವೇಷದಲ್ಲಿ ಕಣ್ಣಿಗೆ ಬಿದ್ದ. ಆಹೊತ್ತಿಗೆ ವಿಷ್ಣು ತನ್ನ ಚಕ್ರದಿಂದ ಸೂರ್ಯನನ್ನು ಮರೆಮಾಡಲಾರಂಭಿಸಿದ. ರಾವಣ ಸಂಧ್ಯಾವಂದನೆಯ ಹೊತ್ತಾಯಿತೆಂದು ಗಣಪತಿಯನ್ನು ಕರೆದು, ಆತ್ಮಲಿಂಗವನ್ನು ಕೊಟ್ಟು, ತಾನು ಹಿಂದಿರುಗುವ ವರೆಗೆ ಅದನ್ನು ಕೈಯಲ್ಲಿಯೇ ಇಟ್ಟುಕೊಂಡಿರುವಂತೆ ಪ್ರಾರ್ಥಿಸಿದ. ರಾವಣ ಅತ್ತ ಹೋದಮೇಲೆ, ಆತ್ಮಲಿಂಗದ ಭಾರ ತಾಳಲಾರೆ –ಎಂದು ಗಣಪತಿ ಅದನ್ನು ನೆಲದ ಮೇಲೆ ಇಟ್ಟ. ಅದು ಅಲ್ಲಿಯೇ ಬಲವಾಗಿ ಊರಿಬಿಟ್ಟಿತು. ರಾವಣ ಎಷ್ಟು ಬಲ ಪ್ರಯೋಗ ಮಾಡಿ ಜಗ್ಗಿಸಿದರೂ ಅದು ಕದಲಲೇ ಇಲ್ಲ. ಅದನ್ನು ಅಲ್ಲೇ ಬಿಟ್ಟುಹೋಗಬೇಕಾಯಿತು.

ಗೋಕರ್ಣ ಆತ್ಮಲಿಂಗಕ್ಷೇತ್ರವೆಂದು ಪ್ರಸಿದ್ಧವಾಗಿದೆ. ರುದ್ರನು ಹುಟ್ಟಿದ ಸ್ಥಳದಲ್ಲಿ ಅವನ ಆತ್ಮಲಿಂಗವೂ ಸ್ಥಾಪಿಸಲ್ಪಟ್ಟುದರಿಂದ ಇದು 'ಭೂಕೈಲಾಸ' ಎಂಬ ಹೆಸರನ್ನೂ ಪಡೆದಿದೆ.

ಪುರಾಣಗಳಲ್ಲಿ, ಕಾಳಿದಾಸನ 'ರಘುವಂಶ'ದಲ್ಲಿ, ಶ್ರೀಹರ್ಷನ 'ನಾಗಾನಂದ'ದಲ್ಲಿ, ಅರಬಿ ಹಾಗೂ ಇಟಲಿಯ ಪ್ರವಾಸಿಗಳ ಬರೆಹಗಳಲ್ಲಿ ಗೋಕರ್ಣದ ಬಗೆಗೆ ಉಲ್ಲೇಖಗಳಿವೆ. ಸಮುದ್ರದ ಮೊರೆತ, ಶುಭ್ರ ಮರಳ ಕರಾವಳಿ, ಕಂಗೊಳಿಸುವ ತೆಂಗಿನ ಮರ, ಗುಡ್ಡ, ದೇವಾಲಯ, ಅವುಗಳ ಎತ್ತರದ ಗೋಪುರಗಳು –ಇವೆಲ್ಲ ಪ್ರಶಾಂತ ಗೋಕರ್ಣದ ರಮ್ಯ ನೋಟಗಳು.

ದೀಪಾವಳಿ, ಕಾರ್ತಿಕ, ಶಿವರಾತ್ರಿ, ನವರಾತ್ರಿ ಮುಂತಾದ ಹಬ್ಬಗಳು ಗೋಕರ್ಣದಲ್ಲಿ ಸಂಭ್ರಮದಿಂದ ಜರಗುತ್ತವೆ.

ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ

"ಮಾನವ ಸಂಸ್ಕಾರಕ ಧರ್ಮಾನುವ್ರತಮಕ್ಕೆ ಸಾರ್ವಜನಿಕ ವಿಚಾರಂ॥
ಜ್ಞಾನಿಯಿನಕ್ಕುಂ ಹಿತಸಂಧಾನಂ ರಾಜ್ಯಾದಿ ಲೌಕಿಕ ವ್ಯವಹೃತಿಯೊಳ್"॥

ಈ ಧ್ಯೇಯ ವಚನವುಳ್ಳ 'ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ' (ಗೋಖಲೆ ಇನ್‌ಸ್ಟಿಟ್ಯೂಟ್ ಆಫ್ ಪಬ್ಲಿಕ್ ಅಫೇರ್ಸ್) ಬೆಂಗಳೂರಿನಲ್ಲಿದೆ.

ಸ್ಥಾಪನೆ 1945ರ ಫೆಬ್ರುವರಿ 18ರಂದು. ಉತ್ತಮ ಪ್ರಜೆಗಳಾಗಲು ಸೂಕ್ತ ತರಬೇತಿ ಪಡೆಯುವಂತೆ ಜನರಿಗೆ ಉತ್ತೇಜನ ಕೊಡುವುದು ಈ ಸಂಸ್ಥೆಯ ಧ್ಯೇಯಗಳಲ್ಲೊಂದು. ಸಂಸ್ಥೆ ಪಕ್ಷಾತೀತ, ಮತಾತೀತ. ಇಡೀ ರಾಷ್ಟ್ರದ ದೃಷ್ಟಿಯಿಂದ ಸಾರ್ವಜನಿಕ ಸಮಸ್ಯೆಗಳನ್ನು ವ್ಯವಸ್ಥಿತವಾಗಿ ಮತ್ತು ವೈಜ್ಞಾನಿಕವಾಗಿ ಅಧ್ಯಯನ ಮಾಡುವುದು, ರಾಷ್ಟ್ರದ ರಾಜಕೀಯ

ಮತ್ತು ಸಾಮಾಜಿಕ ಸಂಸ್ಥೆಗಳು ದಕ್ಷತೆಯಿಂದ ನಡೆಯಲು ಸಹಾಯ ಮಾಡುವುದು ಇದರ ಉದ್ದೇಶ.

ಈ ಸಂಸ್ಥೆಗೆ ಸೇರಿದಂತೆ ಇಂಗ್ಲಿಷ್, ಕನ್ನಡ ಮತ್ತು ಸಂಸ್ಕೃತ ಪುಸ್ತಕಗಳಿರುವ ದೊಡ್ಡ ಗ್ರಂಥ ಭಂಡಾರವಿದೆ, ವಾಚನಾಲಯವಿದೆ. ವಾರಕ್ಕೊಮ್ಮೆ ಸಂಸ್ಕೃತ, ಇಂಗ್ಲಿಷ್, ಕನ್ನಡ ಗ್ರಂಥಗಳ ವ್ಯಾಸಂಗ ಕೂಟಗಳು ನಡೆಯುತ್ತವೆ. 'ಪಬ್ಲಿಕ್ ಅಫೇರ್ಸ್' ಮಾಸಪತ್ರಿಕೆ ಪ್ರಕಟವಾಗುತ್ತದೆ.

ಈ ಸಂಸ್ಥೆಯ ಶಿಲ್ಪಿ ಹಾಗೂ ಅದರ ಜೀವನಾಡಿ ಕನ್ನಡದ ಖ್ಯಾತ ಸಾಹಿತಿ, ವಿಚಾರವಾದಿ ಡಾ. ಡಿ. ವಿ. ಗುಂಡಪ್ಪನವರು.

ನೋಡಿ : ಡಿ.ವಿ.ಜಿ—ಸಂಪುಟ ೫

ಗೋತಮಿ

ಆಕೆಗೆ ಇಬ್ಬರು ಮಕ್ಕಳು —ನಂದ ಮತ್ತು ಸುಂದರೀನಂದ. ಮಕ್ಕಳನ್ನು ನೋಡಿಕೊಳ್ಳಲು ದಾದಿಯರನ್ನು ಗೊತ್ತು ಮಾಡಿದಳು. ಏಳು ದಿನದ ಮಗುವನ್ನು ಬಿಟ್ಟು ತೀರಿಕೊಂಡಿದ್ದ ತನ್ನ ಅಕ್ಕನ ಮಗುವಿನ ಪೋಷಣೆಯ ಹೊಣೆಯನ್ನು ತಾನೇ ಹೊತ್ತುಕೊಂಡಳು.

ಇಂಥ ತ್ಯಾಗಿ, ವಿರಾಗಿಣಿ ಮಹಾಪ್ರಜಾಪತಿ ಗೋತಮಿ.

ಗೋತಮಿ ಸುಪ್ರಬುದ್ಧನ ಮಗಳು. ಮಹಾಮಾಯಾ ಅವಳ ಅಕ್ಕ. ಸುಪ್ರಬುದ್ಧ ಇವರಿಬ್ಬರನ್ನೂ ಕಪಿಲವಸ್ತುವಿನ ಅರಸ ಶುದ್ಧೋದನನಿಗೆ ಕೊಟ್ಟು ವಿವಾಹ ಮಾಡಿದ್ದ. ಸಿದ್ಧಾರ್ಥನ ಜನನವಾದ ಏಳನೆಯ ದಿನ ಮಹಾಮಾಯಾ ತೀರಿಕೊಂಡಳು. ಗೋತಮಿ ಈ ಮಗುವಿನ ಪೋಷಣೆ ರಕ್ಷಣೆಗಳನ್ನು ತಾನೇ ವಹಿಸಿಕೊಂಡಳು.

ಸಿದ್ಧಾರ್ಥ ಬುದ್ಧನಾದ ಬಳಿಕ ಒಮ್ಮೆ ಕಪಿಲವಸ್ತುವಿಗೆ ಭೇಟಿಕೊಟ್ಟ. ಬುದ್ಧನ ಉಪದೇಶವನ್ನು ಕೇಳಿ ಶುದ್ಧೋದನ ಅವನ ಅನುಯಾಯಿಯಾದ. ನಂದ ಮತ್ತು ಬುದ್ಧನ ಮಗ ರಾಹುಲ ಭಿಕ್ಷುಗಳಾದರು. ಶುದ್ಧೋದನ ನಿಧನಹೊಂದಿದ ಮೇಲೆ ಗೋತಮಿ ಸಂಸಾರ ವ್ಯಾಮೋಹ ತ್ಯಜಿಸಿ ವಿರಾಗಿಣಿಯಾಗಲು ನಿರ್ಧರಿಸಿದಳು. ಆಗ ತಾನೆ ನಡೆದಿದ್ದ ಯುದ್ಧದಲ್ಲಿ ತಮ್ಮ ಗಂಡಂದಿರನ್ನು ಕಳೆದುಕೊಂಡು ನೊಂದು ಭಿಕ್ಷುಣಿಯರಾಗಲು ಸಿದ್ಧರಾಗಿದ್ದ ವಿಧವೆಯರನ್ನು ಜೊತೆಗೆ ಕರೆದುಕೊಂಡು ಬುದ್ಧನಿದ್ದಲ್ಲಿಗೆ ಹೊರಟಳು. ಹಿಂದೊಮ್ಮೆ ಭಿಕ್ಷುಣಿಯಾಗಬೇಕೆಂದು ಗೋತಮಿ ಅಪೇಕ್ಷೆ ಪಟ್ಟಾಗ ಬುದ್ಧ ಒಪ್ಪಿಗೆ ಕೊಟ್ಟಿರಲಿಲ್ಲ. ಆದ್ದರಿಂದ ಈ ಬಾರಿ, ವೈಶಾಲಿಯಲ್ಲಿದ್ದ ಬುದ್ಧನನ್ನು ನೋಡುವ ಮೊದಲೇ, ಅವರೆಲ್ಲರೂ ತಲೆಗೂದಲು ತೆಗೆಸಿಕೊಂಡು, ಹಳದಿ ಬಟ್ಟೆ ಉಟ್ಟರು. ಈ ಬಾರಿಯೂ ಬುದ್ಧ ಅವರಿಗೆ ಭಿಕ್ಷುಣೀದೀಕ್ಷೆ ಕೊಡಲು ನಿರಾಕರಿಸಿದ. ಆದರೆ ಶಿಷ್ಯ ಆನಂದ ಬುದ್ಧನೊಡನೆ ವಾದಿಸಿ, ವಿರಾಗಿಗಳಾಗಲು ಪುರುಷರಂತೆ ಸ್ತ್ರೀಯರಿಗೂ ಅವಕಾಶ ಕೊಡಲು ಒಪ್ಪಿಸಿದ. ಬುದ್ಧ ಎಂಟು ನಿಯಮಗಳನ್ನು ಹಾಕಿ ಅವನ್ನು ಪಾಲಿಸುವವರು ಭಿಕ್ಷುಣಿಯರಾಗಬಹುದು ಎಂದ. ಬುದ್ಧನ ಸಾನ್ನಿಧ್ಯದಲ್ಲಿ ಗೋತಮಿ ಭಿಕ್ಷುಣಿಯಾದಳು. ಧ್ಯಾನಾಸಕ್ತಳಾಗಿ ಆಕೆ ನಿಯಮಬದ್ಧ ಜೀವನ ನಡೆಸಿದಳು.

120ನೆಯ ವರ್ಷದಲ್ಲಿ ಅವಳ ಅಂತ್ಯವಾಯಿತು. ಅವಳು ಮರಣಶಯ್ಯೆಯಲ್ಲಿದ್ದಾಗ ಬುದ್ಧ ಆಕೆಯನ್ನು ನೋಡಲು ಬರುತ್ತಿದ್ದ.

ನೋಡಿ : ಸಿದ್ಧಾರ್ಥ

ಗೋದಾವರಿ

ಆಕಸ್ಮಿಕವಾಗಿ ಬಂದಿದ್ದ ಗೋಹತ್ಯಾ ಪಾಪ ನಿವಾರಿಸಿಕೊಳ್ಳಲು ಗೌತಮ ಋಷಿ ಶಿವನನ್ನು ಪ್ರಾರ್ಥಿಸಿ ಪಡೆದ ಗಂಗೆಯಿಂದ ಹುಟ್ಟಿದ ನದಿ ಗೋದಾವರಿ –ಎಂದು ಪುರಾಣ ಕಥೆ. ಭಗೀರಥನು ಭೂಲೋಕಕ್ಕೆ ಗಂಗೆಯನ್ನು ತರುವುದಕ್ಕೆ ಮೊದಲೇ ಗೌತಮನು ಶಿವನಿಂದ ಈ ಗಂಗಾಜಲವನ್ನು ಪಡೆದಿದ್ದರಿಂದ ಇದಕ್ಕೆ 'ವೃದ್ಧಗಂಗಾ' ಎಂಬ ಹೆಸರೂ ಇದೆ.

ಮಹಾರಾಷ್ಟ್ರದ ನಾಸಿಕ ಜಿಲ್ಲೆಯ ತ್ರ್ಯಂಬಕದ ಬಳಿಯಿರುವ ಬ್ರಹ್ಮಗಿರಿಯಲ್ಲಿ ಗೋದಾವರಿಯ ಉಗಮ. ಪಶ್ಚಿಮ ಕರಾವಳಿಯಿಂದ ಇದು ಕೇವಲ 50 ಮೈಲು ದೂರದಲ್ಲಿದೆ. ಹರಿಯುವುದು ಪೂರ್ವ ದಿಕ್ಕಿನಲ್ಲಿ. ಬಂಗಾಳ ಕೊಲ್ಲಿಯನ್ನು ಸೇರುವ ವರೆಗಿನ ಈ ನದಿಯ ಉದ್ದ ಸುಮಾರು 900 ಮೈಲು. ಸುಮಾರು 650 ಮೈಲುಗಳಷ್ಟು ಪೂರ್ವಮುಖವಾಗಿ ಹರಿದ ನದಿ ಅನಂತರ ಆಗ್ನೇಯ ದಿಕ್ಕಿಗೆ ಹೊರಳುತ್ತದೆ. ಪ್ರಾಣಹಿತ, ಇಂದ್ರಾವತಿ, ಶಾವೇರಿ ಹೊಳೆಗಳು ಗೋದಾವರಿಯನ್ನು ಸೇರುತ್ತವೆ. ಈ ಸಂಗಮ ಪ್ರದೇಶದಲ್ಲಿ ಸುಮಾರು 2½ ಮೈಲುಗಳಷ್ಟು ವಿಶಾಲವಾಗಿ ಹರಿಯುವ ನದಿ, ಪೂರ್ವ ಘಟ್ಟವನ್ನು ರಭಸದಿಂದ ದಾಟುವಾಗ ಸುಮಾರು 200 ಗಜಗಳಷ್ಟು ಕಿರಿದಾಗುತ್ತದೆ. ರಾಜಮಹೇಂದ್ರಿಯ ಬಳಿ ಪುನಃ 2 ಮೈಲು ಅಗಲದಲ್ಲಿ ಹರಿದು, ಮುಂದೆ 4 ಮೈಲು ವಿಶಾಲವಾಗುತ್ತದೆ.

ಧವಳೇಶ್ವರದಲ್ಲಿ ಈ ನದಿ ಎರಡಾಗಿ ಕವಲೊಡೆಯುತ್ತದೆ. ಇವನ್ನು ಗೌತಮ ಗೋದಾವರಿ, ವಸಿಷ್ಠ ಗೋದಾವರಿ ಎಂದೂ ಕರೆಯುತ್ತಾರೆ. ಕವಲೊಡೆಯುವುದಕ್ಕೆ ತುಸು ಮೇಲ್ಗಡೆ ಈ ನದಿಗೆ ಒಂದು ಅಣೆಕಟ್ಟು ಕಟ್ಟಿದ್ದಾರೆ. ಇದು 1890ರಲ್ಲಿ ಪೂರ್ಣಗೊಂಡಿತು. ತಗಲಿದ ವೆಚ್ಚ 227 ಲಕ್ಷ ರೂಪಾಯಿ. ಈ ಅಣೆಕಟ್ಟಿನಿಂದ 1,299 ಸಾವಿರ ಎಕರೆಗಳಷ್ಟು ವ್ಯವಸಾಯ ಭೂಮಿಗೆ ನೀರು ಒದಗುತ್ತದೆ.

ಭದ್ರಾಚಲಂ, ರಾಜಮಹೇಂದ್ರಿ, ಕೋಟಿಪಲ್ಲಿ –ಗೋದಾವರಿಯ ತೀರದಲ್ಲಿನ ಪ್ರಮುಖ ಸ್ಥಳಗಳು. ವೇದಗಳಲ್ಲಿ ಗೋದಾವರಿ ಬಗೆಗೆ ಯಾವುದೇ ಪ್ರಸ್ತಾಪವಿಲ್ಲದಿದ್ದರೂ ಪುರಾಣ, ಮಹಾಕಾವ್ಯಗಳಲ್ಲಿ ಹಲವು ಉಲ್ಲೇಖಗಳಿವೆ. ಭಾರತದ ಏಳು ಪವಿತ್ರ ನದಿಗಳಲ್ಲಿ ಗೋದಾವರಿ ಒಂದು ಎಂದು ನಂಬಿಕೆ.

ನೋಡಿ : ಭದ್ರಾಚಲಂ

ಗೋಪಾಲಕೃಷ್ಣ ಗೋಖಲೆ

ಶಾಲೆಯಲ್ಲಿ ಗಣಿತದ ತರಗತಿ. ಉಪಾಧ್ಯಾಯರು ಮನೆಯಲ್ಲಿ ಮಾಡಿಕೊಂಡು ಬರಲು ಲೆಕ್ಕ ಕೊಟ್ಟಿದ್ದರು. ಇಡೀ ತರಗತಿಯಲ್ಲಿ ಒಬ್ಬ ಹುಡುಗ ಮಾತ್ರ ಲೆಕ್ಕವನ್ನು ಸರಿಯಾಗಿ ಮಾಡಿಕೊಂಡು ಬಂದಿದ್ದ. ತರಗತಿಯಲ್ಲಿ ಮೊದಲನೆಯ ಜಾಗದಲ್ಲಿ ಕುಳಿತುಕೊಳ್ಳುವಂತೆ ಉಪಾಧ್ಯಾಯರು ಅವನಿಗೆ ಹೇಳಿದರು; ಹುಡುಗ ಅಳತೊಡಗಿದ. ಉಪಾಧ್ಯಾಯರು ವಿಚಾರಿಸಿದಾಗ ಹುಡುಗ, ತಾನು ಆ ಲೆಕ್ಕವನ್ನು ಬೇರೆಯವರಿಂದ ಮಾಡಿಸಿದ್ದರಿಂದ ಮೊದಲ ಜಾಗದಲ್ಲಿ ಕುಳಿತುಕೊಳ್ಳುವುದು ತಪ್ಪು ಎಂದ.



ವಜ್ರ, ಕಂಠಾಭರಣ : ಗೋಖಲೆ

ಆ ಹುಡುಗನೇ ಮುಂದೆ ಶ್ರೇಷ್ಠ ಶಿಕ್ಷಣವೇತ್ತ, ಸಮಾಜ ಸುಧಾರಕ ಹಾಗೂ ರಾಜನೀತಿಜ್ಞರಾಗಿ ರೂಪುಗೊಂಡ ಗೋಪಾಲಕೃಷ್ಣ ಗೋಖಲೆ.

ಜನನ 1866 ಮೇ 9ರಂದು, ಮಹಾರಾಷ್ಟ್ರದ ರತ್ನಾಗಿರಿ ಜಿಲ್ಲೆಯ ಕೊಟ್ಲುಕ್ ಎಂಬ ಹಳ್ಳಿಯಲ್ಲಿ. ಬಡತನದ ಬಾಲ್ಯ. ಬೀದಿ ದೀಪದ ಬೆಳಕಿನಲ್ಲಿ ವ್ಯಾಸಂಗ. 18ನೆಯ ವಯಸ್ಸಿನಲ್ಲಿ ಪದವೀಧರರಾಗಿ ಶಾಲಾ ಉಪಾಧ್ಯಾಯರಾದರು ; ಈ ವಿದ್ಯಾಸಂಸ್ಥೆ ಫರ್ಗುಸನ್ ಕಾಲೇಜ್ ಆದಾಗ, ಅಲ್ಲೂ ತಮ್ಮ ಅಧ್ಯಾಪಕವೃತ್ತಿ ಮುಂದುವರಿಸಿದರು. ಆ ಸಂಸ್ಥೆಯನ್ನು ಬೆಳೆಸಲು ನಿರಂತರವಾಗಿ ಶ್ರಮಿಸಿದರು. ತಿಂಗಳಿಗೆ ಕೇವಲ 75 ರೂಪಾಯಿ ಸಂಬಳ ತೆಗೆದುಕೊಳ್ಳುತ್ತ ಅವರ ಪ್ರಾಧ್ಯಾಪಕರಾಗಿಯೂ ಪ್ರಿನ್ಸಿಪಾಲರಾಗಿಯೂ ಕೆಲಸಮಾಡಿದರು.

ಮಹದೇವ ಗೋವಿಂದ ರಾನಡೆಯವರ ಪ್ರೇರಣೆಯಿಂದ ಗೋಖಲೆಯವರು ಸಾರ್ವಜನಿಕರಂಗವನ್ನು ಪ್ರವೇಶಿಸಿದರು : 'ಸಾರ್ವಜನಿಕ ಸಭಾ' ಎಂಬ ಸಂಸ್ಥೆಯನ್ನು ಸೇರಿದರು. ಕೇವಲ 26 ವರ್ಷ ವಯಸ್ಸಿನವರಾಗಿದ್ದಾಗ ಕಾಂಗ್ರೆಸ್ ಸದಸ್ಯರಾದರು. 33ನೆಯ ವಯಸ್ಸಿನಲ್ಲಿ ಮುಂಬಯಿ ಪ್ರಾಂತದ ಶಾಸನಸಭೆಯ ಸದಸ್ಯರಾದರು. ಅನಂತರ ಸ್ವಲ್ಪ ಕಾಲದಲ್ಲೇ ಕೇಂದ್ರಶಾಸನ ಸಭೆಗೆ ಆಯ್ಕೆಯಾದರು.

ಗೋಖಲೆಯವರ ಮಹತ್ವದ ಸಾಧನೆ, 'ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿ'ಯನ್ನು ಸ್ಥಾಪಿಸಿ ನಿಸ್ವಾರ್ಥ ದೇಶಸೇವಕರ ತಂಡವನ್ನು ನಿರ್ಮಿಸಿದ್ದು. ಗಾಂಧೀಜಿ ದಕ್ಷಿಣ ಆಫ್ರಿಕದಲ್ಲಿ ಭಾರತೀಯರ ಹಕ್ಕುಗಳಿಗಾಗಿ ಹೋರಾಡುತ್ತಿದ್ದಾಗ ಗೋಖಲೆ ಅಲ್ಲಿಗೆ ಹೋಗಿ ಗಾಂಧೀಜಿಗೆ ಬೆಂಬಲ ಕೊಟ್ಟರು. ಗಾಂಧೀಜೀ ಗೋಖಲೆಯವರನ್ನು ತಮ್ಮ ರಾಜಕೀಯ ಗುರು ಎಂದು ಭಾವಿಸಿದ್ದರು. ಗೋಖಲೆಯವರಲ್ಲಿ ಕುರಿಮರಿಯ ಸೌಮ್ಯ, ಸಿಂಹದ ಧೈರ್ಯ ಇದ್ದುವೆಂದೂ ಅವರು ಅಪಾರ ಕರುಣಾಶಾಲಿಯಾಗಿದ್ದರೆಂದೂ ಗಾಂಧೀಜೀ ಹೇಳಿದ್ದಾರೆ.

1915ರ ಫೆಬ್ರವರಿ 19ರಂದು ಗೋಖಲೆ ಪುಣೆಯಲ್ಲಿ ನಿಧನರಾದರು. ಆಗ ಬಾಲಗಂಗಾಧರ ತಿಲಕರು "ಗೋಖಲೆ ಭಾರತದ ವಜ್ರ, ಮಹಾರಾಷ್ಟ್ರೀಯರ ಕಂಠಾಭರಣ ಮತ್ತು ಕಾರ್ಯಕರ್ತರ ಅರಸ ಆಗಿದ್ದರು" ಎಂದು ಉದ್ಗರಿಸಿದರು.

1905ರಲ್ಲಿ ಕಾಶಿಯಲ್ಲಿ ನಡೆದ ಕಾಂಗ್ರೆಸ್ ಅಧಿವೇಶನಕ್ಕೆ ಗೋಖಲೆಯವರು ಅಧ್ಯಕ್ಷರಾಗಿದ್ದರು.

ನೋಡಿ : ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿ

ಗೋಲ್ಕೊಂಡ

ಕೋಹಿನೂರು ಮುಂತಾದ ಅಮೂಲ್ಯ ವಜ್ರಗಳ ಪ್ರಸ್ತಾಪ ಬಂದಾಗ ಗೋಲ್ಕೊಂಡದ ಹೆಸರು ನೆನಪಿಗೆ ಬರುತ್ತದೆ. ಇಲ್ಲಿ ವಜ್ರಗಳು ದೊರೆಯುತ್ತಿರಲಿಲ್ಲ; ಆದರೆ ಅವುಗಳಿಗೆ ಸಾಣೆ ಹಿಡಿದು ಹೊಳಪುಕೊಡುತ್ತಿದ್ದರು. ವಜ್ರಗಳ ಮಾರುಕಟ್ಟೆಯಾಗಿ ಗೋಲ್ಕೊಂಡ ಪ್ರಸಿದ್ಧವಾಗಿತ್ತು. 16ನೆಯ ಶತಮಾನದಲ್ಲಿ ಬಹಮನಿ ಸಾಮ್ರಾಜ್ಯ ಒಡೆದಾಗ ರೂಪುಗೊಂಡ ಐದು ರಾಜ್ಯಗಳಲ್ಲಿ ಗೋಲ್ಕೊಂಡವೂ ಒಂದು. ಇದನ್ನು ಆಳಿದ ಸುಲ್ತಾನ ಮನೆತನದ ಹೆಸರು ಕುತುಬ್ ಷಾಹಿ.

ಹೈದರಾಬಾದಿಗೆ ಐದು ಮೈಲು ದೂರದಲ್ಲಿದೆ —ಗೋಲ್ಕೊಂಡ. ಇಲ್ಲಿ ಕೋಟೆ, ಅರಮನೆ, ಗೋರಿಗಳ ಅವಶೇಷಗಳನ್ನು ಕಾಣಬಹುದು. ಅವುಗಳಿಂದ ಈ ದುರ್ಗದ ಹಿಂದಿನ ವೈಭವವನ್ನು ಗುರುತಿಸಬಹುದು.

ಗೋಲ್ಕೊಂಡ ರಾಜ್ಯಸ್ಥಾಪಕ ಖುಲಿ ಕುತುಬ್ ಷಾ. ಈತ ಬಹಮನಿ ರಾಜ್ಯದಲ್ಲಿ ಮಹಮ್ಮದ್ ಷಾ ಬಹಮನಿಯ ಆಳ್ವಿಕೆಯ ಕಾಲದಲ್ಲಿ ಒಬ್ಬ ಅಧಿಕಾರಿಯಾಗಿದ್ದ.

ಖುಲಿ ಷಾ 1512ರಲ್ಲಿ ಗೋಲ್ಕೊಂಡ ರಾಜ್ಯ ಸ್ಥಾಪಿಸಿ 1543ರ ವರೆಗೆ ಆಳಿದ. ಹೈದರಾಬಾದ್ ನಗರ ರಚನೆಗೆ ಕಾರಣನಾದವನು ಇವನು.


ಮೊಘಲ್ ಸಮ್ರಾಟರ ಮತ್ತು ಗೋಲ್ಕೊಂಡದವರ ನಡುವೆ ಪದೇ ಪದೇ ಯುದ್ಧಗಳು ನಡೆಯುತ್ತಲೇ ಇದ್ದುವು. 1687ರಲ್ಲಿ ಔರಂಗಜೇಬ್ ಇದನ್ನು ವಶಪಡಿಸಿಕೊಳ್ಳಲು ದೀರ್ಘ ಕಾಲ ಹೋರಾಡಿದರೂ ಅದು ಫಲಿಸಲಿಲ್ಲ. ಕೊನೆಗೆ ಗೋಲ್ಕೊಂಡದ ಸುಲ್ತಾನನ ಕಡೆಯ ಅಫ್‌ಘನ್ ಯೋಧ ಅಬ್ದುಲ್ಲ ಪನಿ ಎಂಬವನಿಗೆ ಆಸೆ ತೋರಿಸಿ, ಕೋಟೆಯ ಮಹಾದ್ವಾರ ತೆರೆಸಿ, ಮೊಘಲರು ಒಳನುಗ್ಗಬೇಕಾಯಿತು.

ಗೋಲ್ಕೊಂಡದ ಕಲ್ಲುಕೋಟೆ ಒಂದು ಗುಡ್ಡದ ಮೇಲಿದೆ. ಸುತ್ತಳತೆ ಮೂರು ಮೈಲುಗಳಿಗೂ ಹೆಚ್ಚು. ಕೋಟೆಯಿಂದ ಸುಮಾರು ಅರ್ಧ ಮೈಲು ದೂರದಲ್ಲಿ ಕುತುಬ್ ಷಾಹಿ ಮನೆತನದ ಗೋರಿಗಳಿವೆ. ಈ ಗೋರಿಗಳ ವಾಸ್ತುಶಿಲ್ಪ ಶೈಲಿ ವಿಶಿಷ್ಟವಾದದ್ದು. ಹಿಂದೂ ಸಂಕೇತಗಳಾದ ಕಮಲ ಮುಂತಾದ ವಿನ್ಯಾಸಗಳನ್ನು ಈ ಕಟ್ಟಡಗಳಲ್ಲಿ ಕಾಣಬಹುದು.

ನೋಡಿ : ಕುತುಬ್ ಷಾಹಿ

ಗುಡ್ಡದ ಮೇಲಿನ ಕಲ್ಲು ಕೋಟೆ





ವಿಸ್ತೀರ್ಣ : 3,813 ಚ. ಮೈಲು
ಜನಸಂಖ್ಯೆ : 8.57,771
ರಾಜಧಾನಿ : ಪಣಜಿ
ಭಾಷೆಗಳು : ಗೋವದಲ್ಲಿ : ಕೊಂಕಣಿ ; ದೀವ್ ದಮಾನ್‌ಗಳಲ್ಲಿ : ಗುಜರಾತೀ

ಗೋವ, ದಮಾನ್, ದೀವ್

ನಿಸರ್ಗದ ಚೆಲುವಿಗೆ ಹೆಸರಾದ ಗೋವ ಒಂದು ಕಾಲಕ್ಕೆ ಪೋರ್ಚುಗೀಸರ ಏಷ್ಯ ಸಾಮ್ರಾಜ್ಯದ ಮುಖ್ಯ ಕಾರ್ಯಸ್ಥಾನವಾಗಿದ್ದಿತು. ದೀವ್ ಗುಜರಾತ್ ಕರಾವಳಿಯ ಸಮೀಪದಲ್ಲಿರುವ ಒಂದು ದ್ವೀಪ. ದಮಾನ್ ಅದೇ ಕರಾವಳಿಯಲ್ಲಿರುವ ಒಂದು ಬಂದರು. ಮುಂಬಯಿಗೆ 200 ಮೈಲು ದಕ್ಷಿಣದಲ್ಲಿ ಗೋವ, 110 ಮೈಲು ಉತ್ತರದಲ್ಲಿ ದಮಾನ್, 275 ಮೈಲು ಉತ್ತರದಲ್ಲಿ ದೀವ್ ಇವೆ. ಇವೆಲ್ಲವೂ ಒಂದೇ ಆಡಳಿತಕ್ಕೆ ಸೇರಿವೆ. ಸ್ವತಂತ್ರ ಭಾರತ 1961ರಲ್ಲಿ ಪೋರ್ಚುಗೀಸ್ ನೆಲೆಗಳನ್ನು ತನ್ನ ಸ್ವಾಧೀನಕ್ಕೆ ತೆಗೆದುಕೊಂಡಿತು. ಗೋವ, ದಮಾನ್, ದೀವ್ ಕೇಂದ್ರ ಸರಕಾರದ ಆಡಳಿತಕ್ಕೊಳಪಟ್ಟುವು.

ಪೋರ್ಚುಗೀಸರ ಕಾಲದಲ್ಲಿ ಗೋವೆಯನ್ನು 'ಪೂರ್ವಪ್ರದೇಶದ ರಾಣಿ', 'ಚಿನ್ನದ ಗೋವ' ಎಂದು ಕರೆಯುತ್ತಿದ್ದರು. ಸಂಪತ್ತಿಗೆ, ಚೆಲುವಿಗೆ, ವೈಭವಕ್ಕೆ ಹೆಸರಾದ ನಾಡು ಇದು. ಪೋರ್ಚುಗೀಸರೂ ಡಚ್ಚರೂ ಅಂಗ್ಲರೂ ಇದರ ಪ್ರಭುತ್ವ ಪಡೆಯಲು ಪರಸ್ಪರ ಕಾದಾಡಿದ್ದುಂಟು.

ಇಂದಿನ ಗೋವ ಪ್ರದೇಶದ ದಕ್ಷಿಣ ತುದಿಯಲ್ಲಿ ಪ್ರಾಚೀನ ಹಿಂದೂ ಪಟ್ಟಣವಿದ್ದಿತು. ಅದರ ಗುರುತು ಈಗ ಸ್ವಲ್ಪವೂ ಕಂಡುಬರುವುದಿಲ್ಲ. ಪ್ರಾಚೀನ ದಂತಕಥೆಗಳಲ್ಲಿ ಹಾಗೂ ಇತಿಹಾಸದಲ್ಲಿ ಗೋವದ ಪ್ರಸ್ತಾಪಗಳಿವೆ. ಕೆಲವು ಶಾಸನಗಳಲ್ಲಿ ಹಾಗೂ ಪುರಾಣಗಳಲ್ಲಿ ಈ ಪಟ್ಟಣ ಗೋವೆ, ಗೋವಪುರಿ, ಗೋಮಾಂತಕ ಎಂಬುದಾಗಿ ಕರೆಯಲ್ಪಟ್ಟಿದೆ. ಮಧ್ಯಕಾಲೀನ ಅರಬಿ ಪ್ರವಾಸಿಗೆ ಇದು ಸಿಂದಾಬುರ್ ಅಥವಾ ಸಂದಬುರ್ ಆಗಿದ್ದಿತು.

10ನೆಯ ಶತಮಾನದಿಂದ 1312ರ ವರೆಗ ಗೋವವನ್ನು ಕದಂಬರು ಆಳುತ್ತಿದ್ದರು. ಸುಮಾರು 1370ರಲ್ಲಿ ಇದು ವಿಜಯನಗರ ಸಾಮ್ರಾಜ್ಯದ ವಶವಾಯಿತು. ಆಮೇಲೆ ಬಹಮನಿ ರಾಜ್ಯಕ್ಕೆ ಸೇರಿತು. ಅದು ಒಡೆದಾಗ ಬಿಜಾಪುರದ ಸುಲ್ತಾನನಿಗೆ ಅಧೀನವಾಯಿತು. ಗೋವೆಯಲ್ಲಿ ಅಂತರರಾಷ್ಟ್ರೀಯ ವ್ಯಾಪಾರಕ್ಕೇನು ಅಭಿವೃದ್ಧಿಗೊಂಡ ಪ್ರದೇಶ ಈಗಿನ ಹಳೆಯ ಗೋವ.

ಅಲ್ಫಾನ್ಸೊ ಆಲ್ಬುಕರ್ಕ್ 1510ರ ನವೆಂಬರ್ ತಿಂಗಳಿನಲ್ಲಿ ಗೋವೆಯನ್ನು ವಶಪಡಿಸಿಕೊಂಡ. ಪೋರ್ಚುಗೀಸರ ಕಾಲದಲ್ಲಿ ಗೋವ ವೈಭವದಿಂದ ಮೆರೆಯಿತು. ಪರ್ಷಿಯದಿಂದ ಹವಳ, ಮುತ್ತು ; ಚೀನದಿಂದ ರೇಷ್ಮೆ ಮತ್ತು ಪಿಂಗಾಣಿ ; ಪೋರ್ಚುಗಲ್ಲಿನ ಮಖಮಲ್ ; ಮಲಯದ ಸಾಂಬಾರ ಪದಾರ್ಥಗಳು ಇಲ್ಲಿನ ಪೇಟೆಯಲ್ಲಿ ದೊರೆಯುತ್ತಿದ್ದುವು. ನೌಕಾಧಿಪತಿಗಳು, ಮತಪ್ರಚಾರಕರು, ಪಂಡಿತರು, ರಾಜರು, ಯಾತ್ರಿಕರು, ಗೋವೆಯನ್ನು ಸಂದರ್ಶಿಸುತ್ತಿದ್ದರು. ಕ್ರೈಸ್ತ ಸಂತ ಫ್ರಾನ್ಸಿಸ್ ಝೇವಿಯರ್ ಇಂಥ ಮತ ಪ್ರಚಾರಕರಲ್ಲಿ ಪ್ರಮುಖ ; ಗೋವೆಯ ಬಹಳ ಜನರು ಕ್ರೈಸ್ತರಾಗಿ ಮತಾಂತರ ಹೊಂದಿದರು. ಇದು ಪೂರ್ವದ ಕ್ಯಾಥೊಲಿಕ ಧರ್ಮದ ಕೇಂದ್ರವೆನಿಸಿತು. ಸಂತ ಜೇವಿಯರನ ಸಂರಕ್ಷಿತ ದೇಹವನ್ನು 12 ವರ್ಷಕ್ಕೊಂದು ಬಾರಿ ಹೊರತೆಗೆದು ಭಕ್ತಾದಿಗಳ ದರ್ಶನಕ್ಕೆಂದು ಇರಿಸುವುದು ಪದ್ಧತಿ.



ಮಂಗೇಶ ದೇವಾಲಯ

ಗೋವ ಸುಮಾರು 450 ವರ್ಷ ಕಾಲ ಪೋರ್ಚುಗೀಸರ ವಶದಲ್ಲಿ ಇತ್ತು. ಪೂರ್ವ ಹಾಗೂ ಪಶ್ಚಿಮದ ಮಿಶ್ರ ಸಂಸ್ಕೃತಿಯನ್ನು ಅಧಿಕ ಗೋವೆಯಲ್ಲಿ ಕಾಣಬಹುದು.

ಭಾರತ ಸ್ವತಂತ್ರವಾದ ಮೇಲೂ ಪೋರ್ಚುಗೀಸರು ಗೋವೆಯಿಂದ ಕಾಲ್ತೆಗೆಯಲಿಲ್ಲ. ತಮ್ಮ ಪ್ರಜೆಗಳಾಗಿದ್ದ ಸ್ವಾತಂತ್ರ್ಯಕಾಂಕ್ಷಿ ಭಾರತೀಯರ ಮೇಲೆ ಅವರ ದಬ್ಬಾಳಿಕೆ ಉಗ್ರವಾಯಿತು. ಜನರು ಬಿಡುಗಡೆಗಾಗಿ ಹೋರಾಡಿದರು. 1961 ಡಿಸೆಂಬರ್ 19ರಂದು ಸ್ವತಂತ್ರ ಭಾರತದ ಸೇನೆಗಳು ಗೋವ, ದಮಾನ್, ದೀವ್‌ಗಳನ್ನು ಪ್ರದೇಶ ಈ ಪ್ರದೇಶಗಳನ್ನು ಮುಕ್ತಗೊಳಿಸಿದುವು.

'ಉಜ್ವಲವರ್ಣಗಳ ಚಿತ್ರಪಟ' ಎಂದು ಕರೆಯಲ್ಪಡುತ್ತಿರುವ ಗೋವ ಅರಬಿ ಸಮುದ್ರ ಹಾಗೂ ಪಶ್ಚಿಮ ಘಟ್ಟಗಳ ನಡುವಿನ ಕಿರಿದಾದ ಭೂಪ್ರದೇಶದಲ್ಲಿದೆ. ಕಡಲುದ್ದಕ್ಕೆ ತಾಳೆ, ತೆಂಗುಗಳು ಅಂಚುಕಟ್ಟಿ ನಿಂತಂತೆ ತೋರುತ್ತವೆ. ಗುಡ್ಡಗಳು ಸಾಲುಸಾಲಾಗಿ ಅಂತಸ್ತು ಅಂತಸ್ತಾಗಿ ಹಬ್ಬಿವೆ. ಸರೋವರಗಳು, ಕೊರಕಲುಗಳು, ಸಣ್ಣಪುಟ್ಟ ಜಲಪಾತಗಳು ಈ ಪ್ರದೇಶವನ್ನು ಮನೋಹರವಾಗಿಸಿವೆ. ಅರ್ವಾಲೆಮ್ ಜಲಪಾತ, ದೂಧ್ ಸಾಗರ್ ಜಲಪಾತಗಳು ಗೋವೆಯಲ್ಲಿ ಹೆಸರಾದುವು. ಇಲ್ಲಿನ ಹಸಿರು ಕಾಡುಗಳಲ್ಲಿ ಕಾಡುಮೃಗಗಳಿವೆ : ಚಿರತೆ, ಹುಲಿ, ಜಿಂಕೆಗಳಿವೆ.

ಗೋವ ಪ್ರದೇಶದಲ್ಲಿ ಹೆಸರಾದ ಉದ್ಯಾನಗಳು : ಮಾಂಡವಿ, ಜುರಾಯ್, ತೆರೆಖೋಲ್, ಛಪೋರ್, ಬಾಗ್, ತಲಪೋಣ, ಸಾಲ್, ಗಾಲ್ಜಿಬಾಗ್.




ಕಲಂಗುಟೆ ಕಡಲತೀರದಲ್ಲಿ ಜನರ ವಿಹಾರ



ಪಣಜಿ ; ಎತ್ತರದ ಕಟ್ಟಡ : ಪ್ರವಾಸೀ ವಸತಿಗೃಹ

ವಿಹಾರಾರ್ಥಿಗಳಾಗಿ, ವಿಲಾಸಪ್ರಿಯರಾಗಿ ಬರುವ ಪ್ರವಾಸಿಗರನ್ನು ಇಂಥ ಸುಂದರ ಪ್ರದೇಶ ಆಕರ್ಷಿಸುವುದು ಸಹಜವೇ. ಇಲ್ಲಿನ ಜನರೂ



ಮಾರ್ಮಗೋವ ಬಂದರಿನಿಂದ ಕಬ್ಬಿಣದ ಅದುರು ಸಾಗಣೆ

ಸಂತೋಷಚಿತ್ತರು. ಸಂಗೀತ-ನೃತ್ಯಪ್ರಿಯರು. ಮಾಂಡೋ ಇವರ ವಿಶಿಷ್ಟ ನೃತ್ಯ. ಹಬ್ಬ, ಉತ್ಸವಗಳನ್ನು ವಿನೋದ ಉಲ್ಲಾಸಗಳಿಂದ ಆಚರಿಸುವ ಜನ ಗೋವೆಯುವರು.



ಪಣಜಿ
ಸಮುದ್ರದಂಡೆ

ಹಳೆಯ ಗೋವೆಯಲ್ಲಿ, ಪಣಜಿಗೆ ಸಮೀಪವಾಗಿ ಪ್ರಸಿದ್ಧ ಇಗರ್ಜಿ ಇದೆ. ಅಸಿಸಿಯ ಸಂತ ಫ್ರಾನ್ಸಿಸ್, ಬಾಮ್ ಜೇಸಸ್, ಸಂತ ಜೇವಿಯರ್ ಮುಂತಾದ ಇಗರ್ಜಿಗಳಲ್ಲದೆ ಅಗೊವಾಡದ ಕೋಟೆ ಇಲ್ಲಿನ ಕೆಲವು ಗಮನಾರ್ಹ ಕಟ್ಟಡಗಳು. ಹಳೆಯ ಗೋವೆಯ ಬಳಿಯಿರುವ ಪೋಂಡಾ ದಲ್ಲಿ ಮಂಗೇಶ, ಶಾಂತದುರ್ಗಾ, ಮಹಾಲಸಾ ಮುಂತಾದ ದೇವಾಲಯ ಗಳಿವೆ. ಇಲ್ಲಿನ ಶ್ರೀ ಮಹಾದೇವ ದೇವಾಲಯ 13ನೆಯ ಶತಮಾನದ್ದು.

ಗೋವೆಯ ಮರ್ಮಗೋವ ಭಾರತದ ಉತ್ತಮ ನೈಸರ್ಗಿಕ ಬಂದರು ಗಳಲ್ಲಿ ಒಂದು. ಕಬ್ಬಿಣದ ಅದಿರು ಇಲ್ಲಿಂದ ರಫ್ತಾಗುತ್ತದೆ. ಗೋವ ದಲ್ಲಿ ಅಕ್ಕಿ ಮುಖ್ಯಬೆಳೆ. ತೆಂಗು, ಅಡಿಕೆ, ಗೋಡಂಬಿ, ಬಾಳೆ, ಮಾವು, ಅನಾನಸ್ ಇಲ್ಲಿ ಬೆಳೆಯುತ್ತವೆ.

ದೀವ್ : ಇದು ಒಂದು ದ್ವೀಪ. ಹಿಂದಿನ ಕಾಲದ ಒಂದು ಪ್ರಮುಖ ಬಂದರು. ಇಲ್ಲಿ ನೆಯ್ದ ಬಟ್ಟೆಗಳಿಗೆ ವಿದೇಶದಲ್ಲಿ ಒಳ್ಳೆಯ ಮಾರುಕಟ್ಟೆ ಇದ್ದಿತು. 1670ರಲ್ಲಿ ಅರಬರು ಇಲ್ಲಿನ ಸಂಪತ್ತನ್ನೆಲ್ಲ ಕೊಳ್ಳೆಹೊಡೆದರು.

ಇಲ್ಲಿನ ಜನರ ಮುಖ್ಯ ಕಸಬು ಉಪ್ಪು ತಯಾರಿಕೆ ಮತ್ತು ಮೀನು ಗಾರಿಕೆ. ಸಜ್ಜೆ, ತೆಂಗು ಇಲ್ಲಿನ ಪ್ರಧಾನ ಬೆಳೆಗಳು. ಇಲ್ಲಿರುವ ಬಹುಪಾಲು ಜನ ಗುಜರಾತಿಗಳು.

1535ರಲ್ಲಿ ಗುಜರಾತನ್ನು ಆಳುತ್ತಿದ್ದ ಬಹದ್ದೂರ್ ಷಾನ ಅಪ್ಪಣೆ ಪಡೆದು ಪೋರ್ಚುಗೀಸರು ಇಲ್ಲಿ ಒಂದು ಕೋಟೆ ಕಟ್ಟಿದರು. 1538 ಹಾಗೂ 1545ರಲ್ಲಿ ಇದರ ಮೇಲೆ ಎರಡು ಮುತ್ತಿಗೆಗಳಾದುವು. ಎರಡನೆಯ ಮುತ್ತಿಗೆ ಭಾರತ-ಪೋರ್ಚುಗಲ್ ಇತಿಹಾಸದ ಒಂದು ಸುಪ್ರಸಿದ್ಧ ಘಟನೆ. ಜೆರೊನಿಮೊ ಕೋರ್ಟರೀಲ್ ಎಂಬ ಪೋರ್ಚುಗೀಸ್ ಕವಿ ಇದನ್ನು ಒಂದು ಮಹಾಕಾವ್ಯದ ವಸ್ತುವಾಗಿ ಬಳಸಿದ್ದಾನೆ. ದೀವ್ ದ್ವೀಪದ ಉದ್ದ ಮೈಲು, ಅಗಲ 2 ಮೈಲು.

ದಮಾನ್ : ಕ್ಯಾಂಬೆ ಖಾರಿಯನ್ನು ಪ್ರವೇಶಿಸುವಲ್ಲಿ ಇರುವ ಬಂದರು ಪಟ್ಟಣ. 1531ರಲ್ಲಿ ಇದು ಪೋರ್ಚುಗೀಸರ ವಶವಾಯಿತು. ಇಲ್ಲಿನ ಕಟ್ಟಡ ಗಳು ಸಾಧಾರಣವಾಗಿ ಬಿಳಿಯ ಬಣ್ಣದವಾದ್ದರಿಂದ, ಈ ದ್ವೀಪ ಸಮುದ್ರದಲ್ಲಿ ದೂರದಿಂದಲೇ ಎದ್ದು ಕಾಣುತ್ತದೆ. ಒಂದು ಕಾಲಕ್ಕೆ ಇದಕ್ಕೆ ವಾಣಿಜ್ಯ ಮಹತ್ವವಿದ್ದಿತು.

ಈಗ ಪ್ರತ್ಯೇಕ ಕೇಂದ್ರಾಡಳಿತ ಪ್ರದೇಶಗಳಾಗಿರುವ ದಾದ್ರ ಹಾಗೂ ನಗರಹವೇಲಿ ಮೊದಲಿಗೆ ದಮಾನ್‌ಗೆ ಸೇರಿದ್ದುವು. ಭತ್ತ, ಗೋಧಿ, ಕಬ್ಬು, ತಂಬಾಕು ಇಲ್ಲಿ ಬೆಳೆಯುತ್ತವೆ. ಇಲ್ಲಿನ ಉಪ್ಪು ತಯಾರಿಸುವ ಕೇಂದ್ರಗಳು ಬಹಳ ಕಾಲದಿಂದ ಹೆಸರುವಾಸಿ. ಮೀನುಗಾರಿಕೆ ಒಂದು ಮುಖ್ಯ ಉದ್ಯಮ. ಸಿಂಗಪುರ, ಕೊಲಂಬೊ, ಬ್ರಿಟನ್‌ಗಳಿಗೆ ಮೀನು ರಫ್ತಾಗುತ್ತದೆ.

ಈ ಮೂರು ಪ್ರದೇಶಗಳ ಅತಿ ಮುಖ್ಯ ಉದ್ಯಮ ಗೋವೆಯಲ್ಲಿ ನಡೆಯುವ ಕಬ್ಬಿಣದ ಗಣಿಕೆಲಸ ಹಾಗೂ ರಫ್ತು. ಪಿಂಗಾಣಿ ಜೇಡಿ ಮತ್ತು ಸುಣ್ಣಕಲ್ಲುಗಳ ನಿಕ್ಷೇಪ ಸಾಕಷ್ಟಿವೆ. ಒಳ್ಳೆಯ ಮ್ಯಾಗ್ನೀ ಸಿಯಂ ದೊರೆಯುತ್ತದೆ. ಅಕ್ಕಿ ಗಿರಣಿ, ನೆಯ್ಗೆ, ಆಹಾರವಸ್ತು

ಮುಖ್ಯ ಮಂತ್ರಿ : ಶಶಿಕಲಾ ಕಾಕೋ



ಸಂಸ್ಕರಣೆ, ಇಟ್ಟಿಗೆ, ಹೆಂಚು, ಐಸ್, ಸಾಬೂನು, ಕಾರ್ಬಾನಿಕ್ ಆಸಿಲ ತಯಾರಿಕೆ ಇತರ ಮುಖ್ಯ ಉದ್ಯಮಗಳು. ಪದರಹಲಗೆ, ಪೇಯಿಂಟ್, ವೈನ್, ಬಿಸ್ಕತ್ತು ಮುಂತಾದವು ಇತರ ಉದ್ಯಮಗಳು. ರಾಸಾಯನಿಕಗಳು, ವಸ್ತ್ರ, ಮರ, ಮೀನಿನ ಎಣ್ಣೆ, ಉಪ್ಪು, ಕೃಷಿಯಂತ್ರಗಳ ತಯಾರಿಕೆ ಮುಂತಾದ [illegible] ಸಣ್ಣ ಪ್ರಮಾಣ ಕೈಗಾರಿಕೆಗಳು. [illegible] ವಿಮಾನ ನಿಲ್ದಾಣವಿದೆ. ಇಲ್ಲಿನ ಪ್ರಸಿದ್ಧ ನಿಲ್ದಾಣದ ಹೆಸರು ದಾಬೋಲ್ಮ್.

ನೋಡಿ : ಪಣಜಿ

ಗೋವಿಂದ ವಲ್ಲಭ ಪಂತ್

ಒಮ್ಮೆ ಅತಿಥಿಯೊಡನೆ ಅವರು ಚಹಾ ತೆಗೆದುಕೊಳ್ಳಲು ಕುಳಿತರು. ಚಹಾದ ಬಟ್ಟಲು ಹಿಡಿದ ಅವರ ಕೈ ನಡುಗುತ್ತಿತ್ತು. ಕಾರಣ ಕೇಳಿದ ಅತಿಥಿಗೆ, "1930ರಲ್ಲಿ ಲಖನೌದಲ್ಲಿ ಪೋಲೀಸರಿಂದ ತಿಂದ ಹೊಡೆತದ ಫಲ ಇದು," ಎಂದು ವಿವರಿಸಿದರು.



ಭಾರತರತ್ನ : ಪಂತ್

ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ ಈ ಖ್ಯಾತ ರಾಷ್ಟ್ರೀಯ ಮುಖಂಡ ಗೋವಿಂದ ವಲ್ಲಭ ಪಂತ್.

ಜನನ 1887ರ ಸೆಪ್ಟೆಂಬರ್ 10. ಅಲಹಾಬಾದ್ ವಿಶ್ವವಿದ್ಯಾನಿಲಯದಲ್ಲಿ ಓದಿ ಕಾನೂನು ಪದವಿ ಪಡೆದರು. ಅಲಹಾಬಾದ್ ಉಚ್ಚ ನ್ಯಾಯಾಲಯದಲ್ಲಿ ವಕೀಲರಾದರು. ಅಸಾಧಾರಣ ತಿಳಿವಳಿಕೆ ಮತ್ತು ತೀಕ್ಷ್ಣ ವಿವೇಚನಾಶಕ್ತಿ ಉಳ್ಳವರೆಂದು ಹೆಸರು ಗಳಿಸಿದರು. ಸೈಮನ್ ಆಯೋಗದ ವಿರುದ್ಧ ನಡೆದ ಚಳುವಳಿಯಲ್ಲಿ ಗೋವಿಂದ ವಲ್ಲಭ ಪಂತ್ ಭಾಗವಹಿಸಿದರು. ಸ್ವಾತಂತ್ರ್ಯಪೂರ್ವ ಸಂಯುಕ್ತ ಪ್ರಾಂತ ಭೂ ಸುಧಾರಣಾ ಸಮಿತಿಯ ಅಧ್ಯಕ್ಷರಾಗಿದ್ದರು. 1934ರಲ್ಲಿ ಕೇಂದ್ರ ಶಾಸನಸಭೆಗೆ ಆಯ್ಕೆಯಾಗಿ, ಕಾಂಗ್ರೆಸ್ ಪಕ್ಷದ ಮುಖಂಡರಾದರು. 1937ರಲ್ಲಿ ಸಂಯುಕ್ತ ಪ್ರಾಂತದ ಮುಖ್ಯಮಂತ್ರಿಯಾದರು. ಸ್ವತಂತ್ರ ಭಾರತದ ಕೇಂದ್ರಮಂತ್ರಿಮಂಡಲದಲ್ಲಿ ಹಲವು ವರ್ಷ ಗೋವಿಂದ ವಲ್ಲಭ ಪಂತ್ ಗೃಹಮಂತ್ರಿಯಾಗಿದ್ದರು. 1957ರಲ್ಲಿ ಇವರಿಗೆ ಭಾರತರತ್ನ ಪ್ರಶಸ್ತಿ ನೀಡಲಾಯಿತು. 1961ರಲ್ಲಿ ಅವರು ನಿಧನ ಹೊಂದಿದರು.

ಗೋಳಗುಮ್ಮಟ

ನೋಡಿ : ಸಂಪುಟ 9.

ಗೋಳವಲ್ಕರ್

ನೋಡಿ : ಎಂ.ಎಸ್ ಗೋಳವಲ್ಕರ್

ಗೌತಮನ 'ನ್ಯಾಯಸೂತ್ರ'

ಪ್ರಾಚೀನ ಭಾರತದಲ್ಲಿ ಬೆಳೆದುಬಂದ ತರ್ಕಶಾಸ್ತ್ರ ವಿಚಕ್ಷಣವಾದದ್ದು. ಇದಕ್ಕೆ ಆಧಾರ ಗೌತಮನ 'ನ್ಯಾಯಸೂತ್ರ'. ಗೌತಮನನ್ನು 'ಭಾರತೀಯ ತರ್ಕದ ಜನಕ' ಎಂದು ಕರೆಯುತ್ತಾರೆ. ಇವನ ಕಾಲ ಸುಮಾರು ಕ್ರಿ. ಪೂ. 150 ರಿಂದ ಸುಮಾರು ಕ್ರಿ. ಶ. 100ರೊಳಗಿನ [illegible].

ಹಿಂದೂಧರ್ಮದ ಪ್ರಕಾರ ಮೋಕ್ಷಸಾಧನೆಗೆ ಆರು ಪಂಥಗಳಿವೆ. ಈ ಷಡ್ದರ್ಶನಗಳಲ್ಲಿ 'ನ್ಯಾಯ'ವೂ ಒಂದು. ಗೌತಮ 'ನ್ಯಾಯ' ಪಂಥದ ಸೂತ್ರಗಳನ್ನು ನಿರೂಪಿಸಿದ್ದಾನೆ. ಸ್ಪಷ್ಟವಾಗಿ ತರ್ಕಬದ್ಧ ಆಲೋಚನಾ ಮಾರ್ಗ ತೋರಿಸಿದ್ದಾನೆ. ವಾದದ ಸೂತ್ರಗಳು, ವಾದ ವಿವಾದದ ಯುಕ್ತಿಗಳು ಇವುಗಳ ವಿವೇಚನೆ ಗೌತಮನ 'ನ್ಯಾಯಸೂತ್ರ'ದ ತಿರುಳು. ಸಂಪೂರ್ಣ ಜ್ಞಾನದಿಂದ 'ಅಪವರ್ಗ' ಎಂದರೆ ಬಿಡುಗಡೆ ಸಾಧ್ಯ ಎನ್ನುವುದು ನ್ಯಾಯಶಾಸ್ತ್ರದ ಸಿದ್ಧಾಂತ. ಈ ಮಟ್ಟಕ್ಕೆ ಏರಬೇಕಾದರೆ ತರ್ಕಬದ್ಧ ಆಲೋಚನೆಯೇ ಸಾಧನ.

ಮನುಷ್ಯನ ವಿಚಾರಶಕ್ತಿಯನ್ನು ಬೆಳೆಸುವ ವಿಧಾನವನ್ನು 'ನ್ಯಾಯಸೂತ್ರ' ಪ್ರಮುಖವಾಗಿ ತಿಳಿಸುತ್ತದೆ.

ಗೌರಿಬಿದನೂರು ಭೂಕಂಪನಮಾಪನ ಕೇಂದ್ರ

ಪ್ರಪಂಚದ ಬೇರೆ ಬೇರೆ ಭಾಗಗಳಲ್ಲಿ ಭೂಮಿಯ ಒಳಗೆ ನಡೆಸುವ ಪರಮಾಣು ಸ್ಫೋಟನಗಳನ್ನು ಪತ್ತೆಹಚ್ಚುವ ಭಾರತೀಯ ಭೂಕಂಪ ಮಾಪನ ಕೇಂದ್ರಗಳಲ್ಲಿ ಪ್ರಮುಖವಾದದ್ದು ಗೌರಿಬಿದನೂರಿನ ಕೇಂದ್ರ. ಗೌರಿಬಿದನೂರು ಬೆಂಗಳೂರಿನಿಂದ 80 ಕಿ. ಮೀ. ದೂರದಲ್ಲಿದೆ.

ಇದನ್ನು ಭಾಭಾ ಪರಮಾಣು ಸಂಶೋಧನಾ ಕೇಂದ್ರ 1965ರ ಅಂತ್ಯದ ವೇಳೆಗೆ ಸ್ಥಾಪಿಸಿತು. ಇದರ ಸ್ಥಾಪನೆಯಲ್ಲಿ ಬ್ರಿಟನಿನ ಆಟಾಮಿಕ್ ಎನರ್ಜಿ ಅಥಾರಿಟಿ ಸಂಸ್ಥೆಯ ಸಹಕಾರ ದೊರೆಯಿತು. ಗೌರಿಬಿದನೂರು ಕೇಂದ್ರ 20 ಸಂವೇದಕಗಳಿಂದ ಸಜ್ಜಿತವಾಗಿದೆ. ಇವು ಸುಮಾರು 25 ಕಿ. ಮೀ. ಚದರ ಪ್ರದೇಶವನ್ನು ವ್ಯಾಪಿಸಿವೆ. ಭೂಮಿಯೊಳಗೆ ನಡೆಸುವ ಪರಮಾಣು ಸ್ಫೋಟನೆಗಳನ್ನು ಗುರುತಿಸಲೂ ಇವು ನೆರವಾಗುತ್ತವೆ. ಅಲ್ಲದೆ, ಭೂಕಂಪ ವಿಜ್ಞಾನದ ಸಂಶೋಧನೆಗೂ ಉಪಯುಕ್ತವಾಗಿದೆ.

ವರ್ಷದ ಎಲ್ಲ ಕಾಲಗಳಲ್ಲೂ ಗೌರಿಬಿದನೂರು ಕೇಂದ್ರ ಕಾರ್ಯನಿರತವಾಗಿರುತ್ತದೆ. ಇಲ್ಲಿ ದಾಖಲಾದ ಸ್ಥಾನಿಕ ಭೂಕಂಪನ ಕ್ರಿಯೆಗಳ ಆಧಾರದಿಂದ ಗೌರಿಬಿದನೂರಿನ ಸುತ್ತಮುತ್ತಲಿನ ಭೂಮಿಯ ಕವಚದ ಬಗೆಗೆ ಅಧ್ಯಯನಗಳು ಕೂಡ ನಡೆದಿವೆ.

ಘಜ್ನಿ ಮುಹಮ್ಮದ್

ಮಹಮ್ಮದನು ದಾಳಿಕಾರನಾಗಿ ಭಾರತದ [illegible] ಒಂದರಿಂದಲೇ 7,00,000 ಚಿನ್ನದ ನಾಣ್ಯ, 700 ಮಣ ಚಿನ್ನ ಮತ್ತು ಬೆಳ್ಳಿಯ ತಟ್ಟೆ, 200 ಮಣ ಶುದ್ಧ ಚಿನ್ನದ ತುಂಡು, 2,000 ಮಣ ಬೆಳ್ಳಿ, ಮತ್ತು ಮುತ್ತು, ಹವಳ, ವಜ್ರ, ಕೆಂಪು ಸೇರಿ 20 ಮಣ ಒಡವೆಗಳನ್ನು ಲೂಟಿ ಮಾಡಿಕೊಂಡು ಹೋದ. ಭಾರತದ ಮೇಲೆ ದಂಡೆತ್ತಿಬಂದು ಈ ಅತುಲ ಸಂಪತ್ತನ್ನು ಕೊಳ್ಳೆ ಹೊಡೆದ ದಾಳಿಕಾರ ಘಜ್ನಿ ಮುಹಮ್ಮದ್.

ಘಜ್ನಿಯ ದೊರೆ ಸಬುಕ್ತಗೀನನ ಮಗ ಮುಹಮ್ಮದ್. ಜನನ 971ರಲ್ಲಿ. 997ರಲ್ಲಿ ತಂದೆಯ ಮರಣಾನಂತರ ಅರಸನಾದ.



ಸಂಪತ್ತಿನ ಕೊಳ್ಳೆ : ಘಜ್ನಿ

ಆಗ ಭಾರತದಲ್ಲಿ ಅನೇಕ ಚಿಕ್ಕಪುಟ್ಟ ರಾಜ್ಯಗಳಿದ್ದು ರಾಜರಲ್ಲಿ ಐಕಮತ್ಯವಿರಲಿಲ್ಲ. 1001ರಿಂದ 1026ರ ಅವಧಿಯಲ್ಲಿ ಇವನು ಭಾರತದ ಮೇಲೆ 17 ಬಾರಿ ದಂಡೆತ್ತಿ ಬಂದ. 1001ರಲ್ಲಿ ಪೆಷಾವರ್ ಬಳಿ ಜಯಪಾಲನನ್ನು ಸೋಲಿಸಿದ. ಜಯಪಾಲ ಆತ್ಮಹತ್ಯೆ ಮಾಡಿಕೊಂಡ. 1014ರಲ್ಲಿ ಸ್ಥಾನೇಶ್ವರ, 1018ರಲ್ಲಿ ಕನ್ನೌಜ್ ಇವನ ವಶವಾದುವು. 1026ರಲ್ಲಿ ಪ್ರಖ್ಯಾತ ಸೋಮನಾಥ ದೇವಾಲಯವನ್ನು ದೋಚಿದ. ವಿಗ್ರಹಗಳನ್ನು ನಾಶಮಾಡಿದ. ಅರಮನೆ, ದೇವಾಲಯಗಳನೇಕವನ್ನು ಲೂಟಿ ಮಾಡಿದ್ದಲ್ಲದೆ, ಹಾಳುಗೆಡವಿದ. ವಾಯುವ್ಯಗಡಿ ಪ್ರದೇಶ ಮತ್ತು ಪಂಜಾಬನ್ನು ತನ್ನ ಸಾಮ್ರಾಜ್ಯಕ್ಕೆ ಸೇರಿಸಿಕೊಂಡ.

ಪಶ್ಚಿಮದ ಕೊನೆಯ ಭಾಗದಲ್ಲಿ ಸೆಲ್ಜೂಕರ ಆಕ್ರಮಣವನ್ನು ಮಹಮ್ಮದ್ ಎದುರಿಸಬೇಕಾಯಿತು. ತಾನು ಸಾಯುವವರೆಗೂ ಅವರನ್ನು ತಡೆಹಿಡಿದಿದ್ದ. 1030ರಲ್ಲಿ ತೀರಿಕೊಂಡ.

ಕವಿಗಳಾದ ಫಿರ್ದೂಸಿ, ಅನ್ಸುರಿ, ಅಸಾದಿ ಅವನ ಆಸ್ಥಾನದಲ್ಲಿದ್ದರು. ಅಲ್‌ಬಿರುನಿ ಇವನ ಆಸ್ಥಾನದಲ್ಲಿದ್ದ ಪಂಡಿತ.

ಘಾಲಿಬ್

ನೋಡಿ : ಸಂಪುಟ ೨

ಘುಮುರ್ ನೃತ್ಯ

"ಅತ್ತೆಯವರೇ, ಅವಕುಂಠನವನ್ನು ಕಣ್ಣೆತ್ತರಕ್ಕೆ ಸರಿಸಿದ್ದೇನೆ — ಲಜ್ಜೆಯಿಂದ; ಆದರೆ, ತುಂಬ ಸಂತಸದಿಂದ . . ."

—ಘುಮುರ್ ನೃತ್ಯ ಕಾಲದಲ್ಲಿ ಹಾಡುವ ಗೀತದ ಒಂದು ಚರಣ ಇದು.

ಬಣ್ಣ ಬಣ್ಣದ ಉಡುಪು ತೊಟ್ಟು ಚಿನ್ನ ಬೆಳ್ಳಿಯ ಒಡವೆಗಳನ್ನು ಧರಿಸಿ, ಹೂಗಳಿಂದ ಅಲಂಕರಿಸಿಕೊಂಡು ಹಾಡುತ್ತ ನರ್ತಿಸುವ ಸರಳ ನೃತ್ಯ ಘುಮುರ್ : ಇದು ರಾಜಸ್ಥಾನದ ವಿವಿಧ ಪ್ರದೇಶಗಳಲ್ಲಿ ಪ್ರಚಾರದಲ್ಲಿದೆ.

ಇದೇ ಹೆಸರಿನ ಭಿಲ್ಲರ ನೃತ್ಯವೂ ಒಂದಿದೆ. ಆದರೆ ಅದಕ್ಕಿಂತ ಇದು ಭಿನ್ನ. ರಾಜಸ್ಥಾನದ ಘುಮುರ್ ನೃತ್ಯದಲ್ಲಿ ಸ್ತ್ರೀಯರು ಮಾತ್ರ ಭಾಗವಹಿಸುತ್ತಾರೆ. ಕಾಮನ ಹುಣ್ಣಿಮೆ, ಯುಗಾದಿ, ದೀಪಾವಳಿ ಮುಂತಾದ ಹಬ್ಬ ಹರಿದಿನಗಳಲ್ಲಿ ಈ ನೃತ್ಯದಲ್ಲಿ ತೊಡಗುವುದು ಪದ್ಧತಿ. ವರ್ತುಲಾಕಾರದಲ್ಲಿ ಹಾಡುತ್ತ ಹಿಂದಕ್ಕೆ ಮುಂದಕ್ಕೆ ಸರಿಯುತ್ತ ವೃತ್ತಾಕಾರದಲ್ಲಿ ಚಲಿಸುತ್ತಾರೆ. ಕೈಗಳನ್ನು ಮೇಲಕ್ಕೆತ್ತಿ ದಯಾಪೂರ್ಣ ಭಂಗಿಯಲ್ಲಿ ನಾಜೂಕಾಗಿ ಕುಣಿಯುತ್ತಾರೆ.



' ...ಕಣ್ಣೆತ್ತರಕ್ಕೆ ಸರಿಸಿದ್ದೇನೆ... ' : ಘುಮುರ್

ಘುಮುರ್ ಒಂದು ಧಾರ್ಮಿಕ ನೃತ್ಯ ; ಪಟ್ಟಣವಾಸಿಗಳು ಹಾಗೂ ಹಳ್ಳಿಯ ಜನತೆಯಲ್ಲಿ ಇದು ಏಕಪ್ರಕಾರವಾಗಿ ರೂಢಿಯಲ್ಲಿದೆ.

ಘೆರಾವ್

ನೋಡಿ : ಸಂಪುಟ ೧

ಘೋರಿ ಮುಹಮ್ಮದ್

ಘಜ್ನಿ ಮಹಮ್ಮದನ ಮರಣಾನಂತರ ಅವನ ಸಾಮ್ರಾಜ್ಯ ದುರ್ಬಲವಾದಾಗ, ಅಫ್‌ಘಾನಿಸ್ತಾನದ ಘೂರ್ (ಬಳಿಕೆಯಲ್ಲಿ ಘೋರಿ)ನಲ್ಲಿ ಒಂದು ರಾಜ್ಯ ಹುಟ್ಟಿಕೊಂಡಿತು. ಅದರ ಆಡಳಿತ 1173ರಲ್ಲಿ ಶಿಹಾಬುದ್ದೀನನನಿಗೆ ವಹಿಸಲ್ಪಟ್ಟಿತು. ಮುಂದೆ ಘೋರಿ ಮಹಮ್ಮದ್ ಎಂದು ಹೆಸರಾದವನು ಇವನೇ.

ಇವನು 1175ರಲ್ಲಿ ಭಾರತದ ಮೇಲೆ ದಂಡೆತ್ತಿ ಬಂದ. ಮುಲ್ತಾನ್ ಮತ್ತು ಉಚ್‌ಕೋಟೆಗಳು ಇವನ ವಶವಾದುವು. ಮೂರು ವರ್ಷಗಳ ಅನಂತರ ಗುಜರಾತನ್ನು ಆಕ್ರಮಿಸಲು ಇವನು ನಡೆಸಿದ ಪ್ರಯತ್ನ ವಿಫಲವಾಯಿತು. ಆದರೆ ಇದರಿಂದ ಇವನು ಹತಾಶನಾಗಲಿಲ್ಲ. ಮಾರನೆಯ ವರ್ಷ ಪೆಷಾವರನ್ನು ಆಕ್ರಮಿಸಿದ. 1181ರಲ್ಲಿ ಸಿಯಾಲ್‌ಕೋಟ್‌ನಲ್ಲಿ ಒಂದು ಕೋಟೆ ಕಟ್ಟಿ ತನ್ನ ಸ್ಥಾನವನ್ನು ಭದ್ರಪಡಿಸಿಕೊಂಡ. ಲಾಹೋರನ್ನು ವಶಪಡಿಸಿಕೊಂಡು ಪಂಜಾಬಿನಲ್ಲಿ ಪ್ರಬಲನಾದ. ಇದರಿಂದಾಗಿ ಭಾರತದ ಮೇಲೆ ದಾಳಿಗಳನ್ನು ಮುಂದುವರಿಸಲು ತುಂಬ ಅನುಕೂಲವಾಯಿತು. ಅವನು ಪಂಜಾಬಿನಿಂದ ಮುಂದುವರಿದಾಗ ಅವನನ್ನು ಧೈರ್ಯವಾಗಿ ಇದಿರಿಸಿದ ಪೃಥ್ವೀರಾಜನ ಮರಣ, ಮಹಮ್ಮದ್ ಘೋರಿ ದೆಹಲಿಯ ಕಡೆಗೆ ನುಗ್ಗಲು ಅವಕಾಶ ಮಾಡಿಕೊಟ್ಟಿತು. ಈ ದಾಳಿಗಳಲ್ಲಿ ಘೋರಿಗೆ ಸಹಾಯಕನಾಗಿ ಹೋರಾಡಿದ ಕುತುಬುದ್ದೀನ್ ದೆಹಲಿಯಲ್ಲಿ ರಾಜಪ್ರತಿನಿಧಿಯಾಗಿ ನಿಂತು ತನ್ನ ಸ್ಥಾನವನ್ನು ಬಲಪಡಿಸಿಕೊಂಡ.

1203ರಲ್ಲಿ ಅಣ್ಣ ಘಿಯಾಸುದ್ದೀನ್ ಮಹಮ್ಮದ್ ಸತ್ತಮೇಲೆ ಘೋರಿ ಮುಹಮ್ಮದ್ ಅಣ್ಣನ ಘಜ್ನಿ ರಾಜ್ಯಕ್ಕೆ ಅರಸನಾದ. ಇತ್ತ ಭಾರತದ ಮೇಲೆ ಘೋರಿಯ ಹಿಡಿತ ಕಡಮೆಯಾಯಿತು. ಅವನು ತನ್ನ ವಿರೋಧಿಗಳನ್ನು ಧ್ವಂಸಮಾಡುವ ಪ್ರಯತ್ನವನ್ನೇನೋ ನಡೆಸಿದ. ಆದರೆ 1206ರಲ್ಲಿ ದಮ್ಯಾಕ್ ಎಂಬಲ್ಲಿ ಕೊಲೆಗೀಡಾದ. ಉತ್ತರಾಧಿಕಾರಿಗಳು ಯಾರೂ ಇರಲಿಲ್ಲ. ಅವನು ಆಕ್ರಮಿಸಿಕೊಂಡಿದ್ದ ಭಾರತ ಪ್ರದೇಶದಲ್ಲಿ ಅವನ ಪ್ರತಿನಿಧಿಯಾಗಿದ್ದ ಕುತುಬುದ್ದೀನ್ ಐಬಕ್ ತಾನೇ ಅರಸನಾಗಿ ದೆಹಲಿಯಲ್ಲಿ ಗುಲಾಮ ಸಂತತಿಯ ಪ್ರವರ್ತಕನಾದ.

ಚಂಡಿ

ಪಾರ್ವತಿಯ ರುದ್ರರೂಪಗಳಲ್ಲಿ ಒಂದನ್ನು ಚಂಡಿ ಎಂದು ಕರೆಯುತ್ತಾರೆ. ಬೇರೆಯವರು ಹೇಳಿದ ಮಾತನ್ನು ಕೇಳದೆ ಮೊಂಡತನ ಮಾಡು

ನವರನ್ನೂ ಚಂಡಿ ಎಂದು ನಿಂದಿಸುವ ಅಭ್ಯಾಸವಿದೆ. ಇಂಥ ಚಂಡಿಯೊಬ್ಬಳ ಕಥೆ ಜೈಮಿನಿ ಭಾರತದಲ್ಲಿ ಬರುತ್ತದೆ.

ದೇವಿಯ ಅವತಾರವಾದ ಚಂಡಿಯ ಕಥೆ ದೇವೀ ಭಾಗವತ ಮುಂತಾದ ಪುರಾಣ ಗ್ರಂಥಗಳಲ್ಲಿ ದೊರೆಯುತ್ತದೆ. ಶುಂಭ, ನಿಶುಂಭರೆಂಬ ರಾಕ್ಷಸ



ದೇವಿಯ ಅವತಾರ : ಚಂಡಿ

ಸಹೋದರರು ತಪಸ್ಸಿನಿಂದ ಬ್ರಹ್ಮನನ್ನು ಮೆಚ್ಚಿಸಿದರು. ಅಯೋನಿಜೆಯಾದ ಕನ್ಯೆಯಿಂದಲ್ಲದೆ ಮತ್ತಾರಿಂದಲೂ ತಮಗೆ ಸಾವು ಬಾರದಂತೆ ವರ ಪಡೆದು ಲೋಕಕಂಟಕರಾದರು. ಇವರನ್ನು ಧ್ವಂಸ ಮಾಡಲು ಆದಿಶಕ್ತಿ ತನ್ನ ದೇಹದಿಂದ ಅತ್ಯಂತ ಸುಂದರಿಯಾದ ಕನ್ಯೆಯನ್ನು ಸೃಷ್ಟಿಸಿದಳು. ಅವಳು ಶುಂಭ, ನಿಶುಂಭರನ್ನೂ ಅವರ ಶೂರ ಸೇನಾನಿಗಳಾದ ಚಂಡ, ಮುಂಡರನ್ನೂ ಸಂಹಾರ ಮಾಡಿದಳು. ಆದ್ದರಿಂದ ಆದಿಶಕ್ತಿಯ ದೇಹದಿಂದ ಹೊರಹೊಮ್ಮಿದ ಕೌಶಿಕೆಯೆಂಬ ಅಂಶಕ್ಕೆ ಚಂಡಿ (ಚಂಡನನ್ನು ಕೊಂದವಳು) ಚಾಮುಂಡಾ (ಚಂಡ ಮುಂಡರನ್ನು ಕೊಂದವಳು) ಎಂಬ ಹೆಸರು ಬಂತು.

ಮಾರ್ಕಂಡೇಯ ಪುರಾಣದಲ್ಲಿ ಬರುವ ಈ ಕಥಾಭಾಗವನ್ನು ಚಂಡಿ ಎಂದು ಕರೆಯುತ್ತಾರೆ. ನವರಾತ್ರಿಯ ಸಂದರ್ಭದಲ್ಲಿ ಇದರ ಪಾರಾಯಣ ಮಾಡುತ್ತಾರೆ. ಚಂಡಿಯ ಪ್ರೀತ್ಯರ್ಥವಾಗಿ ಈ ಕಾಲದಲ್ಲಿ ಚಂಡೀಹೋಮ ಮಾಡುವುದೂ ಉಂಟು.

ಚಂಡೀಗಢ

'ಪ್ರಪಂಚದ ಅತ್ಯಂತ ಆಧುನಿಕ ನಗರ' ಎಂದು ಕರೆಯಲ್ಪಟ್ಟಿದೆ, ಚಂಡೀಗಢ. ಇದರ ನಿರ್ಮಾಣ ಆರಂಭವಾದದ್ದು 1950ರಲ್ಲಿ; ಜನವಾಸ ಮೊದಲಾದದ್ದು 1953ರಲ್ಲಿ.

ಭಾರತದ ವಿಭಜನೆಯಾದಾಗ ಪಂಜಾಬ್ ಪ್ರಾಂತ ಎರಡಾಗಿ ಒಡೆಯಿತು. ಅಖಂಡ ಪಂಜಾಬಿನ ರಾಜಧಾನಿಯಾಗಿದ್ದ ಲಾಹೋರ್ ಪಾಕಿಸ್ತಾನಕ್ಕೆ ಸೇರಿತು. ಭಾರತದ ಪಾಲಿಗೆ ಬಂದ ಪಂಜಾಬಿಗೆ ಒಂದು ಹೊಸ ರಾಜಧಾನಿ ಬೇಕಾಯಿತು. ವಿಶಿಷ್ಟ ರೀತಿಯ ರಾಜಧಾನಿ ನಿರ್ಮಿಸಲು ಭಾರತ ಸರಕಾರ ನಿರ್ಧರಿಸಿತು. ಅದರ ನಿರ್ಮಾಣದ ಹೊಣೆ ಹೊತ್ತವರು ಖ್ಯಾತ ಫ್ರೆಂಚ್ ವಾಸ್ತುಶಿಲ್ಪಿ ಲಾ ಕಾರ್ಬೂಸ್ಯಾ ಹಾಗೂ ಅವರ ಸಂಗಡಿಗರು. ಭಾರತೀಯ ವಾಸ್ತುಶಿಲ್ಪಿಗಳೂ ಈ ತಂಡದಲ್ಲಿದ್ದರು.

ಚಂಡೀಗಢ ದೆಹಲಿಯಿಂದ 150 ಮೈಲು ದೂರದಲ್ಲಿ ಸುಖಿಮಾ ಹಾಗೂ ಪಾಟಿಯಾಲಾ ನದಿಗಳ ನಡುವೆ ಇದೆ. ಸುತ್ತಲೂ ಹಸಿರಿನ ವಲಯ. ನಗರದ ಪ್ರತಿ ವಿಭಾಗದಲ್ಲೂ ನಾಗರಿಕ ಸೌಲಭ್ಯಗಳ ದೃಷ್ಟಿಯಿಂದ ಸ್ವಯಂಪೂರ್ಣತೆ, ಈ ಪಟ್ಟಣ ರಚನೆಯ ವೈಶಿಷ್ಟ್ಯ.

ನಗರವನ್ನು ಒಟ್ಟು 36 ವಿಭಾಗ ಮಾಡಲಾಗಿದೆ. ಇದರಲ್ಲಿ 30 ವಿಭಾಗಗಳು ವಸತಿ ಸೌಕರ್ಯವುಳ್ಳವು. ಇಂಥ ಪ್ರತಿ ವಿಭಾಗದಲ್ಲಿ 15,000 ಜನ ವಾಸಿಸಬಹುದು. ನಗರದ ಬೇರೆ ಬೇರೆ ವಲಯಗಳು ಬೇರೆ ಬೇರೆ ವಿಶೇಷ ಉದ್ದೇಶಗಳಿಗಾಗಿ ಕಟ್ಟಲ್ಪಟ್ಟಿವೆ. ಚಂಡೀಗಢದ ಆಡಳಿತ ಕಟ್ಟಡದ ಸ್ಥಾಪತ್ಯ ಭವ್ಯವಾದದ್ದು. ಇತರ ಮುಖ್ಯ ನಿರ್ಮಾಣಗಳು ವಿಶ್ವವಿದ್ಯಾನಿಲಯ, ಸ್ಟೇಡಿಯಂ, ಬಯಲು ನಾಟ್ಯಮಂದಿರ, ಕಾಲೇಜುಗಳು, ಆಸ್ಪತ್ರೆಗಳು, ಪುರಭವನ ಮುಂತಾದುವು. ನಗರದ ರಸ್ತೆಗಳು ವಾಹನಗಳ ಸಂಚಾರಕ್ಕಾಗಿ ಹಾಗೂ ಪಾದಚಾರಿ ಸಂಚಾರಕ್ಕಾಗಿ ಎಂದು ಪ್ರತ್ಯೇಕಿಸಲ್ಪಟ್ಟಿವೆ.

ನವನಿರ್ಮಾಣ ಚಂಡೀಗಢ; ಆರ್ಟ್ಸ್ ಕಾಲೇಜು



ಚಂಡೀಗಡದ ಜನಸಂಖ್ಯೆ 2,57,251.

ಚಂಡೀಗಡದ ಉತ್ತರಕ್ಕೆ ಒಂದು ಸರೋವರವಿದೆ. ಇದು ಒಳ್ಳೆಯ ವಿಹಾರಸ್ಥಳ. ಚಂಡೀಗಡ ಶಿವಾಲಿಕ್ ಶ್ರೇಣಿಗಳ ತಪ್ಪಲಿನಲ್ಲಿ ಇದೆ. ಚಂಡಿಯ ದೇವಾಲಯವೊಂದರಿಂದ ಊರಿಗೆ ಈ ಹೆಸರು ಬಂದಿದೆ.

ಪಂಜಾಬಿನಲ್ಲಿ ಹಿಂದೀ ಭಾಷೆ ಪ್ರಧಾನವಾಗಿದ್ದ ಪ್ರದೇಶ 1966ರಲ್ಲಿ ಹರ್ಯಾಣ ಎಂಬ ಪ್ರತ್ಯೇಕ ರಾಜ್ಯವಾದಾಗ, ಚಂಡೀಗಡ ನಗರ ತಾತ್ಕಾಲಿಕವಾಗಿ ಆ ರಾಜ್ಯಕ್ಕೂ ರಾಜಧಾನಿಯಾಯಿತು.

ಚಂಡೀದಾಸ

ಬಂಗಾಳದ ಅತ್ಯುಚ್ಚ ಸಂತ ಕವಿ ಚಂಡೀದಾಸ. ಅಗಸರ ಹುಡುಗಿ ರಾಮಿಯನ್ನು ಕಂಡ ಚಂಡೀದಾಸ ಆಕೆ ಬೃಂದಾವನದ ಗೋಪಿಯರಲ್ಲಿ ಒಬ್ಬಳೆಂದು ಭಾವಿಸಿ ಆಕೆಯನ್ನು ಆರಾಧಿಸಿದ. ಆತನ ಪ್ರೀತಿ ಪರಿಶುದ್ಧ. ರಾಧಾಕೃಷ್ಣರ ಪ್ರಣಯವನ್ನು ರೂಪಿಸುವ ಭಕ್ತಿಗೀತೆಗಳನ್ನು ಆತ ರಚಿಸಲು ರಾಮಿಯೇ ಸ್ಫೂರ್ತಿ.



ರಾಮಿಯ ಸ್ಫೂರ್ತಿ : ಚಂಡೀದಾಸ

ಚಂಡೀದಾಸನ ಕಾಲ 1417—77. ಜನಿಸಿದ್ದು ವೀರಭೂಮಿ ಪ್ರದೇಶದಲ್ಲಿ. ದೇವಿಯ ಉಪಅರ್ಚಕ ವೃತ್ತಿ ತಂದೆಯಿಂದ ಚಂಡೀದಾಸನಿಗೆ ಬಂದಿತು. ಆತ ಅಗಸರ ಹುಡುಗಿ, ರಾಮಿಯನ್ನು ತ್ಯಜಿಸಿದರೆ ಮಾತ್ರ ಅರ್ಚಕನಾಗಿ ಮುಂದುವರಿಯಬಹುದು ಎಂದು ಚಂಡೀದಾಸನಿಗೆ ಊರಿನ ಜನ ಹೇಳಿದರು. ರಾಮಿಯನ್ನು ಬಿಡಲು ಅವನು ಒಪ್ಪಲಿಲ್ಲ. ಅರ್ಚಕ ವೃತ್ತಿಯೂ ಹೋಯಿತು ; ಬಹಿಷ್ಕಾರವೂ ಬಿತ್ತು.

ರಾಮಿಯಿಂದಾಗಿ ಚಂಡೀದಾಸ ಶಕ್ತಿಪೂಜೆ ಬಿಟ್ಟು ವೈಷ್ಣವನಾದ.

ಚಂಡೀದಾಸನ ಭಕ್ತಿಗೀತೆಗಳು ಉಜ್ವಲ ಕಲ್ಪನೆ, ಗಾಢ ಚಿಂತನೆ, ಲಯಗತಿಯಿಂದ ಕೂಡಿ ಎಲ್ಲ ಕಾಲಕ್ಕೂ ಅದ್ಭುತ ಎನಿಸುವಂತಿವೆ.

ಪ್ರಖ್ಯಾತ ಕವಿ ವಿದ್ಯಾಪತಿ, ಚಂಡೀದಾಸನ ವಿಚಾರ ಕೇಳಿ, ನಡೆದುಕೊಂಡೇ ಹೋಗಿ ಆ ಸಂತಕವಿಯನ್ನು ಗೌರವಿಸಿ ಬಂದ.

ಗೌರ್‌ನ ನವಾಬನ ಒಬ್ಬಳು ಪತ್ನಿ ಚಂಡೀದಾಸನಿಗೆ ಮಾರುಹೋದಳು; ಆತನನ್ನು ಪ್ರೀತಿಸತೊಡಗಿದಳು : ಅಸೂಯೆಯಿಂದ ನವಾಬ ಚಂಡೀದಾಸನನ್ನು ಕೊಲ್ಲಿಸಲು [illegible] ಪ್ರಯತ್ನ ನಡೆಸಿದ ; [illegible] ಕೊನೆಗೆ ಆನೆಯ ಬೆನ್ನಿಗೆ ಚಂಡೀದಾಸನನ್ನು ಕಟ್ಟಿ ಊರಲ್ಲೆಲ್ಲ ಮೆರವಣಿಗೆ ಮಾಡಿಸಿ, ಚಾವಟಿಯಿಂದ ಹೊಡೆಸಿದ ; ಅದರಿಂದ ಚಂಡೀದಾಸ ಮರಣಹೊಂದಿದ ಎಂಬ ಹೇಳಿಕೆಯಿದೆ.

ಚಂದ್ರಗುಪ್ತ ಮೌರ್ಯ

ಭಾರತದಲ್ಲಿ ಪ್ರಥಮವಾಗಿ ಮಹಾನ್ ಚಕ್ರಾಧಿಪತ್ಯ ಸ್ಥಾಪಿಸಿದವನು ಚಂದ್ರಗುಪ್ತ ಮೌರ್ಯ ಈತ ಮೌರ್ಯ ವಂಶದ ಮೂಲಪುರುಷ.

ಚಾಣಕ್ಯನ ಸಹಾಯದಿಂದ ನಂದರನ್ನು ಸೋಲಿಸಿ ಚಂದ್ರಗುಪ್ತ ಮಗಧದ ಅರಸನಾದ. ಆಳ್ವಿಕೆಯ ಕಾಲ ಕ್ರಿ.ಪೂ. 324ರಿಂದ 300. ಉತ್ತರ ಭಾರತದ ಬಹುಭಾಗ ಅವನಿಗೆ ಒಳಪಟ್ಟಿತ್ತು.

ಅಲೆಗ್ಸಾಂಡರ್ ಭಾರತದ ಮೇಲೆ ದಂಡೆತ್ತಿ ಬಂದು ಭಾರತದ ಪಶ್ಚಿಮ, ವಾಯುವ್ಯ ಪ್ರದೇಶಗಳನ್ನು ವಶಪಡಿಸಿಕೊಂಡಿದ್ದ. ಕ್ರಿ.ಪೂ. 323ರಲ್ಲಿ ಅಲೆಗ್ಸಾಂಡರ್ ನಿಧನನಾದ. ಅವನು ನೇಮಿಸಿದ್ದ ಪ್ರಾಂತಾಧಿಕಾರಿಗಳನ್ನು ಜನ ಕೊಂದು ಸ್ವತಂತ್ರರಾದರು. ಇದಕ್ಕೆ ಕಾರಣನಾದವನು 'ಸಂದ್ರೋಕೊಟ್ಟೋಸ್' ಎಂದು ಗ್ರೀಕ್ ಚರಿತ್ರಕಾರನೊಬ್ಬ ಬರೆದಿದ್ದಾನೆ. ಚಂದ್ರಗುಪ್ತನೇ ಆತ ಹೇಳಿರುವ ಸಂದ್ರೋಕೊಟ್ಟೋಸ್.

ಚಂದ್ರಗುಪ್ತ ಕ್ರಿ.ಪೂ. 305ರಲ್ಲಿ ಅಲೆಗ್ಸಾಂಡರನ ಕಡೆಯವನಾದ ಸೆಲ್ಯೂಕಸ್‌ನನ್ನು ಸೋಲಿಸಿ ಗ್ರೀಕರಿಗೆ ಸೇರಿದ್ದ ಪಂಜಾಬ್ ಮತ್ತಿತರ ಭಾಗಗಳನ್ನು ತನ್ನ ರಾಜ್ಯಕ್ಕೆ ಸೇರಿಸಿಕೊಂಡ.

ಸೆಲ್ಯೂಕಸ್ ಕಳುಹಿಸಿದ್ದ ರಾಯಭಾರಿ ಮೆಗಾಸ್ತನೀಸ್ ಚಂದ್ರಗುಪ್ತನ ರಾಜ್ಯಭಾರದ ಬಗೆಗೆ ಹೀಗೆ ಬರೆದಿದ್ದಾನೆ :

"ಚಂದ್ರಗುಪ್ತನ ರಾಜಧಾನಿ ಪಾಟಲಿಪುರ. ಅವನು ತನ್ನ ಚಕ್ರಾಧಿಪತ್ಯವನ್ನು ಆಡಳಿತ ಭಾಗಗಳಾಗಿ ವಿಂಗಡಿಸಿ ಪ್ರಾಂತಾಧಿಕಾರಿಗಳಿಗೆ ವಹಿಸಿ ಕೊಟ್ಟಿದ್ದ. ಸೈನ್ಯ, ಕಾರ್ಯಾಂಗ, ನ್ಯಾಯಾಂಗ ಎಂದು ಆಡಳಿತ ವಿಭಾಗಗಳಿದ್ದುವು. ಜನಜೀವನ ಸುಖಮಯವಾಗಿತ್ತು. ಕಳ್ಳರ ಹಾವಳಿ ಇರಲಿಲ್ಲ."

ಚಂದ್ರಗುಪ್ತ ತನ್ನ ಕೊನೆಗಾಲದಲ್ಲಿ ಭದ್ರಬಾಹುವೆಂಬ ಜೈನಗುರುವಿನೊಡನೆ ಶ್ರವಣಬೆಳಗೊಳಕ್ಕೆ ಬಂದು ಅಲ್ಲಿ ಸಲ್ಲೇಖನ ವ್ರತದಿಂದ ಪ್ರಾಣತ್ಯಾಗ ಮಾಡಿದನೆಂದು ಜೈನ ಉಲ್ಲೇಖವಿದೆ.

ನೋಡಿ : ಭದ್ರಬಾಹು

ಚಂದ್ರ ಗುಪ್ತ ವಿಕ್ರಮಾದಿತ್ಯ

ರಾಮ ಗುಪ್ತ ದುರ್ಬಲ ರಾಜ. ಈತನ ಪತ್ನಿ ಧ್ರುವದೇವಿ ಬಹು ಲಾವಣ್ಯವತಿ. ರಾಮ ಗುಪ್ತ ಶಕರಾಜನ ಬೆದರಿಕೆಗೆ ಒಳಗಾಗಿ ತನ್ನ ಪತ್ನಿಯನ್ನು ಅವನಿಗೆ ಒಪ್ಪಿಸಲು ಸಮ್ಮತಿಸಿದ. ರಾಮ ಗುಪ್ತನ ತಮ್ಮನಿಗೆ ಈ ವಿಷಯ ತಿಳಿಯಿತು. ಧ್ರುವದೇವಿಯಂತೆ ವೇಷ ಧರಿಸಿಕೊಂಡು ಹೋಗಿ ಶಕ ರಾಜನನ್ನು ವಧೆ ಮಾಡಿದ. ತನ್ನ ರಾಜ್ಯಕ್ಕೆ ಹಿಂದಿರುಗಿ ರಾಮ ಗುಪ್ತನನ್ನು ಕೊಂದು, ಧ್ರುವದೇವಿಯನ್ನು ವಿವಾಹ ಮಾಡಿಕೊಂಡ; ಪಟ್ಟಾಭಿಷಿಕ್ತನಾದ. ಚಂದ್ರ ಗುಪ್ತನ ಬಗೆಗೆ ಪ್ರಚಲಿತವಿರುವ ಕಥೆ ಇದು. ಆತನೇ ವಿಕ್ರಮಾದಿತ್ಯ, ಶಕಾರಿ ಮೊದಲಾದ ಬಿರುದುಗಳನ್ನು ಪಡೆದಿದ್ದ ಎರಡನೆಯ ಚಂದ್ರ ಗುಪ್ತ.

ಸಮುದ್ರ ಗುಪ್ತನ ಎರಡನೇ ಮಗ ಚಂದ್ರ ಗುಪ್ತ. ವಿಶಾಲವಾದ ಚಕ್ರಾಧಿಪತ್ಯ ಇವನದಾಗಿತ್ತು. ರಾಜ್ಯವನ್ನು ಮತ್ತಷ್ಟು ವಿಸ್ತರಿಸುವ ಹಂಬಲದಿಂದ ಉಜ್ಜಯಿನಿಯ ಹಾಗೂ ಪಶ್ಚಿಮ ಮಾಳ್ವ ಮತ್ತು ಕಾಠೇ



...ರಮಾದಿತ್ಯ, ಶಕಾರಿ : ಚಂದ್ರ ಗುಪ್ತ

ವಾಡದ ಶಕರನ್ನು ಸೋಲಿಸಿದ. ಪೂರ್ವ ಮಾಳ್ವದ ಮುಖ್ಯಸ್ಥನಿಂದ ಗೌರವ ಕಾಣಿಕೆ ಪಡೆದುಕೊಂಡ.

ಚಂದ್ರ ಗುಪ್ತನ ರಾಜಧಾನಿ ಉಜ್ಜಯಿನಿ. ಆಳ್ವಿಕೆಯ ಕಾಲ 380ರಿಂದ 413. ಸುಮುಖವಾದ ಆಡಳಿತದ ದೃಷ್ಟಿಯಿಂದ ನಾಗಾ ರಾಜಕುಮಾರಿಯನ್ನು ಮದುವೆಯಾದ. ಮಧ್ಯ ಭಾರತದಲ್ಲಿ ಪ್ರಬಲರಾಗಿದ್ದ ವಾಕಾಟಕ ರಾಜಪುತ್ರನೊಂದಿಗೆ ತನ್ನ ಮಗಳ ವಿವಾಹ ನೆರವೇರಿಸಿದ.

ಅವನ ಆಸ್ಥಾನದಲ್ಲಿ 'ನವರತ್ನ'ಗಳಿದ್ದರು ; ಇವರಲ್ಲಿ ಕಾಳಿದಾಸ, ವರಾಹಮಿಹಿರ ಮುಖ್ಯರಾದವರು —ಎನ್ನುತ್ತಾರೆ.

ಇವನ ನಾಣ್ಯಗಳ ಮೇಲೆ 'ವಿಕ್ರಮಾದಿತ್ಯ' ಎಂಬ ವಿಶೇಷ ಗುಣವಾಚಕವನ್ನು ಕಾಣಬಹುದು.

ಚೀನೀ ಯಾತ್ರಿಕ ಫಾಹಿಯಾನ್ ಚಂದ್ರ ಗುಪ್ತನ ಆಡಳಿತವನ್ನು ಪ್ರಶಂಸಿಸಿದ್ದಾನೆ. ರಾಜ್ಯದಲ್ಲಿ ಶಾಂತಿ, ಸಮಾಧಾನ ನೆಲೆಸಿದ್ದುವು. ಗುರುತರ ಅಪರಾಧಗಳು ಅಷ್ಟಾಗಿ ಆಗುತ್ತಿರಲಿಲ್ಲ ; ಅರಸ ವಿದ್ಯಾಪೋಷಕ ; ನ್ಯಾಯಪಕ್ಷಪಾತಿ ; ಎಂದಿದ್ದಾನೆ. ಅವನ ಆಳ್ವಿಕೆಯ ಕಾಲವನ್ನು 'ಸ್ವರ್ಣಯುಗ' ಎಂದು ಕರೆಯುವುದುಂಟು.

ಚಂದ್ರವಳ್ಳಿ

ಕರ್ನಾಟಕದ ಚಿತ್ರದುರ್ಗದಲ್ಲಿ ಒಂದು ಕೋಟೆಯಿದೆ. ಇದರ ಬಳಿ ಒಂದು ಚಿಕ್ಕ ನದಿ ಹರಿಯುತ್ತದೆ. ಈ ನದಿ ಕಣಿವೆಯೇ ಚಂದ್ರವಳ್ಳಿ ಪ್ರದೇಶ. ಇಲ್ಲಿ ಪುರಾತನ ಅವಶೇಷಗಳು ದೊರೆತಿವೆ.

ಚಂದ್ರವಳ್ಳಿಗೆ ಸಂಬಂಧಪಟ್ಟಂತೆ ಮಹಾಭಾರತ ವೀರರನ್ನು ಕುರಿತ ಕಥೆಗಳಿವೆ. ಹಿಡಿಂಬಾಸುರ, ಭೀಮ ಮೊದಲಾದವರು ಇಲ್ಲಿ ವಾಸಿಸುತ್ತಿದ್ದರೆಂದು ಪ್ರತೀತಿ.

ಚಿನ್ನದ ಶೋಧಕ್ಕಾಗಿ ಇಲ್ಲಿ ಪ್ರಾಯೋಗಿಕ ಗುಳಿಗಳನ್ನು ತೆಗೆದಾಗ ಭೂವಿಜ್ಞಾನಿಗಳಿಗೆ ಇಲ್ಲಿ ಆಶ್ಚರ್ಯ ಕಾದಿತ್ತು. ಅಲ್ಲಿ ಕರ್ನಾಟಕದಲ್ಲಿ ಆಳಿದ ಶಾತವಾಹನರ ಹಾಗೂ ಚೀನದ ಚಕ್ರವರ್ತಿಗಳ ನಾಣ್ಯಗಳು ದೊರೆತುವು.

ಅನಂತರ ಚಂದ್ರವಳ್ಳಿ ಪ್ರದೇಶದಲ್ಲಿ ವ್ಯವಸ್ಥಿತ ಭೂ ಶೋಧನೆ ಆರಂಭವಾಯಿತು. ಆಗ ಶಿಲಾಯುಗ ಮತ್ತು ನವಶಿಲಾಯುಗಗಳಲ್ಲಿ ಮಾನವ ಉಪಯೋಗಿಸುತ್ತಿದ್ದ ಉಪಕರಣಗಳು ಸಿಕ್ಕಿರುವುವು. ಚಂದ್ರವಳ್ಳಿ ಪ್ರದೇಶದ ಅಂಕಲಿ ಮಠದ ಗುಹೆಗಳು ಶಿಲಾಯುಗ ಮಾನವನ ಆವಾಸವಾಗಿದ್ದಿರಬಹುದು ಎಂಬ ತರ್ಕವಿದೆ. ಇಲ್ಲಿನ ನವಶಿಲಾಯುಗ ಮಾನವನಿಗೆ ಕಬ್ಬಿಣದ ಉಪಯೋಗ ಗೊತ್ತಿದ್ದಿರಬಹುದು ಎಂದು ಊಹೆಯಿದೆ.



ಭೂಶೋಧನೆ : ಚಂದ್ರವಳ್ಳಿ

ಚಂದ್ರವಳ್ಳಿ ನಿವೇಶನದ ಬೇರೆ ಬೇರೆ ಸ್ಥಳಗಳಲ್ಲಿ ನಾಣ್ಯಗಳು, ಮಣ್ಣಿನ ಪಾತ್ರೆಗಳು, ಸಮಾಧಿಕುಂಭಗಳು (ಸಮಾಧಿಯಲ್ಲಿ ಬೂದಿ ತುಂಬಿಸಿ ಇಟ್ಟ ಮಡಕೆಗಳು) ಮತ್ತು ಇಟ್ಟಿಗೆಗಳು ದೊರೆತಿವೆ. ನಾಣ್ಯಗಳು ಶಾತವಾಹನ ರಾಜರಾದ ಯಜ್ಞಶ್ರೀ, ಮುಡಾನಂದ, ಗೌತಮೀಪುತ್ರ ವಿಳಿನಾಯಕ ಇವರ ಕಾಲದವು. ಇಟ್ಟಿಗೆ, ಒಲೆ, ಪ್ರಶಸ್ತ ಶಿಲೆಗಳು ಇಲ್ಲಿ ಲಭಿಸಿವೆ. ಕ್ರಿ.ಪೂ. 200ರ ವೇಳೆಯಲ್ಲಿ ಈ ಪ್ರದೇಶವನ್ನು ಶಾತವಾಹನರು ಆಳುತ್ತಿದ್ದರೆಂದು ಹೇಳಬಹುದು. ಪ್ರಾಚೀನ ರೋಮ್ ಚಕ್ರವರ್ತಿ ಅಗಸ್ಟಸ್ ಸೀಸರನ ಕಾಲದ ನಾಣ್ಯಗಳೂ ಇಲ್ಲಿ ಲಭಿಸಿವೆ.

ಕದಂಬರಾಜ ಮಯೂರಶರ್ಮನ ಒಂದು ಶಾಸನ ಚಂದ್ರವಳ್ಳಿಯ ಬಳಿಯ ಬಂಡೆಯ ಕೋಡುಗಲ್ಲಿನ ಮೇಲಿದೆ. ಇದರ ಲಿಪಿ ಬ್ರಾಹ್ಮಿ. ಭಾಷೆ ಸಂಸ್ಕೃತ. ತಟಾಕವನ್ನು ನಿರ್ಮಿಸುವ ಬಗೆಯನ್ನು ಇದು ತಿಳಿಸುತ್ತದೆ. ಅಲ್ಲದೆ ಆ ಕಾಲದ ಚರಿತ್ರೆಯ ಮೇಲೆ ಬೆಳಕು ಚೆಲ್ಲುತ್ತದೆ.

ಚಂದ್ರವಳ್ಳಿಯಲ್ಲಿ ದೊರೆತಿರುವ ಕೆಲವು ಅವಶೇಷಗಳು ಕ್ರಿ.ಪೂ.4000 ವರ್ಷಗಳಿಗೂ ಹಿಂದಿನವೆಂದು ಭಾವಿಸಲಾಗಿದೆ.

ಚಂದ್ರಶೇಖರ ಆಜಾದ್

ಇಸವಿ 1921. ಬ್ರಿಟಿಷ್ ಪ್ರಭುತ್ವದ ವಿರುದ್ಧ ದೇಶದಲ್ಲೆಲ್ಲ ಸ್ವಾತಂತ್ರ್ಯ ಸಂಗ್ರಾಮ ನಡೆದಿತ್ತು. 14 ವರ್ಷದ ವಿದ್ಯಾರ್ಥಿಯೊಬ್ಬ ಮೊದಲ ಬಾರಿಗೆ ಪಿಕೆಟಿಂಗ್ ಅಪರಾಧಕ್ಕಾಗಿ ಹದಿನೈದು ಛಡಿ ಹೊಡೆತದ ಶಿಕ್ಷೆಗೊಳಗಾದ. ಏಟು ಬಿದ್ದು ಮೈಯಿಂದ ರಕ್ತ ಸುರಿಯುತ್ತಿದ್ದರೂ ಈ ಬಾಲಕ ಅಳದೆ, ಆ ನೋವನ್ನು ಸಹಿಸಿಕೊಂಡು, "ಭಾರತ್ ಮಾತಾಕೀ ಜೈ" ಎಂದು ವೀರಘೋಷಣೆ ಮಾಡುತ್ತಲೇ ಇದ್ದ. ಈ ವೀರ ಬಾಲಕನೇ ಚಂದ್ರಶೇಖರ ಆಜಾದ್.

ಹುಟ್ಟಿದ್ದು 1906 ಜುಲೈ 23ರಂದು ; ಮಧ್ಯಪ್ರದೇಶದ ಭಾವರಾ ಗ್ರಾಮದಲ್ಲಿ.

ಕೇವಲ 16 ವರ್ಷದವನಾಗಿದ್ದಾಗಲೇ 'ಕ್ರಾಂತಿಕಾರಿ ಪಕ್ಷ'ವನ್ನೂ 'ಹಿಂದೂಸ್ಥಾನ್ ಸೋಷಲಿಸ್ಟ್ ರಿಪಬ್ಲಿಕ್ ಆರ್ಮಿ'ಯನ್ನೂ ಸೇರಿದ. ಝಾನ್ಸಿಯಲ್ಲಿ ನೆಲೆಸಿ ಕ್ರಾಂತಿಕಾರರ ಸಂಘಟನೆಗೆ ತೊಡಗಿದ. ಆ ವೇಳೆಗಾಗಲೇ ಪ್ರಸಿದ್ಧ ಕ್ರಾಂತಿಕಾರಿಗಳೆಂದು ಕೀರ್ತಿಗಳಿಸಿದ್ದ ಭಗತ್‌ಸಿಂಗ್, ರಾಜಗುರು ಮೊದಲಾದವರ ಸಹವರ್ತಿಯಾದ.

1929 ಏಪ್ರಿಲ್ 8ರಂದು ದೆಹಲಿಯ ಕೇಂದ್ರ ಶಾಸನ ಸಭೆಯ ಹಾಲ್‌ನಲ್ಲಿ ಬಾಂಬ್ ಸ್ಫೋಟನೆ ನಡೆದ ಸಂಬಂಧದಲ್ಲಿ ಚಂದ್ರಶೇಖರರೂ [illegible] ಪೊಲೀಸರ ಕೈಗೆ ಸಿಕ್ಕದೆ ಅನೇಕ ವರ್ಷಗಳ ವರೆಗೆ ತಲೆ ತಪ್ಪಿಸಿಕೊಂಡು ಜೀವಿಸಿದರು. ಇವರ ಸುಳಿವು ಕೊಟ್ಟವರಿಗೆ 30,000 ರೂಪಾಯಿ ಬಹು



ವೀರಘೋಷಣೆ : ಆಜಾದ್

ಮಾನ ಕೊಡುವುದಾಗಿ ಬ್ರಿಟಿಷ್ ಸರಕಾರದವರು ಪ್ರಕಟಿಸಿದರಾದರೂ ಅದರಿಂದ ಪ್ರಯೋಜನವಾಗಲಿಲ್ಲ.

ಕೊನೆಗೆ ಅವರ ಜೊತೆಯವನೊಬ್ಬ ಪೋಲೀಸರಿಗೆ ಸುಳಿವು ನೀಡಿದ. 1931 ಫೆಬ್ರುವರಿ 27ರಂದು ಆಜಾದ್ ಅಲಹಾಬಾದಿನ ಆಲ್‌ಫ್ರೆಡ್ ಪಾರ್ಕಿನಲ್ಲಿದ್ದಾಗ ಪೋಲೀಸರು ಅವರನ್ನು ಮುತ್ತಿದರು. ಆಜಾದ್ ಧೈರ್ಯಗೆಡದೆ ದಿಟ್ಟತನದಿಂದ ಹೋರಾಡಿದರು. ಪೋಲೀಸರು ಹಾರಿಸಿದ ಗುಂಡುಗಳು ಅವರ ಕೈಕಾಲುಗಳನ್ನು ಹೊಕ್ಕವು. ಅವರೂ ಕೊನೆಯವರೆಗೂ ಹೋರಾಡಿ ಹುತಾತ್ಮರಾದರು. ವೀರಮರಣ ಹೊಂದಿದ ಆ ಉದ್ಯಾನದಲ್ಲಿ ಇವರ ಪ್ರತಿಮೆಯೊಂದನ್ನು ಸ್ಥಾಪಿಸಲಾಗಿದೆ. ಆಜಾದ್ ಉಪಯೋಗಿಸುತ್ತಿದ್ದ ಪಿಸ್ತೂಲನ್ನು ಲಖನೌನಲ್ಲಿರುವ ರಾಜ್ಯ ವಸ್ತು ಸಂಗ್ರಹಾಲಯದಲ್ಲಿ ರಕ್ಷಿಸಿ ಇಟ್ಟಿದ್ದಾರೆ.

ಚಂದಾವರ್ಕರ್

ನೋಡಿ : ನಾರಾಯಣ ಗಣೇಶ ಚಂದಾವರ್ಕರ್

ಚಂದೆಲ್ಲರು

ಒಂಬತ್ತನೆಯ ಶತಮಾನದ ಆರಂಭದಲ್ಲಿ ಖಜುರಾಹಕ (ಖಜುರಾಹೊ)ದಿಂದ ಆಳಲಾರಂಭಿಸಿದ ನನ್ನುಕ ಚಂದೆಲ್ಲವಂಶದ ಮೂಲ ಪುರುಷ.

ಆರಂಭದಲ್ಲಿ ಚಂದೆಲ್ಲರು ಕನ್ನೌಜ್‌ನ ಪ್ರತಿಹಾರರ ಮಾಂಡಲಿಕರಾಗಿದ್ದರು. ಈ ವಂಶದ ಯಶೋವರ್ಮನೆಂಬ ದೊರೆ (925–954) ಯಮುನಾನದಿಯ ವರೆಗೆ ತನ್ನ ರಾಜ್ಯವನ್ನು ವಿಸ್ತರಿಸಿದ. ಬಂಗಾಳದ ವರೆಗೂ ದಂಡೆತ್ತಿ ಹೋಗಿ ಪಾಲರನ್ನು ಸೋಲಿಸಿದ. ಇವನು ಖಜುರಾಹೊದಲ್ಲಿ ಚತುರ್ಭುಜ ದೇವಾಲಯ ಕಟ್ಟಿಸಿದ. ಇವನ ಮಗ ದಂಗ ಕನ್ನೌಜ್ ದೊರೆಯನ್ನು ಸೋಲಿಸಿ ಯಮುನೆಯ ಉತ್ತರದ ಕೆಲ ಭಾಗಗಳನ್ನು ಗೆದ್ದುಕೊಂಡ; ಪ್ರತಿಹಾರರ ಹಿಡಿತದಿಂದ ಬಿಡುಗಡೆ ಸಾಧಿಸಿ 'ಮಹಾರಾಜಾಧಿರಾಜ' ಎಂಬ ಬಿರುದು ತಳೆದ. ಕಾಲಂಜರ ಇವನ ರಾಜಧಾನಿಯಾಯಿತು. ಇವನ ಮಗ ವಿದ್ಯಾಧರನ ಕಾಲದಲ್ಲಿ ಘಜ್ನಿ ಮಹಮ್ಮದನು ಎರಡು ಬಾರಿ ಕಲಂಜರದ ಮೇಲೆ ದಂಡೆತ್ತಿ ಬಂದು, ಅಪಾರ ಕಪ್ಪ ಪಡೆದ.

1202ರಲ್ಲಿ ಕುತುಬುದ್ದೀನ್ ಕಾಲಂಜರವನ್ನು ಮುತ್ತಿದಾಗ ಆಗಿನ ದೊರೆ ಪರಮರ್ದಿ ಆತನ ಜೊತೆ ಒಪ್ಪಂದ ಮಾಡಿಕೊಂಡ. ಇದರಿಂದ ಸಿಟ್ಟಿಗೆದ್ದ ಮಂತ್ರಿ ಅಜಯದೇವ ಪರಮರ್ದಿಯನ್ನು ಕೊಂದ. ಕೊನೆಗೆ ಕುತುಬುದ್ದೀನ್ ಕಾಲಂಜರವನ್ನು ಗೆದ್ದು ಅಲ್ಲಿ ಮಂಡಲಾಧಿಕಾರಿಯೊಬ್ಬನನ್ನು ನೇಮಿಸಿದ. ಆದರೆ 1205ರಲ್ಲಿ ಪರಮರ್ದಿಯ ಮಗ ತ್ರೈಲೋಕ್ಯವರ್ಮ ಕಾಲಂಜರವನ್ನು ಮತ್ತೆ ಗೆದ್ದ. 1309ರಲ್ಲಿ ಅಲಾವುದ್ದೀನ್ ಖಿಲ್ಜಿ ಚಂದೆಲ್ಲರ ರಾಜ್ಯದ ಬಹುಭಾಗವನ್ನು ವಶಪಡಿಸಿಕೊಂಡ.

ನೋಡಿ : ಖಜುರಾಹೊ

ಚಂಪಕರಾಮನ್ ಪಿಳ್ಳೆ



ಸಾಗರದಾಚೆ ಕಹಳೆ : ಪಿಳ್ಳೆ

16ರ ಹರೆಯದ (ಜನನ 1891ರಲ್ಲಿ, ತಿರುವಂತಪುರದಲ್ಲಿ) ಚುರುಕು ಹುಡುಗ ಚಂಪಕರಾಮನ್‌ನನ್ನು ಐರೋಪ್ಯ ಜೀವವಿಜ್ಞಾನಿ ಸ್ಟ್ರಿಕ್‌ಲೆಂಡ್ ಕರೆದೊಯ್ದರು. ಚಂಪಕರಾಮನ್‌ಗೆ ಇಟಲಿಯ ಶಾಲೆಯಲ್ಲಿ ಓದು. ಮುಂದೆ ಜರ್ಮನ್ ವಿಶ್ವವಿದ್ಯಾಲಯದಲ್ಲಿ ಶಿಕ್ಷಣ—ಡಾಕ್ಟರೇಟ್.

ದೇಶಪ್ರೇಮಿ ಚಂಪಕರಾಮನ್ 'ಪ್ರೊ–ಇಂಡಿಯಾ' (ಭಾರತ ಪರ) ಎಂಬ ಸಂಸ್ಥೆ ಕಟ್ಟಿದರು. ಅದೇ ಹೆಸರಿನ ಮಾಸಪತ್ರಿಕೆ ಹೊರಡಿಸಿದರು. ವಿ. ಆರ್. ಪಿಳ್ಳೆ, ವೀರೇಂದ್ರನಾಥ ಚಟ್ಟೋಪಾಧ್ಯಾಯ, ಭೂಪೇಂದ್ರನಾಥ ದತ್ತ, ಲಾಲಾ ಹರದಯಾಲ್, ಆಚಾರ್ಯ ಪ್ರತಿವಾದಿ ಭಯಂಕರ —ಇವರೆಲ್ಲ ಒಡನಾಡಿಗಳು. ಮುಂದೆ ರಾಜಾ ಮಹೇಂದ್ರ ಪ್ರತಾಪರೂ ಈ ಗುಂಪನ್ನು ಸೇರಿದರು.

ಮೊದಲ ಜಾಗತಿಕ ಯುದ್ಧದ ಕಾಲದಲ್ಲಿ ಬ್ರಿಟಿಷ್ ಸಾಮ್ರಾಜ್ಯವಾದಿಗಳ ಮೇಲೆ ತಿರುಗಿ ಬೀಳಬೇಕೆಂದು ಭಾರತೀಯ ಸೈನಿಕರನ್ನು ಚಂಪಕರಾಮನ್ ಪ್ರೇರೇಪಿಸಿದರು. 1915ರಲ್ಲಿ ರಾಜಾ ಮಹೇಂದ್ರಪ್ರತಾಪ್ ಕಾಬೂಲಿನಲ್ಲಿ ಸ್ವತಂತ್ರ ಭಾರತದ ತಾತ್ಕಾಲಿಕ ಸರಕಾರ ಘೋಷಿಸಿದಾಗ ವಿದೇಶ ಮಂತ್ರಿಯಾದರು. ಮುಂದೆ ಯುದ್ಧಪಾತಕಿ ಎಂದು ಅವರನ್ನು ಬಂಧಿಸಲು ಚಂಪಕರಾಮನ್ ಬ್ರಿಟಿಷರು ವಿಫಲಪ್ರಯತ್ನ ಮಾಡಿದರು.

ಹಿಟ್ಲರನನ್ನು ಟೀಕಿಸಿದ್ದಕ್ಕಾಗಿ ಚಂಪಕರಾಮನ್ ನಾಜಿಗಳ ಕೋಪಕ್ಕೆ ಗುರಿಯಾದರು. ಒಂದು ದಿನ ಬರ್ಲಿನಿನ ತನ್ನ ಪುಟ್ಟ ಮನೆಗೆ ಹಿಂದಿರುಗುತ್ತಿದ್ದಾಗ ನಾಜಿ ಯುವಕರ ಗುಂಪು ಚಂಪಕರಾಮನ್‌ರ ಮೇಲೆ ಹಲ್ಲೆ ಮಾಡಿತು. 1943 ಮೇ 26ರಂದು ಆಸ್ಪತ್ರೆಯಲ್ಲಿ ಅವರು ಅಸುನೀಗಿದರು.

ಚಂಬಲ್

ಯಮುನಾ ನದಿಯ ಪ್ರಮುಖ ಉಪನದಿ ಚಂಬಲ್. ಯಮುನಾವನ್ನು ಸೇರಿದ ಬಳಿಕವೂ ಕೆಲವು ಮೈಲುಗಳ ವರೆಗೆ ಇದರ ನೀರು ಬೇರೆಯಾಗಿ ಕಾಣುತ್ತದೆ. ಯಮುನಾ ನದಿಯ ನೀರು ಸ್ವಲ್ಪ ಮಟ್ಟಿಗೆ ಬಗ್ಗಡ; ಚಂಬಲ್‌ನ ನೀರು ಬಹಳ ಸ್ವಚ್ಛ. ಚಂಬಲ್ ನದಿಯ ಉದ್ದ 650 ಮೈಲು. ಇದು ದಡದ ಮಣ್ಣನ್ನು ಕೊಚ್ಚಿಕೊಂಡು ಹೋಗುವುದು ಕಡಮೆ.

ಇಂದೂರಿನ ಸಮೀಪದಲ್ಲಿ, ವಿಂಧ್ಯ ಪರ್ವತಶ್ರೇಣಿಗಳಲ್ಲಿ ಚಂಬಲ್ ಹುಟ್ಟುತ್ತದೆ. ಮೊದಲು ಉತ್ತರ ದಿಕ್ಕಿನಲ್ಲಿ, ಅನಂತರ ಈಶಾನ್ಯ ದಿಕ್ಕಿನಲ್ಲಿ ಹರಿದು ಮಧ್ಯಪ್ರದೇಶ ಮತ್ತು ರಾಜಸ್ಥಾನಗಳನ್ನು ದಾಟುತ್ತದೆ. ಚಂಬ್ಲಾ, ಸಿಪ್ರಾ ಮತ್ತು ಬನಾಸ್ ಮುಖ್ಯ ಉಪನದಿಗಳು.

ಮಧ್ಯಪ್ರದೇಶದಲ್ಲಿ ಧುಮ್ಮಿಕ್ಕುತ್ತ ಹರಿದು ಜಲಪಾತಗಳನ್ನು ಉಂಟುಮಾಡುತ್ತದೆ. ರಾಜಸ್ಥಾನದ ಸಮತಟ್ಟಾದ ಪ್ರದೇಶಕ್ಕೆ ಬಂದಾಗ ಇದು ಆಳವಾಗಿ, ಅಗಲವಾಗಿ ಹರಿಯುತ್ತದೆ. ಬೇಸಿಗೆಯಲ್ಲಿ ಬರಿಯ 300 ಗಜ ಅಗಲವಿರುವ ನದಿ ಮಳೆಗಾಲದಲ್ಲಿ 1,000 ಗಜಗಳಿಗಿಂತಲೂ ಅಗಲವಾಗಿ, ರಭಸವಾಗಿ ಹರಿಯುತ್ತದೆ.

ನದಿಯ ಬದಿಯ ಕೊರಕಲುಗಳು ಬಹಳ ದುರ್ಗಮ. 1971–72ರ ವರೆಗೂ ಚಂಬಲ್ ಕಣಿವೆ ದರೋಡೆಕಾರರ ಆವಾಸವಾಗಿತ್ತು.

ನೋಡಿ : ಚಂಬಲ್ ಕಣಿವೆ ಯೋಜನೆ ; ಮಧ್ಯಪ್ರದೇಶ

ಚಂಬಲ್ ಕಣಿವೆ ಯೋಜನೆ

ಮಧ್ಯಪ್ರದೇಶ, ರಾಜಸ್ಥಾನಗಳಲ್ಲಿ ಹರಿಯುವ ಚಂಬಲ್ ನದಿಯ ನೀರನ್ನು ನೀರಾವರಿಗೆ ಬಳಸಿಕೊಳ್ಳಲು 1946ರಲ್ಲಿ ಒಂದು ಯೋಜನೆ ರೂಪಿಸಲಾಯಿತು. ಮೂರು ಹಂತಗಳ ಈ ಯೋಜನೆಗೆ ಚಂಬಲ್ ಕಣಿವೆ ಯೋಜನೆ ಎಂದು ಹೆಸರು.

ಮೊದಲನೆಯ ಹಂತದಲ್ಲಿ ನಿರ್ಮಿತವಾದದ್ದು ಗಾಂಧೀಸಾಗರ ಅಣೆಕಟ್ಟು. ಇದರಿಂದ ದೊಡ್ಡ ಪ್ರಮಾಣದ ನೀರಾವರಿ ಸಾಧ್ಯವಾಗಿದೆ. ಇಲ್ಲಿ ಒಂದು ಭಾರೀ ಜಲ ವಿದ್ಯುದಾಗಾರವೂ ಇದೆ. ಎರಡನೆಯ ಹಂತ ರಾಣಾ ಪ್ರತಾಪ್ ಸಾಗರ ಅಣೆಕಟ್ಟು. ಇಲ್ಲಿಂದ ಕೆಳಗೆ ಇರುವ ಮತ್ತೊಂದು ಅಣೆಕಟ್ಟು ಮತ್ತು ಕಾಲುವೆಗಳು ಮೂರನೆಯ ಹಂತಕ್ಕೆ ಸೇರಿದುವು. ಈ ಯೋಜನೆ 11 ಲಕ್ಷ ಎಕರೆ ಭೂಮಿಗೆ ನೀರು ಒದಗಿಸುತ್ತದೆ; ಸುಮಾರು 400 ಮೆಗವಾಟ್‌ನಷ್ಟು ವಿದ್ಯುತ್ತನ್ನು ಉತ್ಪಾದಿಸುತ್ತದೆ.

ನೋಡಿ : ಚಂಬಲ್

ಚಕ್ರವರ್ತಿ ರಾಜಗೋಪಾಲಾಚಾರಿ

ಅಸಾಮಾನ್ಯ ವ್ಯಕ್ತಿತ್ವ, ಉಚ್ಚ ಸಂಸ್ಕೃತಿ ಹಾಗೂ ಪಾಂಡಿತ್ಯಗಳ, ಸರಳ ನಡೆನುಡಿಗಳ ಮಹಾನ್ ರಾಜನೀತಿಜ್ಞರೆಂದು ಸಿ. ರಾಜಗೋಪಾಲಾಚಾರಿ ಭಾರತದಲ್ಲೂ ವಿದೇಶಗಳಲ್ಲೂ ಪ್ರಖ್ಯಾತರಾಗಿದ್ದರು.

ಅವರ ಜನನ ಸೇಲಂ ಜಿಲ್ಲೆಯ ಹೊಸೂರು ಹತ್ತಿರದ ತೋರಪಳ್ಳಿಯಲ್ಲಿ, 1878ರಲ್ಲಿ. ಬೆಂಗಳೂರಿನ ಸೆಂಟ್ರಲ್ ಕಾಲೇಜ್, ಮದರಾಸಿನ ಪ್ರೆಸಿಡೆನ್ಸಿ ಕಾಲೇಜ್ ಮತ್ತು ಲಾ ಕಾಲೇಜುಗಳಲ್ಲಿ ವಿದ್ಯಾಭ್ಯಾಸ. ಸೇಲಂನಲ್ಲಿ ವಕೀಲ ವೃತ್ತಿಆರಂಭಿಸಿ ಉತ್ತಮ ವಕೀಲರೆಂದು ಖ್ಯಾತಿ ಗಳಿಸಿದರು.

1919ರಲ್ಲಿ ವಕೀಲ ವೃತ್ತಿ ಬಿಟ್ಟು ಕಾಂಗ್ರೆಸ್ಸಿಗೆ ಸೇರಿದರು. ಗಾಂಧೀಜಿಯ ನಿಕಟವರ್ತಿಯಾಗಿ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದರು. ಅನೇಕ ಬಾರಿ ಸೆರೆಮನೆ ಕಂಡರು. ಭಾರತ ರಾಷ್ಟ್ರೀಯ ಕಾಂಗ್ರೆಸ್ಸಿನ ಪ್ರಧಾನ ಕಾರ್ಯದರ್ಶಿಯಾದರು. ಸ್ವಾತಂತ್ರ್ಯಪೂರ್ವದಲ್ಲಿ ಮದರಾಸಿನ ಮುಖ್ಯ ಮಂತ್ರಿಯಾಗಿದ್ದರು. 1947 ಆಗಸ್ಟ್‌ನಲ್ಲಿ ಪಶ್ಚಿಮ ಬಂಗಾಳದ ಗವರ್ನರರಾದರು. 1947 ನವೆಂಬರ್‌ನಿಂದ 1950 ಜನವರಿ ತನಕ ಸ್ವತಂತ್ರ ಭಾರತದ ಪ್ರಥಮ ಭಾರತೀಯ ಗವರ್ನರ್ ಜನರಲ್ ಆದರು. 1950 ಮೇ ತಿಂಗಳಲ್ಲಿ ಕೇಂದ್ರ ಸರಕಾರದ ಮಂತ್ರಿ ಮಂಡಲಕ್ಕೆ ಸೇರಿದರು. 1951ರಲ್ಲಿ ಕೇಂದ್ರ ಸರಕಾರದ ಗೃಹಶಾಖೆಯ ಸಚಿವರಾಗಿದ್ದರು. 1952ರಿಂದ 1954ರ ತನಕ ಮದರಾಸು ರಾಜ್ಯದ ಮುಖ್ಯ ಮಂತ್ರಿಯಾದರು.

1942ರಲ್ಲಿ ಅಭಿಪ್ರಾಯ ಭೇದ ಉಂಟಾದಾಗ ಅವರು ಕಾಂಗ್ರೆಸಿನಿಂದ ಹೊರಬಂದಿದ್ದರು. ಮತ್ತೆ 1945ರಲ್ಲಿ ಕಾಂಗ್ರೆಸ್ ಸೇರಿದರು. 1959ರಲ್ಲಿ ಸ್ವತಂತ್ರ ಪಕ್ಷದ ಸ್ಥಾಪನೆಗೆ ಕಾರಣರಾದರು.

ಪ್ರಾಯೋಗಿಕ ಪರಮಾಣು ಸ್ಫೋಟವನ್ನು ನಿಷೇಧಿಸುವುದಕ್ಕೆ ಜನ ಬೆಂಬಲ ಗಳಿಸುವುದಕ್ಕಾಗಿ 1962ರಲ್ಲಿ ಅಮೆರಿಕಕ್ಕೆ ಹೊರಟ ಗಾಂಧೀ ಶಾಂತಿ ಪ್ರತಿಷ್ಠಾನದ ನಿಯೋಗದ ನಾಯಕರಾಗಿದ್ದರು.

ಆ ಸಂಬಂಧದಲ್ಲಿ ಬ್ರಿಟನ್, ಇಟಲಿ ರಾಷ್ಟ್ರಗಳಿಗೂ ಭೇಟಿ ನೀಡಿದರು.



ಅಸಾಮಾನ್ಯ : ರಾಜಾಜಿ

ರಾಜಗೋಪಾಲಾಚಾರಿ ಮೇಧಾವಿ, ಕುಶಾಗ್ರಮತಿ, ಪ್ರತಿಭಾವಂತ ಟೀಕಾಕಾರ. ಗಾಂಧೀಜಿಯ 'ಯಂಗ್ ಇಂಡಿಯಾ'ದ ಸಂಪಾದಕರಾಗಿದ್ದರು. 'ಕಲ್ಕಿ', 'ಸ್ವರಾಜ್ಯ' ವಾರಪತ್ರಿಕೆಗಳಲ್ಲಿ ಬರೆಯುತ್ತಿದ್ದರು. ಕಡೆಯ ವರೆಗೂ ಬರೆಯುವುದನ್ನು ಅವರು ನಿಲ್ಲಿಸಲಿಲ್ಲ. ರಾಜಗೋಪಾಲಾಚಾರಿ ಉತ್ತಮ ಕತೆಗಾರರು ಕೂಡ. ಇಂಗ್ಲಿಷಿನಲ್ಲೂ ತಮಿಳಿನಲ್ಲೂ ಅನೇಕ ಗ್ರಂಥಗಳನ್ನು ಬರೆದಿದ್ದಾರೆ. 'ಫೇಟಲ್ ಕಾರ್ಟ್ ಅಂಡ್ ಅದರ್ ಸ್ಟೋರೀಸ್', 'ಮಹಾಭಾರತ', 'ರಾಮಾಯಣ', 'ಭಗವದ್ಗೀತಾ ಸೆಲೆಕ್ಷನ್ಸ್ ಅಂಡ್ ನೋಟ್ಸ್' ಮೊದಲಾದುವು ಅವರ ಕೆಲವು ಕೃತಿಗಳು.

ರಾಜಾಜಿ ಎಂದು ಜನಪ್ರಿಯರಾಗಿದ್ದ ಅವರು 1972 ಡಿಸೆಂಬರ್ 25ರಂದು ತಮ್ಮ 94ನೆಯ ವಯಸ್ಸಿನಲ್ಲಿ ನಿಧನರಾದರು.

ಚರ್ಚಿಲ್

ಎರಡನೆಯ ಮಹಾಯುದ್ಧ ಕಾಲದಲ್ಲಿ ಬ್ರಿಟಿಷ್ ಸಾಮ್ರಾಜ್ಯದ ಆಧಾರ ಸ್ತಂಭದಂತಿದ್ದ ವಿನ್‌ಸ್ಟನ್ ಚರ್ಚಿಲ್, ಭಾರತ ಸ್ವತಂತ್ರವಾಗುವುದಕ್ಕೆ ವಿರೋಧಿಯಾಗಿದ್ದರು. ಭಾರತಕ್ಕೆ ಸ್ವಾತಂತ್ರ್ಯವನ್ನಲ್ಲ, ಸ್ವಯಮಾಡಳಿತ ಕೊಡುವುದಕ್ಕೆ ಕೂಡ ಅವರು ಸಿದ್ಧವಿರಲಿಲ್ಲ.

ಗಾಂಧೀಜಿಯನ್ನು 'ನಗ್ನ ಫಕೀರ' ಎಂದು ಚರ್ಚಿಲ್ ಕರೆದಿದ್ದರು. 1931ರಲ್ಲಿ ಆಗಿನ ವೈಸ್‌ರಾಯ್ ಇರ್ವಿನ್, ಗಾಂಧೀಜಿಯೊಡನೆ ಒಡಂಬಡಿಕೆಯ ಮಾತುಕತೆಗಳಿಗೆ ಸಿದ್ಧರಾದಾಗ ಅದನ್ನು ಚರ್ಚಿಲ್ ಕಟುವಾಗಿ ಟೀಕಿಸಿದರು. ''ಉದ್ಧಟನಾಗಿ ಕಾಯಿದೆಭಂಗ ಚಳುವಳಿಯನ್ನು ನಡೆಸುತ್ತಿರುವ (ಲಂಡನಿನ) ಇನ್ನರ್ ಟೆಂಪಲ್‌ನ ವಕೀಲನಾಗಿದ್ದ ರಾಜದ್ರೋಹಿ, ಫಕೀರನಂತೆ ಅರೆನಗ್ನನಾಗಿ ಬ್ರಿಟಿಷ್ ಸಮ್ರಾಟನ ಪ್ರತಿನಿಧಿಯ ಭವ್ಯ ಅರಮನೆಯಲ್ಲಿ ಸಮಾನನಂತೆ ಮಾತುಕತೆ ಹೆಜ್ಜೆಯಿಟ್ಟ ದೃಶ್ಯ'' ಚರ್ಚಿಲರಿಗೆ ಅಸಹ್ಯವೆನಿಸಿತು.

ಅವರು ಬ್ರಿಟನಿನ ಪ್ರಧಾನಿಯಾಗಿದ್ದಾಗ, "ಬ್ರಿಟಿಷ್ ಸಾಮ್ರಾಜ್ಯದ ವಿಸರ್ಜನೆಯ ಅಧ್ಯಕ್ಷತೆಯನ್ನು ನಾನು ವಹಿಸಲಾರೆ", ಎಂದು ಗುಡುಗಿದರು.

1945ರಲ್ಲಿ ಲೇಬರ್ ಪಕ್ಷಕ್ಕೆ ಜಯ ಲಭಿಸಿ ಚರ್ಚಿಲ್ ಬ್ರಿಟನಿನ ಪ್ರಧಾನಿ ಪಟ್ಟದಿಂದ ಕೆಳಗಿಳಿದರು. ಲೇಬರ್ ಪಕ್ಷ ಭಾರತದ ಸ್ವಾತಂತ್ರ್ಯ ಹೋರಾಟಕ್ಕೆ ಸಹಾನುಭೂತಿ ತೋರಿಸಿತು.

ನೋಡಿ : ಚರ್ಚಿಲ್–ಸಂಪುಟ ೨

[illegible]

ನೋಡಿ : ಸಂಪುಟ



ವೈದ್ಯ : ಚರಕ

'ಚರಕ ಸಂಹಿತೆ'

ಆತ್ರೇಯ ಮುನಿಯ ಶಿಷ್ಯ ಅಗ್ನಿವೇಶ ಒಂದು ವೈದ್ಯಗ್ರಂಥ ಬರೆದ: ಚರಕ ಅದನ್ನು ಪರಿಷ್ಕರಿಸಿದ; ಅದೇ 'ಚರಕ ಸಂಹಿತೆ'—ಎಂದು ಹೇಳುತ್ತಾರೆ. ಪ್ರಾಚೀನ ಭಾರತದ ವೈದ್ಯ ಚರಕ ಹಿಂದಿನ ಗ್ರಂಥಗಳ ಮತ್ತು ತನ್ನ ಅನುಭವಗಳ ಆಧಾರದ ಮೇಲೆ ಈ ಬೃಹತ್ ಗ್ರಂಥವನ್ನು ಬರೆದ –ಎಂದು ಭಾವಿಸಬಹುದು. ಇದು ಆಯುರ್ವೇದ ವೈದ್ಯರಿಗೆ ಆಧಾರ ಗ್ರಂಥ.

ಈ ಗ್ರಂಥದಲ್ಲಿ ಅನೇಕ ದೈಹಿಕ, ಮಾನಸಿಕ ರೋಗಗಳ ಬಗೆಗೆ ವಿವೇಚನೆಯಿದೆ. ಸಾಂಕ್ರಾಮಿಕ ರೋಗಗಳು ಬರುವುದು ಹೇಗೆ, ಅವು ಎಂಥವು ಮುಂತಾದ ವಿಷಯಗಳ ವಿವರಣೆ ಇದೆ. ರೋಗ ಲಕ್ಷಣಗಳಾವುವು, ರೋಗ ಗುರುತಿಸುವ ಬಗೆ ಹೇಗೆ ಎಂಬುದನ್ನು ವಿಶದವಾಗಿ, ಸರಳವಾಗಿ ತಿಳಿಸಿದೆ. ಪ್ರಾಣಿ, ಸಸ್ಯ ಹಾಗೂ ಖನಿಜ ಮೂಲಗಳಿಂದ ತಯಾರಿಸಬಹುದಾದ 500 ಔಷಧಗಳ ವಿವರಣೆ ಇದೆ. ವೈದ್ಯನ ವೃತ್ತಿ ನೀತಿ ಹೇಗಿರಬೇಕು ? ಸಾಮಾಜಿಕ ಹಾಗೂ ನಿವಾರಕ ವೈದ್ಯ ವಿಜ್ಞಾನ ಎಂದರೇನು ? ಎಂಬುದನ್ನು ಮನಮುಟ್ಟುವಂತೆ ಬರೆದಿದ್ದಾನೆ. ಚರಕ ತನ್ನ ಕಾಲದಲ್ಲಿ ಹೆಂಗಸರು, ಮಕ್ಕಳಿಗಾಗಿ ಪ್ರತ್ಯೇಕ ವಿಭಾಗವಿರುವ ವೈದ್ಯಶಾಲೆಗಳನ್ನು ನಡೆಸುತ್ತಿದ್ದನಂತೆ. ಗದ್ಯ ಪದ್ಯ ಪ್ರಕಾರಗಳೆರಡನ್ನೂ ಬಳಸಿ ಬರೆದಿರುವ 'ಚರಕ ಸಂಹಿತೆ' ಯಲ್ಲಿ ಎಂಟು ಪ್ರಧಾನ ಭಾಗಗಳಿವೆ.

'ಚರಕ ಸಂಹಿತೆ' ಗೆ ಅನೇಕರು ವ್ಯಾಖ್ಯೆಗಳನ್ನು ಬರೆದಿದ್ದಾರೆ. ಇದು ಅರಬೀ, ಪಾರಸೀ, ಲ್ಯಾಟಿನ್ ಹಾಗೂ ಇಂಗ್ಲಿಷ್ ಭಾಷೆಗಳಿಗೆ ಅನುವಾದವಾಗಿದೆ.

ನೋಡಿ : ಚರಕ–ಸಂಪುಟ ೨

ಚರಖಾ

—"ಚರಖಾ ಅಹಿಂಸಾತ್ಮಕ, ಆರ್ಥಿಕ ಸ್ವಾವಲಂಬನದ ಸಂಕೇತ . . ."

—"ನೂಲುವ ರಾಟೆ ಚರಖಾ ವಾಣಿಜ್ಯ ಸಮರದ ಸಂಕೇತವಲ್ಲ, ವಾಣಿಜ್ಯ ಶಾಂತಿಯ ಚಿಹ್ನೆ. ಜಗತ್ತಿನ ಇತರ ರಾಷ್ಟ್ರಗಳೆಡೆಗೆ ಅದು ಬೀರುವುದು ದ್ವೇಷದ ಸಂದೇಶವಲ್ಲ; ಸದ್ಭಾವನೆ ಹಾಗೂ ಸ್ವಾವಲಂಬನಗಳ ಸಂದೇಶ. ರಾಟೆಯ ಪ್ರತಿಯೊಂದು ಘರ್ಷಣವೂ ಶಾಂತಿ, ಸದ್ಭಾವನೆ. ಪ್ರೇಮಗಳನ್ನು ನೇಯುತ್ತದೆ . . ."



ಇವು ಚರಖಾದ ಮಹತ್ವವನ್ನು ಕುರಿತು ಗಾಂಧೀಜೀ ಆಡಿರುವ ಮಾತುಗಳು.

ಭಾರತದ ಆರ್ಥಿಕ, ನೈತಿಕ ಪುನರುತ್ಥಾನಕ್ಕೆ ಪ್ರತಿಯೊಬ್ಬರೂ ಕೈಯಲ್ಲಿ ನೂಲುವುದು ಮತ್ತು ನೇಯುವುದು ಅಗತ್ಯವೆಂದು ಗಾಂಧೀಜೀ ನಂಬಿದ್ದರು. ಮೊತ್ತಮೊದಲಿಗೆ ಅವರು ಖಾದಿಯ ವ್ರತ ತೊಟ್ಟದ್ದು 1919ರಲ್ಲಿ. 1921ರಲ್ಲಿ ಕಾಂಗ್ರೆಸ್ಸಿನ ಕಾರ್ಯಕ್ರಮದಲ್ಲಿ ಚರಖಾ ಸ್ಥಾನ ಪಡೆಯಿತು. ಕಾಂಗ್ರೆಸ್ ಸದಸ್ಯರು ಚರಖಾ ಅಥವಾ ತಕಲಿಯಿಂದ ನೂತ ನೂಲನ್ನು ಕಾಂಗ್ರೆಸ್ ಸದಸ್ಯತ್ವದ ವಂತಿಗೆಯಾಗಿ ಕೊಡಬೇಕೆಂಬ ನಿಯಮ ಏರ್ಪಟ್ಟಿತು. ಕಾಂಗ್ರೆಸ್ ಧ್ವಜದ ಲಾಂಛನವಾದ ಚರಖಾ ಭಾರತ ಸ್ವಾತಂತ್ರ್ಯ ಸಂಗ್ರಾಮದ ಸಂಕೇತವಾಯಿತು.

ನೋಡಿ : ಚರಕ—ಸಂಪುಟ ೪

'ಚಲೇ ಜಾವ್'

"ಭಾರತ ಬಿಟ್ಟು ತೊಲಗಿ!", "ಕ್ವಿಟ್ ಇಂಡಿಯಾ!", "ಚಲೇ ಜಾವ್!" ಇದು 1942ರಲ್ಲಿ ನಡೆದ ಸ್ವಾತಂತ್ರ್ಯಸಂಗ್ರಾಮದ ಘೋಷಣೆ. ಇದೇ ಕೊನೆಯ ಹೋರಾಟ ಎಂದರು ಗಾಂಧೀಜೀ. "ಮಾಡು ಅಥವಾ ಮಡಿ" ಎಂಬ ಮಂತ್ರವನ್ನು ಅವರು ಇಂದಿಯ ದೇಶದ ಜನತೆಯ ಮುಂದಿಟ್ಟರು.

ಎರಡನೆಯ ಮಹಾಯುದ್ಧ ಭರದಿಂದ ಸಾಗಿತ್ತು. ಅದರಲ್ಲಿ ಪಾಲುಗೊಳ್ಳಲು ಭಾರತಕ್ಕೆ ಇಷ್ಟವಿರಲಿಲ್ಲ. ಇಂಡಿಯಾ ಸರಕಾರ ಭಾರತೀಯ ಮುಖಂಡರ ಅಭಿಪ್ರಾಯವನ್ನು ಕೇಳದೆಯೇ ಏಕ ಪಕ್ಷೀಯವಾಗಿ ಜರ್ಮನರ ಮೇಲೆ ಯುದ್ಧ ಘೋಷಿಸಿತು. ಇದರಿಂದ ಭಾರತವೂ ಜರ್ಮನಿಯ ವೈರಿ ರಾಷ್ಟ್ರವಾದಂತಾಯಿತು. ಕಾಂಗ್ರೆಸ್ ಈ ಧೋರಣೆಯನ್ನು ತೀವ್ರವಾಗಿ ವಿರೋಧಿಸಿತು. 1942ರ ಆಗಸ್ಟ್ 8ರಂದು ಅಖಿಲ ಭಾರತ ಕಾಂಗ್ರೆಸ್ ಸಮಿತಿ 'ಕ್ವಿಟ್ ಇಂಡಿಯಾ' ನಿರ್ಣಯ ಅಂಗೀಕರಿಸಿತು. ಚಳುವಳಿ ಮರುದಿನ ಆರಂಭವಾಯಿತು.

ಬ್ರಿಟಿಷ್ ಸರಕಾರ ಗಾಂಧೀಜೀ ಹಾಗೂ ಇತರ ಮುಖಂಡರನ್ನು ಬಂಧಿಸಿತು. ಚಳುವಳಿಯನ್ನು ಮುರಿಯಲು ತೀವ್ರ ಕ್ರಮಗಳನ್ನು ಕೈಗೊಂಡಿತು. ಸಭೆಗಳ ಮೇಲೆ, ಮೆರವಣಿಗೆಗಳ ಮೇಲೆ, ಲಾಠೀ ಪ್ರಹಾರಗಳಾದುವು: ಗೋಳಿಬಾರುಗಳೂ ನಡೆದುವು. ಎಲ್ಲೆಲ್ಲೂ ಕ್ಷುಬ್ಧ ಪರಿಸ್ಥಿತಿ ಉಂಟಾಯಿತು. ಚಳುವಳಿಗಾರರು ಸರಕಾರವನ್ನು ನಿಷ್ಕ್ರಿಯಗೊಳಿಸಲು ಸಾರಿಗೆ ಸಂಪರ್ಕಗಳ ಸಾಧನಗಳನ್ನು ಕಡಿದುಹಾಕಿದರು.

ಸರಕಾರ ಸಾವಿರಾರು ಜನರನ್ನು ಬಂಧಿಸಿ ಸೆರೆಯಲ್ಲಿಟ್ಟಿತು. ಸರಕಾರದ ಅಂಕಿ ಅಂಶಗಳ ಮೇರೆಗೆ 60,229 ಮಂದಿ ಬಂಧನಕ್ಕೊಳಗಾದರು. ಅದರಲ್ಲಿ 18,000 ಜನರು ಸೆರೆಮನೆ ಸೇರಿದರು. ಹೋರಾಟದಲ್ಲಿ 950ಜನ ಸತ್ತರು. ಪೋಲೀಸರು ಹಾರಿಸಿದ ಗುಂಡಿನಿಂದ 1,630 ಜನ ಗಾಯಗೊಂಡರು. ಚಳುವಳಿಯನ್ನು ಹತ್ತಿಕ್ಕಲು ಸರಕಾರ 60 ಕಡೆ ಸೈನಿಕರನ್ನು ನಿಯೋಜಿಸಿತು. ಆರು ಕಡೆ ವಿಮಾನದಿಂದ ಬಾಂಬು ಹಾಕಿತು. ರಾಷ್ಟ್ರದಲ್ಲಿ ತೀವ್ರ ಕ್ರಾಂತಿಭಾವನೆ ಬೆಳೆಯಿತು. "ಇಡೀ ದೇಶ ಸಂಪೂರ್ಣ ಬದಲಾವಣೆ ಹೊಂದಿತು. ತನ್ನ ರಾಜಕೀಯ ಬಾಳ್ವೆಗೆ ಹೊಸ ಮಾರ್ಗವನ್ನು ಕಂಡುಕೊಂಡ ಹೊಸ ಭಾರತ ಹುಟ್ಟಿತು" ಎಂದು 'ಚಲೇಜಾವ್' ಚಳುವಳಿಯ ಬಗೆಗೆ ಜಯಪ್ರಕಾಶ ನಾರಾಯಣ್ ಹೇಳಿದ್ದಾರೆ. ಈ ಚಳುವಳಿಯ ಪ್ರಮುಖ ನಾಯಕರಲ್ಲಿ ಅವರೂ ಒಬ್ಬರು. ಚಳುವಳಿಯ ಅವಧಿಯಲ್ಲಿ ಅನೇಕ ಕ್ರಾಂತಿಕಾರರು ಗುಪ್ತವಾಗಿದ್ದುಕೊಂಡು ಕಾರ್ಯಸಾಧನೆ ಮಾಡಿದರು.



' ಚಲೇ ಜಾವ್ '



ಸ್ವಾತಂತ್ರ್ಯ ರಣರಂಗಕ್ಕೆ ಜನಸೇನೆ

ಕಾಂಗ್ರೆಸ್ ಶಾಸನಬಾಹಿರ ಸಂಸ್ಥೆ ಎಂದು ಬ್ರಿಟಿಷ್ ಸರಕಾರ ಘೋಷಿಸಿತು. ಈ ಚಳುವಳಿಗೆ ಸಂಬಂಧಪಟ್ಟ ಯಾವ ವಾರ್ತೆಯನ್ನೂ ಪತ್ರಿಕೆಗಳು ಪ್ರಕಟಿಸಬಾರದೆಂಬ ನಿರ್ಬಂಧವನ್ನೂ ಹೇರಿತು. ಆದರೆ ಇದಾವುದರಿಂದಲೂ ಚಳುವಳಿಯನ್ನು ನಿಲ್ಲಿಸಲು ಸಾಧ್ಯವಾಗಲಿಲ್ಲ.

ಈ ಸಮಯದಲ್ಲೇ ಆಜಾದ್ ಹಿಂದ್ ಫೌಜ್ ಬರ್ಮ ಕಡೆಯಿಂದ ಬಂದು ಸುಮಾರು 1,500 ಚದರ ಮೈಲುಗಳಷ್ಟು ಭಾರತ ಪ್ರದೇಶವನ್ನು ಆಕ್ರಮಿಸಿತು. ಪರಿಸ್ಥಿತಿ ಇನ್ನಷ್ಟು ಪ್ರಕ್ಷುಬ್ಧವಾಯಿತು.

1944ರಲ್ಲಿ ಗಾಂಧೀಜೀ ಬಿಡುಗಡೆ ಹೊಂದಿದರು. ತಾನು ಭಾರತವನ್ನು ಬಿಟ್ಟು ಹೊರಡುವುದು ಅನಿವಾರ್ಯ ಎಂದು ಮನಗಂಡ ಬ್ರಿಟನ್. ಅಧಿಕಾರದ ಹಸ್ತಾಂತರಕ್ಕೆ ಸಂಬಂಧಿಸಿದ ಮಾತುಕತೆ ಆರಂಭಿಸಿತು.

ಚಾಂದ್ ಬೀಬಿ

ಕೋಟೆಗೆ ಶತ್ರುಗಳು ಮುತ್ತಿಗೆ ಹಾಕಿದ್ದರು. ಕೋಟೆಯ ಗೋಡೆಯ ಕೆಳಗೆ ಸುರಂಗ ತೋಡಿ, ಸಿಡಿಮದ್ದು ತುಂಬಿ, ಹಾರಿಸಿದ್ದರಿಂದ ಕೋಟೆಯ ಒಂದು ಕಡೆ ಗೋಡೆ ಬಿದ್ದುಹೋಯಿತು. ತಕ್ಷಣವೇ ಒಬ್ಬಾಕೆ ಬಿರುಗಾಳಿಯಲ್ಲಿ ನಡೆಯುತ್ತ ಅಪಘಾತ ಸ್ಥಳಕ್ಕೆ ಬಂದಳು. ಕೈಲಿ ಹಿಡಿದ ಖಡ್ಗ, ಹಿಂದೆ ಸಂಬಿಗಸ್ತ ಅನುಚರ ಗುಂಪು. ಆಕೆಯ ಉತ್ತೇಜನದಿಂದ ಆ ರಾತ್ರಿಯೇ ದುರಸ್ತಿ ಕಾರ್ಯ ಮುಗಿಯಿತು.

ಆಕೆಯೇ ಭಾರತದ ಮುಸಲ್ಮಾನ ಮಹಿಳೆಯರಲ್ಲಿ ಬಹಳ ಹೊಗಳಿಕೆಗೆ ಪಾತ್ರಳಾಗಿರುವ ಚಾಂದ್ ಬೀಬಿ.

ಅಹಮದ್‌ನಗರದ ಹುಸೇನ್ ನಿಜಾಮ್ ಷಾನ ಪುತ್ರಿ ಚಾಂದ್ ಬೀಬಿ ಜನಿಸಿದ್ದು 1547ರಲ್ಲಿ. ಚಾಂದ್ ಬೀಬಿಯ ವಿವಾಹ ಬಿಜಾಪುರದ ಅಲಿ ಆದಿಲ್ ಷಾನೊಡನೆ ನಡೆಯಿತು. ಸೊಲ್ಲಾಪುರದ ಕೋಟೆ ಆಕೆಗೆ ಬಳುವಳಿಯಾಗಿ ದೊರೆಯಿತು. ಪತ್ನಿಯ ಪ್ರತಿಭೆಯನ್ನು ಗುರುತಿಸಿದ ಆದಿಲ್ ಷಾ ಆಡಳಿತ ವಿಚಾರಗಳಲ್ಲಿ ಆಕೆಯ ಸಲಹೆ ಪಡೆಯುತ್ತಿದ್ದ. 1580ರಲ್ಲಿ ಆದಿಲ್ ಷಾ ಕೊಲೆಯಾದ. ಈತನ ಸೋದರ ಸಂಬಂಧಿ ಇಬ್ರಾಹಿಂ ಆದಿಲ್ ಷಾ ಪಟ್ಟಕ್ಕೆ ಬಂದ. ಆತ ಅಪ್ರಾಪ್ತ ವಯಸ್ಕನಿದ್ದುದರಿಂದ ಚಾಂದ್‌ಬೀಬಿ ರಾಜ ಪ್ರತಿನಿಧಿಯಾದಳು.

ಅಸೂಯಾಪರರು ಚಾಂದ್ ಬೀಬಿಗೆ ತೊಂದರೆ ಕೊಟ್ಟರು; ಬಂಧನದಲ್ಲಿಟ್ಟರು.

1599ರಲ್ಲಿ ಆಕೆಗೆ ಮರಣದಂಡನೆ ವಿಧಿಸಿದರು. ಹೀಗೆ, ತನ್ನವರ ಕೃತಘ್ನತೆಗೆ ಚಾಂದ್ ಬೀಬಿ ಬಲಿಯಾದಳು.

ಚಾಪರು

ಚಾಪ ರಾಜವಂಶದ ಎರಡು ಶಾಖೆಗಳಿದ್ದುವು. ಇವರನ್ನು ಚಾಪೋತ್ಕಟರು, ಚಾವುಡರು ಎಂದು ಕರೆಯುತ್ತಿದ್ದರು. ಒಂದು ಶಾಖೆ ಗುಜರಾತಿನ ವರ್ಧಮಾನದಿಂದ ಆಳುತ್ತಿತ್ತು. ಇದರ ಮೊದಲ ರಾಜ ವಿಕ್ರಮಾರ್ಕ. ಈತ ಎಂಟನೆಯ ಶತಮಾನದವನು. ಇವನ ಅನಂತರ ಅಡ್ಡಕ, ಪುಲಿಕೇಶಿ, ಧ್ರುವಭಟ್ಟ ಮತ್ತು ಧರಣೀ ವರಾಹ ಆಳಿದರು. ಇವನನ್ನು 942ರಲ್ಲಿ ಚೌಲುಕ್ಯ ಮೂಲ ರಾಜ್ಯಸೋಲಿಸಿ ಈ ಶಾಖೆಯ ಆಡಳಿತವನ್ನು ಕೊನೆಗಾಣಿಸಿದ.

ಚಾಪರ ಇನ್ನೊಂದು ಶಾಖೆ ಅನ್ಹಿಲಪಾಟಕದಿಂದ ಆಳುತ್ತಿತ್ತು. ವನರಾಜನೆಂಬ ಈ ಶಾಖೆಯ ಮೂಲಪುರುಷ 745ರಲ್ಲಿ ಈ ನಗರವನ್ನು ಕಟ್ಟಿದ. ಈ ವಂಶದ ಸಮಂತಸಿಂಹನೆಂಬ ರಾಜನ ಮಗಳ ಮಗನೇ ಚೌಲುಕ್ಯ ಮೂಲರಾಜ. ಆತ 942ರಲ್ಲಿ ಈ ವಂಶವನ್ನು ಕೊನೆಗಾಣಿಸಿ ಅನ್ಹಿಲಪಾಟಕ (ಅನಿಲವಾಡ) ವನ್ನು ತನ್ನ ರಾಜಧಾನಿಯಾಗಿ ಮಾಡಿಕೊಂಡ.

ಚಾಪೇಕರ್ ಸಹೋದರರು

ಭಾರತದಲ್ಲಿ ಬ್ರಿಟಿಷರ ಆಳ್ವಿಕೆಯನ್ನು ಕೊನೆಗಾಣಿಸಲು ಕ್ರಾಂತಿಕಾರಿ ಚಟುವಟಿಕೆಗಳನ್ನು ಕೈಗೊಂಡ ವೀರರಲ್ಲಿ ಚಾಪೇಕರ್ ಸಹೋದರರು ಗಣ್ಯರು.



ಆಳುವ ಕೈ : ಚಾಂದ್ ಬೀಬಿ

ದಾಮೋದರ ಚಾಪೇಕರ್

ಈ ಮೂವರು ಸಹೋದರರಲ್ಲಿ ಮೊದಲ ನೆಯವನು ದಾಮೋದರ; ಜನನ 1869. ಎರಡನೆಯವನು ಬಾಲಕೃಷ್ಣ. ಹುಟ್ಟಿದ್ದು 1873ರಲ್ಲಿ. ವಾಸುದೇವ ಮೂರನೆಯವನು. ಈತನ ಜನನ 1880ರಲ್ಲಿ. ಇವರೆಲ್ಲರೂ ಪುಣೆ ಜಿಲ್ಲೆಯ ಚಿಂಚವಾಡದವರು.

ಭಾರತ ಸ್ವಾತಂತ್ರ್ಯ ಸಾಧನೆಗಾಗಿ ಹಿರಿಯ ರಿಬ್ಬರೂ ಒಂದು ಸಂಸ್ಥೆ ಕಟ್ಟಿ ತರುಣರಿಗೆ ವ್ಯಾಯಾಮ ಶಿಕ್ಷಣವನ್ನು, ಸೈನಿಕ ತರಪೇತಿ ಯನ್ನು ಕೊಡುತ್ತಿದ್ದರು. ದೇಶಭಕ್ತ ತರು ಣರ ಗುಂಪನ್ನು ಬೆಳೆಸುತ್ತಿದ್ದರು. 1897ರಲ್ಲಿ ಮುಂಬಯಿ ಪ್ರದೇಶದಲ್ಲಿ ಪ್ಲೇಗಿನ ಹಾವಳಿ ಹಬ್ಬಿತು. ಅದರ ನಿವಾರಣೆ ಕಾರ್ಯಕ್ರಮದ ಮುಖ್ಯಸ್ಥನಾಗಿದ್ದ ರ್ಯಾಂಡ್ ಎಂಬ ಬ್ರಿಟಿಷ್ ಅಧಿಕಾರಿಯೂ ಅವನ ಕೈಕೆಳಗಿನ ಕೆಲಸಗಾರರೂ ಜನರೊ ಡನೆ ದಯಾಹೀನರಾಗಿ ವರ್ತಿಸಿದರು. ಈ ದಬ್ಬಾಳಿಕೆಯಿಂದ ಜನರನ್ನು ಪಾರುಮಾಡಬೇಕೆಂದು ಚಾಪೇಕರ್ ಸೋದರರು ನಿರ್ಧರಿಸಿದರು; ರ್ಯಾಂಡ್ ನನ್ನು ಕೊಲ್ಲುವ ಯೋಜನೆ ಹಾಕಿದರು.

ಪುಣೆಯಲ್ಲಿ ವಿಕ್ಟೋರಿಯಾ ರಾಣಿಯ ಆಳ್ವಿಕೆಯ ವಜ್ರಮಹೋತ್ಸವ ಸಮಾರಂಭ ಮುಗಿಸಿಕೊಂಡು ಹಿಂದಿರುಗುತ್ತಿದ್ದ ರ್ಯಾಂಡ್‌ನನ್ನೂ ಅವನ ಜೊತೆಗಾರನನ್ನೂ ದಾಮೋದರ ಮತ್ತು ಬಾಲಕೃಷ್ಣ ಗುಂಡಿಟ್ಟು ಕೊಂದರು. ಯಾರ ಕೈಗೂ ಸಿಕ್ಕದೆ ತಪ್ಪಿಸಿಕೊಂಡಿದ್ದ ಇವರನ್ನು ಸ್ವಲ್ಪ ಕಾಲಾನಂತರ ಬಂಧಿಸಿ, ವಿಚಾರಣೆಗೆ ಗುರಿಮಾಡಲಾಯಿತು. ಇವರಿಬ್ಬರಿಗೂ ಮರಣದಂಡನೆ ವಿಧಿಸಿದರು. ಕೊಲೆ ಪ್ರಕರಣದಲ್ಲಿ ತನ್ನ ಸೋದರರಿಗೆ ಸಹಾಯಕನಾಗಿದ್ದನೆಂಬ ಆಪಾದನೆಯ ಮೇಲೆ ವಾಸುದೇವನಿಗೂ ಇದೇ ಶಿಕ್ಷೆಯಾಯಿತು. 1899ನೆಯ ಮೇ ತಿಂಗಳಿನಲ್ಲಿ ಈ ಮೂವರನ್ನೂ ಪುಣೆಯ ಯೆರವಾಡ ಸೆರೆಮನೆಯಲ್ಲಿ ಗಲ್ಲಿಗೆ ಏರಿಸಲಾಯಿತು.

ಚಾರು ಮಜುಮ್‌ದಾರ್

ಗುಳಿಬಿದ್ದ ಕಣ್ಣುಗಳು. ಬಡಕಲು ದೇಹ, ಬಿಡದೆ ಕಾಡುವ ಉಬ್ಬಸ. ಇದಕ್ಕೆ ಬೇಕಾದ ಔಷಧಿಯನ್ನೂ ಇತರ ಪರಿಕರಗಳನ್ನೂ ಬೆನ್ನಿಗೆ ಕಟ್ಟಿ ಕೊಂಡು ಪೋಲೀಸರ ಕಣ್ಣಿಗೆ ಬೀಳದಂತೆ ಕಾಡುಮೇಡುಗಳಲ್ಲಿ ಓಡಾಡುತ್ತಿದ್ದ ಕ್ರಾಂತಿಕಾರ ಚಾರು ಮಜುಮ್‌ದಾರ್. ಇವರು ಮಾರ್ಕ್ಸಿಸ್ಟ್-ಲೆನಿನಿಸ್ಟ್ ಕಮ್ಯೂನಿಸ್ಟ್ ಪಕ್ಷ ಸ್ಥಾಪಿಸಿದವರು; ಬಂಗಾಳದ ನಕ್ಸಲ್‌ಬಾರಿಯ ಬೇಸಾಯಗಾರರಲ್ಲಿ ಕ್ರಾಂತಿಯ ಕಿಡಿ ಹತ್ತಿಸಿದವರು.

ಬಂಗಾಳದವರೇ ಆದ ಚಾರು ಮೊದಲಿಗೆ ಭಾರತದ ಕಮ್ಯೂನಿಸ್ಟ್ ಪಕ್ಷದ ಸದಸ್ಯರಾಗಿದ್ದರು. 1965ರಲ್ಲಿ ಇವರು ಮಾರ್ಕ್ಸಿಸ್ಟ್ – ಕಮ್ಯೂನಿಸ್ಟ್ ಪಕ್ಷದವರಾದರು. 1967ರಲ್ಲಿ ಉಳಿದ ತೀವ್ರಗಾಮಿಗಳೊಂದಿಗೆ ಹೊಸ ಪಕ್ಷ ಸ್ಥಾಪಿಸಿದರು. ಸಶಸ್ತ್ರ ಕ್ರಾಂತಿಯಿಂದ ದೇಶದಲ್ಲಿ ಕಮ್ಯೂನಿಸಮನ್ನು ಪಡೆಯುವುದು ಅವರ ಹೊಸ ಪಕ್ಷದ ಉದ್ದೇಶ.

ನಕ್ಸಲ್‌ವಾದಿಗಳೆಂದು ಹೆಸರು ಪಡೆದ ಈ ಕ್ರಾಂತಿಕಾರಿಗಳನ್ನು ಹತ್ತಿಕ್ಕಲು ಸರಕಾರ ನಿರ್ಧರಿಸಿತು. ಚಾರು ಅವರ ಬಂಧನಕ್ಕೆ ವಾರಂಟ್ ಹೊರಡಿಸಿತು. ಎರಡೂವರೆ ವರ್ಷಗಳ ಬಳಿಕ ಕಲ್ಕತ್ತದಲ್ಲಿ ಮಜುಮ್‌ದಾರ್ ಬಂಧಿಸಲ್ಪಟ್ಟರು.

ಹನ್ನೆರಡು ದಿನಗಳ ಬಳಿಕ, 1972ರ ಜೂಲೈ 28ರಂದು, ಚಾರು ಮಜುಮ್‌ದಾರ್ ಸೆರೆಮನೆಯಲ್ಲೇ ಹೃದಯಾಘಾತದಿಂದ ನಿಧನರಾದರು. ಆಗ ಅವರಿಗೆ ಐವತ್ತು ವರ್ಷ ವಯಸ್ಸು.



ನಕ್ಸಲ್‌ಬಾರಿ ನಾಯಕತ್ವ : ಚಾರು

ಚಾಲುಕ್ಯರು

ಆರು, ಏಳು, ಎಂಟನೆಯ ಶತಮಾನಗಳಲ್ಲಿ, ಕರ್ನಾಟಕ ಮತ್ತು ಅದರ ಆಚೆಯ ಪ್ರದೇಶಗಳಲ್ಲಿ ರಾಜ್ಯಭಾರ ನಡೆಸಿದ, ಅಖಿಲ ಭಾರತ ಕೀರ್ತಿ ಗಳಿಸಿದ ರಾಜವಂಶ ಚಾಲುಕ್ಯರದು.

ಚಾಲುಕ್ಯರು ಅಯೋಧ್ಯೆಯಿಂದ ಬಂದವರೆಂದು ಕೆಲವರು ವಾದಿಸುತ್ತಾರೆ. ಆದರೆ ಚಾಲುಕ್ಯರ ಶಾಸನಗಳ ಆಧಾರದಿಂದ, ಅವರು ಕನ್ನಡ ನಾಡಿನವರೆಂದು ಹೇಳಬಹುದು.

ಬಾದಾಮಿಯ ಚಾಲುಕ್ಯರು : ಕ್ರಿ. ಶ. 550ರ ಸುಮಾರಿಗೆ ಬಾದಾಮಿ ಕೋಟೆಯನ್ನು ಕಟ್ಟಿಸಿ ಅಶ್ವಮೇಧಯಾಗ ಮಾಡಿದ ಪುಲಿಕೇಶಿ ಈ ವಂಶದ ಮೊದಲ ಶ್ರೇಷ್ಠ ರಾಜ. ಬಾದಾಮಿಯ ಕೋಟೆಯನ್ನು ಕಟ್ಟುವ ಮೊದಲು ಐಹೊಳೆ ಅವನ ರಾಜಧಾನಿಯಾಗಿತ್ತು.

ಪುಲಿಕೇಶಿಯ ಅನಂತರ ಕೀರ್ತಿವರ್ಮ, ಮಂಗಳೇಶ ಎಂಬ ಅವನ ಮಕ್ಕಳು ಅನುಕ್ರಮವಾಗಿ ಆಳಿದರು. ಮಂಗಳೇಶನು ಬಾದಾಮಿಯ ಖ್ಯಾತ ವೈಷ್ಣವ ಗುಹಾಲಯಗಳನ್ನು ನಿರ್ಮಿಸಿದ. ಕೀರ್ತಿವರ್ಮನ ಮಗ ಎರಡನೆಯ ಪುಲಿಕೇಶಿ ಭಾರತದ ಶ್ರೇಷ್ಠ ದೊರೆಗಳಲ್ಲಿ ಒಬ್ಬ. ದಕ್ಷಿಣದ ಪಲ್ಲವರನ್ನೂ ಉತ್ತರದ ಹರ್ಷನನ್ನೂ ಸೋಲಿಸಿದ; ಇರಾನ್ ದೇಶದೊಂದಿಗೆ ರಾಯಭಾರ ಸಂಬಂಧ ಹೊಂದಿದ್ದ. ಇವನ ಕೊನೆಗಾಲದಲ್ಲಿ ಪಲ್ಲವರು ಇವನ ರಾಜಧಾನಿ ಬಾದಾಮಿಯನ್ನು ಮುತ್ತಿ ವಶಪಡಿಸಿಕೊಂಡರು. ಪುಲಿಕೇಶಿಯ ಮರಣಾನಂತರ (642) ಅವನ ಮಗ ವಿಕ್ರಮಾದಿತ್ಯ (ಆಳ್ವಿಕೆ : 655-81) ಪಲ್ಲವರನ್ನು ಹೊಡೆದಟ್ಟಿ ಬಾದಾಮಿಯನ್ನು ಗೆದ್ದ. ಅವನ ಮಗ ವಿನಯಾದಿತ್ಯ ಉತ್ತರ ಭಾರತದ ಮೇಲೆ ದಾಳಿಮಾಡಿ, ಉತ್ತರಾಪಥನಾಥ ವಜ್ರಟನನ್ನು ಸೋಲಿಸಿ, ಅವನಿಂದ ಭಾರತದ ಪರಮಾಧಿಕಾರದ ಚಿಹ್ನೆಯಾದ ಪಾಳಿಧ್ವಜವನ್ನು ಕಸಿದುತಂದ. ಇವನ ಮೊಮ್ಮಗ ಎರಡನೆಯ ವಿಕ್ರಮಾದಿತ್ಯ ಪಲ್ಲವರ ಕಂಚಿಯನ್ನು ಗೆದ್ದು ತನ್ನ ವಿಜಯದ ಸ್ಮಾರಕವಾಗಿ ಅಲ್ಲಿನ ಕೈಲಾಸನಾಥ ದೇವಾಲಯದಲ್ಲಿ ಕನ್ನಡದಲ್ಲಿ ವಿಜಯ ಶಾಸನವನ್ನು ಬರೆಸಿದ. ಇವನ ಮಗ ಎರಡನೆಯ ಕೀರ್ತಿವರ್ಮನನ್ನು ರಾಷ್ಟ್ರಕೂಟ ದಂತಿದುರ್ಗನು 753ರಲ್ಲಿ ಸೋಲಿಸಿ ಚಾಲುಕ್ಯ ರಾಜ್ಯವನ್ನು ಗೆದ್ದುಕೊಂಡ. ಬಾದಾಮಿಯ ಖ್ಯಾತ ಗುಹೆಗಳೂ ಐಹೊಳೆ, ಪಟ್ಟದಕಲ್ಲುಗಳಲ್ಲಿರುವ ಸುಂದರ ದೇವಾಲಯಗಳೂ ಚಾಲುಕ್ಯರ ರಚನೆಗಳು. ಕರ್ನಾಟಕ, ಆಂಧ್ರ, ಮಹಾರಾಷ್ಟ್ರ, ದಕ್ಷಿಣ ಗುಜರಾತ್ ಮತ್ತು ತಮಿಳುನಾಡಿನ ಉತ್ತರ ಭಾಗಗಳನ್ನು ಒಳಗೊಂಡ ವಿಶಾಲ ರಾಜ್ಯವನ್ನು ಎರಡು ಶತಮಾನಗಳ ಕಾಲ ಚಾಲುಕ್ಯರು ಆಳಿದರು. ವೆಂಗಿ, ಕಲ್ಯಾಣದ ಚಾಲುಕ್ಯರು ಇವರ ಶಾಖೆಗಳೇ.



ವೆಂಗಿಯ ಚಾಲುಕ್ಯರ ನಾಣ್ಯ

ಕಲ್ಯಾಣದ ಚಾಲುಕ್ಯರು : ಬಾದಾಮಿಯ ಎರಡನೆಯ ವಿಕ್ರಮಾದಿತ್ಯನ ಸೋದರ ಭೀಮ ಎಂಬಾತ ಕಲ್ಯಾಣದ ಚಾಲುಕ್ಯರ ಮೂಲಪುರುಷ ಎನ್ನುತ್ತಾರೆ. ಈ ವಂಶದ ಇಮ್ಮಡಿ ತೈಲಪ ಕ್ರಿ. ಶ. 973ರಲ್ಲಿ ರಾಷ್ಟ್ರಕೂಟ ದೊರೆ ಎರಡನೆಯ ಕರ್ಕನನ್ನು ಸೋಲಿಸಿ ಮಾನ್ಯಖೇಟವನ್ನು ವಶಪಡಿಸಿಕೊಂಡು ಮತ್ತೆ ಚಾಲುಕ್ಯರ ರಾಜ್ಯಭಾರ ಆರಂಭಿಸಿದ. ಇವನ ಬಳಿಕ ಆಳಿದ ಸತ್ಯಾಶ್ರಯ ಇರಿವಬೆಡಂಗ (ಆಳ್ವಿಕೆ : 997-1008) ಕನ್ನಡ ಕವಿ ರನ್ನನ ಆಶ್ರಯದಾತ. ಈ ವಂಶದ ಮೊದಲನೆಯ ಸೋಮೇಶ್ವರ (ಆಳ್ವಿಕೆ : 1043-68) ಕಲ್ಯಾಣ ರಾಜಧಾನಿಯನ್ನು ಕಟ್ಟಿಸಿದ. ತಂಜಾವೂರಿನ ಚೋಳರ ಜೊತೆ ನಡೆದ ಸೆಣಸಾಟದಲ್ಲಿ ಈತ ಚೋಳ ರಾಜಾಧಿರಾಜನನ್ನು ಕೊಂದ.

ಇವನ ಮಗ ಆರನೆಯ ವಿಕ್ರಮಾದಿತ್ಯ (1076-1127) ಈ ವಂಶದ ಶ್ರೇಷ್ಠ ದೊರೆ. ಚಾಲುಕ್ಯ ವಿಕ್ರಮ ಶಕ ಎಂಬುದನ್ನು ಇವನು 1076ರಲ್ಲಿ ಆರಂಭಿಸಿದ. 'ಮಿತಾಕ್ಷರ ಸಂಹಿತಾ' ಹಿಂದೂಧರ್ಮಶಾಸ್ತ್ರ ಗ್ರಂಥವನ್ನು ಬರೆದ ವಿಜ್ಞಾನೇಶ್ವರ ಮತ್ತು ವಿಕ್ರಮಾದಿತ್ಯನನ್ನೇ ನಾಯಕನಾಗಿ ಹೊಂದಿರುವ 'ವಿಕ್ರಮಾಂಕದೇವ ಚರಿತ'ವನ್ನು ಬರೆದ ಕಾಶ್ಮೀರದ ಸಂಸ್ಕೃತ ಕವಿ ಬಿಲ್ಹಣ ಇವನ ಆಸ್ಥಾನದಲ್ಲಿದ್ದವರು.

ಇವನ ಮಗ ಮೂರನೆಯ ಸೋಮೇಶ್ವರ ವಿದ್ವಾಂಸನಾದ ರಾಜ. ಈತ 'ಅಭಿಲಾಷಿತಾರ್ಥ ಚಿಂತಾಮಣಿ' ಎಂಬ ಸಂಸ್ಕೃತ ವಿಶ್ವಕೋಶವನ್ನು ಬರೆದ. 1162ರಲ್ಲಿ ಕಳಚುರಿ ವಂಶದ ಬಿಜ್ಜಳ ಚಾಲುಕ್ಯರ ರಾಜ್ಯವನ್ನು ವಶಪಡಿಸಿಕೊಂಡ.

ಈ ವಂಶದವರು 22 ವರ್ಷ ಆಳ್ವಿಕೆ ನಡೆಸಿದ ಅನಂತರ 1184ರಲ್ಲಿ ಕಲ್ಯಾಣದ ಚಾಲುಕ್ಯ ವಂಶದ ನಾಲ್ಕನೆಯ ಸೋಮೇಶ್ವರನು ತಮ್ಮ ರಾಜ್ಯವನ್ನು ಮತ್ತೆ ಗೆದ್ದುಕೊಂಡ. ಆದರೆ ಕೆಲವೇ ವರ್ಷಗಳಲ್ಲಿ ಪುನಃ ಪದಚ್ಯುತನಾದ. ಬಳಿಕ ಸಾಮಂತರಾದ ಸೇವುಣರೂ ಹೊಯ್ಸಳರೂ ಚಾಲುಕ್ಯ ರಾಜ್ಯವನ್ನು ಕಬಳಿಸಿದರು. ನರ್ಮದೆಯಿಂದ ತುಂಗಭದ್ರೆಯ ವರೆಗೆ ವಿಶಾಲ ರಾಜ್ಯವನ್ನು ಆಳಿದ ಚಾಲುಕ್ಯರು ಕನ್ನಡ, ಸಂಸ್ಕೃತ ಸಾಹಿತ್ಯಗಳಿಗೆ ಪ್ರೋತ್ಸಾಹ ನೀಡಿದರು. ಕಲ್ಯಾಣದ ಚಾಲುಕ್ಯರ ಶೈಲಿಯ ಸುಂದರ ದೇವಾಲಯಗಳು ಇಟಗಿ, ಡಂಬಳ, ಲಕ್ಕುಂಡಿ, ಗದಗ, ಕುರುವತ್ತಿ, ಚೌಡದಾನಪುರ ಮುಂತಾದ ಸ್ಥಳಗಳಲ್ಲಿ ಇಂದಿಗೂ ಇವೆ.

ವೆಂಗಿಯ ಚಾಲುಕ್ಯರು : ಎರಡನೆಯ ಪುಲಕೇಶಿ ತಾನು ಗೆದ್ದ ಆಂಧ್ರ ಪ್ರದೇಶದ ಭಾಗಗಳ ಮೇಲೆ ತನ್ನ ಸೋದರ ವಿಷ್ಣುವರ್ಧನನನ್ನು ಮಾಂಡಲಿಕನನ್ನಾಗಿ ನೇಮಿಸಿದ. ಇದರಿಂದ ವೆಂಗಿಯ ಚಾಲುಕ್ಯ ಶಾಖೆಯ ಉದಯವಾಯಿತು.

ರಾಷ್ಟ್ರಕೂಟರು, ಪಲ್ಲವರು ಹಾಗೂ ಚೋಳರ ವಿರುದ್ಧ ಸೆಣಸಾಡುತ್ತ [illegible] ಕಲ್ಯಾಣದ ಚಾಲುಕ್ಯರ ಕಾಲದಲ್ಲಿ

ವೆಂಗಿಯ ರಾಜ್ಯವನ್ನು ಗೆಲ್ಲಲು ಕಲ್ಯಾಣದ ಅರಸರೂ ಚೋಳರೂ ಸದಾ ಹೋರಾಡಿದರು. 1070ರಲ್ಲಿ ಚೋಳ ರಾಜ್ಯದ ಪಟ್ಟವನ್ನೇರಿದ ಎರಡನೆಯ ರಾಜೇಂದ್ರ(ಕುಲೋತ್ತುಂಗ)ನು ವೆಂಗಿಯ ವಿಜಯಾದಿತ್ಯನನ್ನು ಹೊಡೆದಟ್ಟಿ ವೆಂಗಿರಾಜ್ಯವನ್ನು ವಶಪಡಿಸಿಕೊಂಡ. ಐದು ಶತಮಾನದ ಕಾಲ ಆಂಧ್ರದಲ್ಲಿ ಆಳಿದ ಈ ವಂಶ ಆಂಧ್ರದಲ್ಲಿ [illegible] ಗಳ ಪ್ರಗತಿಯ ಕ್ಷೇತ್ರಕ್ಕೆ ತನ್ನದೇ ಆದ ಕೊಡುಗೆ ನೀಡಿದೆ.

ಚಾಲುಕ್ಯ ಶಿಲ್ಪ, ವಾಸ್ತುಶಿಲ್ಪ

ನೋಡಿ : ಸಂಪುಟ ೫

ಚಾರ್ವಾಕ

ಸ್ವರ್ಗವಿಲ್ಲ, ನರಕವಿಲ್ಲ, ದೇವರಿಲ್ಲ, ರಾಕ್ಷಸರಿಲ್ಲ, ಮಂತ್ರಗಳಿಗೆ ಅರ್ಥವಿಲ್ಲ. ನಮ್ಮ ಕಣ್ಣಿಗೆ ಕಾಣುವ, ನಾವು ಕೇಳುವ, ಸ್ಪರ್ಶಕ್ಕೆ ಸಿಗುವ ವಿಷಯಗಳೇ ನಿಜ. ಈ ದೇಹವೆಂಬುದು ನಿಜ. ಇಂದ್ರಿಯಗಳಿಗೆ ನಿಲುಕದ ಆತ್ಮ ಎಂಬುದಿಲ್ಲ — ಇದು ಚಾರ್ವಾಕವಾದ. ಚಾರ್ವಾಕ ದರ್ಶನ ಭಾರತದ ಪ್ರಾಚೀನ ಸಿದ್ಧಾಂತಗಳಲ್ಲಿ ಒಂದು. ದೇಹಕ್ಕಿಂತ ಬೇರೆಯಾದ ಆತ್ಮವಿದೆ ಎಂಬುದನ್ನಾಗಲೀ ಜನ್ಮಾಂತರ, ಪುಣ್ಯಪಾಪ, ಪರಲೋಕಗಳು ಇವೆ ಎಂಬುದನ್ನಾಗಲೀ ಇವರು ಒಪ್ಪುವುದಿಲ್ಲ.

ಭೂಮಿ, ನೀರು, ತೇಜಸ್ಸು ಹಾಗೂ ಗಾಳಿ ಈ ನಾಲ್ಕು ತತ್ತ್ವಗಳ ಪರಿಣಾಮದಿಂದ ಜಗತ್ತಿನ ಸೃಷ್ಟಿಯಾಗಿದೆ ; ಈ ತತ್ತ್ವಗಳ ಸಂಯೋಗದಿಂದಲೇ ಬುದ್ಧಿ, ಜ್ಞಾನ ಎಂಬ ಚೈತನ್ಯಶಕ್ತಿ ಉಂಟಾಗುತ್ತದೆ ; ಈ ತತ್ತ್ವಗಳು ಬೇರೆಬೇರೆಯಾದಾಗ ಈ ಚೈತನ್ಯ ಅಡಗಿಹೋಗುತ್ತದೆ ; ಅದೇ ಸಾವು — ಎನ್ನುತ್ತಾರೆ ಚಾರ್ವಾಕರು.

ಪ್ರತಿಯೊಂದು ವಸ್ತುವಿಗೂ ಅದರದರ ಸ್ವಭಾವವಿರುತ್ತದೆ. ಬೀಜ ಭೂಮಿಗೆ ಬಿದ್ದಾಗ ಅದು ಮೊಳೆತು, ಗಿಡವಾಗಿ ಹೂ ಬಿಡುವುದು ಅದರ ಸ್ವಭಾವ. ವ್ಯವಸಾಯ, ವ್ಯಾಪಾರ, ರಾಜನ ಸೇವೆಗಳಿಂದ ಐಶ್ವರ್ಯ ಹಾಗೂ ಸುಖ ಗಳಿಸಿ, ಆತ್ಮ ಇರುವವರೆಗೂ ಸುಖವಾಗಿರುವಂತೆ ಮಾಡುವುದೇ ಮುಕ್ತಿ. ಇದು ಚಾರ್ವಾಕವಾದದ ತಿರುಳು.

ಚಾರ್ವಾಕದರ್ಶನ ಒಂದು ಕಾಲಕ್ಕೆ ಬಹಳ ಪ್ರಸಿದ್ಧವಾಗಿದ್ದಿತು, ವ್ಯಾಪಕವಾಗಿದ್ದಿತು. ಇದರಿಂದ ಈ ವಾದಕ್ಕೆ ಲೋಕಾಯತವಾದವೆಂಬ ಹೆಸರೂ ಇದೆ.

ಬೃಹಸ್ಪತ್ಯಾಚಾರ್ಯ ಇದರ ಸೂತ್ರಗಳನ್ನು ರಚಿಸಿದ ; ಚಾರ್ವಾಕ ಇದಕ್ಕೆ ಭಾಷ್ಯ ಬರೆದ – ಎಂದು ಪ್ರತೀತಿ.

ರಾಮಾಯಣ, ಮಹಾಭಾರತಗಳಲ್ಲಿ ಚಾರ್ವಾಕಮತದ ಪ್ರಸ್ತಾಪ ಬರುತ್ತದೆ. ಚಾರ್ವಾಕ ಮತದ ಬರಹಗಳು ದೊರೆತಿಲ್ಲ. ಆದರೆ ಇದರ ವಿಚಾರಗಳು ಮಾತ್ರ ಇತರ ಮತದ ಬರಹಗಳಲ್ಲಿ ಉಲ್ಲೇಖವಾಗಿರುವುದು ದೊರೆತಿವೆ. 15ನೆಯ ಶತಮಾನದ ವರೆಗೆ ಚಾರ್ವಾಕ ಮತದ ಅಧ್ಯಯನ ನಡೆಯುತ್ತಿದ್ದಿತು. ನಾಲಂದಾ, ತಕ್ಷಶಿಲಾ, ಕಾಶಿ, [illegible] ಮುಂತಾದ ವಿಶ್ವ ವಿದ್ಯಾನಿಲಯಗಳಲ್ಲಿ ಈ ದರ್ಶನದ ಪಾಠ ನಡೆಯುತ್ತಿತ್ತು.

ಚಾವುಂಡರಾಯ

ಶ್ರವಣಬೆಳಗೊಳದ ಗೊಮ್ಮಟೇಶ್ವರ ಮೂರ್ತಿಯನ್ನು ಮಾಡಿಸಿದವನು ಚಾವುಂಡರಾಯ. [illegible]

ಮಹಾಪುರಾಣ'ದ ಕರ್ತೃ ಇವನು. ಇದು 'ಚಾವುಂಡರಾಯ ಪುರಾಣ' ಎಂಬ ಹೆಸರಿನಲ್ಲಿ ಪ್ರಸಿದ್ಧವಾಗಿದೆ. ಚಾವುಂಡರಾಯ ಗಂಗ ಅರಸರಾದ ನಾಲ್ವರ ರಾಜಮಲ್ಲನ ಮಂತ್ರಿಯೂ ದಂಡಾಧಿಪತಿಯೂ ಆಗಿದ್ದ. ಇವನ ತಂದೆ ಮಹಾಬಲಯ್ಯ.

ಚಾವುಂಡರಾಯ ಗಂಗ ಅರಸ ಮಾರಸಿಂಹನೊಡನೆ ಯುದ್ಧಗಳಲ್ಲಿ ಪಾಲ್ಗೊಂಡಾಗ ಅವನ ಶೌರ್ಯ, ಸಾಹಸ ಬೆಳಕಿಗೆ ಬಂದುವು. ಮಾರಸಿಂಹ ನಿಧನನಾದ ಮೇಲೆ ಗಂಗ ರಾಜ್ಯಾಪಹಾರಕ್ಕೆ ಪ್ರಯತ್ನಪಟ್ಟವರನ್ನು ಚಾವುಂಡ ಬಗ್ಗುಬಡಿದ. ವಿರೋಧಿಗಳನ್ನು ನಿಗ್ರಹಿಸಿದ. ನಾಲ್ಮಡಿ ರಾಚಮಲ್ಲನನ್ನು ಸಿಂಹಾಸನಕ್ಕೇರಿಸಿದ. ತಾನು ಅವನ ಮಂತ್ರಿ ಹಾಗೂ ದಂಡಾಧಿಪತಿಯಾದ.

ಅಪ್ರತಿಮ ಶೂರನಾಗಿದ್ದ ಇವನಿಗೆ ಸಮರ ಪರಶುರಾಮ, ವೀರ ಮಾರ್ತಾಂಡ, ರಣರಂಗ ಸಿಂಹ, ಸಮರ ದುರಂಧರ, ವೈರಿಕುಲ ಕಾಲದಂಡ, ಭುಜ ವಿಕ್ರಮ, ಭಟಮಾರ ಎಂಬ ಬಿರುದುಗಳಿವೆ.

ಚಾವುಂಡ ರಾಜನೀತಿ ವಿಚಕ್ಷಣ, ಯುದ್ಧನೀತಿ ವಿಶಾರದ, ಸ್ವಯಂ ಪಂಡಿತ. ಪಾಂಡಿತ್ಯವನ್ನು ಗೌರವಿಸುತ್ತಿದ್ದ. ತರ್ಕ, ವ್ಯಾಕರಣ, ಗಣಿತ, ವೈದ್ಯ ಮತ್ತು ಸಾಹಿತ್ಯದಲ್ಲಿ ಪರಿಣತನಾಗಿದ್ದ. ಜೈನ ಮತದಲ್ಲಿ ಇವನಿಗೆ ಅಪಾರ ಶ್ರದ್ಧೆ.

ಚಾವುಂಡರಾಯ 982ರಲ್ಲಿ ಶ್ರವಣಬೆಳಗೊಳದಲ್ಲಿ ಎರಡು ಅಂತಸ್ತುಗಳ ಬಸದಿ ಕಟ್ಟಿಸಿದ. 983ರಲ್ಲಿ ಗೋಮಟೇಶ್ವರ ವಿಗ್ರಹ ಪ್ರತಿಷ್ಠಾಪಿಸಿದ. ರಾಚಮಲ್ಲ ಅವನಿಗೆ 'ರಾಯ' ಎಂಬ ಬಿರುದು ಕೊಟ್ಟು ಸನ್ಮಾನಿಸಿದ.

ಉದಾರ ಸ್ವಭಾವ, ಸರಳತೆ, ಧೈರ್ಯ, ಸಾಹಸ, ನ್ಯಾಯಪರತೆ, ಉಪಕಾರಬುದ್ಧಿಗೆ ಖ್ಯಾತನಾಗಿದ್ದ ವ್ಯಕ್ತಿ, ಚಾವುಂಡರಾಯ.

ಚಿಕದೇವರಾಯ

ನೋಡಿ : ಸಂಪುಟ ೫

ಚಿಕವೀರರಾಜೇಂದ್ರ

ಪದಚ್ಯುತನಾದ ರಾಜ ಇಂಗ್ಲೆಂಡಿಗೆ ಹೋಗಿ ನ್ಯಾಯ ದೊರಕಿಸಿಕೊಳ್ಳಲು ಯತ್ನಿಸಿದ. ನ್ಯಾಯಾಲಯದಲ್ಲಿ ತನ್ನ ಹಕ್ಕಿಗಾಗಿ ದಾವೆ ಹೂಡಿದ. ತನ್ನ ರಾಜ್ಯದಲ್ಲಿ ನಡೆದ ಘಟನೆಗಳನ್ನು ಯಥಾವತ್ತಾಗಿ ವಿವರಿಸಿ ತನಗಾದ ಅನ್ಯಾಯವನ್ನು ಎತ್ತಿ ತೋರಿಸಿದ. ಆ ರಾಜ ಕೊಡಗಿನ ಹಾಲೇರಿ ಮನೆತನದ ಚಿಕವೀರರಾಜೇಂದ್ರ.

ಚಿಕವೀರರಾಜೇಂದ್ರ ಲಿಂಗರಾಜನ ಮಗ. ಈತನ ಆಳ್ವಿಕೆಯ ಕಾಲ 1820 – 1831. ಲಿಂಗರಾಜನಿಗಿಂತ ಮೊದಲು ರಾಜ್ಯವಾಳಿದ ವೀರರಾಜನ ಮಗಳು, ದೇವಮ್ಮಾಜಿ. ಆಕೆ ಮತ್ತು ಚಿಕವೀರರಾಜೇಂದ್ರರ ನಡುವಣ ಸಂಬಂಧ ಹಿತಕರವಾಗಿರಲಿಲ್ಲ. ದೇವಮ್ಮಾಜಿಯ ಪತಿ ಚನ್ನಬಸಪ್ಪ ಬ್ರಿಟಿಷರ ಸಹಾಯ ಕೋರಿದ. ಬ್ರಿಟಿಷರು ಈ ಪರಿಸ್ಥಿತಿಯ ಲಾಭ ಪಡೆದರು.

ಚಿಕವೀರರಾಜೇಂದ್ರ ಕ್ರೂರಿ, ಪ್ರಜೆಗಳಿಗೆ ಹಿಂಸೆ ಕೊಡುತ್ತಿದ್ದಾನೆ; ಬ್ರಿಟಿಷರ ವಿರುದ್ಧ ಗುಪ್ತವಾಗಿ ಪಿತೂರಿ ನಡೆಸುತ್ತಿದ್ದಾನೆ ಎಂದು ಆಪಾದನೆಗಳ ಪಟ್ಟಿ ಸಿದ್ಧವಾಯಿತು. ಆಗ ಭಾರತದ ಗವರ್ನರ್ ಜನರಲ್ ಆಗಿದ್ದ ವಿಲಿಯಂ ಬೆಂಟಿಂಕನ ನಿರ್ದೇಶದಂತೆ ಆಂಗ್ಲ ಸೈನ್ಯ 1834 ಏಪ್ರಿಲ್ 10ರಂದು ಮಡಿಕೇರಿಯ ಮೇಲೆ ದಾಳಿಮಾಡಿತು. ಚಿಕವೀರರಾಜೇಂದ್ರ ಯುದ್ಧಕ್ಕೆ ಸಿದ್ಧತೆ ಮಾಡಿಕೊಂಡಿದ್ದರೂ ನಾಲ್ಕು ದಿಕ್ಕಿನಿಂದ ಮುತ್ತಿದ ಬ್ರಿಟಿಷರ ಸೇನೆಯನ್ನು ಎದುರಿಸಲು ಅಶಕ್ತನಾದ. ತನ್ನ ಕುಟುಂಬದವರೊಡನೆ ನಾಲ್ಕುನಾಡಿಗೆ ಹೊರಟುಹೋದ.

ಮಡಿಕೇರಿ 1834 ಮೇ 7ರಂದು ಬ್ರಿಟಿಷರ ವಶವಾಯಿತು. ಮತ್ತೆ 23ರಂದು ಚಿಕವೀರರಾಜ ಮಡಿಕೇರಿಗೆ ಹಿಂದಿರುಗಿದ. ಅವನನ್ನು ಬಂಧಿಸಲಾಯಿತು.

ಚಿಕವೀರರಾಜ ಪ್ರಜೆಗಳ ಪ್ರೀತಿ, ಗೌರವ ಗಳಿಸಿದ್ದ. ಆದ್ದರಿಂದ ಬ್ರಿಟಿಷರು ಅವನನ್ನು ಕೊಡಗಿನಲ್ಲಿಡದೆ ಕಾಶಿಗೆ ಕಳುಹಿಸಿದರು. ಮಾಸಾಶನ ಕೊಟ್ಟರು.

ರಾಜ 1852ರಲ್ಲಿ ಮಗಳು ಗೌರಮ್ಮನೊಂದಿಗೆ ಇಂಗ್ಲೆಂಡಿಗೆ ಹೋಗಿ ಪಾರ್ಲಿಮೆಂಟ್ ಸದಸ್ಯರ ನೆರವು ಪಡೆದು ನ್ಯಾಯಕ್ಕಾಗಿ ಹೋರಾಡಿದ. ಹಾಗೆ ಪ್ರಯತ್ನಿಸುತ್ತಿದ್ದಾಗಲೇ ಇಂಗ್ಲೆಂಡಿನಲ್ಲಿ 1860ರಲ್ಲಿ ತೀರಿಕೊಂಡ.

ಚಿತ್ತರಂಜನ್ ದಾಸ್

ಚಿತ್ತರಂಜನ್ ದಾಸ್ ಒಮ್ಮೆ ರೈಲ್ವೆ ಪ್ರಯಾಣ ಮಾಡುತ್ತಿದ್ದಾಗ ಮುಖಕ್ಷೌರ ಮಾಡಿಸಿಕೊಂಡರು; ಕ್ಷೌರಿಕನಿಗೆ ಹತ್ತು ರೂಪಾಯಿ ಕೊಟ್ಟರು. "ಇಷ್ಟು ಸಣ್ಣ ಕೆಲಸಕ್ಕೆ ಇಂಥ ಭಕ್ಷೀಸು ಏಕೆ ಕೊಟ್ಟಿರಿ?" ಎಂದು ಒಬ್ಬರು ಪ್ರಶ್ನಿಸಿದಾಗ, "ಹತ್ತು ರೂಪಾಯಿ ನನಗೆ ಬಹಳ ಸಣ್ಣ ಮೊತ್ತ. ಆದರೆ ಕ್ಷೌರಿಕನಿಗೆ ಇದು ಭಾರೀ ಸಂಪಾದನೆ ತಾನೆ?" ಎಂದರು. ಅಂಥ ಉದಾರಿ ಅವರು.

ಚಿತ್ತರಂಜನ್ ದಾಸ್ ಹುಟ್ಟಿದ್ದು ಕಲ್ಕತ್ತೆಯಲ್ಲಿ, 1870 ನವೆಂಬರ್ 5ರಂದು. ತಂದೆ ಭುವನಮೋಹನ ದಾಸರು ಖ್ಯಾತ ವಕೀಲರು. ಚಿತ್ತರಂಜನ್ ಕಲ್ಕತ್ತೆಯಲ್ಲಿ ಸ್ನಾತಕ ಶಿಕ್ಷಣ ಮುಗಿಸಿ ಐ.ಸಿ.ಎಸ್. ಪರೀಕ್ಷೆಗಾಗಿ ಇಂಗ್ಲೆಂಡಿಗೆ ಹೋದರು. ರಾಜಕೀಯಕ್ಕೆ ಮನಕೊಟ್ಟ ಕಾರಣ ಆ ಪರೀಕ್ಷೆಯಲ್ಲಿ ಉತ್ತೀರ್ಣರಾಗಲಿಲ್ಲ. ಬ್ಯಾರಿಸ್ಟರ್ ಆಗಿ ಹಿಂದಿರುಗಿ, ಕಲ್ಕತ್ತೆಯಲ್ಲಿ ಹೈಕೋರ್ಟ್ ವಕೀಲರಾದರು.

ವಕೀಲರಾಗಿ ದಾಸ್ ಕೈತುಂಬ ಸಂಪಾದಿಸಿದರು. ಅದನ್ನು ಸಾರ್ವಜನಿಕ ಸೇವೆಗಾಗಿ ವೆಚ್ಚ ಮಾಡಿದರು. 1906ರಲ್ಲಿ ಕಾಂಗ್ರೆಸ್ ಸದಸ್ಯರಾದರು. ಸೆರೆಮನೆ ಸೇರಿದ ಅನೇಕ ಮಂದಿ ಸ್ವಾತಂತ್ರ್ಯ ಹೋರಾಟಗಾರರ ಕುಟುಂಬಗಳಿಗೆ ಸಹಾಯ ಮಾಡಿದರು. ಅವರು ಸಕ್ರಿಯ ರಾಜಕೀಯ ರಂಗವನ್ನು ಪ್ರವೇಶಿಸಿದ್ದು 1917ರಲ್ಲಿ —ಅಲಿಪುರದ ಬಾಂಬ್ ಪ್ರಕರಣದಲ್ಲಿ— ಅರವಿಂದ ಘೋಷರ ವಕೀಲರಾಗಿ ವಾದಿಸಿದಾಗ. ಅನಂತರ ಅವರು ದೇಶ ಸೇವೆಗಾಗಿ ಪೂರ್ಣ ಕಾಲ ವ್ಯಯ ಮಾಡಲು ನಿರ್ಧರಿಸಿ, ತಮ್ಮ ವಕೀಲಿಯನ್ನು ಬಿಟ್ಟರು.

1920ರಲ್ಲಿ ಗಾಂಧೀಜೀ ಕಾಂಗ್ರೆಸ್ಸಿನ ಮುಂದೆ ಮಂಡಿಸಿದ ಅಸಹಕಾರ ಚಳುವಳಿ ಸೂಚನೆ ಚಿತ್ರರಂಜನ್ ದಾಸರಿಗೆ ಒಪ್ಪಿಗೆಯಾಗಲಿಲ್ಲ. ಅದನ್ನು ಅವರು ತೀವ್ರವಾಗಿ ವಿರೋಧಿಸಿದರು. ಆದರೆ ಗಾಂಧೀಜಿಯ ಕಾರ್ಯಕ್ರಮಕ್ಕೆ ಕಾಂಗ್ರೆಸ್ ಒಪ್ಪಿಗೆ ಕೊಟ್ಟ ಮೇಲೆ. ಅದಕ್ಕೆ ತಮ್ಮ ಪೂರ್ಣ ಬೆಂಬಲ ನೀಡಿದರು. ಅದು ಯಶಸ್ವಿಯಾಗಲು ಶ್ರಮಿಸಿದರು : ಗಾಂಧೀಜಿಯ ಬಲಗೈ ಎನಿಸಿದರು.



ಸ್ವರಾಜ್ಯ ಪಕ್ಷ : ದೇಶಬಂಧು

ಕಾಂಗ್ರೆಸ್ ಸಾರ್ವಜನಿಕ ಚಳುವಳಿಯ ಜೊತೆಜೊತೆಯಲ್ಲಿಯೇ ಶಾಸನ ಸಭೆಗಳನ್ನು ಪ್ರವೇಶಿಸಿ ಆ ರಂಗದ ಮೂಲಕವೂ ಸರಕಾರದ ಮೇಲೆ ಹೋರಾಟ ನಡೆಸಬೇಕೆಂಬುದು ದಾಸ್ ಅವರ ಅಭಿಪ್ರಾಯವಾಗಿತ್ತು. ಈ ಕಾರ್ಯಸಾಧನೆಗಾಗಿ ಅವರು 'ಸ್ವರಾಜ್ಯ ಪಕ್ಷ'ವನ್ನು ಕಟ್ಟಿ ಗಮನಾರ್ಹ ಸೇವೆ ಸಲ್ಲಿಸಿದರು. ಜನಜಾಗೃತಿ ಉಂಟುಮಾಡಲು ವಿಶೇಷವಾಗಿ ಶ್ರಮಿಸಿದರು.

ದಾಸ್ ಅವರು 1921ರ ಅಹಮದಾಬಾದ್ ಕಾಂಗ್ರೆಸ್ ಅಧಿವೇಶನಕ್ಕೆ ಅಧ್ಯಕ್ಷರಾಗಿ ಚುನಾಯಿತರಾದರು. ಅವರ ತೀವ್ರ ರಾಜಕೀಯ ಚಟುವಟಿಕೆಗಳಿಂದ ಕಂಗಾಲಾಗಿದ್ದ ಸರಕಾರ, ಅಧಿವೇಶನಕ್ಕೆ ಹದಿನೈದು ದಿನಗಳ ಮುಂಚೆ ಅವರನ್ನು ಬಂಧಿಸಿತು. 1922ರಲ್ಲಿ ಬಿಡುಗಡೆ ಹೊಂದಿದ ಮೇಲೆ ಆ ವರ್ಷದ ಕಾಂಗ್ರೆಸ್ ಅಧಿವೇಶನಕ್ಕೆ ಚಿತ್ತರಂಜನ್‌ದಾಸ್ ಅವರನ್ನು ಅಧ್ಯಕ್ಷರನ್ನಾಗಿ ಆರಿಸಲಾಯಿತು.

ಚಿತ್ತರಂಜನದಾಸರು ವಕೀಲರೂ ರಾಜಕಾರಣಪಟುವೂ ಆಗಿದ್ದಂತೆ ಸಾಹಿತಿಯೂ ಆಗಿದ್ದರು. 'ಸಮುದ್ರಗೀತೆ' ಅವರ ಕವನಸಂಕಲನ. ಇದನ್ನು ಅರವಿಂದ ಘೋಷರು ಇಂಗ್ಲಿಷ್‌ಗೆ ಭಾಷಾಂತರಿಸಿದರು. ದಾಸರು ಇನ್ನೂ ಕೆಲವು ಗ್ರಂಥಗಳನ್ನು ರಚಿಸಿದ್ದಲ್ಲದೆ, 'ಫಾರ್ವರ್ಡ್' ಎಂಬ ಪತ್ರಿಕೆಯನ್ನೂ ನಡೆಸಿದರು.

'ದೇಶಬಂಧು' ಎಂದು ಕರೆದು ಜನತೆ ಅವರನ್ನು ಗೌರವಿಸಿತು.

ಬಿಡುವಿಲ್ಲದ ದುಡಿಮೆ ಸೆರೆಮನೆವಾಸಗಳಿಂದಾಗಿ ದಾಸರ ಆರೋಗ್ಯ ಕೆಟ್ಟಿತು. ವಿಶ್ರಾಂತಿ ಅವಶ್ಯವಾಯಿತು. ಅದಕ್ಕಾಗಿ ಡಾರ್ಜೀಲಿಂಗ್‌ಗೆ ಹೋದರು. 1925 ಜೂನ್ 16 ರಂದು ಅಲ್ಲೇ ತಮ್ಮ ಕೊನೆಯ ಉಸಿರೆಳೆದರು.

ಈ ಸುದ್ದಿ ತಿಳಿದಾಗ ಗಾಂಧೀಜೀ 'ಇಂದು ಬಂಗಾಳ ವಿಧವೆಯಂತಾಗಿದೆ' ಎಂದರು. ತನ್ನ ಮಹಾ ನಾಯಕನೊಬ್ಬನ ವಿಯೋಗದಿಂದ ಇಡೀ ರಾಷ್ಟ್ರವೇ ಶೋಕಕ್ಕೊಳಗಾಯಿತು.

ನೋಡಿ : ಸ್ವರಾಜ್ಯ ಪಕ್ಷ

ಚಿತ್ತರಂಜನ್ ಲೋಕೊಮೋಟಿವ್ ವರ್ಕ್ಸ್

ರೈಲ್ವೆ ಎಂಜಿನುಗಳ ತಯಾರಿಕೆಗಾಗಿ ಸ್ವತಂತ್ರ ಭಾರತದಲ್ಲಿ ಸ್ಥಾಪಿಸಲ್ಪಟ್ಟ ಸರಕಾರೀ ಉದ್ಯಮ, ಚಿತ್ತರಂಜನ್ ಲೋಕೊಮೋಟಿವ್ ವರ್ಕ್ಸ್. ಇದು ಪಶ್ಚಿಮ ಬಂಗಾಳದಲ್ಲಿದೆ. ಆರಂಭವಾದದ್ದು 1948ರಲ್ಲಿ. ಆಗ ಹೂಡಿದ ಬಂಡವಾಳ 14 ಕೋಟಿ ರೂಪಾಯಿ. ರೈಲ್ವೆ ಎಂಜಿನ್‌ಗಳಿಗಾಗಿ ಪರದೇಶಗಳ ಮೇಲೆ ಅವಲಂಬಿಸುವುದನ್ನು ತಪ್ಪಿಸಬೇಕೆಂಬುದೇ ಈ ಉದ್ಯಮದ ಸ್ಥಾಪನೆಯ ಉದ್ದೇಶ.



ಚಿತ್ತರಂಜನ್ ಲೋಕೊಮೋಟಿವ್

ಈ ಕಾರಖಾನೆಯಲ್ಲಿ ತಯಾರಾದ ಮೊತ್ತಮೊದಲ ಉಗಿ ಎಂಜಿನ್ 1950 ನವೆಂಬರ್ 1ರಂದು ಹೊರಬಿದ್ದಿತು. ಈಗ ಇಲ್ಲಿ ಉಗಿ ಎಂಜಿನ್‌ಗಳನ್ನು ತಯಾರಿಸುತ್ತಿಲ್ಲ. ಡೀಸೆಲ್ ಎಣ್ಣೆ ಮತ್ತು ವಿದ್ಯುತ್ತಿನಿಂದ ಓಡುವ ರೈಲ್ವೆ ಎಂಜಿನ್‌ಗಳು ತಯಾರಾಗುತ್ತವೆ. 1972ರ ವರೆಗೆ 2,299 ಉಗಿ ಎಂಜಿನ್, 227 ಎ.ಸಿ. ವಿದ್ಯುತ್ ಎಂಜಿನು ಹಾಗೂ ನ್ಯಾರೊಗೇಜಿನ ಮೇಲೆ ಓಡುವ 41 ಡೀಸೆಲ್ ಮತ್ತು 21 ಡಿ.ಸಿ. ವಿದ್ಯುತ್ ಎಂಜಿನುಗಳು ಈ ಕಾರಖಾನೆಯಲ್ಲಿ ತಯಾರಾಗಿವೆ. ಯೋಜನೆಯ ಅಂಗವಾಗಿ ಆ ಎಂಜಿನ್‌ಗಳ ದೊಡ್ಡ ದೊಡ್ಡ ಬಿಡಿಭಾಗಗಳೂ ಚಿತ್ತರಂಜನ್ ಲೋಕೊಮೋಟಿವ್ ವರ್ಕ್ಸ್‌ನಲ್ಲಿ ತಯಾರಾಗುತ್ತವೆ. ರೈಲ್ವೆಗಾಗಿ ಬೇಕಾಗುವ ಭಾರವಾದ ಎರಕಗಳನ್ನು ಹುಯ್ಯುವ ದೊಡ್ಡ ಎರಕಶಾಲೆಯೂ ಇಲ್ಲಿದೆ. ದೇಶಬಂಧು ಚಿತ್ತರಂಜನ ದಾಸರ ನೆನಪಿಗಾಗಿ ಈ ಉದ್ಯಮಸ್ಥಾನಕ್ಕೆ ಚಿತ್ತರಂಜನ್ ಲೋಕೊಮೋಟಿವ್ ವರ್ಕ್ಸ್ ಎಂದು ಹೆಸರಿಟ್ಟಿದ್ದಾರೆ.


ಚಿತ್ತೋಡಗಡ

ಮೂರು ಬಾರಿ ಪ್ರಬಲ ದಾಳಿಗೆ ಒಳಗಾದ ಚಿತ್ತೋಡಗಡ (ಚಿತ್ತೂರು ಕೋಟೆ) ರಜಪೂತ ಇತಿಹಾಸದಲ್ಲಿ ಸುಪ್ರಸಿದ್ಧವಾದದ್ದು.

ರಾಜಸ್ಥಾನದ ಗಂಭೀರಿ ನದಿಯ ಬಳಿ ಇರುವ ಚಿತ್ತೋಡಗಡ ಸುತ್ತಲಿನ ಪ್ರದೇಶದಿಂದ ಐನೂರು ಅಡಿಗಳ ಎತ್ತರದಲ್ಲಿದೆ. 1303, 1534-35 ಮತ್ತು 1567ರಲ್ಲಿ ಮುಹಮ್ಮದೀಯರು ಈ ಕೋಟೆಗೆ ಮುತ್ತಿಗೆ ಹಾಕಿದರು.

ಪದ್ಮಿನಿಯ ಅರಮನೆ





ವಿಜಯಸ್ತಂಭ

ರಾಣಾ ರತ್ನಸಿಂಹನ ರಾಣಿ ಅಪ್ರತಿಮ ಚೆಲುವೆ ಪದ್ಮಿನಿಯನ್ನು ತನ್ನವಳನ್ನಾಗಿ ಮಾಡಿಕೊಳ್ಳುವುದಕ್ಕಾಗಿ ಅಲ್ಲಾವುದ್ದೀನ್ ಖಿಲ್ಜಿ ಹಾಕಿದ ಮುತ್ತಿಗೆ ಮೊದಲನೆಯದು. ಆ ಕಾದಾಟದಲ್ಲಿ ಅನೇಕ ಮಂದಿ ರಜಪೂತ ಸೈನಿಕರು ಮಡಿದರು. ಪದ್ಮಿನಿ ತನ್ನ ಜೊತೆಯವರೊಡನೆ ಅಗ್ನಿಕುಂಡಕ್ಕೆ ಹಾರಿ 'ಜೋಹರ್' ನಡೆಸಿದಳು.

ಎರಡನೆಯ ಮುತ್ತಿಗೆ ಹಾಕಿದವನು ಗುಜರಾತಿನ ಸುಲ್ತಾನ ಬಹದ್ದೂರ್ ಷಾ. ಆ ಕಾಳಗದಲ್ಲಿ 32,000 ರಜಪೂತ ವೀರರು ಮಡಿದರು. 13,000 ರಜಪೂತ ಸ್ತ್ರೀಯರು ಜೋಹರ್ ನಡೆಸಿದರು.

1567ರಲ್ಲಿ ದಾಳಿ ಮಾಡಿದವನು ಅಕ್ಬರ್. ಮರುವರ್ಷ ಕೋಟೆ ಅವನ ವಶವಾಯಿತು. ಹೀಗೆ ಚಿತ್ತೋಡಗಡ ರಕ್ಷಣೆಗಾಗಿ ಮಡಿದ ವೀರ ರಜಪೂತರ, ಅವರ ರಮಣಿಯರ ಕಥೆಗಳು ರಾಜಸ್ಥಾನದ ಜಾನಪದ ಕಥೆ-ಗೀತೆಗಳಲ್ಲಿ ಹಾಸುಹೊಕ್ಕಾಗಿವೆ.

ಕೋಟೆಗೆ ಹತ್ತಬೇಕಾದರೆ ಅಂಕುಡೊಂಕು ದಾರಿಯಲ್ಲಿ ಸಾಗಬೇಕು. ಏಳು ಪ್ರವೇಶ ದ್ವಾರಗಳಿವೆ. ಕೋಟೆಯ ಒಳಗೆ ಇರುವ ಮುಖ್ಯ ಕಟ್ಟಡಗಳು ಕುಂಭ ಮಹಲ್, ಮೀರಾಬಾಯಿಯ ಪೂಜಾಮಂದಿರ, ವಿಜಯ ಸ್ತಂಭ, ಕೀರ್ತಿಸ್ತಂಭ, ಪದ್ಮಿನಿಯ ಅರಮನೆ, ಜೋಹರ್ ಕುಂಡ ಮುಂತಾದುವು.

ವಿಜಯಸ್ತಂಭ ಹಾಗೂ ಕೀರ್ತಿ ಸ್ತಂಭಗಳು ಈ ಕೋಟೆಯಲ್ಲಿರುವ ಮುಖ್ಯ ಸ್ಮಾರಕಗಳು. 1440ರಲ್ಲಿ ರಾಣಾಕುಂಭನು ಮಾಳ್ವದ ಸುಲ್ತಾನ ಮಹಮ್ಮದ್ ಖಿಲ್ಜಿಯನ್ನು ಸೋಲಿಸಿದ ನೆನಪಿಗಾಗಿ ವಿಜಯಸ್ತಂಭ ನಿರ್ಮಿಸಿದ. ಇದರಲ್ಲಿ ಒಂಭತ್ತು ಅಂತಸ್ತುಗಳಿವೆ. ಮೇಲಿನಿಂದ ಕೆಳಗಿನವರೆಗೆ ಶಿಲ್ಪಕೃತಿಗಳಿವೆ. ಸ್ತಂಭದ ಎತ್ತರ 122 ಅಡಿ. ಅಲ್ಲಾವುದ್ದೀನನಿಗೆ ರಾಣಿ ಪದ್ಮಿನಿಯ ಪ್ರತಿಬಿಂಬವನ್ನು ಕನ್ನಡಿಯಲ್ಲಿ ತೋರಿಸುವುದಕ್ಕಾಗಿ ಮಾಡಿದ ಅರಮನೆಯು ದೃಢವಾಗಿ ಈಗಲೂ ಪ್ರವಾಸಿಗರಿಗೆ ನೋಡ ಸಿಗುತ್ತದೆ. ಇಲ್ಲಿಯ ಜನ ಸಂಖ್ಯೆ 25,917.

ಚಿದಂಬರಂ

ಪತಂಜಲಿ ಮುನಿ ಅತ್ತಿತ್ತ ಓಡಾಡುತ್ತ ಶಿವಪೂಜೆಗೆ ಹೂ ಬಿಡಿಸುತ್ತಿದ್ದ. ಕಾಲು ನೋಯುತ್ತಿತ್ತು. ಓಡಾಡುವುದು ಸುಲಭವಾಗಲಿ, ವೇಗ ಆಯಾಸ ಆಗದಿರಲಿ ಎಂದು ಅನುಕಂಪದಿಂದ ಶಿವ ಅವನಿಗೆ ಹುಲಿಯ ಕಾಲನ್ನು ಉಂಟುಮಾಡಿದ. ಮುನಿ ವ್ಯಾಘ್ರಪಾದನೆನಿಸಿಕೊಂಡ. ಆತ ಆದಿಶೇಷನ ಅವತಾರ ; ಅವನ ಮುಂದೆ ನರ್ತಿಸಿದ ಶಿವನೇ ಚಿದಂಬರದ ನಟರಾಜ.

—ಇದು ಚಿದಂಬರದ ನಟರಾಜನನ್ನು ಕುರಿತ ಕಥೆ.

ಇದು ತಮಿಳು ನಾಡಿನ ಉತ್ತರ ಆರ್ಕಾಟ್ ಜಿಲ್ಲೆಯಲ್ಲಿದೆ.



ನಟರಾಜ ದೇವಾಲಯ

ಇದರ ಸುತ್ತ 40 ಮೈಲು ಸುತ್ತಿನಲ್ಲಿ ಎಲ್ಲೂ ಬಂಡೆಗಳಿಲ್ಲ. ಆದರೆ ನಟರಾಜನ ಬೃಹತ್ ದೇವಾಲಯ ಮತ್ತು ಅದರ ಸುತ್ತಮುತ್ತಲ ಕಟ್ಟಡಗಳು ಮಾತ್ರ ಕಲ್ಲಿನಿಂದ ಕಟ್ಟಲ್ಪಟ್ಟಿವೆ. ಅಂದರೆ ಬಹುದೂರದಿಂದ ಇಲ್ಲಿಗೆ ಕಲ್ಲನ್ನು ಸಾಗಿಸಿಕೊಂಡು ಬಂದಿರಬೇಕು. ದೇವಾಲಯ 39 ಎಕರೆ ವಿಸ್ತಾರವನ್ನು ಆಕ್ರಮಿಸಿದೆ. ಇಲ್ಲಿರುವ ಕಟ್ಟಡಗಳು ಬೇರೆಬೇರೆ ಕಾಲದಲ್ಲಿ ಕಟ್ಟಿದುವು. ಇವುಗಳಲ್ಲಿ ಕೆಲವು ಚೋಳ ರಾಜರ ನಿರ್ಮಾಣಗಳು. ಮೂಲ ನಟರಾಜ ದೇವಾಲಯ ಹತ್ತನೆಯ ಶತಮಾನದ ರಚನೆ. ಇಲ್ಲಿ ನಾಟ್ಯಭಂಗಿಯಲ್ಲಿರುವ ಶಿವನ —ನಟರಾಜನ— ಮೂರ್ತಿಯಿದೆ. 340 ಅಡಿ ಉದ್ದ 190 ಅಡಿ ಅಗಲ ಇರುವ 1,000 ಕಂಬಗಳ ಸಭಾಮಂಟಪ, ನೃತ್ಯ ಮಾಡುತ್ತಿರುವಂತೆ ಕೆತ್ತಿರುವ ಸುಂದರ ಮೂರ್ತಿಗಳಿರುವ ನೃತ್ಯಸಭಾ, ಕನಕಸಭಾ, ಚಿತ್‌ಸಭಾ ಮಂಟಪಗಳು ಮುಖ್ಯವಾದುವು. ಕನಕಸಭಾ ಇರುವುದು ಶಿವನು ನಾಟ್ಯ ಮಾಡಿದ ಸ್ಥಳದಲ್ಲಿ ಎಂಬ ಐತಿಹ್ಯವಿದೆ. ಚೋಳ ರಾಜ ಮೊದಲನೆಯ ಪರಾಂತಕ (907–953) ಇದರ ಛಾವಣಿಗೆ ಚಿನ್ನದ ಹೊದಿಕೆ ಮಾಡಿಸಿದನೆಂದು ಶಾಸನ ಹೇಳುತ್ತದೆ.

ಈ ದೇವಾಲಯದ ಒಳ ಪ್ರಾಂಗಣದಲ್ಲಿ ಗೋವಿಂದರಾಜ ಪೆರುಮಾಳ್ (ವಿಷ್ಣು) ದೇವಾಲಯವಿದೆ. ನಟರಾಜನ ನೃತ್ಯ ನೋಡಲು ವಿಷ್ಣು ಇಲ್ಲಿಗೆ ಬಂದನೆಂಬುದರ ಸಂಕೇತ ಇದು ಎನ್ನುತ್ತಾರೆ. ಶಿವಕಾಮಿ ಎಂದು ಕರೆಯಲ್ಪಡುವ ಪಾರ್ವತಿ ದೇವಾಲಯವೂ ಸುಬ್ರಹ್ಮಣ್ಯ ದೇವಾಲಯವೂ ಈ ಆವರಣದಲ್ಲಿವೆ. ಚಿದಂಬರದ ನಟರಾಜ ದೇವಾಲಯವನ್ನು ಭರತನಾಟ್ಯದ ಪ್ರದರ್ಶನಶಾಲೆ ಎನ್ನಬಹುದು. ಯಾಕೆಂದರೆ, ಈ ದೇವಾಲಯದ ಪೂರ್ವ ಮತ್ತು ಪಶ್ಚಿಮದ ಗೋಪುರಗಳ ಮೇಲೆ ಭರತನಾಟ್ಯದಲ್ಲಿ ಹೇಳಿರುವ 108 ನಾಟ್ಯಭಂಗಿಗಳ ವಿಗ್ರಹಗಳಿವೆ : ಈ ಭಂಗಿಗಳನ್ನು ಕುರಿತ ವಿವರಗಳೂ ಇವೆ.

ಚಿದಂಬರ ಪ್ರಾಚೀನ ಶೈವಕ್ಷೇತ್ರ; ಶೈವ ಧರ್ಮದ ಪುರಾತನರಿಗೆ ಮೆಚ್ಚಿನ ತಾಣ. 48,811 ಜನಸಂಖ್ಯೆಯಿರುವ ಪಟ್ಟಣ ಇದು.

ನಟರಾಜ ದೇವಾಲಯ ಭಾರತದ ಅತಿ ಪ್ರಾಚೀನ ದೇವಾಲಯಗಳಲ್ಲಿ ಒಂದು. ಚಿದಂಬರಂಗೆ ತಿಲ್ಲೈ, ಪೆರುಂಪಟ್ಟಿ, ಪುಲಿಯೂರ್, ಚಿತ್ರಕೂಟ ಮೊದಲಾದ ಹೆಸರುಗಳೂ ಇವೆ.

ಚಿದಂಬರಂ ಕೆಲ ಕಾಲ ಚೋಳರ ರಾಜಧಾನಿಯಾಗಿತ್ತು.

ಚಿದಂಬರಂನಲ್ಲಿ ರಾಜಾ ಅಣ್ಣಾಮಲೈ ಚೆಟ್ಟಿಯಾರ್ ಸ್ಥಾಪಿಸಿದ ವಿಶ್ವ ವಿದ್ಯಾಲಯವಿದೆ.

ಚಿದಂಬರಂ ಪಿಳ್ಳೆ

ಪ್ರಥಮ ಸ್ವದೇಶೀ ಹಡಗು ಸಾರಿಗೆ ಸಂಸ್ಥೆಯ ಸ್ಥಾಪಕರೆಂದು ಚಿರಸ್ಥ ಕೀರ್ತಿ ಗಳಿಸಿದವರು ಚಿದಂಬರಂ ಪಿಳ್ಳೆ. ಸ್ವಾತಂತ್ರ್ಯ ಹೋರಾಟದಲ್ಲಿ 'ದಕ್ಷಿಣ ಭಾರತದ ತಿಲಕರು' ಎಂದು ಅವರು ಪ್ರಸಿದ್ಧರು.

ಅವರು ತಿರುನೆಲ್ವೇಲಿ ಸಮೀಪದ ಒಟ್ಟಪಿಡಾರಮ್‌ನಲ್ಲಿ 1872 ಸೆಪ್ಟೆಂಬರ್ 5ರಂದು ಜನಿಸಿದರು. ತಂದೆ, ಉಲಗನಾಥ ಪಿಳ್ಳೆಯವರು ; ಪ್ರಭಾವೀ ವಕೀಲರು. ಚಿದಂಬರಂ ಮೇಧಾವಿ ವಿದ್ಯಾರ್ಥಿ, ತಿರುಚಿರಪಳ್ಳಿಯಲ್ಲಿ ಉನ್ನತ ವಿದ್ಯಾಭ್ಯಾಸ ಮುಗಿಸಿದರು ; 1896ರಲ್ಲಿ ಕಾನೂನು ಪದವೀಧರರಾಗಿ ತಿರುಚಿರಪಳ್ಳಿಯಲ್ಲೇ ವಕಾಲತ್ತು ಪ್ರಾರಂಭಿಸಿ, ಸ್ವಲ್ಪ ಕಾಲದಲ್ಲೇ ಪ್ರಸಿದ್ಧ ವಕೀಲರಾದರು.



ದಕ್ಷಿಣ ಭಾರತದ ತಿಲಕ

ಅವರು ಬಡ ಕಕ್ಷಿದಾರರಿಂದ ಹಣ ತೆಗೆದುಕೊಳ್ಳುತ್ತಿರಲಿಲ್ಲ. ತಮ್ಮ ಉದಾರತೆಯಿಂದಾಗಿ ಸದಾ ಆರ್ಥಿಕ ತೊಂದರೆಗಳನ್ನು ಎದುರಿಸಿದರು.

ರಾಷ್ಟ್ರೀಯ ಆಂದೋಲನದಲ್ಲಿ ಭಾಗವಹಿಸತೊಡಗಿದ ಚಿದಂಬರಂ ಪಿಳ್ಳೆಯವರು ಲಜಪತರಾಯ್, ತಿಲಕರಂಥ ಉಗ್ರಪಂಥದ ನಾಯಕರನ್ನು ಅನುಸರಿಸಿದರು. ಜನಜಾಗೃತಿ ಉಂಟುಮಾಡಲು 'ವಿವೇಕ ಭಾನು' ಮಾಸ ಪತ್ರಿಕೆ ಪ್ರಾರಂಭಿಸಿದರು. ವಿದೇಶೀ ವಸ್ತುಗಳಿಗೆ ಬಹಿಷ್ಕಾರ ಹಾಕಿದರು. ಆಗ ಹಡಗು ಸಾರಿಗೆ–ವ್ಯಾಪಾರ ಪೂರ್ಣವಾಗಿ ಬ್ರಿಟಿಷರ ಕೈಯಲ್ಲಿದ್ದುದರಿಂದ ದೇಶದ ಲೂಟಿಯಾಗುತ್ತಿದೆ ಎಂದು ಆಲೋಚಿಸಿ, ಸ್ವದೇಶೀ ಹಡಗು ಸಾರಿಗೆ ಸಂಸ್ಥೆ ಸ್ಥಾಪಿಸಿದರು. ಅದಕ್ಕಾಗಿ ಜನತೆಯಿಂದ ಹಣ ಸಂಗ್ರಹಿಸಿದರು. ಈ ಸಂಸ್ಥೆಗೆ ಬ್ರಿಟಿಷ್ ಸರಕಾರ ಅಡ್ಡಿ, ಆತಂಕ ಉಂಟುಮಾಡಿತು. ಕೊನೆಗೆ ದೇಶದ್ರೋಹದ ಆರೋಪದ ಮೇಲೆ ಚಿದಂಬರಂ ಪಿಳ್ಳೆ ಬಂಧಿತರಾದರು ; ಅವರಿಗೆ ಆರೂವರೆ ವರ್ಷ ಸೆರೆಮನೆ ಶಿಕ್ಷೆ ವಿಧಿಸಲಾಯಿತು.

ಶಿಕ್ಷೆ ಮುಗಿಯುವಷ್ಟರಲ್ಲಿ ಅವರ ಆರೋಗ್ಯ ಕೆಟ್ಟಿತ್ತು. ಹಡಗು ಸಂಸ್ಥೆಯ ಆರ್ಥಿಕಸ್ಥಿತಿಯೂ ಬಿಕ್ಕಟ್ಟಿನಲ್ಲಿತ್ತು. ಅವರು ಮತ್ತೆ ವಕೀಲಿ ವೃತ್ತಿಗೆ ಗಮನಹರಿಸಿದರು.

ಚಿದಂಬರಂ ಪಿಳ್ಳೆ ಒಳ್ಳೆಯ ವಾಗ್ಮಿಯೂ ಲೇಖಕರೂ ಆಗಿದ್ದರು. ಸೆರೆಮನೆಯಲ್ಲಿದ್ದಾಗ ಮೂರು ಗ್ರಂಥಗಳನ್ನು ಬರೆದರು. ಜನತೆಗೆ ದೇಶ ಪ್ರೇಮ, ಆಧ್ಯಾತ್ಮಿಕ ಭಾವನೆಗಳ ಬಗೆಗೆ ಮಾರ್ಗದರ್ಶನ ನೀಡುವುದೇ ಆ ಕೃತಿಗಳ ಉದ್ದೇಶ.

1936ರಲ್ಲಿ ತಮ್ಮ 64ನೆಯ ವಯಸ್ಸಿನಲ್ಲಿ ಅವರು ನಿಧನರಾದರು. ಪಿಳ್ಳೆಯವರ ಮಿತ್ರ ಕವಿ ಸುಬ್ರಹ್ಮಣ್ಯ ಭಾರತಿಯವರು ಈ ಮಿತ್ರನ ಸಾಧನೆಗಳನ್ನು ಹಾಡಿ ಹೊಗಳಿದ್ದಾರೆ.

ಚಿರಾಪುಂಜಿ

1841 ಆಗಸ್ಟ್ ತಿಂಗಳಲ್ಲಿ ಐದು ದಿನಗಳಲ್ಲಿ 150 ಅಂಗುಲ ಮಳೆ. 1860 ಆಗಸ್ಟ್‌ನಿಂದ 1861 ಜುಲೈ ವರೆಗೆ 1041.78 ಅಂಗುಲ ಮಳೆ. ಇದು ಚಿರಾಪುಂಜಿಯ ಎರಡು ವಿಕ್ರಮಗಳು.

ಪ್ರಪಂಚದಲ್ಲಿ ಅತ್ಯಧಿಕ ಮಳೆ ಬೀಳುವ ಚಿರಾಪುಂಜಿ ಮೇಘಾಲಯದ ಖಾಸಿಬೆಟ್ಟಗಳ ಬಳಿಯಿದೆ. [illegible] ಇಷ್ಟು ಅತಿ ಪ್ರಖ್ಯಾತವಾದುದು.

ಚಿರಾಪುಂಜಿಯ ವಾರ್ಷಿಕ ಸರಾಸರಿ ಮಳೆ ಸುಮಾರು 428 ಅಂಗುಲ. ಇದರ ಬಳಿಯ ಮೌಸಿನ್‌ರಾಮ್ ಎಂಬಲ್ಲಿ 1861ರ ಜುಲೈ ತಿಂಗಳಲ್ಲಿ 550 ಅಂಗುಲ ಮಳೆಯಾಯಿತು. ಇದೂ ಒಂದು ವಿಶ್ವದಾಖಲೆ.

ಇದು ಚಿರಾಪುಂಜಿ ಇರುವುದು ಹಿಮಾಲಯದ ಬಳಿ. ಇತ್ತಕಡೆ ಬೀಸುವ ಮುಂಗಾರು ಮಾರುತ ನೈಋತ್ಯ ದಿಕ್ಕಿನಿಂದ ಬರುತ್ತದೆ. ಚಿರಾಪುಂಜಿ ವರ್ತುಲ ಬಯಲುನಾಟಕ ಮಂದಿರದಂಥ ಪ್ರದೇಶದಲ್ಲಿ, ಉನ್ನತ ಸ್ಥಾನದಲ್ಲಿ ಇದೆ. ಹಾಗೂ ಮುಂಗಾರು ಮಾರುತ ಬೀಸುವ ದಿಕ್ಕಿನಲ್ಲಿದೆ. ಈ ಪ್ರದೇಶದಲ್ಲಿ ಇಷ್ಟು ಮಳೆ ಬೀಳಲು ಇದೇ ಕಾರಣ.

ಚಿರಾಪುಂಜಿಯ ಕಲ್ಲಿದ್ದಲು ಗಣಿ ಮುಖ್ಯವಾದದ್ದು. ಇಲ್ಲಿ ಝೂಮ್ (ಆವರ್ತನ) ಬೇಸಾಯಕ್ರಮ ರೂಢಿಯಲ್ಲಿದೆ. ಭತ್ತ ಮುಖ್ಯ ಬೆಳೆ. ಬಾಳೆ, ಜಂಬೀರ, ಪ್ಲಮ್, ಅನಾನಸ್‌ಗಳು ಇಲ್ಲಿ ಬೆಳೆಯುತ್ತವೆ.

ಹೆಚ್ಚು ಮಳೆ ಬೀಳುವ ಕರ್ನಾಟಕದ ಆಗುಂಬೆಯನ್ನು 'ದಕ್ಷಿಣದ ಚಿರಾಪುಂಜಿ' ಎಂದು ಕರೆಯುತ್ತಾರೆ.

ನೋಡಿ : ಆಗುಂಬೆ

ಚಿಷ್ತಿ

ಇಸ್ಲಾಂ ಧರ್ಮದಲ್ಲಿ ಸೂಫಿ ಒಂದು ಪಂಥ. ಸೂಫಿ ಪಂಥದ ಒಂದು ಸಂಸ್ಥೆ ಚಿಷ್ತಿ. ದೈವಭಕ್ತಿ, ಗುರುಭಕ್ತಿ, ಗುರುಸೇವೆ, ಸನ್ಮಾರ್ಗದಲ್ಲಿ ನಡೆಯುವುದು. ಈ ಸಂಸ್ಥೆಯ ಅನುಯಾಯಿಗಳ ಲಕ್ಷಣ. ಚಿಷ್ತಿ ಸಂಸ್ಥೆಯನ್ನು ಸ್ಥಾಪಿಸಿದವನು ಮೊಯಿನುದ್ದೀನ್ ಚಿಷ್ತಿ. ಈ ಸಂಸ್ಥೆಗೆ ಹೆಸರು ಬಂದಿರುವುದು ಅದರ ಸ್ಥಾಪಕನಿಂದಲೇ. ಇದರ ಅನುಯಾಯಿಗಳಲ್ಲಿ ಬಹು ಪಾಲು ಜನ ಭಾರತದಲ್ಲಿದ್ದಾರೆ.

ಮೊಯಿನುದ್ದೀನ್ ಚಿಷ್ತಿ ಬದುಕಿದ್ದಾಗಲೇ ಅವನ ಬಗೆಗೆ ಅನೇಕ ದಂತ ಕಥೆಗಳು ಪ್ರಚಲಿತವಿದ್ದುವು. ಈತ ಪೂರ್ವ ಇರಾನಿನ ಸಿಜಿಸ್ತಾನದ ಚಿಷ್ತ್ ಎಂಬಲ್ಲಿ ಹುಟ್ಟಿದ. ಚಿಕ್ಕಂದಿನಲ್ಲೇ ವಿರಕ್ತನಾದನು. ದೇಶ ಪರ್ಯಟನ ಮಾಡಿ ಅನೇಕ ಸೂಫಿ ಸಾಧುಗಳ ದರ್ಶನ ಪಡೆದ. 1192ರಲ್ಲಿ ಮುಹಮ್ಮದ್ ಘೋರಿಯೊಡನೆ ಈತ ಭಾರತಕ್ಕೆ ಬಂದ ಎಂದು ಹೇಳುತ್ತಾರೆ. ಅದಕ್ಕೂ ಮೊದಲೇ ಬಂದು ಮುಲ್ತಾನಿನಲ್ಲಿ ಸಂಸ್ಕೃತ, ಹಿಂದೂ ಧರ್ಮವನ್ನು ಅಭ್ಯಾಸ ಮಾಡಿದನೆಂದೂ ಅನಂತರ ಅಜ್ಮೀರಿನಲ್ಲಿ ನೆಲೆಸಿದನೆಂದೂ ಇನ್ನೊಂದು ಹೇಳಿಕೆ ಇದೆ. ಅಜ್ಮೀರಿನಲ್ಲಿ ತನ್ನ ಸಂಸ್ಥೆಯನ್ನು ಸ್ಥಾಪಿಸಿದವನು ಈತನೇ.

ಅಲ್ಲಿರುವ ಅವನ ದರ್ಗಾ (ಗೋರಿ) ಪವಿತ್ರ ಸ್ಥಳವೆನಿಸಿದೆ. ಚಕ್ರವರ್ತಿ ಅಕ್ಬರ್ ಅಲ್ಲಿಗೆ ಕಾಲುನಡಿಗೆಯಲ್ಲಿ ಯಾತ್ರೆ ಬರುತ್ತಿದ್ದನೆಂದು ಹೇಳಿಕೆ. ಅಲ್ಲಿನ 'ಉರುಸ್' ಕಾಲದಲ್ಲಿ ರಾಣಿ ನೂರ್‌ಜಹಾನ್ ತಾನು ದಾನವಾಗಿ ಕೊಟ್ಟ ದೊಡ್ಡ ಪಾಕಪಾತ್ರೆಯಲ್ಲಿ ಬಡವರಿಗೆ ಬಡಿಸಲು ತಾನೇ ಖಿಚಡಿ ತಯಾರಿಸಿದಳು ಎನ್ನುತ್ತಾರೆ.

16ನೆಯ ಶತಮಾನದಲ್ಲಿ ಸಲೀಮ್ ಚಿಷ್ತಿ ಆಗ್ರಾದ ಫತೇಪುರ್ ಎಂಬಲ್ಲಿಗೆ (ಆಗ ಅದು ಚಿಕ್ಕ ಹಳ್ಳಿ) ಬಂದ. ಅಕ್ಬರ್ ಅವನನ್ನು ಕಂಡು ತನಗೆ ಪುತ್ರ ಸಂತಾನ ಅನುಗ್ರಹಿಸಬೇಕೆಂದು ಬೇಡಿದ. ಮುಂದೆ ರಾಣಿಯ ಪ್ರಸವಕ್ಕಾಗಿ ಅಲ್ಲೇ ಒಂದು ಅರಮನೆ ಕಟ್ಟಿಸಿದ. ಮಗ ಹುಟ್ಟಿದಾಗ ಅವನಿಗೆ ಸಲೀಮ್ ಎಂಬ ಹೆಸರನ್ನೇ ಇಟ್ಟ. ಕಡೆಗೆ ತನ್ನ ರಾಜಧಾನಿಯನ್ನೂ ಫತೇಪುರಕ್ಕೆ ವರ್ಗಾಯಿಸಿದ.

ದೆಹಲಿಯಲ್ಲಿ ಷೇಖ್ ನಿಜಾಮುದ್ದೀನ್ ಚಿಷ್ತಿಯ ಗೋರಿ ಹುಮಾಯೂನನ ಗೋರಿಯ ಸಮೀಪದಲ್ಲಿ ಇದೆ. ನಿಜಾಮುದ್ದೀನ್ ಚಿಷ್ತಿ ಖ್ಯಾತ ಅಮೀರ್ ಖುಸರೋವಿನ ಗುರು ಹಾಗೂ ಗೆಳೆಯ.

ನೋಡಿ : ಅಜ್ಮೀರ್

ಚೀನ

ಹಿಮಾಲಯದಿಂದ ಪ್ರತ್ಯೇಕಿಸಲ್ಪಟ್ಟ ಭಾರತದ ನೆರೆ ರಾಜ್ಯ ಚೀನ. ಭಾರತದಂತೆ ಇದಕ್ಕೆ ಸಾವಿರಾರು ವರ್ಷಗಳ ಇತಿಹಾಸವಿದೆ.

ಭಾರತ–ಚೀನಗಳ ನಡುವಿನ ಸಂಪರ್ಕ ಬೌದ್ಧಮತ ಪ್ರಚಾರದೊಡನೆ ಆರಂಭವಾಯಿತು. ಇದು ನಡೆದದ್ದು ಒಂದನೆಯ ಶತಮಾನದಲ್ಲಿ. ಚೀನದಿಂದ ಭಾರತಕ್ಕೆ ಬಂದ ಯಾತ್ರಿಕರಲ್ಲಿ ಫಾಹಿಯಾನ್ (ಸಂದರ್ಶನ ಕಾಲ: 405–411), ಹ್ಯೂಯೆನ್ ತ್ಸಾಂಗ್ (629–645) ಹಾಗೂ ಇ–ತ್ಸಿಂಗ್ (675–685) ಮುಖ್ಯರು. ಫಾಹಿಯಾನ್ ಪಾಟಲಿಪುತ್ರದಲ್ಲೂ ಇನ್ನಿಬ್ಬರು ನಾಲಂದಾದಲ್ಲೂ ವಿದ್ಯಾರ್ಜನೆ ಮಾಡಿದರು. ಭಾರತದಲ್ಲಿ ತಾವು ಕಂಡು ಕೇಳಿದ ವಿಚಾರಗಳನ್ನೂ ತಮ್ಮ ಅನುಭವಗಳನ್ನೂ ಇವರು ಬರೆದಿದ್ದಾರೆ. ಇವುಗಳಿಂದ ಆ ಕಾಲದ ಭಾರತದ ಚರಿತ್ರೆಯ ಬಗೆಗೆ ವಿವರ ದೊರೆಯುತ್ತದೆ. ಇಂಥ ಯಾತ್ರಿಕರಿಂದ ಆಗಿನ ಭಾರತ–ಚೀನ ಸಾಂಸ್ಕೃತಿಕ ಬಾಂಧವ್ಯ ಬಲಗೊಂಡಿತು. ಹರ್ಷವರ್ಧನ ಕೂಡ ಆಗಿನ ಚೀನೀ ಚಕ್ರವರ್ತಿ ಟಾಂಗ್‌ನೊಡನೆ ರಾಜಕೀಯ ಸಂಪರ್ಕ ಬೆಳೆಸಿಕೊಂಡಿದ್ದ.

ಬುದ್ಧನೆದುರು ದೇವದತ್ತನ ಕಪಟ ಪ್ರಾಯಶ್ಚಿತ್ತ
—ಚೀನದ ಯೂನ್‌ಕಾಂಗ್ ಗವಿಶಿಲ್ಪ





1956ರಲ್ಲಿ ಚೌಎನ್‌ಲೈ ಭಾರತ ಭೇಟಿ : ರಾಷ್ಟ್ರಪತಿ ರಾಜೇಂದ್ರ ಪ್ರಸಾದರೊಂದಿ

ಅನಂತರ ಸುಮಾರು ಒಂದು ಸಾವಿರ ವರ್ಷ ಚೀನದೊಡನೆ ಬಾಹ್ಯ ಜಗತ್ತಿಗೆ ಸಂಪರ್ಕವಿರಲಿಲ್ಲ. ಮುಂದೆ ಪಾಶ್ಚಾತ್ಯ ವಲಸೆಗಾರರು ಚೀನಕ್ಕೆ ಬಂದು ಅದನ್ನು ಶೋಷಿಸತೊಡಗಿದರು. 1948ರಲ್ಲಿ ಚೀನ ಕಮ್ಯೂನಿಸ್ಟ್ ರಾಷ್ಟ್ರವಾಯಿತು. ಕಮ್ಯೂನಿಸ್ಟ್ ಚೀನದೊಡನೆ ಸ್ವತಂತ್ರ ಭಾರತ ಸ್ನೇಹಭಾವದಿಂದ ವರ್ತಿಸಿತು. ಸಹಬಾಳ್ವೆಯ ಪಂಚಶೀಲ ತತ್ವಗಳನ್ನು ಈ ಎರಡು ರಾಷ್ಟ್ರಗಳ ನಾಯಕರು 1954ರಲ್ಲಿ ರೂಪಿಸಿದರು. ಆದರೆ ಚೀನ ವಿಶ್ವಾಸಘಾತ ಮಾಡಿತು. 1962ರಲ್ಲಿ ಭಾರತದ ನೇಫಾ(ಈಗಿನ ಅರುಣಾಚಲ ಪ್ರದೇಶ)ದಲ್ಲಿ ಚೀನ ಆಕ್ರಮಣ ನಡೆಸಿತು. ಮುಂದೆ ಇದ್ದಕ್ಕಿದ್ದಂತೆ ಯುದ್ಧವನ್ನು ನಿಲ್ಲಿಸಿತು.

ಚೀನದ ಪ್ರಧಾನ ಬೆಳೆ, ಭತ್ತ. ಜಪ ಕೂಡ ದೊಡ್ಡ ಪ್ರಮಾಣದಲ್ಲಿ ಬೆಳೆಯುತ್ತದೆ. ಕಲ್ಲಿದ್ದಲು ಮತ್ತು ಕಬ್ಬಿಣಗಳು ಅಪಾರವಾಗಿ ದೊರೆಯುತ್ತವೆ. ಬೇಸಾಯ ಮುಖ್ಯ ಕಸುಬು. ಇತ್ತೀಚೆಗೆ ಭಾರೀ ಕೈಗಾರಿಕೆಗಳೂ ಸ್ಥಾಪಿತವಾಗಿವೆ. ಪಿಂಗಾಣಿಗಾಗಿ ಉಪಯೋಗಿಸುವ ಚೀನಮಣ್ಣು ಜಗತ್ಪ್ರಸಿದ್ಧ. ರೇಷ್ಮೆ ಉದ್ಯಮ ಒಂದು ಮುಖ್ಯ ಕೈಗಾರಿಕೆ.

ನೋಡಿ : ಚೀನ ಭಾರತ ಯುದ್ಧ ; ಟಿಬೆಟ್
ಚೀನ ; ಪಂಚಶೀಲ ;—ಸಂಪುಟ ೧

ಚೀನ ಭಾರತ ಯುದ್ಧ

ಸ್ವತಂತ್ರ ಭಾರತ ಹಾಗೂ ಚೀನ ನಡುವಣ ಸಂಬಂಧ ಮೊದಲಿಗೆ ಸೌಹಾರ್ದಯುತವಾಗಿಯೇ ಇತ್ತು. ಆದರೆ 1950ರಲ್ಲಿ ಚೀನ ಟಿಬೆಟಿನ ಬಗೆಗೆ ತಳೆದ ಆಕ್ರಮಣಶೀಲ ನಿಲುವಿನಿಂದ ಈ ಸಂಬಂಧ ಸ್ವಲ್ಪ ಕೆಟ್ಟಿತು.

1954ರ ಏಪ್ರಿಲ್ 20ರಂದು ಭಾರತ ಮತ್ತು ಚೀನಗಳು ಪಂಚಶೀಲ ಒಪ್ಪಂದಕ್ಕೆ ಸಹಿ ಹಾಕಿದುವು. ಈ ಎರಡು ರಾಷ್ಟ್ರಗಳೂ ಶಾಂತಿಯುತ ಸಹಬಾಳ್ವೆ ನಡೆಸುವ ಬಗೆಗೆ ಐದು ತತ್ತ್ವಗಳನ್ನು (ಪಂಚಶೀಲ) ಈ ಒಪ್ಪಂದ ಒಳಗೊಂಡಿತ್ತು. ಇದರ ರೀತ್ಯಾ ತಾನು ಟಿಬೆಟ್‌ನಲ್ಲಿ ಹೊಂದಿದ್ದ ವಿಶೇಷ ಹಕ್ಕುಗಳನ್ನು ಭಾರತ ಬಿಟ್ಟುಕೊಟ್ಟಿತು. ಅದೇ ವರ್ಷ ಚೀನದ ಪ್ರಧಾನಿ ಚೌ ಎನ್ ಲೈ ಭಾರತಕ್ಕೆ ಭೇಟಿ ಇತ್ತರು. ಎರಡು ರಾಷ್ಟ್ರಗಳ ಸಂಬಂಧ ಹಿತಕರವಾಗಿ ಮುಂದುವರಿಯುವ ಲಕ್ಷಣಗಳು ಕಂಡುಬಂದುವು.

ಆದರೆ ಚೀನ ಪಂಚಶೀಲ ತತ್ತ್ವಗಳನ್ನು ಪಾಲಿಸಲಿಲ್ಲ. ಭಾರತ ಮತ್ತು ಚೀನಗಳ ನಡುವಣ ಮೆಕ್‌ಮೋಹನ್ ಗಡಿಯ ಬಗೆಗೆ ಚೀನ ವಾದ ವಿವಾದ ಆರಂಭಿಸಿತು. ಈ ಗಡಿ ರೇಖೆಯನ್ನು ತಾನು ಒಪ್ಪುವುದಿಲ್ಲ

ಎಂದಿತು. ತಾನು ಪ್ರಕಟಿಸಿದ ನಕ್ಷೆಗಳಲ್ಲಿ ಭಾರತದ ಸುಮಾರು 1,32,090 ಚದರ ಕಿಲೊ ಮಿಟರ್ ಪ್ರದೇಶವನ್ನು ತನಗೆ ಸೇರಿದುದೆಂದು ತೋರಿಸಿತು. ಅಲ್ಲದೆ 1959ರಲ್ಲಿ ಚೀನ ಟಿಬೆಟ್ ಪ್ರದೇಶವನ್ನು ಸಂಪೂರ್ಣ ಆಕ್ರಮಿಸಿತು. ಅಲ್ಲಿನ ಜನರ ಮೇಲೆ ದಬ್ಬಾಳಿಕೆ ನಡೆಸಲಾರಂಭಿಸಿತು. ಟಿಬೆಟಿನ ಧರ್ಮಗುರು ಹಾಗೂ ರಾಜಕೀಯ ಮುಖ್ಯಸ್ಥ ದಲಾಯ್ ಲಾಮಾ ಟಿಬೆಟ್ ಬಿಟ್ಟು ಬಂದು ಭಾರತದ ಆಸರೆ ಕೇಳಿದರು. ಭಾರತ ಅವರಿಗೆ ಆಶ್ರಯಕೊಟ್ಟಿತು. ಆ ವರ್ಷದ ಅಂತ್ಯದಲ್ಲಿ ಚೀನ ಸುಮಾರು 3,000 ಚದರ ಕಿ.ಮಿೂ.ಗಳಷ್ಟು ಭಾರತೀಯ ಪ್ರದೇಶವನ್ನು ಆಕ್ರಮಿಸಿಕೊಂಡಿತು. ಈ ಬಗೆಗೆ ಭಾರತ ಎತ್ತಿದ ಆಕ್ಷೇಪಣೆ, ತೋರಿದ ಪ್ರತಿಭಟನೆಗಳನ್ನು ಚೀನ ಲಕ್ಷಿಸಲೇ ಇಲ್ಲ. ಅಷ್ಟೇ ಅಲ್ಲದೆ 1962 ಅಕ್ಟೋಬರ್ 20ರಂದು ಸುಮಾರು 30,000 ಚೀನೀ ಸೈನಿಕರು ಲಡಖ್, ನೇಫಾ (ಈಗಿನ ಅರುಣಾಚಲ ಪ್ರದೇಶ)ಗಳ ಮೇಲೆ ದಾಳಿಯನ್ನಾರಂಭಿಸಿ ವ್ಯಾಪಕ ಆಕ್ರಮಣ ನಡೆಸಿದರು. ನವೆಂಬರ್ 19ರಂದು ಚೀನೀಯರು ಬೊಮ್ಡಿಲಾ ಪ್ರದೇಶವನ್ನು ವಶಪಡಿಸಿಕೊಂಡರು: ಅಸ್ಸಾಂ ಪ್ರದೇಶದಲ್ಲಿ ಮುಂದುವರಿದರು. ಅತ್ತ ಕಾಶ್ಮೀರ ಪ್ರದೇಶದಲ್ಲಿ ಲಡಖ್‌ನ ಕೆಲವು ಭಾಗಗಳನ್ನು ಆಕ್ರಮಿಸಿಕೊಂಡರು. ಅನಂತರ ಚೀನೀಯರು, 21ರಂದು, ಇದ್ದಕ್ಕಿದ್ದಂತೆ ಯುದ್ಧವಿರಾಮ ಘೋಷಿಸಿ ಸಾಕಷ್ಟು ಹಿಂದೆ ಸರಿದರು. ಆದರೆ ತಾವು ಅನ್ಯಾಯವಾಗಿ ಆಕ್ರಮಿಸಿಕೊಂಡಿದ್ದ ಭಾರತ ಪ್ರದೇಶಗಳನ್ನು ಪೂರ್ಣವಾಗಿ ಬಿಟ್ಟುಕೊಡಲಿಲ್ಲ.

ಸಿಂಹಳ (ಈಗ ಶ್ರೀಲಂಕಾ), ಬರ್ಮ, ಕಾಂಬೋಡಿಯ, ಇಂಡೊನೇಷ್ಯ, ಘಾನ ಹಾಗೂ ಐಕ್ಯ ಅರಬ್ ಗಣರಾಜ್ಯ –ಈ ಆರು ಅಲಿಪ್ತ ರಾಷ್ಟ್ರಗಳು 1962 ಡಿಸೆಂಬರ್ 12ರಂದು ಕೊಲಂಬೊದಲ್ಲಿ ಸಭೆ ಸೇರಿ, ಭಾರತ–ಚೀನ ಸೌಹಾರ್ದಕ್ಕೆ ಕೆಲವು ಸೂಚನೆಗಳನ್ನು ಮಂಡಿಸಿದುವು. ಕೆಲವು ವಿವರಣೆಗಳನ್ನು ಪಡೆದ ಅನಂತರ, ಭಾರತ ಇವಕ್ಕೆ ಒಪ್ಪಿಗೆ ಕೊಟ್ಟಿತು. ಆದರೆ ಚೀನ ಒಪ್ಪಲಿಲ್ಲ.

1965ರ ಭಾರತ – ಪಾಕಿಸ್ತಾನ ಹೋರಾಟ ಕಾಲದಲ್ಲಿ, ಸಿಕ್ಕಿಮ್‌ನ ಗಡಿನೆಲೆಯಿಂದ ಭಾರತ ತನ್ನ ದಳಗಳನ್ನು ಹಿಂದಕ್ಕೆ ಕರೆಸದಿದ್ದರೆ ತಾನು ಆಕ್ರಮಣ ನಡೆಸುವುದಾಗಿ ಚೀನ ಭಾರತಕ್ಕೆ ಎಚ್ಚರಿಕೆ ಹಾಕಿತು. ಆದರೆ ಭಾರತ ಇದನ್ನು ಲೆಕ್ಕಿಸಲಿಲ್ಲ. ಚೀನ ತನ್ನ ಎಚ್ಚರಿಕೆಯನ್ನು ಕಾರ್ಯಗತ ಮಾಡದೆ ಸುಮ್ಮನಾಯಿತು. ಲಡಖ್‌ನಲ್ಲಿನ 36,260 ಚದರ ಕಿಲೊ ಮಿಟರ್ ಪ್ರದೇಶವನ್ನೂ ಅರುಣಾಚಲಪ್ರದೇಶದ 5,180 ಚದರ ಕಿಲೊ ಮಿಟರ್ ಪ್ರದೇಶವನ್ನೂ ಚೀನ ತನ್ನ ವಶದಲ್ಲೇ ಇಟ್ಟುಕೊಂಡಿದೆ.

ನೋಡಿ : ಪಂಚಶೀಲ–ಸಂಪುಟ ೧

ಚೀನಾಬ್

ಪಂಜಾಬಿನ ಪಂಚ ನದಿಗಳಲ್ಲಿ ಪ್ರಮುಖವಾದದ್ದು ಚೀನಾಬ್.

ಕಾಶ್ಮೀರದ ಹಿಮಾಲಯ ಪರ್ವತ ಪ್ರದೇಶದಲ್ಲಿ ಚಂದ್ರ ಮತ್ತು ಭಾಗಾ ಎಂಬ ಎರಡು ನದಿಗಳು ಹುಟ್ಟುತ್ತವೆ. ಇವು ಕೂಡಿ ಉಂಟಾಗುವ ನದಿ ಚಂದ್ರಭಾಗಾ. ಚೀನಾಬ್ ಎನ್ನುವುದೂ ಇದನ್ನೇ.

ಇದು ಕಾಶ್ಮೀರ, ಹಿಮಾಚಲ ಪ್ರದೇಶ ಮತ್ತು ಪಂಜಾಬ್ ರಾಜ್ಯಗಳನ್ನು ಹಾದು ಸಿಯಾಲ್‌ಕೋಟ್ ಬಳಿ ಪಾಕಿಸ್ತಾನವನ್ನು ಪ್ರವೇಶಿಸುತ್ತದೆ. 675 ಮೈಲು ಉದ್ದದ ಚೀನಾಬ್, ಸಟ್ಲೆಜ್ ಜೊತೆಗೂಡಿ ಮುಂದುವರಿದು ಸಿಂಧು ನದಿಯನ್ನು ಸೇರುತ್ತದೆ.

ಪರ್ವತ ಪ್ರದೇಶದಿಂದ ಬಯಲಿಗೆ ಇಳಿದ ಮೇಲೆ ಶಾಂತವಾಗಿ ಹರಿಯುವ ಚೀನಾಬ್ ನದಿಯ ಪಾತ್ರ ಬಹಳ ಅಗಲವಾಗಿದೆ. ಚೀನಾಬ್ ನದಿಯಿಂದ ಹೊರಡುವ ಕೆಳ ಚೀನಾಬ್ ಕಾಲುವೆ ಮತ್ತು ಮೇಲಿನ ಚೀನಾಬ್ ಕಾಲುವೆಗಳು ಒಟ್ಟು 25,00,000 ಎಕರೆ ಭೂಮಿಗೆ ನೀರನ್ನು ಒದಗಿಸಿವೆ.

ಚೀನೀ ಯಾತ್ರಿಕರು

ನೋಡಿ : ಸಂಪುಟ ೧

ಚುನಾವಣೆ

'ಚುನಾವಣೆ' ಎಂದರೆ ಆರಿಸುವುದು. 'ಚುನಾವ್' ಎಂಬ ಹಿಂದೀ ಪದ ಇದರ ಮೂಲ. ರಾಷ್ಟ್ರವನ್ನಾಳಲು ಜನತೆ ತಮ್ಮ ಪ್ರತಿನಿಧಿಗಳನ್ನು ಆಯ್ಕೆ ಮಾಡುವ ಸಂದರ್ಭ ಇದು. ಗ್ರಾಮ ಪಂಚಾಯಿತಿ, ಪೌರಸಭೆ, ರಾಜ್ಯಗಳ ಶಾಸನ ಸಭೆ, ಲೋಕಸಭೆ ಎಲ್ಲಕ್ಕೂ ಸದಸ್ಯರನ್ನು ಆರಿಸುವುದು ಚುನಾವಣೆಯ ಮೂಲಕ.

ಬ್ರಿಟಿಷರ ಆಡಳಿತದಲ್ಲಿ ಭಾರತೀಯರಿಗೆ ಮತದಾನದ ಹಕ್ಕಿರಲಿಲ್ಲ. ಜನ ಅದಕ್ಕಾಗಿ ಚಳುವಳಿ ಹೂಡಬೇಕಾಯಿತು. ಮಾರ್ಲೆ–ಮಿಂಟೋ ಸುಧಾರಣೆ 1909ರಲ್ಲಿ ಜಾರಿಗೆ ಬಂದಾಗ ಆಸ್ತಿವಂತರಿಗೆ, ಹೆಚ್ಚು ತೆರಿಗೆ ಕೊಡುವವರಿಗೆ ಮಾತ್ರ ಮತದಾನದ ಹಕ್ಕು ದೊರಕಿತು. ಪ್ರಾಂತ ಶಾಸನ ಸಭೆಗಳ ಚುನಾವಣೆಯಲ್ಲಿ ಮತದಾನ ಮಾಡುವ ಹಕ್ಕು ಶೇಕಡಾ 14ರಷ್ಟು ಜನರಿಗೆ ದೊರೆತದ್ದು 1935ರ 'ಭಾರತ ಶಾಸನ'ದಿಂದ. ದೇಶಕ್ಕೆ ಸ್ವಾತಂತ್ರ್ಯ ಬಂದ ಮೇಲೆ 21 ವರ್ಷಕ್ಕೆ ಮೇಲ್ಪಟ್ಟವರಿಗೆಲ್ಲ ಮತದಾನ ಮಾಡುವ ಹಕ್ಕು ದೊರೆಯಿತು.

ಭಾರತದಲ್ಲಿ ಸಾರ್ವತ್ರಿಕ ಚುನಾವಣೆ 5 ವರ್ಷಗಳಿಗೊಮ್ಮೆ ನಡೆಯುತ್ತದೆ. ಲೋಕಸಭೆಯಲ್ಲಿ ಬಹುಮತ ಪಡೆದ ರಾಜಕೀಯ ಪಕ್ಷ ಮಂತ್ರಿಮಂಡಲ ರಚಿಸುತ್ತದೆ. ಈ ಪಕ್ಷ ಚುನಾಯಿಸಿದ ನಾಯಕ ಪ್ರಧಾನಮಂತ್ರಿ. ವಿಧಾನ ಸಭೆಯ ಚುನಾವಣೆಗಳಲ್ಲಿ ಬಹುಮತ ಪಡೆದ ಪಕ್ಷದ ನಾಯಕರು ರಾಜ್ಯಗಳ ಮುಖ್ಯಮಂತ್ರಿಗಳಾಗುತ್ತಾರೆ.

ಸ್ವತಂತ್ರವಾಗಿ, ನ್ಯಾಯವಾಗಿ ಚುನಾವಣೆ ನಡೆಸಲು ಚುನಾವಣಾ ಆಯೋಗವಿದೆ. ಸಂವಿಧಾನ ರೀತ್ಯಾ ಈ ಆಯೋಗ ಸ್ವತಂತ್ರ, ಪಕ್ಷಾತೀತ. ಆಯೋಗದ ಸದಸ್ಯರನ್ನು ನೇಮಕ ಮಾಡುವವರು ರಾಷ್ಟ್ರಪತಿ. ಪ್ರಧಾನ ಚುನಾವಣಾ ಕಮಿಷನರ್ ಇದಕ್ಕೆ ಅಧ್ಯಕ್ಷರು. ಚುನಾವಣೆಗೆ ನೆರವಾಗಲು ಪ್ರಾದೇಶಿಕ ಕಮಿಷನರುಗಳ ನೇಮಕ ನಡೆಯುತ್ತದೆ.

"ನಿಮ್ಮ ಘನವಾದ ಓಟು ನನಗೆ !"



ಆಯೋಗದ ಹೊಣೆ ಗುರುತರ. ರಾಷ್ಟ್ರಪತಿ, ಉಪರಾಷ್ಟ್ರಪತಿ ಸ್ಥಾನಗಳಿಗೆ, ಲೋಕಸಭೆ—ರಾಜ್ಯಗಳ ಶಾಸನ ಸಭಾ ಚುನಾವಣೆಗಳಿಗೆ ಮತದಾರರ ಪಟ್ಟಿ ತಯಾರಿಕೆ, ಮಾರ್ಗದರ್ಶನ ನಿಯಮ, ಚುನಾವಣೆ ನಡೆಸುವ ಜವಾಬ್ದಾರಿ ಇದಕ್ಕೆ ಸೇರಿದ್ದು. ಚುನಾವಣಾ ಸಂಬಂಧದ ವಿವಾದಗಳನ್ನು ಪರಿಹರಿಸಲು ಪಂಚಾಯತಿಯನ್ನು ಆಯೋಗವೇ ನೇಮಿಸಬೇಕು.

ಜನಸಂಖ್ಯೆಯ ಆಧಾರದ ಮೇಲೆ ಚುನಾವಣಾ ಕ್ಷೇತ್ರಗಳನ್ನು ಗೊತ್ತು ಪಡಿಸುತ್ತಾರೆ. ಭಾರತದಲ್ಲಿ ಏಕಸದಸ್ಯ ಕ್ಷೇತ್ರಗಳೇ ಹೆಚ್ಚು. ಬಹು ಸದಸ್ಯ ಕ್ಷೇತ್ರಗಳೂ ಇವೆ. ಕೆಲವು ಕ್ಷೇತ್ರಗಳಲ್ಲಿ ಪರಿಶಿಷ್ಟ ವರ್ಗದವರಿಗೆ ಮೀಸಲಾದ ಸ್ಥಾನಗಳಿರುತ್ತವೆ. ಇಂಥ ಕ್ಷೇತ್ರಗಳಲ್ಲಿ ಇಬ್ಬರು ಉಮೇದುವಾರರಿದ್ದು ಜನ ಇಬ್ಬರಿಗೂ ಮತ ನೀಡಬೇಕಾಗುತ್ತದೆ. ಇವರಲ್ಲಿ ಪರಿಶಿಷ್ಟವರ್ಗಕ್ಕೆ ಸೇರಿದವರು ಒಬ್ಬರಾದರೂ ಇರುತ್ತಾರೆ.

ಲೋಕಸಭೆ ಪ್ರತಿಯೊಂದು ರಾಜ್ಯದ ಚುನಾವಣಾ ಕ್ಷೇತ್ರಗಳನ್ನು ನಿಗದಿ ಪಡಿಸುತ್ತದೆ.

ರಾಷ್ಟ್ರಪತಿಯವರು ಗಜೆಟ್ಟಿನಲ್ಲಿ ಲೋಕಸಭಾ ಚುನಾವಣೆ ನಡೆಯಲು ಕರೆ ನೀಡುತ್ತಾರೆ. ರಾಜ್ಯಪಾಲರು ಹೀಗೆಯೇ ರಾಜ್ಯದ ಗಜೆಟ್ಟಿನಲ್ಲಿ ವಿಧಾನಸಭಾ ಚುನಾವಣೆಯ ಬಗೆಗೆ ಪ್ರಕಟಣೆ ಹೊರಡಿಸುತ್ತಾರೆ. ಇದು ಚುನಾವಣೆಯ ಪ್ರಾರಂಭ ಘಟ್ಟ.

ಮತ ಚಲಾಯಿಸುವವರ ಹೆಸರು ಪಟ್ಟಿಯಲ್ಲಿರಬೇಕು. ಈ ಪಟ್ಟಿಯನ್ನು ಪ್ರತಿವರ್ಷ ತಿದ್ದುಪಡಿ ಮಾಡುವುದು, ತಮ್ಮ ಹೆಸರು ಸೇರಿಸಬೇಕೆಂದು ಅರ್ಜಿ ಕೊಟ್ಟವರ ಹೆಸರನ್ನು ಸೇರಿಸಿಕೊಳ್ಳುವುದು, ಹೆಸರು–ವಿಳಾಸ ಯಾವುದಾದರೂ ತಪ್ಪು ಇದ್ದರೆ, ಅದನ್ನು ತಿಳಿಸಿದರೆ ತಿದ್ದುವುದು ಮುಂತಾದುವು ಚುನಾವಣೆಗೆ ಪೂರ್ವಭಾವಿಯಾಗಿ ನಡೆಯುತ್ತವೆ.

ಭಾರತದ ನಾಗರಿಕರಲ್ಲದವರು ಮತ ಚಲಾಯಿಸುವಂತಿಲ್ಲ.

ಚುನಾವಣೆಯಲ್ಲಿ ಉಮೇದುವಾರರಾಗುವವರ ಹೆಸರು ಮತದಾರರ ಪಟ್ಟಿಯಲ್ಲಿರಬೇಕು. ಹಾಗಿಲ್ಲದಿದ್ದರೆ ಅಂಥವರು ಸ್ಪರ್ಧಿಸುವಂತಿಲ್ಲ. ವಯಸ್ಸು ಕನಿಷ್ಠಪಕ್ಷ 25 ವರ್ಷವಾದರೂ ಆಗಿರಬೇಕು. ವಿಧಾನ ಪರಿಷತ್, ರಾಜ್ಯಸಭೆಗಾದರೆ ಈ ಮಿತಿ 30 ವರ್ಷ. ಸರಕಾರೀ ನೌಕರರು ಉಮೇದು ವಾರರಾಗುವಂತಿಲ್ಲ.

ಅನೈತಿಕ ನಡವಳಿಕೆಗಾಗಿ ಎರಡು ವರ್ಷಗಳಿಗಿಂತ ಹೆಚ್ಚು ಕಾಲ ಸೆರೆಮನೆ ವಾಸದ ಶಿಕ್ಷೆ ಪಡೆದವರು ಸ್ಪರ್ಧಿಸಬಾರದು. ಹಿಂದಿನ ಚುನಾವಣೆಗಳಲ್ಲಿ ಉಮೇದುವಾರರಾಗಿದ್ದು ತಮ್ಮ ಚುನಾವಣಾ ವೆಚ್ಚದ ತಪಶೀಲನ್ನು ಕ್ರಮವಾಗಿ, ಸಕಾಲದಲ್ಲಿ ಕೊಡದೆ ತಪ್ಪಿದವರು ಉಮೇದುವಾರರಾಗು ವಂತಿಲ್ಲ. ಲಂಚ, ಅವಿಧೇಯತೆಗಳಿಗಾಗಿ ಸರಕಾರೀ ಕೆಲಸದಿಂದ ಹೊರ ಹಾಕಲ್ಪಟ್ಟವರು ಚುನಾವಣೆಗೆ ನಿಲ್ಲುವಂತಿಲ್ಲ.

ಲೋಕಸಭಾ ಚುನಾವಣೆಯಲ್ಲಿ ಉಮೇದುವಾರನ ಹೆಸರನ್ನು ಯಾವುದೇ ರಾಜ್ಯದ ಮತದಾರ ಬೇಕಾದರೂ ಸೂಚಿಸಬಹುದು. ವಿಧಾನ ಸಭೆಗಾದರೆ ಆ ರಾಜ್ಯದ ಮತದಾರ ಹೆಸರನ್ನು ಸೂಚಿಸಬೇಕು.

ನಾಮಪತ್ರದಲ್ಲಿ ಉಮೇದುವಾರನ ಹೆಸರು, ತಂದೆ ಅಥವಾ ಪತಿಯ ಹೆಸರು, ಮತದಾರರ ಪಟ್ಟಿಯಲ್ಲಿನ ಆ ಹೆಸರಿನ ಕ್ರಮಸಂಖ್ಯೆಗಳು ನಮೂದಿತವಾಗಿರಬೇಕು. ಉಮೇದುವಾರನು ಚುನಾವಣೆಗೆ ನಿಲ್ಲಲು ತನ್ನ ಸಮ್ಮತಿ ಸೂಚಿಸಿ ತನಗೆ ಬೇಕಾಗಿರುವ ಗುರುತನ್ನೂ ನಮೂದಿಸಿರಬೇಕು. ನಿರ್ದಿಷ್ಟ ತೇದಿಗೆ ಮೊದಲೇ ನಾಮಪತ್ರವನ್ನು ನಿಗದಿಯಾಗಿರುವ ಕಾಲದೊಳಗೆ ಚುನಾವಣಾಧಿಕಾರಿಗೆ ತಲುಪಿಸಬೇಕು.

ಅನಂತರ ಚುನಾವಣಾಧಿಕಾರಿ ನಾಮಪತ್ರಗಳನ್ನು ಪರಿಶೀಲಿಸುತ್ತಾನೆ. ಆತ ಯಾವುದೇ ನಾಮಪತ್ರವನ್ನು ತಿರಸ್ಕರಿಸಿದರೆ ಅದಕ್ಕೆ ಕಾರಣ ಕೊಡ ಬೇಕು. ಇತರ ಉಮೇದುವಾರರು, ಅಧಿಕೃತ ಏಜೆಂಟರು ಯಾರಾದರೂ ಸ್ಪರ್ಧಿಯ ಬಗೆಗೆ ಆಕ್ಷೇಪಣೆ ಎತ್ತಿದ್ದು ನ್ಯಾಯವಾಗಿದ್ದರೆ ನಾಮಪತ್ರವನ್ನು ಆತ ತಿರಸ್ಕರಿಸಬಹುದು. ಈ ಪರಿಶೀಲನೆಯಾದ ಮೇಲೆ ಅಂಗೀಕೃತ ಉಮೇದುವಾರರ ಪಟ್ಟಿ ಪ್ರಕಟವಾಗುತ್ತದೆ. ಅನಂತರ ಉಮೇದುವಾರಿಕೆ ವಾಪಸ್ಸು ಪಡೆಯಲು ಎರಡು ದಿನ ಕಾಲಾವಕಾಶವಿರುತ್ತದೆ. ಇದಾದ ಮೇಲೆ ಅಂತಿಮ ಪಟ್ಟಿ ಪ್ರಕಟಣೆ.

ಕೆಲವು ವೇಳೆ ಅಂತಿಮ ಪಟ್ಟಿ ಪ್ರಕಟವಾಗುವುದರಲ್ಲಿ ಉಮೇದುವಾರರು ನಿಧನರಾಗುವುದುಂಟು. ಆಗ ಪಟ್ಟಿಯಲ್ಲಿ ಅವರ ಹೆಸರು ಸೇರಿಸುವುದಿಲ್ಲ. ಪಟ್ಟಿ ಪ್ರಕಟವಾಗಿ, ಚುನಾವಣೆ ನಡೆಯುವುದರೊಳಗೆ ನಿಧನರಾದರೆ ಚುನಾವಣೆಯನ್ನು ಮುಂದಕ್ಕೆ ಹಾಕುತ್ತಾರೆ. ಆ ಕ್ಷೇತ್ರದಲ್ಲಿ ಹೊಸದಾಗಿ ಚುನಾವಣಾ ಪೂರ್ವಭಾವಿ ಕಾರ್ಯಕ್ರಮ ಆರಂಭ. ಆಗ ಮೊದಲಿಗೆ ನಾಮಪತ್ರ ಸಲ್ಲಿಸಿದ್ದವರು ಪುನಃ ಅರ್ಜಿಸಲ್ಲಿಸಬೇಕಾಗಿಲ್ಲ. ಮತದಾನ ಆರಂಭವಾದ ಅನಂತರ ತೀರಿಕೊಂಡರೆ ಚುನಾವಣೆ ನಡೆದು, ಮತಗಳ ಎಣಿಕೆಯೂ ಆಗುತ್ತದೆ. ಆಗ ತೀರಿಹೋದ ವ್ಯಕ್ತಿಗೇ ಬಹುಮತ ಬಂದಿದ್ದರೆ ಇನ್ನೊಮ್ಮೆ ಚುನಾವಣೆ ನಡೆಸಬೇಕಾಗುತ್ತದೆ.

ಆಯ್ಕೆ ಆಗಬೇಕಾಗಿರುವ ಪ್ರತಿನಿಧಿಗಳಿಗಿಂತ ಹೆಚ್ಚು ಮಂದಿ ಸ್ಪರ್ಧಿ ಗಳಿದ್ದಲ್ಲಿ ಚುನಾವಣೆ ನಡೆಯುತ್ತದೆ. ಹಾಗಿಲ್ಲದಿದ್ದಲ್ಲಿ ಚುನಾವಣಾಧಿ ಕಾರಿಯೇ, ಇಂಥ ಉಮೇದುವಾರ ಅವಿರೋಧಿತವಾಗಿ ಚುನಾಯಿತನಾದ —ಎಂದು ಪ್ರಕಟಿಸುತ್ತಾರೆ.

ಭಾರತದಲ್ಲಿ ಗುಪ್ತ ಮತದಾನ ಪದ್ಧತಿ ಆಚರಣೆಯಲ್ಲಿದೆ. ಮತದಾನ ಚೀಟಿಯ ಪಕ್ಕಪತ್ರದಲ್ಲಿ ಮತದಾರನ ರುಜು ಪಡೆದು ಆವನಿಗೆ ಮತದಾನ ಚೀಟಿ ಕೊಡುತ್ತಾರೆ. ಮತದಾನ ಚೀಟಿಯಲ್ಲಿ ಉಮೇದು

ಹಿಮಾವೃತ ಕಾಶ್ಮೀರದಲ್ಲಿ ಮತಗಟ್ಟೆಗೆ ನಡಿಗೆ





ಗುಪ್ತ ಮತದಾನ

ವಾರರ ಹೆಸರು, ಅವರು ಇಟ್ಟುಕೊಂಡಿರುವ ಗುರುತು ಇರುತ್ತದೆ. ಗೊತ್ತಾದ ರಹಸ್ಯ ಸ್ಥಳದಲ್ಲಿ ಮತದಾರ ತನಗೆ ಬೇಕಾದ ಸ್ಪರ್ಧಿಯ ಹೆಸರಿನ ಪಕ್ಕದಲ್ಲಿ x ಗುರುತಿನ ಮುದ್ರೆಯನ್ನು ಒತ್ತಬೇಕಾಗುತ್ತದೆ. ಅನಂತರ ಚೀಟಿಯನ್ನು ಮತಪೆಟ್ಟಿಗೆಯಲ್ಲಿ ಹಾಕಬೇಕು. ಮತದಾನ ಮುಗಿದ ಮೇಲೆ ಮತಪೆಟ್ಟಿಗೆಗಳನ್ನು ಸುರಕ್ಷಿತವಾಗಿಟ್ಟಿರುತ್ತಾರೆ. ಗೊತ್ತಾದ ದಿನ ಎಣಿಕೆ ಆರಂಭ. ಬಹುಮತ ಪಡೆದ ಉಮೇದುವಾರರು ಚುನಾಯಿತರಾಗುತ್ತಾರೆ. ಇಬ್ಬರು ಸ್ಪರ್ಧಿಗಳಿಗೆ ಒಂದೇಸಮ ಮತ ಬಂದಿದ್ದರೆ ಚೀಟಿ ಎತ್ತಿ ವಿಜಯಿಯನ್ನು ನಿರ್ಣಯ ಮಾಡುತ್ತಾರೆ.

ಯಾರೇ ಆಗಲಿ ಲೋಕಸಭೆ, ವಿಧಾನಸಭೆಗಳಿಗೆ ಏಕಕಾಲದಲ್ಲಿ ಸದಸ್ಯರಾಗಿರುವಂತಿಲ್ಲ. ಎರಡು ಸಭೆಗಳಿಗೂ ಚುನಾಯಿತರಾದರೆ ಯಾವುದಾದರೂ ಒಂದು ಸ್ಥಾನಕ್ಕೆ ರಾಜಿನಾಮೆ ಕೊಡಬೇಕಾಗುತ್ತದೆ.

ಉಮೇದುವಾರರು ತಮ್ಮ ಚುನಾವಣಾ ವೆಚ್ಚದ ವಿವರಗಳನ್ನು ಚುನಾವಣಾಧಿಕಾರಿಗೆ ಸಕಾಲದಲ್ಲಿ ಸಲ್ಲಿಸಬೇಕು. ಚುನಾವಣೆಗೆ ನಿಗದಿಯಾಗಿರುವುದಕ್ಕಿಂತ ಹೆಚ್ಚು ಹಣ ವೆಚ್ಚ ಮಾಡುವುದು ಅಪರಾಧವಾಗುತ್ತದೆ.

ಲಂಚ ಕೊಡುವುದು, ಬೇರೆ ಮತದಾರನ ಹೆಸರಿನಲ್ಲಿ ಬೇರೊಬ್ಬರು ಮತದಾನ ಮಾಡುವುದು, ಜಾತಿ, ಮತಗಳ ಹೆಸರಿನಲ್ಲಿ ಪ್ರಚಾರ ಮಾಡುವುದು, ಮತದಾರರಿಗೆ ವಾಹನ ಸೌಕರ್ಯ [illegible] ಒದಗಿಸುವುದು ಅಪರಾಧಗಳು. ಇವು ಶಿಕ್ಷಾರ್ಹ.

ಚುನಾವಣೆ ಮುಗಿದು, ಫಲಿತಾಂಶಗಳು ಪ್ರಕಟವಾದ ಅನಂತರ ಚುನಾವಣೆಯಲ್ಲಿ ಗೆದ್ದ ಉಮೇದುವಾರನ ಅರ್ಹತೆಯನ್ನು ಪ್ರಶ್ನಿಸುವುದು, ಪ್ರಚಾರಕಾಲದಲ್ಲಿ ಮಾಡಿದ ಅಪರಾಧ, ನಾಮಪತ್ರವನ್ನು ಅಕಾರಣವಾಗಿ ತಿರಸ್ಕರಿಸಿದ್ದುದು ಮುಂತಾದುವು ವ್ಯಾಜ್ಯಕ್ಕೆ ಕಾರಣವಾಗುತ್ತವೆ. ಸಂಬಂಧಪಟ್ಟ ಉಚ್ಚನ್ಯಾಯಾಲಯಗಳು ಇದರ ವಿಚಾರಣೆ ನಡೆಸುತ್ತವೆ. ಇದರ ತೀರ್ಪಿನ ವಿರುದ್ಧವಾಗಿ ಸರ್ವೋಚ್ಚ ನ್ಯಾಯಾಲಯಕ್ಕೆ ಅಪೀಲು ಹೋಗಲೂ ಅವಕಾಶವಿದೆ.

ಸದಸ್ಯನ ಸಾವು ಅಥವಾ ರಾಜೀನಾಮೆಯಿಂದ ಒಂದು ಕ್ಷೇತ್ರವು [illegible]. ಲೋಕಸಭೆ ಅಥವಾ ವಿಧಾನಸಭೆಯನ್ನು ಕಾಲಾವಧಿಗಿಂತ ಮೊದಲೇ [illegible] ಚುನಾವಣೆ ನಡೆಯುತ್ತದೆ.

ಚೆನ್ನಮ್ಮಾಜಿ

ಕೆಳದಿ ರಾಜಮನೆತನಕ್ಕೆ ಕನ್ನಡನಾಡಿನ ಇತಿಹಾಸದಲ್ಲಿ ವಿಶೇಷ ಸ್ಥಾನವಿದೆ. ಈ ವಂಶದವರು ಕರ್ನಾಟಕದ ಮಲೆನಾಡು ಮತ್ತು ಕರಾವಳಿ ಪ್ರದೇಶದಲ್ಲಿ 1500ರಿಂದ 1763ರ ವರೆಗೆ ಆಳಿದರು. ವರದಾ ನದೀತೀರದ ಕೆಳದಿ ಈ ಅರಸರ ಮೊದಲ ರಾಜಧಾನಿ. ಅನಂತರ ಇಕ್ಕೇರಿ ಅಮೇಲೆ ಬಿದನೂರು.

ಕೆಳದಿ ಸೋಮಶೇಖರನಾಯಕ 1664ರಲ್ಲಿ ಪಟ್ಟಕ್ಕೆ ಬಂದ. ಸೋಮಶೇಖರನಾಯಕ ಶೂರನಾದರೂ ಕೆಟ್ಟವರ ಸಂಸರ್ಗದಿಂದ ವಿಲಾಸದಲ್ಲಿ ಕಾಲಕಳೆಯುತ್ತಿದ್ದ. ಇದರಿಂದಾಗಿ ಈತನ ಹೆಂಡತಿ ಚೆನ್ನಮ್ಮಾಜಿ ಆಡಳಿತ ಸೂತ್ರವನ್ನು ತಾನೇ ವಹಿಸಿಕೊಂಡಳು. ಕುಹಕಿಗಳ ವಂಚನೆಯಿಂದ 1671ರಲ್ಲಿ ಸೋಮಶೇಖರನಾಯಕ ತೀರಿಕೊಂಡ. ಕೆಲವರು ರಾಜದ್ರೋಹಿಗಳ ಪ್ರೇರಣೆಯಿಂದ ಬಿಜಾಪುರದ ಸುಲ್ತಾನರ ಸೈನ್ಯ ಕೆಳದಿ ರಾಜ್ಯವನ್ನು ಆಕ್ರಮಿಸಲು ಬಂದಿತು. ಚೆನ್ನಮ್ಮಾಜಿ ತನ್ನ ಸೇನಾನಿಗಳನ್ನು ಹುರಿದುಂಬಿಸಿ, ಬಿಜಾಪುರದ ಸೈನ್ಯವನ್ನು ಸೋಲಿಸಿ ಓಡಿಸಿದಳು.

ಚೆನ್ನಮ್ಮಾಜಿ ತನ್ನ ತಂದೆ ಸಿದ್ದಪ್ಪಶೆಟ್ಟಿಯೊಡನೆ ಆಪ್ತಾಲೋಚನೆ ನಡೆಸಿ ಬಸವಪ್ಪನಾಯಕನೆಂಬ ಬಾಲಕನನ್ನು ದತ್ತು ಪಡೆದುಕೊಂಡಳು. ಉತ್ತಮ ರಾಜನಾಗುವಂತೆ ಆತನಿಗೆ ಶಿಕ್ಷಣ ಕೊಡಿಸಿದಳು (ಇದೇ ಬಸವಪ್ಪನಾಯಕ ಮುಂದೆ 'ಶಿವತತ್ತ್ವ ರತ್ನಾಕರ' ಎಂಬ ಸಂಸ್ಕೃತ ಗ್ರಂಥವನ್ನು ಬರೆದ. ಈತ 'ಸುಭಾಷಿತ ಸುರದ್ರುಮ', 'ಸೂಕ್ತಿ ಸುಧಾಕರ', 'ವೀರಶೈವ ಸಂಜೀವಿನಿ' ಎಂಬ ಗ್ರಂಥಗಳನ್ನೂ ರಚಿಸಿದನೆಂದು ಉಲ್ಲೇಖವಿದೆ.)

ಚೆನ್ನಮ್ಮಾಜಿ ಅಧಿಕಾರಸೂತ್ರ ವಹಿಸಿಕೊಂಡಮೇಲೆ ಮನೆಮುರುಕರನ್ನು ಸದೆಬಡಿದಳು. ಭೂಸುಧಾರಣೆಯಲ್ಲಿ ಕಟ್ಟುನಿಟ್ಟಾದ ನಿಯಮ ಜಾರಿಗೆ ತಂದು ರಾಜ್ಯದ ಆದಾಯ ಹೆಚ್ಚಿಸಿದಳು. ಹೊನ್ನಾಳಿಯ ಮೇಲೆ ಮುಸಲ್ಮಾನರು ದಾಳಿ ಮಾಡಿದಾಗ, ಅವರನ್ನು ಹಿಮ್ಮೆಟ್ಟಿಸಿದಳು. ನೆರೆಯ ಅರಸರು ತನ್ನ ರಾಜ್ಯದ ಮೇಲೆ ಏರಿಬಂದಾಗ ಅವರನ್ನು ಹಿಂದಕ್ಕಟ್ಟಿದಳು; ತನ್ನ ರಾಜ್ಯವನ್ನು ವಿಸ್ತರಿಸಿದಳು.

ರಾಣಿ ಚೆನ್ನಮ್ಮಾಜಿ ಧರ್ಮಸಹಿಷ್ಣು. ತಾನು ವೀರಶೈವ ಮತದವಳಾದರೂ ಎಲ್ಲ ಮತಗಳ ಧಾರ್ಮಿಕ ಸಂಸ್ಥೆಗಳಿಗೂ ಪೋಷಕಳಾದಳು. ಹಲವಾರು ದೇವಾಲಯಗಳಿಗೆ ದತ್ತಿಗಳನ್ನು ಕೊಟ್ಟಳು. ತನ್ನ ಪತಿಯ ಹೆಸರಿನಲ್ಲಿ 'ಸೋಮಶೇಖರಪುರ' ಎಂಬ ಅಗ್ರಹಾರ ನಿರ್ಮಿಸಿ ದಾನ ಮಾಡಿದಳು. ಮಲಿಕೆರೆ ಕೋಟೆಯನ್ನು ಜಯಿಸಿ, ಅದಕ್ಕೆ 'ಚೆನ್ನಗಿರಿ' ಎಂದು ಹೆಸರಿಟ್ಟಳು.

ಚೆನ್ನಮ್ಮಾಜಿಯ ಆಳ್ವಿಕೆಯ ಕೊನೆಯ ದಿನಗಳಲ್ಲಿ ಚಿರಸ್ಮರಣೀಯ ಪ್ರಸಂಗವೊಂದು ನಡೆಯಿತು. 1680ರಲ್ಲಿ ಶಿವಾಜಿ ತೀರಿಕೊಂಡ ಮೇಲೆ ಅವನ ಹಿರಿಯಮಗ ಸಂಭಾಜಿ(ಶಂಭೂಜಿ)ಯನ್ನು ಔರಂಗಜೇಬನು ಕೊಲ್ಲಿಸಿದ್ದ. ಅನಂತರ ಶಿವಾಜಿಯ ಕಿರಿಯ ಹೆಂಡತಿಯ ಮಗ ರಾಜಾರಾಮನನ್ನು ಕೊಂದು ತೀರಿಸುವ ಹವಣಿಕೆಯಲ್ಲಿದ್ದ. ಕೆಲ ಮರಾಠಾ ಸೇನಾಪತಿಗಳು ರಾಜಾರಾಮನನ್ನು ಜಿಂಜೀಕೋಟೆಯಿಂದ ಪಾರುಮಾಡಿ ಸುರಕ್ಷಿತ ಸ್ಥಳವೆಂದು ಬಿದನೂರಿಗೆ ಕರೆತಂದರು. ಔರಂಗಜೇಬನ ಮೊಘಲರನ್ನು ಎದುರಿಸಬೇಕಾಗಿ ಬರುತ್ತದೆಂದು ತಿಳಿದರೂ ಮನೆಗೆ ಬಂದ ಅತಿಥಿಯೆಂದು ಚೆನ್ನಮ್ಮಾಜಿ ರಾಜಾರಾಮನಿಗೆ ಆಶ್ರಯವಿತ್ತಳು. [illegible] ಸೇನೆ [illegible] ರಾಜ್ಯದ ಮೇಲೆ [illegible]. ಚೆನ್ನಮ್ಮಾಜಿ [illegible] ಸೈನ್ಯವನ್ನು ಹಣ್ಣುಗಾಯಿ ನೀರುಗಾಯಿ ಮಾಡಿದಳು. 1690ರಲ್ಲಿ ನಡೆದ ಈ

ಯುದ್ಧದಲ್ಲಿ ಫಿರಂಗಿಯೊಂದ ಸೈನ್ಯ ಸಂಪೂರ್ಣ ಸೋತುಹೋಯಿತು. ರಾಜಾರಾಮನನ್ನು ವೇಷಮರೆಯಿಸಿ ತನ್ನ ರಾಜ್ಯದ ಗಡಿಯಿಂದ ಚೆನ್ನಮ್ಮಾಜಿ ಸುರಕ್ಷಿತವಾಗಿ ಕಳುಹಿಸಿಕೊಟ್ಟಳು.

1696ರಲ್ಲಿ ದತ್ತುಮಗನಾದ ಬಸವಪ್ಪನಿಗೆ ಚೆನ್ನಮ್ಮಾಜಿ ಪೂರ್ಣ ರಾಜ್ಯಾಧಿಕಾರವನ್ನು ವಹಿಸಿಕೊಟ್ಟಳು. 1697ರಲ್ಲಿ ಆಕೆಯ ದೇಹಾಂತ ವಾಯಿತು. ಬಿದನೂರಿನ ಕೋಟೆಪ್ಪುರ ಮಠದಲ್ಲಿ ಆಕೆಯನ್ನು ಸಮಾಧಿ ಮಾಡಲಾಯಿತು.

ಚೇದಿಯರು

ಪೌರಾಣಿಕ ಸಾಹಿತ್ಯದಲ್ಲಿ ಉಲ್ಲೇಖಿತವಾದ ಚೇದಿ ವಂಶದ ರಾಜರು ಯಮುನಾ ನದಿಯ ದಂಡೆಯಲ್ಲೂ ಬುಂದೇಲ್‌ಖಂಡ ಪ್ರದೇಶದಲ್ಲೂ ಕ್ರಿ. ಪೂ. ಐದು–ಆರನೆಯ ಶತಮಾನದಲ್ಲಿ ಆಳುತ್ತಿದ್ದರು.

ಇವರ ಒಂದು ಶಾಖೆ ಕ್ರಿ. ಪೂ. ಒಂದನೆಯ ಶತಮಾನದಲ್ಲಿ ಕಳಿಂಗ (ಇಂದಿನ ಪುರಿ, ಗಂಜಾಂ ಮತ್ತು ಕಟಕ್ ಜಿಲ್ಲೆಗಳ ಪ್ರದೇಶ)ದಿಂದ ಆಳ ಲಾರಂಭಿಸಿತು. ಮಹಾಮೇಘವಾಹನ ಈ ಶಾಖೆಯ ಮೊದಲ ದೊರೆ. ಅವನ ಬಳಿಕ ವಕ್ರದೇವ ಆಳಿದ. ಭುವನೇಶ್ವರದ ಬಳಿಯ ಉದಯಗಿರಿ ಬೆಟ್ಟಗಳಲ್ಲಿನ ಮಂಚಪುರಿ ಗುಹೆಗಳ ಕೆಳ ಹಂತದ ಕೆಲಸ ಇವನ ಸಾಧನೆ. ಇವನ ಬಳಿಕ ಆಳಿದ ಖಾರವೇಲ ಪ್ರಾಚೀನ ಭಾರತದ ಶ್ರೇಷ್ಠ ರಾಜರಲ್ಲಿ ಒಬ್ಬ. ಇವನ ಕಾಲ ಒಂದನೆಯ ಶತಕದ ಪೂರ್ವಾರ್ಧ.

ನೋಡಿ : ಖಾರವೇಲ

ಚೇರರು

ಕ್ರಿಸ್ತಶಕಾರಂಭದಿಂದ ಕೇರಳದಲ್ಲಿ ಆಳುತ್ತಿದ್ದ ಚೇರರು ದಕ್ಷಿಣ ಭಾರತದ ಪ್ರಾಚೀನ ರಾಜಮನೆತನವಾದ ಚೋಳರ ಮತ್ತು ಪಾಂಡ್ಯರ ಸಮಕಾಲೀನರು. ಪ್ರಾಚೀನ ಭಾರತದ ಸಾಗರೋತ್ತರ ವಾಣಿಜ್ಯದಲ್ಲಿ ಇವರು ಅಗ್ರಪಾತ್ರ ವಹಿಸಿದವರು.

ಚೇರರ ಕೊಲ್ಲಂ (ಕ್ವಿಲೋನ್) ಮತ್ತು ಕ್ರಾಂಗನೋರ್ (ಮುಜಿರಿಸ್) ಬಂದರುಗಳು ಪ್ರಸಿದ್ಧವಾದುವು. ತಮಿಳು ಸಂಘಂ ಸಾಹಿತ್ಯದಲ್ಲಿ ಈ ವಂಶಕ್ಕೆ ಸಂಬಂಧಿಸಿದ ಅನೇಕ ಕತೆಗಳಿವೆ. ಕ್ರಿ. ಶ. ಎರಡನೆಯ ಶತ ಮಾನದಲ್ಲಿ ಆಳಿದ ಶೆಂಗುಟ್ಟುವನ್ ಈ ವಂಶದ ಖ್ಯಾತ ದೊರೆ. ಈತನು ತಮಿಳುನಾಡಿನ ಅನೇಕ ಭಾಗಗಳ ಮೇಲೆ ಪ್ರಭುತ್ವ ಹೊಂದಿದ್ದ. ವಂಜಿ ಈತನ ರಾಜಧಾನಿ. ಚೇರರು ಧರ್ಮಸಹಿಷ್ಣುಗಳು. ಕ್ರಿ. ಶ. ಒಂದನೆಯ ಶತಮಾನದಲ್ಲಿ ಸಂತ ಥಾಮಸ್ ಚೇರ ರಾಜ್ಯಕ್ಕೆ ಬಂದು ಕೆಲ ಕಾಲ ಧ್ಯಾನಾಸಕ್ತನಾಗಿದ್ದ ಎನ್ನುತ್ತಾರೆ. ಮೂರನೆಯ ಶತಮಾನದಲ್ಲಿ ಪಲ್ಲವರು ಪಾಂಡ್ಯರು ಪ್ರಬಲರಾದಾಗ ಚೇರರ ಶಕ್ತಿಗುಂದಿತು. ಚೇರ ದೊರೆ ಮಾಂದರಂಜೇರಲ್‌ನನ್ನು 210ರ ಸುಮಾರಿಗೆ ಪಾಂಡ್ಯ ನೆಡುಂಜೆಳಿಯನ್ ಬಂಧಿಸಿ ಚೇರರ ವಿಸ್ತರಣ ನೀತಿಗೆ ತಡೆ ಹಾಕಿದ.

ಮುಂದಿನ ಚೇರರ ಇತಿಹಾಸ ಅಸ್ಪಷ್ಟ. ಪಲ್ಲವ ವಂಶದ ಮೊದಲ ನೆಯ ನರಸಿಂಹವರ್ಮ ತಾನು ಚೇರರನ್ನು ಸೋಲಿಸಿದ್ದಾಗಿ ಹೇಳಿದ್ದಾನೆ. ಪೆರುಮಾಳ ಮನೆತನದವರ ಕಾಲದಲ್ಲಿ (400–825) ಚೇರ ರಾಜರು ಧರ್ಮ, ಸಂಸ್ಕೃತಿಗಳಿಗೆ ಪ್ರೋತ್ಸಾಹ ಕೊಟ್ಟರು.

ಒಂಬತ್ತನೆಯ ಶತಮಾನದ ಕೊನೆಯಲ್ಲಿ ಆಳಿದ್ದ ಚೇರಮಾನ್ ಪೆರು ಮಾಳ್ ಎಂಬ ಚೇರ ವಂಶದ ದೊರೆ ಇಸ್ಲಾಂ ಧರ್ಮವನ್ನು ಸ್ವೀಕರಿಸಿ ಮಕ್ಕಾಯಾತ್ರೆ ಕೈಗೊಂಡನೆಂಬ ಹೇಳಿಕೆ ಇದೆ. ಜೈನರು, ಕ್ರೈಸ್ತರು ಮತ್ತು ಶೈವರು ಅವನು ತಮ್ಮ ಧರ್ಮದವನೆಂದೂ ಹೇಳಿಕೊಳ್ಳುತ್ತಾರೆ. 825ರಲ್ಲಿ ಚೆರುಮಾನ್ ಪೆರುಮಾಳ್ ಕಣ್ಮರೆಯಾದ. ಅಂದಿನಿಂದ ಕೇರಳದಲ್ಲಿ ಕೊಲ್ಲಂ ಶಕ ಎಣಿಕೆ ಬಳಕೆಗೆ ಬಂದಿತು.

ಚೋಳ ದೊರೆ ಆದಿತ್ಯ (871–907)ನು ಚೇರ ದೊರೆ ಸ್ಥಾಣು ರವಿಯ ಜೊತೆ ರಕ್ತಸಂಬಂಧ ಬೆಳೆಸಿದ್ದ. ಹನ್ನೊಂದನೆಯ ಶತಮಾನದ ಕೊನೆಯ ರವಿವರ್ಮನ್ ಕುಲಶೇಖರನು ತಾನು ಚೇರ ಸಮ್ರಾಟನೆಂದು ಹೇಳಿಕೊಂಡು ಆಳಲಾರಂಭಿಸಿದ. ಕೊಲ್ಲಂ ಅವನ ರಾಜಧಾನಿ. ಮುಂದೆ ಕೇರಳವು ಅನೇಕ ಕಿರು ರಾಜ್ಯಗಳಾಗಿ ಒಡೆಯಿತು. ಚೇರವಂಶ ತನ್ನ ಮಹತ್ವ ಕಳೆದುಕೊಂಡಿತು.

ಚೈತನ್ಯ

ಐದು ವರ್ಷದ ಮಗು ಇದ್ದಕ್ಕಿದ್ದಂತೆ ಅಳತೊಡಗಿತು. ಬಹಳವಾಗಿ ರಮಿಸಿ ಕೇಳಿದ ಮೇಲೆ, ತಮ್ಮ ನೆರೆಯವರಾದ ಜಗದೀಶ ಮತ್ತು ಹಿರಣ್ಯರ ಮನೆಯಲ್ಲಿ ದೇವರ ನೈವೇದ್ಯಕ್ಕಾಗಿ ತಯಾರಿಸಿರುವ ತಿಂಡಿಗಳು ತನಗೆ ಬೇಕು —ಎಂದಿತು. ಅವರ ಮನೆಯಲ್ಲಿ ಇವತ್ತು ವಿಶೇಷ ಪೂಜೆ ಎಂಬುದು ಮಗುವಿಗೆ ಹೇಗೆ ತಿಳಿಯಿತು ಎಂದು ಹಿರಿಯರಿಗೆ ಆಶ್ಚರ್ಯ. ಕಾರಣ ಕೇಳಿದ ಜಗದೀಶ ಮತ್ತು ಹಿರಣ್ಯರಿಗೆ, ಕೃಷ್ಣನೇ ಮಗುವಿನ ರೂಪದಲ್ಲಿ ಕೇಳುತ್ತಿದ್ದಾನೆ ಎನ್ನಿಸಿತು. ನೈವೇದ್ಯವನ್ನು ತಂದು ಮಗುವಿನ ಮುಂದಿರಿಸಿ ತಿನ್ನುವಂತೆ ಹೇಳಿದರು.

—ಮುಂದೆ ಬಂಗಾಳದಲ್ಲಿ ವೈಷ್ಣವ ಪಂಥ ಸ್ಥಾಪಿಸಿದ ಚೈತನ್ಯ ಮಹಾ ಪ್ರಭುವಿನ ಬಾಲ್ಯವನ್ನು ಕುರಿತ ಕಥೆ ಇದು.

ನವದ್ವೀಪ ಅಥವಾ ನದಿಯಾದಲ್ಲಿ ಚೈತನ್ಯ 1486ರಲ್ಲಿ ಜನಿಸಿದ. ತಂದೆ ಇಟ್ಟ ಹೆಸರು ವಿಶ್ವಂಭರ. ಚೈತನ್ಯ ಆ ಮನೆಯ ಹತ್ತನೆಯ ಮಗು. ಇವನಿಗಿಂತ ಮುಂಚೆ 8 ಮಕ್ಕಳನ್ನು ಕಳೆದುಕೊಂಡಿದ್ದ ತಾಯಿ ಈ ಮಗು ವನ್ನು ನಿಮಾಯಿ (ಅರ್ಧಸತ್ತವನು) ಎನ್ನುತ್ತಿದ್ದಳು. ಮಗು ಗೌರ ವರ್ಣದ್ದಾಗಿದ್ದರಿಂದ ಗೌರಾಂಗ ಎಂದೂ ಹೆಸರುಬಂತು.

ಆ ಕಾಲದಲ್ಲಿ ನದಿಯಾ ಸುಪ್ರಸಿದ್ಧ ವಿದ್ಯಾಕೇಂದ್ರವಾಗಿತ್ತು. ಚೈತನ್ಯ ಚಿಕ್ಕ ವಯಸ್ಸಿನಲ್ಲೇ ಸಂಸ್ಕೃತದಲ್ಲಿ ಅಪಾರ ಪಾಂಡಿತ್ಯ ಗಳಿಸಿದ. 14ನೆಯ ವಯಸ್ಸಿನಲ್ಲಿ ಸಂಸ್ಕೃತ ವ್ಯಾಕರಣ ಬರೆದ. ಅನೇಕ ಪಂಡಿತರನ್ನು ವಾದದಲ್ಲಿ ಸೋಲಿಸಿದ. ಒಂದು ವಿದ್ಯಾಶಾಲೆಯನ್ನು ನಡೆಸುತ್ತ ಕೆಲಕಾಲ ಸಂಸಾರಿಯಾಗಿ ಬಾಳಿದ.

ಒಮ್ಮೆ ಗಯಾ ಯಾತ್ರೆಗೆ ಹೋಗಿದ್ದಾಗ, ಒಬ್ಬ ಗುರು ಆತನಿಗೆ ಶ್ರೀಕೃಷ್ಣಭಕ್ತಿಯನ್ನು ಉಪದೇಶಿಸಿದರು. ಆಗ ಅವನ ವಯಸ್ಸು 22. ಗಯೆಯಿಂದ ಹಿಂದಿರುಗಿದ ಎರಡು ವರ್ಷಗಳ ಅನಂತರ ಅವರು ಸನ್ಯಾಸಿ ಯಾಗಿ ಮನೆಬಿಟ್ಟರು. ನಾನಾ ಭಾಗಗಳಲ್ಲಿ ಸಂಚರಿಸುತ್ತ ಯಾವ ಜಾತಿ ಮತ ಭೇದವನ್ನೂ ಎಣಿಸದೆ ಎಲ್ಲರಿಗೂ ಕೃಷ್ಣಭಕ್ತಿಯನ್ನು ಉಪದೇಶಿಸಿ ದರು. ಎಲ್ಲ ವರ್ಗಗಳ ಜನರೂ ಆತನ ಶಿಷ್ಯರಾದರು. ಚೈತನ್ಯರನ್ನು 'ಮಹಾ ಪ್ರಭು' ಎಂದು ಕರೆದರು ; ಕೃಷ್ಣನ ಅವತಾರವೆಂದು ಭಾವಿಸಿ ದರು.

ಚೈತನ್ಯ ತನ್ನ ಬೋಧನೆಯನ್ನು ಆರಂಭಿಸಿದ್ದು ಜಗನ್ನಾಥ ಕ್ಷೇತ್ರದಲ್ಲಿ. ಹಿಂದುಗಳು, ಮಹಮ್ಮದೀಯರು, ಬಡವರು, ಬಲ್ಲಿದರು, ಸ್ತ್ರೀಯರು ಪುರುಷರು —ಹೀಗೆ ಅನೇಕರು ಅವರ ಶಿಷ್ಯರಾದರು.



ಭಕ್ತಿಪಂಥ : ' ಮಹಾಪ್ರಭು '

ಕೃಷ್ಣನ ಲೀಲಾಕ್ಷೇತ್ರಗಳಾಗಿದ್ದ ಮಥುರಾ, ಬೃಂದಾವನಗಳಿಗೆ ಯಾತ್ರೆ ಮಾಡಿ, ಅವುಗಳ ಜೀರ್ಣೋದ್ಧಾರಕ್ಕೆ ಪ್ರೇರಕರಾದರು.

ಚೈತನ್ಯರು ದೊಡ್ಡ ವಿದ್ವಾಂಸರಾಗಿದ್ದರು.

' ಶಿಕ್ಷಾಅಷ್ಟಕ ' ಚೈತನ್ಯರ ಬೋಧನೆಗಳ ಸಾರ.

ಹರಕುಬಟ್ಟೆ ಧರಿಸಿ ಹುಚ್ಚನಂತೆ ತಿರುಗುತ್ತಿದ್ದ ಚೈತನ್ಯ 1533ರಲ್ಲಿ ಪುರಿಯಲ್ಲಿ ಸಮುದ್ರಸ್ನಾನ ಮಾಡುತ್ತಿದ್ದಾಗ ಭಕ್ತಿ ಪರವಶತೆಯಿಂದ ಮೈಮರೆತು ನಿಧನರಾದರು. ಅವರ ಶವವನ್ನು ಸಮೀಪದ ದೇವಸ್ಥಾನದಲ್ಲಿ ಸಮಾಧಿ ಮಾಡಲಾಯಿತು ಎನ್ನುತ್ತಾರೆ.

ಚೈತ್ಯ

ಚೈತ್ಯ ಎಂದರೆ ಸ್ತೂಪವನ್ನುಳ್ಳ ಬೌದ್ಧ ಆಲಯ. ಚಿತಾ ಎಂಬ ಶಬ್ದದಿಂದ ಬಂದದ್ದು ಚೈತ್ಯ. ಪವಿತ್ರವಾದ ಹಿರಿಯರ ಅವಶೇಷಗಳನ್ನು ಉಳ್ಳ ಕಟ್ಟಡ ಸ್ತೂಪ. ಚೈತ್ಯಗಳನ್ನು ಧಾರ್ಮಿಕ ಸಭಾಮಂಟಪಗಳನ್ನಾಗಿ, ಬೌದ್ಧ ಭಿಕ್ಷುಗಳ ವಾಸಕ್ಕಾಗಿ ಉಪಯೋಗಿಸುತ್ತಿದ್ದರು.

ಬೃಹತ್ ಬಂಡೆಗಳನ್ನು ಕೊರೆದು ನಿರ್ಮಿಸಿದ ಚೈತ್ಯಗಳಿವೆ. ಬಂಡೆಯನ್ನು ಕೊರೆದು ಮಾಡಿದ ಗುಹೆಗಳ ಒಳಗೋಡೆಗಳಲ್ಲಿ ಕಲಾವಿದರು ಕೃತಿ ರಚಿಸಿದರು. ಪುಣೆಯ ಬಳಿಯ ಕಾರ್ಲಿ ಚೈತ್ಯ. ಇದರ ಒಳಭಾಗದಲ್ಲಿ ಶ್ರೇಷ್ಠ ಮಟ್ಟದ ಶಿಲ್ಪಾಲಂಕಾರವಿದೆ. ಚೈತ್ಯದ ಸಾಧಾರಣ ರಚನೆ ಹೀಗೆ : ಮುಖ್ಯ ದ್ವಾರ. ಅದರ ಮೇಲೆ ಒಳಗೆ ಬೆಳಕು ಬೀಳುವುದಕ್ಕಾಗಿ ಅರ್ಧವರ್ತುಲ ಅಥವಾ ವರ್ತುಲಾಕಾರದ ಕಿಟಕಿ. ಚೈತ್ಯದ ತಳ ವಿನ್ಯಾಸ ಕುದುರೆಯ ಲಾಳದಂತೆ ; ಎರಡು ಬಾಹುಗಳೂ ಸ್ವಲ್ಪ ಹೆಚ್ಚಾಗಿ ಲಂಬಿಸಿದಂತೆ ಇರುತ್ತವೆ. ದ್ವಾರದಿಂದ ಮುಂದಕ್ಕೆ ಹೋದರೆ ದೀರ್ಘವಾದ ಒಳ ಅಂಕಣ. ಅಂಕಣದ ಕೊನೆಗೆ ವರ್ತುಲಾಕಾರದ ಗರ್ಭಗುಡಿ ಅಥವಾ ಧಾತುಗರ್ಭದಲ್ಲಿ ಸ್ತೂಪ. ಸ್ತೂಪವಿರುವ ಸ್ಥಳದಲ್ಲಿ ಕ್ರಮೇಣ ಬುದ್ಧನ ಪ್ರತಿಮೆ ಇಡುವುದು ರೂಢಿಗೆ ಬಂದಿತು.

ಅಶೋಕ ಚಕ್ರವರ್ತಿ ಕಟ್ಟಿಸಿದ ಚೈತ್ಯಗಳು ಅತಿ ಪುರಾತನವಾದುವು. ಇವು ಗಯೆಯ ಬಳಿಯ ಬಾರಾಬರ್ ಗುಡ್ಡದಲ್ಲಿ ಇವೆ. ಅನಂತರದ ಚೈತ್ಯಗಳನ್ನು ಪುಣೆಯ ಬಳಿಯ ಭಾಜ (ಕ್ರಿ.ಪೂ. 75), ಬೇಡ್ಸ ಹಾಗೂ ಕೊಂಡಾಣೆ(100–200), ಕಾರ್ಲಿ(120), ಜುನ್ನಾರ್(150), ಮುಂಬಯಿಯ ಬಳಿಯ ಕನ್ಹೇರಿ(180), ಭುವನೇಶ್ವರದ ಬಳಿಯ ಉದಯಗಿರಿ, ಅಜಂತಾ, ಎಲ್ಲೋರ ಮುಂತಾದ ಕಡೆ ಕಾಣಬಹುದು.

ಮೊದಲ ಚೈತ್ಯಗಳು ಸಾದಾ ರೀತಿಯಲ್ಲಿದ್ದುವು. ಬರುಬರುತ್ತ ಒಳಗಿನ ಶಿಲ್ಪಾಲಂಕಾರ ರೂಢಿಗೆ ಬಂತು. ಕಂಬದ ಮೇಲಿನ ಶಿಲ್ಪದ ರೀತಿಯಲ್ಲಿ ವೈವಿಧ್ಯವಿದೆ. ಭಿತ್ತಿಚಿತ್ರಗಳು ಕಂಡುಬರುವ ಚೈತ್ಯಕ್ಕೆ ಉತ್ತಮ ಉದಾಹರಣೆ ಅಜಂತಾ ಚೈತ್ಯಗಳು.

ಭಾರತೀಯ ಶಿಲ್ಪದಲ್ಲಿ ಚೈತ್ಯ ನಿರ್ಮಾಣ ಒಂದು ಮುಖ್ಯ ಘಟ್ಟ.

ನೋಡಿ : ಕಾರ್ಲಿ

ಚೈತ್ಯಾಲಯದ ಸ್ತಂಭಗಳು ; ಸಾಂಚಿಯ ಅವಶೇಷ —17ನೆಯ ಶತಮಾನ



ಚೋಳರು

ಚೋಳರದು ತಮಿಳುನಾಡಿನ ಖ್ಯಾತ ರಾಜವಂಶ.

ಕರ್ನಾಟಕದ ಮತ್ತು ಆಂಧ್ರದ ಕೆಲ ಭಾಗಗಳೂ ಇವರ ರಾಜ್ಯದಲ್ಲಿ ಸೇರಿದ್ದುವು. ಉರೈಯೂರ್‌ನಿಂದ ಆಳುತ್ತಿದ್ದರೆಂದು ಹೇಳಲಾದ ಪ್ರಾಚೀನ ಚೋಳರಲ್ಲಿ ಕರಿಕಾಲ ಚೋಳ ಖ್ಯಾತ ದೊರೆ. ಒಂಬತ್ತನೆಯ ಶತಮಾನದಿಂದ ತಂಜಾವೂರಿನಿಂದ ಆಳುತ್ತಿದ್ದ ಸಾಮ್ರಾಟ ಚೋಳರೇ ಹೆಚ್ಚು ಪ್ರಸಿದ್ಧರು. ಚೋಳ ವಿಜಯಾಲಯನೆಂಬ ಪಾಂಡ್ಯರ ಸಾಮಂತನು ಪಾಂಡ್ಯರಿಂದ ತಂಜಾವೂರನ್ನು ಗೆದ್ದು ಪ್ರಸಿದ್ಧಿಗೆ ಬಂದ. ಇವನ ಮಗ ಆದಿತ್ಯನು ಅಪರಾಜಿತ ಪಲ್ಲವನನ್ನು ಕೊಂದು ಪಲ್ಲವರ ರಾಜ್ಯದ ಮೇಲೆ ಚೋಳ ಸ್ವಾಮ್ಯವನ್ನು ಸ್ಥಾಪಿಸಿದ. ತಮಿಳುನಾಡಿನಲ್ಲಿ ಗ್ರಾಮ ಸ್ವಾಯತ್ತ ಸಂಸ್ಥೆಗಳನ್ನು ಸ್ಥಾಪಿಸಿ ಇವನು ಖ್ಯಾತನಾದ.

ರಾಜರಾಜ (985–1016) ಮತ್ತು ರಾಜೇಂದ್ರ (1014–44) ಖ್ಯಾತ ಚೋಳ ಅರಸರು. ಹದಿಮೂರನೆಯ ಶತಮಾನದಲ್ಲಿ ಚೋಳರು ಹೊಯ್ಸಳ ಮತ್ತು ಪಾಂಡ್ಯರ ಜೊತೆ ಸೆಣಸಬೇಕಾಯಿತು.

'ಪೆರಿಯ ಪುರಾಣಮ್' ಬರೆದ ಸೆಕ್ಕಿಳಾರ್, 'ಜೀವಕ ಚಿಂತಾಮಣಿ'ಯನ್ನು ಬರೆದ ತಿರುತಕ್ಕ ದೇವರ್, ' ರಾಮಾಯಣ ' ಬರೆದ ಕಂಬರ್ ಚೋಳರ ಕಾಲದ ಖ್ಯಾತ ತಮಿಳು ಲೇಖಕರು.

ಚೋಳರ ಆಡಳಿತ ಕ್ರಮ ಅತ್ಯಂತ ವ್ಯವಸ್ಥಿತವಾಗಿದ್ದಿತು. ಹಳ್ಳಿಗಳ 'ಸಭಾ' ಎಂಬ ಕೂಟದಲ್ಲಿ ಸದಸ್ಯರನ್ನು ಆರಿಸಲು ಕ್ರಮಬದ್ಧ ಚುನಾವಣೆ ನಡೆಯುತ್ತಿತ್ತು. ಈ ಸಭೆಗೆ ಹಳ್ಳಿಯ ಮೇಲೆ ಪೂರ್ಣಾಧಿಕಾರ ವಿರುತ್ತಿತ್ತು.

ಕಾವೇರಿಪಟ್ಟಿಣಂ ಚೋಳರ ಮುಖ್ಯ ರೇವು ಪಟ್ಟಣವಾಗಿತ್ತು. ರೋಮ್ ಸಾಮ್ರಾಜ್ಯದೊಡನೆ ಚೋಳರು ವ್ಯಾಪಾರ ನಡೆಸುತ್ತಿದ್ದರು. ಒಳನಾಡು ವ್ಯಾಪಾರವೂ ಸಾಗರೋತ್ತರ ವ್ಯಾಪಾರವೂ ಚೆನ್ನಾಗಿ ಅಭಿವೃದ್ಧಿ ಹೊಂದಿದ್ದುವು.

ನೋಡಿ : ರಾಜೇಂದ್ರ ಚೋಳ

ಚೌ ನೃತ್ಯ

'ಚೌ' ಎಂದರೆ 'ಮುಖವಾಡ'. ಬಿಹಾರಿನ ಸೆರೈಕೆಲಾ ಪ್ರದೇಶದಲ್ಲಿ ಮುಖವಾಡ ಧರಿಸಿ ಕುಣಿಯುವ ಸಾಂಪ್ರದಾಯಿಕ 'ಕುಣಿತವೇ –ಚೌ ನೃತ್ಯ.



ವೀರರಸಪ್ರಧಾನ

ಅರ್ಧನಾರೀಶ್ವರ ಸೇವೆಗೆಂದು ವಸಂತೋತ್ಸವದ ಸಂದರ್ಭದಲ್ಲಿ ಪ್ರದರ್ಶಿಸಲಾಗುವ ಈ ವೈಭವಯುತ್ತ ನೃತ್ಯ ಪ್ರದರ್ಶನದಲ್ಲಿ ರಾಜ ಕುಮಾರರು ಕೂಡ ಇತರ ನರ್ತಕರ ಜೊತೆಗೆ ಭಾಗವಹಿಸುತ್ತಿದ್ದರು.

ಚೌ ನೃತ್ಯ ತಾಂಡವ ವಿಭಾಗಕ್ಕೆ ಸೇರಿದೆ. ಚರಿತ್ರೆ, ಪುರಾಣ, ದಂತ ಕಥೆಗಳನ್ನು ಚೌ ನೃತ್ಯರೂಪಕದಲ್ಲಿ ಪ್ರದರ್ಶಿಸಲಾಗುತ್ತದೆ. ಡೋಲು, ಮೃದಂಗ, ತಾಳ, ಶಹನಾಯಿಗಳನ್ನು ಪಕ್ಕವಾದ್ಯಗಳಾಗಿ ಉಪಯೋಗಿಸಿ ನೃತ್ಯಕ್ಕೆ ಸಂಬಂಧಿಸಿದ ಗೀತವನ್ನು ಹಾಡುತ್ತಾರೆ.



ಮುಖವಾಡ : ಚೌ

ಚೌ ನರ್ತಕರು ಧರಿಸುವ ಉಡುಪುಗಳು ವರ್ಣಮಯ. ಅವರು ಉಪಯೋಗಿಸುವ ಚಿತ್ರಿತ ಮುಖವಾಡಗಳು ಭಾವಪೂರ್ಣ, ಕಲಾತ್ಮಕ.

ಪ್ರಾಚೀನ ನಾಟ್ಯಶಾಸ್ತ್ರಗಳ ನಿಯಮಗಳನ್ನು ಅನುಸರಿಸಿದರೂ ಚೌ ನೃತ್ಯ ತನ್ನದೇ ಆದ ವಿಶಿಷ್ಟ ಲಕ್ಷಣಗಳನ್ನು ಹೊಂದಿದೆ.

ಒಡಿಸ್ಸಾ ರಾಜ್ಯದ ಮಯೂರ್‌ಭಂಜ ಪ್ರದೇಶದಲ್ಲಿ ಪ್ರಚಲಿತವಾಗಿರುವ ಒಂದು ಜಾನಪದ ಪ್ರಕಾರವನ್ನು ಕೂಡ ಚೌ ನೃತ್ಯವೆಂದು ಕರೆಯುವ ವಾಡಿಕೆ ಇದೆ. ಇದು ಶಾಸ್ತ್ರೀಯ ತಳಹದಿಯುಳ್ಳ ಸೆರೈಕೆಲಾ ಚೌ ನೃತ್ಯ ದಿಂದ ಭಿನ್ನ. ಈ ನೃತ್ಯವನ್ನು ನಡೆಸುವಾಗ ಮುಖವಾಡಗಳನ್ನು ಬಳಸ ದಿರುವುದೂ ಉಂಟು. ಈ ನೃತ್ಯ ವಿಧಾನ ವೀರರಸಪ್ರಧಾನ.

ಚೌಲುಕ್ಯರು

ಚೌಲುಕ್ಯರು ಅಥವಾ ಸೋಲಂಕಿಯರು ಚಾಲುಕ್ಯ ಮೂಲದವರೆಂಬ ನಂಬುಗೆ ಇದೆ. ಆದರೆ ಈ ವಂಶದವರು ಮಧ್ಯ ಭಾರತದವರೇ. ರಜಪೂತರ ಒಂದು ಪಂಗಡವಾದ ಅಗ್ನಿಕುಲಕ್ಕೆ ಸೇರಿದವರು. ಮತ್ತಮಯೂರ ಎಂಬಲ್ಲಿ ಅವರ ಒಂದು ಶಾಖೆ ಇದ್ದು ಅಲ್ಲಿ ಮೂವರು ರಾಜರು ಆಳಿದರು (ಸಿಂಹವರ್ಮನ್, ಸಧನ್ವ, ಅವನಿವರ್ಮನ್). ಎರಡನೆಯ ಶಾಖೆಯ ಮೂಲ ಪುರುಷ ಮೂಲರಾಜ ಎಂಬುವನು. ಇವನ ರಾಜಧಾನಿ ಇಂದಿನ ಅಹಮದಾಬಾದ್ ಸಮೀಪದಲ್ಲಿದ್ದ ಅನ್ಹಿಲ ಪಾಟಕ (ಅನ್ಹಿಲವಾಡ). ಇವನು 942ರಲ್ಲಿ ಪಟ್ಟವೇರಿದ. ಪರಮಾರರು ಮುಂತಾದ ವಂಶಗಳ ರಾಜರನ್ನು ಸೋಲಿಸಿ ರಾಜ್ಯವನ್ನು ವಿಸ್ತರಿಸಿದ. ಇವನ ಅನಂತರ ಚಾಮುಂಡರಾಜ, ದುರ್ಲಭರಾಜ ಇವರು ಆಳಿದರು. ಸುಮಾರು 1022ರಲ್ಲಿ ಪಟ್ಟವೇರಿದ ಭೀಮನ ಸಾಮಂತ ವಿಮಲ ಷಹಾ ಆಬುವಿನ ಆದಿನಾಥ ದೇವಾಲಯ ಕಟ್ಟಿಸಿದ. ಘಜ್ನಿ ಮಹಮ್ಮದನು ಗುಜರಾತಿನ ಮೇಲೆ ನಡೆಸಿದ ದಾಳಿಯನ್ನು ತಡೆಗಟ್ಟಲು ಅಸಮರ್ಥನಾದನಾದರೂ ಅವನು ನಾಶಗೊಳಿಸಿದ ಸೋಮನಾಥ ದೇವಾಲಯವನ್ನು ಭೀಮನು ಮತ್ತೆ ಕಲ್ಲಿನಿಂದ ಕಟ್ಟಿಸಿದ. ಇವನ ಅನಂತರ ಕರ್ಣನು 1064ರಲ್ಲಿ

ಪಟ್ಟಕ್ಕೆ ಬಂದು ಪರಮಾರ ಜಯಸಿಂಹನನ್ನು ಯುದ್ಧದಲ್ಲಿ ಕೊಂದ. ಕರ್ಣನ ಮಗ ಜಯಸಿಂಹನು ಪರಮಾರರಿಂದ ಅವಂತಿಯನ್ನು ಗೆದ್ದುಕೊಂಡ. ಇವನ ಬಳಿಕ ಕುಮಾರಪಾಲ, ಅಜಯಪಾಲ, ಮೂಲರಾಜ ಇವರು ಆಳಿದರು. ಸುಪ್ರಸಿದ್ಧ ಜೈನ ಪಂಡಿತ ಹೇಮಚಂದ್ರನು ಇದ್ದದ್ದು ಕುಮಾರಪಾಲನ ಕಾಲದಲ್ಲಿ. ಮೂಲರಾಜನು ಬಾಲಕನಾಗಿದ್ದ ಕಾಲದಲ್ಲಿ ರಾಜರಕ್ಷಕಿಯಾಗಿದ್ದ ಅವನ ತಾಯಿ ನಾಯಕಿದೇವಿ ಗದರಘಟ್ಟದಲ್ಲಿ 1178ರಲ್ಲಿ ನಡೆದ ಯುದ್ಧದಲ್ಲಿ ಮಹಮ್ಮದ್ ಘೋರಿಯನ್ನು ಸೋಲಿಸಿ ಕೀರ್ತಿಶಾಲಿನಿಯಾದಳು. ಮೂಲರಾಜನ ಬಳಿಕ ಎರಡನೆಯ ಭೀಮನಿಗೆ ಪಟ್ಟವಾಯಿತು. 1210—1250ರ ವರೆಗೆ ಆಳಿದ ವೀರಧವಳನ ಕಾಲದಲ್ಲಿ ಅಬೂ ಬೆಟ್ಟದಲ್ಲಿ ವಸ್ತುಪಾಲ, ತೇಜಪಾಲ ಹಾಗೂ ಗಿರ್ನಾರ್-ಶತ್ರುಂಜಯದ ದೇವಾಲಯಗಳು ನಿರ್ಮಿಸಲ್ಪಟ್ಟವು. ಈ ವಂಶದ ಕೊನೆಯ ದೊರೆ ಕರ್ಣನನ್ನು ಖಿಲ್ಜಿಯ ಸೇನೆ 1297ರಲ್ಲಿ ಸೋಲಿಸಿ ಗುಜರಾತಿನ ಚಾಲುಕ್ಯರ ರಾಜ್ಯವನ್ನು ಕೊನೆಗಾಣಿಸಿತು.

ಭೃಗುಕಚ್ಛ(ಬರೋಚ್)ವನ್ನು ರಾಜಧಾನಿಯಾಗಿ ಉಳ್ಳ ಇನ್ನೊಂದು ಚೌಲುಕ್ಯ ವಂಶ ಹತ್ತನೆಯ ಶತಮಾನದಲ್ಲಿ ಆಳಿತು. ಇವರನ್ನು ಲಾಟದ ಚೌಲುಕ್ಯರು ಎನ್ನುತ್ತಾರೆ,

ಛತ್ತರ್ ಸಿಂಗ್

ಪಂಜಾಬನ್ನು ತಮ್ಮ ವಶಕ್ಕೆ ತೆಗೆದುಕೊಳ್ಳಲು 1848-49ರಲ್ಲಿ ಬ್ರಿಟಿಷರು ನಡೆಸಿದ ಪ್ರಯತ್ನವನ್ನು ಪ್ರತಿಭಟಿಸಿದವರಲ್ಲಿ ಪ್ರಮುಖ. ಛತ್ತರ್ ಸಿಂಗ್. ಈತ ಅಟಾರಿ ಎಂಬ ಹಳ್ಳಿಯವನು; ಇದರಿಂದ ಮನೆತನದ ಹೆಸರು ಅಟಾರಿವಾಲಾ. ತಂದೆ ಜೋಧ್ ಸಿಂಗ್ ಗತಿಸಿದ ಮೇಲೆ ಜಾಗೀರಿಗೆ ಛತ್ತರ್ ಸಿಂಗ್ ಉತ್ತರಾಧಿಕಾರಿಯಾದ.

1843ರಲ್ಲಿ ಪಂಜಾಬಿನ ಶೇರ್ ಸಿಂಗ್ ಸತ್ತಾಗಲೂ ಅದಕ್ಕೆ ಮೊದಲೂ ನಡೆದ ಒಳಸಂಚುಗಳು ಛತ್ತರ್ ಸಿಂಗ್‌ಗೆ ಬೇಸರ ಉಂಟು ಮಾಡಿದ್ದುವು. ಬ್ರಿಟಿಷ್-ಸಿಕ್ಖ್ ಯುದ್ಧದಲ್ಲೂ ಕೆಲ ಸಿಕ್ಖ್ ಪ್ರಮುಖರ ನಡವಳಿಕೆ ಅವನಿಗೆ ಸರಿಬೀಳಲಿಲ್ಲ. ಛತ್ತರ್ ಸಿಂಗನ ರಾಷ್ಟ್ರಪ್ರೇಮದ ಉತ್ಕಟತೆಯನ್ನು ಅರಿತಿದ್ದ ಬ್ರಿಟಿಷರು ಅವನನ್ನು ಹಜಾರಾಕ್ಕೆ ಕಳಿಸಿದರು; ಅಲ್ಲಿನ ಆಂಗ್ಲ ಅಧಿಕಾರಿ ಅವನಿಗೆ ಕಿರುಕುಳ ಕೊಡಲಾರಂಭಿಸಿದ. ಈ ಮಧ್ಯೆ ಆಂಗ್ಲರು ಅವನ ಮೇಲೆ ಮಹಮ್ಮದೀಯರನ್ನು ಎತ್ತಿ ಕಟ್ಟಿದರು. ಛತ್ತರ್‌ಸಿಂಗನ ಪಟ್ಟಣ ಮುತ್ತಿಗೆಗೆ ಒಳಗಾಯಿತು; ಆತ್ಮರಕ್ಷಣೆಗಾಗಿ ಛತ್ತರ್ ಸಿಂಗ್ ಹೋರಾಡಬೇಕಾಯಿತು. ಬ್ರಿಟಿಷರು, ಮುಸಲ್ಮಾನರ ಒತ್ತಡದ ಮಧ್ಯೆ ಅವನ ಸ್ಥಿತಿ ಹದಗೆಟ್ಟಿತು.

ಬ್ರಿಟಿಷರು ಯುದ್ಧಘೋಷಣೆ ಮಾಡದೆಯೇ ಪಂಜಾಬನ್ನು ಆಕ್ರಮಿಸಲು ಮುಂದುವರಿದರು. ಛತ್ತರ್ ಸಿಂಗ್ ಹಾಗೂ ಮಗ ಶೇರ್ ಸಿಂಗ್ ಅವರನ್ನು ಪ್ರತಿಭಟಿಸಿದರು; ಆದರೆ ಸೋಲು ಅನುಭವಿಸಬೇಕಾಯಿತು. 1849ರಲ್ಲಿ ಆಂಗ್ಲರು ಪಂಜಾಬನ್ನು ತಮ್ಮ ಆಧಿಪತ್ಯಕ್ಕೆ ಸೇರಿಸಿಕೊಂಡರು.

ಛತ್ತರ್ ಸಿಂಗ್ ಮತ್ತು ಅವನ ಮಕ್ಕಳನ್ನು ಅಟಾರಿ ಹಳ್ಳಿಯಿಂದ ಹೊರಗೆ ಹೋಗದಂತೆ ನಿರ್ಬಂಧಪಡಿಸಲಾಯಿತು. ಆಸ್ತಿಯನ್ನು ಮುಟ್ಟುಗೋಲು ಹಾಕಿದರು. ಪದಚ್ಯುತಳಾಗಿದ್ದ ರಾಜಮಾತೆಯೊಡನೆ ಸಂಧಾನ ಮಾಡುತ್ತಿದ್ದರೆಂಬ ಆಪಾದನೆಯ ಮೇಲೆ ಅವರನ್ನು ಕಲ್ಕತ್ತೆಯ ಕೋಟೆಗೆ ವರ್ಗಾಯಿಸಿದರು. 1855 ಡಿಸೆಂಬರ್ 27ರಂದು ಛತ್ತರ್ ಸಿಂಗ್ ಬಂಧನದಲ್ಲೇ ನಿಧನನಾದ.

ಛತ್ರಸಾಲ್ ಬುಂದೇಲಾ

ಮೊಘಲರನ್ನು ಆಗಾಗ್ಗೆ ಪ್ರತಿಭಟಿಸುತ್ತಲೇ ಇದ್ದ ದೇಶೀಯರಲ್ಲಿ ಬುಂದೇಲಾರದು ಒಂದು ಗುಂಪು. ಇವರು ಮಧ್ಯಪ್ರದೇಶದವರು. ಷಾಜಹಾನನ ಕಾಲದಲ್ಲಿಯೇ ಜುಝಾರ್ ಸಿಂಗ್ ಬುಂದೇಲಾ ಎಂಬುವನು ಮೊಘಲರ ವಿರುದ್ಧ ದಂಗೆ ಎದ್ದಿದ್ದ. ಅವರು ಪ್ರಯಾಸಪಟ್ಟು ಇವನನ್ನು ಅಡಗಿಸಬೇಕಾಯಿತು. ಮುಂದೆ ಔರಂಗಜೇಬನ ವಿರುದ್ಧ ಯಶಸ್ವಿಯಾಗಿ ದಂಗೆಯೆದ್ದು ಹೋರಾಟ ನಡೆಸಿದವನು ಈ ವಂಶದ ಛತ್ರಸಾಲ್.

ಔರಂಗಜೇಬ್ ಪಟ್ಟಕ್ಕೆ ಬಂದ ಆರಂಭದಲ್ಲಿಯೇ ಛತ್ರಸಾಲನ ತಂದೆ ಚಂಪತರಾಯ್ ಮೊಘಲರನ್ನು ಪ್ರತಿಭಟಿಸಿದ್ದ. ಆದರೆ ತನ್ನ ಪ್ರಯತ್ನದಲ್ಲಿ ಯಶಸ್ವಿಯಾಗಲಿಲ್ಲ. ಸೆರೆಸಿಗುವುದನ್ನು ತಪ್ಪಿಸಿಕೊಳ್ಳಲು ಆತ್ಮಹತ್ಯೆ ಮಾಡಿಕೊಂಡ. ಮಗ ಛತ್ರಸಾಲ್ ಬುಂದೇಲಾ ಕೆಲ ಕಾಲ ದಕ್ಷಿಣದಲ್ಲಿ ಔರಂಗಜೇಬನ ಸೇವೆಯಲ್ಲಿದ್ದ. ಆಗ ಶಿವಾಜಿಯ ಸಾಹಸಗಳಿಂದ ಪ್ರೇರಿತನಾಗಿ ತಾನೂ ಸ್ವತಂತ್ರನಾಗುವ ಕನಸು ಕಂಡ. ಬುಂದೇಲಾ ಖಂಡ ಮತ್ತು ಮಾಳ್ವಗಳ ಹಿಂದೂ ಜನರಲ್ಲಿ ಅಶಾಂತಿಯುಂಟಾದಾಗ ಅವರ ರಕ್ಷಣೆಯನ್ನು ಬುಂದೇಲಾದ ಸ್ವಾತಂತ್ರ್ಯವನ್ನೂ ಸಾಧಿಸಲು ನಿರ್ಧರಿಸಿದ. ಈ ಆಕಾಂಕ್ಷೆ 1671ರ ವೇಳೆಗೆ ಛತ್ರಸಾಲನಲ್ಲಿ ಬಲವಾಯಿತು. ಮೊಘಲರನ್ನು ಪ್ರತಿಭಟಿಸಿದ. ಹಲವಾರು ಬಾರಿ ಹೋರಾಟ ನಡೆಸಿ ಮೊಘಲರನ್ನು ಸೋಲಿಸಿದ. ಕಡೆಗೆ ಪೂರ್ವ ಮಾಳ್ವ ದೇಶದಲ್ಲಿ ಬುಂದೇಲ್ ಖಂಡವೆಂಬ ಚಿಕ್ಕ ರಾಜ್ಯ ಕಟ್ಟುವುದರಲ್ಲಿ ಯಶಸ್ವಿಯಾದ. ಪನ್ನವನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡ.

1731ರಲ್ಲಿ ಎಂಬತ್ತನೆಯ ವಯಸ್ಸಿನಲ್ಲಿ ಛತ್ರಸಾಲ್ ಕಾಲವಾದ.

ಛಾಂದೋಗ್ಯೋಪನಿಷತ

ಜಾಬಾಲಿ ಎಂಬಾಕೆಯ ಮಗ ಸತ್ಯಕಾಮ, ಗೌತಮ ಋಷಿಯ ಹತ್ತಿರ ಬ್ರಹ್ಮವಿದ್ಯೆ ಕಲಿಯಲು ಬಂದ. "ನಿನ್ನ ಗೋತ್ರ ಯಾವುದು". ಎಂದು ಗುರು ಕೇಳಿದ. "ಹಲವರ ಸೇವೆ ಮಾಡುತ್ತಿದ್ದಾಗ ಹುಟ್ಟಿದೆ. ಗೋತ್ರ ಯಾವುದೋ ತಿಳಿಯದು ಎಂದು ತಾಯಿ ಹೇಳಿದ್ದಾಳೆ." ಎಂದು ಹುಡುಗ ಉತ್ತರ ಕೊಟ್ಟ. ಹೀಗೆ ನಿರ್ಭೀತಿಯಿಂದ ನುಡಿದ ಸತ್ಯಕಾಮನನ್ನು ಶಿಷ್ಯನನ್ನಾಗಿ ಗೌತಮ ಅಂಗೀಕರಿಸಿದ.

400 ಬಡಕಲು ಗೋವುಗಳನ್ನು ಅವನ ವಶಕ್ಕೆ ಕೊಟ್ಟು, ಅವನ್ನು ಮೇಯಿಸಿ ಅಭಿವೃದ್ಧಿಪಡಿಸಿಕೊಂಡು ಬರಲು ಗೌತಮ ಆಜ್ಞೆ ಮಾಡಿದ. ಸತ್ಯಕಾಮ ಗೋವುಗಳನ್ನು ಶ್ರದ್ಧೆಯಿಂದ ಕಾಪಾಡಿ ಅವುಗಳ ಸಂಖ್ಯೆ ಒಂದು ಸಾವಿರಕ್ಕೆ ಏರುವಂತೆ ಮಾಡಿದ. ಅವುಗಳೊಡನೆ ಹಿಂದಿರುಗುವಾಗ ಒಂದು ಹೋರಿ, ಅಗ್ನಿ, ಹಂಸ ಮತ್ತು ಮದ್ಗು ಎಂಬ ಪಕ್ಷಿ ಅವನಿಗೆ ಪರಬ್ರಹ್ಮವನ್ನು ಕುರಿತು ಉಪದೇಶ ಮಾಡಿದುವು. ಆಶ್ರಮಕ್ಕೆ ಹಿಂದಿರುಗಿದ ಸತ್ಯಕಾಮನ ತೇಜಸ್ಸನ್ನು ಕಂಡ ಗೌತಮ ಅವನಿಗೆ ಬ್ರಹ್ಮಜ್ಞಾನವಾಗಿದೆಯೆಂದು ತಿಳಿದ. ಹೇಳಿಕೊಡಬೇಕಾದುದು ಇನ್ನೇನೂ ಇಲ್ಲ ಎಂದ. ಆದರೂ ತನಗೆ ಗುರೂಪದೇಶ ಬೇಕೆಂದು ಕೇಳಿದ ಸತ್ಯಕಾಮನಿಗೆ, ಅವನು ಈ ಹಿಂದೆ ಪಡೆದಿದ್ದ ಜ್ಞಾನವನ್ನೇ ಮತ್ತೆ ಉಪದೇಶಿಸಿದ.

ಛಾಂದೋಗ್ಯೋಪನಿಷತ್ತಿನಲ್ಲಿ ಬರುವ ಪ್ರಸಂಗ ಇದು.

ಛಾಂದೋಗ್ಯೋಪನಿಷತ್ತು ಸಾಮವೇದಕ್ಕೆ ಸೇರಿದ್ದು. ಬೃಹದಾರಣ್ಯಕೋಪನಿಷತ್ತಿನಂತೆ ಇದೂ ವೇದಾಂತ ದರ್ಶನಕ್ಕೆ ಒಂದು ಮುಖ್ಯ ಹಾಗೂ ಪ್ರಾಚೀನ ಆಕರ.

ಇದರಲ್ಲಿ ಉಪದೇಶಿಸಿರುವುದು ಅದ್ವೈತ. ಅಧ್ಯಾಯಗಳಲ್ಲಿ ವಿವಿಧ ವಿದ್ಯೆಗಳ (ಎಂದರೆ ಉಪಾಸನೆಯ) ಉಪದೇಶವಿದೆ.

ಮೊದಲನೆಯದು ಉದ್ಗೀಥ ವಿದ್ಯೆ. ಸಾಮವೇದವನ್ನು ಹೇಳುವಾತ ಉದ್ಗಾತೃ. ಈತ 'ಓಂ' ಅಕ್ಷರದಿಂದ ಆರಂಭಿಸುವುದು ಉದ್ಗೀಥ. ಓಂಕಾರ ಪರಬ್ರಹ್ಮನಿಗೆ ಪ್ರಿಯವಾದದ್ದು.

ಮಧುವಿದ್ಯೆಯಲ್ಲಿ, ದೇವತೆಗಳ ಮಧುವಾದ ಸೂರ್ಯ ಆತ್ಮನೂ ಹೌದು —ಎಂದಿದ್ದಾರೆ.

ಚಿಕ್ಕದಾದ ಹೃದಯ ಕಮಲದಲ್ಲಿ ಆಕಾಶವಿದೆ. ಅದರಲ್ಲಿ ಬ್ರಹ್ಮವನ್ನು ಅರಿತುಕೊಳ್ಳುವುದು ದಹರಾವಿದ್ಯೆ.

ಹೀಗೆಯೇ ಇನ್ನೂ ಕೆಲವು ವಿದ್ಯೆಗಳನ್ನು ಛಾಂದೋಗ್ಯೋಪನಿಷತ್ತಿನಲ್ಲಿ ವಿವರಿಸಿದೆ.

ಜಂತರ್‌ಮಂತರ್

ಯಂತರ್, ಮಂತರ್‌ನ (ಯಂತ್ರ, ಮಂತ್ರ) ರೂಪಾಂತರ ಜಂತರ್ ಮಂತರ್. ಇವು ಭಾರತೀಯ ಖಗೋಲ ವೀಕ್ಷಣಾಲಯಗಳು —ಕಲ್ಲು, ಇಟ್ಟಿಗೆ, ಗಾರೆಗಳ ವಿಶಿಷ್ಟ ರಚನೆ.

ಇವನ್ನು ಕಟ್ಟಿಸಿದವನು ಜಯಪುರದ ಮಹಾರಾಜನೂ ಮೇಧಾವಿಯೂ ದಕ್ಷ ಆಡಳಿತಗಾರನೂ ಖಗೋಲವಿಜ್ಞಾನದಲ್ಲಿ ಪರಿಶ್ರಮವಿದ್ದವನೂ ಆಗಿದ್ದ ಎರಡನೆಯ ಸವಾಯಿ ಜಯಸಿಂಹ (17ನೆಯ ಶತಮಾನ). ಅವನು ಕಟ್ಟಿಸಿದ ಐದು ಜಂತರ್‌ಮಂತರ್‌ಗಳು ಜಯಪುರ, ದೆಹಲಿ, ಉಜ್ಜಯಿನಿ, ವಾರಾಣಸಿ ಹಾಗೂ ಮಥುರಾಗಳಲ್ಲಿ ಇವೆ.

ಇಲ್ಲಿನ ಯಂತ್ರಗಳು ಬೃಹತ್ ರಚನೆಗಳು. ಸಮ್ರಾಟ ಯಂತ್ರ, ರಾಮ ಯಂತ್ರ, ಜಯ ಪ್ರಕಾಶ ಯಂತ್ರ, ದಕ್ಷಿಣೋತ್ತರವೃತ್ತಿ ಯಂತ್ರ, ಷಷ್ಟ್ಯಂಶ ಯಂತ್ರ, ರಾಶಿ ಯಂತ್ರಗಳನ್ನು ಇವು ಒಳಗೊಂಡಿವೆ. ಜಯ ಪ್ರಕಾಶ, ರಾಮ ಯಂತ್ರ ಹಾಗೂ ಸಮ್ರಾಟ ಯಂತ್ರಗಳನ್ನು ಜಯಸಿಂಹನೇ

ಜಯಪುರದ ಜಂತರ್‌ಮಂತರ್



ರೂಪಿಸಿದ ಎನ್ನುತ್ತಾರೆ. ರೇಖಾಗಣಿತದ ನಿಯಮಗಳಿಗೆ ತಕ್ಕಂತೆ, ನಿರ್ಮಾಣ ಸ್ಥಳದ ಅಕ್ಷಾಂಶಗಳನ್ನೂ ಮಧ್ಯಾಹ್ನ ರೇಖೆಗಳನ್ನೂ ಅನುಲಕ್ಷಿಸಿ ಇವನ್ನು ಕಟ್ಟಲಾಗಿದೆ.

ಬೃಹತ್ ಮುಖಫಲಕಗಳು, ಮಧ್ಯಾಹ್ನ ರೇಖಾವೃತ್ತಗಳು, ಕೋನ ದೂರಗಳನ್ನು ಅಳೆಯಲು ಅನುಕೂಲವಾಗುವ ಷಷ್ಟಕ ಮುಂತಾದುವು ಈ ಜಂತರ್‌ಮಂತರ್‌ಗಳ ಕೆಲವು ಅಂಗಗಳು.

ಸಮ್ರಾಟ್‌ಯಂತ್ರದಲ್ಲಿ ನೆರಳು ಗಡಿಯಾರದಂತೆ ವರ್ತಿಸುವ ಒಂದು ಕಂಬ, ಇದಕ್ಕೆ ಅಡ್ಡವಾಗಿ ಅಳತೆಯ ಗುರುತುಗಳಿರುವ ಕಾಲುವೃತ್ತಾಕಾರದ ರಚನೆ ಇದೆ. ಕಾಲುವೃತ್ತದಲ್ಲಿ ಗಂಟೆಗಳು, ಮಿನಿಟುಗಳು ಹಾಗೂ ಡಿಗ್ರಿಗಳು ಸೂಚಿಸಲ್ಪಟ್ಟಿವೆ. ಸಮ್ರಾಟಯಂತ್ರದಿಂದ ಸ್ಥಳೀಯ ಕಾಲವನ್ನು ತಿಳಿಯಬಹುದು.

ಜಯಪ್ರಕಾಶ ಯಂತ್ರ ಪೊಳ್ಳಾದ ಅರ್ಧವರ್ತುಲ ಫಲಕದಂತೆ ಇದೆ. ಇದರ ಒಳಭಾಗಕ್ಕೆ ಸ್ಥಾನಸೂಚಕಗಳನ್ನು ಗುರುತಿಸಲಾಗಿದೆ. ಉತ್ತರ-ದಕ್ಷಿಣ ಹಾಗೂ ಪೂರ್ವ-ಪಶ್ಚಿಮವಾಗಿ ಅಡ್ಡ ತಂತಿಗಳಿವೆ. ಜಯ ಪ್ರಕಾಶ ಯಂತ್ರ ಜಯಪುರ ಹಾಗೂ ದೆಹಲಿಗಳಲ್ಲಿ ಮಾತ್ರ ಇದೆ.

ರಾಮಯಂತ್ರದಲ್ಲಿ ಮಧ್ಯಕ್ಕೆ ಒಂದು ಕಂಬವೂ ಸುತ್ತಲೂ ಗೋಡೆಯೂ ಇವೆ. ಮೇಲೆ ತೆರೆದಂತಿದೆ. ಗೋಡೆಯ ಒಳಭಾಗ ಹಾಗೂ ನೆಲಗಳ ಮೇಲೆ ಅಳತೆಯ ಗುರುತುಗಳಿವೆ. ರಾಮಯಂತ್ರದಲ್ಲಿ ಸೂರ್ಯನ ದಿಗಂಶ ಮತ್ತು ಉಚ್ಛ್ರಾಯಗಳನ್ನು ಅಳೆಯಬಹುದು.

ಮಿಶ್ರಯಂತ್ರ ಹಲವು ರಚನೆಗಳನ್ನು ಒಳಗೊಂಡಿದೆ.

ದಿಗಂಶಯಂತ್ರ ಒಂದು ದೊಡ್ಡ ಕೋನಮಾಪಕದಂತೆ ಇದೆ. ಇದರಿಂದಲೂ ಸೂರ್ಯನ ದಿಗಂಶ ವೀಕ್ಷಣೆ ಮಾಡಬಹುದು.

ದಕ್ಷಿಣೋತ್ತರವೃತ್ತಿಯಂತ್ರದಿಂದ ಮಧ್ಯಾಹ್ನವೃತ್ತ, ಷಷ್ಟ್ಯಂಶಯಂತ್ರದಿಂದ ಮಧ್ಯಾಹ್ನವೃತ್ತ ಚಾಪ, ರಾಶಿಯಂತ್ರದಿಂದ ಸೂರ್ಯ ಇರುವ ರೇಖಾಂಶ ಇವನ್ನು ಗುರುತಿಸಬಹುದು.

ಜ್ಯೋತಿಷ್ಯ ಶಾಸ್ತ್ರದ ಲೆಕ್ಕಗಳಿಗೂ ಖಗೋಲ ಕಾಯಗಳ ವಾಸ್ತವ ಚಲನೆಗಳಿಗೂ ಇದ್ದ ವ್ಯತ್ಯಾಸದಿಂದ ಲೆಕ್ಕಾಚಾರದಲ್ಲಿ ದೋಷಗಳು ಉಂಟಾಗುವುದನ್ನು ಜಯಸಿಂಹ ಗಮನಿಸಿದ್ದ. ಖಗೋಲಕಾಯಗಳ ಚಲನೆಯನ್ನು ಖಚಿತವಾಗಿ ಗುರುತಿಸಿ ಖಗೋಲ ಪಂಚಾಂಗಗಳನ್ನು ಅವನು ತಯಾರಿಸಿದ. ಈ ಕಾರ್ಯದಲ್ಲಿ ಜಂತರ್‌ಮಂತರ್‌ಗಳಿಂದ ದೊರೆತ ನೆರವು ಮಹತ್ತರವಾದದ್ದು.

ಜಕರೀಯ ಅಲ್ 'ಕಜ್ವಿನಿ'

"ಸುಲ್ತಾನ ಮಹಮ್ಮದ್ ಸೋಮನಾಥ ದೇವಾಲಯದ ವಿನಾಶಕ್ಕೆ ಪ್ರಯತ್ನಿಸಿದ್ದುದರ ಉದ್ದೇಶ ಸ್ವಮತಪ್ರಚಾರ; ಮಹಮ್ಮದನು ಚಿನ್ನ, ಬೆಳ್ಳಿ, ವಿಗ್ರಹಗಳು, ವಜ್ರ ವೈಢೂರ್ಯಖಚಿತ ಕಾಣಿಕೆಗಳು, ವಸ್ತುಗಳು —ಹೀಗೆ ಭಾರೀ ಸಂಪತ್ತನ್ನು ವಶಪಡಿಸಿಕೊಂಡ."

ಈ ರೀತಿ ಬರೆದವನು 13ನೆಯ ಶತಮಾನದ ಉತ್ತರಾರ್ಧದಲ್ಲಿದ್ದ ಪರ್ಷಿಯದ ಲೇಖಕ, ಜಕರೀಯ ಅಲ್ 'ಕಜ್ವಿನಿ'. ಇವನ ಬರೆಹದಲ್ಲಿ ಸೋಮನಾಥ ದೇವಾಲಯದ ಸೂರೆಯ ಈ ಪ್ರಸ್ತಾಪವಿದೆ. ಇವನ ಕೃತಿಯಲ್ಲಿರುವ ಅಂಶಗಳು, ಇವನು ಇತರರಿಂದ ಸಂಗ್ರಹಿಸಿದುವು. ಇವನು ಭಾರತಕ್ಕೆ ಬಂದಿರಲಿಲ್ಲ.

ಸಿಂಧ್ ಪ್ರದೇಶದ ಸೈಮೂರ್ ನಗರದಲ್ಲಿ ಮುಸಲ್ಮಾನರು, ಕ್ರೈಸ್ತರು,

[illegible] ಇವೆ —ಎಂದು ಹೇಳಿದ್ದಾನೆ.

ಜಗಜಿತ್ ಸಿಂಗ್

ಭಾರತದಲ್ಲಿ ವಿಜ್ಞಾನವನ್ನು ಜನಪ್ರಿಯಗೊಳಿಸುವ ಕಾರ್ಯದಲ್ಲಿ ಯಶಸ್ಸುಗಳಿಸಿರುವ ಪ್ರಮುಖರು ಜಗಜಿತ್ ಸಿಂಗ್.

ಆಧುನಿಕ ವ್ಯೋಮವಿಜ್ಞಾನ, ಕ್ರಿಯಾ ನಿರ್ವಹಣ ಸಂಶೋಧನೆಗಳಂಥ ಕಠಿಣ ವಿಷಯಗಳ ಮೇಲೆ ಸರಳ ಗ್ರಂಥಗಳನ್ನು ಇವರು ರಚಿಸಿದ್ದಾರೆ. ಜನಪ್ರಿಯ ವೈಜ್ಞಾನಿಕ ಬರವಣಿಗೆಗಾಗಿ ಕಳಿಂಗ ಪ್ರಶಸ್ತಿಯನ್ನು ಪಡೆದ (1963) ವಿಜ್ಞಾನಿಗಳಲ್ಲಿ ಜಗಜಿತ್ ಸಿಂಗ್ ಒಬ್ಬರು.

ಇವರು 1912 ಮೇ 15ರಂದು ಅಮೃತಸರದಲ್ಲಿ ಜನಿಸಿದರು. ಅಮೃತಸರ ಮತ್ತು ಲಾಹೋರ್ ಕಾಲೇಜುಗಳಲ್ಲಿ ವಿದ್ಯಾಭ್ಯಾಸವಾಯಿತು.

ಸಿಂಗ್ ಅವರ ಕಾರ್ಯಕ್ಷೇತ್ರ ವಿಸ್ತಾರವಾದದ್ದು. ಆಗ್ನೇಯ ರೈಲ್ವೆ ವಲಯದ ಜನರಲ್ ಮ್ಯಾನೇಜರ್, 'ಸೈನ್ಸ್ ರಿಪೋರ್ಟರ್' ಪತ್ರಿಕೆಯ ಸಂಪಾದಕೀಯ ಸಮಿತಿಯ ಅಧ್ಯಕ್ಷ ಮತ್ತು ಕ್ರಿಯಾ ನಿರ್ವಹಣ ಸಂಶೋಧನೆಯಲ್ಲಿ ಭಾರತ ಸರಕಾರಕ್ಕೆ ಸಲಹೆಗಾರ —ಹೀಗೆ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ್ದಾರೆ.

ಜಗಜಿತ್ ಸಿಂಗ್ ಅವರು ರಾಯಲ್ ಸ್ಟಾಟಿಸ್ಟಿಕಲ್ ಸೊಸೈಟಿ, ಇಂಡಿಯನ್ ಸ್ಟಾಟಿಸ್ಟಿಕಲ್ ಇನ್‌ಸ್ಟಿಟ್ಯೂಟ್, ಇನ್‌ಸ್ಟಿಟ್ಯೂಟ್ ಆಫ್ ಮ್ಯಾಥಮೆಟಿಕಲ್ ಸ್ಟಾಟಿಸ್ಟಿಕ್ಸ್ ಸಂಸ್ಥೆಗಳ ಸದಸ್ಯರು. ರೂರ್ಕಿ ವಿಶ್ವವಿದ್ಯಾಲಯದಿಂದ ಇವರಿಗೆ ಗೌರವ ಡಾಕ್ಟರೇಟ್ ಪ್ರಶಸ್ತಿ ದೊರೆತಿದೆ.

1969ರಲ್ಲಿ ಜಗಜಿತ್ ಸಿಂಗ್ ಇಂಡಿಯನ್ ಡ್ರಗ್ಸ್ ಅಂಡ್ ಫಾರ್ಮಸೂಟಿಕಲ್ಸ್ ಲಿಮಿಟೆಡ್ ಸಂಸ್ಥೆಯ ಅಧ್ಯಕ್ಷರಾದರು.

ಜಗಜೀವನ ರಾಮ್

ಸ್ವಾತಂತ್ರ್ಯ ಚಳುವಳಿಯಲ್ಲಿ ಜಗಜೀವನರಾಮ್ ಅವರದು ಸಕ್ರಿಯ ಪಾತ್ರ. ಅನೇಕ ಬಾರಿ ಸೆರೆಮನೆವಾಸ ಅನುಭವಿಸಿದ್ದಾರೆ. ಅಖಿಲ ಭಾರತ ನಿಮ್ನವರ್ಗಗಳ ಸಂಘದ ಪ್ರಧಾನ ಕಾರ್ಯದರ್ಶಿಯಾಗಿ, ಅಧ್ಯಕ್ಷರಾಗಿ ದುಡಿದಿದ್ದಾರೆ. ಕಾಂಗ್ರೆಸ್ ಕಾರ್ಯಕಾರೀ ಸಮಿತಿಯ ಸದಸ್ಯರು.

ಜಗಜೀವನ ರಾಮ್ ಕೇಂದ್ರ ಮಂತ್ರಿ ಮಂಡಲದ ವಿವಿಧ ಶಾಖೆಗಳಲ್ಲಿ 1947ರಿಂದ ಸೇವೆ ಸಲ್ಲಿಸುತ್ತ ಬಂದಿದ್ದಾರೆ.



ರಾಷ್ಟ್ರೀಯ ನಾಯಕತ್ವ :
ಜಗಜೀವನ ರಾಮ್

ಬಿಹಾರಿನ ಆರಾದಲ್ಲಿ 1908ರ ಏಪ್ರಿಲ್‌ನಲ್ಲಿ ಜಗಜೀವನ ರಾಮ್ ಜನಿಸಿದರು. ಎಳೆವಯಸ್ಸಿನಲ್ಲೇ ನಿಮ್ನವರ್ಗದವರ ಉದ್ಧಾರದ ಬಗೆಗೆ ಇವರಿಗೆ ಚಿಂತೆ. ಬನಾರಸ್ ಹಿಂದೂ ವಿಶ್ವವಿದ್ಯಾನಿಲಯ ಮತ್ತು ಕಲ್ಕತ್ತಾ ವಿಶ್ವವಿದ್ಯಾನಿಲಯಗಳಲ್ಲಿ ವಿದ್ಯಾಭ್ಯಾಸ ಪಡೆದರು.

[illegible] ಭಾರತೀಯ ತಂಡಕ್ಕೆ ಎರಡು ಬಾರಿ ನಾಯಕರಾಗಿದ್ದರು.

ತಮ್ಮ ಮಂತ್ರಿ ಪದವಿಯ ಅವಧಿಯಲ್ಲಿ ಜಗಜೀವನ ರಾಮ್ ಕಾರ್ಮಿಕ, ಸಾರಿಗೆ ಸಂಪರ್ಕ, ರೈಲ್ವೆ, ಆಹಾರ, ಕೃಷಿ, ರಕ್ಷಣಾ ಖಾತೆಗಳನ್ನು ನಿರ್ವಹಿಸಿದ್ದಾರೆ.

ಸ್ವಾತಂತ್ರ್ಯಪೂರ್ವ ಪ್ರಜಾ ಸರಕಾರದಿಂದ ಮೊದಲಾಗಿ ('ಕಾಮರಾಜ ಯೋಜನೆ' ಯಂತೆ ಪಕ್ಷದ ಸಂಘಟನಾಕಾರ್ಯಕ್ಕೆಂದು ಅಧಿಕಾರ ತ್ಯಜಿಸಿದ ಅಲ್ಪಾವಧಿಯ ಹೊರತಾಗಿ) ಸುಮಾರು ಕಾಲು ಶತಮಾನ ಕಾಲ ಇವರು ಕೇಂದ್ರದ ಮಂತ್ರಿ. 1969 ರಿಂದ 1971ರ ವರೆಗೆ ಮಂತ್ರಿ ಪದವಿ ಜೊತೆಗೆ ಆಡಳಿತ ಕಾಂಗ್ರೆಸ್ ಪಕ್ಷದ ಅಧ್ಯಕ್ಷರೂ ಆಗಿದ್ದರು.

1971ರಿಂದ ಜಗಜೀವನ ರಾಮ್ ರಕ್ಷಣಾ ಸಚಿವರು.

ಜಗದೀಶ ಚಂದ್ರ ಬೋಸ್

ನೋಡಿ : ಬೋಸ್, ಜಗದೀಶ್ ಚಂದ್ರ–ಸಂಪುಟ ೨

ಜಗನ್ನಾಥ ಪಂಡಿತ

ನೋಡಿ : ಸಂಪುಟ ೫

ಜತೀಂದ್ರ ನಾಥ ದಾಸ್


"ಇದೇ ಭಾರತವೇ ನನ್ನ ಮನೆ"

—ಹುತಾತ್ಮ ಜತೀಂದ್ರನಾಥ ದಾಸರ ಕೊನೆಯುಸಿರಿನೊಡನೆ ಹೊರಬಿದ್ದ ಮಾತುಗಳಿವು.

ಅವರ ಜನನ 1904ರ ಅಕ್ಟೋಬರ್ 27ರಂದು, ಕಲ್ಕತ್ತೆಯಲ್ಲಿ.

ದೇಶದಲ್ಲಿ ಹಬ್ಬಿದ್ದ ಸ್ವಾತಂತ್ರ್ಯ ಸಮರದ ವಾತಾವರಣ ಜತೀಂದ್ರರನ್ನು ರಾಜಕೀಯದಲ್ಲಿ ಭಾಗವಹಿಸಲು ಪ್ರೇರೇಪಿಸಿತು. ಆಗ ಅವರ ವಯಸ್ಸು 17. ಅಸಹಕಾರ ಚಳುವಳಿಯಲ್ಲಿ ಪಾತ್ರ ವಹಿಸಿದರು.

ಕ್ರಾಂತಿಕಾರಿಗಳ ಸಂಪರ್ಕ ದೊರೆತು ಬಾಂಬು ತಯಾರಿಕೆಯಲ್ಲಿ ತೊಡಗಿದರು. ಮೊಕದ್ದಮೆ ನಡೆದು ಶಿಕ್ಷೆಯಾಯಿತು. ವಿಚಾರಣೆ ಎದುರುನೋಡುತ್ತಿದ್ದ ದೇಶಭಕ್ತ ಕೈದಿಗಳಿಗೆ ಕೊಡುತ್ತಿದ್ದ ಹಿಂಸೆಯನ್ನು ಪ್ರತಿಭಟಿಸಲು, 1929ರ ಜೂಲೈ 13ರಂದು ಜತೀಂದ್ರನಾಥರು ನಿರಶನವ್ರತ ಕೈಗೊಂಡರು. 63 ದಿನಗಳ ಉಪವಾಸದ ಬಳಿಕ 1929 ಸೆಪ್ಟೆಂಬರ್ 13ರಂದು ಬಾರ್ಸ್ಟಲ್ ಸೆರೆಮನೆಯಲ್ಲಿ ನಿಧನರಾದರು.



'ಇದೇ ಭಾರತವೇ ನನ್ನ ಮನೆ': ಜತೀಂದ್ರ

ಇವರ ಬಲಿದಾನದ ಪರಿಣಾಮವಾಗಿ ಸರಕಾರ ರಾಜಕೀಯ ಕೈದಿಗಳ ಬಗೆಗೆ ಉತ್ತಮ ನಡವಳಿಕೆ ತೋರತೊಡಗಿತು.

ಅವರು ಸಮಾಜವಾದವನ್ನು ಪ್ರತಿಪಾದಿಸುತ್ತಿದ್ದರು. ಅವರದು ಕಡುವೇ ಮಾತು, ದೃಢ ನಿಶ್ಚಯ.

ಜತೀಂದ್ರ ಮೋಹನ ಸೇನಗುಪ್ತ

ನೋಡಿ : ಸೇನಗುಪ್ತ

ಜದುನಾಥ್ ಸರ್ಕಾರ್

ಚರಿತ್ರೆ ಪುನರಾವರ್ತನೆಗೊಳ್ಳುತ್ತದೆ ಎನ್ನುವುದುಂಟು. ಚರಿತ್ರೆಯನ್ನು ಆಳವಾಗಿ ಅಭ್ಯಾಸ ಮಾಡಿ, ಮುಂದೆ ನಡೆಯುವ ಕೆಲವು ಘಟನೆಗಳನ್ನು ಮೊದಲೇ ಕಂಡುಕೊಳ್ಳಬಹುದು. ಮಹಾನ್ ಚರಿತ್ರಕಾರ ಜದುನಾಥ್ ಸರ್ಕಾರ್ 'ಪ್ರವಾದಿ' ಅನಿಸಿದ್ದು ಇದೇ ಕಾರಣದಿಂದ. ಭಾರತ ಎದುರಿಸಬೇಕಾದ ವಿವಿಧ ಸಮಸ್ಯೆಗಳಿಗೆ ಅವು ಹುಟ್ಟಿಕೊಳ್ಳುವುದಕ್ಕೆ ಮೊದಲೇ ಇವರು ಪರಿಹಾರಗಳನ್ನು ಸೂಚಿಸಿದರು.

ಬಂಗಾಳಿ ಮತ್ತು ಇಂಗ್ಲಿಷಿನಲ್ಲಿ ಹಲವು ಚರಿತ್ರೆ ಗ್ರಂಥಗಳನ್ನು ಸರ್ಕಾರ್ ರಚಿಸಿದರು. ಚರಿತ್ರೆಯ ಬಗೆಗೆ ಇವರಿಗೆ ಇದ್ದ ವಿಶೇಷ ಜ್ಞಾನವನ್ನು ಈ ಗ್ರಂಥಗಳು ಸಾರುತ್ತವೆ.

ಇವರು ವಿಶೇಷ ಅಭ್ಯಾಸಕ್ಕಾಗಿ ಆರಿಸಿಕೊಂಡದ್ದು ಭಾರತೀಯ ಚರಿತ್ರೆಯ ವಿಶಿಷ್ಟ ವ್ಯಕ್ತಿ —ಔರಂಗಜೇಬ್. ಇವರ ' ಇಂಡಿಯಾ ಥ್ರೂ ದಿ ಏಜಸ್ ' ಒಂದು ಶ್ರೇಷ್ಠ ಆಕರಗ್ರಂಥ.

ಭಾರತ ಸ್ವತಂತ್ರವಾದಾಗ ಅದು ಇಬ್ಭಾಗವಾಯಿತು. 1931ರಷ್ಟು ಹಿಂದೆಯೇ ಈ ಘಟನೆ ಅನಿವಾರ್ಯ ಎಂಬುದನ್ನು ಜದುನಾಥ್ ಸರ್ಕಾರ್ ಮನಗಂಡಿದ್ದರು. ತಮ್ಮ ಒಂದು ಪತ್ರದಲ್ಲಿ, "ದೇಶದ ರಾಜಕೀಯ ವಾತಾವರಣದಲ್ಲಿ ಮೋಡ ಮುಚ್ಚಿಕೊಂಡಿದೆ. ರಕ್ತದ ಮಳೆಯ ಬಳಿಕವೇ ಒಳ್ಳೆಯ ವಾತಾವರಣ ಸಾಧ್ಯ," ಎಂದು ಬರೆದಿದ್ದರು. ಹಿಂದೂ–ಮುಸಲ್ಮಾನ ಗಲಭೆಗಳಿಂದಾಗಿ ಎಲ್ಲರಿಗೂ ಆ ಕಟುಸತ್ಯದ ಅರಿವಾಯಿತು.

ಜನಕ

ತತ್ತ್ವಜ್ಞಾನಿಯಾದ ಜನಕ ಅನೇಕ ಋಷಿಗಳೊಡನೆ ತಾತ್ತ್ವಿಕ ಜಿಜ್ಞಾಸೆ ನಡೆಸಿದ ಜ್ಞಾನಪ್ರವರ್ತಕ. "ಕ್ಷತ್ರಿಯನಾದವನ ಮುಖ್ಯ ಕೆಲಸ ಪ್ರಜಾ ಪರಿಪಾಲನೆ" ಎಂದು ತನ್ನ ಕರ್ತವ್ಯಧರ್ಮವನ್ನು ಎತ್ತಿಹಿಡಿದು, ಅದರಂತೆ ನಡೆದ ರಾಜರ್ಷಿ ಆತ.



ರಾಜರ್ಷಿ : ಜನಕ

ವಸಿಷ್ಠ ಮುನಿಯ ಶಾಪದಿಂದ ಇಕ್ಷ್ವಾಕು ರಾಜನ ಮಗ ನಿಮಿ ಮರಣಹೊಂದಿದಾಗ ಪ್ರಜೆಗಳು ಆತನ ಬಲತೋಳನ್ನು ಅರೆದು, ಅದರಿಂದ ಒಬ್ಬ ಪುರುಷನನ್ನು ರೂಪಿಸಿದರು. ಅವನನ್ನೇ ತಮ್ಮ ರಾಜನನ್ನಾಗಿ ಮಾಡಿಕೊಂಡರು. ಅವನಿಗೆ ವಿದೇಹ, ಮಿಥಿ, ಜನಕ ಇತ್ಯಾದಿ ಹೆಸರುಗಳು ಬಂದುವು. ಅನಂತರ ಆ ವಂಶದವರೆಲ್ಲ ವೈದೇಹ, ಮೈಥಿಲ, ಜನಕ ಎಂದೇ ಕರೆಯಲ್ಪಟ್ಟರು. ' ರಾಜರ್ಷಿ ' ಎಂದು ಖ್ಯಾತನಾದ ಜನಕರಾಜನ ವೈಯಕ್ತಿಕ ಹೆಸರು ಸೀರಧ್ವಜ. ಈತ ಪುತ್ರಕಾಮೇಷ್ಟಿ ಯಾಗಕ್ಕಾಗಿ ಭೂಮಿಯನ್ನು ಉತ್ತಾಗ ದೊರೆತವಳು ಸೀತೆ, ಮುಂದೆ ಜನಕ ಈಕೆಯ ಸ್ವಯಂವರವನ್ನು ಏರ್ಪಡಿಸಿದ.

ಜನಕನ ಕಥೆ 'ರಾಮಾಯಣ'ದಲ್ಲೂ ಅವನ ತತ್ತ್ವಜಿಜ್ಞಾಸೆ 'ಮಹಾಭಾರತ'ದ ಉಪ ಕಥೆಗಳಲ್ಲೂ ಇವೆ.

ನೋಡಿ : ಸೀತಾ

ಜನಗಣತಿ

ದೇಶದ ಜನಸಂಖ್ಯೆ ಬಗೆಗೆ ವಿವರಗಳನ್ನು ಸಂಗ್ರಹಿಸುವುದು ಜನಗಣತಿ. ಇದನ್ನು ಖಾನೇಷುಮಾರಿ ಎಂತಲೂ ಕರೆಯುತ್ತಾರೆ.

ಬಹು ಕಾಲದಿಂದಲೂ ಭಾರತದ ಅರಸರು ಸ್ಥೂಲರೀತಿಯ ಜನಗಣತಿ ನಡೆಸುತ್ತಿದ್ದರೆಂದು ಅಶೋಕನ ಶಾಸನಗಳಿಂದ ತಿಳಿದುಬರುತ್ತದೆ.

1687ರಲ್ಲಿ ಮದರಾಸಿನ ಫೋರ್ಟ್ ಸೇಂಟ್ ಜಾರ್ಜ್ ಮತ್ತು ಸುತ್ತಲಿನ ಜಾಗದಲ್ಲಿ ಮೊದಲನೆಯ ಜನಗಣತಿ ನಡೆಯಿತು. ಲಾರ್ಡ್ ಮೇಯೊ ವೈಸ್‌ರಾಯ್ ಆಗಿದ್ದಾಗ 1867-72ರ ಅವಧಿಯಲ್ಲಿ ಪ್ರಥಮ ಬಾರಿಗೆ ಜನರನ್ನು ಎಣಿಕೆಮಾಡಿ ಜನಸಂಖ್ಯೆಯ ಬಗೆಗೆ ನಿಖರವಾಗಿ ತಿಳಿದುಕೊಳ್ಳುವ ಯತ್ನ ನಡೆಯಿತು. 1881ರಿಂದ 10 ವರ್ಷಕ್ಕೊಮ್ಮೆ ಜನಗಣತಿ ಕ್ರಮವಾಗಿ ನಡೆಯುತ್ತಿದೆ.

1948ರಲ್ಲಿ ಜನಗಣನೆ ಕಾಯಿದೆ ಅಂಗೀಕೃತವಾಯಿತು. ಭಾರತಕ್ಕೆ ಸ್ವಾತಂತ್ರ್ಯ ಬಂದ ಮೇಲಿನ ಪ್ರಥಮ ಜನಗಣನೆ ನಡೆದದ್ದು 1951ರಲ್ಲಿ. ಇದರಲ್ಲಿ ಜಮ್ಮು, ಕಾಶ್ಮೀರ ಮತ್ತು ನೇಫಾ ಪ್ರದೇಶಗಳು ಸೇರಿರಲಿಲ್ಲ.

1961 ಮತ್ತು 1971ರ ಜನಗಣನೆ ದೊಡ್ಡ ಪ್ರಮಾಣದಲ್ಲಿ ನಡೆಯಿತು. 1971ರಲ್ಲಿ ಜನಗಣತಿಯ ಶತಮಾನೋತ್ಸವವನ್ನು ಆಚರಿಸಲಾಯಿತು.

ಜನಗಣನೆಗೆ ಪೂರ್ವಭಾವಿಯಾಗಿ ರಾಷ್ಟ್ರದ ಎಲ್ಲ ಹಳ್ಳಿ ಮತ್ತು ಪಟ್ಟಣಗಳ ನಕ್ಷೆ ತಯಾರಿಸುತ್ತಾರೆ. ಮನೆಗಳ ಪಟ್ಟಿಮಾಡಿ ಅವಕ್ಕೆ ಅನುಕ್ರಮ ಸಂಖ್ಯೆ ಕೊಡುತ್ತಾರೆ. ಗಣತಿ ತೆಗೆದುಕೊಳ್ಳುವವರು ಮನೆಮನೆಗೂ ಭೇಟಿಕೊಟ್ಟು ವಿವರಗಳನ್ನು ಬರೆದುಕೊಳ್ಳುತ್ತಾರೆ. ಅನಂತರ ಈ ಅಂಕಿ ಅಂಶಗಳನ್ನು ಹಲವಾರು ದೃಷ್ಟಿಗಳಿಂದ ವಿಶ್ಲೇಷಿಸಿ, ಒಂದೊಂದು ವರ್ಗದ ಮಾಹಿತಿಪಟ್ಟಿಯನ್ನೂ ಅವುಗಳ ಆಧಾರದ ಮೇಲೆ ಜನಗಣತಿ ವರದಿಯನ್ನೂ ರೂಪಿಸುತ್ತಾರೆ.

ಜನಗಣತಿ ಮಾಡುವಾಗ ಒಟ್ಟು ಜನಸಂಖ್ಯೆಯಲ್ಲಿ ಹೆಂಗಸರು ಮತ್ತು ಗಂಡಸರ ಪ್ರಮಾಣ, ವಿದ್ಯಾಭ್ಯಾಸ, ಉದ್ಯೋಗ, ವರಮಾನ, ವಯಸ್ಸು, ಜಾತಿ-ಮತ ಇತ್ಯಾದಿ ವರ್ಗಗಳಾಗಿ ವಿಂಗಡಿಸಲಾಗುವುದು. ಇಂಥ ವರ್ಗೀಕರಣ ವಿವಿಧ ರೀತಿಗಳಲ್ಲಿ ಉಪಯೋಗಕ್ಕೆ ಬೀಳುತ್ತದೆ. ಭಾರತೀಯ ಜನಗಣತಿ ಹಲವು ಹೊಸ ವಿಧಾನಗಳನ್ನು ರೂಪಿಸಿದೆ. ದೇಶದ ಹಲವು ಬಗೆಯ ವಿವರಗಳಿಗೆ ಇದು ಒಂದು ಮುಖ್ಯ ಆಕರ ವಿಷಯವೆನಿಸಿದೆ.

ಭಾರತದಲ್ಲಿ ಜನಗಣತಿ ವೈಜ್ಞಾನಿಕ ವಿಧಾನಗಳಿಂದ ಆಗುವಂತೆ ಮಾಡಿದವರಲ್ಲಿ ಪಿ.ಸಿ. ಮಹಲನೋಬಿಸ್ ಅವರು ಅತಿ ಪ್ರಮುಖರು.

1971ರ ಜನಗಣತಿಯಲ್ಲಿ ಕಂಪ್ಯೂಟರನ್ನು ಬಳಸಲಾಯಿತು.

ನೋಡಿ : ಜನಗಣತಿ—ಸಂಪುಟ ೧

ಜನಗಣಮನ

ಜನಗಣಮನ ಅಧಿನಾಯಕ ಜಯಹೇ
 ಭಾರತ ಭಾಗ್ಯ ವಿಧಾತಾ॥
ಪಂಜಾಬ ಸಿಂಧು ಗುಜರಾತ ಮರಾಠಾ
 ದ್ರಾವಿಡ ಉತ್ಕಲ ವಂಗಾ
ವಿಂಧ್ಯ ಹಿಮಾಚಲ ಯಮುನಾ ಗಂಗಾ
 ಉಚ್ಛಲ ಜಲಧಿತರಂಗಾ
ತವಶುಭ ನಾಮೇ ಜಾಗೇ
ತವ ಶುಭ ಆಶಿಷ ಮಾಗೇ
ಗಾಹೇ ತವಜಯ ಗಾಥಾ
ಜನಗಣ ಮಂಗಲದಾಯಕ ಜಯಹೇ
 ಭಾರತ ಭಾಗ್ಯವಿಧಾತಾ
ಜಯಹೇ ಜಯಹೇ ಜಯಹೇ
ಜಯ ಜಯ ಜಯಹೇ

'ಜನಗಣಮನ' ನಮ್ಮ ರಾಷ್ಟ್ರಗೀತೆ. ಇದು ರಾಷ್ಟ್ರದ ಜಯಗೀತೆ. ಗುರುದೇವ ರವೀಂದ್ರನಾಥ ಠಾಕೂರರು 1911ರಲ್ಲಿ ಬಂಗಾಳಿಯಲ್ಲಿ ರಚಿಸಿದ ದೀರ್ಘ ಗೀತೆಯ ಮೊದಲ ಪದ್ಯದ ಸಾಲುಗಳನ್ನು ಮಾತ್ರ ಆರಿಸಿಕೊಂಡು ನಮ್ಮ ರಾಷ್ಟ್ರಗೀತೆಯನ್ನು ರೂಪಿಸಿದ್ದಾರೆ. ಈ ಕವನದ ಮೊದಲಿನ ಸಾಲು 'ಜನಗಣಮನ ಅಧಿನಾಯಕ ಜಯಹೇ.' ಗೀತೆಯ ಮೊದಲ ಪದಗಳಿಂದ ಈ ಗೀತೆಯನ್ನು 'ಜನಗಣಮನ' ಎಂದು ಸಂಕ್ಷಿಪ್ತವಾಗಿ ಕರೆಯುವುದು ವಾಡಿಕೆ. ಮೊದಲನೆಯ ಪದ್ಯದ ಸಾಲುಗಳ ಅನಂತರ 'ಜಯಹೇ, ಜಯಹೇ'. ಎಂದು ಜಯಕಾರದ ಸಾಲು ಸೇರಿದ ಭಾಗವೇ ನಮ್ಮ ಅಧಿಕೃತ ರಾಷ್ಟ್ರಗೀತೆ.

ಸ್ವತಂತ್ರ ಭಾರತದ ಸಂವಿಧಾನ ರಚನಾಸಭೆ 1950ರ ಜನವರಿ 24ರಂದು 'ಜನಗಣಮನ'ವನ್ನು ಅಧಿಕೃತ ರಾಷ್ಟ್ರಗೀತೆ ಎಂದು ಅಂಗೀಕರಿಸಿತು.

ಭಾರತ ಇಬ್ಭಾಗವಾಗುವುದಕ್ಕೆ ಮೊದಲು ಬರೆದ ಗೀತೆಯಾದರೂ ಇದರಲ್ಲಿ ಬರುವ ರಾಷ್ಟ್ರದ ವಿವಿಧ ಪ್ರದೇಶಗಳ ಹೆಸರುಗಳನ್ನು ಬದಲಾಯಿಸಿಲ್ಲ; ಆ ಹೆಸರುಗಳು ವಿವಿಧ ಭಾರತೀಯ ಜನಾಂಗಗಳಿಗೂ ಅನ್ವಯಿಸುತ್ತವೆ. ಆದ್ದರಿಂದ ಮೂಲಗೀತೆ ಯಾವುದೇ ಬದಲಾವಣೆಗಳನ್ನು ಹೊಂದದೆ ಉಳಿದಿದೆ.

ರಾಷ್ಟ್ರಗೀತೆಗೆ ಸೂಕ್ತ ಗೌರವ ಕೊಡದಿರುವುದೂ ರಾಷ್ಟ್ರಗೀತೆಯ ಹಾಡುವಿಕೆಗೆ ಅಡ್ಡಿ ತರುವುದೂ ಶಾಸನದ ಪ್ರಕಾರ ಶಿಕ್ಷಾರ್ಹ ಅಪರಾಧ.

ಸಂವಿಧಾನದಲ್ಲಿ ರಾಷ್ಟ್ರಗೀತೆಯ ಸಮಾನ ಸ್ಥಾನಮಾನ ಪಡೆದಿರುವ 'ವಂದೇ ಮಾತರಂ' ರಾಷ್ಟ್ರಸ್ತವ ಎನಿಸಿದೆ. ಸಮಾರಂಭಗಳಲ್ಲಿ 'ವಂದೇ ಮಾತರಂ' ಪ್ರಾರ್ಥನೆಯಾಗಿಯೂ 'ಜನಗಣಮನ' ಮಂಗಳ ಗೀತವಾಗಿಯೂ ಹಾಡಲ್ಪಡುತ್ತವೆ.

ನೋಡಿ : ವಂದೇಮಾತರಂ
 ರಾಷ್ಟ್ರಗೀತೆ—ಸಂಪುಟ ೫

ಜನಮೇಜಯ

"ಕೇಳು ಜನಮೇಜಯ" "......ಭೂಪ ಕೇಳೆಂದ......."...... ರಾಯ ಕೇಳೆಂದ......."

—ಇವು ಕುಮಾರ ವ್ಯಾಸ ಭಾರತದಲ್ಲಿ ಆಗಾಗ ಬರುವ ಮಾತುಗಳು. ಮೂಲ ಭಾರತ ಕಥೆ, ಜನಮೇಜಯ ರಾಜನಿಗೆ ಹೇಳಲ್ಪಟ್ಟದ್ದೇ ಇದಕ್ಕೆ ಕಾರಣ.

ವೈಶಂಪಾಯನ, ಮಹಾಭಾರತದ ಕತೆಯನ್ನು ಜನಮೇಜಯರಾಯನಿಗೆ ಹೇಳಿದ. ಅದಕ್ಕೆ ಮೊದಲು ಅವನು ಈ ಕಥೆಯನ್ನು ವ್ಯಾಸರಿಂದ ಕೇಳಿದ್ದ.

'ಮಹಾಭಾರತ' ವ್ಯಾಸರು ಜನಮೇಜಯನನ್ನು ಉದ್ದೇಶಿಸಿ ಹೇಳಿದ ರೂಪದಲ್ಲೇ ಇದೆ.

ಜನಮೇಜಯನ ಪೂರ್ವಜರೇ 'ಮಹಾಭಾರತ'ದ ನಾಯಕರು. ಜನಮೇಜಯನ ತಂದೆ ಪರೀಕ್ಷಿತ್ ಅರ್ಜುನನ ಮೊಮ್ಮಗ. ಯುಧಿಷ್ಠಿರನ ಅನಂತರ ಅರಸನಾಗಿ ಉತ್ತಮ ರಾಜ್ಯಭಾರ ನಡೆಸಿದ ಪರೀಕ್ಷಿತ್ ಅಂತ್ಯದಲ್ಲಿ ಮುನಿ ಶಾಪಕ್ಕೊಳಗಾಗಿ ತಕ್ಷಕನೆಂಬ ಸರ್ಪದಿಂದ ಕಚ್ಚಲ್ಪಟ್ಟು ಮರಣ ಹೊಂದಿದ.

ತನ್ನ ತಂದೆಯನ್ನು ಕಚ್ಚಿ ಕೊಂದನೆಂದು, ಜನಮೇಜಯನಿಗೆ ತಕ್ಷಕ ಮತ್ತು ಅವನ ಕುಲದ ಮೇಲೆ ಕೋಪ ಬಂದಿತು. ಅಲ್ಲದೆ ಜನರಿಗೂ ಆಗ ಸರ್ಪಗಳ ಕಾಟ ಹೆಚ್ಚಾಗಿತ್ತು. ಆದ್ದರಿಂದ ಅವುಗಳ ವಂಶವನ್ನೇ ನಾಶಗೊಳಿಸುವ ಯಾಗವನ್ನು ಜನಮೇಜಯ ಕೈಗೊಂಡ. ಜಗತ್ತಿನ ಎಲ್ಲ ಭಾಗಗಳ ಸರ್ಪಗಳು ಮಂತ್ರಶಕ್ತಿಯಿಂದ ಯಜ್ಞಕುಂಡಕ್ಕೆ ಆಕರ್ಷಿಸಲ್ಪಟ್ಟುವು; ಅದರಲ್ಲಿ ಬಿದ್ದು ನಾಶವಾಗಲಾರಂಭಿಸಿದುವು.

ಹೀಗೆ ಸರ್ಪಕುಲ ಕ್ಷಯಿಸುತ್ತಿದಂತೆ, ತಕ್ಷಕ ಪ್ರಾಣ ಭೀತಿಯಿಂದ ದೇವೇಂದ್ರನ ಮರೆಹೊಕ್ಕು, ಅವನ ಸಿಂಹಾಸನಕ್ಕೆ ಸುತ್ತಿಕೊಂಡ. ಆದರೆ ಮಂತ್ರ ಪ್ರಭಾವದಿಂದಾಗಿ, ತಕ್ಷಕ ಪೀಠಸಹಿತ ಸೆಳೆಯಲ್ಪಟ್ಟು ಆಕಾಶದಿಂದ ಯಜ್ಞಕುಂಡದತ್ತ ಬೀಳತೊಡಗಿದ. ಅಷ್ಟರಲ್ಲಿ ಸರ್ಪಗಳ ರಾಜನಾದ ವಾಸುಕಿಯ ತಂಗಿಯ ಮಗ ಆಸ್ತೀಕ ಯಜ್ಞಶಾಲೆಗೆ ಬಂದು, ಇಂಥ ಘೋರ ಹಿಂಸೆ ಸರಿಯಲ್ಲವೆಂದು ಜನಮೇಜಯನಿಗೆ ತಿಳಿಯ ಹೇಳಿದ; ಯಜ್ಞ ಅಷ್ಟಕ್ಕೇ ನಿಲ್ಲುವಂತೆ ಮಾಡಿದ.

ವೈಶಂಪಾಯನ ಜನಮೇಜಯನಿಗೆ 'ಮಹಾಭಾರತದ' ಕತೆ ಹೇಳಿದ್ದು ಈ ಸರ್ಪಯಜ್ಞ ಕಾಲದಲ್ಲೇ.

ಜನಮೇಜಯನ ಎಂಬತ್ತನಾಲ್ಕು ವರ್ಷ ಕಾಲ ಆಡಳಿತದಲ್ಲಿ ದೇಶದಲ್ಲಿ ಸುಭಿಕ್ಷೆ, ಸಮೃದ್ಧಿ ಉಂಟಾಯಿತಂತೆ.

ಜನಮೇಜಯನ ವೃತ್ತಾಂತ 'ಮಹಾಭಾರತ'ದ ಆದಿಪರ್ವದಲ್ಲಿದೆ.

ಜಮುನಲಾಲ್ ಬಜಾಜ್

ಜಮುನಲಾಲ್ ಬಜಾಜ್ ಹುಟ್ಟಿದ್ದು ಬಡ ಕುಟುಂಬದಲ್ಲಿ. ತಂದೆ ಕನೀರಾಮ. ವರ್ಧಾದ ಶ್ರೀಮಂತ ಸೇಟ್ ಬಚ್ಛರಾಜ್ ಅವರ ದತ್ತು ಮಗನಾಗಿ ಜಮುನಲಾಲ್ ಬೆಳೆದರು; ವಿದ್ಯಾಭ್ಯಾಸ ಪಡೆದರು. ಶ್ರೀಮಂತ ಮನೆತನದ ಕನ್ಯೆಯೊಂದಿಗೆ ವಿವಾಹವೂ ಆಯಿತು.

ಜಮುನಲಾಲರಿಗೆ ಮೊದಲಿನಿಂದಲೂ ರಾಜಕೀಯದಲ್ಲಿ ಆಸಕ್ತಿ. ಮದನಮೋಹನ ಮಾಳವೀಯ, ತಿಲಕ್, ರವೀಂದ್ರನಾಥ ಠಾಕೂರ್ ಮುಂತಾದ ಹಿರಿಯ ದೇಶಭಕ್ತರಿಂದ ಸ್ಫೂರ್ತಿ ಪಡೆದರು. ಆದರೆ ಅವರಿಗೆ ಗುರುವಾದವರು ಗಾಂಧೀಜೀ.

ಬಜಾಜರು ಕಾಂಗ್ರೆಸ್ಸಿನ ಚಟುವಟಿಕೆಗಳಲ್ಲಿ ಗಣನೀಯವಾದ ಪಾಲುಗೊಂಡವರು. ಗಾಂಧೀಜಿಯ ಶ್ರದ್ಧಾವಂತ ಅನುಯಾಯಿಯಾದರು.



ಬಾಪೂ 'ಪುತ್ರ' : ಬಜಾಜ್

"ನನ್ನನ್ನು ಐದನೆಯ ಮಗನಾಗಿ ಸ್ವೀಕರಿಸಿ" ಎಂದು ಅವರು ಗಾಂಧೀಜಿಯನ್ನು ಬೇಡಿದರು. 1921ರ ಅಸಹಕಾರ ಆಂದೋಲನ, 1923ರ ರಾಷ್ಟ್ರಧ್ವಜ ಸತ್ಯಾಗ್ರಹ, 1941ರ ಯುದ್ಧ ವಿರುದ್ಧ ಪ್ರಚಾರಗಳಲ್ಲಿ ಅವರದು ಪ್ರಮುಖ ಪಾತ್ರ. ವರ್ಧಾದ ಸತ್ಯಾಗ್ರಹ ಆಶ್ರಮ, ಗಾಂಧೀ ಸೇವಾ ಸಂಘ, ಗೋಸೇವಾಸಂಘಗಳನ್ನು ಸ್ಥಾಪಿಸಿದರು. ಸೇಗಾಂವ್ ಹಳ್ಳಿಯನ್ನು ಗಾಂಧೀಜಿಗೆ ಕೊಟ್ಟರು. ಇದು ಸೇವಾಗ್ರಾಮವಾಯಿತು. ತಾವು ಕಟ್ಟಿಸಿದ ಲಕ್ಷ್ಮೀನಾರಾಯಣ ದೇವಾಲಯವನ್ನು ಪ್ರವೇಶಿಸಲು ಹರಿಜನರಿಗೆ ಅವಕಾಶ ಕೊಟ್ಟರು.

ಭಾರತ ಸ್ವತಂತ್ರವಾಗಬೇಕೆಂಬುದು ಅವರ ಉತ್ಕಟೇಚ್ಛೆಯಾಗಿತ್ತು. ಖಾದಿ, ಗ್ರಾಮೋದ್ಯೋಗಗಳು, ಮೂಲಶಿಕ್ಷಣ, ಸ್ತ್ರೀ ವಿದ್ಯಾಭ್ಯಾಸಗಳಲ್ಲಿ ಅವರ ನಂಬಿಕೆ ಅಚಲವಾಗಿದ್ದಿತು. ತಮ್ಮ ಜನಸೇವೆಯನ್ನು ಮೆಚ್ಚಿ ಬ್ರಿಟಿಷರು ಇತ್ತ ರಾಯ್‌ಬಹದ್ದೂರ್ ಪ್ರಶಸ್ತಿಯನ್ನು ಬಿಟ್ಟುಕೊಟ್ಟರು. ನಿರಾಡಂಬರವಾಗಿ ಬಾಳಿದರು.

1942 ಫೆಬ್ರುವರಿ 11ರಂದು ಅತೀವ ರಕ್ತ ಒತ್ತಡದಿಂದ ಅವರು ಕಾಲವಾದರು. ಆಗ ವಲ್ಲಭಭಾಯಿ ಪಟೇಲರು, "ಬಾಪೂ ತಮ್ಮ ಮೆಚ್ಚಿನ ಮಗನನ್ನು,... ದೇಶ ಒಬ್ಬ ನಿಷ್ಠ ಸೇವಕನನ್ನು, ಕಾಂಗ್ರೆಸ್ ಒಂದು ಬೃಹತ್ ಆಧಾರವನ್ನು ...ಕಳೆದುಕೊಂಡಂತಾಗಿದೆ, " ಎಂದರು

ಜಮ್ಮು

ಜಮ್ಮು ರಾಜ್ಯ 11ನೆಯ ಶತಮಾನದಲ್ಲೇ ಅಸ್ತಿತ್ವದಲ್ಲಿ ಇದ್ದಿತು. 18ನೆಯ ಶತಮಾನದಲ್ಲಿ ಶಿವಾಲಿಕ್ ಬೆಟ್ಟಗಳಲ್ಲಿದ್ದ ಇಪ್ಪತ್ತೆರಡು ಗಿರಿರಾಜ್ಯಗಳಲ್ಲೆಲ್ಲ ಇದು ಅತ್ಯಂತ ಪ್ರಬಲವಾಗಿದ್ದಿತು. 19ನೆಯ ಶತಮಾನದ ಮೂರನೆಯ ದಶಕದಲ್ಲಿ ಇದನ್ನು ರಾಜಾ ರಣಜಿತ್‌ಸಿಂಗ್ ವಶಪಡಿಸಿಕೊಂಡ. ಅನಂತರ 1820ರಲ್ಲಿ ಇದನ್ನು ಗುಲಾಬ್‌ಸಿಂಗನಿಗೆ ಕೊಟ್ಟು ಅವನನ್ನು ರಾಜನನ್ನಾಗಿ ಮಾಡಿದ. 1846ರಲ್ಲಿ ಬ್ರಿಟಿಷರು ಜಮ್ಮು ಕಾಶ್ಮೀರ ರಾಜ್ಯವನ್ನು ರೂಪಿಸಿ ಗುಲಾಬ್‌ಸಿಂಗನನ್ನು ಅದರ ಮಹಾರಾಜನನ್ನಾಗಿ ಮಾಡಿದರು.

ಟಾವಿ ನದಿಯ ಎಡದಂಡೆಯ ಮೇಲೆ ಜಮ್ಮು ನಗರವಿದೆ. ಪೀಠಭೂಮಿ, ಬೆಟ್ಟದ ತಪ್ಪಲು, ಪರ್ವತಮಯ ಪ್ರದೇಶ –ಇದು ಜಮ್ಮುವಿನ ಮೇಲ್ಮೈಲಕ್ಷಣ. ನಗರದಲ್ಲಿ ಹಾಗೂ ಸುತ್ತಮುತ್ತ ಕಂಡುಬರುವ ಭಗ್ನಾವಶೇಷಗಳು ಇದರ ಗತ ವೈಭವವನ್ನು ಸಾರುತ್ತವೆ. ಅನೇಕ ಪುರಾತನ ದೇವಾಲಯಗಳೂ ಕೋಟೆಗಳೂ ಇವೆ. ಶ್ರೀ ವೈಷ್ಣೋದೇವಿ, ಶುದ್ಧ ಮಹಾದೇವ, ಅಘರ್ ಜಿಟ್ಟೊ ಮುಂತಾದ ಪವಿತ್ರ ಕ್ಷೇತ್ರಗಳನ್ನೂ ಬಾಹುಕೋಟೆ, ರಾಮ್‌ನಗರ, ಕಪೂರ್ ಗಡ, ಅಖನೂರ್, ಸಾಂಬ ಕೋಟೆಗಳನ್ನೂ ಇಲ್ಲಿ ಹೆಸರಿಸಬಹುದು. ಕಿಷ್ಟ್‌ವಾರ ಎಂಬ ರಮಣೀಯ ಗಿರಿಧಾಮ ಹಾಗೂ ನೀಲಿ ಬಣ್ಣದ ನೀರಿರುವಂತೆ ಕಾಣುವ ಮಾನಸಾರ್ ಎಂಬ ಆಳವಾದ ಸರೋವರ ಜಮ್ಮುವಿಗೆ ಸಮೀಪದಲ್ಲಿವೆ.

ಜಮ್ಮುವಿನ ನಿವಾಸಿಗಳು ಮುಖ್ಯವಾಗಿ ಡೋಗ್ರಾ ಜನರು. ಇವರಲ್ಲದೆ ಗುಜ್ಜರ, ಸಿಖ್ಖ, ಮಹಾಜನರೂ ಇದ್ದಾರೆ. ಡೋಗ್ರಾ ರಜಪೂತರದು ಶ್ರೀಮಂತ ಪರಂಪರೆ. ಅವರ ಜಾನಪದ ಗೀತೆಗಳು ಪೂರ್ವಜರ ಕತೆಗಳನ್ನು ಒಳಗೊಂಡಿವೆ. ಭಾಂಗ್ಡಾ ಅವರ ಸುಪ್ರಸಿದ್ಧ ನೃತ್ಯ.

ಪಹಾಡಿ ಶೈಲಿ ಚಿತ್ರಕಲೆಗೆ ಜಮ್ಮು ಕೇಂದ್ರವಾಗಿತ್ತು.

ಈಗ ಇದು ಒಂದು ಮುಖ್ಯ ವಾಣಿಜ್ಯ ನಗರ. ಸಮೀಪದಲ್ಲಿ ಕಲ್ಲಿದ್ದಲ ಗಣಿಗಳಿವೆ. ನಗರಕ್ಕೆ ರೈಲು ಹಾಗೂ ರಸ್ತೆ ಸಂಪರ್ಕವಿದೆ.

ನೋಡಿ : ಕಾಶ್ಮೀರ ; ಡೋಗ್ರೀ ಭಾಷೆ, ಸಾಹಿತ್ಯ


ಜಮ್ಮು ಮತ್ತು ಕಾಶ್ಮೀರ

ಅಫ್‌ಘಾನಿಸ್ತಾನ, ಸೋವಿಯತ್ ರಷ್ಯ, ಚೀನ, ಪಶ್ಚಿಮ ಪಾಕಿಸ್ತಾನ, ಪಂಜಾಬ್ ಮತ್ತು ಹಿಮಾಚಲ ಪ್ರದೇಶಗಳನ್ನು ಮೇರೆಯಾಗಿ ಉಳ್ಳ ರಾಜ್ಯ ಜಮ್ಮು ಮತ್ತು ಕಾಶ್ಮೀರ (ಭಾಷಾ ಉಚ್ಚಾರ ಕಶ್ಮೀರ).

ಭಾರತ ಸ್ವತಂತ್ರವಾಗುವುದಕ್ಕೆ ಮುಂಚೆ ಜಮ್ಮು ಮತ್ತು ಕಾಶ್ಮೀರ ಒಂದು ದೇಶೀಯ ಸಂಸ್ಥಾನವಾಗಿತ್ತು. ಅನಂತರ ಅದು ಭಾರತ ಒಕ್ಕೂಟಕ್ಕೆ ಸೇರಿತು. ದೇಶವಿದೇಶಗಳ ಪ್ರವಾಸಿಗರ ಪ್ರಮುಖ ಆಕರ್ಷಣೆಯ ಕೇಂದ್ರ, ಈ ರಾಜ್ಯ. ಇದಕ್ಕೆ ಇಲ್ಲಿನ ರಮಣೀಯ ನಿಸರ್ಗವೇ ಕಾರಣ.

ಹಿಮಾಲಯದ ಮಡಿಲಿನಲ್ಲಿರುವ ಈ ರಾಜ್ಯ ನಾನಾ ಅಂತಸ್ತುಗಳುಳ್ಳ ದುರ್ಗದಂತೆ ಕಾಣುತ್ತದೆ.

ತಗ್ಗಾದ ಗುಡ್ಡಗಳನ್ನುಳ್ಳ ಬಯಲು ಪ್ರದೇಶ ಜಮ್ಮು. ಅದರಿಂದಾಚೆ ಪೀರ್ ಪಂಜಾಲ್ ಪರ್ವತಶ್ರೇಣಿ. ಇದನ್ನು ದಾಟಿದರೆ ಝೀಲಂ ನದಿ ಹರಿಯುವ ಕಣಿವೆ ಅಥವಾ ಕಾಶ್ಮೀರ ಕಣಿವೆ. ಅಲ್ಲಿಂದ ಉತ್ತರ ಹಾಗೂ ಈಶಾನ್ಯಕ್ಕೆ ಬಲ್ಟಿಸ್ತಾನ್, ಲಡಖ್ ಪ್ರದೇಶಗಳಿವೆ.



ಸಿಂಧು, ಝೀಲಂ, ಚೀನಾಬ್ ನದಿಗಳು ಈ ರಾಜ್ಯದಲ್ಲಿ ಹರಿಯುತ್ತವೆ. ಜನರ ಮುಖ್ಯ ಕಸಬು ಬೇಸಾಯ. ಭತ್ತ, ಗೋಧಿ, ಜೋಳ, ಹೊಗೆಸೊಪ್ಪು, ಎಣ್ಣೆಬೀಜಗಳು, ಕುಂಕುಮ ಕೇಸರಿ, ಬಾರ್ಲಿ, ಹತ್ತಿ ಇವು ಮುಖ್ಯ ಬೆಳೆಗಳು. ಸೇಬು, ಸಕ್ಕರೆಯಾದಾಮಿ, ಚೆರಿ, ಪೇರ್, ಪ್ಲಮ್, ವಾಲ್‌ನಟ್, ಬಾದಾಮಿ ಮುಂತಾದ ಅನೇಕ ಬಗೆಯ ಹಣ್ಣುಹಂಪಲು



ಕಾಶ್ಮೀರದ ಮೇಲಿನ ಆಕ್ರಮಣ ಹಿಮ್ಮೆಟ್ಟಿಸಿದ ಭಾರತೀಯ ಯೋಧಗಣ

ಸ್ಥಿ ಬೆಳೆಯುತ್ತವೆ. ಕುರಿ, ಮೇಕೆಗಳನ್ನು ಸಾಕುವುದು ಸರ್ವಸಾಮಾನ್ಯ. ಮೇವಿಗೆ ವಿಶಾಲ ಹುಲ್ಲುಗಾವಲುಗಳಿವೆ. ರಾಜ್ಯದ ಹೆಚ್ಚುಭಾಗ ಬಂಜರು.

ಜಮ್ಮು ಮತ್ತು ಕಾಶ್ಮೀರ ರಾಜ್ಯದ ಕಾಡುಗಳಲ್ಲಿ ದೊರೆಯುವ ಮೆದು ಮರ ಭಾರತದಲ್ಲೇ ಶ್ರೇಷ್ಠವಾದದ್ದು. ಟರ್ಪೆಂಟೈನ್, ರಾಳ ತೆಗೆಯುವುದು ಮೊದಲಾದ ಅರಣ್ಯ ಕೈಗಾರಿಕೆಗಳು ಇಲ್ಲಿವೆ. ಕ್ರಿಕೆಟ್ ಬ್ಯಾಟು ತಯಾರಿಸುವ ವಿಲೋ ಮರ ಇಲ್ಲಿ ಅಧಿಕವಾಗಿ ದೊರೆಯುತ್ತದೆ. ಕಾಡು ಕೋಳಿಗಳು, ಚಕೋರ ಪಕ್ಷಿಗಳು ಇಲ್ಲಿನ ಮುಖ್ಯ ಬೇಟೆ ಹಕ್ಕಿಗಳು.

ಶ್ರೇಷ್ಠ ಕಲ್ಲಿದ್ದಲು ರಾಜ್ಯದ ಮುಖ್ಯ ಖನಿಜ ಸಂಪತ್ತು. ಲಿಗ್ನೈಟ್, ಜಿಪ್ಸಮ್‌ಗಳೂ ದೊರೆಯುತ್ತವೆ. ಸೀಸ, ಸತು, ತಾಮ್ರ, ಬಾಕ್ಸೈಟ್ (ಅಲ್ಯೂಮಿನಿಯಂ ಅದಿರು), ಕಲ್ನಾರು, ನಿಕಲ್, ಕಬ್ಬಿಣದ ಅದಿರು, ಬೋರಾಕ್ಸ್, ಫುಲ್ಲರ್ ಮಣ್ಣು, ಸ್ಲೇಟುಕಲ್ಲು, ಚೈನಾಮಣ್ಣು, ಚಿನ್ನ ಹಾಗೂ ನೀಲದ ನಿಕ್ಷೇಪಗಳನ್ನು ಪತ್ತೆ ಹಚ್ಚಲಾಗಿದೆ.

ಪ್ರವಾಸೋದ್ಯಮ ರಾಜ್ಯದ ಗಣನೀಯ ಸಂಪನ್ಮೂಲ. ವ್ಯವಸಾಯ ಬಿಟ್ಟರೆ, ಗೃಹಕೈಗಾರಿಕೆ ಹಾಗೂ ಸಣ್ಣ ಪ್ರಮಾಣದ ಕೈಗಾರಿಕೆಗಳಿಗೆ ಮಹತ್ವವಿದೆ. ರೇಷ್ಮೆಗೂಡುಗಳಿಂದ ರೇಷ್ಮೆ ತೆಗೆದು ನೂಲುವುದು ಇಲ್ಲಿನ ಕೈಗಾರಿಕೆ ಬೃಹತ್ ಪರಿಮಾಣದ್ದು. ಶಾಲು, ನೆಲಹಾಸು, ಪೇಪಿಯರ್ ಮಾಷೆ, ಮರ ಕೆತ್ತನೆ, ಕಸೂತಿ ಮಾಡಿದ ಪದಾರ್ಥಗಳು, ಅಪ್ಪಟ ರೇಷ್ಮೆ ವಸ್ತ್ರ, ಆಭರಣ ತಯಾರಿ –ಇವು ಇಲ್ಲಿನ ಕುಶಲ ಕೈಗಾರಿಕಾ ವಸ್ತುಗಳಲ್ಲಿ ಮುಖ್ಯವಾದುವು.

ಜಮ್ಮು ಹಾಗೂ ಕಾಶ್ಮೀರ ವಿಶ್ವವಿದ್ಯಾನಿಲಯ ಕೇಂದ್ರ ಶ್ರೀನಗರದಲ್ಲಿದೆ.

ನೋಡಿ : ಕಾಶ್ಮೀರ : ಕಾಶ್ಮೀರೀ ಭಾಷೆ. ಸಾಹಿತ್ಯ : ಜಮ್ಮು : ಡೋಗ್ರೀ ಭಾಷೆ. ಸಾಹಿತ್ಯ ; 'ರಾಜತರಂಗಿಣಿ'

ಜಯಂತ್ ನಾರಳೀಕರ್

ಗುರುತ್ವ ಮೀಮಾಂಸೆಯ ಬಗೆಗೆ 1964ರಲ್ಲಿ ಒಂದು ಹೊಸ ಸಿದ್ಧಾಂತ ಪ್ರತಿಪಾದಿಸಲ್ಪಟ್ಟಿತು. ಪ್ರತಿಪಾದಕರು : ಇಂಗ್ಲೆಂಡಿನ ಫ್ರೆಡ್ ಹಾಯ್ಲ್ ಮತ್ತು ಭಾರತದ ಜಯಂತ್ ನಾರಳೀಕರ್. ಒಂದು ವಸ್ತುವಿನ ದ್ರವ್ಯರಾಶಿಯಿಂದ ಮತ್ತೊಂದು ವಸ್ತುವಿನ ದ್ರವ್ಯರಾಶಿಯ ಮೇಲೆ ಪ್ರಭಾವ, ವಿಶ್ವದ ಸ್ಥಿರಸ್ಥಿತಿ, ಅಗಾಧ ಗುರುತ್ವದಿಂದ ವಸ್ತುವಿನಿಂದ ಹೊಮ್ಮುವ ಬೆಳಕು ಬಂಧಿತವಾಗುವುದು-ಸಿದ್ಧಾಂತದಿಂದ ಹೊಮ್ಮಿದ ಕೆಲ ಅಂಶಗಳು. ಆಗ ನಾರಳೀಕರ್ ಅವರಿಗೆ ಕೇವಲ 26 ವರ್ಷ ವಯಸ್ಸು.



ಗುರುತ್ವ ಮೀಮಾಂಸೆ : ಜಯಂತ

1938 ಜುಲೈ 19ರಂದು ಜಯಂತ್ ನಾರಳೀಕರ್ ಜನಿಸಿದರು. ಬನಾರಸ್ ಹಿಂದೂ ವಿಶ್ವವಿದ್ಯಾನಿಲಯದಲ್ಲಿ ಪ್ರೌಢ ವ್ಯಾಸಂಗ ಮಾಡಿದರು. 1957ರಲ್ಲಿ ಹೆಚ್ಚಿನ ಅಧ್ಯಯನಕ್ಕಾಗಿ ಇಂಗ್ಲೆಂಡಿನ ಕೇಂಬ್ರಿಜ್ ವಿಶ್ವವಿದ್ಯಾನಿಲಯ ಸೇರಿದರು. ಒಂದಾದ ಮೇಲೊಂದು ಗೌರವಗಳಿಗೆ ಪಾತ್ರರಾದರು. ಕಿಂಗ್ಸ್ ಕಾಲೇಜಿನ ಬೆರಿ–ರ್‍ಯಾಮ್‌ಸೆ ಫೆಲೊ ಆಗಿ ಆಯ್ಕೆಯಾದರು. 1960ರಲ್ಲಿ ಟೈಸನ್ ಪದಕವನ್ನೂ 1962ರಲ್ಲಿ ಸ್ಮಿತ್ ಬಹುಮಾನವನ್ನೂ ಕೇಂಬ್ರಿಜ್ ವಿಶ್ವವಿದ್ಯಾನಿಲಯ ನೀಡಿತು. 1957ರಿಂದ 63ರ ವರೆಗೆ ತಾತಾ ವಿದ್ಯಾರ್ಥಿ ವೇತನ ಅವರಿಗೆ ದೊರೆಯಿತು.

ಅವರು ಇಂಗ್ಲೆಂಡಿನ ರಾಯಲ್ ಅಸ್ಟ್ರನಾಮಿಕಲ್ ಸೊಸೈಟಿಯ ಫೆಲೊ. ಭಾರತ ಸರಕಾರ 1965ರಲ್ಲಿ ಪದ್ಮಭೂಷಣ ಪ್ರಶಸ್ತಿ ನೀಡಿತು.

ಅಂತರರಾಷ್ಟ್ರೀಯ ವೈಜ್ಞಾನಿಕ ನಿಯತಕಾಲಿಕಗಳಲ್ಲಿ ನಾರಳೀಕರರ ಸಂಶೋಧನಾ ಲೇಖನಗಳು ಪ್ರಕಟವಾಗಿವೆ. ವಿದೇಶದಿಂದ ಹಿಂದಿರುಗಿದ ಅನಂತರ ಮುಂಬಯಿಯ ತಾತಾ ಮೂಲಭೂತ ಸಂಶೋಧನಾಲಯದಲ್ಲಿ ಅವರು ಸಂಶೋಧನೆ ಮುಂದುವರಿಸಿದರು. 1973ರಲ್ಲಿ ಅವರಿಗೆ ಜವಾಹರ ಲಾಲ ನೆಹರೂ ಅಧ್ಯಯನ ವೇತನ ದೊರಕಿತು.

ಜಯಚಾಮರಾಜ ಒಡೆಯರ್

ಜಯಚಾಮರಾಜ ಒಡೆಯರು, ನಾಲ್ವಡಿ ಕೃಷ್ಣರಾಜ ಒಡೆಯರ ತಮ್ಮಂದಿರಾದ ಕಂಠೀರವ ನರಸಿಂಹ ರಾಜ ಒಡೆಯರ ಪುತ್ರ. ಕೃಷ್ಣರಾಜ ಒಡೆಯರಿಗೆ ಮಕ್ಕಳಿರಲಿಲ್ಲ. ಆದ್ದರಿಂದ ಅವರ ನಿಧನಾನಂತರ 1940ರಲ್ಲಿ ಮೈಸೂರಿನ ಅರಸರಾಗಿ ಪಟ್ಟಕ್ಕೆ ಬಂದರು. ಸ್ವತಂತ್ರ ಭಾರತದಲ್ಲಿ ಮೈಸೂರು ಸಂಸ್ಥಾನ ಭಾರತ ಒಕ್ಕೂಟಕ್ಕೆ ಸೇರಿದ ಮೇಲೆ, 1948ರಲ್ಲಿ ರಾಜ್ಯದ ರಾಜಪ್ರಮುಖರಾದರು. 1956ರಲ್ಲಿ ರಾಜ್ಯಗಳ ಪುನರ್ವಿಂಗಡಣೆಯಾದಾಗ ನೂತನ ಮೈಸೂರು ರಾಜ್ಯದ ರಾಜ್ಯಪಾಲರಾದರು. ಅನಂತರ ಕೆಲ ಕಾಲ ಮದರಾಸಿನ ರಾಜ್ಯಪಾಲರಾಗಿದ್ದರು.

1919 ಜುಲೈ 18ರಂದು ಜನನ. ರಾಜ ಪಾಠಶಾಲೆಯಲ್ಲಿ ಆರಂಭ ವಿದ್ಯಾಭ್ಯಾಸ. ಅನಂತರ ಮೈಸೂರಿನ ಮಹಾರಾಜಾ ಕಾಲೇಜಿನಲ್ಲಿ ಅಧ್ಯಯನ. ಜಯಚಾಮರಾಜ ಒಡೆಯರು ಪಟ್ಟಕ್ಕೆ ಬಂದ ಮೇಲೆ ತಮ್ಮ ವಂಶದ ಹಿರಿಯರ ಮಾರ್ಗದಲ್ಲಿ ನಡೆದು, ಸಂಸ್ಥಾನದ ಪುರೋಭಿವೃದ್ಧಿಗಾಗಿ ಶ್ರಮಿಸಿದರು. [illegible] ರಾಜಕೀಯ ಸುಧಾರಣೆಗಳನ್ನು ಆಚರಣೆಗೆ ತಂದರು.

1970ರಲ್ಲಿ ಭಾರತ ಸರಕಾರ ಮಹಾರಾಜರೆಲ್ಲರ ಹಕ್ಕುಬಾಧ್ಯತೆಗಳನ್ನು ತೆಗೆದು ಹಾಕಿದಾಗ ಜಯಚಾಮರಾಜಒಡೆಯರು ಅದಕ್ಕೆ ಒಳಗಾದರು.

ಭಾರತೀಯ ಧರ್ಮ, ತತ್ತ್ವವಿಚಾರ, ಸಂಸ್ಕೃತಿಗಳಲ್ಲಿ ಜಯಚಾಮ ರಾಜರಿಗೆ ಅಪಾರ ಆಸಕ್ತಿ. ಸಂಗೀತ, ಸಾಹಿತ್ಯಗಳಲ್ಲಿ ಒಳ್ಳೆಯ ಪರಿಣತಿ. ಕರ್ನಾಟಕ–ಹಿಂದೂಸ್ತಾನಿ,



[illegible] : ಒಡೆಯರ್

ಪಾಶ್ಚಾತ್ಯ ಸಂಗೀತಗಳನ್ನು ಚೆನ್ನಾಗಿ ಬಲ್ಲವರು. ಕರ್ನಾಟಕ ಸಂಗೀತ ಶೈಲಿಯಲ್ಲಿ ಕೃತಿಗಳನ್ನು ರಚಿಸಿದ್ದಾರೆ. ಪಾಶ್ಚಾತ್ಯ ದೇಶಗಳಲ್ಲಿ ಆಗಿಂದಾಗ್ಗೆ ಪ್ರವಾಸ ಮಾಡಿ ಭಾರತದ ಧರ್ಮ ಸಂಸ್ಕೃತಿಗಳನ್ನು ಕುರಿತು ಅನೇಕ ಭಾಷಣಗಳನ್ನು ಮಾಡಿದ್ದಾರೆ.

ತಮ್ಮ ಹಿರಿಯರು ಮತ್ತು ತಾವು ಸಂಗ್ರಹಿಸಿದ್ದ ಅನೇಕ ಅಮೂಲ್ಯ ಕಲಾವಸ್ತುಗಳನ್ನು ಇವರು ಒಂದು ನ್ಯಾಸಮಂಡಲಿಗೆ ದಾನ ಮಾಡಿದರು. ಇವನ್ನು ಮೈಸೂರಿನ ಜಗನ್ಮೋಹನ ಭವನದಲ್ಲಿ ರೂಪಿಸಲಾಗಿರುವ ಜಯಚಾಮರಾಜೇಂದ್ರ ಆರ್ಟ್ಸ್ ಗ್ಯಾಲರಿಯಲ್ಲಿ ನೋಡಬಹುದು.

ಜಯದೇವ

ನೋಡಿ : ಸಂಪುಟ ೫

ಜಯಪ್ರಕಾಶ ನಾರಾಯ

ಭಾರತದ ಸ್ವಾತಂತ್ರ್ಯಸಂಗ್ರಾಮದ ಧೀರೋದಾತ್ತ ನಾಯಕರೆಂದು ವಿಖ್ಯಾತರಾದವರು ಜಯಪ್ರಕಾಶ ನಾರಾಯಣ.

ಸರಯೂ ಮತ್ತು ಜಾಹ್ನವೀ ನದಿಗಳು ಕೂಡುವ ಸ್ಥಳವಾದ ಬಿಹಾರದ ಸಿತಾಬ್ದಿಯಾರಾದಲ್ಲಿ 1902ರ ಅಕ್ಟೋಬರ್ 11ರಂದು ಜನನ. ಶಿಕ್ಷಣ ಮುಗಿಯುವ ಮುನ್ನವೇ ರಾಷ್ಟ್ರೀಯ ಆಂದೋಲನದ ಸುಳಿಗೆ ಸಿಕ್ಕಿದರು. ಆಗ ಬಿಹಾರದ ಸುಪ್ರಸಿದ್ಧ ರಾಜಕೀಯ ನಾಯಕರಾಗಿದ್ದ, ಬ್ರಜಕಿಶೋರಬಾಬು ಅವರ ಮಗಳು ಪ್ರಭಾವತಿ ದೇವಿಯೊಂದಿಗೆ ಜಯಪ್ರಕಾಶರ ವಿವಾಹ ಎಳೆಹರೆಯದಲ್ಲೇ ನಡೆಯಿತು. ಗಾಂಧೀಜಿಯ ಪ್ರಭಾವಕ್ಕೆ ಸಿಕ್ಕಿದ್ದ ಬ್ರಜಕಿಶೋರಬಾಬು ಅವರ ಸಂಬಂಧ ಜಯಪ್ರಕಾಶರ ರಾಜಕೀಯ ಪ್ರವೇಶಕ್ಕೆ ರಂಗವನ್ನು ಸಜ್ಜುಗೊಳಿಸಿತು.

ಬಿಹಾರ ವಿದ್ಯಾಪೀಠದಲ್ಲಿ ಜಯಪ್ರಕಾಶರು ತಮ್ಮ ಶಿಕ್ಷಣ ಪೂರೈಸಿ, 1922ರಲ್ಲಿ, ಉನ್ನತ ವ್ಯಾಸಂಗಕ್ಕಾಗಿ ಅಮೆರಿಕಕ್ಕೆ ಹಡಗು ಹತ್ತಿದರು. ಅವರ ಪತ್ನಿ ಪ್ರಭಾವತಿದೇವಿ ಗಾಂಧೀಜಿಯ ಸಾಬರಮತಿ ಆಶ್ರಮ ಸೇರಿದರು. ಅಮೆರಿಕದ ಕ್ಯಾಲಿಫೋರ್ನಿಯಾದ ಹಣ್ಣಿನ ತೋಟಗಳಲ್ಲಿ ಕೂಲಿಯ ಕೆಲಸ ಮಾಡುತ್ತಲೇ ವಿದ್ಯಾರ್ಜನೆಯನ್ನು ಮಾಡಿದ ಜಯಪ್ರಕಾಶರು ಕಾರ್ಲ್ ಮಾರ್ಕ್ಸನ ವಿಚಾರಗಳಿಂದ ತುಂಬ ಪ್ರಭಾವಿತರಾದರು.

ಅಮೆರಿಕದಿಂದ ಭಾರತಕ್ಕೆ ಮರಳಿದೊಡನೆ ಸ್ವಾತಂತ್ರ್ಯ ಸಮರ ಅವರನ್ನು ಕೈಬೀಸಿ ಕರೆಯಿತು. ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಜವಾಹರಲಾಲ ನೆಹರೂ ಅಖಿಲ ಭಾರತ ರಾಷ್ಟ್ರೀಯ ಕಾಂಗ್ರೆಸ್ ಸಮಿತಿಯ ಕಾರ್ಮಿಕ ವಿಭಾಗವನ್ನು ಸಂಘಟಿಸಲು ಜಯಪ್ರಕಾಶರನ್ನು ಆಹ್ವಾನಿಸಿದರು.

1934ರಲ್ಲಿ ನಾಸಿಕ್‌ರೋಡ್ ಸೆಂಟ್ರಲ್ ಜೈಲಿನಲ್ಲಿ ಬಂಧಿತರಾಗಿದ್ದ ಹಲವು ಪ್ರತಿಭಾಶಾಲಿ, ಪ್ರಗತಿಪರ ವಿಚಾರ ಧಾರೆಯ ಯುವಕರು ಕಾಂಗ್ರೆಸ್ ಸಮಾಜವಾದೀ ಪಕ್ಷವನ್ನು ಸ್ಥಾಪಿಸಿದರು. ಜಯಪ್ರಕಾಶ ನಾರಾಯಣರೇ ಅದರ ಸಂಸ್ಥಾಪಕ ಪ್ರಧಾನ ಕಾರ್ಯದರ್ಶಿ.



ಸರ್ವೋದಯ :

ಆರಂಭಿಸಿದ ಕಾಂಗ್ರೆಸ್ಸನ್ನು ಸಮಾಜವಾದೀ ದಿಶೆಯಲ್ಲಿ ತಿರುಗಿಸಲು ಅವರು ಹಾಗೂ ಅವರ ಸಂಗಡಿಗರು ಸತತ ಪ್ರಯತ್ನ ನಡೆಸಿದರು.

ಅದಕ್ಕೆ ಮುನ್ನವೇ ಜಯಪ್ರಕಾಶರು ದೇಶದಾದ್ಯಂತ ಪ್ರಗತಿಪರ ವಿಚಾರದ ತರುಣರ ಸಂಪರ್ಕ ಬೆಳೆಸಿದ್ದರು. ಹಿರಿಯರಾದ ಆಚಾರ್ಯ ನರೇಂದ್ರದೇವ, ಡಾ. ಸಂಪೂರ್ಣಾನಂದರಂಥವರ ಬೆಂಬಲವೂ ಅವರಿಗೆ ಸಿಕ್ಕಿತ್ತು. ರಾಮಮನೋಹರ ಲೋಹಿಯಾ, ಕಮಲಾದೇವಿ ಚಟ್ಟೋಪಾಧ್ಯಾಯ, ಯೂಸುಫ್ ಮೆಹರಲ್ಲಿ. ಅಚ್ಯುತ ಪಟವರ್ಧನ, ಅಶೋಕ ಮೆಹತಾ ಅವರ ಸಹಕಾರವೂ ಇತ್ತು. ದೇಶದ ಸಮಾಜವಾದೀ ಆಂದೋಲನದ ಪ್ರಧಾನ ದಿಗ್ದರ್ಶಕರಾಗಿ ಅವರು ಕೆಲಸ ಮಾಡಿದರು.

ಎರಡನೆಯ ಮಹಾಯುದ್ಧದ ಸಮಯ. 1940ರಲ್ಲಿ ಬ್ರಿಟಿಷ್ ಸರಕಾರ ಜಯಪ್ರಕಾಶರನ್ನು ಸೆರೆಮನೆಗೆ ಅಟ್ಟಿತು. 1942ರ ಆಗಸ್ಟ್ 8ರಂದು ಮುಂಬಯಿಯಲ್ಲಿ ಸೇರಿದ್ದ ಅಖಿಲ ಭಾರತ ಕಾಂಗ್ರೆಸ್ ಸಮಿತಿ 'ಚಲೇಜಾವ್' ನಿರ್ಣಯ ಅಂಗೀಕರಿಸಿತು. ಗಾಂಧೀಜೀ ದೇಶಕ್ಕೆ "ಮಾಡು ಇಲ್ಲ ಮಡಿ"—ಎಂಬ ಮಂತ್ರ ನೀಡಿದರು. ಸ್ವಾತಂತ್ರ್ಯಕ್ಕಾಗಿ ಸರ್ವಸ್ವವನ್ನೂ ಪಣಕ್ಕೆ ಹಚ್ಚಿ ಹೋರಾಡುವ ಪ್ರತಿಜ್ಞೆ ತಳೆದಿದ್ದ ಜಯಪ್ರಕಾಶರು 1942ರ ನವೆಂಬರ್‌ನಲ್ಲಿ ದೀಪಾವಳಿಯ ರಾತ್ರಿ ಬಿಹಾರದ ಹಜಾರಿಬಾಗ್ ಸೆರೆಮನೆಯ ಅತಿ ಎತ್ತರದ ಗೋಡೆಗಳನ್ನು ಐವರು ಸಂಗಡಿಗರೊಡನೆ ಹಾರಿ, ಪಾರಾಗಿ 'ಆಗಸ್ಟ್ ಕ್ರಾಂತಿ'ಯ ಸಂಘಟನೆಗೆ ತೊಡಗಿದರು. ಭೂಗತರಾಗಿದ್ದುಕೊಂಡು ದೇಶದ ಆದ್ಯಂತ ಸಂಚರಿಸಿ ಬ್ರಿಟಿಷ್ ಸಾಮ್ರಾಜ್ಯಶಾಹಿಯ ವಿರುದ್ಧ ಬಹಿರಂಗ ಬಂಡಾಯವನ್ನು ಸಂಘಟಿಸಿ 'ಚಲೇಜಾವ್ ಚಳುವಳಿಯ ಚೈತನ್ಯ ಪುರುಷ'—ಎಂಬ ಕೀರ್ತಿಗೆ ಪಾತ್ರರಾದರು.

1943 ಸೆಪ್ಟೆಂಬರ್‌ನಲ್ಲಿ ಲಾಹೋರಿಗೆ ತೆರಳುತ್ತಿದ್ದಾಗ ಆಕಸ್ಮಿಕವಾಗಿ ಜಯಪ್ರಕಾಶರ ಬಂಧನ ಆಯಿತು. ಲಾಹೋರ್ ಕೋಟೆಯ ಸೆರೆಮನೆಯಲ್ಲಿ ಬ್ರಿಟಿಷ್ ಆಳರಸರು ಅವರನ್ನು ನಾನಾ ಬಗೆಯ ಚಿತ್ರಹಿಂಸೆಗೆ ಗುರಿಪಡಿಸಿದರು. 1946ರಲ್ಲಿ ಬಿಡುಗಡೆ ಯಾಯಿತು.

1948 ಜನವರಿ 30ರಂದು ಮಹಾತ್ಮಾ ಗಾಂಧೀ ಅವರ ಕೊಲೆಯ ತರುವಾಯ, ಕಾಂಗ್ರೆಸ್ಸಿನ ಸಂಪರ್ಕ ತೊರೆದು ಸ್ವತಂತ್ರ ಸಮಾಜವಾದೀ ಪಕ್ಷದ ಸಂಘಟನೆಗೆ ತೊಡಗಿದರು. ಆಗ ಅವರೇ ಅದರ ಪ್ರಧಾನ ಕಾರ್ಯದರ್ಶಿ.

ನಾಲ್ಕನೆಯ ದಶಕದಲ್ಲಿ ಕಾರ್ಮಿಕ ಆಂದೋಲನದಲ್ಲಿ ಪ್ರಧಾನಪಾತ್ರ ವಹಿಸಿದ್ದ ಅವರು ಅಖಿಲ ಭಾರತ ರೈಲ್ವೆ ಕೆಲಸಗಾರರ ಫೆಡರೇಷನ್, ಅಖಿಲ ಭಾರತ ಅಂಚೆ–ತಂತಿ ಕೆಲಸಗಾರರ ಫೆಡರೇಷನ್ ಹಾಗೂ ಅಖಿಲ ಭಾರತ ಆರ್ಡನೆನ್ಸ್ ಕೆಲಸಗಾರರ ಫೆಡರೇಷನ್‌ಗಳ ಅಧ್ಯಕ್ಷರಾಗಿದ್ದರು.

1952ರ ಕೊನೆಯಲ್ಲಿ ಜಯಪ್ರಕಾಶರು ವಿನೋಬಾ ಭಾವೆ ನಡೆಸುತ್ತಿದ್ದ ಭೂದಾನ ಚಳುವಳಿಯತ್ತ ಆಕರ್ಷಿತರಾದರು. 1954ರಲ್ಲಿ ಗಯಾದಲ್ಲಿ ಸೇರಿದ್ದ ಸರ್ವೋದಯ ಸಮ್ಮೇಳನದಲ್ಲಿ ಸರ್ವೋದಯ ಧ್ಯೇಯ ಸಾಧನೆಗಾಗಿ ಜೀವನದಾನಕ್ಕೆ ಕರೆ ಇತ್ತು, ತಾವೇ ಪ್ರಥಮ 'ಜೀವನದಾನಿ' ಆದರು. ಆ ವೇಳೆಗಾಗಲೇ ಅವರು ಗಾಂಧೀ–ವಿನೋಬಾ ರೂಪಿಸಿದ್ದ ಸರ್ವೋದಯ ಸಿದ್ಧಾಂತಕ್ಕೆ ಪೂರಾ ಒಲಿದುಬಿಟ್ಟಿದ್ದರು. ಜಯಪ್ರಕಾಶರು ಪಕ್ಷಗತ ರಾಜಕಾರಣದ ಸಿದ್ಧಾಂತವನ್ನು ತಿರಸ್ಕರಿಸಿ. ಪಕ್ಷಾತೀತ ಲೋಕ ನೀತಿಯ ಅಚಲ ಪ್ರತಿಪಾದಕರಾದರು.

ಭಾರತೀಯ ಸಮಾಜವಾದದ ಹಾಗೂ ಸರ್ವೋದಯ ಸಿದ್ಧಾಂತದ ವಿಶಿಷ್ಟ ವ್ಯಾಖ್ಯಾನಕಾರರಾಗಿ ಅವರು ಜಗತ್ತಿನಾದ್ಯಂತ ಪ್ರವಾಸಮಾಡಿ ತಮ್ಮ ವಿಚಾರವನ್ನು ಶಾಸ್ತ್ರೀಯವಾಗಿ ಪ್ರತಿಪಾದಿಸಿದ್ದಾರೆ. ಬಾಂಗ್ಲಾದೇಶ ತನ್ನ ವಿಮೋಚನೆಯ ಸಂಗ್ರಾಮದಲ್ಲಿ ತೊಡಗಿದ್ದಾಗ ಜಯಪ್ರಕಾಶರು ಜಗತ್ತಿನ ಎಲ್ಲ ರಾಷ್ಟ್ರಗಳ ವರಿಷ್ಠರನ್ನು ಕಂಡು ಬಾಂಗ್ಲಾ ಜನತೆಯ ಸಮರದ ಬಗೆಗೆ ಸರಿಯಾದ ಕಲ್ಪನೆ ನೀಡಲು ಪ್ರಯತ್ನಿಸಿದರು. ಗಾಂಧಿ ಶಾಂತಿಪ್ರತಿಷ್ಠಾನ, ಅಖಿಲ ಭಾರತ ಸರ್ವಸೇವಾಸಂಘ, ಅಖಿಲ ಭಾರತ ಪಂಚಾಯತ್ ಪರಿಷತ್‌ಗಳೊಡನೆ ಅವರದು ಗಾಢ ಸಂಬಂಧ. ಬಿಹಾರದ ಗಯಾ ಜಿಲ್ಲೆಯ ಸೋಖೋದೇವರಾದಲ್ಲಿ ಅವರ ಆಶ್ರಮವಿದೆ.

ಅವರ ಎಲ್ಲ ಸಾರ್ವಜನಿಕ ಕೆಲಸದಲ್ಲೂ ಸಮಭಾಗಿಯಾಗಿದ್ದ ಅವರ ಪತ್ನಿ ಪ್ರಭಾವತಿದೇವಿ 1973ರಲ್ಲಿ ತೀರಿಕೊಂಡರು.

ಜನತಾಂತ್ರಿಕ ಸಮಾಜವಾದ ಹಾಗೂ ಸರ್ವೋದಯ ತತ್ತ್ವವನ್ನು ಕುರಿತ ಹಲವು ಪುಸ್ತಕಗಳನ್ನು ಜಯಪ್ರಕಾಶರು ಬರೆದಿದ್ದಾರೆ. ಅವರ ಅನುಯಾಯಿಗಳು ಹಾಗೂ ಸಂಗಡಿಗರಿಗೆಲ್ಲ ಅವರು 'ಜೆ.ಪಿ.'



ಜಯಪುರದ ತ್ರಿದ್ವಾರ

ಜಯಪುರ

'ಭಾರತದ ಗುಲಾಬಿ ನಗರ' ಎಂಬ ಹೆಸರಾದದ್ದು ಜಯಪುರ. ಏಕೆಂದರೆ ಇಲ್ಲಿನ ಕಟ್ಟಡಗಳ ಬಣ್ಣ ಗುಲಾಬಿ. ಸಂಜೆಗೆಂಪಿನ ಬೆಳಕಿನಲ್ಲಿ ಇವನ್ನು ನೋಡುವುದು ಕಣ್ಣಿಗೊಂದು ಹಬ್ಬ. ಪ್ರಪಂಚದ ಸುಂದರ ನಗರಗಳಲ್ಲಿ ಒಂದು ಎಂಬ ಹೊಗಳಿಕೆಗೆ ಪಾತ್ರವಾಗಿದೆ, ಈ ಪಟ್ಟಣ.

ಜಯಪುರ ರಾಜಸ್ಥಾನದ ರಾಜಧಾನಿ. ಹಿಂದೆ ಇದು ಸ್ವತಂತ್ರ ಸಂಸ್ಥಾನದ ಕೇಂದ್ರವಾಗಿತ್ತು. ಸವಾಯಿ ಜಯಸಿಂಹನೆಂಬ ರಜಪೂತರಾಜ ಇದನ್ನು ಕಟ್ಟಿಸಿದ. ಇದರಿಂದ ಜಯಪುರವೆಂಬ ಹೆಸರು.

ಖಗೋಲಶಾಸ್ತ್ರ, ವಾಸ್ತುಶಿಲ್ಪಗಳಲ್ಲಿ ಪಂಡಿತನಾಗಿದ್ದ ಜಯಸಿಂಹ (1686–1742) ಹೊಸ ನಗರದ ನಿರ್ಮಾಣಕ್ಕಾಗಿ ಐರೋಪ್ಯ ನಗರ ಯೋಜನೆಗಳನ್ನೂ ಹಿಂದೂ ವಾಸ್ತುಶಿಲ್ಪ ಸೂತ್ರಗಳನ್ನೂ ಗಣನೆಗೆ ತೆಗೆದುಕೊಂಡು ಹೊಸ ಪಟ್ಟಣವನ್ನು ಕಟ್ಟಿಸಿದ. ಆರು ಆಯಾತಾಕಾರದ ವಿಭಾಗಗಳುಳ್ಳ, ವಿಶಾಲವಾದ ಮುಖ್ಯ ವೀಥಿಗಳು ಇರುವ ಪಟ್ಟಣದ ಸುತ್ತಲೂ ಕೋಟೆ ಗೋಡೆಯಿದೆ. ಅಲ್ಲಿಂದಾಚೆ ದಕ್ಷಿಣ ದಿಕ್ಕನ್ನು ಬಿಟ್ಟು ಉಳಿದ ಮೂರು ಕಡೆಯೂ ಬೆಟ್ಟಗಳಿವೆ.

ಜಯಪುರದ ಮುಖ್ಯ ಕಟ್ಟಡಗಳು : ಅರಮನೆ, ಜಂತರ್ ಮಂತರ್ (ಖಗೋಲ ವೀಕ್ಷಣಾಲಯ), ಹವಾ ಮಹಲ್, ರಾಮ್‌ಬಾಗ್ ಅರಮನೆ, ವಸ್ತುಸಂಗ್ರಹಾಲಯ, ಸಾರ್ವಜನಿಕ ಪುಸ್ತಕಭಂಡಾರ, ನಹಾರ್‌ಗಡ.

ನಗರದ ಅರಮನೆ ಇಡೀ ಪಟ್ಟಣದ ಏಳನೆಯ ಒಂದಂಶದಷ್ಟು ವಿಸ್ತಾರವಾಗಿದೆ. ಇಲ್ಲಿ [illegible] ಇವೆ. ಇದರ ದರ್ಬಾರ್ ಅಥವಾ ಸಾರ್ವಜನಿಕ ಸಭಾಂಗಣದಲ್ಲಿ, ಜಯಪುರದ ರಾಜರು ಸಂಗ್ರಹಿಸಿದ್ದ ತೈಲಚಿತ್ರಗಳನ್ನೂ ಹಸ್ತಪ್ರತಿಗಳನ್ನೂ ಇಟ್ಟಿದ್ದಾರೆ. ಇಂಥ ಹಸ್ತಪ್ರತಿಗಳಲ್ಲಿ 'ಮಹಾಭಾರತ'ದ ಪಾರಸೀ ಭಾಷಾಂತರವಾದ 'ರಜಂನಾಮಾ' ಮುಖ್ಯವಾದದ್ದು. ಅರಮನೆಯ ಆವರಣದೊಳಗಿರುವ ಹಾಲುಗಲ್ಲಿನ, ಏಳಂತಸ್ತುಗಳ, ಭವ್ಯ ನಿರ್ಮಾಣದ [illegible] ಭಾರತದಲ್ಲೇ ಅತ್ಯುತ್ತಮವಾದದ್ದು.

ಹವಾ ಮಹಲ್ ಜಯಪುರದ ಪ್ರಮುಖ ಕಟ್ಟಡ. ಇದಕ್ಕೆ ಐದು ಅಂತಸ್ತುಗಳಿವೆ. [illegible] ರಚನೆ ಕ್ರಮವಾಗಿ ಕಿರಿದಾಗುತ್ತ ಹೋಗುತ್ತದೆ. 1799ರಲ್ಲಿ ಇದನ್ನು ರಾಜಾ ಸವಾಯಿ ಪ್ರತಾಪಸಿಂಹ ಕಟ್ಟಿಸಿದ. ಕಟ್ಟಡದ ಮುಂಭಾಗವೆಲ್ಲ ಅಷ್ಟಕೋನಾಕೃತಿಯ ಜಾಲಂದ್ರದ ಕಿಟಕಿಗಳಿಂದ ತುಂಬಿದೆ.



[illegible]

ಜಯಪುರದ ವಸ್ತುಸಂಗ್ರಹಾಲಯದಲ್ಲಿ ಕಲಾಕೃತಿಗಳು, ದಂತಕೆತ್ತನೆ, ಆಭರಣ, ಕುಂಭಪದಾರ್ಥ, ಮರಕೆತ್ತನೆ, ಕಂಚಿನ ವಸ್ತುಗಳುಮುಂತಾದ ಕುಶಲ ಕಲಾಕೃತಿಗಳಿವೆ. ವಸ್ತುಸಂಗ್ರಹಾಲಯದ ಕಟ್ಟಡ ಮರಳುಗಲ್ಲು ಮತ್ತು ಚಂದ್ರಕಾಂತ ಶಿಲೆಗಳಿಂದ ರಚಿಸಲ್ಪಟ್ಟಿದೆ.

ರಾಜಸ್ಥಾನದ ವಿಶ್ವವಿದ್ಯಾನಿಲಯದ ಕೇಂದ್ರ ಜಯಪುರದಲ್ಲಿದೆ.

[illegible]

ಇಲ್ಲಿಯ ಜನಸಂಖ್ಯೆ 6,15,258.

ಜಲಂಧರ್

ಪಂಜಾಬ್ ರಾಜ್ಯದ ಸಾರಿಗೆ ವ್ಯವಸ್ಥೆಯ ಮುಖ್ಯ ಸಂಧಿಸ್ಥಳಗಳಲ್ಲಿ ಒಂದು ಜಲಂಧರ್. ರಾಜ್ಯದ ಎಲ್ಲ ಮುಖ್ಯ ಪಟ್ಟಣಗಳಿಗೂ ಇಲ್ಲಿಂದ ರಸ್ತೆ ಸಾರಿಗೆಯಿದೆ. ಪಂಜಾಬಿನ ರಾಜಧಾನಿ ಚಂಡೀಗಡದಿಂದ ಇಲ್ಲಿಗೆ 93 ಮೈಲು.

ಜಲಂಧರ್, ಇಲ್ಲಿ ನಡೆಯುವ ಸಂಗೀತೋತ್ಸವಕ್ಕೆ ಪ್ರಖ್ಯಾತ. ಡಿಸೆಂಬರ್ ತಿಂಗಳಿನಲ್ಲಿ ಇಲ್ಲಿನ ಬಾಬಾ ಹರ್‌ಬಲ್ಲಾ ಕ್ಷೇತ್ರಕ್ಕೆ ರಾಷ್ಟ್ರದ ವಿವಿಧ ಭಾಗಗಳಿಂದ ಸಂಗೀತಗಾರರು ಬರುತ್ತಾರೆ; ಹಾಡುಗಾರಿಕೆ, ಹಾಗೂ ವಾದ್ಯ ಸಂಗೀತ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಾರೆ.

ಜಲಂಧರ್ ಒಂದು ಪ್ರಾಚೀನ ಪಟ್ಟಣ; ಏಳನೆಯ ಶತಮಾನದಲ್ಲಿ ಆಳಿದ ರಜಪೂತ ರಾಜ್ಯವೊಂದರ ರಾಜಧಾನಿಯಾಗಿತ್ತು. ಆಗ ಚೀನೀ ಯಾತ್ರಿಕ ಹ್ಯೂಯೆನ್ ತ್ಸಾಂಗ್ ಇಲ್ಲಿಗೆ ಬಂದಿದ್ದ. 1757ರಲ್ಲಿ ಇದು ಸಿಕ್ಖರಿಂದ ಹಾನಿಗೊಳಗಾಯಿತು. ರಣಜಿತ್‌ಸಿಂಗ್ 1811ರಲ್ಲಿ ಜಲಂಧರವನ್ನು ವಶಪಡಿಸಿಕೊಂಡ. ಮುಂದೆ 1846ರಲ್ಲಿ ಸಿಕ್ಖರನ್ನು ಸೋಲಿಸಿದ ಆಂಗ್ಲರು ಇದನ್ನು ಸ್ವಾಧೀನಪಡಿಸಿಕೊಂಡರು.

ಆಧುನಿಕ ಜಲಂಧರ್ ಒಂದು ಮುಖ್ಯ ಮಾರುಕಟ್ಟೆ. ಕೃಷಿ ಉಪಕರಣ, ಹಿಟ್ಟು, ವನಸ್ಪತಿ ತೈಲ, ರೇಷ್ಮೆ ವಸ್ತ್ರ, ಕುಶಲ ಕೈಗಾರಿಕಾ ಪದಾರ್ಥಗಳು ಇಲ್ಲಿನ ಮಾರುಕಟ್ಟೆಗೆ ಬರುತ್ತವೆ. 1947ರಿಂದ ಇದು ಕ್ರೀಡಾ ಉಪಕರಣಗಳನ್ನು ತಯಾರಿಸುವ ಕೈಗಾರಿಕೆಗಳ ಕೇಂದ್ರವಾಗಿದೆ. ವಿಮಾನ ಸಾರಿಗೆ ಸೌಲಭ್ಯವೂ ಇಲ್ಲಿ ಇದೆ. ಉಪನಗರಗಳು ಮುಖ್ಯ ನಗರದ ಸುತ್ತಲೂ ಇವೆ. ಮೂರು ಮೈಲು ದೂರದಲ್ಲಿ ದೊಡ್ಡ ದಂಡು ಪ್ರದೇಶವಿದೆ.

ಇಲ್ಲಿಯ ಜನಸಂಖ್ಯೆ 2,96,106.


ಜಲಿಯನ್‌ವಾಲಾ ಬಾಗ್



ಜಲಿಯನ್‌ವಾಲಾ ಬಾಗ್ ಸ್ಮಾರಕ

1919 ಏಪ್ರಿಲ್ ತಿಂಗಳ 13: ಪಂಜಾಬಿನಲ್ಲಿ ಅಂದು ವೈಶಾಖಿ ಹಬ್ಬ. ಅಮೃತಸರದ ಸುವರ್ಣದೇವಾಲಯದಿಂದ ಸ್ವಲ್ಪ ದೂರದಲ್ಲಿರುವ ಜಲಿಯನ್‌ವಾಲಾ ಬಾಗ್‌ನಲ್ಲಿ ಆ ಸಂಜೆ ಒಂದು ದೊಡ್ಡ ದುರಂತ ನಡೆಯಿತು.

ಮೊದಲನೆಯ ಜಾಗತಿಕ ಯುದ್ಧದ ಹೊರೆ ನಿರ್ವಹಿಸುವುದಕ್ಕಾಗಿ ಬ್ರಿಟಿಷ್ ಸರಕಾರ ಹೆಚ್ಚಿನ ತೆರಿಗೆಯನ್ನು ಭಾರತೀಯರ ಮೇಲೆ ಹೇರಿತ್ತು; ದೇಶದಲ್ಲಿ ಸಂಕ್ರಾಮಿಕರೋಗಗಳು ಹರಡಿದ್ದುವು. ಬೆಳೆಯೂ ಸರಿಯಾಗಿ ಬಂದಿರಲಿಲ್ಲ. ಈ ಸ್ಥಿತಿಯಲ್ಲೂ ಸರಕಾರ ಯುವಕರನ್ನು ಬಲಾತ್ಕಾರದಿಂದ ಸೇನೆಗೆ ಸೇರಿಸಿಕೊಳ್ಳತೊಡಗಿತು. ಇದೆಲ್ಲದರಿಂದ ಜನ ರೋಸಿ ಹೋಗಿದ್ದರು. ಹೀಗಿದ್ದಾಗ ಬ್ರಿಟಿಷ್ ಸರಕಾರ ರೌಲಟ್ ಶಾಸನವನ್ನು ಜಾರಿಗೆ ತಂದಿತು. (ಅದಕ್ಕೆ ಆಧಾರವಾದ ವರದಿಯನ್ನು ತಯಾರಿಸಿದ ಸಮಿತಿಯ ಅಧ್ಯಕ್ಷನಿಂದಾಗಿ ಶಾಸನಕ್ಕೆ ಆ ಹೆಸರು.) ಈ ಶಾಸನದಂತೆ ಯಾವ ಭಾರತೀಯನನ್ನಾದರೂ ರಾಜದ್ರೋಹಿ ಎಂಬ ಅನುಮಾನದ ಮೇಲೆ ಬಂಧಿಸಿ ಶಿಕ್ಷಿಸಬಹುದಾಗಿತ್ತು. ಈ ಶಿಕ್ಷೆಯ ವಿರುದ್ಧ ಅಪೀಲುಮಾಡುವ ಮಾರ್ಗವೂ ಇರಲಿಲ್ಲ. ಬ್ರಿಟಿಷ್ ಸರಕಾರ ಭಾರತೀಯ ದೇಶಾಭಿಮಾನಿಗಳನ್ನೂ ಸ್ವಾತಂತ್ರ್ಯ ಹೋರಾಟಗಾರರನ್ನೂ ರಾಜದ್ರೋಹಿಗಳು ಎಂದು ಕರೆದು, ಅನೇಕರನ್ನು ವಿಚಾರಣೆಗೆ ಗುರಿ ಮಾಡಿತು. ಇದರಿಂದ ಕೆರಳಿದ ಜನ ಈ ಕಾಯಿದೆಯ ವಿರುದ್ಧ ತಮ್ಮ ಪ್ರತಿಭಟನೆಯನ್ನು ತೋರಿದರು.



ಪಂಜಾಬಿನ ಅಮೃತಸರದಲ್ಲೂ ಇಂಥ ಪ್ರತಿಭಟನೆ ನಡೆಯಿತು. ಅಲ್ಲಿನ ಮುಂದಾಳುಗಳು ಡಾ. ಕಿಚ್ಲು ಹಾಗೂ ಡಾ. ಸತ್ಯಪಾಲ್. ಅವರನ್ನು ಸರಕಾರ ಬಂಧಿಸಿತು. ಜನ ಹರತಾಳ ನಡೆಸಿ ಮೆರವಣಿಗೆ ಹೊರಟರು. ಆಗ ಪೋಲೀಸರು ಗುಂಡು ಹಾರಿಸಿ ಅನೇಕರನ್ನು ಕೊಂದರು.

ಈ ಘಟನೆಯನ್ನು ವಿರೋಧಿಸಲು ಅಮೃತಸರದ ಜನ 1919 ಏಪ್ರಿಲ್ 13ರಂದು ಜಲಿಯನ್‌ವಾಲಾ ಬಾಗ್‌ನಲ್ಲಿ ಸಭೆ ನಡೆಸಲು ನಿರ್ಧರಿಸಿದರು. ಸುತ್ತಲೂ ಮನೆಗಳಿಂದ ಆವೃತವಾಗಿ, ಇಕ್ಕಟ್ಟಾದ ಒಂದೇ ಒಂದು ಪ್ರವೇಶ ದಾರಿಯ ತೆರಪು ಜಾಗ ಜಲಿಯನ್‌ವಾಲಾ ಬಾಗ್.

ಪಂಜಾಬಿನ ಲೆಫ್ಟಿನೆಂಟ್ ಗವರ್ನರ್ ಮೈಕೆಲ್ ಒಡ್ವಯರ್. ಅಮೃತಸರದ ನಿಯಂತ್ರಣಕ್ಕಾಗಿ ನಿಯಮಿಸಿದ್ದ ಜನರಲ್ ಡಯರ್, ಈ ಸಭೆ ಸೇರಿದರೆ ಅದರ ಮೇಲೆ ಗುಂಡು ಹಾರಿಸುವುದಾಗಿ ಘೋಷಿಸಿದ. ಜನ ಧೃತಿಗೆಡಲಿಲ್ಲ. ಸುಮಾರು 20,000 ನಿಶ್ಶಸ್ತ್ರರಾದ ಗಂಡಸರು, ಹೆಂಗಸರು, ಮಕ್ಕಳು ಅಲ್ಲಿ ಸೇರಿದರು. ಡಯರ್ ಇಕ್ಕಟ್ಟಿನ ದಾರಿಯಲ್ಲಿ ತನ್ನ ಸೇನೆ ನಿಲ್ಲಿಸಿದ. ಸಭೆಯ ಮೇಲೆ ಗುಂಡು ಹಾರಿಸಲು ಸೈನಿಕರಿಗೆ ಆಜ್ಞೆಮಾಡಿದ. ಸುಮಾರು 1650 ಸುತ್ತು ಗುಂಡು ಹಾರಿಸಲಾಯಿತು. 379 ಜನ ಸತ್ತರು. ಗಾಯಗೊಂಡು ಚಿಕಿತ್ಸೆ ಪಡೆದವರು 1200 ಜನ. ಡಯರ್ ನಗರದಲ್ಲಿ ಕರ್ಫ್ಯೂ ವಿಧಿಸಿ, ಗಾಯಗೊಂಡವರಿಗೆ ವೈದ್ಯಕೀಯ ನೆರವು ದೊರೆಯದಂತೆ ಮಾಡಿದ.

ಕವಿ ಠಾಕೂರರು ಈ ಘಟನೆಯಿಂದ ದುಃಖಿತರಾಗಿ, ತಮ್ಮ ಸರ್ ಪದವಿಯನ್ನು ಬ್ರಿಟಿಷ್ ಸರಕಾರಕ್ಕೆ ಹಿಂದಿರುಗಿಸಿದರು. ಈ ಹತ್ಯಾಕಾಂಡದ ಬಗೆಗೆ ಗಾಂಧೀಜೀ, "ಇದು ಕೇವಲ ಆರಂಭ ಮಾತ್ರ", ಎಂದರು.

ಜಲಿಯನ್‌ವಾಲಾ ಬಾಗ್ ಹತ್ಯಾಕಾಂಡವನ್ನು ನೋಡಿದ ಇಪ್ಪತ್ತರ ಯುವಕ ಉಧಾಮ್‌ಸಿಂಗ್ ಪ್ರತೀಕಾರ ಮಾಡುವ ಪ್ರತಿಜ್ಞೆ ಕೈಗೊಂಡ. ಒಡ್ವಯರ್ ಮತ್ತು ಡಯರ್ ಇಂಗ್ಲೆಂಡಿಗೆ ಮರಳಿದರು. ಉಧಾಮ್‌ಸಿಂಗ್ ಬಹಳಷ್ಟು ದುಡಿದು ಹಣ ಕೂಡಿಸಿ ಇಂಗ್ಲೆಂಡಿಗೆ ಹೋದ. ಡಯರ್ ಆ ಹೊತ್ತಿಗೆ ಕಾಲವಾಗಿದ್ದ. ಜಲಿಯನ್‌ವಾಲಾಬಾಗ್ ಪ್ರಕರಣ ನಡೆದು 21 ವರ್ಷಗಳ ಬಳಿಕ 1941ರಲ್ಲಿ, ಲಂಡನಿನ ಒಂದು ಸಭೆಯಲ್ಲಿ ಒಡ್ವಯರ್‌ನನ್ನು ಉಧಾಮ್‌ಸಿಂಗ್ ಗುಂಡಿಕ್ಕಿಕೊಂದ. ಗುಂಡು ಹಾರಿಸಿದ

ಬಳಿಕ ಓಡಿಹೋಗಲಿಲ್ಲ. ಬಂಧನಕ್ಕೊಳಗಾದ. ನ್ಯಾಯಾಲಯದಲ್ಲಿ ಉಧಾಮನು "ಅವನಿಗೆ ತಕ್ಕ ಶಾಸ್ತಿಯಾಯಿತು", ಎಂದು ನುಡಿದ. ಉಧಾಮನನ್ನು ಮರಣ ದಂಡನೆಗೆ ಗುರಿಪಡಿಸಿದರು.

ಇಂದು ಜಲಿಯನ್‌ವಾಲಾ ಬಾಗ್‌ನಲ್ಲಿ ಹುತಾತ್ಮರಿಗಾಗಿ ಒಂದು ಸ್ಮಾರಕ ಏರ್ಪಟ್ಟಿದೆ: ಉತ್ತಮ ಉದ್ಯಾನವಿದೆ.

ಜವಾಬ್ದಾರಿ ಸರಕಾರ

ಬ್ರಿಟಿಷರು ಭಾರತದಲ್ಲಿ ಆಡಳಿತ ನಡೆಸುತ್ತಿದ್ದಾಗ ನಮ್ಮ ದೇಶವನ್ನು ಪ್ರಾಂತಗಳು ಮತ್ತು ಸಂಸ್ಥಾನಗಳು ಎಂದು ವಿಂಗಡಿಸಲಾಗಿತ್ತು. ಪ್ರಾಂತ



ದ್ದಯ್ಯ



ಕೆ. ಟಿ. ಭಾಷ್ಯಂ



ಸಾಹುಕಾರ್ ಚೆನ್ನಯ್ಯ



ದಾಸಪ್ಪ



ಯಶೋಧರಮ್ಮ ದಾಸಪ್ಪ



ವಿ. ವೆಂಕಟಪ್ಪ

ಗಳು ನೇರವಾಗಿ ಬ್ರಿಟಿಷ್ ಆಡಳಿತಕ್ಕೆ ಒಳಪಟ್ಟಿದ್ದುವು. ಸಂಸ್ಥಾನಗಳಲ್ಲಿ ಮಹಾರಾಜರು, ರಾಜರು, ನಿಜಾಮರು, ನವಾಬರು ಆಳುತ್ತಿದ್ದರು. ಆದರೂ ಅವರೆಲ್ಲ ಬ್ರಿಟಿಷ್ ಪ್ರಭುತ್ವಕ್ಕೆ ಅಧೀನರಾಗಿದ್ದರು.

ಈ ಸಂಸ್ಥಾನಗಳಲ್ಲಿ ಬ್ರಿಟಿಷ್ ಪ್ರಭುತ್ವದ ಪ್ರತಿನಿಧಿಯಾಗಿ ರೆಸಿಡೆಂಟ್ ಅಥವಾ ಪೊಲಿಟಿಕಲ್ ಏಜೆಂಟ್ ಎಂಬ ಅಧಿಕಾರಿ ಇರುತ್ತಿದ್ದ. ಸಂಸ್ಥಾನಾಧಿಪತಿಗಳು ಈ ಅಧಿಕಾರಿಯ ಮೂಲಕ ಬ್ರಿಟಿಷ್ ಸಾರ್ವಭೌಮ ಸರಕಾರದೊಡನೆ ವ್ಯವಹಾರ ನಡೆಸಬೇಕಾಗಿತ್ತು.


ನಾಲ್ಕನೆಯ ಮೈಸೂರು ಯುದ್ಧದಲ್ಲಿ ಟಿಪ್ಪು ಸುಲ್ತಾನನ ಮರಣವಾಯಿತು. ಮೈಸೂರು ಸಂಸ್ಥಾನದ ರಾಜ್ಯಭಾರವನ್ನು ಮುಮ್ಮಡಿ ಕೃಷ್ಣರಾಜ ಒಡೆಯರಿಗೆ ವಹಿಸಿಕೊಡಲಾಯಿತು. ಸ್ವಲ್ಪ ಕಾಲಾನಂತರ ಬ್ರಿಟಿಷ್



ಸಂಪಿಗೆ ವೆಂಕಟಪತಯ್ಯ




ಎಚ್. ಬಿ. ಗುಂಡಪ್ಪಗೌಡ



ಎಚ್. ಕೆ. ವೀರಣ್ಣ ಗೌ

ಸರಕಾರ ರಾಜ್ಯದ ಆಡಳಿತವನ್ನು ತಾನೇ ವಹಿಸಿಕೊಂಡಿತು; ತನ್ನ ಪರವಾಗಿ ಆಡಳಿತ ನಡೆಸಲು ಒಬ್ಬ ಚೀಫ್ ಕಮಿಷನರನ್ನು ನೇಮಕ ಮಾಡಿತು.

ಮುಮ್ಮಡಿ ಕೃಷ್ಣರಾಜ ಒಡೆಯರ್ ಬ್ರಿಟಿಷ್ ಸರಕಾರದೊಡನೆ ಎಡಬಿಡದೆ ಸಂಧಾನ ನಡೆಸಿ ಮೈಸೂರಿನ ರಾಜ್ಯಾಧಿಕಾರವನ್ನು ಮತ್ತೆ ತಮ್ಮ ವಶಕ್ಕೆ ಪಡೆದುಕೊಂಡರು. ಇವರ ದತ್ತು ಪುತ್ರ ಚಾಮರಾಜ ಒಡೆಯರು ಪ್ರಾಪ್ತ ವಯಸ್ಕರಾದಾಗ ಅಂದರೆ 1881ರಲ್ಲಿ ಮೈಸೂರು ಸಂಸ್ಥಾನದ ಆಡಳಿತ ಅವರ ಕೈಗೆ ಬಂತು. ಮಹಾರಾಜರ ದಿವಾನರಾಗಿ ರಂಗಾಚಾರ್ಲು ನೇಮಕವಾದರು.



ಕೆ. ರಂಗ ಅಯ್ಯಂಗಾರ

ಜನರಿಗೆ ಸಂಸ್ಥಾನದ ಆಡಳಿತದಲ್ಲಿ ಭಾಗವಹಿಸುವುದಕ್ಕೆ ಅವಕಾಶ ಮಾಡಿಕೊಡುವಂಥ ವ್ಯವಸ್ಥೆ ಪ್ರಾರಂಭವಾದದ್ದು ಕೂಡ 1881ನೆಯ ಇಸವಿ ಯಲ್ಲೇ. ಆ ವರ್ಷ ಚಾಮರಾಜ ಒಡೆಯರು ದಿವಾನರಾದ ರಂಗಾಚಾರ್ಲು ಅವರ ಸಲಹೆಯಂತೆ ಮೈಸೂರು ಪ್ರಜಾಪ್ರತಿನಿಧಿ ಸಭೆ ಸ್ಥಾಪಿಸುವುದಕ್ಕೆ ಅನುಮತಿ ಇತ್ತರು.

ಭಾರತದಲ್ಲಿ ಪ್ರಜಾಪ್ರಭುತ್ವ ಪದ್ಧತಿಯಂತೆ ಏರ್ಪಟ್ಟ ಮೊದಲ ಶಾಸನ ಸಭೆ, ಮೈಸೂರು ಪ್ರಜಾಪ್ರತಿನಿಧಿ ಸಭೆ. ಇದಾದ ನಾಲ್ಕು ವರ್ಷಗಳ ಮೇಲೆ ರಾಷ್ಟ್ರೀಯ ಕಾಂಗ್ರೆಸ್ ಸ್ಥಾಪನೆಯಾಯಿತು.



ತಗಡೂರು ರಾಮಚಂದ್ರರಾವ್

ಮೈಸೂರು ಸಂಸ್ಥಾನದಲ್ಲಿ ಕ್ರಮೇಣ ನ್ಯಾಯವಿಧಾಯಕ ಸಭೆಯೂ ಏರ್ಪಟ್ಟಿತು.

ಸಂಸ್ಥಾನದ ಈ ಎರಡು ಶಾಸಕ ಸಭೆಗಳಿಗೂ ಪೂರ್ಣ ಸ್ವಾತಂತ್ರ್ಯವಿರಲಿಲ್ಲ. ಅವು ದಿವಾನರ ಮೂಲಕ ಪ್ರಜೆಗಳ ಕುಂದುಕೊರತೆಗಳನ್ನು ಶ್ರೀಮನ್ಮಹಾರಾಜರ ಸರಕಾರಕ್ಕೆ ಅರಿಕೆ ಮಾಡಿಕೊಳ್ಳುವ ಸಂಸ್ಥೆಗಳಾಗಿದ್ದುವು. ಆದರೆ, ಅವುಗಳಿಗೆ ನಡೆಯುತ್ತಿದ್ದ ಚುನಾವಣೆ ವಯಸ್ಕರ ಮತದಾನ ಪದ್ಧತಿಯನ್ನು ಅವಲಂಬಿಸಿರಲಿಲ್ಲ.

ದಿವಾನರೂ ಅವರ ಸಮಾಲೋಚಕ ಮಂಡಲಿಯವರೂ ಪ್ರಜಾಪ್ರತಿನಿಧಿ ಸಭೆಗಾಗಲಿ ನ್ಯಾಯವಿಧಾಯಕ ಸಭೆಗಾಗಲಿ ಜವಾಬ್ದಾರರಾಗಿರಲಿಲ್ಲ. ಮಹಾರಾಜರೇ ದಿವಾನರನ್ನೂ ಸಮಾಲೋಚಕ ಮಂಡಲಿಯ ಸದಸ್ಯರನ್ನೂ ನೇಮಕ



ಟಿ. ಸುಬ್ರಹ್ಮಣ್ಯ

ರೆಡ್ಡಿ




ಎಸ್. ನಿಜಲಿಂಗಪ್ಪ



ಕೆ. ಹನುಮಂತಯ್ಯ



ವೀರಕೇಸರಿ ಸೀತಾರಾಮಶಾಸ್ತ್ರಿ



ತಿ. ತಾ. ಶರ್ಮ



ಟಿ. ಸಿದ್ದಲಿಂಗಯ್ಯ



ಮಾಡುತ್ತಿದ್ದರು. ಶಾಸಕಾಂಗಕ್ಕೆ ಮಂತ್ರಿಮಂಡಲ ರಚಿಸುವ ಹಕ್ಕು ಇರಲಿಲ್ಲ. ಕೆಲವು ಸಂಸ್ಥಾನಗಳ ಅಧಿಪತಿಗಳು ಜನಪ್ರಿಯರಾಗಿದ್ದರೆ, ಇನ್ನು ಕೆಲವು ಕಡೆಗಳಲ್ಲಿ ಅವರು ಪ್ರಜಾಪೀಡಕರೇ ಆಗಿದ್ದರು. ಜನರ ಆಸೆ ಆಕಾಂಕ್ಷೆಗಳನ್ನು ಲಕ್ಷಿಸದೆ ದಬ್ಬಾಳಿಕೆ ನಡೆಸುತ್ತಿದ್ದರು. ಬ್ರಿಟಿಷ್ ಪ್ರಾಂತಗಳಲ್ಲಿ ಸ್ವಾತಂತ್ರ್ಯ ಚಳುವಳಿ ಪ್ರಾರಂಭವಾಗಿ ಅಲ್ಲಿ ಸ್ವಲ್ಪಮಟ್ಟಿಗೆ ಪ್ರಜಾಪ್ರಭುತ್ವ ದೊರೆತ ಮೇಲೆ, ಆ ಮುನ್ನಡೆ ದೇಶೀಯ ಸಂಸ್ಥಾನಗಳ ಮೇಲೆ ಪರಿಣಾಮ ಉಂಟುಮಾಡಿತು.

ದೇಶೀಯ ಸಂಸ್ಥಾನಗಳಲ್ಲೂ ಜನರು ಸ್ವಾತಂತ್ರ್ಯ ಆಂದೋಳನ ಪ್ರಾರಂಭಿಸಿದರು. ಮೈಸೂರಿನಂಥ ಸಂಸ್ಥಾನಗಳಲ್ಲಿ ಅದು 'ಜವಾಬ್ದಾರಿ ಸರಕಾರದ ಸ್ಥಾಪನೆ'ಗೆ ಒತ್ತಾಯಪಡಿಸುವ ಚಳುವಳಿಯಾಗಿ ಪರಿಣಮಿಸಿತು. ಜವಾಬ್ದಾರಿ ಸರಕಾರದ ರಚನೆಯಾದರೆ, ರಾಜರ ಸ್ಥಾನಮಾನ ವೇನು ಎಂಬ ಪ್ರಶ್ನೆ ತಲೆದೋರಿತು. ಕೆಲವರು "ರಾಜ ಮಹಾರಾಜರು ಇರುವುದು ಬೇಡ; ಪೂರ್ಣ ಜವಾಬ್ದಾರಿ ಸರಕಾರವೇ ಆಗಬೇಕು" ಎಂದು ಒತ್ತಾಯಪಡಿಸಿದರೂ, ಇತರರು "ಶ್ರೀಮನ್ಮಹಾರಾಜರ ಕೃಪಾಶ್ರಯದಲ್ಲಿ ಜವಾಬ್ದಾರಿ ಸರಕಾರ ಏರ್ಪಡಬೇಕು" ಎಂದು ಪ್ರತಿಪಾದಿಸಿದರು. ಆದರೆ ಈ ಭಿನ್ನಾಭಿಪ್ರಾಯದಿಂದ ಜವಾಬ್ದಾರಿ ಸರಕಾರಕ್ಕೋಸ್ಕರ ನಡೆದ ಚಳುವಳಿಗೆ ಭಂಗ ಉಂಟಾಗಲಿಲ್ಲ.

ಜವಾಬ್ದಾರಿ ಸರಕಾರದ ಬೇಡಿಕೆಗೂ ಪ್ರಾಂತಗಳಲ್ಲಿ ಸ್ವರಾಜ್ಯದ ಬೇಡಿಕೆಗೂ ಹೆಚ್ಚಿನ ವ್ಯತ್ಯಾಸವಿರಲಿಲ್ಲ. ಎರಡರ ಗುರಿಯೂ ಪ್ರಜೆಗಳಿಗೆ ಸ್ವಾತಂತ್ರ್ಯಗಳಿಸಿ ಕೊಡುವುದೇ ಆಗಿತ್ತು. ಆದ್ದರಿಂದ ದೇಶೀಯ ಸಂಸ್ಥಾನಗಳಲ್ಲಿ ನಡೆಯುತ್ತಿದ್ದ ಆಂದೋಲನ ರಾಷ್ಟ್ರೀಯ ಸ್ವಾತಂತ್ರ್ಯ ಸಮರದ ಒಂದು ಭಾಗವೇ ಆಗಿತ್ತು. ಮೈಸೂರಿನಲ್ಲಿ ಜವಾಬ್ದಾರಿ ಸರಕಾರ ಸ್ಥಾಪನೆಗಾಗಿ 1948ರಲ್ಲಿ ನಡೆದ ಉಗ್ರ ಚಳುವಳಿಯ ಫಲವಾಗಿ ಕೆ. ಸಿ. ರೆಡ್ಡಿ ಅವರ ನಾಯಕತ್ವದಲ್ಲಿ ಶಾಸನ ಸಭೆಗೆ ಜವಾಬ್ದಾರಿ ಹೊತ್ತ ಕಾಂಗ್ರೆಸ್ ಮಂತ್ರಿಮಂಡಲ ರಚಿತವಾಯಿತು.

ಜವಾಹರಲಾಲ ನೆಹರೂ

ಅಲಹಾಬಾದಿನ ಅಗ್ರ ನ್ಯಾಯವಾದಿ ಮೋತೀಲಾಲ ನೆಹರೂ ಮತ್ತು ಅವರ ಪತ್ನಿ ಸ್ವರೂಪರಾಣಿ — ಈ ದಂಪತಿಯ ಪುತ್ರ ಜವಾಹರ ಲಾಲ ನೆಹರೂ. 1889 ನವೆಂಬರ್ 14ರಂದು ಅಲಹಾಬಾದಿನಲ್ಲಿ ಜನನ.

ತನ್ನ ಮಗನಿಗೆ ಇಂಗ್ಲೆಂಡಿನಂಥ ಉನ್ನತ ಶಿಕ್ಷಣ ಕೊಡಿಸಬೇಕೆಂದಿದ್ದ ಮೋತೀಲಾಲರು ಮಗನಿಗೆ ಆರಂಭದ ಶಿಕ್ಷಣವನ್ನು ಮನೆಯಲ್ಲೇ ಎಫ್. ಟಿ. ಬ್ರೂಕ್ಸ್ ಎಂಬ ಆಂಗ್ಲ ಅಧ್ಯಾಪಕರಿಂದ ಕೊಡಿಸಿದರು. ಬಾಲಕ ಜವಾಹರ, ಆಂಗ್ಲ ಸಾಹಿತ್ಯ ಕೃತಿಗಳನ್ನು ಓದುವುದರೊಂದಿಗೆ ವಿಜ್ಞಾನದಲ್ಲೂ ಹೆಚ್ಚಿನ ಆಸಕ್ತಿ ತೋರಿಸಿದ.

ಜವಾಹರಲಾಲರಿಗೆ ಹದಿನೈದು ವರ್ಷವಾಗುತ್ತಲೇ ಮೋತೀಲಾಲರು ಮಗನನ್ನು ಇಂಗ್ಲೆಂಡಿನ ಹ್ಯಾರೋ ಶಾಲೆಗೆ ಸೇರಿಸಿದರು. ವಿದ್ಯಾರ್ಥಿ ದೆಸೆಯಲ್ಲೇ ಅವರು ಅಲ್ಲಿನ ರಾಜಕೀಯದಲ್ಲಿ ಆಸಕ್ತಿ ವಹಿಸಿದರು. 1910ರಲ್ಲಿ ಕೇಂಬ್ರಿಜ್ ಟ್ರಿನಿಟಿ ಕಾಲೇಜಿನಲ್ಲಿ ಕಲಿತು ಪದವೀಧರರಾದರು. ಕೇಂಬ್ರಿಜಿನಿಂದ ಲಂಡನಿಗೆ ಬಂದು ಬ್ಯಾರಿಸ್ಟರ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದರು. ಹೀಗೆ ಏಳು ವರ್ಷಗಳನ್ನು ಇಂಗ್ಲೆಂಡಿನಲ್ಲಿ ಕಳೆದು 1912ರಲ್ಲಿ ಭಾರತಕ್ಕೆ ಮರಳಿದರು.



ಜವಾಹರಲಾಲ್ - ಕಮಲಾ

ಇಂಗ್ಲೆಂಡಿನಿಂದ ಬಂದ ಜವಾಹರರು ಹೈಕೋರ್ಟಿನಲ್ಲಿ ವಕೀಲಿ ಆರಂಭಿಸಿದರು. ತಂದೆಗೆ ಸಹಾಯಕರಾಗಿ ನಿಂತರು. 1916ರಲ್ಲಿ ಜವಾಹರಲಾಲರಿಗೆ ಕಮಲಾ ಅವರೊಂದಿಗೆ ಮದುವೆಯಾಯಿತು.

1916ರಲ್ಲಿ ಕಾಂಗ್ರೆಸ್ ಮಹಾಧಿವೇಶನ ಲಖನೌದಲ್ಲಿ ಜರಗಿದಾಗ ಜವಾಹರಲಾಲರು ಅದರಲ್ಲಿ ಭಾಗವಹಿಸಿದರು. ಅವರು ಗಾಂಧೀಜಿಯನ್ನು ಮೊದಲ ಬಾರಿ ಭೇಟಿ ಆದದ್ದು ಆ ಅಧಿವೇಶನದಲ್ಲಿ. 1918ರಲ್ಲಿ ಅವರು ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಸದಸ್ಯರಾದರು. ಮುಂದೆ ಅದರ ಕಾರ್ಯಕಾರಿ ಮಂಡಳಿಯ ಸದಸ್ಯರೂ ಕಾರ್ಯದರ್ಶಿಯೂ ಆದರು.

1921ರಲ್ಲಿ ಬ್ರಿಟಿಷ್ ಯುವರಾಜರ ಭಾರತ ಭೇಟಿ ಏರ್ಪಟ್ಟಿತು. ಅವರ ಆಗಮನದ ವಿರುದ್ಧ ಕರಪತ್ರ ಹಂಚಿದ್ದಕ್ಕಾಗಿ ಜವಾಹರರು ಬಂಧಿತರಾದರು. ಇದು ಅವರ ಮೊತ್ತಮೊದಲ ಸೆರೆಮನೆವಾಸ. ಮುಂದೆ ಹಲವು ಸಲ ಅವರು ಕಾರಾಗೃಹವಾಸ ಅನುಭವಿಸಿದರು. 1928ರಲ್ಲಿ ಮೋತೀಲಾಲರ ಅಧ್ಯಕ್ಷತೆಯಲ್ಲಿ ಕಾಂಗ್ರೆಸ್ ಮಹಾಧಿವೇಶನ ನಡೆದಾಗ ದೇಶಕ್ಕೆ ಸಂಪೂರ್ಣ ಸ್ವಾತಂತ್ರ್ಯ ಬೇಕು ಎಂಬ ನಿರ್ಣಯ ಮಂಡಿಸಿದರು. 1929ರಲ್ಲಿ ಲಾಹೋರಿನಲ್ಲಿ ಜವಾಹರಲಾಲ ನೆಹರೂ ಅವರ ಅಧ್ಯಕ್ಷತೆಯಲ್ಲಿ ಜರಗಿದ ಕಾಂಗ್ರೆಸ್ ಮಹಾಧಿವೇಶನ ಸಂಪೂರ್ಣ ಸ್ವಾತಂತ್ರ್ಯವೇ ಭಾರತದ ಗುರಿ ಎಂದು ಸಾರಿತು. ಅನಂತರವೂ ಕೆಲವು ಸಲ ಜವಾಹರಲಾಲರು ಕಾಂಗ್ರೆಸ್ಸಿನ ಅಧ್ಯಕ್ಷರಾದರು.

1942 ಆಗಸ್ಟ್ 8ರಂದು ಮುಂಬಯಿಯಲ್ಲಿ ಜರಗಿದ ಕಾಂಗ್ರೆಸ್ ಮಹಾಧಿವೇಶನದಲ್ಲಿ 'ಭಾರತದಿಂದ ತೊಲಗಿ' ನಿರ್ಣಯವನ್ನು ಮಂಡಿಸಿ ಕಾಂಗ್ರೆಸ್ ಕಾರ್ಯಕಾರಿ ಮಂಡಳಿಯ ಸದಸ್ಯರೊಂದಿಗೆ ಬಂಧಿತರಾದರು. ಭಾರತ ಸ್ವಾತಂತ್ರ್ಯ ಹೋರಾಟದಲ್ಲಿ ಗಾಂಧೀಜಿಯ ಬಲಗೈಯಾಗಿ

ಜವಾಹರರು ಸಲ್ಲಿಸಿದ ಸೇವೆ ಅಪಾರ. ಕಾಂಗ್ರೆಸ್ಸಿನ ನೀತಿಯು ಸರ್ವ ಸಾಮಾನ್ಯವಾಗಿ ಸಮಾಜವಾದಿಯಾಗಲು ಅವರೇ ಕಾರಣ. 1947ರಲ್ಲಿ ಭಾರತ ಸ್ವತಂತ್ರವಾದಾಗ ಪ್ರಥಮ ಪ್ರಧಾನಿಯಾಗಿ ಜವಾಹರಲಾಲರು ಪ್ರತಿಜ್ಞೆ ಸ್ವೀಕರಿಸಿದರು.

ಭಾರತಕ್ಕೆ ಸ್ವಾತಂತ್ರ್ಯ ದೊರೆತ ಮೇಲೆ ಜವಾಹರಲಾಲರು ಇಂಗ್ಲೆಂಡ್, ಫ್ರಾನ್ಸ್, ಅಮೆರಿಕ, ಚೀನ ಮುಂತಾದ ರಾಷ್ಟ್ರಗಳಿಗೆ ಭೇಟಿಕೊಟ್ಟರು. 1955ರಲ್ಲಿ ಬಾಂಡುಂಗ್ ನಗರದಲ್ಲಿ ನಡೆದ ಆಫ್ರಿಕಾ–ಏಷ್ಯ ಸಮ್ಮೇಳನದಲ್ಲಿ ಭಾಗವಹಿಸಿದರು. ಈ ಪ್ರದೇಶದ ರಾಷ್ಟ್ರಗಳಲ್ಲಿ ಪರಸ್ಪರ ಸ್ನೇಹ, ಸೌಹಾರ್ದ, ಸಹಕಾರಗಳು ಬೆಳೆಯಲು ಕಾರಣರಾದರು. 1956ರಲ್ಲಿ ಯೂರೋಪ್, ಮಧ್ಯಪ್ರಾಚ್ಯ ಮತ್ತು ಅಮೆರಿಕಾಗಳಿಗೆ ಭೇಟಿಯಿತ್ತರು. ಜಗತ್ತಿನ ವಿವಿಧ ಭಾಗಗಳಲ್ಲಿ ಸ್ವತಂತ್ರ ಭಾರತದ ಬಗೆಗೆ ಆಸಕ್ತಿ ಮತ್ತು ಸದ್ಭಾವನೆ ಬೆಳೆಸಲು ಪ್ರಯತ್ನಿಸಿದರು. ಸ್ವತಂತ್ರ ಭಾರತದ ಸರ್ವತೋಮುಖ ಅಭಿವೃದ್ಧಿಗೆ ಪಂಚವಾರ್ಷಿಕ ಯೋಜನೆಗಳನ್ನು ರೂಪಿಸಿದರು. ವಿಶ್ವಶಾಂತಿಗಾಗಿ ಪಂಚಶೀಲ ತತ್ತ್ವವನ್ನು ಪ್ರಚಾರ ಮಾಡಿದರು.

ಜವಾಹರಲಾಲ ನೆಹರೂ 1964ರಲ್ಲಿ ಫೆಬ್ರುವರಿಯಲ್ಲಿ ಭುವನೇಶ್ವರದಲ್ಲಿ ಕಾಂಗ್ರೆಸ್ ಸಮ್ಮೇಳನ ನಡೆಯುತ್ತಿದ್ದಾಗ, ಅಸ್ವಾಸ್ಥ್ಯಕ್ಕೆ ಗುರಿಯಾದರು. ಅದೇ ವರ್ಷ ಮೇ 27ರಂದು ಕಾಲವಾದರು.

ನೆಹರೂ ಉತ್ತಮ ವಾಗ್ಮಿ, ಖ್ಯಾತ ಲೇಖಕರು. ಸೆರೆಮನೆಯಲ್ಲಿ ಬಂಧಿತರಾಗಿದ್ದಾಗ ಅವರು ನಿರಂತರ ಅಧ್ಯಯನ, ಗ್ರಂಥಲೇಖನಗಳಲ್ಲಿ ಕಾಲಕಳೆಯುತ್ತಿದ್ದರು. '[illegible]', 'ಆತ್ಮಚರಿತ್ರೆ', 'ಪ್ರಪಂಚದ ಚರಿತ್ರೆಯ ಇಣುಕು ನೋಟಗಳು' ಅವರ ವಿಖ್ಯಾತ ಕೃತಿಗಳು.

ನೋಡಿ : ನೆಹರೂ –ಸಂಪುಟ ೧

ಜಹಾಂಗೀರ್

ನೋಡಿ : ನೂರ್ ಜಹಾನ್

ಜಾಕೀರ್ ಹುಸೇನ್

"ಭಾರತದ ಜನತೆಯೇ ನನ್ನ ಬಳಗ ಮತ್ತು ಇಡಿಯ ಭಾರತವೇ ನನ್ನ ಮನೆ".

—ಭಾರತದ ರಾಷ್ಟ್ರಪತಿ ಆಗಿದ್ದ ಜಾಕೀರ್ ಹುಸೇನರ ಮಾತುಗಳಿವು.

ಜಾಕೀರ್ ಹುಸೇನ್ 1897 ಫೆಬ್ರುವರಿ 8ರಂದು ಹೈದರಾಬಾದಿನಲ್ಲಿ ಜನಿಸಿದರು. ಪ್ರತಿಭಾವಂತ ವಿದ್ಯಾರ್ಥಿಯಾಗಿದ್ದ ಇವರು ಅಲಿಘರ್ ವಿಶ್ವವಿದ್ಯಾನಿಲಯದಲ್ಲಿ ಓದಿದರು. ಗಾಂಧೀಜೀ ಅಸಹಕಾರ ಆಂದೋಲನ ಆರಂಭಿಸಿದಾಗ 1921ರಲ್ಲಿ ಹುಸೇನರೂ ಅದರಲ್ಲಿ ಸೇರಿದರು. ಮುಂದೆ ಬರ್ಲಿನ್ ವಿಶ್ವವಿದ್ಯಾನಿಲಯದಲ್ಲಿ ಅರ್ಥಶಾಸ್ತ್ರದ ಪಿಎಚ್. ಡಿ. ಪಡೆದು 1926ರಲ್ಲಿ ಭಾರತಕ್ಕೆ ಹಿಂದಿರುಗಿದರು.





ಆಗ ಕೇವಲ 29 ವರ್ಷ ವಯಸ್ಸಿನವರಾಗಿದ್ದ ಅವರು ದೆಹಲಿಯಲ್ಲಿ [illegible] ಪ್ರಖ್ಯಾತ ರಾಷ್ಟ್ರೀಯ ಮುಸಲ್ಮಾನ [illegible] ಸಲ್ಲಿಸಿದರು.

ತಾವು ವಿದ್ಯಾರ್ಥಿಯಾಗಿದ್ದ ಅಲಿಘರ್ ವಿಶ್ವವಿದ್ಯಾನಿಲಯಕ್ಕೂ ಕೆಲ ಕಾಲ ಉಪಕುಲಪತಿಯಾಗಿದ್ದು ಅಲ್ಲಿನ ವಾತಾವರಣದಲ್ಲಿ ಅನೇಕ ಸುಧಾರಣೆಗಳನ್ನು ತಂದರು. 1952ರಲ್ಲಿ ರಾಜ್ಯಸಭೆಗೆ ನಾಮಕರಣಗೊಂಡರು. ಐದು ವರ್ಷಗಳ ಅನಂತರ ಬಿಹಾರದ ರಾಜ್ಯಪಾಲರಾಗಿ ಕೆಲಸ ಮಾಡಿದರು. 1962ರಲ್ಲಿ ಉಪರಾಷ್ಟ್ರಪತಿಯಾಗಿ ಆಯ್ಕೆಯಾದರು. 1967ರ ಮೇ 13ರಂದು ಭಾರತದ ಮೂರನೆಯ ರಾಷ್ಟ್ರಪತಿಯಾಗಿ ಆಯ್ಕೆಯಾದರು.

ಹುಸೇನರು ಶ್ರೇಷ್ಠ ಶಿಕ್ಷಣ ತಜ್ಞರು. ಅವರನ್ನು ಗಾಂಧೀಜಿಯವರ ಮೂಲ ಶಿಕ್ಷಣದ ರಾಷ್ಟ್ರೀಯ ಸಮಿತಿಯ ಅಧ್ಯಕ್ಷರನ್ನಾಗಿ ಮಾಡಿದ್ದರು. ವಿದ್ಯಾರ್ಥಿಗಳು ತಮ್ಮ ಜೀವನವನ್ನು ರೂಪಿಸಿಕೊಳ್ಳಲು ನೆರವಾಗುವಂಥ ಪಠ್ಯಕ್ರಮಗಳನ್ನು ಜಾರಿಗೆ ತರುವುದು ಇದರ ಉದ್ದೇಶವಾಗಿತ್ತು. ಜಾಕೀರ್ ಹುಸೇನರು ಉರ್ದು ಭಾಷೆಯ ಶ್ರೇಷ್ಠ ಬರೆಹಗಾರರು. ಮಕ್ಕಳಿಗಾಗಿ ಅವರು ಬರೆದ ನೀತಿಬೋಧಕ ಕಥೆಗಳು ಪ್ರಖ್ಯಾತವಾಗಿವೆ.

ಗುಲಾಬಿ ಹೂಗಳೆಂದರೆ ಜಾಕೀರರಿಗೆ ತುಂಬ ಇಷ್ಟ. ಅವರು ರಾಷ್ಟ್ರಪತಿ ನಿವಾಸದ ಉದ್ಯಾನದಲ್ಲಿ 200 ವಿವಿಧ ಗುಲಾಬಿ ಗಿಡಗಳನ್ನು ಬೆಳೆಸಿದ್ದರು.

1969 ಮೇ 3ರಂದು ಅವರು ನಿಧನರಾದರು.

1963ರಲ್ಲಿ ಜಾಕೀರ್ ಹುಸೇನರಿಗೆ 'ಭಾರತರತ್ನ' ಪ್ರಶಸ್ತಿ ಲಭಿಸಿತು.

ಜಾಗೃತ ಆಯೋಗ

ನೋಡಿ : ಸಂಪುಟ ೧

ಜಾರ್ಜ್ ಎವರೆಸ್ಟ್

ಎವರೆಸ್ಟ್ ಜಗತ್ತಿನ ಅತ್ಯಂತ ಎತ್ತರದ ಪರ್ವತ ಶಿಖರ. ಅದನ್ನು ಹಾಗೆಂದು ಖಚಿತಪಡಿಸಿದ ವ್ಯಕ್ತಿ, ಜಾರ್ಜ್ ಎವರೆಸ್ಟ್. ಆಗ ಅತ ಭಾರತದ ಸರ್ವೇಯರ್ ಜನರಲ್ ಆಗಿದ್ದರು.

ಜಾರ್ಜ್ ಎವರೆಸ್ಟ್ ಹುಟ್ಟಿದ್ದು ಗ್ರೇಟ್ ಬ್ರಿಟನಿನಲ್ಲಿ 1790 ಜುಲೈ 4ರಂದು. ಪ್ರಾರಂಭಿಕ ಮಿಲಿಟರಿ ಶಿಕ್ಷಣ ಪಡೆದ ಎವರೆಸ್ಟ್ ತನ್ನ ಹದಿನಾರನೆಯ ವಯಸ್ಸಿನಲ್ಲಿ ಭಾರತಕ್ಕೆ ಬಂದ. ಮುಂದೆ 1813ರಲ್ಲಿ ಸೈನ್ಯ ತುಕಡಿಯಲ್ಲಿ ಅಧಿಕಾರಿಯಾದ.

ಎವರೆಸ್ಟ್‌ನ ಹೆಚ್ಚಿನ ಸಮಯ ಮಿಲಿಟರಿ ಎಂಜಿನಿಯರಿಂಗ್ ಮತ್ತು ಸರ್ವೆ ಕೆಲಸಗಳಿಗಾಗಿ ಮೀಸಲಾಯಿತು. 1823ರಲ್ಲಿ 'ಸೂಪರಿಂಟೆಂಡೆಂಟ್ ಆಫ್ ಸರ್ವೆ' ಆಗಿ ನೇಮಕಗೊಂಡ.



ಅಧಿಕಾರಿಯ ಹೆಸರು ಹೊತ್ತ ಶಿಖರ

ಎವರೆಸ್ಟ್ ಪ್ರಥಮ ಬಾರಿಗೆ 1825ರಲ್ಲಿ ತನ್ನ ತಾಯ್ನಾಡಾದ ಇಂಗ್ಲೆಂಡಿಗೆ ಹಿಂದಿರುಗಿದ. ಅಲ್ಲೂ ಆತನಿಗೆ ಭಾರತದಲ್ಲಿನ ಸರ್ವೆ ಕೆಲಸದ್ದೇ ಯೋಚನೆ. 1827ರಲ್ಲಿ ರಾಯಲ್ ಸೊಸೈಟಿಯ ಸದಸ್ಯನಾಗಿ ಚುನಾಯಿತನಾದ ಎವರೆಸ್ಟ್ ಪ್ರಮುಖ ತಜ್ಞರೊಡನೆ ಸರ್ವೆ ಬಗೆಗೆ ತನ್ನ ಸಮಸ್ಯೆಗಳನ್ನು ಕೂಲಂಕಷವಾಗಿ ಚರ್ಚಿಸಿದ.

1830ರಲ್ಲಿ ಜಾರ್ಜ್ ಎವರೆಸ್ಟ್ ಸರ್ವೇಯರ್ ಜನರಲ್ ಆಗಿ ಭಾರತಕ್ಕೆ ಮತ್ತೆ ಬಂದ. ಅತ್ಯಾಧುನಿಕ ಸರ್ವೆ ಸಲಕರಣೆ ಮತ್ತು ವಿಧಾನಗಳನ್ನು ಭಾರತದಲ್ಲಿ ಬಳಕೆಗೆ ತಂದ ಕೀರ್ತಿ ಇವನದು. ನಿಷ್ಕೃಷ್ಟವೂ ವ್ಯಾಪಕವೂ ಆದ ಸರ್ವೆ ಕೆಲಸಕ್ಕೆ ಇದರಿಂದ ತುಂಬ ಸಹಾಯವಾಯಿತು. ಹಿಮಾಲಯದ ಪರ್ವತಶ್ರೇಣಿಗಳ ಸರ್ವೆಯೂ ಇವನ ಆಡಳಿತ ಕಾಲದಲ್ಲಿ ಆಯಿತು. ಇವನ ಜೊತೆಯಲ್ಲಿ ಕೆಲಸ ಮಾಡಿದ ಭಾರತೀಯ ರಾಧಾನಾಥ ಸಿಕದರ್.

ಜಾರ್ಜ್ ಎವರೆಸ್ಟ್‌ಗೆ 1861ರಲ್ಲಿ 'ನೈಟ್' ಪದವಿ ದೊರೆಯಿತು. 1863ರಲ್ಲಿ ಹಿಮಾಲಯದ ಅತ್ಯುನ್ನತ ಶಿಖರ ಎವರೆಸ್ಟ್ ಎಂಬ ಹೆಸರನ್ನು ಪಡೆಯಿತು.

ಮೂರು ವರ್ಷಗಳ ಬಳಿಕ, 1866 ಡಿಸೆಂಬರ್ 1ರಂದು, ಎವರೆಸ್ಟ್ ಲಂಡನಿನಲ್ಲಿ ನಿಧನನಾದ.


ನೋಡಿ : ರಾಧಾನಾಥ ಸಿಕದರ್
ಎವರೆಸ್ಟ್ ಆರೋಹಣ—ಸಂಪುಟ ೬

ಜಾರ್ಜ್ ಫರ್ನಾಂಡೀಸ್

ಮಂಗಳೂರಿನಲ್ಲಿ ಹುಟ್ಟಿದ ಬಾಲಕ ತಂದೆತಾಯಿಯರ ಆಸೆಯಂತೆ ಕ್ರೈಸ್ತ ಪಾದ್ರಿ ಆಗಬೇಕಾಗಿದ್ದ. ಅದು ಈಡೇರಲಿಲ್ಲ. ಎಳೆ ಹರೆಯದಲ್ಲೇ ಮುಂಬಯಿ ಮಹಾನಗರ ಸೇರಿದ [illegible]. ಸಮಾಜವಾದೀ [illegible] ತಳೆದಿದ್ದ ಜಾರ್ಜ್ ಕಾರ್ಮಿಕ ಚಳುವಳಿಗೆ ಕಾಲಿಟ್ಟರು.

ಮುಂಬಯಿಯ ಸಾವಿರಾರು ಹಡಗು ಕಟ್ಟೆ ಕಾರ್ಮಿಕರ ಮುಂದಾಳು ಡಿಮೆಲ್ಲೊ ಅವರ ನೇತೃತ್ವದ ಜಾರ್ಜ್ ಫರ್ನಾಂಡೀಸರಿಗೆ ಸ್ಫೂರ್ತಿ ದೊರೆಯಿತು. 1951ರವರೆಗೆ ಹಡಗು ಕಟ್ಟೆ, ಸಾರಿಗೆ, ನಗರಸಭೆ, ಹೋಟೆಲ್ ಮುಂತಾದ ಇತರ ಕಾರ್ಮಿಕರ ಸಂಘಟನೆಗೆ ತನ್ಮಯತೆಯಿಂದ ತೊಡಗಿದ [illegible] [illegible] ಸಹಾಯವಾಗಿ [illegible] [illegible] ಪಕ್ಷ [illegible] [illegible] 1967ರಲ್ಲಿ ಕಾಂಗ್ರೆಸಿನಿಂದ ಡಾ. ರಾಮ ಮನೋಹರ ಲೋಹಿಯಾ ಅವರ ನೇತೃತ್ವದ ಸಂಯುಕ್ತ ಸೋಷಲಿಸ್ಟ್ ಪಕ್ಷಗಳೇ ಇವರ ರಾಜಕೀಯ ನೆಲೆ. ಇವರು ಸಂಯುಕ್ತ ಸೋಷಲಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿಯಾಗಿದ್ದರು. 1973ರಲ್ಲಿ ಸೋಷಲಿಸ್ಟ್ ಪಕ್ಷದ ಅಧ್ಯಕ್ಷರಾದರು.

ಮುಂಬಯಿ ಮಹಾನಗರ ಕಾರ್ಮಿಕ ಸಮುದಾಯದಲ್ಲಿ ಮನೆಮಾತಾದ ಜಾರ್ಜ್ ಫರ್ನಾಂಡೀಸ್ 1967ರಲ್ಲಿ ನಡೆದ ಲೋಕಸಭಾ ಚುನಾವಣೆಯಲ್ಲಿ, ಮುಂಬಯಿಯ ಕಾಂಗ್ರೆಸ್ಸಿನ ಪ್ರಮುಖರೂ ಕೇಂದ್ರದ ಮಂತ್ರಿಯೂ ಆಗಿದ್ದ ಎಸ್. ಕೆ. ಪಾಟೀಲರ ವಿರುದ್ಧ ಸ್ಪರ್ಧಿಸಿ ವಿಜಯಿಯಾದರು. ಸಮಾಜವಾದಿಗಳ ಕೇಂದ್ರೀಯ ಕಾರ್ಮಿಕ ಸಂಘಟನೆಯಾದ ಹಿಂದ್ ಮಜದೂರ್ ಸಭಾ ಹಾಗೂ ಹಿಂದ್ ಮಜದೂರ್ ಪಂಚಾಯತ್‌ಗಳಲ್ಲಿ ಇವರು ಅಗ್ರಪಾತ್ರ.



ಫರ್ನಾಂಡೀಸ್ : ಪಾದ್ರಿಯಾಗುವ ಬದಲು...

1949ರಲ್ಲಿ 'ರೈತವಾಣಿ' ಎಂಬ ಕನ್ನಡ ಸಾಪ್ತಾಹಿಕವನ್ನು ಹೊರಡಿಸುತ್ತಿದ್ದರು. ಅದೇ ಕಾಲಕ್ಕೆ 'ಕೊಂಕಣಿ ಯುವಕ' ಎಂಬ ಮಾಸಪತ್ರಿಕೆಯ ಸಂಪಾದಕರಾಗಿದ್ದರು. 1952–53ರಲ್ಲಿ 'ಡಾಕ್‌ಮನ್' ಎಂಬ ಇಂಗ್ಲಿಷ್ ಭಾಷೆಯ ಕಾರ್ಮಿಕ ಪತ್ರಿಕೆಯನ್ನೂ 'ನ್ಯೂ ಸೊಸೈಟಿ' ಎಂಬ ಪತ್ರಿಕೆಯನ್ನೂ ನಡೆಸಿದರು. ಈಗ (1973) 'ಪ್ರತಿಪಕ್ಷ' ಎಂಬ ಹಿಂದೀ ಸಾಪ್ತಾಹಿಕವನ್ನು ದೆಹಲಿಯಿಂದ ಪ್ರಕಟಿಸುತ್ತಿದ್ದಾರೆ.

1930 ಜೂನ್ 2ರಂದು ಜನಿಸಿದ ಜಾರ್ಜ್ ಫರ್ನಾಂಡೀಸ್ ಕೇಂದ್ರ ಸರಕಾರದ ಶಿಕ್ಷಣ ಸಚಿವರಾಗಿದ್ದ ದಿವಂಗತ ಹುಮಾಯೂನ್ ಕಬೀರ್ ಅವರ ಮಗಳು ಲೈಲಾ ಅವರನ್ನು ಮದುವೆಯಾಗಿದ್ದಾರೆ.

ಜಾಟರು

ಪಂಜಾಬ್, ಹರ್ಯಾಣ, ಉತ್ತರ ಪ್ರದೇಶ ಮುಂತಾದ ರಾಜ್ಯಗಳಲ್ಲಿ ವಾಸಿಸುವ, ಕೃಷಿವೃತ್ತಿ ಅವಲಂಬಿಸಿರುವ ಯೋಧ ಜನಾಂಗ —ಜಾಟರು.

ಹದಿನೇಳನೆಯ ಶತಮಾನದಲ್ಲಿ ಮರಾಠರಂತೆ ಒಂದು ರಾಜಸತ್ತೆಯಾಗಿ ಕಾಣಿಸಿಕೊಂಡ ಇವರ ಉತ್ಥಾನಕ್ಕೆ ಮೊಘಲರ ದಬ್ಬಾಳಿಕೆಯೇ ಕಾರಣ. 1669ರಲ್ಲಿ ಮಥುರೆಯ ಜಾಟರು ತಿಲಪತ್‌ನ ಜಮೀನುದಾರ ಗೋಕ್ಲಾ ಎಂಬವನ ನಾಯಕತ್ವದಲ್ಲಿ ಬಂಡೆದ್ದರು. ಮೊಘಲರಿಂದ ಗೋಕ್ಲಾನ ಕೊಲೆಯಾಯಿತು. ಜಾಟರು ರಾಜಾರಾಮನ ನಾಯಕತ್ವದಲ್ಲಿ 1685ರಲ್ಲಿ ಮತ್ತೆ ದಂಗೆ ಎದ್ದರು. ಇವನನ್ನೂ ಹಿಡಿದು ಕೊಲ್ಲಲಾಯಿತು. ಈತನ ಬಳಿಕ ಚೂಡಾಮನ್ ಎಂಬವನ ನಾಯಕತ್ವದಲ್ಲಿ ಜಾಟರು ಇನ್ನಷ್ಟು ಸಂಘಟಿತರಾಗಿ 1707ರಲ್ಲಿ ಔರಂಗಜೇಬನ ಮರಣಾನಂತರ ಮತ್ತೆ ಭಾರೀ ಬಂಡಾಯ ಹೂಡಿದರು. ಆಗ್ರಾದ ಬಳಿ ಜಾಟರ ಸ್ವತಂತ್ರರಾಜ್ಯ ಸ್ಥಾಪಿತವಾಯಿತು. 1721ರಲ್ಲಿ ಇದನ್ನು ಕೊನೆಗಾಣಿಸಲಾಯಿತು.

ಮುಂದೆ ಚೂಡಾಮನ್‌ನ ಸೋದರನ ಮಗ ಬದನ್ ಸಿಂಗ್ ಆಗ್ರಾ ಮತ್ತು ಮಥುರಾ ಜಿಲ್ಲೆಗಳ ಪ್ರದೇಶದಲ್ಲಿ ತನ್ನ ಸ್ವಾಮ್ಯ ಸ್ಥಾಪಿಸಿದ.

1756ರಲ್ಲಿ ಇವನು ತೀರಿಕೊಂಡಾಗ ದತ್ತುಪುತ್ರ ಸೂರಜ್‌ಮಲ್ ಎಂಬ ವಿಚಕ್ಷಣ ಮತ್ತು ಧೀರ ನಾಯಕ ವಿಶಾಲ ಪ್ರದೇಶಗಳ ಮೇಲೆ ತನ್ನ ಪ್ರಭುತ್ವ ಸ್ಥಾಪಿಸಿದ. ಇವನ ಕಾಲದಲ್ಲಿ ಜಾಟ್ ರಾಜ್ಯ ಪಂಜಾಬ್, ಹರ್ಯಾಣ ಮತ್ತು ರಾಜಸ್ಥಾನದ ಜಿಲ್ಲೆಗಳ ವರೆಗೆ ವಿಸ್ತರಿಸಿತು. 1763ರಲ್ಲಿ ಇವನ ಸಾವಿನ ಬಳಿಕ ಜಾಟರ ಆಡಳಿತ ಕ್ಷೀಣಿಸಿತು.

ಜಾನ್ ಮಾರ್ಷಲ್

ಸಿಂಧೂ ಕಣಿವೆ ನಾಗರಿಕತೆಯನ್ನು ಬೆಳಕಿಗೆ ತಂದವನು, ಜಾನ್ ಮಾರ್ಷಲ್. 1901ರಲ್ಲಿ ಭಾರತದ ಪುರಾತತ್ತ್ವ ಶೋಧನೆಯ ಇಲಾಖೆಯ ಡೈರೆಕ್ಟರ್ ಜನರಲ್ ಆಗಿ ಈತ ನಿಯಮಿತನಾಗುವ ವರೆಗೆ ಪುರಾತತ್ತ್ವ ಶೋಧನೆಗೆ ಸಂಬಂಧಿಸಿ ಸರ್ವೆ ಮತ್ತು ಸಂರಕ್ಷಣೆ ಕೆಲಸಗಳುಮಾತ್ರ ನಡೆಯುತ್ತಿದ್ದುವು. ಮಾರ್ಷಲನ ನೇತೃತ್ವದಲ್ಲಿ ಇದರ ಸ್ವರೂಪ ಬದಲಾಯಿತು.



ಪ್ರಾಚೀನತೆಯ ಶೋಧೆ : ಮಾರ್ಷಲ್

ಪ್ರಾಚೀನ ನಿವೇಶನಗಳನ್ನು ಅಗೆದು, ಭಾರತದ ಪ್ರಾಚೀನ ಸಂಸ್ಕೃತಿಯ ಅವಶೇಷಗಳನ್ನು ಹೊರತೆಗೆಯುವ ಕೆಲಸ ಈತನ ಕಾಲದಲ್ಲಿ ಆರಂಭ ವಾಯಿತು. ಮಾರ್ಷಲ್ ಪರಿಣತರನ್ನು ತನ್ನ ಸಹಾಯಕ್ಕೆ ತೆಗೆದುಕೊಂಡು ಹಿಂದೆಂದೂ ನಡೆಯದಿದ್ದ ರೀತಿಯಲ್ಲಿ ವ್ಯಾಪಕ ಭೂ ಶೋಧನೆ ನಡೆಸಿದ. ತಕ್ಷಶಿಲೆಯ ಬಳಿ ಶೋಧನೆ ನಡೆಸಿದಾಗ ಕಲ್ಲಿನಲ್ಲಿ ಕೊರೆಯಲ್ಪಟ್ಟ ವಸ್ತುಗಳು, ಚೆನ್ನಾಗಿ ಹೊಳಪು ಕೊಟ್ಟ ವಿಗ್ರಹಗಳು, ಉತ್ತಮ ಗಾಜು ಮತ್ತು ಕ್ರಿ. ಪೂ. 600ಕ್ಕೂ ಹಿಂದಿನ ನಾಣ್ಯಗಳು ದೊರೆತುವು. ಈಗ ಪಶ್ಚಿಮ ಪಂಜಾಬಿನಲ್ಲಿರುವ ಹರಪ್ಪಾ, ಮತ್ತು ಅದಕ್ಕೆ 400 ಮೈಲು ದಕ್ಷಿಣದಲ್ಲಿ ಸಿಂಧ್ ಪ್ರಾಂತ್ಯದಲ್ಲಿರುವ ಮೊಹೆಂಜೊ ದಾರೊ ಪ್ರದೇಶದಲ್ಲಿ ಆತ ನಡೆಸಿದ ಭೂಶೋಧನೆಗಳು ಮಹತ್ವದ್ದು. ಸಿಂಧೂ ಕಣಿವೆ ನಾಗರಿಕತೆಯ ಕೊನೆಗಾಲಕ್ಕೂ ಆರ್ಯರ ಆಕ್ರಮಣಕ್ಕೂ ಮಧ್ಯೆ ಎರಡು ಶತಕಗಳ ಅಂತರವಾದರೂ ಇದೆ ಎಂದು ಮಾರ್ಷಲ್ ಪ್ರತಿಪಾದಿಸಿದ. ಅನಂತರದ ಶೋಧನೆಗಳು ಈ ಅಂತರವನ್ನು ಇನ್ನೂ ಕಡಮೆ ಮಾಡಿವೆ.

ಭಾರತದ ಪುರಾತತ್ತ್ವ ಶೋಧನೆಯ ಸಂಬಂಧದಲ್ಲಿ ಜಾನ್ ಮಾರ್ಷಲ್ ಸಲ್ಲಿಸಿದ ಅಮೂಲ್ಯ ಸೇವೆಗಾಗಿ ಬ್ರಿಟಿಷ್ ಸರಕಾರ ಅವನಿಗೆ 'ಸರ್' ಪ್ರಶಸ್ತಿ ಕೊಟ್ಟು ಗೌರವಿಸಿತು.

ಜಾಮಿನಿ ರಾಯ್

ಪಾಶ್ಚಾತ್ಯ ಚಿತ್ರಕಲೆಯನ್ನು ಆಳವಾಗಿ ಅಭ್ಯಸಿಸಿದರೂ ಸ್ವದೇಶೀ [illegible] ಕಲಾವಿದ. ಜಾಮಿನಿ ರಾಯ್.



ಜಾನಪದಶೈಲಿ : ಜಾಮಿನಿ

ಬಂಗಾಳದಲ್ಲಿ 1888ರಲ್ಲಿ ರಾಯ್ ಜನಿಸಿದರು. ಬಡಕುಟುಂಬದಲ್ಲಿ ಬೆಳೆದ ರಾಯ್‌ಗೆ ಜೀವನದ ಕಷ್ಟ–ನಷ್ಟಗಳ ನೇರ ಅನುಭವವಾಯಿತು. ಕಲ್ಕತ್ತೆಯ ಸರಕಾರೀ ಚಿತ್ರಕಲಾ ಶಾಲೆಯಲ್ಲಿ ಪಾಶ್ಚಾತ್ಯ ಚಿತ್ರಕಲೆಯ ಸಂಪ್ರದಾಯದ ಬಗೆಗೆ ರಾಯ್ ಅಧ್ಯಯನ ನಡೆಸಿದರು. ಇವರ ಸಮಕಾಲೀನರಾದ ರವೀಂದ್ರ ನಾಥ ಠಾಕೂರರು ಆಗಿನ ಅನೇಕ ಪ್ರತಿಭಾವಂತ ಕಲಾವಿದರನ್ನು ತಮ್ಮ ಪ್ರಭಾವಕ್ಕೆ ಒಳಪಡಿಸಿಕೊಂಡರೂ ಜಾಮಿನಿ ರಾಯ್ ರವೀಂದ್ರರ ಸಂಪ್ರದಾಯದಿಂದ ದೂರ ಉಳಿದರು.



ಶಿಲುಬೆಯ ಮೇಲೆ ಯೇಸು–ಜಾಮಿನಿ ರಾಯ್ ಕೃತಿ

ತಮ್ಮ ಕೃತಿಗಳನ್ನು ತಾವೇ ಅನೇಕ ಬಾರಿ ಪ್ರತಿಮಾಡಿ ಅವನ್ನು ಕಡಮೆ ಬೆಲೆಗೆ ಜಾಮಿನಿ ರಾಯ್ ಮಾರುತ್ತಿದ್ದರು. ಯಾವುದೇ ರೀತಿಯ ಜನಪ್ರಿಯತೆಗೆ ಅವರು ತಲೆಬಾಗಲಿಲ್ಲ.

ಬಣ್ಣ–ಕುಂಚಗಳ ಗೆಳೆತನಕ್ಕಿಂತ ಬೇರೊಂದು ಸ್ನೇಹ ಇವರಿಗೆ ಇರಲಿಲ್ಲ. ಕಲೆ ಹಣತರುವ ಸಾಧನವಲ್ಲ ಎಂಬುದು ಇವರ ನಂಬಿಕೆಯಾಗಿತ್ತು.

1972 ಏಪ್ರಿಲ್ 24ರಂದು ಜಾಮಿನಿ ರಾಯ್ ನಿಧನರಾದರು.

ರಾಯ್ [illegible] ವಾನ್ ಗೋ, ಮೋಡಿಲ್ಯಾನೀ ಮತ್ತು ಅಮೃತಾ ಶೇರ್‌ಗಿಲ್ ಅವರ ಶೈಲಿ

[illegible] ಗ್ರಂಥದಲ್ಲಿ ಹೇಳಿದ್ದಾರೆ. ಜಾಮಿನಿ ರಾಯ್ ಸಾಂಪ್ರದಾಯಿಕ ಜಾನಪದ [illegible] ಸಾಧಿಸಿದ್ದ ಪ್ರಭುತ್ವ ಅದ್ಭುತವಾದದ್ದು.

ಜ್ಞಾನದೇವ

ಪುಣೆಗೆ ಸಮೀಪದ ಇಂದ್ರಾಯಣಿ ನದಿಯ ದಂಡೆಯ ಮೇಲಿರುವ ಒಂದು ಊರು —ಆಲಂದಿ. ಗೋದಾವರಿ ನದೀತೀರದಲ್ಲಿರುವ ಅಪೆಗಾರ್ವನ ತರುಣ ವಿದ್ವಾಂಸ ವಿತಲಪಂತ. ತನ್ನ ದೇಶಸಂಚಾರ ಕಾಲದಲ್ಲಿ (13ನೆಯ ಶತಮಾನ) ಆಲಂದಿಗೆ ಬಂದ. ಆ ಊರಿನ ಸಿದ್ಧೋಪಂತ ಈ ತರುಣ ವಿದ್ವಾಂಸನಿಂದ ಆಕರ್ಷಿತನಾದ. ತನ್ನ ಮಗಳು ರುಕ್ಮಿಣಿಯನ್ನು ಮದುವೆಯಾಗುವಂತೆ ಅವನನ್ನು ಕೇಳಿಕೊಂಡ. ವಿತಲಪಂತನದು ವೈರಾಗ್ಯ ಮನೋಭಾವ. ಆದರೂ ಕನಸಿನಲ್ಲಿ ಪಂಢರಿನಾಥನ ಆದೇಶ ದೊರೆತಂತಾಗಿ, ರುಕ್ಮಿಣಿಯನ್ನು ಮದುವೆಯಾದ. ಕೆಲ ಕಾಲ ಕಳೆಯಿತು. ವಿತಲಪಂತನಿಗೆ ಮಕ್ಕಳಾಗಲಿಲ್ಲ. ಅವನ ವೈರಾಗ್ಯಭಾವ ಬೆಳೆಯಿತು. ತನ್ನ ಹೆಂಡತಿಯ ಅನುಮತಿಯನ್ನು ಪಡೆದು ಸನ್ಯಾಸ ತೆಗೆದುಕೊಳ್ಳಲು ಕಾಶಿಗೆ ಹೋದ. ಪ್ರಖ್ಯಾತ ಸನ್ಯಾಸಿ ರಾಮಾನಂದರಿಂದ ಸನ್ಯಾಸ ದೀಕ್ಷೆಪಡೆದ.

ರಾಮಾನಂದರು ತಮ್ಮ ತೀರ್ಥಯಾತ್ರೆಯ ಕಾಲದಲ್ಲಿ ಆಲಂದಿಗೆ ಬಂದಾಗ, ವಿತಲಪಂತ ಮಕ್ಕಳಿಲ್ಲದ ತನ್ನ ತರುಣ ಪತ್ನಿಯನ್ನು ಬಿಟ್ಟು ಬಂದು ಸನ್ಯಾಸ ತೆಗೆದುಕೊಂಡ ವಿಷಯವು ಅವರಿಗೆ ತಿಳಿಯಿತು. ಅವರು ಕಾಶಿಗೆ ಮರಳಿ, ವಿತಲಪಂತನನ್ನು ಅವನ ಮನೆಗೆ ಹಿಂದಕ್ಕೆ ಕಳುಹಿಸಿದರು, ಆತ ಮತ್ತೆ ಗೃಹಸ್ಥನಾದ. ಸನ್ಯಾಸವನ್ನು ಸ್ವೀಕರಿಸಿದ್ದವನು ಮತ್ತೆ ಗೃಹಸ್ಥನಾಗುವುದು ಮಹಾಪಾಪ ಎಂಬುದು ಸಮಾಜದ ನಂಬಿಕೆಯಾಗಿದ್ದುದರಿಂದ, ವಿತಲಪಂತನೂ ಅವನ ಹೆಂಡತಿಯೂ ಬಹಿಷ್ಕೃತರಾದರು. ವಿತಲಪಂತನ 12 ವರ್ಷಗಳ ಗೃಹಸ್ಥ ಜೀವನದಲ್ಲಿ ಅವನಿಗೆ ನಿವೃತ್ತಿದೇವ, ಜ್ಞಾನದೇವ ಮತ್ತು ಸೋಪಾನದೇವ ಎಂಬ ಪುತ್ರರೂ ಮುಕ್ತಾಬಾಯಿ ಎಂಬ ಪುತ್ರಿಯೂ ಹುಟ್ಟಿದರು. ತನ್ನ ಮಕ್ಕಳಿಗೆ ಸಮಾಜದಲ್ಲಿ ಮನ್ನಣೆ ದೊರೆಯುವಂತೆ ಮಾಡುವ ಹಾಗೂ ತಾನು ಪ್ರಾಯಶ್ಚಿತ್ತ ಮಾಡಿಕೊಳ್ಳುವ ಉದ್ದೇಶದಿಂದ ವಿತಲಪಂತ ಪತ್ನೀಸಮೇತನಾಗಿ ಗಂಗಾನದಿಯಲ್ಲಿ ಜಲ ಸಮಾಧಿ ಹೊಂದಿದ.

ಮಕ್ಕಳಲ್ಲಿ ಹಿರಿಯವನಾದ ನಿವೃತ್ತಿದೇವ ಕಿರಿಯ ವಯಸ್ಸಿನಲ್ಲೇ ವಿರಕ್ತ ಜೀವನವನ್ನು ಕೈಗೊಂಡ. ತಮ್ಮನಾದ ಜ್ಞಾನದೇವನಿಗೆ ಇವನೇ ಗುರು. ಜನತೆಗೆ ತಿಳಿಯುವಂತೆ ಭಗವದ್ಗೀತೆಯನ್ನು ಉಪದೇಶಿಸು ಎಂದು ಈತ ಜ್ಞಾನದೇವನಿಗೆ ಹೇಳಿದ. ಜ್ಞಾನದೇವ ತನ್ನ ಹದಿನೈದನೆಯ ವಯಸ್ಸಿನಲ್ಲಿ ಭಗವದ್ಗೀತೆಯ ವ್ಯಾಖ್ಯಾನ ರೂಪವಾದ 'ಜ್ಞಾನೇಶ್ವರೀ' ಅಥವಾ 'ಭಾವಾರ್ಥ ದೀಪಿಕಾ' ಎಂಬ ಗ್ರಂಥವನ್ನು ಮರಾಠೀ ಭಾಷೆಯಲ್ಲಿ ರಚಿಸಿದ. ಜ್ಞಾನದೇವನಿಗೆ ಜ್ಞಾನೇಶ್ವರ ಎಂಬ ಹೆಸರೂ ಇದೆ. ಅವನ ಕಾಲದಲ್ಲೇ ಈ ಅಮೂಲ್ಯ ಗ್ರಂಥವೆಂದು ಮನ್ನಣೆ ಪಡೆಯಿತು.



'ಜ್ಞಾನೇಶ್ವರೀ' : ಜ್ಞಾನದೇವ

ಜ್ಞಾನೇಶ್ವರನ ಕಾಲಕ್ಕಿಂತ ಹಿಂದೆಯೇ ಮರಾಠಿಯಲ್ಲಿ ಗ್ರಂಥರಚನೆ ನಡೆದಿತ್ತಾದರೂ ಜ್ಞಾನೇಶ್ವರನನ್ನು 'ಮರಾಠೀ ಕಾವ್ಯದ ಪಿತಾಮಹ' ಎನ್ನುವುದುಂಟು. ಮರಾಠೀ ಸಾಹಿತ್ಯದಲ್ಲಿ ಅವನ ಸ್ಥಾನ ಹಿರಿದು. ಮರಾಠೀ ಭಾಷೆಯಲ್ಲಿ ರಚಿತವಾದ 'ಜ್ಞಾನೇಶ್ವರೀ' ಒಂದು ಮಹಾನ್‌ಸಾಹಿತ್ಯ ಕೃತಿ. ಈ ಗ್ರಂಥ ನೀತಿಶಾಸ್ತ್ರದ ಕೈಪಿಡಿಯೂ ಹೌದು. ಜ್ಞಾನದೇವ ನಾಥ ಸಂಪ್ರದಾಯದಿಂದ ಪ್ರಭಾವಿತನಾದವನು; ಅದ್ವೈತ ಮತದ ಹಾಗೂ ಭಕ್ತಿ ಮಾರ್ಗದ ಪ್ರತಿಪಾದಕ. ಇವನ ಗುರುಭಕ್ತಿ ಅಪಾರವಾದದ್ದು. ಗುರುವೆಂಬ ಹಸುವನ್ನು ಹಿಂಬಾಲಿಸುವ ಕರು ತಾನು —ಎಂದಿದ್ದಾನೆ ಈತ. ಆತ್ಮ ಪ್ರಕಾಶವೆಂಬ ಮರದ ನೆರಳಿಗೆ ತನ್ನನ್ನು ಕೊಂಡೊಯ್ಯುವವನು ಗುರು —ಎಂದು ಹೇಳಿದ್ದಾನೆ.

'ಅನುಭವಾಮೃತ' ಇವನ ಇನ್ನೊಂದು ತಾತ್ತ್ವಿಕ ಗ್ರಂಥ. ಜ್ಞಾನದೇವ ಭಗವಂತನ ಸಾಕ್ಷಾತ್ಕಾರದ ಅನುಭವವನ್ನು ಇದರಲ್ಲಿ ವಿವರಿಸಿದ್ದಾನೆ.

ಇಪ್ಪತ್ತೇಳರ ಯುವಕನಾಗಿದ್ದಾಗ ಜ್ಞಾನೇಶ್ವರನಿಗೆ ತಾನು ಸಾಧಿಸಬೇಕಾದದ್ದು ಕೈಗೂಡಿತೆಂಬ ಭಾವನೆ ಬಂತು; 1297ರಲ್ಲಿ ಆಲಂದಿಯಲ್ಲಿ ಯೋಗ ಸಮಾಧಿಸ್ಥನಾದ. ಪ್ರತಿ ವರ್ಷ ಕಾರ್ತಿಕ ಬಹುಳದಲ್ಲಿ ಈ ಸಮಾಧಿಯ ಸಮೀಪದಲ್ಲಿ ದೊಡ್ಡ ಜಾತ್ರೆ ನಡೆಯುತ್ತದೆ.

ಜ್ಞಾನದೇವನಿಂದ ರಚಿತವಾದ 'ಜ್ಞಾನೇಶ್ವರೀ'ಕೃತಿಯ ಹಸ್ತಪ್ರತಿಗಳಲ್ಲಿ ಲೋಪದೋಷಗಳು ಸೇರಿದ್ದುದನ್ನು ಗುರುತಿಸಿ, ಏಕನಾಥದೇವ ಪರಿಷ್ಕೃತ ಆವೃತ್ತಿಯನ್ನು ಸಿದ್ಧಗೊಳಿಸಿದ. ಈ ಪರಿಷ್ಕರಣ ನಡೆದದ್ದು ಜ್ಞಾನದೇವ ಸಮಾಧಿಹೊಂದಿದ 300 ವರ್ಷಗಳ ಅನಂತರ. ಇದೇ ಆವೃತ್ತಿ ಈಗ ಪ್ರಚಾರದಲ್ಲಿದೆ.

ಜ್ಞಾನಪೀಠ ಪ್ರಶಸ್ತಿ

ನೋಡಿ : ಸಂಪುಟ ೫

ಜಿ. ಎಸ್. ಘುರ್ಯೆ

ಸಮಾಜವಿಜ್ಞಾನ, ಮಾನವವಿಜ್ಞಾನ, ಭಾರತಾಧ್ಯಯನ ಕ್ಷೇತ್ರಗಳಲ್ಲಿ ಹೆಸರಾದವರು ಗೋವಿಂದ ಸದಾಶಿವ ಘುರ್ಯೆ. ದೇಶದ ಅನೇಕ ಸಮಾಜ ವಿಜ್ಞಾನಿ, ಮಾನವವಿಜ್ಞಾನಿಗಳಿಗೆ ಇವರು ಗುರು.

1893ರಲ್ಲಿ ಗೋವಿಂದ ಸದಾಶಿವ ಘುರ್ಯೆ ಅವರ ಜನನ. 1918ರಲ್ಲಿ ಸಂಸ್ಕೃತದಲ್ಲಿ ಸ್ನಾತಕೋತ್ತರ ಪದವಿ ಪಡೆದರು. ಮುಂಬಯಿಯ ಎಲ್ಫಿನ್‌ಸ್ಟನ್ ಕಾಲೇಜಿನಲ್ಲಿ ಸಂಸ್ಕೃತ ಪ್ರಾಧ್ಯಾಪಕರಾಗಿ ವೃತ್ತಿಜೀವನ ಆರಂಭಿಸಿದರು. ಅನಂತರ ಸಮಾಜವಿಜ್ಞಾನದಲ್ಲಿ ಆಸಕ್ತರಾಗಿ ವಿಶೇಷ ವ್ಯಾಸಂಗಕ್ಕಾಗಿ ಇಂಗ್ಲೆಂಡಿಗೆ ತೆರಳಿದರು. ಅಲ್ಲಿ ಎಲ್.ಬಿ. ಹಾಬ್ ಹೌಸ್ ಅವರ ಮಾರ್ಗದರ್ಶನ ದೊರೆಯಿತು. ಡಾಕ್ಟರೇಟ್ ಪಡೆದು 1923ರಲ್ಲಿ ಭಾರತಕ್ಕೆ ಮರಳಿದರು. ಮುಂಬಯಿ ವಿಶ್ವವಿದ್ಯಾನಿಲಯದಲ್ಲಿ ಸಮಾಜ ವಿಜ್ಞಾನದ ಅಧ್ಯಾಪಕರಾದರು.

ಇವರಿಗೆ ವಿಶೇಷ ಕೀರ್ತಿ ತಂದ ಲೇಖನ —1925ರಲ್ಲಿ ಪ್ರಕಟವಾದ 'ನಾಗರಿಕತೆ ಮತ್ತು ಸಂತಾನಾಭಿವೃದ್ಧಿ'. 'ಕಲ್ಚರ್ ಅಂಡ್ ಸೊಸೈಟಿ', 'ಇಂಡಿಯನ್ ಸಾಧೂಸ್', 'ಕ್ಯಾಸ್ಟ್ ಅಂಡ್ ಕ್ಲಾಸ್ ಇನ್ ಇಂಡಿಯಾ',



[illegible]

'ಭರತನಾಟ್ಯ ಅಂಡ್ ಇಟ್ಸ್ ಕಾಸ್ಟ್ಯೂಮ್' ಮತ್ತು 'ರಿಲಿಜಿಯಸ್ ಕಾನ್ಷಸ್‌ನೆಸ್' ಎಂಬ ಗ್ರಂಥಗಳನ್ನು ಇವರು ರಚಿಸಿದ್ದಾರೆ. 'ಐ ಅಂಡ್ ದಿ ವರ್ಲ್ಡ್' ಘುರ್ಯೆ ಅವರ ಆತ್ಮವೃತ್ತ.

ಪ್ರಾಧ್ಯಾಪಕರಾಗಿ ನಿವೃತ್ತರಾದ ಮೇಲೆ ಘುರ್ಯೆ ಮುಂಬಯಿ ವಿಶ್ವ ವಿದ್ಯಾನಿಲಯದಲ್ಲಿ ಸಮಾಜವಿಜ್ಞಾನದ ಎಮರಿಟಸ್ ಪ್ರೊಫೆಸರ್ ಆದರು.

'ಭಾರತೀಯ ಸಾಮಾಜಿಕ ಸಂಘ' ಇವರು ಪ್ರಾರಂಭಿಸಿದ ಸಂಸ್ಥೆ. 1954ರಲ್ಲಿ ಅಭಿಮಾನಿಗಳು 'ಘುರ್ಯೆ ಅಭಿನಂದನಾ ಗ್ರಂಥ'ವನ್ನು ಒಪ್ಪಿಸಿ ಗೌರವ ಪ್ರದರ್ಶಿಸಿದರು. 1973ರಲ್ಲಿ ಮುಂಬಯಿಯಲ್ಲಿ ಅವರ 80ನೆಯ ಹುಟ್ಟುಹಬ್ಬ ಆಚರಿಸಲ್ಪಟ್ಟಿತು.

ಜಿ. ಎಸ್. ಧಿಲ್ಲೋನ್

ಸ್ವಾತಂತ್ರ್ಯಪೂರ್ವ ಪಂಜಾಬಿನ ರಾಜಕೀಯ ಕ್ಷೇತ್ರದಲ್ಲಿ ಎರಡು ಬಣಗಳಿದ್ದುವು. ಬ್ರಿಟಿಷ್ ಆಡಳಿತವನ್ನು ವಿರೋಧಿಸುತ್ತಿದ್ದ ಕಾಂಗ್ರೆಸ್ಸಿಗರು ಮತ್ತು ಬ್ರಿಟಿಷರ ಆಡಳಿತವನ್ನು ಬೆಂಬಲಿಸುತ್ತಿದ್ದ ಮಾಸ್ಟರ್ ತಾರಾಸಿಂಗರ ಸಂಗಡಿಗರು. 1946ರಲ್ಲಿ ಪಂಜಾಬಿನ ವಿಧಾನಸಭೆಗಾಗಿ ನಡೆದ ಚುನಾವಣೆಯಲ್ಲಿ ಈ ಎರಡು ಪಕ್ಷಗಳೂ ಸ್ಪರ್ಧಿಸಿದ್ದುವು. ಕಾಂಗ್ರೆಸ್ಸಿನ ಪರವಾಗಿ ಪ್ರತಾಪಸಿಂಗ್ ಕೈರಾನ್ (ಇವರು ಮುಂದೆ ಪಂಜಾಬಿನ ಮುಖ್ಯಮಂತ್ರಿಯಾದರು) ನಿಂತಿದ್ದರು. ತರುಣ ಗುರುದಯಾಳ್ ಸಿಂಗ್ ಧಿಲ್ಲೋನ್, ಕೈರಾನರ ಪರವಾಗಿ ಪ್ರಚಾರ ಕಾರ್ಯ ನಡೆಸಿದ್ದರು. ಚುನಾವಣೆಯಲ್ಲಿ ಕೈರಾನರ ಪ್ರತಿಸ್ಪರ್ಧಿಯಾಗಿದ್ದವರು, ಸ್ವತಃ ಧಿಲ್ಲೋನರ ತಂದೆ! ತಾವು ಅಂಗೀಕರಿಸಿದ್ದ ಆದರ್ಶದ ಸಾಧನೆಗಾಗಿ ಗುರುದಯಾಳ್ ತಮ್ಮ ತಂದೆಯನ್ನೂ ವಿರೋಧಿಸಲು ಸಿದ್ಧರಾಗಿದ್ದರು. ಕೊನೆಗೆ ಇವರ ತಂದೆ ತಮ್ಮ ಉಮೇದುವಾರಿಕೆಯನ್ನು ಹಿಂದಕ್ಕೆ ತೆಗೆದುಕೊಂಡರು. ಕೈರಾನ್ ಗೆದ್ದು ಬಂದರು.

ಧಿಲ್ಲೋನ್ ಹುಟ್ಟಿದ್ದು 1916 ಆಗಸ್ಟ್ 6ರಂದು. ಲಾಹೋರಿನಲ್ಲಿ ಕಾನೂನು ಅಭ್ಯಾಸ ಮಾಡಿ ಪರೀಕ್ಷೆಯಲ್ಲಿ ಪ್ರಥಮ ಸ್ಥಾನ ಗಳಿಸಿ ತೇರ್ಗಡೆಯಾದರು. ಸ್ವಲ್ಪ ಕಾಲ ಸೈನ್ಯದ ಅಧಿಕಾರಿಯಾಗಿದ್ದರು. ಅನಂತರ, ಅದು ಸರಿಯಾಗದೆ, ವಕೀಲ ವೃತ್ತಿ ಕೈಗೊಂಡರು. ಸ್ವಾತಂತ್ರ್ಯ ಸಮರದಲ್ಲಿ ಭಾಗಿಯಾಗಿ 'ವರ್ತಮಾನ್' ಪಂಜಾಬಿ ದೈನಿಕ ಪತ್ರಿಕೆಯನ್ನು ಹೊರಡಿಸಿದರು. 'ಶೇರ್-ಇ-ಭಾರತ್' ಇವರ ಸಂಪಾದಕತ್ವದಲ್ಲಿ ನಡೆಯುತ್ತಿದ್ದ ಉರ್ದು ದೈನಿಕ.

ಧಿಲ್ಲೋನ್ 1952ರಲ್ಲಿ ಪಂಜಾಬ್ ವಿಧಾನಸಭೆಗೆ ಆರಿಸಿ ಬಂದರು. 1952-54ರ ಅವಧಿಯಲ್ಲಿ ವಿಧಾನ ಸಭೆಯ ಉಪಾಧ್ಯಕ್ಷರಾಗಿ, 1954-62ರ ಅವಧಿಯಲ್ಲಿ ಅಧ್ಯಕ್ಷರಾಗಿ ಇದ್ದರು. 1964ರಲ್ಲಿ ಇವರು ಪಂಜಾಬ್ [illegible] ಮಂತ್ರಿಯಾಗಿದ್ದರು. 1967ರಲ್ಲಿ ಲೋಕಸಭೆಗೆ ಸ್ಪರ್ಧಿಸಿ ಚುನಾಯಿತರಾದರು.

1969ರಲ್ಲಿ ರಾಷ್ಟ್ರಾಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಲೆಂದು ಸಂಜೀವ ರೆಡ್ಡಿಯವರು ಲೋಕಸಭೆಯ ಅಧ್ಯಕ್ಷ ಸ್ಥಾನಕ್ಕೆ ರಾಜಿನಾಮೆ ಕೊಟ್ಟಾಗ, ಧಿಲ್ಲೋನ್ ಆ ಸ್ಥಾನಕ್ಕೆ ಆಯ್ಕೆಯಾದರು. 1971ರಲ್ಲಿ ಸಾರ್ವತ್ರಿಕ ಚುನಾವಣೆ ನಡೆದಾಗ ಲೋಕಸಭೆಗೆ ಪುನರಾಯ್ಕೆಗೊಂಡರು. ಮತ್ತೆ ಸರ್ವಾನುಮತದಿಂದ ಸಭಾಧ್ಯಕ್ಷರಾದರು. ಲೋಕಸಭೆಯಲ್ಲಿ ಬಿಕ್ಕಟ್ಟಿನ, ಬಿರುಸಿನ ಪರಿಸ್ಥಿತಿಗಳು ಏರ್ಪಟ್ಟ ಸಂದರ್ಭಗಳಲ್ಲಿ ಕೂಡ ತಮ್ಮ ಸಹನೆ, ನ್ಯಾಯಪರತೆ, ಸಮದರ್ಶಿತ್ವ, ಹಾಸ್ಯಪ್ರವೃತ್ತಿಗಳಿಂದ ಕಾರ್ಯನಿರ್ವಹಣೆ ಮಾಡಿ ಅವರು ಖ್ಯಾತರಾಗಿದ್ದಾರೆ.

ಲೋಕಸಭಾಧ್ಯಕ್ಷತೆ : ಧಿಲ್ಲೋನ್

ಪಂಜಾಬ್ ವಿಶ್ವವಿದ್ಯಾನಿಲಯ ಧಿಲ್ಲೋನ್ ಅವರಿಗೆ 'ಡಾಕ್ಟರ್ ಆಫ್ ಲಾಸ್' ಪ್ರಶಸ್ತಿ ಕೊಟ್ಟು ಗೌರವಿಸಿದೆ.

ಜಿ. ಎಸ್. ಪಾಠಕ್

ಪಂಡಿತ ಕೃಷನ್ ಸ್ವರೂಪ್ ಪಾಠಕ್ ವಾಯುವ್ಯ ರೈಲ್ವೆಯ ನೌಕರ. 1896 ಫೆಬ್ರುವರಿ 26ರಂದು ಅವರಿಗೆ ಮಗ ಹುಟ್ಟಿದ. ಸಂಸಾರದ [illegible] ತಂದೆ ಈ ಮಗನನ್ನು ಪ್ರೀತಿಯಿಂದ ಬೆಳೆಸಿದರು; ಒಳ್ಳೆಯ ವಿದ್ಯಾಭ್ಯಾಸ ಕೊಡಿಸಿದರು. [illegible] ಬುದ್ಧಿವಂತ. ಶ್ರದ್ಧೆಯಿಂದ ಓದಿದ. ಹದಿನಾರನೆಯ ವರ್ಷದಲ್ಲಿ ಲಾಹೋರಿನ ಸರಕಾರಿ ಕಾಲೇಜಿನಲ್ಲಿ ಬಿ. ಎ. ಪಾಸಾದ. ಅಗ್ರಕ್ಕೆ ಹೋಗಿ ಎಂ. ಎ. ಮತ್ತು ನ್ಯಾಯಶಾಸ್ತ್ರ ಪರೀಕ್ಷೆಗಳಿಗಾಗಿ ಏಕಕಾಲದಲ್ಲಿ ಅಭ್ಯಾಸಮಾಡಿ, ಎರಡರಲ್ಲೂ ಉತ್ತೀರ್ಣನಾದ. ತನ್ನ ಹುಟ್ಟೂರಾದ ಬಸ್ತಿಗೆ ಹೋಗಿ ವಕೀಲನಾದ. ಸ್ವಲ್ಪ ಕಾಲದಲ್ಲೇ ಉತ್ತಮ ವಕೀಲನೆಂದೂ ನ್ಯಾಯಶಾಸ್ತ್ರಜ್ಞನೆಂದೂ ಹೆಸರು ಗಳಿಸಿದ.

ಇಂಥ ಪ್ರತಿಭಾಶಾಲಿ, 1969 ಆಗಸ್ಟ್ 31ರಂದು ಭಾರತದ ಉಪಾಧ್ಯಕ್ಷರಾಗಿ ಚುನಾಯಿತರಾದ ಗೋಪಾಲ ಸ್ವರೂಪ್ ಪಾಠಕ್.

ಬಸ್ತಿಯಲ್ಲಿ ವಕೀಲರಾಗಿ ಹೆಸರು ಗಳಿಸಿದ ಪಾಠಕ್ ಮುಂದೆ ಅಲಹಾಬಾದಿಗೆ ಹೋಗಿ ಉಚ್ಚನ್ಯಾಯಾಲಯದ ವಕೀಲರಾದರು; 1945ರಲ್ಲಿ ಅದೇ ನ್ಯಾಯಾಲಯದ ನ್ಯಾಯಾಧೀಶರಾದರು.

[illegible]

ವರು. ಪಾಠಕರು ಈ ಸೂಚನೆಯನ್ನು ಅಂಗೀಕರಿಸಿ, ತಮ್ಮ ನ್ಯಾಯಾಧೀಶ ಪದವಿಗೆ ಮರು ವರ್ಷವೇ ರಾಜಿನಾಮೆಕೊಟ್ಟರು.

[illegible] ವಂತೆ ಪಾಠಕರನ್ನು ಆಹ್ವಾನಿಸಿದರು. ಅವರಿಬ್ಬರ ಸ್ನೇಹ ಬೆಳೆಯಿತು.



ಉಪರಾಷ್ಟ್ರಪತಿ ಪಾಠಕ್

ಪಾಠಕರು ಜವಾಹರಲಾಲರ ಆಪ್ತ ಕಾನೂನು ಸಲಹೆಗಾರರಾದರು : ವಿಶ್ವ ಸಂಸ್ಥೆಯ ಭಾರತ ನಿಯೋಗದ ಸದಸ್ಯರಾಗಿ ನಿಯಮಿತರಾದರು ; ಅದರ ಸಭೆಗಳಲ್ಲಿ ಪರಿಣಾಮಕಾರಿಯಾಗಿ ಭಾಗ ವಹಿಸಿದರು. ಕಾಶ್ಮೀರದ ಸಮಸ್ಯೆಯ ಬಗೆಗೆ ಭಾರತದ ನಿಲುವನ್ನು ವಿದೇಶಗಳಲ್ಲಿ ವಿವರಿಸಲು ಜವಾಹರಲಾಲರ ವೈಯಕ್ತಿಕ ಪ್ರತಿನಿಧಿಯಾಗಿ ಅನೇಕ ರಾಷ್ಟ್ರಗಳಲ್ಲಿ ಸಂಚರಿಸಿ, ಅಮೂಲ್ಯ ಸೇವೆ ಸಲ್ಲಿಸಿದರು. 1960ರಲ್ಲಿ ರಾಜ್ಯ ಸಭೆಯ ಸದಸ್ಯರಾದರು.

1966ರಲ್ಲಿ ಇಂದಿರಾ ಗಾಂಧಿಯವರು ತಮ್ಮ ಮಂತ್ರಿಮಂಡಲವನ್ನು ರಚಿಸಿದಾಗ ಪಾಠಕರು ಕಾನೂನು ಮತ್ತು ಕೇಂದ್ರ ಶಾಸನ ಶಾಖೆಯ ಮಂತ್ರಿಯಾದರು. ಆದರೆ ಆ ಅಧಿಕಾರದಲ್ಲಿ ಅವರು ಹೆಚ್ಚು ಕಾಲ ಮುಂದುವರಿಯಲಿಲ್ಲ. ಮಂತ್ರಿಸ್ಥಾನದ ಹೊರಗುಳಿದೇ ಸಾರ್ವಜನಿಕ ಸೇವೆಯನ್ನು ಮುಂದುವರಿಸಲು ಬಯಸಿದರು. 1967ರಲ್ಲಿ ಮೈಸೂರಿನ ರಾಜ್ಯಪಾಲರಾದರು : 1969ರಲ್ಲಿ ಭಾರತದ ಉಪರಾಷ್ಟ್ರಪತಿಯಾಗಿ ಆಯ್ಕೆಗೊಂಡರು.

ಪಾಠಕರು ಅಂತರರಾಷ್ಟ್ರೀಯ ಖ್ಯಾತಿಯ ಕಾನೂನು ಪಂಡಿತರು ; ಭಾರತೀಯ ಸಂಸ್ಕೃತಿ, ಅದರ ರಕ್ಷಣೆ ಅಭಿವೃದ್ಧಿಗಳಲ್ಲಿ ಅವರಿಗೆ ಅಪಾರ ಆಸಕ್ತಿ.

ಜಿ. ಜಿ. ಬೇವೂರ್

1969ರಲ್ಲಿ ಪರಮ ವಿಶಿಷ್ಟ ಸೇವಾ ಪದಕವನ್ನೂ 1972ರಲ್ಲಿ ಪದ್ಮಭೂಷಣ ಪ್ರಶಸ್ತಿಯನ್ನೂ ಪಡೆದ ಗೋಪಾಲ ಗುರುನಾಥ ಬೇವೂರ್ ಅವರು 1973ರ ಜನವರಿ 15ರಂದು ಭಾರತೀಯ ಸೇನಾ ಪಡೆಯ ಮಹಾ ದಂಡನಾಯಕರಾಗಿ ಅಧಿಕಾರ ವಹಿಸಿಕೊಂಡರು.

ಗೋಪಾಲ ಬೇವೂರ್ ಹುಟ್ಟಿದ್ದು 1916 ಆಗಸ್ಟ್ 11ರಂದು. ಹಿಂದಿನ ಮಧ್ಯಪ್ರಾಂತದ ಸಿಯೋನಿಯಲ್ಲಿ. ಕರ್ನಾಟಕದವರಾದ ತಂದೆ ಗುರುನಾಥ ಬೇವೂರರು 'ಇಂಡಿಯನ್ ಸಿವಿಲ್ ಸರ್ವಿಸ್‌ನ ಖ್ಯಾತ ಅಧಿಕಾರಿಯಾಗಿದ್ದರು.



ನಾಯಕ, ಶಿಕ್ಷಕ, ಸೇನಾನಿ : ಬೇವೂರ್

ತಮ್ಮ ವಿದ್ಯಾಭ್ಯಾಸ ಮುಗಿಸಿದ ಮೇಲೆ ಗೋಪಾಲ ಬೇವೂರ್ ರಾಯಲ್ ಇಂಡಿಯನ್ ಮಿಲಿಟರಿ ಕಾಲೇಜಿನಲ್ಲೂ ಇಂಡಿಯನ್ ಮಿಲಿಟರಿ ಅಕಾಡೆಮಿಯಲ್ಲೂ ಸೈನಿಕ ಶಿಕ್ಷಣ ಪಡೆದರು. ಅಲ್ಲಿ 'ಗೌರವ ಖಡ್ಗ' ಮತ್ತು ಚಿನ್ನದ ಪದಕಗಳ ಪ್ರಶಸ್ತಿ ಗಳಿಸಿದರು.

1937ರಲ್ಲಿ ಬೇವೂರ್ ಸೇನಾಪಡೆಯಲ್ಲಿ ನಿಯೋಜಿತರಾದರು.

ಎರಡನೆಯ ಮಹಾಯುದ್ಧ ಕಾಲದಲ್ಲಿ ಬರ್ಮಾದಲ್ಲಿ ಹೋರಾಡಿದರು. 1947–48ರಲ್ಲಿ ಪಾಕಿಸ್ತಾನದವರು ಕಾಶ್ಮೀರದ ಮೇಲೆ ನುಗ್ಗಿಬಂದಾಗ ತಮ್ಮ ಸೇನೆಯೊಡನೆ ಅವರನ್ನೆದುರಿಸಿ ಹಿಮ್ಮೆಟ್ಟಿಸಿದರು.

1948ರಲ್ಲಿ ಎನ್. ಸಿ. ಸಿ. ಯ ನಿರ್ದೇಶಕರಾಗಿ ಅಧಿಕಾರ ವಹಿಸಿಕೊಂಡ ಬೇವೂರ್ ಮೂರು ವರ್ಷಗಳ ಅವಧಿಯಲ್ಲಿ ಎನ್. ಸಿ. ಸಿ. ಯನ್ನು ಬೃಹತ್ ರಾಷ್ಟ್ರೀಯ ಸಂಘಟನೆಯಾಗಿ ಬೆಳೆಸಿದರು.

ಮತ್ತೆ ಕೆಲವು ಕಾಲ ಸೇನೆಯ ಬೇರೆ ಅಧಿಕಾರಗಳನ್ನು ನಿರ್ವಹಿಸಿ, 1963ರಲ್ಲಿ ಸೇನಾಶಿಕ್ಷಣದ ನಿರ್ದೇಶಕರಾದರು ; ಸೇನೆಯ ಅಧಿಕಾರಿಗಳು ಮತ್ತು ಯೋಧರಿಗೆ ಕೊಡುವ ಶಿಕ್ಷಣ ಕ್ರಮದಲ್ಲಿ ಸುಧಾರಣೆಗಳನ್ನು ಆಚರಣೆಗೆ ತಂದರು.

1964ನೆಯ ನವೆಂಬರ್‌ನಲ್ಲಿ ಪೂರ್ವವಲಯದ ಸೇನಾಧಿಪತಿಯಾಗಿ ಸಿಕ್ಕಿಂ ಪ್ರದೇಶದ ರಕ್ಷಣಾ ವ್ಯವಸ್ಥೆಗಳನ್ನು ಬಲಪಡಿಸಿದರು.

1969ರಲ್ಲಿ ದಕ್ಷಿಣ ವಲಯದ ಸೇನಾಧಿಪತಿಯಾದರು. 1971ರಲ್ಲಿ ಪಾಕಿಸ್ತಾನದೊಡನೆ ನಡೆದ ಹೋರಾಟದಲ್ಲಿ, ರಾಜಸ್ಥಾನ ಮತ್ತು ಕಚ್ ವಲಯಗಳಲ್ಲಿ ಪಾಕ್ ಸೇನೆಯನ್ನು ಎದುರಿಸಿ, ಆ ದುರ್ಗಮ ಪ್ರದೇಶದಲ್ಲಿ ತುಂಬ ಚಾಕಚಕ್ಯದಿಂದ ಯುದ್ಧ ನಡೆಸಿ, 4765 ಚದರ ಮೈಲು ಪಾಕ್ ಪ್ರದೇಶವನ್ನು ಆಕ್ರಮಿಸಿಕೊಂಡರು.


ಜನರಲ್ ಬೇವೂರ್ ಅವರು ಉತ್ತಮ ಸೇನಾ ನಾಯಕರು, ಯುದ್ಧ ತಂತ್ರಪಟು, ಸೇನಾ ಶಿಕ್ಷಕ. ಸೈನಿಕರ ಹಿತಸಾಧನೆಯಲ್ಲಿ ಅವರಿಗೆ ವಿಶೇಷ ಆಸಕ್ತಿ.

ಜಿ.ಡಿ. ನಾಯುಡು

ಆರು ದಿನಗಳಲ್ಲಿ ಸಿಹಿಮೂತ್ರ ರೋಗವನ್ನು ವಾಸಿಮಾಡುವ ಔಷಧಿ ಬಯಸುತ್ತೀರಾ ? 200 ಬಾರಿ ಮುಖಕ್ಷೌರ ಮಾಡುವಂಥ ಬ್ಲೇಡು ಬೇಕೆ ? ಚುನಾವಣೆಯಲ್ಲಿ ಮೋಸಕ್ಕೆ ಎಡೆಯಿಲ್ಲದಂತೆ ಮತಗಳ ಲೆಕ್ಕ ಇಡುವ ಯಂತ್ರದ ಕುರಿತು ತಿಳಿದಿದೆಯೆ ? ಇವು ಮತ್ತು ಇಂಥ ನೂರಾರು ವಸ್ತುಗಳ ವಿನ್ಯಾಸವನ್ನು ಮಾಡಿದವರು ಜಿ. ಡಿ. ನಾಯುಡು. ಉದ್ಯಮಿ, ಸಂಶೋಧಕ, ವ್ಯವಸಾಯತಜ್ಞ, ಸಸ್ಯವಿಜ್ಞಾನಿ ಹಾಗೂ ವೈದ್ಯರಾಗಿ ಇವರು ಹೆಸರು ಗಳಿಸಿದರು.

ಗೋಪಾಲಸ್ವಾಮಿ ದೊರೆಸ್ವಾಮಿ ನಾಯುಡು ಕೊಯಮತ್ತೂರಿನ ಸಮೀಪದ ಹಳ್ಳಿಯೊಂದರಲ್ಲಿ ಹುಟ್ಟಿದರು. ಜನನ 1893 ಮಾರ್ಚ್ 23ರಂದು. ಚಿಕ್ಕಂದಿನಲ್ಲಿ ಇವರು ತುಂಬ ತುಂಟ. ತಮ್ಮ ಮದುವೆಯ ಮುಹೂರ್ತಕ್ಕೆ ಸರಿಯಾಗಿ ಅವರು ನಾಪತ್ತೆ ಆಗಿದ್ದರು. ಪ್ರಾಥಮಿಕ ಶಾಲೆಯ ಶಿಕ್ಷಣಕ್ಕಿಂತ ಹೆಚ್ಚಿನ ವಿದ್ಯಾಭ್ಯಾಸ ಇವರು ಪಡೆಯಲಿಲ್ಲ. ಆದರೂ ಉತ್ತಮ ಪುಸ್ತಕಗಳನ್ನು ಆಯ್ದುಕೊಂಡು ಓದುವ ಅಭ್ಯಾಸ ಬೆಳೆಸಿಕೊಂಡರು.

ಹೋಟೆಲಿನ ಮಾಣಿಯಾಗಿ ಕೆಲಸ ಮಾಡುತ್ತಿದ್ದ ನಾಯುಡು ದುಡ್ಡು



ಅದ್ಭುತ ಪ್ರತಿಭೆ : ನಾಯುಡು

[illegible] ಮೋಟರ್‌ಸೈಕಲ್ ಒಂದನ್ನು ಕೊಂಡರು. ಅದನ್ನು ಬಿಚ್ಚಿ ಹಾಕಿ ಮತ್ತೆ ಜೋಡಿಸಿ ಯಂತ್ರದ ಕಾರ್ಯವಿಧಾನ [illegible]. ಸ್ವಲ್ಪ ಕಾಲದಲ್ಲಿ ಅವರು ಸಾರಿಗೆ ಸಂಸ್ಥೆಯೊಂದನ್ನು ಕಟ್ಟಿದರು. ರೇಡಿಯೋ ತಯಾರಿ ಸಂಸ್ಥೆಯನ್ನು ಸ್ಥಾಪಿಸಿದರು.

ತೋಟಗಾರಿಕೆಯಲ್ಲಿ ಸಂಶೋಧನೆ ನಡೆಸಲು ಜಿ.ಡಿ. ನಾಯುಡು ನಲವತ್ತು ಎಕರೆ ವಿಸ್ತೀರ್ಣದ ಸ್ಥಳ ಕೊಂಡರು. ಬ್ಯಾಕ್ಟೀರಿಯ ವಿಜ್ಞಾನದಲ್ಲಿ [illegible] ತೆರೆದರು. [illegible] ಆಯುರ್ವೇದದಿಂದ ಆಕರ್ಷಿತರಾಗಿದ್ದ ನಾಯುಡು ಗಿಡಮೂಲಿಕೆಗಳ ಔಷಧೀಯ ಗುಣಪರೀಕ್ಷೆಗೆ ಪ್ರಯೋಗ ಶಾಲೆ ಕಟ್ಟಿದರು.

ಕಡಮೆ ಖರ್ಚಿನ ಗೃಹನಿರ್ಮಾಣ, ಸಣ್ಣ ಕಾರಿನ ತಯಾರಿ – ಇಂಥ ಅನೇಕ ಅಗತ್ಯಗಳಿಗೆ ನಾಯುಡು ಪರಿಹಾರ ಸೂಚಿಸಿದರು. 1974 ಜನವರಿ 4ರಂದು ಜಿ.ಡಿ. ನಾಯುಡು ನಿಧನರಾದರು.

ಜಿ. ಡಿ. ಬಿರ್ಲಾ

ದೇಶದ ಆರ್ಥಿಕಾಭಿವೃದ್ಧಿ, ವಾಣಿಜ್ಯಗಳ ಬಗೆಗೆ ಆಳವಾಗಿ ಯೋಚಿಸಿ ಭಾರತದ ಔದ್ಯೋಗೀಕರಣ ಯಾವ ರೀತಿ ಬೆಳೆಯಬೇಕು ಎಂದು ಖಚಿತ ಅಭಿಪ್ರಾಯವನ್ನು ಮುಂದಿಟ್ಟವರು. ಘನಶ್ಯಾಮದಾಸ್ ಬಿರ್ಲಾ – ಜಿ.ಡಿ. ಬಿರ್ಲಾ.

ಬಿರ್ಲಾ ಮನೆತನ ಭಾರತದ ಅತ್ಯಂತ ಧನಿಕ ವಣಿಕ ವಂಶಗಳಲ್ಲಿ ಒಂದು. ದಾನಶೀಲ ಹಾಗೂ ಅಂತರರಾಷ್ಟ್ರೀಯ ಖ್ಯಾತಿವೆತ್ತ ಕೈಗಾರಿಕೋದ್ಯಮಿ ಘನಶ್ಯಾಮದಾಸ್ ದೌಲತ್‌ರಾಮ್ ಬಿರ್ಲಾ ಅವರಿಗೆ ಭಾರತ ಸರಕಾರ 1957ರಲ್ಲಿ ಪದ್ಮವಿಭೂಷಣ ಪ್ರಶಸ್ತಿ ಕೊಟ್ಟು ಗೌರವಿಸಿತು. 1967ರಲ್ಲಿ ಬನಾರಸ್ ಹಿಂದೂ ವಿಶ್ವವಿದ್ಯಾನಿಲಯ ಗೌರವ ಡಾಕ್ಟರೇಟ್ ಪದವಿ ನೀಡಿತು.

1894ರಲ್ಲಿ ಜಯಪುರ ಸಂಸ್ಥಾನದಲ್ಲಿ ಜನಿಸಿದ ಬಿರ್ಲಾಅವರು ಶಾಲೆಯಲ್ಲಿ ಕಲಿತದ್ದು ಸ್ವಲ್ಪ. ಸ್ವಂತವಾಗಿ ಓದಿಕೊಂಡದ್ದು ಅಪಾರ. ಜೀವನ ಚರಿತ್ರೆ, ಪ್ರವಾಸ ಕಥನ ಅವರ ಮೆಚ್ಚಿನ ಸಾಹಿತ್ಯ ಪ್ರಕಾರಗಳು. ಗಾಂಧೀಜಿಯ ವ್ಯಕ್ತಿತ್ವ ಅವರ ಜೀವನದ ಮೇಲೆ ಅತ್ಯಧಿಕ ಪರಿಣಾಮ ಉಂಟು ಮಾಡಿತು. 'ಮಹಾತ್ಮರ ಛಾಯೆ', 'ಏಳಿಗೆಯ ಪಥ' ಇವು ಬಿರ್ಲಾರ ಎರಡು ಗ್ರಂಥಗಳು.

ಘನಶ್ಯಾಮದಾಸರು ಅಖಿಲ ಭಾರತ ವಾಣಿಜ್ಯ ಸಂಘ ಒಕ್ಕೂಟದ ಅಧ್ಯಕ್ಷರಾಗಿದ್ದರು. ಬಂಗಾಳ ಮತ್ತು ಭಾರತೀಯ ಶಾಸನಸಭೆಗಳ ಸದಸ್ಯರಾಗಿದ್ದರು. ಜಿನೀವಾದಲ್ಲಿ ನಡೆದ ಅಂತರರಾಷ್ಟ್ರೀಯ ಕಾರ್ಮಿಕ ಸಮ್ಮೇಳನ, ಎರಡನೆಯ ದುಂಡು ಮೇಜು ಪರಿಷತ್ತುಗಳಲ್ಲಿ ಭಾರತೀಯ ಪ್ರತಿನಿಧಿಯಾಗಿ ಭಾಗವಹಿಸಿದರು. ಅಸ್ಪೃಶ್ಯತಾ ನಿವಾರಣಾ ಕಾರ್ಯದಲ್ಲಿ ಪಾಲ್ಗೊಂಡರು.

ಗಾಂಧೀಜೀ ದೆಹಲಿಯಲ್ಲಿದ್ದಾಗ ಬಿರ್ಲಾ ಅವರ ಮನೆಯಲ್ಲಿ ಆಗಾಗ್ಗೆ ಉಳಿದುಕೊಳ್ಳುತ್ತಿದ್ದರು. ಹುತಾತ್ಮರಾದ ದಿನ ಸಂಜೆಯ ಪ್ರಾರ್ಥನಾ ಸಭೆಗೆ ಗಾಂಧೀಜಿ ಹೋದದ್ದು ಈ ಭವನದಿಂದಲೇ. [illegible] ಔದ್ಯೋಗೀಕರಣ [illegible] ಜಗತ್ತಿನ ಉದ್ಧಾರವಾಗಬೇಕಾದರೆ ಧರ್ಮ [illegible] ಅರ್ಥಮಾಡಿಕೊಳ್ಳಬೇಕು —ಎಂಬುದು ಬಿರ್ಲಾರ ಅಭಿಪ್ರಾಯ.



ದಾನಶೀಲ ಧನಿಕ :
ಘನಶ್ಯಾಮದಾಸ್

ಜಿಡ್ಡು ಕೃಷ್ಣಮೂರ್ತಿ

"ನಾನು ಯಾರಿಗೂ ಗುರುವಲ್ಲ: ಯಾರಿಗೂ [illegible] ಬೋಧಿಸುವುದಿಲ್ಲ. ಸತ್ಯವನ್ನು ಪ್ರತಿಯೊಬ್ಬನೂ ತಾನೇ ತಿಳಿದುಕೊಳ್ಳಬೇಕು: ಈ ವಿಷಯದಲ್ಲಿ ಒಬ್ಬನಿಗೆ ಮತ್ತೊಬ್ಬ ಮಾರ್ಗದರ್ಶಕನಾಗಲಾರ. ಯಾವುದೇ ಸಂಸ್ಥೆ, ಧರ್ಮ, ಪಂಥ ಅಥವಾ ಸಂಘಟನೆ ಸತ್ಯದರ್ಶನ ಮಾಡಿಸಲಾರವು."

ತಮ್ಮನ್ನು ಬುದ್ಧ, ಏಸು ಕ್ರಿಸ್ತರ ಅವತಾರ ಎಂದು ನಂಬಿ ವಿಶ್ವದಾದ್ಯಂತ ಲಕ್ಷಾಂತರ ಮಂದಿ ಶಿಷ್ಯರು ತಮಗಾಗಿ ಸಂಘಟಿಸಿದ್ದ 'ಆರ್ಡರ್ ಆಫ್ ದಿ ಸ್ಟಾರ್' ಸಂಘಟನೆಯನ್ನು ಇದ್ದಕ್ಕಿದ್ದಂತೆ ಒಂದು ದಿನ ವಿಸರ್ಜಿಸುತ್ತ ಹೀಗೆ ಹೇಳಿದವರು—ಜಿಡ್ಡು ಕೃಷ್ಣಮೂರ್ತಿ. ವಿಶ್ವದ ಹಲವಾರು ಪ್ರಮುಖ ಪಟ್ಟಣಗಳಲ್ಲಿ ತಮಗಾಗಿ ಕಟ್ಟಿದ್ದ ನಿವಾಸ, ಉಪನ್ಯಾಸಗೃಹಗಳನ್ನು ಅವರು ತ್ಯಜಿಸಿದರು. ಜಗತ್ತಿನ 'ಧರ್ಮಗುರು' ಆಗುವರೆಂದು ಅನೇಕರು ನಿರೀಕ್ಷಿಸಿದ್ದ ಕೃಷ್ಣಮೂರ್ತಿ ಎಲ್ಲ ಸಂಸ್ಥೆ, ಸಂಘಟನೆಗಳಿಂದ ದೂರವಾಗಿ ಸ್ವತಂತ್ರ ಚಿಂತಕರಾದರು: ವಿಶ್ವವಿಖ್ಯಾತ ಆಧುನಿಕ ತತ್ತ್ವಜ್ಞಾನಿಯಾದರು.

ಜಿಡ್ಡು ಕೃಷ್ಣಮೂರ್ತಿಯವರ ಜನನ 1895ರಲ್ಲಿ. ಪ್ರತಿಭೆಯನ್ನು ಗುರುತಿಸುವ ವಿಶೇಷ ಶಕ್ತಿಯಿದ್ದ ಅನಿ ಬೆಸೆಂಟರು ಬಾಲಕ ಕೃಷ್ಣಮೂರ್ತಿಯ ಘನ ವ್ಯಕ್ತಿತ್ವವನ್ನು ಗುರುತಿಸಿ, ಅತನನ್ನೂ ಅತನ ಸೋದರ ನಿತ್ಯಾನಂದನನ್ನೂ ತಮ್ಮ ವಶಕ್ಕೆ ತೆಗೆದುಕೊಂಡರು; ಅವರ ಪಾಲನೆ ಪೋಷಣೆಯ ಜವಾಬ್ದಾರಿ ಹೊತ್ತರು. ಪ್ರಬುದ್ಧ ಜೀವಿಗಳು ಜಗತ್ತಿನ ಉದ್ಧಾರಕ್ಕಾಗಿ ಆಗಾಗ ಆವಿರ್ಭವಿಸುತ್ತಾರೆ ಎಂದು ನಂಬಿದ್ದ ಅನಿ ಬೆಸೆಂಟರು ಕೃಷ್ಣಮೂರ್ತಿ ಅಂಥ ಮಹಾಚೇತನ ಎಂದು ಭಾವಿಸಿದರು.

ಈ ಮಹಾಚೇತನದ ಸಂದೇಶವನ್ನು ಸ್ವೀಕರಿಸಲು ಜನರನ್ನು ಸಿದ್ಧಗೊಳಿಸುವ ಉದ್ದೇಶದಿಂದ ವಿಶ್ವದಾದ್ಯಂತ ಲಕ್ಷಾಂತರ ಮಂದಿ ಶಿಷ್ಯರನ್ನು ಸಂಘಟಿಸಿ, ಅದಕ್ಕೆ 'ಆರ್ಡರ್ ಆಫ್ ದಿ ಸ್ಟಾರ್' ಎಂಬ ಸಂಸ್ಥೆಯನ್ನು ಕಟ್ಟಿದರು. ಕೃಷ್ಣಮೂರ್ತಿಯವರನ್ನು ಆ ಸಂಸ್ಥೆಯ ಮುಖಂಡರನ್ನಾಗಿ ಮಾಡಿದರು. ಇಂಗ್ಲೆಂಡಿನಲ್ಲಿ ಅತ್ಯುತ್ತಮ ರೀತಿಯ ವಿದ್ಯಾಭ್ಯಾಸ ಪಡೆಯಲು ವ್ಯವಸ್ಥೆ ಮಾಡಿದರು. ಆದರೆ, ಕೃಷ್ಣಮೂರ್ತಿ ತಮ್ಮದೇ ದಾರಿ ಹಿಡಿದರು.

"ಸತ್ಯದ ಗ್ರಹಿಕೆ ಮೂಲತಃ ವೈಯಕ್ತಿಕವಾದದ್ದು. ಆದ್ದರಿಂದ ನಾನು ಇನ್ನೊಬ್ಬರಿಗೆ ಏನನ್ನೂ ಬೋಧಿಸಲಾರೆ" ಎನ್ನುವುದು ಕೃಷ್ಣಮೂರ್ತಿಯವರ ನಿಲುವು. ಅವರು ಯಾವ ಹೇಳಿಕೆ ಅಭಿಪ್ರಾಯಗಳನ್ನೂ ಅನುಸರಿಸುವವರಲ್ಲ. ಯಾವುದೇ ಧರ್ಮ, ಯಾವುದೇ ಗುರುವಾಣಿಯಲ್ಲಿ ಅವರಿಗೆ



ಸ್ವತಂತ್ರ ಚಿಂತನೆ :
ಜಿಡ್ಡು

ನಂಬಿಕೆ ಇಲ್ಲ. ಅಂತೆಯೇ ತಮ್ಮನ್ನು ಬೇರೆಯವರು ಅನುಸರಿಸುವುದೂ ಅವರಿಗೆ ಇಷ್ಟವಿಲ್ಲ.

"ಯಾವುದೇ ಧರ್ಮ, ತತ್ತ್ವ, ನಂಬಿಕೆಗಿಂತ ಜೀವನ ಮುಖ್ಯ. ಜೀವನವನ್ನು ನಂಬಿಕೆ, ಸಂಪ್ರದಾಯಗಳಿಂದ ಬಿಡಿಸಿ ಶುದ್ಧವಾಗಿ ಇಟ್ಟುಕೊಳ್ಳುವವನಿಗ ಶುದ್ಧರೀತಿಯಲ್ಲಿ ಸತ್ಯ ಗೋಚರಿಸುತ್ತದೆ" —ಎಂಬುದು ಅವರ ಅಭಿಪ್ರಾಯ.

ಇಪ್ಪತ್ತನೆಯ ಶತಮಾನದ ಭಾರತದ ಈ ಸ್ವತಂತ್ರ ಚಿಂತಕ ವಿಶ್ವದ ಜನಪ್ರಿಯ ತತ್ತ್ವಜ್ಞಾನಿಗಳಲ್ಲೊಬ್ಬರು.

ಜಿ. ರಾಮಚಂದ್ರನ್


ಗಾಂಧೀ ತತ್ತ್ವದ ನಿಷ್ಠಾವಂತ ಅನುಯಾಯಿ. ಸಮಾಜ ಸೇವಕ. ರಾಮಚಂದ್ರನ್.

ಸ್ವಾತಂತ್ರ್ಯ ಹೋರಾಟ ಕಾಲದಲ್ಲಿ 30 ವರ್ಷ ತಮಿಳು ನಾಡು ಹಾಗೂ ಕೇರಳಗಳಲ್ಲಿ ಸಕ್ರಿಯವಾಗಿ ಇವರು ಭಾಗವಹಿಸಿದರು. ಹಲವು ಬಾರಿ ಸೆರೆಮನೆ ಕಂಡರು.

ಗೋವಿಂದ ರಾಮಚಂದ್ರನ್ ಅವರು 1904 ಅಕ್ಟೋಬರ್ 8ರಂದು ಕೇರಳದ ನೆಯ್ಯತ್ತಿನ್‌ಕರೈ ಎಂಬಲ್ಲಿ ಜನಿಸಿದರು. ತಂದೆ ಗೋವಿಂದ ಪಿಳ್ಳೈ. ತಾಯಿ ಮಾಧವಿ ತಂಕಾಚಿ. ವಿಶ್ವಭಾರತಿಯಲ್ಲಿ ಅಭ್ಯಾಸ ಮಾಡಿ 1925ರಲ್ಲಿ ಪದವೀಧರರಾದರು. ಅನಂತರ ಭಾರತ ರಾಷ್ಟ್ರೀಯ ಕಾಂಗ್ರೆಸ್ ಸದಸ್ಯರಾಗಿ ಕೇರಳ, ತಮಿಳುನಾಡಿನ ಚಟುವಟಿಕೆಗಳಲ್ಲಿ ಪಾಲುಗೊಂಡರು.

ಕೇರಳ ಹಾಗೂ ತಮಿಳುನಾಡಿನ ಹರಿಜನ ಸೇವಕ ಸಂಘದ ಪ್ರಾಂತೀಯ ಕಾರ್ಯದರ್ಶಿಯಾಗಿಯೂ (1930–36) ಹಿಂದೂಸ್ತಾನೀ ತಾಲೀಮಿ ಸಂಘದ ಸಹಾಯಕ ಕಾರ್ಯದರ್ಶಿಯಾಗಿಯೂ (1940–43) ಸೇವೆ ಸಲ್ಲಿಸಿದರು. ವರ್ಧಾದ ಅಖಿಲ ಭಾರತ ಗ್ರಾಮೀಣ ಕೈಗಾರಿಕಾ ಸಂಘದ ಕಾರ್ಯದರ್ಶಿಯಾಗಿ ಮೂರು ವರ್ಷ ಕೆಲಸ ಮಾಡಿದರು. ಭಾರತ ಸರಕಾರದ ಮೂಲ ಶಿಕ್ಷಣ ಪರಿಶೀಲನಾ ಸಮಿತಿಯ ಅಧ್ಯಕ್ಷರಾಗಿಯೂ ಇದ್ದರು. ಕೇರಳದ ವಿಧಾನ ಸಭೆಯಲ್ಲಿಯೂ ಮೊತ್ತಮೊದಲ ಕಾಂಗ್ರೆಸ್ ಸಚಿವ ಸಂಪುಟದಲ್ಲಿಯೂ ಇದ್ದರು. ತಮಿಳುನಾಡಿನ ಗಾಂಧೀ ಗ್ರಾಮದ ಶಿಕ್ಷಣ ನಿರ್ದೇಶಕರಾಗಿದ್ದರು.

ಗಾಂಧೀಸ್ಮಾರಕ ನಿಧಿ ಮತ್ತು ಗಾಂಧೀ ಶಾಂತಿ ಪ್ರತಿಷ್ಠಾನಗಳಲ್ಲಿ ರಾಮಚಂದ್ರನ್ ಸೇವೆ ಸಲ್ಲಿಸಿದ್ದಾರೆ. 1962ರಲ್ಲಿ ರಷ್ಯಕ್ಕೆ ಹೋಗಿದ್ದ ಗಾಂಧೀ ಶಾಂತಿ ಪ್ರತಿಷ್ಠಾನದ ಸಮಿತಿಯ ಒಬ್ಬ ಸದಸ್ಯರಾಗಿದ್ದರು. 'ನವ ಕೇರಳಮ್', 'ಇಂಡಿಯನ್ ಎಕ್ಸ್‌ಪ್ರೆಸ್' ಪತ್ರಿಕೆಗಳ ಸಂಪಾದಕ ವರ್ಗದಲ್ಲಿದ್ದರು. 'ಭಾರತೀಯ ನವೋದಯದ ಇಣಕು ನೋಟಗಳು', 'ಗ್ರಾಮಸೇವೆಯ ಕೈಪಿಡಿ', 'ಗಾಂಧೀ ಮತ್ತು ಮಾನವ', 'ಶಾಂತಿ ಕಾಲದ ಆರ್ಥಿಕತೆ' ಮುಂತಾದುವು ಅವರು ರಚಿಸಿರುವ ಗ್ರಂಥಗಳು. ಜಿ. ರಾಮಚಂದ್ರನ್ 1973ರಲ್ಲಿ ಅಖಿಲ ಭಾರತ ಖಾದಿ ಮತ್ತು ಗ್ರಾಮೋದ್ಯೋಗ ಆಯೋಗದ ಅಧ್ಯಕ್ಷರಾದರು.



ಗಾಂಧೀ ತತ್ತ್ವ :
ರಾಮಚಂದ್ರನ್

ಜಿ. ವಿ. ಮಾವಳಣಕರ್


ಸ್ವತಂತ್ರ ಭಾರತದ ಲೋಕಸಭೆಯ ಪ್ರಥಮ ಅಧ್ಯಕ್ಷ ಗಣೇಶ ವಾಸು
ದೇವ ಮಾವಳಣಕರ್.

ಇವರು 1888 ನವೆಂಬರ್ 26ರಂದು ಹುಟ್ಟಿದರು. ರಾಜಾಪುರ, ಅಹಮದಾಬಾದ್, ಮುಂಬಯಿಗಳಲ್ಲಿ ಶಿಕ್ಷಣ ಪಡೆದು ಬಿ. ಎ., ಎಲ್‌ಎಲ್.ಬಿ. ಪದವೀಧರರಾಗಿ ವಕೀಲವೃತ್ತಿ ಪ್ರಾರಂಭಿಸಿದರು.

1917ರಲ್ಲಿ ಇನ್‌ಫ್ಲುಯೆಂಜ, ಕ್ಷಾಮ ಸಮಯಗಳಲ್ಲಿ ಸೇವೆ ಸಲ್ಲಿಸಿ ಜನ
ಪ್ರಿಯತೆ ಗಳಿಸಿದರು. 1919ರಲ್ಲಿ ಅಹಮದಾಬಾದ್ ಪುರಸಭೆಯ
ಸದಸ್ಯರಾದರು. 1921ರಿಂದ 23ರ ವರೆಗೆ ಗುಜರಾತ್ ಪ್ರಾಂತದ ಕಾಂಗ್ರೆಸ್
ಕಾರ್ಯದರ್ಶಿಯಾಗಿದ್ದರು. 1930–33 ಮತ್ತು 1935–36 ಅವಧಿಯಲ್ಲಿ
ಅಹಮದಾಬಾದ್ ನಗರಸಭೆಯ ಅಧ್ಯಕ್ಷರಾಗಿದ್ದರು.

1940ರಲ್ಲಿ ವೈಯಕ್ತಿಕ ಸತ್ಯಾಗ್ರಹದಲ್ಲಿ ಸೆರೆಮನೆವಾಸ ಅನುಭವಿಸಿದರು. 1946–47ರಲ್ಲಿ ಕೇಂದ್ರ ಶಾಸನಸಭೆಯ ಅಧ್ಯಕ್ಷರಾದರು.

1948ರಲ್ಲಿ ಲಂಡನಿನಲ್ಲಿ ನಡೆದ ಕಾಮನ್‌ವೆಲ್ತ್ ಪಾರ್ಲಿಮೆಂಟರಿ ಸಮ್ಮೇಳನ, 1950ರಲ್ಲಿ ಅಲ್ಲೇ ನಡೆದ ಕಾಮನ್‌ವೆಲ್ತ್ ಶಾಸನ ಸಭಾಪತಿಗಳ ಸಮ್ಮೇಳನ, ಅದೇ ವರ್ಷ ಡಬ್ಲಿನ್‌ನಲ್ಲಿ ನಡೆದ ಇಂಟರ್ ಪಾರ್ಲಿಮೆಂಟರಿ ಸಮ್ಮೇಳನಗಳಲ್ಲಿ ಭಾರತದ ಪ್ರತಿನಿಧಿಯಾಗಿ ಭಾಗವಹಿಸಿದರು. 1950ರಲ್ಲಿ ಬ್ರಿಟಿಷ್ ಪಾರ್ಲಿಮೆಂಟಿನ ಹೊಸ ಕಟ್ಟಡ ಆರಂಭೋತ್ಸವದಲ್ಲಿ ಭಾಗವಹಿಸಿದರು.



ಲೋಕಸಭಾಧ್ಯಕ್ಷತೆ : ಮಾವಳ

1950 ಜನವರಿ 26ರಂದು ಲೋಕಸಭೆಯ ಅಧ್ಯಕ್ಷರಾಗಿ ಆಯ್ಕೆಗೊಂಡ ಇವರು 1956ರ ವರೆಗೂ ಅದರ ಕಾರ್ಯನಿರ್ವಹಿಸಿದರು. ಮಾವಳಣ
ಕರರು ಆಗ ಅಧ್ಯಕ್ಷರಾಗಿ ನೀಡಿದ ತೀರ್ಪುಗಳು ಅವರ ಅನಂತರದ
ಲೋಕಸಭಾಧ್ಯಕ್ಷರಿಂದ ಆಧಾರಗಳೆಂದು ಉಲ್ಲೇಖಿಸಲ್ಪಟ್ಟಿವೆ.

ಜಿ. ಶಂಕರ ಕುರುಪ್


ಕೇರಳದ ಪ್ರಸಿದ್ಧ ಕವಿ ಜಿ. ಶಂಕರ ಕುರುಪ್. ಕಿರಿವಯಸ್ಸಿನಲ್ಲೇ ಅವರು
ಪ್ರತಿಭಾವಂತರೆನಿಸಿದರು.

ಇವರು ತರಬೇತಿಶಾಲೆಯ ಉಪಾಧ್ಯಾಯರಾಗಿ ಸೇರಿದಾಗ ಇವರ
ತರಗತಿಯ ಹೆಚ್ಚಿನ ವಿದ್ಯಾರ್ಥಿಗಳು ಕುರುಪ್‌ಗಿಂತ ಹಿರಿಯರು. ಆದರೂ
ವಿದ್ಯಾರ್ಥಿಗಳಿಗೆ ತಮ್ಮ ತರುಣ ಉಪಾಧ್ಯಾಯರಲ್ಲಿ ಬಹಳ ಭಕ್ತಿ. ಗೌರವ
ಆಗಲೇ ಶಂಕರ ಕುರುಪ್ ಉತ್ತಮ ಕವಿ ಎಂದು ಹೆಸರಾಗಿದ್ದರು.

ಕುರುಪ್ ಅವರ ಜನನ 1901ರಲ್ಲಿ, ಕಾಲಟಿಯಲ್ಲಿ. ಅಷ್ಟೇನೂ ಅನು
ಕೂಲವಿರದ ಮನೆತನ. ಎಳೆಯ ವಯಸ್ಸಿನಲ್ಲೇ ಶಂಕರ ಕುರುಪ್ ಉದ್ಯೋ
ಕೈಗೊಂಡರು. ಬಿಡುವಿನ ಸಮಯದಲ್ಲಿ ಸಾಹಿತ್ಯಾಭ್ಯಾಸ ನಡೆಸಿದರು
ಸ್ವತಃ ಕಾವ್ಯರಚನೆ ಮಾಡಿದರು. ಇವರ ಪ್ರಥಮ ಕವನ ಸಂಕಲನ 'ಸಾಹಿ

ಕೌತುಕವುಮ್ ' 1923ರಲ್ಲಿ ಪ್ರಕಟವಾಯಿತು. ರವೀಂದ್ರನಾಥ ಠಾಕೂರ್, ಪರ್ಷಿಯದ ಸೂಫಿಗಳಿಂದ ಇವರು ಪ್ರಭಾವಿತರಾಗಿದ್ದರು. ನಿಸರ್ಗ ಪ್ರಿಯರೂ ಕನಸುಗಾರರೂ ಆದ ಈ ಕವಿ ಕ್ರಮೇಣ ಕ್ರಾಂತಿಕಾರೀ ಭಾವನೆಗಳನ್ನು ತಮ್ಮ ಕೃತಿಗಳಲ್ಲಿ ವ್ಯಕ್ತಪಡಿಸತೊಡಗಿದರು. ಸರಕಾರೀ ಉದ್ಯೋಗದಲ್ಲಿದ್ದ ಕುರುಪ್ ಆಗ ಬಹಳ ಕಷ್ಟ ಅನುಭವಿಸಬೇಕಾಯಿತು.

' ನಿಮಿಷಮ್ ' (1945), ' ಮುತ್ತುಕಳ್ ' (1946), ' ವಿಶ್ವದರ್ಶನಂ ' (1960), ' ಜೀವನ ಸಂಗೀತಮ್ ' (1964) ಮುಂತಾದುವು ಕುರುಪ್ ಅವರ ಪ್ರಮುಖ ಕವನಸಂಕಲನಗಳು. 1950ರಲ್ಲಿ ಪ್ರಕಟವಾದ 'ಓಟಕ್ಕುಪಲ್' ಇವರ ಅತ್ಯುತ್ತಮ ಕವನ ಸಂಕಲನ. ಈ ಕೃತಿಗಾಗಿ 1965ರಲ್ಲಿ ಕುರುಪ್ ಅವರಿಗೆ ಭಾರತೀಯ ಜ್ಞಾನಪೀಠ ಪಾರಿತೋಷಕ ದೊರೆಯಿತು.



ಮಹಾಕವಿ 'ಜಿ'

ಕುರುಪ್ ಹೈ ಸ್ಕೂಲು, ಕಾಲೇಜುಗಳಲ್ಲಿ ಶಿಕ್ಷಕರಾಗಿದ್ದರು. ನಿವೃತ್ತರಾದ ಬಳಿಕ ಆಕಾಶವಾಣಿಯಲ್ಲಿ ಕೆಲಸ ಮಾಡಿದರು. ಮುಂದೆ ರಾಜ್ಯಸಭಾ ಸದಸ್ಯರಾಗಿ ನೇಮಕಗೊಂಡರು. 1963ರಲ್ಲಿ ಸಾಹಿತ್ಯ ಅಕಾದೆಮಿ ಪ್ರಶಸ್ತಿ, 1967ರಲ್ಲಿ 'ಸೋವಿಯೆತ್ ದೇಶ' ನೆಹರೂ ಪ್ರಶಸ್ತಿ ಮತ್ತು 1968 ರಲ್ಲಿ ಪದ್ಮ ಭೂಷಣ ಪ್ರಶಸ್ತಿಗಳು ಇವರಿಗೆ ಲಭಿಸಿದುವು.

' ಜಿ ' ಎಂದು ಒಲವಿನಿಂದ ಸಂಬೋಧಿಸಲ್ಪಡುವ ಜಿ. ಶಂಕರ ಕುರುಪ್ ಎರ್ನಾಕುಲಂನಲ್ಲಿ ವಾಸವಾಗಿದ್ದಾರೆ.

ಜಿ. ಸುಬ್ರಮಣ್ಯ ಅಯ್ಯರ್

ಹಲವು ವರ್ಷ ಅಧ್ಯಾಪಕರಾಗಿ 'ಮತ್ತು ಮುಖ್ಯ ಅಧ್ಯಾಪಕರಾಗಿ ಇದ್ದವರು ಜಿ. ಸುಬ್ರಮಣ್ಯ ಅಯ್ಯರ್. ' ಹಿಂದು ' ವೃತ್ತಪತ್ರಿಕೆಯ ಸ್ಥಾಪಕ ಸಂಪಾದಕರಾಗಿ, ತಮಿಳು ಪತ್ರಿಕೆ ' ಸ್ವದೇಶ ಮಿತ್ರನ್ ' ಆರಂಭಿಸಿ, ಸಮಾಜಕ್ಕೇ ಉಪಾಧ್ಯಾಯರಾದರು.

ತಂಜಾವೂರು ಜಿಲ್ಲೆಯ ತಿರುವಾಡಿಯಲ್ಲಿ 1855ರಲ್ಲಿ ಸುಬ್ರಮಣ್ಯ ಅಯ್ಯರ್ ಹುಟ್ಟಿದರು. ಕಾಲೇಜು ಶಿಕ್ಷಣದ ಬಳಿಕ ತಮ್ಮ ಇಪ್ಪತ್ತನೆಯ ವಯಸ್ಸಿನಲ್ಲಿ ಅಧ್ಯಾಪಕ ವೃತ್ತಿ ಕೈಗೊಂಡರು. ಎಂ. ವೀರರಾಘವಾಚಾರ್ ರೊಡನೆ ಸೇರಿಕೊಂಡು 1878ರಲ್ಲಿ ' ಹಿಂದು ' ವಾರಪತ್ರಿಕೆ ಆರಂಭಿಸಿದರು.

ಜನರ ಪ್ರೋತ್ಸಾಹ ದೊರೆತು ಇದು ವಾರಕ್ಕೆ ಮೂರು ಬಾರಿ ಬರುವ ಪತ್ರಿಕೆಯಾಯಿತು. ಮುಂದೆ ದಿನಪತ್ರಿಕೆಯೂ ಆಯಿತು. ಬೋಧಪ್ರದ ಲೇಖನಗಳನ್ನು ಪ್ರಕಟಿಸುತ್ತಿದ್ದ ' ಹಿಂದು ' ಬಹಳ ಜನಪ್ರಿಯವಾಯಿತು. ಆಳರಸರಾಗಿದ್ದ ಬ್ರಿಟಿಷರೂ ಇದು ವಿಶ್ವಸನೀಯ ಪತ್ರಿಕೆ ಎಂದು ಒಪ್ಪಿಕೊಂಡರು. ವೈಸರಾಯಿಯಾಗಿದ್ದ ಲಾರ್ಡ್ ರಿಪ್ಪನ್ [illegible] ' ಹಿಂದು ' ಪತ್ರಿಕೆಯನ್ನು [illegible] ನೋಡೋಣ" ಎನ್ನುತ್ತಿದ್ದರು. ದಕ್ಷಿಣ ಭಾರತದ ಜನಜೀವನದಲ್ಲಿ ' ಹಿಂದು ' ಪ್ರಮುಖ ಸ್ಥಾನ ಪಡೆಯಲು ಕಾರಣರಾದ ಸುಬ್ರಮಣ್ಯ ಅಯ್ಯರ್ ಮುಂದೆ ಅದರ ಸಂಪಾದಕತ್ವವನ್ನು ತ್ಯಜಿಸಬೇಕಾಯಿತು. ಅನಂತರ ಇವರು 'ಯುನೈಟೆಡ್ ಇಂಡಿಯಾ' ಎಂಬ ವಾರಪತ್ರಿಕೆಯನ್ನು ಹೊರಡಿಸಿದರು. ಅನಂತರ ಇದನ್ನೂ ಬಿಟ್ಟು ' ಸ್ವದೇಶ ಮಿತ್ರನ್ ' ಕಡಗೆ ತಮ್ಮ ಪೂರ್ತಿ ಗಮನ ಹರಿಸಿದರು. ಸಮಾಜ ಸುಧಾರಕ ಸುಬ್ರಮಣ್ಯ ಅಯ್ಯರ್ ಮೊದಲಿನಿಂದಲೂ ಕಾಂಗ್ರೆಸಿಗಾಗಿ ದುಡಿದರು. ಕಾಂಗ್ರೆಸಿನ ಪ್ರಥಮ ಅಧಿವೇಶನ 1885ರಲ್ಲಿ ನಡೆದಾಗ ಅದರಲ್ಲಿ ಮೊತ್ತಮೊದಲ ನಿರ್ಣಯವನ್ನು ಮಂಡಿಸಿದ್ದು ಅವರೇ. ಸುಬ್ರಮಣ್ಯ ಅಯ್ಯರ್ ಇಂಗ್ಲಿಷ್‌ನಲ್ಲೂ ತಮಿಳಿನಲ್ಲೂ ಉತ್ತಮ ವಾಗ್ಮಿಯಾಗಿದ್ದರು. ಸ್ವದೇಶೀ ಚಳುವಳಿಯಲ್ಲಿ ಭಾಗವಹಿಸಿದ ಇವರು ಅನಾರೋಗ್ಯದಿಂದ ಇದ್ದಾಗಲೂ ದೂರದ ಪ್ರದೇಶಗಳಲ್ಲಿ ಸಂಚರಿಸಿ ಉಪನ್ಯಾಸ ಮಾಡಿದರು. ಇವರ ಲೇಖನ ಹೇಗೋ ಹಾಗೆಯೇ ಭಾಷಣವೂ ಹರಿತ.



ಹರಿತ : ಸುಬ್ರಮಣ್ಯ ಅಯ್ಯರ್

' ಭಾರತದಲ್ಲಿ ಬ್ರಿಟಿಷ್ ಆಡಳಿತದ ವಾಣಿಜ್ಯ ವಿಷಯಗಳು ' ಇವರ ಪ್ರಮುಖ ಕೃತಿ. ಇವರು 1916ರಲ್ಲಿ ನಿಧನರಾದರು.

ಜೀಜಾಬಾಯಿ

ತಾಯಿ–ಮಗ ಚದುರಂಗ ಆಡುತ್ತಿದ್ದರು. ತಾಯಿ ಗೆದ್ದಳು. "ಗೆದ್ದುದಕ್ಕೆ ನಿನಗೇನು ಬಹುಮಾನ ಕೊಡಲಿ? " ಎಂದು ಮಗ ಕೇಳಿದ. ತಾಯಿ, " ಕೊಂಡಾಣ ದುರ್ಗ " ಎಂದಳು.

ತನ್ನ ಮಗನಿಂದ ಇಂಥ ವೀರ ಶುಲ್ಕವನ್ನು ಕೇಳಿದವಳು ಶಿವಾಜಿಯ ತಾಯಿ ಜೀಜಾಬಾಯಿ.

ಮೊಘಲರ ವಶದಲ್ಲಿದ್ದ ಕೊಂಡಾಣ ದುರ್ಗವನ್ನು ಶಿವಾಜಿ ಗೆದ್ದು ತಾಯಿಗೆ ಅರ್ಪಿಸಿದ.

ಲಖೋಜಿ ಜಾಧವರಾವ್ ಅಹಮದ್‌ನಗರದ ನಿಜಾಮ್‌ಷಾನ ಸರದಾರ. ಜೀಜಾಬಾಯಿ ಆತನ ಮಗಳು. ಜನನ 1594. 1605ರಲ್ಲಿ ಈಕೆಯ ವಿವಾಹ ಷಹಜಿಯೊಡನೆ ನೆರವೇರಿತು. ಪುಣೆ, ಸೂಪಾ ಹಾಗೂ ಶಿವನೇರಿ ಮತ್ತು ಚಾಕಣ ದುರ್ಗಗಳನ್ನು ಷಹಜಿಯ ತಂದೆ ಮಾಲೋಜಿಗೆ ನಿಜಾಮ್‌ಷಾ ಜಹಗೀರು ಕೊಟ್ಟಿದ್ದ.

ಜಾಧವರಾವ್ [illegible] ಮೊಘಲರ ಪಕ್ಷ ಸೇರಿಕೊಂಡ. ಷಹಜಿ ನಿಜಾಮ್‌ಷಾನೊಂದಿಗೆ ಉಳಿದು ಅವನ ಮುಖ್ಯ ಸೇನಾನಿಯಾದ.

ಒಂದು ಯುದ್ಧದಲ್ಲಿ ಜಾಧವರಾವ್ ಷಹಜಿಯನ್ನು [illegible] ಬೆನ್ನಟ್ಟಿಹೋಗಬೇಕಾಯಿತು. ಗರ್ಭಿಣಿ ಜೀಜಾಬಾಯಿಗೆ ಅಷ್ಟು [illegible] ಹೋಗಲಾಗಲಿಲ್ಲ. ಮಗಳನ್ನು ತಂದೆ ನೋಡಿಕೊಳ್ಳುವನೆಂದು [illegible] ಷಹಜಿ ಮುಂದಕ್ಕೆ ಹೊರಟುಹೋದ.

ಕರ್ತವ್ಯ ನಿಷ್ಠೆ, ಧೈರ್ಯ, ಆತ್ಮಾಭಿಮಾನ, [illegible] ಗುಣಗಳಿಗೆ ಹೆಸರಾಗಿದ್ದ ಜೀಜಾಬಾಯಿ [illegible] ದಿನಗಳಲ್ಲಿ [illegible]

[illegible] ಮೇಲೆ ಶಿವಾಜಿ ಎಂದು ಕರೆದಳು.

ಸ್ವತಂತ್ರ ಮಹಾರಾಷ್ಟ್ರದ ಕಲ್ಪನೆಯನ್ನು ತರುಣ ಮಗನ ಮನಮುಟ್ಟುವಂತೆ ಆಕೆ ಬಣ್ಣಿಸುತ್ತಿದ್ದಳು. ನ್ಯಾಯಪರತೆ, ಸ್ತ್ರೀಯರಲ್ಲಿ ಗೌರವ, ಪರಮತ ಸಹಿಷ್ಣುತೆ ಶಿವಾಜಿಯಲ್ಲಿ ಜೀಜಾಬಾಯಿ ಬೆಳೆಸಿದ ಗುಣಗಳು. ತಾಯಿಯಿಂದ ಶಿವಾಜಿ ಆಡಳಿತದ ಪಾಠಗಳನ್ನು ಕಲಿತ. ಯುದ್ಧಗಳಲ್ಲಿ ಜಯಗಳಿಸಿದಾಗ ಶಿವಾಜಿ, ಸೋತ ದೇಶದ ಸ್ತ್ರೀಯರನ್ನು ಅಪಮಾನಗೊಳಿಸಲು ತನ್ನ ಸೈನಿಕರಿಗೆ ಒಮ್ಮೆಯೂ ಅವಕಾಶ ನೀಡಲಿಲ್ಲ.

1666ರಲ್ಲಿ ಶಿವಾಜಿ ಆಗ್ರಾಕ್ಕೆ ಹೋಗಬೇಕಾದಾಗ ತಾಯಿಯನ್ನೇ ರಾಜಪ್ರತಿನಿಧಿ ಮಂಡಲಿಯ ಮುಖ್ಯಸ್ಥೆಯಾಗಿ ನೇಮಿಸಿದ.

80 ವರ್ಷ ಕಾಲ ಜೀವಿಸಿದ್ದ ಜೀಜಾಬಾಯಿ ಮರಾಠರ ಅಭ್ಯುದಯ ಕಂಡಳು. ಶಿವಾಜಿಯ ಪಟ್ಟಾಭಿಷೇಕದ ಅನಂತರ ರಾಯಗಡದ ಬಳಿ ಇರುವ ಪಾಚಾಡ ಎಂಬ ಹಳ್ಳಿಯಲ್ಲಿ, 1674ರಲ್ಲಿ, ನಿಧನಳಾದಳು.

ನೋಡಿ : ಶಿವಾಜಿ

ಜೀನತ್ ಮಹಲ್

ಮೊಘಲ್ ಚಕ್ರವರ್ತಿಗಳಲ್ಲಿ ಕೊನೆಯವನಾದ ಎರಡನೆಯ ಬಹದ್ದೂರ್ ಷಾನ ಕಿರಿಯ ರಾಣಿ ಜೀನತ್ ಮಹಲ್.

ಬಹದ್ದೂರ್ ಷಾನನ್ನು ಕೆಂಪು ಕೋಟೆಯ ಅರಮನೆಯಿಂದ ಹೊರಡಿಸಬೇಕು, ಅವನ ಚಕ್ರವರ್ತಿ ಪಟ್ಟವನ್ನು ಕಿತ್ತುಹಾಕಬೇಕು —ಎಂಬುದು ಈಸ್ಟ್ ಇಂಡಿಯಾ ಕಂಪೆನಿಯ ಅಪೇಕ್ಷೆಯಾಗಿತ್ತು.

ಷಾನ ಹಿರಿಯ ರಾಜಕುಮಾರರಲ್ಲಿ ಫಕ್ರುದ್ದೀನ್ ಎಂಬವನೊಡನೆ ದೆಹಲಿಯ ಬ್ರಿಟಿಷ್ ರೆಸಿಡೆಂಟ್ ಗುಪ್ತ ಒಪ್ಪಂದಕ್ಕೆ ಬಂದ. ಷಾನ ಮರಣದ ಅನಂತರ ಕೆಂಪುಕೋಟೆ ಬಿಟ್ಟು ಕೊಟ್ಟರೆ ಮೊಘಲ ವೈಭವಕ್ಕೆ ಆತನನ್ನು ಉತ್ತರಾಧಿಕಾರಿ ಮಾಡುವುದಾಗಿ ಹೇಳಿದ. ಇದು ಗೊತ್ತಾದಾಗ ಜೀನತ್ ಮಹಲಳಿಗೆ [illegible]. ಎಲ್ಲರಿಗೂ ಚಿಕ್ಕವನಾದ ತನ್ನ ಮಗ ಜವಾನ್ ಬಖ್ತನಿಗೆ [illegible] ಜೀನತ್ ಮಹಲ್ ಬ್ರಿಟಿಷರೊಡನೆ ರಹಸ್ಯ ವ್ಯವಹಾರ ನಡೆಸಿದಳು. ಚಿಕ್ಕ ವಯಸ್ಸಿನ ಈ [illegible] ವೃದ್ಧ ಬಹದ್ದೂರ್ ಷಾನ ಪೂರ್ಣ ಬೆಂಬಲ ಇತ್ತು.

[illegible] ಫಕ್ರುದ್ದೀನ್ [illegible]. 1857ರಲ್ಲಿ, ಸಿಪಾಯಿ ದಂಗೆ ನಡೆದಾಗ ಕ್ರಾಂತಿಕಾರರಿಗೆ ಜೀನತ್ ಮಹಲಳ ಕಾರಸ್ಥಾನದ ಅರಿವು ಪೂರ್ಣವಾಗಿ ಇರಲಿಲ್ಲ. ಈ ವೇಳೆಗೆ ಸಿಂಹಾಸನ [illegible] ಕೊಟ್ಟಿರಲಿಲ್ಲ.

[illegible]



ವೈಭವದ ಕೊನೆ : ಜೀನತ್

[illegible] ಬರ್ಮಕ್ಕೆ ಗಡೀಪಾರು ಮಾಡಲಾಯಿತು.

[illegible] ವಾಯಿತು. ರಾಷ್ಟ್ರಹಿತದ ಬದಲು ಸ್ವಾರ್ಥವನ್ನು ಸಾಧಿಸಲು ಪ್ರಯತ್ನಿಸಿ [illegible], ಜೀನತ್ ಮಹಲ್.

ಜೀವವಿಮಾ ಕಾರ್ಪೊರೇಷನ್

[illegible] 1956 [illegible]

[illegible] 240 [illegible] 1956ರಲ್ಲಿ [illegible] ಜೀವವಿಮಾ ವಿಭಾಗವನ್ನು ಕಾರ್ಪೊರೇಷನ್ ವಹಿಸಿಕೊಂಡಿತು.

[illegible]

ಕಾರ್ಪೊರೇಷನಿನ ಶಾಖೆಗಳಿವೆ. ಕೇಂದ್ರ ಕಛೇರಿ ಮುಂಬಯಿಯಲ್ಲಿದೆ. [illegible] ಕಾನ್ಪುರ, ಮದರಾಸು ಮತ್ತು ದೆಹಲಿ.

ಏಡನ್, ಫಿಜಿ, ಹಾಂಕಾಂಗ್, ಮಲೇಷ್ಯ, ಸಿಂಗಪುರ, ಕೀನ್ಯಾ, [illegible] ವಿಮಾ ಕಾರ್ಯ ನಡೆಸುತ್ತಿದೆ.

[illegible] ತ್ತದೆ. ಇದರ ಅಧ್ಯಕ್ಷರು ಕಾರ್ಪೊರೇಷನಿನ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ.

ರಾಜ್ಯ ಸರಕಾರಗಳು ತಮ್ಮ ಕೆಲಸಗಾರರಿಗೆ ಕಡ್ಡಾಯ ಜೀವವಿಮೆ [illegible] ಗಳಲ್ಲಿ ಕರ್ನಾಟಕವೂ ಒಂದು.

1963–64ರಿಂದ ಸರಕಾರ ವಿಮಾ ವ್ಯವಹಾರ ಆರಂಭಿಸಿತು. ಅಗ್ನಿ, ನೌಕಾ, ವಿವಿಧ ರೀತಿಯ ವಿಮಾ ವ್ಯವಹಾರಗಳನ್ನೂ ಭಾರತೀಯ ಮತ್ತು [illegible] ಸರಕಾರ 1971ರಲ್ಲಿ [illegible] ವಹಿಸಿಕೊಂಡಿತು.

[illegible] ಆಡಳಿತಾಧಿಕಾರಿಗಳಿಗೂ ತರಬೇತಿ ಕೊಡುತ್ತಾರೆ.

1973 ಮಾರ್ಚ್ ತಿಂಗಳಲ್ಲಿ 1.67 ಕೋಟಿ ಪಾಲಿಸಿದಾರರಿದ್ದರು. ಯೋಜನೆಗಳಲ್ಲಿ ತೊಡಗಿಸಲು 10,000 ಕೋಟಿ ರೂಪಾಯಿ ಹಣ ಅವರಲ್ಲಿತ್ತು.

ಜುಬಿನ್ ಮೆಹತಾ

ಭಾರತೀಯರಾಗಿ ಹುಟ್ಟಿ ಪಾಶ್ಚಾತ್ಯ ಸಂಗೀತವನ್ನು ನಿರ್ದೇಶಿಸುವ [illegible] ಅಂತರರಾಷ್ಟ್ರೀಯ ಖ್ಯಾತಿ ಗಳಿಸಿರು ವವರು ಜುಬಿನ್ ಮೆಹತಾ. ಇವರ ಸಮರ್ಥ ನೇತೃತ್ವದಲ್ಲಿ ಲಾಸ್ ಎಂಜೆ [illegible] ಆರ್ಕೆಸ್ಟ್ರಾ ಅಮೆರಿಕದ ಅತ್ಯುತ್ತಮ ವಾದ್ಯಮೇಳಗಳಲ್ಲಿ ಒಂದು ಎನಿಸಿದೆ.



[illegible]

ಜುಬಿನ್ ಮೆಹತಾ ಹುಟ್ಟಿದ್ದು 1936 [illegible] ಮೆಹತಾ. ಅವರೇ ಜುಬಿನರ ಮೊದಲ ಸಂಗೀತ ಶಿಕ್ಷಕ ಕೂಡ. ಜುಬಿನ್ ಪಾಶ್ಚಾತ್ಯ ಸಂಗೀತದ ಪ್ರಸಿದ್ಧ ಕೇಂದ್ರಗಳಲ್ಲಿ ಒಂದಾದ [illegible] ಸಂಗೀತ ಅಭ್ಯಾಸ ಮಾಡಿ ಡಿಪ್ಲೊಮಾ ಪಡೆದರು. 1965–66ರಲ್ಲಿ ನ್ಯೂಯಾರ್ಕಿನಲ್ಲಿ ಜುಬಿನ್ ಮೆಹತಾರ ನಿರ್ದೇಶನದಲ್ಲಿ ನಡೆದ ಸಂಗೀತ ಕಾರ್ಯಕ್ರಮ ಬಹಳ ಜನಪ್ರಿಯತೆ ಗಳಿಸಿತು.

ಭಾರತ ಸರಕಾರ ಪದ್ಮಶ್ರೀ ಪ್ರಶಸ್ತಿ ಇತ್ತು ಜುಬಿನ್ ಮೆಹತಾರನ್ನು ಗೌರ ವಿಸಿದೆ.

[illegible]

ಟಾಟಾ ಉದ್ಯಮಗಳ ಅಂಗವಾಗಿ ಟಾಟಾ ಏರ್‌ಲೈನ್ಸ್ ಆರಂಭ [illegible] 1932ರಲ್ಲಿ. ಇದರ ಸ್ಥಾಪನೆಗೆ ಕಾರಣರಾದವರು ಜೆ. ಆರ್. ಡಿ. ಟಾಟಾ. [illegible] ಕರಾಚಿಯಿಂದ ಮುಂಬಯಿಗೆ ಹಾರಿಸಿದ ಮೊದಲ ವಿಮಾನದ ಚಾಲಕರೂ ಅವರೇ. ವಿಮಾನ [illegible] ಮೊದಲನೆಯ ಭಾರತೀಯ ಕೂಡ ಇವರೇ.

ಜಹಾಂಗೀರ್ ರತನ್‌ಜಿ [illegible] ಟಾಟಾ [illegible] ಪ್ಯಾರಿಸಿನಲ್ಲಿ, 1904 ಜುಲೈ 29ರಂದು. ಭಾರತ, [illegible] ಜಪಾನ್‌ಗಳಲ್ಲಿ ವಿದ್ಯಾಭ್ಯಾಸ ಮಾಡಿದರು.



[illegible]

ಜೆ. ಆರ್. ಡಿ. ಅವರು ಟಾಟಾ ಕೈಗಾರಿಕೆಗಳ ಮುಖ್ಯಸ್ಥರು. ಅವರು ಏರ್ ಇಂಡಿಯಾದ ಅಧ್ಯಕ್ಷರೂ ಇಂಡಿಯನ್ ಏರ್‌ಲೈನ್ಸ್ ಕಾರ್ಪೊರೇಷನಿನ ಸದಸ್ಯರೂ ಆಗಿದ್ದಾರೆ. ನ್ಯಾಷನಲ್ [illegible] ಲ್ಯಾಬೊರೇಟರಿ, ಪರಮಾಣುಶಕ್ತಿ ಆಯೋಗ, ಟಾಟಾನಿಧಿ, ಗಾಂಧೀ ಸ್ಮಾರಕ ನಿಧಿ, ಕಸ್ತೂರಬಾ ರಾಷ್ಟ್ರೀಯ ಸ್ಮಾರಕ [illegible] ಇವರ ಸಂಬಂಧವಿದೆ.

ಅಲಹಾಬಾದ್ ವಿಶ್ವವಿದ್ಯಾನಿಲಯದ ಗೌರವ ಡಾಕ್ಟರೇಟ್ ಪದವಿ, ಭಾರತೀಯ ವಾಯುದಳದ ಗೌರವ ಏರ್ ಕಮೋಡೋರ್ ಪದವಿ, ಫ್ರಾನ್ಸಿನ ಲೀಜನ್ ಆಫ್ ಆನರ್—ಹೀಗೆ ಇವರಿಗೆ ಅನೇಕ ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಗೌರವಗಳು ದೊರೆತಿವೆ. ಅಮೆರಿಕದ ರಾಷ್ಟ್ರೀಯ [illegible] ದವರು ಇವರನ್ನು 'ಅಂತರರಾಷ್ಟ್ರೀಯ ಆಡಳಿತ ನಿರ್ವಾಹಕ' ಎಂದು ಕರೆದು ಗೌರವಿಸಿದ್ದಾರೆ.

1955ರಲ್ಲಿ ಭಾರತ ಸರಕಾರ ಇವರಿಗೆ ಪದ್ಮವಿಭೂಷಣ ನೀಡಿ ಪುರಸ್ಕರಿಸಿತು.



ಜಹಾಂಗೀರ್ ರತನ್‌ಜಿ ದಾದಾಭಾಯ್

ಜೆ. ಎನ್. ಚೌಧರಿ

ಯುದ್ಧ. ಶಾಂತಿ ಈ ಎರಡಕ್ಕೂ ಸಂಬಂಧಿಸಿದ ಕಾರ್ಯಗಳಲ್ಲಿ ದಕ್ಷರೆಂದು ಹೆಸರು ಪಡೆದವರು ಜನರಲ್ ಜೆ. ಎನ್. ಚೌಧರಿ. ಇವರು 1962–66ರ ವರೆಗೆ ಭಾರತದ ಸೇನಾಬಲಾಧಿಪತಿಯಾಗಿ, ನಿವೃತ್ತಿಯ ಬಳಿಕ 1966–69ರ ವರೆಗೆ ಕೆನಡದಲ್ಲಿ ಭಾರತದ ಹೈ ಕಮಿಷನರ್ ಆಗಿ ಕಾರ್ಯ ನಿರ್ವಹಿಸಿದರು.



ಕಾರ್ಯಾಚರಣೆ : ಜಯಂತೋ ನಾಥ

ಹೈದರಾಬಾದನ್ನು ಸ್ವತಂತ್ರ ಭಾರತದಲ್ಲಿ ವಿಲೀನಗೊಳಿಸಲು ನಿಜಾಮರು ನಿರಾಕರಿಸಿ ಭಾರತದ ಹಿತಕ್ಕೆ ವಿರುದ್ಧವಾಗಿ ವರ್ತಿಸಿದಾಗ, ಕೇಂದ್ರ ಸರಕಾರ ಸೈನ್ಯ ಕಳುಹಿಸಿ ಕ್ರಮ ಕೈಗೊಂಡಿತು. ಇದರ ಹೊಣೆಯನ್ನು ಚೌಧರಿ ಹೊತ್ತಿದ್ದರು. ಅನಂತರ 1948–49ರಲ್ಲಿ ಹೈದರಾಬಾದಿನ ಮಿಲಿಟರಿ ಆಡಳಿತಗಾರರಾಗಿದ್ದರು. 1961ರಲ್ಲಿ ಗೋವೆಯ ಮೇಲೆ ನಡೆದ ಕಾರ್ಯಾಚರಣೆಯ ನಾಯಕರಾಗಿದ್ದರು. ಇವರು 1971ರಲ್ಲಿ ಮಾಂಟ್ರೀಲ್‌ನ ಮ್ಯಾಕ್‌ಗಿಲ್ ವಿಶ್ವವಿದ್ಯಾಲಯದಲ್ಲಿ ಸಂದರ್ಶಕ ಪ್ರಾಧ್ಯಾಪಕರೂ ಆಗಿದ್ದರು.

ಜಯಂತೋ ನಾಥ್ ಚೌಧರಿ ಹುಟ್ಟಿದ್ದು 1908 ಜೂನ್ 10ರಂದು. ವಿದ್ಯಾಭ್ಯಾಸ ಪಡೆದದ್ದು ಕಲ್ಕತ್ತಾ ಮತ್ತು ಲಂಡನ್‌ಗಳಲ್ಲಿ. ಸ್ಯಾಂಡ್‌ಹರ್ಸ್ಟ್‌ನ ಮಿಲಿಟರಿ ಕಾಲೇಜಿನಲ್ಲಿ ತರಬೇತಿ ಹೊಂದಿದ ಚೌಧರಿ 1928ರಲ್ಲಿ ಸೈನ್ಯದ ಆಯುಕ್ತಾಧಿಕಾರಿಯಾದರು. ಭಾರತದಲ್ಲಿ ಮಾತ್ರವಲ್ಲದೆ ಉತ್ತರ. ಮಧ್ಯ ಪ್ರಾಚ್ಯ. ದೂರ ಪ್ರಾಚ್ಯ ಮತ್ತು ಇಂಗ್ಲೆಂಡ್‌ಗಳಲ್ಲೂ ಕೆಲಸ ಮಾಡಿದರು.

ಎರಡನೆಯ ಮಹಾಯುದ್ಧದ ಸಮಯದಲ್ಲಿ ಚೌಧರಿ ಅವರ ಸೇವೆಗಾಗಿ ಬ್ರಿಟಿಷ್ ಸರಕಾರ ಇವರಿಗೆ 'ಆರ್ಡರ್ ಆಫ್ ದಿ ಬ್ರಿಟಿಷ್ ಎಂಪೈರ್' ಪ್ರಶಸ್ತಿ ನೀಡಿತು.

1962ರಲ್ಲಿ ಅವರು ಭಾರತ ಸೇನೆಯ ಅತ್ಯುಚ್ಚ ಸೇನಾಧಿಕಾರಿಯಾದರು. 1965ರಲ್ಲಿ ಪಾಕಿಸ್ತಾನದೊಂದಿಗೆ ನಡೆದ ಘರ್ಷಣೆಯಲ್ಲಿ ಚೌಧರಿ ಅವರದೇ ಸಮರತಂತ್ರ. ಆ ಯುದ್ಧದಲ್ಲಿ ಭಾರತದ್ದೇ ಮೇಲುಗೈ ಆಯಿತು.

1965ರಲ್ಲಿ ಇವರಿಗೆ ಭಾರತ ಸರಕಾರದಿಂದ ಪದ್ಮವಿಭೂಷಣ ಪ್ರಶಸ್ತಿ ಲಭಿಸಿತು. ಉಸ್ಮಾನಿಯ. ಮತ್ತು ಸೌಗರ್ ವಿಶ್ವವಿದ್ಯಾನಿಲಯಗಳು ಇವರಿಗೆ ಗೌರವ ಡಾಕ್ಟರೇಟ್ ಪ್ರಶಸ್ತಿ ಕೊಟ್ಟಿವೆ.


ಚೌಧರಿ ಉತ್ತಮ ಲೇಖಕ ಕೂಡಾ. 'ಆಪರೇಷನ್ ಪೋಲೊ' ಅವರ ಗ್ರಂಥಗಳಲ್ಲಿ ಮುಖ್ಯವಾದದ್ದು.

ಜೆ. ಎಫ್. ಫ್ಲೀಟ್

ದಿ ಡೈನಾಸ್ಟೀಸ್ ಆಫ್ ದಿ ಕ್ಯಾನರೀಸ್ ಡಿಸ್ಟ್ರಿಕ್ಟ್ಸ್—ಕನ್ನಡ ಜಿಲ್ಲೆಗಳ ರಾಜಮನೆತನಗಳು—ಪುಸ್ತಕದ ಕರ್ತೃ ಜಾನ್ ಫೇಯ್ತ್‌ಫುಲ್ ಫ್ಲೀಟ್. ಕರ್ನಾಟಕದ ಚರಿತ್ರೆಯಲ್ಲದೆ, ಸಾಹಿತ್ಯ ಮತ್ತು ಭಾಷೆಯ ಅಧ್ಯಯನಕ್ಕೂ ಫ್ಲೀಟರ ಕೊಡುಗೆ ಗಮನಾರ್ಹ.

ಶಾಸನಗಳ ಅಧ್ಯಯನದ ಆಧಾರದ ಮೇಲೆ ಫ್ಲೀಟ್ ಕರ್ನಾಟಕದ ಚರಿತ್ರೆಯ ಮೇಲೆ ಬೆಳಕು ಚೆಲ್ಲುವಂಥ ನಿರ್ಣಯಗಳನ್ನು ಹೊರಗೆಡವಿದ್ದಾರೆ.

ಹಲಸಿಯಲ್ಲಿರುವ ಜೈನ ದೇವಾಲಯ ಪೂರ್ವ ಕದಂಬ ಶೈಲಿಯಲ್ಲಿದ್ದು ಇದನ್ನು ಮೃಗೇಶವರ್ಮ ಕಟ್ಟಿಸಿದ್ದಿರಬೇಕು ಎಂಬುದು ಫ್ಲೀಟರ ಅಭಿಪ್ರಾಯ. ಬನವಾಸಿ, ಬಳ್ಳಿಗಾವೆ, ಹರಿಹರ, ಹಂಪೆ, ಹಾನಗಲ್, ಲಕ್ಷ್ಮೇಶ್ವರ. ಲಕ್ಕುಂಡಿ, ಗದಗ, ಬೆಳಗಾಂವಿ, ಸವದತ್ತಿ. ಮನೋಳಿ, ಕೊಣ್ಣೂರು. ಪಟ್ಟದಕಲ್ಲು, ಐಹೊಳೆ, ತೇರದಾಳ, ಬಿಜಾಪುರ ಮತ್ತು ಕಲ್ಯಾಣಗಳು ಕುಂತಳ ದೇಶಕ್ಕೆ ಸೇರಿದ್ದವೆಂಬುದು ಅವರ ಅಭಿಮತ.



ಶಾಸನಾಧ್ಯಯನ : ಫ್ಲೀಟ್

ಅಶೋಕನ ಗಿರಿನಾರ್ ಶಾಸನವನ್ನೂ ಸ್ಕಂದಗುಪ್ತ ಹಾಗೂ ರುದ್ರದಾಮರ ಶಾಸನಗಳನ್ನೂ ಶೋಧಿಸಿದವರು ಫ್ಲೀಟ್.

ಫ್ಲೀಟ್ 1847ರಲ್ಲಿ ಇಂಗ್ಲೆಂಡಿನಲ್ಲಿ ಹುಟ್ಟಿದರು. ಲಂಡನ್ ವಿಶ್ವವಿದ್ಯಾಲಯದ ಪದವೀಧರರಾಗಿ ಇಂಡಿಯನ್ ಸಿವಿಲ್ ಸರ್ವಿಸ್‌ಗೆ ಸೇರಿದರು. ಭಾರತಕ್ಕೆ ಬಂದು ವಿವಿಧ ಸರಕಾರಿ ಉದ್ಯೋಗಗಳಲ್ಲಿ ಕೆಲಸ ಮಾಡಿದರು. ಸಂಸ್ಕೃತದಲ್ಲೂ ಕೆಲವು ಪ್ರಾದೇಶಿಕ ಭಾಷೆಗಳಲ್ಲೂ ಅವರು ಪಾಂಡಿತ್ಯವನ್ನು ಗಳಿಸಿಕೊಂಡರು. ಭಾರತದ ಚರಿತ್ರೆಯ ಅಧ್ಯಯನಕ್ಕೆ ಮನಸ್ಸುಕೊಟ್ಟು ಆ ವಿಷಯದಲ್ಲಿ ನೂರಾರು ಲೇಖನಗಳನ್ನು ವಿದ್ವತ್ ಪತ್ರಿಕೆಗಳಲ್ಲಿ ಪ್ರಕಟಿಸಿದರು. ಸರಕಾರದ ಶಾಸನ ಇಲಾಖೆಯನ್ನು ಸೇರಿ ಅನೇಕ ಶಾಸನಗಳನ್ನು ಸಂಗ್ರಹಿಸಿ. ಅವುಗಳ ಅಧ್ಯಯನ ನಡೆಸಿದರು. ಕನ್ನಡದ ಪ್ರಾಚೀನತೆ. ಕನ್ನಡ ಭಾಷೆ. ಚರಿತ್ರೆ. ಜನಪದ ಸಾಹಿತ್ಯಗಳಲ್ಲಿ ಅವರಿಗೆ ಅಭಿಮಾನವಿತ್ತು. ಈ ಬಗೆಗೆ ಅವರು ಅನೇಕ ಲೇಖನಗಳನ್ನೂ ಪುಸ್ತಕಗಳನ್ನೂ ಪ್ರಕಟಿಸಿದ್ದಾರೆ. 1895ರಲ್ಲಿ ಇಂಗ್ಲೆಂಡಿಗೆ ಹಿಂದಿರುಗಿದ ಮೇಲೂ ಅವರು ತಮ್ಮ ಸಂಶೋಧನೆಯನ್ನು ಮುಂದುವರಿಸಿದರು.

ಜೆ. ಬಿ. ಎಸ್. ಹಾಲ್ಡೇನ್

ನೋಡಿ : ಹಾಲ್ಡೇನ್—ಸಂಪುಟ ೩

ಜೆ. ಬಿ. ಕೃಪಲಾನಿ

ಭಾರತದ ಸ್ವಾತಂತ್ರ್ಯ ಸಂಗ್ರಾಮದ ಮೊದಲ ಸಾಲಿನ ಮುಂದಾಳುಗಳಲ್ಲಿ ಆಚಾರ್ಯ ಜೀವತ್‌ರಾಮ್ ಭಗವಾನ್‌ದಾಸ್ ಕೃಪಲಾನಿ ಒಬ್ಬರು. ಗಾಂಧೀಜಿಯ ವಿಚಾರ ಸರಣಿಯನ್ನು ಆಳವಾಗಿ ಅಭ್ಯಾಸ ಮಾಡಿದ್ದ ಕೃಪಲಾನಿ ಗಾಂಧೀ ತತ್ತ್ವಗಳನ್ನು ಅಧಿಕಾರವಾಣಿಯಿಂದ ಪ್ರತಿಪಾದಿಸಬಲ್ಲ ವಿದ್ವಾಂಸರು.


ಕೃಪಲಾನಿ ಹುಟ್ಟಿದ್ದು 1888ರಲ್ಲಿ. ಇವರು ಸಿಂಧ್ ಪ್ರಾಂತದವರು. 1912ರಲ್ಲಿ ಇತಿಹಾಸ ಮತ್ತು ಅರ್ಥಶಾಸ್ತ್ರದಲ್ಲಿ ಎಂ. ಎ. ಪದವಿ ಪಡೆದರು

[illegible]. ಕರಾಚಿ ಹಾಗೂ ಪೂನೆಗಳ ಕಾಲೇಜುಗಳಲ್ಲಿ ಅಧ್ಯಾಪಕರಾಗಿದ್ದರು. ಆಗ ಕಾಲೇಜುಗಳ ಮುಖ್ಯಸ್ಥರಾಗಿರುತ್ತಿದ್ದ ಇಂಗ್ಲಿಷರೊಡನೆ ಚಕಮಕಿ ನಡೆದು ತಮ್ಮ ಹುದ್ದೆ ತೊರೆದರು.

1917ರಲ್ಲಿ ಚಂಪಾರಣ್ಯದ ಸತ್ಯಾಗ್ರಹದ ಸಮಯದಲ್ಲಿ ಇವರಿಗೆ ಗಾಂಧೀಜಿಯ ಪರಿಚಯವಾಯಿತು. ಅಲ್ಲಿಯವರೆಗೆ ಅವರಿಗೆ ಅಹಿಂಸೆಯಲ್ಲಿ ನಂಬಿಕೆ ಇರಲಿಲ್ಲ. ಕ್ರಾಂತಿಕಾರಿಗಳೊಡನೆ ಸೇರಿ ಅವರು ಕೆಲಸ ಮಾಡುತ್ತಿದ್ದರು. ಚಂಪಾರಣ್ಯ ಸತ್ಯಾಗ್ರಹದಲ್ಲಿ ರಾಜೇಂದ್ರ ಪ್ರಸಾದರೊಡಗೂಡಿ ಕೃಪಲಾನಿ ಗಾಂಧೀಜಿಗೆ ನೆರವಾದರು. ಅನಂತರ ಪಂಡಿತ ಮದನ ಮೋಹನ ಮಾಳವೀಯರ ಆಪ್ತ ಕಾರ್ಯದರ್ಶಿಯಾಗಿ ಸ್ವಲ್ಪ ಕಾಲ ಕೆಲಸ ಮಾಡಿದರು. ಕಾಶಿಯ ಬಳಿ 'ಗಾಂಧಿ ಆಶ್ರಮ' ಸ್ಥಾಪಿಸಿ ಖಾದಿ ಮತ್ತು ಗ್ರಾಮೋದ್ಯೋಗ ರಂಗಗಳಲ್ಲಿ ಸೇವೆ ಸಲ್ಲಿಸಿದರು.

ಗಾಂಧೀಜೀ ಹೂಡಿದ ಎಲ್ಲ ಸತ್ಯಾಗ್ರಹ ಚಳುವಳಿಗಳಲ್ಲೂ ಭಾಗವಹಿಸಿ ಅನೇಕ ಬಾರಿ ಕಾರಾಗೃಹವಾಸ ಅನುಭವಿಸಿರುವ ಆಚಾರ್ಯ ಕೃಪಲಾನಿ ಗುಜರಾತ್ ವಿದ್ಯಾಪೀಠದ ಆಚಾರ್ಯರೂ ಆಗಿದ್ದರು. 1934ರಿಂದ 1946ರ ವರೆಗೆ ಭಾರತ ರಾಷ್ಟ್ರೀಯ ಕಾಂಗ್ರೆಸಿನ ಪ್ರಧಾನ ಕಾರ್ಯದರ್ಶಿಯಾಗಿದ್ದರು. ಸ್ವಾತಂತ್ರ್ಯೋದಯಕ್ಕೆ ಮುನ್ನ ಕಾಂಗ್ರೆಸ್ಸಿನ ಅಧ್ಯಕ್ಷರಾಗಿ ಆರಿಸಲ್ಪಟ್ಟರು. 1947 ನವಂಬರ್‌ನಲ್ಲಿ ಕಾಂಗ್ರೆಸ್ಸಿನ ತಮ್ಮ ಸಹೋದ್ಯೋಗಿಗಳ ಜೊತೆ ವೈಚಾರಿಕ ಭಿನ್ನಮತದ ದೆಸೆಯಿಂದ ಕಾಂಗ್ರೆಸ್ ಅಧ್ಯಕ್ಷ ಸ್ಥಾನಕ್ಕೆ ರಾಜಿನಾಮೆ ಇತ್ತರು.

1946–50ರ ವರೆಗೆ ಭಾರತದ ಸಂವಿಧಾನ ಸಭೆಯ ಸದಸ್ಯ ರಾಗಿದ್ದುದಲ್ಲದೆ 1952, 1957, 1963 ಮತ್ತು 1967ರಲ್ಲಿ ಲೋಕಸಭೆಗೆ ಆರಿಸಿಬಂದರು. 1952ರ ಚುನಾವಣೆಗೆ ಮುನ್ನ ಕಾಂಗ್ರೆಸ್ ತ್ಯಜಿಸಿ ಕಿಸಾನ್ ಮಜದೂರ್ ಪ್ರಜಾಪಕ್ಷದ ಸ್ಥಾಪಕರಾದರು. ಅನಂತರ ಆ ಪಕ್ಷ 1952ರ ಅಂತ್ಯದಲ್ಲಿ ಸೋಷಲಿಸ್ಟ್ ಪಕ್ಷದೊಡನೆ ವಿಲೀನಗೊಂಡು ಪ್ರಜಾಸೋಷಲಿಸ್ಟ್ ಪಕ್ಷ ಹುಟ್ಟಿದಾಗ, ಅದರ ಅಧ್ಯಕ್ಷರಾದರು. 1960ರ ವರೆಗೆ ಆ ಪಕ್ಷದಲ್ಲಿದ್ದ ಅವರು ಮುಂದೆ ಅದನ್ನು ತೊರೆದು ಪಕ್ಷೇತರರಾಗಿಯೇ ಉಳಿದರು. ಲೋಕಸಭೆಯಲ್ಲಿ ಅವರು ಆಗಾಗ ಮಾಡಿರುವ ಭಾಷಣಗಳು ಅವರನ್ನು ಶ್ರೇಷ್ಠ ಸಂಸದೀಯ ಪಟುಗಳ ಪಂಕ್ತಿಗೆ ಸೇರಿಸಿವೆ.



ಮೊದಲ ಸಾಲು : ಕೃಪಲಾನಿ

ಕೃಪಲಾನಿ ಉತ್ತಮ ವಾಗ್ಮಿ ಹಾಗೂ ಹರಿತವಾದ ಬರೆಹಗಾರರು. ಅವರು ಇಂಗ್ಲಿಷಿನಲ್ಲಿ ಬರೆದಿರುವ: 'ಗಾಂಧೀ : ವ್ಯಕ್ತಿ ಮತ್ತು ವಿಚಾರ', 'ಹೊಚ್ಚಹೊಸ [illegible] ಚಿತ್ರ' ಮುಂತಾದ ಕೃತಿಗಳು ಉಲ್ಲೇಖಾರ್ಹವಾಗಿವೆ. ಪ್ರಚಲಿತ ವಿದ್ಯಮಾನಗಳನ್ನು ಕುರಿತು ಅವರು ಈಗಲೂ ಲೇಖನಗಳನ್ನು ಬರೆಯುತ್ತಲೇ ಇರುತ್ತಾರೆ.

ಉತ್ತರಪ್ರದೇಶದ ಮಾಜಿ ಮುಖ್ಯಮಂತ್ರಿ ಹಾಗೂ ಮಾಜಿ ಲೋಕಸಭಾ ಸದಸ್ಯೆ ಶ್ರೀಮತಿ ಸುಚೇತಾ ಕೃಪಲಾನಿ ಅವರ ಪತ್ನಿ. ಇವರದು ಅಸಾಮಾನ್ಯ ದಾಂಪತ್ಯ.

ನೋಡಿ : ಸುಚೇತಾ ಕೃಪಲಾನಿ

ಜೆಮ್‌ಷೆಡ್‌ಪುರ

ಭಾರತದ ಹಿರಿಯ ಕೈಗಾರಿಕೋದ್ಯಮಿ ಜಮ್‌ಶೇಟ್‌ಜೀ ತಾತಾ ಅವರ ನನಸಾದ ಒಂದು ದೊಡ್ಡ ಕನಸು. ಜೆಮ್‌ಷೆಡ್‌ಪುರ ಅಥವಾ ತಾತಾನಗರ.

ಈ ಶತಮಾನದ ಆದಿಕಾಲದ ವರೆಗೆ ಯಾರ ಗಮನಕ್ಕೂ ಬಾರದೆ ಇದ್ದ ಸಾಕ್ಚಿ ಹಳ್ಳಿ ಕಳೆದ ಆರು ದಶಕಗಳ ಅವಧಿಯಲ್ಲಿ ಸುಮಾರು 29 ಚದರ ಮೈಲು ವಿಸ್ತೀರ್ಣದಷ್ಟು ಬೆಳೆದು ಜೆಮ್‌ಷೆಡ್‌ಪುರವಾಗಿದೆ. ಬಿಹಾರಿನ ಅತ್ಯಂತ ದೊಡ್ಡ ನಗರಗಳಲ್ಲಿ ಇದು ಎರಡನೆಯದು.



ಜೆಮ್‌ಷೆಡ್‌ಪುರ ಕಾರಖಾನೆಯಲ್ಲಿ ಉಕ್ಕು ವಿಭಾಗ

ಛೋಟಾ ನಾಗಪುರ ಪ್ರಸ್ಥಭೂಮಿ ಖನಿಜ ಸಂಪತ್ತಿನಿಂದ ತುಂಬಿದ ಭೂಪ್ರದೇಶ. ಇಲ್ಲಿನ ಕಬ್ಬಿಣ ಅದಿರನ್ನು ತೆಗೆದು ಸಂಸ್ಕರಿಸಲು ತಾತಾ 'ಅಯರ್ನ್ ಅಂಡ್ ಸ್ಟೀಲ್ ಕಂಪೆನಿ' ಎಂಬ ಬೃಹತ್ ಉದ್ಯಮ ಸ್ಥಾಪಿತವಾಯಿತು ; ಅದರ ಅಂಗವಾಗಿ ಅಲ್ಲಿ ಜೆಮ್‌ಷೆಡ್‌ಪುರ 1908ರಲ್ಲಿ ರೂಪುಗೊಂಡಿತು.

ಜೆಮ್‌ಷೆಡ್‌ಪುರದ ಕಾರಖಾನೆ ಭಾರತದ ಅತಿ ದೊಡ್ಡ ಹಾಗೂ ಪ್ರಪಂಚದ ಪ್ರಮುಖ ಉಕ್ಕು ಉದ್ಯಮಗಳಲ್ಲಿ ಒಂದಾಗಿದೆ. ಈಗ ಇಲ್ಲಿ ವಿವಿಧ ಯಂತ್ರಗಳ ತಯಾರಿಕೆ ನಡೆಯುತ್ತದೆ.

ಜೆಮ್‌ಷೆಡ್‌ಪುರ ಇರುವುದು ಸುವರ್ಣರೇಖಾ ಹಾಗೂ ಖರಕಾಯ್ ನದಿಗಳ ಸಂಗಮದ ಬಳಿ. ಸುಮಾರು 12 ಮೈಲು ದೂರದಲ್ಲಿರುವ ದಿಮ್ನಾಸಾಗರ ಒಂದು ಸುಂದರ ತಾಣ.

ಜೆಮ್‌ಷೆಡ್‌ಪುರಕ್ಕೆ ರೈಲು, ವಿಮಾನ ಸಂಪರ್ಕವಿದೆ.

ಜೆಮ್‌ಸೇಟ್‌ಜೀ ಜೆಜೀಭಾಯಿ

ಭಾರತೀಯ ಉದ್ಯಮದ ಆದ್ಯ ಪ್ರವರ್ತಕರಲ್ಲಿ ಒಬ್ಬರು ಜೆಮ್‌ಸೇಟ್‌ಜೀ ಜೆಜೀಭಾಯಿ. ಅವರ ಜನನ 1783ರಲ್ಲಿ. ತಮ್ಮ 16ನೆಯ ವಯಸ್ಸಿನಲ್ಲಿ ಜೆಜೀಭಾಯಿ ವ್ಯಾಪಾರೋದ್ಯಮದಲ್ಲಿ ತೊಡಗಿದರು.



ವ್ಯಾಪಾರೋದ್ಯಮಿ : ಜೆಜೀಭಾಯಿ

ಉದ್ಯಮದಲ್ಲಿ ಯಶಸ್ಸು ಗಳಿಸುತ್ತ, ಚೀನದೊಡನೆ ವಾಣಿಜ್ಯ ವ್ಯವಹಾರ ಕುದುರಿಸಿಕೊಂಡರು. ದೊಡ್ಡ ಪ್ರಮಾಣದಲ್ಲಿ ವ್ಯಾಪಾರೋದ್ಯಮ ಬೆಳೆಸಿದರು. ಜೆಜೀಭಾಯಿ ಉದಾರಿ. ದಾನ ಧರ್ಮಗಳಿಗಾಗಿ ಅವರು ನೀಡಿದ ಹಣದ ಮೊತ್ತ ಸುಮಾರು 41ಲಕ್ಷ ರೂಪಾಯಿ. ಜನೋಪಕಾರ, ದಯಾಪರತೆಗೆ ಇನ್ನೊಂದು ಹೆಸರು ಜೆಮ್‌ಸೇಟ್‌ಜೀ ಜೆಜೀಭಾಯಿ ಎನ್ನುವಂಥ ಉದಾತ್ತ ವ್ಯಕ್ತಿಯಾಗಿದ್ದರು.

1842ರಲ್ಲಿ ಬ್ರಿಟಿಷ್ ಸರಕಾರ ಅವರಿಗೆ ನೈಟ್ ಪದವಿ, ಬ್ಯಾರನ್ ಪದವಿಗಳನ್ನು ನೀಡಿತು. 1859ರಲ್ಲಿ ಜೆಜೀಭಾಯಿ ನಿಧನರಾದರು.

ಜೆಮ್‌ಸೇಟ್‌ಜೀ ತಾತಾ

ನೋಡಿ : ತಾತಾ, ಜೆಮ್‌ಸೇಟ್‌ಜೀ—ಸಂಪುಟ ೪

ಜೆ. ಸಿ. ಕುಮಾರಪ್ಪ

ತಮಿಳುನಾಡಿನ ಸಾಂಪ್ರದಾಯಿಕ ಕ್ರೈಸ್ತ ಮನೆತನವೊಂದರಲ್ಲಿ 1892ರ ಜನವರಿ 4ರಂದು ಹುಟ್ಟಿದ ಜೋಸೆಫ್ ಕಾರ್ನೀಲಿಯಸ್ ಕುಮಾರಪ್ಪ ಮದರಾಸಿನ ಲೋಕೋಪಯೋಗಿ ಶಾಖೆಯಲ್ಲಿ ಅಧಿಕಾರಿಯಾಗಿದ್ದ ಸುಖಜೀವಿ ತಂದೆಯ ಒಂಬತ್ತನೆಯ ಮಗ. ತಾಯಿ ದೈವಭೀರು, ಕರುಣಾಮಯಿ.

ಜೋಸೆಫ್ ಶಾಲೆಯಲ್ಲಿ ಜಾಣ ವಿದ್ಯಾರ್ಥಿ. ಎಂಜಿನಿಯರ್ ಆಗಬೇಕೆಂದಿದ್ದ ಹುಡುಗ ವಿದ್ಯಾಲಯದ ಮುಖ್ಯಾಧಿಕಾರಿಯ ಹಟದಿಂದ ಅಕೌಂಟೆಂಟ್, ಆಡಿಟರ್ ಆಗಬೇಕಾಗಿ ಬಂದದ್ದು ಆಕಸ್ಮಿಕ. ಈ ಉದ್ಯೋಗವನ್ನೇ ಶ್ರದ್ಧೆಯಿಂದ ಕೈಗೊಂಡ ಕುಮಾರಪ್ಪ ಯಶಸ್ಸನ್ನೂ ಹಣವನ್ನೂ ಹೇರಳವಾಗಿ ಗಳಿಸಿದರು.

1927ರಲ್ಲಿ ಅಣ್ಣನ ಕರೆಯಂತೆ ಅಮೆರಿಕಕ್ಕೆ ಹೋದರು. ಪ್ರೌಢ ವ್ಯಾಸಂಗದಲ್ಲಿ ತೊಡಗಿ, 'ಭಾರತದ ಬಡತನ ಮತ್ತು ರಾಜ್ಯದ ಆದಾಯ'–ಎಂಬ ಪ್ರಬಂಧ ಬರೆದು, ಡಾಕ್ಟರೇಟ್ ಪಡೆದರು. ಭಾರತದ ಕಡುಬಡತನ ಅವರ ಕಣ್ಣು ತೆರೆಸಿತು. ಈ ಪ್ರಬಂಧವೇ ಅವರಿಗೆ ಗಾಂಧೀಜಿಯ ಸಂಪರ್ಕ ದೊರೆಯಲು ಕಾರಣವಾಯಿತು. ಗಾಂಧೀಜಿ ಕುಮಾರಪ್ಪನವರನ್ನು ಸಾಬರಮತಿ ಆಶ್ರಮಕ್ಕೆ ಆಹ್ವಾನಿಸಿದರು. ಅಂದಿನಿಂದ ಗಾಂಧೀ ಅರ್ಥವಿಚಾರಕ್ಕೆ ಖಾದಿ–ಗ್ರಾಮ ಉದ್ಯೋಗಗಳ ವ್ಯಾಖ್ಯಾನಕಾರ. ಕುಮಾರಪ್ಪ ಅಧ್ಯಯನಶೀಲರು. ಹಾಗಾಗಿ ಅವರು 'ಡಾಕ್ಟರ್ ಆಫ್ ವಿಲೇಜ್ ಇಂಡಸ್ಟ್ರೀಸ್' ಎಂಬ ಗೌರವ ಪ್ರಶಸ್ತಿಯನ್ನು ಅವರಿಗೆ ಇತ್ತರು !

ಡಾ. ಕುಮಾರಪ್ಪನವರು ಗುಜರಾತ್ ವಿದ್ಯಾಪೀಠದ ಅರ್ಥಶಾಸ್ತ್ರದ ಪ್ರಾಧ್ಯಾಪಕರಾಗಿಯೂ ಕೆಲಸ ಮಾಡಿದರು.

ಗ್ರಾಮೋದ್ಯೋಗ ಸಂಘದ ಕಾರ್ಯದರ್ಶಿಯಾಗಿ ಕುಮಾರಪ್ಪನವರು ಗ್ರಾಮೋದ್ಯೋಗಗಳ ಪುನರುಜ್ಜೀವನಕ್ಕಾಗಿ ತುಂಬ ಶ್ರಮಿಸಿದರು.

ಅವರು ಸರಳಜೀವಿ. ಗ್ರಾಮ ಉದ್ಯೋಗ ಸಂಘದ ಕಾರ್ಯದರ್ಶಿಯಾಗಿ ಅವರ ವೇತನ ತಿಂಗಳಿಗೆ 50ರೂ. ಅದರಲ್ಲೂ 20–30 ರೂಪಾಯಿ ಉಳಿಸುತ್ತಿದ್ದರು. ಧೋತರ ಹಾಗೂ ಪಾಯಜಾಮಾ ಎರಡೂ ಸೇರಿದಂತೆ ಇರುವ 'ಧೋತಿಜಾಮಾ' ಅವರ ವಿಶಿಷ್ಟ ಉಡುಗೆ.

ಕುಮಾರಪ್ಪನವರು ಎಲ್ಲ ಸತ್ಯಾಗ್ರಹಗಳಲ್ಲೂ ಭಾಗವಹಿಸಿ ಸೆರೆಮನೆವಾಸ ಅನುಭವಿಸಿದರು. ಯಾವ ಸ್ಥಾನ–ಪದವಿಗೂ ಅವರು ಆಸೆ ಪಡಲಿಲ್ಲ. ಗಾಂಧೀಜಿಯ 'ಹರಿಜನ', ಹಾಗೂ ತಾವೇ ಹೊರಡಿಸುತ್ತಿದ್ದ 'ಗ್ರಾಮ ಉದ್ಯೋಗ ಪತ್ರಿಕಾ'ಗಳ ಮೂಲಕ ತಮ್ಮ ವಿಪ್ಲವಕಾರಿ ಅರ್ಥ ವಿಚಾರವನ್ನು ಯಾವಾಗಲೂ ಸ್ಫುಟವಾಗಿ ಪ್ರತಿಪಾದಿಸುತ್ತಿದ್ದರು. 'ಶಾಶ್ವತ ಅರ್ಥಶಾಸ್ತ್ರ', 'ಗಾಂಧೀವಾದೀ ಅರ್ಥವಿಚಾರ', 'ಗ್ರಾಮ ಆಂದೋಲನವೇಕೆ ?'–ಮುಂತಾದುವು ಅವರ ಕೃತಿಗಳು.

ಭಾರತ ಸ್ವತಂತ್ರವಾದ ಅನಂತರ ರಷ್ಯ, ಚೀನ, ಜರ್ಮನಿ, ಜಪಾನ್‌ಗಳಿಗೆ ಶಾಂತಿವಾದಿಯಾಗಿ, ಅರ್ಥಶಾಸ್ತ್ರಜ್ಞರಾಗಿ ಪ್ರವಾಸ ಹೋಗಿ ಬಂದರು. ಅಲ್ಲಿನ ವಿದ್ಯಮಾನಗಳನ್ನು ಇದ್ದಂತೆ, ಕಂಡಂತೆ, ವರ್ಣಿಸಿದರು. ಭಾರತದ ಪಂಚವಾರ್ಷಿಕ ಯೋಜನೆಗಳನ್ನು ಹಾಗೂ ಸ್ವಾತಂತ್ರ್ಯಾನಂತರದ ಕಾಂಗ್ರೆಸ್ ಸರಕಾರಗಳ ನಡೆಯನ್ನೂ ನೀತಿಯನ್ನೂ ಕಟುವಾಗಿ ಟೀಕಿಸಿದರು.

ನಿಷ್ಠುರ ನಡೆ, ಅಷ್ಟೇ ನಿಷ್ಠುರ ನುಡಿ ಕುಮಾರಪ್ಪನವರ ವ್ಯಕ್ತಿತ್ವದ ಹೆಗ್ಗುರುತು. ಗಾಂಧೀಜಿಗೆ ಭೌತ ಸ್ಮಾರಕ ನಿರ್ಮಿಸಬೇಕೆಂಬುದನ್ನು ತೀವ್ರವಾಗಿ ಅವರು ವಿರೋಧಿಸಿದರು.

ದೀರ್ಘ ಅನಾರೋಗ್ಯದ ಬಳಿಕ 1960ರಲ್ಲಿ ಅವರು ಕಡೆಯ ಉಸಿರೆಳೆದರು.

ಜೇಮ್ಸ್ ಕಸಿನ್ಸ್, ಮಾರ್ಗರೆಟ್ ಕಸಿನ್ಸ್

ಮೈಸೂರಿನ ಜಗನ್ಮೋಹನ ಅರಮನೆಯನ್ನೂ ಅಲ್ಲಿನ ಚಿತ್ರಶಾಲೆಯನ್ನೂ ನೀವು ಕಂಡಿರಬಹುದು. ಹೈದರಾಬಾದಿನ ಸಾಲಾರ್‌ಜಂಗ್ ವಸ್ತುಸಂಗ್ರಹಾಲಯವನ್ನೂ ನೋಡಿರುವುದು ಸಾಧ್ಯ. ತಿರುವನಂತಪುರಕ್ಕೆ ಹೋಗಿದ್ದರೆ ಅಲ್ಲಿನ ಚಿತ್ರಾಲಯಕ್ಕೂ ಹೋಗಿರುತ್ತೀರಿ. ಈ ವಸ್ತುಸಂಗ್ರಹಾಲಯ, ಚಿತ್ರಾಲಯಗಳನ್ನು ಅಷ್ಟು ಚೆನ್ನಾಗಿ ಒಪ್ಪವಾಗಿ ಯೋಜಿಸಿದವರು ಒಬ್ಬ ವಿದೇಶೀಯ. ಅವರು ಐರ್‌ಲೆಂಡಿನಲ್ಲಿ ಹುಟ್ಟಿ, ಭಾರತಕ್ಕೆ ಪತ್ನಿ ಮಾರ್ಗರೆಟ್‌ರ ಜೊತೆಯಲ್ಲಿ ಬಂದು, ಇಲ್ಲೇ ನೆಲೆಸಿದ ಜೇಮ್ಸ್ ಹೆನ್ರಿ ಕಸಿನ್ಸ್.

ಕಸಿನ್ಸ್ ಜನನ 1873 ಜುಲೈ 22ರಂದು, ಬೆಲ್‌ಫಾಸ್ಟ್‌ನಲ್ಲಿ. ಬಡ ಕುಟುಂಬದಲ್ಲಿ ಹುಟ್ಟಿದ ಇವರ ವಿದ್ಯಾಭ್ಯಾಸ ಐರ್‌ಲೆಂಡಿನ ನ್ಯಾಷನಲ್ ಶಾಲೆಯೊಂದರಲ್ಲಿ. ತಂದೆ ನಾವಿಕ. ವರ್ಷದಲ್ಲಿ ಬಹುಭಾಗ ಆತನ ವಾಸ ಮನೆಯಿಂದ ಹೊರಗೆ. ತಾಯಿಯೇ ಕುಟುಂಬದ ಸರ್ವಸ್ವ.

ಹನ್ನೆರಡು ವರ್ಷಕ್ಕೇ ಕಸಿನ್ಸ್‌ರ ವಿದ್ಯಾಭ್ಯಾಸ ಮುಗಿಯಿತು. ಅಲ್ಲಿಂದ ಮುಂದೆ ಕೆಲಸಕ್ಕಾಗಿ ಅಲೆದಾಟ. ಬಟ್ಟೆಬರೆ ಬಳಿ ಸಣ್ಣಪುಟ್ಟ ಕಾರಕೂನ ಕೆಲಸ. ಗುರಿಯಿಲ್ಲದ ಬದುಕು. ಆದರೆ ಮೊದಲಿನಿಂದಲೂ ಕವನ ಬರ

[illegible] 1894ರಲ್ಲಿ 'ಬೆನ್ ಮ್ಯಾಡಿಗನ್' ಎಂಬ ಇವರ ಮೊದಲ ಕವನ ಸಂಗ್ರಹ ಬೆಲ್‌ಫಾಸ್ಟಿನಿಂದ ಪ್ರಕಟವಾಯಿತು.

ಈ ತರುಣ ಕವಿಯನ್ನು ಮದುವೆಯಾದಾಕೆ ಐರಿಷ್ ಯುವತಿ ಮಾರ್ಗರೆಟ್. ಇವರಿಬ್ಬರೂ ಕೊನೆಯ ವರೆಗೆ ಒಬ್ಬರನ್ನೊಬ್ಬರು ಅಗಲಿ ಇರಲೇ ಇಲ್ಲ. ಇವರಿಬ್ಬರೂ ಕೂಡಿ ಬರೆದಿರುವ ಆತ್ಮಕಥೆ 'ನಾವಿಬ್ಬರು'. ಸಾಹಿತ್ಯ ಪ್ರಪಂಚದಲ್ಲೇ ಇದು ಒಂದು ಹೊಸ ಬಗೆಯ ಕೃತಿ.

ಕಸಿನ್ಸರ ಜೀವನಕ್ಕೊಂದು ಹೊಸ ತಿರುವು. ತಿರುವು ಕೊಟ್ಟವರು ಅನಿಬೆಸೆಂಟ್. ಭಾರತದಲ್ಲಿ ತಾವು ಪ್ರಕಟಿಸುತ್ತಿದ್ದ 'ನ್ಯೂ ಇಂಡಿಯಾ' ಪತ್ರಿಕೆಯ ಸಂಪಾದಕ ವರ್ಗಕ್ಕೆ ಸೇರಲು ಕಸಿನ್ಸರನ್ನು ಆಕೆ ಆಹ್ವಾನಿಸಿದರು.

1915ರಲ್ಲಿ ಕಸಿನ್ಸ್ ದಂಪತಿ ಮದರಾಸಿಗೆ ಬಂದರು. ಅಡ್ಯಾರಿನಲ್ಲಿರುವ ಥಿಯಸಾಫಿಕಲ್ ಸೊಸೈಟಿಯು ಅವರಿಗೆ ಅವರ ನೆಲೆವೀಡಾಯಿತು.

ಭಾರತೀಯ ಸಾಹಿತ್ಯ ಕಲೆಗಳ ಅಭಿವೃದ್ಧಿಗಾಗಿ ಕಸಿನ್ಸ್ ಅನೇಕ ಕಡೆ ಭಾಷಣಗಳನ್ನು ಮಾಡಿದರು : ಚಿತ್ರಪ್ರದರ್ಶನಗಳನ್ನು ಏರ್ಪಡಿಸಿದರು : ವಸ್ತು ಸಂಗ್ರಹಾಲಯಗಳನ್ನೂ ಚಿತ್ರಶಾಲೆಗಳನ್ನೂ ಸ್ಥಾಪಿಸಲು ಕಾರಣರಾದರು. ತರುಣ ಚಿತ್ರಕಾರರಿಗೆ. ಕವಿಗಳಿಗೆ ಅವರಿಂದ ಬಹಳ ಉತ್ತೇಜನ ದೊರೆಯಿತು. ಕವಿಯ ಕುವೆಂಪು ತಮ್ಮ ಇಂಗ್ಲಿಷ್ ಕವನಗಳನ್ನು ಕಸಿನ್ಸರಿಗೆ ತೋರಿಸಿದಾಗ ಅವರು ಹೇಳಿದರು : "ನೀವು ಕನ್ನಡದಲ್ಲೇ ಯಾಕೆ ಬರೆಯಬಾರದು ?" ಹೀಗೆ. ಕನ್ನಡದಲ್ಲಿ ಕಾವ್ಯ ಬರೆಯಲು ಕುವೆಂಪುರವರಿಗೆ ಕಸಿನ್ಸ್ ಸ್ಫೂರ್ತಿಯಾದರು.

ದೇಶದ ಅನೇಕ ಕಡೆಗಳಲ್ಲಿ ನ್ಯಾಷನಲ್ ಕಾಲೇಜುಗಳು ಆರಂಭವಾದಾಗ ಕಸಿನ್ಸ್ ಮದನಪಲ್ಲಿಯ ನ್ಯಾಷನಲ್ ಕಾಲೇಜಿಗೆ ಪ್ರಿನ್ಸಿಪಾಲರಾದರು. ಮುಂದೆ ತಿರುವಾಂಕೂರಿನಲ್ಲಿ ಹಿಂದೂಧರ್ಮವನ್ನು ಸ್ವೀಕರಿಸಿ ಜೇಮ್ಸ್ ಕಸಿನ್ಸ್ 'ಕುಲಪತಿ ಜಯರಾಮ್ ಕಸಿನ್ಸ್' ಆದರು.

ಪತ್ನಿ ಮಾರ್ಗರೆಟ್ ಭಾರತ ಮಹಿಳೆಯರ ಅಭಿವೃದ್ಧಿಗಾಗಿ ಸತತವಾಗಿ ಶ್ರಮಿಸಿದರು. ಭಾರತ ಮಹಿಳೆಯರ ಜಾಗೃತಿಗಾಗಿ ಸ್ಥಾಪಿತವಾದ 'ವಿಮೆನ್ಸ್ ಇಂಡಿಯಾ ಅಸೋಸಿಯೇಷನ್'ನ ಕಾರ್ಯದರ್ಶಿನಿಯಾಗಿ, ಅಖಿಲಭಾರತ ಮಹಿಳಾ ಸಮ್ಮೇಳನವನ್ನು ಮೊದಲು ಆರಂಭಿಸಿದವರು ಮಾರ್ಗರೆಟ್ ಕಸಿನ್ಸ್.

ಅನಿಬೆಸೆಂಟ್, ರುಕ್ಮಿಣಿದೇವಿ ಅರುಂಡೇಲ್, ಡಾ. ಮುತ್ತುಲಕ್ಷ್ಮಿರೆಡ್ಡಿ ಇವರೊಂದಿಗೆ ಸ್ತ್ರೀ ಸ್ವಾತಂತ್ರ್ಯ, ಸಮಾನತೆಗಳಿಗಾಗಿ ಹೋರಾಡಿದ ಮಾರ್ಗರೆಟ್ 1954 ಮಾರ್ಚ್ 11 ರಂದು ಕಾಲವಾದರು.

ಇಪ್ಪತ್ತೇಳು ಕಾವ್ಯ ಸಂಗ್ರಹಗಳನ್ನು, ಹದಿನಾರು ಗದ್ಯ ಗ್ರಂಥಗಳನ್ನು ರಚಿಸಿ, ಕಲಾವಿಮರ್ಶಕರಾಗಿ ಅಂತಾರಾಷ್ಟ್ರೀಯ ಖ್ಯಾತಿಗಳಿಸಿದ ಕಸಿನ್ಸ್ 1956 ಫೆಬ್ರವರಿ 20 ರಂದು ಮದನಪಲ್ಲಿಯಲ್ಲಿ ಕಾಲವಾದರು.

ನೋಡಿ : ಅನಿಬೆಸೆಂಟ್; ಮುತ್ತುಲಕ್ಷ್ಮಿರೆಡ್ಡಿ ; ರುಕ್ಮಿಣಿದೇವಿ ಅರುಂಡೇಲ್

ಜೇಮ್ಸ್ ಪ್ರಿನ್ಸೆಪ್

ಭಾರತದಲ್ಲಿ ಪ್ರಾಚೀನ [illegible] ರಿಂದ ಇದನ್ನು ಓದಲು ಅಸಾಧ್ಯವಾಗಿತ್ತು. ಈ ಸಮಸ್ಯೆಯನ್ನು ಪರಿಹರಿಸಲು ಶ್ರಮಿಸಿದವರಲ್ಲಿ ಜೇಮ್ಸ್ ಪ್ರಿನ್ಸೆಪ್ (1799–1840) ಪ್ರಮುಖ.

[illegible] 1837ರಲ್ಲಿ [illegible]

ಆ ಲಿಪಿಯಲ್ಲಿದ್ದ ಅಶೋಕ ಚಕ್ರವರ್ತಿಯ ಶಾಸನಗಳನ್ನು ಮೊಟ್ಟ ಮೊದಲಿಗೆ ಓದಿದ.

ಭಾಷಾ ಅಧ್ಯಯನ ಹಾಗೂ [illegible] ಪ್ರಿನ್ಸೆಪ್ ಪರಿಣತನಾಗಿದ್ದ. 1819ರಲ್ಲಿ ಕಲ್ಕತ್ತೆಯ ಟಂಕಸಾಲೆಯಲ್ಲಿ ಒಬ್ಬ ಅಧಿಕಾರಿಯಾಗಿ [illegible]. ಕಾಶಿಯ ಟಂಕಸಾಲೆಯ [illegible]ನಾಗಿದ್ದ. ಅವರಿಗೆ ಸಂಗ್ರಹಿಸಲ್ಪಟ್ಟಿದ್ದ ಭಾರತೀಯ ನಾಣ್ಯಗಳನ್ನು ತನ್ನ ಅಧ್ಯಯನದ ವಸ್ತುವನ್ನಾಗಿ ಮಾಡಿಕೊಂಡ. ಕಲ್ಕತ್ತೆಯಲ್ಲಿ ಆರಂಭವಾದ ಏಷ್ಯಾಟಿಕ್ ಸೊಸೈಟಿಯ ಕಾರ್ಯದರ್ಶಿಯಾಗಿಯೂ ಅದರ ವತಿಯಿಂದ ಹೊರಬರುತ್ತಿದ್ದ ಪತ್ರಿಕೆಯ ಸಂಪಾದಕನಾಗಿಯೂ ಕೆಲಸ ಮಾಡಿದ.

ವಾಸ್ತುಶಿಲ್ಪದಲ್ಲಿ ತರಬೇತಿ ಪಡೆದಿದ್ದ ಪ್ರಿನ್ಸೆಪ್ ಕಾಶಿಗೆ ಸಮೀಪದಲ್ಲಿ ಒಂದು ನದಿಗೆ ಅಡ್ಡಲಾಗಿ ಸೇತುವೆಯನ್ನು ಕಟ್ಟಿದ. ಕಾಶಿಯ ಚರಂಡಿ ವ್ಯವಸ್ಥೆಯನ್ನು ಉತ್ತಮಗೊಳಿಸಿದ. ಒಂದು ಮಸೀದಿಯನ್ನು ಜೀರ್ಣೋದ್ಧಾರಮಾಡಿ ನಗರದಲ್ಲಿ ಜನಗಣತಿ [illegible] ಪ್ರಿನ್ಸೆಪ್ ಕಲ್ಕತ್ತೆಯಲ್ಲಿದ್ದಾಗ ಗಂಗಾ ನದೀಮುಖಜಭೂಮಿಯಲ್ಲಿ ಒಂದು ಮುಖ್ಯ ಕಾಲುವೆ ಇವನ ಉಸ್ತುವಾರಿಯಲ್ಲಿ ನಿರ್ಮಾಣವಾಯಿತು.

ಭಾರತೀಯ ತೂಕ ಅಳತೆಗಳಲ್ಲಿ ಸುಧಾರಣೆಯಾದದ್ದೂ ದೇಶದ ಎಲ್ಲ ಕಡೆ ಕಂಪೆನಿಯ ರೂಪಾಯಿ ರೂಢಿಗೆ ಬಂದದ್ದೂ ಇವರ ಪ್ರಯತ್ನದಿಂದ. ಹೊಸ ನಾಣ್ಯಗಳ ಸುಧಾರಿತ ವಿನ್ಯಾಸವನ್ನೂ ಇವನು ರೂಪಿಸಿದ.

ನಾಣ್ಯಗಳ ಅಧ್ಯಯನ ಪ್ರಿನ್ಸೆಪ್‌ನ ವಿಶಿಷ್ಟ ಹವ್ಯಾಸವಾಗಿದ್ದಿತು.

ಜೈನಧರ್ಮ

ಜಿನನಿಂದ ಬೋಧಿಸಲಾದ ಧರ್ಮ, ಜೈನಧರ್ಮ.

ಈ ಜಿನ ಸೃಷ್ಟಿಕರ್ತನಾದ ಈಶ್ವರನಲ್ಲ. ಅವನು ಸ್ವಂತ ತಪೋಬಲದಿಂದ ತನ್ನ ಕರ್ಮಗಳನ್ನು ಗೆದ್ದು 'ಜಿನ'ನಾಗಿದ್ದಾನೆ. ಜಿನ ಶಬ್ದದ ಅರ್ಥ ಗೆಲ್ಲುವವ ಎಂದು. ಯಾರು ತಮ್ಮ ರಾಗ ದ್ವೇಷಗಳನ್ನು ಮತ್ತು ಅದರಿಂದ ಜನಿಸಿದ ಕರ್ಮಗಳನ್ನು ಗೆಲ್ಲುವರೋ ಅವರು ಜಿನರಾಗುವರು: ಪರಮಾತ್ಮರಾಗುವರು. 'ಜಿನ'ನಾದ ಮೇಲೆ ಮಾನವನು ಸರ್ವಜ್ಞನಾಗುವನು : ಅವನು ವೀತರಾಗನಾಗುವನು.

ಜೈನಧರ್ಮಕ್ಕೆ ಎರಡು ಅಂಗಗಳು : ವಿಚಾರ, ಆಚಾರ. ಜೈನಧರ್ಮದ ವಿಚಾರ ಸ್ಯಾದ್ವಾದ ಭೂಮಿಕೆಯ ಮೇಲೆ ನಿಂತಿದೆ. ಆಚಾರಕ್ಕೆ ಅಹಿಂಸೆಯು ಮೂಲಾಧಾರ. ಅದರಿಂದ ಯಾವ ವಿಚಾರಕ್ಕೂ ಅನ್ಯಾಯವಾಗಕೂಡದು. ಯಾವ ಪ್ರಾಣಿಯ ಜೀವನಕ್ಕೂ ಬಾಧೆ ತಟ್ಟಕೂಡದು ಎಂಬುದೇ ಜೈನ ಧರ್ಮದ ಉದ್ದೇಶ. 'ಎಲ್ಲರ ವಿಚಾರಗಳನ್ನೂ ತಿಳಿದುಕೊಳ್ಳುವುದು. [illegible]

'ತೀರ್ಥಂಕರ' ಎಂದೂ ಹೇಳುವರು. ಇವರು ಯಾವುದೇ ವ್ಯಕ್ತಿ, ವರ್ಗ, ಸಂಪ್ರದಾಯದ ಹಿತದ ದೃಷ್ಟಿಯಿಂದ ಉಪದೇಶಿಸುವುದಿಲ್ಲ; ಸಮಸ್ತ ಪ್ರಾಣಿಗಳ ಹಿತಕ್ಕಾಗಿ ಬೋಧಿಸುವರು.

ಧರ್ಮ ಶಬ್ದಕ್ಕೆ ಎರಡರ್ಥಗಳಿವೆ: ಒಂದು ವಸ್ತುವಿನ ಸ್ವಭಾವವು ಅದರ ಧರ್ಮ. ಅಗ್ನಿಗೆ ಸುಡುವಿಕೆಯು ಧರ್ಮ, ವಾಯುವಿಗೆ ವಹನವು ಧರ್ಮ. ಆತ್ಮಕ್ಕೆ ಚೈತನ್ಯವು ಧರ್ಮ. ಆಚಾರ, ಚಾರಿತ್ರ್ಯ ಕೂಡ ಧರ್ಮ ವೆನಿಸುತ್ತವೆ. ಈ ಎರಡನೆಯ ಅರ್ಥದಲ್ಲಿ ಯಾವುದರಿಂದ ಅಭ್ಯುದಯ, ಮುಕ್ತಿ ಲಭಿಸುವವೋ, ಅದು ಧರ್ಮವೆಂಬ ಭಾವವಿದೆ. ಜೈನಧರ್ಮದ ತೀರ್ಥಂಕರರು ಈ ಎರಡೂ ಧರ್ಮರೂಪಗಳನ್ನು ಬೋಧಿಸಿದ್ದಾರೆ.

ವಸ್ತು ಸ್ವಭಾವದ ವಿವರಣೆಯಲ್ಲಿ, ಆತ್ಮವೆಂದರೇನು? ಪರಲೋಕ ವೆಂದರೇನು? ವಿಶ್ವವೆಂದರೇನು? ಪರಮಾತ್ಮನ ಸ್ವರೂಪವೇನು? ಇತ್ಯಾದಿ ಪ್ರಶ್ನೆಗಳ ವಿವೇಚನೆ ಇದೆ. ಆಚಾರಧರ್ಮದ ವಿವರಣೆಯಲ್ಲಿ, ಆತ್ಮವು ಪರಮಾತ್ಮನಾಗುವ ಮಾರ್ಗವನ್ನು ತೋರಿಸಿದ್ದಾರೆ.
ಆದ್ದರಿಂದ ಜೈನಧರ್ಮ 'ಜಿನ' ದೇವನಿಂದ ಉಪದೇಶಿಸಲಾದ ವಿಚಾರ ಹಾಗೂ ಆಚಾರ.

ಜೈಮಿನಿ

ದೇವರ ಹಾಗೂ ಅಧ್ಯಾತ್ಮದ ಸಮಸ್ಯೆಗಳನ್ನು ಬಗೆಹರಿಸುವ ವಿಷಯ ದಲ್ಲಿ ಮಾನವನ ಬುದ್ಧಿಶಕ್ತಿ ಬಹಳ ದುರ್ಬಲ; ಸಾಂಪ್ರದಾಯಿಕವಾಗಿ ಬಂದಿರುವ ಆಚರಣೆಗಳನ್ನು ನಡೆಸಿಕೊಂಡು ಹೋಗುವುದರಿಂದ ಮಾತ್ರ ಶಾಂತಿ ಸಿಗಲು ಸಾಧ್ಯ –ಎಂದು ಹೇಳಿದವನು ಜೈಮಿನಿ. ಆರು ಆಸ್ತಿಕ ದರ್ಶನಗಳಲ್ಲೊಂದಾದ ಪೂರ್ವ ಮೀಮಾಂಸಾ ದರ್ಶನದ ಪ್ರವರ್ತಕ ಈತ.

ಜೈಮಿನಿ ಮಹರ್ಷಿಯ ಕಾಲ ಸುಮಾರು ಕ್ರಿ. ಪೂ. 400ರಿಂದ 200ರ ಒಳಗೆ ಇರಬಹುದೆಂದು ಊಹೆ. ಈತ 'ಉತ್ತರ ಮೀಮಾಂಸಾ ದರ್ಶನ'ದ ಪ್ರವರ್ತಕನಾದ ಬಾದರಾಯಣನ ಶಿಷ್ಯನೆಂದೂ ವ್ಯಾಸರಲ್ಲಿ ಸಾಮವೇದ ಅಭ್ಯಸಿಸಿದನೆಂದೂ ಪ್ರತೀತಿ. ವೇದಗಳನ್ನು ವಿಂಗಡಿಸಲು ವ್ಯಾಸರಿಗೆ ಸಹಾಯಮಾಡಿದನೆಂದೂ ಹೇಳುವುದುಂಟು.

ಜೈಮಿನಿಯ 'ಮೀಮಾಂಸಾ ಸೂತ್ರ' ಮೀಮಾಂಸಾ ದರ್ಶನದ ಪ್ರಮುಖ ಕೃತಿ. ಜೈಮಿನಿ ಕೂಡ 'ಮಹಾಭಾರತ'ವನ್ನು ರಚಿಸಿದನೆಂದೂ ಪ್ರತೀತಿ ಇದೆ. ಅದರಲ್ಲಿ ಅಶ್ವಮೇಧಿಕ ಪರ್ವಮಾತ್ರ ಈಗ ದೊರೆತಿದೆ. ಇದನ್ನು ಕವಿ ಲಕ್ಷ್ಮೀಶ ಕನ್ನಡಿಸಿದ್ದಾನೆ.

ನೋಡಿ: ಮೀಮಾಂಸಾ ದರ್ಶನ

ಜೋಗ್

ಪಶ್ಚಿಮ ಘಟ್ಟಗಳ ಒಂದು ಭಾಗದಲ್ಲಿ ಹರಿಯುವ ಶರಾವತಿ ನದಿ ಇದ್ದಕ್ಕಿದ್ದಂತೆ 960 ಅಡಿ ಎತ್ತರದಿಂದ ಧುಮ್ಮಿಕ್ಕುವ ಭಾರೀ ಜಲಪಾತ, ಜೋಗ್.

ನದಿ ನಾಲ್ಕು ಕವಲಾಗಿ ಕೆಳಕ್ಕೆ ಬೀಳುತ್ತದೆ. ಗಂಭೀರವಾದ 'ರಾಜಾ'; ಘೋರವೆಂದು ಸೊರಯುತ್ತ ಮುನ್ನುಗ್ಗುವ 'ರೋರರ್'; ತ್ವರಿತವಾಗಿ ಧಾವಿಸಿ ಬೀಳುವ 'ರಾಕೆಟ್' ಹಾಗೂ ಹೆಚ್ಚು ಸದ್ದುಗದ್ದಲಗಳಿಲ್ಲದೆ ಸರಾಗವಾಗಿ ಇಳಿಯುವ 'ರಾಣಿ' — ಈ ಜಲಪಾತಗಳ ಹೆಸರುಗಳು. ಮಳೆಗಾಲವೆಲ್ಲ ಮುಗಿದ ಮೇಲೆ ನದಿ ತುಂಬಿ ಹರಿಯುವಾಗ ಜೋಗ್



ರಾಜಾ, ರೋರರ್, ರಾಕೆಟ್, ರಾಣಿ

ಜಲಪಾತದ ದೃಶ್ಯ ನೋಡುವವರ ಮನಸ್ಸನ್ನು ಸೆರೆಹಿಡಿಯುತ್ತದೆ. ಜಲ ಪಾತದಿಂದ ಹಾರುವ ತುಂತುರುಗಳು ತೇಲಾಡುವ ಮಂಜಿನಂತೆ ಕಾಣುವುದೂ ಉಂಟು. ಈ ರೀತಿ ಹರಡಿದ ಅಸಂಖ್ಯಾತ ತುಂತುರುಗಳ ಮೇಲೆ ಸೂರ್ಯನ ಬೆಳಕು ಬಿದ್ದಾಗ ಜಲಪಾತ ಹರಡಿರುವ ಅರ್ಧ ಮೈಲು ಅಗಲಕ್ಕೂ ಕಾಮನಬಿಲ್ಲು ಮೂಡುವುದು ಒಂದು ಅಪೂರ್ವ ದೃಶ್ಯ. ಬೆಳದಿಂಗಳಿನಲ್ಲೂ ಒಮ್ಮೊಮ್ಮೆ ಇಂಥ ಕಾಮನಬಿಲ್ಲು ಕಾಣಿಸಿಕೊಳ್ಳುವು ದುಂಟು. ಚಿಕ್ಕ ಪುಟ್ಟ ಕಾಮನಬಿಲ್ಲುಗಳು ಆಗಾಗ್ಗೆ ಮೂಡುತ್ತಲೇ ಇರುತ್ತವೆ. ಜಲಪಾತದ ನೀರು ದೊಡ್ಡ ಹೊಂಡದೊಳಕ್ಕೆ ಬಿದ್ದು ಮುಂದೆ ಹರಿಯುವಲ್ಲಿಗೆ ಇಳಿದುಹೋಗಲು ಸ್ವಲ್ಪ ಕಡಿದಾದ ದಾರಿಯೂ ಇದೆ. ಅಲ್ಲಿಂದ ತಲೆಯೆತ್ತಿ ನೋಡಿದಾಗ ಜಲಪಾತದ ಇನ್ನೊಂದು ಭವ್ಯ ನೋಟ ಕಾಣಸಿಗುತ್ತದೆ.

ಜೋಗ್ ಪ್ರಪಂಚದ ಉನ್ನತ ಜಲಪಾತಗಳಲ್ಲಿ ಒಂದು. ಇದು ಶಿವಮೊಗ್ಗ ಜಿಲ್ಲೆಯಲ್ಲಿದೆ. ಇಲ್ಲಿಗೆ ಒಳ್ಳೆಯ ರಸ್ತೆ ಸಂಪರ್ಕವಿದೆ. ಪ್ರವಾಸಿಗಳ ಅನುಕೂಲಕ್ಕೆ ಪ್ರವಾಸಿಮಂದಿರಗಳಿವೆ. ಜಲಪಾತದ ತಾಣ ಕ್ಕಿಂತ ಸ್ವಲ್ಪ ದೂರ ಹಿಂದೆ ನದಿಗೆ ಅಡ್ಡವಾಗಿ ಕಟ್ಟಿರುವ ಲಿಂಗನಮಕ್ಕಿ ಜಲಾಶಯದಲ್ಲಿ ಸಂಗ್ರಹಿಸುವ ನೀರನ್ನು ಬಳಸಿ, ದೊಡ್ಡ ಪ್ರಮಾಣದಲ್ಲಿ ವಿದ್ಯುತ್ ಉತ್ಪಾದನೆ ಮಾಡುತ್ತಾರೆ.

ಬೌದ್ಧ : ಶಿಲ್ಪ ಅಮರಾವತಿ





ಹಿಂದು : ವಿಮಾನ ತಿರುಪತಿ

ಜೈನ : ಮಂದಿರ ಕಲ್ಕತ್ತಾ





ಕ್ರೈಸ್ತ : ಇಗರ್ಜಿ ಕಲ್ಕತ್ತಾ

ಜೋಗ ಪದದ ಅರ್ಥ ಜಲಪಾತ. ಆದರೂ ಇದಕ್ಕೆ 'ಜೋಗ ಜಲಪಾತ' ರೂಢನಾಮವಾಗಿದೆ. ಗೇರುಸೊಪ್ಪೆ ಊರಿನ ಸಮೀಪದ ಈ ಜಲಪಾತವನ್ನು ಗೇರುಸೊಪ್ಪೆ ಜಲಪಾತವೆಂದೂ ಕರೆಯುತ್ತಾರೆ.

ಜೋಗೇಶಚಂದ್ರ ಚಟರ್ಜಿ

ಎಪ್ಪತ್ತನಾಲ್ಕು ವರ್ಷದ ಜೀವಮಾನದಲ್ಲಿ ಸುಮಾರು 24 ವರ್ಷ ಸೆರೆವಾಸ. ಅದರಲ್ಲಿ ಸ್ವಲ್ಪ ಭಾಗ ಕಳೆದದ್ದು ಉಪವಾಸ ಸತ್ಯಾಗ್ರಹ ನಡೆಸುತ್ತ. ಒಮ್ಮೆಯಂತೂ 142 ದಿನಗಳ ನಿರಂತರ ಉಪವಾಸ ಸತ್ಯಾಗ್ರಹ ನಡೆಸಿದರು. ಕ್ರಾಂತಿಕಾರರ ಮುಖಂಡ ಜೋಗೇಶಚಂದ್ರ ಚಟರ್ಜಿ ನಿರ್ಮಿಸಿದ ದಾಖಲೆಗಳು ಇವು.



ಕ್ರಾಂತಿಕಾರ : ಜೋಗೇಶಚಂದ್ರ

ಜೋಗೇಶಚಂದ್ರ ಹುಟ್ಟಿದ್ದು ಢಾಕ್ಕಾಗೆ ಸೇರಿದ ಗಾವ್ಪೊದಿಯಾ ಹಳ್ಳಿಯಲ್ಲಿ. 1895ರಲ್ಲಿ. ತಂದೆ ವ್ಯಾಪಾರಿ. ವಿದ್ಯಾಭ್ಯಾಸಕ್ಕಾಗಿ ಕೋಮಿಲಾಕ್ಕೆ ಬಂದು ಚಿಕ್ಕಪ್ಪನ ಬಳಿ ಇದ್ದರು. ಆಗ ಇವರಿಗೆ ಖ್ಯಾತ ಕ್ರಾಂತಿಕಾರ ಬೀರೇನ್ ಚಟರ್ಜಿಯ ಪರಿಚಯವಾಯಿತು. ಅವರ ತಂಡಕ್ಕೆ ಸೇರಿದ ಇವರು ಕ್ರಮೇಣ ಕ್ರಾಂತಿಕಾರಿ ಚಟುವಟಿಕೆಯಲ್ಲಿ ನಿರತರಾದರು. ಪೋಲೀಸರು ಇವರಿಗಾಗಿ ಹುಡುಕುತ್ತಿದ್ದಾಗ ಕಲ್ಕತ್ತೆಗೆ ಹೋಗಿ ತಲೆಮರೆಸಿಕೊಳ್ಳಲು ಯತ್ನಿಸಿದರು. ಆದರೆ 1916ರಲ್ಲಿ ಸೆರೆಸಿಕ್ಕಿ, 1920ರಲ್ಲಿ ಬಿಡುಗಡೆ ಹೊಂದಿದರು.

ಅನಂತರವೂ ಇವರು ಕ್ರಾಂತಿಕಾರಿ ಚಳುವಳಿಯಲ್ಲೇ ತೊಡಗಿದರು. ಬಂಗಾಳದಿಂದ ಹೊರಗೆ ಕ್ರಾಂತಿಕಾರರ ತಂಡಗಳನ್ನು ಸಂಘಟಿಸಲು ಇವರನ್ನು ಕಳುಹಿಸಲಾಯಿತು. ಕಾಶಿ, ಕಾನ್ಪುರಗಳನ್ನು ಕೇಂದ್ರವಾಗಿಟ್ಟುಕೊಂಡು ಕೆಲಸ ಮಾಡುತ್ತಿದ್ದಾಗ, ಭಗತ್‌ಸಿಂಗ್ ಮೊದಲಾದ ಕ್ರಾಂತಿಕಾರರ ಪರಿಚಯವಾಯಿತು. 1925ರಲ್ಲಿ ಕಲತ್ತೆಗೆ ಬಂದಿದ್ದಾಗ ಪೋಲೀಸರು ಇವರನ್ನು ಬಂಧಿಸಿ, ಕಾಕೋರಿ ಫಿತೂರಿ ಮೊಕದ್ದಮೆಯ ಸಂಬಂಧದಲ್ಲಿ (ಓಡುತ್ತಿದ್ದ ಉಗಿಬಂಡಿಯ ಮೇಲೆ ದಾಳಿ) ವಿಚಾರಣೆಗೆ ಗುರಿಪಡಿಸಿದರು. ಪರಿಣಾಮ: ಜೀವಮಾನ ಪರ್ಯಂತ ಗಡೀಪಾರು ಶಿಕ್ಷೆ. ಆಗ್ರಾ ಸೆಂಟ್ರಲ್ ಜೈಲುವಾಸ. ಇವರನ್ನು ಅಲ್ಲಿಂದ ಬಿಡಿಸಲು ಕ್ರಾಂತಿಕಾರರು ಮಾಡಿದ ಯತ್ನ ವಿಫಲವಾಯಿತು. ಗಡೀಪಾರಾಗುವ ಸಂದರ್ಭ. 1937ರಲ್ಲಿ ಸಂಯುಕ್ತ ಪ್ರದೇಶದ ಕಾಂಗ್ರೆಸ್ [illegible] ರಾಜಕೀಯ ಕೈದಿಗಳ ಜೊತೆಯಲ್ಲಿ ಇವರಿಗೂ ಬಿಡುಗಡೆಯಾಯಿತು.

1940ರಲ್ಲಿ ಬೀರೇನ್ ಚಟರ್ಜಿಯ ತಂಡದ ಕೆಲವರು ಕ್ರಾಂತಿಕಾರಿ ಸಮಾಜವಾದೀ ಪಕ್ಷ ಕಟ್ಟಿದರು. ಜೋಗೇಶಚಂದ್ರರು ಕೆಲವು ವರ್ಷ ಇದರ ಕಾರ್ಯದರ್ಶಿಯಾಗಿದ್ದರು. ತಮ್ಮ ರಾಜಕೀಯ ಚಟುವಟಿಕೆಗಳಿಗಾಗಿ ಮತ್ತೆ ಹಲವು ಬಾರಿ ಸೆರೆಮನೆವಾಸ ಅನುಭವಿಸಿದರು.

ಚಟರ್ಜಿ ಅವರು 1956ರಲ್ಲಿ ರಾಜ್ಯಸಭೆಗೆ ಆಯ್ಕೆಯಾದರು. 1969 ಏಪ್ರಿಲ್ 22ರಂದು ಅವರ ದೇಹಾವಸಾನವಾಯಿತು.

ಜೋಧಪುರ

ರಾಯ ಜೋಧನೆಂಬ ರಜಪೂತ ದೊರೆ ಕಟ್ಟಿಸಿದ ಪಟ್ಟಣ, ಜೋಧಪುರ. ಇದು ಜಯಪುರದಿಂದ 192 ಮೈಲು ದೂರದಲ್ಲಿದೆ.

ಸುತ್ತಲೂ ಬಯಲು. ಮಧ್ಯೆ ಒಂದು ಬೆಟ್ಟದ ಮೇಲೆ, ಜೋಧಪುರದ ಕೋಟೆ. ಇದು ರಾಜಸ್ಥಾನದ ಕೋಟೆಗಳಲ್ಲಿ ಅತ್ಯಂತ ಪ್ರೇಕ್ಷಣೀಯವಾದದ್ದು. ಸುತ್ತಲ ಭೂಮಿಯಿಂದ ನಾಲ್ಕು ನೂರು ಅಡಿಗಳ ಎತ್ತರದಲ್ಲಿದೆ. ಸುಮಾರು ಆರು ಮೈಲು ಉದ್ದದ, 20 ಅಡಿ ಎತ್ತರದ ಕೋಟೆಗೆ ಏಳು ದ್ವಾರಗಳಿವೆ. ಇವುಗಳಲ್ಲಿ ಒಂದಾದ ವಿಜಯ ದ್ವಾರವನ್ನು 1707ರಲ್ಲಿ ಮೊಘಲರ ಮೇಲೆ ಸಾಧಿಸಿದ ವಿಜಯದ ನೆನಪಿಗಾಗಿ ರಾಜಾ ಅಜಿತ್‌ಸಿಂಹ ಕಟ್ಟಿಸಿದ. ಕೋಟೆಯೊಳಗೆ ಅರಮನೆಗಳು, ದೇವಾಲಯಗಳು, ಸೈನ್ಯಗೃಹಗಳಿವೆ. ಮೋತೀಮಹಲ್ ಹಾಗೂ ಫೂಲ್‌ಮಹಲ್ ಮುಖ್ಯ ಅರಮನೆಗಳು. ಸಿಲೇಖಾನಾದಲ್ಲಿ ಶಸ್ತ್ರಾಸ್ತ್ರಗಳ ಸಂಗ್ರಹವಿದೆ. ಕೋಟೆಯಿಂದ ಕೆಳಗಿನ ನಗರದ ಭವ್ಯದೃಶ್ಯವನ್ನು ಕಾಣಬಹುದು.

ಗುಲಾಬ್‌ಸಾಗರವೆಂಬ ಕೆರೆಯ ದಂಡೆಯ ಮೇಲಿರುವ ತಾಲಹತಿ–ಕಾ–ಮಹಲ್, ರಾಜಮಹಲ್‌ಗಳು ನಗರದ ಎರಡು ಮುಖ್ಯ ಕಟ್ಟಡಗಳು. ಉಮ್ಮೇದ್ ಭವನ ಆಧುನಿಕ ಶೈಲಿಯಲ್ಲಿ ಕಟ್ಟಲ್ಪಟ್ಟಿರುವ ಅರಮನೆ. ಸುಂದರ ಪರಿಸರದಲ್ಲಿರುವ ಹಲವಾರು ಕೊಳಗಳು ಜೋಧಪುರದಲ್ಲಿ ಇವೆ. ಇವುಗಳಲ್ಲಿ ಬಾಲಸಮಂದ್ ಹಾಗೂ ಕೈಲಾನ ಮುಖ್ಯವಾದುವು. ಬಾಲಸಮಂದ್‌ನ ದಂಡೆಯಲ್ಲಿ ಸೊಗಸಾದ ಉದ್ಯಾನ ಹಾಗೂ ಅರಮನೆಗಳಿವೆ. ಕೈಲಾನ ಅತಿ ದೊಡ್ಡ ಕೊಳ. ವಿಲಿಂಗ್ಡನ್ ಉದ್ಯಾನದಲ್ಲಿ ಸರ್ದಾರ್ ವಸ್ತುಸಂಗ್ರಹಾಲಯವಿದೆ. ಶಿಲಾಶಾಸನಗಳು, ಹಳೆಯ ನಾಣ್ಯ, ಶಿಲ್ಪಕೃತಿಗಳು ಇಲ್ಲಿವೆ.



ರಾಯ ಜೋಧ ಕಟ್ಟಿಸಿದ ಜೋಧಪುರ

ಜೋಧಪುರ ವಿಶ್ವವಿದ್ಯಾನಿಲಯದ ಕೇಂದ್ರ ಜೋಧಪುರದಲ್ಲಿದೆ. ಹಲವು ಬಗೆಯ ಎಂಜಿನಿಯರಿಂಗ್ ಮತ್ತು ರೈಲ್ವೆ ಕರ್ಮಾಗಾರಗಳಿರುವ ಈ ಪಟ್ಟಣ, ಒಂದು ಮುಖ್ಯ ವಾಣಿಜ್ಯ ಹಾಗೂ ಕೈಗಾರಿಕಾ ಕೇಂದ್ರ. ಬೈಸಿಕಲ್, ಹಿತ್ತಾಳೆ ಹಾಗೂ ಕಬ್ಬಿಣದ ಸಾಮಾನು ತಯಾರಿಸುವ ಉದ್ಯಮಗಳಿವೆ. ರಂಗುಹಾಕುವ ಕೆಲಸವೂ ಇಲ್ಲಿ ನಡೆಯುತ್ತದೆ. ವಿಶಾಲವಾದ ವಿಮಾನ ನಿಲ್ದಾಣವಿದೆ. ಭಾರತದ ವಿಮಾನ ದಳ ಸಿಬ್ಬಂದಿಗಳಿಗೆ ತರಬೇತಿ ಕೊಡುವ ಕೇಂದ್ರವಿದೆ.

ಔರಂಗಜೇಬ್ 1679ರಲ್ಲಿ ಮುತ್ತಿಗೆ ಹಾಕಿ ರಜಪೂತರು ಮುಸಲ್ಮಾನರಾಗಬೇಕೆಂದು ಒತ್ತಾಯಪಡಿಸಿದಾಗ ಜೋಧಪುರ, ಜಯಪುರ, ಉದಯಪುರದ ರಾಜರು ಒಂದಾಗಿ ಪ್ರತಿಭಟಿಸಿದರು. ಮುಂದೆ ಈ ಎಲ್ಲ ರಾಜ್ಯಗಳೂ ಮರಾಠರ ವಶವಾದುವು. 1818ರಲ್ಲಿ ಜೋಧಪುರ ಬ್ರಿಟಿಷರ ರಕ್ಷಣೆಗೆ ಒಳಪಟ್ಟಿತು.

ಇಲ್ಲಿಯ ಜನಸಂಖ್ಯೆ 4,76,695

ಜ್ಯೋತಿರ್ಲಿಂಗ

ಸುಪ್ರಿಯ ಪರಮ ದೈವಭಕ್ತ. ಆತ ತನ್ನ ಜೊತೆಯವರೊಡನೆ ದೋಣಿಯಲ್ಲಿ ಹೋಗುತ್ತಿದ್ದಾಗ, ದಾರುಕನೆಂಬ ರಾಕ್ಷಸ ಅವರನ್ನು ಹಿಡಿದು ಸೆರೆಯಲ್ಲಿಟ್ಟ. ಅಲ್ಲಿಯೂ ಸುಪ್ರಿಯ ಶಿವನ ಪ್ರಾರ್ಥನೆ ಬಿಡಲಿಲ್ಲ. ಸುಪ್ರಿಯನನ್ನು ಕೊಲ್ಲಲು ದಾರುಕ ಯತ್ನಿಸಿದಾಗ ಜ್ಯೋತಿರ್ಲಿಂಗದ ರೂಪದಲ್ಲಿ ಶಿವ ಬಂದು ಅವನನ್ನು ಸಂಹರಿಸಿದ.

ಇದು ದ್ವಾರಕೆಯ ಸಮೀಪದಲ್ಲಿರುವ ನಾಗೇಶ್ವರ ಎಂಬ ಜ್ಯೋತಿರ್ಲಿಂಗದ ಬಗೆಗೆ ಪ್ರಚಲಿತವಿರುವ ದಂತಕಥೆ.

ಭಾರತದ ಆದ್ಯಂತ ಶಿವದೇವಾಲಯಗಳು ಅಗಣಿತ.

ಸೌರಾಷ್ಟ್ರದಲ್ಲಿರುವ ಸೋಮನಾಥ, ಶ್ರೀಶೈಲದ ಮಲ್ಲಿಕಾರ್ಜುನ, ಉಜ್ಜಯಿನಿಯ ಮಹಾಕಾಲ, ಹಿಮಾಲಯದ ಕೇದಾರನಾಥ, ಕಾಶಿಯ ವಿಶ್ವನಾಥ, ನಾಸಿಕದ ತ್ರ್ಯಂಬಕೇಶ್ವರ, ನರ್ಮದಾ ನದಿಯ ಒಂದು ದ್ವೀಪದಲ್ಲಿರುವ ಓಂಕಾರೇಶ್ವರ, ಎಲ್ಲೋರ ಗುಹೆ ಬಳಿ ಇರುವ ಘುಷ್ಮೇಶ್ವರ, ಸೇತುಬಂಧನದ ರಾಮೇಶ್ವರ, ನಾಗೇಶ್ವರ, ಭೀಮಶಂಕರ, ಮತ್ತು ವೈದ್ಯನಾಥ ಇವು ದ್ವಾದಶ ಜ್ಯೋತಿರ್ಲಿಂಗಗಳು.

ಈ ಎಲ್ಲ ಜ್ಯೋತಿರ್ಲಿಂಗಗಳಿಗೂ ಸಂಬಂಧಿಸಿದಂತೆ ದಂತಕಥೆಗಳೂ ಪೌರಾಣಿಕ ಆಖ್ಯಾಯಿಕೆಗಳೂ ಇವೆ.

ಝಾನ್ಸಿ ಲಕ್ಷ್ಮೀಬಾಯಿ

ಹುಡುಗರಿಗೆ ಕತ್ತಿವರಸೆ, ಕುದುರೆಸವಾರಿ ಮೊದಲಾದ ಯುದ್ಧ ವಿದ್ಯೆಗಳ ಅಭ್ಯಾಸ ನಡೆಯುತ್ತಿತ್ತು. ಹುಡುಗರ ಸಹಚರಿಯಾಗಿದ್ದ ಸುಂದರ ಬಾಲಕಿಗೆ ತಾನೂ ಅವನ್ನು ಕಲಿಯಬೇಕೆಂಬ ಹಟ. ಬಾಲಕಿ ನಾನಾನನ್ನು ಒಪ್ಪಿಸಿದಳು. "ನಾನೂ ಕತ್ತಿ ಹಿಡೀತೇನೆ. ಕುದುರೆ ಸವಾರಿ ಮಾಡ್ತೇನೆ. ರಾಣಿಯಾಗ್ತೇನೆ." ಎಂದು ಹೇಳಿಕೊಂಡು ಆನಂದಪಟ್ಟಳು.

ಕುದುರೆ ಸವಾರಿ ಕತ್ತಿವರಸೆ ಕಲಿತ ಈ ಬಾಲಕಿಯೇ ಮುಂದೆ ಝಾನ್ಸಿಯ ರಾಣಿ ಲಕ್ಷ್ಮೀಬಾಯಿ ಎಂದು ಪ್ರಖ್ಯಾತಳಾದಳು.

ಪೇಶ್ವೆಯಾಗಿದ್ದ ಎರಡನೆಯ ಬಾಜೀರಾಯನ ಆಪ್ತ ಮೋರೋಪಂತ ತಾಂಬೆಯ ಮಗಳು ಮಣಿಕರ್ಣಿಕಾ. 1835 ನವೆಂಬರ್ 19ರಂದು ಜನಿಸಿದಳು. ಪೇಶ್ವೆಯನ್ನು [illegible] [illegible] ಬಿತ್ತೂರಿಗೆ



ವೀರ ಮರಣ : ರಾಣಿ ಲಕ್ಷ್ಮೀಬಾಯಿ

ಬಂದಾಗ, ಮೋರೋಪಂತನೂ ಮಗಳೊಡನೆ ಹಿಂಬಾಲಿಸಿದ. ಬಾಜೀರಾಯನ ಮಕ್ಕಳೊಡನೆ ಮಣಿಕರ್ಣಿಕಾ ಯುದ್ಧ ವಿದ್ಯೆ ಕಲಿತಳು. ವಿವಾಹ ಝಾನ್ಸಿಯ ರಾಜ ಗಂಗಾಧರ ನೆವಾಳ್ಕರ್‌ನೊಡನೆ ನಡೆಯಿತು. ಆಗ ಗಂಡನ ಮನೆಯವರು ಅವಳಿಗೆ ಲಕ್ಷ್ಮೀಬಾಯಿ ಎಂದು ಹೆಸರಿಟ್ಟರು. ಆಕೆಗೆ ಪುತ್ರ ಸಂತಾನವಾಯಿತು. ಆದರೆ ಮಗು ಸ್ವಲ್ಪ ಕಾಲದಲ್ಲೇ ತೀರಿಕೊಂಡಿತು. ಈ ಆಘಾತದಿಂದ ನೊಂದ ನೆವಾಳ್ಕರ್ ಕಾಯಿಲೆಗೆ ತುತ್ತಾಗಿ, 1856, ನವೆಂಬರ್ 21ರಂದು ನಿಧನರಾದ. ಲಕ್ಷ್ಮಿ ತನ್ನ 18ನೆಯ ವಯಸ್ಸಿನಲ್ಲಿ ವಿಧವೆಯಾದಳು.

ಅನಂತರ ಆಕೆ ತನ್ನ ಅಕ್ಕನ ಮಗನನ್ನು ದತ್ತು ತೆಗೆದುಕೊಂಡಳು. ಈ ದತ್ತು ಸ್ವೀಕಾರವನ್ನು ಬ್ರಿಟಿಷರು ನಿರಾಕರಿಸಿದರು.

ಈ ಸಮಯದಲ್ಲಿ ಆಕ್ರಮಣಶೀಲ ಬ್ರಿಟಿಷರ ಮತ್ತು ಭಾರತದ ಸ್ವಾತಂತ್ರ್ಯವಾದಿಗಳ ನಡುವೆ ವೈರ ಬೆಳೆಯುತ್ತಿತ್ತು. ಒಮ್ಮೆ ಒಬ್ಬ ಸಾಧು ರಾಣಿಯ ಬಳಿಗೆ ಬಂದು, ಬ್ರಿಟಿಷರ ವಿರುದ್ಧ ಹೋರಾಟ ನಡೆಸಲು ಧನಸಹಾಯ ಕೇಳಿದ. ಆಕೆ ತನ್ನ ಸ್ವಂತ ಖಜಾನೆಯಿಂದ ಸಾಧ್ಯವಿದ್ದಷ್ಟು ಹಣ ಕೊಟ್ಟಳು. ಇದು ಬ್ರಿಟಿಷರಿಗೆ ಗೊತ್ತಾದಾಗ, ರಾಣಿ ದಂಗೆಕೋರರ ಪಕ್ಷಕ್ಕೆ ಸೇರಿದ್ದಾಳೆಂದು ಅವರು ಆರೋಪಿಸಿದರು. ರಾಜ್ಯಾಡಳಿತವನ್ನು ತಮಗೆ ಬಿಟ್ಟುಕೊಡಬೇಕೆಂದು ಒತ್ತಾಯಿಸಿದರು. ರಾಣಿ ತನ್ನ ಪ್ರಜೆಗಳು ಮತ್ತು ಸಹಚರರ ನೆರವಿನಿಂದ ಬ್ರಿಟಿಷರನ್ನು ಎದುರಿಸಲು ಸನ್ನದ್ಧಳಾದಳು. ಯುದ್ಧ ಸಾಮಗ್ರಿಗಳನ್ನು ಕೂಡಿ ಹಾಕಿದಳು. ಬ್ರಿಟಿಷರು ಝಾನ್ಸಿಯ ಮೇಲೆ ದಾಳಿ ನಡೆಸಲು ನಿರ್ಧರಿಸಿದರು. ಸರ್ ಹ್ಯೂರೋಸ್ 1858 ಮಾರ್ಚ್ 23ರಂದು ತನ್ನ ಮುತ್ತಿಗೆ ಆರಂಭಿಸಿದ. ಲಕ್ಷ್ಮೀಬಾಯಿ [illegible] ರಕ್ಷಣೆಯಿಂದಲೂ ಅಪ್ರತಿಮ ಶೌರ್ಯದಿಂದಲೂ ಹೋರಾಡಿದಳು. ಕಡೆಗೆ [illegible] ಭಗ್ನವಾದ [illegible] [illegible] ಹೆಚ್ಚು [illegible] ಕೂಡ [illegible] [illegible].

ಲಕ್ಷ್ಮೀಬಾಯಿ ತಾನೇ ಎಲ್ಲೆಲ್ಲೂ ಸಂಚರಿಸುತ್ತ ತನ್ನ ಸೈನಿಕರನ್ನೂ ಜನರನ್ನೂ ಹುರಿದುಂಬಿಸಿದಳು. ಕೋಟೆಯನ್ನು ಗೆಲ್ಲುವುದು ಬ್ರಿಟಿಷರಿಗೆ ಕಷ್ಟದ ಕೆಲಸವೇ ಆಯಿತು. ಲಕ್ಷ್ಮೀಬಾಯಿಯ ನೆರವಿಗೆ ಬಂದ ತಾತ್ಯಾ [illegible] ಬ್ರಿಟಿಷರು ಅವನ ದಾಳಿಯನ್ನು ನಿವಾರಿಸಿಕೊಂಡು ಕೊನೆಗೆ ಝಾನ್ಸಿಯನ್ನು ವಶಪಡಿಸಿಕೊಂಡರು.

ಲಕ್ಷ್ಮೀಬಾಯಿ [illegible] ಕೊಂಡು ಕಾಲ್ಪಿಗೆ ಹೋಗಿ ತಾತ್ಯಾಟೋಪೆಯನ್ನು ಸೇರಿಕೊಂಡರು. ಬ್ರಿಟಿಷರು ಕಾಲ್ಪಿಯ [illegible] ವಶಪಡಿಸಿಕೊಂಡರು. ಲಕ್ಷ್ಮೀಬಾಯಿ ಮತ್ತು ತಾತ್ಯಾ ಟೋಪೆ ಸಮಾಲೋಚನೆ ನಡೆಸಿ, ಬ್ರಿಟಿಷರ ಸ್ನೇಹಿತನಾಗಿದ್ದ ಸಿಂಧ್ಯನ ರಾಜಧಾನಿ ಗ್ವಾಲಿಯರ್ ಮೇಲೆ ದಾಳಿ ನಡೆಸಿದರು. ಸಿಂಧ್ಯನೂ [illegible] ಓಡಿಹೋದರು. ಗ್ವಾಲಿಯರ್ ಸುಲಭವಾಗಿ ವಶವಾಯಿತು.

ತಮ್ಮ ಸ್ನೇಹಿತನಾಗಿದ್ದ [illegible] ಬ್ರಿಟಿಷರು ಗ್ವಾಲಿಯರ್‌ಗೆ ಮುತ್ತಿಗೆ ಹಾಕಿದರು. [illegible] 1858 ಜೂನ್ 17ರಂದು [illegible] ಕೋಟೆಯಿಂದ ಬ್ರಿಟಿಷ್ ಸೇನೆಯ [illegible] ತ್ತಿದ್ದಾಗ. [illegible] ತಾಗಿತು; ಆಕೆಯ ಮರಣಕ್ಕೆ ಅದು ಕಾರಣವಾಯಿತು.

[illegible] ಆಕೆಯ ದೇಹಕ್ಕೆ ದಹನ ಸಂಸ್ಕಾರ ನಡೆಯಿತು.

ಝೀಲಂ

ಪಂಜಾಬಿನ ಪಂಚನದಿಗಳಲ್ಲಿ ಅತ್ಯಂತ ಪಶ್ಚಿಮಕ್ಕೆ ಇರುವುದು, ಝೀಲಂ.

ಕಾಶ್ಮೀರ [illegible] ಪರ್ವತಗಳ [illegible] ಸೇರುತ್ತದೆ. [illegible] ಝೀಲಂ [illegible] ಇನ್ನೊಂದು ಸರೋವರವನ್ನು ಸೇರುತ್ತದೆ. ಮತ್ತೆ ಮುಂದು ವರಿದು ಪೀರ್ ಪಂಜಾಲ್ ಪರ್ವತಶ್ರೇಣಿಯನ್ನು [illegible] ಮುಜಫರ್‌ಬಾದ್‌ನ ಬಳಿಗೆ ಬಂದಾಗ ಉಪನದಿ ಕೃಷ್ಣ ಗಂಗಾ [illegible] ಪರ್ವತಗಳ ಮಧ್ಯೆ ಹರಿಯುವ ಝೀಲಂ ಸುಮಾರು 100 ಮೈಲು ಗಳ ವರೆಗೆ ಭಾರತ – ಪಾಕಿಸ್ತಾನಗಳ ನೈಸರ್ಗಿಕ ಗಡಿ. ಈ ನದಿ ಭಾರತದ ಗಡಿಯನ್ನು ಬಿಟ್ಟು ಪಾಕಿಸ್ತಾನವನ್ನು ಪ್ರವೇಶಿಸುವಲ್ಲಿ ಝೀಲಂ ಪಟ್ಟಣವಿದೆ. ಝೀಲಂ ಪಾಕಿಸ್ತಾನದಲ್ಲಿ ಹರಿಯುವ ಚೀನಾಬ್ ನದಿಯನ್ನು ಸೇರುತ್ತದೆ.



ಝೀಲಂ ನದಿಯ ಉದ್ದ ಸುಮಾರು 480 ಮೈಲು. ಇದರ ಹೆಚ್ಚಿನ ಭಾಗ ದೋಣಿಸಂಚಾರಕ್ಕೆ ಅನುಕೂಲವಾಗಿದೆ. ಕಾಶ್ಮೀರದ ಹೆಚ್ಚಿನ [illegible] ಇದರ ಮೂಲಕವೇ. ಝೀಲಂನ ನೀರನ್ನು ಕೃಷಿಗೂ ಉಪಯೋಗಿಸಿಕೊಳ್ಳುತ್ತಾರೆ. ಪಂಜಾಬಿನ ಇತರ ನದಿಗಳು ತುಂಬಿ ಹರಿಯುವುದಕ್ಕೆ ಮೊದಲೇ, ಅಂದರೆ ಮಾರ್ಚ್ ತಿಂಗಳಿಗೆಲ್ಲ, ಝೀಲಂನಲ್ಲಿ ನೀರು ತುಂಬಿರುತ್ತದೆ. ಈ ನದಿಗೆ ಕಟ್ಟಿದ ಅಣೆಕಟ್ಟಿನಿಂದ 30 ಲಕ್ಷ ಎಕರೆ ಭೂಮಿಗೆ ನೀರು ಸಿಗುತ್ತದೆ. ದೊಡ್ಡ ಪ್ರಮಾಣದಲ್ಲಿ ವಿದ್ಯುತ್ತು ಲಭ್ಯವಾಗಿದೆ.

ಝೀಲಂ ನದಿಯಲ್ಲಿ ದೋಣಿ ವಿಹಾರ



ಟಾಲೆಮಿ

ಟಾಲೆಮಿ [illegible] ಗಣಿತ, ಭೂಗೋಳ, ಖಗೋಳಶಾಸ್ತ್ರಗಳಲ್ಲಿ ಇವನಿಗೆ ಅಪಾರ ಪಾಂಡಿತ್ಯವಿತ್ತು.

ಇವನು ರಚಿಸಿದ 'ಭೂಗೋಳ ಕೈಪಿಡಿ' ಅನೇಕ ಪ್ರದೇಶಗಳ ಊರು, ನದಿ, ಪರ್ವತಗಳ ಹೆಸರು, ಭೂಪಟಗಳನ್ನೊಳಗೊಂಡಕೃತಿ. ಹಿಂದಿನ ಲೇಖಕರೂ ಪ್ರವಾಸಿಗಳೂ ಒದಗಿಸಿದ್ದ ಅಂಶಗಳು, ತನ್ನ ಖಗೋಳಜ್ಞಾನ ಮತ್ತು ರೇಖಾಗಣಿತ ಜ್ಞಾನ ಇವುಗಳ ಸಹಾಯದಿಂದ ಇವನು 'ಭೂಗೋಳ ಕೈಪಿಡಿ' ರಚಿಸಿದ.

ಟಾಲೆಮಿ ತನ್ನ ಗ್ರಂಥದಲ್ಲಿ ಅನೇಕ ದೇಶಗಳ ಅನೇಕ ಸ್ಥಳಗಳನ್ನು ಉಲ್ಲೇಖಿಸಿದ್ದಾನೆ. ಭಾರತದ ಊರು, ನದಿ, ಪರ್ವತಗಳನ್ನು ಕುರಿತು ಕೂಡ ದೀರ್ಘವಾಗಿ ಬರೆದಿದ್ದಾನೆ. ಇವನು ಉಲ್ಲೇಖಿಸುವ ಭಾರತೀಯ ಸ್ಥಳನಾಮಗಳು ಇಂದಿನ

ಯಾವ ಸ್ಥಳಗಳಿಗೆ ಅನ್ವಯಿಸುತ್ತದೆ ಎಂದು ನಿಖರವಾಗಿ ಹೇಳುವುದು ಕಷ್ಟ. ಈ ಬಗೆಗೆ ಏಕಾಭಿಪ್ರಾಯವಿಲ್ಲ.

ನೋಡಿ : ಟಾಲೆಮಿ. ಕ್ಲಾಡಿಯಸ್—ಸಂಪುಟ 8.

ಟ್ರಾಂಬೆ

ಭಾರತದ ಪ್ರಮುಖ ಪರಮಾಣುಶಕ್ತಿ ಸಂಶೋಧನೆ ಹಾಗೂ ಅಭಿವೃದ್ಧಿ ಕೇಂದ್ರ ಟ್ರಾಂಬೆಯಲ್ಲಿದೆ.

ಮುಂಬಯಿಯಿಂದ 15 ಕಿಲೋಮೀಟರ್ ರಸ್ತೆಮಾರ್ಗ ಕ್ರಮಿಸಿದರೆ ಟ್ರಾಂಬೆ ಕಾಣುತ್ತದೆ. ಸುಮಾರು 2000 ಎಕರೆಯಷ್ಟು ವಿಸ್ತೀರ್ಣ ಸ್ಥಳವನ್ನು ಆವರಿಸಿರುವ ಭಾಭಾ ಅಟಾಮಿಕ್ ರಿಸರ್ಚ್ ಸೆಂಟರ್ (ಭಾಭಾ ಪರಮಾಣು ಸಂಶೋಧನಾ ಕೇಂದ್ರ) ಇಲ್ಲಿದೆ. ಇದು ಸ್ಥಾಪಿತವಾದದ್ದು 1957ರಲ್ಲಿ.



ಪರಮಾಣು ರಿಯಾಕ್ಟರ್

ಭೌತವಿಜ್ಞಾನ, ಎಲೆಕ್ಟ್ರಾನಿಕ್ಸ್, ಎಕರಣ ಎಂಜಿನಿಯರಿಂಗ್, ಲೋಹ ವಿಜ್ಞಾನ, ಜೀವವೈದ್ಯಕೀಯ ಹಾಗೂ ಆಡಳಿತ – ಈ ಆರು ಪ್ರಧಾನ ವಿಭಾಗಗಳು ಈ ಕೇಂದ್ರದಲ್ಲಿವೆ. ನಾಲ್ಕು ರಿಯಾಕ್ಟರುಗಳಿವೆ : ಸೈರಸ್, ಅಪ್ಸರಾ, ಜರ್ಲೀನಾ, ಪೂರ್ಣಿಮಾ. ಒಂದು ಕಂಪ್ಯೂಟರ್ ಹಾಗೂ ಒಂದು ವೇಗೋತ್ಕರ್ಷಕ ಇವೆ. ವಿಶೇಷ ಪ್ರಯೋಗಾಲಯ ಸೌಲಭ್ಯಗಳಿವೆ. ಈ ಕೇಂದ್ರ ಪ್ರತಿ ವರ್ಷ 125 ವಿಜ್ಞಾನ ಹಾಗೂ ಎಂಜಿನಿಯರಿಂಗ್ ಪದವೀಧರರಿಗೆ ತರಬೇತಿ ನೀಡುತ್ತದೆ.

ಟ್ರಾಂಬೆಯಲ್ಲಿ ಖಾಸಗೀಕ್ಷೇತ್ರಕ್ಕೆ ಸೇರಿದ ಎರಡು ತೈಲ ಶುದ್ಧೀಕರಣಾಗಾರಗಳೂ ಫರ್ಟಿಲೈಜರ್ ಕಾರ್ಪೊರೇಷನ್ ಆಫ್ ಇಂಡಿಯಾ ಸ್ಥಾಪಿಸಿರುವ ರಾಸಾಯನಿಕ ಗೊಬ್ಬರದ ಕಾರಖಾನೆಯೂ ಇವೆ.

ಟಿ. ಆರ್. ಶೇಷಾದ್ರಿ

ಸುಮಾರು ಸಾವಿರಕ್ಕೂ ಹೆಚ್ಚು ಮೂಲಭೂತ ಸಂಶೋಧನಾ ಲೇಖನಗಳನ್ನು ಪ್ರಕಟಿಸಿರುವ ರಸಾಯನವಿಜ್ಞಾನಿ ಟಿ.ಆರ್. ಶೇಷಾದ್ರಿ.

ನೈಸರ್ಗಿಕ ಉತ್ಪನ್ನಗಳ ರಸಾಯನವಿಜ್ಞಾನದಲ್ಲಿ ಇವರು ಅಂತರರಾಷ್ಟ್ರೀಯ ಖ್ಯಾತಿ ಪಡೆದಿದ್ದಾರೆ. ಫ್ಲೆವೋನ್ ಎಂಬ ಸಸ್ಯಮೂಲ ವರ್ಣದ್ರವ್ಯ, ಇತರ ಸಸ್ಯಮೂಲ ವರ್ಣಪದಾರ್ಥಗಳು, ಶಿಲಾವಲ್ಕ ಉತ್ಪನ್ನಗಳು, ಹಣ್ಣುಗಳು ಮತ್ತು ಬಗೆಬಗೆಯ ಮರ ಈ ಕ್ಷೇತ್ರಗಳಲ್ಲಿ ಇವರು ವ್ಯಾಪಕ ಸಂಶೋಧನೆ ನಡೆಸಿದ್ದಾರೆ. ರಸಾಯನವಿಜ್ಞಾನದ ವಿಶ್ರಾಂತ ಮಹೋಪಾಧ್ಯಾಯರಾಗಿದ್ದಾರೆ.

ಶೇಷಾದ್ರಿ ಅವರು 1900ರಲ್ಲಿ ಫೆಬ್ರವರಿ 3ರಂದು ತಮಿಳುನಾಡಿನ ಕುಳಿತಲಾಯ್‌ನಲ್ಲಿ ಹುಟ್ಟಿದರು. ತಂದೆಯ ಹೆಸರು ಆರ್.ಟಿ. ಅಯ್ಯಂಗಾರ್. 1930ರಲ್ಲಿ ಮ್ಯಾಂಚೆಸ್ಟರ್‌ನಲ್ಲಿ ಪಿಎಚ್.ಡಿ. ಪದವಿ ಗಳಿಸಿದರು. ಆಗಲೇ ನೈಸರ್ಗಿಕ ಉತ್ಪನ್ನಗಳ ಸಾವಯವ ರಸಾಯನವಿಜ್ಞಾನದಲ್ಲಿ ವಿಶೇಷ ಅಧ್ಯಯನ ಮಾಡಿದರು. 1930–33ರಲ್ಲಿ ಕೊಯಮುತ್ತೂರಿನ ಕೃಷಿ ಕಾಲೇಜಿನಲ್ಲಿ ಸಂಶೋಧಕ ರಸಾಯನ ವಿಜ್ಞಾನಿಯಾಗಿದ್ದರು. ಅನಂತರ 16 ವರ್ಷ ಕಾಲ (1933–49) ಆಂಧ್ರ ವಿಶ್ವವಿದ್ಯಾಲಯದಲ್ಲಿ ರಸಾಯನವಿಜ್ಞಾನ ಪ್ರಾಧ್ಯಾಪಕರಾಗಿದ್ದರು. ಮತ್ತೆ 16 ವರ್ಷ ಕಾಲ 1965ರ ವರೆಗೆ ದೆಹಲಿ ವಿಶ್ವವಿದ್ಯಾನಿಲಯದಲ್ಲಿ ಪ್ರಾಧ್ಯಾಪಕರಾದರು.

ಹಲವಾರು ವೈಜ್ಞಾನಿಕ ಸಂಸ್ಥೆಗಳ ಗೌರವ ಶೇಷಾದ್ರಿ ಅವರಿಗೆ ಸಂದಿವೆ. ಇಂಡಿಯನ್ ನ್ಯಾಷನಲ್ ಸೈನ್ಸ್ ಅಕಾಡೆಮಿ, ಇಂಡಿಯನ್ ಅಕಾಡೆಮಿ ಆಫ್ ಸೈನ್ಸಸ್, ಲಂಡನಿನ ರಾಯಲ್ ಅಕಾಡೆಮಿ, ಜರ್ಮನ್ ಅಕಾಡೆಮಿ ಆಫ್ ಸೈನ್ಸಸ್ ಸಂಸ್ಥೆಗಳ ಗೌರವ ಸದಸ್ಯರಾಗಿದ್ದಾರೆ. 1967ರಲ್ಲಿ ಇಂಡಿಯನ್ ಸೈನ್ಸ್ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷರಾಗಿದ್ದರು.

ಆಂಧ್ರ ವಿಶ್ವವಿದ್ಯಾನಿಲಯ, ಬನಾರಸ್ ಹಿಂದೂ ವಿಶ್ವವಿದ್ಯಾನಿಲಯ, ಉಸ್ಮಾನಿಯ ವಿಶ್ವವಿದ್ಯಾನಿಲಯಗಳು ಅವರಿಗೆ ಗೌರವ ಡಾಕ್ಟರೇಟ್ ನೀಡಿವೆ. ಭಾರತ ಸರಕಾರ 1963ರಲ್ಲಿ ಅವರಿಗೆ ಪದ್ಮಭೂಷಣ ಪ್ರಶಸ್ತಿ ಇತ್ತು ಸನ್ಮಾನಿಸಿತು. 1971ರ ಮೇಘನಾದ ಸಹಾ ಪದಕ ಇವರಿಗೆ ಲಭಿಸಿದೆ.

ಟಿ. ಎಂ. ಎ. ಪೈ

ಸುತ್ತ ಬೆಟ್ಟಗುಡ್ಡಗಳು, ಹಸಿರು ವನರಾಜಿ. ನಡುವೆ ತಲೆ ಎತ್ತಿ ನಿಂತಿರುವ ಭಾರೀ ಸೌಧಗಳು. ಭಾರತದ ಖ್ಯಾತ ಶಿಕ್ಷಣ ಕ್ಷೇತ್ರಗಳಲ್ಲಿ ಒಂದಾದ ಮಣಿಪಾಲ ಉಡುಪಿಯಿಂದ ಆರು ಮೈಲು ದೂರದಲ್ಲಿ ರಮ್ಯ ನಿಸರ್ಗದ ಮಧ್ಯೆ ಬೆಳಗುತ್ತಿದೆ. ಇದಕ್ಕೆ ಕಾರಣರಾದವರು, ತೋನ್ಸೆ ಮಾಧವ ಅನಂತ ಪೈ —ಟಿ.ಎಂ.ಎ.ಪೈ.

ಇವರ ಜನನ 1898, ಏಪ್ರಿಲ್ 30ರಂದು. ಮದರಾಸು ಮೆಡಿಕಲ್ ಕಾಲೇಜಿನಲ್ಲಿ ವೈದ್ಯಕೀಯ ವಿದ್ಯಾಭ್ಯಾಸ ಪಡೆದು ಉಡುಪಿಯಲ್ಲಿ ವೈದ್ಯವೃತ್ತಿ ಆರಂಭಿಸಿದರು. ವೈದ್ಯವೃತ್ತಿ ಬಿಟ್ಟು ಬ್ಯಾಂಕಿಂಗ್ ಉದ್ಯಮ, ಶಿಕ್ಷಣ ಕ್ಷೇತ್ರಗಳಲ್ಲಿ ತಮ್ಮ ಚಟುವಟಿಕೆ ಪ್ರಾರಂಭಿಸಿದರು. 1925ರಲ್ಲಿ ಸಿಂಡಿಕೇಟ್ ಬ್ಯಾಂಕ್ ಸ್ಥಾಪಿಸಿದರು. 36 ವರ್ಷ ಮ್ಯಾನೇಜಿಂಗ್ ಡೈರೆಕ್ಟರ್ ಆಗಿದ್ದರಲ್ಲದೆ, ಕೆಲ ಕಾಲ ಅದರ ಅಧ್ಯಕ್ಷರಾಗಿದ್ದರು.

ಮಣಿಪಾಲದಲ್ಲಿ 1942ರಲ್ಲಿ 'ಅಕಾಡೆಮಿ ಆಫ್ ಜನರಲ್ ಎಜುಕೇಷನ್' ಸಂಸ್ಥೆ ಸ್ಥಾಪಿತವಾಯಿತು. ಇದರ ಸ್ಥಾಪನೆಯಲ್ಲಿ ಮಾಧವ ಪೈ ಪಾತ್ರ ಹಿರಿದು. ಮಣಿಪಾಲದಲ್ಲಿ ವೈದ್ಯಕೀಯ, ಎಂಜಿನಿಯರಿಂಗ್ ಕಾಲೇಜುಗಳು, ಉಡುಪಿಯ ಎಂ.ಜಿ.ಎಂ. ಕಾಲೇಜು, ಶಿಕ್ಷಕರ ತರಬೇತಿ ಕಾಲೇಜು, ಗ್ರಾಮಾಂತರ ಪ್ರದೇಶಗಳಲ್ಲಿ ಸ್ನಾತಕ ವರ್ಗದ ಕಾಲೇಜುಗಳು



ಉದ್ಯಮ, ಶಿಕ್ಷಣ ಶಿಲ್ಪಿ : ತೋನ್ಸೆ ಮಾಧವ ಅನಂತ ಪೈ

ಹಾಗೂ ಹೈಸ್ಕೂಲುಗಳು — ಇವುಗಳ ಸ್ಥಾಪನೆಗೆ ಅವರು ಕಾರಣರು. ಮಣಿಪಾಲ್ ಇಂಡಸ್ಟ್ರೀಸ್‌ನಂಥ ಅನೇಕ ವಾಣಿಜ್ಯ ಮತ್ತು ಉದ್ಯೋಗಿಕ ಸಂಸ್ಥೆಗಳನ್ನು ಅವರು ಸ್ಥಾಪಿಸಿದ್ದಾರೆ.

ಜನರಲ್ಲಿ ಉಳಿತಾಯ ಮನೋಭಾವ ಬೆಳೆಸುವುದರಲ್ಲಿ ಮತ್ತು ಅವರಿಗೆ ಉತ್ತಮ ವಿದ್ಯಾಭ್ಯಾಸ ಸೌಲಭ್ಯ ನೀಡುವುದರಲ್ಲಿ ಅವರಿಗೆ ಆಸಕ್ತಿ.

1965ರಲ್ಲಿ ಮಾಧವ ಪೈ ಅವರಿಗೆ ಪದ್ಮಶ್ರೀ ಪ್ರಶಸ್ತಿ ಲಭಿಸಿತು. 1974ರಲ್ಲಿ ಅವರಿಗೆ ಮೈಸೂರು ವಿಶ್ವವಿದ್ಯಾನಿಲಯ ಗೌರವ ಡಾಕ್ಟರೇಟ್ ನೀಡಿತು.

ಟಿ. ಚೌಡಯ್ಯ

ನೋಡಿ : ಸಂಪುಟ—೫

ಟಿ. ಪ್ರಕಾಶಂ

ಆಂಧ್ರ ಕೇಸರಿಯೆನಿಸಿ, ಆಂಧ್ರಪ್ರದೇಶದ ಮೊದಲ ಮುಖ್ಯಮಂತ್ರಿಯಾದ ಟಂಗಟೂರಿ ಪ್ರಕಾಶಂ. ಕಂದಾಯ ಇಲಾಖೆಯಲ್ಲಿ ಬರೇ ಐದು ರೂಪಾಯಿ ಸಂಬಳ ಪಡೆಯುತ್ತಿದ್ದ ನೌಕರ ಗೋಪಾಲಕೃಷ್ಣಯ್ಯನವರ ಮಗ. ತಾಯಿ ಸುಬ್ಬಮ್ಮ. 1872 ಆಗಸ್ಟ್ 23ರಂದು ಹುಟ್ಟಿದ ಮಗನ ಉತ್ಕರ್ಷ ನೋಡಲು ತಂದೆ ಹೆಚ್ಚು ಕಾಲ ಬದುಕಲಿಲ್ಲ. ಪ್ರಕಾಶಂಗೆ ಹನ್ನೊಂದು ವರ್ಷವಾಗುವಾಗ ಅವರು ತೀರಿಕೊಂಡರು. ಗರ್ಭಿಣಿಯಾಗಿದ್ದ ಸುಬ್ಬಮ್ಮನನ್ನು ಆಕೆಯ ಸೋದರ ಕರೆದೊಯ್ದರು. ಸೋದರನಿಗೆ ತನ್ನ ಸಂಸಾರ ಹೊರೆಯಾಗಬಾರದೆಂದು ಸುಬ್ಬಮ್ಮ ಊಟದ ಹೋಟೆಲು ತೆರೆದು ಜೀವಿಸಲಾರಂಭಿಸಿದರು.

ಬಾಲ್ಯದಿಂದಲೂ ತಾನು ವಕೀಲನಾಗಬೇಕೆಂಬ ಆಸೆ ಪ್ರಕಾಶಂ ಅವರಿಗೆ. ಇದರ ಪ್ರತೀಕವಾಗಿ ಇನ್ನೂ ಶಾಲಾ ವಿದ್ಯಾರ್ಥಿಯಾಗಿದ್ದಾಗಲೇ ಒಂದು ಕಪ್ಪು ಕೋಟು ಹೊಲಿಸಿಕೊಂಡು ಅದನ್ನು ಧರಿಸುತ್ತಿದ್ದರು. ಮುಂದೆ ರಾಜಮಹೇಂದ್ರಿಯಲ್ಲಿ ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ತೇರ್ಗಡೆಯಾದ ಮೇಲೆ ಅಲ್ಲಿಯೇ ಕಾಲೇಜು ಸೇರಿದರು. ಎಫ್. ಎ. ಪರೀಕ್ಷೆಯಲ್ಲಿ ಉತ್ತೀರ್ಣರಾದರು. ತಂದೆಯ ಮರಣಾನಂತರ ತನಗೆ ಮಾರ್ಗದರ್ಶನ ಮಾಡಿದ ಹನುಮಂತ ನಾಯುಡುರವರ ಸಹಾಯದಿಂದ ಮದರಾಸಿಗೆ ಹೋಗಿ ನ್ಯಾಯಶಾಸ್ತ್ರ ಕಲಿತು ರಾಜಮಹೇಂದ್ರಿಯಲ್ಲಿ ವಕೀಲರಾದರು. ಸಾರ್ವಜನಿಕ ಚಟುವಟಿಕೆಗಳಲ್ಲಿ ಭಾಗವಹಿಸಿ, ಜನಪ್ರಿಯರಾಗಿ, ಮೂವತ್ತನೆಯ ಪ್ರಾಯದಲ್ಲೇ ರಾಜಮಹೇಂದ್ರಿ ನಗರಸಭೆಯ ಅಧ್ಯಕ್ಷರಾದರು. ದಕ್ಷ ಆಡಳಿತಗಾರನೆಂದು ಮೆಚ್ಚುಗೆ ಪಡೆದರು. ಕೆಲವು ಮಿತ್ರರ ನೆರವಿನಿಂದ ಲಂಡನಿಗೆ ಹೋಗಿ ಬ್ಯಾರಿಸ್ಟರ್ ಪದವಿ ಪಡೆದರು.



ಆಂಧ್ರ ಕೇಸರಿ : ಟಂಗಟೂರಿ

ಬ್ಯಾರಿಸ್ಟರ್ ಆಗಿ ಮರಳಿದ ಪ್ರಕಾಶಂ ಮದರಾಸಿಗೆ ಬಂದು, ಹೈಕೋರ್ಟ್ ವಕೀಲರಾದರು. ಆ ವೃತ್ತಿಯಲ್ಲಿ ಗಣ್ಯರೆನಿಸಿದರು.

ಪ್ರಕಾಶಂ ಮೊದಲಿನಿಂದಲೂ ರಾಷ್ಟ್ರೀಯವಾದಿ. ಕಾಂಗ್ರೆಸ್ ಅಧಿವೇಶನಗಳಿಗೆ ಹೋಗುತ್ತಿದ್ದರು : ಅದರ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದರು. 1926ರಲ್ಲಿ ಸ್ವರಾಜ್ಯಪಕ್ಷದ ಪರವಾಗಿ ಚುನಾವಣೆಗೆ ನಿಂತು ಕೇಂದ್ರ ಶಾಸನಸಭೆಯ ಸದಸ್ಯರಾದರು. ಸೈಮನ್ ಸಮಿತಿ ಮದರಾಸಿಗೆ ಬಂದಾಗ ನಿಷೇಧಾಜ್ಞೆಯನ್ನು ಉಲ್ಲಂಘಿಸಿದರು. ಉಪ್ಪಿನ ಸತ್ಯಾಗ್ರಹಮಾಡಿ ಒಂದು ವರ್ಷ ಶಿಕ್ಷೆಗೊಳಗಾದರು. ರಾಷ್ಟ್ರೀಯ ಚಳುವಳಿಯ ಸಂಘಟನೆಗಾಗಿ 'ಸ್ವರಾಜ್ಯ' ಎಂಬ ಇಂಗ್ಲಿಷ್ ದಿನಪತ್ರಿಕೆ ಆರಂಭಿಸಿದರು. ಅದರ ಧೋರಣೆ, ಅಗ್ರಲೇಖನಗಳಿಗಾಗಿ ಸರಕಾರಕ್ಕೆ ಅನೇಕ ಬಾರಿ ದಂಡ ತೆರಬೇಕಾಯಿತು.

1935ರ ಸುಧಾರಣೆಯಂತೆ ನಡೆದ ಚುನಾವಣೆಯಲ್ಲಿ ಪ್ರಕಾಶಂ ಮದರಾಸು ಶಾಸನ ಸಭೆಗೆ ಆರಿಸಿ ಬಂದರು : ಕಂದಾಯ ಮಂತ್ರಿಯಾದರು. ಅನಂತರ ಕೆಲ ಕಾಲ ಮದರಾಸಿನ ಮುಖ್ಯಮಂತ್ರಿಯಾಗಿ ಸೇವೆ ಸಲ್ಲಿಸಿದರು. 1953ರಲ್ಲಿ ಆಂಧ್ರಪ್ರದೇಶ ರೂಪುಗೊಂಡಾಗ ಪ್ರಕಾಶಂ ಮುಖ್ಯಮಂತ್ರಿಯಾದರು. 1956ರಲ್ಲಿ ಹೈದರಾಬಾದ್ ಸಂಸ್ಥಾನದ ವಿಸರ್ಜನೆಯಾಗಿ ಆಂಧ್ರ ವಿಸ್ತಾರಗೊಂಡಾಗ, ಪ್ರಕಾಶಂ ಮುಖ್ಯಮಂತ್ರಿ ಪದವಿಯನ್ನು ಬಿಟ್ಟರು.

ರಾಜಕೀಯ ಚಳುವಳಿಗಳ ಸಂಬಂಧದಲ್ಲಿ ಸೆರೆಮನೆಯಲ್ಲಿದ್ದಾಗ ಪ್ರಕಾಶಂ ಹಿಂದೀ, ತಮಿಳು, ಮಲಯಾಳಂ ಭಾಷೆಗಳನ್ನು ಕಲಿತರು. ಒಟ್ಟು ತಮ್ಮ ಮೂರು ವರ್ಷಗಳ ಜೈಲುವಾಸದ ಅವಧಿಯಲ್ಲಿ ಸಂಸ್ಕೃತ ಅಧ್ಯಯನ ಮಾಡಿ ಭಗವದ್ಗೀತೆ, ಉಪನಿಷತ್ತುಗಳು ಮತ್ತು ಬ್ರಹ್ಮಸೂತ್ರಗಳಿಗೆ ಸರಳ ಭಾಷ್ಯ ಬರೆದರು. 'ಜೀವನ ಯಾತ್ರೆ' ಅವರ ಆತ್ಮಕಥೆ.

ಭಾರತ ಸ್ವಾತಂತ್ರ್ಯ ಸಂಗ್ರಾಮದಲ್ಲಿ ದೀರ್ಘ ಕಾಲ ಹೋರಾಡಿ 'ಆಂಧ್ರ ಕೇಸರಿ' ಎಂಬ ಹೊಗಳಿಕೆಗೆ ಪಾತ್ರರಾದ ಪ್ರಕಾಶಂ 1957 ಮೇ 20ರಂದು ನಿಧನರಾದರು.

ಟಿಪ್ಪು ಸುಲ್ತಾನ್

ಸುಮಾರು 20 ವರ್ಷದ ತರುಣ. ಕರ್ನಾಟಕ ಯುದ್ಧದಲ್ಲಿ ಬ್ರಿಟಿಷರ ಮದ್ದುಗುಂಡುಗಳನ್ನು ಧ್ವಂಸ ಮಾಡಿದ್ದಲ್ಲದೆ ಸೈನಿಕರನ್ನು ಸದೆಬಡಿದ. ಈ ವಿಜಯವನ್ನು ಸಾಧಿಸಿದವನು 'ಮೈಸೂರು ಹುಲಿ' ಎಂದು ಮುಂದೆ ಪ್ರಖ್ಯಾತನಾದ ಟಿಪ್ಪು ಸುಲ್ತಾನ್.

ಟಿಪ್ಪು ಸುಲ್ತಾನ್ ಮೈಸೂರಿನ ಹೈದರ್ ಅಲಿಯ ಮಗ. ಹೈದರ್ ಅವನಿಗೆ ಉತ್ತಮ ಶಿಕ್ಷಣ ಕೊಡಿಸಿದ. ತಾನು ಯುದ್ಧಕ್ಕೆ ಹೋದಾಗ ಜತೆಯಲ್ಲಿ ಕರೆದೊಯ್ಯುತ್ತಿದ್ದ. ಬ್ರಿಟಿಷರನ್ನು ಭಾರತದಿಂದ ಹೊರಗಟ್ಟಬೇಕು ಎಂಬ ಆಕಾಂಕ್ಷೆಯನ್ನು ಟಿಪ್ಪುವಿನ ಮನಸ್ಸಿನಲ್ಲಿ ಮೂಡಿಸಿದ.

1782ರಲ್ಲಿ ಹೈದರ್ ಮರಣಹೊಂದಿದ. ಆಗ ಪಶ್ಚಿಮ ಕರಾವಳಿಯಲ್ಲಿ ಯುದ್ಧ ನಿರತನಾಗಿದ್ದ ಟಿಪ್ಪು ಶ್ರೀರಂಗಪಟ್ಟಣಕ್ಕೆ ಹಿಂದಿರುಗಿ ರಾಜ್ಯದ ಆಡಳಿತವನ್ನು ವಹಿಸಿಕೊಂಡ. ಪುತ್ತೆ ಯುದ್ಧ ಮುಂದುವರಿಸಲು ಹೊರಟುಹೋದ.

ಮರಾಠರು ಮತ್ತು ಬ್ರಿಟಿಷರು ಟಿಪ್ಪುವಿನ ಪ್ರಬಲ ವೈರಿಗಳಾಗಿದ್ದರು. 1783ರ ವರ್ಸೇಲ್ ಒಪ್ಪಂದದ ಪ್ರಕಾರ ಫ್ರೆಂಚರು ಮತ್ತು ಬ್ರಿಟಿಷರು ಪರಸ್ಪರ ಹೋರಾಟ ನಿಲ್ಲಿಸಿದ್ದರು. ಟಿಪ್ಪುವಿನ ಮಿತ್ರರಾಗಿದ್ದ ಫ್ರೆಂಚರು



ಹುಲಿಬಾಳು : ಟಿಪ್ಪು




ಟಿಪ್ಪು ಟಂಕಿಸಿದ ನಾಣ್ಯ



ಶ್ರೀರಂಗಪಟ್ಟಣದಲ್ಲಿ ಎರಕ ಹುಯ್ದ ಫಿರಂಗಿ

ಟಿಪ್ಪುವಿನ ಸಹಾಯಕ್ಕೆ ಬರಲಾಗಲಿಲ್ಲ. ಟಿಪ್ಪು ಏಕಾಕಿಯಾಗಿ ಬ್ರಿಟಿಷರನ್ನು ಎದುರಿಸಲಾರದೆ 1784ರಲ್ಲಿ ಮಂಗಳೂರಿನಲ್ಲಿ ಒಪ್ಪಂದ ಮಾಡಿಕೊಂಡ. ಒಪ್ಪಂದ ಉಭಯ ಪಕ್ಷದವರಿಗೂ ಹಿತಕರವಾಗಿದ್ದಿತು. ಇಬ್ಬರೂ ಗೆದ್ದಿದ್ದ ಪ್ರದೇಶಗಳನ್ನು ಬಿಟ್ಟುಕೊಟ್ಟು ಯುದ್ಧ ಕೈದಿಗಳನ್ನು ಹಿಂತಿರುಗಿಸಿದರು.



ದರಿಯಾ ದೌಲತ್

ಟಿಪ್ಪು ರಾಜ್ಯಾಡಳಿತವನ್ನು ವಹಿಸಿಕೊಂಡ ಮೇಲೆ ಅವನನ್ನು ಪದಚ್ಯುತಗೊಳಿಸಲು ಸಂಚು ನಡೆಯಿತು. ಅದರಲ್ಲಿ ಭಾಗವಹಿಸಿದರೆಂದು ಅನುಮಾನ ಬಂದವರಿಗೆಲ್ಲ ಟಿಪ್ಪು ಉಗ್ರ ಶಿಕ್ಷೆ ವಿಧಿಸಿ ತನ್ನ ಸ್ಥಾನ ಬಲಪಡಿಸಿಕೊಂಡ.

1786ರಲ್ಲಿ ಮರಾಠರೊಂದಿಗೆ ಯುದ್ಧ ಮಾಡಿದ ಟಿಪ್ಪು ಸವಣೂರನ್ನು ಗೆದ್ದ. 1787ರಲ್ಲಿ ಯುದ್ಧ ನಿಲ್ಲಿಸಿ ಒಪ್ಪಂದ ಮಾಡಿಕೊಂಡ. ಮೂರು ವರ್ಷ ಮಲಬಾರ್‌ನ ಮೇಲೆ ದಾಳಿಮಾಡಿದ. 1789ರಲ್ಲಿ ಟಿಪ್ಪು ತಿರುವಾಂಕೂರನ್ನು ಮುತ್ತಿದಾಗ ಬ್ರಿಟಿಷರು ತಿರುವಾಂಕೂರಿನ ಅರಸನಿಗೆ ಬೆಂಬಲವಾಗಿ ನಿಂತರು. ಬ್ರಿಟಿಷರು ಮೈಸೂರಿನ ರಾಜಧಾನಿ ಶ್ರೀರಂಗಪಟ್ಟಣದ ಮೇಲೆ ಘೋರ ದಾಳಿ ನಡೆಸಿದರು. ಟಿಪ್ಪು ಒಪ್ಪಂದ ಮಾಡಿಕೊಳ್ಳಬೇಕಾಯಿತು. ಮೂರು ಕೋಟಿ ಮೂವತ್ತು ಲಕ್ಷ ಪರಿಹಾರ ಧನ ಕೊಡಲು ಆತ ಒಪ್ಪಿದ. ಅರ್ಧ ಹಣ ಕೊಟ್ಟು, ಉಳಿದುದಕ್ಕೆ ತನ್ನ ಮಕ್ಕಳನ್ನು ಒತ್ತೆ ಇಟ್ಟ. ಮುಂದೆ ಉಳಿದ ಹಣವನ್ನು ಬ್ರಿಟಿಷರಿಗೆ ಒಪ್ಪಿಸಿ ಮಕ್ಕಳನ್ನು ಬಿಡಿಸಿಕೊಂಡ. ಅವನ ಮನೆತನದವರು ಈಗಲೂ ಕಲ್ಕತ್ತೆಯಲ್ಲಿ ವಾಸವಾಗಿದ್ದಾರೆ.

ಟಿಪ್ಪು ಅರೇಬಿಯ, ಅಫ್‌ಘಾನಿಸ್ಥಾನಗಳಿಗೆ ರಾಯಭಾರಿಗಳನ್ನು ಕಳುಹಿಸಿ ಸಹಾಯ ಕೋರಿದ. ಫ್ರಾನ್ಸಿನ ನೆಪೋಲಿಯನನೊಡನೆಯೂ ಪತ್ರವ್ಯವಹಾರ ನಡೆಸಿದ. ಆದರೆ ಸಹಾಯ ಬರಲಿಲ್ಲ. ಬ್ರಿಟಿಷರು ಮತ್ತೆ ಯುದ್ಧ ಹೂಡಿದರು. ಬ್ರಿಟಿಷರಿಗೆ ಸಿಂಹಸ್ವಪ್ನನಾಗಿದ್ದ ಟಿಪ್ಪು ಶ್ರೀರಂಗಪಟ್ಟಣದಲ್ಲಿ ಯುದ್ಧ ಮಾಡುತ್ತ 1799 ಮೇ 4 ರಂದು ಅಸು ನೀಗಿದ.

ಬ್ರಿಟಿಷ್ ಕೈದಿಗಳೊಡನೆ ಟಿಪ್ಪು ಕ್ರೂರವಾಗಿ ವರ್ತಿಸುತ್ತಿದ್ದ. ಸಹಸ್ರಾರು ಹಿಂದೂಗಳನ್ನು ಆತ ಬಲಾತ್ಕಾರದಿಂದ ಮುಹಮ್ಮದೀಯರನ್ನಾಗಿ ಮಾಡಿದನೆಂಬ ಆರೋಪವಿದೆ. ಶೃಂಗೇರಿ ಮಠಕ್ಕೂ ಕೆಲ ದೇವಾಲಯಗಳಿಗೂ ಟಿಪ್ಪು ಗೌರವ ಸಲ್ಲಿಸುತ್ತಿದ್ದ ಎಂಬುದಕ್ಕೆ ದಾಖಲೆಗಳಿವೆ.

ಟಿಪ್ಪುವಿನ ಅರಮನೆಯಲ್ಲಿ ದೊಡ್ಡ ಗ್ರಂಥ ಭಂಡಾರವಿತ್ತು. ಅವನು ತನ್ನ ಕನಸುಗಳನ್ನು ಬರೆದಿಡುತ್ತಿದ್ದ. ಮೈಸೂರು ರಾಜ್ಯದಲ್ಲಿ ರೇಷ್ಮೆ ಉದ್ಯಮವನ್ನು ಮೊದಲು ಮಾಡಿದವನು ಟಿಪ್ಪು. ಕೋಲಾರದಲ್ಲಿ ಚಿನ್ನ ಪಡೆಯುವುದಕ್ಕೆ ಕೆಲಸ ಆರಂಭಿಸಿದ. ಕಾವೇರಿಗೆ ಅಡ್ಡವಾಗಿ ಫ್ರೆಂಚ್ ಎಂಜಿನಿಯರೊಬ್ಬನ ನೆರವಿನಿಂದ ಕನ್ನಂಬಾಡಿಯಲ್ಲಿ ಒಂದು ಅಣೆಕಟ್ಟೆ ಕಟ್ಟಿಸಿದ ಖ್ಯಾತಿ ಅವನದು. ಆ ಕಾಲದಲ್ಲಿ ಹರಿಹರದಲ್ಲಿ ಒಂದು ಕಾಗದ ತಯಾರಿ ಕಾರಖಾನೆಯನ್ನೂ ಅವನು ಸ್ಥಾಪಿಸಿದ. ಶ್ರೀರಂಗಪಟ್ಟಣದಲ್ಲಿ ಫಿರಂಗಿಗಳನ್ನು ಎರಕ ಹುಯ್ಯಿಸಿದ.

ಭಾರತದ ಇತಿಹಾಸದಲ್ಲಿ ಚಿರಸ್ಥಾನ ಗಳಿಸಿಕೊಂಡ ಮೈಸೂರು ನಾಯಕ, ಟಿಪ್ಪು ಸುಲ್ತಾನ್.

ಟಿಬೆಟ್

ಭಾರತದ ಉತ್ತರಕ್ಕಿರುವ ಟಿಬೆಟ್ 15,000 ಅಡಿ ಎತ್ತರದಲ್ಲಿರುವ ಪ್ರಸ್ಥಭೂಮಿ.

ಇದರ ವಿಸ್ತೀರ್ಣ ಸುಮಾರು 470,000 ಚ.ಮೈಲು. ಕುನ್‌ಲುನ್ ಪರ್ವತಗಳು, ಚಿಂಘಾಯ್, ಜೆಕ್‌ವಾನ್ ಸಂಸ್ಥಾನಗಳು, ಹಿಮಾಲಯ ಇದರ ಮೇರೆಗಳು. ಹಿಮಾಲಯ ಇದನ್ನು ಭಾರತ, ಭೂತಾನ, ನೇಪಾಳಗಳಿಂದ ಪ್ರತ್ಯೇಕಿಸಿದೆ. ಟಿಬೆಟ್‌ನ ರಾಜಧಾನಿ ಲ್ಹಾಸಾ. ಬೌದ್ಧ ಧರ್ಮದ ಲಾಮಾ ಪಂಥವನ್ನು ಇಲ್ಲಿನ ಜನ ಅನುಸರಿಸುತ್ತಾರೆ. ಇವರು ಆಡುವ ಭಾಷೆ ಚೀನಿ ಭಾಷೆಗೆ ಸಂಬಂಧವಾದರೂ ಲಿಪಿ ಮಾತ್ರ ಸಂಸ್ಕೃತದಿಂದ ರೂಪುಗೊಂಡಿದೆ.



ಸ್ವರ್ಗದಿಂದ ಬುದ್ಧನ ಅವರೋಹಣ —ಟಿಬೆಟ್ಟಿನಲ್ಲಿ ಚಿತ್ರ

ಟಿಬೆಟಿನ ಪುರಾತನ ಚರಿತ್ರೆ ಅಸ್ಪಷ್ಟ. 620ರಲ್ಲಿ ಗಾಂಪ್ಪೊ ಎಂಬ ರಾಜ ಇದನ್ನು ಆಳುತ್ತಿದ್ದ. 8ನೆಯ ಶತಮಾನದ ವೇಳೆಗೆ ಸೈನಿಕ ರಾಜ್ಯಭಾರ ನಿರುವ ಮಧ್ಯ ಏಷ್ಯದ ದೇಶಗಳಲ್ಲಿ ಒಂದಾಗಿದ್ದಿತು ಟಿಬೆಟ್. ಮುಂದೆ ಈ ಪ್ರದೇಶ ಹಲವು ರಾಜ್ಯಗಳಾಗಿ ಒಡೆಯಿತು. 13ನೆಯ ಶತಮಾನದಲ್ಲಿ ಕುಬ್ಲಾಯ್‌ಖಾನ್ ಚಕ್ರವರ್ತಿಯ ಆಳ್ವಿಕೆಯಲ್ಲಿ ಇದು ಮಠಾಧಿಪತಿ ಆಳುವ ರಾಜ್ಯವಾಯಿತು. ಮೂರು ಶತಮಾನದಲ್ಲಿ ಲಾಮಾರ ಶ್ರೇಣಿ ಆರಂಭವಾಯಿತಂ (ಲಾಮಾ ಎಂದರೆ 'ಶ್ರೇಷ್ಠನಾದವ').

1914ರಲ್ಲಿ ಬ್ರಿಟಿಷ್ ಇಂಡಿಯಾ, ಟಿಬೆಟ್ ಹಾಗೂ ಚೀನಗಳ ಸಭೆಯೊಂದನ್ನು ಬ್ರಿಟಿಷರು ಸಿಮ್ಲಾದಲ್ಲಿ ಏರ್ಪಡಿಸಿದ್ದರು. ಈ ಸಭೆಗೆ ಬ್ರಿಟಿಷರ ಪರವಾಗಿ ಬಂದ ಮೆಕ್‌ಮೋಹನರ ಹೆಸರನ್ನೇ ಇಟ್ಟು, ಭಾರತ ಟಿಬೆಟ್‌ಗಳ ನಡುವಿನ ಗಡಿರೇಖೆ 'ಮೆಕ್‌ಮೋಹನ್ ರೇಖೆ'ಯನ್ನು ಗುರುತಿಸಲಾಯಿತು. ಚೀನದ ಪ್ರತಿನಿಧಿ ಇದಕ್ಕೆ ಒಪ್ಪಲಿಲ್ಲ. ಮುಂದಿನ 30 ವರ್ಷ ಕಾಲ ದಲಾಯ್ ಲಾಮಾ ಟಿಬೆಟ್ಟನ್ನು ಸ್ವಯಮಾಧಿಕಾರವುಳ್ಳ ರಾಜ್ಯದಂತೆ ಆಳಿದರು. 1950ರ ಅಕ್ಟೋಬರ್‌ನಲ್ಲಿ ಚೀನೀ ಪಡೆಗಳು ಟಿಬೆಟನ್ನು ಆಕ್ರಮಿಸಿಕೊಂಡುವು. ಮುಂದೆ ಅದನ್ನು ಸ್ವಯಮಾಡಳಿತ ಪ್ರದೇಶವೆಂದು ಸಾರಿದರೂ ವಾಸ್ತವವಾಗಿ ಅದಕ್ಕೆ ಯಾವುದೇ ಬಗೆಯ ಸ್ವಾತಂತ್ರ್ಯವಿರಲಿಲ್ಲ. 1959ರಲ್ಲಿ ಟಿಬೆಟಿನ ಜನ ದಂಗೆಯೆದ್ದರು. ದಲಾಯ್ ಲಾಮಾರನ್ನು ಬಂಧನದಲ್ಲಿಡಲು ಚೀನ ಪ್ರಯತ್ನಿಸಿತು. ಸಾವಿರಾರು ಟಿಬೆಟನರು ಕೊಲ್ಲಲ್ಪಟ್ಟರು. ಲಾಮಾ ತಪ್ಪಿಸಿಕೊಂಡು ಭಾರತಕ್ಕೆ ಬಂದರು. ಟಿಬೆಟಿನ ಸ್ವಯಂ ಆಡಳಿತ ಕುಸಿದು ಬಿದ್ದಿತು. ಪೀಕಿಂಗ್ ಸರಕಾರದ ಪ್ರತಿನಿಧಿ ದೇಶದ ನಿಯಂತ್ರಣವನ್ನು ಕೈಗೊಂಡ. ಟಿಬೆಟಿನ ಸುತ್ತಲೂ ಉನ್ನತ ಪರ್ವತಗಳಿವೆ. ಅನೇಕ ಮುಖ್ಯ ನದಿಗಳು ಇಲ್ಲಿ ಹರಿಯುತ್ತವೆ. ಕೃಷಿಯೇ ಪ್ರಧಾನ ಕಸಬು. ಚಮರೀಮೃಗ ಇಲ್ಲಿನ ಮುಖ್ಯ ಪ್ರಾಣಿ. ರತ್ನಗಂಬಳಿಗಳ ನೆಯ್ಗೆ ಮುಂತಾದ ಹಲವು ಬಗೆಯ ಕುಶಲಕಲೆಗಳಲ್ಲಿ ಟಿಬೆಟನ್ನರು ಪರಿಣತರು.

ಪ್ರಪಂಚದಲ್ಲೆಲ್ಲ ಅತ್ಯಂತ ಉನ್ನತ ದೇಶ ಟಿಬೆಟ್. ಇದನ್ನು ಭೂಮಿಯ ಛಾವಣಿ ಎನ್ನುವುದುಂಟು.

ಟಿಬೆಟ್‌ನಲ್ಲಿ ಆಸರೆ ಕಳೆದುಕೊಂಡ ಅನೇಕ ನಿರಾಶ್ರಿತರಿಗೆ ಭಾರತ ಆಶ್ರಯವಿತ್ತಿದೆ.

ಟಿ. ಸಿದ್ದಲಿಂಗಯ್ಯ

ಮೊದಲು ತುರಂಗವಾಸ ಅನುಭವಿಸಿದ್ದು ಅಮೆರಿಕದಲ್ಲಿ. ಮುಂದೆ ಬ್ರಿಟಿಷರ ಆಳ್ವಿಕೆಗೆ ಇದಿರಾದ ಹೋರಾಟದಲ್ಲಿ ಅವರು ನಡೆಸಿದ ಹಲವಾರು ಜೈಲು ಯಾತ್ರೆಗಳಿಗೆ ಅದೇ ನಾಂದಿ.

ಟಿ. ಸಿದ್ದಲಿಂಗಯ್ಯನವರು ಭಾರತ ಸ್ವಾತಂತ್ರ್ಯ ಪಡೆಯುವುದಕ್ಕೆ ಹದಿನೈದು ವರ್ಷಗಳಿಗೆ ಮುಂಚೆ, 1932ರಲ್ಲಿ, ಒಬ್ಬ ಪ್ರವಾಸಿಯಾಗಿ ಅಮೆರಿಕಕ್ಕೆ ಹೋದಾಗ, ಅವರನ್ನೂ ಅವರ ಗೆಳೆಯ ಶಾಂಪೂರ್ ರಾಮಚಂದ್ರಯ್ಯನವರನ್ನೂ ಅಮೆರಿಕನರು ಬಂಧಿಸಿ ಕ್ಯಾಲಿಫೋರ್ನಿಯಾ ಬಳಿ ಜೈಲಿನಲ್ಲಿಟ್ಟರು. ಅಮೆರಿಕದ ವಲಸೆ ಕಾನೂನಿನಂತೆ ಅವರಿಬ್ಬರನ್ನೂ ಬಂಧಿಸಲಾಗಿತ್ತು. ಬ್ರಿಟಿಷ್ ರಾಯಭಾರ ಕಚೇರಿಗಾಗಲೀ ಮೈಸೂರಿನ ದಿವಾನರಿಗಾಗಲೀ ಮಾಡಿಕೊಂಡ ಮನವಿಯಿಂದ ಪ್ರಯೋಜನವಾಗದೆ, ಒಂದೂವರೆ ತಿಂಗಳ ಕಾಲ ಅಮೆರಿಕದಲ್ಲಿ ಜೈಲುವಾಸ ಅನುಭವಿಸಿದರು. ಅವಮಾನಕರ ಗುಲಾಮಗಿರಿಯಿಂದ ತಮ್ಮ ನಾಡನ್ನು ಬಿಡುಗಡೆ ಮಾಡಲು ಶ್ರಮಿಸಬೇಕೆಂದು ಅಮೆರಿಕದಲ್ಲೇ ಸಿದ್ದಲಿಂಗಯ್ಯನವರು ನಿರ್ಧರಿಸಿದರು.

ಸಿದ್ದಲಿಂಗಯ್ಯನವರು [illegible]ರಲ್ಲಿ ದೊಡ್ಡಬಳ್ಳಾಪುರದಲ್ಲಿ ಹುಟ್ಟಿ [illegible] ಅಲ್ಲೇ ಕಲಿತರು. ಬೆಂಗಳೂರು ಮತ್ತು ಮೈಸೂರಿನಲ್ಲಿ ಹೈಸ್ಕೂಲು ಮತ್ತು ಬಿ.ಎ. ಶಿಕ್ಷಣ ಮುಗಿಸಿದರು. ಮುಂಬಯಿಯಲ್ಲಿ ಕಾನೂನುಶಾಸ್ತ್ರದಲ್ಲಿ ಪದವೀಧರರಾಗಿ 1924ರಿಂದ 1937ರ ವರೆಗೆ ಬೆಂಗಳೂರು, ದೊಡ್ಡಬಳ್ಳಾಪುರಗಳಲ್ಲಿ ವಕೀಲಿ ಮಾಡಿದರು.

ಸಿದ್ದಲಿಂಗಯ್ಯನವರ ಜೀವನಕ್ಕೆ ಒಂದು ಹೊಸ ತಿರುವು ಕೊಟ್ಟ ವರ್ಷ 1935. [illegible] ಮಹಾತ್ಮಾಗಾಂಧಿಯವರೊಡನಿದ್ದ ಸರದಾರ್ ಪಟೇಲರು ಸಾರ್ವಜನಿಕ ಸಭೆಯೊಂದರಲ್ಲಿ ಭಾಷಣ ಮಾಡಲು ದೊಡ್ಡಬಳ್ಳಾಪುರಕ್ಕೆ ಬಂದರು. ಆಗ ಸಿದ್ದಲಿಂಗಯ್ಯ ಕಾಂಗ್ರೆಸ್ ಪಕ್ಷ ಸೇರಿದರು. ಆ ವೇಳೆಗೆ ಕೆಲವರು ಆರಂಭಿಸಿದ್ದ ಮೈಸೂರು ಸಂಸ್ಥಾನ ಕಾಂಗ್ರೆಸ್ಸಿನ ಪಾರ್ಲಿಮೆಂಟರಿ ಮಂಡಲಿಯ ಅಧ್ಯಕ್ಷರಾದರು. 1937ರಲ್ಲಿ ಕಾಂಗ್ರೆಸ್ ಪ್ರಚಾರಕ್ಕಾಗಿ ಸಂಸ್ಥಾನದ ಅದ್ಭುತ ಪ್ರವಾಸ ಮಾಡಿ ಜನರನ್ನು [illegible]. ಇವರ ಈ ಕಾರ್ಯಕ್ರಮದ ಪರಿಣಾಮವಾಗಿ [illegible]



ಪ್ರತಿಭಟನೆ, ಸೇವೆ:
ಸಿದ್ದಲಿಂಗಯ್ಯ

1938ರ ಧ್ವಜಸತ್ಯಾಗ್ರಹ ಸಂದರ್ಭದಲ್ಲಿದ್ದ ಮಹಾತ್ಮಗಾಂಧಿಯವರು ಮಹಾರಾಜರಿಗೆ ಬರೆದಿದ್ದ ಪತ್ರವನ್ನು ಸಿದ್ಧಲಿಂಗಯ್ಯನವರು ಸ್ವತಃ ಮಹಾರಾಜರಿಗೆ ಮುಟ್ಟಿಸಿದರು. ಮೈಸೂರಿನಲ್ಲಿ ಜವಾಬ್ದಾರಿ ಸರಕಾರ ಸ್ಥಾಪನೆಯಾಗಬೇಕು ಎಂದು ಬಯಸಿ ಬರೆದ ಪತ್ರ ಅದು.

ರಾಷ್ಟ್ರೀಯ ಕಾಂಗ್ರೆಸ್ ಚಳುವಳಿಯಂತೆ ಮೈಸೂರು ಸಂಸ್ಥಾನದಲ್ಲೂ ಜವಾಬ್ದಾರಿ ಸರಕಾರಕ್ಕಾಗಿ ಕಾಂಗ್ರೆಸ್ ಆಶ್ರಯದಲ್ಲಿ ಚಳುವಳಿ ತೀವ್ರವಾಗಿ ನಡೆಸಲು ನಾಯಕರು ನಿರ್ಧರಿಸಿದರು. ಅದರ ಪರಿಣಾಮವಾಗಿ ಮದ್ದೂರು ಬಳಿ ಶಿವಪುರದಲ್ಲಿ 1938ರಲ್ಲಿ ಅಧಿವೇಶನ ನಡೆಯಿತು. ಕಾಂಗ್ರೆಸ್ ನಾಯಕರು ಬಂಧಿಸಲ್ಪಟ್ಟರು. ಆ ಅಧಿವೇಶನಕ್ಕೆ ಸಿದ್ಧಲಿಂಗಯ್ಯನವರೇ ಅಧ್ಯಕ್ಷರು. 1947ರಲ್ಲಿ ಮೈಸೂರು ಸಂಸ್ಥಾನ ಕಾಂಗ್ರೆಸ್ಸಿನ, 1952ರಲ್ಲಿ ಮೈಸೂರು ಪ್ರದೇಶ ಕಾಂಗ್ರೆಸ್ಸಿನ, ಅಧ್ಯಕ್ಷರಾದರು.

1950ರಲ್ಲಿ ಚಂಗಲರಾಯರೆಡ್ಡಿ ಮಂತ್ರಿಮಂಡಲದಲ್ಲಿ ಮಂತ್ರಿಯಾಗಿದ್ದು ಹತ್ತು ತಿಂಗಳ ಅನಂತರ ರಾಜೀನಾಮೆ ನೀಡಿದರು. ಮತ್ತೆ 1952ರಲ್ಲಿ ಕೆಂಗಲ್ ಹನುಮಂತಯ್ಯನವರ ಸಂಪುಟದ ಸದಸ್ಯರಾಗಿ ಒಂದು ವರ್ಷದ ಬಳಿಕ ರಾಜೀನಾಮೆ ನೀಡಿದರು.

1927ರಲ್ಲಿ ಪ್ರಥಮ ಬಾರಿಗೆ ಪ್ರಜಾಪ್ರತಿನಿಧಿ ಸಭೆ ಸದಸ್ಯರಾದ ಸಿದ್ಧಲಿಂಗಯ್ಯನವರು ಎಂಟು ಬಾರಿ ಶಾಸನಸಭೆಯಲ್ಲಿ ದೊಡ್ಡಬಳ್ಳಾಪುರ ಕ್ಷೇತ್ರವನ್ನು ಪ್ರತಿನಿಧಿಸಿದ್ದಾರೆ. 1947ರಿಂದ 50ರ ವರೆಗೆ ರಾಜ್ಯಾಂಗ ಸಭೆಯ ಸದಸ್ಯರಾಗಿ, 1967ರಿಂದ 70ರ ವರೆಗೆ ರಾಜ್ಯಸಭೆಯ ಸದಸ್ಯರಾಗಿ ಸೇವೆ ಸಲ್ಲಿಸಿದರು.

ಸ್ವಾತಂತ್ರ್ಯ ಹೋರಾಟದಲ್ಲಿ ಐದು ಬಾರಿ ಜೈಲಿಗೆ ಹೋಗಿ ಒಟ್ಟು ಮೂರು ವರ್ಷಕಾಲ ತುರಂಗವಾಸ ಅನುಭವಿಸಿದ್ದಾರೆ.

ರಾಜಕೀಯ ಕ್ಷೇತ್ರವಲ್ಲದೆ ಸಿದ್ಧಲಿಂಗಯ್ಯನವರು ವಿಶೇಷ ಆಸಕ್ತಿ ವಹಿಸಿದ ಇನ್ನೊಂದು ಕಾರ್ಯರಂಗ—ಭಾರತ ಸೇವಾದಳದ ಸಂಘಟನೆ. ಅದಕ್ಕೆ ಡಾ. ನಾ. ಸು. ಹರ್ಡೀಕರರಿಂದ ಸ್ಫೂರ್ತಿ ಪಡೆದರು.

ಟಿ. ಸುಬ್ರಹ್ಮಣ್ಯ

'ತಾಳಕೆರೆ ಪೈಲ್ವಾನ್' ಎಂದು ಅವರ ಅಭಿಮಾನಿಗಳು ಕರೆದದ್ದು ಅವರ ಮೈಕಟ್ಟನ್ನು ನೋಡಿಯಷ್ಟೇ ಅಲ್ಲ. ಅವರ ಮನೋದಾರ್ಢ್ಯವನ್ನೂ ಕಂಡು. ದಿವಂಗತ ತಾಳಕೆರೆ ಸುಬ್ರಹ್ಮಣ್ಯರವರು ಮುಕ್ಕಾಲು ಶತಮಾನದ ತಮ್ಮ ಜೀವಾವಧಿಯಲ್ಲಿ ಅರ್ಧ ಶತಮಾನ ಕಾಲ ಸೆಣಸಾಟ ನಡೆಸಿದರು. ಅವರ ಹೋರಾಟ ವಿದೇಶೀಯರಾದ ಬ್ರಿಟಿಷರ ವಿರುದ್ಧ ಎಷ್ಟಿತ್ತೋ ಅಷ್ಟೇ ತೀಕ್ಷ್ಣವಾಗಿ ಶಿಸ್ತು, ನೀತಿ ಇಲ್ಲದ ದೇಶೀಯರ ವಿರುದ್ಧವೂ ಆಗಿತ್ತು.



' ತಾಳಕೆರೆ ಪೈಲ್ವಾನ್' :

ಟಿ. ಸುಬ್ರಹ್ಮಣ್ಯರವರು ಕನ್ನಡದಲ್ಲೂ ಇಂಗ್ಲಿಷಿನಲ್ಲೂ ಮೇಲ್ಪಟ್ಟದ ವಾಗ್ಮಿಯಾಗಿದ್ದರು. ವಿಚಾರ ಪುಷ್ಟಿ ಇದ್ದ ಚುರುಕು ನಾಲಿಗೆ. ಹೀಗಾಗಿ ಅವರ ಮಾತಿಗೆ ಗೌರವ ; ಭಯ ಕೂಡ. ಅವರದು ಮಾತು - ಕ್ರಿಯೆ ಮಿಳನಗೊಂಡಿದ್ದ ಅಪರೂಪ ಬದುಕು.

ತುಮಕೂರು ಜಿಲ್ಲೆ ತುರುವೇಕೆರೆ ತಾಲೂಕು ತಾಳಕೆರೆಯಲ್ಲಿ 1898ರಲ್ಲಿ ಜನಿಸಿದ ಸುಬ್ರಹ್ಮಣ್ಯರವರು ತುರುವೇಕೆರೆಯಲ್ಲಿ ಆರಂಭದ ವಿದ್ಯಾಭ್ಯಾಸ ಮಾಡಿ, ಮುಂದೆ ಮಂಗಳೂರಿನ ಸೇಂಟ್ ಅಲೋಸಿಯಸ್ ಕಾಲೇಜಿನಲ್ಲಿ ಬಿ. ಎ. ಕಲಿತರು. ಮುಂಬಯಿಯಲ್ಲಿ ಎಲ್ ಎಲ್. ಬಿ. ಪಾಸ್ ಮಾಡಿದ ಅನಂತರ, 1922ರಲ್ಲಿ ತುಮಕೂರಿನಲ್ಲಿ ವಕೀಲವೃತ್ತಿ ಆರಂಭಿಸಿ, ಚಾಣಾಕ್ಷ ಕ್ರಿಮಿನಲ್ ವಕೀಲರೆಂದು ಹೆಸರು ಪಡೆದರು.

ವಿದ್ಯಾರ್ಥಿ ದೆಸೆಯಿಂದಲೇ ರಾಷ್ಟ್ರೀಯ ಹೋರಾಟದತ್ತ ಸೆಳೆಯಲ್ಪಟ್ಟಿದ್ದ ಸುಬ್ರಹ್ಮಣ್ಯರವರು ಚಳುವಳಿಯಲ್ಲಿ ಪೂರ್ಣ ಭಾಗಿಯಾಗಲು ಬಹಳ ಕಾಲ ಹಿಡಿಯಲಿಲ್ಲ. ಆ ವೇಳೆಗಾಗಲೇ ಕರ್ನಾಟಕ ಪ್ರಾಂತ ಕಾಂಗ್ರೆಸ್ಸಿನಲ್ಲಿ ಸಕ್ರಿಯ ಪಾತ್ರ ವಹಿಸುತ್ತಿದ್ದು 1928ರಲ್ಲಿ ಬಾಗಲಕೋಟೆಯಲ್ಲಿ ಪ್ರಥಮ ಬಾರಿಗೆ ಬಂಧಿಸಲ್ಪಟ್ಟರು. ಮುಂದೆ ಹಲವಾರು ಸತ್ಯಾಗ್ರಹಗಳಲ್ಲೂ ರಾಜಕೀಯ ಹೋರಾಟಗಳಲ್ಲೂ ಭಾಗವಹಿಸಿ, ಒಟ್ಟು ಆರು ವರ್ಷ ಕಾಲ ತುರಂಗವಾಸ ಅನುಭವಿಸಿದರು.

1942ರಲ್ಲಿ ಚನ್ನಪಟ್ಟಣದಲ್ಲಿ ನಡೆದ ಅಖಿಲ ಮೈಸೂರು ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷರಾದ ಸುಬ್ರಹ್ಮಣ್ಯರವರು 1945ರ ವರೆಗೆ ಅಖಿಲ ಮೈಸೂರು ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿದ್ದರು. ಮೈಸೂರು ರಾಜ್ಯದಲ್ಲಿ ಕಾಂಗ್ರೆಸ್ ಚಳುವಳಿಯನ್ನು ಕಟ್ಟಿ ಬೆಳೆಸಿದರು. 1947ರಲ್ಲಿ ಮೈಸೂರು ರಾಜ್ಯಾಂಗ ಸಭೆಯ ಅಧ್ಯಕ್ಷರಾದರು. 1954ರಲ್ಲಿ ವಿಧಾನ ಪರಿಷತ್ತಿನ ಸಭಾಪತಿಯಾದರು. 1958ರಲ್ಲಿ ಜತ್ತಿ ಮಂತ್ರಿಮಂಡಲದಲ್ಲಿ ಪೌರಾಡಳಿತ ಸಚಿವರಾದರು : ಜಾಡಮಾಲಿಗಳು ತಲೆಯ ಮೇಲೆ ಮಲ ಹೊರುವುದನ್ನು ತಪ್ಪಿಸಿ ಅವರಿಗೆ ಕೈಗಾಡಿಗಳನ್ನು ಕೊಡಬೇಕೆಂದು ಪುರಸಭೆಗಳಿಗೆ ಪ್ರಥಮ ಸೂಚನೆ ಹೋದದ್ದು ಅವರ ಕಾಲದಲ್ಲಿ. (ಮುಂದೆ 1973ರಲ್ಲಿ ಬಿ. ಬಸವಲಿಂಗಪ್ಪನವರು ಪೌರಾಡಳಿತ ಸಚಿವರಾಗಿದ್ದಾಗ ಈ ಗುರಿ ಸಾಧಿಸಲ್ಪಟ್ಟಿತು).

1962ರ ಚುನಾವಣೆ ಅನಂತರ ಕಾಂಗ್ರೆಸ್ ಪಕ್ಷದ ಇತರ ನಾಯಕರೊಂದಿಗೆ ಭಿನ್ನಾಭಿಪ್ರಾಯವುಂಟಾದಾಗ ಕಾಂಗ್ರೆಸ್ಸನ್ನು ಬಿಟ್ಟು ರಾಜ್ಯಮಟ್ಟದಲ್ಲಿ ಜನತಾಪಕ್ಷ ಕಟ್ಟುವುದರಲ್ಲೂ ಬೆಂಗಳೂರು ನಗರದಲ್ಲಿ ಪೌರಸಮಿತಿ ರಚಿಸುವುದರಲ್ಲೂ ಪ್ರಮುಖ ಪಾತ್ರ ವಹಿಸಿದರು.

ಕೇವಲ ರಾಜಕೀಯ ಕ್ಷೇತ್ರವಲ್ಲದೆ ರಚನಾತ್ಮಕ ಕಾರ್ಯಕ್ಷೇತ್ರದಲ್ಲೂ ಸುಬ್ರಹ್ಮಣ್ಯರವರು ಸೇವೆ ಸಲ್ಲಿಸಿದರು. ಹಿಂದಿ ಪ್ರಚಾರ, ಖಾದಿ ಪ್ರಚಾರದಲ್ಲಿ ಗಣನೀಯ ಪಾತ್ರ ವಹಿಸಿದರು.

ತಮ್ಮ ಕೊನೆಯ ದಿನಗಳಲ್ಲಿ ಆಧ್ಯಾತ್ಮಿಕ ವಿಚಾರಗಳಲ್ಲಿ ಮಗ್ನರಾದರು : ಸುಮಾರು ಮೂರು ತಿಂಗಳ ಕಾಲ ಹೃಷೀಕೇಶದಲ್ಲಿದ್ದು ಬೆಂಗಳೂರಿಗೆ ಹಿಂತಿರುಗಿದರು.

1971 ಡಿಸೆಂಬರ್ 4ರಂದು ಕಾರು ಅಪಘಾತದಲ್ಲಿ ಟಿ. ಸುಬ್ರಮಣ್ಯ ಮರಣಕ್ಕೀಡಾದರು.

ಟಿಸ್ಕೊ

ಭಾರತದ ಕಬ್ಬಿಣ ಮತ್ತು ಉಕ್ಕು ಕಾರಖಾನೆಗಳಲ್ಲಿ ಅತ್ಯಂತ ಹಳೆಯದು ತಾತಾ ಕಬ್ಬಿಣ ಮತ್ತು ಉಕ್ಕಿನ ಕಾರಖಾನೆ. ಈ ಕಾರಖಾನೆಯ ಒಡೆತನ ತಾತಾ ಅಯರ್ನ್ ಅಂಡ್ ಸ್ಟೀಲ್ ಕಂಪೆನಿಯದು. ಇದರ ಹ್ರಸ್ವನಾಮ ಟಿಸ್ಕೊ. ಇದು ಬಿಹಾರ್ ರಾಜ್ಯದ ಜೆಮ್‌ಷೆಡ್‌ಪುರದಲ್ಲಿದೆ.

ಇಲ್ಲಿ ಕಬ್ಬಿಣದ ಉತ್ಪಾದನೆ ಆರಂಭವಾದದ್ದು 1911ರಲ್ಲಿ. ಎರಡು ವರ್ಷದ ತರುವಾಯ ಇಲ್ಲಿ ಉಕ್ಕೂ ಉತ್ಪಾದಿಸಲ್ಪಟ್ಟಿತು. ಮೊದಲು

ಇವರ ಎರಡು ವಿಸ್ತರಣಾ ಯೋಜನೆಗಳು ಉತ್ಪಾದನೆ ಹೆಚ್ಚಿಸುವಲ್ಲಿ ನೆರವಾದುವು. ಎರಡನೆಯ ವಿಸ್ತರಣಾ ಯೋಜನೆಗೆ ಅಮೆರಿಕದ ಕೈಸರ್ ಎಂಜನಿಯರಿಂಗ್ ಕಾರ್ಪೊರೇಷನ್ ಸಹಕಾರ ನೀಡಿತು.

ಇಲ್ಲಿ ವಿವಿಧ ಸಿದ್ಧ ಹಾಗೂ ಅರೆಸಿದ್ಧ ಉಕ್ಕಿನ ವಸ್ತುಗಳು ತಯಾರಾಗುತ್ತವೆ. ಬ್ಲೂಮ್, ಬಿಲೆಟ್, ಟಿನ್ ಬಾರ್, ರೇಲ್, ಸ್ಟ್ರಕ್ಚರಲ್ಸ್, ಪ್ಲೇಟ್ ಮತ್ತು ಶೀಟ್ ಇಲ್ಲಿ ಸಿದ್ಧವಾಗುವ ಉಕ್ಕಿನ ವಸ್ತುಗಳು.

ಫೆರೋ ಮ್ಯಾಂಗನೀಸ್ ಫ್ಯಾಕ್ಟರಿ, ಫೆರೋಸಲ್ಫೇಟ್ ಪ್ಲಾಂಟ್ ಮತ್ತು ಕಿಟ್ಟದಿಂದ ಕಬ್ಬಿಣದ ಚೂರುಗಳನ್ನು ತೆಗೆಯುವ ಯಂತ್ರಸ್ಥಾವರಗಳನ್ನು ಟಿಸ್ಕೊ ಸ್ಥಾಪಿಸಿ ನಡೆಸುತ್ತಿದೆ. ರೈಲ್ವೆ ಎಂಜಿನುಗಳನ್ನು ನಿರ್ಮಿಸುವ ಕಾರಖಾನೆಯೂ ಉಂಟು.

ಟಿಸ್ಕೊ ಉತ್ಪಾದನಾ ಸಾಮರ್ಥ್ಯ 20 ಲಕ್ಷ ಟನ್. ಇದು 5ನೆಯ ಪಂಚವಾರ್ಷಿಕ ಯೋಜನೆಯಲ್ಲಿ 45 ಲಕ್ಷ ಟನ್ ಆಗುತ್ತದೆ.

ಟುಡೆಲದ ಬೆಂಜಮಿನ್

ಕಿಷ್ ದ್ವೀಪ, ಪರ್ಷಿಯಾ ಖಾರಿಯಲ್ಲಿದೆ. 12ನೆಯ ಶತಮಾನದಲ್ಲಿ ಭಾರತದ ವರ್ತಕರು ಕಿಷ್ ದ್ವೀಪದೊಡನೆ ವ್ಯಾಪಾರ ನಡೆಸುತ್ತಿದ್ದರು.

—ಈ ಅಂಶ ಪೂರ್ವ ದೇಶಗಳನ್ನು ಸುತ್ತಿ ಬಂದ ಮೊದಲನೆಯ ಯುರೋಪ್ಯ ಪ್ರವಾಸಿ ಬೆಂಜಮಿನನ ಬರೆಹದಿಂದ ತಿಳಿದುಬರುತ್ತದೆ.

ಬೆಂಜಮಿನ್ ಜನಿಸಿದ್ದು ಸ್ಪೇನಿನ ಟುಡೆಲದಲ್ಲಿ. ಈತ ಯೆಹೂದಿ. 1159–73ರ ವರೆಗೆ ಪ್ರವಾಸ ನಡೆಸಿದ. ಫ್ರಾನ್ಸ್, ಇಟಲಿ, ಗ್ರೀಸ್, ಪ್ಯಾಲೆಸ್ಟೈನ್, ಪರ್ಷಿಯದ ಮೂಲಕ ಚೀನ ತಲಪಿದ. ಅರೇಬಿಯ, ಈಜಿಪ್ಟ್, ಸಿಸಿಲಿಗಳನ್ನು ದಾಟಿ ಸ್ಪೇನ್ ಸೇರಿದ. ಹೀಬ್ರೂ ಭಾಷೆಯಲ್ಲಿ ಆತ ಬರೆದ ಪ್ರವಾಸ ಕಥನ 'ಇಟಿನರರಿ' ಪ್ರಕಟವಾದದ್ದು 1543ರಲ್ಲಿ.

ಟೆಲ್ಕೊ

ರೈಲ್ವೆ ಲೋಕೊಮೋಟಿವ್‌ಗಳು, ಅವಕ್ಕೆ ಬೇಕಾದ ಬಾಯ್ಲರ್‌ಗಳು, ಡೀಸೆಲ್ ಟ್ರಕ್, ಬಸ್ಸುಗಳಿಗೆ ಬೇಕಾದ ಅಡಿಗಟ್ಟು ಮುಂತಾದ ಸಾಮಗ್ರಿಗಳನ್ನು ತಯಾರಿಸುವ ಕೈಗಾರಿಕಾ ಸಂಸ್ಥೆ ಟೆಲ್ಕೊ (ಟಾಟಾ ಎಂಜಿನಿಯರಿಂಗ್ ಅಂಡ್ ಲೋಕೊಮೋಟಿವ್ ಕಂಪೆನಿ). ಸ್ಥಾಪನೆ 1945ರಲ್ಲಿ. ಇದು ಜಮ್‌ಷೆಡ್‌ಪುರದಲ್ಲಿದೆ.

ಬೇರೆ ಕಂಪೆನಿಗಳ ಸಹಕಾರದೊಡನೆ ಈ ಕೈಗಾರಿಕಾ ಸಂಸ್ಥೆ ಇನ್ನೂ ಕೆಲವು ಭಾರೀ ಸಾಮಗ್ರಿಗಳನ್ನು ತಯಾರಿಸುತ್ತದೆ. ಉಕ್ಕಿನ ಜಟಿಲ ಏರಕ ಪದಾರ್ಥಗಳು, ಎಂಜಿನಿಯರಿಂಗ್ ಉದ್ದೇಶಗಳಿಗೆ ಬೇಕಾದ ದೊಡ್ಡ ಪ್ರಮಾಣದ ಸಾಮಗ್ರಿಗಳು, ಡೀಸೆಲ್ ವಾಹನಗಳಿಗೆ ಬೇಕಾದ ಉತ್ತಮ ಕಬ್ಬಿಣ, ಮಿಶ್ರಲೋಹದ ಏರಕ ಪದಾರ್ಥಗಳು—ಇಂಥವು. ಈ ಉದ್ಯಮಕ್ಕೆ ಬೇಕಾಗುವ ಹಲವಾರು ತಯಾರಿಕಾ ಘಟಕಗಳಿಗೆ ಕೂಡ ಟೆಲ್ಕೊ ಸಹಾಯ ನೀಡುತ್ತದೆ. ಒಳ್ಳೆಯ ಗುಣಮಟ್ಟದ ಯಂತ್ರಭಾಗಗಳನ್ನು ನಮ್ಮ ರಾಷ್ಟ್ರದಲ್ಲಿ ತಯಾರಿಸಲು ಅನುವು ಮಾಡಿಕೊಡಬೇಕೆಂಬುದು ಇವರ ಉದ್ದೇಶ. ಕೈಗಾರಿಕಾ ಸಂಸ್ಥೆಗಳಿಗೆ ಬೇಕಾಗುವ ವಿಶೇಷ [illegible] ಪ್ರಮಾಣದ 'ಸಿಲಿಂಡರ್' ಎಂಜಿನ್‌ಗಳ ವಿನ್ಯಾಸವನ್ನು ಈ ಸಂಸ್ಥೆ ತಾನೇ ರಚಿಸಿ ತಯಾರಿಸುತ್ತದೆ. ನೆಲವನ್ನು ಕೊರೆಯುವ ಯಂತ್ರಗಳೂ ಟೆಲ್ಕೊದಲ್ಲಿ ತಯಾರಾಗುತ್ತವೆ. ಕಾಗದದ ಪಲ್ಪ್ ಹಾಗೂ ಕಾಗದದ ತಯಾರಿಕೆಗೆ ಬೇಕಾದ ವಿವಿಧ ಯಂತ್ರಗಳನ್ನು ತಯಾರಿಸಲು ಈ ಸಂಸ್ಥೆ ಕೈಹಾಕಿದೆ.

ಟೇಸಿಯಸ್

"ಅವರ ನ್ಯಾಯಪಕ್ಷಪಾತ, ರಾಜಭಕ್ತಿ, ಸಾವಿನ ಬಗೆಗೆ ತಿರಸ್ಕಾರ—ಈ ಗುಣಗಳು ಮೆಚ್ಚುವಂಥವು. ಅವರಿಗೆ ತಲೆನೋವು, ಹಲ್ಲುನೋವು, ಕಣ್ಣುಬೇನೆಗಳೇ ಇಲ್ಲ. ನೂರೈವತ್ತು ವರ್ಷ ಬದುಕುತ್ತಾರೆ."

—ಇದು ಭಾರತೀಯರ ಬಗೆಗೆ ಪ್ರಾಚೀನ ಗ್ರೀಕ್ ಬರೆಹಗಾರ ಟೇಸಿಯಸ್‌ನ ಅಭಿಪ್ರಾಯ!

ಧರ್ಮಬೋಧಕರ ಮನೆತನದಲ್ಲಿ ಜನಿಸಿ ವೈದ್ಯವೃತ್ತಿ ಅವಲಂಬಿಸಿದ್ದ ಟೇಸಿಯಸ್ ಕ್ರಿ. ಪೂ. 415ರಿಂದ 398ರ ತನಕ ಪರ್ಷಿಯ ರಾಜನ ಆಸ್ಥಾನ ವೈದ್ಯನಾಗಿದ್ದ. ಇವನು ಭಾರತಕ್ಕೆ ಬಂದಿರಲಿಲ್ಲ. ಭಾರತವನ್ನು ಕುರಿತ ಇವನ 'ಇಂಡಿಕಾ'ದ ರಚನೆಗೆ ಇತರರ ಹೇಳಿಕೆಗಳೇ ಆಧಾರ.

"ಇಂಡಿಯಾದ ಮಧ್ಯಭಾಗದಲ್ಲಿ ಗಣಿಗಳಲ್ಲಿ ಯಥೇಚ್ಛ ಬೆಳ್ಳಿ ಸಿಗುತ್ತದೆ.....ಎತ್ತರದ ಪರ್ವತ ಶಿಖರಗಳಲ್ಲಿ ಭಯಂಕರ ಹಕ್ಕಿಗಳು ವಾಸಿಸುವ ಕಡೆಗಳಲ್ಲಿ ಚಿನ್ನದ ತುಂಡುಗಳಿರುತ್ತವೆ......ಜನರು ಗುಂಪಾಗಿ ರಾತ್ರಿ ಹೊತ್ತಿನಲ್ಲಿ ಹೋಗಿ ಚಿನ್ನವನ್ನು ಸಂಗ್ರಹಿಸಿ ತರುತ್ತಾರೆ."

"ಇಂಡಿಯಾದ ಈಚಲ ಮರದ ಗಾತ್ರ ಬ್ಯಾಬಿಲೋನಿಯದ ಈಚಲ ಮರಕ್ಕಿಂತ ಮೂರುಪಾಲು ದೊಡ್ಡದು... ನಾಯಿಗಳು ಸಿಂಹದೊಡನೆ ಹೋರಾಡಬಲ್ಲುವು".

"ಇಂಡಿಯಾದಲ್ಲಿ ಒಂದು ಜಾತಿಯ ಅಪೂರ್ವ ಮರಗಳಿಂದ ಜಿಗುಟು ದ್ರವರೂಪದಲ್ಲಿ ದೊರಕುವ ಒಂದು ಸುಗಂಧ ದ್ರವ್ಯವನ್ನು ಪರ್ಷಿಯದ ರಾಜನಿಗೆ ಬಹುಮಾನವಾಗಿ ಕಳುಹಿಸಲಾಗಿತ್ತು. ಅದರ ಸುವಾಸನೆ ವರ್ಣನಾತೀತ. ಇಂಡಿಯಾದ ಬೆಣ್ಣೆ ಮತ್ತು ಮದ್ಯ ಅತ್ಯಂತ ರುಚಿಕರ".

—ಇವು ಟೇಸಿಯಸನ ಬರೆಹದಿಂದ ಉಲ್ಲೇಖಗಳು.

ಟೇಸಿಯಸ್‌ನ ಗ್ರಂಥಗಳು ಸಿಗುವುದಿಲ್ಲ. ಅವುಗಳಿಂದ ಇತರರು ಸಂಗ್ರಹಿಸಿದ ಈ ಅಂಶಗಳು ಮಾತ್ರ ದೊರೆತಿವೆ. ಅವನ ಬರೆವಣಿಗೆಯಲ್ಲಿ ಸತ್ಯಾಂಶಗಳಿಗಿಂತ ವೈಪರೀತ್ಯಗಳೇ ಹೆಚ್ಚು. ಅವನು ಹೇಳಿರುವ ಕೆಲವು ವಿಷಯಗಳು ಪುರಾಣ ಪ್ರಸಂಗಗಳ ರೂಪಾಂತರಗಳಂತೆ ಕಾಣುತ್ತವೆ. ಅಂಥ ಕಲ್ಪನೆಗಳನ್ನು ಸತ್ಯಸಂಗತಿಗಳೆಂದು ಅವನು ಭಾವಿಸಿರಬಹುದು.

ಡಯೋಡೋರಸ್ ಸಿಕ್ಯುಲಸ್

ಕ್ರಿ.ಪೂ. 1ನೆಯ ಶತಮಾನದ ಸಿಸಿಲಿಯ ಡಯೋಡೋರಸ್ ಸಿಕ್ಯುಲಸ್ ಯೂರೋಪ್, ಏಷ್ಯಾಗಳನ್ನು ಕಂಡಿದ್ದ ಪ್ರವಾಸಿ. ಅವನು ಬರೆದ 'ಬಿಬ್ಲಿಯೋಥೆಕಾ ಹಿಸ್ಟಾರಿಕ' ಜಾಗತಿಕ ಇತಿಹಾಸ. ಅದರಲ್ಲಿ ಭಾರತದ ಮೇಲೆ ಅಲೆಗ್ಸಾಂಡರ್ ದಂಡಯಾತ್ರೆ ಮತ್ತು ಅನಂತರದ ಕೆಲವು ವಿಷಯಗಳ ನಿರೂಪಣೆ ಇದೆ.

"ಇಂಡಿಯಾ ವಿಶಾಲ ಮತ್ತು ಜನಭರಿತ ದೇಶವೆಂದು ಹೇಳಲಾಗಿದೆ.... ದೇಶದಲ್ಲಿ ಅನೇಕ ರಾಜ್ಯಗಳಿವೆ..." ಎಂದು ಸಿಕ್ಯುಲಸ್ ಬರೆದಿದ್ದಾನೆ.

ಅಲೆಗ್ಸಾಂಡರನ ಕಾಲಾನಂತರ ನಡೆದ ಒಂದು [illegible] ಭಾರತದ [illegible] ಅದನ್ನು [illegible] ಹೀಗೆ [illegible]

"[illegible] ಕೊನೆಗೆ [illegible]

ಜ್ವಾಲೆ ಅನ್ನುವುದು ಕೊನೆಯುತ್ತಿದ್ದಾಗಲೂ ಆಕೆ ಬಂದವರನ್ನೆಲ್ಲ : ಗಂಭೀರಳಾಗಿಯೇ ಇದ್ದಳು... ಕೆಲವರು ಹೋಗಿದರು... ಕೆಲವರು ಕಣ್ಣೀರಿಟ್ಟರು ...ಗ್ರೀಸಿನಲ್ಲಿ ಎಂದೂ ನಡೆಯದ ಪ್ರಸಂಗ ಇದು..."

ಡಾಂಗೆ

ನೋಡಿ : ಎಸ್. ಎ. ಡಾಂಗೆ

ಡಾರ್ಜೀಲಿಂಗ್

'ಗಿರಿಧಾಮಗಳ ರಾಣಿ' ಎಂದು ಡಾರ್ಜೀಲಿಂಗನ್ನು ಬಣ್ಣಿಸುತ್ತಾರೆ. ಪಶ್ಚಿಮ ಬಂಗಾಳಕ್ಕೆ ಸೇರಿದ ಹಿಮಾಲಯದ ತಪ್ಪಲು ಬೆಟ್ಟಗಳಲ್ಲಿರುವ ಈ ಗಿರಿಧಾಮ ಒಂದು ಬೆಡಗಿನ ತಾಣ. ನಿಚ್ಚಳವಾದ ಹಗಲಿನಲ್ಲಿ ಇಲ್ಲಿಂದ ಹಿಮಾಲಯದ ಕಾಂಚನಗಂಗಾ ಶಿಖರವನ್ನು ಕಾಣಬಹುದು. ಕೆಲವು ಬಾರಿ ಎವರೆಸ್ಟ್ ಶಿಖರ ಕೂಡ ಕಾಣಿಸುವುದುಂಟು.



'ಗಿರಿಧಾಮಗಳ ರಾಣಿ'

ಡಾರ್ಜೀಲಿಂಗ್ ಪ್ರದೇಶದ ಚಹ ತೋಟಗಳು ಸುಪ್ರಸಿದ್ಧ. ಇಲ್ಲಿಂದ ಉತ್ತರಕ್ಕೆ ಹಿಮಾಲಯ ಶ್ರೇಣಿಗಳು ಮಾಲಿಕೆಗಳಂತೆ ಒಂದಾದ ಮೇಲೆ ಒಂದುಎದ್ದು ನಿಂತಿವೆ. ಕೆಳಗೆ ರಣಜಿತ್ ನದಿಯ ಪಾತ್ರ. ಸುತ್ತಲೂ ತೋಟಗಳು, ಅರಣ್ಯಗಳು. ಸುಮಾರು 90 ಕ್ಕೂ ಹೆಚ್ಚಿನ ಬಗೆಯ ಪ್ರಾಣಿಗಳೂ 550 ಬಗೆಯ ಪಕ್ಷಿಗಳೂ ಡಾರ್ಜೀಲಿಂಗಿನ ವಿಹಾರತಾಣಗಳ ಆಕರ್ಷಣೆಯನ್ನು ಹೆಚ್ಚಿಸಿವೆ. ಪಕ್ಷಿವೀಕ್ಷಣೆಗೆ ಇದೊಂದು ಒಳ್ಳೆಯ ಸ್ಥಳ. 1865ರಲ್ಲಿ ಸ್ಥಾಪಿಸಲ್ಪಟ್ಟ ಲಾಯ್ಡ್ ಸಸ್ಯೋದ್ಯಾನ ಇಲ್ಲಿದೆ.

ಸಿಕ್ಕಿಂ ಹಿಮಾಲಯ ಶ್ರೇಣಿಯ ಒಂದು ಬದಿಯಲ್ಲಿ ಡಾರ್ಜೀಲಿಂಗ್ ಇದೆ. 1835ರಲ್ಲಿ ಇದನ್ನು ಸಿಕ್ಕಿಂ ರಾಜನಿಂದ ಕೊಂಡುಕೊಳ್ಳಲಾಯಿತು. ಇದರ ಬಳಿ ಎರಡು ದಂಡು ಪ್ರದೇಶಗಳನ್ನು ಬ್ರಿಟಿಷರು ಕಟ್ಟಿದರು.

ಇಲ್ಲಿರುವ ಬಹುಪಾಲು ಜನ ನೇಪಾಳಿ ಹಾಗೂ ಭೂತಾನಿಯರು. ಮುಖ್ಯ ಉದ್ಯಮ ಚಹಾ ಸೊಪ್ಪಿನ ಸಂಸ್ಕರಣೆ. ಭತ್ತ, ಜೋಳ, ಏಲಕ್ಕಿ, ಕಿತ್ತಳೆ ಬೆಳೆಯುತ್ತವೆ. ಪದರ ಹಲಗೆ, ಅಡುಗೆ ಮನೆ ಉಪಕರಣಗಳ ಕೈಗಾರಿಕೆಗಳಿವೆ.

ಚಿಕ್ಕ ರೈಲು ಡಾರ್ಜೀಲಿಂಗಿನ ಬಳಿ 5 ಮೈಲು ದೂರದಲ್ಲಿರುವ ಸಿಲಿಗುರಿಯಿಂದ ಹೊರಡುತ್ತದೆ. ಇದು ಓಡುವ 50 ಮೈಲು ಮಾರ್ಗ ಮೋಟರು ರಸ್ತೆಯ ಪಕ್ಕದಲ್ಲೇ ಇದೆ. ಒಂದೊಂದು ಬಾರಿ ಅಂಗಡಿಗಳು, ಉಪಾಹಾರ ಗೃಹಗಳ ಸಾಲುಗಳ ನಡುವೆ ಸಾಗುವ ಈ ರೈಲು ಮಾರ್ಗದ ಪ್ರಯಾಣ ಒಂದು ಹೊಸ ಅನುಭವವೆನಿಸುತ್ತದೆ. ಡಾರ್ಜೀಲಿಂಗ್‌ನ ಇನ್ನೊಂದು ನೂತನ ಆಕರ್ಷಣೆ ಹೊರಜುಮಾರ್ಗ ಅಥವಾ ರೋಪ್‌ವೇ. ಈ ಎಂಟು ಕಿ.ಮೀ. ಉದ್ದದ ಹೊರಜುಮಾರ್ಗ ವಿಶ್ವದಲ್ಲೇ ಅತಿ ದೀರ್ಘವಾದದ್ದು. ಕಾದು ಪರ್ವತಗಳ ನಡುವೆ, ಭವ್ಯ ಕಾಂಚನಗಂಗಾ ಮತ್ತಿತರ ಹಿಮಶಿಖರಗಳ ಹಿನ್ನೆಲೆಯಲ್ಲಿ ಹಾಯುವ ಈ ಮಾರ್ಗ ನೋಟಕರ ಕಣ್ಣುಗಳನ್ನು ತಣಿಸುತ್ತದೆ. ಇದು ಪ್ರವಾಸೋದ್ಯಮ ಹಾಗೂ ವ್ಯಾಪಾರಾಭಿವೃದ್ಧಿ ಎರಡನ್ನೂ ಸಾಧಿಸುವ ಮಾರ್ಗ.

ಕಲ್ಕತ್ತೆಯಿಂದ ಡಾರ್ಜೀಲಿಂಗಿಗೆ 300 ಮೈಲಿ ದೂರ. ಈ ಗಿರಿಧಾಮ 7,000 ಅಡಿಗೂ ಹೆಚ್ಚು ಎತ್ತರದಲ್ಲಿದೆ. ಇಲ್ಲಿನ ಜನಸಂಖ್ಯೆ 42,873.

ಡಿ. ಆರ್. ಗಾಡ್‌ಗೀಳ

ಧನಂಜಯ ರಾಮಚಂದ್ರ ಗಾಡ್‌ಗೀಳರು ಭಾರತದ ಪ್ರಮುಖ ಅರ್ಥಶಾಸ್ತ್ರಜ್ಞರಲ್ಲಿ ಒಬ್ಬರಾಗಿದ್ದರು.

ಜನನ 1901ರ ಏಪ್ರಿಲ್ 10ರಲ್ಲಿ. ನಾಗಪುರ, ಲಂಡನ್, ಕೇಂಬ್ರಿಜ್‌ಗಳಲ್ಲಿ ವಿದ್ಯಾಭ್ಯಾಸ. ಅನಂತರ, ಕೊನೆಯ ವರೆಗೆ, ಒಂದಲ್ಲ ಒಂದು ಉನ್ನತ ಸ್ಥಾನದಲ್ಲಿದ್ದು ದಕ್ಷತೆಯಿಂದ ದುಡಿದರು. ಗೋಖಲೆ ರಾಜಕೀಯ ಹಾಗೂ ಆರ್ಥಿಕ ಸಂಸ್ಥೆಯ ನಿರ್ದೇಶಕರಾಗಿದ್ದರು (1930–66) ; ಭಾರತ ಸರಕಾರದ ಕೃಷಿ ಹಣಕಾಸಿನ ಉಪಸಮಿತಿಯ ಅಧ್ಯಕ್ಷರಾಗಿದ್ದರು. ರಾಷ್ಟ್ರೀಯ ವೇತನಾ ಸಮಿತಿ, ವಿಶ್ವಸಂಸ್ಥೆಯ ಹಿಂದುಳಿದ ದೇಶಗಳ ಅಭಿವೃದ್ಧಿ ಸಂಘ, ಶಾಂತಿಯುತ ಬಾಂಧವ್ಯಕ್ಕಾಗಿ ಸಂಘಟಿಸಲ್ಪಟ್ಟ ಅಂತರ ರಾಷ್ಟ್ರೀಯ ಸಂಸ್ಥೆಯ ಕಾರ್ಯಕಾರೀ ಸಮಿತಿ ಮುಂತಾದುವುಗಳ ಸದಸ್ಯರಾಗಿ ಸೇವೆ ಸಲ್ಲಿಸಿದರು.



ಅರ್ಥಸಮಸ್ಯೆ : ಗಾಡ್‌ಗೀಳ

ರಾಷ್ಟ್ರ ಹಾಗೂ ರಾಜ್ಯಮಟ್ಟಗಳ ಹಣಕಾಸು ವಹಿವಾಟು ವ್ಯವಸ್ಥೆಯ ಹಲವಾರು ಸಂಸ್ಥೆಗಳಲ್ಲಿ ಇವರು ಕೆಲಸ ಮಾಡಿದರು. ಪುಣೆ ವಿಶ್ವವಿದ್ಯಾನಿಲಯದ ವೈಸ್‌ಛಾನ್ಸಲರ್ ಆಗಿಯೂ (1966–67) ಯೋಜನಾ ಆಯೋಗದ ಉಪಾಧ್ಯಕ್ಷರಾಗಿಯೂ (1967–71) ಇದ್ದರು. ನಾಲ್ಕನೆಯ ಪಂಚವಾರ್ಷಿಕ ಯೋಜನೆಯನ್ನು ರೂಪಿಸುವುದರಲ್ಲಿ ಮುಖ್ಯ ಪಾತ್ರ ವಹಿಸಿದರು.

ಯೋಜನಾ ಆಯೋಗದ ಹುದ್ದೆಯ ಬಳಿಕ ದೆಹಲಿಯಿಂದ ಮಹಾರಾಷ್ಟ್ರಕ್ಕೆ ಹಿಂದಿರುಗುತ್ತಿದ್ದಾಗ, 1971 ಮೇ ತಿಂಗಳಲ್ಲಿ ರೈಲುಗಾಡಿಯಲ್ಲಿ ಹೃದಯಾಘಾತಕ್ಕೆ ತುತ್ತಾಗಿ ಡಿ. ಆರ್. ಗಾಡ್‌ಗೀಳರು ನಿಧನರಾದರು.

ಇವರು ಭಾರತವನ್ನು ಇದಿರಿಸುತ್ತಿರುವ ವಿವಿಧ ಆರ್ಥಿಕ ಸಮಸ್ಯೆಗಳ ಬಗೆಗೆ 24 ಪುಸ್ತಕಗಳನ್ನು ಬರೆದಿದ್ದಾರೆ.

ಡಿ. ಎನ್. ವಾಡಿಯಾ

ಭೂವಿಜ್ಞಾನದಲ್ಲಿ ರಾಷ್ಟ್ರೀಯ ಪ್ರಾಧ್ಯಾಪಕರೆಂದು 1962ರಲ್ಲಿ ನೇಮಕಗೊಂಡ ಡಿ. ಎನ್. ವಾಡಿಯಾ ಆ ಹೊತ್ತಿಗಾಗಲೇ ಭೂವಿಜ್ಞಾನದ ರಂಗದಲ್ಲಿ ಅನೇಕ ಅಂತರರಾಷ್ಟ್ರೀಯ ಪ್ರಶಸ್ತಿಗಳಿಗೆ ಪಾತ್ರರಾಗಿದ್ದರು. ಭಾರತ ಸರಕಾರ ಅವರಿಗೆ ಪದ್ಮಭೂಷಣ ಪ್ರಶಸ್ತಿ ನೀಡಿತ್ತು.

[illegible] ಡಿ. ಎನ್. ವಾಡಿಯಾ [illegible]

[illegible] 1883 [illegible] ಕೆಲಸ ಮಾಡಿದರು. 1939–44 ಅವಧಿಯಲ್ಲಿ ಸಿಂಹಳ ಸರಕಾರಕ್ಕೆ ಖನಿಜ ವಿಚಾರದ ಸಲಹೆಗಾರರಾಗಿ, 1945ರ ಬಳಿಕ ಭಾರತ ಸರಕಾರಕ್ಕೆ ಭೂವಿಜ್ಞಾನದ ಸಲಹೆಗಾರರಾಗಿ ಸೇವೆ ಸಲ್ಲಿಸಿದರು.

ವಾಡಿಯಾ ಭೂವಿಜ್ಞಾನವನ್ನು ಕುರಿತು [illegible] ದ್ದಾರೆ. ಪರಮಾಣುಶಕ್ತಿ ವಿಭಾಗದಲ್ಲೂ [illegible] ಕೆಲಸ ಮಾಡಿದ್ದಾರೆ. ಇವರು ರಾಜ್ಯಸಭೆಯ ಸದಸ್ಯರೂ ಆಗಿದ್ದರು.

1964 ಜೂನ್ 15ರಂದು ವಾಡಿಯಾ ನಿಧನರಾದರು.

ಡಿ. ಎಸ್. ಕೊಠಾರಿ

[illegible] ಡಿ. ಎಸ್. ಕೊಠಾರಿ. ಈ ಆಧಾರದ ಮೇಲೆ ಶ್ವೇತ ಕುಬ್ಜ ನಕ್ಷತ್ರಗಳ ಬಗೆಗೆ ಅವರು ಒಂದು ಸಿದ್ಧಾಂತ ರೂಪಿಸಿದರು. ಅತಿ ಒತ್ತಡದಲ್ಲಿ ಅಯಾನೀಕೃತ ವಸ್ತುವಿನ ಗುಣಲಕ್ಷಣಗಳ ಬಗೆಗೆ ಪರಿಶೀಲನೆಗಳನ್ನೂ ನಡೆಸಿದರು.



ಒತ್ತಡದಿಂದ ಪರಮಾಣು ಅಯಾನೀಕರಣ : ಕೊಠಾರಿ

ದೌಲತ್ ಸಿಂಗ್ ಕೊಠಾರಿಯವರು 1906 ಜೂಲೈ 6 ರಂದು ಜನಿಸಿದರು. ಅಲಹಾಬಾದಿನಲ್ಲಿ ಎಂ. ಎಸ್‌ಸಿ. ಇಂಗ್ಲೆಂಡಿನ ಕೇಂಬ್ರಿಜ್‌ನಲ್ಲಿ ಪಿಎಚ್.ಡಿ. ಪದವಿ ಗಳಿಸಿದರು. 1934ರಿಂದ 14 ವರ್ಷ ಕಾಲ ದೆಹಲಿ ವಿಶ್ವವಿದ್ಯಾನಿಲಯದಲ್ಲಿ ಭೌತವಿಜ್ಞಾನ ಪ್ರಾಧ್ಯಾಪಕರಾಗಿದ್ದರು. [illegible] 1948–61 ಅವಧಿಯಲ್ಲಿ ಭಾರತದ ರಕ್ಷಣಾ ಖಾತೆಯ ವೈಜ್ಞಾನಿಕ ಸಲಹೆಗಾರರಾಗಿದ್ದರು. 1961–73 ವರೆಗೆ ವಿಶ್ವವಿದ್ಯಾನಿಲಯ ಧನ ಸಹಾಯ ಆಯೋಗದ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದರು. [illegible] ಭಾರತ ಸರಕಾರ ಇವರಿಗೆ 1962ರಲ್ಲಿ ಪದ್ಮಭೂಷಣ ಹಾಗೂ 1973ರಲ್ಲಿ ಪದ್ಮವಿಭೂಷಣ ಪ್ರಶಸ್ತಿಗಳನ್ನು ನೀಡಿ ಪುರಸ್ಕರಿಸಿತು.

[illegible] 1963ರಲ್ಲಿ [illegible] ಆಗಿದ್ದರು. ಅವರ 'ನ್ಯೂಕ್ಲಿಯರ್ [illegible]' ಪ್ರಖ್ಯಾತ ಕೃತಿ. ಭಾರತೀಯ ಮತ್ತು ವಿದೇಶೀ ವಿಜ್ಞಾನ [illegible] ಪ್ರಕಟವಾಗಿವೆ. 1973ರಲ್ಲಿ ಇಂಡಿಯನ್ ನ್ಯಾಷನಲ್ ಸೈನ್ಸ್ ಕಾಂಗ್ರೆಸ್ಸಿನ ಅಧ್ಯಕ್ಷರಾದರು.

ಡಿ. ಕೆ. ಕರ್ವೆ

ಸಮಾಜ ಸುಧಾರಣೆಗೆ [illegible] ಧೋಂಡೊ ಕೇಶವ ಕರ್ವೆ.

ಅವಿರತ ಸಮಾಜ ಸೇವೆಗಾಗಿ ಭಾರತ ಸರಕಾರ 1955ರಲ್ಲಿ ಅವರಿಗೆ ಪದ್ಮವಿಭೂಷಣ ಪ್ರಶಸ್ತಿ ನೀಡಿ ಗೌರವಿಸಿತು. ಅವರ 100ನೆಯ ವರ್ಷದಲ್ಲಿ ಭಾರತರತ್ನ ಪ್ರಶಸ್ತಿ ಕೊಟ್ಟು ಪುರಸ್ಕರಿಸಿತು.

1896ರಲ್ಲಿ ಅನಾಥ ಬಾಲಿಕಾಶ್ರಮ ಸಂಘ, 1907ರಲ್ಲಿ ಪುಣೆಯ ಮಹಿಳಾ ವಿದ್ಯಾಲಯ, 1916ರಲ್ಲಿ ಮಹಾರಾಷ್ಟ್ರ ಪ್ರಾಥಮಿಕ ಶಿಕ್ಷಣ ಸಂಸ್ಥೆ, 1944ರಲ್ಲಿ ಸಮತಾ ಸಂಘ, 1948ರಲ್ಲಿ ಜಾತಿ ನಿರ್ಮೂಲನಾ ಸಂಸ್ಥೆ —ಹೀಗೆ ಕರ್ವೆಯವರು ಸ್ಥಾಪಿಸಿದ ಸಂಸ್ಥೆಗಳು ಅನೇಕ.

ಕರ್ವೆಯವರು 1858 ಏಪ್ರಿಲ್ 18 ರಂದು ರತ್ನಾಗಿರಿ ಜಿಲ್ಲೆಯ ಶೇರವಲಿಯಲ್ಲಿ ಜನಿಸಿದರು. ತಂದೆ ಕೇಶವ ಕರ್ವೆ. ಮುರೂಡ್‌ನಲ್ಲಿ ಧೋಂಡೊ ಕರ್ವೆಯವರ ಪ್ರಾಥಮಿಕ ವಿದ್ಯಾಭ್ಯಾಸ. ಬಡತನದ ಜೀವನ. 1885 ರಲ್ಲಿ ಮುಂಬಯಿಯಲ್ಲಿ ಬಿ. ಎ. ಪರೀಕ್ಷೆಯಲ್ಲಿ ತೇರ್ಗಡೆಯಾದರು. ಎಂ. ಎ. ವಿದ್ಯಾಭ್ಯಾಸ ಅಪೂರ್ಣವಾಯಿತು. ಪುಣೆಯ ಫರ್ಗುಸನ್ ಕಾಲೇಜಿನಲ್ಲಿ ಅಧ್ಯಾಪಕರಾದರು. ಇಲ್ಲಿ 23ವರ್ಷಕಾಲ ಕೆಲಸಮಾಡಿದ ಮೇಲೆ, ಅವರ ಬಾಳಿನ ದಿಕ್ಕು ಬದಲಾಯಿತು; ಸಮಾಜಸೇವೆ, ಸುಧಾರಣೆಗಳಿಗೆ ಮನಸ್ಸು ಕೊಟ್ಟರು.

ಸಮಾಜಸೇವೆ : ಕರ್ವೆ

[illegible] ಗಳಿಂದ ಕರ್ವೆ ಪ್ರಭಾವಿತರಾಗಿದ್ದರು. [illegible] ಹಾಗೆಯೇ [illegible] 1893ರಲ್ಲಿ [illegible] ವಿವಾಹವಾದರು. ವಿಧವಾ ಪುನರ್ವಿವಾಹ ಸಂಸ್ಥೆಯನ್ನು ಆರಂಭಿಸಿದರು.

ಇವರು ಸ್ಥಾಪಿಸಿದ ಮಹಿಳಾ ವಿದ್ಯಾಪೀಠ, ಮುಂದೆ ಸ್ತ್ರೀ ಶಿಕ್ಷಣದ ದೊಡ್ಡ ಕೇಂದ್ರವಾಯಿತು. 1927ರಲ್ಲಿ ಅವರು ವಿದೇಶಗಳಲ್ಲಿ ಪ್ರವಾಸಮಾಡಿ, ಈ ಸಂಸ್ಥೆಗಾಗಿ ಹಣ ಕೂಡಿಸಿದರು.

ಕರ್ವೆಯವರು ತಮ್ಮ ಆತ್ಮಚರಿತ್ರೆ ಬರೆದಿದ್ದಾರೆ. ಅವರು 1962 ನವೆಂಬರ್ 9ರಂದು ತಮ್ಮ 105ನೆಯ ವಯಸ್ಸಿನಲ್ಲಿ ಕಾಲವಾದರು.

ಡಿಗ್ಬಾಯ್

1890ರಲ್ಲಿ ಅಸ್ಸಾಂನಲ್ಲಿ ರೈಲು ದಾರಿ ನಿರ್ಮಾಣವಾಗುತ್ತಿತ್ತು. ಕಾಡಿನಿಂದ ಮರದ ದಿಮ್ಮಿಗಳನ್ನು ಎತ್ತಿಕೊಂಡು ಬರುವುದಕ್ಕಾಗಿ ಉಪಯೋಗಿಸುತ್ತಿದ್ದ ಒಂದು ಆನೆ ರೈಲು ಮಾರ್ಗದ ಸಮೀಪದಲ್ಲಿದ್ದ ಜೌಗುಪ್ರದೇಶದಲ್ಲಿ ಹಾದು ಬಂದಾಗ, ಅದರ ಕಾಲುಗಳ ಮೇಲೆ ಕಪ್ಪುಬಣ್ಣದ ಜಿಡ್ಡು ಪದಾರ್ಥ ಮೆತ್ತಿದ್ದು ಕಂಡುಬಂತು. ಆನೆಯ ಕಾಲಿಗೆ ಇದು ಎಲ್ಲಿ ಹತ್ತಿತು ಎಂಬುದನ್ನು ಪತ್ತೆಮಾಡಲು, ಆನೆಯ ಹೆಜ್ಜೆಯನ್ನನುಸರಿಸಿ ಹಿಂದೆ ಹೋದರು. ಒಂದು ಗುಂಡಿಯ ನೀರಿನ ಮೇಲೆ ಖನಿಜ ತೈಲ ಹರಡಿರುವುದು ಕಂಡುಬಂತು. ಇದರಿಂದ ಈ ಪ್ರದೇಶದಲ್ಲಿ – ಡಿಗ್ಬಾಯ್‌ನಲ್ಲಿ— ಖನಿಜ ತೈಲ ನಿಕ್ಷೇಪ ಇರಬಹುದೆಂದು ಊಹಿಸಿ, ಎಣ್ಣೆಬಾವಿ ತೋಡಲು ನಿಶ್ಚಯಿಸಲಾಯಿತು. ಈ ಕಾರ್ಯವನ್ನು ನಡೆಸುವುದಕ್ಕಾಗಿ, 1899ರಲ್ಲಿ ಅಸ್ಸಾಂ ಆಯಿಲ್ ಕಂಪೆನಿ ಸ್ಥಾಪಿತವಾಯಿತು.

ಡಿಗ್ಬಾಯ್ ಪ್ರದೇಶದಲ್ಲಿ 662 ಅಡಿಯಷ್ಟು ಆಳದ ಬಾವಿ ತೋಡಿದಾಗ ಎಣ್ಣೆ ದೊರೆಯಿತು. ಭಾರತದಲ್ಲಿ ತೋಡಿದ ಮೊದಲನೆಯ ಎಣ್ಣೆಯ ಬಾವಿ ಇದು. ಇಲ್ಲಿಂದ ತೆಗೆದ ಕಚ್ಚಾ ಎಣ್ಣೆಯ ಸಂಸ್ಕರಣಕ್ಕಾಗಿ ಒಂದು ಸಣ್ಣ ತೈಲ ಶುದ್ಧೀಕರಣಾಗಾರವನ್ನು 1901ರಲ್ಲಿ ಸ್ಥಾಪಿಸಲಾಯಿತು.

1920ರಲ್ಲಿ ಅಸ್ಸಾಂ ಆಯಿಲ್ ಕಂಪೆನಿಯ ಹೊಣೆಯನ್ನು ಬರ್ಮಾ ಆಯಿಲ್ ಕಂಪೆನಿ ವಹಿಸಿಕೊಂಡಿತು.

ಡಿಗ್ಬಾಯ್‌ನಲ್ಲಿ ತೈಲ ಉದ್ಯಮ ಆರಂಭವಾದ ಮೇಲೆ ಸುಮಾರು 60 ವರ್ಷಗಳ ಕಾಲ ಖನಿಜ ತೈಲ ಉದ್ಯಮ ಕೇಂದ್ರ ಅದೊಂದೇ ಆಗಿತ್ತು. ಅನಂತರ ಗುಜರಾತ್ ರಾಜ್ಯದ ಅಂಕಲೇಶ್ವರ, ಕ್ಯಾಂಬೆ ಮುಂತಾದೆಡೆಗಳಲ್ಲೂ ಅಸ್ಸಾಂನ ಶಿವಸಾಗರ ಪ್ರದೇಶದಲ್ಲೂ ಖನಿಜ ತೈಲ ನಿಕ್ಷೇಪಗಳನ್ನು ಗುರುತಿಸಿ, ಅವುಗಳಿಂದ ಎಣ್ಣೆ ತೆಗೆಯುವ ಕೆಲಸ ನಡೆಯಿತು.

ಡಿಗ್ಬಾಯಿಯ ಜನಸಂಖ್ಯೆ 16,538.

ನೋಡಿ : ಅಂಕಲೇಶ್ವರ ; ಕ್ಯಾಂಬೆ

ಡಿ. ಸಂಜೀವಯ್ಯ

ಆಂಧ್ರಪ್ರದೇಶದ ಪ್ರಮುಖ ರಾಜಕಾರಣಿ, ಡಿ. ಸಂಜೀವಯ್ಯ. 1972ರಲ್ಲಿ ನಿಧನರಾದಾಗ ಇವರು ರಾಷ್ಟ್ರೀಯ ಕಾಂಗ್ರೆಸ್‌ನ ಅಧ್ಯಕ್ಷರಾಗಿದ್ದರು.

ದಾಮೋದರಂ ಸಂಜೀವಯ್ಯನವರು ಹುಟ್ಟಿದ್ದು 1921 ಫೆಬ್ರುವರಿಯಲ್ಲಿ. ಆಂಧ್ರಪ್ರದೇಶದ ಅನಂತಪುರದಲ್ಲಿ ಬಿ.ಎ., ಮದರಾಸಿನಲ್ಲಿ ಬಿ. ಎಲ್. ಪದವಿ ಗಳಿಸಿದರು. 1950ರಲ್ಲಿ ವಕೀಲರಾದರು. ಆಮೇಲೆ ರಾಜಕೀಯ ರಂಗವನ್ನು ಪ್ರವೇಶಿಸಿ 1952ರಲ್ಲಿ ಕರ್ನೂಲಿನಿಂದ ಅಭ್ಯರ್ಥಿಯಾಗಿ ಮದರಾಸು ವಿಧಾನಸಭೆಗೆ ಆರಿಸಿಬಂದರು ; ಅಲ್ಲಿನ ಮಂತ್ರಿಮಂಡಲದಲ್ಲಿ ಸಹಕಾರ ಮತ್ತು ವಸತಿ ಶಾಖೆಯ ಸಚಿವರಾದರು. 1951–60ರಲ್ಲಿ ಆಂಧ್ರಪ್ರದೇಶದ ಮಂತ್ರಿಮಂಡಲದಲ್ಲಿ ಸ್ಥಳೀಯ ಆಡಳಿತ ಹಾಗೂ ಕಾರ್ಮಿಕ ಶಾಖೆಯ ಹೊಣೆ ಹೊತ್ತರು. ಅನಂತರ, 1960–62ರಲ್ಲಿ ಆ ರಾಜ್ಯದ ಮುಖ್ಯಮಂತ್ರಿಯೂ ಆದರು.

ಇವರು 1962–64ರಲ್ಲಿ ಅವಿಭಾಜ್ಯ ರಾಷ್ಟ್ರೀಯ ಕಾಂಗ್ರೆಸ್ಸಿನ ಅಧ್ಯಕ್ಷರಾದರು. 1971ರಲ್ಲಿ ಇಂದಿರಾಗಾಂಧೀ ನಾಯಕತ್ವದ ಕಾಂಗ್ರೆಸ್ಸಿನ ಅಧ್ಯಕ್ಷರಾದರು. ಕೇಂದ್ರ ಮಂತ್ರಿಮಂಡಲದಲ್ಲಿ ಒಟ್ಟು ಮೂರು ವರ್ಷ ಕಾಲ ವಿವಿಧ ಶಾಖೆಗಳ ಸಚಿವರಾಗಿ ಕಾರ್ಯ ನಿರ್ವಹಿಸಿದರು.

ಇವರು ತೆಲುಗುಭಾಷೆಯಲ್ಲಿ ಕವನಗಳನ್ನು ಬರೆದಿದ್ದಾರೆ.

ಡಿ. ಸಂಜೀವಯ್ಯ ಅವರು 1972 ಮೇ 7ರಂದು ನಿಧನರಾದರು.



ಆಡಳಿತ, ಸಂಘಟನೆ :
ಸಂಜೀವಯ್ಯ

ಡಿ. ಸಿ. ಪಾವಟೆ

ಪ್ರತಿಭಾವಂತ ಗಣಿತಜ್ಞರಾಗಿ, ಶಿಕ್ಷಕವೃತ್ತಿಯಲ್ಲಿದ್ದು, ವೈಸ್ ಛಾನ್ಸ್‌ಲರ್ ಸ್ಥಾನವನ್ನು ಅಲಂಕರಿಸಿ, ಅನಂತರ ರಾಜ್ಯಪಾಲ ಪದವಿಯನ್ನು ನಿರ್ವಹಿಸಿದವರು ದಾದಾಸಾಹೇಬ ಚಿಂತಾಮಣಿ ಪಾವಟೆ. 1899 ಆಗಸ್ಟ್ 2ರಂದು ಬೆಳಗಾಂವಿಗೆ ಸೇರಿದ ಮದುದಾಪುರದಲ್ಲಿ ಇವರ ಜನನ. ಕೊಲ್ಹಾಪುರ, ಧಾರವಾಡ, ಮುಂಬಯಿ, ಕೇಂಬ್ರಿಜ್‌ಗಳಲ್ಲಿ ವಿದ್ಯಾಭ್ಯಾಸ. ಅಧ್ಯಯನದ ವಿಶೇಷ ವಿಷಯ —ಗಣಿತ. ಕೇಂಬ್ರಿಜ್‌ನಲ್ಲಿ ಟ್ರೈಪಾಸ್ ಗಳಿಸಿದರು. ರ್‍ಯಾಂಗ್ಲರ್ ಆದರು.

ಭಾರತಕ್ಕೆ ಮರಳಿ, ಬನಾರಸ್ ಹಿಂದೂ ವಿಶ್ವವಿದ್ಯಾನಿಲಯದಲ್ಲಿ 1928 ರಿಂದ 30ರ ವರೆಗೆ ಪ್ರಾಧ್ಯಾಪಕರಾಗಿದ್ದರು. ಅನಂತರ ಮುಂಬಯಿ ಪ್ರಾಂತದ ಶಿಕ್ಷಣ ಶಾಖೆಯನ್ನು ಸೇರಿದರು. ಅಲ್ಲಿ 1947–54 ಅವಧಿಯಲ್ಲಿ ಸಾರ್ವಜನಿಕ ಶಿಕ್ಷಣದ ಡೈರೆಕ್ಟರ್ ಆಗಿ ಕೆಲಸ ಮಾಡಿದರು. 1954ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ವೈಸ್‌ಛಾನ್ಸ್‌ಲರ್ ಆದರು. 1955–56ರಲ್ಲಿ ಅಧಿಕೃತ ಭಾಷಾ ಆಯೋಗದಲ್ಲಿ ಸದಸ್ಯರಾಗಿದ್ದರು. ಜಿನೀವಾದಲ್ಲಿ 1956ರಲ್ಲಿ ನಡೆದ ಅಂತರರಾಷ್ಟ್ರೀಯ ಶೈಕ್ಷಣಿಕ ಸಮ್ಮೇಳನಕ್ಕೆ ಭಾರತೀಯ ಪ್ರತಿನಿಧಿಗಳ ನಾಯಕರಾಗಿದ್ದರು. ಅನಂತರ ವಿಶ್ವವಿದ್ಯಾನಿಲಯ ಸಹಾಯಧನ ಆಯೋಗದ ಸದಸ್ಯತ್ವ. 1954–67 ವರೆಗೆ ಪಾವಟೆಯವರು ಕರ್ನಾಟಕ ವಿಶ್ವವಿದ್ಯಾನಿಲಯದ ವೈಸ್ ಛಾನ್ಸ್‌ಲರ್‌ಆಗಿ ಪ್ರಶಂಸನೀಯ ಸೇವೆ ಸಲ್ಲಿಸಿದರು. 1967 ಅಕ್ಟೋಬರ್ ತಿಂಗಳಿನಿಂದ ಪಂಜಾಬಿನ ಗವರ್ನರ್ ಆಗಿದ್ದು, 1973ರಲ್ಲಿ ನಿವೃತ್ತರಾದರು.

'ಆಧುನಿಕ ಕಾಲೇಜು ಕಲನಗಣಿತ', 'ಆಧುನಿಕ ಕಾಲೇಜು ಬೀಜಗಣಿತ'



ರ್‍ಯಾಂಗ್ಲರ್ :
ದಾದಾ ಸಾಹೇಬ

ಮುಂತಾದ ಗಣಿತ ಗ್ರಂಥಗಳನ್ನೂ 'ಶೈಕ್ಷಣಿಕ ಆಡಳಿತಗಾರನೊಬ್ಬನ ನೆನಪುಗಳು' ಎಂಬ ಕೃತಿಯನ್ನೂ ಪಾವಟೆ ರಚಿಸಿದ್ದಾರೆ.

1967ರಲ್ಲಿ ಭಾರತ ಸರಕಾರ ಅವರಿಗೆ ಪದ್ಮಭೂಷಣ ಪ್ರಶಸ್ತಿ ನೀಡಿತು.

ಡೂಪ್ಲೆ

ಭಾರತದಲ್ಲಿ ಫ್ರೆಂಚ್ ಸಾಮ್ರಾಜ್ಯ ವಿಸ್ತರಣೆಯ ಉದ್ದೇಶದಿಂದ ಬಂದು ಅದನ್ನು ಸಾಧಿಸಲಾರದೆ ಹೋದವನು ಡೂಪ್ಲೆ. ಇವನ ಕಾಲದಲ್ಲೇ ಫ್ರೆಂಚ್ ಆಧಿಪತ್ಯ ಭಾರತದಲ್ಲಿ ತನ್ನ ಉಚ್ಛ್ರಾಯ, ಪತನಗಳನ್ನು ಕಂಡಿತು.



ವಿಫಲ ಯತ್ನ : ಡೂಪ್ಲೆ

ಡೂಪ್ಲೆ ಜನಿಸಿದ್ದು ಫ್ರಾನ್ಸಿನಲ್ಲಿ, 1696ರಲ್ಲಿ. ದೊಡ್ಡ ಅಧಿಕಾರದಲ್ಲಿದ್ದ ಇವನ ತಂದೆ ಪಾಂಡಿಚೆರಿಯಲ್ಲಿದ್ದ ಫ್ರೆಂಚ್ ಆಡಳಿತದಲ್ಲಿ ಮಗನಿಗೆ ಕೆಲಸ ಕೊಡಿಸಿದ. ಡೂಪ್ಲೆ ತನ್ನ ಪ್ರತಿಭೆ ಸಾಹಸಗಳಿಂದ ಭಾರತದ ಎಲ್ಲ ಫ್ರೆಂಚ್ ಆಡಳಿತಗಳಿಗೆ 1742ರಲ್ಲಿ ಗವರ್ನರ್ ಜನರಲ್ ಆದ.

ಡೂಪ್ಲೆ ಬ್ರಿಟಿಷರ ವಶದಲ್ಲಿದ್ದ ಮದರಾಸನ್ನು ವಶಪಡಿಸಿಕೊಂಡ. ಆದರೆ ಫ್ರೆಂಚರಿಗೂ ಬ್ರಿಟಿಷರಿಗೂ ಅನಂತರ ಏರ್ಪಟ್ಟ ಒಪ್ಪಂದದ ಮೇರೆಗೆ ಬ್ರಿಟಿಷರಿಗೆ ಮದರಾಸನ್ನು ಬಿಟ್ಟುಕೊಡಬೇಕಾಯಿತು.

ಅವನು ತನ್ನ ಗಮನವನ್ನು ದಕ್ಷಿಣ ಭಾರತದಲ್ಲಿಯೇ ಕೇಂದ್ರೀಕರಿಸಿದ. ಆದರೆ ಇಲ್ಲಿ ಈಸ್ಟ್ ಇಂಡಿಯಾ ಕಂಪನಿಯ ರಾಬರ್ಟ್ ಕ್ಲೈವನದು ಮೇಲುಗೈ ಆಯಿತು: ಡೂಪ್ಲೆಯ ಆಸೆಗಳನ್ನು ಮಣ್ಣುಗೂಡಿಸಿದ. ಕ್ಲೈವ್, ಬ್ರಿಟಿಷರ ಸಾಮ್ರಾಜ್ಯ ವಿಸ್ತರಣೆಗೆ ಹೊಸ ತಿರುವು ಕೊಟ್ಟ.

ಫ್ರೆಂಚ್ ಸರಕಾರ ಡೂಪ್ಲೆಯನ್ನು 1754ರಲ್ಲಿ ಹಿಂದಕ್ಕೆ ಕರೆಸಿಕೊಂಡಿತು.

ಕೊನೆಗಾಲವನ್ನು ತೀರಾ ಬಡತನದಲ್ಲಿ ಕಳೆದ ಡೂಪ್ಲೆ 1763ರಲ್ಲಿ ಸಾಮಾನ್ಯನೊಬ್ಬನಂತೆ ಕಣ್ಣುಮುಚ್ಚಿದ.

ಆನಂದ ರಂಗ ಪಿಳ್ಳೈ ಎಂಬಾತ ಡೂಪ್ಲೆಯ ಆಪ್ತಕಾರ್ಯದರ್ಶಿಯಾಗಿದ್ದ. ಅವನ ದಿನಚರಿಯಲ್ಲಿ ಡೂಪ್ಲೆಯ ವ್ಯಕ್ತಿತ್ವ ಮತ್ತು ಅವನ ಕಾಲದ ದಕ್ಷಿಣ ಭಾರತದ ಜನಜೀವನದ ಬಗೆಗೆ ಸ್ಪಷ್ಟ ವಿವರಗಳಿವೆ.

ಡೆಪ್ಯುಟಿ ಚೆನ್ನಬಸಪ್ಪ

19ನೆಯ ಶತಮಾನದಲ್ಲಿ ಸರಕಾರೀ ಹುದ್ದೆಯಲ್ಲಿದ್ದುಕೊಂಡೇ ನಾಡು ನುಡಿಗೆ ಸೇವೆ ಸಲ್ಲಿಸಿ ಪ್ರಖ್ಯಾತರಾದವರು ಡೆಪ್ಯುಟಿ ಚೆನ್ನಬಸಪ್ಪನವರು.

ಉತ್ತರ ಕರ್ನಾಟಕದಲ್ಲಿ—ವಿಶೇಷವಾಗಿ ಬೆಳಗಾವಿ, ಧಾರವಾಡ ಜಿಲ್ಲೆಗಳಲ್ಲಿ—ಕನ್ನಡದಲ್ಲಿ ಶಿಕ್ಷಣ ದೊರೆಯುವಂತೆ ಶ್ರಮಿಸಿ ಅವರು ಯಶಸ್ಸು ಗಳಿಸಿದರು.

ಅವರು ತಮ್ಮ ಇಪ್ಪತ್ತು ವರ್ಷಗಳ ಅಧಿಕಾರಾವಧಿಯಲ್ಲಿ ಹಳ್ಳಿಹಳ್ಳಿ ಎನ್ನದೆ ಎಲ್ಲ ಕಡೆಗೂ ಹೋಗಿ ಬಂದರು. ದುರವಸ್ಥೆಗೀಡಾಗಿದ್ದ ಶಿಕ್ಷಣರಂಗ ಚೇತರಿಸಿಕೊಳ್ಳುವಂತೆ ಮಾಡಿದರು. ಶಿಕ್ಷಕರಲ್ಲಿ ಉತ್ಸಾಹ ತುಂಬಿದರು. ಹೊಸ ಗನ್ನಡದ ಪುಣ್ಯಪುರುಷರಲ್ಲಿ ಒಬ್ಬರೆನಿಸಿದರು.



ಸೇವಾಜೀವನ : ಚೆನ್ನಬಸಪ್ಪ

ಶಿಕ್ಷಣ ರಂಗವನ್ನು ಅವರು ಸೇವೆಯ ಸಾಧನವಾಗಿ ಮಾಡಿಕೊಂಡಿದ್ದಂತೆ, ಸಮಾಜಸೇವೆಯನ್ನು ತಮ್ಮ ಜೀವದ ಹಿರಿಯ ಉದ್ದೇಶವಾಗಿಟ್ಟುಕೊಂಡಿದ್ದರು.

ಕೈತುಂಬ ಕೆಲಸವಿದ್ದರೂ ಕನ್ನಡದಲ್ಲಿ ಗ್ರಂಥಗಳನ್ನು ರಚಿಸಲು ಬಿಡುವು ಮಾಡಿಕೊಂಡರು. ಗಣಿತದ ಪಠ್ಯಪುಸ್ತಕಗಳನ್ನು ಬರೆದುದಲ್ಲದೆ, ಸಾಹಿತ್ಯ ಕೃತಿಗಳನ್ನೂ ರಚಿಸಿದರು. 'ನಗದವರನ್ನು ನಗಿಸುವ ಕಥೆ' ಮತ್ತು ಕನ್ನಡ 'ಮ್ಯಾಕ್‌ಬೆತ್' ಅವರ ರಚನೆಗಳು. ಅನೇಕ ವಿದ್ವಾಂಸರಿಗೆ ಕನ್ನಡ ಗ್ರಂಥಗಳನ್ನು ರಚಿಸಲು ನೆರವಾದರು.

ಧಾರವಾಡದಲ್ಲಿ 1824ರಲ್ಲಿ ಚೆನ್ನಬಸಪ್ಪನವರ ಜನನ. ಇವರು ಆರು ವರ್ಷದವರಿದ್ದಾಗ ತಂದೆ ಗತಿಸಿದರು. ಹೀಗಾಗಿ ಬಾಲ್ಯದ ದಿನಗಳು ಕಷ್ಟಮಯವಾಗಿದ್ದವು. ಶಿಕ್ಷಣದತ್ತ ಒಲವೂ ಕಡಿಮೆ. ಆಟದ ಚಸ್ಕು ಹತ್ತಿದ್ದರು. ಸಾಹಸ ಪ್ರವೃತ್ತಿಯೂ ಇತ್ತು. ತಾಯಿಯ ಕಣ್ಣೀರು ನೋಡಲಾರದೆ ಓದಿನತ್ತ ಲಕ್ಷ್ಯಗೊಟ್ಟರು. ಗಣಿತದಲ್ಲಿ ಗಟ್ಟಿಗನೆನಿಸಿದರು. ತಾಯಿಯ ಇಚ್ಛೆಗೆ ವಿರುದ್ಧವಾಗಿ, ನಡೆದುಕೊಂಡೇ ಪುಣೆಗೆ ಹೋಗಿ, ಇಂಗ್ಲಿಷ್ ಶಿಕ್ಷಣ ಪೂರೈಸಿದರು.

ಕುಶಾಗ್ರಮತಿ ಚೆನ್ನಬಸಪ್ಪ ಎಂಜನಿಯರಿಂಗ್ ಶಿಕ್ಷಣವನ್ನು ಪಡೆದು ಕೆಲ ಕಾಲ ಅಲ್ಲಿಯೇ ಅಧ್ಯಾಪಕರಾದರು. ಮುಂದೆ ಧಾರವಾಡಕ್ಕೆ ಅಂಚೆ ಶಾಖೆಯ ನೌಕರರಾಗಿ ಬಂದರು. ಅಲ್ಲಿ ಮನಸ್ಸು ನಿಲ್ಲಲಿಲ್ಲ. ಶಿಕ್ಷಣರಂಗ ಸೇರಿ ನಾರ್ಮಲ್ ಸ್ಕೂಲ್ ಮುಖ್ಯಾಧ್ಯಾಪಕರಾದರು. ಮುಂದೆ ಡೆಪ್ಯುಟಿ ಇನ್ಸ್‌ಸ್ಪೆಕ್ಟರ್ ಆದರು. ಆದರೆ ಅವರು 'ಸಾಹೇಬ'ರಾಗಲಿಲ್ಲ. ಶಿಕ್ಷಕರೊಂದಿಗೆ ಸೇರಿ ಅವರಿಗೆ ಪ್ರೋತ್ಸಾಹ ನೀಡುತ್ತಿದ್ದರು. ಅವರಲ್ಲಿ ಬೆರೆಯುತ್ತಿದ್ದರು. ಹೀಗಾಗಿ 'ಡೆಪ್ಯುಟಿ' ಎಂದೇ ಹೆಸರು ಪಡೆದುಕೊಂಡರು. ಅವರದು ಸರಳ ಜೀವನ, ನಡೆನುಡಿ. ಮುಖಸ್ತುತಿ ಅವರಿಗೆ ಸೇರುತ್ತಿರಲಿಲ್ಲ. 1881ರಲ್ಲಿ, ಸೇವಾಜೀವನದಲ್ಲಿದ್ದಾಗಲೇ, ಅವರು ಮರಣಹೊಂದಿದರು.

ಡೆಹ್ರಾ ಡೂನ್

[illegible]

[illegible] ದೇವಾಲಯ ಕಟ್ಟಿಸಿದ. ಅದರ ಸುತ್ತಲೂ ಡೂನ್ ಪಟ್ಟಣ ಬೆಳೆಯಿತು.



ಡೆಹ್ರ ಡೂನ್ ಅಂಗಡಿಬೀದಿ ಮತ್ತು ಡೆಹ್ರ ಡೂನಿನ ಗಡಿಯಾರ ಗೋಪುರ —ರತಿನ್‌ಮಿತ್ರ ಕೃತಿಗಳು

ಡೇರಿಯಸ್ ನಾಣ್ಯವನ್ನು ಚಲಾವಣೆಗೆ ತಂದ. ಅಳತೆ, ತೂಕಗಳನ್ನು ನಿಗದಿಮಾಡಿದ. ಇವನ ಆಡಳಿತದಲ್ಲಿ ಪರ್ಷಿಯ ಸಾಮ್ರಾಜ್ಯದಲ್ಲಿ ರಸ್ತೆ ಮತ್ತು ಸಮುದ್ರ ಮಾರ್ಗಗಳು ವೃದ್ಧಿ ಹೊಂದಿದುವು.

ಮುಂದೆ ಕ್ರಿ.ಪೂ. 330ರಲ್ಲಿ ಮೂರನೆಯ ಡೇರಿಯಸ್‌ನನ್ನು ಅರ್ಬೆಲಾದ ಬಳಿ ಗ್ರೀಕ್ ದೊರೆ ಅಲೆಗ್ಸಾಂಡರ್ ಸೋಲಿಸಿದ. ಇದಾದ ತರುವಾಯ ಪರ್ಷಿಯನರ ಆಧಿಪತ್ಯಕ್ಕೊಳಪಟ್ಟ ಭಾರತೀಯ ರಾಜ್ಯಗಳು ಅವರ ಕೈತಪ್ಪಿದುವು.

ಹೀಗೆ ರಾವ್‌ರಾಯಿಯನ್ನೇ ಈ ಪಟ್ಟಣದ ಸ್ಥಾಪಕ ಎನ್ನುವುದುಂಟು. ಅವನು ಕಟ್ಟಿಸಿದ ದೇವಾಲಯ ಈ ಪರಿಸರದಲ್ಲಿ ಐತಿಹಾಸಿಕ ಪ್ರಾಮುಖ್ಯ ಇರುವ ಏಕಮಾತ್ರ ಸ್ಥಳ. 1815ರಲ್ಲಿ ಡೆಹ್ರ ಡೂನ್ ಪ್ರದೇಶ ಬ್ರಿಟಿಷರ ಆಡಳಿತಕ್ಕೆ ಒಳಪಟ್ಟಿತು.

ಡೆಹ್ರ ಡೂನ್ ಒಂದು ಗಿರಿಧಾಮ; ಉತ್ತರ ಪ್ರದೇಶಕ್ಕೆ ಸೇರಿದೆ. 2,200 ಅಡಿ ಎತ್ತರದಲ್ಲಿದೆ. 1867ರಲ್ಲಿ ಇಲ್ಲಿ ಅರಣ್ಯ ರಕ್ಷಕ ಶಾಲೆ ಆರಂಭವಾಯಿತು. ಮುಂದೆ ಅರಣ್ಯ ಸಂಶೋಧನಾ ಸಂಸ್ಥೆ ಹಾಗೂ ಅರಣ್ಯ ವಿಷಯ ಕಾಲೇಜು ರೂಪುಗೊಂಡುವು. 1932ರಲ್ಲಿ ಮಿಲಿಟರಿ ಅಕಾಡೆಮಿ ಆರಂಭವಾಯಿತು. ಇದು ಈಗ ಭಾರತದ ರಾಷ್ಟ್ರೀಯ ಮಿಲಿಟರಿ ಅಕಾಡೆಮಿ ಆಗಿದೆ. ಇಲ್ಲಿ ರಕ್ಷಣಾದಳದ ಮೂರು ಶಾಖೆಗಳಿಗೂ ತರಬೇತಿ ನೀಡಲಾಗುತ್ತದೆ. ಪ್ರಸಿದ್ಧ ಡೂನ್ ಶಾಲೆ ಹಾಗೂ ಇನ್ನೂ ಹಲವಾರು ವಿದ್ಯಾಸಂಸ್ಥೆಗಳೂ ಇಲ್ಲಿ ವಸ್ತುಸಂಗ್ರಹಾಲಯಗಳೂ ಇವೆ. ಸರ್ವೆ ಆಫ್ ಇಂಡಿಯಾ ಹಾಗೂ ಭಾರತದ ಅರಣ್ಯ ಇಲಾಖೆಯ ಮುಖ್ಯ ಕಾರ್ಯಾಲಯಗಳು ಡೆಹ್ರ ಡೂನ್‌ನಲ್ಲಿವೆ.

ಪಟ್ಟಣದಲ್ಲಿ [illegible] ಎಂಬ ಎರಡು [illegible]. ಇವುಗಳ ಮಧ್ಯೆ ಯಮುನಾ ನದಿ ಹರಿಯುತ್ತದೆ.

ಇಲ್ಲಿನ ಜನಸಂಖ್ಯೆ 1,69,827.

ಡೇರಿಯಸ್

ಕ್ರಿಸ್ತ ಪೂರ್ವ ಆರನೇ ಶತಮಾನದಲ್ಲಿ ಪರ್ಷಿಯನ್ ಸಾಮ್ರಾಜ್ಯದಷ್ಟು ವಿಸ್ತಾರವಾದ ಸಾಮ್ರಾಜ್ಯ ಬೇರೊಂದು ಇರಲಿಲ್ಲ. ಪರ್ಷಿಯದ ಚಕ್ರವರ್ತಿಗಳಲ್ಲಿ ಪ್ರಸಿದ್ಧನಾದವನು ಮೊದಲನೆಯ ಡೇರಿಯಸ್.

ಇವನ ಜನನ ಸುಮಾರು ಕ್ರಿ. ಪೂ. 550. ಆಳ್ವಿಕೆ ಕ್ರಿ.ಪೂ. 522–486. [illegible] ಮಂಡಲ ಎಂದು ಗಣಿಸಲ್ಪಟ್ಟಿತು.

ಡೋಗ್ರೀ ಭಾಷೆ, ಸಾಹಿತ್ಯ

ಭಾರತದ ಇತರ ಭಾಷೆಗಳಿಗೆ ಹೋಲಿಸಿದರೆ, ಡೋಗ್ರೀ ಭಾಷೆಯದು ಇನ್ನೂ ಬಾಲ್ಯಾವಸ್ಥೆ. ಈ ಭಾಷೆಗೂ ಅದರ ಸಾಹಿತ್ಯಕ್ಕೂ ಪ್ರೋತ್ಸಾಹ ಕೊಡುವ ದೃಷ್ಟಿಯಿಂದ ಕೇಂದ್ರ ಸಾಹಿತ್ಯ ಅಕಾದೆಮಿ ಡೋಗ್ರೀಗೆ ಮನ್ನಣೆ ಇತ್ತಿದೆ.

ಪೂರ್ವ ಪಂಜಾಬ್, ಹಿಮಾಚಲ ಪ್ರದೇಶ ಮತ್ತು ಜಮ್ಮು ಕಾಶ್ಮೀರಗಳ ಕೆಲವು ಭಾಗಗಳ ಸುಮಾರು 10 ಲಕ್ಷ ಮಂದಿಯ ಮಾತೃಭಾಷೆ ಡೋಗ್ರೀ. ಈ ಭಾಷೆ ಹಿಂದಿಗೆ ಸಮೀಪ. ಇಪ್ಪತ್ತನೆಯ ಶತಮಾನದ ವರೆಗೆ ಇದರ ಸಾಹಿತ್ಯ ಲಿಖಿತರೂಪಕ್ಕೆ ಇಳಿದಿರಲಿಲ್ಲ.

ಡೋಗ್ರೀ ಭಾಷೆಯ ಜಾನಪದ ಸಾಹಿತ್ಯ ಸಮೃದ್ಧವಾಗಿದೆ. ಇದು ಅಲಿಖಿತ ಸಾಹಿತ್ಯ. ವೀರಕಥನ ಕಾವ್ಯಗಳು ಜಾನಪದದಲ್ಲಿ ಹೇರಳವಾಗಿವೆ.

ಡೋಗ್ರೀ ಭಾಷೆಗೆ ಟಾಕರಿ ಎಂಬ ಲಿಪಿ ಇತ್ತು. ಆದರೆ ಇದರ ಬಳಕೆ ಬಹು ವಿರಳ. ಸುಮಾರು ನೂರು ವರ್ಷಗಳ ಹಿಂದೆ ಮಹಾರಾಜಾ ರಣ್‌ಬೀರ್ ಸಿಂಗ್ ಎಂಬ ಡೋಗ್ರ ದೊರೆ ತನ್ನ ಆಸ್ಥಾನದ ವ್ಯವಹಾರಗಳನ್ನು ಡೋಗ್ರೀ ಭಾಷೆಯಲ್ಲಿ ಬರೆಯಲು ಪ್ರಯತ್ನಿಸಿದ; ಕಾನೂನು ಗ್ರಂಥಗಳ ಭಾಷಾಂತರಕ್ಕೆ ಯತ್ನಿಸಿದ.

ಸುಮಾರು 1932ರ ವೇಳೆಗೆ, ಸಂಸ್ಕೃತ ವಿದ್ವಾಂಸನೊಬ್ಬ ಭಗವದ್ಗೀತೆಯನ್ನು ಡೋಗ್ರೀಗೆ ಭಾಷಾಂತರಿಸಿದ. ಇದೇ ವೇಳೆಗೆ ಬೈಬಲ್ ಸಹ ಭಾಷಾಂತರಗೊಂಡಿತು. ಡೋಗ್ರೀ ಭಾಷೆ, ಸಾಹಿತ್ಯಗಳನ್ನು ಪ್ರಾಚೀನ, ಆಧುನಿಕ ಎಂದು ಎರಡು ವಿಭಾಗಗಳನ್ನಾಗಿ ಮಾಡಿದರೆ, 1940ರ ವರೆಗಿನ ಸಾಹಿತ್ಯ ಮೊದಲ ಗುಂಪಿಗೆ ಸೇರುತ್ತದೆ.

1940ರಿಂದೀಚೆಗೆ ಡೋಗ್ರೀ ಸಂಪೂರ್ಣವಾಗಿ ಹೊಸ ರಕ್ತ ಪಡೆದು ಪುನರ್ಜನ್ಮ ತಾಳಿತು ಎನ್ನಬಹುದು. ಡೋಗ್ರೀ ಮಾತೃಭಾಷೆಯಾಗಿದ್ದ, ಆದರೆ ಹಿಂದಿಯಲ್ಲಿ ಸಾಹಿತ್ಯ ರಚಿಸುತ್ತಿದ್ದ, ಕೆಲ ಯುವಕರು ಈ ಸಮಯದಲ್ಲಿ ದೇವನಾಗರಿ ಲಿಪಿಯಲ್ಲಿ ಡೋಗ್ರೀ ಸಾಹಿತ್ಯ ರಚನೆಗೆ ಕೈಹಾಕಿದರು. [illegible] ಡೋಗ್ರೀ ಸಾಹಿತ್ಯ ನಿಜವಾದ ಅರ್ಥದಲ್ಲಿ ಜನ್ಮ ತಾಳಿತು. ಇವರು ಡೋಗ್ರೀ ಸಂಸ್ಥೆಯೊಂದನ್ನು ಕಟ್ಟಿದರು. ಕವಿ

ಸಮ್ಮೇಳನಗಳನ್ನು ನಡೆಸಿ, ಕವನ ಸಂಗ್ರಹಗಳನ್ನು ಹೊರತಂದರು. 1945ರಲ್ಲಿ ಎರಡು ಕವನ ಸಂಗ್ರಹಗಳು, ಒಂದು ಕಥಾಸಂಕಲನ ಹೊರ ಬಿದ್ದು ಜನಪ್ರಿಯಂತೆ ಗಳಿಸಿದುವು. ಅನಂತರ 'ಡೋಗ್ರ ಮಂಡಲಿ'ಯೊಂದು ಪ್ರಾರಂಭವಾಯಿತು. 1945ರಿಂದ ಮೊದಲಾಗಿ ಈ ಎರಡು ಸಂಘಗಳು ಸುಮಾರು 50 ಕೃತಿಗಳನ್ನು ಪ್ರಕಟಿಸಿವೆ. ಇದೇ ಡೋಗ್ರೀ ಸಾಹಿತ್ಯದ ಪುಟ್ಟ ಭಂಡಾರ.

ಧರಮ್ ಚಂದ್ ಪ್ರಶಾಂತ್, ಲಲತ್ ಮೆಹತಾ, ಮದನ ಮೋಹನ್, ನರೇಂದ್ರ ಖಜೂರಿಯಾ ಪ್ರಮುಖ ಸಣ್ಣಕತೆಗಾರರು. ಪಾಟ್ಸ್ಪಿಕಲ ಹೆಸರಾಂತ ಕಾದಂಬರಿಗಾರರು.

ಡೋಗ್ರೀ ಕವಿಗಳಲ್ಲಿ [illegible] ರಾಮನಾಥ್ ಶಾಸ್ತ್ರಿ, [illegible], ಕಿಷನ್ ಶಮಾಲ್‌ಪುರಿ, ಪರಮಾನಂದ್, ಯಶಶರ್ಮ, ಗಂಗಾರಾಮ್, ಪದ್ಮಾ ಸಚ್‌ದೇವ್ ಮೊದಲಾದವರು ಪ್ರಮುಖರು. ತಮ್ಮ ತವರೂರಿನ ನಿಸರ್ಗ ಸೌಂದರ್ಯ, ಸಂಪ್ರದಾಯ ನಂಬಿಕೆಗಳನ್ನು ತನ್ನ ಜನರಿಗೆ ಹತ್ತಿರದ ನುಡಿಯಲ್ಲಿ ಚಿತ್ರಿಸಿರುವುದು ಈ ಸಾಹಿತ್ಯದ ಗಮನಾರ್ಹ ಅಂಶ. ಧಾರ್ಮಿಕ ನಂಬಿಕೆ, ನಡವಳಿಕೆಗಳ ಅಪ್ರಯೋಜಕತೆಯನ್ನು ಕೆಲವರು ವ್ಯಕ್ತಪಡಿಸಿದ್ದಾರೆ. ಸಮಕಾಲೀನ ಡೋಗ್ರೀ ಸಾಹಿತ್ಯ ಜೀವನಕ್ಕೆ ಹತ್ತಿರವಾದ ವಾಸ್ತವ ಸತ್ಯಗಳನ್ನು ಪ್ರತಿಬಿಂಬಿಸುತ್ತದೆ.

'ರಾಮಾಯಣ' ಪಂಚತಂತ್ರ ಕಥೆಗಳು, 'ಮೇಘದೂತ' ಮೊದಲಾದ ಕೃತಿಗಳು ಡೋಗ್ರೀಗೆ ಭಾಷಾಂತರಗೊಂಡಿವೆ. [illegible] 'ಗೀತಾಂಜಲಿ', [illegible] ಡೋಗ್ರೀಗೆ ಅನುವಾದವಾಗಿ, ಗದ್ಯ ಸಾಹಿತ್ಯದಲ್ಲಿ ಗಮನಾರ್ಹವೆನಿಸಿವೆ.

ಡೋಗ್ರೀ ಭಾಷೆಯಲ್ಲಿ ವ್ಯಾಕರಣ, [illegible] ಸ್ವತಂತ್ರ ಗದ್ಯ ಸಾಹಿತ್ಯ [illegible] ನಿಯತಕಾಲಿಕಗಳನ್ನು ಹೊರಡಿಸಲು ಪ್ರಯತ್ನಗಳು ನಡೆದಿವೆ (1973). ಜಮ್ಮುವಿನಲ್ಲಿ ಪ್ರಾಥಮಿಕ ಶಾಲೆಗಳಲ್ಲಿ ಡೋಗ್ರೀ ಕಡ್ಡಾಯ ಭಾಷೆಯಾಗಿದೆ.

ತಂಜಾವೂರು

ತಮಿಳುನಾಡಿನ ಪ್ರಮುಖ ಪಟ್ಟಣಗಳಲ್ಲಿ ತಂಜಾವೂರು ಒಂದು; ಇದಕ್ಕೆ ದೀರ್ಘ ಕಾಲದ ಇತಿಹಾಸವಿದೆ.

[illegible] 9ರಿಂದ 11ನೆಯ ಶತಮಾನದ ಅವಧಿಯಲ್ಲಿ ಚೋಳರಾಜರ ಆಳ್ವಿಕೆಗೆ ಒಳಗಾಗಿತ್ತು. ಒಂದನೆಯ ರಾಜೇಂದ್ರ ಚೋಳನು ಗಂಗೈಕೊಂಡ ಚೋಳ ಪುರಕ್ಕೆ ತನ್ನ ರಾಜಧಾನಿಯನ್ನು ಬದಲಾಯಿಸುವ ವರೆಗೆ ತಂಜಾವೂರೇ ಈ ಮನೆತನದ ರಾಜಧಾನಿಯಾಗಿತ್ತು. ಚೋಳರ ಅನಂತರ ಪಾಂಡ್ಯರು ತಂಜಾವೂರನ್ನು ವಶಮಾಡಿಕೊಂಡರು. ಅನಂತರ ನಾಯಕ ವಂಶದವರು, ಮರಾಠರು ಇಲ್ಲಿ ಆಳಿದರು. ಮುಂದೆ ತಂಜಾವೂರು ಬ್ರಿಟಿಷರ ವಶಕ್ಕೆ ಬಂತು. 1ನೆಯ ರಾಜರಾಜನು [illegible] ಬೃಹದೀಶ್ವರ ದೇವಾಲಯ ಕಟ್ಟಿಸಿದ. ಈ ಆಲಯದ ನಿರ್ಮಾಣವನ್ನು 1003ರಲ್ಲಿ ಆರಂಭಿಸಿ ಆರು ವರ್ಷಗಳ ಅವಧಿಯಲ್ಲಿ ಮುಗಿಸಿದ. 14 ಅಂತಸ್ತುಗಳಿರುವ ಈ ದೇವಾಲಯದ ವಿಮಾನದ ಎತ್ತರ 216 ಅಡಿ; ಶಿಖರದಲ್ಲಿ [illegible] [illegible] [illegible] [illegible]



ಬೃಹದೀಶ್ವರ ದೇವಾಲಯ

ಇಳಿಜಾರು ಮಾರ್ಗವನ್ನು ನಿರ್ಮಿಸಿ, ಅದರ ಮೇಲೆ ಈ ದೊಡ್ಡ ಕಲ್ಲನ್ನು ತಳ್ಳಿಕೊಂಡು ಬಂದರಂತೆ. ವಾಸ್ತುಶಿಲ್ಪ ದೃಷ್ಟಿಯಿಂದಲೂ ಈ ಶಿಖರ ವಿಶಿಷ್ಟವಾಗಿದೆ; ಇನ್ನೂರು ಅಡಿಗಿಂತಲೂ ಹೆಚ್ಚು ಎತ್ತರವಾಗಿರುವ ಈ ಶಿಖರದ ನೆರಳು [illegible] ಮೇಲೆ ಬೀಳುವುದಿಲ್ಲ.

ಬೃಹದೀಶ್ವರ ದೇವಾಲಯದಲ್ಲಿರುವ ಲಿಂಗ ಬೃಹದಾಕಾರದ್ದು. ಆರು ಅಡಿ ಎತ್ತರದಲ್ಲಿರುವ ಪಾಣಿ ಬಟ್ಟಲಿನ ಸುತ್ತಳತೆ 54 ಅಡಿ. ಅದರ ಮಧ್ಯೆ ಇರುವ ಲಿಂಗದ ಸುತ್ತಳತೆ ಇಪ್ಪತ್ತಮೂರೂವರೆ ಅಡಿ, ಎತ್ತರ ಒಂಬತ್ತು ಅಡಿ.

ಬೃಹದೀಶ್ವರ ಲಿಂಗದ ಮುಂದಿರುವ ನಂದಿಯೂ ದೊಡ್ಡ ಆಕಾರದ್ದೇ; 12 ಅಡಿ ಎತ್ತರ; ಹತ್ತೊಂಬತ್ತು ಅಡಿ ಉದ್ದ; ಎಂಟೂಕಾಲು ಅಡಿ ಅಗಲ. ಇದು ಭವ್ಯವಾದ ಮಂಟಪವದಲ್ಲಿದೆ.

ದೇವಾಲಯದ ತುಂಬ ಉತ್ತಮ ಶಿಲ್ಪಕೃತಿಗಳಿವೆ.

ಬೃಹದೀಶ್ವರ ದೇವಾಲಯದ ಸಮೀಪದಲ್ಲಿರುವ ಸುಬ್ರಮ್ಹಣ್ಯ ದೇವಾಲಯ ಕೂಡ ಉತ್ತಮ ಕಲಾಕೃತಿ.

ತಂಜಾವೂರಿನಲ್ಲಿರುವ ಅನೇಕ ಪ್ರೇಕ್ಷಣೀಯ ಸ್ಥಳಗಳಲ್ಲಿ 18ನೆಯ ಶತಮಾನದ ಇಗರ್ಜಿ, ಅನೇಕ ಅಪೂರ್ವ ಹಸ್ತಪ್ರತಿಗಳನ್ನುಳ್ಳ ಸರಸ್ವತಿ ಮಹಲ್ ಗ್ರಂಥ ಭಂಡಾರ, ನಾಯಕ ಮತ್ತು ಮರಾಠ ರಾಜ ವಂಶದವರು ವಾಸಿಸುತ್ತಿದ್ದ ಅರಮನೆ, ಸಂಗೀತ ಮಹಲ್ ಗಮನಾರ್ಹವಾದುವು.

ತಂಜಾವೂರು ಕಾವೇರಿ ನದಿಯ ಮುಖಜ ಭೂಮಿಯಲ್ಲಿದೆ. ಕರ್ಣಾಟಕ ಸಂಗೀತಕ್ಕೂ ಸಂಗೀತ ವಾದ್ಯ ತಯಾರಿಕೆಗೂ ಹೆಸರಾದ ಊರು ಇದು. ಇಲ್ಲಿಂದ 7 ಮೈಲು ದೂರದಲ್ಲಿ ತಿರುವಯ್ಯಾರಿನಲ್ಲಿ ಕರ್ಣಾಟಕ ಸಂಗೀತದ ಮಹಾನ್ ವ್ಯಕ್ತಿ ತ್ಯಾಗರಾಜರ ಸಮಾಧಿಯಿದೆ. ಇಲ್ಲಿ ಅವರ ಪುಣ್ಯದಿನದ ನೆನಪಿಗಾಗಿ ಪ್ರತಿ ವರ್ಷ ಕರ್ಣಾಟಕ ಸಂಗೀತೋತ್ಸವವೂ ನಡೆಯುತ್ತದೆ.

ತಂಜಾವೂರಿನ ಜನಸಂಖ್ಯೆ 1,40,547.

ತಕ್ಷಶಿಲಾ

[illegible]



ತಕ್ಷಶಿಲೆಯ ಧರ್ಮರಾಜಿಕ ಸ್ತೂಪ

ಪಶ್ಚಿಮ ಏಷ್ಯದ ಕಡೆಗಿನ ಹೆದ್ದಾರಿಯಲ್ಲಿದ್ದುದರಿಂದ ತಕ್ಷಶಿಲಾ ಯುದ್ಧ ತಂತ್ರದ ದೃಷ್ಟಿಯಿಂದಲೂ ಗಣ್ಯಸ್ಥಾನವಾಗಿತ್ತು.

ತಕ್ಷಶಿಲಾ ವಿಶ್ವವಿದ್ಯಾಲಯದಲ್ಲಿ ಐಹಿಕ ವಿಷಯ ಶಿಕ್ಷಣಕ್ಕೆ ಪ್ರಾಶಸ್ತ್ಯ ಇದ್ದಿತು. ವೈದ್ಯ ಶಿಕ್ಷಣವಂತೂ ಶ್ರೇಷ್ಠಮಟ್ಟದ್ದಾಗಿತ್ತು. ಈ ಶಿಕ್ಷಣದ ಅವಧಿ ಏಳು ವರ್ಷ. ವಿದ್ಯಾರ್ಥಿಗಳಿಗೆ ಪ್ರಾಯೋಗಿಕ ಪರೀಕ್ಷೆಗಳೂ ಇದ್ದುವು. ವಿವಿಧ ವರ್ಣಗಳವರಿಗೆ ಅವರವರ ವೃತ್ತಿಗೆ ಉಚಿತವಾದ ಶಿಕ್ಷಣದ ವ್ಯವಸ್ಥೆಯೂ ಇಲ್ಲಿ ಇತ್ತು. ಕ್ಷತ್ರಿಯರಿಗೆ ದಂಡನೀತಿ, ಬರಹ, ಕಲೆ, ವ್ಯವಹಾರ, ವಾರ್ತೆ, ಬಿಲ್ಲು ವಿದ್ಯೆ, ಅರ್ಥ ಹಾಗೂ ಧರ್ಮಶಾಸ್ತ್ರ, ಪುರಾಣ, ಇತಿಹಾಸ ವಿಷಯಗಳಲ್ಲಿ ಪಾಠ ನಡೆಯುತ್ತಿತ್ತು. ವ್ಯಾಪಾರವೇ ವೃತ್ತಿಯಾದ ವೈಶ್ಯರ ಅಧ್ಯಯನ ವಿಷಯಗಳು: ತೂಕ ಅಳತೆ, ಲೇವಾದೇವಿ, ಲಾಭನಷ್ಟ, ವಾರ್ತೆ, ಇತ್ಯಾದಿ. ಶೂದ್ರರಿಗೆ ವ್ಯವಸಾಯ, ಗೃಹಕೈಗಾರಿಕೆಗಳಲ್ಲಿ ಶಿಕ್ಷಣ ದೊರೆಯುತ್ತಿದ್ದಿತು.

ಚಂದ್ರಗುಪ್ತ ಮೌರ್ಯನ ಮಂತ್ರಿಯೂ ಕುಶಾಗ್ರಮತಿಯೂ ಆದ ಚಾಣಕ್ಯ (ಕೌಟಿಲ್ಯ), ಕ್ರಿ.ಪೂ. 4ನೆಯ ಶತಮಾನದ ಹೆಸರಾಂತ ವ್ಯಾಕರಣಕಾರ ಪಾಣಿನಿ, ಭಾರತೀಯ ಮಹಾನ್ ವೈದ್ಯಪಟುಗಳಲ್ಲಿ ಒಬ್ಬನಾದ ಚರಕ—ಇವರು ತಕ್ಷಶಿಲೆಯಲ್ಲಿದ್ದವರು. ಕ್ರಿ.ಪೂ. 8ನೆಯ ಶತಮಾನದಿಂದ ಸುಮಾರು ಕ್ರಿ.ಪೂ. 4ನೆಯ ಶತಮಾನದ ಕೊನೆಯ ವರೆಗೆ ತಕ್ಷಶಿಲಾ ವಿದ್ಯಾಕೇಂದ್ರವಾಗಿ ಪ್ರಸಿದ್ಧವಾಗಿದ್ದಿತು. ಇಲ್ಲಿ ವಿವಾಹಿತ ಮತ್ತು ಅವಿವಾಹಿತ ವಿದ್ಯಾರ್ಥಿಗಳಿಬ್ಬರಿಗೂ ಪ್ರವೇಶವಿತ್ತು. ಬಡವಿದ್ಯಾರ್ಥಿಗಳಿಗೆ ನಗರದ ಗೃಹಸ್ಥರು ಭೋಜನ ವ್ಯವಸ್ಥೆ ಮಾಡಿಕೊಡುತ್ತಿದ್ದರು. ಐನೂರು ವಿದ್ಯಾರ್ಥಿಗಳಿಗೆ ಒಬ್ಬ ಪ್ರಧಾನ ಉಪಾಧ್ಯಾಯ ಇರುತ್ತಿದ್ದ. ಪಾಠ ಹೇಳಿಕೊಡುವುದರಲ್ಲಿ ಹಿರಿಯ ವಿದ್ಯಾರ್ಥಿಗಳು ಇವನಿಗೆ ಸಹಾಯಮಾಡುತ್ತಿದ್ದರು.

ತಕ್ಷಶಿಲೆಯ ಭೀರ್‌ದಿಬ್ಬ – ಅವಶೇಷಗಳು



ಬುದ್ಧನಿಗಿಂತಲೂ ಹಿಂದಿನ ಕಾಲದಿಂದ ಇದ್ದ ಈ ವಿಶ್ವವಿದ್ಯಾಲಯ ಬೌದ್ಧಮತ ಪ್ರಚಾರವಾದ ಮೇಲೆ ಆ ಬಗೆಗೂ ಶಿಕ್ಷಣ ಕೊಡಲಾರಂಭಿಸಿತು.

ಸುಮಾರು ಮೂರನೆಯ ಶತಮಾನದ ವರೆಗೆ, ಕುಶಾನರ ಆಳ್ವಿಕೆಯ ಅಂತ್ಯದ ತನಕ, ತಕ್ಷಶಿಲಾ ಭಾರತದ ಪ್ರಮುಖ ವಿದ್ಯಾಕೇಂದ್ರವಾಗಿ ಶೋಭಿಸಿತು.

ತಪತಿ

"ಈ ನದಿಯಲ್ಲಿ ಸ್ನಾನಮಾಡಬೇಕಾಗಿಲ್ಲ; ಜಲಪಾನ ಕೂಡ ಮಾಡಬೇಕಾಗಿಲ್ಲ; ದರ್ಶನವನ್ನೂ ಮಾಡದೆ, 'ತಪತಿ' ಎಂಬ ನಾಮಸ್ಮರಣೆ ಮಾಡಿದರೆ ಸಾಕು, ಪಾಪ ಪರಿಹಾರವಾಗುತ್ತದೆ."—ತಪತಿ ನದಿಯ ಅಸಾಮಾನ್ಯ ಪ್ರಭಾವದ ಬಗೆಗೆ ಈ ಹೇಳಿಕೆ ಸ್ಕಂದಪುರಾಣದಲ್ಲಿದೆ.

ತಪತಿ ನದಿಯ ತೀರದಲ್ಲಿ ಅನೇಕ ಕ್ಷೇತ್ರಗಳಿವೆ. ಆಷಾಢಮಾಸದಲ್ಲಿ ಈ ನದಿಗೆ ಸಂಬಂಧಿಸಿದ ಉತ್ಸವಗಳೂ ಪೂಜೆಗಳೂ ನಡೆಯುತ್ತವೆ.

ತಾಪಿ, ತಾಪ್ತಿ, ತಪತಿ —ಎಂಬ ಹೆಸರುಗಳಿಂದ ಕರೆಯಲಾಗುವ ಈ ನದಿಯ ಉಗಮ ಸಾತ್ಪುರಾ ಶ್ರೇಣಿಗಳಲ್ಲಿ. ಇದು ಸುಮಾರು 450 ಮೈಲು ದೂರ ಹರಿಯುತ್ತದೆ. ಸಾತ್ಪುರ ಪ್ರಸ್ಥಭೂಮಿಯ ಪ್ರದೇಶದಲ್ಲಿ ಸುಮಾರು 150 ಮೈಲು ಸಾಗಿದ ಮೇಲೆ ಈ ನದಿ ಖಾನ್‌ದೇಶದಲ್ಲಿ ಹರಿದು, ಮುಂದೆ ಪಶ್ಚಿಮದಲ್ಲಿ ಗುಜರಾತ್ ತಲಪಿ, ಬಳಿಕ ಸೂರತ್ ಜಿಲ್ಲೆಯಲ್ಲಿ ಸಾಗಿ, ಅರಬಿ ಸಮುದ್ರವನ್ನು ಸೇರುತ್ತದೆ.

ಸುಮಾರು ಒಂದು ಕೋಟಿ 70 ಲಕ್ಷ ಎಕರೆ ಅಡಿಗಳಷ್ಟು ವಾರ್ಷಿಕ ಪ್ರವಾಹ ಇರುವ ಈ ನದಿಯ ನೀರನ್ನು ಹೆಚ್ಚು ಪ್ರಮಾಣದಲ್ಲಿ ನೀರಾವರಿ



ಗಾಗಿ ಉಪಯೋಗಿಸುತ್ತಿರಲಿಲ್ಲ. ಇಪ್ಪತ್ತನೆಯ ಶತಮಾನದ ಉತ್ತರಾರ್ಧದಲ್ಲಿ ನಿರ್ಮಿತವಾದ ಕಾಕ್ರಪುರ, ಉಕಾಯ್ ಯೋಜನೆಗಳಿಂದ ಕೆಲವಾರು ಲಕ್ಷ ಎಕರೆ ಭೂಮಿಗೆ ನೀರಿನ ಸೌಲಭ್ಯ ದೊರೆತಿದೆಯಲ್ಲದೆ, ವಿದ್ಯುತ್ ಉತ್ಪಾದನೆಗೂ ಅವಕಾಶ ಏರ್ಪಟ್ಟಿದೆ. ಇದಲ್ಲದೆ ತಪತಿ ನದಿಯ ಪ್ರವಾಹದಿಂದ ಸೂರತ್ ನಗರ ಮತ್ತು ಜಿಲ್ಲೆಯಲ್ಲಿ ಆಗಿಂದಾಗ್ಗೆ ಸಂಭವಿಸುತ್ತಿದ್ದ ನಷ್ಟಗಳು ಈ ಅಣೆಕಟ್ಟುಗಳ ನಿರ್ಮಾಣದಿಂದ ಬಹುಮಟ್ಟಿಗೆ ತಪ್ಪಿವೆ.


ತಮಿಳು ನಾಡು

ಭಾರತದ ದಕ್ಷಿಣದ ತುದಿ ಕನ್ಯಾಕುಮಾರಿಯನ್ನು ಒಳಗೊಂಡಿರುವ ರಾಜ್ಯ ತಮಿಳುನಾಡು. ಕೇರಳ, ಕರ್ನಾಟಕ, ಆಂಧ್ರಪ್ರದೇಶ ಇವರ ಭೂಮೇರೆಗಳು. ಪೂರ್ವಕ್ಕೆ ಬಂಗಾಳ ಕೊಲ್ಲಿಯಿದೆ. ದಕ್ಷಿಣದ ತುದಿಯಲ್ಲಿ ಅರಬಿ ಸಮುದ್ರ, ಹಿಂದೂ ಮಹಾಸಾಗರ ಹಾಗೂ ಬಂಗಾಳ ಕೊಲ್ಲಿ ಸಂಗಮವಾಗುತ್ತವೆ. ಚೋಳಮಂಡಲ ತೀರಪ್ರದೇಶ ತಮಿಳುನಾಡಿನ ಅತ್ಯಂತ ಫಲವತ್ತಾದ ಪ್ರದೇಶ.

ಕಾವೇರಿ, ವೈಗೈ, ಪೆನ್ನಾರ್, ತಾಮ್ರಪರ್ಣಿ ಮುಂತಾದ ನದಿಗಳು ರಾಜ್ಯದಲ್ಲಿ ಹರಿಯುತ್ತವೆ. ಕಾವೇರಿಯ ನೀರು ಈ ನಾಡಿನ ವ್ಯವಸಾಯಕ್ಕೆ ಮುಖ್ಯ ಆಸರೆ.

ತಮಿಳು ನಾಡಿನ ಪೂರ್ವ ಕರಾವಳಿ ಐನೂರು ಮೈಲುಗಳಿಗಿಂತ ಉದ್ದ. ದಕ್ಷಿಣ ಕರಾವಳಿಯ ಉದ್ದ ಕೇವಲ 40 ಮೈಲು. ರಾಜ್ಯದ ಮುಖ್ಯ ಬಂದರುಗಳು : ಮದರಾಸು, ತೂತ್ತುಕುಡಿ, ನಾಗಪಟ್ಟಿಣಂ, ಕಾರೈಕಾಲ್ ಹಾಗೂ ಕಡಲೂರು.

ಹೆಚ್ಚು ಜನರಿಗೆ ಬೇಸಾಯವೇ ಮುಖ್ಯ ಕಸಬು. ಈಶಾನ್ಯ ಮಾರುತ ತರುವ ಮಳೆ ಮುಖ್ಯವಾದದ್ದು. ರಾಜ್ಯದ ಪ್ರಧಾನ ಬೆಳೆಗಳು: ಭತ್ತ, ರಾಗಿ ಮೊದಲಾದ ಧಾನ್ಯಗಳು, ದ್ವಿದಳ ಧಾನ್ಯಗಳು, ಈರುಳ್ಳಿ ಆಲೂಗೆಡ್ಡೆ. ಸಿಹಿ ಗೆಣಸು. ಮರ ಗೆಣಸು. ವಾಣಿಜ್ಯ ಬೆಳೆಗಳಲ್ಲಿ ಮುಖ್ಯ ವಾದುವು ಹತ್ತಿ, ಕಬ್ಬು, ಎಳ್ಳು, ತೆಂಗು ಹೊಗೆಸೊಪ್ಪು, ಕಾಫಿ, ಚಹ, ಮೆಣಸು ಹಾಗೂ ರಬ್ಬರು. ಬಾಳೆ, ಮಾವು ಮತ್ತು ಜಂಬೀರ ಫಲಗಳು ತಮಿಳು ನಾಡಿನಲ್ಲಿ ಹೇರಳ ವಾಗಿ ಬೆಳೆಯುವ ಫಲಗಳು. ತಮಿಳು ನಾಡಿನ ಮತ್ತೊಂದು ಮುಖ್ಯ ಉತ್ಪಾದನೆ. ಕ್ವೈನೈನ್.



ವಿಸ್ತೀರ್ಣ : 1.30,069 ಚ.ಕಿ.ಮಿ.
ಜನಸಂಖ್ಯೆ : 4,11,99,168
ರಾಜಧಾನಿ : ಮದರಾಸು
ಮುಖ್ಯ ಭಾಷೆ : ತಮಿಳು

ತೇಗ, ಕರಿಮರ, ಬೀಟೆ, ಗಂಧದ ಮರ, ಬಿದಿರು. ಇವು ಮುಖ್ಯ ಅರಣ್ಯ ಉತ್ಪನ್ನಗಳು. ನಿಜಾರಣ್ಯದಿಂದ ತುಂಬಿದ ಉದಕಮಂಡಲ (ಊಟಿ), ಕೊಡೈಕೆನಾಲ್, ಕೂನೂರು, ಕೋಟಗಿರಿ – ಇವು ಆಹ್ಲಾದಕರ ಗಿರಿಧಾಮಗಳು.

ತಮಿಳು ನಾಡಿನ ರಾಜಧಾನಿಯಾದ ಮದರಾಸು, ಭಾರತದ ಪ್ರಮುಖ ಬಂದರುಗಳಲ್ಲಿ ಒಂದು. ಕಂಚಿ, ತಂಜಾವೂರು, ಮದುರೈ, ಚಿದಂಬರ, ಮಹಾಬಲಿಪುರಂ, ಶ್ರೀರಂಗ ರಾಮೇಶ್ವರಗಳಲ್ಲಿ ಹಿಂದೆ ಆಳಿದ ಪಲ್ಲವ, ಚೋಳ,ಪಾಂಡ್ಯ ದೊರೆಗಳು ಕಟ್ಟಿಸಿದ ಭವ್ಯದೇವಾಲಯಗಳಿವೆ. ತಮಿಳು ನಾಡಿನ ದೇವಾಲಯಗಳು ಪ್ರಧಾನವಾಗಿ ದ್ರಾವಿಡ ಶೈಲಿಯವು. ಮದುರೈ ನಗರವನ್ನು ಪ್ರಪಂಚದ ಅತಿ ಹಳೆಯ ನಗರಗಳಲ್ಲಿ ಒಂದು ಎಂದು ಪರಿಗಣಿಸಿದ್ದಾರೆ. 150 ವರ್ಷಗಳಿಗೂ ಹಿಂದಿನದೆಂದು ಹೇಳಲಾಗುವ ಪಕ್ಷಿಧಾಮ ವೇದನ್‌ತಂಗಲ್. ಮದರಾಸಿನಿಂದ 54 ಮೈಲು ದೂರದಲ್ಲಿದೆ. ವೆಲ್ಲೂರಿನಲ್ಲಿ ವಿಖ್ಯಾತ ಆಸ್ಪತ್ರೆಯಿದೆ. ದಕ್ಷಿಣದ ಬೃಹತ್ ದೇವಾಲಯಗಳಲ್ಲಿ ಒಂದಾದ ತೇಜೋಲಿಂಗ ದೇವಾಲಯವೂ ರಮಣ ಮಹರ್ಷಿಗಳ ಸಮಾಧಿಯೂ ಇರುವ ಸ್ಥಳ ತಿರುವಣ್ಣಾಮಲೈ. ವಸ್ತ್ರೋದ್ಯಮಕ್ಕೆ ಹೆಸರಾದದ್ದು ಕೊಯಮುತ್ತೂರು.

ಎರಡನೆಯ ಶತಮಾನದಲ್ಲೇ ಕರಿಕಾಲ ಚೋಳ, ಕಾವೇರಿ ಮತ್ತು ವೆಣ್ಣಾರ್‌ಗಳಿಗೆ ಕಟ್ಟಿಸಿದ ದೊಡ್ಡ ಅಣೆಕಟ್ಟು ಇನ್ನೂ ಇದೆ. ಮೆಟ್ಟೂರ್ ಸರೋವರ ಹಾಗೂ ಅಣೆಕಟ್ಟು ಮತ್ತೊಂದು ಪ್ರೇಕ್ಷಣೀಯ ಸ್ಥಳ.



ಶ್ರೀರಂಗಂ ದೇಗುಲದಲ್ಲಿ ಶಿಲ್ಪ ಸೃಷ್ಟಿ

ಕೊಯಮುತ್ತೂರು-ವಸ್ತ್ರೋದ್ಯಮ ಕೇಂದ್ರ





ದಕ್ಷತೆ : ಸಿ. ಸುಬ್ರಹ್ಮಣ್ಯಂ



ಡಿ.ಎಂ.ಕೆ. ಮುಖ್ಯ ಮಂತ್ರಿತ್ವ : ಕರುಣಾ

ತಮಿಳುನಾಡಿನಲ್ಲಿ ಅನೇಕ ಖನಿಜಗಳು ದೊರೆಯುತ್ತವೆ. ಜಿಪ್ಸಮ್ ಸುಣ್ಣಕಲ್ಲು, ಮ್ಯಾಗ್ನಸೈಟ್, ಅಭ್ರಕ, ಕ್ವಾರ್ಟ್ಸ್, ಫೆಲ್‌ಸ್ಪಾರ್, ಕಾವಿಟ್ಟಿಗೆಮಣ್ಣು, ಬಾಕ್ಸೈಟು, ಅಪಾರ ಲಿಗ್ನೈಟ್ ಸಿಗುತ್ತದೆ. ಹತ್ತಿ ವಸ್ತ್ರೋದ್ಯಮ, ತೊಗಲು ಸಂಸ್ಕರಣೆಗಳಿಗೆ ಈ ರಾಜ್ಯ ಹೆಸರಾಗಿದೆ. ಕಂಚಿ, ಧರ್ಮಾವರ, ಆರಣಿ ರೇಷ್ಮೆ ಸೀರೆಗಳು ಪ್ರಖ್ಯಾತ. ಕಾಫಿ ಬೀಜ ಸಂಸ್ಕರಣೆ, ಭತ್ತದ ಗಿರಣಿ, ಎಣ್ಣೆ ತೆಗೆಯುವುದು, ಹಗ್ಗ ಹುರಿ ಮಾಡುವುದು, ಸಕ್ಕರೆಯ ಶುದ್ಧೀಕರಣ, ಹೆಂಚು ಇಟ್ಟಿಗೆ, ಸೈಕಲ್, ಸಿಮೆಂಟ್, ಗಾಜು ಬೆಂಕಿಕಡ್ಡಿ, ಉಪ್ಪು, ಸಾಬೂನು —ಇಲ್ಲಿನ ಇತರ ಮುಖ್ಯ ಕೈಗಾರಿಕೆಗಳು. ಸ್ಟಾಂಡರ್ಡ್ ಕಾರುಗಳನ್ನು ಮದರಾಸಿನಲ್ಲಿ ತಯಾರಿಸುತ್ತಾರೆ. ಪೆರಂಬೂರಿನ ಇಂಟೆಗ್ರಲ್ ಕೋಚ್ ಫ್ಯಾಕ್ಟರಿ, ನೈವೇಲಿಯ ಲಿಗ್ನೈಟ್ ಕಾರ್ಪೊರೇಷನ್, ಸಂಗಮ್‌ಬಾಕ್ಕಮ್‌ನಲ್ಲಿರುವ ಶಸ್ತ್ರ ಚಿಕಿತ್ಸೆ ಉಪಕರಣಗಳ ಕಾರಖಾನೆ, ಗಿಂಡಿಯ ಹಿಂದೂಸ್ಥಾನ್ ಟೆಲಿಪ್ರಿಂಟರ್ಸ್ ಊಟಿಯ ಹಿಂದೂಸ್ಥಾನ್ ಫೋಟೋ ಫಿಲ್ಮ್ಸ್—ತಮಿಳುನಾಡಿನ ಬೃಹತ ಉದ್ಯಮಗಳು. ಮೀನುಗಾರಿಕೆಯೂ ಈ ರಾಜ್ಯದಲ್ಲಿ ಬೆಳೆದಿದೆ. ಭಾರತಚಲಚ್ಚಿತ್ರ ಉದ್ಯಮದ ಒಂದು ಮುಖ್ಯ ಕೇಂದ್ರ—ಮದರಾಸು. ಪರಂಬಿಕುಲಮ್ –ಅಳಿಯಾರ್ ಯೋಜನೆ ಅತಿ ಮುಖ್ಯ ನೀರಾವರಿಯೋಜನೆ. ಪೆರಿಯಾರ್, ಮೆಟ್ಟೂರು, ನೈವೇಲಿಗಳಲ್ಲಿ ವಿದ್ಯುದುತ್ಪಾದನಾ ಸ್ಥಾವರಗಳಿವೆ. ಕಲ್ಪಾಕ್ಕಂನಲ್ಲಿ ಪರಮಾಣು ವಿದ್ಯುತ್ ಕೇಂದ್ರವಿದೆ.

ಕೈಮಗ್ಗದ ಹತ್ತಿ ಹಾಗೂ ರೇಷ್ಮೆ ವಸ್ತ್ರಗಳು, ಕಂಚಿನ, ಹಿತ್ತಾಳೆಯ ಮತ್ತು ತಾಮ್ರದ ಪದಾರ್ಥಗಳು, ವಿಗ್ರಹಗಳು ತಮಿಳುನಾಡಿನ ಆಕರ್ಷಕ ಗೃಹ ಕೈಗಾರಿಕಾ ವಸ್ತುಗಳಾಗಿವೆ. ಹಲವು ಬಗೆಯ ದೀಪಗಳು, ತಟ್ಟೆ, ಪಾತ್ರೆ, ಹೂದಾನಿಗಳೂ ಇಲ್ಲಿನ ವಿಶಿಷ್ಟ ಸಾಮಾನುಗಳು. ತೊಗಲಿನ ಕೈಚೀಲಗಳೂ ಇಲ್ಲಿನ ಆಕರ್ಷಕ ಪದಾರ್ಥಗಳಲ್ಲಿ ಒಂದು. ತಂಜಾವೂರಿನ ಸಂಗೀತವಾದ್ಯಗಳು ದೇಶದಾದ್ಯಂತ ಹೆಸರಾಗಿವೆ. ಜೇಡಿ ಹಾಗೂ ಮರದ ಸುಂದರ ಆಟಿಕೆಗಳೂ ಈ ರಾಜ್ಯದಲ್ಲಿ ತಯಾರಾಗುತ್ತವೆ.

ಪೊಂಗಲ್ (ಸಂಕ್ರಾಂತಿ), ಕೋಲು (ನವರಾತ್ರಿ) ಮುಖ್ಯ ಹಬ್ಬಗಳು. ಭರತನಾಟ್ಯ ಈ ರಾಜ್ಯದಲ್ಲಿ ಚೆನ್ನಾಗಿ ಅಭಿವೃದ್ಧಿಯಾಗಿ ಬಂದಿವೆ. ಚಲಚ್ಚಿತ್ರ ಮತ್ತು ಕರ್ನಾಟಕ ಸಂಗೀತ ಜನಪ್ರಿಯವಾಗಿವೆ. ಹೆಸರಾದ ಅನೇಕ ವಾಗ್ಗೇಯಕಾರರು ಇಲ್ಲಿನವರೇ.



ಮದರಾಸು ಮೌಂಟ್‌ರಸ್ತೆ



ಅಣ್ಣಾ ಡಿ.ಎಂ.ಕೆ. : ಎಂ.ಜಿ. ರಾಮಚಂದ್ರ

ಚೋಳ, ಪಾಂಡ್ಯ ಹಾಗೂ ಪಲ್ಲವರಂಥ ಬಲಿಷ್ಠ ದೊರೆಗಳು ಈ ನಾಡನ್ನು ಆಳಿದ್ದಾರೆ. ಬಹಳ ಹಿಂದಿನಿಂದ ಇಲ್ಲಿನವರು ಹೊರದೇಶದೊಡನೆ ಸಂಪರ್ಕ ಇಟ್ಟುಕೊಂಡಿದ್ದರು. ಈ ವಂಶಗಳ ಆಳ್ವಿಕೆಯಲ್ಲಿ ತಮಿಳುನಾಡಿನ ಭಾಷೆ–ಸಾಹಿತ್ಯ ಅನೇಕಾನೇಕ ಭವ್ಯ ಸುಂದರ ದೇವಾಲಯಗಳು ಹಾಗೂ ಸಂಗೀತ, ನಾಟ್ಯಕಲೆಗಳು ರೂಪುಗೊಂಡುವು.



ಜೀವಪಿಮಾ ಕಟ್ಟಡ :
ರಥೋತ್ಸವ-ಮದರಾಸಿನಲ್ಲಿ

14–16ನೆಯ ಶತಮಾನಗಳಲ್ಲಿ ವಿಜಯನಗರ ಸಾಮ್ರಾಜ್ಯ ಇಡೀ ತಮಿಳುನಾಡಿನ ಎಲ್ಲ ಪ್ರದೇಶಗಳನ್ನು ಒಳಗೊಂಡಿತ್ತು. 17ನೆಯ ಶತಮಾನದಲ್ಲಿ ನಾಯಕವಂಶದವರು ತಮಿಳುನಾಡನ್ನು ಆಳಿದರು. ಮುಂದೆ ಫ್ರೆಂಚರು, ಡಚ್ಚರು, ಬ್ರಿಟಿಷರು ಇಲ್ಲಿಗೆ ಆಗಮಿಸಿ ಕೆಲವು ಭಾಗಗಳನ್ನು ವಶಪಡಿಸಿಕೊಂಡರು. 1801ರ ವೇಳೆಗೆ ಮದರಾಸು ಆಧಿಪತ್ಯ ರೂಪುಗೊಂಡಿತು. ಸ್ವಾತಂತ್ರ್ಯಾನಂತರ ರಾಜ್ಯಗಳ ಪುನರ್ವಿಂಗಡಣೆ ಆದಾಗ ಈ ಆಧಿಪತ್ಯದ ಕೆಲವು ಭಾಗಗಳು ಆಂಧ್ರ, ಮೈಸೂರು, ಕೇರಳ ರಾಜ್ಯಗಳಿಗೆ ಸೇರಿದುವು.

ತಮಿಳುನಾಡಿನಲ್ಲಿ ನಾಲ್ಕು ವಿಶ್ವವಿದ್ಯಾನಿಲಯಗಳಿವೆ: ಮದರಾಸು, ಮಧುರೈ ಮತ್ತು ಅಣ್ಣಾಮಲೈ ಕೊಯಮತ್ತೂರಿನ ಕೃಷಿ ವಿಶ್ವವಿದ್ಯಾನಿಲಯ.

ನೋಡಿ : ಉದಕಮಂಡಲ ; ಕಂಚಿ ; ಕನ್ಯಾಕುಮಾರಿ ; ಕುಂಭಕೋಣಂ ; ಕೊಡೈಕನಾಲ್ ; ಚಿದಂಬರಂ ; ತಂಜಾವೂರು ; ತಮಿಳು ಭಾಷೆ, ಸಾಹಿತ್ಯ ; ನೈವೇಲಿ ; ಪಳನಿ ; ಮದರಾಸು ; ಮಧುರೈ ; ಮಹಾಬಲಿಪುರಂ ; ರಾಮೇಶ್ವರ ; ಶ್ರೀರಂಗಂ ; ಶುಚೀಂದ್ರ

ತಮಿಳು ಭಾಷೆ, ಸಾಹಿತ್ಯ

ತಮಿಳು ದ್ರಾವಿಡ ಭಾಷಾ ಕುಟುಂಬಕ್ಕೆ ಸೇರುತ್ತದೆ. ಇದು ದಕ್ಷಿಣ ಭಾರತದ ಅತ್ಯಂತ ಪ್ರಾಚೀನ ಭಾಷೆ; ವಿಶ್ವದ ಪ್ರಾಚೀನ ಭಾಷೆಗಳಲ್ಲೊಂದು.

ತಮಿಳಿನಲ್ಲಿ ಈಗ ಲಭ್ಯವಿರುವ ಅತಿ ಪ್ರಾಚೀನ ವ್ಯಾಕರಣಗ್ರಂಥ ತೊಲ್‌ಕಾಪ್ಪಿಯರ್ ಅವರ 'ತೊಲ್‌ಕಾಪ್ಪಿಯಮ್'. ಇವರ ಕಾಲ ಸುಮಾರು ಕ್ರಿ.ಪೂ. 3ನೆಯ ಶತಮಾನ. 'ತೊಲ್‌ಕಾಪ್ಪಿಯಮ್'ಗೂ ಮುನ್ನ ಅನೇಕ ಸಾಹಿತ್ಯಕ ಮತ್ತು ವ್ಯಾಕರಣ ಗ್ರಂಥಗಳು ಇದ್ದಿರಬಹುದು; ಪ್ರಾಚೀನ ತಮಿಳುನಾಡಿನ ದಕ್ಷಿಣ ಭಾಗದಲ್ಲಿ ಬಹಳ ಹಿಂದೆ ಸಂಭವಿಸಿದ ಜಲಪ್ರಳಯದಿಂದಾಗಿ ಕಳೆದುಹೋಗಿರಬಹುದು. ಹೀಗಾಗಿ, ಈ ಕಾಲದ ಭಾಷೆಯ ಸ್ವರೂಪವನ್ನು ಗುರುತಿಸುವುದು ಸಾಧ್ಯವಾಗಿಲ್ಲ.

ತಮಿಳಿನ ಉಗಮ ಕಾಲವನ್ನು ನಿರ್ದಿಷ್ಟವಾಗಿ ಹೇಳಲು ಸಾಧ್ಯವಾಗಿಲ್ಲ. ತಮಿಳುನಾಡಿನ ಹೆಚ್ಚು ಕಡಮೆ ಎಲ್ಲ ಜನರೂ ಈ ಭಾಷೆಯನ್ನು ಮಾತನಾಡುತ್ತಾರೆ. ಶ್ರೀಲಂಕಾ (ಸಿಂಹಳ), ಮಲೇಷ್ಯ, ಸಿಂಗಪುರ ಮತ್ತು ಬರ್ಮಾಗಳಲ್ಲಿ ಪ್ರಚಲಿತವಿರುವ ಪ್ರಮುಖ ಭಾಷೆಗಳಲ್ಲಿ ತಮಿಳೂ ಒಂದು. ಭಾರತದಲ್ಲೂ ಹೊರಗೂ ಒಟ್ಟು ಸುಮಾರು ಐದು ಕೋಟಿ ಜನರ ಮಾತೃಭಾಷೆ ತಮಿಳು.

ವಿಶ್ವದ ಅತ್ಯಂತ ಅಭ್ಯುನ್ನತ, ಪೂರ್ಣ ಬೆಳವಣಿಗೆ ಹೊಂದಿದ ಭಾಷೆಗಳಲ್ಲಿ ತಮಿಳು ಸ್ಥಾನ ಪಡೆದಿದೆ. ಧ್ವನಿ ಪದ್ಧತಿ, ಅಕ್ಷರ ಸಂಯೋಜನೆ, ಶಬ್ದರೂಪ ರಚನಾಶಾಸ್ತ್ರ, ವಾಕ್ಯರಚನೆ, ಶಬ್ದಾರ್ಥ ನಿರ್ಣಯನ ಶಾಸ್ತ್ರ, ಅಲಂಕಾರ, ಭಾಷಾ ಲಕ್ಷಣ, ಛಂದಸ್ಸು ಇವುಗಳ ಮೇಲೆ 'ತೊಲ್‌ಕಾಪ್ಪಿಯಮ್' ಸಾಕಷ್ಟು ಬೆಳಕು ಚೆಲ್ಲುತ್ತದೆ.

ತಮಿಳು ಸಾಹಿತ್ಯದ ಪ್ರಾಚೀನ ಯುಗಕ್ಕೆ (ಕ್ರಿ.ಪೂ. 200ರಿಂದ ಕ್ರಿ.ಶ. 500) ಸಂಗಂ ಕಾಲ ಎಂದು ಹೆಸರು. 'ಪತ್ತುಪ್ಪಾಟ್ಟು' (ಹತ್ತು ಗೀತೆಗಳು), 'ಎಟ್ಟುತ್ತೊಗೈ' (ಎಂಟು ಸಂಕಲನಗಳು), ತಿರುವಳ್ಳುವರ್ ಅವರ 'ತಿರುಕ್ಕುರಳ್', ಇಳಂಗೋವಡಿಗಳ್ ಅವರ 'ಸಿಲಪ್ಪದಿಕಾರಮ್', ಶೀತ್ತಲೈ ಶಾತ್ತನಾರ್ ಅವರ 'ಮಣಿಮೇಕಲೈ' ಈ ಕಾಲಕ್ಕೆ ಸೇರುವ ಕೃತಿಗಳು. ಈ ಎಲ್ಲ ಸಾಹಿತ್ಯ ಕೃತಿಗಳನ್ನು ಒಟ್ಟಿಗೆ ಸಂಗಂ ಸಾಹಿತ್ಯ ಎನ್ನುವುದುಂಟು. ಮಧುರೆಯ ಪಾಂಡ್ಯ ದೊರೆಗಳು 'ತಮಿಳ್ ಸಂಗಂ' (ಸಾಹಿತ್ಯ ಸಂಘ) ಸ್ಥಾಪಿಸಿ ತಮಿಳು ಕವಿಗಳಿಗೆ ಆಶ್ರಯಕೊಟ್ಟರು. ಈ ಕಾಲದ ಅತ್ಯಂತ ಶ್ರೇಷ್ಠ ಕವಿ ತಿರುವಳ್ಳುವರ್. ಅಪ್ಪರ್, ತಿರುಜ್ಞಾನ ಸಂಬಂಧರ್, ಸುಂದರರ್, ಮಾಣಿಕ್ಕವಾಚಕರ್ ಈ ನಾಲ್ವರೂ ತಮಿಳು ಸಾಹಿತ್ಯದ ಮಧ್ಯಕಾಲದ (500ರಿಂದ 1800) ಪ್ರಸಿದ್ಧ ಶೈವ ಸಂತರು (ನಾಯನಾರರು). 'ತಿರುಮುರೈ' ಎಂಬ ಹೆಸರಿನಲ್ಲಿ (ತೇವಾರಮ್, ತಿರುವಾಚಕಮ್ ಮೊದಲಾದ) ಶೈವ ಕೃತಿಗಳು ಒಟ್ಟುಗೂಡಿದುವು. 'ನಾಲಾಯಿರ ದಿವ್ಯಪ್ರಬಂಧ' ಎಂಬ ಹೆಸರಿನಲ್ಲಿ 12 ಮಂದಿ ವೈಷ್ಣವ ಸಂತರ (ಆಳ್ವಾರರು) ಭಕ್ತಿಗೀತೆಗಳು ಸಂಕಲನಗೊಂಡುವು. ಕಂಬರ್ ಅವರ 'ಕಂಬ ರಾಮಾಯಣಮ್' ಈ ಯುಗದ ಅತಿ ಮಹತ್ವದ ಸಾಹಿತ್ಯಕೃತಿ. 1100ರ ಕಂಬರನ್ನು 'ಕವಿ ಚಕ್ರವರ್ತಿ' ಎನ್ನಲಾಗಿದೆ.

ಯೂರೋಪಿಯನರು ಆಗಮಿಸಿದ ನಂತರ 1801–1947 ಅವಧಿಯಲ್ಲಿ ತಮಿಳು ಸಾಹಿತ್ಯ ಹೊಸ ದಿಕ್ಕಿನಲ್ಲಿ ಸಾಗಿತು. ಐರೋಪ್ಯ ಲೇಖಕರು ಅನೇಕ ಗದ್ಯಗ್ರಂಥಗಳನ್ನೂ ನಿಘಂಟುಗಳನ್ನೂ ರಚಿಸಿದರು. ತಮಿಳು ಸಾಹಿತ್ಯಕ್ಕೆ ಗಮನಾರ್ಹ ಕೊಡುಗೆ ಇತ್ತ ಐರೋಪ್ಯರಲ್ಲಿ ಇಟಲಿಯ ರಾಬರ್ಟ್ ದ ನೋಬಿಲ್ (ತತ್ತುವ ಬೋಧಗ ಸ್ವಾಮಿಗಳ್) ಮತ್ತು ಕಾನ್‌ಸ್ಟಾನ್‌ಟಿಯಸ್ ಬೆಸ್ಕಿ (ವೀರಮಾ ಮುನಿವರ್), ಇಂಗ್ಲೆಂಡಿನ ಡಾ. ಜಿ.ಯು. ಪೋಪ್ ಮತ್ತು ಐರ್ಲೆಂಡಿನ ಡಾ. ಕಾಲ್ಡ್‌ವೆಲ್ ಪ್ರಮುಖರು. ತಮ್ಮ ಜನಪ್ರಿಯ ಭಾವಗೀತೆಗಳ ಮೂಲಕ ರಾಷ್ಟ್ರೀಯತೆಯನ್ನೂ ದೇಶಭಕ್ತಿಯನ್ನೂ ಬೋಧಿಸಿದ ಸುಬ್ರಹ್ಮಣ್ಯ ಭಾರತಿ (1882–1921) ಈ ಯುಗದ ಅತ್ಯಂತ ಪ್ರಮುಖ ರಾಷ್ಟ್ರಕವಿ.

ಸ್ವಾತಂತ್ರ್ಯಾನಂತರದ ತಮಿಳು ಸಾಹಿತ್ಯ ಬಹುಮುಖವಾಗಿ ಬೆಳೆದು ಪುನರುಜ್ಜೀವನಗೊಂಡಿತು. ತಮಿಳುನಾಡಿನ ಮಾಜಿ ಮುಖ್ಯಮಂತ್ರಿ ಸಿ. ಎನ್. ಅಣ್ಣಾದುರೈ ಮತ್ತಿತರರ ಗದ್ಯಶೈಲಿ ತಮಿಳಿನ ಸೊಬಗನ್ನು ಹೆಚ್ಚಿಸಿದೆ. ಪೆರಿಯಸ್ವಾಮಿ ತೂರನ್ ಅವರ ಪ್ರಧಾನ ಸಂಪಾದಕತ್ವದಲ್ಲಿ ಹತ್ತು ಸಂಪುಟಗಳ ವಿಶ್ವಕೋಶ ಹೊರಬಂದಿದೆ. ಭಾರತ, ಸಿಂಹಳ, ಮಲೇಷ್ಯ, ಸಿಂಗಪುರ ಮತ್ತು ಇಂಗ್ಲೆಂಡುಗಳಿಂದ ಸುಮಾರು 600 ನಿಯತಕಾಲಿಕಗಳು ತಮಿಳುಭಾಷೆಯಲ್ಲಿ ಪ್ರಕಟವಾಗುತ್ತಿವೆ. ಅಂತರ ರಾಷ್ಟ್ರೀಯ ತಮಿಳು ಸಂಶೋಧನಾ ಸಂಸ್ಥೆಯು ಕೌಲಾಲಂಪುರ (1966), ಮದರಾಸು (1968) ಮತ್ತು ಪ್ಯಾರಿಸ್ (1970)ಗಳಲ್ಲಿ ಅಂತರರಾಷ್ಟ್ರೀಯ ತಮಿಳು ಅಧಿವೇಶನಗಳನ್ನೇರ್ಪಡಿಸಿ, ವಿಶ್ವದ ಹಲವಾರು ವಿಶ್ವವಿದ್ಯಾಲಯಗಳಲ್ಲಿ ತಮಿಳುಭಾಷೆ–ಸಾಹಿತ್ಯಗಳ ಅಭ್ಯಾಸಕ್ಕೆ ಅವಕಾಶ ಮಾಡಿಕೊಟ್ಟಿದೆ. ತಮ್ಮ ಕವನಗಳಿಗೆ ಕ್ರಾಂತಿಕಾರಿ ಮತ್ತು ವೈಚಾರಿಕ ಆಯಾಮ ಕೊಟ್ಟ ಭಾರತೀದಾಸನ್ (1891–1964) ಈ ಕಾಲದ ಪ್ರಮುಖ ಕವಿ. ಮದರಾಸಿನ ದಕ್ಷಿಣಭಾರತ ಶೈವ ಸಿದ್ಧಾಂತ ಕೃತಿ ಪ್ರಕಾಶನಸಂಸ್ಥೆಯು ತಮಿಳು ಸಾಹಿತ್ಯದ 2,000 ಅಮೂಲ್ಯ ಕೃತಿಗಳನ್ನು ಪ್ರಕಟಿಸಿದೆ.

ಪ್ರಾಚೀನ ತಮಿಳು ಸಾಹಿತ್ಯದಲ್ಲಿ ಲೌಕಿಕ ಹಾಗೂ ವಸ್ತುನಿಷ್ಠ ಕಾವ್ಯಪರಂಪರೆ ಕಂಡುಬಂದರೆ, ಮಧ್ಯಕಾಲದಲ್ಲಿ ಭಕ್ತಿ ಮತ್ತು ಧಾರ್ಮಿಕ ವಸ್ತುವುಳ್ಳ ಕಾವ್ಯ ಪ್ರಧಾನವಾಗಿತ್ತು. ಬ್ರಿಟಿಷ್ ಕಾಲದ ಸಾಹಿತ್ಯದಲ್ಲಿ ರಾಷ್ಟ್ರೀಯತೆ ಮತ್ತು ದೇಶಭಕ್ತಿ, ಕಾವ್ಯಗುಣಗಳಾದುವು. ಆಧುನಿಕ ಸಾಹಿತ್ಯದಲ್ಲಿ ವೈಚಾರಿಕತೆ ವೈಜ್ಞಾನಿಕತೆ ಎದ್ದು ಕಾಣುತ್ತವೆ.

ನೋಡಿ : ಅಣ್ಣಾದುರೈ ; ಆಂಡಾಳ್ ; ಕಂಬ ; ನಾಯನಾರರು ; ಮಾಣಿಕ್ಕವಾಚಕರ ; [illegible] ; [illegible] ; ಸುಬ್ರಹ್ಮಣ್ಯ ಭಾರತಿ–ಸಂಪುಟ ೫

ತಲಕಾಡು

ಅದೊಂದು ಘೋರ ಕಾಡು. ಅಲ್ಲಿ ತಲ ಮತ್ತು ಕಾಡ ಎಂಬ ಬೇಡರು. ಆನೆ ಒಂದು ಮರದ ಪೊಟರೆಗೆ ಕೆಂದಾವರೆ ಹೂವು ಹಾಕುವುದನ್ನು ಅವರು ಕಂಡರು. ಮರ ಕಡಿದಾಗ ಶಿವಲಿಂಗ ಗೋಚರಿಸಿತು. ಆ ಬೇಡರಿಬ್ಬರ ಹೆಸರಿನಿಂದ ಆ ಕ್ಷೇತ್ರ ತಲಕಾಡು ಎನಿಸಿತು.

ಇದು ತಲಕಾಡಿನ ಬಗೆಗೆ ಇರುವ ಕಥೆ.

ತಲಕಾಡು ಮೈಸೂರಿನಿಂದ ಸುಮಾರು 30 ಮೈಲು ದೂರದಲ್ಲಿರುವ ಪುಣ್ಯಕ್ಷೇತ್ರ.

ಐತಿಹಾಸಿಕವಾಗಿಯೂ ತಲಕಾಡು ಪ್ರಸಿದ್ಧ. 3ನೆಯ ಶತಮಾನದಿಂದ ಗಂಗರು, ರಾಷ್ಟ್ರಕೂಟರು ಇಲ್ಲಿ ಆಳಿದರು. 12ನೆಯ ಶತಮಾನದ ಆದಿಭಾಗದಲ್ಲಿ ಚೋಳರು ಇದನ್ನು ಆಕ್ರಮಿಸಿಕೊಂಡರು. ಹೊಯ್ಸಳ ವಿಷ್ಣುವರ್ಧನ ಅವರನ್ನು ಸೋಲಿಸಿ ಇದನ್ನು ತನ್ನ ವಶಕ್ಕೆ ತೆಗೆದುಕೊಂಡ.

ಅನಂತರ ಇದು ವಿಜಯನಗರದ ಅರಸರ ಅಧೀನವಾಯಿತು. ಅವರ ಪ್ರತಿನಿಧಿಯಾಗಿ ಶ್ರೀರಂಗಪಟ್ಟಣದಲ್ಲಿದ್ದ ಶ್ರೀರಂಗರಾಯ ಅಧಿಕಾರವನ್ನು ಮೈಸೂರಿನ ರಾಜ ಒಡೆಯರಿಗೆ ಬಿಟ್ಟುಕೊಟ್ಟ ಮೇಲೆ ಇಲ್ಲಿಗೆ ಬಂದಿದ್ದ. ಈತನ ಹೆಂಡತಿ ಶ್ರೀರಂಗಮ್ಮ (ಅಲಮೇಲಮ್ಮ) ತನ್ನ ಒಡವೆಗಳನ್ನು ರಾಜ ಒಡೆಯರಿಗೆ ಕೊಡಲು ನಿರಾಕರಿಸಿ, ತಲಕಾಡಿಗೆ ಸಮೀಪದ ಕಾವೇರಿ ನದಿಯಲ್ಲಿ ಎಸೆದುಬಿಟ್ಟಳು : "ತಲಕಾಡು ಮರಳಾಗಲಿ, ಮಾಲಂಗಿ ಮಡುವಾಗಲಿ, ಮೈಸೂರು ದೊರೆಗೆ ಮಕ್ಕಳಿಲ್ಲದೆ ಹೋಗಲಿ" ಎಂದು ಶಪಿಸಿ ತಾನೂ ನದಿಯಲ್ಲಿ ಬಿದ್ದಳು. ಇದು ಒಂದು ಪ್ರಚಲಿತ ದಂತಕಥೆ.

ತಲಕಾಡಿನಲ್ಲಿ 'ಪಂಚಲಿಂಗದರ್ಶನ' ಬಹಳ ಪ್ರಸಿದ್ಧ. ವೈದ್ಯೇಶ್ವರ, ಪಾತಾಳೇಶ್ವರ, ಮರಳೇಶ್ವರ, ಅರ್ಕೇಶ್ವರ, ವಿಜಯೇಶ್ವರ—ಇವೇ ಪಂಚ ಲಿಂಗಗಳು. ಕಾರ್ತಿಕಮಾಸದ (ಅಕ್ಟೋಬರ್–ನವೆಂಬರ್) ಅಮಾವಾಸ್ಯೆ ಸೋಮವಾರ ಬೀಳಬೇಕು : ವೃಶ್ಚಿಕರಾಶಿಯಲ್ಲಿ ಸೂರ್ಯಚಂದ್ರರು ಸೇರಬೇಕು. ಆಗ ಈ ಉತ್ಸವ ನಡೆಯುತ್ತದೆ.

30ಕ್ಕೂ ಹೆಚ್ಚು ದೇವಾಲಯಗಳು ಕಾವೇರಿ ಈ ಪ್ರದೇಶದಲ್ಲಿ ತಂದೊತ್ತುವ ಮರಳಿನಲ್ಲಿ ಹೂತುಹೋಗಿವೆ ಎನ್ನುತ್ತಾರೆ.

ತಲಕಾಡಿನ ವೈದ್ಯೇಶ್ವರ ದೇವಾಲಯ ದ್ರಾವಿಡ ಶೈಲಿಯಲ್ಲಿ ಕಟ್ಟಿರುವ ಸುಂದರ ದೇವಾಲಯ. ಹತ್ತು ಅಡಿಯಷ್ಟು ಎತ್ತರವಿರುವ ದ್ವಾರ ಪಾಲಕ ವಿಗ್ರಹಗಳು ಭವ್ಯವಾದುವು. ಇಷ್ಟು ದೊಡ್ಡ ಪ್ರಮಾಣದ ದ್ವಾರಪಾಲಕ ವಿಗ್ರಹಗಳು ಕರ್ನಾಟಕದಲ್ಲಿ ಇನ್ನೆಲ್ಲಿಯೂ ಕಂಡುಬಂದಿಲ್ಲ. ಕೀರ್ತಿನಾರಾಯಣ ದೇವಾಲಯವನ್ನು ಹೊಯ್ಸಳ ವಿಷ್ಣುವರ್ಧನ 1117ರಲ್ಲಿ ಕಟ್ಟಿಸಿದನೆಂದು ಶಾಸನವಿದೆ. ಇದರ ಆವರಣವನ್ನು ಮರಳು ತುಂಬುತ್ತಿದೆ.

ಪುಣ್ಯಕ್ಷೇತ್ರದಲ್ಲಿ ಸ್ನಾನ



ತಾಜಮಹಲ್

ನೋಡಿ : ಸಂಪುಟ ೧, ೫

ಟಾಟಾ ಮೂಲಭೂತ ಸಂಶೋಧನಾ ಸಂಸ್ಥೆ

ನ್ಯೂಕ್ಲಿಯರ್ ವಿಜ್ಞಾನ ಹಾಗೂ ಗಣಿತದಲ್ಲಿ ಪ್ರೌಢ ಅಧ್ಯಯನ ಮತ್ತು ಮೂಲಭೂತ ಸಂಶೋಧನೆಗಳು ನಡೆಯುತ್ತಿರುವ ಅಖಿಲ ಭಾರತ ಕೇಂದ್ರ — ಟಾಟಾ ಮೂಲಭೂತ ಸಂಶೋಧನಾ ಸಂಸ್ಥೆ. ಇದರ ಸ್ಥಾಪಕ ನಿರ್ದೇಶಕರು ಎಚ್. ಜೆ. ಭಾಭಾ.

ಈ ಸಂಸ್ಥೆ 1945ರಲ್ಲಿ ಮುಂಬಯಿಯಲ್ಲಿ ಸ್ಥಾಪಿತವಾಯಿತು. ಇದರ ಆಶ್ರಯದಲ್ಲಿ ಪ್ರೌಢ ವ್ಯಾಸಂಗಕ್ಕೆಂದು ಪ್ರತ್ಯೇಕ ಗಣಿತ ಹಾಗೂ ಭೌತ ವಿಜ್ಞಾನ ಶಾಲೆಗಳು ನಡೆಸಲ್ಪಡುತ್ತವೆ. ಗಣಿತ ಶಾಲೆ ಅಂತರರಾಷ್ಟ್ರೀಯ ಮನ್ನಣೆ ಹಾಗೂ ಖ್ಯಾತಿ ಪಡೆದಿದೆ.

ಇಲ್ಲಿನ ಸಂಶೋಧನಾ ಚಟುವಟಿಕೆ ಹಲವು ಕ್ಷೇತ್ರಗಳಲ್ಲಿ ಹರಡಿದೆ. ಅಣು ಜೀವವಿಜ್ಞಾನ, ಸೂಕ್ಷ್ಮತರಂಗ ಎಂಜಿನಿಯರಿಂಗ್, ಘನಭೌತ ಎಲೆಕ್ಟ್ರಾನಿಕ್ಸ್, ಕಂಪ್ಯೂಟರ್ ತಾಂತ್ರಿಕತೆ ಇವು ಇಂಥ ಕೆಲವು ಕ್ಷೇತ್ರಗಳು. ನ್ಯೂಕ್ಲಿಯರ್ ಭೌತವಿಜ್ಞಾನ, ಭೂಭೌತವಿಜ್ಞಾನ, ರಾಸಾಯನಿಕ ಭೌತ ವಿಜ್ಞಾನ, ಘನಭೌತವಿಜ್ಞಾನ ಕ್ಷೇತ್ರಗಳಲ್ಲಿ ಮೂಲಭೂತ ಸಂಶೋಧನಾ ಕಾರ್ಯ ಇಲ್ಲಿ ನಡೆದಿದೆ.

ಭಾರತದಲ್ಲಿ ವಿಶ್ವಕಿರಣ ಸಂಶೋಧನೆಯ ಅತಿ ದೊಡ್ಡ ಕೇಂದ್ರವಿರುವುದೂ ಇಲ್ಲಿಯೇ. ಅತ್ಯಾಧುನಿಕ ಕಂಪ್ಯೂಟರ್ ಈ ಸಂಸ್ಥೆಯಲ್ಲಿದೆ. ಸಂಸ್ಥೆಯ ಅಂಗವಾಗಿ ಮುಂಬಯಿಯ ಕಲ್ಯಾಣದಲ್ಲಿ, ಸೌರ ಅಧ್ಯಯನಕ್ಕೆಂದು ರೇಡಿಯೋ ದೂರದರ್ಶಕವನ್ನು ಇಡಲಾಗಿದೆ. ಉದಕಮಂಡಲದಲ್ಲಿ ಇರುವ ದೊಡ್ಡ ದೂರದರ್ಶಕ ಈ ಸಂಸ್ಥೆಗೆ ಸೇರಿದ್ದು. ಚಂದ್ರ ಶಿಲೆಯ ಅಧ್ಯಯನವೂ ಈ ಸಂಸ್ಥೆಯಲ್ಲಿ ನಡೆಯುತ್ತದೆ.

ತಾತ್ಯಾ ಟೋಪೆ

ಮರಣದಂಡನೆ ಶಿಕ್ಷೆ ವಿಧಿಸಲ್ಪಟ್ಟಾಗ ಎದೆಸೆಟೆದು ಗಲ್ಲಿನ ಅಟ್ಟಣೆಯನ್ನೇರಿದ. ತಾನೇ ಕೊರಳಿಗೆ ಉರುಲನ್ನು ಹಾಕಿಕೊಂಡ.

ಇಂಥ ಗಟ್ಟಿ ಎದೆಯ ವೀರ —1857ರ ಸಿಪಾಯಿ ದಂಗೆಯಲ್ಲಿ ಪ್ರಮುಖ ಪಾತ್ರ ವಹಿಸಿದ ತಾತ್ಯಾ ಟೋಪೆ.

ಯುದ್ಧ ವಿದ್ಯೆಯಲ್ಲಿ ತರಬೇತಿ ಪಡೆಯದಿದ್ದರೂ ತಾತ್ಯಾ ಸಮರ್ಥ ಸೈನಿಕ ಮುಂದಾಳು ಆಗಿದ್ದ. ಪೇಶ್ವೆ ಎರಡನೆಯ ಬಾಜೀರಾಯನ ದತ್ತುಪುತ್ರ ನಾನಾ ಸಾಹೇಬನ ಮೆಚ್ಚಿನ ಸೇನಾನಿಯಾಗಿದ್ದ. ಕಿರುಕುಳ ಯುದ್ಧದಲ್ಲಿ ಮಹಾ ನಿಪುಣ. ಇದರಿಂದಾಗಿ ಅನೇಕ ಬಾರಿ ಬ್ರಿಟಿಷರ ಸೇನೆಯ ಮುಂದೆ ಸೋಲಬೇಕಾಗಿ ಬಂದರೂ, ಅವರ ಕೈಗೆ ಸಿಕ್ಕದೆ ತಪ್ಪಿಸಿಕೊಂಡು ಮತ್ತೆ ಮತ್ತೆ ತನ್ನ ಸೇನೆಯನ್ನು ಸಂಘಟಿಸಿ ಹೋರಾಡಿದ.

ತಾತ್ಯಾ ಟೋಪೆಯ ನಿಜವಾದ ಹೆಸರು ರಾಮಚಂದ್ರ ಪಾಂಡುರಂಗ. ಅವನ ತಂದೆ ಪೇಶ್ವೆ ಬಾಜೀರಾಯನ ಆಶ್ರಿತರಲ್ಲೊಬ್ಬನಾಗಿದ್ದ.



ಇದರಿಂದಾಗಿ ಪೇಶ್ವೆಯ ದತ್ತು ಮಗ ನಾನಾಸಾಹೇಬನಿಗೂ ಅವನಿಗೂ ತುಂಬ ಸ್ನೇಹವಿತ್ತು. ಸಿಪಾಯಿ ದಂಗೆ ಆರಂಭವಾದಾಗ ಅವನು ಗ್ವಾಲಿಯರ್‌ನ ಸಿಂಧ್ಯನ 5.000 ಸೈನಿಕರನ್ನು ತನ್ನ ಕಡೆಗೆ ಒಲಿಸಿಕೊಂಡು ಅವರೊಡನೆ ಕಾಲ್ಪಿಯಲ್ಲಿದ್ದ ನಾನಾಸಾಹೇಬನನ್ನು ಸೇರಿದ.

ಕಾನ್ಪುರದಲ್ಲಿ ಅವನು ಬ್ರಿಟಿಷ್ ಸೇನೆಯೊಡನೆ ಹೋರಾಟ ನಡೆಸಿದಾಗ ಅವನಿಗೆ ಸೋಲಾಯಿತು : ಬ್ರಿಟಿಷರು ಝಾನ್ಸಿಗೆ ಮುತ್ತಿಗೆ ಹಾಕಿದಾಗ ರಾಣಿ ಲಕ್ಷ್ಮೀಬಾಯಿಗೆ ಸಹಾಯಮಾಡಲು ತನ್ನ ಸೇನೆಯೊಡನೆ ಅಲ್ಲಿಗೆ ತೆರಳಿದ. ಆಗಲೂ ಅವನಿಗೆ ಸೋಲಾಯಿತು. ಗ್ವಾಲಿಯರನ್ನು ತಾತ್ಯಾ ವಶಪಡಿಸಿಕೊಂಡನಾದರೂ ಅದನ್ನು ಬಹುಕಾಲ ಉಳಿಸಿಕೊಳ್ಳಲಾಗಲಿಲ್ಲ. ಸಿಕಾರ್ ಎಂಬಲ್ಲಿ ಪರಾಭವ ಅನುಭವಿಸಿದ ಮೇಲೆ, ಇನ್ನು ಹೋರಾಡುವುದರಿಂದ ಲಾಭವಿಲ್ಲವೆಂದು, ತಾತ್ಯಾ ಮತ್ತು ಇತರ ನಾಯಕರು ಭಾವಿಸಿದರು. ತಾತ್ಯಾ ತನ್ನ ಸೇನೆಯವರು ಚದರಿಹೋಗುವಂತೆ ಹೇಳಿ, ತಾನು ಮೂವರು ಸೇವಕರೊಡನೆ ಕಾಡಿನಲ್ಲಿ ಅಡಗಿಕೊಂಡ. ಅಲ್ಲಿ ಮಾನ್‌ಸಿಂಗ್ ಎಂಬುವನು ಅವನನ್ನು ಬ್ರಿಟಿಷರಿಗೆ ಹಿಡಿದುಕೊಟ್ಟ. 1859 ಏಪ್ರಿಲ್ 15ರಂದು ವಿಚಾರಣೆಯಾಗಿ ಅವನಿಗೆ ಮರಣದಂಡನೆ ವಿಧಿಸಲ್ಪಟ್ಟಿತು. ತಾತ್ಯಾ ಅಂಜದೆ ಅಳುಕದೆ ಸಾವನ್ನಪ್ಪಿದ.

ನೋಡಿ : ಝಾನ್ಸಿ ಲಕ್ಷ್ಮೀಬಾಯಿ ; ಸಿಪಾಯಿದಂಗೆ

ತಾನ್‌ಸೇನ್

ನೋಡಿ : ಸಂಪುಟ ೫

ತಾಮ್ರಲಿಪ್ತಿ

"ತಾಮ್ರಲಿಪ್ತಿಯಲ್ಲಿ ಹಡಗು ಹತ್ತಿ ಭೋಗ(ಮಲಯ)ದ ಮೂಲಕ ಚೀನ ಸೇರಬಹುದು. ಸಿಂಹಳಕ್ಕೆ ಹೋಗುವವರು ತಾಮ್ರಲಿಪ್ತಿಯಿಂದ ಹೊರಟು ನೈಋತ್ಯ ದಿಕ್ಕಿನಲ್ಲಿ ಪ್ರಯಾಣ ಮಾಡಬೇಕು. ತಾಮ್ರಲಿಪ್ತಿ ಪೂರ್ವ ಇಂಡಿಯಾದ ದಕ್ಷಿಣದ ಗಡಿ. ನಾಲಂದಾದಿಂದ 60 ಯೋಜನ ದೂರದಲ್ಲಿದೆ."

ಏಳನೆಯ ಶತಮಾನದಲ್ಲಿ ಭಾರತಕ್ಕೆ ಭೇಟಿ ಕೊಟ್ಟಿದ್ದ ಇ-ತ್ಸಿಂಗ್ [illegible] ತಾಮ್ರಲಿಪ್ತಿಯನ್ನು ಕುರಿತು ಈ ಮಾತು ಬರೆದಿದ್ದಾನೆ. [illegible] ತಾಮ್ರಲಿಪ್ತಿಗೆ ತಾಮಲಿಟೆಸ್, ತಾಮಲಿಪ್ತ ಎಂಬ ಹೆಸರುಗಳೂ ಇವೆ. ಇದು ಗಂಗಾನದೀ ಮುಖಜ ಭೂಮಿಯಲ್ಲಿದೆ. ಭಾರತೀಯರು ಕ್ರಿಸ್ತಶಕೆಗೂ ಮುಂಚೆಯೇ ಆಗ್ನೇಯ ಏಷ್ಯ, ಇಂಡೋನೇಷ್ಯಗಳೊಡನೆ ಸಮುದ್ರ ಮಾರ್ಗವಾಗಿ ವ್ಯಾಪಾರ ಸಂಬಂಧ ಬೆಳೆಸಿಕೊಂಡಿದ್ದರು. ಇದಕ್ಕೆ ಅವರು ಬಳಸುತ್ತಿದ್ದ ರೇವುಪಟ್ಟಣಗಳಲ್ಲಿ ತಾಮ್ರಲಿಪ್ತಿಯೂ ಒಂದು.

ಬೌದ್ಧ ಸಾಹಿತ್ಯದಲ್ಲಿ ತಾಮ್ರಲಿಪ್ತಿಯು ಮುಖಾಂತರ ರೋಮನರೊಡನೆ ಮಾಡುತ್ತಿದ್ದ ವ್ಯಾಪಾರ ವಹಿವಾಟುಗಳ ಪ್ರಸ್ತಾಪವಿದೆ. 1954–55ರಲ್ಲಿ ತಾಮ್ರಲಿಪ್ತಿಯಲ್ಲಿ ನಡೆಸಿದ ಪುರಾತತ್ತ್ವ ಶೋಧನೆಗಳು ಈ ಅಂಶವನ್ನು ಸ್ಪಷ್ಟಪಡಿಸಿವೆ. ನವಶಿಲಾಯುಗದಿಂದ 18–19ನೆಯ ಶತಮಾನದ ವರೆಗೆ 4 ಅವಧಿಗಳನ್ನು ಸೂಚಿಸುವ ಕುರುಹುಗಳು ಕಂಡುಬಂದಿವೆ. ಮೊದಲ ಹಂತಗಳಲ್ಲಿ ತಾಮ್ರದ ನಾಣ್ಯ, ಮಣ್ಣಿನ ಬೊಂಬೆಗಳೂ ಪ್ರಾಚೀನ ರೋಮಿನಲ್ಲಿ ಬಳಕೆಯಲ್ಲಿದ್ದ ವಿಶಿಷ್ಟ ಮಾದರಿಯ ಪಾತ್ರೆಗಳೂ ದೊರೆತಿವೆ. ಇಟ್ಟಿಗೆಯಿಂದ ಕಟ್ಟಿದ ಕೊಳ ಕಂಡುಬಂದಿದೆ.

ತಾರಾ

ಕಿಷ್ಕಿಂಧೆಯ ವಾನರರಾಜ ವಾಲಿಯ ಪತ್ನಿ, ತಾರಾ. ಇವಳು ಸುಷೇಣ ಎಂಬವನ ಮಗಳು. ಧೈರ್ಯಶಾಲಿ, ಬುದ್ಧಿವಂತೆ, ವ್ಯವಹಾರ ಚತುರೆ.

ಮಾಯಾವಿಯೆಂಬ ರಾಕ್ಷಸನೊಡನೆ ಒಂದು ಗವಿಯಲ್ಲಿ ವಾಲಿ ಹೋರಾಡಬೇಕಾಗಿ ಬಂದಾಗ, ತನ್ನ ತಮ್ಮ ಸುಗ್ರೀವನನ್ನು ಗವಿಯ ಬಾಗಿಲಲ್ಲಿ ಕಾವಲು ಕೂರಿಸಿ ಹೋದ. ಬಹುದಿನಗಳ ಅನಂತರ ಬಾಗಿಲಿನಿಂದ ರಕ್ತ ಹರಿದಾಗ, ತನ್ನ ಅಣ್ಣ ಹೋರಾಟದಲ್ಲಿ ಸತ್ತಿರಬೇಕೆಂದು ಸುಗ್ರೀವ ಭಾವಿಸಿ, ಗವಿಯ ಬಾಗಿಲಿಗೆ ಬಂಡೆ ಮುಚ್ಚಿ ಕಿಷ್ಕಿಂಧೆಗೆ ಹಿಂದಿರುಗಿದ. ಮಂತ್ರಿಗಳ ಒತ್ತಾಯದಿಂದ ರಾಜ್ಯಭಾರ ವಹಿಸಿಕೊಂಡ.

ಕೆಲ ಕಾಲದ ಅನಂತರ ವಾಲಿ ಹಿಂದಿರುಗಿ ಬಂದ. ಸುಗ್ರೀವನ ಮೇಲೆ ಕೋಪಗೊಂಡು ಅವನನ್ನು ಓಡಿಸಿದ. ಅವನ ಪತ್ನಿ ರುಮೆಯನ್ನು ತನ್ನ ಅರಮನೆಗೆ ಸೇರಿಸಿದ. ಅನಂತರ ಸುಗ್ರೀವ ರಾಮನ ಸಹಾಯ ಪಡೆದು ವಾಲಿಯ ಮೇಲೆ ಯುದ್ಧಕ್ಕೆ ಬಂದ. ಸುಗ್ರೀವನ ಹೆಂಡತಿಯನ್ನು ಅವನಿಗೆ ಒಪ್ಪಿಸಿ, ಅವನೊಡನೆ ಸ್ನೇಹದಿಂದ ಇರಲು ತಾರಾ ಹೇಳಿದಳು. ವಾಲಿ ಸಮ್ಮತಿಸಲಿಲ್ಲ.

ವಾಲಿ, ರಾಮನಿಂದ ಗಾಯಗೊಂಡಾಗ ತಾರಾ ರಾಮನಲ್ಲಿಗೆ ಬಂದು, "ಯಾವ ಬಾಣದಿಂದ ವಾಲಿಯನ್ನು ಕೊಂದೆಯೋ ಅದರಿಂದಲೇ ನನ್ನನ್ನೂ ಕೊಂದುಬಿಡು," ಎಂದಳು. ರಾಮ ಅವಳಿಗೆ ಸಮಾಧಾನ ಹೇಳಿದ.

ವಾಲಿ ಸಾಯುವ ಮುನ್ನ ಸುಗ್ರೀವನಿಗೆ ರಾಜನಾಗುವಂತೆ ತಿಳಿಸಿ, "ಎಲ್ಲ ವಿಚಾರಗಳಲ್ಲೂ ತಾರೆಯ ಮಾತಿನಂತೆ ನಡೆ. ಅವಳ ಸಲಹೆ ಎಂದೂ ತಪ್ಪಾಗುವುದಿಲ್ಲ" ಎಂದು ಸೂಚಿಸಿದ. ತಾರೆಯ ವಿಚಾರವಾಗಿ ವಾಲಿಗೆ ಅಷ್ಟು ಗೌರವವಿತ್ತು.

ರಾವಣನ ಮೇಲಿನ ಯುದ್ಧದಲ್ಲಿ ರಾಮನಿಗೆ ಸಹಾಯಮಾಡುವುದಕ್ಕೆ ಒಪ್ಪಿಕೊಂಡು ಸುಗ್ರೀವ [illegible] ಲಕ್ಷ್ಮಣ ಕೋಪಗೊಂಡ. ಅವನನ್ನು ಸಮಾಧಾನಗೊಳಿಸಲು ಸುಗ್ರೀವ ತಾರೆಯನ್ನು ಕಳುಹಿಸಿದ. ಸಮಯೋಚಿತ ಮಾತುಗಳಿಂದ ಲಕ್ಷ್ಮಣನನ್ನು [illegible] ಸುಗ್ರೀವನ ಕ್ಷಮೆ ಕೇಳುವಂತೆ ಮಾಡಿದಳು. [illegible] ಸುಗ್ರೀವ ತನ್ನ ಮಾತಿನಂತೆ [illegible]

ರಾವಣನ ಮೇಲಿನ ಯುದ್ಧ ಮುಗಿದು ರಾಮನ ಪರಿವಾರ ಹಿಂದಿರುಗಿದಾಗ ಸೀತೆಯ ಅಪೇಕ್ಷೆಯಂತೆ ತಾರಾ ಅಯೋಧ್ಯೆಗೆ ಹೋಗಿ, ರಾಮನ ಪಟ್ಟಾಭಿಷೇಕದಲ್ಲಿ ಭಾಗವಹಿಸಿದಳು.

ತಾರಾಚಂದ್

ಭಾರತದ ಪ್ರಮುಖ ಇತಿಹಾಸಕಾರರಲ್ಲಿ ಒಬ್ಬರು ಡಾ. ತಾರಾಚಂದ್. 'ಭಾರತೀಯ ಸ್ವಾತಂತ್ರ್ಯ ಹೋರಾಟದ ಇತಿಹಾಸ' ಎಂಬ ಎರಡು ಸಂಪುಟಗಳ ಇವರ ಕೃತಿ ಪ್ರಖ್ಯಾತವಾಗಿದೆ. 'ಭಾರತೀಯರ ಸಂಕ್ಷಿಪ್ತ ಚರಿತ್ರೆ', 'ಭಾರತದಲ್ಲಿ ಇಸ್ಲಾಂ ವಿಚಾರಧಾರೆಯ ಬೆಳವಣಿಗೆ', 'ಪೂರ್ವ ಹಾಗೂ ಪಾಶ್ಚಾತ್ಯ ತತ್ತ್ವಶಾಸ್ತ್ರಗಳ ಇತಿಹಾಸ' ಇತ್ಯಾದಿ ಅವರ ಇತರ ಮುಖ್ಯ ಕೃತಿಗಳು.

ತಾರಾಚಂದ್ ಅವರು 1888 ಜೂನ್ 17ರಂದು ಈಗಿನ ಪಾಕಿಸ್ತಾನದಲ್ಲಿರುವ ಸಿಯಾಲ್‌ಕೋಟ್‌ನಲ್ಲಿ ಜನಿಸಿದರು. ತಂದೆ ಮುನ್ಷಿಕೃಪ ನಾರಾಯಣ್, ಅಲಹಾಬಾದ್‌ನಲ್ಲಿ ಎಂ. ಎ. ಮನ್ನೂ ಆಕ್ಸ್‌ಫರ್ಡಿನಲ್ಲಿ ಪಿಎಚ್. ಡಿ. ಯನ್ನೂ ಮಾಡಿಕೊಂಡರು. ಅಲಹಾಬಾದಿನಲ್ಲಿ ಇತಿಹಾಸ ಪ್ರಾಧ್ಯಾಪಕರಾಗಿ, ಅನಂತರ ಪ್ರಿನ್ಸಿಪಾಲರಾಗಿ ಕೆಲಸ; 1925-1945ರ ವರೆಗೆ ರಾಜನೀತಿಶಾಸ್ತ್ರ ಪ್ರಾಧ್ಯಾಪಕ ಹುದ್ದೆ; ಸ್ವಲ್ಪಕಾಲ ಅಲಹಾಬಾದ್ ವಿಶ್ವವಿದ್ಯಾನಿಲಯದ ವೈಸ್‌ಛಾನ್ಸ್‌ಲರ್ ಅಧಿಕಾರ ನಿರ್ವಹಣೆ; 1951ರಿಂದ 1956ರ ವರೆಗೆ ಇರಾನಿನಲ್ಲಿ ಭಾರತೀಯ ರಾಯಭಾರಿಯಾಗಿ ಕೆಲಸ; 1958–1968 ಅವಧಿಯಲ್ಲಿ ರಾಜ್ಯಸಭಾ ಸದಸ್ಯತ್ವ —ಹೀಗೆ ತಾರಾಚಂದ್ ವಿವಿಧ ಉನ್ನತ ಪದವಿಗಳಲ್ಲಿ ಯಶಸ್ವಿಯಾಗಿ ಸೇವೆ ಸಲ್ಲಿಸಿದರು.



ಹೋರಾಟದ ಇತಿಹಾಸ : ತಾರಾಚಂದ್

ಇಂಡಿಯನ್ ಹಿಸ್ಟರಿ ಕಾಂಗ್ರೆಸ್ಸಿನ ಅಧ್ಯಕ್ಷರಾಗಿಯೂ ಟೆಹರಾನ್, ಹೈದರಾಬಾದ್ ಅಲೀಗಡ ವಿಶ್ವವಿದ್ಯಾನಿಲಯಗಳ ಗೌರವ ಪ್ರಾಧ್ಯಾಪಕರಾಗಿಯೂ ಅಲಹಾಬಾದ್ ವಿಶ್ವವಿದ್ಯಾನಿಲಯದ ಎಮಿರಿಟಸ್ ಪ್ರಾಧ್ಯಾಪಕರಾಗಿಯೂ ಇದ್ದರು.

ದೆಹಲಿ, ಸೌಗಾರ್, ಅಲೀಗಡ ವಿಶ್ವವಿದ್ಯಾನಿಲಯಗಳು ಅವರಿಗೆ ಗೌರವ ಡಾಕ್ಟರೇಟ್ ಪದವಿ ನೀಡಿ ಗೌರವಿಸಿದುವು.

ತಾರಾಚಂದ್ 1973 ಅಕ್ಟೋಬರ್‌ನಲ್ಲಿ ನಿಧನರಾದರು.

ತಾರಾಪುರ

ಮುಂಬಯಿಯಿಂದ 97 ಕಿಲೊಮೀಟರ್ ದೂರದಲ್ಲಿರುವ ತಾರಾಪುರದಲ್ಲಿ ಪರಮಾಣು ಶಕ್ತಿಯನ್ನು ಉಪಯೋಗಿಸಿ ವಿದ್ಯುತ್ತನ್ನು ಉತ್ಪಾದಿಸುವ ಕೇಂದ್ರ ಇದೆ. ಭಾರತದಲ್ಲಿ ಸ್ಥಾಪಿತವಾದ ಇಂಥ ಕೇಂದ್ರಗಳಲ್ಲಿ ಇದೇ ಮೊದಲನೆಯದು. ಇದರ ಒಟ್ಟು ಉತ್ಪಾದನಾ ಸಾಮರ್ಥ್ಯ 380 ಮೆಗಾವಾಟ್. ಇಲ್ಲಿ ಉತ್ಪಾದಿಸುವ ವಿದ್ಯುತ್ತನ್ನು ಮಹಾರಾಷ್ಟ್ರ ಹಾಗೂ ಗುಜರಾತ್ ರಾಜ್ಯಗಳಿಗೆ ಸರಬರಾಜು ಮಾಡಲಾಗುತ್ತದೆ.

ತಾರಾಪುರ ಪರಮಾಣು ಕೇಂದ್ರದಲ್ಲಿ ಪರಮಾಣು ಇಂಧನ ಪ್ಲುಟೋನಿಯಂ ಕೂಡ ತಯಾರಾಗುತ್ತದೆ.



ಪರಮಾಣು ಶಕ್ತಿ ಕೇಂದ್ರ —ತಾರಾಪುರ

ಈ ಕೇಂದ್ರ ಅಮೆರಿಕದ ಸಂಯುಕ್ತ ಸಂಸ್ಥಾನದ ಜನರಲ್ ಎಲೆಕ್ಟ್ರಿಕ್ ಕಂಪೆನಿಯ ನೆರವಿನಿಂದ ನಿರ್ಮಾಣವಾಯಿತು. 1969 ಏಪ್ರಿಲ್ ಒಂದನೆಯ ದಿನಾಂಕ ರಾತ್ರಿ 8–15 ಗಂಟೆಗೆ ಪರಮಾಣುಶಕ್ತಿಮೂಲದ ವಿದ್ಯುತ್ ಉತ್ಪಾದನೆ ಆರಂಭವಾಯಿತು.

ತಾರಾಶಂಕರ ಬಂದೋಪಾಧ್ಯಾಯ


ರವೀಂದ್ರನಾಥ ಠಾಕೂರ್ ಮತ್ತು ಶರಚ್ಚಂದ್ರ ಚಟ್ಟೋಪಾಧ್ಯಾಯರ ಅನಂತರ ಬಂಗಾಳದ ಅತ್ಯಂತ ಪ್ರಮುಖ ಕಾದಂಬರಿಕಾರ ಮತ್ತು ಸಣ್ಣ ಕಥೆಗಳ ಲೇಖಕ ಎನಿಸಿದವರು ತಾರಾಶಂಕರ ಬಂದೋಪಾಧ್ಯಾಯ.

ಇವರು ಹುಟ್ಟಿದ್ದು, 1898 ಜುಲೈ 23ರಂದು, ಪಶ್ಚಿಮ ಬಂಗಾಳದ ಲವಪುರವೆಂಬಲ್ಲಿ. ವಿದ್ಯಾರ್ಥಿಯಾಗಿದ್ದಾಗಲೇ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದರು. ಸೆರೆಮನೆಯಲ್ಲಿ ಒಂದು ವರ್ಷ ಕಳೆದಮೇಲೆ ರಾಜಕೀಯ ಕ್ಷೇತ್ರದಿಂದ ಹೊರಬಂದರು; ಸಾಹಿತ್ಯ ರಚನೆಯಲ್ಲಿ ನಿರತರಾದರು.

ನೂರಕ್ಕಿಂತಲೂ ಹೆಚ್ಚು ಗ್ರಂಥಗಳನ್ನು ಇವರು ಬರೆದಿದ್ದಾರೆ. ಇವುಗಳಲ್ಲಿ ನಲವತ್ತು ಕಾದಂಬರಿಗಳು. 'ಆರೋಗ್ಯನಿಕೇತನ', 'ಗಣದೇವತಾ' ಇವರ ಕಾದಂಬರಿಗಳಲ್ಲಿ ಶ್ರೇಷ್ಠವಾದುವು. ಬಂಗಾಳದ ಗ್ರಾಮೀಣ ಜೀವನವನ್ನು ಚಿತ್ರಿಸುವುದರಲ್ಲಿ ತಾರಾಶಂಕರರು ಎತ್ತಿದ ಕೈ.

1955ರಲ್ಲಿ ಬಂಗಾಳ ಸರಕಾರ ಬಂದೋಪಾಧ್ಯಾಯರಿಗೆ ಶರತ್ ಸ್ಮಾರಕ ಹಾಗೂ ರವೀಂದ್ರ ಸ್ಮಾರಕ ಪ್ರಶಸ್ತಿಗಳನ್ನು ನೀಡಿತು. 1956ರಲ್ಲಿ ಸಾಹಿತ್ಯ ಅಕಾದೆಮಿ ಪ್ರಶಸ್ತಿ ಪಡೆದರು. 1967ರಲ್ಲಿ ಜ್ಞಾನಪೀಠ ಪಾರಿತೋಷಕ ದೊರೆಯಿತು. ಕಲ್ಕತ್ತಾ ಮತ್ತು ರವೀಂದ್ರ ಭಾರತಿ ವಿಶ್ವವಿದ್ಯಾಲಯಗಳು ಡಾಕ್ಟರೇಟ್ ಪದವಿ ನೀಡಿ ಗೌರವಿಸಿದುವು.

ಇವರು ರಾಜ್ಯಸಭೆಯ ನಾಮಕರಣ ಸದಸ್ಯರಾಗಿದ್ದರು. ತಾರಾಶಂಕರ ಬಂದೋಪಾಧ್ಯಾಯರು 1971 ಸೆಪ್ಟೆಂಬರ್ 14 ರಂದು ಕಲ್ಕತ್ತೆಯಲ್ಲಿ ನಿಧನರಾದರು.



ಕಥೆ, ಕಾದಂಬರಿ : ತಾರಾಶಂಕರ



ತಾರಾಸಿಂಗ್

ಬಡ ಹಿಂದು ಕುಟುಂಬದಲ್ಲಿ ಜನಿಸಿ, 17ನೆಯ ವರ್ಷದಲ್ಲಿ ಸಿಕ್ಖ್ ಧರ್ಮ ಸ್ವೀಕರಿಸಿ, ಕೊನೆಗೆ ಸಿಕ್ಖರ ನಾಯಕರಾದವರು ಮಾಸ್ಟರ್ ತಾರಾಸಿಂಗ್. 20ನೆಯ ಶತಮಾನದ ಆದಿಯಿಂದಲೂ ಸಿಕ್ಖರ ಆಸೆ-ಆಕಾಂಕ್ಷೆಗಳಿಗೆ ಸ್ವರೂಪ ಕೊಟ್ಟು ತಾರಾಸಿಂಗ್ ಸಾಮಾಜಿಕ ಹಾಗೂ ರಾಜಕೀಯ ಕ್ಷೇತ್ರಗಳಲ್ಲಿ ಹೋರಾಡಿದರು.

ಜನನ, 1885ರಲ್ಲಿ. ಸಿಕ್ಖ್ ಧರ್ಮ ಸ್ವೀಕರಿಸಿದ ಅನಂತರ ಇವರು ತಾರಾಸಿಂಗ್ ಎಂಬ ಹೆಸರನ್ನು ಇಟ್ಟುಕೊಂಡರು. ವಿಶ್ವವಿದ್ಯಾಲಯದ ಪದವಿ ಪಡೆದು ಶಾಲೆಯೊಂದರಲ್ಲಿ ಅಧ್ಯಾಪಕರಾದಾಗ ಇವರ ಹೆಸರಿಗೆ 'ಮಾಸ್ಟರ್' ಎಂಬ ಅಡ್ಡ ಹೆಸರು ಅಂಟಿಕೊಂಡಿತು. ಜಲಿಯನ್ ವಾಲಾ ಬಾಗ್ ಕಗ್ಗೊಲೆ ಸಂದರ್ಭದಲ್ಲಿ ಇವರು ಚಳುವಳಿ ನಡೆಸಿದಾಗ ಬಂಧನಕ್ಕೊಳಗಾದರು. ಮತ್ತೆ ಕಾನೂನು ಭಂಗ ಚಳುವಳಿ ಸಂದರ್ಭದಲ್ಲಿ, 1930ರಲ್ಲಿ, ಸೆರೆಮನೆ ಸೇರಬೇಕಾಯಿತು.

ಗುರುದ್ವಾರಗಳಲ್ಲಿ ವಂಶಪಾರಂಪರ್ಯವಾಗಿ ಪುರೋಹಿತರಾಗಿ ಬಂದಿದ್ದವರ ಭ್ರಷ್ಟಾಚಾರಗಳನ್ನೆದುರಿಸಿ ತೀವ್ರ ಹೋರಾಟ ನಡೆಸಿದ ತಾರಾಸಿಂಗ್ ಶಿರೋಮಣಿ ಗುರುದ್ವಾರ ಪ್ರಬಂಧಕ ಸಮಿತಿಯ ಕಾರ್ಯದರ್ಶಿಯಾಗಿ, ಕೊನೆಗೆ ಅಧ್ಯಕ್ಷರಾದರು. ಈ ವೇಳೆಗೆ ಸಿಕ್ಖರ ಪ್ರತಿನಿಧಿ ಪಕ್ಷವಾಗಿದ್ದ ಅಕಾಲಿದಳದ ಅಧ್ಯಕ್ಷರೂ ಆಗಿದ್ದರು.

ಸಿಕ್ಖರಿಗಾಗಿ ಪ್ರತ್ಯೇಕ ಸ್ವತಂತ್ರ ರಾಷ್ಟ್ರ ರೂಪಿತವಾಗಬೇಕೆಂದು ಅವರ ಆಕಾಂಕ್ಷೆಯಾಗಿತ್ತು. ಗಾಂಧೀಜೀ 'ಭಾರತ ಬಿಟ್ಟು ತೊಲಗಿ' ಎಂಬ ಚಳುವಳಿ ಆರಂಭಿಸಿದಾಗ, "ಅದರಲ್ಲಿ ಭಾಗವಹಿಸಬೇಡಿ" ಎಂದು ಸಿಕ್ಖರಿಗೆ ಕರೆ ಕೊಟ್ಟರು. ಅದರ ಬದಲು ಸೈನ್ಯಕ್ಕೆ ಹೆಚ್ಚು ಸಂಖ್ಯೆಯಲ್ಲಿ ಸೇರುವಂತೆ ಹೇಳಿದರು. ಗಾಂಧೀಜಿಯ ಅಹಿಂಸಾ ಧೋರಣೆಯಲ್ಲೂ ಇವರಿಗೆ ನಂಬಿಕೆ ಇರಲಿಲ್ಲ. "ಭಾರತಕ್ಕೆ ಸ್ವಾತಂತ್ರ್ಯ ಬಂದದ್ದರಿಂದ ನಾವು ಗುಲಾಮರಾದೆವು" ಎಂದರು.

'ಪಂಜಾಬಿ ಸುಬಾ'—ಸ್ಥಾಪನೆಯ ಹೋರಾಟದಲ್ಲಿ ಸಂತ ಫತೇಸಿಂಗರಂಥ ಹಲವಾರು ಪ್ರಭಾವಶಾಲಿ ನಾಯಕರು ಮೂಡಿದ ಮೇಲೆ ತಾರಾಸಿಂಗರ ಪ್ರಭಾವ ತುಸು ಕಡಮೆಯಾಯಿತು. ಆದರೂ ಸಿಕ್ಖರಿಗೆ ಪ್ರತ್ಯೇಕ ರಾಷ್ಟ್ರ ಬೇಕೆಂಬ ಹೋರಾಟವನ್ನು ಇವರು ಮುಂದುವರಿಸಿದರು.

1967 ನವೆಂಬರ್ 22ರಂದು ತಾರಾಸಿಂಗ್ ನಿಧನರಾದರು.

ತಾಷ್ಕೆಂಟ್ ಒಪ್ಪಂದ

1965ರ ಯುದ್ಧದ ಅನಂತರ ಭಾರತ-ಪಾಕಿಸ್ತಾನಗಳ ಪರಸ್ಪರ ಸಂಬಂಧದಲ್ಲಿ ಹೊಸ ಅಧ್ಯಾಯ ಆರಂಭಿಸಲು ಉದ್ದೇಶಿಸಿ 1966ರಲ್ಲಿ ರೂಪುಗೊಂಡ ಒಪ್ಪಂದ —ತಾಷ್ಕೆಂಟ್ ಒಪ್ಪಂದ.

1965ರ ವೇಳೆಗೆ ಪಾಕಿಸ್ತಾನದ ಸೈನಿಕರು ಛದ್ಮವೇಷಧಾರಿಗಳಾಗಿ ಕಾಶ್ಮೀರಕ್ಕೆ ಬಂದು ಸೇರತೊಡಗಿದರು. ಇದರ ಸುಳಿವು ದೊರೆತ ಕೂಡಲೇ ಭಾರತದ ರಕ್ಷಣಾ ಪಡೆಗಳು ರಕ್ಷಣೆಯ ಕ್ರಮ ಕೈಗೊಂಡುವು. ಅದೇ ವರ್ಷ ಆಗಸ್ಟ್ 27ರಂದು ಪಾಕಿಸ್ತಾನದ ಪಡೆಗಳು ಕಾಶ್ಮೀರದ ಯುದ್ಧ ವಿರಾಮ ರೇಖೆಯನ್ನು ದಾಟಿದುವು. ಸೆಪ್ಟೆಂಬರಿನಲ್ಲಿ ಪಾಕಿಸ್ತಾನ ಭಾರತದ ಮೇಲೆ ದೊಡ್ಡ ಕಾಳಗವನ್ನೇ ಆರಂಭಿಸಿತು. ಭಾರತ ಅದನ್ನು ಯಶಸ್ವಿಯಾಗಿ ಪ್ರತಿಭಟಿಸಿತು. ವಿಶ್ವಸಂಸ್ಥೆಯ ಭದ್ರತಾ ಸಮಿತಿ ಈ ಯುದ್ಧ ಸಮಸ್ಯೆಯನ್ನು ಪರಿಶೀಲಿಸಿ, ಎರಡೂ ದೇಶಗಳಿಗೆ ಯುದ್ಧ ವಿರಾಮದ ಕರೆ ಇತ್ತಿತು. ಇದರ ಪರಿಣಾಮವಾಗಿ ಯುದ್ಧ ನಿಂತಿತಾದರೂ ಪಾಕಿಸ್ತಾನ ಅಲ್ಲಲ್ಲಿ ಚಿಕ್ಕಪುಟ್ಟ ಕದನಗಳನ್ನು ನಡೆಸುತ್ತಲೇ ಇತ್ತು. ಆಗ ರಷ್ಯದ ಪ್ರಧಾನಿ ಕೊಸಿಗಿನ್ ಅವರು ಭಾರತದ ಪ್ರಧಾನಿ ಲಾಲ್‌ಬಹದ್ದೂರ್ ಶಾಸ್ತ್ರಿಯವರಿಗೂ ಪಾಕಿಸ್ತಾನದ ಅಧ್ಯಕ್ಷ ಅಯೂಬ್ ಖಾನರಿಗೂ ಆಹ್ವಾನವಿತ್ತು, ತಾಷ್ಕೆಂಟ್‌ನಲ್ಲಿ ಅವರಿಬ್ಬರ ಭೇಟಿಗೆ ವ್ಯವಸ್ಥೆ ಮಾಡಿದರು.



ರಷ್ಯದ ಉಜ್ಬೆಕಿಸ್ತಾನದ ರಾಜಧಾನಿ –ತಾಷ್ಕೆಂಟ್. 1966 ಜನವರಿ ಪ್ರಥಮ ಭಾಗದಲ್ಲಿ ಶಾಸ್ತ್ರೀ ಹಾಗೂ ಅಯೂಬ್ ಖಾನರು ಇಲ್ಲಿ ಸಂಧಿಸಿದರು. ಜನವರಿ 10ರ ಅಪರಾತ್ರಿ ಒಂದು ಗಂಟೆಗೆ ಇಲ್ಲಿ ಶಾಂತಿ, ಸೌಹಾರ್ದಗಳ ಒಂದು ಘೋಷಣೆಗೆ ಇಬ್ಬರೂ ಸಹಿ ಹಾಕಿದರು. ಎರಡೂ ರಾಷ್ಟ್ರಗಳ ನಡುವಿನ ವಾದ ವಿವಾದ ಪರಿಹರಿಸುವಲ್ಲಿ ಬಲಪ್ರಯೋಗ ಮಾಡಕೂಡದು ; 1965 ಸೆಪ್ಟೆಂಬರ್ ನಿಕ್ಕೆ ಹಿಂದೆ ಇದ್ದ ನೆಲೆಗಳಿಗೆ ಎರಡೂ ದೇಶಗಳ ಪಡೆಗಳೂ ಹಿಂದಿರುಗಬೇಕು; ತಾವು ವಶಪಡಿಸಿಕೊಂಡಿರುವ ಆಸ್ತಿ, ಸರಕುಗಳನ್ನು ಬಿಟ್ಟುಕೊಡಬೇಕು; ಎಂದಿನಂತೆ ರಾಯಭಾರಿ ಸಂಬಂಧ, ವಾಣಿಜ್ಯ ಸಂಬಂಧಗಳನ್ನು ಮುಂದುವರಿಸಬೇಕು : ಆಂತರಿಕ ವಿಷಯಗಳಲ್ಲಿ ಪರಸ್ಪರ ತಲೆಹಾಕಬಾರದು : ಯುದ್ಧ ಕೈದಿಗಳ ವಿನಿಮಯ ಮಾಡಿಕೊಳ್ಳಬೇಕು — ಇದು ತಾಷ್ಕೆಂಟ್ ಒಪ್ಪಂದದ ಸಾರಾಂಶ. ಶಾಸ್ತ್ರಿಯವರು, "ಅಂತರ ರಾಷ್ಟ್ರೀಯ ರಾಜತಾಂತ್ರಿಕ ಕ್ಷೇತ್ರದಲ್ಲಿ ಇದೊಂದು ಗಮನಾರ್ಹ ಸಾಧನೆ"— ಎಂದರು.

ಒಪ್ಪಂದಕ್ಕೆ ಸಹಿ ಹಾಕಿದ ಕೆಲವೇ ಗಂಟೆಗಳ ಅನಂತರ ಶಾಸ್ತ್ರಿಯವರ ಅನಿರೀಕ್ಷಿತ ಮರಣ ಸಂಭವಿಸಿತು.

ತಾಷ್ಕೆಂಟ್ ಒಪ್ಪಂದದ ಮೂಲ ಧ್ಯೇಯಗಳಿಗೆ ಅನುಸಾರವಾಗಿ ಪಾಕಿಸ್ತಾನ ನಡೆದುಕೊಳ್ಳದ್ದರಿಂದ ಆ ಒಪ್ಪಂದ ತನ್ನ ಮಹತ್ವ ಕಳೆದುಕೊಂಡಿದೆ; ಕೇವಲ ಒಂದು ಐತಿಹಾಸಿಕ ಘಟನೆಯಾಗಿ ಮಾತ್ರ ಉಳಿದಿದೆ.

ತಾಳಿಕೋಟೆ

ನೋಡಿ : ರಕ್ಕಸತಂಗಡಿ

ತ್ಯಾಗರಾಜ

ನೋಡಿ : ಸಂಪುಟ ೫

ತ್ರಿಪಿಟಕ

ಬೋಧಿಯನ್ನು ಪಡೆದ ಮೇಲೆ ಭಗವಾನ್ ಬುದ್ಧ ನಲವತ್ತೈದು ವರ್ಷಗಳ ಕಾಲ ಜನರ ಒಳ್ಳೆಯದಕ್ಕಾಗಿ ಬೋಧನೆ ಮಾಡಿದ. ಆ ಬೋಧನೆಗಳನ್ನು ಒಳಗೊಂಡಿರುವ ಗ್ರಂಥವೇ ತಿಪಿಟಕ ಅಥವಾ ತ್ರಿಪಿಟಕ.

'ಪಿಟಕ' ಎಂದರೆ ಬುಟ್ಟಿ; ತಿಪಿಟಕ ಎಂದರೆ ಮೂರು ಬುಟ್ಟಿಗಳು. ಒಬ್ಬರಿಂದ ಅಥವಾ ಒಂದು ಕಡೆಯಿಂದ ಮತ್ತೊಬ್ಬರಿಗೆ ಅಥವಾ ಮತ್ತೊಂದು ಕಡೆಗೆ ಸಾಮಾನು ಸಾಗಿಸಲು ಬುಟ್ಟಿ ಉಪಯೋಗಿಸುತ್ತೇವೆ. ಹೀಗೆ ಪೀಳಿಗೆಯಿಂದ ಪೀಳಿಗೆಗೆ ಬುದ್ಧನ ಬೋಧನೆಗಳೆಂಬ ಅಮೂಲ್ಯ ವಸ್ತುವನ್ನು ಸಾಗಿಸುವ ಬುಟ್ಟಿಯೇ ಪಿಟಕ. ಇಂಥ ಪಿಟಕಗಳು ಮೂರು: ಸುತ್ತ ಪಿಟಕ, ವಿನಯ ಪಿಟಕ, ಅಭಿಧಮ್ಮ ಪಿಟಕ. ಈ ಗ್ರಂಥ ಸಮೂಹಕ್ಕೆ ತಿಪಿಟಕ ಎಂಬ ಹೆಸರು ಬಂದಿದೆ.

ಭಗವಾನ್ ಬುದ್ಧನ ಕಾಲದಲ್ಲಿ ಓದು ಬರಹ ಬಳಕೆಯಲ್ಲಿರಲಿಲ್ಲ. ಜ್ಞಾನಪ್ರಸಾರ ಬಾಯಿಮಾತಿನ ಮೂಲಕವೇ ಆಗಬೇಕಾಗಿತ್ತು. ಗುರು ಶಿಷ್ಯನಿಗೆ ಹೇಳುವುದು, ಅವನು ತನ್ನ ಶಿಷ್ಯನಿಗೆ ಹೇಳುವುದು —ಹೀಗೆಯೇ ಜ್ಞಾನ ಪ್ರಸಾರವಾಗುತ್ತಿತ್ತು. ಬುದ್ಧನ ಬೋಧನೆಗಳು ಪ್ರಸಾರವಾದದ್ದು ಇದೇ ಬಗೆಯಾಗಿ. ಈ ರೀತಿ ಒಬ್ಬರಿಂದ ಮತ್ತೊಬ್ಬರಿಗೆ ಕೇವಲ ಬಾಯಿ ಮಾತಿನ ಮೂಲಕ ವಿಷಯಗಳನ್ನು ತಿಳಿಸುವಾಗ, ಹೇಳುವ ವ್ಯಕ್ತಿಯ ಕುಂದು ಕೊರತೆಗಳಿಂದ ಆ ವಿಷಯಗಳಲ್ಲಿ ತಪ್ಪು ಸೇರಿಕೊಳ್ಳಲು ಅವಕಾಶವಿರುತ್ತದೆ. ಬುದ್ಧನ ಶಿಷ್ಯರು ಈ ಸಾಧ್ಯತೆಯನ್ನು ತಿಳಿದಿದ್ದರು. ಆದ್ದರಿಂದ ಬುದ್ಧನ ಬೋಧನೆಗಳನ್ನು ಶುದ್ಧ ರೂಪದಲ್ಲಿ ಉಳಿಸುವ ಪ್ರಯತ್ನ ಮಾಡಿದರು. ಆ ಪ್ರಯತ್ನಗಳೇ ಸಂಗೀತಿಗಳು.

ಸಂಗೀತಿ ಎಂದರೆ ಬುದ್ಧ ಭಗವಾನನ ಬೋಧನೆಗಳನ್ನು ಬಲ್ಲ, ಅವುಗಳನ್ನು ಕಂಠಪಾಠ ಮಾಡಿದ್ದ ಭಿಕ್ಷುವರ್ಗದವರು ಒಂದು ಕಡೆ ಸೇರಿ ತಮಗೆ ಗೊತ್ತಿದ್ದೆಲ್ಲವನ್ನೂ ಪಠಿಸುವುದು; ಹಾಗೆ ಹೇಳಿದುದನ್ನು ಉಳಿದವರು ಕೇಳಿ, ತಾವು ತಿಳಿದಿದ್ದುದರೊಂದಿಗೆ ತಾಳೆ ನೋಡುವುದು. ಹೀಗೆ ಒಬ್ಬರು ಹೇಳಿದ್ದನ್ನು ಅನೇಕರು ಪರೀಕ್ಷಿಸಿ ತಾಳೆ ನೋಡಿ ಯಾವುದು ಎಲ್ಲರಿಗೂ ಶುದ್ಧವೆಂದು ಸಮ್ಮತವಾಗುವುದೋ, ಅದನ್ನು ಉಳಿಸಿ ಕೊಳ್ಳುವುದು. ತಿಪಿಟಕಗಳು ಬರವಣಿಗೆಗೆ ಇಳಿಯುವ ವರೆಗೆ ಇಂಥ ನಾಲ್ಕು ಸಂಗೀತಿಗಳು ನಡೆದುವು.

ಮೊದಲನೆಯ ಸಂಗೀತಿ ಬುದ್ಧನ ಪರಿನಿರ್ವಾಣ ಆದ ಸ್ವಲ್ಪ ಸಮಯದಲ್ಲಿಯೇ ರಾಜಗೃಹದಲ್ಲಿ ನಡೆಯಿತು. ಅದರಲ್ಲಿ ಐನೂರು ಜನ ಅತಿ ಶ್ರದ್ಧಾವಂತ ಭಿಕ್ಷುಗಳು ಭಾಗವಹಿಸಿದ್ದರು. ಅವರ ಜ್ಞಾಪಕಶಕ್ತಿ ಅದ್ಭುತವಾಗಿತ್ತು. ತಾವು ಕೇಳಿದ್ದನ್ನು ಚಾಚೂ ತಪ್ಪದೆ ಹೇಳುವ ಸಾಮರ್ಥ್ಯ ಅವರಿಗಿತ್ತು. ಭಗವಾನರ ಅತಿ ಸಮೀಪವರ್ತಿಯಾಗಿದ್ದ ಆನಂದ ಥೇರಾ ಅದರಲ್ಲಿದ್ದ. ಸುತ್ತ ಮತ್ತು ಅಭಿಧಮ್ಮ ಪಿಟಕಗಳನ್ನು ಆತ ಹೇಳಿದ. ಉಪಾಲಿ ಎಂಬ ಮತ್ತೊಬ್ಬ ಭಿಕ್ಷು ವಿನಯ ಪಿಟಕವನ್ನು ಪಠಿಸಿದ. ಸುಮಾರು ಏಳು ತಿಂಗಳ ಕಾಲ ಈ ಸಂಗೀತಿ ನಡೆಯಿತು. ಭಿಕ್ಷು ಸಮೂಹ ಆನಂದ ಮತ್ತು ಉಪಾಲಿ ಪಠಿಸಿದ್ದನ್ನು ಕೇಳಿ ಒಪ್ಪಿ ಕೊಂಡಿತು. ತಿಪಿಟಕಕ್ಕೆ ರೂಪ ಬಂದಿತು.

ಇದಾದ ನೂರು ವರ್ಷಗಳ ಅನಂತರ ವೈಶಾಲಿಯಲ್ಲಿ ಎರಡನೆಯ ಸಂಗೀತಿಯೂ ಮತ್ತೆ ಇನ್ನೂರು ವರ್ಷಗಳ ಅನಂತರ ಅಶೋಕನ ಕಾಲದಲ್ಲಿ ಮೂರನೆಯ ಸಂಗೀತಿಯೂ ನಡೆದುವು. ಇದಾದ ಸುಮಾರು ನೂರೈವತ್ತು ವರ್ಷಗಳ ಅನಂತರ, ಕ್ರಿ.ಪೂ. 88ರಲ್ಲಿ, ಲಂಕೆಯ ಅಲಿ ಲೇನದಲ್ಲಿ ನಾಲ್ಕನೆಯ ಸಂಗೀತಿ ನಡೆಯಿತು. ತಿಪಿಟಕ ಬರಹರೂಪಕ್ಕೆ ಇಳಿದದ್ದು ಈ ಸಂಗೀತಿಯಲ್ಲಿ. ಓಲೆಗರಿಯಲ್ಲಿ ತಿಪಿಟಕವನ್ನು ಬರೆದಿಡ ಲಾಯಿತು. ಬರೆದಿಡುವ ಮುನ್ನ ನೂರಾರು ಬಾರಿ ತಾಳೆ ನೋಡಿ, ಪರೀಕ್ಷಿಸಿ ತಪ್ಪು ಸೇರಿಕೊಳ್ಳದಂತೆ ಎಚ್ಚರಿಕೆ ವಹಿಸಲಾಯಿತು. ಇಂದೂ ತಿಪಿಟಕ ಕ್ರಿ.ಪೂ. 88ರಲ್ಲಿ ಬರೆದಂತೆಯೇ ಇದೆ.

ಪ್ರತಿಯೊಂದು ಪಿಟಕವನ್ನು ವಿವಿಧ ಭಾಗಗಳಾಗಿ ವಿಂಗಡಿಸಿದ್ದಾರೆ. ಸುತ್ತ ಪಿಟಕದಲ್ಲಿ ಐದು ಭಾಗಗಳೂ ವಿನಯ ಪಿಟಕದಲ್ಲಿ ಐದು ಭಾಗಗಳೂ ಅಭಿಧಮ್ಮ ಪಿಟಕದಲ್ಲಿ ಏಳು ಭಾಗಗಳೂ ಇವೆ. ಖುದ್ದಕ ನಿಕಾಯ ಎಂಬುದು ಸುತ್ತಪಿಟಕದ ಒಂದು ಭಾಗ. ಅತಿ ಪ್ರಸಿದ್ಧವಾಗಿರುವ ಧಮ್ಮಪದ ಮತ್ತು ಜಾತಕ ಕತೆಗಳು ಖುದ್ದಕ ನಿಕಾಯದಲ್ಲಿ ಇವೆ.

ಬುದ್ಧ, ತನ್ನ ಬೋಧನೆಯನ್ನು ಜನರಿಗೆ ತಿಳಿಯುವ ಭಾಷೆಯಲ್ಲಿಯೇ ಮಾಡುತ್ತಿದ್ದ. ಹೀಗಾಗಿ ತಿಪಿಟಕವೂ ಪಾಳೀ ಭಾಷೆಯಲ್ಲಿದೆ. ಬುದ್ಧನು ಬೋಧೆ ಮಾಡುತ್ತಿದ್ದ ಮಗಧ ದೇಶದಲ್ಲಿ ಜನರು ಆಡುತ್ತಿದ್ದ ಭಾಷೆ ಅದು.

ತಿಪಿಟಕದ ಅನಂತರ ಅನೇಕ ಉದ್ದಾಮಗ್ರಂಥಗಳು ಪಾಳಿಭಾಷೆಯಲ್ಲಿ ರಚಿತವಾಗಿದ್ದರೂ ಪಾಳೀಸಾಹಿತ್ಯದ ತಿರುಳು ಇರುವುದು ತಿಪಿಟಕದಲ್ಲಿಯೇ. ಆದ್ದರಿಂದ ತಿಪಿಟಕವಿಲ್ಲದೆ ಪಾಳೀ ಸಾಹಿತ್ಯವೇ ಇಲ್ಲ ಎನ್ನಬಹುದು.

ಸಾರನಾಥ ಶಿಲ್ಪದಲ್ಲಿ ಬುದ್ಧ ಬೋಧಿಸಿದ ಸತ್ಯಗಳು



ತಿರುಕ್ಕುರಳ್

ನೋಡಿ : ತಿರುವಳ್ಳುವರ್–ಸಂಪುಟ ೫

ತಿರುಪತಿ

ಪದ್ಮಾವತಿಯನ್ನು ಮದುವೆಯಾಗಲು ಶ್ರೀನಿವಾಸ ಕುಬೇರನ ಹತ್ತಿರ ಸಾಲ ಮಾಡಿದ. ಕುಬೇರ ಕೊಟ್ಟ ಸಾಲದ ಹಣವನ್ನು ಕೊಳಗದಲ್ಲಿ ಅಳೆದು ಅಳೆದು ಬಳಲಿದ ಶ್ರೀನಿವಾಸ, ಕೊಳಗವನ್ನೇ ತಲೆಕೆಳಗೆ ಇಟ್ಟು ಕೊಂಡು ಆದಿಶೇಷನ ಮೇಲೆ ಮಲಗಿಬಿಟ್ಟ.

—ತಿರುಪತಿ ಅಥವಾ ಗೋವಿಂದ ರಾಜಪಟ್ಟಣದಲ್ಲಿರುವ ಗೋವಿಂದ ರಾಜ ಮೂರ್ತಿಯ ಬಗೆಗಿನ ಪ್ರಚಲಿತ ದಂತಕಥೆ ಇದು.



ಬೆಟ್ಟದ ಬುಡದಲ್ಲಿರುವ ತಿರುಪತಿ : ಗೋವಿಂದರಾಜ ಮೂರ್ತಿ ದೇವಾಲಯ

ತಿರುಪತಿ ಆಂಧ್ರಪ್ರದೇಶದ ಚಿತ್ತೂರು ಜಿಲ್ಲೆಯಲ್ಲಿದೆ. ಶ್ರೀನಿವಾಸ, ವೆಂಕಟೇಶ, ಬಾಲಾಜಿ ಮುಂತಾದ ಹೆಸರುಗಳಿರುವ ವಿಷ್ಣುವಿನ ದೇವಾಲಯ ಇರುವುದು ಈ ಊರಿನ ಪಕ್ಕದಲ್ಲಿರುವ ತಿರುಮಲೆ ಬೆಟ್ಟದ ಮೇಲೆ. ಪೂರ್ವಘಟ್ಟ ಈ ಪ್ರದೇಶದಲ್ಲಿ ತಿರುವು, ಏರು, ತಗ್ಗುಗಳಿಂದ ಸರ್ಪಾಕಾರದಲ್ಲಿ ಕಾಣುವುದಲ್ಲದೆ, ತಿರುಪತಿಯ ಏಳುಬೆಟ್ಟಗಳು ಆ ಸರ್ಪದ ಏಳು ಹೆಡೆಗಳಂತೆ ತೋರುತ್ತವೆ. ಇದರಿಂದ ತಿರುಮಲೆಗೆ ಶೇಷಾಚಲ —ಆದಿಶೇಷನ ಬೆಟ್ಟ— ಎಂಬ ಹೆಸರೂ ಇದೆ.

ವೆಂಕಟೇಶ್ವರ, ವೆಂಕಟಾಚಲಪತಿ ಎಂದು ವಿಖ್ಯಾತವಾಗಿರುವ ಶ್ರೀನಿವಾಸನ ವಿಗ್ರಹ ಪೂರ್ವಾಭಿಮುಖವಾಗಿದೆ. ಇದು ಕಪ್ಪುಶಿಲೆಯ ಸುಂದರ ಮೂರ್ತಿ : ಎತ್ತರ 7 ಅಡಿ. ವೆಂಕಟೇಶ್ವರ ವಿಗ್ರಹ ವೈಷ್ಣವ ಮೂರ್ತಿಯಲ್ಲವೆಂದೂ ಅದು ದೇವಿ ಅಥವಾ ವೀರಭದ್ರ ವಿಗ್ರಹವಿರಬಹುದೆಂದೂ ಒಂದು ಅಭಿಪ್ರಾಯವಿದೆ.

ದೇವಾಲಯಕ್ಕೆ ಮೂರು ಪ್ರಾಕಾರಗಳಿವೆ. ಬೆಳಗಿನ ಝಾವ ಸುಪ್ರಭಾತ ಸೇವೆಯಿಂದ ಆರಂಭವಾಗಿ ರಾತ್ರಿ ಏಕಾಂತ ಸೇವೆಯೊಂದಿಗೆ ದಿನದ ಸೇವೆ ಕೊನೆಗಾಣುತ್ತದೆ. ಮೂರು ಬಾರಿ ಧರ್ಮದರ್ಶನಕ್ಕೆ ಅವಕಾಶವಿದೆ. ಚೈತ್ರಮಾಸದಲ್ಲಿ ಮೂರು ದಿನಗಳ ವಸಂತೋತ್ಸವ, ಯುಗಾದಿಯಿಂದ 40 ದಿನಗಳ ನಿತ್ಯೋತ್ಸವ, ನವರಾತ್ರಿಯಲ್ಲಿ 9 ದಿವಸಗಳ ಬ್ರಹ್ಮೋತ್ಸವ ಇಲ್ಲಿ ನಡೆಯುವ ಮುಖ್ಯ ಉತ್ಸವಗಳು.

ಶ್ರೀನಿವಾಸ ದೇವಾಲಯದ ಆವರಣದಲ್ಲಿ ರಾಮಾನುಜರ ದೇಗುಲವಿದೆ. ದೇವಾಲಯದ ಹತ್ತಿರ ಸ್ವಾಮಿ ಪುಷ್ಕರಣಿ ಇದೆ. ಇದರ ಒಂದು ಮೂಲೆಯಲ್ಲಿ ವರಾಹಸ್ವಾಮಿ ದೇವಾಲಯವಿದೆ. ಸುಮಾರು 2 ಮೈಲು ದೂರದಲ್ಲಿರುವ ಆಕಾಶಗಂಗೆಯಿಂದ ತಂದ ನೀರನ್ನು ಶ್ರೀನಿವಾಸನ ಪೂಜೆಗೆ ಬಳಸುತ್ತಾರೆ. ಪಾಪನಾಶಿನಿ ಮುಂತಾದ ತೀರ್ಥಗಳಿವೆ.

ಬೆಟ್ಟದ ಕೆಳಗಿರುವ ತಿರುಪತಿಯಲ್ಲಿ ಗೋವಿಂದರಾಜ ಮೂರ್ತಿ ಇರುವ ದೇವಾಲಯವಿದೆ. ಈ ಮೂರ್ತಿ ರಾಮಾನುಜಾಚಾರ್ಯರು ಚಿದಂಬರದಿಂದ ತಂದು ಸ್ಥಾಪಿಸಿದ್ದು. ಕೋದಂಡರಾಮ ದೇವಸ್ಥಾನದಲ್ಲಿರುವ ವಿಗ್ರಹ ಜಾಂಬವಂತ ಪ್ರತಿಷ್ಠಿಸಿದ್ದು ಎಂದು ಪ್ರತೀತಿ. ತಿರುಪತಿಯಿಂದ 3 ಮೈಲು ದೂರ ತಿರುಚಾನೂರಿನಲ್ಲಿ ಪದ್ಮಾವತಿ ದೇವಸ್ಥಾನ ಇದೆ. ದೇವಿಗೆ ಅಲಮೇಲು ಮಂಗಮ್ಮ ಎಂದೂ ಕರೆಯುತ್ತಾರೆ.

ತಮಿಳು ಸಾಹಿತ್ಯದಲ್ಲಿ ತಿರುಪತಿಯನ್ನು ವೇಂಗಡಮ್ ಎಂದು ಕರೆದಿದ್ದಾರೆ. ಅನೇಕ ಭಕ್ತರು, ರಾಜರು ಆಗಾಗ್ಗೆ ದೇವಾಲಯದ ಜೀರ್ಣೋದ್ಧಾರ, ವಿಸ್ತರಣ ಮಾಡಿದುದರ ಫಲವಾಗಿ ತಿರುಮಲೆಯ ಶ್ರೀನಿವಾಸ ದೇವಸ್ಥಾನದಲ್ಲಿ ವಿವಿಧ ವಾಸ್ತುಶಿಲ್ಪ ಶೈಲಿಯ ರಚನೆಗಳನ್ನು ಕಾಣಬಹುದು. ಚೋಳ, ವಿಜಯನಗರ ಹಾಗೂ ನೂತನ ಶೈಲಿಯ ನಿರ್ಮಾಣಗಳನ್ನು ಅಕ್ಕಪಕ್ಕಗಳಲ್ಲಿ ಕಾಣಬಹುದು. ಈ ಪ್ರದೇಶದಲ್ಲಿರುವ ಶಾಸನಗಳಲ್ಲಿ 790ರದ್ದು ಅತಿ ಪ್ರಾಚೀನವಾದದ್ದು.

ತಿರುಪತಿ–ತಿರುಮಲೈ ದೇವಸ್ಥಾನಗಳ ಒಟ್ಟು ಆದಾಯ ವರ್ಷಕ್ಕೆ ಸುಮಾರು ನಾಲ್ಕೂವರೆ ಕೋಟಿ ರೂಪಾಯಿ. ಈ ದೇವಸ್ಥಾನಗಳ ಆಡಳಿತ ಮಂಡಲಿ ವೆಂಕಟೇಶ್ವರ ವಿಶ್ವವಿದ್ಯಾನಿಲಯ, ವೆಂಕಟೇಶ್ವರ ಓರಿಯೆಂಟಲ್ ರಿಸರ್ಚ್ ಇನ್‌ಸ್ಟಿಟ್ಯೂಟ್, ಪಾಠಶಾಲೆ ಮುಂತಾದ ವಿದ್ಯಾಸಂಸ್ಥೆಗಳನ್ನು ನಡೆಸುತ್ತಿದೆ.

ತಿರುಪತಿಯ ಜನಸಂಖ್ಯೆ 65.813.

ತಿರುವನಂತಪುರ

ಕೇರಳದ ರಾಜಧಾನಿ ತಿರುವನಂತಪುರ.

ಮೊದಲು ಇದು ತಿರುವಾಂಕೂರು ರಾಜ್ಯದ ರಾಜಧಾನಿಯಾಗಿತ್ತು. ಅನಂತರ ತಿರುವಾಂಕೂರು-ಕೊಚ್ಚಿ ರಾಜ್ಯದ ರಾಜಧಾನಿಯಾಯಿತು.

ಇಲ್ಲಿನ ಕಂಡಿಯಾರ್ ಅರಮನೆ, ವಿಧಾನ ಸಭಾಭವನ, ವಿಕ್ಟೋರಿಯಾ ಜ್ಯೂಬಿಲಿ ಪುರಭವನ, ವಿಶ್ವವಿದ್ಯಾನಿಲಯದ ಕಟ್ಟಡಗಳು, ಚಿತ್ರಾಲಯ, ವಸ್ತುಸಂಗ್ರಹಾಲಯಗಳು ಪ್ರೇಕ್ಷಣೀಯವಾದವು.

ಶೇಷಶಾಯಿ ಪದ್ಮನಾಭಸ್ವಾಮಿಯ ದೇವಸ್ಥಾನ ತಿರುವನಂತಪುರದಲ್ಲಿದೆ. ಮೃಗಾಲಯ, ಮತ್ಸ್ಯಾಗಾರ, ವಸ್ತುಸಂಗ್ರಹಾಲಯ ಮುಂತಾದವು

ತಿರುವನಂತಪುರ ವಸ್ತು ಸಂಗ್ರಹಾಲಯ : ಶ್ರೇಷ್ಠ ಕಲಾಕೃತಿಗಳು



ನಗರದ ಇತರ ಆಕರ್ಷಣೆಗಳು. ಚಿತ್ರಾಲಯದಲ್ಲಿ ಖ್ಯಾತ ಚಿತ್ರಕಾರ ರವಿವರ್ಮನ ಅನೇಕ ಚಿತ್ರಗಳಿವೆ. ವಸ್ತುಸಂಗ್ರಹಾಲಯದಲ್ಲಿ ದಕ್ಷಿಣ ಭಾರತದ ಅನೇಕ ಶ್ರೇಷ್ಠ ಕಲಾಕೃತಿಗಳಿವೆ.

ತಿರುವನಂತಪುರದ ಜನಸಂಖ್ಯೆ 4,09,627. ಸಮುದ್ರ ತೀರದಿಂದ ಹಿಂದಕ್ಕೆ ಕ್ರಮೇಣ ಏರುವ ಭೂಭಾಗದ ಮೇಲೆ ಈ ನಗರ ಹರಡಿಕೊಂಡಿದೆ. ಇಲ್ಲಿಗೆ ಸಮೀಪದಲ್ಲಿರುವ ಕೋವಲಮ್ ಸಮುದ್ರತೀರಪ್ರದೇಶ ಅತ್ಯಂತ ಆಕರ್ಷಕವಾದದ್ದು. ಇದು ಹೆಸರಾಂತ ಪ್ರವಾಸೀ ಕೇಂದ್ರ.

ತಿರುವನಂತಪುರದಲ್ಲಿ ತಿರುವಾಂಕೂರು ವಿಶ್ವವಿದ್ಯಾನಿಲಯವಿದೆ.

ಈ ನಗರದಲ್ಲಿ ಹಗ್ಗ, ರಬ್ಬರ್ ಪದಾರ್ಥಗಳು, ವಸ್ತ್ರೋದ್ಯಮ, ರಾಸಾಯನಿಕ ವಸ್ತುಗಳು, ತೆಂಗಿನೆಣ್ಣೆ ತಯಾರಿಸುವ ಉದ್ಯಮಗಳಿವೆ. ರಸ್ತೆ ರೈಲು ಸಾರಿಗೆಗಳೂ ಹಿನ್ನೀರು ನಾಲೆಗಳ ಉತ್ತಮ ಸಾರಿಗೆಯೂ ಇವೆ. ಚಿಕ್ಕ ಬಂದರು ಮತ್ತು ವಿಮಾನ ನಿಲ್ದಾಣ ಇವೆ.

ನೋಡಿ : ಅನಂತಶಯನಂ

ತಿರುವಳ್ಳುವರ್

ನೋಡಿ : ಸಂಪುಟ ೫

ತ್ರಿಪುರ

ಬೆಟ್ಟದ ಶ್ರೇಣಿಗಳು, ಕಣಿವೆಗಳು, ನಿಬಿಡ ಕಾನನಗಳಿಂದ ಕೂಡಿರುವ ಪ್ರದೇಶ —ತ್ರಿಪುರ.

ಹದಿನಾರನೆಯ ಶತಮಾನದಲ್ಲಿ ತ್ರಿಪುರ ರಾಜ್ಯ ಉಚ್ಛ್ರಾಯ ಸ್ಥಿತಿಯಲ್ಲಿತ್ತು. ಬಂಗಾಳ, ಅಸ್ಸಾಂ, ಬರ್ಮಾಗಳ ಬಹುಪಾಲು ಪ್ರದೇಶ ಆಗ ಇದರ ಅಧೀನದಲ್ಲಿತ್ತು. 1733ರಲ್ಲಿ ಮೊಘಲರು ಇದನ್ನು ವಶಪಡಿಸಿಕೊಂಡರು. ಅನಂತರ ಬ್ರಿಟಿಷರ ಆಳ್ವಿಕೆಗೆ ಇದು ಒಳಪಟ್ಟಿತು. 1949ರಲ್ಲಿ ಭಾರತ ಗಣರಾಜ್ಯಕ್ಕೆ ಸೇರಿದ ತ್ರಿಪುರ ಕೇಂದ್ರಾಡಳಿತ ಪ್ರದೇಶವಾಗಿ ಘೋಷಿಸಲ್ಪಟ್ಟಿತು. 1972 ಜನವರಿ 21ರಂದು ಪ್ರತ್ಯೇಕ ರಾಜ್ಯವಾಯಿತು.

ಧರ್ಮನಗರ, ಕೈಲಾಸಹರ, ಕಮಲ್‌ಪುರ, ಖೊವಾಯ್ ಹಾಗೂ ಅಗರ್‌ತಲ ಇವು ತ್ರಿಪುರದಲ್ಲಿ ನಾಲ್ಕು ಕಣಿವೆ ಪ್ರದೇಶಗಳು. ರಾಜ್ಯದ ಪಶ್ಚಿಮಭಾಗದಲ್ಲಿ ತಗ್ಗಾದ ಬೆಟ್ಟಗಳಿವೆ. ಪೂರ್ವಭಾಗದಲ್ಲಿ ಸಮಾನಾಂತರವಾಗಿ ಹಬ್ಬಿರುವ ಬೆಟ್ಟ ಶ್ರೇಣಿಗಳಿವೆ. ಇದರ ಸ್ವಲ್ಪಭಾಗದಲ್ಲಿ ಚಹ ತೋಟಗಳಿವೆ. ಬೆಟ್ಟಗುಡ್ಡಗಳ ನಾಡಾದ ಈ ರಾಜ್ಯದಲ್ಲಿ ವರ್ಷಕ್ಕೆ ಸರಾಸರಿ 80 ಅಂಗುಲ ಮಳೆ ಬೀಳುತ್ತದೆ. ಕಾಡುಗಳಲ್ಲಿ ಸಾಲ ಮುಂತಾದ ಉಪಯುಕ್ತ ಮರ ಹಾಗೂ ಬಿದಿರು, ಬೊಂಬು, ಬೆತ್ತಗಳು ಬೆಳೆಯುತ್ತವೆ. ಕಾಡಾನೆ, ಕಾಡೆಮ್ಮೆ, ಹುಲಿ, ಚಿರತೆ ಹಾಗೂ ಜಿಂಕೆಗಳು ಇಲ್ಲಿನ ವನ್ಯ ಮೃಗಗಳು. ಬೊಂಬಿನ ಮನೆ ಕಟ್ಟುತ್ತಾರೆ. ಎಣ್ಣೆ, ಉಪ್ಪಿನಕಾಯಿ, ಮೊಸರು ಮುಂತಾದುವನ್ನು ಸಂಗ್ರಹಿಸಲು ಬೊಂಬಿನ ಅಂಡೆಗಳನ್ನು ಉಪಯೋಗಿಸುತ್ತಾರೆ. ಆಟದ ಸಾಮಾನು, [illegible]





ಗುಡ್ಡಗಾಡಿನ ಮಹಿಳೆಯರು : ತ್ರಿಪುರ ಪ್ರಜೆಗಳು

ಇಲ್ಲಿ [illegible]. ಬೊಂಬುಗಳೇ ಬೇಕು. ಜನ ಹುಕ್ಕಾ ಸೇದುವುದು ಸರ್ವಸಾಮಾನ್ಯ. ರಾಜ್ಯದಲ್ಲಿ ಗುಮತಿ ಪ್ರಧಾನ ನದಿ. ದೇವ್, ಜೂರಿ, ಮನು, ಫಲಾಯ್, ಖೊವಾಯ್ ಇತರ ನದಿಗಳು. ಭತ್ತ ಇಲ್ಲಿನ ಮುಖ್ಯ ಬೆಳೆ. ನಾರು ಎರಡನೆಯ ಮುಖ್ಯ ಬೆಳೆ. ಚಹ, ಕಬ್ಬು, ಹತ್ತಿ, ಎಣ್ಣೆಬೀಜಗಳೂ ಬೆಳೆಯುತ್ತವೆ. ಮಣ್ಣಿನಿಂದಲೇ ನದಿ ಹೊಳೆಗಳಿಗೆ ಕಟ್ಟೆ ಕಟ್ಟಿ, ತಾತ್ಕಾಲಿಕ ಕಾಲುವೆಗಳ ಮೂಲಕ ನೀರಾವರಿ ವ್ಯವಸ್ಥೆ ಮಾಡುತ್ತಾರೆ. ಅನಾನಸ್, ಕಿತ್ತಳೆ, ಲಿಂಬೆ, ಹಲಸು, ಬಾಳೆ, ಮಾವು, ಪರಂಗಿ ಹಾಗೂ ಸೀಬೆ ಹಣ್ಣುಗಳು ತ್ರಿಪುರದಲ್ಲಿ ಬೆಳೆಯುತ್ತವೆ. ಕೃಷಿ ಬಿಟ್ಟರೆ ಹೈನುಗಾರಿಕೆ ಜನರ ಇನ್ನೊಂದು ಮುಖ್ಯ ಕಸಬು. ಗುಮತಿ ಜಲವಿದ್ಯುತ್ ಯೋಜನೆ ರೂಪುಗೊಂಡು, ವಿದ್ಯುತ್ತು ಉತ್ಪಾದನೆಯಾಗುತ್ತಿದೆ.

ಉಜ್ವಲ ಬಣ್ಣ ಹಾಗೂ ಮೋಹಕ ವಿನ್ಯಾಸಗಳುಳ್ಳ ಕೈಮಗ್ಗದ ಬಟ್ಟೆ ಇಲ್ಲಿನ ಮುಖ್ಯ ಗೃಹ ಕೈಗಾರಿಕೆ. ಸ್ತ್ರೀಪುರುಷರ ಉಡುಗೆ ತೊಡುಗೆಗಳು ವಿಶಿಷ್ಟವಾಗಿವೆ. ಅದರಲ್ಲೂ ಸ್ತ್ರೀಯರ ಆಭರಣಗಳು ಗಮನ ಸೆಳೆಯುವಂಥವು.

ರಾಜಧಾನಿ ಅಗರ್‌ತಲದಲ್ಲಿ ಹಿಂದಿನ ರಾಜರ ಭವ್ಯ ಅರಮನೆಯಿದೆ. ಉದಯಪುರ, ಅಮರಪುರಗಳಲ್ಲೂ ಪ್ರಾಚೀನ ದೇವಾಲಯಗಳಿವೆ. ರುದ್ರಸಾಗರ [illegible] ತ್ರಿಪುರದ ಪ್ರೇಕ್ಷಣೀಯ ಸ್ಥಳಗಳಲ್ಲೊಂದು.

ಈ ರಾಜ್ಯದ ಬಹುಪಾಲು ಗಡಿ [illegible]. ತ್ರಿಪುರಕ್ಕೆ ಭಾರತದ ಸಂಪರ್ಕವಿರುವುದು ಅಸ್ಸಾಮಿನ ಚಾಚಾರ್ [illegible]

[illegible]
ಅಗರ್ ತಲದಿಂದ ಕಲ್ಕತ್ತೆಗೆ ವಿಮಾನ ಸಾರಿಗೆ ಇದೆ.

[illegible]
[illegible]



ತ್ರಿಪುರ ಗ್ರಾಮೀಣ ಬಾಲಿಕೆಯರು

[illegible]
[illegible]
[illegible]
ಪ್ರತಿ ಹಳ್ಳಿಯ ಮುಖ್ಯಸ್ಥ ಒಬ್ಬ ಸರದಾರ.

[illegible]
ಸಂಪರ್ಕ ಬಹು ಕಾಲ ದುಸ್ಸಾಧ್ಯವಾಗಿತ್ತು.

ನೋಡಿ : ಅಗರ್ ತಲ

ತ್ರಿಮೂರ್ತಿ

ನೋಡಿ : ಬ್ರಹ್ಮ, ಹರ, ಹರಿ

ತೀರ್ಥಂಕರರು

[illegible]
ಎನ್ನುತ್ತಾರೆ. ಇವರಿಗೆ ಅರ್ಹಂತರೆಂದೂ ಹೆಸರಿದೆ.

[illegible]
[illegible]
ಜನಿಸಿದ ಋಷಭದೇವ ಮೊದಲನೆಯ ತೀರ್ಥಂಕರ. ಇವನನ್ನು ಆದಿನಾಥ, ಆದಿತೀರ್ಥಂಕರ ಎಂದೂ ಕರೆಯುತ್ತಾರೆ. ಇವನ ತರುವಾಯ ಕ್ರಮವಾಗಿ ಅಜಿತನಾಥ, ಸಂಭವನಾಥ, ಅಭಿನಂದನನಾಥ, ಸುಮತಿನಾಥ, ಪದ್ಮಪ್ರಭ, ಸುಪಾರ್ಶ್ವನಾಥ, ಚಂದ್ರಪ್ರಭ, ಪುಷ್ಪದಂತ, ಶೀತಲನಾಥ, ಶ್ರೇಯಾಂಸ, ವಾಸುಪೂಜ್ಯ, ವಿಮಲನಾಥ, ಅನಂತನಾಥ, ಧರ್ಮನಾಥ, ಶಾಂತಿನಾಥ, ಕುಂಥುನಾಥ, ಅರನಾಥ, ಮಲ್ಲಿನಾಥ, ಮುನಿಸುವ್ರತ,
[illegible]

[illegible]
ಕುಲದಲ್ಲಿ ಜನಿಸಿದವರು ; ಅರಸು ಮಕ್ಕಳು. ಕೆಲವರಂತೂ ಹಲವು ದಿನ
[illegible]
[illegible]
ಮುಂದೆ ಜನರಿಗೆ ಧರ್ಮವನ್ನು ಬೋಧಿಸಿ ನಿರ್ವಾಣ ಹೊಂದಿದರು.

ತೀರ್ಥಂಕರರನ್ನು ಕುರಿತ ಹೇಳಿಕೆ ಹೀಗಿದೆ :

ಹಿಂದಿನ ಹಲವು ಜನ್ಮಗಳಲ್ಲಿ ಪುಣ್ಯವನ್ನು ಸಂಪಾದಿಸುತ್ತ ಬಂದು, ಕೊನೆಯ ಜನ್ಮದಲ್ಲಿ ಇವರೆಲ್ಲ ತೀರ್ಥಂಕರ ಪದವನ್ನು ಪಡೆದಿದ್ದಾರೆ. ಇವರು ಮುಕ್ತಾತ್ಮರು. ಇವರು ತಾಯಿಯ ಗರ್ಭದಲ್ಲಿ ಅವತರಿಸಿದಾಗ, ಅವಳಿಗೆ ಶುಭ ಕನಸುಗಳು ಬೀಳುತ್ತವೆ. ದೇವತೆಗಳು ಬಂದು ತೀರ್ಥಂಕರರ ತಾಯಿಯನ್ನು ಸೇವಿಸುವರು. ಈ ಸಂದರ್ಭಕ್ಕೆ 'ಗರ್ಭಾವತರಣ ಕಲ್ಯಾಣ' ಎನ್ನುವರು. ಆಮೇಲೆ ತೀರ್ಥಂಕರನಾಗುವ ಬಾಲಕನು ಜನಿಸಿದಾಗ ಸ್ವರ್ಗದಿಂದ ದೇವೇಂದ್ರ ತನ್ನ ರಾಣಿಯರು ಹಾಗೂ ಪರಿವಾರದವರೊಡನೆ ಬಂದು ಜಿನಬಾಲಕನನ್ನು ಐರಾವತದ ಮೇಲೆ ಕೊಂಡೊಯ್ದು ಏಳು ಸಮುದ್ರದ ಜಲವನ್ನು ತರಿಸಿ ಮೇರುಗಿರಿಯಲ್ಲಿ ಅಭಿಷೇಕ ಮಾಡುವನು. ಇದು 'ಜನ್ಮಕಲ್ಯಾಣ' ಉತ್ಸವ. ಸಂಸಾರದಲ್ಲಿ ವೈರಾಗ್ಯ ಹುಟ್ಟಿ, ತೀರ್ಥಂಕರನಾಗುವ ವ್ಯಕ್ತಿಯು ಸನ್ಯಾಸ ಸ್ವೀಕರಿಸುವಾಗಲೂ ದೇವತೆಗಳು ಬಂದು ಉತ್ಸವವನ್ನು ಮಾಡುವರು. ಇದಕ್ಕೆ 'ಪರಿನಿಷ್ಕ್ರಮಣ ಕಲ್ಯಾಣ' ಎಂದು ಹೇಳುವರು. ಆ ಮೇಲೆ ಅವರು ತಪಸ್ಸಿಗೆ ತೊಡಗುವರು ; ಕಠೋರ ತಪಸ್ಸಿನಿಂದ ಸರ್ವಜ್ಞತ್ವವನ್ನು ಹೊಂದುವರು. ಆ ಸಂದರ್ಭದಲ್ಲಿಯೂ
[illegible]
[illegible]
[illegible]
ಮಾಡುತ್ತ ನಾಡಿನಲ್ಲಿ ಸಂಚರಿಸುವರು. ಕೊನೆಗೆ ದೇಹವನ್ನು ತ್ಯಜಿಸಿ
[illegible]
ಬಂದು ಪೂಜಿಸುವರು. ಇದು 'ನಿರ್ವಾಣ ಕಲ್ಯಾಣ'. ಹೀಗೆ ಎಲ್ಲ ತೀರ್ಥಂಕರರಿಗೂ ಪಂಚ ಕಲ್ಯಾಣಗಳು ಉಂಟಾಗುತ್ತವೆ.

ನೋಡಿ : ವರ್ಧಮಾನ ಮಹಾವೀರ
ತೀರ್ಥಂಕರರು—ಸಂಪುಟ ೫

ತುಂಗಭದ್ರಾ

ತುಂಗಾ, ಭದ್ರಾ ಎಂಬ ನದಿಗಳು ಸೇರಿ ರೂಪುಗೊಂಡಿದೆ, 'ತುಂಗಭದ್ರಾ'.

[illegible]
ನದಿಯ ನೀರು ಕುಡಿದಷ್ಟೂ ಕುಡಿಯಬೇಕೆನಿಸುವಷ್ಟು ರುಚಿ.





ನೀರಾವರಿ, ವಿದ್ಯುತ್ತು : ತುಂಗಭದ್ರಾ ಅಣೆಕಟ್ಟು

ತುಂಗಾ ಮತ್ತು ಭದ್ರಾ ಹುಟ್ಟುವುದು ಪಶ್ಚಿಮ ಘಟ್ಟಗಳ ವರಾಹ ಪರ್ವತದ ಗಂಗಾಮೂಲ ಎಂಬಲ್ಲಿ, ಅಕ್ಕಪಕ್ಕದಲ್ಲಿ. ಆದರೆ ಇವು ಬೇರೆ ಬೇರೆಯಾಗಿ ಹರಿದು' ಶಿವಮೊಗ್ಗೆಗೆ ಸಮೀಪದಲ್ಲಿರುವ ಕೂಡಲಿಯಲ್ಲಿ ಒಂದನ್ನೊಂದು ಸೇರುತ್ತವೆ. ಹೆಚ್ಚು ಕಡಮೆ ಈಶಾನ್ಯ ದಿಕ್ಕಿನಲ್ಲಿ ಹರಿಯುವ ತುಂಗಭದ್ರೆಯನ್ನು ವರದಾ, ವೇದಾವತಿ ಮುಂತಾದ ಉಪನದಿಗಳು ಸೇರುತ್ತವೆ. ತುಂಗಭದ್ರಾ ಕರ್ನಾಟಕದ ಎಲ್ಲೆಯನ್ನು ದಾಟಿದ ಮೇಲೆ ಆಂಧ್ರಪ್ರದೇಶವನ್ನು ಹೊಕ್ಕು ಪೂರ್ವ ದಿಕ್ಕಿನಲ್ಲಿ ಹರಿದು ಕರ್ನೂಲಿನ ಸಮೀಪ ಕೃಷ್ಣಾನದಿಯನ್ನು ಸೇರುತ್ತದೆ. ತುಂಗಭದ್ರೆಯ ಉದ್ದ ಸುಮಾರು 400 ಮೈಲು. ಇದು ಕೃಷ್ಣೆಯ ಪ್ರಮುಖ ಉಪನದಿ.

ತುಂಗಾ ಮತ್ತು ಭದ್ರಾ ನದಿಗಳ ಹಾಗೂ ತುಂಗಭದ್ರೆಯ ತೀರದಲ್ಲಿ ಅನೇಕ ಪುಣ್ಯಕ್ಷೇತ್ರಗಳಿವೆ. ಶೃಂಗೇರಿ, ಹಂಪೆ, ಹರಿಹರ ಇವುಗಳಲ್ಲಿ ಪ್ರಮುಖವಾದುವು. ಈ ಮೂರು ನದಿಗಳಿಗೆ ಬೇರೆ ಬೇರೆ ಪ್ರದೇಶಗಳಲ್ಲಿ ಅಣೆಕಟ್ಟುಗಳನ್ನು ಕಟ್ಟಿ ನೀರಾವರಿ ಸೌಲಭ್ಯಗಳನ್ನು ಕಲ್ಪಿಸಲಾಗಿದೆ. ಭದ್ರಾ ಮತ್ತು ತುಂಗಭದ್ರಾ ಅಣೆಕಟ್ಟುಗಳಲ್ಲಿ ವಿದ್ಯುತ್ ಉತ್ಪಾದನೆ ನಡೆಯುತ್ತದೆ.

ತುಂಬಾ ರಾಕೆಟ್ ನೆಲೆ

ಆಕಾಶ ಸಂಶೋಧನೆಗೆ ಸಂಬಂಧಿಸಿದ ಎಲ್ಲ ವಿಷಯಗಳನ್ನೂ ಭಾರತೀಯ ವ್ಯೋಮ ಸಂಶೋಧನಾ ಸಂಸ್ಥೆ ನೋಡಿಕೊಳ್ಳುತ್ತದೆ.

ತುಂಬಾ ನೆಲೆಯಿಂದ ಹಾರಲು ಅಣಿಯಾಗುತ್ತಿರುವ ಕ್ಷಿಪಣಿ





ಆಕಾಶದತ್ತ ಅಧ್ಯಯನ ಕ್ಷಿಪಣಿ

ಮೊದಲಿಗೆ ದಿವಂಗತ ಡಾ. ವಿಕ್ರಮ್ ಸಾರಾಭಾಯಿ ಇದರ ಮುಖ್ಯಸ್ಥರಾಗಿದ್ದರು. ಇದರ ಮುಖ್ಯ ಕಚೇರಿ ಅಹಮದಾಬಾದಿನಲ್ಲಿದೆ. ಎರಡು ಕೇಂದ್ರಗಳಲ್ಲಿ ಇದರ ಕಾರ್ಯ ಚಟುವಟಿಕೆಗಳು ನಡೆಯುತ್ತವೆ. ಅಹಮದಾಬಾದ್ ಮತ್ತು ತಿರುವನಂತಪುರ ಇವೇ ಆ ಕೇಂದ್ರಗಳು.

ತಿರುವನಂತಪುರದಲ್ಲಿರುವುದು ವಿಕ್ರಮ್ ಸಾರಾಭಾಯಿ ವ್ಯೋಮಕೇಂದ್ರ ತುಂಬಾ ರಾಕೆಟ್ ಉಡಾವಣಾ ಕೇಂದ್ರ ಇದರ ಒಂದು ಅಂಗ.

ವಿಶ್ವಸಂಸ್ಥೆಯ ಸಹಾಯದಿಂದ 1963ರ ಕೊನೆಯ ಭಾಗದಲ್ಲಿ ಈ ಉಡಾವಣಾ ಕೇಂದ್ರವನ್ನು ಸ್ಥಾಪಿಸಲಾಯಿತು. ಮುಖ್ಯ ಉದ್ದೇಶ : ಹವಾಮಾನ ಮತ್ತು ಅಯಾನುವಲಯ ಸಮಸ್ಯೆಗಳ ಬಗ್ಗೆ ಅಧ್ಯಯನ. ಇಂಥ ಪ್ರಯೋಗಗಳಿಗೆ ಭೂಕಾಂತ ಮಧ್ಯರೇಖೆ ಹಾದು ಹೋಗುವ ಪ್ರದೇಶ ಉತ್ತಮ. ತುಂಬಾ ಸಮೀಪದಲ್ಲಿ ಈ ವೃತ್ತ ಹಾದು ಹೋಗುವುದರಿಂದ ಇಲ್ಲಿ ಈ ಕೇಂದ್ರವನ್ನು ಸ್ಥಾಪಿಸಲಾಗಿದೆ.

ತುಂಬಾ ರಾಕೆಟ್ ನೆಲೆ 1963 ನವೆಂಬರಿನಿಂದ ಕಾರ್ಯಾಚರಣೆ ನಡೆಸುತ್ತಿದೆ. ಇಲ್ಲಿ ವಿಶ್ವಸಂಸ್ಥೆಯ ಎಲ್ಲ ಸದಸ್ಯ ರಾಷ್ಟ್ರಗಳೂ ವೈಜ್ಞಾನಿಕ ಪ್ರಯೋಗಗಳನ್ನು ನಡೆಸಬಹುದು. ಸೋವಿಯೆತ್ ರಷ್ಯ, ಅಮೆರಿಕ ಸಂಯುಕ್ತ ಸಂಸ್ಥಾನಗಳು, ಜಪಾನ್, ಫ್ರಾನ್ಸ್‌ಗಳ ಸಹಕಾರದಿಂದ ಅನೇಕ ಪ್ರಯೋಗಗಳನ್ನು ಕೈಗೊಳ್ಳಲಾಗಿದೆ.

1972 ಮಾರ್ಚ್ 31ರ ವೇಳೆಗೆ ಈ ಕೇಂದ್ರದಿಂದ ಒಟ್ಟು 129 ರಾಕೆಟ್‌ಗಳು ಹಾರಿದುವು. ಇದರಲ್ಲಿ 63 ಪರೀಕ್ಷಾರ್ಥ ರಾಕೆಟ್‌ಗಳು. ಮಿಕ್ಕ 66 ರಾಕೆಟ್‌ಗಳಿಂದ ವೈಜ್ಞಾನಿಕ ಪ್ರಯೋಗಗಳನ್ನು ನಡೆಸಲಾಯಿತು.

ಈ ಕೇಂದ್ರದಲ್ಲಿ ಸಂಶೋಧನೆಗೂ ಅಭಿವೃದ್ಧಿಗೂ ಸಂಬಂಧಿಸಿದ ಅನೇಕ ಕಾರ್ಯಗಳು ನಡೆಯುತ್ತಿವೆ. ರಾಕೆಟ್ ಉಡಾವಣೆಗೆ ಅಗತ್ಯವಾದ ಸಂಕೀರ್ಣ ಇಂಧನಗಳ ತಯಾರಿಕೆಗೂ ಪ್ರಯತ್ನಗಳು ನಡೆಯುತ್ತಿವೆ.

ತುಕಾರಾಮ್

ಪುಣೆಯ ಬಳಿಯ ದೇಹು ಎಂಬಲ್ಲಿ ಸುಂದರ ಭಕ್ತಿಗೀತೆಗಳನ್ನು ಹಾಡಿ ಜನರನ್ನು ಆಕರ್ಷಿಸುತ್ತಿದ್ದ ಸಂತನೊಬ್ಬನಿದ್ದ. ವೇದಗಳ ಮೇಲೆ ಅವನು ಮಾಡುತ್ತಿದ್ದ ಉಪನ್ಯಾಸಗಳನ್ನು ಕೇಳಿದ ಪಂಡಿತರೂ ಬೆರಗಾಗುತ್ತಿದ್ದರು.

ಆತ ತುಕಾರಾಮ್. ಹುಟ್ಟಿದ್ದು 1598ರಲ್ಲಿ, ವ್ಯಾಪಾರಿಗಳ ವಂಶದಲ್ಲಿ. ಹೆತ್ತವರನ್ನು ಚಿಕ್ಕಂದಿನಲ್ಲೇ ಕಳೆದುಕೊಂಡ. ವ್ಯಾಪಾರದಲ್ಲೂ ನಷ್ಟ ಅನುಭವಿಸಿದ. ಒಮ್ಮೆ ಬರಗಾಲ ಬಂದಾಗ ಇವನ ಪತ್ನಿ ಮತ್ತು ಪುತ್ರರು ಹೊಟ್ಟೆಗಿಲ್ಲದೆ ತೀರಿಕೊಂಡರು.

ತುಕಾರಾಮನಿಗೆ ಮೊದಲಿನಿಂದಲೂ ಆಧ್ಯಾತ್ಮಿಕ ಪ್ರವೃತ್ತಿ ಬಲವಾಗಿತ್ತು. ಧ್ಯಾನಚಿಂತನೆಗಳಲ್ಲಿ ಕಾಲಕಳೆಯುತ್ತಿದ್ದ. ತುಕಾರಾಮನಿಗಿಂತ 300 ವರ್ಷ ಹಿಂದೆ ಜೀವಿಸಿದ್ದ ಸಂತ ಚೈತನ್ಯ ಬಾಬಾ ಒಮ್ಮೆ ಕನಸಿನಲ್ಲಿ ಕಾಣಿಸಿಕೊಂಡು ಭಕ್ತಿಮಾರ್ಗವನ್ನು ಉಪದೇಶಿಸಿದಂತೆ ಅವನಿಗೆ ಅನಿಸಿತು. ಅನಂತರ ತುಕಾರಾಮನಿಗೆ ದೇವನಾಮ ಸಂಕೀರ್ತನೆಯೇ ಬದುಕಿನ ಉಸಿರಾಯಿತು. ಭಕ್ತಿಪಂಥವನ್ನವಲಂಬಿಸಿದ ತುಕಾರಾಮನಿಗೆ ವಿಠ್ಠಲನೇ ಸರ್ವಸ್ವವಾದ. ಅವನೇ ನನಗೆ ತಂದೆ–ತಾಯಿ, ಎಂದು ಹಾಡಿದ. ತನ್ನ ಆರಾಧ್ಯದೈವನನ್ನು ಹೊಗಳಿ ಅನೇಕ ಸುಂದರ ಗೀತೆಗಳನ್ನು ರಚಿಸಿದ. "ಸ್ವತಃ ದೇವನಿಗೇ ತನ್ನ ನಾಮದ ಮಹತ್ವ ತಿಳಿದಿಲ್ಲ. ಕಮಲಕ್ಕೆ ತನ್ನ ಸುಗಂಧ ಹೇಗೆ ತಿಳಿದೀತು ? ದುಂಬಿಗೆ ಮಾತ್ರ ಇದು ಗೊತ್ತು. ಮುತ್ತಿಗೆ ತನ್ನ ಬೆಲೆ ಏನು ಅರ್ಥವಾದೀತು ? ಅಕ್ಕಸಾಲಿಗನೊಬ್ಬನೇ ಬೆಲೆ ಕಟ್ಟಬಲ್ಲ", ಎಂದ.

ತುಕಾರಾಮ್ ತನ್ನ ಭಕ್ತಿಮಾರ್ಗವನ್ನು ಜನರಲ್ಲಿ ಪ್ರಚಾರಮಾಡಿದ್ದು 'ಅಭಂಗ' ಛಂದಸ್ಸಿನ ರೂಪದಲ್ಲಿ. ಅರಸನೂ ಭಿಕಾರಿಯೂ ಇವನ ದೃಷ್ಟಿಯಲ್ಲಿ ಸಮಾನರು. ಆಂತರಿಕ ಶುದ್ಧಿ ಮುಖ್ಯವೇ ಹೊರತು ವೇಷ ಭೂಷಣಗಳಲ್ಲ. "ಮನಸ್ಸು ವಿಷಯ ವಾಸನೆಯಿಂದ ಕೂಡಿದ್ದರೂ ನಾರುಬಟ್ಟೆ ಧರಿಸಿ ಯೋಗಿ ಎನಿಸಿದವನು ಖಂಡನೆಗೆ ಯೋಗ್ಯ. ಕಾವಿಬಟ್ಟೆ ಧರಿಸಿದರೆ ಏನು ಬಂತು ? ಒಂದು ನಾಯಿಯೂ ಕಂದು ಬಣ್ಣದ್ದಾಗಿರುತ್ತದೆ. ಜಟಾಧಾರಿಯಾಗಿದ್ದರೇನು ? ಒಂದು ಕರಡಿಯ ಕೂದಲೂ ಗಂಟುಗಂಟಾಗಿರುತ್ತದೆ. ಗುಹೆಯಲ್ಲಿ ವಾಸಿಸುವುದರಿಂದ ಏನನ್ನು ಸಾಧಿಸಿದಂತಾಯಿತು ? ಇಲಿ ಸಹ ಬಿಲವಾಸಿಯೇ", ಎಂಬುದು ಇವನ ನಿಲುವು.

ಇತರ ಸಂತರು ಪ್ರಚಾರಮಾಡುತ್ತಿದ್ದ ನಿರಾಕಾರ ದೇವನ ಕಲ್ಪನೆ ತುಕಾರಾಮನಿಗೆ ಮೆಚ್ಚುಗೆಯಾಗಲಿಲ್ಲ. ಆತ ಬಯಸಿದ್ದು ಸಾಕಾರ ದೇವ ದರ್ಶನವನ್ನು. "ಬೇರೆಯವರಿಗೆ ಬೇಕಾದರೆ ನೀನು ನಿರಾಕಾರನಾಗಿಯೇ ಇರು, ಆದರೆ ನನಗಾಗಿ ಮಾತ್ರ ನೀನು ಒಂದು ರೂಪವನ್ನು ಪಡೆ' ಎಂದು ದೇವರನ್ನು ಪ್ರಾರ್ಥಿಸಿದ. ವಿಠ್ಠಲನ ದರ್ಶನವಾದಂತೆ ಅನಿಸಿತು. ಆ ಚತುರ್ಭುಜ ಮೂರ್ತಿಯೇ ಅವನ ಆರಾಧ್ಯದೇವತೆಯಾಯಿತು. ಪಂಢರಪುರ ಸಾಕ್ಷಾತ್ ವೈಕುಂಠವೆನಿಸಿತು.



ಭಕ್ತಿ ಮಾರ್ಗ : ತುಕಾರಾಮ್

ಜಾತಿಮತಗಳ ಭೇದವನ್ನೆಣಿಸದೆ ಎಲ್ಲರಿಗೂ ಭಕ್ತಿಮಾರ್ಗವನ್ನು ಉಪದೇಶಿಸಿದ ತುಕಾರಾಮನಿಗೆ ಅನೇಕ ಮಂದಿ ಶಿಷ್ಯರಾದರು. ತನ್ನ 52ನೆಯ ವಯಸ್ಸಿನಲ್ಲಿ (1650) ತುಕಾರಾಮನ ದೇಹಾವಸಾನವಾಯಿತು.

ಸಂತ ತುಕಾರಾಮನ ಅಭಂಗಗಳು ಮಹಾರಾಷ್ಟ್ರದ ಸಾಮಾಜಿಕ ಜೀವನದಲ್ಲಿ ಸ್ಥಾನಗಳಿಸಿವೆ.

ತುಘಲಕ್

ಶ್ರೇಷ್ಠ ವಿದ್ವಾಂಸ, ಬುದ್ಧಿವಂತ, ಉತ್ತಮ ಜ್ಞಾಪಕಶಕ್ತಿ ಉಳ್ಳವ, ವಿವಿಧ ವಿಷಯಗಳಲ್ಲಿ ಪರಿಣತ; ಆದರೆ ಆತುರ, ಸಿಟ್ಟು ಹೆಚ್ಚು : ವ್ಯವಹಾರ ಕೌಶಲ ಕಡಮೆ. ಒಳ್ಳೆಯ ಉದ್ದೇಶದಿಂದ ಪ್ರೇರಿತನಾಗಿ ಅವನು ಮಾಡಿದ ಕಾರ್ಯಗಳು ರಾಜ್ಯವನ್ನು ವಿಪತ್ತಿನಲ್ಲಿ ಮುಳುಗಿಸುತ್ತಿದ್ದುವು.

—ಹೀಗೆ, ವಿಚಿತ್ರ ವ್ಯಕ್ತಿತ್ವವಿದ್ದವನು ಮಹಮ್ಮದ್ ಬಿನ್ ತುಘಲಕ್.



ಕಾವ್ಯ, ಸಮರ, ಪ್ರಮಾದ : ತುಘಲಕ್

ಘಿಯಾಸುದ್ದೀನ್ ತುಘಲಕ್‌ನ ಮಗ ಜೌನಾ. ಘಿಯಾಸುದ್ದೀನ್ 1325ರಲ್ಲಿ ಮೃತನಾದ. ಮಹಮ್ಮದ್ ಬಿನ್ ತುಘಲಕ್ ಎಂಬ ಹೆಸರಿನಿಂದ ಜೌನಾ ದೆಹಲಿಯ ಸುಲ್ತಾನನಾದ. ಆಗ ಜನರಿಗೆ ಉದಾರವಾಗಿ ಚಿನ್ನ ಮತ್ತು ಬೆಳ್ಳಿ ನಾಣ್ಯಗಳನ್ನು ಹಂಚಿದ; ಶ್ರೀಮಂತರಿಗೆ ಬಿರುದುಗಳನ್ನು ಕೊಟ್ಟ.

ಮಹಮ್ಮದ್ ಪರ್ಷಿಯನ್ ಕಾವ್ಯಗಳ ಆಳವಾದ ಅಭ್ಯಾಸ ಮಾಡಿದ್ದ. ಅವನ್ನು ಮುದ್ದಾದ ಅಕ್ಷರಗಳಲ್ಲಿ ಪ್ರತಿ ಮಾಡುತ್ತಿದ್ದ. ಅವನಿಗೆ ನಾಲ್ಕಾರು ಭಾಷೆಗಳು ಬರುತ್ತಿದ್ದುವು.

ಯುದ್ಧತಂತ್ರ ನಿಪುಣನಾದ ತುಘಲಕ್ ಯುದ್ಧಗಳಲ್ಲಿ ಸೋಲನ್ನು ಅನುಭವಿಸಿದ್ದು ಅಪರೂಪ.

ದೆಹಲಿಯ ಬದಲು ಭಾರತದ ಮಧ್ಯಭಾಗದಲ್ಲಿರುವ ದೇವಗಿರಿಯನ್ನು ರಾಜಧಾನಿಯನ್ನಾಗಿ ಮಾಡಿದರೆ ಅದು ಸಾಮ್ರಾಜ್ಯದ ಕೇಂದ್ರದಲ್ಲಿದ್ದಂತಾಗುತ್ತದೆ ಎಂದು ತುಘಲಕ್ ಭಾವಿಸಿದ. ದೆಹಲಿಯಿಂದ 700 ಮೈಲು ದೂರದಲ್ಲಿದ್ದ ದೇವಗಿರಿಗೆ ದೌಲತಾಬಾದ್ ಎಂದು ಹೆಸರಿಟ್ಟ. ದೆಹಲಿಯ ಜನ ಅಲ್ಲಿಗೆ ಹೋಗಬೇಕೆಂದು ಆಜ್ಞೆ ಮಾಡಿದ. ಜನರ ಅನುಕೂಲಕ್ಕಾಗಿ ಮನೆಗಳು, ವಿಶಾಲವಾದ ದಾರಿ ಮೊದಲಾದ ಸೌಕರ್ಯಗಳನ್ನು ಕಲ್ಪಿಸಿಕೊಟ್ಟ. ಆದರೆ ಹಾಗೆ ಹೊರಟ ಜನ ಅನುಭವಿಸಿದ ಕಷ್ಟ ಹೇಳತೀರದು. ಎಷ್ಟೋ ಜನ ದಾರಿಯಲ್ಲೇ ಮಡಿದರು. ತಾನು ಮಾಡಿದ್ದು ಪ್ರಮಾದವಾಯಿತೆಂದು ಮನಗಂಡಮೇಲೆ ತುಘಲಕ್, ಜನರು ಮತ್ತೆ ದೆಹಲಿಗೆ ಹಿಂತಿರುಗ

ಮತ್ತೆ ಆಜ್ಞೆ ಮಾಡಿದ. ಬದುಕಿ ಉಳಿದು ದೇವಗಿರಿಗೆ ಮುಟ್ಟಿದವರು ಕೆಲವೇ ಜನ.

23 ಪ್ರಾಂತಗಳಿದ್ದ ವಿಸ್ತಾರ ಸಾಮ್ರಾಜ್ಯ ತುಘಲಕ್‌ನದು. ದೋಆಬ್ ಪ್ರದೇಶದಲ್ಲಿ ಭೂಕಂದಾಯ ಏರಿಸಿದಾಗ, ಅದನ್ನು ಕೊಡಲು ಸಾಧ್ಯವಿಲ್ಲದೆ ರೈತರೆಲ್ಲ ಊರು ಬಿಟ್ಟರು. ಮತ್ತೆ ಅವರನ್ನೆಲ್ಲ ಬಲಾತ್ಕಾರದಿಂದ ಅಲ್ಲಿಗೆ ಬರಮಾಡಿಕೊಂಡ.

ಪ್ರಶಸ್ತ ಲೋಹಗಳ ನಾಣ್ಯಗಳ ಬದಲು ಅಷ್ಟೇ ಮುಖಮೌಲ್ಯವುಳ್ಳ ತಾಮ್ರದ ನಾಣ್ಯಗಳನ್ನು ಚಲಾವಣೆಗೆ ತಂದ. ಆದರೆ ಸರಕಾರ ಮಾತ್ರ ಇಂಥ ನಾಣ್ಯಗಳನ್ನು ತಯಾರಿಸಬೇಕೆಂದು ವಿಧಿಸದೆ ತಪ್ಪುಮಾಡಿದ. ಸಿಕ್ಕ ಸಿಕ್ಕವರೆಲ್ಲ ತಾಮ್ರದ ನಾಣ್ಯಗಳನ್ನು ತಯಾರಿಸಿದರು. ಅವಕ್ಕೆ ವಿನಿಮಯವಾಗಿ ಪ್ರಶಸ್ತಲೋಹಗಳನ್ನು ಕೊಡುವುದು ಸರಕಾರಕ್ಕೆ ಸಾಧ್ಯವಾಗಲಿಲ್ಲ; ರಾಜ್ಯದ ಆರ್ಥಿಕ ಸ್ಥಿತಿ ಅವ್ಯವಸ್ಥೆಗೆ ಇಟ್ಟುಕೊಂಡಿತು. ತುಘಲಕ್ ತಪ್ಪನ್ನರಿತು ಮತ್ತೆ ಹಿಂದಿನ ನಾಣ್ಯವನ್ನೇ ಉಪಯೋಗಿಸುವಂತೆ ಆಜ್ಞಾಪಿಸಿದ.

ಇವನ ಆಡಳಿತದಿಂದ ಅಸಂತುಷ್ಟರಾದ ಪ್ರಜೆಗಳು ದಂಗೆ ಎದ್ದರು. ಸಿಂಧ್ ಪ್ರದೇಶದಲ್ಲಿ ದಂಗೆಕೋರರನ್ನು ದಮನ ಮಾಡುತ್ತಿದ್ದಾಗ, ಜ್ವರ ಬಂದು, 1351 ಮಾರ್ಚ್ 20ರಂದು ತುಘಲಕ್ ತೀರಿಕೊಂಡ.

ತುಘಲಕ್‌ನ ಬಗೆಗೆ ಅಮೀರ್ ಖುಸರೋ, ಇಬ್ನ್ ಬತೂತ, ಬರ್‌ನಿ ಮೊದಲಾದವರು ಬರೆದಿದ್ದಾರೆ.

ತುಲಸೀದಾಸ್

ತರುಣ ತುಲಸಿಗೆ ತನ್ನ ಪತ್ನಿಯಲ್ಲಿ ಅಪಾರ ಪ್ರೇಮ. ಒಂದು ದಿನ ಅವಳನ್ನು ಬಿಟ್ಟಿರುವುದೆಂದರೂ ಅಸಾಧ್ಯ ಚಡಪಡಿಕೆ. ಒಮ್ಮೆ ತವರಿಗೆ ಹೋದ ಹೆಂಡತಿ ಹೇಳಿದ ಸಮಯಕ್ಕೆ ಬರದೆ ಇದ್ದದ್ದನ್ನು ನೋಡಿ ಅವಳನ್ನು ಕಾಣಲು ಮಧ್ಯರಾತ್ರಿಯಲ್ಲಿ ಎದ್ದುಹೊರಟ. ಜಡಿಮಳೆಯಲ್ಲೂ ನಡೆದ. ನೆರೆಬಂದು ತುಂಬಿದ್ದ ಗಂಗಾನದಿಯನ್ನು ಈಜಿ ದಾಟಿದ. ಆ ಹೊತ್ತಿನಲ್ಲಿ ಅಷ್ಟೆಲ್ಲ ಪ್ರಯಾಸಪಟ್ಟು ಬಂದ ಇವನನ್ನು ಕಂಡ ಪತ್ನಿಗೆ ಅತಿ ಆಶ್ಚರ್ಯ. "ನನ್ನ ಮೇಲಿರುವ ಪ್ರೇಮದ ಅರ್ಧದಷ್ಟನ್ನು ನೀವು ಶ್ರೀರಾಮನಿಗೆ ಧಾರೆಯೆರೆದರೆ ಸ್ವರ್ಗಕ್ಕೆ ಹೋಗುವುದು ಖಂಡಿತ" ಎಂದು ಉದ್ಗಾರ ಎತ್ತಿದಳು. ಒಡನೆಯೇ ತುಲಸಿಗೆ ಜ್ಞಾನೋದಯವಾಯಿತು. ಮನೆ-ಮಠ ತೊರೆದು ದೇಶಾಂತರ ಹೊರಟ : ಅಪ್ರತಿಮ ರಾಮಭಕ್ತಿಯನ್ನು ಬೆಳಸಿಕೊಂಡು, ತುಲಸೀದಾಸನೆಂದು ಪ್ರಖ್ಯಾತನಾದ.



'ರಾಮಾಯಣ' ಮಹಾಕಾವ್ಯ : ತುಲಸೀದಾಸ್

ಹುಟ್ಟಿದ್ದು ಹದಿನಾರನೆಯ ಶತಮಾನದ ಮಧ್ಯಭಾಗದಲ್ಲಿ. ಅವನ ಜಾತಿ, ಮತ ಯಾವುದೆಂದು ಖಚಿತವಾಗಿ ತಿಳಿದಿಲ್ಲ. ಅನಕ್ಷರಸ್ಥ ತಂದೆ ತಾಯಿ ಆತನನ್ನು ತೊರೆದರು. ತುಲಸಿ ಭಿಕ್ಷೆ ಬೇಡಿ ಜೀವಿಸುತ್ತ ಕಾಶಿಯಲ್ಲಿ ವಿದ್ಯಾಭ್ಯಾಸ ಪಡೆದು ಪಂಡಿತನಾದ.

ತುಲಸೀದಾಸ ಹಿಂದಿಯಲ್ಲಿ ರಚಿಸಿದ ಮಹಾಕಾವ್ಯ 'ರಾಮಚರಿತ ಮಾನಸ' ರಾಮಾಯಣದ ಕಥೆಯ ಸಂಗ್ರಹ. ಇದು 'ತುಲಸೀ ರಾಮಾಯಣ' ಎಂದೇ ಹೆಸರಾಗಿದೆ. ಇದು ಭಕ್ತಿರಸದ ಹೊಳೆಯನ್ನೇ ಹರಿಸುವ ಮಹಾಗ್ರಂಥ. ಜನಸಾಮಾನ್ಯರಿಗೆ ಅರ್ಥವಾಗುವ ಭಾಷೆಯಲ್ಲಿ ಇರುವುದರಿಂದ ಅಪಾರ ಜನಪ್ರಿಯತೆ ಗಳಿಸಿದೆ.

'ವಿನಯ ಪತ್ರಿಕಾ' ತುಲಸೀದಾಸನ ಇನ್ನೊಂದು ಭಕ್ತಿಪ್ರಧಾನ ಗ್ರಂಥ. 'ಕವಿತಾವಲಿ' ವ್ರಜಭಾಷೆಯ ಕೃತಿ. ಇದು ನಿರೂಪಿಸುವುದು 'ರಾಮಾಯಣ'ದ ಕಥೆಯನ್ನು. 'ದೋಹಾವಲಿ' ಎಂಬುದು ದ್ವಿಪದಿಗಳ ಸಂಗ್ರಹ. ತುಲಸೀದಾಸ ಹದಿಮೂರಕ್ಕಿಂತಲೂ ಹೆಚ್ಚು ಗ್ರಂಥಗಳನ್ನು ರಚಿಸಿದ್ದಾನೆ.

ಎಲ್ಲ ಮತಗಳ ಉತ್ತಮ ವಿಚಾರಗಳ ಸುಂದರ ಸಂಗಮವನ್ನು ಈತನ ಕೃತಿಗಳಲ್ಲಿ ಕಾಣಬಹುದು.

17ನೆಯ ಶತಮಾನದ ಮೊದಲ ಭಾಗದಲ್ಲಿ ಕಾಶಿಯ ಅನೇಕರನ್ನು ಬಲಿತೆಗೆದುಕೊಂಡ ಸಾಂಕ್ರಾಮಿಕ ರೋಗಕ್ಕೆ ತುಲಸೀದಾಸ ತುತ್ತಾದ.

ತುಷಾರ ಕಾಂತಿ ಘೋಷ್

ಭಾರತದ ಹಿರಿಯ ಪತ್ರಿಕೋದ್ಯಮಿ, ತುಷಾರ ಕಾಂತಿ ಘೋಷ್.

1899 ಅಕ್ಟೋಬರ್ 4ರಂದು ಜನನ. ಕಲ್ಕತ್ತಾ ವಿಶ್ವವಿದ್ಯಾನಿಲಯದಲ್ಲಿ ವಿದ್ಯಾಭ್ಯಾಸ.

1920ರಲ್ಲಿ ಪತ್ರಿಕೋದ್ಯಮ ಕ್ಷೇತ್ರಕ್ಕೆ ಘೋಷ್ ಕಾಲಿಟ್ಟರು. ತಮ್ಮ ಮನೆತನಕ್ಕೆ ಸೇರಿದ 'ಅಮೃತಬಜಾರ್ ಪತ್ರಿಕಾ' ದಲ್ಲಿ ಉಪಸಂಪಾದಕರಾಗಿ, ಕಾಲಕ್ರಮದಲ್ಲಿ ಈ ಪತ್ರಿಕೆಯ ಸಂಪಾದಕರೂ ಮ್ಯಾನೇಜಿಂಗ್ ಡೈರೆಕ್ಟರರೂ ಆದರು. ಈ ಪತ್ರಿಕೆಯನ್ನು ಉತ್ತಮ ಮಟ್ಟದ ರಾಷ್ಟ್ರೀಯ ಪತ್ರಿಕೆಯಾಗಿ ನಡೆಸಿದರು.

'ಜುಗಾಂತರ್' ಬಂಗಾಳೀ ದಿನಪತ್ರಿಕೆಯನ್ನೂ 'ಅಮೃತ' ಬಂಗಾಳೀ ವಾರಪತ್ರಿಕೆಯನ್ನೂ ಅಲಹಾಬಾದಿನ 'ನಾರ್ದರ್ನ್ ಇಂಡಿಯಾ ಪತ್ರಿಕಾ' ಎಂಬ ಇಂಗ್ಲಿಷ್ ದೈನಿಕವನ್ನೂ 'ಅಮೃತ ಪತ್ರಿಕಾ' ಹಿಂದೀ ದೈನಿಕವನ್ನೂ ತುಷಾರ ಕಾಂತಿ ಘೋಷರು ಸ್ಥಾಪಿಸಿ, ಅವುಗಳ ಸಂಪಾದಕರೂ ಆದರು.

ಘೋಷ್ ಪತ್ರಿಕೋದ್ಯಮಕ್ಕೆ ಸಂಬಂಧಿಸಿದ ಹಲವಾರು ರಾಷ್ಟ್ರೀಯ, ಅಂತರರಾಷ್ಟ್ರೀಯ ಸಂಘ ಸಂಸ್ಥೆಗಳ ಸದಸ್ಯರೂ ಆಗಿದ್ದಾರೆ.

1946–47ರಲ್ಲಿ ಅಖಿಲ ಭಾರತ ಪತ್ರಿಕಾ ಸಂಪಾದಕರ ಸಮ್ಮೇಳನ ಹಾಗೂ 1948–49ರಲ್ಲಿ ಇಂಡಿಯನ್ ಅಂಡ್ ಈಸ್ಟರ್ನ್ ನ್ಯೂಸ್‌ಪೇಪರ್ಸ್ ಸೊಸೈಟಿಯ ಅಧ್ಯಕ್ಷರಾಗಿದ್ದರು. ಲಂಡನಿನಲ್ಲಿ ನಡೆದ ಎಂಪೈರ್ ಪ್ರೆಸ್ ಯೂನಿಯನ್ ಕಾನ್ಫರೆನ್ಸಿನಲ್ಲಿ ಭಾರತವನ್ನು ಪ್ರತಿನಿಧಿಸಿದ್ದರು. ಕೇಂದ್ರ ಫಿಲ್ಮ್ ಸೆನ್ಸಾರ್ ಮಂಡಲಿಯ ಸದಸ್ಯರೂ ಪ್ರೆಸ್ ಟ್ರಸ್ಟ್ ಆಫ್ ಇಂಡಿಯಾ, ಯುನೈಟೆಡ್ ನ್ಯೂಸ್ ಆಫ್ ಇಂಡಿಯಾ ವಾರ್ತಾ ಸಂಸ್ಥೆಗಳ ಅಧ್ಯಕ್ಷರೂ ಆಗಿದ್ದರು. ಇಂಟರ್‌ನ್ಯಾಷನಲ್ ಪ್ರೆಸ್ ಇನ್‌ಸ್ಟಿಟ್ಯೂಟ್‌ನ ಕಾರ್ಯ



'ಅಮೃತ ಬಜಾರ್ ಪತ್ರಿಕಾ' : ತುಷಾರ ಕಾಂತಿ ಘೋಷ್

ಗಾರಿ ಸಮಿತಿಯ ಉಪಾಧ್ಯಕ್ಷರಾಗಿಯೂ ಕೆಲಸ ಮಾಡಿದರು. ಘೋಷರು ಜಗತ್ತಿನ ಅನೇಕ ರಾಷ್ಟ್ರಗಳಲ್ಲಿ ಪ್ರವಾಸಮಾಡಿ ಅನುಭವ ಪಡೆದಿದ್ದಾರೆ. ಅವರಿಗೆ 1964ರಲ್ಲಿ ಪದ್ಮಭೂಷಣ ಪ್ರಶಸ್ತಿ ಲಭಿಸಿತು. ಅಖಿಲ ಭಾರತ ವಂಗ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯ ಗೌರವ 1973ರಲ್ಲಿ ಇವರಿಗೆ ಸಂದಿತು.

ತೆನ್ನಾಲಿ ರಾಮಕೃಷ್ಣ

ವಿಜಯನಗರದ ಕೃಷ್ಣದೇವರಾಯನ ಆಸ್ಥಾನದಲ್ಲಿ 'ಅಷ್ಟದಿಗ್ಗಜ'ಗಳೆಂದು ಪ್ರಸಿದ್ಧರಾಗಿದ್ದ ಕವಿ-ಪಂಡಿತರಲ್ಲಿ ತೆನ್ನಾಲಿ ರಾಮಕೃಷ್ಣನೂ ಒಬ್ಬ. ಇವನು ಹಾಸ್ಯಗಾರ. 'ವಿಕಟ-ಕವಿ' ಎಂದು ವಿಖ್ಯಾತ.

ರಾಮಕೃಷ್ಣನ ತಂದೆ ರಾಮಯ್ಯ. ಊರು ಗಾರ್ಲಪಾಡು. ತಾಯಿ ಲಕ್ಷ್ಮಮ್ಮ ತೆನ್ನಾಲಿಯವರು. ರಾಮಕೃಷ್ಣನ ಜನ್ಮಸ್ಥಳದ ಬಗೆಗೆ ಏಕಾಭಿಪ್ರಾಯವಿಲ್ಲ. ಗಾರ್ಲಪಾಡು ಎಂದು ಕೆಲವರೂ ತೆನ್ನಾಲಿ ಎಂದು ಕೆಲವರೂ ವಾದಿಸುತ್ತಾರೆ.

ಎಳೆಯ ವಯಸ್ಸಿನಲ್ಲಿ ತಂದೆಯನ್ನು ಕಳೆದುಕೊಂಡ ರಾಮಕೃಷ್ಣ ತೆನ್ನಾಲಿಯಲ್ಲಿ ಸೋದರಮಾವನ ಮನೆಯಲ್ಲಿ ಬೆಳೆದ. ವಿದ್ಯಾಭ್ಯಾಸದಲ್ಲಿ ಆಸಕ್ತಿ ಇಲ್ಲದ ರಾಮಕೃಷ್ಣ ತುಂಟನಾಗಿದ್ದ.

ಬಾಲ್ಯದಲ್ಲಿ ಇವನು ಕಾಳಿಯ ಭಕ್ತ. ಒಂದು ದಿನ ಇವನ ಭಕ್ತಿಗೆ ಮೆಚ್ಚಿ ಕಾಳಿ ಪ್ರತ್ಯಕ್ಷಳಾದಳು. ಅವಳನ್ನು ನೋಡಿ ನಕ್ಕ. ಕಾಳಿ ಏಕೆಂದು ಕೇಳಿದಾಗ, "ನಿನಗೆ ಸಾವಿರ ತಲೆಗಳೂ ಸಾವಿರ ಮೂಗುಗಳೂ ಇವೆ. ಕೈಗಳು ಮಾತ್ರ ಎರಡೇ ಎರಡು. ಒಂದು ಮೂಗಿರುವ ನಮಗೆ ನೆಗಡಿ ಬಂದಾಗ, ಎರಡು ಕೈಗಳಿಂದ ಅದನ್ನು ತೆಗೆದರೂ ಮುಗಿಯುವುದಿಲ್ಲ, ನಿನಗೆ ನೆಗಡಿ ಬಂದರೆ ಗತಿಯೇನು ಎಂದು ಯೋಚಿಸಿದೆ. ನಗೆ ಬಂತು." ಎಂದ. ದೇವಿ ಅವನ ತುಂಟಾಟವನ್ನು ಮೆಚ್ಚಿ "ವಿಕಟಕವಿಯಾಗು"ಎಂದು ಆಶೀರ್ವದಿಸಿದಳು. –ಇದು ತೆನ್ನಾಲಿ ರಾಮಕೃಷ್ಣ ವಿಕಟಕವಿಯಾಗಿ ರೂಪುಗೊಂಡ ಬಗೆಗೆ ಒಂದು ದಂತಕಥೆ.

ರಾಮಕೃಷ್ಣ ವಿಜಯನಗರಕ್ಕೆ ಬಂದ. ಕೃಷ್ಣದೇವರಾಯ ಅವನ ಹಾಸ್ಯವನ್ನು ಮೆಚ್ಚಿ ಅವನನ್ನು ತನ್ನ ಆಸ್ಥಾನದಲ್ಲಿ ಇರಿಸಿಕೊಂಡ.

ತೆನ್ನಾಲಿ ರಾಮಕೃಷ್ಣನ ಹಾಸ್ಯ, ಚುರುಕು ಬುದ್ಧಿಗಳನ್ನು ಕುರಿತು ಅನೇಕ ಕಥೆಗಳಿವೆ.

ರಾಮಕೃಷ್ಣ ತನ್ನ ಹಾಸ್ಯ, ಚಾತುರ್ಯದ ಪ್ರಸಂಗಗಳಲ್ಲಿ ತನ್ನ ಮಗನನ್ನೂ ಭಾಗಿಯಾಗಿ ಮಾಡಿದ ಕೆಲವು ಪ್ರಸಂಗಗಳೂ ಉಂಟು.

ರಾಮಕೃಷ್ಣನ ಮಗ ಭಾಸ್ಕರಶರ್ಮ. ಬುದ್ಧಿವಂತಿಕೆಯಲ್ಲೂ ಹಾಸ್ಯಗುಣದಲ್ಲೂ ಭಾಸ್ಕರಶರ್ಮ ತಂದೆಯನ್ನು ಹೋಲುತ್ತಿದ್ದ.

ತೆಲಂಗ್

ನೋಡಿ : ಕೆ.ಟಿ.ತೆಲಂಗ್

ತೆಲುಗು ಭಾಷೆ, ಸಾಹಿತ್ಯ

ಭಾಷಾ ವಿಜ್ಞಾನದ ಪ್ರಕಾರ ತೆಲುಗು, ದ್ರಾವಿಡ ಭಾಷಾ ಕುಟುಂಬಕ್ಕೆ ಸೇರುತ್ತದೆ. ಕನ್ನಡ, ತಮಿಳು, ಮಲಯಾಳಂಗಳೂ ಇದೇ ಕುಟುಂಬಕ್ಕೆ ಸೇರಿದ ಭಾಷೆಗಳು. ಕೆಲವು ವ್ಯತ್ಯಾಸಗಳನ್ನು ಬಿಟ್ಟರೆ ಕನ್ನಡ ಮತ್ತು ತೆಲುಗು ಭಾಷೆಯ ಲಿಪಿಗಳು ಬಹುಮಟ್ಟಿಗೆ ಒಂದನ್ನೊಂದು ಹೋಲುತ್ತವೆ. ಕನ್ನಡ, ಮಲಯಾಳಂಗಳಂತೆ ತೆಲುಗಿನಲ್ಲಿ ಸಂಸ್ಕೃತದ ಪ್ರಭಾವ ಹೇರಳವಾಗಿದೆ. ಈ ಭಾಷೆಯನ್ನು ಮಾತನಾಡುವ ಜನ [illegible] ನೂರಕ್ಕೆ 95ರಷ್ಟು ಮಂದಿ ಈಗಿನ [illegible] ದಲ್ಲಿಯೇ ಇದ್ದಾರೆ. [illegible] ಕನ್ನಡದಲ್ಲಿದ್ದಂತೆ ತೆಲುಗಿನಲ್ಲೂ ಪದಗಳ ಉಚ್ಚಾರ ಕಾಗುಣಿತಕ್ಕೆ ಅನುಸಾರವಾಗಿ ಇರುತ್ತದೆ.

ಆಂಧ್ರಪ್ರದೇಶದ ಕರಾವಳಿ ಜನರು ಮಾತನಾಡುವ ಭಾಷೆಯೇ ಇಂದು ಬಹುಮಟ್ಟಿಗೆ ಎಲ್ಲರಿಗೂ ಒಪ್ಪಿಗೆಯಾಗಿರುವ ಆಧುನಿಕ ತೆಲುಗು ಭಾಷೆ. ಶುದ್ಧ ತೆಲುಗು ಮತ್ತು ಸಂಸ್ಕೃತ ಪದಗಳ ಮಿಶ್ರಣದಿಂದಾದ ಈ ಭಾಷಾ ರೂಪವನ್ನೇ ಇಂದು [illegible] ಲಾಗುತ್ತಿದೆ.

ರಾಜಮಹೇಂದ್ರವರದ (ಈಗಿನ ರಾಜಮಹೇಂದ್ರಿ) ರಾಜರಾಜ ನರೇಂದ್ರನ ಆಸ್ಥಾನದಲ್ಲಿದ್ದ ನನ್ನಯನನ್ನು ತೆಲುಗು ಸಾಹಿತ್ಯದ ಮೂಲ ಪುರುಷನೆಂದು ಪರಿಗಣಿಸಲಾಗಿದೆ. ಭಾಷಾಂತರಕಾರ ನನ್ನಯನಿಗಿಂತ ಹಿಂದೆ ತೆಲುಗನ್ನು ಸಾಹಿತ್ಯದಲ್ಲಿ ಬಳಸಿರುವ ಬಗೆಗೆ ಹೆಚ್ಚು ಆಧಾರಗಳಿಲ್ಲ. ಆದರೆ ಕ್ರಿ.ಶ. 7ನೆಯ ಶತಮಾನದ ತೆಲುಗು ಶಾಸನಗಳು ದೊರೆತಿವೆ. ಹನ್ನೆರಡನೆಯ ಶತಮಾನದ ಎರಡನೆಯ ದಶಕದಿಂದ ಈಚೆಗೆ ತೆಲುಗು ಸಾಹಿತ್ಯದ ಸ್ಪಷ್ಟ ಬೆಳವಣಿಗೆಯಾದುದೆಯಂಬುದಕ್ಕೆ ದಾಖಲೆಗಳಿವೆ. ಈ ಕಾಲದಲ್ಲೇ ನನ್ನಯ, ಸಂಸ್ಕೃತ 'ಮಹಾಭಾರತ'ವನ್ನು ತೆಲುಗಿಗೆ ಭಾಷಾಂತರಿಸಿದ. 'ಮಹಾಭಾರತ'ದ ಮೊದಲ ಎರಡು ಪರ್ವಗಳು ಹಾಗೂ ಮೂರನೆಯ ಪರ್ವದ ಸ್ವಲ್ಪ ಭಾಗವನ್ನು ನನ್ನಯ ಭಾಷಾಂತರಿಸಿದ್ದರೂ ಕೃತಿ ವಿಶೇಷ ಮಹತ್ವಗಳಿಸಿತು. ನನ್ನಯನ ಅನಂತರ ತಿಕ್ಕನ (13ನೆಯ ಶತಮಾನ) 'ಮಹಾಭಾರತ'ದ ಮಿಕ್ಕ ಭಾಗಗಳನ್ನು ಭಾಷಾಂತರಿಸಿದ. ತಿಕ್ಕನ ಬಿಟ್ಟಿದ್ದ ಭಾಗಗಳನ್ನು 14ನೆಯ ಶತಮಾನದಲ್ಲಿ ಎರ್ರಾಪ್ರಗ್ಗಡ ಸಂಪೂರ್ಣಗೊಳಿಸಿದ. ಹೀಗೆ 'ಮಹಾಭಾರತ' ತೆಲುಗಿಗೆ ಸಂಪೂರ್ಣವಾಗಿ ಭಾಷಾಂತರವಾಗಲು ಸುಮಾರು ಮೂರು ಶತಕಗಳು ಬೇಕಾದುವು. ಜನಪ್ರಿಯತೆಯಲ್ಲಿ ಈ ಕಾವ್ಯ ತೆಲುಗಿನ ಸರ್ವ ಕಾಲಕ್ಕೂ ಸಲ್ಲುವ ಮಹಾ ಕೃತಿಗಳಲ್ಲೊಂದು.

ಈ ಮಧ್ಯೆ 12ನೆಯ ಶತಮಾನದ ಉತ್ತರಾರ್ಧದಲ್ಲಿ ತನ್ನ 'ಸೋಮೇಶ್ವರ ಶತಕ' ದಿಂದ ಕನ್ನಡಿಗರಿಗೂ ಚಿರಪರಿಚಿತನಾಗಿರುವ ಕವಿ ಪಾಲ್ಕುರಿಕೆ ಸೋಮನಾಥ 'ಬಸವ ಪುರಾಣ'ವೆಂಬ ಶೈವಗ್ರಂಥ ರಚಿಸಿದ. ಸಂಸ್ಕೃತ ಕಾವ್ಯಗಳಿಂದ ಪ್ರೇರಿತನಾದ ನನ್ನೆಚೋಡ 'ಕುಮಾರ ಸಂಭವ' ಬರೆದ. ರಾಮಾಯಣ ತೆಲುಗಿನಲ್ಲಿ ತಡವಾಗಿ ಬಂದರೂ ಅದರ ಅನೇಕ ರೂಪಗಳು ರಚನೆಯಾದುವು. ಇವುಗಳಲ್ಲಿ ಜನಪ್ರಿಯವಾದ 'ಭಾಸ್ಕರ ರಾಮಾಯಣ', 'ರಂಗನಾಥ ರಾಮಾಯಣ' ಹಾಗೂ ತಿಕ್ಕನನ 'ಉತ್ತರರಾಮ ಚರಿತ' ಗಣನೀಯವಾದುವು.

15ನೆಯ ಶತಮಾನದ ಶ್ರೀನಾಥನನ್ನು ಆಂಧ್ರದ ಬೈರನ್ ಎಂದು ಕರೆಯುವುದುಂಟು. 'ಪಾಲ್ನಾಟಿ ವೀರಚರಿತ್ರ' ಇವನ ಐತಿಹಾಸಿಕ ಕಾವ್ಯ. ಇದೇ ಕಾಲದ ಪೋತನ 'ಭಾಗವತ ಪುರಾಣ'ವನ್ನು ತೆಲುಗಿನಲ್ಲಿ ಬರೆದ. ಈ ಕೃತಿ [illegible] ವಾಗಿದೆ.

"ದೇಶ ಭಾಷಲಂದು ತೆಲುಗು ಲೆಸ್ಸ" [illegible] [illegible]

ಸುವರ್ಣಯುಗ ಎನ್ನುತ್ತಾರೆ. ಈ ಕಾಲದಲ್ಲಿಯೇ ಪ್ರಬಂಧಗಳ ರೂಪದಲ್ಲಿ ತೆಲುಗಿನ ಸ್ವೋಪಜ್ಞಕೃತಿಗಳು ರಚಿತವಾದುವು. ಅಲ್ಲಸಾನಿ ಪೆದ್ದನನ 'ಮನು ಚರಿತ್ರ', ಕವಯಿತ್ರಿ ಮೊಲ್ಲಳ 'ರಾಮಾಯಣ', ಪಿಂಗಳಿ ಸೂರನ್ನನ 'ಕಳಾ ಪೂರ್ಣೋದಯಮು', ರಾಮರಾಜ ಭೂಷಣನ 'ವಸು ಚರಿತ್ರ' ಈ ಕಾಲದ ಗಮನಾರ್ಹ ಕೃತಿಗಳು. ಲೋಕಜ್ಞಾನ, ಅನುಭವಗಳಿಂದ ತುಂಬಿದ ವೇಮನನ ಕೃತಿಗಳು ಅಪಾರ ಜನಪ್ರಿಯತೆ ಗಳಿಸಿದುವು. ಇವನನ್ನು 'ಜನರ ಕವಿ' ಎನ್ನುವುದುಂಟು. ತಂಜಾವೂರಿನ ನಾಯಕ ದೊರೆಗಳ (17ನೆಯ ಶತಮಾನ) ಆಶ್ರಯದಲ್ಲಿ ತೆಲುಗಿನ ದಕ್ಷಿಣ ಸಾಹಿತ್ಯ ಪ್ರಕಾರ ಹುಟ್ಟಿತು. ಯಕ್ಷಗಾನ ಮುಂತಾದ ದೇಶೀ ಸಾಹಿತ್ಯ ರೂಪಗಳು ರೂಪುಗೊಂಡುವು.

ಹತ್ತೊಂಬತ್ತನೆಯ ಶತಮಾನದ ದ್ವಿತೀಯಾರ್ಧದ ರಾಜಕೀಯ ಬೆಳವಣಿಗೆಗಳಿಂದಾಗಿ ತೆಲುಗು ಸಾಹಿತ್ಯದಲ್ಲಿ, ಮುಖ್ಯವಾಗಿ ಗದ್ಯಪ್ರಕಾರದಲ್ಲಿ, ಹೊಸ ಯುಗ ಪ್ರಾರಂಭವಾಯಿತು. ಆಡುಮಾತಿನ ಭಾಷೆಯನ್ನು ಸಾಹಿತ್ಯದಲ್ಲಿ ತಂದ ಗಿಡುಗು ವೆಂಕಟರಾಮ ಮೂರ್ತಿ (1863–1940) ಮತ್ತು ಗುರಜಾಡ ವೆಂಕಟ ಅಪ್ಪಾರಾವ್ (1861–1915) ತೆಲುಗು ಸಾಹಿತ್ಯದಲ್ಲಿ ಕ್ರಾಂತಿಯನ್ನುಂಟುಮಾಡಿದರು. ಅಪ್ಪಾರಾವ್ ಅವರ 'ಕನ್ಯಾಶುಲ್ಕಂ' ಸಾಮಾಜಿಕ ನಾಟಕ. ಅಮೂಲ್ಯ ಕೃತಿ. ಕಂದುಕೂರಿ ವೀರೇಶಲಿಂಗಂ (1848–1919) ಗೋಲ್ಡ್ ಸ್ಮಿತ್‌ನ 'ವಿಕಾರ್ ಆಫ್ ವೇಕ್‌ಫೀಲ್ಡ್'ನ ಆಧಾರದ ಮೇಲೆ 'ರಾಜಶೇಖರ ಚರಿತ'ವನ್ನು ರಚಿಸಿದರು. ಇಂಗ್ಲೆಂಡಿನ 'ಸ್ಪೆಕ್ಟೇಟರ್'ನಂತೆ ಪಾನುಗಂಟಿ ಲಕ್ಷ್ಮೀನರಸಿಂಹರಾವ್ (1865–1940) 'ಸಾಕ್ಷಿ' ಪ್ರಬಂಧಗಳನ್ನು ಬರೆದರು. ಚಿಲಕಮರ್ತಿ ಲಕ್ಷ್ಮೀನರಸಿಂಹಮ್ (1867–1940) ಅವರ 'ಗಣಪತಿ' ಖ್ಯಾತ ಕೃತಿ.

ಅವಧಾನಂ ತೆಲುಗಿನ ಅತ್ಯಂತ ವಿಶಿಷ್ಟ ಸಾಹಿತ್ಯಕ ಸಂಪ್ರದಾಯ. ತಿರುಪತಿಶಾಸ್ತ್ರೀ ಮತ್ತು ಚೆಳ್ಳಪಿಳ್ಳ ವೆಂಕಟಶಾಸ್ತ್ರೀ (ತಿರುಪತಿ ವೆಂಕಟಕವುಲು ಎಂದು ಜನಪ್ರಿಯರು) ಈ ಸಂಪ್ರದಾಯವನ್ನು ಕರಗತಮಾಡಿಕೊಂಡಿದ್ದರು. ಆಶುಕವಿತೆ ಮತ್ತೊಂದು ವಿಶಿಷ್ಟ ಪ್ರಕಾರ.

ಈ ಸಾಂಪ್ರದಾಯಿಕ ಹಿನ್ನೆಲೆಯಲ್ಲಿ ರೊಮ್ಯಾಂಟಿಕ್ ಪ್ರಜ್ಞೆಯ 'ಭಾವ ಕವುಲು' ಎಂಬ ಪ್ರಗತಿಪರ ಧೋರಣೆಯ ಕವಿಗಳ ಹೊಸ ಶೈಲಿ ತೆಲುಗಿನಲ್ಲಿ ಹುಟ್ಟಿತು. ರಾಯಪ್ರೋಲು ಸುಬ್ಬರಾವ್ (ಜನನ : 1892), ಗುರ್ರಂ ಜೋಷುವ, ದುವ್ವೂರಿ ರಾಮಿರೆಡ್ಡಿ ಆಧುನಿಕ ಸಾಹಿತ್ಯದ ಗಮನಾರ್ಹ ಕವಿಗಳು. ಸಾಂಪ್ರದಾಯಿಕ ಶೈಲಿಯಿಂದ ಆಧುನಿಕತೆಗೆ ನಡೆದ ಕವಿಗಳಲ್ಲಿ ದೇವುಲಪಲ್ಲಿ ವೆಂಕಟಕೃಷ್ಣಶಾಸ್ತ್ರೀ (ಜನನ : 1887) ಪ್ರಮುಖರು. 1940ರ ದಶಕದಲ್ಲಿ 'ಶ್ರೀ ಶ್ರೀ' (ಶ್ರೀರಂಗಂ ಶ್ರೀನಿವಾಸರಾವ್, ಜನನ: 1910), ಪಟ್ಟಾಭಿ ನಾರಾಯಣ ಬಾಬು ಮೊದಲಾದವರು ಪ್ರಗತಿಶೀಲರೆಂದು ಪ್ರಖ್ಯಾತರಾಗಿ ತಮ್ಮದೇ ಸಂಪ್ರದಾಯ ಆರಂಭಿಸಿದರು. 'ಆರುದ್ರ' (ಭಗವತುಲ ಶಂಕರಶಾಸ್ತ್ರೀ, ಜನನ: 1925), ದಾಶರಥಿ (ಜನನ : 1925), ಸಿ. ನಾರಾಯಣರೆಡ್ಡಿ (ಜನನ : 1931)—ಈ ಸಂಪ್ರದಾಯಕ್ಕೆ ಸೇರಿದ ಕವಿಗಳು. ಸಂಪ್ರದಾಯ ಹಾಗೂ ಆಧುನಿಕತೆಗಳ ಸಂಗಮ ಇವರ ಕಾವ್ಯಗಳಲ್ಲಿ ಕಂಡುಬರುತ್ತದೆ. ಖ್ಯಾತಕವಿ ವಿಶ್ವನಾಥ ಸತ್ಯನಾರಾಯಣ (ಜನನ : 1895) ಅವರ 'ಶ್ರೀಮದ್ರಾಮಾಯಣ ಕಲ್ಪತರು' ಕೃತಿಗೆ 1971ರಲ್ಲಿ ಜ್ಞಾನಪೀಠ ಪ್ರಶಸ್ತಿ ಸಿಕ್ಕಿತು. ಇವರ 'ವೇಯಿ ಪಡಗಲು', 'ಏಕವೀರ' ಮೊದಲಾದ ಕಾದಂಬರಿಗಳು ಅಪಾರ ಜನಪ್ರಿಯತೆ ಗಳಿಸಿವೆ. ಪದ್ಮರಾಜು (ಜನನ : 1915) ಅವರ 'ಗಾಳಿವಾನ' ಕೃತಿಗೆ 1951ರಲ್ಲಿ ಅಂತರರಾಷ್ಟ್ರೀಯ ಮನ್ನಣೆದೊರೆತಾಗ ತೆಲುಗು ಸಾಹಿತ್ಯದಲ್ಲಿ ಸಣ್ಣಕಥೆಗಳ ಸ್ಥಾನ ಭದ್ರವಾಯಿತು. ಬುಚ್ಚಿಬಾಬು, ಕೊಡವಟಿಗಂಟಿ ಕುಟುಂಬರಾವ್ (ಜನನ : 1909) ಖ್ಯಾತ ಸಣ್ಣಕಥೆ ಲೇಖಕರು.

ಸಮಕಾಲೀನ ತೆಲುಗು ಸಾಹಿತ್ಯದಲ್ಲಿ ಮಹಿಳಾ ಲೇಖಿಕಿಯರು ಅನೇಕರಿದ್ದಾರೆ. ಎದ್ದನಪುಡಿ ಸುಲೋಚನಾರಾಣಿ, ಕೋಡೂರಿ (ಅರೆಕೆಪುಡಿ) ಕೌಸಲ್ಯದೇವಿ, ಮುಪ್ಪಾಳ ರಂಗನಾಯಕಮ್ಮ, ಬೀನಾ ದೇವಿ, ದ್ವಿವೇದುಲ ವಿಶಾಲಾಕ್ಷಿ ಮೊದಲಾದವರು ಜನಪ್ರಿಯ ಕಾದಂಬರಿಕಾರರು.

ಸಂಗೀತ ರಚನೆಯಲ್ಲಿ ತ್ಯಾಗರಾಜ, ಅಣ್ಣಮಾಚಾರ್ಯ, ಕ್ಷೇತ್ರಯ್ಯ ಪ್ರಮುಖರು. ಚಾರ್ಲ್ಸ್ ಫಿಲಿಪ್ ಬ್ರೌನ್ (1798–1884) 'ತೆಲುಗು ಭಾಷೆಯ ಕಿಟ್ಟೆಲ್'.

1966ರಲ್ಲಿ ಪ್ರಾರಂಭವಾದ 'ದಿಗಂಬರ ಕವುಲು' ಎಂಬ ಕವಿಗಳ ಗುಂಪು ಅಸ್ತಿತ್ವವಾದವನ್ನು ಸಾಹಿತ್ಯದಲ್ಲಿ ತಂದಿತು. ಈಗ ಇತಿಹಾಸ, ವಿಜ್ಞಾನ, ಪತ್ರಿಕೋದ್ಯಮ ಕ್ಷೇತ್ರಗಳಲ್ಲಿ ತೆಲುಗು ಗದ್ಯಸಾಹಿತ್ಯ ಸಮೃದ್ಧವಾಗಿ ಬೆಳೆಯುತ್ತಿದೆ. 1902ರಲ್ಲಿ 'ಕೃಷ್ಣಾ ಪತ್ರಿಕ' ಪ್ರಾರಂಭಿಸಿದ ಮುತ್ತೂರಿ ಕೃಷ್ಣರಾವ್, 'ಆಂಧ್ರ ಪತ್ರಿಕ' ಆರಂಭಿಸಿದ ಕಾಶೀನಾಧುನಿ ನಾಗೇಶ್ವರರಾವ್ ತೆಲುಗು ಪತ್ರಿಕೋದ್ಯಮದ ಪಿತಾಮಹರು. ಸಾಹಿತ್ಯದಲ್ಲಿ ವ್ಯವಸ್ಥಿತ ಕೃತಿಗಳನು ಹೊರತರಲು ಕೊಮ್ಮರಾಜು ವೆಂಕಟಲಕ್ಷ್ಮಣರಾವ್ 'ವಿಜ್ಞಾನ ಚಂದ್ರಿಕ ಗ್ರಂಥಮಂಡಲಿ' ಸ್ಥಾಪಿಸಿದರು. ಇವರ ಪ್ರಯತ್ನದಿಂದಾಗಿ ವಿಜ್ಞಾನ ಗ್ರಂಥಗಳು, 'ಆಂಧ್ರ ವಿಜ್ಞಾನ ಸರ್ವಸ್ವಮು' ಎಂಬ ಎರಡು ಸಂಪುಟಗಳ ವಿಶ್ವಕೋಶ ಹೊರಬಂದುವು. ಸ್ವಾತಂತ್ರ್ಯಾನಂತರ ತೆಲುಗು ಭಾಷಾ ಸಮಿತಿ 16 ಸಂಪುಟಗಳ 'ವಿಜ್ಞಾನ ಸರ್ವಸ್ವಮು' ಎಂಬ ವಿಶ್ವಕೋಶ ಪ್ರಕಟಿಸುತ್ತಿದೆ. 'ಸಂಗ್ರಹಾಂಧ್ರ ವಿಜ್ಞಾನ ಕೋಶ ಸಮಿತಿ' ಇಂಥದೇ ಪ್ರಯತ್ನ ನಡೆಸುತ್ತಿರುವ ಇನ್ನೊಂದು ಸಂಸ್ಥೆ.

ಕಾಕಿನಾಡದ ಆಂಧ್ರ ಸಾಹಿತ್ಯ ಪರಿಷತ್, ಹೈದರಾಬಾದಿನ ಆಂಧ್ರ ಸಾರಸ್ವತ ಪರಿಷತ್ ಮತ್ತು ಆಂಧ್ರ ಪ್ರದೇಶ ಸಾಹಿತ್ಯ ಅಕಾಡೆಮಿ ತೆಲುಗು ಸಾಹಿತ್ಯದ ಏಳಿಗೆಗೆ ಶ್ರಮಿಸುತ್ತಿರುವ ಪ್ರಮುಖ ಸಂಸ್ಥೆಗಳು.

ನೋಡಿ : ವಿಶ್ವನಾಥ ಸತ್ಯನಾರಾಯಣ

ತೇಜ ಬಹದ್ದೂರ್ ಸಪ್ರು

ವಿದ್ವಾಂಸ, ರಾಜಕಾರಣಿ, ನ್ಯಾಯವೇತ್ತ ತೇಜ ಬಹದ್ದೂರ್ ಸಪ್ರು ಸ್ಫುಟ ವಿಚಾರಗಳಿಗೂ ಚತುರ ಪ್ರತಿಪಾದನೆಗೂ ಪ್ರಖ್ಯಾತರಾಗಿದ್ದರು.

ಜನನ 1875 ಡಿಸೆಂಬರ್ 8. ಆಗ್ರಾ, ಅಲಹಾಬಾದ್‌ಗಳಲ್ಲಿ ವಿದ್ಯಾಭ್ಯಾಸ. ನ್ಯಾಯವಾದಿಯಾಗಿ ಬಹು ಬೇಗ ಉನ್ನತಿಗೇರಿದರು. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸಿನ ಕಾರ್ಯದರ್ಶಿಯಾಗಿದ್ದ (1910) ಸಪ್ರು ಅಸಹಕಾರ ಚಳುವಳಿ ನಡೆದಾಗ ಕಾಂಗ್ರೆಸ್ಸನ್ನು ಬಿಟ್ಟರು. ಮುಂದೆ ರಾಷ್ಟ್ರೀಯ ಚಳುವಳಿಯಲ್ಲಿ ಭಾಗ ವಹಿಸಲಿಲ್ಲ.

1920ರಲ್ಲಿ ಭಾರತ ಸರಕಾರದ ಕಾಯಿದೆ ಸದಸ್ಯರಾಗಿ ನೇಮಕಗೊಂಡರು. ವಿದೇಶದಲ್ಲಿರುವ ಭಾರತೀಯರಿಗೆ ಪೌರ ಹಕ್ಕು ಮತ್ತು ಸೌಕರ್ಯ



ಸೌಮ್ಯ ನೀತಿ : ಸಪ್ರು

ದೊರೆಯಬೇಕೆಂದು ಸಪ್ರು ಅವರು ಸಾಮ್ರಾಜ್ಯ ಸಮ್ಮೇಳನದಲ್ಲಿ ಮಾಡಿದ ಭಾಷಣ ಅತ್ಯಂತ ಪರಿಣಾಮಕಾರಿಯಾಗಿತ್ತು. ಮೂರು ಬಾರಿ ನಡೆದ ದುಂಡು ಮೇಜಿನ ಪರಿಷತ್ತಿನಲ್ಲೂ ಭಾರತದ ಪ್ರತಿನಿಧಿಯಾಗಿ ಸಪ್ರು ಭಾಗ ವಹಿಸಿದರು.

ರಾಜಕೀಯದಲ್ಲಿ ಅವರದು ಸೌಮ್ಯನೀತಿ. ರಾಷ್ಟ್ರೀಯ ಚಳುವಳಿಗಾರರು ಮತ್ತು ಬ್ರಿಟಿಷ್ ಸರಕಾರದೊಡನೆ ಸೌಹಾರ್ದ ಬೆಳೆಸಲು ಸಪ್ರು ವಿಶೇಷವಾಗಿ ಶ್ರಮಿಸಿದರು. ಗಾಂಧೀ–ಇರ್ವಿನ್ ಒಪ್ಪಂದ ಏರ್ಪಡಲು ಅವರು ಬಹುಮಟ್ಟಿಗೆ ಕಾರಣರಾಗಿದ್ದರು.

1949 ಜನವರಿ 20ರಂದು ಸಪ್ರು ತೀರಿಕೊಂಡರು.

ನೋಡಿ : ಗಾಂಧೀ – ಇರ್ವಿನ್ ಒಪ್ಪಂದ

ತೇನ್‌ಸಿಂಗ್

ನೋಡಿ : ತೇನ್‌ಸಿಂಗ್ ನಾರ್ಕೆ—ಸಂಪುಟ ೧

ತೈತ್ತಿರೀಯೋಪನಿಷತ್

ವೇದಗಳನ್ನು ಗುರು ಶಿಷ್ಯರಿಗೆ ಬಾಯಿಪಾಠ ಮಾಡಿಸುವುದು ಪೂರ್ವ ಪದ್ಧತಿ. ಇದರಂತೆ ವ್ಯಾಸ ವೈಶಂಪಾಯನನಿಗೆ ಕಲಿಸಿದ್ದನ್ನು ವೈಶಂಪಾಯನನು ತನ್ನ ಶಿಷ್ಯರಿಗೆ ಕಲಿಸಿದ. ಯಾಜ್ಞವಲ್ಕ್ಯ ವೈಶಂಪಾಯನನಿಂದ ಯಜುರ್ವೇದವನ್ನು ಕಲಿತ. ಗುರು–ಶಿಷ್ಯರಿಗೆ ಮನಸ್ತಾಪ ಉಂಟಾದಾಗ ವೈಶಂಪಾಯನ ಯಾಜ್ಞವಲ್ಕ್ಯನನ್ನು ಕುರಿತು "ನಾನು ಕಲಿಸಿದ್ದನ್ನೆಲ್ಲ ಹಿಂದಿರುಗಿಸು" –ಎಂದ. ಯಾಜ್ಞವಲ್ಕ್ಯ ತಾನು ಕಲಿತದ್ದನ್ನು ತನ್ನ ತಪೋಬಲದಿಂದ ವಾಂತಿ ಮಾಡಿದ. ಗುರುವಿನ ಅಪ್ಪಣೆಯಂತೆ ಇತರ ಶಿಷ್ಯರು ತಿತ್ತಿರಿ ಹಕ್ಕಿಗಳ ರೂಪ ಪಡೆದು ಅದನ್ನು ತಿಂದರು. ಇದರಿಂದಾಗಿ ಕೃಷ್ಣ ಯಜುರ್ವೇದಕ್ಕೆ ತೈತ್ತಿರೀಯ ಸಂಹಿತೆ ಎಂಬ ಹೆಸರು ಬಂತು. (ಯಜುರ್ವೇದದಲ್ಲಿ ಎರಡು ಬಗೆ: ಕೃಷ್ಣಯಜುರ್ವೇದ ಮತ್ತು ಶುಕ್ಲಯಜುರ್ವೇದ.)

ತೈತ್ತಿರೀಯ ಸಂಹಿತೆಯ ಆರಣ್ಯಕ ವಿಭಾಗದ ಶೀಕ್ಷಾವಲ್ಲಿ, ಆನಂದವಲ್ಲಿ, ಭೃಗುವಲ್ಲಿ ಎಂಬ ಅಧ್ಯಾಯಗಳು ತೈತ್ತಿರೀಯೋಪನಿಷತ್ತಿನಲ್ಲಿವೆ.

ಅಧ್ಯಯನ ಮುಗಿಸಿ ಹೊರಟಿರುವ ಶಿಷ್ಯ ಮುಂದೆ ಏನು ಮಾಡಬೇಕು, ಹೇಗೆ ವರ್ತಿಸಬೇಕು ಮುಂತಾದ ಗುರುಬೋಧೆ ಶೀಕ್ಷಾವಲ್ಲಿಯಲ್ಲಿದೆ. ಎಲ್ಲರೂ ಅನುಸರಿಸಬೇಕಾದ ಧರ್ಮಬೋಧೆಯೂ ಇದರಲ್ಲಿದೆ. ಆನಂದವಲ್ಲಿಯಲ್ಲಿ ಅನಂತವಾದ ಬ್ರಹ್ಮದ ಲಕ್ಷಣವನ್ನು ಹೇಳಿದೆ. ಬ್ರಹ್ಮ ವಿದ್ಯೆಯನ್ನು ಪಡೆಯಲು ಸಾಧಕವಾದ ತಪಸ್ಸನ್ನು ಕುರಿತ ವಿವರಣೆ ಭೃಗುವಲ್ಲಿಯಲ್ಲಿದೆ.

ನೋಡಿ : ಯಜುರ್ವೇದ

ತೈಮೂರ್

ಭಾರತದ ಮೇಲೆ ಒಂದೇ ಆಕ್ರಮಣದಲ್ಲಿ ಹಿಂದೆ ಯಾವ ಜಯಶಾಲಿಯೂ ಮಾಡಿರದಷ್ಟು ಹಾನಿ ಮಾಡಿ ಹಿಂದಿರುಗಿದವನು ಕುಂಟ ತೈಮೂರ.

ಸಮರಕಂದ್‌ಗೆ 50 ಮೈಲು ದಕ್ಷಿಣದಲ್ಲಿರುವ ಕೆಶ್‌ನಲ್ಲಿ ಅಮೀರ್ ತೈಮೂರ್ 1336ರಲ್ಲಿ ಜನಿಸಿದ. ತಂದೆ ಅಮೀರ್ ತುರ್ಘೆ ಒಂದು ಬುಡಕಟ್ಟಿನ ಮುಖಂಡನಾಗಿದ್ದ. 1369ರಲ್ಲಿ ಸಮರ್‌ಕಂದ್‌ನ ಸಿಂಹಾಸನ ಏರಿದ ತೈಮೂರ್ ಪರ್ಷಿಯ, ಆಫ್‌ಘಾನಿಸ್ತಾನ ಮತ್ತು ಮೆಸೊಪೊಟೇಮಿಯಗಳ ಮೇಲೆ ದಾಳಿ ಮಾಡಿದ.



ಬಂದ ದಾರಿಯಲ್ಲಿ ಹಿಂದೆ : ತೈಮೂರ್

ಭಾರತದಲ್ಲಿ ತುಂಬಿ ತುಳುಕುತ್ತಿದ್ದ ಐಶ್ವರ್ಯ ಭಾರತವನ್ನು ಆಕ್ರಮಣ ಮಾಡಬೇಕೆಂಬ ತೈಮೂರನ ಆಸೆಗೆ ಪ್ರೇರಣೆಯಾಯಿತು. 1398ರಲ್ಲಿ ಸಿಂಧೂ ನದಿಯನ್ನು ದಾಟಿ ಭಾರತವನ್ನು ಪ್ರವೇಶಿಸಿದ. ದೆಹಲಿ ತಲಪುವ ವರೆಗೂ ಅನೇಕ ಕಡೆ ಯುದ್ಧ ನಡೆಸಿ ಬಹು ಜನರ ಕಗ್ಗೊಲೆ ಮಾಡಿದ. ದೆಹಲಿಯ ಸುಲ್ತಾನ್ ಮಹಮೂದ್ ಮತ್ತು ಮಲ್ಲೂ ಇಕ್ಬಾಲ್ ತೈಮೂರನನ್ನು ಎದುರಿಸಿ ಸೋತರು. ಒಂದು ಲಕ್ಷ ಬಂದಿಗಳ ಹತ್ಯೆ ನಡೆಯಿತು. ಮರುದಿನ ದೆಹಲಿ ಪ್ರವೇಶ ಹಾಗೂ ಸುಲಿಗೆ, ಕೊಲೆ. ತೈಮೂರ್ ಸ್ವತಃ ವಿನ್ಯಾಸಮಾಡಿದ್ದ ಮಸೀದಿ ಕಟ್ಟಲು ದೆಹಲಿಯ ಕುಶಲ ಕೆಲಸಗಾರರನ್ನು ಸಮರ್‌ಕಂದ್‌ಗೆ ಕಳುಹಿಸಿದ. ಮೀರತ್‌ನ ಮೇಲೆ ದಾಳಿ ನಡೆಸಿ ಹರಿದ್ವಾರದ ಬಳಿ ಎರಡು ಹಿಂದೂ ಸೈನ್ಯಗಳನ್ನು ಸೋಲಿಸಿದ. ಕಾಂಗ್ರಾ ಮತ್ತು ಜಮ್ಮುಗಳ ಮೇಲೆ ದಾಳಿ ಮಾಡಿದ. ಇಲ್ಲೂ ಕಗ್ಗೊಲೆ ನಡೆಯಿತು. ಖಿಜರ್‌ಖಾನ್ ಸಯಿದ್‌ನನ್ನು ಮುಲ್ತಾನ್, ಲಾಹೋರ್, ದೀಪಾಲ್ಪುರಗಳ ರಾಜಪ್ರತಿನಿಧಿ ಎಂದು ನೇಮಕ ಮಾಡಿದ.

ಅದೇ ವರ್ಷ ಈಜಿಪ್ಟ್‌ನತ್ತ ನಡೆದ ತೈಮೂರ್ ಅಜರ್‌ಬೈಜಾನ್, ಸಿರಿಯ, ಡಮಾಸ್ಕಸ್, ಬಾಗ್ದಾದ್, ಅನಟೋಲಿಯಗಳನ್ನು ಗೆದ್ದು, 1404ರಲ್ಲಿ ಸಮರ್‌ಕಂದ್‌ಗೆ ಹಿಂದಿರುಗಿದ. ಚೀನದತ್ತ ಹೊರಟಾಗ ದಾರಿಯಲ್ಲೇ ಅಸ್ವಸ್ಥನಾಗಿ 1405ರಲ್ಲಿ ತೀರಿಕೊಂಡ.

ತೈಲ ಮತ್ತು ನೈಸರ್ಗಿಕ ಅನಿಲ ಆಯೋಗ

ರಾಷ್ಟ್ರದ ವಿವಿಧ ಭಾಗಗಳಲ್ಲಿ ಖನಿಜ ತೈಲ ಮತ್ತು ನೈಸರ್ಗಿಕ ಅನಿಲಗಳಿಗಾಗಿ ಶೋಧನೆಗಳನ್ನು ನಡೆಸುವುದು, ಅವು ದೊರೆತ ಸ್ಥಳಗಳಲ್ಲಿ ಉತ್ಪಾದನೆಗೆ ಸಂಬಂಧಿಸಿದ ಕಾರ್ಯಗಳನ್ನು ನಿರ್ವಹಿಸುವುದು ಈ ಆಯೋಗಕ್ಕೆ ಸಂಬಂಧಿಸಿದ ಕೆಲಸಗಳು.

1955ರಲ್ಲಿ ಭಾರತ ಸರಕಾರದ ಭೂವೈಜ್ಞಾನಿಕ ಸರ್ವೆ ಕಾರ್ಯದಲ್ಲಿ ಪೆಟ್ರೋಲಿಯಂ ವಿಭಾಗವೊಂದು ಆರಂಭವಾಯಿತು. 1956ರಲ್ಲಿ ತೈಲ ಮತ್ತು ನೈಸರ್ಗಿಕ ಅನಿಲ ಆಯೋಗ (ಆಯಿಲ್ ಅಂಡ್ ನ್ಯಾಚುರಲ್ ಗ್ಯಾಸ್ ಕಮಿಷನ್) ರೂಪುಗೊಂಡಿತು.



ಗುಜರಾತಿನ ಕೊಯಾಲಿ ತೈಲಸಂಸ್ಕರಣ ಕೇಂದ್ರ

ವಿಜ್ಞಾನಿಗಳು ಮತ್ತು ತಾಂತ್ರಿಕ ಪರಿಣತರ ಒಂದು ಗುಂಪನ್ನು ಸಂಘಟಿಸುವುದು ಈ ಆಯೋಗದ ಮೊದಲ ಕೆಲಸವಾಯಿತು. ಈಗ ಗುಜರಾತಿನ ಕ್ಯಾಂಬೆ ಮತ್ತು ಅಸ್ಸಾಮಿನ ಅನೇಕ ಪ್ರದೇಶಗಳಲ್ಲಿ ಆಯೋಗ ಎಣ್ಣೆ ಬಾವಿಗಳನ್ನು ತೋಡಿಸಿದೆ. ಇದಲ್ಲದೆ, ಪೆಟ್ರೋಲಿಯಂ ಅನ್ವೇಷಣೆಗೆ ಸಂಬಂಧಿಸಿದಂತೆ ಒಂದು ಪೆಟ್ರೋಲಿಯಂ ಶುದ್ಧೀಕರಣ ಸಂಸ್ಥೆಯನ್ನೂ ಮಾರಾಟ ವ್ಯವಹಾರಕ್ಕಾಗಿ ಪ್ರತ್ಯೇಕ ಸಂಸ್ಥೆಯನ್ನೂ ಸ್ಥಾಪಿಸಿದೆ. ಹಲವು ರಾಷ್ಟ್ರಗಳೊಡನೆ ಹಲವು ಬಗೆಯ ಸಹಕಾರಗಳಿಗಾಗಿ ಒಪ್ಪಂದ ಮಾಡಿಕೊಂಡು ತೈಲ ಉತ್ಪಾದನೆಯನ್ನು ಕೈಗೊಂಡಿದೆ.

ಗಣಿಗಳಿಂದ ತೆಗೆದ ತೈಲ ಮತ್ತು ಅನಿಲಗಳನ್ನು ಸಂಸ್ಕರಣ ಕೇಂದ್ರಗಳಿಗೆ ಸಾಗಿಸುವುದಕ್ಕಾಗಿ ಕೊಳವೆ ಮಾರ್ಗ ಹಾಕುವುದೂ ಈ ಆಯೋಗದ ಹೊಣೆ.

ತೊಗಲು ಗೊಂಬೆಯಾಟ

ನೋಡಿ : ಸಂಪುಟ ೫

ತೋಡರ್‌ಮಲ್

ರಾಜನ ಆದಾಯಕ್ಕೆ ಕುಂದುತರದ, ಆದರೆ ಬೇಸಾಯಗಾರನ ಕಷ್ಟನಷ್ಟಗಳನ್ನು ಗಮನಿಸಿದ ಅತಿ ದಕ್ಷ ಕಂದಾಯ ಪದ್ಧತಿಯನ್ನು ಅಕ್ಬರನ ಕಾಲದಲ್ಲಿ ರೂಪಿಸಿದವನು ತೋಡರ್‌ಮಲ್ (ಭಾಷಾ ಉಚ್ಚಾರ: ಟೋಡರ್‌ಮಲ್).



ಭೂಕಂದಾಯ : ತೋಡರ್‌ಮಲ್

1570–71 ರಲ್ಲಿ ತೋಡರ್‌ಮಲ್ ಮತ್ತು ಮುಜಫರ್ ಖಾನರು ಆಗಿನ ಭೂಕಂದಾಯ ಪದ್ಧತಿಯ ಪುನರ್ವಿಮರ್ಶೆ ಮಾಡಿದರು. 1582ರಲ್ಲಿ ತೋಡರ್‌ಮಲ್ ದಿವಾನ್-ಇ-ಅಷ್ರಫ್ ಪದವಿಗೆ ಬಂದಾಗ, ಭೂಮಿಯ ಸರ್ವೆ ನಡೆಸಿದ ; ಕೃಷಿಗೆ ಒಳಪಡುವ ಭೂಮಿಯ ಮೇಲೆ ಮಾತ್ರ ಕಂದಾಯ ವಿಧಿಸಿದ. ಉತ್ಪಾದಿತ ಬೆಳೆಯ ಮೂರರಲ್ಲಿ ಒಂದು ಭಾಗದಷ್ಟು ಕಂದಾಯವನ್ನು ಹಣ ಅಥವಾ ಬೇರೆ ಯಾವುದೇ ರೂಪದಲ್ಲಿ ಸರಕಾರಕ್ಕೆ ನೇರವಾಗಿ ಸಲ್ಲಿಸಲು ಅವಕಾಶವಿತ್ತು.

ಆಡಳಿತಾನುಕೂಲಕ್ಕಾಗಿ ಹಾಗೂ ಕಂದಾಯ ವಸೂಲಿಯ ಸೌಕರ್ಯಕ್ಕಾಗಿ ಸಾಮ್ರಾಜ್ಯವನ್ನು ಕ್ರಮವಾಗಿ ಸುಬಾ, ಸರಕಾರ, ಪರಗಣಾ ಎಂದು ವಿಂಗಡಿಸಲಾಯಿತು. ಅತಿ ಸಣ್ಣ ವಿಭಾಗವಾದ ಪರಗಣಾ ಹಲವು ಹಳ್ಳಿಗಳ ಒಂದು ಗುಂಪು.

ತೋಡರ್‌ಮಲ್ ಅಕ್ಬರನ ಸೈನ್ಯ ಕಾರ್ಯಾಚರಣೆಗಳಲ್ಲೂ ಭಾಗವಹಿಸಿದ.

ತೋರು ದತ್

ಬದುಕಿದ್ದಾಗ ಕೇವಲ ಇಪ್ಪತ್ತೊಂದು ವರ್ಷ. ಆದರೆ ಅಷ್ಟರಲ್ಲೇ 'ಗಂಗಾತೀರದ ಈ ಹೆಣ್ಣು ಮಗಳು' ಸ್ವಪ್ರತಿಭೆಯಿಂದ ಶ್ರೇಷ್ಠ ಆಂಗ್ಲ ಕವಿಗಳ ಸಾಲಿನಲ್ಲಿ ನಿಲ್ಲುವ ಹಕ್ಕನ್ನು ಸಂಪಾದಿಸಿದ್ದರು.

ಇಂಗ್ಲಿಷಿನಲ್ಲಿ ಸಾಹಿತ್ಯ ರಚಿಸಿ ಸುಪ್ರಸಿದ್ಧರಾಗಿರುವ ಭಾರತೀಯ ಮಹಿಳೆಯರಲ್ಲಿ ತೋರು ದತ್ ಮೊದಲಿಗರು.

ತರುಲತಾ ಹುಟ್ಟಿದ್ದು 1856ರಲ್ಲಿ ಕಲ್ಕತ್ತೆಯ ಬಂಗಾಳಿ ಕುಟುಂಬವೊಂದರಲ್ಲಿ. ತಂದೆ ಗೋವಿನ್ ದತ್. ಸುಸಂಸ್ಕೃತ ಮನೆತನ. ತರು (ಅಥವಾ ತೋರು) ಆರು ವರ್ಷದವಳಿದ್ದಾಗ ದತ್ ಕುಟುಂಬ ಕ್ರೈಸ್ತಮತವನ್ನು ಅವಲಂಬಿಸಿತು. ಆಗ ತರುವಿನ ಅಕ್ಕ ಅರುವಿಗೆ ಎಂಟು ವರ್ಷ. ಅಣ್ಣ ಅಬ್ಜುವಿಗೆ ಹನ್ನೊಂದು. ಹದಿನಾಲ್ಕು ವರ್ಷದವನಿದ್ದಾಗ ಅಬ್ಜು ಕಾಲವಾದ.

1869ರಲ್ಲಿ ದತ್ ಕುಟುಂಬ ಯೂರೋಪಿಗೆ ಪ್ರಯಾಣ ಮಾಡಿತು. ಫ್ರಾನ್ಸಿನ ಫ್ರೆಂಚ್ ಶಾಲೆಯಲ್ಲೂ ಇಂಗ್ಲೆಂಡಿನ ಇಂಗ್ಲಿಷ್ ಶಾಲೆಯಲ್ಲೂ ಕೆಲವು ಕಾಲ ಕಲಿತ ಸೋದರಿಯರು ಇಂಗ್ಲಿಷ್, ಫ್ರೆಂಚ್ ಎರಡು ಭಾಷೆಗಳಲ್ಲೂ ಪಾಂಡಿತ್ಯ ಪಡೆದರು. ಅನೇಕ ಫ್ರೆಂಚ್ ಕವನಗಳನ್ನು ಮೂಲಕ್ಕೆ ಸ್ವಲ್ಪವೂ ಕುಂದಿಲ್ಲದಂತೆ ಇಂಗ್ಲಿಷ್ ಭಾಷೆಗೆ ಅನುವಾದ ಮಾಡಿದರು.

1873ರಲ್ಲಿ ದತ್ ಕುಟುಂಬ ಕಲ್ಕತ್ತೆಗೆ ಹಿಂದಿರುಗಿತು. ಮೊದಲಿನಿಂದಲೂ ಮಕ್ಕಳ ಆರೋಗ್ಯ ಸರಿಯಾಗಿರಲಿಲ್ಲ. ಅರು ಕ್ಷಯರೋಗಕ್ಕೆ ತುತ್ತಾಗಿ ಕಾಲವಾದಳು.

ತೋರು ತನ್ನ ದುಃಖವನ್ನೆಲ್ಲ ಕಾವ್ಯರಚನೆಯಲ್ಲಿ ಮರೆತರು. ಅವರ ಅನೇಕ ಕವನಗಳು 'ಬೆಂಗಾಲ್ ಮ್ಯಾಗಜೀನ್'ನಲ್ಲಿ ಪ್ರಕಟವಾದುವು. ಫ್ರೆಂಚ್ ಸಾಹಿತ್ಯದಿಂದ ತಾವು ಆರಿಸಿ ಭಾಷಾಂತರಿಸಿದ್ದ ಕವನಗಳನ್ನು 'ಫ್ರೆಂಚ್ ಹೊಲಗದ್ದೆಗಳಲ್ಲಿ ಕಟ್ಟಿದ ಕಂತೆ' ಎಂಬ ಹೆಸರಿಟ್ಟು ಅಚ್ಚಿಗೆ ಕಳುಹಿಸಿದರು. ನೂರಅರವತ್ತೈದು ಅನುವಾದಿತ ಕವನಗಳಿರುವ ಈ ಕವನ ಸಂಕಲನಕ್ಕೆ ಮಾರುಹೋದ ಆಂಗ್ಲ ವಿಮರ್ಶಕ ಎಡ್ಮಂಡ್ ಗಾಸ್ "ಕಾವ್ಯ ಇಷ್ಟು ಸೊಗಸಾಗಿರುವಾಗ ಇದರ ಮುದ್ರಣ ಅಂದವಾಗಿದೆಯೇ ಇಲ್ಲವೇ ಎಂಬುದು ಮುಖ್ಯವಲ್ಲ" ಎಂದರು.



'ಗಂಗಾತೀರದ ಹೆಣ್ಣು'—ತೋರು

ತಂದೆಯೊಡಗೂಡಿ ಸಂಸ್ಕೃತದ ಅಭ್ಯಾಸಕ್ಕೂ ತೋರು ಆರಂಭಿಸಿದ್ದರು. ಸಂಸ್ಕೃತ ಕಾವ್ಯವನ್ನು ಆಂಗ್ಲ ಭಾಷೆಗೆ ಅನುವಾದಿಸಬೇಕೆಂಬುದು ಅವರ ಆಸೆಯಾಗಿತ್ತು ಆದರೆ ಚಿಕ್ಕಂದಿನಿಂದಲೂ ಕಾಡುತ್ತಿದ್ದ ಅನಾರೋಗ್ಯ ಅವರನ್ನು ಹೆಚ್ಚು ಕಾಲ ಉಳಿಯಲು ಬಿಡಲಿಲ್ಲ. ಅಣ್ಣ ಅಕ್ಕಂದಿರಂತೆಯೇ ಕ್ಷಯರೋಗಕ್ಕೆ ತುತ್ತಾಗಿ 1877 ಆಗಸ್ಟ್ 30ರಂದು ಕಾಲವಾದರು.

ತೋರುವಿನ ಮರಣಾನಂತರ ಆಕೆಯ ತಂದೆ, ತೋರುವಿನ ಆಸೆಗೆ ರೂಪುಕೊಡಲು, ಅವರ ಕೆಲವು ಅಪೂರ್ಣ ಕೃತಿಗಳನ್ನು ಕೂಡಿಸಿ 'ಹಿಂದೂಸ್ಥಾನದ ಪುರಾಣ ಕಥೆಗಳು' ಎಂಬ ಕಾವ್ಯ ಸಂಕಲನವನ್ನು ಪ್ರಕಟಿಸಿದರು. ಸೀತೆ, ಸಾವಿತ್ರಿ, ಲಕ್ಷ್ಮಣ, ಧ್ರುವರ ಈ ಕಾವ್ಯ ಚಿತ್ರಗಳು ಆಕೆಯ ಅಸಾಧಾರಣ ಕಾವ್ಯ ಪ್ರತಿಭೆಗೆ ನಿದರ್ಶನ.

'[illegible]' [illegible] ರಚಿಸಿದ ಅತ್ಯುತ್ತಮ ಕಾದಂಬರಿಗಳ್ಲೊಂದು.

ಥಕ್ಕರ್ ಬಾಪಾ

"ಅವರು [illegible]. ಅವರಿಗೆ [illegible] ಬೇಕಾಗಿಲ್ಲ. ಅವರ [illegible] [illegible] [illegible] [illegible] [illegible] ಕಡಮೆ ಮಾಡಿಲ್ಲ. ಆತನೇ ಒಂದು ಸಂಸ್ಥೆ."

— ಗಾಂಧೀಜೀ ಹೀಗೆ ವರ್ಣಿಸಿರುವುದು ಥಕ್ಕರ್ ಬಾಪಾ ಅವರನ್ನು.

ಜನರು ವಿಶ್ವಾಸದಿಂದ ಥಕ್ಕರ್ ಬಾಪಾರನ್ನು 'ಪುಟ್ಟ ಮಹಾತ್ಮ' ಎಂದು ಕರೆದಿದ್ದರು.

ಥಕ್ಕರ್ ಬಾಪಾರ ನಿಜವಾದ ಹೆಸರು ಅಮೃತಲಾಲ್ ಥಕ್ಕರ್. ಜನನ 1869 ರಲ್ಲಿ, ಭಾವನಗರದಲ್ಲಿ.

ಎಂಜಿನಿಯರ್ ಥಕ್ಕರ್ ಬಾಪಾ ಆಫ್ರಿಕದ ಉಗಾಂಡಕ್ಕೆ ರೈಲುಮಾರ್ಗ ಹಾಕುವ ಕೆಲಸದ ಮೇಲ್ವಿಚಾರಣೆಗೆ 3 ವರ್ಷ ಕಾಲ ಹೋಗಿದ್ದರು. ಅಲ್ಲಿಂದ ಹಿಂದಿರುಗಿದ ಮೇಲೆ ಸಾಂಗ್ಲಿ ಸಂಸ್ಥಾನದಲ್ಲಿ ಮುಖ್ಯ ಎಂಜಿನಿಯರರೂ ಅನಂತರ [illegible] [illegible] ಸಹಾಯಕ ಎಂಜಿನಿಯರರೂ ಆಗಿದ್ದರು. ಪತ್ನಿ, ತಂದೆ ಮತ್ತು ಇದ್ದ ಒಬ್ಬನೇ ಮಗು ಕೆಲ ದಿನಗಳ ಅಂತರದಲ್ಲಿ ತೀರಿಹೋದ ಅನಂತರ ಬಾಪಾ ಸಾರ್ವಜನಿಕ ಸೇವೆಗೆ ತಮ್ಮ ಜೀವನವನ್ನು ಮುಡುಪಿಟ್ಟರು.



'ಪುಟ್ಟ ಮಹಾತ್ಮ'

1914ರಲ್ಲಿ ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿಯ ಸದಸ್ಯರಾದರು. ಅಂದಿನಿಂದ ಅವರ ಸೇವಾ ಜೀವನದ ಆರಂಭ. ಕಚ್, ಒಡಿಸ್ಸಾಗಳಲ್ಲಿ ಕ್ಷಾಮ ನಿವಾರಣೆಗೆ ಶ್ರಮಿಸಿದಷ್ಟೇ ಹುರುಪಿನಿಂದ ಅಸ್ಸಾಂ ಪ್ರವಾಹ ಪೀಡಿತರ ನೆರವಿಗೂ ದುಡಿದರು. ಕೂಲಿಗಾರರು, ಹರಿಜನರು, ಗಿರಿಜನರು, ಬುಡಕಟ್ಟಿನ ಜನರ ಮೇಲ್ಮೆಗಾಗಿ ಸಂಘಗಳನ್ನು ಸ್ಥಾಪಿಸಿನರು. ಭಿಲ್ಲರ ಸೇವಾ ಮಂಡಲಿ ಆರಂಭಿಸಿದರು.

ಹರಿಜನ ಸೇವಕ ಸಂಘ ದೆಹಲಿಯಲ್ಲಿ ಸ್ಥಾಪಿತವಾದಾಗ ಇವರು ಅದರ ಕಾರ್ಯದರ್ಶಿಯಾದರು. [illegible] [illegible] [illegible] ತೆರೆದರು. ಕಸ್ತೂರ ಬಾ ನಿಧನರಾದ ಮೇಲೆ ಆಕೆಯ ಹೆಸರಿನಲ್ಲಿ ಮಹಿಳೆಯರ ಮತ್ತು [illegible] [illegible]ಕ್ಕಾಗಿ [illegible] [illegible] [illegible] [illegible] ನಿಧಿ [illegible] ಮಾಡಿದರು. ಕಸ್ತೂರ ಬಾ ಗಾಂಧಿ ಪ್ರತಿಷ್ಠಾನ ಪ್ರಾರಂಭವಾಯಿತು.

ಭಾರತೀಯ ಆದಿಮ ಜಾತಿ ಸೇವಕ ಸಂಘದ ಜನಕ ಇವರು. ಭಾರತದ ಸಂವಿಧಾನ ರಚನಾ ಸಭೆಯ ಸದಸ್ಯರೂ ಆಗಿದ್ದರು.

1950ರ [illegible] [illegible] [illegible]. ಇವರ ಸ್ಮರಣಾರ್ಥ ನವದೆಹಲಿಯಲ್ಲಿ ಭವನವನ್ನು ಕಟ್ಟಿದ್ದಾರೆ.

ಥಾಮಸ್ ಮನ್ರೊ

ಭಾರತಕ್ಕೆ ಬಂದ ಬ್ರಿಟಿಷ್ ಆಡಳಿತಾಧಿಕಾರಿಗಳಲ್ಲಿ ದೂರದರ್ಶಿತ್ವ, ವಿವೇಚನಾಶಕ್ತಿಗಳಿದ್ದ ಗಮನಾರ್ಹ ವ್ಯಕ್ತಿ —ಥಾಮಸ್ ಮನ್ರೊ.

1761ರಲ್ಲಿ ಗ್ಲಾಸ್ಗೋದಲ್ಲಿ ಜನನ. [illegible] [illegible] [illegible] [illegible] ಬ್ರಿಟಿಷ್ ಸೈನ್ಯದ [illegible] [illegible] [illegible] ನಡೆದ ಯುದ್ಧದಲ್ಲಿ ಭಾಗವಹಿಸಿದ. ಅನಂತರ ಅವನಿಗೆ ಬಡ್ತಿ ದೊರೆಯಿತು.

[illegible] [illegible] [illegible] [illegible] [illegible] [illegible] [illegible] [illegible] [illegible] [illegible] [illegible] ಹೋದ ಮನ್ರೊ ಮತ್ತೆ 1814ರಲ್ಲಿ ಭಾರತಕ್ಕೆ ಬಂದು, ನ್ಯಾಯ ಇಲಾಖೆ ಹಾಗೂ [illegible] [illegible] [illegible] [illegible] ಕೈಗೊಂಡ. ಮರಾಠ ಯುದ್ಧದಲ್ಲಿ ಬ್ರಿಗೆಡಿಯರ್ ಜನರಲ್ ಆಗಿದ್ದ. ಪುನಃ ಸ್ವದೇಶಕ್ಕೆ ಹೋಗಿಬಂದು, 1819ರಿಂದ [illegible] [illegible] [illegible] [illegible] [illegible] [illegible] ಗವರ್ನರ್ ಆಗಿ ಮನ್ರೊ ಕೆಲಸ ಮಾಡಿದ.

ಭಾರತದಲ್ಲಿ ಬ್ರಿಟಿಷರು [illegible] [illegible] [illegible] ಮನ್ರೊ ಹೀಗೆ ಬರೆದಿದ್ದಾನೆ: "ಈ [illegible] [illegible] [illegible] [illegible] [illegible] [illegible]. [illegible] ಜನತೆಯ [illegible] [illegible]. [illegible] ಸ್ವಾತಂತ್ರ್ಯ ಅಥವಾ ಆತ್ಮಾಭಿಮಾನಕ್ಕೆ [illegible] [illegible] ಬದಿಗೊತ್ತಿ ಈ ಲಾಭಗಳನ್ನು ಕೊಂಡುಕೊಳ್ಳಲಾಗಿದೆ..... ಹೀಗೆ ಭಾರತದಲ್ಲಿ ಬ್ರಿಟಿಷರು ಶಸ್ತ್ರಗಳ ಮೂಲಕ ಸಾಧಿಸಿದ ವಿಜಯ. ಜನತೆಯ ಏಳಿಗೆಗೆ ಕಾರಣವಾಗುವ ಬದಲು ಆ ಜನರನ್ನು ಕೀಳು ಮಟ್ಟಕ್ಕೆ ತಳ್ಳಿದೆ. ಒಂದು ಪ್ರದೇಶದ ಮೂಲನಿವಾಸಿಗಳನ್ನು ಇಷ್ಟೊಂದು ಸಂಪೂರ್ಣವಾಗಿ, ಸರಕಾರದಲ್ಲಿ ಪಾತ್ರವೇ ಇಲ್ಲದಂತೆ ಮೂಲೆಗುಂಪುಮಾಡಿ ಸಾಧಿಸಿದ ಈ ಬಗೆಯ ಗೆಲವು ಬ್ರಿಟಿಷ್ ಇಂಡಿಯಾದಲ್ಲಿರುವಂತೆ ಬಹುಶಃ ಇನ್ನೆಲ್ಲೂ ಕಂಡುಬರುವುದಿಲ್ಲ."



[illegible] : ಮನ್ರೊ

ಕಂದಾಯ, ವಿದ್ಯಾಭ್ಯಾಸ, ಅಧಿಕಾರಿ ತರಬೇತಿ ಮುಂತಾದ ಅನೇಕ [illegible] ಬಗೆಗೆ ಮನ್ರೊ ಪರಿಶೀಲನೆ ನಡೆಸಿದ. ಮಾತೃಭಾಷೆ [illegible] [illegible] [illegible] [illegible] [illegible] [illegible] [illegible] ಬ್ರಿಟಿಷ್ ಸರಕಾರ [illegible] [illegible].

ನೋಡಿ : ಮಂತ್ರಾಲಯ

ಥಾರ್ ಮರುಭೂಮಿ

[illegible] – [illegible] [illegible] [illegible] [illegible] [illegible] ದಲ್ಲಿರುವ ಮರುಭೂಮಿ. ಥಾರ್.

ನಮ್ಮ ದೇಶದ ಅತಿ ಪ್ರಾಚೀನ ಮಾನವನ ಬಗೆಗೆ ಈ ಮರುಭೂಮಿಯಲ್ಲಿ ಸುಳಿವು ಸಿಗಬಹುದು ಎನ್ನುತ್ತಾರೆ. ಹತ್ತು ಸಾವಿರ ವರ್ಷಗಳಿಗೆ ಹಿಂದೆ ಥಾರ್‌ನಲ್ಲಿ ನೀರು ದೊರೆಯುತ್ತಿತ್ತು. ಮನುಷ್ಯ ಇಲ್ಲಿ ವಾಸಿಸುತ್ತಿದ್ದ ಎಂಬುದಕ್ಕೆ ಆಧಾರಗಳಿವೆ.

ಥಾರ್ ಮರುಭೂಮಿ ಆರಾವಳಿ ಪರ್ವತ ಶ್ರೇಣಿ ಹಾಗೂ ಸಿಂಧೂ ನದಿಗಳ ನಡುವೆ ಹರಡಿದೆ. ಇದರ ಹೆಚ್ಚಿನ ಭಾಗ ಭಾರತದಲ್ಲಿದೆ. ರಾಜಸ್ಥಾನದ ಬಹು ಭಾಗ ಇದರಿಂದ ಆವರಿಸಲ್ಪಟ್ಟಿದೆ.

ಕಚ್‌ನ ರಣ್‌ನಿಂದ ಬೀಸಿದ ಗಾಳಿ ಹೊತ್ತುತಂದ ಮರಳಿನಿಂದ ಹಾಗೂ ಈಗಿನ ಥಾರ್ ಪ್ರದೇಶದಲ್ಲೇ ಇದ್ದ ಶಿಲೆಗಳು ಸವೆದು ಆದ ಮರಳಿನಿಂದ ಈ ಮರುಭೂಮಿ ಹುಟ್ಟಿತು. ಇವಕ್ಕೆ ಪೂರಕವಾಗಿ, ಆರಾವಳಿಯಿಂದ ಪಶ್ಚಿಮಕ್ಕೆ ಬೀಸುವ ಮುಂಗಾರು ಮಾರುತಗಳನ್ನು ತಡೆಯುವ ಬೆಟ್ಟವೇ ಇಲ್ಲದ ಕಾರಣ ಮಳೆ ದುರ್ಲಭ. ಥಾರ್ ಮರುಭೂಮಿಯ ಸರಾಸರಿ ಮಳೆ ವರ್ಷಕ್ಕೆ 15 ಅಂಗುಲ ಮಾತ್ರ. ಹಗಲಿನ ಉಷ್ಣತೆಗೂ ರಾತ್ರಿಯ ಉಷ್ಣತೆಗೂ ಅಂತರ ಬಹಳ. ಏಪ್ರಿಲ್, ಮೇ ಮತ್ತು ಅಕ್ಟೋಬರ್‌ಗಳಲ್ಲಿ ಇಲ್ಲಿ ಧೂಳಿನ ಬಿರುಗಾಳಿಗಳು ಏಳುತ್ತಲೇ ಇರುತ್ತವೆ.

ಥಾರ್ ಮರುಭೂಮಿಯು ಒಂದು ವಿಶಿಷ್ಟ ನೋಟ. ಸರಿಯುವ ಮರಳು ದಿಬ್ಬಗಳು. ಇವು ಐನೂರು ಅಡಿ ಎತ್ತರಕ್ಕೆ ಬೆಳೆದಿರುವುದೂ ಉಂಟು. ರಣ್ ಸರೋವರದ ಕಡೆಗೆ ಹೆಚ್ಚು ಕಡಿಮೆ ಸ್ಥಿರವಾದ, 200 ಅಡಿಯ ದಿಬ್ಬಗಳಿವೆ.

ಥಾರ್‌ನ ವಿಸ್ತೀರ್ಣ ಸುಮಾರು 1,00,00 ಚ.ಮೈಲು. ಇದರ ಅಂಚಿನಲ್ಲಿರುವ ಸಾಂಭಾರ್ ಸರೋವರದಿಂದ ಉಪ್ಪು ತೆಗೆಯುತ್ತಾರೆ. ಇನ್ನು ಕೆಲವು ಸರೋವರಗಳಿಂದ ಜಿಪ್ಸಮ್ ಲವಣ ಪಡೆಯುತ್ತಾರೆ. ಓಯಸಿಸಿನ ಚಿಲುಮೆ ಇರುವೆಡೆ ಸುತ್ತಲೂ ಸಸ್ಯಗಳಿವೆ. ಅನುಕೂಲ ಪರಿಸ್ಥಿತಿಯಲ್ಲಿ ಜನರು ಕೆಲವು ಧಾನ್ಯಗಳನ್ನೂ ಬೆಳೆಯುತ್ತಾರೆ. ಒರಟು ಉಣ್ಣೆ, ಒಂಟೆ ಕೂದಲು, ತೊಗಲಿನ ಗೃಹಕೈಗಾರಿಕೆಗಳನ್ನೂ ಇಟ್ಟುಕೊಂಡಿದ್ದಾರೆ.

ಈ ಮರುಭೂಮಿಯನ್ನು ಕೃಷಿಯೋಗ್ಯವಾಗಿ ಮಾಡುವ ಪ್ರಯತ್ನಗಳು ನಡೆಯುತ್ತಿವೆ.

ಥಿಯಸಾಫಿಕಲ್ ಸೊಸೈಟಿ

ರಷ್ಯದ ಮಹಿಳೆ ಹೆಲೆನಾ ಪೆಟ್ರೋವ್ನ ಬ್ಲವಟ್‌ಸ್ಕಿ ಅಮೆರಿಕದ ಕರ್ನಲ್ ಎಚ್.ಎಸ್. ಓಲ್ಕಾಟ್‌ರೊಂದಿಗೆ ಸೇರಿ, 1875ರಲ್ಲಿ ನ್ಯೂಯಾರ್ಕ್‌ನಲ್ಲಿ ಥಿಯಸಾಫಿಕಲ್ ಸೊಸೈಟಿಯನ್ನು ಸ್ಥಾಪಿಸಿದರು.

'ಥಿಯಸಾಫಿ'ಯ ಮೂಲ ಪದಗಳು ಥಿಯೊಸ್ (ದೇವರು) ಮತ್ತು ಸೋಫಿಯಾ (ಜ್ಞಾನ). ಭಾರತದಲ್ಲಿ ಈ ಸಂಸ್ಥೆಯನ್ನು ಬ್ರಹ್ಮಜ್ಞಾನ ಸಮಾಜ ಎಂದೂ ಕರೆಯುತ್ತಾರೆ.

ಪ್ರಾಚೀನ ಆಧ್ಯಾತ್ಮಿಕ ಜ್ಞಾನವನ್ನು ಮಹಾತ್ಮರು ಪೀಳಿಗೆಯಿಂದ ಪೀಳಿಗೆಗೆ [illegible] ರಕ್ಷಿಸಿಕೊಂಡು ಬಂದಿದ್ದಾರೆಂದೂ ತಾವು ಅವರ ಶಿಷ್ಯವರ್ಗಕ್ಕೆ ಸೇರಿದವರೆಂದೂ ಥಿಯಸಾಫಿಕಲ್ ಸೊಸೈಟಿಯ ಸ್ಥಾಪಕರು ನಂಬಿದ್ದರು. ಭಾರತವೇ ಇಂಥ ಪ್ರಾಚೀನ ಜ್ಞಾನದ ಒಂದು ಪ್ರಮುಖ ಮೂಲ ಎಂಬುದು ಬ್ಲವಟ್‌ಸ್ಕಿಯವರ ಅಭಿಪ್ರಾಯವಾಗಿತ್ತು.

1879ರಲ್ಲಿ ಥಿಯಸಾಫಿಕಲ್ ಸೊಸೈಟಿಯ ಸ್ಥಾಪಕರು ಭಾರತಕ್ಕೆ ಬಂದರು; 1882ರಲ್ಲಿ ಮದರಾಸಿನಲ್ಲಿ ತಮ್ಮ ಪ್ರಧಾನ ಕಚೇರಿಯನ್ನು ಸ್ಥಾಪಿಸಿದರು. ಕರ್ನಲ್ ಓಲ್ಕಾಟ್‌ರವರ ನಿಧನಾನಂತರ 1907ರಲ್ಲಿ ಅನಿ ಬೆಸೆಂಟ್ ಸೊಸೈಟಿಯ ಅಧ್ಯಕ್ಷರಾದರು.

ಭಾರತದಲ್ಲಿ ಥಿಯಸಾಫಿಕಲ್ ಸೊಸೈಟಿಯ ಚಟುವಟಿಕೆಗಳು ಸಾಮಾಜಿಕ ಸುಧಾರಣೆಗಳ ಬಗೆಗೆ ಜನರ ಗಮನ ಸೆಳೆದುವು. ಇದರ ಪರಿಣಾಮವಾಗಿ ಅನೇಕ ಸಂಘ ಸಂಸ್ಥೆಗಳೂ ಸಮಾಜ ಸುಧಾರಕರೂ ಕಾರ್ಯಪ್ರವೃತ್ತರಾದರು.

ನೋಡಿ : ಅನಿ ಬೆಸೆಂಟ್ ; ಬ್ಲವಟ್‌ಸ್ಕಿ

ಥೇರಾವಾದ

ಭಗವಾನ್ ಬುದ್ಧನ ಪರಿನಿರ್ವಾಣವಾದ ಕೂಡಲೇ ಅವರ ಶಿಷ್ಯರಲ್ಲಿ ಕೆಲವರು ಸಂಘವನ್ನು ಒಡೆಯಲು ಪ್ರಯತ್ನಪಟ್ಟರು. ತಮಗೆ ತೋರಿದಂತೆ ಬುದ್ಧವಚನವನ್ನು ವ್ಯಾಖ್ಯಾನ ಮಾಡತೊಡಗಿದರು. ಇಂಥ ಪ್ರಯತ್ನವನ್ನು ಮುರಿಯಲು ಹಿರಿಯ ಶಿಷ್ಯರು ರಾಜಗೃಹದಲ್ಲಿ (ರಾಜಗೀರ್‌ನಲ್ಲಿ) ಸೇರಿ ಭಗವಾನ್ ಬುದ್ಧನು ಬೋಧಿಸಿದ್ದೆಲ್ಲವನ್ನು ಕೆಡದಂತೆ ಉಳಿಸಿಕೊಳ್ಳಲು ಪ್ರಯತ್ನಿಸಿದರು. ಅವರ ಪ್ರಯತ್ನದ ಫಲವೇ ಪಾಳೀ ಭಾಷೆಯಲ್ಲಿರುವ ತಿಪಿಟಕ. ಇದು ಅಂದಿನಿಂದ ಇಂದಿನ ವರೆಗೆ ಒಂದೇ ರೀತಿಯಲ್ಲಿದೆ.

ತಿಪಿಟಕದಲ್ಲಿ ಸಂಪೂರ್ಣ ಶ್ರದ್ಧೆ ಇಟ್ಟು ಅದರಲ್ಲಿರುವಂತೆ ಸಾಧನೆಯನ್ನು ಮಾಡುವವರಿಗೆ 'ಥೇರಾವಾದಿ'ಗಳು ಎಂಬ ಹೆಸರು ಬಂದಿದೆ. 'ಥೇರಾ' ಎಂದರೆ 'ಹಿರಿಯ' ಎಂದು ಅರ್ಥ. ಹಿರಿಯರಿಂದ ಪರಂಪರಾಗತವಾಗಿ ಬಂದದ್ದು ಥೇರಾವಾದ.

ಜೀವನದಲ್ಲಿನ ದುಃಖವನ್ನು ಗೆದ್ದುಕೊಳ್ಳಲು ಭಗವಾನ್ ಬುದ್ಧ ಆರ್ಯ ಅಷ್ಟಾಂಗ ಮಾರ್ಗವನ್ನು ತೋರಿಸಿದ್ದ. ಒಳ್ಳೆಯ ದೃಷ್ಟಿಯನ್ನಿಟ್ಟುಕೊಂಡಿರುವುದು, ಒಳ್ಳೆಯದನ್ನು ಮಾಡಲು ಮನಸ್ಸು ಮಾಡುವುದು, ಒಳ್ಳೆಯ ಮಾತನ್ನಾಡುವುದು, ಒಳ್ಳೆಯ ಕೆಲಸಗಳನ್ನು ಮಾಡುವುದು, ಒಳ್ಳೆಯ ರೀತಿಯಲ್ಲಿ ಸಂಪಾದನೆ ಮಾಡುವುದು, ಒಳ್ಳೆಯದಕ್ಕೆ ಪ್ರಯತ್ನ ಮಾಡುವುದು, ಒಳ್ಳೆಯದನ್ನೇ ಯೋಚಿಸುವುದು ಮತ್ತು ಒಳ್ಳೆಯದರಲ್ಲಿ ಏಕಾಗ್ರತೆಯಿಂದಿರುವುದು ಈ ಅಷ್ಟಾಂಗಮಾರ್ಗ. ಅದನ್ನು ಶೀಲ, ಸಮಾಧಿ, ಪ್ರಜ್ಞೆ ಎಂದು ವರ್ಗೀಕರಣ ಮಾಡಬಹುದು. ಶೀಲದ ತಳಹದಿಯ ಮೇಲೆ ಸಮಾಧಿ ಸ್ಥಿತಿಯಲ್ಲಿರಬಲ್ಲ ಮನಸ್ಸನ್ನು ಕಟ್ಟಿದಾಗ ಪ್ರಜ್ಞೆ ಮಿಂಚಿ, ಸತ್ಯ ತಿಳಿಯುತ್ತದೆ. ಸತ್ಯ ತಿಳಿದಾಗ, ರಾಗ ಮೋಹ ದ್ವೇಷಗಳು ಮಾಯವಾಗಿ ದುಃಖ ಅಡಗಿಹೋಗುತ್ತದೆ. ಇಂಥ ಸ್ಥಿತಿಯನ್ನು ಪಡೆಯುವುದೇ ಸಾಧಕನ ಗುರಿಯಾಗಿರಬೇಕು.

ಸಾಧಕರಲ್ಲದ ಸಾಧಾರಣ ಗೃಹಸ್ಥರೂ ಆರ್ಯ ಅಷ್ಟಾಂಗ ಮಾರ್ಗದಲ್ಲಿ ನಡೆಯಬಹುದು. ಅಂಥ ಗೃಹಸ್ಥರಿಂದ ಸಮಾಜದಲ್ಲಿ ಶಾಂತಿ ಬೆಳೆಯುತ್ತದೆ. ಅದರಲ್ಲಿನ ವ್ಯಕ್ತಿಗಳು ಸದಾ ಸಮಾಧಾನಚಿತ್ತದಿಂದ ಇರುವುದು ಸಾಧ್ಯವಾಗುತ್ತದೆ. ಥೇರಾವಾದದ ಸರಳ ನಿರೂಪಣೆ ಇದು.

ಬೌದ್ಧಧರ್ಮದ ಅತಿ ಪುರಾತನ ಮತ್ತು ಅತಿ ಶುದ್ಧ ರೂಪವಾದ ಥೇರಾವಾದದ ಪ್ರಸಾರಕ್ಕೆ ಪ್ರೋತ್ಸಾಹ ಕೊಟ್ಟವನು ಚಕ್ರವರ್ತಿ ಅಶೋಕ. ಅವನ ಪ್ರಯತ್ನದಿಂದ ಥೇರಾವಾದ ಸಿಂಹಳದಲ್ಲಿ ಹರಡಿತು. ಮುಂದೆ ಬರ್ಮ, ಇಂಡೋ-ಚೀನ, ಥೈಲೆಂಡ್‌ಗಳಲ್ಲಿ ಹರಡಿ ಇಂದೂ ಉಳಿದುಕೊಂಡಿದೆ. ಥೇರಾವಾದವನ್ನು ಒಪ್ಪದ ಮುಂದಿನ ಕೆಲವರು ಅದನ್ನು 'ಹೀನಯಾನ' ಎಂದು ಕರೆದು, ಆ ಪದವನ್ನು ನೀಚಾರ್ಥದಲ್ಲಿ ಬಳಸಿದರು.

ಆದರೆ ಥೇರಾವಾದವು ಬುದ್ಧ ಬೋಧಿಸಿದ ಧರ್ಮದ ಅತಿ ಪರಿಶುದ್ಧ ರೂಪ ಎಂಬುದನ್ನು ಎಲ್ಲ ವಿದ್ವಾಂಸರೂ ಒಪ್ಪಿದ್ದಾರೆ.

ನೋಡಿ : ತಿಪಿಟಕ

ದಂಡಕಾರಣ್ಯ

ಸೂರ್ಯವಂಶದ ರಾಜ ಇಕ್ಷ್ವಾಕುವಿನ ಮಗ ದಂಡಕ. ಮಹಾಮೂರ್ಖನಾಗಿದ್ದ ದಂಡಕ ಘೋರಕೃತ್ಯಗಳನ್ನು ಮಾಡುತ್ತಿದ್ದ. ವಿಂಧ್ಯ ಮತ್ತು ಶೈವಲ ಪರ್ವತಗಳ ನಡುವ ಈತನಿಗೆ ಇಕ್ಷ್ವಾಕು ರಾಜ್ಯ ಮಾಡಿಕೊಟ್ಟ. ಶುಕ್ರಾಚಾರ್ಯನನ್ನು ಪುರೋಹಿತನನ್ನಾಗಿ ಮಾಡಿಕೊಂಡು ದಂಡಕ ರಾಜ್ಯಭಾರ ಮಾಡುತ್ತಿದ್ದ. ಒಮ್ಮೆ ಶುಕ್ರಾಚಾರ್ಯನ ಆಶ್ರಮಕ್ಕೆ ಹೋಗಿದ್ದ ದಂಡಕ ಅವರ ಮಗಳು ಅರಜೆಯ ಮಾನಭಂಗ ಮಾಡಿ ಓಡಿಹೋಗಿದ. ಕೋಪಗೊಂಡ ಶುಕ್ರಾಚಾರ್ಯ, ಏಳು ರಾತ್ರಿಗಳಲ್ಲಿ ದಂಡಕ ಮತ್ತು ಅವನ ಪರಿವಾರವೆಲ್ಲ ನಾಶವಾಗಲಿ, ರಾಜ್ಯದ ಸುತ್ತ ಮೂರು ಯೋಜನ ಪ್ರದೇಶವೆಲ್ಲ ಹಾಳಾಗಲಿ ಎಂದು ಶಾಪವಿತ್ತ. ಅಂತೆಯೇ ಏಕಪ್ರಕಾರವಾಗಿ ಏಳು ದಿನ ಧೂಳು ಸುರಿದು ಅವನ ರಾಜ್ಯ ನಾಶವಾಯಿತು. ಅನಂತರ ಆ ಪ್ರದೇಶದಲ್ಲಿ ಕಾಡು ಬೆಳೆದುಕೊಂಡಿತು. ಇದಕ್ಕೆ ದಂಡಕಾರಣ್ಯ ಎಂದು ಹೆಸರಾಯಿತು ; ರಾಕ್ಷಸರು, ಕ್ರೂರಮೃಗಗಳಿಗೆ ಆವಾಸಸ್ಥಾನವಾಯಿತು. ದಂಡಕಾರಣ್ಯ ಬಗೆಗಿನ ಪುರಾಣ ಕಥೆ ಇದು.

ಕರ್ನಾಟಕದ ದಾಂಡೇಲಿಯೇ ಪ್ರಾಚೀನ ಕಾಲದ ದಂಡಕಾರಣ್ಯ ಎನ್ನುವ ಮಾತೂ ಇದೆ. ರಾಮ ತನ್ನ ವನವಾಸ ಕಾಲದಲ್ಲಿ ದಂಡಕಾರಣ್ಯದಲ್ಲಿದ್ದ ಎಂಬ ಹೇಳಿಕೆಯಿದೆ.

ದೇಶದ ವಿಭಜನೆಯಾದ ಬಳಿಕ ಪೂರ್ವ ಪಾಕಿಸ್ತಾನದಿಂದ ವಲಸೆ ಬರುತ್ತಿದ್ದವರಿಗಾಗಿ, ಮಧ್ಯಪ್ರದೇಶದ ದಂಡಕಾರಣ್ಯ ಪ್ರದೇಶದಲ್ಲಿ ಪುನರ್ವಸತಿ ಕಲ್ಪಿಸಲಾಯಿತು.

ದಂಡೀಯಾತ್ರೆ

1930 ಮಾರ್ಚ್ 12ರಂದು ಗಾಂಧೀಜೀ 79 ಜನ ಸ್ವಯಂಸೇವಕರೊಡನೆ ತಮ್ಮ ಸಾಬರಮತಿ ಆಶ್ರಮದಿಂದ ಸುಪ್ರಸಿದ್ಧ ದಂಡೀಯಾತ್ರೆ ಕೈಗೊಂಡರು. ದಂಡಿ ಪಶ್ಚಿಮ ಕರಾವಳಿಯಲ್ಲಿರುವ ಒಂದು ಹಳ್ಳಿ. ಬ್ರಿಟಿಷರು ಉಪ್ಪಿನ ಮೇಲೆ ಹೇರಿದ್ದ ಕರದ ಬಗೆಗೆ ವಿರೋಧ ಸೂಚಿಸುವ ಉದ್ದೇಶದಿಂದ ಇಲ್ಲಿ ಉಪ್ಪನ್ನು ತಯಾರಿಸುವುದು ದಂಡೀಯಾತ್ರೆಯ ಉದ್ದೇಶವಾಗಿತ್ತು. ಹೀಗೆ ಉಪ್ಪನ್ನು ತಯಾರಿಸುವುದು ಕಾನೂನಿಗೆ ವಿರುದ್ಧವಾದದ್ದರಿಂದ ಗಾಂಧಿಯವರ ಸವಿನಯ ಕಾಯಿದೆ ಭಂಗ ಚಳುವಳಿಗಳಲ್ಲಿ ಇದೊಂದು ಪ್ರಮುಖ ಆಂದೋಲನವಾಯಿತು.

ಅಹಮದಾಬಾದಿನ ಸಮೀಪದಲ್ಲಿದ್ದ ಸಾಬರಮತಿ ಆಶ್ರಮದಿಂದ ಸುಮಾರು 240 ಮೈಲು ದೂರದಲ್ಲಿರುವ ದಂಡಿಯನ್ನು ಕಾಲ್ನಡಿಗೆಯಿಂದ ತಲಪಲು ಗಾಂಧೀಜೀ ಹಾಗೂ ಅವರ ಅನುಯಾಯಿಗಳಿಗೆ 24 ದಿನಗಳು ಬೇಕಾದುವು. ಯಾತ್ರೆಯುದ್ದಕ್ಕೂ ಗ್ರಾಮೀಣ ಜನ ಎಲ್ಲ ಕಡೆಯಿಂದ ಮಾರ್ಗಗಳಲ್ಲಿ ನೆರೆದರು ; ರಸ್ತೆಗೆ ಜಲಸೇಚನ ಮಾಡಿದರು ; ಎಲೆಗಳನ್ನು ಉದುರಿಸಿ ಹಸಿರು ಹಾಸು ಮಾಡಿದರು ; ಗಾಂಧೀಜೀ ಹಾಗೂ ಇತರರು ನಡೆದುಹೋಗುವಂತೆ ಮುಂಡಿಯೂರಿ ಕುಳಿತು ತಮ್ಮ ಗೌರವ ವ್ಯಕ್ತಪಡಿಸಿದರು. ಈ ಅದ್ಭುತ ಸ್ವಾಗತ ಎಂಥ ಸಾಮ್ರಾಜ್ಯವನ್ನೂ ಕರಗಿಸುವಂತಿತ್ತು. ದೇಶದಾದ್ಯಂತ ಜನರ ಜಾಗೃತಿ ಯಾವ ಮಟ್ಟದಲ್ಲಿತ್ತು ಎನ್ನುವುದಕ್ಕೆ ಇದೇ ಸಾಕ್ಷಿಯಾಯಿತು. ಏಪ್ರಿಲ್ 6ಕ್ಕೆ ಗಾಂಧೀಜೀ ದಂಡಿಯಲ್ಲಿ ಉಪ್ಪನ್ನು ಮಾಡಲು ಆರಂಭಿಸಿದರು. ಬಡಜನ ತಮಗೆ ಬೇಕಾದಷ್ಟು ಉಪ್ಪನ್ನು ತೆರಿಗೆ ಕೊಡದೆ ತಾವೇ ಮಾಡಿಕೊಳ್ಳಬಹುದು ಎಂದರು. ಸ್ವರಾಜ್ಯದ ಕರೆಯಿತ್ತರು. ಎಲ್ಲೆಲ್ಲೂ ಚಳುವಳಿಗಳು ಆರಂಭವಾದುವು. ಇದನ್ನು ನಿರೋಧಿಸುವುದು ಬ್ರಿಟಿಷ್ ಸರಕಾರಕ್ಕೆ ಕಷ್ಟವಾಯಿತು. ಅದು ನಿಷ್ಕರುಣೆಯಿಂದ ಜನರನ್ನೂ ಸತ್ಯಾಗ್ರಹಿಗಳನ್ನೂ ಸ್ತ್ರೀಯರು ಪುರುಷರೆನ್ನದೆ ಶಿಕ್ಷಿಸಿತು. ಈ ಚಳುವಳಿಯನ್ನು ಹತ್ತಿಕ್ಕಲು ಸರಕಾರ 29 ಸುತ್ತು ಗುಂಡು ಹಾರಿಸಿತು. ಸತ್ತವರು 103 ಜನ ; ಗಾಯಗೊಂಡವರ ಸಂಖ್ಯೆ 402. ಒಂದು ವರ್ಷಕ್ಕೂ ಕಡಮೆ ಅವಧಿಯಲ್ಲಿ 6,000 ಮಂದಿ ಬಂಧಿಸಲ್ಪಟ್ಟರು. ಕಡೆಗೆ ಸರಕಾರ ಸಂಧಿಯಾಗಲೇ ಬೇಕಾಯಿತು. ಇದರ ಪರಿಣಾಮವೇ 1931 ಜನವರಿಯಲ್ಲಿ ನಡೆದ ಗಾಂಧಿ–ಇರ್ವಿನ್ ಒಪ್ಪಂದ.



ಮೊದಲ ಹಿಡಿ ಉಪ್ಪು

ದಂಡೀಯಾತ್ರೆ ಅಥವಾ ಉಪ್ಪಿನ ಸತ್ಯಾಗ್ರಹದ ಹಿನ್ನೆಲೆ ಇದು : 1930ರ ಜನವರಿ 26ರಂದು 'ಪೂರ್ಣ ಸ್ವರಾಜ್ಯದಿನ'ವನ್ನು ಭಾರತ ಆಚರಿಸಿತು. ಇದರ ಪರಿಣಾಮವಾಗಿ ಆಗಿನ ವೈಸರಾಯ್ ಇರ್ವಿನರ ಮುಂದೆ ಗಾಂಧೀಜೀ ಹನ್ನೊಂದು ಸೂತ್ರಗಳ ಬೇಡಿಕೆಯೊಂದನ್ನು ಇಟ್ಟರು. ಆದರೆ ಬ್ರಿಟಿಷ್ ಸರಕಾರ ಇದಕ್ಕೆ ಮನ್ನಣೆ ಕೊಡಲಿಲ್ಲ. ತಾವು ಚಳುವಳಿ ನಡೆಸುವುದಾಗಿಯೂ ಇದಕ್ಕಾಗಿ ಉಪ್ಪಿನ ಸತ್ಯಾಗ್ರಹ ಆಚರಿಸುವುದಾಗಿಯೂ ಇರ್ವಿನರಿಗೆ ಗಾಂಧೀಜಿ ಬರೆದರು. ಇದಕ್ಕೆ 'ಶಾಂತಿಭಂಗ' ಆಗುವುದೆಂದು ಉತ್ತರ ಬಂತು. "ಈ ರಾಷ್ಟ್ರ ಕಾಣಬಯಸುವ ಶಾಂತಿ ಬರೇ ಅದು ಕಾರಾಗೃಹ..." ಎಂದು ಉತ್ತರಿಸಿ, ಇಂಥ ದಬ್ಬಾಳಿಕೆಯ ಶಾಂತಿಯನ್ನು ಪ್ರತಿಭಟಿಸುವುದೇ ತಮ್ಮ ಕರ್ತವ್ಯವೆಂದು ತಿಳಿಸಿ, ಗಾಂಧೀಜೀ ದಂಡೀಯಾತ್ರೆಯನ್ನು ಕೈಗೊಂಡರು. ಅವರನ್ನು ಬಂಧಿಸಲಾಯಿತು.

ದಂಡೀಯಾತ್ರೆ ವಿದೇಶಗಳಲ್ಲೂ ಜನರ ಗಮನ ಸೆಳೆಯಿತು.

ನೋಡಿ : ಗಾಂಧಿ–ಇರ್ವಿನ್ ಒಪ್ಪಂದ

ದಖ್ಖಣದ ಪ್ರಸ್ಥಭೂಮಿ

ಭಾರತದ ಮೂರು ಮುಖ್ಯ ಪ್ರಾಕೃತಿಕ ಭಾಗಗಳಲ್ಲಿ ಒಂದು — ದಖ್ಖಣದ ಪ್ರಸ್ಥಭೂಮಿ.

ವಿಂಧ್ಯಪರ್ವತದ ದಕ್ಷಿಣಕ್ಕೆ, ಪೂರ್ವ ಮತ್ತು ಪಶ್ಚಿಮ ಘಟ್ಟಗಳ ನಡುವೆ ತ್ರಿಕೋಣಾಕಾರದಲ್ಲಿರುವ ಪ್ರಸ್ಥಭೂಮಿ [illegible] ಗಳಿಂದ ಕೂಡಿರುವ ಈ ಪ್ರದೇಶ [illegible] ಇರುವ ಕಡೆ ಇದರ ಎತ್ತರ 1,000 [illegible] 1,000 [illegible] ಈ ಪ್ರಸ್ಥಭೂಮಿ [illegible] ಇದೆ. [illegible]

[illegible] ದಖ್ಖಣ ಪ್ರಸ್ಥಭೂಮಿಯೂ ಒಂದು.

ಇಲ್ಲಿ ಹರಿಯುವ ಮುಖ್ಯ ನದಿಗಳು ನರ್ಮದಾ, ಗೋದಾವರಿ, ಕೃಷ್ಣಾ, ಮಹಾನದಿ, ತಪತಿ, ತುಂಗಭದ್ರಾ ಮತ್ತು ಕಾವೇರಿ. ಹೆಚ್ಚು ಸಂಖ್ಯೆಯ ನದಿಗಳು ಪಶ್ಚಿಮದಿಂದ ಪೂರ್ವಕ್ಕೆ ಹರಿದುಬಂದು ಬಂಗಾಳ ಕೊಲ್ಲಿಗೆ ಸೇರುತ್ತವೆ.

ಮಧ್ಯದ ಪ್ರಸ್ಥಭೂಮಿಯನ್ನು ಪಶ್ಚಿಮ ಘಟ್ಟಗಳು, ಉತ್ತರದ ದಖ್ಖಣ ಪ್ರಸ್ಥಭೂಮಿ, ದಕ್ಷಿಣದ ದಖ್ಖಣ ಪ್ರಸ್ಥಭೂಮಿ, ಪೂರ್ವದ ಪ್ರಸ್ಥ ಭೂಮಿ ಮತ್ತು ಪೂರ್ವ ಘಟ್ಟಗಳು ಎಂದು ವಿಭಾಗಿಸಬಹುದು.

ಜನಾಂಗ, ಭಾಷೆಗಳು ಮತ್ತು ಸಂಪ್ರದಾಯಗಳಲ್ಲಿ ದಖ್ಖಣ ಪ್ರಸ್ಥ ಭೂಮಿಯಲ್ಲಿ ಇರುವಷ್ಟು ವೈವಿಧ್ಯ ಭಾರತದ ಇನ್ನಾವ ವಿಭಾಗ ದಲ್ಲೂ ಇಲ್ಲ.

ದತ್ತಾತ್ರೇಯ

ಅತ್ರಿ ಮಹರ್ಷಿ, ಅನಸೂಯೆಯರ ಪುತ್ರ ದತ್ತಾತ್ರೇಯ ; ವಿಷ್ಣುವಿನ ಅಂಶದಿಂದ ಹುಟ್ಟಿದವನು.

ಮೂರು ತಲೆಗಳ ಈ ದೇವತೆ ತ್ರಿಮೂರ್ತಿಗಳ ಹಾಗೂ ತ್ರಿಗುಣಗಳ ಸಂಕೇತ ಎನ್ನುತ್ತಾರೆ. ತ್ರಿಮೂರ್ತಿಗಳು ತಾವೇ 'ದತ್ತ'ರು (ಕೊಡಲ್ಪಟ್ಟ ವರು) ; ಆದುದರಿಂದ ಈ ದೇವತೆಯದು ದತ್ತಾವತಾರ. ದತ್ತಾತ್ರೇಯ ಅವಧೂತ (ಎಲ್ಲವನ್ನೂ ಬಿಟ್ಟವ) : ನಾಥ ಪಂಥದ ಮಹಾಗುರು : ಅದ್ವೈತ ಸಿದ್ಧಾಂತದ ಪ್ರತಿಪಾದಕ.

ದತ್ತಾತ್ರೇಯನದು ವಿಶ್ವರೂಪ : ಮೂರು ತಲೆ, ಆರು ಕೈ. ಈ ಕೈಗಳಲ್ಲಿ ತ್ರಿಶೂಲ, ಜಪಮಾಲೆ, ಕಮಲಪುಷ್ಪ, ಚಕ್ರ, ಶಂಖ ಮತ್ತು ಕಮಂಡಲ. ಇವನ ವರ್ಣ ಮತ್ತು ಶರೀರಕಾಂತಿ, ಇಂದ್ರ ನೀಲ ಮಣಿ ಯಂತೆ. ಇವನು ಜಟಾಧರ. ಇವನೊಡನೆ ಒಂದು ಹಸು ಹಾಗೂ ನಾಲ್ಕು ನಾಯಿಗಳಿರುತ್ತವೆ. ದತ್ತಾತ್ರೇಯನನ್ನು ಹೀಗೆ ನಿರೂಪಿಸುವುದು ವಾಡಿಕೆ. ದತ್ತಾತ್ರೇಯ ಉಪನಿಷತ್ತು, ಶಾಂಡಿಲ್ಯ ಉಪನಿಷತ್ತುಗಳಲ್ಲಿ ದತ್ತಾತ್ರೇಯನ ಮಹಿಮೆ ಮತ್ತು ತತ್ತ್ವದ ವಿಷಯವಾಗಿ ವಿವರಣೆಗಳು ದೊರೆಯುತ್ತವೆ.

ತ್ರಿಮೂರ್ತಿ, ತ್ರಿಗುಣ ಸಂಕೇತ : 'ದತ್ತ' ರು



ದತ್ತಾತ್ರೇಯ ವಿರಚಿತ ಎನ್ನಲಾಗಿರುವ 'ಜೀವನ್ಮುಕ್ತ ಗೀತಾ' ಮತ್ತು 'ಅವಧೂತ ಗೀತಾ' ಪ್ರಸಿದ್ಧವಾಗಿವೆ. ಇವುಗಳಲ್ಲಿ ವ್ಯಾಖ್ಯಾನ, ವಿವೇಚನೆಗಳು ಅಡಗಿವೆ.

ದತ್ತಾತ್ರೇಯ, ಭಕ್ತೋದ್ಧಾರಕ್ಕಾಗಿ ಮತ್ತು ಧರ್ಮ ಸಂಸ್ಥಾಪನೆಗಾಗಿ ಮತ್ತೆ ಎರಡು ಸಲ ಅವತರಿಸಿದ ಕಥೆ ಗುರುಚರಿತ್ರೆಯಲ್ಲಿ ಬರುತ್ತದೆ. ಹಿಮಾಚಲ ಪ್ರದೇಶ ಮತ್ತಿತರ ಭಾಗಗಳಲ್ಲಿ, ಕರ್ನಾಟಕದ ಕುರುಗಡ್ಡೆ, ನರಸಿಂಹವಾಡಿ, ಭಲವಡಿ, ಗಾಣಗಾಪುರ, ಬಾಬಾಬುಡನ್‌ಗಿರಿಗಳಲ್ಲಿ ದತ್ತಾತ್ರೇಯ ಪೀಠಗಳಿವೆ.

ನೋಡಿ : ಅನಸೂಯ

ದಧೀಚಿ

ಬ್ರಹ್ಮನ ಮಾನಸಪುತ್ರನಾದ ಅಥರ್ವನೆಂಬ ಋಷಿಯ ಮಗ, ದಧೀಚಿ. ಇವನ ಬಗೆಗೆ 'ಮಹಾಭಾರತ', ದೇವೀಭಾಗವತ, ಸ್ಕಂದ ಪುರಾಣ, ಬ್ರಹ್ಮ ಪುರಾಣಗಳಲ್ಲಿ ಪ್ರಸ್ತಾಪವಿದೆ.

ಇಂದ್ರ ದಧೀಚಿಗೆ ಮಧುವಿದ್ಯೆಯನ್ನು ಉಪದೇಶಿಸಿದ; ಅದನ್ನು ಬೇರೆ ಯಾರಿಗಾದರೂ ಹೇಳಿಕೊಟ್ಟರೆ ಅವನ ತಲೆ ಕತ್ತರಿಸುವುದಾಗಿ ಎಚ್ಚರಿಸಿದ.

ದೇವತೆಗಳ ವೈದ್ಯರಾದ ಅಶ್ವಿನೀಕುಮಾರರು ದಧೀಚಿಯಿಂದ ಮಧು ವಿದ್ಯೆಯನ್ನು ಕಲಿಯಲು ಬಯಸಿದರು. ಅದನ್ನು ತಮಗೆ ಹೇಳಿಕೊಡು ವುದರಿಂದ ಅವನು ತನ್ನ ತಲೆಯನ್ನು ಕಳೆದುಕೊಳ್ಳಬಾರದೆಂದು ಯೋಚಿಸಿ, ದಧೀಚಿಯ ತಲೆಯನ್ನೇ ತೆಗೆದಿಟ್ಟು ಅವನ ದೇಹಕ್ಕೆ ಒಂದು ಕುದುರೆಯ ತಲೆ ಜೋಡಿಸಿದರು. ಆ ಕುದುರೆ ಮುಖದ ಮೂಲಕವೇ ದಧೀಚಿ ಅವರಿಗೆ ಬೇಕಾದ ರಹಸ್ಯ ತಿಳಿಸಿದ. ಇದು ಗೊತ್ತಾದಾಗ ದಧೀಚಿ ಪಡೆದಿದ್ದ ಕುದುರೆ ತಲೆಯನ್ನು ಇಂದ್ರ ಕತ್ತರಿಸಿದ. ಆಗ ದೇವವೈದ್ಯರಾದ ಅಶ್ವಿನೀಕುಮಾರರು ಆ ದೇಹಕ್ಕೆ ದಧೀಚಿಯ ನಿಜವಾದ ತಲೆಯನ್ನು ಜೋಡಿಸಿದರು.


ಒಮ್ಮೆ ದೇವತೆಗಳು ತಮ್ಮ ಅಸ್ತ್ರಗಳನ್ನೆಲ್ಲ ತಂದು ದಧೀಚಿಯ ಬಳಿ ಇಟ್ಟುಹೋದರು. ಬಹಳ ದಿನಗಳಾದ ಬಳಿಕ ಅವುಗಳಿಗೆ ತುಕ್ಕು ಹಿಡಿಯಲು ಆರಂಭವಾಯಿತು. ದಧೀಚಿ ತನ್ನ ಮಂತ್ರಶಕ್ತಿಯಿಂದ ಅವನ್ನು ದ್ರವರೂಪಕ್ಕೆ ತಿರುಗಿಸಿ ಕುಡಿದುಬಿಟ್ಟ. ಕೆಲಕಾಲದ ಅನಂತರ ತಮ್ಮ ರಕ್ಷಣೆಗೆ ಅಸ್ತ್ರಗಳ ಅಗತ್ಯ ಉಂಟಾದಾಗ, ದೇವತೆಗಳು ದಧೀಚಿಯ ಬಳಿ ಬಂದು ಕೇಳಿದರು ; ಅವನ್ನು ಹಿಂದಕ್ಕೆ ಕೊಡುವಂತೆ ಒತ್ತಾಯಪಡಿಸಿದರು. ದಧೀಚಿ, "ಅವು ನನ್ನ ಬೆನ್ನುಮೂಳೆಯಲ್ಲಿ ಬೆರೆತುಹೋಗಿವೆ. ಅದನ್ನು ತೆಗೆದುಕೊಂಡು ಹೋಗಿ ನಿಮಗೆ ಬೇಕಾದ ಆಯುಧಗಳನ್ನು ಮಾಡಿಸಿಕೊಳ್ಳಿ", ಎಂದು ಸೂಚಿಸಿ, ಯೋಗಬಲದಿಂದ ತನ್ನ ದೇಹತ್ಯಾಗ ಮಾಡಿದ. ವಿಶ್ವಕರ್ಮ ಆ ಮೂಳೆಗಳಿಂದ ದೇವತೆಗಳಿಗೆ ಬೇಕಾದ ಆಯುಧಗಳನ್ನು ಮಾಡಿಕೊಟ್ಟ.

—ಇದು ದಧೀಚಿಯನ್ನು ಕುರಿತ ಪುರಾಣಕಥೆಗಳ ಸಾರಾಂಶ.

ದ.ಪ. ಕರಮರಕರ್

ಉತ್ತರ ಕನ್ನಡ ಜಿಲ್ಲೆಯ ಅಂಕೋಲೆಯ ಉಪ್ಪಿನ ಸತ್ಯಾಗ್ರಹ, ಅರಣ್ಯ ಸತ್ಯಾಗ್ರಹ ಹಾಗೂ ಕರನಿರಾಕರಣೆಯ ಆಂದೋಲನಗಳಲ್ಲಿ ಮಾರ್ಗದರ್ಶನ ಮಾಡಿದ ನಾಯಕ ದ. ಪ. ಕರಮರಕರ್. ಒಳ್ಳೆಯ ಸಂಘಟಕರು ಎಂದು ಅವರು ಹೆಸರು ಪಡೆದಿದ್ದು ಈ ಸಂದರ್ಭದಲ್ಲಿ. ಕಣಗಿಲ್, ಹಿಚಕಡ ಮೊದಲಾದ ಗ್ರಾಮಾಂತರ ಪ್ರದೇಶಗಳಲ್ಲಿ ತಲೆ ಮರೆಸಿಕೊಂಡು, ಭೂಗತ ರಾಗಿ ಈ ಆಂದೋಲನವನ್ನು ಸಂಘಟಿಸಿದರು.

ಮುಂದೆ 1942ರಲ್ಲಿ ಚಲೇಜಾವ್ ಆಂದೋಲನದಲ್ಲಿ ಅವರು ನಿರ್ವಹಿಸಿದ ಪಾತ್ರವೂ ಗಮನಾರ್ಹವಾದದ್ದು. ಮುಂಬಯಿಯಲ್ಲಿ ಭೂಗತ ರಾಗಿದ್ದುಕೊಂಡು ಅವರು ಈ ಚಟುವಟಿಕೆಗಳನ್ನು ನಿರ್ದೇಶಿಸುತ್ತಿದ್ದರು.



ರಾಜಕಾರಣಿ, ಶಿಕ್ಷಕ : ಕರಮರಕರ್

ಅಪಾಯವನ್ನು ಲೆಕ್ಕಿಸದ ಅವರು ಮುಂಬಯಿ ನಗರದಲ್ಲೆಲ್ಲ ಅಡ್ಡಾಡುತ್ತಿದ್ದರು. ಗುಪ್ತಚಾರರಿಂದ ತಪ್ಪಿಸಿಕೊಳ್ಳಲು ಸಾಧ್ಯವಾಗದೆ, ಬಂಧಿತರಾದರು.

ಭಾರತ ಸ್ವತಂತ್ರವಾದ ಅನಂತರ ವಿದೇಶಕ್ಕೆ ಹೋದ ಅನೇಕ ಶಿಷ್ಟ ಮಂಡಲಿಗಳಲ್ಲಿ ಕರಮರಕರ್ ಸದಸ್ಯರಾಗಿದ್ದರು. 1950ರಲ್ಲಿ ನಡುಗಾಲ ಸಂಸತ್ತಿನ ಸದಸ್ಯರಾಗಿದ್ದರು. ಆ ಸಂದರ್ಭದಲ್ಲಿಯೇ ವಾಣಿಜ್ಯ ಉದ್ದಿಮೆ ಶಾಖೆಯ ಉಪಮಂತ್ರಿಯಾಗಿದ್ದರು. 1952ರಲ್ಲಿ ವಾಣಿಜ್ಯ ಮಂತ್ರಿಯಾಗಿದ್ದರು. ಈ ಸಂದರ್ಭದಲ್ಲಿ ಸಂಯುಕ್ತ ರಾಷ್ಟ್ರ ಸಂಘದ ಆರ್ಥಿಕ ಮಂಡಲಿ, ಕರಭಾರ ಮಂಡಲಿಗಳ ಅಧಿವೇಶನಗಳಿಗೆ ಹೋದ ಭಾರತೀಯ ಶಿಷ್ಟ ಮಂಡಲಿಗಳ ಧುರೀಣರಾಗಿದ್ದರು. 1957ರಲ್ಲಿ ಕೇಂದ್ರ ಆರೋಗ್ಯ ಮಂತ್ರಿಯಾದರು.

1962 – 68ರ ವರೆಗೆ ರಾಜ್ಯಸಭೆಯ ಸದಸ್ಯರಾಗಿದ್ದರು. ಈ ಕಾಲಕ್ಕೆ ಅವರು ಅನೇಕ ಶಿಷ್ಟಮಂಡಲಿಗಳ ಸದಸ್ಯರಾಗಿ, ಧುರೀಣರಾಗಿ, ವಿಚಾರಣಾ ಆಯೋಗಗಳ ಅಧ್ಯಕ್ಷರಾಗಿ ಕೆಲಸ ನಿರ್ವಹಿಸಿದರು.

ಶಿಕ್ಷಣರಂಗದಲ್ಲೂ ಅವರ ಸೇವೆ ಸಂದಿದೆ. ಭಾರತವಾದ ಅರ್ಥಶಾಸ್ತ್ರ ಸಂಶೋಧನಾ ಸಂಸ್ಥೆಯ ಗೌರವ ನಿರ್ದೇಶಕ ಪದವಿ, ಜನತಾ ಶಿಕ್ಷಣ ಸಮಿತಿ, ಆಡಳಿತ ಮಂಡಲಿ ಸದಸ್ಯತ್ವ, ಇವು ಕರಮರಕರರ ರಾಜಕೀಯೇತರ ಚಟುವಟಿಕೆಗಳು.

1902ರಲ್ಲಿ ಜನಿಸಿದ ದತ್ತಾತ್ರೇಯ ಕರಮರಕರ್ ಅವರು ಪುಣೆಯ ಡೆಕ್ಕನ್ ಕಾಲೇಜ್ ಮತ್ತು ಲಾ ಕಾಲೇಜುಗಳಲ್ಲಿ ವ್ಯಾಸಂಗ ಮಾಡಿದರು. 1924ರಲ್ಲಿ ಮುಂಬಯಿ ವಿಶ್ವವಿದ್ಯಾನಿಲಯದ ಭಗವಾನ್‌ಲಾಲ ಇಂದ್ರಜಿ ಸುವರ್ಣ ಪದಕ ಪಡೆದರು. ವಕೀಲಿ ಕೈಗೊಂಡರೂ ಬಹು ಬೇಗ ರಾಷ್ಟ್ರೀಯ ಆಂದೋಲನದಲ್ಲಿ ಧುಮುಕಿದರು. ಹಲವಾರು ವರ್ಷ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದರು.

ದಮಯಂತಿ

ವಿದರ್ಭ ರಾಜ ಭೀಮನ ಮಗಳು ದಮಯಂತಿಯ ಸ್ವಯಂವರ ಏರ್ಪಾಡಾಗಿತ್ತು. ಅದಕ್ಕೆ ಮೊದಲೇ ಆಕೆ ನಿಷಧ ರಾಜ್ಯಾಧಿಪತಿಯನ್ನು ವರಿಸಲು ನಿರ್ಧರಿಸಿದ್ದಳು. ರಾಜಕುಮಾರಿ ಸಭಾಭವನಕ್ಕೆ ಬಂದಾಗ ನಳನಂತೆಯೇ ಇದ್ದ ಐವರು ರಾಜರು ಒಬ್ಬರ ಪಕ್ಕದಲ್ಲೊಬ್ಬರು ಕುಳಿತಿದ್ದುದನ್ನು ಕಂಡಳು. ಐದು ಜನರಲ್ಲಿ ತಾನು ಮೆಚ್ಚಿದ್ದ ನಳ ಯಾರು ಎಂಬುದು ತಿಳಿಯದೆ ತಬ್ಬಿಬ್ಬಾದಳು. ದೇವತೆಗಳು ಏನೋ ತಂತ್ರ ಹೂಡಿರಬೇಕೆಂದು ಬಗೆದು, ಪ್ರಾರ್ಥಿಸಿದಳು. ನಿಜವಾದ ನಳನನ್ನು ಗುರುತಿಸುವುದು ಸಾಧ್ಯವಾಯಿತು. ಆತನಿಗೆ ಮಾಲೆ ಹಾಕಿದಳು. ಹೀಗೆ ತನ್ನ ಪ್ರೇಮವನ್ನು ಸಫಲಗೊಳಿಸಿಕೊಂಡವಳು ದಮಯಂತಿ.

ಕಲಿಯ ಪ್ರಭಾವಕ್ಕೆ ಒಳಗಾದ ನಳ ಜೂಜಿನಲ್ಲಿ ಪುಷ್ಕರನಿಗೆ ಸೋತು ತನ್ನ ಐಶ್ವರ್ಯ, ರಾಜ್ಯಗಳನ್ನು ಕಳೆದುಕೊಂಡು, ದಮಯಂತಿಯೊಡನೆ ಕಾಡಿಗೆ ಹೋದ. ಆಹಾರಕ್ಕಾಗಿ ಹಕ್ಕಿ ಹಿಡಿಯಲು ಹೋಗಿ, ಉಟ್ಟಿದ್ದ ಬಟ್ಟೆಯೂ ಹೋಯಿತು. ಹೆಂಡತಿಯ ಸೀರೆಯ ಸೆರಗನ್ನು ಹರಿದು ಅದನ್ನೇ ಉಟ್ಟುಕೊಂಡ. ಅಂದೇ ರಾತ್ರಿ, ನಿದ್ರಿಸುತ್ತಿದ್ದ ದಮಯಂತಿಯನ್ನು ಬಿಟ್ಟು ಹೊರಟ. ಏಕಾಕಿಯಾದ ದಮಯಂತಿ, ನಾನಾ ಕಷ್ಟಗಳನ್ನು ಅನುಭವಿಸಿ ಚೇದಿರಾಜ್ಯಕ್ಕೆ ಬಂದು ರಾಜಕುಮಾರಿಯ ಅಪ್ತ ಸಖಿಯಾಗಿ ಬಾಳಬೇಕಾಯಿತು. ಅಷ್ಟು ಕಷ್ಟಪಟ್ಟರೂ ಆಕೆ ನಳನಲ್ಲಿಟ್ಟಿದ್ದ ಪ್ರೇಮ ಕುಂದಲಿಲ್ಲ.

ಕಾಡಿನಲ್ಲಿ ತಿರುಗುತ್ತಿದ್ದಾಗ ಸರ್ಪ ಕಚ್ಚಿದ ಕಾರಣ ನಳ ಕುರೂಪಿಯಾದ; ಅಯೋಧ್ಯೆಯ ರಾಜ ಋತುಪರ್ಣನ ರಥ ಚಾಲಕನಾಗಿ ಸೇರಿಕೊಂಡ.

ಭೀಮರಾಜ ತನ್ನ ಮಗಳು ಹಾಗೂ ಅಳಿಯನನ್ನು ಹುಡುಕಿಸಲು ಮಾಡಿದ ಪ್ರಯತ್ನಗಳ ಪರಿಣಾಮವಾಗಿ, ದಮಯಂತಿ ತಂದೆಯ ಮನೆಗೆ ಹಿಂದಿರುಗಿದಳು. ನಳನನ್ನು ಪತ್ತೆಹಚ್ಚಲು ಆಕೆ ನಿರ್ಧರಿಸಿದಳು. ಒಂದು ಪದ್ಯವನ್ನು ಬರೆದುಕೊಟ್ಟು, "ಇದನ್ನು ಎಲ್ಲ ಕಡೆಗಳಲ್ಲೂ ಓದಬೇಕು : ಅದಕ್ಕೆ ಪ್ರತಿಕ್ರಿಯೆಯಾಗಿ ಯಾರಾದರೂ ಏನಾದರೂ ಹೇಳಿದರೆ ಅದನ್ನು ನನಗೆ ತಿಳಿಸಬೇಕು." ಎಂದು ತನ್ನ ಚಾರರಿಗೆ ಅಜ್ಞಾಪಿಸಿದಳು. ನಳ ಅವಳನ್ನು ಅರಣ್ಯದಲ್ಲಿ ಬಿಟ್ಟುಹೋದ ಪ್ರಸಂಗ ಆ ಪದ್ಯದ ವಸ್ತು. ಅಯೋಧ್ಯೆಯ ಕಡೆ ಹೋಗಿದ್ದ ಚಾರ ಹಿಂದಕ್ಕೆ ಬಂದು, "ಅಲ್ಲಿನ ರಾಜನ ಸಾರಥಿ 'ನಳ ಅಸಹಾಯನಾಗಿ ಹಾಗೆ ಮಾಡಬೇಕಾಯಿತು' ಎಂದು ಉತ್ತರ ಹೇಳಿ ಕಣ್ಣೀರೊರೆಸಿಕೊಂಡ." ಎಂದು ವರದಿ ಮಾಡಿದ. ಆ ಸಾರಥಿಯೇ ನಳನಿರಬೇಕು ಎಂದು ದಮಯಂತಿ ತರ್ಕಿಸಿದಳು. ತಾನಿರುವೆಡೆಗೆ ನಳ ಬರುವಂತೆ ಮಾಡಲು ಬಯಸಿದಳು. "ದಮಯಂತಿ ಎರಡನೆಯ ಬಾರಿ ವಿವಾಹ ಮಾಡಿಕೊಳ್ಳಲಿದ್ದಾಳೆ: ಅದಕ್ಕಾಗಿ ಸ್ವಯಂವರ ಏರ್ಪಾಡಾಗಿದೆ; ಅದಕ್ಕೆ ಬರಬೇಕು", ಎಂದು ಋತುಪರ್ಣನಿಗೆ ಪತ್ರ ಹೋಯಿತು.

ಋತುಪರ್ಣನಿಗೆ ಆಹ್ವಾನಪತ್ರ ತಲಪಿದ ಮಾರನೆಯ ದಿನವೇ ಸ್ವಯಂವರಕ್ಕೆ ಗೊತ್ತಾದ ದಿನ. ಅಶ್ವಹೃದಯ ಬಲ್ಲ ನಳನಿಂದ ಮಾತ್ರ ಅಷ್ಟು ಅಲ್ಪಕಾಲದಲ್ಲಿ ಅಯೋಧ್ಯೆಯಿಂದ ವಿದರ್ಭಕ್ಕೆ ಬರಲು ಸಾಧ್ಯವೆಂದು ದಮಯಂತಿ ಅರಿತಿದ್ದಳು. ಋತುಪರ್ಣ ಬಂದಮೇಲೆ ದಮಯಂತಿ



ನಿಜವಾದ ನಳನಿಗೆ ಹಾರ... ...

ನಳ ಸಾರಥಿಯನ್ನು ನಾನಾ ರೀತಿ ಪರೀಕ್ಷಿಸಿದಳು. [illegible] ಕೊಟ್ಟ ಉಡುಪು ಧರಿಸಿ ಬಾಹುಕನಾಗಿದ್ದ ನಳ, ತನ್ನ ಮೊದಲಿನ ರೂಪ ಪಡೆದ. ದಮಯಂತಿಯು ಪತಿ [illegible] ಋತುಪರ್ಣನಿಗೆ ಅಶ್ವವಿದ್ಯೆಯನ್ನು ಹೇಳಿ ಕೊಟ್ಟು, ಅವನಿಂದ ಅಕ್ಷಹೃದಯ (ಜೂಜಾಟದ ವಿದ್ಯೆ) ಕಲಿತ. ಪುಷ್ಕರನನ್ನು ಸೋಲಿಸಿ, ತನ್ನ ರಾಜ್ಯ ಐಶ್ವರ್ಯಗಳನ್ನು ಹಿಂದಕ್ಕೆ ಪಡೆದ.

ಪತಿನಿಷ್ಠೆ, ಕಾರ್ಯ ಚತುರತೆಗಳ ಪ್ರತೀಕ—ದಮಯಂತಿ.

ದಯಾನಂದ ಬಾಂದೋಡ್ಕರ್

[illegible] ಕಥೆ ಬರೆಯುವುದರಲ್ಲಿ ಎತ್ತಿದ ಕೈ. ಯಶಸ್ವೀ ವ್ಯಾಪಾರಿ. ವರ್ತಕರ ರಾಜಕುಮಾರ ಎಂದು ಪ್ರಖ್ಯಾತಿ. ಗೋವೆಯ ಬಡವ ಬಲ್ಲಿದರೆಲ್ಲರಿಂದಲೂ 'ಭಾವು' (ಅಣ್ಣ) ಎಂದು ಕರೆಸಿಕೊಳ್ಳುವಷ್ಟು ಜನಪ್ರಿಯತೆ. ಜೊತೆಗೆ ಅವರು ನುರಿತ ರಾಜಕಾರಣಿ.



'ಭಾವು' ಬಾಂದೋಡ್ಕರ್

ದಯಾನಂದ ಬಾಂದೋಡ್ಕರ್ ಗೋವಾ ವಿಮೋಚನೆಯಿಂದ ತಮ್ಮ ಮರಣದ ವರೆಗೆ ಗೋವ, ದಮಾನ್, ದೀವ್‌ಗಳ ಮುಖ್ಯ ಮಂತ್ರಿಯಾಗಿದ್ದರು.

ಜನನ 1912 ಮಾರ್ಚ್ 11ರಂದು. ಪೋರ್ಚುಗೀಸ್, ಫ್ರೆಂಚ್, ಹಿಂದೀಗಳಲ್ಲಿ ಪರಿಣತಿ ಪಡೆದರು. 1942ರಲ್ಲಿ ಚಲೇ ಜಾವ್ ಚಳುವಳಿಯಲ್ಲಿ ಬಾಂದೋಡ್ಕರ್ ಭಾಗವಹಿಸಿದರು. ಗೋವ ವಿಮೋಚನಾ ಚಳುವಳಿಯಲ್ಲಿ ಭಾಗವಹಿಸಿದಾಗ ಮೂರು ತಿಂಗಳ ಕಾಲ ಸೆರೆಮನೆವಾಸ ಅನುಭವಿಸಿದರು. 1963ರಲ್ಲಿ ಗೋವಾ ಪೋರ್ಚುಗೀಸರ ಹಿಡಿತದಿಂದ ಮುಕ್ತವಾದಾಗ ಬಾಂದೋಡ್ಕರ್ ಆ ಪ್ರದೇಶದ ಪ್ರಥಮ ಮುಖ್ಯಮಂತ್ರಿಯಾದರು.

ಗೋವ ಪ್ರತ್ಯೇಕ ರಾಜ್ಯವಾಗಿ ಉಳಿಯಬೇಕೇ ಅಥವಾ ಬೇರೆ ರಾಜ್ಯದೊಂದಿಗೆ ವಿಲೀನವಾಗಬೇಕೇ ಎಂಬ ಬಗೆಗೆ ಜನಾಭಿಪ್ರಾಯ ಸಂಗ್ರಹಿಸಲು ಕೇಂದ್ರ ಸರಕಾರ ನಿರ್ಧರಿಸಿದಾಗ, ಬಾಂದೋಡ್ಕರ್ ಅದನ್ನು ವಿರೋಧಿಸಿ ತಮ್ಮ ಪದವಿಗೆ ರಾಜೀನಾಮೆ ಇತ್ತರು. ಮತ್ತೆ ಚುನಾವಣೆಯಲ್ಲಿ ಗೆದ್ದು ಬಂದು ಮುಖ್ಯಮಂತ್ರಿಯಾದರು.

ತಮ್ಮ ಬಿಡುವಿಲ್ಲದ ರಾಜಕೀಯ ಚಟುವಟಿಕೆಗಳ ನಡುವೆಯೂ ಇವರು ಕ್ರೀಡೆಗಳಿಗಾಗಿ ಸಮಯ ಕಂಡುಕೊಳ್ಳುತ್ತಿದ್ದರು. ಮುಂಬಯಿಯಲ್ಲಿ ನಡೆದ ಯಾವ ಕ್ರಿಕೆಟ್ ಟೆಸ್ಟ್ ಪಂದ್ಯವನ್ನೂ ಇವರು ನೋಡದೆ ಬಿಡುತ್ತಿರಲಿಲ್ಲ. ಒಮ್ಮೆ ವಿಧಾನ ಸಭೆಗೆ ಹೋಗುತ್ತಿದ್ದಾಗ ದಾರಿಯಲ್ಲಿ ಹುಡುಗರು ಕ್ರಿಕೆಟ್ ಆಡುತ್ತಿರುವುದನ್ನು ಕಂಡು, ಅಲ್ಲೇನಿಂತು ಒಂದು ಆಟ ಆಡಿ ಮುಂದುವರಿದರು; ಸಭೆಗೆ ಹೋಗುವುದು ತಡವಾಯಿತು.

ಬಾಂದೋಡ್ಕರ್ 1973 ಆಗಸ್ಟ್ 12ರಂದು ತಮ್ಮ 61ನೆಯ ವಯಸ್ಸಿನಲ್ಲಿ ನಿಧನರಾದರು.

ದಲ್ ಸರೋವರ

ಶ್ರೀನಗರದ ದಲ್ ಸರೋವರ ವಸಂತಕಾಲದಲ್ಲಿ ಸಾವಿರಾರು ಕೆಂದಾವರೆಗಳಿಂದ ಮೆರೆಯುತ್ತದೆ. ಈ ಕಮಲಗಳ ನಡುವೆ ದೋಣಿಗಳು ಸಂಚರಿಸಲು ಹಾದಿ ಮಾಡಿರುತ್ತಾರೆ. ಈ ಪ್ರದೇಶದಲ್ಲಿ ನೌಕಾವಿಹಾರ ಒಂದು ಅಪೂರ್ವ ಅನುಭವ.

ಹರಿಪರ್ವತ ಹಾಗೂ ಸಾಲೊಮನ್ ಸಿಂಹಾಸನ ಎಂಬ ಎರಡು ಬೆಟ್ಟಗಳ ನಡುವೆ ಶ್ರೀನಗರವಿದೆ. ದಲ್ ಸರೋವರದ ಅಂಚು ಈ ಎರಡು ಬೆಟ್ಟಗಳ ತಪ್ಪಲುಗಳನ್ನು ಮುಟ್ಟುತ್ತದೆ. ದಲ್ ಸರೋವರದ ನೀರಿನಲ್ಲಿ ಈ ಬೆಟ್ಟಗಳ ಪ್ರತಿಫಲನದಿಂದ ಸುಂದರ ದೃಶ್ಯ ಮೂಡುತ್ತದೆ.

ಐದು ಮೈಲು ಉದ್ದ ಎರಡೂವರೆ ಮೈಲು ಅಗಲದ ಈ ಸರೋವರದ ಮೇಲೆ ಅಲ್ಲಲ್ಲಿ ಬಗೆಬಗೆಯ ಸೊಬಗಿನ ತಾಣಗಳಿವೆ. ತೇಲುವ ಉಪವನಗಳು, ದ್ವೀಪಗಳು, ದೀರ್ಘವಾಗಿ ಬೆಳೆದಿರುವ ಜೊಂಡುಗಳ ಸಮೂಹಗಳಿವೆ. ಇವು ನಿಸರ್ಗದ ಕೊಡುಗೆ. ಬಣ್ಣ ಬಣ್ಣದ 'ಗೃಹ ದೋಣಿ'ಗಳೂ ತೆರೆದ (ಶಿಕಾರಿ) ದೋಣಿಗಳೂ ಮಾನವ ನಿರ್ಮಿತ. 'ಗೃಹ ದೋಣಿ'ಗಳಿಗೆ ಲಂಗರುಹಾಕಿ ಅವು ಒಂದೆಡೆ ನಿಲ್ಲುವಂತೆ ಮಾಡಲು ಅವಕಾಶವಿದೆ. ಇಲ್ಲಿಂದ ಅತ್ತಿತ್ತ ಹೋಗಲು ಅಥವಾ ವಿಹರಿಸಲು ಇರುವ ದೋಣಿಗಳು 'ಶಿಕಾರಿ' ದೋಣಿಗಳು.

ದಲ್ ಸರೋವರದ ದಂಡೆಯ ಮೇಲಿರುವ ನಿಶಾತ್, ಶಾಲಿಮಾರ್ ಹಾಗೂ ನಾಸೀಮ್ ಉದ್ಯಾನಗಳು ಮೊಘಲ್ ಅರಸರ ಸೃಷ್ಟಿ.

ಐದು ಮೈಲು ಉದ್ದ, ಎರಡೂವರೆ ಮೈಲು ಅಗಲದ ಸೊಬಗು : ದಲ್ ಸರೋವರ



ದೇವಾಲಯದ ಮೂರು ಬದಿಗಳಲ್ಲಿ ಪ್ರೇಕ್ಷಕರಿಗಾಗಿ ಕಟ್ಟಿದ ಮಂಟಪಗಳಿವೆ. ದೇವರ ವಿಹಾರ, ಸ್ನಾನ, ಊಟ, ತೆರಸೇವೆಗಳಿಗೂ ಇಲ್ಲಿ ದೇವಾಲಯದಲ್ಲಿ ಅವಕಾಶವಿದೆ.

ದಲಾಲ್ ಸ್ಟ್ರೀಟ್

ಮುಂಬಯಿಯ ಷೇರು ಪೇಟೆಯ —ಸ್ಟಾಕ್ ಎಕ್ಸ್‌ಚೇಂಜ್— ಇನ್ನೊಂದು ಹೆಸರು ದಲಾಲ್ ಸ್ಟ್ರೀಟ್ ಅಥವಾ ದಲಾಲ್ ರಸ್ತೆ. ಪ್ರಮುಖ ಉದ್ಯಮಗಳ, ಕಂಪೆನಿಗಳ ಷೇರುಪತ್ರ, ಸಾಲಪತ್ರಗಳ ಖರೀದಿ —ಎಂದರೆ ಕೊಳ್ಳುವಿಕೆ ಮಾರಾಟಗಳು— ದಲಾಲ್ ರಸ್ತೆಯಲ್ಲಿರುವ ಷೇರು ಮಾರುಕಟ್ಟೆಯಲ್ಲಿ ನಡೆಯುತ್ತವೆ. ಇಲ್ಲಿ ದಿನವಿಡೀ ಎರಡು ಗಂಟೆ ಕಾಲ ಮಾತ್ರ ವ್ಯಾಪಾರ. ಈ ಅವಧಿಯ ಕೊನೆಯ ಭಾಗದಲ್ಲಂತೂ ಇಲ್ಲಿನ ಕೂಗಾಟ, ಗದ್ದಲಗಳನ್ನು ನೋಡಿ, ಅನುಭವಿಸಿಯೇ ತಿಳಿಯಬೇಕು. ಷೇರು ಅಥವಾ ಸಾಲಪತ್ರ ಯಾವ ಉದ್ಯಮದ್ದು, ಅದರ ಪರಿಸ್ಥಿತಿ ಏನು, ಅಲ್ಲಿನ ಕಾರ್ಮಿಕರ ಚಳವಳಿ ಇತ್ಯಾದಿ ಅನೇಕ ವಿಷಯಗಳನ್ನು ಕೊಳ್ಳುವವರು ಗಮನದಲ್ಲಿಟ್ಟುಕೊಳ್ಳಬೇಕು; ಕೊಳ್ಳುವ ನಿರ್ಧಾರವನ್ನು ಅಲ್ಲಿಯೇ, ಆ ಕೂಡಲೇ, ಮಾಡಬೇಕು. ಇದರಿಂದಾಗಿ ಅದೊಂದು ಕೋಲಾಹಲ.

ದಲಾಲ್ ಸ್ಟ್ರೀಟಿನ ಸ್ಟಾಕ್ ಎಕ್ಸ್‌ಚೇಂಜಿನಲ್ಲಿರುವ ಸದಸ್ಯರೆಲ್ಲ ದಲಾಲರೇ. ದಿನಕ್ಕೆ ಸಾವಿರಾರು ಜನ ಈ ಸ್ಟಾಕ್ ಎಕ್ಸ್‌ಚೇಂಜಿನಲ್ಲಿ ಸೇರುತ್ತಾರೆ. ಭಾರತದ ಇತರೆಡೆ ಸ್ಟಾಕ್ ಎಕ್ಸ್‌ಚೇಂಜುಗಳಿದ್ದರೂ ಮುಂಬಯಿಯ ಕೆಲವು ವಿಶಿಷ್ಟ ಸೌಲಭ್ಯಗಳಿಂದಾಗಿ ದಲಾಲ್ ಸ್ಟ್ರೀಟಿನಲ್ಲಿರುವ ಎಕ್ಸ್‌ಚೇಂಜಿಗೆ ಹೆಚ್ಚಿನ ಪ್ರಾಧಾನ್ಯ.

ದರ್ಶನಗಳು

ಕೇಳಿದ, ನೋಡಿದ, ಅನುಭವಕ್ಕೆ ಬಂದ ಸಂಗತಿಗಳನ್ನು ಸ್ವವಿಮರ್ಶೆಯಿಂದ ವ್ಯವಸ್ಥಿತ ರೂಪದಲ್ಲಿ ಹೇಳುವುದು ದರ್ಶನ.

ಭಾರತೀಯ ತತ್ತ್ವಜ್ಞಾನ ವ್ಯವಸ್ಥಿತ ರೂಪದಲ್ಲಿ ಕಂಡುಬರುವುದು ದರ್ಶನಗಳಲ್ಲಿ.

ಬೌದ್ಧಧರ್ಮ ಹುಟ್ಟುವವರೆಗೆ ಭಾರತೀಯ ಚಿಂತನೆ ಬಹುಮಟ್ಟಿಗೆ ಶ್ರದ್ಧೆ ನಂಬಿಕೆಗಳ ಗಡಿ ಮೀರಿ ಹೋಗಿರಲಿಲ್ಲ. ಬುದ್ಧನ ಚಿಂತನೆಗಳಲ್ಲಿ ವೇದದ ಅಧಿಕಾರ, ದೇವರ ಅಸ್ತಿತ್ವ, ಆತ್ಮ ಇವನ್ನು ಪ್ರಶ್ನಿಸುವ ದಿಟ್ಟತನ ಕಾಣಿಸಿತು. ಆಗ ತಾತ್ತ್ವಿಕ ವಾದ-ವಿವಾದಗಳೂ ಪ್ರಾರಂಭವಾದುವು. ವೇದಗಳ ಅಧಿಕಾರವನ್ನೂ ದೇವರ ಅಸ್ತಿತ್ವವನ್ನೂ ಒಪ್ಪುವವರು ಆಸ್ತಿಕರಾದರು; ಒಪ್ಪದವರು ನಾಸ್ತಿಕರಾದರು. ಪರಸ್ಪರ ಖಂಡನೆ, ತಮ್ಮ ತಮ್ಮ ತತ್ತ್ವಪ್ರತಿಪಾದನೆಗಳು ಪ್ರಾರಂಭವಾದುವು. ಈ ಕಾಲದಲ್ಲಿ, ಎಂದರೆ ಕ್ರಿ. ಪೂ. 150ರಿಂದ ಕ್ರಿ.ಶ. 200ರ ವರೆಗೆ, ಭಾರತೀಯ ಚಿಂತನೆ ವ್ಯವಸ್ಥಿತ ರೂಪದಲ್ಲಿ ವಿವಿಧ ದರ್ಶನಗಳಾಗಿ ರೂಪುಗೊಂಡಿತು.

ಹೀಗೆ ರೂಪುಗೊಂಡ ದರ್ಶನಗಳು ಪ್ರಧಾನವಾಗಿ ಒಂಭತ್ತು. ಇವುಗಳನ್ನು ವೈದಿಕ ದರ್ಶನಗಳು, ಅವೈದಿಕ ದರ್ಶನಗಳು ಎಂದು ಎರಡು ಗುಂಪುಗಳನ್ನಾಗಿ ವಿಂಗಡಿಸುತ್ತಾರೆ. ವೈದಿಕ ದರ್ಶನಗಳು ಆರು: ಸಾಂಖ್ಯ, ಯೋಗ, ನ್ಯಾಯ, ವೈಶೇಷಿಕ, ಮೀಮಾಂಸಾ ಹಾಗೂ ವೇದಾಂತ. ಅವೈದಿಕ ದರ್ಶನಗಳು ಮೂರು: ಬೌದ್ಧ, ಜೈನ, ಹಾಗೂ ಚಾರ್ವಾಕ.

ಆಸ್ತಿಕ ದರ್ಶನಗಳು ಕಲ್ಪನೆಯನ್ನೂ ವೇದದ ಅಧಿಕಾರವನ್ನೂ ಹೆಚ್ಚಾಗಿ ಅವಲಂಬಿಸಿವೆ. ಅವೈದಿಕ ದರ್ಶನಗಳು ಅನುಭವದ ಆಧಾರದ ಮೇಲೆ ಬಂದ ವಿಚಾರಾತ್ಮಕ ಪ್ರತಿಪಾದನೆಗಳು. ಚಾರ್ವಾಕ ದರ್ಶನವಂತೂ ಅನುಭವಕ್ಕೆ ಸಿಕ್ಕದ ಯಾವುದಕ್ಕೂ ಬೆಲೆ ಕೊಡುವುದಿಲ್ಲ.

ಸಾಮಾನ್ಯವಾಗಿ ಒಂದೊಂದು ದರ್ಶನಕ್ಕೂ ಒಬ್ಬೊಬ್ಬ ಮೂಲ ಪ್ರತಿಪಾದಕನಿದ್ದಾನೆ. ಇವನು ತನ್ನ ಚಿಂತನೆಯ ತಿರುಳನ್ನು ಹೊಳಹುಗಳನ್ನು ಕ್ರೋಢೀಕರಿಸಿ, ಕೆಲವು ಮೂಲ ಸೂತ್ರಗಳ ರೂಪದಲ್ಲಿ ಬರೆದಿಡುತ್ತಾನೆ. ಈ ಸೂತ್ರಗಳನ್ನು ವಿವರಿಸಿ ವ್ಯಾಖ್ಯಾನಿಸುವುದು ಎರಡನೆಯ ಹಂತ. ವ್ಯಾಖ್ಯಾತ ದರ್ಶನಕ್ಕೆ ಟೀಕೆ, ಟಿಪ್ಪಣಿ ಬರೆಯುವುದು ಮೂರನೆಯ ಹಂತ. ಈ ದರ್ಶನದ ವಿರುದ್ಧ ಬಂದ ಟೀಕೆಗಳನ್ನು ಖಂಡಿಸುವುದು ನಾಲ್ಕನೆಯ ಹಂತ. ಹೀಗೆ ಒಂದೊಂದು ದರ್ಶನವೂ ಹಲವಾರು ಹಂತಗಳಲ್ಲಿ ಬೆಳೆದು ಬಂದಿರುತ್ತದೆ. ಆದ್ದರಿಂದ ಒಂದೊಂದು ದರ್ಶನದಲ್ಲೂ ಹಲವಾರು ಧೀಮಂತರ ಕೈವಾಡವಿದ್ದು ಕೆಲವೊಮ್ಮೆ, ಮೂಲ ಕರ್ತೃ ಯಾರೆಂಬುದೇ ವಿವಾದಾಸ್ಪದ ಸಂಗತಿಯಾಗುತ್ತದೆ.

ಈಗ ನಂಬಿರುವಂತೆ ದರ್ಶನಗಳಲ್ಲಿ ಅತ್ಯಂತ ಪ್ರಾಚೀನವಾದದ್ದು ಸಾಂಖ್ಯ. ಮೂಲರೂಪದಲ್ಲಿ ಇದು ಬುದ್ಧನಿಗಿಂತಲೂ ಹಿಂದಿನದಾಗಿತ್ತು. ವ್ಯವಸ್ಥಿತ ರೂಪ ಪಡೆದದ್ದು ಅನಂತರ. ಈ ದರ್ಶನದ ಟೀಕೆಗಳಾಗಿಯೇ ಮಿಕ್ಕ ಎಲ್ಲ ದರ್ಶನಗಳೂ ಹುಟ್ಟಿಕೊಂಡುವೆಂಬ ಅಭಿಪ್ರಾಯವಿದೆ. ಕಾಲಕ್ರಮೇಣ ಒಂದು ದರ್ಶನ ಮತ್ತೊಂದರಿಂದ ಪ್ರಭಾವಿತವಾಗಿರುವುದೂ ಉಂಟು.

ನೋಡಿ : ಚಾರ್ವಾಕದರ್ಶನ ; ಜೈನಧರ್ಮ ; ನ್ಯಾಯದರ್ಶನ ; ಬೌದ್ಧ ಧರ್ಮ ; ಮೀಮಾಂಸಾದರ್ಶನ ; ಯೋಗದರ್ಶನ ; ವೇದಾಂತ ದರ್ಶನ ; ವೈಶೇಷಿಕದರ್ಶನ ; ಸಾಂಖ್ಯದರ್ಶನ

ದಶಾವತಾರ

ಪರಿತ್ರಾಣಾಯ ಸಾಧೂನಾಂ ವಿನಾಶಾಯ ಚ ದುಷ್ಕೃತಾಂ ।
ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ ॥

"ಸಜ್ಜನರ ಪರಿಪಾಲನೆಗಾಗಿ, ದುಷ್ಟರ ನಿಗ್ರಹಕ್ಕಾಗಿ, ಧರ್ಮವನ್ನು ಸ್ಥಾಪಿಸುವುದಕ್ಕಾಗಿ (ನಾನು) ಯುಗ ಯುಗದಲ್ಲೂ ಅವತಾರ ಮಾಡುತ್ತೇನೆ" ಎಂದು ಶ್ರೀಕೃಷ್ಣ ಭಗವದ್ಗೀತೆಯಲ್ಲಿ ಹೇಳಿದ್ದಾನೆ.

ಅಸ್ಪಷ್ಟ ಮತ್ತು ಗುಪ್ತವಾಗಿದ್ದುದು ಗೋಚರಗೊಳ್ಳುವುದು ಅವತಾರ. ಪರಮಾತ್ಮನ ಅಂಶ ಜಲಚರವಾಗಿ, ಮೃಗವಾಗಿ, ಮಾನವನಾಗಿ, ಭೂಮಿಯ

ಹತ್ತು ಅವತಾರಗಳು : ಉಬ್ಬು ಶಿಲ್ಪದಲ್ಲಿ



ಮೇಲೆ ಕಾಣಿಸಿಕೊಂಡು ದುಷ್ಟ ನಿಗ್ರಹ, ಧರ್ಮ ಸಂಸ್ಥಾಪನೆಯಂಥ ಏಳಿಗೆಗೆ ಸಾಧಕವಾದ ಕಾರ್ಯ ನಡೆಯುತ್ತದೆ ಎಂಬುದು ಅವತಾರಗಳ ರಹಸ್ಯದ ವಿವರಣೆ.

ಮತ್ಸ್ಯ, ಕೂರ್ಮ, ವರಾಹ, ನರಸಿಂಹ, ವಾಮನ, ಪರಶುರಾಮ, ರಾಮ, ಕೃಷ್ಣ, ಬುದ್ಧ ಮತ್ತು ಕಲ್ಕಿ ಇವೇ ದಶಾವತಾರಗಳು. ಮೊದಲಿನ ಒಂಬತ್ತು ಅವತಾರಗಳೂ ಆಗಿಹೋಗಿವೆ; ಕಲ್ಕಿ ಅವತಾರ ಇನ್ನೂ ಆಗಬೇಕಾಗಿದೆ—ಎಂಬುದೊಂದು ನಂಬಿಕೆ.

ನೋಡಿ : ಅವತಾರ—ಸಂಪುಟ ೧

ದಸರಾ

ಮಹಿಷಾಸುರ ಪ್ರಜಾಪೀಡಕನಾಗಿದ್ದ. ಅವನ ಕೋಟಲೆಯಿಂದ ತಪ್ಪಿಸಿಕೊಳ್ಳಲು ಪಾರಾಗಿಸಲು ಜನರೂ ದೇವತೆಗಳೂ ತ್ರಿಮೂರ್ತಿಗಳನ್ನು ಆಶ್ರಯಿಸಿದರು. ಆ ಮೂವರೂ ತಮ್ಮ ಉತ್ತಮ ಗುಣಗಳನ್ನು ಕೊಟ್ಟು ದುರ್ಗಾದೇವಿಯನ್ನು ನಿರ್ಮಿಸಿದರು. ದೇವಿ ಸಿಂಹವಾಹಿನಿಯಾಗಿ ಮಹಿಷಾಸುರನೊಡನೆ ಯುದ್ಧಕ್ಕೆ ನಿಂತಳು. ಯುದ್ಧ 9 ದಿನ ನಡೆಯಿತು. 10ನೆಯ ದಿನ ದೇವಿಯಿಂದ ಮಹಿಷಾಸುರನ ವಧೆಯಾಯಿತು. ಈ ಘಟನೆಯ ನೆನಪಿನ ಹಬ್ಬ ನವರಾತ್ರಿ. ವಿಜಯದ ದಿನವೂ ಸೇರಿದಂತೆ ಇದು ದಸರಾ : ಹತ್ತು ದಿನಗಳ ಹಬ್ಬ.

ಭಾರತದ ಆದ್ಯಂತ ಆಚರಣೆಯಲ್ಲಿರುವ ದಸರಾ ಆಶ್ವಯುಜ ಮಾಸದ ಮೊದಲನೆಯ ದಿನದಿಂದ ಆರಂಭವಾಗುತ್ತದೆ. ಈ ಅವಧಿಯಲ್ಲಿ ದೇವಿಯ ಪೂಜೆಗೆ ಪ್ರಾಶಸ್ತ್ಯ.

ವಿಜಯನಗರ ಅರಸರು ದಸರಾ ಉತ್ಸವವನ್ನು ವೈಭವದಿಂದ ನಡೆಸುತ್ತಿದ್ದರು. ಉತ್ಸವ ನಡೆಸಲು ಅವರು ಕಟ್ಟಿಸಿದ ನವರಾತ್ರಿ ದಿಬ್ಬದ ಅವಶೇಷಗಳನ್ನು ಈಗಲೂ ಹಂಪೆಯಲ್ಲಿ ಕಾಣಬಹುದು. ವಿಜಯನಗರಕ್ಕೆ ಬಂದಿದ್ದ ವಿದೇಶೀ ಪ್ರವಾಸಿಗರು ಈ ಹಬ್ಬದ ವೈಭವಪೂರಿತ ಆಚರಣೆಯ ವಿವರಗಳನ್ನು ಕೊಟ್ಟಿದ್ದಾರೆ.

ಮೈಸೂರು ಅರಸರಲ್ಲಿ 9ನೆಯವರಾದ ರಾಜ ಒಡೆಯರು 1610ರಲ್ಲಿ ಶ್ರೀರಂಗಪಟ್ಟಣದಲ್ಲಿ ದಸರಾ ಹಬ್ಬದ ಆಚರಣೆಯನ್ನು ಆರಂಭಿಸಿದರು. ಮುಂದಿನ ಪೀಳಿಗೆಯವರು ಈ ಪದ್ಧತಿಯನ್ನು ಅನುಸರಿಸಬೇಕು ಎಂದು ಕಟ್ಟಳೆ ಮಾಡಿದರು. 1799ರಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರು ಪಟ್ಟಕ್ಕೆ ಬಂದಮೇಲೆ ದಸರೆಯನ್ನು ಮೈಸೂರಿನಲ್ಲಿ ಏರ್ಪಡಿಸುವುದು ಆರಂಭವಾಯಿತು. ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಮೈಸೂರಿನಲ್ಲಿ ನವರಾತ್ರಿ ಉತ್ಸವವನ್ನೂ ವಿಜಯದಶಮಿಯ ಮೆರವಣಿಗೆಯನ್ನೂ ವೈಭವದಿಂದ ನಡೆಸಲು ನಾನಾ ವಿಧ ವ್ಯವಸ್ಥೆ ಮಾಡಲಾಯಿತು. ಮೈಸೂರಿನ ವಿಜಯದಶಮಿಯ ಜಂಬೂಸವಾರಿ ಉತ್ಸವವನ್ನು ನೋಡಲು ದೇಶವಿದೇಶಗಳಿಂದ ಸಹಸ್ರಾರು ಜನರು ಬರುತ್ತಿದ್ದರು.

ಕರ್ನಾಟಕದಲ್ಲಿ ನವರಾತ್ರಿಯ ಹಬ್ಬವನ್ನು ನಾಡಹಬ್ಬವೆಂಬ ಹೆಸರಿನಲ್ಲಿ ಆಚರಿಸುವ ಪದ್ಧತಿ ಬೆಳೆದಿದೆ. ಇದು ಪ್ರಧಾನವಾಗಿ ಸಾಂಸ್ಕೃತಿಕ ಕಾರ್ಯಕ್ರಮ.

ಹಿಂದುಗಳ ಮನೆಗಳಲ್ಲಿ ದಸರಾ ಕಾಲದಲ್ಲಿ ವಿಶೇಷ ಪೂಜೆಗಳು ನಡೆಯುತ್ತವೆ. ಸಪ್ತಮಿಯಂದು ಸರಸ್ವತೀಪೂಜೆ; ಪುಸ್ತಕಗಳು, ಸಂಗೀತವಾದ್ಯಗಳಿಗೂ ಪೂಜೆ ಸಲ್ಲುತ್ತದೆ. ಮರುದಿನ ದುರ್ಗಾಷ್ಟಮಿ. ಮಹಾನವಮಿ ದಿವಸ ಆಯುಧ ಪೂಜೆ; ಚಾಕು, ಕತ್ತರಿ, ಹೊಲಿಗೆಯಂತ್ರ, ಕಾರು; ಸ್ಕೂಟರುಗಳಿಗೂ ಕಾರಖಾನೆಗಳಲ್ಲಿ ಯಂತ್ರಗಳಿಗೂ ಪೂಜೆ ಆಗುತ್ತದೆ. ಕರ್ನಾಟಕ, ತಮಿಳುನಾಡುಗಳಲ್ಲಿ ದಸರಾದ ಹತ್ತು ದಿನವೂ ಬೊಂಬೆಗಳ ಅಲಂಕಾರ ಮಾಡಿ ಕೂಡಿಸುತ್ತಾರೆ. ಇದು ಸುಂದರ ನೋಟ.



ಗಂಗೆಯಲ್ಲಿ ದುರ್ಗಾ ವಿಸರ್ಜನೆ

ವಿಜಯದಶಮಿಗೆ ಇನ್ನೊಂದು ಹೆಸರು ವಿದ್ಯಾ ದಶಮಿ. ಅಕ್ಷರಾಭ್ಯಾಸ, ಸಂಗೀತ–ನೃತ್ಯಾಭ್ಯಾಸ ಆರಂಭಿಸಲು ವಿಜಯದಶಮಿ ಶುಭ ದಿನ ಎಂಬ ನಂಬಿಕೆಯಿದೆ.

ದಸರೆಯ ಕಾಲದಲ್ಲಿ ಬಂಗಾಳದಲ್ಲಿ ನಡೆಯುವ ದುರ್ಗಾಪೂಜೆ ವಿಖ್ಯಾತ. ರಾಜಸ್ಥಾನದಲ್ಲಿ ಮಹಾಲಕ್ಷ್ಮಿಯನ್ನು ಪೂಜಿಸುತ್ತಾರೆ. ಜೈತ್ರಯಾತ್ರೆ ಎಂದು, ಮಹಾಲಕ್ಷ್ಮಿ ದೇವಸ್ಥಾನಕ್ಕೆ ಹೋಗಿ ಬರುತ್ತಾರೆ. ಮಹಾರಾಷ್ಟ್ರದಲ್ಲಿ ಅಂಬಾರಿ ಆನೆ ಮೆರವಣಿಗೆ, ಶಮಿ ಪೂಜೆ, ಶಮಿಪತ್ರ ಹಂಚುವಿಕೆ ನಡೆಯುತ್ತವೆ.

ಜನ ಬಹಳ ಉತ್ಸಾಹ, ಸಂಭ್ರಮಗಳಿಂದ ಆಚರಿಸುವ ಹಬ್ಬಗಳಲ್ಲೊಂದು ದಸರಾ.

ನೋಡಿ : ದುರ್ಗಾಪೂಜೆ ; ರಾಮಲೀಲಾ

ದಾಂಡೇಲಿ

ಕರ್ನಾಟಕ ರಾಜ್ಯದ ಉತ್ತರ ಕನ್ನಡ ಜಿಲ್ಲೆಯಲ್ಲಿರುವ ದಾಂಡೇಲಿ ರಮ್ಯ ನಿಸರ್ಗದ ಮಡಿಲಿನಲ್ಲಿದೆ. ಸುತ್ತಲೂ ಕಾಡು. ಕಾಳೀನದಿ ಇಲ್ಲಿ ಮೈತುಂಬಿ ಹರಿಯುತ್ತದೆ.

ರಮ್ಯ ನಿಸರ್ಗದ ಮಡಿಲಲ್ಲಿ ದಾಂಡೇಲಿ




ಕಾಗದದ ಕಾರಖಾನೆಯಾದ ವೆಸ್ಟ್‌ಕೋಸ್ಟ್ ಪೇಪರ್ ಮಿಲ್ಸ್ ದಾಂಡೇಲಿಯಲ್ಲಿದೆ. ಈ ಕಾರಖಾನೆಯು ಕೆಲಸಗಾರರಿರುವ ನಗರ ಭಾರತದ ಸಂಕ್ಷಿಪ್ತರೂಪ ಎನ್ನಿಸುವಂತಿದೆ. ಭಾರತದ ಎಲ್ಲ ಭಾಗಗಳಿಂದ ಬಂದ ಜನ ಇಲ್ಲಿ ಕೆಲಸ ಮಾಡುತ್ತಾರೆ. ದಾಂಡೇಲಿಯ ಜನಸಂಖ್ಯೆ 25.425.

ಪದರ ಹಲಗೆ ಕಾರಖಾನೆ, ಫೆರೊ ಮ್ಯಾಂಗನೀಸ್ ಕಾರಖಾನೆಗಳೂ ಇಲ್ಲಿವೆ. ದಾಂಡೇಲಿ ಪ್ರದೇಶದಲ್ಲಿ ಒಂದು ಅಭಯಾರಣ್ಯವೂ ಇದೆ.

ದಾದ್ರ, ನಗರ್ ಹವೇಲಿ

ಮೊದಲಿಗೆ ದಮಾನ್‌ನ ಒಂದು ಭಾಗವಾಗಿದ್ದ ದಾದ್ರ ಹಾಗೂ ನಗರ್ ಹವೇಲಿಗಳು ಪೋರ್ಚುಗೀಸರಿಗೆ ಸೇರಿದ್ದುವು. ಗೋವ, ದಮಾನ್, ದೀವ್‌ಗಳನ್ನು ಭಾರತ ವಶಪಡಿಸಿಕೊಂಡ ಮೇಲೆ, 1961 ಆಗಸ್ಟ್ 11ರಿಂದ, ದಾದ್ರ, ನಗರ್ ಹವೇಲಿ ಪ್ರತ್ಯೇಕ ಕೇಂದ್ರಾಡಳಿತ ಪ್ರದೇಶವಾಯಿತು. ಗೋವಾ, ದಮಾನ್, ದೀವ್‌ಗಳ ಲೆಫ್ಟಿನೆಂಟ್ ಗವರ್ನರರೇ ಈ ಪ್ರದೇಶಗಳ ಲೆಫ್ಟಿನೆಂಟ್ ಗವರ್ನರ್. ದಾದ್ರ, ನಗರ್ ಹವೇಲಿಗಳ ವರಿಷ್ಠ ಪಂಚಾಯತಿಯ ಸಲಹೆ ಪಡೆದು ಇವರು ಇಲ್ಲಿನ ಆಡಳಿತ ನಡಸುತ್ತಾರೆ.

ಬಿದಿರು, ಕಾಗದ, ಬಿಗರು ಸಾರ, ತೊಗಲು ಸಂಸ್ಕರಣೆ, ಹೆಂಚು, ಇಟ್ಟಿಗೆಗಳ ತಯಾರಿ —ಇಲ್ಲಿನ ಉದ್ಯಮಗಳು.



ದಾದಾಭಾಯಿ ನವರೋಜಿ

ನಾಲ್ಕನೆಯ ವಯಸ್ಸಿನಲ್ಲಿ ತಂದೆಯನ್ನು ಕಳೆದುಕೊಂಡು, ತಾಯಿಯ ಪೋಷಣೆಯಲ್ಲಿ ಬೆಳೆದವರು ದಾದಾಭಾಯಿ. ಅವರು ತಮ್ಮ ಆತ್ಮಕಥೆಯಲ್ಲಿ "ನಾನು ಏನು ಆಗಿರುವೆನೊ ಅದೆಲ್ಲ ನನ್ನ ತಾಯಿಯಿಂದ" ಎಂದಿದ್ದಾರೆ. ಮಾತೃಭೂಮಿಯ ಮೇಲೂ ಇದೇ ರೀತಿ ಅಭಿಮಾನ ಅವರಿಗೆ.

ದಾದಾಭಾಯಿ ನವರೋಜಿ 1825 ಸೆಪ್ಟೆಂಬರ್ 4ರಂದು ಮುಂಬಯಿಯಲ್ಲಿ ಜನಿಸಿದರು. ಅಲ್ಲಿಯೇ ವಿದ್ಯಾಭ್ಯಾಸ ಮಾಡಿ ಗಣಿತಶಾಸ್ತ್ರದಲ್ಲಿ ಸ್ವರ್ಣ ಪದಕ ಗಳಿಸಿದರು. 19ನೆಯ ವಯಸ್ಸಿನಲ್ಲಿ ಶಿಕ್ಷಣ ಮುಗಿಸಿ, ತಾವು ಕಲಿತ ಎಲ್ಫಿನ್‌ಸ್ಟನ್ ಕಾಲೇಜಿನಲ್ಲೇ ಗಣಿತ ಮತ್ತು ಪ್ರಕೃತಿ ವಿಜ್ಞಾನದ ಅಧ್ಯಾಪಕರಾದರು. ಆ ಹುದ್ದೆಗೆ ನೇಮಕವಾದ ಪ್ರಥಮ ಭಾರತೀಯರು ಅವರು. ಸ್ವಲ್ಪ ಕಾಲದಲ್ಲೇ ಅವರನ್ನು ಕೈಜಿ. ಕಾಮಾ ಅಂಡ್ ಕಂಪೆನಿಯ ಪ್ರತಿನಿಧಿಯಾಗಿ ಇಂಗ್ಲೆಂಡಿಗೆ ತೆರಳಿದರು. ಭಾರತದ ಹಿತಸಾಧನೆಗಾಗಿ ಅಲ್ಲಿ ಬಹುವಾಗಿ ಶ್ರಮಿಸಿದರು. ಇಂಗ್ಲೆಂಡಿನಲ್ಲಿ ವಿದ್ಯಾಭ್ಯಾಸಕ್ಕಾಗಿ ಬರುತ್ತಿದ್ದ ಭಾರತೀಯರಿಗೆ ಬೇಕಾದ ಸಹಾಯವನ್ನು ಮಾಡುತ್ತಿದ್ದರು. ಹೀಗೆ ನೆರವು ಪಡೆದವರಲ್ಲಿ ಗಾಂಧೀಜಿಯೂ ಒಬ್ಬರು. ಗಾಂಧೀಜಿ ದಕ್ಷಿಣ ಆಫ್ರಿಕದಲ್ಲಿ ನೆಲೆಸಿದಾಗಲೂ ದಾದಾಭಾಯಿಯವರೊಡನೆ ಪತ್ರ ವ್ಯವಹಾರ ಇಟ್ಟುಕೊಂಡಿದ್ದರು. ತಮ್ಮ ಚಟುವಟಿಕೆಗಳ ಬಗೆಗೆ ಅವರಿಂದ ಸಲಹೆ ಸೂಚನೆ ಪಡೆಯುತ್ತಿದ್ದರು.



ಸ್ವರಾಜ್ಯ ಮಂತ್ರ : ದಾದಾಭಾಯಿ

ಬ್ರಿಟನಿನಲ್ಲಿದ್ದಾಗ ದಾದಾಭಾಯಿ ಕೆಲ ಕಾಲ ಲಂಡನ್ ವಿಶ್ವವಿದ್ಯಾನಿಲಯದ ಗುಜರಾತೀ ಭಾಷಾ ಸಾಹಿತ್ಯಗಳ ಪ್ರಾಧ್ಯಾಪಕರಾಗಿ ಕೆಲಸ ಮಾಡಿದರು. ಅನಂತರ 1862ರಲ್ಲಿ ತಮ್ಮದೇ ವಾಣಿಜ್ಯ ಸಂಸ್ಥೆಯನ್ನು–ದಾದಾಭಾಯಿ ನವರೋಜಿ ಮತ್ತು ಕಂಪೆನಿ–ಪ್ರಾರಂಭಿಸಿದರು. ಭಾರತದ ರಾಜಕೀಯ, ಶೈಕ್ಷಣಿಕ, ಆರ್ಥಿಕ ಸಮಸ್ಯೆಗಳ ಬಗೆಗೆ ಇಂಗ್ಲೆಂಡಿನ ಜನರಿಗೆ ಮನವರಿಕೆ ಮಾಡಲು ತಮ್ಮ ಸಾಮರ್ಥ್ಯವನ್ನೆಲ್ಲ ಉಪಯೋಗಿಸಿದರು. 'ಲಂಡನ್ ಇಂಡಿಯನ್ ಸೊಸೈಟಿ' ಮತ್ತು 'ಈಸ್ಟ್ ಇಂಡಿಯಾ ಅಸೋಸಿಯೇಷನ್' ಸ್ಥಾಪಿಸಿ, ಬ್ರಿಟನಿನಲ್ಲಿದ್ದ ಭಾರತೀಯರನ್ನು ಸಂಘಟಿಸಿದರು.

1869ರಲ್ಲಿ ಮುಂಬಯಿಗೆ ಹಿಂದಿರುಗಿದಾಗ ದಾದಾಭಾಯಿಯವರಿಗೆ ವೀರೋಚಿತ ಸ್ವಾಗತ ದೊರೆಯಿತು; 20 ಸಾವಿರ ರೂಪಾಯಿ ನಿಧಿ ಅರ್ಪಿಸಲ್ಪಟ್ಟಿತು.

1873ರಲ್ಲಿ ದಾದಾಭಾಯಿ ನವರೋಜಿ ಪುನಃ ಇಂಗ್ಲೆಂಡಿಗೆ ಹೋದರು. ಬ್ರಿಟಿಷ್ ಆಡಳಿತದಿಂದ ಭಾರತದ ಆರ್ಥಿಕ ಸುಲಿಗೆ ಆಗುತ್ತಿದೆ ಎಂದು ಪಾರ್ಲಿಮೆಂಟಿನ ಸಮಿತಿಯ ಮುಂದೆ ಪ್ರತಿಪಾದಿಸಿದರು. ಆ ಪ್ರತಿಪಾದನೆಯನ್ನು ಮುಂದಿಡುವ ಅವರ ಪ್ರಸಿದ್ಧ ಗ್ರಂಥ, 'ಭಾರತದಲ್ಲಿ ಬ್ರಿಟಿಷ್ ಆಡಳಿತ ಮತ್ತು ಬಡತನ'.

ಭಾರತಕ್ಕೆ ಹಿಂದಿರುಗಿದ ಅನಂತರ 1874ರಲ್ಲಿ ಬರೋಡಾ (ಬಡೋದೆ) ಸಂಸ್ಥಾನದ ಪ್ರಧಾನಮಂತ್ರಿ ಆಗಿ ನೇಮಕಗೊಂಡರು. ಅಲ್ಲಿನ ಬ್ರಿಟಿಷ್ ರೆಸಿಡೆಂಟನೊಡನೆ ಉಂಟಾದ ಭಿನ್ನಾಭಿಪ್ರಾಯದಿಂದ ಆ ಅಧಿಕಾರಕ್ಕೆ ರಾಜಿನಾಮೆ ಕೊಟ್ಟರು. ಮುಂಬಯಿಯಲ್ಲಿ ನೆಲೆಸಿ ತಮ್ಮ ರಾಜಕೀಯ ಚಟುವಟಿಕೆಯನ್ನು ಮುಂದುವರಿಸಿದರು. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಸ್ಥಾಪನೆ ಆದ ವರ್ಷವೇ (1885) ಮುಂಬಯಿ ಶಾಸನ ಮಂಡಲಿಯ ಸದಸ್ಯರಾಗಿ ನೇಮಿಸಲ್ಪಟ್ಟರು.

ಭಾರತೀಯ ಹಿತಾಸಕ್ತಿಗಳನ್ನು ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ಪ್ರತಿನಿಧಿಸಬೇಕೆಂಬ ಆಸೆಯಿಂದ 1886ರಲ್ಲಿ ಇಂಗ್ಲೆಂಡಿಗೆ ಹಿಂದಿರುಗಿ ಚುನಾವಣೆಗೆ ನಿಂತರು. ಆದರೆ ಒಂದೇ ಒಂದು ಮತದಿಂದ ಸೋಲಾಯಿತು. ಅದೇ ವರ್ಷ ಕಲ್ಕತ್ತಾ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷರಾಗಿ ಗೌರವಿಸಲ್ಪಟ್ಟರು. 1892ರಲ್ಲಿ ಮತ್ತೆ ಬ್ರಿಟಿಷ್ ಪಾರ್ಲಿಮೆಂಟ್ ಚುನಾವಣೆಗೆ ನಿಂತು ಗೆದ್ದರು. ಮರುವರ್ಷ ಲಾಹೋರ್ ಕಾಂಗ್ರೆಸ್ ಅಧಿವೇಶನಕ್ಕೆ ಅಧ್ಯಕ್ಷರಾದರು. 1904ರಲ್ಲಿ ಆಮ್‌ಸ್ಟರ್‌ಡಾಮಿನಲ್ಲಿ ಜರಗಿದ ಅಂತರರಾಷ್ಟ್ರೀಯ ಸೋಷಲಿಸ್ಟ್ ಸಮ್ಮೇಳನದಲ್ಲಿ ಭಾಗವಹಿಸಿ ಭಾರತದ ಜನತೆಯ ಆರ್ಥಿಕ ದುಃಸ್ಥಿತಿಯನ್ನು ವಿವರಿಸಿದರು.

1906ರಲ್ಲಿ ಜರಗಿದ ಕಲ್ಕತ್ತಾ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷರಾದರು. ಅವರು ಕಾಂಗ್ರೆಸ್ ಅಧ್ಯಕ್ಷರಾದದ್ದು ಅದು ಮೂರನೆಯ ಸಲ. ಆ ಸಂದರ್ಭದಲ್ಲಿ ಭಾರತಕ್ಕೆ 'ಸ್ವರಾಜ್ಯ' ಮಂತ್ರವನ್ನು ಬೋಧಿಸಿದರು.

1916ರಲ್ಲಿ 91 ವಯಸ್ಸಿನ ದಾದಾಭಾಯಿಯವರಿಗೆ ಮುಂಬಯಿ ವಿಶ್ವವಿದ್ಯಾನಿಲಯ ಗೌರವ ಡಾಕ್ಟರೇಟ್ ನೀಡಿತು. 1917 ಜೂನ್ 30ರಂದು ಈ 'ಭಾರತ ಪಿತಾಮಹ' ನಿಧನರಾದರು.

ನೋಡಿ : ಸ್ವರಾಜ್ಯ

ದಾಮೋದರ

ಮಳೆಗಾಲದಲ್ಲಿ ಇದರಲ್ಲಿ ಇದ್ದಕ್ಕಿದ್ದಂತೆ ಮಹಾಪೂರ ಬರುತ್ತದೆ. ಕೆಲವೊಮ್ಮೆ ಇದು ತನ್ನ ಪಾತ್ರವನ್ನು ಬದಲಿಸಿ ಹಲವಾರು ಹಳ್ಳಿಗಳನ್ನು ಮುಳುಗಿಸಿಬಿಡುತ್ತದೆ. ವರ್ಷದಲ್ಲಿ ಆರು ತಿಂಗಳು ನದಿಯ ಅಗಲವಾದ ಪಾತ್ರದಲ್ಲಿ ಕಾಣುವುದು ಬರಿಯ ಮರಳು.

—ಇಂಥ ವೈಪರೀತ್ಯಗಳ ನದಿ ದಾಮೋದರ. 'ಶೋಕನದಿ' ಎಂಬ ಅಡ್ಡ ಹೆಸರು ಇದಕ್ಕೆ.

ನೆರೆ ಹಾವಳಿಯನ್ನು ಕಡಮೆ ಮಾಡಿ, ವರ್ಷವಿಡೀ ನೀರಾವರಿ ಅನುಕೂಲ ಪಡೆಯುವ ಉದ್ದೇಶದಿಂದ, ಈ ನದಿಗೆ ಸಂಬಂಧಿಸಿದಂತೆ 1948ರಲ್ಲಿ ಒಂದು ಭಾರೀ ಯೋಜನೆಯನ್ನು ಕೈಗೊಳ್ಳಲಾಯಿತು.



ಬಿಹಾರದ ಛೋಟಾ ನಾಗಪುರ ಪ್ರಸ್ಥಭೂಮಿಯಲ್ಲಿ ದಾಮೋದರ ನದಿ ಹುಟ್ಟುತ್ತದೆ. ಅಲ್ಲಿಂದ ಪೂರ್ವಕ್ಕೆ ಹರಿಯುವಾಗ ಬರಾಕಾರ್ ಮತ್ತು ಕೋನಾರ್‌ಗಳೆಂಬ ಎರಡು ಪುಟ್ಟ ನದಿಗಳು ಇದನ್ನು ಸೇರಿಕೊಳ್ಳುತ್ತವೆ. ದಾಮೋದರ [illegible] ಮೈಲು ಹರಿದು ಅನಂತರ ಹೂಗ್ಲಿ ನದಿಯನ್ನು ಕೂಡಿಕೊಳ್ಳುತ್ತದೆ. ಹೂಗ್ಲಿ ಜಿಲ್ಲೆಯನ್ನು ತಲಪುವುದಕ್ಕೆ ಮೊದಲು ದಾಮೋದರ ಅನೇಕ ಕವಲುಗಳಾಗಿ ಒಡೆದು, ವಿಶಾಲವಾದ ನದೀಮುಖಜ ಭೂಮಿಯನ್ನು ಉಂಟುಮಾಡಿದೆ.

ಭಾರತದ ಪ್ರಮುಖ ಕಲ್ಲಿದ್ದಲು ಗಣಿ ರಾಣಿಗಂಜ್ ಇರುವುದು ದಾಮೋದರ್ ನದಿ ಕಣಿವೆಯಲ್ಲಿ. ಗಣಿಗಳ ಕಲ್ಲಿದ್ದಲನ್ನು ಪುಟ್ಟ ದೋಣಿಗಳಲ್ಲಿ ತುಂಬಿ, ದಾಮೋದರ ಮತ್ತು ಹೂಗ್ಲಿ ನದಿಗಳ ಮೂಲಕ ಕಲ್ಕತ್ತಾ ಬಂದರಿಗೆ ಸಾಗಿಸುತ್ತಾರೆ.

ದಾಮೋದರ ಕಣಿವೆ ಯೋಜನೆ

ದಾಮೋದರ ಮತ್ತು ಅದರ ಉಪನದಿಗಳು ಮಳೆಯನ್ನು ಅವಲಂಬಿಸಿರುವ ನದಿಗಳು. ಮಳೆಗಾಲದಲ್ಲಿ ಇವುಗಳಲ್ಲಿ ಹುಚ್ಚು ಪ್ರವಾಹ ಉಂಟಾಗಿ ಈ ನದಿಗಳ ಪಾತ್ರಕ್ಕೆ ಸಮೀಪವಾದ ಸ್ಥಳಗಳಲ್ಲಿ ಪ್ರಾಣಹಾನಿಯಾಗುತ್ತಿತ್ತು; ಇತರ ವಿಧವಾದ ನಷ್ಟವೂ ಆಗುತ್ತಿತ್ತು.

ಈ ಪ್ರವಾಹದಿಂದ ಆಗುವ ಕಷ್ಟನಷ್ಟಗಳನ್ನು ತಪ್ಪಿಸುವುದಕ್ಕೋಸ್ಕರ ಸೂಕ್ತ ಕಾರ್ಯಕ್ರಮ ಸೂಚಿಸಲು ಒಂದು ಸಮಿತಿ ನೇಮಕವಾಯಿತು. ನದೀ ಪ್ರವಾಹವನ್ನು ನಿಯಂತ್ರಿಸುವುದರ ಜೊತೆಗೆ ನದಿಯ ನೀರನ್ನು ನೀರಾವರಿ, ವಿದ್ಯುಚ್ಛಕ್ತಿ ಉತ್ಪಾದನೆ ಮುಂತಾದುವುಗಳ ಉಪಯೋಗಕ್ಕೆ ಅಮೆರಿಕ ಸಂಯುಕ್ತ ಸಂಸ್ಥಾನಗಳ ಟೆನೆಸೀ ಕಣಿವೆ ಯೋಜನೆ ಮಾದರಿಯ ಒಂದು ವ್ಯವಸ್ಥೆ ಏರ್ಪಡಿಸಬೇಕು ಎಂದು ಈ ಸಮಿತಿ ಶಿಫಾರಸು ಮಾಡಿತು. ಭಾರತ ಸರಕಾರ ಒಪ್ಪಿತು. 1948 ಜುಲೈ 7ರಂದು ದಾಮೋದರ ಕಣಿವೆ ಕಾರ್ಪೊರೇಷನ್ ಅಸ್ತಿತ್ವಕ್ಕೆ ಬಂದಿತು. ಇದು ಪಶ್ಚಿಮ ಬಂಗಾಳ, ಬಿಹಾರ ಮತ್ತು ಭಾರತ ಸರಕಾರ ಒಟ್ಟುಗೂಡಿ ಕೈಗೊಂಡಿರುವ ಯೋಜನೆ.

ದಾಮೋದರ ಕಣಿವೆಯ ವಿವಿಧೋದ್ದೇಶ ಯೋಜನೆಯಿಂದ ಬಿಹಾರ ಮತ್ತು ಪಶ್ಚಿಮ ಬಂಗಾಳಗಳಿಗೆ ತುಂಬ ಅನುಕೂಲವಾಗಿದೆ. ಭೂಸಾರ ರಕ್ಷಣೆ, ಪ್ರವಾಸೋದ್ಯಮ ಇತ್ಯಾದಿ ಲಾಭಗಳೂ ಈ ಯೋಜನೆಯ ಅಡಕವಾಗಿವೆ.

ಈ ಯೋಜನೆಯಂತೆ ತಿಲೈಯ, ಕೊನಾರ್, ಮೈಥಾನ್ ಮತ್ತು ಪಾಂಚೆಟ್‌ಗಳಲ್ಲಿ ಅಣೆಕಟ್ಟುಗಳನ್ನು ಕಟ್ಟಲಾಗಿದೆ. ಇವುಗಳಲ್ಲೆಲ್ಲ ಪಾಂಚೆಟ್‌ನಲ್ಲಿರುವುದು ಅತಿ ದೊಡ್ಡದು. ಇದನ್ನು ದಾಮೋದರ ನದಿಗೆ ಅಡ್ಡವಾಗಿ ಕಟ್ಟಿದೆ. ಮಿಕ್ಕವನ್ನು ದಾಮೋದರ ನದಿಯ ಉಪನದಿಗಳಾದ ಬರಾಕಾರ್ ಮತ್ತು ಕೋನಾರ್‌ಗಳಿಗೆ ಅಡ್ಡವಾಗಿ ಕಟ್ಟಲಾಗಿದೆ. ಈ ಅಣೆಕಟ್ಟುಗಳು ಸೇರಿ ಒಂದು ಜಾಲ ಏರ್ಪಡುವಂತೆ ರೂಪಿಸಲಾಗಿದೆ.

ನೀರಾವರಿ ಕಾರ್ಯಗಳಿಗಾಗಿ ದುರ್ಗಾಪುರ ಒಡ್ಡನ್ನು 1955ರ ಆಗಸ್ಟ್‌ನಲ್ಲೂ ಇದಕ್ಕೆ ಸಂಬಂಧಿಸಿದ ಇತರ ಸ್ಥಾವರಗಳನ್ನು 1958ರ ವೇಳೆಗೆ ಮುಗಿಸಲಾಯಿತು. ಇದರಿಂದ 10.26.000 ಎಕರೆ ಜಮೀನು ಸಾಗುವಳಿಗೆ ಅನುಕೂಲವಾಗುತ್ತದೆ. 1964–65ರಲ್ಲಿ ಈ ಒಡ್ಡು ಮತ್ತು ನೀರಾವರಿ ವ್ಯವಸ್ಥೆಗಳ ಕಾರ್ಯಭಾರ ಮತ್ತು ಸಂರಕ್ಷಣೆಯನ್ನು ಪಶ್ಚಿಮ ಬಂಗಾಲ ಸರಕಾರಕ್ಕೆ ವಹಿಸಿಕೊಡಲಾಯಿತು.

ಈ ಯೋಜನೆಯ ವಿದ್ಯುತ್ ವ್ಯವಸ್ಥೆ ಇಡೀ ದೇಶದಲ್ಲೇ ದೊಡ್ಡದು. ಇದರಲ್ಲಿ 1.061 ಮೆಗಾವಾಟ್‌ನಷ್ಟು ವಿದ್ಯುತ್ ಈಗಾಗಲೇ ಉತ್ಪಾದನೆಯಾಗುತ್ತಿದೆ. ಯೋಜನೆ ಪೂರ್ಣಗೊಂಡಾಗ ಉತ್ಪಾದನೆ ಇನ್ನೂ ಹೆಚ್ಚುತ್ತದೆ. ಜೆಮ್‌ಷೆಡ್‌ಪುರ, ದುರ್ಗಾಪುರ, ಚಕ್ರಪುರ ಮುಂತಾದ ಸ್ಥಳಗಳಲ್ಲಿರುವ ಭಾರೀ ಕೈಗಾರಿಕೆಗಳು ಇದರ ಉಪಯೋಗ ಪಡೆಯುತ್ತಿವೆ.

ದಾರಾ ಷುಕೋ

ಸುಪ್ರಸಿದ್ಧ ಮೊಘಲ್ ಚಕ್ರವರ್ತಿ ಷಾಜಹಾನನ ಹಿರಿಯ ಮಗ ದಾರಾ ಷುಕೋ. ಚಕ್ರವರ್ತಿಗೆ ಇವನ ಮೇಲೆ ತುಂಬ ಪ್ರೀತಿ. ಷಾ ಜಹಾನ್ ಕಾಂದಹಾರವನ್ನು ವಶಪಡಿಸಿಕೊಳ್ಳಲು ಎರಡು ಬಾರಿ ವಿಫಲನಾದ ಮೇಲೆ 1653ರಲ್ಲಿ, ದಾರಾ ಷುಕೋನನ್ನು ದಾಳಿ ನಡೆಸಲು ಕಳುಹಿಸಿದ. ಆದರೆ ಈ ಬಾರಿಯೂ ಮೊಘಲರಿಗೆ ಸೋಲಾಯಿತು. ಈ ಸೋಲು ದಾರಾನ



ಪಾಂಡಿತ್ಯ, ವೈರಾಗ್ಯ : ದಾರಾ

ತುಂಬ ಪರಿಣಾಮ ಉಂಟುಮಾಡಿತು. ಅವನಲ್ಲಿ ವೈರಾಗ್ಯ ಭಾವ ತಲೆದೋರಿತು. ಇದನ್ನು ತಿಳಿದ ಒಬ್ಬ ಸ್ನೇಹಿತ ದಾರಾನಿಗೆ ಬಾಬಾ ಲಾಲ್ ಎಂಬ ಬೈರಾಗಿಯ ಪರಿಚಯ ಮಾಡಿಕೊಟ್ಟ. ಅವನಿಂದ ದಾರಾ ಅದ್ವೈತ ವೇದಾಂತದ ಬಗೆಗೆ ಅರಿತ.

ಕಾಂದಹಾರಿನಿಂದ ದೆಹಲಿಗೆ ಹಿಂದಿರುಗಿದ ಮೇಲೆ ದಾರಾ ಕಾಶಿಯಿಂದ ಪಂಡಿತರನ್ನು ಬರಮಾಡಿಕೊಂಡು ಉಪನಿಷತ್ತಿನ ಅಧ್ಯಯನ ಆರಂಭಿಸಿದ. 1655ರಲ್ಲಿ 'ಮಜಮಾ–ಉಲ್–ಬಹರೈನ್'–ಎರಡು ಸಮುದ್ರಗಳ ಸಂಗಮ –ಎಂಬ ಪುಸ್ತಕವನ್ನು ಬರೆದ. ಭಾರತೀಯ ಮತ್ತು ಇಸ್ಲಾಂ ಧರ್ಮಗಳಲ್ಲಿ ಸಾಮಾನ್ಯವಾಗಿರುವ ಸಿದ್ಧಾಂತಗಳ ನಿರೂಪಣೆ ಈ ಗ್ರಂಥದಲ್ಲಿದೆ. ಉಪನಿಷತ್ತುಗಳನ್ನು ಪಾರಸಿ ಭಾಷೆಗೆ ತರ್ಜುಮೆ ಮಾಡಿದ್ದು ದಾರಾನ ಮಹತ್ತರ ಸಾಧನೆ. ಇದಲ್ಲದೆ ಇವನು 'ಯೋಗ ವಾಸಿಷ್ಠ', 'ಭಗವದ್ಗೀತೆ'ಗಳನ್ನೂ ಪಾರಸಿ ಭಾಷೆಗೆ ಅನುವಾದಿಸಿದ. ಪೆರೋ ಎಂಬ ಫ್ರೆಂಚ್ ವಿದ್ವಾಂಸ ಉಪನಿಷತ್ತುಗಳ ಪಾರಸಿ ಅನುವಾದವನ್ನು ಓದಿ ಪ್ರಭಾವಿತನಾದ. ಅದನ್ನು ಫ್ರೆಂಚ್ ಮತ್ತು ಲ್ಯಾಟಿನ್ ಭಾಷೆಗಳಿಗೆ ಆತ ಅನುವಾದಮಾಡಿದ.

ಅರಬಿ, ಸಂಸ್ಕೃತ ಮತ್ತು ಪಾರಸಿ ಭಾಷೆಗಳಲ್ಲಿ ದಾರಾ ಪಾಂಡಿತ್ಯ ಗಳಿಸಿದ್ದ. ಈತನ ಕೃತಿಗಳು ಪಾರಸಿ ಸಾಹಿತ್ಯದ ಮೇರುಕೃತಿಗಳಾಗಿವೆ.

ದಾರಾ ಹಿಂದೂಗಳ ತತ್ತ್ವವಿಚಾರದಲ್ಲಿ ಅಪಾರ ಆಸಕ್ತಿ ತೋರಿದನಾದರೂ ಅವನು ನಿಷ್ಠಾವಂತ ಮಹಮ್ಮದೀಯನಾಗಿದ್ದ ; ಸೂಫಿ ಪಂಥದ ಅನುಯಾಯಿಯಾಗಿದ್ದ. ಹಿಂದೂಧರ್ಮಗ್ರಂಥಗಳನ್ನಲ್ಲದೆ, ಬೈಬಲ್, ಟಾಲ್ಮುಡ್‌ಗಳನ್ನೂ ಅವನು ಅಧ್ಯಯನ ಮಾಡಿದ್ದ. ದಾರಾನ ಈ ಉದಾರ ನೀತಿ ಸ್ವಮತ ಪಕ್ಷಪಾತಿಗಳಾಗಿದ್ದ ಮುಸಲ್ಮಾನರಿಗೆ ಸರಿಬೀಳಲಿಲ್ಲ. ಅವರು ಅವನ ವಿರೋಧಿಗಳಾದರು. ದಾರಾನ ತಮ್ಮ ಔರಂಗಜೇಬ್ ಈ ಪರಿಸ್ಥಿತಿಯ ಲಾಭ ಪಡೆದು, ಅಣ್ಣನ ಮೇಲೆ ಹೋರಾಟ ನಡೆಸಿ, ಅವನನ್ನು ಸೆರೆಹಿಡಿದು ಕೊಲ್ಲಿಸಿದ. ಆ ಮೂಲಕ ಸೂಫಿ ಪಂಥದ ಮೇಲೂ ಅವನು ಖಡ್ಗ ಹಿರಿದಂತಾಯಿತು.

ದಾಸ ಸಾಹಿತ್ಯ

ನೋಡಿ : ಸಂಪುಟ ೫

ದ್ರಾವಿಡ ಮುನ್ನೇಟ್ರ ಕಜಗಂ

ತಮಿಳುನಾಡಿನ ಪ್ರಮುಖ ರಾಜಕೀಯ ಪಕ್ಷ ದ್ರಾವಿಡ ಮುನ್ನೇಟ್ರ ಕಜಗಂ. ಇದರ ಸ್ಥಾಪಕರು ದಿವಂಗತ ಸಿ.ಎನ್. ಅಣ್ಣಾದುರೈ. ಇವರು ಹಿಂದೆ ಇ.ವಿ. ರಾಮಸ್ವಾಮಿ ನಾಯಕರ್ ಅವರು ಸಂಘಟಿಸಿದ ದ್ರಾವಿಡ ಕಜಗಮಿನ ಸದಸ್ಯರಾಗಿದ್ದರು. ಇದರ ನಾಯಕರೊಡನೆ ಭಿನ್ನಾಭಿಪ್ರಾಯಗಳುಂಟಾದ ಮೇಲೆ, ಅಣ್ಣಾದುರೈ ದ್ರಾವಿಡ ಮುನ್ನೇಟ್ರ ಕಜಗಂ ಸ್ಥಾಪಿಸಿದರು. ಈ ಪಕ್ಷ 1967ರಲ್ಲಿ ಸಾರ್ವತ್ರಿಕ ಚುನಾವಣೆಯಲ್ಲಿ ವಿಜಯ ಗಳಿಸಿ ಮದರಾಸು ರಾಜ್ಯದಲ್ಲಿ ಮಂತ್ರಿಮಂಡಲವನ್ನು ರಚಿಸಿತು. 1971ರಲ್ಲಿ ನಡೆದ ಮಧ್ಯಂತರ ಸಾರ್ವತ್ರಿಕ ಚುನಾವಣೆಯಲ್ಲಿಯೂ ಜಯಗಳಿಸಿ ಅಧಿಕಾರದಲ್ಲಿ ಮುಂದುವರಿಯಿತು.

ದ್ರಾವಿಡ ಮುನ್ನೇಟ್ರ ಕಜಗಂ ಪಕ್ಷದ ಸಂಕ್ಷಿಪ್ತನಾಮ –ಡಿ.ಎಂ.ಕೆ. ಅಣ್ಣಾದುರೈ ಅವರ ಅನಂತರ ಡಿ.ಎಂ.ಕೆ. ಮುಂದಾಳು, ಎಂ. ಕರುಣಾನಿಧಿ.

1972ರ ಅಕ್ಟೋಬರ್ ತಿಂಗಳಲ್ಲಿ ಹೆಸರಾಂತ ತಮಿಳುನಟ ಹಾಗೂ ರಾಜಕಾರಣಿ ಎಂ. ಜಿ. ರಾಮಚಂದ್ರನ್ ಅವರನ್ನು ಡಿ. ಎಂ. ಕೆ. ಪಕ್ಷದಿಂದ ಹೊರಹಾಕಿದಾಗ, ಈ ಪಕ್ಷದಲ್ಲಿ ಒಡಕುಹುಟ್ಟಿತು. ಎಂ. ಜಿ. ರಾಮಚಂದ್ರನ್ ಅವರಿಂದ ಅಣ್ಣಾ ದ್ರಾವಿಡ ಮುನ್ನೇಟ್ರ ಕಜಗಂ —ಎ. ಡಿ. ಎಂ. ಕೆ. ಸ್ಥಾಪಿತವಾಯಿತು.

ನೋಡಿ : ಅಣ್ಣಾದುರೈ ; ಇ. ವಿ. ರಾಮಸ್ವಾಮಿ ನಾಯಕರ್

ದ್ರಾವಿಡರು

ಭಾರತದ ಎರಡು ಮುಖ್ಯ ಪ್ರಾಚೀನ ಜನಾಂಗಗಳು ಆರ್ಯರು ಹಾಗೂ ದ್ರಾವಿಡರು.

ದ್ರಾವಿಡರು ಆರ್ಯರಿಗಿಂತ ಹಿಂದೆ ನಮ್ಮ ದೇಶದಲ್ಲಿದ್ದವರು. ದ್ರಾವಿಡರು ಮೆಡಿಟರೇನಿಯನ್ ಮೂಲದವರೆಂದೂ ಸುಮಾರು 6–7 ಸಾವಿರ ವರ್ಷಗಳ ಕೆಳಗೆ ಅವರು ನಮ್ಮ ದೇಶಕ್ಕೆ ಬಂದು [illegible] ಜನರಿದ್ದ ಪ್ರದೇಶವನ್ನು ಆಕ್ರಮಿಸಿಕೊಂಡು ನೆಲೆಯೂರಿದರೆಂದೂ ಹೇಳಲಾಗಿದೆ. ಆರ್ಯರು ಬಂದ ಮೇಲೆ ದ್ರಾವಿಡರೊಡನೆ ಹೋರಾಟವಾಗಿ ದ್ರಾವಿಡರು ಬಹುಮಟ್ಟಿಗೆ ದಕ್ಷಿಣಕ್ಕೆ ಸಾಗಿದರು. ಈಗಿನ ಕನ್ನಡ, ತಮಿಳು, ತೆಲುಗು, ಮಲಯಾಳಂ – ಈ ಮುಖ್ಯ ದ್ರಾವಿಡ ಭಾಷೆಗಳಿಗೆ ಮೂಲವಾದ ಒಂದು ಭಾಷೆ ಇವರದಾಗಿತ್ತು ಎಂದು ನಂಬಿಕೆ.

ದ್ರಾವಿಡರು ಸಾಹಸಿಗಳು ; ನಾಗರಿಕರು. ಅವರು ನಮ್ಮ ದೇಶಕ್ಕೆ ಬಂದಾಗಲೇ ಲೋಹಗಳ ಉಪಯೋಗ ತಿಳಿದಿದ್ದರು. ನಗರ ಕಟ್ಟಿ

ಪ್ರಾಚೀನ ತಮಿಳು ಪ್ರದೇಶದ ಕಲ್ಪನಾ ಮೃಗ : 'ಯಾಳಿ'



'ಸಮ್ರಾಟ್ ಚಂದ್ರಗುಪ್ತ,' 'ಜಗದ್ಗುರು ಶಂಕರಾಚಾರ್ಯ,' 'ಪಿ ಬುಕ್ ಆಫ್ ಹ್ಯೂಮನಿಸಮ್,' 'ಭಾರತೀಯ ಅರ್ಥನೀತಿ' ಇವು ಅವರ ಕೃತಿಗಳು.

ಜನಸಂಘದ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡ ಒಂದೂವರೆ ತಿಂಗಳಲ್ಲಿ, 1968 ಫೆಬ್ರವರಿ 11ರಂದು. ರೈಲುಪ್ರಯಾಣ ಮಾಡುತ್ತಿದ್ದಾಗ, ಅವರಿಗೆ ಅಪಮೃತ್ಯು ಸಂಭವಿಸಿತು. ಆಗ ಅವರಿಗೆ 51 ವರ್ಷ ವಯಸ್ಸು.

ದೀಪಾವಳಿ

ಹಬ್ಬಗಳಲ್ಲೆಲ್ಲ ಹೆಚ್ಚು ಸಡಗರ ಸಂಭ್ರಮ ಕಾಣಬರುವುದು ದೀಪಾವಳಿಯಲ್ಲಿ. ಎಣ್ಣೆನೀರು, ಹೊಸ ಬಟ್ಟೆ, ದೇವರ ಪೂಜೆ, ಪಟಾಕಿ, ಬಾಣ–ಬಿರುಸು, ದೀಪಾಲಂಕಾರ, ಹೊಸ ಅಳಿಯನನ್ನು ಹಬ್ಬಕ್ಕೆ ಬರಮಾಡಿಕೊಂಡು ಆದರಿಸುವುದು ದೀಪಾವಳಿಯ ವಿಶೇಷ.

ಮುಂಗಾರು ಬೆಳೆ ಕುಯಿಲಿಗೆ ಬರುವ ಕಾಲದಲ್ಲಿ ಈ ಹಬ್ಬ ಬರುತ್ತದೆ. ಅಶ್ವಯುಜ ಮಾಸದ ಕೊನೆಯ ಎರಡು ದಿನಗಳು ಹಾಗೂ ಕಾರ್ತಿಕ ಮಾಸದ ಮೊದಲನೆಯ ದಿನ ಹಬ್ಬ ನಡೆಯುತ್ತದೆ. ಕೆಲವು ಕಡೆ ಮುಂದಿನ ಎರಡು ದಿವಸಗಳನ್ನೂ ಸೇರಿಸಿಕೊಂಡು 5 ದಿನ ಹಬ್ಬ ಮಾಡುತ್ತಾರೆ. ಉತ್ತರ ಭಾರತದಲ್ಲಿ ಇದನ್ನು ದೀವಾಲೀ ಎಂದು ಕರೆಯುತ್ತಾರೆ.

ದೀಪಾವಳಿಗೆ ಎರಡು ದಿನ ಮೊದಲು ನೀರು ತುಂಬುವ ಹಬ್ಬ. ಮರುದಿನ ನರಕ ಚತುರ್ದಶಿ—ನರಕಾಸುರ ಎಂಬ ರಾಕ್ಷಸನನ್ನು ಕೃಷ್ಣ ಸಂಹರಿಸಿ, ಲೋಕಕ್ಕೆಲ್ಲ ಹರ್ಷವನ್ನುಂಟುಮಾಡಿದ ಸ್ಮರಣೆಯ ದಿನ. ಅಮಾವಾಸ್ಯೆಯ ದಿನ ದೀಪಾವಳಿ, ಲಕ್ಷ್ಮೀಪೂಜೆ. ಮರುದಿನ ಬಲಿಪಾಡ್ಯಮಿ. ವಾಮನನಿಂದ ಪಾತಾಳಕ್ಕೆ ತುಳಿಯಲ್ಪಟ್ಟ ಬಲೀಂದ್ರ ಆ ದಿನ ಭೂಮಿಗೆ ಬರುವನೆಂಬ ನಂಬಿಕೆಯೇ ಬಲಿಪಾಡ್ಯಮಿ ಆಚರಣೆಯ ಮೂಲ. ಅಂದು ಸಂಜೆ ಬಲೀಂದ್ರನ ಪೂಜೆ ನಡೆಯುತ್ತದೆ. ಐದು ದಿನ ಹಬ್ಬ ಮಾಡುವವರು ನಾಲ್ಕನೆಯ ದಿನ 'ಬಂಧು ದ್ವಿತೀಯೆ' ಆಚರಿಸುತ್ತಾರೆ. ಅಂದು ಅಣ್ಣತಮ್ಮಂದಿರು ಸಹೋದರಿಯ ಮನೆಗೆ ಊಟಕ್ಕೆ ಹೋಗುತ್ತಾರೆ. ಐದನೆಯ ದಿನ 'ಭಗಿನೀ ತೃತೀಯೆ.' ಅಣ್ಣ ತಮ್ಮಂದಿರು ಸಹೋದರಿಯನ್ನು ಕರೆದು ಹಬ್ಬದೂಟ ಮಾಡಿಸಿ, ಉಡುಗೊರೆ ಕೊಡುತ್ತಾರೆ.

ಬಂಗಾಳದಲ್ಲಿ ದೀಪಾವಳಿಯಲ್ಲಿ ಕಾಳೀಪೂಜೆ ನಡೆಯುತ್ತದೆ.

ದೀಪಾವಳಿಯ ದಿನ ತಾನು ಸೆರೆಯಲ್ಲಿಟ್ಟಿದ್ದ ಗುರು ಹರಗೋಬಿಂದರನ್ನು ಜಹಾಂಗೀರ್ ಬಿಡುಗಡೆ ಮಾಡಿದ. ಸಿಕ್ಖರು ಆ ದಿನ ಅಮೃತಸರದಲ್ಲಿರುವ ಸ್ವರ್ಣ ಮಂದಿರಕ್ಕೆ ಭೇಟಿಕೊಟ್ಟು, ಅಲ್ಲಿರುವ ಕೊಳದಲ್ಲಿ ಸ್ನಾನ ಮಾಡುತ್ತಾರೆ.

ಜೈನರಿಗೂ ದೀಪಾವಳಿ ಪವಿತ್ರ ದಿನ; ಮತಸ್ಥಾಪಕ ಮಹಾವೀರ ನಿರ್ವಾಣ ಹೊಂದಿದ ದಿನ ಅದು. ಗುಜರಾತದಲ್ಲಿ ದೀಪಾವಳಿಯಂದ ಹೊಸ ವರ್ಷ ಆರಂಭವಾಗುತ್ತದೆ.

ನೇಪಾಳದಲ್ಲಿ ದೀಪಾವಳಿ 5 ದಿವಸ ನಡೆಯುತ್ತದೆ.


ವ್ಯಾಪಾರಿಗಳು ದೀಪಾವಳಿಯಂದು ತಮ್ಮ ಲೆಕ್ಕವನ್ನು ಮುಗಿಸಿ, ಹೊಸ ಲೆಕ್ಕ ಆರಂಭಿಸುತ್ತಾರೆ.

ಮಹಾವೀರನು ಪ್ರತಿಷ್ಠೆ ದಿನ ದೀಪಾವಳಿ ಎಂದು ಕೆಲವರ ನಂಬಿಕೆ.

ದುರ್ಗಾದಾಸ್

ದುರ್ಗಾದಾಸ್ ಭಾರತದ ಪತ್ರಿಕೋದ್ಯಮ ಕ್ಷೇತ್ರದಲ್ಲಿ ಅತ್ಯಂತ ಹೆಸರಾಂತರಾದವರು.

ಜನನ 1900 ನವೆಂಬರ್ 23ರಂದು. ಜಲಂಧರ್, ಲಾಹೋರ್‌ನಲ್ಲಿ ವಿದ್ಯಾಭ್ಯಾಸ. 'ಸ್ಟೇಟ್ಸ್‌ಮನ್'ನ ವಿಶೇಷ ಪ್ರತಿನಿಧಿಯಾಗಿದ್ದರು. 'ಹಿಂದೂಸ್ಥಾನ್ ಟೈಮ್ಸ್'ನಲ್ಲಿ ಸಹಸಂಪಾದಕರಾಗಿ, ಅನಂತರ ಪ್ರಧಾನ ಸಂಪಾದಕರಾದರು. 1959ರಲ್ಲಿ 'ಇಂಡಿಯಾ ನ್ಯೂಸ್ ಅಂಡ್ ಫೀಚರ್ ಅಲಯನ್ಸ್ (ಇನ್ಫಾ)' ಸಂಸ್ಥೆಯನ್ನು ದುರ್ಗಾದಾಸ್ ಸ್ಥಾಪಿಸಿದರು. ಈ ಸಂಸ್ಥೆ ಆರಂಭಿಸಿದ 'ಸ್ಟೇಟ್ಸ್' ಪತ್ರಿಕೆಗೆ ಅವರು ಪ್ರಧಾನ ಸಂಪಾದಕರು.



ಯುದ್ಧ ಬಾತ್ಮೀದಾರರಾಗಿ 1945ರಲ್ಲಿ ಮಧ್ಯಪ್ರಾಚ್ಯ, ಇಟಲಿ ಮತ್ತು ಇಂಗ್ಲೆಂಡ್‌ಗೆ ಭೇಟಿಕೊಟ್ಟರು. ಸಂಸದೀಯ ಬಾತ್ಮೀದಾರರಾಗಿದ್ದರು; ಹಾಗೂ ಅಸೋಸಿಯೇಟೆಡ್ ಪ್ರೆಸ್‌ನ ಸಂಪಾದಕರಾಗಿದ್ದರು.

ದುರ್ಗಾದಾಸರು 1950ರಲ್ಲಿ ಅಟವದಲ್ಲಿ ನಡೆದ ಕಾಮನ್‌ವೆಲ್ತ್ ಪ್ರೆಸ್ ಕಾನ್ಫರೆನ್ಸ್‌ಗೆ ಭಾರತದ ಪ್ರತಿನಿಧಿಯಾಗಿ ಹೋಗಿದ್ದರು. ಸಣ್ಣ ಪ್ರಮಾಣದ ಪತ್ರಿಕೆಗಳನ್ನು ಕುರಿತ ವಿಚಾರಣಾ ಸಮಿತಿಯ ಸದಸ್ಯರಾಗಿದ್ದರು. ಇವರು ಪ್ರೆಸ್ ಕ್ಲಬ್ ಆಫ್ ಇಂಡಿಯಾದ ಸಂಸ್ಥಾಪಕ ಸದಸ್ಯರು.

ಇವರು ಮೂರು ಬಾರಿ ಪ್ರಪಂಚ ಪರ್ಯಟನೆ ಮಾಡಿದ್ದಾರೆ.

'ಇಂಡಿಯಾ ಅಂಡ್ ದಿ ವರ್ಲ್ಡ್,' 'ರಾಮರಾಜ್ಯ ಇನ್ ಆಕ್ಷನ್,' 'ಇಂಡಿಯಾ ಫ್ರಂ ಕರ್ಜನ್ ಟು ನೆಹರೂ ಅಂಡ್ ಆಫ್ಟರ್' ಮೊದಲಾದ ಗ್ರಂಥಗಳನ್ನು ಬರೆದಿದ್ದಾರೆ.

ದುರ್ಗಾದಾಸ್ ರಾಥೋಡ್

ಮೇವಾಡದ ರಾಜಾ ಜಸವಂತಸಿಂಗ್ ಹತನಾಗಿದ್ದ. ಆತನ ರಾಣಿಯರನ್ನೂ ಮಗ ಅಜಿತಸಿಂಗ್‌ನನ್ನೂ ಹಿಡಿಯುವ ಉದ್ದೇಶದಿಂದ ಔರಂಗಜೇಬನ ಸೇನೆ ಬಂದಿತ್ತು. ಆಗ ಯುದ್ಧ ಮಧ್ಯದಲ್ಲಿ ಗೊಂದಲದ ನಡುವೆ ರಾಜಪುತ್ರನನ್ನೂ ರಾಣಿಯರನ್ನೂ ಜೋಧ್‌ಪುರಕ್ಕೆ ಸುರಕ್ಷಿತವಾಗಿ ತಲುಪಿಸಿದ ಸಾಹಸಿ, ದುರ್ಗಾದಾಸ್ ರಾಥೋಡ್. ಇವರೆಲ್ಲ ಜೋಧ್‌ಪುರ ಸೇರಿದ್ದು 1679ರ ಜುಲೈ 23ರಂದು.

ದುರ್ಗಾದಾಸ್ ಜಸವಂತಸಿಂಗನ ಮಂತ್ರಿ ಅಸ್ಕರನ ಪುತ್ರ. "ಮೊಘಲರ ಚಿನ್ನ ಆತನನ್ನು ದುರ್ಮಾರ್ಗಕ್ಕೆ ಎಳೆಯಲಾರದೆ ಹೋಯಿತು. ಆತನ ಅಚಲ ಮನಸ್ಸನ್ನು ಮೊಘಲರ ಶಸ್ತ್ರ ಅಂಜಿಸಲಿಲ್ಲ" —ಇದು ದುರ್ಗಾದಾಸ್ ರಾಥೋಡ್‌ನನ್ನು ಕುರಿತ ಪ್ರಶಂಸೆ.


ತನ್ನ ನಾಡಿನ ರಕ್ಷಣೆಗಾಗಿ, ಒಡೆಯನ ಅಧಿಕಾರ ರಕ್ಷಣೆಗಾಗಿ ದುರ್ಗಾದಾಸ್ 30 ವರ್ಷ ಕಾಲ ಯುದ್ಧನಿರತನಾಗಿದ್ದ. ಔರಂಗಜೇಬನ ಮರಣ

[illegible] ಯುದ್ಧ ನಡೆಯಿತು. ಅನಂತರ ಪಟ್ಟಕ್ಕೆ ಬಂದ ಬಹದ್ದೂರ್ ಷಾ 1709ರಲ್ಲಿ ಅಜಿತಸಿಂಗ್‌ನನ್ನು ಮೇವಾಡದ ರಾಣಾ ಎಂದು ಮಾನ್ಯ ಮಾಡಿದ.

ರಾಥೋಡ್ 'ವೀರಶ್ರೇಷ್ಠ' ಎಂಬ ಹೊಗಳಿಕೆಗೆ ಪಾತ್ರನಾಗಿದ್ದ. ದುರ್ಗಾದಾಸನಲ್ಲಿ ರಜಪೂತ ಸೈನಿಕರ ಕೆಚ್ಚು, ಸಾಹಸಗಳೂ ಮೊಘಲ್ ರಾಜ್ಯ ಸಚಿವರಲ್ಲಿರುವ ವ್ಯವಹಾರ ಕುಶಲತೆ, ಸಂಘಟನಾಶಕ್ತಿಗಳೂ ಮೇಳೈಸಿದ್ದುವು.

ದುರ್ಗಾಪುರ ಉಕ್ಕಿನ ಕಾರಖಾನೆ

ದೆಹಲಿಗೆ ಹೋಗುವ ಗ್ರಾಂಡ್ ಟ್ರಂಕ್ ರಸ್ತೆಯಲ್ಲಿ ಕಲ್ಕತ್ತೆಯಿಂದ ಸುಮಾರು 176 ಕಿ.ಮೀ. ಹೋದರೆ ದುರ್ಗಾಪುರ ಉಕ್ಕಿನ ಕಾರಖಾನೆ



[illegible] : ದುರ್ಗಾಪುರ ಉಕ್ಕಿನ ಕಾರಖಾನೆ

ಸಿಗುತ್ತದೆ. ಇದು ಪಶ್ಚಿಮ ಬಂಗಾಳದ ಬರ್ದ್ವಾನ್ ಜಿಲ್ಲೆಯಲ್ಲಿದೆ. ಕಾರಖಾನೆ ಹಿಂದೂಸ್ತಾನ್ ಸ್ಟೀಲ್ ಲಿಮಿಟೆಡ್ ಸಂಸ್ಥೆಯ ಆಡಳಿತಕ್ಕೊಳಪಟ್ಟಿದೆ.

ರಾಷ್ಟ್ರದ ಉಕ್ಕಿನ ಅವಶ್ಯಕತೆಯನ್ನು ಪೂರೈಸಲು ಭಾರತ ಸರಕಾರ ಹದಿಮೂರು ಪ್ರಖ್ಯಾತ ಬ್ರಿಟಿಷ್ ಸಂಸ್ಥೆಗಳ ನೆರವಿನಿಂದ ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಈ ಕಾರಖಾನೆಯನ್ನು ಸ್ಥಾಪಿಸಿತು. [illegible] ಕಬ್ಬಿಣದ ತಯಾರಿಕೆ 1959ರ ಡಿಸೆಂಬರ್‌ನಲ್ಲೂ ಉಕ್ಕಿನ ತಯಾರಿಕೆ 1960ರ ಏಪ್ರಿಲ್‌ನಲ್ಲೂ ಆರಂಭವಾಯಿತು.

ಕಾರಖಾನೆಗೆ ಅಗತ್ಯವಾದ ಕಬ್ಬಿಣದ ಅದಿರು ಒರಿಸ್ಸಾದ ಗುವ ಎಂಬ ಸ್ಥಳದಿಂದ ಬರುತ್ತದೆ. ಝರಿಯಾ ಗಣಿಗಳಿಂದ ಸರಬರಾಜಾಗುವ ಕಲ್ಲಿದ್ದಲನ್ನು ಇಲ್ಲಿ ಸಂಸ್ಕರಿಸಿ ಬಳಸುತ್ತಾರೆ. ದಾಮೋದರ ನದಿ ಈ ಕಾರಖಾನೆಗೆ ನೀರನ್ನು ಪೂರೈಸುತ್ತದೆ. ದಾಮೋದರ ಕಣಿವೆ ಕಾರ್ಪೊರೇಷನ್‌ನ ಉಷ್ಣ ವಿದ್ಯುತ್ ಕೇಂದ್ರದಿಂದ ವಿದ್ಯುತ್ ಸರಬರಾಜು ಆಗುತ್ತದೆ.

ಈ ಕಾರಖಾನೆಯಲ್ಲಿ 234 ಕೋಕ್ ಒಲೆಗಳು. ದಿನಕ್ಕೆ 1,250 ಟನ್ ಉತ್ಪಾದನಾ ಸಾಮರ್ಥ್ಯದ ಮೂರು ಕುಲುಮೆಗಳು ಇವೆ. ಉಕ್ಕಿನ ತಯಾರಿಕೆಗೆ 200 ಟನ್ ಸಾಮರ್ಥ್ಯದ ಏಳು ಮತ್ತು 80 ಟನ್ ಸಾಮರ್ಥ್ಯದ ಒಂದು ಸಾಂಪ್ರದಾಯಿಕ ತೆರೆದೊಲೆಯ ಕುಲುಮೆಗಳು ಇವೆ. ಮಿಶ್ರ ಉಕ್ಕಿನ ತಯಾರಿಕೆಗೆ ಸೂಕ್ತ ಏರ್ಪಾಟಿದೆ. [illegible] ತಯಾರಾಗುತ್ತದೆ.

ಇಲ್ಲಿ ಮುಖ್ಯವಾಗಿ ಹಗುರ ಹಾಗೂ ಮಧ್ಯಮ ತರಗತಿಯ ಪಿಂಡಗಳು ಮತ್ತು ರೈಲ್ವೆಗೆ ಅಗತ್ಯವಾದ ಚಕ್ರ, ದಂಡ ಮುಂತಾದ ಭಾಗಗಳು ತಯಾರಾಗುತ್ತವೆ. ಇವಲ್ಲದೆ ಕಚ್ಚಾ ಟಾರ್, ಅಮೋನಿಯಂ ಸಲ್ಫೇಟ್, ಕಚ್ಚಾ ಬೆಂಜಾಲ್ ಮುಂತಾದ ಉಪವಸ್ತುಗಳೂ ದೊರೆಯುತ್ತವೆ.

ದುರ್ಗಾಬಾಯಿ ದೇಶಮುಖ್

ಶಾಲೆಗೆ ಕಳುಹಿಸಲು ಮನೆಯವರು ಒಪ್ಪದಾಗ ಆಕೆ ಮನೆಯಲ್ಲಿಯೇ ಹಿಂದಿ ಕಲಿತರು. ಮುಂದೆ ಬಾಲಕಿಯರ ಶಾಲೆಯೊಂದನ್ನು ತಾವೇ ಪ್ರಾರಂಭಿಸಿದರು. ಆಕೆಯ ನಿಷ್ಠೆಯನ್ನು ಮೆಚ್ಚಿ ಗಾಂಧೀಜಿ ಚಿನ್ನದ ಪದಕ ಕೊಟ್ಟರು. ಹೀಗೆ ಸ್ವಪ್ರಯತ್ನದಿಂದ ಉನ್ನತಿ ಪಡೆದವರು. ದುರ್ಗಾಬಾಯಿ ದೇಶಮುಖ್.



ಸಮಾಜ ಕಲ್ಯಾಣ : ದುರ್ಗಾಬಾಯಿ

ಜನನ 1909 ಜುಲೈ 15ರಂದು. ಆಂಧ್ರದ ರಾಜಮಹೇಂದ್ರಿಯಲ್ಲಿ. ರಾಜಕೀಯ ಚಟುವಟಿಕೆಯಲ್ಲಿ ಆಸಕ್ತಿಯಿದ್ದ ತಾಯಿಯ ಪ್ರಭಾವದಿಂದ ದುರ್ಗಾಬಾಯಿ ಎಳೆ ವಯಸ್ಸಿನಲ್ಲೇ ರಾಜಕೀಯ ರಂಗವನ್ನು ಪ್ರವೇಶಿಸಿದರು : ಸ್ವಾತಂತ್ರ್ಯ ಚಳುವಳಿಯಲ್ಲಿ ಪಾತ್ರ ವಹಿಸಿದರು. ಉಪ್ಪಿನ ಸತ್ಯಾಗ್ರಹದಲ್ಲಿ 3 ವರ್ಷ ಸೆರೆಮನೆವಾಸವೂ ಆಯಿತು. ಆ ಅವಧಿಯಲ್ಲಿ ತಮ್ಮ ಶಿಕ್ಷಣ ಮುಂದುವರಿಸಿ, ಇಂಗ್ಲಿಷ್ ಕಲಿತರು. ಅನಂತರ ಕಾಲೇಜು ಸೇರಿ ಬಿ.ಎ., ಬಿ.ಎಲ್.. ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿ ಮದರಾಸಿನಲ್ಲಿ ವಕೀಲರಾದರು.

ರಾಜ್ಯಾಂಗ ರಚನಾ ಸಭೆಯ ವಿವಿಧ ಪ್ರಮುಖ ಸಮಿತಿಗಳಲ್ಲಿ ದುರ್ಗಾಬಾಯಿ ಕೆಲಸ ಮಾಡಿದರು. ರಾಜಕೀಯದಂತೆ ಸಮಾಜ ಸೇವೆಯಲ್ಲೂ ದುರ್ಗಾಬಾಯಿಯವರಿಗೆ ಆಸಕ್ತಿ. ಸ್ತ್ರೀಯರ ವಿದ್ಯಾಭ್ಯಾಸವನ್ನು ಕುರಿತ ರಾಷ್ಟ್ರೀಯ ಸಮಿತಿಯ ನಾಯಕತ್ವ, ಕೌನ್ಸಿಲ್ ಫಾರ್ ಸೋಷಿಯಲ್ ಡೆವಲಪ್‌ಮೆಂಟ್‌ನ ನಿರ್ದೇಶಕ ಹುದ್ದೆ ಇವರಿಗೆ ಲಭಿಸಿದ್ದುವು. ಮದರಾಸಿನ ಅಖಿಲ ಭಾರತ ಸಮಾಜ ಕಲ್ಯಾಣ ಮಂಡಲಿಯ ಅಧ್ಯಕ್ಷರಾಗಿ. ಸ್ತ್ರೀಯರ ಮತ್ತು ಮಕ್ಕಳ ಹಿತಸಾಧನೆಗಾಗಿ ವಿಶೇಷ ಶ್ರಮವಹಿಸಿ ದುರ್ಗಾಬಾಯಿ ಕೆಲಸ ಮಾಡಿದರು. ಮದರಾಸಿನ ಆಂಧ್ರ ಮಹಿಳಾ ಸಭಾದ ಸ್ಥಾಪಕ ಸದಸ್ಯರಾಗಿ ಆ ಸಂಸ್ಥೆಯನ್ನು ಬಹುಮುಖವಾಗಿ ಬೆಳೆಸಿದರು. ಆ ಸಂಸ್ಥೆಯ ಆಶ್ರಯದಲ್ಲಿ ನರ್ಸಿಂಗ್ ಹೋಂ, ದಾದಿ, ನರ್ಸ್‌ಗಳು ಮತ್ತು [illegible] ತರಬೇತಿ ಕೇಂದ್ರಗಳು, ಕಾಲೇಜು ಹಾಗೂ ವೃತ್ತಿ ಶಿಕ್ಷಣ ಶಾಲೆಗಳು [illegible] ಮಾಡಿದರು. ಅವರು ಭಾರತದ ಯೋಜನಾ ಆಯೋಗದ ಸದಸ್ಯೆ ಕೂಡ. ದುರ್ಗಾಬಾಯಿ ತೆಲುಗು ಮತ್ತು ಇಂಗ್ಲಿಷ್ [illegible] ವಾಗ್ಮಿ. ಅವರದು ಪ್ರಭಾವಶಾಲಿ ವ್ಯಕ್ತಿತ್ವ.

1953ರಲ್ಲಿ ಸಿ.ಡಿ. ದೇಶಮುಖ್ ಅವರನ್ನು ದುರ್ಗಾಬಾಯಿ ವಿವಾಹವಾದರು.

ದುರ್ಯೋಧನ

ದುರ್ಯೋಧನ ಮಹಾ ಛಲವಂತ. ಯುದ್ಧದಲ್ಲಿ ಇವನನ್ನು ಎದುರಿಸುವುದು ಕಷ್ಟವಾದ್ದರಿಂದ 'ದುರ್ಯೋಧನ' ಎಂಬ ಹೆಸರು ಬಂತು. 'ಸುಯೋಧನ' -ಯುದ್ಧದಲ್ಲಿ ನಿಪುಣ -ಎಂಬ ಹೆಸರೂ ಇದೆ.

ದುರ್ಯೋಧನ ಚಂದ್ರವಂಶದ ರಾಜ. ತಂದೆ ಧೃತರಾಷ್ಟ್ರ. ತಾಯಿ ಗಾಂಧಾರಿ. ಆಕೆಗೆ ದುರ್ಯೋಧನ ಮೊದಲಾದ ನೂರು ಗಂಡು ಮಕ್ಕಳು ಒಟ್ಟಿಗೆ ಜನಿಸಿದರು. ಇವರೆಲ್ಲ ಕೌರವರು. ಅವರಲ್ಲಿ ದುರ್ಯೋಧನನ ಬಲಗೈಯಂತಿದ್ದವನು ತಮ್ಮ ದುಶ್ಶಾಸನ. ಕೌರವರಿಗೆ ದುಶ್ಶಲೆ ಎಂಬ ಒಬ್ಬಳೇ ತಂಗಿ ಇದ್ದಳು.

ಪಾಂಡವರು ಕೌರವರ ಚಿಕ್ಕಪ್ಪನ ಮಕ್ಕಳು. ಅವರಲ್ಲಿ ಎರಡನೆಯವನಾದ ಭೀಮ ಕೌರವರ ಸಮ ವಯಸ್ಕ. ಬಲಶಾಲಿಯಾದ ಆತ ಚಿಕ್ಕಂದಿನಿಂದ ದುರ್ಯೋಧನಾದಿಗಳಿಗೆ ಉಪಟಳ ಕೊಡುತ್ತಿದ್ದ. ಅಸೂಯೆಯಿಂದ ದುರ್ಯೋಧನ ಅವನನ್ನು ಕೊಲ್ಲಲು ಯತ್ನಿಸಿದ್ದುಂಟು. ದ್ರೋಣಾಚಾರ್ಯನಲ್ಲಿ ಶಸ್ತ್ರ ವಿದ್ಯೆ ಕಲಿಯುತ್ತಿದ್ದಾಗ ಗದಾಯುದ್ಧದಲ್ಲಿ ಭೀಮ. ದುರ್ಯೋಧನರಿಗೆ ಯಾವಾಗಲೂ ಪೈಪೋಟಿ.

ಪಾಂಡವರಲ್ಲಿ ಹಿರಿಯನಾದ ಯುಧಿಷ್ಠಿರನನ್ನು ಧೃತರಾಷ್ಟ್ರ ಯುವರಾಜನನ್ನಾಗಿ ಮಾಡಿದಾಗ. ದುರ್ಯೋಧನ ಸಹಿಸಲಿಲ್ಲ. ಪಾಂಡವರನ್ನೆಲ್ಲ ರಾಜ್ಯದಿಂದ ಹೊರಗೆ ಕಳುಹಿಸಿ. ಸಾಮೂಹಿಕವಾಗಿ ಕೊಲ್ಲಿಸಲು ಸಂಚುಹೂಡಿದ. ವಾರಣಾವತಿಯಲ್ಲಿ ಅವರಿದ್ದ ಮನೆಗೆ ಬೆಂಕಿಯಿಡಿಸಿದ. ಆದರೆ ಪಾಂಡವರು ಈ ಅಗ್ನಿ ಅನಾಹುತದಿಂದ ಪಾರಾದರು.

ದ್ರೌಪದಿಯ ಸ್ವಯಂವರದಲ್ಲಿ ದುರ್ಯೋಧನ ಮೊದಲಾದವರು ಅವಮಾನಿತರಾದರು.

ಸೋದರ ಮಾವ ಶಕುನಿಯ ಸಲಹೆಯಂತೆ ದುರ್ಯೋಧನ ಮೋಸದ ಜೂಜು ಏರ್ಪಡಿಸಿ ಪಾಂಡವರಲ್ಲಿ ಹಿರಿಯನಾದ ಯುಧಿಷ್ಠಿರನನ್ನು ಸೋಲಿಸಿದ. ಪಣದಂತೆ ಪಾಂಡವರು ರಾಜ್ಯ ಬಿಟ್ಟುಕೊಟ್ಟು ವನವಾಸ. ಅಜ್ಞಾತವಾಸಕ್ಕೆ ತೆರಳಿದರು. ಅವರು ಹಿಂದಿರುಗಿದ ಬಳಿಕ ದುರ್ಯೋಧನ ಅವರಿಗೆ ರಾಜ್ಯವನ್ನು ಮರಳಿ ಕೊಡಲಿಲ್ಲ. ಸಂಧಾನಕ್ಕೆ ಬಂದಿದ್ದ ಕೃಷ್ಣನನ್ನು ಅವಮಾನಿಸಿದ ತಂದೆ. ಗುರು. ಹಿರಿಯರ ಸಲಹೆಗೆ ಕಿವಿಗೊಡಲಿಲ್ಲ. ರಾಜ್ಯಕ್ಕಾಗಿ ಪಾಂಡವರು ಯುದ್ಧ ಮಾಡಬೇಕಾಯಿತು.

ಛಲವಂತ : ದುರ್ಯೋಧನ



ಯುದ್ಧದಲ್ಲಿ ದುರ್ಯೋಧನನ ಪಕ್ಷಕ್ಕೆ ಭೀಷ್ಮ. ದ್ರೋಣ, ಕರ್ಣ, ಶಲ್ಯರು ಒಬ್ಬರಾದ ಮೇಲೆ ಒಬ್ಬರಂತೆ ಸೇನಾಧಿಪತಿಗಳಾದರು. ಸೈನ್ಯವನ್ನು ಕಳೆದುಕೊಂಡು ಒಂಟಿಯಾದಾಗ ದುರ್ಯೋಧನ ತಲೆ ಮರೆಸಿಕೊಂಡು. ವೈಶಂಪಾಯನ ಸರೋವರದಲ್ಲಿ ಅಡಗಿ ಕುಳಿತ. ಅವನು ಅಲ್ಲಿ ಇರುವುದನ್ನು ಪಾಂಡವರು ಗೊತ್ತು ಹಚ್ಚಿದರು. ಭೀಮ ದುರ್ಯೋಧನನ್ನು ಮೂದಲಿಸತೊಡಗಿದ. ಕೆರಳಿದ ದುರ್ಯೋಧನ ಸರೋವರದಿಂದ ಹೊರ ಬಂದು ಭೀಮನೊಡನೆ ಹೋರಾಟಕ್ಕೆ ನಿಂತ. ಗದಾಯುದ್ಧದಲ್ಲಿ ಕೃಷ್ಣನ ಸಲಹೆಯಂತೆ ಭೀಮ ದುರ್ಯೋಧನನ ತೊಡೆ ಮುರಿದು ಕೆಡವಿದ. ಒಂದು ರಾತ್ರಿಯಿಡೀ ನೋವನ್ನು ಅನುಭವಿಸಿದ ದುರ್ಯೋಧನ ಮರುದಿನ ಬೆಳಗ್ಗೆ ಪ್ರಾಣಬಿಟ್ಟ.

ದುರ್ಯೋಧನ ಛಲಕ್ಕೆ ಹೆಸರಾಗಿದ್ದಂತೆ. ಅಭಿಮಾನಧನನೂ ಆಗಿದ್ದ. ದುಶ್ಶಾಸನನ ಬಗೆಗೆ ಅವನ ಭ್ರಾತೃಪ್ರೇಮ. ಕರ್ಣನಲ್ಲಿ ಅವನು ಬೆಳೆಸಿಕೊಂಡಿದ್ದ ಸ್ನೇಹ ಅಸದೃಶ.

ದುಲೀಪ್‌ಸಿಂಗ್

ನೋಡಿ : ಸಂಪುಟ ೬

ದೆಹಲಿ

ಏಳು ಬಾರಿ ಹೊಸದಾಗಿ ಹುಟ್ಟಿದ ರಾಜಧಾನಿ. ಪ್ರದೇಶಗಳನ್ನು ಒಳಗೊಂಡಿವೆ ಇಂದಿನ, ಹೊಸ ದೆಹಲಿ ಹಾಗೂ ಹಳೆಯ ದೆಹಲಿ. ಪ್ರಾಚೀನ ಕಾಲದಿಂದಲೂ ರಾಜಕೀಯ ಮಹತ್ವವಿದ್ದ ಈ ಪ್ರದೇಶದಲ್ಲಿ ಅನೇಕ ರಾಜವಂಶಗಳು ತಮ್ಮ ರಾಜಧಾನಿಯನ್ನು ಕಟ್ಟಿದುವು.

ಇಲ್ಲಿ ಮೊತ್ತಮೊದಲು ನಿರ್ಮಿತವಾದ ಪಟ್ಟಣ. ಇಂದ್ರಪ್ರಸ್ಥ. ಇದನ್ನು ಸುಮಾರು ಮೂರು ಸಾವಿರ ವರ್ಷಗಳ ಹಿಂದೆ ಪಾಂಡವರು ನಿರ್ಮಿಸಿದರು ಎನ್ನುತ್ತಾರೆ. ಸುಮಾರು ಕ್ರಿ.ಪೂ. ಒಂದನೆಯ ಶತಮಾನದ ಆದಿಭಾಗದಲ್ಲಿ ದೆಹಲಿ ಎಂಬ ರಾಜ. ಇಂದಿನ ಕುತುಬ್‌ಮಿನಾರ್ ಇರುವಲ್ಲಿ ಒಂದು ಪಟ್ಟಣಕಟ್ಟಿ. ಅದಕ್ಕೆ ತನ್ನ ಹೆಸರನ್ನು ಇಟ್ಟ. ಅಲ್ಲಿಂದ ಮುಂದೆ 11ನೆಯ ಶತಮಾನದ ವರೆಗೆ ದೆಹಲಿಯ ಬಗೆಗೆ ಹೆಚ್ಚು ತಿಳಿದಿಲ್ಲ.

11-12ನೆಯ ಶತಮಾನದಲ್ಲಿ ದೆಹಲಿ ರಜಪೂತರ ಆಳ್ವಿಕೆಯಲ್ಲಿತ್ತು. ಇವರಲ್ಲಿ ಪೃಥ್ವಿರಾಜ ಹೆಸರಾದವನು. ಅನಂಗಪಾಲನೆಂಬ ರಜಪೂತ ರಾಜ ಕುತುಬ್‌ಮಿನಾರ್ ಇರುವಲ್ಲಿ ಒಂದು ಕೋಟೆ ಕಟ್ಟಿಸಿದ್ದ. 13ನೆಯ ಶತಮಾನದಲ್ಲಿ ಕುತುಬುದ್ದೀನನು ಕುತುಬ್ ಮಿನಾರದ ಸುತ್ತ ದೆಹಲಿ

ಮೌರ್ಯರಿಂದ ರಜಪೂತರವರೆಗಿನ ಪ್ರಾಚೀನ ದೆಹಲಿ - ಪುರಾತತ್ತ್ವ ಶೋಧೆ





ನವದೆಹಲಿಯ 'ಸೌತ್‌ಬ್ಲಾಕ್' –ಆಡಳಿತ ಭವನ

ನಗರವನ್ನು ಬೆಳೆಸಿದ. ಮತ್ತೆ ಅಲ್ಲಾವುದ್ದೀನ್ ಖಿಲ್ಜಿ ಆಗಿನ ದೆಹಲಿಯ ವಾಯುವ್ಯಕ್ಕೆ 'ಸಿರಿ' ಎಂಬಲ್ಲಿ ಒಂದು ಹೊಸ ಪಟ್ಟಣ ಕಟ್ಟಿದ. ದೆಹಲಿಗೂ ಸಿರಿಗೂ ಮಧ್ಯೆ 'ಜಹಾಪನಾ' ಎಂಬ ಹೊಸ ರಾಜಧಾನಿ ನಿರ್ಮಿಸಿದ. ಅವನ ಅನಂತರದ ಫಿರೋಜ್ ಷಾ ಎಂಟು ಮೈಲು ದೂರದ ಫಿರೋಜಾಬಾದಿಗೆ ರಾಜಧಾನಿಯನ್ನು ವರ್ಗಾಯಿಸಿದ. ಮುಂದೆ ಮೊಘಲ್ ಚಕ್ರವರ್ತಿ ಷಾ ಜಹಾನನು ದೆಹಲಿ ಪ್ರದೇಶದಲ್ಲಿ ಒಂದು ನಗರ ಕಟ್ಟಿಸಿದ. ಇದೇ ಇಂದಿನ ಹಳೆಯ ದೆಹಲಿ.

ಮೊಘಲರ ಕೊನೆಗಾಲದಲ್ಲಿ ದೆಹಲಿ ಬ್ರಿಟಿಷರ ಆಡಳಿತಕ್ಕೆ ಒಳಗಾಯಿತು. 1857ರ ದಂಗೆಯಲ್ಲಿ ದಂಗೆಗಾರರು ಸ್ವಲ್ಪ ಕಾಲ ದೆಹಲಿಯನ್ನು ತಮ್ಮ ವಶದಲ್ಲಿ ಇಟ್ಟುಕೊಂಡಿದ್ದರು. 1912ರಲ್ಲಿ ಬ್ರಿಟಿಷರು ತಮ್ಮ ರಾಜಧಾನಿಯನ್ನು ಕಲ್ಕತ್ತೆಯಿಂದ ದೆಹಲಿಗೆ ವರ್ಗಾಯಿಸಿದರು. ಹೊಸ ದೆಹಲಿ ಪಟ್ಟಣವನ್ನು ಕಟ್ಟಲು ಆರಂಭಿಸಿ 1929ರ ವೇಳೆಗೆ ಅದನ್ನು ಮುಗಿಸಿದರು. ಸ್ವತಂತ್ರ ಭಾರತಕ್ಕೂ ನವ ದೆಹಲಿಯೇ (ಹೊಸ ದೆಹಲಿ) ರಾಜಧಾನಿ.

ದೆಹಲಿ ನಗರ ಹಾಗೂ ಅದರ ಸುತ್ತ ಪ್ರದೇಶಗಳು ಕೇಂದ್ರಾಡಳಿತಕ್ಕೆ ಒಳಪಟ್ಟಿವೆ. ಇದರ ವಿಸ್ತೀರ್ಣ 50 ಚದರ ಮೈಲು.

ದೆಹಲಿ ಮತ್ತು ಅದರ ಸುತ್ತಮುತ್ತ ಅನೇಕ ಪ್ರೇಕ್ಷಣೀಯ ಸ್ಥಳಗಳಿವೆ: ಕುತುಬ್‌ಮಿನಾರ್ ಹಾಗೂ ಅದರ ಬಳಿಯ ಕಬ್ಬಿಣದ ಸ್ತಂಭ. ಹುಮಾಯೂನನ ಸಮಾಧಿ. ಷಾ ಜಹಾನನಿಂದ ಕಟ್ಟಲ್ಪಟ್ಟ ಕೆಂಪು ಕೋಟೆ. ಇದರ ದಿವಾನ್-ಇ-ಆಮ್ ಹಾಗೂ ದಿವಾನ್-ಇ-ಖಾಸ್ ಮುಂತಾದುವು.

ಹಳೆ ದೆಹಲಿಯಲ್ಲಿರುವ ಚಾಂದನಿ ಚೌಕ ಬಹಳ ಕಾಲದ ವರೆಗೆ ದೆಹಲಿಯ ಮುಖ್ಯ ವ್ಯಾಪಾರ ಕೇಂದ್ರ. ಕನ್ನಾಟ್ ಸರ್ಕಸ್ ಹೊಸ ದೆಹಲಿಯ ವಾಣಿಜ್ಯ ಕೇಂದ್ರ. ಕೆಂಪುಕೋಟೆಯ ಸಮೀಪದಲ್ಲಿರುವ ಜುಮ್ಮಾ ಮಸೀದಿ ಭಾರತದಲ್ಲೇ ಅತಿ ದೊಡ್ಡ ಮಸೀದಿ. 1710ರಲ್ಲಿ ಕಟ್ಟಿದ ಜಂತರ್ ಮಂತರ್ ಅಂದಿನ ಖಗೋಳ ವೀಕ್ಷಣಾಲಯ. ಇದು ಇಂದಿನ ಹೊಸ ದೆಹಲಿ ಪ್ರದೇಶದಲ್ಲಿದೆ.

ಪಾಲಮ್. ದೆಹಲಿಯ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ.

ರೈಲು. ಹೆದ್ದಾರಿಗಳು ಸಾರಿಗೆಗಳಿಗೆ ದೆಹಲಿ ಒಂದು ಮುಖ್ಯ ಕೇಂದ್ರ.

ದೆಹಲಿ ಒಂದು ಉದ್ಯಮಕೇಂದ್ರ ಕೂಡ. ಇಲ್ಲಿ ಉಣ್ಣೆ. ಹತ್ತಿ. ರೇಷ್ಮೆಯ ಗಿರಣಿಗಳಿವೆ. ಸೈನಿಕರಿಗೆ ಬೇಕಾದ ವಸ್ತ್ರಗಳು. ಔಷಧಗಳು. ರಾಸಾಯನಿಕಗಳು. ಕಂಪನ ಪದಾರ್ಥಗಳು ಇವುಗಳ ತಯಾರಿಕೆ ಇಲ್ಲಿ ನಡೆಯುತ್ತದೆ. ಕಬ್ಬಿಣದ ಎರಕ ಶಾಲೆಗಳು. ಹಿಟ್ಟಿನ ಗಿರಣಿಗಳು, ಬಿಸ್ಕತ್ ಹಾಗೂ ಸಕ್ಕರೆ ಕಾರಖಾನೆಗಳು, ಪಿಂಗಾಣಿ ಮತ್ತು ಕಬ್ಬಿಣದ ಸಾಮಾನುಗಳನ್ನು ತಯಾರಿಸುವ ಕೈಗಾರಿಕೆಗಳಿವೆ. ಚಿನ್ನ ಮತ್ತು ಬೆಳ್ಳಿಯ ಅತಿ ನಾಜೂಕು ಸಾಮಾನುಗಳು, ದಂತದ ಮರಗಳು, ಚಿತ್ತಾಕರ್ಷಕ ಕೆತ್ತನೆ ಕೆಲಸ, ಶಾಲುಗಳಿಗೆ ಕಸೂತಿ ಇಲ್ಲಿನ ಮುಖ್ಯ ಗೃಹ ಕೈಗಾರಿಕೆಗಳು.

ದೆಹಲಿ ಯಮುನಾ ನದಿಯ ತೀರದಲ್ಲಿದೆ. ಇಲ್ಲಿ ಬೇಸಿಗೆಯಲ್ಲಿ ಸೆಕೆ ಹೆಚ್ಚು. ಚಳಿಗಾಲದಲ್ಲಿ ಚಳಿ ಹೆಚ್ಚು. ಹೊಸ ದೆಹಲಿಯನ್ನು ಯೋಜಿಸಿದವರು ಲಚೆನ್ಸ್ ಮತ್ತು ಬೇಕರ್ ಎಂಬ ಇಬ್ಬರು ಆಂಗ್ಲ ವಾಸ್ತುಶಿಲ್ಪಿಗಳು. ಹೊಸ ದೆಹಲಿಯಲ್ಲಿ ರಾಷ್ಟ್ರಪತಿ ಭವನ. ಸೆಕ್ರೆಟೇರಿಯಟ್ ಕಟ್ಟಡಗಳು. ಸಂಸತ್ ಭವನ. ರಾಜಪಥ. ಇಂಡಿಯಾ ಗೇಟ್‌ಗಳಿವೆ. ಯಮುನಾ ನದಿಯ ದಂಡೆಯ ಮೇಲಿರುವ ರಾಜಘಾಟ್, ಮಹಾತ್ಮಾ ಗಾಂಧಿಯವರ ಸಮಾಧಿ ಸ್ಥಳ. ಬಳಿಯಲ್ಲೇ ನೆಹರೂ ಅವರ ಸಮಾಧಿ ಸ್ಥಳ ಶಾಂತಿಘಾಟ್ ಇದೆ. ವಿಜ್ಞಾನಭವನ. ವರಿಷ್ಠ ನ್ಯಾಯಾಲಯ. ನ್ಯಾಷನಲ್ ಫಿಸಿಕಲ್ ಲ್ಯಾಬೊರೇಟರಿ. ಪೂಸಾ ಕೃಷಿ ಸಂಶೋಧನಾ ಸಂಸ್ಥೆ. ರಾಷ್ಟ್ರೀಯ ವಸ್ತು ಸಂಗ್ರಹಾಲಯ. ರವೀಂದ್ರ ಭವನ. ಐತಿಹಾಸಿಕ ಪುರಾತನ ವಸ್ತು ಸಂಗ್ರಹಾಲಯ ಇವು ದೆಹಲಿಯಲ್ಲಿವೆ.



ಜವಾಹರ ಸ್ಮಾರಕ : ತೀನ್ ಮೂರ್ತಿ ಭವನ

1922ರಲ್ಲಿ ಆರಂಭವಾದ ದೆಹಲಿ ವಿಶ್ವವಿದ್ಯಾನಿಲಯ ಇಂದು ಬೃಹತ್ ವಿದ್ಯಾಕೇಂದ್ರವಾಗಿ ಬೆಳೆದಿದೆ. ಹೊಸ ದೆಹಲಿಯ 'ಚಾಣಕ್ಯಪುರಿ'. ರಾಯಭಾರಿ ಕಚೇರಿಗಳಿರುವ ಪ್ರದೇಶ. ದೆಹಲಿಯಲ್ಲಿ ರಾಷ್ಟ್ರಪತಿ ಭವನಕ್ಕೆ ಸೇರಿದ ಮೊಘಲ್ ಉದ್ಯಾನ ಹಾಗೂ ಹೊಸದಾಗಿ ರೂಪುಗೊಂಡ 'ಬುದ್ಧ ಜಯಂತಿ' ಉದ್ಯಾನಗಳಿವೆ. ದೆಹಲಿ ಭಾರತದ ಜೀವನಾಡಿ. ಪ್ರಪಂಚದ ಅತಿ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರದ ಭವ್ಯ ರಾಜಧಾನಿ.

ದೇವಕಿ

ಯದುಕುಲದ ರಾಜ ದೇವಕನ ಮಗಳು ದೇವಕಿ. ಕಂಸ ಇವಳ ದೊಡ್ಡಪ್ಪ ಉಗ್ರಸೇನನ ಮಗ. ಇವನು ದೇವಕಿಯನ್ನು ವಸುದೇವನಿಗೆ ಕೊಟ್ಟು ಮದುವೆ ಮಾಡಿದ. ದೇವಕಿಯ ಮಗನಿಂದ ತನಗೆ ಮರಣ ಎಂದು ತಿಳಿದು ಕಂಸ ವಸುದೇವ-ದೇವಕಿಯರನ್ನು ಸೆರೆಯಲ್ಲಿಟ್ಟ. ಕೃಷ್ಣ ಹುಟ್ಟಿದ್ದು ಆ ಸೆರೆಮನೆಯಲ್ಲೇ. ಈ ಮಗುವನ್ನು ಕಂಸನಿಂದ ಪಾರು ಮಾಡಲು. ವಸುದೇವ ಯಮುನಾ ನದಿಯನ್ನು ದಾಟಿ. ಗೋಕುಲದಲ್ಲಿನ ತನ್ನ ಸ್ನೇಹಿತ ನಂದನ ಮನೆಯಲ್ಲಿ ಅದನ್ನು ಬಿಟ್ಟುಬಂದ.

ಕಂಸನನ್ನು ವಧಿಸಿದ ಬಳಿಕ ಕೃಷ್ಣ. ವಸುದೇವನನ್ನೂ ದೇವಕಿಯನ್ನೂ ಸೆರೆಯಿಂದ ಬಿಡುಗಡೆ ಮಾಡಿದ. ಮಹಾಭಾರತ ಯುದ್ಧದ ಬಳಿಕ ವ್ಯಾಧನ ಬಾಣದಿಂದ ಕೃಷ್ಣ ಮರಣಹೊಂದಿದ. ದೇವಕಿ ವಸುದೇವನೊಡನೆ ಸಹಗಮನ ಮಾಡಿದಳು.

ನೋಡಿ : ಕೃಷ್ಣ ; ವಸುದೇವ



ಅತಿಲಾವಣ್ಯವತಿ : ದೇವಿಕಾರಾಣಿ

ದೇವಿಕಾರಾಣಿ

"............ಈ ಪ್ರಧಾನ ಅಭಿನೇತ್ರಿ ಪಾಶ್ಚಾತ್ಯ ಜಗತ್ತಿನಲ್ಲೇ ತೋರುತ್ತಿರುವ ಉತ್ಕೃಷ್ಟ ತಾರೆ ಎಂಬುದರಲ್ಲಿ ಅನುಮಾನವೇ ಇಲ್ಲ."

"ತೆರೆಯ ಮೇಲೆ ಕಂಡುಬಂದವರಲ್ಲಿ ಅತಿ ಲಾವಣ್ಯವತಿ"

–ಇತ್ಯಾದಿಯಾಗಿ ಈ ಶತಮಾನದ ಮೂರನೆಯ ದಶಕದಲ್ಲಿ ಇಂಗ್ಲೆಂಡಿನ ಪತ್ರಿಕೆಗಳು ಓರ್ವ ಭಾರತೀಯ ನಟಿಯನ್ನು ಹಾಡಿ ಹೊಗಳಿದುವು. ಆಕೆಯೇ ರೂಪಸಿ ನಟಿ ದೇವಿಕಾರಾಣಿ. ಭಾರತೀಯ ಚಲಚ್ಚಿತ್ರ ಉದ್ಯಮದ ಪ್ರಥಮ ದಶಕಗಳಲ್ಲಿಯೇ ಅದಕ್ಕೆ ಹೊಸ ತಿರುವು, ಹೊಸ ಮೌಲ್ಯಗಳನ್ನು ಕೊಟ್ಟ ಪ್ರಥಮ ಸುಶಿಕ್ಷಿತ ಮಹಿಳೆ ಆಕೆ: ವಿಶ್ವಕವಿ ರವೀಂದ್ರರ ಮೊಮ್ಮಗಳು.

ಈ ಶತಮಾನದ ಮೊದಲ ದಶಕದಲ್ಲಿ ಹುಟ್ಟಿದರು, ದೇವಿಕಾರಾಣಿ. ತಂದೆ ಚೌಧರಿ ಸರಕಾರದ ಉನ್ನತಾಧಿಕಾರಿಯಾಗಿದ್ದರು. ಶಾಲಾ ಶಿಕ್ಷಣ ಇಂಗ್ಲೆಂಡಿನಲ್ಲಿ ನಡೆಯಿತು. ಆಗಲೇ ಅಲ್ಲಿಯ ಶ್ರೇಷ್ಠ ನಾಟಕ ಸಂಸ್ಥೆ 'ರಾಯಲ್ ಅಕಾಡೆಮಿ ಆಫ್ ಡ್ರಮಾಟಿಕ್ ಆರ್ಟ್'ನಲ್ಲಿ ದೇವಿಕಾರಾಣಿ ಪ್ರಶಸ್ತಿಗಳಿಸಿದರು. 18ನೆಯ ವಯಸ್ಸಿಗೆ ಲಂಡನಿನಪ್ರಮುಖ ಚಿತ್ರಕಲಾ ಶಾಲೆಯಲ್ಲಿ ವಸ್ತ್ರೋದ್ಯಮ ವಿನ್ಯಾಸಗಾರ್ತಿಯಾಗಿ ವೃತ್ತಿ ಕೈಗೊಂಡ ಸಾಹಸಿ ಈಕೆ. ಇಲ್ಲಿ ಪ್ರತಿಭಾವಂತ ಹಿಮಾಂಶುರಾಯ್ ಅವರ ಭೇಟಿಯಾಯಿತು. ಅವರು ಅಂದಿನ ಭಾರತೀಯ ಚಲಚ್ಚಿತ್ರ ತಯಾರಕರಲ್ಲಿ ಅಗ್ರಗಣ್ಯರಾಗಿದ್ದರು. 1929ರಲ್ಲಿ ಇವರಿಬ್ಬರ ವಿವಾಹವಾಯಿತು.

'ದಾಳದ ಒಂದು ಎಸೆತ' (ಎ ತ್ರೋ ಆಫ್ ಡೈಸ್), 'ಕರ್ಮ', 'ಅಛೂತ್ ಕನ್ಯಾ', 'ಸಾವಿತ್ರಿ', 'ಜೀವನ ಪ್ರಭಾತ', 'ಇಜ್ಜತ್' ಹೀಗೆ ಒಂದಾದ ಮೇಲೊಂದು ಅನೇಕ ಚಲಚ್ಚಿತ್ರಗಳಲ್ಲಿ ಅಭಿನಯಿಸಿದರು. ಪತ್ರಿಕೆಗಳು, ಸಾರ್ವಜನಿಕರು, ಚಲಚ್ಚಿತ್ರೋದ್ಯಮಿಗಳಿಂದ ಈ ಶ್ರೇಷ್ಠ ನಟಿಗೆ ಗೌರವ, ಸನ್ಮಾನಗಳ ಸುರಿಮಳೆಯಾಯಿತು. 'ದಾಳದ ಒಂದು ಎಸೆತ' ಜರ್ಮನಿಯಲ್ಲಿ ತಯಾರಾದ ಚಲಚ್ಚಿತ್ರ. 'ಕರ್ಮ' ಇಂಗ್ಲಿಷ್ ಹಾಗೂ ಹಿಂದೂಸ್ಥಾನಿ ಎರಡೂ ಭಾಷೆಗಳಲ್ಲಿ ಭಾರತದಲ್ಲೇ ತಯಾರಾದ ಚಿತ್ರ.

ಯಾವುದೇ ಪಾತ್ರವಿರಲಿ ದೇವಿಕಾರಾಣಿ ಅದನ್ನು ಮನಮುಟ್ಟುವಂತೆ ಅಭಿನಯಿಸುತ್ತಿದ್ದರು. ಹಿಂದೆಂದೂ ಕಾಣಬರದ ಸುಸಂಸ್ಕೃತ ವಾತಾವರಣ, ಹೊಸ ದೃಷ್ಟಿ ಮತ್ತು ಹೊಸ ದಿಗಂತಗಳನ್ನು ಭಾರತೀಯ ಚಲಚ್ಚಿತ್ರೋದ್ಯಮಕ್ಕೆ ತಂದುಕೊಟ್ಟ ಕೀರ್ತಿ ಅವರಿಗೆ ಸಲ್ಲುತ್ತದೆ. ದೇವಿಕಾರಾಣಿ ಹಾಗೂ ಹಿಮಾಂಶುರಾಯ್ ಕಟ್ಟಿದ ಬಾಂಬೆ ಟಾಕೀಸ್ ಸಂಸ್ಥೆ ಉತ್ತಮ ಮಟ್ಟದ ಚಿತ್ರಗಳನ್ನು ತಯಾರಿಸಿತು: ಪ್ರತಿ ವರ್ಷ 300 ಮಂದಿ ಯುವಕ ನಟನಟಿಯರಿಗೆ ತರಬೇತಿ ನೀಡಿತು. ಈ ಮಧ್ಯೆ ಲಂಡನಿನ ಬಿ.ಬಿ.ಸಿ.ಯ ಮೊಟ್ಟಮೊದಲ ಟೆಲಿವಿಷನ್ ಕಾರ್ಯಕ್ರಮದಲ್ಲಿ ಭಾಗವಹಿಸುವ ಗೌರವ ದೇವಿಕಾರಾಣಿಯವರಿಗೆ ಸಂದಿತು. ಭಾರತಕ್ಕೆ [illegible] ಮೊತ್ತಮೊದಲ ಪ್ರಸಾರ ಇವರ ಬಂಗಾಳಿ ಗೀತೆಯ ಹಾಡುಗಾರಿಕೆಯಿಂದ ಆರಂಭವಾಯಿತು.

ಹಿಮಾಂಶುರಾಯ್ 1940ರಲ್ಲಿ ಅಕಾಲಮೃತ್ಯುವಿಗೆ ತುತ್ತಾದರು ಆದರೂ ಬಾಂಬೆ ಟಾಕೀಸ್ ಹೊಣೆಯನ್ನು ಧೃತಿಗೆಡದೆ ದೇವಿಕಾರಾಣಿ ನಿರ್ವಹಿಸಿದರು. 1945ರಲ್ಲಿ ತಮ್ಮ ಕೀರ್ತಿ ಶಿಖರ ತಲಪಿದ್ದಾಗಲೇ ಚಲಚ್ಚಿತ್ರೋದ್ಯಮ ರಂಗವನ್ನು ತ್ಯಜಿಸಿದರು. ಅನಂತರ ಖ್ಯಾತ ರಷ್ಯನ್ ಚಿತ್ರಕಾರ ಸ್ವೆತಸ್ಲಾವ್ ರೋರಿಕ್ ಅವರನ್ನು ವಿವಾಹವಾದರು.

ಭಾರತ ಸರಕಾರ 1970ರಲ್ಲಿ ಆರಂಭಿಸಿದ ದಾದಾಸಾಹೇಬ್ ಫಾಲ್ಕೆ ಸ್ಮರಣಾರ್ಥ ಮೊದಲ ಪ್ರಶಸ್ತಿ ದೇವಿಕಾರಾಣಿಯವರಿಗೆ ದೊರೆಯಿತು. ಪದ್ಮಶ್ರೀ ಪ್ರಶಸ್ತಿಯೂ ದೊರೆತಿದೆ. ಲಲಿತಕಲೆಯ ಹಲವು ಸಂಸ್ಥೆಗಳಲ್ಲಿ ಈಗಲೂ ದೇವಿಕಾರಾಣಿ ಸಕ್ರಿಯ ಪಾತ್ರ ವಹಿಸಿದ್ದಾರೆ.

ದೇವೇಂದ್ರನಾಥ ಠಾಕೂರ್

ರಾಜಾ ರಾಮ್‌ಮೋಹನ ರಾಯರ ಮನೆಯ ಅಂಗಳದಲ್ಲಿ ಒಬ್ಬ ಚಿಕ್ಕ ಹುಡುಗ ಆಡುತ್ತಿದ್ದ. ಆತ ರಾಮ್‌ಮೋಹನರ ಪುಟಾಣಿ ಗೆಳೆಯ. ಅವರಿಬ್ಬರ ವಯಸ್ಸಿನ ನಡುವೆ ಬಹಳ ಅಂತರವಿದ್ದರೂ ವಿಶ್ವಾಸ, ಸ್ನೇಹಗಳಲ್ಲಿ ಅವರು ಒಂದೇ ವಯಸ್ಸಿನವರಂತೆ ಕಾಣುತ್ತಿದ್ದರು. ಮುಂದೆ, ರಾಮ್‌ಮೋಹನರ ಅನಂತರ ಅವರ ಧ್ಯೇಯ ಆದರ್ಶಗಳನ್ನು ಈ ಬಾಲಕ ತನ್ನದನ್ನಾಗಿ ಮಾಡಿಕೊಂಡ.

ಆತನೇ ಕಳೆದ ಶತಮಾನದಲ್ಲಿ ಭಾರತದ ಅತಿ ಪ್ರಮುಖ ವ್ಯಕ್ತಿಗಳಲ್ಲಿ ಒಬ್ಬನಾಗಿ ರೂಪುಗೊಂಡ ದೇವೇಂದ್ರನಾಥ ಠಾಕೂರ್.



'ಬ್ರಹ್ಮಸಮಾಜ' ಪುನರುಜ್ಜೀವನ: ದೇವೇಂದ್ರ ನಾಥ

ರಾಜಾ ರಾಮ್‌ಮೋಹನ ರಾಯರ ಗೆಳೆಯರಾಗಿದ್ದ ದ್ವಾರಕನಾಥ ಠಾಕೂರರ ಮಗ ದೇವೇಂದ್ರನಾಥ: ಜನನ ಕಲ್ಕತ್ತೆಯಲ್ಲಿ 1817 ಮೇ 15ರಂದು. ರಾಮ್‌ಮೋಹನರೇ ಸ್ಥಾಪಿಸಿದ ಆಂಗ್ಲೋ–ಇಂಡಿಯನ್ ಶಾಲೆಯಲ್ಲಿ 9ನೆಯ ವಯಸ್ಸಿನವರೆಗೆ ಓದಿ, ಅನಂತರ ಹಿಂದೂ ಕಾಲೇಜಿನಲ್ಲಿ ಅಭ್ಯಾಸ ಮಾಡಿದರು. ಸಿರಿವಂತ ವಂಶದಲ್ಲಿ ಹುಟ್ಟಿದರೂ ಇವರ ಮನಸ್ಸು ಲೌಕಿಕ ಐಶ್ವರ್ಯಕ್ಕಿಂತ ಅಧ್ಯಾತ್ಮ ಚಿಂತನೆಯ ಕಡೆಗೇ ತಿರುಗಿತ್ತು.

ರಾಮ್‌ಮೋಹನರ ಅನಂತರ ಪ್ರಭಾವ ಕುಂದಿದ್ದ 'ಬ್ರಹ್ಮ ಸಮಾಜ'ವನ್ನು ದೇವೇಂದ್ರನಾಥರು ತಮ್ಮ ಕೈಗೆ ತೆಗೆದುಕೊಂಡು ಅದರ ಪುನರುಜ್ಜೀವನ ನಡೆಸಿದರು. ಜೀವನದ ಗಂಭೀರ ಸಮಸ್ಯೆಗಳ ಬಗೆಗೆ ಚಿಂತನೆ ನಡೆಸಲು 'ತತ್ತ್ವ ಬೋಧಿನಿ ಸಭಾ' ಎಂಬ ಸಂಘವನ್ನು ಕಟ್ಟಿ, ಒಂದು ಪತ್ರಿಕೆಯನ್ನು ನಡೆಸಿದರು. ಬ್ರಹ್ಮ ಸಮಾಜದ ಬೋಧನೆಗಳಿಗೆ ವೇದ ಉಪನಿಷತ್ತುಗಳಲ್ಲಿ ಬೆಂಬಲವಿದೆ ಎಂದು ತೋರಿಸಲು, ವೈದಿಕ ಸಾಹಿತ್ಯದಿಂದ ಆರಿಸಿದ ವಾಕ್ಯಗಳಿಗೆ ಬಂಗಾಳಿ ಭಾಷಾಂತರ ಮತ್ತು ವ್ಯಾಖ್ಯಾನ ಬರೆದರು. 'ಬ್ರಹ್ಮ ಸಮಾಜ'ಕ್ಕಾಗಿ ಒಂದು ನಿಯಮಾವಳಿ ರಚಿಸಿದರು. ಬುದ್ಧಿವಂತ ಯುವಕರನ್ನು ಆ ಸಂಸ್ಥೆಗೆ ಆಕರ್ಷಿಸಿ, ಅದನ್ನು ಅಂದಿನ ಅತ್ಯಂತ ಪ್ರಭಾವಶಾಲೀ ಶಕ್ತಿಯನ್ನಾಗಿ ಮಾಡಿದರು. ಆಗಾಗ್ಗೆ

ಹಿಮಾಲಯಕ್ಕೆ ಹೋಗಿ ತಪಸ್ಸು ಮಾಡಿದರು. ಉತ್ತರ ದಕ್ಷಿಣ ಭಾರತಗಳಲ್ಲಿ ಪ್ರವಾಸದಿಂದ ವಿಚಾರ ವಿನಿಮಯ ಮಾಡಿ ತಮ್ಮ ಅರಿವನ್ನು ಹೆಚ್ಚಿಸಿಕೊಂಡರು.

ದೇವೇಂದ್ರನಾಥರು ಧಾರ್ಮಿಕ ತತ್ತ್ವಜ್ಞಾನಿ. ಇವರ ಸಾಂಪ್ರದಾಯಿಕ ಮನೋಭಾವಕ್ಕೆ ಪಾಶ್ಚಾತ್ಯ ಸಂಸ್ಕೃತಿ, ಚಿಂತನೆಗಳು ಎದುರಾದಾಗ, ದೇವರಲ್ಲಿ ಇವರಿಗಿದ್ದ ನಂಬಿಕೆ ದೃಢಗೊಂಡಿತು.

ಇವರ ಆಧ್ಯಾತ್ಮಿಕ ಜೀವನ, ತಪಸ್ಸುಗಳಿಗಾಗಿ ದೇವೇಂದ್ರನಾಥರನ್ನು ಜನ 'ಮಹರ್ಷಿ' ಎಂದು ಕರೆದರು. ಏಕಾಂತ ಬಯಸಿದ ದೇವೇಂದ್ರನಾಥರು 1863ರಲ್ಲಿ ಗ್ರಾಮಾಂತರ ಪ್ರದೇಶದಲ್ಲಿ ಒಂದು ಪುಟ್ಟ ಮನೆ ಕಟ್ಟಿಕೊಂಡು ವಾಸಿಸತೊಡಗಿದರು. ಆ ತಾಣವನ್ನು 'ಶಾಂತಿನಿಕೇತನ' ಎಂದು ಕರೆದರು. ಮುಂದೆ 'ಶಾಂತಿನಿಕೇತನ'ವನ್ನು ವಿಶ್ವವಿಖ್ಯಾತವನ್ನಾಗಿ ಮಾಡಿದವರು ಇವರ ಮಗ, ವಿಶ್ವಕವಿ ರವೀಂದ್ರನಾಥ ಠಾಕೂರರು. ರವೀಂದ್ರರು ಅಲ್ಲಿ ಒಂದು ವಿಶ್ವವಿದ್ಯಾಲಯವನ್ನು ಸ್ಥಾಪಿಸಿದರು.

ದೇವೇಂದ್ರನಾಥರು 1905 ಜನವರಿ 19ರಂದು ಕಲ್ಕತ್ತೆಯಲ್ಲಿ ಮರಣ ಹೊಂದಿದರು.

ದೇಶಪಾಂಡೆ ಗಂಗಾಧರರಾಯ

ಸ್ವಾತಂತ್ರ್ಯಪೂರ್ವದಲ್ಲಿ ಕಾಂಗ್ರೆಸ್ ಅಧಿವೇಶನ ಕರ್ನಾಟಕದಲ್ಲಿ ನಡೆದದ್ದು ಒಂದೇ ಬಾರಿ-1924ರಲ್ಲಿ, ಬೆಳಗಾಂವಿಯಲ್ಲಿ. ಮಹಾತ್ಮಾ ಗಾಂಧಿಯವರು ಅದರ ಅಧ್ಯಕ್ಷರಾಗಿದ್ದರು. ಅವರು ಕಾಂಗ್ರೆಸ್ ಅಧ್ಯಕ್ಷರಾದದ್ದೂ ಅದೊಂದೇ ಸಲ. ಈ ಅಧಿವೇಶನವನ್ನು ಸಂಘಟಿಸಿ ಯಶಸ್ವಿಗೊಳಿಸಿದ ಶ್ರೇಯಸ್ಸು ದೇಶಪಾಂಡೆ ಗಂಗಾಧರ ರಾಯರದು.

1871ರಲ್ಲಿ ಹುಟ್ಟಿದ ಇವರು ಬೆಳಗಾಂವಿ ಹತ್ತಿರದ ಹುದಲಿ ಎಂಬ ಗ್ರಾಮದ ದೇಶಪಾಂಡೆ ಮನೆತನಕ್ಕೆ ಸೇರಿದವರು. ಶ್ರೀಮಂತ ಮನೆತನದವರಾದರೂ ರಾಷ್ಟ್ರ ಸ್ವಾತಂತ್ರ್ಯಕ್ಕಾಗಿ ಹೋರಾಡುವ ಕಷ್ಟಮಯ ಜೀವನವನ್ನು ಸಂತೋಷದಿಂದ ಸ್ವೀಕರಿಸಿದರು.

ಲೋಕಮಾನ್ಯ ತಿಲಕರು ಇವರನ್ನು ತಮ್ಮ ಕೆಲವೇ ಆಪ್ತಮಿತ್ರರಲ್ಲಿ ಒಬ್ಬರೆಂದು ಬಗೆದಿದ್ದರು. ಅವರಿಗೊಮ್ಮೆ ತಮ್ಮ 'ಕೇಸರಿ' ಪತ್ರಿಕೆಯ ಹೊಣೆಯನ್ನು ಯಾರಿಗಾದರೂ ಒಪ್ಪಿಸುವ ಪ್ರಶ್ನೆ ಬಂದಿತ್ತು. ಆಗ ದೇಶಪಾಂಡೆ ಗಂಗಾಧರರಾಯರನ್ನೇ ಅವರು ಆರಿಸಿದ್ದರು. ಆದರೆ ಕರ್ನಾಟಕವನ್ನೇ ತಮ್ಮ ಕಾರ್ಯಕ್ಷೇತ್ರವನ್ನಾಗಿ ಆರಿಸಿಕೊಂಡ ಗಂಗಾಧರ ರಾಯರು ಅದಕ್ಕೊಪ್ಪಲಿಲ್ಲ. ಕರ್ನಾಟಕಕ್ಕೆ ಬಂದು ಇಲ್ಲಿಯೇ ಕಾಂಗ್ರೆಸ್ ಮತ್ತು ರಾಷ್ಟ್ರೀಯ ಚಳುವಳಿಗಳ ಸಂಘಟನೆ ಕೈಗೊಂಡರು. ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ರಚನೆಯಾದಾಗ ಇವರೇ ಅದರ ಮೊದಲ ಅಧ್ಯಕ್ಷರಾದರು. ಕಾಂಗ್ರೆಸ್ ಕಾರ್ಯ ಸಮಿತಿಯಲ್ಲೂ ಕೆಲ ಕಾಲ ಸದಸ್ಯರಾಗಿದ್ದರು. ಆಗಿನ ಸರಕಾರ ಇವರಿಗೆ ಅನೇಕ ರೀತಿಯ ತೊಂದರೆ ಕೊಡುತ್ತಿತ್ತು. ಇವರ ಮೇಲೆ ನೂರಾರು ಮೊಕದ್ದಮೆಗಳನ್ನು ಹೂಡಿ ಬಂಧಿಸುತ್ತಿತ್ತು. ಆದರೆ ಗಂಗಾಧರರಾಯರು ಅಧೀರರಾಗಲಿಲ್ಲ. ಗಾಂಧೀಜಿ ಪ್ರಾರಂಭಿಸಿದ ಎಲ್ಲ ಚಳವಳಿಗಳಲ್ಲಿ ನಿಷ್ಠೆಯಿಂದ ಭಾಗವಹಿಸಿದರು. ಖಾದಿ ಮತ್ತು ಅಸ್ಪೃಶ್ಯೋದ್ಧಾರ ಚಳುವಳಿಗಳ ಬೀಜವನ್ನು ಕರ್ನಾಟಕದಲ್ಲಿ ಬಿತ್ತಿದವರು ಗಂಗಾಧರರಾಯರೇ.



ಸಿಂಹ ಗರ್ಜನೆ : ಗಂಗಾಧರರಾವ

ಸುಮಾರು ಕಾಲು ಶತಮಾನ ಕಾಲ ದೇಶಪಾಂಡೆ ಗಂಗಾಧರರಾಯರು ಕರ್ನಾಟಕದ ಅದ್ವಿತೀಯ ನಾಯಕರೆನಿಸಿದ್ದರು. ಜನ ಇವರನ್ನು ಕರ್ನಾಟಕದ ಸಿಂಹ ಎಂದೇ ಕರೆಯುತ್ತಿದ್ದರು. ಇವರ ಸಿಂಹಸದೃಶ ಗರ್ಜನೆ ಬೆಳಗಾಂವಿ ಜಿಲ್ಲೆ ಕರ್ನಾಟಕದಲ್ಲಿ ಅನುರಣಿಸುವಂತೆ ಮಾಡಿತು. ತೊಂಬತ್ತು ವರ್ಷದ ತುಂಬುಜೀವನ ನಡೆಸಿದ ಗಂಗಾಧರರಾಯರು 1961ರಲ್ಲಿ ನಿಧನರಾದರು.

ದ್ರೋಣ

ಪಾಂಡವರು, ಕೌರವರು ಆಟವಾಡುತ್ತಿದ್ದಾಗ ಚೆಂಡು ಬಾವಿಯೊಳಕ್ಕೆ ಬಿದ್ದಿತು. ಚೆಂಡು ತೆಗೆಯುವುದಕ್ಕೆ ಆಗದೆ ಅವರು ಪರಿತಪಿಸುತ್ತಿದ್ದಾಗ ಅಲ್ಲಿಗೆ ಬಂದ ಒಬ್ಬ ವೃದ್ಧ ಬಾಣ ಬಿಟ್ಟು ಚೆಂಡು ತೆಗೆದುಕೊಟ್ಟ. ಮುಂದೆ ಆತ ಆ ಕಿರಿಯರಿಗೆ ಗುರುವಾದ.

ಆ ಗುರು ದ್ರೋಣಾಚಾರ್ಯ. ದ್ರೋಣಾಚಾರ್ಯ ಮಹರ್ಷಿ ಭರದ್ವಾಜರ ಮಗ. ಧನುರ್ವಿದ್ಯೆ ಕಲಿತದ್ದು ಅಕ್ನಿವೇಶ ಮುನಿಯ ಬಳಿ. ಅವನಿಗೆ ಧನುರ್ವಿದ್ಯೆಯ ರಹಸ್ಯಗಳನ್ನು ತಿಳಿಸಿಕೊಟ್ಟವನು ಪರಶುರಾಮ.

ಅರ್ಜುನ ದ್ರೋಣನ ಮೆಚ್ಚಿನ ಶಿಷ್ಯ. ಒಮ್ಮೆ ಗಂಗಾನದಿಯಲ್ಲಿ ಸ್ನಾನ ಮಾಡುತ್ತಿದ್ದ ದ್ರೋಣನನ್ನು ಮೊಸಳೆ ಹಿಡಿಯಿತು. ಅರ್ಜುನ ಮೊಸಳೆಯನ್ನು ಕೊಂದು ಗುರುವನ್ನು ಪಾರುಮಾಡಿದ.

ವನವಾಸ ಅಜ್ಞಾತವಾಸಗಳನ್ನು ಮುಗಿಸಿ ಬಂದ ಪಾಂಡವರಿಗೆ ಅರ್ಧ ರಾಜ್ಯ ಕೊಡುವುದು ಯುಕ್ತವೆಂದು ದ್ರೋಣಾಚಾರ್ಯ ದುರ್ಯೋಧನನಿಗೆ ತಿಳಿಯಹೇಳಿದ. ಆತ ಒಪ್ಪಲಿಲ್ಲ. ಅನಿವಾರ್ಯವಾಗಿ ಮಹಾಭಾರತ ಯುದ್ಧ ಆರಂಭವಾಯಿತು. ಭೀಷ್ಮನ ಬಳಿಕ ಕೌರವರ ಕಡೆ ದ್ರೋಣಾಚಾರ್ಯ ಸೇನಾಧಿಪತಿಯಾಗಿ ನಿಯಮಿತನಾದ. ಧರ್ಮರಾಯನನ್ನು ಸೆರೆಹಿಡಿದು ತರುವುದಾಗಿ ದುರ್ಯೋಧನನ ಬಳಿ ಒಪ್ಪಿಕೊಂಡ ದ್ರೋಣ ತನ್ನ ಶಿಷ್ಯ ಅರ್ಜುನನಿಂದ ಪರಾಜಿತನಾದ.

ಭೀಮನ ಮಾತಿನಿಂದ ನೊಂದು ದ್ರೋಣ ಶಸ್ತ್ರತ್ಯಾಗ ಮಾಡಿದ. ಯೋಗಬಲದಿಂದ ದೇಹ ತ್ಯಾಗಮಾಡಿದ.

ಪಾಂಡವ ಕೌರವರಿಗೆ ಶಸ್ತ್ರಾಭ್ಯಾಸ : ಆಚಾರ್ಯ ದ್ರೋಣ



ಶರದ್ವಂತನ ಮಗಳು ಕೃಪೀ, ದ್ರೋಣಾಚಾರ್ಯನ ಪತ್ನಿ. ಅಶ್ವತ್ಥಾಮ ಅವರ ಮಗ.

ನೋಡಿ : ಅಶ್ವತ್ಥಾಮ

ದ್ರೌಪದಿ

ಪಾಂಚಾಲ ದೇಶದ ರಾಜ ದ್ರುಪದ. ಅವನ ಯಜ್ಞಕುಂಡದಿಂದ ಹೊರಬಂದವಳು, ದ್ರೌಪದಿ. ಅವಳು ಹುಟ್ಟಿದಾಗ ಈಕೆ ದೇವರಿಗೆ ಮೆಚ್ಚುಗೆಯಾಗುವಂಥ ಕೆಲಸಗಳನ್ನು ಮಾಡುತ್ತಾಳೆಂದೂ ಈಕೆಯಿಂದ ಕುರುವಂಶ ವಿನಾಶವಾಗುತ್ತದೆ ಎಂದೂ ಅಶರೀರವಾಣಿಯಾಯಿತು.

—ಇದು ದ್ರೌಪದಿಯ ಜನನವನ್ನು ಕುರಿತ ಕಥೆ. ಅವಳಿಗೆ ಪಾಂಚಾಲಿ, ಕೃಷ್ಣೆ ಇತ್ಯಾದಿ ಹೆಸರುಗಳೂ ಇವೆ.

ಅಪ್ರತಿಮ ಸುಂದರಿಯೆಂದು ವಿಖ್ಯಾತಳಾಗಿದ್ದ ದ್ರೌಪದಿ ಪಂಚ ಪಾಂಡವರನ್ನು ಮದುವೆಯಾದಳು. ಒಬ್ಬಾಕೆ ಐದು ಮಂದಿಯನ್ನು ಏಕೆ ಮದುವೆಯಾದಳು ಎಂಬ ಬಗೆಗೆ 'ಮಹಾಭಾರತ'ದಲ್ಲಿ ವಿವರಣೆ ಇದೆ. ದ್ರೌಪದಿಯ ಸ್ವಯಂವರದ ಕಾಲದಲ್ಲಿ ಪಾಂಡವರು ಬ್ರಾಹ್ಮಣರಂತೆ ವೇಷ ಮರೆಸಿಕೊಂಡು ವಾಸಿಸುತ್ತಿದ್ದರು. ಅವರು ಆ ವೇಷದಲ್ಲಿಯೇ ಸ್ವಯಂವರ ಮಂಟಪಕ್ಕೆ ಬಂದು ಕುಳಿತಿದ್ದರು. ದ್ರೌಪದಿ ಮತ್ಸ್ಯಯಂತ್ರವನ್ನು ಭೇದಿಸಿದವನ ಕೈಹಿಡಿಯುವುದೆಂದು ಗೊತ್ತಾಗಿತ್ತು. ಸ್ವಯಂವರಕ್ಕೆ ಬಂದಿದ್ದ ರಾಜರು ಯಾರೂ ಅದನ್ನು ಭೇದಿಸಲು ಶಕ್ತರಾಗಲಿಲ್ಲ. ಬ್ರಾಹ್ಮಣವೇಷದಲ್ಲಿದ್ದ ಅರ್ಜುನ ಅದನ್ನು ಸಾಧಿಸಿದ. ಅವಳನ್ನು ಕರೆದುಕೊಂಡು ತಮ್ಮ ಬಿಡಾರಕ್ಕೆ ಹೋದ; ಬಾಗಿಲಲ್ಲಿ ನಿಂತು 'ಅಮ್ಮಾ ಭಿಕ್ಷೆ ತಂದಿದ್ದೇವೆ' ಎಂದ. ತಾಯಿ ಕುಂತಿ ಒಳಗಿನಿಂದಲೇ "ಅದನ್ನು ಎಲ್ಲರೂ ಸಮವಾಗಿ ಹಂಚಿಕೊಳ್ಳಿ" ಎಂದಳು. ಹೊರಗೆ ಬಂದಾಗ ತಾನು ಮಾಡಿದ ತಪ್ಪು ಅವಳಿಗೆ ತಿಳಿಯಿತು. ಪಾಂಡವರು ಐವರನ್ನೂ ದ್ರೌಪದಿ ವಿವಾಹವಾಗುವುದು ಅಧರ್ಮವಲ್ಲವೆಂದು ನಿರ್ಣಯವಾದ ಮೇಲೆ, ಐವರೊಡನೆಯೂ ಅವಳ ವಿವಾಹವಾಯಿತು.

'ಮಹಾಭಾರತ'ದ ಕೇಂದ್ರ ವ್ಯಕ್ತಿ ದ್ರೌಪದಿ. ಅವಳ ಧೈರ್ಯ, ಕೆಚ್ಚು, ವಿವೇಕ, ಸ್ವಾಭಿಮಾನ ಅಪೂರ್ವವಾದುವು. ರಾಜವಂಶದಲ್ಲಿ ಹುಟ್ಟಿ, ರಾಜಕುಮಾರರನ್ನು ಮದುವೆಯಾದರೂ ದ್ರೌಪದಿ ತನ್ನ ಜೀವನದಲ್ಲಿ ಅನೇಕ ಕಷ್ಟಗಳನ್ನು ಅನುಭವಿಸಿದಳು.

ಕುರುಕ್ಷೇತ್ರ ಯುದ್ಧ ಮುಗಿದ ಬಳಿಕ ಅಶ್ವತ್ಥಾಮ ದ್ರೌಪದಿಯ ಐವರು ಮಕ್ಕಳನ್ನೂ ಕೊಂದ. ಅವಳು ಪುತ್ರಶೋಕವನ್ನು ಅನುಭವಿಸಬೇಕಾಯಿತು. ಕೆಲ ಕಾಲ ಹಸ್ತಿನಾಪುರದಲ್ಲಿ ರಾಜ್ಯಭಾರ ನಡೆಸಿದ ಮೇಲೆ ಪಾಂಡವರು ಮಹಾಪ್ರಸ್ಥಾನಕ್ಕೆ ಹೊರಟಾಗ, ದ್ರೌಪದಿ ತಾನೂ ಅವರೊಡನೆ ಹೊರಟಳು. ಆ ಮಾರ್ಗದಲ್ಲಿ ಮುಂದುವರಿಯುತ್ತಿದ್ದಾಗ ದ್ರೌಪದಿಯ ದೇಹಾಂತವಾಯಿತು.

ಧನ್ವಂತರಿ

'ಚಲಿಸುವ ಬಾಣ' ಎಂಬರ್ಥ ಬರುವ ಹೆಸರು 'ಧನ್ವಂತರಿ.' ಭಾರತೀಯ ವೈದ್ಯದ ಮೂಲಪುರುಷ ಎಂಬ ಪ್ರಶಸ್ತಿ ಈತನದು. 'ರಾಮಾಯಣ', 'ಮಹಾಭಾರತ' ಮತ್ತು ಪುರಾಣಗಳಲ್ಲಿ ಧನ್ವಂತರಿಯ ಪ್ರಸ್ತಾಪ ಇದೆ.

ಸೂರ್ಯನ ಅವತಾರ ಈತ: ಬೆಳಕಿನ ಕಿರಣ ಚಲಿಸುವ ರೀತಿಗೆ ಧನ್ವಂತರಿ ಎಂಬ ಹೆಸರು —ಎಂದು ಒಂದು ಅಭಿಪ್ರಾಯ. ಕಾಶಿ ದೀರ್ಘ



ಭಾರತೀಯ ವೈದ್ಯಕೆ : ಧನ್ವಂತರಿ

ತಮಸನ ಮಗ, ವಿಷ್ಣುವಿನ ಅವತಾರ, ಶಿವನ ಶಿಷ್ಯ ಎಂದೂ ಬೇರೆ ಬೇರೆ ಉಲ್ಲೇಖಗಳಿವೆ.

ದೇವತೆಗಳೂ ದಾನವರೂ ಕ್ಷೀರಸಮುದ್ರವನ್ನು ಕಡೆದಾಗ ಈತ ಹುಟ್ಟಿದ: ಕೈಯಲ್ಲಿ ಅಮೃತದ ಕಳಶವನ್ನು ಎತ್ತಿಕೊಂಡು ಬಂದ–ಎಂದೂ ಹೇಳಲಾಗಿದೆ.


ಕೆಲವು ಪುರಾಣಗಳ ಮೇರೆಗೆ ಇವನು ವೈದ್ಯದೇವತೆಗಳಾದ ಅಶ್ವಿನೀ ಕುಮಾರರ ಶಿಷ್ಯ : ಪ್ರಾಚೀನ ಭಾರತದ ವಿಖ್ಯಾತ ವೈದ್ಯ ಸುಶ್ರುತ ಧನ್ವಂತರಿಯ ಪ್ರತ್ಯಕ್ಷ ಶಿಷ್ಯ ಎಂದೂ ಪ್ರತೀತಿ.

ಕೆಲವಾರು ಆಯುರ್ವೇದ ಗ್ರಂಥಗಳನ್ನು ಬರೆದ 'ಧನ್ವಂತರಿ', ವಿಕ್ರಮಾದಿತ್ಯನ ಆಸ್ಥಾನದಲ್ಲಿದ್ದ ನವರತ್ನಗಳಲ್ಲಿ ಒಬ್ಬನೆಂಬ ಉಲ್ಲೇಖ ಇದೆ. ಧನ್ವಂತರಿ ಎಂಬ ಹೆಸರಿನ ಹಲವಾರು ಮಂದಿ ವೈದ್ಯರು ಇದ್ದಿರಬಹುದು ಎಂಬ ಅಭಿಪ್ರಾಯವೂ ಇದೆ. ಈಗಲೂ ದಕ್ಷ ವೈದ್ಯನನ್ನು 'ಧನ್ವಂತರಿ' ಎಂದು ಕರೆಯುವುದುಂಟು.

'ಧಮ್ಮಪದ'

ಭಗವಾನ್ ಬುದ್ಧನು ಬಹುಜನರ ಹಿತಕ್ಕಾಗಿ, ಬಹುಜನರ ಸುಖಕ್ಕಾಗಿ ಮಾಡಿದ ಬೋಧನೆಗಳು ತಿಪಿಟಕ (ತ್ರಿಪಿಟಕ) ಎಂಬ ಗ್ರಂಥಗಳಲ್ಲಿ ಸಂಗ್ರಹವಾಗಿದೆ. ತಿಪಿಟಕಗಳಲ್ಲಿ ಒಂದಾದ ಸುತ್ತಪಿಟಕದಲ್ಲಿ 'ಧಮ್ಮಪದ' ಭಾಗವಿದೆ. ಈ ಭಾಗವು ಬುದ್ಧನ ನಲವತ್ತೈದು ವರ್ಷಗಳ ಕಾಲದ ಬೋಧನೆಯ ಸಾರ. ಬುದ್ಧಧರ್ಮವನ್ನು ಆಳವಾಗಿ ಅಭ್ಯಾಸಮಾಡಿ ತಮ್ಮ ಜೀವನದಲ್ಲಿ ಅದನ್ನು ಅಳವಡಿಸಿಕೊಳ್ಳಬೇಕೆಂಬ ಸಾಧಕರಿಗೂ ಸರಿಯಾದ ಮಾರ್ಗದಲ್ಲಿ ತಾವು ನಡೆಯಬೇಕೆಂಬ ಸಾಧಾರಣ ಗೃಹಸ್ಥರಿಗೂ ಇದು ಅತ್ಯಮೂಲ್ಯ ಗ್ರಂಥ.

ಬುದ್ಧನು ಎಲ್ಲ ಬಗೆಯ ದುಃಖದಿಂದ ಪಾರಾಗುವ ಮಾರ್ಗವನ್ನು ತೋರಿಸಿದ್ದಾನೆ. ಆತ ಅದನ್ನು 'ದುಃಖ ನಿರೋಧ ಮಾರ್ಗ' ಎಂದು ಕರೆದ. ಈ ಮಾರ್ಗ ಯಾವುದು ಎಂಬುದನ್ನು 'ಧಮ್ಮಪದ' ತೋರಿಸುತ್ತದೆ. ಈ ಗ್ರಂಥ ಇರುವುದು ಪಾಳಿ ಭಾಷೆಯಲ್ಲಿ. ಇದರ ಭಾಷೆ ಸರಳ.



ಖರೋಷ್ಟಿ ಲಿಪಿಯಲ್ಲಿ 'ಧಮ್ಮಪದ' ಹಸ್ತಪ್ರತಿಯ ತುಣುಕು

ಶೈಲಿ ಸುಂದರ. ಇಪ್ಪತ್ತಾರು ಅಧ್ಯಾಯಗಳೂ ನಾಲ್ಕುನೂರ ಇಪ್ಪತ್ತ ಮೂರು ಶ್ಲೋಕಗಳೂ ಇದರಲ್ಲಿವೆ. ಅಧ್ಯಾಯವನ್ನು 'ವಗ' ಎಂದೂ ಶ್ಲೋಕವನ್ನು 'ಗಾಥ' ಎಂದೂ ಕರೆಯುತ್ತಾರೆ. 'ಧಮ್ಮಪದ'ದಲ್ಲಿ ಇರುವ ಗಾಥಗಳಿಗೆ ಒಂದು ಮಾದರಿ ಇದು :

ಸಬ್ಬ ಪಾಪಸ್ಸ ಅಕರಣಜ್
ಕುಸಲಸ್ಸ ಉಪಸಂಪದ
ಸಚಿತ್ತ ಪರಿಯೋ ಪದನಜ್
ಏತಜ ಬುದ್ಧಾನು ಸಾಸನಜ್

—"ಪಾಪವಾವುದನ್ನೂ ಮಾಡದಿರುವುದೇ, ಕುಶಲವಾದದ್ದನ್ನು ಸಂಪಾದಿಸುವುದೇ, ಚಿತ್ತವನ್ನು ಪರಿಶುದ್ಧಗೊಳಿಸಿಕೊಳ್ಳುವುದೇ ಬುದ್ಧನ ಅನುಶಾಸನ ಅಥವಾ ಬುದ್ಧಿವಾದ."

ಎಲ್ಲ ಬಗೆಯ, ಎಲ್ಲ ವಿಧದ ಜನರಿಗೂ ಶ್ರೇಯಸ್ಸನ್ನು ಕೊಡಬಲ್ಲ ವಿಷಯವು ಅತಿ ಸುಂದರವಾಗಿ 'ಧಮ್ಮಪದ'ದಲ್ಲಿ ಅಡಕವಾಗಿರುವುದರಿಂದ, ಅದು ಜಗತ್ತಿನ ಅತಿ ಪ್ರಸಿದ್ಧ ಗ್ರಂಥಗಳಲ್ಲಿ ಒಂದಾಗಿದೆ. ಪ್ರಪಂಚದ ಅನೇಕ ಭಾಷೆಗಳಿಗೆ ಅದು ತರ್ಜುಮೆಯಾಗಿದೆ. ಹಾಗೆಯೇ ಅದರ ಮೇಲಿನ ವ್ಯಾಖ್ಯಾನ ಗ್ರಂಥಗಳೂ ವಿಪುಲವಾಗಿವೆ.

ಧರ್ಮರಾಯ

ಮೂರು ಬಾರಿ ಅಶ್ವಮೇಧ ಯಾಗ ಮಾಡಿದವನೂ ಧರ್ಮಪಾಲಕನೂ ಆಗಿದ್ದವನು ಧರ್ಮರಾಯ. ಪಾಂಡವರಲ್ಲಿ ಹಿರಿಯ. ಯುಧಿಷ್ಠಿರ, ಧರ್ಮಪುತ್ರ, ಅಜಾತಶತ್ರು ಎನ್ನುವ ಹೆಸರುಗಳೂ ಈತನಿಗಿವೆ.

ಧರ್ಮರಾಯ, ಪಾಂಡು ರಾಜನ ಪತ್ನಿ ಕುಂತಿಗೆ ಯಮನ ಕೃಪೆಯಿಂದ ಜನಿಸಿದವನು. ಕೃಪ, ದ್ರೋಣರಲ್ಲಿ ಶಸ್ತ್ರಾಭ್ಯಾಸ ಮಾಡಿದ. ಇಂದ್ರಪ್ರಸ್ಥವನ್ನು ರಾಜಧಾನಿಯಾಗಿ ಮಾಡಿಕೊಂಡು ಧರ್ಮದಿಂದ ರಾಜ್ಯಭಾರ ಮಾಡಿದ. ದ್ಯೂತದಲ್ಲಿ ಕೌರವರಿಗೆ ಸೋತ. ಅನಂತರ ಅವರು ಮಾಡಿದ ಅವಮಾನವನ್ನೆಲ್ಲ ತಾಳ್ಮೆಯಿಂದ ಸಹಿಸಿದ. ವನವಾಸ ಹಾಗೂ ಅಜ್ಞಾತವಾಸ ಸಮಯದಲ್ಲಿ ಪಾಂಡವರು ಎದುರಿಸಬೇಕಾಗಿ ಬಂದ ಸಂಕಷ್ಟಗಳು ಹಲವಾರು. ಧರ್ಮಕ್ಕೆ ಕಟ್ಟುಬಿದ್ದು ಎಲ್ಲ ಕಷ್ಟಗಳನ್ನೂ ತಾಳಿಕೊಂಡ. ಮಹಾಭಾರತ ಯುದ್ಧದಲ್ಲಿ ಜಯಶಾಲಿಯಾದರೂ ಬಂಧು ವಿಯೋಗಕ್ಕಾಗಿ ತುಂಬ ದುಃಖಿಪಟ್ಟ. ಕೃಷ್ಣನಲ್ಲಿ ಅಪಾರ ಭಕ್ತಿ, ವಿಶ್ವಾಸ ಅವನಿಗೆ. ತಮ್ಮಂದಿರಲ್ಲಿ ವಾತ್ಸಲ್ಯ. ಅವರ ಧೈರ್ಯ ಶೌರ್ಯಗಳ ಬಗೆಗೆ ಹೆಮ್ಮೆ. ಎಂಥ ಕಷ್ಟದಲ್ಲೂ ಧರ್ಮಮಾರ್ಗದಿಂದ ವಿಚಲಿತನಾಗದಿದ್ದ ಧರ್ಮರಾಯ, 'ಮಹಾಭಾರತ'ದಲ್ಲಿ ತಿಳಿಸಿರುವಂತೆ ಸಶರೀರನಾಗಿ ಸ್ವರ್ಗಕ್ಕೆ ಹೋದ.

ಧರ್ಮಸ್ವಾಮಿ

ಕ್ರಿಸ್ತ ಪೂರ್ವ ಕಾಲದಿಂದಲೂ ಉತ್ತರ ಭಾರತದೊಡನೆ ಟಿಬೆಟ್ ಸಂಪರ್ಕ ಹೊಂದಿತ್ತು. ಬೌದ್ಧಧರ್ಮ ಪ್ರಚಾರವಾದ ಮೇಲೆ ನೂರಾರು ಬೌದ್ಧ ಭಿಕ್ಕುಗಳು ಅಲ್ಲಿಂದ ಅಧ್ಯಯನಕ್ಕಾಗಿ ಯಾತ್ರೆಗಾಗಿ ಭಾರತಕ್ಕೆ ಬಂದರು. ಹೀಗೆ ಬಂದವರಲ್ಲಿ ಧರ್ಮಸ್ವಾಮಿಯೂ ಒಬ್ಬ. 13ನೆಯ ಶತಮಾನದಲ್ಲಿ ಭಾರತಕ್ಕೆ ಇವನು ಬಂದಿದ್ದ. ಎರಡು ವರ್ಷ ಕಾಲ ಇಲ್ಲಿ ತಂಗಿದ್ದು, ತಾನು ಕಂಡ ವಿಷಯಗಳನ್ನು ಬರೆದಿಟ್ಟ.

ಚಾಗ್ ಲೊ - ತ್ಸಾ - ಬ ಚೋಸ್ - ರ್ಜೀ - ದ್ಪಾಲ್ ಎಂಬುದು ಅವನ ಹೆಸರು. ಆ ಹೆಸರಿನ ಸಂಸ್ಕೃತ ರೂಪ ಧರ್ಮಸ್ವಾಮಿ. ಜನನ 1197ರಲ್ಲಿ. 1226ರಲ್ಲಿ ಭಾರತಕ್ಕೆ ಹೊರಡುವ ಮೊದಲು ಅವನು 22 ವರ್ಷ ಕಾಲ ಅಧ್ಯಯನ ನಡೆಸಿ ಸಂಸ್ಕೃತ, ಹೇತುವಿದ್ಯೆ, ಅಧ್ಯಾತ್ಮ ವಿದ್ಯೆ ಮುಂತಾದ ಹಲವಾರು ಭಾರತೀಯ ವಿದ್ಯೆಗಳಲ್ಲಿ ಪಾಂಡಿತ್ಯ ಗಳಿಸಿದ್ದ. ನೇಪಾಳಕ್ಕೆ ಬಂದು ಅಲ್ಲಿ ಎಂಟು ವರ್ಷ ಅಧ್ಯಯನದಲ್ಲಿ ನಿರತನಾಗಿದ್ದ, ಅನಂತರ ಭಾರತಕ್ಕೆ ಬಂದ. ಈಗಿನ ಬಿಹಾರದ ವಿವಿಧ ಪ್ರದೇಶಗಳಲ್ಲಿ ಸಂಚರಿಸಿದ.

ಧಾರ್ಮಿಕ ಐತಿಹ್ಯ, ಆಚಾರ ವಿಚಾರಗಳಲ್ಲದೆ ಸಾಮಾನ್ಯ ಜನಜೀವನದ ಬಗೆಗೂ ಅವನ ಬರೆಹದಲ್ಲಿ ಪ್ರಸ್ತಾಪಗಳಿವೆ. ಪಟ್ನಾ, ವೈಶಾಲಿ, ವಜ್ರಾಸನ, ನಾಲಂದಾಗಳಲ್ಲಿ ತುರುಷ್ಕರ ದಾಳಿಯ ಭೀತಿಯಿಂದ ಜನಜೀವನ ಗೊಂದಲಕ್ಕೀಡಾಗಿತ್ತು ; ದಾಳಿಯಿಂದ ಪವಿತ್ರ ಕ್ಷೇತ್ರಗಳು ಧ್ವಂಸವಾಗಿದ್ದುವು ಎಂದು ತಿಳಿಸಿದ್ದಾನೆ.

ವೈದಿಕ ಧರ್ಮವು ಬೌದ್ಧಧರ್ಮಕ್ಕಿಂತ ಪ್ರಬಲ ; ಆದರೆ, ಭಿಕ್ಕುಗಳಿಗೆ ಬೌದ್ಧೇತರರು ಸಹ ಗೌರವ ಸಲ್ಲಿಸುತ್ತಾರೆ —ಎಂದೂ ಹೇಳಿದ್ದಾನೆ.

ಧರ್ಮಸ್ವಾಮಿ ನಾಲಂದಾದಲ್ಲಿ ಒಂದೆರಡು ವರ್ಷ ಅಧ್ಯಯನ ಮಾಡಿದ. ಆಗಲೇ ಸಂಸ್ಕೃತ ಗ್ರಂಥವೊಂದನ್ನು ಟಿಬೆಟಿ ಭಾಷೆಗೆ ಅನುವಾದಿಸಿದ. 1241ರಲ್ಲಿ ಹುಟ್ಟೂರಿಗೆ ಹಿಂದಿರುಗಿದಾಗ ಭಾರತದ ಬಗೆಗೆ ತಿಳಿವಳಿಕೆ ಉಳ್ಳವನೆಂದು ಅವನ ಬಗೆಗೆ ಅಪಾರ ಗೌರವ ತೋರಿದರು. 1264 ಜನವರಿಯಲ್ಲಿ ಗತಿಸಿದ.

ಧರ್ಮಸ್ವಾಮಿಯ ಟಿಪ್ಪಣಿಗಳ ಆಧಾರದಿಂದ ಅವನ ಜೀವನ ಚರಿತ್ರೆಯನ್ನು ಟೋಸ್-ದರ್ ಎಂಬವನು ಬರೆದಿದ್ದಾನೆ. ಟಿಬೆಟ್‌ನಲ್ಲಿ ರಾಹುಲ ಸಾಂಕೃತ್ಯಾಯನರ (1894–1962) ಸಂಶೋಧನೆಯಿಂದ ಇದು ಬೆಳಕಿಗೆ ಬಂತು. ಅದನ್ನು ಮಾಸ್ಕೋ ವಿಶ್ವವಿದ್ಯಾನಿಲಯದ ಪೌರ್ವಾತ್ಯ ವಿದ್ಯೆಗಳ ವಿದ್ವಾಂಸ ರೋರಿಕ್ (ಕಲಾವಿದ ಸ್ವೆತೊಸ್ಲಾವ್ ರೋರಿಕರ ಸೋದರ) ಇಂಗ್ಲಿಷಿಗೆ ಭಾಷಾಂತರಿಸಿದ್ದಾರೆ. ಸುಪ್ರಸಿದ್ಧ ಭಾರತೀಯ ವಿದ್ವಾಂಸ ಡಾ. ಅಲ್ಟೇಕರ್ ಅವರು ಮೂಲ ಟಿಬೆಟಿ ಗ್ರಂಥದ ಇಂಗ್ಲಿಷ್ ಭಾಷಾಂತರವನ್ನು ಸಿದ್ಧಗೊಳಿಸಿದ್ದಾರೆ.

ಧ್ಯಾನ್ ಚಂದ್

ನೋಡಿ : ಸಂಪುಟ ೬



ಭಕ್ತ ಧ್ರುವ

ಧ್ರುವ

ದೇವರನ್ನು ಕಾಣಬೇಕೆಂದು ಏಕಾಕಿಯಾಗಿ ಹೊರಟ ಮುಗ್ಧ ಬಾಲಕ, ಧ್ರುವ. ಅವನ ದೈವ ಭಕ್ತಿ ಅಪಾರ; ಎಷ್ಟೇ ಕಷ್ಟ ಬಂದರೂ ತನ್ನ ಛಲಬಿಡದೆ ದೇವರನ್ನು ಸಾಕ್ಷಾತ್ಕರಿಸಿಕೊಂಡ— ಎನ್ನುತ್ತದೆ, ಧ್ರುವನನ್ನು ಕುರಿತ ಪುರಾಣ ಕಥೆ.

ಆ ಕಥೆಯ ಪ್ರಕಾರ ಧ್ರುವನ ತಂದೆ ಉತ್ತಾನಪಾದ, ದೊಡ್ಡ ರಾಜ. ಇವನ ಹಿರಿಯ ಹೆಂಡತಿ ಸುನೀತಿಯಲ್ಲಿ ಹುಟ್ಟಿದವ ಧ್ರುವ. ಕಿರಿಯ ಹೆಂಡತಿ ಸುರುಚಿಯ ಮಗ ಉತ್ತಮ. ಉತ್ತಾನಪಾದ ಚೆಲುವೆಯಾದ ಸುರುಚಿಯ ಕೈಗೊಂಬೆಯಾಗಿದ್ದ. ಅವಳಿಗೆ ತನ್ನ ಮಗನೇ ಮುಂದೆ ರಾಜನಾಗಬೇಕೆಂದು ಆಸೆ. ಸುನೀತಿಯನ್ನು ದೊರೆ ಅಲಕ್ಷಿಸುವಂತೆ ಅವಳು ಮಾಡಿದಳು.

ರಾಜ ಒಮ್ಮೆ ಸಿಂಹಾಸನದ ಮೇಲೆ ಕುಳಿತಿದ್ದ. ಉತ್ತಮ ತಂದೆಯ ತೊಡೆಯ ಮೇಲಿದ್ದ. ಅಲ್ಲಿಗೆ ಬಂದ ಧ್ರುವ ತಾನೂ ತಂದೆಯ ತೊಡೆಯ ನ್ನೇರಲು ಆಸೆಪಟ್ಟು ಹತ್ತಿರಕ್ಕೆ ಹೋದ. ದುಷ್ಟ ಸ್ವಭಾವದ ಸುರುಚಿ "ರಾಜ ಸಿಂಹಾಸನವನ್ನು ಏರುವ ಭಾಗ್ಯ ನಿನಗಿಲ್ಲ; ನಿನಗೆ ಅಷ್ಟು ಅಪೇಕ್ಷೆ ಇದ್ದರೆ ತಪಸ್ಸುಮಾಡಿ ದೇವರಿಂದ ವರ ಪಡೆದು ಮುಂದಿನ ಜನ್ಮದಲ್ಲಿ ನನ್ನ ಮಗನಾಗು" ಎಂದು ಗದರಿಸಿ, ಅವನನ್ನು ತಳ್ಳಿದಳು.

ಬಾಲಕ ಧ್ರುವನಿಗೆ ಅಪಾರ ದುಃಖವಾಯಿತು. ಅಳುತ್ತ ತಾಯಿಯ ಬಳಿಗೆ ಹೋಗಿ ನಡೆದದ್ದನ್ನೆಲ್ಲ ಹೇಳಿದ. ತನ್ನ ಮಗನ ದೌರ್ಭಾಗ್ಯಕ್ಕಾಗಿ ಆಕೆಯೂ ವ್ಯಥೆಪಟ್ಟಳು. ಆಗ ಧ್ರುವನು ಅನಾಥ ರಕ್ಷಕ ಭಗವಂತನನ್ನೇ ಕಂಡುಬರುತ್ತೇನೆ ಎಂದು ಕಾಡಿಗೆ ಹೊರಟ. ಕ್ರೂರ ಪ್ರಾಣಿಗಳು, ಕಲ್ಲುಮುಳ್ಳು ಯಾವುದನ್ನೂ ಲೆಕ್ಕಿಸದೆ ಕಾಡಿನಲ್ಲಿ ಮುನ್ನಡೆದ. ಯಮುನಾ ನದಿ ತೀರದಲ್ಲಿ ಅವನಿಗೆ ಆಕಸ್ಮಾತ್ತಾಗಿ ಸಪ್ತರ್ಷಿಗಳ ದರ್ಶನ ಆಯಿತು. ಅವರಿಂದ ಮಂತ್ರೋಪದೇಶ ಪಡೆದು, ಉಗ್ರ ತಪಸ್ಸನ್ನಾಚರಿಸಿದ. ಕೊನೆಗೆ ವಿಷ್ಣು ಪ್ರತ್ಯಕ್ಷನಾಗಿ ಧ್ರುವನನ್ನು ಅನುಗ್ರಹಿಸಿದ.

ಧ್ರುವನು ರಾಜ್ಯಕ್ಕೆ ಹಿಂದಿರುಗಿದ ಮೇಲೆ ತಂದೆ, ಮಲತಾಯಿ ಸುರುಚಿ, ತಾವು ಹಿಂದೆ ಅವನನ್ನು ನೋಯಿಸಿದ್ದಕ್ಕೆ ಪಶ್ಚಾತ್ತಾಪಪಟ್ಟರು. ಮುಂದೆ ಉತ್ತಾನಪಾದನ ಅನಂತರ ಧ್ರುವನೇ ರಾಜನಾದ. ದೀರ್ಘಕಾಲ ಆಳ್ವಿಕೆ ನಡೆಸಿ, ಅನೇಕ ಯಜ್ಞಗಳನ್ನು ಮಾಡಿದ. ಮರಣಾನಂತರ ನಕ್ಷತ್ರ ಲೋಕದಲ್ಲಿ ಶಾಶ್ವತಸ್ಥಾನ ಪಡೆದ.

ಆಕಾಶದಲ್ಲಿ ಉತ್ತರದ ಕಡೆ ತಗ್ಗಿನಲ್ಲಿ ಇರುವ ಧ್ರುವ ನಕ್ಷತ್ರದ ಸ್ಥಾನವೇ ಸರಿಯಾದ ಉತ್ತರ ದಿಕ್ಕು. ಇತರ ನಕ್ಷತ್ರಗಳು ಮೂಡಿದಂತೆ, ಮುಳುಗಿದಂತೆ, ಚಲಿಸಿದಂತೆ ಭಾಸವಾಗುತ್ತದೆ. ಆದರೆ ಈ ನಕ್ಷತ್ರ ವರ್ಷದ ಎಲ್ಲ ಸಮಯದಲ್ಲೂ ಒಂದೇ ಸ್ಥಾನದಲ್ಲಿ ಇರುತ್ತದೆ. 'ಧ್ರುವ' ಎಂದರೆ ಸ್ಥಿರ, ವಿಚಲಿತ ಎಂದರ್ಥ. ಹೀಗೆ ಅದು ಧ್ರುವನಿಗೆ ದೇವರು ಅನುಗ್ರಹಿಸಿದ ಸ್ಥಿರವಾದ ಸ್ಥಳ ಎಂದು ಪೌರಾಣಿಕ ಕಲ್ಪನೆ.

ಧೃತರಾಷ್ಟ್ರ

ಚಂದ್ರವಂಶದ ಶಂತನು ರಾಜನ ಮಗ ವಿಚಿತ್ರವೀರ್ಯನಿಗೆ ಇಬ್ಬರು ಹೆಂಡಂದಿರು –ಅಂಬಿಕೆ, ಅಂಬಾಲಿಕೆ. ವಿಚಿತ್ರವೀರ್ಯ ಮಕ್ಕಳಿಲ್ಲದೆ ಸತ್ತಾಗ ವ್ಯಾಸರ ಅನುಗ್ರಹದಿಂದ ಅಂಬಿಕೆಯಲ್ಲಿ ಜನಿಸಿದ ಮಗನೇ ಧೃತರಾಷ್ಟ್ರ. ಇವನು ಹುಟ್ಟುಕುರುಡ. ಅಂಬಾಲಿಕೆಯಲ್ಲಿ ಹುಟ್ಟಿದವನು ಪಾಂಡು.

ಧೃತರಾಷ್ಟ್ರ ಕುರುಡನಾದದ್ದರಿಂದ ಪಾಂಡುವೇ ಹಸ್ತಿನಾವತಿಯ ರಾಜನಾದ. ಕೆಲ ಕಾಲ ದಕ್ಷತೆಯಿಂದ ರಾಜ್ಯವಾಳಿದ. ಪಾಂಡು ಒಂದು ಶಾಪದ ಕಾರಣದಿಂದ ಕಾಡಿನಲ್ಲಿ ತೀರಿಕೊಂಡ. ಅನಂತರ ಅವನ ಐವರು ಮಕ್ಕಳು –ಪಾಂಡವರು– ತಾಯಿ ಕುಂತಿಯೊಡನೆ ಧೃತರಾಷ್ಟ್ರನ ಆಶ್ರಯ ಪಡೆದರು. ಧೃತರಾಷ್ಟ್ರನಿಗೆ ಪತ್ನಿ ಗಾಂಧಾರಿಯಲ್ಲಿ ದುರ್ಯೋಧನ ಮೊದಲಾದ ನೂರು ಮಂದಿ ಗಂಡು ಮಕ್ಕಳು–ಕೌರವರು; ಹಾಗೂ ಒಬ್ಬ ಮಗಳು –ದುಶ್ಶಲೆ.

ಒಟ್ಟಿಗೆ ಬೆಳೆಯುತ್ತಿದ್ದ ಕೌರವ, ಪಾಂಡವರಲ್ಲಿ ದ್ವೇಷ ಮೂಡುತ್ತಿದ್ದುದನ್ನು ಕಂಡು ಧೃತರಾಷ್ಟ್ರ ಪಾಂಡುಪುತ್ರರಲ್ಲಿ ಹಿರಿಯನಾದ ಯುಧಿಷ್ಠಿರನನ್ನು ಯುವರಾಜನನ್ನಾಗಿ ಮಾಡಿದ. ಆದರೆ ದುರ್ಯೋಧನ ತಂದೆಯನ್ನು ಲೆಕ್ಕಿಸದೆ ತಾನೇ ಪ್ರಬಲನಾಗಿ ಪಾಂಡವರಿಗೆ ರಾಜ್ಯಾಧಿಕಾರ ಲಭಿಸದಂತೆ ಮಾಡಲು ಪ್ರಯತ್ನಪಟ್ಟ. ಇದರಿಂದ ಕೌರವ, ಪಾಂಡವರ ನಡುವೆ ವಿರೋಧ ಬೆಳೆಯಿತು.

ಧೃತರಾಷ್ಟ್ರ ಸ್ವಂತ ಬುದ್ಧಿಯಿಂದಲೂ ಹಿರಿಯರ ಮಾತಿನಂತೆಯೂ ದುರ್ಯೋಧನನಿಗೆ ವಿವೇಕ ಹೇಳಿ ಪರಿಸ್ಥಿತಿಯನ್ನು ಉತ್ತಮಗೊಳಿಸಲು ಪ್ರಯತ್ನಿಸುತ್ತಿದ್ದ. ಆದರೆ ಕೆಲವೊಮ್ಮೆ ತನ್ನ ಮಕ್ಕಳ ಮೇಲಿನ ಮೋಹದಿಂದ ದುರ್ಯೋಧನಾದಿಗಳ ಮಾತನ್ನು ಮನ್ನಿಸಿ ಪರಿಸ್ಥಿತಿ ಕೆಟ್ಟದ್ದೂ ಉಂಟು. ಕೊನೆಗೆ ಪಾಂಡವ ಕೌರವರ ನಡುವೆ ಮಹಾಭಾರತ ಯುದ್ಧ ನಡೆಯಿತು.



ದುಃಖಿ ಧೃತರಾಷ್ಟ್ರ

ಮಹಾಭಾರತ ಯುದ್ಧದಲ್ಲಿ ತಮ್ಮ ಪುತ್ರರೆಲ್ಲ ಮಡಿದಾಗ ಧೃತರಾಷ್ಟ್ರ ಅಪಾರ ದುಃಖ ಅನುಭವಿಸಿದ. ಶ್ರೀಕೃಷ್ಣ, ವ್ಯಾಸರು ಅವನನ್ನು ಸಂತೈಸಿದರು. ಹಸ್ತಿನಾವತಿಯ ರಾಜ್ಯಾಧಿಕಾರವನ್ನು ಪಡೆದುಕೊಂಡ ಪಾಂಡವರು ಆತನ ಶುಶ್ರೂಷೆ ಮಾಡಿದರು. ಆದರೆ ಮುಂದೆ ಭೀಮನ ಕೆಲವು ತಿರಸ್ಕಾರದ ಮಾತಿನಿಂದ ನೊಂದ ಧೃತರಾಷ್ಟ್ರ ವನವಾಸಕ್ಕೆ ಹೋದ. ಕುಂತಿ, ಗಾಂಧಾರಿಯರೂ ಅವನೊಡನೆ ಕಾಡಿಗೆ ಹೋದರು. ಒಮ್ಮೆ ಗಂಗೆಯಲ್ಲಿ ಸ್ನಾನಮಾಡಿ ಆಶ್ರಮಕ್ಕೆ ಹಿಂದಿರುಗುವ ದಾರಿಯಲ್ಲಿ ಉರಿಯುತ್ತಿದ್ದ ಕಾಳ್ಗಿಚ್ಚನ್ನು ಸ್ವ ಇಚ್ಛೆಯಿಂದ ಹೊಕ್ಕಾಗ ಧೃತರಾಷ್ಟ್ರ, ಗಾಂಧಾರಿ, ಕುಂತಿಯರ ಅವಸಾನವಾಯಿತು.

ಧೋಂಡಿಯಾ ವಾಘ್


ಶಿವಮೊಗ್ಗ ಜಿಲ್ಲೆಯ ಚನ್ನಗಿರಿಯ ನಿವಾಸಿ ಧೋಂಡಿಯಾ ವಾಘ್ ಬ್ರಿಟಿಷರನ್ನು ಎದುರಿಸಿದ ವೀರ. ಮಹಾ ಸಾಹಸಿ. 'ವಾಘ್' ಎಂದರೆ ಮರಾಠಿಯಲ್ಲಿ ಹುಲಿ. ವಾಘ್ ಮನೆತನದ ಧೋಂಡಿಯಾ ಹುಲಿಯಂತೆ ಶೂರನಾಗಿದ್ದ.

1794ರಲ್ಲಿ ಧೋಂಡಿಯಾ ಟಿಪ್ಪುಸುಲ್ತಾನನ ಸೈನ್ಯ ಸೇರಿದ. ಆಗ ಮೇಲಿನ ಹುದ್ದೆಯ ಆಸೆ ತೋರಿಸಿ ಈತನನ್ನು ಇಸ್ಲಾಂ ಮತಕ್ಕೆ ಸೇರಿಸುವ ಪ್ರಯತ್ನ ನಡೆಯಿತು. ಧೋಂಡಿಯಾ ಒಪ್ಪದ ಕಾರಣ ಬಲಾತ್ಕಾರವಾಗಿ ಮತಾಂತರಿಸಿ ಸೆರೆಮನೆಗೆ ಹಾಕಲಾಯಿತು. 1799ರಲ್ಲಿ ಟಿಪ್ಪುವಿನ ಮರಣಾನಂತರ ಶ್ರೀರಂಗಪಟ್ಟಣದ ಸೆರೆಯಿಂದ ಧೋಂಡಿಯಾ ಪಾರಾಗಿ ಬಿದನೂರು ಪ್ರದೇಶಕ್ಕೆ ಬಂದು, ತನ್ನದೇ ಸೈನ್ಯ ಕಟ್ಟಿದ. ನೌಕರಿಯಿಂದ ತೆಗೆಯಲ್ಪಟ್ಟ ಅನೇಕ ಸೈನಿಕರು, ಬ್ರಿಟಿಷರ ನೀತಿಯಿಂದ ಬೇಸರಗೊಂಡಿದ್ದ ಜನರು ಇವನೊಡನೆ ಸೇರಿಕೊಂಡರು. ಧೋಂಡಿಯಾ ಹಣ ಸಂಗ್ರಹಿಸಿದ. ಬಿದನೂರಿನ ಸುತ್ತಲಿನ ಪ್ರದೇಶವನ್ನು ವಶಪಡಿಸಿಕೊಂಡು ತನ್ನದೇ ಆದ ಚಿಕ್ಕ ರಾಜ್ಯವನ್ನು ರೂಪಿಸಿಕೊಂಡ. 'ಎರಡು ಲೋಕಗಳ ಒಡೆಯ' ಎಂಬ ಬಿರುದನ್ನು ಧರಿಸಿದ.

ಬ್ರಿಟಿಷ್ ಸೈನ್ಯ 1799 ಆಗಸ್ಟ್ 17ರಂದು ಶಿವಮೊಗ್ಗದ ಮೇಲೆ ಏರಿ ಬಂತು. ಶಿಕಾರಿಪುರದ ಹತ್ತಿರ ನಡೆದ ಕದನದಲ್ಲಿ ಧೋಂಡಿಯಾ ಸೋತರೂ ತಪ್ಪಿಸಿಕೊಂಡು ಉತ್ತರ ಕರ್ನಾಟಕ ಗಡಿಯನ್ನು ಸೇರಿದ. ಇಲ್ಲಿ ಮರಾಠಾ ಸೇನಾಪತಿ ಗೋಖಲೆ ಇವನನ್ನು ಎದುರಿಸಿದ. ಆಗ ಈತ ತಲೆಮರೆಸಿಕೊಳ್ಳಬೇಕಾಯಿತು. ಸೈನ್ಯ ಸಂಗ್ರಹಿಸುತ್ತ ಸುತ್ತಲಿನ ಅರಸರಿಗೆ ಬ್ರಿಟಿಷರ ವಿರುದ್ಧ ಹೋರಾಡಲು ಆಹ್ವಾನವಿತ್ತ.

ಜೂನ್ 1800ರಲ್ಲಿ ತುಂಗಭದ್ರಾ ಮತ್ತು ಮಲಪ್ರಭಾ ನದಿಗಳ ನಡುವಿನ ಪ್ರದೇಶದಲ್ಲಿ ತನ್ನ ಚಟುವಟಿಕೆ ಆರಂಭಿಸಿದ. ಅತ್ತ ವೆಲ್ಲೆಸ್ಲಿಯ ಸೈನ್ಯವನ್ನು ಎದುರಿಸಿದಂತೆ, ಇತ್ತ ಮರಾಠಾ ಸರದಾರ ಪಂತ ಗೋಖಲೆಯ ಸೈನ್ಯವನ್ನೂ ಎದುರಿಸಬೇಕಾಯಿತು. ಯುದ್ಧನಿಪುಣನಾದ ಧೋಂಡಿಯಾ ಕಿತ್ತೂರಿನ ಬಳಿ ಗೋಖಲೆಯ ಸೈನ್ಯದ ಮೇಲೆ ಹಠಾತ್ತನೆ ದಾಳಿ ಮಾಡಿದ. 10,000 ಕುದುರೆ ಸವಾರರು 5000 ಕಾಲ್ದಳದವರು 8 ಫಿರಂಗಿಗಳಿದ್ದರೂ ಗೋಖಲೆ ಈ ಅನಿರೀಕ್ಷಿತ ದಾಳಿಗೆ ಈಡಾಗಿ ಸೋತು ಮಡಿದ.

ಊಟ ನಿದ್ರೆಯಿಲ್ಲದೆ ಧೋಂಡಿಯಾನ ಬೆನ್ನು ಹತ್ತಿದ ವೆಲ್ಲೆಸ್ಲಿ ಮಲಪ್ರಭಾ ಬಲದಂಡೆಯಲ್ಲಿ ಆತನ ಮೇಲೆ ದಾಳಿಮಾಡಿದ. ಧೋಂಡಿಯಾ ತನ್ನ ಸರಂಜಾಮು, ಆನೆ, ಒಂಟೆ, ಕುದುರೆ, ಎತ್ತುಗಳನ್ನು ಬಿಟ್ಟು ತಪ್ಪಿಸಿಕೊಂಡ. ಶಿರಹಟ್ಟಿಯಲ್ಲಿ ಆಂಗ್ಲರು ಧೋಂಡಿಯಾನ ಮೇಲೆ ಏರಿಬಂದರು. ಈ ಎಲ್ಲ ಆಕ್ರಮಣಗಳಿಂದ ಪಾರಾಗಿ ಧೋಂಡಿಯಾ ಕೊನೆಗೆ ನಿಜಾಮನ ಸೀಮೆಯನ್ನು ಪ್ರವೇಶಿಸಿದ.



ಧೋಂಡಿಯಾ ಬಳಸಿದ ಖಡ್ಗ

ನಿಧಾನವಾಗಿ ಧೋಂಡಿಯಾನನ್ನು ಹಿಂಬಾಲಿಸಿದ ವೆಲ್ಲೆಸ್ಲಿ, 1800 ಸೆಪ್ಟೆಂಬರ್ 10ರಂದು, ನಿಜಾಮ ರಾಜ್ಯದ ಕೋಣಗಲ್ಲಿನ ಹತ್ತಿರ ಈತನನ್ನು ಸುತ್ತುವರಿದ. ಆದರೂ ಸಾಹಸಿಯಾದ ಧೋಂಡಿಯಾ ತನ್ನ ಸೈನ್ಯವನ್ನು ಹುರಿದುಂಬಿಸಿ ಬ್ರಿಟಿಷರನ್ನು ಹುಲಿಯಂತೆ ಎದುರಿಸಿದ. ಈ ಯುದ್ಧದಲ್ಲಿ ವೀರಮರಣ ಹೊಂದಿದ.

ಸಾಕಷ್ಟು ಬಲಶಾಲಿಯಾದ ಧೋಂಡಿಯಾ ವಾಘ್ ಸಿಪಾಯಿ ದಂಗೆಗೆ ಅರ್ಧ ಶತಕ ಪೂರ್ವದಲ್ಲೇ ಬ್ರಿಟಿಷರನ್ನು ಸದೆಬಡೆಯುವ ಪ್ರಯತ್ನಮಾಡಿದ್ದ.

"ಅವಕಾಶ ದೊರೆತಿದ್ದರೆ ಧೋಂಡಿಯಾ ಎರಡನೆಯ ಹೈದರಾಲಿಯಾಗುತ್ತಿದ್ದನೆಂಬುದರಲ್ಲಿ ಸಂದೇಹವಿಲ್ಲ"–ಎಂದು ಆಂಗ್ಲ ಇತಿಹಾಸಕಾರ ಎಡ್ವರ್ಡ್ ಥಾರ್ನ್‌ಟನ್ ಹೇಳಿದ್ದಾನೆ.

ನಂಗಪರ್ವತ

ಹಿಮಾಲಯದ ಶಿಖರಗಳಲ್ಲೊಂದಾದ ನಂಗಪರ್ವತ 26,660 ಅಡಿ ಎತ್ತರವಿದೆ. ನಂಗ ಎಂದರೆ ನಗ್ನ. ಈ ಹಿಮಾಚ್ಛಾದಿತ ಶಿಖರ ಅನೇಕ ಪರ್ವತಾರೋಹಿಗಳನ್ನು ಆಹುತಿ ತೆಗೆದುಕೊಂಡಿರುವುದರಿಂದ ಬಹಳ ಕಾಲ 'ಘಾತಕ ಪರ್ವತ' ಎನಿಸಿಕೊಂಡಿತ್ತು.

ಈ ಪರ್ವತವನ್ನು ಹತ್ತುವ ಮೊದಲ ಪ್ರಯತ್ನ ನಡೆದದ್ದು 1895ರಲ್ಲಿ. ಆಗ ಪರ್ವತಾರೋಹಿ ಆಲ್‌ಫ್ರೆಡ್ ಎಫ್. ಮಮರಿ ಮತ್ತು ಬೇರೆ ಹೊತ್ತಿದ್ದವರು ಕಾಣೆಯಾಗಿದ್ದರು.

ಜರ್ಮನಿಯ ಪರ್ವತಾರೋಹಿಗಳು 1932, 1934, 1937, 1938 ಮತ್ತು 1939ರಲ್ಲಿ ಈ ಶಿಖರ ಏರಲು ಪ್ರಯತ್ನಿಸಿದರು.

ನಗ್ನ ಪರ್ವತ



ಕೊನೆಗೊಮ್ಮೆ ಜಯಶೀಲನಾದವನು ಜರ್ಮನಿ–ಆಸ್ಟ್ರಿಯ ತಂಡದ ಹರ್ಮನ್ ಬೂಲ್. ಈತ 1953 ಜುಲೈ 4ರಂದು ಏಕಾಂಗಿಯಾಗಿ ಈ ಶಿಖರವನ್ನು ಏರಿದ.

ನಂದರು

ಮಗಧದಲ್ಲಿ ಶಿಶುನಾಗರ ಸಾಮ್ರಾಜ್ಯದ ಅನಂತರ ಅಲ್ಪ ಕಾಲ ನಂದರು ಆಳಿದರು. ಪಾಟಲಿಪುತ್ರವನ್ನು ಚಂದ್ರಗುಪ್ತ ಮೌರ್ಯ ಗೆಲ್ಲುವ ಮೊದಲು ಕ್ರಿ.ಪೂ. ನಾಲ್ಕನೆಯ ಶತಮಾನದಲ್ಲಿ ಕೆಲವು ದಶಕಗಳ ಕಾಲ ಆಳಿದ ನಂದರನ್ನು ನವನಂದರೆಂದೂ ಕರೆಯುತ್ತಾರೆ.

ಶಿಶುನಾಗ ಸಂತತಿ ಪತನದ ಬಳಿಕ ಪಟ್ಟವೇರಿದವನು ಮಹಾಪದ್ಮನಂದ. ಅವನಿಗೆ ಉಗ್ರಸೇನ ಎಂಬ ಹೆಸರೂ ಇತ್ತು. ಆರಂಭದಲ್ಲಿ ಅವನು ದರೋಡೆಕಾರರ ಗುಂಪಿನ ನಾಯಕನಾಗಿದ್ದು, ಅನಂತರ ಮಗಧವನ್ನು ಗೆದ್ದು ಪಾಟಲಿಪುರವನ್ನು ರಾಜಧಾನಿಯಾಗಿ ಮಾಡಿಕೊಂಡ. ಉತ್ತರ ಭಾರತದಲ್ಲಿನ ಅನೇಕ ರಾಜವಂಶಗಳನ್ನು ಸೋಲಿಸಿ, ವಿಶಾಲ ಹಾಗೂ ಸುಭದ್ರ ಮಗಧ ಸಾಮ್ರಾಜ್ಯದ ಸ್ಥಾಪನೆಗೆ ದಾರಿಮಾಡಿಕೊಟ್ಟ. ಇವನ ಎಂಟು ಮಕ್ಕಳಲ್ಲಿ ಕೊನೆಯವನಾದ ಧನನಂದ ತನ್ನ ಐಶ್ವರ್ಯವನ್ನು ಹೆಚ್ಚಿಸಿಕೊಳ್ಳಲು ಪ್ರಜೆಗಳನ್ನು ಪೀಡಿಸಿದ. ಚಂದ್ರಗುಪ್ತ ಮೌರ್ಯ ಕ್ರಿ.ಪೂ. 324ರಲ್ಲಿ ಇವನನ್ನು ಸೋಲಿಸಿ ಮೌರ್ಯ ವಂಶವನ್ನು ಸ್ಥಾಪಿಸಿದ.

ಉತ್ತರ ಭಾರತದ ಬಹುಭಾಗವನ್ನೂ ದಕ್ಷಿಣದಲ್ಲಿ ಕಳಿಂಗ ಹಾಗೂ ಕರ್ನಾಟಕದ ಉತ್ತರ ಭಾಗಗಳನ್ನೂ ನಂದರ ಸಾಮ್ರಾಜ್ಯ ಒಳಗೊಂಡಿತ್ತು.

ನಂದಲಾಲ ಬಸು

ನೋಡಿ : ಸಂಪುಟ ೫

ನಂದಾದೇವಿ ಪರ್ವತ

ಮಾನವನ ಸಾಹಸ ಪ್ರವೃತ್ತಿಗೆ ಸವಾಲಾಗಿ ನಿಂತಿರುವ ಪರ್ವತ, ನಂದಾದೇವಿ. ಭಾರತ–ನೇಪಾಳ ಗಡಿಯಲ್ಲಿರುವ ನಂದಾದೇವಿಯ ಎತ್ತರ 25,645 ಅಡಿ. ಇದು ಹಿಮಾಲಯದ ಒಂದು ಶಿಖರ.

ಬ್ರಿಟಿಷರು ಮತ್ತು ಅಮೆರಿಕನವರು ಒಟ್ಟಾಗಿ ಈ ಶಿಖರ ಏರಲು ಈ ಶತಮಾನದ 3ನೆಯ ದಶಕದಲ್ಲಿ ಪ್ರಯತ್ನ ಮಾಡಿದರು. ನೋಯೆಲ್ ಇ. ಓಡೆಲ್ ಮತ್ತು ಎಚ್.ಡಬ್ಲ್ಯು. ಟಿಲ್‌ಮನ್ 1936ರಲ್ಲಿ ಶಿಖರವನ್ನೇರಿ ದಾಖಲೆ ಸ್ಥಾಪಿಸಿದರು. ಮುಂದೆ 14 ವರ್ಷಗಳ ವರೆಗೆ ಬೇರೆ ಯಾರೂ ಈ ಶಿಖರವನ್ನೇರಲಿಲ್ಲ.

ಪೋಲೆಂಡಿನವರು 1939ರಲ್ಲಿ ಈ ಪರ್ವತದ ಪೂರ್ವಭಾಗದ ಶಿಖರ (24,379 ಅಡಿ) ಎತ್ತರ ಏರುವುದರಲ್ಲಿ ಯಶಸ್ವಿಯಾದರು.

ನಂದಿಬೆಟ್ಟ

ಶ್ರೀಸಾಮಾನ್ಯನ ಊಟಿ ಎಂದು ಹೆಸರಾದ ಗಿರಿಧಾಮ —ನಂದಿಬೆಟ್ಟ. ಗಾಂಧೀಜೀ 1936ರಲ್ಲಿ, ದೀರ್ಘ ಉಪವಾಸದ ಅನಂತರ ಸುಧಾರಿಸಿಕೊಳ್ಳಲು ನಂದಿಬೆಟ್ಟದಲ್ಲಿ ತಂಗಿದ್ದರು.



ಶ್ರೀಸಾಮಾನ್ಯನ ಊಟಿ

1962ರಲ್ಲಿ ಬ್ರಿಟಿಷ್ ರಾಣಿ ಎಲಿಜಬೆತ್ ವಿಶ್ರಾಂತಿಗಾಗಿ ಕೆಲ ದಿನಗಳ ಇಲ್ಲಿ ಕಳೆದಿದ್ದರು.

ಈ ಬೆಟ್ಟ ಬೆಂಗಳೂರಿನಿಂದ 38 ಮೈಲು ದೂರದಲ್ಲಿದೆ. ವಿಸ್ತಾರವಾ ಸುಂದರ ಬಯಲು ಪ್ರದೇಶದ ಮಧ್ಯೆ ತಲೆಯೆತ್ತಿ ನಿಂತ ಕಡಿದಾದ ಬೆ ನಂದಿ. ಮೇಲಕ್ಕೆ ಹೋಗಲು ಬೆಟ್ಟದ ಪಶ್ಚಿಮ ಬದಿಯಲ್ಲಿ ವಾಹ ಸಂಚಾರ ಯೋಗ್ಯವಾದ ರಸ್ತೆಯಿದೆ. ಸಮುದ್ರಮಟ್ಟದಿಂದ 4851 ಅ ಎತ್ತರವಾಗಿರುವ ಈ ಬೆಟ್ಟ ಕಡುಬೇಸಗೆಯಲ್ಲೂ ತಂಪಾಗಿರುತ್ತದೆ. ಬೆಟ್ಟ ಮೇಲೆ ವನಪ್ರದೇಶವೂ ಇದೆ. ಇದರಲ್ಲಿ ತಿರುಗಾಡಲು ಮಾರ್ಗವಿದೆ.

ಉತ್ತರ ಪಿನಾಕಿನಿ, ದಕ್ಷಿಣ ಪಿನಾಕಿನಿ, ಪೆನ್ನಾರ್, ಅರ್ಕಾವ ಚಿತ್ರಾವತಿ ಮೊದಲಾದ ನದಿಗಳ ಉಗಮ ನಂದಿಬೆಟ್ಟ ಪ್ರದೇಶದಲ್ಲಿ.

18ನೆಯ ಶತಮಾನದಲ್ಲಿ ಚಿಕ್ಕಬಳ್ಳಾಪುರದ ನಾಯಕರು ಬೆಟ್ಟದ ಮೇ ಕೋಟೆ ಕಟ್ಟಿಸಿದರು. ಅನಂತರ ಇದು ಹೈದರಾಲಿ ಮತ್ತು ಟಿಪ್ಪು ಸುಲ್ತಾನರ ವಿಶ್ರಾಂತಿಧಾಮವಾಗಿತ್ತು. ದುರ್ಗಮವಾದ ಈ ಬೆಟ್ಟ ರಕ್ಷಣಾ ವ್ಯವಸ್ಥೆಯನ್ನು ಇವರು ಮತ್ತಷ್ಟು ಬಲಪಡಿಸಿದರು.

1,000 ಅಡಿಗಳಷ್ಟು ಕಡಿದಾದ ಪ್ರಪಾತ ಒಂದು ಇಲ್ಲಿದೆ. ಮರಣ ದಂಡನೆಗೆ ಒಳಗಾದ ತನ್ನ ಕೈದಿಗಳನ್ನು ಟಿಪ್ಪು ಇಲ್ಲಿಂದ ಕೆಳಕ್ಕೆ ತಳ್ಳಿಸುತ್ತಿದ್ದ ಎಂದು ಹೇಳುತ್ತಾರೆ. ಅದರಿಂದಾಗಿ ಇದಕ್ಕೆ 'ಟಿಪ್ಪೂಸ್ ಡ್ರಾಪ್' (ಟಿಪ್ಪು ಪ್ರಪಾತ) ಎಂಬ ಹೆಸರು ಬಂದಿದೆ.

ಹಲವಾರು ವರ್ಷ ಕಾಲ ನಂದಿಬೆಟ್ಟ, ಮೈಸೂರು ಸಂಸ್ಥಾನದಲ್ಲಿದ್ದ ಬ್ರಿಟಿಷ್ ಸರಕಾರದ ಅಧಿಕಾರಿಗಳ ಬೇಸಿಗೆಯ ಬೀಡಾಗಿತ್ತು.

ಪ್ರವಾಸಿಗಳು ಉಳಿದುಕೊಳ್ಳಲು ಇಲ್ಲಿ ವಿಶ್ರಾಂತಿಗೃಹಗಳಿವೆ. ಬೆಟ್ಟದ ತುದಿಯಲ್ಲಿರುವ ಕಣಿವೆಯ ಬದಿಯಲ್ಲಿ 'ಅಮೃತ ಸರೋವರ' ಎಂಬ ಕೊಳವಿದೆ. ಈ ಸರೋವರದ ನೀರು ರುಚಿಕರವೂ ಆರೋಗ್ಯಕರವೂ ಆಗಿದೆ.

ಬೆಟ್ಟದ ಸೌಂದರ್ಯಕ್ಕೆ ಪಾವಿತ್ರ್ಯದ ಕಳೆ ನೀಡಿರುವುದು ಇಲ್ಲಿರುವ ಯೋಗ ನಂದೀಶ್ವರ ದೇವಾಲಯ. ಬೆಟ್ಟದ ಬುಡದ ನಂದಿಗ್ರಾಮದಲ್ಲಿ ಭೋಗನಂದೀಶ್ವರನ ದೇವಾಲಯ ಇದೆ. ಇವೆರಡು ದ್ರಾವಿಡಶೈಲಿಯ ಪ್ರಾಚೀನ ದೇವಾಲಯಗಳು.

ನಚಿಕೇತ

ನಚಿಕೇತ ವಾಜಶ್ರವಸನ ಮಗ. ವಾಜಶ್ರವಸ್ ವಿಶ್ವಜಿತ್ ಎಂಬ ಯಜ್ಞ ಮಾಡಿದ. ಅನಂತರ ತನ್ನ ಸರ್ವಸ್ವವನ್ನೂ ದಾನ ಮಾಡತೊಡಗಿದ.

...ದೆ ಬಡಕಲು ಪಶುಗಳನ್ನು ದಾನ ಕೊಡುತ್ತಿದ್ದುದನ್ನು ನೋಡಿದ ...ಬಾಲಕ ನಚಿಕೇತ. "ನನ್ನನ್ನು ಯಾರಿಗೆ ಕೊಡುತ್ತೀರಿ?" ಎಂದು ತಂದೆಯನ್ನು ಕೇಳಿದ. ಉತ್ತರ ಬರಲಿಲ್ಲ. ಮತ್ತೆ ಮತ್ತೆ ಕೇಳಿದ. ಕೋಪಗೊಂಡ ವಾಜಶ್ರವಸ್ "ಯಮನಿಗೆ" ಎಂದ. ನಚಿಕೇತ ನಿರ್ಭೀತನಾಗಿ ಯಮನ ಮನೆಗೆ ಹೋದ.

ಆದರೆ ಯಮ ಅಲ್ಲಿ ಇರಲಿಲ್ಲ. ನಚಿಕೇತ ನಿರಾಹಾರಿಯಾಗಿ ಮೂರು ದಿನ ಅವನಿಗಾಗಿ ಕಾದ. ಹಿಂದಿರುಗಿದ ಯಮ ಪೂಜಾರ್ಹನಾದ ಅತಿಥಿ ಉಪವಾಸದಿಂದ ಇದ್ದುದನ್ನು ಕಂಡು, ಮೊದಲು ಅವನಿಗೆ ಸತ್ಕಾರಮಾಡಿದ; ಮೂರು ವರಗಳನ್ನು ಕೊಡುವುದಾಗಿ ಹೇಳಿದ.

ನಚಿಕೇತ ಬೇಡಿದ ಮೊದಲನೆಯ ವರ, ತಂದೆ ತನ್ನ ಬಗೆಗೆ ಪ್ರಸನ್ನನಾಗಿರಲಿ —ಎಂದು. ಯಮ ಅದನ್ನು ಕರುಣಿಸಿದ. ತನಗೆ ಅಗ್ನಿ ವಿದ್ಯೆಯನ್ನು ತಿಳಿಸಿಕೊಡಬೇಕು ಎಂಬುದು ಎರಡನೆಯ ವರ. ಯಮ ಅದನ್ನು ತಿಳಿಸಿಕೊಟ್ಟ. ಮನುಷ್ಯ ಮೃತನಾದ ಮೇಲೆ ಆತ್ಮ ಉಳಿಯುವುದೇ



ಅಥವಾ ಅಳಿಯುವುದೇ ಎಂಬುದನ್ನು ತಿಳಿಸಬೇಕು ಎಂಬುದು ಮೂರನೆಯದು. ದೇವತೆಗಳಿಗೂ ತಿಳಿದುಕೊಳ್ಳಲು ಕಷ್ಟಸಾಧ್ಯವಾಗಿರುವ ಈ ವಿಚಾರವನ್ನು ನಚಿಕೇತ ಕೇಳಿದಾಗ. ಅದರ ಬದಲು ಯಮ ಅವನಿಗೆ ಐಶ್ವರ್ಯ, ಭೋಗಭಾಗ್ಯ, ರಾಜ್ಯಗಳನ್ನು ಕೊಡುವ ಪ್ರಲೋಭನೆ ಒಡ್ಡಿದ. ಆದರೂ ನಚಿಕೇತ ಅವೆಲ್ಲ ಅನಿತ್ಯವೆಂದು ನಿರಾಕರಿಸಿ, ತಾನು ಮೊದಲು ಕೇಳಿದ ವರವನ್ನೇ ಕರುಣಿಸಬೇಕೆಂದು ಕೇಳಿ, ಯಮನಿಂದ ಉತ್ತರ ಪಡೆದು, ತಂದೆಯ ಬಳಿಗೆ ಹಿಂದಿರುಗಿದ.

ನಚಿಕೇತನ ಕಥೆ ಕಠೋಪನಿಷತ್ತಿನಲ್ಲಿದೆ.

ನೋಡಿ : ಕಠೋಪನಿಷತ್

ನಟರಾಜ

ನೋಡಿ : ಸಂಪುಟ ೫



ನಟರಾಜ —15ನೆಯ ಶತಮಾನದ ರಚನೆ

ನರ್ಮದಾ

ಒಮ್ಮೆ, ಶಿವ, ಉಮೆಯ ಒಡಗೂಡಿ. ಋಕ್ಷಾಪರ್ವತದ ಮೇಲೆ ತಪಸ್ಸುಮಾಡುತ್ತಿದ್ದ. ಈ ಘೋರ ತಪಸ್ಸಿನ ಪರಿಣಾಮವಾಗಿ ಆತನ ದೇಹವೆಲ್ಲ ಬೆವರಿತು. ಬೆವರು ನದಿಯಾಗಿ ಹರಿಯತೊಡಗಿತು. ಹೆಣ್ಣಿನ ರೂಪ ತಳೆದು ಶಿವನನ್ನು ಒಲಿಸಿಕೊಂಡ ಈ ಜಲಧಾರೆ, "ಪವಿತ್ರವಾಗಿರು, ಅಕ್ಷಯವಾಗಿರು," ಎಂಬ ಅನುಗ್ರಹ ಪಡೆಯಿತು. ಈ ರುದ್ರಕನ್ಯೆಯ ಮೋಹಕ ರೂಪಿಗೆ ದೇವದಾನವರು ಮರುಳಾದರು. ಅವರಿಗೆ ಚಿತ್ತಭ್ರಾಂತಿಯಾಯಿತು. ದೃಢಕಾಯರಾದ ಸುಂದರಾಂಗರು ಮಾತ್ರ ಆಕೆಯನ್ನು ಹೊಂದಲು ಸಾಧ್ಯ–ಎಂದ ಶಿವ. ತನ್ನನ್ನು ಹಿಡಿಯಲು ಬಂದ ದೇವ, ದಾನವರು ತೀರಾ ಹತ್ತಿರವಾದಾಗ, ಮರೆಯಾಗಿ ಕಣ್ಣುಮುಚ್ಚಾಲೆಯಾಡಿದಳು ರುದ್ರಕನ್ಯೆ. ಈ ಮೋಡಿಯನ್ನು ಮೆಚ್ಚಿದ ಶಿವ ಈಕೆಯನ್ನು 'ನರ್ಮದಾ' (ವಿನೋದ ನೀಡುವವಳು) ಎಂದು ಕರೆದ. ಕೊನೆಗೆ ನರ್ಮದೆಯನ್ನು ಸಾಗರನಿಗೆ ಕೊಟ್ಟು ಮದುವೆಯಾಯಿತು.

ಇದು ನರ್ಮದಾ ನದಿಯನ್ನು ಕುರಿತ ಕಥೆ. ರುದ್ರಕನ್ಯೆ, ಅಯೋನಿಜೆ (ತಾಯಿ ಇಲ್ಲದವಳು) –ಎಂಬ ಹೆಸರುಗಳೂ ಈ ನದಿಗೆ ಇವೆ.

ಈ ನದಿಯ ಬಗೆಗೆ ಮಹಾಭಾರತ, ಮತ್ಸ್ಯ, ಪದ್ಮ, ಕೂರ್ಮ, ಸ್ಕಂದ ಪುರಾಣಗಳಲ್ಲಿ ಪ್ರಸ್ತಾಪವಿದೆ.

ಅಮರಕಂಟಕದ ದಕ್ಷಿಣದಲ್ಲಿ ಹುಟ್ಟುವ ಈ ನದಿ 801 ಮೈಲು ದೂರ ಹರಿದು ಕ್ಯಾಂಬೆ ಖಾರಿಯನ್ನು ಸೇರುತ್ತದೆ. ಪ್ರವಾಹದ ದಾರಿಯಲ್ಲಿ ಕಪಿಲಾ, ವೈಶಾಲ್ಯ, ಎರಂದಿ, ಇಕ್ಷು ನದಿಗಳು ಇದನ್ನು ಸೇರುತ್ತವೆ. ಕಪಿಲಾಧಾರದಲ್ಲಿ ಸುಮಾರು 70–80 ಅಡಿ ಎತ್ತರದ ಜಲಪಾತವಿದೆ.

ಗುಡ್ಡಬೆಟ್ಟಗಳಲ್ಲಿ ಹಾದು ಜಬ್ಬಲ್‌ಪುರದ ಬಳಿ ಮತ್ತೆ 30 ಅಡಿ ಗಳಷ್ಟು ಕೆಳಕ್ಕೆ ಧುಮುಕುತ್ತದೆ. ಈ ಜಲಪಾತಕ್ಕೆ ಧುರಂಧರ ಎಂದು ಹೆಸರು. ಅಮೃತಶಿಲೆ ಬಂಡೆಗಳ ಪ್ರದೇಶದಲ್ಲಿ ಹರಿದು, ಪಶ್ಚಿಮ ದಿಕ್ಕಿನಲ್ಲಿ ವಿಂಧ್ಯ ಪರ್ವತ ಮತ್ತು ಸಾತ್ಪುರ ಬೆಟ್ಟಗಳ ನಡುವಿನ ಕಣಿವೆಯಲ್ಲಿ ಸಾಗುತ್ತದೆ. ಇಲ್ಲಿ ನದಿಯ ಇಕ್ಕೆಲಗಳಲ್ಲಿ ದಟ್ಟವಾದ ಕಾಡುಗಳು. ಈ ನದಿ ಗುಜರಾತ್ ರಾಜ್ಯದಲ್ಲಿ ಸುಮಾರು 170 ಮೈಲು ಹರಿದು ಬರೂಚ್ ಸಮೀಪದಲ್ಲಿ ಸಮುದ್ರ ಸೇರುತ್ತದೆ.

ನರ್ಮದಾ ನದಿಯ ನೀರನ್ನು ನೀರಾವರಿಗಾಗಿ ಉಪಯೋಗಿಸಿಕೊಳ್ಳಲು ನರ್ಮದಾ ಯೋಜನೆಯನ್ನು ರೂಪಿಸಲಾಗಿದೆ. ಇದರಿಂದ 9.97,500 ಎಕರೆ ಜಮೀನಿಗೆ ನೀರು ಒದಗುತ್ತದೆ.

ನರ್ಮದಾ ಭಾರತದ ಪವಿತ್ರ ನದಿಗಳಲ್ಲೊಂದು. ಇದರ ತೀರದಲ್ಲಿ ಸುಕಲ ತೀರ್ಥ ಮುಂತಾದ ಪುಣ್ಯಕ್ಷೇತ್ರಗಳಿವೆ.



ಬಂಡಾಯ : ಬಾಬಾಸಾಹೇಬ


ನರಗುಂದ ಬಾಬಾಸಾಹೇಬ

ಧಾರವಾಡ ಜಿಲ್ಲೆಯಲ್ಲಿರುವ ನರಗುಂದ, ಕರ್ನಾಟಕದ ಹಳೆಯ ರಾಜ್ಯ. 1674ರಲ್ಲಿ ಛತ್ರಪತಿ ಶಿವಾಜಿ ನರಗುಂದ ಕೋಟೆಯನ್ನು ಕಟ್ಟಿಸಿದ ಎಂದು ಹೇಳುತ್ತಾರೆ.

ರಾಮರಾವ್ ಭಾವೆ ಈ ಸಂಸ್ಥಾನದ ಸ್ಥಾಪಕ. ಇದೇ ವಂಶದ ದಾದಾಜಿರಾಯನಿಗೆ ಭಾಸ್ಕರರಾವ್ ಮತ್ತು ಹರಿಹರರಾವ್ ಎಂಬ ಇಬ್ಬರು ಮಕ್ಕಳು. ಹಿರಿಯವನಾದ ಭಾಸ್ಕರರಾಯನೇ ಬಾಬಾಸಾಹೇಬ. ತಂದೆಯ ನಿಧನದ ಅನಂತರ 1842ರಲ್ಲಿ ಬಾಬಾಸಾಹೇಬ ನರಗುಂದ ಅರಸೊತ್ತಿಗೆ ಯನ್ನು ಪಡೆದ. ಆತ ತುಂಬ ಜಾಣ; ಧೈರ್ಯಶಾಲಿ.

ಬಾಬಾಸಾಹೇಬನಿಗೆ ಒಂದು ಗಂಡುಮಗು ಹುಟ್ಟಿತು. ಅದು ನಾಲ್ಕಾರು ತಿಂಗಳಲ್ಲಿ ತೀರಿಕೊಂಡಿತು. ಮುಂದೆ ಸಂತಾನವಾಗಲಿಲ್ಲ. ಬಾಬಾಸಾಹೇಬ ದತ್ತು ಪಡೆಯಲು ಧಾರವಾಡದ ಕಲೆಕ್ಟರ್ ಹಾಗೂ ಬೆಳಗಾಂವಿ ಕಮಿಷನರರ ಅನುಮತಿ ಕೋರಿದ. ಬಾಬಾಸಾಹೇಬ ಬ್ರಿಟಿಷರ ಸ್ನೇಹಿತನಾಗಿದ್ದರೂ ದತ್ತಕಕ್ಕೆ ಅವರ ಸಮ್ಮತಿ ದೊರೆಯಲಿಲ್ಲ. ಬಾಬಾಸಾಹೇಬ ಇದರಿಂದ ಅಸಮಾಧಾನಗೊಂಡ.

1857ರ ಉತ್ತರ ಭಾರತದ ದಂಗೆಯ ಕಿಡಿ ಕರ್ನಾಟಕಕ್ಕೂ ಹಬ್ಬಿದಾಗ ಮುಂಡರಗಿ ಭೀಮರಾಯ ಮತ್ತು ಹಮ್ಮಿಗಿ ದೇಸಾಯಿ ಕೆಂಚನಗೌಡರ ಜೊತೆಗೂಡಿ, ಬ್ರಿಟಿಷರನ್ನು ಎದುರಿಸಬೇಕೆಂದು ಬಾಬಾಸಾಹೇಬ ಸಿದ್ಧತೆ ಮಾಡಿದ. ಸುರಪುರ ವೆಂಕಟಪ್ಪನಾಯಕನೊಡನೆಯೂ ಆತ ಸಂಪರ್ಕ ಬೆಳೆಸಿದ.



ನರಗುಂದ ಕೋಟೆ

ಇದರ ಸುಳಿವು ಸಿಕ್ಕಿದಾಗ, ದಕ್ಷಿಣ ಮರಾಠಾ ಸಂಸ್ಥಾನಗಳ ಉಪರಾಜ ಕೀಯ ಪ್ರತಿನಿಧಿ ಚಾರ್ಲ್ಸ್ ಮ್ಯಾನ್ಸನ್ ನರಗುಂದ ಬಂಡಾಯವನ್ನು ಮೊಳಕೆ ಯಲ್ಲಿಯೇ ಚಿವುಟಲು ನಿರ್ಧರಿಸಿ ಕರ್ನಾಟಕಕ್ಕೆ ಬಂದ.

ಮ್ಯಾನ್ಸನ್ 1858 ಮೇ 29 ರಂದು ಸಂಜೆ ರಾಮದುರ್ಗದಿಂದ ಹೊರಟು ಸುರೇಬಾನದಲ್ಲಿ ವಸತಿ ಮಾಡಿದ. ಇದು ಬಾಬಾಸಾಹೇಬನಿಗೆ ತಿಳಿದು ಆತ 800 ಸೈನಿಕರೊಂದಿಗೆ ಸುರೇಬಾನಕ್ಕೆ ಬಂದು ಮ್ಯಾನ್ಸನನ ಸೈನ್ಯದ ಮೇಲೆ ಎರಗಿದ. ತನ್ನ ಮೇಣೆಯಲ್ಲಿ ಮಲಗಿದ್ದ ಮ್ಯಾನ್ಸನ್ ಎಚ್ಚೆತ್ತು ಸಮೀಪದ ದೇವಾಲಯದಲ್ಲಿ ಅಡಗಿಕೊಂಡ. ಹಿರೇಕೊಪ್ಪದ ವಿಷ್ಣು ಕುಲಕರ್ಣಿ ಎಂಬ ತರುಣ ಗುಡಿಯ ಬಾಗಿಲನ್ನು ಒಡೆದು ಮ್ಯಾನ್ಸನನ ರುಂಡವನ್ನು ಕತ್ತರಿಸಿದ. ಮ್ಯಾನ್ಸನನ ರುಂಡ ಮರುದಿನ ಬೆಳಗ್ಗೆ ನರಗುಂದದ ಅಗಸೆ ಬಾಗಿಲಿನಿಂದ ನೇತಾಡಿತು.

1858 ಜೂನ್ 1 ರಂದು ಕರ್ನಲ್ ಮಾಲ್ಕಮನ ನೇತೃತ್ವದಲ್ಲಿ ಕಂಪೆನಿ ಸೈನ್ಯ ನರಗುಂದ ಕೋಟೆಗೆ ಮುತ್ತಿಗೆ ಹಾಕಿತು. ನಾಡಿನ ವೀರರನ್ನು ಕೂಡಿಕೊಂಡು ಬಾಬಾಸಾಹೇಬ ಬ್ರಿಟಿಷರ ಜೊತೆ ಹೋರಾಡಿದ. ಆದರೆ ಜಯಶೀಲನಾಗಲಿಲ್ಲ. ಕೋಟೆಯಲ್ಲಿ ದ್ರೋಹವೂ ನಡೆದಿತ್ತು. ಸೋಲು ನಿಶ್ಚಿತವೆಂದು ತಿಳಿದಾಗ ಬಾಬಾಸಾಹೇಬ ತನ್ನ ಪ್ರಾಮಾಣಿಕ ಅನುಚರ ರೊಡನೆ ಕೋಟೆಯನ್ನು ಬಿಟ್ಟು ಹೊರಟ.

ಅತ್ತ ಆತನ ತಾಯಿ ಯಮುನಾಬಾಯಿ ಮತ್ತು ಪತ್ನಿ ಸಾವಿತ್ರಿಬಾಯಿ ಗುಪ್ತ ಮಾರ್ಗದಿಂದ ಹೊರಬಿದ್ದು, ಮಲಪ್ರಭಾ ನದಿಗೆ ಹಾರಿ ಪ್ರಾಣ ಬಿಟ್ಟರು. ಮರುದಿನ ಮಾರಿಹಾಳದ ಹತ್ತಿರ ಅವರ ಶವ ದೊರೆತು ಅಲ್ಲಿನ ಜನ ಅಗ್ನಿ ಸಂಸ್ಕಾರ ನೆರವೇರಿಸಿದರು.

ಬೆಳಗಾಂವಿ ಪೋಲೀಸ್ ಅಧಿಕಾರಿ ಫ್ರಾಂಕ್ ಸೂಟರ್ ತೋರಗಲ್ಲದ ಹತ್ತಿರ ಗುಪ್ತ ವೇಷದಲ್ಲಿದ್ದ ಬಾಬಾಸಾಹೇಬನನ್ನು ಜೂನ್ 2ರಂದು ಬಂಧಿಸಿದ. ಬಾಬಾಸಾಹೇಬನನ್ನು ಬೆಳಗಾವಿಗೆ ತಂದರು. ಮ್ಯಾನ್ಸನನ ಕೊಲೆಯ ಆರೋಪಕ್ಕಾಗಿ ಆತನನ್ನು ಜೂನ್ 12ರಂದು ಗಲ್ಲಿಗೆ ಹಾಕಿದರು. ಹೀಗೆ ಸ್ವಾಭಿಮಾನಿ ಬಾಬಾಸಾಹೇಬನ ಜೀವನ ಕೊನೆಗಂಡಿತು.

ನರಸಿ ಮೆಹತಾ

" ವೈಷ್ಣವ ಜನತೋ ತೇನೇ ಕಹೀಯೇ
ಜೇಪೀಡ ಪರಾಯೀ ಜಾಣೇರೇ... "

ಗಾಂಧೀಜಿಗೆ ಅತ್ಯಂತ ಪ್ರಿಯವಾಗಿದ್ದ ಈ ಗೀತೆಯನ್ನು ಬರೆದಾತ ಗುಜರಾತಿನ ಸಂತ ಕವಿ ನರಸಿ ಮೆಹತಾ.

ಇಡೀ ದಿನ ಯಾವುದೋ ಗುಂಗಿನಲ್ಲಿ ಕಾಲ ಕಳೆಯುತ್ತಿದ್ದ ತನ್ನ ತಮ್ಮ ನರಸಿಂಹ ಯಾವ ಕೆಲಸಕ್ಕೂ ಬಾರದ ಅಪ್ರಯೋಜಕ ಎಂಬ ಅಭಿಪ್ರಾಯ ಬನ್ಸಿಧರನದು. ಬನ್ಸಿಧರ ಕಂದಾಯ ಅಧಿಕಾರಿಯಾಗಿ ಪ್ರತಿಷ್ಠಿತ ವ್ಯಕ್ತಿಯಾಗಿದ್ದ. ತಮ್ಮನಿಗೆ ಬುದ್ಧಿ ಹೇಳಿ ಹೇಳಿ ಬೇಸತ್ತು ಕೊನೆಗೆ ಇವನನ್ನೂ ಇವನ ಹೆಂಡತಿಯನ್ನೂ ಮಗುವನ್ನೂ ಮನೆಯಿಂದ ಹೊರಗೆ ಅಟ್ಟಿದ. ಆದರೂ ಬೇಸರವಿಲ್ಲ ನರಸಿಗೆ. ಸಂಸಾರಸಮೇತ ಒಂದು ಧರ್ಮಶಾಲೆಗೆ ಹೋದ. ಹೆಂಡತಿ ಮತ್ತು ಮಗು ಹಸಿವೆಯಿಂದ ಕಂಗೆಟ್ಟು ನಿದ್ದೆ ಹೋಗಿದ್ದಾಗ ನರಸಿ ಮೆಹತಾ ಮೆಲ್ಲನೆ ಎದ್ದು ಊರ ಹೊರಗಿನ ಹಾಳು ದೇವಸ್ಥಾನಕ್ಕೆ ನಡೆದ. ಏಳು ದಿನ ಧ್ಯಾನಮಗ್ನನಾಗಿ ಕುಳಿತ. ರಾಧಾ–ಕೃಷ್ಣರ ರಾಸಲೀಲೆಯ ದರ್ಶನ ಆದಂತೆ ಅನಿಸಿತು. ಅನಂತರ ಶ್ರೀಕೃಷ್ಣನ ಮಹಿಮೆಯನ್ನು ಕುರಿತುಕೀರ್ತನೆಗಳನ್ನು ರಚಿಸಿ ಹಾಡುತ್ತ ತಿರುಗುವುದೇ ಇವನಉದ್ಯೋಗವಾಯಿತು.



"ವೈಷ್ಣವ ಜನತೋ...."

ಗುಜರಾತಿ ಸಾಹಿತ್ಯವನ್ನು ಬೆಳೆಸಿದವರಲ್ಲಿ ನರಸಿ ಮೆಹತಾ ಮೊದಲಿಗ. ಇವನ ಕಾಲ 1414–81. ಇವನ ರಚನೆಗಳು ಭಕ್ತಿರಸಪ್ರಧಾನವಾದುವು. ಇವುಗಳಲ್ಲಿ ನೈತಿಕ ತತ್ತ್ವಗಳ ಪ್ರತಿಪಾದನೆಯೂ ಇದೆ.

ದೇವರನ್ನು ನೋಡಿದ್ದೇನೆ ಎನ್ನುತ್ತಿದ್ದ ನರಸಿಯನ್ನು ನಂಬದ ಜನ ಇವನನ್ನು ಮೋಸಗಾರನೆಂದು ಕರೆದರು: ಅವನ ಜನರೇ ಅವನನ್ನು ಹಿಡಿದು ಹಿಂಸಿಸಿದರು.

ಭಕ್ತಿಭಾವದಿಂದ ತುಂಬಿದ್ದ ನರಸಿ ಮೆಹತಾನ ಒಂದು ಸುಂದರ ಗೀತೆ ಹೀಗಿದೆ :

'ಸಾಧುಗಳೇ ದೇವರ ಹೆಸರನ್ನು ಮಾರುವವನು ನಾನು:
ಎಲ್ಲ ಬಗೆಯ ಜನ ಬರುತಾರೆ ನನ್ನ ಬಳಿಗೆ :
ಕ್ಷಾಮ ಕಾಲದಲ್ಲೂ ನನ್ನ ಸರಕಿಗೆ ಬರವಿಲ್ಲ
ಅದರ ಮಾರಾಟದಿಂದ ನನಗೆ ನಷ್ಟವೇ ಇಲ್ಲ
ನನ್ನ ಸರಕನ್ನು ಕಳ್ಳರು ಕದಿಯುವಂತಿಲ್ಲ
ಅರಸನ ಸುಂಕವೂ ಅದಕಿಲ್ಲ..'

ತನ್ನ ಕಾಲದ ಅತ್ಯಂತ ಪ್ರಖ್ಯಾತ ಕೀರ್ತನಕಾರನಾಗಿದ್ದ ನರಸಿ ಮೆಹತಾನ ವೈರಾಗ್ಯ ಅಸಾಧಾರಣವಾದದ್ದು. ತನ್ನ ಪತ್ನೀ ಪುತ್ರರ ಮರಣದ ಸುದ್ದಿ ಕೇಳಿದಾಗ, "ಆದದ್ದೆಲ್ಲ ಒಳ್ಳೆಯದೇ. ಸಂಸಾರದ ಚಿಂತೆ ಕಳೆದು ಈಗ ಕೃಷ್ಣನ ಆರಾಧನೆಯನ್ನು ಮುಂದುವರಿಸಲು ಅನುಕೂಲವೇ ಆಯಿತು" ಎಂದ. ವೈರಾಗ್ಯವೇ ಜ್ಞಾನಸಾಧನೆಯ ಪ್ರಥಮ ಸೋಪಾನ ಎಂಬುದು ಅವನ ನಂಬಿಕೆಯಾಗಿತ್ತು.

ನರಸಿ ಮೆಹತಾನನ್ನು [illegible] ಜುನಾಗಡದ ದೇವಾಲಯದಲ್ಲಿದೆ. ಅವನು ಹುಟ್ಟಿದ್ದೂ ಅಲ್ಲೇ ಸಮೀಪದ ಸ್ಥಳದಲ್ಲಿ.

ನರೇಂದ್ರದೇವ್

1951ರ ಕೊನೆಯಲ್ಲಿ ಕಾಶಿಯಲ್ಲೊಂದು ಸ್ವಾಗತ ಸಮಾರಂಭ ನಡೆಯಿತು. ಅದಕ್ಕೆ ಇಪ್ಪತ್ತು ವರ್ಷಗಳ ಹಿಂದೆ ಗಾಂಧೀಜಿ ಕಾಶಿಗೆ ಪ್ರಥಮ ಸಾರ್ವಜನಿಕ ಭೇಟಿಕೊಟ್ಟ ಸಂದರ್ಭ ಬಿಟ್ಟರೆ ಅಲ್ಲಿಯವರೆಗೆ ಅಂಥ ಅಪಾರ ಜನಸಂದಣಿಯ ಆತ್ಮೀಯ ಸ್ವಾಗತ ಯಾರಿಗೂ ಏರ್ಪಟ್ಟಿದ್ದೇ ಇಲ್ಲ. ಇಂಥ ಅದ್ಭುತ ಸ್ವಾಗತ ದೊರೆತದ್ದು, ಬನಾರಸ್ ಹಿಂದೂ ವಿಶ್ವವಿದ್ಯಾನಿಲಯದ ವೈಸ್‌ಛಾನ್ಸಲರ್ ಅಧಿಕಾರವನ್ನು ವಹಿಸಿಕೊಳ್ಳಲು ಬಂದ ಆಚಾರ್ಯ ನರೇಂದ್ರದೇವ್ ಅವರಿಗೆ.

ಶಿಕ್ಷಣ, ಸಾಹಿತ್ಯ ಮತ್ತು ರಾಜಕೀಯ ಕ್ಷೇತ್ರಗಳಲ್ಲಿ ರಾಷ್ಟ್ರಕ್ಕೆ ಸಾರ್ಥಕ ಸೇವೆ ಸಲ್ಲಿಸಿರುವ ಆಚಾರ್ಯ ನರೇಂದ್ರ ದೇವ್ ಉಜ್ವಲ ರಾಷ್ಟ್ರಾಭಿಮಾನಿ. ಹಲವಾರು ಸಮಸ್ಯೆಗಳು ಬನಾರಸ್ ಹಿಂದೂ ವಿಶ್ವವಿದ್ಯಾನಿಲಯವನ್ನು ಕಾಡುತ್ತಿದ್ದಾಗ ಅವನ್ನು ನಿವಾರಿಸಲು ಕೇಂದ್ರ ಸರಕಾರದ ನಾಯಕರು ನರೇಂದ್ರ ದೇವ್ ಅವರನ್ನು ಕೇಳಿಕೊಂಡರು. ನರೇಂದ್ರ ದೇವ್ ಆ ಮೊದಲು 1947ರಿಂದ ಲಖನೌ ವಿಶ್ವವಿದ್ಯಾನಿಲಯದ ವೈಸ್‌ಛಾನ್ಸಲರ್ ಆಗಿದ್ದು ಅಲ್ಲಿನ ಕಲುಷಿತ ವಾತಾವರಣವನ್ನು ಸ್ವಚ್ಛಗೊಳಿಸಿ ಆ ವಿದ್ಯಾಕೇಂದ್ರಕ್ಕೆ ಒಳ್ಳೆಯ ಹೆಸರು ತಂದಿದ್ದರು.

ಅವರ ಜನನ 1889 ಅಕ್ಟೋಬರ್ 30ರಂದು.

ಬನಾರಸ್ ಮತ್ತು ಅಲಹಾಬಾದ್ ವಿಶ್ವವಿದ್ಯಾನಿಲಯಗಳಲ್ಲಿ ಎಂ. ಎ., ಮತ್ತು ಎಲ್‌ಎಲ್.ಬಿ. ಮುಗಿಸಿದ ನರೇಂದ್ರ ದೇವ್ ಕೆಲ ಕಾಲ ವಕೀಲ ವೃತ್ತಿ ನಡೆಸಿದರು. 1921ರಲ್ಲಿ ಅದನ್ನು ಬಿಟ್ಟು ರಾಷ್ಟ್ರೀಯ ಸ್ವಾತಂತ್ರ್ಯ ಚಳುವಳಿಯನ್ನು ಸೇರಿದರು. ರಾಷ್ಟ್ರೀಯ ಮನೋಧರ್ಮವನ್ನು ಬೆಳೆಸುವುದಕ್ಕಾಗಿ ವಿಶಿಷ್ಟ ಶಿಕ್ಷಣ ಕೊಡಲು ಸ್ಥಾಪಿತವಾಗಿದ್ದ ಕಾಶೀ ವಿದ್ಯಾಪೀಠದಲ್ಲಿ (ಈಗ ಇದು ವಿಶ್ವವಿದ್ಯಾನಿಲಯದ ಸ್ಥಾನಮಾನ ಪಡೆದ ಶಿಕ್ಷಣ ಸಂಸ್ಥೆ) ಆಚಾರ್ಯರಾದರು. 1926ರಲ್ಲಿ ವಿದ್ಯಾಪೀಠದ ಮುಖ್ಯಸ್ಥರಾಗಿ 20 ವರ್ಷ ಕಾಲ ಸೇವೆ ಸಲ್ಲಿಸಿದರು. ಆಚಾರ್ಯ ನರೇಂದ್ರ ದೇವ್ ಅವರಿಂದ ಪ್ರಭಾವಿತರಾಗಿ ರಾಷ್ಟ್ರಾಭಿಮಾನಿಗಳಾದವರು ನೂರಾರು ಮಂದಿ. ಮುಂದೆ ಭಾರತದ ಪ್ರಧಾನಿಯಾದ ಲಾಲ್‌ಬಹದ್ದೂರ್ ಶಾಸ್ತ್ರಿ ಅವರಲ್ಲೊಬ್ಬರು.

ಭಾರತದಲ್ಲಿ ಸಮಾಜವಾದವನ್ನು ರೂಪಿಸಿದ ಆದ್ಯರ ಶ್ರೇಣಿಗೆ ಸೇರಿದವರು ಆಚಾರ್ಯ ನರೇಂದ್ರ ದೇವ್. 1934ರಲ್ಲಿ ಜಯಪ್ರಕಾಶ ನಾರಾಯಣ್ ಅವರ ಜೊತೆ ಸೇರಿ. ಅಖಿಲ ಭಾರತ ಕಾಂಗ್ರೆಸ್ಸಿನ ಅಂಗವಾಗಿ ಕಾಂಗ್ರೆಸ



ಸಮಾಜವಾದ, ಶಿಕ್ಷಣ, ಸಾಹಿತ್ಯ : ದೇವ್

ಸೋಷಲಿಸ್ಟ್ ಪಕ್ಷವನ್ನು ಸ್ಥಾಪಿಸಿದರು. 1937ರಲ್ಲಿ ಸಂಯುಕ್ತ ಪ್ರಾಂತ್ಯ (ಈಗಿನ ಉತ್ತರ ಪ್ರದೇಶ)ದ ಮುಖ್ಯಮಂತ್ರಿಯಾಗುವ ಅವಕಾಶವನ್ನೂ ನಿರಾಕರಿಸಿದರು. ನಮ್ಮ ರಾಷ್ಟ್ರ ಸ್ವತಂತ್ರವಾದಾಗ, ಇವರೇ ಕಾಂಗ್ರೆಸ್ ಅಧ್ಯಕ್ಷರಾಗಲಿ ಎಂದು ಗಾಂಧೀಜೀ ಬಯಸಿದರು. ಆದರೆ ಇವರು ಒಪ್ಪಲಿಲ್ಲ. 1948ರಲ್ಲಿ ತಮ್ಮ ಸಮಾಜವಾದೀ ಗುಂಪನ್ನು ಕಾಂಗ್ರೆಸ್ಸಿನಿಂದ ಪ್ರತ್ಯೇಕಿಸಿದರು. ಮೂರು ಬಾರಿ ಸಮಾಜವಾದೀ ಪಕ್ಷದ ಅಧ್ಯಕ್ಷರಾಗಿ, ಆ ಸ್ಥಾನದ ಕರ್ತವ್ಯವನ್ನು ಸಮರ್ಥವಾಗಿ ನಿರ್ವಹಿಸಿದರು.

ಕಾಂಗ್ರೆಸ್ಸಿನಲ್ಲಿ ನರೇಂದ್ರ ದೇವ್ ನೇತಾಜಿ ಸುಭಾಷಚಂದ್ರಬೋಸರ ಬೆಂಬಲಿಗರಾಗಿದ್ದರು. ಅವರ ಪಕ್ಷದ ರಾಷ್ಟ್ರೀಯ ಕಾರ್ಯಕಾರಿ ಸಮಿತಿಯಲ್ಲಿ ಹಲವಾರು ವರ್ಷಗಳ ಕಾಲ ಸೇವೆ ಸಲ್ಲಿಸಿದರು. ತಮ್ಮ ರಾಜಕೀಯ ಚಟುವಟಿಕೆಗಳಿಗಾಗಿ ಅನೇಕ ಸಲ ಕಾರಾಗೃಹ ಶಿಕ್ಷೆ ಅನುಭವಿಸಿದರು.

ಇತಿಹಾಸ, ತತ್ತ್ವಶಾಸ್ತ್ರ, ಸಮಾಜಶಾಸ್ತ್ರ, ರಾಜಕೀಯ ಸಿದ್ಧಾಂತಗಳಿಗೆ ಸಂಬಂಧಿಸಿದಂತೆ ಹಿಂದಿಯಲ್ಲಿ ಬಹಳಷ್ಟು ಕೃತಿಗಳನ್ನು ರಚಿಸಿರುವ ಆಚಾರ್ಯ ನರೇಂದ್ರ ದೇವ್ 1950ರ ಹಿಂದೀ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾದರು. ಅವರ 'ಬೌದ್ಧಧರ್ಮ ದರ್ಶನ್' ಕೃತಿಗೆ 1957ರಲ್ಲಿ ಕೇಂದ್ರ ಸಾಹಿತ್ಯ ಅಕಾದೆಮಿಯ ಪ್ರಶಸ್ತಿ ಲಭಿಸಿತು.

ಆಚಾರ್ಯ ನರೇಂದ್ರ ದೇವ್ ತಮ್ಮ 67ನೆಯ ವಯಸ್ಸಿನಲ್ಲಿ, 1956 ಫೆಬ್ರವರಿ 19ರಂದು, ನಿಧನರಾದರು.

ನವಾಂಗ್ ಗೊಂಬು

ಎರಡು ಬಾರಿ ಎವರೆಸ್ಟ್ ಶಿಖರವನ್ನು ಏರಿದ ಕೀರ್ತಿಗೆ ಪಾತ್ರರಾಗಿರುವ ಏಕಮಾತ್ರ ವ್ಯಕ್ತಿ ನವಾಂಗ್ ಗೊಂಬು.

ಜನನ 1934 ಫೆಬ್ರವರಿ 3 ರಂದು. ಇವರು ಭಾರತದ ಪರ್ವತಾರೋಹಣ ಚರಿತ್ರೆಯಲ್ಲಿ ವಿಶಿಷ್ಟ ಸ್ಥಾನ ಗಳಿಸಿರುವ ಶೆರ್ಪಾ ಪಂಗಡಕ್ಕೆ ಸೇರಿದವರು.

ಹದಿನೆಂಟು ವರ್ಷ ವಯಸ್ಸಿನಲ್ಲೇ ಪರ್ವತಾರೋಹಣ ಪ್ರಯತ್ನಗಳಲ್ಲಿ ಭಾಗವಹಿಸಲು ಆರಂಭಿಸಿದರು. 1954ರಲ್ಲಿ ಇವರು ಸ್ವಿಟ್ಜರ್‌ಲೆಂಡಿಗೆ ಹೆಚ್ಚಿನ ತರಬೇತಿಗಾಗಿ ತೆರಳಿದರು. 1963ರಲ್ಲಿ ಯಶಸ್ವಿಯಾಗಿ ಎವರೆಸ್ಟ್ ಶಿಖರವನ್ನೇರಿದ ಅಮೆರಿಕದ ತಂಡದಲ್ಲಿ ಇವರಿದ್ದರು. ಮರುವರ್ಷ ಗೊಂಬು ನಂದಾದೇವಿ ಶಿಖರವನ್ನು ಏರಿದರು. 1965ರಲ್ಲಿ ಭಾರತೀಯ ಪರ್ವತಾರೋಹಣ ತಂಡವನ್ನು ಸೇರಿಕೊಂಡು ನವಾಂಗ್ ಗೊಂಬು ಮತ್ತೆ ಎವರೆಸ್ಟ್ ಆರೋಹಣ ಮಾಡಿದರು. ಭಾರತದ ಹಲವು ಪರ್ವತಗಳಲ್ಲದೆ ಸಾಕಾನ್, ಕೊಕ್‌ಟಾಂಗ್ ಹಾಗೂ ಆಲ್ಪ್ಸ್ ಪರ್ವತ ಶ್ರೇಣಿಯ ಮೌಂಟ್ ಬ್ಲಾಂಕ್ ಶಿಖರಗಳನ್ನೂ ಗೊಂಬು ಏರಿದ್ದಾರೆ. ನವಾಂಗ್ ಗೊಂಬು ಡಾರ್ಜಿಲಿಂಗಿನ ಪರ್ವತಾರೋಹಣ ಸಂಸ್ಥೆಯಲ್ಲಿ ಕ್ಷೇತ್ರ ತರಬೇತಿಯ ನಿರ್ದೇಶಕರಾಗಿದ್ದಾರೆ. ಇವರಿಗೆ 1964ರಲ್ಲಿ ಪದ್ಮಶ್ರೀ ಮತ್ತು 1966ರಲ್ಲಿ ಪದ್ಮಭೂಷಣ ಪ್ರಶಸ್ತಿಗಳು ದೊರೆತಿವೆ.

ನೋಡಿ : ಎವರೆಸ್ಟ್ ಆರೋಹಣ –ಸಂಪುಟ ೬



ಇಮ್ಮಡಿ ಖ್ಯಾತಿ :
ಗೊಂಬು

ನಳ

ನೋಡಿ : ದಮಯಂತಿ

ನಾಗರಪಂಚಮಿ

ನಾಗರಪಂಚಮಿ ಭಾರತದ ಎಲ್ಲ ಕಡೆಗಳಲ್ಲೂ ನಡೆಯುವ ಹಬ್ಬ. ಶ್ರಾವಣಮಾಸದ ಶುದ್ಧ ಪಂಚಮಿ, ನಾಗರಪಂಚಮಿ.

ಈ ಹಬ್ಬದ ಆಚರಣೆಯ ಅಂಗವಾಗಿ ರಂಗೋಲಿಯಲ್ಲಿ ಹಾವಿನ ಚಿತ್ರ ಬಿಡಿಸುತ್ತಾರೆ. ಹುತ್ತದ ಮಣ್ಣು, ಹುಲಿಕಡ್ಡಿ, ಗೋಧಿಹಿಟ್ಟನ್ನು ಕಲೆಸಿ ಮಾಡಿರುವ ಹಾವಿನ ಆಕಾರಗಳನ್ನು ತಟ್ಟೆಯಲ್ಲಿ ಚಿತ್ರದ ಮೇಲಿಡುತ್ತಾರೆ. ಹಾಲು, ತುಪ್ಪ, ಬಾಳೆಹಣ್ಣು, ಭತ್ತದ ಅರಳನ್ನು ಅರ್ಪಿಸುತ್ತಾರೆ. ಕೆಲವರು ಹುತ್ತಕ್ಕೆ, ನಾಗರಕಲ್ಲಿಗೆ ಪೂಜೆ ಮಾಡುತ್ತಾರೆ.

ನಾಗರಪಂಚಮಿಯನ್ನು ಕನ್ನಡನಾಡಿನಲ್ಲಿ ವ್ಯಾಪಕವಾಗಿ ಆಚರಿಸುತ್ತಾರೆ. ಅದರಲ್ಲೂ ಉತ್ತರ ಕರ್ನಾಟಕದಲ್ಲಿ ಇದು ದೊಡ್ಡ ಹಬ್ಬ. ಗಂಡನ ಮನೆಯಲ್ಲಿರುವ ಹೆಣ್ಣು ಮಕ್ಕಳನ್ನು ತವರುಮನೆಗೆ ಕರೆಸಿಕೊಂಡು ಅವರನ್ನು ಆದರಿಸಿ ಉಡುಗೊರೆ ಕೊಡುತ್ತಾರೆ.

ಪಂಜಾಬಿನಲ್ಲಿ ಮನೆಯ ಗೋಡೆಯ ಮೇಲೆ ಕಪ್ಪು ಚಿತ್ರ ಬರೆಯುತ್ತಾರೆ. ಅದು ಸರ್ಪದೇವತೆಯ ಸೂಚಕ. ಇದರಿಂದ ಮನೆಗೆ ಸರ್ಪದ ಪೀಡೆ ಇರುವುದಿಲ್ಲ ಎಂದು ನಂಬುಗೆ.

ಉತ್ತರ ಪ್ರದೇಶದಲ್ಲಿ ಹಬ್ಬಕ್ಕೆ ಏಳು ದಿನ ಮುಂಚಿತವಾಗಿ ನೀರಿನಲ್ಲಿ ಗೋಧಿ, ಬೇಳೆ, ದ್ವಿದಳಧಾನ್ಯ ನೆನೆಹಾಕುತ್ತಾರೆ. ಮನೆಯ ಗೋಡೆಯ ಮೇಲೆ ಬಣ್ಣದಲ್ಲಿ ಸರ್ಪ, ಪಕ್ಷಿಗಳ ಚಿತ್ರ ಬಿಡಿಸುತ್ತಾರೆ. ಹುಲ್ಲಿನಲ್ಲಿ ಸರ್ಪದ ಆಕಾರವನ್ನು ಹೊಸೆದು ಬೇಳೆ ನೆನೆಸಿರುವ ನೀರಿನಲ್ಲಿ ಅದ್ದಿ, ಸಿಹಿ ತಿಂಡಿಯೊಂದಿಗೆ ಹಾವಿಗೆ ಕೊಡುತ್ತಾರೆ.

ಮಹಾರಾಷ್ಟ್ರದಲ್ಲಿ ಹಾವಿನ ಹುತ್ತಕ್ಕೆ ಹಾಲು ಸುರಿಯುತ್ತಾರೆ; ಅಕ್ಕಿ ಹಾಕುತ್ತಾರೆ.

ಗಣಪತಿಯ ಹೊಟ್ಟೆಗೆ ಪಟ್ಟಿಯಾಗಿ, ಶಿವನ ಆಭರಣವಾಗಿ, ವಿಷ್ಣುವಿನ ಹಾಸಿಗೆಯಾಗಿ ಹಾಗೂ ದುರ್ಯೋಧನನ ಧ್ವಜ ಚಿಹ್ನೆಯಾಗಿರುವ ಸರ್ಪದ ಪೂಜೆ ಭಾರತದಲ್ಲಿ ಸಾರ್ವತ್ರಿಕ.

ನಾಗಾರ್ಜುನ

ನೋಡಿ : ಸಂಪುಟ ೧

ನಾಗಾರ್ಜುನಕೊಂಡ

ಒಂದು ಕಡೆ ಆಧುನಿಕ ಎಂಜಿನಿಯರಿಂಗ್ ಕೌತುಕವಾದ ನಾಗಾರ್ಜುನ ಸಾಗರ ಅಣೆಕಟ್ಟು. ಇದು ಜಗತ್ತಿನ ಅತ್ಯಂತ ಎತ್ತರದ ಕಲ್ಲುಗಾರೆ ಕಟ್ಟೆ. ಇನ್ನೊಂದು ಕಡೆ ಚರಿತ್ರಪೂರ್ವ ಕಾಲದಿಂದ ಹಿಡಿದು ಶಾತವಾಹನ ಮತ್ತು ಇಕ್ಷ್ವಾಕು ವಂಶಗಳ ಅರಸರ ಕಾಲದ ವರೆಗಿನ ಅಪೂರ್ವ ಕಲಾಕೃತಿಗಳು. ಹೀಗೆ ಇಂದಿನ ನಾಗರಿಕತೆ ಮತ್ತು ಹಿಂದಿನ ಸಂಸ್ಕೃತಿಗಳ ಅಪೂರ್ವ ಸಂಗಮವನ್ನು ನಾಗಾರ್ಜುನಕೊಂಡದಲ್ಲಿ ಕಾಣಬಹುದು.

ಹ್ಯೂಯೆನ್ ತ್ಸಾಂಗ್ ಮುಂತಾದ ಪ್ರವಾಸಿಗಳನ್ನು ಆಕರ್ಷಿಸಿದ, ಬೌದ್ಧರಿಗೆ ಪವಿತ್ರವೆನಿಸಿದ ಕ್ಷೇತ್ರ, ನಾಗಾರ್ಜುನಕೊಂಡ. ತೆಲುಗಿನಲ್ಲಿ 'ಕೊಂಡ' ಎಂದರೆ ಗುಡ್ಡ. ಕ್ರಿ.ಪೂ. 2ನೆಯ ಶತಮಾನದಲ್ಲಿ ನಾಗಾರ್ಜುನಕೊಂಡ



ಗಾರ್ಜುನ —ಟಿಬೆಟ್ಟಿನ ದೇವಾಲಯದಲ್ಲಿ ಶಿಲ್ಪ

ಪ್ರದೇಶ ಒಂದು ಪ್ರಸಿದ್ಧ ಬೌದ್ಧಕ್ಷೇತ್ರ ಮತ್ತು ವಿದ್ವತ್ ಕೇಂದ್ರವಾಗಿತ್ತು. ಸುವಿಖ್ಯಾತ ಬೌದ್ಧ ದಾರ್ಶನಿಕ ನಾಗಾರ್ಜುನ ಇಲ್ಲಿದ್ದ. ಆತ ಪ್ರಸಿದ್ಧ ಆಚಾರ್ಯ. ತನ್ನ ಕೊನೆಯ ದಿನಗಳನ್ನು ಅವನು ಇಲ್ಲಿ ಕಳೆದ. ಆತನಿಂದಾಗಿ ಈ ಸ್ಥಳ ನಾಗಾರ್ಜುನಕೊಂಡ ಎನಿಸಿತು.

ನಾಗಾರ್ಜುನಕೊಂಡ ಆಂಧ್ರಪ್ರದೇಶದ ಗುಂಟೂರು ಜಿಲ್ಲೆಯಲ್ಲಿ ಕೃಷ್ಣಾ ನದಿಯ ಬಲದಂಡೆಯಲ್ಲಿದೆ. ನಾಗಾರ್ಜುನ ಸಾಗರ ಅಣೆಕಟ್ಟು ನಿರ್ಮಿತವಾದಾಗ ಈ ಕಣಿವೆ ನೀರಿನಲ್ಲಿ ಮುಳುಗಲಿದ್ದುದರಿಂದ ಈ ಪ್ರದೇಶದಲ್ಲಿದ್ದ ಕಲಾಕೃತಿಗಳನ್ನು ಅಲ್ಲಿಂದ ತೆಗೆದು ಎತ್ತರದ ಗುಡ್ಡಕ್ಕೆ ಸಾಗಿಸಿದರು. ಸರೋವರದಲ್ಲಿ ನೀರು ತುಂಬಿದಾಗ ಈ ಗುಡ್ಡ ಒಂದು ದ್ವೀಪವಾಯಿತು. ಈಗ ನಾಗಾರ್ಜುನಕೊಂಡ ಎನ್ನುವುದು ಈ ದ್ವೀಪವನ್ನು.

ನಾಗಾರ್ಜುನಕೊಂಡ ಸಂಸ್ಕೃತಿಯ ಅಧ್ಯಯನ ಆರಂಭವಾದದ್ದು 1926 ರಲ್ಲಿ, ಕಣಿವೆಯನ್ನು ಸರೋವರವಾಗಿ ಪರಿವರ್ತಿಸುವ ಯೋಜನೆ ರೂಪಿತವಾದಾಗ.

ನಾಗಾರ್ಜುನಕೊಂಡ ದ್ವೀಪದಲ್ಲಿ ಪ್ರಾಚೀನ ಅವಶೇಷಗಳನ್ನು ಅವುಗಳ ಮೂಲ ಸ್ವರೂಪಕ್ಕೆ ಚ್ಯುತಿ ಬಾರದಂತೆ ಪುನರ್ನಿರ್ಮಿಸಿದ್ದಾರೆ. ಸ್ತೂಪವೂ ಮೂರ್ತಿಗಳೂ ದೇವಸ್ಥಾನಗಳೂ ಇಲ್ಲಿವೆ. ಸುಮಾರು 1,700 ವರ್ಷಗಳಷ್ಟು ಹಿಂದಿನ ಸ್ನಾನಘಟ್ಟಗಳು ನದಿಯ ಬದಿಯಲ್ಲಿ ಪುನರಚಿಸಲ್ಪಟ್ಟಿವೆ. ಇಲ್ಲಿನ ವರ್ತುಲ ನಾಟಕಶಾಲೆಯಲ್ಲಿ ಸುಮಾರು ಒಂದು ಸಾವಿರ ಪ್ರೇಕ್ಷಕರು ಕುಳಿತುಕೊಳ್ಳಬಹುದು. ಆದರೆ ಕಣಿವೆಯಲ್ಲಿದ್ದ ಎಲ್ಲ ಅಮೂಲ್ಯ ಅವಶೇಷಗಳನ್ನೂ ರಕ್ಷಿಸುವುದು ಸಾಧ್ಯವಾಗಿಲ್ಲ.

ನಾಗಾರ್ಜುನಕೊಂಡದಲ್ಲಿ ಭಾರತದ ಏಕಮಾತ್ರ ದ್ವೀಪ ವಸ್ತುಸಂಗ್ರಹಾಲಯ ಇದೆ. ಅನುಪು ಎಂಬ ಸ್ಥಳದಿಂದ ಇಲ್ಲಿಗೆ ಮೋಟರು ದೋಣಿಯಲ್ಲಿ ಹೋಗಬೇಕು. ಒಂಬತ್ತು ಲಕ್ಷ ರೂಪಾಯಿಗಳ ಖರ್ಚಿನಿಂದ ರಚಿತವಾದ ಈ ವಸ್ತುಸಂಗ್ರಹಾಲಯವಿರುವುದು ಸುಂದರ ಪ್ರಕೃತಿಯ ಮಧ್ಯೆ. ಶಿಲ್ಪ ಕೃತಿಗಳು, ಆಭರಣಗಳು, ಪುರಾತನ ನಾಣ್ಯಗಳು ಮುಂತಾದುವನ್ನು ಇಲ್ಲಿ ಕಾಣಬಹುದು. ನಾಲ್ಕು ಮೀಟರ್ ಎತ್ತರದ ಬುದ್ಧನ ಪ್ರತಿಮೆ ಇಲ್ಲಿನ ಮುಖ್ಯ ಆಕರ್ಷಣೆ.

ನಾಗಾರ್ಜುನ ಸಾಗರ

14 –15ನೆಯ ಶತಮಾನದ ತೆಲುಗು ಕವಿ ಶ್ರೀನಾಥ, ಗುಂಟೂರು ಜಿಲ್ಲೆಯ ಪಲನಾಡು ಪ್ರದೇಶ ಜೋಳದ ಅಂಬಲಿ ಹೊರತು ಬೇರೇನೂ ದೊರೆಯದ ಅನಾಗರಿಕ ಸ್ಥಳ —ಎಂದು ವರ್ಣಿಸಿದ್ದ. ಇದೇ ಪ್ರದೇಶ



ಕೃಷಿಗೆ ನೀರು ; ನಾಗಾರ್ಜುನ ಸಾಗರ ಅಣೆಕಟ್ಟು

ಇಂದು ಭತ್ತ, ಹತ್ತಿ, ಅರಿಸಿನ, ಮೆಣಸಿನಕಾಯಿ, ಕೊತ್ತಂಬರಿ, ತರಕಾರಿ ಬೆಳೆಯುವ ಫಲವತ್ತಾದ ಭೂಮಿಯಾಗಿದೆ. ಈ ಬದಲಾವಣೆಗೆ ಕಾರಣ ನಾಗಾರ್ಜುನ ಸಾಗರ ಅಣೆಕಟ್ಟಿನಿಂದ ಈ ಪ್ರದೇಶಕ್ಕೆ ಒದಗುವ ನೀರಾವರಿ ಸೌಕರ್ಯ.

ಕೃಷ್ಣಾ ನದಿಗೆ ನಂದಿಕೊಂಡ ಗ್ರಾಮದ ಬಳಿ ಕಟ್ಟಿದ ಅಣೆಕಟ್ಟಿನಿಂದಾಗಿ ಉಂಟಾದ ನಾಗಾರ್ಜುನ ಸಾಗರ ಭಾರತದಲ್ಲೇ ಅತ್ಯಂತ ದೊಡ್ಡ ಕೃತಕ ಸರೋವರ. ಸರೋವರದ ನೀರು ಆಕ್ರಮಿಸಿರುವ ಭೂಮಿ 110 ಚದರ ಮೈಲು. ಇದರಿಂದ ಸುಮಾರು ಮೂವತ್ತೈದು ಲಕ್ಷ ಎಕರೆ ಭೂಮಿಗೆ ನೀರು ಒದಗುತ್ತದೆ. ಕೃಷ್ಣಾನದಿಯ ಬಲದಂಡೆಯ ಗುಂಟೂರು,

ನಾಗಾರ್ಜುನಕೊಂಡ ಅವಶೇಷಗಳು



ಒಂಗೋಲ್, ನೆಲ್ಲೂರು ಮತ್ತು ಕರ್ನೂಲು ಜಿಲ್ಲೆಗಳ ಹಾಗೂ ಎಡದಂಡೆಯ ನಲಗೊಂಡ, ಖಮ್ಮಮ್ ಮತ್ತು ಪಶ್ಚಿಮ ಗೋದಾವರಿ ಜಿಲ್ಲೆಗಳ ರೈತರು ಈ ಅಣೆಕಟ್ಟಿನ ನೀರಿನಿಂದ ಪ್ರಯೋಜನ ಪಡೆಯುತ್ತಾರೆ.

1955 ಡಿಸೆಂಬರ್ ತಿಂಗಳಲ್ಲಿ ಪ್ರಧಾನಿ ಜವಾಹರಲಾಲ ನೆಹರೂ ಅವರು ಈ ಯೋಜನೆಯ ಶಂಕುಸ್ಥಾಪನೆ ಮಾಡಿದರು.

ನಾಗಾರ್ಜುನ ಸಾಗರ ಯೋಜನೆಯಿಂದಾಗಿ ಸುಮಾರು 20.6ಲಕ್ಷ ಎಕರೆ ಜಮೀನಿಗೆ ನೀರಾವರಿ ಸೌಲಭ್ಯ ದೊರೆಯುತ್ತದೆ.

ನಾಗಾಲ್ಯಾಂಡ್


ಬ್ರಹ್ಮಪುತ್ರಾ ಹಾಗೂ ಚಿಂದ್ವಿನ್ ನದೀ ಕಣಿವೆಗಳ ನಡುವಿನ, ಅಗಲ ಕಿರಿದಾದ, ಬೆಟ್ಟಗುಡ್ಡಗಳ ಪ್ರದೇಶ ನಾಗಾಲ್ಯಾಂಡ್. ಇದು ಭಾರತದ ಪೂರ್ವ ಗಡಿರಾಜ್ಯಗಳಲ್ಲಿ ಒಂದು.

ಬೆಟ್ಟಗಳ ಶ್ರೇಣಿಗಳು ಮೆಟ್ಟಿಲು ಮೆಟ್ಟಿಲಾಗಿ ಹರಡಿಕೊಂಡಿರುವ ಈ ನಾಡಿನ ದೃಶ್ಯ ಮನಸೆಳೆಯುವಂಥದು. ಇಲ್ಲಿ ಜನರ ವೇಷಭೂಷಣ ಬಹು ಆಕರ್ಷಕ. ಒಬ್ಬ ನಾಗಯೋಧ ತಲೆಯಿಂದ ಕಾಲಿನ ವರೆಗೆ ಬಣ್ಣ ಬಣ್ಣದ ಉಡುಗೆತೊಡುಗೆಗಳನ್ನು ಧರಿಸಿರುತ್ತಾನೆ. ಕೊಂಬು, ಪುಚ್ಛ ಮುಂತಾದುವುಗಳಿಂದ ಕೂಡಿದ ದೊಡ್ಡ ತಲೆಯುಡುಗೆ. ಕಿವಿಗೆ ದಪ್ಪ ಹತ್ತಿ ಉಂಡೆಗಳು, ಕತ್ತಿಗೆ ಹಾರಗಳು, ಉಜ್ವಲ ಬಣ್ಣದ ವಸ್ತ್ರದುಡುಗೆ, ಕೈಯಲ್ಲಿ ಈಟಿ —ಇವುಗಳಿಂದ ಅವನು ಅಲಂಕೃತನಾಗಿರುತ್ತಾನೆ.

'ಮೋರಂಗ್' ಎಂಬುದು ನಾಗಹಳ್ಳಿಗಳ ವಿಶಿಷ್ಟ ನಿವಾಸಸ್ಥಾನ. ಅವಿವಾಹಿತ ನಾಗ ಯುವಕ, ಯುವತಿಯರಿಗೆ ಮೀಸಲಾದ ಇವು ಇಬ್ಬರಿಗೂ ಪ್ರತ್ಯೇಕವಾಗಿರುತ್ತವೆ. ನಾಗ ಜನರ ನೃತ್ಯ, ಸಂಗೀತ ವಿಶಿಷ್ಟವಾಗಿರುತ್ತವೆ.

ಕಳೆದ ಶತಮಾನದ ಉತ್ತರಾರ್ಧದಲ್ಲಿ ಕೂಡ ತಲೆಬುರುಡೆಗಳನ್ನು ಕೂಡಿ ಹಾಕುವ (ತಲೆಬೇಟೆ) ಪದ್ಧತಿ, ಗುಲಾಮಗಿರಿ, ನರಬಲಿ ಮುಂತಾದುವು ಈ ಜನರಲ್ಲಿ ಪ್ರಚಲಿತವಿದ್ದುವು. ಈಗ ನಾಗ ಜನರ ಜೀವನ ಎಷ್ಟೋ ಬದಲಾಗಿದೆ. 1880ರಲ್ಲಿ ನಾಗ ಜನರಿರುವ ಪ್ರದೇಶ ಬ್ರಿಟಿಷ್ ಆಡಳಿತಕ್ಕೆ ಒಳಪಟ್ಟಿತು. 1917–19ರ ಅವಧಿಯಲ್ಲಿ ಇದರಲ್ಲಿ ಒಂದು ಭಾಗವನ್ನು ಬರ್ಮಕ್ಕೆ ಸೇರಿಸಲಾಯಿತು. ಉಳಿದ ನಾಗ ಪ್ರದೇಶಕ್ಕೆ ಕೊಹಿಮವನ್ನು ಮುಖ್ಯಸ್ಥಾನವಾಗಿ ಮಾಡಿಕೊಂಡು ಆಡಳಿತ ನಡೆಸಲಾಗುತ್ತಿತ್ತು.

1947ರಲ್ಲಿ ಭಾರತಕ್ಕೆ ಸ್ವಾತಂತ್ರ್ಯ ಬಂದಾಗ ಆಗಿನ ನೇಫಾ ಪ್ರದೇಶಕ್ಕೆ ನಿಕಟ ಭಾಗದಲ್ಲಿದ್ದ ನಾಗರು ಪ್ರಬಲ ಆಂದೋಲನವನ್ನು ಪ್ರಾರಂಭಿಸಿದರು. ತಮ್ಮದೇ ರಾಷ್ಟ್ರ ಬೇಡಿದರು. ಆದರೆ ನಾಗಾಲ್ಯಾಂಡಿನಲ್ಲಿ ಇದ್ದ ಸುಮಾರು 20 ಬುಡಕಟ್ಟುಗಳೊಳಗೇ ಒಮ್ಮತವಿರಲಿಲ್ಲ. 1957ರಲ್ಲಿ, ಭಾರತ ಸರಕಾರ ನಾಗರ ಒಂದು ಸಭೆ ನಡೆಸಿ ನಾಗ ಗುಡ್ಡಗಳು ಹಾಗೂ ತೂಯೆನ್ಸಾಂಗ್ ವಿಭಾಗಗಳನ್ನು ಕೂಡಿಸಿ ಕೇಂದ್ರಾಡಳಿತ ಪ್ರದೇಶವಾಗಿ ಮಾರ್ಪಡಿಸಿತು. ಇದಕ್ಕೂ ನಾಗಜನರು ಒಪ್ಪಲಿಲ್ಲ 1961ರಲ್ಲಿ ನಾಗಾಲ್ಯಾಂಡ್ ಒಂದು ಪ್ರತ್ಯೇಕ ರಾಜ್ಯವಾಗಿ ರೂಪುಗೊಂಡಿತು. ಕೊಹಿಮ ಇದರ ರಾಜಧಾನಿಯಾಯಿತು. ರಾಜ್ಯದಲ್ಲಿ ಮೂರು ಜಿಲ್ಲೆಗಳಿವೆ.



ನಾಗಾಲ್ಯಾಂಡಿನ ಆರ್ಥಿಕತೆಗೆ ಒಂದು ಮುಖ್ಯ ಆಧಾರ ಅಲ್ಲಿನ ಕಾಡುಗಳು. ಇಲ್ಲಿ ದೊರೆಯುವ ಸಾಮಗ್ರಿಗಳು ಹಲವು ಬಗೆಯ ಗೃಹಕೈಗಾರಿಕೆಗಳಿಗೆ ಒದಗುತ್ತವೆ. ಇಲ್ಲಿನ ಕಾಡುಗಳಲ್ಲಿ ಆನೆ, ಹುಲಿ, ಚಿರತೆ, ಕರಡಿ ಹಾಗೂ ಅನೇಕ ಬಗೆಯ ಜಿಂಕೆಗಳು ಸಂಚರಿಸುತ್ತವೆ. ದೊಡ್ಡ ಕೊಕ್ಕಿನ ಪಕ್ಷಿ 'ದಿ ಗ್ರೇಟ್ ಇಂಡಿಯನ್ ಹಾರ್ನ್‌ಬಿಲ್' ಇಲ್ಲಿಗೆ ವಿಶಿಷ್ಟವಾದದ್ದು. ಇಲ್ಲಿನ ಜನರ ಜೀವನದಲ್ಲಿ ಹಾಸುಹೊಕ್ಕಾಗಿರುವ ಪ್ರಾಣಿ ಮಿಥುನ್. ಕೋಣ ಹಾಗೂ ಕಾಡುಹಸುವಿಗೆ ಹುಟ್ಟಿದ ಈ ಪ್ರಾಣಿಯನ್ನು, ನಾಗಯುವಕ ತಾನು ಮದುವೆಯಾಗುವ ಯುವತಿಯ ತಂದೆತಾಯರಿಗೆ ಕಾಣಿಕೆಯಾಗಿ ಕೊಡುತ್ತಾನೆ. ಕಾಡಿನಲ್ಲಿ ಹೇರಳವಾಗಿ ದೊರೆಯುವ ಬೊಂಬಿನಿಂದ ನಾಗ ಜನರು ಅನೇಕ ಉಪಯುಕ್ತ ಹಾಗೂ ಕಲಾತ್ಮಕ ಪದಾರ್ಥಗಳನ್ನು ಮಾಡುತ್ತಾರೆ.

ಜನರ ಪ್ರಧಾನ ಕಸಬು ವ್ಯವಸಾಯ. ಇಲ್ಲಿ ಝೂಮ್(ಪರಿವರ್ತನ ಬೇಸಾಯ ಕ್ರಮ) ವ್ಯವಸಾಯ ಪದ್ಧತಿ ರೂಢಿಯಲ್ಲಿದೆ. ಭತ್ತ ಇಲ್ಲಿನ ಮುಖ್ಯ ಬೆಳೆ. ಚಿಕ್ಕ ಚಿಕ್ಕ ನೀರಾವರಿ ಯೋಜನೆಗಳನ್ನು ರಾಜ್ಯದಲ್ಲಿ ಕೈಗೊಳ್ಳಲಾಗಿದೆ. ವಿದ್ಯುಚ್ಛಕ್ತಿಯನ್ನೂ ಉತ್ಪಾದಿಸಲಾಗುತ್ತಿದೆ. ನೇಯುವುದು ಜನರ ಮತ್ತೊಂದು ಮುಖ್ಯ ಕೆಲಸ. ಹೆಣ್ಣು ಮಕ್ಕಳೆಲ್ಲ ನೇಯಲು ಕಲಿತಿರುತ್ತಾರೆ. ರೇಷ್ಮೆ ವ್ಯವಸಾಯವೂ ಇದೆ.

ನಾಗ ಮದುಮಗ





ನಾಗಾ

ಮಣಿಪುರದಿಂದ ಇಂಫಾಲಕ್ಕೆ ರಸ್ತೆ ಹಾಕಿದಾಗ ಅದು ನಾಗಾಲ್ಯಾಂಡಿನ ನೈಋತ್ಯದಲ್ಲಿ ಹಾಯ್ದು, ರಾಜಧಾನಿ ಕೊಹಿಮಕ್ಕೆ ಸಂಪರ್ಕ ಉಂಟು ಮಾಡಿತು.

ದೇಶದಲ್ಲಿ ಅತಿ ಕಡಮೆ ಜನಸಂಖ್ಯೆಯಿರುವ ರಾಜ್ಯ ನಾಗಾಲ್ಯಾಂಡ್.

ನೋಡಿ : ಕೊಹಿಮ

ನಾಗಾವಿ

ಕಲಬುರ್ಗಿಯಿಂದ ಎರಡು ಮೈಲು ದೂರದ ನಾಗಾವಿ(ನಾಗಾಯಿ)ಯ ಮಧುಸೂಧನದೇವಾಲಯಕ್ಕೆ ಸೇರಿತ್ತು ನಾಗಾವಿಮಠ. ಇದು ಭವ್ಯ ಕಟ್ಟಡ ದಿಂದೊಡಗೂಡಿದ, ಉಚ್ಚ ವ್ಯಾಸಂಗ ಸೌಲಭ್ಯವಿದ್ದ ಸಂಸ್ಥೆಯಾಗಿತ್ತು. ಈ ಮಠ ಮೂರು ಅಂತಸ್ತುಗಳ ಕಟ್ಟಡ. ಇದಕ್ಕೆ ಸೇರಿದಂತೆ ವಿಶಾಲ ನೃತ್ಯ ಮಂಟಪವಿದ್ದಿತು. ಭವ್ಯ ಕೈಸಾಲೆ, ದ್ವಾರಗಳು ಹಾಗೂ ಉನ್ನತ ಪ್ರಾಕಾರಗಳಿದ್ದವು. ಈಗ ಇವೆಲ್ಲ ಭಗ್ನವಾಗಿವೆ.

ಹನ್ನೊಂದು ಹನ್ನೆರಡನೆಯ ಶತಮಾನದಲ್ಲಿ ಉಚ್ಛ್ರಾಯ ಸ್ಥಿತಿಯಲ್ಲಿದ್ದ ಈ ಗುರುಕುಲಕ್ಕೆ ಏಕದಂಡಿ, ತ್ರಿದಂಡಿ ಪಂಥದ ಸನ್ಯಾಸಿಗಳೂ ಹಂಸ ಹಾಗೂ ಪರಮಹಂಸರೆನಿಸಿದ ಸನ್ಯಾಸಿಗಳೂ ಬರುತ್ತಿದ್ದರು. ಉಚ್ಚ ಧಾರ್ಮಿಕ ಅಧ್ಯಯನಕ್ಕೆ ಅವಕಾಶವಿದ್ದ ಸಂಸ್ಥೆ. ನಾಗಾವಿ ಮಠ. ಋಕ್, ಯಜುರ್, ಸಾಮ ಮತ್ತು ಅಥರ್ವವೇದಗಳು; ವೇದಾಂತ ಹಾಗೂ ವಿವಿಧ ದರ್ಶನ, ಜೈನ, ಬೌದ್ಧಧರ್ಮಗಳು; ಶೈವ, ವೈಷ್ಣವ ಪಂಥಗಳು; ಕಲೆಗಳು–ಇವುಗಳ ಅಧ್ಯಯನಕ್ಕೆ ಸೌಲಭ್ಯವಿತ್ತು. ಸಾವಿರ ವಿದ್ಯಾರ್ಥಿಗಳಿಗೆ ಊಟ, ವಸತಿ ಸೌಕರ್ಯವಿದ್ದಿತು. ದೊಡ್ಡ ಗ್ರಂಥ ಭಂಡಾರವಿತ್ತು. ಅದರ ಮೇಲ್ವಿಚಾರಣೆಗೆ ಆರು ಜನ ಸರಸ್ವತೀ ಭಂಡಾರಿಕರಿದ್ದರು.

ನಾಲ್ವರು ಕುಶಲ ಕಲ್ಲು ಕೆಲಸಗಾರರು ದೇವಾಲಯ ಹಾಗೂ ಮಠವನ್ನು ಒಳ್ಳೆಯ ಸ್ಥಿತಿಯಲ್ಲಿಡುವ ಹೊಣೆ ಹೊತ್ತಿದ್ದರು. ಒಬ್ಬ ವ್ಯವಸ್ಥಾಪಕ ಮಠಕ್ಕೆ ಸೇರಿದ ಭೂಮಿಯನ್ನು ನೋಡಿಕೊಳ್ಳುತ್ತಿದ್ದ. ಮೂವರು 'ಘಟಿಯಾರ'ರು ವೇಳೆಯನ್ನು ಗುರುತಿಸುತ್ತಿದ್ದರು.

ನಾದಿರ್ ಷಾ

ಸ್ವರ್ಗದಲ್ಲಿ ಯುದ್ಧ ಇಲ್ಲ ಎಂಬುದನ್ನು ಕೇಳಿ, "ಹಾಗಾದರೆ ಅಲ್ಲಿ ಆಮೋದ ಪ್ರಮೋದಗಳು ಇರುವುದಾದರೂ ಹೇಗೆ ?" ಎಂದು ಉದ್ಗರಿಸಿದವನು ಪರ್ಷಿಯದ ನಾದಿರ್ ಷಾ.

ಇವನು ಹುಟ್ಟಿದ್ದು 1688ರಲ್ಲಿ ಬಡಕುಟುಂಬದಲ್ಲಿ. ಹೆಸರು ನಾದಿರ್ ಕುಲಿ ಬೇಗ್. ಕೆಲ ಕಾಲ ಕಳ್ಳಕಾಕರ ಮುಖಂಡನಾಗಿದ್ದ. ಪರ್ಷಿಯದ ಮೇಲೆ ದಾಳಿ ನಡೆದು ಪರ್ಷಿಯದ ಅರಸ ಪದಚ್ಯುತನಾದಾಗ, ಅವನ ಮಗ ಷಾ ತಹಮಾಸ್ಪ್ ತಂದೆಯ ರಾಜ್ಯ ಮರಳಿ ಪಡೆಯುವುದಕ್ಕೆ ನಾದಿರ್ ನೆರವಾದ. ನಾದಿರನನ್ನು ಷಾ ತನ್ನ ಸೇವೆಗೆ ತೆಗೆದುಕೊಂಡ. ಕ್ರಮೇಣ ಆಡಳಿತ ಸೂತ್ರಗಳು ನಾದಿರನ ಹಸ್ತಗತವಾದುವು. 1732ರಲ್ಲಿ ಷಾ ತಹಮಾಸ್ಪ್‌ನನ್ನು ನಾದಿರ್ ಪದಚ್ಯುತಗೊಳಿಸಿದ. ತಹಮಾಸ್ಪ್‌ನ ಎಳೆಯ ಮಗ ಮರಣ ಹೊಂದಿದ ಮೇಲೆ, 1736ರಲ್ಲಿ ತಾನೇ ಪರ್ಷಿಯದ ಅರಸನಾದ. ತನ್ನನ್ನು ನಾದಿರ್ ಷಾ ಎಂದು ಕರೆದುಕೊಂಡ.

ವಿಜಯ, ಸುಲಿಗೆಗಳ ಹಂಬಲದಿಂದ ನಾದಿರ್ 1738ರಲ್ಲಿ ಭಾರತದ ಮೇಲೆ ದಾಳಿಮಾಡಿದ. ಘಜ್ನಿ, ಕಾಬೂಲ್, ಲಾಹೋರ್ ಅವನ ವಶವಾದುವು. ದೆಹಲಿಯ ಅರಸ ಮಹಮದ್ ಷಾ ನಾದಿರನ ಪ್ರಬಲ ಸೇನೆಯೆದುರು ಸೋಲೊಪ್ಪಬೇಕಾಯಿತು. ನಾದಿರ್ ಷಾ ಷಾಜಹಾನನ

ನಾಗಾವಿ ಅವಶೇಷಗಳು : ವಿದ್ಯಾ ಕೇಂದ್ರ : ಗ್ರಂಥ ಭಂಡಾರ







ಅರಮನೆಯಲ್ಲಿ ಬೀಡು ಬಿಟ್ಟಿದ್ದಾಗ ಅವನು ಸತ್ತನೆಂಬ ಸುಳ್ಳು ವಾರ್ತೆ ಹಬ್ಬಿತು. ಈ ಗೊಂದಲದಲ್ಲಿ ಕೆಲ ಪಾರಸೀ ಸೈನಿಕರ ಕೊಲೆಯಾಯಿತು. ಕೋಪೋದ್ರಿಕ್ತನಾದ ನಾದಿರ್ ದೆಹಲಿಯ ಪ್ರಜೆಗಳ ಹತ್ಯೆಗೆ ಆಜ್ಞೆ ನೀಡಿದ. ಹಲವಾರು ದಿನಗಳ ವರೆಗೆ ಕೊಲೆ ಕೊಳ್ಳೆಗಳು ನಡೆದುವು.

ಪರ್ಷಿಯಕ್ಕೆ ಹಿಂದಿರುಗುವಾಗ ನಾದಿರ್ 15 ಕೋಟಿ ರೂಪಾಯಿ ನಗದು ಹಣ. ರಾಜನ ಒಡವೆಗಳು. ಕೋಹಿನೂರ್ ವಜ್ರ, ಮಯೂರ ಸಿಂಹಾಸನ ಮುಂತಾದ ಅನೇಕ ಅಮೂಲ್ಯ ವಸ್ತುಗಳನ್ನು ತನ್ನೊಡನೆ ತೆಗೆದುಕೊಂಡು ಹೋದ. 1747ರಲ್ಲಿ ನಾದಿರ್ ಷಾನ ಕೊಲೆಯಾಯಿತು.

ನಾನಕ್‌ಝುರಾ

ಸಿಖ್ಖ ಮತಪ್ರವರ್ತಕ ಗುರು ನಾನಕ್ ಅವರ ಸಾನ್ನಿಧ್ಯದಿಂದ ಪ್ರಸಿದ್ಧ ಪವಿತ್ರವೆನಿಸಿರುವ ಕ್ಷೇತ್ರ. ನಾನಕ್ ಝುರಾ. ಇದು ಬೀದರ ಜಿಲ್ಲೆಯಲ್ಲಿದೆ.

ಗುರುನಾನಕರು 1511ರಲ್ಲಿ ತೀರ್ಥಯಾತ್ರೆ ಮತ್ತು ತತ್ತ್ವ ಪ್ರಚಾರಕ್ಕೆಂದು ದಕ್ಷಿಣ ಭಾರತದ ಕಡೆ ಹೊರಟರು. ಅವರು ನಾಗಪುರ. ಓಂಕಾರೇಶ್ವರ. ನಾಂದೇಡ್. ಭಾಗ್ಯನಗರ ಮಾರ್ಗವಾಗಿ ಬಿದರೆಯನ್ನು ತಲಪಿದರು. ಅಲ್ಲಿ ಊರಾಚೆ ಇದ್ದ ಪ್ರಶಾಂತ ಸ್ಥಳವೊಂದನ್ನು ಕಂಡು ಬೀಡುಬಿಟ್ಟರು.

ನಾನಕರು ಅಲ್ಲಿದ್ದಾಗ ಆ ಪ್ರದೇಶದಲ್ಲಿ ಕುಡಿಯುವ ನೀರಿನ ಅಭಾವ ಉಂಟಾಯಿತು. ಜನರ ಕಷ್ಟವನ್ನು ಕಂಡು ಗುರು ಕನಿಕರಪಟ್ಟರು: ಬೆಟ್ಟದ ಬುಡವನ್ನು ಕಾಲಿನಿಂದ ಮೆಟ್ಟಿ ಸಿಹಿನೀರು ಹೊರಹರಿಯುವಂತೆ ಮಾಡಿದರು. ಇದೇ ನಾನಕ್ ಝುರಾ —ಎಂದು ಒಂದು ದಂತಕಥೆಯಿದೆ.

ನೀರಿನ ಝರಿ ಮೊದಲಿನಿಂದಲೂ ಇತ್ತು: ಇದರ ಸುತ್ತಲೂ ಇದ್ದ ಹಸಿರಿನ ತಂಪಿನಿಂದ ನಾನಕರು ಆಕರ್ಷಿತರಾದರು: ಅವರು ಕೆಲ ಕಾಲ ಅಲ್ಲಿಯೇ ಉಳಿದು ಧರ್ಮೋಪದೇಶ ಮಾಡಿದರು: ಅವರ ಸ್ಪರ್ಶ. ಸಾನ್ನಿಧ್ಯಗಳಿಂದ ಪವಿತ್ರಗೊಂಡ ಆ ಜಲಧಾರೆ 'ನಾನಕ್ ಝುರಾ ಸಾಹೇಬ್' ಎಂದು ಖ್ಯಾತಿ ಪಡೆಯಿತು —ಎಂದು ಮತ್ತೆ ಕೆಲವರ ಅಭಿಪ್ರಾಯ.

ನಾನಕ್ ಝುರಾ ನೀರು ರುಚಿಕರ ಅಷ್ಟೇ ಅಲ್ಲ. ಆರೋಗ್ಯಕರ ಕೂಡ. ಅದು ಪ್ರೇಕ್ಷಣೀಯ ಸ್ಥಳ.

ಇಲ್ಲೊಂದು ಗುರುದ್ವಾರವಿದೆ: ಒಂದು ಪ್ರಬಂಧಕ ಸಮಿತಿ ಈ ಕ್ಷೇತ್ರಕ್ಕೆ ಸಂಬಂಧಿಸಿದ ಕಾರ್ಯಗಳನ್ನು ನೋಡಿಕೊಳ್ಳುತ್ತದೆ.

ನೋಡಿ : ಗುರು ನಾನಕ್

ನಾನಾ ಫಡ್ನವಿಸ್

ಮೂವರು ಪೇಶ್ವೆಗಳ ಆಡಳಿತದಲ್ಲಿ ಅಧಿಕಾರಿಯಾಗಿ. ಮರಾಠರ ಗೌರವವನ್ನು ಶಿಖರಕ್ಕೇರಿಸಿದಾತ ನಾನಾ ಫಡ್ನವಿಸ್.



ನಾನಾ ಫಡ್ನವಿಸ್ ನಿಷ್ಠಾವಂತ ಕೆಲಸಗಾರ. ಸೂಕ್ಷ್ಮಮತಿ. ಗುಪ್ತಚಾರರಿಂದ ದೇಶದ ವಿದ್ಯಮಾನಗಳನ್ನು ತಿಳಿದುಕೊಂಡು ಸೂಕ್ತ ಕ್ರಮ ಕೈಗೊಳ್ಳುತ್ತಿದ್ದ. ಇದಿರಾಳಿಗಳಲ್ಲಿ ಒಡಕುಂಟು ಮಾಡಿ ತನ್ನ ಅಧಿಕಾರವನ್ನು ವಿಸ್ತರಿಸಿಕೊಳ್ಳುತ್ತಿದ್ದ.

ಇಂಗ್ಲಿಷ್ ಕುಟಿಲ ನೀತಿಯನ್ನು ಫಡ್ನವಿಸ್ ಅರ್ಥ ಮಾಡಿಕೊಂಡಿದ್ದ.

ಈತ 1800ರಲ್ಲಿ ನಿಧನನಾದ.

ನೋಡಿ : ಪೇಶ್ವೆ ; ಮರಾಠರು

ನಾನಾ ಸಾಹೇಬ್

"ಹಿಂದೂಸ್ಥಾನದಲ್ಲಿ ನೀವು ಮಾಡಿರುವ ಮೋಸವನ್ನು ತಿಳಿದಿರುವ ನಾನು ನಿಮ್ಮನ್ನು ಏತಕ್ಕೆ ಸೇರಲಿ ? ಎಂದಾದರೂ ಜೀವ ಕೊಡಬೇಕು. ಅಪಮಾನಿತವಾಗಿ ಸಾಯುವುದೇಕೆ ? ನಾನು ಸತ್ತರೂ ಸರಿ. ಸೆರೆ ಸಿಕ್ಕರೂ ಆಯಿತು ಅಥವಾ ನೇಣು ಹಾಕಿದರೂ ಸರಿ. ನಾನು ಏನು ಮಾಡಿದರೂ. ಅದು ಖಡ್ಗದಿಂದಲೇ..."

—ಹೀಗೆ ಭಾರತದ ಬಹುಭಾಗವನ್ನು ಆಳುತ್ತಿದ್ದ ಬ್ರಿಟಿಷರಿಗೆ ಬರೆದ ಧೀರ. ನಾನಾ ಸಾಹೇಬ್ ಎಂದು ಪ್ರಸಿದ್ಧನಾದ ಧೋಂಡು ಪಂತ. ಈತ ಪೇಶ್ವೆ ಎರಡನೆಯ ಬಾಜೀರಾಯನ ದತ್ತುಪುತ್ರ. ಬಾಜೀರಾಯ ನಿಧನನಾದ ಮೇಲೆ ಆತನಿಗೆ ದೊರಕುತ್ತಿದ್ದ 8 ಲಕ್ಷ ರೂಪಾಯಿ ಜೀವನಾಂಶವನ್ನು ದತ್ತುಪುತ್ರನಿಗೆ ಕೊಡಲು ಗವರ್ನರ್ ಜನರಲ್ ಡಾಲ್‌ಹೌಸಿ ನಿರಾಕರಿಸಿದ.

ಬ್ರಿಟಿಷರ ಮೇಲಿನ ಅತೃಪ್ತಿಯ ಫಲವಾಗಿ 1857 ಮೇ 10ರಂದು ಮೀರತ್‌ನಲ್ಲಿ



"ಏನು ಮಾಡಿದರೂ ಅದು ಖಡ್ಗದಿಂದಲೇ"

ಸಿಪಾಯಿಗಳು ದಂಗೆ ಎದ್ದಾಗ ಕಾನ್ಪುರದ ಬಳಿ ಇದ್ದ ನಾನಾ ಸಾಹೇಬ ತಾನು ಪೇಶ್ವೆ ಎಂದು ಘೋಷಿಸಿದ: ಕಾನ್ಪುರ ನಗರದ ಆಡಳಿತವನ್ನು ವಹಿಸಿದ.

ಜೂನ್ 8ರಿಂದ 26ರ ವರೆಗೆ ಬ್ರಿಟಿಷ್ ನೆಲೆಯ ಮೇಲೆ ಆಕ್ರಮಣ ನಡೆಯಿತು. ಜೂನ್ 27ರಂದು ಬ್ರಿಟಿಷರು ಶರಣಾಗತರಾದರು. ತಮ್ಮ ನೆಲೆಯಿಂದ ಹೊರ ಹೋಗುತ್ತಿದ್ದಾಗ ಅವರಲ್ಲಿ ಅನೇಕರ ಕೊಲೆಯಾಯಿತು. ಈ ಸಾಮೂಹಿಕ ಕೊಲೆಗೆ ನಾನಾ ಸಾಹೇಬನೂ ಹೊಣೆಗಾರ ಎಂದು ಆಂಗ್ಲರು ಆಪಾದಿಸಿದರು.

ನಾನಾ ಸಾಹೇಬ ಆಂಗ್ಲರ ಕೈಗೆ ಸಿಗಲಿಲ್ಲ, ಅವನನ್ನು ಹಿಡಿದುಕೊಟ್ಟವರಿಗೆ ಒಂದು ಲಕ್ಷ ರೂಪಾಯಿ ಬಹುಮಾನ ಎಂದು ಸಾರಲಾಯಿತು.

ನಾನಾ ಸಾಹೇಬ್ 1859ರ ಸೆಪ್ಟೆಂಬರಿನಲ್ಲಿ ನೇಪಾಳದ ಕಾಡಿನಲ್ಲಿ ಮರಣಹೊಂದಿದ ಎಂದು ಪ್ರತೀತಿ.

ನೋಡಿ : ಸಿಪಾಯಿ ದಂಗೆ

ನಾಮದೇವ

ಮಹಾರಾಷ್ಟ್ರದ ಸಂತ, ನಾಮದೇವ.

ಅವನು ಹುಟ್ಟಿದ್ದು 1270ರ ಸುಮಾರಿಗೆ. ಪವಿತ್ರ ಕ್ಷೇತ್ರ ಪಂಢರಾಪುರದಲ್ಲಿ, ಒಂದು ದರ್ಜಿ ಕುಟುಂಬದಲ್ಲಿ. ದುಷ್ಟರ ಸಹವಾಸಕ್ಕೆ ಬಿದ್ದು ಕೊಲೆ, ಸುಲಿಗೆಗಳಲ್ಲೇ ಜೀವನದ ಹೆಚ್ಚಿನ ಭಾಗವನ್ನು ಕಳೆದ. ಆದರೆ ಸಂತ ಜ್ಞಾನೇಶ್ವರನ ಪ್ರಭಾವದಿಂದ ನಾಮದೇವನ ಜೀವನದ ರೀತಿ ಬದಲಾಯಿತು. ಹಣಕ್ಕಾಗಿ ಕೊಲೆ ಮಾಡಲೂ ಹಿಂದೆಗೆಯದೆ ಇದ್ದ ನಾಮದೇವ ವಿಷ್ಣುವಿನ ಪೂಜೆಗಾಗಿ ತನ್ನ ಜೀವನವನ್ನು ಮುಡಿಪಿಟ್ಟ. ಪುರಾಣ ಪಾಂಡಿತ್ಯಗಳ ಬಗೆಗೆ ಅನಾದರದಿಂದಿದ್ದ ಈತ ಸ್ವತಃ ಕೀರ್ತನೆಗಳನ್ನು ರಚಿಸಿದ.



ಅಭಂಗ : ನಾಮದೇವ

ಕುಂಬಾರನಾದ ಗೋರ, ಅಸ್ಪೃಶ್ಯನಾದ ಚೋಖ, ಗಾಣಿಗನಾದ ಜೋಗ, ತೋಟಗಾರ ಸಾವಂತ –ಇವರೆಲ್ಲ ನಾಮದೇವನ ಅನುಯಾಯಿಗಳು; ಮಹಾಭಕ್ತರು ತನ್ನ ಸಂಗಡಿಗರ ಮತ್ತು ಕುಟುಂಬದವರ ಸಹಾಯದಿಂದ ನಾಮದೇವ ನೂರು ಕೋಟಿ 'ಅಭಂಗ'ಗಳನ್ನು (ಹಾಡುಗಳು) ರಚಿಸಿದ ಎಂದು ಪ್ರತೀತಿ ಇದೆ. ನಾಮದೇವ ಹಲವು ವರ್ಷ ಕಾಲ ಪಂಜಾಬಿನಲ್ಲಿದ್ದ. ಸಿಕ್ಖರ ಪವಿತ್ರಗ್ರಂಥವಾದ 'ಗ್ರಂಥ್ ಸಾಹೆಬ್'ನಲ್ಲಿ ನಾಮದೇವನ ಕೆಲವು ಗೀತೆಗಳು ಸೇರಿವೆ.

ಹಿಂದಿ ಮತ್ತು ಮರಾಠಿ ಹಾಡುಗಳ ಮೂಲಕ ಭಕ್ತಿ ಪಂಥವನ್ನು ಜನಪ್ರಿಯಗೊಳಿಸಿದ ಮೊದಲಿಗರಲ್ಲಿ ನಾಮದೇವ ಒಬ್ಬ. ಇವನ ಅನುಯಾಯಿಗಳಲ್ಲಿ ಅನೇಕ ಜಾತಿಯವರು ಇದ್ದರು. ಯಾವ ಜಾತಿ, ಮತದವರಾದರೂ ಭಕ್ತಿಮಾರ್ಗದಲ್ಲಿ ನಡೆದರೆ ಮೋಕ್ಷವನ್ನು ಪಡೆಯುತ್ತಾರೆ ಎಂದು ನಾಮದೇವ ಸಾರಿದ.

ಅಹಂಕಾರವನ್ನು ಬಿಟ್ಟು ಸಕಲಜೀವಿಗಳಲ್ಲೂ ವಾಸುದೇವನನ್ನು ಕಾಣುವವರನ್ನು ಮಾತ್ರವೇ ಸಂತರೆಂದು ತಿಳಿಯಬೇಕು. ಇತರರನ್ನಲ್ಲ –ಎಂದು ಆತ ಹೇಳಿದ. ನಾಮದೇವ 1350ರಲ್ಲಿ ಗತಿಸಿದ.

ನಾಯನಾರರು

ನಾಯನಾರರು (ನಾಯನ್‌ಮಾರರು) ತಮಿಳುನಾಡಿನಲ್ಲಿ ಶೈವ ಪಂಥದ ಭಕ್ತಾಗ್ರಣಿಗಳು : ಸಂತ ಕವಿಗಳು. 700–900ರ ವರೆಗಿನ ಅವಧಿಯಲ್ಲಿ 63 ನಾಯನಾರರು ಜನಮನವನ್ನು ಬೆಳಗಿದರು.

ಭಕ್ತಿರಸದಿಂದ ತುಂಬಿದ, ಧಾರ್ಮಿಕ ತಾತ್ತ್ವಿಕ ವಿಚಾರಧಾರೆಗಳುಳ್ಳ ಸ್ತೋತ್ರ ಗೀತೆಗಳನ್ನು ಇವರು ರಚಿಸಿದರು. ಇವನ್ನು 'ತೇವಾರಮ್' ಎಂದು ಕರೆಯುತ್ತಾರೆ. 'ತಮಿಳುವೇದ' ಎಂಬ ಗೌರವ ಇದಕ್ಕೆ ಸಲ್ಲುತ್ತದೆ. ಅತ್ಯಂತ ಗೇಯಗುಣವುಳ್ಳ 'ತೇವಾರಮ್' ಗಳನ್ನು ಶೈವ ದೇವಾಲಯಗಳಲ್ಲಿ ಹಾಡುವ ಸಂಪ್ರದಾಯವಿದೆ.

ನಾಯನಾರರಲ್ಲಿ ಅಪ್ಪರ್, ಸಂಬಂಧರ್ ಮತ್ತು ಸುಂದರರ್ ಈ ಮೂವರನ್ನು 'ಮೂವರ್'(ತ್ರಿಮೂರ್ತಿ) ಎಂದು ಕರೆಯಲಾಗಿದೆ. ತಿರುವಾಚಕವನ್ನು ರಚಿಸಿದ ಮಾಣಿಕ್ಯವಾಚಕರ್ ಅವರನ್ನೂ ಸೇರಿಸಿ ಈ ನಾಲ್ವರನ್ನು 'ಶೈವ ಸಮಯ ಗುರುಗಳು' ಎನ್ನುತ್ತಾರೆ.

ನಾಯನಾರರನ್ನು ಪಟ್ಟಿಮಾಡಿದವರು ಅವರಲ್ಲಿಯೇ ಒಬ್ಬರಾದ ಸುಂದರ ಮೂರ್ತಿ. ಅವರ ಜೀವನ ಚರಿತ್ರೆಯನ್ನು ವಿವರವಾಗಿ ಬರೆದವರು ಚೋಳ ಆಸ್ಥಾನದಲ್ಲಿ ಮಂತ್ರಿಯಾಗಿದ್ದ ಸಿಕ್ಕಿಳಾರ್. ಒಂದನೆಯ ರಾಜರಾಜಚೋಳನ ಆಣತಿಯ ಮೇರೆಗೆ ನಂಬಿ ಆಂಡಾರ್ ನಂಬಿ ಎಂಬವನು ನಾಯನಾರರ ಅಳಿದುಳಿದ ಸಮಗ್ರ ಗೀತೆಗಳನ್ನು ಸಂಗ್ರಹಿಸಿದ. ಇದು 12 ಹೊತ್ತಗೆಗಳಲ್ಲಿದೆ.

ಕೆಲವು ಶಿವ ದೇವಾಲಯಗಳಲ್ಲಿ ನಾಯನಾರರಿಗೆ ಪೂಜೆ ಸಲ್ಲುತ್ತದೆ.

ನೋಡಿ : ತಮಿಳು ಭಾಷೆ-ಸಾಹಿತ್ಯ

ನಾರದ

ತ್ರಿಲೋಕ ಸಂಚಾರಿ, ಕಲಹಪ್ರಿಯ ಎಂಬ ಟೀಕೆಗೆ ಒಳಗಾಗಿರುವ ನಾರದನೂ ಅವನ ಸೋದರಮಾವನಾದ ಪರ್ವತನೂ ಬ್ರಹ್ಮರ್ಷಿಗಳೆಂದು ಪ್ರಸಿದ್ಧರು.

ಹರ್ಯಶ್ವ ಮತ್ತು ಶಬಲಾಶ್ವ ಎಂಬ ದಕ್ಷನ ಮಕ್ಕಳಿಗೆ ನಾರದ ಜ್ಞಾನೋಪದೇಶ ಮಾಡಿದ. ಅದರಿಂದ ಅವರು ಸೃಷ್ಟಿಕಾರ್ಯದಿಂದ ವಿಮುಖರಾದರು. ದಕ್ಷ ಕೋಪಗೊಂಡು "ಎಲ್ಲಿಯೂ ನಿನಗೆ ಸ್ಥಾನವಿಲ್ಲದಂತಾಗಲಿ, ಕಲಹಪ್ರಿಯನಾಗಿ ಅಲೆಯುತ್ತಿರು." ಎಂದು ನಾರದನಿಗೆ ಶಾಪಕೊಟ್ಟ.

—ಇದು ನಾರದನನ್ನು ಕುರಿತ ಪುರಾಣಕಥೆ.



ಕಲಹಪ್ರಿಯತೆ : ನಾರದ

ಸಂಗೀತಕ್ಕೆ ಖ್ಯಾತರಾದ ಗಂಧರ್ವರ ಮುಖ್ಯಸ್ಥ ನಾರದ: ಇವನೇ ವೀಣೆಯನ್ನು ಸೃಜಿಸಿದವನು; ಈತ ಸಂಗೀತ ಗ್ರಂಥಗಳ ಕರ್ತೃ ಕೂಡ ಎಂದೂ ಹೇಳುತ್ತಾರೆ.

ಕೃಷ್ಣನಿಗೆ ಸಂಬಂಧಿಸಿದ ದಂತಕಥೆಗಳಲ್ಲಿ ನಾರದನ ಪಾತ್ರವೂ ಇದೆ. ಕೃಷ್ಣನಿಂದ ಮರಣ ಬರುವುದೆಂದು ಕಂಸನಿಗೆ ಸೂಚನೆ ಕೊಟ್ಟವನು ನಾರದ. ಕೃಷ್ಣನು ಸತ್ಯಭಾಮೆಗೆ ದೇವಲೋಕದಿಂದ ಪಾರಿಜಾತ ಪುಷ್ಪವನ್ನು ತಂದು ಕೊಡಬೇಕಾಗುವ ಪ್ರಸಂಗ ಉಂಟಾಗುವುದು ನಾರದನಿಂದ.

ಪುರಾಣ ಕಥೆಗಳ ಪ್ರಕಾರ—

ನಾರದ ಗುರುವಾಗಿ ಪ್ರಸಿದ್ಧನಾಗಿದ್ದಾನೆ. ರಾಜರಿಗೆ ಸಲಹೆಗಾರನಾಗಿ ರಂಜಿಸಿದ್ದಾನೆ.

ವಾಲ್ಮೀಕಿಗೆ ರಾಮಾಯಣದ ಕಥೆಯನ್ನು ತಿಳಿಸಿ 'ರಾಮಾಯಣ' ಬರೆಯಲು ಸೂಚಿಸಿದವನು ಆತ.

ಸುತ್ತಾಟ ಎಂದರೆ ನಾರದನಿಗೆ ಇಷ್ಟ. ಮಹಾಭಾರತದ ಕಥೆಯನ್ನು ದೇವಲೋಕದಲ್ಲಿ ಹರಡಿದವನು ಆತ.

ದೇವಬ್ರಹ್ಮ, ಕಲಿಕಾರಕ. ಕಪಿವಕ್ತ್ರ, ಪಿಶುನ ಮೊದಲಾದ ಹೆಸರುಗಳಿಂದಲೂ ನಾರದನನ್ನು ಕರೆಯುತ್ತಾರೆ.

ನಾರಾಯಣ ಗಣೇಶ ಚಂದಾವರ್‌ಕರ್

1883ರಲ್ಲಿ ಇಂಗ್ಲೆಂಡಿನಲ್ಲಿ ಪಾರ್ಲಿಮೆಂಟ್ ಚುನಾವಣೆ: ಆ ಸಂದರ್ಭದಲ್ಲಿ ಭಾರತದ ಸಮಸ್ಯೆಗಳನ್ನು ಕುರಿತು ಅಲ್ಲಿ ಪ್ರಚಾರಮಾಡಿ ಪರಿಹಾರ ದೊರಕಿಸಲು ಪ್ರಯತ್ನಿಸಿದವರು ನಾರಾಯಣ ಗಣೇಶ ಚಂದಾವರ್‌ಕರ್.

ಪಾಂಡಿತ್ಯ. ವಾದಕೌಶಲ. ಸಮಾಜಸುಧಾರಣಾ ದೃಷ್ಟಿಗಳು ಅವರಲ್ಲಿ ಬೆರೆತಿದ್ದುವು. ಉನ್ನತ ಹುದ್ದೆಗಳ ದಕ್ಷನಿರ್ವಹಣೆ ಅವರ ಚಟುವಟಿಕೆಯ ಒಂದು ಮುಖ: ವಿದ್ಯಾರ್ಥಿ ಸಂಘಗಳಿಂದ ಸೇವಾಸಂಘಟನೆಗಳು. ಸಮಾಜ ಸುಧಾರಣಾ ಸಂಸ್ಥೆಗಳ ತನಕ ವಿವಿಧ ಸಾರ್ವಜನಿಕ ಕೆಲಸಗಳಿಗೆ ಪ್ರೇರಣೆ. ಸಹಕಾರ ನೀಡಿಕೆ ಇನ್ನೊಂದು ಮುಖ.

1855ರಲ್ಲಿ ಹೊನ್ನಾವರದಲ್ಲಿ ಜನಿಸಿದ ಚಂದಾವರ್‌ಕರ್ ಪ್ರಾರಂಭಿಕ ಶಿಕ್ಷಣದ ಅನಂತರ ಮುಂಬಯಿಗೆ ತೆರಳಿ. ಎಲ್‌ಫಿನ್‌ಸ್ಟನ್ ಕಾಲೇಜಿನಲ್ಲಿ ಶಿಕ್ಷಣ ಪಡೆದರು. 22ನೆಯ ವಯಸ್ಸಿನಲ್ಲಿ ಬಿ. ಎ. ಉತ್ತೀರ್ಣರಾದ ಅನಂತರ ಎರಡು ವರ್ಷ 'ಇಂದು ಪ್ರಕಾಶ' ಪತ್ರಿಕೆಯ ಇಂಗ್ಲಿಷ್ ವಿಭಾಗದ ಸಂಪಾದಕರಾಗಿದ್ದರು. ಆಮೇಲೆ 1881ರಲ್ಲಿ ಕಾನೂನು ಪರೀಕ್ಷೆ ಉತ್ತೀರ್ಣರಾಗಿ ಮುಂಬಯಿ ಹೈಕೋರ್ಟಿನಲ್ಲಿ ವಕಾಲತ್ತನ್ನೂ ಸಾರ್ವಜನಿಕ ಚಟುವಟಿಕೆಗಳನ್ನೂ ಪ್ರಾರಂಭಿಸಿದರು. ಶಿಕ್ಷಣ. ಸಾಹಿತ್ಯಕ್ಷೇತ್ರಗಳಲ್ಲೂ ಆಸಕ್ತಿ ತೋರಿಸಿದರು. 1897ರಲ್ಲಿ ಮುಂಬಯಿ ವಿಶ್ವವಿದ್ಯಾನಿಲಯ ಸೆನೆಟ್ ಹಾಗೂ ಮುಂಬಯಿ ಶಾಸನ ಸಭೆಗಳ ಸದಸ್ಯರಾಗಿ ನೇಮಕಗೊಂಡರು.



ಸಮಾಜಸುಧಾರಣೆ : ಚಂದಾವರ

ಅವರು 1900ರಲ್ಲಿ ಲಾಹೋರಿನಲ್ಲಿ ಜರಗಿದ 16ನೆಯ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷತೆ ವಹಿಸಿದರು.

ಮುಂಬಯಿ ಹೈಕೋರ್ಟಿನ ನ್ಯಾಯಾಧೀಶರಾಗಿದ್ದ ಮಹಾದೇವ ಗೋವಿಂದ ರಾನಡೆ 1901ರಲ್ಲಿ ತೀರಿಕೊಂಡಾಗ ಸರಕಾರವು ಆ ಹುದ್ದೆಗೆ ಚಂದಾವರ್‌ಕರರನ್ನು ನೇಮಿಸಿತು. ಅವರು 1912ರ ತನಕ ಆ ಅಧಿಕಾರದಲ್ಲಿದ್ದರು. ಅನಂತರ ಸ್ವಲ್ಪಕಾಲ ಇಂದೂರು ಸಂಸ್ಥಾನದ ಮುಖ್ಯ ಮಂತ್ರಿಯಾಗಿ ಸೇವೆ ಸಲ್ಲಿಸಿದರು.

ಧರ್ಮ ಹಾಗೂ ಸಮಾಜಸುಧಾರಕ ಸಂಘವಾಗಿದ್ದ 'ಪ್ರಾರ್ಥನಾ ಸಮಾಜ'ದಲ್ಲಿ ರಾನಡೆಯವರ ಜೊತೆಯಲ್ಲಿ ಚಂದಾವರ್‌ಕರರೂ ಕಾರ್ಯಕರ್ತರಾಗಿದ್ದರು. ರಾನಡೆಯವರ ಅನಂತರ ಅವರ ಕಾರ್ಯಗಳನ್ನು ಮುಂದುವರಿಸಿದರು. 1902ರಲ್ಲಿ ವೈಸ್‌ರಾಯ್ ಕರ್ಜನ್ ಇವರನ್ನು ಶಿಕ್ಷಣ ಮಂಡಲಿಯ ಸದಸ್ಯರಾಗಿ ನೇಮಿಸಿದರು. ಕೆಲಕಾಲ ಮುಂಬಯಿ ವಿಶ್ವವಿದ್ಯಾನಿಲಯದ ವೈಸ್‌ಛಾನ್ಸ್‌ಲರ್ ಕೂಡಾ ಆಗಿದ್ದರು.

1923ರ ಮೇ ತಿಂಗಳಲ್ಲಿ ಬೆಂಗಳೂರಿಗೆ ಬಂದಿದ್ದಾಗ, ಹೃದಯಾಘಾತಕ್ಕೊಳಗಾಗಿ ಚಂದಾವರ್‌ಕರ್ ತೀರಿಕೊಂಡರು.

ನಾರಾಯಣ ಗುರು

"ಒಂದೇ ಕುಲ, ಒಂದೇ ಮತ, ಒಬ್ಬನೇ ದೇವರು.

ಈ ಸಂದೇಶ ನೀಡಿದ ಕೇರಳದ ಅತ್ಯಂತ ಪ್ರಮುಖ ಸಮಾಜ ಸುಧಾರಕ ನಾರಾಯಣ ಗುರು.

ಹಿಂದೂ ದೇವಾಲಯಗಳಲ್ಲಿ ಎಲ್ಲರಿಗೂ ಪ್ರವೇಶ ಸಿಗುವಂತೆ ಮಾಡಲು ಇವರು ಶ್ರಮಿಸಿದರು. ಇವರ ಪ್ರಯತ್ನದ ಫಲವಾಗಿ ಕೆಲವು ದೇವಾಲಯಗಳು ವಿದ್ಯಾಲಯಗಳಾಗಿ ಪರಿವರ್ತನೆಗೊಂಡು ಎಲ್ಲ ಜಾತಿಗಳ ಜನರಿಗೆ ವಿದ್ಯಾದಾನ ಮಾಡಿದುವು.

ತಿರುವನಂತಪುರದಿಂದ ಏಳು ಮೈಲು ದೂರದ ಪುಟ್ಟ ಹಳ್ಳಿಯಲ್ಲಿ ನಾರಾಯಣ ಗುರು 1855 ಆಗಸ್ಟ್ 18ರಂದು ಹುಟ್ಟಿದರು. ಸಂಸ್ಕೃತವನ್ನೂ ಆಯುರ್ವೇದವನ್ನೂ ಅಭ್ಯಾಸಮಾಡಿದರು. ವಿದ್ಯಾರ್ಥಿಯಾಗಿದ್ದಾಗಲೇ ಸಮಾಜದ ಲೋಪದೋಷಗಳನ್ನು ಕಂಡು ಮರುಗಿದರು. ಆಧ್ಯಾತ್ಮಿಕ ಜೀವನವನ್ನು ಬಯಸಿ ಮನೆಬಿಟ್ಟರು. ತತ್ತ್ವಜ್ಞಾನಿಯಾದರು; ಮನೆಗೆ ಮರಳಿಬಂದರು.



' ಒಂದೇ ಕುಲ ' :
ನಾರಾಯಣ ಗುರು

ಇವರು ಅಲ್ವಾಯಿಯಲ್ಲಿ ಅದ್ವೈತಾಶ್ರಮ ಆರಂಭಿಸಿದರು. ವಿವಿಧ ಮತಗಳ ತುಲನಾತ್ಮಕ ಅಧ್ಯಯನಕ್ಕಾಗಿ ಇಲ್ಲಿ ಒಂದು ಸಮ್ಮೇಳನ ಏರ್ಪಡಿಸಿದರು. ಅವರ ಸಂದೇಶವನ್ನು ಸಾರುವುದಕ್ಕಾಗಿ ಶಿಷ್ಯವೃಂದ ಸಿದ್ಧವಾಯಿತು.

ರವೀಂದ್ರನಾಥ ಠಾಕೂರರೂ ನಾರಾಯಣ ಗುರು ಅವರಿಂದ ಆಕರ್ಷಿತರಾಗಿದ್ದರು.

ನಾರಾಯಣ ಗುರು ವಿಪುಲ ಬರೆಹಗಾರರು. ಸಂಸ್ಕೃತದಲ್ಲಿ 'ದರ್ಶನಮಾಲಾ' ಮತ್ತು ಮಲಯಾಳಂನಲ್ಲಿ 'ಆತ್ಮೋಪದೇಶ ಶತಕಂ' ಎಂಬ ಗ್ರಂಥಗಳು ಅವರ ಪ್ರಮುಖ ಕೃತಿಗಳು.

1928 ಸೆಪ್ಟೆಂಬರ್ 21ರಂದು ನಾರಾಯಣ ಗುರು ಅವರ ದೇಹಾವಸಾನವಾಯಿತು.



ನಾಲಂದಾ : ಗತವೈಭವದ ಪ್ರತೀಕ

ನಾರಾಯಣೋಪನಿಷತ್

ಉಪನಿಷತ್ತುಗಳ ಒಟ್ಟು ಸಂಖ್ಯೆ ಎಷ್ಟು. ಇವುಗಳಲ್ಲಿ ಪ್ರಧಾನವಾದುವು ಯಾವುವು ಎಂಬ ಬಗೆಗೆ ಭಿನ್ನಾಭಿಪ್ರಾಯಗಳಿವೆ. ಕೆಲವರು ಹತ್ತು ಉಪನಿಷತ್ತುಗಳನ್ನು ಪ್ರಧಾನವೆಂದು ಭಾವಿಸಿದರೆ ಮತ್ತೆ ಕೆಲವರು ಹದಿಮೂರು ಉಪನಿಷತ್ತುಗಳು ಪ್ರಧಾನವಾದುವು ಎನ್ನುತ್ತಾರೆ.


ಈ ಹದಿಮೂರು ಉಪನಿಷತ್ತುಗಳನ್ನು ಬಿಟ್ಟು ಉಳಿದವುಗಳಲ್ಲಿ ನಾರಾಯಣೋಪನಿಷತ್ತಿಗೆ ಗಣ್ಯಸ್ಥಾನವಿದೆ. ಇದು ತೈತ್ತಿರೀಯ ಆರಣ್ಯಕಕ್ಕೆ ಸೇರಿದ್ದು. ಇದು ಪರಿಶಿಷ್ಟ ಅಥವಾ ಅನುಬಂಧ ರೂಪವಾದದ್ದು.

ಈ ದೀರ್ಘ ಉಪನಿಷತ್ತಿನಲ್ಲಿ ಸಂಹಿತೆಗಳಿಂದ ಆರಿಸಲ್ಪಟ್ಟ ಅನೇಕ ಮಂತ್ರಗಳಿವೆ; ಹಲವಾರು ದೇವತೆಗಳನ್ನು ಸ್ತುತಿಸುವ ಮಂತ್ರಗಳೂ ಇವೆ. ಕೊನೆಯ ಖಂಡದಲ್ಲಿ ಆತ್ಮಯಾಗದ ನಿರೂಪಣೆಯಿದೆ.

ನಾಲಂದಾ

ಆರರಿಂದ ಹದಿಮೂರನೆಯ ಶತಮಾನದ ವರೆಗೆ ಜಗತ್ಪ್ರಸಿದ್ಧಿ ಪಡೆದಿದ್ದ ವಿದ್ಯಾಕೇಂದ್ರ, ನಾಲಂದಾ. ಇದು ಇದ್ದದ್ದು ಇಂದಿನ ಬಿಹಾರ್ ಪ್ರದೇಶದಲ್ಲಿ. ನ-ಅಲಂ-ದಾ ಎಂದರೆ ತಡೆಯಿಲ್ಲದೆ ದಾನ ನಡೆಯುತ್ತಿರುವುದು —ಎಂದರ್ಥ.

ಇಲ್ಲಿಗೆ ಅಧ್ಯಯನಕ್ಕಾಗಿ ದೇಶವಿದೇಶಗಳಿಂದ ವಿದ್ಯಾರ್ಥಿಗಳು ಬರುತ್ತಿದ್ದರು. ಇಂಥವರಲ್ಲಿ ಒಬ್ಬನಾದ ಚೀನೀ ಯಾತ್ರಿಕ ಹ್ಯೂಯೆನ್ ತ್ಸಾಂಗ್ ಈ ಮಹಾವಿದ್ಯಾಲಯದಲ್ಲಿ ಕೆಲವಾರು ವರ್ಷಗಳನ್ನು ಕಳೆದ. ಇವನ ಬರೆವಣಿಗೆಗಳಿಂದ ಏಳನೆಯ ಶತಮಾನದ ನಾಲಂದಾದ ಚಿತ್ರ ನಮಗೆ ದೊರೆಯುತ್ತದೆ.



ಆಚಾರ್ಯ ಶುಭಕರ ಸಿಂಹ :
8ನೆಯ ಶತಮಾನದಲ್ಲಿ, ನಾಲಂದಾದಲ್ಲಿ

ಇಲ್ಲಿ ಎಂಟು ಮಹಾ ಪಾಠಶಾಲೆಗಳೂ ಮೂರು ಪ್ರತ್ಯೇಕ ಕಟ್ಟಡಗಳಲ್ಲಿ ಧರ್ಮಗುಂಜವೆಂಬ ಬೃಹತ್ ಗ್ರಂಥ ಭಂಡಾರವೂ ಇದ್ದುವು. ಹ್ಯೂಯೆನ್ ತ್ಸಾಂಗ್ ಬಂದಿದ್ದ ಕಾಲದಲ್ಲಿ ವಯೋವೃದ್ಧನೂ ಜ್ಞಾನವೃದ್ಧನೂ ಆಗಿದ್ದ ಶೀಲಭದ್ರ ಈ ವಿದ್ಯಾಕೇಂದ್ರದ ಸ್ಥಾನಪತಿಯಾಗಿದ್ದ. ಮಹಾಯಾನ ಬೌದ್ಧಧರ್ಮ ಇಲ್ಲಿನ ಮುಖ್ಯ ಅಧ್ಯಯನ ವಿಷಯವಾಗಿದ್ದರೂ ವೇದ, ವೇದಾಂಗ, ಯೋಗ, ತರ್ಕ, ವ್ಯಾಕರಣ ಹಾಗೂ ವೈದ್ಯ ವಿಷಯಗಳ ಬಗೆಗೂ ಶಿಕ್ಷಣವಿದ್ದಿತು.

ಇಲ್ಲಿಗೆ ಪ್ರವೇಶ ಪಡೆಯುವುದಕ್ಕೆ ಮೊದಲು ವಿದ್ಯಾರ್ಥಿ ತಕ್ಕಮಟ್ಟಿಗೆ ಅಭ್ಯಾಸಮಾಡಿರುವುದು ಅಗತ್ಯವಿತ್ತು. ಪ್ರವೇಶ ಪರೀಕ್ಷೆಯಲ್ಲಿ ಉತ್ತೀರ್ಣರಾದವರನ್ನು ಮಾತ್ರ ವಿದ್ಯಾಲಯಕ್ಕೆ ಸೇರಿಸಿಕೊಳ್ಳುತ್ತಿದ್ದರು. ಶಿಕ್ಷಣಕ್ಕಾಗಲೀ, ಊಟ ವಸತಿಗಳಿಗಾಗಲೀ ಶುಲ್ಕವಿರಲಿಲ್ಲ. ಈ ಎಲ್ಲ ಖರ್ಚನ್ನು ನಿರ್ವಹಿಸಲು ನೂರು ಗ್ರಾಮಗಳ ಆದಾಯ ಮೀಸಲಾಗಿದ್ದಿತು. ಇದಲ್ಲದೆ ಅನೇಕ ಮಂದಿ ರಾಜರ, ಶ್ರೀಮಂತರ ಉದಾರ ದಾನದ ಬೆಂಬಲವೂ ಇತ್ತು. ಸಮ್ರಾಟ ಹರ್ಷವರ್ಧನ ಈ ವಿದ್ಯಾಲಯದ ಪೋಷಕರಲ್ಲಿ ಒಬ್ಬನಾಗಿದ್ದ. ನಾಲಂದಾ ವಿಹಾರದ ಕಟ್ಟಡಗಳು ಭವ್ಯವಾಗಿದ್ದುವು.

ನಾಲಂದಾದ ವಿದ್ಯಾರ್ಥಿಗಳ ವೈಯಕ್ತಿಕ ಜೀವನ ಕಟ್ಟುನಿಟ್ಟಾಗಿತ್ತು. ಭಿಕ್ಷುಣಿಯರಿಗೂ ಇಲ್ಲಿ ಪ್ರವೇಶವಿತ್ತು. ಆದರೆ ಸ್ತ್ರೀಯರನ್ನು ಕಣ್ಣೆತ್ತಿ ನೋಡುವುದೂ ಪಾಪ ಎಂದು ಪರಿಗಣಿಸಲಾಗಿತ್ತು. ಅಂಥ ಅಪರಾಧ ಮಾಡಿದ ಶಿಷ್ಯ ಒಂದು ವರ್ಷಕಾಲ ಬಾಲ ತೂಗಾಡುತ್ತಿರುವ ಕತ್ತೆಯ ಚರ್ಮ ಹೊದೆದು, ತನ್ನ ಪಾಪ ನಿವೇದನೆ ಮಾಡಿಕೊಳ್ಳುತ್ತ ಭಿಕ್ಷೆ ಬೇಡಬೇಕಾಗಿತ್ತು.

ಅಧ್ಯಯನ ಅವಧಿ ಹನ್ನೆರಡು ವರ್ಷ, ಕೆಲವರು ಮೂವತ್ತು ವರ್ಷಗಳ ಕಾಲವೂ ಕೆಲವರು ಇಡೀ ಜೀವಮಾನ ಪರ್ಯಂತವೂ ಈ ವಿದ್ಯಾಕೇಂದ್ರದಲ್ಲಿ ಅಭ್ಯಾಸಮಾಡುತ್ತಿದ್ದರು. ಮಹಾ ಪಂಡಿತರು ಅಧ್ಯಾಪಕವರ್ಗದಲ್ಲಿದ್ದರು.

1197ರಲ್ಲಿ ಮುಸಲ್ಮಾನ ಆಕ್ರಮಣಕಾರರು ಈ ವಿಹಾರದ ಕಟ್ಟಡಗಳನ್ನು ಧ್ವಂಸಮಾಡಿದರು. ಪಟ್ನಾದ ಬಳಿಯ ರಾಜಗೀರ್ (ರಾಜಗೃಹ) ಸಮೀಪದಲ್ಲಿ 1916ರಲ್ಲಿ ಭೂಶೋಧನೆ ನಡೆದಾಗ ನಾಲಂದಾದ ಭವ್ಯ ಕಟ್ಟಡಗಳ ಅವಶೇಷಗಳು ಕಂಡುಬಂದುವು. ಇವು ಆ ವಿದ್ಯಾಕೇಂದ್ರದ ವೈಭವದ ಪ್ರತೀಕಗಳಾಗಿವೆ.



ಮಾದರಿ ಮೈಸೂರು : ರಾಜರ್ಷಿ

ನಾಲ್ವಡಿ ಕೃಷ್ಣರಾಜ ಒಡೆಯರ್

"ಕೃಷ್ಣರಾಜ ಒಡೆಯರ ರಾಜ್ಯಭಾರದಲ್ಲಿ ಮೈಸೂರು ರಾಮರಾಜ್ಯವಾಗುತ್ತಿದೆ."

—ಇದು ಗಾಂಧೀಜೀ ಆಡಿದ ಪ್ರಶಂಸೆಯ ಮಾತು. ಹೀಗೆ ಅವರು ನುಡಿದದ್ದು ಮೈಸೂರಿನ ಮಹಾರಾಜರಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ ಆಳ್ವಿಕೆಯನ್ನು ಕುರಿತು.

ನಾಲ್ವಡಿ ಕೃಷ್ಣರಾಜ ಒಡೆಯರ ಜನನ 1884ರಲ್ಲಿ. ತಂದೆ ಚಾಮರಾಜ ಒಡೆಯರು ಗತಿಸಿದಾಗ ಇವರಿನ್ನೂ 10 ವರ್ಷದ ಬಾಲಕ. 1895ರಲ್ಲಿ ಪಟ್ಟಾಭಿಷೇಕವಾಯಿತು. ತಾಯಿ ಕೆಂಪನಂಜಮ್ಮಣ್ಣಿ ತಮ್ಮ ಮಗನ ಪರವಾಗಿ ಅಧಿಕಾರ ಸೂತ್ರ ಹಿಡಿದರು. ಒಡೆಯರಿಗೆ ಉತ್ತಮ ಶಿಕ್ಷಣ ದೊರೆಯಲು ಏರ್ಪಾಡು ಮಾಡಿದರು. 1902ರಲ್ಲಿ ಅಧಿಕಾರ ವಹಿಸಿಕೊಂಡಾಗ ಸಮರ್ಥವಾಗಿ ಆಡಳಿತ ನಿರ್ವಹಿಸಲು ಒಡೆಯರು ಶಕ್ತರಾಗಿದ್ದರು.

ಅವರ ಆಳ್ವಿಕೆ ಅವಧಿಯಲ್ಲಿ ಮೈಸೂರು ಸರ್ವತೋಮುಖ ಏಳಿಗೆ ಸಾಧಿಸಿ 'ಮಾದರಿ ಸಂಸ್ಥಾನ' ಎನಿಸಿಕೊಂಡಿತು.

ಕೃಷ್ಣರಾಜ ಸಾಗರ, ಭದ್ರಾವತಿ ಕಬ್ಬಿಣ ಕಾರಖಾನೆ ಮತ್ತಿತರ ಕೈಗಾರಿಕೆಗಳು ಇವರ ಆಳ್ವಿಕೆಯಲ್ಲಿ ಅಸ್ತಿತ್ವಕ್ಕೆ ಬಂದುವು. ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಬ್ಯಾಂಕ್‌ಗಳ ಸ್ಥಾಪನೆಯಾಯಿತು. ಮೊದಲನೆಯ ಮಹಾಯುದ್ಧದ ಸಮಯದಲ್ಲಿ ಮೈಸೂರು ಸಂಸ್ಥಾನದಿಂದ ದೊರೆತ ಅಮೂಲ್ಯ ಸಹಾಯವನ್ನೂ ಮೈಸೂರು ಸಂಸ್ಥಾನದ ಅಭಿವೃದ್ಧಿಗಾಗಿ ಅವರು ನಡೆಸಿದ ನಿರಂತರ ಪ್ರಯತ್ನಗಳನ್ನೂ ಲಕ್ಷಿಸಿ ಬ್ರಿಟಿಷ್ ಚಕ್ರವರ್ತಿ ಅವರಿಗೆ ಜಿ. ಜಿ. ಇ. (ಗ್ರ್ಯಾಂಡ್ ಕ್ರಾಸ್ ಆಫ್ ಆರ್ಡರ್ ಆಫ್ ಬ್ರಿಟಿಷ್ ಎಂಪೈರ್) ಪ್ರಶಸ್ತಿಯನ್ನು ಕೊಟ್ಟು ಗೌರವ ತೋರಿದರು.

ಚಾಮರಾಜ ಒಡೆಯರ ಕಾಲದಲ್ಲಿ ಸ್ಥಾಪಿತವಾಗಿದ್ದ ಪ್ರಜಾಪ್ರತಿನಿಧಿ ಸಭೆಯ ಜೊತೆಗೆ 1907ರಲ್ಲಿ ನ್ಯಾಯವಿಧಾಯಕ ಸಭೆಯನ್ನೂ ಸ್ಥಾಪಿಸಿ ಸಂಸ್ಥಾನದ ಆಡಳಿತದಲ್ಲಿ ಪ್ರಜಾಪ್ರತಿನಿಧಿಗಳು ಹೆಚ್ಚು ಹೆಚ್ಚಾಗಿ ಭಾಗ ವಹಿಸಲು ಅವಕಾಶ ಕಲ್ಪಿಸಿದರು.

ಕೃಷ್ಣರಾಜ ಒಡೆಯರು ಕಲಾಸಾಹಿತ್ಯ ಪ್ರೇಮಿಗಳು, ಪೋಷಕರು. ಸಂಗೀತದಲ್ಲಿ ಅವರಿಗೆ ತುಂಬ ಆಸಕ್ತಿ. 1916ರಲ್ಲಿ ಬನಾರಸ್ ಹಿಂದೂ ವಿಶ್ವವಿದ್ಯಾಲಯ ಆರಂಭವಾದಾಗ ಅದರ ಮೊದಲನೆಯ ಛಾನ್ಸಲರ್ ಆಗಿ ಅದನ್ನು ಪ್ರೋತ್ಸಾಹಿಸಿದರು.

ಕೃಷ್ಣರಾಜ ಒಡೆಯರು ಉದಾರಿಗಳು, ಧರ್ಮನಿಷ್ಠರು. ಅವರ ಘನತೆ, ಗಾಂಭೀರ್ಯ ಲೋಕವಿಖ್ಯಾತವಾಗಿದ್ದುವು. ಅವರು 'ರಾಜರ್ಷಿ' ಎಂಬ ಗೌರವಕ್ಕೆ ಪಾತ್ರರಾಗಿದ್ದರು

ವಿದೇಶಗಳಲ್ಲಿ ಪ್ರವಾಸ ಮಾಡಿ ಒಳ್ಳೆಯ ಅನುಭವ ಗಳಿಸಿಕೊಂಡ ಕೃಷ್ಣರಾಜ ಒಡೆಯರು ಸಂಸ್ಥಾನದ ವಿದ್ಯಾಪ್ರಗತಿಗಾಗಿ ಹಲವಾರು ಯೋಜನೆಗಳನ್ನು ಆಚರಣೆಗೆ ತಂದರು. ಗ್ರಾಮಾಂತರ ಪ್ರದೇಶಗಳ ಹಾಗ ಹಿಂದುಳಿದ ಮತ್ತು ದಲಿತವರ್ಗದ ಮಕ್ಕಳ ಸ್ತ್ರೀಯರ ವಿದ್ಯಾಭ್ಯಾಸಕ್ಕೆ ತುಂಬ ಪ್ರೋತ್ಸಾಹಕೊಟ್ಟರು.

ಇವರ ಆಡಳಿತ ಕಾಲದಲ್ಲಿ ದಿವಾನ ಪದವಿಯಲ್ಲಿದ್ದವರಲ್ಲಿ ಪ್ರಮುಖರು ಎಂ. ವಿಶ್ವೇಶ್ವರಯ್ಯ ಮತ್ತು ಮಿರ್ಜಾ ಇಸ್ಮಾಯಿಲ್. ಒಡೆಯರು 1940ರಲ್ಲಿ ನಿಧನರಾದರು.

ನಾವಿಕರ ಬಂಡಾಯ

1946 ಫೆಬ್ರವರಿ 18. ಮುಂಬಯಿಯಲ್ಲಿದ್ದ ತರಬೇತಿ ಹಡಗು 'ತಲ್‌ವಾರ್'ನ ನಾವಿಕರಿಗೆ ಆಹಾರ ಹಂಚಲಾಯಿತು. ಕೀಳುಮಟ್ಟದ ಆಹಾರವನ್ನು ತಿಂದು ನಾವಿಕರು ರೋಸಿದ್ದರು. ಅಂದು ಆಹಾರ ಮುಟ್ಟಲು ಅವರು ನಿರಾಕರಿಸಿದರು.

ನೌಕಾಪಡೆಯ ಬ್ರಿಟಿಷ್ ಅಧಿಕಾರಿಗಳು ಭಾರತೀಯ ನಾವಿಕರನ್ನು ತುಚ್ಛವಾಗಿ ಕಾಣುತ್ತಿದ್ದುದೂ ಬೇರೆ ನಾವಿಕರಲ್ಲಿ ತೀವ್ರ ಅಸಮಾಧಾನ ಉಂಟುಮಾಡಿತ್ತು.

ಬಂಡಾಯದ ಕಿಡಿ ಒಂದು ಹಡಗಿನಿಂದ ಇನ್ನೊಂದಕ್ಕೆ, ಮುಂಬಯಿಯಿಂದ ಕರಾಚಿ, ವಿಶಾಖಪಟ್ಟಣ, ಕಲ್ಕತ್ತಾ ಬಂದರುಗಳಿಗೆ ಹರಡಿತು. ಮಾರುದಿನ ನೌಕಾಪಡೆಯ 20,000 ಜನ ದಂಗೆ ಎದ್ದರು.

ಫೆಬ್ರವರಿ 18ರಿಂದ 23ರ ವರೆಗೆ ನೌಕಾಪಡೆಯ ಹಲವು ಹಡಗುಗಳಲ್ಲಿ ಬ್ರಿಟಿಷ್ ಧ್ವಜ ಹಾರಲಿಲ್ಲ. ಕಾಂಗ್ರೆಸ್–ಮುಸ್ಲಿಂ ಲೀಗ್–ಕಮ್ಯೂನಿಸ್ಟ್ ಧ್ವಜಗಳು ಹಾರಿದುವು. ನಾವಿಕರು ಒಂದುಗೂಡಿ ತಮ್ಮತಮ್ಮಲ್ಲೇ ನಾಯಕರನ್ನು ಆರಿಸಿದರು. ತಮಗೆ ಬೆಂಬಲ ನೀಡಲು ಬಂಡಾಯಗಾರರು ಕಾರ್ಮಿಕರಿಗೆ ಕರೆಕೊಟ್ಟರು. ತಮ್ಮ ಬೇಡಿಕೆಗಳನ್ನು ಅಧಿಕಾರಿಗಳ ಮುಂದಿಟ್ಟರು.

ಬಂಡಾಯವನ್ನು ಹತ್ತಿಕ್ಕಲು ಬ್ರಿಟಿಷ್ ಸರಕಾರ ತನ್ನ ಸೈನ್ಯ ಬಲವನ್ನು ಉಪಯೋಗಿಸಿತು. ಅಡ್ಮಿರಲ್ ಗಾಡ್‌ಫ್ರೆ "ಇಡೀ ಭಾರತೀಯ ನೌಕಾಪಡೆಯನ್ನು ನಾಶಪಡಿಸುತ್ತೇವೆ"—ಎಂದು ಘೋಷಿಸಿದ. ಆಗ ಭಾರತ ರಾಷ್ಟ್ರೀಯ ಕಾಂಗ್ರೆಸ್ಸಿನ ನಾಯಕರು ದೇಶದ ಸ್ವಾತಂತ್ರ್ಯಕ್ಕೆ ಸಂಬಂಧಿಸಿ ಬ್ರಿಟಿಷ್ ಸರಕಾರದೊಡನೆ ಮಾತುಕತೆಯಲ್ಲಿ ನಿರತರಾಗಿದ್ದರು. ನಾವಿಕರು ಶರಣಾಗತರಾಗಬೇಕೆಂದು ಅವರು ಆಗ್ರಹಿಸಿದರು. ಫೆಬ್ರವರಿ 23ರಂದು ಬಂಡಾಯದ ಕೇಂದ್ರ ಸಮಿತಿ ಸತ್ಯಾಗ್ರಹವನ್ನು ಹಿಂದೆಗೆಯುವ ನಿರ್ಧಾರವನ್ನು ಪ್ರಕಟಿಸಿತು. "ನಾವು ಶರಣಾಗುತ್ತಿರುವುದು ಭಾರತಕ್ಕೆ, ಬ್ರಿಟಿಷರಿಗಲ್ಲ" ಎಂದು ಆ ಸಮಿತಿ ಘೋಷಿಸಿತು.



ನಾವಿಕ ಬಂಡಾಯ
—ಚಿತ್ತಪ್ರಸಾದ್ ಕೃತಿ

ನಾಸಿಕ

ರಾಮ, ಸೀತೆ, ಲಕ್ಷ್ಮಣರು ವನವಾಸ ಕಾಲದಲ್ಲಿ ಪಂಚವಟಿಯಲ್ಲಿದ್ದ ಸಮಯ. ರಾಮ, ಲಕ್ಷ್ಮಣರಿಗೆ ಮನಸೋತ ರಾವಣನ ತಂಗಿ ಶೂರ್ಪನಖಿ, ತನ್ನನ್ನು ವಿವಾಹ ಮಾಡಿಕೊಳ್ಳಬೇಕೆಂದು ಅವರನ್ನು ಕಾಡಿದಳು. ರಾಮನ ಅಜ್ಞೆಯಂತೆ ಲಕ್ಷ್ಮಣ ಆಕೆಯ ಮೂಗು, ಕಿವಿಗಳನ್ನು ಕತ್ತರಿಸಿದ.

ಈ ಘಟನೆ ನಡೆದ ಸ್ಥಳವೇ ನಾಸಿಕ—ಎಂಬ ಕಥೆ ಇದೆ. ಪ್ರಾಚೀನ ಸಾಹಿತ್ಯದಲ್ಲಿ ಇದನ್ನು ನಾಸಿಕ್ಯ ಎಂದಿದ್ದಾರೆ.

ದಕ್ಷಿಣದ ಗಂಗೆ ಎನಿಸಿಕೊಂಡಿರುವ ಗೋದಾವರಿ ನದಿಯ ದಂಡೆಯ ಮೇಲೆ ನಾಸಿಕವಿದೆ; ಇನ್ನೊಂದು ದಂಡೆಯ ಮೇಲೆ ಪಂಚವಟಿ ಕ್ಷೇತ್ರವಿದೆ. ಇವೆರಡೂ ಇರುವುದು ಮಹಾರಾಷ್ಟ್ರ ರಾಜ್ಯದಲ್ಲಿ. ಸುಮಾರು 60 ದೇವಾಲಯಗಳಿರುವ ನಾಸಿಕವನ್ನು ಈ ಭಾಗದ ಕಾಶಿ ಎನ್ನುತ್ತಾರೆ. ಇದೊಂದು ಸುಪ್ರಸಿದ್ಧ ಯಾತ್ರಾಸ್ಥಳ. ಜನಸಂಖ್ಯೆ 1,76,091.

1750–1818 ಅವಧಿಯಲ್ಲಿ ಪೇಶ್ವೆಗಳು ಆಳುತ್ತಿದ್ದಾಗ ಈಗಿರುವ ದೊಡ್ಡ ದೇವಾಲಯಗಳಲ್ಲಿ ಹೆಚ್ಚಿನವು ನಿರ್ಮಾಣವಾದುವು.

ಗೋದಾವರಿ ನದಿಯಲ್ಲಿ ರಾಮಕುಂಡ, ಸೀತಾಕುಂಡ, ಲಕ್ಷ್ಮಣಕುಂಡ ಎಂಬ ತೀರ್ಥಗಳಿವೆ.

ಸುಂದರ ನಾರಾಯಣ ದೇವಾಲಯದಲ್ಲಿ ಕಪ್ಪು ಕಲ್ಲಿನ ನಾರಾಯಣ ಮತ್ತು ಲಕ್ಷ್ಮೀವಿಗ್ರಹಗಳಿವೆ.

ಪಂಚವಟಿಯಲ್ಲಿರುವ ರಾಮದೇವಾಲಯ ಪಶ್ಚಿಮ ಭಾರತದ ಅತ್ಯುತ್ತಮ ನೂತನ ದೇವಾಲಯಗಳಲ್ಲೊಂದು. ವನವಾಸದ ಕಾಲದಲ್ಲಿ ರಾಮ ನೆಲೆಸಿದ್ದ ಸ್ಥಳದ ಮೇಲೆ ಇದನ್ನು ಕಟ್ಟಿದ್ದಾರೆ ಎಂದು ಪ್ರತೀತಿ. ಇದನ್ನು ಸರದಾರ ರಂಗರಾವ್ ಓಢೇಕರ್ 1782ರಲ್ಲಿ 23 ಲಕ್ಷ ರೂಪಾಯಿ ವೆಚ್ಚಮಾಡಿ ಕಟ್ಟಿಸಿದ. ಸುಂದರ ಕೆತ್ತನೆಗಳಿಂದ ಕೂಡಿದ ವೇದಿಕೆಯ ಮೇಲೆ ಕಪ್ಪು ಶಿಲೆಯ ರಾಮ, ಸೀತಾ, ಲಕ್ಷ್ಮಣರ ವಿಗ್ರಹಗಳಿವೆ.

ಇಲ್ಲಿನ ರಾಮೇಶ್ವರ ದೇವಸ್ಥಾನ ಶಿಲ್ಪ ಮತ್ತು ಐಶ್ವರ್ಯದಲ್ಲಿ ಮಿಗಿಲಾದದ್ದು. ಇಲ್ಲಿ ಶಿವಲಿಂಗವಿದೆ.

ರಾಮ ತಂದೆಗೆ ಶ್ರಾದ್ಧಮಾಡಿದ ಸ್ಥಳ ಎಂದು ರಾಮಗಯಾ ಕುಂಡವನ್ನು ತೋರಿಸುತ್ತಾರೆ.

ಸೀತಾಗುಹೆಯ ಹಿಂಭಾಗದ ಗೋಡೆಯಲ್ಲಿ ರಾಮ, ಸೀತೆ, ಲಕ್ಷ್ಮಣರ ಮೂರ್ತಿಗಳಿವೆ.

ಮಹಾದೇವ, ಉಮಾಮಹೇಶ್ವರ, ಚಂದ್ರಮೌಳೀಶ್ವರ, ಪಂಚರತ್ನೇಶ್ವರ, ಮುರಲೀಧರ, ತಿಲಭಾಂಡೇಶ್ವರ, ಮುರುಡೇಶ್ವರ ಮತ್ತು ಮುಕ್ತೇಶ್ವರ ದೇವಾಲಯಗಳೂ ಇಲ್ಲಿವೆ.


ಗೋದಾವರಿ–ನದಿದಂಡೆಯ ಮೇಲಿರುವ ತಪೋವನ ಗೌತಮ ಮುನಿ ತಪಸ್ಸು ಮಾಡುತ್ತಿದ್ದ ಸ್ಥಳ ಎನ್ನುತ್ತಾರೆ.

ನಾಸಿಕದಲ್ಲಿ ಇಂಡಿಯಾ ಸೆಕ್ಯೂರಿಟಿ ಪ್ರೆಸ್ ಇದೆ.

ನೋಡಿ : ಇಂಡಿಯಾ ಸೆಕ್ಯೂರಿಟಿ ಪ್ರೆಸ್

ನಾ.ಸು. ಹರ್ಡೀಕರ್

ನಮ್ಮ ದೇಶದ ಸ್ವಾತಂತ್ರ್ಯ ಹೋರಾಟದ ಚರಿತ್ರೆ ಬಲ್ಲವರಿಗೆಲ್ಲ ಹಿಂದೂಸ್ತಾನೀ ಸೇವಾದಳದ ಹೆಸರು ಪರಿಚಿತ. ಅದೊಂದು ಸ್ವಯಂಸೇವಕ ಸಂಸ್ಥೆ. ಮಹಾತ್ಮ ಗಾಂಧೀ ಹಾಕಿಕೊಟ್ಟ ಮಾರ್ಗದಲ್ಲಿ ಅಹಿಂಸಾತ್ಮಕ ಸತ್ಯಾಗ್ರಹ ನಡೆಸಲು ಅದು ಸ್ವಯಂಸೇವಕರಿಗೆ ತರಬೇತಿ ಕೊಟ್ಟಿತು. ಈ ತರಬೇತಿಗೆ ಸೈನಿಕ ಶಿಸ್ತನ್ನು ಅಳವಡಿಸಿದ್ದು ಅದರ ವೈಶಿಷ್ಟ್ಯ ಮತ್ತು ಹಿರಿಮೆ. ತರಬೇತಿ ಪಡೆದ ಅನೇಕರು ಮುಂದೆ ದೇಶದ ಹಿರಿಯ ನಾಯಕರೆನಿಸಿದರು. ಜವಾಹರ ಲಾಲ ನೆಹರೂ, ಲಾಲ ಬಹದ್ದೂರ್ ಶಾಸ್ತ್ರೀ ಮೊದಲಾದವರೆಲ್ಲ ಹಿಂದೂಸ್ತಾನೀ ಸೇವಾದಳದಲ್ಲಿ ಶಿಸ್ತಿನ ಸಿಪಾಯಿಗಳಾಗಿದ್ದರು.



ಹಿಂದೂಸ್ತಾನೀ ಸೇವಾದಲ : ಹರ್ಡೀಕರ್

ಹಿಂದೂಸ್ತಾನೀ ಸೇವಾದಲದ ಸ್ಥಾಪಕ ಕನ್ನಡಿಗ ಡಾ. ನಾರಾಯಣ ಸುಬ್ಬರಾವ್ ಹರ್ಡೀಕರ್. ತಮ್ಮ ರಾಜಕೀಯ ಮತ್ತು ಸಾರ್ವಜನಿಕ ಕಾರ್ಯಗಳಿಗೆಲ್ಲ ಕರ್ನಾಟಕವನ್ನೇ ಕಾರ್ಯಕ್ಷೇತ್ರವನ್ನಾಗಿ ಆರಿಸಿಕೊಂಡು ಇವರು ಕೆಲಸಮಾಡಿದರು.

1889 ಮೇ 7ರಂದು ಜನನ. ಬಾಲ್ಯದಲ್ಲಿಯೇ ಲೋಕಮಾನ್ಯ ತಿಲಕರ ಪ್ರಭಾವಕ್ಕೆ ಒಳಗಾದರು. ಮುಂದೆ ವೈದ್ಯಕೀಯ ಅಭ್ಯಾಸಕ್ಕೆಂದು ಅಮೆರಿಕಕ್ಕೆ ಹೋದಾಗ ಲಾಲಾ ಲಜಪತರಾಯರ ನಿಕಟ ಸಂಪರ್ಕ ಉಂಟಾಯಿತು. ಇದರಿಂದಾಗಿ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡುವ ಹುರುಪು ಪ್ರಬಲಗೊಂಡಿತು. ಭಾರತಕ್ಕೆ ಬಂದ ಮೇಲೆ ಸತ್ಯಾಗ್ರಹದಲ್ಲಿ ಭಾಗವಹಿಸಿ ಸೆರೆಮನೆ ಸೇರಿದರು. ಅಲ್ಲಿ ತಮ್ಮ ಸಹಚಳುವಳಿಗಾರರೊಡನೆ ಚರ್ಚೆ ಮಾಡುತ್ತಿದ್ದಾಗ ಸತ್ಯಾಗ್ರಹಿಗಳನ್ನು ಶಿಸ್ತಿನ ಸ್ವಯಂಸೇವಕರನ್ನಾಗಿ ಸಂಘಟಿಸುವ ವಿಚಾರ ಮೂಡಿತು. ಬಿಡುಗಡೆ ಆದ ಕೂಡಲೇ ಡಾ. ಹರ್ಡೀಕರ್ ಈ ಕಾರ್ಯವನ್ನು ಆಸ್ಥೆಯಿಂದ ಎತ್ತಿಕೊಂಡರು. ಕರ್ನಾಟಕದ ಹುಬ್ಬಳ್ಳಿಯನ್ನೇ ಮುಖ್ಯ ಕೇಂದ್ರವನ್ನಾಗಿರಿಸಿಕೊಂಡು, ಸೇವಾದಲದ ಸಂಘಟನೆ ಪ್ರಾರಂಭಿಸಿದರು. ಕಾಂಗ್ರೆಸ್ ಅಧಿವೇಶನಗಳನ್ನು ಅಚ್ಚುಕಟ್ಟಾಗಿ ನಡೆಸುವುದರಲ್ಲಿ, ಕಾಂಗ್ರೆಸ್ ಸಂದೇಶವನ್ನು ಜನತೆಯಲ್ಲಿ ಬಿತ್ತರಿಸುವುದರಲ್ಲಿ, ಸೇವಾದಲದ ಸ್ವಯಂಸೇವಕರು ವಹಿಸಿದ ಪಾತ್ರ ಎಲ್ಲರ ಮೆಚ್ಚುಗೆ ಗಳಿಸಿತು.

1931ರಲ್ಲಿ ಕಾರವಾರ ಜಿಲ್ಲೆಯಲ್ಲಿ ಉಪ್ಪಿನ ಸತ್ಯಾಗ್ರಹ ನಡೆಯಿತು. ಅನಂತರ ಕರ ನಿರಾಕರಣೆ ಸತ್ಯಾಗ್ರಹವೂ ಆಯಿತು. ಈ ಎರಡೂ ಸತ್ಯಾಗ್ರಹಗಳನ್ನು ಅಚ್ಚುಕಟ್ಟಾಗಿ ಯಶಸ್ವಿಯಾಗಿ ಸಂಘಟಿಸಿದ ಶ್ರೇಯಸ್ಸು ಹಿಂದೂಸ್ತಾನೀ ಸೇವಾದಲಕ್ಕೆ. ಆ ಮೂಲಕ ಡಾ. ಹರ್ಡೀಕರರಿಗೆ, ಸಲ್ಲುತ್ತದೆ. ಇದರಿಂದ ಗಾಬರಿಗೊಂಡ ಅಂದಿನ ಬ್ರಿಟಿಷ್ ಸರಕಾರ ಹಿಂದೂಸ್ತಾನೀ ಸೇವಾದಲ ಸಂಘಟನೆಯನ್ನೇ ಪ್ರತಿಬಂಧಿಸಿತು.

ಡಾ. ಹರ್ಡೀಕರರು ಸುಮ್ಮನೆ ಕುಳಿತುಕೊಳ್ಳಲಿಲ್ಲ. ತಮ್ಮ ಊರಾದ ಹುಬ್ಬಳ್ಳಿಯಲ್ಲಿ ನಗರ ನೈರ್ಮಲ್ಯ ಮತ್ತು ಆಡಳಿತ ಶುದ್ಧೀಕರಣ ಕಾರ್ಯ ಕೈಗೆತ್ತಿಕೊಂಡರು. 'ಹುಬ್ಬಳ್ಳಿ ಗಜೆಟ್' ಎಂಬ ಪತ್ರಿಕೆ ಪ್ರಾರಂಭಿಸಿ ನಿರ್ಭೀತ ಟೀಕೆ ಟಿಪ್ಪಣಿಗಳನ್ನು ಬರೆಯತೊಡಗಿದರು. ನಗರ ಪಟ್ಟಣ ಹುಬ್ಬಳ್ಳಿ ನಗರ ಸಭೆಯ ಅಧಿಕಾರವನ್ನು ತನ್ನ ವಶಕ್ಕೆ ತೆಗೆದುಕೊಂಡಿತು.

ಒಬ್ಬ ವಿಶೇಷ ಅಧಿಕಾರಿಯನ್ನು ನೇಮಿಸಿ ನಾಗರಿಕರ ಅಗತ್ಯಗಳನ್ನು ಪೂರೈಸುವ ಅನೇಕ ಸುಧಾರಣೆಗಳನ್ನು ಜಾರಿಗೆ ತಂದಿತು.

ಸ್ವಾತಂತ್ರ್ಯ ಪ್ರಾಪ್ತಿಯ ಅನಂತರ ಡಾ. ಹರ್ಡೀಕರರು ಕೆಲ ಕಾಲ ರಾಜ್ಯ ಸಭಾ ಸದಸ್ಯರಾಗಿದ್ದರು.

ಡಾ. ಹರ್ಡೀಕರರು ಕನ್ನಡ ಜನತೆಗೆ ಕೊಟ್ಟ ಇನ್ನೊಂದು ಅಸಾಧಾರಣ ಕೊಡುಗೆ. ಕರ್ನಾಟಕ ಆರೋಗ್ಯಧಾಮ. ಇದು ಬೆಳಗಾವಿ ಜಿಲ್ಲೆಯ ಘಟಪ್ರಭಾದಲ್ಲಿದೆ. ತಮ್ಮ ಹಳೆಯ ಮಿತ್ರರಾದ ಡಾ. ಕೊಕಟನೂರ ಎಂಬವರ ಸಹಾಯದಿಂದ 1935ರಲ್ಲಿ ಇದನ್ನು ಪ್ರಾರಂಭಿಸಿದರು. ಇಂದು ಅದು ಕರ್ನಾಟಕದ ಹೆಮ್ಮೆಯ ವೈದ್ಯ ಶುಶ್ರೂಷಾ ಕೇಂದ್ರ ಎನಿಸಿದೆ. 200 ಎಕರೆಯಷ್ಟು ವಿಸ್ತಾರ ಪ್ರದೇಶದಲ್ಲಿ 150 ಹಾಸಿಗೆಗಳ ಸುಸಜ್ಜಿತ ಆಸ್ಪತ್ರೆಯನ್ನೊಳಗೊಂಡ ಈ ಆರೋಗ್ಯಧಾಮದಲ್ಲಿ ಕ್ಷಯರೋಗ ಶುಶ್ರೂಷೆಯ ವಿಶೇಷ ವಿಭಾಗವಿದೆ. ಸೇವಾದಳದ ಶಿಸ್ತನ್ನೂ ಗಾಂಧೀ ಆಶ್ರಮದ ಸರಳತೆಯನ್ನೂ ಈ ಆರೋಗ್ಯಧಾಮದ ಆವರಣದಲ್ಲಿ ಅಳವಡಿಸಿರುವುದು ಒಂದು ವೈಶಿಷ್ಟ್ಯ. ಈ ಆರೋಗ್ಯಧಾಮವೇ ಡಾ. ಹರ್ಡೀಕರರ ವಾಸಸ್ಥಾನ.

ನೋಡಿ : ಸೇವಾದಳ—ಸಂಪುಟ ೧

ನ್ಯಾಟ್

'ನ್ಯಾಟ್'—ಕುಟುಕುವ ಪುಟ್ಟ ಕೀಟದ ಇಂಗ್ಲಿಷ್ ಹೆಸರು. ಹೀಗೆಯೇ ಚಿಕ್ಕ ಗಾತ್ರದ ಭಾರತೀಯ ವಾಯುದಳದ ಒಂದು ಕಾದಾಟ ವಿಮಾನದ



ಕುಟುಕುವ ಪುಟ್ಟ ವಿಮಾನ : ನ್ಯಾಟ್

ಹೆಸರು 'ನ್ಯಾಟ್'. 1965ರಲ್ಲಿ ಮತ್ತು 1971ರಲ್ಲಿ ಪಾಕಿಸ್ತಾನದ ದೊಡ್ಡ ಸೇಬರ್ ಜೆಟ್ ವಿಮಾನಗಳನ್ನು ಹೊಡೆದುರುಳಿಸಿದ ಸಾಹಸ ಸಾಧನೆ ಈ ವಿಮಾನಗಳದ್ದು. ಚುರುಕಾಗಿ ಚಲಿಸಬಲ್ಲ ಸಾಮರ್ಥ್ಯ ಇದರ ವೈಶಿಷ್ಟ್ಯ.

1956ರಲ್ಲಿ ಭಾರತೀಯ ಸರಕಾರ ಬ್ರಿಟನಿನ ಫಾಲಂಡ್ ಏರ್‌ಕ್ರಾಫ್ಟ್ ಲಿಮಿಟೆಡ್ ಎಂಬ ಕಂಪೆನಿಯೊಡನೆ ಬೆಂಗಳೂರಿನ ಹಿಂದೂಸ್ತಾನ್ ಏರ್‌ಕ್ರಾಫ್ಟ್ ಲಿಮಿಟೆಡ್‌ನಲ್ಲಿ (ಈಗ ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್) ನ್ಯಾಟ್ ವಿಮಾನ ತಯಾರಿಸಲು ಒಪ್ಪಂದ ಮಾಡಿಕೊಂಡಿತು. ಅದರ ತಯಾರಿಕೆ ಆರಂಭವಾದದ್ದು 1961ರಲ್ಲಿ. ಮೊದಲಿಗೆ ನ್ಯಾಟ್ ತಯಾರಿಕೆಗೆ ಪ್ರೇರಕ ಅಂಶಗಳು. ಮಿತವ್ಯಯ ಮತ್ತು ಉತ್ಪಾದನಾ ಸೌಲಭ್ಯ. ಮುಂದೆ ಈ ಚಿಕ್ಕಾಕಾರದ ವಿಮಾನಗಳು ಪಾಕಿಸ್ತಾನಿ ವಾಯುದಳಕ್ಕೆ ಸಿಂಹಸ್ವಪ್ನವಾದುವು.

ನ್ಯಾಯದರ್ಶನ

ಜೀವನದ ದುಃಖ, ನೋವು, ತಾಪತ್ರಯಗಳಿಗೆಲ್ಲ ಅಜ್ಞಾನವೇ ಕಾರಣ. ತರ್ಕಬದ್ಧ ಚಿಂತನೆ. ಆಲೋಚನಾ ಕ್ರಮಗಳಿಂದ ಈ ಅಜ್ಞಾನವನ್ನು ಹೊಡೆದಟ್ಟಿ ನಿರ್ವಾಣವನ್ನು ಸಾಧಿಸಬಹುದು ಎಂದು ಸಾರಿದ್ದು —ನ್ಯಾಯದರ್ಶನ. ಇದು ಆರು ವೈದಿಕ ದರ್ಶನಗಳಲ್ಲೊಂದು.

ಗೌತಮ ಮಹರ್ಷಿ ಈ ದರ್ಶನದ ಮೂಲಪುರುಷ. ಅವನ 'ನ್ಯಾಯಸೂತ್ರ' ಈ ದರ್ಶನದ ಮೂಲಗ್ರಂಥ. ಗೌತಮನ ಅನಂತರ ಬಂದ ವಾತ್ಸ್ಯಾಯನ ಮತ್ತು ಗಂಗೇಶರು ಈ ದರ್ಶನದ ವ್ಯಾಖ್ಯಾನಕಾರರಲ್ಲಿ ಪ್ರಮುಖರು.

ಜೀವನದ ನೋವಿನಿಂದ ಪಾರಾಗಲು ಜ್ಞಾನವೇ ಮಾರ್ಗ —ಎಂದ ಈ ದರ್ಶನ. ಜ್ಞಾನಸಂಪಾದನೆಗೆಂದು ಅತ್ಯಂತ ದೃಢವಾದ ತರ್ಕಶಾಸ್ತ್ರವನ್ನೇ ಸೃಷ್ಟಿಸಿತು.

ಮಾನವನ ಚಿಂತನೆಯಲ್ಲಿ ಬರುವ ತೊಡಕು, ತಪ್ಪುಗಳನ್ನು ಪರಿಹರಿಸುವ ಬಗೆಯನ್ನು ನ್ಯಾಯದರ್ಶನದಲ್ಲಿ ವಿವೇಚಿಸಿದೆ. ವಾದ ವಿವಾದಗಳನ್ನು ಗೆಲ್ಲುವ ರಹಸ್ಯ, ವಿಷಯಗಳನ್ನು ಅಭ್ಯಸಿಸಬೇಕಾದ ರೀತಿ ಮೊದಲಾದವನ್ನು ಅತ್ಯಂತ ಸ್ಪಷ್ಟ ತರ್ಕವಿಧಾನದಿಂದ ಅರಿಯಬಹುದೆಂದು ಈ ದರ್ಶನ ಪ್ರತಿಪಾದಿಸುತ್ತದೆ.

ಮಾನವ ವಿಚಾರಮಾಡಲು, ತರ್ಕಿಸಲು ಹದಿನಾರು ಅಂಶ ಅಥವಾ ಮಾರ್ಗಗಳನ್ನು ನ್ಯಾಯದರ್ಶನ ಸೂಚಿಸುತ್ತದೆ. 1 ಪ್ರಮಾಣ : ಎಂದರೆ ಸರಿಯಾದ ಜ್ಞಾನ ಪಡೆಯುವ ರೀತಿ ; 2 ಪ್ರಮೇಯ (ಜ್ಞಾನದ ವಿಷಯ); 3 ಸಂಶಯ (ಸಂದೇಹ ಪಡುವುದು); 4 ಪ್ರಯೋಜನ (ಉದ್ದೇಶ. ಗುರಿ ಏನೆಂದು ಯೋಚಿಸುವುದು) ; 5 ದೃಷ್ಟಾಂತ (ಉದಾಹರಣೆಗಳು) ; 6 ಸಿದ್ಧಾಂತ (ದೃಷ್ಟಾಂತ ದೃಢೀಕರಿಸುವುದು) ; 7 ಅವಯವ (ನಿಗಮನ ತರ್ಕದ ಹಂತಗಳು) ; 8 ತರ್ಕ (ವಾದಸರಣಿ) : 9 ನಿರ್ಣಯ (ನಿಶ್ಚಿತವಾಗಿ ತೀರ್ಮಾನಿಸುವುದು) : 10 ವಾದ (ಚರ್ಚಿಸುವುದು) ; 11 ಜಲ್ಪ (ವಾದ—ಪ್ರತಿವಾದ. ಖಂಡನೆಗಳ ವಾಗ್ಯುದ್ಧ); 12 ವಿತಂಡಾ (ತಾನು ಯಾವ ಪಕ್ಷಕ್ಕೂ ಸೇರದೆ ಬೇರೆ ಪಕ್ಷಗಳನ್ನು ಖಂಡಿಸುವುದು); 13 ಹೇತ್ವಾಭಾಸ (ಹೊರಕ್ಕೆ ಸರಿಯಾಗಿ ತೋರುವ. ನಿಜವಾಗಿ ಸರಿಯಲ್ಲದ ವಾದ): 14 ಛಲ (ವಾಕ್ಯಕ್ಕೆ ಅಪಾರ್ಥವಿದೆ ಎಂದು ವಾದಿಸುವುದು); 15 ಜಾತಿ (ಹೋಲಿಕೆ): 16 ನಿಗ್ರಹಸ್ಥಾನ (ವಿರೋಧ ಪಕ್ಷದ ವಾದ ನಿರಾಧಾರವಾದುದೆಂದು ತೋರಿಸುವುದು).

ಇವುಗಳಲ್ಲಿ ಅವಯವ (ಅಥವಾ ನಿಗಮನ) ಪ್ರಮುಖವಾದದ್ದು. ಇದರಲ್ಲಿ ಐದು ಹಂತಗಳು. 'ಗುಡ್ಡಕ್ಕೆ ಬೆಂಕಿ ಬಿದ್ದಿದೆ' ಎಂಬ ಸತ್ಯವನ್ನು ಹೀಗೆ ಅರಿಯಬಹುದು :

ಗುಡ್ಡಕ್ಕೆ ಬೆಂಕಿ ಬಿದ್ದಿದೆ (ಪ್ರತಿಜ್ಞಾ)

ಏಕೆಂದರೆ ಗುಡ್ಡದ ಮೇಲೆ ಹೊಗೆ ಇದೆ (ಹೇತು)

ಎಲ್ಲಿ ಹೊಗೆ ಇರುತ್ತದೋ ಅಲ್ಲಿ ಬೆಂಕಿ ಇರುತ್ತದೆ. ಉದಾ : ಅಡುಗೆ ಮನೆ (ಉದಾಹರಣ)

ಗುಡ್ಡದ ಮೇಲೆ ಹಾಗೆ ಆಗಿದೆ (ಉಪನಯ)

ಆದ್ದರಿಂದ ಗುಡ್ಡಕ್ಕೆ ಬೆಂಕಿ ಬಿದ್ದಿದೆ (ನಿಗಮನ)

—ಹೀಗೆ ಐದು ಹಂತಗಳಲ್ಲಿ ತರ್ಕಿಸುವುದು ನ್ಯಾಯದರ್ಶನದ ತರ್ಕದ ವೈಶಿಷ್ಟ್ಯ.



ರಾಷ್ಟ್ರರಕ್ಷಣೆಗೆ ನ್ಯಾಟ್

ಕರ್ನಾಟಕದ ಮಣ್ಣಿನ ಮಕ್ಕಳು

ಪ್ರಗತಿ ಪರಂಪರೆ





ಚಹ ಎಲೆ ಸಂಗ್ರಹ : ಪಶ್ಚಿಮ ಬಂಗಾಳ

ನ್ಯಾಯ ಹಾಗೂ ವೈಶೇಷಿಕ ದರ್ಶನಗಳ ನಡುವೆ ಅನೇಕ ಸಮಾನ ಅಂಶಗಳಿರುವುದರಿಂದ. ಇವೆರಡು ದರ್ಶನಗಳನ್ನು ಒಟ್ಟಿಗೆ ಅಧ್ಯಯನಿಸುವುದುಂಟು.

ಮೂಲತಃ ಈ ದರ್ಶನ ನಾಸ್ತಿಕವಾಗಿದ್ದು ಕಾಲಕ್ರಮೇಣ ಶೈವ ಪ್ರಭಾವದಿಂದಾಗಿ ಆಸ್ತಿಕವಾಯಿತೆಂಬ ಅಭಿಪ್ರಾಯವೂ ಇದೆ.

ನೋಡಿ : ವೈಶೇಷಿಕ ದರ್ಶನ

ನ್ಯಾಷನಲ್ ಡಿಫೆನ್ಸ್ ಅಕಾಡೆಮಿ

ಭಾರತದ ರಕ್ಷಣಾದಳಗಳಲ್ಲಿ ಆಯುಕ್ತಾಧಿಕಾರಿಗಳಾಗುವವರಿಗೆ ವೃತ್ತಿಪೂರ್ವ ಶಿಕ್ಷಣ ಕೊಡುವ ಸಂಸ್ಥೆ ನ್ಯಾಷನಲ್ ಡಿಫೆನ್ಸ್ ಅಕಾಡೆಮಿ. ಇದು ಮಹಾರಾಷ್ಟ್ರ ರಾಜ್ಯದ ಖಡಕ್‌ವಾಸ್ಲದಲ್ಲಿದೆ. ಕಾಲೇಜಿನಲ್ಲಿ ನಡೆಯುವಂತೆ ಇಲ್ಲಿ ನಡೆಯುವ ಮೊದಲ ಎರಡು ವರ್ಷಗಳ ಶಿಕ್ಷಣ ಸಾಮಾನ್ಯ ವಿದ್ಯಾವಿಷಯಕವಾದದ್ದು. ಶಿಕ್ಷಣ ಪಡೆದವರು ಅನಂತರ ರಕ್ಷಣಾಪಡೆಯ ಯಾವ ವಿಭಾಗಕ್ಕೆ ಆಯುಕ್ತರೋ ಆ ವಿಭಾಗದ ಕಾರ್ಯಕ್ಷೇತ್ರಕ್ಕೆ ಸಂಬಂಧಿಸಿದಂತೆ ಒಂದು ವರ್ಷ ಶಿಕ್ಷಣ ಪಡೆಯುತ್ತಾರೆ.

ಸ್ವತಂತ್ರ ಭಾರತದ ರಕ್ಷಣಾಪಡೆಯ ಇತಿಹಾಸದಲ್ಲಿ ಇದರ ಸ್ಥಾಪನೆ ಒಂದು ಮುಖ್ಯ ಘಟ್ಟ. 1955ರಲ್ಲಿ ತರಬೇತಿ ಆರಂಭವಾಯಿತು. ಇಲ್ಲಿ ತರಬೇತಿ ಮುಗಿದ ಮೇಲೆ ಕ್ಯಾಡೆಟ್‌ಗಳು ವಾಯು, ನೌಕಾ ತರಬೇತಿ



ಕರಾವಳಿಯ ರಕ್ಷಣೆಗೆ ಇವರು ಸಿದ್ಧರು

ಕೇಂದ್ರಗಳಿಗೆ ಸೇರುತ್ತಾರೆ. ಸೇನಾ ಕ್ಯಾಡೆಟ್‌ಗಳು ಇಂಡಿಯನ್ ಮಿಲಿಟರಿ ಅಕಾಡೆಮಿಗೆ ಸೇರುತ್ತಾರೆ.

ನ್ಯಾಷನಲ್ ಬುಕ್ ಟ್ರಸ್ಟ್

1957ರಲ್ಲಿ ಕೇಂದ್ರ ಸರಕಾರದ ಅಧೀನದಲ್ಲಿ ಅಸ್ತಿತ್ವಕ್ಕೆ ಬಂದ ಪ್ರಕಟಣ ಸಂಸ್ಥೆ, ನ್ಯಾಷನಲ್ ಬುಕ್ ಟ್ರಸ್ಟ್. ಇದು ಸ್ವಾಯತ್ತ ಸಂಸ್ಥೆ. ದೇಶದಲ್ಲಿ ಉತ್ತಮ ಪುಸ್ತಕಪ್ರಕಟಣೆ ಮತ್ತು ಪುಸ್ತಕ ಪ್ರೇಮದ ಪ್ರಸಾರ ಇದರ ಗುರಿ. ಕಡಮೆ ಬೆಲೆಯಲ್ಲಿ ಉತ್ತಮ ಪುಸ್ತಕಗಳನ್ನು ಪ್ರಕಟಿಸುವುದು. ಇತರರು ಪ್ರಕಟಿಸಲು ನೆರವು ನೀಡುವುದು. ಟ್ರಸ್ಟ್‌ನ ಒಂದು ಮುಖ್ಯ ಕಾರ್ಯ. ದೇಶದ ಪ್ರಕೃತಿ, ಜನಜೀವನ, ರಾಷ್ಟ್ರೀಯ ವ್ಯಕ್ತಿಗಳು, ಜಾನಪದ ಕಲೆ, ಸಾಹಿತ್ಯ ಮತ್ತು ಜಗತ್ತಿನ ಜ್ಞಾನ–ವಿಜ್ಞಾನ ಸಂಗತಿಗಳಿಗೆ ಸಂಬಂಧಿಸಿದ ಪುಸ್ತಕಗಳನ್ನು ಟ್ರಸ್ಟ್ ಪ್ರಕಟಿಸುತ್ತದೆ. ಮಕ್ಕಳ ಮೇಲೆ ವಿಶೇಷ ಪ್ರಭಾವ ಬೀರಲು 'ಯಂಗ್ ಇಂಡಿಯಾ ಲೈಬ್ರರಿ' ಮಾಲಿಕೆಯಲ್ಲಿ, ಅವರಲ್ಲಿ ರಾಷ್ಟ್ರೀಯ ಐಕ್ಯಭಾವನೆಯನ್ನು ಮೂಡಿಸಲು 'ನೆಹರೂ ಬಾಲ ಪುಸ್ತಕಾಲಯ' ಮಾಲಿಕೆಯಲ್ಲಿ ಪುಸ್ತಕಗಳು ಪ್ರಕಟವಾಗುತ್ತಿವೆ.

ದೇಶದ ವಿವಿಧ ಭಾಷೆಗಳಲ್ಲಿ ಒಂದು ಭಾಷೆಯಿಂದ ಆಯ್ದ ಪುಸ್ತಕಗಳನ್ನು ಇತರ ಎಲ್ಲ ಭಾಷೆಗಳಿಗೆ ಅನುವಾದಿಸಿ ನ್ಯಾಷನಲ್ ಬುಕ್ ಟ್ರಸ್ಟ್ ಪ್ರಕಟಿಸುತ್ತದೆ. ವಿಶ್ವವಿದ್ಯಾನಿಲಯ ಮಟ್ಟದ ಪುಸ್ತಕ ರಚಿಸಲು ಭಾರತೀಯ ಲೇಖಕರಿಗೆ ನೆರವು ನೀಡುತ್ತದೆ.

ಪುಸ್ತಕ ಪ್ರಸಾರ ಚಳುವಳಿಯು ಟ್ರಸ್ಟ್‌ನ ಇನ್ನೊಂದು ಮುಖ್ಯ ಕಾರ್ಯ. ಅದು ರಾಷ್ಟ್ರೀಯ ಮತ್ತು ಪ್ರಾದೇಶಿಕ ಪುಸ್ತಕ ಪ್ರದರ್ಶನವನ್ನು 1964ರಲ್ಲಿ ದೆಹಲಿಯಲ್ಲಿ ಜರಗಿಸಿತು. 1972ರಲ್ಲಿ ಅಂತರರಾಷ್ಟ್ರೀಯ ಗ್ರಂಥ ವರ್ಷದ ಅಂಗವಾಗಿ ಬೃಹತ್ ಮಟ್ಟದ ಪುಸ್ತಕ ಪ್ರದರ್ಶನವನ್ನು ದೆಹಲಿಯಲ್ಲಿ ಏರ್ಪಡಿಸಿತು.

ಪುಸ್ತಕ ಪ್ರಕಟಣೆ ಮತ್ತು ಮಾರಾಟಗಳಿಗೆ ಸಂಬಂಧಿಸಿದ ಚರ್ಚೆ, ವಿಚಾರಗೋಷ್ಠಿಗಳನ್ನು ಟ್ರಸ್ಟ್ ಏರ್ಪಡಿಸುತ್ತದೆ. ದೇಶದಲ್ಲಿ ವಿವಿಧ ಭಾಷೆಗಳ ಲೇಖಕರ, ಭಾಷಾಂತರಕಾರರ ಶಿಬಿರಗಳನ್ನೇರ್ಪಡಿಸಿ ವಿಚಾರ ವಿನಿಮಯಕ್ಕೆ ಅವಕಾಶ ಒದಗಿಸುತ್ತದೆ. ಪ್ರಥಮವಾಗಿ ಲೇಖಕರ ಶಿಬಿರ 1970ರ ಜುಲೈಯಲ್ಲಿ ಮೈಸೂರಿನಲ್ಲಿ ಜರಗಿತು. ಅಂತರರಾಷ್ಟ್ರೀಯ ಪುಸ್ತಕ ಮೇಳಗಳಲ್ಲೂ ಟ್ರಸ್ಟ್ ಭಾಗವಹಿಸಿ, ಭಾರತೀಯ ಪುಸ್ತಕಗಳ ಮಾರಾಟಕ್ಕೆ ಪ್ರಯತ್ನಿಸುತ್ತದೆ.

ನಿಂಬಾರ್ಕ

ಒಬ್ಬ ಮುನಿ ಒಬ್ಬ ತತ್ತ್ವಜ್ಞಾನಿಯನ್ನು ಭೇಟಿ ಮಾಡಿದ. ಅವರಿಬ್ಬರೂ ವಾದ ವಿವಾದಗಳಲ್ಲಿ ಮೈಮರೆತರು. ಸಂಜೆಯಾಯಿತು. "ಆಹಾರ ಸೇವಿಸೋಣ" ಎಂದ ತತ್ತ್ವಜ್ಞಾನಿ. "ಸೂರ್ಯ ಮುಳುಗಿದ ಮೇಲೆ ನಾನು ಆಹಾರ ಸೇವಿಸುವುದಿಲ್ಲ", ಎಂದ ಮುನಿ. ಮುಳುಗುತ್ತಿದ್ದ ಸೂರ್ಯಕಿರಣ (ಅರ್ಕ)ಗಳನ್ನು ತತ್ತ್ವಜ್ಞಾನಿ ಸೆರೆಹಿಡಿದು, ಬಳಿಯ ಬೇವಿನ (ನಿಂಬ) ಮರದ ಮೇಲೆ ತೂಗು ಹಾಕಿದ. ಆ ತತ್ತ್ವಜ್ಞಾನಿ ಮುಂದೆ ನಿಂಬಾರ್ಕ ಎಂದು ಪ್ರಖ್ಯಾತನಾದ.

—ಇದು ನಿಂಬಾರ್ಕನನ್ನು ಕುರಿತ ಕಥೆ.

ಬ್ರಹ್ಮವೇ ಪರತತ್ತ್ವ, ಅನಂತ. ಸೃಷ್ಟಿ, ಸಂರಕ್ಷಣೆ, ನಾಶ ಬ್ರಹ್ಮನಿಗೆ ಸೇರಿವೆ. ತನ್ನ ಬಗೆಗೆ ಅರಿವಿರುವ ಮನುಷ್ಯನ ಆತ್ಮ ಅಥವಾ ಜೀವ, ಅಂಥ ಅರಿವಿಲ್ಲದ ಜಡ ಪ್ರಪಂಚ ಅಥವಾ ಪ್ರಕೃತಿ ಇವೆರಡಕ್ಕೂ ಸ್ವತಂತ್ರ ಅಸ್ತಿತ್ವವೇ ಇಲ್ಲ. ಇವು ಬ್ರಹ್ಮನಿಂದ ಬೇರೆಯಾದ, ಅಂತ್ಯವಿರುವ ತತ್ತ್ವಗಳು. ನಿಂಬಾರ್ಕನ ಈ ಪಂಥವನ್ನು ದ್ವೈತಾದ್ವೈತ ಎಂದು ಕರೆಯಲಾಗಿದೆ.

ಬ್ರಹ್ಮವನ್ನೇ ಕೃಷ್ಣ, ಹರಿ ಇತ್ಯಾದಿಯಾಗಿ ನಿಂಬಾರ್ಕ ಕರೆದಿದ್ದಾನೆ. ಮೋಕ್ಷ ಸಾಧನೆಗೆ ಭಕ್ತಿ ಮಾರ್ಗವನ್ನು ಪ್ರತಿಪಾದಿಸಿದ್ದಾನೆ.

ಈತ ತೆಲುಗ. ಬ್ರಹ್ಮಸೂತ್ರದ ಬಗೆಗೆ ವೇದಾಂತ ಪಾರಿಜಾತ ಸೌರಭ ಎಂಬ ಭಾಷ್ಯ ಬರೆದಿದ್ದಾನೆ. ಬ್ರಹ್ಮ, ಜೀವ, ಪ್ರಕೃತಿ ಈ ತತ್ತ್ವಗಳನ್ನು ಕುರಿತು 'ದಶಶ್ಲೋಕೀ' ಎಂಬ ಹತ್ತು ಪದ್ಯಗಳನ್ನು ರಚಿಸಿದ್ದಾನೆ.

ನಿಕೊಲಾಯಿ ರೋರಿಕ್

ಭಾರತೀಯ ತತ್ತ್ವಜ್ಞಾನ, ಭಾರತ [illegible] ಸೆಳೆತಕ್ಕೆ ಒಳಗಾಗಿ, ರಷ್ಯದಿಂದ ಭಾರತಕ್ಕೆ ಬಂದು [illegible]



ಭಾರತದ ಆರಾಧನೆ : ರೋರೀಕ್

ಚಿತ್ರಕಾರ, ನಿಕೊಲಾಯಿ ರೋರೀಕ್. ಹಿಮಾಲಯದ ರಮ್ಯ, ಗಂಭೀರ ದೃಶ್ಯಗಳನ್ನು ಬಹುಶಃ ಇವರಷ್ಟು ಭಾವಗರ್ಭಿತವಾಗಿ ಬೇರೆ ಯಾವ ಕಲಾವಿದನೂ ಚಿತ್ರಿಸಿಲ್ಲ.

ಇವರು ಒಳ್ಳೆಯ ಬರೆಹಗಾರರು, ಪುರಾತತ್ತ್ವ ಶೋಧಕರು ಮತ್ತು ಅನ್ವೇಷಕರು. ಭಾರತ ಹಾಗೂ ಹಿಮಾಲಯಗಳನ್ನು ಕುರಿತು ಅನೇಕ ಪುಸ್ತಕಗಳನ್ನು ರೋರೀಕ್ ಬರೆದಿದ್ದಾರೆ.

ರೋರೀಕ್ ಅವರು 1874ರಲ್ಲಿ ಹುಟ್ಟಿದವರು. ಸೇಂಟ್ ಪೀಟರ್ಸ್‌ಬರ್ಗ್‌ನ (ಈಗಿನ ಲೆನಿನ್‌ಗ್ರಾಡ್) ಅವರ ಮನೆಯಲ್ಲಿದ್ದ 'ಕಾಂಚನಗಂಗಾ' ಚಿತ್ರಪಟವು ನಿಕೊಲಾಯಿ ರೋರೀಕ್ ಅವರ ಮನಸ್ಸನ್ನು ಚಿಕ್ಕಂದಿನಲ್ಲೇ ಆಕರ್ಷಿಸಿತು. [illegible] ಕಲಾ ಅಕಾಡೆಮಿ ಮತ್ತು ವಿಶ್ವವಿದ್ಯಾನಿಲಯದ ಹಲವು ಶಾಖೆಗಳಲ್ಲಿ ವ್ಯಾಸಂಗ ಮಾಡಿದರು : ನ್ಯಾಯಶಾಸ್ತ್ರ ಓದಿದರು. ಬಳಿಕ ವಿದೇಶದಲ್ಲಿ ವ್ಯಾಸಂಗ.

ರೋರೀಕ್ ಅವರು ತಮ್ಮ 18ನೆಯ ವಯಸ್ಸಿಗೇ ಪುರಾತತ್ತ್ವ ಶೋಧನೆಯಲ್ಲಿ ತೊಡಗಿದ್ದರು. ಅನಂತರ ಚಿತ್ರಕಲೆಯಲ್ಲಿ ನಿರತರಾದರು. ಒಪೆರಾ, ಬ್ಯಾಲೆ ನೃತ್ಯಗಳಿಗೆ ರಂಗಸಜ್ಜಿಕೆಯ ವಿನ್ಯಾಸ ಮಾಡಿದರು. ಸಣ್ಣಕತೆ, ಕಿನ್ನರಕತೆ, ಕವಿತೆಗಳನ್ನು ಬರೆದರು.

1920ರಲ್ಲಿ ಇವರು ಕುಟುಂಬ ಸಹಿತವಾಗಿ ಭಾರತಕ್ಕೆ ಬಂದರು. ಹಿಮಾಲಯದ ಬಳಿಸಾರಬೇಕೆಂಬ ತಮ್ಮ ಆಸೆಯನ್ನು ತಣಿಸಿಕೊಂಡರು. ಅನಂತರ ಸ್ವಲ್ಪ ಕಾಲ ಮಧ್ಯ ಏಷ್ಯಾ ಪ್ರವಾಸ ಕೈಗೊಂಡರು. ರೋರೀಕರು ಹೋದಲ್ಲೆಲ್ಲ ಅವರ ಪತ್ನಿಯೂ ಜೊತೆಯಲ್ಲಿರುತ್ತಿದ್ದರು. ಆಕೆ ತತ್ತ್ವಜ್ಞಾನವನ್ನು ಅಭ್ಯಸಿಸಿದ್ದರು ; ಹಲವಾರು ಪುಸ್ತಕಗಳನ್ನು ಬರೆದಿದ್ದರು.

ರೋರೀಕ್ ವಿಶ್ವವಿಖ್ಯಾತ ಚಿತ್ರಕಾರರು. ಜಗತ್ತಿನ ಹೆಸರಾದ ಚಿತ್ರಶಾಲೆಗಳಲ್ಲಿ ಇವರ ವರ್ಣಚಿತ್ರಗಳಿವೆ. ಭಾರತದಲ್ಲಿ ವಾರಾಣಸಿಯ ಕಲಾಭವನ. ತಿರುವನಂತಪುರ, ಅಲಹಾಬಾದ್ ಹಾಗೂ ಚಂಡೀಗಢಗಳ ವಸ್ತುಸಂಗ್ರಹಾಲಯಗಳಲ್ಲಿ ಇವರ ಚಿತ್ರಗಳಿಗಾಗಿ ಪ್ರತ್ಯೇಕ ವಿಭಾಗಗಳಿವೆ.

ಯುದ್ಧ ಮತ್ತಿತರ ಕ್ಷೋಭೆಗಳ ಕಾಲದಲ್ಲಿ ಅಪೂರ್ವ ಕಲಾಕೃತಿ ವಸ್ತುಗಳನ್ನು ಸಂರಕ್ಷಿಸುವುದಕ್ಕಾಗಿ ಅವರು ಸೂಚಿಸಿದ ಅಂತರರಾಷ್ಟ್ರೀಯ ಒಪ್ಪಂದವೇ ರೋರೀಕ್ ಒಪ್ಪಂದ. ಇದು 1935ರಲ್ಲಿ ಆಚರಣೆಗೆ ಬಂತು. 1954ರಲ್ಲಿ ಸ್ವೀಕೃತವಾದ ಹೇಗ್ ಒಪ್ಪಂದಕ್ಕೆ ಇದು ತಳಹದಿಯಾಯಿತು.

'ಏಷ್ಯದ ಹೃದಯ' 'ಶಾಂಭಲಾ' 'ಭವಿಷ್ಯದ ದ್ವಾರಗಳು' 'ಅಲ್ಟಾಯ್ ಹಿಮಾಲಯ' 'ಹಿಮಾಲಯ—ತೇಜಸ್ಸಿನ ಆಗರ' ಇತ್ಯಾದಿ ಅವರ ಕೆಲವು ಮುಖ್ಯ ಪುಸ್ತಕಗಳು. ಅವರು ಚಿತ್ರಿಸಿದ ವರ್ಣಚಿತ್ರಗಳು 7,000ಕ್ಕಿಂತಲೂ ಹೆಚ್ಚು.

ನಿಕೊಲಾಯಿ ರೋರೀಕರ ಇಬ್ಬರು ಪ್ರತಿಭಾವಂತ ಪುತ್ರರು ಜಾರ್ಜ್ ರೋರೀಕ್ ಮತ್ತು ಸ್ವೆತಸ್ಲಾವ್ ರೋರೀಕ್. ಮೊದಲನೆಯವರು ರಷ್ಯದ ಸಂಸ್ಕೃತ ಪಂಡಿತರೂ ಭಾರತಾಧ್ಯಯನ ಪರಿಣತರೂ ಆಗಿದ್ದರು. ಸ್ವೆತಸ್ಲಾವ್ ರೋರೀಕ್ ಖ್ಯಾತ ಚಿತ್ರಕಾರರು : ತತ್ತ್ವವೇತ್ತರು. ಭಾರತದ[ಲ್ಲಿ] ನೆಲೆಸಿದ್ದಾರೆ.

ಭಾರತದ ಬಗೆಗೆ ನಿಕೊಲಾಯಿ ರೋರೀಕ್ ಬರೆದ ಒಂದು ಲೇಖನದ ಕೊನೆಯ ಸಾಲುಗಳು ಹೀಗಿವೆ: "ಓ ಸರ್ವರಮಣೀಯ ಭಾರತವೇ, ನಿನ್ನ ಪುರಾತನ ನಗರಗಳು ಮತ್ತು ದೇವಾಲಯಗಳು, ನಿನ್ನ ಹುಲ್ಲುಗಾವಲುಗಳು, ದಿವ್ಯ ವನಗಳು, ನಿನ್ನ ಪವಿತ್ರ ನದಿಗಳು ಮತ್ತು ಹಿಮಾಲಯದಲ್ಲಿ ತುಂಬಿರುವ ಭವ್ಯತೆ, ಸ್ಫೂರ್ತಿ ಇವಕ್ಕೆಲ್ಲ ಇಗೋ ನನ್ನ ಹೃತ್ಪೂರ್ವಕ ಮೆಚ್ಚು[ಗೆ] ....".

1947ರಲ್ಲಿ ನಿಕೊಲಾಯಿ ರೋರೀಕ್ ನಿಧನರಾದರು. 1974 ಅವರ ಜನ್ಮ ಶತಾಬ್ದಿಯ ವರ್ಷ.

ನಿಕೊಲೊ ದ ಕೊಂತಿ

"ಅಸಂಖ್ಯಾತ ದೀಪಗಳನ್ನು ಉರಿಸುವ ಹಬ್ಬ ...ಒಂಬತ್ತು ದಿ[ನ] ಆಚರಿಸುವ ಹಬ್ಬ. ಬಡವ ಬಲ್ಲಿದ ಎನ್ನದೆ. ಎಲ್ಲರ ಮೇಲೆ ಬಣ್ಣದ ಓಕು[ಳಿ] ಎರಚುವ ಇನ್ನೊಂದು ಹಬ್ಬ... ಅಲ್ಲಿಯ ರಾಜ. ದೇಶದಲ್ಲೇ ಬಲಾಢ್ಯ... ನಗರದ ಸುತ್ತಳತೆ ಅರವತ್ತು ಮೈಲು..."

ಇದು ವಿಜಯನಗರಕ್ಕೆ ಬಂದ ವೆನಿಸಿನ ಪ್ರವಾಸಿ ನಿಕೊಲೊ ದ ಕೊಂ[ತಿ] ಮಾಡಿದ ವರ್ಣನೆ. ಆಗ ವಿಜಯನಗರದಲ್ಲಿ ಇಮ್ಮಡಿ ದೇವರಾಯನ ಆಳ್ವಿಕೆ ನಡೆದಿತ್ತು.

ನಿಕೊಲೊ ತನ್ನ ಹೆಂಡತಿ ಮಕ್ಕಳೊಡನೆ. ಪರ್ಷಿಯದ ವ್ಯಾಪಾರಿ ತಂಡದ ಜೊತೆಯಲ್ಲಿ ಹೊರಟು ಕರಾವಳಿಯುದ್ದಕ್ಕೂ ಸಾಗಿ 'ಇಂಡಸ್' ನದೀಮುಖಜ ಭೂಮಿ, ಕಂಬೈತಾ(ಗುಜರಾತಿನ ಕ್ಯಾಂಬೆ)ಗಳನ್ನು ದಾಟಿ ಕರ್ನಾಟಕದ ಕರಾವಳಿಯನ್ನು ತಲಪಿದ; ಅನಂತರ ಒಳನಾಡಿನಲ್ಲಿ ಸಂಚರಿಸಿದ.

ಭಾರತ ಕರಾವಳಿಯ 'ಪತಮೂರಿಯ' ಪಟ್ಟಣದಿಂದ (ಈಗಿನ ದಕ್ಷಿಣ ಕನ್ನಡ ಜಿಲ್ಲೆಯ ಬಾರಕೂರ ಇರಬಹುದು) ಭೂಮಾರ್ಗವಾಗಿ ಮುನ್ನೂರು ಮೈಲು ಸಾಗಿ 'ಬಿಜೆನ್‌ಗಾಲಿಯಾ' (ವಿಜಯನಗರ)ವನ್ನು ಕಂಡ. ಬಳಿಕ ಮಾಬಾರ್ ಕೋರಮಂಡಲ ಪ್ರದೇಶ ಕಡೆಗೆ, ಅಲ್ಲಿಂದ ಸಿಂಹಳಕ್ಕೆ, ಅನಂತರ ಸುಮಾತ್ರ ದ್ವೀಪಕ್ಕೆ ಹೋಗಿ ಅಲ್ಲಿ ಒಂದು ವರ್ಷ ವಾಸಮಾಡಿದ. ಅಂಡಮಾನ್ ನಿಕೋಬಾರ್ ದ್ವೀಪಗಳಲ್ಲೂ ದಕ್ಷಿಣ ಬರ್ಮ, ಜಾವಾಗಳಲ್ಲೂ ಸಂಚರಿಸಿದ ಬಳಿಕ ಪುನಃ ಭಾರತಕ್ಕೆ ಬಂದ. 'ಮೆಲಿಬೇರಿಯಾ' (ಮಲಬಾರ್) ಪ್ರಾಂತದಲ್ಲಿ 'ಕೋಲೋಯನ್' (ಕ್ವಿಲಾನ್), 'ಕೊಚ್ಚಿಂ' (ಕೊಚ್ಚಿ). 'ಕೆಲಿಕಟ್ಟು'(ಕಲ್ಲಿಕೋಟೆ)ಗಳಲ್ಲಿ ಸಂಚರಿಸಿದ. ಕಂಬೈತಾಕ್ಕೆ ಹೋಗಿ ಪುನಃ ಕೆಲಿಕಟ್ಟು ತಲಪಿದ. ಕರಾವಳಿಯ ಹತ್ತಿರದ ದ್ವೀಪಗಳನ್ನು ಕಂಡು, ಅನಂತರ ಸಮುದ್ರ ದಾಟಿ ಏಡನ್, ಕೆಂಪು ಸಮುದ್ರ ದಾರಿ ಈಜಿಪ್ಟಿಗೆ ಹೋದಾಗ ಅಲ್ಲಿ ಹೆಂಡತಿಯೂ ಇಬ್ಬರು ಮಕ್ಕಳೂ ಪ್ಲೇಗಿಗೆ ಬಲಿಯಾದರು. ಉಳಿದ ಇಬ್ಬರು ಮಕ್ಕಳೊಡನೆ (1444ರಲ್ಲಿ) ವೆನಿಸಿಗೆ ಹಿಂದಿರುಗಿದ. ಆ ವೇಳೆಗೆ ಪ್ರವಾಸದಲ್ಲಿ ಇವನು ಕಳೆದ ಒಟ್ಟು ಕಾಲ ಸುಮಾರು ಇಪ್ಪತ್ತೈದು ವರ್ಷ.

ಪ್ರವಾಸ ಕಾಲದಲ್ಲಿ ಪ್ರಾಣ ಉಳಿಸಿಕೊಳ್ಳಲು ಒಮ್ಮೆ ತನ್ನ ಧರ್ಮದ ವಿರುದ್ಧ ನಡೆಯಬೇಕಾಯಿತು. ಅದಕ್ಕಾಗಿ ಪೋಪ್ ಗುರು ಪ್ರಾಯಶ್ಚಿತ್ತ

[illegible]: "ಪ್ರವಾಸವನ್ನು ವರ್ಣಿಸು." ಎಂದು ಆಜ್ಞಾಪಿಸಿದ. ಇವನು ಹೇಳಿದಷ್ಟನ್ನು ಪೋಪ್‌ನ ಕಾರ್ಯದರ್ಶಿ ಬರೆದಿಟ್ಟದ್ದು ಮಾತ್ರವಲ್ಲ, ಕಾಲ್ಪನಿಕವಾಗಿ ಪ್ರಕ್ಷಿಪ್ತ ಹೆಚ್ಚು ವಿವರಗಳನ್ನು ದಾಖಲು ಮಾಡಿಕೊಂಡ.

ವಿಜಯನಗರದಿಂದ ಮುಂದೆ ದಾರಿಯಲ್ಲಿ ಕಂಡ ಶ್ರೀಗಂಧದ ಮರಗಳು. ಮಲಬಾರ್ ಪ್ರದೇಶದ ಶುಂಠಿ, ದಾಲ್ಚಿನ್ನಿ, ಮೆಣಸು ಬೆಳೆಗಳು...ಹಲಸಿನ ಹಣ್ಣು, ಮಾವಿನಹಣ್ಣು, ಮಾತೃಪ್ರಧಾನ ಕುಟುಂಬ ಪದ್ಧತಿ–ಇವನ್ನು ನಿಕೊಲೊ ದ ಕೊಂತಿ ಪ್ರಸ್ತಾಪಿಸಿದ್ದಾನೆ. ಇಂಡಿಯಾದವರು ಸಜ್ಜನರು, ಶ್ರೀಮಂತರು. ಸ್ತ್ರೀಲೋಲರು : ಬಹುಭಾಗಗಳಲ್ಲಿ ಬಹುಪತ್ನಿತ್ವ ರೂಢಿಯಲ್ಲಿದೆ ; ಜ್ಯೋತಿಷ್ಯ, ಭವಿಷ್ಯ ಬಲ್ಲವರೂ ಪವಾಡ ನಡೆಸುವವರೂ ಇದ್ದಾರೆ ; ಈ ಜನರ ಹಬ್ಬ, ಉತ್ಸವ, ಕೋಲಾಟ, ಕುಣಿತಗಳು ಆಕರ್ಷಕ ಎಂದು ಅವನು ಬಣ್ಣಿಸಿದ್ದಾನೆ.

ನಿಜಗುಣ ಶಿವಯೋಗಿ

ನೋಡಿ : ಸಂಪುಟ ೫

ನಿಜಾಂ ಷಾಹಿ

ಬಹಮನಿಗಳ ರಾಜ್ಯ ಒಡೆದಾಗ ಅಸ್ತಿತ್ವಕ್ಕೆ ಬಂದ ಐದು ರಾಜ್ಯಗಳಲ್ಲಿ ಅಹಮದ್‌ನಗರದಿಂದ ಆಳಿದ ನಿಜಾಂ ಷಾಹಿ ವಂಶವೂ ಒಂದು. ಬಹಮನಿ ಸುಲ್ತಾನನು ಜುನ್ನರ್‌ನಲ್ಲಿ ನೇಮಿಸಿದ್ದ ಮಾಂಡಲಿಕನಾದ ಮಲಿಕ್ ಅಹಮದ್ 1490ರಲ್ಲಿ ಸ್ವತಂತ್ರನಾದ. ಇವನು ಅಹಮದ್‌ನಗರ ಪಟ್ಟಣ ಸ್ಥಾಪಿಸಿದ. ಇವನ ತಂದೆಯಾದ ನಿಜಾಂ-ಉಲ್-ಮುಲ್ಕ್ ಬಹ್ರಿಯಿಂದಾಗಿ ಈ ವಂಶಕ್ಕೆ ನಿಜಾಂ ಷಾಹಿ ಎಂಬ ಹೆಸರು ಬಂತು.

ಮಲಿಕ್ ಅಹಮದ್‌ನ ಮಗ ಬುರ್ಹಾನ್ 1508ರಲ್ಲಿ ಪಟ್ಟವೇರಿದ. ಈತನ ಮಗ ಒಂದನೆಯ ಹುಸೇನ್ ರಕ್ಕಸತಂಗಡಿ ಯುದ್ಧದಲ್ಲಿ ಪ್ರಮುಖ ಪಾತ್ರ ವಹಿಸಿದ. ಇತಿಹಾಸಕಾರ ಸಯ್ಯದ್ ಅಲಿ ತಬಾತಬಾ (ಕೃತಿ 'ಬುರ್ಹಾನ್-ಇ-ಮಾಸಿರ್') ಈ ವಂಶದ ಎರಡನೆಯ ಬುರ್ಹಾನನ (1590-95) ಆಸ್ಥಾನಿಕ.

ಈ ವಂಶದ ರಾಜಪುತ್ರಿ ಚಾಂದ್‌ಬೀಬಿ ಹುಸೇನ್ ನಿಜಾಂಷಾನ ಮಗಳು. ಬಿಜಾಪುರದ ಅಲಿ ಆದಿಲ್‌ಷಾನನ್ನು ಆಕೆ ವರಿಸಿದ್ದಳು. ಮುಂದೆ ಅಹ್ಮದ್‌ನಗರದಲ್ಲಿ ಎರಡನೆಯ ಬುರ್ಹಾನ್‌ನ ಉತ್ತರಾಧಿಕಾರಿಯಾಗಿ ಆಕೆ ರಾಜ್ಯವಾಳಿದಳು. ಅಕ್ಬರನ ಮಗ ಮುರಾದನು 1595ರಲ್ಲಿ ದಂಡೆತ್ತಿ ಬಂದಾಗ ಅವನನ್ನು ಎದುರಿಸಿದಳು. ಈಕೆ ಮೊಘಲರೊಡನೆ ಮಾಡಿಕೊಂಡ ಒಪ್ಪಂದವನ್ನು ಆವಳ ಸರದಾರರು ಮುರಿದುದರಿಂದ 1600ರಲ್ಲಿ ಅಹಮದ್‌ನಗರ ಕೋಟೆಯನ್ನು ಮೊಘಲರು ವಶಪಡಿಸಿಕೊಂಡರು.

1633ರಲ್ಲಿ ಈ ರಾಜ್ಯ ಮೊಘಲ್ ಸಾಮ್ರಾಜ್ಯದಲ್ಲಿ ಸೇರಿಹೋಯಿತು. ನಾಮಮಾತ್ರ ದೊರೆಯಾಗಿದ್ದ ಎರಡನೆಯ ಹುಸೇನ್ ಗ್ವಾಲಿಯರ್ ಕೋಟೆಯಲ್ಲಿ ಬಂಧಿತನಾದ.

ನಿಜಾಮರು

ಮೊಘಲರ ಪ್ರತಿನಿಧಿಯಾಗಿ ಆಳುತ್ತಿದ್ದು, ಮುಂದೆ ಸ್ವತಂತ್ರವಾದ ಹೈದರಾಬಾದಿನ ರಾಜವಂಶ ನಿಜಾಮರದು.

ಮೊಘಲ್ ಸಮ್ರಾಟ ಫರುಖ್ ಸಿಯರ್ 1713ರಲ್ಲಿ ದಖ್ಖಿಣದ ಸುಭೇದಾರನೆಂದು ಮೀರ್ ಕಮರುದ್ದೀನ್ ನಿಜಾಂ-ಉಲ್-ಮುಲ್ಕ್ ಅಸಫ್ ಜಾನನ್ನು ನೇಮಿಸಿದ. ಈತ 1724ರಲ್ಲಿ ಸ್ವತಂತ್ರನಾದ. ಈತನ ಕೈಕೆಳಗೆ ಆರ್ಕಾಟ್, ಸವಣೂರು, ಕಡಪ, ಆದವಾನಿ ಮುಂತಾದ ಸ್ಥಳಗಳ ನವಾಬರು ಇದ್ದರು. ಇವನ ಅನಂತರ ಪಟ್ಟವೇರಿದವನು ಈತನ ಮಗ ನಾಸಿರ ಜಂಗ್ (1748-50). ಈತನ ಕಾಲದಲ್ಲಿ ಪಟ್ಟಕ್ಕೆ ನಡೆದ ಅಂತಃಕಲಹ ಹೈದರಾಬಾದಿನ ರಾಜಕೀಯದಲ್ಲಿ ಫ್ರೆಂಚರೂ ಇಂಗ್ಲಿಷರೂ ಪ್ರವೇಶಿಸಲು ಅವಕಾಶ ಮಾಡಿಕೊಟ್ಟಿತು. 1750ರಲ್ಲಿ ಫ್ರೆಂಚರ ನೆರವಿನಿಂದ ನಾಸಿರ್‌ಜಂಗನ ಸೋದರಿಯ ಮಗನಾದ ಮುಜಫರ್ ಜಂಗ್, ನಾಸಿರ್‌ಜಂಗನನ್ನು ಕೊಂದು ಪಟ್ಟವೇರಿದ.



ನಿಜಾಮ ಉಸ್ಮಾನ್ ಅಲಿ

ಮುಂದೆ ಸಲಾಬತ್‌ಜಂಗ್ (1751–1761) ಮತ್ತು ನಿಜಾಮ್ ಅಲಿ (1762-1803) ಎಂಬ ನಾಸಿರ್‌ಜಂಗನ ಸೋದರರು ಅನುಕ್ರಮವಾಗಿ ಆಳಿದರು. ನಿಜಾಂ ಅಲಿಯು ತನ್ನ ಪರಮಾಧಿಕಾರವನ್ನು ಬ್ರಿಟಿಷರಿಗೆ ಬಿಟ್ಟುಕೊಟ್ಟು ಅವರ ಆಶ್ರಿತರಾಜನಾದ.

ಭಾರತ ಸ್ವತಂತ್ರವಾದಾಗ ನಿಜಾಮ್ ವಂಶದ ಮೀರ್ ಉಸ್ಮಾನ್ ಅಲಿ ಖಾನ್ (1911-48) ಹೈದರಾಬಾದ್ ಸಂಸ್ಥಾನದ ಸ್ವಾತಂತ್ರ್ಯವನ್ನು ಘೋಷಿಸಿದರು. ಆದರೆ 1948 ಸೆಪ್ಟೆಂಬರ್‌ನಲ್ಲಿ ಸೈನ್ಯ ಕಳುಹಿಸಿ ಹೈದರಾಬಾದನ್ನು ಭಾರತ ಒಕ್ಕೂಟದಲ್ಲಿ ಸೇರಿಸಲಾಯಿತು.

ನಿಜಾಂ ಉಸ್ಮಾನ್ ಅಲಿ 1966ರಲ್ಲಿ ತೀರಿಕೊಂಡರು. ಸಮಕಾಲೀನ ವಿಶ್ವದ ಅಗ್ರ ಶ್ರೀಮಂತ ಎಂದು ಅವರು ಖ್ಯಾತರಾಗಿದ್ದರು. ಹೈದರಾಬಾದಿನ ಉಸ್ಮಾನಿಯಾ ವಿಶ್ವವಿದ್ಯಾನಿಲಯ ಇವರ ಹೆಸರಲ್ಲಿದೆ. ಮೊಘಲ್ ಸಾಮ್ರಾಜ್ಯದ ಕೊನೆಯ ಸ್ಮಾರಕವಾಗಿ ಹೈದರಾಬಾದಿನ ನಿಜಾಮರ ಸಂಸ್ಥಾನ ಉಳಿದಿತ್ತು.

ನಿವೇದಿತಾ

"ನಿಜವಾಗಿ ಹೇಳಬೇಕೆಂದರೆ ಭಾರತಕ್ಕಾಗಿ ಮಾಡಬೇಕಾದ ಕೆಲಸದಲ್ಲಿ ನಿನಗೆ ಒಳ್ಳೆಯ ಭವಿಷ್ಯವಿದೆ ಎಂಬ ನನ್ನ ಭಾವನೆ ದೃಢವಾಗಿದೆ. ಭಾರತೀಯರಿಗಾಗಿ, ವಿಶೇಷತಃ ಮಹಿಳೆಯರಿಗಾಗಿ, ಕೆಲಸ ಮಾಡಲು ಈಗ ಬೇಕಾಗಿರುವುದು ಪುರುಷನಲ್ಲ, ಒಬ್ಬ ಮಹಿಳೆ, ನಿಜವಾಗಿಯೂ ಸಿಂಹಿಣಿ. ನಿನ್ನ ವಿದ್ಯಾಭ್ಯಾಸ, ಪ್ರಾಮಾಣಿಕತೆ, ಅಪಾರ ಪ್ರೇಮ, ದೃಢ ಸಂಕಲ್ಪಗಳು ನಿನ್ನನ್ನು ನಮಗೆ ಬೇಕಾದ ಮಹಿಳೆಯನ್ನಾಗಿ ಮಾಡಿವೆ."

—ಸೋದರಿ ನಿವೇದಿತಾ ಭಾರತಕ್ಕೆ ಬರುವ ಇಚ್ಛೆ ವ್ಯಕ್ತಪಡಿಸಿದಾಗ, ಸ್ವಾಮಿ ವಿವೇಕಾನಂದರು ಬರೆದ ಕಾಗದದ ಭಾಗ ಇದು.

ಮಾರ್ಗರೆಟ್ ನೋಬಲ್ 1867ರಲ್ಲಿ ಐರ್ಲೆಂಡಿನಲ್ಲಿ ಜನಿಸಿದರು. ವಿದ್ಯಾಭ್ಯಾಸ ಇಂಗ್ಲೆಂಡಿನಲ್ಲಿ. ತಮ್ಮ ಮೆಚ್ಚುಗೆಯ ಶಿಕ್ಷಣ ವೃತ್ತಿ ಅವಲಂಬಿಸಿದರು. ಕೆಲ ಕಾಲದ ಬಳಿಕ ತಮ್ಮದೇ ಶಾಲೆ ತೆರೆದರು. 1895ರಲ್ಲಿ ವಿವೇಕಾನಂದರನ್ನು ಕಂಡರು. ಅವರ ಅಸಾಧಾರಣ ವ್ಯಕ್ತಿತ್ವ ಹಾಗೂ ಶುದ್ಧ ಮತ್ತು ಸ್ಪಷ್ಟ



ಸೋದರಿ ನಿವೇದಿತಾ

ಬೋಧನೆಗಳಿಂದ ಆಕರ್ಷಿತರಾದರು. ಅವರು ನಡೆಸುತ್ತಿದ್ದ ಪಾಠ ಪ್ರವಚನಗಳನ್ನು ತಪ್ಪದೆ ಕೇಳಿ ಅವರ ಶಿಷ್ಯೆಯಾದರು. ವಿವೇಕಾನಂದರು ಆಕೆಯನ್ನು ನಿವೇದಿತಾ ಎಂದು ಕರೆದರು.

ಭಾರತಕ್ಕೆ ಬರುವುದಾದರೆ ಸಂಪೂರ್ಣ ಭಾರತೀಯಳೇ ಆಗಬೇಕು : ಹಿಂದಿನ ಆಂಗ್ಲ ಜೀವನವನ್ನು ಮರೆತು. ಭಾರತೀಯರಲ್ಲಿ ಏನೇ ತಪ್ಪಿರಲಿ ಅವರ ಸೇವೆ ಮಾಡಬೇಕು—ಎಂಬ ಶರತ್ತು ಹಾಕಿದರು. ಆಕೆ ಅದಕ್ಕೊಪ್ಪಿದರು. ಭಾರತವೇ ಆಕೆಯ ಮನೆಯಾಯಿತು.

1898ರ ಜನವರಿಯಲ್ಲಿ ನಿವೇದಿತಾ ಕಲ್ಕತ್ತೆಗೆ ಬಂದರು. ಭಾರತೀಯರ ಜೀವನ ರೀತಿಯನ್ನು ಕಂಡರು. ವಿವೇಕಾನಂದರೊಡನೆ ಕೆಲವು ಪುಣ್ಯ ಕ್ಷೇತ್ರಗಳಿಗೆ ಹೋಗಿ ಬಂದರು. ವಿವೇಕಾನಂದರು ಆಕೆಗೆ ಭಾರತೀಯ ಧರ್ಮ. ಆಧ್ಯಾತ್ಮಿಕ ಜೀವನ. ಚರಿತ್ರೆ. ಕಲೆಗಳನ್ನಲ್ಲದೆ ಭಾರತವನ್ನು ಪ್ರೀತಿಸಲೂ ಕಲಿಸಿದರು. ಆಕೆ ಸ್ವಲ್ಪ ಕಾಲ ಶಾರದಾಮಣಿದೇವಿಯೊಡನೆ ವಾಸಿಸಿದರು.

ನಿವೇದಿತಾ ಬಾಲಿಕೆಯರ ಶಾಲೆ ಪ್ರಾರಂಭಿಸಿದರು. ಅದಕ್ಕಿದ್ದ ಹಣದ ಕೊರತೆಯನ್ನು ನಿವಾರಿಸಲು ಪಶ್ಚಿಮ ರಾಷ್ಟ್ರಗಳಲ್ಲಿ ಸುತ್ತಿ ಭಾಷಣ. ಲೇಖನಗಳಿಂದ ನಿಧಿ ಕೂಡಿಸಿದರು.

ನಿವೇದಿತಾ ಭಾರತದಲ್ಲೆಲ್ಲ ಸಂಚರಿಸಿದರು. ಹೋದಲ್ಲೆಲ್ಲ ಮಹಿಳೆಯರನ್ನು ಕಂಡು ಅವರಲ್ಲಿ ಜಾಗೃತಿ ಉಂಟುಮಾಡುವುದು. ವಿದ್ಯಾರ್ಥಿಗಳನ್ನುದ್ದೇಶಿಸಿ ಭಾಷಣ ಮಾಡುವುದು. ಭಾರತೀಯ ಕಲೆ. ಸಾಹಿತ್ಯಗಳಿಗೆ ಉತ್ತೇಜನ ಕೊಡುವುದು ಅವರ ಕಾರ್ಯಕ್ರಮವಾಗಿತ್ತು. ದಾಸ್ಯದಲ್ಲಿರುವ ಭಾರತ ಸ್ವತಂತ್ರವಾಗಬೇಕೆಂಬುದು ಅವರ ಆಸೆಯಾಗಿತ್ತು. ಗಾಂಧೀಜೀ ಸ್ವದೇಶೀ ವ್ರತವನ್ನು ಜನಪ್ರಿಯಗೊಳಿಸುವ ಬಹುಮೊದಲೇ, 1906ರಲ್ಲಿಯೇ. ಆಕೆ ಅದನ್ನು ಬೋಧಿಸಿದರು. ಭಾರತವನ್ನು ಕುರಿತು ಅವರು ಅನೇಕ ಪುಸ್ತಕಗಳನ್ನೂ ಲೇಖನಗಳನ್ನೂ ಬರೆದರು.

ಭಾರತವು ಶಕ್ತ ಹಾಗೂ ಪ್ರಬಲ ರಾಷ್ಟ್ರವಾಗಿ ರೂಪುಗೊಳ್ಳಬೇಕೆಂಬುದು ನಿವೇದಿತಾ ಅವರ ಪ್ರಬಲ ಆಕಾಂಕ್ಷೆಯಾಗಿತ್ತು. ಅವರ ಭಾರತಪ್ರೇಮ ಅಸದೃಶವಾದದ್ದು.

ನಿವೇದಿತಾ 1911ರ ಅಕ್ಟೋಬರ್ 13ರಂದು ಡಾರ್ಜಿಲಿಂಗ್‌ನಲ್ಲಿ ಮೃತರಾದರು. ಅಲ್ಲಿ 'ತಮ್ಮೆಲ್ಲವನ್ನೂ ಭಾರತಕ್ಕೆ ನೀಡಿದ ಸೋದರಿ ನಿವೇದಿತಾ ಇಲ್ಲಿ ವಿಶ್ರಾಂತರು' ಎಂಬ ಸ್ಮಾರಕ ಲೇಖವಿದೆ.

1968ರಲ್ಲಿ ಸೋದರಿ ನಿವೇದಿತಾ ಶತಮಾನೋತ್ಸವ ಜರಗಿತು.

ನೋಡಿ : ವಿವೇಕಾನಂದ

ನೀಲಂ ಸಂಜೀವರೆಡ್ಡಿ

1969ರಲ್ಲಿ ಕಾಂಗ್ರೆಸ್ಸಿನ ಕೆಲವು ಮುಖಂಡರು ಲೋಕಸಭೆಯ ಅಧ್ಯಕ್ಷರಾಗಿದ್ದ ಸಂಜೀವ ರೆಡ್ಡಿ ರಾಷ್ಟ್ರಪತಿ ಪದವಿಗೆ ಅಭ್ಯರ್ಥಿಯಾಗಬೇಕು ಎಂದರು. ಉಪರಾಷ್ಟ್ರಪತಿಯಾಗಿದ್ದು ತಾತ್ಕಾಲಿಕವಾಗಿ ಅಧ್ಯಕ್ಷರ ಕಾರ್ಯ ನಿರ್ವಹಿಸುತ್ತಿದ್ದ ವಿ. ವಿ. ಗಿರಿಯವರೂ ಆ ಸ್ಥಾನಕ್ಕೆ ಸ್ಪರ್ಧಿಯಾದರು. ರೆಡ್ಡಿ–ಗಿರಿ–ಸಿ. ಡಿ. ದೇಶಮುಖ್–ಇವರ ನಡುವೆ ಸ್ಪರ್ಧೆ ನಡೆದು ಗಿರಿ ವಿಜಯಿಯಾದರು.

ನೀಲಂ ಸಂಜೀವ ರೆಡ್ಡಿ ಆಂಧ್ರಪ್ರದೇಶ ಕಾಂಗ್ರೆಸ್ಸಿನ ಜನಪ್ರಿಯ ಮುಖಂಡರಾಗಿದ್ದರು. ಹಲವು ಹಿರಿಯ ಸ್ಥಾನಗಳಲ್ಲಿ ಕಾರ್ಯ ನಿರ್ವಹಿಸಿ ಅವರು ಖ್ಯಾತರಾಗಿದ್ದವರು. ಮದರಾಸು ವಿಧಾನಸಭೆಯ ಸದಸ್ಯರಾಗಿ. ಮದರಾಸು ಮಂತ್ರಿಮಂಡಲದ ಸದಸ್ಯರಾಗಿ, ಆಂಧ್ರ ಪ್ರದೇಶ ಕಾಂಗ್ರೆಸ್ ಸಮಿತಿಯ ಮುಖಂಡರಾಗಿ. ಆಂಧ್ರಪ್ರದೇಶದ ಮುಖ್ಯಮಂತ್ರಿಯಾಗಿ. ಕೇಂದ್ರ ಸಂಪುಟದಲ್ಲಿ ಮಂತ್ರಿಯಾಗಿ. ಅವರು ಜನಪ್ರಿಯತೆ ಗಳಿಸಿದ್ದರು. ಅವರು ಸ್ವಲ್ಪ ಕಾಲ ಕಾಂಗ್ರೆಸ್ಸಿನ ಅಧ್ಯಕ್ಷರೂ ಆಗಿದ್ದರು. 1967ರಿಂದ 1969ರ ತನಕ ಲೋಕಸಭೆಯ ಅಧ್ಯಕ್ಷರಾಗಿ ದಕ್ಷರೆನಿಸಿದ ನೀಲಂ, ರಾಷ್ಟ್ರದ ಅತ್ಯುಚ್ಚ ಸ್ಥಾನಕ್ಕೆ ಸ್ಪರ್ಧಿಸಲು ನಿರ್ಧರಿಸಿದಾಗ, ಲೋಕಸಭೆಯ ಅಧ್ಯಕ್ಷ ಸ್ಥಾನವನ್ನು ತ್ಯಜಿಸಿದರು.



ಒರಿಯ ಸ್ಥಾನಗಳು : ನೀಲಂ

1913 ಮೇ 19ರಂದು ನೀಲಂ ಸಂಜೀವ ರೆಡ್ಡಿ ಅವರು ಆಂಧ್ರಪ್ರದೇಶದ ಇಲ್ಲೂರಿನಲ್ಲಿ ಜನಿಸಿದರು. ವಿದ್ಯಾಭ್ಯಾಸ ಪಡೆದದ್ದು ಮದರಾಸು ಮತ್ತು ಅನಂತಪುರಗಳಲ್ಲಿ. 1969ರಲ್ಲಿ ರಾಷ್ಟ್ರಪತಿ ಸ್ಥಾನಕ್ಕೆ ಸ್ಪರ್ಧಿಸಿ ಸೋತ ಮೇಲೆ ಸಕ್ರಿಯ ರಾಜಕಾರಣದಿಂದ ತುಸು ಓಂದಕ್ಕೆ ಸರಿದು ಅನಂತಪುರದಲ್ಲಿ ನೆಲೆಸಿದರು.

ನೀಲಗಿರಿ

ನೋಡಿ : ಉದಕಮಂಡಲ

ನೂನಿಜ್

"ಕೋಟೆ ಕೊತ್ತಳಗಳು ನಿರ್ಮಾಣಗೊಂಡು ನಗರ ಬೆಳೆಯುತ್ತಿದ್ದರೂ ನೀರಿನ ಅಭಾವ ಇದ್ದಿತು. ಆಗ ರಾಜನು ಐದು ಹರದಾರಿ (20 ಮೈಲು) ದೂರದಲ್ಲಿದ್ದ ನದಿಗೆ ಅಣೆಕಟ್ಟು ಕಟ್ಟಿಸಿ ಕಾಲುವೆ ಮೂಲಕ ನೀರು ಹರಿಸಿದ. ಉಪಕಾಲುವೆಗಳ ಮೂಲಕ ನಗರದ ಎಲ್ಲ ಭಾಗಗಳಿಗೂ ನೀರು ಬಂತು. ಹಣ್ಣು. ಹಂಪಲು. ಹೂ ತೋಟಗಳು ಹೇರಳವಾಗಿ ಬೆಳೆದುವು.

—ಇದು ಪೋರ್ಚುಗೀಸ್ ವ್ಯಾಪಾರಿ ಫರ್ನಾಂವ್ ನೂನಿಜ್ ವಿಜಯನಗರದ ಅರಸರ ಸಾಧನೆಯ ಬಗೆಗೆ ಪ್ರಸ್ತಾಪಿಸಿರುವ ವಿಷಯ.

ವಿಜಯನಗರವನ್ನು ಅಚ್ಯುತರಾಯ (ರಾಜ್ಯಭಾರ :1530-42) ಆಳುತ್ತಿದ್ದ ಕಾಲ. ವರ್ತಕ ನೂನಿಜ್ ವಿಜಯನಗರಕ್ಕೆ ಕುದುರೆ ವ್ಯಾಪಾರಕ್ಕಾಗಿ ಬಂದ.

ಸಾಮ್ರಾಜ್ಯ ಸ್ಥಾಪನೆಯಿಂದ ಮೊದಲ್ಗೊಂಡು ತಾನು ಕಂಡ ಕಾಲದವರೆಗೆ ಆಳಿದ ರಾಜರ ಅನುಕ್ರಮ. ಸಾಧನೆಗಳ ಬಗೆಗೆ ತಾನು ಕೇಳಿದ ಸಂಗತಿಗಳನ್ನು ನೂನಿಜ್ ಬರೆದಿದ್ದಾನೆ.

—'ದೇವರಾವ್' ನಿಗೆ (ಇಮ್ಮಡಿ ದೇವರಾಯ : 1419—44) ವಿಲೋನಿನ ರಾಜನು ಕಪ್ಪಕಾಣಿಕೆ ಸಲ್ಲಿಸುತ್ತಿದ್ದ... 'ನರಸಿಂಗುವಾ' (ನರಸಿಂಹ) ಅರಬ ದೇಶದ ಕುದುರೆಗಳಿಗಾಗಿ ಅಪಾರ ವೆಚ್ಚ ಮಾಡಿದ... ಆ ಕುದುರೆ ವ್ಯಾಪಾರಿಗಳನ್ನು ಪ್ರೋತ್ಸಾಹಿಸುವುದಕ್ಕಾಗಿ. ಕುದುರೆಗಳು ದಾರಿಯಲ್ಲೇ ಸತ್ತರೂ ಅವುಗಳ ಬೆಲೆ ಕೊಡುತ್ತಿದ್ದ...ಒಬ್ಬ ವ್ಯಾಪಾರಿ ಕುದುರೆಗಳಿಗಾಗಿ ಕೃಷ್ಣದೇವರಾಯನಿಂದ ಮುಂಗಡ ಹಣ ತೆಗೆದುಕೊಂಡು.

ಅನಂತರ ವಂಚಿಸಿ. 'ರಾಚೋಲಿ' (ರಾಯಚೂರು) ಸುಲ್ತಾನನ್ನು ಆಶ್ರಯಿಸಿದಾಗ, ಅದನ್ನು ನೆಪಮಾಡಿ, ರಾಯನು ಸುಲ್ತಾನನ ಮೇಲೆ ಯುದ್ಧಹೂಡಿ ಅವನನ್ನು ಸದೆಬಡಿದ ...ದಂಡು ಬೀಡು ಬಿಟ್ಟಿದ್ದ ಸ್ಥಳ ಬೆಂಗಾಡಾಗಿದ್ದರೂ ಇವರು ಮಾಡಿಕೊಂಡ ಸುವ್ಯವಸ್ಥೆಯಿಂದಾಗಿ ಅದು ಇನ್ನೊಂದು ಬಿಸ್ನಗರವೋ (ವಿಜಯನಗರ) ಎನ್ನುವಂತಿತ್ತು ... ಕೃಷ್ಣ ದೇವರಾಯನ ಸೈನ್ಯದ ಜೊತೆ ಕ್ರಿಸ್ಟಾಂವ್-ದ-ಫಿಗೆರೆಡೊ ನಾಯಕತ್ವದಲ್ಲಿ ಫಿರಂಗಿಗಳ ಸಹಿತ ಪೋರ್ಚುಗೀಸ್ ಸೈನ್ಯವೂ ಬಂದು ಪಾಲ್ಗೊಂಡಿತ್ತು...'ನಾಗಲಾಪುರ' (ಈಗ ಹೊಸಪೇಟೆ) ಬಳಿ ದೊಡ್ಡ ಕೆರೆಯೊಂದನ್ನು ನಿಪುಣರಾದ ಪೋರ್ಚುಗೀಸ್ ಕೆಲಸಗಾರರ ಸಹಾಯದಿಂದ ನಿರ್ಮಿಸಲಾಯಿತು...

—ವಿಜಯನಗರ ಅರಮನೆಯ ಪಾತ್ರೆ, ಉಪಕರಣಗಳು ಚಿನ್ನ, ಬೆಳ್ಳಿಯವು. ಹಾಸಿಗೆ, ದಿಂಬುಗಳಿಗೆ ಮುತ್ತುಗಳ ಅಂಚುಕಟ್ಟು. ಮಂಚ, ಪಲ್ಲಕ್ಕಿಗಳಿಗೆ ಚಿನ್ನ, ಬೆಳ್ಳಿ ಅಲಂಕಾರ...ರಾಜನ ಮಾತು. ಆಜ್ಞೆಗಳನ್ನೆಲ್ಲ ಬರೆದುಕೊಳ್ಳಲು ಸದಾ ಒಬ್ಬ ಗುಮಾಸ್ತ ಜೊತೆಯಲ್ಲಿರುತ್ತಿದ್ದ...

ನೂನಿಜ್‌ನದು ಚಾರಿತ್ರಿಕ ದಾಖಲೆಗಳ ಸಂಗ್ರಹ. ನೂನಿಜ್ ಬಂದ ಕಾಲದಲ್ಲಿ ರಾಜ್ಯಭಾರ ಹದಗೆಟ್ಟಿತ್ತು. ಸದ್ಯದಲ್ಲೇ ಸಾಮ್ರಾಜ್ಯ ಪತನಗೊಳ್ಳಬಹುದೆಂದು ಜನ ಹೇಳುತ್ತಾರೆ—ಎಂದು ಅವನು ಬರೆದ ಮಾತು ಮುಂದೆ ಸ್ವಲ್ಪ ಕಾಲದಲ್ಲೇ ನಿಜವಾಯಿತು.

ಬಾರೊಸ್. ಪೋರ್ಚುಗೀಸ್ ವಸಾಹತುಗಳ ಇತಿಹಾಸ ರಚಿಸುತ್ತಿದ್ದಾಗ ವಿಜಯನಗರದ ಬಗೆಗೆ ಪ್ರವಾಸಿ ಪಾಯೆಸ್ ಮತ್ತು ನೂನಿಜ್ ಬರೆದ ವಿಷಯಗಳನ್ನು ಗೋಪ್ಯವಾಗಿ ತರಿಸಿಕೊಂಡು ತನ್ನ ಕೃತಿಯಲ್ಲಿ ಸೇರಿಸಿದ. ಪಾಯೆಸ್ ಮತ್ತು ನೂನಿಜ್‌ರ (ಪೋರ್ಚುಗೀಸ್ ಭಾಷೆಯ) ಮೂಲ ಬರೆಹಗಳು ಒಟ್ಟಿಗೆ ಸೇರಿಸಲ್ಪಟ್ಟ ಒಂದು ಕೃತಿ 19ನೆಯ ಶತಮಾನದ ಅಂತ್ಯಭಾಗದಲ್ಲಿ ಪ್ರಕಟವಾಯಿತು.

ನೋಡಿ : ಕೃಷ್ಣದೇವರಾಯ ; ಪಾಯೆಸ್ ; ವಿಜಯನಗರ

ನೂರ್ ಜಹಾನ್

ಒಮ್ಮೆ ಶ್ರೀಮಂತನಾಗಿದ್ದು ಬಡತನಕ್ಕೆ ಬಲಿಯಾದ ಮಿರ್ಜಾ ಘಿಯಾಸ್ ಬೇಗ್ ಪರ್ಷಿಯದಿಂದ ಭಾರತಕ್ಕೆ ವಲಸೆ ಬಂದ. ಅಕ್ಬರನ ಆಸ್ಥಾನದಲ್ಲಿ ಕೆಲಸಕ್ಕೆ ಸೇರಿದ. ಮುಂದೆ ನೂರ್ ಜಹಾನ್ ಎಂದು ಪ್ರಖ್ಯಾತಳಾದ ಮೆಹರುನ್ನೀಸ ಇವನ ಮಗಳು.

ಅವಳು 17 ವಯಸ್ಸಿನವಳಾಗಿದ್ದಾಗ ಅಲಿ ಕುಲಿಬೇಗ್ ಇಸ್ತಾಜಿ ಎಂಬಾತನೊಂದಿಗೆ ಅವಳ ವಿವಾಹವಾಯಿತು. ಅಕ್ಬರನ ಮಗ ಸಲೀಮ್, ಜಹಾಂಗೀರ್ ಎಂಬ ಹೆಸರಿನಿಂದ ಚಕ್ರವರ್ತಿ ಆದ ಮೇಲೆ, ಅಲಿ ಕುಲಿ ಬಂಗಾಳದಲ್ಲಿರುವ ಬರ್ದ್‌ವಾನ್‌ನ ಜಹಗೀರುದಾರನಾಗಿ ನೇಮಕಗೊಂಡ. ಅದರೆ ಅಲಿ ಕುಲಿಯ ನಿಷ್ಠೆಯ ಬಗೆಗೆ ಶಂಕಿಸಿದ ಜಹಾಂಗೀರ್ ಅತನನ್ನು ಸೆರೆಹಿಡಿದು ತರಲು ಸೇನೆ ಕಳುಹಿಸಿದ. ಈ ಸಂಬಂಧದಲ್ಲಿ ನಡೆದ ಹೋರಾಟದಲ್ಲಿ ಅಲಿ ಕುಲಿ ಮೃತನಾದ. ಮೆಹರುನ್ನೀಸಳನ್ನು ಅವಳ ಚಿಕ್ಕ ಮಗಳೊಂದಿಗೆ ದೆಹಲಿಗೆ ಕರೆತರಲಾಯಿತು.

ನಾಲ್ಕು ವರ್ಷಗಳ ಅನಂತರ ಜಹಾಂಗೀರ್ ಮೆಹರುನ್ನೀಸಳನ್ನು ಕಂಡಾಗ ಅವಳ ಸೌಂದರ್ಯದಿಂದ ಆಕರ್ಷಿತನಾದ : 1611ರ ಮೇ ತಿಂಗಳಲ್ಲಿ ಅವಳನ್ನು ಮದುವೆಯಾದ. ಪಟ್ಟದರಸಿಯನ್ನಾಗಿ ಮಾಡಿದ. ಅವಳನ್ನು ನೂರ್ ಮಹಲ್ (ಅರಮನೆಯ ಬೆಳಕು) ಎಂದು ಕರೆದ. ಸ್ವಲ್ಪ ಕಾಲಾನಂತರ ನೂರ್ ಜಹಾನ್ (ಪ್ರಪಂಚದ ಬೆಳಕು) ಎಂದು ಆ ಹೆಸರನ್ನು ಬದಲಾಯಿಸಿದ. ನೂರ್ ಜಹಾನ್ ರಸಿಕಳು ; ಪಾರಸೀ ಸಾಹಿತ್ಯವನ್ನು ಅಭ್ಯಾಸ ಮಾಡಿದ್ದಳು. ಕಲಾವಿದೆಯೂ ಆಗಿದ್ದಳು. ಒಳ್ಳೆಯ ಬುದ್ಧಿವಂತೆ ಕೂಡ. ಎಲ್ಲ ವಿಚಾರದಲ್ಲೂ ಅವಳು ಜಹಾಂಗೀರನಿಗೆ ಸಲಹೆ ಕೊಡುತ್ತಿದ್ದಳು. ಅವನು ಅವಳೊಡನೆ ಸಮಾಲೋಚಿಸದೆ ಮಹತ್ವದ ನಿರ್ಣಯಗಳನ್ನು ತೆಗೆದುಕೊಳ್ಳುತ್ತಿರಲಿಲ್ಲ.



' ಪ್ರಪಂಚದ ಬೆಳಕು '

ಕಾಲಕ್ರಮದಲ್ಲಿ ನೂರ್ ಜಹಾನಳ ಪ್ರಭಾವ ಬೆಳೆಯಿತು. ಆಡಳಿತ ಆಕೆಯ ಕೈಗೆ ಬಂತು. ರಾಜಾಜ್ಞೆಗಳು ಕೂಡ ಆಕೆಯ ಹೆಸರಿನಲ್ಲೇ ಹೊರಬೀಳುವಂತಾಯಿತು. ನಾಣ್ಯಗಳಲ್ಲಿ ಜಹಾಂಗೀರನೊಡನೆ ಆಕೆಯ ಚಿತ್ರವೂ ಅಚ್ಚಾಗತೊಡಗಿತು.

ಆ ಕಾಲಕ್ಕೆ ಜಗತ್ತಿನ ಹಿರಿದಾದ ಚಕ್ರಾಧಿಪತ್ಯವನ್ನು ಮಹತ್ವಾಕಾಂಕ್ಷಿಯಾದ ನೂರ್ ಜಹಾನ್ 11 ವರ್ಷ ಕಾಲ ದಕ್ಷತೆಯಿಂದ ಆಳಿದಳು. 1627ರಲ್ಲಿ ಜಹಾಂಗೀರ್ ಮರಣಾನಂತರ ಅವಳ ಪ್ರಭಾವ ತಗ್ಗಿತು. 1646ರಲ್ಲಿ ಅವಳು ಮರಣ ಹೊಂದಿದಳು.

ನೃಪತುಂಗ

ನೋಡಿ : ಸಂಪುಟ ೧

ನೆಲಿ ಸೇನ್‌ಗುಪ್ತ

ತಾಯ್ನಾಡಾದ ಇಂಗ್ಲೆಂಡನ್ನು ತೊರೆದು, ಭಾರತವನ್ನೇ ಮಾತೃಭೂಮಿಯಾಗಿ ಸ್ವೀಕರಿಸಿ, ಭಾರತೀಯ ಸ್ವಾತಂತ್ರ್ಯ ಸಂಗ್ರಾಮದಲ್ಲಿ ದೀರ್ಘ ಕಾಲ ಪಾಲ್ಗೊಂಡು ನಾನಾ ವಿಧವಾದ ಕಷ್ಟನಷ್ಟಗಳನ್ನು ಅನುಭವಿಸಿದ ವೀರ ಮಹಿಳೆ, ನೆಲಿ ಸೇನ್‌ಗುಪ್ತ.

ನೆಲಿ ಹುಟ್ಟಿದ್ದು ಇಂಗ್ಲೆಂಡಿನ ಕೇಂಬ್ರಿಜ್‌ನಲ್ಲಿ ; 1890ರಲ್ಲಿ. ಆಕೆಯ ತಂದೆ ಗ್ರೇ ಅವರಿಗೆ ಭಾರತೀಯ ವಿದ್ಯಾರ್ಥಿಗಳೆಂದರೆ ಬಹಳ ಮಮತೆ. ಅನೇಕ ಮಂದಿ ಭಾರತೀಯ ವಿದ್ಯಾರ್ಥಿಗಳು ಅವರ ಪರಿಚಯ ಮಾಡಿಕೊಂಡಿದ್ದರು. ಜತೀಂದ್ರ ಮೋಹನ ಸೇನ್‌ಗುಪ್ತ ಇಂಥವರಲ್ಲಿ ಒಬ್ಬರು. ಇಂಗ್ಲೆಂಡಿನಲ್ಲಿದ್ದಾಗ ಸೇನ್‌ಗುಪ್ತರಿಗೂ ನೆಲಿಯವರಿಗೂ ಸ್ನೇಹವಾಯಿತು. 1909ರಲ್ಲಿ ಅವರು ಆಕೆಯನ್ನು ವಿವಾಹ ಮಾಡಿಕೊಂಡರು. ತಮ್ಮೊಡನೆ ಭಾರತಕ್ಕೆ ಕರೆದುಕೊಂಡು ಬಂದರು.

ನೆಲಿ-ಜತೀಂದ್ರರ ದಾಂಪತ್ಯ ಆದರ್ಶ ರೀತಿಯದು. ಕಷ್ಟಸುಖಗಳೆರಡರಲ್ಲಿಯೂ ನೆಲಿ ತನ್ನ ಪತಿಯನ್ನು ನೆರಳಿನಂತೆ ಅನುಸರಿಸಿದರು. ದೇಶಭಕ್ತ ಜತೀಂದ್ರರು ಸತ್ಯಾಗ್ರಹಿಯಾಗಿ ಹೋರಾಡುತ್ತಿದ್ದಾಗಲೂ ಆಕೆ ಹಿಂಜರಿಯಲಿಲ್ಲ. ಪತಿ ಜೈಲಿಗೆ ಹೋದಾಗ ನೆಲಿ ಅವರ ಸ್ಥಾನದಲ್ಲಿ ನಿಂತು ಅವರ ಕಾರ್ಯವನ್ನು ಮುಂದುವರಿಸುತ್ತಿದ್ದರು. ... ನಡೆದ ... ತನ್ನ ... ದಲ್ಲಿ ...



ಜತೀಂದ್ರ



ನೆಲಿ

ಸ್ವತಃ ಖಾದಿ ತೊಡುತ್ತಿದ್ದರು: ಖಾದಿಯನ್ನು ಹೊತ್ತು ಮನೆ ಮನೆಗೆ ಹೋಗಿ ಅವರ ಮಾರಾಟ ಮಾಡುತ್ತಿದ್ದರು. 1930ರಲ್ಲಿ ಸತ್ಯಾಗ್ರಹ ಚಳುವಳಿಯನ್ನು ಬಂಗಾಳದಲ್ಲಿ ಯಶಸ್ವಿಯಾಗಿ ಸಂಘಟಿಸಿದ ಕೀರ್ತಿ ಈ ದಂಪತಿಗೆ ಸೇರಿದ್ದು. ಈ ಸಂಘಟನಾ ಕಾರ್ಯ ಎಷ್ಟು ಬಿರುಸಾಗಿತ್ತೆಂದರೆ ಚಳುವಳಿಗೆ ಮೊದಲೇ ಬರ್ಮಾದಲ್ಲಿ ನೆಲಿಯವರ ದಸ್ತಗಿರಿಯಾಯಿತು: ಅಲ್ಲಿಂದ ಕಲ್ಕತ್ತೆಗೆ ಬಂದಾಗ ಮತ್ತೆ ಬಂಧನ. ಅವರು ಹೊರಬರುವ ಹೊತ್ತಿಗೆ ಪತಿ ಬಂಧಿತರಾಗಿದ್ದರು. ಸೆರೆಮನೆಯಲ್ಲಿ ಸತ್ಯಾಗ್ರಹಿಗಳ ಸ್ಥಿತಿ ನೆಟ್ಟಗಿಲ್ಲವೆಂದು ತಿಳಿದು ಬಂದಾಗ, ನೆಲಿ ಸೆರೆಮನೆಯ ಮುಂದೆಯೇ ಸತ್ಯಾಗ್ರಹ ನಡೆಸಿದರು. ಸೇನ್‌ಗುಪ್ತರು ಸೆರೆಮನೆಯಿಂದ ಬಿಡುಗಡೆ ಹೊಂದಿದೊಡನೆಯೇ ಅವರೊಡನೆ ಪಂಜಾಬಿಗೆ ಹೋದರು. ಜಲಿಯನ್‌ವಾಲಾ ಬಾಗ್‌ನಲ್ಲಿ ಭಾಷಣ ಮಾಡಿದ್ದಕ್ಕಾಗಿ ಸೇನ್‌ಗುಪ್ತರ ಬಂಧನವಾಯಿತು. ದೆಹಲಿಯಲ್ಲಿ ಭಾಷಣ ಮಾಡಿದ್ದಕ್ಕಾಗಿ ನೆಲಿಯವರನ್ನು ಸೆರೆಹಿಡಿದರು.

ಕಾರಾಗೃಹದಿಂದ ಹಿಂದಿರುಗುವ ಹೊತ್ತಿಗೆ, ಸೇನ್‌ಗುಪ್ತರ ದೇಹಸ್ಥಿತಿ, ಆರ್ಥಿಕ ಸ್ಥಿತಿ ಎರಡೂ ಹದಗೆಟ್ಟಿದ್ದುವು. ನೆಲಿ ಅವರೊಡನೆ 1931ರಲ್ಲಿ ಇಂಗ್ಲೆಂಡಿಗೆ ಹೋದರು: 1932ರಲ್ಲಿ ಭಾರತಕ್ಕೆ ಹಿಂದಿರುಗಿದ ಮೇಲೆ ಜತೀಂದ್ರ ಸೇನ್‌ಗುಪ್ತ ಕಾಲವಾದರು. ಪತಿ ವಿಯೋಗದ ದುಃಖ, ಆರ್ಥಿಕ ಮುಗ್ಗಟ್ಟು, ಮಕ್ಕಳ ವಿದ್ಯಾಭ್ಯಾಸ ಸಮಸ್ಯೆ ಇವೆಲ್ಲವನ್ನೂ ನೆಲಿ ಎದುರಿಸಬೇಕಾಯಿತು. ಇಂಥ ಪ್ರತಿಕೂಲ ಪರಿಸ್ಥಿತಿಯಲ್ಲೂ ಅವರು ರಾಜಕೀಯ ಚಟುವಟಿಕೆಗಳನ್ನು ನಿಲ್ಲಿಸಲಿಲ್ಲ.

ಸರಕಾರದವರು ಅಕ್ರಮ ಸಂಸ್ಥೆಯೆಂದು ಘೋಷಿಸಿದ್ದ ಕಾಂಗ್ರೆಸ್ಸಿನ ಅಧಿವೇಶನ 1933ರಲ್ಲಿ ಕಲ್ಕತ್ತೆಯಲ್ಲಿ ನಡೆದಾಗ ನೆಲಿಯವರು ಅದರ ಅಧ್ಯಕ್ಷತೆ ವಹಿಸಿದರು. ಪೋಲೀಸರ ಲಾಠೀ ಪ್ರಹಾರದಿಂದ ಅಧಿವೇಶನದಲ್ಲಿ ರಕ್ತ ಹರಿದರೂ ಅವರು ವಿಚಲಿತರಾಗದೆ ಕಾರ್ಯ ನಡೆಸಿದರು. "ನಾವು ನಮ್ಮ ರಕ್ತದಿಂದ ಭಾರತದ ಇತಿಹಾಸ 'ಬರೆಯುತ್ತಿದ್ದೇವೆ," ಎಂದು ಘೋಷಿಸಿ, ಅಧಿವೇಶನದ ಪ್ರತಿನಿಧಿಗಳನ್ನು ಹುರಿದುಂಬಿಸಿದರು.

'ರಕ್ತಮಯ ಕಾಂಗ್ರೆಸ್ಸಿನ ವೀರರಮಣಿ' ಎಂದು ವರ್ಣಿಸಲ್ಪಟ್ಟಿದ್ದಾರೆ, ನೆಲಿ ಸೇನಗುಪ್ತ.

ಹೀಗೆ ಅಪೂರ್ವ ಶ್ರದ್ಧೆಯಿಂದ ಭಾರತದ ಸೇವೆ ಸಲ್ಲಿಸಿದ ನೆಲಿ ಸೇನ್‌ಗುಪ್ತ 1973 ಅಕ್ಟೋಬರ್ 23ರಂದು ಚಿತ್ತಗಾಂಗ್‌ನಲ್ಲಿ ನಿಧನರಾದರು.

ನೋಡಿ : ಸೇನ್‌ಗುಪ್ತ

ನೆಹರೂ ಪ್ರಶಸ್ತಿ

ಭಾರತೀಯ ಸಾಂಸ್ಕೃತಿಕ ಬಾಂಧವ್ಯ ಮಂಡಲಿ ಶಾಂತಿ ಸಾಧನೆ ಮತ್ತು ಅಂತರರಾಷ್ಟ್ರೀಯ ತಿಳಿವಳಿಕೆಗಾಗಿ ನೀಡುವ ಅಂತರರಾಷ್ಟ್ರೀಯ ಪ್ರಶಸ್ತಿ ಜವಾಹರಲಾಲ್ ನೆಹರೂ ಪ್ರಶಸ್ತಿ. ಈ ಪ್ರಶಸ್ತಿ ಪ್ರದಾನ 1966ರಲ್ಲಿ ಆರಂಭವಾಯಿತು.

ಅಂತರರಾಷ್ಟ್ರೀಯ ಶಾಂತಿ ತಿಳಿವಳಿಕೆ, ಸೌಹಾರ್ದ, ಸಖ್ಯಕ್ಕಾಗಿ ಶ್ರಮಿಸುವ ಯಾವುದೇ ದೇಶ, ಜಾತಿ, ಮತದ ಸ್ತ್ರೀಯಾಗಲೀ ಪುರುಷನಾಗಲೀ ಈ ಪ್ರಶಸ್ತಿ ಪಡೆಯಲು ಅರ್ಹರು. ವಿಜೇತರಿಗೆ ಒಂದು ಲಕ್ಷ ರೂಪಾಯಿ ನಗದು ಹಣ ಹಾಗೂ ಒಂದು ಪ್ರಶಸ್ತಿ ಪತ್ರ ನೀಡುತ್ತಾರೆ. ಈ ಪ್ರಶಸ್ತಿಗೆ ಇಬ್ಬರು ಅರ್ಹರೆಂದು ನಿರ್ಣಾಯಕ ಸಮಿತಿ ನಿರ್ಧರಿಸಿದರೆ ಅವರ ನಡುವೆ ಪ್ರಶಸ್ತಿ ಹಣವನ್ನು ಹಂಚುತ್ತಾರೆ.

ಇದುವರೆಗೆ ನೆಹರೂ ಪ್ರಶಸ್ತಿ ಪಡೆದವರು : ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಉ ಥಾಂಟ್ (1966) : ಅಮೆರಿಕದ ನೀಗ್ರೊ ನಾಯಕ ಡಾ. ಮಾರ್ಟಿನ್ ಲೂಥರ್ ಕಿಂಗ್ (1968) (ಮರಣಾನಂತರ ನೀಡಲಾಯಿತು); ಗಡಿನಾಡಿನ ಗಾಂಧೀ ಖಾನ್ ಅಬ್ದುಲ್ ಗಫರ್ ಖಾನ್ (1969) : ಖ್ಯಾತ ಪಿಟೀಲುವಾದಕ ಯೆಹೂದಿ ಮೆನೂಹಿನ್ (1970) : ಮದರ್ ಥೆರೇಸ (1971) ; ಕೆನೆತ್ ಕೌಂಡ (1972) : ಮಾರ್ಷಲ್ ಟಿಟೊ (1973).

ನೇತಾಜಿ ಸುಭಾಷ್ ರಾಷ್ಟ್ರೀಯ ಕ್ರೀಡಾ ಸಂಸ್ಥೆ

ನೋಡಿ : ಸಂಪುಟ ೬


ನೇಪಾಳ

ಭಾರತ, ನೇಪಾಳಗಳ ಸಾಂಸ್ಕೃತಿಕ ಸಂಬಂಧ ಪುರಾತನವಾದದ್ದು. ಆದ್ದರಿಂದ ಅನೇಕ ಅಂಶಗಳಲ್ಲಿ ಈ ಎರಡು ರಾಷ್ಟ್ರಗಳ ಜೀವನ ವಿಧಾನದಲ್ಲಿ ಸಾಮ್ಯವನ್ನು ಕಾಣಬಹುದು. ಇವೆರಡೂ ಇಂದಿಗೂ ತಮ್ಮ ಪರಸ್ಪರ ಸ್ನೇಹಸಂಬಂಧವನ್ನು ಉಳಿಸಿಕೊಂಡಿವೆ.

ಇಂದಿನ ಕಠ್ಮಂಡು ಇರುವ ಕಣಿವೆ ಪ್ರದೇಶವನ್ನೇ ಮೊದಲಿಗೆ ನೇಪಾಳ ಕಣಿವೆ ಎಂದು ಕರೆಯಲಾಗುತ್ತಿತ್ತು. ಈಗ ಈ ಹೆಸರು ಇಡೀ



ತಾರಾ : 17ನೆಯ ಶತಮಾನದ ನೇಪಾಳೀ ಕೃತಿ



ನೇಪಾಳದಲ್ಲಿ ಜಾತ್ರೆ

ದೇಶಕ್ಕೆ ಅನ್ವಯಿಸುತ್ತದೆ. ಹಿಮಾಲಯದ ದಕ್ಷಿಣ ತಪ್ಪಲಿನಲ್ಲಿ 500 ಮೈಲು ದೀರ್ಘವಾಗಿ ಹಬ್ಬಿದೆ, ನೇಪಾಳ. ಪ್ರಪಂಚದ ಅತ್ಯುನ್ನತ ಶಿಖರ ಎವರೆಸ್ಟ್ ಹಾಗೂ ಇತರ ಉನ್ನತ ಶಿಖರಗಳಾದ ಕಾಂಚನಗಂಗಾ, ಮಕಾಲು, ಧವಳಗಿರಿ ಮತ್ತು ಅನ್ನಪೂರ್ಣಾ ನೇಪಾಳದಲ್ಲಿ ಇವೆ. ಈ ದೇಶದ ರಾಜಧಾನಿ ಕಠ್ಮಂಡು.

18ನೆಯ ಶತಮಾನಕ್ಕೆ ಮೊದಲು ಇದ್ದ ಚಿಕ್ಕಪುಟ್ಟ ರಾಜ್ಯಗಳೆಲ್ಲವನ್ನು ಪೃಥ್ವಿ ನಾರಾಯಣ ಷಹಾ ಎಂಬ ಗೂರ್ಖಾ ದೊರೆ 1768ರಲ್ಲಿ ತನ್ನ ಅಧೀನಕ್ಕೆ ತೆಗೆದುಕೊಂಡು ನೇಪಾಳವನ್ನು ಒಂದು ರಾಜ್ಯವಾಗಿ ಸಂಘಟಿಸಿದ. ಗೂರ್ಖರು ಟಿಬೆಟನ್ನು ಆಕ್ರಮಿಸಲು ಹೋಗಿ ಚೀನದ ಅವಕೃಪೆಗೆ ಪಾತ್ರರಾದರು. 1814ರ ವೇಳೆಗೆ ಸಟ್ಲೆಜ್ ನದಿಯವರೆಗೆ, ಗಂಗಾನದಿಯ ಬಯಲು ಪ್ರದೇಶದಲ್ಲಿ ಸ್ವಲ್ಪಭಾಗವನ್ನು ಆಕ್ರಮಿಸಿಕೊಂಡಿದ್ದರು. ಆಗ ಭಾರತದಲ್ಲಿ ಪ್ರಬಲಗೊಳ್ಳುತ್ತಿದ್ದ ಬ್ರಿಟಿಷರಿಗೂ ಗೂರ್ಖರಿಗೂ 1814-1816 ಅವಧಿಯಲ್ಲಿ ಯುದ್ಧ ವಾಯಿತು. ಗೂರ್ಖರು ಸೋತರು; ಬ್ರಿಟಿಷರೊಡನೆ ಒಪ್ಪಂದ ಮಾಡಿಕೊಂಡರು.

ನೇಪಾಳದಲ್ಲಿ ರಾಣಾಗಳ ನಿರಂಕುಶ ಪ್ರಭುತ್ವ ಬಹಳ ಕಾಲ ನಡೆಯಿತು. 1947ರಲ್ಲಿ ಭಾರತಕ್ಕೆ ಸ್ವಾತಂತ್ರ್ಯ ಬಂದಾಗ ಅದು ನೇಪಾಳದ ಮೇಲೆಯೂ ಪ್ರಭಾವ ಬೀರಿತು. ಅಲ್ಲಿಯ ಜನ ನಿರಂಕುಶ ಪ್ರಭುತ್ವವನ್ನು ವಿರೋಧಿಸಿದರು. ಕ್ರಾಂತಿ ಪರಿಸ್ಥಿತಿ ಏರ್ಪಟ್ಟಿತು. 1950ರಲ್ಲಿ ನೇಪಾಳದ ರಾಜಾ ತ್ರಿಭುವನರು ಭಾರತದಲ್ಲಿ ಆಶ್ರಯ ಪಡೆದರು. ಅನಂತರ ದೇಶಕ್ಕೆ ಮರಳಿ ಸಂವಿಧಾನಬದ್ಧ ರಾಜಪ್ರಭುತ್ವವನ್ನು ಒಪ್ಪಿಕೊಂಡರು. ಅನಂತರ ರಾಜಾ ಮಹೇಂದ್ರರು ಅವರ ಸ್ಥಾನಕ್ಕೆ ಬಂದರು. 1959ರಲ್ಲಿ ಪ್ರಜಾಸತ್ತಾತ್ಮಕ ಸಂವಿಧಾನ ರೂಪುಗೊಂಡಿತು. 1972ರಲ್ಲಿ ರಾಜಾ ಬೀರೇಂದ್ರರು ಪಟ್ಟಕ್ಕೆ ಬಂದರು.



ಅರಸು : ಬೀರೇಂದ್ರ




ಅರಸಿ : ಐಶ್ವರ್ಯ

ದೇಶದ ಮುಖ್ಯ ಭಾಷೆ ನೇಪಾಳೀ. ಇದು ಸಂಸ್ಕೃತ ಮೂಲದಿಂದ ಬಂದದ್ದು. ಸ್ವಲ್ಪ ಮಟ್ಟಿಗೆ ಹಿಂದಿಯನ್ನು ಹೋಲುತ್ತದೆ. ಇಲ್ಲಿನ ಬಹುಪಾಲು ಜನ ಹಿಂದೂಗಳು. ಬೌದ್ಧ ಮತಾನುಯಾಯಿಗಳೂ ಇದ್ದಾರೆ. ಕೃಷಿ ಹಾಗೂ ಅರಣ್ಯ ಉದ್ಯಮ ಮುಖ್ಯ ಕಸಬುಗಳು. ದೇಶದಲ್ಲಿ ಹರಿಯುವ ಮೂರು ಮುಖ್ಯ ನದಿಗಳು ಕೋಸಿ, ಗಂಡಕ್ ಹಾಗೂ

ನೇಪಾಳೀ ಕನ್ಯೆಯರು



ಫೆವತಾಲ್ ಅಣೆಕಟ್ಟು : ಭಾರತ ನೇಪಾಳ ಸಹಕಾರ



ಕರ್ನಾಲಿಗಳು. ಇವು ದಕ್ಷಿಣಕ್ಕೆ ಹರಿದು ಭಾರತದಲ್ಲಿರುವ ಗಂಗಾ ನದಿಯನ್ನು ಸೇರುತ್ತವೆ.

ಕಠ್ಮಂಡುವಿನಿಂದ ಭಾರತ ಗಡಿಯ ವರೆಗಿನ ಹೆದ್ದಾರಿಯನ್ನು ರಚಿಸಲು ಭಾರತವು ನೇಪಾಳಕ್ಕೆ ನೆರವು ನೀಡಿತು. ಇಲ್ಲಿನ ಮೊದಲ ವಿಮಾನ ಸಾರಿಗೆಗೆ ಏರ್ ಇಂಡಿಯಾ ಬೆಂಬಲ ನೀಡಿತು. 1958ರಲ್ಲಿ ನೇಪಾಳ ತನ್ನದೇ ವಿಮಾನ ಸಾರಿಗೆ ವ್ಯವಸ್ಥೆಯನ್ನು ಹೊಂದಿತು. ನೇಪಾಳದ ವಿಸ್ತೀರ್ಣ 54,362 ಚ.ಮೈಲುಗಳು. ಇದು ಜಗತ್ತಿನಲ್ಲಿರುವ ಏಕಮಾತ್ರ ಸ್ವತಂತ್ರ ಹಿಂದೂ ರಾಜ್ಯ.

ನೋಡಿ : ನೇಪಾಳ–ಸಂಪುಟ ೧

ನೈನಿ ತಾಲ್

ಹಿಮಾಲಯದ ಕುಮಾವೊ ಶ್ರೇಣಿಯಲ್ಲಿರುವ ಗಿರಿಧಾಮ, ನೈನಿ ತಾಲ್. ಇದು ಉತ್ತರ ಪ್ರದೇಶದಲ್ಲಿದೆ.

ಇದರ ಬಳಿಯಿರುವ ಹಿಮದರ್ಶಿನಿ ('ಸ್ನೋ ವ್ಯೂ')ಯಿಂದ ಹಿಮಾಲಯದ ಭವ್ಯ ನೋಟಗಳನ್ನು ಕಾಣಬಹುದು ; ಪ್ರಶಾಂತವಾದ ಚಿಕ್ಕಪುಟ್ಟ ಹಾದಿಗಳಲ್ಲಿ ತಿರುಗಾಡಬಹುದು. ಹಾಗೆಯೇ ದೋಣಿ ವಿಹಾರ, ಕುದುರೆ ಸವಾರಿ, ಹಿಯಿಂಗ್ ಕ್ರೀಡೆಗಳಿಗೂ ಇಲ್ಲಿ ಅನುಕೂಲವಿದೆ. ತಾಲ್ ಸರೋವರದ ಸುತ್ತಲೂ ಅನೇಕ ರಮ್ಯ ಶಿಖರಗಳೂ ವಿಹಾರತಾಣಗಳೂ ಇವೆ. ಉತ್ತರಕ್ಕೆ ಸರೋವರಗಳ ಸರಣಿಯೇ ಕಂಡುಬರುತ್ತದೆ. ಇವುಗಳಲ್ಲೆಲ್ಲ 'ನೈನಿ' ಸರೋವರವೇ ಅತ್ಯಂತ ಸುಂದರವಾದದ್ದು. ನೈನಿ ತಾಲ್‌ನ ನೈನಾ ದೇವಿಯ ದೇವಸ್ಥಾನ ಪ್ರಖ್ಯಾತವಾದದ್ದು.



ನೈನಿ ಸರೋವರದಲ್ಲಿ ದೋಣಿ ವಿಹಾರ



ನೈನಿತಾಲ್ ವಸತಿ ಗೃಹ

ನೈನಿ ತಾಲ್‌ನ ಸುತ್ತಲೂ ಕಾಡುಗಳಿವೆ. ಹಿಮದರ್ಶಿನಿಯಿಂದ ನಂದಾ ದೇವಿ (25,645 ಅ. ಎತ್ತರ) ಶಿಖರವನ್ನು ನೋಡಬಹುದು. ನೈನಿ ತಾಲ್‌ನಿಂದ 7 ಮೈಲು ದೂರದಲ್ಲಿ ಭೋವಾಲಿಯಿದೆ. ಇಲ್ಲಿನ ಕ್ಷಯರೋಗ ಆಸ್ಪತ್ರೆ ಪ್ರಸಿದ್ಧವಾದದ್ದು. 30 ಮೈಲು ದೂರದಲ್ಲಿ ಮುಕ್ತೇಶ್ವರವಿದೆ. ಇಲ್ಲಿ ಪಶುವೈದ್ಯ ಸಂಶೋಧನಾ ಸಂಸ್ಥೆಯಿದೆ.

ನೈನಿ ತಾಲ್ ಸಮುದ್ರ ಮಟ್ಟದಿಂದ 6,400 ಅಡಿ ಎತ್ತರ. ಇಲ್ಲಿನ ಜನಸಂಖ್ಯೆ 23,981.

ನೈಮಿಷಾರಣ್ಯ

ವಿಷ್ಣು ತನ್ನ ಚಕ್ರದಿಂದ ದಾನವರ ಇಡೀ ಸೇನೆಯನ್ನು ಒಂದು ನಿಮಿಷದಲ್ಲಿ ನಾಶ ಮಾಡಿದುದರಿಂದ ಈ ಸ್ಥಳಕ್ಕೆ ನೈಮಿಷಾರಣ್ಯ ಎಂಬ ಹೆಸರು ಬಂತು–ಎಂದು ವರಾಹ ಪುರಾಣದಲ್ಲಿ ಹೇಳಿದೆ.

ಬ್ರಹ್ಮ, ಶಿವನಿಗೆ ನಮಸ್ಕರಿಸಿ ಮನೋಮಾಯಾಚಕ್ರವನ್ನು ಬಿಟ್ಟ. ಅದು ಎಲ್ಲೆಲ್ಲೋ ಸುತ್ತತೊಡಗಿತು. ಸೂರ್ಯನಂತೆ ಹೊಳೆಯುತ್ತಿದ್ದ ಚಕ್ರವನ್ನು ಮುನಿಗಳು ಹಿಂಬಾಲಿಸಿಕೊಂಡು ಬಂದರು. ಚಕ್ರದ ಅಂಚು ನೈಮಿಷಾರಣ್ಯದಲ್ಲಿ ಒಡೆದುಹೋಯಿತು. ಮುನಿಗಳು ಅಲ್ಲೇ ನಿಂತರು.

—ಈ ಕಥೆ ವಾಯು ಪುರಾಣದಲ್ಲಿದೆ.


ನೈಮಿಷಾರಣ್ಯ ಪವಿತ್ರಕ್ಷೇತ್ರ. ಗೋಮತಿ ನದಿಯ ತೀರದಲ್ಲಿ ಲಖನೌದಿಂದ 45 ಮೈಲು ದೂರದಲ್ಲಿದೆ. ಈಗ ಇದನ್ನು ನಿಮ್‌ಖಾರ್ ಅಥವಾ ನಿಮ್‌ಸಾರ್ ಎನ್ನುತ್ತಾರೆ. ಒಡೆದ ಚಕ್ರ ಬಿದ್ದ ಸ್ಥಳದಲ್ಲಿ ಷಟ್ಕೋಣಾಕಾರದ ಚಕ್ರತೀರ್ಥವಿದೆ : ಇಲ್ಲೇ ದಾನವರತ್ತ ವಿಷ್ಣು ತನ್ನ ಚಕ್ರವನ್ನು ಎಸೆದದ್ದು ಎಂದು ಪ್ರತೀತಿ. ಲಲಿತಾದೇವಿ ದೇವಾಲಯ ಇಲ್ಲಿ ಮುಖ್ಯವಾದದ್ದು : ಫಾಲ್ಗುಣ ಮಾಸದಲ್ಲಿ ಜಾತ್ರೆ ನಡೆಯುತ್ತದೆ. ಇನ್ನೂ ಅನೇಕ ದೇವಾಲಯಗಳೂ ತೀರ್ಥಸ್ಥಾನಗಳೂ ಈ ಪ್ರದೇಶದಲ್ಲಿ ಇವೆ.

ಸೂತಪುರಾಣಿಕರು ಮಹಾಭಾರತವನ್ನು ಇಲ್ಲಿ ಋಷಿಗಳಿಗೆ ಹೇಳಿದರು ; ಪುರಾಣಗಳಲ್ಲಿ ಹೆಚ್ಚಿನವು ಇಲ್ಲಿ ರಚಿತವಾಗಿ ಮುನಿಗಳ ಎದುರಿನಲ್ಲಿ ಅವುಗಳ ಪಠನವಾಯಿತು ಎನ್ನುತ್ತಾರೆ.

ನೈವೇಲಿ

ಲಿಗ್ನೈಟ್ ನಿಕ್ಷೇಪಕ್ಕೆ ಹೆಸರಾದ ನೈವೇಲಿ ತಮಿಳುನಾಡಿನ ದಕ್ಷಿಣ ಆರ್ಕಾಟ್ ಜಿಲ್ಲೆಯಲ್ಲಿದೆ.

ವರ್ಷಕ್ಕೆ 3½ ದಶಲಕ್ಷ ಟನ್ನಿನಷ್ಟು ಲಿಗ್ನೈಟ್ ತೆಗೆಯಬೇಕೆಂಬುದು ನೈವೇಲಿ ಲಿಗ್ನೈಟ್ ಕಾರ್ಪೊರೇಷನ್ ಲಿಮಿಟೆಡ್ ಸಂಸ್ಥೆಯ ಉದ್ದೇಶ. ಲಿಗ್ನೈಟ್ ತೆಗೆಯುವುದು ನೈವೇಲಿಯ ಯೋಜನೆಯ ಒಂದಂಶ ಮಾತ್ರ. ಲಿಗ್ನೈಟನ್ನು ಉಪಯೋಗಿಸಿ ವಿದ್ಯುದುತ್ಪಾದನೆ, ಸಾರಜನಕ ಗೊಬ್ಬರ ತಯಾರಿಕೆ, ಇಂಗಾಲಪೂರಿತ ಇಂಧನ ಉಂಡೆಗಳ ತಯಾರಿಕೆ—ಈ ಎಲ್ಲ ಕಾರ್ಯಗಳೂ ಇಲ್ಲಿ ನಡೆಯುತ್ತವೆ. ಮನೆಗಳಲ್ಲಿ ಇಂಧನವಾಗಿ ಉಪಯೋಗಿಸುವುದಕ್ಕಾಗಿಯೇ ಇಂಧನ ಉಂಡೆಗಳ ತಯಾರಿ. ಇಲ್ಲಿ ಉತ್ಪಾದನೆ



ನೈವೇಲಿಯ ಲಿಗ್ನೈಟ್ ನಿಕ್ಷೇಪ

ಯಾಗುವ ಒಟ್ಟು 35ಲಕ್ಷ ಟನ್ ಲಿಗ್ನೈಟ್‌ನಲ್ಲಿ 1.52 ಲಕ್ಷ ಟನ್ ಉಪಯೋಗಿಸಿ 25 ಕೋಟಿ ವಾಟ್ ವಿದ್ಯುತ್ತನ್ನು ತಯಾರಿಸುತ್ತಾರೆ. 5.2 ಲಕ್ಷ ಟನ್ ಉಪಯೋಗಿಸಿ 1.54.000 ಟನ್ ಸಾರಜನಕಯುಕ್ತ ಗೊಬ್ಬರದ ಉತ್ಪಾದನೆಯಾಗುತ್ತದೆ. 15.2 ದಶಲಕ್ಷ ಟನ್ ಲಿಗ್ನೈಟ್‌ನಿಂದ 3.86.000 ಟನ್ ಇಂಧನ ಉಂಡೆಗಳ ಉತ್ಪಾದನೆ ಆಗುತ್ತದೆ.

ನೈವೇಲಿ ಲಿಗ್ನೈಟ್ ಕಾರ್ಪೊರೇಷನ್ ಲಿಮಿಟೆಡ್ 1956ರಲ್ಲಿ ಆರಂಭವಾಯಿತು. ವಿದ್ಯುತ್ ಉತ್ಪಾದನೆಗಾಗಿ 'ನೈವೇಲಿ ಥರ್ಮಲ್ ಪವರ್ ಪ್ರಾಜೆಕ್ಟ್' ನಿರ್ಮಾಣಕಾರ್ಯ 1961ರಲ್ಲಿ ಆರಂಭವಾಯಿತು. ಸೋವಿಯತ್ ಒಕ್ಕೂಟದ ನೆರವಿನಿಂದ ಇದರಲ್ಲಿ ಬಹು ಪಾಲು ಕೆಲಸ ಮುಗಿದಿದೆ. ನಾಲ್ಕು ಉತ್ಪಾದನಾ ಕೇಂದ್ರಗಳು ಕೆಲಸಮಾಡುತ್ತಿವೆ.

ನೈವೇಲಿ ಉಪನಗರವು ಸಾರ್ವಜನಿಕ ವಲಯಕ್ಕೆ ಸೇರಿದೆ. ಇಲ್ಲಿಯ ಜನಸಂಖ್ಯೆ 58.285.

ನೋನಸ್

"ಭೂಮಧ್ಯ ಸಮುದ್ರ, ಕೆಂಪು ಸಮುದ್ರ ತೀರಗಳ ತನಕ ಇಂಡಿಯಾ ದೇಶದವರ ಚಕ್ರಾಧಿಪತ್ಯ ಹರಡಿತ್ತು : ಆಗ ಬ್ಯಾಕಸ್ ದೇವತೆ ಈ ಪುಂಡರನ್ನು ಸದೆಬಡೆಯಲು ನಿರ್ಧರಿಸಿದ..."

ಸಸ್ಯಸಂಪತ್ತು, ಸಂತಾನ ಸಮೃದ್ಧಿಗಳ ಅಧಿದೇವತೆ ಎನಿಸಿದ ಬ್ಯಾಕಸ್‌ನ ಭಾರತ ದಂಡಯಾತ್ರೆಯೇ ಗ್ರೀಕ್ ಪುರಾಣಕವಿ ನೋನಸ್ ಬರೆದ 'ಡೈಯೋನೈಸಿಯಾಕ' ಕಾವ್ಯದ ಮುಖ್ಯ ವಸ್ತು. ಡೈಯೋನೈಸಸ್ ಎಂಬ ಗ್ರೀಕ್ ಮೂಲದ ಹೆಸರಿನ ದೇವತೆಗೆ ಕ್ರಿ. ಶ. 4ನೆಯ ಶತಮಾನದ ಹೊತ್ತಿಗೆ ಗ್ರೀಸ್‌ನಲ್ಲೂ ರೋಮ್‌ನಲ್ಲೂ 'ಬ್ಯಾಕಸ್' ಹೆಸರು ರೂಢಿಗೆ ಬಂತು.

'ಡೈಯೋನೈಸಿಯಾಕ'ದ ಕಥಾಪುರುಷ ಬ್ಯಾಕಸ್, ಜೂಸ್ ದೇವನಿಗೆ ಥೀಬ್ಸ್ ರಾಜಪುತ್ರಿಯೊಬ್ಬಳಿಂದ ಹುಟ್ಟಿದ ಮಗ. ಮದ್ಯ ತಯಾರಿಸುವ ವಿಧಾನವನ್ನು ಮಾನವರಿಗೆ ಮೊತ್ತಮೊದಲು ಕಲಿಸಿ ಕೊಟ್ಟನೆಂದು ಅವನಿಗೆ ಮದ್ಯಗಳ ಅಧಿದೇವತೆ ಎಂಬ ಖ್ಯಾತಿಯೂ ಇದೆ. ಏಷ್ಯದ ಮೇಲೆ ದಂಡಯಾತ್ರೆಗೆ ಇವನಿಗೆ ಪ್ರೇರಣೆ ದೊರೆತಿದ್ದು ಜೂಸ್ ದೇವನಿಂದಲೇ. ನೋನಸ್‌ನ ಕಾವ್ಯದ ಕಥೆ ಹೀಗಿದೆ :

ದೇವತೆಗಳ ಅಗಾಧ ಸೈನ್ಯದೊಡನೆ ಹೊರಟ ಬ್ಯಾಕಸ್ ಈಗ ತುರ್ಕಿಯಲ್ಲಿರುವ ಬಿಥಿನಿಯದ ಅಷ್ಟಕಿಸ್ ಸರೋವರದ ಬಳಿ ಇಂಡಿಯನರನ್ನು ಎದುರಿಸಿದ... ಸರೋವರದ ನೀರನ್ನು ಮದ್ಯವನ್ನಾಗಿ ಪರಿವರ್ತಿಸಿ, ಕುಡಿದವರಿಗೆ ಪ್ರಜ್ಞೆ ತಪ್ಪುವಂತೆ ಮಾಡಿದ... ಇಂಡಿಯಾದವರು ಮೂರ್ಛಿತರಾಗಿ ಬಿದ್ದಾಗ, ಸೆರೆ ಹಿಡಿದ...

ಬ್ಯಾಕಸ್ ಸಿರಿಯಕ್ಕೆ ಹೋಗಿ ಇಂಡಿಯದ ರಾಜ 'ಡೇರಿಯಡಸ್' (ದುರ್ಯೋಧನ ಹೆಸರಿಗೆ ಗ್ರೀಕ್‌ಪದ)ನ ಅಳಿಯನನ್ನು ಕೊಂದ...

ಡೇರಿಯಡಸ್‌ನೊಡನೆ ಕದನ ಏಳು ವರ್ಷ ನಡೆಯಿತಂತೆ. ಸೇನಾಪತಿಯನ್ನೇ ಕಳೆದುಕೊಂಡ ಡೇರಿಯಡಸ್ ತನ್ನ ಅಧೀನ ರಾಜರನ್ನೆಲ್ಲ ಸೇರಿಸಿ ಮತ್ತೆ ಆರು ವರ್ಷ ಹೋರಾಡಿದ : ನೌಕಾದಳ ನಾಶವಾದಾಗ ಭೂಮಿಯ ಮೇಲೆ ಯುದ್ಧ ಮುಂದುವರಿಸಿದ : ಕೊನೆಗೆ ಯುದ್ಧ ದೇವತೆಯೇ ಬ್ಯಾಕಸ್‌ನ ಸಹಾಯಕ್ಕೆ ಬಂದಾಗ ಡೇರಿಯಡಸ್ ನದೀ ತೀರಕ್ಕೆ ಪಲಾಯನ ಮಾಡಿದ. ಬೆನ್ನಟ್ಟಿದ ಬ್ಯಾಕಸ್ ದಡದಿಂದ ಹೊಡೆದಾಗ ಅವನು ನದಿಗೆ ಬಿದ್ದು ಸತ್ತ (ನೋನಸ್ ವರ್ಣಿಸಿದ ಈ ಘಟನೆ ದುರ್ಯೋಧನನ ಅವಸಾನವನ್ನು ಹೋಲುತ್ತದೆ.)

ಡೇರಿಯಡಸ್ ತನ್ನ ಸಹಾಯಕ್ಕೆ ಕರೆಸಿಕೊಂಡ ಅಧೀನರಾಜರುಗಳ ಪಟ್ಟಿ ಈ ಕಾವ್ಯದಲ್ಲಿದೆ. ಕಾಬೂಲ್, ಇಥಿಯೋಪಿಯ, ದಕ್ಷಿಣ ಭಾರತ —ಹೀಗೆ ವಿವಿಧ ಪ್ರದೇಶಗಳಿಂದ ಬಂದ ಅವರ ಜನಾಂಗ ವೈಶಿಷ್ಟ್ಯ, ಜೀವನ ಕ್ರಮ ಪ್ರಸ್ತಾಪ ವರ್ಣರಂಜಿತವಾಗಿದೆ. ಭಾರತದಿಂದ ಪ್ರೇರಿತವಾದ ನೋನಸ್‌ನ ಕಾವ್ಯದಲ್ಲಿ ಐತಿಹಾಸಿಕಾಂಶಗಳಿಗಿಂತ ಕಲ್ಪನೆಯೇ ಹೆಚ್ಚು. ನೋನಸನ ಕಾಲ ಸುಮಾರು ಕ್ರಿ. ಪೂ. 5ನೆಯ ಶತಮಾನ.

ನೌಖಾಲಿ ಯಾತ್ರೆ

1947ರಲ್ಲಿ ಇನ್ನೇನು ಭಾರತ ಸ್ವತಂತ್ರವಾಗಲಿದ್ದಾಗ ನೌಖಾಲಿಯಲ್ಲಿ (ಇದು ಇಂದಿನ ಬಾಂಗ್ಲಾದೇಶದಲ್ಲಿದೆ) ಒಂದು ಗಲಭೆ ಎದ್ದಿತು. ಇಲ್ಲಿ ಆರಂಭವಾದ ಗಲಭೆ ವ್ಯಾಪಕ ಕೋಮುವಾರು ಗಲಭೆಯಾಗಿ ಹಬ್ಬಿತು.



' ಬೆಂಕಿ ಆರಿಸಲು ಪಾದಯಾತ್ರೆ '

ಮತೀಯ ಉದ್ವೇಗವನ್ನು ತಗ್ಗಿಸಿ ಶಾಂತಿ ಸಾಧಿಸುವ ಉದ್ದೇಶದಿಂದ ಗಾಂಧೀಜೀ ನೌಖಾಲಿಗೆ ಹೋದರು. ಮುಸಲ್ಮಾನರೇ ಹೆಚ್ಚು ಸಂಖ್ಯೆಯಲ್ಲಿದ್ದ ಪ್ರದೇಶ ಅದು. ಅಲ್ಲಿ ನಡೆಯುತ್ತಿದ್ದ ಗಲಭೆಯಲ್ಲಿ ಗಾಂಧೀಜೀ ಅವರ ಪ್ರಾಣಕ್ಕೂ ಅಪಾಯ ಒದಗುತ್ತಿತ್ತು. ಅವರೆ ಯಾವುದೇ ಬಗೆಯ ರಕ್ಷಣೆಯನ್ನು ಪಡೆಯಲು ಒಪ್ಪದೆ ಗಾಂಧೀಜೀ ಈ ಪ್ರದೇಶದಲ್ಲಿ ಪಾದಯಾತ್ರೆ ಕೈಗೊಂಡರು: ಹಿಂದೂ ಮುಸಲ್ಮಾನರ ಹೃದಯ ಶುದ್ಧಿಯಾಗಲೆಂದು ಪ್ರಾರ್ಥನೆ ಮಾಡಿದರು. "ಮತ್ತೆ ನೀವು ಈ ರೀತಿ ಹುಚ್ಚೆದ್ದು ಗಲಭೆ ಮಾಡುವುದಾದರೆ ನನ್ನನ್ನು ಮೊದಲು ನಾಶ ಮಾಡಿ", ಎಂದು ನುಡಿದರು.

ಗಲಭೆಯ ಸದ್ದುಗದ್ದಲದಲ್ಲಿ ಗಾಂಧೀಜೀ ಆಡಿದ್ದು ಯಾರ ಕಿವಿಗೂ ಬೀಳಲಿಲ್ಲ. ನೌಖಾಲಿಯ ಈ ಕೋಮುವಾರು ಗಲಭೆಯ ಕಿಡಿ ಹಲವೆಡೆಗಳಿಗೆ ಹಾರಿತು. ಬಿಹಾರ್, ಪಂಜಾಬ್ ಮುಂತಾದೆಡೆಗಳಲ್ಲಿ ತೀವ್ರ ಘರ್ಷಣೆ, ಕೊಲೆಗಳು ನಡೆದುವು.

ನಮ್ಮ ಹೋರಾಟ ಬ್ರಿಟಿಷರ ಆಡಳಿತದ ವಿರುದ್ಧ ಎಂಬುದನ್ನು ಮರೆತು ಜನ ತಮ್ಮ ತಮ್ಮಲ್ಲೇ ಕಾದಾಡಿದರು. ನೌಖಾಲಿ ಯಾತ್ರೆಯಲ್ಲಿ ಗಾಂಧೀಜೀ ಅತೀವ ಮಾನಸಿಕ ಯಾತನೆ ಅನುಭವಿಸಿದರು.

ಪಂಚತಂತ್ರ

ನೋಡಿ : ಸಂಪುಟ ೫

ಪಂಚಭೂತಗಳು

ಪಂಚಭೂತಗಳು ಎಂದರೆ ಪೃಥ್ವಿ, ಅಪ್, ತೇಜಸ್, ವಾಯು, ಆಕಾಶ. ಇವನ್ನು ಕನ್ನಡದಲ್ಲಿ ನೆಲ, ನೀರು, ಬೆಂಕಿ, ಗಾಳಿ, ಬಯಲು ಎನ್ನುತ್ತಾರೆ. ಜಗತ್ತಿನಲ್ಲಿ ಕಾಣಬರುವ ಬಹು ಗುಣಗಳ ವೈವಿಧ್ಯದ ಕಾರಣವನ್ನು ವಿವರಿಸುವ ಪ್ರಯತ್ನದಲ್ಲಿ ಪಂಚಭೂತಗಳ ಭಾವನೆ ರೂಪುಗೊಂಡಿತು. ಋಗ್ವೇದ ಮತ್ತು ಉಪನಿಷತ್ತುಗಳ ಕಾಲದಲ್ಲೇ ಈ ಭಾವನೆ ಮೂಡಿತು. ಪಂಚಭೂತಗಳನ್ನು ಮಹಾಭೂತಗಳು ಎಂದೂ ಕರೆಯುತ್ತಾರೆ.

ಪಂಚಭೂತಗಳು ನಮ್ಮ ಪಂಚೇಂದ್ರಿಯಗಳಿಗೆ ಗೋಚರವಾಗುವಂಥವು. ಇವು ಶಾಶ್ವತವಾದುವಲ್ಲ. ಇವುಗಳಿಗೆ ಮೂಲವಾದ ತನ್ಮಾತ್ರಗಳು ಅತ್ಯಂತ ಸೂಕ್ಷ್ಮರೂಪದವು. ಅವು ನಮಗೆ ಅಗೋಚರವಾದುವು. ಶಾಶ್ವತವಾದುವು. ಶಬ್ದ, ಸ್ಪರ್ಶ, ರೂಪ, ರಸ, ಗಂಧ ಇವು ಐದು ತನ್ಮಾತ್ರಗಳು. ಶಬ್ದ ತನ್ಮಾತ್ರದಿಂದ ಆಕಾಶ ರೂಪುಗೊಂಡಿದೆ. ವಾಯು, ತೇಜಸ್ಸು ಮುಂತಾದ ಇತರ ಭೂತಗಳು ಬೇರೆ ಬೇರೆ ತನ್ಮಾತ್ರಗಳ ಸಂಯೋಗದಿಂದ ಹುಟ್ಟಿವೆ. ಭೌತ ವಸ್ತುಗಳು ಬೇರೆ ಬೇರೆ ಭೂತಗಳ ಸಂಯೋಗದಿಂದ ಉಂಟಾದುವಾದರೂ ಒಂದೆರಡು ಭೂತಗಳು ಇವುಗಳಲ್ಲಿ ಪ್ರಧಾನವಾಗಿರುತ್ತವೆ. ಜಗತ್ತಿನ ಎಲ್ಲ ವಸ್ತುಗಳೂ ಪಂಚಭೂತಗಳಿಂದ ಆದುವು —ಇವು ಭಾರತೀಯ ತತ್ತ್ವಜ್ಞಾನದಲ್ಲಿ ಹಾಸುಹೊಕ್ಕಾಗಿರುವ ಭೌತಿಕ ಕಲ್ಪನೆಗಳು.

ಸಾಂಖ್ಯ, ನ್ಯಾಯ, ವೈಶೇಷಿಕ ದರ್ಶನಗಳಲ್ಲಿ ಪಂಚಭೂತಗಳ ಭಾವನೆಗೆ ವಿಶೇಷ ಗಮನ ಕೊಟ್ಟಿದ್ದಾರೆ. ಆಯುರ್ವೇದದಲ್ಲೂ ಇದನ್ನು ಒಂದು ಆಧಾರಾಂಶವಾಗಿ ಉಪಯೋಗಿಸಿಕೊಂಡಿದ್ದಾರೆ.

ಜೈನ, ಬೌದ್ಧ, ಚಾರ್ವಾಕ ಪಂಥಗಳಲ್ಲಿ ಮೊದಲ ನಾಲ್ಕು ಭೂತಗಳನ್ನು ಮಾತ್ರ ಅಂಗೀಕರಿಸಿದ್ದಾರೆ. ಆಕಾಶತತ್ತ್ವವನ್ನು ಅವರು ಒಪ್ಪುವುದಿಲ್ಲ.

ಪಂಚವಾರ್ಷಿಕ ಯೋಜನೆ

ಸ್ವಾತಂತ್ರ್ಯಪೂರ್ವದಲ್ಲಿಯೇ ಸರ್ ಎಂ. ವಿಶ್ವೇಶ್ವರಯ್ಯನವರು ಭಾರತದ ಅಭಿವೃದ್ಧಿಗೆ ಯೋಜನೆಯ ಅಗತ್ಯವಿದೆ ಎಂಬುದನ್ನು ಮನಗಂಡಿದ್ದರು. 'ಪ್ಲಾನ್ಡ್ ಎಕಾನಮಿ ಆಫ್ ಇಂಡಿಯಾ' ಎಂಬ ಪುಸ್ತಕದಲ್ಲಿ ಇದನ್ನು ಕುರಿತು ಬರೆದರು. ಭಾರತ ರಾಷ್ಟ್ರೀಯ ಕಾಂಗ್ರೆಸ್ ಈ ವಿಚಾರವನ್ನು ಎತ್ತಿ ಹಿಡಿದು ಜವಾಹರಲಾಲ ನೆಹರೂ ಅವರ ಮುಖಂಡತ್ವದಲ್ಲಿ ರಾಷ್ಟ್ರೀಯ ಯೋಜನಾ ಸಮಿತಿಯನ್ನು ರಚಿಸಿತು. ಮುಂಬಯಿಯ ಎಂಟು ಮಂದಿ ಕೈಗಾರಿಕೋದ್ಯಮಿಗಳು, ಕ್ರಾಂತಿಕಾರಿ ಎಂ. ಎನ್. ರಾಯ್, ಅರ್ಥಶಾಸ್ತ್ರಜ್ಞ ಎಸ್. ಎನ್. ಅಗರ್‌ವಾಲ ಮುಂತಾದವರು ಕೂಡ ತಮ್ಮ ತಮ್ಮ ದೃಷ್ಟಿಗೆ ಅನುಗುಣವಾಗಿ ಯೋಜನೆಗಳನ್ನು ರೂಪಿಸಿ ಅವನ್ನು ಪ್ರಕಟಿಸಿದರು.

ಭಾರತ ಸ್ವತಂತ್ರವಾದ ಅನಂತರ 1950ರ ಮಾರ್ಚ್‌ನಲ್ಲಿ ಭಾರತ ಸರಕಾರ ಯೋಜನಾ ಆಯೋಗವನ್ನು ರಚಿಸಿತು.

ಜನರ ಜೀವನದ ಮಟ್ಟವನ್ನು ಹೆಚ್ಚಿಸುವುದು. ಜನರಿಗೆ ಹೆಚ್ಚು ಶ್ರೀಮಂತವಾದ ಮತ್ತು ವೈವಿಧ್ಯಮಯ ಬದುಕು ನಡೆಸಲು ಅವಕಾಶ ಮಾಡಿಕೊಡುವುದು. ಒಟ್ಟಿನಲ್ಲಿ ಭಾರತ ಜನತೆಯ ಸರ್ವತೋಮುಖ

ಅಭಿವೃದ್ಧಿ —ಯೋಜನೆಗಳ ಮುಖ್ಯ ಉದ್ದೇಶ. ಇದಕ್ಕಾಗಿ ಪಂಚವಾರ್ಷಿಕ ಯೋಜನೆಗಳು ರೂಪುಗೊಂಡುವು. ಮೊದಲನೆಯ ಪಂಚವಾರ್ಷಿಕ ಯೋಜನೆ 1951ರಲ್ಲಿ ಆರಂಭವಾಯಿತು. ಒಂದೊಂದು ಪಂಚವಾರ್ಷಿಕ ಯೋಜನೆಯಲ್ಲಿಯೂ ಕೆಲವು ಕ್ಷೇತ್ರಗಳಲ್ಲಿ ವಿಶಿಷ್ಟ ಸಾಧನೆಗಳನ್ನು ಕೈಗೂಡಿಸಿಕೊಳ್ಳುವ ಪ್ರಯತ್ನ ನಡೆಯಿತು. ಸಾರ್ವಜನಿಕ ಹಾಗೂ ಖಾಸಗೀ ಉದ್ಯಮ ವಲಯಗಳೆರಡೂ ಈ ಪ್ರಯತ್ನದಲ್ಲಿ ಭಾಗಿಗಳಾದುವು. ಪ್ರಥಮ ಪಂಚವಾರ್ಷಿಕ ಯೋಜನೆಯಲ್ಲಿ (1951–56) ನೀರಾವರಿ, ವಿದ್ಯುತ್ ಮತ್ತು ಸಾರಿಗೆಗೆ ಹೆಚ್ಚು ಲಕ್ಷ್ಯ ಕೊಡಲಾಯಿತು. ಸಾರ್ವಜನಿಕ ವಲಯದಲ್ಲಿ 2,356 ಕೋಟಿ ರೂಪಾಯಿಗಳನ್ನು ವೆಚ್ಚಮಾಡಲಾಯಿತು.

ಎರಡನೆಯ ಪಂಚವಾರ್ಷಿಕ ಯೋಜನೆಯ (1956–61) ಅಂದಾಜು ವೆಚ್ಚ ಸಾರ್ವಜನಿಕ ವಲಯದಲ್ಲಿ 4,800 ಕೋಟಿ ರೂಪಾಯಿ. ಇದರಲ್ಲಿ 3,650 ಕೋಟಿ ರೂಪಾಯಿ ಬಂಡವಾಳ ಹೂಡಿಕೆಗಾಗಿ ವೆಚ್ಚಮಾಡಲಾಯಿತು. ಖಾಸಗೀ ವಲಯದಲ್ಲಿ 3,100 ದಶಲಕ್ಷ ರೂಪಾಯಿಗಳ ವೆಚ್ಚಕ್ಕೆ ಒಪ್ಪಿಗೆ ದೊರೆಯಿತು. ತೀವ್ರ ಔದ್ಯೋಗೀಕರಣ, ಹೆಚ್ಚು ಹೆಚ್ಚು ಉದ್ಯೋಗಾವಕಾಶಗಳ ಕಲ್ಪನೆ, ಜನರ ವರಮಾನ ಹಾಗೂ ಸಂಪತ್ತಿನ ಬಗೆಗೆ ಇರುವ ಅಸಮಾನತೆಯನ್ನು ಕಡಮೆ ಮಾಡುವುದು ಈ ಯೋಜನೆಯ ಪ್ರಧಾನ ಉದ್ದೇಶ. ಇದರಲ್ಲಿ ಮೂಲಭೂತ ಮತ್ತು ದೊಡ್ಡ ಪ್ರಮಾಣದ ಉದ್ಯಮಗಳ ಬೆಳವಣಿಗೆಗೆ ಆದ್ಯತೆ ನೀಡಲಾಯಿತು.

ಮೂರನೆಯ ಯೋಜನೆಯಲ್ಲಿ (1961–66) ವರ್ಷಕ್ಕೆ ಶೇಕಡಾ 5ರಂತೆ ರಾಷ್ಟ್ರೀಯ ವರಮಾನ ಹೆಚ್ಚಿಸುವುದು, ಆಹಾರ ಉತ್ಪಾದನೆಯಲ್ಲಿ ಸ್ವಪೂರ್ಣತೆ ಸಾಧಿಸುವುದು, ಉದ್ಯಮಗಳಿಗೆ ಬೇಕಾದ ಕೃಷಿ ಉತ್ಪನ್ನಗಳನ್ನು ಹೆಚ್ಚಿಸುವುದು, ಉಕ್ಕು ಇತ್ಯಾದಿ ಮೂಲಭೂತ ಉದ್ಯಮಗಳ ವಿಸ್ತರಣೆ— ಪ್ರಧಾನ ಉದ್ದೇಶಗಳು. ಸಾರ್ವಜನಿಕ ವಲಯದಲ್ಲಿ ಸುಮಾರು 7,500 ಕೋಟಿ ರೂಪಾಯಿ ಮತ್ತು ಖಾಸಗೀ ವಲಯದಲ್ಲಿ 4,000 ಕೋಟಿ ರೂಪಾಯಿ ವೆಚ್ಚಕ್ಕೆ ಅವಕಾಶವಿತ್ತು.

1966–67, 1967–68, 1968–69 ಅವಧಿಗಳಲ್ಲಿ ವಾರ್ಷಿಕ ಯೋಜನೆಗಳು ನಡೆದುವು. ಇವುಗಳ ಒಟ್ಟು ವೆಚ್ಚ 6,756.5 ಕೋಟಿ ರೂಪಾಯಿ. ಭಾರತ–ಪಾಕಿಸ್ತಾನ ಯುದ್ಧ, ಅನಾವೃಷ್ಟಿ, ರೂಪಾಯಿಯ ಮೌಲ್ಯ ವಿಚ್ಛೇದನ ಇತ್ಯಾದಿ ತೀವ್ರ ಸಮಸ್ಯೆಗಳು ಉಂಟುಮಾಡಿದ ಪರಿಸ್ಥಿತಿಯಿಂದಾಗಿ ನಾಲ್ಕನೆಯ ಯೋಜನೆಯ ಆರಂಭ ಹೀಗೆ ತಡವಾಯಿತು.

ನಾಲ್ಕನೆಯ ಪಂಚವಾರ್ಷಿಕ ಯೋಜನೆಗೆ ನಿಗದಿಯಾದ ವೆಚ್ಚ 24,882 ಕೋಟಿ ರೂಪಾಯಿ. ಅವಧಿ 1969ರಿಂದ 1974. ಕೃಷಿ ಹಾಗೂ ಕೈಗಾರಿಕಾ ಉತ್ಪಾದನೆಯಿಂದ ರಾಷ್ಟ್ರೀಯ ವರಮಾನದ ಏರಿಕೆ, ಬಂಡವಾಳ–ವರಮಾನಗಳ ಪ್ರಮಾಣ ಏರಿಕೆ, ವಿದೇಶದಿಂದ ಪಡೆಯುವ ಸಹಾಯವನ್ನು ಬಹುಮಟ್ಟಿಗೆ ತಗ್ಗಿಸುವುದು, ಉಳಿತಾಯ-ವರಮಾನ ಪ್ರಮಾಣ ಏರಿಕೆ –ಇವು ನಾಲ್ಕನೆಯ ಯೋಜನೆಯ ಮುಖ್ಯ ಗುರಿಗಳು.

ಐದನೆಯ ಪಂಚವಾರ್ಷಿಕ ಯೋಜನೆಯ ಆರಂಭ 1974ರಲ್ಲಿ. ಬಡತನ ನಿರ್ಮೂಲನ, ಮೂಲಭೂತ ಅಗತ್ಯಗಳ ಪೂರೈಕೆ, ಸಮಾನ ಉದ್ಯೋಗಾವಕಾಶ ಇದರ ಮುಖ್ಯ ಗುರಿ. ಈ ಯೋಜನೆಯ ಅಂದಾಜು ವೆಚ್ಚ 53,411 ಕೋಟಿ ರೂಪಾಯಿ.

ಪಂಚಶೀಲ

ನೋಡಿ : ಸಂಪುಟ ೧

ಪಂಚಾಂಗ

ನೋಡಿ : ಪಂಚಾಂಗ-ಸಂಪುಟ ೧; ಕ್ಯಾಲೆಂಡರ್-ಸಂಪುಟ ೩

ಪಂಚಾಯತಿ ರಾಜ್ಯ

ಪ್ರಜಾಪ್ರಭುತ್ವ ಭಾರತೀಯರಿಗೆ ಹೊಸದೇನೂ ಅಲ್ಲ. ಗ್ರಾಮವು ರಾಷ್ಟ್ರದ ಮೂಲ ಘಟಕವಾಗಿರುವಂತೆಯೇ ಗ್ರಾಮ ಪಂಚಾಯತಿ ಪ್ರಜಾಪ್ರಭುತ್ವದ ತಳಹದಿ.

ಹಿಂದಿನಿಂದಲೂ ಗ್ರಾಮಗಳಲ್ಲಿ ಪಂಚಾಯತಿಯ ಸ್ಥಾನ ಪ್ರಮುಖವಾದದ್ದು. ಜನತೆಯ ನಾನಾ ವರ್ಗಗಳವರಿಗೆ ಇದರಲ್ಲಿ ಪ್ರಾತಿನಿಧ್ಯ ಇರುತ್ತಿತ್ತು. ಅನೇಕ ವೃತ್ತಿಯ ಜನರು ಪಂಚಾಯತಿಯಲ್ಲಿರುತ್ತಿದ್ದರು. ಇವರ ಗ್ರಾಮದ ಜನರು ಇವರನ್ನು ಆರಿಸುತ್ತಿದ್ದರು. ಕಂದಾಯ ವಸೂಲಿ, ವ್ಯಾಜ್ಯಗಳ ತೀರ್ಮಾನ, ತಪ್ಪಿತಸ್ಥರಿಗೆ ದಂಡ ವಿಧಿಸುವುದು, ಹಳ್ಳಿಯ ಕೆರೆ, ಕಾಲುವೆ, ಹುಲ್ಲುಗಾವಲು, ದೇವಾಲಯ, ಗೋಪುರಗಳು–ಇವುಗಳ ಮೇಲ್ವಿಚಾರಣೆ ಪಂಚಾಯತಿಗೆ ಸೇರಿತ್ತು.

ಈಗ್ಗೆ ಒಂದು ಸಾವಿರ ವರ್ಷಗಳ ಹಿಂದೆ ಗ್ರಾಮ ಪಂಚಾಯತಿಗಳಿಗೆ ಚುನಾವಣೆ ಹೇಗೆ ನಡೆಯುತ್ತಿತ್ತು ? ಪಂಚಾಯತಿಯ ಸದಸ್ಯರಾಗ ಬಯಸುವವರಿಗೆ ಇರಬೇಕಾಗಿದ್ದ ಅರ್ಹತೆಗಳೇನು ? ಎಂಥವರು ಪಂಚಾಯತಿಗಳ ಸದಸ್ಯರಾಗಲು ಅನರ್ಹರು ? ಮುಂತಾದ ವಿವರಗಳು ಶಾಸನಗಳಲ್ಲಿ ನಮಗೆ ದೊರೆತಿವೆ.

ಬ್ರಿಟಿಷರ ಕಾಲದಲ್ಲಿ ಪಂಚಾಯತಿಗಳು ತೆಗೆದುಹಾಕಲ್ಪಟ್ಟುವು. ಜವಾಹರಲಾಲ ನೆಹರೂ ಪಂಚಾಯತಿಗಳ ಅಗತ್ಯ ಗಮನಿಸಿ, ಸ್ವಾತಂತ್ರ್ಯಾನಂತರ ಮತ್ತೊಮ್ಮೆ ಪಂಚಾಯತಿ ಪದ್ಧತಿ ಜಾರಿಗೆ ತಂದರು. ಭಾರತದ ಈ ಪಂಚಾಯತಿ ರಾಜ್ಯಪದ್ಧತಿಯಲ್ಲಿ ಹಳ್ಳಿ, ವಿಭಾಗ (ಬ್ಲಾಕ್) ಮತ್ತು ಜಿಲ್ಲೆ ಈ ಮಟ್ಟಗಳಲ್ಲಿ ಆಡಳಿತ ನಡೆಯುತ್ತದೆ.

ಸ್ವಾತಂತ್ರ್ಯಾನಂತರ ಗ್ರಾಮಪಂಚಾಯತಿಗಳು ಜನತೆಯ ಪ್ರಾತಿನಿಧ್ಯವುಳ್ಳ ಪ್ರಜಾಸತ್ತಾತ್ಮಕ ಸಂಸ್ಥೆಗಳಾಗಿ ರೂಪುಗೊಂಡುವು. ಗ್ರಾಮಪಂಚಾಯತಿಗಳಿಗೆ ಆಯ್ಕೆ ಸಾರ್ವಜನಿಕ ಚುನಾವಣೆಗಳ ಮೂಲಕ ನಡೆಯುತ್ತದೆ. ಪಂಚಾಯತಿ ಪ್ರದೇಶದಲ್ಲಿರುವ ಮತದಾರರು ಯಾರು ಬೇಕಾದರೂ ಉಮೇದುವಾರರಾಗಿ ನಿಲ್ಲಬಹುದು.

ಗ್ರಾಮ ಪಂಚಾಯತಿ ನೆರವೇರಿಸಬೇಕಾದ ಕೆಲವು ಅವಶ್ಯ ಕರ್ತವ್ಯಗಳಿವೆ. ಪಂಚಾಯತಿ ಪ್ರದೇಶದ ರಸ್ತೆ–ಚರಂಡಿ–ಸೇತುವೆಗಳನ್ನು ಸುಸ್ಥಿತಿಯಲ್ಲಿಟ್ಟಿರುವುದು, ಗ್ರಾಮನೈರ್ಮಲ್ಯ, ದೀಪ, ನೀರಿನ ವ್ಯವಸ್ಥೆ, ಗೊಬ್ಬರದ ಗುಂಡಿಗಳಿಗೆ ಸ್ಥಳ ನಿರ್ದೇಶಿಸುವುದು, ಗಿಡಗಳನ್ನು ಬೆಳೆಸುವುದು, ಸಾಂಕ್ರಾಮಿಕ ರೋಗಗಳ ನಿವಾರಣೆ ಮತ್ತು ಚಿಕಿತ್ಸೆಯ ಏರ್ಪಾಡು ಮುಂತಾದುವು ಇವುಗಳಲ್ಲಿ ಮುಖ್ಯವಾದುವು.

ಇಷ್ಟಲ್ಲದೆ ಅನಾಥರಿಗೆ, ರೋಗಿಗಳಿಗೆ ನೆರವು ಕೊಡುವುದು, ಪಶುಸಂಗೋಪನೆ ಅಭಿವೃದ್ಧಿ, ಗ್ರಂಥಭಂಡಾರ ನಡೆಸುವುದು, ಮಕ್ಕಳ ಆಟದ ಮೈದಾನದ ನಿರ್ಮಾಣ ಮುಂತಾದುವುಗಳಲ್ಲೂ ಗ್ರಾಮ ಪಂಚಾಯತಿ ಆಸಕ್ತಿವಹಿಸಬಹುದು. ಕಟ್ಟಡ ಮತ್ತು ನಿವೇಶನಗಳ ಮೇಲಿನ ಕಂದಾಯ, ಸಂತೆ, ಜಾತ್ರೆ, ಅಂಗಡಿಗಳ ಮೇಲಿನ ಸುಂಕ, ಮೋಟರು ವಾಹನಗಳಲ್ಲದೆ ಇತರ ವಾಹನಗಳ ಮೇಲಿನ ತೆರಿಗೆ, ಪಂಚಾಯತಿ ಪ್ರದೇಶದ ವ್ಯವಸಾಯ ಭೂಮಿಯ ಮೇಲಿನ ಕಂದಾಯದಲ್ಲಿ ಸರಕಾರ ಕೊಡುವ ಮೂರನೆಯ ಒಂದು ಭಾಗ

ವಷ್ಟು ಹಣ ಮುಂತಾದುವು ಪಂಚಾಯತಿಯ ಆದಾಯದ ಆಕರಗಳು. ಗ್ರಾಮ ಪಂಚಾಯತಿಗಳ ಮೇಲಿನ ಹಂತ ತಾಲ್ಲೂಕು ಬೋರ್ಡು. ಅವೂ ಪ್ರಜಾಸತ್ತಾತ್ಮಕ ವ್ಯವಸ್ಥೆಯಂತೆ ಕೆಲಸ ಮಾಡುತ್ತವೆ. ಗ್ರಾಮ ಪಂಚಾಯತಿಗಳಿಗೆ ನೆರವು ಕೊಡುತ್ತವೆ. ಅವುಗಳೊಡನೆ ಸಹಕರಿಸಿ ಕೆಲಸ ಮಾಡುತ್ತವೆ.

1972ರ ಕೊನೆಯ ವೇಳೆಗೆ ಭಾರತದಲ್ಲಿ 2,19,119 ಗ್ರಾಮ ಪಂಚಾಯತಿಗಳಿದ್ದುವು.

ಕೇರಳ, ಮಧ್ಯಪ್ರದೇಶ, ಮಣಿಪುರ, ಮೇಘಾಲಯ, ತ್ರಿಪುರ, ಜಮ್ಮು ಮತ್ತು ಕಾಶ್ಮೀರ ಹಾಗೂ ನಾಗಾಲ್ಯಾಂಡ್‌ಗಳಲ್ಲಿ ಪಂಚಾಯತಿ ರಾಜ್ಯಪದ್ಧತಿ ಇಲ್ಲ.

ನೋಡಿ : ಗ್ರಾಮ ಪಂಚಾಯತಿ–ಸಂಪುಟ ೧


ಪಂಜಾಬ್

'ಐದು ನದಿಗಳ ನಾಡು' ಪಂಜಾಬ್. ಇದು ಝೀಲಮ್, ಚೀನಾಬ್, ರಾವಿ, ಬಿಯಸ್ ಹಾಗೂ ಸಟ್ಲೆಜ್ ನದಿಗಳು ಹರಿಯುತ್ತಿದ್ದ ಅಖಂಡ ಪ್ರದೇಶವಾಗಿತ್ತು. ಭಾರತದ ವಿಭಜನೆಯಾದ ಮೇಲೆ ರಾವಿ, ಬಿಯಸ್, ಸಟ್ಲೆಜ್ ನದಿಗಳು ಹರಿಯುವ ಪ್ರದೇಶ ಮಾತ್ರ ಭಾರತದ ಪಾಲಿಗೆ ಬಂತು. ಉಳಿದ ಪ್ರದೇಶ ಪಾಕಿಸ್ತಾನದ ಅಂಗವಾಯಿತು.

ಭಾರತದ ವಾಯುವ್ಯ ಭಾಗದಲ್ಲಿರುವ ಪಂಜಾಬ್ ಪ್ರಾಚೀನ ಕಾಲದಿಂದ ಪರಕೀಯರ ದಾಳಿ, ವಲಸೆಗಳಿಗೊಳಗಾಗುತ್ತಿದ್ದ ತಾಣ.

ಇಲ್ಲಿಗೆ ಇತಿಹಾಸಪೂರ್ವ ಕಾಲದಲ್ಲಿ ಬಂದವರು ಆರ್ಯರು. ಇವರು ಬರುವ ಮೊದಲೇ ಈ ಪ್ರದೇಶದಲ್ಲಿ ಸಿಂಧೂ ಕಣಿವೆಯ ಸಂಸ್ಕೃತಿ ಬೆಳೆದಿತ್ತು. ಆರ್ಯರ ಅನಂತರ ಅನೇಕ ಶತಮಾನಗಳಾದ ಮೇಲೆ ಪರ್ಷಿಯದ ಒಂದನೆಯ ಡೇರಿಯಸ್‌ನ ಸಾಮ್ರಾಜ್ಯಕ್ಕೆ ಪಂಜಾಬಿನ ಸ್ವಲ್ಪ ಭಾಗ ಸೇರಿತ್ತು. ಅಲೆಗ್ಸಾಂಡರ್ ಕ್ರಿ.ಪೂ. 326ರಲ್ಲಿ ಇಲ್ಲಿ ದಾಳಿ ನಡೆಸಿದ.

ಕ್ರಿ.ಪೂ. 3ನೆಯ ಶತಮಾನದಿಂದ ಕ್ರಿ.ಶ. 10ನೆಯ ಶತಮಾನದ ವರೆಗೆ ಹೊರನಾಡಿನ ಆಕ್ರಮಣಕಾರರ ಒಂದು ಸರಣಿಯನ್ನು ಗುರುತಿಸಬಹುದು. ಈ ಕಾಲದಲ್ಲಿ ಪಾರಸೀಕರು, ಮೌರ್ಯರು, ಗ್ರೆಕೊ–ಬಾಕ್ಟ್ರಿಯನರು, ಶಕರು, ಪಾರ್ಥಿಯನರು, ಕುಶಾನರು ಮುಂತಾದವರ ಆಳ್ವಿಕೆಗೆ ಪಂಜಾಬು ಒಳಗಾಯಿತು. ಮಹಮ್ಮದೀಯರು ಮೊತ್ತಮೊದಲಿಗೆ ಪಂಜಾಬು ಪ್ರವೇಶಿಸಿದ್ದು 712ರಲ್ಲಿ; ಘಜ್ನಿ ಮಹಮುದ್ 10-11ನೆಯ ಶತಮಾನದಲ್ಲಿ ಪಂಜಾಬನ್ನು ಗೆದ್ದ. ಅನಂತರ ಘೋರಿ ಮಹಮ್ಮದ್ ದಾಳಿ ಮಾಡಿದ. ಈ ಅವಧಿಯಲ್ಲಿ ಪಂಜಾಬಿನಲ್ಲಿ ವ್ಯಾಪಿಸಿದ್ದ ಬೌದ್ಧಧರ್ಮ ಕ್ಷೀಣವಾಯಿತು. 1206ರಿಂದ 1526ರ ವರೆಗೆ ದೆಹಲಿಯ ಸುಲ್ತಾನರು ಪಂಜಾಬನ್ನು ಆಳಿದರು. 1526ರಲ್ಲಿ ನಡೆದ ಪಾಣಿಪತ್ ಯುದ್ಧದಲ್ಲಿ ಗೆದ್ದ ಬಾಬರ್ ಭಾರತದಲ್ಲಿ ಮೊಘಲ್ ಸಾಮ್ರಾಜ್ಯದ ಅಸ್ತಿವಾರ ಹಾಕಿದ. ಅಕ್ಬರ್ ಚಕ್ರವರ್ತಿಯ ಮರಣದ ವೇಳೆಗೆ ಪಂಜಾಬಿನಲ್ಲಿ ಸಿಕ್ಖರು ಪ್ರಬಲರಾಗತೊಡಗಿದರು. ಈ ವೇಳೆಗೆ ಗುರು ನಾನಕ್ ಸಿಕ್ಖ್ ಪಂಥಕ್ಕೆ ಭದ್ರ ತಳಹದಿ ಹಾಕಿದ್ದ.



1707ರಲ್ಲಿ ಪಂಜಾಬ್ ಮರಾಠರ ವಶವಾಯಿತು. ಇವರು ಮೂರನೆಯ ಪಾಣಿಪತ್ ಯುದ್ಧದಲ್ಲಿ ಸೋತಾಗ ಅಫ್ಘಾನಿಸ್ತಾನದ ದೊರೆ ಪಂಜಾಬನ್ನು ಆಕ್ರಮಿಸಿದ. ಈತನ ಮರಣಾನಂತರ ಸಿಕ್ಖರ ಬೇರೆ ಬೇರೆ ಗುಂಪುಗಳು ಬಿಟ್ಟಾದುವು. ರಣಜಿತ್ ಸಿಂಗ್ (1780-1839) ಬಲಿಷ್ಠ ದೊರೆಯಾಗಿ, ಸಿಕ್ಖರ ನಾಯಕನಾಗಿ ಆಳಿದ. ಅವನ ಅನಂತರ ಮತ್ತೆ ಪಂಜಾಬ್ ಅಶಾಂತಿಯ ಆಗರವಾಯಿತು. 1845ರಲ್ಲಿ ಹಾಗೂ 1848-49ರಲ್ಲಿ ಇಂಗ್ಲಿಷರು ಮತ್ತು ಸಿಕ್ಖರ ನಡುವೆ ಯುದ್ಧಗಳು ನಡೆದುವು. ಎರಡನೆಯ ಯುದ್ಧದಲ್ಲಿ ಸಿಕ್ಖರಿಗೆ ಸೋಲಾಯಿತು. ಅವರು ತಮ್ಮ ಸ್ವಾತಂತ್ರ್ಯವನ್ನು ಕಳೆದುಕೊಂಡರು; ವೀರರ ನೆಲೆಯಾಗಿದ್ದ ಐದು ನದಿಗಳ ನಾಡು, ಪಂಜಾಬ್ ಬ್ರಿಟಿಷ್ ಭಾರತಕ್ಕೆ ಸೇರಿತು.

ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಪಂಜಾಬ್ ಹಿರಿಯ ಪಾತ್ರ ವಹಿಸಿತು. 1919ರಲ್ಲಿ ಇಲ್ಲಿ ನಡೆದ ಜಲಿಯನ್‌ವಾಲಾ ಬಾಗ್ ಹತ್ಯಾಕಾಂಡ ಪ್ರಸಿದ್ಧ. ಭಾರತಕ್ಕೆ ಸ್ವಾತಂತ್ರ್ಯ ಬಂದ ವರ್ಷ ಪಂಜಾಬಿನ ವಿಭಜನೆಯಾದಾಗ ಅದು ಮತೀಯ ಕ್ಷೋಭೆಗೆ ಒಳಗಾಯಿತು. ನಿರಾಶ್ರಿತರ ಮತ್ತು ನೀರಾವರಿಯ ಸಮಸ್ಯೆಗಳು ರಾಜ್ಯವನ್ನು ಕಾಡಿದುವು. 1955ರಲ್ಲಿ ಅಕಾಲಿ ದಳದ ತಾರಾಸಿಂಗರ ನೇತೃತ್ವದಲ್ಲಿ ಪಂಜಾಬೀ ಭಾಷೆಯುಳ್ಳ ಪ್ರದೇಶ ಪ್ರತ್ಯೇಕ ರಾಜ್ಯವಾಗಬೇಕೆಂದು ಸಿಕ್ಖರು ಚಳುವಳಿ ಆರಂಭಿಸಿದರು. 1966ರಲ್ಲಿ ಈಗಿನ ಪಂಜಾಬ್ ರಾಜ್ಯ ರೂಪುಗೊಂಡಿತು. ಹಿಂದೀ ಆಡುವ ಭಾಗ ಹರ್ಯಾಣ ರಾಜ್ಯವಾಯಿತು.

ಇಂದಿನ ಪಂಜಾಬಿನ ಮೇರೆಗಳು ಜಮ್ಮು ಮತ್ತು ಕಾಶ್ಮೀರ, ಪಶ್ಚಿಮ ಪಾಕಿಸ್ತಾನ, ರಾಜಸ್ಥಾನ, ಹರ್ಯಾಣ ಹಾಗೂ ಹಿಮಾಚಲ ಪ್ರದೇಶ. ಮುಖ್ಯ ನಗರಗಳು : ಅಮೃತಸರ, ಲುಧಿಯಾನ, ಪಾಟಿಯಾಲ, ಜಲಂಧರ್, ಫಿರೋಜ್‌ಪುರ, ಕಪೂರ್ತಲ. ರಾಜ್ಯದಲ್ಲಿ 11 ಜಿಲ್ಲೆಗಳಿವೆ. ಚಂಡೀಗಢದಲ್ಲಿ ಪಂಜಾಬ್ ವಿಶ್ವವಿದ್ಯಾನಿಲಯ, ಪಾಟಿಯಾಲದಲ್ಲಿ ಪಂಜಾಬೀ ವಿಶ್ವವಿದ್ಯಾನಿಲಯ, ಲುಧಿಯಾನದಲ್ಲಿ ಪಂಜಾಬಿನ ಕೃಷಿ ವಿಶ್ವವಿದ್ಯಾನಿಲಯಗಳಿವೆ.

ಉತ್ತರಕ್ಕಿರುವ ಹಿಮಾಲಯ ಬೆಟ್ಟದ ಇಡೀ ರಾಜ್ಯ ಒಂದು ವಿಶಾಲ ಬಯಲು. ಮಧ್ಯೆ ಮಧ್ಯೆ ನದಿಗಳು ಹರಿಯುತ್ತವೆ. ನೀರಾವರಿಯೇ ಬೆಳೆಗಳಿಗೆ ಮುಖ್ಯ ಆಧಾರ. ಭಾರತದ ಗೋಧಿ ಕಣಜ ಪಂಜಾಬು. ಏಷ್ಯಾದಲ್ಲೇ ದೊಡ್ಡದಾದ ಭಾಕ್ರಾ ನಂಗಲ್, ಬಿಯಸ್ ಇಲ್ಲಿನ ಮುಖ್ಯ ನೀರಾವರಿ ಯೋಜನೆಗಳು. ಬಡಿ ದೊಅಬ್ ಕಾಲುವೆಯ ವಿದ್ಯುತ್ ಯೋಜನೆ ಪ್ರಮುಖ ವಿದ್ಯುತ್ ಉತ್ಪಾದನಾ ಮೂಲ.




ದುಡಿಮೆ ಕ್ರೀಡೆ : ಪಂಜಾಬಿನ ರೈತ



ಪಂಜಾಬಿನಲ್ಲಿ ಆಧುನಿಕ ಕೃಷಿ ಪದ್ಧತಿ


ಗೋಧಿ ಬಿಟ್ಟರೆ ರಾಜ್ಯದ ಇತರ ಮುಖ್ಯ ಬೆಳೆಗಳು ಧಾನ್ಯ, ಹತ್ತಿ, ಕಬ್ಬು, ಎಣ್ಣೆಬೀಜ. ಖನಿಜ ಉತ್ಪಾದನೆ ಅತ್ಯಲ್ಪ. ಹತ್ತಿ ಮತ್ತು ಉಣ್ಣೆ ವಸ್ತ್ರೋದ್ಯಮ, ಸಕ್ಕರೆಯ ಶುದ್ಧೀಕರಣ ಮುಂತಾದ ಹಿರಿಯ ಉದ್ಯಮಗಳು ಇಲ್ಲಿ ತಲೆಯೆತ್ತಿವೆ. ಜಲಂಧರ್‌ನಲ್ಲಿ ಕ್ರೀಡಾ ಉಪಕರಣಗಳ ಉದ್ಯಮವಿದೆ. ಎಂಜಿನಿಯರಿಂಗ್ ಮತ್ತು ವಿದ್ಯುತ್ ಉಪಕರಣಗಳು, ಹೊಲಿಗೆಯಂತ್ರ, ತೈಲ ಎಂಜಿನ್ ತಯಾರಿಕೆ ಮುಂತಾದ ಸಣ್ಣ ಪ್ರಮಾಣದ ಕೈಗಾರಿಕೆಗಳು ಈ ರಾಜ್ಯದಲ್ಲಿ ಬೆಳೆದಿವೆ.



ಮುಖ್ಯ ಮಂತ್ರಿತ್ವ :
ಪ್ರತಾಪ್‌ಸಿಂಗ್ ಕೈರಾನ್

ಪಂಜಾಬ್‌ನಲ್ಲಿ ಯೋಗ್ಯ ರೈಲು ಸಾರಿಗೆ ವ್ಯವಸ್ಥೆ ಇದೆ. ಅಮೃತಸರ, ಚಂಡೀಗಡಕ್ಕೆ ವಿಮಾನ ಸಂಪರ್ಕವೂ ಇದೆ.

17ನೆಯ ಶತಮಾನದಲ್ಲಿ ಫಿದಾಯಿ ಖಾನ್ ನಿರ್ಮಿಸಿದ ಪಿಂಜೋರೆ ಉದ್ಯಾನ ಒಂದು ರಮಣೀಯ ತಾಣ. ಇದು ಚಂಡೀಗಡದಿಂದ 14 ಮೈಲು ದೂರದಲ್ಲಿದೆ. ಪಲಮ್‌ಪುರ ರಾಜ್ಯದ ಒಂದು ಆರೋಗ್ಯಧಾಮ. ಕಾಂಗ್ರಾ ಕಣಿವೆಯಲ್ಲಿರುವ ವೈಜನಾಥ ಒಂದು ಗಿರಿಧಾಮ : ಗುರುಗೋವಿಂದ ಸಿಂಗನ ಹೆಸರು ಪಡೆದಿರುವ ಗೋವಿಂದ ಸಾಗರ ನಂಗಲ್ ಯೋಜನೆಯ ದೊಡ್ಡ ಜಲಾಶಯ. ಯೋಜನೆಯ ಪ್ರದೇಶದ ಬಳಿ ಏಷ್ಯದ ಎರಡನೆಯ ದೊಡ್ಡ ಕೃತಕ ಗೊಬ್ಬರ ಕಾರಖಾನೆ—ಹಿಂದೂಸ್ತಾನ್ ಕೆಮಿಕಲ್ಸ್ ಅಂಡ್ ಫರ್ಟಿಲೈಸರ್ಸ್ ಇದೆ.



ಪಂಜಾಬಿನ ಸಂಭ್ರಮದ ಹಬ್ಬ ವೈಸಾಖಿ. ಆಗ ಬಣ್ಣ ಬಣ್ಣದ ಉಡುಗೆ ತೊಟ್ಟ ಅಲ್ಲಿಯ ಪುರುಷರು ಭಾಂಗ್ಡಾ ನೃತ್ಯ ಆಡುತ್ತಾರೆ. ಹೆಂಗಸರು ಆಡುವ ನೃತ್ಯ ಗಿಡ್ಡಾ. ಇಲ್ಲಿ ಚಿರಖಾದ ಬಳಕೆ ಹೆಚ್ಚು. ಕಸೂತಿ ಮಾಡುವುದರಲ್ಲಿ ಪಂಜಾಬಿ ಮಹಿಳೆಯರು ನಿಪುಣರು. ಇಲ್ಲಿನ 'ತಂದೂರಿ ರೋಟಿ'. 'ತಂದೂರಿ ಕೋಳಿ' ಎಂಬ ಭಕ್ಷ್ಯ ಈಗ ಭಾರತದಲ್ಲೂ ವಿದೇಶಗಳಲ್ಲೂ ಪ್ರಸಿದ್ಧಿ ಪಡೆದಿದೆ.

ಮುಖ್ಯಮಂತ್ರಿ :
ಜೆಯಾಲ್‌ಸಿಂಗ್

ಸಿಕ್ಖ್ ಎಂದರೆ ಶಿಷ್ಯ. ಇವರ ಉಡುಗೆ, ತೊಡುಗೆ ವಿಶಿಷ್ಟ. ಹೆಸರಿನ ಕೊನೆಯಲ್ಲಿ ಸಿಂಗ್ ಎಂಬ ಪ್ರತ್ಯಯ ಇರುತ್ತದೆ. ಸಿಂಗ್ ಎಂದರೆ ಸಿಂಹ. ಕೇಶ, ಕಚ್ಛಾ, ಕರೇ (ಉಕ್ಕಿನ ಬಳೆ) ಕಿರಪಾಣ್ ಹಾಗೂ ಕಂಘಾ (ಹಣಿಗೆ)— ಇವರ ಐದು ಭೂಷಣಗಳು. ಗುರುದ್ವಾರ ಇವರ ದೇವಾಲಯ. ಸಿಕ್ಖರು ಸಮರದಲ್ಲಿ ಸಮರ್ಥರು, ಕ್ರೀಡಾಪ್ರಿಯರು ; ವ್ಯಾಪಾರ, ಕುಶಲ ಕಲೆಗಳಲ್ಲಿ ಪರಿಣತರು, ಶ್ರಮಜೀವಿಗಳು.

ನೋಡಿ : ಅಮೃತಸರ ; ಗಿಡ್ಡಾ ; ಚಂಡೀಗಡ ; ಜಲಂಧರ್ ; ಜಲಿಯನ್ ವಾಲಾ ಬಾಗ್ ; ಬಿಯಸ್

ಪಂಜಾಬೀ ಭಾಷೆ, ಸಾಹಿತ್ಯ

ಹಿಂದೀ, ಮರಾಠೀ ಮತ್ತು ಬಂಗಾಳೀ ಭಾಷೆಗಳಂತೆಯೇ ಪಂಜಾಬೀ ಭಾಷೆಯ ಮೂಲವನ್ನೂ 9–10ನೆಯ ಶತಮಾನಗಳಲ್ಲಿ ಗುರುತಿಸಬಹುದು. 12–13ನೆಯ ಶತಮಾನಗಳ ವೇಳೆಗೆ ಇದು ವಿಕಾಸಗೊಂಡು ತನ್ನದೇ ಆದ ಭಾಷಾ ವೈಶಿಷ್ಟ್ಯಗಳನ್ನು ಬೆಳೆಸಿಕೊಂಡಿತು. ಭಾರತಾರ್ಯ ಭಾಷಾ ಕುಟುಂಬಕ್ಕೆ ಸೇರುವ ಈ ಭಾಷೆಯನ್ನು ಭಾರತದ ಪಂಜಾಬ್ ಮತ್ತು ಈಗ ಪಾಕಿಸ್ತಾನದಲ್ಲಿರುವ ಪಶ್ಚಿಮ ಪಂಜಾಬಿನ ಜನ ಆಡುತ್ತಾರೆ.

ಪಂಜಾಬೀ ಸಾಹಿತ್ಯದ ಮೊತ್ತಮೊದಲ ಸಾಹಿತ್ಯ ಕೃತಿ ಫರೀದ್ ಶಕ್ಕರ್‌ಗಂಜ್ (1173–1266)ನಿಂದ ರಚಿತವಾದವು. ಅರಬೀ ಮತ್ತು ಪಾರಸೀ ಭಾಷೆಗಳ ಕ್ರಮಬದ್ಧ ಅಧ್ಯಯನ ಮಾಡಿದ್ದ ಇವನು ಪ್ರಾಚೀನ ಪಂಜಾಬಿಯಲ್ಲೂ ನುರಿತ ಲೇಖಕನಾಗಿದ್ದ. ಸಾಹಿತ್ಯ ಸೃಷ್ಟಿಗೆ ಬಹು ಭಾಷಾಜ್ಞಾನ ಮೂಲಾಧಾರ ಎಂದು ಪರಿಗಣಿಸಿದ್ದ ಶಕ್ಕರ್‌ಗಂಜ್, ವ್ರಜ ಮತ್ತು ಉರ್ದು ಭಾಷೆಗಳಲ್ಲೂ ಕಾವ್ಯ ರಚನೆ ನಡೆಸಿದ.

ಮಧ್ಯಕಾಲೀನ ಪಂಜಾಬೀ ಸಾಹಿತ್ಯವನ್ನು ನಾಲ್ಕು ಹಂತಗಳಾಗಿ ವಿಂಗಡಿಸಬಹುದು. 1 ನಾನಕನಿಗಿಂತ ಹಿಂದಿನಕಾಲ ಅಥವಾ ಪಂಜಾಬೀ ಸಾಹಿತ್ಯದ ಅಂಧಕಾರ ಯುಗ (1100ರಿಂದ 1500). 2 ಆರಂಭಕಾಲದ ಮೊಘಲರ ಯುಗ (1500–1699). ಈ ಅವಧಿಗೆ ಪಂಜಾಬೀ ಸಾಹಿತ್ಯ, ಸಂಸ್ಕೃತಿಗಳ ಸುವರ್ಣಯುಗವೆಂದು ಹೆಸರು. 3 ಅನಂತರದ ಮೊಘಲ್ ಯುಗ ಅಥವಾ ಕಲೆ ಸಾಹಿತ್ಯಗಳ ಅವನತಿಯ ಕಾಲ. 4 1849ರ ತನಕ ರಣಜಿತ್ ಸಿಂಗ್ ಯುಗ, ಸಂಕ್ರಮಣಯುಗ. ಇದಾದ ಅನಂತರ ಆಧುನಿಕ ಯುಗಾರಂಭ.

ಪಂಜಾಬಿನ ಸೃಜನಶೀಲತೆಯನ್ನು ಅದರ ಭೌಗೋಳಿಕ ಗಡಿಗಳಿಂದಾಚೆ ಹರಡುವುದರ ಮೂಲಕ ಪಂಜಾಬ್ ಹಾಗೂ ಭಾರತದ ಇತರ ಭಾಗಗಳೊಂದಿಗೆ ಬೌದ್ಧಿಕ ಸಂಪರ್ಕ ಸ್ಥಾಪಿಸಲು ಪ್ರಯತ್ನಿಸಿದ ಗುರುನಾನಕ್ (1469–1526) ಮಧ್ಯಕಾಲೀನ ಪಂಜಾಬಿನ ಅತ್ಯಂತ ಮಹತ್ವಪೂರ್ಣ ಲೇಖಕರಲ್ಲೊಬ್ಬ. ಮಧ್ಯಕಾಲೀನ ಪಂಜಾಬಿನ ಪ್ರಮುಖ ಕಾವ್ಯ ಸಂಪ್ರದಾಯಗಳು ಇವು : ಸಿಕ್ಖ ಗುರು ದರ್ಬಾರ್ ಕಾವ್ಯ, ಸೂಫಿಕಾವ್ಯ, ಕೀಸ್ಸಾ ಕಾವ್ಯ (ಪ್ರಣಯದ ಕಥೆ) ಮತ್ತು ವಾರ್ ಕಾವ್ಯ (ಹಾಡುಗಬ್ಬ). ಈ ಪ್ರತಿಯೊಂದು ಸಂಪ್ರದಾಯದಲ್ಲೂ ಬಹುಪಾಲು ಪ್ರಮುಖ ಕವಿಯನ್ನು

ದೊರೆಯುತ್ತದೆ. ಗುರು ದರ್ಬಾರಿನ ಕಾವ್ಯದಲ್ಲಿ ಗುರುನಾನಕ್, ಸೂಫಿ ಕಾವ್ಯದಲ್ಲಿ ಶಾಹ ಹುಸೇನ್, ಕಿಸ್ಸಾ ಕಾವ್ಯದಲ್ಲಿ ವಾರಿಸ್ ಶಾಹ್, ವಾರ್ ಕಾವ್ಯದಲ್ಲಿ ನಾದಿರ್ ಶಾಹ್ ಪ್ರಮುಖರು. ಮಧ್ಯಕಾಲೀನ ಯುಗದಲ್ಲಿ ಪಂಜಾಬೀ ಕಾವ್ಯದ ರೂಪಗಳೆಂದರೆ: ವಾರ್ (ಹಾಡುಗಬ್ಬ), ಕಾಫಿ (ಸೂಫಿ ಭಾವಗೀತೆ) ಹಾಗೂ ಕಿಸ್ಸಾ (ಪ್ರಣಯಗೀತೆ). ಈ ಎಲ್ಲ ಪಂಜಾಬಿ ಕಾವ್ಯ ರೂಪಗಳೂ ಒಂದಿಗರನ್ನೇ ಗಮನದಲ್ಲಿಟ್ಟುಕೊಂಡು ರಚಿಸಿದಂಥವು. ಯಾವುದೇ ಪ್ರಭಾವಿತ ಸಂಪ್ರದಾಯದಿಂದ ಪ್ರಯತ್ನಪೂರ್ವಕವಾಗಿ ಜನರ ಜೀವನದಲ್ಲಿ ಬೇರುಬಿಟ್ಟು ದೂರನಿಂತದ್ದೇ ಈ ಯುಗದ ಸಾಹಿತ್ಯದ ಲಕ್ಷಣ.

ಆಧುನಿಕ ಯುಗದಲ್ಲೂ ಕಾವ್ಯವೇ ಸೃಷ್ಟ್ಯಾತ್ಮಕ ಸಾಹಿತ್ಯದ ಕೇಂದ್ರವಾಗಿದೆ. ಭಾಯಿ ವೀರ್‌ಸಿಂಹರ ಕೃತಿಗಳಲ್ಲಿ ಹೊಸವಸ್ತು, ಹೊಸ ಅಭಿವ್ಯಕ್ತಿ ವಿಧಾನಗಳ ಅನ್ವೇಷಣೆಯನ್ನು ಕಾಣುತ್ತೇವೆ. ಇವರ ಪ್ರಾತಿನಿಧಿಕ ಕೃತಿ 'ಲಹರ್ ಹುಲಾರೇ' (ರಾಗ-ತರಂಗ). ಸಾಂಪ್ರದಾಯಿಕ ಶೈಲಿಯಿಂದ ಪಂಜಾಬೀ ಕಾವ್ಯವನ್ನು ಹೊರತಂದು, ಅದಕ್ಕೆ ಹೊಸ ಭಾಷೆ, ಹೊಸ ರೂಪ, ಹೊಸ ಪ್ರತಿಮಾ ವಿಧಾನಗಳನ್ನು ಕೊಟ್ಟ ಭಾಯಿ ವೀರ್ ಸಿಂಹರ ಕೊಡುಗೆ ಆಧುನಿಕ ಪಂಜಾಬೀ ಕಾವ್ಯಕ್ಕೆ ಅಮೂಲ್ಯವಾದದ್ದು. ಕಾವ್ಯದಲ್ಲಿ ಭಾವನಾ ತೀವ್ರತೆ ಮತ್ತು ಸಮೃದ್ಧ ಭಾಷೆಯನ್ನು ಅಳವಡಿಸಿದ ಮತ್ತೊಬ್ಬ ಕವಿ ಪ್ರೊ. ಪೂರನ್ ಸಿಂಹ. ಇವರ ಪ್ರತಿಭೆಯನ್ನು ಸಮಕಾಲೀನ ವಿಮರ್ಶಕರು ಸರಿಯಾದ ರೀತಿಯಲ್ಲಿ ಅರ್ಥಮಾಡಿಕೊಳ್ಳದೆ, ಕಟುವಾಗಿ ವಿಮರ್ಶಿಸಿದ್ದಾರೆ. ಇವರ 'ಖುಲೇ ಮೈದಾನ್' (ಗಡಿಯಿಲ್ಲದ ಭೂಮಿ) ಇಂದಿಗೂ ವಿಶಿಷ್ಟ ಕಾವ್ಯವಾಗಿ ಉಳಿದಿದೆ. ಅಮೆರಿಕದ ಕವಿ ವಾಲ್ಟ್ ವಿಟ್ಮನ್‌ನನ್ನು ಮೆಚ್ಚಿಕೊಂಡಿದ್ದ ಪೂರನ್‌ಸಿಂಹ ಪಂಜಾಬಿ ಮುಕ್ತ ಛಂದಸ್ಸನ್ನು ಜನಪ್ರಿಯಗೊಳಿಸಿದರು.

ಧನೀರಾಮ್ ಚಾತ್ರಿಕ್ ಆಧುನಿಕ ಪಂಜಾಬೀ ಕಾವ್ಯಕ್ಕೆ ವಾಸ್ತವಿಕತೆ ಮತ್ತು ಪಂಜಾಬಿ ಜಾನಪದದ ಶಕ್ತಿ, ಪರಿಚಿತ ಶೈಲಿಗಳನ್ನು ತಂದುಕೊಟ್ಟ ಕವಿ. ಪಂಜಾಬಿನ ಸಾಮಾಜಿಕ ಮತ್ತು ರಾಜಕೀಯ ಪ್ರಭಾವಗಳಿಗೆ ಒಗ್ಗಿಕೊಟ್ಟ ಮೋಹನ್ ಸಿಂಗ್, ಅಮೃತಾ ಪ್ರೀತಮ್ ಇವರ ಕಾವ್ಯದಲ್ಲಿ ವಸ್ತು, ಅಭಿವ್ಯಕ್ತಿಗಳ ವೈವಿಧ್ಯವನ್ನು ಕಾಣಬಹುದು. ಅಮೃತಾ ಪ್ರೀತಮ್ ಅವರ 'ಸುನೇ ಹಡೇ' (ಸಂದೇಶಗಳು), ಮೋಹನ್ ಸಿಂಹರ 'ಸಾವೇ ಪತ್ತರ್' (ಹಸಿರು ಎಲೆಗಳು) ಪ್ರಮುಖ ಕೃತಿಗಳು. ಸಮಕಾಲೀನ ಘಟನೆಗಳು ಇವರ ಮೇಲೆ ತುಂಬ ಪರಿಣಾಮ ಬೀರಿರುವುದನ್ನು ಕಾಣಬಹುದು. ಬಾವಾ ಬಲ್ವಂತ್, ಪ್ರೀತಮ್ ಸಿಂಹ ಸಫೀರ್ ಮತ್ತು ಪ್ರಭಜೋತ ಕೌರ್ 'ಪಬ್ಬಿ' ಇತರ ಪ್ರಮುಖ ಲೇಖಕರು.

ಆಧುನಿಕ ಯುಗದ ಅತ್ಯಂತ ಪ್ರತಿಭಾವಂತ ಕವಿಗಳಲ್ಲಿ ಹರಭಜನ್ ಸಿಂಹ (ಸಭುಷ್ಯನ ಛಾಪೆ) ಒಬ್ಬರು. ಕಾವ್ಯರೂಪದ ವಿಶಿಷ್ಟ ಸೌಂದರ್ಯವನ್ನು ಮೊತ್ತಮೊದಲ ಬಾರಿಗೆ ಗಮನಿಸಿ ಪಂಜಾಬೀ ಕಾವ್ಯಕ್ಕೆ ಹೊಸ ತಿರುವು ಕೊಟ್ಟವರು ಇವರು. ಇವರಿಗಿಂತ ಮೊದಲು ಪಂಜಾಬೀ ಕಾವ್ಯದ ಮೇಲೆ ಮಾರ್ಕ್ಸ್‌ವಾದೀ ಪ್ರಭಾವ ಉಂಟಾಗಿದ್ದು ಕಾವ್ಯ, ರಾಜಕೀಯ ಪ್ರಚಾರಕ್ಕೆ ಸಾಧನವಾಗಿ ಬಿಟ್ಟಿತ್ತು. ಹರಿಭಜನ್ ಸಿಂಹರಿಂದ ಪಂಜಾಬೀ ಕಾವ್ಯ ಪರಪ್ರಭಾವದಿಂದ ಮುಕ್ತವಾಗಿ ಸ್ವತಂತ್ರವಾಯಿತು. ಶಿವ ಕುಮಾರ್ (ಬಿರಹಾ), ಜಸ್ವಂತ್ ಸಿಂಹ ನೇಕಿ (ಅಸಲೀ ತೇ ಓಹಲೀ), ಎಸ್. ಎಸ್. ಮೀಶಾ (ದಸ್ತಕ್) ಮತ್ತು ಜಗ್‌ತಾರ್ ಸಿಂಹ (ಮಾಥ್ ಪತ್ಥರ್) ಇವರು ಸಮಕಾಲೀನರಲ್ಲಿ ಪ್ರಮುಖರು.

ಜನಪ್ರಿಯತೆಯಲ್ಲಿ ಕಾವ್ಯದ ಅನಂತರದ ಸ್ಥಾನ ಸಣ್ಣ ಕಥೆಗಳದು. ಕರ್ತಾರ್ ಸಿಂಹ ದುಗ್ಗಲ್, ಸಂತ್ ಸಿಂಹ ಸೇಖೋ ಮತ್ತು ಕುಲವಂತ ಸಿಂಹ್ ವಿರ್ಕ್ ಈ ಕ್ಷೇತ್ರದ ಪ್ರಮುಖ ಲೇಖಕರು.

ಪಂಜಾಬೀ ಸಾಹಿತ್ಯದಲ್ಲಿ ಕಾದಂಬರಿ ಇನ್ನೂ ಆರಂಭ ಸ್ಥಿತಿಯಲ್ಲಿದೆ. ನಾನಕ್ ಸಿಂಹ, ಜಸ್ವಂತ್ ಸಿಂಹ ಕನ್ವಲ್, ಸುರೀಂದ್ರ ಸಿಂಹ ನರುಲಾ, ಸಂತ್ ಸಿಂಹ ಸೇಖೋ, ಕರ್ತಾರ್ ಸಿಂಹ ದುಗ್ಗಲ್ ಮತ್ತು ಇತರರು ಈ ಕ್ಷೇತ್ರದ ಹಳಬರಲ್ಲಿ ಪ್ರಮುಖರು. ಕಥಾನಕ ಶೈಲಿಯ ಕಾದಂಬರಿಗಳನ್ನು ರಚಿಸುತ್ತಿರುವ ಆಧುನಿಕರಲ್ಲಿ ಗುರ್‌ದಯಾಲ್ ಸಿಂಹ, ಸುರಜೀತ್ ಸಿಂಹ ಸೇಠಿ, ದಲೀಪ್ ಕೌರ್ ದಿವಾಣಾ ಗಮನಾರ್ಹರು.

ಐ.ಸಿ. ನಂದಾ ಅವರಿಂದ ಆಧುನಿಕ ಪಂಜಾಬೀ ನಾಟಕ ಪ್ರಾರಂಭವಾಯಿತು. ಹರಚರಣ್ ಸಿಂಹ, ಬಲವಂತ್ ಗಾರ್ಗೀ, ಗುರ್‌ದಯಾಲ್ ಸಿಂಹ ಫೋಸ್ಲಾ, ಸಂತ ಸಿಂಹ ಸೇಖೋಮ್‌ರಿಂದ ನಾಟಕರಂಗದ ಸಂಪ್ರದಾಯ ಮುಂದುವರಿಯಿತು. ಈ ಪ್ರಕಾರ ಇನ್ನೂ ಪ್ರಬುದ್ಧ ಕೃತಿಗಳನ್ನು ಕೊಟ್ಟಿಲ್ಲ.

ಗದ್ಯ ಸಾಹಿತ್ಯ ತೀರ ಆರಂಭಾವಸ್ಥೆಯಲ್ಲಿದೆ. ಪೂರನ್ ಸಿಂಹ ('ಖುಲ್ಲೆ ಲೇಖ್'), ತೇಜಾ ಸಿಂಹ ('ಸಭ್ಯಾಚಾರ್'), ಜ್ಞಾನಿಗುರುದತ್ತ ಸಿಂಗ್ ('ಮೇರಾ ಪಿಂಡ್'), ಗುರುಭಕ್ಷ ಸಿಂಹ ('ಜಿಂದಗೀ ದೀ ರಾಸ್') - ಈ ಕ್ಷೇತ್ರದ ಗಮನಾರ್ಹ ಲೇಖಕರು. ವಿಮರ್ಶಾತ್ಮಕ ಸಾಹಿತ್ಯ ಇನ್ನೂ ಬೆಳೆದಿಲ್ಲ. ಸಂತ್ ಸಿಂಗ್ ಸೇಖೋಂ, ಹರಭಜನ್ ಸಿಂಗ್, ಗೋಪಾಲ್ ಸಿಂಹ, ಅತ್ತರ್‌ಸಿಂಗ್ ಈ ಕ್ಷೇತ್ರದಲ್ಲಿ ಹೆಸರಿಸಬಹುದಾದ ಲೇಖಕರು.

ಸಮಕಾಲೀನ ಪಂಜಾಬೀ ಸಾಹಿತ್ಯ ಇನ್ನೂ ಕಲಾತ್ಮಕ ಅಭಿವ್ಯಕ್ತಿ ಮತ್ತು ಬೌದ್ಧಿಕ ಪ್ರಬುದ್ಧತೆಯನ್ನು ಗಳಿಸಬೇಕಾಗಿದೆ.

ಪಂಡಿತಾ ರಮಾಬಾಯಿ

ಹತ್ತೊಂಬತ್ತನೆಯ ಶತಮಾನದ ದ್ವಿತೀಯ ಭಾಗ; ಸ್ತ್ರೀ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹವಿರಲಿಲ್ಲ. ಅಂಥ ವಾತಾವರಣದಲ್ಲಿ ಸಂಸ್ಕೃತ, ಮರಾಠೀ ಕಲಿತಳು; ಕ್ರೈಸ್ತ ಧರ್ಮಕ್ಕೆ ಮತಾಂತರ ಹೊಂದಿದಳು; ವಿದೇಶಗಳಿಗೂ ಹೋಗಿಬಂದಳು. ಸ್ತ್ರೀಯರ ಏಳಿಗೆಗಾಗಿ ಸಮಾಜ ಸ್ಥಾಪಿಸಿ ದುಡಿದಳು. ಇಂಥ ಸಾಹಸಮಯ ಜೀವನ ರಮಾಬಾಯಿಯದು.

ರಮಾಬಾಯಿ ತಂದೆ ಅನಂತಶಾಸ್ತ್ರೀ ಡೋಂಗ್ರೆ, ಕರ್ನಾಟಕದವರು. ಖ್ಯಾತ ಸಂಸ್ಕೃತ ವಿದ್ವಾಂಸರು. ತಮ್ಮ ಹೆಂಡತಿಗೆ ಸಂಸ್ಕೃತ ಕಲಿಸಿದ್ದಕ್ಕಾಗಿ ಸಂಪ್ರದಾಯಸ್ಥರು ಅವರಿಗೆ ಬಹಿಷ್ಕಾರ ಹಾಕಿದರು. ಇದರಿಂದಾಗಿ ಡೋಂಗ್ರೆ ಕುಟುಂಬ ತಾನಿದ್ದ ದಕ್ಷಿಣ ಕನ್ನಡವನ್ನು ಬಿಟ್ಟು, ಚಿಕ್ಕಮಗಳೂರು ಜಿಲ್ಲೆಯ ಗಂಗಾಮೂಲ ಅರಣ್ಯದಲ್ಲಿ ನೆಲೆಸಿತು. ಕೆಲವರು ಅಲ್ಲಿಗೂ ಬಂದು ಅವರಿಗೆ ಕಿರುಕುಳ ಕೊಟ್ಟರು. ಅವರಿಂದ ಪಾರಾಗಲು ಆ ಕುಟುಂಬ ಯಾತ್ರೆ ಹೊರಟಿತು. ಆಗ ರಮಾಬಾಯಿ ಕೆಲವೇ ತಿಂಗಳ ಎಳೆಯ ಮಗು.

ರಮಾಬಾಯಿ ಮಗುವಾಗಿದ್ದಾಗಲೇ ತಾಯಿಯಿಂದ ಪಾಣಿನಿಯ ಸೂತ್ರಗಳನ್ನೂ, ಭಾಗವತದ ಸಹಸ್ರಾರು ಪದ್ಯಗಳನ್ನೂ ಕಲಿತು, ಬಾಯಿಪಾಠ ಮಾಡಿದಳು. ಅನಂತರ ಮರಾಠೀ ಕಲಿತಳು. ಅನಂತಶಾಸ್ತ್ರಿಯವರು ಹೋದೆಡೆಯಲ್ಲೆಲ್ಲ ಪಂಡಿತರು ಅವರ ವಿದ್ವತ್ತನ್ನು ಮೆಚ್ಚಿ ಆದರಿಸಿದರು. ಆದರೆ ಸ್ತ್ರೀ ವಿದ್ಯಾಭ್ಯಾಸ, ಪ್ರೌಢ ವಿವಾಹದ ಬಗೆಗೆ ಅವರಿಗಿದ್ದ ಆಸಕ್ತಿ, ದೃಢ ನಿಲುವಿನಿಂದಾಗಿ ಅವರು ಹೋದೆಡೆಗಳಲ್ಲೆಲ್ಲ ಅವರಿಗೆ ವಿರೋಧವೂ ಏರ್ಪಡುತ್ತಿತ್ತು. ಹೀಗಾದಾಗಲೆಲ್ಲ ಅವರು ಆ ಸ್ಥಳ



'ಪಂಡಿತಾ'

ಬಿಟ್ಟು ಬೇರೆಡೆಗೆ ಹೋಗುತ್ತಿದ್ದರು. ಹೀಗೆ ಕಷ್ಟ ಕಾರ್ಪಣ್ಯಗಳಿಗೆ ಒಳಗಾದ ಶಾಸ್ತ್ರಿಯವರೂ ಅವರ ಹೆಂಡತಿಯೂ ಹಿರಿಯ ಮಗಳೂ ತೀರಿಕೊಂಡರು.

ರಮಾಬಾಯಿ ಸೋದರ ಶ್ರೀನಿವಾಸನೊಡನೆ ಯಾತ್ರೆ ಮುಂದುವರಿಸಿದರು. ಕಲ್ಕತ್ತೆಯಲ್ಲಿ ಆಕೆಯ ವಿದ್ವತ್ತಿಗೆ ಮನ್ನಣೆ ದೊರಕಿತು. 1878ರಲ್ಲಿ ಆಕೆಗೆ 'ಪಂಡಿತಾ' ಮತ್ತು 'ಸರಸ್ವತಿ' ಬಿರುದುಗಳು ಲಭಿಸಿದುವು. ರಮಾಬಾಯಿ ಅಸ್ಸಾಂ, ಬಂಗಾಳಗಳಲ್ಲಿ ಭಾಷಣ ಪ್ರವಾಸ ಕೈಗೊಂಡರು. ಆಕೆಯ ಕೀರ್ತಿ ಬೇಗನೆ ಹಬ್ಬಿತು.

1880ರಲ್ಲಿ ಶ್ರೀನಿವಾಸನೂ ಮೃತನಾಗಿ ರಮಾಬಾಯಿ ಏಕಾಕಿಯಾದರು. ಅನಂತರ ಬಿಪಿನ್ ಬಿಹಾರಿದಾಸ್ ಮೇಧಾವಿ ಎಂಬವರನ್ನು ಮೆಚ್ಚಿ ವಿವಾಹವಾದರು. ಅದು ಅಂತರ್ಜಾತೀಯ ವಿವಾಹ. ಇವರ ವಿವಾಹ ಜೀವನ ಕೆಲ ಕಾಲ ಸುಖಮಯವಾಗಿತ್ತು. ಆದರೆ ಮಗಳು ಮನೋರಮೆಯ ಜನನದ ತರುವಾಯ 1882ರಲ್ಲಿ ಮೇಧಾವಿ ತೀರಿಕೊಂಡರು. ರಮಾಬಾಯಿ ಇದರಿಂದ ಕಂಗೆಡಲಿಲ್ಲ. ಜೀವನ ನಿರ್ವಹಣಕ್ಕೆ ಇಂಗ್ಲಿಷ್ ಅವಶ್ಯವೆಂದು ಅದನ್ನು ಕಲಿತರು. ಮಗಳೊಡನೆ ಪುಣೆಗೆ ಬಂದರು. ಸಮಾಜ ಸುಧಾರಕರಾದ ಮಹದೇವ ಗೋವಿಂದ ರಾನಡೆ, ಭಾಂಡಾರ್‌ಕರ್ ಮುಂತಾದವರ ಪರಿಚಯ ಮಾಡಿಕೊಂಡು ಹಿಂದೂ ಮಹಿಳೆಯರ ಉದ್ಧಾರಕ್ಕಾಗಿ ಆರ್ಯ ಮಹಿಳಾ ಸಮಾಜ ಆರಂಭಿಸಿದರು. ಅವರ ಚಟುವಟಿಕೆಗಳನ್ನು ಮುಂದುವರಿಸಲು, ವಿಸ್ತರಿಸಲು ಅವಶ್ಯವಾದ ಸಹಾಯ ಸಂಪತ್ತಿಯನ್ನು ಒದಗಿಸಿಕೊಳ್ಳುವ ಉದ್ದೇಶದಿಂದ 1883ರಲ್ಲಿ ತಮ್ಮ ಮಗಳೊಡನೆ ಇಂಗ್ಲೆಂಡಿಗೆ ಹೋದರು. ಚೆಲ್‌ಟನ್‌ಹಾಮ್‌ನ ಮಹಿಳಾ ಕಾಲೇಜಿನಲ್ಲಿ ಸಂಸ್ಕೃತ ಅಧ್ಯಾಪಕಿಯಾಗಿ ಕೆಲಸ ಮಾಡುತ್ತ ಅಲ್ಲೇ ಆಂಗ್ಲ ಸಾಹಿತ್ಯ, ವಿಜ್ಞಾನ, ಗಣಿತಶಾಸ್ತ್ರಗಳನ್ನು ಅಭ್ಯಸಿಸಿದರು. ಈ ಅವಧಿಯಲ್ಲೇ ಕ್ರೈಸ್ತಮತವನ್ನು ಅವಲಂಬಿಸಿದರು.

1886ರಲ್ಲಿ ಅಮೆರಿಕಕ್ಕೆ ಹೋದರು. ಭಾಷಣ ಪ್ರವಾಸ ಕೈಗೊಂಡರು. 1887ರಲ್ಲಿ 'ರಮಾಬಾಯಿ ಸಂಘ'ವನ್ನು ಸ್ಥಾಪಿಸಿದರು. ಭಾರತದಲ್ಲಿ ತಾನು ಸ್ಥಾಪಿಸಬೇಕೆಂದಿದ್ದ ಮಹಿಳಾ ಮಂದಿರ, ಶಾಲೆ ಇವುಗಳ ಬಗೆಗೆ ವಿಪರೀತ ಧನಸಹಾಯ ದೊರಕಿಸಿಕೊಂಡರು. 'ಹಿಂದೂ ಕುಲೀನ ಮಹಿಳೆ' ಎಂಬ ಅವರ ಕೃತಿ ಭಾರತೀಯ ಮಹಿಳೆಯ ಏಳಿಗೆಗಾಗಿ ಪಶ್ಚಿಮದಲ್ಲಿ ಆಸಕ್ತಿ ಹುಟ್ಟಿಸಿತು.

ಭಾರತಕ್ಕೆ ಮರಳಿದ ರಮಾಬಾಯಿ ಮುಂಬಯಿಯಲ್ಲಿ ವಿಧವೆಯರಿಗಾಗಿ 'ಶಾರದಾ ಸದನ' ಪ್ರಾರಂಭಿಸಿದರು. ವೆಚ್ಚ ಕಡಮೆಮಾಡುವ ಉದ್ದೇಶದಿಂದ ಸಂಸ್ಥೆಯನ್ನು 1890ರಲ್ಲಿ ಪುಣೆಗೆ ವರ್ಗಾಯಿಸಿದರು. ಸದನದ ನಿವಾಸಿಗಳು ಕ್ರೈಸ್ತಮತಕ್ಕೆ ಸೇರಿದ್ದನ್ನು ಕಂಡು ತಿಲಕ್ ಮೊದಲಾದವರು ಸದನದ ಚಟುವಟಿಕೆಗಳ ವಿಚಾರದಲ್ಲಿ ವಿರೋಧ ವ್ಯಕ್ತಪಡಿಸಿದರು. ಆದರೂ ಆಕೆ ಅಳುಕದೆ, ತಮ್ಮ ಕೆಲಸ ಮುಂದುವರಿಸಿದರು.

1896ರಲ್ಲಿ ಮಧ್ಯಪ್ರಾಂತ್ಯ ಮತ್ತು 1900ರಲ್ಲಿ ಗುಜರಾತ್, ಕಾಠೆವಾಡಗಳಲ್ಲಿ ಬರಗಾಲ ತಲೆದೋರಿತು. ಆಗ ರಮಾಬಾಯಿ ಸಲ್ಲಿಸಿದ ಸೇವೆ ಸ್ಮರಣೀಯ.

ಪುಣೆಯಿಂದ 30 ಮೈಲು ದೂರದಲ್ಲಿರುವ ಖೆಡ್ ಎಂಬಲ್ಲಿ ಮುಕ್ತಿ ಸದನ ತೆರೆದರು. ಇದಕ್ಕೆ ಸೇರಿದಂತೆ ಕೃಪಾ ಸದನವೂ ಸ್ಥಾಪಿತವಾಯಿತು.

1898ರಲ್ಲೊಮ್ಮೆ ಅಮೆರಿಕಕ್ಕೆ ಭೇಟಿ ನೀಡಿ ಸ್ವಲ್ಪ ಸಮಯದಲ್ಲೆ ಹಿಂದಿರುಗಿದರು. ಶಾರದಾ ಸದನವನ್ನೂ ಖೆಡ್‌ನಲ್ಲೇ ನೆಲೆಗೊಳಿಸಿದರು. ಮಹಿಳೆಯರ ಸೇವೆಯೇ ಅವರ ಜೀವನದ ಧ್ಯೇಯವಾಯಿತು.

1921ರಲ್ಲಿ ಅವರ ಮಗಳು ನಿಧನಳಾದಳು. ಆಗಲೂ ಅವರು ದುಃಖಪಡಲಿಲ್ಲ. ತಮ್ಮ ಕರ್ತವ್ಯ ನಿರ್ವಹಣೆ, ಆಧ್ಯಾತ್ಮಿಕ ಸಾಧನೆಗಳನ್ನು ಮುಂದುವರಿಸಿದರು. ಜೀವನದುದ್ದಕ್ಕೂ ಅವಿರತ ದುಡಿದ ಪಂಡಿತಾ ರಮಾಬಾಯಿ ತಮ್ಮ 64ನೆಯ ವಯಸ್ಸಿನಲ್ಲಿ 1922 ಏಪ್ರಿಲ್ 5ರಂದು ಕಾಲವಾದರು.

ಪಂಢರಾಪುರ

ಜಾನುದೇವ – ಮುಕ್ತಾಬಾಯಿಯರ ಮಗ ಪುಂಡಲೀಕ. ಹೆತ್ತವರಿಗೆ ವಯಸ್ಸಾಗಿತ್ತು. ಆದರೆ ಪುಂಡಲೀಕ ಅವರಿಂದಲೂ ಕೆಲಸ ಮಾಡಿಸುತ್ತಿದ್ದ, ದಂಡಿಸುತ್ತಿದ್ದ. ಒಮ್ಮೆ ಈ ಮೂವರೂ ಯಾತ್ರೆಯಲ್ಲಿದ್ದಾಗ, ಪ್ರೀತಿಯಿಂದ ತಂದೆ ತಾಯಿಯರ ಸೇವೆ ಮಾಡುತ್ತಿದ್ದ ಮೋಚಿ ರೋಹಿದಾಸನನ್ನು ಪುಂಡಲೀಕ ಕಂಡ. ಆ ದೃಶ್ಯ ಅವನ ಮನಸ್ಸಿನ ಮೇಲೆ ಪರಿಣಾಮ ಉಂಟುಮಾಡಿತು. ಹೆತ್ತವರನ್ನು ಪೀಡಿಸುವುದು ಮಹಾಪಾತಕ ಎನಿಸಿ, ಪುಂಡಲೀಕ ತನ್ನ ತಪ್ಪು ತಿದ್ದಿಕೊಂಡ. ಅವಿರತವಾಗಿ ಹೆತ್ತವರ ಸೇವೆಯಲ್ಲಿ ತೊಡಗಿದ. ಒಮ್ಮೆ ಕೃಷ್ಣ, ರುಕ್ಮಿಣಿ ಇವನ ಮನೆಗೆ ಬಂದರು. ತಂದೆತಾಯಿಯ ಸೇವೆ ಮಾಡುತ್ತಿದ್ದ ಪುಂಡಲೀಕ ತಾನು ಮಾಡುತ್ತಿದ್ದ ಸೇವೆಯನ್ನು ನಿಲ್ಲಿಸಲಿಲ್ಲ. ಅದು ಮುಗಿದ ಮೇಲೆ ಬಂದು ಕೃಷ್ಣನ ಪೂಜೆ ಮಾಡಿದ. ಅವನ ಪ್ರಾರ್ಥನೆಯಂತೆ ಕೃಷ್ಣ ಅಲ್ಲಿಯೇ ನೆಲೆಸಿದ. ಪುಂಡಲೀಕನ ಊರು ಪುಂಡಲೀಕಪುರ ಅಥವಾ ಪುಂಡರೀಕಪುರ ಎನಿಸಿತು. ಅದು ಇಂದಿನ ಪಂಢರಾಪುರ.

–ಪಂಢರಾಪುರವನ್ನು ಕುರಿತ ದಂತಕಥೆ ಇದು.

ಮಹಾರಾಷ್ಟ್ರ ರಾಜ್ಯದಲ್ಲಿರುವ ಪಂಢರಾಪುರ ಭೀಮಾ ನದಿಯ ದಡದಲ್ಲಿದೆ. ವಿಠಲ ಅಥವಾ ವಿಠೋಬ ದೇವಸ್ಥಾನ ಇಲ್ಲಿಯ ಪ್ರಮುಖ ಆಕರ್ಷಣೆ. 350 ಅಡಿ ಉದ್ದ 170 ಅಡಿ ಅಗಲದ ಈ ದೇವಾಲಯಕ್ಕೆ ಆರು ಬಾಗಿಲುಗಳಿವೆ. ಮುಂಬಾಗಿಲನ್ನು 13ನೆಯ ಶತಮಾನದಲ್ಲಿದ್ದ ಮಹಾರಾಷ್ಟ್ರದ ವಿಖ್ಯಾತ ವೈಷ್ಣವ ಸಂತನ ಹೆಸರಿನಿಂದ 'ನಾಮದೇವನ ಬಾಗಿಲು' ಎನ್ನುತ್ತಾರೆ. ಮೊದಲನೆಯ ಮೆಟ್ಟಲ ಬಳಿ ಈತನ ಎದೆಯ



ವಿಠೋಬ

[illegible] ವಿನ್ಯಾಸವಿದೆ. ಇಲ್ಲಿ ನಾಮದೇವನ ಸಮಾಧಿ ಇದೆ ಎನ್ನುತ್ತಾರೆ. ವಿಠಲನ ವಿಗ್ರಹ ಸುಮಾರು 3 ಅಡಿ 9 ಅಂಗುಲ ಎತ್ತರವಿದೆ. ವಿಠಲ ದೇವಾಲಯದ ಹಿಂದುಗಡೆ ರುಕ್ಮಿಣೀ ಮಂದಿರವಿದೆ.

ವಿಠಲ ದೇವಸ್ಥಾನದಿಂದ ಸುಮಾರು 500 ಗಜ ದೂರದಲ್ಲಿ ಪುಂಡಲೀಕ ಆಲಯವಿದೆ.

ಕೃಷ್ಣ ಜನ್ಮಾಷ್ಟಮಿ ಇಲ್ಲಿ ವೈಭವದಿಂದ ಜರಗುವ ಉತ್ಸವ. ಚೋಖಮೇಳ, ತುಕಾರಾಂ, ಜ್ಞಾನೇಶ್ವರ, ಏಕನಾಥ, ಜನಾಬಾಯಿ, ಗೋರ ಕುಂಬಾರ ಮೊದಲಾದ ಖ್ಯಾತ ಸಂತರು ವಿಠಲನ ಮಹದ್ಭಕ್ತರು.

ಪಂಪ

ನೋಡಿ : ಸಂಪುಟ ೫

ಪಟ್ಟದಕಲ್ಲು

ನೋಡಿ : ಸಂಪುಟ ೫

ಪಟ್ಟಾಭಿ ಸೀತಾರಾಮಯ್ಯ

ವೈದ್ಯಕೀಯ ವೃತ್ತಿಯಿಂದ ಜೀವನ ಆರಂಭಿಸಿ, ಅನಂತರ ಭಾರತ ಸ್ವಾತಂತ್ರ್ಯ ಹೋರಾಟಕ್ಕಾಗಿ ತಮ್ಮ ಬಾಳನ್ನು ಸಂಪೂರ್ಣವಾಗಿ ವಿನಿಯೋಗಿಸಿದವರು ಪಟ್ಟಾಭಿ ಸೀತಾರಾಮಯ್ಯ.



ಪೂಸಲು ಚಿತ್ರ : ಪಟ್ಟಾಭಿ

ಹುಟ್ಟಿದ್ದು 1880 ನವೆಂಬರ್ 24ರಂದು. ಆಂಧ್ರ ಪ್ರದೇಶದಲ್ಲಿ ವೈದ್ಯಕೀಯ ವಿದ್ಯೆಯಲ್ಲಿ ಪದವಿ ಪಡೆದು ಮಚಲಿಪಟ್ಟಣದಲ್ಲಿ ವೈದ್ಯವೃತ್ತಿ ಆರಂಭಿಸಿದರು. ರಾಜಕೀಯದಲ್ಲಿ ಆಸಕ್ತಿ ಬೆಳೆದಂತೆ ವೃತ್ತಿಯಲ್ಲಿ ಆಸಕ್ತಿ ಕುಗ್ಗಿತು. ಕಾಂಗ್ರೆಸನ್ನು ಸೇರಿದರು, ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದರು. 1916ರಲ್ಲಿ ಅಖಿಲ ಭಾರತ ಕಾಂಗ್ರೆಸ್ ಸಮಿತಿಗೆ ಅನಂತರ ಕಾಂಗ್ರೆಸ್ ಕಾರ್ಯಕಾರಿ ಸಮಿತಿಗೆ ಸದಸ್ಯರಾಗಿ ಆರಿಸಲ್ಪಟ್ಟರು.

'ಜನ್ಮಭೂಮಿ' ಇಂಗ್ಲಿಷ್ ವಾರಪತ್ರಿಕೆ ಸಂಪಾದಕರಾಗಿ ಆಂಧ್ರ ಪ್ರದೇಶದ ಸುಶಿಕ್ಷಿತರಲ್ಲಿ ರಾಜಕೀಯ ಪ್ರಜ್ಞೆಯನ್ನು ಬೆಳೆಸಿದರು. ತಮ್ಮ ರಾಜಕೀಯ ಚಟುವಟಿಕೆಗಳ ಫಲವಾಗಿ ಅವರು ಹಲವಾರು ಬಾರಿ ಸೆರೆಮನೆ ಸೇರಬೇಕಾಯಿತು. ಅಹಮದ್ ನಗರದ ಕೋಟೆಯಲ್ಲಿ ಸುಮಾರು ಮೂರು ವರ್ಷ ಕಾಲ ಗಾಂಧೀಜೀ ಮತ್ತಿತರರೊಂದಿಗೆ ಬಂಧನದಲ್ಲಿದ್ದರು. 1948ರಲ್ಲಿ ಅವರು ಜಯಪುರದ ಕಾಂಗ್ರೆಸ್ ಅಧಿವೇಶನಕ್ಕೆ ಅಧ್ಯಕ್ಷರಾದರು.

ಗಾಂಧೀಜಿಯ ತತ್ತ್ವಗಳಲ್ಲಿ ಪಟ್ಟಾಭಿಯವರಿಗೆ ತುಂಬ ನಂಬಿಕೆ, ಶ್ರದ್ಧೆ. ಅವನ್ನು ಕುರಿತು ಅವರು ಗ್ರಂಥಗಳನ್ನು ಬರೆದರು. ಗಾಂಧೀ ತತ್ತ್ವದ ವ್ಯಾಖ್ಯಾನಕಾರ ಎಂಬ ಪ್ರಶಂಸೆಗೆ ಪಾತ್ರರಾದವರು. ಕಾಂಗ್ರೆಸ್ಸಿನ ಇತಿಹಾಸವನ್ನು ಕುರಿತು ಅವರು ಬರೆದಿರುವ ಬೃಹತ್‌ಗ್ರಂಥ ರಾಷ್ಟ್ರೀಯ ಚಳುವಳಿಯ ಉಗಮ, ಬೆಳವಣಿಗೆ ಕುರಿತಾದ ಪ್ರಾಮಾಣಿಕ ಕೃತಿ. 'ಗಾಂಧಿಯಿಸಮ್ ಅಂಡ್ ಸೋಷಲಿಸಂ', 'ಗಾಂಧೀ ಅಂಡ್ ಗಾಂಧೀಯಿಸಮ್', ಮುಂತಾದುವು ಅವರ ಇತರ ಗ್ರಂಥಗಳು.

ಪಟ್ಟಾಭಿ ಸೀತಾರಾಮಯ್ಯನವರು 1959 ಡಿಸೆಂಬರ್ 17ರಂದು ನಿಧನರಾದರು.

ಪಟ್ನಾ

ಇಂದಿನ ಪಟ್ನಾ ನಗರಕ್ಕೆ 'ಕುಸುಮಗಳ ಪಟ್ಟಣ', 'ಕುಸುಮಾಪುರ', 'ಪಾಟಲಿಪುತ್ರ', 'ಪಾಟಲಿಪುರ' ಎಂಬ ಹೆಸರುಗಳೂ ಇವೆ (ಪಾಟ್ನಾ ಎಂದೂ ಉಚ್ಚರಿಸುತ್ತಾರೆ). ಇದು ಬಿಹಾರ್ ರಾಜ್ಯದ ರಾಜಧಾನಿ.

ಪ್ರಾಚೀನ ಪಟ್ನಾ ಭಾರತದ ಹಿಂದಿನ ಭವ್ಯ ಸಾಮ್ರಾಜ್ಯಗಳಾದ ಮೌರ್ಯ ಹಾಗೂ ಗುಪ್ತ ರಾಜ್ಯಗಳ ರಾಜಧಾನಿಯಾಗಿತ್ತು. ಸುಮಾರು ಕ್ರಿ. ಪೂ. 302ರಲ್ಲಿ ಸಂದರ್ಶಿಸಿದ್ದ ಗ್ರೀಕ್ ರಾಯಭಾರಿ ಮೆಗಾಸ್ತನೀಸ್ ತನ್ನ ಬರೆಹದಲ್ಲಿ ಇದನ್ನು 'ಪಾಲಿಬೋತ್ರ' ಎಂದು ಕರೆದಿದ್ದಾನೆ; ಇದರ ವೈಭವವನ್ನು ವರ್ಣಿಸಿದ್ದಾನೆ. ಅಶೋಕನ ಕಾಲದಲ್ಲಿ ಈ ನಗರ ತುಂಬ ಉಚ್ಛ್ರಾಯ ಸ್ಥಿತಿಗೆ ಬಂತು. ಇಲ್ಲಿಂದ ಅವನ ಮತ ಪ್ರಚಾರಕರು ಹೊರಟರು. ಶಾಸನಗಳು ಘೋಷಿಸಲ್ಪಟ್ಟುವು. ಆಗಿನ ಪಟ್ನಾ ಗಂಗಾ ಮತ್ತು ಶೋಣಾ ನದಿಗಳ ನಡುವಣ ಭೂಭಾಗದಲ್ಲಿ ಇದ್ದಿತು. ಗುಪ್ತವಂಶದ ಎರಡನೆಯ ಚಂದ್ರಗುಪ್ತ ತನ್ನ ರಾಜಧಾನಿಯನ್ನು ಪಾಟಲಿಪುರದಿಂದ ವರ್ಗಾಯಿಸಿದ. ಅನಂತರ ಇದು ಪ್ರವಾಹ ಮತ್ತು ಬೆಂಕಿಗಳ ಹಾವಳಿಯಿಂದ ನಾಶಹೊಂದಿತು. ಆ ಮೇಲೆ ಈ ನಗರದ ಪುನರ್ನಿರ್ಮಾಣವಾಯಿತು. 6ನೆಯ ಶತಮಾನದಲ್ಲಿ ಹೂಣರು ಇದನ್ನು ಕೊಳ್ಳೆಹೊಡೆದರು.

ಪ್ರಾಚೀನ ಪಟ್ನಾ ಗಂಗಾನದಿಯ ಹೂಳಿನಡಿಯಲ್ಲಿ ಮುಚ್ಚಿಹೋಗಿದೆ. ಇದರ ಕೆಲವು ಭಾಗಗಳನ್ನು ಅಗೆದು ತೆಗೆಯಲಾಗಿದೆ. ಅಂಥ ಅವಶೇಷಗಳಲ್ಲಿ, ಅಶೋಕನು ಕಟ್ಟಿಸಿದ್ದ ನೂರು ಕಂಬಗಳ ಸಭಾಂಗಣ ಮುಖ್ಯವಾದದ್ದು.

16ನೆಯ ಶತಮಾನದಲ್ಲಿ ಷೇರ್ ಷಾ ಪಟ್ನಾ ನಗರವನ್ನು ತನ್ನ ರಾಜಧಾನಿಯಾಗಿ ಮಾಡಿಕೊಂಡು ಒಂದು ಕೋಟೆ ಕಟ್ಟಿಸಿದ. ಅಕ್ಬರ್ ಅದನ್ನು ವಶಪಡಿಸಿಕೊಂಡ ಮೇಲೆ ಪಟ್ನಾ ಒಂದು ಮುಖ್ಯ ವಾಣಿಜ್ಯ ಕೇಂದ್ರವೂ ಆಯಿತು. ವಿಸ್ತಾರವಾದ ನಗರವಾಗಿ ರೂಪುಗೊಂಡಿತು. 1763ರಲ್ಲಿ ಪಟ್ನಾ ಬ್ರಿಟಿಷರ ಕೈಸೇರಿತು.



'ಕುಸುಮಗಳ ಪಟ್ಟಣ' : ಪಟ್ನಾ

ಗಂಗಾನದಿಯ ಬಲದಂಡೆಯ ಮೇಲಿರುವ ಆಧುನಿಕ ಪಟ್ನಾವನ್ನು ಮೂರು ಭಾಗಗಳಾಗಿ ವಿಂಗಡಿಸಬಹುದು. ಷೇರ್‌ಷಾ ಕಟ್ಟಿಸಿದ ಹಳೆಯನಗರ; ಬ್ರಿಟಿಷರ ಆಳ್ವಿಕೆಯ ಪ್ರಥಮ ಘಟ್ಟದಲ್ಲಿ ಬೆಳೆದ ಬಂಕಿಪುರ ಪ್ರದೇಶ; ಈ ಶತಮಾನದಲ್ಲಿ ನಿರ್ಮಾಣವಾದ ನೂತನ ನಗರ. ಇಕ್ಕೆಲಗಳಲ್ಲಿ ಮರಗಳಿರುವ ವಿಶಾಲವಾದ ಬೀದಿಗಳು, ಹೊಸ ಕಟ್ಟಡಗಳು ಈ ನೂತನ ನಗರದಲ್ಲಿವೆ. ಸರಕಾರೀ ಭವನ. ಆಕಾಶವಾಣಿ ಕೇಂದ್ರ, ಉಚ್ಚ ನ್ಯಾಯಾಲಯ. ವಸ್ತುಸಂಗ್ರಹಾಲಯ ಕಟ್ಟಡಗಳು ಗಮನಾರ್ಹವಾದುವು. ಪಟ್ನಾದ ಜನಸಂಖ್ಯೆ 4,75.300.

ಹಳೆಯ ನಗರ ಮತ್ತು ಹೊಸ ನಗರಗಳ ನಡುವೆ ಒಂದು ದೊಡ್ಡ ಉದ್ಯಾನವಿದೆ.

ಪಟ್ನಾದಲ್ಲಿರುವ ಖುದಾಬಕ್ಷ ಗ್ರಂಥಾಲಯದಲ್ಲಿ ಪಾರಸಿ ಹಾಗೂ ಅರಬೀ ಭಾಷೆಗಳ ಅಮೂಲ್ಯ ಹಸ್ತಪ್ರತಿಗಳೂ ವರ್ಣಚಿತ್ರಗಳೂ ಇವೆ.

ಪಟ್ನಾಕ್ಕೆ ಒಳ್ಳೆಯ ರಸ್ತೆ, ರೈಲು ಹಾಗೂ ವಿಮಾನ ಸಂಪರ್ಕಗಳಿವೆ. ಧಾನ್ಯ, ಎಣ್ಣೆಬೀಜಗಳಿಗೆ ಇದು ವ್ಯಾಪಾರ ಕೇಂದ್ರ. ಹಿತ್ತಾಳೆ, ಬೆಳ್ಳಿ, ಚಿನ್ನದ ವಸ್ತುಗಳು ತಯಾರಾಗುತ್ತವೆ. ಗಾಜು, ನೆಲಹಾಸು, ತೊಗಲು ಪದಾರ್ಥ ಮತ್ತು ಕುಂಭ ಪದಾರ್ಥಗಳ ಉದ್ಯಮಗಳಿವೆ. ಬಿಹಾರ್ ಹಾಗೂ ಪಟ್ನಾ ವಿಶ್ವವಿದ್ಯಾನಿಲಯಗಳ ಕೇಂದ್ರಗಳು ಈ ನಗರದಲ್ಲಿವೆ.

ಪಣಜಿ

ಭಾರತದಲ್ಲಿದ್ದ ಪೋರ್ಚುಗೀಸ್ ವಸಾಹತಿನ ರಾಜಧಾನಿಯನ್ನು 1759 ರಲ್ಲಿ ಮರ್ಮ ಗೋವೆಯಿಂದ ಪಣಜಿಗೆ ಬದಲಾಯಿಸಲಾಯಿತು. ಅನಂತರ ಇದು ಪ್ರಾಮುಖ್ಯಕ್ಕೆ ಬಂದು ಹೊಸ ಗೋವ ಎನಿಸಿಕೊಂಡಿತು. ಪಣಜಿ ಇರುವುದು ಮಾಂಡವಿ ನದಿಯ ಎಡದಂಡೆಯ ಮೇಲೆ. ಇದು ಅನುಕೂಲ ಹವೆಯ ಕಾಲದಲ್ಲಿ ಉಪಯೋಗಿಸಬಹುದಾದ ಬಂದರು; ಆಧುನಿಕ ಸೌಲಭ್ಯಗಳಿಂದ ಕೂಡಿದೆ.



ಪಣಜಿ ರಸ್ತೆ ದೃಶ್ಯ

1510ರಲ್ಲಿ ಪೋರ್ಚುಗೀಸ್ ನೌಕಾ ತಂಡದ ಮುಖಂಡ ಅಲ್ಫಾನ್ಸೊ ಆಲ್ಬುಕರ್ಕ್ ಮೊದಲು ಬಂದಿಳಿದದ್ದು ಇಂದಿನ ಪಣಜಿ ಇರುವಲ್ಲಿ. ಅಲ್ಲಿಂದ ಬಿರುಗಾಳಿಯಂತೆ ಮುನ್ನುಗ್ಗಿ ಗೋವ ಪ್ರದೇಶವನ್ನು ಆತ ವಶಪಡಿಸಿಕೊಂಡ.

ಮೀನು, ಅಕ್ಕಿ, ಕೊಬ್ಬರಿ, ತೆಂಗಿನಕಾಯಿ ಮುಂತಾದ ಪದಾರ್ಥಗಳ ವ್ಯಾಪಾರ ಇಲ್ಲಿ ಮುಖ್ಯ.

ಪಣಜಿ ಬಳಿಯ ಹಳೆಯ ಗೋವದಲ್ಲಿ ಅನೇಕ ಭಗ್ನಾವಶೇಷಗಳಿವೆ; ಚರ್ಚುಗಳಿವೆ. ಸಂತ ಫ್ರಾನ್ಸಿಸ್ ಝೇವಿಯರ್‌ನ ಪವಿತ್ರ ಸಮಾಧಿ ಇಲ್ಲಿದೆ. ಜನಪ್ರಿಯ ಕಲಂಗೂಟೆ ಕಡಲತೀರ ಪಣಜಿಯಿಂದ ಸುಮಾರು 10 ಮೈಲಿ ದೂರದಲ್ಲಿದೆ. ಪಣಜಿಯಲ್ಲಿ ಸುಂದರ ಉದ್ಯಾನಗಳಿವೆ. ಕ್ರಿಸ್ತ ಪ್ರಧಾನ ಮಠಾಧಿಪತಿಯವರ (ಆರ್ಚ್‌ಬಿಷಪ್) ಭವ್ಯ ಅರಮನೆ ಇದೆ. [illegible] ಕಟ್ಟಡಗಳಿವೆ.

ಸ್ವತಂತ್ರ ಭಾರತದಲ್ಲಿ ಗೋವ, ದಮನ್, ದೀವ್ ಈ ಮೂರು ಭಾಗಗಳನ್ನೊಳಗೊಂಡ ಕೇಂದ್ರಾಡಳಿತ ಪ್ರದೇಶದ ರಾಜಧಾನಿ ಪಣಜಿ. ಜನಸಂಖ್ಯೆ 34,953.

ಪತಂಜಲಿ

ಪ್ರಾಚೀನ ಭಾರತದ ಪ್ರಮುಖ ಚಿಂತನಶೀಲ ವ್ಯಕ್ತಿಗಳಲ್ಲಿ ಪತಂಜಲಿ ಒಬ್ಬ. ಅವನ ತಾಯಿಯ 'ಅಂಜಲಿ'ಯಿಂದ ಬಿದ್ದವನೆಂದು ಅವನಿಗೆ 'ಪತಂಜಲಿ' ಎಂಬ ಹೆಸರು ಬಂತು ಎಂಬ ಒಂದು ದಂತಕಥೆಯಿದೆ. ಪತಂಜಲಿಯ ತಾಯಿ ಗೋಣಿಕಾ. ಆದ್ದರಿಂದ ಪತಂಜಲಿಯನ್ನು ಗೋಣಿಕಾಪುತ್ರ ಎಂದು ಕರೆಯುವುದಿದೆ.

ಪಾಣಿನಿಯ ವ್ಯಾಕರಣಕ್ಕೆ 'ಮಹಾಭಾಷ್ಯ'ವೆಂಬ ಟೀಕೆ ಬರೆದು ಪ್ರಖ್ಯಾತನಾಗಿರುವ ಪತಂಜಲಿ ಹಾಗೂ ಯೋಗದರ್ಶನದ ಪ್ರವರ್ತಕ ಎಂದು ಪ್ರಸಿದ್ಧನಾಗಿರುವ ಪತಂಜಲಿ ಒಬ್ಬನೇ ಅಥವಾ ಬೇರೆ ಬೇರೆಯವರೇ ಎಂಬ ಬಗೆಗೆ ಏಕಾಭಿಪ್ರಾಯವಿಲ್ಲ. ಇವರಿಬ್ಬರ ಕಾಲದ ಬಗೆಗೂ ಒಮ್ಮತವಿಲ್ಲ.

'ಮಹಾಭಾಷ್ಯ'ದಲ್ಲಿ ಪತಂಜಲಿ, ಪುಷ್ಯಮಿತ್ರನೆಂಬ (ಕ್ರಿ. ಪೂ. ಸುಮಾರು 178 ಅಥವಾ 185ರಿಂದ ಆಳಿದ) ದೊರೆಯನ್ನು ಉಲ್ಲೇಖಿಸುತ್ತಾನೆ. ಪುಷ್ಯಮಿತ್ರ ಅಶ್ವಮೇಧಯಾಗ ಮಾಡಿದಾಗ ಪತಂಜಲಿ ಅದಕ್ಕೆ ಪ್ರಧಾನ ಪುರೋಹಿತನಾಗಿದ್ದ. 'ಮಹಾಭಾಷ್ಯ'ವನ್ನು ಸುಮಾರು ಕ್ರಿ. ಪೂ. 150ರಲ್ಲಿ ಪತಂಜಲಿ ರಚಿಸಿರಬಹುದೆಂದು ಅಭಿಪ್ರಾಯಪಡುತ್ತಾರೆ.

'ಮಹಾಭಾಷ್ಯ' ಕೃತಿಯಲ್ಲಿ ಪತಂಜಲಿ ಪಾಣಿನೀಯ ಕೆಲವು ಸೂತ್ರಗಳನ್ನು ನಿರಾಕರಿಸಿದ್ದಾನೆ.

ಭಾರತದ ಆರು ತಾತ್ತ್ವಿಕ ವಿದ್ಯಾಶಾಖೆಗಳಲ್ಲೊಂದಾದ ಯೋಗದರ್ಶನಕ್ಕೆ ರೂಪಕೊಟ್ಟ ತತ್ತ್ವಜ್ಞಾನಿ [illegible]

ದಾದ ಮಾರ್ಗವನ್ನು ಇವನು ತೋರಿಸಿದ್ದಾನೆ. ಸಮಾಧಿ, ಯೋಗಾಭ್ಯಾಸ, ಮನೋಶಕ್ತಿ ಮತ್ತು ಕೈವಲ್ಯ (ಮುಕ್ತಿ) ಇವುಗಳಿಗೆ ಸಂಬಂಧಿಸಿದಂತೆ ಪತಂಜಲಿಯು ಸೂತ್ರವನ್ನು ನಾಲ್ಕು ಭಾಗಗಳನ್ನಾಗಿ ಮಾಡಲಾಗಿದೆ. 'ಯೋಗಸೂತ್ರ'ದಲ್ಲಿ ಬೌದ್ಧರ 'ಯೋಗಾಚಾರ'ದ ಬಗೆಗೆ ಉಲ್ಲೇಖವಿರುವುದರಿಂದ ಅದರ ಕಾಲ ಕ್ರಿ. ಶ. ಮೂರರಿಂದ ಐದನೆಯ ಶತಮಾನದ ಒಳಗಿರಬಹುದೆಂಬ ಅಭಿಮತವಿದೆ.

'ಚರಕ ಸಂಹಿತೆ' ಎಂದು ಹೆಸರಾದ ವೈದ್ಯಕೀಯ ಗ್ರಂಥವನ್ನು ರಚಿಸಿದ ಚರಕನೂ ಪತಂಜಲಿಯೂ ಒಬ್ಬನೇ ಎಂಬ ಅಭಿಪ್ರಾಯ ಕೂಡ ಇದೆ.

ಪತಂಜಲಿ ಶಾಸ್ತ್ರೀ

ಸ್ವತಂತ್ರ ಭಾರತದ ವರಿಷ್ಠ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರಾಗಿದ್ದವರು ಪತಂಜಲಿ ಶಾಸ್ತ್ರೀ.

ಇವರು 1889 ಜನವರಿ 4ರಂದು ಜನಿಸಿದರು. ತಂದೆ ಮದರಾಸಿನ ಪಾಚ್ಚೆಯಪ್ಪ ಕಾಲೇಜಿನಲ್ಲಿ ಸಂಸ್ಕೃತ ವಿಭಾಗದ ಖ್ಯಾತ ಪ್ರಾಧ್ಯಾಪಕರಾಗಿದ್ದ ಪಂಡಿತ ಕೃಷ್ಣಶಾಸ್ತ್ರೀ.

ಪತಂಜಲಿಶಾಸ್ತ್ರೀ ಅವರು ಪಾಚ್ಚೆಯಪ್ಪ ಕಾಲೇಜಿನಲ್ಲಿ ಬಿ. ಎ. ಆದ ಬಳಿಕ ನ್ಯಾಯಶಾಸ್ತ್ರದಲ್ಲಿ ಪದವಿ ಪಡೆದರು. ಅನೇಕ ವರ್ಷಗಳ ವರೆಗೆ ಹೈಕೋರ್ಟಿನ ವಕೀಲರಾಗಿ ಜನಪ್ರಿಯರಾದರು.

ಇವರು 1939 ಮಾರ್ಚ್ ತಿಂಗಳಲ್ಲಿ ಮದರಾಸಿನ ಹೈಕೋರ್ಟ್ ನ್ಯಾಯಾಧೀಶರಾದರು. ಅನಂತರ 1947 ಡಿಸೆಂಬರ್‌ನಲ್ಲಿ ಫೆಡರಲ್ ಕೋರ್ಟಿನ ನ್ಯಾಯಾಧೀಶರಾದರು.

1950 ಜನವರಿ 26ರಂದು ಭಾರತದ ವರಿಷ್ಠ ನ್ಯಾಯಾಲಯದ ನ್ಯಾಯಾಧೀಶರಾದರು. ಮಾರನೆಯ ವರ್ಷ ಆ ನ್ಯಾಯಾಲಯದ ಪ್ರಧಾನ ನ್ಯಾಯಾಧೀಶರಾದರು.

1953ರಲ್ಲಿ ದೆಹಲಿ ವಿಶ್ವವಿದ್ಯಾಲಯದ ಮೊದಲನೆಯ ಪ್ರೊ ಛಾನ್ಸಲರ್ ಆಗಿ ಚುನಾಯಿತರಾಗಿ ಮೂರು ವರ್ಷ ಕಾಲ ಆ ಅಧಿಕಾರದಲ್ಲಿದ್ದರು. ಬನಾರಸ್ ವಿಶ್ವವಿದ್ಯಾಲಯದ ಆಡಳಿತ ಮಂಡಲಿಯ ಸದಸ್ಯರಾಗಿಯೂ ಸೇವೆ ಸಲ್ಲಿಸಿದರು.

ಶಾಸ್ತ್ರಿಯವರು ಧಾರ್ಮಿಕ ಪ್ರವೃತ್ತಿಯವರು, ಸಂಸ್ಕೃತದಲ್ಲಿ ಅವರಿಗೆ ಅಪಾರ ಆಸಕ್ತಿ. ಕೇಂದ್ರ ಸಂಸ್ಕೃತ ಮಂಡಲಿ ಹಾಗೂ ಕೇಂದ್ರೀಯ ಸಂಸ್ಕೃತ ವಿದ್ಯಾಪೀಠ ಸೊಸೈಟಿಯ ಅಧ್ಯಕ್ಷರಾಗಿ ಸಂಸ್ಕೃತ ಪ್ರಚಾರಕ್ಕಾಗಿ ಅವರು ಶ್ರಮಿಸಿದರು.

1963, ಮಾರ್ಚ್ 16ರಂದು ನವದೆಹಲಿಯಲ್ಲಿ ನಿಧನರಾದರು.

ಪದಮ್‌ಪತ್ ಸಿಂಘಾನಿಯಾ

ಪದಮ್‌ಪತ್ ಸಿಂಘಾನಿಯಾ ಪ್ರಮುಖ ಕೈಗಾರಿಕೋದ್ಯಮಿ. ಹತ್ತಿ ನೂಲುವ ಮತ್ತು ನೇಯುವ ಜೆ. ಕೆ. ಸಂಸ್ಥೆಯ ಅಧ್ಯಕ್ಷರು.

ಸಿಂಘಾನಿಯಾ ಮಧ್ಯಪ್ರದೇಶ ಸಕ್ಕರೆ ಕಂಪನಿಯ ಡೈರೆಕ್ಟರರೂ ಆಗಿದ್ದಾರೆ. [illegible] ವಾಣಿಜ್ಯ ಮಂಡಲಿಯ ಸ್ಥಾಪಕರು. ಭಾರತೀಯ ವಾಣಿಜ್ಯ ಮಂಡಲಗಳ ಒಕ್ಕೂಟದಲ್ಲಿ 1935ರಲ್ಲಿ ಅಧ್ಯಕ್ಷರಾಗಿದ್ದರು.

[illegible] ಸಮಿತಿಯ ಅಧ್ಯಕ್ಷರು; ಕಾನ್ಪುರದ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಆಡಳಿತ ಮಂಡಲಿಯ ಅಧ್ಯಕ್ಷರು; ಹಿಂದೂಸ್ತಾನೀ ಪ್ರಚಾರಸಭಾ, ಇಂಡಿಯನ್ ಕೌನ್ಸಿಲ್ ಆಫ್ ವರ್ಲ್ಡ್ ಅಫೇರ್ಸ್—ಈ ಸಂಸ್ಥೆಗಳ ಸದಸ್ಯರು; ಹೀಗೆ ಅನೇಕ ಸಂಘ ಸಂಸ್ಥೆಗಳಲ್ಲಿ ಸಿಂಘಾನಿಯಾ ಅವರದು ಸಕ್ರಿಯ ಪಾತ್ರ. 1937–38ರಲ್ಲಿ ವಿಧಾನಸಭೆಯ ಸದಸ್ಯರೂ 1948–52ರ ಅವಧಿಯಲ್ಲಿ ರಾಜ್ಯಾಂಗ ರಚನಾ ಸಭೆಯ ಸದಸ್ಯರೂ ಆಗಿದ್ದರು. 1943ರಲ್ಲಿ ಅವರಿಗೆ ಕಾನ್ಪುರ ವಿಶ್ವವಿದ್ಯಾನಿಲಯ ಗೌರವ ಎಲ್‌ಎಲ್.ಡಿ. ಪದವಿ ನೀಡಿ ಪುರಸ್ಕರಿಸಿದೆ.



'ಕೈಗಾರಿಕೋದ್ಯಮಿ' : ಸಿಂಘಾನಿಯಾ

ಪದಮ್‌ಪತ್ ಸಿಂಘಾನಿಯಾ 1905 ಫೆಬ್ರವರಿ 3ರಂದು ಕಾನ್ಪುರದಲ್ಲಿ ಜನಿಸಿದರು. ತಂದೆ ಕಮಲಾಪತ್ ಸಿಂಘಾನಿಯಾ. ಸ್ವಬೋಧೆಯಿಂದ ಇವರು ವಿದ್ಯಾಭ್ಯಾಸ ಪಡೆದರು. ಇವರು ಸ್ಥಾಪಿಸಿರುವ, ನೆರವು ನೀಡಿರುವ ಸಂಸ್ಥೆಗಳು ಅನೇಕ. ಕಾನ್ಪುರದಲ್ಲೇ 23 ಶಾಲೆಗಳನ್ನು ಸ್ಥಾಪಿಸಿದ್ದಾರೆ. ಸುಸಜ್ಜಿತ ಕಾಲೇಜುಗಳನ್ನು ಕಟ್ಟಿಸಿದ್ದಾರೆ. ಅಲಹಾಬಾದ್ ವಿಶ್ವವಿದ್ಯಾನಿಲಯಕ್ಕೆ ಸೇರಿದ ಜೆ. ಕೆ. ಅನ್ವಯ ಭೌತವಿಜ್ಞಾನ ಮತ್ತು ತಂತ್ರವಿಜ್ಞಾನ ಸಂಸ್ಥೆ, ಲಖನೌ ವಿಶ್ವವಿದ್ಯಾನಿಲಯಕ್ಕೆ ಸೇರಿದ ಜೆ. ಕೆ. ಸಮಾಜವಿಜ್ಞಾನ ಹಾಗೂ ಮಾನವ ಸಂಬಂಧ ಸಂಸ್ಥೆ, ಕ್ಯಾನ್ಸರ್ ಮತ್ತು ವಿಕಿರಣ ವಿಜ್ಞಾನ ಸಂಸ್ಥೆ, ಲಾಲಾ ಕಮಲಾಪತ್ ಸ್ಮಾರಕ ಆಸ್ಪತ್ರೆ, ವಾರಾಣಸಿಯ ಕಾಶಿ ವಿದ್ಯಾಪೀಠಕ್ಕೆ ಸೇರಿದಂತೆ ಜೆ. ಕೆ. ಮಹಿಳಾ ವಸತಿಗೃಹ —ಇವು ಪದಮ್‌ಪತ್ ಸಿಂಘಾನಿಯಾ ಸ್ಥಾಪಿಸಿದ ಕೆಲವು ಪ್ರಮುಖ ಸಂಸ್ಥೆಗಳು.

ಪದ್ಮಿನಿ

ಲೋಕೋತ್ತರ ಸುಂದರಿ ಪದ್ಮಿನಿ ರಜಪೂತ ರಾಣಿ; ಖ್ಯಾತ ರಜಪೂತ ವಂಶವಾದ ಗುಹಿಲ ರಾಜಮನೆತನದ ದೊರೆ ರಾಣಾ ರತನಸಿಂಗನ (ರತ್ನಸಿಂಹ) ಪತ್ನಿ.

ಈ ಅಪ್ರತಿಮ ಸುಂದರಿಯನ್ನು ನೋಡಬೇಕೆಂದು ಆಗ ದೆಹಲಿಯಲ್ಲಿ ಆಳುತ್ತಿದ್ದ ಅಲ್ಲಾವುದ್ದೀನ್ ಖಿಲ್ಜಿ ಆಗ್ರಹಪಡಿಸಿದ: ಪರಪುರುಷನ ಎದುರು ಬರಲು ಆಕೆ ನಿರಾಕರಿಸಿದಳು: ಕೊನೆಗೆ ಒಂದು ಕನ್ನಡಿಯಲ್ಲಿ ಮೂಡಿದ ಆಕೆಯ ಬಿಂಬವನ್ನು ಅವನಿಗೆ ತೋರಿಸಲಾಯಿತು: ಅಲ್ಲಾವುದ್ದೀನ್ ಖಿಲ್ಜಿ ಅದನ್ನು ಕಂಡು ಮರುಳಾದ—ಎಂಬುದು ಪದ್ಮಿನಿಯನ್ನು ಕುರಿತ ಕಥೆ.

ಅಲ್ಲಾವುದ್ದೀನ್ ಖಿಲ್ಜಿ 1303ರಲ್ಲಿ ಚಿತ್ತೋಡಗಡಕ್ಕೆ —ರಾಣಾ ರತನಸಿಂಗನ ಕೋಟೆಗೆ— ಮುತ್ತಿಗೆ ಹಾಕಿದ. ಇದಕ್ಕೆ ಪದ್ಮಿನಿಯ ಆಕರ್ಷಣೆಯೂ ಕಾರಣ ಎನ್ನುತ್ತಾರೆ. ರತನ್‌ಸಿಂಗ್ ಅಲ್ಲಾವುದ್ದೀನನ ಸೆರೆಸಿಕ್ಕಿದ. ಆಗ ರಜಪೂತವೀರರ ಒಂದು ಚಿಕ್ಕ ಪಡೆ ಕೋಟೆಯ ರಕ್ಷಣೆಗಾಗಿ ಹೋರಾಡಿತು. ಆದರೆ ಇದು ಸಫಲವಾಗಲಿಲ್ಲ. ಈ ವಿಷಯ ತಿಳಿದ ಕೂಡಲೇ ಪದ್ಮಿನಿ ಹಾಗೂ ಸಾವಿರಾರು ಜನ ರಜಪೂತ ರಮಣಿಯರು ಜೋಹರ್ ಆಚರಿಸಿದರು.



' ಕನ್ನಡಿಯ ಪದ್ಮಿನಿ '

ಪದ್ಮಿನಿಯ ಜೀವನ ಕಥೆಯನ್ನು ಪದ್ಮಾವತ್ ಎಂಬ ಹಿಂದೀ ಕಾವ್ಯದಲ್ಲಿ ಮಲಿಕ್ ಮಹಮದ್ ಜಯಸಿ ಎಂಬಾತ ಬರೆದಿದ್ದಾನೆ.

ನೋಡಿ : ಗುಹಿಲರು

ಪನ್ನಾದಾಸಿ

ಸ್ವಾಮಿನಿಷ್ಠೆಗೆ ಇನ್ನೊಂದು ಹೆಸರು ಪನ್ನಾದಾಸಿ. ಒಡೆಯನ ಮಗುವನ್ನು ರಕ್ಷಿಸುವುದಕ್ಕೋಸ್ಕರ ತನ್ನ ಮಗುವನ್ನೇ ಬಲಿಗೊಟ್ಟ ಮಹಾ ತ್ಯಾಗಿ ಆಕೆ. ಮೇವಾಡದ ಅರಸ ರಾಣಾ ಸಂಗ. ಆತನ ಮರಣಾನಂತರ ಜನಿಸಿದ ಅವನ ಕೊನೆಯ ಮಗುವಿನ ದಾಸಿಯಾಗಿ ಪನ್ನಾ ನೇಮಿತಳಾದಳು. ರಾಣಾ ಸಂಗನ ತರುವಾಯ ಅವನ ಮಗ ರಾಣಾ ರತನ್ ಸಿಂಗ್ ರಾಜ್ಯವಾಳಿದ. ಮುಂದೆ ಸಿಂಹಾಸನ ಏರಿದವನು ರತನ್ ಸಿಂಗನ ತಮ್ಮ ರಾಣಾ ವಿಕ್ರಮಜಿತ್. ವಿಕ್ರಮಜಿತ್‌ನ ಸೋದರ ಸಂಬಂಧಿ ವನವೀರ್ ಸಿಂಗ್ ಆತನನ್ನು ಕೊಲೆಮಾಡಿದ. ತಾನು ಸಿಂಹಾಸನ ಏರಲು ಇದ್ದ ಮತ್ತೊಂದು ಅಡ್ಡಿ ರಾಣಾ ಸಿಂಗನ ಕಿರಿಯ ಮಗು ಉದಯಸಿಂಗ್. ಮಗುವನ್ನು ಕೊಲ್ಲಲು ವನವೀರ್ ನಿರ್ಧರಿಸಿದ.

ಆತನ ದುರುದ್ದೇಶ ರಾಜಭಕ್ತನಾದ ಕ್ಷೌರಿಕನೊಬ್ಬನಿಂದ ಪನ್ನಾದಾಸಿಗೆ ತಿಳಿಯಿತು. ಪನ್ನಾ ಮಗುವನ್ನು ಹಣ್ಣಿನ ಬುಟ್ಟಿಯಲ್ಲಿರಿಸಿ ಮೇಲೆ ಎಲೆಗಳನ್ನು ಮುಚ್ಚಿದಳು. ಕ್ಷೌರಿಕ ಆ ಬುಟ್ಟಿಯನ್ನು ಎತ್ತಿಕೊಂಡು ಕೋಟೆಯಿಂದ ಹೊರಕ್ಕೆ ಹೊರಟುಹೋದ.

ವನವೀರ್ ಪನ್ನಾ ಇದ್ದಲ್ಲಿಗೆ ಬಂದು ರಾಜಪುತ್ರ ಎಲ್ಲಿ ಎಂದು ಕೇಳಿದ. ಪನ್ನಾ ಸ್ವಲ್ಪವೂ ಅಳುಕದೆ ರಾಜಪುತ್ರನ ಸ್ಥಾನದಲ್ಲಿ ಮಲಗಿಸಿದ್ದ ತನ್ನ ಮಗುವನ್ನೇ ಅವನಿಗೆ ತೋರಿಸಿದಳು. ವನವೀರ್ ಮಗುವನ್ನು ಕೊಂದು, ಹೊರಟುಹೋದ.

ಪನ್ನಾಳ ಹೊಣೆಗಾರಿಕೆ ಹೆಚ್ಚಿನದಾಗಿತ್ತು. ತನ್ನ ಮಗುವಿನ ಶವ ಸಂಸ್ಕಾರ ಮಾಡಿ, ರಾಜಕುಮಾರನಿಗೆ ಉತ್ತಮ ರಕ್ಷಣೆ ಒದಗಿಸಲು ಹೊರಟಳು. ಒಂದೆರಡು ಕಡೆಗಳಲ್ಲಿ ಅವಳ ಪ್ರಯತ್ನ ಫಲಿಸಲಿಲ್ಲ. ಕೊನೆಗೆ ಕುಂಭಲ್ಮೇರ್‌ನ ಆಸಾಶಹಾ ರಾಜಕುಮಾರನನ್ನು ತನ್ನ ಆಶ್ರಯಕ್ಕೆ ತೆಗೆದುಕೊಳ್ಳುವಂತೆ ಪನ್ನಾ ಒಡಂಬಡಿಸಿದಳು. ಅನುಮಾನಕ್ಕೆ ಎಡೆಗೊಡ ಬಾರದೆಂದು ಪನ್ನಾ ಒಡನೆಯೇ ಅಲ್ಲಿಂದ ಹಿಂದಿರುಗಿದಳು. ಕೆಲ ವರ್ಷ ಕಳೆದುವು. ಅನಂತರ ಮೇವಾಡದ ಸರದಾರರು ರಾಜಕುಮಾರನನ್ನು ಗುರುತಿಸಿ, ತಂದೆಯ ಸಿಂಹಾಸನಕ್ಕೆ ಅವನನ್ನು ಅಧಿಪತಿಯಾಗಿ ಮಾಡಿದರು.

ಪನ್ನಾಲಾಲ್ ಘೋಷ್

ನೋಡಿ : ಸಂಪುಟ ೫

ಪನ್ನಾ ವಜ್ರದ ಗಣಿ

ಅಕ್ಬರನ ಕಾಲದಲ್ಲಿ, ಮಧ್ಯ ಪ್ರದೇಶದಲ್ಲಿರುವ ಪನ್ನಾದ ವಜ್ರದ ಗಣಿಯಿಂದಲೇ ವರ್ಷಕ್ಕೆ 12 ಲಕ್ಷ ರೂಪಾಯಿ ಆದಾಯ ತರುವಷ್ಟು ವಜ್ರ ದೊರೆಯುತ್ತಿತ್ತು.

ಪನ್ನಾ ಇರುವ ಜಾಗ ಹಿಂದೆ ಬುಂದೇಲ್‌ಖಂಡವೆಂದು ಹೆಸರಾಗಿದ್ದಿತು.

ಬ್ರೆಜಿಲ್ ಮತ್ತು ದಕ್ಷಿಣ ಆಫ್ರಿಕದ ವಜ್ರಗಣಿಗಳಲ್ಲಿ ಉತ್ಪಾದನೆ ಆರಂಭವಾದ ಮೇಲೆ ಭಾರತದ ವಜ್ರ ವ್ಯಾಪಾರ ಹಿಂದೆ ಬಿದ್ದಿತು. ಆದರೆ ಈ ಶತಮಾನದಲ್ಲಿ ಮತ್ತೆ ಪನ್ನಾ ವಜ್ರದ ಗಣಿ ಬೆಳಕಿಗೆ ಬಂದಿದೆ. ಅಲ್ಲೊಂದು ಇಲ್ಲೊಂದು ವಜ್ರ ದೊರೆಯುತ್ತಿದ್ದ ಈ ಪ್ರದೇಶದಲ್ಲಿ ಆಫ್ರಿಕದ ಕಿಂಬರ್ಲಿಯ ಶ್ರೇಷ್ಠ ವಜ್ರ ಗಣಿಯನ್ನು ಹೋಲುವ ಶಿಲಾಸ್ತರ ಕಂಡು ಬಂದಿದೆ. ಆಧುನಿಕ ಗಣಿ ಕಾರ್ಯ ವಿಧಾನಗಳನ್ನು ಇಲ್ಲಿ ಅಳವಡಿಸಲಾಗುತ್ತಿದೆ.

1961ರಲ್ಲಿ ಪನ್ನಾ ಗಣಿಯಲ್ಲಿ ದೊರೆತ '[illegible]' ಎಂಬ ವಜ್ರ 16.9 ಕ್ಯಾರಟ್ ತೂಕವಿದ್ದಿತು. ಇದು 19[illegible]ರಲ್ಲಿ [illegible] ಲಕ್ಷ ರೂಪಾಯಿಗೆ ಹರಾಜಾಯಿತು.

ಛತ್ರಸಾಲ್ ಎಂಬ ಬುಂದೇಲ್‌ಖಂಡ ರಾಜ್ಯದ ದೊರೆ 1[illegible]ರಲ್ಲಿ ಪನ್ನಾ ನಗರವನ್ನು ತನ್ನ ರಾಜಧಾನಿಯಾಗಿ ಮಾಡಿಕೊಂಡ. ಪನ್ನಾದಲ್ಲಿ ಹಲವು ಐತಿಹಾಸಿಕ ಮಹತ್ವದ ಕಟ್ಟಡಗಳಿವೆ.

[illegible]

ಪಬ್ಲಿಕ್ ಸರ್ವಿಸ್ ಕಮಿಷನ್

ನೋಡಿ : ಲೋಕ ಸೇವಾ ಆಯೋಗ

ಪರದೀಪ್

ಬಂಗಾಳ ಕೊಲ್ಲಿಯ ಕರಾವಳಿಯಲ್ಲಿ, ವಿಶಾಖಪಟ್ಟಣ ಮತ್ತು ಕಲ್ಕತ್ತಾ ಬಂದರುಗಳ ಮಧ್ಯೆ, ಒರಿಸ್ಸಾ ರಾಜ್ಯದಲ್ಲಿ ಇರುವ ಪರದೀಪ್ 1958ರಲ್ಲಿ 'ಚಿಕ್ಕ ಬಂದರು' ಎನಿಸಿಕೊಂಡಿತು. ಯುಗೊಸ್ಲಾವಿಯಾದ ಸಹಕಾರದಿಂದ ಇದರ ಅಭಿವೃದ್ಧಿ ಕಾರ್ಯ ಭರದಿಂದ ನಡೆಯಿತು. 1966ರಲ್ಲಿ ಈ ಬಂದರಿನ ಉದ್ಘಾಟನೆಯಾಯಿತು. ಆ ವೇಳೆಗೆ ಅದು 'ಪ್ರಮುಖ ಬಂದರಿನ' ಸ್ಥಾನಮಾನ ಪಡೆದಿತ್ತು. ಭಾರತದಲ್ಲಿನ ಸರ್ವಋತು ಬಂದರುಗಳಲ್ಲಿ ಅತ್ಯಂತ ಆಳವಾದ ಬಂದರು ಇದು.



ಪರದೀಪ್ ಹಡಗುಕಟ್ಟೆ

ಮಹಾನದಿ ಸಮುದ್ರವನ್ನು ಸೇರುವಲ್ಲಿಂದ 45 ಮೈಲು ದಕ್ಷಿಣಕ್ಕೆ ಕಟಕ್‌ನಿಂದ 60 ಮೈಲು ದೂರದಲ್ಲಿ, ಪರದೀಪ್ ಬಂದರವಿದೆ. ಒಡಿಸ್ಸಾ ಮತ್ತು ಸುತ್ತುಮುತ್ತು ಪ್ರದೇಶಗಳಲ್ಲಿ ಸಿಗುವ ಕಬ್ಬಿಣದ ಅದಿರು ಮತ್ತು ಇತರ ಖನಿಜಗಳನ್ನು ಹಡಗುಗಳಿಗೆ ಹೇರಲು ಈ ಸ್ಥಳ ಯೋಗ್ಯವಾಗಿದೆ.

ಪರಮಾರರು

ಗುರ್ಜರ ಪ್ರತಿಹಾರರ ಅನಂತರ ಮಾಳ್ವದಲ್ಲಿ ಆಳುತ್ತಿದ್ದ ರಾಜವಂಶ ಪರಮಾರರು. ಧಾರಾ (ಇಂದಿನ ಧಾರ್) ಅವರ ರಾಜಧಾನಿ.

ಪರಮಾರರ ಆಳ್ವಿಕೆಯು ಕ್ರಿ. ಶ. ಒಂಬತ್ತನೆಯ ಶತಮಾನದಿಂದ ಆರಂಭವಾಯಿತು. ಈ ವಂಶದ ಏಳನೆಯ ದೊರೆ ವಾಕ್ಪತಿ ಮುಂಜನ ಕಾಲದಿಂದ ಇದರ ಘನತೆ ಹೆಚ್ಚಿತು. ಆರಂಭದಲ್ಲಿ ಇವರು ರಾಷ್ಟ್ರಕೂಟರ ಸಾಮಂತರಾಗಿದ್ದರು. 972ರಲ್ಲಿ ಪಟ್ಟವೇರಿದ ವಾಕ್ಪತಿ ಮುಂಜ ಅದೇ ವರ್ಷ ರಾಷ್ಟ್ರಕೂಟರ ರಾಜಧಾನಿ ಮಾನ್ಯಖೇಟವನ್ನು ಗೆದ್ದು, ಕೊಳ್ಳೆ ಹೊಡೆದು ಸ್ವತಂತ್ರನಾದ. ಆದರೆ ರಾಷ್ಟ್ರಕೂಟರ ಅನಂತರ ಕರ್ನಾಟಕದಲ್ಲಿ ಬಂದ ಕಲ್ಯಾಣದ ಚಾಲುಕ್ಯರು ಮುಂಜನನ್ನು ಬಂಧಿಸಿ ಕೊಂದರು. ಉದಾರನಾದ ಮುಂಜ ವಿದ್ಯಾಪಕ್ಷಪಾತಿಯೂ ವಿದ್ವಾಂಸನೂ ಆಗಿದ್ದ. ಧನಂಜಯ, ಧನಿಕ, ಪದ್ಮಗುಪ್ತ ಮುಂತಾದ ಅನೇಕ ಲೇಖಕರು ಅವನ ಆಶ್ರಿತರಾಗಿದ್ದರು.

ಮುಂಜನ ಸೋದರಪುತ್ರನಾದ ಭೋಜನ ಕಾಲದಲ್ಲಿ (1000–1055) ಪರಮಾರರ ರಾಜ್ಯ ಇನ್ನಷ್ಟು ವಿಸ್ತೃತವಾಯಿತು. ಖ್ಯಾತ ಲೇಖಕನೂ ಪಂಡಿತಾಶ್ರಯನೂ ಆದ ಭೋಜನ ಪಾಂಡಿತ್ಯವನ್ನು ಕುರಿತು ಅನೇಕ ದಂತಕಥೆಗಳಿವೆ. (ಕಾಳಿದಾಸನು ಈತನ ಸಮಕಾಲೀನನೆಂದು ಆ ಕತೆಗಳು ಹೇಳುತ್ತವೆ. ಆದರೆ ಕಾಳಿದಾಸ ಇವನ ಕಾಲದಲ್ಲಿ ಇದ್ದವನಲ್ಲ.)

ಭೋಜನ ಅನಂತರ ಕೆಲ ಕಾಲ ಪರಮಾರರ ರಾಜ್ಯ ದುರ್ದೆಸೆಯನ್ನು ಕಂಡಿತು. ಚಾಲುಕ್ಯ ಅರಸನೆಯ ವಿಕ್ರಮಾದಿತ್ಯನ ಕಾಲದಲ್ಲಿ ಪರಮಾರರು ಅವನ ಮಿತ್ರರಾದರು. ವಿಂಧ್ಯವರ್ಮನ (ಸು. 1170–93) ಕಾಲದಲ್ಲಿ ಪರಮಾರರು ಮತ್ತೆ ಮಾಳ್ವವನ್ನು ಗೆದ್ದು ಸ್ವತಂತ್ರರಾದರು.

1210ರ ಸುಮಾರಿಗೆ ಪಟ್ಟವೇರಿದ ಅರ್ಜುನ ವರ್ಮ ಈ ವಂಶದ ಇನ್ನೊಬ್ಬ ಖ್ಯಾತ ದೊರೆ. 1305ರ ವೇಳೆಗೆ ಮಾಳ್ವದ ಪರಮಾರರು ಇಸ್ಲಾಮಿನ ಆಕ್ರಮಣವನ್ನು ಎದುರಿಸಲಾರದೆ ಕಣ್ಮರೆಯಾದರು. ಪರಮಾರರ ಒಂದು ಶಾಖೆ ಹತ್ತನೆಯ ಶತಮಾನದಿಂದ ಹದಿಮೂರನೆಯ ಶತಮಾನದ ವರೆಗೆ ಅಬೂ ಬೆಟ್ಟ ಪ್ರದೇಶದಿಂದ ಆಳುತ್ತಿತ್ತು. ಇದೇ ರೀತಿ ವಾಗಡಾ(ಈಗಿನ ಬಾನ್ಸ್‌ವಾರಾ)ದಿಂದ ಇನ್ನೊಂದು ಶಾಖೆ 10-12ನೆಯ ಶತಮಾನಗಳ ನಡುವೆ ಆಳುತ್ತಿತ್ತು. ಇದಲ್ಲದೆ ಜಾಲೊರ್ ಮತ್ತು ಭಿನ್ಮಾಲ್‌ಗಳಲ್ಲೂ ಪರಮಾರರ ಎರಡು ಶಾಖೆಗಳು ಅಲ್ಪ ಕಾಲ ಆಳಿದುವು.


ಪರಶುರಾಮ

''ನಿನ್ನ ತಾಯಿಯ ತಲೆ ಕತ್ತರಿಸು''—ಎಂದು ಪರಶುರಾಮನಿಗೆ ಅವನ ತಂದೆ ಜಮದಗ್ನಿ ಮಹರ್ಷಿ ಆಜ್ಞೆ ಮಾಡಿದ. ಪರಶುರಾಮ ಹಿಂದೆ ಮುಂದೆ ನೋಡದೆ ತಾಯಿಯ ತಲೆ ಕಡಿದೇಬಿಟ್ಟ. ಸಂತುಷ್ಟನಾದ ಜಮದಗ್ನಿ ''ಬೇಕಾದ ವರ ಕೇಳು.'' ಎಂದಾಗ ಪರಶುರಾಮ, ''ನನ್ನ ತಾಯಿಯನ್ನು ಬದುಕಿಸಿಕೊಡಿ.'' ಎಂದ. ಅವನ ತಾಯಿ ಮತ್ತೆ ಬದುಕಿದಳು.

ತನಗೆ ಯಾರಲ್ಲಿ ಅಪಾರ ಗೌರವವಿತ್ತೋ ಅವರಲ್ಲಿ ಅಷ್ಟೇ ನಂಬಿಕೆ ಇಟ್ಟಿದ್ದ ಪರಶುರಾಮ. ಆ ಧೈರ್ಯದ ಮೇಲೆಯೇ ಅವನು ತನ್ನ ತಾಯಿಯ ತಲೆ ಕತ್ತರಿಸಿದ್ದ. ಮತ್ತೆ ಕೇಳಿದರೆ ಆಕೆಯನ್ನು ತಂದೆ ಬದುಕಿಸಿ ಕೊಡುತ್ತಾನೆ ಎಂಬ ನಂಬಿಕೆ ಅವನಿಗಿತ್ತು.

ಜಮದಗ್ನಿಗೆ ಕಿರುಕುಳ ಕೊಡುತ್ತಿದ್ದ ಹೈಹಯ ದೊರೆ ಕಾರ್ತವೀರ್ಯನನ್ನು ಪರಶುರಾಮ ಕೊಂದುಹಾಕಿದ. ಈ ಪಾಪದ ಹತ್ಯೆಯ ದೋಷ ಪರಿಹಾರಕ್ಕಾಗಿ ಪರಶುರಾಮ ಯಾತ್ರೆ ಹೊರಟಿದ್ದಾಗ, ಕಾರ್ತವೀರ್ಯನ ಮಕ್ಕಳು ಜಮದಗ್ನಿಯನ್ನು ಕೊಂದರು.

ಈ ಸುದ್ದಿ ಕೇಳಿ ಪರಶುರಾಮನಿಗೆ ತುಂಬ ಕೋಪ ಬಂತು. ''ಇಡೀ ಕ್ಷತ್ರಿಯ ಕುಲವನ್ನೇ ನಿರ್ಮೂಲ ಮಾಡುತ್ತೇನೆ.'' ಎಂದು ಶಪಥತೊಟ್ಟ



ಯಕುಲ ನಿರ್ಮೂಲಕ : ಪರಶುರಾಮ

ಭಾರತವನ್ನು ಹಲವಾರು ಬಾರಿ ಸುತ್ತಿ, ಕಂಡ ಕಂಡ ಕ್ಷತ್ರಿಯರನ್ನೆಲ್ಲ ನಾಶಮಾಡಿದ. ತಾನು ಗೆದ್ದ ಭೂಮಿಯನ್ನೆಲ್ಲ ದಾನ ಮಾಡಿದ.

ವರುಣದೇವನ ಅನುಗ್ರಹದಿಂದ ಪಶ್ಚಿಮ ಘಟ್ಟ ಪ್ರದೇಶದ ಕರಾವಳಿಯಲ್ಲಿ ಹೊಸ ಭೂಮಿಯನ್ನು ಪಡೆದನೆಂದೂ ಅದು ಪರಶುರಾಮ ಕ್ಷೇತ್ರವೆಂದು ಹೆಸರಾಯಿತೆಂದೂ ದಂತಕಥೆಯಿದೆ.

ತನಗೆ ಪರಶುವನ್ನು ದಯಪಾಲಿಸಿದ ಶಿವನೆಂದರೆ ಪರಶುರಾಮನಿಗೆ ಅಪಾರ ಭಕ್ತಿ, ಗೌರವ. ರಾಮಾಯಣದಲ್ಲಿ ಶ್ರೀರಾಮ ಶಿವಧನುಸ್ಸನ್ನು ಮುರಿದ ಬಗ್ಗೆ ಕೋಪಗೊಂಡ. ಅವನ ಮೇಲೆ ಪರಶುರಾಮ ಯುದ್ಧಮಾಡಿದ ; ಆದರೆ ಸೋತ. ಇವನು ವಿಷ್ಣುವಿನ ದಶಾವತಾರಗಳಲ್ಲೊಬ್ಬ ಎಂದು ಹಿಂದೂಗಳ ನಂಬಿಕೆ. ಪೂರ್ವ ಘಟ್ಟ ಪ್ರದೇಶದ ಮಹೇಂದ್ರ ಪರ್ವತಗಳ ಬಳಿ ಪರಶುರಾಮ ತನ್ನ ಇಳಿವಯಸ್ಸನ್ನು ಕಳೆಯಲಾರಂಭಿಸಿದ : ಈಗಲೂ ಅಲ್ಲಿ ಆತ ತಪಸ್ಸು ಮಾಡುತ್ತಿದ್ದಾನೆ —ಎಂದು ನಂಬುವವರಿದ್ದಾರೆ.

ಪರಾಶರ

ಗೋತ್ರ ಪ್ರವರ್ತಕರಾದ ಮಹರ್ಷಿಗಳಲ್ಲಿ ಪರಾಶರ ಒಬ್ಬ. ಇವನು ವಸಿಷ್ಠ ಮಹಾಮುನಿಯ ಮೊಮ್ಮಗ.

ವಸಿಷ್ಠನ ಪುತ್ರ ಶಕ್ತಿ ಎಂಬಾತ ಇವನ ತಂದೆ. ತಾಯಿ ಅದೃಶ್ಯಂತಿ. ಈತ ಗರ್ಭಾವಸ್ಥೆಯಲ್ಲೇ ವೇದಗಳ ಅಧ್ಯಯನ ನಡೆಸಿದನಂತೆ. ಮುಂದೆ ಪರಾಶರ ಕಪಿಲ ಋಷಿಯ ಶಿಷ್ಯನಾದ. ಪುಲಸ್ತ್ಯರಿಂದ ವಿಷ್ಣು ಪುರಾಣ ಹಾಗೂ ಪಂಚರಾತ್ರದ ತತ್ತ್ವಗಳನ್ನು ಕಲಿತ.

ಇವನು ಋಗ್ವೇದದ ಕೆಲವು ಸ್ತೋತ್ರಗೀತೆಗಳು ಹಾಗೂ ಧರ್ಮಶಾಸ್ತ್ರವೊಂದರ ಕರ್ತೃ ಎಂಬ ಹೇಳಿಕೆ ಇದೆ.

ತಾನು ಹುಟ್ಟುವುದಕ್ಕೆ ಮೊದಲೇ ಒಬ್ಬ ರಾಕ್ಷಸ ತನ್ನ ತಂದೆಯ ಹತ್ಯೆ ಮಾಡಿದ್ದ ಸಂಗತಿ ತಿಳಿದ ಪರಾಶರ ಕ್ರುದ್ಧನಾಗಿ ಜಗತ್ತನ್ನೇ ನಾಶಗೊಳಿಸಲೆಂದು ಒಂದು ಯಜ್ಞ ಮಾಡತೊಡಗಿದ. ಆದರೆ ಅಜ್ಜ ವಸಿಷ್ಠ ತಿಳಿಹೇಳಿದಮೇಲೆ ಆ ಯಜ್ಞವನ್ನು ನಿಲ್ಲಿಸಿ, ಅದರ ಬದಲು ರಾಕ್ಷಸರ ನಾಶಕ್ಕಾಗಿ ಯಜ್ಞ ಕೈಗೊಂಡ.

ಪರಾಶರ ಧರ್ಮಶಾಸ್ತ್ರ, ಕಲೆ, ವಿಜ್ಞಾನಗಳಲ್ಲಿ ಉದ್ದಾಮ ಪಂಡಿತನಾಗಿದ್ದ. ತತ್ತ್ವಶಾಸ್ತ್ರ, ಧರ್ಮ, ಮಾನವ ಹಕ್ಕುಗಳ ಬಗೆಗೆ ಅವನ ಅಭಿಪ್ರಾಯಗಳನ್ನು 'ಪರಾಶರಗೀತೆ'ಯಲ್ಲಿ ಕಾಣಬಹುದು.

ಪರೀಕ್ಷಿತ್

ಪಾಂಡವರು ಸ್ವರ್ಗಲೋಕದ ಕಡೆ ಹೊರಟಾಗ, ಅವರ ಸಾಮ್ರಾಜ್ಯಕ್ಕೆ ಉತ್ತರಾಧಿಕಾರಿಯಾಗಿ ಯುಧಿಷ್ಠಿರನ ಸಿಂಹಾಸನವನ್ನೇರಿದವನು ಮೊಮ್ಮಗ ಪರೀಕ್ಷಿತ್. ಯುಧಿಷ್ಠಿರನಂತೆಯೇ ಧರ್ಮಾತ್ಮನಾಗಿದ್ದ ಇವನು 60 ವರ್ಷ ರಾಜ್ಯಭಾರ ಮಾಡಿ ಸುಭಿಕ್ಷೆ ಉಂಟುಮಾಡಿದ.

ಪರೀಕ್ಷಿತ್ ಅಭಿಮನ್ಯು-ಉತ್ತರೆಯರ ಮಗ. ತಾಯಿಯ ಗರ್ಭದಲ್ಲಿದ್ದಾಗಲೇ ಅಶ್ವತ್ಥಾಮ ಬ್ರಹ್ಮಾಸ್ತ್ರದಿಂದ ಅವನನ್ನು ಕೊಂದನಂತೆ. ಆಗ ಕೃಷ್ಣ ತನ್ನ ಮಹಿಮೆಯಿಂದ ಗರ್ಭದಲ್ಲಿದ್ದ ಮಗುವಿಗೆ ಜೀವ ಕೊಟ್ಟನಂತೆ. ಪಾಂಡವರ ವಂಶ ಕಠಿಣ ಪರೀಕ್ಷೆಗೆ ಒಳಗಾಗಿದ್ದಾಗ ಹುಟ್ಟಿದವನಾದ್ದರಿಂದ ಇವನಿಗೆ ಪರೀಕ್ಷಿತ್ ಎಂದು ಹೆಸರಾಯಿತು. ವಿಷ್ಣುರಾತ—ಇವನ ಇನ್ನೊಂದು ಹೆಸರು.

ಹಸ್ತಿನಾವತಿಯ ರಾಜನಾದ ಬಳಿಕ ಪರೀಕ್ಷಿತ್ ಮೂರು ಬಾರಿ ಅಶ್ವಮೇಧ ಯಾಗ ನಡೆಸಿದ. ಒಮ್ಮೆ ಅವನು ಅರಣ್ಯಪ್ರದೇಶದಲ್ಲಿ ಸಂಚರಿಸುತ್ತಿದ್ದಾಗ ಕಣ್ಣೀರು ಸುರಿಸುತ್ತಿದ್ದ ಒಂದು ಹಸು, ಒಂದು ವೃಷಭ ಮತ್ತು ಅವನ್ನು ಹಿಂಸಿಸುತ್ತಿದ್ದ ಒಬ್ಬ ರಾಜವೇಷಧಾರಿಯನ್ನು ಕಂಡ. ಆ ಹಸುವೇ ಭೂಮಿದೇವಿ. ವೃಷಭವೇ ಧರ್ಮ ಪುರುಷ. ಅವನ್ನು ಹಿಂಸಿಸುತ್ತಿರುವವನೇ ಕಲಿ ಎಂದು ಪರೀಕ್ಷಿತ್ ತಿಳಿದ. ಕಲಿಯನ್ನು ಶಿಕ್ಷಿಸಿ, ಅವನ ಪ್ರಭಾವ ಕಡಮೆಮಾಡಿದ.

ಒಮ್ಮೆ ಇವನು ಶಮೀಕ ಮುನಿಯ ಆಶ್ರಮಕ್ಕೆ ಹೋದಾಗ ತಪಸ್ಸಿನಲ್ಲಿ ಮಗ್ನನಾಗಿದ್ದ ಮುನಿ ಇವನನ್ನು ಗಮನಿಸಲಿಲ್ಲ. ತನಗೆ ಗೌರವದ ಸ್ವಾಗತ ಸಿಗಲಿಲ್ಲವೆಂದು ಪರೀಕ್ಷಿತ್ ಕೋಪಗೊಂಡ. ಮುನಿಯನ್ನು ಅವಮಾನಿಸಲೆಂದು ಅಲ್ಲಿಯೇ ಸತ್ತು ಬಿದ್ದಿದ್ದ ಹಾವೊಂದನ್ನು ಬಿಲ್ಲಿನ ತುದಿಯಿಂದ ಎತ್ತಿ ಅವನ ಕೊರಳಿಗೆ ಹಾರದಂತೆ ತೊಡಿಸಿ ಹೊರಟುಹೋದ. ಅನಂತರ ಅಲ್ಲಿಗೆ ಬಂದ ಮುನಿಪುತ್ರ ಶೃಂಗಿ. ಹೀಗೆ ಅವಮಾನಿಸಿದವನು ಏಳು ದಿನಗಳಲ್ಲಿ ಹಾವು ಕಚ್ಚಿ ಸಾಯಲಿ ಎಂದು ಶಾಪ ಕೊಟ್ಟ. ಸಮಾಧಿಯಿಂದ ಎಚ್ಚೆತ್ತ ಶಮೀಕ ರಾಜನಿಗೆ ಕೇಡಾಗುವುದೆಂದು ವ್ಯಥೆಪಟ್ಟ. ಶಾಪಕ್ಕೆ ಪರಿಹಾರ ಮಾಡಿಕೊಳ್ಳುವಂತೆ ರಾಜನಿಗೆ ಹೇಳಿ ಕಳುಹಿಸಿದ: ಇಷ್ಟರಲ್ಲಿ ಪರೀಕ್ಷಿತನಿಗೂ ತಪ್ಪಿನ ಅರಿವಾಗಿತ್ತು. ಪ್ರಾಯಶ್ಚಿತ್ತ ಮಾಡಿಕೊಳ್ಳಲು ಆತ ನಿರ್ಧರಿಸಿದ.

ಸರ್ಪಗಳು ಸಮೀಪಿಸದಂತೆ ಮಾಡಲು ಒಂದು ಸ್ತಂಭದ ಕಂಬವೊಂದರ ಆಧಾರದ ಮೇಲೆ ಎತ್ತರದಲ್ಲಿ ಮಹಡಿ ನಿರ್ಮಿಸಿ ಅದರಲ್ಲಿ ಅವನು ಏಳು ದಿನ ಕಳೆಯುವ ವ್ಯವಸ್ಥೆ ಆಯಿತು. ಅನೇಕ ಋಷಿಗಳು ಅವನ ಜೊತೆಗಿದ್ದರು. ಆ ಸಂದರ್ಭದಲ್ಲಿ ಶುಕಮುನಿ ಅಲ್ಲಿಗೆ ಭೇಟಿಕೊಟ್ಟು ಅವನ ಕೋರಿಕೆಯಂತೆ ಭಾಗವತ ಕತೆಯನ್ನು ಹೇಳಿದರು.

ಯಾವ ಅಪಾಯವೂ ಬಾರದೆ ಆರು ದಿನ ಕಳೆದ ಬಳಿಕ ಏಳನೆಯ ದಿನ ರಾಜನ ಭೇಟಿಗೆ ಬಂದ ಕೆಲವು ಬ್ರಾಹ್ಮಣರು ಅವನಿಗೆ ಫಲ ಕಾಣಿಕೆಗಳನ್ನು ಕೊಟ್ಟರು. ಪರೀಕ್ಷಿತನನ್ನು ಕೊಲ್ಲಲು ಛಲ ತೊಟ್ಟಿದ್ದ ಸರ್ಪರಾಜ ತಕ್ಷಕ ಒಂದು ಹಣ್ಣಿನಲ್ಲಿ ಹುಳುರೂಪದಲ್ಲಿ ಸೇರಿಕೊಂಡಿದ್ದ. ಆ ಹಣ್ಣನ್ನು ಕೈಗೆತ್ತಿಕೊಂಡೊಡನೆ ತಕ್ಷಕ ಹೊರ ಬಂದು ಘೋರ ರೂಪತಾಳಿ ಅವನನ್ನು ಕಚ್ಚಿದ. ಪರೀಕ್ಷಿತ್ ತಕ್ಷಣ ಮರಣಹೊಂದಿದ. ಪರೀಕ್ಷಿತನ ಕಥೆ 'ಮಹಾಭಾರತ' 'ಭಾಗವತ' ಮತ್ತು ದೇವೀ ಭಾಗವತಗಳಲ್ಲಿದೆ

ಪಲ್ಲವರು

ಆರಂಭದಲ್ಲಿ ಶಾತವಾಹನರ ಮಾಂಡಲಿಕರಾಗಿದ್ದು ಮುಂದೆ ಸ್ವತಂತ್ರ [illegible]

ಅಲಹಾಬಾದ ಶಾಸನದಲ್ಲಿ ಸಮುದ್ರಗುಪ್ತನು ಕಂಚಿಯ ವಿಷ್ಣು ಗೋಪನನ್ನು ಸೋಲಿಸಿದ ಬಗ್ಗೆ ಉಲ್ಲೇಖವಿದೆ. ಆರನೆಯ ಶತಮಾನದಲ್ಲಿ ಆಳಿದ ಸಿಂಹವಿಷ್ಣುವಿನ ಕಾಲದಿಂದ ಈ ವಂಶದ ಇತಿಹಾಸ ಸ್ಪಷ್ಟವಾಗಿದೆ. ಕಾವೇರಿ ತೀರದ ತಮಿಳುನಾಡು; ಆಂಧ್ರದ ಉತ್ತರಭಾಗದ ವರೆಗೆ ತನ್ನ ರಾಜ್ಯ ವನ್ನು ವಿಸ್ತರಿಸಿದ. ಇವನ ಮಗ ಮಹೇಂದ್ರವರ್ಮ ಬಾದಾಮಿಯ ಎರಡನೆಯ ಪುಲಕೇಶಿಯ ಜೊತೆ ಸೆಣಸಿ ಸೋತ. ಅವನ ಮಗ ನರಸಿಂಹವರ್ಮ (642-68) ಚಾಲುಕ್ಯರನ್ನು ಸೋಲಿಸಿ ಬಾದಾಮಿಯನ್ನು ವಶಪಡಿಸಿಕೊಂಡ. ಮಹಾಬಲಿಪುರದ ಶಿಲಾರಥಗಳು ಇವನ ರಚನೆಗಳು. ಮಾಮಲ್ಲ (ಮಹಾಮಲ್ಲ) ಎಂಬುದು ಇವನ ಬಿರುದು. ಇವನು ಸಿಂಹಳ ದ್ವೀಪದ ಮೇಲೆ ಯಶಸ್ವಿಯಾಗಿ ದಾಳಿ ನಡೆಸಿದ. ಹ್ಯೂಯೆನ್ ತ್ಸಾಂಗ್ ಇವನ ಆಸ್ಥಾನಕ್ಕೆ ಬಂದಿದ್ದ.

ಈ ವಂಶದ ಎರಡನೆಯ ನರಸಿಂಹವರ್ಮ (695-722) ಚೀನಕ್ಕೆ ರಾಯಭಾರಿಗಳನ್ನು ಕಳುಹಿಸಿದ್ದಲ್ಲದೆ ಕಂಚಿಯಲ್ಲಿ ಕೈಲಾಸನಾಥ ಮಂದಿರ ವನ್ನು ಕಟ್ಟಿಸಿದ. ಇವನಿಗೆ ರಾಜಸಿಂಹನೆಂಬ ಬಿರುದಿತ್ತು. ವಂಶದ ಕೊನೆಯ ದೊರೆಯಾದ ಅಪರಾಜಿತನನ್ನು ಚೋಳ ಆದಿತ್ಯನು ಕೊಂದು. ಪಲ್ಲವರ ಆಡಳಿತವನ್ನು ಕೊನೆಗಾಣಿಸಿದ.

ಪಲ್ಲವರ ಆಡಳಿತವು ತಮಿಳುನಾಡಿನ ಸಾಂಸ್ಕೃತಿಕ ಇತಿಹಾಸದಲ್ಲಿ ಮಹತ್ವದ ಕಾಲ. ಭಕ್ತಿಯುಗ ಆಗ ಪ್ರಾರಂಭವಾಯಿತು. ವೈಷ್ಣವ ಸಂತರಾದ ಆಳ್ವಾರರೂ ಶೈವ ಸಂತರಾದ ನಾಯನಾರರೂ ಇವರ ಕಾಲ ದಲ್ಲಿ ಬಹಳ ಭಕ್ತಿ ಸಾಹಿತ್ಯ ರಚನೆ ಮಾಡಿದರು. ಕಂಚಿಯು ಖ್ಯಾತ ಶಿಕ್ಷಣ ಕೇಂದ್ರವಾಗಿತ್ತು. ಪಲ್ಲವರು ಕಲಾ ಸಾಹಿತ್ಯ ಪೋಷಕರಾಗಿದ್ದರು. ಮಹೇಂದ್ರವರ್ಮ 'ಮತ್ತವಿಲಾಸ' ಎಂಬ ಪ್ರಹಸನವನ್ನು ಬರೆದ. ಭಾರವಿ. ದಂಡಿ ಮುಂತಾದ ಸಂಸ್ಕೃತ ಕವಿಗಳು ಪಲ್ಲವರ ಕಾಲದಲ್ಲಿದ್ದರು.

ಪಶ್ಚಿಮ ಘಟ್ಟಗಳು

ಭಾರತದ ಪರ್ಯಾಯ ಭೂಪ್ರದೇಶದಲ್ಲಿ ಪೂರ್ವ ಪಶ್ಚಿಮಗಳಲ್ಲಿ ಹಬ್ಬಿರುವ ಪರ್ವತ ಮಾಲೆಗಳನ್ನು ಪೂರ್ವ ಘಟ್ಟ, ಪಶ್ಚಿಮ ಘಟ್ಟಗಳೆಂದು ಕರೆಯುತ್ತಾರೆ. ರಾಮಾಯಣದಲ್ಲಿ ಪಶ್ಚಿಮ ಘಟ್ಟ ಸಹ್ಯಾದ್ರಿ ಎಂದು ಕರೆಯಲ್ಪಟ್ಟಿದೆ. ಪಶ್ಚಿಮ ಘಟ್ಟ ದಖ್ಖನ ಪ್ರಸ್ಥಭೂಮಿಯ ಪಶ್ಚಿಮ ಅಂಚಿನಲ್ಲಿ ಸುಮಾರು ಸಾವಿರ ಮೈಲು ದೂರ ತಪತಿ ಮುಖಜಭೂಮಿಯಿಂದ ಕನ್ಯಾಕುಮಾರಿ ವರೆಗೆ ಹಬ್ಬಿದೆ. ಇದರ ಸರಾಸರಿ ಎತ್ತರ 3.500ರಿಂದ 4.000 ಅಡಿಗಳು. ಆದರೆ ವೆಂಬಾಡಿಶೋಲಾ. ಪಳನಿ. ಅಣ್ಣೈಮುಡಿ. ಮಾಕೃತಿ. ನೀಲಗಿರಿಯ ದೊಡ್ಡ ಬೆಟ್ಟ ಮೊದಲಾದ 8.000 ಅಡಿಗೂ ಮೀರಿದ ಉನ್ನತ ಶಿಖರಗಳು ಈ ಘಟ್ಟದಲ್ಲಿವೆ. ಅರಬಿ ಸಮುದ್ರ ತೀರಕ್ಕೆ ಸಮೀಪವಾಗಿ ಹಬ್ಬಿರುವ ಈ ಪರ್ವತಶ್ರೇಣಿ ದಕ್ಷಿಣಕ್ಕೆ ಸರಿದಂತೆ ತೀರದಿಂದ ದೂರವಾಗು ತ್ತದೆ. ಕಡೆಗೆ ಇದಕ್ಕೂ ಸಮುದ್ರಕ್ಕೂ 40-50 ಮೈಲು ಅಂತರ ಉಂಟಾಗುತ್ತದೆ.

ತಪತಿ ನದೀ ಮುಖಜಭೂಮಿಯಲ್ಲಿ ಪಶ್ಚಿಮ ಘಟ್ಟ ಆರಂಭವಾದ ಮೇಲೆ 200 ಮೈಲು ತನಕ ಇದರ ಎತ್ತರ 3.000 ಅಡಿಗಳಿಗಿಂತ ಕಡಮೆ. ಅನಂತರ ಇದು ಕ್ರಮೇಣ ಎತ್ತರವಾಗುತ್ತದೆ. ಈ ಶ್ರೇಣಿ ನೀಲಗಿರಿ ಸೇರುವಲ್ಲಿರುವ ದೊಡ್ಡ ಬೆಟ್ಟದ ಎತ್ತರ 8.760 ಅಡಿ.

ಗೋದಾವರಿ. ಕೃಷ್ಣಾ. ಕಾವೇರಿ. ತಾಮ್ರಪರ್ಣಿ ಅವುಗಳ ಉಪನದಿಗಳೆಲ್ಲ ಪಶ್ಚಿಮ ಘಟ್ಟದಲ್ಲಿ ಹುಟ್ಟಿ. ಪೂರ್ವಕ್ಕೆ ಹರಿದು ಬಂಗಾಳಕೊಲ್ಲಿಯನ್ನು ಸೇರುತ್ತವೆ. ಕಾಳಿ. ಶರಾವತಿ. ನೇತ್ರಾವತಿ ಮೊದಲಾದ ನದಿಗಳು ಅರಬಿ ಸಮುದ್ರಕ್ಕೆ ಸೇರುತ್ತವೆ.

ಪಶ್ಚಿಮ ಘಟ್ಟಗಳಲ್ಲಿರುವ ಪಾಲ್ಘಾಟ್ ಕಣಿವೆ ಅತ್ಯಂತ ವಿಶಾಲ ವಾದದ್ದು. ಇದರ ಗರಿಷ್ಠ ಅಗಲ 15 ಮೈಲು. ಇದೊಂದು ಸಂಪರ್ಕ ಮಾರ್ಗ. ಮಲಬಾರ್ ತೀರಪ್ರದೇಶ. ಕನ್ನಡ ಜಿಲ್ಲೆಗಳಿಗೂ ಕರ್ನಾಟಕ. ತಮಿಳುನಾಡಿನ ಬಯಲು ಪ್ರದೇಶಗಳಿಗೂ ನಡುವೆ ಈ ಮಾರ್ಗವಿದೆ.

ಪಶ್ಚಿಮ ಘಟ್ಟಗಳ ಪಶ್ಚಿಮದ ಇಳಿಜಾರು ಕಡಿದಾಗಿದೆ. ಪೂರ್ವದ ಇಳಿಜಾರು ಕ್ರಮೇಣ ಇಳಿಯುತ್ತದೆ. ಹೀಗೆ ತಗ್ಗಿ ಕರ್ನಾಟಕದ ಪ್ರಸ್ಥ ಭೂಮಿಯಾಗಿ ಇದರ ಮುಕ್ತಾಯ. ಪಶ್ಚಿಮದ ಕಡೆಯ ಘಟ್ಟ ಭಾಗದಲ್ಲಿ ಭಾರೀ ಮಳೆಬೀಳುತ್ತದೆ. ಇಲ್ಲಿ ದಟ್ಟ ಕಾಡುಗಳಿವೆ.


ಪಶ್ಚಿಮ ಘಟ್ಟದ ನದಿಗಳು ವಿದ್ಯುತ್ ಉತ್ಪಾದನೆಗೆ ಅನುಕೂಲವಾಗಿವೆ. ಕರ್ನಾಟಕದ ಪಶ್ಚಿಮಘಟ್ಟ ಪ್ರದೇಶದಲ್ಲಿ ಕಾಫಿ. ಏಲಕ್ಕಿ ಬೆಳೆಯುತ್ತವೆ.



ಪಶ್ಚಿಮ ಘಟ್ಟ ಶ್ರೇಣಿ

ಪಶ್ಚಿಮ ಬಂಗಾಳ

1947ರ ವರೆಗೆ ಬಂಗಾಳ ಪ್ರಾಂತವಾಗಿದ್ದ ಪ್ರದೇಶ, ಭಾರತದ ವಿಭಜನೆಯ ಬಳಿಕ ಪಶ್ಚಿಮ ಬಂಗಾಳ ಹಾಗೂ ಪೂರ್ವ ಪಾಕಿಸ್ತಾನ ಎಂದಾಯಿತು. ಪೂರ್ವ ಪಾಕಿಸ್ತಾನ ಈಗ ಬಾಂಗ್ಲಾ ದೇಶವಾಗಿದೆ. ಹಿಂದಿನ ಬಂಗಾಳ ಪ್ರಾಂತದ ಸುಮಾರು ಮೂರನೆಯ ಒಂದು ಭಾಗದಷ್ಟು ಪ್ರದೇಶ ಮಾತ್ರ ಈಗಿನ ಪಶ್ಚಿಮ ಬಂಗಾಳ, ಭಾರತದ ರಾಜ್ಯಗಳಲ್ಲಿ ಒಂದು. ಇದರ ಮೇರೆಗಳು



ಬಾಂಗ್ಲಾ ದೇಶ, ಅಸ್ಸಾಂ, ಬಂಗಾಳ ಕೊಲ್ಲಿ, ಬಿಹಾರ್, ಒಡಿಸ್ಸಾ, ನೇಪಾಳ ಹಾಗೂ ಭೂತಾನ.

ಹಿಮಾಲಯದ ಡಾರ್ಜೀಲಿಂಗ್, ಜಲ್‌ಪಾಯ್‌ಗುರಿ ಪ್ರದೇಶಗಳನ್ನು ಬಿಟ್ಟರೆ, ಪಶ್ಚಿಮ ಬಂಗಾಳ ಒಂದು ವಿಶಾಲ ಬಯಲುಸೀಮೆ. ಅತಿ ಮಟ್ಟಸವಾದ ಹಾಗೂ ವಿಶಾಲವಾದ ಗಂಗಾನದಿ ಮುಖಜಭೂಮಿ ಇದರಲ್ಲಿ ಸೇರಿದೆ. ಪಶ್ಚಿಮ ಬಂಗಾಳದ ಬಹುಭಾಗ ಮೆಕ್ಕಲು ಮಣ್ಣಿನಿಂದ ಫಲವತ್ತಾಗಿದೆ. ಗಂಗಾನದಿಯ ಭಾಗೀರಥಿ ವಿಭಾಗ ಪಶ್ಚಿಮ ಬಂಗಾಳದ ಮುಖ್ಯ ನದಿ. ಇದರ ಕೊನೆಯ ಭಾಗದಲ್ಲಿ ಪ್ರಪಂಚದ ಮುಖ್ಯ ಬಂದರುಗಳಲ್ಲಿ ಒಂದಾದ ಕಲ್ಕತ್ತಾ ಇದೆ. ಹೂಗ್ಲಿ, ದಾಮೋದರ, ಮಯೂರಾಕ್ಷಿ, ಕಾಂಗ್ಸಬತಿ, ರೂಪನಾರಾಯಣ್ ಹಾಗೂ ಟೀಸ್ಟ –ಇವು ಇತರ ಮುಖ್ಯ ನದಿಗಳು.

ಚಂದ್ರಕೇತುಪುರದ ಬಳಿ ನಡೆದಿರುವ ಭೂಸಂಶೋಧನೆಗಳಿಂದ ಈ ಪ್ರದೇಶದಲ್ಲಿ ಹರಪ್ಪಾ ಮೊಹೆಂಜೊದಾರೊ ಸಂಸ್ಕೃತಿಯ ಅವಶೇಷಗಳನ್ನು ಹೋಲುವ ಅವಶೇಷಗಳು ದೊರೆತಿವೆ.

ಈಗಿನ ಪಶ್ಚಿಮ ಬಂಗಾಳವಿರುವ ಪ್ರದೇಶದಲ್ಲಿ ಕಾಲದಿಂದ ಕಾಲಕ್ಕೆ ಬೇರೆ ಬೇರೆ ರಾಜವಂಶಗಳು ಆಳಿದುವು. ಇವುಗಳಲ್ಲಿ ಗೌರ್ ರಾಜ್ಯ ತುಂಬ ಪ್ರಸಿದ್ಧವಾದದ್ದು. ಇದು ಪಾಲವಂಶದವರ ಅನಂತರ ಸೇನವಂಶದ ಅರಸರ ಆಳ್ವಿಕೆಗೆ ಒಳಗಾಗಿತ್ತು.

ಏಳನೆಯ ಶತಮಾನದಿಂದ 18ನೆಯ ಶತಮಾನದ ವರೆಗೆ ಆಳಿದ ಮಲ್ಲ ವಂಶದವರು ಸ್ಥಾಪಿಸಿದ ವಿಷ್ಣುಪುರದಲ್ಲಿ ಬಂಗಾಳಕ್ಕೆ ವಿಶಿಷ್ಟವಾದ ವಾಸ್ತುಶಿಲ್ಪ ಶೈಲಿಯ ಹಲವಾರು ಪ್ರೇಕ್ಷಣೀಯ ದೇವಾಲಯಗಳಿವೆ. ಇವುಗಳಲ್ಲಿರುವ ಶಿಲ್ಪ ಕೃತಿಗಳಲ್ಲಿನ ವೈವಿಧ್ಯವೂ ಸೌಂದರ್ಯವೂ ಗಮನಾರ್ಹ.

ಪಶ್ಚಿಮ ಬಂಗಾಳದ ಜನರ ಮುಖ್ಯ ಕಸುಬು ವ್ಯವಸಾಯ. ಭತ್ತ ಮುಖ್ಯ ಬೆಳೆ. ಮೀನುಗಾರಿಕೆಗೂ ಪ್ರಾಧಾನ್ಯವಿದೆ. ಬಂಗಾಳದ ಜನರ ಆಹಾರದಲ್ಲಿ ಅಕ್ಕಿ, ಮೀನು ಪ್ರಧಾನಾಂಶಗಳು. ಕಾಳುಗಳು, ಬಾರ್ಲಿ, ಸಣಬು, ಸಾಸಿವೆ, ಕಬ್ಬು, ಜೋಳ, ಹತ್ತಿ, ತಂಬಾಕು ಮುಂತಾದುವು ಬೆಳೆಯುತ್ತವೆ. ಭತ್ತ ಬಿಟ್ಟರೆ ಪಶ್ಚಿಮ ಬಂಗಾಳದ ಇನ್ನೊಂದು ಪ್ರಧಾನ ಬೆಳೆ ಸಣಬು. ಭಾರತದ ಅತಿ ದೊಡ್ಡ ಉದ್ಯಮಗಳಲ್ಲಿ ಇದು ಮೂರನೆಯದು. ಭಾರತದಲ್ಲಿ ಅತ್ಯಧಿಕ ಪ್ರಮಾಣದ ಚಹಾ ಉತ್ಪಾದನೆಯಾಗುವ ರಾಜ್ಯ ಇದು. ಡಾರ್ಜೀಲಿಂಗಿನ ಬಳಿಯ ಇಳಿಜಾರು ಪ್ರದೇಶದಲ್ಲಿ ಚಹಾ ತೋಟಗಳಿವೆ.

ಡಾರ್ಜೀಲಿಂಗ್, ಜಲ್‌ಪಾಯ್‌ಗುರಿ, ಕೂಚ್ ಬಿಹಾರ್, ಸುಂದರಬನ್, ಮಿಡ್ನಾಪುರ, ನಾದಿಯಾ, ಬಂಕುರ ಪ್ರದೇಶಗಳಲ್ಲಿ ಅರಣ್ಯಗಳಿವೆ. ಇಲ್ಲಿ ತೇಗದಂಥ ಅನೇಕ ಬಗೆಯ ಉತ್ತಮ ಮರಗಳು ಬೆಳೆಯುತ್ತವೆ. ಕೆಳಮಟ್ಟದ ಭಾಗಗಳಲ್ಲಿ ಬೊಂಬು, ಜೊಂಡು, ಬೆತ್ತ ದೊರೆಯುತ್ತವೆ. ರಂಗು, ರಬ್ಬರ್, ಔಷಧಿಯ ಮೂಲಿಕೆಗಳು ಇಲ್ಲಿನ ಕಾಡಿನ ಉತ್ಪನ್ನಗಳು. ಹುಲಿ, ಚಿರತೆ, ಆನೆ, ಖಡ್ಗಮೃಗ, ಕರಡಿ, ಕೋತಿ, ಗುಳ್ಳೆನರಿ ಮುಂತಾದ ಕಾಡು ಪ್ರಾಣಿಗಳಿವೆ.

ಈ ರಾಜ್ಯದಲ್ಲಿ ಉತ್ತಮ ದರ್ಜೆಯ ಕಲ್ಲಿದ್ದಲು, ಮ್ಯಾಂಗನೀಸ್, ಅಲ್ಯೂಮಿನಿಯಂ, ಸುಣ್ಣದ ಕಲ್ಲು ದೊಡ್ಡ ಪ್ರಮಾಣದಲ್ಲಿ ದೊರೆಯುತ್ತವೆ.

ರಾಷ್ಟ್ರದ ಕೈಗಾರಿಕೆಯಲ್ಲಿ ಶೇಕಡಾ 23ರಷ್ಟು ಪಶ್ಚಿಮ ಬಂಗಾಳದಲ್ಲಿ ಕೇಂದ್ರೀಕೃತವಾಗಿದೆ. ಒಳ್ಳೆಯ ರೈಲು ಸಾರಿಗೆ ವ್ಯವಸ್ಥೆ ಹಾಗೂ ವಿದ್ಯುತ್ ಉತ್ಪಾದನೆ ಇದಕ್ಕೆ ಕಾರಣ. ಸಣಬು ಚೀಲ ಮುಂತಾದುವು ಹೊರ ದೇಶಗಳಿಗೆ ಕೂಡ ರಫ್ತಾಗುತ್ತವೆ. ಅಲ್ಯೂಮಿನಿಯಂ ತಯಾರಿಕೆಯ ಉರುಳೆಗಿರಣಿಗಳು ಪಶ್ಚಿಮ ಬಂಗಾಳದಲ್ಲಿವೆ. ರಾಷ್ಟ್ರದ ಕಾಲುಭಾಗದಷ್ಟು ಕಲ್ಲಿದ್ದಲು ಈ ರಾಜ್ಯದಲ್ಲಿ ಉತ್ಪಾದಿಸಲ್ಪಡುತ್ತದೆ. ತೊಗಲು, ಪಿಂಗಾಣಿ ಸಾಮಾನು, ಔಷಧ ಪದಾರ್ಥ ಮತ್ತು ಇತರ ಅನೇಕ ಕಲಾತ್ಮಕ ವಸ್ತುಗಳು ಈ ರಾಜ್ಯದಲ್ಲಿ ತಯಾರಾಗುತ್ತವೆ. ದೇಶದ ಎರಡು ದೊಡ್ಡ ಉಕ್ಕಿನ ಕಾರಖಾನೆಗಳು ರಾಜ್ಯದ ದುರ್ಗಾಪುರ ಹಾಗೂ ಬರ್ನಪುರಗಳಲ್ಲಿವೆ. ಹಿಂದೂಸ್ಥಾನ್ ಕೇಬಲ್ಸ್ ಕಾರಖಾನೆ, ಉತ್ತರಪಾರಾದ ಹಿಂದೂಸ್ಥಾನ್ ಮೋಟರ್ಸ್, ಕಾಗದ ಕಾರಖಾನೆ, ಅನೇಕ ಬಟ್ಟೆ ಗಿರಣಿಗಳು ಪಶ್ಚಿಮ ಬಂಗಾಳದಲ್ಲಿವೆ. ಆಟದ ಸಾಮಾನು, ಸುಂದರ ರೇಷ್ಮೆ ವಸ್ತ್ರ, ದಂತಕೆತ್ತನೆ, ನೆಲಹಾಸು, ವರ್ಣರಂಜಿತ ಬಂಗಾರದ ಸಾಮಾನು ಇಲ್ಲಿ ತಯಾರಾಗುವ ಕುಶಲ ಕಲಾವಸ್ತುಗಳು.

ಮಯೂರಾಕ್ಷಿ ಮತ್ತು ಕಾಂಗ್ಸಬತಿ ರಾಜ್ಯದ ಎರಡು ಮುಖ್ಯ ನೀರಾವರಿ ಯೋಜನೆಗಳು. ದಾಮೋದರ್ ಕಣಿವೆ ಯೋಜನೆಯಿಂದ ಪಶ್ಚಿಮ ಬಂಗಾಳಕ್ಕೂ ಪ್ರಯೋಜನವಾಗಿದೆ. ಇವು ವಿದ್ಯುತ್ ಉತ್ಪಾದನೆಯ ಮುಖ್ಯ ಯೋಜನೆಗಳು ಕೂಡ.

ಈ ರಾಜ್ಯದಲ್ಲಿ 16 ಜಿಲ್ಲೆಗಳಿವೆ. ಕೂಚ್ ಬಿಹಾರ್, ಡಾರ್ಜೀಲಿಂಗ್, ಮಿಡ್ನಾಪುರ, ಮುರ್ಷಿದಾಬಾದ್ ಮುಂತಾದುವು ಮುಖ್ಯ ನಗರಗಳು. ಡಾರ್ಜೀಲಿಂಗ್, ಕಾಲಿಂಪಾಂಗ್, ಸಂದಾಕ್‌ಫು, ಸಿಲಿಗುರಿ ಕೆಲವು ಪ್ರೇಕ್ಷಣೀಯ ಸ್ಥಳಗಳು, ಧಾಮಗಳು.

ಪಶ್ಚಿಮ ಬಂಗಾಳ ಮೊದಲಿನಿಂದಲೂ ವಿದ್ಯಾಸಕ್ತಿಗೆ ಹೆಸರಾದ ಪ್ರದೇಶ. ನಾದಿಯ (ನವದ್ವೀಪ) ಹಾಂದಿನಿಂದ ಪ್ರಸಿದ್ಧವಾದ ವಿದ್ಯಾಕೇಂದ್ರ. ವಿಶ್ವಭಾರತಿ (ಶಾಂತಿನಿಕೇತನ) ಯನ್ನೊಳಗೊಂಡು ಆರು ವಿಶ್ವವಿದ್ಯಾನಿಲಯಗಳಿವೆ. ಕಲ್ಕತ್ತಾ ವಿಶ್ವವಿದ್ಯಾನಿಲಯ ಇವುಗಳಲ್ಲಿ ಅತ್ಯಂತ ಹಳೆಯದು. ಪ್ರಪಂಚದ ದೊಡ್ಡ ವಿದ್ಯಾನಿಲಯಗಳಲ್ಲಿ ಇದೂ ಒಂದು. ಜಾಧವಪುರ ವಿಶ್ವವಿದ್ಯಾನಿಲಯ, ಉತ್ತರ ಬಂಗಾಳ ವಿಶ್ವವಿದ್ಯಾನಿಲಯ



ದುರ್ಗಾಪುರ :
ಉಕ್ಕಿನ ಕಾರಖಾನೆ



ಸಿದ್ಧಾರ್ಥ ಶಂಕರ ರೇ

(ಸಿಲಿಗುರಿ) ಹಾಗೂ ರವೀಂದ್ರಭಾರತಿ ವಿಶ್ವವಿದ್ಯಾನಿಲಯ (ಕಲ್ಕತ್ತಾ) ಇವು ಇನ್ನುಳಿದವು.

ರಾಜ್ಯದಲ್ಲಿ ಅನೇಕ ಬುಡಕಟ್ಟುಗಳ ಜನರಿದ್ದಾರೆ. ಇವರಲ್ಲಿ ಸಂತಾಲರು ಮುಖ್ಯರು. ಗ್ರಾಮೀಣ ಪಶ್ಚಿಮ ಬಂಗಾಳದ ಪ್ರಧಾನ ನೋಟ. ಅಲ್ಲಿನ ಗುಡಿಸಲುಗಳೂ ಜನರ ಉಡುಗೆಗಳೂ ವಿಶಿಷ್ಟ. 'ಅಲ್ಪನಾ' ರಂಗವಲ್ಲಿ ಕಲೆ ಇಲ್ಲಿ ಜನಪ್ರಿಯ ಹಾಗೂ ವಿಕಸಿತ ಕಲೆ. ಕಾಳಿಯ ಆರಾಧನೆ ಬಂಗಾಳಿ ಹಿಂದೂಗಳಲ್ಲಿ ತುಂಬ ಪ್ರಚಾರದಲ್ಲಿದೆ. ನವರಾತ್ರಿಯಲ್ಲಿ ದುರ್ಗಾ ಪೂಜೆ ವಿಶಿಷ್ಟವಾದದ್ದು.

ರಾಜ್ಯದಲ್ಲಿ ರೈಲು. ರಸ್ತೆ. ವಿಮಾನ. ದೋಣಿ ಸಾರಿಗೆ ವ್ಯವಸ್ಥೆಗಳಿವೆ. ಕಲ್ಕತ್ತೆಯ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ದಮ್‌ದಮ್. ರಾಜಧಾನಿ ಕಲ್ಕತ್ತಾ ಜನಸಂಖ್ಯೆ 70,31.382.

1947ರಲ್ಲಿ ವಿಭಜನೆಯಾದಾಗ ಪಶ್ಚಿಮ ಬಂಗಾಳ ಎರಡು ಪ್ರತ್ಯೇಕ ಭಾಗಗಳನ್ನು ಒಳಗೊಂಡಿತ್ತು. ಮಧ್ಯೆ ಬಿಹಾರ್ ರಾಜ್ಯದ ಪ್ರದೇಶವಿದ್ದಿತು. 1956ರ ರಾಜ್ಯ ಪುನರ್ರಚನೆಯ ಸಮಯದಲ್ಲಿ ಈ ಎರಡು ಭಾಗಗಳ ನಡುವೆ ಇದ್ದ ಬಿಹಾರದ ಸ್ವಲ್ಪ ಭಾಗವನ್ನು ಪಶ್ಚಿಮ ಬಂಗಾಳ ರಾಜ್ಯಕ್ಕೆ ಸೇರಿಸಿ ಪ್ರಾದೇಶಿಕ ಐಕ್ಯವನ್ನು ಸಾಧಿಸಲಾಯಿತು.

ನೋಡಿ : ಕಲ್ಕತ್ತಾ ; ಡಾರ್ಜೀಲಿಂಗ್ : ದುರ್ಗಾಪುರ ಉಕ್ಕಿನ ಕಾರಖಾನೆ ; ಬಂಗಾಳ ; ಬಾಂಗ್ಲಾದೇಶ ; ವಿಶ್ವಭಾರತಿ

ಪಳನಿ

ತಮಿಳು ನಾಡಿನ ಮದುರೈ ಜಿಲ್ಲೆಯಲ್ಲಿ ಸಮುದ್ರಮಟ್ಟದಿಂದ 1.068 ಅಡಿ ಎತ್ತರದಲ್ಲಿರುವ ಪಳನಿ ಪ್ರಸಿದ್ಧ ಸುಬ್ರಹ್ಮಣ್ಯ ಕ್ಷೇತ್ರ. ಪಳನಿ ಬೆಟ್ಟ ಪಶ್ಚಿಮಘಟ್ಟದ ಒಂದು ಶ್ರೇಣಿಯಲ್ಲಿದೆ.

ಶಿವ–ಪಾರ್ವತಿಯರ ಮಕ್ಕಳು ಗಣಪತಿ ಮತ್ತು ಸುಬ್ರಹ್ಮಣ್ಯ. ಮಕ್ಕಳಿಬ್ಬರಲ್ಲಿ ಯಾರು ಮೊದಲು ಪ್ರಪಂಚವನ್ನೆಲ್ಲ ಸುತ್ತಿಕೊಂಡು ಬರುವರೋ ಅವರಿಗೆ ಬಹುಮಾನ ಕೊಡುವುದಾಗಿ ಶಿವ ಹೇಳಿದ. ಸುಬ್ರಹ್ಮಣ್ಯ ತನ್ನ ವಾಹನವಾದ ನವಿಲನ್ನೇರಿ ತಕ್ಷಣ ಹೊರಟುಬಿಟ್ಟ. ಗಣಪತಿ ನಿಧಾನವಾಗಿ ಎದ್ದು, ತಂದೆತಾಯಿಯರಿಗೆ ಪ್ರದಕ್ಷಿಣೆ ಹಾಕಿ, ನಾನು ಪ್ರಪಂಚವನ್ನೆಲ್ಲ ಸುತ್ತಿದಂತಾಯಿತು ಎಂದು ಹೇಳಿ. ಮಾಳಿಂದ ಹಣ್ಣನ್ನು ಬಹುಮಾನವಾಗಿ ಪಡೆದ. ಅಷ್ಟು ಹೊತ್ತಿಗೆ ಪ್ರಪಂಚವನ್ನೆಲ್ಲ ಸುತ್ತಿಕೊಂಡು ಸುಬ್ರಹ್ಮಣ್ಯ ಅಲ್ಲಿಗೆ ಬಂದ. ಗಣಪತಿಗೆ ಬಹುಮಾನ ದೊರೆತದ್ದರಿಂದ ಸಿಟ್ಟುಗೊಂಡು ಸುಬ್ರಹ್ಮಣ್ಯ ವರಾಹಗಿರಿ(ಪಳನಿ)ಗೆ ಬಂದುಬಿಟ್ಟು ಅಲ್ಲಿ ನೆಲೆಸಿದ.

–ಪಳನಿಯ ಬಗೆಗಿನ ಕಥೆ ಇದು.

ಸುಬ್ರಹ್ಮಣ್ಯ ದೇವಾಲಯದಲ್ಲಿ ದಂಡಾಯುಧಪಾಣಿಯೂ ನವಿಲು ವಾಹನನೂ ಆದ ದೇವರ ಮೂರ್ತಿ ಇದೆ.

ಪಳನಿಯ ಜನಸಂಖ್ಯೆ 49.575.

ಪ್ರಜಾಪ್ರಭುತ್ವ

ಸಾರ್ವಭೌಮ ಅಧಿಕಾರ ಒಟ್ಟು ಜನತೆಯ ಕೈಯಲ್ಲಿರಬೇಕು : ಅವರು ಅದನ್ನು ತಾವು ನೇರವಾಗಿಯೋ ಚುನಾಯಿಸಿದ ಪ್ರತಿನಿಧಿಗಳ ಮೂಲಕವೋ ಚಲಾಯಿಸಬೇಕು. ಇದೇ ಪ್ರಜಾಪ್ರಭುತ್ವ ತತ್ತ್ವ.

ಭಾರತದಲ್ಲಿರುವುದು ಪ್ರಜಾಪ್ರಭುತ್ವ. ಪ್ರಜೆಗಳಿಂದ ಚುನಾಯಿತರಾದ ಪ್ರತಿನಿಧಿಗಳಿಂದ ಸರಕಾರ ನಡೆಯುವಂತೆ ನಮ್ಮ ಸಂವಿಧಾನ ರೂಪಿತವಾಗಿದೆ. ಚುನಾವಣೆಯಲ್ಲಿ ಮತದಾನ ಮಾಡುವ ಹಕ್ಕು 21 ವರ್ಷ ವಯಸ್ಸಾದವರಿಗೆಲ್ಲ ಉಂಟು.

ಭಾರತದಲ್ಲಿ ಚುನಾವಣೆ ನಡೆಯುವುದು 5 ವರ್ಷಗಳಿಗೊಮ್ಮೆ. ಅನಂತರ ರಾಜ್ಯಗಳ ವಿಧಾನಮಂಡಲಗಳು. ಮತ್ತು ಕೇಂದ್ರದಲ್ಲಿ ಲೋಕಸಭೆ ಹಾಗೂ ರಾಜ್ಯ ಸಭೆಗಳೂ (ಸಂಸತ್) ಮಂತ್ರಿ ಸಂಪುಟಗಳೂ ರೂಪುಗೊಳ್ಳುತ್ತವೆ. ಜನತಾ ಪ್ರತಿನಿಧಿಗಳು ರಾಜ್ಯಗಳ ಮತ್ತು ರಾಷ್ಟ್ರದ ಆಳ್ವಿಕೆಯ ಸೂತ್ರವನ್ನು ಹಿಡಿಯುತ್ತಾರೆ.

ಮಂತ್ರಿ ಸಂಪುಟಗಳು ಪ್ರಜಾಪ್ರತಿನಿಧಿ ಸಭೆಗಳಿಗೆ ಜವಾಬ್ದಾರರಾಗಿ ಕಾರ್ಯ ನಿರ್ವಹಣೆ ಮಾಡುತ್ತವೆ. ಮಂತ್ರಿ ಸಂಪುಟದ ಕೆಲಸ ಅಸಮರ್ಪಕವೆನಿಸಿದರೆ. ಈ ಸಭೆಗಳಲ್ಲಿ ಅವಿಶ್ವಾಸನಿರ್ಣಯ ತಂದು ಅವನ್ನು ಅಧಿಕಾರದಿಂದ ತೆಗೆಯಬಹುದು.

ಭಾರತದ ಸಂವಿಧಾನದ ಪ್ರಕಾರ ಕೇಂದ್ರ ಮತ್ತು ರಾಜ್ಯಗಳ ಸರಕಾರಗಳು ಸಂಸದೀಯ ಪ್ರಜಾಪ್ರಭುತ್ವ ಪದ್ಧತಿಯನ್ನನುಸರಿಸಿ ಆಡಳಿತ ನಡೆಸುತ್ತಿವೆ.

ನೋಡಿ : ಪಂಚಾಯತಿ ರಾಜ್ಯ : ಭಾರತ ಸಂವಿಧಾನ

ಪ್ರತಿಹಾರರು

ನೋಡಿ : ಗುರ್ಜರ ಪ್ರತಿಹಾರರು

ಪ್ರಧಾನಮಂತ್ರಿ

ಭಾರತದ ಸಂವಿಧಾನದಲ್ಲಿ ಪ್ರಧಾನ ಮಂತ್ರಿಯದು ಪ್ರಮುಖ ಸ್ಥಾನ. ಲೋಕಸಭೆಯಲ್ಲಿ ಬಹುಮತ ಗಳಿಸಿರುವ ರಾಜಕೀಯ ಪಕ್ಷದ ನಾಯಕನನ್ನು ರಾಷ್ಟ್ರಪತಿ ಪ್ರಧಾನ ಮಂತ್ರಿಯಾಗಿ ನೇಮಿಸುತ್ತಾರೆ.

ಮಂತ್ರಿಮಂಡಲದ ಇತರ ಸದಸ್ಯರನ್ನು ಆರಿಸುವ ಹಕ್ಕು ಪ್ರಧಾನಿಯದು. ರಾಷ್ಟ್ರದ ಕಾರ್ಯಾಂಗದ ಮುಖ್ಯಸ್ಥ ವಾಸ್ತವವಾಗಿ ಪ್ರಧಾನ ಮಂತ್ರಿಯೇ. ಮಂತ್ರಿಮಂಡಲ ಮಾಡಿದ ನಿರ್ಣಯಗಳನ್ನು ರಾಷ್ಟ್ರಪತಿಗೆ ಕಳುಹಿಸಿಕೊಡುವವರೂ ಪ್ರಧಾನ ಮಂತ್ರಿಯೇ. ಮುಖ್ಯ ಕಾರ್ಯಗಳ ಸಂಬಂಧದಲ್ಲಿ ರಾಷ್ಟ್ರಪತಿಗೆ ತಿಳಿವಳಿಕೆ ಕೊಡುವವರು ಇವರೇ. ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ರಾಷ್ಟ್ರಪತಿ ಪ್ರಧಾನಿಯ ಸಲಹೆ ಪಡೆಯುತ್ತಾರೆ.

ಲೋಕಸಭೆಯಲ್ಲಿ ಬಹುಮತ ಕಳೆದುಕೊಂಡಾಗ ಪ್ರಧಾನ ಮಂತ್ರಿಯ ಸ್ಥಾನಕ್ಕೆ ಬೇರೊಬ್ಬರನ್ನು ಆರಿಸುತ್ತಾರೆ. ಯಾವ ಮಂತ್ರಿಯಾದರೂ ಲೋಕಸಭೆಯ ಅವಿಶ್ವಾಸಕ್ಕೆ ಪಾತ್ರರಾದರೆ ಅಥವಾ ಅಪಾರದ ಪಾವಿತ್ರ್ಯವನ್ನು ಕಾಪಾಡಿಕೊಂಡು ಬರದಿದ್ದರೆ. ಅಂಥವರನ್ನು ರಾಜೀನಾಮೆ ಕೊಡುವಂತೆ ಒತ್ತಾಯಪಡಿಸುವ ಇಲ್ಲವೆ ಅವರನ್ನು ತೆಗೆದುಹಾಕುವಂತೆ ರಾಷ್ಟ್ರಪತಿಯನ್ನು ಕೇಳಿಕೊಳ್ಳುವ ಹಕ್ಕು ಪ್ರಧಾನಮಂತ್ರಿಗಿದೆ.

ಭಾರತದ ಕಥೆ

ಜವಾಹರಲಾಲ ನೆಹರೂ ಭಾರತದ ಮೊದಲನೆಯ ಪ್ರಧಾನ ಮಂತ್ರಿ. 1947-64ರ ವರೆಗೆ ಅಧಿಕಾರದಲ್ಲಿದ್ದರು. ಅನಂತರ ಬಂದವರು ಲಾಲ್ ಬಹದ್ದೂರ್ ಶಾಸ್ತ್ರೀ. 1966ರಲ್ಲಿ ಇಂದಿರಾ ಗಾಂಧೀ ಪ್ರಧಾನಮಂತ್ರಿಯಾದರು. 1964 ಮತ್ತು 1966ರಲ್ಲಿ ಅಲ್ಪ ಕಾಲ ಗುಲ್ಜಾರಿಲಾಲ್ ನಂದಾ ಹಂಗಾಮಿ ಪ್ರಧಾನ ಮಂತ್ರಿಯಾಗಿದ್ದರು.

ನೋಡಿ : ಇಂದಿರಾ ಗಾಂಧೀ ; ಜವಾಹರಲಾಲ ನೆಹರೂ ; ಲಾಲ್ ಬಹದ್ದೂರ್ ಶಾಸ್ತ್ರೀ

ಪ್ರಯಾಗ

ನೋಡಿ : ಅಲಹಾಬಾದ್

ಪ್ರಶ್ನೋಪನಿಷತ್

ಬ್ರಹ್ಮಜ್ಞಾನಿಯಾದ ಪಿಪ್ಪಲಾದನ ಬಳಿಗೆ ಆರು ಜನ ಬರುತ್ತಾರೆ. ಪರಬ್ರಹ್ಮವನ್ನು ಅರಿಯಬೇಕೆಂಬ ಆಕಾಂಕ್ಷೆ ಅವರಿಗೆ. ಪಿಪ್ಪಲಾದ ಅವರನ್ನು ಪರೀಕ್ಷಿಸ ಬಯಸಿ "ತಪಸ್ಸು, ಬ್ರಹ್ಮಚರ್ಯ, ಶ್ರದ್ಧೆ, ಗುರು ಶುಶ್ರೂಷೆಗಳಲ್ಲಿ ಒಂದು ವರ್ಷ ಕಳೆಯಿರಿ. ಬಳಿಕ ಯಾವ ಪ್ರಶ್ನೆಗಾದರೂ ನನಗೆ ತಿಳಿದಿರುವ ಉತ್ತರ ಕೊಡುತ್ತೇನೆ" ಎನ್ನುತ್ತಾನೆ.

ಪಿಪ್ಪಲಾದನ ಶಿಷ್ಯರಾದ ಆರು ಜನರೂ ಬ್ರಹ್ಮನಿಷ್ಠರು. ಅವರು ಪರಬ್ರಹ್ಮದ ಅನ್ವೇಷಕರಾಗಿ ಗುರುವಿನ ಬಳಿಗೆ ಬಂದರು. ಅವರು ಗುರು ಹೇಳಿದಂತೆ ಒಂದು ವರ್ಷ ಕಳೆದರು. ಅನಂತರ ಗುರುವಿಗೆ ಪ್ರಶ್ನೆಗಳನ್ನು ಹಾಕಿದರು. ಮೊದಲು ಕಬಂಧೀ ಕಾತ್ಯಾಯನ ಜಗತ್ತಿನ ಮೂಲ ಕಾರಣವನ್ನು ಕೇಳಿದ. ಭಾರ್ಗವ ವೈದರ್ಭಿ ಇಂದ್ರಿಯಗಳಿಗೂ ಮುಖ್ಯ ಪ್ರಾಣನಿಗೂ ಇರುವ ಸಂಬಂಧ ಕುರಿತು ಪ್ರಶ್ನಿಸಿದ. ಕೌಸಲ್ಯ ಆಶ್ವಲಾಯನ ಪ್ರಾಣದ ಹುಟ್ಟು, ಸ್ವರೂಪಗಳನ್ನು ಕುರಿತ ಪ್ರಶ್ನೆ ಕೇಳಿದ. ಸೌರ್ಯಾಯಣೀ ಗಾರ್ಗ್ಯ ಪುರುಷನ ಸ್ವಪ್ನ ಜಗತ್ತಿನ ಬಗೆಗೆ ಪ್ರಶ್ನೆ ಹಾಕಿದ. ಓಂಕಾರವನ್ನು ಮರಣಕಾಲದ ಪರ್ಯಂತ ಧ್ಯಾನಿಸಿದರೆ ಯಾವ ಲೋಕ ಪ್ರಾಪ್ತಿಯಾಗುತ್ತದೆ ಎಂದು ಶೈಬ್ಯ ಸತ್ಯಕಾಮ ತಿಳಿಯಬಯಸಿದ. ಸುಕೇಶ ಭಾರದ್ವಾಜ ಹದಿನಾರು ಕಲೆಗಳಿರುವ ಪುರುಷನ ವಿಷಯ ಕೇಳಿದ.

ಪಿಪ್ಪಲಾದ ಒಂದೊಂದು ಪ್ರಶ್ನೆಗೂ ಸೂಕ್ತ ಉತ್ತರವಿತ್ತು, ಶಿಷ್ಯರ ಜ್ಞಾನಸಂಪತ್ತು ಹೆಚ್ಚುವಂತೆ ಮಾಡಿದ.

ಪ್ರಶ್ನೋತ್ತರ ರೂಪದಲ್ಲಿರುವ ಪ್ರಶ್ನೋಪನಿಷತ್ತಿನಲ್ಲಿ ಈ ಪ್ರಸಂಗ ಬರುತ್ತದೆ. ಇದು ಅಥರ್ವವೇದಕ್ಕೆ ಸೇರಿದ್ದು.

ಪ್ರಹ್ಲಾದ

ಹುಟ್ಟಿನಿಂದಲೇ ಮಹಾ ವಿಷ್ಣುಭಕ್ತನಾಗಿದ್ದವನು ಪ್ರಹ್ಲಾದ. ತಂದೆ ಹಿರಣ್ಯಕಶಿಪುವಿನಿಂದ ಅನುಭವಿಸಿದ ಸಂಕಷ್ಟಗಳೇ ವಿಷ್ಣು ನರಸಿಂಹನಾಗಿ ಅವತರಿಸಲು ಕಾರಣ ಆದುವು – ಎಂದು 'ಭಾಗವತ', 'ದೇವೀಭಾಗವತ', 'ವಿಷ್ಣು ಪುರಾಣಗಳು' ಸಾರುತ್ತವೆ.

ಹಿರಣ್ಯಕಶಿಪು ಜನ್ಮಾಂತರದ ಒಂದು ಶಾಪದಿಂದಾಗಿ ವಿಷ್ಣುದ್ವೇಷಿ ಆಗಿದ್ದ. ತನಗೆ ಮನುಷ್ಯನಿಂದಾಗಲೀ ಮೃಗದಿಂದಾಗಲೀ ಹಗಲಾಗಲೀ ರಾತ್ರಿಯಾಗಲೀ ಮನೆಯ ಒಳಗಾಗಲೀ ಹೊರಗಾಗಲೀ ಶಸ್ತ್ರದಿಂದಾಗಲೀ ಅಸ್ತ್ರದಿಂದಾಗಲೀ ಯಾವ ಆಯುಧದಿಂದಾಗಲೀ ಮರಣ ಬಾರದಂತೆ



" ಎಲ್ಲಿ ನಿನ್ನ ಹರಿ? "

ಬ್ರಹ್ಮನಿಂದ ವರ ಪಡೆದಿದ್ದ. ಅದರಿಂದ ಕೊಬ್ಬಿ ದುರಾತ್ಮನೂ ಲೋಕ ಕಂಟಕನೂ ಆಗಿದ್ದ.

ಅವನ ಮಗ ಪ್ರಹ್ಲಾದ ತಾಯಿಯ ಗರ್ಭದಲ್ಲಿದ್ದಾಗಲೇ ನಾರದ ಮುನಿಯಿಂದ ವಿಷ್ಣುಭಕ್ತಿಯ ಉಪದೇಶ ಪಡೆದಿದ್ದ. ಅವನು ಸದಾ ವಿಷ್ಣುವನ್ನು ಭಜಿಸುತ್ತಿದ್ದ. ಇದನ್ನು ಹಿರಣ್ಯಕಶಿಪು ಸಹಿಸದೆ ಮಗನ ವರ್ತನೆಯನ್ನು ಬದಲಾಯಿಸಲು ಪ್ರಯತ್ನಿಸಿದ. ಆದರೆ ಪ್ರಹ್ಲಾದ ಬದಲಾಗಲಿಲ್ಲ.

ವಿಷ್ಣುದ್ವೇಷದಿಂದ ವಿವೇಕ ಕಳೆದುಕೊಂಡು ಮಗನನ್ನು ಕೊಲ್ಲಿಸಲು ಹಿರಣ್ಯಕಶಿಪು ಯತ್ನಿಸಿದ. ಪರ್ವತದಿಂದ ತಳ್ಳಿಸಿ, ಆನೆಗಳಿಂದ ತುಳಿಸಿ, ಸರ್ಪಗಳಿಂದ ಕಚ್ಚಿಸಿ, ಸಮುದ್ರದಲ್ಲಿ ಮುಳುಗಿಸಿ, ವಿಷಕುಡಿಸಿ, ಬೆಂಕಿಯಲ್ಲಿ ತಳ್ಳಿ ಕೊಲ್ಲಿಸಲು ಅವನು ನಡೆಸಿದ ಪ್ರಯತ್ನಗಳೆಲ್ಲ ವಿಫಲವಾದುವು.

ಕೊನೆಗೆ ಒಂದು ಮುಸ್ಸಂಜೆ ಹಿರಣ್ಯಕಶಿಪು ತನ್ನ ಸಭಾ ಮಂಟಪದಲ್ಲಿ ಪ್ರಹ್ಲಾದನನ್ನು ತಾನೇ ಕೊಲ್ಲಲು ಸಿದ್ಧನಾಗಿ, "ಎಲ್ಲಿ ನಿನ್ನ ಹರಿ?" ಎಂದು ಪ್ರಶ್ನಿಸಿದ. ಆಗ ಸಭಾಮಂಟಪದ ಕಂಬವೊಂದು ಒಡೆದು ಅದರಿಂದ ಮನುಷ್ಯದೇಹದ, ಸಿಂಹ ಶಿರದ 'ನರಸಿಂಹ' ಮೂಡಿ ಬಂದ. ಹಿರಣ್ಯಕಶಿಪುವನ್ನೆತ್ತಿ ಹೊಸ್ತಿಲ ಬಳಿ ಕೂಡಿಕೊಂಡು ತನ್ನ ತೊಡೆಯ ಮೇಲಿಟ್ಟುಕೊಂಡು ಉಗುರುಗಳಿಂದ ಅವನ ಎದೆಯನ್ನು ಸೀಳಿ ಕೊಂದ. ಬ್ರಹ್ಮನ ಮಾತು ಸುಳ್ಳಾಗದ ರೀತಿಯಲ್ಲೇ ಹಿರಣ್ಯಕಶಿಪುವಿನ ವಧೆ ಆಯಿತು.

ಅನಂತರ ಪಟ್ಟಾಭಿಷಿಕ್ತನಾದ ಪ್ರಹ್ಲಾದ ಧರ್ಮಮಾರ್ಗದಲ್ಲಿ ರಾಜ್ಯಭಾರ ಮಾಡಿದ.

ಮತ್ಸ್ಯ ಪುರಾಣದಲ್ಲಿ ಪ್ರಹ್ಲಾದನನ್ನು ಹಿರಣ್ಯಕಶಿಪು ಹಿಂಸಿಸಿದ ವಿಷಯ ಪ್ರಸ್ತಾಪಿಸಲ್ಪಟ್ಟಿಲ್ಲ. ಅದರ ಪ್ರಕಾರ ನರಸಿಂಹ ಅವತಾರಕ್ಕೆ ಪ್ರಹ್ಲಾದ ನೆಪವಾಗುವುದಿಲ್ಲ.

ಜ್ಞಾನ, ಧರ್ಮ, ವೈರಾಗ್ಯಗಳ ಬಗೆಗೆ ಪ್ರಹ್ಲಾದ ಜಿಜ್ಞಾಸೆ ನಡೆಸಿದ್ದು 'ಮಹಾಭಾರತ'ದಲ್ಲಿ ವರ್ಣಿಸಲ್ಪಟ್ಟಿದೆ.

ಪಾಂಡವರು

ಪಾಂಡು ರಾಜನಿಗೆ ಕುಂತಿ ಮತ್ತು ಮಾದ್ರಿ ಎಂಬ ಇಬ್ಬರು ಪತ್ನಿಯರು. ದೂರ್ವಾಸ ಮುನಿಯಿಂದ ಮಂತ್ರೋಪದೇಶ ಪಡೆದಿದ್ದ ಕುಂತಿ ಆ ಮಂತ್ರದ ಪ್ರಭಾವದಿಂದ ಧರ್ಮರಾಯ, ಭೀಮ ಮತ್ತು ಅರ್ಜುನ ಎಂಬ ಮೂವರು ಮಕ್ಕಳನ್ನು ಪಡೆದಳು. ಕುಂತಿಯಿಂದ ಆ ಮಂತ್ರವನ್ನು ಕಲಿತ ಮಾದ್ರಿ ನಕುಲ ಮತ್ತು ಸಹದೇವರನ್ನು ಪಡೆದಳು. ಈ ಐವರೇ ಪಾಂಡವರು – ಅಂದರೆ ಪಾಂಡುವಿನ ಮಕ್ಕಳು.

ವೆತ್ತಪರೊಡನೆ ಕಾಡಿನಲ್ಲಿ ಬೆಳೆದ ಪಾಂಡವರಿಗೆ ಶುಕ್ರ ಮುನಿ ಧರ್ಮವಿದ್ಯೆ ಕಲಿಸಿದ. ಪಾಂಡುವಿಗೆ ಮರಣ ಸಂಭವಿಸಿದಾಗ ಮಾದ್ರಿ ಸಹಗಮನ ಮಾಡಿದಳು. ಕುಂತಿ ಐದು ಮಕ್ಕಳನ್ನೂ ಕರೆದುಕೊಂಡು ಹಸ್ತಿನಾಪುರ ಸೇರಿದಳು. ಇಲ್ಲಿ ಕೌರವರ ಜೊತೆಯಲ್ಲಿ ಪಾಂಡವರು ದ್ರೋಣಾಚಾರ್ಯನಿಂದ ಅಸ್ತ್ರವಿದ್ಯೆ ಕಲಿತರು. ಅರ್ಜುನ ದ್ರೋಣನ ಮೆಚ್ಚಿನ ಶಿಷ್ಯನಾದ. ಕೌರವರು ದಾಯಾದಿಮತ್ಸರದಿಂದ ಪಾಂಡವರನ್ನು ಅರಗಿನ ಮನೆಯಲ್ಲಿ ಸುಡಲು ಯತ್ನಿಸಿ ವಿಫಲರಾದರು.

ಏಕಚಕ್ರ ಪಾಂಡವರು ದ್ರುಪದ ನಗರಕ್ಕೆ ಬಂದರು. ದ್ರೌಪದಿಯ ಸ್ವಯಂವರ ಕಾಲದಲ್ಲಿ ಅರ್ಜುನ ಮತ್ಸ್ಯಯಂತ್ರ ಭೇದಿಸಿ ಆಕೆಯನ್ನು ಪಡೆದ. ತಾಯಿಮಾತಿನಂತೆ ಐವರು ಸೋದರರೂ ದ್ರೌಪದಿಯನ್ನು ವಿವಾಹವಾದರು. ಆಕೆಯೊಂದಿಗೆ ನಡೆದುಕೊಳ್ಳಬೇಕಾದ ರೀತಿಯನ್ನು ನಾರದರು ಪಾಂಡವರಿಗೆ ಹೇಳಿಕೊಟ್ಟರು. ಅನಂತರ ಇಂದ್ರಪ್ರಸ್ಥದಲ್ಲಿ ತಮ್ಮ ರಾಜಧಾನಿಯನ್ನು ಕಟ್ಟಿಕೊಂಡು ಪಾಂಡವರು ಸುಖದಿಂದ ರಾಜ್ಯಭಾರ ನಡೆಸತೊಡಗಿದರು.

ಶಕುನಿಯ ಮಾತಿನಂತೆ ಕೌರವರು ಪಗಡೆ ಜೂಜಿಗೆ ಬರುವಂತೆ ಧರ್ಮರಾಜನನ್ನು ಆಹ್ವಾನಿಸಿದರು. ಅವನು ಜೂಜಿನಲ್ಲಿ ಎಲ್ಲವನ್ನೂ ಕಳೆದುಕೊಂಡ. ಹನ್ನೆರಡು ವರ್ಷ ವನವಾಸ ಮತ್ತು ಒಂದು ವರ್ಷ ಅಜ್ಞಾತವಾಸ ಮಾಡಬೇಕಾಯಿತು. ಈ ಕಠಿಣ ಕಾಲದಲ್ಲಿ ಅವರಿಗೆ ಆಗಾಗ್ಗೆ ಕೃಷ್ಣ ನೆರವು ನೀಡಿದ.

13 ವರ್ಷ ಕಳೆದು ಮರಳಿದರೂ ಕೌರವರು ರಾಜ್ಯದ ಅರ್ಧಭಾಗವನ್ನು ಪಾಂಡವರಿಗೆ ಕೊಡಲು ಒಪ್ಪಲಿಲ್ಲ. ಕೃಷ್ಣನ ರಾಯಭಾರವೂ ನಿಷ್ಫಲವಾಯಿತು. ಕುರುಕ್ಷೇತ್ರದಲ್ಲಿ 18 ದಿನ ಯುದ್ಧ ನಡೆದು ಪಾಂಡವರಿಗೆ ಜಯವಾಯಿತು. ಅವರು ಹಸ್ತಿನಾಪುರದಲ್ಲಿ ಅಶ್ವಮೇಧಯಾಗ ಮಾಡಿದರು. ಕೃಷ್ಣನ ಮರಣವಾದ ಮೇಲೆ ಪರೀಕ್ಷಿತನಿಗೆ ಪಟ್ಟಕಟ್ಟಿ ಪಾಂಡವರು ಮಹಾಪ್ರಸ್ಥಾನ ಮಾಡಿದರು.

ನೋಡಿ : ಕೌರವರು ; ದ್ರೋಣಾಚಾರ್ಯ ; ದ್ರೌಪದಿ

ಪಾಂಡ್ಯರು

ತಮಿಳುನಾಡಿನಲ್ಲಿ ಆಳಿದ ಪ್ರಾಚೀನ ಮನೆತನಗಳಲ್ಲಿ ಪಾಂಡ್ಯರು ಪ್ರಮುಖರು. ಮತ್ಸ್ಯಲಾಂಛನರಾದ ಇವರು ಕ್ರಿ.ಪೂ. 3ನೆಯ ಶತಮಾನದಿಂದ ಆಳುತ್ತಿದ್ದರು. ದಕ್ಷಿಣ ಭಾರತದ ತುದಿಯಲ್ಲಿ ಮದುರೈ–ತಿರುನಲ್ವೇಲಿ ಪ್ರದೇಶಗಳಲ್ಲಿ ಇವರ ರಾಜ್ಯ ಹರಡಿತ್ತು. ಇವರು ಸಾಗರೋತ್ತರ ವ್ಯಾಪಾರವನ್ನು ಚೆನ್ನಾಗಿ ಅಭಿವೃದ್ಧಿಪಡಿಸಿದ್ದರು. ಕ್ರಿ.ಪೂ. 26ರಲ್ಲಿ ಪಾಂಡ್ಯರ ರಾಯಭಾರಿಗಳು ರೋಮ್ ಚಕ್ರವರ್ತಿ ಅಗಸ್ಟಸನ ಆಸ್ಥಾನಕ್ಕೆ ಬಂದಿದ್ದರೆಂದು ಗ್ರೀಕ್ ಲೇಖಕ ಸ್ಟ್ರಾಬೋ ಬರೆದಿದ್ದಾನೆ. ಹದಿಮೂರನೆಯ ಶತಮಾನದಲ್ಲಿ ಪಾಂಡ್ಯರ ರಾಜ್ಯಕ್ಕೆ ಬಂದಿದ್ದ ಪ್ರವಾಸಿ ಮಾರ್ಕೊ ಪೋಲೋ, ಪಾಂಡ್ಯರ ರೇವುಪಟ್ಟಣ ಕಾಯಲ್ ಒಂದು ಮಹಾನಗರವಾಗಿತ್ತೆಂದೂ ಇಲ್ಲಿ 'ಜೇಡರ ಬಲೆ'ಯಂಥ ನವುರಾದ ಬಟ್ಟೆ ದೊರೆಯುತ್ತಿತ್ತೆಂದೂ ಹೇಳಿದ್ದಾನೆ.



ಪಾಂಡ್ಯ ನಾಣ್ಯಗಳು

ತಮಿಳು ಸಾಹಿತ್ಯಕ್ಕೆ ಪಾಂಡ್ಯರಿಂದ ದೊರೆತ ಪ್ರೋತ್ಸಾಹ ಅಪಾರವಾದದ್ದು. ಅವರ ರಾಜಧಾನಿ ಮದುರೈ ತಮಿಳು ಸಾಹಿತ್ಯ ಸಂಘದ ಕೇಂದ್ರವಾಗಿತ್ತು.

ಕ್ರಿ.ಶ. 600ರಿಂದ ಕಡುಂಗೋನ್, ಮಾರವರ್ಮನ್, ಅವನಿಶೂಳಾಮಣಿ, ಶೇಂದನ್, ಅರಿಕೇಸರಿ, ಮಾರವರ್ಮನ್, ಕೊಚ್ಚಡಯ್ಯನ್, ರಣಧೀರ, ಮಾರವರ್ಮನ್ ರಾಜಸಿಂಹ (740–65) ಮುಂತಾದ ಪಾಂಡ್ಯರಾಜರ ಹೆಸರುಗಳು ಕಂಡುಬರುತ್ತವೆ.

ರಾಜಸಿಂಹನ ಮಗನಾದ ನೆಡುಂಚಳಿಯನ್ (675–815)ಪರಾಕ್ರಮಿಯಾದ ಅರಸು. ಇವನ ರಾಜ್ಯವು ಉತ್ತರದಲ್ಲಿ ಕೊಯಮತ್ತೂರಿನ ವರೆಗೂ ಪೂರ್ವದಲ್ಲಿ ತಿರುವಾಂಕೂರಿನ ವರೆಗೂ ವ್ಯಾಪಿಸಿತ್ತು. ಒಂಬತ್ತನೆಯ ಶತಮಾನದಲ್ಲಿ ಚೋಳರು ಪ್ರಬಲಗೊಂಡು ಪಾಂಡ್ಯರ ರಾಜ್ಯ ಕ್ಷೀಣಿಸಿತು. ಚೋಳ ಪರಾಂತಕನು ಕ್ರಿ.ಶ. 920ರಲ್ಲಿ ಪಾಂಡ್ಯ ಎರಡನೆಯ ಪರಾಂತಕನನ್ನು ಪೂರ್ತಿ ಸೋಲಿಸಿ ಅವನ ರಾಜ್ಯವನ್ನು ಕಸಿದುಕೊಂಡ. ಮುಂದೆ ಪಾಂಡ್ಯರು ಚೋಳರ ಮಾಂಡಲಿಕರಾಗಿ ಉಳಿದರು. ಜಟಾವರ್ಮ ಕುಲಶೇಖರ (1190–1216) ಪಾಂಡ್ಯರ ಸ್ವಾತಂತ್ರ್ಯವನ್ನು ಪುನಃ ಸ್ಥಾಪಿಸಿದ. ಚೋಳರನ್ನು ಬದಿಗೊತ್ತಿ ಪಾಂಡ್ಯರು ಮತ್ತೆ ಪ್ರಾಬಲ್ಯಕ್ಕೆ ಬಂದರು.

ಜಟಾವರ್ಮ ಒಂದನೆಯ ಸುಂದರಪಾಂಡ್ಯ (1251–68) ಚೋಳರನ್ನು ತನ್ನ ಮಾಂಡಲಿಕರನ್ನಾಗಿ ಮಾಡಿದ. ತಮಿಳುನಾಡಿನಲ್ಲಿ ನೆಲೆಸಿದ್ದ ಹೊಯ್ಸಳರನ್ನು ಕಾವೇರಿಯ ಆಚೆಗೆ ಅಟ್ಟಿದ. ಅವನು ಉತ್ತರ ಸಿಂಹಳದಿಂದಲೂ ಕಪ್ಪ ಸಂಗ್ರಹಿಸಿದ. ಕಾಕತೀಯ ಗಣಪತಿಯನ್ನು ಸೋಲಿಸಿ ನೆಲ್ಲೂರನ್ನು ಗೆದ್ದುಕೊಂಡ. ಇವನ ಉತ್ತರಾಧಿಕಾರಿ ಮಾರವರ್ಮ ಕುಲಶೇಖರ (1268–1310) ಕ್ವಿಲೋನನ್ನು ಗೆದ್ದ. ಮೂರನೆಯ ಚೋಳ ರಾಜೇಂದ್ರನನ್ನು ಪೂರ್ತಿಯಾಗಿ ಸೋಲಿಸಿದ.

ಮಾರವರ್ಮ ಕುಲಶೇಖರನ ಇಬ್ಬರು ಮಕ್ಕಳಲ್ಲಿ ಉತ್ತರಾಧಿಕಾರಕ್ಕಾಗಿ ನಡೆದ ಕಲಹದ ಲಾಭ ಪಡೆದು ದೆಹಲಿಯ ಸೇನಾನಿ ಮಲಿಕ್ ಕಾಫರ್ ಮಧುರೆಯನ್ನು ಗೆದ್ದು ಪಾಂಡ್ಯರ ಆಳ್ವಿಕೆಯನ್ನು ಕೊನೆಗಾಣಿಸಿದ. ಮದುರೈ 14ನೆಯ ಶತಮಾನದಲ್ಲಿ ವಿಜಯನಗರದ ವಶವಾಯಿತು. ಪಾಂಡ್ಯರು ಅವರ ಮಾಂಡಲಿಕರಾದರು.

ದೇವಾಲಯ ರಚನೆಯಲ್ಲಿ ಪಾಂಡ್ಯರ ಶೈಲಿ ದಕ್ಷಿಣ ಭಾರತ ವಾಸ್ತುಶಿಲ್ಪದ ಮುಖ್ಯ ಲಕ್ಷಣಗಳನ್ನು ಕೇಂದ್ರೀಕರಿಸಿತು. ಪ್ರಾಕಾರಗಳು, ದ್ವಾರಗಳ ಮೇಲಿನ ಎತ್ತರದ ಗೋಪುರಗಳು –ಈ ಶೈಲಿಗೆ ವಿಶಿಷ್ಟವಾದುವು. ಮದುರೈ, ಶ್ರೀರಂಗಂಗಳಲ್ಲಿ ಕಟ್ಟಿರುವ ಭವ್ಯ ದೇವಾಲಯಗಳು ಪಾಂಡ್ಯ ಶೈಲಿಯ ಉತ್ತಮ ಉದಾಹರಣೆಗಳು. ಮದುರೈ ಮೀನಾಕ್ಷಿ ದೇವಸ್ಥಾನ ಸೌಂದರ್ಯಕ್ಕೂ ಶ್ರೀರಂಗಂ ದೇವಸ್ಥಾನ ವೈಶಾಲ್ಯಕ್ಕೂ ಹೆಸರಾಗಿವೆ. ದೇವಾಲಯದ ಕಂಬಗಳ ಮೇಲೆ ಪ್ರಾಣಿಗಳ ರೂಪವನ್ನು ಮೊತ್ತಮೊದಲು ಕಡೆದದ್ದು ಪಾಂಡ್ಯರ ಕಾಲದಲ್ಲಿ.

ಪಾಂಡಿಚೆರಿ


'ಪುದುಚೇರಿ'...ಎಂದರೆ 'ಹೊಸಹಳ್ಳಿ' ಎಂದರ್ಥ. ಪಾಂಡಿಚೆರಿಯೆಂದೂ ಇದನ್ನು ಕರೆಯುತ್ತಾರೆ. ಇದು ಪಾಂಡ್ಯಚೇರಿ, ಪಾಂಡುಚೇರಿಗಳ ರೂಪಾಂತರ.

ಚೋಳಮಂಡಲ ಕರಾವಳಿಯಲ್ಲಿ ದಕ್ಷಿಣ ಆರ್ಕಾಟಿನ ಬಳಿಯಲ್ಲಿ ಪಾಂಡಿಚೆರಿ ಪಟ್ಟಣವಿದೆ. ತಂಜಾವೂರು ಜಿಲ್ಲೆಯ ಒಂದು ಭಾಗವಾದ

ಕಾರೈಕಾಲ್ ; ಕೇರಳದ ಕಣ್ಣಾನೂರು ಜಿಲ್ಲೆಯ ಕರಾವಳಿ ಭಾಗದ 'ಮಾಹೆ' ಹಾಗೂ ಆಂಧ್ರಪ್ರದೇಶದ ಪೂರ್ವ ಗೋದಾವರಿ ಜಿಲ್ಲೆಯ 'ಯಾನಮ್'–ಈ ಭಾಗಗಳು ಪಾಂಡಿಚೆರಿಯ ಆಡಳಿತ ವ್ಯಾಪ್ತಿಯಲ್ಲಿರುವ ಪ್ರದೇಶಗಳು. ಇದು ಕೇಂದ್ರಾಡಳಿತಕ್ಕೆ ಸೇರಿದೆ.

1674ರಲ್ಲಿ ಫ್ರಾಂಕಾಯ್ ಮಾರ್ಟಿನ್ ಎಂಬಾತ ಜಿಂಜಿಯ ರಾಜನಿಂದ ಪಾಂಡಿಚೆರಿಯನ್ನು ಕೊಂಡುಕೊಂಡ. ಫ್ರೆಂಚರು ಅಲ್ಲಿ ತಳವೂರಿದರು. 1693ರಲ್ಲಿ ಡಚ್ಚರು ಪಾಂಡಿಚೆರಿಯನ್ನು ವಶಪಡಿಸಿಕೊಂಡರು. ಮತ್ತೆ ಅದು ಫ್ರೆಂಚರ ಕೈಸೇರಿತು. ಅನಂತರ ಬ್ರಿಟಿಷರ, ಪುನಃ ಫ್ರೆಂಚರ ವಶವಾಯಿತು.

ಭಾರತ ಸ್ವತಂತ್ರವಾದ ಮೇಲೆ ಭಾರತ ಸರಕಾರ ಹಾಗೂ ಫ್ರೆಂಚ್ ಸರಕಾರಗಳ ನಡುವಿನ ಒಪ್ಪಂದದಂತೆ 1954 ನವೆಂಬರ್ 1ರಂದು ಪಾಂಡಿಚೆರಿ ಆಡಳಿತ ಪ್ರದೇಶ ಭಾರತಕ್ಕೆ ವರ್ಗಾಯಿಸಲ್ಪಟ್ಟಿತು.



ಪಾಂಡಿಚೆರಿ ನಗರದಲ್ಲಿ ಹಲವು ವಿದ್ಯಾಸಂಸ್ಥೆಗಳೂ ಒಂದು ಸಂಶೋಧನಾ ಸಂಸ್ಥೆಯೂ ಇವೆ. ಈ ಪ್ರದೇಶದಲ್ಲಿ ಭತ್ತ, ರಾಗಿ ಮುಖ್ಯ ಬೆಳೆಗಳು. ಕಡಲೆಕಾಯಿ, ತೆಂಗು, ಹತ್ತಿ, ಹೊಗೆಸೊಪ್ಪು, ಮೆಣಸಿನಕಾಯಿ ವಾಣಿಜ್ಯ ಬೆಳೆಗಳು. ವಸ್ತ್ರೋದ್ಯಮ, ಎಣ್ಣೆ, ಬೈಸಿಕಲ್ ಭಾಗಗಳು, ವಿದ್ಯುತ್ ಉಪಕರಣಗಳು, ಮರದ ಪದಾರ್ಥಗಳು, ಕರ್ಪೂರ, ತೊಗಲು ಪದಾರ್ಥಗಳ ತಯಾರಿಕೆ ಮುಂತಾದ ಕೈಗಾರಿಕೆಗಳಿವೆ. ಪಾಂಡಿಚೆರಿಯಲ್ಲಿ ಒಳ್ಳೆಯ ರಸ್ತೆ, ರೈಲು ಸಾರಿಗೆಗಳಿವೆ.

ಪಾಂಡಿಚೆರಿ ನಗರದ ಮಧ್ಯೆ ಒಂದು ಕಾಲುವೆ ಹಾಯುತ್ತದೆ. ಒಂದು ಬದಿಯಲ್ಲಿ ಬಿಳಿ ಪಟ್ಟಣ, ಇನ್ನೊಂದು ಬದಿಯಲ್ಲಿ ಕರಿ ಪಟ್ಟಣ. ಐರೋಪ್ಯರೂ ದೇಶೀಯರೂ ಮೊದಲು ಬೇರೆ ಬೇರೆ ಭಾಗಗಳಲ್ಲಿ ನೆಲೆಸಿದ್ದರಿಂದ ಈ ಹೆಸರುಗಳು. ತೀರ ಪಟ್ಟಣವಾದರೂ ಪಾಂಡಿಚೆರಿ ಅಂಥ ಮುಖ್ಯ ಬಂದರೇನಲ್ಲ. ಈಗಲೂ ಪಾಂಡಿಚೆರಿಯಲ್ಲಿ ಫ್ರೆಂಚ್ ಸಂಸ್ಕೃತಿಯ ಕುರುಹುಗಳಿವೆ.

ಪಾಂಡಿಚೆರಿಯಲ್ಲಿ ಇಂದಿನ ಒಂದು ಮುಖ್ಯ ಆಕರ್ಷಣೆ 'ಅರೋವಿಲ್'– ಇದರ ಶಂಕುಸ್ಥಾಪನೆ 1968 ಫೆಬ್ರವರಿ 28ರಂದು ಆಯಿತು. ಯುನೆಸ್ಕೊ ಅಂತರರಾಷ್ಟ್ರೀಯ ಸಂಸ್ಥೆಯ 124 ಸದಸ್ಯ ರಾಷ್ಟ್ರಗಳ ಬಾಲಕ ಬಾಲಕಿಯರು ತಮ್ಮ ದೇಶದ ಮಣ್ಣನ್ನು ತಂದು ಇಲ್ಲಿ ಇಟ್ಟಿದ್ದಾರೆ. ಈ ಪಟ್ಟಣ ಜಾತ್ಯತೀತ, ರಾಷ್ಟ್ರಾತೀತ. ಇಲ್ಲಿ ಎಲ್ಲೆಡೆಯಿಂದ ಬಂದ ಜನ ಶಾಂತಿ, ನೆಮ್ಮದಿ, ಹೊಂದಾಣಿಕೆಗಳೊಡನೆ ಬಾಳಬೇಕೆಂಬುದು 'ಅರೋವಿಲ್' ನಿರ್ಮಾಣ ಉದ್ದೇಶ. ಇದಕ್ಕೆ ಮೊದಲೇ 1926ರಲ್ಲಿ ಅರವಿಂದ ಘೋಷರು ಇಲ್ಲಿ ತಮ್ಮ ಆಶ್ರಮ ಸ್ಥಾಪಿಸಿದ್ದರು. ಇಲ್ಲಿ ಹಲವು ರಾಷ್ಟ್ರಗಳಿಂದ ಬಂದ ಭಕ್ತ ಸಹೋದ್ಯೋಗಿಗಳು ಸುಮಾರು ಮಂದಿ ಕೂಡಿ ಬಾಳುತ್ತಿದ್ದಾರೆ. ಹೊಲ, ಕೊಟ್ಟಿಗೆ, ಯಂತ್ರ ರಿಪೇರಿ, ಮರದ ಕೆಲಸ, ನೇಯ್ಗೆ, ಬಡಗಿತನ, ಸುಗಂಧ ಸಾಮಾನು, ರಂಗು ಹಾಕುವುದು



'ನವಮಾನವನ ತೊಟ್ಟಿಲು' : ಅರೋವಿಲ್

ಮುಂತಾದ ಹಲವಾರು ಕೆಲಸಗಳಲ್ಲಿ ಅವರು ನೆರವು ನೀಡುತ್ತಾರೆ. ಆಶ್ರಮದ ಮಾತೆಯ ನಿಧನದ ಬಳಿಕ ಒಂದು ಸಮಿತಿ ಇಲ್ಲಿಯ ಉಸ್ತುವಾರಿ ನೋಡುತ್ತದೆ. ಆಶ್ರಮ ಹಾಗೂ ಅರೋವಿಲ್‌ಗಳಿಂದ ಪಾಂಡಿಚೆರಿ ದೇಶ ವಿದೇಶಗಳಲ್ಲಿ ಪ್ರಸಿದ್ಧವಾಗಿದೆ.

ನೋಡಿ : ಅರವಿಂದ

ಪಾಕಿಸ್ತಾನ

ಸ್ವತಂತ್ರ ಭಾರತದೊಂದಿಗೆ ಜನ್ಮ ತಳೆದ ರಾಷ್ಟ್ರ ಪಾಕಿಸ್ತಾನ. ಅಖಂಡ ಭಾರತದಲ್ಲಿ ಇಸ್ಲಾಂ ಮತಾನುಯಾಯಿಗಳು ಅಧಿಕ ಸಂಖ್ಯೆಯಲ್ಲಿದ್ದ ಪ್ರದೇಶಗಳನ್ನು ಆರಿಸಿ, ಅವನ್ನು ಒಟ್ಟುಗೂಡಿಸಿ ಪಾಕಿಸ್ತಾನವನ್ನು ರಚಿಸಲಾಯಿತು.

ಪಾಕಿಸ್ತಾನದಲ್ಲಿರುವ ಹರಪ್ಪಾ, ಮೊಹೆಂಜೊದಾರೊ ವೇದಪೂರ್ವ ಸಂಸ್ಕೃತಿಯ ಕೇಂದ್ರಗಳು. ಅನಂತರ ಅಲ್ಲಿ ವೈದಿಕ ಸಂಸ್ಕೃತಿ ಬೆಳೆಯಿತು. 8ನೆಯ ಶತಮಾನದಲ್ಲಿ ಅರಬರು, ಅನಂತರ 10ರಿಂದ 18ನೆಯ ಶತಮಾನದ ವರೆಗೆ ಪರ್ಷಿಯ, ಅಫ್ಘಾನಿಸ್ತಾನ, ತುರ್ಕಿಸ್ತಾನಗಳ ಮಹಮ್ಮದೀಯರು ಭಾರತದ ಮೇಲೆ ಬಾರಿಬಾರಿಗೆ ದಾಳಿಮಾಡಿದರು. ಇದರಿಂದಾಗಿ ಈ ಪ್ರದೇಶದಲ್ಲಿ ಮಹಮ್ಮದೀಯ ಸಂಸ್ಕೃತಿ ಧರ್ಮಗಳ ಪ್ರಚಾರವಾಯಿತು. ವಿಶೇಷವಾಗಿ 16–18ನೆಯ ಶತಮಾನದ ವರೆಗೆ ಆಳಿದ ಮೊಘಲರ ಕಾಲದಲ್ಲಿ ಈ ಪ್ರಭಾವ ಹೆಚ್ಚಿತು. ಬ್ರಿಟಿಷರ ಆಳ್ವಿಕೆಗೆ ವಿರುದ್ಧ ಭಾರತದಲ್ಲಿ ಸ್ವಾತಂತ್ರ್ಯ ಚಳುವಳಿ ಆರಂಭವಾದಾಗ ಅಲ್ಪಸಂಖ್ಯಾತರಾದ ತಮ್ಮ ಸಮಸ್ಯೆಗೆ ಸ್ವಾತಂತ್ರ್ಯ ಪರಿಹಾರವಲ್ಲ ಎಂದು ಕೆಲವು ಮಹಮ್ಮದೀಯ ರಾಜಕಾರಣಿಗಳಿಗೆ ತೋರಿತು. ಅವರು ತಮಗೆ ಪ್ರತ್ಯೇಕ ರಾಷ್ಟ್ರ ಬೇಕು ಎಂದು ವಾದಿಸಿದರು. ಇದರ ಪರಿಣಾಮವೇ ಭಾರತದ ವಿಭಜನೆ ಮತ್ತು ಪಾಕಿಸ್ತಾನದ ಉದಯ.

ಭೌಗೋಳಿಕ ದೃಷ್ಟಿಯಿಂದ ಪಾಕಿಸ್ತಾನದ ರಚನೆ ಅಸಾಮಾನ್ಯವಾದದ್ದು. ಏಕೆಂದರೆ, ಪಾಕಿಸ್ತಾನ ಒಳಗೊಂಡದ್ದು ಪಶ್ಚಿಮ ಪಾಕಿಸ್ತಾನ, ಪೂರ್ವ ಪಾಕಿಸ್ತಾನ ಎಂಬ ಎರಡು ಭಾಗಗಳನ್ನು. ಅವುಗಳ ನಡುವೆ ಸುಮಾರು 1,100 ಕಿ.ಮೀ.ಗಳಷ್ಟು ಅಂತರವಿತ್ತು. ಉತ್ತರ ಭಾರತದ ವಿಶಾಲ ಪ್ರದೇಶ. ಈಗ ಆ ಪರಿಸ್ಥಿತಿ ಇಲ್ಲ. 1971 ಡಿಸೆಂಬರ್ 16ರಂದು ಪೂರ್ವ ಪಾಕಿಸ್ತಾನ 'ಬಾಂಗ್ಲಾದೇಶ' ಎಂಬ ಹೆಸರಿನಿಂದ ಸ್ವತಂತ್ರವಾಯಿತು.



ಭುಟ್ಟೊ ಇಂದಿರಾ ಗಾಂಧಿ

ಭಾರತದೊಡನೆ ಗಡಿ ಘರ್ಷಣೆ, ಅಂತಃಕಲಹ. ಪಾಕಿಸ್ತಾನದ ಅಭಿವೃದ್ಧಿಗೆ ದೊಡ್ಡ ಅಡಚಣೆಗಳಾದುವು. ರಾಷ್ಟ್ರದ ಆಂತರಿಕ ಪರಿಸ್ಥಿತಿಯಿಂದಾಗಿ ಶೀಘ್ರ ರಾಜಕೀಯ ಬದಲಾವಣೆಗಳು ನಡೆದುವು.

ಪಾಕಿಸ್ತಾನ ರೂಪುಗೊಂಡಾಗ ಮಹಮ್ಮದಾಲಿ ಜಿನ್ನಾ ರಾಷ್ಟ್ರದ ಮೊತ್ತಮೊದಲ ಗವರ್ನರ್ ಜನರಲ್ ಆದರು. ಲಿಯಾಖತ್ ಅಲಿಖಾನ್ ಪ್ರಧಾನ ಮಂತ್ರಿಯಾದರು. 1956ರಲ್ಲಿ ದೇಶ ಗಣತಂತ್ರವನ್ನು ಅಳವಡಿಸಿಕೊಂಡಿತು. ಅನಂತರ 1958ರಲ್ಲಿ ಆ ರಾಷ್ಟ್ರ ಸೈನಿಕ ರಾಜ್ಯಭಾರಕ್ಕೆ ಒಳಪಟ್ಟಿತು. ಸೇನಾನಿ ಅಯೂಬ್‌ಖಾನ್ ರಾಷ್ಟ್ರಾಧ್ಯಕ್ಷರಾದರು.

ಆರಂಭದಿಂದಲೂ ಪಾಕಿಸ್ತಾನ ಭಾರತದೊಡನೆ ಮೈತ್ರಿಯಿಂದ ವರ್ತಿಸಲಿಲ್ಲ; ಪಶ್ಚಿಮದ ರಾಷ್ಟ್ರಗಳಿಂದ ಮಿಲಿಟರಿ ನೆರವು ಪಡೆದು ಅದು ಉದ್ಧಟತನದಿಂದ ವರ್ತಿಸಿತು. ನಾಲ್ಕು ಬಾರಿ ಭಾರತದೊಡನೆ ಯುದ್ಧ ನಡೆಸಿತು. ಚೀನ ಭಾರತದ ಮೇಲೆ ದಾಳಿ ಮಾಡಿದ ಸಂದರ್ಭದಲ್ಲಿ ಪಾಕಿಸ್ತಾನ ಚೀನದೊಡನೆ ಮೈತ್ರಿ ಬೆಳೆಸಿತು.

ಅಯೂಬ್‌ಖಾನರ ಆಳ್ವಿಕೆಯ ವಿರುದ್ಧ ಜನತೆ ಕೆರಳಿದಾಗ ಸೇನಾನಿ ಯಾಹ್ಯಾಖಾನ್ ರಾಜ್ಯ ಸೂತ್ರಗಳನ್ನು ವಹಿಸಿಕೊಂಡರು.

ಬಾಂಗ್ಲಾದೇಶದ ಉದಯದೊಡನೆ ಯಾಹ್ಯಾಖಾನರ ಪತನವಾಯಿತು. (1971): ರಾಜಕಾರಣಿ ಭುಟ್ಟೋ ಅಧ್ಯಕ್ಷರಾದರು: ಹೊಸ ರಾಜ್ಯಾಂಗ ಸ್ವೀಕರಿಸಿದ ಬಳಿಕ ಪ್ರಧಾನಿಯಾದರು. ಇಸ್ಲಾಮಿಕ್ ಗಣರಾಜ್ಯವೆನಿಸಿಕೊಂಡಿರುವ ಪಾಕಿಸ್ತಾನದ ವಿಸ್ತೀರ್ಣ 3.10.403 ಚ.ಮೈಲು. ಸಿಂಧು ಇಲ್ಲಿನ ಮುಖ್ಯ ನದಿ. ಕರಾಚಿ, ರಾವಲ್ಪಿಂಡಿ, ಲಾಹೋರ್, ಹೈದರಾಬಾದ್‌ಗಳು ಮುಖ್ಯ ಪಟ್ಟಣಗಳು. ಹೊಸ ರಾಜಧಾನಿ ಇಸ್ಲಾಮಾಬಾದ್. ಹಿಮಾಲಯದ ತಪ್ಪಲಿನಲ್ಲಿ ನಿರ್ಮಾಣಗೊಂಡಿದೆ. ಉರ್ದು ಪಾಕಿಸ್ತಾನದ ರಾಷ್ಟ್ರಭಾಷೆ. ಕ್ರೋಮೈಟ್ ಖನಿಜದ ದೊಡ್ಡ ನಿಕ್ಷೇಪ ಪಾಕಿಸ್ತಾನದಲ್ಲಿದೆ. ಪ್ರಪಂಚದ ಅಧಿಕ ಹತ್ತಿ ಉತ್ಪಾದನೆ ಆಗುವುದು ಪಾಕಿಸ್ತಾನದಲ್ಲಿ. ಕೃಷಿಯೇ ಜನರ ಮುಖ್ಯ ಕಸಬು. ಗೋಧಿ ಮುಖ್ಯ ಬೆಳೆ. ಅರಬಿ ಸಮುದ್ರ, ಇರಾನ್, ಅಫ್‌ಘಾನಿಸ್ತಾನ ಮತ್ತು ಭಾರತ ಪಾಕಿಸ್ತಾನದ ಮೇರೆಗಳು.

ನೋಡಿ: ತಾಷ್ಕೆಂಟ್ ಒಪ್ಪಂದ; ಬಾಂಗ್ಲಾದೇಶ; ಭಾರತ–ಪಾಕ್ ಯುದ್ಧ; ಸಿಮ್ಲಾ ಒಪ್ಪಂದ

ಪಾಟಲಿಪುತ್ರ

ನೋಡಿ: ಪಟ್ನಾ

ಪಾಣಿನಿ

ಹುಡುಗ ಶಾಲೆಯಲ್ಲಿ ಬಲು ದಡ್ಡನಾಗಿದ್ದ. ವಿದ್ಯೆ ಕಲಿಯುವ ಯೋಗ್ಯತೆ ಅವನಿಗಿಲ್ಲವೆಂದು ಉಪಾಧ್ಯಾಯರು ಹೇಳಿಬಿಟ್ಟರು. ಆದರೂ ತಕ್ಷಶಿಲೆಯ ಮಹಾವಿದ್ಯಾಲಯದ ಪ್ರತಿಭಾವಂತ ವಿದ್ಯಾರ್ಥಿಗಳಲ್ಲಿ ಒಬ್ಬ ಎನಿಸಿಕೊಂಡ ಪಾಣಿನಿ ಮುಂದೆ ಶಾಸ್ತ್ರೀಯವಾದ, ಜಗತ್ತಿನ ಅತಿ ಪ್ರಾಚೀನ ವ್ಯಾಕರಣವನ್ನು ರಚಿಸಿದ.

ಸುಮಾರು ಕ್ರಿ.ಪೂ. 350—250 ಕಾಲಾವಧಿಯಲ್ಲಿ ಪಾಣಿನಿ ಇದ್ದನೆಂಬ ಅಭಿಪ್ರಾಯವಿದೆ. ಅವನ ಜನನ ಗಾಂಧಾರ ಪ್ರದೇಶದ ಶಲಾತುರದಲ್ಲಿ.

'ಅಷ್ಟಾಧ್ಯಾಯಿ' ಅವನ ಮೇರು ಕೃತಿ. ಇದನ್ನು 'ಪಾಣಿನೀಯಂ' ಎಂದೂ ಕರೆಯುತ್ತಾರೆ. ಇದು ವೇದಾನಂತರದ ಸಾಹಿತ್ಯಕ ಸಂಸ್ಕೃತಕ್ಕೆ ಒಂದು ಭಾಷಾಮಾನದಂಡ ಎನಿಸಿಕೊಂಡಿದೆ. 'ಅಷ್ಟಾಧ್ಯಾಯಿ' ರಚನೆಯಾದುದಕ್ಕೆ ಮುಂಚೆ ಹಲವಾರು ವ್ಯಾಕರಣಗಳಿದ್ದುವಾದರೂ ಸಾಹಿತ್ಯಕ ಸಂಸ್ಕೃತದಲ್ಲಿ ಇದರ ಸ್ಥಾನ ಅಪೂರ್ವವಾದದ್ದು. ಈ ಗ್ರಂಥದಲ್ಲಿ 4,000ಕ್ಕೂ ಹೆಚ್ಚು ಸೂತ್ರಗಳಿವೆ; ಪ್ರತಿಯೊಂದು ಸೂತ್ರವೂ 2 ಅಥವಾ 3 ಪದಗಳದ್ದು. ವ್ಯಾಖ್ಯಾನದ ಸಹಾಯವಿಲ್ಲದೆ ಇವನ್ನು ಅರ್ಥಮಾಡಿಕೊಳ್ಳುವುದು ಸಾಧ್ಯವಾಗುವುದಿಲ್ಲ. ಅಷ್ಟು ಸಂಕ್ಷಿಪ್ತ ಇವು.

ಶಬ್ದದ ಮೂಲಾಂಶ ಧಾತು ಎಂಬುದನ್ನು ಅಂಗೀಕರಿಸಿದ ಪಾಣಿನಿ 2,000 ಏಕ ಉಚ್ಚಾರಾಂಶ ಧಾತುಗಳನ್ನು ವರ್ಗೀಕರಿಸಿದ್ದಾನೆ. ಇವಕ್ಕೆ ಪ್ರತ್ಯಯಗಳನ್ನು ಸೇರಿಸುವುದರಿಂದ ಭಾಷೆಯ ಎಲ್ಲ ಪದಗಳನ್ನೂ ರೂಪಿಸಿಕೊಳ್ಳಬಹುದೆಂಬ ಭಾವನೆ ಇತ್ತು.

'ಅಷ್ಟಾಧ್ಯಾಯಿ'ಗೆ ಹಲವು ವ್ಯಾಖ್ಯಾನಗಳಿವೆ. ಇವುಗಳಲ್ಲಿ ಮುಖ್ಯವಾದದ್ದು ಪತಂಜಲಿಯ 'ಮಹಾಭಾಷ್ಯ'. ಪಾಣಿನಿ ತನಗಿಂತಲೂ ಮುಂಚೆ ವ್ಯಾಕರಣ ರಚಿಸಿದ ಕೆಲವರನ್ನು ಹೆಸರಿಸಿದ್ದಾನೆ. ಆದರೂ ಪಾಣಿನಿಯ 'ಅಷ್ಟಾಧ್ಯಾಯಿ' ಕೃತಿಯೇ ಸಂಸ್ಕೃತ ಭಾಷೆಗೆ ಒಂದು ಅಚ್ಚುಕಟ್ಟಾದ ವ್ಯಾಕರಣ ತಳಹದಿ ಹಾಕಿತು—ಎಂಬುದು ನಿರ್ವಿವಾದ.

ನೋಡಿ: ಪತಂಜಲಿ

ಪಾಣಿಪತ್

ಹರ್‍ಯಾಣ ರಾಜ್ಯದಲ್ಲಿರುವ ಪಾಣಿಪತ್ (ಸ್ಥಳೀಯ ಉಚ್ಚಾರ: ಪಾನೀಪತ್) ಭಾರತ ಚರಿತ್ರೆಯಲ್ಲಿ ಪ್ರಸಿದ್ಧವಾಗಿರುವ ಮೂರು ಯುದ್ಧಗಳು ನಡೆದ ಸ್ಥಳ.



1526ರಲ್ಲಿ ಬಾಬರನ ವಿಜಯ

ಆಗಿನ ಕಾಲದಲ್ಲಿ ಇಬ್ರಾಹಿಂ ಲೋಡಿ ದೆಹಲಿಯಲ್ಲಿ ಆಳುತ್ತಿದ್ದಾಗ ದೌಲತ್ ಖಾನ್ ಲೋಡಿ ಪಂಜಾಬಿನ ರಾಜ್ಯಪಾಲ ಆಗಿದ್ದ. ಇಬ್ರಾಹಿಂ ಲೋಡಿಯನ್ನು ಸೋಲಿಸಲು ತನಗೆ ಸಹಾಯ ಮಾಡಬೇಕೆಂದು ದೌಲತ್ ಖಾನ್ ಕಾಬೂಲಿನ ಅರಸು ಬಾಬರನನ್ನು ಕೇಳಿದ. ಬಾಬರ್ ಇದಕ್ಕೆ ಒಪ್ಪಿ 1524ರಲ್ಲಿ ಭಾರತಕ್ಕೆ ಬಂದು ಲಾಹೋರನ್ನು ಆಕ್ರಮಿಸಿಕೊಂಡ; ಪಂಜಾಬಿನಲ್ಲಿ ನೆಲೆಸಿದ. ದೌಲತ್ ಖಾನ್‌ಗೆ ತಾನು ತಪ್ಪು ಮಾಡಿದೆ ಎಂದು ಮನವರಿಕೆಯಾಯಿತು. ಅತ ಬಾಬರನ ವಿರೋಧಿಯಾದ. ಕಾಬೂಲಿಗೆ ಹಿಂತಿರುಗಿದ ಬಾಬರ್ ಮತ್ತೆ 1525ರಲ್ಲಿ ಪಂಜಾಬಿನ ಮೇಲೆ ದಾಳಿ ಮಾಡಿ ದೌಲತ್‌ಖಾನನನ್ನು ಸೋಲಿಸಿದ. ಭಾರತವನ್ನು ಗೆಲ್ಲಬೇಕೆಂದು 1526ರ ಏಪ್ರಿಲ್ 21ರಂದು ಪಾಣಿಪತ್‌ನಲ್ಲಿ ದೆಹಲಿಯ ಅರಸ ಇಬ್ರಾಹಿಂ ಲೋಡಿಯೊಂದಿಗೆ ಯುದ್ಧ ನಡೆಸಿ, ವಿಜಯಿಯಾದ. ಇದು ಮೊದಲನೆಯ ಪಾಣಿಪತ್ ಕದನ. ಭಾರತದಲ್ಲಿ ಮೊಘಲರ ಪ್ರವೇಶಕ್ಕೆ ಇದು ಆಸ್ಪದಮಾಡಿಕೊಟ್ಟಿತು.

1556ರಲ್ಲಿ ಅಕ್ಬರ್ ಪಂಜಾಬಿನಲ್ಲಿ ಪಟ್ಟಕ್ಕೆ ಬಂದಾಗ ಆಗ್ರಾದಿಂದ ಮಾಳ್ವ ಹಾಗೂ ಜೌನ್‌ಪುರ ಗಡಿ ವರೆಗಿನ ಪ್ರದೇಶ ಆದಿಲ್ ಷಾನ ಆಡಳಿತಕ್ಕೆ ಒಳಪಟ್ಟಿತ್ತು. ಆದಿಲ್ ಷಾನ ಮಂತ್ರಿ ಮತ್ತು ಸಮರ್ಥ ಸೇನಾಧಿಪತಿ ಹೇಮೂ ಮೊಘಲರನ್ನು ಎದುರಿಸಲು ನಿಂತ. ರಾಜಾ ವಿಕ್ರಮಾದಿತ್ಯ ಎಂಬ ಬಿರುದನ್ನಿಟ್ಟುಕೊಂಡ ಹೇಮೂ 1556ರಲ್ಲಿ ಅಕ್ಬರನನ್ನು ಪಾಣಿಪತ್‌ನಲ್ಲಿ ಇದಿರಿಸಿದ. ಮೊದಮೊದಲು ಹೇಮೂವಿಗೆ ಜಯ ಲಭಿಸಿತು. ಆದರೆ ಯುದ್ಧದಲ್ಲಿ ಕಣ್ಣಿಗೆ ಬಾಣ ತಾಗಿ ಹೇಮೂ ಮೂರ್ಛಿತನಾದ. ಅವನ ಸೈನಿಕರು ದಿಕ್ಕುಗೆಟ್ಟರು. ಹೇಮೂವನ್ನು ಅಕ್ಬರನ ಕಡೆಯವರು ಕೊಂದರು. ಇದು ಎರಡನೆಯ ಪಾಣಿಪತ್ ಯುದ್ಧ. ಭಾರತದಲ್ಲಿ ಮೊಘಲ್ ಸಾಮ್ರಾಜ್ಯವನ್ನು ಇದು ಭದ್ರಗೊಳಿಸಿತು.

ಮೂರನೆಯ ಪಾಣಿಪತ್ ಯುದ್ಧ ಮರಾಠರು ಮತ್ತು ಅಫ್ಘಾನರ ನಡುವೆ ನಡೆಯಿತು. ಅಫ್‌ಘಾನಿಸ್ತಾನವನ್ನು ಅಹಮದ್ ಷಾ ಅಬ್ದಾಲಿ ಆಳುತ್ತಿದ್ದ. ಇವನು ಮೂರು ಬಾರಿ ಭಾರತದ ಮೇಲೆ ದಾಳಿ ಮಾಡಿ ಅಪಾರ ಧನವನ್ನು ಲೂಟಿ ಮಾಡಿಕೊಂಡು ಹೋಗಿದ್ದಲ್ಲದೆ ಕಾಶ್ಮೀರವನ್ನು ಗೆದ್ದಿದ್ದ. 1761 ಜನವರಿ 14ರಂದು ಅಹಮದ್ ಷಾ ಅಬ್ದಾಲಿಗೂ ಆ ವೇಳೆಗೆ ಪಂಜಾಬನ್ನು ಆಕ್ರಮಿಸಿಕೊಂಡಿದ್ದ ಮರಾಠರಿಗೂ ಪಾಣಿಪತ್‌ನಲ್ಲಿ ಭಾರಿ ಕದನ ನಡೆದು ಅಫ್ಘಾನರು ಗೆದ್ದರು. ಮರಾಠರು ಅಪಾರ ಹಾನಿ ಅನುಭವಿಸಿದರು. ಸಾಮ್ರಾಜ್ಯ ಕಟ್ಟುವ ಮರಾಠರ ಮಹತ್ವಾಕಾಂಕ್ಷೆ ಮೂರನೆಯ ಪಾಣಿಪತ್ ಯುದ್ಧದಿಂದ ವಿಫಲವಾಯಿತು.

ಪಾಣಿಪತ್‌ನಲ್ಲಿ ನಡೆದ ಈ ಮೂರು ಯುದ್ಧಗಳು ಭಾರತ ಇತಿಹಾಸದ ನಿರ್ಣಾಯಕ ಯುದ್ಧಗಳೆಂದು ಪ್ರಸಿದ್ಧವಾಗಿವೆ.

ಪಾರ್ಥಿಯನರು

ಭಾರತದ ವಾಯವ್ಯ ಭಾಗಗಳ ಮೇಲೆ ಕೆಲ ಕಾಲ ಆಳಿದ ಶಕರ ಒಂದು ಶಾಖೆಯ ಈ ರಾಜರನ್ನು ಪಹ್ಲವರು ಅಥವಾ ಪಾರ್ಥಿಯನರು ಎನ್ನುತ್ತಾರೆ.

ಕ್ರಿ. ಪೂ. 20ರಿಂದ ಆಳಲಾರಂಭಿಸಿದ ಮಾವೆಸ್ ಅಥವಾ ಮೋಗ ಈ ವಂಶದ ಮೊದಲ ರಾಜ. ಪೂರ್ವ ಇರಾನ್‌ನಲ್ಲಿ ಇವನ ರಾಜಧಾನಿ ಇದ್ದರೂ ಭಾರತದ ಬಹಳ ಭಾಗಗಳ ಮೇಲೆ ಇವನ ಪ್ರಭುತ್ವವಿತ್ತು.

ಇವನ ಅನಂತರ ಅಜೆಸ್, ಅಜಿಲಿಸಸ್, ಎರಡನೆಯ ಅಜೆಸ್ ಆಳಿದರು. ಈ ರಾಜರ ಮಾಂಡಲಿಕ ಗೊಂಡೊಫರ್ನೆಸ್ 'ರಾಜಾಧಿರಾಜ' ಎಂಬ ಬಿರುದಿನಿಂದ ಸ್ವತಂತ್ರನಾಗಿ ಭಾರತದ ವಾಯವ್ಯ ಪ್ರದೇಶವನ್ನು ಆಳಿದ. ಅಲ್ಲ ಪಾರ್ಥಿಯನ್ ಮನೆತನದವನು. ಕ್ರೈಸ್ತ ಪ್ರವಾದಿಗಳಲ್ಲೊಬ್ಬನಾದ ಸಂತ ಥಾಮಸ್ ಇವನ ಆಸ್ಥಾನಕ್ಕೆ ಬಂದಿದ್ದ. ಕುಷಾಣ ಪಂಗಡಗಳ ದಾಳಿಯಿಂದ ಇವರ ರಾಜ್ಯ ಛಿದ್ರವಾಯಿತು. ಇವರ ರಾಜ್ಯದ ನಾಲ್ಕು ಮಂಡಲಗಳು ಭಾರತದಲ್ಲಿ ಇದ್ದು, ಇವನ್ನು ಇರಾನಿನ ಮಾದರಿಯಲ್ಲಿ 'ಸ್ಯಾಟ್ರಪಿ'ಗಳೆಂದು ಕರೆಯುತ್ತಿದ್ದರು.

ಭಾರತೀಯ ಜನರಲ್ಲಿ ಬೆರೆತ ಈ ಅಧಿಕಾರಿಗಳು 'ಸ್ಯಾಟ್ರಪ್' ಎಂಬ ತಮ್ಮ ಹುದ್ದೆಯ ಹೆಸರನ್ನು 'ಕ್ಷತ್ರಪ' ಎಂದು ಬದಲಾಯಿಸಿಕೊಂಡು ಸ್ವತಂತ್ರ ರಾಜ್ಯಗಳನ್ನು ಸ್ಥಾಪಿಸಿದರು.

ನಾಲ್ಕನೆಯ ಶತಮಾನದ ವರೆಗೆ ಪಾರ್ಥಿಯನರ ರಾಜ್ಯಗಳು ಭಾರತದಲ್ಲಿ ಮುಂದುವರಿದುವು. ಸಮುದ್ರಗುಪ್ತ ಅವನ್ನು ಕೊನೆಗಾಣಿಸಿದ.

ಪಾಯೆಸ್

"ತಾವು 'ಬಿಸ್ನಗರ'(ವಿಜಯನಗರ)ಕ್ಕೆ ಹೋಗಿದ್ದವರು ಯಾರೆಂದು ತಿಳಿದು ಅವರು ಬರೆದ ಸಂಗತಿಗಳನ್ನು ಕಳುಹಿಸಬೇಕೆಂದು ಬರೆದಿದ್ದೀರಿ... ಅಲ್ಲಿಗೆ ಹೋದವರೆಲ್ಲ ಅಲ್ಲಿನ ವಿಷಯಗಳನ್ನು ಒಂದು ಹಾಳೆ ಕಾಗದ ತುಂಬ ಬರೆದುಕೊಳ್ಳದೆ ಹಿಂದಿರುಗುವುದಿಲ್ಲ. 'ಕ್ರಿಷ್ನರಾವ್' (ಕೃಷ್ಣದೇವರಾಯ) ಕಾಲದಲ್ಲಿ ಅಲ್ಲಿಗೆ ಹೋಗಿ ಬಂದಿರುವ ಡಾಮಿಂಗೋ ಪಾಯೆಸ್ ಮತ್ತು ಕುದುರೆ ವ್ಯಾಪಾರಕ್ಕಾಗಿ ಹೋಗಿದ್ದ ಫರ್ನಾವ್ ನೂನಿಜ್ ಬರೆದ ವಿವರಗಳನ್ನು ಅವರಿಬ್ಬರಿಂದ ಪಡೆದು ಇದರೊಂದಿಗೆ ಕಳುಹಿಸಿದ್ದೇನೆ..."

—ಇದು ಗೋವೆಯ ಒಬ್ಬ ವ್ಯಕ್ತಿ, ಪೋರ್ಚುಗಲಿನ ಜೊಆವೊ ಬಾರೊಷ್‌ಗೆ (1496-1570) ಬರೆದ ಪತ್ರ. ವಸಾಹತುಗಳನ್ನು ಕುರಿತ ಪ್ರಥಮ ಇತಿಹಾಸಕಾರ ಎನಿಸಿಕೊಂಡವನು ಬಾರೊಷ್. ಪ್ರವಾಸಿಗಳಾದ ಡಾಮಿಂಗೋ ಪಾಯೆಸ್ ಮತ್ತು ನೂನಿಜರು ವಿಜಯನಗರದ ಬಗೆಗೆ ಬರೆದಿರುವ ಅಂಶಗಳು ಬಾರೊಷನ ಕೃತಿಯಲ್ಲಿ ಸಿಗುತ್ತವೆ.

ಅಲ್ಲದೆ, ಇವರಿಬ್ಬರ ಮೂಲ ಬರೆಹಗಳು 19ನೆಯ ಶತಮಾನದ ಅಂತ್ಯಭಾಗದಲ್ಲಿ 'ಡೋಸ್ ರೈಸ್–ದೆ–ಬಿಸ್ನಾಗ' ಎಂಬ ಗ್ರಂಥದಲ್ಲಿ ಪ್ರಕಟವಾದುವು.

ಡಾಮಿಂಗೋ ಪಾಯೆಸ್, ಗೋವೆಯ ಪೋರ್ಚುಗೀಸ್ ಗವರ್ನರ್ ಲೋಪೋ ಸ್ವಾರಿಸ್‌ನ ದಲ್ಲಾಳಿಯಾಗಿ ಆನೆ, ಕುದುರೆಗಳ ಸಮೇತ ವಿಜಯನಗರಕ್ಕೆ ಹೋದ.

ಈ ರಾಜ್ಯದ ಭೂಮಿ ಫಲವತ್ತಾದದ್ದು. ದವಸಧಾನ್ಯಗಳು, ಹತ್ತಿ ಬೆಳೆಗಳಿಂದ ಸಮೃದ್ಧ. ಗುಡ್ಡಗಳ ಕಣಿವೆಗಳಲ್ಲಿ ಕಟ್ಟೆಕಟ್ಟಿ ಜಲಾಶಯ ನಿರ್ಮಿಸಿದ್ದಾರೆ. ಬೇಸಾಯಕ್ಕೆ ನೀರು ಸರಬರಾಜು ಮಾಡುವ ಕೊಳವೆ, ಕಾಲುವೆಗಳ ವ್ಯವಸ್ಥೆ ಇದೆ — ಎಂದು ಅವನು ಹೇಳಿದ್ದಾನೆ.

ಒಂದು ಗುಡ್ಡದ ಬದಿಯಲ್ಲಿ ಕೆರೆ ನಿರ್ಮಾಣ ಆಗುತ್ತಿದ್ದುದನ್ನು ಸ್ವತಃ ಕಂಡು ಪಾಯೆಸ್ ಅಲ್ಲಿ ಹದಿನೈದು ಇಪ್ಪತ್ತು ಸಾವಿರ ಜನ 'ಇರುವೆಗಳಂತೆ ಜಮಾಯಿಸಿ' ತಮಗೆ ನಿಗದಿಯಾದ ಕೆಲಸವನ್ನು ಮಾಡುತ್ತಿದ್ದರೆಂದು ಬರೆದಿದ್ದಾನೆ.

ಬಿಸ್ನಗದಲ್ಲಿ ವರ್ತಕರು, ಶ್ರೀಮಂತರು ನೆಲೆಸಿರುವ ಬೀದಿಯಲ್ಲಿ ವಜ್ರ, ವೈಢೂರ್ಯ, ಮುತ್ತು, ಮಾಣಿಕ್ಯ, ವಿಧವಿಧದ ಬಟ್ಟೆಗಳು — ಹೀಗೆ ಭೂಮಿಯ ಮೇಲೆ ಇರುವುದೆಲ್ಲ ಸಿಗುತ್ತದೆ. ಈ ನಗರ ಭಾರೀ ವ್ಯಾಪಾರ

ಕ್ಕಳ ಆಗಿರುವುದರಿಂದ ಎಲ್ಲ ರಾಷ್ಟ್ರಗಳ, ಎಲ್ಲ ಜಾತಿಗಳ ಜನರೂ ಇಲ್ಲಿದ್ದಾರೆ. ಇದು ಪ್ರಪಂಚದಲ್ಲೇ ಅತ್ಯಂತ ಸೌಕರ್ಯಯುತ ನಗರ ಎಂದಿದ್ದಾನೆ ಪಾಯೆಸ್.

ದಸರಾ ಹಬ್ಬದ ವೈಭವ, ಸಂಪತ್ತಿನ ಪ್ರದರ್ಶನ, ನೃತ್ಯ, ಕುಸ್ತಿ ಕಾರ್ಯಕ್ರಮದ ವಿವರಗಳನ್ನು ವರ್ಣಿಸಿದ್ದಾನೆ. "ದಸರೆಯ ಕೊನೆಯ ದಿನದ ಕಾರ್ಯಕ್ರಮದಲ್ಲಿ ಅದೆಷ್ಟು ಮದ್ದು ನೋಡಬೇಕೆಂದು ಕುಳಿತಲ್ಲಿಂದ ಕತ್ತನ್ನು ಅತ್ತಿತ್ತ ಅನೇಕ ಬಾರಿ ಹೊರಳಿಸಿ ತಲೆ ತಿರುಗತೊಡಗಿತು. ರಾಜನ ದರಬಾರಿಗೆ ಮುಗಿದು, ಸಮಾರಂಭ ಕೊನೆಗಾಣುತ್ತಿದ್ದಂತೆ, ಕನಸಿನ ಲೋಕದಿಂದ ಹೊರ ಬರುತ್ತಿರುವಂತೆ ಅನ್ನಿಸಿತು" – ಎಂದು ತನ್ನ ಅನುಭವವನ್ನು ಆತ ಬಣ್ಣಿಸಿದ್ದಾನೆ.

ನೋಡಿ : ಕೃಷ್ಣದೇವರಾಯ ; ನೂನಿಜ್ ; ವಿಜಯನಗರ

ಪಾಲರು

ಬಂಗಾಳದಿಂದ ಆಳುತ್ತಿದ್ದ ಪಾಲರು ತಮ್ಮನ್ನು ಸೂರ್ಯವಂಶದವರೆಂದು ಕರೆದುಕೊಂಡಿದ್ದಾರೆ. ಕ್ರಿ. ಶ. 8ನೆಯ ಶತಮಾನದಲ್ಲಿ ಆಳಿದ ಗೋಪಾಲ ಈ ವಂಶದ ಮೊದಲ ಪ್ರಮುಖ ದೊರೆ. ಇವನ ಮಗ ಧರ್ಮಪಾಲ (770–810) ಈ ವಂಶದ ಶ್ರೇಷ್ಠ ಅರಸು. ಇವನ ಕಾಲದಲ್ಲಿ ರಾಜ್ಯವು ಉತ್ತರ ಭಾರತದ ಗಣ್ಯ ರಾಜ್ಯಗಳಲ್ಲಿ ಒಂದಾಯಿತು. ಕನೌಜವನ್ನು ಈತ ಗೆದ್ದ. ಇವನ ಮಗ ದೇವಪಾಲನ ಬಳಿಕ ಪಾಲರ ಶಕ್ತಿ ಕುಂದಿತು.

ಮುಂದೆ ಹನ್ನೊಂದನೆಯ ಶತಮಾನದ ಆರಂಭದಲ್ಲಿ ಆಳಿದ ಮಹೀಪಾಲನು ಪಾಲರ ಹಿರಿಮೆಯನ್ನು ಮತ್ತೆ ಸ್ಥಾಪಿಸಿದ. ಬಂಗಾಳದ ಕೆಲ ಭಾಗಗಳ ಮೇಲೆ ಆಳುತ್ತಿದ್ದ ಸೂರ್ಯ ಮತ್ತು ಚಂದ್ರ ವಂಶಗಳ ರಾಜರು ಈತನನ್ನು ತಮ್ಮ ಅಧಿರಾಜನೆಂದು ಮಾನ್ಯ ಮಾಡಿದ್ದರು.

ಮೂರನೆಯ ವಿಗ್ರಹ ಪಾಲನು ಕರ್ನಾಟಕದ ರಾಷ್ಟ್ರಕೂಟ ರಾಜಪುತ್ರಿಯೊಬ್ಬಳನ್ನು ವರಿಸಿದ. ಹನ್ನೆರಡನೆಯ ಶತಮಾನದ ಮಧ್ಯಭಾಗದಲ್ಲಿ ಕರ್ನಾಟಕ ಮೂಲದ ವಿಜಯ ಸೇನನೆಂಬ ದೊರೆ ಪಾಲರ ಆಡಳಿತವನ್ನು ಕೊನೆಗಾಣಿಸಿ ಸೇನವಂಶದ ಆಳ್ವಿಕೆಯನ್ನು ಆರಂಭಿಸಿದ.

ಪೂರ್ವ ಭಾರತದಲ್ಲಿ ದೊಡ್ಡ ಸಾಮ್ರಾಜ್ಯ ಕಟ್ಟಿದ ಪಾಲರು ಸ್ವತಃ ಬೌದ್ಧರಾದರೂ ಹಿಂದೂಧರ್ಮಕ್ಕೆ ಪ್ರೋತ್ಸಾಹ ನೀಡಿದರು. ಅನೇಕ ವಿದ್ವಾಂಸರಿಗೆ ಇವರು ಆಶ್ರಯವಿತ್ತರು. ಆಯುರ್ವೇದ ಪಂಡಿತ ಚಕ್ರಪಾಣಿ ದತ್ತ ಇವರ ಆಸ್ಥಾನದಲ್ಲಿದ್ದವನು. ಉದ್ದಂಡಪುರ, ವಿಕ್ರಮಶೀಲ ವಿಶ್ವವಿದ್ಯಾಲಯಗಳು ಇವರ ಕಾಲದಲ್ಲಿ ಸ್ಥಾಪಿತವಾದುವು. ಪಾಲರ ರಾಜ್ಯವು ಅಸಾಧರಣ ಸಾಂಸ್ಕೃತಿಕ ಚಟುವಟಿಕೆಗಳ ಕೇಂದ್ರವಾಗಿತ್ತು.

ಪಾಳಿ

ಬುದ್ಧನ ಕಾಲದಲ್ಲಿ ಸಂಸ್ಕೃತ ವಿದ್ವಜ್ಜನರ ಭಾಷೆಯಾಗಿತ್ತು. ಜನಸಾಮಾನ್ಯರಿಗೆ ಅದು ಅಷ್ಟಾಗಿ ಅರ್ಥವಾಗುತ್ತಿರಲಿಲ್ಲ. ಆದ್ದರಿಂದ ತನ್ನ ತತ್ತ್ವಗಳನ್ನು ತಿಳಿಸುವಾಗಲು ಜನರ ಆಡುಭಾಷೆಯಲ್ಲೇ ಜನರಿಗೆ ಬೋಧಿಸಬೇಕೆಂದು ಆತ ಬಯಸಿದ. ತನ್ನ ಶಿಷ್ಯರಿಗೂ ಅದೇ ವಿಧಾನವನ್ನು ಅನುಸರಿಸುವಂತೆ ಆಜ್ಞೆ ಮಾಡಿದ.

ಸಾಹಿತ್ಯದ ರೂಪದಲ್ಲಿದ್ದ ಸಂಸ್ಕೃತದಿಂದ ಭಿನ್ನವಾದ ಆಡುಭಾಷೆಗಳನ್ನು ಪ್ರಾಕೃತ ಎನ್ನುತ್ತಾರೆ. ಇವುಗಳಲ್ಲಿ ಪ್ರಾದೇಶಿಕ ವ್ಯತ್ಯಾಸಗಳಿವೆ. ಪಾಳಿ (ಪಾಲಿ) ಒಂದು ಪ್ರಾದೇಶಿಕ ಭಾಷೆ; ಪ್ರಾಚೀನ ಮಾಗಧೀ ಅಥವಾ ಅರ್ಧ ಮಾಗಧೀ ಭಾಷೆಗೆ ಸಮೀಪವಾಗಿದ್ದ ಮತ್ತು ಸಿಂಹಳದಲ್ಲಿ ಬರೆಯಲ್ಪಟ್ಟ ಬೌದ್ಧ ಗ್ರಂಥಗಳ ಭಾಷೆ. ಪಾಳಿ–ಯಾವ ಪ್ರದೇಶಕ್ಕೆ ಸೇರಿದ್ದು ಎಂಬ ಬಗೆಗೆ ಭಿನ್ನಾಭಿಪ್ರಾಯಗಳಿವೆ. ಉತ್ತರ ಭಾರತದ ಪಶ್ಚಿಮ ಭಾಗದಲ್ಲಿ ಬೆಳೆದಿರಬಹುದೆಂದು ಅನೇಕ ಅಭಿಪ್ರಾಯ. ಉಜ್ಜಯಿನಿ ಮತ್ತು ಸಾಂಚಿಗಳಲ್ಲಿ ಈ ಭಾಷೆ ರೂಢಿಯಲ್ಲಿದ್ದಿತೆಂದು ತಿಳಿಯಲಾಗಿದೆ. ಈಗಲೂ ಪಾಳಿ ಶ್ರೀಲಂಕಾ, ಬರ್ಮ, ಆಗ್ನೇಯ ಏಷ್ಯಾದ ಬೌದ್ಧಮತೀಯ ಭಾಷೆಯಾಗಿದೆ. ಜಾತಕ ಕಥೆಗಳು, ತಿಪಿಟಕ ಸೂತ್ರಗಳು ಪಾಳಿ ಭಾಷೆಯಲ್ಲಿವೆ.

ಪಾಳಿಭಾಷೆಯ ರಚನೆಗಳು ಮೊದಮೊದಲು ಧಾರ್ಮಿಕ ಕ್ಷೇತ್ರಕ್ಕೆ ಸೇರಿದುವಾದರೂ ಅನಂತರ ಚಾರಿತ್ರಿಕ ಗ್ರಂಥಗಳೂ ಕಾವ್ಯಗಳೂ ಈ ಭಾಷೆಯಲ್ಲಿ ಬರೆಯಲ್ಪಟ್ಟುವು. ಭಾರತದಲ್ಲಿ ಮಾತ್ರವಲ್ಲದೆ ಸಿಂಹಳ, ಬರ್ಮಗಳಲ್ಲಿ ಕೂಡ ಪಾಳಿ ಪ್ರಚುರಗೊಂಡು ಅಲ್ಲೂ ಗ್ರಂಥ ರಚನೆ ನಡೆಯಿತು. ನಿಘಂಟು, ವ್ಯಾಕರಣ, ಛಂದಸ್ಸು, ಅಲಂಕಾರ, ವೈದ್ಯ, ಜ್ಯೋತಿಷ್ಯ ಮುಂತಾದ ಶಾಸ್ತ್ರಗಳು ಬಂದುವು. ಈ ಸಾಹಿತ್ಯ ಚಟುವಟಿಕೆ 18–19ನೆಯ ಶತಮಾನಗಳ ವರೆಗೆ ನಡೆಯಿತು.

ನೋಡಿ : ತಿಪಿಟಕ

ಪ್ರಾಕೃತ

ಪ್ರಕೃತಿ ಎಂದರೆ ನಿಸರ್ಗ; ಪ್ರಾಕೃತ ಎಂದರೆ ನೈಸರ್ಗಿಕ. ಆದಿ ಪ್ರಾಕೃತ ಭಾಷೆಯಿಂದ ಹುಟ್ಟಿದ ಒಂದೇ ವರ್ಗದ ಎಲ್ಲ ಭಾರತೀಯ ಆಡುಮಾತುಗಳನ್ನು ಪ್ರಾಕೃತ ಭಾಷೆಗಳು ಎನ್ನುತ್ತಾರೆ. ಸಂಸ್ಕೃತಕ್ಕಿಂತ ಸರಳವಾಗಿದ್ದ ಈ ಭಾಷೆಗಳನ್ನು ಬುದ್ಧನ ಕಾಲಕ್ಕೆ ಜನ ಆಡುತ್ತಿದ್ದರು.

ಪ್ರಾಕೃತದ ಬೆಳವಣಿಗೆಯಲ್ಲಿ 3 ಹಂತಗಳನ್ನು ಗುರುತಿಸಬಹುದು: ಪ್ರಾಚೀನ ಪ್ರಾಕೃತ –ಇದರಲ್ಲಿ ಅವೆಸ್ತಾ, ವೇದ ಮತ್ತು ಸಂಸ್ಕೃತ ಭಾಷೆಗಳು ಸೇರಿವೆ. ಇದರ ಮುಂದಿನ ಹಂತದ ಪ್ರಾಕೃತದಲ್ಲಿ ಸ್ಥಳೀಯ ಪ್ರಾಕೃತಗಳು ಮತ್ತು ಅವರ ಅಪಭ್ರಂಶಗಳು ಸೇರುತ್ತವೆ. ಇದನ್ನೇ ಸಾಮಾನ್ಯವಾಗಿ ಪ್ರಾಕೃತ ಎಂದು ಕರೆಯುತ್ತಾರೆ. ಮೂರನೆಯ ಹಂತದ ಪ್ರಾಕೃತ ಎಂದರೆ ಹಿಂದೀ, ಬಂಗಾಳೀ, ಒಡಿಯಾ, ಮರಾಠಿಯಂಥ ಹೊಸ ಭಾರತಾರ್ಯ ಭಾಷೆಗಳು.

ಕ್ರಿ. ಪೂ. 3ನೆಯ ಶತಮಾನದಿಂದ ಕ್ರಿ. ಶ. 17ನೆಯ ಶತಮಾನದ ವರೆಗೆ ಪ್ರಾಕೃತ ಭಾಷೆಗಳು ಪ್ರಚಾರದಲ್ಲಿದ್ದುವು. ಇವುಗಳಲ್ಲಿ ಅನೇಕ ಗ್ರಂಥಗಳು ರಚನೆಯಾದವು. ಪುಷ್ಟವಾದ ಸಾಹಿತ್ಯವೂ ಬೆಳೆಯಿತು. ಹಿಂದೂ, ಜೈನರು, ಬೌದ್ಧರು ಈ ಭಾಷಾ ಸಾಹಿತ್ಯಗಳನ್ನು ಪೋಷಿಸಿ ಬೆಳೆಸಿದರು. ಗುಪ್ತರ ಕಾಲಕ್ಕಿಂತ ಹಿಂದೆ, ಶಾಸನಗಳು ಕೂಡ ಪ್ರಾಕೃತ ಭಾಷೆಯಲ್ಲೇ ಬರೆಯಲ್ಪಡುತ್ತಿದ್ದುವು.

ಪಾಲ, ಗಾಥಾ, ಶೌರಸೇನೀ, ಮಾಗಧೀ, ಅರ್ಧಮಾಗಧೀ, ಮಹಾರಾಷ್ಟ್ರೀ ಇವು ಪ್ರಧಾನವಾದ ಪ್ರಾಕೃತ ಭಾಷೆಗಳು.

ಪ್ರಾಚೀನ ಭಾಷೆಯಾದ ಸಂಸ್ಕೃತಕ್ಕೂ ಇಂದಿನ ಹಿಂದೀ, ಬಂಗಾಳೀ, ಕಾಶ್ಮೀರೀ ಮುಂತಾದ ಭಾಷೆಗಳಿಗೂ ನಡುವಿನ ಭಾಷೆ ಪ್ರಾಕೃತ.

ನೋಡಿ : ಪಾಳಿ

ಪ್ಲಾಸಿ

ಭಾರತದಲ್ಲಿ ಬ್ರಿಟಿಷ್ ಸಾಮ್ರಾಜ್ಯ ವಿಸ್ತರಣೆಗೆ ನಾಂದಿಯಾದ ಒಂದು ಕದನ ಬಂಗಾಳದ ಹಳ್ಳಿ ಪ್ಲಾಸಿಯಲ್ಲಿ 1757ರಲ್ಲಿ ನಡೆಯಿತು.



ಪ್ಲಾಸೀ ಕದನ–ಚಿತ್ರಕಾರ ಕಂಡಂತೆ

ವ್ಯಾಪಾರೋದ್ದೇಶಕ್ಕಾಗಿ ಭಾರತದಲ್ಲಿ ಬ್ರಿಟಿಷರು ರೂಪಿಸಿದ ಸಂಸ್ಥೆ —ಈಸ್ಟ್ ಇಂಡಿಯಾ ಕಂಪೆನಿ. ಹಾಗೆಯೇ ಫ್ರೆಂಚ್ ಈಸ್ಟ್ ಇಂಡಿಯಾ ಕಂಪೆನಿಯನ್ನು ಫ್ರೆಂಚರು ಸ್ಥಾಪಿಸಿಕೊಂಡಿದ್ದರು.

ಆಗಿನ ಬಂಗಾಳದ ನವಾಬ ಸಿರಾಜುದ್ದೌಲ ಬ್ರಿಟಿಷರಿಗೆ ಸೇರಿದ್ದ ಕಲ್ಕತ್ತೆಯನ್ನು ಗೆದ್ದುಕೊಂಡ. ಚಂದ್ರನಾಗೂರಿನಲ್ಲಿದ್ದ ಫ್ರೆಂಚರೊಡನೆ ನವಾಬ ಸ್ನೇಹದಿಂದಿದ್ದುದು ಬ್ರಿಟಿಷರಿಗೆ ನುಂಗಲಾರದ ತುತ್ತಾಗಿತ್ತು. ನವಾಬನ ಸೈನ್ಯದ ಸೇನಾಪತಿ ಮೀರ್ ಜಾಫರ್ ಆಂಗ್ಲರಿಗೆ ಅನುಕೂಲನಾಗಿದ್ದ. ಅತನಿಗೆ ಆಂಗ್ಲರು ಬಂಗಾಳದ ನವಾಬಗಿರಿಯ ಆಮಿಷ ತೋರಿದರು.

1757 ಜೂನ್ 23ರಂದು ಬ್ರಿಟಿಷರ ಸೇನೆ ನವಾಬನ ಮೇಲೆ ದಾಳಿ ಮಾಡಲು ನಿರ್ಧರಿಸಿತು. ಅವನ ಸೈನ್ಯವನ್ನು ಪ್ಲಾಸಿಯಲ್ಲಿ ಎದುರಿಸಿತು. ಮೀರ್ ಜಾಫರನ ಕುತಂತ್ರ ತಿಳಿಯದ ಸಿರಾಜುದ್ದೌಲ ತನ್ನ ಸೈನ್ಯಕ್ಕೆ ಆತನನ್ನು ಮುಖ್ಯಸ್ಥನಾಗಿ ಮಾಡಿದ್ದ. ನವಾಬನಿಗೆ ಫ್ರೆಂಚರ ಫಿರಂಗಿ ದಳದ ನೆರವೂ ಇತ್ತು. ಫಿರಂಗಿ ಕಾಳಗ ಆರಂಭವಾದಾಗ ಕ್ಲೈವ್‌ನ ಸೇನೆ ಮಾವಿನ ತೋಪಿನ ಮರಗಳ ಮರೆಯಲ್ಲಿತ್ತು. ನವಾಬನ ಸೈನ್ಯ ಬಯಲಿನಲ್ಲಿದ್ದು ಬ್ರಿಟಿಷರ ಫಿರಂಗಿ ದಾಳಿಗೆ ಸುಲಭವಾಗಿ ಈಡಾಯಿತು. ಕ್ಲೈವ್‌ನ ಗಮನ ನವಾಬನ ಪಕ್ಷಪಾತರಾಗಿದ್ದ ಫ್ರೆಂಚರ ಫಿರಂಗಿ ದಳದತ್ತ ತಿರುಗಿತು. ಅಲ್ಲೂ ವಿಜಯ ದೊರೆತದ್ದು ಆತನಿಗೇ. ಮೀರ್ ಜಾಫರ್ ಯುದ್ಧದಲ್ಲಿ ಭಾಗವಹಿಸದೆ ತಟಸ್ಥನಾಗಿದ್ದುದನ್ನು ಕಂಡು, ಬ್ರಿಟಿಷ್ ಸೈನಿಕರು ಮುಂದೊತ್ತಿ ಬಂದರು. ನವಾಬನ ಸೇನೆ ದಿಕ್ಕಾಪಾಲಾಗಿ ಚದರಿ ಹೋಯಿತು. ಸಿರಾಜುದ್ದೌಲ ಪಲಾಯನ ಮಾಡಿದ. ಬಂಗಾಳ ಈಸ್ಟ್ ಇಂಡಿಯಾ ಕಂಪೆನಿಯ ವಶವಾಯಿತು. ದ್ರೋಹಿ ಮೀರ್ ಜಾಫರ್ ಬಂಗಾಳದ ನವಾಬನಾದ.

ಪ್ಲಾಸಿಯಲ್ಲಿ ನಡೆದ ಈ ಹೋರಾಟ ಬ್ರಿಟಿಷರಿಗೆ ನೆಲೆಯೂರಲು ಸ್ಥಳ ಒದಗಿಸಿತು. ಆದ್ದರಿಂದಲೇ, ಬ್ರಿಟಿಷರ ಭಾರತ ಸಾಮ್ರಾಜ್ಯ ರಚನೆ ಪ್ಲಾಸಿ ವಿಜಯದಿಂದ ಆರಂಭವಾಯಿತು ಎನ್ನುವುದುಂಟು.

ಪಿಂಡಾರೆಯರು

18ನೆಯ ಶತಮಾನದ ಅಂತ್ಯದ ವೇಳೆಗೆ ನಿರ್ದಯಿಗಳಾದ ಲೂಟಿ ಪಿಂಡಾರಿ ಮತ್ತು ಪಠಾಣರ ತಂಡವೊಂದು ಮಧ್ಯ ಭಾರತದಲ್ಲಿ ತಲೆ ಎತ್ತಿತು. ಭಯೋತ್ಪಾದಕರಾಗಿದ್ದ ಈ ಜನ, ಪಿಂಡಾರೆಯರು.

ಎಲ್ಲ ಜಾತಿ ಮತ, ರೀತಿ ನೀತಿಗಳ ಜನರು ಇದರಲ್ಲಿದ್ದರು. ವಿಧ್ವಂಸಕ ಕೃತ್ಯಕ್ಕೆ ಹೊರಡುವ ಮೊದಲು ಮತೀಯ ವಿಧಿ ನೆರವೇರಿಸುತ್ತಿದ್ದ ಈ ಜನ ದೈವಭಕ್ತಿಯೊಂದಿಗೆ ಸುಲಿಗೆಯನ್ನೂ ಸೇರಿಸಿಕೊಂಡಿದ್ದರು. ಸಿಂಧ್ಯ, ಹೋಳ್ಕರ್ ಸೇನೆಗಳಲ್ಲಿ ಪಿಂಡಾರೆಯರದು ಸಹಾಯಕದಳವಾಗಿತ್ತು. ಇವರಿಗೆ ವೇತನ ಸಿಗುತ್ತಿರಲಿಲ್ಲ. ಶತ್ರು ಪ್ರದೇಶದಲ್ಲಿ ಲೂಟಿ ಮಾಡಲು ಅನುಮತಿ ದೊರೆತಿತ್ತು. 1794ರಲ್ಲಿ ಇವರಿಗೆ ಮಾಳ್ವದಲ್ಲಿ ನೆಲೆಸಲು ಸಿಂಧ್ಯರು ಅನುಕೂಲ ಮಾಡಿಕೊಟ್ಟರು.

1812-16 ಅವಧಿಯಲ್ಲಿ ಪಿಂಡಾರೆಯರು ನೂರಾರು ಹಳ್ಳಿಗಳನ್ನು ಕೊಳ್ಳೆಹೊಡೆದರು. ಸಾವಿರಾರು ಜನರನ್ನು ಹಿಂಸಿಸಿ ಕೊಂದರು.

ಆಗ ಭಾರತದಲ್ಲಿ ಗವರ್ನರ್ ಜನರಲ್ ಆಗಿದ್ದ ಮಾರ್ಕ್ವಿಸ್ ಹೇಸ್ಟಿಂಗ್ಸ್ ಪಿಂಡಾರೆಯರನ್ನು ದಮನ ಮಾಡಲು ನಿಶ್ಚಯಿಸಿದ. ಅವರಿಗೆ ಸಹಕಾರ ನೀಡಬಾರದೆಂದು ಭಾರತೀಯ ಅರಸರನ್ನು ಒಪ್ಪಿಸಿದ. ಭಾರೀ ಸೈನ್ಯವನ್ನು ಒಂದುಗೂಡಿಸಿ 1818ರಲ್ಲಿ ಪಿಂಡಾರೆಯರ ಹುಟ್ಟಡಗಿಸಿದ. ಪಿಂಡಾರೆಯರ ಮುಖಂಡರಲ್ಲೊಬ್ಬ ಕರೀಂ ಖಾನ್ ಶರಣಾಗತನಾದ.

ಪಿ. ಪಿ. ಕುಮಾರಮಂಗಳಂ

ಭಾರತದ ಸೇನಾಪಡೆಯ ಮಹಾದಂಡನಾಯಕರಾಗಿದ್ದವರು ಪಿ. ಪಿ. ಕುಮಾರಮಂಗಳಂ.



ಮಹಾದಂಡನಾಯಕ ಕುಮಾರಮಂಗಳಂ

ಪರಮಶಿವ ಪ್ರಭಾಕರ ಕುಮಾರಮಂಗಳಂ ಜನನ 1913 ಜುಲೈ 1. ಪದವೀಧರರಾದ ತರುವಾಯ 1933ರಲ್ಲಿ ಭಾರತೀಯ ಸೇನೆಯ ಫಿರಂಗಿ ದಳದಲ್ಲಿ ನಿಯೋಜಿತರಾದರು.

1942ರಲ್ಲಿ ಎರಡನೆಯ ಮಹಾಯುದ್ಧದಲ್ಲಿ ಯುದ್ಧ ಕೈದಿಯಾಗಿದ್ದ ಕುಮಾರಮಂಗಳಂ ಬಿಡುಗಡೆ ಹೊಂದಿ 1945ರಲ್ಲಿ ಭಾರತಕ್ಕೆ ಹಿಂದಿರುಗಿದರು. ಲಿಬಿಯಾದಲ್ಲಿ ನಡೆಸಿದ ಕಾರ್ಯಾಚರಣೆಗಾಗಿ ಪ್ರಶಸ್ತಿ ಪಡೆದರು. ಅನಂತರ ಅವರು ಭಾರೀ ವಿಮಾನ ವಿನಾಶಕ ಪಡೆಯ ಮುಖ್ಯಾಧಿಕಾರಿಯಾಗಿ ನೇಮಕಗೊಂಡರು. 1959ರಲ್ಲಿ ಬ್ರಿಗೇಡಿಯರ್ ಪದವಿಗೇರಿದ ಅವರು, ಆ ವರ್ಷದಲ್ಲೇ ಸೇನಾ ಮುಖ್ಯ ಕಚೇರಿಯಲ್ಲಿ ಫಿರಂಗಿ ದಳದ ಡೈರೆಕ್ಟರ್ ಆದರು. ಬಳಿಕ ಮೇಜರ್ ಜನರಲ್ ಆಗಿ, ವೆಲಿಂಗ್ಟನಿನ ಡಿಫೆನ್ಸ್ ಸರ್ವಿಸಸ್ ಸ್ಟಾಫ್ ಕಾಲೇಜಿನ ಮುಖ್ಯಾಧಿಕಾರಿಯಾದರು.

1964ರಲ್ಲಿ ಸೇನಾ ಪಡೆಯ ದಕ್ಷಿಣ ವಿಭಾಗ ಮುಖ್ಯಸ್ಥರಾಗಿದ್ದ ಕುಮಾರಮಂಗಳಂ ಮರುವರ್ಷ ಉಪ ಮುಖ್ಯಾಧಿಕಾರಿಯಾದರು. 1966ರಲ್ಲಿ

ಸೇನಾಪಡೆಯ ದಂಡನಾಯಕರಾದರು. ಹೀಗೆ 36 ವರ್ಷ ಕಾಲ ಭಾರತೀಯ ಸೇನೆಯಲ್ಲಿ ಸೇವೆಸಲ್ಲಿಸಿ 1969ರಲ್ಲಿ ನಿವೃತ್ತರಾದರು.

ರಾಷ್ಟ್ರಪತಿಯಾಗಿದ್ದ ಡಾ. ಪಿ. ಸುಬ್ಬರಾಯನ್ ಇವರ ತಂದೆ, ರಾಧಾಬಾಯಿ ತಾಯಿ. ಕೇಂದ್ರ ಮಂತ್ರಿಮಂಡಲದಲ್ಲಿದ್ದ ಮೋಹನ ಕುಮಾರ ಮಂಗಳಂ ಇವರ ತಮ್ಮ.

ಪಿ. ಬಿ. ಗಜೇಂದ್ರಗಡಕರ್

ನ್ಯಾಯಾಂಗ ಮತ್ತು ವಿದ್ಯಾಕ್ಷೇತ್ರಗಳಲ್ಲಿ ಮಹತ್ತರ ಸೇವೆ ಸಲ್ಲಿಸಿದವರು ಪಿ. ಬಿ. ಗಜೇಂದ್ರಗಡಕರ್.

ಪ್ರಹ್ಲಾದ ಬಾಳಾಚಾರ್ಯ ಗಜೇಂದ್ರಗಡಕರ್ ಹುಟ್ಟಿದ್ದು 1901 ಮಾರ್ಚ್ 16ರಂದು. ವಿದ್ಯಾಭ್ಯಾಸ ಧಾರವಾಡದ ಕರ್ನಾಟಕ ಕಾಲೇಜಿನಲ್ಲಿ. ಮುಂಬಯಿಯಲ್ಲಿ ಸ್ನಾತಕೋತ್ತರ ಶಿಕ್ಷಣ. ವಿದ್ಯಾರ್ಥಿಯಾಗಿದ್ದಾಗಲೇ ಪ್ರತಿಭಾವಂತ ಎನಿಸಿಕೊಂಡರು. ಸಂಸ್ಕೃತದ ಜೊತೆಯಲ್ಲಿ ಕಾಯಿದೆಯನ್ನೂ ಕಲಿತರು. ತಮ್ಮ 28ನೆಯ ವಯಸ್ಸಿನಲ್ಲಿ ವಕೀಲ ವೃತ್ತಿ ಆರಂಭಿಸಿದ ಗಜೇಂದ್ರಗಡಕರ್ 1945–1957 ಅವಧಿಯಲ್ಲಿ ಭಾರತದ ವರಿಷ್ಠ ನ್ಯಾಯಾಲಯದ ನ್ಯಾಯಾಧೀಶರಾಗಿದ್ದರು; 1964ರಿಂದ 66ರ ತನಕ ವರಿಷ್ಠ ನ್ಯಾಯಾಲಯದ ಪ್ರಧಾನ ನ್ಯಾಯಾಧೀಶರಾಗಿದ್ದರು.



ನ್ಯಾಯಾಂಗ, ಶಿಕ್ಷಣ : ಗಜೇಂದ್ರಗಡಕರ್

ಗಜೇಂದ್ರಗಡಕರ್ ತುಟ್ಟಿ ಭತ್ತೆ ಕಮಿಷನ್, ಕಾಶ್ಮೀರ ವಿಚಾರಣೆ ಕಮಿಷನ್ ಮುಂತಾದ ಮಂಡಲಿಗಳ ಸದಸ್ಯರಾಗಿದ್ದು ಕೆಲಸ ಮಾಡಿದರು. ದೇಶ ವಿದೇಶಗಳಲ್ಲಿ ಉಪನ್ಯಾಸ ಪ್ರವಾಸ ಕೈಗೊಂಡರು. ಮುಂಬಯಿ ವಿಶ್ವವಿದ್ಯಾಲಯದ ವೈಸ್ ಛಾನ್ಸಲರ್ ಆಗಿಯೂ ಅವರು ಕೆಲಸ ಮಾಡಿದರು.

ನಂದ ಪಂಡಿತನ 'ದತ್ತಕ ಮೀಮಾಂಸಾ' ಕೃತಿಯನ್ನು ಇಂಗ್ಲಿಷಿಗೆ ಭಾಷಾಂತರಿಸಿದ್ದಾರೆ; ಕಾಯಿದೆ ಗ್ರಂಥಗಳನ್ನು ರಚಿಸಿದ್ದಾರೆ.

ಪಿ. ಮಹೇಶ್ವರಿ

ಸಸ್ಯ ವೈಜ್ಞಾನಿಕ ಕ್ಷೇತ್ರದಲ್ಲಿ ಅಂತರರಾಷ್ಟ್ರೀಯ ಖ್ಯಾತಿ ಗಳಿಸಿದ ಭಾರತೀಯ ವಿಜ್ಞಾನಿ, ಪಿ. ಮಹೇಶ್ವರಿ.


ಪಂಚಾನನ ಮಹೇಶ್ವರಿ 1904ರಲ್ಲಿ ಜನಿಸಿದರು. ವಿದ್ಯಾಭ್ಯಾಸ ಅಲಹಾಬಾದ್ ವಿಶ್ವವಿದ್ಯಾಲಯದಲ್ಲಿ. 1930ರಲ್ಲಿ ಇವರು ಆಗ್ರಾ ಕಾಲೇಜಿನಲ್ಲಿ ಸಸ್ಯವಿಜ್ಞಾನದ ಉಪನ್ಯಾಸಕರಾದರು. ಮುಂದೆ ಅಲಹಾಬಾದ್, ಢಾಕ್ಕಾ ಮತ್ತು ದೆಹಲಿ ವಿಶ್ವವಿದ್ಯಾಲಯಗಳಲ್ಲಿ ಪ್ರಾಧ್ಯಾಪಕರಾಗಿ ಕೆಲಸ ಮಾಡಿದರು.

ಮಹೇಶ್ವರಿ ದೇಶ ವಿದೇಶಗಳ ಅನೇಕ ವಿಜ್ಞಾನ ಸಂಸ್ಥೆಗಳ ಸದಸ್ಯರು. ವಿಜ್ಞಾನ ಸಮ್ಮೇಳನಗಳಲ್ಲಿ ಭಾಗವಹಿಸಲು ಹಲವು ಬಾರಿ ವಿದೇಶಗಳಿಗೆ ಹೋಗಿದ್ದರು. ಇವರು 'ಫೈಟೋ ಮಾರ್ಫಾಲಜಿ' ಪತ್ರಿಕೆಯ ಸಂಪಾದಕರು. 1963ರಲ್ಲಿ ಇವರು ಇಂಡಿಯನ್ ನ್ಯಾಷನಲ್ ಸೈನ್ಸ್ ಅಕಾಡೆಮಿಯ ಕಾರ್ಯದರ್ಶಿಯಾದರು.

ಮಹೇಶ್ವರಿ ಅಮೂಲ್ಯ ಕೊಡುಗೆಗಳನ್ನಿತ್ತುದು ಸಸ್ಯ ಭ್ರೂಣ ವಿಜ್ಞಾನ ಕ್ಷೇತ್ರವಲ್ಲಿ, ಅದರಲ್ಲಿಯೂ ಆವೃತಬೀಜ ಸಸ್ಯಗಳ ವಿಚಾರದಲ್ಲಿ.

ಪಿಲೂ ಮೋದಿ

ಸ್ವತಂತ್ರ ಪಕ್ಷದ ನಾಯಕ ಪಿಲೂ ಮೋದಿ ನಮ್ಮ ರಾಷ್ಟ್ರದ ಪ್ರಮುಖ ವಾಸ್ತುಶಿಲ್ಪಿಗಳಲ್ಲಿ ಒಬ್ಬರು. 1967ರಲ್ಲಿ ಲೋಕಸಭೆಯ ಸದಸ್ಯರಾಗಿ ಆಯ್ಕೆಯಾದರು. 1971ರಲ್ಲಿ ಪುನರಾಯ್ಕೆಗೊಂಡರು. ಪಿಲೂ ಮೋದಿ ಲೋಕಸಭೆಯಲ್ಲಿ ನವುರುಹಾಸ್ಯಕ್ಕೂ ಚಾಟೂಕ್ತಿಗಳಿಗೂ ಪ್ರಖ್ಯಾತರು.



ಸ್ವತಂತ್ರಪಕ್ಷ : ಪಿಲೂ ಮೋದಿ

1926 ನವೆಂಬರ್ 14ರಂದು ಮುಂಬಯಿಯಲ್ಲಿ ಜನನ. ತಂದೆ ಹೋಮಿ ಮೋದಿ, ತಾಯಿ ಜೇರಾ ಬಾಯಿ. ಅಮೆರಿಕ ಸಂಯುಕ್ತ ಸಂಸ್ಥಾನದ ಬರ್ಕ್‌ಲೀ ವಿಶ್ವವಿದ್ಯಾನಿಲಯದಲ್ಲಿ ಇವರು ವಾಸ್ತುಶಿಲ್ಪ ವಿಜ್ಞಾನದ ಸ್ನಾತಕೋತ್ತರ ಪದವಿ ಪಡೆದರು. 1951-53ರಲ್ಲಿ ವಿಖ್ಯಾತ ಫ್ರೆಂಚ್ ವಾಸ್ತುಶಿಲ್ಪಿ ಕಾಬೂಸಿಯರ್‌ರೊಡನೆ ಆಧುನಿಕ ಶೈಲಿಯ ಚಂಡೀಗಡ ನಿರ್ಮಾಣ ಯೋಜನೆಯಲ್ಲಿ ಕೆಲಸ ಮಾಡಿದರು. 195[illegible]ರಿಂದ ಮುಂಬಯಿಯ ವಾಸ್ತುಶಿಲ್ಪ ಸಂಸ್ಥೆಯೊಂದನ್ನು ಪಿಲೂ ಮೋದಿ ನಡೆಸುತ್ತಿದ್ದಾರೆ.

ಮೋದಿಯವರು ಭಾರತದ ವಾಸ್ತುಶಿಲ್ಪಜ್ಞರ ಸಂಸ್ಥೆಯ ಆಡಳಿತ ಮಂಡಲಿಯ ಸದಸ್ಯರು. ಇವರು 'ಮಾರ್ಚ್ ಆಫ್ ದಿ ನೇಷನ್' ಎಂಬ ಪತ್ರಿಕೆಯ ಸಂಪಾದಕರೂ ಆಗಿದ್ದಾರೆ.

ಪಿ. ವಿ. ಕಾಣೆ

ಐದು ದಶಕಗಳಿಗೂ ಮೇಲ್ಪಟ್ಟು ಅವಿರತವಾಗಿ ದುಡಿದು ಭಾರತೀಯ ಧರ್ಮಶಾಸ್ತ್ರದ ಇತಿಹಾಸವನ್ನು ಐದು ಬೃಹತ್ ಸಂಪುಟಗಳಲ್ಲಿ ಹೊರತಂದ ಕೀರ್ತಿ ಪಾಂಡುರಂಗ ವಾಮನ ಕಾಣೆ ಅವರದ್ದು. ಇದು ಅವರ ಮಹೋನ್ನತ ಕೃತಿ. ಇದರಿಂದಾಗಿ ರಾಷ್ಟ್ರೀಯ, ಅಂತರರಾಷ್ಟ್ರೀಯ ಮಾನ್ಯತೆಗೆ ಕಾಣೆ ಪಾತ್ರರಾದರು.

ಪಾಂಡುರಂಗ ವಾಮನ ಕಾಣೆ ಹುಟ್ಟಿದ್ದು ಮಹಾರಾಷ್ಟ್ರದ ರತ್ನಾಗಿರಿ ಜಿಲ್ಲೆಯ ಪರಶುರಾಮದಲ್ಲಿ, 1880 ಮೇ 7ರಂದು. 1901ರಲ್ಲಿ ಪದವೀಧರರಾದರು. ಅನಂತರ ಎಲ್‌ಎಲ್.ಬಿ., ಎಂ.ಎ. ಹಾಗೂ ಎಲ್‌ಎಲ್.ಎಂ. ಪದವಿಗಳನ್ನು ಪಡೆದರು. ಸ್ವಲ್ಪ ಕಾಲ ಉಪಾಧ್ಯಾಯ ವೃತ್ತಿ ಕೈಗೊಂಡಿದ್ದರು. ಬಳಿಕ ವಕೀಲರಾಗಿ ಹೆಸರು ಗಳಿಸಿದರು. ಆದರೆ ಭಾರತೀಯ ಸಂಸ್ಕೃತಿಯ ಅಭ್ಯಾಸದೆಡೆಗೆ ಅವರ ಒಲವು ಪ್ರಬಲವಾಗಿತ್ತು. ಆ ವಿಚಾರದಲ್ಲಿ ಗಾಢ ಅಧ್ಯಯನ ನಡೆಸಿ, ಗ್ರಂಥ ರಚನೆಯಲ್ಲಿ ತೊಡಗಿದರು.

ಕಾಣೆಯವರು ಅನೇಕ ಪ್ರಮುಖ ಸಂಘ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸಿದರು. 1917ರಿಂದ ಆರು ವರ್ಷ ಕಾಲ ಮುಂಬಯಿ ಲಾ ಕಾಲೇಜಿನಲ್ಲಿ ಪ್ರಾಧ್ಯಾಪ

...ದ್ದರು. 1947–49 ಅವಧಿಯಲ್ಲಿ ಮುಂಬಯಿ ವಿಶ್ವವಿದ್ಯಾಲಯದ ವೈಸ್‌ಛಾನ್ಸಲರ್ ಆಗಿದ್ದರು. ಪ್ಯಾರಿಸ್, ಇಸ್ತಾಂಬೂಲ್, ...ನಗರಗಳಲ್ಲಿ ನಡೆದ ಪ್ರಾಚ್ಯ ವಿದ್ವಾಂಸರ ಅಂತರರಾಷ್ಟ್ರೀಯ ಮಹಾ ಸಮ್ಮೇಳನಗಳಲ್ಲಿ ಭಾರತದ ಪ್ರತಿನಿಧಿಯಾಗಿ ಅವರು ಭಾಗವಹಿಸಿದರು. ಕಾಣೆಯವರ ಉನ್ನತ ಸಾಧನೆಗಳಿಗಾಗಿ ಗೌರವ ಡಾಕ್ಟರೇಟ್ ಪದವಿಗಳು, ಮಹಾ ಮಹೋಪಾಧ್ಯಾಯ ಪದವಿ, ಲಂಡನ್ ವಿಶ್ವವಿದ್ಯಾನಿಲಯದ ಸ್ಕೂಲ್ ಆಫ್ ಓರಿಯೆಂಟಲ್ ಅಂಡ್ ಆಫ್ರಿಕನ್ ಸ್ಟಡೀಸ್‌ನ ಗೌರವ ಸದಸ್ಯತ್ವ ದೊರೆತುವು.

ಇವರು ರಚಿಸಿದ 'ಧರ್ಮಶಾಸ್ತ್ರ ಇತಿಹಾಸ' ದ ನಾಲ್ಕನೆಯ ಸಂಪುಟಕ್ಕೆ 1956ರಲ್ಲಿ ಸಾಹಿತ್ಯ ಅಕಾದೆಮಿ ಪ್ರಶಸ್ತಿ ದೊರೆಯಿತು. ಭಾರತ ಸರಕಾರ 1963ರಲ್ಲಿ ಈ ಪಂಡಿತೋತ್ತಮರಿಗೆ 'ಭಾರತ ರತ್ನ' ಪ್ರಶಸ್ತಿ ನೀಡಿತು.



ಧರ್ಮಶಾಸ್ತ್ರದ ಇತಿಹಾಸ : ಕಾಣೆ

ಗ್ರಂಥ ಸಂಪಾದನೆಯಲ್ಲೂ ಕಾಣೆಯವರು ಅಗ್ರಗಣ್ಯರು. ಬಾಣನ 'ಕಾದಂಬರಿ', 'ಹರ್ಷ ಚರಿತ', ಭವಭೂತಿಯ 'ಉತ್ತರ ರಾಮ ಚರಿತ' ನಾಟಕ, ನೀಲಕಂಠನ 'ವ್ಯವಹಾರ ಮಯೂಖ' ಗಳನ್ನು ಸಂಪಾದಿಸಿದ್ದಾರೆ. 'ಪೂರ್ವ ಮೀಮಾಂಸಾದರ್ಶನ', ಶಂಖ ಲಿಖಿತನ 'ಧರ್ಮಸೂತ್ರ', ವಿಶ್ವನಾಥನ 'ಸಾಹಿತ್ಯ ದರ್ಪಣ' ಮೊದಲಾದ ಗ್ರಂಥಗಳನ್ನು ಸಂಪಾದಿಸಿ ...ಟೀಕೆ ಬರೆದಿದ್ದಾರೆ: ಟಿಪ್ಪಣಿ, ಭಾಷಾಂತರಗಳೊಂದಿಗೆ ಪ್ರಕಟಿಸಿದ್ದಾರೆ. 'ಸಂಸ್ಕೃತ ಅಲಂಕಾರಶಾಸ್ತ್ರ ಚರಿತ್ರೆ' ಅವರ ಕೃತಿ.

ಸಂಸ್ಕೃತದಷ್ಟೇ ಮರಾಠಿಯಲ್ಲೂ ಪಾಂಡಿತ್ಯವಿದ್ದ ಕಾಣೆ 'ಸಂಸ್ಕೃತಸಾಹಿತ್ಯ ...ತಿಹಾಸ', 'ಧರ್ಮಶಾಸ್ತ್ರ ವಿಚಾರ', 'ಋಕ್‌ಸಾರ ಸಂಗ್ರಹ', 'ಯೂರೋಪಿನಲ್ಲಿ ಪ್ರವಾಸ' ಎಂಬ ಕೃತಿಗಳನ್ನು ಮರಾಠಿಯಲ್ಲಿ ರಚಿಸಿದ್ದಾರೆ.

ಕಾಣೆ ಅವರು ನಿರಾಡಂಬರ, ಸರಳ, ಸುಸಂಸ್ಕೃತ ವ್ಯಕ್ತಿಯಾಗಿದ್ದರು. 1972ರ ಏಪ್ರಿಲ್ 18ರಂದು ನಿಧನರಾದರು.

ಪಿ. ಸಾಂಬಮೂರ್ತಿ

ಸಂಗೀತದಲ್ಲಿ, ವಿಶೇಷವಾಗಿ ಕರ್ನಾಟಕ ಸಂಗೀತದಲ್ಲಿ, ಅದರ ಸೈದ್ಧಾಂತಿಕ ಶಾಸ್ತ್ರ–ಶಿಕ್ಷಣ ಕ್ರಮಗಳಲ್ಲಿ ಪಿಚ್ಚು ಸಾಂಬಮೂರ್ತಿ ಅವರದು ಅಗ್ರಗಣ್ಯ ಸಾಧನೆ.

ಜನನ 1901, ಫೆಬ್ರವರಿ 14ರಂದು. ತಂದೆ ಪಿಚ್ಚು ಅಯ್ಯರ್. ವಿದ್ಯಾಭ್ಯಾಸ ಮದರಾಸಿನಲ್ಲಿ. ಬಿ.ಎ., ಬಿ.ಎಲ್. ಪದವೀಧರರಾದರು. ಕಾಲೇಜಿನಲ್ಲಿ ಓದುತ್ತಿದ್ದಾಗಲೇ ವೇಣುವಾದನ ಕಚೇರಿ ನಡೆಸುತ್ತಿದ್ದರು; ...ಗಳಲ್ಲಿ ಭಾಗವಹಿಸುತ್ತಿದ್ದರು. ಆಗಲೇ ಪಿಟೀಲು, ಗೋಟುವಾದ್ಯ ವಾದನದಲ್ಲಿಯೂ ಪರಿಣತರಾಗಿದ್ದರು.

1931–33ರಲ್ಲಿ ಜರ್ಮನಿಯ ಮ್ಯೂನಿಕ್ ವಿಶ್ವವಿದ್ಯಾನಿಲಯ ಹಾಗೂ ಮ್ಯೂನಿಕ್‌ನ ಸ್ಟೇಟ್ ಅಕಾಡೆಮಿ ಆಫ್ ಮ್ಯೂಸಿಕ್‌ನಲ್ಲಿ ಪಾಶ್ಚಾತ್ಯ ಸಂಗೀತ ಹಾಗೂ ತುಲನಾತ್ಮಕ ಸಂಗೀತಗಳ ಅಧ್ಯಯನ ನಡೆಸಿದರು. ಅನಂತರ ಮದರಾಸಿನ ಕ್ವೀನ್ ಮೇರಿ ಕಾಲೇಜಿನಲ್ಲಿ ಅಧ್ಯಾಪಕರಾದರು. 1937ರಲ್ಲಿ ಮದರಾಸು ವಿಶ್ವವಿದ್ಯಾನಿಲಯದಲ್ಲಿ ಸಂಗೀತ ವಿಭಾಗ ಪ್ರಾರಂಭವಾದಲ್ಲಿ ಸೇರಿಕೊಂಡರು. 1961ರಲ್ಲಿ ತಮ್ಮ ನಿವೃತ್ತಿಯಾಗುವ ವರೆಗೆ ಅಲ್ಲಿ ಕೆಲಸ ಮಾಡಿದರು.

ಸಂಗೀತ ವಿದ್ಯಾಲಯದ ನಿರ್ದೇಶಕರಾಗಿ (1961–64) ಸಾಂಬಮೂರ್ತಿ ಅವರು ಅನೇಕ ಸಂಗೀತ ವಾದ್ಯಗಳಲ್ಲಿ ಸುಧಾರಣೆ ಮಾಡಿದರು; ಜಟಿಲ ವಾದ್ಯಗಳನ್ನು ರಚಿಸಿದರು. ತಿರುಪತಿಯ ಶ್ರೀ ವೆಂಕಟೇಶ್ವರ ವಿಶ್ವವಿದ್ಯಾನಿಲಯದಲ್ಲಿ ಎರಡು ವರ್ಷ ಸಂಗೀತಶಾಸ್ತ್ರದ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದರು.



ಸಂಗೀತ ಸಿದ್ಧಾಂತ : ಸಾಂಬಮೂರ್ತಿ

ಧ್ವನಿ ತಂತುಗಳಿಗೆ ಅನವಶ್ಯ ಶ್ರಮ ನೀಡುವಂಥ ಸಂಗೀತಾಭ್ಯಾಸಕ್ಕೆ ಬದಲಾಗಿ, ಚಿಕ್ಕಂದಿನಿಂದ ಧ್ವನಿತಂತುಗಳನ್ನು ಒಂದು ಕ್ರಮದಲ್ಲಿ ಒಗ್ಗಿಸಬಹುದಾದ, ವಿವಿಧ ಹಂತದ ಸಂಗೀತ ರಚನೆಗಳನ್ನು ಆಯ್ದು ಪ್ರಕಟಿಸಿದರು. ಶಾಸ್ತ್ರೀಯ ಸಂಗೀತ ಧಾಟಿಯ ಕೆಲವು ಪ್ರೌಢ ಜಾನಪದ ಗೀತೆಗಳನ್ನು ಗ್ರಾಮೀಣ ಜನರಲ್ಲಿ ಪ್ರಚುರಗೊಳಿಸಿದರು; ಅವಕ್ಕೆ ಶಾಸ್ತ್ರೀಯ ಸಂಗೀತ ಸಂಜ್ಞೆ ಕೊಡುವ ವ್ಯವಸ್ಥೆಯನ್ನು ಅವರು ರೂಪಿಸಿದರು.

ಇಂಗ್ಲಿಷ್, ತಮಿಳು, ತೆಲುಗುಗಳಲ್ಲಿ ಇವರ ಸಂಗೀತ ವಿಷಯದ ಪುಸ್ತಕಗಳು 50ಕ್ಕೂ ಹೆಚ್ಚು ಪ್ರಕಟವಾಗಿವೆ. 'ದಕ್ಷಿಣ ಭಾರತ ಸಂಗೀತ ಹಾಗೂ ಸಂಗೀತಗಾರರ ನಿಘಂಟು' (ಮೂರು ಸಂಪುಟಗಳು), 'ಭಾರತೀಯ ಸಂಗೀತದ ಇತಿಹಾಸ', 'ಸಂಗೀತ ಕಲಿಸುವಿಕೆ', 'ಶ್ರುತಿವಾದ್ಯಗಳು', 'ಲಯವಾದ್ಯಗಳು', ತ್ಯಾಗರಾಜ ರಚಿತ 'ನೌಕಾಚರಿತ', 'ಪ್ರಹ್ಲಾದ ಭಕ್ತಿ ವಿಜಯ' ಮುಂತಾದ ಕೃತಿಗಳನ್ನೂ ಹೊರತಂದಿದ್ದಾರೆ.

1958ರಲ್ಲಿ ವಾಷಿಂಗ್‌ಟನ್‌ನ ಅಂತರರಾಷ್ಟ್ರೀಯ ಸಂಗೀತ ಶಿಕ್ಷಣಸಂಘಕ್ಕೆ ಉಪಾಧ್ಯಕ್ಷರಾಗಿ ಸಾಂಬಮೂರ್ತಿ ಆಯ್ಕೆಯಾಗಿದ್ದರು. ಅವರು ಅನೇಕ ಸಂಗೀತ ಸಮ್ಮೇಳನಗಳ ಅಧ್ಯಕ್ಷತೆ ವಹಿಸಿದ್ದರು. ಸಂಗೀತ ನಾಟಕ ಅಕಾದೆಮಿಯ ಫೆಲೊ, ದಕ್ಷಿಣ ಭಾರತ ಸಂಗೀತ ಶಿಕ್ಷಕರ ಸಂಘದ ಅಧ್ಯಕ್ಷ, ಮದರಾಸು ಸಂಗೀತ ಅಕಾಡೆಮಿಯ ಉಪಾಧ್ಯಕ್ಷ ಮತ್ತಿತರ ಉನ್ನತ ಸ್ಥಾನಗಳಲ್ಲಿ ಸೇವೆ ಸಲ್ಲಿಸಿದರು.

1973 ಅಕ್ಟೋಬರ್ 23ರಂದು ಅವರು ನಿಧನರಾದರು.

ಪಿ. ಸಿ. ಮಹಲನೋಬಿಸ

ಒಂದು ವಿಷಯದ ವಿವರಗಳನ್ನು ಕಲೆಹಾಕಿ ಸಂಖ್ಯಾಶಾಸ್ತ್ರ ... ಅದರಿಂದ ಎಲ್ಲ ಬಗೆಯ ಮಾನವ ಚಟುವಟಿಕೆಗಳಿಗೆ ಸಂಬಂಧಿಸಿದ ಕಾರ್ಯಕಾರೀ ನಿರ್ಧಾರಗಳನ್ನು ತೆಗೆದುಕೊಳ್ಳಲು ಸಂಖ್ಯಾಶಾಸ್ತ್ರ ಒಂದು



' ಸಂಖ್ಯಾ ಎಂಜಿನಿಯರ್ ' : ಮಹಲನೋಬಿಸ್

ಹೊಸ ಮಾರ್ಗ—ಎಂದು ಅಭಿಪ್ರಾಯ ಪಡುತ್ತಿದ್ದವರು ಮಹಲನೋಬಿಸ್. ಆ ಕ್ಷೇತ್ರದಲ್ಲಿ ಅವರು ಮಾಡಿದ ಸೇವೆ ಮಹತ್ತರವಾದದ್ದು. ಇವರು ಪ್ರತಿಪಾದಿಸಿದ ಸಿದ್ಧಾಂತಗಳು ಸಂಖ್ಯಾವಿಜ್ಞಾನದ ಪಠ್ಯಪುಸ್ತಕಗಳಲ್ಲಿ ಸೇರ್ಪಡೆಯಾಗಿವೆ.

ಪ್ರಶಾಂತ ಚಂದ್ರ ಮಹಲನೋಬಿಸ್ ಜನಿಸಿದ್ದು 1893 ಜೂನ್ 29ರಂದು, ಕಲ್ಕತ್ತೆಯಲ್ಲಿ. 1912ರಲ್ಲಿ ಬಿ.ಎಸ್‌ಸಿ, ಅನಂತರ ಕೇಂಬ್ರಿಜ್‌ನಲ್ಲಿ ಎಂ.ಎ. ಮಾಡಿಕೊಂಡರು. ಕಲ್ಕತ್ತಾ ವಿಶ್ವವಿದ್ಯಾನಿಲಯದ ಭೌತವಿಜ್ಞಾನ ಪ್ರಾಧ್ಯಾಪಕರಾಗಿ, ಆ ವಿಭಾಗದ ಮುಖ್ಯಸ್ಥರಾಗಿ ಮೂವತ್ತು ವರ್ಷ ಸೇವೆ ಸಲ್ಲಿಸಿದರು. ಈ ಅವಧಿಯಲ್ಲಿ ಸಂಖ್ಯಾವಿಜ್ಞಾನದ ಬಗೆಗೆ ಇವರ ಆಸಕ್ತಿ ಬಲವಾಗಿ, ಕಲ್ಕತ್ತೆಯಲ್ಲಿ 'ಇಂಡಿಯನ್ ಸ್ಟಾಟಿಸ್ಟಿಕಲ್ ಇನ್‌ಸ್ಟಿಟ್ಯೂಟ್' (ಭಾರತೀಯ ಸಂಖ್ಯಾವಿಜ್ಞಾನ ಸಂಸ್ಥೆ) ಸ್ಥಾಪಿಸಿದರು. ಮಹಲನೋಬಿಸ್ ಭಾರತ ಸರಕಾರದ ಸಂಖ್ಯಾವೈಜ್ಞಾನಿಕ ಸಲಹೆಗಾರರೂ ಯೋಜನಾ ಆಯೋಗದ ಸದಸ್ಯರೂ ಆದರು. 1933ರಲ್ಲಿ 'ಸಂಖ್ಯಾ' ಎಂಬ ನಿಯತಕಾಲಿಕ ಸ್ಥಾಪಿಸಿ, ಕೊನೆಯ ವರೆಗೆ ಅದರ ಸಂಪಾದಕರಾಗಿದ್ದರು. ಅನೇಕ ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಸಂಘ ಸಂಸ್ಥೆಗಳ ಸದಸ್ಯರಾಗಿದ್ದರು. ಅವರು ತಮ್ಮನ್ನು 'ಸಂಖ್ಯಾ ಎಂಜಿನಿಯರ್' ಎಂದು ಕರೆದುಕೊಳ್ಳುತ್ತಿದ್ದರು. ಎರಡನೆಯ ಪಂಚವಾರ್ಷಿಕ ಯೋಜನೆಗೆ ಅವರು ರೂಪಿಸಿದ ಯೋಜನಾ ಮಾದರಿ ಅರ್ಥಶಾಸ್ತ್ರದಲ್ಲಿ ಪ್ರಾಮುಖ್ಯ ಪಡೆದಿದೆ.

ದೊಡ್ಡ ಮಟ್ಟದ ಮಾದರಿ ಸರ್ವೆಗಳನ್ನು ನಡೆಸುವುದಕ್ಕೆ ಅವರು ತತ್ತ್ವಗಳನ್ನು ರೂಪಿಸಿದರು. ಸಾಮಾಜಿಕ ಆರ್ಥಿಕ ಸಮಸ್ಯೆಗಳಿಗೆ ಸಂಖ್ಯಾ ವಿಧಾನಗಳನ್ನು ಅನ್ವಯಿಸುವುದರಲ್ಲಿ ಯಶಸ್ವಿಯಾದರು.

ಕೇಂಬ್ರಿಜ್‌ನ ವೆಲ್ಡನ್ ಪದಕ, ಕಲ್ಕತ್ತಾ ವಿಶ್ವವಿದ್ಯಾನಿಲಯದ ಸರ್ವಾಧಿಕಾರಿ ಪದಕ, ವಿಶ್ವಭಾರತಿಯ ದೇಶಿಕೋತ್ತಮ, ಭಾರತ ಸರಕಾರದ ಪದ್ಮವಿಭೂಷಣ, ರಾಯಲ್ ಸೊಸೈಟಿಯ ಫೆಲೊ ಪದವಿ ಇವರಿಗೆ ದೊರೆತುವು. 'ಯೋಜನೆಗಳ ಬಗೆಗೆ ಭಾಷಣಗಳು' ಮಹಲನೋಬಿಸರ ಉಪನ್ಯಾಸಗಳ ಸಂಗ್ರಹ. 'ಭಾರತದ ಯೋಜನೆಗೆ ನಿರ್ವಹಣ ಸಂಶೋಧನೆಯ ಅನ್ವಯ' ಅವರ ಒಂದು ಪ್ರಖ್ಯಾತ ಕೃತಿ.

ಸಂಖ್ಯಾವಿಜ್ಞಾನ ಕ್ಷೇತ್ರದಲ್ಲಿ ಭಾರತಕ್ಕೆ ಒಂದು ಗೌರವಯುತ ಸ್ಥಾನ ದೊರಕಿಸಿಕೊಟ್ಟ ಮಹಲನೋಬಿಸ್ 1972 ಜೂನ್ 28ರಂದು ಕಾಲವಾದರು.

ಪಿ. ಸಿ. ರಾಯ್

ನೋಡಿ : ರಾಯ್, ಪ್ರಫುಲ್ಲ ಚಂದ್ರ–ಸಂಪುಟ ೩.

ಪಿ. ಸಿ. ಲಾಲ್

1969-73ರ ವರೆಗೆ ಭಾರತೀಯ ವಿಮಾನದಳದ ಮುಖ್ಯಸ್ಥರಾಗಿದ್ದ ಪಿ. ಸಿ. ಲಾಲ್ ವಿಮಾನ ಹಾರಾಟ ಕಲಿತದ್ದು ಕೇವಲ ಹವ್ಯಾಸಕ್ಕಾಗಿ. ಇದು 1934ರ ಸುಮಾರಿಗೆ. ಎರಡನೆಯ ಮಹಾಯುದ್ಧ ಸಮಯದಲ್ಲಿ ಅವರು ತಮ್ಮ ವಕೀಲಿ ವ್ಯಾಸಂಗ ಬಿಟ್ಟು ಭಾರತೀಯ ವಿಮಾನದಳ ಸೇರಿದರು. 1944 ಹಾಗೂ 1945ರಲ್ಲಿ ಬರ್ಮ ಕ್ಷೇತ್ರದಲ್ಲಿ ನಡೆದ ಯುದ್ಧದಲ್ಲಿ ಇವರು ವಹಿಸಿದ ಪಾತ್ರಕ್ಕಾಗಿ 'ಡಿಸ್ಟಿಂಗ್ವಿಷ್ಡ್ ಫ್ಲೈಯಿಂಗ್ ಕ್ರಾಸ್' ದೊರೆಯಿತು.



ವಾಯುಬಲ : ಪಿ. ಸಿ. ಲ

ಪ್ರತಾಪ ಚಂದ್ರ ಲಾಲ್ ಜನಿಸಿದ್ದು 1916 ಡಿಸೆಂಬರ್ 6ರಂದು, ಲುಧಿಯಾನಾದಲ್ಲಿ. ತಂದೆ ಬಸಂತ್ ಲಾಲ್. ದೆಹಲಿ ಕಾಲೇಜು ಹಾಗೂ ಲಂಡನಿನ ಕಿಂಗ್ಸ್ ಕಾಲೇಜುಗಳಲ್ಲಿ ವಿದ್ಯಾಭ್ಯಾಸ. 1939ರಲ್ಲಿ ಭಾರತೀಯ ವಿಮಾನ ದಳದ ಆಯುಕ್ತಾಧಿಕಾರಿಯಾದರು. 1944ರಲ್ಲಿ ವಿಮಾನದಳ ಸಮಾದೇಶಕರಾದರು.

ಸ್ವತಂತ್ರ ಭಾರತ ವಿಮಾನದಳದಲ್ಲಿ ಹಲವು ಉನ್ನತ ಅಧಿಕಾರಗಳನ್ನು ಸಮರ್ಥವಾಗಿ ನಿರ್ವಹಿಸಿದರು. ವಿಮಾನಬಲದ ಮುಖ್ಯ ಕಚೇರಿಯ ಸಂಬಂಧಪಟ್ಟ ಯೋಜನೆಗಳ ನಿರ್ದೇಶಕ, ಮಂತ್ರಿಮಂಡಲದ ಸೈನಿಕ ಶಾಖೆಯ ಉಪಕಾರ್ಯದರ್ಶಿ, ಇಂಡಿಯನ್ ಏರ್‌ಲೈನ್ಸ್ ಕಾರ್ಪೊರೇಷನ್ ಪ್ರಧಾನ ವ್ಯವಸ್ಥಾಪಕ ಹೀಗೆ ಹಲವು ಜವಾಬ್ದಾರಿಗಳನ್ನು ವಹಿಸಿದರು. 1966 ಸೆಪ್ಟೆಂಬರ್ ವರೆಗೆ ವಾಯುಬಲದ ಉಪ ಬಲಾಧಿಪತಿಯಾಗಿದ್ದರು. ಮುಂದೆ ಸ್ವಲ್ಪ ಕಾಲ ಹಿಂದೂಸ್ಥಾನ್ ಏರೋನಾಟಿಕ್ಸ್ ಲಿಮಿಟೆಡ್ ಸಂಸ್ಥೆಯ ಮ್ಯಾನೇಜಿಂಗ್ ಡೈರೆಕ್ಟರ್ ಪದವಿ. 1969 ಜುಲೈ ತಿಂಗಳಲ್ಲಿ ಅವರು ವಾಯು ಬಲಾಧಿಪತಿ (ಏರ್ ಚೀಫ್ ಮಾರ್ಷಲ್) ಆದರು.

1966ರಲ್ಲಿ ಪದ್ಮಭೂಷಣ ಮತ್ತು 1972ರಲ್ಲಿ ಪದ್ಮವಿಭೂಷಣ ಪ್ರಶಸ್ತಿಗಳನ್ನಿತ್ತು ಭಾರತ ಸರಕಾರ ಇವರನ್ನು ಪುರಸ್ಕರಿಸಿತು.

ವಾಯು ಬಲಾಧಿಪತಿ ಹುದ್ದೆಯಿಂದ ನಿವೃತ್ತರಾದ ಮೇಲೆ, 1973ರ ಇಂಡಿಯನ್ ಏರ್‌ಲೈನ್ಸ್ ಸಂಸ್ಥೆಯ ಅಧ್ಯಕ್ಷರಾಗಿ ಲಾಲ್ ನೇಮಕಗೊಂಡರು.

ಪ್ಲಿನಿ

“ಇಂಡಿಯಾದಿಂದ ರೋಮ್ ಸಾಮ್ರಾಜ್ಯಕ್ಕೆ ವರ್ಷಕ್ಕೆ 55 ಕೋಟಿ ಸೆಸ್ಟರ್ಸ್ (ಸುಮಾರು 80 ಲಕ್ಷ ರೂ.) ಬೆಲೆಯ ಸರಕು ಸಮುದ್ರ ಮಾರ್ಗವಾಗಿ ಆಮದಾಗುತ್ತದೆ. ಅಲ್ಲಿನ ಮೆಣಸು ಕಾಳುಗಳನ್ನು ಚಿನ್ನ, ಬೆಳ್ಳಿಯಂತೆ ತೂಕಮಾಡಿ ಕೊಂಡುಕೊಳ್ಳುತ್ತೇವೆ. ವಜ್ರ, ಪಚ್ಚೆ, ಗೋಮೇಧಿಕ ಮುಂತಾದ ಪ್ರಶಸ್ತ ರತ್ನಗಳಿಗೆ ಇಂಡಿಯಾ ಮಾತೃಸ್ಥಾನ.”

—ರೋಮ್‌ನ ಬಹುಶ್ರುತ ಪಂಡಿತ ಪ್ಲಿನಿ ರಚಿಸಿದ, ಜಗತ್ತಿನ ಪ್ರಥಮ ವಿಶ್ವಕೋಶ ಎನಿಸಿದ, 'ಹಿಸ್ಟರಿಯ ನ್ಯಾಚುರೇಲಿಸ್' (ನಿಸರ್ಗೇತಿಹಾಸ)ನಲ್ಲಿ ಇರುವ ವಿವರಣೆ ಇದು.

'ಹಿರಿಯ ಪ್ಲಿನಿ' ಎಂದು ಪ್ರಸಿದ್ಧನಾಗಿರುವ ಗಯಸ್ ಪ್ಲಿನಿಯಸ್ ಸೆಕಂಡಸ್ 23ರಲ್ಲಿ ಜನಿಸಿದ. ರೋಮ್ ಆಡಳಿತದಲ್ಲಿ ಹಲವು ಹುದ್ದೆಗಳಲ್ಲಿದ್ದ. 77ರಲ್ಲಿ ನೇಪಲ್ಸ್ ಕೊಲ್ಲಿ ತೀರದಲ್ಲಿ ವೆಸೂವಿಯಸ್ ಪರ್ವತದ ಜ್ವಾಲಾಮುಖಿಯ ಪ್ರಕೋಪಕ್ಕೆ ತುತ್ತಾಗಿ ಮರಣಹೊಂದಿದ.

[illegible] 300 [illegible]

[illegible]

[illegible]

[illegible]

ಪ್ರೀತಿ ವದ್ದೇದಾರ್

"ನೀವೆಲ್ಲ ತಪ್ಪಿಸಿಕೊಳ್ಳಿ. ಕೊಂಚವೂ ತಡಮಾಡಬೇಡಿ. ಶತ್ರುಗಳ [illegible] ಅದೇ ನನ್ನ ಅಂತಿಮ ಬೇಡಿಕೆ. ಹೊರಟುಹೋಗಿ ಗೆಳೆಯರೇ, [ನಿ]ಮಗೆಲ್ಲ ಶುಭಾಶಯಗಳು. ಮಾಸ್ಟರ್‌ದಾಗೆ ಪ್ರಣಾಮಗಳು."

—ವಿಷ ತೆಗೆದುಕೊಳ್ಳುವ ಮೊದಲು ತಮ್ಮ ಜೊತೆಯಲ್ಲಿದ್ದವನಿಗೆ [illegible] ಕ್ರಾಂತಿಕಾರಿಣಿ ಪ್ರೀತಿ ವದ್ದೇದಾರ್ [ಆ]ಡಿದ ಕೊನೆಯ ಮಾತುಗಳಿವು.

ಚಿತ್ತಗಾಂಗ್‌ನ ಬಡಕುಟುಂಬದಲ್ಲಿ ಪ್ರೀತಿ 1911ರಲ್ಲಿ ಜನಿಸಿದರು. [illegible] ಕಾಲೇಜಿಗೆ ಸೇರಲು ಢಾಕ್ಕಾಗೆ ಬಂದ [ಪ್ರೀ]ತಿ, ಮಹಿಳಾ ಕ್ರಾಂತಿಕಾರಿಗಳ ಚಟುವಟಿಕೆಯ ಕೇಂದ್ರವಾಗಿದ್ದ "ದೀಪಾಲಿ [ಸ]ಂಘ'ವನ್ನು ಸೇರಿದರು. ಬಿ.ಎ.ಗೆ ಓದಲೆಂದು ಆಕೆ ಕಲ್ಕತ್ತೆಗೆ ಬಂದರು. ಚಿತ್ತಗಾಂಗ್ ಗುಂಪಿನೊಡನೆ ಸಂಪರ್ಕ ಇಟ್ಟುಕೊಂಡಿದ್ದರು. 1932ರಲ್ಲಿ ಪದವೀಧರೆಯಾಗಿ ಚಿತ್ತಗಾಂಗಿಗೆ ಹಿಂದಿರುಗಿದರು. ನಂದನ ಕಾನನ್ ಬಾಲಿಕಾ ಶಾಲೆಯಲ್ಲಿ ಮುಖ್ಯೋಪಾಧ್ಯಾಯಿನಿಯಾದರು.



ಕ್ರಾಂತಿ : ಪ್ರೀತಿ

ಕ್ರಾಂತಿದಳದ ಸೇನಾನಿ ಸೂರ್ಯಸೇನ್ ಪರಿಚಯವಾದದ್ದು ಮೇ ತಿಂಗಳಲ್ಲಿ, ಪ್ರೀತಿ ಧಾಲ್‌ಘಾಟ್‌ಗೆ ಹೋದಾಗ. ಮತ್ತೆ ಜೂನ್ [illegible]

[illegible] 10,000 ರೂಪಾಯಿ ಹಾಗೂ ಪ್ರೀತಿಯ ಸುಳಿವು ನೀಡಿದವರಿಗೆ 500 ರೂಪಾಯಿ [illegible]

1932 [illegible] 11-30 [illegible]

[illegible]

[illegible] ಅಣೆಕಟ್ಟು ನಿರ್ಮಾಣ, ತೈಲ ಉತ್ಪಾದನೆ, ರಕ್ಷಣಾ ಪಡೆಗಳ ಕಾರ್ಯಾಚರಣೆ –ಈ ಎಲ್ಲ ಉಪಯೋಗಗಳಿಗಾಗಿ, ವಾಹನಗಳನ್ನು ತಯಾರಿಸುವ ಸಂಸ್ಥೆ, ಪ್ರೀಮಿಯರ್ ಆಟೋಮೊಬೈಲ್ಸ್ ಲಿಮಿಟೆಡ್. ಅಲ್ಲದೆ, ನೌಕೆಗಳಿಗೆ ಹಾಗೂ ವಿವಿಧ ಕೈಗಾರಿಕೆಗಳಿಗೆ [illegible] ಗಳನ್ನೂ ಏರ್‌ಕಂಡಿಷನಿಂಗ್ ಸಲಕರಣೆಗಳನ್ನೂ ಈ ಸಂಸ್ಥೆ ಉತ್ಪಾದಿಸುತ್ತದೆ. ಆದರೆ ಇವೆಲ್ಲಕ್ಕಿಂತ ಹೆಚ್ಚು ಜನಪ್ರಿಯವಾದ, ವ್ಯಾಪಕವಾದ, ಪ್ರೀಮಿಯರ್ ತಯಾರಿಕೆ — ಕಾರು. ಕಾರಿನ ಪ್ರೀಮಿಯರ್ ಪ್ರೆಸಿಡೆಂಟ್ (ಮೊದಲು ಫಿಯೆಟ್) ಕಾರುಗಳ ನಿರ್ಮಾಣ ನಡೆಯುವುದು ಪ್ರೀಮಿಯರ್ ಆಟೊಮೊಬೈಲ್ ಲಿಮಿಟೆಡ್ ಸಂಸ್ಥೆಯಲ್ಲಿ. ವಾಲ್‌ಚಂದ್ ಹೀರಾಚಂದ್ ಅವರ ನೇತೃತ್ವದಲ್ಲಿ ಕೆಲವರು ಉದ್ಯಮಿಗಳು 1944 ಜೂನ್ 24ರಂದು ಪ್ರೀಮಿಯರ್ ಆಟೊಮೊಬೈಲ್ಸ್ ಸಂಸ್ಥೆಯನ್ನು ಸ್ಥಾಪಿಸಿದರು. ಮೊದಲಿಗೆ ಇದು



ಕಾರು, ಟ್ರಕ್ಕು ಇತ್ಯಾದಿ



ವಾಹನಕ್ಕೆ ಯಂತ್ರಜೋಡಣೆ

ಅಮೆರಿಕದ ಕ್ರಿಸ್ಲರ್ ಕಂಪೆನಿಯ ಕಾರು, ಲಾರಿಗಳನ್ನು (ಡಾಜ್, ಡಿ ಸೋಟೊ ಮತ್ತು ಪ್ಲಿಮತ್) ಭಾರತದಲ್ಲಿ ಜೋಡಿಸುವ ಕೆಲಸವನ್ನು ಮಾಡುತ್ತಿತ್ತು. 1950ರಲ್ಲಿ ಇಟಲಿಯ ಫಿಯೆಟ್ ಕಂಪೆನಿಯ ಸಹಕಾರದಿಂದ ಅದೇ ಹೆಸರಿನ ಕಾರುಗಳನ್ನು ತಯಾರಿಸಲು ಆರಂಭಿಸಿತು. ಒಂಬತ್ತು ವರ್ಷಗಳ ಬಳಿಕ ಕಿಸ್ಲರ್ ಕಂಪೆನಿಯ ವಾಹನಗಳನ್ನು ಜೋಡಿಸುವ ಕೆಲಸವನ್ನು ನಿಲ್ಲಿಸಿತು. ಫಿಯೆಟ್ ಕಂಪೆನಿಯ ವಾಹನಗಳನ್ನು ತಯಾರಿಸುವ ಕೆಲಸ ಮಾತ್ರ ಮುಂದುವರಿದುಕೊಂಡು ಬಂತು. 1972ರಲ್ಲಿ ಎಲ್ಲ ವಿದೇಶೀ ಸಂಸ್ಥೆಗಳ ಸಹಕಾರ ಕೊನೆಗೊಂಡಿತು. ಪ್ರೀಮಿಯರ್ ಕಂಪೆನಿ ತನ್ನ ಎಲ್ಲ ತಯಾರಿಕೆಗಳಿಗೂ ಹೆಚ್ಚು ಕಡಮೆ ಪೂರ್ಣವಾಗಿ ದೇಶೀಯ ವಸ್ತುಗಳನ್ನೇ ಉಪಯೋಗಿಸತೊಡಗಿತು.

ಕುರ್ಲಾ, ಕಲ್ಯಾಣ್ ಮತ್ತು ಪಡಾಲಗಳಲ್ಲಿ ಪ್ರೀಮಿಯರ್ ಆಟೊಮೊಬೈಲ್ಸ್‌ನ ಕಾರಖಾನೆಗಳಿವೆ. ವಾಹನಗಳಿಗೆ ಬೇಕಾದ ಪ್ರಮುಖ ಭಾಗಗಳು ಇಲ್ಲಿ ತಯಾರಾಗುತ್ತವೆ. ಉಳಿದ ಚಿಕ್ಕ ಪುಟ್ಟ ಭಾಗಗಳನ್ನು ದೇಶದ ಅನೇಕ ಕಡೆಗಳಲ್ಲಿರುವ ಚಿಕ್ಕ ಕೈಗಾರಿಕೋದ್ಯಮಗಳಿಂದ ಪಡೆಯುತ್ತದೆ. ವರ್ಷಕ್ಕೆ 14,000 ಕಾರುಗಳ 6,000 ಇತರ ವಾಹನಗಳ ತಯಾರಿಕಾ ಸಾಮರ್ಥ್ಯ ಪ್ರೀಮಿಯರ್ ಸಂಸ್ಥೆಗಿದೆ. ಇಲ್ಲಿ ತಯಾರಾದ ವಾಹನಗಳು ದೇಶಗಳಿಗೆ ಕೂಡ ರಫ್ತಾಗುತ್ತವೆ. ಸಂಸ್ಥೆಯ ನಿರ್ದೇಶಕರ ಮಂಡಲಿಗೆ ಲಾಲ್‌ಚಂದ್ ಹೀರಾಚಂದ್ ಅಧ್ಯಕ್ಷರು.

ನೋಡಿ : ವಾಲ್‌ಚಂದ್ ಹೀರಾಚಂದ್

ಪುಣೆ

'ದಖ್ಖಣದ ರಾಣಿ' ಎನಿಸಿಕೊಂಡ ನಗರ ಪುಣೆ (ಪೂನಾ). ಮಹಾರಾಷ್ಟ್ರದ ಇತಿಹಾಸದಲ್ಲಿ ಈ ನಗರದ ಪಾತ್ರ ಮಹತ್ವದ್ದು.

' ದಖ್ಖಣದ ರಾಣಿ '



ಪುಣೆಗೆ ಮುಂಬಯಿಯಿಂದ 192 ಕಿಲೊಮೀಟರ್ ದೂರ. ಸಹ್ಯಾದ್ರಿಯಲ್ಲಿ ಸಾಗುವ ಈ ಮಾರ್ಗದುದ್ದಕ್ಕೂ ಪ್ರಕೃತಿ ರಮಣೀಯವಾಗಿದೆ.

ಪುಣೆ ನಗರದಲ್ಲಿ ಕೋಟೆಗಳೂ, ದೇವಸ್ಥಾನಗಳೂ, ಪ್ರಮುಖ ಆಧುನಿಕ ವಿದ್ಯಾ ಸಂಸ್ಥೆಗಳೂ ಇಲ್ಲಿವೆ. ಈ ನಗರ ಭಾರತೀಯ ಸೇನೆಯ ದಕ್ಷಿಣ ಸಮಾದೇಶದ ಮುಖ್ಯಸ್ಥಾನ. ಇದರ ಸಮೀಪದಲ್ಲಿರುವ ಖಡಕ್‌ವಾಸ್ಲಾದಲ್ಲಿ ನ್ಯಾಷನಲ್ ಡಿಫೆನ್ಸ್ ಅಕಾಡೆಮಿ ಇದೆ. ಕೇಂದ್ರ ಜಲ ಮತ್ತು ಶಕ್ತಿ ಸಂಶೋಧನಾಲಯ, ಮಿಲಿಟರಿ ಎಂಜಿನಿಯರಿಂಗ್ ಕಾಲೇಜು, ರಕ್ಷಣಾ ಪಡೆಗಳ ವೈದ್ಯಕೀಯ ಕಾಲೇಜುಗಳು ಪುಣೆಯಲ್ಲಿವೆ. ಪುಣೆ ವಿಶ್ವವಿದ್ಯಾಲಯ ಕೇಂದ್ರವೂ ಇಲ್ಲಿದೆ. ನೌಕಾ ತರಬೇತಿ ಕೇಂದ್ರ ' ಐಎನ್‌ಎಸ್ ಶಿವಾಜಿ ' 40 ಮೈಲು ದೂರದ ಲೋಣಾವಳದಲ್ಲಿದೆ. ಭಾರತದಲ್ಲಿ ಏಕಮಾತ್ರ ಸಂಸ್ಥೆಯಾದ ಕೃತಕ ಅವಯವ ತಯಾರಿಕಾ ಕೇಂದ್ರ ಇರುವುದು ಪುಣೆಯಲ್ಲಿ. ಇಲ್ಲಿನ ಜನಸಂಖ್ಯೆ 8,56,105.

ಈ ನಗರದಲ್ಲಿರುವ ಇತರ ಪ್ರಮುಖ ಸಂಸ್ಥೆಗಳು : ಭಾರತದ ಪವನ ವಿಜ್ಞಾನ ಸಂಸ್ಥೆಯ ಮುಖ್ಯ ಕಾರ್ಯಾಲಯ, ರಾಷ್ಟ್ರೀಯ ರಾಸಾಯನಿಕ ಪ್ರಯೋಗಾಲಯ, ಸಾಗರೋತ್ತರ ಸಂಪರ್ಕ ಕೇಂದ್ರ, ಫಿಲ್ಮ್ ಮತ್ತು ಟೆಲಿವಿಷನ್ ಶಿಕ್ಷಣ ಸಂಸ್ಥೆ, ವೈರಸ್ ಸಂಶೋಧನಾ ಸಂಸ್ಥೆ, ಲಾರ್ಡ್ ರಿ... ಕೈಗಾರಿಕಾ ವಸ್ತು ಪ್ರದರ್ಶನಾಲಯ, ರಾಜಾ ಕೇಳ್ಕರ್ ವಸ್ತುಸಂಗ್ರಹಾಲಯ.

ನಗರದಲ್ಲಿ ಬಂಡ್‌ತೋಟ, ಸಾಂಭಾಜಿ ಉದ್ಯಾನ, ಶನಿವಾರವಾಡ ಉದ್ಯಾನಗಳಿವೆ. ಪೇಶ್ವೆಯವರ ಭವ್ಯ ಅರಮನೆಯ ಅವಶೇಷವಿದೆ. ಖಡಕ್‌ವಾಸ್ಲಾದ ಬಳಿಯ ಫೈಫ್ ಸರೋವರ ಅತ್ಯಂತ ಚೆಲುವಿನ ತಾಣ. ಪುಣೆಯ ಟರ್ಫ್ ಕ್ಲಬ್ (ಕುದುರೆ ಪಂದ್ಯ ನಡೆಸುವ ಸಂಸ್ಥೆ) ಭಾರತದ ಉತ್ತಮ ಕ್ಲಬ್‌ಗಳಲ್ಲಿ ಒಂದು.

ಮುಥಾ ಮತ್ತು ಮೂಲಾ ನದಿಗಳ ಸಂಗಮಸ್ಥಾನದ ಬಳಿ ಪುಣೆಯಿದೆ. ಇಲ್ಲಿ ಕಾಗದ ಮತ್ತು ಹತ್ತಿ ಕಾರಖಾನೆ, ಶಸ್ತ್ರ ಕಾರಖಾನೆ ಮತ್ತು ಎಂಜಿನಿಯರಿಂಗ್ ಉದ್ಯಮಗಳಿವೆ. ಸುಮಾರು 2,000 ಅಡಿ ಎತ್ತರದಲ್ಲಿರುವ ಈ ನಗರ ಬ್ರಿಟಿಷರ ಕಾಲದಲ್ಲಿ ಮುಂಬಯಿ ಪ್ರಾಂತದ ಮುಂಗಾರು ಕಾಲದ ರಾಜಧಾನಿಯಾಗಿತ್ತು. ನಗರ ಬಳಿ ಇರುವ ಗುಡ್ಡದ ಮೇಲೆ ಪಾರ್ವತಿ ದೇವಾಲಯವಿದೆ. ಸುಮಾರು 15 ಮೈಲು ದೂರದಲ್ಲಿ ಸುಪ್ರಸಿದ್ಧ ಸಿಂಹಗಡ ಕೋಟೆಯಿದೆ. ನೂರು ವರ್ಷಕ್ಕೂ ಹೆಚ್ಚು ಕಾಲ ಇದು ಮರಾಠ ಸಾಮ್ರಾಜ್ಯದ ರಾಜಧಾನಿಯಾಗಿತ್ತು. 1818ರಲ್ಲಿ ಬ್ರಿಟಿಷರು ಪುಣೆಯನ್ನು ವಶಪಡಿಸಿಕೊಂಡರು. ಪುಣೆಗೆ ಒಳ್ಳೆಯ ರೈಲು, ರಸ್ತೆ ಮಾರ್ಗಗಳಿವೆ. ವಿಮಾನ ಸಂಪರ್ಕವೂ ಇದೆ.

ನೋಡಿ : ಕೇಂದ್ರ ಜಲ ಮತ್ತು ಶಕ್ತಿ ಸಂಶೋಧನಾಲಯ

ಪುರಂದರದಾಸ

ನೋಡಿ : ಸಂಪುಟ ೫

ಪುರಾಣಗಳು

ನೋಡಿ : ಸಂಪುಟ ೧, ೫

ಪುರಾತನರು

ನೋಡಿ : ಸಂಪುಟ ೫

ಪುರಿ ಜಗನ್ನಾಥ

ಭಾರತದ ಮೂರ್ತಿಯನ್ನು ಪಡೆದು ಅದನ್ನು ಭೂಮಿಯ ಮೇಲೆ ಪ್ರತಿಷ್ಠಿಸಬೇಕು ಎಂದು ಆಸೆ ಮಾಳ್ವದ ಅರಸು ಇಂದ್ರದ್ಯುಮ್ನನಿಗೆ. ಇದಕ್ಕಾಗಿ ತಪಸ್ಸು ಮಾಡಿದ. ದೇವರು ಸ್ವಪ್ನ ಕನಸಿನಲ್ಲಿ ಬಂದು— "ಜಗನ್ನಾಥ ಕಾಣುವ ಸಮುದ್ರ ತೀರಕ್ಕೆ ಹೋಗು. ದೊಡ್ಡ ಮರವೊಂದು



ಜಗನ್ನಾಥ ದೇವಾಲಯ

ನೀರಿನ ಮೇಲೆ ತೇಲಿ ಬರುತ್ತದೆ. ಅದರ ಕಡೆ ಸಾಗಿ ಕೊಡಲಿಯಿಂದ ಆ ಮರದ ಕಾಂಡವನ್ನು ಕಡಿದುಕೊಂಡು ಬಂದು ಅದರಿಂದ ನನ್ನ ಮೂರ್ತಿಯನ್ನು ಮಾಡಿಸು" ಎಂದು ಹೇಳಿದ. ಆತ ಹಾಗೆಯೇ ಮಾಡಿದ. ಕಾಂಡವನ್ನು ಸಮುದ್ರದಿಂದ ತಂದಾಗ ವಿಷ್ಣು ಮತ್ತು ವಿಶ್ವಕರ್ಮರು ಬಡಗಿ ವೇಷದಲ್ಲಿ ಬಂದು, ತಾವು ವಿಗ್ರಹಗಳನ್ನು ಮಾಡಿ ಕೊಡುವುದಾಗಿಯೂ ಆದರೆ ಅದು ಪೂರ್ಣವಾಗುವುದಕ್ಕೆ ಮೊದಲು ಯಾರೂ ಅವನ್ನು ನೋಡಬಾರದೆಂದೂ ಹೇಳಿದರು. ಇಂದ್ರದ್ಯುಮ್ನ ಒಪ್ಪಿದ. ಅವರು ಕೃಷ್ಣ, ಬಲರಾಮ, ಸುಭದ್ರೆಯರ ವಿಗ್ರಹಗಳನ್ನು ಮಾಡಿಕೊಟ್ಟರು.

—ಇದು ಪುರಿಯಲ್ಲಿರುವ ಜಗನ್ನಾಥ ದೇವಾಲಯದ ವಿಗ್ರಹಗಳ ಬಗೆಗೆ ಇರುವ ದಂತಕಥೆ.

ಪುರುಷೋತ್ತಮ ಕ್ಷೇತ್ರವೆಂದು ಪ್ರಸಿದ್ಧವಾಗಿರುವ ಪುರಿ ಜಗನ್ನಾಥ ಒಡಿಸ್ಸಾ ರಾಜ್ಯದಲ್ಲಿದೆ. ಇಲ್ಲಿರುವ ಕೃಷ್ಣನ ಮೂರ್ತಿಯನ್ನು ಜಗನ್ನಾಥ —ಜಗತ್ತಿನ ಒಡೆಯ— ಎನ್ನುತ್ತಾರೆ. ಈ ಮೂರ್ತಿಯನ್ನು ಮರದಲ್ಲಿ ಮಾಡಿರುವುದರಿಂದ ದಾರುಬ್ರಹ್ಮ ಎನ್ನುವ ಹೆಸರೂ ಇದೆ. ಸಮುದ್ರ ತೀರದ ನೀಲಪರ್ವತದ ಇಳಿಜಾರಿನಲ್ಲಿ, 652 ಅಡಿ ಉದ್ದ 630 ಅಡಿ ಅಗಲದ ಆವರಣದಲ್ಲಿ ಜಗನ್ನಾಥನ ದೇವಸ್ಥಾನವಿದೆ. ಸುತ್ತ 20 ಅಡಿ ಎತ್ತರದ ಪ್ರಾಕಾರ. ಆವರಣದೊಳಗೆ ಸುಮಾರು 120 ದೇವಾಲಯಗಳಿವೆ. ಪ್ರಧಾನ ದೇವಾಲಯದ ಗೋಪುರ 192 ಅಡಿ ಎತ್ತರ. ಈ ದೇವಾಲಯದಲ್ಲಿರುವ ಕೃಷ್ಣ, ಬಲರಾಮ ಮತ್ತು ಸುಭದ್ರಾ ದೇವತೆಗಳು ಮರದವು. ಸೊಂಟದಿಂದ ಕೆಳಗಿನ ಭಾಗವಿಲ್ಲದ ಈ ಮೂರ್ತಿಗಳ ಕೆತ್ತನೆ ಒರಟಾಗಿದೆ. ಜಗನ್ನಾಥನ ಅಡಿಗೆ ಮನೆ ದೊಡ್ಡದು ಇದೆ. ಪುರಿಯಲ್ಲಿ ವರ್ಷಕ್ಕೆ 24 ಮುಖ್ಯ ಉತ್ಸವಗಳಾಗುತ್ತವೆ. ಎಲ್ಲಕ್ಕಿಂತ ಪ್ರಮುಖವಾದ ರಥಯಾತ್ರೆಯ ಆರಂಭ ಆಷಾಢ ಶುದ್ಧ ಬಿದಿಗೆಯಂದು. 45 ಅಡಿ ಎತ್ತರ, 35 ಅಡಿ ಚೌಕವುಳ್ಳ ರಥಕ್ಕೆ 7 ಅಡಿ ವ್ಯಾಸದ 16 ಚಕ್ರಗಳಿವೆ. ಪ್ರತಿ ವರ್ಷ ತೇರನ್ನು ಒಡೆದು ಮರವನ್ನು ಕುರುಹಾಗಿ ಮಾರಿಬಿಟ್ಟು ಅದೇ ಮಾದರಿಯ ಹೊಸ ರಥ ಮಾಡುತ್ತಾರೆ.

ಐದನೆಯ ಶತಮಾನದ ಮೊದಲ ಭಾಗದಲ್ಲಿ ಇಲ್ಲಿಗೆ ಬಂದಿದ್ದ ಫಾಹಿಯಾನ್, ಇಲ್ಲಿ ಬುದ್ಧನ ಹಲ್ಲಿನ ರಥೋತ್ಸವ ತುಂಬ ವಿಜೃಂಭಣೆಯಿಂದ ನಡೆಯುತ್ತಿತ್ತೆಂದು ಹೇಳಿದ್ದಾನೆ. ಆ ಕಾಲಕ್ಕೆ ಇದು ಬೌದ್ಧರ ಒಂದು ಮುಖ್ಯ ಕೇಂದ್ರವಾಗಿತ್ತು. ಶಂಕರಾಚಾರ್ಯರು ಸ್ಥಾಪಿಸಿದ ಗೋವರ್ಧನ ಪೀಠ ಎಂಬ ಅದ್ವೈತ ಮಠ ಇಲ್ಲಿದೆ.

ಪುಷ್ಕರ

ವಿಶ್ವಪರ್ಯಟನೆಗೆ ಬ್ರಹ್ಮ ಹೊರಟಿದ್ದ. ಹಸಿರು ಮರಗಳ ಸುವಾಸನೆ ಬೀರುವ ಹೂಗಳನ್ನೂ ರಸಭರಿತ ಹಣ್ಣುಗಳನ್ನೂ ಹೊತ್ತ ಅರಣ್ಯ ಕಾಣಿಸಿತು. ಮರಗಳು ಪುಷ್ಪವೃಷ್ಟಿ ಮಾಡಿ ಬ್ರಹ್ಮನನ್ನು ಸ್ವಾಗತಿಸಿದುವು. ಅವುಗಳ ಸತ್ಕಾರಕ್ಕೆ ವರರೂಪವಾಗಿ ಬ್ರಹ್ಮ ಅಲ್ಲಿ ತಂಗಿದ್ದ. ಅಲ್ಲಿ ವಜ್ರನಾಭ ಎಂಬ ರಾಕ್ಷಸನಿದ್ದ. ಆತ ಮಕ್ಕಳನ್ನು ಕೊಲ್ಲುತ್ತಿದ್ದ. ಬ್ರಹ್ಮ ತನ್ನ ಕೈಯಲ್ಲಿದ್ದ ತಾವರೆ(ಪುಷ್ಕರ) ಹೂವನ್ನು ಆ ರಾಕ್ಷಸನ ಮೇಲೆ ಎಸೆದಾಗ ಅವನು ಮಡಿದ. ಹೂವು ಪುಟಿದು ಮೂರು ಕಡೆ ಭೂಮಿಯನ್ನು ತಾಕಿತು. ಆ ಸ್ಥಳದಿಂದ ನೀರು ಚಿಮ್ಮಿತು.ಇದೇ ಪುಷ್ಕರ ಕ್ಷೇತ್ರ. ಎರಡು ಹರದಾರಿ ಆಸುಪಾಸಿನಲ್ಲಿ ಮೂರು ತೀರ್ಥಗಳಾದುವು. ಜ್ಯೇಷ್ಠ ಪುಷ್ಕರ, ಮಧ್ಯ ಪುಷ್ಕರ, ಮತ್ತು ಕನಿಷ್ಠ ಪುಷ್ಕರ. ಇವಕ್ಕೆ ಕ್ರಮವಾಗಿ ಬ್ರಹ್ಮ,ವಿಷ್ಣು, ರುದ್ರರು ಅಧಿದೇವತೆಗಳು.

—ಇದು ಪುಷ್ಕರದ ಬಗೆಗಿನ ಕಥೆ.

ಪುಷ್ಕರ ರಾಜಸ್ಥಾನದ ಅಜ್ಮೀರಿಗೆ 7 ಮೈಲಿ ದೂರದಲ್ಲಿದೆ. ದೇವಾಲಯಗಳು ಬ್ರಹ್ಮ, ಬದರೀನಾರಾಯಣ, ಆತ್ಮೇಶ್ವರ, ಸಾವಿತ್ರಿ,

ಸರಸ್ಸು ಮತ್ತು
ಸ್ನಾನ ಘಟ್ಟ



ಮತ್ತು ಗಾಯತ್ರಿ ದೇವಾಲಯಗಳು ಇದ್ದವೆ. ಇಲ್ಲಿ ಪ್ರಸಿದ್ಧವಾದ ಬ್ರಹ್ಮನ ದೇವಾಲಯವಿದೆ. ಚತುರ್ಮುಖ ಬ್ರಹ್ಮನ ಬಲಗಡೆಗೆ ಸಾವಿತ್ರಿ ಮತ್ತು ಎಡಗಡೆಗೆ ಗಾಯತ್ರಿ ವಿಗ್ರಹಗಳಿವೆ. ಇವರು ಬ್ರಹ್ಮನ ಪತ್ನಿಯರು.

ಪುಷ್ಕರದ ಸುತ್ತಮುತ್ತ ಕೆಂಪು ತಾವರೆ ಹೂ ಬೆಳೆಯುತ್ತದೆ. ಪುಷ್ಕರದಲ್ಲಿ ಯಜ್ಞ ಮಾಡಲು ಬ್ರಹ್ಮ ನಿಶ್ಚಯಿಸಿದ; ಸಾವಿತ್ರಿ ಯಜ್ಞಕ್ಕೆ ಬರಲು ತಡವಾದ್ದರಿಂದ ಗಾಯತ್ರಿಯನ್ನು ಮದುವೆಯಾಗಿ ಯಜ್ಞ ಆರಂಭಿಸಿದ; ಅನಂತರ ಬಂದ ಸಾವಿತ್ರಿ ಕೋಪಗೊಂಡು ಪುಷ್ಕರದ ದಕ್ಷಿಣದಲ್ಲಿರುವ ಬೆಟ್ಟಕ್ಕೆ ಹೊರಟುಹೋಗಿ ಅಲ್ಲಿ ನೆಲೆಸಿದಳು —ಎಂದು ಒಂದು ದಂತಕಥೆ ಇದೆ. ಅಲ್ಲಿ ಸಾವಿತ್ರಿ ದೇವಸ್ಥಾನವಿದೆ.

ಯಜ್ಞಕುಂಡದ ಸಮೀಪ ಅಗಸ್ತ್ಯರ ಆಶ್ರಮವಿದ್ದಿತು; ಪರೀಕ್ಷಿತ್ ರಾಜ ಸರ್ಪಯಾಗ ಮಾಡಿದ್ದು ಇದರ ಸಮೀಪದಲ್ಲಿ; ರಾಮ, ಸೀತೆ, ಲಕ್ಷ್ಮಣರು ವನವಾಸದ ಅವಧಿಯಲ್ಲಿ ಇಲ್ಲಿ ಸ್ನಾನ ಮಾಡಿದ್ದರು—ಎನ್ನುತ್ತಾರೆ.

ಪುಷ್ಕರದಲ್ಲಿ ಪ್ರಾಣಿವಧೆ ನಿಷಿದ್ಧ, ಕಾರ್ತಿಕ (ಅಕ್ಟೋಬರ್–ನವೆಂಬರ್) ಮಾಸದ ಪೂರ್ಣಿಮೆಯಂದು ದೊಡ್ಡ ಜಾತ್ರೆ ನಡೆಯುತ್ತದೆ.

ಪುಷ್ಯಭೂತಿಯರು

ಖ್ಯಾತ ದೊರೆಯಾದ ಹರ್ಷವರ್ಧನ ಪುಷ್ಯಭೂತಿ ವಂಶದವನು. ಶಿವಭಕ್ತನಾಗಿದ್ದ ಪುಷ್ಯಭೂತಿಯಿಂದ ಈ ವಂಶದ ಹೆಸರು ಬಂತು. ಥಾನೇಶ್ವರ (ಸ್ಥಾನೇಶ್ವರ)ದಿಂದ ಆಳುತ್ತಿದ್ದ ಈ ವಂಶದ ಮೊದಲ ಖ್ಯಾತ ದೊರೆ ಪ್ರಭಾಕರ ವರ್ಧನ. ಇವನ ತಾಯಿ ಗುಪ್ತವಂಶೀಯಳೆಂದು ನಂಬಿಕೆ. ಇವನು ತನ್ನ ಮಗಳು ರಾಜಶ್ರೀಯನ್ನು ಮೌಖರಿ ವಂಶದ ಗ್ರಹವರ್ಮನಿಗೆ ಮದುವೆ ಮಾಡಿಕೊಟ್ಟು ಗಂಗಾ ಬಯಲಿನ ಉತ್ತರಭಾಗದ ಎರಡು ಪ್ರಬಲ ಮನೆತನಗಳ ಸ್ನೇಹ ಬಂಧವನ್ನು ಬಲಪಡಿಸಿದ; 'ರಾಜಾಧಿರಾಜ' ಎಂಬ ಬಿರುದು ತಳೆದ.

ಪ್ರಭಾಕರ ವರ್ಧನನ ಅನಂತರ ಅವನ ಹಿರಿಯ ಮಗ ರಾಜ್ಯವರ್ಧನ ಪಟ್ಟಕ್ಕೆ ಬಂದ. ಭಾವ ಗ್ರಹವರ್ಮನು ಮಾಳ್ವದ ರಾಜನಿಂದ ಹತನಾದಾಗ ಸೇಡು ತೀರಿಸಿಕೊಂಡ. ಆದರೆ ಗೌಡ ರಾಜನ ಕುತಂತ್ರದಿಂದ ಕೊಲ್ಲಲ್ಪಟ್ಟ. ಅನಂತರ ಅವನ ತಮ್ಮ ಹರ್ಷವರ್ಧನ ವೈರಿಗಳೊಡನೆ ನಿರಂತರ ಯುದ್ಧ ನಡೆಸಿದ; ಉತ್ತರಾರ್ಧದಲ್ಲಿ ಪ್ರಬಲ ರಾಜನಾಗಿ ಆಳಿದ (606—647).

ಹರ್ಷ ಕನ್ನೋಜನ್ನು ತನ್ನ ರಾಜಧಾನಿಯಾಗಿ ಮಾಡಿಕೊಂಡ. ಆ ವರೆಗೆ ಮಗಧದ ದೊರೆಯೇ ಭಾರತದ ದೊರೆ ಎಂದಿದ್ದ ಕಲ್ಪನೆ ಹರ್ಷನ ಕಾಲದಲ್ಲಿ ಬದಲಾಯಿತು. ಕನ್ನೋಜದ ದೊರೆಯೇ ಭಾರತದ ದೊರೆ ಎಂಬ ಕಲ್ಪನೆ ಬೆಳೆಯಿತು. ಹರ್ಷನ ಬಳಿಕ ಪುಷ್ಯಭೂತಿಯರ ರಾಜ್ಯ ಕೊನೆಗಂಡಿತು.

ನೋಡಿ : ಹರ್ಷವರ್ಧನ–ಸಂಪುಟ ೧

ಪೂರ್ವ ಘಟ್ಟಗಳು

ಕನ್ಯಾಕುಮಾರಿ ಬಳಿಯಿಂದ ಬಂಗಾಳ ಕೊಲ್ಲಿಗೆ ಅಭಿಮುಖವಾಗಿ ಚೋಳಮಂಡಲ ಕರಾವಳಿಯ ಉದ್ದಕ್ಕೂ ಸಾಗಿ, ಒರಿಸ್ಸಾ ಮಹಾನದೀ ಮುಖಜ ಭೂಮಿಯ ವರೆಗೆ ಪೂರ್ವಘಟ್ಟಗಳು ಹಬ್ಬಿವೆ. ಒಟ್ಟು ಉದ್ದ 875 ಮೈಲು. ಇವುಗಳ ಸರಾಸರಿ ಎತ್ತರ 2,500 ಅಡಿ. ನಾಲ್ಕು ಸಾವಿರ ಅಡಿಗಳಿಗೂ ಹೆಚ್ಚು ಎತ್ತರದ ಶಿಖರಗಳೂ ಇವುಗಳಲ್ಲಿವೆ. ದಕ್ಷಿಣದಲ್ಲಿ ನೀಲಗಿರಿ ಪ್ರದೇಶದಲ್ಲಿ ಪಶ್ಚಿಮ ಘಟ್ಟಗಳನ್ನು ಪೂರ್ವ ಘಟ್ಟಗಳು ಸಂಧಿಸುತ್ತವೆ.

ಪೂರ್ವ ಘಟ್ಟಗಳಲ್ಲಿ ಅತ್ಯಂತ ಉನ್ನತ ಶಿಖರ ಮಹೇಂದ್ರಗಿರಿ. ಇದು ಗಂಜಾಂ ಜಿಲ್ಲೆಯಲ್ಲಿದೆ. ಎತ್ತರ 4,916 ಅಡಿ. ಕಾಳಹಂದಿಯಲ್ಲಿರುವ ಕೊಲಾರ್‌ಪಟ್, ಕೊರಾಪಟ್‌ನಲ್ಲಿರುವ ಶಿಮ್ಲಿಗಿರಿ, ಮಯೂರ್ ಭಂಜ್‌ನಲ್ಲಿರುವ ಮೇಘಾಸಿನಿ ಇತರ ಉನ್ನತ ಶಿಖರಗಳು.

ಈ ಘಟ್ಟಗಳಿಗೆ ಸಮಾನಾಂತರವಾದ ಘಟ್ಟಗಳು ಪೆನ್ನಾರ್ ಮತ್ತು ಕೃಷ್ಣಾನದಿಗಳ ನಡುವಿನ ಪ್ರದೇಶದಲ್ಲಿ ಕಾಣಬರುತ್ತವೆ. ಇವರಲ್ಲಿ ನಲ್ಲಮಲೈ ಒಂದು ಮುಖ್ಯ ಶ್ರೇಣಿ. ಶಿವಸಮುದ್ರದ ಬಳಿ ಕಾವೇರಿ ನದಿ ಪೂರ್ವ ಘಟ್ಟಗಳನ್ನು ಎರಡು ಭಾಗಗಳಾಗಿ ಪ್ರತ್ಯೇಕಿಸುವಂತೆ ಹರಿಯುತ್ತದೆ. ಇಲ್ಲಿಂದ ಮುಂದೆ ಹರಿದು ನದಿ ಹೊಗೇನಕಲ್ ಜಲಪಾತವಾಗುತ್ತದೆ.

ಕರ್ನಾಟಕದ ಬಿಳಿಗಿರಿರಂಗನ ಬೆಟ್ಟವೂ ಪೂರ್ವ ಘಟ್ಟಗಳಿಗೆ ಸೇರಿದೆ.

ಪೃಥ್ವೀರಾಜ್ ಕಪೂರ್

ನೋಡಿ : ಸಂಪುಟ ೫

ಪೃಥ್ವೀರಾಜ್ ಚೌಹಾಣ್

ಕಾನ್ಯಕುಬ್ಜದ ರಾಜ ಜಯಚಂದ್ರನ ಮಗಳು ಸಂಯುಕ್ತೆ. ಬಲು ಚೆಲುವೆ. ಜಯಚಂದ್ರ ಮತ್ತು ಆತನ ಬಂಧು ಪೃಥ್ವೀರಾಜನ ನಡುವೆ ವೈರಭಾವವಿತ್ತು. ಮಗಳ ಸ್ವಯಂವರಕ್ಕೆ ಜಯಚಂದ್ರ ಪೃಥ್ವೀರಾಜನನ್ನು ಆಹ್ವಾನಿಸಲಿಲ್ಲ. ಆತನನ್ನು ಅವಮಾನಗೊಳಿಸಬೇಕೆಂದು ಆತನ ಪ್ರತಿಮೆಯನ್ನು ಮಾಡಿಸಿ ಕಾವಲುಗಾರನಂತೆ ಬಾಗಿಲಿನಲ್ಲಿ ಇಡಿಸಿದ.

ಪೃಥ್ವೀರಾಜನಲ್ಲಿ ಅನುರಕ್ತಳಾಗಿದ್ದ ಸಂಯುಕ್ತೆ ಅಲ್ಲಿ ಸೇರಿದ್ದ ರಾಜಪುತ್ರರನ್ನು ಬಿಟ್ಟು, ಪೃಥ್ವೀರಾಜನ ಪ್ರತಿಮೆಗೆ ಹಾರ ಹಾಕಿದಳು. ಅಲ್ಲೇ ಹತ್ತಿರದಲ್ಲಿ ಅಡಗಿಕೊಂಡಿದ್ದ ಪೃಥ್ವೀರಾಜ ಸಂಯುಕ್ತೆಯನ್ನು ಒಡನೆಯೇ ಎತ್ತಿಕೊಂಡುಹೋಗಿ, ತನ್ನ ಊರಿನಲ್ಲಿ ಮದುವೆಮಾಡಿಕೊಂಡ. ಈ ಘಟನೆಯಿಂದ ಎರಡು ಮನೆತನಗಳಿಗೂ ಮೊದಲಿನಿಂದ ಇದ್ದ ವೈರ ಮತ್ತಷ್ಟು ಹೆಚ್ಚಿತು.

ದೆಹಲಿಯ ಅರಸ ಅನಂಗಪಾಲನ ಒಬ್ಬ ಮಗಳ ಮಗ ಪೃಥ್ವೀರಾಜ. ಈತ ಚೌಹಾಣ ವಂಶದವನು. ಇವನ ರಾಜಧಾನಿ ಅಜ್ಮೀರ್. ಜಯಚಂದ್ರ, ಇನ್ನೊಬ್ಬ ಮಗಳ ಮಗ. ಅನಂಗಪಾಲ ತೀರಿಕೊಂಡಾಗ ಬಲಿಷ್ಠನಾಗಿದ್ದ ಪೃಥ್ವೀರಾಜ ದೆಹಲಿಯ ರಾಜನೂ ಆದದ್ದು ಜಯಚಂದ್ರನಿಗೆ ಸಹ್ಯವಾಗಲಿಲ್ಲ. ಆ ಕಾರಣದಿಂದ ದ್ವೇಷ ಬೆಳೆಯಿತು.

1191ರಲ್ಲಿ ಮಹಮ್ಮದ್ ಘೋರಿ ಭಾರತದ ಮೇಲೆ ದಾಳಿ ಮಾಡಿದ. ಪೃಥ್ವೀರಾಜ ರಜಪೂತರನ್ನೆಲ್ಲ ಒಟ್ಟುಗೂಡಿಸಿ ಭಾರಿ ಸೈನ್ಯದೊಡನೆ ಸ್ಥಾನೇಶ್ವರದಲ್ಲಿ ಘೋರಿಯೊಡನೆ ಹೋರಾಡಿದ. ವೀರ ರಜಪೂತರ ಶೌರ್ಯವನ್ನು ಎದುರಿಸಲಾರದೆ ವೈರಿಗಳು ಓಡಿ ಹೋದರು. ಆಗ ಜಯಚಂದ್ರ ತಟಸ್ಥನಾಗಿದ್ದ.

ತನ್ನ ಸೋಲಿಗೆ ಪ್ರತೀಕಾರ ಬಯಸಿ ಘೋರಿ ಮರುವರ್ಷ ಮತ್ತೆ ಭಾರತಕ್ಕೆ ಬಂದ. ಈ ಬಾರಿ 1,20,000 ಸುಸಜ್ಜಿತ ಸೈನಿಕರನ್ನು



ಪರಾಕ್ರಮ, ಪ್ರಣಯ :
ಪೃಥ್ವೀರಾಜ್

[illegible] ಗೆದ್ದ. ರಜಪೂತರು ಸೋತರು. ಅನೇಕ ರಜಪೂತರು ಮಡಿದರು. [illegible] ಪೃಥ್ವೀರಾಜನನ್ನು [illegible]

ಪೃಥ್ವೀರಾಜನ ಆಸ್ಥಾನದಲ್ಲಿದ್ದು, ಅವನೊಂದಿಗೆ ಯುದ್ಧದಲ್ಲಿ ಮಡಿದ [illegible] (1125-93) ಪೃಥ್ವೀರಾಜನ ಪರಾಕ್ರಮ, [illegible] ಗಳನ್ನು ಕುರಿತು 'ಪೃಥ್ವೀರಾಜ್ ರಾಸೊ' ಎಂಬ ಕೃತಿ ರಚಿಸಿದ್ದಾನೆ.

ಪೆರಿಪ್ಲಸ್

'ಹಿಂದೂ ಮಹಾಸಾಗರದ ಪ್ರದಕ್ಷಿಣ ಯಾನ' — ಈ ಅರ್ಥವುಳ್ಳ ಒಂದು ಪ್ರಾಚೀನ ಗ್ರೀಕ್ ಬರೆಹ 'ಪೆರಿಪ್ಲಸ್ ಮಾರಿಸ್ ಎರಿತ್ರೇ'

ಈಜಿಪ್ಟಿಗೆ ಬಂದು ನೆಲೆಸಿದ್ದ ಒಬ್ಬ ಅಜ್ಞಾತ ಗ್ರೀಕ್ ನಾವಿಕ ಸುಮಾರು ಕ್ರಿ.ಶ. 80ರಲ್ಲಿ ಭಾರತ ಕರಾವಳಿಯೆಡೆಗೆ ಪ್ರಯಾಣ ಕೈಗೊಂಡ. ತನ್ನ ಅನುಭವವನ್ನು ವಿವರವಾಗಿ ಬರೆದಿಟ್ಟ. ಈ ಬರೆಹಗಳ ಸಂಕಲನ 'ಪೆರಿಪ್ಲಸ್ ಮಾರಿಸ್ ಎರಿತ್ರೇ'. ಹ್ರಸ್ವವಾಗಿ ಇದನ್ನು 'ಪೆರಿಪ್ಲಸ್' ಎಂದು ಕರೆಯುವುದು ವಾಡಿಕೆ.

ಬರ್ಬರಿಕೆ, ಬಾರಿಗಾಜಾ (ಭೃಗುಕಚ್ಛ), ಮುಜಿರಿಸ್, ನೆಲ್ಸಿಂಡ, ಬಕರಾಯ್, ಕೊರಕಾಯ್, ಪುಹಾರ್ (ಕಾವೇರಿ ಪಟ್ಟಣಂ) ಮುಂತಾದ ಪ್ರಾಚೀನ ಬಂದರುಗಳು, ಅಲ್ಲಿ ಹಡಗುಗಳಿರುವ ಸೌಲಭ್ಯ, ಈ ಪ್ರದೇಶಗಳಿಂದ ರಫ್ತಾಗುತ್ತಿದ್ದ ಪದಾರ್ಥ ಮುಂತಾದ ವಿವರಗಳನ್ನು ಈ ಕೃತಿಯಲ್ಲಿ ಕಾಣಬಹುದು. ಇದರಲ್ಲಿ ಹೇಳಿರುವಂತೆ ಮೆಣಸು, ಉತ್ತಮ ದರ್ಜೆಯ ಮುತ್ತುಗಳು, ಆನೆಯ ದಂತ, ರೇಷ್ಮೆಬಟ್ಟೆ, ವಜ್ರ ಮುಂತಾದ ರತ್ನಗಳು ಇಲ್ಲಿಂದ ರಫ್ತಾಗುತ್ತಿದ್ದುವು.

ಸಾಂಬಾರ ಪದಾರ್ಥಗಳು, ಹವಳ, ಬೆಳಗಾಜು, ಹಿತ್ತಾಳೆ, ತವರ, ಸೀಸ, ಮುಂತಾದುವು ಆಮದಾಗುತ್ತಿದ್ದುವು.

ಈ ಕೃತಿಯಲ್ಲಿ ಪ್ರಾಚೀನ ಭಾರತದ ಹಡಗು ನಿರ್ಮಾಣ ಕೇಂದ್ರಗಳನ್ನು ಕುರಿತ ವಿವರವಿದೆ. ಭಾರತದಲ್ಲಿ ಕಟ್ಟಲ್ಪಡುತ್ತಿದ್ದ ಎರಡು ಬಗೆಯ ('ಸಂಗಾರ' ಮತ್ತು 'ಕೊಲಾಂಡಿಯೊ ಫಾಂಟ') ಹಡಗುಗಳ ವರ್ಣನೆಯೂ ಇದೆ.

ಪೆರಿಯಾರ್

ಕೇರಳದ ಪೂರ್ವಭಾಗ ಭಾರಿ ಕಾಡುಗಳಿಂದ ಕೂಡಿದೆ. ಇಲ್ಲಿನ ತೇಕ್ಕಡಿ ಎಂಬ ಪ್ರದೇಶ ವನ್ಯಮೃಗಗಳಿಗೆ ತವರು. ಪೆರಿಯಾರ್ ಅಭಯಾರಣ್ಯ ಇರುವುದೂ ಇಲ್ಲೇ. 260 ಚ. ಮೈಲು ವಿಸ್ತಾರದ ಈ ಪ್ರದೇಶದಲ್ಲಿ ವನ್ಯ ಪ್ರಾಣಿಗಳನ್ನು ಕೊಲ್ಲುವುದು ನಿಷಿದ್ಧ. ಈ ಸುಂದರ ತಾಣದಲ್ಲಿ ವನ್ಯ ಪ್ರಾಣಿಗಳು ಯಾವ ಭಯವೂ ಇಲ್ಲದೆ ತಿರುಗಾಡುವ ದೃಶ್ಯ ಪ್ರವಾಸಿಯ ಕಣ್ಣಿಗೆ ರಸದೌತಣ.

ಕೊಟ್ಟಾಯಂ [illegible] ಪೆರಿಯಾರ್ ಅಭಯಾರಣ್ಯಕ್ಕೆ ಪ್ರಯಾಣ ಮಾಡುವುದೇ ಒಂದು ಅಪೂರ್ವ ಅನುಭವ. ಗುಡ್ಡ ಬೆಟ್ಟಗಳನ್ನು ಬಳಸಿ ಚಹಾ ರಬ್ಬರ್ ತೋಟಗಳನ್ನು ಹಾದು ಈ ರಸ್ತೆ ಮುಂದುವರಿಯುತ್ತದೆ. ಇಲ್ಲಿ ಒಂದೆಡೆ ಪೆರಿಯಾರ್ ನದಿ ಪೆರಿಯಾರ್ ಕೃತಕ ಸರೋವರವನ್ನು ಸೇರುತ್ತದೆ. ಮೂಲತಃ ಮದರಾಸು ರಾಜ್ಯದ ಕೆಲ ಪ್ರದೇಶಗಳಿಗೆ [illegible]

[illegible] ಗರು ಇಲ್ಲಿಗೆ ಬರುತ್ತಾರೆ.

ಕಾಡಿನ ಕೆಲವು ಪ್ರದೇಶಗಳಲ್ಲಿ ಅಧಿಕಾರಿಗಳಿಂದ ಅನುಮತಿ ಪಡೆದು [illegible]

ಪೆರಿಯಾರ್‌ನಿಂದ 12 ಮೈಲು ದೂರದ ಕೂಸೋ ದ್ವೀಪ ಮತ್ತು 20 ಮೈಲು ದೂರದ [illegible]

ಪೇಶ್ವೆ

ಶಿವಾಜಿ ನೇಮಿಸಿದ್ದ ಅಷ್ಟ ಪ್ರಧಾನ ಮಂಡಲಿಯಲ್ಲಿ ಪೇಶ್ವೆಯು ಪ್ರಧಾನ. ಛತ್ರಪತಿ ಶಾಹು 1713ರಲ್ಲಿ ನೇಮಿಸಿದ ಬ್ರಾಹ್ಮಣ ಪೇಶ್ವೆ ಬಾಳಾಜಿ ವಿಶ್ವನಾಥ ತನ್ನ ಕರ್ತವ್ಯ ಶಕ್ತಿಯಿಂದ ಹಾಗೂ ದಕ್ಷತೆಯಿಂದ, ಪೇಶ್ವೆಯೇ ಮರಾಠ ರಾಜ್ಯದ ಪ್ರಮುಖನಾಗುವುದಕ್ಕೆ ಕಾರಣನಾದ. ಬಾಳಾಜಿಯ ಬಳಿಕ ಪೇಶ್ವೆ ಪದವಿ ಆನುವಂಶಿಕವಾಯಿತು.

ಮೊಘಲ್ ಸಾಮ್ರಾಜ್ಯವು ಅಂತಃಕಲಹಗಳಿಂದ ತೊಂದರೆಗೊಳಗಾದ ಕಾಲದಲ್ಲಿ ಅದರ ಲಾಭ ಪಡೆದು ಬಾಳಾಜಿಯು ಮರಾಠರಿಗಾಗಿ ಅನೇಕ ಸವಲತ್ತುಗಳನ್ನು ದೊರಕಿಸಿದ. ಮೊಘಲರ 15,000 ರಾಹುತರ ಸೇನಾನಿಯಾಗಿ ನೇಮಿಸಲ್ಪಟ್ಟು ದಖ್ಖಣದಲ್ಲಿ ಶಾಂತಿ ಸ್ಥಾಪನೆ ಮಾಡುವ ಹಕ್ಕು ಶಾಹುಗೆ ಲಭಿಸಿತು. ಈ ಒಪ್ಪಂದದಿಂದ ದಖ್ಖಣದಲ್ಲಿ ಮರಾಠರ ಅಧಿಕಾರಕ್ಕೆ ಮೊಘಲರ ಮಾನ್ಯತೆ ದೊರೆತಂತಾಯಿತು. 1719ರಲ್ಲಿ ದೆಹಲಿಯಲ್ಲಿ ನಡೆದ ಒಳಜಗಳದಲ್ಲಿ ಮರಾಠರು ನಿರ್ಣಾಯಕ ಪಾತ್ರವಹಿಸಿ, ತಮ್ಮ ಬಲ ಪ್ರತಿಷ್ಠೆಗಳನ್ನು ಹೆಚ್ಚಿಸಿಕೊಂಡರು.



ಪಾಣಿಪತ್ ಪರಾಭವ :
ಬಾಳಾಜಿ ಬಾಜೀರಾವ

1720ರಲ್ಲಿ ಬಾಳಾಜಿಯ ಮಗ ಮೊದಲನೆಯ ಬಾಜಿರಾವ್ ಪೇಶ್ವೆಯಾದ. ಇವನು ಪೇಶ್ವೆಯರಲ್ಲಿ ಅತಿ ಪ್ರಸಿದ್ಧ. ಒಳ್ಳೆಯ ಆಡಳಿತಗಾರನಾಗಿರುವುದರ ಜೊತೆ ಸಮರ್ಥ ಸೇನಾನಿಯೂ ಆಗಿದ್ದುದರಿಂದ ಮರಾಠರ ಸಾಮ್ರಾಜ್ಯ ಇನ್ನಷ್ಟು ವಿಸ್ತರಿಸಿತು. 'ಹಿಂದೂಪದ ಪಾದಷಾಹಿ' ಎಂಬ ಹಿಂದೂ ಸಾಮ್ರಾಜ್ಯದ ಕಲ್ಪನೆಯನ್ನು ಮುಂದಿಟ್ಟು. ಉತ್ತರ ಭಾರತದ ಹಿಂದೂ ರಾಜರ ಸಹಾನುಭೂತಿಯನ್ನೂ ಪಡೆದು, 'ಎರಡನೆಯ ಶಿವಾಜಿ' ಎಂಬ ಗೌರವಕ್ಕೆ ಅವನು ಪಾತ್ರನಾದ.

ಇವನ ಮಗನಾದ ಎರಡನೆಯ ಬಾಳಾಜಿಯು (ಬಾಳಾಜಿ ಬಾಜಿರಾವ್) (1740–61) ತಂದೆಯಷ್ಟು ಸಮರ್ಥನಾಗಿರಲಿಲ್ಲ. ಈತನ ಕಾಲದಲ್ಲಿ ಮೂರನೆಯ ಪಾಣಿಪತ್ ಕದನ (1761) ನಡೆದು ಮರಾಠರ ಅಧಿಕಾರಕ್ಕೆ ಭಾರೀ ಏಟು ಬಿತ್ತು. ಮರಾಠರ ದೌರ್ಬಲ್ಯದ ಲಾಭ ಪಡೆದು ಮೈಸೂರಿನಲ್ಲಿ ಹೈದರಾಲಿ ಅಧಿಕಾರಕ್ಕೆ ಬರಲು ಸಾಧ್ಯವಾಯಿತು. ಆದರೆ ಇವನ ಸೋದರನಾದ ರಘುನಾಥರಾವ್ (ರಘೋಬ) ಸಮರ್ಥ ಸೇನಾನಿಯಾಗಿದ್ದ. ತನ್ನ ಅಣ್ಣನ ಕಾಲದಲ್ಲಿ ಮರಾಠರ ವಿಜಯಿ ಸೇನೆಯನ್ನು ವಾಯುವ್ಯ ಭಾರತದ ಆಚೆ ಅಟಕ್ ನದಿಯವರೆಗೆ ಒಯ್ದ.

ಬಾಳಾಜಿಯ ತರುಣ ಪುತ್ರ ಮಾಧವರಾಯನು ಅತ್ಯಂತ ದಕ್ಷ ಪೇಶ್ವೆಯಾಗಿದ್ದು ನಷ್ಟವಾದ ಮರಾಠರ ಪ್ರತಿಷ್ಠೆಯನ್ನು ತನ್ನ ರಾಜಕಾರಣ ಪಟುತ್ವದಿಂದಲೂ ಶೌರ್ಯದಿಂದಲೂ ಮತ್ತೆ ಗಳಿಸಿದ. ಆದರೆ 1772ರಲ್ಲಿ ತನ್ನ 27ನೆಯ ವಯಸ್ಸಿನಲ್ಲಿ ಅಕಾಲಮರಣಕ್ಕೆ ತುತ್ತಾದ.

ಇವನ ಅನಂತರ ಪಟ್ಟವೇರಿದ ಈತನ ಸೋದರ ನಾರಾಯಣರಾಯನನ್ನು ರಘೋಬನ ಪಕ್ಷದವರು ಕೊಲೆ ಮಾಡಿದರು. ರಘೋಬನು ಪೇಶ್ವೆಯಾದರೂ, ಕೊಲೆಗಡುಕನೆಂಬ ಕಾರಣದಿಂದ ಪೇಶ್ವೆಪಟ್ಟಕ್ಕೆ ಅನರ್ಹನಾದ. ನಾರಾಯಣರಾಯನ ಮರಣದ ಕಾಲಕ್ಕೆ ಗರ್ಭಿಣಿಯಾಗಿದ್ದ ಅವನ ಸತಿ ಹೆತ್ತ ಗಂಡುಮಗು ಸವಾಯ್ ಮಾಧವರಾಯನನ್ನು ಪೇಶ್ವೆ ಎಂದು ಘೋಷಿಸಲಾಯಿತು. ಬಾಳಾಜಿ ಜನಾರ್ದನ ಅಥವಾ ನಾನಾ ಫಡ್ನವಿಸ್ ಪೇಶ್ವೆಯ ಹೆಸರಲ್ಲಿ ಅಧಿಕಾರ ಚಲಾಯಿಸಿದ.

ಸವಾಯ್ ಮಾಧವರಾಯನು 1795ರಲ್ಲಿ ಆತ್ಮಹತ್ಯೆ ಮಾಡಿಕೊಂಡ. ರಘೋಬನ ಮಗ ಎರಡನೆಯ ಬಾಜೀರಾಯನು 1796ರಲ್ಲಿ ಪೇಶ್ವೆಯಾದ. ಈತನ ಅಧಿಕಾರವೂ 1818ರಲ್ಲಿ ಮುಕ್ತಾಯವಾಯಿತು. ಬ್ರಿಟಿಷರ ಕೈಯಲ್ಲಿ ಸೋತ ಇವನು ಕಾನ್ಪುರದ ಬಳಿಯ ಬಿಠೂರಿನಲ್ಲಿ ವಿಶ್ರಾಂತಿ ವೇತನ ಪಡೆದು ಇರತೊಡಗಿದ. 1857ರ ಕ್ರಾಂತಿಯಲ್ಲಿ ಭಾಗವಹಿಸಿದ ನಾನಾಸಾಹೇಬನು ಈತನ ದತ್ತಪುತ್ರ.

ಮಾಧವರಾಯನ (1761–72) ಅನಂತರ ಪೇಶ್ವೆಪಟ್ಟಕ್ಕೆ ನಡೆದ ಒಳಜಗಳದ ಲಾಭ ಪಡೆದು ಸಿಂಧ್ಯ, ಹೋಳ್ಕರ್, ಭೋನ್ಸ್ಲೆ, ಗಾಯಕವಾಡರು ಪ್ರಬಲರಾದರು. ಮರಾಠರ ಒಕ್ಕೂಟ ದುರ್ಬಲವಾಗಿ ಬ್ರಿಟಿಷರ ದಾರಿ ಸುಗಮವಾಯಿತು.

ನೋಡಿ : ನಾನಾ ಫಡ್ನವಿಸ್ ; ನಾನಾಸಾಹೇಬ ; ಪೇಶ್ವೆ ಮಾಧವರಾವ್ ; ಬಾಜೀರಾವ್

ಪೇಶ್ವೆ ಮಾಧವರಾವ್

ಬ್ರಿಟಿಷರ ವಿಜಯಕ್ಕೆ ಮದ್ದುಗುಂಡುಗಳೇ ಕಾರಣ ಎಂದು ಅರಿತು, ತನ್ನ ರಾಜ್ಯದಲ್ಲೂ ಬಂದೂಕು ಮತ್ತು ಗುಂಡುಗಳ ತಯಾರಿಕೆಗೆ ಕಾರಖಾನೆ ಸ್ಥಾಪಿಸಿದವನು ಪೇಶ್ವೆ ಒಂದನೆಯ ಮಾಧವರಾವ್.



ರಾಜ ಕುಮಾರನ ಮರಣ....

ಬಾಲಾಜಿ ಬಾಜೀರಾಯನ ಎರಡನೆಯ ಮಗ ಮಾಧವರಾವ್. ಮೊದಲನೆಯ ಮಗ ವಿಶ್ವನಾಥರಾಯ ಪಾಣಿಪತ್ ಯುದ್ಧದಲ್ಲಿ ಮೃತನಾದ್ದರಿಂದ ಬಾಜೀರಾಯನ ಮರಣಾನಂತರ 17 ವರ್ಷದ ಮಾಧವರಾಯ 1761ರಲ್ಲಿ ಪೇಶ್ವೆಯಾದ. ಇವನ ಚಿಕ್ಕಪ್ಪ ರಘುನಾಥರಾವ್ (ರಘೋಬ) ದಂಡನಾಯಕನಾಗಿದ್ದ. ಆತ ಮಾಧವರಾಯನನ್ನು ಸತಾರಾಕ್ಕೆ ಕರೆದೊಯ್ದು ವಿಧಿಯುಕ್ತವಾಗಿ ಆತನಿಗೆ ಪೇಶ್ವೆಪಟ್ಟ ಕಟ್ಟಿಸಿದ. ರಘುನಾಥರಾಯ ಯುದ್ಧ ವಿಚಕ್ಷಣನಾಗಿದ್ದ. ವಯಸ್ಸಿನಲ್ಲಿ ಅವನಿಗಿಂತ ಚಿಕ್ಕವನಾಗಿದ್ದರೂ ಮಾಧವರಾಯನೂ ಯುದ್ಧ ಕುಶಲಿ. 1763ರಲ್ಲಿ ನಿಜಾಮನೊಡನೆ ನಡೆದ ಯುದ್ಧದಲ್ಲಿ ಮಾಧವರಾಯನ ಯುದ್ಧ ಕೌಶಲ ವ್ಯಕ್ತವಾಯಿತು. ನಿಜಾಮ ಸೋಲು ಅನುಭವಿಸಬೇಕಾಯಿತು.

ಮೈಸೂರಿನ ಹೈದರಾಲಿಯ ಮೇಲೆ ನಡೆದ ಯುದ್ಧದಲ್ಲಿ ಮಾಧವರಾವ್ ತನ್ನ ಯುದ್ಧ ಚಾತುರ್ಯವನ್ನು ತೋರಿಸಿದ. ಅವನ ಈ ಚಾತುರ್ಯದ ಅರಿವು ರಘೋಬನಿಗೆ ಇದ್ದದ್ದರಿಂದಲೇ ಮಾಧವರಾಯನ ತಂಟೆಗೆ ಹೋಗದೆ, ಪೇಶ್ವೆಯಾಗಬೇಕೆಂಬ ತನ್ನ ಆಕಾಂಕ್ಷೆಯನ್ನು ಅದುಮಿಟ್ಟುಕೊಂಡಿದ್ದ. ಇದನ್ನು ಅರಿತಿದ್ದ ಮಾಧವರಾವ್ ರಾಜ್ಯದ ಆಂತರಿಕ ಹಾಗೂ ವಿದೇಶೀ ವ್ಯವಹಾರಗಳನ್ನು ತಾನೇ ನಿರ್ವಹಿಸುತ್ತಿದ್ದ.

ಆಳಿದ್ದು ಅಲ್ಪಕಾಲವಾದರೂ ಮಾಧವರಾವ್ ದಕ್ಷತೆಗೆ ಹೆಸರಾಗಿದ್ದ. ತನ್ನ ಸೈನಿಕರನ್ನು ವಿಶ್ವಾಸದಿಂದ ಕಾಣುತ್ತ ಅವರು ಉತ್ತಮ ಯೋಧರಾಗಿರುವಂತೆ ನೋಡಿಕೊಂಡಿದ್ದ. ಪ್ರಜೆಗಳ ಹಿತವನ್ನೂ ಸಾಧಿಸಿದ್ದ. 1772ರ ನವೆಂಬರ್ 18ರಂದು ಮಾಧವರಾವ್ ನಿಧನನಾದ.

"ಪಾಣಿಪತ್ ಯುದ್ಧಕ್ಕಿಂತಲೂ ಈ ಉತ್ಕೃಷ್ಟ 'ರಾಜಕುಮಾರ'ನ ಮರಣದಿಂದ ಮರಾಠಾ ಸಾಮ್ರಾಜ್ಯಕ್ಕೆ ಹೆಚ್ಚು ಹಾನಿ ಉಂಟಾಯಿತು" ಎಂದು ಒಬ್ಬ ಚರಿತ್ರಕಾರ ಹೇಳಿದ್ದಾನೆ.

ಪ್ರೇಮ್‌ಚಂದ್

ನೋಡಿ : ಸಂಪುಟ ೫

ಪೈಠಣ

ಶಾತವಾಹನ ಸಂತತಿಯಲ್ಲಿ ಒಬ್ಬನಾದ ವಾಸಿಷ್ಠೀ ಪುತ್ರ ಪುಲಮಾಯಿ ಎಂಬ ದೊರೆ ಪ್ರತಿಷ್ಠಾನವನ್ನು ಆಳುತ್ತಿದ್ದ. ಆ ಪ್ರತಿಷ್ಠಾನವೇ ಇಂದಿನ ಪೈಠಣ. ಇದು ಗೋದಾವರಿ ತೀರದಲ್ಲಿದೆ; ಮಹಾರಾಷ್ಟ್ರದ ಔರಂಗಾಬಾದ್ ಜಿಲ್ಲೆಗೆ ಸೇರಿದೆ.

'ಪೆರಿಪ್ಲಸ್' ಎಂಬ ಪ್ರಾಚೀನ ಗ್ರೀಕ್ ಬರೆಹದಲ್ಲಿ ಹಾಗೂ ಟಾಲೆಮಿಯ ಭೂಗೋಳದಲ್ಲಿ ಪೈಠಣದ ಪ್ರಸ್ತಾಪವಿದೆ. ಅವರು ಆಗಿನ ಪ್ರತಿಷ್ಠಾನವನ್ನು ಪೈಠಣ ಅಥವಾ ಬೈಠಣ ಎಂದು ಕರೆದಿದ್ದಾರೆ.

ಪೈಠಣ [illegible] ರಾಜಧಾನಿಯಾಗಿದ್ದ ಕಾಲದಲ್ಲಿ ಅಭ್ಯುದಯ ಸ್ಥಿತಿಯಲ್ಲಿದ್ದಿತು. ಆಗ ಇದು ಸುಪ್ರಸಿದ್ಧ ವ್ಯಾಪಾರಕೇಂದ್ರವಾಗಿತ್ತು; ಪ್ರಮುಖ ವಿದ್ಯಾಕೇಂದ್ರವೂ ಆಗಿತ್ತು. ಧರ್ಮಶಾಸ್ತ್ರ [illegible] 'ಚತುರ್ವರ್ಣ ಚಿಂತಾಮಣಿ'ಯ ಕರ್ತೃ ಹೇಮಾದ್ರಿ ಅಲ್ಲಿನ ನಿವಾಸಿ.

ಮಹಾರಾಷ್ಟ್ರದ ಸಂತಕವಿ ಏಕನಾಥ ಪೈಠಣದವನು.

ಆಧುನಿಕ ಪಟ್ಟಣದ ಪೂರ್ವಕ್ಕೆ ಹಿಂದಿನ ಪೈಠಣದ ಅವಶೇಷಗಳ ದಿಬ್ಬಗಳು ಕಂಡುಬರುತ್ತವೆ. ಏಕನಾಥ ಮಂದಿರ ಮತ್ತಿತರ ಅನೇಕ ದೇವಾಲಯಗಳು ಪೈಠಣದಲ್ಲಿವೆ.

ಪೊಂಗಲ

ನೋಡಿ : ಸಂಕ್ರಾಂತಿ

ಪೋರ್ಟ್ ಬ್ಲೇರ್

ಕೇಂದ್ರಾಡಳಿತ ಪ್ರದೇಶವಾಗಿರುವ ಅಂಡಮಾನ್, ನಿಕೋಬಾರ್ ದ್ವೀಪ ಸಮೂಹದ ರಾಜಧಾನಿ ಪೋರ್ಟ್ ಬ್ಲೇರ್. ಇದು ಜಗತ್ತಿನ ಉತ್ತಮ ಬಂದರುಗಳಲ್ಲಿ ಒಂದು.



ಬರ್ಮೀ ದೇವಾಲಯ—ಪೋರ್ಟ್ ಬ್ಲೇರ್‌ನಲ್ಲಿ

1789ರಲ್ಲಿ ಆರ್ಚಿಬಾಲ್ಡ್ ಬ್ಲೇರ್ ಎಂಬಾತ ಇದನ್ನು ಆಕ್ರಮಿಸಿದ. ಭಾರತದಲ್ಲಿ ಗವರ್ನರ್ ಜನರಲ್ ಆಗಿದ್ದ ಕಾರ್ನ್‌ವಾಲಿಸ್‌ನ ಹೆಸರಿನಲ್ಲಿ ಇದನ್ನು ಆಗ ಪೋರ್ಟ್ ಕಾರ್ನ್‌ವಾಲಿಸ್ ಎಂದು ಕರೆಯುತ್ತಿದ್ದರು. ಇದಕ್ಕೆ ಪೋರ್ಟ್ ಬ್ಲೇರ್ ಎಂಬ ಹೆಸರು ಬಂದದ್ದು 1858ರಲ್ಲಿ. ಆಗಿನಿಂದ 1942ರ ವರೆಗೆ ಗಡೀಪಾರು ಶಿಕ್ಷೆಗೆ ಗುರಿಯಾದ ಇಂಡಿಯಾ ಮತ್ತು ಬರ್ಮಾದ ಅಪರಾಧಿಗಳು ಮತ್ತು ರಾಜಕೀಯ ಬಂದಿಗಳನ್ನು ಇಲ್ಲಿಗೆ ಕಳಿಸುತ್ತಿದ್ದರು.

ಎರಡನೆಯ ಮಹಾಯುದ್ಧ ಕಾಲದಲ್ಲಿ ಇದು 1942-45ರ ವರೆಗೆ ಜಪಾನೀಯರ ವಶದಲ್ಲಿದ್ದಾಗ ಇಲ್ಲಿದ್ದ ಅನೇಕ ಬಂದಿಗಳ ಬಿಡುಗಡೆಯಾಯಿತು. 1950ರಲ್ಲಿ ಪೂರ್ವ ಪಾಕಿಸ್ತಾನದಿಂದ ಭಾರತಕ್ಕೆ ವಲಸೆಬಂದ ಹಲವರಿಗೆ ಪೋರ್ಟ್‌ಬ್ಲೇರ್ [illegible] ಕಲ್ಪಿಸಿಕೊಟ್ಟಿತು.

ಭಾರತೀಯ ನೌಕಾಬಲಕ್ಕೆ ಸೇರಿದ [illegible] ನೌಕಾಕೇಂದ್ರ ಪೋರ್ಟ್ ಬ್ಲೇರ್‌ನಲ್ಲಿದೆ.

ಕಲ್ಕತ್ತೆಯಿಂದ ಪೋರ್ಟ್ ಬ್ಲೇರಿಗೆ ಪ್ರತಿ ವಾರ ವಿಮಾನ ಸಾರಿಗೆ. ಪ್ರತಿ 10 ದಿನಗಳಿಗೊಮ್ಮೆ ಮದರಾಸು ಹಾಗೂ ಕಲ್ಕತ್ತೆಗಳಿಂದ ಹಡಗು ಸಾರಿಗೆ ವ್ಯವಸ್ಥೆ ಇದೆ. ಕಲ್ಕತ್ತೆಯಿಂದ ಇಲ್ಲಿಗೆ 810 ಮೈಲು ; ಮದರಾಸಿನಿಂದ 840 ಮೈಲು.

ಪೋರ್ಟ್ ಬ್ಲೇರ್‌ನ ಜನಸಂಖ್ಯೆ 26, 218.

ನೋಡಿ : ಅಂಡಮಾನ್, ನಿಕೋಬಾರ್, ದ್ವೀಪಗಳು

ಪೋತನ್ ಜೋಸೆಫ್

ಭಾರತೀಯ ಪತ್ರಿಕೋದ್ಯಮದಲ್ಲಿ ವಿಶಿಷ್ಟ ಸ್ಥಾನಪಡೆದ ವ್ಯಕ್ತಿ ಪೋತನ್ ಜೋಸೆಫ್. ಬೆಂಗಳೂರಿನ 'ಡೆಕ್ಕನ್ ಹೆರಾಲ್ಡ್' ದಿನ ಪತ್ರಿಕೆಯ ಸಂಪಾದಕರಾಗಿ ಅವರು ಹತ್ತು ವರ್ಷಗಳಿಗೂ ಹೆಚ್ಚು ಕಾಲ ಬರೆಯುತ್ತಿದ್ದರು. 'ಒಂದು ಕಪ್ ಚಹ ಸವಿಯುತ್ತ' (ಓವರ್ ಎ ಕಪ್ ಆಫ್ ಟೀ) ಅಂಕಣ ಬರೆಹ ಪ್ರಸಿದ್ಧವಾಗಿತ್ತು. ಪತ್ರಿಕೋದ್ಯಮ ಹಾಗೂ ಅದರ ನಿಕಟ ಕ್ಷೇತ್ರಗಳಲ್ಲಿ ಪೋತನ್ ಜೋಸೆಫ್ ಅತಿ ಪರಿಣತರಾಗಿದ್ದರು.

ಪೋತನ್ ಜೋಸೆಫ್ ಭಾರತದ ವಿವಿಧ ಭಾಗಗಳಲ್ಲಿ ಹಲವಾರು ಪತ್ರಿಕೆಗಳಲ್ಲಿ ಸಂಪಾದಕರಾಗಿ ಕೆಲಸ ಮಾಡಿದರು. ಈ ಪತ್ರಿಕೆಗಳು ಬೇರೆ ಬೇರೆ ರಾಜಕೀಯ ಪಕ್ಷ ಪಂಥಗಳಿಗೆ ಸೇರಿದ್ದುವು. ಯಾವುದೇ ವಿಚಾರದಲ್ಲಿ ತಮ್ಮ ಅಭಿಪ್ರಾಯವೇನೇ ಇರಲಿ, ತಾವು ಕೆಲಸ ಮಾಡುತ್ತಿದ್ದ ಪತ್ರಿಕೆಯ ಧೋರಣೆಯನ್ನು ದಕ್ಷತೆಯಿಂದ ಪ್ರತಿಪಾದಿಸುತ್ತಿದ್ದುದು ಪೋತನ್ ಜೋಸೆಫ್ ಅವರ ವಿಶಿಷ್ಟಗುಣ. ಆದ್ದರಿಂದಲೇ ಮುಸ್ಲಿಂ ಲೀಗ್ ಧೋರಣೆಯ 'ಡಾನ್', ರಾಷ್ಟ್ರೀಯತಾ ಧೋರಣೆಯ 'ಬಾಂಬೆ ಕ್ರಾನಿಕಲ್', ಸ್ವತಂತ್ರ ಪಕ್ಷದ ಮುಖಪತ್ರ 'ಸ್ವರಾಜ್ಯ' ದಂಥ ಭಿನ್ನ ಭಿನ್ನ ದೃಷ್ಟಿಯ ಪತ್ರಿಕೆಗಳನ್ನು ಯಶಸ್ವಿಯಾಗಿ ಸಂಪಾದಿಸುವುದು ಅವರಿಗೆ ಸಾಧ್ಯವಾಯಿತು.



ಲೇಖನಿ, ಹೃದಯವಲ್ಲ

ತಮ್ಮನ್ನು ಕೆಲಸಕ್ಕೆ ಸೇರಿಸಿಕೊಂಡವರಿಗೆ ಅವರು ತಮ್ಮ ಶಿಕ್ಷಣವನ್ನು ಒದಗಿಸುತ್ತಿದ್ದರು. ಪ್ರಶಸ್ತಿಯಲ್ಲೂ — ಎಂಬುದು ಅವರನ್ನು ಕುರಿತ ಪುಸ್ತಕ. ಇದು ಪತ್ರಿಕೋದ್ಯಮದಲ್ಲಿ ಅವರ ಕಾರ್ಯದಕ್ಷತೆಯ ಬಗ್ಗೆಯದನ್ನು ನಿರೂಪಿಸುತ್ತದೆ.

ಪೋತನ್ ಜೋಸೆಫ್ 1972ರಲ್ಲಿ ಕಾಲವಾದರು.

ಅವರಿಗೆ ಮರಣೋತ್ತರ ಪದ್ಮಭೂಷಣ ಪ್ರಶಸ್ತಿ ಲಭಿಸಿತು.

ಪೌರವ

"ನಿನ್ನನ್ನು ಹೇಗೆ ಕಾಣಲಿ ?"

"ನನ್ನ ಸ್ಥಾನಮಾನಕ್ಕೆ ತಕ್ಕ ಹಾಗೆ, ರಾಜನಂತೆ"

—ಈ ಪ್ರಶ್ನೋತ್ತರ ಝೀಲಂ ನದಿಯ ಬಳಿ ನಡೆದ ಯುದ್ಧದಲ್ಲಿ ವಿಜಯಿಯಾಗಿದ್ದ ಮ್ಯಾಸಿಡೋನಿಯದ ಅರಸ ಅಲೆಗ್ಸಾಂಡರನಿಗೂ ಅವನಿಗೆ ಸೆರೆ ಸಿಕ್ಕಿದ್ದ ಭಾರತೀಯ ರಾಜ ಪೌರವನಿಗೂ ನಡೆದದ್ದು. ಮೈ ಮೇಲೆ ಅನೇಕ ಗಾಯಗಳಾಗಿ ಬಳಲಿದ್ದರೂ ದರ್ಪದಿಂದ ತಲೆ ಎತ್ತಿ ನಿಂತಿದ್ದ ಪೌರವನ ದಿಟ್ಟ ನಿಲುವು ಅಲೆಗ್ಸಾಂಡರನಿಗೆ ಮೆಚ್ಚುಗೆಯಾಯಿತು. ಪೌರವನನ್ನು ಗೌರವದಿಂದ ಕಂಡ. ಅವನ ರಾಜ್ಯವನ್ನು ಅವನಿಗೆ ಒಪ್ಪಿಸಿದ. ವಿದೇಶೀ ಇತಿಹಾಸಕಾರರು ಪೌರವನನ್ನು 'ಪೋರಸ್' ಎಂದು ಕರೆದಿದ್ದಾರೆ.

ವೇದಕಾಲದಿಂದಲೂ ಇದ್ದ ಪುರು ವಂಶಕ್ಕೆ ಸೇರಿದವನು ಪೌರವ ಎನ್ನುತ್ತಾರೆ. ಝೀಲಂ ಚಿನಾಬ್ ನದಿಗಳ ಮಧ್ಯದ ಪ್ರದೇಶ ಅವನ ರಾಜ್ಯ.

ಸಾಮ್ರಾಜ್ಯ ವಿಸ್ತರಣೆಯ ಉದ್ದೇಶದಿಂದ ಕ್ರಿ. ಪೂ. 326ರಲ್ಲಿ ಅಲೆಗ್ಸಾಂಡರ್ ಭಾರತವನ್ನು ಪ್ರವೇಶಿಸಿದ. ಅವನ ಮುನ್ನಡೆಗೆ ತಡೆ ಹಾಕುವ ಉದ್ದೇಶದಿಂದ, ಅಲೆಗ್ಸಾಂಡರ್ ಝೀಲಂ ನದಿಯ ಎದುರು ದಂಡೆಯ ಬಳಿ ಬೀಡುಬಿಟ್ಟಾಗ ಪೌರವ ತನ್ನ ಸೈನ್ಯದೊಡನೆ ಸಿದ್ಧನಾಗಿದ್ದ : ಅವನ ಸೈನ್ಯದಲ್ಲಿ 30 ಸಾವಿರ ಯೋಧರೂ 4 ಸಾವಿರ ಸವಾರರೂ 300 ರಥಿಕರೂ 200 ಆನೆಗಳೂ ಇದ್ದವು. ಮುಂಚೂಣಿಯಲ್ಲಿ ಆನೆಗಳನ್ನು ನಿಲ್ಲಿಸಿ ಅವುಗಳ ಹಿಂದೆ ಯೋಧರನ್ನು ಪಾರ್ಶ್ವಗಳಲ್ಲಿ ರಥಗಳನ್ನೂ ಅವುಗಳ ಹಿಂದೆ ಅಶ್ವಸೇನೆಯನ್ನೂ ನಿಲ್ಲಿಸಿದ್ದ. ಇಂಥ ಬಲವಾದ ಸೇನೆಯೊಡನೆ ಹೋರಾಡಿ ಗೆಲ್ಲುವುದು ದುಸ್ತರ ಕೆಲಸ ಎಂದು ಭಾವಿಸಿದ ಅಲೆಗ್ಸಾಂಡರ್ ಪೌರವನ ಸೇನೆಯ ಮೇಲೆ ದಾಳಿ ಮಾಡಿದ. ಮಳೆ ಬಂದು ನೆಲ ನೆನೆದು ಕೊಚ್ಚೆಯಾದ್ದರಿಂದ ಪೌರವನ ಪದಾತಿಸೇನೆ ತೀವ್ರವಾಗಿ ಹೋರಾಡಲಾಗಲಿಲ್ಲ ; ಅಶ್ವಾರೂಢರಾಗಿದ್ದ ಅಲೆಗ್ಸಾಂಡರನ ಬಿಲ್ಲಾಳುಗಳ ಹೊಡೆತವನ್ನು ತಡೆಯಲಾಗಲಿಲ್ಲ. ಗಜಸೇನೆ ವೈರಿ ಪಡೆಯನ್ನು ನಷ್ಟಕ್ಕೀಡು ಮಾಡಿತು. ಆದರೆ ವೈರಿಗಳ ಬಾಣ ತಗಲಿ ಗಾಬರಿಯಿಂದ ಆನೆಗಳು ತಮ್ಮ ಸೈನಿಕರ ಮೇಲೆಯೇ ನುಗ್ಗಿ ನಷ್ಟ ಉಂಟುಮಾಡಿದುವು. ಇದರಿಂದಾಗಿ ಪೌರವನಿಗೆ ಸೋಲಾಯಿತು. ಆದರೂ ಹಿಂದೆಗೆಯದೆ ಹೋರಾಡಿದ. ಅವನ ಶೌರ್ಯವನ್ನೂ ಗಾಂಭೀರ್ಯವನ್ನೂ ಅಲೆಗ್ಸಾಂಡರ್ ಮೆಚ್ಚಿಕೊಂಡ.

ಪರಕೀಯರ ದಾಳಿಯ ವಿರುದ್ಧ ದಿಟ್ಟತನದಿಂದ ಹೋರಾಡಿದ ಭಾರತದ ವೀರರಲ್ಲಿ ಪೌರವ ಅಗ್ರಗಣ್ಯ.



" ನನ್ನ ಸ್ಥಾನ ಮಾನಕ್ಕೆ ತಕ್ಕ ಹಾಗೆ, ರಾಜನಂತೆ "

ಫತೇಸಿಂಗ್

ಪಂಜಾಬಿ ಸುಬಾಕ್ಕಾಗಿ ಹೋರಾಡಿದ ಸಂತ್ ಫತೇಸಿಂಗ್ ಸಿಕ್ಖರ ಸರ್ವಾಧಿಕಾರಿ ನಾಯಕ ಎಂದು ಹೆಸರಾದವರು.

1911ರ ಅಕ್ಟೋಬರ್ 27ರಂದು ಅವರ ಜನನ. ಮಹಮ್ಮದೀಯರಾಗಿದ್ದವರು ಸಿಕ್ಖ್ ಮತಾವಲಂಬಿಯಾದರು.

ಫತೇಸಿಂಗ್ ಧಾರ್ಮಿಕ ಕ್ಷೇತ್ರಗಳಲ್ಲಿ ತಮ್ಮ ಚಿಕ್ಕಂದಿನ ದಿನಗಳನ್ನು ಕಳೆದರು : ಮುಂದೆ ಗಂಗಾನಗರದಲ್ಲಿ ನೆಲೆಸಿ ಅಲ್ಲಿ ಅನಾಥಾಶ್ರಮ, ಶಾಲೆ, ಆಸ್ಪತ್ರೆ, ಗುರುದ್ವಾರಗಳನ್ನು ಕಟ್ಟಲು ಪ್ರಯತ್ನ ನಡೆಸಿ ಸಫಲರಾದರು.

ಭಾರತದ ಸ್ವಾತಂತ್ರ್ಯ ಹೋರಾಟದಲ್ಲೂ ಫತೇಸಿಂಗ್ ತುಂಬ ಆಸಕ್ತಿಯಿಂದ ಭಾಗವಹಿಸಿದರು. 1942ರ 'ಕ್ವಿಟ್ ಇಂಡಿಯಾ' ಚಳುವಳಿಯಲ್ಲಿ. ಅನಂತರ 1955ರ ಪ್ರತ್ಯೇಕ ಪಂಜಾಬ್ ರಾಜ್ಯ ಸ್ಥಾಪನೆಗಾಗಿ ನಡೆದ ಚಳುವಳಿಯಲ್ಲಿ, ಸಕ್ರಿಯ ಪಾತ್ರ ವಹಿಸಿದರು.

ಫತೇಸಿಂಗ್ ಪಂಜಾಬಿನ ಮನೆಮಾತಾದದ್ದು 1960ರ ಅನಂತರ. 'ಪ್ರತ್ಯೇಕ ಪಂಜಾಬ್' ಪುರಸ್ಕರದಲ್ಲಿ ಉಪವಾಸ ಸತ್ಯಾಗ್ರಹ ನಡೆಸಿ ಭಾರಿ ಜನಪ್ರಿಯತೆ ಗಳಿಸಿದ ಫತೇಸಿಂಗ್, ಮಾಸ್ಟರ್ ತಾರಾಸಿಂಗರ ಅನಂತರ ಪಂಜಾಬಿನ ಏಕಮೇವ 'ಸರ್ವಾಧಿಕಾರಿ' ಎಂದು ಹೆಸರು ಪಡೆದರು.



ಹಿರಿಯ ಪ್ರಭಾವ : ಫತೇಸಿಂಗ್

ಇದೇ ಸಮಯಕ್ಕೆ ತಾರಾಸಿಂಗ್ - ಫತೇಸಿಂಗರ ನಡುವೆ ಭಿನ್ನಾಭಿಪ್ರಾಯಗಳು ಉಂಟಾದುವು. 1962 ರಲ್ಲಿ ತಾರಾಸಿಂಗರಿಂದ ಫತೇಸಿಂಗ್ ದೂರವಾಗಿ, ಬೇರೊಂದು ಅಕಾಲಿ ದಳವನ್ನು ಕಟ್ಟಿದರು. ಚಂಡೀಗಡ ಪಂಜಾಬಿಗೆ ಸೇರಬೇಕೆಂದು ನಡೆದ ಚಳುವಳಿಯಲ್ಲಿ ಇವರದೇ ನಾಯಕತ್ವ.

ಫತೇಸಿಂಗರ ಎಲ್ಲ ಉದ್ದೇಶಗಳು ಕೈಗೂಡದಿದ್ದರೂ ಪಂಜಾಬಿನ ರಾಜಕೀಯ, ಸಾರ್ವಜನಿಕ ಕ್ಷೇತ್ರಗಳಲ್ಲಿ ಅವರ ಪ್ರಭಾವ ಹಿರಿದಾದದ್ದು. ಅಪಾರ ಜನಪ್ರಿಯತೆ ಗಳಿಸಿ, ಜನರ ಬೇಡಿಕೆಗಳಿಗೆ ಧ್ವನಿಯಾಗಿದ್ದ ಅವರು 1972ರಲ್ಲಿ ರಾಜಕೀಯ ಕ್ಷೇತ್ರದಿಂದ ನಿವೃತ್ತರಾದರು.

ಫರಕ್ಕಾ ಅಣೆಕಟ್ಟು

ಕಲ್ಕತ್ತಾ ಬಂದರು ಹೂಳಿನಿಂದ ಮುಚ್ಚಿಹೋಗದಂತೆ ಉಳಿಸುವುದಕ್ಕಾಗಿ ನಿರ್ಮಿತವಾದ ಅಣೆಕಟ್ಟು, ಫರಕ್ಕಾ.

ಗಂಗಾನದಿ ತನ್ನ ಮುಖಜ ಭೂಮಿಯಲ್ಲಿ ಎರಡು ಪ್ರಧಾನ ಕವಲುಗಳಾಗಿ ಹರಿಯುತ್ತದೆ. ಒಂದು ಭಾರತದಲ್ಲಿದೆ. ಮತ್ತೊಂದು ಬಾಂಗ್ಲಾ ದೇಶದಲ್ಲಿದೆ. ಭಾರತದ ಕಡೆಯ ನದಿಗೆ ಗಂಗಾ–ಭಾಗೀರಥಿ ಅಥವಾ ಹೂಗ್ಲಿ ಎಂದು ಹೆಸರು. ಬಾಂಗ್ಲಾ ದೇಶದಲ್ಲಿ ಹರಿಯುವ ಕವಲಿಗೆ ಪದ್ಮಾ ಎಂದು ಹೆಸರು. ನವೆಂಬರ್‌ನಿಂದ ಜೂನ್ ವರೆಗೆ ಮಳೆಯಿಲ್ಲದ ಕಾಲದಲ್ಲಿ ಸಮುದ್ರದ ಉಬ್ಬರವಿಳಿತಗಳಿಂದ ಬಹಳಷ್ಟು ಮರಳು ಹೂಗ್ಲಿ ನದೀ ಪಾತ್ರದಲ್ಲಿ ಸೇರಿಕೊಳ್ಳುತ್ತದೆ. ಮರಳಿನ ದಿಬ್ಬಗಳೂ ಉಂಟಾಗುತ್ತವೆ.

ಮರಳನ್ನು ಎತ್ತಿಹಾಕುವುದು ದುಬಾರಿ ಕೆಲಸ. ಈ ರೀತಿ ಮರಳು ಸಮುದ್ರದಿಂದ ಹೂಗ್ಲಿ ನದಿಯ ಪಾತ್ರಕ್ಕೆ ಬರದ ಹಾಗೆ ಮಾಡಬೇಕಾದರೆ ಭಾಗೀರಥಿ–ಪದ್ಮಾನದಿಗಳಾಗಿ ಗಂಗೆ ಕವಲೊಡೆಯುವ ಸ್ಥಳಕ್ಕೆ ಮುಂಚೆ ಕಟ್ಟೆಯನ್ನು ನಿರ್ಮಿಸಿ, ಗಂಗಾನದಿಯ ನೀರು ಹೆಚ್ಚು ಪ್ರಮಾಣದಲ್ಲಿ ಹೂಗ್ಲಿಗೆ ಬರುವಂತೆ ಮಾಡಬೇಕು. ಅದರಿಂದ ಬಲಗೊಂಡ ಪ್ರವಾಹ ಪಾತ್ರದ ಮರಳನ್ನೂ ಹೂಳನ್ನೂ ಕೊಚ್ಚಿಕೊಂಡು ಹೋಗುವಂತಾಗುತ್ತದೆ. ಪದ್ಮಾ ನದೀ ಪ್ರದೇಶದಲ್ಲಿ ಉಪಯೋಗಕ್ಕೆ ಬೇಕಾಗುವಷ್ಟು ನೀರು ಆ ನದಿಯಲ್ಲಿ ಹರಿಯುವಂತಾಗುತ್ತದೆ. ಫರಕ್ಕಾ ಯೋಜನೆಯನ್ನು ರೂಪಿಸಿರುವುದು ಈ ಉದ್ದೇಶ ಸಾಧನೆಗಾಗಿಯೇ.

7,400 ಅಡಿ ಉದ್ದವಿರುವ ಈ ಅಣೆಕಟ್ಟಿನ ಮೇಲೆ ಎರಡು ರೈಲು ಹಾಗೂ ಒಂದು ರಸ್ತೆ ಮಾರ್ಗಗಳಿವೆ. ಅಣೆಕಟ್ಟಿನ ಮೇಲ್ಭಾಗದ ಅಗಲ 10 ಅಡಿ. ಅಣೆಕಟ್ಟಿಗೆ 109 ಬಾಗಿಲುಗಳಿವೆ. ಪ್ರವಾಹಕಾಲದಲ್ಲಿ ಬರುವ ಹೆಚ್ಚಿನ ನೀರನ್ನು ಈ ಜಲಾಶಯದಲ್ಲಿ ಶೇಖರಿಸಿ ಸೂಕ್ತಕಾಲದಲ್ಲಿ ಹೂಗ್ಲಿಗೆ ಬಿಡುವುದು ಈ ಅಣೆಕಟ್ಟಿನ ಉದ್ದೇಶ. ಪ್ರವಾಹ ಕಾಲದಲ್ಲಿ ಈ ಅಣೆಕಟ್ಟಿನಲ್ಲಿ ನೀರು ಶೇಖರಿಸಿದಾಗ ಅದು ಅಕ್ಕಪಕ್ಕದ ಪ್ರದೇಶಗಳ ಮೇಲೆ ನುಗ್ಗಿ ಹಾವಳಿ ಮಾಡದಂತೆ ಏರಿಗಳನ್ನು ಕಟ್ಟಿದ್ದಾರೆ.

ತಾಂತ್ರಿಕ ದೃಷ್ಟಿಯಿಂದ ಅನೇಕ ಸಮಸ್ಯೆಗಳಿದ್ದ ಈ ಅಣೆಕಟ್ಟಿನ ನಿರ್ಮಾಣ ಭಾರತೀಯರಿಂದಲೇ ನಡೆಯಿತು.

ಫ್ರಾಂಕ್ ಆಂಥೊನಿ

ಅಖಿಲ ಭಾರತ ಆಂಗ್ಲೊ–ಇಂಡಿಯನ್ ಸಂಘದ ಪ್ರಧಾನ ಅಧ್ಯಕ್ಷ ಫ್ರಾಂಕ್ ಆಂಥೊನಿ ಪ್ರತಿಭಾನ್ವಿತ ವ್ಯಕ್ತಿ. ಆಂಗ್ಲೊ–ಇಂಡಿಯನ್ ವಿದ್ಯಾ ಶಿಕ್ಷಣ ಸಂಸ್ಥೆಗೂ ಇವರು ಅಧ್ಯಕ್ಷರು. 1942ರಲ್ಲಿ ಅಖಿಲ ಭಾರತ ಹಾಗೂ ಬರ್ಮಗಳ ಆಂಗ್ಲೊ–ಇಂಡಿಯನ್ ಮತ್ತು ವಲಸೆ ಬಂದು ನೆಲೆಸಿದ ಐರೋಪ್ಯರ ಸಂಸ್ಥೆಗೆ ಇವರು ಪ್ರಮುಖರಾಗಿದ್ದರು.

ಫ್ರಾಂಕ್ ರೆಜಿನಾಲ್ಡ್ ಆಂಥೊನಿ 1908 ಸೆಪ್ಟೆಂಬರ್ 25ರಂದು ಜನಿಸಿದರು. ನಾಗಪುರ ವಿಶ್ವವಿದ್ಯಾನಿಲಯ ಮತ್ತು ಲಂಡನಿನಲ್ಲಿ ಪ್ರೌಢ ವ್ಯಾಸಂಗದ ಬಳಿಕ ಬಾರ್–ಅಟ್–ಲಾ ಪದವಿ ಪಡೆದರು. ಇಂಗ್ಲಿಷ್ ಭಾಷೆ, ಸಾಹಿತ್ಯಗಳಲ್ಲಿ ಅವರು ತೋರಿದ ಪ್ರೌಢಿಮೆಗಾಗಿ ವೈಸರಾಯರ ಚಿನ್ನದ ಪದಕ ದೊರೆಯಿತು.



ಆಂಗ್ಲೊ–ಇಂಡಿಯನ್ ನಾಯಕತ್ವ
ಆಂಥೊನಿ

ಅಪರಾಧ ಕಾನೂನು ಬಗೆಗೆ ಮಧ್ಯಪ್ರದೇಶದಲ್ಲಿ ಪ್ರಮುಖ ವಕೀಲ, ವೈಸರಾಯರ ನ್ಯಾಷನಲ್ ಡಿಫೆನ್ಸ್ ಕೌನ್ಸಿಲ್‌ನ ಸದಸ್ಯ, ವಿಶ್ವಸಂಸ್ಥೆಯ ಮಹಾ ಸಭೆಯಲ್ಲಿ 1946ರಲ್ಲಿ ಭಾಗವಹಿಸಿದ ಭಾರತೀಯ ನಿಯೋಗದ ಸದಸ್ಯ, ಕೇಂದ್ರ ಶಾಸನಸಭೆಗೆ 1942 ಹಾಗೂ 1946ರಲ್ಲಿ ಸದಸ್ಯ, 1948, 1957ರ ಕಾಮನ್‌ವೆಲ್ತ್ ಸಂಸದೀಯ ಅಧಿವೇಶನಗಳಿಗೆ ಭಾರತೀಯ ಪ್ರತಿನಿಧಿ –ಹೀಗೆ ಅನೇಕ ಜವಾಬ್ದಾರಿ ಸ್ಥಾನಗಳಲ್ಲಿ ಕೆಲಸ ಮಾಡಿದ ಫ್ರಾಂಕ್ ಆಂಥೊನಿ 1952ರಿಂದ ಲೋಕಸಭೆಗೆ ನಾಮಕರಣ ಸದಸ್ಯರು.

ಫ್ರಾಂಕ್ ಆಂಥೊನಿ ಅವರು ಭಾರತದ ವರಿಷ್ಠ ನ್ಯಾಯಾಲಯದ ವಕೀಲರು; ಉತ್ತಮ ವಾಗ್ಮಿ.

ಫ್ರಾಂಕ್ ಮೊರೇಸ್

1938–72ರ ವರೆಗೆ ಭಾರತದ ಪತ್ರಿಕೋದ್ಯಮದ ಕ್ಷೇತ್ರದಲ್ಲಿ ಪ್ರಮುಖರಾಗಿದ್ದವರು ಫ್ರಾಂಕ್ ಮೊರೇಸ್.

ಮುಂಬಯಿಯಲ್ಲಿ 1907 ನವೆಂಬರ್ 12ರಂದು ಜನನ. ತಂದೆ ಆಂಥೊನಿ. ತಾಯಿ ಹೆಲ್ಗಿಯೆಟ್ಟ. ಮುಂಬಯಿಯ ಸೇಂಟ್ ಝೇವಿಯರ್ ಕಾಲೇಜು ಹಾಗೂ ಲಂಡನಿನ ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯಗಳಲ್ಲಿ ಪ್ರೌಢ ವಿದ್ಯಾಭ್ಯಾಸ. ಬಾರ್–ಅಟ್–ಲಾ ಪದವಿ ಪಡೆದರೂ ನ್ಯಾಯವಾದಿಯಾಗಲಿಲ್ಲ. ಇವರು ಭಾರತೀಯ ಪತ್ರಿಕೋದ್ಯಮ ರಂಗಕ್ಕಿಳಿದರು.

ಮೊದಲ ಎಂಟು ವರ್ಷ (1938–46) 'ಟೈಮ್ಸ್ ಆಫ್ ಇಂಡಿಯಾ'ದ ಸಹಾಯಕ ಸಂಪಾದಕ, 1946–50ರಲ್ಲಿ 'ಟೈಮ್ಸ್ ಆಫ್ ಸಿಲೋನ್'

ಸಂಪಾದಕ; ಬರ್ಮ-ಚೀನ ಯುದ್ಧದಲ್ಲಿ (1942–45) ಸಮರ ವರದಿಗಾರ. ಮತ್ತೆ ಎರಡು ವರ್ಷ 'ಟೈಮ್ಸ್ ಆಫ್ ಇಂಡಿಯಾ'ದಲ್ಲಿ ಕೆಲಸ; ಅನಂತರ ಸ್ವಲ್ಪ ಕಾಲ 'ನ್ಯಾಷನಲ್ ಹೆರಾಲ್ಡ್' ಮತ್ತು 'ಟೈಮ್ಸ್ ಆಫ್ ಇಂಡಿಯಾ' ಸಂಪಾದಕ ಹುದ್ದೆ —ಹೀಗೆ ಮೊರೇಸ್ ದುಡಿದರು. 1957–72ರ ವರೆಗೆ ಹದಿನೈದು ವರ್ಷಕಾಲ 'ಇಂಡಿಯನ್ ಎಕ್ಸ್‌ಪ್ರೆಸ್' ದಿನಪತ್ರಿಕೆಯ ಪ್ರಧಾನ ಸಂಪಾದಕರಾಗಿದ್ದರು.



ವಿರಾಮವಿಲ್ಲದ ಲೇಖನಿ...

ಅವರು ಭಾರತದ ಪ್ರೆಸ್ ಕ್ಲಬ್ ಸದಸ್ಯ. ಕೊರಿಯಾದ ಪ್ರೆಸ್ ಸೆಂಟರಿನ ಗೌರವ ಸದಸ್ಯರೂ ಆಗಿದ್ದಾರೆ. ಅವರದು ವಿರಾಮವಿಲ್ಲದ ಲೇಖನಿ. ಅವರ ಹಲವಾರು ಗ್ರಂಥಗಳು ಪ್ರಕಟವಾಗಿವೆ. ಅವುಗಳಲ್ಲಿ ಕೆಲವು: 'ಮಾವೋ ಚೀನಾದ ಬಗೆಗೆ ವರದಿ', 'ಟಿಬೆಟ್‌ನಲ್ಲಿ ದಂಗೆ', 'ಇಂದಿನ ಭಾರತ', 'ಜವಾಹರಲಾಲ ನೆಹರೂ'.

'ಇಂಡಿಯನ್ ಎಕ್ಸ್‌ಪ್ರೆಸ್' ಪತ್ರಿಕೆ ಸಂಪಾದಕತ್ವದಿಂದ ನಿವೃತ್ತರಾದ ಮೇಲೆ 1973ರಲ್ಲಿ ಇಂಗ್ಲೆಂಡಿಗೆ ಹೋದರು. ಅಲ್ಲೇ ತಮ್ಮ ಪತ್ರಿಕೋದ್ಯಮವನ್ನು ಮುಂದುವರಿಸುತ್ತಿದ್ದಾರೆ.

ಫಾಲ್ಕೆ

ನೋಡಿ : ಸಂಪುಟ ೫



ದಾದಾ ಸಾಹೇಬ ಫಾಲ್ಕೆ ಸ್ಮರಣೆ ಅಂಚೆ ಚೀಟಿ

ಫಾಹಿಯಾನ

ತನ್ನ ಧರ್ಮದ ಮೂಲ ಸ್ಥಾನವನ್ನು ಕಾಣಬೇಕೆಂದು ಭಾರತಕ್ಕೆ ಬಂದ ಬೌದ್ಧಭಿಕ್ಷು ಫಾಹಿಯಾನ್. ಈ ಶ್ರದ್ಧಾಳು, ವಿದ್ವಾಂಸ, ಬೌದ್ಧ ದೇಶಗಳ ಯಾತ್ರೆಯಲ್ಲಿ ತನ್ನ ಬಾಳಿನ ಹದಿನೈದು ವರ್ಷ ಕಳೆದ. ಇವನು ಭಾರತಕ್ಕೆ ಬಂದಾಗ ಇಲ್ಲಿ ಗುಪ್ತರ ಸುವರ್ಣಯುಗ —ಎರಡನೇ ಚಂದ್ರಗುಪ್ತ ದೊರೆಯ ಆಳ್ವಿಕೆ —ನಡೆದಿತ್ತು.

ಚೀನದ ಷಾಂಸಿ ಪ್ರಾಂತದಲ್ಲಿ ಜನಿಸಿದ ಕುಂಗ್ ಬಾಲ್ಯದಲ್ಲೇ ಬೌದ್ಧ ಸಂಘಾರಾಮಕ್ಕೆ ಸೇರಿದ. ಆಗ ಅವನ ಹೆಸರು ಫಾಹಿಯಾನ್ (ಧರ್ಮಜ್ಯೋತಿ) ಎಂದು ಮಾರ್ಪಟ್ಟಿತು. 'ಶಾಕ್ಯಪುತ್ರ ಫಾಹಿಯಾನ್' ಎಂದೂ ಉಲ್ಲೇಖವಿದೆ. ಇವನೇ ಸ್ವಾಯಂಭು ಪುರಾಣದಲ್ಲಿ ಹೆಸರಿಸಲ್ಪಟ್ಟ 'ಪ್ರಾಹೂಣಿಕ' ಎಂದು ಕೆಲ ಮಂದಿ ಸಂಶೋಧಕರ ಊಹೆ.

ಸಂಘಾರಾಮದಲ್ಲಿ ಅಭ್ಯಾಸ ಮಾಡಿದ ಫಾಹಿಯಾನ್ ತನ್ನ 20ನೆಯ ವಯಸ್ಸಿನಲ್ಲೇ ಅಸಾಮಾನ್ಯ ಪಂಡಿತ ಎನಿಸಿಕೊಂಡ. ತಾನು ಓದಿದ 'ವಿನಯ ಪಿಟಕ' ಅಸಂಪೂರ್ಣ ಎನಿಸಿದಾಗ ನಿಜವಾದ ಧರ್ಮ ಸೂತ್ರಗಳನ್ನು ಅರಿಯಲು ನಿರ್ಧರಿಸಿದ. ಐದು ವರ್ಷಗಳ ಅನಂತರ (ಕ್ರಿ.ಶ. 399ರಲ್ಲಿ) ಕೆಲವು ಬೌದ್ಧ ಭಿಕ್ಕುಗಳ ಜೊತೆಯಲ್ಲಿ ಭಾರತಕ್ಕೆ ಹೊರಟ. ಕಾಲ್ನಡಿಗೆಯಲ್ಲೇ ಸಂಚಾರ ಕೈಗೊಂಡು ಪ್ರಯಾಸದಿಂದ ಗೋಬಿ ಮರುಭೂಮಿ ದಾಟಿದ; ಭಾರತದ ವಾಯವ್ಯ ಪ್ರದೇಶ ಸೇರಿದ. ಉದ್ಯಾನ, ಅನಂತರ ಗಾಂಧಾರ ದಾಟಿ ತಕ್ಷಶಿಲೆಗೆ ಬಂದ.

ಫಾಹಿಯಾನ್ 402ರಿಂದ 411ರ ವರೆಗೆ ಭಾರತದಲ್ಲಿ ಪ್ರವಾಸ ಮಾಡಿದ. ಈ ಅವಧಿಯಲ್ಲಿ ಅವನು ಬುದ್ಧನ ಜೀವನಕ್ಕೆ ಅದರ ಐತಿಹ್ಯಗಳಿಗೆ ಸಂಬಂಧಿಸಿದ ಕ್ಷೇತ್ರಗಳ ಯಾತ್ರೆ ಮಾಡಿದ. ತಾನು ಭೇಟಿಕೊಟ್ಟ ಪ್ರದೇಶಗಳ ಜನರ ಜೀವನವನ್ನು ಅರಿತುಕೊಂಡ.

ಫಾಹಿಯಾನ್, ಸುಪ್ರಸಿದ್ಧ ಬೌದ್ಧಗುರು ಕುಮಾರಜೀವನ ಶಿಷ್ಯ. ಅವನು ಭಾರತಕ್ಕೆ ಯಾತ್ರೆ ಹೊರಟಾಗ ಕುಮಾರಜೀವ "ನೀನು ಭಾರತದಲ್ಲಿರುವಾಗ ಧಾರ್ಮಿಕ ವಿಚಾರಗಳಲ್ಲೇ ನಿನ್ನ ಕಾಲವನ್ನೆಲ್ಲ ಕಳೆಯಬೇಡ. ಅವರ ಜೀವನ ವಿಧಾನ, ನಡವಳಿಕೆಗಳನ್ನೂ ವಿವರವಾಗಿ ತಿಳಿದುಕೋ. ಇದರಿಂದ ಚೀನದ ಜನರಿಗೆ ಭಾರತ ಮತ್ತು ಭಾರತೀಯರ ಬಗೆಗೆ ತಿಳಿವಳಿಕೆ ಕೊಡಬಹುದು," ಎಂದು ಹೇಳಿದ.

ಫಾಹಿಯಾನ್ ತನ್ನ ಗುರುವಿನ ಈ ಆದೇಶದಂತೆ ನಡೆದುಕೊಂಡನೆಂಬುದಕ್ಕೆ ಅವನ ಕೃತಿಗಳೇ ಸಾಕ್ಷಿ.

"ಉದ್ಯಾನ ಪ್ರದೇಶದಲ್ಲಿ ಪರನಾಡಿನಿಂದ ಬಂದ ಭಿಕ್ಕುಗಳಿಗೆ ಮೂರು ದಿನ ಎಲ್ಲ ಸೌಕರ್ಯಗಳನ್ನೊದಗಿಸಿ ಉಪಚರಿಸುತ್ತಾರೆ. ಅನಂತರ ಭಿಕ್ಕುಗಳೇ ತಮ್ಮ ಊಟ ಉಪಚಾರ ಮಾಡಿಕೊಳ್ಳಬೇಕು. ಸಿಂಧೂನದಿಯನ್ನು ದಾಟಿದ ಅನಂತರ ಸಿಕ್ಕುವ ನಾಡಿನಲ್ಲಿ ಧರ್ಮವನ್ನು ಅರಸಿ ಬಂದ ವಿದೇಶೀಯರಿಗೆ ಆದರದ ಸ್ವಾಗತ ದೊರೆಯುತ್ತದೆ. ಎಲ್ಲ ರಾಜರಿಗೂ ಧರ್ಮದಲ್ಲಿ ಗಾಢನಂಬಿಕೆ; ವಿನಮ್ರರಾಗಿ ಸನ್ಯಾಸಿಗಳನ್ನು ಸತ್ಕರಿಸುತ್ತಾರೆ. ಹಿಮ ಬೀಳದ, ಹಿತಕರ ಹವೆಯ ಮಧ್ಯದೇಶದಲ್ಲಿ ಜನ ಸುಖದಿಂದಿದ್ದಾರೆ. ಇಲ್ಲಿ ಜನಸಂಖ್ಯೆ ಅಪಾರ. ಕಾಯಿದೆ, ನ್ಯಾಯಾಲಯಗಳ ಕಿರಿಕಿರಿ ಇಲ್ಲ. ಸರಕಾರಕ್ಕೆ ಆಸ್ತಿಪಾಸ್ತಿ ವಿವರ ಕೊಡಬೇಕಾಗಿಲ್ಲ. ಸಾಗುವಳಿ ಮಾಡಿದ್ದಕ್ಕೆ ಅಲ್ಪ ಕಂದಾಯ ಸಲ್ಲಿಸಬೇಕು. ಮರಣ ದಂಡನೆ ಅಥವಾ ದೈಹಿಕ ಶಿಕ್ಷೆಗಳೇ ಇಲ್ಲ. ದಂಗೆಕೋರರಿಗೆ ಕೈಕತ್ತರಿಸುವುದೇ ದಂಡನೆ. ಪ್ರಾಣಿ ಹಿಂಸಕರಾದ ಚಂಡಾಲರು ಮಾತ್ರ ಮದ್ಯ ಮಾಂಸ ಭಕ್ಷಕರು. ಶ್ರೀಮಂತರು ಉಚಿತ ವೈದ್ಯಾಲಯ, ಅನ್ನಸತ್ರ ಕಟ್ಟಿಸಿದ್ದಾರೆ." ಎಂದಿದ್ದಾನೆ ಫಾಹಿಯಾನ್.

ಮಥುರೈ, ಕನ್ನೌಜ್, ಶ್ರಾವಸ್ತಿ, ಸಾರನಾಥ, ಗಯಾ, ವಾರಾಣಸಿಗಳನ್ನು ಕಂಡ ಅವನು ಪಾಟಲಿಪುತ್ರಕ್ಕೆ ಹೋಗಿದ್ದ. ಸುಮಾರು 8 ಶತಮಾನಗಳ ಹಿಂದಿನ ಅಶೋಕನ ಅರಮನೆಯನ್ನು ಕಂಡು, "ಈ ಅದ್ಭುತ ಅರಮನೆಯನ್ನು ಮಾನವರಲ್ಲ, ದೇವತೆಗಳೇ ದೊಡ್ಡ ದೊಡ್ಡ ಕಲ್ಲುಗಳಿಂದ ಕಟ್ಟಿರಬೇಕು. ಇಂಥ ಸುಂದರ ಕೆತ್ತನೆ, ಕುಸುರಿ ಕೆಲಸಗಳು ಮಾನವ ಹಸ್ತದಿಂದ ಅಸಾಧ್ಯ," ಎಂದು ಪ್ರಶಂಸಿಸಿದ್ದಾನೆ.

ಫಾಹಿಯಾನ್ ಭಾರತದಲ್ಲಿದ್ದಾಗ ಬೌದ್ಧ ಪಂಡಿತರೊಡನೆ ಚರ್ಚೆ ನಡೆಸಿದ. ಇಲ್ಲಿನ ಶ್ರಮಣರ ಘನತೆ ಪಾಂಡಿತ್ಯಗಳನ್ನು ಕಂಡು, "ನನಗೆ ಬುದ್ಧನ ಸ್ಥಿತಿ ಬರುವ ವರೆಗೆ ಚೀನದಲ್ಲಿ ಮರುಜನ್ಮ ಬೇಡ". ಎಂದು ಭಾರತದಲ್ಲೇ ಮತ್ತೆ ಜನಿಸಬಯಸಿದ.

ಮಧ್ಯ ಭಾರತದ ಮಹಾಯಾನ ಮತ ವಿಹಾರದಲ್ಲಿ ಮಹಾ ಸಾಂಘಿಕ ನಿಯಮಗಳ ಸಹಿತವಾದ ವಿನಯ ಪಿಟಕದ ಒಂದು ಪ್ರತಿ ಅವನಿಗೆ ಸಿಕ್ಕಿತು. ಜೊತೆಗೆ ಇತರ ಗ್ರಂಥಗಳನ್ನೂ ಪ್ರತಿಮೆ, ಸ್ಮಾರಕ ವಸ್ತುಗಳನ್ನೂ ಸಂಗ್ರಹಿಸಿದ. ತಾಮ್ರಲಿಪ್ತಿ (ಹೂಗ್ಲಿನದಿ ಸಂಗಮ ಸಮೀಪದ ಸ್ಥಳ: ಈಗಿನ ಕಲ್ಕತ್ತೆಗೆ ಹತ್ತಿರ) ಬಂದರಿನಿಂದ ಸಮುದ್ರಯಾನ ಮಾಡಿ ಸಿಂಹಳಕ್ಕೆ ಹೋಗಿ. ಅಲ್ಲಿ ಎರಡು ವರ್ಷ ಕಳೆದು, ಅನಂತರ ಜಾವಾ ಮಾರ್ಗವಾಗಿ

ತನ್ನ ನಾಡಿಗೆ (ಕ್ರಿ. ಶ. 414ರ ಸುಮಾರಿಗೆ) ಹಿಂದಿರುಗಿದ. ತಾನು ತಂದ ಗ್ರಂಥಗಳನ್ನು ಚೀನೀ ಭಾಷೆಗೆ ಅನುವಾದಿಸಿ ತನ್ನ [illegible] ವಯಸ್ಸಿನಲ್ಲಿ ನಿಧನನಾದ.

"ಸಾಮಾನ್ಯ ದೃಷ್ಟಿಯಲ್ಲಿ ಅಮುಖ್ಯವಾದದ್ದನ್ನು ಮುಖ್ಯವೆಂದೂ ಮುಖ್ಯವೆಂದು ಕಾಣುವುದನ್ನು ಅಮುಖ್ಯವೆಂದೂ ಪರಿಗಣಿಸಿದರೆ ಮಾತ್ರ ನಮಗೆ ಸಿದ್ಧಿ ದೊರಕುವುದು ಸಾಧ್ಯ."

ಇದು ಫಾಹಿಯಾನನ ನುಡಿ.

ಫಿರಾಕ್ ಗೋರಖಪುರಿ

20ನೆಯ ಶತಮಾನದ ಶ್ರೇಷ್ಠ ಭಾರತೀಯ ಉರ್ದು ಕವಿಗಳಲ್ಲಿ ಒಬ್ಬರು ಫಿರಾಕ್ ಗೋರಖಪುರಿ.



ಸಂಪ್ರದಾಯ, ಆಧುನಿಕತೆ : ಫಿರಾಕ್

ಆಧುನಿಕ ಮತ್ತು ಸಾಂಪ್ರದಾಯಿಕ ತತ್ತ್ವಗಳೆರಡೂ ಇವರ ಕವಿತೆಯಲ್ಲಿ ಬೆರೆತಿವೆ. ಎಲ್ಲವ ರಲ್ಲೂ ಸೌಂದರ್ಯ ವನ್ನು ಗುರುತಿಸುವ, ಸೌಂದರ್ಯವೇ ದೇವರು. ದೇವರೇ ಸೌಂದರ್ಯ ಎನ್ನುವ ಪಂಥದ ಕವಿ ಅವರು.

ಫಿರಾಕ್ ಗೋರಖಪುರಿಯವರ ನಿಜವಾದ ಹೆಸರು ರಘುಪತಿ ಸಹಾಯ್. ಜನನ ಉತ್ತರ ಪ್ರದೇಶದ ಗೋರಖಪುರದಲ್ಲಿ. 1896ರಲ್ಲಿ. ಇವರದು ಆಗರ್ಭ ಶ್ರೀಮಂತ ಮನೆತನ. ತಂದೆ ಮುನ್ಷಿ ಗೋರಖ್ ಪ್ರಸಾದ್ ವಕೀಲರು. ಭಾರತೀಯ ತತ್ತ್ವಜ್ಞಾನ, ಸಂಸ್ಕೃತ ಸಾಹಿತ್ಯ, ಪಾರಸೀ ಮತ್ತು ಉರ್ದು ಭಾಷೆಗಳಲ್ಲಿ ಅವರು ಪಂಡಿತರು.

ಗೋರಖಪುರಿಯವರಿಗೂ ಇವುಗಳಲ್ಲಿ ಆಸಕ್ತಿ ಹುಟ್ಟಿತು. ಪ್ರಕೃತಿ ಸೌಂದರ್ಯದ ಆರಾಧಕರಾಗಿ ಅವರು ಬೆಳೆದರು.

ಬಿ. ಎ., ಮುಗಿಸಿದ ಕೂಡಲೇ ಅವರಿಗೆ ಸರಕಾರದಲ್ಲಿ ಉನ್ನತ ಹುದ್ದೆ ಕಾದಿತ್ತು. ಆದರೆ ಗೋರಖಪುರಿಯವರು ಗಾಂಧೀಜೀ ಪ್ರಭಾವಕ್ಕೆ ಒಳಗಾಗಿ ಆ ಹುದ್ದೆಯನ್ನು ಬಿಟ್ಟುಕೊಟ್ಟರು. ಕಾಂಗ್ರೆಸ್ಸಿನಲ್ಲಿ ಸಕ್ರಿಯ ಪಾತ್ರ ವಹಿಸಿದರು ; ಬಂಧನಕ್ಕೂ ಒಳಗಾದರು.

ಅಲಹಾಬಾದ್ ವಿಶ್ವವಿದ್ಯಾನಿಲಯದಲ್ಲಿ ಸ್ವಲ್ಪ ಕಾಲ ಇಂಗ್ಲಿಷ್ ಪ್ರಾಧ್ಯಾಪಕರಾಗಿದ್ದರು. ಇವರು ಎಲ್ಲ ತತ್ತ್ವಜ್ಞಾನಗಳಿಂದಲೂ ಧರ್ಮಗಳಿಂದಲೂ ಪ್ರಭಾವಿತರು. ವೈಯಕ್ತಿಕವಾಗಿ ಅವರು ಬಹಳ ನೊಂದಿರುವ ವ್ಯಕ್ತಿ. ಆದರೆ ಆ ನೋವನ್ನು ತಮ್ಮ ಕೃತಿಗಳಲ್ಲಿ ಎಲ್ಲೂ [illegible].

ಫಿರಾಕ್ ಗೋರಖಪುರಿ ಅವರಿಗೆ 1969ರಲ್ಲಿ [illegible] ದೊರೆಯಿತು. 'ಗುಲೆ ನಗ್ಮ' ಅವರ [illegible] ಕೃತಿ.

ಫಿರಿಷ್ತ

ಅಕ್ಬರ್ ಚಕ್ರವರ್ತಿಯ ಸಮಕಾಲೀನನಾಗಿದ್ದ ಒಬ್ಬ ಶ್ರೇಷ್ಠ ಚರಿತ್ರಕಾರ ಮುಹಮದ್ ಖಾಸಿಮ್ ಫಿರಿಷ್ತ. ಅವನು ಬರೆದಿರುವ 'ಫಿರಿಷ್ತನ ಚರಿತ್ರೆ' ಅಥವಾ 'ತರೀಖ್–ಇ–ಫಿರಿಷ್ತ' ಒಂದು ಆಕರ ಗ್ರಂಥ. ವಿಶೇಷವಾಗಿ ದಕ್ಷಿಣದ ಮುಹಮ್ಮದೀಯ ರಾಜರ ಬಗೆಗೆ ಇಂದಿಗೂ ಇದೊಂದು ಮುಖ್ಯ ಬರೆಹ. ವಿಜಯನಗರದ ಸಾಮ್ರಾಜ್ಯದ ಬಗೆಗೂ ನ್ಯೂನಿಜ್ ಬರೆವಣಿಗೆಯನ್ನು ಬಿಟ್ಟರೆ 'ಫಿರಿಷ್ತನ ಚರಿತ್ರೆ' ಒಂದು ಪ್ರಮುಖ ಐತಿಹಾಸಿಕ ಗ್ರಂಥ.

ಫಿರಿಷ್ತನ ಕಾಲ ಸುಮಾರು 1560ರಿಂದ 1620ರ ವರೆಗೆ. ಈತ ಪರ್ಷಿಯದವನು. ಅಹಮದ್‌ನಗರದಲ್ಲಿ ಕಾಪುದಳದ ಮುಖ್ಯಸ್ಥನಾಗಿದ್ದ.

ಬ್ರಿಗ್ಸ್ ಎಂಬ ಆಂಗ್ಲ ಪ್ರಜೆ 'ಭಾರತದಲ್ಲಿ ಮುಹಮ್ಮದೀಯ ರಾಜ್ಯ ಪ್ರಾಬಲ್ಯಕ್ಕೆ ಬಂದುದರ ಇತಿಹಾಸ' ಎಂಬ ಶೀರ್ಷಿಕೆಯಲ್ಲಿ ಫಿರಿಷ್ತನ ಬರೆಹವನ್ನು 1829ರಲ್ಲಿ ಇಂಗ್ಲಿಷಿಗೆ ಅನುವಾದ ಮಾಡಿದ.

ಫಿರೋಜ್ ಷಾ

ಮೊಘಲ್ ಸಾಮ್ರಾಜ್ಯ ಅವನತಿಯ ದಾರಿಹಿಡಿದಿತ್ತು. ಕೊನೆಯ ಚಕ್ರವರ್ತಿ ಎರಡನೆಯ ಬಹದ್ದೂರ್ ಷಾ ದುರ್ಬಲ ಅರಸು. ಆದರೆ ಅದೇ ಮನೆತನದ ಫಿರೋಜ್ ಷಾ (ಉಚ್ಚಾರ : ಫಿರೂಜ್ ಷಾ) 1857ರ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಬ್ರಿಟಿಷರ ವಿರುದ್ಧ ಕಾದಿದ ರೀತಿ ಉಲ್ಲೇಖನೀಯ. ಆಗ ಅವನದು 22ರ ಹರೆಯ.

ಫಿರೋಜ್ ಷಾ ಒಳ್ಳೆಯ ವಿದ್ವಾಂಸ, ಧಾರ್ಮಿಕ ಶ್ರದ್ಧೆಯ ವ್ಯಕ್ತಿ. ಈತ ಮೊದಲನೆಯ ಬಹದ್ದೂರ್ ಷಾನ ಸಂತತಿಯವನು. 1855ರಲ್ಲಿ ಮಕ್ಕ ಸಂದರ್ಶಿಸಿ, 1857 ಮೇ ತಿಂಗಳ ವೇಳೆಗೆ ಮುಂಬಯಿಗೆ ಬಂದಿಳಿದ. ಸ್ವಲ್ಪ ಕಾಲದ ಅನಂತರ ಮಂಡಿಸೋರದಲ್ಲಿ ಈತ ಫಕೀರನ ಉಡುಗೆಯಲ್ಲಿ ಕಾಣಿಸಿಕೊಂಡ. ಬ್ರಿಟಿಷರ ವಿರುದ್ಧ ಪವಿತ್ರಯುದ್ಧ (ಜೆಹಾದ್) ಸಾರಿದ. ಅನೇಕ ಮಂದಿ ಅವನ ಅನುಯಾಯಿಗಳಾದರು. ಅವರು ಮಂಡಿಸೋರನ್ನು ವಶಪಡಿಸಿಕೊಂಡು ಫಿರೋಜ್ ಷಾನನ್ನು ಅರಸನನ್ನಾಗಿ ಮಾಡಿದರು. ನವೆಂಬರ್ ವೇಳೆಗೆ ಸುಮಾರು 18,000 ಜನ ಇವನ ಬೆಂಬಲಕ್ಕೆ ನಿಂತರು. ಇವರು ಬ್ರಿಟಿಷರೊಂದಿಗೆ ಪ್ರಬಲವಾಗಿ ಹೋರಾಡಿದರು.

ಫಿರೋಜ್ ಷಾ ತನ್ನ ಸೈನ್ಯದೊಡನೆ ಆಗ್ರಾ, ಗ್ವಾಲಿಯರ್, ಝಾನ್ಸಿ, ಫರೂಕಾಬಾದ್‌ಗಳಿಗೆ ಹೋಗಿದ್ದನೆಂದೂ ಹೇಳಲಾಗಿದೆ. ಕೆಲವರಿಗೆ ಯುದ್ಧದಲ್ಲಿ ಸಹಾಯ ಮಾಡಿದುದೂ ಉಂಟು. 1858 ಮಾರ್ಚ್‌ನಲ್ಲಿ ಲಖನೌ ರಕ್ಷಣೆಗಾಗಿ ಬೇಗಂ ಹಜರತ್ ಮಹಲಳಿಗೂ ಇವನು ನೆರವು ನೀಡಿದ. ಹೀಗೆ ಅಲ್ಲಿಂದಿಲ್ಲಿಗೆ ಓಡಾಡುತ್ತಲೇ ಇದ್ದ ಇವನ ಪರಿವಾರಕ್ಕೆ ಹಣ ಮತ್ತು ಯುದ್ಧ ಸಾಮಗ್ರಿಗಳ ಅವಶ್ಯಕತೆ ತೀವ್ರವಾಗಿತ್ತು. ಆದರೆ ಬ್ರಿಟಿಷರು ಇವನ ಸುಳಿವು ಸಿಕ್ಕಿದಾಗಲೆಲ್ಲ ಇವನನ್ನು ಸುತ್ತುವರಿಯುತ್ತ [illegible] ಸ್ವಲ್ಪ ಕಾಲದಲ್ಲಿ ಫಿರೋಜ್ ಷಾ [illegible] ಕಾಣಿಸಿಕೊಂಡ. [illegible]

[illegible] ಲಿಲ್ಲ. ಅವನು ಕಾಂದಹಾರ್, ಬೊಖಾರಾ, ಟೆಹರಾನ್, ಕಾಬೂಲ್, ಕಾನ್‌ಸ್ಟಾಂಟಿನೋಪಲ್‌ಗಳಲ್ಲಿ ಸಂಚರಿಸಿದ. 1877 ಜನವರಿ 17ರಂದು ಮಕ್ಕದಲ್ಲಿ ಕಾಲವಾದ.

1857ರ ಸಮರದಲ್ಲಿ ಆಂಗ್ಲರು ಮುಗ್ಧ ಮಕ್ಕಳನ್ನೂ ಸ್ತ್ರೀಯರನ್ನೂ ಕೊಂದುದನ್ನು ಫಿರೋಜ್ ಷಾ ತನ್ನ ಒಂದು ಹೇಳಿಕೆಯಲ್ಲಿ ಖಂಡಿಸಿದ್ದಾನೆ. ಅಷ್ಟು ಸ್ಪಷ್ಟವಾಗಿ, ಧೈರ್ಯವಾಗಿ ಆಂಗ್ಲರ ವರ್ತನೆಯನ್ನು ಆಗಿನವರು ಬೇರೆ ಯಾರೂ ಟೀಕಿಸಿಲ್ಲ.

ಫಿರೋಜ್ ಷಾ ಮೆಹತಾ

' ಮುಂಬಯಿಯ ಅನಭಿಷಿಕ್ತ ಅರಸ ' ಎಂದು ಖ್ಯಾತರಾಗಿ ಅನೇಕ ದಶಕಗಳ ಕಾಲ ಆ ನಗರದ ಉನ್ನತಿಗಾಗಿ ದುಡಿದ ಅತ್ಯಂತ ಜನಪ್ರಿಯ ವ್ಯಕ್ತಿ ಫಿರೋಜ್ ಷಾ ಮೆಹತಾ. ಇವರು ನವಭಾರತದ ನಿರ್ಮಾಪಕರಲ್ಲೊಬ್ಬರು. ಗೋಪಾಲಕೃಷ್ಣ ಗೋಖಲೆ, ಬಾಲಗಂಗಾಧರ ತಿಲಕ್ ಅವರ ಸಮಕಾಲೀನರು.



' ಮುಂಬಯಿಯ.... ಅರಸ '

ಮೆಹತಾ 1845, ಅಗಸ್ಟ್ 4ರಂದು ಮುಂಬಯಿನಲ್ಲಿ ಜನಿಸಿದರು. 1864ರಲ್ಲಿ ಬಿ.ಎ. ಪರೀಕ್ಷೆಯಲ್ಲಿ ತೇರ್ಗಡೆಯಾದರು. ಮುಂದಿನ 6 ತಿಂಗಳಲ್ಲೇ ಎಂ.ಎ. ಪರೀಕ್ಷೆಗೆ ಕಟ್ಟಿ ಉತ್ತೀರ್ಣರಾದರು. ಅದೇ ವರ್ಷ ಇಂಗ್ಲೆಂಡಿಗೆ ಪ್ರಯಾಣಮಾಡಿ ಬಾರ್-ಅಟ್-ಲಾ ಪದವಿ ಪಡೆದು 1868ರಲ್ಲಿ ಭಾರತಕ್ಕೆ ಹಿಂದಿರುಗಿದರು. ವಕೀಲ ವೃತ್ತಿಯೊಡನೆ, ಸಾರ್ವಜನಿಕ ಸೇವೆಯನ್ನೂ ಕೈಗೊಂಡರು.

ಪ್ರೌಢ ಚಿಂತನೆ, ಶೀಘ್ರ ಗ್ರಹಣ ಶಕ್ತಿ, ಸೂಕ್ತ ನಿರ್ಣಯ ಕೈಗೊಳ್ಳುವ ಸಾಮರ್ಥ್ಯಗಳಿಂದಾಗಿ ಅವರು ಸಹಜವಾಗಿಯೇ ನಾಯಕ ಎನಿಸಿಕೊಂಡರು.

1873ರಲ್ಲಿ ಅವರು ಮುಂಬಯಿ ನಗರ ಸಭೆಯ ಸದಸ್ಯರಾಗಿ ಚುನಾಯಿತರಾದರು. ಆಗ ಅವರಿಗೆ ಕೇವಲ 28 ವರ್ಷ. ಮೆಹತಾ ನಗರದ ನೈರ್ಮಲ್ಯಕ್ಕಾಗಿ ಬಹಳ ಶ್ರಮಿಸಿದರು. 1884ರಲ್ಲಿ ನಗರಸಭಾಧ್ಯಕ್ಷರಾಗಿದ್ದರು. ಮುಂಬಯಿಯ ಭವ್ಯ ನಗರ ಸಭಾ ಕಟ್ಟಡದ ಶಂಕುಸ್ಥಾಪನೆಯಾದದ್ದೂ ಈ ಕಾಲದಲ್ಲೇ.

ಮುಂಬಯಿ ನಗರಸಭೆಯ ಚುನಾವಣೆಗಳಲ್ಲದೆ ಭಾರತ ಸ್ವಾತಂತ್ರ್ಯ ಆಂದೋಲನದಲ್ಲೂ ಮೆಹತಾರವರ ಪಾತ್ರ ಗಣನೀಯವಾದದ್ದು. ಭಾರತ ರಾಷ್ಟ್ರೀಯ ಕಾಂಗ್ರೆಸ್ಸಿನ ಸ್ಥಾಪಕರಲ್ಲಿ ಇವರೂ ಒಬ್ಬರು. 1890ರಲ್ಲಿ ಕಲ್ಕತ್ತೆಯಲ್ಲಿ ನಡೆದ ಭಾರತ ರಾಷ್ಟ್ರೀಯ ಕಾಂಗ್ರೆಸ್ಸಿನ ವಾರ್ಷಿಕ ಅಧಿವೇಶನದ ಅಧ್ಯಕ್ಷರಾದರು.

ಫಿರೋಜ್ ಷಾ ಮೆಹತಾ ಸ್ವಭಾವತಃ ಸೌಮ್ಯವಾದಿಗಳು. ಕಾಂಗ್ರೆಸ್ಸಿನ ಆರಂಭಕಾಲದಲ್ಲಿ ಅದು ಅವರ ಪ್ರಭಾವಕ್ಕೆ ಒಳಗಾಗಿತ್ತು. ಬಾಲಗಂಗಾಧರ ತಿಲಕರ ನಾಯಕತ್ವದಲ್ಲಿ ಕಾಂಗ್ರೆಸ್ ಉಗ್ರಪಂಥವನ್ನು ಹಿಡಿದಮೇಲೆ. ಕಾಂಗ್ರೆಸ್ಸಿನಲ್ಲಿ ಮೆಹತಾ ಅವರ ಪ್ರಭಾವ ತಗ್ಗಿತು. 1910ರ ಹೊತ್ತಿಗೆ ಅವರು ಕಾಂಗ್ರೆಸ್ಸಿನಿಂದ ದೂರವಾದರು.

ಮೆಹತಾ ಉತ್ತಮ ಶಾಸಕರು. ಭಾರತ ಶಾಸನಸಭೆಯ ಸದಸ್ಯರಾಗಿ ಅವರು ಭಾರತದ ಹಿತರಕ್ಷಣೆಗೆ ಶ್ರಮಿಸಿದರು. ಅವರ ವಾದ ವೈಖರಿಯಿಂದ ವಿರೋಧಿಗಳು ಬೆರಗಾಗುತ್ತಿದ್ದರು.

ಮೆಹತಾ ಅವರಿಗೆ ರಾಜಕೀಯದಲ್ಲಿದ್ದಂತೆಯೇ ಶಿಕ್ಷಣ ರಂಗದಲ್ಲೂ ಆಸಕ್ತಿ ಇತ್ತು. ಭಾರತ ವಿಶ್ವವಿದ್ಯಾನಿಲಯಗಳ ಅಭಿವೃದ್ಧಿಗಾಗಿ ಅವರು ಶ್ರಮಿಸಿದರು.

ಮುಂಬಯಿ ವಿಶ್ವವಿದ್ಯಾನಿಲಯ 1915 ಮಾರ್ಚ್ ತಿಂಗಳಲ್ಲಿ ಅವರನ್ನು ವೈಸ್‌ಛಾನ್ಸ್‌ಲರ್ ಆಗಿ ಆಯ್ಕೆ ಮಾಡಿತು. ಆ ಹೊತ್ತಿಗೆ ಅವರ ಆರೋಗ್ಯ ಚೆನ್ನಾಗಿರಲಿಲ್ಲ. ಆ ಹೊಣೆಗಾರಿಕೆ ನಿರ್ವಹಿಸುವುದು ಸುಲಭವಾಗಿರಲಿಲ್ಲ. ಜುಲೈಯಲ್ಲಿ ಗೌರವ ಡಾಕ್ಟರೇಟ್ ಪ್ರಶಸ್ತಿ ನೀಡಬೇಕೆಂದು ವಿಶ್ವವಿದ್ಯಾನಿಲಯದವರು ನಿರ್ಧರಿಸಿದರು. ಮೆಹತಾ ಅದಕ್ಕೆ ತಮ್ಮ ಒಪ್ಪಿಗೆಯನ್ನೂ ಸೂಚಿಸಿದ್ದರು. ಆದರೆ ಆ ಗೌರವವನ್ನು ಸ್ವೀಕರಿಸುವ ಮೊದಲೇ 1915 ನವೆಂಬರ್ 5ರಂದು ಅವರು ಕಾಲವಾದರು.

ಮೆಹತಾರವರ ನಿಧನಕ್ಕಾಗಿ ಇಡೀ ರಾಷ್ಟ್ರ ಶೋಕಿಸಿತು.

ಫಿಲ್ಮ್ ಮತ್ತು ಟೆಲಿವಿಷನ್ ಇನ್‌ಸ್ಟಿಟ್ಯೂಟ್

ಭಾರತೀಯ ಚಲಚ್ಚಿತ್ರ ಉದ್ಯಮದ ಎಲ್ಲ ವಿಭಾಗಗಳಲ್ಲಿ ಕ್ರಮಬದ್ಧ ತರಬೇತಿ ನೀಡುವ ಸಂಸ್ಥೆ, ಪುಣೆಯಲ್ಲಿರುವ ಫಿಲ್ಮ್ ಮತ್ತು ಟೆಲಿವಿಷನ್ ಇನ್‌ಸ್ಟಿಟ್ಯೂಟ್.

1961 ಮಾರ್ಚ್ 20ರಂದು ಫಿಲ್ಮ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ ಆರಂಭವಾಯಿತು. ಚಲಚ್ಚಿತ್ರಗಳ ತಾಂತ್ರಿಕ ತರಬೇತಿ ಉತ್ತೀರ್ಣರಾದವರಿಗೆ ಡಿಪ್ಲೊಮಾ ನೀಡಿಕೆ, ಭಾರತದಲ್ಲಿ ಚಲಚ್ಚಿತ್ರ ತಂತ್ರಜ್ಞರ ಶಿಕ್ಷಣಕ್ಕಾಗಿ ಸೂಕ್ತ ಯೋಜನೆಗಳ ಸಮನ್ವಯ, ಭಾರತ ಹಾಗೂ ವಿದೇಶಗಳಲ್ಲಿ ತಯಾರಾದ ಮಹತ್ವದ ಚಲಚ್ಚಿತ್ರಗಳ ಸಂಗ್ರಹ —ಇವು ಸಂಸ್ಥೆಯ ಮುಖ್ಯ ಉದ್ದೇಶಗಳು. ಪ್ರೌಢ ನಿರ್ದೇಶನ, ಚಲಚ್ಚಿತ್ರಕ್ಕೆ ಸಂಬಂಧಪಟ್ಟಂತೆ ಪಾತ್ರಾಭಿನಯ, ಚಿತ್ರಕಥೆ, ಫೋಟೊಗ್ರಫಿ, ಧ್ವನಿಮುದ್ರಣ, ಧ್ವನಿ ಎಂಜಿನಿಯರಿಂಗ್ ಹಾಗೂ ಚಿತ್ರಸಂಕಲನ ಈ ಆರು ವಿಷಯಗಳಲ್ಲಿ 2 ಮತ್ತು 3 ವರ್ಷಗಳ ತರಬೇತಿ ವರ್ಗಗಳಿವೆ. ಈ ಸಂಸ್ಥೆಗೆ ಉಪಕರಣಗಳಿಗಾಗಿ ಯುನೆಸ್ಕೊ ವಿಶೇಷ ಧನ ಸಹಾಯ ನೀಡಿದೆ. ಸ್ಟುಡಿಯೋ ಮತ್ತು ಹೊರಾವರಣ ಚಿತ್ರೀಕರಣ, ಚಿತ್ರದ ನೆಗೆಟಿವ್‌ಗಳ ಸಂಸ್ಕರಣ, ಮುಂತಾದ ಸೌಲಭ್ಯಗಳಿಲ್ಲಿವೆ.

ಸಂಸ್ಥೆಯಲ್ಲಿ ನ್ಯಾಷನಲ್ ಫಿಲ್ಮ್ ಆರ್ಕೈವ್ಸ್ ಆಫ್ ಇಂಡಿಯಾ (ಭಾರತದ ಚಲಚ್ಚಿತ್ರಾಗಾರ) ಇದೆ. ಭಾರತೀಯ ಹಾಗೂ ವಿದೇಶೀ ಚಿತ್ರಗಳು, ಸಂಬಂಧಪಟ್ಟ ಪುಸ್ತಕಗಳು, ನಿಯತಕಾಲಿಕಗಳು, ಧ್ವನಿಮುದ್ರಿಕೆಗಳು, ಬೃಹತ್ ಭಿತ್ತಿ ಚಿತ್ರಗಳು ಇವನ್ನೆಲ್ಲ ಸಂಗ್ರಹಿಸಿ ಇಡುತ್ತಾರೆ.

1972ರ ಮೊದಲ್ಗೊಂಡು ಟೆಲಿವಿಷನನ್ನು ಕುರಿತ ತರಬೇತಿ ಅಧ್ಯಯನ ಇಲ್ಲಿ ನಡೆಯುತ್ತದೆ.

1974ರಲ್ಲಿ ಗಿರೀಶ್ ಕಾರ್ನಾಡ್ ಈ ಸಂಸ್ಥೆಯ ಅಧ್ಯಕ್ಷರಾದರು.

ಬಂಕಿಮಚಂದ್ರ ಚಟ್ಟೋಪಾಧ್ಯಾಯ

ನೋಡಿ : ಸಂಪುಟ ೫.

ಬಂಗಾಳ

'ವಂಗ' ಶಬ್ದದಿಂದ ಬಂದದ್ದು ಬಂಗಾಳ. ಋಗ್ವೇದ, 'ರಾಮಾಯಣ', 'ಮಹಾಭಾರತ'ಗಳಲ್ಲೂ ಕಾಳಿದಾಸನ ಕೃತಿಗಳಲ್ಲೂ ವಂಗದೇಶದ ಪ್ರಸ್ತಾಪ ಇದೆ. ಕ್ರಿಸ್ತ ಪೂರ್ವ ನಾಲ್ಕನೆಯ ಶತಮಾನದ ಗ್ರೀಕ್ ಯಾತ್ರಿಕ ಮೆಗಾಸ್ತನೀಸ್ ಇಲ್ಲಿ ಒಂದು ಪ್ರಬಲ ರಾಜ್ಯವಿತ್ತೆಂದು ಬರೆದಿದ್ದಾನೆ. ಬೌದ್ಧ, ಜೈನ ಬರೆಹಗಳಲ್ಲಿಯೂ ವಂಗದ ಉಲ್ಲೇಖವಿದೆ.

ಆರ್ಯರು ಬರುವುದಕ್ಕೆ ಮೊದಲು ಬಂಗಾಳದಲ್ಲಿ ದ್ರಾವಿಡ ಸಂಸ್ಕೃತಿ ಇತ್ತು. ಮುಂದೆ ಸಿಂಹಳವನ್ನು ಗೆದ್ದ ವಂಗ ಅರಸುಕುಮಾರ ವಿಜಯಸಿಂಹ ಬಂಗಾಳದವನು. ಇವನು ಆರ್ಯ.

ಪ್ರಾಚೀನ ಬಂಗಾಳದ ಗೌಡ ಹಾಗೂ ಪಾಂಡುವ ನಗರಗಳ ಭಗ್ನಾವಶೇಷಗಳನ್ನು ಈಗಲೂ ಕಾಣಬಹುದು.

ಕ್ರಿಸ್ತ ಪೂರ್ವ ಕಾಲದ ವಿಶಾಲ ಮೌರ್ಯ ಚಕ್ರಾಧಿಪತ್ಯದಲ್ಲಿ ಬಂಗಾಳವೂ ಸೇರಿತ್ತು. ಅನಂತರ ಗುಪ್ತ ಸಾಮ್ರಾಜ್ಯದ ಆಡಳಿತಕ್ಕೆ ಒಳಪಟ್ಟಿತ್ತು. ಹರ್ಷನ ಚಕ್ರಾಧಿಪತ್ಯವೂ ಬಂಗಾಳವನ್ನು ಒಳಗೊಂಡಿತ್ತು.

ಬಂಗಾಳ ಒಂದು ಪ್ರತ್ಯೇಕ ರಾಜ್ಯವಾದದ್ದು ಹರ್ಷನ ಅನಂತರ. ಇದನ್ನು ಆಳಿದವರು ಬೌದ್ಧರಾದ 'ಪಾಲ' ದೊರೆಗಳು. ಮೂರು ಶತಮಾನಗಳಿಗೂ ಹೆಚ್ಚುಕಾಲ ಆಳಿದ ಇವರು ಬಂಗಾಳದ ಸಂಸ್ಕೃತಿಯ ಉತ್ತರೋತ್ತರ ಪ್ರಗತಿ ಸಾಧಿಸಿದರು. ಇವರಲ್ಲಿ ಖ್ಯಾತರಾದವರು ಮಹೀಪಾಲ ಮತ್ತು ರಾಮಪಾಲ. ಪಾಲರು ಕ್ಷೀಣಿಸಿದಾಗ ಬಂಗಾಳ, ವೈಷ್ಣವ ಮತದ ದೊರೆಗಳಾದ ಸೇನರ ಆಡಳಿತಕ್ಕೆ ಒಳಪಟ್ಟಿತು.

1199ರ ಅನಂತರ ಬಂಗಾಳದ ಮೇಲೆ ಮಹಮ್ಮದೀಯರ ದಾಳಿ ಪ್ರಾರಂಭವಾಯಿತು. 13ನೆಯ ಶತಮಾನದಿಂದ 1757ರ ಪ್ಲಾಸೀ ಕದನದ ವರೆಗೆ ಬಂಗಾಳ ಮುಸಲ್ಮಾನರ ಆಡಳಿತಕ್ಕೊಳಗಾಗಿತ್ತು. ರಾಜರನೇಕರು ಬಂಗಾಳೀ ಭಾಷೆಯ ಅಭಿವೃದ್ಧಿಗೆ ನೆರವಾದರು. ತಮ್ಮ ಆಸ್ಥಾನದಲ್ಲಿ ಆ ಭಾಷೆಯನ್ನು ಬಳಸಿದರು. 15–17ನೆಯ ಶತಮಾನದ ಅವಧಿ ಬಂಗಾಳೀ ಸಾಹಿತ್ಯದ ಉತ್ತುಂಗ ಅವಧಿಗಳಲ್ಲಿ ಒಂದು.

1765ರಲ್ಲಿ ಮೊಘಲ್ ಚಕ್ರವರ್ತಿ ಷಾ ಆಲಮ್ ಈಸ್ಟ್ ಇಂಡಿಯಾ ಕಂಪೆನಿಗೆ ಬಂಗಾಳದ ಕರವಸೂಲಿ ಅಧಿಕಾರವನ್ನು ಬಿಟ್ಟುಕೊಟ್ಟ. 1773ರಲ್ಲಿ ಬಂಗಾಳ ಸಂಪೂರ್ಣವಾಗಿ ಬ್ರಿಟಿಷರ ಆಡಳಿತಕ್ಕೆ ಬಂದಿತು.

1905ರ ವಂಗ ವಿಭಜನೆ ಬಂಗಾಳದ ಇತಿಹಾಸದಲ್ಲಿ ಒಂದು ಮುಖ್ಯ ಅಧ್ಯಾಯ. ಇದರ ವಿರುದ್ಧ ಬಂಗಾಳಿಗಳು ಮಾತ್ರವಲ್ಲ ಭಾರತದ ವಿವಿಧ ಭಾಗಗಳ ರಾಷ್ಟ್ರೀಯವಾದಿಗಳು ಪ್ರತಿಭಟಿಸಿದರು. 1912ರಲ್ಲಿ ಬಂಗಾಳ ವಿಭಜನೆ ರದ್ದಾಯಿತು. ಆದರೆ 1947ರಲ್ಲಿ ಭಾರತದ ವಿಭಜನೆಯಾದಾಗ ಬಂಗಾಳ ಮತ್ತೆ ಒಡೆಯಿತು. ಬಂಗಾಳದ ಪಶ್ಚಿಮ ಭಾಗ ಭಾರತದಲ್ಲಿ ಉಳಿಯಿತು. ಪೂರ್ವಭಾಗ ಪೂರ್ವ ಪಾಕಿಸ್ತಾನವಾಯಿತು. 1972ರಲ್ಲಿ ಪೂರ್ವ ಪಾಕಿಸ್ತಾನ ಪಾಕಿಸ್ತಾನದಿಂದ ಬೇರೆಯಾಗಿ, ಸ್ವತಂತ್ರ ಬಾಂಗ್ಲಾದೇಶವಾಗಿ ರೂಪುಗೊಂಡಿತು.

ಭಾರತದಲ್ಲಿ ಬ್ರಿಟಿಷ್ ಆಡಳಿತ ಆರಂಭವಾದ ಮೇಲೆ ಐರೋಪ್ಯ ಸಂಪರ್ಕದಿಂದಾಗಿ ಬಂಗಾಳದಲ್ಲಿ ಜಾಗೃತಿ ಮೂಡಿತು. ಸಾಹಿತ್ಯ, ಕಲೆ, ಸಂಸ್ಕೃತಿಗಳಲ್ಲಿ ನವೋದಯ ಕಾಲ ಆರಂಭವಾಯಿತು. ರವೀಂದ್ರನಾಥ ಠಾಕೂರರು ವಿಶ್ವವಿಖ್ಯಾತರಾದರು. ರಾಷ್ಟ್ರೀಯತಾಭಾವ ಸ್ಫುಟಗೊಂಡಿತು. ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಬಂಗಾಳವೂ ಮಹತ್ವದ ಪಾತ್ರ ವಹಿಸಿತು.

ಈಗಿನ ಪಶ್ಚಿಮ ಬಂಗಾಳ ಅಖಂಡ ಬಂಗಾಳದ ಸುಮಾರು ಮೂರನೆಯ ಒಂದು ಭಾಗ ಮಾತ್ರ.

ನೋಡಿ : ಪಶ್ಚಿಮ ಬಂಗಾಳ ; ಬಾಂಗ್ಲಾದೇಶ; [illegible]

ಬಂಗಾಳ ಕೊಲ್ಲಿ

ಬಹಳ ಹಿಂದೆ ಗೊಂಡವಾನಾ ಖಂಡವೆಂಬ ಭೂಪ್ರದೇಶ ಬಿರಿದಾಗ ಹಿಂದೂಮಹಾಸಾಗರದ ಎರಡು ಅಂಗಗಳು ರೂಪುಗೊಂಡುವು. ಇದರಲ್ಲಿ ಒಂದು, ಭಾರತದ ಪೂರ್ವಕ್ಕಿರುವ ಬಂಗಾಳ ಕೊಲ್ಲಿ ; ಮತ್ತೊಂದು, ಪಶ್ಚಿಮದ ಅರಬಿ ಸಮುದ್ರ.

ಭಾರತದ ಪರ್ಯಾಯ ದ್ವೀಪಭಾಗ, ಬಾಂಗ್ಲಾದೇಶ ಬರ್ಮದ ಅರಕನ್ ಕರಾವಳಿ, ಅಂಡಮಾನ್ ದ್ವೀಪಗಳು, ಸಿಂಹಳ ಇವು ಬಂಗಾಳ ಕೊಲ್ಲಿಯ ಮೇರೆಗಳು. ಗಂಗಾ, ಬ್ರಹ್ಮಪುತ್ರ, ಮಹಾನದಿ, ಗೋದಾವರಿ, ಕೃಷ್ಣಾ, ಕಾವೇರಿ ಹಾಗೂ ಬರ್ಮದ ಇರಾವತಿ ನದಿಗಳು ಬಂಗಾಳ ಕೊಲ್ಲಿಯನ್ನು ಸೇರುವ ಪ್ರಮುಖ ನದಿಗಳು. ಇವುಗಳಿಂದ ಬಂದು ಸೇರುವ ಮೆಕ್ಕಲು ಮಣ್ಣಿನಿಂದಾಗಿ ಬಂಗಾಳ ಕೊಲ್ಲಿಯ ಆಳ ಕಡಮೆ.

ಕೊಲ್ಲಿಯ ಪಶ್ಚಿಮ ಕರಾವಳಿಯಲ್ಲಿ ನೈಸರ್ಗಿಕ ಬಂದರುಗಳಿಲ್ಲ. ಮದರಾಸು ಮತ್ತು ವಿಶಾಖಪಟ್ಟಣಗಳು ಮುಖ್ಯ ಕೃತಕ ಬಂದರುಗಳು. ಪೂರ್ವ ಕರಾವಳಿಯಲ್ಲಿ ಪ್ರಮುಖ ಬಂದರುಗಳಾದ ಚಿತ್ತಗಾಂಗ್ (ಬಾಂಗ್ಲಾ) ಹಾಗೂ ಅಕ್ಯಾಬ್ (ಬರ್ಮ)ಗಳಿವೆ. ಅಂಡಮಾನ್, ನಿಕೋಬಾರ್‌ಗಳು ಈ ಕೊಲ್ಲಿಯ ಮುಖ್ಯ ದ್ವೀಪ ಸಮೂಹಗಳು.

ಬಂಗಾಳಕೊಲ್ಲಿಯ ಮೇಲೆ ಮುಂಗಾರು ಮತ್ತು ಹಿಂಗಾರು ಮಾರುತಗಳು ಬೀಸುತ್ತವೆ. ಮಾರುತಗಳು ದಿಕ್ಕು ಬದಲಾಯಿಸಿದಾಗ ಬಂಗಾಳ ಕೊಲ್ಲಿಯಲ್ಲಿ ಪ್ರಚಂಡ ಬಿರುಗಾಳಿಗಳು ಉಂಟಾಗುತ್ತವೆ.

ಬಂಗಾಳೀ ಭಾಷೆ, ಸಾಹಿತ್ಯ

ಭಾರತಾರ್ಯ ಭಾಷಾ ಕುಟುಂಬಕ್ಕೆ ಸೇರುವ ಬಂಗಾಳೀ ಭಾಷೆ,ಮಾಗಧೀ ಅಪಭ್ರಂಶದಿಂದ ಅವಹಟ್ಟದ ಮೂಲಕ ಉಗಮಗೊಂಡು ಕ್ರಿ. ಶ. 10ನೆಯ ಶತಮಾನದ ವೇಳೆಗೆ ಸ್ಪಷ್ಟರೂಪ ಪಡೆದುಕೊಂಡಿತು.

ವೈದಿಕ ಪ್ರಭಾವದಿಂದ ಬಂಗಾಳೀ ಪ್ರತಿಭೆ ತಪ್ಪಿಸಿಕೊಂಡು ಹೋಯಿತು. ಬೌದ್ಧ ಅನುಭಾವಿಗಳಿಂದ ರಚಿತವಾದ ಚರ್ಯಾಗೀತೆಗಳೆಂಬ ಕೃತಿಗಳಲ್ಲಿ ವೈದಿಕ ವಿರೋಧೀ ಧೋರಣೆಗಳನ್ನು ಪ್ರಕಟಿಸಿತು. ಬಂಗಾಳಿ ಇತರ ವೈದಿಕ ಹಾಗೂ ಸಂಸ್ಕೃತ ಕಾವ್ಯಗಳಂತಲ್ಲದೆ, ಬಂಗಾಳೀ ಕಾವ್ಯ ಸುಮಾರು ಎಂಟು ಶತಮಾನಗಳ ಕಾಲ ಸಂಗೀತದೊಡನೆ ಹೊಂದಿಕೊಂಡೇ ಬೆಳೆಯಿತು.

ಸುಮಾರು 14ನೆಯ ಶತಮಾನದ ವೇಳೆಗೆ ಬಂಗಾಳೀ ಸಾಹಿತ್ಯದಲ್ಲಿ ಹೊಸ ಸೃಷ್ಟ್ಯಾತ್ಮಕ ಧ್ವನಿ ಕೇಳಿಬಂತು. ಜಯದೇವ ಕವಿಯ 'ಗೀತಗೋವಿಂದ' ಕಾವ್ಯದ ನಾದಲಯವನ್ನು [illegible] ಅನುಸರಿಸಿದ ಚಂಡೀದಾಸನ (1417–1477) 'ಕೃಷ್ಣ[illegible]' ಈ

ಹೊಸ ಧ್ವನಿ ಮೂಡಿಸಿದ ಕಾವ್ಯ. ಪುರಾಣದ 'ಮಂಗಲಕಾವ್ಯ' ಗಳಂಥ ಧಾರ್ಮಿಕ ಕಥನಗಳು ಪುರಾಣ ಕಥೆಗಳ ರೂಪದಲ್ಲಿ ಜನರ ಆಕಾಂಕ್ಷೆಗಳನ್ನು ವ್ಯಕ್ತಪಡಿಸಿದುವು. 'ರಾಮಾಯಣ', 'ಭಾಗವತ', 'ಮಹಾಭಾರತ'ಗಳ ಭಾಷಾಂತರಗಳಲ್ಲಿ ಮಧ್ಯಕಾಲೀನ ಬಂಗಾಳೀ ಸಮಾಜದ ಜೀವನದ ರೀತಿಗಳು ಅಭಿವ್ಯಕ್ತಗೊಂಡುವು. ಚೈತನ್ಯದೇವ (1486–1532) ಹೊಸ ಸಂಪ್ರದಾಯ ಪ್ರಾರಂಭಿಸಿದ. ವೈಷ್ಣವ ಗೀತ ಸಾಹಿತ್ಯದಲ್ಲಿ ಗೋವಿಂದದಾಸ (ಸು. 1512) ಮತ್ತು ಜ್ಞಾನದಾಸರು (ಸು. 1530) ಪ್ರಮುಖರೆನಿಸಿದರು. ಜೀವನ ಚರಿತ್ರೆಗಳ ಪ್ರಕಾರದಲ್ಲಿ ಕೃಷ್ಣದಾಸ ಕವಿರಾಜನ 'ಚೈತನ್ಯ ಚರಿತಾಮೃತ' ಬಹು ಕಾಲ ನಿಲ್ಲುವ ಕೃತಿಯಾಯಿತು. ಭರತಚಂದ್ರರಾಯರ (1712–60) 'ಅನ್ನದಾ ಮಂಗಲ್' (1752) ಕೃತಿ ಮತಶ್ರದ್ಧೆಯ ಯುಗದ ಅಂತಿಮ ಘಟ್ಟದಲ್ಲಿ ರಚಿತವಾದವು ; ಇವರಲ್ಲಿ ನಂಬಿಕೆ ಅಪನಂಬಿಕೆಗಳೆರಡೂ ವ್ಯಕ್ತವಾಗಿವೆ.

ಮೈಕೆಲ್ ಮಧುಸೂದನ ದತ್ತ (1824–73)ರ ಅಮಿತ್ರಾಕ್ಷರ ಛಂದಸ್ಸಿನಲ್ಲಿ ಬರೆದ 'ಮೇಘನಾದ ವಧ ಕಾವ್ಯ' ಬಂಗಾಳೀ ಸಾಹಿತ್ಯದಲ್ಲಿ ಮಾನವೀಯತೆ ಮತ್ತು ಆಧುನಿಕತೆಗಳ ಯುಗಕ್ಕೆ ಅಡಿಪಾಯ ಹಾಕಿತು. ರಾಷ್ಟ್ರ ಖ್ಯಾತ ಕಾದಂಬರಿಕಾರ ಬಂಕಿಮಚಂದ್ರ ಚಟ್ಟೋಪಾಧ್ಯಾಯರ (1838–94) 'ಕೃಷ್ಣಕಾಂತನ ಉಯಿಲು' ಕಾದಂಬರಿ ಬಂಗಾಳೀ ಗದ್ಯವನ್ನು ಕಾವ್ಯದ ಮಟ್ಟಕ್ಕೇರಿಸಿತು. ದೀನಬಂಧು ಮಿತ್ರರ (1819–73) 'ನೀಲದರ್ಪಣ' ಮತ್ತು ಗಿರೀಶ್‌ಚಂದ್ರ ಘೋಷರ (1844–1912) 'ಪ್ರಫುಲ್ಲ' ನಾಟಕಗಳು ನಾಟಕಾಭಿರುಚಿಯುಳ್ಳವರ ಹಾಗೂ ಗಣ್ಯರ ಭಾವನೆಗಳನ್ನು ಪ್ರತಿಬಿಂಬಿಸಿದುವು.

ರವೀಂದ್ರನಾಥ ಠಾಕೂರರು (1861–1941) ಸಾಹಿತ್ಯದ ಎಲ್ಲ ಪ್ರಕಾರಗಳಿಗೂ ಹೊಸ ಓಜಸ್ಸನ್ನು ತುಂಬಿದರು. ಅವರ 'ಗೀತಾಂಜಲಿ', 'ರಾಜಾ' ಮತ್ತು 'ಗೋರಾ' ಕೃತಿಗಳು ಠಾಕೂರರು ಕವಿ, ನಾಟಕಕಾರ ಹಾಗೂ ಕಾದಂಬರಿಕಾರರಾಗಿ ಎಷ್ಟು ಪಕ್ವವಾಗಿದ್ದರು ಎಂಬುದನ್ನು ತೋರಿಸುತ್ತವೆ. ಕ್ರಮೇಣ ಬೋಧನಾತ್ಮಕ ಶೈಲಿಯಿಂದ ದೂರವಾದ ಮೇಲೆ, ಠಾಕೂರರು ಅತ್ಯುತ್ತಮ ಆಧುನಿಕ ಬಂಗಾಳೀ ಕವಿಯಾದರು. ಶರತ್ ಚಂದ್ರ ಚಟ್ಟೋಪಾಧ್ಯಾಯರ 'ಚರಿತ್ರಹೀನ' ಮತ್ತು 'ಗೃಹದಾಹ' ಠಾಕೂರರಿಂದ ಪ್ರಭಾವಿತವಾದ ಕಾದಂಬರಿಗಳು. 'ಕಲ್ಲೋಲ' ಪತ್ರಿಕೆಯಲ್ಲಿ ಬರೆಯುತ್ತಿದ್ದ ಠಾಕೂರ್ ನಿಂದಕ ಲೇಖಕರಿಂದಾಗಿ ಜನಪ್ರಿಯವಾದುವು. 'ಕಲ್ಲೋಲ'ದಲ್ಲಿ ಬರೆಯುತ್ತಿದ್ದ ಲೇಖಕರು ಸಹಜತೆ ಮತ್ತು ನವ–ರಮ್ಯತೆಗಳ ಸಾಮರಸ್ಯಕ್ಕೆ ಪ್ರಯತ್ನಿಸಿದರು. ವಿಭೂತಿ ಭೂಷಣ ಬಂದ್ಯೋಪಾಧ್ಯಾಯರ (1898–1950) 'ಆರಣ್ಯಕ', ಪ್ರೇಮೇಂದ್ರ ಮಿತ್ರರ (ಜನನ : 1904) 'ಪಾಂಕ್' ಮತ್ತು ಮಾಣಿಕ ಬಂದೋಪಾಧ್ಯಾಯರ (1910–56) 'ಪದ್ಮಾನದೀರ್ ಮಾಝೀ' ಇಂಥ ಧೋರಣೆಯ ಕೃತಿಗಳು. ಸತೀನಾಥ ಭಾದುಡೀ ಅವರ (1906–1965) 'ಜಾಗ್ರಿಹೀ' ಸ್ವಾತಂತ್ರ್ಯದ ಬಯಕೆಯನ್ನು ಅತ್ಯಂತ ಕಲಾತ್ಮಕ ರೀತಿಯಲ್ಲಿ ಪ್ರತಿಬಿಂಬಿಸುತ್ತದೆ.

ದೇಶಕ್ಕೆ ಸ್ವಾತಂತ್ರ್ಯ ದೊರೆತ 1947ರಲ್ಲಿ ಹೊರಬಂದ ತಾರಾಶಂಕರ ಬಂದೋಪಾಧ್ಯಾಯರ (1898 - 1971) 'ಹಾಂಸುಲೀ ಬಾಂಕೇರ್ ಉಪಕಥಾ' ಪ್ರಾದೇಶಿಕ ವಾಸ್ತವಿಕತೆಯ ವಿಕೃತರೂಪ. ಇದು ಇತರ ಲೇಖಕರಿಗೆ ಮಾದರಿಯಾಯಿತು. ಲೇಖಕವರ್ಗದಲ್ಲಿ ತಮ್ಮ ಸ್ಥಾನವನ್ನು ಭದ್ರಪಡಿಸಿಕೊಂಡಿದ್ದ ಬನಫೂಲ್ (ಜ: 1899), ಅಚಿಂತ್ಯ ಕುಮಾರ್ ಸೇನಗುಪ್ತ (ಜ: 1903), ಅನ್ನದಾ ಶಂಕರ ರಾಯ್ (ಜ: 1904) ಮತ್ತು ಬುದ್ಧದೇವ ಬಸು ಅವರಂಥ ಕಥೆಗಾರರು ಕೂಡ ತಮ್ಮ ರಚನಾತಂತ್ರದಲ್ಲಿ ಮೊದಲಿಗಿಂತ ಹೆಚ್ಚು ಪ್ರಯೋಗಶೀಲತೆಯನ್ನು ಪ್ರದರ್ಶಿಸಿದರು.

ಈ ಧೋರಣೆಯನ್ನು ಜ್ಯೋತಿರಿಂದ್ರ ನಂದಿ (ಜ : 1912), ವಿಮಲ ಕರ್ (ಜ: 1921), ಸಮರೇಶ ಬಸು (ಜ : 1925) ಮತ್ತು ಸುನಿಲ್ ಗಂಗೋಪಾಧ್ಯಾಯ (ಜ :1934)ರ ಕೃತಿಗಳಲ್ಲಿ ಆಧುನಿಕ ಪ್ರಜ್ಞೆ ಪ್ರಬಲ ಆಧುನಿಕ ಸೌಂದರ್ಯಾಭಿರುಚಿಯೊಡನೆ ಬೆರೆತು ಬಲಗೊಂಡಿರುವುದನ್ನು ಕಾಣಬಹುದು. ಕಮಲ ಕುಮಾರ್ ಮಜುಂದಾರ್ (ಜ : 1914) ಮತ್ತು ಶೀರ್ಷೇಂದು ಮುಖೋಪಾಧ್ಯಾಯ (ಜ: 1935)ರು ಕಥನ ಕಲೆಯಲ್ಲಿ ಧಾರ್ಮಿಕ ಭಾವನೆಯನ್ನು ಪುನರುಜ್ಜೀವನಗೊಳಿಸುವ ಪ್ರಯತ್ನ ಮಾಡಿದ್ದಾರೆ. ಸುಧೀಂದ್ರನಾಥದತ್ತ (1901–60)ರ 'ದಶಮೀ' ಜೀವನಾನಂದದಾಸರ (1899-1954) 'ಸಾತ್‌ಟಿ ತಾರಾರ್ ತಿಮಿರ', ಅಮಿಯ ಚಕ್ರವರ್ತಿ (ಜ: 1901)ಅವರ 'ಪಾರಾಪಾರ' ಮತ್ತು ಬಿಷ್ಣು ಡೇ (ಜ: 1909) ಅವರ 'ನಾಮ್ ರೇಖೇಛಿ ಕೋಮಲ್ ಗಾಂಧಾರ' ಕಾವ್ಯಗಳು ದೇಶೀಯ ಪರಂಪರೆಯ ಹಿನ್ನೆಲೆಯಲ್ಲಿ ಸಂಕೇತಾತ್ಮಕ ಅತಿವಾಸ್ತವವಾದದ ಕಡೆಗೆ ವಾಲಿರುವುದನ್ನು ಕಾಣಬಹುದು. ಬಿಜನ ಭಟ್ಟಾಚಾರ್ಯ (ಜ : 1916) ತಮ್ಮ ನಾಟಕಗಳಲ್ಲಿ ಜಾನಪದ ತಂತ್ರಗಳನ್ನು ಬಳಸಿದ್ದಾರೆ. ನವ್ಯಕಾವ್ಯ ಮಾರ್ಗ ಈಗಿನ ಎಲ್ಲ ಸಾಹಿತ್ಯಕ ಪ್ರಕಾರಗಳ ಮೇಲೂ ಪ್ರಭಾವ ಬೀರಿದೆ. ಕ್ರಾಂತಿಕಾರಿ ಕವಿ ನಜ್ರುಲ್ ಇಸ್ಲಾಂ (ಜ : 1899) ಅವರ ಜನಪ್ರಿಯತೆ ಪಶ್ಚಿಮ ಬಂಗಾಳದಿಂದ ಬಾಂಗ್ಲಾದೇಶದ ವರೆಗೆ ಹಬ್ಬಿದೆ.

ಬಂಡೀಪುರ

ಮೈಸೂರು–ಊಟಿ ರಸ್ತೆಯಲ್ಲಿ ಮೈಸೂರಿನಿಂದ ಸುಮಾರು 50 ಮೈಲು ದೂರದಲ್ಲಿದೆ. ಬಂಡೀಪುರ ಅಭಯಾರಣ್ಯ. 22 ಚದರ ಮೈಲು ವಿಸ್ತಾರವಾಗಿರುವ ಇದು ವೇಣುಗೋಪಾಲ ವನ್ಯಪ್ರದೇಶದ ಒಂದು ಭಾಗ; 1941ರಲ್ಲಿ ಅಭಯಾರಣ್ಯವೆಂದು ಘೋಷಿಸಲ್ಪಟ್ಟಿತು.

ಭಾರಿ ಮರಗಳು. ಬಿದಿರು ಮೆಳೆಗಳು. ಕೆರೆಕುಂಟೆಗಳು ಇರುವ ಈ ಕಾಡಿನಲ್ಲಿ ಕಾಡೆಮ್ಮೆ. ಜಿಂಕೆ, ಸಾರಂಗ, ಆನೆ, ಕರಡಿ. ಕಡವೆ. ಚಿರತೆ, ಹುಲಿ

ಕಾಡೆಮ್ಮೆ. ಕಾಡುಕೋಣ





ಸಾರಂಗ — ಬಂಡೀಪುರವಾಸಿ

ಮುಂತಾದ ಪ್ರಾಣಿಗಳು, ನವಿಲು ಮುಂತಾದ ಅನೇಕ ಪಕ್ಷಿಗಳು ತಮಗೆ ಸಹಜವಾದ ಸನ್ನಿವೇಶದಲ್ಲಿ ಜೀವಿಸುವುದನ್ನು ನೋಡಬಹುದು.

ಈ ಅಭಯಾರಣ್ಯದಲ್ಲಿ ಒಟ್ಟು 82 ಮೈಲುಗಳ ರಸ್ತೆ ಜಾಲ ಇದೆ. ಮೋಟರು ವಾಹನದಲ್ಲಿ ಅಥವಾ ಆನೆಯಮೇಲೆ ಕುಳಿತು ಕಾಡಿನ ಮೂಲೆ ಮೂಲೆಗಳಿಗೆ ಹೋಗಿ ಬರಬಹುದು. ಪ್ರಾಣಿಗಳು ನಿತ್ಯ ಹೋಗುವ ಕಾಲ್ದಾರಿಯ ಪಕ್ಕ ಅಥವಾ ನೀರು ಕುಡಿಯಲು ಬರುವ ಕೊಳದ ದಡದಲ್ಲಿ ಮರದ ಮೇಲೆ ಕಟ್ಟಿದ ಅಟ್ಟಣಿಗೆಯಲ್ಲಿ ಕುಳಿತು ಹತ್ತಿರದಿಂದ ವೀಕ್ಷಿಸಬಹುದು. ವರ್ಷದ ಎಲ್ಲ ಕಾಲಗಳಲ್ಲೂ ಬಂಡೀಪುರದ ಪ್ರವಾಸ ಸಾಧ್ಯ. ಆದರೆ ಅಲ್ಲಿಗೆ ಹೋಗಲು ಉತ್ತಮ ಕಾಲ, ಮೇ–ಜೂನ್ ತಿಂಗಳಲ್ಲಿ ಮಳೆ ಬಿದ್ದ ಮೇಲೆ.

ಬಂಡೀಪುರ ಅರಣ್ಯದ ಒಂದು ಅಂಚಿನಲ್ಲಿ ಮೋಯಾರ್ ನದಿಯ ಆಚೆ ತಮಿಳುನಾಡು ರಾಜ್ಯದ ಮುದುಮಲೈ ಅಭಯಾರಣ್ಯವಿದೆ. ವರ್ಷದ ಕೆಲವು ಋತುಗಳಲ್ಲಿ ಒಂದು ಅಭಯಾರಣ್ಯದ ಪ್ರಾಣಿಗಳು ಇನ್ನೊಂದಕ್ಕೆ ಹೋಗಿಬರುವುದೂ ಉಂಟು.

ಬಂಡೀಪುರ ಅಭಯಾರಣ್ಯ ಪ್ರದೇಶದಲ್ಲಿ ಪ್ರವಾಸಿಗರ ಉಪಯೋಗಕ್ಕಾಗಿ ಒಂದು ಪ್ರವಾಸೀ ಮಂದಿರವೂ ಅರಣ್ಯ ಇಲಾಖೆಯ ಮೂರು ವಸತಿ ಗೃಹಗಳೂ ಇವೆ.

ಬಕ್ಷಾಲೀ ಹಸ್ತಪ್ರತಿ

ಪೆಷಾವರ್ ನಗರದ ಬಳಿಯ ಇತಿಹಾಸ ಪ್ರಸಿದ್ಧ ತಕ್ಷಶಿಲೆಗೆ ಸುಮಾರು 70 ಮೈಲು ದೂರದಲ್ಲಿರುವುದೆ ಬಕ್ಷಾಲೀ ಎಂಬ ಹಳ್ಳಿ; 1881ರಲ್ಲಿ ಅಲ್ಲಿನ ಒಬ್ಬ ರೈತ ಭೂಮಿಯನ್ನು ಅಗೆಯುತ್ತಿದ್ದಾಗ ಒಂದು ಹಳೆಯ ಹಸ್ತಪ್ರತಿ ಲಭಿಸಿತು. ಅದೇ ಬಕ್ಷಾಲೀ ಹಸ್ತಪ್ರತಿ.

ಈ ವರೆಗೆ ದೊರೆತಿರುವ ಭಾರತೀಯ ಗಣಿತಗ್ರಂಥಗಳಲ್ಲಿ ಇದು ಅತಿ ಪುರಾತನವಾದದ್ದು. ಆದರೆ ಈಗಿರುವ ಸ್ಥಿತಿಯಲ್ಲಿ ಬಕ್ಷಾಲೀ ಹಸ್ತಪ್ರತಿ ಅಪೂರ್ಣವಾಗಿದೆ. ದೊರೆತಿರುವುದು ಭೂರ್ಜಮರದ ತೊಗಟೆಯ ಮೇಲೆ ಬರೆಯಲ್ಪಟ್ಟಿರುವ ಈ ಹಸ್ತಪ್ರತಿಯ 70 ಪುಟಗಳು ಮಾತ್ರ. ಮುಟ್ಟಿದರೆ ಮುರಿಯುವಷ್ಟು ಜೀರ್ಣವಾಗಿವೆ. ಗ್ರಂಥದ ಆರಂಭ, ಮುಕ್ತಾಯ ಇಲ್ಲ. ಇದರ ರಚನೆಯ ಕಾಲ, ಬರೆದವನ ವಿಚಾರಗಳು ಸರಿಯಾಗಿ ತಿಳಿದಿಲ್ಲ.

ಬಕ್ಷಾಲೀ ಹಸ್ತಪ್ರತಿ ಅದಕ್ಕೂ ಹಿಂದಿನ ಗಣಿತ ಬರೆಹವೊಂದರ ವ್ಯಾಖ್ಯೆ — ಎಂದು ತಜ್ಞರ ಅಭಿಪ್ರಾಯ.

ಬ್ರಾಹ್ಮೀ ಲಿಪಿಯ ಒಂದು ರೂಪವಾದ ಶಾರದಾ ಲಿಪಿಯಲ್ಲಿ ಹಸ್ತಪ್ರತಿ ಇದೆ. ವಿಷಯ ಕೇವಲ ಗಣಿತ ನಿಯಮಗಳಿಗೆ ಸಂಬಂಧಿಸಿದ್ದು. ಇವನ್ನು ಸೂತ್ರಗಳೆಂದು ಕರೆಯಲಾಗಿದೆ. ದೊರೆತಿರುವ ಹಸ್ತಪ್ರತಿ 9ನೆಯ ಸೂತ್ರದಿಂದ ಆರಂಭವಾಗುತ್ತದೆ; ಕೊನೆಯದು 57ನೆಯ ಸೂತ್ರ. ಆದ್ದರಿಂದ, ಈ ಬರೆಹ ಯಾವುದೋ ದೊಡ್ಡ ಗ್ರಂಥದ ಒಂದು ಭಾಗ ಎಂದು ಊಹೆ. ಇದರಲ್ಲಿ ಅಂಕಗಣಿತ, ಬೀಜಗಣಿತಗಳಿಗೆ ಸಂಬಂಧಪಟ್ಟ ವಿಷಯಗಳೇ ಹೆಚ್ಚಾಗಿವೆ. ರೇಖಾಗಣಿತ ಸಂಬಂಧ ಬರೆಹವೂ ಇದೆ. ನಿಯಮ, ಅದಕ್ಕೆ ಸೂಕ್ತ ಉದಾಹರಣೆ ಹಾಗೂ ಸಮಸ್ಯೆಗಳಿಗೆ ಉತ್ತರಗಳು ಇವೆ. ಇದು ಬಕ್ಷಾಲೀ ಗಣಿತಗ್ರಂಥದ ವೈಶಿಷ್ಟ್ಯ. ಭಿನ್ನರಾಶಿ, ವರ್ಗಮೂಲ, ಬಡ್ಡಿ, ತ್ರೈರಾಶಿ ಇತ್ಯಾದಿ ಅಂಕಗಣಿತ ವಿಷಯಗಳೂ ಬೀಜಗಣಿತದ ಹಲವು ಬಗೆಯ ಸಮೀಕರಣಗಳೂ ಶ್ರೇಢಿ ಮುಂತಾದ ವಿಷಯಗಳೂ ಇದರಲ್ಲಿ ಇವೆ. ದಶಮಾಂಶ ಪದ್ಧತಿಯನ್ನು ಇದರಲ್ಲಿ ಬಳಸಿರುವುದು ಗಮನಾರ್ಹವಾಗಿದೆ. ಅಂಕಗಣಿತದಲ್ಲಿ ಸೊನ್ನೆಯ ಸ್ಥಳದಲ್ಲಿ ಅಥವಾ ಬೀಜಗಣಿತದ ಅಜ್ಞಾತ ಸಂಖ್ಯೆಯ ಸ್ಥಳದಲ್ಲಿ ಒಂದು ಸ್ಥೂಲ ಬಿಂದುವನ್ನು ಬರೆದಿರುವುದು ಈ ಹಸ್ತಪ್ರತಿಯ ಇನ್ನೊಂದು ವೈಶಿಷ್ಟ್ಯ.

ಬಕ್ಷಾಲೀ ಹಸ್ತಪ್ರತಿಯ ಕಾಲ ಸುಮಾರು 3–4ನೆಯ ಶತಮಾನ ಇರಬಹುದೆಂದು ತರ್ಕಿಸಲಾಗಿದೆ.

ಬದರೀನಾಥ

ಬದರೀನಾಥ ಕ್ಷೇತ್ರ ಹಿಮಾಚಲ ಪ್ರದೇಶದ ನರ ಮತ್ತು ನಾರಾಯಣ ಪರ್ವತಗಳ ಮಧ್ಯದ ಕಣಿವೆಯಲ್ಲಿದೆ.

ಹರಿದ್ವಾರದಿಂದ 184 ಮೈಲು ದೂರದಲ್ಲಿ ಅಲಕನಂದ ನದಿಯ ಬಲ ದಡದಲ್ಲಿರುವ ಬದರೀನಾಥ ಸಮುದ್ರ ಮಟ್ಟದಿಂದ 10,284 ಅಡಿ ಎತ್ತರದಲ್ಲಿದೆ.

ಬದರೀನಾರಾಯಣನ ವಿಗ್ರಹ ಕಳೆದು ಹೋಗಿತ್ತು. ಶಂಕರಾಚಾರ್ಯರು ನಾರದಕುಂಡ ತೀರ್ಥದಲ್ಲಿ ಮುಳುಗಿ ವಿಗ್ರಹವನ್ನು ಹೊರಕ್ಕೆ ತೆಗೆದು ಸುಮಾರು 9ನೆಯ ಶತಮಾನದಲ್ಲಿ ಪುನಃ ಪ್ರತಿಷ್ಠಾಪಿಸಿದರು ಎಂದು ಹೇಳುತ್ತಾರೆ. ಹಿಮಪಾತದಿಂದ ದೇವಾಲಯ ಅನೇಕ ಬಾರಿ ಹಾನಿಗೊಳಗಾಗಿ ಪುನರ್ನಿರ್ಮಾಣಗೊಂಡಿದೆ. ಬದರಿಯ ಸುತ್ತಮುತ್ತಲಿನ ಸ್ಥಳ ವೈಷ್ಣವ ಕ್ಷೇತ್ರ. ಇದರಲ್ಲಿ ಬದರೀನಾರಾಯಣ ಅಥವಾ ವಿಶಾಲ ಬದರೀ, ಯೋಗ ಬದರೀ, ಭವಿಷ್ಯ ಬದರೀ, ವೃದ್ಧ ಬದರೀ ಮತ್ತು ಧ್ಯಾನ ಬದರೀ ಎಂಬ ಐದು ಬದರಿಗಳಿವೆ.

ನಾರಾ ಎಂದರೆ ನೀರು. ನೀರಿಗೆ ಆಶ್ರಯ ಎಂಬುದರಿಂದ ನಾರಾಯಣ ಪದ. ಬದರೀನಾರಾಯಣ ದೇವಾಲಯ ಪೂರ್ವಾಭಿಮುಖವಾಗಿದ್ದು ಸುಮಾರು 45 ಅಡಿ ಎತ್ತರವಿದೆ. ಕಪ್ಪು ಸಾಲಿಗ್ರಾಮ ಶಿಲೆಯ ಬದರೀನಾರಾಯಣಮೂರ್ತಿ ಪದ್ಮಾಸನ ಭಂಗಿಯಲ್ಲಿದೆ. ಸುಮಾರು 3 ಅಡಿ ಎತ್ತರವಿರುವ



ಬದರೀನಾಥ :
[illegible] ದೇವಾಲಯ [illegible]

ಈ ವಿಗ್ರಹದ ಬಲಗಡೆ ಗರುಡ ಮತ್ತು ಕುಬೇರ. ಎಡಗಡೆ ನರ ಮತ್ತು ನಾರಾಯಣ ಹಾಗೂ ಮುಂದುಗಡೆ ಕೃಷ್ಣನ ಮಿತ್ರ ಉದ್ಧವ ಮತ್ತು ನಾರದರ ಕಲ್ಲಿನ ಮೂರ್ತಿಗಳಿವೆ.

ಬದರೀನಾಥ ದೇವಾಲಯ ತೆರೆದಿರುವುದು ಮೇ ಎರಡನೆ ವಾರದಿಂದ ನವೆಂಬರ್ ವರೆಗೆ ಮಾತ್ರ. ಬಾಗಿಲನ್ನು ಹೀಗೆ ಮುಚ್ಚುವ ಮೊದಲು ಒಂದು ದೀವಿಗೆಯ ತುಂಬ ತುಪ್ಪ ಸುರಿದಿಡುತ್ತಾರೆ. ಮುಂದಿನ ಮೇ ವರೆಗೆ ಈ ದೀಪ ಉರಿಯುತ್ತಿರುತ್ತದೆ.

ಬದರೀನಾಥದ ಸಮೀಪ ಶಂಕರರು ಸ್ಥಾಪಿಸಿದ ಜ್ಯೋತಿರ್ಮಠ ಇದೆ.

ಗಂಧಕದಿಂದ ಕೂಡಿದ ಬಿಸಿನೀರಿನ ಊಟೆಯಾದ ತಪ್ತಕುಂಡ ಮತ್ತು ವೀರಾಂಜನೇಯ ದೇವಸ್ಥಾನ ಬದರಿಯಲ್ಲಿ ನೋಡಬೇಕಾದ ಸ್ಥಳಗಳು.

ಬದ್ರುದ್ದೀನ್ ತಯ್ಯಾಬ್ಜಿ

ಮುಂಬಯಿ ಹೈಕೋರ್ಟಿನಲ್ಲಿ ಮೊಕದ್ದಮೆಯೊಂದರ ವಿಚಾರಣೆ ನಡೆಯುತ್ತಿತ್ತು. ನ್ಯಾಯಾಧೀಶರು ಗಡುಸಾಗಿ ಹೇಳಿದರು : "ನಾನು ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷನಾಗಿದ್ದೆ. ಈ ನ್ಯಾಯಾಧೀಶ ಹುದ್ದೆಗಿಂತ ಆ ಗೌರವವೇ ಹೆಚ್ಚಿನದೆಂದು ನನ್ನ ಭಾವನೆ. ಕಾಂಗ್ರೆಸ್ಸಿನ ದೇಶಾಭಿಮಾನಿಗಳ ಬಗೆಗೆ ನನಗೆ ಗೌರವವಿದೆ. ಇಲ್ಲಿ ನನ್ನ ಸಮ್ಮುಖದಲ್ಲಿ ಕಾಂಗ್ರೆಸನು ಹೀಗಳೆಯಲು ಯಾರಿಗೂ ಅವಕಾಶವಿಲ್ಲ".



ರಾಷ್ಟ್ರೀಯತೆ : ತಯ್ಯಾಬ್ಜಿ

ಕಾಂಗ್ರೆಸ್ ಪರ ಪತ್ರಿಕೆಯೊಂದರ ಸಂಪಾದಕರ ಮೇಲಿನ ಮೊಕದ್ದಮೆಯಲ್ಲಿ ಕಾಂಗ್ರೆಸ್ಸಿನ ಬಗೆಗೆ ಲಘುವಾಗಿ ಆಡತೊಡಗಿದ ಸರಕಾರೀ ವಕೀಲರಿಗೆ ನ್ಯಾಯಾಧೀಶರು ಹೀಗೆ ತಡೆ ಹಾಕಿದರು. ಆ ನ್ಯಾಯಾಧೀಶರೇ ಬದ್ರುದ್ದೀನ್ ತಯ್ಯಾಬ್ಜಿ.

ಬದ್ರುದ್ದೀನ್ ತಯ್ಯಾಬ್ಜಿ, ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸಿನ ಮೂರನೆಯ ಅಧಿವೇಶನದ (1887) ಅಧ್ಯಕ್ಷತೆ ವಹಿಸಿದವರು. "ಭಾರತದಲ್ಲಿ ಎಲ್ಲ ಮತೀಯರಿಗೂ ರಾಜಕೀಯವಾಗಿ ಕಾಂಗ್ರೆಸ್ಸೇ ಪ್ರಾತಿನಿಧಿಕ ಸಂಸ್ಥೆ" ಎಂಬುದು ಅವರು ತಳೆದ ನಿಲುವು. "ಕಾಂಗ್ರೆಸ್ಸನ್ನು ರಾಜಕೀಯವಾಗಿ ವಿರೋಧಿಸುವ ಯಾವುದೇ ಸಂಸ್ಥೆಯಲ್ಲೂ ನಾನು ಭಾಗವಹಿಸುವುದಿಲ್ಲ" ಎಂದು ಸಾರಿದ್ದರು.

ಬದ್ರುದ್ದೀನ್ ತಯ್ಯಾಬ್ಜಿಯವರು ಮಹತ್ವದ ಸೇವೆ ಸಲ್ಲಿಸಿದ್ದು ಮಹಮ್ಮದೀಯರ ಸಾಮಾಜಿಕ, ಶೈಕ್ಷಣಿಕ ರಂಗದಲ್ಲಿ. ಮುಂಬಯಿಯ ಅಂಜುಮನ್-ಎ-ಇಸ್ಲಾಂ ಸಂಸ್ಥೆಯ ಮೂಲಕ ಮಹಮ್ಮದೀಯರಲ್ಲಿ ಮುಖ್ಯವಾಗಿ ಮಹಿಳೆಯರಲ್ಲಿ ಆಧುನಿಕ ಶಿಕ್ಷಣ ಪ್ರಸಾರಕ್ಕೆ ಅವರು ಕಾರಣರಾದರು. ಘೋಷಾ ಪದ್ಧತಿ ನಿರ್ಮೂಲನ ಇತ್ಯಾದಿ ಸಾಮಾಜಿಕ ಸುಧಾರಣೆಗಳಿಗಾಗಿ ಶ್ರಮಿಸಿದರು.

ಬದ್ರುದ್ದೀನ್ ಜನಿಸಿದ್ದು 1844 ಅಕ್ಟೋಬರ್ 8ರಂದು. ಮುಂಬಯಿಯಲ್ಲಿ. ತಂದೆಯ ಉದ್ಯೋಗ, ವಿದೇಶ ವ್ಯಾಪಾರ. ಉರ್ದು, ಪಾರಸಿ ಪ್ರಾಥಮಿಕ ಅಭ್ಯಾಸದ ಅನಂತರ ಮ್ಯಾಟ್ರಿಕ್‌ನಿಂದ ಬಾರ್-ಅಟ್-ಲಾ ಪದವಿ ತನಕ ಶಿಕ್ಷಣ ಇಂಗ್ಲೆಂಡಿನಲ್ಲೇ ನಡೆಯಿತು.

1867ರಲ್ಲಿ ಸ್ವದೇಶದಲ್ಲಿ ವಕೀಲ ವೃತ್ತಿ ಪ್ರಾರಂಭಿಸಿ, ಮುಂಬಯಿ ಹೈಕೋರ್ಟಿನ ಪ್ರಥಮ ಭಾರತೀಯ ಬ್ಯಾರಿಸ್ಟರ್ ಎನಿಸಿದರು. ಉದ್ಯೋಗದಲ್ಲಿ ಅಪಾರ ಹಣ, ಹೆಸರು ಗಳಿಸಿದರು. ಸಾರ್ವಜನಿಕ ಜೀವನದಲ್ಲಿ ಭಾಗವಹಿಸತೊಡಗಿ, 1882ರಲ್ಲಿ ಮುಂಬಯಿ ಶಾಸನ ಸಭೆಯ ಸದಸ್ಯರಾಗಿ ನೇಮಕಗೊಂಡರು. ಕಾಂಗ್ರೆಸ್ ಅಧ್ಯಕ್ಷತೆಯ ಅನಂತರ 1895ರಲ್ಲಿ ಮುಂಬಯಿ ಹೈಕೋರ್ಟ್ ನ್ಯಾಯಾಧೀಶ ಹುದ್ದೆ ಸ್ವೀಕರಿಸಿದರು. 1906ರಲ್ಲಿ ಕಣ್ಣಿನ ಚಿಕಿತ್ಸೆಗಾಗಿ ಇಂಗ್ಲೆಂಡಿಗೆ ಹೋದವರು ಅಲ್ಲಿಯೇ, ಆಗಸ್ಟ್ 19ರಂದು, ಕೊನೆಯ ಉಸಿರು ಎಳೆದರು.

ಬನವಾಸಿ

ಮಾನವ ಜನ್ಮ ಬನವಾಸಿಯಲ್ಲಿ ಲಭಿಸುವುದು ಸುಲಭವಲ್ಲ. ಆದಾಗದಿದ್ದರೆ ಕೋಗಿಲೆಯಾಗಿಯೋ ಮರಿದುಂಬಿಯಾಗಿಯೋ ಹುಟ್ಟಬೇಕೆಂದು ಕನ್ನಡದ ಆದಿಕವಿ ಪಂಪ ಆಶಿಸಿದ್ದಾನೆ. ಅಲ್ಲಿಜನರು ಪಂಡಿತರು, ತ್ಯಾಗಿಗಳು, ಭೋಗಿಗಳು, ಕಲಾಭಿಮಾನಿಗಳು ಎಂದು ಅವನ ಬಣ್ಣನೆ. "ಆರಂಕುಶವಿಟ್ಟೊಡಂ ನೆನೆವುದೆನ್ನ ಮನಂ ಬನವಾಸಿ ದೇಶಮಂ" ಎಂದಿದ್ದಾನೆ.

ಬನವಾಸಿಯ ಸುತ್ತಣ ನಿಸರ್ಗದೇವಿಯ ಸೌಂದರ್ಯ ವೈಭವಯುತವಾದದ್ದು. ಉತ್ತರ ಕನ್ನಡ ಜಿಲ್ಲೆಯ ಶಿರಸಿಯಿಂದ ಇಲ್ಲಿಗೆ 12 ಮೈಲು ದೂರ. ಘಟ್ಟ ಪ್ರದೇಶಕ್ಕೆ ಸೇರಿರುವ ಈ ಊರು 345ರಲ್ಲಿ ಕದಂಬರ ರಾಜಧಾನಿಯಾಯಿತು. ಕದಂಬರು ಚಾಲುಕ್ಯರ ಮಾಂಡಲಿಕರಾದಾಗಲೂ ಬನವಾಸಿಯಲ್ಲಿ ಆಳುತ್ತಿದ್ದರು.

ಮಹಾಭಾರತದಲ್ಲಿ ಬನವಾಸಿಯನ್ನು 'ವನವಾಸ' ಎಂದು ಕರೆಯಲಾಗಿದೆ. ಇಲ್ಲಿಗೆ ಅಶೋಕ ಚಕ್ರವರ್ತಿ ಬೌದ್ಧಮತ ಪ್ರಚಾರಕರನ್ನು ಕಳುಹಿಸಿದ್ದ. ಬನವಾಸಿಯಲ್ಲಿ ಅನೇಕ ಮಂದಿ ಬೌದ್ಧಭಿಕ್ಕುಗಳನ್ನೂ 100 ಸಂಘಾರಾಮಗಳನ್ನೂ ಸುಂದರವಾದ ಮೈತ್ರೇಯ ಬೋಧಿಸತ್ತ್ವನ ವಿಗ್ರಹವನ್ನೂ ಕಂಡುದಾಗಿ ಬೌದ್ಧ ಯಾತ್ರಿಕ ಹ್ಯೂಯೆನ್ ತ್ಸಾಂಗ್ ಬರೆದಿದ್ದಾನೆ. ಗ್ರೀಸಿನ ಟಾಲೆಮಿ ಇದನ್ನು ಬೈಜಾಯಂಟ್ ಎಂದು ಕರೆದಿದ್ದಾನೆ. ಇದು ಬನವಾಸಿಗೆ ಇದ್ದ ವೈಜಯಂತಿ ಹೆಸರಿನ ರೂಪಾಂತರ.

ಮಧುಕೇಶ್ವರ ದೇವಾಲಯ



ಬನವಾಸಿ ವರದಾ ನದಿಯ ದಡದ ಮೇಲಿದೆ. ಇಲ್ಲಿನ ಅರಸರು ಮಧುಕೇಶ್ವರ ಭಕ್ತರಾಗಿದ್ದರು. ಇಲ್ಲಿನ ದೇವಾಲಯದ ಗರ್ಭಗುಡಿಯಲ್ಲಿರುವ ಮಧುಕೇಶ್ವರಲಿಂಗ. ಮುಂದಿನ ಮುಖ ಮಂಟಪ. ಅಷ್ಟದಿಕ್ಪಾಲಕರ ವಿಗ್ರಹಗಳು. ಪರಶುರಾಮ ಪ್ರತಿಮೆ —ಎಲ್ಲವೂ ಮನಸೆಳೆಯುವ ಕಲಾಕೃತಿಗಳು ; ಕಂಬಗಳಿಂದ ಕೂಡಿದ ಕೈಸಾಲೆಯೂ ನಂದಿಯ ದೊಡ್ಡ ವಿಗ್ರಹವೂ ಸುಂದರವಾಗಿವೆ. ಅಲ್ಲಿರುವ ಒಂದು ಕಲ್ಲುಮಂಚವನ್ನು 1628ರಲ್ಲಿ ಒಬ್ಬ ಪಾಳೆಯಗಾರ ಅರ್ಪಿಸಿದನೆಂದು ನಂಬಿಕೆಯಿದೆ. ಮಧುಕೇಶ್ವರ ದೇವಾಲಯದ ಬಳಿ ಪಾರ್ವತಿಯ ದೇಗುಲವಿದೆ. ಬನವಾಸಿಯಲ್ಲಿ ಅಲ್ಲಮಪ್ರಭುವಿನ ದೇವಾಲಯವೂ ಇದೆ.

ಬರ್ಬೋಸಾ

"ಜನ ಇಷ್ಟಬಂದಂತೆ ಸಂಚರಿಸಬಹುದು : ಯಾವ ಆತಂಕವೂ ಇಲ್ಲದೆ ತಮಗೆ ಇಷ್ಟ ಬಂದ ಧರ್ಮವನ್ನು ಅನುಸರಿಸಬಹುದು : ನೀನು ಕ್ರೈಸ್ತನೆ, ಯೆಹೂದಿಯೆ, ಮುಸಲ್ಮಾನನೆ, ಹಿಂದುವೆ ? —ಎಂದು ಯಾರೂ ತನಿಖೆ ನಡೆಸುವುದಿಲ್ಲ. ಇಂಥ ಸ್ವಾತಂತ್ರ್ಯವನ್ನು ಅರಸು ನೀಡಿದ್ದಾನೆ."

—ವಿಜಯನಗರದ ಸಮ್ರಾಟ ಕೃಷ್ಣದೇವರಾಯನ ಬಗೆಗೆ ಹೀಗೆ ಬರೆದಿರುವವನು ಪೋರ್ಚುಗೀಸ್ ಪ್ರವಾಸಿ, ದುಆರ್ತೆ ಬರ್ಬೋಸಾ. ಇವನ ಮತ್ತು ನ್ಯೂನಿಜ್‌ರಂಥ ಪ್ರವಾಸೀ ಕಥನಗಳು ಕೃಷ್ಣದೇವರಾಯನ ಕಾಲದ ರಾಜ್ಯಾಡಳಿತ, ಜನಜೀವನಗಳ ಬಗೆಗೆ ಅಮೂಲ್ಯ ಸಂಗತಿಗಳನ್ನು ಒದಗಿಸಿವೆ. ಬರ್ಬೋಸಾ ಸುಮಾರು 1504–14 ಅವಧಿಯಲ್ಲಿ ವಿಜಯನಗರಕ್ಕೆ ಭೇಟಿಕೊಟ್ಟಿದ್ದ. ಈತ ಬರೆದ ಪ್ರವಾಸ ಕಥನ 1524ರಲ್ಲಿ ಪ್ರಕಟವಾಯಿತು.

"ಬಿಜನಾಂಗರ್ (ವಿಜಯನಗರ ಎನ್ನುವುದಕ್ಕೆ ಆತ ಬಳಸಿದ ಪದ) ಜನಸಮೃದ್ಧ ನಗರ. ಇದನ್ನು ಸಮತಟ್ಟಾದ ಭೂಮಿಯ ಮೇಲೆ ಚೆನ್ನಾಗಿ ಕಟ್ಟಿದ್ದಾರೆ...ಇದು ಸಂಪದ್ಭರಿತ ರಾಜ್ಯ. ಸರಬರಾಜು ಉತ್ತಮವಾಗಿದ್ದು ನಗರಗಳು ಮತ್ತು ಪಟ್ಟಣಗಳಿಂದ ತುಂಬಿದೆ."

—ಇದು ವಿಜಯನಗರ ಮತ್ತು ಆ ಸಾಮ್ರಾಜ್ಯವನ್ನು ಕುರಿತು ಬರ್ಬೋಸಾ ಹೇಳಿರುವ ಮಾತುಗಳು. ಬರ್ಬೋಸಾ ತಾನು ಸಂದರ್ಶಿಸಿದ ಭಾರತದ ಇತರ ಅನೇಕ ಜಾಗಗಳ ಬಗೆಗೂ ಬರೆದಿದ್ದಾನೆ.

ಬರ್ಮ

ಪ್ರಾಚೀನ ಕಾಲದಿಂದ ಭಾರತ-ಬರ್ಮಗಳ ನಡುವೆ ಸಂಪರ್ಕವಿದೆ. ಕ್ರಿ.ಪೂ.ದಲ್ಲಿ ಅಶೋಕನ ಕಾಲದಲ್ಲಿ ಬೌದ್ಧಧರ್ಮ ಬರ್ಮದಲ್ಲಿ ವ್ಯಾಪಿಸಿತ್ತು. ಒಂದನೆಯ ಶತಮಾನದಲ್ಲಿ ಭಾರತದ ನೌಕಾ ಚಟುವಟಿಕೆ ಹೆಚ್ಚಿದಾಗ ಅನೇಕ ಮಂದಿ ಮತಪ್ರಚಾರಕರೂ ವ್ಯಾಪಾರಿಗಳೂ ಬರ್ಮಕ್ಕೆ ಹೋಗಿ ನೆಲೆಸಿದರು,

ಭಾರತೀಯ ಹೆಸರುಗಳ, ಭಾಷೆಗಳ ಪ್ರಭಾವ ಬರ್ಮದ ಕೆಲವು ಪ್ರದೇಶಗಳಲ್ಲಿ ಕಂಡುಬರುತ್ತದೆ. ಬರ್ಮದ ಮೊದಮೊದಲ ಶಾಸನಗಳು ಕದಂಬರ ಕಾಲದ ಲಿಪಿಯಲ್ಲಿವೆ. ನಾಲ್ಕನೆಯ ಶತಮಾನದ ಶಾಸನಗಳ ಲಿಪಿ ಪಲ್ಲವರ ಕಾಲದವು. ಒಂದು ಕಾಲಕ್ಕೆ ಬೌದ್ಧ ಕೇಂದ್ರವಾಗಿದ್ದ ಕಾಂಚೀಪುರದೊಡನೆ ಇದ್ದ ಸಂಪರ್ಕದಿಂದಾಗಿ ಬರ್ಮದಲ್ಲಿ ಬೌದ್ಧಮತ ವ್ಯಾಪಕಗೊಂಡಿತು. ಬ್ರಿಟಿಷರು ಭಾರತವನ್ನು ಆಕ್ರಮಿಸಿದಾಗ, ಕಳೆದ ಶತಮಾನದಲ್ಲಿ ಬಂಗಾಳದ ಮೇಲೆ ಬರ್ಮ ದಾಳಿ ಮಾಡಿದ್ದೂ ಉಂಟು.

1885ರಿಂದ 1935ರ ವರೆಗೆ ಅದು ಬ್ರಿಟಿಷ್ ಇಂಡಿಯಾದ ಭಾಗವಾಯಿತು. 1935ರಲ್ಲಿ ರಾಷ್ಟ್ರೀಯ ಸುಧಾರಣಾ ಶಾಸನದಿಂದ ಬರ್ಮ ಭಾರತದಿಂದ ಬೇರ್ಪಟ್ಟು ಪ್ರತ್ಯೇಕ ರಾಜ್ಯವಾಯಿತು. ಭಾರತದ ಸ್ವಾತಂತ್ರ್ಯ ಚಳವಳಿ ಬರ್ಮಕ್ಕೂ ಸ್ಫೂರ್ತಿಯಾಯಿತು. 1948ರಲ್ಲಿ ಬರ್ಮ ಸ್ವತಂತ್ರ ಗಣರಾಜ್ಯವಾಯಿತು. 1962ರಿಂದ ಸೈನಿಕ ರಾಜ್ಯಭಾರವಿದೆ. ಜನರಲ್ ನೆವಿನ್ ಅಧ್ಯಕ್ಷರು. 1964ರಲ್ಲಿ ಸಾರ್ವತ್ರಿಕ ಚುನಾವಣೆ ನಡೆಯಿತು. ಭಾರತ, ಬಾಂಗ್ಲಾದೇಶ, ಥೈಲೆಂಡ್, ಲಾವೋಸ್ ಹಾಗೂ ಚೀನ ನೆರೆರಾಷ್ಟ್ರಗಳು. ರಾಜಧಾನಿ ರಂಗೂನ್. ಪ್ರಧಾನ ಉದ್ಯೋಗ ಕೃಷಿ. ಮುಖ್ಯ ಬೆಳೆ ಭತ್ತ. ವಾಣಿಜ್ಯ ಬೆಳೆ ತೇಗ. ಇರಾವತಿ ನದಿ ಮುಖ್ಯ ಜಲಮಾರ್ಗ. ಹಲವು ಬಗೆಯ ರತ್ನಗಳು –ವಿಶೇಷವಾಗಿ ಮಾಣಿಕ್ಯ– ಇಲ್ಲಿ ದೊರೆಯುತ್ತವೆ.



ಸೈನಿಕ ಆಡಳಿತಗಾರ : ನೆವಿನ್

ಈ ರಾಷ್ಟ್ರದ ಬಹುಪಾಲು ಜನರು ಬೌದ್ಧರು. ದೇಶದ ಮುಖ್ಯ ಭಾಷೆ ಬರ್ಮೀ. ಇಲ್ಲಿ ಎರಡು ವಿಶ್ವವಿದ್ಯಾನಿಲಯಗಳಿವೆ: ಬರ್ಮದ ಊ ಥಾಂಟ್ ಅವರು ವಿಶ್ವಸಂಸ್ಥೆಯ ಯಶಸ್ವೀ ಪ್ರಧಾನ ಕಾರ್ಯದರ್ಶಿಯಾಗಿ ಎರಡು ಅವಧಿ ಸೇವೆ ಸಲ್ಲಿಸಿದರು.

ನೋಡಿ : ಬರ್ಮ—ಸಂಪುಟ ೧

ಬಯಲಾಟ

ನೋಡಿ : ಯಕ್ಷಗಾನ—ಸಂಪುಟ ೫

ಬರ್‌ನಿ

14ನೆಯ ಶತಮಾನದಲ್ಲಿ ಆಳಿದ ದೆಹಲಿಯ ಸುಲ್ತಾನರ ಬಗೆಗೆ ಹೆಚ್ಚಿನಂಶ ತಿಳಿದುಬರುವುದು ಅವರ ಆಸ್ಥಾನ ಕವಿಗಳ, ಚರಿತ್ರಕಾರರ ಬರವಣಿಗೆಯ ಮೂಲಕ. ಇಂಥ ಒಬ್ಬ ಪ್ರಸಿದ್ಧ ಚರಿತ್ರಕಾರ ಜಿಯಾವುದ್ದೀನ್ ಬರ್‌ನಿ. ಇವನು ಮಹಮ್ಮದ್ ಬಿನ್ ತುಘಲಕನ ಹಾಗೂ ಅವನ ಅನಂತರ ಆಳಿದ ಫಿರೂಜ್ ಷಾ ತುಘಲಕರ ಸಮಕಾಲೀನ. ಈತ ಚರಿತ್ರೆ ಬರೆದದ್ದು ಫಿರೂಜ್ ಷಾನ ಕಾಲದಲ್ಲಿ.

ಬರ್‌ನಿ ಅಲ್ಲಾವುದ್ದೀನನ ಆಡಳಿತದ ಬಗೆಗೂ ಬರೆದಿದ್ದಾನೆ. "ಅಲ್ಲಾವುದ್ದೀನನ ಆಡಳಿತ ಕಾಲದಲ್ಲಿ ಎಲ್ಲ ದೇಶಗಳ ಮಹಾನ್ ವ್ಯಕ್ತಿಗಳು, ಎಲ್ಲ ಬಗೆಯ ವಿಜ್ಞಾನ ಮತ್ತು ಕಲೆಗಳ ಪ್ರತಿಭಾವಂತರು ಕಂಡುಬರುತ್ತಿದ್ದುದು ಒಂದು ವಿಸ್ಮಯಕಾರೀ ವಿಷಯ. ಇಂಥ ಉದ್ದಾಮರ ಸಂದಣಿಯಿಂದ ರಾಜಧಾನಿ ದೆಹಲಿಯನ್ನು ಕಂಡು ಬಾಗ್‌ದಾದ್ ನಗರ ಕರುಬುವಂತಾಯಿತು : ಕೈರೋ ನಗರಕ್ಕೆ ಇದು ಪ್ರತಿಸ್ಪರ್ಧಿ ಎನಿಸಿತು : ಕಾನ್‌ಸ್ಟಾಂಟಿನೋಪಲಿಗೆ ಇದು ಸಮಾನ ನಗರ ಎನಿಸಿತು " ಎಂದು ಬರ್‌ನಿ ಬರೆದಿದ್ದಾನೆ.

"ಮುಗ್ಧ ಜನರ ರಕ್ತವನ್ನು ಇವನು ಚೆಲ್ಲಿದಷ್ಟು ಯಾವ ಫರಾಓ (ಈಜಿಪ್ಟಿನ ಕ್ರೂರ ದೊರೆ) ಚೆಲ್ಲಿರಲಿಕ್ಕಿಲ್ಲ." ಎಂದು ಅಲ್ಲಾವುದ್ದೀನ್ ಖಿಲ್ಜಿಯ ಬಗೆಗೆ ಆತ ಬರೆದಿದ್ದಾನೆ.

ಸಾಮಾನ್ಯವಾಗಿ ರಾಜಾಶ್ರಯದಲ್ಲಿರುವ ಬರೆಹಗಾರರೂ ಕವಿಗಳೂ ಪಕ್ಷಪಾತಿಗಳಾಗಿ ಬರೆಯುವುದು ಸಹಜ. ಆದರೆ ಬರ್‌ನಿ ಇದಕ್ಕೆ ಅಪವಾದ. ದೇವರ ಅಧಿಕಾರ ಸೂತ್ರವನ್ನು ವಹಿಸಿಕೊಂಡ ಸುಲ್ತಾನರು ತಮ್ಮ ಅಧಿಕಾರದೆಡೆಗೆ ಸಾಕಷ್ಟು ಗಮನ ಕೊಡುತ್ತಿಲ್ಲ ಎಂದು ಒಮ್ಮೆ ಬರ್‌ನಿ ದೂರಿದ. ಇದಕ್ಕಾಗಿ ಅವನು ದೇಶಭ್ರಷ್ಟನಾಗಬೇಕಾಯಿತು.

ಬರ್‌ನಿ ಸೂಫಿಯ ಪ್ರಧಾನಪಂಥಗಳಲ್ಲಿ ಒಂದಾದ ಚಿಶ್ತಿ ಸಂಪ್ರದಾಯದವನು.

ಬರೀದ್ ಷಾಹಿ

ಬಿದರೆಯಿಂದ ಆಳುತ್ತಿದ್ದ ಒಂದು ಮುಸಲ್ಮಾನ ರಾಜವಂಶ ಬರೀದ್ ಷಾಹಿ.

ಬಹಮನಿ ಸುಲ್ತಾನರ ರಾಜ್ಯ ಒಡೆದು ಹುಟ್ಟಿದ ಐದು ರಾಜವಂಶಗಳಲ್ಲಿ ಒಂದಾದ ಈ ಮನೆತನದ ಸ್ಥಾಪಕ ಕಾಸಿಂ ಬರೀದ್. ಇವನು ಬಹಮನಿ ಸುಲ್ತಾನ ಮಹಮೂದ್(1482–1518)ನನ್ನು ತನ್ನ ಕೈಗೊಂಬೆಯಾಗಿ ಮಾಡಿಕೊಂಡ. ಕಾಸಿಮನ ಕಾಲದಲ್ಲಿ ಇಮಾದ್ ಷಾಹಿ, ಆದಿಲ್ ಷಾಹಿ ಸ್ವತಂತ್ರ ರಾಜ್ಯಗಳಾದುವು. ಕಾಸಿಮನ ಮಗ ಅಮೀರ್ ಬರೀದ್, ಮುಂದೆ ಅವನ ಮಗ ಅಲಿ (1542–80) ರಾಜ್ಯವಾಳಿದರು. ಅಲಿಯೇ ಬರೀದ್ ಷಾ ಎಂಬ ಬಿರುದು ಧರಿಸಿದ ಮೊದಲ ದೊರೆ.

1619ರಲ್ಲಿ ಬಿಜಾಪುರದವರು ಈ ರಾಜ್ಯವನ್ನು ವಶಪಡಿಸಿಕೊಂಡು ಕೊನೆಯ ದೊರೆ ಅಮೀರನನ್ನು ಬಂಧಿಸಿದರು. ಬಿದರೆಯಲ್ಲಿ ರಂಗೀನ್ ಮಹಲ್ ಮತ್ತು ಕಾಲಿ ಮಸ್‌ಜಿದ್ ಮುಂತಾದ ಸುಂದರ ಕಟ್ಟಡಗಳನ್ನು ಕಟ್ಟಿಸಿದವರು ಈ ವಂಶದವರು.

ಬರೂಚ್

ಭೃಗುಕಚ್ಛ ಪ್ರಾಚೀನ ಭಾರತದ ವೈಭವದ ರೇವುಪಟ್ಟಣಗಳಲ್ಲಿ ಒಂದಾಗಿತ್ತು. ಇಲ್ಲಿನ ಪುರಾತನ ಭೃಗು ಋಷಿಯ ದೇಗುಲ ಈಗಲೂ ಇದೆ. ಭೃಗು ಕಚ್ಛದ ರೂಪಾಂತರ ಬ್ರೋಚ್, ಬರೂಚ್. ಈ ಹೆಸರನ್ನು ಪ್ರಾಚೀನ ಗ್ರೀಕ್ ಹಾಗೂ ಇತರ ಬರೆಹಗಾರರು 'ಬಾರಿಗಾಜಾ' ಎಂದು ಪ್ರಸ್ತಾಪಿಸಿದ್ದಾರೆ.

'ಮಹಾಭಾರತ'ದಲ್ಲಿ ಭೃಗುಕಚ್ಛದ ಹೆಸರಿದೆ. ಅನಂತರ ಗ್ರೀಕ್ ಪ್ರವಾಸಕಥನವಾದ 'ಪೆರಿಪ್ಲಸ್' (ಕ್ರಿ.ಶ.80)ನಲ್ಲೂ ಟಾಲೆಮಿಯ ಬರೆವಣಿಗೆಯಲ್ಲೂ ಇದರ ಪ್ರಸ್ತಾಪವಿದೆ. 7ನೆಯ ಶತಮಾನದಲ್ಲಿ ಭಾರತಕ್ಕೆ ಬಂದ ಚೀನೀ ಯಾತ್ರಿಕ ಹ್ಯೂಯೆನ್ ತ್ಸಾಂಗ್ ಈ ರೇವನ್ನು ಸಂದರ್ಶಿಸಿದ್ದ.

ಬಾರಿಗಾಜಾವನ್ನು ಗ್ರೀಸಿನ ಅಪೊಲೊಡೋಟಸ್ 70ರಲ್ಲಿ ಗೆದ್ದುಕೊಂಡ ಎಂದು ತಿಳಿದುಬರುತ್ತದೆ. ಗ್ರೀಕರು ಹಾಗೂ ಬರ್ಬರರ ಕಾಲದಲ್ಲಿ ಇದು ಪ್ರಮುಖ ಬಂದರಾಗಿತ್ತು.

ಅಲೆಗ್ಸಾಂಡ್ರಿಯಾದೊಡನೆಯೂ ಪರ್ಷಿಯನ್ ಕೊಲ್ಲಿಯ ಮೂಲಕ ಬ್ಯಾಬಿಲೋನಿಯಾದೊಡನೆಯೂ ಬಾರಿಗಾಜಾ ವ್ಯಾಪಾರ ನಡೆಸುತ್ತಿತ್ತು. ಒಳನಾಡಿನಲ್ಲಿ ಗಂಗಾನದಿಯ ವ್ಯಾಪಾರಕೇಂದ್ರಗಳೊಡನೆ ಇದರ ಸಂಪರ್ಕವಿದ್ದಿತು. ಒಂದನೆಯ ಶತಕದಲ್ಲಿ ಗ್ರೀಕ್ ವರ್ತಕರ ದೊಡ್ಡ ಪಡೆ ಇಲ್ಲಿದ್ದಿತು. ಗ್ರೀಕರು ಕಟ್ಟಿಸಿದ ಬಾವಿಗಳೂ ಕೋಟೆಗಳೂ ಇದ್ದುವು.

ಕ್ರಿಸ್ತನ ಅನಂತರದ ಮೊದಲ ಹತ್ತು ಶತಕಗಳ ವರೆಗೆ ಕ್ಷತ್ರಪರು, ಗುರ್ಜರರು ಇದನ್ನು ಆಳಿದರು. 1297ರಿಂದ 1772ರ ವರೆಗೆ ಇದು ಮುಹಮ್ಮದೀಯರ ಆಳ್ವಿಕೆಯಲ್ಲಿದ್ದಿತು. ಸ್ವಲ್ಪ ಕಾಲ ಮರಾಠರ ವಶದಲ್ಲಿತ್ತು. ಮುಂದೆ ಹಲವು ಕೈಗಳು ಬದಲಾಯಿಸಿದ ಮೇಲೆ 1803ರಲ್ಲಿ ಬ್ರಿಟಿಷರ ಅಧೀನವಾಯಿತು.

ಬರೂಚ್ ಗುಜರಾತಿನಲ್ಲಿ ನರ್ಮದಾ ನದೀ ಮುಖಜ ಭೂಮಿಯಲ್ಲಿದೆ. ಕ್ಯಾಂಬೆ ಕೊಲ್ಲಿಯಿಂದ ಇಲ್ಲಿಗೆ 30 ಮೈಲು ದೂರ. ಈಗ ಇದು ಹತ್ತಿ ಉದ್ಯಮಕ್ಕೆ ಹೆಸರಾಗಿದೆ. ಬಟ್ಟೆನ ಗಿರಣಿ ಉದ್ಯಮವೂ ಹಲವು ಬಗೆಯ ಕುಶಲಕೈಗಾರಿಕೆಗಳೂ ಇಲ್ಲಿವೆ. ಅಹಮದಾಬಾದ್–ಮುಂಬಯಿ ನಡುವಣ ರೈಲ್ವೆಮಾರ್ಗ ಇಲ್ಲಿ ಹಾದು ಹೋಗುತ್ತದೆ.

ಬರೌನಿ

ಬಿಹಾರ್ ರಾಜ್ಯದ ಬರೌನಿಯಲ್ಲಿ ಪೆಟ್ರೋಲಿಯಂ ಶುದ್ಧೀಕರಣಾಗಾರವಿದೆ. ಇದು ಸಾರ್ವಜನಿಕ ವಲಯದ ಉದ್ಯಮ. ಒಡೆತನ ಆಯಿಲ್ ಇಂಡಿಯಾ ಲಿಮಿಟೆಡ್ ಎಂಬ ಕಂಪೆನಿಯದು.

ಶುದ್ಧೀಕರಣಾಗಾರವನ್ನು ರಷ್ಯದ ಸಹಕಾರದೊಂದಿಗೆ ಪ್ರಾರಂಭಿಸಿದ್ದು 1964 ಜುಲೈಯಲ್ಲಿ. ವರ್ಷಕ್ಕೆ 30 ಲಕ್ಷ ಟನ್ ತೈಲಶುದ್ಧೀಕರಣ ಮಾಡುವ ಶಕ್ತಿ ಇದಕ್ಕಿದೆ.

ಬರೌನಿಯಲ್ಲಿ ಉಷ್ಣ ವಿದ್ಯುದುತ್ಪಾದನಾ ಕೇಂದ್ರವೂ ಇದೆ.

ಬಲ್ಲಾ ಷಾ

ಗುರುವನ್ನು ಅರಸಿ ಹೊರಟ ಭಕ್ತ, ಹೊಲದಲ್ಲಿ ಈರುಳ್ಳಿ ನೆಡುವುದರಲ್ಲಿ ನಿರತನಾಗಿದ್ದ ಒಬ್ಬ ವ್ಯಕ್ತಿಯನ್ನು ಕಂಡ. ಹತ್ತಿರ ಹೋದಾಗ, ಕೆಲಸ ಮಾಡುತ್ತಿದ್ದವನು ತಲೆಯೆತ್ತಿ ನೋಡಿ, ''ಯಾಕಪ್ಪಾ ಈ ಕಡೆ ಬಂದೆ?'' ಎಂದು ಕೇಳಿದ.

''ಪರಮಾತ್ಮನ ಹತ್ತಿರಕ್ಕೆ ಹೋಗುವ ದಾರಿ ಯಾವುದು––ಅಂತ ಕೇಳೋದಕ್ಕೆ ಬಂದೆ,'' ಎಂದ ತರುಣ ಭಕ್ತ.

''ಬಹಳ ಸುಲಭವಾದ ದಾರಿ ಇದೆ. ಪ್ರಪಂಚದ ಬಂಧನಗಳನ್ನೆಲ್ಲ ಕಡಿದುಹಾಕು. ಅನಂತರ ಪರಮಾತ್ಮನನ್ನು ಸೇರುವ ಪ್ರಯತ್ನ ಮಾಡು'' ಎಂದು ಸಲಹೆ ಬಂತು,

ಹೀಗೆ ಹೇಳಿದ ಜ್ಞಾನಿ ಷಾ ಇನಾಯತ್ ತನಗೆ ತಕ್ಕ ಗುರು ಎಂದು ತರುಣ ಬಲ್ಲಾ ಷಾ ಕಂಡುಕೊಂಡ. ಭಯಭಕ್ತಿಯಿಂದ ಗುರುಸೇವೆ ಮಾಡಿದ. ಗುರುವಿನ ಪ್ರೀತಿಯನ್ನು ಗಳಿಸಿದ. ದೇವರ ಕೃಪೆಗೆ ಪಾತ್ರನಾದ. ಹೀಗೆ ಪಡೆದ ಪರಮಸುಖವನ್ನು ಸುಂದರ 'ಕಾಫಿ' ಗಳ (ಹಾಡು) ರೂಪದಲ್ಲಿ ಜನರಿಗೆ ಹಂಚಿದ. ಸಿಂಧ್, ಪಂಜಾಬ್ ಪ್ರದೇಶಗಳಲ್ಲಿ ಇವು ಜನಪ್ರಿಯವಾದುವು.

ಬಲ್ಲಾ ಷಾನ ಒಂದು ಹಾಡಿನ ಅರ್ಥ ಇದು : ''ಯಾರನ್ನೂ ಬೆನ್ನಟ್ಟುವ ವರಲ್ಲೇ ನಾನು ಜೀವನವನ್ನೆಲ್ಲ ವ್ಯರ್ಥ ಮಾಡಿದೆ. ಈ ಜೀವನದ ಆಟದಲ್ಲಿ ಸೋಲಲು ಕಲಿಯಬೇಕು. ಹಾಗಿದ್ದರೆ ಮಾತ್ರ ಸಾಧುಸಂತರ ಸಹವಾಸ ಸಿಗುತ್ತದೆ.''

ಆಡಿದಂತೆ ಬಾಳಿದವನು ಬಲ್ಲಾ ಷಾ. ಇವನು ಹುಟ್ಟಿದ್ದು ಲಾಹೋರ್ ಮತ್ತು ಕಸೂರ್‌ಗಳ ನಡುವಿನ ಉಲಾನಿ ಎಂಬಲ್ಲಿಯ ಪ್ರತಿಷ್ಠಿತ ಕುಟುಂಬದಲ್ಲಿ (1680ರಲ್ಲಿ). ಆದರೆ ಇವನ ಬಾಳು ಕಳೆದದ್ದು ವೇದಾಂತಿಗಳು ಮತ್ತು

[illegible] ಸುಖ ಸೌಲಭ್ಯಗಳು ಸಿಗುತ್ತಿದ್ದರೂ ಕಠಿಣ ಸಾಧನೆಯ ದಾರಿಯನ್ನು ಆಯ್ದುಕೊಂಡವನು ಈತ. ಏಕಾಂತದಲ್ಲಿ ಧ್ಯಾನ ಮಾಡಲು ಬಲ್ಲಾ ಷಾಗೆ ಸ್ಮಶಾನವಾದರೂ ಸರಿಯೆ. ದೊಡ್ಡ ಗ್ರಂಥಗಳನ್ನು ಕಂಠಪಾಠಮಾಡಿ ಮಹಾಜ್ಞಾನಿಗಳೆಂದು ಮೆರೆಯುವವರನ್ನು ಕಂಡರೆ ಅವನಿಗಾಗುತ್ತಿರಲಿಲ್ಲ.

ಇರಾನಿನ ಸೂಫಿಗಳು ಮತ್ತು ಅರೇಬಿಯದ ಸಂತರಿಂದ ಬಲ್ಲಾ ಷಾ ಪ್ರಭಾವಿತನಾಗಿದ್ದ. ಅವನಿಗೆ ಹಿಂದು–ಮುಸಲ್ಮಾನ ಎಂಬ ಭೇದ ಇರಲಿಲ್ಲ. "ದೇವರನ್ನು ಆರಾಧಿಸುವ ಭಕ್ತ ಬೆಳಕನ್ನು ಕೂಡಿಕೊಳ್ಳಲು ಧಾವಿಸುವ ಪಾತೆಯಂತೆ. ಪಾತೆಗೆ ದೀಪ ದೇವಸ್ಥಾನದಲ್ಲಿ ಇದ್ದರೂ ಒಂದೇ. ಮಸೀದಿಯಲ್ಲಿದ್ದರೂ ಒಂದೇ." ಎಂದು ಹಾಡಿದವನು ಬಲ್ಲಾ ಷಾ.

ಹರಕು ಬಟ್ಟೆ ಧರಿಸಿ ಭಿಕಾರಿಯಂತೆ ತಿರುಗಿದ ಬಲ್ಲಾ ಷಾ ತನ್ನ 72ನೆಯ ವಯಸ್ಸಿನಲ್ಲಿ ಲಾಹೋರಿನಲ್ಲಿ ನಿಧನನಾದ.

ಬಸಂತಿ ದೇವಿ

1897ರಲ್ಲಿ ಬಂಗಾಳಿ ಹುಡುಗಿಯೊಬ್ಬಳ ವಿವಾಹ ನಡೆಯಿತು. ಹುಡುಗಿಯ ತಂದೆ ಅಸ್ಸಾಮಿನ ಜಿಲ್ಲೆ ಸಂಸ್ಥಾನದ ದಿವಾನರು. ವರ ಚಿತ್ತರಂಜನ ದಾಸ್. ಆ ವಧು ಮನೆಯ ಆವರಣದಿಂದ ಹೊರ ಬಂದು ದೇಶಸೇವೆಗೆ ನಿಲ್ಲುವಳೆಂದು ಆಗ ಯಾರೂ ಊಹಿಸಿರಲಿಲ್ಲ. ಆಕೆ ಬಸಂತಿದೇವಿ.



ಬಸಂತಿ : ಚಿತ್ತರಂಜನರ ಸಂಗಾತಿ

1921ರ ಅಸಹಕಾರ ಚಳುವಳಿಯ ಕಾಲದಲ್ಲಿ ಚಿತ್ತರಂಜನ ದಾಸರು ತಮ್ಮ ಪತ್ನಿಯೂ ಅದರಲ್ಲಿ ಭಾಗವಹಿಸಲು ಪ್ರೇರೇಪಿಸಿದರು. ಅದು ಆರಂಭ. ಮುಂದೆ ಆಕೆ ಖಾದಿ, ಚರಖಾಗಳನ್ನು ಜನಪ್ರಿಯಗೊಳಿಸುವ ಕೆಲಸದಲ್ಲಿ ತೊಡಗಿದರು. 1921ರ ಚಳುವಳಿಯಲ್ಲಿ ಮಗನ ಬಂಧನವಾದಾಗ ಬಸಂತಿ ದೇವಿಯು ಚಳುವಳಿಯಲ್ಲಿ ಧುಮುಕಿದರು: ಹರತಾಳ ನಡೆಸಿ ಸೆರೆಮನೆವಾಸ ಅನುಭವಿಸಿದರು. ಮುಚ್ಚಳಿಕೆ ಬರೆದು ಕೊಟ್ಟರೆ ಬಿಡುಗಡೆ ಮಾಡುತ್ತೇವೆಂದು ಅಧಿಕಾರಿಗಳು ಹೇಳಿದಾಗ ಆಕೆ ಒಪ್ಪಲಿಲ್ಲ. ಕಡೆಗೆ ಏನೊಂದು ಶರತ್ತೂ ಹಾಕದೆ ಆಕೆಯನ್ನು ಬಿಡುಗಡೆ ಮಾಡಿದರು. ಚಿತ್ತರಂಜನದಾಸರು ಬಂಧಿಸಲ್ಪಟ್ಟಾಗ ಅವರು ನಡೆಸುತ್ತಿದ್ದ 'ಬಂಗ್ಲಾರ್ ಕಥಾ' ರಾಜಕೀಯ ಪತ್ರಿಕೆಯ ಸಂಪಾದಕತ್ವದ ಹೊಣೆಯನ್ನು ಬಸಂತಿದೇವಿ ಹೊತ್ತರು. ರಾಜಕೀಯ ಸಮ್ಮೇಳನದ ಅಧ್ಯಕ್ಷತೆ ವಹಿಸಿದರು. ಪತಿ ವಿವಿಧ ಕ್ಷೇತ್ರಗಳಲ್ಲಿ ನಡೆಸುತ್ತಿದ್ದ ಸಂಘಟನಾ ಕೆಲಸಗಳನ್ನು ಇವರು ನಿರ್ವಹಿಸಿದರು. ಅಷ್ಟು ಉತ್ಸಾಹದಿಂದ ರಾಜಕೀಯದಲ್ಲಿ ಪಾಲ್ಗೊಳ್ಳುತ್ತಿದ್ದ ಬಸಂತಿ ದೇವಿ 1925 ಜೂನ್ 16 ರಂದು ಚಿತ್ತರಂಜನ ದಾಸರ ನಿಧನಾನಂತರ ರಾಜಕೀಯದಿಂದ ದೂರವಾದರು.

1972ರಲ್ಲಿ ಆಕೆಗೆ ಪದ್ಮವಿಭೂಷಣ ಪ್ರಶಸ್ತಿಯಿತ್ತು ಗೌರವಿಸಲಾಯಿತು.

ಬಸವಕಲ್ಯಾಣ

"ಒಳಗು ಹೊರಗು ಶುದ್ಧವಾದವರಿಗಲ್ಲದೆ ಕಲ್ಯಾಣವ ಹೊಗಬಾರದು" ಎಂದು ಅಕ್ಕಮಹಾದೇವಿ ಕಲ್ಯಾಣ ಪಟ್ಟಣದ ಮಹಿಮೆಯನ್ನು ಹೊಗಳಿದ್ದಾರೆ. 12ನೆಯ ಶತಮಾನದಲ್ಲಿ ಭಕ್ತಿಭಂಡಾರಿ ಬಸವೇಶ್ವರರಿಂದಾಗಿ ಕಲ್ಯಾಣವು ಆಧ್ಯಾತ್ಮ ಕೇಂದ್ರವಾಯಿತು, ಮುಂದೆ ಬಸವಕಲ್ಯಾಣ ಎನಿಸಿತು.

ಬಸವಕಲ್ಯಾಣ - ಕನ್ನಡನಾಡಿನ ವಿಶೇಷ ಕ್ಷೇತ್ರಗಳಲ್ಲಿ ಒಂದು. ಇದು ಬಿದರೆಯಿಂದ 40 ಮೈಲು ದೂರದಲ್ಲಿದೆ.

ಚಾಲುಕ್ಯ ಚಕ್ರವರ್ತಿ ಇಮ್ಮಡಿ ಪುಲಿಕೇಶಿಯ ಕಾಲದಲ್ಲಿ, ಅಂದರೆ 6ನೆಯ ಶತಮಾನದಲ್ಲೇ, ಕಲ್ಯಾಣನಗರ ಸ್ಥಾಪಿತವಾಗಿದ್ದಿರಬೇಕೆಂಬ ಊಹೆಯಿದೆ. ಬಾದಾಮಿಯ ಚಾಲುಕ್ಯ ವಂಶದ ದೊರೆ ತೈಲಪ ರಾಷ್ಟ್ರಕೂಟರ ಪ್ರಾಬಲ್ಯವನ್ನು ಮುರಿದು. 973ರಲ್ಲಿ ಕಲ್ಯಾಣದ ಚಾಲುಕ್ಯ ಮನೆತನವನ್ನು ಸ್ಥಾಪಿಸಿದ. ಈ ವಂಶದ ಆಹವಮಲ್ಲ ಸೋಮೇಶ್ವರನು ಕಲ್ಯಾಣನಗರವನ್ನು 1050ರಲ್ಲಿ ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡ. ಈ ನಗರ ಸುಮಾರು 125 ವರ್ಷ ಕಾಲ ರಾಜಧಾನಿಯಾಗಿ ವೈಭವದಿಂದ ಕೂಡಿದ ಪಟ್ಟಣವಾಗಿ ಶೋಭಿಸಿತು. ಇದು ಬಹಮನಿ ರಾಜ್ಯದ ವಶವಾದಾಗ ಕಳೆಗುಂದಿತು. ಮುಂದೆ ಹಲವು ರಾಜರು ಅದನ್ನು ವಶಪಡಿಸಿಕೊಳ್ಳಲು ಕಾದಾಡಿದರು. 1724ರಲ್ಲಿ ಕಲ್ಯಾಣ ಹೈದರಾಬಾದ್ ಸಂಸ್ಥಾನಕ್ಕೆ ಸೇರಿತು. ರಾಜ್ಯ ಪುನರ್ವಿಂಗಡಣೆಯಾದಾಗ ಮೈಸೂರು ರಾಜ್ಯಕ್ಕೆ ಬಂತು.

11ನೆಯ ಶತಮಾನದಲ್ಲಿ ಕಲ್ಯಾಣದ ಖ್ಯಾತಿ ಬೆಳೆದದ್ದು ಆರನೆಯ ವಿಕ್ರಮಾದಿತ್ಯನ ಕಾಲದಲ್ಲಿ. ತನ್ನ ಶೌರ್ಯ ಪ್ರತಾಪಗಳಿಗೆ ಪ್ರಸಿದ್ಧನಾಗಿದ್ದ ಈ ದೊರೆ ಕಲ್ಯಾಣದಿಂದ ಆಳುತ್ತಿದ್ದ. ಕಾಶ್ಮೀರದ ಕವಿ ಬಿಲ್ಹಣ ತನ್ನ ನಾಡಿನಿಂದ ಹೊರಗೆ ರಾಜಾಶ್ರಯವನ್ನು ಅರಸುತ್ತಿದ್ದಾಗ, ಚಾಲುಕ್ಯ ದೊರೆ ವಿಕ್ರಮನ ಆಸ್ಥಾನದಲ್ಲಿ ಅವನಿಗೆ ಮನ್ನಣೆ ದೊರೆಯಿತು. ಅವನ ಕಾವ್ಯಗಳಲ್ಲಿ ಕಲ್ಯಾಣದ ವರ್ಣನೆಯಿದೆ.

ಅನಂತರ 12ನೆಯ ಶತಮಾನದಲ್ಲಿ ಬಿಜ್ಜಳನ ಕಾಲದಲ್ಲಿ ಕಲ್ಯಾಣ. ಬಸವೇಶ್ವರರಿಂದ ಆರಂಭವಾದ ಧಾರ್ಮಿಕ ಕ್ರಾಂತಿಯ ಕೇಂದ್ರವಾಯಿತು. ಆ ಕಾಲಕ್ಕೆ ಕಲ್ಯಾಣ ಹನ್ನೆರಡು ಯೋಜನ ಸುತ್ತಳತೆಯ ನಗರವಾಗಿತ್ತು; ದೊಡ್ಡ ಕೋಟೆಯಿಂದ ಸುತ್ತುವರಿದಿದ್ದ ಈ ನಗರ ಜನಭರಿತವಾಗಿತ್ತು; ಸಂಪತ್ಸಮೃದ್ಧವಾಗಿತ್ತು —ಎಂಬ ವಿವರಣೆಗಳು ದೊರೆಯುತ್ತವೆ.



ಆಧ್ಯಾತ್ಮಿಕ ಕೇಂದ್ರ : ಬಸವಕಲ್ಯಾಣ

ವೀರಶೈವ ಧರ್ಮದ ಇತಿಹಾಸದಲ್ಲಿ ಅತ್ಯಂತ ಪ್ರಖ್ಯಾತವಾದ ಅನುಭವ ಮಂಟಪವಿದ್ದದ್ದು ಈ ನಗರದಲ್ಲೇ.

ಇಂತಹ ಹಿರಿಮೆಯುಳ್ಳ ಕಲ್ಯಾಣ ಇಂದು ಸಣ್ಣ ಊರಾದರೂ ಅದರ ಹಿಂದಿನ ವೈಭವವನ್ನು ಸಾರುವ ಹಲವಾರು ಅವಶೇಷಗಳನ್ನು ಊರಿನ ಸುತ್ತಮುತ್ತ ಕಾಣಬಹುದು.

ಕಲ್ಯಾಣದಿಂದ 11 ಮೈಲು ದೂರದಲ್ಲಿ ಗೋಳಿಗೆಯ ಮಾರಯ್ಯನ ಗವಿಯಿದೆ. ಇದು ನಿಸರ್ಗದಲ್ಲಿರುವ, ಬೃಹತ್ ಕಂಬಗಳುಳ್ಳ, ಪ್ರಶಾಂತ ಸ್ಥಳ. ಕಲ್ಯಾಣವನ್ನು ಪ್ರವೇಶಿಸುವ ಮೊದಲೇ ಸಿಗುವ 'ಬಂದವರ ಓಣಿ' ಆ ನಗರದ ಉನ್ನತಿಯ ಕಾಲದಲ್ಲಿ, ಅಲ್ಲಿಗೆ ಬರುತ್ತಿದ್ದ ಪ್ರಯಾಣಿಕರು ನಗರ ಪ್ರವೇಶಕ್ಕೆ ಮೊದಲು ವಿಶ್ರಮಿಸುತ್ತಿದ್ದ ಸ್ಥಳ ಎಂದು ನಂಬಿಕೆ. ಕಲ್ಯಾಣದಲ್ಲಿ ಕಂಡುಬರುವ ಇತರ ಅವಶೇಷಗಳು ಬಿಜ್ಜಳನ ಅರಮನೆ. ನಾರಾಯಣಪುರದ ಶಿವಾಲಯ. ಪಟ್ಟಣದ ಸುತ್ತಲಕೋಟೆ. ಮಠಗಳು ಮುಂತಾದುವು. ಅಕ್ಕನಾಗಮ್ಮ, ಪ್ರಭುದೇವರು, ವಿಜ್ಞಾನೇಶ್ವರ ಮುಂತಾದವರ ಹೆಸರು ಹೊತ್ತ ಹಲವಾರು ಗವಿಗಳು ಇಲ್ಲಿವೆ.

ಬಸವೇಶ್ವರ

ಆಧ್ಯಾತ್ಮಿಕ, ರಾಜಕೀಯ ಜೀವನಗಳೆರಡನ್ನೂ ಏಕಪ್ರಕಾರವಾದ ದಕ್ಷತೆಯಿಂದ ಸಾಧಿಸಿದ ಅಪೂರ್ವ ವ್ಯಕ್ತಿ, ಬಸವೇಶ್ವರರು.

ಬಸವೇಶ್ವರರು ಹುಟ್ಟಿದ್ದು 1125ರ ಸುಮಾರಿನಲ್ಲಿ. ಅವರು ಮೊದಲು ವೈದಿಕ ವಿದ್ಯೆಯನ್ನು ಅಭ್ಯಾಸ ಮಾಡಿದರು. ಅದನ್ನು ವಿಮರ್ಶಾತ್ಮಕ ದೃಷ್ಟಿಯಿಂದ ವಿವೇಚಿಸಿ, ಜಾತಿ ವ್ಯವಸ್ಥೆಯನ್ನು ಮೀರಿದ ಹೊಸ ಸಮಾಜ ರೂಪಿಸಲು ಪ್ರಯತ್ನಿಸಿದರು. ಅಧ್ಯಾತ್ಮ ರಂಗದಲ್ಲಿ ಪುರುಷರಂತೆ ಸ್ತ್ರೀಯರಿಗೂ ಸ್ಥಾನ ದೊರಕಿಸಲು ಶ್ರಮಿಸಿದರು. ಶಿವಭಕ್ತಿ ಪ್ರಧಾನವಾದ ಧರ್ಮವನ್ನು ಸಾಮಾನ್ಯರಿಗೂ ತಿಳಿಯುವಂಥ ಕನ್ನಡ ಭಾಷೆಯಲ್ಲಿ ಬೋಧಿಸಿದರು. ಹೀಗೆ ಆಧ್ಯಾತ್ಮಿಕ, ಸಾಮಾಜಿಕ ರಂಗದಲ್ಲಿ ಕ್ರಾಂತಿಯನ್ನುಂಟು ಮಾಡಿದರು.

ನೋಡಿ : ಬಸವಕಲ್ಯಾಣ
ಬಸವೇಶ್ವರ–ಸಂಪುಟ ೧

ಬಹದ್ದೂರ್ ಷಾ



ಬ್ರಿಟಿಷರ ಮೇಲಿನ ಅತೃಪ್ತಿ 1857ರಲ್ಲಿ ಸಿಪಾಯಿದಂಗೆಗೆ ದಾರಿ ಮಾಡಿಕೊಟ್ಟಿತು. ದೆಹಲಿಯಲ್ಲಿದ್ದ ಮೊಘಲ್ ಸಂತತಿಯ ಅರಸ ಬಹದ್ದೂರ್ ಷಾನನ್ನು ಕ್ರಾಂತಿಕಾರರು ತಮ್ಮ ಮುಖಂಡನನ್ನಾಗಿ ಆರಿಸಿದರು.

ಬಹದ್ದೂರ್ ಷಾ ಜನಿಸಿದ್ದು 1775ರಲ್ಲಿ; ಪಟ್ಟಕ್ಕೆ ಬಂದದ್ದು 1837ರಲ್ಲಿ. ದುರ್ಬಲನಾದ ಷಾ ಈಸ್ಟ್ ಇಂಡಿಯಾ ಕಂಪೆನಿಯವರ ಹಿಡಿತಕ್ಕೆ ಒಳಗಾಗಿದ್ದ. ಅವನ ಅಧಿಕಾರ ಅರಮನೆಗಷ್ಟೇ ಸೀಮಿತವಾಗಿತ್ತು.

ಸತದೃಷ್ಟ :
ಬಹದ್ದೂರ್ ಷಾ

1857ರಲ್ಲಿ ಸಿಪಾಯಿ ಬಂಡಾಯ ಮೀರತ್‌ನಲ್ಲಿ ಆರಂಭವಾಗಿ. ಮಿಂಚಿನ ವೇಗದಲ್ಲಿ ಇತರ ಸ್ಥಳಗಳಿಗೂ ಹಬ್ಬಿತು. ಬಂಡಾಯಗಾರರು ದೆಹಲಿಗೆ ಬಂದು ವೃದ್ಧ ಷಾನನ್ನು ತಮ್ಮ ಮುಖಂಡನಾಗುವಂತೆ ಕೇಳಿದರು. ಮೊದಲು ಆತ ಅದಕ್ಕೆ ಒಪ್ಪಲಿಲ್ಲವಾದರೂ ಕೊನೆಗೆ ಸಮ್ಮತಿಸಿದ. ಅವರು ಷಾನನ್ನು ಭಾರತದ ಚಕ್ರವರ್ತಿ ಎಂದು ಘೋಷಿಸಿದರು.

1857 ಸೆಪ್ಟೆಂಬರ್‌ನಲ್ಲಿ ದಂಗೆಯನ್ನಡಗಿಸುವ ಉದ್ದೇಶದಿಂದ ವಿಲಿಯಂ ಹಾಡ್ಸನ್ ದೆಹಲಿಯನ್ನು ಮುತ್ತಿದ. ನಗರ ಅವನ ವಶವಾಯಿತು. ಷಾನನ್ನು ಸೆರೆಹಿಡಿದು ವಿಚಾರಣೆಗೆ ಗುರಿಪಡಿಸಿ. ರಂಗೂನಿಗೆ ಗಡೀಪಾರು ಮಾಡಿದರು. ಷಾ ಅಲ್ಲೇ 1862ರಲ್ಲಿ ನಿಧನನಾದ.

ಬಹದ್ದೂರ್ ಷಾನ ಮರಣದೊಂದಿಗೆ ಭಾರತದಲ್ಲಿ ಮೊಘಲರ ಆಳ್ವಿಕೆ ಕೊನೆಗಂಡಿತು.

ನೋಡಿ : ಜೀನತ್‌ಮಹಲ್ ; 'ಸಿಪಾಯಿ ದಂಗೆ'

ಬಳ್ಳಿಗಾವೆ

"ಕಮಲ ಪುಂಜ, ದುಂಬಿಯ ಹಿಂಡು, ಮಾವಿನ ತೋಪು, ಹಂಸ ಗಿಳಿ ಕೋಗಿಲೆ, ವೀಳೆಯದೆಲೆ ಬಳ್ಳಿ, ಅಡಿಕೆಮರ ಮುಚುಕುಂದಗಳಿಂದ ಕೂಡಿದ" ಸುಂದರ ನಗರ ಬೆಳಿಗಾಮೆ (ಈಗಿನ ಬಳ್ಳಿಗಾವೆ). ಇದಕ್ಕೆ ಸೇರಿದ ಕೋಡಿಮಠ 11–12ನೆಯ ಶತಮಾನದಲ್ಲಿ ಪ್ರಖ್ಯಾತ ವಿದ್ಯಾ ಕೇಂದ್ರವಾಗಿತ್ತು.

ಈಗ ಬಳ್ಳಿಗಾವೆ ಶಿವಮೊಗ್ಗೆಯ ಶಿಕಾರಿಪುರ ತಾಲ್ಲೂಕಿಗೆ ಸೇರಿರುವ ಒಂದು ಹಳ್ಳಿ. ಬಲಿಪುರ, ಬಳ್ಳಿಪುರ, ಬಳ್ಳಿ ಗ್ರಾಮ ಇತ್ಯಾದಿ ಹೆಸರುಗಳಿಂದ ಇದು ಕರೆಯಲ್ಪಟ್ಟಿದೆ. ಪ್ರಾಚೀನ ರಾಜಧಾನಿಗಳಲ್ಲಿ ಒಂದಾದ ಬಳ್ಳಿಗಾವೆ ಧಾರ್ಮಿಕ ಕೇಂದ್ರವೂ ಆಗಿತ್ತು. ಹಿರಿಯಮಠ, ಪಂಚಲಿಂಗಮಠ, ತ್ರಿಪುರಾಂತಕಮಠ, ಕೋಡಿಮಠಗಳು ಇದಕ್ಕೆ ಸೇರಿದ್ದ ವಿದ್ಯಾಸಂಸ್ಥೆಗಳು.

ಉತ್ತಮ ಶಿಲ್ಪಕೃತಿಗಳಿಂದ ತುಂಬಿದ ದೇವಾಲಯ, ಮಠಗಳು ಈ ನಗರದ ಇನ್ನೊಂದು ವೈಶಿಷ್ಟ್ಯವಾಗಿತ್ತು. ಈಗಲೂ ಇಲ್ಲಿ ಕೇದಾರೇಶ್ವರ, ಪಂಚಲಿಂಗ, ತ್ರಿಪುರಾಂತಕ, ಸೋಮೇಶ್ವರ ದೇವಾಲಯಗಳಿವೆ. ಜೈನ-ಬೌದ್ಧ ಧರ್ಮಗಳೂ ಇಲ್ಲಿ ಪ್ರಚಲಿತವಿದ್ದ ಕುರುಹುಗಳಿವೆ. ಜೈನ ವಿಗ್ರಹಗಳಿವೆ. ಶಾಸನಗಳಲ್ಲಿ ಬೌದ್ಧ ಭಿಕ್ಷುಣಿ ನಾಗಿಯಕ್ಕ ಎಂಬವಳ ಪ್ರಸ್ತಾಪ ಕಂಡುಬರುತ್ತದೆ. ಹೀಗೆ ಬೆಳಿಗಾಮೆ ವೈಭವಯುತವಾಗಿ ಮೆರೆದ ನಗರ.

ಬಳ್ಳಿಗಾವೆ ನಗರದ ಮುಖ್ಯ ಪಾಲಕನಿಗೆ ಪಟ್ಟಣ ಸ್ವಾಮಿ ಅಥವಾ ಸ್ವಾಮಿ ಎಂದು ಕರೆಯುತ್ತಿದ್ದರು. ಬೌದ್ಧ, ಜೈನ, ಶೈವ, ವೈಷ್ಣವರೆಲ್ಲರಿಗೂ ಈ ನಗರದಲ್ಲಿ ಸಮಾನಾವಕಾಶವಿದ್ದಿತು. ರಾಜಾವಿಕ್ರಮಾದಿತ್ಯನೂ ಈ ನಗರದಿಂದ ಆಕರ್ಷಿತನಾಗಿದ್ದ. ರಾಜನಾಗುವ ಮೊದಲು ಅವನು ಈ ನಗರದ ಮೇಲಧಿಕಾರಿಯಾಗಿ ಇದ್ದಿರಲೂಬಹುದು. ನಿಲುದಾಣಗಳು, ಬಡವರಿಗೆ ಧರ್ಮಸಾಲೆಗಳು, ಶಾಲೆ, ಧಾರ್ಮಿಕ ಕೇಂದ್ರ ಮುಂತಾದುವನ್ನು ಕಟ್ಟಿಸುವುದರಲ್ಲಿ ಇಲ್ಲಿನ ಜನರ ಉತ್ಸುಕತೆ ಗಮನಾರ್ಹವಾಗಿತ್ತು. ಕಲಿಯುವುದಕ್ಕೆ ಇದ್ದಷ್ಟೇ ಮಹತ್ವ ಕಲಿಸುವುದಕ್ಕೂ ಇದ್ದಿತು.

ನೋಡಿ : ಕೋಡಿಮಠ

ಬ್ರಗಾಂಜಾ ಕುನ್ಹ

ಪ್ಯಾರಿಸ್ಸಿನಲ್ಲಿದ್ದ ಭಾರತೀಯ ಯುವಕನೊಬ್ಬನ ಮನಸ್ಸಿನಲ್ಲಿ ರಾಷ್ಟ್ರೀಯ ಸ್ವಾತಂತ್ರ್ಯಸಾಧನೆಯ ಹಂಬಲ ಮೂಡಿತ್ತು. ಐರೋಪ್ಯರ ಅಧಿಪತ್ಯಕ್ಕೆ ಒಳಪಟ್ಟಿದ್ದ ವಸಾಹತುಗಳಿಗೆ ರಾಜಕೀಯ ಸ್ವಾತಂತ್ರ್ಯ ದೊರೆಯಬೇಕೆಂದು ಆತ ವಾದಿಸುತ್ತಿದ್ದ. 1917ರ ರಷ್ಯದ ಮಹಾಕ್ರಾಂತಿ ಅವನ ಮೇಲೆ ಪ್ರಭಾವವನ್ನುಂಟುಮಾಡಿತು.

ಈ ವ್ಯಕ್ತಿಯೇ ಗೋವೆಯ ಸ್ವಾತಂತ್ರ್ಯ ಹೋರಾಟಗಾರ ಬ್ರಗಾಂಜಾ ಕುನ್ಹ. ಮೆನೆಜೆಸ್ ಬ್ರಗಾಂಜಾ ಕುನ್ಹ ಹುಟ್ಟಿದ್ದು 1891 ಏಪ್ರಿಲ್ 2ರಂದು; ಗೋವ ಪ್ರದೇಶದ ಚಂದೋರ್ ಹಳ್ಳಿಯಲ್ಲಿ. ವಿದ್ಯುತ್ ಎಂಜಿನಿಯರಿಂಗ್ ಓದಲು ಆತ ಪ್ಯಾರಿಸಿಗೆ ಹೋಗಿ 14 ವರ್ಷ ಕಾಲ ಅಲ್ಲಿದ್ದರು. ಅಲ್ಲಿದ್ದಾಗ ಫ್ರೆಂಚ್ ಪತ್ರಿಕೆಗಳಲ್ಲಿ ಗಾಂಧೀಜಿಯನ್ನು ಕುರಿತು ಹಾಗೂ ತಮ್ಮ ಸ್ವಾತಂತ್ರ್ಯದ ಬಗೆಗೆ ಭಾರತೀಯರ ದೃಷ್ಟಿಕೋನವನ್ನು ವಿವರಿಸಿ ಲೇಖನಗಳನ್ನು ಬರೆದರು. 1926ರಲ್ಲಿ ಭಾರತಕ್ಕೆ ಹಿಂತಿರುಗಿದರು.

ಗೋವ ಕಾಂಗ್ರೆಸ್ ಸಮಿತಿಯನ್ನು ಸ್ಥಾಪಿಸಿ ಅದನ್ನು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸಿಗೆ ಸೇರಿಸಿದರು.

ಪೋರ್ಚುಗೀಸರ ದಾಸ್ಯಕ್ಕೊಳಗಾಗಿದ್ದ ಗೋವೆಯ ವಿಮೋಚನೆಗಾಗಿ ಚಳುವಳಿ ಆರಂಭಿಸಿದರು. ಪತ್ರಿಕೆಗಳಿಗೆ ಲೇಖನ ಬರೆದರು. ಕರಪತ್ರಗಳನ್ನು ಪ್ರಕಟಿಸಿದರು.

1946ರಲ್ಲಿ ಪೋರ್ಚುಗೀಸ್ ದುರಾಡಳಿತದ ವಿರುದ್ಧ ಬಹಿರಂಗ ಸಭೆಯಲ್ಲಿ ಮಾತಾಡಿದ್ದಕ್ಕಾಗಿ, 1948ರಲ್ಲಿ ಸೈನಿಕ ನ್ಯಾಯಾಲಯದಲ್ಲಿ ಅವರ ವಿಚಾರಣೆ ನಡೆಯಿತು. ೮ ವರ್ಷ ಸೆರೆಮನೆವಾಸ ಲಭಿಸಿತು. 1950ರಲ್ಲಿ ಬಿಡುಗಡೆಯಾದರೂ ಪೋರ್ಚುಗಲ್‌ನ ರಾಜಧಾನಿ ಲಿಸ್ಬನಿನಲ್ಲೇ ಇರಬೇಕಾಯಿತು.

1953ರಲ್ಲಿ ಭಾರತಕ್ಕೆ ಮರಳಿ ಮತ್ತೆ ಗೋವ ವಿಮೋಚನೆಯ ಹೋರಾಟದಲ್ಲಿ ಭಾಗಿಯಾದರು. 1958ರ ಸೆಪ್ಟೆಂಬರ್ 26ರಂದು ಕುನ್ಹ ಮರಣ ಹೊಂದಿದರು.

ವಿಶ್ವ ಶಾಂತಿ ಸಮಿತಿ ಕುನ್ಹ ಅವರ ಮರಣಾನಂತರ, 1959ರಲ್ಲಿ ಅವರಿಗೆ ಚಿನ್ನದ ಶಾಂತಿ ಪದಕ ನೀಡಿತು.

ಕುನ್ಹ ಕಲಾರಾಧಕರಾಗಿದ್ದರು. ಆಧುನಿಕ ಚಿತ್ರ ಮತ್ತು ಶಿಲ್ಪಗಳನ್ನು ಅವರು ಸಂಗ್ರಹಿಸಿದ್ದರು. ಇದನ್ನು ಗೋವದ ಪಣಜಿಯಲ್ಲಿ ರಕ್ಷಿಸಿ ಇಟ್ಟಿದ್ದಾರೆ.

ಬ್ರಹ್ಮ

ತ್ರಿಮೂರ್ತಿಗಳಲ್ಲಿ ತಾನೇ ಶ್ರೇಷ್ಠನೆಂಬ ಹೆಮ್ಮೆ ಇತ್ತು—ಬ್ರಹ್ಮನಿಗೆ. ಅವನು ವೇದಗಳನ್ನು ನಿಂದಿಸಿ ಮಾತಾಡಿದ; ಪ್ರತ್ಯಕ್ಷನಾದ ಶಿವನನ್ನು ಕೂಡ ಧಿಕ್ಕರಿಸಿದ. ಶಿವ ಭೈರವನನ್ನು ಸೃಷ್ಟಿಸಿದ. ಭೈರವ ಬ್ರಹ್ಮನ ಐದನೆಯ ತಲೆಯನ್ನು ಕತ್ತರಿಸಿ ಹಾಕಿದ. ಅದು ಭೈರವನ ಕೈಗೇ ಅಂಟಿಕೊಂಡಿತು. ಬ್ರಹ್ಮಹತ್ಯಾ ದೋಷವೂ ತಟ್ಟಿತು. ಭೈರವ ಕಾಶಿಗೆ ಬಂದಾಗ ಬ್ರಹ್ಮಹತ್ಯಾದೋಷ ನಿವಾರಣೆಯಾಯಿತು. ಗಂಗೆಯಲ್ಲಿ ಸ್ನಾನ ಮಾಡಿದಾಗ ಕೈಗೆ ಅಂಟಿಕೊಂಡಿದ್ದ ಬ್ರಹ್ಮನ ಶಿರಸ್ಸು ಬಿದ್ದು ಹೋಯಿತು.

ಐದು ತಲೆಗಳಿದ್ದ ಬ್ರಹ್ಮ ಹೀಗೆ ಒಂದು ತಲೆಯನ್ನು ಕಳೆದುಕೊಂಡು ಚತುರ್ಮುಖ ಬ್ರಹ್ಮನಾದ — ಎಂಬುದು ಆತನನ್ನು ಕುರಿತ ಕಥೆ.

ಇವನು ಹುಟ್ಟಿದ್ದು ವಿಷ್ಣುವಿನ ನಾಭಿಯಿಂದ ಹೊರಟ ಕಮಲದಲ್ಲಿ. ಆಗ ಅವನಿಗೆ ಎಲ್ಲರಂತೆ ಒಂದೇ ಮುಖವಿತ್ತು. ಕಮಲದಲ್ಲಿ ಕುಳಿತು ಎಲ್ಲ ಕಡೆ ನೋಡುತ್ತಿದ್ದಂತೆ ಐದು ಮುಖಗಳಾದುವು. ಮುಂದೆ ಉಳಿದದ್ದು ನಾಲ್ಕು ಮುಖಗಳು — ಎಂದು ಪುರಾಣಗಳಲ್ಲಿ ಉಲ್ಲೇಖವಿದೆ.

ಬ್ರಹ್ಮ—ಜಾನಪದ ಚಿತ್ರ

ಬ್ರಹ್ಮನದು ಕೆಂಪು ಬಣ್ಣ, ನಾಲ್ಕು ಮುಖ. ನಾಲ್ಕು ಕೈಗಳು. ಒಂದು ಕೈಯಲ್ಲಿ ಕುಡಿಯುವ ಪಾತ್ರೆ; ಒಂದರಲ್ಲಿ ಪವಿತ್ರ ಮಣಿ ಜಪ್ಪು; ಒಂದರಲ್ಲಿ ದಂಡ; ಮತ್ತೊಂದರಲ್ಲಿ ವೇದ. ಇವನು ವಾಸ ಮಾಡುವುದು ಬ್ರಹ್ಮಲೋಕದಲ್ಲಿ. ವಾಹನ ಹಾಲುಬಿಳುಪಿನ ಹಂಸ. ಬ್ರಹ್ಮನ ಒಂದು ವರ್ಷಕ್ಕೆ ಕಲ್ಪ ಎನ್ನುತ್ತಾರೆ. ಆತನ ನಾಲ್ಕು ಮುಖಗಳು ನಾಲ್ಕು ವೇದಗಳನ್ನು ಪ್ರತಿನಿಧಿಸುತ್ತವೆ.

ತಾನೇ ಸೃಷ್ಟಿಸಿದ ಸರಸ್ವತಿ ಆತನ ಪತ್ನಿ. ಈಕೆ ವಿದ್ಯಾಭಿಮಾನಿ ದೇವತೆ. ನವಿಲು ಈಕೆಯ ವಾಹನ. ಬ್ರಹ್ಮನ ಎರಡನೆಯ ಹೆಂಡತಿ ಗಾಯತ್ರಿ.

ಜಗತ್ತಿನಲ್ಲಿ ಯಾರೂ ಬ್ರಹ್ಮನನ್ನು ಪೂಜಿಸಬಾರದೆಂದು ಶಿವನ ಶಾಪ. ಬ್ರಹ್ಮನ ದೇವಾಲಯಗಳು ಕಂಡುಬರುವುದು ಅಪರೂಪ.

ಬ್ರಹ್ಮನಿಗೆ ಮಾನಸ ಪುತ್ರರು ಮರೀಚಿ, ಅತ್ರಿ, ಅಂಗೀರಸ, ಪುಲಸ್ತ್ಯ, ಪುಲಹ, ಕ್ರತು —ಈ ಆರು ಜನ. ಬ್ರಹ್ಮನನ್ನು ಅಬ್ಜಭೂ, ಆದಿಕವಿ, ಚತುರಾನನ, ಧಾತ್ರಿ, ಲೋಕೇಶ, ನಾಭಿಜ, ಪಿತಾಮಹ, ಸನತ್‌ಸರೋಜನ್, ಸ್ರಷ್ಟ, ವಿಧಾತ್ರಿ, ವಿಧಿ ಎಂದು ಮೊದಲಾಗಿ ಕರೆಯುತ್ತಾರೆ. ಹಿಂದೂ ಧಾರ್ಮಿಕ ಗ್ರಂಥಗಳಲ್ಲಿ ಉಲ್ಲೇಖಿಸಿರುವ ಬ್ರಹ್ಮವನ್ನು ಪರಾತ್ಪರವಸ್ತು ಎನ್ನುತ್ತಾರೆ. ಇದಕ್ಕೆ ಗುಣ, ಆಕಾರ ಮುಂತಾದುವು ಇಲ್ಲ; ತಪಸ್ಸು, ಜ್ಞಾನಗಳಿಂದ ಇದನ್ನು ಕಾಣಬಹುದೆಂದು ಉಪನಿಷತ್ತುಗಳಲ್ಲಿ ಹೇಳಿದೆ.

ನೋಡಿ : ಸರಸ್ವತಿ ; ಹರ ; ಹರಿ

ಬ್ರಹ್ಮಗುಪ್ತ

ಅರಬ ದೇಶದ ಖಗೋಲವಿಜ್ಞಾನಕ್ಕೆ ಗಣಿತ ಆಧಾರ ದೊರೆತದ್ದು ಬ್ರಹ್ಮಗುಪ್ತನ ಉದ್ಗ್ರಂಥ 'ಬ್ರಹ್ಮಸ್ಫುಟ ಸಿದ್ಧಾಂತ'ದಿಂದಾಗಿ. ಭಾರತೀಯ ಗಣಿತ ವಿದ್ವಾಂಸರಲ್ಲಿ ಅಗ್ರಗಣ್ಯನಾದ ಬ್ರಹ್ಮಗುಪ್ತ ಏಳನೆಯ ಶತಮಾನದವನು. ಈತ ಉಜ್ಜಯಿನಿಯ ವೀಕ್ಷಣಾಲಯದ ಮುಖ್ಯಸ್ಥನಾಗಿದ್ದ.

ಬ್ರಹ್ಮಗುಪ್ತನ ಅನಂತರದ ಗಣಿತಜ್ಞರು ಅವನ ಬರಹಕ್ಕೆ ವಿವರಣೆ, ಉದಾಹರಣೆಗಳನ್ನು ಕೊಟ್ಟು ವಿಸ್ತರಿಸಿದರು. ಅನೇಕ ಶತಮಾನಗಳ ವರೆಗೆ ಬ್ರಹ್ಮಗುಪ್ತನ ಖಗೋಳವಿಜ್ಞಾನ ಮತ್ತು ಗಣಿತ ಕೃತಿಗಳ ಬರೆದ ಪ್ರತಿ ಹಲವನ್ನು ಅಭ್ಯಸಿಸಿ ಹಾಗೆಯೇ ಬಳಸುವುದು ರೂಢಿಯಲ್ಲಿತ್ತು.

'ಬ್ರಹ್ಮಸ್ಫುಟ ಸಿದ್ಧಾಂತ' 1,008 ಪದ್ಯಗಳಿಂದ ಕೂಡಿದೆ, 24 ಅಧ್ಯಾಯಗಳಿವೆ. ಬ್ರಹ್ಮಗುಪ್ತನ ಸ್ವಂತ ಕೃತಿಗೆ ಬೇಕಾದ ಬರಹವು ೧೨ನೆಯ ಮತ್ತು 18ನೆಯ ಅಧ್ಯಾಯಗಳಲ್ಲಿ.

ಈತ ವಿಷ್ಣುಗುಪ್ತನ ಮಗನೆಂದೂ ವ್ಯಾಘ್ರಮುಖ ದೊರೆಯ ಕಾಲದಲ್ಲಿ ಇದ್ದುದಾಗಿಯೂ ಶಕ 550ರಲ್ಲಿ (ಅಂದರೆ 628ರಲ್ಲಿ) ತನ್ನ ಮೂವತ್ತನೆಯ ವಯಸ್ಸಿನಲ್ಲಿ ಈ ಗ್ರಂಥವನ್ನು ಬರೆದಿರುವುದಾಗಿಯೂ ಬ್ರಹ್ಮಗುಪ್ತನೇ 'ಬ್ರಹ್ಮಸ್ಫುಟ ಸಿದ್ಧಾಂತ'ದಲ್ಲಿ ಹೇಳಿಕೊಂಡಿದ್ದಾನೆ. ಇದರಿಂದ ಆತ ಹುಟ್ಟಿದ ವರ್ಷ 598 ಎಂದು ಊಹಿಸಲಾಗಿದೆ. ಆರ್ಯಭಟ ಮುಂತಾದ ತನ್ನ ಹಿಂದಿನ ಲೇಖಕರನ್ನು ತನ್ನ ಬರೆಹಗಳಲ್ಲಿ ಟೀಕೆಗೆ ಗುರಿಮಾಡಿದ್ದಾನೆ. ಆ ಕಾಲಕ್ಕೆ ಭಾರತೀಯ ಖಗೋಳವಿಜ್ಞಾನ ಬರೆಹಗಳಲ್ಲಿ ಕಂಡುಬರುತ್ತಿದ್ದ ವಿದೇಶೀ ಖಗೋಳವಿಜ್ಞಾನ ವಿಚಾರಗಳನ್ನು ವಿಶೇಷವಾಗಿ ಟೀಕಿಸಿದ್ದಾನೆ. ಋಣ, ಧನ ಸಂಖ್ಯೆಗಳಿಂದ ಸರಳ ಗಣಿತ ಕ್ರಿಯೆಗಳು, ಶ್ರೇಢಿ, ಚತುರ್ಭುಜಗಳು, ಅಂಕಗಣಿತ, ಬೀಜಗಣಿತ, ರೇಖಾಗಣಿತ ವಿಷಯಗಳು ಇವನ ಬರೆಹದಲ್ಲಿವೆ. ಸಿದ್ಧಾಂತದಲ್ಲಿ ಇವನ ಬರೆಹವನ್ನು ಅನಂತರದ ಅನೇಕ ಹೆಸರಾಂತ ಗಣಿತಜ್ಞರು ಬಹುವಾಗಿ ಬಳಸಿ ಬೆಳೆಸಿದ್ದಾರೆ. 12ನೆಯ ಶತಮಾನದ ಭಾಸ್ಕರಾಚಾರ್ಯ ಇವನನ್ನು 'ಗಣಕಚಕ್ರ ಚೂಡಾಮಣಿ' ಎಂದು ಕರೆದಿದ್ದಾನೆ.

ಬ್ರಹ್ಮಗುಪ್ತ ತನ್ನ 67ನೆಯ ವಯಸ್ಸಿನಲ್ಲಿ 'ಖಂಡ ಖಾದ್ಯಕ' ಎಂಬ ಮತ್ತೊಂದು ಗ್ರಂಥ ರಚಿಸಿದ. ಇದು ಖಗೋಳವಿಜ್ಞಾನ ಗ್ರಂಥ. 'ಬ್ರಹ್ಮಸ್ಫುಟ ಸಿದ್ಧಾಂತ'ವು 'ಸಿಂಧ್ ಹಿಂದ್' ಎಂಬ ಹೆಸರಿನಲ್ಲೂ 'ಖಂಡ ಖಾದ್ಯಕ'ವು 'ಅರ್ ಕಂದ್' ಎಂದೂ 8ನೆಯ ಶತಮಾನದ ಅಂತ್ಯದಲ್ಲಿ ಅರಬೀ ಭಾಷೆಗೆ ಅನುವಾದಗೊಂಡುವು. ಅರಬಿ ಪಂಡಿತರು ಇವುಗಳಿಂದ ಬಹಳ ಪ್ರಭಾವಿತರಾದರು.

ಬ್ರಹ್ಮಗುಪ್ತ ಸುಮಾರು 660ರಲ್ಲಿ ಕಾಲವಾಗಿರಬಹುದು.

ಬ್ರಹ್ಮಪುತ್ರ

ಭಾರತದಲ್ಲಿ ಹರಿಯುವ ದೊಡ್ಡನದಿಗಳಲ್ಲಿ ಬ್ರಹ್ಮಪುತ್ರ ಮೊದಲ ಪಂಕ್ತಿಗೆ ಸೇರಿದ್ದು.

ಟಿಬೆಟ್ಟಿನಲ್ಲಿ 800 ಮೈಲು ದೂರ ಹರಿಯುವ ತ್ಸಾಂಗ್‌ಪೋ ನದಿಯೇ ಭಾರತವನ್ನು ಪ್ರವೇಶಿಸಿದ ಮೇಲೆ ಬ್ರಹ್ಮಪುತ್ರ ಎಂದು ಕರೆಸಿಕೊಂಡಿದೆ.

ಬ್ರಹ್ಮಪುತ್ರಾ ಹುಟ್ಟುವುದು ಮಾನಸ ಸರೋವರದ ಆಗ್ನೇಯಕ್ಕೆ–ಸಿಂಧೂ ಮತ್ತು ಸಟ್ಲೆಜ್ ಮೂಲಗಳ ಹತ್ತಿರದಲ್ಲೇ. ಇದು ಹಿಮಾಲಯದ ಪರ್ವತಶ್ರೇಣಿಗೆ ಹೆಚ್ಚು ಕಡಮೆ ಸಮಾನಾಂತರವಾಗಿ ಪೂರ್ವಕ್ಕೆ ಹರಿಯುತ್ತದೆ. ಸಮುದ್ರಮಟ್ಟದಿಂದ 12,000 ಅಡಿ ಎತ್ತರದಲ್ಲಿದ್ದರೂ ಟಿಬೆಟ್ಟಿನಲ್ಲಿ ಕೂಡ ಈ ನದಿ 400 ಮೈಲು ದೂರ ನೌಕಾಯಾನಕ್ಕೆ ಯೋಗ್ಯವಾಗಿದೆ. ಅಲ್ಲಿ ಪ್ರಾಣಿಗಳ ಚರ್ಮದಿಂದ ಮಾಡಿದ ದೋಣಿಗಳಲ್ಲಿ ಜನ ಇದರ ಮೇಲೆ ಸಂಚರಿಸುತ್ತಾರೆ.



ತನ್ನ ಉಗಮಸ್ಥಾನದಿಂದ ಪೂರ್ವಕ್ಕೆ ಹರಿಯುವ ನದಿ ಇದ್ದಕ್ಕಿದ್ದಂತೆ ದಕ್ಷಿಣಕ್ಕೆ ತಿರುಗಿ ಅರುಣಾಚಲ ಪ್ರದೇಶದ ಮಾರ್ಗವಾಗಿ ಅಸ್ಸಾಮನ್ನು ಪ್ರವೇಶಿಸುತ್ತದೆ. ಹಲವು ಕವಲುಗಳಾಗಿ ಒಡೆದು ಮತ್ತೆ ಸೇರಿಕೊಂಡು ಮುಂದುವರಿಯುತ್ತದೆ. ಮಹಾಪೂರ ಬಂದರಂತೂ ಐದು–ಆರು ಮೈಲು ಅಗಲವಾಗಿ ಹರಿಯುತ್ತದೆ. ಬ್ರಹ್ಮಪುತ್ರ ತಂದು ಹಾಕುವ ಮೆಕ್ಕಲು ಮಣ್ಣಿನಿಂದಾಗಿ ಈ ಪ್ರದೇಶ ಫಲವತ್ತಾಗಿದೆ. ಮಹಾಪೂರ ಬಂದಾಗ ಹೊಲ-ಮನೆಗಳನ್ನು ಮುಳುಗಿಸುವ ಈ ನದಿ ವಿಪತ್ಕಾರಿಯೂ ಹೌದು.

ಅಸ್ಸಾಮನ್ನು ದಾಟಿ ಬಾಂಗ್ಲಾದೇಶವನ್ನು ಹೊಕ್ಕ ಬ್ರಹ್ಮಪುತ್ರ 150 ಮೈಲು ಹರಿದು ಗಂಗಾನದಿಯ ಕವಲಾದ ಪದ್ಮಾನದಿಯನ್ನು ಕೂಡುತ್ತದೆ. ಅನಂತರ ಬಂಗಾಳ ಕೊಲ್ಲಿಯನ್ನು ಸೇರುತ್ತದೆ.

ಬ್ರಹ್ಮಪುತ್ರದ ಉದ್ದ 1,800 ಮೈಲು. ಅಸ್ಸಾಮಿನ ದಿಬ್ರುಘರ್‌ನಿಂದ ಸಮುದ್ರವನ್ನು ಸೇರುವವರೆಗೆ 800 ಮೈಲು ದೂರ ಬ್ರಹ್ಮಪುತ್ರ ನೌಕಾಯಾನಕ್ಕೆ ಯೋಗ್ಯವಾಗಿದೆ. ಬಾಂಗ್ಲಾದೇಶ ಮತ್ತು ಅಸ್ಸಾಂ ರಾಜ್ಯಗಳ ಸಾರಿಗೆ ಮತ್ತು ವಾಣಿಜ್ಯ ಚಟುವಟಿಕೆಗಳಲ್ಲಿ ಬ್ರಹ್ಮಪುತ್ರದ ಪಾತ್ರ ಹಿರಿದು. ಅಸ್ಸಾಮಿನ ಹಿರಿಯ ನೀರಾವರಿ ಹಾಗೂ ವಿದ್ಯುತ್ ಉತ್ಪಾದನಾ ಯೋಜನೆಗಳು ಈ ನದಿಗೆ ಸಂಬಂಧಿಸಿವೆ.

ಬ್ರಹ್ಮಪುತ್ರಕ್ಕೆ ಬರ್ಮಾ ಭಾಷೆಯಲ್ಲಿ ಭುಲ್ಲಾಂಬುತೂರ್ (ಜುಳುಜುಳು ಶಬ್ದ ಮಾಡುವಂಥದ್ದು) ಎನ್ನುತ್ತಾರೆ.

ಬ್ರಹ್ಮ ಸಮಾಜ

ದೇವನೊಬ್ಬನೇ; ಅವನು ನಿರಾಕಾರ; ಅವನಿಗೆ ಹೆಸರು, ಪದವಿಗಳಿಲ್ಲ. ಈ ವಿಶ್ವದ ಕರ್ತೃ ಮತ್ತು ರಕ್ಷಕನಾದ ಈ ದೇವರನ್ನು ಆರಾಧಿಸಬೇಕು. ಜಾತಿ ಪದ್ಧತಿ, ವಿಗ್ರಹಾರಾಧನೆ, ಸಹಗಮನ(ಸತಿ) ಇವುಗಳನ್ನು ಆಚರಿಸಕೂಡದು.

—ಇವು ಬ್ರಹ್ಮ ಸಮಾಜದ ಧ್ಯೇಯಗಳು.

ಹದಿನೆಂಟನೆಯ ಶತಮಾನದ ವೇಳೆಗೆ ಹಿಂದೂಧರ್ಮದಲ್ಲಿ ನುಸುಳಿದ್ದ ಮೂಢ ನಂಬಿಕೆಗಳನ್ನು ಕಿತ್ತೆಸೆದು, ಕ್ರೈಸ್ತ ಹಾಗೂ ಇಸ್ಲಾಂ ಧರ್ಮಗಳಲ್ಲಿನ ಉತ್ತಮ ಅಂಶಗಳನ್ನು ಗ್ರಹಿಸಿ, ಹಿಂದೂಧರ್ಮವನ್ನು ವೈಚಾರಿಕ ಹಾಗೂ ಮಾನವೀಯ ಚೌಕಟ್ಟಿನೊಳಕ್ಕೆ ತರಲು ಪ್ರಯತ್ನಿಸಿದವರು ರಾಜಾ ರಾಮಮೋಹನ್‌ರಾಯ್. ಈ ಪ್ರಯತ್ನದ ಕಾರ್ಯಾಚರಣೆಗಾಗಿ ಅವರು ಪ್ರಾರಂಭಿಸಿದ 'ಬ್ರಹ್ಮಸಭಾ' ಮುಂದೆ ಅವರ ನೇತೃತ್ವದಲ್ಲಿ 'ಬ್ರಹ್ಮ ಸಮಾಜ'ವಾಗಿ ಪರಿವರ್ತನೆಯಾಯಿತು.

ರಾಜಾ ರಾಮಮೋಹನರಾಯ್‌ರ ಅನಂತರ ಕೊಂಚ ಕಾಲ ಕುಂಟುತ್ತ ಸಾಗಿದ ಬ್ರಹ್ಮ ಸಮಾಜವನ್ನು ಪುನರುದ್ಧಾರಗೊಳಿಸಿದವರು ದೇವೇಂದ್ರನಾಥ ಠಾಕೂರರು. ಅಸ್ತಿಕರಾದರೂ ಶುದ್ಧ ತತ್ತ್ವಜ್ಞಾನಿಯಾಗಿದ್ದ ದೇವೇಂದ್ರನಾಥರು ಒಂದು ಮುದ್ರಣಾಲಯ ಸ್ಥಾಪಿಸಿ ಬ್ರಹ್ಮ ಸಮಾಜದ 'ತತ್ತ್ವಬೋಧಿನಿ ಪತ್ರಿಕಾ' ಎಂಬ ಮಾಸಪತ್ರಿಕೆ ಪ್ರಾರಂಭಿಸಿದರು.

ಬ್ರಹ್ಮಸಮಾಜದ ತರುಣ ಸದಸ್ಯರಾಗಿದ್ದ ಕೇಶವ ಚಂದ್ರಸೇನರಿಗೂ ದೇವೇಂದ್ರನಾಥ ಠಾಕೂರರಿಗೂ ಭಿನ್ನಾಭಿಪ್ರಾಯಗಳು ಉಂಟಾದುವು; ಕೇಶವ ಚಂದ್ರಸೇನರು ಮೂಲ ಬ್ರಹ್ಮಸಮಾಜದಿಂದ ದೂರವಾಗಿ 1866ರಲ್ಲಿ

ಭಾರತವರ್ಷೀಯ ಬ್ರಹ್ಮಸಮಾಜವನ್ನು ಸ್ಥಾಪಿಸಿದರು. ಬಾಲ್ಯ ವಿವಾಹವನ್ನು ವಿರೋಧಿಸುತ್ತಿದ್ದ ಕೇಶವ ಚಂದ್ರಸೇನರೇ ತಮ್ಮ ಚಿಕ್ಕವಯಸ್ಸಿನ ಮಗಳನ್ನು ಇನ್ನೂ ವಯಸ್ಸಿಗೆ ಬಾರದ ಕೂಚ್–ಬಿಹಾರಿನ ರಾಜಕುಮಾರನಿಗೆ ಮದುವೆ ಮಾಡಿಕೊಟ್ಟಾಗ, ಇವರ ಸಮಾಜದ ತರುಣ ಸದಸ್ಯರು ಇವರಿಂದ ದೂರವಾದರು. ಈ ಸಮಾಜ ಒಡೆದು 'ಸಾಧಾರಣ ಬ್ರಹ್ಮಸಮಾಜ'ವೆಂಬ ಹೊಸ ಸಂಸ್ಥೆ ಹುಟ್ಟಿಕೊಂಡಿತು.

ಹೀಗೆ ಬ್ರಹ್ಮಸಮಾಜ ಛಿದ್ರವಾಯಿತು. ಹಿಂದಿನಷ್ಟು ಪ್ರಭಾವಶಾಲಿಯಾಗಿರದಿದ್ದರೂ ತನ್ನ ಧ್ಯೇಯಗಳಿಗಾಗಿ ಹೋರಾಡುತ್ತಲೇ ಇತ್ತು. ಮುಂದೆ ಬ್ರಹ್ಮಸಮಾಜದ ಪ್ರಭಾವ ಮತ್ತೂ ಕಡಮೆಯಾದರೂ ಅದರ ಸುಧಾರಣಾ ಧ್ಯೇಯಗಳು ಮಾನ್ಯತೆ ಗಳಿಸಿದುವು.

ಬ್ರಹ್ಮ ಸೂತ್ರ

“ಅಥಾತೋ ಬ್ರಹ್ಮ ಜಿಜ್ಞಾಸಾ”–(ಬ್ರಹ್ಮಜ್ಞಾನ ಪಡೆಯಲು) ಬ್ರಹ್ಮವನ್ನು ಕುರಿತು ಈಗ ಜಿಜ್ಞಾಸೆ ನಡೆಸೋಣ ಎನ್ನುವ ಅರ್ಥ ಕೊಡುವ ಈ ಸಾಲು ಬ್ರಹ್ಮ ಸೂತ್ರದ ಮೊದಲನೆಯ ಸೂತ್ರ. ಬ್ರಹ್ಮಸೂತ್ರವನ್ನು ವೇದಾಂತ ಸೂತ್ರ ಎಂದೂ ಕರೆಯುತ್ತಾರೆ.

ಬ್ರಹ್ಮ ಸೂತ್ರದ ರಚನಕಾರ ಬಾದರಾಯಣ. ಮಹಾಭಾರತವನ್ನು ಬರೆದ ವ್ಯಾಸನೇ ಈತ ಎಂಬ ನಂಬಿಕೆಯಿದೆ. ಕ್ರಿಸ್ತಶಕದ ಆದಿಭಾಗದಲ್ಲಿ ಈ ಗ್ರಂಥ ರಚನೆಯಾಗಿರಬೇಕೆಂದು ಅಭಿಪ್ರಾಯ. ಬ್ರಹ್ಮಜ್ಞಾನವೇ ಜೀವನ್ಮುಕ್ತಿಗೆ ದಾರಿ ಎಂದು ಬೋಧಿಸಿದ ವಿವಿಧ ಉಪನಿಷತ್ತುಗಳಲ್ಲಿ ಒಮ್ಮತವಿರಲಿಲ್ಲ. ಉಪನಿಷತ್ತುಗಳ ಬೋಧನೆಯಲ್ಲಿ ಏಕರೂಪತೆಯನ್ನು ಸಾಧಿಸುವುದು ಅವಶ್ಯವಾಗಿತ್ತು. ಬಾದರಾಯಣರು ಬ್ರಹ್ಮಸೂತ್ರದಲ್ಲಿ ಇದನ್ನು ಸಾಧಿಸಿದರು.

ಬ್ರಹ್ಮಸೂತ್ರಕ್ಕೆ ಶಂಕರಾಚಾರ್ಯರು ಭಾಷ್ಯ ಬರೆದಿದ್ದಾರೆ. ಶಂಕರರ ಭಾಷ್ಯಕ್ಕೆ ವಾಚಸ್ಪತಿ ಮೊದಲಾದವರು ವ್ಯಾಖ್ಯಾನ ಬರೆದಿದ್ದಾರೆ. ರಾಮಾನುಜರು, ಮಧ್ವಾಚಾರ್ಯರು ಕೂಡ ತಮ್ಮ ತಮ್ಮ ಸಿದ್ಧಾಂತಗಳನ್ನು ಪ್ರತಿಪಾದಿಸಲು ಬ್ರಹ್ಮಸೂತ್ರಕ್ಕೆ ಭಾಷ್ಯ ಬರೆದಿದ್ದಾರೆ.

ಬ್ಲವೆಟ್ಸ್ಕಿ

1875ರಲ್ಲಿ ನ್ಯೂಯಾರ್ಕ್ ನಗರದಲ್ಲಿ ಥಿಯಸಾಫಿಕಲ್ ಸೊಸೈಟಿಯನ್ನು ಸ್ಥಾಪಿಸಿದ ಬ್ಲವೆಟ್ಸ್ಕಿ ಹುಟ್ಟಿದ್ದು ರಷ್ಯದ ಏಕಟರಿ-ನೊಸ್ಲಾವ್‌ನಲ್ಲಿ, 1831 ಜೂಲೈ 31ರಂದು.

17 ವರ್ಷಕ್ಕೆ ವಿವಾಹವಾಯಿತು. ಕೆಲವೇ ತಿಂಗಳುಗಳ ಅನಂತರ ಜಗತ್ತಿನ ವಿವಿಧ ರಾಷ್ಟ್ರಗಳಲ್ಲಿ ಪ್ರವಾಸ ಮಾಡಿದರು. ಪೌರಸ್ತ್ಯದೇಶಗಳ ಅನುಭಾವಿ ಜೀವನದಲ್ಲೂ ಸಾಹಿತ್ಯಗಳಲ್ಲೂ ಆಕೆಗೆ ಅಪಾರ ಆಸಕ್ತಿಯಿತ್ತು. ಭಾರತ, ಟಿಬೆಟ್, ಈಜಿಪ್ಟ್ ಮುಂತಾದ ದೇಶಗಳಲ್ಲಿ ಸಂಚರಿಸಿ ಆ ಬಗೆಗೆ ದೀರ್ಘ ಅಧ್ಯಯನ ನಡೆಸಿದರು.

ಥಿಯಸಾಫಿಕಲ್ ಸೊಸೈಟಿಯನ್ನು ಸ್ಥಾಪಿಸುವುದರಲ್ಲಿ ಜೊತೆಗೂಡಿ ಸಹಕರಿಸಿದ ಕರ್ನಲ್ ಓಲ್ಕಾಟ್ ಜೊತೆ 1879ರಲ್ಲಿ ಭಾರತಕ್ಕೆ ಬಂದರು. ಮದರಾಸಿನ ಅಡ್ಯಾರ್‌ನಲ್ಲಿ 1883ರಲ್ಲಿ ಥಿಯಸಾಫಿಕಲ್ ಸೊಸೈಟಿಯ ಪ್ರಧಾನ ಕಾರ್ಯಾಲಯವನ್ನು ಬ್ಲವೆಟ್ಸ್ಕಿ ಸ್ಥಾಪಿಸಿದರು. ಅನಂತರ ಕೆಲ ಕಾಲ ಜರ್ಮನಿಯಲ್ಲಿದ್ದು ಆಮೇಲೆ ಲಂಡನಿನಲ್ಲಿ ನೆಲೆಸಿ, ಅಲ್ಲಿ ಥಿಯಸಾಫಿಕಲ್ ಸೊಸೈಟಿಯ ಐರೋಪ್ಯ ಪ್ರಧಾನ ಕಾರ್ಯಾಲಯವನ್ನು ಸ್ಥಾಪಿಸಿದರು: 1891 ಮೇ 8ರಂದು ಅಲ್ಲೇ ನಿಧನರಾದರು.

ಎಲ್ನ ಪೆಟ್ರೋವ್ನ ಬ್ಲವೆಟ್ಸ್ಕಿ ಧಾರ್ಮಿಕ ಹಾಗೂ ಅನುಭಾವಿ ಜೀವನವನ್ನು ಕುರಿತು, ವಿಶೇಷ ದರ್ಶನಗಳನ್ನು ಕುರಿತು ಕೆಲವು ಗ್ರಂಥಗಳನ್ನು ಬರೆದಿದ್ದಾರೆ. ಅವರ ಆಯ್ದ ಬರೆಹಗಳ ಏಳು ಸಂಪುಟಗಳು ಪ್ರಕಟವಾಗಿವೆ.

ನೋಡಿ : ಥಿಯಸಾಫಿಕಲ್ ಸೊಸೈಟಿ




ಥಿಯಾಸಫಿ : ಬ್ಲವೆಟ್ಸ್ಕಿ

ಬಾಂಗ್ಲಾದೇಶ

ಭಾರತದ ನೆರೆರಾಷ್ಟ್ರ ಬಾಂಗ್ಲಾದೇಶ 1971 ಡಿಸೆಂಬರ್ 16ನೆಯ ದಿನಾಂಕ ಅಸ್ತಿತ್ವಕ್ಕೆ ಬಂತು. ಆ ವರ್ಷದ ಮಾರ್ಚ್ ತಿಂಗಳಿನಿಂದ ತನ್ನ ವಿಮೋಚನೆ ಪಡೆಯುವ ವರೆಗೆ ಪಾಕಿಸ್ತಾನದ ದಬ್ಬಾಳಿಕೆಯ ವಿರುದ್ಧ ನಡೆಸಿದ ಹೋರಾಟದಲ್ಲಿ ಅದು ಅಪಾರ ಕಷ್ಟನಷ್ಟಗಳನ್ನು ಅನುಭವಿಸಿತು. ಜನರ ಆಸ್ತಿಪಾಸ್ತಿಗಳು ದೊಡ್ಡ ಪ್ರಮಾಣದಲ್ಲಿ ನಾಶವಾದುವು. ಸುಮಾರು 30 ಲಕ್ಷ ಜನರು ಸಾವಿಗೀಡಾದರು. ಈ ಅವಧಿಯಲ್ಲಿ ಅಲ್ಲಿ ನಡೆದ ರಕ್ತಪಾತ ವಿಶ್ವ ಇತಿಹಾಸದಲ್ಲೇ ಒಂದು ದಾಖಲೆ.

ಬಾಂಗ್ಲಾದೇಶದ ಸ್ವಾತಂತ್ರ್ಯ ಆಂದೋಲನಕ್ಕೆ ಭಾರತ ಸಂಪೂರ್ಣ ಬೆಂಬಲ ನೀಡಿತು. ಅಲ್ಲಿಂದ ಬಂದ ನಿರಾಶ್ರಿತರಿಗೆ ಊಟ ವಸತಿ





ವಿಮೋಚನಾ ಸಮರ : ಮುಕ್ತಿ ವಾಹಿನಿ



ನಿರಾಶ್ರಿತರು

ಒದಗಿಸಿತು. ಕೊನೆಯ ಹಂತದಲ್ಲಿ ಪಾಕಿಸ್ತಾನ ಭಾರತದ ಮೇಲೆ ಹಠಾತ್ತಾಗಿ ದಾಳಿ ನಡೆಸಿದಾಗ ಭಾರತ ತನ್ನ ಸೇನೆಯನ್ನು ಬಾಂಗ್ಲಾದೇಶಕ್ಕೆ ಕಳುಹಿಸಿ ಅಲ್ಲಿನ ಹೋರಾಟದಲ್ಲಿ ಪಾಲುಗೊಂಡಿತು. ಹೊಸದಾಗಿ ಹುಟ್ಟಿದ ದೇಶಕ್ಕೆ ಆರ್ಥಿಕ ನೆರವನ್ನೂ ನೀಡಿತು.

ಪಾಕಿಸ್ತಾನದ ಭಾಗವಾಗಿದ್ದಾಗ ಬಾಂಗ್ಲಾದೇಶ ಪೂರ್ವ ಪಾಕಿಸ್ತಾನ ಎಂದು ಕರೆಯಲ್ಪಡುತ್ತಿತ್ತು.

ಆಡಳಿತಾನುಕೂಲಕ್ಕಾಗಿ ಬಾಂಗ್ಲಾದೇಶವನ್ನು ಢಾಕ್ಕಾ, ಚಿತ್ತಗಾಂಗ್, ರಾಜಷಾಹಿ ಹಾಗೂ ಖುಲ್ನ ಎಂದು ನಾಲ್ಕು ಮುಖ್ಯ ವಿಭಾಗಗಳಾಗಿ ಮಾಡಿದ್ದಾರೆ. ಪೂರ್ವ, ಪಶ್ಚಿಮ ಹಾಗೂ ಉತ್ತರಗಳಲ್ಲಿ ಭಾರತ ಇದರ ಮೇರೆ. ದಕ್ಷಿಣದಲ್ಲಿ ಬಂಗಾಳ ಕೊಲ್ಲಿಯಿದೆ.

ಚಲ್ನ ಹಾಗೂ ಚಿತ್ತಗಾಂಗ್ ಮುಖ್ಯ ಬಂದರುಗಳು. ಗಂಗಾ, ಬ್ರಹ್ಮಪುತ್ರ ಹಾಗೂ ಮೇಘ್ನ ನದೀಮುಖಜಭೂಮಿಗಳು ಬಾಂಗ್ಲಾದೇಶದಲ್ಲಿವೆ. ಈ ರಾಷ್ಟ್ರದ ಸಾಗಾಣಿಕೆಯ ಬಹುಭಾಗ ಜಲಮಾರ್ಗಗಳಲ್ಲಿ ನಡೆಯುತ್ತದೆ.

ಚಿತ್ತಗಾಂಗ್ ಬೆಟ್ಟಗಳಲ್ಲಿ ದಟ್ಟವಾದ ಕಾಡುಗಳಿವೆ. ಇಲ್ಲಿ ದೊರೆಯುವ ಬಹುಪಾಲು ಬಿದಿರು ಕಾಗದ ತಯಾರಿಗಾಗಿ ಉಪಯೋಗವಾಗುತ್ತದೆ. ಇಲ್ಲಿನ ಕಾಡುಗಳಲ್ಲಿ ವಿಖ್ಯಾತ ಬಂಗಾಳದ ಹುಲಿಗಳು ಇವೆ. ಆನೆ, ಖಡ್ಗಮೃಗ, ಜಿಂಕೆ ಮುಂತಾದುವೂ ಇವೆ.

ಪ್ರಧಾನ ಕಸಬು ಕೃಷಿ. ಭತ್ತ ಮುಖ್ಯ ಆಹಾರ ಬೆಳೆ; ಸೆಣಬು ಒಂದು ಪ್ರಮುಖ ವಾಣಿಜ್ಯ ಬೆಳೆ. ಢಾಕ್ಕಾ ಮುಖ್ಯ ವಾಣಿಜ್ಯ ಕೇಂದ್ರ.

ಬಾಂಗ್ಲಾದೇಶದ ಪ್ರಧಾನಮಂತ್ರಿ ಶೇಖ್ ಮುಜಿಬುರ್ ರೆಹಮಾನ್ ಅವರು ಮುಕ್ತಿವಾಹಿನಿ ರೂಪಿಸಿ ವಿಮೋಚನಾ ಚಳುವಳಿಯ ಮಹಾನಾಯಕರಾಗಿ ನಿಂತವರು.

'ಅಮರ್ ಸೋನಾರ್ ಬಾಂಗ್ಲಾ' (ಕವಿ ರವೀಂದ್ರ ವಿರಚಿತ ಗೀತ) ಬಾಂಗ್ಲಾದೇಶದ ರಾಷ್ಟ್ರಗೀತೆ.



ಮುಜಿಬುರ್ ರಹಮಾನ್ — ಇಂದಿರಾ ಗಾಂಧಿ

ಬಾಗ್ ಗುಹಾಲಯಗಳು

ಧ್ಯಾನ ಮಾಡಲು ಅನುಕೂಲವಾದ ಪ್ರಶಾಂತ ಸ್ಥಳಗಳನ್ನು ಹುಡುಕಿ ಬೌದ್ಧ ಭಿಕ್ಷುಗಳು ತಮ್ಮ ವಿಹಾರಗಳನ್ನು ಕಟ್ಟಿಕೊಳ್ಳುತ್ತಿದ್ದರು. ಹೀಗೆ ಆರಿಸಿಕೊಂಡ ಸ್ಥಳಗಳಲ್ಲಿ ಈಗಿನ ಮಧ್ಯಪ್ರದೇಶದ ಬಾಗ್ ನದಿಯ ಮೇಲಿನ ಬಾಗ್ ಗುಹಾಲಯ ಪ್ರದೇಶವೂ ಒಂದು. ಇಲ್ಲಿ ಅಖಂಡ ಶಿಲೆಗಳನ್ನು ಕೊರೆದು ಗುಹಾಲಯಗಳನ್ನು ನಿರ್ಮಿಸಿ ಒಳಗೆ ಭಿತ್ತಿಚಿತ್ರಗಳನ್ನು ರಚಿಸಲಾಯಿತು. ಸ್ಥಳೀಕವಾಗಿ ಇದನ್ನು ಪಾಂಡವ ಗುಹಾ ಎಂದು ಕರೆಯುತ್ತಾರೆ.

ಬಾಗ್ ಗುಹಾಲಯಗಳು ಒಟ್ಟು ಒಂಬತ್ತು. ಆದರೆ ಮನುಷ್ಯನ ಹಾಗೂ ನಿಸರ್ಗದ ಹೊಡೆತಗಳಿಗೆ ಸಿಲುಕಿ ನಾಲ್ಕು ಗುಹೆಗಳು ಕುಸಿದು ಹೋಗಿವೆ. ಈಗ ಐದು ಗುಹೆಗಳು ಮಾತ್ರ ಉಳಿದಿವೆ. ಅದರಲ್ಲಿಯೂ ಅನೇಕ ಕಲಾಕೃತಿಗಳು ವಿರೂಪಗೊಂಡಿವೆ.

2ನೆಯ ಗುಹೆ ಉಳಿದ ಗುಹೆಗಳಿಗಿಂತ ಉತ್ತಮ ಸ್ಥಿತಿಯಲ್ಲಿದೆ. ಭಿಕ್ಷುಗಳ ವಾಸಕ್ಕಾಗಿ ಇದ್ದ ಕೋಣೆಗಳು, ಮಧ್ಯೆ ವಿಶಾಲವಾದ ಹಜಾರ, ಮುಂದುಗಡೆಗೆ ಭವ್ಯ ಕಂಬಗಳಿರುವ ಕೈಸಾಲೆ, ಹಿಂದಕ್ಕೆ ಆರಾಧನಾ ಮಂದಿರ. ನಾಲ್ಕನೆಯ ಗುಹೆಯ ಹಜಾರ ಬಹಳ ದೊಡ್ಡದು. ಇದರ ಕಂಬಗಳ ಮೇಲೆ ಬೇರೆ ಬೇರೆ ವಿನ್ಯಾಸಗಳಿವೆ. ಈ ಗುಹೆಗೆ ರಂಗ್ ಮಹಲ್ ಅಥವಾ ವರ್ಣಗಳ ಸಭಾಂಗಣ ಎಂದು ಹೆಸರು. ಗುಹೆಯ ಒಳಮೈಯ ಹಲವು ಅಂತಸ್ತುಗಳಲ್ಲಿ ಚಿತ್ರಫಲಕಗಳಿವೆ. ಛಾವಣಿ ಹಾಗೂ ಕಂಬಗಳಿಗೆ ಮಾಡಿದ್ದ ಇಂಥ ಅಲಂಕರಣ ಕೆಲಸಗಳು ಈಗ ಮಾಸಿ ಹೋಗಿವೆ.

ನೆಯ ಗುಹೆಯ ಸಭಾಂಗಣ 220 ಅಡಿ ಉದ್ದ. ಇಲ್ಲಿ 20 ಕಂಬಗಳಿವೆ. ಆರು ಅಡಿ ಎತ್ತರ ಹಾಗೂ 15 ಅಡಿ ಉದ್ದದ ವರೆಗೆ ಇದರ ಕೈಸಾಲೆಯ ಗೋಡೆಯ ಮೇಲೆ ರಚಿಸಿರುವ ಸುಂದರವಾದ ಕೆಲವು ದೃಶ್ಯಗಳು ಗಮನಾರ್ಹವಾಗಿವೆ. ದುಃಖಿಸುತ್ತಿರುವ ಸ್ತ್ರೀಯೊಬ್ಬಳು ಹಾಗೂ ಅವಳ ಗೆಳತಿ, ವಾಗ್ವಾದ ನಡೆಸುತ್ತಿರುವ ನಾಲ್ವರು ಪುರುಷರು, ಅಲಂಕಾರ ಮಾಡಿಕೊಂಡಿರುವ ಸಂಗೀತಗಾರ್ತಿಯರು ಹಾಗೂ ಮುಗಿಲಿನಲ್ಲಿ ಚಲಿಸುವಂತೆ ಕಾಣುವ ಪುರುಷರು. ಮೆರವಣಿಗೆಯ ನೋಟ —ಈ ದೃಶ್ಯಗಳು ಸೊಗಸಾಗಿವೆ. ಕೆಲ ಚಿತ್ರಗಳ ವಸ್ತು ಸ್ಪಷ್ಟವಿಲ್ಲ. ಬಾಗ್ ಗುಹೆಗಳ ಹೊರಗೆ ಒಂದು ಬೃಹತ್ ಯಕ್ಷರಾಜನ ಪ್ರತಿಮೆಯಿದೆ.

ಬಾಗ್ ಗುಹೆಗಳು 5—7ನೆಯ ಶತಮಾನದವು.

ಬಾಜೀರಾವ್

ಮರಾಠ ಸಾಮ್ರಾಜ್ಯವನ್ನು ವಿಸ್ತರಿಸಿ ಎರಡನೆಯ ಶಿವಾಜಿ ಎಂಬ ಕೀರ್ತಿಗೆ ಪಾತ್ರನಾದವನು, ಮೊದಲನೆಯ ಬಾಜೀರಾಯ.

ಬಾಲಾಜಿ ವಿಶ್ವನಾಥ ಛತ್ರಪತಿ ಸಾಹುವಿನ ಪೇಶ್ವೆ. ಈತನ ಮಗ ಬಾಜೀರಾವ್. ಬಾಜೀರಾವ್ ಅನೇಕ ಯುದ್ಧಗಳಲ್ಲಿ ಭಾಗವಹಿಸಿದ್ದ. ದಕ್ಷ ಸೇನಾಪತಿ, ಸಾಹಸಿ ಮತ್ತು ಶೂರ. 1720ರಲ್ಲಿ ತಂದೆಯ ಮರಣಾನಂತರ ಪೇಶ್ವೆಯಾಗಿ ನೇಮಕಹೊಂದಿದ.

ಆಗ ಮೊಘಲ್ ಸಾಮ್ರಾಜ್ಯ ದುರ್ಬಲವಾಗಿತ್ತು. ರಾಜ್ಯ ವಿಸ್ತರಿಸುವ ಹಂಬಲದಿಂದ ಬಾಜೀರಾವ್ ಹಿಂದು ರಾಜರನ್ನೆಲ್ಲ ಒಂದುಗೂಡಿಸಲು 'ಹಿಂದೂಪದ ಪಾದಶಾಹಿ' (ಹಿಂದೂ ಸಾಮ್ರಾಜ್ಯ) ನಿರ್ಮಾಣಕ್ಕೆ ಕರೆಕೊಟ್ಟ.



ಮೊದಲನೆಯ ಬಾಜೀರಾವ್ : 'ಎರಡನೆಯ ಶಿವಾಜಿ'

1723ರಲ್ಲಿ ಮಾಳ್ವದ ಮೇಲೆ ದಾಳಿ ಮಾಡಿದ. ಗುಜರಾತನ್ನೂ ವಶಪಡಿಸಿಕೊಂಡ. 1726ರಲ್ಲಿ ಚಿತ್ರದುರ್ಗವನ್ನು ಗೆದ್ದುಕೊಂಡ. ನಿಜಾಮನನ್ನು ಸೋಲಿಸಿದ.

ಅನಂತರದ ಯುದ್ಧ ದಿಲ್ಲಿಯ ಬಾದಶಹನೊಡನೆ ನಡೆಯಿತು. ದೆಹಲಿ ಕೈವಶವಾದರೂ ಬಾಜೀರಾವ್ ಲೂಟಿಗೆ ತೊಡಗಲಿಲ್ಲ. 1739ರಲ್ಲಿ ಪಶ್ಚಿಮ ತೀರದಲ್ಲಿದ್ದ ಸಾಲ್ಸೆಟ್ ಮತ್ತು ಬಸ್ಸೀನ್ ಎಂಬ ಪೋರ್ಚುಗೀಸ್ ನೆಲೆಗಳನ್ನು ವಶಪಡಿಸಿಕೊಂಡ. ಇದೇ ಸಮಯದಲ್ಲಿ ನಾದಿರ್ ಷಾ ಭಾರತವನ್ನು ಮುತ್ತಲು ಬಂದ. ಬಾಜೀರಾವ್ ಎಲ್ಲ ರಾಜರನ್ನೂ ಒಗ್ಗೂಡಿಸಿ ಪರ್ಷಿಯನ್ ದಾಳಿಯನ್ನು ಎದುರಿಸುವ ಪ್ರಯತ್ನ ಮಾಡಿದ. ಆದರೆ ಅದು ಫಲಕಾರಿಯಾಗುವ ಮೊದಲೇ 1740ರಲ್ಲಿ ತನ್ನ ನಲವತ್ತೆರಡನೆಯ ವಯಸ್ಸಿನಲ್ಲಿ ಅಕಾಲಮರಣಕ್ಕೆ ತುತ್ತಾದ.

ಬಾದರಾಯಣ

"……ಈಗ ಬ್ರಹ್ಮನ ಬಗೆಗೆ ತಿಳಿದುಕೊಳ್ಳೋಣ" ಎಂದು ಪ್ರಾರಂಭವಾಗುವ 'ಬ್ರಹ್ಮ ಸೂತ್ರ' ಅಥವಾ 'ವೇದಾಂತ ಸೂತ್ರ' ಭಾರತೀಯ ತತ್ತ್ವಶಾಸ್ತ್ರದ ಪ್ರಮುಖ ಕೃತಿ. ಇದರ ಕರ್ತೃ ಉತ್ತರ ಮೀಮಾಂಸಾ ದರ್ಶನ ಅಥವಾ ವೇದಾಂತ ದರ್ಶನವನ್ನು ರಚಿಸಿದ ಬಾದರಾಯಣ.

ಬಾದರಾಯಣನ ಬಗೆಗೆ ಯಾವುದೇ ಚರಿತ್ರೆಯ ಸ್ಪಷ್ಟ ವಿವರಗಳು ದೊರೆತಿಲ್ಲ. ಈತನ ಕಾಲ ಸುಮಾರು ಕ್ರಿ. ಪೂ. 250ರಿಂದ ಕ್ರಿ. ಶ. 450ರ ಒಳಗೆ ಎಂಬ ಅಭಿಪ್ರಾಯವಿದೆ.

ಕೆಲವು ವಿದ್ವಾಂಸರು ಬಾದರಾಯಣ ಹಾಗೂ ಮಹಾಭಾರತದ ಕರ್ತೃ ವ್ಯಾಸ ಇಬ್ಬರೂ ಒಂದೇ ಎಂದು ಅಭಿಪ್ರಾಯಪಟ್ಟಿದ್ದಾರೆ. ಬೇರೆ ಕೆಲವರು ಇವನು ಪೂರ್ವ ಮೀಮಾಂಸಾ ದರ್ಶನದ ಪ್ರವರ್ತಕನಾದ ಜೈಮಿನಿಯ ಗುರು ಎಂದಿದ್ದಾರೆ.

ಉಪನಿಷತ್ತುಗಳಲ್ಲಿ ಬೇರು ಬಿಟ್ಟಿರುವ ಉತ್ತರ ಮೀಮಾಂಸಾದರ್ಶನ (ಅಥವಾ ವೇದಾಂತ ದರ್ಶನ) ಆರು ದರ್ಶನಗಳಲ್ಲಿ ಒಂದು.

ಬಾದರಾಯಣನನ್ನು 'ಭಗವಾನ್' ಎಂದು ಗೌರವದಿಂದ ಕರೆಯುತ್ತಾರೆ. ಇವನು ತ್ರಿಮೂರ್ತಿಗಳ ಸ್ವರೂಪ ಎಂಬ ನಂಬಿಕೆ ಇದೆ. "ನಾಲ್ಕು ಮುಖವಿಲ್ಲದಿದ್ದರೂ ಬ್ರಹ್ಮ ; ಎರಡು ಕೈಗಳಿದ್ದರೂ ವಿಷ್ಣು ; ಮೂರನೆಯ ಕಣ್ಣು ಇಲ್ಲದಿದ್ದರೂ ಶಂಭು" ಎಂದು ಒಂದು ಶ್ಲೋಕದಲ್ಲಿ ಬಾದರಾಯಣನನ್ನು ಕೊಂಡಾಡಲಾಗಿದೆ.

ನೋಡಿ : ಬ್ರಹ್ಮಸೂತ್ರ ; ವೇದಾಂತ

ಬಾದಾಮಿ

ನೋಡಿ : ಸಂಪುಟ–೪

ಬಾಬರ್

ಭಾರತದ ಪ್ರಥಮ ಮೊಘಲ್ ಚಕ್ರವರ್ತಿ, ಬಾಬರ್.

ಇವನು ಚೆಂಗೀಸ್‌ಖಾನನ ಸಂತತಿಯವನು. ಬಾಬರ್ ಹುಟ್ಟಿದ್ದು 1483ರಲ್ಲಿ. ತಂದೆ ತೀರಿಕೊಂಡಾಗ 11 ವರ್ಷ ವಯಸ್ಸಿನಲ್ಲೇ ಫರ್ಗಾನದ ಅರಸನಾದ. ಆದರೆ ಸಿಂಹಾಸನ ಉಳಿಸಿಕೊಳ್ಳಲು ಆಗಲಿಲ್ಲ. ಕಷ್ಟಗಳಿಗೆ ಒಳಗಾಗಿ ಅಲೆಯಬೇಕಾಯಿತು. ಆದರೂ ನಿರಾಶನಾಗದೆ ತನ್ನ ಸೇನಾಬಲ ಬೆಳೆಸಿಕೊಂಡು, ಕಾಬೂಲನ್ನು ವಶಪಡಿಸಿಕೊಂಡ. ಸಮರ್‌ಕಂಡವನ್ನು ವಶಪಡಿಸಿಕೊಳ್ಳಲು ಪ್ರಯತ್ನ ಮಾಡಿದ. ಅದು ವಿಫಲವಾದ ಮೇಲೆ ಭಾರತದ ಕಡೆಗೆ ತನ್ನ ದೃಷ್ಟಿ ಹರಿಸಿದ. ಇಬ್ರಾಹಿಂ ಲೋದಿಯ ವಿರುದ್ಧ ಹೋರಾಡಲು ದೌಲತ್ ಖಾನ್ ಲೋದಿ ಮತ್ತು ಅಲಾಂಖಾನ್, ಬಾಬರನ ನೆರವು ಕೋರಿದರು. ತಮ್ಮ ನೆರವಿಗೆಂದು ಬಂದು ಲಾಹೋರನ್ನು ಆಕ್ರಮಿಸಿಕೊಂಡ ಬಾಬರ್ ಅಲ್ಲೇ ನೆಲೆಸುವನೆಂಬುದು ಗೊತ್ತಾದಾಗ, ಅವನ ನೆರವನ್ನು ಕೋರಿದ್ದವರೇ ಅವನ ಮೇಲೆ ದಾಳಿ ಮಾಡಿದರು. ಬಾಬರ್ ಕಾಬೂಲಿಗೆ ಹಿಂದಿರುಗಬೇಕಾಯಿತು. ಆದರೆ ಚೆನ್ನಾಗಿ ಸಿದ್ಧತೆ ಮಾಡಿಕೊಂಡು 1526ರಲ್ಲಿ ಮತ್ತೆ ಭಾರತದ ಮೇಲೆ ದಾಳಿ ಮಾಡಿ ಪಾಣಿಪತ್‌ನಲ್ಲಿ ಇಬ್ರಾಹಿಂ ಲೋದಿಯನ್ನು ಸೋಲಿಸಿ ದೆಹಲಿ, ಆಗ್ರಾಗಳನ್ನು ಆಕ್ರಮಿಸಿಕೊಂಡ.



ಬಾಬರ್ : ಪ್ರಥಮ ಮೊಘಲ್ ದೊರೆ

ಬಾಬರ್ ಮರುವರ್ಷ ಮತ್ತೆ ಯುದ್ಧ ಮಾಡಬೇಕಾಯಿತು. ಮೇವಾಡದ ರಾಣಾ ಸಂಗ ಭಾರತದ ರಾಜರನ್ನೆಲ್ಲ ಒಟ್ಟುಗೂಡಿಸಿ ಬಾಬರ್‌ನ ಮೇಲೆ ಯುದ್ಧ ನಡೆಸಿದ. ಖಾನ್ವದಲ್ಲಿ ನಡೆದ ಆ ಹೋರಾಟದಲ್ಲಿ ಬಾಬರನಿಗೇ ಜಯವಾಯಿತು. ಆ ವರ್ಷವೇ ಮೇವಾಡದ ಮೇಲೆ ಆತ ದಾಳಿ ಮಾಡಿ ವಿಜಯಿಯಾದ. 1528ರಲ್ಲಿ ಚಂದೇರಿ ಬಾಬರನ ವಶವಾಯಿತು. ಬಿಹಾರ, ಬಂಗಾಳಗಳಲ್ಲಿ ಆಕ್ರಮಿಸಿದ್ದ ಅಫ್ಘನರನ್ನು ಗೋಗ್ರಾ ಬಳಿ 1529ರಲ್ಲಿ ಸೋಲಿಸಿದ.

ಈ ಯುದ್ಧಗಳ ಪರಿಣಾಮವಾಗಿ ಬಾಬರನ ರಾಜ್ಯ ಆಕ್ಸಸ್‌ನಿಂದ ಗೋಗ್ರಾವರೆಗೆ ಮತ್ತು ಹಿಮಾಲಯದಿಂದ ಗ್ವಾಲಿಯರ್ ತನಕ ವಿಸ್ತರಿಸಿತು. ಆದರೆ ತಾನು ಗೆದ್ದ ಪ್ರದೇಶಗಳಲ್ಲಿ ಭದ್ರವಾದ ಆಡಳಿತವನ್ನು ಸ್ಥಾಪಿಸುವ ಮೊದಲೇ 1530ರ ಡಿಸೆಂಬರ್ 26ರಂದು ಆಗ್ರಾದಲ್ಲಿ ಬಾಬರ್ ನಿಧನನಾದ.

ಬಾಬಾ ಬುಡನ್‌ಗಿರಿ

ಬಾಬಾಬುಡನ್‌ಗಿರಿ ಕರ್ನಾಟಕದ ಚಿಕ್ಕಮಗಳೂರು ಜಿಲ್ಲೆಯಲ್ಲಿದೆ.

ಬಹಳ ಹಿಂದೆ ಇಲ್ಲಿಗೆ ಬಾಬಾ ಬುಡನ್ ಎಂಬ ಫಕೀರನೊಬ್ಬ ಬಂದ. ಅವನು ಅರೇಬಿಯದ ಮೋಖ ಎಂಬಲ್ಲಿಂದ ತಂದ ಕಾಫಿಬೀಜಗಳನ್ನು ಇಲ್ಲಿ ನೆಟ್ಟು ಅವನ್ನು ಬೆಳೆಸಿದ ಎಂಬ ಹೇಳಿಕೆಯಿದೆ. ಈಗ ಬಾಬಾ ಬುಡನ್‌ಗಿರಿ ಪ್ರದೇಶದಲ್ಲಿ ಅನೇಕ ಕಾಫಿ ತೋಟಗಳಿವೆ. ಇಲ್ಲಿ ಕಾಫಿ ತೋಟಗಳನ್ನು ರಚಿಸುವ ಪ್ರಯತ್ನ 1840ರಲ್ಲಿ ಆರಂಭವಾಯಿತು.

ಬಾಬಾ ಬುಡನ್‌ಗಿರಿ ಪಶ್ಚಿಮಘಟ್ಟದ ಒಂದು ಭಾಗ. ಇದರ ಎತ್ತರ 6.214 ಅಡಿ. ಇಲ್ಲಿನ ಹವೆ ಬಹಳ ಹಿತಕರ. ಪಶ್ಚಿಮಘಟ್ಟದ ಈ ಶ್ರೇಣಿಗಳ ಇಳಿಜಾರುಗಳಲ್ಲಿ ದಟ್ಟವಾದ ಕಾಡುಗಳೂ ಕಾಫಿ ತೋಟಗಳೂ ಇವೆ.

ಲಾಳದಾಕಾರದಂಥ ಈ ಪಶ್ಚಿಮಘಟ್ಟದ ಪ್ರದೇಶವನ್ನು ಪುರಾಣಗಳಲ್ಲಿ ಚಂದ್ರದ್ರೋಣಪರ್ವತ ಎಂದು ಕರೆದಿದ್ದಾರೆ. ಇದಕ್ಕೆ ವಾಯು ಪರ್ವತ, ಮರತ್‌ಶಿಲ ಎಂಬ ಹೆಸರುಗಳೂ ಇವೆ. ಇಲ್ಲಿ ಅನೇಕ ಮೂಲಿಕೆಗಳು ದೊರೆಯುತ್ತವೆ, ಅರಣ್ಯಗಳು, ಜಲಪಾತಗಳು, ವಿವಿಧ ಎತ್ತರಗಳ ಪರ್ವತ ಶಿಖರಗಳು, ನದಿಗಳು ಇಲ್ಲಿನ ಚೆಲುವಿಗೆ ಕಾರಣ.

ಕರ್ನಾಟಕದಲ್ಲಿ ಕಬ್ಬಿಣದ ಅದಿರು ಹೇರಳವಾಗಿ ದೊರೆಯುವ ಕೆಮ್ಮಣ್ಣುಗುಂಡಿ ಬಾಬಾ ಬುಡನ್‌ಗಿರಿ ಶ್ರೇಣಿಯಲ್ಲಿದೆ.

ಬಾಬಾ ಬುಡನ್‌ಗಿರಿಯ ನೆತ್ತಿಯಲ್ಲಿರುವ ಒಂದು ಗುಹೆ ಹಿಂದುಗಳಿಗೂ ಮುಸಲ್ಮಾನರಿಗೂ ಯಾತ್ರಾಸ್ಥಳ. ಇದನ್ನು ಹಿಂದುಗಳು ದತ್ತಾತ್ರೇಯ ಪೀಠವೆಂದು ಕರೆಯುತ್ತಾರೆ; ಮಹಮ್ಮದೀಯರು ಹಜರತ್ ದಾದಾ ಹಯಾತ್ ಮೀರ್ ಖಲಂದರ್ ಎಂಬ ಸಂತನ ಪೀಠ ಎಂದು ಕರೆಯುತ್ತಾರೆ. ಈ ಗವಿಯ ಸಮೀಪದಲ್ಲಿ ಹಲವಾರು ಮುಸಲ್ಮಾನ ಸಂತರ ಸಮಾಧಿಗಳಿವೆ. ಯಾತ್ರಿಕರು ಇಳಿದುಕೊಳ್ಳಲು ಕಟ್ಟಡಗಳಿವೆ. ವರ್ಷಕ್ಕೊಮ್ಮೆ ಇಲ್ಲಿ 'ಉರ್ಸ್'—ಜಾತ್ರೆ ನಡೆಯುತ್ತದೆ. ಆಗ ಇಲ್ಲಿಗೆ ಸಹಸ್ರಾರು ಮಂದಿ ಭಕ್ತರು ಬರುತ್ತಾರೆ.

ಬಾಬಾ ಸೋಹನ್‌ಸಿಂಗ್ ಭಾಕ್ನಾ

1914ರಷ್ಟು ಹಿಂದೆಯೇ ಭಾರತದಿಂದ ಆಂಗ್ಲರನ್ನು ಹೊರದೂಡಲು ಸಶಸ್ತ್ರ ಕ್ರಾಂತಿಯ ಯೋಜನೆ ಸಿದ್ಧವಾಗಿತ್ತು. ಇದಕ್ಕಾಗಿ ದೇಶಭಕ್ತರ ಸಂಘಟನೆ ನಡೆದದ್ದು ಅಮೆರಿಕದಲ್ಲಿ. ಈ ಕೂಟಕ್ಕೆ ಗದರ್(ಬಂಡಾಯ) ಪಕ್ಷ ಎಂದು ಹೆಸರಿಟ್ಟರು. ಇದರ ಪ್ರಥಮ ಅಧ್ಯಕ್ಷ ಬಾಬಾ ಸೋಹನ್‌ಸಿಂಗ್ ಭಾಕ್ನಾ.



ಗದರ್ ಪಕ್ಷ : ಭಾಕ್ನಾ

ಜ್ವಾಲಾಸಿಂಗ್ ಜೊತೆಯಲ್ಲಿ ಕೆಲಸ ಮಾಡಿ ವಿದೇಶಗಳಲ್ಲಿರುವ ಸಿಕ್ಖರನ್ನು ಭಾಕ್ನಾ ಸಂಘಟಿಸಿದರು, 1914ರಲ್ಲಿ ಗದರ್ ಪಕ್ಷ ತ್ರಿವರ್ಣ ರಾಷ್ಟ್ರಧ್ವಜವನ್ನು ರೂಪಿಸಿತು. ಭಾರತಕ್ಕೆ ಮರಳಿದ ಸೋಹನ್‌ಸಿಂಗ್ ಸೆರೆಮನೆಗಳಲ್ಲಿ ದೀರ್ಘ ಕಾಲ ಕಳೆದರು. ರೈತರ ಸಂಘಟನೆಗೆ ದುಡಿದರು. ಕಮ್ಯೂನಿಸ್ಟ್ ಮುಖಂಡರಾದರು.

ಸೋಹನ್‌ಸಿಂಗ್ ಜನನ 1870ರಲ್ಲಿ.

ಅಮೃತಸರದ ಸಮೀಪದ ಭಾಕ್ನಾದಲ್ಲಿ ತಮ್ಮ ಕೊನೆಯ ದಿನಗಳನು ಕಳೆದ ಬಾಬಾ 1968ರಲ್ಲಿ 98ನೆಯ ವಯಸ್ಸಿನಲ್ಲಿ ನಿಧನರಾದರು.

ನೋಡಿ : ಗದರ್ ಪಕ್ಷ


ಬಾಮಿಯಾನ

ಅಫ್ಘಾನಿಸ್ತಾನದಲ್ಲಿ ಹಿಂದೂಧರ್ಮ ಮತ್ತು ಬೌದ್ಧಧರ್ಮ ಬಹು ಹಿಂದಿನಿಂದಲೇ ಪ್ರಚಾರದಲ್ಲಿದ್ದುವು. ಸುಮಾರು 4–5ನೆಯ ಶತಮಾನದಲ್ಲಿ ನಿರ್ಮಿಸಿದ ಬಾಮಿಯಾನ ಬೌದ್ಧ ಶಿಲ್ಪಗಳಲ್ಲಿ 55 ಮೀಟರ್ ಎತ್ತರದ ಬುದ್ಧನ ಪ್ರತಿಮೆಯಿದೆ. ಪ್ರಪಂಚದಲ್ಲಿ ಇದಕ್ಕಿಂತ ಹೆಚ್ಚು ಎತ್ತರದ ಪ್ರತಿಮೆ ಬೇರೆ ಇಲ್ಲ.

ಕಾಬೂಲಿನ ಸಮೀಪದಲ್ಲಿ ಬಾಮಿಯಾ ನದಿ ಇದೆ. ಅದರ ದಡದಲ್ಲಿ ಇದೇ ಹೆಸರಿನ ನಗರವೂ ಇದೆ. ನದೀ ಕಣಿವೆಯ ಪಕ್ಕದ ದೊಡ್ಡ ಬಂಡ



ಅತಿ ದೊಡ್ಡ ಬುದ್ಧ–ಬಾಮಿಯಾನ್‌ನಲ್ಲಿ



ಶಿಲೆಯನ್ನು ಕೊರೆದು ಆರಾಧನೆ ; ಮಧ್ಯೆ ಬಾಮಿಯಾನ ಬುದ್ಧ

ಗಳಲ್ಲಿ ಅನೇಕ ಗುಹಾಲಯಗಳನ್ನೂ ಬೌದ್ಧ ವಿಹಾರಗಳನ್ನೂ ನಿರ್ಮಿಸ ಲಾಗಿದೆ. ಇಲ್ಲಿ ಬೌದ್ಧಧರ್ಮದ ಮಹಾಯಾನ ಪಂಥ ಆಚರಣೆಯಲ್ಲಿತ್ತು.

53 ಮೀಟರ್ ಎತ್ತರದ ಬುದ್ಧನಲ್ಲದೆ 35 ಮೀಟರಿನಷ್ಟಿರುವ ಮತ್ತೊಂದು ಬುದ್ಧ ಪ್ರತಿಮೆಯೂ ಬಾಮಿಯಾನ ಸಮೀಪದಲ್ಲಿದೆ. ಬಂಡೆಯನ್ನು ಕೊರೆದು, ಕಮಾನು ಛಾವಣಿಯಂತೆ ಆಕೃತಿ ಕೊಟ್ಟು ಗೂಡಿನಂತೆ ಮಾಡಿ ಅದರ ಹಿನ್ನೆಲೆಯಾಗಿರುವ ಬಂಡೆಯಲ್ಲಿ ಬುದ್ಧನ ಪ್ರತಿಮೆಯನ್ನು ಕೊರೆಯಲಾಗಿದೆ. ಪ್ರತಿಮೆಯ ಆಚೆ ಈಚೆ ಕಮಾನಿನ ಒಳಭಾಗದಲ್ಲಿ ವರ್ಣಚಿತ್ರಗಳೂ ಇವೆ. ಇವು ಅಜಂತಾ ಭಿತ್ತಿಚಿತ್ರಗಳನ್ನು ಹೋಲುತ್ತವೆ. ಬುದ್ಧನ ಉಡುಗೆಗೂ ಬಣ್ಣ ಹಚ್ಚಲಾಗಿತ್ತು. ಆದರೆ ಅದರ ಬಹುಭಾಗ ಈಗ ಮಾಸಿಹೋಗಿದೆ. ಪ್ರತಿಮೆಗಳೂ ವಿರೂಪಗೊಂಡಿವೆ.

ಈ ಪ್ರದೇಶವನ್ನು ಚೀನೀಯಾತ್ರಿಕ ಹ್ಯೂಯೆನ್ ತ್ಸಾಂಗ್ ಸಂದರ್ಶಿಸಿದ್ದ. ಬಾಮಿಯಾನ ಬಳಿಯ ಕಾಕ್ರಾಕ್ ಎಂಬ ಕಡಿದಾದ ಬಂಡೆಯಲ್ಲಿಯೂ ಒಂದು ಬೌದ್ಧ ಪ್ರತಿಮೆ ಇದೆ.

ಬಾಮಿಯಾನ ಮತ್ತು ಅದರ ಸಮೀಪದ ಪ್ರದೇಶಗಳಲ್ಲಿರುವ ವಾಸ್ತುಶಿಲ್ಪ ರಚನೆಗಳಲ್ಲಿ ಭಾರತೀಯ ದೇವಾಲಯ ವಾಸ್ತುಶಿಲ್ಪದ ಪ್ರಭಾವವಿದೆ.

ಬಾಲಗಂಗಾಧರ ತಿಲಕ್

ಹಿಂದಿಯನ್ನು ದೇವನಾಗರಿ ಲಿಪಿಯಲ್ಲಿ ಬರೆಯಬೇಕೆಂದೂ ಭಾರತದ ರಾಷ್ಟ್ರಭಾಷೆಯಾಗಿ ಹಿಂದಿಯನ್ನು ಸ್ವೀಕರಿಸಬೇಕೆಂದೂ ಹೇಳಿದ ಪ್ರಥಮ ನಾಯಕ, ಬಾಲಗಂಗಾಧರ ತಿಲಕ್. ಲೋಕಮಾನ್ಯರೆಂದು ಅವರು ಪ್ರಸಿದ್ಧರು.



ಲೋಕಮಾನ್ಯ ತಿಲಕರು "ಸ್ವರಾಜ್ಯ ನನ್ನ ಜನ್ಮಸಿದ್ಧ ಹಕ್ಕು" ಎಂದು ಘೋಷಿಸಿದವರು.

ನೋಡಿ : ಸ್ವರಾಜ್ಯ

ತಿಲಕ್–ಸಂಪುಟ ೧

ಸ್ವರಾಜ್ಯಕಹಳೆ : ತಿಲಕ್

ಬಾಲಸರಸ್ವತಿ



'ಅಭಿನಯ ರಾಣಿ'

ಭರತನಾಟ್ಯದಲ್ಲಿ 'ಅಭಿನಯ ರಾಣಿ' ಎನಿಸಿಕೊಂಡವರು ಬಾಲಸರಸ್ವತಿ. 'ಕೃಷ್ಣಾ ನೀ ಬೇಗನೆ ಬಾರೋ' ಎಂಬ ಪದವನ್ನು ಇವರು ಅಭಿನಯಿಸಿದಾಗ ರಸಿಕರು ಮಂತ್ರ ಮುಗ್ಧರಂತೆ ಕೇಳುತ್ತಾರೆ, ನೋಡುತ್ತಾರೆ.

ಬಾಲಸರಸ್ವತಿ ಅವರದು ನರ್ತಕರ, ಗಾಯಕರ ಕುಟುಂಬ. ಜನನ 1918 ಮೇ 13ರಂದು. ಆ ಕಾಲಕ್ಕೆ ಭರತನಾಟ್ಯದಲ್ಲಿ ಅತ್ಯಂತ ಪ್ರಖ್ಯಾತರೆನಿಸಿದವರಲ್ಲಿ ಇವರ ನೃತ್ಯ ಅಭ್ಯಾಸ. ಬಾಲಸರಸ್ವತಿ ದೇಶದ ಎಲ್ಲೆಡೆಗಳಲ್ಲೂ ವಿದೇಶಗಳಲ್ಲೂ ಪ್ರದರ್ಶನ ನೀಡಿದ್ದಾರೆ. ಒಮ್ಮೆ ಸಾನ್ ಫ್ರಾನ್ಸಿಸ್ಕೋದಲ್ಲಿ ಭರತನಾಟ್ಯ ಕಲಿಸುವುದಕ್ಕಾಗಿ ಬೇಸಿಗೆ ಶಿಬಿರವನ್ನು ಏರ್ಪಡಿಸಿದ್ದರು. 1963ರಲ್ಲಿ ಎಡಿನ್‌ಬರೋ ಸಂಗೀತೋತ್ಸವದಲ್ಲಿ ಇವರು ಭಾಗವಹಿಸಿದ್ದರು.

ಮದರಾಸಿನ ಸಂಗೀತ ಅಕಾಡೆಮಿಯ ಆಶ್ರಯದಲ್ಲಿ ನಡೆಯುವ ನೃತ್ಯಶಾಲೆಗೆ ಬಾಲಸರಸ್ವತಿ ನಿರ್ದೇಶಕರು. ಭರತನಾಟ್ಯವನ್ನು ಕುರಿತು ವಿ. ರಾಘವನ್ ಅವರ ಸಹಕಾರದೊಡನೆ ಇವರು ಒಂದು ಗ್ರಂಥ ರಚಿಸಿದ್ದಾರೆ.

ಬಾಲಸರಸ್ವತಿ ಅವರಿಗೆ 1955ರಲ್ಲಿ ಸಂಗೀತ ನಾಟಕ ಅಕಾದೆಮಿಯ ಪ್ರಶಸ್ತಿ ; 1957ರಲ್ಲಿ ಪದ್ಮಭೂಷಣ ಮತ್ತು 1964ರಲ್ಲಿ ರವೀಂದ್ರಭಾರತಿ ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್ ಪ್ರಶಸ್ತಿ ದೊರೆತುವು.

ಬಾಳ ಠಕರೆ

ಮುಂಬಯಿಯಲ್ಲಿರುವ ಮಹಾರಾಷ್ಟ್ರೇತರರಿಗೆ ಸಿಂಹಸ್ವಪ್ನವಾದ ಶಿವಸೇನೆಯ ಸ್ಥಾಪಕರು ಬಾಳ ಠಕರೆ. 'ಮಹಾರಾಷ್ಟ್ರವು ಮಹಾರಾಷ್ಟ್ರೀಯರಿಗಾಗಿ' —ಇದು ಇವರ ಘೋಷಣೆ. 'ಮಣ್ಣಿನ ಮಕ್ಕಳಿಗೆ ಮಾತ್ರ ಉದ್ಯೋಗಾವಕಾಶ' ಎಂಬುದು ಇವರು ಬೇಡಿಕೆ. ಇದನ್ನು ಪೂರೈಸಲು ಇವರು ನಡೆಸುವುದು ಉಗ್ರ ಚಳುವಳಿ.



ಚಳುವಳಿಯನ್ನು ವ್ಯಾಪಕಗೊಳಿಸಿದ ಶಿವಸೇನೆ ಮುಂಬಯಿಯ ಕಾರ್ಪೊರೇಷನಿನಲ್ಲಿ ಅತ್ಯಂತ ಪ್ರಬಲ ಪಕ್ಷವಾಯಿತು. ಶಿವಸೇನೆಯ ಸದಸ್ಯರೊಬ್ಬರು 1973ರಲ್ಲಿ ಮೇಯರ್ ಆದರು.

'ಮಾರ್ಮಿಕ್' : ಠಕರೆ

ಶಿವಸೇನೆಯ ಪ್ರಧಾನ ನಾಯಕ ಬಾಳ ಠಕರೆ ಜೀವನ ಆರಂಭಿಸಿದ್ದು ವ್ಯಂಗ್ಯಚಿತ್ರಕಾರರಾಗಿ. ದಕ್ಷಿಣ ಭಾರತೀಯ ಎಸ್. ಸದಾನಂದರಿಂದ ಸ್ಥಾಪಿಸಲ್ಪಟ್ಟ ಮುಂಬಯಿಯ 'ಫ್ರೀ ಪ್ರೆಸ್ ಜರ್ನಲ್' ಪತ್ರಿಕೆಯಲ್ಲಿ ಇವರು ದುಡಿದರು. ಮುಂದೆ ಇವರು ಮರಾಠಿಯಲ್ಲಿ 'ಮಾರ್ಮಿಕ್' ಎಂಬ ವ್ಯಂಗ್ಯ ಚಿತ್ರ ಪ್ರಧಾನ ಪತ್ರಿಕೆಯನ್ನು ಹೊರಡಿಸಿದರು.

ಠಕರೆ ಸಕ್ರಿಯ ರಾಜಕಾರಣಿಯಾದದ್ದು 1967ರಲ್ಲಿ. ಮಹಾರಾಷ್ಟ್ರ–ಕರ್ನಾಟಕ ಗಡಿ ವಿವಾದದಲ್ಲಿ ಇವರ ನಾಯಕತ್ವದ ಶಿವಸೇನೆ ಪ್ರಮುಖ ಪಾತ್ರವಹಿಸಿತು. ಈ ಚಳುವಳಿಯಲ್ಲಿ ಬಾಳ ಠಕರೆ ಬಂಧಿತರಾದರು, ಬಿಡುಗಡೆ ಹೊಂದಿದರು. 1973ರಲ್ಲಿ ಇವರ ಚಳುವಳಿ ಅತ್ಯುಗ್ರರೂಪ ತಳೆಯಿತು.

ಬ್ರಾಹ್ಮಣಗಳು

"ವಿಧಾಯಕಂ ವಾಕ್ಯಂ ಬ್ರಾಹ್ಮಣಮ್"
—'ಬ್ರಾಹ್ಮಣಗಳ ಪ್ರಮುಖ ವಿಷಯ ವಿಧಿ' ಎಂದು ಈ ಸೂತ್ರದ ಅರ್ಥ. ವೇದ ಮಂತ್ರಗಳನ್ನು ಏತಕ್ಕಾಗಿ ಹೇಗೆ ಉಪಯೋಗಿಸಬೇಕು ಎಂಬುದನ್ನೂ ಯಾಗಗಳ ಮೀಮಾಂಸೆಯನ್ನೂ ಒಳಗೊಂಡಿರುವ ವೇದಭಾಗಗಳೇ ಬ್ರಾಹ್ಮಣಗಳು. ಪ್ರತಿಯೊಂದು ವೇದದಲ್ಲೂ ಬ್ರಾಹ್ಮಣಗಳು ಕಂಡು ಬರುತ್ತವೆ. ವೇದಗಳ ಕೊನೆಯ ಎರಡು ಭಾಗಗಳಲ್ಲಿ ಒಂದು, ಬ್ರಾಹ್ಮಣ; ಇನ್ನೊಂದು, ಉಪನಿಷತ್.

ಬೇರೆಬೇರೆ ಬ್ರಾಹ್ಮಣಗಳು ಬೇರೆಬೇರೆ ಕಾಲದಲ್ಲಿ ರಚಿತವಾದುವು. ಈ ಅವಧಿ ಕ್ರಿ.ಪೂ. 1250ರಿಂದ 550ರ ತನಕ ಎಂದು ಊಹೆ. ಕುರು ಮತ್ತು ಪಾಂಚಾಲದೇಶ ಹಾಗೂ ಸರಸ್ವತಿ ನದಿಯ ತೀರಪ್ರದೇಶ ಬ್ರಾಹ್ಮಣಗಳ ಉಗಮಸ್ಥಾನ.

ಗದ್ಯರೂಪದಲ್ಲಿರುವ ಬ್ರಾಹ್ಮಣಗಳಲ್ಲಿ ಯಾಗವನ್ನು ಯಾವಾಗ, ಹೇಗೆ ಮಾಡಬೇಕು : ಅದಕ್ಕೆ ಬೇಕಾಗುವ ಸಾಧನಗಳು ಏನೇನು : ಬಳಸಬೇಕಾದ ಮಂತ್ರಗಳು ಯಾವುವು ಮತ್ತು ಅವನ್ನು ಯಾವಾಗ ಬಳಸಬೇಕು ಮೊದಲಾದ ವಿವರಗಳಿವೆ.

ಬ್ರಾಹ್ಮಣಗಳ ಸಂಖ್ಯೆ ದೊಡ್ಡದು. ಕೆಲವು ಮಾತ್ರ ಈಗ ಲಭ್ಯವಿವೆ.

ಬ್ರಾಹ್ಮಣಗಳಿಗೆ ಭಾಷಾ ದೃಷ್ಟಿಯಿಂದಲೂ ಮಹತ್ವದ ಸ್ಥಾನವಿದೆ. ಶಬ್ದಗಳ ವ್ಯುತ್ಪತ್ತಿ, ಅರ್ಥವಿವರಣೆ ಇವುಗಳಲ್ಲಿವೆ.

ವಿಧಿಗಳ ವಿವರಣೆಯ ನಡುವೆ ಅಲ್ಲಲ್ಲಿ ಆಖ್ಯಾನಗಳಿವೆ. ಊರ್ವಶಿ—ಪುರೂರವರ ಆಖ್ಯಾನ ಇಂಥದು.

ಬ್ರಾಹ್ಮೀ ಲಿಪಿ

ಆಧುನಿಕ ಭಾರತೀಯ ವರ್ಣಮಾಲೆಗಳ ಪೂರ್ವ ಸೂಚಕ, ಬ್ರಾಹ್ಮೀ ಲಿಪಿ.

ಬ್ರಾಹ್ಮೀ ಲಿಪಿಯ ಮೂಲದ ಬಗೆಗೆ ಏಕಾಭಿಪ್ರಾಯವಿಲ್ಲ. ಕೆಲವು ಪಂಡಿತರು ಪರಸ್ಥಾನ ಲಿಪಿಯಿಂದ ಇದು ಹುಟ್ಟಿರಬೇಕು ಎನ್ನುತ್ತಾರೆ. ಕೆಲವರು ಅರ್ಮೈಕ್ ಲಿಪಿಯಿಂದ ಎನ್ನುತ್ತಾರೆ : ಮತ್ತೆ ಕೆಲವರು ಸೆಮಿಟಿಕ್ ಎಂಬ ಭಾಷಾವರ್ಗದ ಲಿಪಿಯಿಂದ ಎಂದು ಅಭಿಪ್ರಾಯ ಪಡುತ್ತಾರೆ. ಕ್ರಿಸ್ತ ಪೂರ್ವ 600 ರಿಂದ 400ರ ಅವಧಿಯಲ್ಲಿ ಮೆಸೊಪೊಟೇಮಿಯ ಮಾರ್ಗವಾಗಿ ಬಂದ ವ್ಯಾಪಾರಿಗಳಿಂದ ಲಿಪಿ ಭಾರತಕ್ಕೆ ಬಂದು ಭಾರತೀಯ ಅವಶ್ಯತೆಗೆ ತಕ್ಕಂತೆ ಕ್ರಮವಾಗಿ ವಿಸ್ತಾರಗೊಂಡಿತು ಎಂಬ ವಾದವೂ ಇದೆ.

ಈ ಲಿಪಿಗೆ ಬ್ರಾಹ್ಮೀ ಎಂಬ ಹೆಸರು ಬಂದದ್ದು ಸುಮಾರು 300ರಲ್ಲಿ. ಅಶೋಕನ ಅನೇಕ ಶಾಸನಗಳು ಬ್ರಾಹ್ಮೀ ಲಿಪಿಯಲ್ಲಿವೆ. ಅಶೋಕನ ಕಾಲದ ಬ್ರಾಹ್ಮೀಲಿಪಿಯಲ್ಲಿ ಎರಡು ಪ್ರಕಾರಗಳಿವೆ : ಉತ್ತರದಲ್ಲಿ ಪ್ರಚಾರದಲ್ಲಿದ್ದದ್ದು ಮತ್ತು ದಕ್ಷಿಣದಲ್ಲಿ ಪ್ರಚಾರದಲ್ಲಿದ್ದದ್ದು. ಉತ್ತರದ ಲಿಪಿಯಿಂದ ನಾಗರೀ, ಶಾರದಾ, ಬಂಗಾಳೀ ಮುಂತಾದ ಲಿಪಿಗಳೂ ದಕ್ಷಿಣ ಪ್ರಕಾರದಿಂದ ಗುಹಾಲಿಪಿಯೂ, ತಮಿಳು, ಕನ್ನಡ, ತೆಲುಗು, ಮಲೆಯಾಳ ಮುಂತಾದ ಲಿಪಿಗಳೂ ಹುಟ್ಟಿದುವು.

ಬಿಂಬಿಸಾರ

ಹದಿನೈದರ ಎಳೆಹರೆಯದಲ್ಲೇ ಮಗಧದಂಥ ಪ್ರಖ್ಯಾತ ರಾಜ್ಯದ ಅರಸನಾದವನು, ಬಿಂಬಿಸಾರ. ಇವನ ಕಾಲ ಕ್ರಿ. ಪೂ. 6ನೆಯ ಶತಮಾನದ ಉತ್ತರಾರ್ಧ. ಈತ ಹರ್ಯಂಕ ಸಂತತಿಯವನು. ಇವನ ಇನ್ನೊಂದು ಹೆಸರು ಶ್ರೇಣಿಕ. ಈತನ ರಾಜ್ಯ ಎಲ್ಲ ದಿಕ್ಕುಗಳಲ್ಲೂ ಪರ್ವತ, ನದಿಗಳಿಂದ ರಕ್ಷಿತವಾಗಿತ್ತು.

ಬಿಂಬಿಸಾರ ದೃಢಮನಸ್ಕ ಮತ್ತು ಕರ್ತೃತ್ವಶಾಲಿ. ಅಸಮರ್ಥ ಅಧಿಕಾರಿಗಳನ್ನು ಕೆಲಸದಿಂದ ತೆಗೆದುಹಾಕುತ್ತಿದ್ದ. ಆಗಾಗ್ಗೆ ರಾಜ್ಯದ ಆದ್ಯಂತ ಸಂಚರಿಸುತ್ತಿದ್ದ.

ಆತ ಶಾಂತಿಪ್ರಿಯ. ಚಾಕಚಕ್ಯತೆಯಿಂದ ರಾಜ್ಯ ವಿಸ್ತರಿಸಿದ. ಕೋಸಲ ದೇಶದ ಅರಸನ ತಂಗಿಯನ್ನು ಬಿಂಬಿಸಾರ ಮದುವೆಯಾದಾಗ ತುಂಬ ವರಮಾನವಿದ್ದ ಕಾಶಿ ಪ್ರದೇಶದ ಒಂದು ಗ್ರಾಮ ಬಳುವಳಿಯಾಗಿ ದೊರೆಯಿತು. ವೈಶಾಲಿಯ ಅರಸು ಮನೆತನದವರೊಡನೆ ವಿವಾಹ ಸಂಬಂಧ ಬೆಳೆಸಿದ. ನೆರೆಹೊರೆ ರಾಜ್ಯಗಳಲ್ಲದೆ ದೂರದ ರಾಜ್ಯದವರೊಡನೆ ಮೈತ್ರಿಯಿಂದಿದ್ದ. ಅವನು ನಡೆಸಿದ್ದು ಒಂದೇ ಯುದ್ಧ. ಆ ಯುದ್ಧದಲ್ಲಿ ಅವನು ಅಂಗ ರಾಜ್ಯವನ್ನು ಜಯಿಸಿದ. ಅದರ ರಾಜಧಾನಿ ಚಂಪಾ. ಈ ನಗರ ದಕ್ಷಿಣ ಭಾರತದೊಡನೆ ವ್ಯಾಪಾರ ನಡೆಸುವ ಕೇಂದ್ರವಾಗಿತ್ತು. ಬಿಂಬಿಸಾರನ ಆಳ್ವಿಕೆಯಲ್ಲಿ ಮಗಧದ ಸಂಪತ್ತು ಸಮೃದ್ಧವಾಗಿ ಬೆಳೆಯಿತು.

ಬಿಂಬಿಸಾರನ ಮಗ ಅಜಾತಶತ್ರು. ಇವನು ತನ್ನ ತಂದೆಯನ್ನು ಬಂಧಿಸಿ, ಸುಮಾರು ಕ್ರಿ.ಪೂ. 493ರಲ್ಲಿ ಕೊಲೆ ಮಾಡಿದ.


ನೋಡಿ : ಅಜಾತಶತ್ರು ; ಮಗಧ ; ಹರ್ಯಂಕರು

ಬಿ. ಆರ್. ಅಂಬೇಡ್ಕರ್

'ಆಧುನಿಕ ಮನು' –ಹಿಂದೂ ಕಾಯಿದೆಯ ಕ್ರೋಡೀಕರಣದಲ್ಲಿ ಸಲ್ಲಿಸಿದ ವಿಶಿಷ್ಟ ಸೇವೆಗಾಗಿ ಅಂಬೇಡ್ಕರ್ ಅವರಿಗೆ ದೊರೆತ ಗೌರವನಾಮ ಇದು. ಇವರು ಸ್ವತಂತ್ರ ಭಾರತದ ಸಂವಿಧಾನವನ್ನು ಅತ್ಯಂತ ಸಮರ್ಪಕವಾಗಿ ಯಶಸ್ವಿಯಾಗಿ ರಚಿಸಿದ ಸಮಿತಿಯ ಅಧ್ಯಕ್ಷರಾಗಿದ್ದರು. ಉತ್ತಮ ವಕೀಲ, ಸಮಾಜಸೇವಕ, ರಾಜಕಾರಣಿ, ಲೇಖಕ, ಶಿಕ್ಷಣವೇತ್ತರಾಗಿದ್ದವರು ಭೀಮರಾವ್ ರಾಮ್‌ಜೀ ಅಂಬೇಡ್ಕರ್.

ಅಂಬೇಡ್ಕರ್ ಮನೆತನದವರು ಮಹಾರಾಷ್ಟ್ರದ ರತ್ನಾಗಿರಿ ಜಿಲ್ಲೆಯ ಅಂಬಾವಾಡಿ ಎಂಬ ಹಳ್ಳಿಯಿಂದ ಬಂದವರು. ಅವರ ಜನನ 1893ರಲ್ಲಿ. ತಂದೆ ರಾಮ್‌ಜೀ ಮಾಲೋಜೀ ಸಂಕಪಾಲ. ತಾಯಿ ಭೀಮಾಬಾಯಿ. ಇವರದು ಹರಿಜನರ ಮಹರ್ ಪಂಗಡ.

ಅಂಬೇಡ್ಕರ್ ಅವರಿಗೆ 14 ವರ್ಷಕ್ಕೇ ಮದುವೆಯಾಯಿತು. ಸತಾರ ದಲ್ಲಿ ಮೊದಲು ವಿದ್ಯಾಭ್ಯಾಸ ಮಾಡಿ ಅನಂತರ ಮುಂಬಯಿಯ



' ಆಧುನಿಕ ಮನು ' : ಅಂಬೇಡ್ಕರ್

ಎಲ್ಫಿನ್‌ಸ್ಟನ್ ಕಾಲೇಜಿನಿಂದ, 1912ರಲ್ಲಿ, ಪದವೀಧರರಾದರು. ಅಮೆರಿಕಕ್ಕೆ ತೆರಳಿ ಅಲ್ಲಿನ ಕೊಲಂಬಿಯ ವಿಶ್ವವಿದ್ಯಾನಿಲಯದಲ್ಲಿ ಎಂ.ಎ. ಹಾಗೂ ಪಿಎಚ್.ಡಿ. ಪದವಿ ಪಡೆದರು. ಅಲ್ಲಿಂದ ಇಂಗ್ಲೆಂಡಿಗೆ ಹೋಗಿ ಬಂದರು. ಸ್ವಲ್ಪ ಕಾಲ ಮುಂಬಯಿಯ ಸಿಡ್ನ್‌ಹ್ಯಾಮ್ ಕಾಲೇಜಿನಲ್ಲಿ ಶಿಕ್ಷಕರಾಗಿದ್ದರು. ಮತ್ತೆ 1920ರಲ್ಲಿ ಲಂಡನಿಗೆ ಪ್ರಯಾಣ. ಅಲ್ಲಿ ಎಂ.ಎಸ್‌ಸಿ. ಮತ್ತು ಡಿ.ಎಸ್‌ಸಿ. ಪದವಿಗಳನ್ನು ಪಡೆದರು.

1921ರ ಜೂನ್ ತಿಂಗಳಲ್ಲಿ ಅಂಬೇಡ್ಕರ್ ಮುಂಬಯಿಯ ಉಚ್ಚ ನ್ಯಾಯಾಲಯದಲ್ಲಿ ವಕೀಲವೃತ್ತಿ ಆರಂಭಿಸಿದರು. ಆಗಲೇ ಹರಿಜನೋದ್ಧಾರಕ್ಕಾಗಿ ಶ್ರಮಿಸುವ ನಿರ್ಧಾರ ಮಾಡಿದರು. 'ಮೂಕನಾಯಕ' ಎಂಬ ಪತ್ರಿಕೆಯನ್ನು ಆರಂಭಿಸಿದರು. ತಾವು ಸ್ಥಾಪಿಸಿದ 'ಬಹಿಷ್ಕೃತ ಹಿತಕಾರಿಣೀ ಸಭಾ'ದ ಪರವಾಗಿ 'ಬಹಿಷ್ಕೃತ ಭಾರತ' ಪತ್ರಿಕೆಯನ್ನೂ ಸಾಮಾಜಿಕ ಸಮಾನತೆಯನ್ನು ಸಾಧಿಸಲು ಸ್ಥಾಪಿಸಿದ 'ಸಮಾಜ ಸಮತಾ ಸಂಘ'ದ ಮುಖಪತ್ರವಾಗಿ 'ಸಮತಾ' ಪತ್ರಿಕೆಯನ್ನೂ ನಡೆಸಿದರು.

ವಕೀಲರಾಗಿ ಅಂಬೇಡ್ಕರರು ಕೀರ್ತಿ ಸಂಪಾದಿಸಿದರು. ಒಂದು ಕಾಸೂ ಪಡೆಯದೆ ಬಡವರ ಮೊಕದ್ದಮೆಗಳನ್ನು ನಡೆಸಿಕೊಡುವುದು ಅವರ ಹಿರಿಯ ಗುಣವಾಗಿತ್ತು.

ಮುಂಬಯಿ ಲಾ ಕಾಲೇಜಿನ ಪ್ರಿನ್ಸಿಪಾಲರಾಗಿ ಕಾಯಿದೆ ಶಿಕ್ಷಣಕ್ಕೆ ಸಂಬಂಧಿಸಿ ಉಪಯುಕ್ತ ಸುಧಾರಣೆಗಳನ್ನು ಸೂಚಿಸಿದರು. 1926ರಲ್ಲಿ ಶಾಸನ ಸಭಾ ಸದಸ್ಯರಾದರು. ರಾಜಕೀಯವಾಗಿ. ಅಂಬೇಡ್ಕರ್ ಹಿಂದುಳಿದ ವರ್ಗದವರ ಮುಂದಾಳುತನ ವಹಿಸಿದರು. ರೈತರು. ಕೆಲಸಗಾರರು, ಹರಿಜನರ ಏಳಿಗೆಗಾಗಿ ಹಲವಾರು ಸುಧಾರಣಾ ಮಸೂದೆಗಳನ್ನು ಮಂಡಿಸಿದರು.

ಸ್ವತಂತ್ರ ಭಾರತದ ಸಂವಿಧಾನ ರಚನಾ ಸಮಿತಿಯ ಅಧ್ಯಕ್ಷರಾಗಿ ಅವರು ಸಲ್ಲಿಸಿದ ಸೇವೆ ಸಾರ್ವತ್ರಿಕ ಮನ್ನಣೆ ಗಳಿಸಿತು. ಅವರು ಕೆಲ ಕಾಲ ಕೇಂದ್ರ ಸರಕಾರದ ಕಾನೂನು ಮಂತ್ರಿಯಾಗಿಯೂ ಇದ್ದರು. ಅವರು ಸೂಚಿಸಿದ ಹಿಂದೂ ಕಾಯಿದೆಗೆ ಅಷ್ಟಾಗಿ ಮನ್ನಣೆ ದೊರೆಯದ್ದರಿಂದ ಅವರು ತಮ್ಮ ಮಂತ್ರಿಪದವಿಗೆ ರಾಜೀನಾಮೆ ಇತ್ತರು. ಹರಿಜನೋದ್ಧಾರ ಕಾರ್ಯದಲ್ಲಿ ತಾವು ನಿರೀಕ್ಷಿಸಿದ ಫಲ ದೊರೆಯದ್ದರಿಂದ ಅವರು 1956ರಲ್ಲಿ ಲಕ್ಷಾಂತರ ಹರಿಜನ ಅನುಯಾಯಿಗಳೊಡನೆ ಬೌದ್ಧಧರ್ಮ ಸ್ವೀಕರಿಸಿದರು. 1956 ಡಿಸೆಂಬರ್ 6ರಂದು ನವದೆಹಲಿಯಲ್ಲಿ ಅಂಬೇಡ್ಕರ್ ನಿಧನರಾದರು.

'ರೂಪಾಯಿಯ ಸಮಸ್ಯೆ', 'ಬ್ರಿಟಿಷ್ ಇಂಡಿಯಾದಲ್ಲಿ ಪ್ರಾಂತೀಯ ಹಣಕಾಸು ವ್ಯವಸ್ಥೆಯ ವಿಕಾಸ', 'ಪಾಕಿಸ್ತಾನದ ಬಗೆಗೆ ಚಿಂತನ', 'ರಾನಡೆ, ಗಾಂಧೀಜೀ ಮತ್ತು ಜಿನ್ನಾ' ಮುಂತಾದುವು ಅಂಬೇಡ್ಕರ್ ಅವರ ಖ್ಯಾತ ಕೃತಿಗಳು.

ಸ್ವಭಾವತಃ ಅಂಬೇಡ್ಕರ್ ಅತ್ಯಂತ ಉಲ್ಲಾಸಶೀಲರೂ ಕರ್ತೃತ್ವ ಶಾಲಿಯೂ ಆಗಿದ್ದರು.

ಬಿ. ಆರ್. ಶೇಷಾಚಾರ್



ಕೋಶಿಕಾವಿಜ್ಞಾನ : ಶೇಷಾಚಾರ್

ವಿಶ್ವವಿದ್ಯಾಲಯಕ್ಕೆ ಮೊದಲಿಗನಾಗಿ ವಿದ್ಯಾರ್ಥಿ ಬಿ.ಎಸ್‌ಸಿ. ಪರೀಕ್ಷೆ ಪಾಸು ಮಾಡಿದ್ದ. ತಡವಿಲ್ಲದೆ ಉದ್ಯೋಗ ಸಿಕ್ಕಿತು. ಬೆಂಗಳೂರಿನ ಸೆಂಟ್ರಲ್ ಕಾಲೇಜಿನ ಬಿ.ಎಸ್‌ಸಿ. ವಿದ್ಯಾರ್ಥಿಗಳಿಗೆ ಉಪನ್ಯಾಸ ಮಾಡುವ ಕೆಲಸ. ಹೆಚ್ಚು ಕಡಮೆ ತನ್ನ ವಯಸ್ಸಿನವರೇ ಆದ ವಿದ್ಯಾರ್ಥಿಗಳಿಗೆ ಉಪನ್ಯಾಸ ಮಾಡಲು ಆತಂಕ —ಈ ಹೊಸ ಉಪನ್ಯಾಸಕನಿಗೆ. ಧೈರ್ಯಮಾಡಿ ಒಂದು ಗಂಟೆಯ ಉಪನ್ಯಾಸ ಮುಗಿಸಿದ. ಈತನಿಗೆ ಗೊತ್ತಿಲ್ಲದಂತೆ ಪಕ್ಕದ ಕೋಣೆಯಲ್ಲಿ ಕುಳಿತಿದ್ದ ಪ್ರಾಧ್ಯಾಪಕರು ತರಗತಿ ಮುಗಿದ ಬಳಿಕ ಬಂದು, ಉಪನ್ಯಾಸವನ್ನು ಕುರಿತು ಮೆಚ್ಚುಗೆ ವ್ಯಕ್ತಪಡಿಸಿದರು.

ಆ ತರುಣನೇ ಮುಂದೆ ಸುಮಾರು ನಲವತ್ತೈದು ವರ್ಷ ವಿಶ್ವವಿದ್ಯಾಲಯಗಳ ಪ್ರಾಧ್ಯಾಪಕರಾಗಿ, ಶ್ರೇಷ್ಠ ವಿಜ್ಞಾನಿಯಾಗಿ ಹೆಸರು ಗಳಿಸಿದ ಬಿ. ಆರ್. ಶೇಷಾಚಾರ್.

ಬಾಗೇಪಲ್ಲಿ ರಾಮಚಂದ್ರ ಆಚಾರ್ಯರ ಪುತ್ರ ಶೇಷಾಚಾರ್ 1908 ಜನವರಿ 9ರಂದು ಹುಟ್ಟಿದರು. ಮನೆಯಲ್ಲಿ ವಿಶೇಷ ಅನುಕೂಲವಿರಲಿಲ್ಲ. ಆದರೆ ಮೇಧಾವಿ ವಿದ್ಯಾರ್ಥಿಯಾದ್ದರಿಂದ ಇವರ ಶಿಕ್ಷಣಕ್ಕೆ ಅಡ್ಡಿ ಉಂಟಾಗಲಿಲ್ಲ. 1926ರಲ್ಲಿ ಚಿನ್ನದ ಪದಕದೊಡನೆ ಸ್ನಾತಕ ಪದವಿ ಪಡೆದ ಅನಂತರ, ಪ್ರಾಣಿವಿಜ್ಞಾನದ ಉಪನ್ಯಾಸಕರಾದರು. ಕೆಲವು ವರ್ಷಗಳ ಬಳಿಕ ಉಚ್ಚಶಿಕ್ಷಣಕ್ಕಾಗಿ ಇವರು ಕಲ್ಕತ್ತಾ ವಿಶ್ವವಿದ್ಯಾಲಯವನ್ನು ಸೇರಿದರು. ಎರಡು ವರ್ಷಗಳ ಶಿಕ್ಷಣವನ್ನು ಒಂದೇ ವರ್ಷದಲ್ಲಿ ಮುಗಿಸಿ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಲ್ಲಿ ಪ್ರಥಮ ಸ್ಥಾನ ಪಡೆದು ಉತ್ತೀರ್ಣರಾದರು. ಮತ್ತೆ ಹಿಂದಿನ ಕಾಲೇಜಿಗೆ ಹಿಂದಿರುಗಿ ಅಧ್ಯಾಪಕ ವೃತ್ತಿ ಮುಂದುವರಿಸಿದರು. ಇವರು ಬರೆದ ಒಂದು ಪ್ರೌಢ ಪ್ರಬಂಧಕ್ಕೆ ಮದರಾಸು ವಿಶ್ವವಿದ್ಯಾಲಯ ಡಿ.ಎಸ್‌ಸಿ. ಪದವಿ ನೀಡಿತು.

ಮೈಸೂರು ವಿಶ್ವವಿದ್ಯಾನಿಲಯದಲ್ಲಿ 1946–60ರ ವರೆಗೆ, ದೆಹಲಿ ವಿಶ್ವವಿದ್ಯಾಲಯದಲ್ಲಿ 1960–71ರ ವರೆಗೆ ಪ್ರಾಣಿವಿಜ್ಞಾನ ವಿಭಾಗದಲ್ಲಿ ಮುಖ್ಯಸ್ಥರಾಗಿ ಕೆಲಸ ಮಾಡಿದರು. ಕೋಶಿಕಾವಿಜ್ಞಾನದಲ್ಲಿ ಹಲವು ಹೊಸ ಸಂಶೋಧನೆಗಳನ್ನು ಮಾಡಿದರು. ಉಪನ್ಯಾಸಗಳನ್ನು ಕೊಡಲು ಮತ್ತು ಸಮ್ಮೇಳನಗಳಲ್ಲಿ ಭಾಗವಹಿಸಲು ಹತ್ತಾರು ಬಾರಿ ವಿದೇಶಗಳಿಗೆ ಹೋಗಿ ಬಂದರು. ದೇಶ. ವಿದೇಶಗಳಲ್ಲಿ ಅನೇಕ ವೈಜ್ಞಾನಿಕ ಸಂಘ. ಸಂಸ್ಥೆಗಳಿಗೆ ಇವರು ಸದಸ್ಯರು. ಸುಮಾರು ಎರಡು ವರ್ಷಗಳ ಕಾಲ ಇವರು ಇಂಡಿಯನ್ ನ್ಯಾಷನಲ್ ಸೈನ್ಸ್ ಅಕಾಡೆಮಿಯ ಅಧ್ಯಕ್ಷರಾಗಿದ್ದರು.

ಡಾ. ಶೇಷಾಚಾರ್ ಅವರು ದಿಲ್ಲಿ ವಿಶ್ವವಿದ್ಯಾನಿಲಯದ ಎಮೆರಿಟಸ್ ಪ್ರಾಧ್ಯಾಪಕರು.

[illegible] ಕೆಲಸ ಇನ್ನಾಗಲೇ ಶೇಷಾಚಾರ್ ಅವರಿಗೆ [illegible]. ಮನಸ್ಸಿಗೆ ಶಾಂತಿ. 1978ರಲ್ಲಿ —[illegible]— [illegible]

ಭಾರತೀಯ ವಿಜ್ಞಾನ ಮಂದಿರದಲ್ಲಿ ಸೈದ್ಧಾಂತಿಕ ಅಧ್ಯಯನ ಕೇಂದ್ರದಲ್ಲಿ ಪ್ರಾಧ್ಯಾಪಕರಾಗಿ ಸೇರಿದರು.

ಬಿ. ಇ. ಎಂ. ಎಲ್.

ನೋಡಿ : ಭಾರತ್ ಅರ್ಥ್ ಮೂವರ್ಸ್ ಲಿಮಿಟೆಡ್

ಬಿ. ಇ. ಎಲ್.

ನೋಡಿ : ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್

ಬಿ. ಎಂ. ಶ್ರೀ.

ನೋಡಿ : ಸಂಪುಟ ೫

ಬಿ. ಎಚ್. ಇ. ಎಲ್.

ನೋಡಿ : ಭಾರತ್ ಹೆವಿ ಎಲೆಕ್ಟ್ರಿಕಲ್ಸ್

ಬಿ. ಎನ್. ರಾವ್

ಭೌತಶಾಸ್ತ್ರಜ್ಞ ಅಥವಾ ಗಣಿತಜ್ಞ ಆಗಬೇಕು –ಎಂದಿದ್ದ ಬೆನಗಲ್ ನರಸಿಂಗರಾವ್, ಐ.ಸಿ.ಎಸ್. ಅಧಿಕಾರಿಯಾದರು. ಕಲ್ಕತ್ತಾ ಉಚ್ಚ ನ್ಯಾಯಾಲಯದ ನ್ಯಾಯಾಧೀಶರಾಗಿ, ಕಾಶ್ಮೀರದ ಮುಖ್ಯಮಂತ್ರಿಯಾಗಿ, ವಿಶ್ವಸಂಸ್ಥೆಯಲ್ಲಿ ಭಾರತದ ಪ್ರತಿನಿಧಿಯಾಗಿ, ಹೇಗ್‌ನಲ್ಲಿ ಅಂತರರಾಷ್ಟ್ರೀಯ ನ್ಯಾಯಾಲಯದ ನ್ಯಾಯಾಧೀಶರಾಗಿ ಕೆಲಸ ಮಾಡಿದರು.



'ಆದರ್ಶ ಅಧಿಕಾರಿ' : ನರಸಿಂಗರಾವ್

ಇವರದು ಬಹುಮುಖ ಪ್ರತಿಭೆಯ ವ್ಯಕ್ತಿತ್ವ. ಜನನ 1887ರಲ್ಲಿ. ಐ.ಸಿ.ಎಸ್. ಅಧಿಕಾರಿಯಾದಾಗ ಕಾಯಿದೆ ಕ್ಷೇತ್ರದಲ್ಲಿ ಪ್ರಭುತ್ವ ಪಡೆದ ಇವರು ಕೆಲವು ಕಾಲ ರಿಫಾರ್ಮ್ಸ್ ಕಮಿಷನರ್ ಆಗಿದ್ದರು. ಹಿಂದೂ ಕಾನೂನು ಸಮಿತಿಯ ಅಧ್ಯಕ್ಷ, ಸಂವಿಧಾನ ಸಮಿತಿಯ ಸಲಹೆಗಾರ ಮತ್ತು ವಿಶ್ವಸಂಸ್ಥೆಯ ಭದ್ರತಾ ಸಮಿತಿಯಲ್ಲಿ ಭಾರತದ ಪ್ರತಿನಿಧಿ ಆಗಿ ಹೆಸರು ಗಳಿಸಿದರು.

ಅಂತರರಾಷ್ಟ್ರೀಯ ನ್ಯಾಯಾಲಯದಲ್ಲಿ ನ್ಯಾಯಾಧೀಶರಾಗಿದ್ದಾಗ 1953ರ ನವೆಂಬರ್ 30ರಂದು ನರಸಿಂಗರಾಯರು ನಿಧನರಾದರು. ಜವಾಹರಲಾಲ ನೆಹರೂ ಅವರು ರಾಯರನ್ನು 'ಆದರ್ಶ ಅಧಿಕಾರಿ' ಎಂದು ಪ್ರಶಂಸಿಸಿದ್ದರು.

ಬಿ. ಎಲ್. ರೈಸ್

ನೋಡಿ : ಲೂಯಿ ರೈಸ್

ಬಿ. ಎಸ್. ಕೇಶವನ್

ಗ್ರಂಥಾಲಯ ವಿಜ್ಞಾನದಲ್ಲಿ ಹೆಸರಾದವರು. ಬಿ. ಎಸ್. ಕೇಶವನ್. ಬೆಂಗಳೂರು ಶಾಮಣ್ಣ ಕೇಶವನ್ 1909 ಮೇ 10ರಂದು ಜನಿಸಿದರು. ಮೈಸೂರು ಹಾಗೂ ಲಂಡನ್ ವಿಶ್ವವಿದ್ಯಾನಿಲಯಗಳಲ್ಲಿ ಪ್ರೌಢ ವ್ಯಾಸಂಗ ಮಾಡಿ ಎಂ.ಎ. ಪದವೀಧರರಾದರು. ಲಂಡನಿನಲ್ಲಿ ಗ್ರಂಥಾಲಯ ವಿಜ್ಞಾನದ ಡಿಪ್ಲೊಮಾ ಪಡೆದರು. ಕೆಲ ಕಾಲ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಅಧ್ಯಾಪಕರಾಗಿದ್ದರು. ಅನಂತರ ಕಲ್ಕತ್ತೆಯಲ್ಲಿರುವ ರಾಷ್ಟ್ರೀಯ ಗ್ರಂಥಾಲಯದ ನಿರ್ದೇಶಕರಾಗಿ ಹದಿನೈದು ವರ್ಷ ಸೇವೆ ಸಲ್ಲಿಸಿದರು. ವೈಜ್ಞಾನಿಕ ಮತ್ತು ಔದ್ಯೋಗಿಕ ಸಂಶೋಧನಾ ಮಂಡಲಿಯ ಸಹಾಯಕ ಕಾರ್ಯದರ್ಶಿಯಾಗಿ ಕೆಲ ಕಾಲ ಕೆಲ ಮಾಡಿದರು. ಮುಂದೆ ಇನ್‌ಸ್ಡಾಕ್‌ನ —ಭಾರತ ರಾಷ್ಟ್ರೀಯ ವೈಜ್ಞಾನಿಕ ದಾಖಲೆಗಳ ಕೇಂದ್ರದ— ನಿರ್ದೇಶಕರಾಗಿದ್ದರು.



ಗ್ರಂಥಾಲಯ ವಿಜ್ಞಾನ : ಕೇಶವ

ರಾಷ್ಟ್ರೀಯ ಗ್ರಂಥ ಸಂಸ್ಥೆಯ ಸದಸ್ಯರು ಕೇಶವನ್. ಮಾಹಿ ದಾಖಲೆಯ ವಿಧಾನದಲ್ಲಿ ತಜ್ಞರಾಗಿರುವ ಕೇಶವನ್ ಇರಾನಿನಲ್ಲಿ ದಾಖಲೆ ಕೇಂದ್ರ ಸ್ಥಾಪನೆಯ ಕೆಲಸದಲ್ಲಿ ಯುನೆಸ್ಕೋದ ತಜ್ಞರಾದರು.


ಕೇಶವನ್ ಹಲವು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಸಂಸ್ಥೆಗಳ ಸಕ್ರಿಯ ಪಾತ್ರವಹಿಸಿದ್ದಾರೆ. ಯುನೆಸ್ಕೊ ಸಂಸ್ಥೆಯಿಂದ ನೇಮಿಸಲ್ಪ ಅಂತರರಾಷ್ಟ್ರೀಯ ಗ್ರಂಥಸೂಚೀ ದಾಖಲೆ ಮತ್ತು ಪರಿಭಾಷಾ ಸಲ ಸಮಿತಿಯ ಸದಸ್ಯರು. ಭಾರತದ ಗ್ರಂಥಾಲಯ ಸಂಘದ ಅಧ್ಯಕ್ಷರು ಭಾರತ ಸರಕಾರಕ್ಕೆ ಗ್ರಂಥಾಲಯ ವಿಚಾರದಲ್ಲಿ ಸಲಹೆಗಾರರು. ಐ.ಎಸ್. ಸಂಸ್ಥೆಯ ದಾಖಲೆ ವಿಭಾಗ ಸಮಿತಿಯ ಅಧ್ಯಕ್ಷರು, ವೈಜ್ಞಾನಿಕ ಮತ್ತು ಔದ್ಯೋಗಿಕ ಮಂಡಲಿಯ ದಾಖಲೆ ತರಬೇತಿ ಬಗೆಗಿನ ಅಧ್ಯಯ ಮಂಡಲಿಯ ಅಧ್ಯಕ್ಷರು. ವಿಶ್ವವಿದ್ಯಾನಿಲಯ ಧನಸಹಾಯ ಆಯೋಗ ಗ್ರಂಥಾಲಯ ಸಮಿತಿಯ ಸದಸ್ಯರು. ಗ್ರಂಥಾಲಯವಿಜ್ಞಾನದಲ್ಲಿ ದೆಹ ವಿಶ್ವವಿದ್ಯಾನಿಲಯದ ಸಂದರ್ಶಕ ಪ್ರಾಧ್ಯಾಪಕ —ಹೀಗೆ ಹಲ ಜವಾಬ್ದಾರಿಗಳನ್ನು ವಹಿಸಿ ಕೆಲಸ ಮಾಡಿದವರು ಕೇಶವನ್. 'ನ್ಯಾಷನ ಲೈಬ್ರರಿ ಆಫ್ ಇಂಡಿಯಾ' ಕೇಶವನ್ ಅವರ ಖ್ಯಾತ ಕೃತಿ.

1960ರಲ್ಲಿ ಭಾರತ ಸರಕಾರ ಇವರಿಗೆ ಪದ್ಮಶ್ರೀ ಪ್ರಶಸ್ತಿ ನೀ ಗೌರವಿಸಿತು.

ಬಿ. ಎಸ್. ಮೂಂಜೆ

ಭಾರತ ಶಕ್ತಿಯುತ, ಪ್ರಗತಿಪರ ರಾಷ್ಟ್ರವಾಗಬೇಕೆಂದು ದುಡಿ ಪ್ರಮುಖರಲ್ಲೊಬ್ಬರು ಡಾ. ಬಾಲಕೃಷ್ಣ ಶಿವರಾಮ ಮೂಂಜೆ.

ಜನನ 1872ರಲ್ಲಿ, ಮಹಾರಾಷ್ಟ್ರದಲ್ಲಿ. ವೈದ್ಯಪದವಿ ಪಡೆದ ಬಳಿ ಮುಂಬಯಿ ನಗರಸಭೆಯ ವಿಶೇಷ ವೈದ್ಯಾಧಿಕಾರಿಯಾಗಿದ್ದರು. ದಕ್ಷಿಣ ಆಫ್ರಿಕದಲ್ಲಿ ಬೋಯೆರ್ ಯುದ್ಧ (ಡಚ್‌ಮೂಲದ ಆಫ್ರಿಕ ರಾದ ಬೋಯರ್ ಜನಾಂಗ ಮತ್ತು ಬ್ರಿಟಿಷರ ನಡುವಣ ಯುದ್ಧ) ಆರಂಭ ವಾದಾಗ, ಈ ಕೆಲಸಕ್ಕೆ ರಾಜೀನಾಮೆ ಸಲ್ಲಿಸಿ, ಸೈನ್ಯದ ವೈದ್ಯ ವಿಭಾಗದಲ್ಲಿ ದುಡಿದರು. ಇದರಿಂದ ಯುದ್ಧದ ಪ್ರತ್ಯಕ್ಷ ಅನುಭವ ಅವರಿಗಾಯಿತು



ಸೈನಿಕ ಶಾಲೆ : ಮೂಂಜೆ

ಭಾರತಕ್ಕೆ ಹಿಂದಿರುಗಿ ನಾಗಪುರವನ್ನು ತಮ್ಮ ಕಾರ್ಯಚಟುವಟಿಕೆಗಳ ಕೇಂದ್ರವನ್ನಾಗಿ ಆರಿಸಿಕೊಂಡರು. ಲೋಕಮಾನ್ಯ ತಿಲಕರ ಅನುಯಾಯಿಯಾಗಿ ಸಾರ್ವಜನಿಕ ರಂಗವನ್ನು ಪ್ರವೇಶಿಸಿದರು. ಸ್ವಾತಂತ್ರ್ಯ ಚಳುವಳಿಯ ಅಗ್ರನಾಯಕರೊಡನೆ ಸಂಪರ್ಕ ಬೆಳೆಸಿದರು. ಭಾರತದಲ್ಲಿ ಆಗ ಬೇಕಾದ ಸುಧಾರಣೆಗಳ ಬಗೆಗೆ ನಡೆದ ದುಂಡುಮೇಜಿನ ಪರಿಷತ್ತಿಗೆ ಆಹ್ವಾನಿತರಾಗಿ ಅದರಲ್ಲಿ ಭಾಗವಹಿಸಿದರು.

ಸೈನ್ಯದ ವಿಷಯದಲ್ಲಿ ತಜ್ಞರೆಂದು ಅವರನ್ನು ಪರಿಗಣಿಸಲಾಯಿತು. ಇವರು ಸೈನಿಕ ಆಯೋಗದ ಸದಸ್ಯರಾಗಿದ್ದರು; ರೈಫ್‌ಲ್ ಸಂಘಗಳ ಸ್ಥಾಪನೆಗೆ ಕಾರಣರಾದರು; ವ್ಯಾಯಾಮ ಶಿಕ್ಷಣದ ಬೆಳವಣಿಗೆಗಾಗಿ ಶ್ರಮಿಸಿದರು.

ಭಾರತೀಯ ಯೋಧರಿಗೆ ಬ್ರಿಟಿಷ್ ಯೋಧರ ಸ್ಥಾನಮಾನ ಕೊಡಬೇಕು. ಸೇನಾವರ್ಗದಲ್ಲಿ ಕ್ರಮಕ್ರಮವಾಗಿ ಭಾರತೀಯರ ಸಂಖ್ಯೆಯನ್ನು ಹೆಚ್ಚಿಸಿ. ಸೈನ್ಯವನ್ನು ಸಂಪೂರ್ಣವಾಗಿ ಭಾರತೀಕರಣಗೊಳಿಸಬೇಕು —ಎಂದು ಆಗ್ರಹಪಡಿಸಿದರು.

ನಾಸಿಕ್ ನಗರದಲ್ಲಿ ಭೋನ್ಸ್ಲೆ ಸೈನಿಕ ಶಾಲೆಯನ್ನು ಅವರು ಪ್ರಾರಂಭಿಸಿದರು. ಅವರು 1948 ಮಾರ್ಚ್ 4ರಂದು ಮೂಂಜೆ ನಿಧನರಾದರು.

ಬಿ. ಎಸ್. ಸೋಮನ್

ಸ್ವತಂತ್ರ ಭಾರತ ನೌಕಾಬಲದ ಆಡಳಿತ ಹಾಗೂ ಕಾರ್ಯಕಾರಿ ವಿಭಾಗಗಳೆರಡರಲ್ಲೂ [illegible] ಕೆಲಸಮಾಡಿದ ವೈಶಿಷ್ಟ್ಯ, ಬಿ. ಎಸ್. ಸೋಮನ್ ಅವರದು. [illegible] ಅವರು ನೌಕಾಬಲಾಧಿಪತಿ (ಚೀಫ್ ಆಫ್ ನೇವಲ್ ಸ್ಟಾಫ್) ಆದರು.



ನೌಕಾಬಲಾಧಿಪತಿ : ಸೋಮನ್

ಭಾಸ್ಕರ ಸದಾಶಿವ ಸೋಮನ್, ಗ್ವಾಲಿಯರ್‌ನಲ್ಲಿ 1913 ಮಾರ್ಚ್ ತಿಂಗಳಲ್ಲಿ ಜನಿಸಿದರು. 1931ರ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ 'ರಾಯಲ್ ಇಂಡಿಯನ ಮರೀನ್'ಗೆ ಆಯ್ಕೆಯಾದರು. ಅನಂತರ ಇಂಗ್ಲೆಂಡಿನಲ್ಲಿ ತರಬೇತಿ. ಕೇಂದ್ರ ಸರ್ಕಾರದ, ಹಲವು ಕೆಲಸಗಳಲ್ಲಿ 1939–40ರಲ್ಲಿ ಎರಡನೆಯ ಜಾಗತಿಕ ಯುದ್ಧದಲ್ಲಿ, ಭಾಗವಹಿಸಿದರು.

1947ರಲ್ಲಿ ಅಖಂಡ ಭಾರತದ ನೌಕಾಬಲವನ್ನು ಭಾರತ ಮತ್ತು ಪಾಕಿಸ್ತಾನಗಳ ನಡುವೆ ಹಂಚುವ ಸಂದರ್ಭದಲ್ಲಿ ಇವರು ಸಲ್ಲಿಸಿದ ಸೇವೆ ಗಮನಾರ್ಹ.

ಸೋಮನ್ 1949ರಲ್ಲಿ ಐಎನ್‌ಎಸ್ 'ಜಮುನಾ'ದ ಕ್ಯಾಪ್ಟನ್ ಆದರು. 1952ರಲ್ಲಿ ವಿಶಾಖಪಟ್ಟಣ ನೌಕಾಕೇಂದ್ರದ ಅಧಿಪತಿಯಾದರು. 1960ರಲ್ಲಿ ಫ್ಲಾಗ್ ಆಫೀಸರ್ ಪದವಿಗೆ ಬಂದು 1962ರಲ್ಲಿ ನೌಕಾಬಲಾಧಿಪತಿಯಾದರು. ನಾಲ್ಕು ವರ್ಷ ಕಾಲ ಈ ಅಧಿಕಾರದಲ್ಲಿದ್ದರು.

ಬಿ. ಕೆ. ಗಾಯಕವಾಡ್

ಭಾರತೀಯ ರಿಪಬ್ಲಿಕನ್ ಪಕ್ಷದ ನಾಯಕರಾಗಿ ಅನೇಕ ವರ್ಷಕಾಲ ದುಡಿದವರು ಬಿ. ಕೆ. ಗಾಯಕವಾಡ್. 1927ರ ಮಹಾಡ್ ಸತ್ಯಾಗ್ರಹ, ನಾಸಿಕ್ ಪ್ರದೇಶದಲ್ಲಿ ನಡೆದ ಭೂಸತ್ಯಾಗ್ರಹ ಮುಂತಾದ ಹಲವಾರು ಹೋರಾಟಗಳಲ್ಲಿ ಅವರು ಭಾಗವಹಿಸಿದರು.



' ದಾದಾ ಸಾಹೇಬ್ '

ಗಾಯಕವಾಡರು 1902ರಲ್ಲಿ ಜನಿಸಿದರು. ಹರಿಜನೋದ್ಧಾರ ಕಾರ್ಯದಲ್ಲಿ ಪ್ರಮುಖರಾಗಿದ್ದ ದಿವಂಗತ ಬಿ. ಆರ್. ಅಂಬೇಡ್ಕರ್ ಅವರ ಶಿಷ್ಯರಾಗಿ ಸಾರ್ವಜನಿಕರಂಗ ಪ್ರವೇಶಿಸಿದರು.

ಇವರು ತಮ್ಮ ಜನ್ಮಪ್ರದೇಶವಾದ ನಾಸಿಕ ಜಿಲ್ಲೆಯಲ್ಲಿ ಗಣನೀಯ ಸಮಾಜ ಸೇವೆ ಸಲ್ಲಿಸಿದ್ದಾರೆ. 1956ರಲ್ಲಿ ಅಖಿಲ ಮುಂಬಯಿ ಮಹರ್ ಅಧಿವೇಶನದಲ್ಲಿ ಪರಿಶಿಷ್ಟ ಜಾತಿಯವರೆಲ್ಲ ಬೌದ್ಧ ಧರ್ಮಾನುಯಾಯಿಗಳಾಗಬೇಕೆಂಬ ನಿರ್ಣಯವನ್ನು ಸೂಚಿಸಿದವರು ಗಾಯಕವಾಡ್. ಪಕ್ಷದ ಚಟುವಟಿಕೆಗಳಲ್ಲಿ ಇವರು ಅತ್ಯಂತ ಕ್ರಿಯಾಶೀಲರು.

ಗಾಯಕವಾಡರನ್ನು ಅವರ ಸಂಗಡಿಗರು 'ದಾದಾ ಸಾಹೇಬ್' ಎಂದು ಆತ್ಮೀಯವಾಗಿ ಸಂಬೋಧಿಸುತ್ತಾರೆ.

ಬಿಜಾಪುರ

ಹಿಂದೂ–ಮಹಮ್ಮದೀಯ ಶೈಲಿಯ [illegible] ವಾಸ್ತುಶಿಲ್ಪ ರಚನೆಗಳನ್ನು ಒಳಗೊಂಡ ಐತಿಹಾಸಿಕ ನಗರ, ಬಿಜಾಪುರ.

ಇಬ್ರಾಹಿಂ ರೋಜಾ



ಇಲ್ಲಿನ ಗೋಳಗುಮ್ಮಟ ಜಗತ್ಪ್ರಸಿದ್ಧವಾದದ್ದು. ಕಂಬಗಳ ಆಸರೆ ಇಲ್ಲದೆ ಕಟ್ಟಿರುವ ಇಂಥ ಬೃಹತ್ ಗುಮ್ಮಟ ಪ್ರಪಂಚದಲ್ಲಿ ಇನ್ನೊಂದಿಲ್ಲ. ಬಿಜಾಪುರದ ಕೋಟೆ, ಇಬ್ರಾಹಿಂ ರೋಜಾ ಕಟ್ಟಡ, ಜುಮ್ಮಾ ಮಸೀದಿ, ಅರಮನೆಗಳು ಮೊದಲಾದ ಪ್ರೇಕ್ಷಣೀಯ ಕಟ್ಟಡಗಳು ಇಲ್ಲಿವೆ.

ಕರ್ನಾಟಕ ರಾಜ್ಯದಲ್ಲಿರುವ ಬಿಜಾಪುರದ ಹಳೆಯ ಹೆಸರು ವಿಜಾಪುರ. ಒಂದು ಕಾಲಕ್ಕೆ ಯಾದವ ವಂಶದ ರಾಜರು ಇದನ್ನು ರಾಜಧಾನಿಯಾಗಿ ಮಾಡಿಕೊಂಡಿದ್ದರು. 1294ರಲ್ಲಿ ದೆಹಲಿಯ ಖಿಲ್ಜಿಗಳು ಇದನ್ನು ವಶಪಡಿಸಿಕೊಂಡರು. 1489ರಲ್ಲಿ ಬಹಮನಿ ಮನೆತನದ ಸ್ವತಂತ್ರ ರಾಜ ಯೂಸುಫ್ ಆದಿಲ್ ಷಾ ಬಿಜಾಪುರದ ಕೋಟೆ ಕಟ್ಟಿಸಿದ. ದಕ್ಷಿಣದ ಐದು ಮುಹಮ್ಮದೀಯ ರಾಜ್ಯಗಳಲ್ಲಿ ಬಿಜಾಪುರ ರಾಜ್ಯವೂ ಒಂದು. 1565ರಲ್ಲಿ ರಕ್ಕಸ ತಂಗಡಿ ಯುದ್ಧದಲ್ಲಿ ಬಿಜಾಪುರ ಹಾಗೂ ಇತರ ಮುಸಲ್ಮಾನ ರಾಜ್ಯಗಳು ವಿಜಯನಗರ ರಾಜ್ಯದ ಮೇಲೆ ದಾಳಿ ಮಾಡಿ ಅದನ್ನು ನಾಶಮಾಡಿದುವು.

ಮೊಘಲ ಚಕ್ರವರ್ತಿ ಔರಂಗಜೇಬನು 1686ರಲ್ಲಿ ಬಿಜಾಪುರವನ್ನು ವಶಪಡಿಸಿಕೊಂಡ. 18ನೆಯ ಶತಮಾನದಲ್ಲಿ ಇದು ಪೇಶ್ವೆಯರ ಕೈಸೇರಿತು. 1818ರಲ್ಲಿ ಬ್ರಿಟಿಷರ ವಶವಾಯಿತು. ಅವರು ಅದನ್ನು ಸತಾರದ ದೊರೆಗೆ ಕೊಟ್ಟರು. ಮತ್ತೆ 1848ರಲ್ಲಿ ಸತಾರಾ ಅವರ ವಶವಾದಾಗ ಬಿಜಾಪುರವೂ ಅವರ ಕೈ ಸೇರಿತು.

ಸಾತ್‌ಮಂಜಿಲ್ ಬಿಜಾಪುರದ ಅರಮನೆಗಳಲ್ಲಿ ಪ್ರಮುಖವಾದದ್ದು. ಇದು ಏಳಂತಸ್ತಿನ ಅರಮನೆಯಾಗಿದ್ದಿತು. ಈಗ ಐದು ಅಂತಸ್ತುಗಳು ಮಾತ್ರ ಉಳಿದಿವೆ. ಬೇಗಂ ಕೆರೆಯನ್ನು ಆದಿಲ್ ಷಾ ಕಟ್ಟಿಸಿದ. ಇದಲ್ಲದೆ ಬಿಜಾಪುರದಲ್ಲಿ ತಾಜ್ ಬಾವ್‌ಡಿ ಮತ್ತು ಚಾಂದ್ ಬಾವ್‌ಡಿಗಳೆಂಬ ಎರಡು ದೊಡ್ಡ ಬಾವಿಗಳಿವೆ. ಮಲ್ಲಿಕ್ ಜಹಾನ್ ಮಸೀದಿ, ಜೋಡು ಗುಮ್ಮಟ, ಮುಕ್ಕ ಮಸೀದಿ, ಯಾಕುಬ್ ಮಸೀದಿ —ಇತರ ಪ್ರೇಕ್ಷಣೀಯ ಸ್ಥಳಗಳು. ಮಲ್ಲಿಕ್-ಇ-ಮೈದಾನದಲ್ಲಿ 1549ರಲ್ಲಿ ಎರಕಹುಯ್ದ ಹಿತ್ತಾಳೆಯ ಒಂದು ಅತಿ ದೊಡ್ಡ ಫಿರಂಗಿ ಇದೆ. 16ನೆಯ ಶತಮಾನದಲ್ಲಿ ಭಾರತೀಯ ಸಾಗರೋತ್ತರ ವಾಣಿಜ್ಯದಲ್ಲಿ ಪ್ರಚಲಿತವಿದ್ದ ನಾಣ್ಯಗಳು ಬಿಜಾಪುರದಲ್ಲಿ ದೊರೆತಿವೆ.


ಬಿಜಾಪುರ ಇಂದು ಹತ್ತಿ ವ್ಯಾಪಾರದ ಮುಖ್ಯ ಸ್ಥಳಗಳಲ್ಲಿ ಒಂದು. ರಾಸಾಯನಿಕಗಳು, ಸಾಬೂನು, ಕಬ್ಬಿಣ ಮತ್ತು ತಾಮ್ರದ ಪದಾರ್ಥಗಳು ಇಲ್ಲಿ ತಯಾರಾಗುತ್ತವೆ. ಬಿಜಾಪುರದ ಜನಸಂಖ್ಯೆ 1,03,931.

ನೋಡಿ : ಆದಿಲ್ ಷಾಹಿ
ಗೋಳಗುಮ್ಮಟ—ಸಂಪುಟ ೫

ಬಿ. ಡಿ. ಖೊಬ್ರಾಗಡೆ

ಸ್ವಾತಂತ್ರ್ಯ ಹೋರಾಟದಲ್ಲಿ ಗಮನಾರ್ಹ ಸೇವೆ ಸಲ್ಲಿಸಿದವರು, ಬಾಪುರಾವ್ ದೇವ್‌ಜಿ ಖೊಬ್ರಾಗಡೆ.

ಖೊಬ್ರಾಗಡೆ ಮಧ್ಯ ಪ್ರದೇಶದ ಚಾಂದಾದಲ್ಲಿ 1925 ಸೆಪ್ಟೆಂಬರ್ 25 ರಂದು ಹುಟ್ಟಿದರು. ನಾಗಪುರ ಹಾಗೂ ಇಂಗ್ಲೆಂಡ್‌ಗಳಲ್ಲಿ ಪ್ರೌಢ ವಿದ್ಯಾಭ್ಯಾಸ. ಸ್ವಲ್ಪ ಕಾಲ ಶಿಕ್ಷಕವೃತ್ತಿ ಮಾಡಿದರು. ಇಂಗ್ಲೆಂಡಿನಲ್ಲಿ ಕಾನೂನು ಪದವಿ ಪಡೆದುಬಂದ ಖೊಬ್ರಾಗಡೆ ರಾಜಕೀಯಕ್ಕಾಗಿ ವಕೀಲ ವೃತ್ತಿ ತ್ಯಜಿಸಿದರು.



ರಿಪಬ್ಲಿಕನ್ ಪಕ್ಷ : ಖೊಬ್ರಾ

ಪರಿಶಿಷ್ಟ ಜಾತಿಗಳ ವಿದ್ಯಾರ್ಥಿ ಫೆಡರೇಷನಿನ ಪ್ರಧಾನ ಕಾರ್ಯದರ್ಶಿಯಾಗಿ ಇವರು ಸ್ವಾತಂತ್ರ್ಯ ಚಳುವಳಿಯಲ್ಲಿ ಪಾಲ್ಗೊಂಡರು. ಚಾಂದಾ ಪುರಸಭೆಯ ಉಪಾಧ್ಯಕ್ಷರಾಗಿ, ನಾಗಪುರ ಪ್ರದೇಶ ಪರಿಶಿಷ್ಟ ಜಾತಿಗಳ ಫೆಡರೇಷನಿನ ಅಧ್ಯಕ್ಷರಾಗಿ ಕೆಲಸ ಮಾಡಿದರು. 1955ರಲ್ಲಿ ಇವರು ಅಖಿಲ ಭಾರತ ಪರಿಶಿಷ್ಟ ಜಾತಿಗಳ ಫೆಡರೇಷನಿನ ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆಯಾದರು. ಈ ಸಂಸ್ಥೆಯನ್ನು ಭಾರತದ ರಿಪಬ್ಲಿಕನ್ ಪಕ್ಷ ಎಂಬುದಾ ವಿಶಾಲ ತಳಹದಿಯ ಮೇಲೆ ರೂಪಿಸಲು ಇವರು ಶ್ರಮಿಸಿದರು.

1958 ಹಾಗೂ 1966ರಲ್ಲಿ ರಾಜ್ಯಸಭೆಗೆ ಆಯ್ಕೆಯಾದರು. ಇವ ಸಿದ್ಧಾರ್ಥ ಶಿಕ್ಷಣ ಸಹಾಯಕ ಸಂಸ್ಥೆಯ ಸಂಸ್ಥಾಪಕ ಸದಸ್ಯರು.

ಬ್ಯಾಂಗ್‌ಕಾಕ್‌ನಲ್ಲಿ 1958ರಲ್ಲಿ ನಡೆದ ಜಾಗತಿಕ ಬೌದ್ಧ ಸಮ್ಮೇಳನದ ಖೊಬ್ರಾಗಡೆ ಭಾಗವಹಿಸಿದ್ದರು.

ಬಿ.ಡಿ. ಜತ್ತಿ

ಕರ್ನಾಟಕದ ಹಿರಿಯ ನಾಯಕರಲ್ಲೊಬ್ಬರು, ಬಿ.ಡಿ. ಜತ್ತಿ.

1912 ಸೆಪ್ಟೆಂಬರ್ 10ರಂದು, ಬಿಜಾಪುರ ಜಿಲ್ಲೆಯ ಸಾವಲಗಿಯ ಬಸಪ್ಪ ದಾನಪ್ಪ ಜತ್ತಿಯವರ ಜನನ. ತಂದೆ ದಾನಪ್ಪ. ತಾಯಿ ಭಾಗ ಬಿ.ಎ. ಪದವಿ ಪಡೆದ ಮೇಲೆ ಕೊಲ್ಹಾಪುರದಲ್ಲಿ ನ್ಯಾಯಶಾಸ್ತ್ರ ಪದ ವ್ಯಾಸಂಗ ಮಾಡಿದರು. ಅನಂತರ ಜಮಖಂಡಿಯಲ್ಲಿ ವಕೀಲವ್ ಕೈಗೊಂಡರು. ಅದೇ ಕಾಲದಲ್ಲಿ ಜಮಖಂಡಿ ಪುರಸಭೆಯ ಸದಸ್ಯರಾ ಎರಡು ಬಾರಿ, ಅಧ್ಯಕ್ಷರಾಗಿ ಒಂದು ಬಾರಿ ಆಯ್ಕೆಯಾದರು. ಹೀಗೆ ಅ ಸಾರ್ವಜನಿಕ ಜೀವನ ಆರಂಭವಾಯಿತು.

1945ರಲ್ಲಿ ಜಮಖಂಡಿ ಸಂಸ್ಥಾನದ ನ್ಯಾಯವಿಧಾಯಕ ಸಭೆ ಸದಸ್ಯರಾದರು. ಅನಂತರ ಒಂದು ವರ್ಷ ಕಾಲ ಜಮಖಂಡಿ ಸಂಸ್ಥಾ ಮಂತ್ರಿಯಾಗಿಯೂ 1948 ಮಾರ್ಚ್ ವರೆಗೆ ಮುಖ್ಯ ಮಂತ್ರಿಯಾಗಿಯೂ ಇದ್ದರು.

1948ರಲ್ಲಿ ಜಮಖಂಡಿ ಸಂಸ್ಥಾನ ಮುಂಬಯಿ ಪ್ರಾಂತ್ಯದಲ್ಲಿ ವಿಲೀನಗೊಂಡ ಮೇಲೆ ಮುಂಬಯಿ ವಿಧಾನಸಭೆಗೆ ಸದಸ್ಯರಾಗಿ ನೇಮಕ ಹೊಂದಿದರು. ಅನಂತರ ಆ ರಾಜ್ಯದ ಮುಖ್ಯಮಂತ್ರಿಗೆ ಪಾರ್ಲಿಮೆಂಟರಿ ಕಾರ್ಯದರ್ಶಿಯಾಗಿ 3 ವರ್ಷ ಕೆಲಸ ಮಾಡಿದರು.



ರಾಜಕಾರಣಿ : ಜತ್ತಿ

1952ರ ಮಹಾ ಚುನಾವಣೆಯಲ್ಲಿ ಮತ್ತೆ ಮುಂಬಯಿ ವಿಧಾನಸಭೆಗೆ ಸದಸ್ಯರಾಗಿ ಆಯ್ಕೆ ಹೊಂದಿದರು. 1952–56 ಅವಧಿಯಲ್ಲಿ ಆರೋಗ್ಯ ಮತ್ತು ಕಾರ್ಮಿಕ ಶಾಖೆಯ ಉಪ ಸಚಿವರಾಗಿದ್ದರು. ವಿಶಾಲ ಮೈಸೂರು ರಾಜ್ಯ ರೂಪುಗೊಂಡಾಗ ಮೈಸೂರಿನ ವಿಧಾನಸಭಾಸದಸ್ಯರಾದರು. 1958–62ರ ಅವಧಿಯಲ್ಲಿ ಮೈಸೂರಿನ ಮುಖ್ಯಮಂತ್ರಿಯಾದರು ; ಮುಂದೆ ಮೂರು ವರ್ಷ ಅರ್ಥ ಸಚಿವರಾಗಿಯೂ ಇನ್ನು ಮೂರು ವರ್ಷ ಆಹಾರ ಮತ್ತು ಸರಬರಾಜು ಸಚಿವರಾಗಿಯೂ ಇದ್ದರು.

1968ರಲ್ಲಿ ಬಿ.ಡಿ. ಜತ್ತಿಯವರು ಪಾಂಡಿಚೆರಿಯ ಲೆಫ್ಟಿನೆಂಟ್ ಗವರ್ನರಾಗಿ ನೇಮಕಗೊಂಡರು. 1973ರಲ್ಲಿ ಒಡಿಸ್ಸಾ ರಾಜ್ಯದ ರಾಜ್ಯಪಾಲರಾದರು.

ಬಿಪಿನ ಚಂದ್ರ ಪಾಲ್

ಇನ್ನೂ ಕಾಲೇಜು ವಿದ್ಯಾರ್ಥಿಯಾಗಿದ್ದಾಗಲೇ ಬಿಪಿನ ಚಂದ್ರ ಪಾಲ್ ಬ್ರಹ್ಮಸಮಾಜವನ್ನು ಸೇರಿದರು. ತಂದೆಗೆ ಇದು ಸರಿಬೀಳಲಿಲ್ಲ. ತಮ್ಮ ಆಸ್ತಿಯಲ್ಲಿ ಮಗನಿಗೆ ಹಕ್ಕು ಇಲ್ಲದಂತೆ ಮಾಡಿದರು. ಪಾಲರು ಬಾಲ ವಿಧವೆಯೊಬ್ಬಳನ್ನು ಮದುವೆಯಾದಾಗ ಸಮಾಜದಿಂದ ಬಹಿಷ್ಕೃತರಾದರು. 'ಉಗ್ರಗಾಮಿ' ಸ್ವಾತಂತ್ರ್ಯವಾದಿಯಾಗಿ ಬ್ರಿಟಿಷ್ ಇಂಡಿಯಾ ಸರಕಾರದ ಅವಕೃಪೆಗೆ ಪಾತ್ರರಾದರು. ಗಾಂಧೀಜೀ ಅಸಹಕಾರ ಚಳುವಳಿಯನ್ನು ಆರಂಭಿಸಿದಾಗ ಅದರ ತತ್ತ್ವವನ್ನು ಬಿಪಿನ ಚಂದ್ರ ಪಾಲ್ ಒಪ್ಪಿಕೊಳ್ಳಲಿಲ್ಲ; ಅದಕ್ಕೆ ವಿರುದ್ಧವಾಗಿ ವಾದಿಸಿದರು. ತಾವು ಕೆಲಸಮಾಡಿದ ಪ್ರತಿ ಕ್ಷೇತ್ರದಲ್ಲೂ ಇವರು ಅಸದೃಶರು. ಏಕಾಕಿಯಾಗಿ ಹೋರಾಡಿದವರು.



ಉಗ್ರಗಾಮಿ : ಪಾಲ್

ಈಗ ಬಾಂಗ್ಲಾದೇಶದಲ್ಲಿರುವ ಸಿಲ್‌ಹೆಟ್ ಜಿಲ್ಲೆಯ ಒಂದು ಹಳ್ಳಿ ಇವರ ಜನ್ಮಸ್ಥಳ. ಹುಟ್ಟಿದ್ದು ಶ್ರೀಮಂತ ಕುಟುಂಬದಲ್ಲಿ, 1858ರ ನವಂಬರ್ ತಿಂಗಳಲ್ಲಿ. ಕಾಲೇಜಿನಲ್ಲಿದ್ದಾಗ ಬ್ರಹ್ಮ ಸಮಾಜ ಸೇರಿದರು. ತಂದೆಗೆ ಒಪ್ಪಿಗೆಯಾಗದೆ ಶಿಕ್ಷಣ ವೆಚ್ಚ ಕೊಡಲು ನಿರಾಕರಿಸಿದರು. ಉಯಿಲು ಬರೆದು ಮಗನ ವಾರಸು ಹಕ್ಕನ್ನು ಕಿತ್ತು ಹಾಕಿದರು. ತಮ್ಮ ಬಂಧುಗಳಿಂದ ಬಿಪಿನ್ ಬಹಿಷ್ಕೃತರಾದರು. ಬಿಪಿನ್ ವಿದ್ಯಾಭ್ಯಾಸವನ್ನು ಅರ್ಧಕ್ಕೇ ನಿಲ್ಲಿಸಬೇಕಾಯಿತು.

22ನೆಯ ವಯಸ್ಸಿನಲ್ಲಿ ಇವರು 'ಪರಿದರ್ಶಕ್' ಎಂಬ ಬಂಗಾಳೀ ವಾರಪತ್ರಿಕೆಯನ್ನು ಆರಂಭಿಸಿದರು. ಮುಂದೆ 1901ರಲ್ಲಿ 'ನ್ಯೂ ಇಂಡಿಯಾ', 1906ರಲ್ಲಿ 'ವಂದೇ ಮಾತರಂ'ಪತ್ರಿಕೆಗಳನ್ನು ಹೊರಡಿಸಿದರು. ಲಂಡನ್ನಿಗೆ ಹೋಗಿ 'ಸ್ವರಾಜ್ಯ' ಎಂಬ ಪಕ್ಷ ಪತ್ರಿಕೆಯನ್ನೂ ಕಲ್ಕತ್ತೆಯಲ್ಲಿ 'ಹಿಂದೂ ರಿವ್ಯೂ' ಮಾಸಪತ್ರಿಕೆಯನ್ನೂ ಸ್ಥಾಪಿಸಿದರು. ಇತರ ಹಲವು ಪತ್ರಿಕೆಗಳಲ್ಲಿ ಸಂಪಾದಕರಾಗಿಯೂ ಅಂಕಣ ಲೇಖಕರಾಗಿಯೂ ಕೆಲಸಮಾಡಿದರು. ತಮ್ಮ ಕೊನೆಗಾಲದವರೆಗೂ ಪತ್ರಿಕೆಗಳಿಗೆ ಲೇಖನಗಳನ್ನು ಬರೆಯುತ್ತಲೇ ಇದ್ದರು. ಪಾಲ್ ಅವರು ತಮ್ಮ 28 ವರ್ಷದವರಾಗಿದ್ದಾಗ ಕಾಂಗ್ರೆಸನ್ನು ಸೇರಿದರು. ಲಾಲಾ ಲಜಪತ್ ರಾಯ್ ಮತ್ತು ಬಾಲಗಂಗಾಧರ ತಿಲಕರಂತೆ ಇವರೂ 'ಉಗ್ರಗಾಮಿ' ಪಂಥದ ನಾಯಕರು. (ಈ ಮೂವರು ಲಾಲ್ - ಬಾಲ್ - ಪಾಲ್ ಎಂದು ಪ್ರಖ್ಯಾತರಾಗಿದ್ದರು.) 1886ರಿಂದ 1907ರವರೆಗೆ ತಮ್ಮ ಭಾಷಣಗಳಿಂದ ಕಾಂಗ್ರೆಸಿನ ಸ್ವಯಂಸೇವಕರನ್ನು ಹುರಿದುಂಬಿಸುತ್ತಿದ್ದರು. 1907ರಲ್ಲಿ ಇತರ ಕಾಂಗ್ರೆಸ್ ನಾಯಕರೊಂದಿಗೆ ಉಂಟಾದ ಮತಭೇದದಿಂದ ಆ ಸಂಸ್ಥೆಯಿಂದ ಹೊರಬಂದರೂ, ಮತ್ತೆ 1916ರಲ್ಲಿ ಪಾಲ್ ಕಾಂಗ್ರೆಸ್ಸಿಗರಾದರು. ರಾಜಕೀಯ ಮಾತುಕತೆಗಳಿಗಾಗಿ ತಿಲಕರೊಡನೆ ಇಂಗ್ಲೆಂಡಿಗೆ ಹೋಗಿಬಂದರು.

ಗಾಂಧೀಜೀ ಒಬ್ಬ ಸಂತ ; ರಾಜಕೀಯ ಇವರಿಗೆ ಸಲ್ಲದು–ಎಂಬುದು ಪಾಲರ ಅಭಿಪ್ರಾಯವಾಗಿತ್ತು.

ಪಾಲರು ರಾಜಕೀಯ ವಿಚಾರಗಳನ್ನು ಗಾಢವಾಗಿ ಅಭ್ಯಸಿಸಿದ್ದಂತೆ ಧಾರ್ಮಿಕ ವಿಚಾರಗಳನ್ನೂ ಅಧ್ಯಯನ ಮಾಡಿದ್ದರು. ಆ ಬಗೆಗೆ ಅವರು ಭಾಷಣಗಳನ್ನು ಮಾಡಿದರು : ಪುಸ್ತಕಗಳನ್ನು ಬರೆದರು.

ಬಿಪಿನ ಚಂದ್ರ ಪಾಲರು 1932ರಲ್ಲಿ ನಿಧನರಾದರು.

ಬಿಯಾಸ್

ಅಲೆಗ್ಸಾಂಡರ್ ಕ್ರಿಸ್ತ ಪೂರ್ವ 326ರಲ್ಲಿ ಭಾರತದ ಮೇಲೆ ನಡೆಸಿದ ದಂಡಯಾತ್ರೆಯ ಕಾಲದಲ್ಲಿ ವಿಪಾಶಾ ನದಿಯನ್ನು ದಾಟಿದ್ದ. ಈ ನದಿಗೆ ಈಗ ಪ್ರಚಲಿತವಾಗಿರುವ ಹೆಸರು ಬಿಯಾಸ್. ಪ್ರಾಚೀನ ಗ್ರೀಕರು ಇದನ್ನು ಹೈಫಾಸಿಸ್ ಎಂದು ಕರೆಯುತ್ತಿದ್ದರು.

ಬಿಯಾಸ್ ಹುಟ್ಟುವುದು ಸಮುದ್ರ ಮಟ್ಟದಿಂದ 13,300 ಅಡಿಗೂ ಎತ್ತರದಲ್ಲಿ. ಕಾಂಗ್ರಾ ಜಿಲ್ಲೆಯ ಹಿಮಾಚ್ಛಾದಿತ ರೋಹ್ತಾಂಗ್ ಕಣಿವೆಯಲ್ಲಿ. ಇದು ಕುಲು ಕಣಿವೆಯಲ್ಲಿ ಹರಿದು 70 ಮೈಲು ದೂರ ಸಾಗಿದಾಗ ಹಲವು ಉಪನದಿಗಳು ಇದನ್ನು ಕೂಡಿಕೊಳ್ಳುತ್ತವೆ. ಬಿಯಾಸ್ ನದಿಯ ನೀರಿನ ಪ್ರಧಾನ ಆಕರ ಪರ್ವತಗಳ ಹಿಮ. ಚಳಿಗಿನ ಹೊತ್ತಿನಲ್ಲಿ ಇದರಲ್ಲಿ ಅಷ್ಟಾಗಿ ನೀರು ಇರುವುದಿಲ್ಲ. ಸೂರ್ಯನ ತಾಪದಿಂದ ಹಿಮ ಕರಗಿದ ಮೇಲೆ ನದಿ ತುಂಬಿಕೊಳ್ಳುತ್ತದೆ.

ಪಂಜಾಬಿನ ಬಯಲು ಪ್ರದೇಶದಲ್ಲಿ ಹರಿಯುವ ಬಿಯಾಸ್ ಅಮೃತಸರದಿಂದ 35 ಮೈಲು ನೈಋತ್ಯಕ್ಕೆ ಸಟ್ಲೆಜ್ ನದಿಯನ್ನು ಸೇರುತ್ತದೆ. ಬಿಯಾಸ್‌ನ ಉದ್ದ ಸುಮಾರು 290 ಮೈಲು. ಪಂಜಾಬ್ ಎಂದು ಹೆಸರು ಬರಲು ಕಾರಣವಾದ ಐದು ನದಿಗಳಲ್ಲಿ ಈಗ ಪೂರ್ತಿಯಾಗಿ ಭಾರತದಲ್ಲೇ ಇರುವ ನದಿ ಇದೊಂದೇ. ಸಟ್ಲೆಜಿಗೆ ಹರಿಯುವ ಇದರ ನೀರಿನ ಪಾಲಿನ ಸಂಬಂಧದಲ್ಲಿ ಭಾರತ-ಪಾಕಿಸ್ತಾನಗಳ ನಡುವೆ ವಿವಾದವಿದೆ.

ಹಿಮಾಚಲ ಪ್ರದೇಶದಲ್ಲಿ ಬಿಯಾಸ್‌ಗೆ ಇರುವ ಅಣೆಕಟ್ಟಿನಿಂದ ದೊಡ್ಡ ಪ್ರಮಾಣದ ನೀರಾವರಿ ಸಾಧ್ಯವಾಗಿದೆ. ಇದರಿಂದ ಹಲವು ಪಟ್ಟಣಗಳಿಗೆ ವಿದ್ಯುತ್ತು ಒದಗಿದೆ.

ಬಿರ್ಲಾ ಔದ್ಯೋಗಿಕ ಮತ್ತು ತಾಂತ್ರಿಕ ವಸ್ತುಸಂಗ್ರಹಾಲಯ

ವಿಜ್ಞಾನ ಹಾಗೂ ತಾಂತ್ರಿಕತೆಯ ಇತಿಹಾಸವನ್ನು ಬಿಂಬಿಸುವುದು. ಸಾಮಾನ್ಯ ಜನರಲ್ಲಿ ವೈಜ್ಞಾನಿಕ ಜಾಗೃತಿ ಮೂಡಿಸುವುದು ಹಾಗೂ ಶಾಲಾ ಮಕ್ಕಳ ವಿಜ್ಞಾನ ವಿದ್ಯಾಭ್ಯಾಸಕ್ಕೆ ಪೂರಕವಾದ ನೆರವು ನೀಡುವುದು

ನ್ನಡು. ಪ್ರಮುಖ ನಗರದಲ್ಲಿ ಕಲ್ಕತ್ತೆಯಲ್ಲಿರುವ ಬಿರ್ಲಾ ಔದ್ಯೋಗಿಕ ಮತ್ತು ತಾಂತ್ರಿಕ ವಸ್ತುಸಂಗ್ರಹಾಲಯದ ಮುಖ್ಯ ಉದ್ದೇಶಗಳು.

ಈ ಬೋಧಪ್ರದ ಪ್ರದರ್ಶನ ವಿಭಾಗಗಳು ಈ ವಸ್ತುಸಂಗ್ರಹಾಲಯದ ವಿಶೇಷ. ಪರಮಾಣುವಿನ ಮೂಲಭೂತ ಕಲ್ಪನೆ. ಪರಮಾಣುಶಕ್ತಿಯ ಉಪಯೋಗಗಳು. ಪ್ರಾಚೀನ ಕಾಲದಿಂದ ಪ್ರಕೃತಿಯಲ್ಲಿ ದೊರೆಯುವ ವಸ್ತುಗಳನ್ನು ಮಾನವ ಬಳಸಿದ ಬಗೆ; ಬೆಳಕು, ಧ್ವನಿಗಳ ಮೂಲಭೂತ ತತ್ತ್ವಗಳ ಬಗೆಗಿನ ಪ್ರದರ್ಶನ ವಿಭಾಗ; ಗಣಿಕೆಲಸ, ಲೋಹ ವಿಜ್ಞಾನ ಮೊದಲಾದ ಕೆಲಸದ ಹಲವು ಯಂತ್ರಗಳ ಮಾದರಿಗಳು : ವಿದ್ಯುತ್ತಿನ ಉಗಮ. ಅದರ ವಿವಿಧ ಗುಣಗಳು. ಟೆಲಿವಿಷನ್. ಎಲೆಕ್ಟ್ರಾನಿಕ್ಸ್ ತತ್ತ್ವಗಳು, ಕೈಗಾರಿಕೆಯಲ್ಲಿ ಅವುಗಳ ಅನ್ವಯ. ತಂತಿವಾರ್ತೆ. ದೂರವಾಣಿ. ಅಂಚೆ ಮುಂತಾದ ಸಂಪರ್ಕ ಕ್ರಮಗಳ ವಿಕಾಸ — ಈ ಎಲ್ಲ ವಿಷಯಗಳು ಸುಲಭವಾಗಿ ತಿಳಿಯುವಂತೆ ಮಾದರಿಗಳನ್ನು ಇಲ್ಲಿ ಇಟ್ಟಿದ್ದಾರೆ.


ಸಂಚಾರೀ ವಿಜ್ಞಾನ ಪ್ರದರ್ಶನ. ಪ್ರದರ್ಶನ ಸಹಿತ ಉಪನ್ಯಾಸ. ವಿಜ್ಞಾನದಲ್ಲಿ ಒಲವು ಇರುವ ಹುಡುಗರಿಗೆ ಮಾರ್ಗದರ್ಶನ. ಮಾದರಿ ರಚನಾಸ್ಪರ್ಧೆ, ವೈಜ್ಞಾನಿಕ ಚಿತ್ರಪ್ರದರ್ಶನ, ಆಕಾಶವೀಕ್ಷಣೆ, ವಿಜ್ಞಾನ–ಕಲೆ ಮತ್ತು ಸಂಸ್ಕೃತಿಗಳ ಬಗೆಗೆ ತಾತ್ಕಾಲಿಕ ಪ್ರದರ್ಶನ. ಇತ್ಯಾದಿ ಅನೇಕ ಸೌಲಭ್ಯಗಳನ್ನು ಏರ್ಪಡಿಸುವುದು ಈ ವಸ್ತುಸಂಗ್ರಹಾಲಯದ ಶೈಕ್ಷಣಿಕ ಕಾರ್ಯಕ್ರಮಗಳು.

ನೋಡಿ : ವಿಶ್ವೇಶ್ವರಯ್ಯ ಔದ್ಯೋಗಿಕ ಮತ್ತು ತಾಂತ್ರಿಕ ವಸ್ತುಸಂಗ್ರಹಾಲಯ

ಬಿ. ಶಿವರಾವ್

ಭಾರತದ ಸ್ವಾತಂತ್ರ್ಯ ಸಮರದ ಸಮಯದಲ್ಲಿ ಪತ್ರಿಕೋದ್ಯಮಿಯಾಗಿ ಜನಾಭಿಪ್ರಾಯವನ್ನು ಖಚಿತವಾಗಿ ಪ್ರತಿಬಿಂಬಿಸುತ್ತಿದ್ದ ಬೆನಗಲ್ ಶಿವರಾಯರಿಗೆ ಸರಕಾರೀ ವಲಯದಲ್ಲೂ ಗೌರವವಿತ್ತು. ತಮ್ಮ ಕಾರ್ಯನೀತಿಗಳ ಬಗೆಗೆ ಜನಾಭಿಪ್ರಾಯವನ್ನು ತಿಳಿಯಬೇಕಾದರೆ ಸರಕಾರಿ ಅಧಿಕಾರಿಗಳು ಶಿವರಾಯರ ನೆರವು ಪಡೆಯುತ್ತಿದ್ದರು. ಇವರು ಹಲವಾರು ವರ್ಷ ಮದರಾಸಿನ 'ಹಿಂದು' ಮತ್ತು ಲಂಡನಿನ 'ಗಾರ್ಡಿಯನ್' ಪತ್ರಿಕೆಗಳಿಗೆ ದೆಹಲಿಯ ಪ್ರತಿನಿಧಿಯಾಗಿದ್ದರು.

ಶಿವರಾಯರ ಜನನ 1891ರಲ್ಲಿ. ತಂದೆ ರಾಘವೇಂದ್ರರಾಯರು. ಇವರು ಕರ್ನಾಟಕ ರಾಜ್ಯದ ದಕ್ಷಿಣ ಕನ್ನಡ ಜಿಲ್ಲೆಯವರು. ಶಿವರಾಯರು ಅಲಹಾಬಾದಿನಲ್ಲಿ ವಿದ್ಯಾಭ್ಯಾಸ ಮಾಡಿ ಬಿ. ಎ. ಪರೀಕ್ಷೆಯಲ್ಲಿ ಉತ್ತೀರ್ಣರಾದರು.



ಒರಿಯ ಪತ್ರಿಕೋದ್ಯಮಿ :
ಶಿವರಾವ್

ಅನಿ ಬೆಸೆಂಟರಿಗೆ ಇವರ ಮೇಲೆ ತುಂಬ ಪ್ರೀತಿ, ಆದರ. ಅವರ ಮಾರ್ಗದರ್ಶನದಲ್ಲಿ ಶಿವರಾಯರು ಪತ್ರಿಕೋದ್ಯಮದಲ್ಲಿ ಪಳಗಿದರು; ಅವರ ಕಾರ್ಯದರ್ಶಿಯಾಗಿ ವ್ಯವಹಾರ ಚಾತುರ್ಯವನ್ನು ಕಲಿತರು. ಜನ ಸೇವೆಯಲ್ಲಿ ಆಸಕ್ತಿ ಬೆಳೆಸಿಕೊಂಡು ಕಾರ್ಮಿಕ ವರ್ಗಕ್ಕೆ ಅಮೂಲ್ಯ ಸೇವೆ ಸಲ್ಲಿಸಿದರು. ಭಾರತೀಯ ಕಾರ್ಮಿಕರ ಪರವಾಗಿ 1930–31ರಲ್ಲಿ ಲಂಡನಿನಲ್ಲಿ ನಡೆದ ದುಂಡುಮೇಜಿನ ಪರಿಷತ್ತಿನಲ್ಲಿ ಭಾಗವಹಿಸಿದರು. ಕರ್ನಾಟಕ ಏಕೀಕರಣದ ಬಗೆಗೆ ಒಂದು ಮಸೂದೆಯನ್ನು ಸಿದ್ಧಗೊಳಿಸಿ ಪರಿಷತ್ತಿಗೆ ಅದನ್ನು ಒಪ್ಪಿ ದರು. ಶಿವರಾಯರು ವಿಶ್ವಸಂಸ್ಥೆಯ ಮಹಾಸಭೆಯಲ್ಲಿ ಭಾರತ ಪ್ರತಿನಿಧಿಯಾಗಿಯೂ ಕೆಲಸ ಮಾಡಿದ್ದಾರೆ. 1952ರಲ್ಲಿ ಶಿವರಾಯ ದಕ್ಷಿಣ ಕನ್ನಡ ಜಿಲ್ಲೆಯ ದಕ್ಷಿಣ ಕ್ಷೇತ್ರದಿಂದ ಪಾರ್ಲಿಮೆಂಟಿಗೆ ಆರಿಸ ಟ್ಟರು. ಪರಮಾಣು ಅಸ್ತ್ರಗಳ ಬಳಕೆಯನ್ನು ನಿಲ್ಲಿಸುವಂತೆ ಒತ್ತಾ ಪಡಿಸಲು ರಾಜಾಜಿಯವರೊಂದಿಗೆ 1962ರಲ್ಲಿ ಇವರು ಅಮೇರಿ ಹೋಗಿ ಬಂದರು.

ಇವರು ಭಾರತ ರಾಜ್ಯಾಂಗ ಸಭೆಯ. ಲೋಕಸಭೆ ಮತ್ತು ರಾ ಸಭೆಗಳ ಸದಸ್ಯರಾಗಿಯೂ ಸೇವೆ ಸಲ್ಲಿಸಿದ್ದಾರೆ.

ಬಿ. ಶಿವರಾಯರು ದಕ್ಷ ಪತ್ರಿಕೋದ್ಯಮಿ: ಉತ್ತಮ ಲೇಖಕರ ಭಾರತೀಯ ಕಾರ್ಮಿಕರನ್ನು ಕುರಿತು ಇವರು ಬರೆದಿರುವ ಗ್ರಂಥ ಪ್ರಸಿ ವಾದದ್ದು. ಅಣ್ಣ ಬೆನಗಲ್ ನರಸಿಂಗರಾಯರ ಬರೆವಣಿಗೆಗಳನ್ನು ಗ್ರಂ ರೂಪದಲ್ಲಿ ಇವರು ಸಂಪಾದಿಸಿದ್ದಾರೆ. ಭಾರತ ರಾಜ್ಯಾಂಗ ರಚನೆಯ ಕುರಿತ ಐದು ಸಂಪುಟಗಳು ಇವರ ಪ್ರಧಾನ ಸಂಪಾದಕತ್ವದಲ್ಲಿ ಪ್ರಕ ವಾಗಿವೆ.

1967ರಲ್ಲಿ ಇವರಿಗೆ ಪದ್ಮಭೂಷಣ ಪ್ರಶಸ್ತಿಯನ್ನು ಕೊಟ್ಟು ಗೌರವ ಲಾಯಿತು.

ಕಾಸರಗೋಡು ಕರ್ನಾಟಕದಲ್ಲಿ ಸೇರ್ಪಡೆಯಾಗಬೇಕೆಂದು ಪಟ್ಟು ಹಿಡಿದು ವಾದಿಸಿರುವ ವ್ಯಕ್ತಿ ಬಿ. ಶಿವರಾಯರು.

ನೋಡಿ : ಕರ್ನಾಟಕ ಏಕೀಕರಣ ; ಬಿ. ಎನ್. ರಾವ್

ಬಿಷ್ಣು ಡೇ

ಬಿಷ್ಣು ಡೇ ಬಂಗಾಳದ ಖ್ಯಾತ ಕವಿ.

ಜನನ 1909 ಜುಲೈ 18ರಂದು. ಇಂಗ್ಲಿಷಿನ ಪ್ರಾಧ್ಯಾಪಕರಾಗಿ ವರು. ಸಮಕಾಲೀನ ಕವಿಗಳಲ್ಲಿ ಬಿಷ್ಣು ಡೇ ಅತ್ಯಾಧುನಿಕರು. ಇವರ ವಿಪುಲ ಕೃತಿ ರಚನೆ. ಬಿಷ್ಣು ಡೇಯವರ ಪ್ರತಿಭೆ. ಬಹುಮುಖ. ಆಧುನಿ ರಾಜಕೀಯ ಚಳುವಳಿಯಲ್ಲಿ ಭಾಗವಹಿಸುತ್ತಿರುವ ಕವಿಗಳಲ್ಲಿ ಇವರ ಅಗ್ರಸ್ಥಾನ. ಭವಿಷ್ಯದ ಬಗೆಗೆ ಇವರು ಬಹಳ ಆಶಾವಾದಿ.

'ಊರ್ವಶಿ ಓ ಆರ್ಟೆಮಿಸ್' ಮತ್ತು 'ಚೋರಾಬಾಲಿ' ಕವ ಸಂಗ್ರಹಗಳು ಅವರಿಗೆ ಶ್ರೇಷ್ಠ ಕವಿಯ ಸ್ಥಾನ ದೊರಕಿಸಿಕೊಟ್ಟವ 'ಸತ್ ಭಾಯ್ ಚಂಪಾ' ಹಾಗೂ 'ಸಂದ್ವೀಪೇರ್ ಚಾರ್' ಭಾವೋದ್ರೇಕ ಮತ್ತು ಸಾಂಪ್ರದಾಯಿಕ ನಿಷ್ಠುರತೆಯ ಜಾಡಿನಲ್ಲಿ ಇದರ 'ಸ್ಮೃತಿ ಸತ್ತಾ ಭವಿಷ್ಯತ್' 1971ರಲ್ಲಿ ಜ್ಞಾನಪೀಠ ಪಾರಿತೋಷಿಕ ಗಳಿಸಿದ ಕೃತಿ. ಇದರಲ್ಲಿ ಜೀವನ ಸಾಗಿಸಲು ಮತ್ತು ಪ್ರಗತಿ ಸಾಧಿಸಲು ಮಾನವ ನಡೆಸಿರುವ ನಿರಂತರ ಹೋರಾಟದ ಚಿತ್ರಣ ಇದೆ.

ಇವರ ಕವನಗಳಲ್ಲಿ ಪ್ರಕೃತಿಗಿಂತ ಮಾನವನ ಸ್ವಭಾವವನ್ನು ಎತ್ತಿ ತೋರಿಸುವಂಥವೇ



ಮಾನವ ಸ್ವಭಾವ ಚಿತ್ರಣ :
ಡೇ





ಬಿರ್ಲಾ ಗ್ರಹವ್ಯೂಹ ಭವನ : ಕಲ್ಕತ್ತಾ : ಸಸ್ಯೋದ್ಯಾನ

ಹಿನ್ನೀರು : ಕೇರಳ



ಸರೋವರ : ಉದಕಮಂಡಲ



ಹೆಚ್ಚು. ನಗರಗಳ ಸಂಸ್ಕೃತಿಯಿಂದ ಜನರ ಮನಸ್ಸು ಹೇಗೆ ವಿಕೃತಿಗೊಂಡಿದೆ, ಔದ್ಯೋಗೀಕರಣದ ದುಷ್ಪರಿಣಾಮಗಳೇನು ಎಂಬುದನ್ನು ಪರಿಣಾಮಕಾರಿಯಾಗಿ ಚಿತ್ರಿಸಿದ್ದಾರೆ. ಶ್ರೀಸಾಮಾನ್ಯನಿಗಾಗಿ ಅವರ ಹೃದಯ ಮಿಡಿಯುವುದನ್ನು ಕವಿತೆಗಳಲ್ಲಿ ಕಾಣಬಹುದು.

ಇವರು ಡಾ. ರವೀಂದ್ರನಾಥ ಠಾಕೂರ್ ಹಾಗೂ ಆಂಗ್ಲಕವಿ ಟಿ. ಎಸ್. ಎಲಿಯಟ್‌ರಿಂದ ಪ್ರಭಾವಿತರಾದರೂ ತಮ್ಮದೇ ಆದ ವಿಶಿಷ್ಟ ಶೈಲಿಯನ್ನು ರೂಪಿಸಿಕೊಂಡಿದ್ದಾರೆ.

ಬಿ. ಸಿ. ರಾಯ್

ವೈದ್ಯಕೀಯ. ರಾಜಕೀಯ ಕ್ಷೇತ್ರಗಳಲ್ಲಿ ಬೆಳಗಿದವರು. ಡಾ. ಬಿ. ಸಿ. ರಾಯ್. ಇವರು ಗಾಂಧೀಜಿಯ ವೈಯಕ್ತಿಕ ವೈದ್ಯರಾಗಿದ್ದರು.



ವೈದ್ಯಕೀ. ರಾಜಕೀಯ : ಬಿ. ಸಿ. ರಾಯ್

ಬಿಧನ ಚಂದ್ರ ರಾಯ್ ಅವರ ಜನನ 1882ರಲ್ಲಿ.

1948ರಲ್ಲಿ ಪಶ್ಚಿಮ ಬಂಗಾಳದ ಮುಖ್ಯಮಂತ್ರಿಯಾದ ಡಾ. ರಾಯ್ ಭಾರತದ ವಿಭಜನೆಯಿಂದ ಉಂಟಾದ ಕಷ್ಟ ಕಾರ್ಪಣ್ಯಗಳ ದಿನಗಳಲ್ಲಿ ತಮ್ಮ ಜನರಿಗೆ ಮಾರ್ಗದರ್ಶನ ಮಾಡಿದರು. 1962ರಲ್ಲಿ ತಮ್ಮ ಎಂಬತ್ತನೆಯ ವಯಸ್ಸಿನಲ್ಲಿ ತೀರಿಕೊಂಡ ತನಕವೂ ಇವರು ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಸ್ಥಾನದಲ್ಲಿದ್ದು ಜನಪ್ರಿಯರಾಗಿದ್ದರು.

1961ರಲ್ಲಿ ಭಾರತ ಸರಕಾರ ಬಿ. ಸಿ. ರಾಯ್ ಅವರಿಗೆ 'ಭಾರತರತ್ನ' ಪ್ರಶಸ್ತಿ ನೀಡಿ ಗೌರವಿಸಿತು.

ಬಿಸ್ಮಿಲ್ಲ ಖಾನ್

ಶಹನಾಯ್ ವಾದಕ ಬಿಸ್ಮಿಲ್ಲ ಖಾನ್ 1965ರಲ್ಲಿ ಎಡಿನ್‌ಬರೊ ಸಂಗೀತಮೇಳದಲ್ಲಿ ಭಾಗವಹಿಸಿದಾಗ. ಶಹನಾಯಿ ಏನು ಎಂಬುದೇ ತಿಳಿಯದಿದ್ದ ಆಂಗ್ಲರು ಕೂಡ ನೂರು ಮಿನಿಟುಗಳ ಕಾಲ ಮಂತ್ರಮುಗ್ಧರಂತೆ ಇವರ ವಾದ್ಯ ವಾದನವನ್ನು ಕೇಳಿದರು.

[illegible]ನಲ್ಲಿ ಬಿಸ್ಮಿಲ್ಲ ಖಾನ್ ಅವರ ಕಚೇರಿ ಮುಗಿದ ಮೇಲೆ ತರುಣನೊಬ್ಬ ಬಂದು ಇವರ ಕಾಲು ಮುಟ್ಟಿ ''ನಾನು ಭಾರತದಲ್ಲಿ ಆರು ತಿಂಗಳು ಇದ್ದು ತಮ್ಮಿಂದ ಶಹನಾಯಿ ಕಲಿತೇನೆ'' ಎಂದ. ಬಿಸ್ಮಿಲ್ಲ ನಗುತ್ತಲೇ ಹೇಳಿದರು : "ನೀನಲ್ಲ, ನಿನ್ನ ತಾತನೇ ಬಂದರೂ ಆರು ತಿಂಗಳಲ್ಲಿ ಶಹನಾಯ್ ಕಲಿಯಲು ಸಾಧ್ಯವಿಲ್ಲ. ಇದು ಇಡೀ ಜೀವಮಾನ ಕಲಿಯಬೇಕಾದ ಕಲೆ.''



ಶಹನಾಯ್ : ಬಿಸ್ಮಿಲ್ಲ

1916 ಮಾರ್ಚ್ 21ರಂದು ಹುಟ್ಟಿದ ಬಿಸ್ಮಿಲ್ಲ ನಾಲ್ಕನೆಯ ವಯಸ್ಸಿನಲ್ಲೇ ಶಹನಾಯ್ ಅಭ್ಯಾಸ ಆರಂಭಿಸಿದರು. ಇವರ ಇಬ್ಬರು ಸೋದರ ಮಾವಂದಿರೇ ಬಿಸ್ಮಿಲ್ಲರ ಮೊದಲ ಗುರುಗಳು. ಖಾನರಿಗೆ ಸಂಗೀತ ಪ್ರತಿಭೆ ಆನುವಂಶಿಕವಾಗಿ ಬಂದದ್ದು. ಬಿಸ್ಮಿಲ್ಲ ಖಾನರ ತಾತ ಮುತ್ತಾತಂದಿರು ಆಸ್ಥಾನ ಸಂಗೀತಗಾರರಾಗಿದ್ದವರು.

ಬಿಸ್ಮಿಲ್ಲಖಾನ್ ಯೂರೋಪ್ ಏಷ್ಯ, ಅಮೆರಿಕಗಳಲ್ಲಿ ಸಂಚರಿಸಿ ಸಂಗೀತ ಕಚೇರಿಗಳನ್ನು ನಡೆಸಿದ್ದಾರೆ. ಆದರೂ ವಾರಾಣಸಿಯ ತಮ ಮನೆಯಲ್ಲಿರುವಾಗಲೇ ಅವರಿಗೆ ಹೆಚ್ಚಿನ ಆನಂದ. "ಗಂಗಾನದಿಯ ದಡದಲ್ಲಿ, ದೇವಸ್ಥಾನಗಳ ನಡುವೆ ನನ್ನ ಶಿಷ್ಯರು, ಮೇಳದವರೊಡನೆ ಕುಳಿತು ಸಂಗೀತ ಅಭ್ಯಾಸ ಮಾಡುವುದಕ್ಕಿಂತ ಹೆಚ್ಚಾದ್ದು ಇನ್ನೇನು ಬೇಕು ನನಗೆ ? '' ಎನ್ನುವುದು ಅವರ ಮತ.

1956ರಲ್ಲಿ ಕೇಂದ್ರ ಸಂಗೀತ ನಾಟಕ ಅಕಾದೆಮಿ ಹಿಂದೂಸ್ತಾನೀ ಸಂಗೀತ ಪ್ರಾವೀಣ್ಯಕ್ಕಾಗಿ ಇವರಿಗೆ ಪ್ರಶಸ್ತಿ ಕೊಟ್ಟು ಗೌರವಿಸಿತು. 1961ರಲ್ಲಿ ಭಾರತ ಸರಕಾರದ ಪದ್ಮಶ್ರೀ, 1968ರಲ್ಲಿ ಪದ್ಮಭೂಷಣ ಪ್ರಶಸ್ತಿಗಳೂ ಲಭಿಸಿದುವು. ನೇಪಾಳ ಅಕಾಡೆಮಿ ಪ್ರಶಸ್ತಿಯೂ ಬಿಸ್ಮಿಲ್ಲ ಖಾನರಿಗೆ ದೊರಕಿದೆ.


ಬಿಸ್ಮಿಲ್ಲ ಖಾನರು ಶಹನಾಯ್ ವಾದನಕ್ಕೆ ಹೊಸ ರೂಪಕೊಟ್ಟವರು ; ಅದಕ್ಕೆ ಅಂತರರಾಷ್ಟ್ರೀಯ ಸ್ಥಾನ ದೊರಕಿಸಿಕೊಟ್ಟವರು.

ಬಿಹಾರ

ಸಿದ್ಧಾರ್ಥ ಬುದ್ಧನಾದ ನಾಡು ಬಿಹಾರ. ಬಿಹಾರ, ವಿಹಾರಗಳ ಪ್ರದೇಶ. 'ವಿಹಾರ' ಎಂದರೆ ಬೌದ್ಧ ವಿಹಾರ. ಜೈನ ತೀರ್ಥಂಕರರಲ್ಲಿ ಕೊನೆಯವನಾದ ವರ್ಧಮಾನ ಮಹಾವೀರ ಹುಟ್ಟಿದ್ದೂ ಬಿಹಾರದಲ್ಲಿ. ಬುದ್ಧ ಗಯೆಯ ಮಹಾಬೋಧಿ ದೇವಾಲಯದಲ್ಲಿ ಬುದ್ಧನ ಭವ್ಯಮೂರ್ತಿ ಇದೆ. ಪಾವಾಪುರಿಯಲ್ಲಿ ತಾವರೆಯ ಕೊಳದ ನಡುವೆ ಇರುವ ಅಮೃತ ಶಿಲೆಯ ಸುಂದರ ದೇವಾಲಯದಲ್ಲಿ ಮಹಾವೀರನ ಸಮಾಧಿ ಇದೆ.

ಪ್ರಾಚೀನ ವಿದೇಹ ರಾಜ್ಯ ಹಾಗೂ ಮಗಧ ಸಾಮ್ರಾಜ್ಯಗಳ ಬಹುಭಾಗ ಈಗಿನ ಬಿಹಾರ ರಾಜ್ಯ ಪ್ರದೇಶದಲ್ಲಿತ್ತು. ಇದರ ಇತಿಹಾಸ ನಿಖರವಾಗಿ ತಿಳಿಯಬರುವುದು ಮಗಧದ ಶಿಶುನಾಗರ ಕಾಲದಿಂದ. ಭಾರತದ ಪ್ರಥಮ ಸಾಮ್ರಾಜ್ಯವಾದ ಮಗಧದ ರಾಜಧಾನಿ ಪಾಟಲಿಪುತ್ರ (ಈಗಿನ ಪಟ್ನಾ) ಆ ಕಾಲಕ್ಕೆ ಭಾರತದ ಶ್ರೇಷ್ಠ ನಗರವಾಗಿತ್ತು. ಕಾಳಿದಾಸ, ಆರ್ಯಭಟ ಮುಂತಾದ ಕವಿಗಳು. ವಿದ್ವಾಂಸರು ಇಲ್ಲಿ ನೆಲೆಸಿದ್ದರು. ಬಿಹಾರದಿಂದ ಬೌದ್ಧಮತ ಪ್ರಸಾರ ನಿಯೋಗಗಳು ಹೊರದೇಶಕ್ಕೆ ಹೋದುವು. ನಾಲಂದಾ ವಿಶ್ವವಿದ್ಯಾನಿಲಯದಲ್ಲಿ ಅಧ್ಯಯನಕ್ಕಾಗಿ ಹೊರದೇಶದಿಂದ ಬಂದವರು ಅನೇಕ.

ಮೌರ್ಯ ಸಾಮ್ರಾಜ್ಯದ ಪತನದ ಅನಂತರ ಸುಮಾರು [illegible] ಬಳಿಕ ಬಿಹಾರ ಪ್ರದೇಶ ಗುಪ್ತ ಸಾಮ್ರಾಜ್ಯದ ಅಂಗವಾಯಿತು. ಈ



ಕಾಲದಲ್ಲಿ ಫಾಹಿಯಾನ್ ಬಿಹಾರವನ್ನು ಸಂದರ್ಶಿಸಿದ. ಹರ್ಷನ ಕಾಲದಲ್ಲಿ ಬಿಹಾರಿಗೆ ಬಂದವನು ಹ್ಯೂಯೆನ್ ತ್ಸಾಂಗ್. ಹರ್ಷನ ಅನಂತರ ಮತ್ತೆ ಬಿಹಾರಿನ ಬಗೆಗೆ ತಿಳಿದು ಬರುವುದು ಬಹಳ ಕಡಮೆ. ಗುರ್ಜರ ಪ್ರತಿಹಾರರು, ರಾಷ್ಟ್ರಕೂಟರು ಇದನ್ನು ಭಾಗಶಃ ಆಕ್ರಮಿಸಿದರು. ಅನಂತರ ಬಂಗಾಳದ ಪಾಲ ರಾಜರು ಆಳಿದರು. 1194ರಲ್ಲಿ ಮುಹಮ್ಮದೀಯರು ಬಿಹಾರವನ್ನು ವಶಪಡಿಸಿಕೊಂಡರು. ಉದ್ದಂಡಪುರ, ನಾಲಂದಾ, ವಿಕ್ರಮ ಶೀಲ ವಿಶ್ವವಿದ್ಯಾನಿಲಯಗಳನ್ನು ಧ್ವಂಸಮಾಡಿದರು. ಸುಲ್ತಾನರ ಅನಂತರ ಬಿಹಾರ ಮೊಘಲರ ಕೈಸೇರಿತು. 1765ರಲ್ಲಿ ಬ್ರಿಟಿಷರು ಈ ಪ್ರದೇಶವನ್ನು ಆಳಲಾರಂಭಿಸಿದರು.

ಬಹಳ ಕಾಲದ ವರೆಗೆ ಬಂಗಾಳ ಆಧಿಪತ್ಯಕ್ಕೆ ಸೇರಿದ್ದ ಬಿಹಾರ 1936ರಲ್ಲಿ ಪ್ರತ್ಯೇಕ ಪ್ರಾಂತ್ಯವಾಯಿತು. ಭಾರತ ಸ್ವತಂತ್ರವಾದ ಮೇಲೆ ಇದರ ಸ್ವಲ್ಪ ಭಾಗವನ್ನು ಪಶ್ಚಿಮ ಬಂಗಾಳಕ್ಕೆ ಸೇರಿಸಲಾಯಿತು. ರಾಜ್ಯದಲ್ಲಿ 17 ಜಿಲ್ಲೆಗಳಿವೆ. ಕೆಲವು ಮುಖ್ಯ ನಗರಗಳು : ಭಾಗಲಪುರ, ಧನ್‌ಬಾದ್, ಗಯಾ, ಮುಜಫರ್‌ಪುರ, ಜೆಮ್‌ಷೆಡ್‌ಪುರ, ರಾಂಚಿ, ಷಹಾಬಾದ್, ರಾಜಗೀರ್ (ರಾಜಗೃಹ). ಬುದ್ಧಗಯಾ ಅತಿ ಮುಖ್ಯ ಬೌದ್ಧ ಕ್ಷೇತ್ರ. ರಾಜಗೀರ್‌ನಲ್ಲಿ ಬೌದ್ಧ ಗುಹಾಲಯಗಳೂ ಜೈನಧರ್ಮಕ್ಕೆ ಸಂಬಂಧಪಟ್ಟ ಕ್ಷೇತ್ರಗಳೂ ಇವೆ. ವೈಶಾಲಿ ಪ್ರಾಚೀನ ಕಾಲದಲ್ಲಿ ವೈಭವದಿಂದ ಮೆರೆದ ಇನ್ನೊಂದು ನಗರ. ಪಟ್ನಾದ ಬಳಿಯಲ್ಲಿರುವ ಸೋನೇಪುರದಲ್ಲಿ ವಿಶ್ವದಲ್ಲೇ ಅತಿ ದೊಡ್ಡ ಜಾನುವಾರ ಜಾತ್ರೆ ಪ್ರತಿ ನವೆಂಬರ್‌ನಲ್ಲಿ ನಡೆಯುತ್ತದೆ. ಇಲ್ಲಿ ಆನೆ ಬೇಕಾದರೂ ಮಾರಾಟಕ್ಕೆ ಸಿಕ್ಕುತ್ತದೆ: ಪುಟ್ಟ ಮೈನಾಹಕ್ಕಿಯೂ ಇರುತ್ತದೆ; ಮಾರಾಟಕ್ಕೆ ಬರದ ವಸ್ತುವೇ ಇಲ್ಲ—ಎನ್ನುತ್ತಾರೆ. ಹಿಂದೆ ರಾಜ ಮಹಾರಾಜರು ಜಮೀನ್ದಾರರು ದೇಶದ ಎಲ್ಲೆಡೆಯಿಂದ ಈ ಜಾತ್ರೆಗೆ ಬರುತ್ತಿದ್ದರು. ಬಿಹಾರದ ಮೇರೆಗಳು ನೇಪಾಳ, ಪಶ್ಚಿ[ಮ] ಬಂಗಾಳ, ಒಡಿಸ್ಸಾ, ಉತ್ತರ ಪ್ರದೇಶ ಹಾಗೂ ಮಧ್ಯಪ್ರದೇಶ. ಗಂಗಾ ಈ ರಾಜ್ಯವನ್ನು ಎರಡು ಭಾಗಗಳಾಗಿ ವಿಂಗಡಿಸುತ್ತದೆ. ಉತ್ತರ ಬಿಹಾ[ರ] ಗಂಗಾನದಿಯ ವಿಶಾಲ ಬಯಲು ಪ್ರದೇಶ. ಇದು ರಾಜ್ಯದ ಅತ್ಯಂ[ತ] ಫಲವತ್ತಾದ ಪ್ರದೇಶ.

ಗಂಡಕ್, ಶೋಣ್, ಕೋಸಿ, ದಾಮೋದರ ನದಿಗಳು ಈ ರಾಜ್ಯದ[ಲ್ಲಿ] ಹರಿಯುತ್ತವೆ. ದಾಮೋದರ ಕಣಿವೆ ಯೋಜನೆ ಬಿಹಾರ್ ಹಾಗ[ೂ] ಪಶ್ಚಿಮ ಬಂಗಾಳಗಳೆರಡಕ್ಕೂ ಸೇರಿದೆ. ಗಂಡಕೀಯೋಜನೆ ಬಿಹಾ[ರ] ಹಾಗೂ ನೇಪಾಳ ದೇಶಗಳಲ್ಲಿ ಹರಡಿದೆ. ಕೋಸಿಯೋಜನೆ ಬಿಹಾ[ರ] ರಾಜ್ಯಕ್ಕೆ ಸೀಮಿತ.

ರಾಜ್ಯದ ಜನರ ಮುಖ್ಯ ಕಸಬು ವ್ಯವಸಾಯ. ಭತ್ತ, ತಂಬಾಕು, ಕಬ್ಬು, ಮುಖ್ಯ ಬೆಳೆಗಳು. ಗೋಧಿ, ಜೋಳ, ಬಾರ್ಲಿ, ನಾರು, ಮೆಣಸಿನ ಕಾಯಿ, ಆಲೂಗೆಡ್ಡೆ, ಎಣ್ಣೆಬೀಜ, ಬಟಾಣಿ, ಕೇಸರಿ ಬೇಳೆಕಾಳು ಬೆಳೆಯುತ್ತವೆ. ಭಾರತದ ಬಹು ಪಾಲು ಖನಿಜ ಬಿಹಾರದಲ್ಲಿ ದೊರೆಯುತ್ತ[ದೆ]. ಕಲ್ಲಿದ್ದಲು, ತಾಮ್ರ, ಕಬ್ಬಿಣ, ಮ್ಯಾಂಗನೀಸ್‌ಗಳ ಅದಿರು, ಅಭ್ರಕ (ಕಾ[ಗೆ] ಬಂಗಾರ), ಸುಣ್ಣದ ಕಲ್ಲು ಮುಖ್ಯ ಖನಿಜಗಳು. ನಮ್ಮ ರಾಷ್ಟ್ರ[ದ] ತಾಮ್ರದ ಉತ್ಪಾದನೆಯಾಗುವುದು ಈ ರಾಜ್ಯದಲ್ಲಿ. ರಾಷ್ಟ್ರದ ಉತ್ಪಾ[ದ]ನೆಯಲ್ಲಿ ಅರ್ಧಕ್ಕಿಂತ ಹೆಚ್ಚು ಕಲ್ಲಿದ್ದಲು, ಅಭ್ರಕ, ಶೇಕಡಾ 40ರಷ್ಟು ಕಬ್ಬಿಣ ಇಲ್ಲಿ ದೊರೆಯುತ್ತದೆ. ಪ್ರಪಂಚದ ಅತಿ ಸಂಪದ್ಯುಕ್ತ ಅಭ್ರ[ಕ] ಪ್ರದೇಶ ಬಿಹಾರಿನಲ್ಲಿದೆ.

ರಾಷ್ಟ್ರದ ಅನೇಕ ಮುಖ್ಯ ಕೈಗಾರಿಕೆಗಳೂ ಇಲ್ಲಿವೆ. ಜೆಮ್‌ಷೆಡ್‌ಪುರ[ದ] ತಾತಾ ಕಬ್ಬಿಣ ಮತ್ತು ಉಕ್ಕಿನ ಕಾರಖಾನೆ, ತವರ ಲೇಪಿತ ಫಲಕ(ಟಿನ್ ಪ್ಲೇಟ್) ಕಂಪೆನಿ, ತಾತಾ ಎಂಜಿನಿಯರಿಂಗ್ ಲೋಕೊಮೋಟಿವ್ ಕಂಪೆ[ನಿ], ಸಿಂಧ್ರಿಯ ಕೃತಕ ಗೊಬ್ಬರ ಕಾರಖಾನೆ, ಬೊಕಾರೋದ ಉಕ್ಕಿನ ಕಾರಖಾ[ನೆ], ರಾಂಚಿಯ ಹೆವಿ ಇಂಜಿನಿಯರಿಂಗ್ ಕಾರ್ಪೊರೇಷನ್, ರಾಷ್ಟ್ರೀಯ ಕಲ್ಲಿದ್ದ[ಲು] ಅಭಿವೃದ್ಧಿ ಕಾರ್ಪೊರೇಷನ್, ಪೈರೈಟುಗಳು ಹಾಗೂ ರಾಸಾಯನಿಕ[ಗಳ] ಉದ್ಯಮ —ಇವು ರಾಜ್ಯದ ದೊಡ್ಡ ಕೈಗಾರಿಕೆಗಳು. ಸಕ್ಕರೆ ಉತ್ಪಾದ[ನೆ] ರಾಜ್ಯದ ಒಂದು ಮುಖ್ಯ ಕೈಗಾರಿಕೆ. ಬಲು ದೊಡ್ಡ ತಂಬಾ[ಕು] ಉದ್ಯಮ ಬಿಹಾರದ ಮಾಂಘೀರ್‌ನಲ್ಲಿದೆ.

ತಾತಾ ಕಬ್ಬಿಣ ಮತ್ತು ಉಕ್ಕು ಕಾರಖಾನೆ : ಜೆಮ್‌ಷೆಡ್‌ಪುರ



ಬಿಹಾರ ರಾಜ್ಯ ಗುಡಿಕೈಗಾರಿಕೆ ರೇಷ್ಮೆ ಉತ್ಪಾದನೆ. ಇಲ್ಲಿನ 'ಟಸರ್' ರೇಷ್ಮೆಗೆ ಬೇಡಿಕೆ ಹೆಚ್ಚು. 'ಟಸ್ಸಾರ್' ರೇಷ್ಮೆ, ಭಾರತದಲ್ಲೇ ಅತಿ ಹೆಚ್ಚಿನ ಪ್ರಮಾಣದಲ್ಲಿ ಇಲ್ಲಿ ಉತ್ಪಾದನೆಯಾಗುತ್ತದೆ. ಕುಶಲಕಲಾ ವಸ್ತುಗಳು ಪ್ರಮುಖವಾದ ಕೈಗಾರಿಕೆಗಳಲ್ಲಿ. ಶಿಲ್ಪ ಮಣ್ಣಿನಿಂದ ಮಾಡಿದ ಸಾಮಾನುಗಳು, ಕುಂಭ ಪದಾರ್ಥಗಳು, ಅರಗು ಪದಾರ್ಥಗಳು, ಮರದ ಆಟದ ಸಾಮಾನುಗಳು ಇಲ್ಲಿನ ಕೆಲವು ಕುಶಲ ಕಲಾವಸ್ತುಗಳು.

ಬಿಹಾರದ ಕಾಡುಗಳಲ್ಲಿ ಬಿದಿರು, ಹುಲ್ಲು, ಅರಗು, ಕೆಲವು ರಾಳಗಳು, ತೊಗಲು ಸಂಸ್ಕರಣೆಗೆ ಬೇಕಾದ ವಸ್ತುಗಳು, ಬೀಡಿ ಕಟ್ಟುವ 'ಕೆಂದು' ಎಲೆ ಮತ್ತು ಅನೇಕ ಮೂಲಿಕೆಗಳು ಸಿಗುತ್ತವೆ. ಹಜಾರಿಬಾಗ್‌ನಲ್ಲಿ ಒಂದು ದೊಡ್ಡ ರಾಷ್ಟ್ರೀಯ ಉದ್ಯಾನವಿದೆ.

ರಾಜ್ಯದಲ್ಲಿ ಆರು ವಿಶ್ವವಿದ್ಯಾನಿಲಯಗಳಿವೆ: **ಪಟ್ನಾ** ವಿಶ್ವವಿದ್ಯಾನಿಲಯ, ಬಿಹಾರ ವಿಶ್ವವಿದ್ಯಾನಿಲಯ (ಮುಜಫರ್‌ಪುರ), ಭಾಗಲಪುರ ವಿಶ್ವವಿದ್ಯಾನಿಲಯ, ರಾಂಚಿ ವಿಶ್ವವಿದ್ಯಾನಿಲಯ, ಕಾಮೇಶ್ವರ ಸಿಂಗ್ ಸಂಸ್ಕೃತ ವಿಶ್ವವಿದ್ಯಾನಿಲಯ (ದರ್ಭಾಂಗ), ಮಗಧ ವಿಶ್ವವಿದ್ಯಾನಿಲಯ (ಬುದ್ಧ ಗಯಾ).

ಒಡಿಸ್ಸಾ, ಮಧ್ಯಪ್ರದೇಶಗಳನ್ನು ಬಿಟ್ಟರೆ ಬಿಹಾರದಲ್ಲಿ ಗಿರಿ ಜನರು ಬಹಳ ಹೆಚ್ಚು. ಒರಾವೋ, ಮುಂಡಾ, ಸಂತಾಲ, ಖಾರಿಯಾ, ಪಹಾಡಿಯಾ—ಇವು ಇಲ್ಲಿನ ಮುಖ್ಯ ಬುಡಕಟ್ಟುಗಳು. ಬಿಹಾರದ ಹಳ್ಳಿಯ ಜನರು ದಿನದ ಕೆಲಸವಾದ ಮೇಲೆ ರಾಮಾಯಣ, ಕೃಷ್ಣಲೀಲಾ ಹಾಡುಗಳನ್ನು ಸಾಮೂಹಿಕವಾಗಿ ಗಾಯನದಲ್ಲಿ ಹಾಡಿಕೊಳ್ಳುತ್ತಾರೆ. ವಸಂತ ಕಾಲದಲ್ಲಿ ಶಿವನ ಆರಾಧನೆಗಾಗಿ ಆಚರಿಸುವ ಚೈತ್ರಪರ್ವ ಮುಖ್ಯ ಹಬ್ಬ. ಈ ಹಬ್ಬದ ವೈಶಿಷ್ಟ್ಯ ಚೌ ನೃತ್ಯ.

ಬಿಹಾರ ರಾಜ್ಯದಲ್ಲಿ ಒಳ್ಳೆಯ ರಸ್ತೆ, ರೈಲು ಸಾರಿಗೆ ವ್ಯವಸ್ಥೆಗಳಿವೆ. ಪಟ್ನಾದಲ್ಲಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣವಿದೆ.

ಬೀನಾ ದಾಸ್

ಗವರ್ನರ್ ಸ್ಟಾನ್ಲಿ ಜಾಕ್‌ಸನ್‌ರ ಕೊಲೆ ಪ್ರಯತ್ನ ನಡೆಸಿದ ಆರೋಪದ ಮೇಲೆ ಒಬ್ಬಳು ಯುವತಿಯನ್ನು ಬಂಧಿಸಲಾಗಿತ್ತು. ಆಕೆ ಯಾವ ಪಕ್ಷಕ್ಕೆ ಸೇರಿದವಳು ಎಂಬ ಬಗೆಗೆ ವಿವರಗಳನ್ನು ತಿಳಿದುಕೊಳ್ಳಬೇಕೆಂದು ಪೋಲೀಸರು ಆಕೆಯನ್ನು ಚಿತ್ರಹಿಂಸೆಗೆ ಗುರಿಮಾಡಿದರು. ಆಕೆ ಮೌನವಾಗಿಯೇ ಎಲ್ಲ ಯಾತನೆ ಸಹಿಸಿದರು. ಏನೊಂದು ವಿವರಗಳನ್ನೂ ಹೊರಗೆಡವಲಿಲ್ಲ. —ಆ ಧೀರ ಮಹಿಳೆಯೇ ಬೀನಾದಾಸ್.

ಬೀನಾದಾಸ್ ಜನನ 1911ರಲ್ಲಿ. ಆಕೆಯ ಪ್ರಥಮ ರಾಜಕೀಯ ಚಟುವಟಿಕೆ, 1928ರಲ್ಲಿ ಸೈಮನ್ ಆಯೋಗಕ್ಕೆ ಹಾಕಿದ ಬಹಿಷ್ಕಾರ. ತಾನು ಓದುತ್ತಿದ್ದ ಬೆಥೂನ್ ಕಾಲೇಜಿನ ಮುಂದೆ ಗೆಳತಿಯರೊಡನೆ ಪಿಕೆಟಿಂಗ್ ನಡೆಸಿದರು. ಅದೇ ವರ್ಷ ಕಲ್ಕತ್ತೆಯಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ ಬೀನಾ ಸ್ವಯಂಸೇವಕಿಯಾಗಿದ್ದರು.

ಬೀನಾ ಅಕ್ಕನೊಡನೆ ಕ್ರಾಂತಿಕಾರಿ ತಂಡ ಕಟ್ಟಿದರು. ಡಾಲ್‌ಹೌಸಿ ಚೌಕದಲ್ಲಿ ನಡೆದ ಬಾಂಬ್ ಪ್ರಕರಣದ ಅನಂತರ ಆ ತಂಡ ಚೆದರಿತು. ಆಕೆ ಭಾಗವಹಿಸಲಿದ್ದ ಘಟಿಕೋತ್ಸವ ಸಮಾರಂಭದಲ್ಲಿ ಗವರ್ನರ್‌ರನ್ನು ಆಕೆ ಕೊಲ್ಲಬೇಕೆಂದು ನಿರ್ಧಾರವಾಯಿತು. ಪಿಸ್ತೂಲು, ಗುಂಡುಗಳನ್ನು ಆಕೆಗೆ ಕೊಟ್ಟರು. ಆದರೆ ಅವನ್ನು ಉಪಯೋಗಿಸುವುದು ಹೇಗೆ ಎಂದು ಹೇಳಿಕೊಡಲಿಲ್ಲ.


ಕ್ರಾಂತಿಕಾರಿಣಿ : ಬೀನಾ

1932 ಫೆಬ್ರವರಿ 6ರಂದು ಗವರ್ನರ್ ಭಾಷಣ ಓದಲು ಎದ್ದಾಗ ಬೀನಾ ತಾವೂ ಎದ್ದು ಅವರತ್ತ ಗುಂಡು ಹಾರಿಸಿದರು. ಆದರೆ ಗುಂಡು ಗುರಿತಪ್ಪಿತು. ಆಕೆಯನ್ನು ಸೆರೆಹಿಡಿದರು. 9 ವರ್ಷ ಕಠಿಣ ಶಿಕ್ಷೆ ವಿಧಿಸಲ್ಪಟ್ಟಿತು. ಸೆರೆಮನೆಯಲ್ಲಿ 7 ವರ್ಷ ಕಳೆದ ಮೇಲೆ 1939ರಲ್ಲಿ ಆಕೆ ಬಿಡುಗಡೆ ಹೊಂದಿದರು.

'ಕ್ವಿಟ್ ಇಂಡಿಯಾ' ಚಳವಳಿ ಕಾಲದಲ್ಲಿ ಆಕೆ ಮತ್ತೊಮ್ಮೆ ಸೆರೆಮನೆ ಸೇರಬೇಕಾಯಿತು.

ಕ್ರಮೇಣ ಬೀನಾ ರಾಜಕೀಯ ಕ್ಷೇತ್ರದಿಂದ ದೂರವಾದರು. ರಾಷ್ಟ್ರ ವಿಭಜನೆಯಾದಾಗ ನೌಖಾಲಿಯಲ್ಲಿ ನಡೆದ ಗಲಭೆಗಳಲ್ಲಿ ನೊಂದವರನ್ನು ಸಂತೈಸುವ ಕೆಲಸ ಕೈಗೊಂಡರು. ನಿರಾಶ್ರಿತರ ಪುನರ್ವ್ಯವಸ್ಥೆಯಲ್ಲಿ ಆಕೆ ಆಸಕ್ತಿವಹಿಸಿದರು.

1946—1951 ಅವಧಿಯಲ್ಲಿ ಬಂಗಾಳ ವಿಧಾನ ಸಭೆಯ ಸದಸ್ಯೆಯಾಗಿದ್ದರು.

ಬೀನಾದಾಸ್ ರಾಜಕೀಯ ಕಾರ್ಯಕರ್ತ ಜ್ಯೋತಿಷ್ ಭೌಮಿಕರನ್ನು ವಿವಾಹವಾದರು.

ಬೀರಬಲ್

ಅಕ್ಬರನ ಆಸ್ಥಾನದಲ್ಲಿದ್ದ ನವರತ್ನಗಳಲ್ಲಿ ಒಬ್ಬ, ಬೀರಬಲ್.

ಬೀರಬಲನ ಹುಟ್ಟು ಹೆಸರು ಮಹೇಶ್ ದಾಸ್. ಇವನು ಸೈನ್ಯಾಧಿಕಾರಿಯಾಗಿದ್ದ. ಅಕ್ಬರನ ವಿಶ್ವಾಸಕ್ಕೆ ಪಾತ್ರನಾಗಿದ್ದ. ವಾಯವ್ಯ ಗಡಿ ಪ್ರದೇಶದಲ್ಲಿ ಪಠಾಣರೊಡನೆ ಹೋರಾಡುತ್ತ 1589ರಲ್ಲಿ ಬೀರಬಲ್ ವೀರ ಮರಣವನ್ನಪ್ಪಿದ.


ಬುದ್ಧಿಮತ್ತೆ : ಬೀರಬಲ್

ಬೀರಬಲ್ ಬುದ್ಧಿಮತ್ತೆಗೆ ಹೆಸರಾಗಿದ್ದ. ಅಕ್ಬರನೊಡನೆ ಗೆಳೆಯನಂತೆ ಒಡನಾಡುತ್ತ ತನ್ನ ಬುದ್ಧಿವಂತಿಕೆಯಿಂದ ಆತನ ಮನಸ್ಸನ್ನು ರಂಜಿಸುತ್ತಿದ್ದ. ಬೀರಬಲನ ಹಾಸ್ಯ, ಚತುರತೆ, ಸಮಯಸ್ಫೂರ್ತಿಗಳನ್ನು ಎತ್ತಿ ತೋರಿಸುವ ನೂರಾರು ಕಥೆಗಳು ಪ್ರಚಲಿತವಾಗಿವೆ.

ಅಕ್ಬರ್ ಚಕ್ರವರ್ತಿ ವಿನೋದಪ್ರಿಯ. ತನ್ನ ಮಾರ್ಮಿಕ ಪ್ರಶ್ನೆಗಳಿಂದ ಆಸ್ಥಾನಿಕರನ್ನು ದಂಗುಬಡಿಸುತ್ತಿದ್ದ. ಒಮ್ಮೆ ಒಂದು ಗೆರೆ ಎಳೆದು ಅದನ್ನು ಅಳಿಸದೆಯೇ ಆ ಗೆರೆಯನ್ನು ಚಿಕ್ಕದು ಮಾಡಬೇಕು ಎಂಬ ಸಮಸ್ಯೆ ಒಡ್ಡಿದ. ಎಲ್ಲರೂ ಕಂಗಾಲಾದರು. ಬೀರಬಲ್ ಮುಂದೆ ಬಂದು, ಅಕ್ಬರ್ ಎಳೆದಿದ್ದ ಗೆರೆಯ ಕೆಳಗೆ ಅದಕ್ಕಿಂತ ಉದ್ದವಾದ ಗೆರೆಯೊಂದನ್ನು ಎಳೆದು—"ಜಹಾಪನಾ, ಈಗ ನಿಮ್ಮ ಗೆರೆ ಚಿಕ್ಕದಾಯಿತು" ಎಂದ.



ಪ್ರಾಕ್ ಸಸ್ಯವಿಜ್ಞಾನಿ : ಸಾಹ್ನಿ

ಬೀರಬಲ್ ಸಾಹ್ನಿ

ಗತಕಾಲದಲ್ಲಿ ಭೂಮಿಯಲ್ಲಿ ಆಗಿ ಹೋದ ಸಸ್ಯಗಳ ಅವಶೇಷ, ಇಂದಿನ ಸಸ್ಯಗಳಿಗೂ ಅಂದಿನ ಸಸ್ಯಗಳಿಗೂ ಇರುವ ಸಾದೃಶ್ಯ, ಭೂ ಚರಿತ್ರೆಯ ವಿವಿಧ ಹಂತಗಳು –ಇವೆಲ್ಲವನ್ನು ಸಂಶೋಧಿಸಿ ಪ್ರಖ್ಯಾತರಾದ ಸಸ್ಯ ವಿಜ್ಞಾನಿ, ಬೀರಬಲ್ ಸಾಹ್ನಿ.

1891 ನವೆಂಬರ್ 14ರಂದು ಈಗ ಪಶ್ಚಿಮ ಪಾಕಿಸ್ತಾನದಲ್ಲಿರುವ ಶಹಾಪುರ ಜಿಲ್ಲೆಯ ಬೇರಾ ಎಂಬಲ್ಲಿ ಇವರು ಹುಟ್ಟಿದರು. ತಂದೆ ರುಚಿ ರಾಮ ಸಾಹ್ನಿ ಕೂಡ ವಿಜ್ಞಾನಿ. ತಾಯಿ ಈಶ್ವರೀದೇವಿ.

ಬೀರಬಲರ ಕಾಲೇಜು ವಿದ್ಯಾಭ್ಯಾಸ ಲಾಹೋರಿನಲ್ಲಿ : ಸ್ನಾತಕೋತ್ತರ ವಿದ್ಯಾಭ್ಯಾಸ ಕೇಂಬ್ರಿಜ್ ವಿಶ್ವವಿದ್ಯಾನಿಲಯದಲ್ಲಿ. ಅನಂತರ ಸಸ್ಯಾವಶೇಷಗಳ ಬಗೆಗೆ ಸಂಶೋಧನೆ ನಡಸಿ ಲಂಡನ್ ವಿಶ್ವವಿದ್ಯಾನಿಲಯದ ಡಾಕ್ಟರೇಟ್ ಪದವಿ ಪಡೆದರು.

ಭಾರತಕ್ಕೆ ಹಿಂದಿರುಗಿದ ಬಳಿಕ ಬನಾರಸ್ ಹಿಂದೂ ವಿಶ್ವವಿದ್ಯಾನಿಲಯ ಸೇರಿದರು. 1921ರಲ್ಲಿ ಲಖನೌ ವಿಶ್ವವಿದ್ಯಾನಿಲಯದ ಸಸ್ಯವಿಜ್ಞಾನ ವಿಭಾಗದ ಪ್ರಾಧ್ಯಾಪಕರಾದರು. ಅತ್ಯಂತ ಜಟಿಲ ವಿಷಯಗಳನ್ನು ಕೂಡ ವಿದ್ಯಾರ್ಥಿಗಳ ಮನಸ್ಸಿಗೆ ನಾಟುವಂತೆ ವಿವರಿಸುತ್ತಿದ್ದರು. ತಮ್ಮ ಸಂಶೋಧನೆಗೆ ಅಗತ್ಯವಾದ ಸಲಕರಣೆಗಳನ್ನು ತಾವೇ ಸಿದ್ಧಪಡಿಸಿ ಭಾರತದಲ್ಲಿ ದೊರೆಯುವ ಸಸ್ಯಾವಶೇಷಗಳ ಬಗೆಗೆ ಸಂಶೋಧನೆ ಮುಂದುವರಿಸಿದರು.

ಇವರ ಸಂಶೋಧನೆಗಳಿಗಾಗಿ 1929ರಲ್ಲಿ ಕೇಂಬ್ರಿಜ್ ವಿಶ್ವವಿದ್ಯಾನಿಲಯ ಇವರಿಗೆ ಡಿ.ಎಸ್‌ಸಿ. ಪದವಿ ಕೊಟ್ಟು ಗೌರವಿಸಿತು. ಇದನ್ನು ಪಡೆದ ಮೊತ್ತಮೊದಲ ಭಾರತೀಯ ವಿಜ್ಞಾನಿ ಇವರು. ಅದೇ ರೀತಿ ಲಂಡನಿನ ರಾಯಲ್ ಸೊಸೈಟಿಯ ಸದಸ್ಯತ್ವ ಗಳಿಸಿದ ಪ್ರಪ್ರಥಮ ಭಾರತೀಯ ಸಸ್ಯವಿಜ್ಞಾನಿಯೂ ಆದರು.

ಮುಖ್ಯ ಕಾರ್ಯಕ್ಷೇತ್ರ ಸಸ್ಯವಿಜ್ಞಾನವಾದರೂ ಪುರಾತನ ಭಾರತದಲ್ಲಿ ನಾಣ್ಯ ತಯಾರಿಕೆಯಂಥ ಇತರ ಕ್ಷೇತ್ರಗಳಲ್ಲಿ ಸಂಶೋಧನೆ ನಡಸಿ ಸಾಹ್ನಿ ಗೌರವ ಸಂಪಾದಿಸಿದರು.

ಚಿಕ್ಕಂದಿನಿಂದಲೂ ಧೈರ್ಯ ಸಾಹಸದ ಕೆಲಸಗಳಲ್ಲಿ ಆಸಕ್ತಿ. ಹಿಮಾಲಯ ಬೆಟ್ಟಗಳಲ್ಲಿ ಸುತ್ತಾಡಿ ಹಿಮಗಡ್ಡೆಗಳ ಮೇಲೆ ಬೆಳೆಯುವ ಸೂಕ್ಷ್ಮ ಸಸ್ಯಗಳನ್ನು ಸಂಗ್ರಹಿಸಿದರು. ಪ್ರಾಮಾಣಿಕ ಮತ್ತು ಕಷ್ಟದ ದುಡಿಮೆಯನ್ನು ಮೆಚ್ಚುತ್ತಿದ್ದರು. ಸತ್ಯ ಮತ್ತು ನ್ಯಾಯಗಳಿಗೆ ಹೋರಾಡುತ್ತಿದ್ದರು. ಇವರು ಟೆನ್ನಿಸ್ ಹಾಕಿ ಮತ್ತು ಚೆಸ್ ಆಟಗಾರರು. ಖಾದಿಯ ಸರಳ ಉಡುಗೆ.

1949ರ ಏಪ್ರಿಲ್ 9–10ರ ಮಧ್ಯರಾತ್ರಿ ಸಾಹ್ನಿ ನಿಧನರಾದರು.

ಪತ್ನಿ ಸಾವಿತ್ರಿ ಸಾಹ್ನಿ ಇವರ ಸಂಶೋಧನಾ ಕೆಲಸದಲ್ಲಿ ಪೂರ್ಣ ಸಹಕಾರ ಕೊಡುತ್ತಿದ್ದರು. ಬೀರಬಲ್ ಸಾಹ್ನಿಯವರ ಮರಣಾನಂತರ ಲಖನೌದಲ್ಲಿರುವ 'ಸಾಹ್ನಿ ಪ್ರಾಕ್ ಸಸ್ಯವಿಜ್ಞಾನ ಸಂಸ್ಥೆ'ಯ ಮೇಲ್ವಿಚಾರಣೆಯ ಜವಾಬ್ದಾರಿಯನ್ನು ಸಾವಿತ್ರಿ ಸಾಹ್ನಿ ಹೊತ್ತರು.

ಬುಕಾನನ

'ಮದರಾಸಿನಿಂದ ಮೈಸೂರು, ಉತ್ತರ ಕನ್ನಡ ಹಾಗೂ ಮಲಬಾರಿನ ಮೂಲಕ ಪ್ರಯಾಣ' ಎಂಬ ಅಮೂಲ್ಯ ಪುಸ್ತಕವನ್ನು ಬರೆದವನು ಫ್ರಾನ್ಸಿಸ್ ಬುಕಾನನ್ ಹಾಮಿಲ್ಟನ್. ಟಿಪ್ಪು ಅನಂತರದ ಕನ್ನಡ ಪ್ರದೇಶದ ಮತ್ತು ಮಲಬಾರಿನ ವ್ಯವಸಾಯ, ವಾಣಿಜ್ಯ, ಕೈಗಾರಿಕೆ. ಸಂಪ್ರದಾಯ, ಪುರಾತನ ಅವಶೇಷ ಮುಂತಾದ ಅನೇಕ ವಿಷಯಗಳ ಮೇಲೆ ಈ ಕೃತಿ ಬೆಳಕು ಚೆಲ್ಲುತ್ತದೆ.

ಈ ಪ್ರಯಾಣವನ್ನು ಬುಕಾನನ 1800 ಏಪ್ರಿಲ್ 23ರಂದು ಮದರಾಸಿನಿಂದ ಆರಂಭಿಸಿದ. ಮತ್ತೆ ಅಲ್ಲಿಗೆ ಹಿಂದಿರುಗಿದ್ದು 1801 ಜುಲೈ 5ರಂದು. ತನ್ನ ಪ್ರಯಾಣ ಕಾಲದಲ್ಲಿ ಮೈಸೂರಿನ ದಿವಾನ ಪೂರ್ಣಯ್ಯನವರನ್ನು ಸಂಪರ್ಕಿಸಿ, ಅವರಿಂದ ತನ್ನ ಕೆಲಸಕ್ಕೆ ನೆರವನ್ನು ಪಡೆದ. ಬುಕಾನನನ ಈ ಬರೆಹ ಒಂದು ದಿನಚರಿಯಂತಿದೆ.

ಟಿಪ್ಪುವಿನ ಮರಣಾನಂತರ ಮೈಸೂರು ಸಂಸ್ಥಾನದ ಪರಿಸ್ಥಿತಿ ಇದರಲ್ಲಿ ಕಣ್ಣು ಕಟ್ಟುವಂತೆ ವರ್ಣಿಸಲ್ಪಟ್ಟಿದೆ.

ಬುಕಾನನ್ ಹುಟ್ಟಿದ್ದು 1762 ಫೆಬ್ರವರಿ 15ರಂದು. 1794ರಲ್ಲಿ ಈಸ್ಟ್ ಇಂಡಿಯಾ ಕಂಪನಿ ಸೇರಿದ. ಸಸ್ಯ ವೈಜ್ಞಾನಿಕ, ಪ್ರಾಣಿ ವೈಜ್ಞಾನಿಕ, ಮತ್ತು ಸಂಖ್ಯಾ ವೈಜ್ಞಾನಿಕ ಪರಿಶೀಲನೆಗಳನ್ನು ನಡೆಸಿದ. 'ನೇಪಾಳ', 'ಹಿಂದೂ ದೇವರ ವಂಶವೃಕ್ಷ', 'ಗಂಗಾನದಿಯ ಮೀನುಗಳು' ಇವು ಇವನ ಇತರ ಬರೆಹಗಳು.

1829 ಜೂನ್ 15ರಂದು ಬುಕಾನನ್ ಗತಿಸಿದ.

ಬುದ್ಧ

ನೋಡಿ : ಸಿದ್ಧಾರ್ಥ

ಬುದ್ಧ—ಸಂಪುಟ ೮

ಬುದ್ಧಘೋಷ

ಪಾಳಿ ಸಾಹಿತ್ಯದಲ್ಲಿ ಬುದ್ಧ ಘೋಷನ ಸ್ಥಾನ ಅದ್ವಿತೀಯ. ತಿಪಿಟಕವನ್ನು ಬಿಟ್ಟರೆ ಪಾಳಿ ಸಾಹಿತ್ಯದಲ್ಲಿ ಅವನ ಗ್ರಂಥಗಳೇ ಅತಿ ಪ್ರಾಮುಖ್ಯವಾದುವು. ಅವು ಸಂಖ್ಯೆಯಲ್ಲೂ ಹೆಚ್ಚು. ಗುಣದಲ್ಲೂ ಅತಿ ಶ್ರೇಷ್ಠ.

ಬುದ್ಧಘೋಷನು ರಚಿಸಿರುವ ಬಹುಮುಖ್ಯ ಗ್ರಂಥಗಳು 'ಅಟ್ಠಕಥಾ' ಮತ್ತು 'ವಿಸುದ್ಧಿಮಗ್ಗ'. 'ಅಟ್ಠಕಥೆ'ಯು ತಿಪಿಟಕದ ಮೇಲಿನ ವ್ಯಾಖ್ಯಾನ ಗ್ರಂಥ. ಅದು ಧರ್ಮಗ್ರಂಥವೊಂದರ ವ್ಯಾಖ್ಯಾನವಾದರೂ ಅದರಲ್ಲಿಲ್ಲದಿರುವ ವಿಷಯವಿಲ್ಲ. ಚರಿತ್ರೆ, ಸಮಾಜಶಾಸ್ತ್ರ, ಭೂವಿವರಣೆ, ದರ್ಶನಶಾಸ್ತ್ರ, ವಿಜ್ಞಾನ, ಗಣಿತ, ಖಗೋಳಶಾಸ್ತ್ರ—ಮುಂತಾದ ಅನೇಕಾನೇಕ ವಿಷಯಗಳನ್ನು ಅದು ಒಳಗೊಂಡಿದೆ. ಅಂದಿನ ಕಾಲಕ್ಕೆ ಅದು ಒಂದು ವಿಶ್ವಕೋಶವೇ ಆಗಿತ್ತು. ಭಾರತದಲ್ಲಿ ಕ್ರಿ.ಶ. ಐದನೆಯ ಶತಮಾನದಲ್ಲಿದ್ದ ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗಳನ್ನು ತಿಳಿಯಬೇಕಾದರೆ 'ಅಟ್ಠಕಥೆ'ಯನ್ನೇ ಅವಲಂಬಿಸಬೇಕು. ಹೀಗಾಗಿ ಅದು ಒಂದು ಆಕರ ಗ್ರಂಥವೂ ಹೌದು.

'ವಿಸುದ್ಧಿಮಗ್ಗ' ಒಂದು ಅಪೂರ್ವ ಗ್ರಂಥ. ಬುದ್ಧನ ಕೇವಲ ಒಂದು ಗಾಥೆಯ ಮೇಲಿನ ವ್ಯಾಖ್ಯಾನವೇ ಆ ಗ್ರಂಥ. ಧ್ಯಾನಗಳ ವಿವಿಧ ಬಗೆ, ಅವುಗಳನ್ನು ಮಾಡುವ ರೀತಿ ಮತ್ತು ಯೋಗ—ಈ ವಿಷಯಗಳು 'ವಿಸುದ್ಧಿಮಗ್ಗ'ದಲ್ಲಿವೆ. ಅದನ್ನು ಬರೆದ ಸಂದರ್ಭವೂ ಸ್ವಾರಸ್ಯಕರ.

ತನ್ನ ಗುರುವಿನ ಅಜ್ಞೆಯಂತೆ ಬುದ್ಧಘೋಷ ಸಿಂಹಳಕ್ಕೆ ಹೋದ. ಹಾಗೆ ಹೋದದ್ದರ ಉದ್ದೇಶ ಸಿಂಹಳೀ ಭಾಷೆಯಲ್ಲಿದ್ದ ವ್ಯಾಖ್ಯಾನ ಗ್ರಂಥಗಳನ್ನು ಪಾಳಿಗೆ ಅನುವಾದ ಮಾಡುವುದು. ಅಗ ಅಲ್ಲಿನ ಧಾರ್ಮಿಕ ಮುಖಂಡರು ಧರ್ಮಗ್ರಂಥಗಳನ್ನು ಅನುವಾದ ಮಾಡಲು ಬುದ್ಧಘೋಷನಿಗಿರುವ ಅರ್ಹತೆಯನ್ನು ಪರೀಕ್ಷಿಸಲು ಪ್ರಯತ್ನಪಟ್ಟರು. ಬುದ್ಧ ಭಗವಾನರ ಗಾಥೆಯೊಂದನ್ನು ಕೊಟ್ಟು ವ್ಯಾಖ್ಯಾನ ಮಾಡಲು ಹೇಳಿದರು. ಆ ವ್ಯಾಖ್ಯಾನವೇ ' ವಿಸುದ್ಧಿಮಗ್ಗ '.

ಸಿಂಹಳದಲ್ಲಿದ್ದಾಗ ಬುದ್ಧಘೋಷನು ಸಿಂಹಳೀ ಭಾಷೆಯಲ್ಲಿದ್ದ ಮುಖ್ಯ ವ್ಯಾಖ್ಯಾನ ಗ್ರಂಥಗಳೆಲ್ಲವನ್ನೂ ಪಾಳಿ ಭಾಷೆಗೆ ಅನುವಾದ ಮಾಡಿದ. ಬುದ್ಧಘೋಷ ಹುಟ್ಟಿದ್ದು ಗಯಾ ಪಟ್ಟಣದ ಹತ್ತಿರದ ಒಂದು ಹಳ್ಳಿಯಲ್ಲಿ. ಅವನ ತಂದೆ ತಾಯಿ ಕೇಶಿ ಮತ್ತು ಕೇಸರಿ. ಕೇಶಿಯು ಬಹಳ ದೊಡ್ಡ ವಿದ್ವಾಂಸ ಮತ್ತು ಅಲ್ಲಿಯ ರಾಜನ ಗುರು. ಹುಡುಗನಾಗಿದ್ದಾಗಲೇ ಬುದ್ಧಘೋಷನು ತನ್ನ ಅದ್ಭುತ ಮೇಧಾಶಕ್ತಿಯನ್ನು ತೋರಿಸಿದ್ದ. ಆದರೆ ಅಷ್ಟೇ ಮುಂಗೋಪಿಯೂ ಆಗಿದ್ದ. ಒಮ್ಮೆ ಅವನ ಮನೆಗೆ ಒಬ್ಬ ಬೌದ್ಧ ಭಿಕ್ಷು ಬಂದ. ಆತನ ಪಾಂಡಿತ್ಯ, ತಾಳ್ಮೆ ಮತ್ತು ಸಾಧನೆಗಳು ಕುಮಾರ ಬುದ್ಧಘೋಷನಿಗೆ ಹಿಡಿಸಿದುವು. ಅವನಂತೆ ತಾನೂ ದೊಡ್ಡ ಪಂಡಿತನಾಗಬೇಕೆಂದು, ಮನೆಬಿಟ್ಟು ತಕ್ಕ ಗುರುವನ್ನು ಹುಡುಕಿಕೊಂಡು ಹೊರಟ. ರೇವತನೆಂಬ ಮಹಾ ಪಂಡಿತನೊಬ್ಬ ಆತನಿಗೆ ಗುರುವಾಗಿ ಸಿಕ್ಕಿದ. ಆತನ ಅಣತಿಯಂತೆ ಬುದ್ಧ ಘೋಷ ಬೌದ್ಧ ಸನ್ಯಾಸಿಯಾದ. ಸಿಂಹಳಕ್ಕೆ ಹೋದದ್ದೂ ಆತನ ಅಣತಿಯಂತೆಯೇ. ಬುದ್ಧಘೋಷನೆಂಬ ಹೆಸರನ್ನು ಕೊಟ್ಟವನೂ ರೇವತನೇ.


ಬುದ್ಧಘೋಷನ ಕಾಲ ಸುಮಾರು ಕ್ರಿ.ಶ. 5ನೆಯ ಶತಮಾನ.

ಬೃಂದಾವನ

ಕೃಷ್ಣರಾಜಸಾಗರ ಅಣೆಕಟ್ಟೆಯ ಬದಿಯಲ್ಲಿರುವ ಸುಂದರ ಉದ್ಯಾನ 'ಬೃಂದಾವನ' (ಶ್ರೀಕೃಷ್ಣ ವಿಹರಿಸಿದ ತಾಣಕ್ಕೂ ಬೃಂದಾವನ ಎಂದು ಹೆಸರಿತ್ತು). ಕಾಶ್ಮೀರದ ಹೆಸರಾದ ಷಾಲಿಮಾರ್ ತೋಟವನ್ನು ನೆನಪಿಗೆ ತರುವ ಈ ಉದ್ಯಾನವನ್ನು ಸರ್ ಮಿರ್ಜಾ ಇಸ್ಮಾಯಿಲ್ ಮೈಸೂರು ಸಂಸ್ಥಾನ ದಿವಾನರಾಗಿದ್ದಾಗ ರೂಪಿಸಿದರು.

ಬೃಂದಾವನ ಉದ್ಯಾನವನ್ನು ಪ್ರವೇಶಿಸಿದೊಡನೆ ಕಟ್ಟೆಯ ಮೋರಿ ಮೆಟ್ಟಿಗೆ ಅಂಟಿದಂತೆ ಪ್ರತಿಷ್ಠಿಸಿರುವ ಕಾವೇರಿಯ ಪ್ರತಿಮೆ ನಮ್ಮ ಕಣ್ಣಿಗೆ ಬೀಳುತ್ತದೆ. ಇದು ಶಿಲ್ಪಿಸಿದ್ಧಾಂತಿ ಸಿದ್ಧಲಿಂಗಸ್ವಾಮಿ ಅವರ ಸೃಷ್ಟಿ. ಇಲ್ಲಿಂದ ಮುಂದಕ್ಕೆ ಹೋದರೆ ಉದ್ಯಾನದ ಪ್ರವೇಶಮಂಟಪ. ಕತ್ತಲಾದ ಬಳಿಕ ಇಲ್ಲಿ ನಿಂತು ನೋಡಿದರೆ ನಮ್ಮ ಮುಂದೆ ಒಂದು ಕಿನ್ನರಲೋಕವೇ ಹರಡಿದಂತೆ ಕಾಣುತ್ತದೆ.

ಬಗೆಬಗೆಯ ಕಾರಂಜಿಗಳು ಇಲ್ಲಿನ ಪ್ರಧಾನ ನೋಟ. ನೀರಿನ ತುಂತುರು, ಬಣ್ಣ ಬಣ್ಣದ ವಿದ್ಯುದ್ದೀಪಗಳ ಬೆಳಕಿನಲ್ಲಿ ದೂರದಿಂದ ರಂಗುರಂಗಿನ ಧೂಮದಂತೆ ಕಾಣುತ್ತವೆ. ವಿಶಾಲವಾದ ಕಾಲುದಾರಿಗಳು. ನಡುವೆ ವೃತ್ತ ಕಾರಂಜಿಗಳ ಸಾಲು. ಮಧ್ಯೆ ಮಧ್ಯೆ ನೀರು ಉರುಳಿ ಉರುಳಿ ಹಿಂಜಿದ ಹತ್ತಿಯಂತೆ ಬೀಳುವ ಜಲಧಾರೆಗಳು. ಎಲ್ಲೆಡೆಯೂ ನಾನಾ ಆಕೃತಿಯ ಪಾತಿಗಳಲ್ಲಿ ಬಣ್ಣ ಬಣ್ಣದ ಹೂಗಳು ಗಿಡಗಳು, ಮಧ್ಯೆ ಸೊಂಪಾದ ಹಸುರು ಹುಲ್ಲಿನ ಹಾಸು. ಅಲ್ಲಲ್ಲಿ ಲತಾಕುಂಜಗಳೂ ಬಗೆಬಗೆಯ ಗಿಡಮರಗಳೂ ಇವೆ. [illegible]ಗಳನ್ನು ನಾನಾ ಆಕೃತಿಗಳಲ್ಲಿ ಕತ್ತರಿಸಲಾಗಿದೆ.



ಬೆಳಕಿನ ಬೆಡಗು, ಬಣ್ಣದ ಕಾರಂಜಿ

ಕಾವೇರಿಯ [illegible] ಈ ಉದ್ಯಾನವಾವರೆ [illegible] ಬೆಳಕಿನಲ್ಲಿ ಬಣ್ಣದಲ್ಲಿ ಮಿಂದ ಕಾರಂಜಿ [illegible] ನದಿಯನ್ನು ದಾಟಿ ಅತ್ತಕಡೆ ಹೋಗಲು ದೋಣಿ ವ್ಯವಸ್ಥೆ ಇದೆ. ಕಟ್ಟೆಯ ಬದಿಯ ಉದ್ಯಾನಕ್ಕೂ ನದಿಯ ಆಚೆಗಿನ [illegible] ಇದೆ. ನದಿಯ ಪಾತ್ರದ ಮಧ್ಯದಲ್ಲಿ ಉದ್ಯಾನದ [illegible] ಕಾರಂಜಿಯಿದೆ.

ಹಗಲಿನಲ್ಲಾಗಲೀ ಬೆಳದಿಂಗಳಲ್ಲಾಗಲೀ ವರ್ಣರಂಜಿತ ವಿದ್ಯುದ್ದೀಪದ ಕಾಂತಿಯಲ್ಲಾಗಲೀ — ಯಾವಾಗ ನೋಡಿದರೂ ಬೃಂದಾವನ ತನ್ನದೇ ಆದ ಸೌಂದರ್ಯದಿಂದ ನೋಟಕರ ಮನವನ್ನು ಆಕರ್ಷಿಸುತ್ತದೆ.

ಬೃಂದಾವನ ಪ್ರದೇಶದಲ್ಲಿ ಈಜಲು, ಮೀನು ಹಿಡಿಯಲು ಸಹ ಅನುಕೂಲಗಳಿವೆ. ಪ್ರವಾಸಿಗರು ತಂಗಲು ಸೌಕರ್ಯಗಳಿವೆ. ಬೃಂದಾವನ ಇರುವುದು, ಮೈಸೂರು ನಗರದಿಂದ ಉತ್ತರಕ್ಕೆ, ಸುಮಾರು 12 ಮೈಲು ದೂರದಲ್ಲಿ.

ಬೃಹದಾರಣ್ಯಕೋಪನಿಷತ್

ಜನಕ ಮಹಾರಾಜ ಬಹುದಕ್ಷಿಣ ಎಂಬ ಯಜ್ಞ ಮಾಡಿದ. ಬ್ರಹ್ಮಸಾಕ್ಷಾತ್ಕಾರ ಪಡೆದವನಿಗೆ ದಾನ ಕೊಡಲು ನಿರ್ಧರಿಸಿದ. ಕೊಂಬಿಗೆ 'ಪಾದ' ಎಂಬ ಹತ್ತು ಚಿನ್ನದ ನಾಣ್ಯಗಳನ್ನು ಕಟ್ಟಿದ ಸಾವಿರ ಗೋವುಗಳನ್ನು ತರಿಸಿ, 'ಬ್ರಹ್ಮಿಷ್ಠನಾದವನು ಇವನ್ನು ಕರೆದೊಯ್ಯಲಿ' ಎಂದ. ಅಲ್ಲಿ ನೆರೆದಿದ್ದವರಲ್ಲಿ ಯಾಜ್ಞವಲ್ಕ್ಯ, ಗೋವುಗಳನ್ನು ಕರೆದುಕೊಂಡು ಹೋಗಲು ತನ್ನ ಶಿಷ್ಯನೊಬ್ಬನಿಗೆ ಹೇಳಿದ. ಇದರಿಂದ ಕೋಪಗೊಂಡ ಬ್ರಾಹ್ಮಣರಲ್ಲಿ ಕೆಲವರು ಯಾಜ್ಞವಲ್ಕ್ಯನನ್ನು ಪ್ರಶ್ನಿಸತೊಡಗಿದರು. ಆತ ಎಲ್ಲರಿಗೂ ಸಮರ್ಪಕವ ಉತ್ತರ ಕೊಟ್ಟ.

ಈ ಪ್ರಸಂಗ ಬೃಹದಾರಣ್ಯಕೋಪನಿಷತ್ತಿನಲ್ಲಿ ಬರುವ ಮನೋಹರ ಸಂವಾದಗಳಲ್ಲೊಂದು.

ಬೃಹದಾರಣ್ಯಕೋಪನಿಷತ್ತು ಶುಕ್ಲಯಜುರ್ವೇದಕ್ಕೆ ಸೇರಿದ್ದು.

ಇದರಲ್ಲಿ ಆರು ಅಧ್ಯಾಯಗಳಿವೆ; 47 ಖಂಡಗಳಿವೆ. ಖಂಡಗಳನ್ನು ಬ್ರಾಹ್ಮಣಗಳು ಎನ್ನುತ್ತಾರೆ. ಈ ಉಪನಿಷತ್ತನ್ನು ಮಧುಕಾಂಡ, ಯಾಜ್ಞವಲ್ಕ್ಯ ಅಥವಾ ಮುನಿಕಾಂಡ ಹಾಗೂ ಖಿಲಕಾಂಡ ಎಂದು ವಿಭಾಗ ಮಾಡಿದ್ದಾರೆ.

[illegible]

ದಾನ ಕುರಿತು ಚರ್ಚೆ. ಬ್ರಹ್ಮವಿದ್ಯೆಯ ಪ್ರಸ್ತಾಪ —ಇವು ಬೃಹದಾರಣ್ಯಕೋಪನಿಷತ್ತಿನಲ್ಲಿ ನಿರೂಪಿತವಾಗಿರುವ ಮುಖ್ಯ ವಿಷಯಗಳು.

ಬೃಹದಾರಣ್ಯಕೋಪನಿಷತ್ತಿನ ವಿಷಯ ವ್ಯಾಪ್ತಿ ದೊಡ್ಡದು ಗಾತ್ರವೂ ಹಿರಿದು. ಆಧ್ಯಾತ್ಮಿಕ ಚಿಂತನೆಯ ದೃಷ್ಟಿಯಿಂದ ಈ ಉಪನಿಷತ್ತು ಒಂದು ಅಪೂರ್ವ ಕೃತಿ.

ನೋಡಿ : ಯಜುರ್ವೇದ

ಬೃಹಸ್ಪತಿ

ದೊಡ್ಡವರ ಮಾತಿಗೆ ಎದುರುತ್ತರ ಕೊಟ್ಟರೆ ಅಥವಾ ಟೀಕೆಯ ಪ್ರತಿ ನುಡಿ ಆಡಿದರೆ, ಅಂಥ ಹುಡುಗನನ್ನು "ನೀನೊಬ್ಬ ಮಹಾ ಬೃಹಸ್ಪತಿ" ಎಂದು ಗದರಿಸುವುದುಂಟು. ಭಾರತದ ನಾಸ್ತಿಕ ತತ್ತ್ವಜ್ಞಾನಿಯಾದ ಬೃಹಸ್ಪತಿ ಹಿಂದಿನ ನಂಬಿಕೆ, ಸಂಪ್ರದಾಯಗಳನ್ನೆಲ್ಲ ಟೀಕಿಸಿದವನು. ದೇವರು, ಧರ್ಮ, ವೇದ, ಉಪನಿಷತ್ತು, ವೈದಿಕ ಕರ್ಮಗಳನ್ನೆಲ್ಲ ಅತ್ಯಂತ ಕಟುವಾಗಿ ಖಂಡಿಸಿದ ತತ್ತ್ವಜ್ಞಾನಿ ಈತ.

ಬೃಹಸ್ಪತಿಯ ಕಾಲ ಅಸ್ಪಷ್ಟ. ಬಹುಶಃ ಕ್ರಿ. ಪೂ. 500ರ ಈಚಿನವನು. ಇವನ 'ಸೂತ್ರ'ಗಳು ದೊರೆತಿಲ್ಲ. ಶಂಕರಾಚಾರ್ಯರೇ ಮೊದಲಾದ ಅನೇಕ ದಾರ್ಶನಿಕರು ಇವನ ಉಕ್ತಿಗಳನ್ನು ಉಲ್ಲೇಖಿಸಿದ್ದಾರೆ.

"ಸ್ವರ್ಗ ಎಂಬುದಿಲ್ಲ, ಮುಕ್ತಿ ಎಂಬುದೂ ಇಲ್ಲ. ಆತ್ಮವಾಗಲೀ ಬೇರೆ ಲೋಕವೆಂಬುದಾಗಲೀ ಇಲ್ಲ. ಧಾರ್ಮಿಕ ಕ್ರಿಯೆಗಳು ಬೇಕಿಲ್ಲ. ಬುದ್ಧಿ ಧೈರ್ಯಗಳಿಲ್ಲದ ಮಂದಿ ಊಟ ಬಟ್ಟೆ ದೊರಕಿಸಿಕೊಳ್ಳಲು ಕಲ್ಪಿಸಿಕೊಂಡ ಮಾರ್ಗಗಳು ಇವು, ಅಷ್ಟೆ." —ಇದು ಬೃಹಸ್ಪತಿಯ ಉಕ್ತಿ.

ವೇದಗಳ ಅಧ್ಯಯನ ಅನಗತ್ಯ, ಅವನ್ನು ಬರೆದವರು ವಿದೂಷಕರು, ತಕ್ಕರು ; ಅವುಗಳಲ್ಲಿನ ವೈದಿಕ ಕ್ರಿಯೆಗಳನ್ನು ಪುರೋಹಿತರು ಆಚರಿಸುತ್ತ ಜೀವನಕ್ಕೆ ಮಾರ್ಗ ಮಾಡಿಕೊಂಡಿದ್ದಾರೆ ; ದೇವರು ಸ್ವರ್ಗ ಎಂಬುದೆಲ್ಲ ತಾಯಿಯು ಮಕ್ಕಳನ್ನು ಹೆದರಿಸಲು ಅಥವಾ ಸಮಾಧಾನಪಡಿಸಲು ಹೂಡುವ ಉಪಾಯಗಳು. ಇಂಥ ನಂಬಿಕೆಗಳಿಗೆ ಒಳಗಾಗಿ ಜೀವನ ನಡೆಸುವವರು ದುಃಖಿ, ದಾಸ್ಯಗಳನ್ನು ಅನುಭವಿಸುತ್ತಾರೆ —ಎಂಬುದು ಅವನ ಅಭಿಪ್ರಾಯ.

'ಯಾವಜ್ಜೀವವೂ ಸುಖದಿಂದ ಬಾಳತಕ್ಕದ್ದು ; ಸಾಲ ಮಾಡಿಯಾದರೂ ತುಪ್ಪ ತಿನ್ನತಕ್ಕದ್ದು. ಸುಟ್ಟುಬೂದಿಯಾದ ದೇಹ ಮತ್ತೆ ಹೇಗೆ ಬಂದೀತು?' —ಎಂದು ಬೃಹಸ್ಪತಿ ಬೋಧಿಸಿದ.



ಸಂಪ್ರದಾಯದ ಟೀಕೆ :
ಬೃಹಸ್ಪತಿ

ಬೃಹಸ್ಪತಿಯ ತತ್ತ್ವಗಳನ್ನು ಬಾರ್ಹಸ್ಪತ್ಯ ಎಂದು ಕರೆಯಲಾಯಿತು. ಇವನ ಬಳಿಕ ನಾಸ್ತಿಕವಾದ ಮತ್ತಷ್ಟು ಬಲವಾಯಿತು. ಚಾರ್ವಾಕ ದರ್ಶನವನ್ನು ರಚಿಸಿದವನು ಇವನೇ ಎಂಬ ಹೇಳಿಕೆಯಿದೆ.

ಮಹಾಭಾರತ, ಮತ್ಸ್ಯಪುರಾಣಗಳಲ್ಲಿ ಬೃಹಸ್ಪತಿಯ ಉಲ್ಲೇಖವಿದೆ.

ರಾಕ್ಷಸರ ಗುರುವಾದ ಶುಕ್ರಾಚಾರ್ಯ ತಪಸ್ಸು ಮಾಡುತ್ತಿದ್ದ ಕಾಲದಲ್ಲಿ ಇವನು ಶುಕ್ರಾಚಾರ್ಯನ ರೂಪಧರಿಸಿ ರಾಕ್ಷಸರೊಡನೆ ಸೇರಿಕೊಂಡು ಅವರಿಗೆ ನಾಸ್ತಿಕವಾದವನ್ನು ಬೋ[...]ಸಿದ; ಅನಂತರ ಕಣ್ಮರೆಯಾದ ಎಂದು 'ಮತ್ಸ್ಯಪುರಾಣ'ದಲ್ಲಿ ಹೇ[...]

ನೋಡಿ : ಚಾರ್ವಾಕ ದರ್ಶನ

ಬೆಂಗಳೂರು


ಕರ್ನಾಟಕದ ರಾಜಧಾನಿ, ಬೆಂಗಳೂರು.

ವೀರಬಲ್ಲಾಳ ದೊರೆ ಒಂದು ಹಳ್ಳಿಯ ಹಟ್ಟಿಯಲ್ಲಿ ಒಮ್ಮೆ ವಸತಿ ಮಾಡಿದ. ಮನೆಯ ಒಡತಿ ಬಡವೆ. ಆತನಿಗೆ ಉಣಬಡಿಸಲು ಏನೂ ಇಲ್ಲದೆ ಬೆಂದಕಾಳುಗಳನ್ನಷ್ಟೇ ನೀಡಿದಳು. ಅಂದಿನಿಂದ ಹಳ್ಳಿ[...] 'ಬೆಂದ ಕಾಳೂರು' ಎಂದು ಹೆಸರಾಯಿತು. ಕ್ರಮೇಣ ಬೆಂಗಳೂರು ಎಂಬ ಹೆಸರು ಬಂದಿತು.

ಇದು ಬೆಂಗಳೂರಿನ ಹುಟ್ಟನ್ನು ಕುರಿತ ಕಥೆ.

ವಿಜಯನಗರದ ಅಚ್ಯುತರಾಯನಿಂದ ಅನುಮತಿ ಪಡೆದು ಪಾಳೆಯಗಾ[ರ] ಕೆಂಪೇಗೌಡ 1537ರಲ್ಲಿ ಇಂದಿನ ಬೆಂಗಳೂರು ಕೋಟೆ ಇರುವಲ್ಲಿ ಒಂದು ಮಣ್ಣಿನ ಕೋಟೆ ಕಟ್ಟಿಸಿದ. ಅಲ್ಲದೆ ಬೆಂಗಳೂರು ಎಷ್ಟು ವಿಸ್ತಾ[ರ]ಗೊಂಡೀತು ಎಂಬುದನ್ನು ಕಲ್ಪಿಸಿ ನಾಲ್ಕು ದಿಕ್ಕುಗಳಲ್ಲಿ. ಗೋಪುರಗಳನ್ನು ನಿರ್ಮಿಸಿದ. ಅವನು ಕಟ್ಟಿಸಿದ ಅನೇಕ ದೇವಾಲಯಗಳಲ್ಲಿ ಗ[...] ಗಂಗಾಧರೇಶ್ವರ ಮತ್ತು ಬಸವನಗುಡಿ ಪ್ರಮುಖವಾದುವು. ಇವುಗ[...] ಬದಿಗೆ ಇರುವ ಕೆಂಪಾಂಬುಧಿ ಕೆರೆಯೂ ಅವನ ನಿರ್ಮಾಣವೇ.

17ನೆಯ ಶತಮಾನದಲ್ಲಿ ಸ್ವಲ್ಪ ಕಾಲ ಬೆಂಗಳೂರು ಬಿಜಾಪುರದ ಸುಲ್ತಾನರ ವಶದಲ್ಲಿತ್ತು. ಅನಂತರ ಶಿವಾಜಿಯ ತಂದೆ ಷಹಾಜಿ ಅದನ್ನು ಸ್ವಾಧೀನಪಡಿಸಿಕೊಂಡ. 1758ರಲ್ಲಿ ಇದು ಹೈದರನ ವಶಕ್ಕೆ ಬಂತು. ಆತ ಮಣ್ಣಿನ ಕೋಟೆ ಕೆಡವಿ ಕಲ್ಲಿನ ಕೋಟೆ ಕಟ್ಟಿಸಿದ. ಲಾರ್ಡ್ ಕಾರ್ನ್‌ವಾಲಿಸ್ 1791ರಲ್ಲಿ ಬೆಂಗಳೂರನ್ನು ಗೆದ್ದ. ಮುಂದೆ ಇದು ಹೈದರನ ಮಗ ಟಿಪ್ಪುವಿನ ಅಧೀನಕ್ಕೆ ಬಂತು. 1799ರಲ್ಲಿ ಟಿಪ್ಪುವಿನ ಪತನದ ಅನಂತರ ಬೆಂಗಳೂರು ಮೈಸೂರು ಒಡೆಯರ ಆಡಳಿತಕ್ಕೆ ಒಳಪಟ್ಟಿತು. 1831ರಿಂದ ಬ್ರಿಟಿಷರ ಆಡಳಿತದಲ್ಲಿದ್ದು 1881ರಲ್ಲಿ ಮತ್ತೆ ಮೈಸೂರು ಒಡೆಯರ ರಾಜಮನೆತನದ



ನಗರಮಿತಿ :
ಗೋಪುರ



ಬೆಂಗಳೂರಿಗೆ ಕಾವೇರಿ ನೀರು–ಕೊಳವೆ ಮಾರ್ಗ



ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಕಟ್ಟಡ

ಕೈಸೇರಿತು. ಸ್ವಾತಂತ್ರ್ಯ ಬರುವವರೆಗೆ ಬೆಂಗಳೂರಿನ ದಂಡು ಪ್ರತ್ಯೇಕವಾಗಿ ಬ್ರಿಟಿಷರಿಂದ ಆಳಲ್ಪಡುತ್ತಿದ್ದಿತು. 1949ರಲ್ಲಿ ದಂಡು ಮತ್ತು ನಗರಗಳೆರಡನ್ನೂ ಒಂದೇ ನಗರಸಭೆಯ ಅಧೀನಕ್ಕೆ ತರಲಾಯಿತು.

ಬೆಂಗಳೂರು ಸಮುದ್ರ ಮಟ್ಟದಿಂದ ಮೂರು ಸಾವಿರ ಅಡಿ ಎತ್ತರದಲ್ಲಿದೆ. ಆಧುನಿಕ ಬೆಂಗಳೂರು ಸುಮಾರು 40 ಚ. ಮೈ. ಗಳಷ್ಟು ವಿಸ್ತಾರವಾಗಿದೆ. ಜನಸಂಖ್ಯೆ 16,53,779.

ಇಲ್ಲಿ ದಿನದಿನವೂ ಕೈಗಾರಿಕೆಗಳ ಸಂಖ್ಯೆ ಹೆಚ್ಚುತ್ತಿದೆ. ಹಿಂದೂಸ್ಥಾನ್ ಮೆಷಿನ್ ಟೂಲ್ಸ್ (ಎಚ್. ಎಮ್. ಟಿ.), ಇಂಡಿಯನ್ ಟೆಲಿಫೋನ್ ಇಂಡಸ್ಟ್ರೀಸ್ (ಐ. ಟಿ. ಐ.), ಹಿಂದೂಸ್ಥಾನ್ ಏರೋನಾಟಿಕ್ಸ್ ಲಿಮಿಟೆಡ್ (ಎಚ್. ಎ. ಎಲ್.), ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್ (ಬಿ. ಇ. ಎಲ್.) ಭಾರತ್ ಅರ್ತ್ ಮೂವರ್ಸ್‌ನ ರೈಲ್ವೆಕೋಚ್ ವಿಭಾಗ –ಇವು ಬೃಹತ್ ಸಾರ್ವಜನಿಕ ಉದ್ಯಮಗಳಲ್ಲಿ ಕೆಲವು. ಪಿಂಗಾಣಿ ಸಾಮಾನು, ಸಾಬೂನು, ವಿದ್ಯುತ್ ಉಪಕರಣಗಳು, ಔಷಧಗಳು, ರೇಡಿಯೋ, ಗಾಜಿನ ಸಾಮಾನುಗಳು, ತೊಗಲು ಪದಾರ್ಥಗಳು, ಪಾದರಕ್ಷೆ, ಬೇಸಾಯ ಉಪಕರಣಗಳು, ವಸ್ತ್ರೋದ್ಯಮ ಮುಂತಾದ ಅನೇಕ ಕೈಗಾರಿಕೆಗಳಿವೆ. ರಸ್ತೆ, ವಿಮಾನ, ರೈಲು ಸಾರಿಗೆ ವ್ಯವಸ್ಥೆಗಳಿವೆ.

ವಿಧಾನಸೌಧ –ರಾಜ್ಯದ ಶಾಸಕಾಂಗ. ಕಾರ್ಯಾಂಗಗಳ ನೆಲೆ.

ವೈಜ್ಞಾನಿಕ ಸಂಶೋಧನಾ ಸಂಸ್ಥೆಗಳಲ್ಲಿ ಇಂಡಿಯನ್ ಇನ್ಸ್‌ಟಿಟ್ಯೂಟ್ ಆಫ್ ಸೈನ್ಸ್. ರಾಮನ್ ರಿಸರ್ಚ್ ಇನ್ಸ್‌ಟಿಟ್ಯೂಟ್. ನ್ಯಾಷನಲ್ ಏರೋನಾಟಿಕಲ್ ಲ್ಯಾಬೊರೇಟರಿ ಮುಖ್ಯವಾದುವು.

ಲಾಲ್‌ಬಾಗ್. ಕಬ್ಬನ್ ಪಾರ್ಕ್. ವಿಶ್ವೇಶ್ವರಯ್ಯ ಔದ್ಯೋಗಿಕ ಮತ್ತು ತಾಂತ್ರಿಕ ಮ್ಯೂಸಿಯಂ, ವಸ್ತುಸಂಗ್ರಹಾಲಯ, ಕೋಟೆ, ಟಿಪ್ಪುವಿನ ಅರಮನೆ, ಗಾಂಧೀಭವನ, ಅಲಸೂರು ಕೆರೆ –ಬೆಂಗಳೂರಿನ ಮುಖ್ಯ ಆಕರ್ಷಣೆಗಳು.

ಬೆಂಗಳೂರು ನಗರದ ಹೊರವಲಯದಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ಕೇಂದ್ರವಾದ ಜ್ಞಾನ ಭಾರತಿಯೂ ಹೆಬ್ಬಾಳದಲ್ಲಿ ಕೃಷಿ ವಿಶ್ವವಿದ್ಯಾನಿಲಯ ಕೇಂದ್ರವೂ ಇವೆ.

ನೋಡಿ : ಬೆಂಗಳೂರು–ಸಂಪುಟ ೧


ಬೆಂಜಮಿನ್ ಗೈ ಹಾರ್ನಿಮನ್

1905ರಲ್ಲಿ ಬ್ರಿಟಿಷ್ ಸರಕಾರ ನಡೆಸಿದ ಬಂಗಾಳದ ವಿಭಜನೆಯ ವಿರುದ್ಧ ಕಲ್ಕತ್ತೆಯಲ್ಲಿ ಪ್ರತಿಭಟನಾ ಮೆರವಣಿಗೆ ನಡೆದಿತ್ತು. ಅದರಲ್ಲಿದ್ದ ಭಾರತೀಯರ ನಡುವೆ ಒಬ್ಬ ಆಂಗ್ಲನಿದ್ದ. ಹೆಗಲಿನ ಮೇಲೊಂದು ಶಾಲು ಹಾಕಿಕೊಂಡು ಬರಿಗಾಲಿನಲ್ಲಿ ನಡೆಯುತ್ತಿದ್ದ.

ಭಾರತಕ್ಕೆ ಬಂದಾಗಿನಿಂದ ಇಲ್ಲಿನ ಸ್ವಾತಂತ್ರ್ಯ ಚಳುವಳಿಯಲ್ಲಿ ಆಸಕ್ತಿ ವಹಿಸಿ, ತನ್ನ ಬರೆವಣಿಗೆಯಿಂದ ಆ ಚಳುವಳಿಯನ್ನು ಪೋಷಿಸಿದ ವ್ಯಕ್ತಿ, ಬೆಂಜಮಿನ್ ಗೈ ಹಾರ್ನಿಮನ್.

ಹಾರ್ನಿಮನ್ ಹುಟ್ಟಿದ್ದು ಇಂಗ್ಲೆಂಡಿನಲ್ಲಿ, 1873ರಲ್ಲಿ. ಪ್ರಾಥಮಿಕ ವಿದ್ಯಾಭ್ಯಾಸ ದೊರೆತದ್ದು ತಾಯಿಯಿಂದ. ತಂದೆ ನೌಕಾಸೇನೆಯಲ್ಲಿ ಇದ್ದವರು. ಮಗನೂ ಸೈನ್ಯ ಸೇರಲಿ ಎಂದು ಅದಕ್ಕೆ ತಕ್ಕ ತರಬೇತಿ ಕೊಡಿಸಿದರು. ಆದರೆ ಬೆಂಜಮಿನ್ 21ನೆಯ ವಯಸ್ಸಿನಲ್ಲಿ ವೃತ್ತ ಪತ್ರಿಕೆಯೊಂದರ ವರದಿಗಾರರಾದರು. ಅನಂತರ ಇಂಗ್ಲೆಂಡಿನ ಕೆಲವು ವೃತ್ತಪತ್ರಿಕೆಗಳ ಸಂಪಾದಕೀಯ ವಿಭಾಗದಲ್ಲಿ ಕೆಲಸಮಾಡಿದರು. ಆ ಹೊತ್ತಿಗಾಗಲೇ ಅವರಿಗೆ ಭಾರತದ ಬಗೆಗೆ ವಿಶೇಷ ಆಸಕ್ತಿ ಬೆಳೆದಿತ್ತು. ಕಲ್ಕತ್ತೆಯ 'ಸ್ಟೇಟ್ಸ್‌ಮನ್' ಪತ್ರಿಕೆಯ ಸಹಾಯಕ ಸಂಪಾದಕರಾಗುವ ಅವಕಾಶ ದೊರೆತೊಡನೆ ಹಾರ್ನಿಮನ್ ಭಾರತಕ್ಕೆ ಬಂದರು. ಭಾರತೀಯರ ಆಶೋತ್ತರಗಳನ್ನು ಅರ್ಥಮಾಡಿಕೊಂಡರು ; ಅವರ ರಾಜಕೀಯ ಚಳುವಳಿಗಳಲ್ಲಿ ಭಾಗವಹಿಸಿದರು.

ಫಿರೋಜ್ ಷಾ ಮೆಹತಾ ಅವರು 1913ರಲ್ಲಿ ಮುಂಬಯಿಯಲ್ಲಿ 'ಬಾಂಬೆ ಕ್ರಾನಿಕಲ್' ಪತ್ರಿಕೆ ಆರಂಭಿಸಿದಾಗ ಹಾರ್ನಿಮನ್ ಅದಕ್ಕೆ ಸಂಪಾದಕರಾದರು. ಆ ಪತ್ರಿಕೆ ಹಾರ್ನಿಮನರ ಕೈಯಲ್ಲಿ ಹೋಂ ರೂಲ್ ಚಳುವಳಿಯ ಪ್ರಮುಖ ಅಸ್ತ್ರವಾಯಿತು. ಈ ಪತ್ರಿಕೆಯು ಕಚೇರಿ ರಾಷ್ಟ್ರೀಯ ಮನೋಭಾವದ ಪತ್ರಕರ್ತರ ತರಬೇತಿಯ ಕೇಂದ್ರವಾಯಿತು. ಹಾರ್ನಿಮನ್ ಉಗ್ರಗಾಮಿ ಪಂಥದ ಚಳುವಳಿಗಾರರ ಒಬ್ಬ ಮುಖಂಡರಾದರು.



ಹಾರ್ನಿಮನ್ : ಹೋರಾಟದ ಲೇಖನಿ

[illegible].

[illegible] ಭಾರತ ವಲ್ಲಿತ್ತು. ಆದರೆ ಇಲ್ಲಿಗೆ ಬರಲು ಬ್ರಿಟಿಷ್ ಸರಕಾರದ ಅಪ್ಪಣೆ [illegible]. ಅಲ್ಲಿಂದ [illegible] ಹಾರ್ನಿಮನ್ ಮತ್ತೆ 'ಬಾಂಬೆ ಕ್ರಾನಿಕಲ್'ನ ಸಂಪಾದಕತ್ವವನ್ನು ವಹಿಸಿಕೊಂಡರು. ಮುಂದೆ 'ಬಾಂಬೆ ಸೆಂಟಿನಲ್'ನ ಸಂಪಾದಕರಾದರು.

[illegible]. ಅವರ ಸಂಪಾದಕೀಯಗಳು [illegible] ಹೋರಾಟಗಾರರಿಗೆ ಪ್ರೋತ್ಸಾಹ ನೀಡುತ್ತಿದ್ದುವು. ಆದರೂ [illegible] ಸಿಗುತ್ತಿರಲಿಲ್ಲ. [illegible] "ಹಾರ್ನಿಮನ್‌ರನ್ನು ಕಂಡರೆ [illegible]. ಆದರೂ ಅವರ [illegible] ಇರುವುದು ಕಷ್ಟ" ಎಂದಿದ್ದರು. ಅಧಿಕಾರಕ್ಕೆ ಬಂದಮೇಲೆ ಕಾಂಗ್ರೆಸ್ಸೂ ಅವರ ಟೀಕೆಗೆ ಗುರಿಯಾಯಿತು.

[illegible] ಅವರು [illegible]. ಭಾರತದ ಜೀವನಕ್ಕೆ ಒಗ್ಗಿ [illegible]. 1948 ಅಕ್ಟೋಬರ್ 17ರಂದು ಮುಂಬಯಿಯಲ್ಲಿ ನಿಧನರಾದರು.

ಬೆನಗಲ್ ನರಸಿಂಗರಾವ್

ನೋಡಿ : ಬಿ. ಎನ್. ರಾವ್

ಬೆನಗಲ್ ಶಿವರಾವ್

ನೋಡಿ : ಬಿ. ಶಿವರಾವ್

ಬೆಳವಡಿ ಮಲ್ಲಮ್ಮ

ಬೆಳವಡಿ ನಾಡಿನಲ್ಲಿ ಈಗಲೂ ಒಂದು ಕಥೆ ಪ್ರಚಲಿತವಿದೆ. ಅದು ಹೀಗೆ: ಬೆಳವಡಿ ಅರಸ ಈಶ ಪ್ರಭು ಮಧ್ಯಾಹ್ನ ಊಟ ತೀರಿಸಿ ಒಂದಿಷ್ಟು ವಿಶ್ರಾಂತಿಗಾಗಿ ಅರಮನೆಯಲ್ಲಿ ಮಲಗಿದ್ದ. ಆ ಸಮಯದಲ್ಲಿ ಒಂದು ಹೆಬ್ಬುಲಿ ಹೇಗೋ ಅರಮನೆಯ ಅಂಗಳವನ್ನು ಪ್ರವೇಶಿಸಿತು. ಅದನ್ನು ಕಂಡ ಈಶ ಪ್ರಭುವಿನ ಪತ್ನಿ ರಾಣಿ ಮಲ್ಲಮ್ಮ ಗಂಡನ ನಿದ್ರೆಗೆ ಭಂಗ ತರದೆ ಬಿಚ್ಚುಗತ್ತಿಯಿಂದ ಆ ಹುಲಿಯನ್ನು ತಾನೇ ತುಂಡರಿಸಿ ಹಾಕಿದಳು, ಕಥೆ ನಿಜವೋ ಅಲ್ಲವೋ ತಿಳಿಯದು. ಆದರೆ ಸ್ವಾಭಿಮಾನಿ ಅರಸು ಮ[illegible] ತನದ ಹೆಣ್ಣುಮಗಳಾದ ಬೆಳವಡಿಯ ರಾಣಿ ಮಲ್ಲಮ್ಮ ಶೂರಳಾಗಿದ್ದ[illegible] ಎನ್ನುವುದು ಮಾತ್ರ ನಿಜ.



ಬೆಳವಡಿ ಮಲ್ಲಮ್ಮ ಶಿವಾಜಿಯೊಂದಿಗೆ
—ಶಿಲ್ಪಚಿತ್ರಣ

ಈಗ ಬೈಲಹೊಂಗಲದ ತಾಲ್ಲೂಕಿಗೆ ಸೇರಿರುವ ಬೆಳವಡಿ, ಚೆನ್ನಮ್ಮನ ಕಿತ್ತೂರಿನಿಂದ 12 ಮೈಲು. ರಾಯಣ್ಣನ ಸಂಗೊಳ್ಳಿಯಿಂದ 7 ಮೈಲಿ ದೂರದಲ್ಲಿದೆ.

1678ರಲ್ಲಿ ಮರಾಠ ನಾಯಕ ಶಿವಾಜಿ ತಂಜಾವೂರಿನ ತನ್ನ ದಕ್ಷಿಣ ಯಾತ್ರೆ ತೀರಿಸಿ ಮರಳಿ ಮಹಾರಾಷ್ಟ್ರಕ್ಕೆ ನಡೆದಿದ್ದ. ಆತನ ಸೇನೆ ದಾರಿಯಲ್ಲಿ ಸಿಕ್ಕ ಊರುಗಳನ್ನು ದೋಚುತ್ತಲಿತ್ತು. ಶಿವಾಜಿಯ ಸೈನ್ಯದ ಒಂದು ಗುಂಪು ಬೆಳವಡಿಯ ಸುತ್ತ ದಾಳಿಮಾಡಿತು. ಇನ್ನೊಂದು ಬೆಳವಡಿ ಪೇಟೆಯನ್ನು ಸುಲಿಯುತ್ತೊಡಗಿತು. ಈಶ ಪ್ರಭು ತನ್ನ ಸೈನಿಕರ ಸಹಾಯದಿಂದ ಮರಾಠ ಸೇನೆಯನ್ನು ಹೊರದಬ್ಬಿ, ಕೋಟೆಯ ಬಾಗಿಲನ್ನು ಭದ್ರಪಡಿಸಿದ.

ಶಿವಾಜಿಯ ಸೇನಾಪತಿ ದಾದಾಜಿ ರಘುನಾಥ ಬೆಳವಡಿ ಕೋಟೆಯನ್ನು ಮುತ್ತಿದ. ಅನೇಕ ದಿನಗಳ ವರೆಗೆ ಪ್ರಯತ್ನಿಸಿದರೂ ಮರಾಠರಿಗೆ ಬೆಳವಡಿ ಕೋಟೆಯನ್ನು ಭೇದಿಸುವುದಾಗಲಿಲ್ಲ. ಒಂದು ದಿನ ಮರಾಠರು ಹಾರಿಸಿದ ಕೊಳ್ಳಿ ಕೋಟೆಯ ಒಳಗಣ ಕಣಕೆಯ ಬಣವೆಗೆ ಬಿದ್ದು ಉರಿ ಹತ್ತಿಕೊಂಡಿತು. ಅದರಿಂದ ಗೊಂದಲ ಉಂಟಾಯಿತು. ಆ ಸಂಧಿ ಸಾಧಿಸಿ ಮರಾಠರು ಕೋಟೆಯನ್ನು ಪ್ರವೇಶಿಸಿದರು. ಬೆಳವಡಿ ವೀರರಿಗೂ ಮರಾಠರಿಗೂ ಕೈ ಕೈ ಹತ್ತಿತ್ತು. ಈ ಕದನದಲ್ಲಿ ಈಶ ಪ್ರಭು ಪ್ರಾಣ ನೀಗಿದ.

ಪತಿಯ ದುರಂತ ತಿಳಿದ ಮಲ್ಲಮ್ಮ ಎದೆಗೆಡದೆ ಶತ್ರು ಪಡೆಯನ್ನು ಎದುರಿಸಲು ಸನ್ನದ್ಧಳಾದಳು. ಅರಸನ ಮರಣದ ಸುದ್ದಿ ತಿಳಿದು ಚೆದರುತ್ತಿದ್ದ ಬೆಳವಡಿ ಸೈನಿಕರೆಲ್ಲ ತಮ್ಮ ರಾಣಿಯ ಧೈರ್ಯಕಂಡು, ಮರಳಿ ಮರಾಠರ ಮೇಲೆ ಬಿದ್ದರು. ಗಂಡನ ಖಡ್ಗವನ್ನು ಮಲ್ಲಮ್ಮ ತೆಗೆದುಕೊಂಡು, ಗಂಡನ ಕುದುರೆಯನ್ನೇರಿ ವೀರಾವೇಶದಿಂದ ಹೋರಾಟಕ್ಕೆ ನಿಂತಳು; ಶತ್ರುಸೈನ್ಯವನ್ನು ಹಿಮ್ಮೆಟ್ಟಿಸಿದಳು; ಮತ್ತೆ ಕೋಟೆಯ ಬಾಗಿಲು ಭದ್ರಪಡಿಸಿದಳು.

ಒಬ್ಬ ಮಹಿಳೆಯಿಂದ ತನ್ನ ಸೈನ್ಯಕ್ಕೆ ಸೋಲಾದದ್ದನ್ನು ತಿಳಿದ ಶಿವಾಜಿ ರೊಚ್ಚಿಗೆದ್ದು ಹೆಚ್ಚಿನ ಸೈನ್ಯ ಕಳುಹಿಸಿದ. ಕೋಟೆಯಲ್ಲಿನ ಆಹಾರ, ಮದ್ದು ಗುಂಡಿನ ಸಂಗ್ರಹ ತೀರುವವರೆಗೂ ಮಲ್ಲಮ್ಮ ಮರಾಠರನ್ನು ಒಳಗಿನಿಂದಲೇ ಪ್ರತಿಭಟಿಸಿದಳು. ಕೊನೆಗೆ ಕೋಟೆಯ ಬಾಗಿಲು ತೆರೆದು ತನ್ನ ಸೈನಿಕರೊಂದಿಗೆ ಮರಾಠರ ಎದುರಾಗಿ ಕಾಳಗಕ್ಕೆ ನಿಂತಳು. ಶಿವಾಜಿಯ ದೊಡ್ಡ ಸುಸಜ್ಜಿತ ಸೈನ್ಯದೆದುರು ಬೆಳವಡಿಯ ಚಿಕ್ಕ ಸೈನ್ಯದ ಆಟ ನಡೆಯಲಿಲ್ಲ. ಆದರೂ ಮಲ್ಲಮ್ಮ ದಿಟ್ಟತನದಿಂದ ಹೋರಾಡುತ್ತಲೇ ಇದ್ದಳು. ಮರಾಠ ಸೈನಿಕನೊಬ್ಬ ಸಂಧಿ ಸಾಧಿಸಿ ಹಿಂದಿನಿಂದ ಬಂದು ರಾಣಿಯ ಕುದುರೆಯ ಹಿಂಗಾಲನ್ನು ಕತ್ತರಿಸಿದ. ಆದರೂ ಮಲ್ಲಮ್ಮ ಹತಾಶಳಾಗದೆ, ನೆಲದ ಮೇಲೆಯೇ ನಿಂತು ಹೋರಾಡಿದಳು. ಶತ್ರು ಸೈನಿಕನೊಬ್ಬನ ಖಡ್ಗದ ಏಟು ಆಕೆಯ ಬಲಗೈಗೆ ಬಿದ್ದಿತು. ರಕ್ತಸ್ರಾವದಿಂದ ಮಲ್ಲಮ್ಮ ಮೂರ್ಛೆಹೋದಳು. ಆಕೆಯನ್ನು ಎತ್ತಿಕೊಂಡು ಶಿವಾಜಿಯ ಬಳಿಗೆ ಒಯ್ದರು.

ಆ ಚಿಕ್ಕ ರಾಜ್ಯದ ಸ್ವಾಭಿಮಾನವನ್ನೂ ಮಲ್ಲಮ್ಮ ರಾಣಿಯ ಸಾಹಸವನ್ನೂ ಕಂಡು ಶಿವಾಜಿಗೆ ಸೋಜಿಗವಾಗಿತ್ತು. ರಾಣಿ ಮಲ್ಲಮ್ಮನನ್ನು

ಶಿವಾಜಿ ತನ್ನ ಸಹೋದರಿಯಂತೆ ಕಂಡು. ಅವಳನ್ನು ಉಪಚರಿಸಿದ. ಮಲ್ಲಮ್ಮನಿಗೆ ಉಡುಗೊರೆಯನ್ನಿತ್ತು ಅವಳ ರಾಜ್ಯವನ್ನು ಮರಳಿಕೊಟ್ಟ.

ಮುನ್ನೂರು ವರ್ಷಗಳ ಹಿಂದಿನ ಈ ಕನ್ನಡದ ರಾಣಿಯ ಖ್ಯಾತಿ ಅಚ್ಚಳಿಯದೆ ಉಳಿದಿದೆ.

ಬೇಲೂರು, ಹಳೇಬೀಡು


ನೋಡಿ : ಸಂಪುಟ ೫

ಬೇವೂರ್

ನೋಡಿ : ಜಿ. ಎಸ್. ಬೇವೂರ್

ಬೊಕಾರೊ

ಬಿಹಾರ್ ರಾಜ್ಯದ ಬೊಕಾರೋದಲ್ಲಿ ಸಾರ್ವಜನಿಕ ವಲಯದ ನಾಲ್ಕನೆಯ ಉಕ್ಕಿನ ಕಾರಖಾನೆಯಿದೆ. ಇದು ಆರಂಭವಾದದ್ದು



ಬೊಕಾರೊ ಕಾರಖಾನೆಯ ಊದುಕುಲುಮೆ

ಸೋವಿಯೆತ್ ಒಕ್ಕೂಟದ ನೆರವಿನಿಂದ. [illegible] 1965 [illegible] 25ರಂದು ಎರಡೂ ರಾಷ್ಟ್ರಗಳು ಒಪ್ಪಂದ ಮಾಡಿಕೊಂಡವು.

[illegible] ಉಕ್ಕು ಮತ್ತು 8.8 ಲಕ್ಷ ಎರಕ ಯೋಗ್ಯ ಕಬ್ಬಿಣ. ಊದುಕುಲುಮೆಯ ಶಿಲಾನ್ಯಾಸವನ್ನು 1968 ಏಪ್ರಿಲ್ 6ರಂದು ಹಾಕಿದರು.

ಬೊಕಾರೋ ಕಾರಖಾನೆಯ [illegible] 100 ಕೋಟಿ [illegible] ಸೋವಿಯೆತ್ ಸರಕಾರ 167 ಕೋಟಿ ರೂ. ಆರ್ಥಿಕ [illegible].

ಬೊಕಾರೋದ ಜನಸಂಖ್ಯೆ 1,07,159.



ಬೊರೋಬುದೂರ್ ಬೌದ್ಧ ದೇವಾಲಯ

ಬೊರೋಬುದೂರ್

ಪ್ರಪಂಚದಲ್ಲೇ ದೊಡ್ಡದಾದ ಬೌದ್ಧ ಸ್ತೂಪವಿರುವುದು ಈಗಿನ ಇಂಡೊನೇಷ್ಯಕ್ಕೆ ಸೇರಿದ ಜಾವಾ ದ್ವೀಪದಲ್ಲಿ; 'ಬೊರೋಬುದೂರ್'ನಲ್ಲಿ. ಬೊರೋಬುದೂರ್ ಎಂದರೆ 'ಅನೇಕ ಬುದ್ಧರು' ಎಂದರ್ಥ. ಇಲ್ಲಿನ ಸ್ತೂಪದಲ್ಲಿ 436 ಬುದ್ಧ ಪ್ರತಿಮೆಗಳಿವೆ.

ಎಂಟನೆಯ ಶತಮಾನದಲ್ಲಿ ಸುಮಾತ್ರದ ಶೈಲೇಂದ್ರ ರಾಜಮನೆತನದವರು ಜಾವಾ ದ್ವೀಪವನ್ನು ಗೆದ್ದುಕೊಂಡರು. ಬೌದ್ಧಧರ್ಮ ಅಲ್ಲಿನ ರಾಷ್ಟ್ರಧರ್ಮ ಎಂದು ಸಾರಿದರು. ಬೊರೋಬುದೂರಿನ ಭವ್ಯಸ್ತೂಪವನ್ನು ಕಟ್ಟಿಸಿದರು. ಈ ಸ್ತೂಪ ಮಹಾಯಾನ ಪಂಥಕ್ಕೆ ಸೇರಿದ್ದು.

ಈ ಸ್ತೂಪವನ್ನು ಒಂದು ಗುಡ್ಡದ ಮೇಲ್ಭಾಗದಲ್ಲಿ ಒಂದರ ಮೇಲೊಂದರಂತೆ ಹಾಕಿದ ಏಳು ವೇದಿಕೆಗಳಲ್ಲಿ ನಿರ್ಮಿಸಲಾಗಿದೆ. ತಳದ ವೇದಿಕೆ 400 ಚದರ ಅಡಿ ವಿಸ್ತಾರವಾಗಿದೆ. ಮೇಲಿನ ಮೂರು ವೇದಿಕೆಗಳು ವರ್ತುಲಾಕಾರದಲ್ಲಿವೆ. ಇವುಗಳ ಮೇಲೆ 72 ಸ್ತೂಪಗಳಿವೆ. ತುದಿಯಲ್ಲಿರುವ ಕೇಂದ್ರ ಸ್ತೂಪದ ವ್ಯಾಸ 52 ಅಡಿ. ವೇದಿಕೆಗಳ ಪ್ರತಿ ತಿರುವಿನಲ್ಲಿ ಉಂಟಾಗುವ ಮೂಲೆಯಲ್ಲಿ ಬುದ್ಧ ಪ್ರತಿಮೆಗಳಿವೆ. ಈ [illegible] ಬುದ್ಧನ ಜಾತಕಕಥೆಗಳನ್ನು ಉಬ್ಬುಚಿತ್ರದಲ್ಲಿ ನಿರೂಪಿಸಲಾಗಿದೆ.

[illegible] ಒಂದು ಅದ್ಭುತ ಕೃತಿ.

ಬೋಸ್ ಸಂಶೋಧನಾ ಮಂದಿರ

[illegible] ಕಲ್ಪಿಸಿಕೊಡಬೇಕು ಎಂಬ ಆಶಯದಿಂದ ಕಲ್ಕತ್ತೆಯಲ್ಲಿ ಜಗದೀಶಚಂದ್ರ

ಬೋಸ್ 1917ರಲ್ಲಿ ಸ್ಥಾಪಿಸಿದ ಸಂಸ್ಥೆ, ಬೋಸ್ ಸಂಶೋಧನಾ ಮಂದಿರ. ಸಂಸ್ಥೆಯ ಉದ್ಘಾಟನಾ ಸಂದರ್ಭದಲ್ಲಿ ಮಾತನಾಡುತ್ತಾ ಅವರು "ದೇಶವಿದೇಶಗಳಿಂದ ಬಂದವರೆಲ್ಲರಿಗೂ ಸಂಸ್ಥೆಯಲ್ಲಿ ಕೆಲಸ ಮಾಡುವ ಸೌಲಭ್ಯ ದೊರೆಯುತ್ತದೆ. 25 ಶತಮಾನಗಳಿಗೆ ಮೊದಲೇ (ಭಾರತದ) ಪ್ರಾಚೀನ ವಿದ್ಯಾ ಕೇಂದ್ರಗಳಾದ ನಾಲಂದಾ ಮತ್ತು ತಕ್ಷಶಿಲೆಗಳಲ್ಲಿ ಪ್ರಪಂಚದ ಎಲ್ಲೆಡೆಯಿಂದ ಬಂದ ವಿದ್ವಾಂಸರನ್ನು ಆದರಿಸುತ್ತಿದ್ದ ನಮ್ಮ ದೇಶದ ಸಂಪ್ರದಾಯವನ್ನು ಕಾರ್ಯರೂಪಕ್ಕೆ ತರಲು ಪ್ರಯತ್ನಿಸುತ್ತಿದ್ದೇನೆ" ಎಂದರು.

ತಮ್ಮ ಗಳಿಕೆಯಿಂದ ಹಣ ಶೇಖರಿಸಿ, ಒಂದು ಲಕ್ಷ ರೂಪಾಯಿ ಆದ ಮೇಲೆ ಅಷ್ಟಕ್ಕೆ ಸರಕಾರದ ಸೆಕ್ಯೂರಿಟಿ ಪತ್ರಗಳನ್ನು ತೆಗೆದುಕೊಂಡು, ಈ ಸಂಸ್ಥೆಗೆ ಬೋಸ್ ಅವರು ಒಂದು ಶಾಶ್ವತ ನಿಧಿಯುನ್ನು ಸ್ಥಾಪಿಸಿದರು. ಅವರು ಪ್ರಾರಂಭದಿಂದ ತಮ್ಮ ಕೊನೆಗಾಲದ ವರೆಗೆ (1937) ಈ ಸಂಸ್ಥೆಯ ನಿರ್ದೇಶಕರಾಗಿ ತರುಣ ವಿಜ್ಞಾನಿಗಳಿಗೆ ಮಾರ್ಗದರ್ಶನ ನೀಡಿದರು.


ಸಂಶೋಧನೆಗೆ ಬೇಕಾದ ಎಲ್ಲ ಸೌಲಭ್ಯಗಳೂ ಇಲ್ಲಿವೆ. ಪುಸ್ತಕ ಭಂಡಾರವಿದೆ; ವಿದ್ಯಾರ್ಥಿಗಳಿಗಾಗಿ ವಸತಿಸೌಕರ್ಯ ಇದೆ. ಒಂದು ಸಾವಿರ ಜನ ಕೂಡಬಹುದಾದ ದೊಡ್ಡ ಉಪನ್ಯಾಸ ಸಭಾಂಗಣ ಈ ಸಂಸ್ಥೆಯ ಒಂದು ಆಕರ್ಷಣೆ.

ನೋಡಿ : ಬೋಸ್, ಜಗದೀಶ ಚಂದ್ರ—ಸಂಪುಟ ೨

ಬೌದ್ಧಧರ್ಮ


ಪ್ರಪಂಚದ ಪ್ರಮುಖ ಧರ್ಮಗಳಲ್ಲೊಂದು ಬೌದ್ಧ ಧರ್ಮ.– ಈ ಧರ್ಮ ಜಪಾನ್, ವಿಯೆಟ್‌ನಾಮ್, ಕಾಂಬೋಡಿಯಾ, ಲಾವೋಸ್, ಥೈಲೆಂಡ್, ಬರ್ಮ ಮತ್ತು ಶ್ರೀಲಂಕಾ (ಸಿಂಹಳ) ದೇಶಗಳಲ್ಲಿ ಇಂದು ಪ್ರಚಾರದಲ್ಲಿದೆ. ಕೆಲವು ವರ್ಷಗಳ ಹಿಂದೆ ಟಿಬೆಟ್ ಮತ್ತು ಚೀನ ದೇಶಗಳಲ್ಲಿಯೂ ಇದು ಅಲ್ಲಿನವರ ಧರ್ಮವಾಗಿತ್ತು, ಆದರೆ ಅಲ್ಲಿನ ರಾಜಕೀಯ, ಸಾಮಾಜಿಕ, ಮತ್ತು ಆರ್ಥಿಕ ಬದಲಾವಣೆಗಳ ದೆಸೆಯಿಂದ ಬೌದ್ಧಧರ್ಮ ತನ್ನ ಹಿಂದಿನ ಸ್ಥಾನವನ್ನು ಕಳೆದುಕೊಂಡಿದೆ. ಅದರ ತವರು ದೇಶವಾದ ಭಾರತದಲ್ಲಿ ಹೆಚ್ಚು ಪ್ರಚಾರದಲ್ಲಿಲ್ಲದಿದ್ದರೂ, ಅದರ ಪ್ರಭಾವ ನಮ್ಮ ಸಂಸ್ಕೃತಿಯ ಮೇಲೆ ಅಪಾರವಾಗಿದೆ. ಈ ದೇಶದ ವಾಸ್ತುಶಿಲ್ಪ, ಚಿತ್ರಕಲೆ, ಸಾಹಿತ್ಯ ಮತ್ತು ಜನಸಾಮಾನ್ಯರ ನಡತೆಗಳು ಬೌದ್ಧಧರ್ಮದಿಂದ ಸ್ಫೂರ್ತಿ ಪಡೆದಿವೆ. ಸಾಂಚಿಯ ಸ್ತೂಪ, ಅಜಂತಾ ಚಿತ್ರಕಲೆಗಳಿಗೆ ಬೌದ್ಧಧರ್ಮವೇ ಪ್ರೇರಕ. ಅಶ್ವಘೋಷನಂಥ ನಾಟಕಕಾರನಿಗೆ ಬೌದ್ಧಧರ್ಮ ಸ್ಫೂರ್ತಿ ಕೊಟ್ಟಿತು. ನಮ್ಮ ಜನರಲ್ಲಿ ಕಾಣಬಹುದಾದ ವಿನಯ, ಸಂಯಮ, ಮೈತ್ರಿ, ಮತ್ತು ಪರಮತ ಸಹಿಷ್ಣುತೆಗಳು ಬೌದ್ಧಧರ್ಮದಿಂದ ಪುಷ್ಟಿ ಪಡೆದಂಥವು.

ಬುದ್ಧನ ಕೈಗೋಲು, ಭಿಕ್ಷಾಪಾತ್ರೆ ಮತ್ತಿತರ ಪರಿಕರಗಳು



ಇಂದು ಪ್ರಚಾರದಲ್ಲಿರುವ ಬೌದ್ಧಧರ್ಮ ವಿವಿಧ ಬಗೆಯಾಗಿದೆ. ಜಪಾನ್ ದೇಶದಲ್ಲಿರುವುದು ಒಂದು ಬಗೆ. ಅದನ್ನು 'ಸೆನ್‌ಬೌದ್ಧಧರ್ಮ' ಎನ್ನುತ್ತಾರೆ. ಶ್ರೀಲಂಕಾ, ಥೈಲೆಂಡ್ ಮುಂತಾದ ಆಗ್ನೇಯ ಏಷ್ಯಾ ರಾಷ್ಟ್ರಗಳಲ್ಲಿ ಥೇರಾವಾದ ಪ್ರಚಾರದಲ್ಲಿದೆ. ಟಿಬೆಟ್ ಮತ್ತು ಚೀನದೇಶಗಳಲ್ಲಿ ಮಹಾಯಾನ ಪಂಥ ಅತಿ ಪ್ರಭಾವಶಾಲಿಯಾಗಿತ್ತು. ನಮ್ಮ ದೇಶದಲ್ಲಿಯೇ, ಹರ್ಷನ ಕಾಲದಲ್ಲಿ ತಾಂತ್ರಿಕ ಶಾಖೆಯು ಉತ್ತರ ದೇಶದಲ್ಲಿ ಪ್ರಚಾರದಲ್ಲಿತ್ತು.

ಬೌದ್ಧ ಮತದಲ್ಲಿ ವಿವಿಧ ಬಗೆಗಳಿದ್ದರೂ, ಅವೆಲ್ಲಕ್ಕೂ ಆಧಾರ ಬುದ್ಧನ ಬೋಧನೆಯೇ. ಆ ಬೋಧನೆಗಳು ವಿವಿಧ ದೇಶಗಳಿಗೆ, ವಿವಿಧ ಕಾಲಗಳಿಗೆ ತಕ್ಕಂತೆ ಬೇರೆ ಬೇರೆ ರೂಪ ಪಡೆದುವು. ಕೆಲ ಸಂದರ್ಭಗಳಲ್ಲಿ ವಿರೂಪಗೊಂಡದ್ದೂ ಉಂಟು. ಎಲ್ಲ ಶಾಖೆಗಳೂ ನಿಬ್ಬಾಣ (ನಿರ್ವಾಣ) ವನ್ನೇ ಗುರಿಯಾಗಿಟ್ಟುಕೊಂಡಿವೆ. ಈ ಗುರಿಯನ್ನು ಮುಟ್ಟುವ ಉದ್ದೇಶ ಇಲ್ಲಿ ಶಾಂತಿ



ಗಾಂಧಾರ ಶೈಲಿಯ ಬುದ್ಧ



ವಾಯುವ್ಯ ಚೀನದಲ್ಲಿ –8ನೆಯ ಶತಮಾನದ ಬುದ್ಧ ಶಿಲ್ಪ



ಪದ್ಮಪಾಣಿ ಬೋಧಿಸತ್ವ

ಸಮಾಧಾನ ಪಡೆಯುವುದು. ಮುಂದೆ ಮರು ಹುಟ್ಟಿಲ್ಲದಿರುವಂಥ ಸ್ಥಿತಿಯನ್ನು ಪಡೆಯುವುದು.

ನೋಡಿ : ಸಂಪುಟ ೨

ಭಗತ್‌ಸಿಂಗ್

ಭಗತ್‌ಸಿಂಗ್ ಹುಟ್ಟಿದ್ದು 1909 ಸೆಪ್ಟೆಂಬರ್ 28ರಂದು, ಈಗ ಪಾಕಿಸ್ತಾನಕ್ಕೆ ಸೇರಿರುವ ಲೈಲ್‌ಪುರ ಜಿಲ್ಲೆಯ ಬಾಂಗಾದಲ್ಲಿ.

ಕೇವಲ 16ನೆಯ ವರ್ಷದಲ್ಲೇ ಅವರು ಕ್ರಾಂತಿಕಾರಿ ಚಳುವಳಿಯನ್ನು ಸೇರಿದರು. ಅನಂತರ ಭಾರತದ ಇತರ ಕ್ರಾಂತಿಕಾರರ ಸಹಕಾರದಿಂದ ಹಿಂದೂಸ್ಥಾನ್ ಸೋಷಲಿಸ್ಟ್ ರಿಪಬ್ಲಿಕನ್ ಸೇನೆಯನ್ನು ಸ್ಥಾಪಿಸಿದರು. ತಮ್ಮ ಕ್ರಾಂತಿಕಾರ ಚಟುವಟಿಕೆಗಳನ್ನು ಮುಂದುವರಿಸಿ 1928 ಡಿಸೆಂಬರ್ 17ರಂದು ಜೆ.ಪಿ. ಸಾಂಡರ್ಸ್ ಎಂಬ ಬ್ರಿಟಿಷ್ ಅಧಿಕಾರಿಯನ್ನು ಕೊಂದರು. ಅನಂತರ 1929ರಲ್ಲಿ ದೆಹಲಿಯ ಕೇಂದ್ರ ಶಾಸನ ಸಭಾಮಂದಿರದಲ್ಲಿ ಬಾಂಬ್ ಆಸ್ಫೋಟಿಸಿದರು. ಆದರಿಂದ ಯಾರಿಗೂ ಪ್ರಾಣಾಪಾಯವಾಗಲಿಲ್ಲ. ಸರಕಾರಕ್ಕೆ ಎಚ್ಚರಿಕೆ ನೀಡಲೆಂದೇ ಈ ಕೆಲಸವನ್ನು ಮಾಡಲಾಗಿತ್ತು.



ಹುತಾತ್ಮ : ಭಗತ್‌ಸಿಂಗ್

ಈ ಆಸ್ಫೋಟನದ ಸಂಬಂಧದಲ್ಲಿ ಭಗತ್‌ಸಿಂಗರನ್ನೂ ಅವರ ಸಂಗಡಿಗರಾಗಿದ್ದ ರಾಜಗುರು, ಸುಖದೇವರನ್ನೂ ಬಂಧಿಸಿದರು. ವಿಚಾರಣೆ ನಡೆದು ಮರಣದಂಡನೆ ವಿಧಿಸಲಾಯಿತು. 1931 ಮಾರ್ಚ್ 23ರಂದು ಅವರನ್ನು ಲಾಹೋರ್ ಸೆಂಟ್ರಲ್ ಜೈಲಿನಲ್ಲಿ ಗಲ್ಲಿಗೇರಿಸಿದರು. ಭಗತ್‌ಸಿಂಗ್ ಸಂತೋಷಚಿತ್ತರಾಗಿ, ಧೈರ್ಯವಾಗಿ ಮರಣವನ್ನಪ್ಪಿದರು.

ನೋಡಿ : ರಾಜಗುರು ; ಸುಖದೇವ್

ಭಗವಂತಂ

ನೋಡಿ : ಎಸ್. ಭಗವಂತಂ

ಭಗವದ್ಗೀತೆ

ನೋಡಿ : ಸಂಪುಟ ೧

ಭಗವಾನ್ ದಾಸ್

ಒಳ್ಳೆಯ ಭವಿಷ್ಯವಿದ್ದ ಸರಕಾರೀ ಹುದ್ದೆಯನ್ನು ಬಿಟ್ಟು ಸಾರ್ವಜನಿಕ ಸೇವಾಕ್ಷೇತ್ರಕ್ಕೆ ಇಳಿದವರು, ಭಗವಾನ್‌ದಾಸ್.

ಭಗವಾನ್‌ದಾಸರು ಹುಟ್ಟಿದ್ದು ಕಾಶಿಯಲ್ಲಿ, 1869 ಜನವರಿ 12ರಂದು. ಹುಡುಗನಾಗಿದ್ದಾಗಲೇ ತಮ್ಮ ಪ್ರಚಂಡ ಬುದ್ಧಿಶಕ್ತಿಯನ್ನು ತೋರಿದ ಅವರು ಕೇವಲ 17ನೆಯ ವರ್ಷದಲ್ಲೇ ಎಂ. ಎ. ಪರೀಕ್ಷೆಯಲ್ಲಿ ಉತ್ತೀರ್ಣರಾದರು. [illegible] ತಹಶೀಲ್‌ದಾರರಾಗಿ ಸರಕಾರೀ ಉದ್ಯೋಗಕ್ಕೆ ಸೇರಿ ಒಂಬತ್ತು ವರ್ಷಗಳ ಬಳಿಕ ತಮ್ಮ ಕೆಲಸಕ್ಕೆ ರಾಜೀನಾಮೆ ಕೊಟ್ಟರು. 1919-20ರ ಅವಧಿಯಲ್ಲಿ ಸಾರ್ವಜನಿಕ ರಂಗವನ್ನು ಪ್ರವೇಶಿಸಿ ವಿದ್ಯಾಭ್ಯಾಸದ ಸುಧಾರಣೆಗೆ ಶ್ರಮಿಸಿದರು. ಬನಾರಸ ಹಿಂದೂ ವಿಶ್ವವಿದ್ಯಾಲಯ, ಕಾಶಿ ವಿದ್ಯಾಪೀಠಗಳಲ್ಲಿ ಸೇವೆ ಸಲ್ಲಿಸಿದರು.



ಪಾಂಡಿತ್ಯ, ದೇಶಭಕ್ತಿ : ಭಗವಾನ್ ದಾಸ್

ಭಗವಾನ್‌ದಾಸರು ರಾಷ್ಟ್ರೀಯ ಕಾಂಗ್ರೆಸ್ಸನ್ನು ಸೇರಿ ಅದರ ಮುಖ್ಯ ಸದಸ್ಯರಲ್ಲಿ ಒಬ್ಬರೆನಿಸಿದರು. ಅಸಹಕಾರ ಚಳುವಳಿ, ಸವಿನಯ ಕಾಯಿದೆ ಭಂಗಗಳಲ್ಲಿ ಪಾಲುಗೊಂಡರು. ಕೇಂದ್ರ ಶಾಸನ ಸಭೆಯ ಸದಸ್ಯರಾದರು, ಸ್ವತಂತ್ರ ಭಾರತದ ರಾಜ್ಯಾಂಗ ರಚನಾಸಭೆಯ ಸದಸ್ಯರಾದರು. ಅವರು ಉತ್ತಮ ಪಂಡಿತರಾಗಿದ್ದಂತೆ, ಪ್ರಭಾವಶಾಲಿ ವಾಗ್ಮಿಯೂ ಆಗಿದ್ದರು. ಶಾಸನ ಸಭೆಯಲ್ಲಿ, ರಾಜ್ಯಾಂಗ ಸಭೆಯಲ್ಲಿ ಅವರು ಭಾಷಣ ಮಾಡಲಾರಂಭಿಸಿದರೆ, ಸದಸ್ಯರೆಲ್ಲರೂ ಕಿವಿಗೊಟ್ಟು ಕೇಳುತ್ತಿದ್ದರು.

ಧರ್ಮ, ಸಾಹಿತ್ಯ, ಕಲೆಗಳಲ್ಲಿ ಭಗವಾನ್‌ದಾಸರಿಗೆ ಅಪಾರ ಆಸಕ್ತಿ. ಅವರು ಈ ವಿಚಾರಗಳನ್ನು ಕುರಿತು ಆಳವಾಗಿ ಅಧ್ಯಯನ ಮಾಡಿದ್ದರು. 'ಎಲ್ಲ ಧರ್ಮಗಳ ಸಾರಭೂತ ಏಕತೆ', 'ಆಧುನಿಕ ಸಮಸ್ಯೆಗಳಿಗೆ ಪ್ರಾಚೀನ ಪರಿಹಾರಗಳು', 'ಆಧುನಿಕ ಸಮಾಜಗಳ ಸಾಮಾಜಿಕ ಪುನರ್ರಚನೆ' —ಅವರ ಈ ಗ್ರಂಥಗಳು ಅಮೂಲ್ಯ ಅಧ್ಯಯನ ಚಿಂತನೆಗಳ ಫಲ. ಗ್ರಾಮ ಆಧಾರಿತ ಸ್ವಾವಲಂಬನೆ ಇರಬೇಕು. ಬಡವರಿಗೆ ಆರ್ಥಿಕ ನೆರವು, ನ್ಯಾಯ ದೊರೆಯಬೇಕು —ಎಂದು ಅವರು ವಾದಿಸುತ್ತಿದ್ದರು. ಜಾಗತಿಕ ಸರಕಾರ, ಜಾಗತಿಕ ಪೌರತ್ವಗಳಲ್ಲಿ ಅವರಿಗೆ ನಂಬಿಕೆ ಇತ್ತು.

1958ರಲ್ಲಿ ಅವರು ಭಾರತರತ್ನರಾದರು.

ತುಂಬು ಶಿಸ್ತಿನ ಜೀವನ ಭಗವಾನ್‌ದಾಸರದು. ತಮ್ಮ ಪಾಂಡಿತ್ಯ, ದೇಶಭಕ್ತಿ, ಉದಾರತೆಗಳಿಗೆ ಖ್ಯಾತರಾಗಿದ್ದ ಅವರು 90 ವರ್ಷಗಳ ತುಂಬು ಜೀವನ ನಡೆಸಿ 1959ರಲ್ಲಿ ಮೃತರಾದರು.

ಶ್ರೀಪ್ರಕಾಶ, ಭಗವಾನ್‌ದಾಸರ ಪುತ್ರ.

ನೋಡಿ : ಶ್ರೀಪ್ರಕಾಶ

ಭದ್ರಬಾಹು

ಭದ್ರಬಾಹು ಕ್ರಿ. ಪೂ. ನಾಲ್ಕನೆಯ ಶತಮಾನದಲ್ಲಿದ್ದ ಸುಪ್ರಸಿದ್ಧ ಜೈನ ವಿರಾಗಿ.

ಚಂದ್ರಗುಪ್ತ ಮೌರ್ಯನ ಆಳ್ವಿಕೆಯ ಕೊನೆಯ ಭಾಗದಲ್ಲಿ ದಕ್ಷಿಣ ಬಿಹಾರ್ ಪ್ರದೇಶದಲ್ಲಿ ದೊಡ್ಡ ಕ್ಷಾಮ ತಲೆದೋರಿದಾಗ ಭದ್ರಬಾಹುವಿನ ಹಿರಿತನದಲ್ಲಿ ಚಂದ್ರಗುಪ್ತ ಮತ್ತು ಅನೇಕ ಜೈನರು ದಕ್ಷಿಣ ಭಾರತಕ್ಕೆ ಬಂದರು. ಭದ್ರಬಾಹು ಅಲ್ಲಿಗೆ ಬಂದಿದ್ದನೆಂದು ಶ್ರವಣಬೆಳಗೊಳದಲ್ಲಿರುವ ಪ್ರಾಚೀನ ಶಾಸನ ಹೇಳುತ್ತದೆ. ಒಂದು ಗುಹೆ ಅವನ ಹೆಸರಿನಲ್ಲಿ ಇರುವುದು ಚಂದ್ರಗಿರಿ ಬೆಟ್ಟದ ಮೇಲೆ. ಈ ಘಟನೆ ನಡೆದ [illegible] ಅನಂತರ ಬರೆದ ಜೈನಗ್ರಂಥಗಳಲ್ಲೂ ಈ ಬಗೆಗೆ [illegible]

ಭದ್ರಬಾಹು ತನ್ನ ಶಿಷ್ಯರನ್ನು ಜೈನಧರ್ಮ ಪ್ರಚಾರಕ್ಕೆಂದು ದಕ್ಷಿಣ ಭಾರತದ ವಿವಿಧ ಭಾಗಗಳಿಗೆ ಕಳುಹಿಸಿದ. ಶ್ರವಣಬೆಳಗೊಳದಲ್ಲೇ ತನ್ನ ಬಾಳಿನ ಕೊನೆಯನ್ನು ಕಂಡ.

ಮಹಾವೀರ ಬೋಧಿಸಿದ ಪವಿತ್ರ ಸಾಹಿತ್ಯ ಬಾಯಿಯಿಂದ ಬಾಯಿಗೆ ಮುಂದುವರಿದುಕೊಂಡುಬರುತ್ತಿದ್ದು. ಅದನ್ನು ಪರಿಷ್ಕಾರವಾಗಿ ತಿಳಿದಿದ್ದವರಲ್ಲಿ ಭದ್ರಬಾಹುವೇ ಕೊನೆಯವನು –ಎಂಬ ನಂಬಿಕೆ ಇದೆ.

ಭದ್ರಾಚಲಂ


ಆಂಧ್ರ ಪ್ರದೇಶದಲ್ಲಿ ಗೋದಾವರಿ ನದಿಯ ತೀರದಲ್ಲಿ ಭದ್ರಾಚಲಂ ಇದೆ. ಇಲ್ಲಿ ಶ್ರೀರಾಮನ ದೊಡ್ಡ ದೇವಾಲಯವಿದೆ.

ಭದ್ರಾಚಲಂ 16-17ನೆಯ ಶತಮಾನದಲ್ಲಿ ಗೋಲ್ಕೊಂಡ ಸಂಸ್ಥಾನಕ್ಕೆ ಸೇರಿತ್ತು. ಪೋಕಲ ದಮ್ಮಕ್ಕ ಎಂಬಾಕೆ ಈ ಊರ ಹೊರಗೆ ಶ್ರೀ ರಾಮ, ಸೀತೆ ಮತ್ತು ಲಕ್ಷ್ಮಣರ ವಿಗ್ರಹಗಳನ್ನು ಕಂಡಳು. ಒಂದು ದೇವಸ್ಥಾನವನ್ನು ಕಟ್ಟಿಸಿ ವಿಗ್ರಹಗಳನ್ನು ಪ್ರತಿಷ್ಠಾಪಿಸಬಯಸಿದಳು; ಭದ್ರಾಚಲವಿನ ಕಂದಾಯ ವಸೂಲಿ ಅಧಿಕಾರಿ ಕಂಚೆರ್ಲ ಗೋಪನ್ನನಲ್ಲಿ ಸಹಾಯ ಯಾಚಿಸಿದಳು. ನವಾಬನ ಒಪ್ಪಿಗೆಯಿಲ್ಲದೆ ಗೋಪನ್ನ ಕಂದಾಯದ ಹಣವನ್ನು ಉಪಯೋಗಿಸಿ ದೇವಸ್ಥಾನವನ್ನು ಕಟ್ಟಿಸಿದ. ಆದರೆ ಇದು ಸರಕಾರೀ ಹಣದ ದುರುಪಯೋಗವೆಂದು ಭಾವಿಸಿ ನವಾಬ ಅವನನ್ನು ಸೆರೆಯಲ್ಲಿಟ್ಟ. ಕಾರಾಗೃಹವಾಸದ ಕಾಲದಲ್ಲಿ ಗೋಪನ್ನ ಶ್ರೀರಾಮನನ್ನು ಪ್ರಾರ್ಥಿಸುವುದರಲ್ಲಿ ಮಗ್ನನಾದ. ಶ್ರೀರಾಮ ಲಕ್ಷ್ಮಣರು ವ್ಯಾಪಾರಿಗಳ ವೇಷದಲ್ಲಿ ಬಂದು, ಗೋಪನ್ನನು ದೇವಾಲಯ ರಚನೆಗಾಗಿ ಉಪಯೋಗಿಸಿದ್ದ ಹಣವನ್ನು ನವಾಬನಿಗೆ ಸಲ್ಲಿಸಿ, ಅವನನ್ನು ಸೆರೆಯಿಂದ ಬಿಡಿಸಿದರು.

—ಇದು, ಭದ್ರಾಚಲ ರಾಮದಾಸನೆಂದು ಖ್ಯಾತನಾದ ಗೋಪನ್ನನನ್ನು ಕುರಿತ ಕಥೆ. ಈತನು ರಚಿಸಿದ ಅನೇಕ ಗೀತೆಗಳು ಇಂದಿಗೂ ಜನಪ್ರಿಯವಾಗಿವೆ.

ಶ್ರೀರಾಮ ದೇವಾಲಯದ ಕಲ್ಯಾಣ ಮಂಟಪದಲ್ಲಿ ಚಿತ್ರ ಮಾಲಿಕೆ





ಶ್ರೀರಾಮ ದೇವಾಲಯ

ಪ್ರತಿ ವರ್ಷ ರಾಮನವಮಿಯ ದಿನ ಇಲ್ಲಿ ದೊಡ್ಡ ಜಾತ್ರೆ ನಡೆಯುತ್ತ
ಈ ಸಂದರ್ಭದಲ್ಲಿ ಕೆಲವು ವಾರಗಳ ವರೆಗೆ ಸಾಂಸ್ಕೃತಿಕ ಕಾರ್ಯಕ್ರಮಗ
ಇರುತ್ತವೆ.

ಭದ್ರಾವತಿ

ಭದ್ರಾ ನದಿಯ ದಡದಲ್ಲಿದ್ದ ಬೆಂಕಿಪುರ 1918ರಲ್ಲಿ ಸುಮಾರು 3,0
ಜನಸಂಖ್ಯೆಯ ಪುಟ್ಟ ಊರಾಗಿತ್ತು. ಐವತ್ತು ವರ್ಷಗಳ ಅವಧಿಯ
ಇದು 71,000 ಜನರಿಂದ ತುಂಬಿ ತುಳುಕುವ ನಗರವಾಯಿತು.



'ಬೆಂಕಿಪುರ'ದ ಕಬ್ಬಿಣ ಮತ್ತು ಉಕ್ಕಿನ ಕಾರಖಾನೆ

ಹೊತ್ತಿಗೆ ಊರಿನ ಹೆಸರು ಭದ್ರಾವತಿ ಎಂದು ಬದಲಾಗಿತ್ತು. ಭಾರತ
ಪ್ರಮುಖ ಕೈಗಾರಿಕಾ ನಗರಗಳಲ್ಲಿ ಒಂದು, ಭದ್ರಾವತಿ. ಇದು ಶಿವಮೊ
ಜಿಲ್ಲೆಯಲ್ಲಿದೆ.

ಭದ್ರಾವತಿಯಲ್ಲಿ ಕಬ್ಬಿಣ ಮತ್ತು ಉಕ್ಕಿನ ಉದ್ಯಮ ಆರಂಭವಾಗಲ
ಕಾರಣರಾದವರು ವಿಶ್ವೇಶ್ವರಯ್ಯನವರು. ಇಲ್ಲಿ ಸ್ಥಾಪಿತವಾದ ಕಾ
ಖಾನೆಯ ಹೆಸರು ಮೈಸೂರು ಕಬ್ಬಿಣ ಮತ್ತು ಉಕ್ಕಿನ ಕಾರಖಾನೆ; ಇದ
ಕಾರ್ಯಾರಂಭ ಮಾಡಿದ್ದು 1922ರಲ್ಲಿ. ಕ್ರಮೇಣ ಇಲ್ಲಿ ಸಿಮೆಂಟ
ಮತ್ತು ಕಾಗದದ ಕಾರಖಾನೆಗಳೂ ನಿರ್ಮಿತವಾದುವು.

ಆಸ್ಟ್ರಿಯಾ ಮತ್ತು ಪಶ್ಚಿಮ ಜರ್ಮನಿಗಳ ಸಹಕಾರದಿಂದ ಭದ್ರಾವತಿಯಲ್ಲಿರುವ ಉಕ್ಕಿನ ಕಾರಖಾನೆ ಆಧುನಿಕ ಸಲಕರಣೆಗಳನ್ನು ಪಡೆದು ವಿಶೇಷ ರೀತಿಯ ಉಕ್ಕು ತಯಾರಿಸುತ್ತಿದೆ.

ಭರತ

ನಮ್ಮ ರಾಷ್ಟ್ರ ಭಾರತ. 'ಭಾರತ' ಎಂಬ ಮಾತು ಭರತ ಎಂಬ ಶಬ್ದದಿಂದ ರೂಪುಗೊಂಡದ್ದು.

ಭಾರತೀಯ ಸಾಹಿತ್ಯದಲ್ಲಿ ಹಲವಾರು ಮಂದಿ ಭರತರ ಉಲ್ಲೇಖವಿದೆ.

ಇವರಲ್ಲಿ ಒಬ್ಬ ದುಷ್ಯಂತ-ಶಕುಂತಲೆಯರ ಮಗ. ಇವನು ಮಹಾ ಪರಾಕ್ರಮಿ. ಬಾಲಕನಾಗಿದ್ದಾಗಲೇ ಸಿಂಹದ ಮರಿಯೊಡನೆ ಆಟವಾಡಿದವನು.

ದಶರಥನ ಮಗನಾದ ಭರತ ಇನ್ನೊಬ್ಬ. 'ನಾಟ್ಯಶಾಸ್ತ್ರ'ವನ್ನು ಬರೆದ ಮುನಿಯ ಹೆಸರೂ ಭರತ.

ಜೈನ ಪುರಾಣಗಳಲ್ಲಿ ಋಷಭದೇವನ ಮಗನಾದ ಭರತನ ಉಲ್ಲೇಖವಿದೆ. ಇವನು ಬಾಹುಬಲಿಯ ಸಹೋದರ.

ವೇದ ಯುಗದಲ್ಲಿ ಭರತರು ಎಂಬ ಯುದ್ಧಪ್ರಿಯ ಜನಾಂಗದವರಿದ್ದರು. ಇವರಿಂದ ದೇಶಕ್ಕೆ ಭಾರತ ಎಂಬ ಹೆಸರು ಬಂದಿತು ಎಂಬ ವಾದವೂ ಇದೆ.

ಭರತನ ನಾಟ್ಯಶಾಸ್ತ್ರ

ನೋಡಿ : ಸಂಪುಟ ೫

ಭರತ ನಾಟ್ಯ

ದಕ್ಷಿಣ ಭಾರತದಲ್ಲಿ ತುಂಬ ಪ್ರಚಾರದಲ್ಲಿರುವ ನಾಟ್ಯ ಪ್ರಕಾರ —ಭರತನಾಟ್ಯ.

ಭರತನಾಟ್ಯದ ಹೆಸರಿನ ಬಗೆಗೆ ಎರಡು ವಿವರಣೆಗಳಿವೆ. ಈ ನಾಟ್ಯ ಪ್ರಕಾರ ವಿಶೇಷವಾಗಿ ಭರತನ 'ನಾಟ್ಯಶಾಸ್ತ್ರ'ದ ನಿಯಮಗಳನ್ನನುಸರಿಸುವುದರಿಂದ ಅದಕ್ಕೆ ಈ ಹೆಸರು ಬಂದಿತು —ಎಂಬುದು ಒಂದು. ಈ ನೃತ್ಯ ಪ್ರಕಾರದಲ್ಲಿ 'ಭರತ'ಗಳಿಗೆ —ಭಾವ, ರಾಗ, ತಾಳಗಳಿಗೆ— ಪ್ರಾಧಾನ್ಯ ಇರುವುದರಿಂದ ಇದು ಭರತ ನಾಟ್ಯವಾಯಿತು—ಎಂಬುದು ಇನ್ನೊಂದು.

ಇದೇನೇ ಇರಲಿ, ಭರತನಾಟ್ಯ ಬಹು ಹಿಂದಿನ ಕಾಲದಿಂದ ಪ್ರದರ್ಶಿಸಲ್ಪಡುತ್ತಿತ್ತು ಎಂಬುದಕ್ಕೆ ಪ್ರಾಚೀನ ಕಾವ್ಯ ಮತ್ತು ಶಾಸನಗಳಲ್ಲಿ ಆಧಾರಗಳಿವೆ. ಒಂದು ಕಾಲಕ್ಕೆ ಇದು ದೇವಾಲಯಗಳಲ್ಲಿ ನಡೆಯುತ್ತಿತ್ತು. ದೇವದಾಸಿಯರು ಇದನ್ನು ನಡೆಸಿಕೊಡುತ್ತಿದ್ದರು. ಇದು ದೇವತಾರಾಧನೆಯ ಒಂದು ಅಂಗವಾಗಿತ್ತು. ಕ್ರಮೇಣ ಈ ಕಲೆಗೆ ಸಮಾಜದ ಗೌರವ ತಪ್ಪಿತು. ಹೀಗೆ ಮೂಲೆಗುಂಪಾಗಿದ್ದ ಭರತನಾಟ್ಯವನ್ನು ಪುನರುಜ್ಜೀವನಗೊಳಿಸುವ ಕಾರ್ಯ ಈ ಶತಮಾನದ ಎರಡು ಮೂರನೆಯ ದಶಕಗಳಲ್ಲಿ ಆರಂಭವಾಯಿತು.

ಭರತನಾಟ್ಯವನ್ನು ಕಲಿಸುವವರನ್ನು ನಟುವನಾಂಗದವರು ಎಂದು ಕರೆಯುತ್ತಾರೆ. ಭರತನಾಟ್ಯ ಶೈಲಿಯನ್ನನುಸರಿಸಿ ನೃತ್ಯ ನಾಟಕಗಳನ್ನು [illegible] ಪ್ರದರ್ಶಿಸುತ್ತಾರಾದರೂ [illegible] ನೃತ್ಯವೇ ಹೆಚ್ಚು.



ಪ್ರಾಚೀನ ನಾಟ್ಯ ಪ್ರಕಾರ

ಈಗ ಆಚರಣೆಯಲ್ಲಿರುವ ಭರತನಾಟ್ಯ ಪ್ರದರ್ಶನದ ಅಚ್ಚುಕಟ್ಟು ಸುಮಾರು ಒಂದು ಶತಮಾನದ ಹಿಂದೆ ರೂಪುಗೊಂಡದ್ದು. ಇದು ಅಲರಿಪ್ಪು ಎಂಬ [illegible] ನೃತ್ಯದಿಂದ ಆರಂಭವಾಗಿ, ಕ್ರಮಕ್ರಮವಾಗಿ ಪುಷ್ಟಿಗೊಂಡು ಭರತನಾಟ್ಯದ ಶಕ್ತಿ, ಸೌಂದರ್ಯಗಳನ್ನು ಬೆಳೆಸುತ್ತ ಹೋಗಿ, ಪ್ರೇಕ್ಷಕರಿಗೆ [illegible]. ಅಲರಿಪ್ಪು [illegible] ಜತಿಸ್ವರ, ಶಬ್ದ, ವರ್ಣ, ಪದಾಭಿನಯ, ತಿಲ್ಲಾನ ಇವನ್ನು ಪ್ರದರ್ಶಿಸುವುದು ಪದ್ಧತಿ.

ನೋಡಿ : ಇಂದ್ರಾಣಿ ರೆಹಮಾನ್; ಬಾಲಸರಸ್ವತಿ ; ರುಕ್ಮಿಣಿ ಅರುಂಡೇಲ್
ಜಟ್ಟಿತಾಯಮ್ಮ—ಸಂಪುಟ ೫ ;

ಭರತಮುನಿ

ನಾಟ್ಯ, ನಾಟಕ, ಸಂಗೀತ ಕಲೆಗಳ ವಿಶ್ವಕೋಶದಂತಿರುವ 'ನಾಟ್ಯಶಾಸ್ತ್ರ'ವನ್ನು ರಚಿಸಿದವನು ಭರತ. ಕ್ರಿ. ಪೂ. [illegible] ಶತಮಾನದ ಅವಧಿಯಲ್ಲಿ 'ನಾಟ್ಯಶಾಸ್ತ್ರ' ರಚಿತವಾಗಿರಬೇಕೆಂದು ವಿದ್ವಾಂಸರ ಅಭಿಪ್ರಾಯ. ಭರತನನ್ನು ಗೌರವದಿಂದ ಭರತಮುನಿ ಎಂದು ಕರೆಯುತ್ತಾರೆ.

ಭರತಮುನಿ ಕಾಲ್ಪನಿಕ ವ್ಯಕ್ತಿ ಎಂದು ಹೇಳುವವರೂ ಇದ್ದಾರೆ. [illegible] 'ನಾಟ್ಯಶಾಸ್ತ್ರ'ವನ್ನು [illegible]. 'ನಾಟ್ಯಶಾಸ್ತ್ರ' [illegible] ಎಂದು 'ನಾಟ್ಯಶಾಸ್ತ್ರ'ದಿಂದ ವ್ಯಕ್ತವಾಗುತ್ತದೆ.

[illegible]

ನೋಡಿ : ಭರತನ 'ನಾಟ್ಯಶಾಸ್ತ್ರ'—ಸಂಪುಟ ೫

ಭವಭೂತಿ

ನೋಡಿ : ಸಂಪುಟ ೫

ಭಾಂಗ್ರಾ

[illegible] ನಿಂತು ಕಾಲುಗಳನ್ನು ನೆಲಕ್ಕೆ ಬಡಿಯುತ್ತ, ಕೈಯನ್ನು ತಟ್ಟುತ್ತ,




ಭಾಂಗ್ರಾ —ಗಂಡಸರಿಗೆ ಮೀಸಲು

ಕುಣಿಯುವ ನೃತ್ಯ ಇದು. ನೃತ್ಯ ಆರಂಭವಾಗಿ ಸ್ವಲ್ಪ ಹೊತ್ತು ಆದ ಮೇಲೆ ನರ್ತಕರು ಥಟ್ಟನೆ ನಿಲ್ಲುತ್ತಾರೆ. ಪಂಜಾಬಿನ ಜಾನಪದ ಗೀತೆಗಳಾದ ' ಡೋಲಾ ' ಅಥವಾ ' ಬೋಲಿ 'ಯನ್ನು ಲಯಬದ್ಧವಾಗಿ ಹಾಡುತ್ತಾರೆ. ಅನಂತರ ಮತ್ತೆ ನರ್ತನ ನಡೆಯುತ್ತದೆ.

ಈ ನೃತ್ಯದಲ್ಲಿ ಭಾಗವಹಿಸುವವರು ಗಂಡಸರು ಮಾತ್ರ. ನೃತ್ಯ ಕಾರ್ಯಕ್ರಮ ಆರಂಭವಾದ ಮೇಲೂ ಹೊಸ ಹೊಸ ನರ್ತಕರು ಬಂದು ಸೇರುತ್ತಲೇ ಇರುತ್ತಾರೆ. ಎಷ್ಟು ಜನರು ಬೇಕಾದರೂ ಇದರಲ್ಲಿ ಭಾಗವಹಿಸಬಹುದು. ನರ್ತಕರ ಸಂಖ್ಯೆ ಹೆಚ್ಚಾದಂತೆ ವೃತ್ತ ದೊಡ್ಡದಾಗುತ್ತ ಹೋಗುತ್ತದೆ. ವೃತ್ತದ ಕೇಂದ್ರದಲ್ಲಿ ಡೋಲಕ್ ಬಾರಿಸುವ ವ್ಯಕ್ತಿ ಇರುತ್ತಾನೆ. ಈತನ ಹಿಂಭಾಗದಲ್ಲಿ ನಿಲ್ಲುವ ಇಬ್ಬರು ಅಥವಾ ಮೂವರು ನರ್ತನದ ಚಲನವಲನದ ಬಗೆಗೆ ಇತರರಿಗೆಸೂಚನೆ ಕೊಡುತ್ತಾರೆ. ಭಾಂಗ್ರಾ ಯಾವ ನಿರ್ದಿಷ್ಟ ನಿಯಮಗಳಿಗೂ ಒಳಗಾದ ನೃತ್ಯವಲ್ಲ. ಅದು ನರ್ತಕರ ಉತ್ಸಾಹ, ಸ್ಫೂರ್ತಿಗಳನ್ನು ಅವಲಂಬಿಸಿದ್ದು. ಆದರೆ, ತಾಳ ತಪ್ಪದಂತೆ ನರ್ತನ ಸಾಗುತ್ತದೆ. ಉತ್ಸಾಹವೇರಿದಂತೆ ನರ್ತನದ ಗತಿ ತೀವ್ರವಾಗುತ್ತದೆ. ಆಕರ್ಷಕ ಬಣ್ಣದ ಪೇಟಾ, ಕಡುಬಣ್ಣದ ಲುಂಗಿ, ಬಿಳಿಯ ನಿಲುವಂಗಿ ಅದರ ಮೇಲೆ ಮಿರುಗುವ ಗುಂಡಿಗಳಿರುವ ಕಪ್ಪುಬಣ್ಣದ ಸೊಂಟ ಮಟ್ಟದ ತುಂಡು ಅಂಗಿ —ಇವು ಭಾಂಗ್ರಾ ನರ್ತಕರ ವೇಷಭೂಷಣ.

ಭಾಕ್ರಾ ನಂಗಲ್

ಏಷ್ಯದಲ್ಲೇ ಅತ್ಯಂತ ದೊಡ್ಡ ವಿವಿಧೋದ್ದೇಶ ನದೀಕಣಿವೆ ಯೋಜನೆ ಭಾಕ್ರಾ ನಂಗಲ್. ಇದರಿಂದ ಪಂಜಾಬ್, ಹರ್‍ಯಾಣ ರಾಜ್ಯಗಳಲ್ಲಿ





ನಂಗಲ್ ಅಣೆಕಟ್ಟು

ನೀರಾವರಿಗೆ ಸಹಾಯವಾಗುತ್ತದೆ; ಪಂಜಾಬ್, ಹರ್‍ಯಾಣ, ರಾಜಸ್ಥಾ ಹಿಮಾಚಲ ಪ್ರದೇಶ, ಜಮ್ಮು ಮತ್ತು ಕಾಶ್ಮೀರ ಹಾಗೂ ದೆಹಲಿಗೆ ವಿದ್ಯುತ್ತು ಒದಗುತ್ತದೆ. ವಿದ್ಯುದುತ್ಪಾದನೆ 12.04.000 ಕಿಲೊವಾ ಗಳಷ್ಟು.

ಪಂಜಾಬಿನಲ್ಲಿರುವ ಭಾಕ್ರಾ ನಂಗಲ್ ಯೋಜನೆಯ ಅಂಗವಾಗಿ ಭಾಕ್ ಎಂಬಲ್ಲಿ ಸಟ್ಲೆಜ್ ನದಿಗೆ ಅಡ್ಡವಾಗಿ 226 ಮೀಟರ್ ಎತ್ತರದ ಒಂ ಅಣೆಕಟ್ಟು ಹಾಗೂ ಅಲ್ಲಿಂದ ಸುಮಾರು 13 ಕಿ. ಮೀ. ದೂರದಲ್ಲಿ ಮೀಟರ್ ಎತ್ತರದ ನಂಗಲ್ ಅಣೆಕಟ್ಟು ಇವೆ. ಭಾಕ್ರಾದಲ್ಲಿ ಇರುವ ಅ ಕಟ್ಟಿನ ಸ್ಥಳದಲ್ಲಿ ಎರಡು ವಿದ್ಯುದುತ್ಪಾದನಾ ಕೇಂದ್ರಗಳಿವೆ. ಇವುಗಳಲ್ಲಿ 1.104 ಕಿ. ಮೀ. ಉದ್ದದ ರಾಯಕಾಲುವೆಗಳೂ 3.360 ಕಿ. ಮೀ. ಗಿ ಉದ್ದವಾದ ನೀರಾವರಿ ಕಾಲುವೆಗಳೂ ಇವೆ. ಈ ಯೋಜನೆಯಿಂ ಒಟ್ಟು 36 ಲಕ್ಷ ಎಕರೆ ಭೂಮಿಗೆ ನೀರಾವರಿ ಒದಗುತ್ತದೆ.

ಭಾಗವತ

ನೋಡಿ ಸಂಪುಟ ೫

ಭಾತ್‌ಖಂಡೆ

ನೋಡಿ : ಸಂಪುಟ ೫

ಭಾಭಾ ಪರಮಾಣು ಸಂಶೋಧನಾ ಕೇಂದ

ಶಾಂತಿಯುತ ಬಳಕೆಗಾಗಿ ಪರಮಾಣು ಶಕ್ತಿಯ ಬಗೆಗೆ ಸಂಶೋ ನಡೆಸಲು ಹಾಗೂ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು ಪರಮಾ ಸಂಶೋಧನಾ ಕೇಂದ್ರವನ್ನು 1957ರಲ್ಲಿ ಸ್ಥಾಪಿಸಲಾಯಿತು.

ಈ ಕೇಂದ್ರದಲ್ಲಿ ಆರು ಮುಖ್ಯ ವಿಭಾಗಗಳಿವೆ: ಭೌತವಿಜ್ಞಾ ಎಂಜಿನಿಯರಿಂಗ್, ಎಲೆಕ್ಟ್ರಾನಿಕ್ಸ್, ಲೋಹವಿಜ್ಞಾನ, ಜೀವವೈದ್ಯಕೀ ಮತ್ತು ಆಡಳಿತ. ಪ್ರತಿ ವಿಭಾಗವನ್ನು ನೋಡಿಕೊಳ್ಳಲು ಒಬ್ಬ ನಿರ್ದೇ ರಿದ್ದಾರೆ. ಪ್ರತಿ ವಿಭಾಗದಲ್ಲೂ ಮೂರು ಅಥವಾ ಹೆಚ್ಚು ಉ ವಿಭಾಗಗಳಿವೆ. ವಿಕಿರಣದಿಂದ ರಕ್ಷಣೆ ಹೊಂದುವ ವಿಷಯಗಳಿಗಾ ಪ್ರತ್ಯೇಕ ನಿರ್ದೇಶನಾಲಯವಿದೆ.


ಪ್ರತಿ ವರ್ಷ ಸುಮಾರು 150 ವಿಜ್ಞಾನ ಮತ್ತು ಎಂಜಿನಿಯರಿಂಗ್ ಪದವೀಧರರನ್ನು ತರಬೇತಿಗಾಗಿ ಸೇರಿಸಿಕೊಳ್ಳುತ್ತಾರೆ. ಒಂದು ವರ್ಷ

ಭಾಕ್ರಾ ಅಣೆಕಟ್ಟಿನಲ್ಲಿ
ವಿದ್ಯುತ್ ಉತ್ಪಾದನೆ



ವಿವಿಧತೆಯಲ್ಲಿ
ಏಕತ್ವ

ಅಸ್ಸಾಂ ಉತ್ತರ ಪ್ರದೇಶ ಪಂಜಾಬ್
ಕೇರಳ ರಾಜಸ್ಥಾನ ಹಿಮಾಚಲ ಪ್ರದೇಶ
ಮಹಾರಾಷ್ಟ್ರ ಕುಲು ಕಣಿವೆ ಮಧ್ಯಪ್ರದೇಶ



ಭಾರತ–ಕೆನಡ ರಿಯಾಕ್ಟರ್

ಕಟ್ಟುನಿಟ್ಟು ತರಬೇತಿಯ ಅನಂತರ ಕೆಲಸ ಮಾಡಲು ನಿಯಮಿಸುತ್ತಾರೆ.

ಇಲ್ಲಿ ನಾಲ್ಕು ಪರಮಾಣು ರಿಯಾಕ್ಟರುಗಳಿವೆ.

'ಅಪ್ಸರಾ' ಎಂಬ ಸರೋವರ ಮಾದರಿ ರಿಯಾಕ್ಟರ್ 1956ರಲ್ಲಿ ಪೂರ್ಣವಾಯಿತು. 1961ರಲ್ಲಿ 'ಜರ್‌ಲಿನಾ' ರಿಯಾಕ್ಟರ್ ಸಿದ್ಧವಾಯಿತು. 1963ರಲ್ಲಿ ಪೂರ್ಣಗೊಂಡ ಭಾರತ ಕೆನಡ ರಿಯಾಕ್ಟರ್ 'ಸೈರಸ್'. ಇದು ಜಗತ್ತಿನ ಅತಿ ದೊಡ್ಡ ಪ್ರಾಯೋಗಿಕ ರಿಯಾಕ್ಟರುಗಳಲ್ಲೊಂದು. 1961ರಲ್ಲಿ 'ಝೀರ್ಲಿನಾ' ರಿಯಾಕ್ಟರನ್ನು ಪೂರ್ಣವಾಗಿ ಭಾರತೀಯ ಎಂಜಿನಿಯರರೂ ವಿಜ್ಞಾನಿಗಳೂ ಕಟ್ಟಿದರು. ಇವಲ್ಲವೂ ಮುಖ್ಯವಾಗಿ ಸಂಶೋಧನಾ ರಿಯಾಕ್ಟರುಗಳು. ಅಪ್ಸರಾ ಮತ್ತು ಸೈರಸ್ ರೇಡಿಯೋ ಐಸೊಟೋಪ್‌ಗಳನ್ನೂ ತಯಾರಿಸುತ್ತವೆ. ಈ ರಿಯಾಕ್ಟರುಗಳ ಅಗತ್ಯ ಪೂರೈಸಲು ಥೋರಿಯಂ, ಯುರೇನಿಯಂ, ಪ್ಲುಟೋನಿಯಂ ಇಂಧನ ತಯಾರಿಕೆಗಳ ಸ್ಥಾವರಗಳಿವೆ. ವೇಗೋತ್ಕರ್ಷಕವೂ ಅನೇಕ ಪ್ರಯೋಗಾಲಯ ಕರ್ಮಾಗಾರಗಳೂ ಇವೆ. 1966ರಿಂದ ಸಂಸ್ಥೆಯನ್ನು ವಿಮಾನ ಅಪಘಾತದಲ್ಲಿ ಮಡಿದ ನಿರ್ದೇಶಕ ಹೋಮಿ ಜೆ. ಭಾಭಾ ಅವರ ಹೆಸರಿನಿಂದ ಕರೆಯಂತೊಡಗಿದರು.

ಟ್ರಾಂಬೆಯಲ್ಲಿರುವ ಈ ಕೇಂದ್ರದಲ್ಲಿ 350 ಬೇರೆ ಬೇರೆ ರೀತಿಯ ಏಕರೂಪಿ ಶೀಲ ವಸ್ತುಗಳು ತಯಾರಾಗುತ್ತಿವೆ. ಇವು ವಿದೇಶಗಳಿಗೂ ರಫ್ತಾಗುತ್ತವೆ.

ಭಾಯಿ ಪರಮಾನಂದ

ಭಾಯಿ ಪರಮಾನಂದರು ಹಿರಿಯ ಕ್ರಾಂತಿಕಾರಿಯೂ ಹಿಂದೂ ಮಹಾಸಭೆಯ ಮುಂದಾಳುವೂ ಆಗಿದ್ದರು.

ಜನನ 1874ರಲ್ಲಿ. ಪಂಜಾಬ್ ವಿಶ್ವವಿದ್ಯಾಲಯದಲ್ಲಿ ಎಂ. ಎ. ಪದವೀಧರರಾದರು. ಡಿ. ಎ. ವಿ. (ದಯಾನಂದ ಆಂಗ್ಲೋ–ವೇದಿಕ್) ಕಾಲೇಜಿನಲ್ಲಿ ಪ್ರಾಧ್ಯಾಪಕರಾದರು : ಆರ್ಯಸಮಾಜ ಸೇರಿದರು.

ವೈದಿಕಧರ್ಮದ ಪ್ರಚಾರ ಮಾಡಲು ಆಫ್ರಿಕಕ್ಕೆ ತೆರಳಿದಾಗ ಅಲ್ಲಿ ಭಾರತೀಯ ಕ್ರಾಂತಿಕಾರರೊಡನೆ ಸೇರಿ ಕೆಲಸ ಮಾಡಿದರು. ಪೋಲೀಸರ ಕಣ್ಣುಬಿತ್ತು. ಅಲ್ಲಿಂದ ಭಾಯಿ ಪರಮಾನಂದರು ದಕ್ಷಿಣ ಅಮೆರಿಕಕ್ಕೆ ಹೋದರು. ಅಲ್ಲಿ ಕ್ರಾಂತಿಕಾರರ ಗುಂಪಿನೊಡನೆ ಸೇರಿಕೊಂಡರು.

ಸ್ವಲ್ಪಕಾಲಾನಂತರ ಭಾರತಕ್ಕೆ ಹಿಂದಿರುಗಿದಾಗ ಗದರ್ ಪಕ್ಷದ ಇತರ ಸದಸ್ಯರೊಡನೆ ಇವರೂ ಬಂಧಿತರಾದರು ; ನ್ಯಾಯಾಲಯದಲ್ಲಿ ವಿಚಾರಣೆ ನಡೆದು, ಮರಣದಂಡನೆ ವಿಧಿಸಲಾಯಿತು. ಅನಂತರ ಅದು ಆಜೀವ ಕಾರಾಗೃಹವಾಸಕ್ಕೆ ಇಳಿಯಿತು. 1915ರಲ್ಲಿ ಪರಮಾನಂದರನ್ನು ಅಂಡಮಾನಿಗೆ ಕಳುಹಿಸಲಾಯಿತು. ಅಲ್ಲಿ 1929ರಲ್ಲಿ ಇವರು ಆಮರಣಾಂತ ಉಪವಾಸ ಪ್ರಾರಂಭಿಸಿದಾಗ, ಇವರ ಬಿಡುಗಡೆ ಆಯಿತು.

ಲಂಡನಿನಲ್ಲಿ ನಡೆದ ದುಂಡು ಮೇಜಿನ ಪರಿಷತ್ತಿನಲ್ಲಿ ಭಾಗವಹಿಸಿದರು. 1933ರಲ್ಲಿ ಹಿಂದೂ ಮಹಾಸಭೆಯ ಅಧ್ಯಕ್ಷರಾದರು. ಇವರು 'ಭಾರತದ ಇತಿಹಾಸ', 'ನನ್ನ ಜೀವನ ಕಥೆ' ಮೊದಲಾದ ಗ್ರಂಥಗಳನ್ನು ಬರೆದಿದ್ದಾರೆ.

1948ರಲ್ಲಿ ಭಾಯಿ ಪರಮಾನಂದರು ನಿಧನರಾದರು.

ಭಾರತ

ನೋಡಿ : ವಿಶ್ವ–ಭಾರತ ಪುಟ ೫–೨೨ ; ಭಾರತ ದರ್ಶನ ಪುಟ ೨೩-೫೬

ಭಾರತ್ ಅರ್ತ್ ಮೂವರ್ಸ್ ಲಿಮಿಟೆಡ್

ಭಾರತ್ ಅರ್ತ್ ಮೂವರ್ಸ್ ಲಿಮಿಟೆಡ್ (ಬಿ. ಇ. ಎಂ. ಎಲ್.) ಮೃಚ್ಚಾಲಕಗಳನ್ನೂ ರೈಲ್ವೆ ಡಬ್ಬಿಗಳನ್ನೂ ತಯಾರಿಸುತ್ತದೆ. 1964ರಲ್ಲಿ ಸ್ಥಾಪಿತವಾದ ಈ ಕಾರಖಾನೆಯಿಂದ ಹೊರಬಿದ್ದ ಬುಲ್‌ಡೋಜರು, ಟ್ರಾಕ್ಟರುಗಳು ಬಳಕೆಯಲ್ಲಿವೆ.

ಭಾರತ್ ಅರ್ತ್ ಮೂವರ್ಸ್ ಕಾರಖಾನೆ ರಕ್ಷಣಾ ಖಾತೆಯ ನಿಯಂತ್ರಣದಲ್ಲಿರುವ ಸರಕಾರೀ ಉದ್ಯಮ ಸಂಸ್ಥೆ. ಇದರ ಪ್ರಧಾನ ಕಾರಖಾನೆ ಕೋಲಾರ ಚಿನ್ನದ ಗಣಿ ಪ್ರದೇಶದಲ್ಲಿದೆ. ಬೆಂಗಳೂರಿನಲ್ಲಿರುವ ಕಾರಖಾನೆಯಲ್ಲಿ ಬ್ರಾಡ್‌ಗೇಜ್ ರೈಲುಡಬ್ಬಿಗಳು ತಯಾರಾಗುತ್ತವೆ. ಇದು 11 ಕೋಟಿ ರೂಪಾಯಿಗಳ ವೆಚ್ಚದಿಂದ ಸ್ಥಾಪಿಸಲ್ಪಟ್ಟಿರುವ ಉದ್ಯಮ.

ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್

ರಕ್ಷಣಾ ಖಾತೆಯ ನಿಯಂತ್ರಣದಲ್ಲಿರುವ ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್ (ಬಿ. ಇ. ಎಲ್.) ಕಾರಖಾನೆಯಲ್ಲಿ ಹಲವಾರು ವರ್ಗದ ಎಲೆಕ್ಟ್ರಾನಿಕ್ ಉಪಕರಣಗಳು ತಯಾರಾಗುತ್ತವೆ.

ಬೆಂಗಳೂರಿನ ಜಾಲಹಳ್ಳಿಯಲ್ಲಿರುವ ಈ ಕಾರಖಾನೆ ನಿರ್ಮಾಣ 1954ರಲ್ಲಿ ಆರಂಭವಾಯಿತು. ಉತ್ಪಾದನೆ ಶುರುವಾದದ್ದು 1956ರಲ್ಲಿ. ಆಗ ಇಲ್ಲಿ ಕೇವಲ ಎರಡು ಬಗೆಯ ಎಲೆಕ್ಟ್ರಾನಿಕ್ ಉಪಕರಣಗಳು ತಯಾರಾಗುತ್ತಿದ್ದುವು. 1974ರಲ್ಲಿ ಉಪಕರಣಗಳ ತಯಾರಿ ಸಂಖ್ಯೆ 70. ಇಲ್ಲಿ ತಯಾರಾದ ಉಪಕರಣಗಳು ಭಾರತದ ರಕ್ಷಣಾ ಪಡೆಗಳು, ಆಕಾಶವಾಣಿ ಹಾಗೂ ಇತರ ಸರಕಾರೀ ಖಾತೆಗಳ ಉಪಯೋಗಕ್ಕೆ ಮೀಸಲಾಗಿವೆ. ಬೆಂಗಳೂರಿನಲ್ಲಿರುವ ಕಾರಖಾನೆಯ ಜೊತೆಗೆ ಈಗ ಘಾಜಿಬಾದ್‌ನಲ್ಲೂ ಒಂದು ಹೊಸ ಕಾರಖಾನೆಯನ್ನು ಆರಂಭಿಸಲಾಗಿದೆ. ಟೆಲಿವಿಷನ್ ಪ್ರಸಾರಕ್ಕೆ ಬೇಕಾಗುವ ಪ್ರಸಾರಕಗಳನ್ನೂ, ಶಿಕ್ಷಣ ಕ್ಷೇತ್ರದಲ್ಲಿ ಉಪಯುಕ್ತವಾದ ಎಲೆಕ್ಟ್ರಾನಿಕ್ ಸಲಕರಣೆಗಳನ್ನೂ ಬಿ. ಇ. ಎಲ್. ತಯಾರಿಸುತ್ತದೆ.

ಭಾರತ ಅಂಚೆ ಮತ್ತು ತಂತಿ ಇಲಾಖೆ

ಆಧುನಿಕ ರೀತಿಯ ಸಾರ್ವಜನಿಕ ಅಂಚೆ ವ್ಯವಸ್ಥೆ ಭಾರತದಲ್ಲಿ ಆರಂಭವಾದದ್ದು 1837ರಲ್ಲಿ. ಪ್ರಥಮ ಅಂಚೆ ಚೀಟಿಯನ್ನು 1852ರಲ್ಲಿ ಕರಾಚಿ



ವಿಶೇಷ ಅಂಚೆ ಚೀಟಿಗಳು

ಯಲ್ಲಿ ಮಾರಾಟಕ್ಕಿಡಲಾಯಿತು. ವಿಮಾನ ಅಂಚೆ ಆರಂಭವಾದದ್ದು 1911ರಲ್ಲಿ.

1972 ಏಪ್ರಿಲ್ ತಿಂಗಳ ವೇಳೆಗೆ ದೇಶದಲ್ಲಿ 1,11,682 ಅಂಚೆ ಕಚೇರಿಗಳಿದ್ದುವು. ರಾತ್ರಿ ಅಂಚೆ ಕಚೇರಿ, ಸಂಚಾರಿ ಅಂಚೆಕಚೇರಿಗಳ ವ್ಯವಸ್ಥೆಯೂ ದೇಶದಲ್ಲಿದೆ. ಇದಕ್ಕಾಗಿ ವಿಮಾನ, ಸ್ವಯಂಚಾಲಿತ ವಾಹನ, ದೋಣಿ, ಸ್ಟೀಮರ್, ಸೈಕಲ್‌ಗಳು, ಕುದುರೆ.ಹೇಸರಗತ್ತೆ, ಒಂಟೆಗಳು ಬಳಸಲ್ಪಡುತ್ತವೆ. ಸೇವಿಂಗ್ಸ್ ಬ್ಯಾಂಕ್, ರಾಷ್ಟ್ರೀಯ ಉಳಿತಾಯ ಪತ್ರಗಳು, ವಿಮಾಪಾಲಿಸಿಗಳ ಕಂತುಗಳು, ರೇಡಿಯೋ ಗ್ರಾಹಕಗಳ ಲೈಸೆನ್ಸ್ ಹಣ ಪಡೆಯುವುದು ಇತ್ಯಾದಿ ಕೆಲಸಗಳನ್ನೂ ಅಂಚೆ ಕಚೇರಿಗಳು ನಿರ್ವಹಿಸುತ್ತವೆ.

ಉತ್ತರ ಪ್ರದೇಶದ ಸಹಾರನ್‌ಪುರದಲ್ಲಿ, ಮಧ್ಯಪ್ರದೇಶದ ಬಡೋದೆಯಲ್ಲಿ, ಮೈಸೂರು ನಗರ, ದರ್ಭಾಂಗಗಳಲ್ಲಿ ಅಂಚೆ ತರಬೇತಿ ಹಾಗೂ ಸಂಶೋಧನಾ ಕೇಂದ್ರಗಳಿವೆ. ದೆಹಲಿಯಲ್ಲಿ ಅಂಚೆಚೀಟಿ ಸಂಗ್ರಹಾಲಯವೂ ಇದೆ.

ಭಾರತದಲ್ಲಿ ತಂತಿಸಂಪರ್ಕ ಸೌಲಭ್ಯ ಆರಂಭವಾದದ್ದು 1851ರಲ್ಲಿ. ಕಲ್ಕತ್ತಾ ಹಾಗೂ ಡೈಮಂಡ್ ಹಾರ್ಬರ್‌ಗಳ ನಡುವೆ ಆ ವರ್ಷ ಹಾಕಲಾದ 21 ಮೈಲುಗಳ ತಂತಿಮಾರ್ಗ ಆಗಿನ ಕಾಲದಲ್ಲಿ ಪ್ರಪಂಚದಲ್ಲೇ ಅತಿ ದೀರ್ಘವಾದ ತಂತಿಸಂಪರ್ಕ ಮಾರ್ಗವಾಗಿತ್ತು.

ಇಂಗ್ಲಿಷ್ ಅಲ್ಲದೆ ಹಿಂದಿ ಮತ್ತು ಇತರ ಭಾಷೆಗಳಲ್ಲಿಯೂ ತಂತಿ ಸಮಾಚಾರವನ್ನು ಒದಗಿಸಲಾಗುವುದು ಸ್ವಾತಂತ್ರ್ಯೋತ್ತರ ಕಾಲದ ಗಮನಾರ್ಹ ವ್ಯವಸ್ಥೆ. 1971ರಲ್ಲಿ ಫೋನೊಗ್ರಾಮ್ ವ್ಯವಸ್ಥೆಯೂ ಆರಂಭವಾಯಿತು. 1972ರ ವೇಳೆಗೆ 10 ದೊಡ್ಡ ಪಟ್ಟಣಗಳಲ್ಲಿ ಟೆಲೆಕ್ಸ್ ಸಂಪರ್ಕ ವ್ಯವಸ್ಥೆ ಏರ್ಪಟ್ಟಿತು.

ಭಾರತದ ಟೆಲಿಫೋನ್ ಸಂಪರ್ಕ ಆರಂಭವಾದದ್ದು 1881ರಲ್ಲಿ. 1913ರಲ್ಲಿ ಸಿಮ್ಲಾದಲ್ಲಿ ಸ್ವಯಂಚಾಲಿತ ಟೆಲಿಫೋನ್ ವ್ಯವಸ್ಥೆ ಬಳಕೆಗೆ ಬಂದಿತು.

[illegible] ಇದೆ.

[illegible]

ಇವೆ. ಇವೆಲ್ಲದರ ಉಸ್ತುವಾರಿಯನ್ನು ಅಂಚೆ ಮತ್ತು ತಂತಿ ಇಲಾಖೆ ನೋಡಿಕೊಳ್ಳುತ್ತದೆ.

ನೋಡಿ : ಅಂಚೆ—ಸಂಪುಟ ೧

ಭಾರತ ಕಮ್ಯೂನಿಸ್ಟ್ ಪಕ್ಷ

ಈ ಶತಮಾನದ ಮೂರನೆಯ ದಶಕದಲ್ಲಿ ಭಾರತ ಸ್ವಾತಂತ್ರ್ಯ ಸಂಗ್ರಾಮ ನಡೆದ ವೇಳೆಯಲ್ಲಿ ಕ್ರಾಂತಿಕಾರಿ ಉದ್ದೇಶಗಳನ್ನಿರಿಸಿಕೊಂಡು ಸ್ಥಾಪಿತವಾದ ಪಕ್ಷ, ಭಾರತದ ಕಮ್ಯೂನಿಸ್ಟ್ ಪಕ್ಷ.

ಇದು 1924ರಲ್ಲಿ ಸಂಘಟಿತವಾಯಿತು. ಸಂಸ್ಥಾಪಕರು ಎಸ್.ಎ. ಡಾಂಗೆ, ಎಸ್. ವಿ. ಘಾಟೆ ಮತ್ತಿತರರು. ಭಾರತದಲ್ಲಿ ಇದಕ್ಕೆ ಒತ್ತಾಸೆಯಾದವರು ಇಬ್ಬರು ಬ್ರಿಟಿಷ್ ಮಾರ್ಕ್ಸ್‌ವಾದಿಗಳು —ಬೆನ್ ಬ್ರಾಡ್ಲೆ ಹಾಗೂ ಫಿಲಿಪ್ಸ್ ಸ್ಪ್ರಾಟ್. ಮಾರ್ಕ್ಸ್ ಸಿದ್ಧಾಂತ, 1917ರಲ್ಲಿ ನಡೆದ ರಷ್ಯದ ಕ್ರಾಂತಿ ಹಾಗೂ ಆ ಕ್ರಾಂತಿಯ ನಾಯಕ ಲೆನಿನ್‌ನರ ಸಿದ್ಧಾಂತಗಳಿಂದ ಭಾರತೀಯ ಕಮ್ಯೂನಿಸ್ಟರು ಪ್ರಭಾವಿತರಾಗಿದ್ದರು. ಅವರೆಲ್ಲ ಕಾಂಗ್ರೆಸ್ ಸದಸ್ಯರೂ ಆಗಿದ್ದರು.

20ನೆಯ ಶತಮಾನದ ಮೂರನೆಯ ದಶಕದ ಪ್ರಥಮ ವರ್ಷಗಳಲ್ಲಿ ದೇಶದ ಕೈಗಾರಿಕಾ ಕ್ಷೇತ್ರದಲ್ಲಿ ಅಶಾಂತಿ ತಲೆದೋರಿತು. ಅಖಿಲ ಭಾರತ ಟ್ರೇಡ್ ಯೂನಿಯನ್ ಕಾಂಗ್ರೆಸ್ಸನ್ನು ಸಂಘಟಿಸುವುದರಲ್ಲಿ ಕಮ್ಯೂನಿಸ್ಟರು ಮುಖ್ಯ ಪಾತ್ರ ವಹಿಸಿದರು. ಸ್ವಾತಂತ್ರ್ಯ ಚಳುವಳಿಯಲ್ಲಿ ಕಾರ್ಮಿಕರು, ರೈತರು, ವಿದ್ಯಾರ್ಥಿಗಳು ಪಾಲುಗೊಂಡರು. ಇವರನ್ನು ಸಂಘಟಿಸಿದವರಲ್ಲಿ ಮುಖ್ಯರಾದವರು ಕಮ್ಯೂನಿಸ್ಟರು.

ಈ ಹೊಸ ಸಂಘಟನೆಯಿಂದ ತನಗಾಗುವ ಅಪಾಯವನ್ನು ಬ್ರಿಟಿಷ್ ಸರಕಾರ ಕೂಡಲೇ ಮನಗಂಡಿತು. 1924ರಲ್ಲಿ ಕಾನ್ಪುರ ಪಿತೂರಿ ಮೊಕದ್ದಮೆಯ ಹೆಸರಲ್ಲಿ ಕಮ್ಯೂನಿಸ್ಟ್ ಮುಂದಾಳುಗಳನ್ನು ವಿಚಾರಣೆಗೆ ಗುರಿಮಾಡಿತು. 1928ರಲ್ಲಿ ಪ್ರಮುಖ ಕಮ್ಯೂನಿಸ್ಟರನ್ನೆಲ್ಲ ದಸ್ತಗಿರಿ ಮಾಡಿತು. ಅವರ ಮೇಲೆ ಪಿತೂರಿ ಆರೋಪ ಹೊರಿಸಿತು. 'ಮೀರತ್ ಪಿತೂರಿ ಮೊಕದ್ದಮೆ' ಎಂದು ಆ ವಿಚಾರಣೆ ಪ್ರಸಿದ್ಧಿ ಪಡೆಯಿತು. 1934ರಲ್ಲಿ ಬ್ರಿಟಿಷ್ ಸರಕಾರ ಭಾರತದ ಕಮ್ಯೂನಿಸ್ಟ್ ಪಕ್ಷವನ್ನು ನಿಷೇಧಿಸಿತು. ಪಕ್ಷವು ಕಾನೂನುಬಾಹಿರವಾದ ಅನಂತರ ಕಮ್ಯೂನಿಸ್ಟರು ಪರೋಕ್ಷವಾಗಿ ಕೆಲಸ ಮಾಡಲಾರಂಭಿಸಿದರು. ಕಾಂಗ್ರೆಸ್, ಕಾಂಗ್ರೆಸ್ ಸಮಾಜವಾದೀ ಪಕ್ಷ ಮೊದಲಾದ ಹಲವು ಸಂಸ್ಥೆಗಳಲ್ಲಿದ್ದು ದುಡಿದರು. ಅಖಿಲ ಭಾರತ ಟ್ರೇಡ್ ಯೂನಿಯನ್ ಕಾಂಗ್ರೆಸಿನಂತೆ ಅಖಿಲ ಭಾರತ ಕಿಸಾನ್ ಸಭೆಯನ್ನು ಸಂಘಟಿಸಿದರು. 1937ರಲ್ಲಿ ಕಾಂಗ್ರೆಸ್ ಪಕ್ಷ ಚುನಾವಣೆಯಲ್ಲಿ ಗೆದ್ದು ಪ್ರಾಂತೀಯ ಮಂತ್ರಿಮಂಡಲಗಳನ್ನು ರಚಿಸಿದಾಗ, ಕಮ್ಯೂನಿಸ್ಟ್ ನೇತೃತ್ವದ ಸಂಘಟನೆಗಳು ಹೋರಾಟ ನಡೆಸಿದುವು. ಈ ವೇಳೆಗೆ – 1939ರಲ್ಲಿ– ಎರಡನೆಯ ಮಹಾಯುದ್ಧ ಆರಂಭವಾಯಿತು. ಕಮ್ಯೂನಿಸ್ಟರು ಅದನ್ನು ಸಾಮ್ರಾಜ್ಯವಾದೀ ಯುದ್ಧ ಎಂದು ಕರೆದರು : ಆ ಯುದ್ಧಕ್ಕೆ ನೆರವು ಕೊಡಿಸುವ ಪ್ರಯತ್ನಗಳನ್ನು ಉಗ್ರವಾಗಿ ವಿರೋಧಿಸಿದರು. ಆದರೆ 1941ರಲ್ಲಿ ಸೋವಿಯೆತ್ ರಷ್ಯದ ಮೇಲೆ ಹಿಟ್ಲರ್ ದಾಳಿ ನಡೆಸಿದಾಗ. ಕಮ್ಯೂನಿಸ್ಟರು ನೀತಿ ಬದಲಿಸಿದರು. ಯುದ್ಧದ ಸ್ವರೂಪ ಬದಲಾಯಿತು ; ಅದೀಗ ಜನತಾಯುದ್ಧ ಎಂದರು. ಜರ್ಮನಿ, ರಷ್ಯಗಳು ಈ ಯುದ್ಧದಲ್ಲಿ ಪರಸ್ಪರ ವೈರಿಗಳು. ರಷ್ಯದ ಪರ ಹೋರಾಡಿದ ರಾಷ್ಟ್ರ ಬ್ರಿಟನ್. ಆದ್ದರಿಂದ ಬ್ರಿಟನಿನ ವಿರುದ್ಧ

[illegible] 1942ರಲ್ಲಿ 'ಕ್ವಿಟ್ ಇಂಡಿಯಾ' ಚಳುವಳಿಯನ್ನು ವಿರೋಧಿಸಿದರು.

1943ರಲ್ಲಿ ಭಾರತ ಕಮ್ಯೂನಿಸ್ಟ್ ಪಕ್ಷದ ಮೇಲಿನ ಬಹಿಷ್ಕಾರವನ್ನು ಬ್ರಿಟಿಷ್ ಸರಕಾರ ತೆಗೆದುಹಾಕಿತು.

ಸ್ವಾತಂತ್ರ್ಯೋತ್ತರ ಭಾರತದಲ್ಲಿ ಪಕ್ಷ ತನ್ನ ಕ್ರಾಂತಿಕಾರಿ ಧೋರಣೆಯನ್ನು ಮುಂದುವರಿಸಿ ತೆಲಂಗಾಣ ರೈತರ ಸಶಸ್ತ್ರ ಹೋರಾಟವನ್ನು ಸಂಘಟಿಸಿತು. ಮುಂದೆ ಚುನಾವಣೆಗಳಲ್ಲಿ ಭಾಗವಹಿಸಲು ನಿರ್ಧರಿಸಿತು : 1952 ಮತ್ತು 1957ರ ಚುನಾವಣೆಗಳಲ್ಲಿ ಹಲವು ಸ್ಥಾನಗಳನ್ನು ಗಳಿಸಿತು. 52,57,62ರ ಚುನಾವಣೆಗಳಲ್ಲಿ ಲೋಕಸಭೆಯಲ್ಲಿ ದ್ವಿತೀಯ ಸ್ಥಾನ ಗಳಿಸಿತು. ಪಶ್ಚಿಮ ಬಂಗಾಳ, ಕೇರಳಗಳಲ್ಲಿ ಮತ್ತು ಆಂಧ್ರದಲ್ಲಿ ಕಮ್ಯೂನಿಸ್ಟ್ [illegible]. ಕೇರಳದಲ್ಲಿ ಕಮ್ಯೂನಿಸ್ಟ್ ಮಂತ್ರಿಮಂಡಲ ರಚಿತವಾಯಿತು.

ಪಕ್ಷದಲ್ಲಿನ ಭಿನ್ನಾಭಿಪ್ರಾಯಗಳು 1962ರಲ್ಲಿ ಚೀನ ಭಾರತದ ಮೇಲೆ ದಾಳಿ ನಡೆಸಿದಾಗ ತೀವ್ರಗೊಂಡುವು. 1964ರಲ್ಲಿ ಭಾರತ ಕಮ್ಯೂನಿಸ್ಟ್ ಪಕ್ಷ ಇಬ್ಭಾಗವಾಯಿತು. ಒಂದು ಬಣ ಹಳೆ ಹೆಸರಲ್ಲೇ ಉಳಿಯಿತು. ಇನ್ನೊಂದು ಭಾರತ ಕಮ್ಯೂನಿಸ್ಟ್ ಪಕ್ಷ(ಮಾರ್ಕ್ಸಿಸ್ಟ್) ಎಂಬ ಹೆಸರನ್ನಿಟ್ಟುಕೊಂಡಿತು.

ನೋಡಿ : ಎಸ್.ಎ. ಡಾಂಗೆ ; ಎಸ್.ವಿ. ಘಾಟೆ ; ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸಿಸ್ಟ್)

ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸಿಸ್ಟ್)

1962ರಲ್ಲಿ ಅಖಿಲ ಭಾರತ ಕಮ್ಯೂನಿಸ್ಟ್ ಪಕ್ಷದ ಅಧಿವೇಶನ ವಿಜಯವಾಡದಲ್ಲಿ ನಡೆಯಿತು. ಪಕ್ಷದಲ್ಲಿ ಮೊದಲೇ ಇದ್ದ ಭಿನ್ನಾಭಿಪ್ರಾಯಗಳು ಈ ಅಧಿವೇಶನದಲ್ಲಿ ತೀವ್ರವಾಗಿ ವ್ಯಕ್ತಗೊಂಡುವು.

ಭಾರತದ ಮೇಲೆ ಚೀನ ದಾಳಿಮಾಡಿದಾಗ ಭಾರತ ಕಮ್ಯೂನಿಸ್ಟ್ ಪಕ್ಷದಲ್ಲಿನ ಭಿನ್ನಾಭಿಪ್ರಾಯಗಳು ಮತ್ತಷ್ಟು ತೀಕ್ಷ್ಣವಾದುವು. 1964ರ ತೆನಾಲಿಯಲ್ಲಿ ಭಿನ್ನಮತೀಯರ ಸಮ್ಮೇಳನ ನಡೆಯಿತು. ಆಗ ಭಾರತದ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸಿಸ್ಟ್) ಜನ್ಮತಾಳಿತು.

ಇ.ಎಂ.ಎಸ್. ನಂಬೂದಿರಿ ಪಾದ್, ಪಿ. ಸುಂದರಯ್ಯ, ಜ್ಯೋತಿ ಬಸು ಬಿ. ಟಿ. ರಣದಿವೆ ಮತ್ತು ಎ.ಕೆ. ಗೋಪಾಲನ್ ಈ ಪಕ್ಷದ ಪ್ರಮುಖರು.

ಬಿ. ಟಿ. ರಣದಿವೆ



ಪಿ. ಸುಂದರಯ್ಯ



[illegible]

ನೋಡಿ : ಇ.ಎಂ.ಎಸ್. ನಂಬೂದಿರಿ ಪಾದ್ ; ಎ.ಕೆ. ಗೋಪಾಲನ್

ಭಾರತ ಕಾರ್ಯನಿರತ ಪತ್ರಕರ್ತರ ಒಕ್ಕೂಟ

ನೋಡಿ : [illegible]

ಭಾರತ ಕೃತಕ ಗೊಬ್ಬರ ಕಾರ್ಪೊರೇಷನ್ ಲಿಮಿಟೆಡ್

[illegible] ಭಾರತ ಕೃತಕ ಗೊಬ್ಬರ ಕಾರ್ಪೊರೇಷನ್ ಲಿಮಿಟೆಡ್ (ಫರ್ಟಿಲೈಸರ್ ಕಾರ್ಪೊರೇಷನ್ ಆಫ್ ಇಂಡಿಯಾ ಲಿಮಿಟೆಡ್) ಸಂಸ್ಥೆಯನ್ನು ಸಂಘಟಿಸಲಾಯಿತು.

[illegible] ಕಾರ್ಪೊರೇಷನ್ನಿನ ಆಶ್ರಯದಲ್ಲಿ ಇನ್ನೂ ಏಳು ವಿಭಾಗಗಳು ಈಗ ನಿರ್ಮಾಣ ಘಟ್ಟದಲ್ಲಿವೆ.

ಕಾರ್ಪೊರೇಷನ್ ಪ್ರತಿ ವರ್ಷ 3.85.000 ಟನ್ ಸಾರಜನಕವನ್ನು 30,000 ಟನ್ ಫಾಸ್ಫೇಟ್ [illegible] ಉತ್ಪಾದಿಸುತ್ತಿದೆ. ಇದಲ್ಲದೆ, ಮುಖ್ಯ ರಾಸಾಯನಿಕಗಳು, ಭಾರ ಜಲ, ಕಲ್ಲಿದ್ದಲ ಕಿಟ್ಟ ಮತ್ತು ಉಪ ಉತ್ಪನ್ನಗಳನ್ನೂ ಕಾರ್ಪೊರೇಷನ್ ಉತ್ಪಾದಿಸುತ್ತದೆ.

ಇದರ ಅಧಿಕೃತ ಬಂಡವಾಳ 200 ಕೋಟಿ ರೂಪಾಯಿ.

ಭಾರತ ಸಂವಿಧಾನ

[illegible] ರಚಿಸಿದ್ದಾರೆ.

ಪ್ರಾಂತಗಳ ಶಾಸನ ಸಭೆಗಳಿಂದ ಪ್ರತಿನಿಧಿಗಳನ್ನು ರಾಜ್ಯಾಂಗ ಸಭೆಗೆ ಚುನಾಯಿಸಿದರು. ದೇಶದ ಅವಶ್ಯತೆಯ ಅನ್ವಯ ಬಿ.ಆರ್. ಅಂಬೇಡ್ಕರ್, ಎನ್. ಗೋಪಾಲಸ್ವಾಮಿ ಅಯ್ಯಂಗಾರ್, ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರ್ ಅಂಥವರು ಕರಡು ಸಂವಿಧಾನವನ್ನು ರಚಿಸಿದರು. 1949 ನವೆಂಬರ್ 26ರಂದು ರಾಜ್ಯಾಂಗ ಸಭೆ ಹೊಸ ಸಂವಿಧಾನಕ್ಕೆ ಒಪ್ಪಿಗೆ ನೀಡಿತು.

ಜಗತ್ತಿನ ಎಲ್ಲ ಸಂವಿಧಾನಗಳಿಗಿಂತ ಭಾರತ ಸಂವಿಧಾನ ಗಾತ್ರದಲ್ಲಿ ಹಿರಿದು. 1950 ಜನವರಿ 26ರಿಂದ ಈ ಸಂವಿಧಾನ ಜಾರಿಗೆ ಬಂದಿತು. ಸಂವಿಧಾನ ರಾಷ್ಟ್ರದ ವರಿಷ್ಠ ಶಾಸನ.

ಇದರ ಮೇರೆಗೆ ಕೇಂದ್ರ ಸರಕಾರ ಮತ್ತು ಬೇರೆ ಬೇರೆ ರಾಜ್ಯ ಸರಕಾರಗಳು ಸೇರಿ ದೇಶದ ಆಡಳಿತ ನಿರ್ವಹಿಸುತ್ತವೆ. ಕೇಂದ್ರ ಮತ್ತು ರಾಜ್ಯ ಮಟ್ಟದಲ್ಲಿ ಪ್ರಜೆಗಳಿಂದ ಚುನಾಯಿತರಾದ ಪ್ರತಿನಿಧಿಗಳು ಲೋಕಸಭೆ ರಾಜ್ಯಸಭೆ, ವಿಧಾನಸಭೆ ಮತ್ತು ವಿಧಾನ ಪರಿಷತ್ತುಗಳಲ್ಲಿ ಭಾಗವಹಿಸಿ ಆಡಳಿತವನ್ನು ನಿರ್ವಹಿಸುತ್ತಾರೆ. ರಾಷ್ಟ್ರದ ಈ ಎಲ್ಲ ಆಡಳಿತ ಘಟಕಗಳನ್ನು

ಭಾರತದ ಸಂವಿಧಾನ

ಭಾರತದ ಜನಗಳಾದ ನಾವು ಭಾರತವನ್ನು ಒಂದು ಸಂಪೂರ್ಣ ಸ್ವಾಮ ಪ್ರಭುತ್ವಸಂಪನ್ನ ಲೋಕತಂತ್ರಾತ್ಮಕ ಗಣರಾಜ್ಯವಾಗಿ * ವ್ಯವಸ್ಥೆಗೊಳಿಸುವುದಕ್ಕಾಗಿಯೂ,

ಭಾರತದ ಸಮಸ್ತ ನಾಗರಿಕರಿಗೆ :

ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯವೂ,

ವಿಚಾರ, ಅಭಿವ್ಯಕ್ತಿ, ವಿಶ್ವಾಸ, ಧರ್ಮ ಮತ್ತು ಉಪಾಸನಾ ಸ್ವಾತಂತ್ರ್ಯವೂ,

ಸ್ಥಾನಮಾನ ಮತ್ತು ಅವಕಾಶ ಸಮತೆಯೂ, †

ದೊರೆಯುವಂತೆ ಮಾಡುವುದಕ್ಕಾಗಿಯೂ ;

ವ್ಯಕ್ತಿಗೌರವವನ್ನೂ, ರಾಷ್ಟ್ರದ ಏಕತೆಯನ್ನೂ ಸುನಿಶ್ಚಿತವಾಗಿ ನೆಲೆಗೊಳಿಸುವಂಥ ಬಂಧುಭಾವನೆಯನ್ನು ಎಲ್ಲರಲ್ಲೂ ವೃದ್ಧಿಗೊಳಿಸುವುದಕ್ಕಾಗಿಯೂ ;

ದೃಢಸಂಕಲ್ಪ ಮಾಡಿದವರಾಗಿ

ನಮ್ಮ ಸಂವಿಧಾನ ಸಭೆಯಲ್ಲಿ ಈ ೧೯೪೯ನೆಯ ಇಸವಿ ನವೆಂಬರು ತಿಂಗಳು ಇಪ್ಪತ್ತಾರನೆಯ ತಾರೀಖಾದ ಇಂದಿನ ದಿವಸ ಈ ಮೂಲಕ ಈ ಸಂವಿಧಾನವನ್ನು ಅಂಗೀಕರಿಸಿ ಅಧಿನಿಯಮಿತಗೊಳಿಸಿ ಆತ್ಮಾರ್ಪಿತಮಾಡಿಕೊಂಡಿದ್ದೇವೆ

* Sovereign Democratic Republic
† ಪ್ರತಿಷ್ಠಾ ಮತ್ತು ಅವಕಾಶ ಸಮತೆ

ಭಾರತ ಸಂವಿಧಾನ —ಪ್ರಸ್ತಾವನೆ

ರಾಷ್ಟ್ರಪತಿ, ಉಪರಾಷ್ಟ್ರಪತಿಯವರ ಅಧಿಕಾರ ವ್ಯಾಪ್ತಿಯನ್ನೂ ಸಂವಿಧಾನದಲ್ಲಿ ನಮೂದಿಸಲಾಗಿದೆ.

21 ವರ್ಷ ತುಂಬಿದ ಎಲ್ಲ ಪ್ರಜೆಗಳೂ ಮತ ನೀಡಲು ಬಾಧ್ಯರು. ಐದು ವರ್ಷಗಳಿಗೆ ಒಂದು ಸಲ ಚುನಾವಣೆ ನಡೆಯುತ್ತದೆ. ಅಲ್ಲಿ ಆರಿಸಿ ಬಂದ ಪ್ರತಿನಿಧಿಗಳಲ್ಲಿ ಬಹುಮತ ಇರುವ ನಾಯಕ ಮಂತ್ರಿಮಂಡಲ ರಚಿಸುತ್ತಾನೆ.

ತಂದೆತಾಯಿ ಭಾರತ ಸಂಜಾತರಾಗಿರುವವರು ಭಾರತದ ಪ್ರಜೆಗಳು. ಇವರಲ್ಲದೆ ಐದು ವರ್ಷ ಕಾಲ ಭಾರತದಲ್ಲಿ ವಾಸ ಮಾಡುತ್ತಿರುವವರೂ, ಒಂದೇ ಪ್ರದೇಶದಲ್ಲಿ ವಸತಿ ಮಾಡಿದ್ದರೆ—ಭಾರತದ ಪೌರತ್ವ ಪಡೆಯಬಹುದು.

ಜಾತಿ ಮತ ಭೇದವಿಲ್ಲದೆ ಉದ್ಯೋಗಾವಕಾಶ ಮತ್ತು ನ್ಯಾಯ ; ವಾಕ್‌ಸ್ವಾತಂತ್ರ್ಯ, ಶಾಂತಿಯುತವಾಗಿ ಸಭೆ ಸೇರುವ ಮತ್ತು ಇಚ್ಛಿತ ಕೆಲಸವನ್ನು ಮಾಡುವ ಸ್ವಾತಂತ್ರ್ಯ ; ಶೋಷಣೆಯಿಂದ ರಕ್ಷಣೆ ; ವಾಸ ಮತ್ತು ಸಂಚಾರ ಸ್ವಾತಂತ್ರ್ಯ ; ಆಸ್ತಿ ಸಂಪಾದಿಸುವ, ಇರಿಸಿಕೊಳ್ಳುವ ಅಥವಾ ಮಾರುವ ಸ್ವಾತಂತ್ರ್ಯ ; ಕಸಬು, ಉದ್ಯಮ ಅಥವಾ ವ್ಯಾಪಾರ ನಡೆಸುವ ಸ್ವಾತಂತ್ರ್ಯ ಮತ್ತು ಧರ್ಮ ಹಾಗೂ ಮತ ಸ್ವಾತಂತ್ರ್ಯ— ಇವು ಭಾರತೀಯ ಪ್ರಜೆಯ ಮೂಲಭೂತ ಹಕ್ಕುಗಳು ; ರಾಷ್ಟ್ರದ ಸಂವಿಧಾನದಿಂದ ಇವು ರಕ್ಷಿತವಾಗಿವೆ.

ಮೂಲಭೂತ ಹಕ್ಕುಗಳಿಗೆ ಚ್ಯುತಿ ಬಂದಾಗ ಸಂವಿಧಾನಾತ್ಮಕ ಕ್ರಮಗಳನ್ನು ಕೈಗೊಳ್ಳುವುದಕ್ಕೂ ಎಡೆಯುಂಟು.

ರಾಷ್ಟ್ರದ ಎಲ್ಲ ಪ್ರಜೆಗಳಿಗೂ ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ವ್ಯವಹಾರಗಳಲ್ಲಿ ನ್ಯಾಯ, ಸಮಾನ ಅವಕಾಶಗಳನ್ನು ಭಾರತೀಯ ಸಂವಿಧಾನ ಒದಗಿಸಿದೆ.

ಮೂಲಭೂತ ಹಕ್ಕುಗಳಿಗೆ ಸಂಬಂಧಿಸಿ ಎರಡು ಮುಖ್ಯ ತಿದ್ದುಪಡಿಗಳಾಗಿವೆ. ಇವುಗಳಿಂದ, ಸಂವಿಧಾನದ ಯಾವುದೇ ಭಾಗವನ್ನು ತಿದ್ದುಪಡಿ ಮಾಡಲು ಸಂಸತ್ತಿಗೆ ಅಧಿಕಾರ ಬಂದಿದೆ. ತಾವು ವಶಪಡಿಸಿಕೊಳ್ಳುವ ಆಸ್ತಿಗೆ ಮಾರುಕಟ್ಟೆ ಬೆಲೆಯ ಬದಲು ತಾವು ನಿರ್ಧರಿಸಿದ ಮೊಬಲಗನ್ನು ಕೊಡುವ ಅಧಿಕಾರ ಸರಕಾರಕ್ಕೆ ಪ್ರಾಪ್ತವಾಗಿದೆ.

ಭಾರತ–ಪಾಕ್ ಯುದ್ಧ

1947ರಲ್ಲಿ ಭಾರತ ಸ್ವತಂತ್ರವಾದಾಗ, ಅದರ ವಿಭಜನೆಯೂ ಆಯಿತು. ಪಾಕಿಸ್ತಾನ ಹುಟ್ಟಿತು. ಆಗಿನಿಂದ ಒಂದಲ್ಲ ಒಂದು ಕಾರಣದಿಂದ ಪಾಕಿಸ್ತಾನ ಪದೇ ಪದೇ ಭಾರತದ ಮೇಲೆ ದಾಳಿ ಮಾಡಿದೆ. ಪ್ರತಿ ಬಾರಿ ಆಕ್ರಮಣವನ್ನು ಯಶಸ್ವಿಯಾಗಿ ಭಾರತ ಹಿಮ್ಮೆಟ್ಟಿಸಿದೆ.

ಜಮ್ಮು ಕಾಶ್ಮೀರ ಪ್ರದೇಶ ತನಗೆ ಸೇರಬೇಕೆಂದು ಬಯಸುತ್ತಿದ್ದ ಪಾಕಿಸ್ತಾನ, 1947ರಲ್ಲಿಯೇ ಆ ಪ್ರದೇಶದ ಮೇಲೆ ದಾಳಿ ಮಾಡಲು ತನ್ನ ಗಿರಿಜನರನ್ನು ಪ್ರಚೋದಿಸಿತು, ನೆರವು ಕೊಟ್ಟಿತು. ದಾಳಿಕಾರರು ಝೀಲಮ್ ಕಣಿವೆಯನ್ನು ದಾಟಿ ಶ್ರೀನಗರದ ಕಡೆ ಮುಂದುವರಿಯುತ್ತಿದ್ದಾಗ ಜಮ್ಮು ಕಾಶ್ಮೀರ ಸರಕಾರ ಭಾರತ ಸರಕಾರದ ನೆರವು ಕೋರಿತು. 1947 ಅಕ್ಟೋಬರ್‌ನಲ್ಲಿ ಭಾರತೀಯ ಸೇನೆಯ ಒಂದು ಪಡೆ ಕಾಶ್ಮೀರ ತಲುಪಿ ದಾಳಿಕಾರರನ್ನು ಹಿಮ್ಮೆಟ್ಟಿಸಿತು. ಅನಂತರ ವಿಶ್ವಸಂಸ್ಥೆಯ ಆಯೋಗ 1948 ಆಗಸ್ಟ್‌ನಲ್ಲಿ ಎರಡು ದೇಶಗಳ ನಡುವೆ, 'ಯುದ್ಧ ವಿರಾಮ' ಒಪ್ಪಂದ ಸೂಚಿಸಿತು. ಕಡೆಗೆ 1949 ಜನವರಿ 1ರಂದು ಈ ಒಪ್ಪಂದಕ್ಕೆ ಎರಡು ದೇಶಗಳು ಸಮ್ಮತಿಸಿದುವು.

1956 ಜನವರಿಯಲ್ಲಿ ಪಾಕಿಸ್ತಾನದ ಪಡೆಗಳು ಕಚ್‌ನ ರಣ್ ಪ್ರದೇಶದ ಛಾಡ್‌ಬೆಟ್ ಅನ್ನು ಆಕ್ರಮಿಸಿಕೊಂಡುವು. ಇದು ಪಾಕಿಸ್ತಾನ ನಡೆಸಿದ ಎರಡನೆಯ ಆಕ್ರಮಣ. ಭಾರತೀಯ ಪಡೆಗಳು ಆ ಪ್ರದೇಶವನ್ನು ಪ್ರವೇಶಿಸಿದಾಗ ಪಾಕಿಸ್ತಾನದ ಸೈನ್ಯ ಹಿಂದೆ ಸರಿಯಿತು.

ಪಾಕಿಸ್ತಾನ ಸೈನ್ಯದವರು ಮಾರುವೇಷದಲ್ಲಿ ಸಣ್ಣ ಸಣ್ಣ ತಂಡಗಳಲ್ಲಿ ಕಾಶ್ಮೀರವನ್ನು ಪ್ರವೇಶಿಸುತ್ತಿದ್ದಾರೆಂದು 1965 ಆಗಸ್ಟ್ 5ರಂದು ತಿಳಿದುಬಂತು. ಕಾಶ್ಮೀರದಲ್ಲಿ ದಂಗೆಯನ್ನು ಪ್ರಚೋದಿಸುವುದು, ಅಲ್ಲಿನ ರಕ್ಷಣಾ ವ್ಯವಸ್ಥೆಯನ್ನು ಭಗ್ನಗೊಳಿಸುವುದು ಈ ಕಾರ್ಯಕ್ರಮದ ಉದ್ದೇಶವಾಗಿತ್ತು. ಸುಮಾರು 3,000ಕ್ಕೂ ಹೆಚ್ಚು ಮಂದಿ ಹೀಗೆ ಅಕ್ರಮ ಪ್ರವೇಶ ನಡೆಸಿದ್ದರು. ಭಾರತೀಯ ಸೇನೆಯ ಭದ್ರತಾಪಡೆಗಳು ಕೂಡಲೇ ನಿರೋಧಕ ಕಾರ್ಯಾಚರಣೆ ಆರಂಭಿಸಿದುವು. ಆಗಸ್ಟ್ 27ರಂದು ಪಾಕಿಸ್ತಾನದ ಪಡೆಗಳು ಬಹಿರಂಗವಾಗಿ ಯುದ್ಧವಿರಾಮ ರೇಖೆಯನ್ನು ಅತಿಕ್ರಮಿಸಿದುವು. ಎರಡು ದೇಶದ ಸೈನ್ಯಗಳ ನಡುವೆ ಭಾರೀ ಕದನ ನಡೆಯಿತು. ಸೆಪ್ಟೆಂಬರ್ 1ರಂದು ಪಾಕಿಸ್ತಾನ ಪ್ಯಾಟನ್ ಟ್ಯಾಂಕು ಹಾಗೂ ಸೇಬರ್ ಜೆಟ್ ವಿಮಾನಗಳೊಂದಿಗೆ ಛಂಬ್ ವಿಭಾಗದಲ್ಲಿ ಆಕ್ರಮಣ ನಡೆಸಿ ಭಾರತ–ಪಾಕಿಸ್ತಾನಗಳ ನಡುವಿನ ಅಂತರರಾಷ್ಟ್ರೀಯ ಗಡಿಯನ್ನು ಉಲ್ಲಂಘಿಸಿತು. ಭಾರತ, ಈ ಎಲ್ಲ ಆಕ್ರಮಣಗಳನ್ನು ಕೂಡಲೇ ಯಶಸ್ವಿಯಾಗಿ ಎದುರಿಸಿತು. ಶತ್ರುಗಳನ್ನು ಹಿಂದಕ್ಕಟ್ಟಿ ಪಾಕಿಸ್ತಾನದ ಲಾಹೋರ್, ಸಿಯಾಲ್‌ಕೋಟ್‌ಗಳ ವರೆಗೆ ಧಾವಿಸಿತು. ಎರಡು ಕಡೆಯೂ ಬಾಂಬುಗಳ ಸುರಿಮಳೆಯಾಯಿತು. ಭಾರತವು ವೈರಿಯ ಮುಖ್ಯ ಸೈನಿಕನೆಲೆಗಳ ಮೇಲೆ ಮಾತ್ರ ಬಾಂಬು ಹಾಕಿತು. ಆದರೆ ಪಾಕಿಸ್ತಾನ ಭಾರತದ ಪೌರ ಕ್ಷೇತ್ರಗಳ ಮೇಲೆಯೂ ಬಾಂಬು ಹಾಕಿತು. ವಿಶ್ವಸಂಸ್ಥೆಯ ಭದ್ರತಾಸಮಿತಿ ಯುದ್ಧ ವಿರಾಮ ಒಪ್ಪಂದ ಸೂಚಿಸಿತು. ಸೆಪ್ಟೆಂಬರ್ 23ರಂದು ಎರಡು ದೇಶಗಳೂ ಇದಕ್ಕೆ ಒಪ್ಪಿದುವು. ಆದರೂ ಪಾಕಿಸ್ತಾನ ಚಿಕ್ಕಪುಟ್ಟ ಘರ್ಷಣೆಗಳನ್ನು ನಡೆಸುತ್ತಲೇ ಇತ್ತು. ಈ ಪರಿಸ್ಥಿತಿಯಲ್ಲಿ ಭಾರತ-ಪಾಕ್ ನಡುವೆ 'ತಾಷ್ಕೆಂಟ್ ಒಪ್ಪಂದ' ಏರ್ಪಟ್ಟಿತು.



1971ರಲ್ಲಿ ಪೂರ್ವಪಾಕಿಸ್ತಾನದಲ್ಲಿ (ಇಂದಿನ ಬಾಂಗ್ಲಾದೇಶ)ಆದ ಘಟನೆಗಳಿಂದಾಗಿ ನಾಲ್ಕನೆಯ ಬಾರಿಗೆ ಭಾರತ–ಪಾಕ್‌ಯುದ್ಧ ನಡೆಯಿತು. 1970ರಲ್ಲಿ ಪಾಕಿಸ್ತಾನದಲ್ಲಾದ ಚುನಾವಣೆಯಲ್ಲಿ ಅವಾಮಿ ಲೀಗ್‌ಗೆ ಬಹುಮತ ದೊರೆಯಿತು. ಇದು ಪಶ್ಚಿಮ ಪಾಕಿಸ್ತಾನದ ರಾಜಕಾರಣಿಗಳಿಗೆ ರುಚಿಸಲಿಲ್ಲ. ಪಾಕಿಸ್ತಾನದಲ್ಲಿ ಪೂರ್ವ ಬಂಗಾಳಕ್ಕೆ ಗಣ್ಯಸ್ಥಾನ ದೊರೆಯುವುದು ಅವರಿಗೆ ಬೇಕಿರಲಿಲ್ಲ. ಆದರಿಂದಾಗಿ ಅವರು ಚುನಾವಣೆಗಳ ಅನಂತರ ಹೊಸ ಸರಕಾರದ ರಚನೆಗೆ ಅವಕಾಶಕೊಡದೆ ಪೂರ್ವಬಂಗಾಳದ ಜನರ ಮೇಲೆ ತೀವ್ರವಾದ ದಬ್ಬಾಳಿಕೆ ನಡೆಸಲಾರಂಭಿಸಿದರು. ಮುಜಿಬುರ್ ರೆಹಮಾನರ ನೇತೃತ್ವದಲ್ಲಿ ಪೂರ್ವ ಬಂಗಾಳದವರು ಈ ದಬ್ಬಾಳಿಕೆಯನ್ನು ತೀವ್ರವಾಗಿ ಪ್ರತಿಭಟಿಸಿದರು.

ಪಾಕಿಸ್ತಾನದ ಪಡೆಗಳು ಪೂರ್ವ ಬಂಗಾಳದ ಜನರನ್ನು ನಾನಾ ವಿಧ ಹಿಂಸೆಗಳಿಗೆ ಗುರಿಮಾಡಿ ಅಮಾನುಷ ರೀತಿಯಲ್ಲಿ ವಧಿಸಿದುವು. ಹಿಂಸೆ ತಾಳಲಾರದೆ ಪೂರ್ವ ಬಂಗಾಳದ ಜನ ಲಕ್ಷೋಪಲಕ್ಷ ಸಂಖ್ಯೆಯಲ್ಲಿ ಭಾರತಕ್ಕೆ ಓಡಿ ಬಂದರು. ಭಾರತ ಇವರಿಗೆ ಆಶ್ರಯಕೊಟ್ಟಿತು. ಪರಿಸ್ಥಿತಿ ಇಷ್ಟು ಉಲ್ಬಣವಾಗಿದ್ದರೂ ಭಾರತ ಶಾಂತರೀತಿಯಿಂದ ವರ್ತಿಸಿತು. ಆದರೆ 1971 ಡಿಸೆಂಬರ್ 3ರಂದು ಪಾಕಿಸ್ತಾನ ತಾನಾಗಿ ಭಾರತದ ಪಶ್ಚಿಮ ಪ್ರದೇಶದ ಮೇಲೆ ದಾಳಿ ಮಾಡಿದಾಗ, ಭಾರತ ಅದನ್ನು ಇದಿರಿಸಿತು. ಪೂರ್ವ ಪಾಕಿಸ್ತಾನದ ಜನತಾ ಸೇನೆಯೊಂದಿಗೆ ಸಹಕರಿಸಿತು. ಹದಿನಾಲ್ಕು ದಿನಗಳ ಹೋರಾಟದ ಪರಿಣಾಮವಾಗಿ ಪೂರ್ವ ಪಾಕಿಸ್ತಾನದಲ್ಲಿ ದಬ್ಬಾಳಿಕೆ ನಡೆಸುತ್ತಿದ್ದ ಪಾಕಿಸ್ತಾನದ ಸೇನೆ ಸೋತು ಶರಣಾಗತವಾಯಿತು. ಒಡನೆಯೇ ಪಶ್ಚಿಮದಲ್ಲಿ ಭಾರತ ಹೋರಾಟ ನಿಲ್ಲಿಸಿತು.

ಈ ಯುದ್ಧದ ಬಳಿಕ ಭಾರತ ಪಾಕಿಸ್ತಾನಗಳ ನಡುವೆ ಸಿಮ್ಲಾದಲ್ಲಿ 1972 ಜೂಲೈ 3ರಂದು ಪೂರ್ವಭಾವಿ ಒಡಂಬಡಿಕೆ ಏರ್ಪಟ್ಟಿತು. 1973 ಆಗಸ್ಟ್‌ನಲ್ಲಿ ಮಾತುಕತೆ ಮುಂದುವರಿದು ದಿಲ್ಲಿಯಲ್ಲಿ ಒಪ್ಪಂದವಾಯಿತು.

ನೋಡಿ : ತಾಷ್ಕೆಂಟ್ ಒಪ್ಪಂದ ; ಸಿಮ್ಲಾ ಒಪ್ಪಂದ

ಭಾರತ ಪ್ರಾಣಿ ವೈಜ್ಞಾನಿಕ ಸರ್ವೆ

ಭಾರತದ ವೈಜ್ಞಾನಿಕ ಸರ್ವೆ ಪ್ರಾಣಿ (ಜೂಆಲಾಜಿಕಲ್ ಸರ್ವೆ ಆಫ್ ಇಂಡಿಯಾ) ದೇಶದ ಪ್ರಾಣಿ ಜಾತಿಗಳನ್ನು ಗುರುತಿಸುತ್ತದೆ. ವಿಶಿಷ್ಟ ಜಾತಿಗಳನ್ನು ಗುರುತಿಸಿ, ಸಂಗ್ರಹಿಸುತ್ತದೆ. ಸಂಬಂಧಿತ ನಿಯತಕಾಲಿಕಗಳು, ಏಕವಿಷಯ ಹೊತ್ತಿಗೆಗಳು ಮತ್ತು ಇತರ ಪುಸ್ತಕಗಳನ್ನು ಪ್ರಕಟಿಸುವ ಹೊಣೆ ಹೊತ್ತಿದೆ. ಇದರ ಪ್ರಾದೇಶಿಕ ಕೇಂದ್ರಗಳು ಡೆಹ್ರಡೂನ್, ಜಬ್ಬಲ್‌ಪುರ, ಜೋಧಪುರ, ಮದರಾಸು, ಪಟ್ನಾ, ಪುಣೆ, ಷಿಲ್ಲಾಂಗ್‌ಗಳಲ್ಲಿವೆ.

ಪ್ರಾಣಿ ಪರಿಸರವಿಜ್ಞಾನ, ಭೂಗೋಲ, ಪ್ರಾಣಿಸಂಪತ್ತು ಮುಂತಾದ ವಿಷಯಗಳ ಬಗೆಗೂ ಈ ಸಂಸ್ಥೆ ಸಂಶೋಧನೆ ನಡೆಸುತ್ತದೆ. ಭಾರತೀಯ ಪ್ರಾಣಿ ಸಂಗ್ರಹಶಾಲೆಗಳ ಸುಧಾರಣೆ ಇದರ ಕೆಲಸಗಳಲ್ಲಿ ಒಂದು. ಭಾರತ ಸರಕಾರಕ್ಕೆ ಪ್ರಾಣಿವಿಜ್ಞಾನಕ್ಕೆ ಸಂಬಂಧಪಟ್ಟ ಸೂಕ್ತ ಸಲಹೆ, ಸೂಚನೆಗಳನ್ನು ಸಂಸ್ಥೆ ನೀಡುತ್ತದೆ. ಉನ್ನತ ಪ್ರದೇಶಗಳಲ್ಲಿನ ಪ್ರಾಣಿಗಳ ಬಗೆಗಿನ ಪರಿಶೀಲನೆಗಾಗಿ ಸೋಲನ್ ಎಂಬಲ್ಲಿ ಒಂದು ಕೇಂದ್ರವನ್ನೂ ಸಂಸ್ಥೆ ಸ್ಥಾಪಿಸಿದೆ. ಭಾರತದ ಪ್ರಾಣಿ ವೈಜ್ಞಾನಿಕ ಸರ್ವೆ 1916ರಲ್ಲಿ ಸ್ಥಾಪಿತವಾಯಿತು.

ಭಾರತ ಪುರಾತತ್ತ್ವ ಸರ್ವೆ

ಭಾರತ ಪುರಾತತ್ತ್ವ ಸರ್ವೆ (ಆರ್ಕಿಯಲಾಜಿಕಲ್ ಸರ್ವೆ ಆಫ್ ಇಂಡಿಯಾ) ಆರಂಭವಾದದ್ದು 1861ರಲ್ಲಿ. ಕನಿಂಗ್‌ಹ್ಯಾಮ್ ಇದರ ಮೊದಲ ನಿರ್ದೇಶಕ. ಈತ ಅಧಿಕಾರದಲ್ಲಿದ್ದ ಕಾಲದಲ್ಲಿ ಈ ಇಲಾಖೆಯ ಚಟುವಟಿಕೆಗಳನ್ನು ಭಾರತದ ವಿವಿಧ ಭಾಗಗಳಿಗೆ ವಿಸ್ತರಿಸಿದ.

ಭಾರತದ ಪ್ರಾಚೀನ ಕಟ್ಟಡಗಳು, ಸ್ಮಾರಕಗಳನ್ನು ಸಂರಕ್ಷಿಸುವುದು. ಭಾರತದ ಪ್ರಾಚೀನ ಚರಿತ್ರೆಯ ಬಗೆಗೆ ಸಂಶೋಧನೆ ನಡೆಸುವುದು. ಐತಿಹಾಸಿಕ ಕ್ಷೇತ್ರಗಳಲ್ಲಿ ಭೂಸಂಶೋಧನೆ ಮಾಡುವುದು. ಶಾಸನಗಳ–ನಾಣ್ಯಗಳ ಸಂಗ್ರಹಣೆ, ಪರಿಶೀಲನೆ, ಪ್ರಕಟಣೆ ಇವು ಈ ಇಲಾಖೆ ನಡೆಸುವ ಮುಖ್ಯ ಕಾರ್ಯಗಳು. ಸಾಂಸ್ಕೃತಿಕ ಮಹತ್ತ್ವವುಳ್ಳ ವಸ್ತುಗಳನ್ನು ಈ ಇಲಾಖೆ ಸಂಗ್ರಹಿಸುತ್ತದೆ, ವಿವಿಧ ವಸ್ತುಸಂಗ್ರಹಾಲಯಗಳಲ್ಲಿಟ್ಟು ಅವನ್ನು ಸಂರಕ್ಷಿಸುತ್ತದೆ. ಭಾರತೀಯ ಸಂಸ್ಕೃತಿಯ ಬಗೆಗೆ ಬರೆಹಗಳನ್ನು ಪ್ರಕಟಿಸಿ, ಪ್ರಚಾರ ನಡೆಸುತ್ತದೆ.

ರಾಷ್ಟ್ರೀಯ ಮಹತ್ತ್ವವಿರುವ ಪುರಾತನ ಕಟ್ಟಡಗಳ ದುರಸ್ತಿ ಕಾರ್ಯವನ್ನೂ ಇದು ನಿರ್ವಹಿಸುತ್ತದೆ. ಸರಕಾರೇತರ ಸಂಸ್ಥೆಗಳು ನಡೆಸುವ ಭೂಶೋಧನೆ, ಪರಿಶೀಲನೆಗಳಿಗೆ ಈ ಸಂಸ್ಥೆ ನೆರವು ನೀಡುತ್ತದೆ.

1959ರಿಂದ ಇದರ ಆಶ್ರಯದಲ್ಲಿ ಪುರಾತತ್ತ್ವ ಸಂಶೋಧನೆಯ ಬಗೆಗೆ ಶಿಕ್ಷಣ ಕೊಡುವ ಒಂದು ಶಾಲೆ ಆರಂಭವಾಗಿದೆ. ಈ ಶಾಲೆ ಪುರಾತತ್ತ್ವ ಸಂಶೋಧನಾ ವಿಷಯದ ಎಲ್ಲ ಶಾಖೆಗಳಲ್ಲೂ ತರಬೇತಿ ನೀಡುತ್ತದೆ.

ಆರಂಭವಾದಾಗಿನಿಂದ ಈ ಸಂಸ್ಥೆ ಭಾರತದ ವಿವಿಧ ಭಾಗಗಳಲ್ಲಿ ಅನೇಕ ಪುರಾತನ ಕ್ಷೇತ್ರಗಳಲ್ಲಿ ಭೂಶೋಧನೆ ನಡೆಸಿ ಭಾರತದ ಪ್ರಾಚೀನ ಇತಿಹಾಸಕ್ಕೆ ಸಂಬಂಧಿಸಿದ ಹಲವು ಅಂಶಗಳನ್ನು ಬೆಳಕಿಗೆ ತಂದಿದೆ.

ಈಜಿಪ್ಟ್, ನೇಪಾಳ, ಅಫ್‌ಘಾನಿಸ್ತಾನಗಳಿಗೆ ಪುರಾತತ್ತ್ವ ಶೋಧನೆಗಾಗಿ ತಂಡಗಳನ್ನು ಕಳುಹಿಸಿದೆ.

ಪುರಾತತ್ತ್ವ ಶೋಧನೆಗೆ ಸಂಬಂಧಿಸಿ ವಾರ್ಷಿಕ ವರದಿಯನ್ನೂ ಒಂದು ನಿಯತಕಾಲಿಕವನ್ನೂ ಗ್ರಂಥಗಳನ್ನೂ ಸಂಸ್ಥೆ ಪ್ರಕಟಿಸುತ್ತದೆ.

ಭಾರತ ಭೂ ವೈಜ್ಞಾನಿಕ ಸರ್ವೆ

ಖನಿಜ ಸಂಪನ್ಮೂಲದ ಬಗೆಗೆ ಅನೇಕ ಮಾಹಿತಿಗಳನ್ನು ಸಂಗ್ರಹಿಸಿ ದೇಶದ ಭೂವೈಜ್ಞಾನಿಕ ನಕ್ಷೆ ತಯಾರಿಸುವ ಹೊಣೆ ಭಾರತದ ಭೂವೈಜ್ಞಾನಿಕ ಸರ್ವೆ(ಜಿಯಾಲಾಜಿಕಲ್ ಸರ್ವೆ ಆಫ್ ಇಂಡಿಯಾ) ಯದು.

1858–60ರಲ್ಲಿ ರಾಣಿಗಂಜ್ ಕಲ್ಲಿದ್ದಲು ಕ್ಷೇತ್ರದ ವಿವರವಾದ ಸರ್ವೆ ನಡೆಸಿ ಮೊತ್ತಮೊದಲ ಭೂವೈಜ್ಞಾನಿಕ ನಕ್ಷೆಯನ್ನು ಈ ಸಂಸ್ಥೆ ತಯಾರಿ

[illegible] ಈ ಪರಿಮಾಣದ ನಕ್ಷೆಗಳನ್ನು ಸಂಸ್ಥೆ [illegible] ವಿವರ [illegible] ಭೂವೈಜ್ಞಾನಿಕ ನಕ್ಷೆ [illegible] ಯನ್ನು ಸಂಸ್ಥೆ ತಯಾರಿಸುತ್ತ ಬಂದಿದೆ.

ಈಗ ಸಂಸ್ಥೆಯ ಮುಖ್ಯ ಕಾರ್ಯಕ್ಷೇತ್ರಗಳು : ಭೂವೈಜ್ಞಾನಿಕ ನಕ್ಷೆ. ಆರ್ಥಿಕ ಭೂವಿಜ್ಞಾನ. ಎಂಜಿನಿಯರಿಂಗ್ ಭೂವಿಜ್ಞಾನ. ಅಂತರ್ಜಲ, ಭೂಭೌತಿಕ ಪರಿಶೋಧನೆ. ರಸಾಯನವಿಜ್ಞಾನ. ಜೀವಿವಿಜ್ಞಾನ. ಪಳೆಯುಳಿಕೆ ವಿಜ್ಞಾನ. ಭೂಕಂಪ ವಿಜ್ಞಾನ. ಸಂಸ್ಥೆ ಭೂವಿಜ್ಞಾನಿಗಳಿಗೆ ತರಬೇತಿ ಸೌಲಭ್ಯ ಕಲ್ಪಿಸಿದೆ.

ಭಾರತದ ಎಲ್ಲ ಬಗೆಯ ಭೂವೈಜ್ಞಾನಿಕ ಕೆಲಸಗಳಿಗೆ ಈ ಸಂಸ್ಥೆ ತಯಾರಿಸುವ ಭೂವೈಜ್ಞಾನಿಕ ನಕ್ಷೆಯೇ ಆಧಾರ.

ಭಾರತ ರತ್ನ

ಸ್ವತಂತ್ರ ಭಾರತದ ರಾಷ್ಟ್ರೀಯ ಪ್ರಶಸ್ತಿಗಳಲ್ಲಿ ಅತ್ಯಂತ ಶ್ರೇಷ್ಠವಾದದ್ದು 'ಭಾರತ ರತ್ನ'. ಸಮಾಜ ಸೇವೆಯಲ್ಲಿ ಶ್ರೇಷ್ಠ ಸಾಧನೆಯನ್ನು ಮಾಡಿದವರು. ಕಲೆ–ಸಾಹಿತ್ಯ–ವಿಜ್ಞಾನ ಕ್ಷೇತ್ರಗಳಲ್ಲಿ ಅತ್ಯುತ್ತಮ ಮಟ್ಟ ತಲಪಿದವರು ಇದನ್ನು ಪಡೆಯಲು ಅರ್ಹರಾಗುತ್ತಾರೆ.

ಪ್ರಶಸ್ತಿಯನ್ನು ಕೊಡುವವರು ಭಾರತದ ರಾಷ್ಟ್ರಪತಿ. ಎರಡು ಅಂಗುಲ ಉದ್ದ 1½ ಅಂಗುಲ ಅಗಲದ ಅಶ್ವತ್ಥ ಎಲೆಯ ಆಕಾರದಲ್ಲಿರುತ್ತದೆ ಪ್ರಶಸ್ತಿ ಪತ್ರ. ಕಂಚಿನ ಪತ್ರದ ಮೇಲೆ ಪ್ಲಾಟಿನಮ್ಮಿನಲ್ಲಿ ಸೂರ್ಯನ ಚಿತ್ರ. ರಾಷ್ಟ್ರ ಲಾಂಛನವಿರುತ್ತದೆ. ಹಿಂದೀ ಅಕ್ಷರಗಳಲ್ಲಿ 'ಭಾರತರತ್ನ' ಎಂಬ ಪದ ಕೆತ್ತಿರುತ್ತದೆ.

ಸಿ. ರಾಜಗೋಪಾಲಾಚಾರಿ. ಎಸ್. ರಾಧಾಕೃಷ್ಣನ್. ಸಿ. ವಿ. ರಾಮನ್. ಡಾ. ಭಗವಾನ್ ದಾಸ್. ಎಂ. ವಿಶ್ವೇಶ್ವರಯ್ಯ. ಜವಾಹರಲಾಲ ನೆಹರೂ. ಗೋವಿಂದ ವಲ್ಲಭ ಪಂತ್. ಡಿ. ಕೆ. ಕರ್ವೆ. ಬಿ. ಸಿ. ರಾಯ್. ಪುರುಷೋತ್ತಮದಾಸ್ ತಾಂಡನ್, ರಾಜೇಂದ್ರ ಪ್ರಸಾದ್, ಜಾಕೀರ್ ಹುಸೇನ್ ಮತ್ತು ಪಿ. ವಿ. ಕಾಣೆ ಅವರಿಗೆ ಈ ಪ್ರಶಸ್ತಿ ದೊರಕಿದೆ. 1966ರಲ್ಲಿ ಲಾಲ್ ಬಹಾದ್ದೂರ್ ಶಾಸ್ತ್ರಿಯವರಿಗೆ ಮರಣೋತ್ತರ ಪ್ರಶಸ್ತಿ ಸಂದಿತು. 1971ರಲ್ಲಿ ಇಂದಿರಾ ಗಾಂಧೀ ಭಾರತರತ್ನ ಪ್ರಶಸ್ತಿ ಪಡೆದರು.

ಭಾರತ ರಾಷ್ಟ್ರೀಯ ಕಾಂಗ್ರೆಸ್

ಕಾಂಗ್ರೆಸ್ ಎಂಬ ಸಂಚಿಪ್ತ ಹೆಸರಿನ ರಾಜಕೀಯ ಸಂಸ್ಥೆ ಭಾರತ ರಾಷ್ಟ್ರೀಯ ಕಾಂಗ್ರೆಸ್. ರಾಷ್ಟ್ರವನ್ನು ಪಾರತಂತ್ರ್ಯದಿಂದ ಬಿಡುಗಡೆಗೊಳಿಸು

ಕಾರ್ಯಕಾರಿ ಸಮಿತಿಯ ಸಭೆಗೆ ಗಾಂಧೀಜೀ, ನೆಹರೂ ಮತ್ತಿತರರು



ವುದರಲ್ಲಿ ಇದು ಮಹತ್ವದ ಪಾತ್ರ ವಹಿಸಿತು. ಮಹಾತ್ಮಗಾಂಧಿ ಯವರು ಸ್ವಾತಂತ್ರ್ಯ ಸಂಗ್ರಾಮ ಚಳವಳಿಗಳನ್ನು ಕಾಂಗ್ರೆಸ್ಸಿನ ಆಶ್ರಯದಲ್ಲಿ ಸಂಘಟಿಸಿದರು. ಅನೇಕ ಪ್ರತಿಭಾವಂತರು, ಮೇಧಾವಿಗಳು. ಹಿರಿಯ ರಾಜಕಾರಣಿಗಳು ಈ ಸಂಸ್ಥೆಯ ಸದಸ್ಯರಾಗಿದ್ದು ತಾಯ್ನಾಡಿನ ಸ್ವಾತಂತ್ರ್ಯಕ್ಕಾಗಿ ಶ್ರಮಿಸಿದರು.

1885 ಡಿಸೆಂಬರ್ 28ರಂದು ಕಾಂಗ್ರೆಸ್ಸಿನ ಮೊದಲ ಅಧಿವೇಶನ ಮುಂಬಯಿಯಲ್ಲಿ ಸೇರಿತು. ಇದರ ಸಂಘಟನೆಗೆ ಕಾರಣರಾದ ಪ್ರಮುಖರಲ್ಲಿ ಒಬ್ಬರು. ಆಂಗ್ಲರಾದ ಎ. ಒ. ಹ್ಯೂಮ್. ಇವರು ಬ್ರಿಟಿಷ್ ಇಂಡಿಯಾ ಸರಕಾರದಲ್ಲಿ ದೊಡ್ಡ ಹುದ್ದೆಯಲ್ಲಿದ್ದರು. ಆರಂಭದಲ್ಲಿ ಕಾಂಗ್ರೆಸ್ ಬ್ರಿಟಿಷ್ ಆಡಳಿತಗಾರರಿಗೆ ಮನವಿ ಸಲ್ಲಿಸುವ ಸಂಸ್ಥೆಯಾಗಿತ್ತು. ಭಾರತದ ಜನತೆಯ ರಾಷ್ಟ್ರೀಯತಾ ವಿಕಾಸದಲ್ಲಿ ಇದೊಂದು ಘಟ್ಟ. ಸುರೇಂದ್ರನಾಥ ಬ್ಯಾನರ್ಜಿ. ದಾದಾಭಾಯಿ ನವರೋಜಿ. ಫಿರೋಜ್ ಷಾ ಮೆಹತಾ ಮುಂತಾದ ಪ್ರಮುಖರು ಈ ಸಂಸ್ಥೆಯನ್ನು ಬೆಳೆಸಿದರು.

ಬರಬರುತ್ತ ಬ್ರಿಟಿಷ್ ಸರಕಾರ ಕಾಂಗ್ರೆಸ್ಸಿನ ಮೇಲೆ ಉಗ್ರ ಕ್ರಮ ಕೈಗೊಳ್ಳತೊಡಗಿತು. ಬಂಗಾಳದ ವಿಭಜನೆ. ಒಂದನೆಯ ಮಹಾಯುದ್ಧದ ಅನಂತರ ಬ್ರಿಟಿಷ್ ಸರಕಾರ ರೂಪಿಸಿದ ಅತೃಪ್ತಿಕರ ಸುಧಾರಣೆಗಳು. ನ್ಯಾಯಮಾಡಲಿಕ್ಕೆ ನೀಡುವುದರಲ್ಲಿ ಬ್ರಿಟನ್ ಅನುಸರಿಸುತ್ತಿದ್ದ ವಿಳಂಬ ನೀತಿ — ಇವುಗಳಿಂದ ಕಾಂಗ್ರೆಸ್ಸಿಗೆ ಜನರ ಬೆಂಬಲ ಹೆಚ್ಚಿತು. ಲಾಲಾ ಲಜಪತರಾಯ್. ಗೋಪಾಲಕೃಷ್ಣ ಗೋಖಲೆ. ಬಾಲ ಗಂಗಾಧರ ತಿಲಕ ಮುಂತಾದ ಸಮರ್ಥ ಮುಂದಾಳುಗಳ ಕಾರಣದಿಂದ ಈ ಸಂಸ್ಥೆಗೆ ಹೆಚ್ಚು ಜನ ಆಕರ್ಷಿತರಾದರು. ಈ ವೇಳೆಗೆ ಸೌಮ್ಯವಾದಿಗಳು. ತೀವ್ರವಾದಿಗಳೆಂಬ ಎರಡು ಪಂಗಡಗಳು ಸಂಸ್ಥೆಯಲ್ಲಿ ಖಚಿತ ರೂಪ ತಳೆದುವು. ಕಾಲಕ್ರಮದಲ್ಲಿ ತೀವ್ರವಾದಿಗಳ ಕೈಮೇಲಾಯಿತು. ಸೌಮ್ಯವಾದಿಗಳು ಕಾಂಗ್ರೆಸ್ಸಿನಿಂದ ದೂರವಾಗತೊಡಗಿದರು.

ಗಾಂಧೀಜೀ ಆಗಿನ ತೀವ್ರವಾದಿ ನಾಯಕರು. ತಾವು ಸ್ವಾತಂತ್ರ್ಯ ಸಂಗ್ರಾಮದ ನಾಯಕರಾದಂದಿನಿಂದ ಅಹಿಂಸೆಯ ಕಾನೂನು ಭಂಗ ಚಳುವಳಿ ಸತ್ಯಾಗ್ರಹಗಳ ಮೂಲಕ ಸ್ವಾತಂತ್ರ್ಯ ಆಂದೋಲನವನ್ನು ಗಾಂಧೀಜಿ ಮುಂದುವರಿಸಿದರು.

1929ರ ಅಧಿವೇಶನದಲ್ಲಿ ಕಾಂಗ್ರೆಸ್ 'ಪೂರ್ಣ ಸ್ವರಾಜ್ಯ' ತನ್ನ ಧ್ಯೇಯ ಎಂದು ಘೋಷಿಸಿತು. 1937ರಲ್ಲಿ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಪ್ರಚಂಡ ಬಹುಮತ ಗಳಿಸಿತು. ಎಂಟು ಪ್ರಾಂತ್ಯಗಳಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂತು. 1939ರಲ್ಲಿ ಎರಡನೆಯ ಮಹಾಯುದ್ಧ ಸಂಭವಿಸಿದಾಗ ಎಲ್ಲ ಕಾಂಗ್ರೆಸ್ ಮಂತ್ರಿಮಂಡಲಗಳೂ ಬ್ರಿಟಿಷ್ ಇಂಡಿಯಾ ಸರಕಾರದ ಧೋರಣೆಯನ್ನು ವಿರೋಧಿಸಿ ರಾಜಿನಾಮೆ ಇತ್ತುವು. ಬ್ರಿಟಿಷ್ ಸರಕಾರ ಆಯೋಗಗಳನ್ನು ರಚಿಸಿತು : ಸುಧಾರಣೆಗಳನ್ನು ಸೂಚಿಸಿತು ಆದರೆ ಅದು ಕಾಂಗ್ರೆಸ್ಸಿಗೆ ತೃಪ್ತಿಕರವಾಗಿ ಕಾಣಲಿಲ್ಲ. ಕಾಂಗ್ರೆಸ್ 'ಭಾರತದಿಂದ ತೊಲಗಿ' ('ಚಲೇಜಾವ್') ಚಳುವಳಿ ಆರಂಭಿಸಿತು. ಈ ಆಂದೋಲನ ದೇಶದಾದ್ಯಂತ ವ್ಯಾಪಿಸಿತು. ಭಾರತೀಯರ ಸ್ವಾತಂತ್ರ್ಯಾಕಾಂಕ್ಷೆಯನ್ನು ಮೆಟ್ಟಿಹಿಡಿಯುವುದು ಇನ್ನು ಸಾಧ್ಯವಿಲ್ಲವೆಂಬುದು ಸ್ಪಷ್ಟವಾದಾಗ ಭಾರತಕ್ಕೆ ಸ್ವಾತಂತ್ರ್ಯ ಕೊಡಲು ಬ್ರಿಟಿಷ್ ಸರಕಾರ ಮುಂದಾಯಿತು ಹಾಗೂ ಭಾರತವನ್ನು ಭಾರತ ಮತ್ತು ಪಾಕಿಸ್ತಾನ ಎಂದು ಇಬ್ಭಾಗ ಮಾಡಲು ನಿರ್ಧರಿಸಿತು. ಭಾರತ 1947 ಆಗಸ್ಟ್ 15ರಂದು ಸ್ವತಂತ್ರವಾಯಿತು.

ಕಾಂಗ್ರೆಸ್ ಆರಂಭವಾದಾಗಿನಿಂದ ಬಹುಕಾಲದ ವರೆಗೆ ಸಾಮಾನ್ಯವಾಗಿ ಪ್ರತಿ ಕ್ರಿಸ್‌ಮಸ್‌ನಲ್ಲಿ ಅಧಿವೇಶನ ನಡೆಸುತ್ತಿತ್ತು. 1885ರಿಂದ 1947ರ ವರೆಗೆ 54 ಬಾರಿ ಇದರ ಅಧಿವೇಶನಗಳು ನಡೆದುವು.

[illegible] ಸ್ವರೂಪದ ಸಮಾಜರಚನೆಯೇ ತನ್ನ ಗುರಿ ಎಂದು ಕಾಂಗ್ರೆಸ್ [illegible]. ಕ್ರಮೇಣ ಸಮಾಜವಾದವೇ ಕಾಂಗ್ರೆಸ್ಸಿನ ಗುರಿ –ಎಂದಾಯಿತು.

[illegible] ಕೇಂದ್ರ ಸರಕಾರದಲ್ಲಿ ಅಧಿಕಾರ ನಡೆಸುತ್ತಿದೆ. ಹೆಚ್ಚಿನ ಪ್ರಾಂತ [illegible].

[illegible] ವಿಭಾಗವಾಯಿತು. ಇದರಲ್ಲಿ ಒಂದು ಭಾಗ ಇಂದಿರಾ ಗಾಂಧಿಯವರ [illegible] 'ಸಂಸ್ಥಾ ಕಾಂಗ್ರೆಸ್' [illegible].

ನೋಡಿ : [illegible]

ಭಾರತ ರಾಷ್ಟ್ರೀಯ ವೈಜ್ಞಾನಿಕ ದಾಖಲೆಗಳ ಕೇಂದ್ರ

ಭಾರತ ರಾಷ್ಟ್ರೀಯ ವೈಜ್ಞಾನಿಕ ದಾಖಲೆಗಳ ಕೇಂದ್ರ —ಇಂಡಿಯನ್ ನ್ಯಾಷನಲ್ ಸೈಂಟಿಫಿಕ್ [illegible] ಸೆಂಟರ್. ಇದರ ಪ್ರಸ್ವರೂಪ [illegible]. ಭಾರತದಲ್ಲಿ [illegible] ವೈಜ್ಞಾನಿಕ ಕೆಲಸಗಳ ವಿವರಗಳನ್ನು [illegible] ಸಂಗ್ರಹಿಸುತ್ತದೆ.

ಯುನೆಸ್ಕೋದ ತಾಂತ್ರಿಕ ನೆರವಿನಿಂದ ಈ ಕೇಂದ್ರ ಸ್ಥಾಪಿತವಾಯಿತು. [illegible]ವಿಧ ವಿದೇಶೀಯ ಸಂಸ್ಥೆಗಳೊಡನೆ ವೈಜ್ಞಾನಿಕ ಸಂಶೋಧನೆಗಳ [illegible] ಮಾಡುತ್ತದೆ.

ಪ್ರಕಟಿತ [illegible] ಅಪ್ರಕಟಿತ [illegible] ಸಂಗ್ರಹಿಸಿ ವೈಜ್ಞಾನಿಕ [illegible].

[illegible]

ಭಾರತ ರಿಪಬ್ಲಿಕನ್ ಪಕ್ಷ

[illegible]

1957ರಲ್ಲಿ ಈ ಒಕ್ಕೂಟ ತನ್ನ ಹೆಸರನ್ನು ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ (ಭಾರತ ರಿಪಬ್ಲಿಕನ್ ಪಕ್ಷ) ಎಂದು ಬದಲಾಯಿಸಿಕೊಂಡಿತು.

1971ರಲ್ಲಿ ರಿಪಬ್ಲಿಕನ್ ಪಕ್ಷ ಇಬ್ಭಾಗವಾಯಿತು. ಒಂದಕ್ಕೆ ಬಿ. ಡಿ. [illegible] ಮುಖ್ಯಸ್ಥರು.

ನೋಡಿ : ಬಿ. ಕೆ. ಗಾಯಕವಾಡ್ ; ಬಿ. ಡಿ. ಖೋಬ್ರಾಗಡೆ

ಭಾರತ ಸಸ್ಯ ವೈಜ್ಞಾನಿಕ ಸರ್ವೆ

ಭಾರತ ಸಸ್ಯವೈಜ್ಞಾನಿಕ ಸರ್ವೆ(ಬೊಟಾನಿಕಲ್ ಸರ್ವೆ ಆಫ್ ಇಂಡಿಯಾ) 1890ರಲ್ಲಿ ಆರಂಭವಾಯಿತು.

ದೇಶದ ಸಸ್ಯಸಂಪನ್ಮೂಲಗಳ ಬಗೆಗೆ ಕ್ರಮಬದ್ಧ ಸರ್ವೆ ನಡೆಸುವುದು ಇದರ ಉದ್ದೇಶ. ಮುಖ್ಯ ಕಾರ್ಯಾಲಯ ಕಲ್ಕತ್ತೆಯಲ್ಲಿದೆ. ಕಲ್ಕತ್ತಾ, ಹೌರಾ, ಡೆಹ್ರ ಡೂನ್, ಕೊಯಮುತ್ತೂರು, ಪುಣೆ, ಷಿಲ್ಲಾಂಗ್ ಮತ್ತು ಅಲಹಾಬಾದ್‌ಗಳಲ್ಲಿ ಇದರ ಶಾಖೆಗಳಿವೆ.

ಹೌರಾದ ಶಿವಪುರದಲ್ಲಿರುವ ರಾಷ್ಟ್ರೀಯ ಸಸ್ಯೋದ್ಯಾನ(ನ್ಯಾಷನಲ್ ಬೊಟಾನಿಕಲ್ ಗಾರ್ಡನ್)ದಲ್ಲಿ [illegible] ವೈಜ್ಞಾನಿಕ [illegible] ಸಸ್ಯಗಳ [illegible] ಬಹುಕಾಲ ಸಂರಕ್ಷಿಸುವ ಹೊಸ ಕಾರ್ಯಕ್ರಮವನ್ನು ಆರಂಭಿಸಿದ್ದಾರೆ. ಇದನ್ನು ಪ್ರಜನನ ದ್ರವ್ಯ (ಜರ್ಮ್-ಪ್ಲಾಸ್ಮ್) ಬ್ಯಾಂಕ್ ಎಂದು ಕರೆಯುತ್ತಾರೆ.

ದೇಶದ ಸಸ್ಯಗಳು ಮತ್ತು ಸಂಬಂಧಪಟ್ಟ ವಿಷಯಗಳ ಬಗೆಗೆ ಸಾಹಿತ್ಯ ಪ್ರಕಟಣೆಗಳನ್ನೂ ಸಂಸ್ಥೆ ದೊರಕಿಸುತ್ತದೆ.

ಭಾರತ ಸೇವಕ ಸಮಾಜ

ರಾಷ್ಟ್ರೀಯ ಯೋಜನೆಗಳ ಯಶಸ್ಸಿಗಾಗಿ ಜನರ ಸಹಾಯ, ಸಹಕಾರಗಳನ್ನು [illegible] 1952ರಲ್ಲಿ [illegible] ಭಾರತ ಸೇವಕ ಸಮಾಜ.

[illegible]

ಭಾರತ [illegible] ಸಮಾಜ ಇದರ ಅಧೀನ ಸಂಸ್ಥೆ.

ಭಾರತಾಂಗ್ಲ ಸಾಹಿತ್ಯ

ವ್ಯಾಪಾರಕ್ಕೆಂದು ಆಂಗ್ಲರು ಭಾರತಕ್ಕೆ ಬಂದರು. ಬಂದವರು ಇಲ್ಲೇ ನಿಂತರು. ಹೀಗೆ ನಿಂತವರ ಭಾಷೆ, ಸಾಹಿತ್ಯ ನಮ್ಮಲ್ಲಿ ಬೇರುಬಿಟ್ಟುವು. ಭಾರತೀಯರು ಅದನ್ನು ಅಭ್ಯಾಸ ಮಾಡಿದರು. ನಮ್ಮ ಸಾಹಿತಿಗಳು ಆಂಗ್ಲ [illegible] —ಭಾರತಾಂಗ್ಲ ಸಾಹಿತ್ಯ. [illegible] 'ಆಂಗ್ಲ'. [illegible]

[illegible] ಯಲ್ಲಿ ವಿಶಿಷ್ಟಸ್ಥಾನ ಗಳಿಸಿರುವ ರಾಜಾ ರಾಮಮೋಹನ ರಾಯ್ ಈ

ಸಾಹಿತ್ಯದ ಮೊದಲ ಪ್ರಯೋಗವಾದುದು. ಅವರ ಆಂಗ್ಲ ಗ್ರಂಥಗಳು ಭಾರತೀಯ ನಿಂದ ಬರೆಯಲ್ಪಟ್ಟ ಮೊದಲ ಆಂಗ್ಲ ಗದ್ಯ ಸಾಹಿತ್ಯ.

ಬ್ರಹ್ಮ ಸಮಾಜದ ಕಾರ್ಯಕರ್ತರೊಂದು ಕಡೆ. ಆರ್ಯ ಸಮಾಜದವ ರೊಂದು ಕಡೆ. ವಿಪುಲವಾಗಿ ಆಂಗ್ಲ ಭಾಷೆಯಲ್ಲಿ ಗದ್ಯ ಗ್ರಂಥಗಳನ್ನು ತಮ್ಮ ತಮ್ಮ ತತ್ತ್ವಗಳ ಪ್ರತಿಪಾದನೆಗಾಗಿ ರಚಿಸಿ ಯಶಸ್ವಿಯಾದರು. ಅವರಲ್ಲಿ ಮಹರ್ಷಿ ದೇವೇಂದ್ರನಾಥ ಠಾಕೂರ್, ಕೇಶವಚಂದ್ರ ಸೇನ್, ಈಶ್ವರಚಂದ್ರ ವಿದ್ಯಾಸಾಗರ ಪ್ರಮುಖರು.

ಏಚ್ಚೆತ್ತ ಭಾರತೀಯರಲ್ಲಿ ಹೊಸ ಹುರುಪನ್ನು ಮೂಡಿಸುವುದರಲ್ಲಿ ಭಾರತೀಯರಿಂದ ಬರೆಯಲ್ಪಟ್ಟ ಆಂಗ್ಲ ಗದ್ಯ ಸಾಹಿತ್ಯ ಅತ್ಯಂತ ಪ್ರಭಾವ ಶಾಲಿಯಾಯಿತು. ತೆಲಂಗ್ ಅವರ ಭಗವದ್ಗೀತೆಯ ಆಂಗ್ಲ ಅನುವಾದ, ರಾನಡೆಯವರ 'ಮರಾಠರ ಆಧಿಪತ್ಯದ ಉದಯ–ಉನ್ನತಿ', ಗೋಖಲೆ ಯವರ ಭಾಷಣಗಳ ಸಂಗ್ರಹ, ಇವೆಲ್ಲ ಭಾರತೀಯ ಆಂಗ್ಲ ಗದ್ಯ ಸಾಹಿತ್ಯದ ಮೈಲುಗಲ್ಲುಗಳು.

ಭಾರತೀಯತೆಗೆ ಒಂದು ಹೊಸ ಪೌರುಷವನ್ನು ತಂದುಕೊಟ್ಟಿದ್ದು ಸ್ವಾಮಿ ವಿವೇಕಾನಂದರ ಭಾಷಣಗಳು, ಬರೆಹಗಳು. ರಾಮಕೃಷ್ಣ ಸಂಘದ 'ಪ್ರಬುದ್ಧ ಭಾರತ' ಆ ಪರಂಪರೆಯನ್ನು ಉಳಿಸಿಕೊಂಡು ಬಂದಿದೆ.

ರಮೇಶ ಚಂದ್ರ ದತ್ತರ ಐತಿಹಾಸಿಕ ಕೃತಿಗಳು, ಕಾವ್ಯ, ಮಹಾಕಾವ್ಯಗಳ ಅನುವಾದಗಳು ಗದ್ಯಸಾಹಿತ್ಯದಲ್ಲಿ ಹೆಸರು ಗಳಿಸಿವೆ. ಅವುಗಳಲ್ಲಿ 'ಪ್ರಾಚೀನ ಭಾರತದ ನಾಗರಿಕತೆ', 'ವಿಕ್ಟೋರಿಯಾ ರಾಣಿಯ ಕಾಲ ದಲ್ಲಿ ಭಾರತದ ನಾಗರಿಕತೆ', 'ಮಧ್ಯಯುಗ ಹಾಗೂ ಆಧುನಿಕ ಬಂಗಾಳ', ರಾಮಾಯಣ, ಮಹಾಭಾರತ ಅನುವಾದ —ಇವು ಮುಖ್ಯವಾದವು.

ಗದ್ಯಸಾಹಿತ್ಯದ ಬೆಳೆ ಹೆಚ್ಚುತ್ತಿದ್ದಂತೆಯೇ ಆಂಗ್ಲ ಭಾಷೆಯಲ್ಲಿ ಪ್ರಕಟ ವಾದ ಪತ್ರಿಕೆಗಳ ಸಂಖ್ಯೆಯೂ ಹೆಚ್ಚಿತು. ಮುಂಬಯಿಯಲ್ಲಿ ಬಹ್ರಾಂಜಿ ಮಲಬಾರಿ 'ಇಂಡಿಯನ್ ಪೇಟ್ರಿಯಟ್', 'ವಾಯ್ಸ್ ಆಫ್ ಇಂಡಿಯಾ' ಹಾಗೂ 'ಈಸ್ಟ್ ಅಂಡ್ ವೆಸ್ಟ್' ಎಂಬ ಪತ್ರಿಕೆಗಳನ್ನು ಬಹಳ ಕಾಲ ನಡೆಸಿದರು. ಇವರ ಗದ್ಯಗ್ರಂಥ 'ಗುಜರಾತ್ ಮತ್ತು ಗುಜರಾತಿಗಳು' ಬಹಳ ಪ್ರಸಿದ್ಧವಾದದ್ದು.

ಸ್ವಾತಂತ್ರ್ಯಸಂಗ್ರಾಮದ ಕಾಲದ ಗದ್ಯಸಾಹಿತ್ಯ ಇಡೀ ಭಾರತಾಂಗ್ಲ ಸಾಹಿತ್ಯದ ಗದ್ಯಸಾಹಿತ್ಯದಲ್ಲೇ ವಿಶೇಷವಾದ ಸ್ಥಾನ ಪಡೆದಿದೆ. ಅತ್ಯಂತ ರಾಷ್ಟ್ರಾಭಿಮಾನದಿಂದಕೂಡಿದ ಪ್ರಭಾವಶಾಲಿಯಾದ ಗ್ರಂಥಗಳೂ ಲೇಖನಗಳೂ ಈ ಕಾಲದಲ್ಲಿ ಪ್ರಕಟವಾದುವು. ಸ್ವಾತಂತ್ರ್ಯ ಚಳುವಳಿ ಯಲ್ಲಿ ಹೋರಾಡಿ ಸೆರೆಮನೆ ಸೇರಿದ ಅನೇಕರು ಸೆರೆಮನೆಯಲ್ಲೇ ಸಾಹಿತ್ಯ ಕೃತಿಗಳನ್ನು ರಚಿಸಿದರು. ಜವಾಹರಲಾಲ ನೆಹರೂ ಅವರ ಪತ್ರಲೇಖನ ಗಳು 'ಪ್ರಪಂಚ ಚರಿತ್ರೆಯ ಇಣಿಕು ನೋಟಗಳು'. ಇವರ ತೌರು ಸೆರೆಮನೆ. ಈ ಕಾಲದಲ್ಲಿ ರಾಜಕಾರಣಿಗಳು ಸಾಹಿತಿಗಳಾಗಿಯೂ ದಾರ್ಶನಿಕ ರಾಗಿಯೂ ಇದ್ದು ಇವರ ಗದ್ಯ ಸಾಹಿತ್ಯದಲ್ಲಿ ಈ ಎಲ್ಲ ಭಾವನೆಗಳು ಸಮನ್ವಯವಾಗಿವೆ.

ಭಾರತಾಂಗ್ಲ ಗದ್ಯ ಸಾಹಿತ್ಯದಲ್ಲಿ ಶಾಶ್ವತವಾಗಿ ಉಳಿಯುವ ಹೆಸರುಗಳು ರವೀಂದ್ರನಾಥ ಠಾಕೂರ್, ಅರವಿಂದ ಘೋಷ್, ಮಹಾತ್ಮ ಗಾಂಧೀ, ಜವಾಹರಲಾಲ ನೆಹರೂ, ಸಿ. ರಾಜಗೋಪಾಲಾಚಾರಿ ಅವರದ್ದು. ಗಾಂಧೀಜಿ ಅವರ ಆತ್ಮಕಥೆ (ಆಂಗ್ಲಾನುವಾದ), ಮತ್ತು 'ಯಂಗ್ ಇಂಡಿಯಾ' ಪತ್ರಿಕೆಗಳಲ್ಲಿನ ಲೇಖನಗಳು ಇಂದಿಗೂ ಯಾವ ಭಾರತೀಯ ನನ್ನೂ ಪ್ರಕಾಶಗೊಳಿಸುತ್ತವೆ. ಗಾಂಧೀಜೀ 'ಸಾಹಿತಿ'ಯಾಗಿದ್ದ 'ಗಾಂಧೀ ಸಾಹಿತ್ಯ' ಭಾರತಾಂಗ್ಲ ಸಾಹಿತ್ಯದ ಒಂದು ಪ್ರಮುಖ ಅ ಅವರ ಸರಳತೆ, ಸೌರಭ, ಸತ್ಯ, ಸತ್ಯಪ್ರಿಯತೆ, ಭಾರತಾಂಗ್ಲ ಸಾಹಿತ ಕೆಲವೊಂದು ವಿಶೇಷ ಗುಣಗಳನ್ನು ತಂದುಕೊಟ್ಟಿವೆ.

ಗದ್ಯ ಸಾಹಿತ್ಯದಲ್ಲಿ ತಮ್ಮದೇ ಆದ ವಿಕ್ರಮವನ್ನು ಸ್ಥಾಪಿಸಿದ ನೆಹರೂ ಹಾಗೂ ರಾಜಗೋಪಾಲಾಚಾರಿ. ನೆಹರೂ ಅವರ ಆತ್ಮ 'ಪ್ರಪಂಚ ಚರಿತ್ರೆಯ ಇಣಿಕು ನೋಟಗಳು' ಮತ್ತು 'ಭಾರತ ದರ್ಶ ರಾಜಗೋಪಾಲಾಚಾರಿಯವರ 'ರಾಮಾಯಣ', 'ಮಹಾಭಾರ ಅತ್ಯಂತ ಜನಪ್ರಿಯ ಗದ್ಯ ಗ್ರಂಥಗಳು.

ಭಾರತಾಂಗ್ಲ ಗದ್ಯಸಾಹಿತ್ಯದ ಬರೆಹ, ಪ್ರಕಟಣೆ, ಮಾರಾಟ ಸಂಬಂಧಿಸಿ ಕೆ.ಎಂ. ಮುನ್ಷಿ ಮತ್ತು ಅವರಿಂದ ಸ್ಥಾಪಿತವಾದ ಭಾರತೀ ವಿದ್ಯಾಭವನ ಹಾಗೂ 'ಭವನ್ಸ್ ಜರ್ನಲ್' ಪತ್ರಿಕೆಗಳ ಸೇವೆ ಗ ನಾರ್ಹ. ಭಾರತೀಯ ವಿದ್ಯಾಭವನ ಆಂಗ್ಲ ಭಾಷೆಯ ನೂರ ಗ್ರಂಥಗಳನ್ನು ಪ್ರಕಟಿಸಿ ಖ್ಯಾತಿ ಪಡೆದಿದೆ.

ಭಾರತೀಯರು ವಿಶೇಷ ವಿಕ್ರಮವನ್ನು ಸ್ಥಾಪಿಸಿರುವ ಇನ್ನೆರ ಭಾರತಾಂಗ್ಲ ಪ್ರಕಾರಗಳು —ಕಾವ್ಯ ಹಾಗೂ ಕಾದಂಬರಿ.

ಭಾರತಾಂಗ್ಲ ಕಾವ್ಯಪರಂಪರೆ ಮೈಕೆಲ್ ಮಧುಸೂದನ ದತ್ತ ಆರಂಭವಾಯಿತು.

ಹೆನ್ರಿ ಡೆರೋಜಿಯೋನ ತಾಯಿ ಭಾರತೀಯರು. ಹದಿನಾಲ್ಕ ವಯಸ್ಸಿನಿಂದಲೇ ಪದ್ಯ ರಚಿಸಿದ ಡೆರೋಜಿಯೋ ಭಾರತೀಯ ಸ ದಾಯಗಳನ್ನು ಅಲ್ಲಗಳೆಯುವುದರಲ್ಲೇ ಹೆಚ್ಚು ಮಗ್ನರಾದರು.

ಇಂಗ್ಲಿಷಿನಲ್ಲಿ ಪದ್ಯ ಸಂಪುಟವನ್ನು ರಚಿಸಿದವರಲ್ಲಿ ಮೊದಲ ಭಾರತೀ ಪ್ರಸಾದ್ ಘೋಷ್. ಆರಂಭದ ಕಾಲದಲ್ಲಿ ಯಶಸ್ವಿಯಾದ ಕವನಗ ರಚಿಸಿದ ಕೀರ್ತಿ ತೋರು ದತ್ತರದು.

ಭಾರತಾಂಗ್ಲ ಕಾವ್ಯ ಚರಿತ್ರೆಯಲ್ಲಿ ಅಮರ ಸ್ಥಾನ ಪಡೆದಿರುವ ರವೀಂದ್ರನಾಥ ಠಾಕೂರರು. ಠಾಕೂರರ 'ಗೀತಾಂಜಲಿ'ಗೆ (ಭಾಷಾಂತರಕ್ಕೆ) ನೊಬೆಲ್ ಬಹುಮಾನ ಲಭ್ಯವಾದದ್ದೇ ಭಾರತ ಸಾಹಿತ್ಯ ಯಾವ ಮಟ್ಟವನ್ನು ಮುಟ್ಟಿತು ಎಂಬುದಕ್ಕೆ ಸಾಕ್ಷಿ.

ಭಾರತಾಂಗ್ಲ ಕಾವ್ಯಕ್ಕೆ ವಿಶ್ವ ಸಾಹಿತ್ಯ ಚರಿತ್ರೆಯಲ್ಲಿ ಉನ್ನತ ಸ್ಥಾನ ಗಳಿಸಿಕೊಟ್ಟ ಮತ್ತೊಬ್ಬ ಕವಿ ಅರವಿಂದ ಘೋಷ್, ಅರ 'ಸಾವಿತ್ರಿ' ಮಹಾಕಾವ್ಯವೆನಿಸಿದೆ.

ಹಿರಿಯ ಕವಿಗಳ ಪಂಕ್ತಿಗೆ ಸೇರಿದ ಇನ್ನೊಬ್ಬ ವ್ಯಕ್ತಿ ಸರೋ ನಾಯ್ಡು. 'ಭಾರತದ ಕೋಗಿಲೆ' ಎಂಬ ಬಿರುದು ಪಡೆದ ಸರೋ ಭಾರತ, ಇಂಗ್ಲೆಂಡ್ ಎರಡು ದೇಶಗಳ ಮನ್ನಣೆಗೂ ಪಾತ್ರರು.

ಅವರ ಅನಂತರ ಈ ಬಗೆಯ ಕಾವ್ಯ ಸೃಷ್ಟಿ ಹರೀಂದ ಚಟ್ಟೋಪಾಧ್ಯಾಯರಿಂದ ಮುಂದುವರಿಯಿತು.

ಆಧುನಿಕ ಭಾರತಾಂಗ್ಲ ಕಾವ್ಯ ಜೀವನದ ದಿನನಿತ್ಯದ ಘಟನೆಗಳಿಗ ಹತ್ತಿರವಾಗಿ ನಿಂತಿದೆ. ವಿಶ್ವದ ಆಧುನಿಕ ಕವಿಗಳ ಪ್ರಭಾವ ನಮ್ಮ ದೇ ಉಂಟಾಗಿದೆ. ಕಲ್ಕತ್ತೆಯಲ್ಲಿರುವ 'ರೈಟರ್ಸ್ ವರ್ಕ್‌ಷಾಪ್', ('ಬರೆಹ ಕಾರ್ಯಾಗಾರ') ಸಂಸ್ಥೆಯ ಪಿ. ಲಾಲ್, ಪ್ರೀತೀಶ್ ನಂದಿ ಮತ್ತಿ ಕಾವ್ಯದಲ್ಲಿ ಹೊಸ ಪ್ರಯೋಗಗಳನ್ನು ಮಾಡುತ್ತಿದ್ದಾರೆ. ನಿ ಇಝಿಕಿಲ್‌ರ ಕವನಗಳು ಬಹಳ ಪ್ರಭಾವಶಾಲಿಯಾಗಿವೆ. ಕನ್ನಡ ಸ

ನಲ್ಲಿ ಬರೆದ ಪ್ರಯೋಗಗಳನ್ನು ಮಾಡಿರುವ ರಾಮಾನುಜನ್ ಆಂಗ್ಲ ಕಾವ್ಯ ದಲ್ಲೂ ಯಶಸ್ಸು ಸಂಪಾದಿಸಿದ್ದಾರೆ. ಅವರ ಆಂಗ್ಲ ಕವನಗಳಲ್ಲಿ ಸತ್ವವಿದೆ.

ವಿಶೇಷ ಮನ್ನಣೆಗೆ ಪಾತ್ರವಾಗಿರುವ ಇನ್ನೊಂದು ಭಾರತಾಂಗ್ಲ ಸಾಹಿತ್ಯ ಪ್ರಕಾರ ಕಾದಂಬರಿ. ಕಾದಂಬರಿಯ ಹುಟ್ಟನ್ನು ತೋರು ದತ್ತ ರಲ್ಲೇ ಮೊದಲಿಗೆ ನಾವು ಕಾಣಬಹುದು. ಅಲ್ಲಿ ಆರಂಭವಾದದ್ದು ಇಂದಿಗೂ ಬಿಡತಡೆಯಿಲ್ಲದೆ ಹರಿದುಬರುತ್ತಿದೆ. ತೋರು ದತ್ತರ 'ಬಿಯಾಂಕ', ರಮೇಶ ಚಂದ್ರರ 'ಲೇಕ್ ಆಫ್ ಪಾಮ್ಸ್' ಹಾಗೂ 'ದಿ ಸ್ಲೇವ್ ಗರ್ಲ್ ಆಫ್ ಆಗ್ರಾ', 'ತೋದರ್‌ಮಲ್' ಇವು ಆರಂಭಕಾಲದ ಕಾದಂಬರಿಗಳು. ಕಾದಂಬರಿ ಕ್ಷೇತ್ರದಲ್ಲೂ ರವೀಂದ್ರನಾಥ ಠಾಕೂರರ ಹೆಸರು ಅಮರವಾಗಿದೆ. ಅವರ 'ದಿ ರೆಕ್' 'ಗೋರಾ' ಹಾಗೂ 'ಹೋಮ್ ಅಂಡ್ ದಿ ವರ್ಲ್ಡ್' ವಿಶ್ವಖ್ಯಾತಿ ಪಡೆದ ಕಾದಂಬರಿಗಳು.

ಇಂದು ಭಾರತಾಂಗ್ಲ ಕಾದಂಬರಿ ಕ್ಷೇತ್ರದಲ್ಲಿ ಹೆಸರಾದವರು : ಮುಲ್ಕ್ ರಾಜ್ ಆನಂದ್, ಆರ್. ಕೆ. ನಾರಾಯಣ್, ರಾಜಾರಾವ್, ಮನೋಹರ ಮಳಗಾಂವ್‌ಕರ್, ಕಮಲಾ ಮಾರ್ಕಂಡೇಯ, ನಯನ ತಾರಾ, ಖುಷ್ ವಂತ್ ಸಿಂಗ್, ಭವಾನಿ ಭಟ್ಟಾಚಾರ್ಯ ಮೊದಲಾದವರು. ಈ ಕ್ಷೇತ್ರದಲ್ಲಿ ಮುಲ್ಕ್‌ರಾಜ್ ಆನಂದರ 'ಕೂಲಿ', 'ದಿ ಅನ್‌ಟಚಬಲ್' ಮತ್ತು 'ಟೂ ಲೀವ್ಸ್ ಅಂಡ್ ಎ ಬಡ್', ಆರ್. ಕೆ. ನಾರಾಯಣ್ ಅವರ 'ದಿ ಗೈಡ್', 'ವೈಟಿಂಗ್ ಫಾರ್ ದಿ ಮಹಾತ್ಮ', ಮತ್ತು 'ದಿ ಡಾರ್ಕ್ ರೂಮ್', ರಾಜಾ ರಾಯರ 'ಕಾಂತಾಪುರ' ಮತ್ತು 'ದಿ ಸರ್ಪೆಂಟ್ ಅಂಡ್ ದಿ ರೋಪ್', ಕಮಲಾ ಮಾರ್ಕಂಡೇಯರ 'ನೆಕ್ಟರ್ ಇನ್ ಎ ಸೀವ್' ಹಾಗೂ 'ಪೊಸೆಷನ್', ಭವಾನಿ ಭಟ್ಟಾಚಾರ್ಯರ 'ಎ ಗಾಡೆಸ್ ನೇಮ್ಡ್ ಗೋಲ್ಡ್' ಮತ್ತು 'ಸೋ ಮೆನಿ ಹಂಗರ್ಸ್' ಕಾದಂಬರಿಗಳು ಪ್ರಖ್ಯಾತವಾದವು.

ಈ ಎಲ್ಲ ಕಾದಂಬರಿಗಳಲ್ಲೂ ಸಮಕಾಲೀನ ಜೀವನ ಚಿತ್ರವಿದೆ. ಆದರೆ ಈ ಚಿತ್ರ ಅತ್ಯಂತ ತೀವ್ರ ನೈಜತೆಯಿಂದ, ಕೆಲವೊಮ್ಮೆ ವಿಡಂಬನಾತ್ಮಕ ವಾಗಿ ಮೂಡಿರುವುದು ಖುಷ್‌ವಂತ್ ಸಿಂಗ್, ನೀರದ್ ಚೌಧುರಿ ಹಾಗೂ ನಯಿಪಾಲ್ ಅವರ ಕೃತಿಗಳಲ್ಲಿ.

ಕಾದಂಬರಿ ಸಾಹಿತ್ಯದಂತೆಯೇ ಕಥಾಸಾಹಿತ್ಯವೂ ವಿಪುಲವಾಗಿ ಬೆಳೆದಿದೆ. ಕಾದಂಬರಿಕಾರರೆಲ್ಲ ಸಾಮಾನ್ಯವಾಗಿ ಕಥೆಗಾರರೂ ಆಗಿದ್ದಾರೆ. ಭಾರತ ದಲ್ಲಿ ಪ್ರಕಟವಾಗುವ ಆಂಗ್ಲ ಪತ್ರಿಕೆಗಳಲ್ಲಿ ಕಥೆಗಳಿಗೆ ವಿಶೇಷ ಸ್ಥಾನ. ಈ ಕಥೆ ಕಾದಂಬರಿಗಳಲ್ಲಿ ಸಮಾಜದ ದೀನ ದಲಿತರ, ಕೆಳ ವರ್ಗಗಳ, ದಿನ ನಿತ್ಯದ ಬದುಕಿನ ಬವಣೆಯ ಸಮಸ್ಯೆಗಳ ಚಿತ್ರಗಳಿಗೆ ಪ್ರಾಧಾನ್ಯ.

ಆರಂಭದ ಕಾಲದ ಕೃತಿಗಳಲ್ಲಿ ಕಾಣುವ ಬದುಕಿನ ಶ್ರೀಮಂತಿಕೆ, ಸೊಗಸು, ಶೃಂಗಾರ, ಲಾಲಿತ್ಯ ಇವು ಈಗಿನ ಕಾದಂಬರಿಗಳಲ್ಲಿಲ್ಲ.

ಭಾರತಾಂಗ್ಲ ಸಾಹಿತ್ಯದಲ್ಲಿ ನಾಟಕ ಪ್ರಕಾರ ಕಾವ್ಯ, ಕಥೆ, ಕಾದಂಬರಿ ಗಳಷ್ಟು ವಿಶಾಲವಾಗಿ ಬೆಳೆದಿಲ್ಲ. ರಂಗದ ಮೇಲೆ ಯಶಸ್ವಿಯಾಗಬಲ್ಲ ನಾಟಕಗಳಂತೂ ತೀರ ಕಡಮೆ. ಆದರೂ ಅರವಿಂದರ 'ವಾಸವದತ್ತ', ರವೀಂದ್ರರ ಕೆಲವು ನಾಟಕಗಳು, ಹರೀಂದ್ರನಾಥ ಚಟ್ಟೋಪಾಧ್ಯಾಯರ ಕೆಲವು ನಾಟಕಗಳು, ವಿ. ವಿ. ಶ್ರೀನಿವಾಸ ಅಯ್ಯಂಗಾರ್ ಅವರ ಪ್ರಹಸನ ಗಳು ಪ್ರಸಿದ್ಧವಾಗಿವೆ. ಬಹುಶಃ ಭಾರತಾಂಗ್ಲ ನಾಟಕಗಳಲ್ಲಿ ಅಮರ ವಾಗಿ ಉಳಿಯಬಲ್ಲ ನಾಟಕ ಟಿ. ಪಿ. ಕೈಲಾಸಂ ಅವರ 'ಕರ್ಣ'. ಕೈಲಾಸಂ 'ಫುಲ್‌ಫಿಲ್‌ಮೆಂಟ್' ಮತ್ತು 'ಬರ್ಡನ್' ಎಂಬ ಬೇರೆ ಎರಡು ನಾಟಕಗಳನ್ನೂ ಇಂಗ್ಲಿಷಿನಲ್ಲಿ ಬರೆದಿದ್ದಾರೆ.

ಎಸ್. ಐ. ಅಯ್ಯರ್, ಲೋಬೊ ಪ್ರಭು, ಫ್ರೆಡ್ ..... ಇವರೆಲ್ಲ ನಾಟಕಗಳನ್ನು ಬರೆದಿದ್ದರೂ ಈ ಕ್ಷೇತ್ರ ಬಡವು.

ವಿಮರ್ಶೆ ದರ್ಶನಶಾಸ್ತ್ರಗಳ ಕ್ಷೇತ್ರದಲ್ಲಿ ಹೆಸರುಗಳು ಕೆಲವಾದರೂ. ವಿಮರ್ಶಕರಾಗಿ, ದಾರ್ಶನಿಕರಾಗಿ ಅರವಿಂದ ಘೋಷ್ ಹಾಗೂ ಸರ್ವಪಲ್ಲಿ ರಾಧಾಕೃಷ್ಣನ್ ಅವರ ಸೇವೆ ಗಣನೀಯ. ಜಿಡ್ಡು ಕೃಷ್ಣಮೂರ್ತಿ ಅವರದೇ ಒಂದು ಸ್ವತಂತ್ರ ಪಂಥ.

ಅವರಲ್ಲದೆ ಕಲಾವಿಮರ್ಶಕರಾಗಿ ಆನಂದ ಕುಮಾರಸ್ವಾಮಿ ಮತ್ತು ಜಿ. ವೆಂಕಟಾಚಲಂ. ಸಾಹಿತ್ಯ ವಿಮರ್ಶಕರಾಗಿ ಕೆ. ಆರ್. ಶ್ರೀನಿವಾಸ ಅಯ್ಯಂಗಾರ್ ಉತ್ತಮ ಕೆಲಸ ಮಾಡಿದ್ದಾರೆ. ಕಲಾ ವಿಮರ್ಶೆ ಎಷ್ಟು ಉತ್ತಮವಾಗಿರಬಹುದು ಎನ್ನುವುದಕ್ಕೆ ಆನಂದ ಕುಮಾರಸ್ವಾಮಿಯ 'ದಿ ಡಾನ್ಸ್ ಆಫ್ ಶಿವ' (ಶಿವನ ನೃತ್ಯ) ನಿದರ್ಶನ. ನಾರಾಯಣ ಮೆನನ್, ವಿ. ಕೆ. ಗೋಕಾಕ್, ಅಮರನಾಥ ಝಾ, ಅಮಿಯಾ ಚಕ್ರವರ್ತಿ, ಹುಮಾಯೂನ್ ಕಬೀರ್ ಇವರೂ ವಿಮರ್ಶೆಯ ಕ್ಷೇತ್ರದಲ್ಲಿ ಗಣನೀಯರು.

ಭಾರತೀಯರು ಆಂಗ್ಲ ಭಾಷೆಯಲ್ಲಿ ಬಿಡಿ ಕವನಗಳನ್ನೂ ಪ್ರಬಂಧ ಗಳನ್ನೂ ಕಥೆ ಕಾದಂಬರಿಗಳನ್ನೂ ವೈಜ್ಞಾನಿಕ ವಿಮರ್ಶಾತ್ಮಕ ಬರೆವ ಗಳನ್ನೂ ರಚಿಸುತ್ತಿದ್ದಾರೆ. ಪತ್ರಿಕೆಗಳಲ್ಲಿ ಪ್ರತಿ ದಿನವೂ ಹಲವಾರು ಉತ್ತಮ ಬರೆವಗಳನ್ನು ನಾವು ಕಾಣಬಹುದು.

ನೋಡಿ : ಆನಂದ ಕುಮಾರಸ್ವಾಮಿ ; ಈಶ್ವರಚಂದ್ರ ವಿದ್ಯಾಸಾಗರ ; ಎಂ. ಜಿ. ರಾನಡೆ; ಕೆ. ಎಂ. ಮುನ್ಷಿ; ಕೆ. ಟಿ. ತೆಲಂಗ್; ಕೇಶವಚಂದ್ರ ಸೇನ್; ಗಾಂಧೀ; ಗೋಪಾಲಕೃಷ್ಣ ಗೋಖಲೆ; ಚಕ್ರವರ್ತಿ ರಾಜಗೋಪಾಲಾಚಾರಿ ; ಜದುನಾಥ ಸರ್ಕಾರ್; ಜವಾಹರಲಾಲ ನೆಹರೂ; ಜಿಡ್ಡು ಕೃಷ್ಣಮೂರ್ತಿ; ತೋರು ದತ್; ಮೈಕೆಲ್ ಮಧುಸೂಧನ ದತ್ ; ಮಿನೂ ಮಸಾನಿ ; ರಮೇಶಚಂದ್ರ ದತ್ ; ವಿ. ಎಸ್. ಶ್ರೀನಿವಾಸಶಾಸ್ತ್ರೀ ; ವಿನೋಬಾ ಭಾವೆ; ವಿವೇಕಾನಂದ ; ಸರೋಜಿನಿ ನಾಯುಡು; ಸುನೀತಿ ಕುಮಾರ ಚಟರ್ಜಿ; ಹರೀಂದ್ರನಾಥ ಚಟ್ಟೋಪಾಧ್ಯಾಯ

ಭಾರತೀಯ ಕಾವ್ಯ ಮೀಮಾಂಸೆ

ನೋಡಿ : : ಸಂಪುಟ ೫

ಭಾರತೀಯ ಕ್ರಾಂತಿದಳ

ಪಟ್ನಾದಲ್ಲಿ 1967ರ ಮೇ ತಿಂಗಳಿನಲ್ಲಿ ನಡೆದ ಸಮ್ಮೇಳನದ ಫಲವಾಗಿ ಹುಟ್ಟಿದ ರಾಜಕೀಯ ಪಕ್ಷ ಭಾರತೀಯ ಕ್ರಾಂತಿದಳ.



ಪ್ರಾಮಾಣಿಕ ಹಾಗೂ ದಕ್ಷ ಆಡಳಿತ ವ್ಯವಸ್ಥೆ, ನ್ಯಾಯ ಬೆಲೆಗೆ ಜನ ಜೀವ ನದ ಅವಶ್ಯಕತೆಗಳನ್ನು ಪೂರೈಸುವುದು ; ಉದ್ಯೋಗಾವಕಾಶಗಳನ್ನು ಹೆಚ್ಚಿಸು ವುದು ; ಭ್ರಷ್ಟಾಚಾರ ಮತ್ತು ಹಿಂಸಾ ಪ್ರವೃತ್ತಿಗಳನ್ನು ನಿವಾರಿಸಿ ಸಾಮಾಜಿಕ ನ್ಯಾಯ ದೊರಕಿಸುವುದು–ಈ ಪಕ್ಷದ ಧ್ಯೇಯಗಳು.

ಪಕ್ಷದ ಅಧ್ಯಕ್ಷ ಚೌಧರಿ ಚರಣಸಿಂಗ್ ಅವರು.

ವಿ. ಕೆ. ಡಿ. : ಚರಣಸಿಂಗ್

ಭಾರತೀಯ ಕೃಷಿ ಸಂಶೋಧನಾ ಮಂಡಲಿ

ಭಾರತ ಕೃಷಿಪ್ರಧಾನವಾದ ದೇಶ. ಕೃಷಿ ಸಂಬಂಧವಾದ ಸಂಶೋಧನೆಗೆ ಸಹಾಯ ನೀಡಿ ಅದನ್ನು ಸಂಘಟಿಸಲು 1929ರಲ್ಲಿ ಭಾರತೀಯ ಕೃಷಿ ಸಂಶೋಧನಾ ಮಂಡಲಿ (ಇಂಡಿಯನ್ ಕೌನ್ಸಿಲ್ ಆಫ್ ಅಗ್ರಿಕಲ್ಚರಲ್ ರಿಸರ್ಚ್) ಸ್ಥಾಪಿತವಾಯಿತು.

ಕೇಂದ್ರದಲ್ಲಿ ಮತ್ತು ರಾಜ್ಯದಲ್ಲಿರುವ ಸಂಶೋಧನಾ ಸಂಸ್ಥೆಗಳಿಗೆ, ವಿಶ್ವವಿದ್ಯಾನಿಲಯಗಳಿಗೆ, ಅಂಗೀಕೃತ ಖಾಸಗಿ ಸಂಸ್ಥೆಗಳಿಗೆ ಅವುಗಳ ಕೃಷಿ ಸಂಬಂಧ ಕಾರ್ಯಗಳಲ್ಲಿ ನೆರವು ನೀಡುವುದು ಇದರ ಜವಾಬ್ದಾರಿ.

ಈ ಸಂಸ್ಥೆಯ ಪ್ರಧಾನ ಕಾರ್ಯಾಲಯ ದೆಹಲಿಯಲ್ಲಿದೆ.

ಭಾರತೀಯ ಕೃಷಿ ಸಂಶೋಧನಾ ಸಂಸ್ಥೆ

ಪೂಸಾ ಕೃಷಿ ಸಂಶೋಧನಾ ಸಂಸ್ಥೆ ಎಂದು ಪರಿಚಿತವಾಗಿ ಕರೆಯಲ್ಪಡುತ್ತಿದ್ದ ಭಾರತೀಯ ಕೃಷಿ ಸಂಶೋಧನಾ ಸಂಸ್ಥೆ (ಇಂಡಿಯನ್ ಅಗ್ರಿಕಲ್ಚರಲ್ ರಿಸರ್ಚ್ ಇನ್ಸ್‌ಟಿಟ್ಯೂಟ್) 1936ರಿಂದ ನವದೆಹಲಿಯಲ್ಲಿದೆ. ಅದಕ್ಕೆ ಮೊದಲು ಆ ಸಂಸ್ಥೆ ಬಿಹಾರಿನ ಪೂಸಾ ಎಂಬಲ್ಲಿ ಇದ್ದಿತು. ಸ್ವಾತಂತ್ರ್ಯ ಪೂರ್ವ ಕಾಲದಲ್ಲಿ ಅದರ ಹೆಸರು: ಇಂಪೀರಿಯಲ್ ಅಗ್ರಿಕಲ್ಚರಲ್ ರಿಸರ್ಚ್ ಇನ್ಸ್‌ಟಿಟ್ಯೂಟ್.

ಇಲ್ಲಿ ಕೃಷಿಗೆ ಸಂಬಂಧಿಸಿದ ಮೂಲಭೂತ ಹಾಗೂ ಅನ್ವಯಿಕ ಸಂಶೋಧನೆಗಳು ನಡೆಯುತ್ತವೆ. ಇಲ್ಲಿ ಕೃಷಿ ವಿಷಯದಲ್ಲಿ ಸ್ನಾತಕೋತ್ತರ ಶಿಕ್ಷಣ ಸೌಲಭ್ಯವೂ ಇದೆ.

1905ಕ್ಕೆ ಮೊದಲು ಪೂಸಾ ಕ್ಷೇತ್ರವನ್ನು ಸಾಕು ಪ್ರಾಣಿಗಳ ಒಳ್ಳೆಯ ತಳಿ ಪಡೆಯುವುದಕ್ಕಾಗಿಯೂ ಅನಂತರ ಹೊಗೆಸೊಪ್ಪಿನ ಬೆಳೆಗಾಗಿಯೂ ಉಪಯೋಗಿಸಿದರು. 1905ರಲ್ಲಿ ಇಂಪೀರಿಯಲ್ ಕೃಷಿ ಸಂಶೋಧನಾ ಸಂಸ್ಥೆ ಆರಂಭವಾದಾಗ ಪ್ರಾಯೋಗಿಕ ಕೃಷಿಕ್ಷೇತ್ರವನ್ನೂ ಕೃಷಿ ಕಾಲೇಜನ್ನೂ ಇಲ್ಲಿ ಸ್ಥಾಪಿಸಲಾಯಿತು. ಕೃಷಿ ಖಾತೆಯ ಅಧಿಕಾರಿಗಳಿಗೆ ಇಲ್ಲಿ ವಿಶೇಷ ತರಬೇತಿ ನೀಡಲಾಗುತ್ತಿತ್ತು.

ಕಾಡಿಗೆರೋಗ ನಿರೋಧಕ ಗೋಧಿ ತಳಿಯನ್ನು ಪಡೆದದ್ದು ಪೂಸಾ ಸಂಸ್ಥೆಯಲ್ಲಿ. ಈ ತಳಿಯನ್ನು ಆಗಿನ ಸಂಯುಕ್ತ ಪ್ರಾಂತ, ವಾಯವ್ಯ ಗಡಿ ಪ್ರಾಂತ (ಈಗ ಪಾಕಿಸ್ತಾನ), ಪಂಜಾಬುಗಳಲ್ಲಿ ವ್ಯಾಪಕವಾಗಿ ಯಶಸ್ವಿಯಾಗಿ ಬೆಳೆಸಿದರು. ಆಯ್ದ ಪ್ರಾಣಿತಳಿಗಳಿಂದ ಉತ್ತಮ ಸಂತಾನ ಪಡೆಯುವುದು ಪೂಸಾ ಸಂಸ್ಥೆ ಸಾಧಿಸಿದ ಮತ್ತೊಂದು ಪ್ರಗತಿ. ಹತ್ತೇ ವರ್ಷಗಳಲ್ಲಿ ಉತ್ತಮ ತಳಿ ದನಗಳಿಂದಾಗಿ ಒಂದಕ್ಕೆ ಎರಡುಪಟ್ಟು ಹಾಲು ಪಡೆಯುವುದು ಸಾಧ್ಯವಾಯಿತು.

1934ರಲ್ಲಿ ಆದ ಒಂದು ಭೂಕಂಪದಿಂದಾಗಿ ಪೂಸಾದ ಈ ಸಂಸ್ಥೆಯ ಕಟ್ಟಡದ ಪ್ರಧಾನ ಭಾಗ ಮುರಿದುಬಿತ್ತು. ಅಲ್ಲದೆ ಅಲ್ಲಿ ಕೆಲವು ಸೌಲಭ್ಯಗಳ ಕೊರತೆಯೂ ಇದ್ದಿತು. 1936ರಲ್ಲಿ ನವದೆಹಲಿಗೆ ಇದು ವರ್ಗಾಯಿಸಲ್ಪಟ್ಟಿತು. 1958ರಲ್ಲಿ ವಿಶ್ವವಿದ್ಯಾನಿಲಯಗಳ ಸಹಾಯಧನ ಆಯೋಗವು ಇದಕ್ಕೆ ವಿಶ್ವವಿದ್ಯಾನಿಲಯದ ಮನ್ನಣೆ ನೀಡಿತು.

ಭಾರತೀಯ ಖಭೌತವಿಜ್ಞಾನ ಸಂಸ್ಥೆ

ಸೂರ್ಯನಿಗೆ ಸಂಬಂಧಿಸಿದ ಅಧ್ಯಯನಕ್ಕೋಸ್ಕರ 19ನೆಯ ಶತಮಾನದ ಅಂತ್ಯದಲ್ಲಿ ಆರಂಭವಾದ ವೀಕ್ಷಣಾಲಯ ಈಗ ಭಾರತೀಯ ಖಭೌತ ವಿಜ್ಞಾನ ಸಂಸ್ಥೆ (ಇಂಡಿಯನ್ ಇನ್ಸ್‌ಟಿಟ್ಯೂಟ್ ಆಫ್ ಆಸ್ಟ್ರೋ... ಎನಿಸಿದೆ. ಈಗ ಈ ಸಂಸ್ಥೆ ಇರುವುದು ಕೊಡೈಕನಾಲ್‌ನಲ್ಲಿ. ದೇ... ಸೌರಭೌತ ವಿಜ್ಞಾನ ಸಂಶೋಧನೆ ಈ ಮಟ್ಟದಲ್ಲಿ ಇನ್ನೆಲ್ಲೂ ನಡೆ...ದಿಲ್ಲ. ದೇಶದ ವೈಜ್ಞಾನಿಕ ವೀಕ್ಷಣಾಲಯಗಳಲ್ಲಿ ಇದು ದೊಡ್ಡದು.

ಕೊಡೈಕನಾಲ್ ವೀಕ್ಷಣಾಲಯ ಮೊದಲಿಗೆ ಮದರಾಸಿನಲ್ಲಿ ಇ... 1898ರಲ್ಲಿ ಅದನ್ನು ಕೊಡೈಕನಾಲಿಗೆ ವರ್ಗಾಯಿಸಲಾಯಿತು. ಸೂ... ಆವರಣ ಇಲ್ಲಿನ ಮುಖ್ಯ ಅಧ್ಯಯನ ವಿಷಯವಾಗಿತ್ತು. ಸೂ... ವರ್ಣಗೋಳದ ಬಗೆಗೆ ಇದು ಸಂಗ್ರಹಿಸಿರುವ ಮಾಹಿತಿ ಪ್ರಪ... ಇನ್ನೆರಡು ವೀಕ್ಷಣಾಲಯಗಳಿಗೆ ಮಾತ್ರ ದೊರೆತಿದೆ.

ಇಲ್ಲಿ ಪ್ರತಿಫಲನ ಮತ್ತು ವಕ್ರೀಕರಣ ದೂರದರ್ಶಕಗಳಿವೆ. ಸೂ...ನಿಂದ ಹೊರಟ ವಿಕಿರಣಗಳನ್ನು ಗ್ರಹಿಸುವ ಆರು ಅಡಿ ವ್ಯಾಸದ ...ಯಿತ ರಚನೆಯೂ ಇದೆ. ಗುರು ಗ್ರಹದಿಂದ ಇದ್ದಕ್ಕಿದ್ದಂತೆ ಚಿ... ರೇಡಿಯೋ ಅಲೆಗಳನ್ನು, ಹತ್ತೆಹನ್ನ್ವ 200 ಅಡಿ ಉದ್ದದ ಸಾಧ... ನಕ್ಷತ್ರಮಂಡಲಗಳಿಂದ ಬರುವ ವಿಕಿರಣಗಳ ಅಧ್ಯಯನವೂ ಇಲ್ಲಿ ನ...ತ್ತದೆ.

ಅಯಾನುಗೋಲ, ಭೂಕಾಂತಕ್ಷೇತ್ರ ಹಾಗೂ ಸೂರ್ಯ–... ಸಂಬಂಧಗಳ ಬಗೆಗೆ ಹೆಚ್ಚಿನ ಅಧ್ಯಯನ ಈ ಸಂಸ್ಥೆಯಲ್ಲಿ ನಡೆಯುತ್ತ...

ಭೂಕಾಂತೀಯ ಸಮಭಾಜಕವೃತ್ತಕ್ಕೆ ಕೊಡೈಕನಾಲ್ ಸ...ವಾಗಿರುವುದು ಅದರ ಪ್ರಾಮುಖ್ಯವನ್ನು ಹೆಚ್ಚಿಸಿದೆ.

ಭಾರತೀಯ ಚಲಚ್ಚಿತ್ರ ಕಲೆ

ನೋಡಿ : ಸಂಪುಟ ೫

ಭಾರತೀಯ ಚಿತ್ರಕಲೆ

ನೋಡಿ : ಸಂಪುಟ ೫



ಅಜಂತಾ ಭಿತ್ತಿಚಿತ್ರ









ಭರತನಾಟ್ಯ

ಕೂಚಿಪುಡಿ ಕಥಕಳಿ

ಮಣಿಪುರಿ

ಭಾರತೀಯ ನೃತ್ಯ

ಭಾರತೀಯ ಜನಸಂಘ

1951ರಲ್ಲಿ ಡಾ. ಶ್ಯಾಮ್ ಪ್ರಸಾದ್ ಮುಖರ್ಜಿಯವರಿಂದ ಸ್ಥಾಪಿಸಲ್ಪಟ್ಟ ರಾಜಕೀಯ ಪಕ್ಷ, ಭಾರತೀಯ ಜನಸಂಘ.

ಭಾರತದ ಅಖಂಡತ್ವವನ್ನೂ ಭಾರತೀಯ ಸಂಸ್ಕೃತಿಯನ್ನೂ ಕಾಪಾಡುವ ನೀತಿಯನ್ನು ಜನಸಂಘ ಪ್ರತಿಪಾದಿಸುತ್ತದೆ. ಪಾಕಿಸ್ತಾನ ಮತ್ತು ಚೀನಾ ಅನ್ಯಾಯವಾಗಿ ಆಕ್ರಮಿಸಿಕೊಂಡಿರುವ ಭೂಪ್ರದೇಶಗಳನ್ನು ತೆರವು ಮಾಡಿಸಬೇಕು ; ಪರಮಾಣು ಅಸ್ತ್ರಗಳನ್ನು ಭಾರತ ಹೊಂದಿರಬೇಕು ; ಕೃಷಿ ಭೂಮಿಯಿಲ್ಲದವರಿಗೆ ಭೂಮಿ ಸಿಗುವಂತೆ ಮಾಡಬೇಕು ; ಚುನಾವಣಾ ಮತದಾರರ ವಯಸ್ಸನ್ನು 18ಕ್ಕೆ ಇಳಿಸಬೇಕು ; ಮೂಲಭೂತ ಹಕ್ಕುಗಳಲ್ಲಿ ಕೆಲಸ ಮಾಡುವ ಹಕ್ಕೂ ಸೇರಬೇಕು ; ನಿರುದ್ಯೋಗಿಗಳಿಗೆ ಉದ್ಯೋಗಾವಕಾಶವಿರಬೇಕು —ಇವೆಲ್ಲ ಜನಸಂಘದ ಧ್ಯೇಯಗಳು.

1967ರಲ್ಲಿ ನಡೆದ ಚುನಾವಣೆಯಲ್ಲಿ ನವದೆಹಲಿಯ ಮೆಟ್ರೊಪಾಲಿಟನ್ ಕೌನ್ಸಿಲಿನಲ್ಲಿ ಜನಸಂಘಕ್ಕೆ ಬಹುಮತ ದೊರೆಯಿತು.

ರಘುವೀರ, ದೀನದಯಾಳು ಉಪಾಧ್ಯಾಯ, ಬಲರಾಜ ಮಧೋಕ್, ಅಟಲ್ ಬಿಹಾರಿ ವಾಜಪೇಯಿ, ಎಲ್. ಕೆ. ಅದ್ವಾನಿ ಮುಂತಾದವರು ಭಾರತೀಯ ಜನಸಂಘವನ್ನು ಬೆಳೆಸಲು ಶ್ರಮಿಸಿದ—ಶ್ರಮಿಸುತ್ತಿರುವ ಮುಂದಾಳುಗಳು.

ನೋಡಿ : ಅಟಲ್ ಬಿಹಾರಿ ವಾಜಪೇಯಿ ; ಎಲ್. ಕೆ. ಅದ್ವಾನಿ ; ದೀನದಯಾಳು ಉಪಾಧ್ಯಾಯ ; ರಘುವೀರ ; ಶ್ಯಾಮ ಪ್ರಸಾದ್ ಮುಖರ್ಜಿ ;

ಭಾರತೀಯ ಜ್ಞಾನಪೀಠ ಸಾಹಿತ್ಯ ಪಾರಿತೋಷಕ

ನೋಡಿ : ಸಂಪುಟ ೫

ಭಾರತೀಯ ತೈಲ ಮಂಡಲಿ

ಪೆಟ್ರೋಲಿಯಂ ಮತ್ತು ಅದರ ಉಪವಸ್ತುಗಳ ಉತ್ಪಾದನೆಯೂ ವಿತರಣೆಯೂ ಸಮರ್ಪಕವಾಗಿ ನಡೆಯಬೇಕೆಂಬ ಉದ್ದೇಶದಿಂದ ಸ್ಥಾಪಿತವಾದ ಸಂಸ್ಥೆ ಭಾರತ ತೈಲ ಮಂಡಲಿ—ಇಂಡಿಯನ್ ಆಯಿಲ್ ಕಾರ್ಪೊರೇಷನ್ (ಸಂಕ್ಷಿಪ್ತನಾಮ ಐ.ಒ.ಸಿ.). 1964 ಸೆಪ್ಟೆಂಬರ್ 1ರಂದು ಇಂಡಿಯನ್ ಆಯಿಲ್ ಕಂಪನಿ ಲಿಮಿಟೆಡ್ ಮತ್ತು 'ಇಂಡಿಯನ್ ರಿಫೈನರೀಸ್ ಲಿಮಿಟೆಡ್ ಎಂಬ ಸಾರ್ವಜನಿಕ ವಲಯ ಉದ್ಯಮಗಳನ್ನು ಸೇರಿಸಿ ಇಂಡಿಯನ್ ಆಯಿಲ್ ಕಾರ್ಪೊರೇಷನ್ನನ್ನು ರೂಪಿಸಿದರು: ಇದರ ಆರಂಭದ ಷೇರು ಬಂಡವಾಳ 75 ಕೋಟಿ ರೂಪಾಯಿ.

ಕಾರ್ಪೊರೇಷನಿನಲ್ಲಿ ತೈಲ ಸಾಗಣೆ ಕೊಳವೆಗಳ ಜಾಲ ನಿರ್ವಹಣೆ, ಶುದ್ಧೀಕರಣಾಗಾರ ಮತ್ತು ಮಾರಾಟ ಎಂಬ ಮೂರು ವಿಭಾಗಗಳಿವೆ. ಶುದ್ಧೀಕರಣಾಗಾರದ ಪ್ರಧಾನ ಕಚೇರಿ ನವದೆಹಲಿಯಲ್ಲಿದೆ. ಗೌಹಾಟಿ ಮತ್ತು ನೂನ್‌ಮತಿ (ಅಸ್ಸಾಂ), ಕೊಚಿನ್ (ಕೇರಳ), ಬರೌನಿ (ಬಿಹಾರ) ಮತ್ತು ಕೊಯಾಲಿ (ಗುಜರಾತ್) ಶುದ್ಧೀಕರಣಾಗಾರಗಳು ಇದರ ಆಡಳಿತಕ್ಕೊಳಪಟ್ಟಿವೆ. ಮಾರಾಟ ವಿಭಾಗದ ಪ್ರಧಾನ ಕಚೇರಿ ಮುಂಬಯಿಯಲ್ಲಿದೆ. ಇದು ಭಾರತದಲ್ಲಿ ಪೆಟ್ರೋಲಿಯಂ ಉತ್ಪನ್ನಗಳ ವಿತರಣೆಯನ್ನು ನೋಡಿಕೊಳ್ಳುತ್ತದೆ.

ಪೆಟ್ರೋಲಿಯಂನ ಸಂಸ್ಕರಿತ ಉತ್ಪನ್ನಗಳನ್ನು ಆಮದು ಮಾಡಿಕೊಂಡು ಅವನ್ನು ದಾಸ್ತಾನು ಮಾಡಿ, ವಿತರಣೆಗೆ ಏರ್ಪಾಡು ಮಾಡುವುದೂ ಈ ಸಂಸ್ಥೆಯ ಹೊಣೆ.

ಭಾರತೀಯ ನೃತ್ಯ ಕಲೆ

ನೋಡಿ : ಸಂಪುಟ ೫

ಭಾರತೀಯ ಪರಮಾಣು ಶಕ್ತಿ ಆಯೋಗ


ನಮ್ಮ ದೇಶದಲ್ಲಿ ಪರಮಾಣು ಶಕ್ತಿಯನ್ನು ಕುರಿತ ಎಲ್ಲ ವಿಷಯಗಳೂ ಕೇಂದ್ರ ಸರಕಾರದ ವ್ಯಾಪ್ತಿಗೆ ಸೇರಿವೆ. 1948ರ ಆಗಸ್ಟ್ 10ರಂದು ಭಾರತ ಪರಮಾಣುಶಕ್ತಿ ಆಯೋಗ —ಇಂಡಿಯನ್ ಅಟಾಮಿಕ್ ಎನರ್ಜಿ ಕಮಿಷನ್ —ಸ್ಥಾಪಿತವಾಯಿತು. ಎಚ್. ಜೆ. ಭಾಭಾ ಅದರ ಅಧ್ಯಕ್ಷರಾಗಿದ್ದರು.

ಭಾರತ ಸರಕಾರವು ಪರಮಾಣು ಶಕ್ತಿ ಇಲಾಖೆಯನ್ನು 1954ರಲ್ಲಿ ರಚಿಸಿದ ಅನಂತರ, ಆಯೋಗ ಈ ಇಲಾಖೆಯ ಅಂಗವಾಗಿ ಕೆಲಸ ಮಾಡುತ್ತಿದೆ.

ಪರಮಾಣು ಶಕ್ತಿಯನ್ನು ಶಾಂತಿಯುತ ಉದ್ದೇಶಗಳಿಗೆ ಬಳಸುವುದಕ್ಕೆ ಸಂಬಂಧಿಸಿದ ಯೋಜನೆಗಳನ್ನು ಆಯೋಗ ರೂಪಿಸುತ್ತದೆ. ಕೃಷಿ, ಜೀವವಿಜ್ಞಾನ, ವೈದ್ಯವಿಜ್ಞಾನ ಮತ್ತು ಕೈಗಾರಿಕಾ ರಂಗಗಳಲ್ಲಿ ಪರಮಾಣು ಶಕ್ತಿಯ ಉಪಯೋಗ ಹಾಗೂ ವಿದ್ಯುಚ್ಛಕ್ತಿಯ ಮೂಲವಾಗಿ ಪರಮಾಣು ಶಕ್ತಿ. ಇಂಥ ಎಲ್ಲ ಯೋಜನೆಗಳನ್ನು ಆಯೋಗ ಸಿದ್ಧಗೊಳಿಸಿ ಅವನ್ನು ಕಾರ್ಯಗತ ಮಾಡುವ ಜವಾಬುದಾರಿಯನ್ನು ವಹಿಸಿಕೊಂಡಿದೆ.

ಆಯೋಗದ ವೈಜ್ಞಾನಿಕ ಮತ್ತು ತಾಂತ್ರಿಕ ಕೆಲಸಕಾರ್ಯಗಳು ಟ್ರಾಂಬೆಯ ಭಾಭಾ ಪರಮಾಣು ಸಂಶೋಧನಾ ಕೇಂದ್ರ ಹಾಗೂ ತಿರುವಾಂಕೂರಿನಲ್ಲಿರುವ ಪರಮಾಣು ಖನಿಜ ವಿಭಾಗಗಳಲ್ಲಿ ನಡೆಯುತ್ತವೆ.

ಆಯೋಗ ಸೂಚಿಸಿರುವ ಇನ್ನು ಕೆಲವು ಕಾರ್ಯಕ್ರಮಗಳು :



ಹತ್ ಪ್ರಮಾಣದ ತೈಲ ಶುದ್ಧೀಕರಣ



ರಾಜಸ್ಥಾನ ಪರಮಾಣುಶಕ್ತಿ ಯೋಜನೆ

ವಿಕಿರಣಶೀಲ ವಸ್ತು ಗಳಾದ ಯುರೇನಿಯಂ ಮತ್ತು ಥೋರಿಯಮ್‌ಗಳಂಥ ಪರಮಾಣು ಇಂಧನ ತಯಾರಿಸುವುದು; ಪರಮಾಣು ವಿಕಿರಣದ ಬಗೆಗೆ ಅಭ್ಯಸಿಸಲು ಅಗತ್ಯವಾದ ಉಪಕರಣಗಳನ್ನು ಸಿದ್ಧಗೊಳಿಸುವುದು ; ರೋಗಗಳನ್ನು ಪತ್ತೆಹಚ್ಚುವುದು ಮತ್ತು ಚಿಕಿತ್ಸೆಗೆ, ಕೃಷಿ ಕೈಗಾರಿಕೆಗಳಿಗೆ ಉಪಯುಕ್ತವಾದ ಐಸೊಟೋಪ್‌ಗಳನ್ನು ತಯಾರಿಸುವುದು, ಪರಮಾಣು ಶಕ್ತಿಯಿಂದ ವಿದ್ಯುತ್ ಉತ್ಪಾದನೆ ಮಾಡುವುದು, ಪರಮಾಣು ವಿಜ್ಞಾನವನ್ನು ಕುರಿತು ಸಂಶೋಧನೆ ನಡೆಸುವುದು, ಸಂಶೋಧನೆ ನಡೆಸುವವರಿಗೆ ನೆರವು ನೀಡುವುದು.

ಭಾಭಾ ಅವರ ಅನಂತರ ವಿಕ್ರಮ ಸಾರಾಭಾಯಿ 'ಅಟಾಮಿಕ್ ಎನರ್ಜಿ ಕಮಿಷನ್'ನ ಅಧ್ಯಕ್ಷರಾದರು. ಅವರ ಬಳಿಕ ಎಚ್. ಎನ್. ಸೇಠ್ನಾ ಅಧ್ಯಕ್ಷರಾದರು.

ನೋಡಿ : ಭಾಭಾ ಪರಮಾಣು ಕೇಂದ್ರ

ಭಾರತೀಯ ಪ್ರಾಯೋಗಿಕ ವೈದ್ಯವಿಜ್ಞಾನ ಸಂಸ್ಥೆ

1935ರಲ್ಲಿ ವೈಜ್ಞಾನಿಕ ಚಟುವಟಿಕೆಯಲ್ಲಿ ತೊಡಗಿದ್ದ ಒಂದು ಗುಂಪು ಕಲ್ಕತ್ತೆಯಲ್ಲಿ ಭಾರತೀಯ ವೈದ್ಯಸಂಶೋಧನಾ ಸಂಸ್ಥೆಯನ್ನು ಆರಂಭಿಸಿತು. 1956ರಲ್ಲಿ ಇದನ್ನು ವೈಜ್ಞಾನಿಕ ಮತ್ತು ಔದ್ಯೋಗಿಕ ಸಂಶೋಧನಾ ಮಂಡಲಿ ವಹಿಸಿಕೊಂಡಾಗ. ಭಾರತದ ಜೀವರಸಾಯನ ವಿಜ್ಞಾನ ಹಾಗೂ ಪ್ರಾಯೋಗಿಕ ವೈದ್ಯವಿಜ್ಞಾನ ಸಂಸ್ಥೆ ಎಂದು ಅದರ ಹೆಸರನ್ನು ಮಾರ್ಪಡಿಸಲಾಯಿತು. ಮುಂದೆ ಅದು ಭಾರತದ ಪ್ರಾಯೋಗಿಕ ವೈದ್ಯ ವಿಜ್ಞಾನ ಸಂಸ್ಥೆ ಎನಿಸಿಕೊಂಡಿತು.

ಜೀವರಸಾಯನ ವಿಜ್ಞಾನ. ಸೂಕ್ಷ್ಮಜೀವವಿಜ್ಞಾನ, ರೋಗ ರಕ್ಷಾ ವಿಜ್ಞಾನ. ಶರೀರವಿಜ್ಞಾನ. ರೋಗವಿಜ್ಞಾನ. ವೈದ್ಯಕೀಯ ರಸಾಯನ ವಿಜ್ಞಾನ ಮತ್ತು ಔಷಧವಿಜ್ಞಾನ ಮುಖ್ಯ ಸಂಶೋಧನಾ ವಿಭಾಗಗಳು.

ಸಂತಾನೋತ್ಪತ್ತಿ ನಿಯಂತ್ರಣದ ಬಗೆಗೂ ಸಂಶೋಧನೆ ನಡೆಯುತ್ತದೆ.

ಕಾಲರಾ ಸೋಂಕಿಗೆ ಪೂರ್ವಭಾವಿ ನಿವಾರಣೆ, ನರರೋಗ ಹಾಗೂ ಹೃದಯ ರಕ್ತನಾಳಗಳಿಗೆ ಸಂಬಂಧಿಸಿದ ರೋಗಗಳು, ಕ್ಯಾನ್ಸರ್ ಸಂಶೋಧನೆ, ದೇಹದಲ್ಲಿ ನಡೆಯುವ ಚಯಾಪಚಯ ಕ್ರಿಯೆ, ಹಿಮವ್ರಣದ ಬಗೆಗೆ ಪ್ರಯೋಗಗಳು ಮುಂತಾದ ಕಾರ್ಯಗಳು ನಡೆದಿವೆ. ಕಾಲರಾ ಸಂಬ ಸಂಶೋಧನೆಗಾಗಿ ವಿಶ್ವ ಆರೋಗ್ಯ ಸಂಸ್ಥೆಯ ಆಶ್ರಯದಲ್ಲಿ ಒ ವಿಭಾಗ ತೆರೆಯಲ್ಪಟ್ಟಿದೆ. ವೈದ್ಯಕೀಯ ಹಾಗೂ ಕೈಗಾರಿಕಾ ಮಹ ವಿರುವ ಕಿಣ್ವಗಳನ್ನೂ ಜೀವನಿರೋಧಕಗಳನ್ನೂ ಸಂಸ್ಥೆ ಅಭಿವೃದ್ಧಿಪಡಿ

ಭಾರತೀಯ ಪೆಟ್ರೋಲಿಯಂ ಸಂಸ್ಥೆ

ಭಾರತೀಯ ಪೆಟ್ರೋಲಿಯಂ ಸಂಸ್ಥೆ(ಇಂಡಿಯನ್ ಇನ್‌ಸ್ಟಿಟ್ಯೂ ಆಫ್ ಪೆಟ್ರೋಲಿಯಂ) ಡೆಹ್ರಾಡೂನಿನಲ್ಲಿದೆ. 1959ರಲ್ಲಿ ಇದು ಸ್ಥಾ ವಾಯಿತು. ವೈಜ್ಞಾನಿಕ ಮತ್ತು ಔದ್ಯೋಗಿಕ ಸಂಶೋಧನಾ ಮಂಡಲಿ ರಾಷ್ಟ್ರೀಯ ಸಂಸ್ಥೆಗಳಲ್ಲಿ ಇದೂ ಒಂದು. ಕಚ್ಚಾ ಪೆಟ್ರೋಲಿ ಹಾಗೂ ನೈಸರ್ಗಿಕ ಅನಿಲಗಳ ಸಂಸ್ಕರಣೆ ಮತ್ತು ಬಳಕೆಯ ವಿಧ ಪೆಟ್ರೋಲಿಯಂ ರಾಸಾಯನಿಕಗಳು ಮತ್ತು ಸಂಬಂಧಪಟ್ಟ ವಿಷಯಗ ಸಂಶೋಧನೆ —ಈ ಸಂಸ್ಥೆಯ ಮುಖ್ಯ ಕಾರ್ಯಕ್ಷೇತ್ರ.

ತೈಲ ಹಾಗೂ ಪೆಟ್ರೋಲಿಯಂ ರಾಸಾಯನಿಕ ಕೈಗಾರಿಕೆಯ ಸಿಬ್ಬ ಗಳಿಗೆ ಸಂಸ್ಥೆ ತರಬೇತಿ ಸೌಲಭ್ಯವನ್ನೂ ಒದಗಿಸುತ್ತದೆ.

ಮಾನಕ ಪೆಟ್ರೋಲಿಯಂ ಉತ್ಪನ್ನಗಳನ್ನು ನಿರ್ಣಯಿಸುವುದ ಭಾರತೀಯ ಮಾನಕ ಸಂಸ್ಥೆಗೆ (ಐಎಸ್‌ಐ—ಇಂಡಿಯನ್ ಸ್ಟಾಂಡ ಇನ್‌ಸ್ಟಿಟ್ಯೂಷನ್) ಈ ಸಂಸ್ಥೆ ನೆರವು ನೀಡುತ್ತದೆ. ವಿದೇಶೀ ಸಹ ಪಡೆಯುವುದರ ಬಗೆಗೆ ನಿರ್ಧಾರ ತೆಗೆದುಕೊಳ್ಳುವುದರಲ್ಲಿ ಪೆಟ್ರೋಲಿ ಹಾಗೂ ರಾಸಾಯನಿಕಗಳ ಸಚಿವ ಖಾತೆಗೆ ಸಂಸ್ಥೆ ಸಹಕಾರ ನೀಡುತ್ತದೆ.

ಪೆಟ್ರೋಲಿಯಂ ವಸ್ತುಗಳಿಂದ ಪೌಷ್ಟಿಕ ಪದಾರ್ಥ ಪಡೆಯುವ ಬಗೆಗೆ ಸಂಸ್ಥೆ ಕಾರ್ಯಕ್ರಮ ರೂಪಿಸಿದೆ.

ಭಾರತೀಯ ಮಾನಕ ಸಂಸ್ಥೆ

'ಐ ಎಸ್ ಐ' ಈ ಇಂಗ್ಲಿಷ್ ಅಕ್ಷರಗಳ ಗುರುತು ಇರುವ ವಸ್ತುಗಳ ಪೇಟೆಯಲ್ಲಿ ಕಾಣಬಹುದು. ಈ ಅಕ್ಷರಗಳ ವಿಸ್ತೃತ ರೂಪ ಇಂಡಿಯ ಸ್ಟಾಂಡರ್ಡ್ಸ್ ಇನ್‌ಸ್ಟಿಟ್ಯೂಷನ್ (ಭಾರತೀಯ ಮಾನಕ ಸಂಸ್ಥೆ).

ಭಾರತೀಯ ಕೈಗಾರಿಕಾ ಉತ್ಪಾದನೆಗಳಿಗೆ ಮಾನಕಗಳನ್ನು ನಿರ್ಧ ಅವುಗಳ ಗುಣಮಟ್ಟವನ್ನು ಐಎಸ್‌ಐ ಕಾಪಾಡುತ್ತದೆ. ಮಾನಕಗ ಸರಿಯಾಗಿ ಉತ್ಪಾದಿತ ವಸ್ತುವಿದ್ದರೆ ಮಾತ್ರ ತಯಾರಿಕೆಗಾರರಿಗೆ ಐಎಸ ಲೈಸೆನ್ಸ್ ನೀಡುತ್ತದೆ. ಆಗ ತಯಾರಿಕೆಗಾರ ತಾನು ಉತ್ಪಾದಿಸಿದ ವ ವಿನ ಮೇಲೆ ಐಎಸ್‌ಐ ಗುರುತನ್ನು ಉಪಯೋಗಿಸಬಹುದು. ಭಾ ದಿಂದ ರಫ್ತಾಗುವ ಅನೇಕ ಪದಾರ್ಥಗಳಿಗೆ ಐಎಸ್‌ಐ ಗುರುತು ಇರ ಬೇಕೆಂದು ವಿಧಿಸಲಾಗಿದೆ.

ಮಾನಕಗಳನ್ನು ನಿರ್ಧರಿಸುವ ವಿಧಾನಗಳು ಮತ್ತು ವಿವರಗಳ ಐಎಸ್‌ಐ ಸಂಸ್ಥೆ ತರಬೇತಿ ಸೌಲಭ್ಯವನ್ನೂ ಕಲ್ಪಿಸಿದೆ.

ರಾಷ್ಟ್ರೀಯ ಹಾಗೂ ಅಂತರ ರಾಷ್ಟ್ರೀಯ ಮಟ್ಟಗಳ ಆಧಾರದ ಮೇ ಐಎಸ್‌ಐ ಮಾನಕ ನಿರ್ಧರಿಸುತ್ತಾರೆ.

ನೋಡಿ : ಮಾನಕಕರಣ–ಸಂಪುಟ ೪

ಭಾರತೀಯ ರಂಗಭೂಮಿ

ನೋಡಿ : ಸಂಪುಟ ೫



ಭಿನ್ನಮತ : ಮಧೋಕ್

ಭಾರತೀಯ ಲೋಕತಾಂತ್ರಿಕ ಸಂಘ

1973ರ ಪ್ರಾರಂಭದಲ್ಲಿ ಹುಟ್ಟಿದ ಹೊಸ ಪಕ್ಷ 'ಭಾರತೀಯ ಲೋಕತಾಂತ್ರಿಕ ಸಂಘ'. ಇದರ ಸ್ಥಾಪಕರು ಬಲರಾಜ ಮಧೋಕ್.

ಮಧೋಕ್ ಭಾರತೀಯ ಜನಸಂಘದ ಸಂಸ್ಥಾಪಕ ಸಸ್ಯರಲ್ಲೊಬ್ಬರು. ಆ ಪಕ್ಷದ ಅಧ್ಯಕ್ಷರೂ ಆಗಿದ್ದರು. ಮಧೋಕ್ ಮತ್ತು ಪಕ್ಷದ ಇತರ ನಾಯಕರ ನಡುವೆ ಧೋರಣೆಗಳಿಗೆ ಸಂಬಂಧಿಸಿ ಭಿನ್ನಾಭಿಪ್ರಾಯ ತಲೆದೋರಿತು. ಇದು ತೀವ್ರಗೊಂಡು. ಪಕ್ಷದಿಂದ ಮಧೋಕ್ ಹೊರಹಾಕಲ್ಪಟ್ಟರು. ಮುಂದೆ ಅವರು ಭಾರತೀಯ ಲೋಕತಾಂತ್ರಿಕ ಸಂಘವನ್ನು ಕಟ್ಟಿದರು, ಅದರ ಅಧ್ಯಕ್ಷರಾದರು.

ಭಾರತೀಯ ವಸ್ತುಸಂಗ್ರಹಾಲಯ

ಕಲ್ಕತ್ತೆಯಲ್ಲಿರುವ ಭಾರತೀಯ ವಸ್ತುಸಂಗ್ರಹಾಲಯ ನಮ್ಮ ದೇಶದಲ್ಲಿ ಅತಿ ದೊಡ್ಡದು. ಬಂಗಾಳದ ಏಷ್ಯಾಟಿಕ್ ಸೊಸೈಟಿ ಸಂಗ್ರಹಿಸಿದ ವಸ್ತುಗಳನ್ನು ಇಟ್ಟು ರಕ್ಷಿಸುವುದಕ್ಕಾಗಿ 1814ರಲ್ಲೇ ಒಂದು ವಸ್ತುಸಂಗ್ರಹಾಲಯ ಸ್ಥಾಪನೆಗೆ ಪ್ರಯತ್ನ ನಡೆಯಿತು. ಆದರೆ ಅದು ಆರಂಭವಾದದ್ದು 1867ರಲ್ಲಿ. ಇಲ್ಲಿ ಒಟ್ಟು ಆರು ವಿಭಾಗಗಳಿವೆ —ಪುರಾತತ್ತ್ವ, ಕಲೆ. ಮಾನವವಿಜ್ಞಾನ. ಭೂವಿಜ್ಞಾನ, ಕೈಗಾರಿಕೆ ಮತ್ತು ಪ್ರಾಣಿವಿಜ್ಞಾನ.

ಇತಿಹಾಸಪೂರ್ವ ಕಾಲದಿಂದ ಮಹಮ್ಮದೀಯರ ಆಳ್ವಿಕೆಯ ವರೆಗಿನ ಪುರಾತನ ಅವಶೇಷಗಳು ಪುರಾತತ್ತ್ವ ವಿಭಾಗದಲ್ಲಿವೆ. ಇಲ್ಲಿನ ಭಾರ್ಹುತ್ ಸ್ತೂಪ ಅವಶೇಷವೂ ಗಾಂಧಾರ ಶೈಲಿಯ ಅವಶೇಷಗಳೂ ಗಮನಾರ್ಹ.

ಭಾರತದ ವಸ್ತ್ರಗಳು, ನೆಲಹಾಸು. ಮರ, ಪೇಪಿಯರ್‌ಮ್ಯಾಷೆ, ಅರಗಿನ ಪದಾರ್ಥಗಳು. ಲೋಹ, ದಂತ, ಕೊಂಬು, ಶಿಲೆ, ಗಾಜು ಹಾಗೂ ಕುಂಭ ಪದಾರ್ಥಗಳು ಕಲಾ ವಿಭಾಗದಲ್ಲಿವೆ. ಪರ್ಷಿಯ, ಭಾರತಗಳ ವರ್ಣ ಚಿತ್ರಗಳೂ ಟಿಬೆಟಿನ ಲಾಂಛನಗಳೂ ಇಲ್ಲಿವೆ.

ಭಾರತದ ಪುರಾತನ ಜನರ ಜೀವನ. ರೀತಿನೀತಿಗಳ ಪ್ರದರ್ಶನ ಇರುವುದು ಮಾನವವಿಜ್ಞಾನ ವಿಭಾಗದಲ್ಲಿ. ಭಾರತೀಯ ವಸ್ತುಸಂಗ್ರಹಾಲಯದಲ್ಲಿರುವ ಭೂವಿಜ್ಞಾನ ಸಂಗ್ರಹ ವಿಶ್ವದಲ್ಲೇ ದೊಡ್ಡದು. ಖನಿಜಗಳು. ಶಿಲೆಗಳು. ಉಲ್ಕಾಶಿಲೆಗಳ ಸಂಗ್ರಹ ಇಲ್ಲಿದೆ. ಕೈಗಾರಿಕಾ ವಿಭಾಗದಲ್ಲಿ ವಾಣಿಜ್ಯ ಹಾಗೂ ಕೈಗಾರಿಕಾ ದೃಷ್ಟಿಯಿಂದ ಕುತೂಹಲಕಾರಿಯಾದ ವಸ್ತುಗಳನ್ನು ಇಡಲಾಗಿದೆ. ಪ್ರಾಣಿವಿಜ್ಞಾನ ಭಾಗದಲ್ಲಿ ಅಕಶೇರುಕ ಕೀಟ ಹಕ್ಕಿ. ಉರಗ, ದ್ವಿಚರ ಮೀನುಗಳ ಸಂಗ್ರಹ ಇವೆ.

ಭಾರತೀಯ ನಾಣ್ಯಗಳ ಅತಿ ದೊಡ್ಡ ಸಂಗ್ರಹ ಇಲ್ಲಿನದು. ಜೊತೆಗೆ ಆಭರಣಗಳೂ ಪ್ರಶಸ್ತ ರತ್ನಗಳೂ ಇಡಲ್ಪಟ್ಟಿವೆ.

ಭಾರತೀಯ ವಿಜ್ಞಾನ ಮಂದಿರ

ಪ್ರೌಢ ವ್ಯಾಸಂಗಕ್ಕೆ. ಸಂಶೋಧನೆಗೆ ಹೆಸರಾಗಿರುವ ವಿಜ್ಞಾನ ಸಂಸ್ಥೆ— ಬೆಂಗಳೂರಿನಲ್ಲಿರುವ ಭಾರತೀಯ ವಿಜ್ಞಾನ ಮಂದಿರ.



ದೂರ ದೃಷ್ಟಿ : ತಾತಾ

ಭಾರತೀಯ ವಿಜ್ಞಾನ ಮಂದಿರ (ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್) ದಿವಂಗತ ಜೆಮ್‌ಸೇಟ್‌ಜಿ ನಸ್ಸರ್‌ವಾನ್‌ಜೀ ತಾತಾ ಅವರ ದೂರದೃಷ್ಟಿಯ ಫಲ. ಅದಕ್ಕಾಗಿ, 1898ರಲ್ಲೇ, ತಮ್ಮ ಆಸ್ತಿಯಿಂದ 30 ಲಕ್ಷ ರೂಪಾಯಿ ತೆಗೆದಿರಿಸಿದರು. 1911ರಲ್ಲಿ ಸಂಸ್ಥೆ ಕಾರ್ಯಾರಂಭ ಮಾಡಿದಾಗ ಅವರು ಇರಲಿಲ್ಲ.

ಸಂಸ್ಥೆ ಆರಂಭವಾದಾಗ ಎರಡು ವಿಭಾಗಗಳಿದ್ದುವು : ಸಾಮಾನ್ಯ ಮತ್ತು ಅನ್ವಯ ರಸಾಯನವಿಜ್ಞಾನ; ವಿದ್ಯುತ್ ತಾಂತ್ರಿಕವಿಜ್ಞಾನ. ಅನಂತರ ಒಂದೇ ಸಮನೆ ಇಲ್ಲಿನ ಅಧ್ಯಯನ ವಿಷಯಗಳ ಸಂಖ್ಯೆ ಹೆಚ್ಚಿದೆ. ಭಾರತದಲ್ಲೇ ಮೊತ್ತಮೊದಲ ಬಾರಿಗೆ ಅಧ್ಯಯನ ಸೌಲಭ್ಯ ದೊರಕಿರುವ ವಿಷಯಗಳೂ ಇಲ್ಲಿ ಇವೆ. ಇಂದು ಭಾರತೀಯ ವಿಜ್ಞಾನ ಮಂದಿರದಲ್ಲಿ ಸ್ನಾತಕೋತ್ತರ ಮಟ್ಟದ ಅಧ್ಯಯನ ಹಾಗೂ ಸಂಶೋಧನೆಗಳ ಪ್ರಮುಖ ವಿಷಯಗಳು ಇವು : ನಿರವಯವ ರಸಾಯನವಿಜ್ಞಾನ. ಭೌತಿಕ ರಸಾಯನವಿಜ್ಞಾನ. ಸಾವಯವ ರಸಾಯನವಿಜ್ಞಾನ. ಜೀವ ರಸಾಯನವಿಜ್ಞಾನ. ಭೌತವಿಜ್ಞಾನ. ಅನ್ವಯ ಗಣಿತ. ಔಷಧವಿಜ್ಞಾನ. ಹುದುಗುವಿಕೆಯ ತಾಂತ್ರಿಕವಿಜ್ಞಾನ. ಔದ್ಯೋಗಿಕ ನಿರ್ವಹಣೆ ಇತ್ಯಾದಿ. ವಾಯುಯಾನ ವಿಜ್ಞಾನ. ಅಂತರ್ದಹನ. ವಿದ್ಯುತ್ ಸಂಪರ್ಕ, ವಿದ್ಯುತ್ ಯಾಂತ್ರಿಕ, ಕಟ್ಟಡ ಹಾಗೂ ಜಲ ಒತ್ತಡ. ರಾಸಾಯನಿಕ ಎಂಜಿನಿಯರಿಂಗ್ ವಿಭಾಗಗಳಲ್ಲೂ ಸಂಶೋಧನೆ. ಅಧ್ಯಯನ ಸೌಲಭ್ಯಗಳಿವೆ. ಸಂಸ್ಥೆಯಲ್ಲಿ ಸುಮಾರು ಒಂದು ಸಾವಿರ ವಿದ್ಯಾರ್ಥಿಗಳಿದ್ದಾರೆ.

ಭಾರತೀಯ ವಿಜ್ಞಾನ ಮಂದಿರ ಅಂತರರಾಷ್ಟ್ರೀಯ ಮಾನ್ಯತೆ ಹಾಗೂ ಖ್ಯಾತಿಯುಳ್ಳ ಸಂಸ್ಥೆ.

ನೋಡಿ : ವಿಜ್ಞಾನ ಸಂಸ್ಥೆಗಳು—ಸಂಪುಟ ೩
ತಾಂತ್ರಿಕ ಏನು, ಎಂತು—ಸಂಪುಟ ೪

ಭಾರತೀಯ ವಿದ್ಯಾಭವನ

ಭಾರತದ ಸಂಸ್ಕೃತಿ. ಕಲೆಗಳ ಅಧ್ಯಯನದ ಉದ್ದೇಶದಿಂದ ಸ್ಥಾಪಿತವಾದದ್ದು ಭಾರತೀಯ ವಿದ್ಯಾಭವನ. ಚಿಕ್ಕ ಸಂಸ್ಥೆಯಾಗಿ ಆರಂಭವಾದ ಈ ವಿದ್ಯಾ ಭವನ ಶಾಖೆ – ಉಪ ಶಾಖೆಗಳಾಗಿ ಬೆಳೆದು ದೇಶದಲ್ಲೆಲ್ಲ ಹಬ್ಬಿದೆ.

ರಾಷ್ಟ್ರನಾಯಕರಲ್ಲೊಬ್ಬರಾಗಿದ್ದ ಕೆ.ಎಂ. ಮುನ್ಷಿ 1938ರಲ್ಲಿ ಭಾರತೀಯ ವಿದ್ಯಾಭವನವನ್ನು ಮುಂಬಯಿಯಲ್ಲಿ ಸ್ಥಾಪಿಸಿದರು. ಈ ಸಂಸ್ಥೆಯ ಆಶ್ರಯದಲ್ಲಿ ಮುಂಬಯಿಯಲ್ಲಿ ಸಂಸ್ಕೃತ ಮಹಾವಿದ್ಯಾಲಯ, ಗೀತಾ ವಿದ್ಯಾಲಯ, ಭಾರತ ಅಧ್ಯಯನ ಸಂಶೋಧನ ಮಂದಿರ ಮತ್ತು ವಿಜ್ಞಾನ, ಎಂಜಿನಿಯರಿಂಗ್ ಕಾಲೇಜುಗಳು ನಡೆಸಲ್ಪಡುತ್ತವೆ. ದೆಹಲಿ, ಬಡೋದೆ. ಮದರಾಸು. ಕೊಯಮತ್ತೂರುಗಳಲ್ಲಿ ಭಾರತೀಯ ವಿದ್ಯಾಭವನದ ಶಾಲಾ ಕಾಲೇಜುಗಳಿವೆ.



ಭಾರತೀಯ ವಿದ್ಯಾಭವನ —ಬೆಂಗಳೂರು

ಭಾರತೀಯ ಸಂಗೀತ, ನೃತ್ಯ, ಚಿತ್ರಕಲೆಗಳ ಅಧ್ಯಯನಕ್ಕೂ ಪತ್ರಿಕೋದ್ಯಮ ತರಬೇತಿಗೂ ಕೇಂದ್ರಗಳಿವೆ. ಅಖಿಲ ಭಾರತ ಮಟ್ಟದಲ್ಲಿ ಸಂಸ್ಕೃತ ಪರೀಕ್ಷೆಗಳನ್ನು ಭವನ ನಡೆಸುತ್ತದೆ; ಸಂಶೋಧನೆಗೆ ಅವಕಾಶ ಮಾಡಿಕೊಡುತ್ತದೆ. ಅಹಮದಾಬಾದ್, ಬೆಂಗಳೂರು, ಬಡೋದೆ, ಕಲ್ಕತ್ತಾ, ಕೊಯಮುತ್ತೂರು, ದಾಕೋರ್, ದೆಹಲಿ, ಹೈದರಾಬಾದ್, ಕಾನ್ಪುರ, ಜಮ್ಮು ಮತ್ತು ಕಾಶ್ಮೀರ, ಮದರಾಸು ಮಾತ್ರವಲ್ಲದೆ, ಲಂಡನ್, ಹಿಂದೂ ಮಹಾಸಾಗರದಲ್ಲಿರುವ ಮಾರಿಷಸ್, ಪಶ್ಚಿಮ ಜರ್ಮನಿಯ ಸ್ಟಟ್‌ಗಾರ್ಟ್, ಅಮೆರಿಕದ ಕ್ಯಾಲಿಫೋರ್ನಿಯ, ನಾಶ್‌ವಿಲ್‌ಗಳಲ್ಲಿ ಭಾರತೀಯ ವಿದ್ಯಾಭವನದ ಶಾಖೆಗಳಿವೆ.

ಭವನದ ಇತಿಹಾಸ ವಿಭಾಗ ಬೃಹತ್ ಗ್ರಂಥಗಳನ್ನು ಹೊರತಂದಿದೆ. ಪ್ರಕಾಶನ ಮಂದಿರ ಪ್ರತಿವರ್ಷ ಹತ್ತಾರು ಪುಸ್ತಕಗಳನ್ನು ಪ್ರಕಟಿಸುತ್ತದೆ. ಭಾರತಾಧ್ಯಯನಕ್ಕೆ ಸಂಬಂಧಿಸಿದ ತ್ರೈಮಾಸಿಕ ಪತ್ರಿಕೆ 'ಭಾರತೀಯ ವಿದ್ಯಾ', ಸಂಸ್ಕೃತ ತ್ರೈಮಾಸಿಕ 'ಸಂವಿದ್' ಮತ್ತು ಗುಜರಾತಿ ಪಾಕ್ಷಿಕ 'ಸಮರ್ಪಣ್' ಹೊರಬೀಳುತ್ತವೆ.

11ನೆಯ ಶತಮಾನದ ಖಜುರಾಹೊ ಶಿಲ್ಪ : ಗಣೇಶ



ಇಂಗ್ಲಿಷಿನಲ್ಲಿರುವ 'ಭವನ್ಸ್ ಜರ್ನಲ್' ತಿಂಗಳಿಗೆ ಎರಡು ಬಾರಿ ಪ್ರ ವಾಗುವ ಜನಪ್ರಿಯ ಪತ್ರಿಕೆ.

ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಲಿ

1912ರಲ್ಲಿ ನವ ದೆಹಲಿಯಲ್ಲಿ ಇಂಡಿಯನ್ ರಿಸರ್ಚ್ ಫಂಡ್ ಅಸೋ ಯೇಷನ್ ಎಂಬ ಸಂಸ್ಥೆ ಸ್ಥಾಪಿತವಾಯಿತು. 1949ರಲ್ಲಿ ಭಾರತ ವೈದ್ಯಕೀಯ ಸಂಶೋಧನಾ ಮಂಡಲಿ (ಇಂಡಿಯನ್ ಕೌನ್ಸಿ ಆಫ್ ಮೆಡಿಕಲ್ ರಿಸರ್ಚ್–ಐ.ಸಿ.ಎಂ.ಆರ್.) ಆಗಿ ಪರಿವರ್ತನೆಗೊಂಡಿ

ಮಾನವನಿಗೆ ತಗಲುವ ರೋಗಗಳು, ಅವುಗಳಿಗೆ ಕಾರಣ, ನಿವಾ ಪೂರ್ವಭಾವಿ ಚಿಕಿತ್ಸೆ—ಈ ಎಲ್ಲ ವಿಷಯಗಳಿಗೆ ಸಂಬಂಧಿಸಿದ ವೈಜ್ಞಾ ಸಂಶೋಧನೆಗಳ ಅಭಿವೃದ್ಧಿ; ಅಂಥ ಅಭಿವೃದ್ಧಿ ಕಾರ್ಯಗಳಿಗೆ ಬೆಂ ನೀಡುವುದು ; ಆ ಕೆಲಸಗಳ ಸಂಯೋಜನೆ —ಇದು ಸಂಸ್ಥೆಯ ಮ ಕಾರ್ಯಕ್ರಮ.

ಐ.ಸಿ.ಎಂ.ಆರ್. ಆಶ್ರಯದಲ್ಲಿ ಪೌಷ್ಟಿಕಾಹಾರ, ಕಾಲರಾ, ಕ್ಷ ರೋಗದ ರಾಸಾಯನಿಕ ಚಿಕಿತ್ಸೆ, ರೋಗವಿಜ್ಞಾನದ ಭಾರತೀಯ ದಾ ವೈರಸ್, ವೃತ್ತಿಸಂಬಂಧ ಆರೋಗ್ಯ ಇವನ್ನು ಕುರಿತು ಸಂಶೋಧನೆ ನಡೆಯುತ್ತವೆ. ಈ ಮಂಡಲಿಯ ನೇತೃತ್ವದಲ್ಲಿ ಆರು ಪ್ರಾ ಸಂಸ್ಥೆಗಳು ರಾಷ್ಟ್ರದ ವಿವಿಧ ಭಾಗಗಳಲ್ಲಿವೆ. ಇವ ಮೆಡಿಕಲ್ ಕಾಲೇಜುಗಳು, ವಿಶ್ವವಿದ್ಯಾನಿಲಯ ವಿಜ್ಞಾನ ವಿಭಾಗಗಳು, ಕ್ಷೇತ್ರಸರ್ವೆಗಳು, ಸಂಶೋ ಸೇವಾ ವಿಭಾಗಗಳ ಮೂಲಕವೂ ಐ.ಸಿ.ಎಂ.ಆ ಕೆಲಸಗಳು ನಡೆಯುತ್ತವೆ.

ಭಾರತೀಯ ಶಿಲ್ಪ, ವಾಸ್ತುಶಿಲ್ಪ


ನೋಡಿ : ಸಂಪುಟ–೫

ಭಾರತೀಯ ಸಂಗೀತ

ನೋಡಿ : ಸಂಪುಟ–೫

ಭುವನೇಶ್ವರದ ದೇವಾಲಯದ ಕಂಬಗಳಲ್ಲಿ ಕೆತ್ತ





ಹಲಿ ಕೆಂಪುಕೋಟೆ



ದೆಹಲಿ ಕುತುಬ್‌ಮಿನಾರ್


ಶಿಲ್ಪ ವೈಭವ

ೀಬೀಡು ನಾಟ್ಯಸರಸ್ವತಿ



ಮಹಾಬಲಿಪುರಂ ಅರ್ಜುನ ತಪಸ್ಸು





ನವೋದಯ ಯುಗಪ್ರವರ್ತಕ : ಭಾರತೇಂದು

ಭಾರತೇಂದು ಹರಿಶ್ಚಂದ್ರ

ಹಿಂದೀ ಸಾಹಿತ್ಯದ ನವೋದಯ ಯುಗದ ಪ್ರವರ್ತಕ ಎಂದು ಖ್ಯಾತರಾದ ಸಾಹಿತಿ ಭಾರತೇಂದು ಹರಿಶ್ಚಂದ್ರ.

ಹರಿಶ್ಚಂದ್ರ ಅವರು ಹುಟ್ಟಿದ್ದು 1850 ಸೆಪ್ಟೆಂಬರ್ 9 ರಂದು. ಪಾರಂಪರ್ಯವಾಗಿ ಸಾಹಿತ್ಯ ಪ್ರಜ್ಞೆಯನ್ನು ಬೆಳೆಸಿಕೊಂಡಿದ್ದ ವಂಶ ಅವರದು. ಅವರ ತಂದೆ ಒಳ್ಳೆಯ ಕವಿಯಾಗಿದ್ದರು. ಹರಿಶ್ಚಂದ್ರರು ಬಾಲ್ಯದಲ್ಲಿಯೇ ತಾಯಿಯನ್ನು ತಂದೆಯನ್ನು ಕಳೆದುಕೊಂಡರು; ಸ್ವಲ್ಪಕಾಲ ವಿದ್ಯಾಭ್ಯಾಸ ಮಾಡಿದ ಅನಂತರ ಪುರಿಗೆ ಹೋದರು. ಅಲ್ಲಿಂದ ಹಿಂದಕ್ಕೆ ಬಂದಮೇಲೆ ಒಂದು ವಿದ್ಯಾಶಾಲೆ ಸ್ಥಾಪಿಸಿದರು. ಹಲವಾರು ಭಾಷೆಗಳನ್ನು ಕಲಿತರು.

ಹರಿಶ್ಚಂದ್ರರಿಗೆ ಚಿಕ್ಕಂದಿನಿಂದಲೂ ಸಾಹಿತ್ಯರಚನೆಯಲ್ಲಿ ಆಸಕ್ತಿ ಇತ್ತು. ಹದಿನೇಳನೆಯ ವಯಸ್ಸಿಗೇ ಒಂದು ಹಿಂದೀ ಪತ್ರಿಕೆ ಸ್ಥಾಪಿಸಿ ಅದರ ಸಂಪಾದಕರಾದರು. ಹರಿಶ್ಚಂದ್ರ ತಮ್ಮ ಸಾಹಿತ್ಯ ಸೇವೆಯನ್ನು ಮುಂದುವರಿಸಿ ನಾಟಕ, ಕಾದಂಬರಿ, ಪ್ರಬಂಧ, ವಿಮರ್ಶೆ, ವಿಡಂಬನೆ ಮುಂತಾದುವನ್ನು ಬರೆದರು. ಭಕ್ತಿಪ್ರಧಾನ, ಭಾವಪ್ರಧಾನ ಕಾವ್ಯಗಳನ್ನು ರಚಿಸಿದರು. ಅವರ ಬರೆಹ ಎಷ್ಟೋ ಜನರಿಗೆ ಸ್ಫೂರ್ತಿದಾಯಕವಾಯಿತು. ಸಂಸ್ಕೃತ, ಉರ್ದು ಮತ್ತು ಇತರ ಭಾಷೆಗಳಲ್ಲಿಯೂ ಬರೆದರು. ಹಲವಾರು ನಿಯತಕಾಲಿಕಗಳನ್ನು ನಡೆಸಿದರು. ಅವರ ಬರೆಹಗಳಲ್ಲಿ ಜೀವನ ಸಮಸ್ಯೆಯ ಚಿತ್ರಣವಿರುತ್ತಿತ್ತು. ಬ್ರಿಟಿಷರ ಆಳ್ವಿಕೆಯ ದೋಷಗಳನ್ನೂ ಎತ್ತಿ ತೋರಿಸಿ ವಿಡಂಬನೆಗಳನ್ನು ಬರೆದರು. ರಾಷ್ಟ್ರೀಯತಾ ಭಾವನೆಯನ್ನೂ ಸಾಮಾಜಿಕ ಸುಧಾರಣೆಗಳಲ್ಲಿ ಆಸಕ್ತಿಯನ್ನೂ ಬೆಳೆಸಲು ಶ್ರಮಿಸಿದರು. ಅನೇಕ ಜನಹಿತಕಾರ್ಯಗಳಿಗೆ ಅವರು ಉದಾರವಾಗಿ ಧನಸಹಾಯವನ್ನು ಮಾಡಿದರು.

ಆಧುನಿಕ ಹಿಂದೀ ಲೇಖಕರಲ್ಲಿ ಮೊದಲಿಗರು ಇವರು.

ಹರಿಶ್ಚಂದ್ರರ ಅಮೂಲ್ಯ ಸೇವೆಗಾಗಿ ಗೌರವವನ್ನು ಬೆಳೆಸಿಕೊಂಡ ಅನುಯಾಯಿಗಳು ಅವರನ್ನು 'ಭಾರತೇಂದು' ಎಂದು ಕರೆದು ಗೌರವಿಸಿದರು. ಈ ಪ್ರತಿಭಾನ್ವಿತ ಸಾಹಿತಿ 1885 ಜನವರಿ 6ರಂದು ಕಾಲವಾದರು.

ಭಾಸ್ಕರಾಚಾರ್ಯ

ನೋಡಿ : ಸಂಪುಟ–೬.

ಭಿಲಾಯಿ ಉಕ್ಕಿನ ಕಾರಖಾನೆ

ಇದು ಭಾರತದ ಅತಿ ದೊಡ್ಡ ಉಕ್ಕಿನ ಕಾರಖಾನೆ. ನಾಗಪುರದಿಂದ 260 ಕಿ. ಮೀ. ಪೂರ್ವಕ್ಕೆ ಮಧ್ಯಪ್ರದೇಶದ ದುರ್ಗ್ ಜಿಲ್ಲೆಯಲ್ಲಿದೆ. ಇದರ ಆಡಳಿತ ಭಾರತ ಸರಕಾರದ ಹಿಂದೂಸ್ಥಾನ್ ಸ್ಟೀಲ್ ಲಿಮಿಟೆಡ್‌ಗೆ ಸೇರಿದ್ದು.




ಅತಿ ದೊಡ್ಡ ಉಕ್ಕಿನ ಕಾರಖಾನೆ : ಭಿಲಾಯಿ

ಭಾರತದಲ್ಲಿ ತಯಾರಾಗುವ ಭಾರೀ ಸಂರಚನೆಗಳಲ್ಲಿ ಶೇಕಡಾ 80 ಭಾಗ ಇಲ್ಲೇ ತಯಾರಾಗುತ್ತಿದೆ. ಪ್ರಪಂಚದಲ್ಲೇ ದೊಡ್ಡದಾದ ಈ ರೀತಿಯ ಯಂತ್ರಗಳಲ್ಲಿ ಇಲ್ಲಿರುವ ಪಳಿಗಿರಣಿ ಒಂದು.

ಸೋವಿಯೆತ್ ರಷ್ಯದ ನೆರವಿನಿಂದ ಈ ಕಾರಖಾನೆಯನ್ನು ಕಟ್ಟಲಾಯಿತು. 1959ರ ಫೆಬ್ರುವರಿ 4ರಂದು ಬೀಡು ಕಬ್ಬಿಣದ ತಯಾರಿಕೆ ಪ್ರಾರಂಭವಾಯಿತು. ಮೊದಲ ಊದುಕುಲುಮೆಯನ್ನು ಆಗಿನ ರಾಷ್ಟ್ರಪತಿ

ದೂರನೋಟಕ್ಕೆ ಭಿಲಾಯಿ



ಡಾ. ರಾಜೇಂದ್ರ ಪ್ರಸಾದ್ ಉದ್ಘಾಟಿಸಿದರು. ಉಕ್ಕಿನ ತಯಾರಿಕೆ 1959 ಅಕ್ಟೋಬರ್ 12ರಿಂದ ಪ್ರಾರಂಭವಾಯಿತು.

ಭಿಲಾಯಿಯ ಸುತ್ತಮುತ್ತ ಉಕ್ಕಿನ ತಯಾರಿಕೆಗೆ ಅಗತ್ಯವಾದ ಕಲ್ಲಿದ್ದಲು, ಕಬ್ಬಿಣದ ಅದಿರು, ಸುಣ್ಣದಕಲ್ಲು, ಡೊಲೊಮೈಟ್ ದೊರೆಯುತ್ತವೆ. ಕಬ್ಬಿಣದ ಅದಿರಿನ ಗಣಿಗಳು ಸುಮಾರು 90 ಕಿ. ಮೀ. ದೂರದಲ್ಲಿರುವ ರಾಜಹರದಲ್ಲಿವೆ. ಸುಮಾರು 25 ಕಿ. ಮೀ. ದೂರದಲ್ಲಿರುವ ನಂದಿನಿ ಗಣಿಗಳಿಂದ ಸುಣ್ಣದಕಲ್ಲೂ, ಕರ್ಗಾಲಿ, ಕಥಾರ, ದುಗ್ಧ, ಝಾರಿಯ ಮುಂತಾದ ಕಡೆಗಳಿಂದ ಕಲ್ಲಿದ್ದಲೂ ಸರಬರಾಜಾಗುತ್ತವೆ.

ಪ್ರಾರಂಭದಲ್ಲಿ ಹತ್ತು ಲಕ್ಷ ಟನ್ ಸಾಮರ್ಥ್ಯವಿತ್ತು. ಅನಂತರ ವರ್ಷಕ್ಕೆ 25 ಲಕ್ಷ ಟನ್ ಸಾಮರ್ಥ್ಯವಿರುವಂತೆ ಕಾರಖಾನೆಯನ್ನು ವಿಸ್ತರಿಸಲಾಯಿತು. ವಿಸ್ತರಣೆಯ ಮೊದಲ ಮಜಲು 1964 ನವೆಂಬರ್‌ನಲ್ಲಿ ಮುಗಿಯಿತು. 1967ರ ಸೆಪ್ಟೆಂಬರ್‌ನಲ್ಲಿ 4 ಲಕ್ಷ ಟನ್ ಸಾಮರ್ಥ್ಯದ ಅತ್ಯಂತ ಆಧುನಿಕ ವೈರ್ ರಾಡ್ ಮಿಲ್ ಅನ್ನು ಸೇರಿಸಲಾಯಿತು.

ಇನ್ನೂ ಹೆಚ್ಚಿನ ವಿಸ್ತರಣೆಗೆ ಕೆಲಸ ನಡೆಯುತ್ತಿದೆ. ಇದರ ಅಂಗವಾಗಿ ಆರನೆಯ ಊದುಕುಲುಮೆ ಜುಲೈ 1971ರಲ್ಲಿ ಕಾರ್ಯಾರಂಭ ಮಾಡಿತು. ಅನಂತರ ಕೋಕ್ ಒಲೆಗಳ ಹೊಸ ಸರಣಿಯನ್ನು ಸಜ್ಜುಗೊಳಿಸಲಾಯಿತು.

ಭೀಮ

ಮಗು ಹುಟ್ಟಿ ಹನ್ನೊಂದು ದಿನ ಆಗಿತ್ತಷ್ಟೆ. ತಾಯಿ, ತಂದೆ ಬೆಟ್ಟದ ಮೇಲಿದ್ದ ದೇವರ ದರ್ಶನಕ್ಕೆ ಹೊರಟರು. ಮಗು ತಾಯಿಯ ಕೈಯಲ್ಲಿತ್ತು. ದಾರಿಯಲ್ಲಿ ಅಕಸ್ಮಾತ್ತಾಗಿ ಭಯಂಕರ ಹುಲಿಯೊಂದು ಎದುರಾಯಿತು. ಅದು ಗರ್ಜಿಸಿದಾಗ ಗಾಬರಿಗೊಂಡ ಮಗುಂ ತಾಯಿಯ ಕೈಯಿಂದ ಜಾರಿ ಕೆಳಗೆ ದೊಡ್ಡ ಬಂಡೆಯ ಮೇಲೆ ಬಿದ್ದಿತು. ಆದರೆ ಮಗುವಿಗೆ ಪೆಟ್ಟಾಗಲಿಲ್ಲ. ಬಂಡೆಯೇ ಒಡೆದು ಚೂರು ಚೂರಾಯಿತು.

ಹೀಗೆ ಶತಶೃಂಗ ಪರ್ವತದ ಬಂಡೆ ಹೋಳಾಗಲು ಕಾರಣವಾದ ಮಗು ಭೀಮಸೇನ. 'ಭೀಮಕಾಯ', 'ಭೀಮ ಬಲ'......ಪದಗಳು ರೂಢಿಗೆ ಬಂದದ್ದು ಭೀಮನಿಂದಾಗಿ.

ಪಾಂಡವರಲ್ಲಿ ಭೀಮ ಎರಡನೆಯವನು. ಕುಂತಿಯಲ್ಲಿ ವಾಯುದೇವನ ಅನುಗ್ರಹದಿಂದ ಜನಿಸಿದವನು. ಧೃತರಾಷ್ಟ್ರನ ನೂರೊಂದು ಮಕ್ಕಳೂ ಇವನ ಸಮವಯಸ್ಕರು. ಅವರಲ್ಲಿ ಪ್ರಮುಖನಾದ ದುರ್ಯೋಧನನಿಗೆ ಬಾಲ್ಯದಿಂದ ಭೀಮನ ಮೇಲೆ ದ್ವೇಷ. ಭೀಮ ಸಾಯಲೆಂದು ದುರ್ಯೋಧನ ಅವನಿಗೆ ವಿಷ ತಿನ್ನಿಸಿ, ಹಾವುಗಳಿಂದ ಕಚ್ಚಿಸಿ, ನದಿಯಲ್ಲೆಸೆದ. ಆದರೂ ಭೀಮ ಬದುಕಿ ಉಳಿದ.



ಬಲಭೀಮ

ಪಾಂಡವ, ಕೌರವರು ಒಟ್ಟಿಗೆ ದ್ರೋಣಾಚಾರ್ಯರಲ್ಲಿ ಶಸ್ತ್ರಾಸ್ತ್ರ ವಿದ್ಯೆ ಕಲಿಯುತ್ತಿದ್ದಾಗ ಶರೀರ ಸಾಧನೆಯಲ್ಲಿ ಭೀಮ ಅಗ್ರಗಣ್ಯನಾಗಿದ್ದ. ಸಾವಿರ ಆನೆಗಳ ಶಕ್ತಿಯುಳ್ಳಾತ ಎಂದು ಆತ ಹೆಸರಾದ. ಬಲರಾಮನಿಂದ ಗದಾಯುದ್ಧವನ್ನೂ ಕಲಿತ. ಕೊಲ್ಲಿಸುವ ಸಂಚು ಹೂಡಿ ದುರ್ಯೋಧನ ಪಾಂಡವರಿಗೆ ವಾರಣಾವತದಲ್ಲಿ ಅರಗಿನ ಅರಮನೆ ಕಟ್ಟಿಸಿಕೊಟ್ಟ. ಅಲ್ಲಿ ಅವರಿದ್ದಾಗ ಒಂದು ರಾತ್ರಿ ಅದಕ್ಕೆ ಬೆಂಕಿ ಹಚ್ಚಿಸಿದ. ಆದರೆ ಮೊದಲೇ ಸಂಚಿನ ಸುದ್ದಿ ತಿಳಿದಿದ್ದ ಭೀಮ ಸೋದರರನ್ನೂ ತಾಯಿಯನ್ನೂ ಎತ್ತಿಕೊಂಡು ದಟ್ಟ ಅರಣ್ಯಕ್ಕೆ ಕೊಂಡೊಯ್ದ. ಅಲ್ಲಿ ಉಳಿದವರೆಲ್ಲ ಇನ್ನೂ ನಿದ್ರಿಸುತ್ತಿದ್ದಾಗ ತನ್ನ ಮೇಲೆ ಹೋರಾಟಕ್ಕೆ ಬಂದ ರಾಕ್ಷಸ ಹಿಡಿಂಬನನ್ನು ಕೊಂದ. ಮೇಲೆ ಮೋಹಗೊಂಡ ರಾಕ್ಷಸನ ತಂಗಿ ಹಿಡಿಂಬೆಯನ್ನು ತಾಯಿ, ಸೋದರರ ಹೇಳಿಕೆಯಂತೆ ವಿವಾಹವಾದ. ಭೀಮ ಹಿಡಿಂಬೆಯರಿಗೆ ಜನಿಸಿದ ಮಗನೇ ಬಲಶಾಲಿಯಾದ ಘಟೋತ್ಕಚ.

ಮುಂದೆ ಪಾಡವರೆಲ್ಲ ಏಕಚಕ್ರ ನಗರಕ್ಕೆ ಹೋದಾಗ, ಅಲ್ಲಿನ ಜನರಿಗೆ ಬಹಳ ತೊಂದರೆ ಕೊಡುತ್ತಿದ್ದ ಬಕಾಸುರನನ್ನು ಭೀಮ ಕೊಂದ.

ಪಂಚ ಪಾಂಡವರು ದ್ರೌಪದಿಯೊಡನೆ ವಿವಾಹವಾದ ಅನಂತರ ಕುರುವಂಶದ ರಾಜ್ಯದಲ್ಲಿ ಯುಧಿಷ್ಠಿರ ಕೌರವರೊಡನೆ ಪಾಲುಪಡೆದು ತಮ್ಮಂದಿರೊಡನೆ ಇಂದ್ರಪ್ರಸ್ಥದಲ್ಲಿ ಆಳತೊಡಗಿದ. ಅವರು ರಾಜಸೂಯಯಾಗ ಕೈಗೊಂಡಾಗ, ದುಷ್ಟನೂ ಬಲಿಷ್ಠನೂ ಆದ ಮಗಧದ ಜರಾಸಂಧನನ್ನು ಭೀಮ ಸಂಹರಿಸಿದ.

ಅನಂತರ ದುರ್ಯೋಧನನೊಡನೆ ಜೂಜಿನಲ್ಲಿ ರಾಜ್ಯವನ್ನೂ ಸಂಪತ್ತನ್ನೂ ಯುಧಿಷ್ಠಿರ ಕಳೆದುಕೊಂಡಾಗ, ರಾಜಸಭೆಯಲ್ಲಿ ದ್ರೌಪದಿಯನ್ನು ಅವಮಾನ ಪಡಿಸಿದ ದುಶ್ಶಾಸನನನ್ನು ರಕ್ತಸುರಿಸಿ ಕೊಲ್ಲುವೆನೆಂದೂ ದುರ್ಯೋಧನನ ತೊಡೆ ಮುರಿಯುವೆನೆಂದೂ ಭೀಮ ಉಗ್ರ ಪ್ರತಿಜ್ಞೆ ಮಾಡಿದ. ಜೂಜಿನ ಶರತ್ತಿನಂತೆ ಪಾಂಡವರು ಅರಣ್ಯವಾಸದಲ್ಲಿದ್ದಾಗ ಕಿರ್ಮೀರ, ಮಣಿಮಂತ ಮತ್ತಿತರ ರಾಕ್ಷಸರನ್ನು ಕೊಂದ.

ಅಜ್ಞಾತವಾಸ ಕಾಲದಲ್ಲಿ ವಿರಾಟರಾಜನ ಆಸ್ಥಾನದಲ್ಲಿ 'ವಲಲ' ಎಂಬ ಹೆಸರಿನಿಂದ ಅಡುಗೆಯವನಾಗಿ ಕೆಲಸ ಮಾಡಿದ. ಅಲ್ಲಿ ಜೀಮೂತನೆಂಬ ಜಟ್ಟಿಯನ್ನೂ ದ್ರೌಪದಿಯ ಮಾನಭಂಗಕ್ಕೆ ಪ್ರಯತ್ನಿಸಿದ ಕೀಚಕನನ್ನೂ ಕೊನೆಗಾಣಿಸಿದ. ಪಾಂಡವರ ಶೋಧನೆಗೆಂದು ಅಲ್ಲಿಗೆ ಬಂದ ಕೌರವರು ವಿರಾಟರಾಜನ ಗೋವುಗಳನ್ನು ವಶಪಡಿಸಿಕೊಂಡು ಯುದ್ಧ ಪ್ರಾರಂಭಿಸಿದಾಗ, ಬಂಧಿತನಾದ ವಿರಾಟರಾಜನನ್ನು ಭೀಮ ಬಿಡಿಸಿದ.

ಮಹಾಭಾರತ ಯುದ್ಧದಲ್ಲಿ ಕೌರವ ಸೋದರರಲ್ಲಿ ಹೆಚ್ಚಿನವರು ಭೀಮನ ಕೈಯಲ್ಲೇ ಹತರಾದರು. ದುಶ್ಶಾಸನನನ್ನು ಕ್ರೂರ ರೀತಿಯಲ್ಲಿ ಕೊಂದು ಸೇಡು ತೀರಿಸಿಕೊಂಡ. ಸರೋವರದಲ್ಲಿ ಅಡಗಿ ಕುಳಿತ ದುರ್ಯೋಧನನನ್ನು ಮೂದಲಿಸಿ, ಹೊರಬರುವಂತೆ ಮಾಡಿ ಗದಾಯುದ್ಧದಲ್ಲಿ ಅವನ ತೊಡೆ ಮುರಿದು, ತನ್ನ ಇನ್ನೊಂದು ಪ್ರತಿಜ್ಞೆಯನ್ನೂ ಪೂರೈಸಿಕೊಂಡ.

ಭೀಮಾ

ಮಹಾರಾಷ್ಟ್ರ ರಾಜ್ಯದ ಕಾಂಡ್ಲದಿಂದ ಇಪ್ಪತ್ತೈದು ಮೈಲು ದೂರದಲ್ಲಿ ಸಹ್ಯಾದ್ರಿ ಪರ್ವತದಲ್ಲಿ ಒಂದು ಪ್ರಸಿದ್ಧ ಶಿವಲಿಂಗವಿದೆ. ಇದನ್ನು ಭೀಮಶಂಕರ ಜ್ಯೋತಿರ್ಲಿಂಗ ಎನ್ನುತ್ತಾರೆ. ಈ ಪ್ರದೇಶದಲ್ಲಿ ಒಂದು ನದಿ ಹುಟ್ಟುತ್ತದೆ. ಶಿವನ ಬೆವರಿನಿಂದ ಇದು ಹುಟ್ಟಿತು ಎಂದು ನಂಬಿಕೆ. ನದಿಗೆ ಭೀಮಾ ಎಂದು ಹೆಸರು.

ಸಮುದ್ರಮಟ್ಟದಿಂದ 3,000 ಅಡಿಗಳ ಎತ್ತರದಲ್ಲಿ ಹುಟ್ಟಿದ ಭೀಮಾ ಆಗ್ನೇಯ ದಿಕ್ಕಿನಲ್ಲಿ ಹರಿಯುತ್ತದೆ. ಮಹಾರಾಷ್ಟ್ರ ಮತ್ತು ಕರ್ನಾ

ಮೂಲಕ ಭೀಮಾ ಹರಿಯುವಾಗ, ಇಂದ್ರಾಯಣಿ, ಘೋಡ್, ನೀರಾ, ...ನಾ ಮುಂತಾದ ನದಿಗಳು ಇದನ್ನು ಕೂಡಿಕೊಳ್ಳುತ್ತವೆ. ರಾಯಚೂರಿನ ಸಮೀಪದಲ್ಲಿ ಭೀಮಾ ಕೃಷ್ಣಾನದಿಯನ್ನು ಸೇರುತ್ತದೆ. ಭೀಮಾ ನದಿಯ ದಡದಲ್ಲಿ ಆಳಂದಿ, ಪಂಢರಾಪುರಗಳಂಥ ಪುಣ್ಯ ಕ್ಷೇತ್ರಗಳಿವೆ.

ಭೀಷ್ಮ

ಒಂದು ಛಲ ತೊಟ್ಟು ಅದನ್ನು ಕಟ್ಟುನಿಟ್ಟಾಗಿ ಪಾಲಿಸುವುದಕ್ಕೆ 'ಭೀಷ್ಮ ಪ್ರತಿಜ್ಞೆ' ಎನ್ನುತ್ತಾರೆ. ಈ ಹೆಸರು ಬಂದದ್ದು 'ಮಹಾಭಾರತ' ಕಥೆಯಲ್ಲಿ ಬರುವ ಭೀಷ್ಮನಿಂದಾಗಿ. ಇವನ ಮೂಲಹೆಸರು ದೇವವ್ರತ.

ಭೀಷ್ಮ ಚಂದ್ರವಂಶದ ರಾಜ ಶಂತನು ಮತ್ತು ಗಂಗೆಯರ ಮಗ. ವಸಿಷ್ಠರ ಶಾಪದಿಂದಾಗಿ ಭೂಲೋಕದಲ್ಲಿ ಗಂಗೆಯ ಮಕ್ಕಳಾಗಿ ಜನಿಸಿದ ಎಂಟು ವಸುಗಳಲ್ಲಿ ಬದುಕಿ ಉಳಿದವನು ಭೀಷ್ಮನೊಬ್ಬ ಮಾತ್ರ. ಭೀಷ್ಮ ಜನಿಸಿದೊಡನೆ ದೇವಲೋಕದ ಗಂಗೆ ತನ್ನ ಲೋಕಕ್ಕೆ ಹೊರಟು ಹೋದಳು. ಭೀಷ್ಮ ಸ್ವಲ್ಪಕಾಲ ತಾಯಿಯೊಡನೆ ಆ ಲೋಕದಲ್ಲಿದ್ದ. ಮಹಾಪರಾಕ್ರಮಿ ಪರಶುರಾಮನಿಂದ ಭೀಷ್ಮನಿಗೆ ಧನುರ್ವಿದ್ಯಾ ಶಿಕ್ಷಣ ದೊರೆಯಿತು.

ಸುಂದರ ಕನ್ಯೆ ಸತ್ಯವತಿಯನ್ನು ಮೆಚ್ಚಿ ಶಂತನು ಮಹಾರಾಜ ವಿವಾಹವಾಗ ಬಯಸಿದ. ಆಗ ಆಕೆಯ ಸಾಕುತಂದೆ ದಾಶರಾಜ, ಸತ್ಯವತಿಯಲ್ಲಿ ಜನಿಸುವ ಮಕ್ಕಳಿಗೇ ರಾಜ್ಯಾಧಿಕಾರ ದೊರಕಬೇಕೆಂದು ಶರತ್ತು ಹಾಕಿದ. ಶಂತನುವಿಗೆ ಇದು ಸಮ್ಮತವಾಗಲಿಲ್ಲ. ಆದರೆ ಯುವರಾಜನಾಗಿದ್ದ ಭೀಷ್ಮ ತನ್ನ ಅಧಿಕಾರ ಬಿಟ್ಟು ಸತ್ಯವತಿಯ ಮಕ್ಕಳಿಗೆ ತಂದೆಯ ಉತ್ತರಾಧಿಕಾರ ಕೊಡುವೆನೆಂದೂ ತಾನು ಜೀವನವಿಡೀ ಬ್ರಹ್ಮಚಾರಿಯಾಗಿ ಉಳಿಯುವೆನೆಂದೂ ಶಪಥಮಾಡಿದ. ಈ ಕಠಿಣ ಪ್ರತಿಜ್ಞೆಯಿಂದಾಗಿ ಅವನಿಗೆ ಸತ್ಯವ್ರತ, ಭೀಷ್ಮ ಎಂಬ ಹೆಸರುಗಳಾದುವು. ತಂದೆ ಶಂತನು ಅವನಿಗೆ 'ಸ್ವಂತ ಇಚ್ಛೆಯಿಂದ ಮರಣಹೊಂದು'ವ ಶಕ್ತಿಯನ್ನು ವರವಾಗಿ ಅನುಗ್ರಹಿಸಿದ.

ಸತ್ಯವತಿಯ ಪುತ್ರರಾದ ಚಿತ್ರಾಂಗದ, ವಿಚಿತ್ರವೀರ್ಯರು ಪ್ರಾಪ್ತ ವಯಸ್ಕರಾದಾಗ ಭೀಷ್ಮ ಕಾಶೀರಾಜನ ಪುತ್ರಿಯರಾದ ಅಂಬಿಕೆ, ಅಂಬಾಲಿಕೆಯರೊಡನೆ ಅವರ ವಿವಾಹ ನೆರವೇರಿಸಿದ. ಕಾಶೀರಾಜನ ಇನ್ನೊಬ್ಬ ಮಗಳು ಅಂಬೆ ಭೀಷ್ಮನೇ ತನ್ನನ್ನು ವರಿಸಬೇಕೆಂದು ಹಟ ಹಿಡಿದಳು. ಗುರು ಪರಶುರಾಮನಿಂದ ಹೇಳಿಸಿದಳು. ತನ್ನ ಮಾತನ್ನು ಕೇಳದ್ದಕ್ಕಾಗಿ ಭೀಷ್ಮನ ಮೇಲೆ ಯುದ್ಧ ಮಾಡಿದ ಪರಶುರಾಮ ತಾನೇ ಸೋತ. ಅಂಬೆ ಹತಾಶಳಾಗಿ ಭೀಷ್ಮನನ್ನು ಕೊಲ್ಲಲು ಪಣತೊಟ್ಟು ತಪಸ್ಸಿಗೆ ಹೋದಳು.

ಮುಂದೆ ಅಂಬಿಕೆ, ಅಂಬಾಲಿಕೆಯರಲ್ಲಿ ಜನಿಸಿದ ಪುತ್ರರೇ ಧೃತರಾಷ್ಟ್ರ ಮತ್ತು ಪಾಂಡು. ಧೃತರಾಷ್ಟ್ರನ ಮಕ್ಕಳು ಕೌರವರು; ಪಾಂಡುವಿನ ಮಕ್ಕಳು ಪಾಂಡವರು. ಅಧಿಕಾರದ ವಿಷಯದಲ್ಲಿ ಅವರೊಳಗೆ ವಿವಾದ ಉಂಟಾದಾಗ ಪಾಂಡವರಿಗೆ ರಾಜ್ಯದ ಸಮಪಾಲು ಕೊಡಬೇಕೆಂದು ಕೌರವ ಪ್ರಮುಖ ದುರ್ಯೋಧನನಿಗೆ ಭೀಷ್ಮ ಸದಾ ನೀತಿ ಬೋಧಿಸುತ್ತಿದ್ದ. ಪಾಂಡವರಿಗೆ ಕೌರವರೊಡನೆ ಯುದ್ಧ ಅನಿವಾರ್ಯವಾಯಿತು. ದುರ್ಯೋಧನನ ಋಣದಲ್ಲಿದ್ದ ಭೀಷ್ಮ ಅವನ ಪಕ್ಷದಲ್ಲೇ ಉಳಿದ. ಮಹಾಭಾರತ ಯುದ್ಧದಲ್ಲಿ ಭೀಷ್ಮನೇ ಕೌರವ ಪಕ್ಷದ ಪ್ರಥಮ ಸೇನಾಪತಿಯಾದ.



ಭೀಷ್ಮ ಪ್ರತಿಜ್ಞೆ

ಯುದ್ಧದ ಒಂಬತ್ತನೆಯ ದಿನ ರಾತ್ರಿ ಯುಧಿಷ್ಠಿರ ರಹಸ್ಯವಾಗಿ ಭೀಷ್ಮನನ್ನು ಭೇಟಿಯಾಗಿ ನಿಮ್ಮನ್ನು ಸೋಲಿಸುವುದು ಹೇಗೆ? ಎಂದು ಅವನನ್ನೇ ಕೇಳಿದ. ತನ್ನ ಮೇಲೆ ದ್ವೇಷ ಸಾಧಿಸಲು ಅಂಬೆ ಶಿಖಂಡಿಯಾಗಿ ಜನಿಸಿದ್ದನ್ನು ತಿಳಿಸಿದ ಭೀಷ್ಮ, ಶಿಖಂಡಿ ಎದುರಾದರೆ ತಾನು ಹಿಮ್ಮೆಟ್ಟುವುದಾಗಿ ಹೇಳಿದ. ಮಾರನೆಯ ದಿನ ಶಿಖಂಡಿ ಎದುರಾದಾಗ, ಭೀಷ್ಮ ಶಸ್ತ್ರತ್ಯಾಗ ಮಾಡಿದ; ಶಿಖಂಡಿ ಹಾಗೂ ಅರ್ಜುನರ ಬಾಣಗಳಿಂದ ನೆಲಕ್ಕುರುಳಿದ.


ಭೀಷ್ಮ ಬಿದ್ದಾಗ ರಣರಂಗದಲ್ಲಿದ್ದ ಕೌರವ, ಪಾಂಡವ ಪ್ರಮುಖರೆಲ್ಲ ಬಂದು ಗೌರವ ಸಲ್ಲಿಸಿದರು. ಅರ್ಜುನ ಭೀಷ್ಮನಿಗೆ ಬಾಣಗಳಿಂದ ಹಾಸಿಗೆ –ಶರ ಶಯ್ಯೆ– ಮಾಡಿಕೊಟ್ಟ. ಬಾಯಾರಿಕೆಯಾದಾಗ, ಬಾಣದಿಂದ ಭೂಮಿಯನ್ನು ಕೊರೆದು 'ಪಾತಾಳಗಂಗೆ'ಯನ್ನು ತರಿಸಿಕೊಟ್ಟ.

ಮರುದಿನ ಭೀಷ್ಮ ಕೃಷ್ಣನ ಪ್ರೇರಣೆಯಂತೆ ಯುಧಿಷ್ಠಿರನಿಗೆ ಧರ್ಮ ರಹಸ್ಯಗಳನ್ನು ಬೋಧಿಸಿದ. ಮರಣಕ್ಕೆ ಉತ್ತರಾಯಣವೇ ಉತ್ತಮ ಕಾಲವೆಂದು, ಅಲ್ಲಿಯವರೆಗೆ ಕಾದಿದ್ದು, ಅನಂತರ ಜೀವತ್ಯಾಗ ಮಾಡಿದ.

ಭುಲಾಭಾಯಿ ದೇಸಾಯಿ

ಭುಲಾಭಾಯಿ ದೇಸಾಯಿ ಅವರ ಜನನ 1877ರ ಅಕ್ಟೋಬರ್ 13ರಂದು. ಮುಂಬಯಿಯಲ್ಲಿ ಬಿ. ಎ. ಪದವಿಯಲ್ಲಿ ಉಚ್ಚ ಶ್ರೇಣಿಯಲ್ಲಿ ತೇರ್ಗಡೆಯಾದರು. ಗುಜರಾತ್ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿದ್ದುಕೊಂಡೇ ಕಾನೂನು ಪದವಿ ಪಡೆದು ಮುಂಬಯಿಯಲ್ಲಿ ವಕೀಲ ವೃತ್ತಿ ಆರಂಭಿಸಿದರು. ದಕ್ಷ ವಕೀಲರೆಂದು ಬಹು ಬೇಗ ಖ್ಯಾತಿ ಗಳಿಸಿದರು.

ಲಿಬರಲ್ ಪಕ್ಷದಲ್ಲಿದ್ದ ದೇಸಾಯಿ 1930ರಲ್ಲಿ ಕಾಂಗ್ರೆಸ್‌ಗೆ ಸೇರಿದ್ದು ಗಾಂಧೀಜಿಯ ಪ್ರಭಾವದಿಂದ. ಅದಕ್ಕೆ ಮೊದಲು ಅವರು ಗಾಂಧೀಜಿಯ ಅಪೇಕ್ಷೆಯಂತೆ ಬಾರ್ಡೋಲಿ ಸತ್ಯಾಗ್ರಹಕ್ಕೆ ಸಂಬಂಧಿಸಿದ



ದೇಶಪ್ರೇಮಿ, ವಕೀಲ : ಭುಲಾಭಾಯಿ

ವಿಚಾರಣಾ ಸಮಿತಿಯಲ್ಲಿ ರೈತರ ಪರ ವಾದಿಸಿ ಜಯಿಸಿದರು. ಇದರಿಂದ ಭೂಕಂದಾಯದಲ್ಲಿ ರೈತರಿಗೆ ರಿಯಾಯಿತಿ ದೊರೆಯುವಂತಾಯಿತು.

ಭುಲಾಭಾಯಿ ದೇಸಾಯಿ ಕಾಂಗ್ರೆಸ್ ಸದಸ್ಯರಾದ ಮೇಲೆ ಸ್ವಾತಂತ್ರ್ಯ ಚಳುವಳಿಯಲ್ಲಿ ಆಸಕ್ತಿ ವಹಿಸಿದರು. ತಮ್ಮ ರಾಜಕೀಯ ಚಟುವಟಿಕೆಗಳಿಗಾಗಿ ಬಂಧಿತರಾಗಿ ಸೆರೆಮನೆವಾಸ ಅನುಭವಿಸಿದರು. ಕೇಂದ್ರ ಶಾಸನಸಭೆಯಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರಾಗಿ, ನಾಯಕರಾಗಿ ಸೇವೆ ಸಲ್ಲಿಸಿದರು.

ದ್ವಿತೀಯ ಮಹಾಯುದ್ಧದ ಬಳಿಕ ಆಜಾದ್ ಹಿಂದ್ ಫೌಜಿನ ಯೋಧರ ಮೇಲೆ ಬ್ರಿಟಿಷ್ ಸರಕಾರ ಹೂಡಿದ್ದ ಮಿಲಿಟರಿ ಮೊಕದ್ದಮೆಯಲ್ಲಿ ಅವರು ಆಪಾದಿತರ ಪರ ವಾದಿಸಿದರು. ಆಜಾದ್ ಹಿಂದ್ ಫೌಜಿನ ಯೋಧರ ನಡವಳಿಕೆ ನ್ಯಾಯವಾದದ್ದೆಂದೂ ತಮ್ಮ ರಾಷ್ಟ್ರದ ಸ್ವಾತಂತ್ರ್ಯ ಸಾಧನೆಗಾಗಿ ಬಂಡಾಯ ಹೂಡುವ ಸ್ವಾತಂತ್ರ್ಯ ಅವರಿಗೆ ಇದೆಯೆಂದೂ ದೇಸಾಯಿಯವರು ಅತ್ಯಂತ ದಕ್ಷತೆಯಿಂದ ವಾದಿಸಿ ಗೆದ್ದರು.

ಈ ವಕಾಲತ್ತನ್ನು ವಹಿಸಿಕೊಂಡಾಗ ಅವರ ಆರೋಗ್ಯ ಅಷ್ಟು ಚೆನ್ನಾಗಿರಲಿಲ್ಲ. ಆದರೂ ಶ್ರಮವಹಿಸಿ ಕೆಲಸ ಮಾಡಿದರು; ರಾಷ್ಟ್ರಕ್ಕೆ ಅಮೂಲ್ಯ ಸೇವೆ ಸಲ್ಲಿಸಿದರು. 1946 ಮೇ 6ರಂದು ಭುಲಾಭಾಯಿ ಅವರ ದೇಹಾವಸಾನವಾಯಿತು.

ಭುವನೇಶ್ವರ

ಒಡಿಸ್ಸಾದ ರಾಜಧಾನಿ ಭುವನೇಶ್ವರ. ಇದು ದೇವಾಲಯಗಳಿಗೆ ಪ್ರಸಿದ್ಧ.

ಭುವನೇಶ್ವರದ ಮೊದಲ ಹೆಸರು 'ಏಕಾಮ್ರತೀರ್ಥ'. ಪುರಿ ಜಗನ್ನಾಥನ ಸಂದರ್ಶನ ಮಾಡುವ ಮೊದಲು ಯಾತ್ರಿಕರು ಏಕಾಮ್ರತೀರ್ಥ ನೋಡಬೇಕು ಎಂಬ ನಂಬಿಕೆ ಇದೆ. ಭುವನೇಶ್ವರದ ಬಿಂದುಸಾಗರ ಎಂಬ ಸರೋವರದಲ್ಲಿ ಮಿಂದು ದೇವಾಲಯಗಳ ದರ್ಶನ ಆರಂಭಿಸುತ್ತಾರೆ. ಅನಂತರ ಕ್ಷೇತ್ರಪತಿಯಾದ ಅನಂತ ವಾಸುದೇವ, ಗಣಪತಿ, ಗೋಪಾಲಿನಿ ದೇವಿ, ಸ್ಕಂದ ದೇವಾಲಯಗಳನ್ನು ನೋಡಿದ ಬಳಿಕ ಲಿಂಗರಾಜ ದೇವಾಲಯಕ್ಕೆ ಪ್ರವೇಶ. ಸುಮಾರು 1000ದಲ್ಲಿ ಕಟ್ಟಿತೆನ್ನಲಾದ ಈ ದೇವಾಲಯ ಚೆಲುವಿಗೆ ಹೆಸರಾಗಿದೆ. ಗರ್ಭಗುಡಿಯ ಮೇಲಿನ ಶಿಖರವೇ 180 ಅಡಿ ಎತ್ತರವಿದೆ. ಗರ್ಭಗುಡಿಯ ಮೇಲಿರುವಂತೆಯೇ ಇತರ ಭಾಗಗಳ ಮೇಲೂ ಶಿಖರಗಳಿವೆ. ದೇವಾಲಯದ ವಿಶಾಲ ಪ್ರಾಂಗಣದಲ್ಲಿ 65 ಚಿಕ್ಕ ದೇವಾಲಯಗಳಿವೆ. ದೇವಾಲಯದ ಹೊರಮೈ ಶಿಲ್ಪ ಕೃತಿಗಳಿಂದ ತುಂಬಿದೆ. ರಾಜ ದೇವಾಲಯದ ಪೂರ್ವಕ್ಕೆ ಭಾಸ್ಕರೇಶ್ವರ ದೇವಾಲಯ ಈಶಾನ್ಯಕ್ಕೆ ರಾಜರಾಣಿ ದೇವಾಲಯ, ಅಲ್ಲಿಯೇ ಪಶ್ಚಿಮಕ್ಕೆ ಇ ದೇವಾಲಯಗಳಲ್ಲಿ ಮುಕ್ತೇಶ್ವರ, ಪರಶುರಾಮೇಶ್ವರ, ಸಿದ್ಧೇ ಕೇದಾರೇಶ್ವರಗಳು ಮುಖ್ಯವಾದುವು.



ತಾಯಿ–ಮಗು : 11ನೆಯ ಶತಮಾನದ ಭು

ಭುವನೇಶ್ವರದಿಂದ ಸುಮಾರು 6 ಮೈಲು ದೂರದಲ್ಲಿ ಧೌಲಿ ಹಳ್ಳಿಯಿದೆ. ಇಲ್ಲಿನ ಗುಡ್ಡದ ಮೇಲೆ ಅಶೋಕನ ಶಿಲಾಶಾಸನ ಬುದ್ಧನ ಪ್ರತೀಕವಾಗಿ ಕೆತ್ತಿದ ಆನೆಯಿದೆ. ಸಾವಿರಾರು ವರ್ಷಗಳಾ ಇವು ಈಗಲೂ ಒಳ್ಳೆಯ ಸ್ಥಿತಿಯಲ್ಲಿವೆ. ಭುವನೇಶ್ವರದಿಂದ 3 ಮ ದೂರದಲ್ಲಿ ಖಂಡಗಿರಿ ಬೆಟ್ಟವಿದೆ. ಇಲ್ಲಿ ಉದಯಗಿರಿ, ಖಂ ನೀಲಗಿರಿ ಎಂಬ ಮೂರು ಶಿಖರಗಳಿವೆ. ಉದಯಗಿರಿಯಲ್ಲಿ 44 ಗವಿ ಖಂಡಗಿರಿಯಲ್ಲಿ 19 ಗವಿಗಳೂ ನೀಲಗಿರಿಯಲ್ಲಿ 3 ಗವಿಗಳೂ ಇವೆ. ಗವಿಗಳಲ್ಲೆಲ್ಲ ಶಿಲ್ಪ ಕೃತಿಗಳಿವೆ. ಇಂದು ಭುವನೇಶ್ವರದಲ್ಲಿ ಎರಡು ಗಳಿವೆ. ಒಂದು, ದೇವಾಲಯಗಳಿರುವ ಹಳೆಯ ಪಟ್ಟಣ. ಇನ್ನೊ 1948ರಲ್ಲಿ ರಾಜಧಾನಿಗೋಸ್ಕರ ಕಟ್ಟಲ್ಪಟ್ಟ ನೂತನ ನಗರ.

ಭುವನೇಶ್ವರದ ಜನಸಂಖ್ಯೆ 1,05,491



ಭುವನೇಶ್ವರದ ಲಿಂಗರಾಜ ದೇವಾಲಯ



ಭೂತಾನದ [illegible]

ಭೂತಾನ

ಮೆಟ್ಟಲುಗಳಂತೆ ಕಾಣುವ ಮೇಲ್ಮೈಯುಳ್ಳ ದೇಶ, ಭೂತಾನ. ಹಿಮಾಲಯದ ಶ್ರೇಣಿಗಳೇ ಈ ಮೆಟ್ಟಲುಗಳು. ಭಾರತಕ್ಕೆ ರಕ್ಷಣಾಧಿಕಾರ ಕೊಟ್ಟಿರುವ ರಾಷ್ಟ್ರ ಇದು. ಟಿಬೆಟ್, ಅರುಣಾಚಲ ಪ್ರದೇಶ, ಪಶ್ಚಿಮ ಬಂಗಾಳ, ಅಸ್ಸಾಂ ಇದರ ಮೇರೆಗಳು.

ಭೂತಾನದ ಮೊದಲ ಅರಸು ಧರ್ಮರಾಜ –16ನೆಯ ಶತಮಾನದವನು. 18ನೆಯ ಶತಮಾನದಲ್ಲಿ ಚೀನ ಭೂತಾನವನ್ನು ತನ್ನ ನಿಯಂತ್ರಣಕ್ಕೆ ತೆಗೆದುಕೊಂಡಿದ್ದಿತು. ಒಳಾಡಳಿತದಲ್ಲಿ ಮಾತ್ರ ದೇಶಕ್ಕೆ ಸ್ವಾತಂತ್ರ್ಯವಿದ್ದಿತು. ಆದರೂ 1800ರ ವರೆಗೆ ಭೂತಾನದಲ್ಲಿ ಸ್ಥಿರ ಸರಕಾರವಿರಲಿಲ್ಲ.

1772ರಲ್ಲಿ ಭೂತಾನ ಕೂಚ್ ಬಿಹಾರ್ ಮೇಲೆ ದಾಳಿ ನಡೆಸಿತು. ಬ್ರಿಟಿಷರು ಕೂಚ್ ಬಿಹಾರದ ಸಹಾಯಕ್ಕೆ ಬಂದರು. ಭೂತಾನ ರಾಜಿಗೆ ಒಪ್ಪಬೇಕಾಯಿತು. 1910ರಲ್ಲಿ ಚೀನ ಭೂತಾನಿನ ಮೇಲೆ ತನ್ನ ಅಧಿಕಾರವನ್ನು ಹೇರಲು ಬಂದಾಗ ಭೂತಾನ ಆಶ್ರಿತ ಸಂಸ್ಥಾನದಂತೆ ಇರುವುದಾಗಿ ಬ್ರಿಟಿಷರೊಂದಿಗೆ ಒಪ್ಪಿಕೊಂಡಿತು. 1949 ಆಗಸ್ಟ್ 8ರಂದು ಸ್ವತಂತ್ರ ಭಾರತದೊಂದಿಗೆ ಮಾಡಿಕೊಂಡ ಒಪ್ಪಂದದಂತೆ ಭೂತಾನ ವಿದೇಶೀ ಸಂಪರ್ಕಗಳಲ್ಲಿ ಭಾರತದ ಸಲಹೆ ಕೇಳುತ್ತದೆ. 1961ರಲ್ಲಿ ಭಾರತ ಭೂತಾನಿನ ರಸ್ತೆಸಾರಿಗೆ ವ್ಯವಸ್ಥೆ ಸುಧಾರಿಸುವ ದೊಡ್ಡ ಕಾರ್ಯಕ್ರಮ ಕೈಗೊಂಡಿತು.

ಭೂತಾನದ ಮುಕ್ಕಾಲು ಪಾಲು ಜನ ಟಿಬೆಟ್ ಮೂಲದವರು. ಭೂತಾನಿ ಭಾಷೆಯೂ ಟಿಬ್ಬತಿ ಭಾಷೆಗೆ ನಿಕಟವಾಗಿದೆ. ಹೆಚ್ಚಿನವರು ಬೌದ್ಧ ಮತಾನುಯಾಯಿಗಳು. ದೇಶದ ವಿಸ್ತೀರ್ಣ —19,305 ಚ.ಮೈಲು. ರಾಜಧಾನಿ ಥಿಂಪು.

ಭೂತಾನದ ಜನರ ಮುಖ್ಯ ಕಸುಬು ಕೃಷಿ ಮತ್ತು ಪಶುಪಾಲನೆ. ಭತ್ತ, ಧಾನ್ಯಗಳು, ಅರಗು, ಮೇಣ, ಚಮರೀ ಮೃಗದ ಹಾಲಿನಿಂದ ಪಡೆದ ಬೆಣ್ಣೆ, ಕಸ್ತೂರಿ, ಮೆಕ್ಕೆ ಜೋಳ ಇಲ್ಲಿನ ಮುಖ್ಯ ಉತ್ಪನ್ನಗಳು. ಕೈಮಗ್ಗ ಪ್ರಧಾನ ಉದ್ಯಮ.

ಭೂತಾರಾಧನೆ

ತುಳುನಾಡು, ಕೇರಳಗಳಲ್ಲಿ ಭೂತಾರಾಧನೆ ಹೆಚ್ಚು ಪ್ರಚಾರದಲ್ಲಿದೆ.

ಎಳೆಯ ತೆಂಗಿನ ಗರಿ, ಕೇದಗೆ (ಕಿಸ್ಗಾರ) ಹೂ, ಸುರಗಿ ಹೂ, ಕೆಂಪು ಧೋತ್ರ, ಸೀರೆ, ಅರದಾಳ, ಮಸಿ, ಗುಂಡುಮಣಿ, ಗಗ್ಗರ —ಇವಿಷ್ಟು ಭೂತದ ಶೃಂಗಾರಕ್ಕೆ ಬೇಕಾಗುವ ಪರಿಕರ. ಆಯಾ ಭೂತಗಳ ಗುಣ, ಅಂತಸ್ತುಗಳಿಗೆ ಅನುಸಾರವಾಗಿ ಅವಕ್ಕೆ ವೇಷಭೂಷಣ.

ಭೂತ ಕಟ್ಟುವವರು ಗಂಡಸರು. ಮಲೆಯರು, ನೆಕ್ಕಾರರು, ಕೋಪಾಳ—ತುಳುನಾಡು ಹಾಗೂ ಕೇರಳಗಳಲ್ಲಿ ಭೂತಕಟ್ಟುವ ವರ್ಗದವರು.

ಚೆಂಡೆಯ ಹೊಡೆತ ಕೇಳಿ ಆವೇಶಭರಿತನಾದ ಭೂತವೇಷಧಾರಿ –ಪಾತ್ರಿ– ನರ್ತಿಸುತ್ತಾನೆ. ಆ ದೈವ ಆತನ ದೇಹದಲ್ಲಿ ಬಂದು ಸೇರಿಕೊಂಡಿತೆಂದು ಜನ ನಂಬುತ್ತಾರೆ. ಆಗ ಅವನು ಬೆಂಕಿಯನ್ನು ತುಳಿಯುತ್ತಾನೆ; ಖಡ್ಗಗಳಿಂದ ತನ್ನನ್ನೇ ಥಳಿಸಿಕೊಳ್ಳುತ್ತಾನೆ. ದೈವವು ಪಾತ್ರಿಯ ಮುಖಾಂತರ ಭಕ್ತಾದಿಗಳೊಂದಿಗೆ ಸಂಭಾಷಣೆ ನಡೆಸುತ್ತದೆ ಎಂಬ ಭಾವನೆ ಇದೆ. 'ಭೂತ' ಸ್ವಹಸ್ತದಿಂದಲೇ ಭಕ್ತರಿಗೆ ಪ್ರಸಾದ ವಿತರಣೆ ಮಾಡುತ್ತದೆ. ನರ್ತನದ ಅಂಶವನ್ನು ಹೊಂದಿರುವ ಭೂತಾರಾಧನೆ ಹೆಚ್ಚಾಗಿ ದೇವಾಲಯ, ಭೂತಗುಡಿಗಳಲ್ಲಿ ನಡೆಯುತ್ತದೆ.



ಕೋಲಕ್ಕೆ ಅಣಿಯಾಗುತ್ತಿರುವ ಭೂತ

ತುಳುನಾಡಿನಲ್ಲಿ ವರ್ಷದ ಒಂದು ತಿಂಗಳು (ಆಟಿ –ಇದು ತುಳು ವರ್ಷದ ಮೂರನೆಯ ತಿಂಗಳು) ಆಟಿ ಕಳಂಜ, ಮದನ, ಬೇಡ ಎಂಬವೇ ಮೊದಲಾದ ಭೂತವೇಷಗಳು ಮನೆ ಮನೆಗೆ ಬಂದು ನರ್ತಿಸುವ ಸಂಪ್ರದಾಯ ಇದೆ. ಇದರಿಂದ ಅನಿಷ್ಟ ನಿವಾರಣೆಯಾಗುತ್ತದೆಂದು ಜನರ ನಂಬುಗೆ.

ಭೂತಾಳ ಪಾಂಡ್ಯ

ತುಳುನಾಡಿಗೆ ವಿಶಿಷ್ಟವೆನಿಸುವ ಕಟ್ಟುಪಾಡುಗಳನ್ನು ಆಚರಣೆಗೆ ತಂದ ಮಹಾಪುರುಷ ಭೂತಾಳ ಪಾಂಡ್ಯ ಎಂಬುದು ತುಳುವರಲ್ಲಿ ಪ್ರಚಲಿತವಿರುವ ನಂಬಿಕೆ.

ಪಾಂಡ್ಯ ದೇಶದಲ್ಲಿ ದೇವ ಪಾಂಡ್ಯನೆಂಬ ವರ್ತಕನಿದ್ದ. ಆತನ ಸೋದರಿ ಸತ್ಯವತಿ, ಪಾಂಡ್ಯ ದೊರೆಯಾಗಿದ್ದ ಸೌಮ್ಯವೀರ ಪಾಂಡ್ಯನ ಮಡದಿ. ಸೌಮ್ಯವೀರ ಯುದ್ಧದಲ್ಲಿ ಸೋತು ರಾಜ್ಯ ಕಳೆದುಕೊಂಡಿದ್ದ. ದೇವ ಪಾಂಡ್ಯ ದಕ್ಷಿಣ ನಾಡುಗಳೊಡನೆ ವ್ಯಾಪಾರಕ್ಕಾಗಿ ಕಟ್ಟಿಸಿದ ಹೊಸ ಹಡಗಿನಲ್ಲಿ ಕುಂಡೋದರ ಎಂಬ ಭೂತ ಸೇರಿಕೊಂಡಿತು. ಹಡಗನ್ನು ಚಲಿಸಲು ಬಿಡಬೇಕಾದರೆ ಒಬ್ಬ ಹುಡುಗನ ಬಲಿ ಬೇಕೆಂದು ಕುಂಡೋದರ ಭೂತ ಬಯಸಿತು. ದೇವ ಪಾಂಡ್ಯ ಚಿಂತಾಕ್ರಾಂತನಾದ. ಪತ್ನಿ ಶಿವದೇವಿ ಸ್ವಂತ ಮಗನನ್ನು ಬಲಿ ಕೊಡಲು ನಿರಾಕರಿಸಿದಾಗ, ಸತ್ಯವತಿ ತನ್ನ ಮಗ ಜಯ ಪಾಂಡ್ಯನನ್ನು ಅರ್ಪಿಸಲು ಮುಂದೆ ಬಂದಳು. ಈ ತ್ಯಾಗದಿಂದ ಭೂತದ ಮನ ಕರಗಿ ಅದು ಜಯ ಪಾಂಡ್ಯನನ್ನು ತುಳುನಾಡಿನ ಬಾರಕೂರಿಗೆ ಕರೆ ತಂದಿತು. ಅಲ್ಲಿನ ರಾಜ ಸಂತತಿಯನ್ನು ಭೂತ [illegible]

ಪಟ್ಟದ ಆನೆಯಿಂದ ಜಯ ಪಾಂಡ್ಯನಿಗೆ ಹೂಹಾರ ಹಾಕಿಸಿ, ಅವನು ರಾಜನಾಗಿ ಆಯ್ಕೆ ಹೊಂದುವಂತೆ ಮಾಡಿತು. ಅನಂತರ ಉಜ್ಜಯಿನಿಯಿಂದ ವಿಕ್ರಮಾದಿತ್ಯ ದೊರೆಯ ಪ್ರಸಿದ್ಧ ಸಿಂಹಾಸನವನ್ನು ತಂದು, ಜಯ ಪಾಂಡ್ಯನು 'ಭೂತಾಳ ಪಾಂಡ್ಯ' ಹೆಸರಿನಿಂದ ಆ ಸಿಂಹಾಸನವನ್ನೇರುವಂತೆ ಮಾಡಿತು. ಇದು ಭೂತಾಳ ಪಾಂಡ್ಯನನ್ನು ಕುರಿತು ಪ್ರಚಲಿತವಿರುವ ಜಾನಪದ ಕಥೆ.

ಭೂತಾಳ ಪಾಂಡ್ಯ ಕ್ರಿ. ಶ. 1 ಅಥವಾ 2ನೆಯ ಶತಮಾನದಲ್ಲಿ ಆಳಿದನೆಂದೂ 'ಅಳಿಯ ಸಂತಾನ ಕಟ್ಟ'ನ್ನು ರೂಢಿಗೆ ತಂದನೆಂದೂ ಹೇಳುತ್ತಾರೆ. 'ಅಳಿಯ ಸಂತಾನ ಕಟ್ಟು' ಅಥವಾ 'ಅಳಿಯ ಕಟ್ಟು' ಎಂದರೆ, ಒಬ್ಬ ವ್ಯಕ್ತಿಯ ಅನಂತರ ಅವನ ಸೋದರಿಯ ಮಕ್ಕಳು ಆ ವ್ಯಕ್ತಿಯ ಉತ್ತರಾಧಿಕಾರಿಗಳಾಗುವ ಪದ್ಧತಿ. 'ಸ್ಕಾಂದ ಪುರಾಣ'ದ 'ಸಹ್ಯಾದ್ರಿ ಖಂಡ'ದ ಭಾಗವೆಂದು ಹೇಳುವ 'ಗ್ರಾಮ ಪದ್ಧತಿ'ಯಲ್ಲಿ ಭೂತಾಳ ಪಾಂಡ್ಯನ ಕಥೆ ವರ್ಣಿತವಾಗಿದೆ. ಆದರೆ ತುಳುನಾಡಿನ ಬೇರೆ ಬೇರೆ ಕಡೆಗಳಲ್ಲಿ ಸಿಗುವ 'ಗ್ರಾಮ ಪದ್ಧತಿ'ಗಳಲ್ಲಿ ಹೇಳಿರುವ ವಿವರಗಳು ಇದರಿಂದ ಭಿನ್ನವಾಗಿವೆ. ಅಲ್ಲದೆ ಅವುಗಳಲ್ಲೇ ಪರಸ್ಪರ ವ್ಯತ್ಯಾಸವಿದೆ.

ಸಂಪ್ರಸಿದ್ಧ ಇತಿಹಾಸ ಸಂಶೋಧಕ ಡಾ. ಬಿ. ಎ. ಸಾಲೆತ್ತೂರ್ ಅವರು 'ಭೂತಾಳ ಪಾಂಡ್ಯ' ಚಾರಿತ್ರಿಕ ವ್ಯಕ್ತಿಯಲ್ಲವೆಂದೂ ತುಳುನಾಡಿನಲ್ಲಿ 12ನೆಯ ಶತಮಾನಕ್ಕಿಂತ ಹಿಂದೆ 'ಅಳಿಯ ಸಂತಾನ ಪದ್ಧತಿ' ಆಚರಣೆಯಲ್ಲಿರಲಿಲ್ಲವೆಂದೂ ಅಭಿಪ್ರಾಯಪಟ್ಟಿದ್ದಾರೆ.

ಭೂದಾನ


ನೋಡಿ : ಸಂಪುಟ ೧

ಭೂಪೇಶ ಗುಪ್ತ

ಭೂಪೇಶ ಗುಪ್ತ ಪ್ರಮುಖ ಕಮ್ಯೂನಿಸ್ಟ್ ನಾಯಕರಲ್ಲಿ ಒಬ್ಬರು.

ಹದಿನಾರನೆಯ ವಯಸ್ಸಿನಲ್ಲೇ ಕ್ರಾಂತಿಕಾರಿ ಚಟುವಟಿಕೆಗಳಿಗಾಗಿ ಸೆರೆಮನೆ ಕಂಡರು. ಕಾನೂನು ಭಂಗ ಚಳುವಳಿಯಲ್ಲಿ ಭಾಗವಹಿಸಿದ್ದಕ್ಕಾಗಿ ಮತ್ತೆ ಬಂಧಿತರಾದರು. 1933 ರಿಂದ 1937ರ ವರೆಗೆ ವಿಚಾರಣೆ ಇಲ್ಲದೆ ಇವರು ಬಂಧನದಲ್ಲಿದ್ದರು. ಸೆರೆಮನೆಯಲ್ಲಿ ಇದ್ದಾಗಲೇ ಇವರು ಬಿ.ಎ. ಪರೀಕ್ಷೆಯಲ್ಲಿ ಉತ್ತೀರ್ಣರಾದರು ; ಕಮ್ಯೂನಿಸಮನ್ನು ಅಂಗೀಕರಿಸಿದರು.

ಭೂಪೇಶ ಗುಪ್ತರ ಜನನ ಈಗ ಬಾಂಗ್ಲಾದೇಶದಲ್ಲಿರುವ ಇಲ್ನಾ ಎಂಬಲ್ಲಿ, 1914 ರಲ್ಲಿ. 1937ರಲ್ಲಿ ಇಂಗ್ಲೆಂಡಿಗೆ ಹೋಗಿ ಆಕ್ಸ್‌ಫರ್ಡ್‌ನಲ್ಲಿ ವ್ಯಾಸಂಗ ಮಾಡಿದರು. ಅಲ್ಲಿ ಇಂದಿರಾ ಪ್ರಿಯದರ್ಶಿನಿ, ಫಿರೋಜ್ ಗಾಂಧಿ ಮತ್ತು ಭೂಪೇಶ ಗುಪ್ತ ಒಡನಾಡಿಗಳಾಗಿದ್ದರು. ಲಂಡನ್ ವಿಶ್ವವಿದ್ಯಾಲಯದ ಎಲ್‌ಎಲ್.ಬಿ. ಪರೀಕ್ಷೆಯಲ್ಲಿ ಉತ್ತೀರ್ಣರಾದರು. ಭಾರತಕ್ಕೆ ಮರಳಿದ ಮೇಲೆ ಏಳು ವರ್ಷ ಭೂಗತರಾಗಿ ಇದ್ದುಕೊಂಡು ಕಮ್ಯೂನಿಸ್ಟ್ ಪಕ್ಷವನ್ನು ಸಂಘಟಿಸಿದರು.



ರಾಜ್ಯಸಭೆ :
ಭೂಪೇಶಗುಪ್ತ

1952ರಿಂದ ಭೂಪೇಶ ಗುಪ್ತ ರಾಜ್ಯಸಭಾ ಸದಸ್ಯರು. ರಾಜ್ಯಸಭೆಯಲ್ಲಿ ಇವರು ಕಮ್ಯೂನಿಸ್ಟ್ ತಂಡದ ನಾಯಕರು. ಇವರ ಮಾತು ಚಾಟಿ ಏಟಿನಂತೆ. ಪಕ್ಷದ ಪತ್ರಿಕೆ 'ನ್ಯೂ ಏಜ್'ಗೆ ಇವರು ಸಂಪಾದಕರು. ಕಮ್ಯೂನಿಸ್ಟ್ ಪಕ್ಷದ ರಾಷ್ಟ್ರೀಯ ಸಮಿತಿಯ ಕಾರ್ಯದರ್ಶಿಯಾಗಿದ್ದರು. ಮಾಸ್ಕೋ 1959, 1960 ಮತ್ತು 1969ರಲ್ಲಿ ನಡೆದ ಅಂತರರಾಷ್ಟ್ರೀಯ ಕಮ್ಯೂನಿ ಸಮ್ಮೇಳನಗಳಿಗೆ ಭಾರತದ ಕಮ್ಯೂನಿಸ್ಟ್ ಪಕ್ಷದ ಪ್ರತಿನಿಧಿಯಾ ಹೋಗಿದ್ದರು.

ಭೂಪೇಶ ಗುಪ್ತ ಇಂಗ್ಲಿಷ್ ಮತ್ತು ಬಂಗಾಳೀ ಭಾಷೆಗಳಲ್ಲಿ ಕೆ ಪುಸ್ತಕಗಳನ್ನು ಬರೆದಿದ್ದಾರೆ.

ಭೃಗುಕಚ್ಛ

ನೋಡಿ : ಬರೂಚ್

ಭೋಪಾಲ್

ಮಧ್ಯಪ್ರದೇಶ ರಾಜ್ಯದ ರಾಜಧಾನಿ, ಭೋಪಾಲ್.

'ಭೋಜಪಾಲ' ಎಂಬ ರಾಜನಿಂದ 11ನೆಯ ಶತಮಾನದಲ್ಲಿ ಸ್ಥಾ ಲ್ಪಟ್ಟ ಹಳೆಯ ನಗರದ ನಿವೇಶನದ ಮೇಲೆ ಇಂದಿನ ಭೋಪಾಲ್ ಕಟ್ಟ ಟ್ಟಿದೆ ಎಂದು ನಂಬಿಕೆ.

ಆಧುನಿಕ ಭೋಪಾಲವನ್ನು ಸ್ಥಾಪಿಸಿದವನು, ಮೊಘಲ್ ಚಕ್ರವ ಔರಂಗಜೇಬನ ಪ್ರಾದೇಶಿಕ ಅಧಿಪತಿಯಾಗಿದ್ದ ದೋಸ್ತ್ ಮಹಮ್ಮ ಖಾನ್. 18ನೆಯ ಶತಮಾನದಲ್ಲಿ ಈತ ಕಟ್ಟಿಸಿದ ಫತೇಗಡ ನಗರ ಕೇಂದ್ರವಾಯಿತು.

ಸ್ವತಂತ್ರ ಭಾರತದಲ್ಲಿ 1956ರಲ್ಲಿ ರಾಜ್ಯಗಳನ್ನು ಭಾಷಾವಾ ತಳಹದಿಯ ಮೇಲೆ ಪುನರ್ರಚಿಸಿದಾಗ ಭೋಪಾಲ್ ಮಧ್ಯ ಪ್ರದೇಶ ರಾಜಧಾನಿಯಾಯಿತು.

ಭೋಪಾಲ್ ನಗರ ಸಮುದ್ರ ಮಟ್ಟದಿಂದ 3,000 ಅಡಿ ಎತ್ತರದಲ್ಲಿ ಇಲ್ಲಿ ವಾಯುಗುಣ ಹಿತಕರ. 'ದೊಡ್ಡ ಸರೋವರ' ಹಾಗೂ 'ಕೆಳ ಸರೋವರ' ಎಂಬ ಎರಡು ಸರೋವರಗಳ ದಂಡೆಯ ಮೇಲೆ ನಗರ ಬೆಳೆದಿದೆ. ದೊಡ್ಡ ಸರೋವರದ ಒಂದು ದಂಡೆಯ ಮೇಲಿರು ಷಿಮ್‌ಲಾ ಗುಡ್ಡದ ಮೇಲಿನಿಂದ ಸಂಜೆ ಹೊತ್ತು ಕಾಣುವ ಪಟ್ಟಣದ ನೋ ಮನೋಹರ. ರಾತ್ರಿಯ ವೇಳೆ ದಂಡೆಯ ಮೇಲಿರುವ ಕಟ್ಟಡಗಳಿ ಹೊರಸೂಸುವ ಸಹಸ್ರಾರು ದೀಪಗಳು ಸರೋವರದಲ್ಲಿ ಪ್ರತಿಫಲಿತವಾ ಕಿನ್ನರಲೋಕದ ಕಲ್ಪನೆ ಕೊಡುತ್ತವೆ.

ಕಮಲಾ ಪಾರ್ಕ್, ಆಯೆಷ (ಸಂತೋಷ) ಬಾಗ್, ಫರ್‌ಹತಾಫ್ (ಅತ್ಯಾನಂದ) ಬಾಗ್, ನೂರ್ (ಬೆಳಕಿನ) ಬಾಗ್ ಮುಂತಾದ ವಿಶಾ ಉದ್ಯಾನಗಳಿವೆ. ಇಲ್ಲಿಂದ 24 ಮೈಲು ದೂರದ ಭೋಜಪುರದಲ್ಲಿ ಅಪೂ ಶಿವ ದೇವಾಲಯವಿದೆ. ಇದೊಂದು ಭವ್ಯ ಕಟ್ಟಡ. 17 ಅಡಿ 4 ಅಂಗು ತ್ರಿಜ್ಯದ ಹಾಗೂ 7 ಅಡಿ 4 ಅಂಗುಲ ನೀಳದ ಶಿವಲಿಂಗ ಇಲ್ಲಿದೆ.

ಸ್ವಿಚ್‌ಗೇರ್, ಟ್ರಾನ್ಸ್‌ಫಾರ್ಮರ್ ಮುಂತಾದ ದೊಡ್ಡ ದೊ ವಿದ್ಯುತ್ ಉಪಕರಣಗಳನ್ನು ತಯಾರಿಸುವ ಹೆವಿ ಎಲೆಕ್ಟ್ರಿಕಲ್ಸ್ ಭೋಪಾ ಭಾರೀ ಉದ್ಯಮ.

ಇಲ್ಲಿಯ ಜನಸಂಖ್ಯೆ 3,04,550

ಭೌತ ಸಂಶೋಧನಾ ಪ್ರಯೋಗಾಲಯ

ದಿವಂಗತ ವಿಕ್ರಮ್ ಸಾರಾಭಾಯಿ ಅವರ ವಿಜ್ಞಾನ ಶ್ರದ್ಧೆಯ ಪ್ರತಿ ಎಂಬಂತಿರುವ ಸಂಸ್ಥೆ ಅಹಮದಾಬಾದಿನಲ್ಲಿರುವ ಭೌತ ಸಂಶೋಧನ

ಪ್ರಯೋಗಾಲಯ. ಸಾರಾಭಾಯಿ ಅವರು ವಿಶ್ವಕಿರಣಗಳ ಅಧ್ಯಯನಕ್ಕಾಗಿ 1947 ರಲ್ಲಿ ಒಂದು ಚಿಕ್ಕ ಪ್ರಯೋಗಾಲಯವಂತೆ ಇದನ್ನು ಆರಂಭಿಸಿದರು. ಈಗ ಇದು ಅಂತರರಾಷ್ಟ್ರೀಯ ಖ್ಯಾತಿಯ ಸಂಸ್ಥೆಯಾಗಿದೆ.

ಸ್ಥಿರ ಮಂಡಲದ (ವಾತಾವರಣದಲ್ಲಿ 11 ಕಿ. ಮೀ.—30 ಕಿ. ಮೀ. ಎತ್ತರದ ಭಾಗ) ಭೌತ ಹಾಗೂ ರಾಸಾಯನಿಕ ವಿದ್ಯಮಾನಗಳ ವಿಜ್ಞಾನವಾದ ಏರೋನೊಮಿ, ಭೂಕಾಂತತೆ, ವಿಶ್ವಕಿರಣ, ವ್ಯೋಮ ಭೌತವಿಜ್ಞಾನ, ಮೂಲಕಣಗಳ ಬಗೆಗಿನ ಸೈದ್ಧಾಂತಿಕ ಭೌತವಿಜ್ಞಾನ, ಬೀಜ ಭೌತವಿಜ್ಞಾನ, ಪ್ಲಾಸ್ಮಾ ಭೌತ ವಿಜ್ಞಾನ ಇಲ್ಲಿನ ಸಂಶೋಧನೆಯ ಮುಖ್ಯ ವಿಭಾಗಗಳು– ದೇಶದ ಪ್ರಮುಖ ವ್ಯೋಮ ಸಂಶೋಧನಾ ಕೇಂದ್ರಗಳಲ್ಲಿ ಇದೂ ಒಂದು. ಕೃತಕ ಉಪಗ್ರಹಗಳು, ವಿಶ್ವಕಿರಣಗಳು, ಸೌರ ರೇಡಿಯೋ ಖಗೋಲ ವಿಜ್ಞಾನ, ಪುರಾತತ್ತ್ವ ಶೋಧನೆ, ಜಲವಿಜ್ಞಾನ ಮುಂತಾದ ಕ್ಷೇತ್ರಗಳಲ್ಲಿ ಸಂಸ್ಥೆ ಗಮನಾರ್ಹ ಕೆಲಸ ನಡೆಸಿದೆ. ಚಂದ್ರ ಉಪಗ್ರಹದ ಶಿಲೆ, ಉಲ್ಕಾ ಶಿಲೆ ಹಾಗೂ ಭೂಮಿಯ ಶಿಲೆ, ಮತ್ತು ಸಾಗರಿಕ ಖನಿಜ ಪದಾರ್ಥಗಳ ಅಧ್ಯಯನ—ಇವು ಸಂಸ್ಥೆಯ ಮುಖ್ಯಕಾರ್ಯಕ್ರಮಗಳಲ್ಲಿ ಸೇರಿವೆ.

ನೋಡಿ : ಸಾರಾಭಾಯಿ ವಿಕ್ರಮ್–ಸಂಪುಟ ೩


ಮಂಗಳೂರು

ಮುಂಬಯಿ, ಕೊಚ್ಚಿನ್‌ಗಳ ನಡುವೆ ಒಂದು ಸರ್ವಋತು ಬಂದರು ನಿರ್ಮಿಸುವುದಕ್ಕಾಗಿ ಆರಿಸಲ್ಪಟ್ಟ ನಿವೇಶನ ಮಂಗಳೂರು. ಇಲ್ಲಿನ ಪಣಂಬೂರಿನಲ್ಲಿ ಈ ಬೃಹತ್ ಯೋಜನೆ 1963ರಲ್ಲಿ ಆರಂಭವಾಯಿತು.

ಮಂಗಳೂರಿನಿಂದ ರಫ್ತಾಗುವ ಪದಾರ್ಥಗಳು – ಗೋಡಂಬಿ, ಕಾಫಿ, ಗಂಧದ ಮರ, ಭತ್ತ, ಅಡಿಕೆ, ತೆಂಗಿನ ಹುರಿ, ಮೀನು, ಏಲಕ್ಕಿ ಇತ್ಯಾದಿ. ಪರ್ಷಿಯ ಕೊಲ್ಲಿಯ ತೀರದ ಪ್ರದೇಶಗಳೊಡನೆ 14ನೆಯ ಶತಮಾನದಲ್ಲೇ ಇಲ್ಲಿಗೆ ವ್ಯಾಪಾರ ಸಂಪರ್ಕವಿತ್ತು. 16ನೆಯ ಶತಮಾನದಲ್ಲಿ ಪೋರ್ಚುಗೀಸರು ಇಲ್ಲಿ ವಾಣಿಜ್ಯ ನೆಲೆಯನ್ನು ಸ್ಥಾಪಿಸಿದರು. 1669ರಲ್ಲಿ ಡಚ್ ಈಸ್ಟ್ ಇಂಡಿಯಾ ಕಂಪೆನಿ ಈ ಸ್ಥಳವನ್ನು ವಶಪಡಿಸಿಕೊಂಡಿತು. 1688ರಲ್ಲಿ ಇದು ಬ್ರಿಟಿಷರ ಕೈಸೇರಿತು. 1763ರಿಂದ 20 ವರ್ಷ ಕಾಲ ಹೈದರನಿಗೆ ಸೇರಿತ್ತು. ಅವನು ಇಲ್ಲಿ ದೋಣಿ ಕಟ್ಟುವ ಕೇಂದ್ರ ಆರಂಭಿಸಿದ. ಮತ್ತೆ ಬ್ರಿಟಿಷರ ಕೈವಶವಾಗಿದ್ದ ಮಂಗಳೂರನ್ನು ಟಿಪ್ಪುಸುಲ್ತಾನ ಪಡೆದ ; 1799ರ ವರೆಗೆ ಅವನ ಅಧೀನದಲ್ಲಿದ್ದು, ಮುಂದೆ ಬ್ರಿಟಿಷರಿಗೆ ಸೇರಿತು.

ಮಂಗಳೂರಿನ ಜನಸಂಖ್ಯೆ: 1.65.174. ನೇತ್ರಾವತಿ ಹಾಗೂ ಗುರುಪುರ ನದಿಗಳ ಮಧ್ಯೆ ಇರುವ ಈ ನಗರಕ್ಕೆ ರಸ್ತೆ, ರೈಲು, ವಿಮಾನ ಸಾರಿಗೆಗಳಿವೆ. ಹಾಸನ–ಮಂಗಳೂರು ರೈಲುದಾರಿ ಈ ನಗರದ ಮಹತ್ತ್ವವನ್ನು ಹೆಚ್ಚಿಸಿದೆ.

ಪಶ್ಚಿಮ ಕರಾವಳಿಯಲ್ಲಿ



ಹತ್ತಿ ನೂಲುವುದು, ಹತ್ತಿವಸ್ತ್ರ, ಹೆಂಚು, ಇಟ್ಟಿಗೆ ತಯಾರಿ, ಶೋಧಕ ಗಂಧಪದಾರ್ಥಗಳು, ಕಾಫಿ ಸಂಸ್ಕರಣೆ, ಬೀಡಿ ತಯಾರಿ ಮುಂತಾದ ಗೃಹ ಕೈಗಾರಿಕೆಗಳಿವೆ. ಹಗ್ಗ ಹೊಸೆಯುವುದು, ಗೋಡಂಬಿ ಸಿದ್ಧ ಪಡಿಸುವುದೂ ಇಲ್ಲಿನ ಗೃಹ ಕೈಗಾರಿಕೆಗಳೇ.

ಮಂಗಳೂರು, ರೋಮನ್ ಕ್ಯಾಥೊಲಿಕ್ ಪಂಥದವರ ಒಂದು ಮುಖ್ಯ ಕೇಂದ್ರ. ಟಿಪ್ಪುಸುಲ್ತಾನನ ಬತೇರಿ, ಕದ್ರಿಯ ದೇವಸ್ಥಾನ, ಅದರ ಹಿಂಭಾಗಕ್ಕಿರುವ ಪಾಂಡವರ ಗುಹೆಗಳು, ಅಲ್ಲಿಯೇ ಇರುವ ಐದು ಕೊಳಗಳು – ಇವು ಮಂಗಳೂರಿನ ಸಮೀಪದ ಪ್ರೇಕ್ಷಣೀಯ ಜಾಗಗಳು. ಇಲ್ಲಿ ಹಲವಾರು ವಿದ್ಯಾಸಂಸ್ಥೆಗಳಿವೆ.

ಮಂಗಳೂರಿನ ಸುಂದರ ನೋಟ ತೆಂಗಿನ ಮರಗಳದ್ದು. ಯಾವುದಾದರೂ ಒಂದು ಉನ್ನತ ಸ್ಥಳದಿಂದ ನೋಡಿದರೆ ಪಟ್ಟಣವಿಡೀ ತೆಂಗಿನ ತೋಟಗಳ ಹಸಿರಿನಲ್ಲಿ ಅಡಗಿರುವಂತೆ ತೋರುತ್ತದೆ.

ಮಂಡೋದರಿ

ರಾವಣನ ಪಟ್ಟಮಹಿಷಿ ಮಂಡೋದರಿ, ಪಂಚ ಮಹಾ ಪತಿವ್ರತೆಯರಲ್ಲಿ ಒಬ್ಬಳು.

ಈಕೆ ಮಾಯಾಸುರನ ಮಗಳು. ವರಾನ್ವೇಷಣೆ ಮಾಡುತ್ತಿದ್ದ ಮಾಯಾಸುರ ರಾವಣನನ್ನು ಕಂಡಾಗ, ಆತನಿಗೇ ಮಗಳನ್ನು ಕೊಡಲು ನಿರ್ಧರಿಸಿದ. ಮದುವೆಯಲ್ಲಿ ಅಮೋಘ ಬಾಣವೊಂದನ್ನು ರಾವಣನಿಗೆ ಉಡುಗೊರೆಯಾಗಿತ್ತು.

ಮಂಡೋದರಿ ಪರಿಶುದ್ಧೆ, ಸುಗುಣೆ, ಶಾಂತೆ ಹಾಗೂ ಗಂಭೀರೆ. ಅವಳ ಪತಿಭಕ್ತಿ ಅಸಮಾನವಾದದ್ದು.

ರಾವಣ ಸೀತೆಯಲ್ಲಿ ಮೋಹಗೊಂಡರೂ ಆಕೆಯ ಬಗೆಗೆ ಮಂಡೋದರಿಗೆ ಈರ್ಷ್ಯೆ ಉಂಟಾಗಲಿಲ್ಲ. ರಾಮನ ವೈರ ಬೇಡವೆಂದು ಗಂಡನಿಗೆ ಎಚ್ಚರಿಕೆಯ ಮಾತುಗಳನ್ನಾಡುತ್ತಿದ್ದಳು. ಸೀತೆಗಿಂತ ತಾನು ಎಲ್ಲ ವಿಧದಲ್ಲೂ ಮಿಗಿಲು ಎಂದು ತಿಳಿಮನಸ್ಸಿನ ಮಂಡೋದರಿ ಭಾವಿಸಿದ್ದಳು.

ನೋಡಿ : ಸೀತಾ

ಮಂತ್ರ

'ಮಂತ್ರಕ್ಕೆ ಮಾವಿನ ಕಾಯಿ ಉದುರೀತೆ?'—ಇದೊಂದು ಗಾದೆ. ಆದರೆ ಮಂತ್ರ ಬಲು ಪರಿಣಾಮಕಾರಿ ಎಂಬ ನಂಬಿಕೆ ಹಿಂದಿನಿಂದಲೂ ಇತ್ತು.

ವೈದಿಕ ಸಾಹಿತ್ಯದಲ್ಲಿ ಮಂತ್ರವೆಂದರೆ ಸ್ತುತಿ ಪಾಠವಿರುವ ಛಂದೋಬದ್ಧ ಸ್ತೋತ್ರಗಳು. ದೀರ್ಘಕಾಲದ ಧ್ಯಾನದ ಬಳಿಕ ಋಷಿಗಳು ಮಂತ್ರಗಳನ್ನು ರಚಿಸಿದರು. ಆತ್ಮೋನ್ನತಿ ಸಾಧಿಸುವುದು ಮಂತ್ರಗಳ ಮುಖ್ಯ ಉದ್ದೇಶ. ವೇದದ ಪ್ರಮುಖ ಮಂತ್ರ 'ಗಾಯತ್ರಿ'.

ಮಂತ್ರಗಳನ್ನು ಎರಡು ವರ್ಗಗಳಾಗಿ ವಿಂಗಡಿಸಬಹುದು : ಧ್ವನಿಯಿಂದ ವ್ಯಕ್ತಪಡಿಸುವ ' ಕಂಠಿಕಾ ' ಮಂತ್ರಗಳು, ಮನಸ್ಸಿನಲ್ಲೇ ಪುನರಾವರ್ತಿಸುವ 'ಅಜಪ' ಮಂತ್ರಗಳು.

ಗುರುಉಪದೇಶಿಸಿದ ಮಂತ್ರಗಳ ಪಠನ ಅಮಿತ ಫಲಗಳನ್ನು ನೀಡುತ್ತದೆ ; ಮಂತ್ರಗಳಿಂದ ದುಷ್ಟಶಕ್ತಿಗಳನ್ನು ನಾಶಗೊಳಿಸಿ ಸ್ವಂತ ರಕ್ಷಣೆ ಹಾಗೂ ಅಭಿವೃದ್ಧಿಯನ್ನು ಸಾಧಿಸಬಹುದು ; ಅನುಸ್ವಾರದಿಂದ ಅಂತವಾಗುವ ಬೀಜಾಕ್ಷರ ಮಂತ್ರಗಳ ಪಠನದಿಂದ ಅತಿ ಒಳ್ಳೆಯ ಪರಿಣಾಮ ಉಂಟಾಗುತ್ತದೆ —ಎಂಬ ನಂಬಿಕೆಗಳಿವೆ.



ಮಂತ್ರಾಲಯದ ಬೃಂದಾವನ

ಮಂತ್ರಾಲಯ

ಮುನ್ನೂರು ವರ್ಷಗಳಿಗೂ ಹಿಂದಿನ ಮಾತು. ಆದವಾನಿಯನ್ನು ಒಬ್ಬ ನವಾಬ ಆಳುತ್ತಿದ್ದ. ದ್ವೈತ ಮತದ ಶ್ರೀ ರಾಘವೇಂದ್ರ ತೀರ್ಥರು ಆ ಪ್ರದೇಶದಲ್ಲಿದ್ದರು. ಅವರನ್ನು ಪರೀಕ್ಷಿಸುವುದಕ್ಕಾಗಿ ನವಾಬನು ಒಂದು ಹರಿವಾಣದಲ್ಲಿ ಮಾಂಸವನ್ನು ಮುಚ್ಚಿಟ್ಟು ಕಾಣಿಕೆಯಾಗಿ ಕಳುಹಿಸಿದ. ಶ್ರೀ ರಾಘವೇಂದ್ರರು ಮಂತ್ರ ಹೇಳಿ ಪ್ರೋಕ್ಷಣೆ ಮಾಡಿ ಮುಸುಕು ಸರಿಸಿದಾಗ, ಹರಿವಾಣದಲ್ಲಿ ಇದ್ದುದು ಬರಿಯ ಪುಷ್ಪ.

ನವಾಬನು ಅವರ ಮಹಿಮೆಗೆ ಬಾಗಿ ಒಂದು ಜಾಗೀರು ಕೊಡುವುದಾಗಿ ಹೇಳಿದ. ಅವರು ತುಂಗಭದ್ರೆಯ ದಡದಲ್ಲಿದ್ದ ಮಂಚಾಲೆ ಎಂಬ ಬಂಜರು ಗ್ರಾಮವನ್ನು ಆರಿಸಿದರು. ಇಲ್ಲಿ ಒಂದು ಬೃಂದಾವನ ನಿರ್ಮಿಸಿದರು. 1671ರ ಶ್ರಾವಣ ಬಹುಳ 2ರಂದು ಅದನ್ನು ಪ್ರವೇಶಿಸಿ ಸಮಾಧಿಸ್ಥರಾದರು.

ಮಂತ್ರಾಲಯ ಎಂದು ಹೊಸ ಹೆಸರು ಪಡೆದ ಮಂಚಾಲೆ ಹೀಗೆ ಒಂದು ಪುಣ್ಯಕ್ಷೇತ್ರವಾಯಿತು.

—ಇದು ಮಂತ್ರಾಲಯವನ್ನು ಕುರಿತ ಹೇಳಿಕೆ.

ರಾಘವೇಂದ್ರ ತೀರ್ಥರು ಇಲ್ಲಿಗೆ ಬರುವ ಮುನ್ನ ದೇಶದಾದ್ಯಂತ ಸಂಚರಿಸುತ್ತಿದ್ದರು. ಪೂರ್ವಾಶ್ರಮದಲ್ಲಿ ಇವರ ಹೆಸರು ವೆಂಕಟಭಟ್ಟ ಎಂದು. ತಂದೆ ತಿಮ್ಮಣ್ಣಭಟ್ಟ, ತಾಯಿ ಗೋಪಮ್ಮ. ಕುಂಭಕೋಣದಲ್ಲಿ ನಡೆಯುವ ಆರಾಧನೆಗೋಸ್ಕರ ತಿಮ್ಮಣ್ಣಭಟ್ಟರು ಮಕ್ಕಳೊಡನೆ ಪ್ರಯಾಣ ಬೆಳೆಸಿದರು. ಅಲ್ಲಿ ಶ್ರೀ ವಿಜಯೀಂದ್ರ ಸ್ವಾಮಿಗಳು ಬಾಲಕ ವೆಂಕಟಭಟ್ಟನನ್ನು ಬಹಳ ಮೆಚ್ಚಿದರು. ಮಧುರೆಯಲ್ಲಿ ವೆಂಕಟಭಟ್ಟನ ವಿದ್ಯಾಭ್ಯಾಸ ನಡೆಯಿತು. ತರ್ಕ, ವ್ಯಾಕರಣ, ವೇದಾಂತ, ನ್ಯಾಯಗಳಲ್ಲಿ ಆತ ಪಾರಂಗತನಾದ. ವಿವಾಹವಾಯಿತು, ಪುತ್ರನೊಬ್ಬ ಜನಿಸಿದ, ಕಡು ಬಡತನದ ಬದುಕು. ಮಧ್ವಮತವನ್ನು ಆಮೂಲಾಗ್ರವಾಗಿ ತಿಳಿಯಲು ಕುಂಭಕೋಣಂ ಶ್ರೀಮಠದಲ್ಲಿ ಅಧ್ಯಯನ ಮಾಡಿದ. ಅಲ್ಲಿನ ಸ್ವಾಮಿಗಳಿಂದ ದೀಕ್ಷೆ ದೊರೆಯಿತು. ವೆಂಕಟಭಟ್ಟ 'ಶ್ರೀ ರಾಘವೇಂದ್ರ ತೀರ್ಥ' ಆದರು. ಕಾಲಕ್ರಮೇಣ ರಾಘವೇಂದ್ರ ತೀರ್ಥರು ಆದವಾನಿಗೆ ಬಂದರು. ಮಂಚಾಲೆಯಲ್ಲಿ ನೆಲೆಸಿದರು.

ಈಸ್ಟ್ ಇಂಡಿಯಾ ಕಂಪೆನಿಯ ಅಧಿಕಾರಿ ಥಾಮಸ್ ಮನ್ರೊ ಮಂತ್ರಾಲಯಕ್ಕೆ ಕೊಟ್ಟ ಜಾಗೀರನ್ನು ರದ್ದುಪಡಿಸುವುದಕ್ಕಾಗಿ ಬಂದಿದ್ದ. ಬೃಂದಾವನದಿಂದ ಸ್ವಾಮಿಗಳು ಎದ್ದು ಬಂದಂತೆ ಆತನಿಗೆ ಅನಿಸಿತು. ಅವರೊಡನೆ ಇಂಗ್ಲಿಷಿನಲ್ಲಿ ಮಾತನಾಡಿದ. ಕೊನೆಗೆ ಜಾಗೀರು ಉಳಿಸಲು ಒಪ್ಪಿಕೊಂಡ. ಉಳಿದವರಿಗೆ ಈತ ಯಾರೊಡನೆ ಮಾತನಾಡುತ್ತಿದ್ದಾ[ನೆ] ಎಂದು ಆಶ್ಚರ್ಯ. ಈ ಪವಾಡ ನಡೆದ ಸಂಗತಿ ಆಗಿನ ಮದರಾಸ್ ಗೆಜೆಟಿಯರಿನಲ್ಲಿ ಪ್ರಕಟಗೊಂಡಿತು.

ಮಂತ್ರಾಲಯದಲ್ಲಿ ಮಂಚಾಲಮ್ಮನ ಗುಡಿಯಿದೆ. ತುಂಗಾತೀರ[ದ] ಆಚೆ ದಡದಲ್ಲಿ ಪಂಚಮುಖಿ ಮೂರ್ತಿಯ ಗುಹೆಯಿದೆ. ವರಾ[ಹ], ನರಸಿಂಹ, ಗರುಡ, ಆಂಜನೇಯ ಮತ್ತು ಹಯವದನ —ಇವೇ ಐ[ದು] ಮುಖಗಳು. ಶ್ರೀ ರಾಘವೇಂದ್ರಸ್ವಾಮಿಯವರು ಈ ಗುಹೆಯ ಬ[ಳಿ] ಹನ್ನೆರಡು ವರ್ಷ ತಪಸ್ಸು ಮಾಡಿದ ಕಟ್ಟೆ ಇದೆ. ಮಂತ್ರಾಲಯಕ್ಕೆ ದೇ[ಶದ] ಎಲ್ಲೆಡೆಗಳಿಂದಲೂ ಯಾತ್ರಾರ್ಥಿಗಳು ಬರುತ್ತಾರೆ.

ಮಂಥರೆ

ಮಂಥರೆ (ಮನ್ಥರಾ) ಕೈಕೇಯಿಯ ದಾಸಿ. ಅವಳು ಕುಬ್ಜೆ, ಗೂ[ನಿ] ಹಾಗೂ ಕುರೂಪಿ.

ರಾತ್ರಿ ದುಃಸ್ವಪ್ನ ಕಂಡು ಬೆದರಿ ಏಳುತ್ತಿದ್ದಾಗಲೇ ಮಂಗಳವಾ[ದ್ಯ] ಕೇಳಿಸಿತು. ಏನು ನೋಡೋಣವೆಂದು ಹೊರಗೆ ಹೋದಳು. ನಗರದಲ್ಲಿ ಸಂಭ್ರಮ. ಇದು ರಾಮನ ಯುವ ರಾಜ್ಯಾಭಿಷೇಕದ ಸಿದ್ಧತೆ ಎಂದು ತಿ[ಳಿ]ದಾಗ ತತ್ತರಿಸಿಹೋದಳು. ಸುದ್ದಿ ಹೇಳಲು ಕೈಕೇಯಿಯೆಡೆಗೆ ಧಾವಿಸಿದಳು.

ಸುದ್ದಿ ತಿಳಿದು ಕೈಕೇಯಿ ಆನಂದದಿಂದ ಕೊರಳಲ್ಲಿದ್ದ ಸರವನ್ನು ತೆಗೆ[ದು] ಮಂಥರೆಗೆ ಕೊಟ್ಟಳು. ಕೈಕೇಯಿಯ ಮೂರ್ಖತನಕ್ಕೆ ಬೇಸತ್ತು ಮಂಥ[ರೆ] ಹಿಂದೆ ಕೈಕೇಯಿ ಪಡೆಯಬಹುದಾಗಿದ್ದ ವರಗಳನ್ನು ಈಗ ಬೇಡ[ಲು] ಪ್ರೇರೇಪಿಸಿದಳು. ರಾಮ ಯುವರಾಜನಾದರೆ ಕೈಕೇಯಿ ಹಾಗೂ ಭರತ ಅನುಭವಿಸಬೇಕಾಗುವ ಕಷ್ಟಪರಂಪರೆಗಳನ್ನು ಕಲ್ಪಿಸಿ ಬಣ್ಣಿಸಿದಳು. ಕೈಕೇಯಿ ಒಪ್ಪಿದಳು. ಇದರ ಪರಿಣಾಮ ರಾಮನ ವನವಾಸ.

ಶತ್ರುಘ್ನನಿಗೆ ಇದು ತಿಳಿದಾಗ ಮಂಥರೆಯನ್ನು ಶಿಕ್ಷಿಸಲು ಮುಂದಾದ. ಆದರೆ ಭರತ ಶತ್ರುಘ್ನನನ್ನು ತಡೆದ. ಅಸೂಯೆ, ಕುಯುಕ್ತಿಯ ಹೆಂಗಸಾಗಿ ಮಂಥರೆಯ ಚಿತ್ರ ಜನಮನದಲ್ಲಿ ಉಳಿದಿದೆ.

ಮಕ್ಕಳ ದಿನ

ಮಕ್ಕಳೆಂದರೆ ಜವಾಹರಲಾಲ ನೆಹರೂ ಅವರಿಗೆ ಬಹಳ ವಾತ್ಸ[ಲ್ಯ]. ಮಕ್ಕಳಿಗೆ ಅವರು ಚಾಚಾ ನೆಹರೂ. ನೆಹರೂರ ಜನ್ಮದಿನ ನವೆಂಬರ್ 1[4]. ಆ ದಿನವನ್ನು ರಾಷ್ಟ್ರದಾದ್ಯಂತ ಮಕ್ಕಳ ದಿನವಾಗಿ ಆಚರಿಸುತ್ತಾರೆ.



ಕಿರಿಯರ ನಡುವೆ ಚಾಚಾ

ಅಂದು ಮಕ್ಕಳ ಸಾಮೂಹಿಕ ಡ್ರಿಲ್, ಮನೋರಂಜನಾ ಕಾರ್ಯಕ್ರಮ ನಡೆಸುತ್ತಾರೆ. ಬೆಂಗಳೂರು ಕಬ್ಬನ್ ಪಾರ್ಕಿನಲ್ಲಿರುವ ಬಾಲಭವನ, ಅಖಿಲ ಕರ್ನಾಟಕ ಮಕ್ಕಳ ಕೂಟಗಳಲ್ಲಿ ಆ ದಿನ ಮಕ್ಕಳಿಗೆ ವಿಶೇಷ ಕಾರ್ಯಕ್ರಮ ಏರ್ಪಾಡು ಮಾಡುತ್ತಾರೆ.

ಮಗಧ

ಭಾರತದ ಚರಿತ್ರಕಾಲದ ಅತಿ ಪ್ರಾಚೀನ ರಾಜ್ಯಗಳಲ್ಲಿ ಒಂದು, ಮಗಧ.

ಬಿಹಾರದ ಪಟ್ನಾ ಹಾಗೂ ಗಯಾ ಜಿಲ್ಲೆಗಳ ಪ್ರದೇಶ ಮೂಲತಃ ಈ ರಾಜ್ಯದ ತಾಣವಾಗಿದ್ದಿತು. ಅನಂತರ ಮಗಧರಾಜ್ಯದ ಎಲ್ಲೆಗಳು ವಿಸ್ತಾರಗೊಂಡುವು ; ಆಗಾಗ್ಗೆ ಬದಲಾದುವು.

ಮಗಧ ಸಾಮ್ರಾಜ್ಯದ ರಾಜಧಾನಿಯಾಗಿ ಪಾಟಲಿಪುತ್ರ (ಪಟ್ನಾ) ಬಹುಕಾಲ ಮೆರೆಯಿತು.

ವೇದಕಾಲದಲ್ಲಿ ಪ್ರಬಲ ರಾಜರು ಆಳುತ್ತಿದ್ದರು. ಆರ್ಯೇತರರೆಂದು ಹೇಳಲಾದ ಕೀಕಟರು ಮಗಧದ ರಾಜರು.

ಸುಮಾರು ಕ್ರಿ. ಪೂ. ಆರನೆಯ ಶತಮಾನದಲ್ಲಿ ಭಾರತದಲ್ಲಿ ತಲೆ ಎತ್ತಿದ ಷೋಡಶ ಮಹಾಜನಪದಗಳೆಂಬ 16 ರಾಜ್ಯಗಳೊಳಗಿನ ಪರಸ್ಪರ ವೈಷಮ್ಯದ ಲಾಭ ಪಡೆದು ಕಟ್ಟಿದ ವಿಶಾಲ ಸಾಮ್ರಾಜ್ಯ, ಮಗಧ. ಇದಕ್ಕೆ ಭದ್ರ ಅಡಿಪಾಯ ಹಾಕಿ ಸ್ಥಾಪಿಸಿದವರು ಹರ್ಯಂಕರಾದ ಬಿಂಬಿಸಾರ ಮತ್ತು ಅಜಾತಶತ್ರು. ಮಗಧ ರಾಜ್ಯವನ್ನು ಆಳಿದವರು ಶಿಶುನಾಗರು. ಸುಮಾರು ಕ್ರಿ. ಪೂ. 430ರಿಂದ ಕ್ರಿ. ಪೂ. 364ರ ವರೆಗೆ ಇವರ ಆಳ್ವಿಕೆ.

ಕ್ರಿ. ಪೂ. 364 ರಿಂದ ಕ್ರಿ. ಪೂ. 322ರವರೆಗೆ ಮಗಧವನ್ನು ನಂದರು ಆಳಿದರು. ಅವರ ಅನಂತರ ಮೌರ್ಯರೂ (ಕ್ರಿ.ಪೂ. 322—ಕ್ರಿ.ಪೂ. 183) ಸುಂಗರೂ (ಕ್ರಿ.ಪೂ. 183—ಕ್ರಿ.ಪೂ. 72) ಆಳಿದರು. ಅನಂತರ 44 ವರ್ಷಕಾಲ ಕಾಣ್ವ ಮನೆತನದವರ ಆಳ್ವಿಕೆ.

ಕ್ರಿಸ್ತ ಶಕ ಪ್ರಥಮ ಶತಕಗಳಲ್ಲಿ ಮಗಧ ಸಾಮ್ರಾಜ್ಯದ ಪ್ರಭಾವ ತಗ್ಗಿತು. ಅದರೆ ನಾಲ್ಕನೆಯ ಶತಮಾನದಿಂದ ಗುಪ್ತರ ಕಾಲದಲ್ಲಿ ಮತ್ತೆ ಉಚ್ಛ್ರಾಯ ಸ್ಥಿತಿಗೇರಿತು. ಗುಪ್ತರ ಅನಂತರ ಆಳಿದ ಹರ್ಷನ ಕಾಲದಲ್ಲೂ ಸಾಕಷ್ಟು ಪ್ರಬಲವಾಗಿದ್ದ ಮಗಧರಾಜ್ಯ ಅವನ ಅನಂತರ ಕನ್ನೌಜ್ ಹಾಗೂ ಬಂಗಾಳಗಳ ನಡುವೆ ಹಂಚಿಹೋಯಿತು. ಮುಂದೆ ಅದು ಮಹಮ್ಮದೀಯರ ವಶವಾಯಿತು.

ಗಂಗಾ ನದೀಜಲಮಾರ್ಗದ ಸಾರಿಗೆ ಸಂಪರ್ಕ ಮತ್ತು ವಾಣಿಜ್ಯಗಳ ನಿಯಂತ್ರಣವೆಲ್ಲ ಇದರ ಅಧೀನದಲ್ಲಿದ್ದಿತು. ಈ ಕಾರಣಗಳಿಂದಾಗಿ ಮಗಧರಾಜ್ಯ ಪ್ರಾಮುಖ್ಯಕ್ಕೆ ಬಂದಿತು.

ಮಜಗಾಂವ್ ಹಡಗುಕಟ್ಟೆ

ಮಜಗಾಂವ್ ಹಡಗುಕಟ್ಟೆ ಇರುವುದು ಮುಂಬಯಿಯಲ್ಲಿ.

1960ರಲ್ಲಿ ಭಾರತ ಸರಕಾರ ಈ ಹಡಗುಕಟ್ಟೆಯನ್ನು ವಹಿಸಿಕೊಂಡಿತು. ಮುಂಬಯಿಯಲ್ಲಿ ಮಜಗಾಂವ್ ಹಡಗುಕಟ್ಟೆಯಿಂದಾಗಿ ನೌಕಾದಳದ ಹಡಗುಕಟ್ಟೆಯ ವಿಸ್ತರಣ ಸುಲಭವಾಯಿತು.

1934ರಲ್ಲಿ ಸ್ಥಾಪಿತವಾದ 'ಮಜಗಾಂವ್ ಹಡಗುಕಟ್ಟೆ ಲಿಮಿಟೆಡ್' ಸಂಸ್ಥೆ ಹಡಗುಗಳ ದುರಸ್ತಿಯನ್ನಷ್ಟೇ ನಿರ್ವಹಿಸುತ್ತಿತ್ತು. ಮುಂದೆ ಹಡಗುಗಳ ದುರಸ್ತಿಯಷ್ಟೇ ಅಲ್ಲದೆ, ಇಲ್ಲಿ ಹಡಗು ಕಟ್ಟುವ ಕೆಲಸವೂ ನಡೆಯತೊಡಗಿತು. 1964ರಲ್ಲಿ ಕಟ್ಟಿದ 'ಯಮುನಾ' ಹಡಗು ಆ ವರೆಗೆ ಇಲ್ಲಿ ತಯಾರಾದ ಹಡಗುಗಳಲ್ಲಿ ಅತಿ ದೊಡ್ಡದು. ಇಲ್ಲಿ ಕಟ್ಟಲ್ಪಟ್ಟ ಮೊತ್ತಮೊದಲ ಯುದ್ಧ ಹಡಗು 'ನೀಲಗಿರಿ'.



ದುರಸ್ತಿ, ನಿರ್ಮಾಣ : ಮಜಗಾಂವ್ ಹಡಗುಕಟ್ಟೆ

ಮಡಿಕೇರಿ

ಕೊಡಗು ಜಿಲ್ಲೆಯ ಮುಖ್ಯ ಪಟ್ಟಣ, ಮಡಿಕೇರಿ.

ಕೇವಲ 1,586 ಚದರ ಮೈಲುಗಳ ವಿಸ್ತಾರದ ಕೊಡಗು ಮುಖ್ಯತಃ ಕೊಡವರ ಬೀಡು. 1956ರಲ್ಲಿ ಕರ್ನಾಟಕದ ಏಕೀಕರಣವಾಗುವವರೆಗೂ ಕೊಡಗು ಪ್ರತ್ಯೇಕ ಪ್ರಾಂತವಾಗಿತ್ತು. ಕರ್ನಾಟಕದ ನೈಋತ್ಯ ದಿಕ್ಕಿನಲ್ಲಿ ಪಶ್ಚಿಮ ಘಟ್ಟಗಳ ತಪ್ಪಲಿನಲ್ಲಿರುವ ಈ ಪುಟ್ಟ ಜಿಲ್ಲೆ ಗಿರಿಕಂದರಗಳಿಂದ, ಕಾಡು ಮೇಡುಗಳಿಂದ, ಭತ್ತದ ಗದ್ದೆಗಳಿಂದ, ಕಾಫಿ ಕಿತ್ತಳೆ ತೋಟಗಳಿಂದ ರಮಣೀಯವಾಗಿದೆ.

ಕ್ರಿಸ್ತಶಕ 1600ರಿಂದ 1834ರ ವರೆಗೂ —ಅಂದರೆ ಆಂಗ್ಲರ ಆಳ್ವಿಕೆಯ ಕಾಲದ ವರೆಗೂ —ಕೊಡಗನ್ನು ಹಾಲೇರಿ ರಾಜವಂಶದ ಅರಸರು ಆಳುತ್ತಿದ್ದರು. ಇವರ ಪೈಕಿ ಮೂರನೆಯವನಾದ ಮುದ್ದುರಾಜ 1681ರಲ್ಲಿ ಹೊಸ ರಾಜಧಾನಿಯೊಂದನ್ನು ಸ್ಥಾಪಿಸಿ, ಅದಕ್ಕೆ 'ಮುದ್ದುರಾಜ ಕೇರಿ' ಎಂಬ ಹೆಸರಿಟ್ಟನೆಂದೂ, ಆ ಹೆಸರು ಕ್ರಮೇಣ 'ಮುದ್ದುಕೇರಿ' ಎಂದಾಗಿ ಅನಂತರ 'ಮಡಿಕೇರಿ' ಎಂದಾಯಿತೆಂದೂ ಹೇಳುತ್ತಾರೆ. ಅಂದಿನಿಂದ ಮೊದಲ್ಗೊಂಡು 1956ರ ವರೆಗೂ ಇದು ಹಿಂದಿನ ಕೊಡಗು ರಾಜ್ಯದ ರಾಜಧಾನಿಯಾಗಿತ್ತು.



'ರಾಜಾ ಸೀಟ್'

ಸಮುದ್ರ ಮಟ್ಟದಿಂದ ಸುಮಾರು 4000 ಅಡಿಗಳ ಎತ್ತರದಲ್ಲಿರುವ ಈ ಪುಟ್ಟ ಗಿರಿಧಾಮ ಮೈಸೂರು ನಗರದಿಂದ 75 ಮೈಲು ಮತ್ತು ಮಂಗಳೂರಿನಿಂದ 84 ಮೈಲು ದೂರದಲ್ಲಿದೆ. ಮಡಿಕೇರಿಗೆ ರೈಲುಮಾರ್ಗ ಸಂಪರ್ಕವಿಲ್ಲ. ಆದರೆ ಉತ್ತಮ ರಸ್ತೆಸಾರಿಗೆ ವ್ಯವಸ್ಥೆ ಇದೆ.

ಗುಡ್ಡಗಳ ಮೇಲೆ, ಕಣಿವೆಗಳ ಕೆಳಗೆ, ಏರುತಗ್ಗುಗಳಲ್ಲಿ ಕೆಲವು ಕಡೆ ಒತ್ತೊತ್ತಾಗಿಯೂ ಕೆಲವು ಕಡೆ ವಿರಳವಾಗಿಯೂ ಕೆಂಪು ಹೆಂಚು ಹೊದಿಸಿದ ಕಟ್ಟಡಗಳು ಹಸಿರು ಹಿನ್ನೆಲೆಯಲ್ಲಿ ಅಡಗಿಕೊಂಡಂತೆ ಕಾಣುತ್ತವೆ. ಕೆಲವು ಕಡೆ ರಸ್ತೆಗಳ ಏರಿಳಿತ ತೀವ್ರವಾಗಿದೆ.

ಮಡಿಕೇರಿಯ ಕೋಟೆಯೊಳಗಿನ ಅರಮನೆಯನ್ನು 1812ರ ಸುಮಾರಿನಲ್ಲಿ ಕೊಡಗಿನ ಲಿಂಗರಾಜ ಪುನರ್ನಿರ್ಮಿಸಿದ. ಒಳಗೆ ತೆರೆದಅಂಗಣವಿದ್ದು, ಅದರ ನಾಲ್ಕು ಕಡೆಯೂ ಅರಮನೆ ಆವೃತವಾಗಿದೆ. ಹೊರಗೆ ಎದುರಿಗೆ ಕಲ್ಲುಹಾಸಿದ ವಿಶಾಲ ಅಂಗಣ. ಅರಮನೆಯ ಎಡಭಾಗದ ಮೂಲೆಯಲ್ಲಿ ಕಲ್ಲುಗಾರೆಯಿಂದ ರಚಿಸಿದ ಎರಡು ಆನೆಗಳ ನಿಜಗಾತ್ರ ಆಕೃತಿಗಳನ್ನು ನಿಲ್ಲಿಸಲಾಗಿದೆ. ಬಲಭಾಗಕ್ಕೆ ಒಂದು ಸಾರ್ವಜನಿಕ ಗ್ರಂಥಾಲಯವೂ ವಸ್ತುಸಂಗ್ರಹಾಲಯವೂ ಇವೆ. ಈ ವಸ್ತುಸಂಗ್ರಹಾಲಯದಲ್ಲಿ ಹಿಂದಿನ ರಾಜರ ಕಾಲದ ಆಯುಧಗಳನ್ನೂ ಅವರ ಚಿತ್ರ, ಪತ್ರ ಮತ್ತು ದೇವರ ವಿಗ್ರಹಗಳನ್ನೂ ಸಂಗ್ರಹಿಸಿಡಲಾಗಿದೆ. ಅರಮನೆಯಲ್ಲಿ ಈಗ ಜಿಲ್ಲಾಧಿಕಾರಿಗಳ ಕಚೇರಿಯಿದೆ.

ಕೋಟೆಯ ಹೆಬ್ಬಾಗಿಲಿನ ಮುಂದಿನ ತಗ್ಗುಪ್ರದೇಶದಲ್ಲಿ ಓಂಕಾರೇಶ್ವರ ದೇವಾಲಯವಿದೆ. ಇದನ್ನೂ ಲಿಂಗರಾಜನೇ 1820ರಲ್ಲಿ ಕಟ್ಟಿಸಿದ. ಇದರ ವಾಸ್ತುಶಿಲ್ಪ ಸ್ವಲ್ಪಮಟ್ಟಿಗೆ ಮುಹಮ್ಮದೀಯ ವಾಸ್ತುಶಿಲ್ಪವನ್ನು ಹೋಲುತ್ತದೆ. ಇದರ ಎದುರಿಗೆ ಒಂದು ವಿಶಾಲ ಕೊಳವಿದ್ದು ಅದರ ಮಧ್ಯೆ ಒಂದು ಮಂಟಪವಿದೆ. ಇದರಲ್ಲಿ ತೆಪ್ಪೋತ್ಸವ ನಡೆಯುತ್ತದೆ.

ಅರಮನೆಯ ಬಲದಿಕ್ಕಿಗಿರುವ ಚಿಕ್ಕಪೇಟೆಯಿಂದ ಇನ್ನೂ ಬಲಕ್ಕೆ ತಿರುಗಿದರೆ, ಮೊದಲಿಗೆ ಗಾಂಧೀಜಿಯ ಚಿತಾಭಸ್ಮವನ್ನಿಟ್ಟಿರುವ ಗಾಂಧೀ ಮಂಟಪ ಮತ್ತು ಹಿಂದೆ ರಾಜರು ವಾಯುವಿಹಾರಕ್ಕೆ ಹೋಗುತ್ತಿದ್ದ ಸ್ಥಳವೆಂದು ಪ್ರಸಿದ್ಧವಾಗಿರುವ 'ರಾಜಾ ಸೀಟ್' ಕಾಣಸಿಗುತ್ತವೆ. ಇಲ್ಲಿ ನಿರ್ಮಿಸಿರುವ ಸಣ್ಣ ಮಂಟಪದಲ್ಲಿ ನಿಂತರೆ ಅಪೂರ್ವ ಪ್ರಕೃತಿ ಸೌಂದರ್ಯವನ್ನು ಕಾಣಬಹುದು. ದೂರದಲ್ಲಿ ಮಂಜು ಮುಸುಕಿದ ನೀಲಿಬಣ್ಣದ ಬೆಟ್ಟದ ಸಾಲುಗಳೂ ಸ್ವಲ್ಪ ಈಚೆಗೆ ದಟ್ಟವಾದ ಅರಣ್ಯಗಳಿಂದ ಕೂಡಿದ ಕಣಿವೆಗಳೂ ಇನ್ನೂ ಹತ್ತಿರದಲ್ಲಿ ಹಸಿರು ಬಣ್ಣದಿಂದ ಕೂಡಿ ಕಂಗೊಳಿಸುವ ಭತ್ತದ ಗದ್ದೆಗಳೂ ನೇರವಾಗಿ ಗುಡ್ಡದ ಕೆಳಗೆ ಹೆಬ್ಬಾವಿನಂತೆ ಅಂಕುಡೊಂಕಾಗಿ ಸುತ್ತಿ ಸಾಗುವ ಮಡಿಕೇರಿ–ಮಂಗಳೂರು ರಸ್ತೆಯೂ ಪ್ರೇಕ್ಷಕರ ಕಣ್ಮನಗಳನ್ನು ಸೆರೆಹಿಡಿಯುತ್ತವೆ.

ಅಲ್ಲಿಂದ ಹಾಗೆಯೇ ಹಿಂದಿರುಗಿ, ಮುಖ್ಯ ರಸ್ತೆಯಲ್ಲಿ ಬಲಕ್ಕೆ ತಿರುಗಿದರೆ ಚಿಕ್ಕಪೇಟೆಯ ಚೌಕದಲ್ಲಿ ಭಾರತೀಯ ಸೈನ್ಯದ ಮಹಾದಂಡನಾಯಕರಾಗಿದ್ದ ಕೊಡಗಿನ ಪುತ್ರ ಕೆ.ಎಸ್. ತಿಮ್ಮಯ್ಯನವರ ದೊಡ್ಡ ಪ್ರತಿಮೆ ಪ್ರೇಕ್ಷಕರ ಗಮನ ಸೆಳೆಯುತ್ತದೆ.

ಮಡಿಕೇರಿಯ ಉತ್ತರ ಭಾಗದಲ್ಲಿ ರಾಜರ ಗದ್ದುಗೆಗಳು –ಸಮಾಧಿಗಳು– ಇವೆ. ಇಲ್ಲಿ ಕೊಡಗಿನ ದೊಡ್ಡ ವೀರರಾಜೇಂದ್ರ ಮತ್ತು ಲಿಂಗರಾಜ ಒಡೆಯರ ಎರಡು ದೊಡ್ಡ ಸಮಾಧಿಗಳು ಅಕ್ಕಪಕ್ಕದಲ್ಲಿವೆ. ಇವು ಮುಹಮ್ಮದೀಯ ವಾಸ್ತುಶಿಲ್ಪದ ಮಾದರಿಯಲ್ಲಿ ನಿರ್ಮಿತವಾಗಿವೆ. ಪಟ್ಟಣದ ಪಶ್ಚಿಮಕ್ಕೆ ಒಂದು ಚಿಕ್ಕ ಗುಡ್ಡದ ಮೇಲೆ ಮಡಿಕೇರಿಯ ಸರಕಾರಿ ಕಾಲೇಜು ಎದ್ದು ಕಾಣುತ್ತದೆ.

ಕಾವೇರಿ ನದಿಯ ಉಗಮ ಸ್ಥಾನವೂ ಪ್ರಸಿದ್ಧ ಯಾತ್ರಾಸ್ಥಳವೂ ಆದ ತಲಕಾವೇರಿ ಮಡಿಕೇರಿಯಿಂದ ಸುಮಾರು 25 ಮೈಲು ದೂರದಲ್ಲಿದೆ.

ಅಕ್ಟೋಬರ್‌ನಿಂದ ಮೇ ತಿಂಗಳ ವರೆಗಿನ ಕಾಲಮಡಿಕೇರಿಯ ವೀಕ್ಷಣೆಗೆ ಪ್ರಶಸ್ತ. ಮಡಿಕೇರಿಯ ಜನಸಂಖ್ಯೆ 19,357.

ನೋಡಿ : ಕೆ. ಎಸ್. ತಿಮ್ಮಯ್ಯ ; ಚಿಕವೀರರಾಜೇಂದ್ರ


ಮಣೆಕ್ ಷಾ

ನೋಡಿ : ಎಸ್.ಎಫ್.ಎಚ್.ಜೆ. ಮಣೆಕ್ ಷಾ


ಮಣಿಪುರ

1972 ಜನವರಿ 21ರಂದು ಅಸ್ತಿತ್ವಕ್ಕೆ ಬಂದ ಭಾರತದ 20ನೆಯ ರಾಜ್ಯ, ಮಣಿಪುರ.

ಅರ್ಜುನ ತನ್ನ ಮಗ ಬಭ್ರುವಾಹನನಿಂದ ಸೋತದ್ದು ಇಂದಿನ ಮಣಿಪುರವಿರುವ ಪ್ರದೇಶದಲ್ಲಿ ಎಂದು ಹೇಳಿಕೆ. ಮಣಿಪುರದ ಬಗೆಗೆ 18ನೆಯ ಶತಮಾನದ ವರೆಗೆ ತಿಳಿದಿರುವುದು ಅತ್ಯಲ್ಪ. 1762ರಲ್ಲಿ ಮಣಿಪುರದ ಅರಸು ಬ್ರಿಟಿಷರ ನೆರವು ಪಡೆದು ಬರ್ಮೀಯರ ಆಕ್ರಮಣವನ್ನು ವಿಫಲಗೊಳಿಸಿದ. ಅನಂತರ ಮತ್ತೆ 1824ರಲ್ಲಿ ನಡೆದ ಮೊದಲನೆಯ 'ಬರ್ಮ ಯುದ್ಧ'ದಲ್ಲಿ ಬ್ರಿಟಿಷರ ಸಹಾಯದಿಂದ ಬರ್ಮೀಯರನ್ನು ಅಸ್ಸಾಂ ಹಾಗೂ ಮಣಿಪುರ ಕಣಿವೆಗಳಿಂದ ಹೊರಹಾಕಲಾಯಿತು. ಸ್ವತಂತ್ರ ರಾಜ್ಯ ಎಂಬ ಮನ್ನಣೆ ಮಣಿಪುರಕ್ಕೆ ಲಭಿಸಿತು.



ಮಡಿಕೇರಿಯ ಊರು



1890ರಲ್ಲಿ ರಾಜ್ಯದ ಉತ್ತರಾಧಿಕಾರಿ ಯಾರು ಎಂಬ ಬಗೆಗೆ ಸ್ವಲ್ಪ ಗೊಂದಲವಾಯಿತು. ಚೌರಾಚಾಂದ್ ಎಂಬ 5 ವರ್ಷದ ಹುಡುಗನನ್ನು ಬ್ರಿಟಿಷರು ರಾಜನಾಗಿ ಮಾಡಿದರು. ಬ್ರಿಟಿಷ್ ರಾಜಕೀಯ ಏಜೆಂಟನ ಮೇಲ್ವಿಚಾರಣೆಯಲ್ಲಿ ರಾಜ್ಯಭಾರ ಆರಂಭವಾಯಿತು. ಮೊದಲನೆಯ ಮಹಾಯುದ್ಧ ಕೊನೆಗಾಣುವ ವರೆಗೆ ಹೀಗೆಯೇ ನಡೆಯಿತು. ಆಗ ಮಣಿಪುರದ ಕುಕಿ ಜನ ದಂಗೆಯೆದ್ದರು. ಇದರಿಂದ ಮುಂದೆ ಮಣಿಪುರವನ್ನು ವಿಭಾಗಿಸಿ ಆಳಲಾಯಿತು.

ಎರಡನೆಯ ಮಹಾಯುದ್ಧ ಸಮಯದಲ್ಲಿ ಜಪಾನೀಯರು ಮಣಿಪುರದ ಮೂಲಕ ಭಾರತವನ್ನು ಪ್ರವೇಶಿಸಲು ಪ್ರಯತ್ನಿಸಿದಾಗ. ಅಲ್ಲಿ ಭೀಕರ ಕಾಳಗ ನಡೆಯಿತು.

ಮಣಿಪುರದ ಭೂಭಾಗದಲ್ಲಿ ಪ್ರಧಾನವಾಗಿ ಬೆಟ್ಟಗಳು ಹಾಗೂ ಬಯಲು ಭೂಮಿ ಎಂದು ಎರಡು ವಿಭಾಗಗಳು. ದಕ್ಷಿಣ ಭಾಗವೆಲ್ಲ ಜೌಗುಭೂಮಿ ಹಾಗೂ ಸರೋವರಗಳಿಂದ ಕೂಡಿದೆ. ಅವುಗಳಲ್ಲಿ ಲೋಕ್ಟಕ್ ಸರೋವರ 13 ಕಿ. ಮೀ. ಉದ್ದ ಹಾಗೂ 8. ಕಿ. ಮೀ. ಅಗಲ. ಇದರಲ್ಲಿ ಚಿಕ್ಕ ದ್ವೀಪಗಳಿವೆ. ನೋಡುವವರಿಗೆ ಇವು ಸರೋವರದಲ್ಲಿ ತೇಲುತ್ತಿರುವಂತೆ ಭಾಸವಾಗುತ್ತದೆ. ಥಾಂಗ್ ಎಂಬ ಇಂಥ ಒಂದು ದ್ವೀಪದ ಮೇಲೆ ಬೆಸ್ತರು ವಾಸಮಾಡುತ್ತಾರೆ.

ಮಣಿಪುರದ ಗುಡ್ಡಗಳು 2,500ರಿಂದ 10,000 ಅಡಿಗಳ ವರೆಗೆ ಇವೆ. ಇದರ ಬಯಲು ಪ್ರಸ್ಥಭೂಮಿ 2,500 ಅಡಿ ಎತ್ತರದಲ್ಲಿದೆ. ರಾಜ್ಯದಲ್ಲಿ ಮಣಿಪುರ, ಬರಾಕ್‌ಗಳಲ್ಲದೆ ಇನ್ನೂ ಹಲವು ಚಿಕ್ಕ ನದಿಗಳು ಹರಿಯುತ್ತವೆ. ಮಣಿಪುರ ನದಿ ಹರಿಯುವ ವಿಶಾಲ ಕಣಿವೆಯೇ ರಾಜ್ಯದ ಬಯಲು ಪ್ರದೇಶ. ಗುಡ್ಡ ಪ್ರದೇಶದಲ್ಲಿ ಕಾಡುಗಳು ನಿಬಿಡವಾಗಿವೆ. ಇಲ್ಲಿ ಆನೆ, ಹುಲಿ, ಚಿರತೆ, ಖಡ್ಗಮೃಗ, ಕಾಡೆಮ್ಮೆ ಮುಂತಾದ ಪ್ರಾಣಿಗಳಿವೆ. ಕಾಡುಗಳಿಂದ ಅಧಿಕ ಪ್ರಮಾಣದಲ್ಲಿ ತೇಗ ಸಿಗುತ್ತದೆ. ಬೊಂಬು, ಬೆತ್ತಗಳೂ ದೊರೆಯುತ್ತವೆ.

ಜನರ ಪ್ರಧಾನ ಕಸಬು ಕೃಷಿ. ಭತ್ತ, ಗೋಧಿ, ಇತರ ಧಾನ್ಯಗಳು, ಅರಿಸಿನ, ಕಬ್ಬು, ಆಲೂಗಡ್ಡೆ, ಸಾಸಿವೆ, ತಂಬಾಕು, ಅನಾನಸ್, ಕಿತ್ತಳೆಹಣ್ಣು ಮತ್ತು ಅನೇಕ ಬಗೆಯ ತರಕಾರಿಗಳು ಬೆಳೆಯುತ್ತವೆ. ಸಾಮೂಹಿಕ ಬೇಸಾಯ ಇಲ್ಲಿಯ ವೈಶಿಷ್ಟ್ಯ. ಕೃಷಿ ನೆಲವನ್ನೆಲ್ಲ ಹಳ್ಳಿಯ ಸಾಮಾನ್ಯ ಆಸ್ತಿಯಂತೆ ಪರಿಗಣಿಸುತ್ತಾರೆ. ಹಳ್ಳಿಯ ಕಣಜವೂ ಎಲ್ಲರಿಗೆ ಸೇರಿದ್ದು. ಇದರಲ್ಲಿ ಧಾನ್ಯವೇ ಅಲ್ಲದೆ ಇತರ ಬೆಲೆ ಬಾಳುವ ಪದಾರ್ಥಗಳನ್ನು ಇಡುತ್ತಾರೆ. ಕಣಜದಲ್ಲಿ ಕಳವು ಆಗುವುದಿಲ್ಲ.

ಬಹುಮಟ್ಟಿಗೆ ಇಲ್ಲಿಯವರು ಗಿರಿಜನರು. ಬಯಲಿನಲ್ಲಿ ಮಣಿಪುರಿಗಳೂ ಮೈಟೀ ಗುಡ್ಡಗಾಡುಗಳಲ್ಲಿ ನಾಗ ಹಾಗೂ ಕುಕಿ ಜನರೂ ವಾಸಿಸುತ್ತಾರೆ. ಹಳ್ಳಿಯ ಮನೆಗಳು ಅತ್ಯಂತ ಚೊಕ್ಕಟ. ಪ್ರತಿಯೊಂದು ಮನೆಯಲ್ಲಿಯೂ ಒಂದೊಂದು ಮಗ್ಗ.

ನೇಯಲು ಬರದಿರುವ ಮಣಿಪುರಿ ಹೆಂಗಸರೇ ಇಲ್ಲ ಎನ್ನಬಹುದು. ಮನೆಗೆ ಬೇಕಾಗುವ ಬಟ್ಟೆಗಳನ್ನು ತಾವೇ ನೇಯುತ್ತಾರೆ. ಪದಾರ್ಥಗಳನ್ನು ಮಾರುವ, ಕೊಳ್ಳುವ ಕೆಲಸವು ಸ್ತ್ರೀಯರದೇ. ಸ್ತ್ರೀಯರೇ ವಹಿವಾಟು ನಡೆಸುವ ದೊಡ್ಡ ಬಜಾರು ಮಣಿಪುರದಲ್ಲಿದೆ. ಭಾರತದಲ್ಲಿ ಇಂಥದು ಇನ್ನೊಂದಿಲ್ಲ.

ಹೆಸರಾದ ರಾಸಲೀಲಾ ನೃತ್ಯ ಮಣಿಪುರಿ ಶೈಲಿಯದು. ಪ್ರತಿ ಹಳ್ಳಿಯಲ್ಲಿ ಒಂದೆರಡು ದೇವಾಲಯಗಳು ಇದ್ದೇ ಇರುತ್ತವೆ. ಪ್ರತಿ ದೇವಸ್ಥಾನದಲ್ಲಿ ಒಂದು ನೃತ್ಯಾಂಗಣವಿರುತ್ತದೆ. ಈ ಅಂಗಣದಲ್ಲಿ ರಾಸಲೀಲಾ ನೃತ್ಯ ನಡೆಯುತ್ತದೆ. ನೂಪಾ ಪಾಲಾ —ಗಂಡಸರಿಗೆ ಮೀಸಲಾದ ನೃತ್ಯ. ಮಣಿಪುರದಲ್ಲಿ ಪ್ರಾಚೀನ ಕಾಲದಿಂದ ಪೋಲೋ ಆಡುತ್ತಾರೆ. ಈಗಲೂ ಅದು ಜನಪ್ರಿಯವಾಗಿದೆ. ಇಲ್ಲಿನ ಪೋಲೋ 'ಪೋನಿ' (ಕುದುರೆ ಮರಿ)ಗಳಿಗೆ ಬೇಡಿಕೆ ಹೆಚ್ಚು. ಕೈಮಗ್ಗ ಅತಿ ದೊಡ್ಡ ಕೈಗಾರಿಕೆ. ರೇಷ್ಮೆ ಕೈಗಾರಿಕೆ ಎರಡನೆಯದು. ಮರಗೆಲಸ, ಕಮ್ಮಾರ ಕೆಲಸ, ಇಟ್ಟಿಗೆ ತಯಾರಿ, ಬೆಲ್ ಲೋಹ ತಯಾರಿ, ತೊಗಲು, ಬೊಂಬು, ಬೆತ್ತ ಮುಂತಾದುವೂ



[illegible]
—ಬಿಡುಗಡೆಯ ನೆನಪು

ಲೋಕ್ಟಕ್ ಸರೋವರ, ಪ್ರವಾಸೀಗೃಹ

ಶ್ರೀ ಗೋವಿಂದ ರಾಜ ಸುವರ್ಣ ದೇವಾಲಯ





ನರ್ತನ ...ಬದುಕಿನಲ್ಲಿ ಹಾಸುಹೊಕ್ಕು

ಗೃಹಪಾಟ್ಟದ ಕೈಗಾರಿಕೆಗಳು. ಇಲ್ಲಿ ಸಾಬೂನು ತಯಾರಿಕೆಯೂ ಇದೆ. ದೀಮಾಪುರದ ರೈಲ್ವೆ ನಿಲ್ದಾಣ ಹಾಗೂ ಇಂಫಾಲ್–ಕಲ್ಕತ್ತಾ ವಿಮಾನ ಸಾರಿಗೆಗಳು ಭಾರತದ ಇತರ ಪ್ರದೇಶಗಳೊಡನೆ ಮಣಿಪುರಕ್ಕಿರುವ ಸಾರಿಗೆ ಸಂಪರ್ಕ. ರಾಜ್ಯದಲ್ಲಿ ಐದು ಜಿಲ್ಲೆಗಳಿವೆ,

ಬರ್ಮ, ಅಸ್ಸಾಮಿನ ಕಾಚಾರ್ ಜಿಲ್ಲೆ. ನಾಗಾ ಗುಡ್ಡಗಳು ಮಣಿಪುರದ ಮೇರೆಗಳು. ಎರಡು ಭೂಮಾರ್ಗಗಳು ಇದರ ಮೂಲಕ ಹಾದು ಬರ್ಮ ದೇಶವನ್ನು ತಲಪುತ್ತವೆ.

ನೋಡಿ : ಇಂಫಾಲ್ ; ಮಣಿಪುರೀ ಭಾಷೆ, ಸಾಹಿತ್ಯ

ಮಣಿಪುರಿ

ಮಣಿಪುರದ ಜನತೆಯ ಧಾರ್ಮಿಕ ಆಚರಣೆಗೂ ಬದುಕಿಗೂ ನಿಕಟ ಸಂಬಂಧವುಳ್ಳ ನೃತ್ಯ ಪ್ರಕಾರ ಮಣಿಪುರಿ. ಗಂಧರ್ವ ವಂಶದವರೆಂದು ತಮ್ಮನ್ನು ಕರೆದುಕೊಳ್ಳುವ ಇಲ್ಲಿನ ಜನರ ಬದುಕಿನಲ್ಲಿ ಸಂಗೀತ, ನರ್ತನ ಹಾಸುಹೊಕ್ಕಾಗಿವೆ.

ಪಾರ್ವತಿಯೊಡನೆ ರಾಸಕ್ರೀಡೆಯನ್ನಾಡಲು ಬಯಸಿದ ಶಿವ ಗುಡ್ಡಗಳ ನಡುವೆ ಇದ್ದ ಸರೋವರದ ನೀರನ್ನು ಹೊರಚೆಲ್ಲಿ, ಮಣಿಪುರ ಪ್ರದೇಶವನ್ನು ರೂಪಿಸಿ, ತನ್ನ ನಾಟ್ಯರಂಗವನ್ನಾಗಿ ಮಾಡಿದ–ಎಂಬ ದಂತಕಥೆ ಇದೆ.

ಮಣಿಪುರಿ ನೃತ್ಯದಲ್ಲಿ ಮೊದಲು ಶಿವಪಾರ್ವತಿಯರ ಲೀಲೆಗೆ ಪ್ರಾಧಾನ್ಯವಿತ್ತು. ಅನಂತರ ವೈಷ್ಣವ ಧರ್ಮದ ಪ್ರಭಾವದಿಂದ ರಾಧಾಕೃಷ್ಣರ ಲೀಲೆಗೆ ಗಮನ ಹೆಚ್ಚಾಯಿತು. ಶಿವಪರವಾದ ನರ್ತನ 'ಲಾಯ್ ಹರೋಬ', ರಾಧಾಕೃಷ್ಣರ ಲೀಲೆ 'ರಾಸಲೀಲಾ' ನರ್ತನದ ವಸ್ತು.

ಮಣಿಪುರಿ ನರ್ತನದಲ್ಲಿ ಭವ್ಯವಾದ ವಸ್ತ್ರಾಲಂಕರಣವಿದೆ; ಹಿತಮಿ[illegible]ವಾದ ತೂಕದ ಚಲನೆಯಿದೆ. ಚಮತ್ಕಾರವಿದೆ. ಸೊಬಗಿದೆ. ನಾಟ್ಯದ ವಿಲಾಸವಿದೆ.

ಸ್ತ್ರೀಯರೂ ಪುರುಷರೂ ಈ ನೃತ್ಯದಲ್ಲಿ ಪಾತ್ರವಹಿಸುತ್ತಾರೆ. ಸ್ತ್ರೀ ಪಾತ್ರಗಳು ಅಪೂರ್ವವಾದ 'ಕುಮಿನ್'ಗಳನ್ನು (ನಿರಿಗೆಯಿಲ್ಲದ ಲಂಗ) ಧರಿಸುತ್ತಾರೆ. ಹಸಿರು. ಕೆಂಪು ಅಥವಾ ನೀಲ ಬಣ್ಣದ 'ಕುಮಿನ್'ಗಳನ್ನು ತೊಟ್ಟು ನರ್ತಕರು ಜೊತೆಯಾಗಿ ನಲಿಯುತ್ತಾರೆ.

1919ರಲ್ಲಿ ರವೀಂದ್ರನಾಥ ಠಾಕೂರರು ಈ ನೃತ್ಯ ಪ್ರದರ್ಶನದ ಪ್ರಥಮ ನೋಟದಲ್ಲೇ ಆಸಕ್ತಿ ತಳೆದರು. ಶಾಂತಿನಿಕೇತನದಲ್ಲಿ ಮಣಿಪುರಿ ನೃತ್ಯಶಿಕ್ಷಣಕ್ಕೆ ಅವಕಾಶ ಮಾಡಿಕೊಟ್ಟರು. ಅವರ 'ಚಿತ್ರಾಂಗದಾ' ಮುಂತಾದ ನಾಟಕಗಳ ರಂಗಪ್ರಯೋಗದಲ್ಲಿ ಮಣಿಪುರಿ ನರ್ತನದ ಅಂಶಗಳನ್ನು ಅಳವಡಿಸಿದರು.

ಮಣಿಪುರಿ ನರ್ತನ ಸಂಪ್ರದಾಯವನ್ನು ಮೆಚ್ಚಿಕೊಂಡು ಅದಕ್ಕೆ ಪ್ರೋತ್ಸಾಹ ಕೊಟ್ಟವರು ಜವಾಹರಲಾಲ ನೆಹರೂ ಅವರು. ರಾಷ್ಟ್ರೀಯ ಸಂಗೀತ ನಾಟಕ ಅಕಾದೆಮಿ ಅವರ ಹೆಸರಿನಲ್ಲಿ ಇಂಫಾಲಿನಲ್ಲಿ ಜವಾಹರಲಾಲ ನೆಹರೂ ಮಣಿಪುರ್ ಡಾನ್ಸ್ ಅಕಾಡೆಮಿ ಎಂಬ ನರ್ತನ ಶಿಕ್ಷಣ ಶಾಲೆಯನ್ನು ನಡೆಸಿಕೊಂಡು ಬರುತ್ತಿದೆ.

ಮಣಿಪುರಿ ನರ್ತನಕ್ಕೆ ಈಗ ಅಂತರರಾಷ್ಟ್ರೀಯ ಜನಪ್ರಿಯತೆ ದೊರೆತಿದೆ.

ಮಣಿಪುರೀ ಭಾಷೆ, ಸಾಹಿತ್ಯ

ಮಣಿಪುರ ಪ್ರದೇಶದ ಜನರು ಆಡುವ ಭಾಷೆ, ಮಣಿಪುರೀ. ಸುಮಾರು 70 ಸಾವಿರ ಮಂದಿಯ ಮಾತೃಭಾಷೆಯಾದ ಇದನ್ನು ಲಕ್ಷಾಂತರ ಜನ ಮಣಿಪುರದಲ್ಲೂ ಹೊರಗೂ ಮಾತನಾಡುತ್ತಾರೆ.

ಟಿಬ್ಬತಿ ಮತ್ತು ಬರ್ಮಿ ಭಾಷೆಗಳ ಕೊಂಡಿ ಮಣಿಪುರೀ ಭಾಷೆ. ಇದು ಟಿಬ್ಬತಿ–ಬರ್ಮಿ ಭಾಷಾ ಕುಟುಂಬಕ್ಕೆ ಸೇರಿದ ಸ್ವತಂತ್ರ ಭಾಷೆ. ಈ ಭಾಷೆಗೆ ತನ್ನದೇ ಆದ, ಅಶೋಕನ ಕಾಲಕ್ಕೂ ಹಿಂದಿನ ಲಿಪಿ ಇದೆ. ಕ್ರಿ.ಶ. 799ರಲ್ಲಿ ಈ ಲಿಪಿಯ ಸ್ಪಷ್ಟ ದಾಖಲೆ ಶಾಸನವೊಂದರಲ್ಲಿ ಸಿಗುತ್ತದೆ.

ರಾಸಲೀಲೆ



ಮೃದಂಗ ನೃತ್ಯ



ಆದರೆ 18ನೆಯ ಶತಮಾನದಲ್ಲಿ ಈ ಭಾಷೆಗೆ ಅಸ್ಸಾಮಿ–ಬಂಗಾಳೀ ಲಿಪಿಯನ್ನು ಅಳವಡಿಸಿಕೊಂಡರು. ಆ ಬಳಿಕ ಮೂಲ ಲಿಪಿಯ ಬಳಕೆ ತೀರಾ ಕಡಮೆಯಾಯಿತು.

ಬಾಯಿಮಾತಿನಲ್ಲಿ ಉಳಿದಿದ್ದ ಮಣಿಪುರೀ ಸಾಹಿತ್ಯದ ಇತಿಹಾಸ ಕ್ರಿ.ಶ. ಒಂದನೇ ಶತಮಾನಕ್ಕೆ ಹೋಗುತ್ತದೆ. 'ಔಗ್ರಿ' ಎಂಬ ಸ್ತೋತ್ರ ರೂಪದ ಕವನವೊಂದನ್ನು ಈ ಕಾಲದಲ್ಲಿ ಹಾಡಲಾಗುತ್ತಿತ್ತು. ಅಂಥ ಕವನವನ್ನು 799ರ ಶಾಸನದಲ್ಲಿ ಉಲ್ಲೇಖಿಸಲಾಗಿದೆ.

ಎಂಟನೆಯ ಶತಮಾನದ ಬಹುತೇಕ ಕೃತಿಗಳು ಅಲಭ್ಯ. ಅಲ್ಲಿಂದ ಬೆಳೆದ ಮಣಿಪುರೀ ಸಾಹಿತ್ಯ 16–17ನೆಯಶತಮಾನಗಳಲ್ಲಿ ಗುಣ–ಪ್ರಮಾಣ ಗಳಲ್ಲಿ ಉನ್ನತ ಮಟ್ಟಕ್ಕೇರಿತು. 18ನೆಯ ಶತಮಾನದಲ್ಲಿ ಗರೀಬ್‌ನಿವಾಜ್‌ನ ಆಳ್ವಿಕೆಯಲ್ಲಿ ಅಸ್ಸಾಮಿ–ಬಂಗಾಳೀ ಲಿಪಿಯನ್ನು ಅಳವಡಿಸಿಕೊಂಡಾಗ, ಮಣಿಪುರದ ಜನ ಸಂಸ್ಕೃತ–ಬಂಗಾಳೀ ಭಾಷೆಗಳಲ್ಲೂ ಸಾಹಿತ್ಯರಚನೆ ಮಾಡಿದರು. 1890ರಲ್ಲಿ 'ಮಣಿಪುರ್ ಇತಿಹಾಸ್' ಎಂಬ ಪ್ರಥಮ ಮುದ್ರಿತ ಪುಸ್ತಕ ಹೊರಬಂದಿತು.

20ನೆಯ ಶತಮಾನದಲ್ಲಿ ಮಣಿಪುರೀ ಸಾಹಿತ್ಯ ಹೊಸ ರಕ್ತ ಪಡೆದು ಬೆಳೆಯುತೊಡಗಿತು. ಪಂಕರ್‌ಸಿಂಗ್, ಮುನಲ್‌ಸಿಂಗ್, ಜತೀಶ್ವರ್‌ಸಿಂಗ್ ಮೊದಲಾದವರಲ್ಲದೆ ವಿದೇಶೀಯರಾದ ರೆವರೆಂಡ್ ಪೆಟಿಗ್ರ್ಯೂ, ವಿನ್ಸ್ ಹಾಗೂ ಮಣಿಪುರದವರಲ್ಲದ ರಾಮಸುಂದರರಾಯ್ ಮೊದಲಾದವರು ಈ ಶತಮಾನದ ಆದಿಯಲ್ಲಿ ಸಾಹಿತ್ಯರಚನೆ ಮಾಡಿದವರು.

ಕಲಾಚಂದ್ ಶಾಸ್ತ್ರೀ 1960ರಲ್ಲಿ ಮಣಿಪುರಿಯಲ್ಲಿ ರಚಿಸಿದ 'ವಾಸುದೇವ ಮಹಾಕಾವ್ಯ' ರಮ್ಯ ಪರಂಪರೆಗೆ ಸೇರುವ ಕೃತಿ. ರಮ್ಯ ಪರಂಪರೆಯ ಇತರ ಕವಿಗಳಲ್ಲಿ ನೀಲಬೀರ್ ಶಾಸ್ತ್ರೀ, ಟೋಕ್‌ಪಂ ಐಬೊಂಚ, ಆರ್. ಕೆ. ಸುರೇಂದ್ರಜಿತ್ ಮೊದಲಾದವರು ಪ್ರಮುಖರು.

ಆಧುನಿಕ ಕವಿಗಳಲ್ಲಿ ದೃಶ್ಯಪ್ರತಿಮೆ ಮತ್ತು ಜೀವಂತ ಶೈಲಿಯ ಎಲ್. ಸಮರೇಂದ್ರ, ಬೆಕೆಟ್ ಪ್ರಭಾವಿತ ಎನ್. ಶ್ರೀ ಬಿರೆನ್ ಮೊದ ಲಾದವರು ಖ್ಯಾತರು. ಐಬೋಚಿಶಕ್, ರಾಜಕುಮಾರ್ ಮಧುಬೀರ್, ಐಬೋಹಲ್‌ಸಿಂಗ್ ಮೊದಲಾದವರು ಗಮನಾರ್ಹ ಸಮಕಾಲೀನ ಕವಿ ಗಳು.

ಸಣ್ಣ ಕಥೆಗಳ ಪ್ರಕಾರದಲ್ಲಿ ಶ್ರೀ ಬಿರೆನ್ ಜೀವನದ ಅರ್ಥಹೀನತೆ ಯನ್ನು ಪ್ರದರ್ಶಿಸುವ ಕಥೆಗಳನ್ನು ರಚಿಸಿದ್ದಾರೆ. ಮಾನವೀಯತೆಯ ಕಡೆ ದೃಷ್ಟಿಯನ್ನು ಕೇಂದ್ರೀಕರಿಸಿದ್ದ ಬಿನೋದಿನಿ ದೇವಿ, ಹಾಸ್ಯಪ್ರಧಾನ ಕೃತಿಗಳ ಕರ್ತೃ ಇ. ನೀಲಕಂಠ ಪ್ರಮುಖರು. ಎಂ. ಕೆ. ಬಿನೋದಿನಿ, ಆರ್. ಕೆ. ಎಲಾಂಗ್‌ಬಮ್, ಎಸ್. ನೀಲಬೀರ್‌ಸಿಂಗ್, [illegible] ಮೊದಲಾದವರು ಜನಪ್ರಿಯ ಕಥೆಗಾರರು.

ಕಾದಂಬರಿಗೆ ಹೊಸ ರೂಪ–ವಸ್ತು ಕೊಟ್ಟವರು ಎಚ್. ಅಂಗಾನ್‌ಹಲ್ ಸಿಂಗ್. ಎಸ್. ನೋಡಿಯಾಚಂದ್‌ಸಿಂಗ್ ಐತಿಹಾಸಿಕ ವಸ್ತುವಿನ ಮೊರೆ ಕಾದಂಬರಿ ರಚಿಸಿದ್ದಾರೆ. ತೊಯಿಬಿದೇವಿ ಪಕ್ಕಿ ಗಮನಾರ್ಹ ಕಾದಂಬರಿ ಗಾರ್ತಿ. ಲಾಯ್‌ಟಂಗ್‌ಬಮ್ ಪಾಚ ಮತ್ತು ಐಹೋಬಲ್‌ಸಿಂಗ್ ಗಂಭೀರ ವಸ್ತುವನ್ನು ಹೊಸ ಶೈಲಿಯಲ್ಲಿ ವ್ಯಕ್ತಪಡಿಸುವ ಕಾದಂಬರಿಗಳನ್ನು ರಚಿಸಿದ್ದಾರೆ.

ಜನಪ್ರಿಯ ನಾಟಕಕಾರರಲ್ಲಿ ಅಂಗನ್‌ಘಲ್ ಮತ್ತು ಜಿ. ಸಿ. ಟಾಂಗ್‌ಬ್ರ ಪ್ರಮುಖರು. ಬೀರಮಂಗೋಲ್ ಸಿಂಗ್ 30 ನಾಟಕಗಳನ್ನು ರಚಿಸಿದ ನಟ ಮತ್ತು ನಿರ್ದೇಶಕ. ಸೋಮೇಂದ್ರಸಿಂಗ್ ಆಧುನಿಕ ದೃಷ್ಟಿಯ ನಾಟಕಕಾರ.

ಸಾಹಿತ್ಯ ವಿಮರ್ಶೆ ಮತ್ತು ವಿಚಾರ ಸಾಹಿತ್ಯದಲ್ಲಿ ಮಣಿಪುರೀ ಅಷ್ಟೊಂದು ಮುಂದುವರಿದಿಲ್ಲ. ನೀಲಕಂಠಸಿಂಗ್, ಚಾಯೋಬಸಿಂಗ್, ಮಣಿಹರ್‌ಸಿಂಗ್ ಈ ಕ್ಷೇತ್ರದಲ್ಲಿ ಮುಖ್ಯ ಹೆಸರುಗಳು. ಸಾಹಿತ್ಯ, ಸಂಸ್ಕೃತಿ ವಿಷಯಕ ನಿಯತಕಾಲಿಕಗಳು ಪ್ರಕಟವಾಗತೊಡಗಿವೆ. ಈ ಭಾಷೆಗೆ ಕೇಂದ್ರ ಸಾಹಿತ್ಯ ಅಕಾದೆಮಿಯ ಮನ್ನಣೆ ದೊರೆತಿದೆ. ಬೆಳೆಯು ತ್ತಿರುವ ಮಣಿಪುರೀ ಭಾಷೆಗೆ ಇದರಿಂದ ಪ್ರೋತ್ಸಾಹ ಲಭಿಸಿದಂತಾಗಿದೆ.

ಮಥುರಾ

ಮಥುರಾ ಯಮುನಾ ನದಿಯ ಬಲದಂಡೆಯ ಮೇಲಿದೆ.

ಮಧುವನದ ಅರಸ ಮಧು. ಆತನ ಮಗ ಲವಣ. ಇಬ್ಬರೂ ರಾಮನನ್ನು ಧಿಕ್ಕರಿಸಿದರು. ಇವರನ್ನು ಸದೆಬಡಿಯಲು ರಾಮ ಶತ್ರುಘ್ನ ನನ್ನು ಕಳುಹಿಸಿದ. ಅವರನ್ನು ಸಾಧಿಸಿ ಮಥುರಾ ನಗರವನ್ನು ಶತ್ರುಘ್ನ ಸ್ಥಾಪಿಸಿದ —ಎಂದು ಪ್ರತೀತಿ.

ಇಲ್ಲಿನ ಅತಿ ದೊಡ್ಡ ದೇವಸ್ಥಾನ ದ್ವಾರಕಾಧೀಶನದು. ಮಹಾ ವಿದ್ಯಾ, ಭೂತೇಶ್ವರ, ಮಹಾದೇವ, ಕೇಶವದೇವ ಮೊದಲಾದ ದೇವಾಲಯಗಳಿವೆ.

ಶ್ರಾವಣ ಶುಕ್ಲ ಪಂಚಮಿಯಂದು ಜನ್ಮ ದಿವಸ ಮಹೋತ್ಸವ ಮೇಳ ನಡೆಯುತ್ತದೆ. ಅಂದು ಯಾತ್ರಾರ್ಥಿಗಳು ಮಥುರೆ

[illegible] ದೃಶ್ಯ : ಮಥುರಾ ದೇವಾಲಯ



ಯಿಂದ ಆರು ಮೈಲು ದೂರದಲ್ಲಿರುವ ಸುಪ್ರಸಿದ್ಧ ವೃಂದಾವನಕ್ಕೆ ಹೊರಡುತ್ತಾರೆ. ಮಥುರಾ ಜನಸಂಖ್ಯೆ 1,32,028.

ವಿಷ್ಣುವಿನ ಎಂಟನೆಯ ಅವತಾರವಾದ ಕೃಷ್ಣನ ಜನ್ಮಸ್ಥಳ ಮಥುರಾ ಎಂಬ ನಂಬಿಕೆಯಿದೆ. ಇಲ್ಲಿಯ ಅನೇಕ ತಾಣಗಳನ್ನು ಕೃಷ್ಣ ಲೀಲೆಗಳಿಗೆ ಸಂಬಂಧಿಸುತ್ತಾರೆ. ಕಂಸ-ತೀಲ ಎಂಬಲ್ಲಿ ಕಂಸನ ಅರಮನೆ ಇತ್ತು; ಯೋಗ ಘಾಟ್ ಎಂಬಲ್ಲಿ ಕಂಸನು ನಂದನ ಮಗಳು ಯೋಗನಿದ್ರಾಳನ್ನು ಅಪ್ಪಳಿಸಿದ—ಎನ್ನುತ್ತಾರೆ. ವಿಶ್ರಮ ಘಾಟ್ ಎಂಬಲ್ಲಿ ಕೃಷ್ಣನು ಕಂಸನನ್ನು ನಾಶಗೊಳಿಸಿದ ಬಳಿಕ ವಿಶ್ರಮಿಸಿದನು ಎನ್ನುತ್ತಾರೆ. ಮರಗಿಡಗಳಿಂದ ತುಂಬಿದ ವೃಂದಾವನವು ಕೃಷ್ಣನು ಗೋಪಿಯರೊಂದಿಗೆ ನರ್ತಿಸಿದ ತಾಣ ಎಂದು ಪ್ರಖ್ಯಾತ.

ಮಥುರೆಯ ಹಿಂದಿನ ಅವಶೇಷಗಳಲ್ಲಿ ಬ್ರಾಹ್ಮಣ, ಬೌದ್ಧ, ಜೈನ ಶಿಲ್ಪಗಳು, ಶಾಸನಗಳು ಮತ್ತಿತರ ಚಾರಿತ್ರಿಕ ಮಹತ್ವದ ವಸ್ತುಗಳು ದೊರೆತಿವೆ. ಇವನ್ನು ಮಥುರಾದ ಕರ್ಜನ್ ವಸ್ತುಸಂಗ್ರಹಾಲಯ ಮತ್ತು ಕಲ್ಕತ್ತೆಯ ಭಾರತೀಯ ವಸ್ತುಸಂಗ್ರಹಾಲಯಗಳಲ್ಲಿ ರಕ್ಷಿಸಿಡಲಾಗಿದೆ.

ಉತ್ತರ ಪ್ರದೇಶದ ಆಗ್ರಾ ವಿಭಾಗಕ್ಕೆ ಸೇರಿದ ಮಥುರಾ ಕ್ರಿಸ್ತ ಪೂರ್ವ ಕಾಲದಲ್ಲಿ ಶೂರಸೇನ ಎಂಬ ಜನಪದವಾಗಿತ್ತು. ಚೀನೀ ಯಾತ್ರಿಕ ಫಾಹಿಯಾನ್ ಭಾರತಕ್ಕೆ ಬಂದಾಗ ಈ ನಗರದಲ್ಲಿ ಬೌದ್ಧಧರ್ಮ ಪ್ರಬಲವಾಗಿತ್ತು. ಮಥುರಾವನ್ನು ಆತ 'ನವಿಲು ನಗರ' ಎಂದು ಕರೆದಿದ್ದಾನೆ. ಹ್ಯೂಯೆನ್ ತ್ಸಾಂಗ್ ಬರುವ ವೇಳೆಗೆ ಹಿಂದೂಧರ್ಮ ಮತ್ತೆ ಪ್ರಾಬಲ್ಯಕ್ಕೆ ಬರುತ್ತು. 1017ರಲ್ಲಿ ಘಜ್ನಿ ಮಹಮದ್ ನಗರವನ್ನು ಕೊಳ್ಳೆಹೊಡೆದ. ಸಿಕಂದರ್ ಲೋದಿ, ಷಾ ಜಹಾನ್, ಔರಂಗಜೇಬರು ಹಿಂದೂ ದೇವಾಲಯಗಳನ್ನು ಹಾಳುಮಾಡಿದರು. 1757ರಲ್ಲಿ ಅಬ್ದಾಲಿ ಮನೆತನದ ಅಹಮದ್ ಷಾ ದುರಾನಿ ಲೂಟಿ ಮಾಡಿದ. ನಾಶ, ಪುನರ್ನಿರ್ಮಾಣ ಹೀಗೆ ಅನೇಕ ಆವರ್ತಗಳಿಗೆ ಸಿಲುಕಿದ ಮಥುರಾ 1804ರಲ್ಲಿ ಆಂಗ್ಲರ ಕೈಸೇರಿತು.

ಮದಕರಿನಾಯಕ

ಮದವೇರಿದ ಆನೆಯನ್ನು ತಡೆದು ನಿಲ್ಲಿಸಿದ ಚಿತ್ರದುರ್ಗದ ಪಾಳೆಯಗಾರ, ಓಬಣ್ಣನಾಯಕ. ಈತ ಮದಕರಿನಾಯಕ ಎಂಬ ಬಿರುದನ್ನು ತಳೆದು ಆಳಿದ.



ಚಿತ್ರದುರ್ಗದ ಕೋಟೆ

ಚಿತ್ರದುರ್ಗದಲ್ಲಿ ಆಧಿಪತ್ಯ ಆರಂಭಿಸಿದವನು ಮತ್ತಿತಿಮ್ಮಣ್ಣ ನಾಯಕ. ವಿಜಯನಗರದ ಚಕ್ರವರ್ತಿ ಈತನನ್ನು ಚಿತ್ರದುರ್ಗದ ನಾಯಕನೆಂದು ಘೋಷಿಸಿದ.

ತಿಮ್ಮಣ್ಣ ನಾಯಕನ ಮಗನೇ ಮದಕರಿನಾಯಕ ಎಂಬ ಬಿರುದು ಧರಿಸಿದ ಓಬಣ್ಣ ನಾಯಕ.

1564-65ರಲ್ಲಿ ವಿಜಯನಗರ ಸಾಮ್ರಾಜ್ಯ ಅವನತಿ ಹೊಂದಿದಾಗ ಮದಕರಿನಾಯಕ ಸ್ವತಂತ್ರ ರಾಜನಂತೆ ವ್ಯವಹರಿಸತೊಡಗಿದ. 1602ರಲ್ಲಿ ಈತನ ಮಗ ಕಸ್ತೂರಿರಂಗನಾಯಕ ಪಟ್ಟಕ್ಕೆ ಬಂದ. ಹೊಳಲಕೆರೆ ಪ್ರಾಂತವನ್ನು ವಿಜಯನಗರದ ತಿರುಮಲರಾಯ ಈತನಿಗೆ ಉಂಬಳಿಕೊಟ್ಟ.


ಕಸ್ತೂರಿರಂಗನಾಯಕನ ತರುವಾಯ ಚಿತ್ರದುರ್ಗವನ್ನು ಮದಕರಿನಾಯಕ ಎಂಬ ಹೆಸರಿನ ಇನ್ನೂ ಹಲವು ಪಾಳೆಯಗಾರರು ಆಳಿದರು. ಅವರಲ್ಲಿ ಮೊದಲನೆಯವನು ಕಸ್ತೂರಿರಂಗ ನಾಯಕನ ಮಗ (ಆಳ್ವಿಕೆ 1652—1674). ಕೊನೆಯವನು ಹೈದರಾಲಿಯೊಡನೆ ಸೆಣಸಿ ಹೆಸರಾದವನು.

ತನಗೆ ಶರಣಾಗುವಂತೆ ಹೈದರಾಲಿಯು 1762ರಲ್ಲಿ ಮದಕರಿನಾಯಕನಿಗೆ ಸಿರೂಪ ಕಳುಹಿಸಿದನು. ಕೊನೆಗೆ ಸೈನ್ಯ ಸಮೇತನಾಗಿ ಅವನು ಬಂದಾಗ ಸಂಧಿ ಏರ್ಪಟ್ಟಿತು.

ಮುಂದೆ ಹೈದರಾಲಿಯು ಮರಾಠರನ್ನು ಎದುರಿಸಬೇಕಾಯಿತು. ಆಗ ಮದಕರಿನಾಯಕ ಹೈದರಾಲಿಯ ಸಹಾಯಕ್ಕೆ ಬರಲಿಲ್ಲ. ಮರಾಠರನ್ನು ಸೋಲಿಸಿದ ಬಳಿಕ ಹೈದರಾಲಿ ಚಿತ್ರದುರ್ಗಕ್ಕೆ ಮುತ್ತಿಗೆ ಹಾಕಿದ. ಚಿತ್ರದುರ್ಗದ ಕೋಟೆ ಅಭೇದ್ಯವಾಗಿತ್ತು. ಸೈನಿಕರು ಮದಕರಿನಾಯಕನಲ್ಲಿ ಅಚಲ ನಿಷ್ಠೆಯಿಂದಿದ್ದರು. ಆದರೆ ವಂಚನೆಯ ಫಲವಾಗಿ 1779ರಲ್ಲಿ ಕೋಟೆ ಹೈದರಾಲಿಯ ವಶವಾಯಿತು. ಮದಕರಿನಾಯಕ ಬಂದಿಯಾದ. ನಾಯಕರ ಆಳ್ವಿಕೆ ಕೊನೆಗಂಡಿತು.

ಮದನಲಾಲ್ ಧಿಂಗ್ರ

"ಭಾರತೀಯ ಯುವಕರನ್ನು ಕರಿನೀರಿನ ಶಿಕ್ಷೆಗೆ ಗುರಿಪಡಿಸುವುದರ ವಿರುದ್ಧ, ಅವರಿಗೆ ಫಾಸೀಶಿಕ್ಷೆ ವಿಧಿಸುವುದರ ವಿರುದ್ಧ, ನನ್ನ ಪ್ರತಿಭಟನೆ ವ್ಯಕ್ತಪಡಿಸುವುದಕ್ಕೋಸ್ಕರ ಉದ್ದೇಶಪೂರ್ವಕವಾಗಿ ಬ್ರಿಟಿಷರ ರಕ್ತ ಸುರಿಸಲು ಪ್ರಯತ್ನಪಟ್ಟೆ" ಹೀಗೆ ಬಹಿರಂಗವಾಗಿ ಸಾರಿದವರು, ಯುವಕ ಮದನಲಾಲ್ ಧಿಂಗ್ರ.



ವರದಿಗೆ ಓಗೊಡುತ್ತಿರುವ
ವೀರ ಮದಕರಿನಾಯಕ



ದೇಶಕ್ಕಾಗಿ : ಧಿಂಗ್ರ

1887ರಲ್ಲಿ, ಅಮೃತಸರ ಜಿಲ್ಲೆಯಲ್ಲಿ, ಜನನ. ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಇಂಗ್ಲೆಂಡಿಗೆ ಹೋದಾಗ ಭಯೋತ್ಪಾದಕ ನೀತಿಯ ಮೊದಲ ಪಾಠ ಸಾವರ್ಕರರಿಂದ ಲಭಿಸಿತು.

ಧಿಂಗ್ರ, ಸಾವರ್ಕರರ ನೆರವಿನಿಂದ ಲಂಡನಿನಲ್ಲಿ ಬಂದೂಕು ಮತ್ತು ಪಿಸ್ತೂಲು ಕೊಂಡು, ಗುರಿ ಹೊಡೆಯುವ ಅಭ್ಯಾಸ ಮಾಡ ತೊಡಗಿದರು.

ಧಿಂಗ್ರರ ಚಟುವಟಿಕೆ ಮನೆಯವರಿಗೆ ತಿಳಿದುಬಂತು. ಭಾರತದ ಸೆಕ್ರೆಟರಿ ಆಫ್ ಸ್ಟೇಟ್‌ಗೆ ಸಲಹೆಗಾರರಾಗಿದ್ದ ಕರ್ಜನ್ ವೈಲೀಗೆ ಧಿಂಗ್ರರ ಅಣ್ಣ ಪತ್ರ ಬರೆದರು. ಕರ್ಜನ್ ವೈಲೀ ತನ್ನ ವ್ಯವಹಾರದ ಬಗೆಗೆ ಮಾತನಾಡಿದ್ದು ಧಿಂಗ್ರರಿಗೆ ಸರಿಕಾಣಲಿಲ್ಲ. 1909ರ ಜೂಲೈ 1ರಂದು ಇಂಡಿಯನ್ ನ್ಯಾಷನಲ್ ಅಸೋಸಿಯೇಷನಿನ ಸಭೆಯಲ್ಲಿ ಕರ್ಜನ್ ವೈಲೀ ಮತ್ತು ಕವಾಸ್‌ಲಾಲ್ ಕಾಕಾರನ್ನು ಧಿಂಗ್ರ ಗುಂಡುಹಾರಿಸಿ ಕೊಂದರು.

ವಿಚಾರಣೆ ನಡೆದು ಮರಣದಂಡನೆ ಶಿಕ್ಷೆ ವಿಧಿಸಲ್ಪಟ್ಟಿತು. "ದೇಶಕ್ಕಾಗಿ ನನ್ನ ದೀನ ಜೀವವನ್ನು ಸಮರ್ಪಿಸಲು ಹೆಮ್ಮೆ ಎನಿಸುತ್ತದೆ. ಧನವಾಗಲೀ ಬುದ್ಧಿಶಕ್ತಿಯಾಗಲೀ ಇಲ್ಲದ ನನ್ನಂಥ ಮಗನ ಬಳಿ ತಾಯಿಗೆ ಅರ್ಪಿಸಲು ಸ್ವಂತ ರಕ್ತವಲ್ಲದೆ ಬೇರೇನೂ ಇಲ್ಲ," ಎಂದು ನುಡಿದು, ಧಿಂಗ್ರ ಶಿಕ್ಷೆಯನ್ನು ಸ್ವಾಗತಿಸಿದರು.

1909ರ ಆಗಸ್ಟ್ 17ರಂದು ಧಿಂಗ್ರ, ಗಲ್ಲಿಗೇರಿದರು.

ಮದನಮೋಹನ ಮಾಳವೀಯ

ಎರಡನೆಯ ದುಂಡುಮೇಜಿನ ಪರಿಷತ್ತಿಗೆ ಇಂಗ್ಲೆಂಡಿಗೆ ಹೋದವರಲ್ಲಿ ಪಂಡಿತ ಮದನಮೋಹನ ಮಾಳವೀಯ ಒಬ್ಬರು. ಮಾಳವೀಯರು ಬಹಳ ಆಚಾರವಂತರು. ಇಂಗ್ಲೆಂಡಿಗೆ ಹೋದಾಗ ತಮ್ಮೊಡನೆ ಸಾಕಷ್ಟು ಗಂಗಾ ಜಲವನ್ನು ಒಯ್ದರು. ತಮ್ಮ ಅಡುಗೆ ತಾವೇ ಮಾಡಿಕೊಂಡರು. ಅದು ಆಗದಾಗ, ಹಣ್ಣುಹಂಪಲು ಮಾತ್ರ ಸೇವಿಸಿದರು. ಅಷ್ಟು ಸಂಪ್ರದಾಯಬದ್ಧರಾಗಿದ್ದರೂ ಸಾಗರದಾಚೆ ಹೋಗುವಂತೆ ಮಾಡಿದ್ದು ಅವರ ಕರ್ತವ್ಯನಿಷ್ಠೆ.



ಶಿಕ್ಷಣ, ಸ್ವದೇಶೀ, ಸ್ವಾತಂತ್ರ್ಯ : ಮಾಳವೀಯ

ಮದನಮೋಹನರು ಹುಟ್ಟಿದ್ದು 1861 ಡಿಸೆಂಬರ್ 25ರಂದು. ಶ್ರೇಷ್ಠ ಸಂಸ್ಕೃತ ವಿದ್ವಾಂಸರ ಕುಟುಂಬದಲ್ಲಿ. 1884ರಲ್ಲಿ ಅಧ್ಯಾಪಕ ವೃತ್ತಿ ಕೈಗೊಂಡರು. ಎರಡು ವರ್ಷಗಳ ಬಳಿಕ ಕಾಂಗ್ರೆಸ್ಸಿನ ಅಧಿವೇಶನದಲ್ಲಿ ಭಾಗವಹಿಸುವ ಅವಕಾಶ ದೊರೆಯಿತು. ಮಾಳವೀಯರ ವಾಗ್ಮಿತೆ, ಪಾಂಡಿತ್ಯ ಹಲವರನ್ನು ಆಕರ್ಷಿಸಿದುವು. 'ಹಿಂದೂಸ್ಥಾನ್' ಎಂಬ ವಾರಪತ್ರಿಕೆಯ ಸಂಪಾದಕರಾಗುವಂತೆ ಮಾಳವೀಯರಿಗೆ ಆಹ್ವಾನ ಬಂದದ್ದು ಆಗಲೇ.

1891ರಲ್ಲಿ ಕಾನೂನು ಪರೀಕ್ಷೆ ಪಾಸುಮಾಡಿ ವಕೀಲವೃತ್ತಿ ಆರಂಭಿಸಿದರು. 1909 ಹಾಗೂ ಮುಂದೆ 1918ರಲ್ಲಿ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷರೂ ಆದರು. 1932 ಮತ್ತು 1933ರಲ್ಲಿ ಇವರು ಅದೇ ಸ್ಥಾನಕ್ಕೆ ಮತ್ತೆ ಆಯ್ಕೆಯಾದರು.

ಮಾಳವೀಯರು ಹಿಂದೂಧರ್ಮದ ಅಂಧಾಭಿಮಾನಿಗಳಲ್ಲ. ಅಸ್ಪೃಶ್ಯತೆಯ ಆಚರಣೆ ಹಿಂದೂಧರ್ಮಕ್ಕೇ ಹಾನಿಕರ ಎಂಬುದು ಇವರ ಭಾವನೆಯಾಗಿತ್ತು. ಬಾಲ ವಿವಾಹವನ್ನೂ ಇವರು ಖಂಡಿಸಿದರು.

ಭಾರತದ ಸಂಸ್ಕೃತಿ ಮತ್ತು ಸಂಸ್ಕೃತದ ಅಧ್ಯಯನ ಅಳಿದು ಹೋಗಬಾರದು ಎಂಬ ಉದ್ದೇಶ ಅವರದು. ಇದಕ್ಕಾಗಿ ಇವರು ಕಾಶಿಯಲ್ಲಿ ವಿಶ್ವವಿದ್ಯಾಲಯವೊಂದನ್ನು ಸ್ಥಾಪಿಸುವ ಯೋಜನೆ ಹಾಕಿದರು. ಇದಕ್ಕಾಗಿ ಹಲವಾರು ವರ್ಷ ದುಡಿದರು ; ಬಡವ-ಬಲ್ಲಿದರಿಂದ ಧನಸಂಗ್ರಹಮಾಡಿದರು. ಚಂದಾ ಕಲೆಹಾಕುವುದರಲ್ಲೂ ದೀರ್ಘ ಭಾಷಣ ಮಾಡುವುದರಲ್ಲೂ ಇವರು ಅಸಮಾನರು. 1916ರಲ್ಲಿ ಬನಾರಸ್ ಹಿಂದೂ ವಿಶ್ವವಿದ್ಯಾಲಯದ ಸ್ಥಾಪನೆಯಾಯಿತು.

ಮಾಳವೀಯರು ವಿಶ್ವವಿದ್ಯಾಲಯದ ವೈಸ್ ಛಾನ್ಸಲರ್ ಆಗಿ ಹಲವು ವರ್ಷ ದುಡಿದರು. ಸಂಸ್ಕೃತ ಅಧ್ಯಯನದೊಂದಿಗೆ ಎಂಜಿನಿಯರಿಂಗ್, ವಾಣಿಜ್ಯ ವಿಷಯಗಳ ಶಿಕ್ಷಣವೂ ಆಗುವಂತೆ ನೋಡಿಕೊಂಡರು.

ಮಾಳವೀಯರು ಸ್ವದೇಶೀ ಚಳುವಳಿಯ ಮುಂದಾಳು. ಸ್ವತಃ ಹೆಚ್ಚು ಬೆಲೆಯ, ದೊರಗಾದ ಬಟ್ಟೆಯನ್ನು ಉಟ್ಟರು. ಆದರೂ ದೇಶದ ಆರ್ಥಿಕ ಮುನ್ನಡೆಗೆ ನಿರುದ್ಯೋಗ ನಿವಾರಣೆಗೆ ವಿದೇಶದಲ್ಲಿರುವಂಥ ಕಾರಖಾನೆಗಳು ಬೇಕು ಎಂದು ಇವರು ಮನಗಂಡಿದ್ದರು. ಇವರು ಪ್ರಯಾಗ ಸಕ್ಕರೆ ಕಾರಖಾನೆಯ ಪ್ರಮುಖ ಪಾಲುಗಾರರಾಗಿದ್ದರು.

ಭಾರತದ ಸ್ವಾತಂತ್ರ್ಯ ಹೋರಾಟದ ಹಿರಿಯ ವ್ಯಕ್ತಿ ಪಂಡಿತ ಮದನಮೋಹನ ಮಾಳವೀಯರು 1946 ನವೆಂಬರಿನಲ್ಲಿ ನಿಧನರಾದರು.

ಮದರಾಸು

ಮದರಾಸಿನ ಜನಸಂಖ್ಯೆ 24,69,449.

ನೋಡಿ : ಮದರಾಸು–ಸಂಪುಟ ೧

ಮದಾಂ ರುಸ್ತುಂ ಕಾಮಾ

ಜರ್ಮನಿಯಲ್ಲಿ 1907ರಲ್ಲಿ ಅಂತರರಾಷ್ಟ್ರೀಯ ಸಮಾಜವಾದೀ ಅಧಿವೇಶನವೊಂದು ನಡೆಯಿತು. ಇದರಲ್ಲಿ ವಿಶ್ವದ ಅನೇಕ ರಾಷ್ಟ್ರಗಳ ಪ್ರತಿನಿಧಿಗಳು ಭಾಗವಹಿಸಿದ್ದರು. ಭಾರತದಿಂದ ಒಬ್ಬ ಮಹಿಳೆ ಅಲ್ಲಿ ಪ್ರತಿನಿಧಿಯಾಗಿ ಹಾಜರಿದ್ದರು. ಅಧಿವೇಶನದ ನಡುವೆ ಈ ಮಹಿಳೆ ಭಾರತಕ್ಕೆ ಸ್ವರಾಜ್ಯಬೇಕೆಂಬ ನಿರ್ಣಯವೊಂದನ್ನು ಮಂಡಿಸಿದರು. ಅದನ್ನು ಇಂಗ್ಲೆಂಡಿನ ಪ್ರತಿನಿಧಿ ವಿರೋಧಿಸುತ್ತಿದ್ದಂತೆ ಈಕೆ ವೇದಿಕೆಯ ಮೇಲೆ ಹೋಗಿ, ತನ್ನ ಕೈಯಲ್ಲಿದ್ದ ಬಟ್ಟೆಯಂ



ಕಾಮಾ : ಸಾಗರದಾಚೆ ಸಮರ



'ಇದು ಸ್ವತಂತ್ರ ಭಾರತದ ಧ್ವಜ'

ಸುರುಳಿಯನ್ನು ಬಿಚ್ಚಿ, "ಇದು ಸ್ವತಂತ್ರ ಭಾರತದ ಧ್ವಜ. ಭಾರತೀಯ ಹುತಾತ್ಮರ ರಕ್ತದಿಂದ ಪಾವನಗೊಂಡಿರುವ ಈ ಧ್ವಜವನ್ನು ನೀವೆಲ್ಲ ಗೌರವಿಸಬೇಕು. ಇದು ನನ್ನ ವಿನಂತಿ." ಎಂದು ಘೋಷಿಸಿದರು. ಇಡೀ ಸಭೆ ಎದ್ದು ನಿಂತು ಗೌರವ ಸಲ್ಲಿಸಿತು. ಅಂತರರಾಷ್ಟ್ರೀಯ ವೇದಿಕೆಯ ಮೇಲೆ ಹೀಗೆ ಭಾರತದ ಸ್ವಾತಂತ್ರ್ಯ ಕಹಳೆ ಊದಿದ ಮಹಿಳೆ, ಮದಾಂ ರುಸ್ತುಂ ಕಾಮಾ.

ಮುಂಬಯಿಯ ಖ್ಯಾತ ವ್ಯಾಪಾರಿಯಾಗಿದ್ದ ಸೊಹ್ರಾಬ್‌ಜೀ ಫ್ರಾಂಜೀ ಪಟೇಲರ ಮಗಳಾಗಿ ರುಸ್ತುಂ 1861 ಸೆಪ್ಟೆಂಬರ್ 24ರಂದು ಜನಿಸಿದರು. ಮುಂದೆ ಅಡ್ವೊಕೇಟ್ ಆರ್. ಕೆ. ಕಾಮಾ ಅವರ ಪತ್ನಿಯಾಗಿ ಮದಾಂ ರುಸ್ತುಂ ಕಾಮಾ ಆದರು.

ಪತಿಗೆ ಬ್ರಿಟಿಷರೆಂದರೆ ಅಪಾರ ಅಭಿಮಾನ, ಗೌರವ. ಈಕೆ ತದ್ವಿರುದ್ಧ. ಈ ಆಂತರಿಕ ಘರ್ಷಣೆಯಿಂದ ಪಾರಾಗಲು ಅವರು ಸಮಾಜ ಸೇವಿಕೆಯಾದರು ; ಸ್ವಾತಂತ್ರ್ಯ ಹೋರಾಟದಲ್ಲಿ ನೇರವಾಗಿ ಭಾಗವಹಿಸಿದರು.

1905ರ ವೇಳೆಗೆ ಲಂಡನಿಗೆ ಹೋಗಿ ದಾದಾಭಾಯಿ ನವರೋಜಿ ಅವರ ಖಾಸಗಿ ಕಾರ್ಯದರ್ಶಿಯಾದರು. ಮರುವರ್ಷ ಅಲ್ಲಿಯೇ ಸಾವರ್‌ಕರ್ ಪ್ರಾರಂಭಿಸಿದ ಸ್ವಾತಂತ್ರ್ಯ ಹೋರಾಟಕ್ಕೆ ಸಂಪೂರ್ಣ ಬೆಂಬಲ ನೀಡಿದರು. 1910ರಲ್ಲಿ ಸಾವರ್‌ಕರರನ್ನು ಲಂಡನಿನಲ್ಲಿ ಬಂಧಿಸಿ ಹಡಗಿನಲ್ಲಿ ಕರೆದೊಯ್ಯುತ್ತಿದ್ದಾಗ, ಅವರನ್ನು ಬಿಡಿಸಲು ಮದಾಂ ಕಾಮಾ ಮತ್ತು ವಿ. ವಿ. ಎಸ್. ಅಯ್ಯರ್ ಪ್ರಯತ್ನಿಸಿದರು. ಮಾರ್ಸೇಲ್ ಬಂದರಿನ ಸಮೀಪ ಒಂದು ಕಾರನ್ನು ಸಿದ್ಧಗೊಳಿಸಿ ಅವರು ಸಾವರ್‌ಕರರಿಗಾಗಿ ಕಾದು ಕುಳಿತರು. ಆದರೆ ಸಾವರ್‌ಕರರು ಓಡಿದ ಜಾಗ ಬೇರೆ ಆಯಿತು. ಸ್ಕಾಟ್‌ಲೆಂಡ್ ಯಾರ್ಡ್ ಅಧಿಕಾರಿಗಳು ಸಾವರ್‌ಕರರನ್ನು ಬೆನ್ನಟ್ಟಿಹೋದಾಗ ಅವರು ಸಿಕ್ಕಿಬಿದ್ದರು.

ಪ್ಯಾರಿಸ್, ಅಮೆರಿಕ, ಇಂಗ್ಲೆಂಡುಗಳಲ್ಲಿ ಹಲವು ವರ್ಷ ಕಾಲ ಪ್ರವಾಸ ಮಾಡಿದ ಅವರು ತಾವು ಹೋದಲ್ಲೆಲ್ಲ ಭಾರತದ ಬಗೆಗೆ ಭಾಷಣಗಳನ್ನು ಕೊಟ್ಟು, ಸ್ವಾತಂತ್ರ್ಯ ಹೋರಾಟಕ್ಕೆ ಹೊರಗಿನ ವಾತಾವರಣ ಅನುಕೂಲವಾಗುವಂತೆ ಮಾಡಿದರು. ಭಾರತ ಅಷ್ಟೇ ಅಲ್ಲದೆ ಈಜಿಪ್ಟ್ ಮತ್ತು ಚೀನಗಳ ಪರವಾಗಿಯೂ ಪ್ರಚಾರ ಮಾಡಿದರು.

1935ರಲ್ಲಿ ಅವರು ಭಾರತಕ್ಕೆ ಹಿಂದಿರುಗಿದರು. ಆಕೆಯ ದೇಹಾರೋಗ್ಯ ಕೆಟ್ಟಿತ್ತು. ಮುಂಬಯಿಯ ಒಂದು ಆಸ್ಪತ್ರೆಯಲ್ಲಿ ಮದಾಂ ಕಾಮಾ 1936 ಆಗಸ್ಟ್ 13ರಂದು ನಿಧನರಾದರು.

ಮದುರೈ

ತಮಿಳು ನಾಡಿನಲ್ಲಿರುವ ಮದುರೈ (ಮಧುರೆ) ನಮ್ಮ ರಾಷ್ಟ್ರದ ಪ್ರಾಚೀನ ನಗರಗಳಲ್ಲೊಂದು. ಇದು ತಮಿಳು ಸಂಸ್ಕೃತಿಯ ಮೂಲ ಸ್ಥಾನ. ವೈಗೈ ನದಿಯ ಸಮೀಪದಲ್ಲಿರುವ ಆಕರ್ಷಕ ನಗರ, ಮದುರೈ. ಇದು ಖ್ಯಾತ ಪಾಂಡ್ಯ ರಾಜವಂಶದವರ ರಾಜಧಾನಿಯಾಗಿತ್ತು. ಅವರೇ ಈ ನಗರವನ್ನು ಕಟ್ಟಿದವರು.

ಮದುರೈಯ ನಿರ್ಮಾಣದ ಬಗೆಗೆ ಒಂದು ಕಥೆಯಿದೆ : ಮನವ ಎಂಬಲ್ಲಿ ಆಳುತ್ತಿದ್ದ ಕುಲಶೇಖರ ಪಾಂಡ್ಯನ ಹತ್ತಿರಕ್ಕೆ ಧನಂಜಯನ ವ್ಯಾಪಾರಿ ಬಂದ. ತಾನು ಸಮೀಪದ ಅರಣ್ಯದಲ್ಲಿ ರಾತ್ರಿಯನ್ನು ಕಳೆ ತ್ತಿದ್ದಾಗ, ದೇವತೆಗಳು ಅಲ್ಲಿದ್ದ ದೇವಾಲಯಕ್ಕೆ ಬಂದು ಪೂಜೆ ಸ ದ್ದನ್ನು ಕಂಡೆ –ಎಂದ. ಅದನ್ನು ಕೇಳಿ ಆಶ್ಚರ್ಯಗೊಂಡ ಅರಸು ಅದ ಪ್ರದೇಶಕ್ಕೆ ಹೋಗಿ ಹುಡುಕಿದಾಗ, ಕದಂಬ ವನದಲ್ಲಿ ಒಂದು ಶಿವಾಲ ವನ್ನು ಕಂಡ. ಅಲ್ಲಿ ಪೂಜೆ ನಡೆಸಿದ. ಅಲ್ಲೊಂದು ನಗರವನ್ನು ಕ ಬೇಕೆಂದು ಅವನಿಗೆ ಆಸೆಯಾಯಿತು. ಸ್ಥಳ ಮಹತ್ವವನ್ನು ಕು ವಿಚಾರಿಸಿದಾಗ, ಬ್ರಹ್ಮಹತ್ಯಾ ದೋಷದಿಂದ ಪಾರಾಗಲು ಇಂದ್ರ ಕದ ವನದಲ್ಲಿದ್ದ ಸ್ವಯಂಭೂಲಿಂಗವನ್ನು ಅರ್ಚಿಸಿದನೆಂದು ಗೊತ್ತಾಯಿ ಕುಲಶೇಖರ ಪಾಂಡ್ಯ ಆ ಪ್ರದೇಶದಲ್ಲಿ ಮದುರೈ ನಗರವನ್ನು ಕಟ್ಟಿಸಿದ.

ಕುಲಶೇಖರನ ಅನಂತರ ಪಟ್ಟಕ್ಕೆ ಬಂದ ಮಲಯಧ್ವಜ ಪಾ ಸಂತಾನಪ್ರಾಪ್ತಿಗಾಗಿ ಯಜ್ಞ ಮಾಡಿದಾಗ, ಯಜ್ಞಕುಂಡದಿಂದ ಹೆಣ್ಣು ಮ ಬಂದಿತೆಂದೂ ಮಲಯಧ್ವಜ ಅದನ್ನು ಬೆಳೆಸಿದನೆಂದೂ ಅನಂತರ ಶಿವನನ್ನು ಒಲಿಸಿಕೊಂಡು ಮದುವೆಯಾದಳೆಂದೂ ಕಥೆಯಿದೆ. ಈಕೆ ಮೀನಾಕ್ಷಿ; ಇವಳು ಮದುವೆಯಾದದ್ದು ಶಿವರೂಪಿ ಸುಂದರೇಶ್ವರನ ಮೀನಾಕ್ಷಿಯನ್ನು 'ಪಾಂಡ್ಯರಾಜತನಯೆ' ಎನ್ನುತ್ತಾರೆ.

ಮದುರೈಯಲ್ಲಿರುವ ಮೀನಾಕ್ಷಿ ದೇವಾಲಯ ದೊಡ್ಡದು. ಅ ವಿವಿಧ ಭಾಗಗಳಲ್ಲಿ ಅತ್ಯುತ್ತಮ ಮೂರ್ತಿಶಿಲ್ಪವನ್ನೂ ಅಲಂಕ ಶಿಲ್ಪವನ್ನೂ ಕಾಣಬಹುದು. ಮೀನಾಕ್ಷಿ ದೇವಾಲಯದ ಆವರಣದ ಸುಂದರೇಶ್ವರನ ಆಲಯವೂ ಇದೆ. ಇವುಗಳ ಸುತ್ತ 847 ಅಡಿ ಉ 729 ಅಡಿ ಅಗಲವಾಗಿರುವ ವಿಸ್ತಾರವಾದ ಪ್ರಾಕಾರವಿದೆ. ಈ ಪ್ರಾಕ ದೊಳಗೆ ಹಲವಾರು ಮಂಟಪಗಳಿವೆ. ಅಷ್ಟಶಕ್ತಿ ಮಂಟಪದಲ್ಲಿ ಅಷ್ಟ ಗಳ ಮೂರ್ತಿಗಳೂ ಮೀನಾಕ್ಷಿ ಸುಂದರೇಶ್ವರರ ವಿವಾಹವನ್ನು ಚಿತ್ರಿಸ ಸುಂದರ ಫಲಕಶಿಲ್ಪವೂ ಇದೆ.

ಸುಂದರೇಶ್ವರ ದೇವಾಲಯದ ಸಮೀಪದಲ್ಲಿರುವ ಸಾವಿರ ಕಂ ಮಂಟಪ (ಇದರಲ್ಲಿ 985 ಕಂಬಗಳಿವೆ) ಒಂದು ಅದ್ಭುತ ವಾಸ್ತುಶಿಲ್ಪ ಸೃ ಈ ಕಂಬಗಳ ಯಾಳಿ ಶಿಲ್ಪ ದೇವಾಲಯದ ವೈಶಿಷ್ಟ್ಯ. ಯ ಕೋನದಿಂದ ನೋಡಿದರೂ ಒಂದೇ ಸಾಲಿನಲ್ಲಿರುವಂತೆ ಕಂಬಗಳನ್ನು ಸ್ಥಾ ಲಾಗಿದೆ. ಈ ಸ್ತಂಭಗಳ ಮೇಲಿರುವ ನಾಟ್ಯಗಣಪತಿ, ರತಿ–ಮನ್ಮ ಮೋಹಿನಿ ಮುಂತಾದ ಮೂರ್ತಿಶಿಲ್ಪಗಳು ರಮ್ಯವಾದುವು. ಗಿಳಿ ಪಂಜರಗಳನ್ನು ತೂಗಹಾಕಿರುವ 'ಕಿಳಿಕೂತ್ತು ಮಂಡಪಂ'ನಲ್ಲಿ ಮೀನಾ ದೇವಿಯ ಪಟ್ಟಾಭಿಷೇಕ–ವಿವಾಹದ ಸುಂದರ ವರ್ಣಚಿತ್ರಗಳಿವೆ.

ಮದುರೈ, ಪವಿತ್ರ ಕ್ಷೇತ್ರವಾಗಿದ್ದಂತೆ, ಸುಪ್ರಸಿದ್ಧ ವಿದ್ಯಾಕೇಂದ್ರ ಆಗಿತ್ತು. ಕವಿಗಳ ಆಶ್ರಯಸ್ಥಾನವಾಗಿತ್ತು. ಇಲ್ಲಿರುವ 'ಚಿನ್ನದ ತಾ ಕೊಳ'ದ ಸುತ್ತಲ ಮಂಟಪದಲ್ಲಿ ಮೂರನೆಯ ತಮಿಳು ಸಂಘದ ಕವಿಗಳ ಚಿತ್ರಣವಿದೆ.

ತಮಿಳುನಾಡಿನ ಎರಡನೆಯ ಪ್ರಮುಖ ಪಟ್ಟಣವಾಗಿರುವ ಮದು ಒಂದು ಮುಖ್ಯ ಜವಳಿ ಉದ್ಯಮಕೇಂದ್ರವಾಗಿದೆ. ಇದು ಮದುರೈ ವಿ ವಿದ್ಯಾಲಯದ ಕೇಂದ್ರ ಕೂಡಾ.

ಮೀನಾಕ್ಷಿ ದೇವಾಲಯವನ್ನು ವಿಸ್ತಾರಗೊಳಿಸಿ ಸುಂದರಗೊಳಿ ತಿರುಮಲನಾಯಕನ ಅರಮನೆ ಮದುರೈಯ ಸಮೀಪದಲ್ಲಿದೆ. ಇ ಜನಸಂಖ್ಯೆ 5,49,114.









ಮಧುರೆ - ಮಥುರಾ - ರಥೋತ್ಸವ - ಜಾತ್ರೆ

ಮಧ್ಯ ಪ್ರದೇಶ


ಒಡಿಸ್ಸಾ, ಆಂಧ್ರ ಪ್ರದೇಶ, ಮಹಾರಾಷ್ಟ್ರ, ಗುಜರಾತ್, ರಾಜಸ್ಥಾನ, ಉತ್ತರ ಪ್ರದೇಶ ಹಾಗೂ ಬಿಹಾರ ರಾಜ್ಯಗಳಿಂದ ಸುತ್ತುವರಿದಿರುವ ಭಾರತದ ಸರಿಸುಮಾರು ನಡುವಿನಲ್ಲಿರುವ ರಾಜ್ಯ — ಮಧ್ಯಪ್ರದೇಶ. ನರ್ಮದಾ ಮತ್ತು ತಪತಿ ನದೀ ಕಣಿವೆಗಳನ್ನು ಬಿಟ್ಟರೆ ಮಧ್ಯಪ್ರದೇಶ ಸರಾಸರಿ 1,600 ಅಡಿ ಎತ್ತರದಲ್ಲಿರುವ ಪ್ರಸ್ಥಭೂಮಿ. ವಿಂಧ್ಯ ಹಾಗೂ ಸಾತ್ಪುರ ಬೆಟ್ಟಶ್ರೇಣಿಗಳು ಇದರ ಮೂಲಕ ಹಾಯುತ್ತವೆ. ಪೂರ್ವದಲ್ಲಿ ಛತ್ತೀಸಗಡದ ಬಯಲು ಪ್ರದೇಶವಿದೆ. ರಾಜ್ಯದಲ್ಲಿ 43 ಜಿಲ್ಲೆಗಳಿವೆ. ರಾಷ್ಟ್ರದ ಅತಿ ದೊಡ್ಡ ರಾಜ್ಯ, ಮಧ್ಯ ಪ್ರದೇಶ.

ರಾಜ್ಯದ ಸುಮಾರು ಮೂರನೆಯ ಒಂದು ಭಾಗ ಕಾಡಿನಿಂದ ಕೂಡಿದೆ. ತೇಗ, ಸಾಲ ಹಾಗೂ ಬಿದಿರು ಕಾಡಿನ ಮುಖ್ಯ ಉತ್ಪನ್ನಗಳು. ಚೀತಲ್ ಎಂಬ ಮಚ್ಚೆ ಜಿಂಕೆಗಳು ಇಲ್ಲಿವೆ. ಬೊಗಳುವ ಜಿಂಕೆ, ಸಾಂಬಾರ್ ಮೃಗ, ಕೃಷ್ಣ ಮೃಗ, ಚಿರತೆ, ಬಿಳಿ ಹುಲಿ, ನೀಲಗಾಯಿ ಜಿಂಕೆಗಳೂ ಇವೆ. ಕಾನ್ಹಾ ಹಾಗೂ ಶಿವಪುರಿಯಲ್ಲಿ ರಾಷ್ಟ್ರೀಯ ಉದ್ಯಾನಗಳಿವೆ. ರಾಜ್ಯದಲ್ಲಿ ಹರಿಯುವ ಮುಖ್ಯ ನದಿಗಳು—ನರ್ಮದಾ, ತಪತಿ, ಮಹಾನದಿ, ಚಂಬಲ್, ಬೆತ್ವಾ, ಶೋಣ್ ಹಾಗೂ ವಾಯಿ ಗಂಗಾ.

ಬಹುಪಾಲು ಜನ ಕೃಷಿಯಿಂದ ಜೀವಿಸುತ್ತಾರೆ. ರಾಜ್ಯದ ಮುಖ್ಯ ಬೆಳೆಗಳು ಭತ್ತ, ಗೋಧಿ, ಕಾಳುಗಳು, ಜೋಳ, ಎಣ್ಣೆಬೀಜಗಳು, ಹೊಗೆಸೊಪ್ಪು, ಹತ್ತಿ, ಹಣ್ಣುಗಳು. ಕಲ್ಲಿದ್ದಲು, ಕಬ್ಬಿಣ, ಬಾಕ್ಸೈಟ್ (ಅಲ್ಯೂಮಿನಿಯಂ ಅದಿರು), ಮ್ಯಾಂಗನೀಸ್ ಅದಿರು, ಸುಣ್ಣ ಶಿಲೆ, ಡೊಲೊಮೈಟ್, ಸ್ಟೀಯಟೈಟ್ ಮೊದಲಾದ ಶ್ರೇಷ್ಠ ಮಣ್ಣುಗಳು, ವಜ್ರ, ಅಮೃತ ಶಿಲೆ, ಜೇಡಿಪದರಗಲ್ಲು, ಸಿಲಿಕಾ, ಗ್ರಾಫೈಟ್, ಅಭ್ರಕ, ತಾಮ್ರ, ಕಲ್ನಾರುಗಳ ಮುಖ್ಯ ನಿಕ್ಷೇಪಗಳಿವೆ. ದೊಡ್ಡ ಪ್ರಮಾಣದ ಕಬ್ಬಿಣದ ಅದಿರು ಲಭ್ಯವಿರುವುದರಿಂದ ಅಧಿಕ ಉತ್ಪಾದನೆಯ ಭಿಲಾಯ್ ಉಕ್ಕಿನ ಕಾರಖಾನೆ ತೆರೆಯಲ್ಪಟ್ಟಿದೆ.

ಸಿಮೆಂಟಿಗೆ ಬೇಕಾಗುವ ಸುಣ್ಣ ಶಿಲೆ ಇಲ್ಲಿದೆ. ಭಾರತದಲ್ಲೇ ದೊಡ್ಡದಾದ ಸಿಮೆಂಟ್ ಕಾರಖಾನೆ ರಾಜ್ಯದ ಕೈಮೂರ್ ಎಂಬಲ್ಲಿದೆ. ಕಾಗದದ ತಯಾರಿ ಹಾಗೂ ದೊಡ್ಡ ವಿದ್ಯುತ್ ಉಪಕರಣಗಳು ರಾಜ್ಯದ ಇತರ ಬೃಹತ್ ಉದ್ಯಮಗಳು. ವಸ್ತ್ರೋದ್ಯಮ, ಸಕ್ಕರೆ, ಕೃತಕ ರೇಷ್ಮೆ, ಕುಂಭ ಪದಾರ್ಥ, ಗಾಜಿನ ಕಾರಖಾನೆಗಳೂ ಇವೆ. ನ್ಯೂಸ್ ಪ್ರಿಂಟಿನದ್ದು ಮತ್ತೊಂದು ಗಮನಾರ್ಹ ಕೈಗಾರಿಕೆ.

ಮಳೆಗಾಲದಲ್ಲಿ ನದಿಗಳಲ್ಲಿ ಹರಿಯುವ ನೀರಿನ ಪ್ರಮಾಣ ಅಗಾಧವಾದದ್ದು. ಈ ನೀರನ್ನು ತಡೆಹಿಡಿದು ನೀರಾವರಿಗೆ, ವಿದ್ಯುಚ್ಛಕ್ತಿ ಉತ್ಪಾದನೆಗೆ ಬಳಸುವುದಕ್ಕಾಗಿ ಚಂಬಲ್ ಯೋಜನೆ, ಕೊರ್ಬಾ ಯೋಜನೆಗಳನ್ನು ಕೈಗೊಳ್ಳಲಾಗಿದೆ.



ವಿಸ್ತೀರ್ಣ : 4,42,841 ಚ.ಕಿ.ಮೀ
ಜನಸಂಖ್ಯೆ : 4,16,54,119
ರಾಜಧಾನಿ : ಭೋಪಾಲ್
ಮುಖ್ಯ ಭಾಷೆ : ಹಿಂದೀ

ಮಧ್ಯಪ್ರದೇಶದಲ್ಲಿ ಗಿರಿಜನರ ಸಂಖ್ಯೆ ಭಾರಿ ಪ್ರಮಾಣದ್ದು. ಬಿಲ್ಲರು, ಗೊಂಡರು ಇದರಲ್ಲಿ ಪ್ರಮುಖರು, ಗೊಂಡರು ವಾಸಿಸುವ ಪ್ರದೇಶ 'ಗೊಂಡವಾನ'. ಭೂಮಿಯ ಪ್ರಾಕ್ ಚರಿತ್ರೆಗೆ ಪುಷ್ಟಿಕೊಡುವ ಸಾಕ್ಷ್ಯಗಳು ಇಲ್ಲಿವೆ. ಅಶೋಕನು ಕಟ್ಟಿಸಿದ ಸಾಂಚಿಯ ಸ್ತೂಪ, ನೆಡಿಸಿದ ಸ್ತಂಭಗಳು ಇಂದಿಗೂ ಇವೆ. ಗುಪ್ತರ ಕಾಲದಲ್ಲಿ ಬಾಗ್ ಗುಹಾಲಯಗಳೂ ಉದಯಗಿರಿಯಲ್ಲಿ ಹಿಂದು ಹಾಗೂ ಜೈನ ದೇವಾಲಯಗಳೂ ರಚಿಸಲ್ಪಟ್ಟವು.



8–12ನೆಯ ಶತಮಾನಗಳಲ್ಲಿ ಮಧ್ಯಪ್ರದೇಶದಲ್ಲಿ ಕೆಲವು ಪ್ರಖ್ಯಾತ ದೇವಾಲಯಗಳ ನಿರ್ಮಾಣವಾಯಿತು. ಖಜುರಾಹೊ, ಉದಯಪುರ ದೇವಾಲಯಗಳು ಇಂಥವು. ಹೋಷಂಗ್ ಷಾನ ಸಮಾಧಿ, ಮಾಂಡುವಿನಲ್ಲಿರುವ ಜುಮ್ಮಾ ಮಸೀದಿ, ಜಹಾಜ್ ಮಹಲ್, ಹಿಂದೋಲ ಮಹಲ್, ಗ್ವಾಲಿಯರ್ ಕೋಟೆ ಮತ್ತು ಅದರೊಳಗಿರುವ ಮಾನ್ ಮಂದಿರ್ ಹಾಗೂ ಗುಜಾರಿ ಮಹಲ್—ಇವು ಮಧ್ಯಪ್ರದೇಶದ ಇತರ ಮುಖ್ಯ ವಾಸ್ತು ಶಿಲ್ಪಗಳು.

'ಶಾಕುಂತಲ'ವನ್ನು ಬರೆದ ಮಹಾಕವಿ ಕಾಳಿದಾಸ ಇಲ್ಲಿನವನು. ವರಾಹ ಮಿಹಿರ, ಭವಭೂತಿ ಮುಂತಾದ ಪ್ರಖ್ಯಾತ ಪಂಡಿತರು, ಸಾಹಿತಿಗಳು ಮಧ್ಯಪ್ರದೇಶದವರು. ಹಿಂದೂಸ್ಥಾನೀ ಸಂಗೀತ ವಿಶಾರದ ತಾನ್‌ಸೇನ್ ಇಲ್ಲಿನವ.

ಕುಶಲಕಲೆಗಳಿಗೆ ಮಧ್ಯಪ್ರದೇಶ ಹೆಸರು ಪಡೆದಿದೆ. ಗ್ವಾಲಿಯರಿನ ಕುಂಭಪದಾರ್ಥಗಳು, ಭೋಪಾಲದ ಬೆಳ್ಳಿ ಹಾಗೂ ಚಿನ್ನದ ಸರಿಗೆಗಳಿಂದ ಮಾಡಿದ ಕಸೂತಿಯ ಕೈಚೀಲಗಳು, ಜಬಲ್‌ಪುರದ ಬಳಪದ ಕಲ್ಲಿನ ಸಾಮಾನುಗಳು, ಅತಿ ನಾಜೂಕಿನ ನೆಯ್ಗೆಯ ಕೆಲಸದ ಮನೋಹರ ಚಂದೇರಿ ಸೀರೆಗಳೂ ಪ್ರಸಿದ್ಧವಾದುವು.

ವಸಂತ ಪಂಚಮಿ, ಶಿವರಾತ್ರಿ, ಹೋಳಿ, ಕೃಷ್ಣ ಜನ್ಮಾಷ್ಟಮಿ, ದಸರಾ, ದೀಪಾವಳಿ ಇಲ್ಲಿನ ಮುಖ್ಯ ಹಬ್ಬಗಳು.

ಸುಂಗರು, ಮೌರ್ಯರು ಮತ್ತು ಗುಪ್ತರ ಕಾಲಾನಂತರ 7ನೆಯ ಶತಮಾನದ ಆದಿಯಲ್ಲಿ ಹರ್ಷವರ್ಧನನ ಸಾಮ್ರಾಜ್ಯಕ್ಕೆ ಮಧ್ಯಪ್ರದೇಶ ಒಳಗಾಗಿತ್ತು. ಪರಮಾರ ವಂಶದವರು ಮಾಳ್ವದೇಶ(ಮಾಂಡು)ವನ್ನು 10ನೆಯ ಶತಮಾನದಲ್ಲಿ ಆಳುತ್ತಿದ್ದರು. ಇವರಲ್ಲಿ ಪ್ರಬಲನಾದ ದೊರೆ ಭೋಜರಾಜ. ಆ ಕಾಲದ ಅದ್ಭುತ ಸಾಧನೆ 250 ಚ. ಮೈಲು ವಿಸ್ತಾರದ ಕೃತಕ ಸರೋವರದ ನಿರ್ಮಾಣ. ಮುಂದೆ ಈ ಭಾಗ ಮೊಘಲರ ವಶವಾಯಿತು.

1760ರ ವೇಳೆಗೆ ಮಧ್ಯಭಾರತ ಮರಾಠರಿಗೆ ಸೇರಿತು. ಮರಾಠರ ಪ್ರಬಲ ಸೇನಾನಿ ಮಹದಾಜಿ ಸಿಂಧ್ಯ 1794ರಲ್ಲಿ ಸತ್ತಮೇಲೆ ಮರಾಠರ ಒಕ್ಕೂಟ ಸಡಿಲಗೊಂಡಿತು. ಗ್ವಾಲಿಯರಿನ ಸಿಂಧ್ಯರ ರಾಜ್ಯ, ಇಂದೂರಿನ ಹೋಳ್ಕರರ ರಾಜ್ಯ ಹೀಗೆ ಚಿಕ್ಕಪುಟ್ಟ ಅಧಿಪತ್ಯಗಳಾಗಿ ಮಧ್ಯಪ್ರದೇಶ ಒಡೆದುಹೋಯಿತು.



ಮಧ್ಯಪ್ರದೇಶದ ಹಿರಿಯ ನಾಯಕರಾಗಿದ್ದ ರವಿಶಂಕರ ಶುಕ್ಲ

1857ರ ಸಿಪಾಯಿದಂಗೆಯಲ್ಲಿ ಗ್ವಾಲಿಯರ್‌ನ ಸೈನಿಕರು ಝಾನ್ಸಿರಾಣಿ ಲಕ್ಷ್ಮೀಬಾಯಿ ನೇತೃತ್ವದಲ್ಲಿ ಮಧ್ಯಭಾರತದಲ್ಲಿ ಮೊದಲ ಬಂಡಾಯ ನಡೆಸಿದರು.

ಆರಂಭದಲ್ಲಿ ಮಾಳ್ವವನ್ನು ಮಾತ್ರ ಮಧ್ಯ ಭಾರತವೆಂದು ಕರೆಯಲಾಗುತ್ತಿತ್ತು. 1901ರಲ್ಲಿ ಆಡಳಿತ ಅನುಕೂಲಕ್ಕಾಗಿ ಮಧ್ಯಪ್ರದೇಶವನ್ನು ಎಂಟು ವಿಭಾಗ ಮಾಡಲಾಯಿತು. 1947ರ ಅನಂತರ ಮಧ್ಯಭಾರತ ಹಾಗೂ ವಿಂಧ್ಯ ಪ್ರದೇಶಗಳೆಂದು ಹೆಸರಿಸಿದ್ದ ಭಾಗಗಳೂ ಭೋಪಾಲವೂ ಸೇರಿ 1956ರಲ್ಲಿ ಮಧ್ಯಪ್ರದೇಶವಾಯಿತು.

ನೋಡಿ : ಅಮರಕಂಟಕ ; ಇಂದೂರು ; ಉಜ್ಜಯಿನಿ ; ಖಜೂರಾಹೊ ; ಗ್ವಾಲಿಯರ್ ; ಬಾಗ್ ಗುಹೆಗಳು; ಭೋಪಾಲ್ ; ಮಾಳ್ವ ; ಸಾಂಚಿ; ಸೇವಾಗ್ರಾಮ ; ಹಿಂದೀ ಭಾಷೆ, ಸಾಹಿತ್ಯ

ಮಧ್ವಾಚಾರ್ಯರು

ನೋಡಿ : ಸಂಪುಟ ೧

ಮಧು ಲಿಮಯೆ

ಸ್ವಾತಂತ್ರ್ಯಕ್ಕಾಗಿ ಸಾವು ಬದುಕಿನ ಹೋರಾಟದಲ್ಲಿ ದೇಶ ತೊಡಗಿದ್ದಾಗ ಎಳೆ ಹರೆಯದಲ್ಲೇ ಅದರಲ್ಲಿ ಧುಮುಕಿದವರು, ಮಧು ಲಿಮಯೆ.

1922 ಮೇ 1ರಂದು ಹುಟ್ಟಿದ ಅವರು ಪುಣೆಯ ಫರ್ಗ್ಯುಸನ್ ಕಾಲೇಜಿನ ವಿದ್ಯಾರ್ಥಿಯಾಗಿದ್ದಾಗ ' ಚಲೇಜಾವ್ ' ಚಳುವಳಿ ಅವರನ್ನು ಸೆಳೆಯಿತು.

ಪದವಿ ಪಡೆಯುವ ಮುಂಚೆಯೇ ಕಾಲೇಜಿಗೆ ಶರಣುಹೊಡೆದರು. ಫಲಿತಾಂಶ : 1940–45 ಅವಧಿಯ ನಾಲ್ಕು ವರ್ಷಗಳ ಕಾಲ ಸೆರೆಮನೆ ವಾಸ. 1955ರಲ್ಲಿ ನಡೆದ ಗೋವೆಯ ವಿಮೋಚನಾ ಚಳುವಳಿಯಲ್ಲಿ ಭಾಗ ವಹಿಸಿದುದಕ್ಕೆ 12 ವರ್ಷಗಳ ಕಠಿಣ ಶಿಕ್ಷೆಗೆ ಗುರಿಯಾದರು ; ಪೋರ್ಚುಗೀಸರ ಬಂದಿಯಾಗಿ 19 ತಿಂಗಳ ಕಾಲ ಇದ್ದರು. ಸ್ವತಂತ್ರ ಭಾರತದಲ್ಲಿಯೂ ಅನೇಕ ಚಳುವಳಿಗಳಲ್ಲಿ ಭಾಗವಹಿಸಿ ಹಲವು ಬಾರಿ ಬಂಧನಕ್ಕೆ ಒಳಗಾಗಿದ್ದಾರೆ.



ಲಿಮಯೆ : ಚಟ್ಟುರವಂತ

ರಾಷ್ಟ್ರ ಸೇವಾದಲದ ಸ್ವಯಂ ಸೇವಕರಾಗಿ ಶಿಸ್ತಿನ ತರಬೇತಿ ಪಡೆದರು. 1938–48ರ ತನಕ ಭಾರತ ರಾಷ್ಟ್ರೀಯ ಕಾಂಗ್ರೆಸ್ ಸದಸ್ಯ. ಆಗಲೇ ಕಾಂಗ್ರೆಸ್ ಸಮಾಜವಾದೀ ಪಕ್ಷದಲ್ಲಿ ಇದ್ದರು. ಅನಂತರ 1948ರಿಂದ 52ರ ವರೆಗೆ ಸೋಷಲಿಸ್ಟ್ ಪಕ್ಷ ; 1952 ರಿಂದ55ರ ವರೆಗೆ ಪ್ರಜಾಸಮಾಜವಾದೀ ಪಕ್ಷ. 1953ರಲ್ಲಿ ರಂಗೂನಿನಲ್ಲಿ ಸ್ಥಾಪನೆಯಾದ ಏಷ್ಯದ ಸೋಷಲಿಸ್ಟ್ ಮಂಡಲಿಯ ಕಾರ್ಯದರ್ಶಿಯಾಗಿ ಕೆಲಸಮಾಡಿದರು. 1955ರಲ್ಲಿ ಡಾ. ರಾಮಮನೋಹರ ಲೋಹಿಯಾ ಅವರ ನೇತೃತ್ವದ ಸೋಷಲಿಸ್ಟ್ ಪಕ್ಷ ಹುಟ್ಟಿತು. ಮಧು ಅದರ ಮುಂದಾಳುಗಳಲ್ಲಿ ಒಬ್ಬರಾದರು. 1955ರಿಂದ 64ರವರೆಗೆ ಅದರಲ್ಲಿದ್ದರು. 1958ರಲ್ಲಿ ಆ ಪಕ್ಷದ ಅಧ್ಯಕ್ಷರೂ ಆಗಿದ್ದರು. ಅನಂತರ 1964–72 ಅವಧಿಯಲ್ಲಿ ಸಂಯುಕ್ತ ಸೋಷಲಿಸ್ಟ್ ಪಕ್ಷದಲ್ಲಿದ್ದರು.

1972ರಲ್ಲಿ ಸಂಯುಕ್ತ ಸೋಷಲಿಸ್ಟ್ ಪಕ್ಷ, ಪ್ರಜಾ ಸೋಷಲಿಸ್ಟ್ ಪಕ್ಷ ಹಾಗೂ ಭಾರತೀಯ ಸೋಷಲಿಸ್ಟ್ ಪಕ್ಷ ಒಂದಾಗಿ ರಚಿತವಾದ ಭಾರತ ಸೋಷಲಿಸ್ಟ್ ಪಕ್ಷದ ಮುಖಂಡರಲ್ಲಿ ಲಿಮಯೆ ಒಬ್ಬರು.

1964ರಲ್ಲಿ ಬಿಹಾರದ ಮುಂಘೇರ್ ಕ್ಷೇತ್ರದ ಮರು ಚುನಾವಣೆಯೊಂದರಲ್ಲಿ ಗೆದ್ದು ಲೋಕಸಭೆಯನ್ನು ಪ್ರವೇಶಿಸಿದ ಮಧು ಲಿಮಯೆ ಭಾರತದ ಸಂಸದೀಯ ಇತಿಹಾಸದಲ್ಲಿ ಹೊಸ ಯುಗಕ್ಕೆ ಕಾರಣರಾಗಿದ್ದಾರೆ. ಗುಲ್ಲಿನ ಪ್ರಕರಣಗಳನ್ನು ಬಹಿರಂಗಗೊಳಿಸುವುದರಲ್ಲಿ ಅವರು ಹೆಸರುವಾಸಿ. 1967ರಲ್ಲಿ ಮತ್ತೆ ಅದೇ ಕ್ಷೇತ್ರದಿಂದ ಆರಿಸಿಬಂದರು. 1971ರ ಮಧ್ಯಂತರ ಚುನಾವಣೆಯಲ್ಲಿ ಪರಾಜಿತರಾದರು. ಆದರೆ 1973ರ ಆದಿಯಲ್ಲಿ ಬಿಹಾರದ ಬಾಂಕಾ ಕ್ಷೇತ್ರದಿಂದ ಲೋಕಸಭೆಯನ್ನು ಮತ್ತೆ ಪ್ರವೇಶಿಸಿದರು. ಲೋಕಸಭೆಯಲ್ಲಿ ತುಂಬ ಕ್ರಿಯಾಶೀಲ ಹಾಗೂ ಚಟ್ಟುರವಂತ ಸದಸ್ಯ ಎಂಬ ಕೀರ್ತಿ ಇವರದು.

ಮರಾಠೀ, ಹಿಂದೀ ಹಾಗೂ ಇಂಗ್ಲಿಷ್ ಭಾಷೆಗಳಲ್ಲಿ ಪ್ರಭುತ್ವವುಳ್ಳ ಲಿಮಯೆ ಲೋಕಸಭೆಯಲ್ಲಿ ಸದಾ ಹಿಂದಿಯಲ್ಲೇ ಮಾತನಾಡುತ್ತಾರೆ. ಸಮಾಜವಾದೀ ಆಂದೋಲನಕ್ಕೆ ಸಂಬಂಧಿಸಿದ ಎಲ್ಲ ಪತ್ರಿಕೆಗಳಲ್ಲೂ ಬರೆಯುತ್ತಾರೆ. ಇವರ ಹಲವು ಪುಸ್ತಕಗಳು ಪ್ರಕಟವಾಗಿವೆ. ಮಧು ಲಿಮಯೆಯವರ ಪತ್ನಿ ಚಂಪಾ ಲಿಮಯೆ ಪ್ರಾಧ್ಯಾಪಿಕೆ. ಈಕೆ ಕ್ರಿಯಾಶೀಲ ಸಮಾಜವಾದೀ.

ಮಧುಸೂದನ ಸರಸ್ವತಿ

ಪರಬ್ರಹ್ಮದಲ್ಲಿ ಒಂದಾಗುವುದು ಅದ್ವೈತಿಗಳ ಆಸಕ್ತಿಯಾಗಿರಬೇಕು ಎಂದು ಪ್ರತಿಪಾದಿಸಿದವರು ಖ್ಯಾತ ನೈಯಾಯಿಕ ಹಾಗೂ ವಿವಿಧ ದರ್ಶನಗಳ ಸಮನ್ವಯಾಚಾರ್ಯ ಮಧುಸೂದನ ಸರಸ್ವತಿ.

ಇದಕ್ಕೆ ಅವರು ಅನುಸರಿಸಿದ ಮಾರ್ಗ ಭಕ್ತಿ. ಅವರು ಚೈತನ್ಯ ಮಹಾಪ್ರಭುವಿನಿಂದ ಪ್ರಭಾವಿತರಾಗಿದ್ದರು.

ಮಧುಸೂದನರು ಬಂಗಾಳದವರು. ಅವರ ಕಾಲ 16ನೆಯ ಶತಮಾನ. ವೇದಾಂತವನ್ನು ಕಲಿಯುವವರ ಸಾಮರ್ಥ್ಯಕ್ಕೆ ಅನುಗುಣವಾಗಿ ಬೇರೆ ಬೇರೆ ತತ್ತ್ವಗಳನ್ನು ಮಧುಸೂದನರು ರೂಪಿಸಿದ್ದಾರೆ.

ಇವರ ಮೇರುಕೃತಿ 'ಅದ್ವೈತ ಸಿದ್ಧಿ'. ಇದಕ್ಕೆ ಕೆಲವರು ಭಾಷ್ಯ ಬರೆದಿದ್ದಾರೆ. 'ಭಗವದ್ಭಕ್ತಿ ರಸಾಯನ', 'ಅದ್ವೈತ ರತ್ನಲಕ್ಷಣ', 'ವೇದಾಂತ ಕಲ್ಪಲತಿಕಾ' – ಇವು ಮಧುಸೂದನರ ಇತರ ಕೃತಿಗಳು.

ಮನ್ಮಥ

ಮನ್ಮಥ. ಪ್ರೇಮದೇವತೆ ; ಅಪ್ಸರೆಯರ ಒಡೆಯ.

ತಾರಕಾಸುರ ದೇವತೆಗಳಿಗೆ ತೊಂದರೆ ಕೊಡುತ್ತಿದ್ದ. ಅವನನ್ನು ಶಿವ – ಪಾರ್ವತಿಯರ ಮಗ ಸಂಹಾರ ಮಾಡುವನೆಂದು ಭವಿಷ್ಯವಾಣಿ ಇದ್ದಿತು.



ಪ್ರೇಮದೇವತೆ

ತಪೋನಿರತನಾಗಿದ್ದ ಶಿವನನ್ನು ಒಲಿಸಿಕೊಳ್ಳಲು ಪಾರ್ವತಿ ಮಾಡಿದ ಯತ್ನಗಳು ವಿಫಲವಾದುವು. ಪಾರ್ವತಿಯಲ್ಲಿ ಶಿವ ಆಸಕ್ತನಾಗುವಂತೆ ಮಾಡಲು ಮನ್ಮಥನನ್ನು ದೇವತೆಗಳು ಕಳುಹಿಸಿದರು. ಅವನು ಶಿವನ ತಪೋಭಂಗ ಮಾಡಲು ಯತ್ನಿಸಿದ. ಸಿಟ್ಟಿನಿಂದ ಶಿವ ಹಣೆಗಣ್ಣು ಬಿಟ್ಟು ನೋಡಿದ. ಮನ್ಮಥ ಸುಟ್ಟುಹೋದ. ಅನಂತರ ದೇವತೆಗಳ ಪ್ರಾರ್ಥನೆಯಂತೆ ಮನ್ಮಥನನ್ನು ಶಿವ ಬದುಕಿಸಿದ.

–ಇದು ಮನ್ಮಥನನ್ನು ಕುರಿತ ಕಥೆ. ಬ್ರಹ್ಮನಿಂದ ಜನಿಸಿದವನು ಮನ್ಮಥ. ಬ್ರಹ್ಮನಿಂದ ವಿಶ್ವವನ್ನೇ ಮರುಳು ಮಾಡುವ ವರವನ್ನು ಮನ್ಮಥ ಪಡೆದುಕೊಂಡ.

ಮನ್ಮಥನ ಪತ್ನಿ, ರತಿ. ಕೋಗಿಲೆ ಅಥವಾ ಗಿಣಿಯ ಮೇಲೆ ಕುಳಿತಿರುವ ಮೋಹಕ ಯುವಕ ಕಬ್ಬಿನ ಬಿಲ್ಲಿಗೆ ದುಂಬಿಗಳ ಹಗ್ಗ ಬಿಗಿದು ಪುಷ್ಪ ಮೊನೆಯ ಬಾಣಗಳನ್ನು ಸುರಿಸುತ್ತಿರುವಂತೆ ಮನ್ಮಥನನ್ನು ಚಿತ್ರಿಸುತ್ತಾರೆ.

ಕಾಮದೇವ, ಕಂದರ್ಪ, ಕುಸುಮಾಯುಧ, ಮದನ, ಮಾರ, ಮಕರಕೇತು, ಮನೋಜ, ಸ್ಮರ ಮೊದಲಾದುವು ಮನ್ಮಥನ ಹೆಸರುಗಳು.

ಮದನೋತ್ಸವ ಮನ್ಮಥನ ಹೆಸರಿನಲ್ಲಿ ನಡೆಯುವ ಉತ್ಸವ. ಸಂಗೀತ, ನೃತ್ಯ ಉತ್ಸವದ ಪ್ರಧಾನ ಅಂಶ. ಹೋಳಿ ಹಬ್ಬದ ಆಚರಣೆ, ಶಿವನಿಂದ ದಹಿಸಲ್ಪಟ್ಟ ಮನ್ಮಥನ ಹೆಸರಿನಲ್ಲೇ.

ನೋಡಿ : ಕಾಮನ ಹುಣ್ಣಿಮೆ ; ಹೋಳಿ

ಮನ್ವಂತರ

ಭಾರತೀಯರ ಕಾಲಗಣನೆಯಲ್ಲಿ ಬರುವ ವರ್ಷಗಳ ಲೆಕ್ಕಾಚಾರದಲ್ಲಿ ಮನ್ವಂತರವೂ ಒಂದು. ಪ್ರತಿಯೊಬ್ಬ ಮನುವಿನ ಆಳ್ವಿಕೆಯ ಅವಧಿ ಒಂದು ಮನ್ವಂತರ.

ಹೀಗೆ ಹದಿನಾಲ್ಕು ಮನುಗಳಿದ್ದಾರೆ. ಆಯಾ ಮನುವಿನ ಹೆಸರನ್ನೇ ಅವನು ಆಳುವ ಅವಧಿಗೆ ಇಟ್ಟಿದ್ದಾರೆ. ಸ್ವಾಯಂಭುವ, ಸ್ವಾರೋಚಿಷ, ಉತ್ತಮ, ತಾಮಸ, ರೈವತ ಮತ್ತು ಚಾಕ್ಷುಷ ಮನ್ವಂತರಗಳು ಕಳೆದು ಹೋಗಿವೆ. ಇದು ಬ್ರಹ್ಮನ 50 ವರ್ಷಗಳಿಗೆ ಸಮ. ಈಗ ನಡೆಯುತ್ತಿರುವುದು ಏಳನೆಯವನಾದ ವೈವಸ್ವತನ ಮನ್ವಂತರ. ಮುಂದೆ ಸೂರ್ಯಸಾವರ್ಣಿ (ಸುವರ್ಣಿ), ದಕ್ಷ ಸಾವರ್ಣಿ, ಬ್ರಹ್ಮ ಸಾವರ್ಣಿ, ಧರ್ಮ ಸಾವರ್ಣಿ, ರುದ್ರ ಸಾವರ್ಣಿ, ದೇವ ಸಾವರ್ಣಿ (ರೌಚ್ಯ), ಇಂದ್ರ ಸಾವರ್ಣಿ (ಭೌತ್ಯ) ಮನ್ವಂತರಗಳು ಬರಲಿವೆ. ಇವೆಲ್ಲ ಒಟ್ಟಾಗಿ ಬ್ರಹ್ಮನ ಮುಂದಿನ 50 ವರ್ಷಗಳಿಗೆ ಸಮ.

14 ಮನ್ವಂತರ ಕಳೆದರೆ ಒಂದು ಕಲ್ಪ. ಕಲ್ಪ ಎಂದರೆ ಬ್ರಹ್ಮನ ಒಂದು ಹಗಲು ಅಥವಾ 432 ಕೋಟಿ ಸೌರ ವರ್ಷಗಳು. ಒಂದು ಮನ್ವಂತರದಿಂದ ಮತ್ತೊಂದಕ್ಕೆ ಮಧ್ಯೆ ದೀರ್ಘ ಅಂತರ. ಈ ಕಾಲದಲ್ಲಿ ಮತ್ತೆ ವಿಶ್ವದ ಸೃಷ್ಟಿಯಾಗುತ್ತದೆ. ನೂತನ ಮನು ಮಾನವಕುಲದ ಜನಕನಾಗುತ್ತಾನೆ.

71 ಮಹಾಯುಗಗಳು ಸೇರಿದರೆ ಒಂದು ಮನ್ವಂತರ. ಒಂದು ಮಹಾಯುಗದಲ್ಲಿ 4 ಯುಗಗಳಿರುತ್ತವೆ.

ನೋಡಿ : ಕಲ್ಪ ; ಮನು

ಮನು

ಮನುಷ್ಯನ ಮೂಲ ಪುರುಷ ಮನು ; ಮನುವಿನಿಂದ ಹುಟ್ಟಿದವರು ಮನುಜರು ; ಈತ ಭೂಮಿಯನ್ನು ಆಳಿದ ಮೊತ್ತಮೊದಲ ದೊರೆ.

—ಇದು ಭಾರತೀಯ ಕಲ್ಪನೆ.



ಇವನಿಂದ ಮನುಕುಲ

'ಮಹಾಭಾರತ'ದಲ್ಲಿ ಈ ಬಗೆಗೆ ಒಂದು ಕಥೆಯಿದೆ. ದುರಾಸೆ, ಕ್ರೋಧಗಳು ಹೆಚ್ಚಿ ಮಾನವರು ಪರಸ್ಪರ ಹಿಂಸೆಯಲ್ಲಿ ತೊಡಗಿದ್ದರು. ಆಗ ಬ್ರಹ್ಮನ ಬಳಿಗೆ ಹೋಗಿ ನೆರವು ಕೋರಿದರು. ಭೂಮಂಡಲಕ್ಕೆಲ್ಲ ಏಕೈಕ ಚಕ್ರವರ್ತಿಯಾಗಿ ಮನು ರಾಜ್ಯಭಾರ ಮಾಡುತ್ತಾನೆ ಎಂದು ಬ್ರಹ್ಮ ತಿಳಿಯ ಹೇಳಿದ. ಇಂಥ 14 ಮನುಗಳು ಒಬ್ಬರಾದ ಮೇಲೊಬ್ಬರು ಭೂಮಂಡಲವನ್ನು ಆಳುತ್ತಾರೆ. ಒಬ್ಬನ ಆಳ್ವಿಕೆಯ ಕಾಲದಲ್ಲಿ ಕೃತ, ತ್ರೇತಾ, ದ್ವಾಪರ ಹಾಗೂ ಕಲಿಯುಗಗಳು 71 ಬಾರಿ ನಡೆಯುತ್ತವೆ.

ಮನು ಎಂಬುದು ಇಂದ್ರ ಪದವಿಯ ಹಾಗೆ ಒಂದು ಪದವಿಯ ಹೆಸರು ಎಂದೂ ಹೇಳುತ್ತಾರೆ.

ನೋಡಿ : ಮನ್ವಂತರ
ಮನು ; ಸಂಪುಟ ೧

ಮನುಧರ್ಮಶಾಸ್ತ್ರ

ಮಾನವ ಜೀವನದಲ್ಲಿ ಅನುಸರಿಸಬೇಕಾದ ನೀತಿ ನಿಯಮಗಳಿಗೆ ಸಂಬಂಧಪಟ್ಟ 'ಮನುಧರ್ಮಶಾಸ್ತ್ರ', ಭಾರತದ ಒಂದು ಪ್ರಾಚೀನ ಗ್ರಂಥ. ಇದನ್ನು ಬರೆದವನ ಕಾಲ ಕ್ರಿ. ಪೂ. 600ರಿಂದ ಕ್ರಿ. ಶ. 300ರ ಒಳಗೆ ಇರಬಹುದು ಎಂಬ ಊಹೆಯಿದೆ.

ಸಾಂಪ್ರದಾಯಿಕವಾಗಿ ಇದು ಅನಾದಿ ಕಾಲದಿಂದ ಇರುವ ಸಾಹಿತ್ಯ. ಪ್ರಥಮ ಮನುವಾದ ಸ್ವಾಯಂಭುವ ಮನು ಭೃಗುಮುನಿಗೆ 1,00,000 ಪದ್ಯಗಳಲ್ಲಿ ಹೇಳಿದನೆಂದೂ ಅದನ್ನು ನಾರದನು 12,000 ಪದ್ಯಗಳಿಗೆ ಇಳಿಸಿದನೆಂದೂ ಹೇಳಿಕೆ. ಮುಂದೆ ಮಾರ್ಕಂಡೇಯನಿಂದ ಸಂಸ್ಕಾರ

ಗೊಂಡು ಇದು 8,000 ಪದ್ಯಗಳ ಗ್ರಂಥವಾಯಿತು. ಸುಮತಿಯು 4,000 ಪದ್ಯಗಳಿಗೆ ಇಳಿಸಿದ. ಈಗ ಲಭ್ಯವಿರುವ ರೂಪದಲ್ಲಿ ಇದು 2,694 ದ್ವಿಪದಿಗಳನ್ನು ಒಳಗೊಂಡಿದೆ.

'ಮನುಧರ್ಮಶಾಸ್ತ್ರ'ಕ್ಕೆ ಮನುಸ್ಮೃತಿ, 'ಮಾನವಧರ್ಮಶಾಸ್ತ್ರ', 'ಮನುಸಂಹಿತಾ' ಎಂಬ ಹೆಸರುಗಳೂ ಇವೆ. ನೈತಿಕ, ಸಾಮಾಜಿಕ ಕಟ್ಟಳೆಗಳನ್ನು ಇದರಲ್ಲಿ ನಿರೂಪಿಸಲಾಗಿದೆ.

'ಮನು ಹೇಳಿರುವುದೆಲ್ಲ ಔಷಧಿಯಂತೆ' ಎಂದು ಒಂದು ವೇದಶ್ಲೋಕ ಸಾರಿದೆ. ಮನು ತೋರಿಸಿರುವ ಇಂಥ ಯುಕ್ತ ಮಾರ್ಗವನ್ನು ಜನ ತೊರೆಯದಿರಲಿ ಎಂದು ಕೋರುವ ಶ್ಲೋಕ ಋಗ್ವೇದದಲ್ಲಿದೆ. ಈ ಜಗತ್ತಿನ ಆರಂಭ, ವರ್ಣಾಶ್ರಮಗಳು, ಧರ್ಮದ ಆಧಾರಗಳು, ಗೃಹಸ್ಥ ಜೀವನ - ಕರ್ತವ್ಯಗಳು, ವಾನಪ್ರಸ್ಥಾಶ್ರಮ, ಸನ್ಯಾಸ, ರಾಜಧರ್ಮ, ಸ್ತ್ರೀ ಧರ್ಮ, ಧರ್ಮಬಾಹಿರರಾದವರು, ಮಾನವನ ಪಾಪ, ಅಪರಾಧಗಳು ಹಾಗೂ ಪ್ರಾಯಶ್ಚಿತ್ತ –ಈ ಎಲ್ಲ ವಿಷಯಗಳೂ ಮನುಧರ್ಮಶಾಸ್ತ್ರದಲ್ಲಿ ಸವಿಸ್ತಾರವಾಗಿ ತಿಳಿಸಲ್ಪಟ್ಟಿವೆ. ಕೊನೆಯಲ್ಲಿ ಕರ್ಮದ ಬಗೆಗೆ ಹಾಗೂ ಧರ್ಮ ಸಾಧನೆಯ ಮೂಲಕ ಮೋಕ್ಷ ಪಡೆಯುವ ಬಗೆಗೆ ವಿವರವಿದೆ.

ನೋಡಿ : ಮನು

ಮನು—ಸಂಪುಟ ೧

ಮಯೂರ ಶರ್ಮ

ಕ್ಷತ್ರಿಯನಂತೆ ಕತ್ತಿ ಹಿಡಿದು, ಕದಂಬಕುಲ ಸ್ಥಾಪನೆ ಮಾಡಿದ ಬ್ರಾಹ್ಮಣ –ಮಯೂರಶರ್ಮ.

ಒಮ್ಮೆ ಕಂಚಿ ವಿದ್ಯಾಪೀಠಕ್ಕೆ ಮಯೂರಶರ್ಮ ಹೋಗಿದ್ದ. ಆಗ ಪಲ್ಲವ ರಾಜ ಶಿವಸ್ಕಂದವರ್ಮ ಅಶ್ವಮೇಧ ಯಾಗ ನಡೆಸುತ್ತಿದ್ದ. ಬ್ರಾಹ್ಮಣರ ಬಗೆಗೆ ರಾಜ ತೋರಿಸಿದ ಅಸಡ್ಡೆಯಿಂದ ಶರ್ಮ ಕೋಪ ತಳೆದ. ಅಲ್ಲಿಂದ ಹೊರಟು ಬಂದ.

ಕ್ಷತ್ರಿಯನಂತೆ ಶಸ್ತ್ರ ಹಿಡಿದು ಶ್ರೀಪರ್ವತ ಪ್ರದೇಶ ಸೇರಿಕೊಂಡ. ಸೈನ್ಯ ಕೂಡಿಸಿ ಸಮೀಪವಿದ್ದ ಅರಸರನ್ನು ಸೋಲಿಸಿ ಕಪ್ಪ ತೆಗೆದುಕೊಳ್ಳತೊಡಗಿದ. ಇವನು ಪ್ರವರ್ಧಮಾನಕ್ಕೆ ಬರುತ್ತಿರುವುದನ್ನು ನೋಡಿ ಪಲ್ಲವ ರಾಜ ಸೇನೆ ಕಳುಹಿಸಿದ. ಶರ್ಮ ಪಲ್ಲವ ಸೇನೆಯನ್ನು ಬಗ್ಗು ಬಡೆದ. ಪರಾಜಿತನಾದ ಪಲ್ಲವ ರಾಜ ಅಮರಾರ್ಣವದಿಂದ ಪ್ರೇಮಾರ ವರೆಗಿನ ತನ್ನ ರಾಜ್ಯದ ಭಾಗವನ್ನು ಒಪ್ಪಿಸಿ ಸಂಧಿ ಮಾಡಿಕೊಂಡ. ಈ ಸಂಗತಿ ತಾಳಗುಂದ ಶಾಸನದಲ್ಲಿದೆ.

ಸುಮಾರು 280ರಲ್ಲಿ ಕದಂಬಕುಲವನ್ನು ಸ್ಥಾಪಿಸಿದ. ಮಯೂರ ಶರ್ಮ ಶಿವಮೊಗ್ಗ, ಅಮರಾರ್ಣವ, ವೆಂಗುರ್ಲೆ, ಬಾದಾಮಿ, ಶ್ರೀಪರ್ವತ – ಇವುಗಳಿಂದ ಸುತ್ತುವರಿಯಲ್ಪಟ್ಟ ಕುಂತಳ ದೇಶಕ್ಕೆ ಅಧಿಪತಿಯಾದ.

ಚಂದ್ರವಳ್ಳಿ ಶಾಸನದಂತೆ ಈತ ತ್ರಿಕೂಟ, ಅಭೀರ, ಪಾರಿಯಾತ್ರ, ಶಕಸ್ಥಾನ, ಸೇಂದ್ರಕ, ಪುನ್ನಾಟ, ಮೌಖರಿ ರಾಜ್ಯಗಳನ್ನು ವಶಪಡಿಸಿಕೊಂಡ.

ದಕ್ಷಿಣಕ್ಕೆ ಶಿವಮೊಗ್ಗ ಜಿಲ್ಲೆಯಿಂದ ಕಾಂಚೀಪಟ್ಟಣ, ಉತ್ತರಕ್ಕೆ ಮಾಳ್ವದಿಂದ ಗಂಗಾ ವರೆಗಿನ ವಿಶಾಲ ಚಕ್ರಾಧಿಪತ್ಯಕ್ಕೆ ಅಧಿಪತಿ ಆದ ಮಯೂರ ಶರ್ಮ ಅಶ್ವಮೇಧ ಯಾಗಮಾಡಿದ ; ಅಖಿಲ ಭಾರತ ಮನ್ನಣೆ ಪಡೆದ ಮೊದಲನೆಯ ಕರ್ನಾಟಕ ಅರಸ ಎನಿಸಿದ.

ಮಯೂರ ಸಿಂಹಾಸನ

ರಾಜಭಂಡಾರದಲ್ಲಿ ಸೊಗಸಾದ, ಅಪೂರ್ವ ಮುತ್ತು ರತ್ನ ವಜ್ರಗಳ ಸಂಗ್ರಹವಾಗಿದ್ದುವು. ಸಾವಿರಾರು ತೊಲ ಚಿನ್ನವೂ ಸೇರಿತ್ತು. ಇಷ್ಟೊಂದ ಸಂಪತ್ತನ್ನು ಒಳಗಿಟ್ಟು ಮಾಡುವುದೇನು ಎಂದು ಯೋಚಿಸಿದ ಷಾ ಜಹಾ ಮನೋಹರವಾದ ಸಿಂಹಾಸನವನ್ನು ರಚಿಸಬೇಕೆಂದು ನಿರ್ಧರಿಸಿದ ಸಹಸ್ರಾರು ಜನ ಕೆಲಸ ಮಾಡಿ ಏಳು ವರ್ಷಗಳಲ್ಲಿ ಈ ಅದ್ಭುತ ಸಿಂಹಾಸ ವನ್ನು ನಿರ್ಮಿಸಿದರು.

ಇದೇ ವಿಶ್ವವಿಖ್ಯಾತ ಮಯೂರ ಸಿಂಹಾಸನ. ಆಕೃತಿ, ಮಂಚದಂತೆ.

ಆಗಿನ ಕಾಲದಲ್ಲಿ 30ಲಕ್ಷ ರೂಪಾಯಿ ಬೆಲೆಯ ಅಂದರೆ 50,000 ಮಿಸ್ಕಾ ತೂಕದ ವಜ್ರಗಳನ್ನು ಷಾ ಜಹಾನ ಆರಿಸಿದ. ಸಿಂಹಾಸನಕ್ಕಾಗಿ, ಲಕ್ಷ ತೊ ಶುದ್ಧ ಚಿನ್ನವನ್ನು ಕೊಟ್ಟ, (ಆಗ ಇದರ ಬೆಲೆ 14 ಲಕ್ಷ ರೂಪಾಯಿ ಪ್ರತಿ ದಿನ ಬಂದು, ಕೆಲಸವನ್ನು ಪರಿಶೀಲಿಸಿ ಸಲಹೆ ನೀಡಿದ.

ಆರು ಅಡಿ ಉದ್ದ ಹಾಗೂ ನಾಲ್ಕು ಅಡಿ ಅಗಲ ಇರುವ ಸಿಂಹಾಸನ ಮೆಟ್ಟಲು ಬೆಳ್ಳಿಯದು. ಕೆಂಪು ಮಖಮಲ್‌ನ ಎಂಟು ಅಡಿ ಎತ್ತರ ರಾಜಛತ್ರಿಯ ಸುತ್ತಲೂ ಮುತ್ತು ರತ್ನಗಳು ಜೋಲಾಡುತ್ತಿದ್ದುವು. ಛ ಯನ್ನು ಆಧರಿಸಿದ 12 ಕಂಬಗಳು, ಕಂಬಗಳ ನಡುವೆ ಕೆಂಪು ಮಖಮ ಬಟ್ಟೆ. ಇದರಲ್ಲಿ ಕುಸುರಿ ಕೆಲಸ. ಕಮಾನು, ಛಾವಣಿ ಕಂಬ, ಎಲ್ಲಕ ಚಿನ್ನದತಗಡಿನ ಹೊದಿಕೆ. ಇದರ ಮೇಲೆ ಮುತ್ತು, ರತ್ನಗಳನ್ನು ಹು ಗಿಸಿದ ಕುಸುರಿ ಕೆಲಸ. ಹನ್ನೆರಡು ಕಂಬಗಳಲ್ಲಿ ಪ್ರತಿಯೊಂದರ ಮೇಲ ಎರಡೆರಡು ನವಿಲುಗಳು. ನವಿಲಿನ ಗರಿಯಲ್ಲಿರುವ ಕಣ್ಣುಗಳಿಗೆ ನೀಲ ಮ ತರ ರತ್ನಗಳ ಜೋಡಣೆ. ನವಿಲಿನ ಮೈಗೆ ರತ್ನ ಹುದುಗಿಸಿದ ಬಂಗಾರ ತಗಡು ಹಾಕಿ ಎದೆಯಲ್ಲಿ ಕೆಂಪು ರತ್ನ. ಅದರಿಂದ ಇಳಿಬಿದ್ದಿರುವ ಒಂ 50 ಕ್ಯಾರೆಟ್ ತೂಕದ ಮುತ್ತು. ನವಿಲಿನ ಎರಡೂ ಪಕ್ಕಗಳಲ್ಲಿ ಅಷ್ಟೆ ಎತ್ತರವಾದ ರತ್ನ ಖಚಿತ ಚಿನ್ನದ ಹೂಗುಚ್ಛಗಳು. ಛತ್ರಿಯ ಕೆಳಗೆ ಹಾಸಿ ಮತ್ತು ದುಂಡನೆಯ ಒರಗುದಿಂಬು.

ಈ ರೀತಿಯ ಮಯೂರ ಸಿಂಹಾಸನ 1665ರಲ್ಲಿ ಪೂರ್ಣಗೊಂಡಿತ ಷಾ ಜಹಾನ್ ಆ ವರ್ಷ ಮಾರ್ಚ್ ತಿಂಗಳಲ್ಲಿ ವೈಭವದಿಂದ ಮಯೂ ಸಿಂಹಾಸನವನ್ನು ಏರಿದ.

ಮೊಘಲ್ ಚಕ್ರವರ್ತಿಗಳ ಎಣೆಯಿಲ್ಲದ ಐಶ್ವರ್ಯ. ಕಲಾಭಿಜ್ಞ ಹಾಗೂ ಕುಶಲ ಕೆಲಸಗಾರರ ಜಾಣ್ಮೆಗೆ ಸಾಕ್ಷಿಯಂತಿದ್ದ ಮಯೂ ಸಿಂಹಾಸನವನ್ನು ಪರ್ಷಿಯದ ಅರಸ ನಾದಿರ್ ಷಾ 1739ರಲ್ಲಿ ತ ದೇಶಕ್ಕೆ ತೆಗೆದುಕೊಂಡು ಹೋದ.

ಇದು ಟೆಹರಾನಿನ ಗುಲಿಸ್ತಾನ್ ಅರಮನೆಯಲ್ಲಿ ಈಗ ಇದೆ.

ಮರಾಠರು

ಶಿವಾಜಿ, ಅವನ ವಂಶಜರು, ಆ ವಂಶದ ಮಂತ್ರಿಗಳಾದ ಪೇಶ್ವೆಯರ ಮತ್ತು ಪೇಶ್ವೆಯರ ಕೈಕೆಳಗೆ ಸೇನಾನಿಗಳಾಗಿದ್ದು ಮುಂದೆ ಸ್ವತಂತ್ರರಾ ಸ್ಥಾಪಿಸಿದ ಕೆಲವು ಸರದಾರರು –ಹೀಗೆ ಭಾರತದ ಇತಿಹಾಸದಲ್ಲಿ 17ನೆಯ ಶತಮಾನದಿಂದ ರಾಜಕೀಯ ಚಟುವಟಿಕೆ ನಡೆಸಿದ ಇಡೀ ಜನಸಮುದಾ ವನ್ನು ಮರಾಠರು ಎನ್ನುತ್ತಾರೆ. ಇವರ ಇತಿಹಾಸವೇ ಮರಾಠ ಇತಿಹಾಸ.

ಶಿವಾಜಿಯ ಅನಂತರ ಅವನ ಪುತ್ರರಾದ ಸಂಭಾಜಿ (1680–689) (ಶಂಭೂಜಿ), ರಾಜಾರಾಮ (1689–1700) ಅನುಕ್ರಮವಾಗಿ ಸಿಂಹಾಸನ ಏರಿದರು. ಮುಂದೆ ಶಿವಾಜಿಯ ಮೊಮ್ಮಗ ಎರಡನೆಯ ಶಿವಾಜಿ–ಸಂಭಾಜಿಯ ಮಗ ಶಾಹು-ಸತಾರೆಯಿಂದ ಆಳಲಾರಂಭಿಸಿದ. ರಾಜಾರಾಮನ ವಂಶಜರು ಕೊಲ್ಲಾಪುರದಿಂದ ಆಳಿದರು. ಸತಾರೆಯ ಶಾಖೆ ಕೊಲ್ಲಾಪುರದ ಶಾಖೆಗಿಂತ ಪ್ರಬಲವಾಯಿತು. ಈ ವಂಶದ ಮಂತ್ರಿಗಳಾದ ಬ್ರಾಹ್ಮಣ ಪೇಶ್ವೆಯರು ಮುಂದೆ ಪ್ರಬಲರಾಗಿ ತಾವೇ ಎಲ್ಲ ಅಧಿಕಾರ ನಡೆಸಿದರು. ಸತಾರೆಯಲ್ಲಿ ಇರುತ್ತಿದ್ದ ಛತ್ರಪತಿ ಹೆಸರಿಗೆ ಮಾತ್ರ ಅರಸನಾದ.

ಪೇಶ್ವೆಯರು ತಮ್ಮ ಸೇನಾನಿಗಳಿಗೆ ಬೇರೆ ಬೇರೆ ಕಡೆ ಜಾಗೀರುಗಳನ್ನು ನೀಡಿದರು. ಈ ಜಾಗೀರುದಾರರು ಮುಂದೆ ಸ್ವತಂತ್ರ ರಾಜ್ಯಗಳನ್ನು ಕಟ್ಟಿದರೂ ಮರಾಠ ಒಕ್ಕೂಟ ಎಂಬ ಒಂದು ಸಡಿಲ ವ್ಯವಸ್ಥೆ ಮುಂದುವರಿಯಿತು. ಛತ್ರಪತಿಗೆ ಪೇಶ್ವೆ ತೋರಿಸುತ್ತಿದ್ದುದು ನಾಮ ಮಾತ್ರ ಗೌರವ. ಹಾಗೆಯೇ ಒಕ್ಕೂಟದ ನಾಲ್ವರು ರಾಜರು–ನಾಗಪುರದ ಭೋಂಸ್ಲೆ, ಬರೋಡೆಯ (ಬರೋಡಾ) ಗಾಯಕವಾಡ, ಗ್ವಾಲಿಯರ್‌ನ ಸಿಂಧ್ಯ ಮತ್ತು ಇಂದೂರಿನ ಹೋಳ್ಕರ್.–ಪೇಶ್ವೆಗೆ ನಾಮಮಾತ್ರ ಗೌರವ ತೋರಿಸಿದರು. ಮುಂದೆ ಈ ಸರದಾರರು ತಮ್ಮ ತಮ್ಮೊಳಗೂ ಪೇಶ್ವೆಯ ವಿರುದ್ಧವೂ ಹೋರಾಡಿದರು. ಬ್ರಿಟಿಷ್‌ಪರಮಾಧಿಕಾರವನ್ನು ಕ್ರಮೇಣ ಒಪ್ಪಿಕೊಂಡರು.

1818ರಲ್ಲಿ ಪೇಶ್ವೆಯು ಬ್ರಿಟಿಷರ ಕೈಯಲ್ಲಿ ಸೋತಾಗ ಮರಾಠರ ಸ್ವತಂತ್ರ ಸತ್ತೆಗಳ ಕತೆ ಮುಗಿದಂತಾಯಿತು. ಸತಾರಾ ಮತ್ತು ಕೊಲ್ಲಾಪುರದ ಛತ್ರಪತಿಗಳೂ ಬ್ರಿಟಿಷರ ಆಳ್ವಿಕೆಯನ್ನು ಸ್ವೀಕರಿಸಿದರು.

ಮೊದಲಿಗೆ ಮೊಘಲರ ಆಳ್ವಿಕೆಯ ವಿರುದ್ಧ ಮತ್ತು ಮುಂದೆ ಬ್ರಿಟಿಷರ ಆಳ್ವಿಕೆಯ ವಿರುದ್ಧ ಸತತವಾಗಿ ಮರಾಠರು ಹೋರಾಡಿದರು.

ನೋಡಿ : ನಾನಾ ಫಡ್ನವಿಸ್ ; ನಾನಾ ಸಾಹೇಬ್ ; ಪಾಣಿಪತ್ ; ಪೇಶ್ವೆ ;
ಪೇಶ್ವೆ ಮಾಧವರಾವ್ ; ಬಾಜೀ ರಾವ್

ಮರಾಠೀ ಭಾಷೆ, ಸಾಹಿತ್ಯ

ಸಂಸ್ಕೃತ ಮೂಲದ ಭಾಷೆ, ಮಹಾರಾಷ್ಟ್ರೀ ಅಪಭ್ರಂಶ. ಅದರಿಂದ ರೂಪುಗೊಂಡ ಮರಾಠೀ ಭಾಷೆ ತನ್ನದೇ ಆದ ಪರಂಪರೆಯನ್ನು ಹೊಂದಿರುವ ಬೃಹತ್ ಸಾಹಿತ್ಯವನ್ನು ಸೃಷ್ಟಿಸಿದೆ. ಈ ಸಾಹಿತ್ಯದ ಉಗಮವನ್ನು ಕ್ರಿ.ಶ. 12ನೆಯ ಶತಮಾನದಿಂದೀಚೆಗೆ ಸ್ಪಷ್ಟವಾಗಿ ಗುರುತಿಸಬಹುದಾದರೂ, 7–8ನೆಯ ಶತಮಾನಗಳಲ್ಲಿ ಮಹಾರಾಷ್ಟ್ರೀ ಅಪಭ್ರಂಶದಲ್ಲಿ ರಚಿತವಾದ ಕೆಲವು ಕೃತಿಗಳನ್ನು ಕಂಡುಹಿಡಿಯಲಾಗಿದೆ.

ಮರಾಠೀ ಸಾಹಿತ್ಯವನ್ನು ಸ್ಥೂಲವಾಗಿ ಪ್ರಾಚೀನ ಮತ್ತು ಆಧುನಿಕ ಎಂದು ಎರಡು ವಿಭಾಗಗಳನ್ನಾಗಿ ಮಾಡಬಹುದು. ಸುಮಾರು 11ನೇ ಶತಮಾನದಿಂದ 19ನೆಯ ಶತಮಾನದವರೆಗಿನದು ಪ್ರಾಚೀನ ಸಾಹಿತ್ಯ. ಅಲ್ಲಿಂದೀಚೆಗಿನದು ಆಧುನಿಕ.

ಮರಾಠೀ ಭಾಷೆಯನ್ನು ಆಸ್ಥಾನದಭಾಷೆಯನ್ನಾಗಿ ಮಾಡಿಕೊಂಡ 12ನೇ ಶತಮಾನದ ಯಾದವ ರಾಜವಂಶ ಮರಾಠೀ ಭಾಷೆಗೆ ಆಶ್ರಯಕೊಟ್ಟು ಅದರ ಬೆಳವಣಿಗೆಗೆ ಅಡಿಪಾಯ ಹಾಕಿತು. ಸುಮಾರು ಇದೇ ಕಾಲದ ಮಹಾನುಭಾವ ಪಂಥ ಮತ್ತು ವಾರ್ಕರಿ ಪಂಥಗಳೆಂಬ ಎರಡು ಧಾರ್ಮಿಕ ಪಂಥಗಳ ಅನುಯಾಯಿಗಳು ತಮ್ಮ ಪಂಥದ ಪ್ರಚಾರಕ್ಕಾಗಿ ಗದ್ಯ–ಪದ್ಯಗಳಲ್ಲಿ ಕೃತಿ ರಚಿಸಿ, ಮರಾಠೀ ಭಾಷೆಯ ಬೆಳವಣಿಗೆಗೆ ಕಾರಣರಾದರು.

ಪ್ರಾಚೀನ ಸಾಹಿತ್ಯದಲ್ಲಿ ಕಾವ್ಯಕ್ಕೇ ಪ್ರಮುಖ ಸ್ಥಾನ. ಧಾರ್ಮಿಕ ದೃಷ್ಟಿಯ ಅಭಿವ್ಯಕ್ತಿಗೆ, ಮಾನವನ ದು:ಖ, ಅಶ್ರು, ಹರ್ಷಗಳ ಚಿತ್ರಣಕ್ಕೆ ಪದ್ಯದ ಪ್ರಕಾರವೇ ಸಾಕಾಯಿತು. ಆದರೆ ಈ ಕಾಲದಲ್ಲಿ ನಾಟಕ-ಗದ್ಯಗಳ ಬೆಳವಣಿಗೆ ತೀರಾ ಕಡಮೆ. ಕಾವ್ಯಗಳ ವಸ್ತು ಸಹ ರಾಮಾಯಣ–ಮಹಾಭಾರತಗಳದ್ದೇ.

ಪ್ರಾಚೀನ ಸಾಹಿತ್ಯದ ಆರಂಭ ಕವಿಗಳಲ್ಲಿ ಮುಕುಂದರಾಜ ಮತ್ತು ಜ್ಞಾನೇಶ್ವರ ಪ್ರಮುಖರು. ಮುಕುಂದರಾಜನ 'ವಿವೇಕಸಿಂಧು' (1188) ಗಮನಾರ್ಹ ಕೃತಿ. ಆದರೆ, 'ಜ್ಞಾನೇಶ್ವರಿ'ಯ ಕರ್ತೃ ಜ್ಞಾನೇಶ್ವರ (1275–1296) ತನ್ನ ಶೈಲಿ, ಶಬ್ದ ಸಂಪತ್ತಿನಿಂದಾಗಿ ಮರಾಠೀ ಸಾಹಿತ್ಯದ ಪಿತಾಮಹ ಎನಿಸಿದ್ದಾನೆ.

ವಾರ್ಕರಿ ಪಂಥದ ಪ್ರಚಾರಕ್ಕಾಗಿ ಕಾವ್ಯ ರಚಿಸಿದ ನಾಮದೇವ (1270–1350), 'ಏಕನಾಥಿ ಭಾಗವತ'ದ ಕರ್ತೃ ಏಕನಾಥ —ಅನಂತರದ ಪ್ರಮುಖ ಕವಿಗಳು. ಏಕನಾಥ ಆಗಿನ ಸಮಾಜ ಸುಧಾರಕರಲ್ಲೊಬ್ಬನಾಗಿದ್ದ. 'ಮಹಾಭಾರತ'ದ ಮೂಲಕ ತನ್ನ ಅಪ್ರತಿಮ ಪ್ರತಿಭೆ ತೋರಿದ ಮುಕ್ತೇಶ್ವರ (1574–1645), 'ದಾಸಬೋಧ'ದ ಕರ್ತೃ ರಾಮದಾಸ, 'ಮಹಾಭಾರತ' ವನ್ನು ಮಹಾಕಾವ್ಯದ ರೂಪದಲ್ಲಿ ಕೊಟ್ಟ ಮಹಾಕವಿ ಮರೋಪಂತ ಪಂಡಿತ(1729–1794) ಈ ಯುಗದ ಸಾಹಿತ್ಯವನ್ನು ಸಮೃದ್ಧಗೊಳಿಸಿದರು. ತುಕಾರಾಮ ಇಡೀ ಭಾರತದಲ್ಲೇ ಖ್ಯಾತನಾದ ಭಕ್ತಕವಿ.

19ನೆಯ ಶತಮಾನದ ಆದಿಭಾಗದಲ್ಲಿ ಬ್ರಿಟಿಷರ ಆಳ್ವಿಕೆ ಹರಡುತ್ತಿದ್ದಂತೆ ಮಹಾರಾಷ್ಟ್ರಕ್ಕೆ ಆಂಗ್ಲ ಸಂಸ್ಕೃತಿ ಸಾಹಿತ್ಯಗಳು ಕಾಲಿಟ್ಟು, ಹೊಸ ಗಾಳಿ ಬೀಸಿತು. ಸಾಹಿತ್ಯದ ವಸ್ತು, ಮಾಧ್ಯಮ, ಧೋರಣೆ, ದೃಷ್ಟಿಕೋಣಗಳೆಲ್ಲ ಕ್ರಮೇಣ ಬದಲಾದುವು. ಕಾದಂಬರಿ, ಸಣ್ಣಕಥೆ, ನಾಟಕ ಮೊದಲಾದ ಪ್ರಕಾರಗಳು ಹುಟ್ಟಿ ಬೆಳೆದುವು. ಇಡೀ ಮರಾಠೀ ಸಾಹಿತ್ಯ ವಿಸ್ತಾರವಾದ ಹೊಸ ಹಾದಿ ಹಿಡಿಯಿತು.

1805ರಲ್ಲಿ ಡಾ. ಕಾರ್ಸಿ ಮರಾಠೀ ವ್ಯಾಕರಣ ಮತ್ತು ನಿಘಂಟುಗಳನ್ನು ಪ್ರಕಟಿಸಿದರು. ಇಂಗ್ಲಿಷ್ - ಮರಾಠೀ ನಿಘಂಟು ಸಹ ಪ್ರಕಟವಾಯಿತು. 1857ರಲ್ಲಿ ಮುಂಬಯಿ ವಿಶ್ವವಿದ್ಯಾನಿಲಯ ಸ್ಥಾಪಿತವಾಯಿತು. 1881ರಲ್ಲಿ 'ಕೇಸರಿ' ವೃತ್ತಪತ್ರಿಕೆ ಪ್ರಾರಂಭವಾಯಿತು —ಹೀಗೆ ಆಧುನಿಕ ಮರಾಠೀ ಸಾಹಿತ್ಯ ನಿರ್ಮಾಣಕ್ಕೆ ಬೇಕಾದ ಹಿನ್ನೆಲೆಗಳು ಸೃಷ್ಟಿಯಾದುವು.

ಆಧುನಿಕ ಮರಾಠೀ ಸಾಹಿತ್ಯದ ಪ್ರಥಮ ಪ್ರಮುಖ ಕವಿ ಕೇಶವಸುತರು. ಆಧುನಿಕ ಕಾಲದ ಕಾವ್ಯದ ಪ್ರಮುಖ ಲಕ್ಷಣವಾದ ವ್ಯಕ್ತಿನಿಷ್ಠತೆಯನ್ನು ಕಾವ್ಯದಲ್ಲಿ ಮೊದಲು ತಂದವರು ಇವರೇ. ಇವರ ಅನೇಕ ಕವನಗಳಲ್ಲಿ ರಮ್ಯ ಭಾವನೆಗಿಂತ ಸಾಮಾಜಿಕ ಸಮಸ್ಯೆಗಳೇ ಪ್ರಧಾನವಾಗಿವೆ. "ನನ್ನ ಭೂತಕ್ಕೆ ಶಾಂತಿಯಿಲ್ಲ; ಮೃತ ಆಶೆಗಳ ಚಿತೆಯ ಮೇಲೆ ಅದು ಅಲೆದಾಡುತ್ತಿದೆ...." ಎಂದ ಅವರು, ಬದುಕನ್ನು ಆಳವಾಗಿ ಗಂಭೀರವಾಗಿ ಕಂಡ ಕವಿ.

ಕೇಶವಸುತರ ಸಮಕಾಲೀನ ಕವಿಗಳಲ್ಲಿ ವಿನಾಯಕ, ನಾರಾಯಣ ವಾಮನ ತಿಲಕ್ ಪ್ರಮುಖರು. ವಿನಾಯಕರ ಕಾವ್ಯದ ವಸ್ತು ಇತಿಹಾಸ ಮಹಿಮೆ. ಸೌಂದರ್ಯೋಪಾಸನೆ ತಿಲಕರ ಕಾವ್ಯವಸ್ತು. ಪ್ರಕೃತಿಯ ಬಗೆಗೆ 'ಬಾಲಕವಿ' ಉತ್ತಮ ಕೃತಿಗಳನ್ನು ರಚಿಸಿದರು. ರಮ್ಯಕವಿಗಳಲ್ಲಿ 'ಗೋವಿಂದಾಗ್ರಜ' (ಶ್ರೀರಾಮ ಗಣೇಶ ಗಡಕರಿ) ಪ್ರಮುಖರು. ಇವರ

'ಮುರಲಿ' ಅತ್ಯಂತ ಗಮನಾರ್ಹ ಕವನ. ಮರ್ಢೇಕರ್, ತಾಂಬೇ, ಮಾಧವ ಜೂಲಿಯನ್, ಯಶವಂತ, ಬೋರ್‌ಕರ್ ಮೊದಲಾದವರು ಅನಂತರದ ಪ್ರಮುಖ ಕವಿಗಳು. ಮರ್ಢೇಕರರು ನವ್ಯಕಾವ್ಯ ಪ್ರವರ್ತಕರೆಂದೂ ಖ್ಯಾತರಾಗಿದ್ದಾರೆ. ನವ್ಯಕಾವ್ಯದ ಮೇಲೆ ಸಾಮಾನ್ಯವಾಗಿರುವ ಅಶ್ಲೀಲತೆಯ ಅಪಾದನೆ ಇವರ ಮೇಲೂ ತೀವ್ರವಾಗಿತ್ತು. ಭಾವೆ. ರೇಗೆ. ಶರಚ್ಚಂದ್ರ. ಕರಂದೀಕರ್, ಇಂದಿರಾ ಸಂತಾ, ಪದ್ಮಾ ಮೊದಲಾದವರು ನವ್ಯಕಾವ್ಯದ ಪ್ರತಿನಿಧಿಗಳು.

ಮರಾಠೀ ಕಾದಂಬರಿಗೆ ಒಂದು ಶತಮಾನಕ್ಕೂ ಹಿಂದಿನ ಇತಿಹಾಸವಿದೆ. ಬಾಬಾ ಪದಮನಜೀ ಅವರ 'ಯಮುನಾ ಪರ್ಯಟನ' (1857) ಮೊದಲ ಕಾದಂಬರಿ. ಹರಿನಾರಾಯಣ ಆಪ್ಟೆ ಅತ್ಯಂತ ಗಮನಾರ್ಹ ಮರಾಠೀ ಕಾದಂಬರಿಕಾರ ('ಯಾರು ಲಕ್ಷ್ಯಸುವರು ?'). ಸಾಮಾಜಿಕ ಐತಿಹಾಸಿಕ ಕಾದಂಬರಿಗಳನ್ನು ಬರೆದು, ತಮ್ಮ ಕೃತಿಗಳ ಮೂಲಕ ಕಾದಂಬರಿಗಳನ್ನು ಕಲಾತ್ಮಕ ಪ್ರಕಾರವನ್ನಾಗಿ ಮಾಡಿದ ಖ್ಯಾತಿ ಇವರದು. ಫಡಕೆ. ವಿ.ಎಸ್ ಖಾಂಡೇಕರ್ ('ಯಯಾತಿ'), ನಾ. ಪೇಂಡ್ಸೆ ('ರಥ ಚಕ್ರ'), ರಣಜಿತ್ ದೇಸಾಯಿ ('ಸ್ವಾಮಿ'), ವಸಂತ ಕಾನೇಟಕರ್ ಮೊದಲಾದವರು ಆಧುನಿಕ ಕಾದಂಬರಿಕಾರರಲ್ಲಿ ಪ್ರಮುಖರು.

ಮರಾಠೀ ನಾಟಕದ ಪಿತಾಮಹ ವಿಷ್ಣುದಾಸ್ ಭಾವೆ. ಈ ಕೀರ್ತಿಗೆ ಅಣ್ಣಾ ಸಾಹೇಬ ಕಿರ್ಲೋಸ್ಕರ್ ('ಶಾಕುಂತಲ' ಇತ್ಯಾದಿ) ಸಹ ಪಾಲುದಾರರಾಗಿದ್ದಾರೆ. ಕೃಷ್ಣಾಜಿ ಪ್ರಭಾಕರ ಖಾಡಿಲಕರ್ ಸಂಗೀತ ನಾಟಕಗಳನ್ನೂ ಐತಿಹಾಸಿಕ, ಪೌರಾಣಿಕ ನಾಟಕಗಳನ್ನೂ ರಚಿಸಿ ಖ್ಯಾತರಾದವರು. ಶ್ರೀರಾಮ ಗಣೇಶ ಗಡಕರಿ ಸಾಮಾಜಿಕ ಸಮಸ್ಯೆಗಳನ್ನು ಎತ್ತಿ ತೋರಿಸಿದರು; ಕೇಶವ ಅತ್ರೆ ವಿಡಂಬನೆಯ ಆಯುಧ ಹಿಡಿದರು. ರಾಂಗಣೇಕರ್ ಅತ್ಯಂತ ಜನಪ್ರಿಯ ನಾಟಕಗಳ ಕರ್ತೃ. ಪು.ಲ ದೇಶಪಾಂಡೆ ಆಧುನಿಕ ನಾಟಕಕಾರರಲ್ಲಿ ಪ್ರಮುಖರು. ನವ್ಯ ಸಣ್ಣಕಥೆಗಾರರಲ್ಲಿ ಗಂಗಾಧರ ಗಾಡಗೀಳ, ಅರವಿಂದ ಗೋಖಲೆ, ಜಿ.ಎ. ಕುಲಕರ್ಣಿ, ಕಮಲಾ ದೇಸಾಯಿ, ವಿಜಯಾ ಆಪ್ಟೆ ಮುಖ್ಯರು.

ವೈಚಾರಿಕ ಸಾಹಿತ್ಯದಲ್ಲಿ ತರ್ಕತೀರ್ಥ ಲಕ್ಷ್ಮಣ ಶಾಸ್ತ್ರಿ ಜೋಶಿ. ಬಿ.ಎಸ್. ಮರ್ಢೇಕರ್, ಜಿ. ಟಿ. ದೇಶಪಾಂಡೆ, ಪಿ. ವೈ. ದೇಶಪಾಂಡೆ, ಎನ್. ಜಿ. ಕಾಲೇಕರ್, ದುರ್ಗಾ ಭಾಗವತ್, ಇರಾವತಿ ಕರ್ವೆ, ಟಿ. ಎಸ್. ಶೆಜ್ವಾಲ್ಕರ್, ಮೊದಲಾದವರು ಖ್ಯಾತರು. ಮರಾಠೀ ಸಾಹಿತ್ಯದಲ್ಲಿ ಆತ್ಮಕಥೆಗಳಿಗೆ ಪ್ರಮುಖ ಸ್ಥಾನವಿದೆ. ಚಿಂತಾಮಣಿರಾವ್ ಕೊಲ್ಹಾಟ್ಕರ್, ಗೋದಾವರಿ ಪರುಲೇಕರ್ ಕೇಂದ್ರ ಅಕಾದೆಮಿ ಪ್ರಶಸ್ತಿ ವಿಜೇತ ಆತ್ಮಕಥನಕಾರರು. ಡಿ. ಎನ್. ಗೋಖಲೆ. ಪು. ಲ. ದೇಶಪಾಂಡೆ. ಎಸ್. ಎನ್. ಬನಹಟ್ಟಿ, ಎನ್. ಆರ್. ಪಾಠಕ್ ಖ್ಯಾತ ಜೀವನ ಚರಿತ್ರೆಕಾರರು.

ಇಂದು ಮರಾಠೀ ಸಾಹಿತ್ಯ ಸರ್ವತೋಮುಖವಾಗಿ, ಸಮೃದ್ಧವಾಗಿ ಬೆಳೆಯುತ್ತಿದೆ. ಅನೇಕ ಮರಾಠೀ ಲೇಖಕರು ರಾಷ್ಟ್ರೀಯ ಮಟ್ಟದ ಮಾನ್ಯತೆ ಗಳಿಸಿದ್ದಾರೆ.

ನೋಡಿ : ಹರಿನಾಯಣ ಆಪ್ಟೆ–ಸಂಪುಟ ೫

ಮಲಯಾಳಂ ಭಾಷೆ, ಸಾಹಿತ್ಯ

ಭಾರತದ ಸಂವಿಧಾನದಲ್ಲಿ ಪಟ್ಟಿ ಮಾಡಲ್ಪಟ್ಟಿರುವ ನಾಲ್ಕು ದ್ರಾವಿಡ ಭಾಷೆಗಳಲ್ಲಿ ಮಲಯಾಳಂ ಒಂದು. ಕೇರಳ ರಾಜ್ಯದ ಪ್ರಾದೇಶಿಕ ಭಾಷೆಯಾದ ಇದನ್ನು 2 ಕೋಟಿಗೂ ಹೆಚ್ಚು ಮಂದಿ ಮಾತನಾಡುತ್ತಾರೆ. ವ್ಯಾಕರಣ ಮತ್ತು ಶಬ್ದ ಸಂಪತ್ತಿಯಲ್ಲಿ ಮಲಯಾಳಂ, ತಮಿಳು ಭಾ ತೀರ ಹತ್ತಿರವಾದದ್ದು. ಕೆಲವು ಕ್ರಿಯಾಪದಾಂತಗಳಲ್ಲಿ ಮಾತ್ರ ವ್ಯ ವಿದೆ. ಈ ಭಾಷೆಯಲ್ಲಿ ಸಂಸ್ಕೃತಜನ್ಯವಾದ ಅನೇಕ ಪದಗಳು ಕೊಂಡಿವೆ. ಆದ್ದರಿಂದ ಮಲಯಾಳಂ ಭಾಷಾ ಉಚ್ಚಾರಣೆಯಲ್ಲಿ ಎರಡೂ ಭಾಷೆಗಳ ಪ್ರಭಾವವಿದೆ. ತಮಿಳಂ 'ಗ್ರಂಥ' ಲಿಪಿ ಜನ್ಯವಾದ ವಿಶಿಷ್ಟ ಲಿಪಿಯೊಂದನ್ನು ಮಲಯಾಳಂ ಭಾಷೆಯಲ್ಲಿ ಬ ತ್ತಾರೆ. ಪಶ್ಚಿಮ ಕರಾವಳಿಯ ತುಳು ಮತ್ತು ಮಲಯಾಳಂ ಭ ಗಳೆರಡನ್ನೂ ಆಧರಿಸಿದ ಕಾರಣ ಇದು ತುಳು–ಮಲಯಾಳಂ ಲಿಪಿ.

ಮಲಯಾಳಂ ಭಾಷೆಯ ಅತಿ ಪ್ರಾಚೀನ ರೂಪದಲ್ಲೇ ಎರಡು ವಿ ಸಾಹಿತ್ಯಕ ಹಾಗೂ ಭಾಷಾ ಸಂಪ್ರದಾಯಗಳನ್ನು ಗುರುತಿಸಬಹು ತಮಿಳಿಗೆ ಹತ್ತಿರವಾಗಿದ್ದ ಸಂಪ್ರದಾಯದಲ್ಲಿ 'ಪಾಟ್ಟು' ಎಂದು ಕ ಲಾದ ಲಯದಲ್ಲಿ ದೇಶೀಯ ಛಂದಸ್ಸನ್ನು ಬಳಸಲಾಗುತ್ತಿತ್ತು. ಸಂಪ್ರದಾಯದ ನುಡಿಕಟ್ಟಿಗೆ 'ಭಾಷಾ' ಅಥವಾ 'ತಮಿೞ್' ಎಂದು ಹೆ ಇದರಲ್ಲಿ ದ್ರಾವಿಡ ಪದಗಳೇ ಹೆಚ್ಚು; ಸಂಸ್ಕೃತದ ತದ್ಭವ ರೂ ಪದಗಳು ವಿರಳ.

ಇನ್ನೊಂದು ಶೈಲಿಗೆ ಮಣಿಪ್ರವಾಳಂ ಎಂದು ಹೆಸರು. ಇ ತತ್ಸಮ ರೂಪದ ಸಂಸ್ಕೃತ ಪದಗಳ ಬಳಕೆ ಹೆಚ್ಚು. ಛಂದಸ್ಸು ಸಂಸ್ಕೃತದ್ದೇ. ಕ್ರಿ.ಶ. 9ನೆಯ ಶತಮಾನಕ್ಕೂ ಮೊದಲೇ ಮಣಿಪ್ರವಾಳ ರೂಢಿಯಲ್ಲಿದ್ದು ಸಾಹಿತ್ಯದಲ್ಲಿ ಮಾತ್ರವಲ್ಲದೆ ಶಾಸನಗಳಲ್ಲೂ ಈ ಶೈ ಪ್ರಭಾವವನ್ನು ಕಾಣಬಹುದು. ಕಾಲಕ್ರಮೇಣ ಈ ಎರಡು ಸಾ ಶೈಲಿಗಳಿಗೂ 'ಮಲಯಾಯ್ಮ' ಎಂದೇ ಹೆಸರು ಬಂತು. ಮೊ ಮಲಯಾಳಂ ಎಂಬ ಹೆಸರು ಮಲಬಾರ್ ಜಿಲ್ಲೆಯ ಭೌಗೋ ಪ್ರದೇಶಕ್ಕೆ ಅಂಕಿತವಾಗಿದ್ದುದು 19ನೆಯ ಶತಮಾನದಿಂದೀಚೆ ಭಾಷೆಯ ಹೆಸರಾಗಿ ಬಳಸಲ್ಪಟ್ಟಿತು.

ಮಲಯಾಳದ ಮೊತ್ತಮೊದಲ ಶಾಸನಕ್ಕೆ ವಾಜಪಳ್ಳಿ ಶಾಸನವೆ ಹೆಸರು. ಇದರ ಕಾಲ ಸುಮಾರು ಕ್ರಿ. ಶ. 830. ಆದರೆ ಮಣಿಪ್ರ ಶೈಲಿಯ ಅತ್ಯಂತ ಪ್ರಾಚೀನ ಕೃತಿ ಎನ್ನಲಾದ 'ವೈಶಿಕಾತಂತ್ರಂ'ನ 12 ಅಥವಾ 13ನೆಯ ಶತಮಾನದ ಆದಿ ಭಾಗ. ವೇಶ್ಯೆಯರ ಕು ಈ ಪ್ರಬಂಧದಲ್ಲಿ ವಿವರಿಸಲ್ಪಟ್ಟಿದೆ. ಪಾಟ್ಟು ಶೈಲಿಯಲ್ಲಿ ರಚಿತ ಮೊತ್ತಮೊದಲ ಕಾವ್ಯ 'ರಾಮಚರಿತಂ'. ಇದರ ಕಾಲ ಸುಮಾರು 13 ಶತಮಾನ. ಕೌಟಿಲ್ಯನ 'ಅರ್ಥಶಾಸ್ತ್ರ'ದ ವ್ಯಾಖ್ಯಾನವೊಂದು ಇದೇ ಕಾಲ ರಚಿತವಾಗಿದ್ದು. ಅದು ಮಲಯಾಳಂನ ಮೊತ್ತಮೊದಲ ಗದ್ಯ ಎನ್ನಲಾಗಿದೆ. ಈ ಕೃತಿಯ ಶೈಲಿ ಮಣಿಪ್ರವಾಳ. ದೇವಾಲಯ ಸಂಸ್ಕೃತ ನಾಟಕಗಳನ್ನು ಆಡುವ ವಿಧಾನ ಹಾಗೂ ನಟರಿಗೆ ನಿಯ ಗಳನ್ನು ಸೂಚಿಸುವ 'ಆಟ್ಟ ಪ್ರಕಾರಮ್' ಸಹ ಮಣಿಪ್ರವಾಳದಲ್ಲೇ ರ ವಾಗಿದೆ. ಕೂಟಿಯಾಟ್ಟಂ ಎಂಬ ಹೆಸರಿನ ಈ ದೇವಾಲಯ ನಾಟಕ ಪೌರಾಣಿಕ ಉಪನ್ಯಾಸಗಳಿಗೆ ಮೂಲವಾದುವು. ಇವುಗಳಿಂದ ಪ್ರ ಅಥವಾ ಚಂಪೂಸಾಹಿತ್ಯ ಉಗಮವಾಯಿತೆಂದು ನಂಬಿಕೆ. ಚಂಪೂಸಾ ಮಣಿಪ್ರವಾಳದ ಶೈಲಿಗೆ ಸ್ಪಷ್ಟ ನಿದರ್ಶನ ಎನ್ನಲಾಗಿದೆ.

ಮಧ್ಯಯುಗ: 16ನೆಯ ಶತಮಾನದ ಪೂರ್ವಾರ್ಧದಲ್ಲಿ ಮಾ ಪಣಿಕ್ಕರ್ ಅವರ ಭಗವದ್ಗೀತ ಹಾಗೂ ರಾಮ ಪಣಿಕ್ಕರ್ ಅ ರಾಮಾಯಣಂ, ಭಾರತಂ ಮತ್ತು ಭಾಗವತಂಗಳಲ್ಲಿ ಪಾಟ್ಟು ಸಂಪ್ರದಾ ಸಂಪೂರ್ಣ ಬೆಳವಣಿಗೆಯನ್ನು ಕಾಣಬಹುದು. 16ನೆಯ ಶತಮಾ

ತುಂಚತು ರಾಮಾನುಜನ್ ಎಳುತ್ತಚ್ಛನ್ ಅವರ ರಾಮಾಯಣಂ, ಭಾರತಂ ಮತ್ತು ಭಾಗವತಂ ಕೃತಿಗಳಲ್ಲಿ ಪಾಟ್ಟು ಮತ್ತು ಮಣಿಪ್ರವಾಳ ಶೈಲಿಗಳೆರಡೂ ಸುಂದರ ರೀತಿಯಲ್ಲಿ ಸಂಗಮಗೊಂಡುವು. ಈ ಶೈಲಿಯೇ ಮುಂದೆ ಎಲ್ಲ ಕೃತಿಗಳ ಭಾಷಾಸ್ವರೂಪಕ್ಕೆ ಮಾರ್ಗದರ್ಶಕವಾಯಿತು.

ಇಂದಿಗೂ ಈ ಕೃತಿಗಳು ಪ್ರತಿಯೊಬ್ಬ ಹಿಂದುವಿನ ಮನೆಯಲ್ಲೂ ಪ್ರತಿದಿನ ಪಠಿಸಲ್ಪಡುತ್ತವೆ. ಆದ್ದರಿಂದಲೇ, ಎಳುತ್ತಚ್ಛನ್ ಮಲಯಾಳಂ ಸಾಹಿತ್ಯದ ಪಿತಾಮಹನೆಂದು ಪ್ರಖ್ಯಾತನಾಗಿರುವುದರಲ್ಲಿ ಆಶ್ಚರ್ಯವಿಲ್ಲ.

ಎಳುತ್ತಚ್ಛನ್‌ನನ್ನು ಅನುಕರಿಸಿದ ಅನೇಕ ಮಂದಿ ಇದೇ ಪೌರಾಣಿಕ ಸಾಹಿತ್ಯವನ್ನು ದೇಶೀಯ ಛಂದಸ್ಸಿನಲ್ಲಿ, ಸಂಸ್ಕೃತದಿಂದ ಮಲಯಾಳಕ್ಕೆ ಭಾಷಾಂತರಿಸಿದರು. ಈ ವೇಳೆಗೆ ಕಥಕಳಿ ಎಂಬ ನೃತ್ಯರೂಪಕ ಅತ್ಯಂತ ಜನಪ್ರಿಯವಾಯಿತು; ಇವುಗಳಿಗಾಗಿ 'ಆಟ್ಟಕಥ' ಸಾಹಿತ್ಯ ಸೃಷ್ಟಿಯಾಯಿತು. ಇವುಗಳ ಸಾಹಿತ್ಯಕ ಮೌಲ್ಯದ ಬಗ್ಗೆ ಭಿನ್ನಾಭಿಪ್ರಾಯಗಳಿದ್ದರೂ ಉಣ್ಣಾಯಿ ವಾರಿಯರ್ ಅವರ 'ನಳಚರಿತಂ' ನಂಥ ಕೃತಿಗಳು ಕಾವ್ಯದ ಮಟ್ಟಕ್ಕೇರಿವೆ. ತುಳ್ಳಲ್ ಎಂಬ ಇನ್ನೊಂದು ಪ್ರದರ್ಶಕ ಕಲೆಯೂ ಅನೇಕ ಕಾವ್ಯ ರಚನೆಗಳಿಗೆ ಅವಕಾಶ ಮಾಡಿಕೊಟ್ಟಿತು. ಇಂಥ ರಚನೆಗಳಲ್ಲಿ ಚತುರತೆ, ಬುದ್ಧಿವಂತಿಕೆ. ಸಾಮಾಜಿಕ ವಿಡಂಬನೆಗೆ ಖ್ಯಾತನಾದ ಕವಿ ಕುಂಚನ್ ನಂಪ್ಯಾರ್ (18ನೆಯ ಶತಮಾನದ ಮಧ್ಯಭಾಗ) ಅವರ ಕೃತಿಗಳು ಅತ್ಯಂತ ಗಮನಾರ್ಹವಾದವು.

ಆಧುನಿಕ ಯುಗ: ತುಂಚತು, ಎಳುತ್ತಚ್ಛನ್ ತಾಳೆಗರಿಗಳ ಮೇಲೆ ಕಬ್ಬಿಣದ ಕಂಠಗಳಿಂದ ಕಾವ್ಯಗಳನ್ನು ರಚಿಸುತ್ತಿದ್ದ ಕಾಲದಲ್ಲೆ ಕೊಚ್ಚಿಯಲ್ಲಿ ಕ್ರೈಸ್ತ ಪಾದ್ರಿಗಳು ಮುದ್ರಣಾಲಯಗಳನ್ನು ಸ್ಥಾಪಿಸುತ್ತಿದ್ದರು. ಆದರೆ ಮೊತ್ತಮೊದಲ ಮಲಯಾಳಂ ಕೃತಿ ಮುದ್ರಣವಾದದ್ದು ರೋಮಿನಲ್ಲಿ, 1772ರಲ್ಲಿ. ಇದು ಬೈಬಲ್ಲಿನ ಕಿರುಹೊತ್ತಗೆ. 1817ರಲ್ಲಿ ತಿರುವಾಂಕೂರಿನ ರಾಜ ಮನೆತನದ ಆಡಳಿತ, ಸಾರ್ವಜನಿಕ ವೆಚ್ಚದಲ್ಲಿ ಶಿಕ್ಷಣ ವ್ಯವಸ್ಥೆಯನ್ನು ಪ್ರಾರಂಭಿಸಿತು. ಮರುವರ್ಷ ಕೊಚ್ಚಿಯಲ್ಲೂ ಈ ವ್ಯವಸ್ಥೆ ಪ್ರಾರಂಭವಾಯಿತು. ಆಧುನಿಕ ಶಿಕ್ಷಣದಿಂದ ಸುಶಿಕ್ಷಿತರಿಗೆ ಐರೋಪ್ಯ ಸಾಹಿತ್ಯದ ಪರಿಚಯವಾಯಿತು. ಇದರಿಂದ ಮಲಯಾಳಂ ಸಾಹಿತ್ಯದ ಸ್ವರೂಪವೂ ಬದಲಾಗುವ ಪರಿಸ್ಥಿತಿಯುಂಟಾಯಿತು. ಹಳೆಯ ಸಂಪ್ರದಾಯವನ್ನೆ ಮುಂದುವರೆಸಿದ ಕೊಟ್ಟುಂಗಲ್ಲೂರ್‌ನ ರಾಜಕವಿಗಳು ಹಾಗೂ ಅವರ ಆಸ್ಥಾನ ಕವಿಗಳು ಕಾವ್ಯದ ಭಾಷೆಯನ್ನು ಜನರ ಆಡುಭಾಷೆಯ ಹತ್ತಿರ ತಂದು, ಗದ್ಯದ ರೂಪಕೊಟ್ಟು ಆಧುನೀಕರಿಸಿದರು. ತಿರುವಾಂಕೂರಿನ ರಾಜಕವಿ ಕೇರಳವರ್ಮನು ಪಾಶ್ಚಾತ್ಯ ಸಾಹಿತ್ಯದ ಚಿಂತನೆ, ಶೈಲಿಗಳನ್ನು ಉಪಯೋಗಕ್ಕೆ ತಂದು ಮಲಯಾಳಂ ಸಾಹಿತ್ಯದ ಅಡಿಪಾಯವನ್ನು ವಿಸ್ತರಿಸಿದ. ಹೊಸದಾಗಿ ಪ್ರಾರಂಭವಾಗಿದ್ದ ಶಾಲಾ–ಕಾಲೇಜುಗಳ ಪಠ್ಯ ಪುಸ್ತಕಗಳ ಬೇಡಿಕೆಯನ್ನು ಈಡೇರಿಸುವುದೇ ಇವರ ಉದ್ದೇಶವಾಗಿತ್ತು. 1881ರಲ್ಲಿ ಮಲಯಾಳಂನ ಮೊದಲ ಕಾದಂಬರಿ 'ಇಂದುಲೇಖ' ವನ್ನು ಚಂತು ಮೆನನ್ ಬರೆದರು. 1891ರಲ್ಲಿ 'ಮಾರ್ತಾಂಡವರ್ಮ' ಎಂಬ ಐತಿಹಾಸಿಕ ಕಥನವನ್ನು ಸಿ. ವಿ. ರಾಮನ್ ಪಿಳ್ಳ ರಚಿಸಿದರು. ಇವಾದ ನಂತರ ಕಾದಂಬರಿಗಳು ಬೃಹತ್ ಸಂಖ್ಯೆಯಲ್ಲಿ ಬರಲಾರಂಭಿಸಿದುವು. ಪತ್ರಿಕೋದ್ಯಮವೂ ಜನಪ್ರಿಯವಾಗತೊಡಗಿತು. ಪ್ರಥಮ ಮಲಯಾಳಂ ನಿಘಂಟಿನ ರಚನಕಾರರಾದ ಕ್ರೈಸ್ತ ಪಾದ್ರಿ ಹರ್ಮನ್ ಗುಂಡರ್ಟ್ ಅವರು 1847ರಲ್ಲಿ 'ಪಶ್ಚಿಮೋದಯಂ' ಎಂಬ ನಿಯತಕಾಲಿಕವನ್ನು ಸಂಪಾದಿಸಿದರು.

ಮಲಯಾಳಂ ಸಾಹಿತ್ಯದಲ್ಲಿ ರೊಮ್ಯಾಂಟಿಕ್ ಸಂಪ್ರದಾಯವನ್ನು ಆರಂಭಿಸಿದ ಕವಿಗಳು ಕುಮಾರನ್ ಆಶಾನ್, ವಳ್ಳತ್ತೋಳ್ ನಾರಾಯಣ ಮೆನನ್ ಮತ್ತು ಉಳ್ಳೂರ್ ಪರಮೇಶ್ವರಯ್ಯರ್. 1973ರಲ್ಲಿ ಕುಮಾರನ್ ಆಶಾನರ ಶತಮಾನೋತ್ಸವವನ್ನು ಭಾರತಾದ್ಯಂತ ಆಚರಿಸಲಾಯಿತು. ವಳ್ಳತ್ತೋಳರ ಕೃತಿಗಳಲ್ಲಿ ಕೇರಳದ ರಾಷ್ಟ್ರೀಯ ಆಕಾಂಕ್ಷೆಗಳು ಕಲಾತ್ಮಕ ಅಭಿವ್ಯಕ್ತಿ ಪಡೆದುವು. ಉಳ್ಳೂರರು ಮಲಯಾಳಂ ಸಾಹಿತ್ಯ ಇತಿಹಾಸದ ಬಗ್ಗೆ ಸೊಗಸಾದ ಕೃತಿಯನ್ನು ರಚಿಸಿದರು. ತೀರ ಚಿಕ್ಕವಯಸ್ಸಿನಲ್ಲೆ (1948ರಲ್ಲಿ) ನಿಧನರಾದ ಚಂಗಂಪುಳ ಹಾಗೂ 1965ರಲ್ಲಿ ಜ್ಞಾನಪೀಠ ಪ್ರಥಮ ಪ್ರಶಸ್ತಿ ಪಡೆದ ಜಿ. ಶಂಕರ ಕುರುಪ್ ಅವರು ಈ ಸಂಪ್ರದಾಯದ ಗಮನಾರ್ಹ ಕವಿಗಳು. ಕಳೆದ ನಾಲ್ಕು ದಶಕಗಳಲ್ಲಿ ಮಲಯಾಳಂ ಸಾಹಿತ್ಯದಲ್ಲಿ ಸಣ್ಣ ಕಥೆ, ನಾಟಕ, ಪ್ರವಾಸಕಥನ ವಿಮರ್ಶೆ ಪ್ರಕಾರಗಳು ಸಾಕಷ್ಟು ಬೆಳೆದಿವೆ. 4ನೆಯ ದಶಕದಲ್ಲಿ ರಾಜಕೀಯ ಪ್ರಜ್ಞೆ ಎಚ್ಚರಗೊಂಡು ಪ್ರಗತಿಶೀಲ ಸಾಹಿತ್ಯದ ರೂಪದಲ್ಲಿ ಹೊರಹೊಮ್ಮಿತು. ಹಳೆಯ ಸಂಪ್ರದಾಯದ ಮೌಲ್ಯಗಳನ್ನು ಪ್ರಗತಿಶೀಲರು ತಿರಸ್ಕರಿಸಿದುದು ಮಾತ್ರವಲ್ಲದೆ ಹೊಸ, ಕ್ರಾಂತಿಕಾರಿ, ದಲಿತವರ್ಗಕ್ಕೆ ಹತ್ತಿರವಾದ ಕೃತಿಗಳನ್ನು ರಚಿಸಿದರು. ಕೇಶವ ದೇವರ 'ಓಟಯಿಲ್ ನಿನ್ನು' ಕೃತಿಯಲ್ಲಿ ರಿಕ್ಷಾ ಎಳೆಯುವವನ ಜೀವನ ಚಿತ್ರಿತವಾಗಿದೆ. ಬಷೀರ್ ಅವರ 'ಬಾಲ್ಯ ಕಾಲ ಸಖಿ' ಕಾದಂಬರಿಯ ಮೂಲಕ ಹಿಂದುಳಿದ ಮುಸಲ್ಮಾನ ವರ್ಗದ ಜನಜೀವನದ ಚಿತ್ರಣ ಸಾಹಿತ್ಯವನ್ನು ಪ್ರವೇಶಿಸಿತು. ಕುಟ್ಟನಾಡ್ ಬತ್ತದ ಗದ್ದೆಗಳ ಪುಲಯರ ಜನಜೀವನ ತಕಳಿ ಶಿವಶಂಕರ ಪಿಳ್ಳೈ ಅವರ 'ರಂಟಿಟಂಗಳಿ'ಯಲ್ಲಿ ವರ್ಣಿಸಲ್ಪಟ್ಟಿದೆ. ತಮ್ಮ ರಾಜಕೀಯ ಕೃತಿ 'ಪಾಟ್ಟಬಾಕ್ಕಿ' ನಾಟಕದ ಮೂಲಕ ವರ್ಗಘರ್ಷಣೆಯನ್ನು ಕೆ. ದಾಮೋದರನ್ ರಂಗದಮೇಲೆ ತಂದರು. ಜನಪ್ರಿಯತೆ ಪಡೆದ ಈ ಕೃತಿಗಳಿಗೆ ಎಂ. ಪಿ. ಪಾಲ್, ಪ್ರೊ. ಮುಂಡಶ್ಶೆರಿ, ಕುಟ್ಟಿಕೃಷ್ಣ ಮಾರಾರ್ ಜ಼ ಕೃಷ್ಣಪಿಳ್ಳೆಯಂಥ ವಿಮರ್ಶಕರ ಬೆಂಬಲ ಸಿಕ್ಕಿತು.

ಸ್ವಾತಂತ್ರ್ಯೋತ್ತರ ಕಾಲ: ಸ್ವಾತಂತ್ರ್ಯ ಬರುತ್ತಿದ್ದಂತೆ ಪ್ರಗತಿಶೀಲ ಸಂಪ್ರದಾಯ ತನ್ನ ಕಾವನ್ನು ಕಳೆದುಕೊಳ್ಳಲಾರಂಭಿಸಿತು. ವಿಶಾಲವಾದ ಜೀವನಾನುಭವದ ಆಧಾರದ ಮೇಲೆ ರಚಿತವಾದ ಪಿ. ಸಿ. ಕುಟ್ಟಿಕೃಷ್ಣನ್ ಅವರ ಕಾದಂಬರಿಗಳು, ಮಾನವನ ಮಾನಸಿಕ ಸಂಘರ್ಷಣೆಗಳನ್ನು ತೀವ್ರವಾಗಿ ಚಿತ್ರಿಸುವ ವಾಸುದೇವನ್ ನಾಯರ್ ಅವರ ಸಣ್ಣ ಕಥೆಗಳು ಈ ಕಾಲದ ಕೃತಿಗಳು. ಆಧುನಿಕವೆಂದು ಕರೆಯಲಾದ ಸಂಪ್ರದಾಯ ಪ್ರಾರಂಭವಾದದ್ದೇ ಏಳನೆಯ ದಶಕದ ಉತ್ತರಾರ್ಧದಲ್ಲಿ. ಛಂದಸ್ಸು ವಿರೋಧ, ಭಗ್ನ ಪ್ರತಿಮೆಗಳ ಮೂಲಕ ಆಧುನಿಕತೆ ಕಾವ್ಯದಲ್ಲಿ ಕಾಲಿರಿಸಿತು. ಆದರೂ ಕಾವ್ಯದ ಮೇಲೆ ಆಧುನಿಕತೆಯ ಪ್ರಭಾವ ಆಳವಾಗಿರಲಿಲ್ಲ. ಕಾದಂಬರಿ ಸಣ್ಣಕಥೆಗಳ ಮೇಲೆ ಆಧುನಿಕತೆಯ ಪ್ರಭಾವ ಗಮನಾರ್ಹವಾದುದು. "ಖಸಾಕ್ಕಿಂಟೆ ಇತಿಹಾಸಂ" ಕಾದಂಬರಿ ಆಧುನಿಕ ಕೃತಿಗಳಲ್ಲಿ ಪ್ರಮುಖವಾದುದು. ಆಧುನಿಕತೆಯ ಪ್ರಭಾವದಿಂದಾಗಿ ಜನಪ್ರಿಯ ನಾಟಕರಂಗ ದುರ್ಬಲವಾಯಿತು.

ಎಂಟನೆಯ ದಶಕದ ಗಮನಾರ್ಹ ಸಾಹಿತ್ಯ ಬೆಳವಣಿಗೆ ವಿಜ್ಞಾನ ಸಾಹಿತ್ಯ. ಮಲಯಾಳಂ ಭಾಷೆಯನ್ನು ಆಡಳಿತದಲ್ಲಿ ಹೆಚ್ಚು ಬಳಸಲು ಪ್ರಾರಂಭಿಸಿದಂತೆ ಭಾಷೆ ಕಾಲ್ಪನಿಕತೆಯಿಂದ ನೇರ ಶೈಲಿಯ ಕಡೆಗೆ ತಿರುಗಿತು. ಈ ತಿರುವು ಭಾಷೆಯ ಬೆಳವಣಿಗೆಯ ಮೇಲೆಯೇ ಪ್ರಭಾವ ಬೀರುವುದು ಖಂಡಿತ.



ಮಹಾತ್ಮನ ಕಾರ್ಯದರ್ಶಿ

ಮಹದೇವ ದೇಸಾಯಿ

ಗಾಂಧೀಜಿಯ ಕಾರ್ಯದರ್ಶಿಯಾಗಿದ್ದವರು ಮಹದೇವ ದೇಸಾಯಿ. ಇವರು ಭಾರತದ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿ ಅನೇಕ ಬಾರಿ ಸೆರೆಮನೆವಾಸ ಅನುಭವಿಸಿದರು.

ಗುಜರಾತಿನ ಸೂರತ್ ಜಿಲ್ಲೆಯಲ್ಲಿ 1892ರಲ್ಲಿ ಜನನ. ಅಸಹಕಾರ ಚಳುವಳಿಯಲ್ಲಿ ಇವರು ಮುಖ್ಯ ಪಾತ್ರ ವಹಿಸಿದರು. ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಅಹಿಂಸೆಗೆ ಮಹತ್ವ ಕೊಟ್ಟು ಆದರಂತೆ ನಡೆದರು. 'ಭಾರತ ಬಿಟ್ಟು ತೊಲಗಿರಿ' ಚಳುವಳಿಯಲ್ಲಿ ಆಸಕ್ತಿಯಿಂದ ದುಡಿದರು. 1942ರಲ್ಲಿ ಗಾಂಧೀಜಿಯೊಂದಿಗೆ ದೇಸಾಯಿಯರನ್ನೂ ಪುಣೆಯ ಆಗಾ ಖಾನ್ ಅರಮನೆಯಲ್ಲಿ ಬಂಧನದಲ್ಲಿರಿಸಲಾಯಿತು. ಬಂಧನದಲ್ಲಿದ್ದಾಗಲೇ 1942 ಆಗಸ್ಟ್ 15ರಂದು ದೇಸಾಯಿ ನಿಧನರಾದರು.

ಮಹದೇವಪ್ಪ ಮೈಲಾರ

1942ರ 'ಚಲೇಜಾವ್' ಆಂದೋಲನದಲ್ಲಿ ತಮ್ಮ ಚಟುವಟಿಕೆಗಳಿಂದ ಸರಕಾರವನ್ನು ದಂಗುಬಡಿಸಿದ ಕರ್ನಾಟಕದ ಅಹಿಂಸಾ ಧುರಂಧರ, ಮಹದೇವಪ್ಪ ಮೈಲಾರ.

ಅಧಿಕಾರಿಗಳಿಗೆ ಮುಂಚಿತವಾಗಿ ತಿಳಿಸಿ ಅವರು ನಡೆಸುತ್ತಿದ್ದ ಕಾರ್ಯಕ್ರಮಗಳು ಮೈಗೆ ಮುಳ್ಳು ತರಿಸುವಂಥವು! ಹೊಸರಿತ್ತಿಯಲ್ಲಿ ಕಂದಾಯದ ಹಣವನ್ನು ಕಸಿದುಕೊಳ್ಳುವ ಮಹಾ ಸಾಹಸಕ್ಕೆ ಅವರು ಇಳಿದರು. ಸಶಸ್ತ್ರ ಪೋಲೀಸರು ಕಣ್ಣಲ್ಲಿ ಎಣ್ಣೆ ಹಾಕಿಕೊಂಡು ಕಾಯುತ್ತಿದ್ದರು. ಅಂಥದರಲ್ಲಿಯೂ ಮಹದೇವಪ್ಪ ಮುನ್ನುಗ್ಗಿದರು. ಈ ರಭಸಕ್ಕೆ ಪೋಲೀಸರೂ ತತ್ತರಿಸಿದರು. ಕ್ಷಣಮಾತ್ರದಲ್ಲಿ ಮಹದೇವಪ್ಪ ಅಲ್ಲಿಂದ ಪಾರಾಗಿ ಹೋಗಬೇಕು; ಹಿಂದೆ ಸರಿದ ಪೋಲೀಸ್ ಒಮ್ಮೆಲೇ ಹಿಂದಿನಿಂದ ಗುಂಡು ಹಾರಿಸಿ, ಅವರನ್ನು ನೆಲಕ್ಕೆ ಕೆಡವಿದ. ಹೀಗೆ ಕ್ರಾಂತಿವೀರ ಮಹದೇವಪ್ಪನವರ ಬಲಿದಾನ ನಡೆದುಹೋಯಿತು. ಅದು 1943 ಏಪ್ರಿಲ್ ಒಂದನೆಯ ದಿನ.

ಮೋಟೆಬೆನ್ನೂರಲ್ಲಿ ಒಂದು ರೈತ ಕುಟುಂಬದಲ್ಲಿ 1913ರಲ್ಲಿ ಇವರ ಜನನ. ಹತ್ತು ವರ್ಷಗಳ ಅನಂತರ ಶಾಲೆ ಸೇರಿದರು. ಇನ್ನೂ ಹದಿನಾರರ ಹರೆಯದಲ್ಲಿರುವಾಗಲೇ ಮಹದೇವಪ್ಪ ಗಾಂಧೀಜಿಯ ಪ್ರಭಾವಲಯದಲ್ಲಿ ಸಿಲುಕಿದರು. ಹುದ್ಲಿ ಆಶ್ರಮದಲ್ಲಿ ವಿಧಾಯಕ ಕಾರ್ಯದ ತರಬೇತಿ ಪಡೆದರು. ಮನೆಯವರು ಮದುವೆ ಮಾಡಿದ್ದರೂ ಹೆಂಡತಿಯಿಂದ ದೂರಸರಿದು 1928ರಲ್ಲಿ ಸಾಬರಮತಿ ಆಶ್ರಮಕ್ಕೆ ತೆರಳಿದರು. ಮಹಾತ್ಮರ ಮೆಚ್ಚುಗೆಗೆ ಪಾತ್ರರಾದರು. 1930ರಲ್ಲಿ ದಂಡೀ ಯಾತ್ರೆಯಲ್ಲಿ ಮಹಾತ್ಮರ ಸಂಗಡಿಗರಾಗುವ ಭಾಗ್ಯ ಅವರದಾಯಿತು. ಆಗ ಅವರಿಗೆ ಆರು ತಿಂಗಳ ಶಿಕ್ಷೆಯಾಯಿತು. ಅವರ ಪತ್ನಿಯೂ ಅಲ್ಲಿ



ಹುತಾತ್ಮ : ಮಹದೇವಪ್ಪ

ಜೊತೆಗೂಡಿದ್ದರು. 1932ರ ಹೋರಾಟದ ಅನಂತರ ಅವರು ಬಂ[illegible]ರಾದರು. 1937ರಲ್ಲಿ ಅವರು ಹಾವೇರಿಗೆ ಮರಳಿದರು.

ಹೊಸರಿತ್ತಿಯ ಬಳಿಯ ಕೊರಡೂರ ಗ್ರಾಮದಲ್ಲಿ ಗ್ರಾಮಸೇ[illegible] ಆಶ್ರಮ ಪ್ರಾರಂಭಿಸಿದರು. ಅಲ್ಲಿ ರಚನಾತ್ಮಕ ಕಾರ್ಯ ಕೈಗೊಂ[illegible] ಗ್ರಾಮ ಜೀವನದ ಮಟ್ಟವನ್ನು ಸುಧಾರಿಸಲು ಹೆಣಗಿದರು. 1940ರ[illegible] ಹಾವೇರಿ ತಾಲೂಕ್ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾದರು. 1941ರ[illegible] ವೈಯಕ್ತಿಕ ಸತ್ಯಾಗ್ರಹದಲ್ಲಿ ಭಾಗವಹಿಸಿ ಸೆರೆಮನೆವಾಸವನ್ನು ಅನುಭವಿ[illegible]ದರು. 1943ರಲ್ಲಿ ಹುತಾತ್ಮರಾದರು.

ಮಹಮ್ಮದ್ ಅಲಿ

ನೋಡಿ : ಅಲಿ ಸಹೋದರರು

ಮಹಮ್ಮದ್ ಇಕ್ಬಾಲ್

ನೋಡಿ : ಸಂಪುಟ–೫

ಮಹಮೂದ್ ಗಾವಾನ್

35 ವರ್ಷಗಳ ಕಾಲ ಬಹಮನಿ ರಾಜ್ಯಕ್ಕೆ ಸೇವೆಸಲ್ಲಿಸಿದ ಮಹಮೂ[illegible] ಗಾವಾನ್ ರಾಜನೀತಿಜ್ಞನೆಂದೂ ವಿದ್ವಾಂಸನೆಂದೂ ಹೆಸರಾದವನ[illegible] ಗಾವಾನನು ಬಹಮನಿ ಅರಸರ ಕಾಲದಲ್ಲಿ 1458–81ರ ವರೆ[illegible] ಮಂತ್ರಿಯಾಗಿದ್ದ.

ಇವನು 1453ರಲ್ಲಿ, ತನ್ನ 42ನೆಯ ವಯಸ್ಸಿನಲ್ಲಿ, ಅರೇಬಿಯ[illegible] ಗಿಲಾನ್‌ನಿಂದ ವ್ಯಾಪಾರಕ್ಕೋಸ್ಕರ ಬಂದವನು ಬೀದರ್‌ಗೆ ಹೋ[illegible] ಬಹಮನಿ ರಾಜ್ಯದಲ್ಲಿ ಹಿರಿಯ ಹುದ್ದೆ ಕೈಗೊಂಡ. ಅರ್ಥಶಾಖೆಯನ[illegible] ಸುವ್ಯವಸ್ಥಿತಗೊಳಿಸಿದ. ಭ್ರಷ್ಟಾಚಾರವನ್ನು ನಿರ್ಮೂಲಮಾಡಿದ. ಅಕ್ರಮ[illegible]ವಾಗಿ ಸರಕಾರದ ಹಣ ಬಳಸಿಕೊಂಡವರನ್ನು ತರಾಟೆಗೆ ತೆಗೆದುಕೊಂಡ.

ಗಾವಾನನು ಜನರ ವಿದ್ಯಾಭ್ಯಾಸಕ್ಕೆ ವಿಶೇಷ ಪ್ರೋತ್ಸಾಹ ಕೊಟ್ಟ. ಅವ[illegible] 1472ರಲ್ಲಿ ತನ್ನ ಸ್ವಂತ ಹಣದಿಂದ ಒಂದು ವಿದ್ಯಾಲಯವನ್ನು ಕಟ್ಟಿಸಿದ[illegible] ಅದು ಇಂದಿಗೂ ಬೀದರಿನಲ್ಲಿ ಉಳಿದಿದೆ. ಆ ವಿದ್ಯಾಲಯದಲ್ಲಿ ದಕ್ಷರಾದ[illegible] ತತ್ತ್ವಶಾಸ್ತ್ರಜ್ಞರನ್ನಲ್ಲದೆ, ವಿಜ್ಞಾನಿಗಳನ್ನೂ ಗಾವಾನ್ ನೇಮಿಸಿದ್ದ[illegible] ಸ್ವತಃ ತಾನೂ ಬೋಧಿಸಿದ. ಆ ವಿದ್ಯಾಸಂಸ್ಥೆಯಲ್ಲಿ ವಿದ್ಯಾರ್ಥಿಗಳೂ[illegible] ಅಧ್ಯಾಪಕರೂ ಬೇರೆ ಬೇರೆಯಾಗಿ ವಾಸಿಸುತ್ತಿದ್ದರು. ವಿದ್ಯಾರ್ಥಿಗಳಿ[illegible] ಉಚಿತ ವಸತಿಯ ಏರ್ಪಾಡಿತ್ತು.

ಇವನು ಅಧಿಕಾರದಲ್ಲಿದ್ದರೂ ಸರಳಜೀವನವನ್ನು ನಡೆಸಿದ. ತನ್ನ ಜೀವನವನ್ನೇ ದೇಶದ ಮತ್ತು ರಾಜನ ಹಿತಸಾಧನೆಗೆ ಮುಡುಪಿಟ್ಟ[illegible]

ಜನಸೇವಕನಾಗಿದ್ದ ಮಹಮೂದ್ ಗಾವಾನ್ 73ನೆಯ ವಯಸ್ಸಿನಲ್ಲಿ ಒಳಸಂಚಿನಿಂದಾಗಿ ಹತನಾದ.

ಮಹಮ್ಮದಾಲಿ ಜಿನ್ನಾ

ನೋಡಿ : ಜಿನ್ನಾ–ಸಂಪುಟ ೧

ಮಹಾಜನ್

ನೋಡಿ : ಮೆಹರಚಂದ್ ಮಹಾಜನ್

ಮಹಾತ್ಮ ಗಾಂಧಿ

ನೋಡಿ : ಗಾಂಧಿ

ಮಹಾನದಿ

1957, ಜನವರಿ 13. ಪ್ರಪಂಚದ ಅತಿ ನೀಳವಾದ (16 ಮೈಲು ಉದ್ದ) ಹಿರಾಕುಡ್ ಅಣೆಕಟ್ಟಿನ ಪ್ರಾರಂಭೋತ್ಸವವನ್ನು ಭಾರತದ ಆಗಿನ ಪ್ರಧಾನಿ ಜವಾಹರಲಾಲರು ನೆರವೇರಿಸಿದರು. ಇದು ಮಹಾನದಿಗೆ ಅಡ್ಡವಾಗಿ ಕಟ್ಟಲಾದ ಅಣೆಕಟ್ಟು.

ಮಧ್ಯಪ್ರದೇಶದ ರಾಯಪುರ ಜಿಲ್ಲೆಯ ಸಿಹಾವದ ಬಳಿ ಮಹಾ ನದಿಯ ಉಗಮ. ಮಧ್ಯಪ್ರದೇಶ, ಒಡಿಸ್ಸಾ ರಾಜ್ಯಗಳ ಮೂಲಕ ಹಾದು ಹೋಗುವ ಈ ನದಿಯ ಉದ್ದ ಸುಮಾರು 890 ಕಿ.ಮೀ. ಮಳೆಗಾಲದಲ್ಲಿ ಹುಚ್ಚುಹೊಳೆಯಾಗಿ ಉಕ್ಕಿ ಹರಿದು ತನ್ನ ಪಾತ್ರದ ಸುತ್ತಮುತ್ತಲ ಪ್ರದೇಶವನ್ನು ನೆರೆಯ ಹಾವಳಿಗೆ ಗುರಿಮಾಡುತ್ತಿತ್ತು. ಹಿರಾಕುಡ್ ಯೋಜನೆಯಿಂದಾಗಿ ಈ ಹಾವಳಿ ತಗ್ಗಿದೆ. ವರ್ಷದಲ್ಲಿ ಸುಮಾರು ಎಂಟು ತಿಂಗಳು ಮಾತ್ರ ಮಹಾನದಿ ಸಣ್ಣ ಹೊಳೆಯಾಗಿ ಹರಿಯುತ್ತದೆ. ಹಸ್ದೊ, ಈಬ್, ಸೇವೊನಾಥ್, ಓಂಗ್, ತೆಲ್ ಮೊದಲಾದುವು ಮಹಾನದಿಯ ಉಪನದಿಗಳು. ಮಹಾನದಿಯ ಜಲಾನಯನ ಭೂಮಿಯಲ್ಲಿ ಅರಣ್ಯಗಳೂ ಖನಿಜಗಳೂ ವಿಪುಲವಾಗಿವೆ.



ಮಹಾನದಿ ಬಂಗಾಳ ಕೊಲ್ಲಿಯನ್ನು ಸೇರುತ್ತದೆ. ಅದಕ್ಕೆ ಮುಂಚೆ ನದಿ ಹಲವು ಕವಲುಗಳಾಗಿ ಒಡೆದು ವಿಶಾಲ ಪ್ರದೇಶದಲ್ಲಿ ಹರಿಯುತ್ತದೆ. ಪ್ರಧಾನ ಪ್ರವಾಹ ಫಾಲ್ಸ್ ಪಾಯಿಂಟ್ ಎಂಬಲ್ಲಿ ಸಮುದ್ರವನ್ನು ಸೇರುತ್ತದೆ.

ಸುಮಾರು ಒಂದೂವರೆ ಶತಮಾನದ ಹಿಂದೆ ಇಲ್ಲಿ ಒಂದು ರೇವನ್ನು ನಿರ್ಮಿಸಲಾಗಿತ್ತು. ಆದರೆ ಇದು ಪ್ರಚಂಡ ಬಿರುಗಾಳಿಯಿಂದ 1815ರಲ್ಲಿ ನಾಶವಾಯಿತು. ಈ ಹಳೆಯ ರೇವಿಗೆ ಸಮೀಪವಾಗಿ ಪರದೀಪ್ ರೇವನ್ನು ನಿರ್ಮಿಸಲಾಗಿದೆ.

ನೋಡಿ : ಪರದೀಪ್

ಮಹಾಬಲಿಪುರಂ

ಪೂರ್ವ ದಿಕ್ಕಿನಲ್ಲಿ ದಿಗಂತದ ವರೆಗೆ ಹಬ್ಬಿರುವ ಸಮುದ್ರ. ತೆರೆಗಳ ಹೊಯ್ದಾಟ. ಕರಾವಳಿಯಲ್ಲಿ ಹರಡಿರುವ ಮರಳು ದಿಬ್ಬಗಳು. ಸಮುದ್ರದ ದಂಡೆಯಲ್ಲೇ ಒಂದು ಸುಂದರ ದೇವಾಲಯ. ಅಲ್ಲಿಂದ ಸ್ವಲ್ಪ ದೂರದಲ್ಲಿ ಮರಳಿನಿಂದ ತಲೆಯೆತ್ತಿ ನಿಂತಿರುವ ಬಂಡೆಗಳು. ಅವುಗಳಲ್ಲಿ ಕೊರೆದಿರುವ ಭವ್ಯ ದೇಗುಲಗಳು. ಈ ಮನೋಹರ ದೃಶ್ಯ ನಮ್ಮ ಕಣ್ಣಿಗೆ ಬೀಳುವುದು ಮಹಾಬಲಿಪುರಂ ನಲ್ಲಿ.

ಮಹಾಬಲಿಪುರಂ, ಮದರಾಸಿನಿಂದ ಸುಮಾರು 60 ಕಿ.ಮೀ. ದೂರದಲ್ಲಿ ಬಂಗಾಳ ಕೊಲ್ಲಿಯ ಕರಾವಳಿಯಲ್ಲಿದೆ. ಇದನ್ನು ಮಾಮಲ್ಲಪುರ ಎಂದೂ ಕರೆಯುತ್ತಾರೆ. ಇದು ಪಲ್ಲವರ ಮುಖ್ಯ ರೇವುಪಟ್ಟಣವಾಗಿತ್ತು. ಏಳನೆಯ ಶತಮಾನದಲ್ಲಿದ್ದ ಒಂದನೆಯ ಮಹೇಂದ್ರವರ್ಮ ಮತ್ತು ಅವನ ಮಗ ನರಸಿಂಹವರ್ಮ ಇಲ್ಲಿನ ದೇವಾಲಯಗಳ ನಿರ್ಮಾಣಕ್ಕೆ ಕಾರಣರು.

ಮಾಮಲ್ಲಪುರದ ಸಮುದ್ರತೀರದಲ್ಲಿ ಒಂದು ಕಡೆಗೆ ಸ್ವಲ್ಪ ಅಂತರದಲ್ಲಿದ್ದ ಸಿಡಿದಾದ ಎರಡು ಕಲ್ಲಿನ ಗುಡ್ಡಗಳು ಪಲ್ಲವ ಶಿಲ್ಪಕೃತಿಗಳಿಗೆ ಸಾಮಗ್ರಿಯಾದುವು. ಈ ಬಂಡೆಗಳಲ್ಲಿ ದೇವಾಲಯಗಳನ್ನು ನಿರ್ಮಿಸಿದ್ದಾರೆ. ಬೆಟ್ಟಗಳ ಇಳುಕಲಿನಲ್ಲಿರುವ ಗುಹೆಗಳಲ್ಲೂ ದೇವಾಲಯಗಳನ್ನು ರಚಿಸಿದ್ದಾರೆ. ಬಂಡೆಗಳ ಹೊರಮೈಮೇಲೆ ಉಬ್ಬುಶಿಲ್ಪಗಳನ್ನು ಕೆತ್ತಿದ್ದಾರೆ. ಹೀಗೆ ಕೆತ್ತಿರುವ 'ಗಂಗಾವತರಣ' ('ಕಿರಾತಾರ್ಜುನೀಯ' ಎಂದೂ ಕರೆಯುತ್ತಾರೆ.) ಶಿಲ್ಪವಂತೂ ಸುಪ್ರಸಿದ್ಧವಾದದ್ದು. ಬಂಡೆಯ ಎತ್ತರ ಸುಮಾರು 30 ಅಡಿ ; ಉದ್ದ 80 ಅಡಿ. ಗಂಗೆ ಧರೆಗಿಳಿಯುತ್ತಿರುವುದನ್ನು ಸೂಚಿಸಲು ಬಂಡೆಯಲ್ಲಿ ಸಹಜವಾಗಿ ಇರುವ ಒಂದು ಬಿರುಕನ್ನು



ಮಹಿಷಾಸುರ ಮರ್ದಿನಿ

ಉಪಯೋಗಿಸಿದ್ದಾರೆ. ಆಚೀಚೆಗೆ ದೇವ ದೇವತೆಗಳ ಋಷಿಗಳ ಗಜಗಳ ಶಿಲ್ಪಗಳಿವೆ. ಗಂಗಾಜಲದಲ್ಲಿ ವಾಸಿಸುವ ನಾಗಗಳೂ ಕೆತ್ತಲ್ಪಟ್ಟಿವೆ. ಆಗಿನ ನಾಗಸ್ತ್ರೀ ಹಾಗೂ ನಾಗಪೂಜೆಯ ಸಂಪ್ರದಾಯವನ್ನು ಈ ಇಡೀ ಶಿಲ್ಪ ಪ್ರತಿನಿಧಿಸುತ್ತದೆ.

ಮಾಮಲ್ಲಪುರದ ವಾಸ್ತುಶಿಲ್ಪಕೃತಿಗಳಲ್ಲಿ 'ರಥ'ಗಳು, 'ಮಂಟಪ'ಗಳು ಇವೆ. ರಥ ಅಖಂಡ ಶಿಲೆಯಲ್ಲಿ ಕೆತ್ತಲ್ಪಟ್ಟ ದೇವಾಲಯ. ಬಂಡೆಯೊಳಗೆ ಕೊರೆದು ಮಾಡಿದ ರಚನೆ ಮಂಟಪ. ರಥ ಬೌದ್ಧ ವಿಹಾರವನ್ನು ಹೋಲುತ್ತದೆ. ಇವಕ್ಕೆ ಅಂತಸ್ತುಗಳಿವೆ. ಈ ರಥಗಳ ಶೈಲಿ ದ್ರಾವಿಡ ಶೈಲಿಯ ದೇವಾಲಯ ಗೋಪುರಗಳ ಆರಂಭ ರೂಪ. ರಥಗಳನ್ನು ಪಗೋಡಗಳೆಂದೂ ಕರೆಯುತ್ತಾರೆ. ಮಹಾಬಲಿಪುರಂ ನಲ್ಲಿರುವ ರಥಗಳಲ್ಲಿ ಧರ್ಮರಾಜ ರಥ ದೊಡ್ಡದು ಮತ್ತು ಸುಂದರವಾದದ್ದು.

ಮಂಟಪಗಳೂ ದೇವಾಲಯಗಳೇ. ಇವುಗಳಲ್ಲಿರುವ ಸ್ತಂಭಗಳೂ ವಿಗ್ರಹಗಳ ಕೆತ್ತನೆಗಳೂ ಮೋಹಕವಾದುವು. ದುರ್ಗ ಮತ್ತು ವರಾಹ ಮಂಟಪಗಳಲ್ಲಿ ಇಂಥ ಕಲಾಕೃತಿಗಳನ್ನು ಕಾಣಬಹುದು. ಇವುಗಳಲ್ಲಿ ವರಾಹ ಮತ್ತು ಮಹಿಷಾಸುರ ಮರ್ದಿನಿ ಶಿಲ್ಪಗಳು ಮುಖ್ಯವಾದುವು.

ಮಹಾಬಲಿಪುರಂನಲ್ಲಿರುವ ಆನೆಯ ಶಿಲ್ಪಗಳು ಲೋಕವಿಖ್ಯಾತಿ ಗಳಿಸಿವೆ.

ಪಲ್ಲವರು ಪ್ರಾಮುಖ್ಯಕ್ಕೆ ಬಂದ ಮೂರು ಶತಕಗಳ ಅವಧಿಯಲ್ಲಿ (ಸುಮಾರು 600–900), ಬಂಡೆಯನ್ನು ಕೊರೆದು ಕಟ್ಟಿದ ಆಲಯಗಳ ಜೊತೆಗೆ ಕಲ್ಲಿನ ದೇವಾಲಯಗಳೂ ನಿರ್ಮಿಸಲ್ಪಟ್ಟುವು. ಮಾಮಲ್ಲಪುರದ ಕರಾವಳಿಯಲ್ಲಿರುವ ಹೆಸರಾಂತ 'ತೀರ ದೇವಾಲಯ' ಕಲ್ಲು ಕಟ್ಟಡ; ವಿನ್ಯಾಸದಲ್ಲಿ ಇದು ಬಹುಮಟ್ಟಿಗೆ ಧರ್ಮರಾಜ ರಥವನ್ನು ಹೋಲುತ್ತದೆ. ಇದು ಎಂಟನೆಯ ಶತಮಾನದ ರಚನೆ. ಈ ದೇವಾಲಯದ ವಿಮಾನ ಲಲಿತವಾಗಿ ಹಗುರವಾಗಿದೆ. ಈ ದೇವಾಲಯವನ್ನು ಕಟ್ಟಿ 12 ಶತಮಾನಗಳ ಮೇಲಾಗಿದೆಯಾದರೂ ಇದು ಅಲೆಗಳ, ಬಿರುಗಾಳಿ–ಮಳೆಗಳ ಹೊಡೆತವನ್ನು ಇದಿರಿಸಿ ನಿಂತಿದೆ. ಇದು, ಅದನ್ನು ಕಟ್ಟಿದವರ ವಾಸ್ತುಶಿಲ್ಪ ಚಾತುರ್ಯಕ್ಕೆ ನಿದರ್ಶನ.

ಮಹಾಬಲೇಶ್ವರ

ಪರ್ವತಗಳ ನಡುವೆ ಹರಿದಿರುವ ರಸ್ತೆ; ಎರಡು ಪಕ್ಕಗಳಲ್ಲೂ ಸ್ಟ್ರಾಬೆರಿ ಹಣ್ಣಿನ ತೋಟಗಳು. ಮನೋಹರ ಸರೋವರ. ಕೊಂಚ ದೂರದಲ್ಲೇ ಪ್ರತಾಪ್‌ಸಿಂಗ್ ತೋಟ. ಪುಣೆಯಿಂದ 75 ಮೈಲು ದೂರದಲ್ಲಿರುವ ಈ ಸುಂದರ ಗಿರಿಧಾಮ, ಮಹಾಬಲೇಶ್ವರ.

ಮುಂಬಯಿಯ ಗವರ್ನರ್ ಆಗಿದ್ದ ಜಾನ್ ಮಾಲ್‌ಕಮ್ 1828ರಲ್ಲಿ ಈ ಸ್ಥಳವನ್ನು ಮೊದಲು ಗುರುತಿಸಿದ ಕೀರ್ತಿಗೆ ಪಾತ್ರ.

ಇಲ್ಲಿ ಪ್ರತಿ ವರ್ಷ ಆಕರ್ಷಕ ಫಲಪುಷ್ಪ ಪ್ರದರ್ಶನ ಜರಗುತ್ತದೆ. ಜೇನು ಸಾಕಣೆ ಕೇಂದ್ರವಿದೆ. ವಿಶಾಲವಾದ ಗಾಲ್ಫ್ ಬಯಲು ಇದೆ.

ಶಿವಾಜಿ ನಿರ್ಮಿಸಿದ ಪ್ರತಾಪಗಡ ಕೋಟೆ ಇಲ್ಲಿಂದ ಹತ್ತು ಮೈಲು ದೂರ. ಈ ಕೋಟೆಯ ಒಳಗೆ ಭವಾನಿ ದೇವಾಲಯವಿದೆ; ದೂರದಲ್ಲಿ ಔರಂಗಜೇಬನ ಸೇನಾಪತಿ ಅಫ್ಜಲ್‌ಖಾನನ ಗೋರಿ ಇದೆ.

ಮಹಾಭಾರತ

ನೋಡಿ : ಸಂಪುಟ ೫

ಮಹಾಯಾನ

ಬುದ್ಧ ವಚನವನ್ನು ಅತಿ ಶುದ್ಧ ರೂಪದಲ್ಲಿ ಕಾಪಾಡಿಕೊಳ್ಳಲು ಸಭೆ ಗಳು ಆಗಾಗ ನಡೆದುವು. ಇಂಥ ಸಭೆಗೆ ಸಂಗೀತಿ ಎಂದು ಹೆ ಬುದ್ಧನ ಪರಿನಿರ್ವಾಣವಾದ ಸ್ವಲ್ಪ ಸಮಯದಲ್ಲೇ ರಾಜಗೃ ಮೊದಲನೆಯ ಸಂಗೀತಿ ನಡೆಯಿತು, ಇದಾದ ನೂರು ವರ್ಷಗಳ ಅ ಎರಡನೆಯ ಸಂಗೀತಿ ವೈಶಾಲಿಯಲ್ಲಿ ನಡೆಯಿತು. ಈ ಸಂಗೀತಿ ಕೆಲವು ಸನ್ಯಾಸಿಗಳು, ತಾವು ಪಾಲಿಸಬೇಕಾದ ನಿಯಮಗಳನ್ನು ಸ ಬೇಕೆಂದು ವಾದಿಸಿದರು. ಆ ನಿಯಮಗಳನ್ನೊಳಗೊಂಡ ವಿನಯ ಪಿ ಕೆಲವು ಭಾಗಗಳನ್ನು ತಮ್ಮದೇ ಆದ ರೀತಿಯಲ್ಲಿ ವ್ಯಾಖ್ಯಾನ ಮಾಡಿ ಹಿರಿಯರನೇಕರು ಈ ವ್ಯಾಖ್ಯಾನವನ್ನು ಒಪ್ಪಲಿಲ್ಲ. ಆಗ ಹೊಸ ರೀ ವ್ಯಾಖ್ಯಾನವನ್ನು ಮಾಡಿದ ಸನ್ಯಾಸಿಗಳು ಸಂಘದಿಂದ ಹೊರಬಿ ತಮ್ಮದೇ ಆದ ಬೇರೊಂದು ಸಂಘವನ್ನು ಮಾಡಿಕೊಂಡರು. ಅ ಮಹಾಸಾಂಘಿಕರು ಎಂಬ ಹೆಸರು ಬಂತು.

ಕ್ರಮೇಣ ಮಹಾಸಾಂಘಿಕರು ಪ್ರಬಲರಾದರು. ಅವರು ಪ್ರತಿ ಸಿದ ಬುದ್ಧಧರ್ಮ ಬೇರೆ ರೂಪವನ್ನು ತಾಳಿತು. ಅದಕ್ಕೆ ಮಹಾ ಎಂಬ ಹೆಸರನ್ನು ಕೊಟ್ಟರು. 'ಮಹಾಯಾನ' ಎಂದರೆ 'ದೊಡ್ಡ ವಾ ಅಥವಾ 'ದೊಡ್ಡ ಪ್ರಯಾಣ'.

ಮಹಾಯಾನ ಸಂಪ್ರದಾಯದಂತೆ, ಅವರ ಗುರಿ ಅತಿ ದೊಡ್ಡ ಬುದ್ಧತ್ವವನ್ನು ಪಡೆಯುವುದೇ ಸಾಧಕನ ಗುರಿ. ಬುದ್ಧ ಎಂದರೆ ಬ ವ್ಯಕ್ತಿಯಲ್ಲ—ಎಲ್ಲ ಕಾಲದಲ್ಲಿಯೂ ಎಲ್ಲ ಕಡೆಗಳಲ್ಲೂ ಇರುವ ಲೋ ತ್ತರ ಮಹಾಶಕ್ತಿ. ಮುಂದೆ ಬುದ್ಧರಾಗುವ ಬೋಧಿಸತ್ತ್ವರೂ ಲೋ ತ್ತರ ವ್ಯಕ್ತಿಗಳು. ಇಂಥ ಲೋಕೋತ್ತರ ಸ್ಥಿತಿಯನ್ನು ಪಡೆಯುವ ದೊಡ್ಡದು. ಅದು ಹೆಚ್ಚು ಬಗೆಯ ಜನರನ್ನು–ಅಂದರೆ ವಿವಿಧ ದಲ್ಲಿರುವ ಸಾಧಕರನ್ನು–ಕೊಂಡೊಯ್ಯಬಲ್ಲುದು. ಆದ್ದರಿಂದಲೇ ಮಹಾಯಾನ.

ಮಹಾಯಾನ ಪಂಥವು ಕನಿಷ್ಕ, ಹರ್ಷ ಮುಂತಾದ ಚಕ್ರ ಗಳಿಂದ ಪ್ರೋತ್ಸಾಹ ಪಡೆಯಿತು. ನಾಗಾರ್ಜುನನಂಥ ಮಹಾದಾರ್ಶನ ಅದರ ಸಿದ್ಧಾಂತವನ್ನು ನಿಷ್ಕರ್ಷಿಸಿದರು. ಕ್ರಿ.ಶ. 1ನೆಯ ಶತಮಾನ 8ನೆಯ ಶತಮಾನದ ವರೆಗೆ ಅದು ಪ್ರಬಲವಾಗಿತ್ತು. ಮಹಾಯಾ ಟಿಬೆಟ್, ಜಪಾನ್ ಮತ್ತು ಚೀನದೇಶಗಳ ಜನಪ್ರಿಯ ಬೌದ್ಧಧ ಆಗಿತ್ತು. ಮಹಾಯಾನದ ಗ್ರಂಥಗಳು ಸಂಸ್ಕೃತದಲ್ಲಿವೆ.


ಕಾಲಕ್ರಮೇಣ ಮಹಾಯಾನ ಪಂಥವೂ ಅನೇಕ ಶಾಖೆಗಳಾಗಿಬಿಡೆ ಅಂಥ ಶಾಖೆಗಳಲ್ಲಿ ಒಂದಾದ ಮಾಧ್ಯಮಿಕ ಪಂಥ, ದಕ್ಷಿಣ ಭಾರತ ಅಮರಾವತಿ ಮತ್ತು ನಾಗಾರ್ಜುನಕೊಂಡಗಳಲ್ಲಿ ಪ್ರಾಮುಖ್ಯ ಪಡೆ

ಮಹಾರಾಷ್ಟ್ರ

ಸ್ವತಂತ್ರ ಭಾರತದ ಮೂರನೆಯ ಅತಿ ದೊಡ್ಡ ರಾಜ್ಯ, ಮಹಾರಾ

ಈ ಹೆಸರು ಮಹಾನ್‌ರಾಷ್ಟ್ರದಿಂದ ಬಂದಿರಬಹುದು; ಪಶ್ಚಿಮ ಭಾ ದಲ್ಲಿ ಇದ್ದ ಮಹರ್ ಎಂಬ ಪ್ರಾಚೀನ ಬುಡಕಟ್ಟಿನವರಿಂದ ಬಂದಿ ಬಹುದು.

ಪುರಾಣದ ಪ್ರಕಾರ ಕೃಷ್ಣನ ಹೆಂಡತಿ ರುಕ್ಮಿಣಿ ಹಾಗೂ ನಳನ ಹೆ ದಮಯಂತಿ ಮಹಾರಾಷ್ಟ್ರದ ವಿದರ್ಭದೇಶದ ರಾಜಕುವರಿಯವರು.



ಕ್ರಿ.ಪೂ. 321–181 ರಲ್ಲಿ ಮೌರ್ಯರು ಮಹಾರಾಷ್ಟ್ರ ಪ್ರದೇಶವನ್ನು ವಶಪಡಿಸಿಕೊಂಡರು. ಅನಂತರ ಶಾತವಾಹನರು, ವಾಕಾಟಕರು, ಚಾಲುಕ್ಯರು ಹಾಗೂ ಯಾದವರು ಆಳಿದರು. ಯಾದವರ ನೆಮ್ಮದಿಯ ಆಡಳಿತ 1294ರಲ್ಲಿ ಕೊನೆಗೊಂಡಿತು. ಅನಂತರ ಮಹಾರಾಷ್ಟ್ರದಲ್ಲಿ 17ನೆಯ ಶತಮಾನದಲ್ಲಿ ಪ್ರಮುಖ ಶಕ್ತಿಯಾಗಿ ಬೆಳಗಿದವನು ಶಿವಾಜಿ. ಅವನ ಮರಣಾನಂತರವೂ ಮರಾಠರ ರಾಜ್ಯ ವಿಸ್ತರಣೆ ಮುಂದುವರಿಯಿತು. ಪುಣೆ, ಮರಾಠಾ ಪ್ರದೇಶಗಳ ಕೇಂದ್ರವಾಯಿತು. 18ನೆಯ ಶತಮಾನದಲ್ಲಿ ಪೇಶ್ವೆಗಳು ಅರಸರಾದರು. ಕೊನೆಗೆ ಬರೋಡಾ, ನಾಗಪುರ, ಇಂದೂರು, ಗ್ವಾಲಿಯರ್ ಮುಂತಾದ ಸಂಸ್ಥಾನಗಳಾಗಿ ಮಹಾರಾಷ್ಟ್ರ ಒಡೆಯಿತು. ಮೂರನೆಯ ಪಾಣಿಪತ್ ಯುದ್ಧದಲ್ಲಿ ಮರಾಠರು ಸೋಲು ಅನುಭವಿಸಿದರು. 1778-1818ರ ಅವಧಿಯಲ್ಲಿ ಮರಾಠ ರಾಜರು ಬ್ರಿಟಿಷರೊಡನೆ ಮೂರು ಯುದ್ಧಗಳಲ್ಲಿ ಕಾದಿದರು. ಮೂರನೆಯ ಯುದ್ಧದಲ್ಲಿ ಸಂಪೂರ್ಣ ಸೋತರು. ಮಹಾರಾಷ್ಟ್ರ ಪ್ರದೇಶ ಬ್ರಿಟಿಷರ ಕೈಗೆ ಬಂತು.

ಸ್ವತಂತ್ರ ಭಾರತದಲ್ಲಿ ಮುಂಬಯಿ ಎಂಬ ದೊಡ್ಡ ರಾಜ್ಯವನ್ನು 1960ರಲ್ಲಿ ಎರಡು ಭಾಷಾವಾರು ರಾಜ್ಯಗಳಾಗಿ ಮಾಡಲಾಯಿತು. ಇದರಲ್ಲಿ ಒಂದು ಮಹಾರಾಷ್ಟ್ರ, ಮತ್ತೊಂದು ಗುಜರಾತ್.

ಮಹಾರಾಷ್ಟ್ರದ ಮೇರೆಗಳು ಅರಬಿ ಸಮುದ್ರ, ಗುಜರಾತ್, ಮಧ್ಯಪ್ರದೇಶ, ಆಂಧ್ರಪ್ರದೇಶ, ಮೈಸೂರು ಹಾಗೂ ಗೋವ. ರಾಜ್ಯಕ್ಕೆ ಸುಮಾರು 330 ಮೈಲು ಉದ್ದದ ಕರಾವಳಿಯಿದೆ. ಮುಂಬಯಿ, ರತ್ನಾಗಿರಿ ಮೊದಲಾದ ಬಂದರುಗಳು ಇಲ್ಲಿವೆ. ರಾಜ್ಯದಲ್ಲಿ 26 ಜಿಲ್ಲೆಗಳಿವೆ. ಮಹಾರಾಷ್ಟ್ರದಲ್ಲಿ ಪಶ್ಚಿಮಘಟ್ಟ ಹಬ್ಬಿದೆ. ಘಟ್ಟದ ಪಶ್ಚಿಮಕ್ಕೆ ಕಿರಿದಾದ ಕರಾವಳಿ ಪ್ರದೇಶ ; ಪೂರ್ವಕ್ಕೆ ದಕ್ಷಿಣದ ಪ್ರಸ್ಥಭೂಮಿ ಪ್ರದೇಶ. ಕೊಂಕಣದಲ್ಲಿ ಅತ್ಯಧಿಕ ಮಳೆಯಾಗುತ್ತದೆ. 'ದೇಶ್' ಮಹಾರಾಷ್ಟ್ರದ ಅತಿ ವಿಸ್ತಾರ ಭಾಗ. ಪಶ್ಚಿಮ ಘಟ್ಟ ಪ್ರದೇಶದಲ್ಲಿ ನಿಬಿಡಾರಣ್ಯಗಳಿವೆ. ಮಟ್ಟಸ ನೆತ್ತಿಯ ಘಟ್ಟ ಪ್ರದೇಶಗಳಲ್ಲಿ ಪ್ರಮುಖವಾದದ್ದು ಮಹಾಬಲೇಶ್ವರ. ಇದು ಒಳ್ಳೆಯ ಆರೋಗ್ಯ ಧಾಮ.

ಮಹಾರಾಷ್ಟ್ರದ ಕಾಡುಗಳಲ್ಲಿ ದೊರೆಯುವ ಮುಖ್ಯ ಮರ ತೇಗ. ನಾರು, ಬೊಂಬು, ಬಿದಿರು, ರಂಗು, ಗೋಂದು ಇಲ್ಲಿನ ಕಾಡಿನ ಇತರ ಉತ್ಪನ್ನಗಳು. ಹುಲಿ, ಚಿರತೆ, ಕಾಡೆಮ್ಮೆ, ಸಾಂಬಾರ್, ಜಿಂಕೆ, ಚಿರತೆ, ನೀಲಹೋರಿ, ಬೊಗಳುವ ಜಿಂಕೆ, ಕಾಡು ನಾಯಿ, ಹಂದಿ ಹಾಗೂ ಕತ್ತೆಕಿರುಬ, ಕೃಷ್ಣ ಮೃಗಗಳು ಅರಣ್ಯಗಳಲ್ಲಿವೆ. ಕಾಡು ಕೋಳಿಗಳು, ಪಾರಿವಾಳಗಳು ಇತರ ಅನೇಕ ವಲಸೆ ಬಂದು ಹೋಗುವ ಹಕ್ಕಿಗಳು ಇಲ್ಲಿ ಕಾಣಬರುತ್ತವೆ. ರಾಜ್ಯದಲ್ಲಿ ಮೂರು ರಾಷ್ಟ್ರೀಯ ಉದ್ಯಾನಗಳಿವೆ : ತಡೋಬಾ, ಬೊರಿವಿಲಿ, ಮತ್ತು ಪೆಂಚ್.



ಮುಂಬಯಿ ನಗರದಲ್ಲಿ 'ಗೇಟ್‌ವೇ ಆಫ್ ಇಂಡಿಯಾ'



ಫ್ಲೋರಾ ಫೌಂಟನ್—ಮುಂಬಯಿ

'ರಾಣಿಯ ಕೊರಳ ಹಾರ' : ಮರೀನ್ ಡ್ರೈವ್





ಎಲ್ಲೋರದ ಕೈಲಾಸ ದೇವಾಲಯ.

ಕೊಯ್ನಾ, ಕೃಷ್ಣಾ, ಭೀಮಾ, ಗೋದಾವರಿ, ಪೂರ್ಣಾ, ವಾಯಿಗಂಗಾ ಮತ್ತು ತಪತಿ—ಇವು ಮಹಾರಾಷ್ಟ್ರದಲ್ಲಿ ಹರಿಯುವ ಮುಖ್ಯನದಿಗಳು. ಜನರ ಪ್ರಧಾನ ಕಸಬು, ಕೃಷಿ. ಭತ್ತ, ಧಾನ್ಯ ಮತ್ತು ಕಾಳುಗಳು ಮುಖ್ಯ ಬೆಳೆಗಳು. ಎಣ್ಣೆ ಬೀಜಗಳಲ್ಲಿ ಕಡಲೆಕಾಯಿ ಮತ್ತು ನಾರಗಸೆಬೀಜ ಮುಖ್ಯವಾದುವು. ಹತ್ತಿ ಕಬ್ಬು, ಹೊಗೆಸೊಪ್ಪು ಬೆಳೆಯುತ್ತವೆ. ಹಣ್ಣುಗಳಲ್ಲಿ ನಾಗಪುರದ ಕಿತ್ತಳೆ, ಕೊಂಕಣದಲ್ಲಿ ಬೆಳೆಯುವ ಪ್ರಸಿದ್ಧ 'ಅಲ್ಫಾನ್ಸೊ' ಮಾವು ಮುಖ್ಯವಾದುವು. ತೆಂಗು, ಅಡಕೆ, ಗೋಡಂಬಿ, ಕೊಂಕಣದಲ್ಲಿ ಬೆಳೆಯುತ್ತವೆ.

ರಾಜ್ಯದಲ್ಲಿ ಮ್ಯಾಂಗನೀಸ್ ಅದಿರು ನಾಗಪುರ ಹಾಗೂ ಭಾಂಡಾರಗಳಲ್ಲಿ ದೊರೆಯುತ್ತವೆ. ಕಲ್ಲಿದ್ದಲು, ಕಬ್ಬಿಣ, ಬಾಕ್ಸೈಟ್, ಕ್ರೋಮೈಟ್, ಸಿಲಿಕ ಮರಳು, ಸುಣ್ಣಕಲ್ಲು, ಇಲಿಮನೈಟ್ ಮುಂತಾದ ಖನಿಜಗಳೂ ದೊರೆಯುತ್ತವೆ. ರಾಜ್ಯದಲ್ಲಿ ಅನೇಕ ನೀರಾವರಿ ಯೋಜನೆಗಳಿವೆ. ಇವುಗಳಲ್ಲಿ ಮುಖ್ಯವಾದುವು ಘೋಡ್, ವೀರ್, ಬಾಘ್, ಗಿರ್ನಾ, ಖಡಕ್‌ವಾಸ್ಲ, ಮುಲಾ, ಪೂರ್ಣಾ, ಗೋದಾವರಿ, ಕೃಷ್ಣಾ, ವರ್ಣಾ, ತಪತಿ ಮುಂತಾದುವು. ಕೊಯ್ನಾ ಪ್ರಮುಖ ವಿದ್ಯುತ್ ಯೋಜನೆ.

ಹತ್ತಿ ವಸ್ತ್ರೋದ್ಯಮ ಇಲ್ಲಿನ ಪ್ರಧಾನ ಕೈಗಾರಿಕೆ. ಮುಂಬಯಿ ಹಾಗೂ ಅದರ ಸುತ್ತಮುತ್ತ ಈ ಉದ್ಯಮ ಹರಡಿದೆ. ರೇಷ್ಮೆ, ರೇಯಾನ್, ಕೃತಕ ಎಳೆಯ ವಸ್ತ್ರೋದ್ಯಮಗಳೂ ಇವೆ. ವಿದ್ಯುತ್ ಎಂಜಿನಿಯರಿಂಗ್. ರಾಸಾಯನಿಕಗಳು. ಔಷಧೋದ್ಯಮ. ಕೃತಕ ಗೊಬ್ಬರ. ಸಕ್ಕರೆ. ವನಸ್ಪತಿ ಉತ್ಪನ್ನಗಳು. ಕಾಗದ ಫಲಕಗಳು. ಸಾಬೂನು. ಮುಂತಾದ ಪ್ರಮುಖ ಕೈಗಾರಿಕೆಗಳಲ್ಲದೆ ಅನೇಕಾನೇಕ ಚಿಕ್ಕಪುಟ್ಟ ಉದ್ಯಮಗಳಿವೆ. ನಾಸಿಕ, ಪುಣೆ, ಕೊಲ್ಹಾಪುರ, ನಾಗಪುರಗಳಲ್ಲಿ ಹೊಸ ಕೈಗಾರಿಕಾ ಕ್ಷೇತ್ರಗಳು ಬೆಳೆಯುತ್ತಿವೆ. ಚಲಚ್ಚಿತ್ರೋದ್ಯಮಕ್ಕೆ ರಾಜ್ಯದ ಆರ್ಥಿಕತೆಯಲ್ಲಿ ಮುಖ್ಯ ಪಾತ್ರವಿದೆ. ಮುಂಬಯಿ ಈ ಉದ್ಯಮದ ಕೇಂದ್ರ. ಆರೇ ಎಂಬಲ್ಲಿರುವ ಹಾಲು ಸರಬರಾಜು ಕೇಂದ್ರ ಪ್ರಪಂಚದಲ್ಲೇ ಒಂದು ದೊಡ್ಡ ಹೈನು ಕ್ಷೇತ್ರವೆಂದು ಪರಿಗಣಿಸಲ್ಪಟ್ಟಿದೆ.



ಮಹಾರಾಷ್ಟ್ರದ ನಾಯಕತ್ವ :
ವಿ. ಪಿ. ನಾಯಕ್

ರಾಜ್ಯದಲ್ಲಿ ಆರು ವಿಶ್ವವಿದ್ಯಾನಿಲಯಗಳಿವೆ : ಮುಂಬಯಿ ವಿಶ್ವವಿದ್ಯಾನಿಲಯ, ಎಸ್. ಎನ್. ಡಿ. ಟಿ. (ಶ್ರೀಮತಿ ನಾಥಿಬಾಯಿ ದಾಮೋದರ್ ಥ್ಯಾಕರಸ್ ಮಹಿಳಾ ವಿಶ್ವವಿದ್ಯಾನಿಲಯ–ಕೇಂದ್ರ; ಮುಂಬಯಿ), ಪುಣೆ ವಿಶ್ವವಿದ್ಯಾನಿಲಯ, ನಾಗಪುರ ವಿಶ್ವವಿದ್ಯಾನಿಲಯ, ಮರಾಠವಾಡ ವಿಶ್ವವಿದ್ಯಾನಿಲಯ (ಕೇಂದ್ರ : ಔರಂಗಾಬಾದ್), ಶಿವಾಜಿ ವಿಶ್ವವಿದ್ಯಾನಿಲಯ (ಕೇಂದ್ರ :ಕೊಲ್ಹಾಪುರ).

ಮುಂಬಯಿ, ಪುಣೆ, ನಾಗಪುರ, ಅಹಮದ್‌ನಗರ, ಔರಂಗಾಬಾದ್, ದೌಲತಾಬಾದ್, ಕೊಲ್ಹಾಪುರ, ಸೊಲ್ಲಾಪುರ, ನಾಸಿಕ–ರಾಜ್ಯದ ಮುಖ್ಯ ನಗರಗಳು. ಮಾಥೆರಾ, ಖಂಡಾಲ, ಲೊಣಾವಳ, ಮಹಾಬಲೇಶ್ವರ, ಪಂಚಗನಿ, ಚಿಕಾಲ್ದಾ—ಗಿರಿಧಾಮಗಳಿವೆ. ವಜ್ರೇಶ್ವರಿ ಒಂದು ಆರೋಗ್ಯಧಾಮ. ಇಲ್ಲಿನ ಬಿಸಿನೀರಿನ ಊಟೆ ಪ್ರಪಂಚದಲ್ಲಿ ಅತಿ ಬಿಸಿಯಾದುದು. ಇದರ ಉಷ್ಣತೆ 110-120° ಫ್ಯಾರನ್‌ಹೀಟ್. ಭಾರತದ ಪ್ರಸಿದ್ಧ ಗುಹಾಲಯಗಳಾದ ಅಜಂತ, ಎಲ್ಲೋರ, ಎಲಿಫೆಂಟಾ, ಕಾರ್ಲಿ ಗುಹಾಲಯಗಳು ಈ ರಾಜ್ಯದಲ್ಲಿವೆ. ವರ್ಧಾದ ಬಳಿ ಸೇವಾಗ್ರಾಮದಲ್ಲಿ ಗಾಂಧಿ ಸ್ಥಾಪಿಸಿದ ಆಶ್ರಮವಿದೆ.

ಜನ ಸಂಗೀತ, ನಾಟಕ, ನೃತ್ಯಪ್ರಿಯರು. ಗಣೇಶ ಚತುರ್ಥಿ ಅತ್ಯಂತ ಸಂಭ್ರಮದ ಹಬ್ಬ. ಗೋಕುಲಾಷ್ಟಮಿಯನ್ನು ವಿಜೃಂಭಣೆಯಿಂದ ಆಚರಿಸುತ್ತಾರೆ. ಕ್ರೀಡೆಗಳಲ್ಲಿ ಇವರಿಗೆ ಬಹಳ ಆಸಕ್ತಿ. ಇವುಗಳಲ್ಲಿಯೂ ಮಲ್ಲಕಂಬ ಕ್ರೀಡೆ ಇವರಿಗೆ ವಿಶೇಷವಾದದ್ದು.

ನೋಡಿ : ಅಜಂತಾ ; ಎಲಿಫೆಂಟ ; ಎಲ್ಲೋರ ; ತ್ರ್ಯಂಬಕ ; ತಾರಾಪುರ ; ದಲಾಲ್ ಸ್ಟ್ರೀಟ್ ; ನಾಸಿಕ ; ಪಂಢರಾಪುರ ; ಪೈ... ; ಮರಾಠೀ ಭಾಷೆ, ಸಾಹಿತ್ಯ ; ಮಹಾಬಲೇಶ್ವರ

ಮಹಾವೀರ

ನೋಡಿ : ವರ್ಧಮಾನ ಮಹಾವೀರ

ಮಹಾವೀರಾಚಾರ್ಯ

'12345679 × 9 = 111,111,111

11011011 × 91 = 1002002001

139 × 109 = 15151'.

ಹೀಗೆ ಎಡದಿಂದ ಬಲಕ್ಕೆ ಅಥವಾ ಬಲದಿಂದ ಎಡಕ್ಕೆ ಓದಿದರೂ ಸಂಖ್ಯಾಂಕಗಳು ಸಾಮಾನ್ಯವಾಗಿರುವಂತೆ ಗುಣಾಕಾರ ಕೆಲಸ ಮಾಡಿದ ಭಾರತೀಯ ಗಣಿತಜ್ಞ ಮಹಾವೀರಾಚಾರ್ಯ. ಇವನು ಕರ್ನಾಟಕದವನು.

ಜೈನ ಮತೀಯ ಮಹಾವೀರ ಖ್ಯಾತ ಗಣಿತ ವಿಜ್ಞಾನಿ. ಕಾಲ ಸುಮಾರು 850. ಈತ ರಾಷ್ಟ್ರಕೂಟದ ಅರಸ ಅಮೋಘವರ್ಷ ನೃಪತುಂಗನ ಕಾಲದಲ್ಲಿದ್ದವನು.

ಮಹಾವೀರ ಸಂಸ್ಕೃತದಲ್ಲಿ ಬರೆದ 'ಗಣಿತಸಾರ ಸಂಗ್ರಹ' ಒಂಬತ್ತು ಮೂಲ ಅಧ್ಯಾಯಗಳ ಗ್ರಂಥ. ವರ್ಗ, ಘನ, ವರ್ಗಮೂಲ, ಘನಮೂಲ, ಶ್ರೇಣಿ, ಭಿನ್ನರಾಶಿ, ಅಳತೆ, ಬೀಜಗಣಿತ, ವರ್ಗ ಸಮೀಕರಣ ಮೊದಲಾದ ವಿಷಯಗಳ ನಿರೂಪಣೆ ಇದರಲ್ಲಿದೆ. ಈತನದು ನೇರವಾದ ಸರಳ ನಿರೂಪಣೆ. ದೃಷ್ಟಾಂತಗಳು ವಿಪುಲ.

'ಗಣಿತಸಾರ ಸಂಗ್ರಹ'ದ ಹಸ್ತಪ್ರತಿ ಮತ್ತು ವ್ಯಾಖ್ಯಾನಗಳು ನಮಗೆ ದೊರೆತಿರುವುದು ಬಹುತೇಕ ಕನ್ನಡದಲ್ಲಿ. ತೆಲುಗು ಹಾಗೂ ನ...

ಲಿಪಿಯಲ್ಲೂ ಕೆಲವು ಇವೆ. 1962ರಲ್ಲಿ ಮದರಾಸು ಅಧಿಪತ್ಯ ಸರಕಾರ ಇದರ ಇಂಗ್ಲಿಷ್ ಅನುವಾದ ಪ್ರಕಟಿಸಿತು. (ಅನುವಾದಕರು : ರಾವ್ ಬಹದ್ದೂರ್ ಎಂ. ರಂಗಾಚಾರ್ಯ)

ಭಿನ್ನರಾಶಿಗಳ ಲೆಕ್ಕವನ್ನು ಸುಲಭಗೊಳಿಸಲು ಲಘುತಮ ಸಾಮಾನ್ಯ ಅಪವರ್ತ್ಯವನ್ನು ಬಳಸಿದ ಭಾರತೀಯ ಗಣಿತಜ್ಞರಲ್ಲಿ ಮಹಾವೀರನೇ ಮೊದಲಿಗ. ಅವನಿಗೂ ಮುಂಚೆ ಇದ್ದ ಬ್ರಹ್ಮಗುಪ್ತನ ಗಮನಕ್ಕೆ ಬಂದ ಅನೇಕ ಗಣಿತ ಸಮಸ್ಯೆಗಳನ್ನು ಪರಿಹರಿಸಲು ಮಹಾವೀರ ಪ್ರಯತ್ನಿಸಿ, ಬಹುವಾಗಿ ಯಶಸ್ವಿಯಾದ. ಋಣ ಸಂಖ್ಯೆಗಳನ್ನು ಅವನು ಬಳಸಿದ. ಗೋಲದ ಘನ ಅಳತೆಯನ್ನು ಸ್ಥೂಲವಾಗಿ ಅಥವಾ ನಿಷ್ಕೃಷ್ಟವಾಗಿ ಪಡೆಯಲು ಅವನು ಎರಡು ಪ್ರತ್ಯೇಕ ಸೂತ್ರಗಳನ್ನು ನಿರೂಪಿಸಿದ.

ಮಹಾವೀರ ಸಂಖ್ಯೆಗಳ ಶ್ರೇಣಿಯನ್ನು ಗುಣೋತ್ತರ ಶ್ರೇಢಿಯಂತೆ ನಿರೂಪಿಸಿ ತೋರಿಸಿದ್ದಾನೆ; ಒಂದು ಭಿನ್ನರಾಶಿಯ ಆಂಶಿಕ ಭಿನ್ನರಾಶಿಗಳನ್ನು ಪಡೆಯುವ ಬಗೆಗಿನ ನಿಯಮಗಳನ್ನು ಕೊಟ್ಟಿದ್ದಾನೆ ; ಹಲವು ಬಗೆಯ ರೇಖಾಕೃತಿಗಳಿಗೆ ಸಂಕ್ಷಿಪ್ತ ನಿರೂಪಣೆ ಕೊಡಲು ಪ್ರಯತ್ನಿಸಿದ್ದಾನೆ.

ಮಹಾಶಿವರಾತ್ರಿ

ರಾತ್ರಿ ಸಮಯ. ಬೇಟೆಗಾರ ಪ್ರಾಣಿಗಳ ಬರವನ್ನು ಕಾಯಲು ಮರವೊಂದನ್ನು ಹತ್ತಿ ಕುಳಿತ. ಆ ಮರ ಶಿವನಿಗೆ ಪ್ರಿಯವಾದ ಬಿಲ್ವವೃಕ್ಷವಾಗಿತ್ತು. ಅವನು ಇಡೀ ರಾತ್ರಿ ಎಚ್ಚರವಾಗಿಯೇ ಇದ್ದ. ಮರದಿಂದ ಎಲೆಗಳು ಉದುರಿ ಮರದ ಕೆಳಗೆ ಹುದುಗಿದ್ದ ಶಿವಲಿಂಗದ ಮೇಲೆ ಬೀಳುತ್ತಿದ್ದುವು. ಪ್ರಾಣಿ ಯಾವುದೂ ದೊರಕದ್ದರಿಂದ ಬೇಟೆಗಾರ ಉಪವಾಸ ಇರಬೇಕಾಯಿತು. ಅಂದು ಮಹಾಶಿವರಾತ್ರಿ. ಹೀಗೆ ತನಗೆ ಅರಿವಿಲ್ಲದೆಯೇ ಶಿವರಾತ್ರಿಯ ದಿವಸ ಶಿವಪೂಜೆ, ಉಪವಾಸ ಮತ್ತು ಜಾಗರಣೆ ಮಾಡಿದ ಬೇಟೆಗಾರ ಮುಕ್ತಿ ಪಡೆದ.

—ಇದು ಮಹಾಶಿವರಾತ್ರಿ ಆಚರಣೆಯ ಒಳಿತನ್ನು ಸೂಚಿಸುವ ಬೇಡರ ಕಣ್ಣಪ್ಪನ ಕಥೆ.

ಶಿವರಾತ್ರಿ ಮಾಘ ಮಾಸದ (ಫೆಬ್ರುವರಿ–ಮಾರ್ಚ್) ಅಮಾವಾಸ್ಯೆಯ ಹಿಂದಿನ ದಿವಸ ಬರುತ್ತದೆ. ಕರ್ನಾಟಕದಲ್ಲಿ ನಂಜನಗೂಡು, ಮಹದೇಶ್ವರ ಬೆಟ್ಟ, ಶ್ರೀರಂಗಪಟ್ಟಣ, ಅರಕಲಗೂಡು, ಶೃಂಗೇರಿ, ಮುಂತಾದ ಸ್ಥಳಗಳಲ್ಲಿ ರಥೋತ್ಸವ, ಜಾತ್ರೆಗಳೂ ನಡೆಯುತ್ತವೆ. ಕಾಶ್ಮೀರದಲ್ಲಿ ಶಿವರಾತ್ರಿಗೆ ವಿಶೇಷ ಮಹತ್ವ. ಈ ಹಬ್ಬ ಹದಿನೈದು ದಿನ ನಡೆಯುತ್ತದೆ.

ಶಿವರಾತ್ರಿಯ 4 ಜಾವಗಳಲ್ಲೂ ಪೂಜೆ, ಅಭಿಷೇಕ, ಹರಿಕಥೆಗಳು ಆಗುತ್ತಿರುತ್ತವೆ. (ಮೂರು ಗಂಟೆಗೆ ಒಂದು ಜಾವ.) ಮೊದಲ ಜಾವ ಹಾಲಿನಿಂದ, ಎರಡನೆಯ ಜಾವ ಮೊಸರಿನಿಂದ, ಮೂರನೆಯದರಲ್ಲಿ ತುಪ್ಪದಿಂದ ಹಾಗೂ ನಾಲ್ಕರಲ್ಲಿ ಜೇನುತುಪ್ಪದಿಂದ ಶಿವಲಿಂಗಕ್ಕೆ ಅಭಿಷೇಕ ಮಾಡುತ್ತಾರೆ.

ಶಿವರಾತ್ರಿಯಲ್ಲಿ ಉಪವಾಸ ಮಾಡುವವರು ಇರುವಂತೆ, ಹಬ್ಬ ಮಾಡುವವರೂ ಇದ್ದಾರೆ. ' ಶಿವರಾತ್ರಿಯ ದಿವಸ ಜಗಳ ಮಾಡಿಯಾದರೂ ಜಾವ ಕಳಿ ' ಎಂಬ ಗಾದೆ ಇದೆ.

ಮಳಖೇಡ

ನೋಡಿ : ಮಾನ್ಯಖೇಟ

ಮಾಂಡೂಕ್ಯೋಪನಿಷತ್

ಅಥರ್ವವೇದಕ್ಕೆ ಸೇರಿದ ಮಾಂಡೂಕ್ಯೋಪನಿಷತ್ ಅತ್ಯಂತ ಚಿಕ್ಕದು. ಇದರಲ್ಲಿರುವ ಶ್ಲೋಕಗಳು ಕೇವಲ ಹನ್ನೆರಡು. ಆದರೆ ಬ್ರಹ್ಮಜ್ಞಾನ ಸಾಧನೆಯ ದೃಷ್ಟಿಯಿಂದ ಇದು ಬಹು ಮುಖ್ಯ ಕೃತಿ. ಶಂಕರಾಚಾರ್ಯರು ಇದನ್ನು ಗಹನ ಅರ್ಥದ ಸಾರವನ್ನು ಹಿಡಿದಿದ್ದಾರೆ. ಮುಕ್ತಿಕೋಪನಿಷತ್ತು, ``ಮೋಕ್ಷಾರ್ಥಿಗಳಿಗೆ ಮಾಂಡೂಕ್ಯೋಪನಿಷತ್ತು ಒಂದಿದ್ದರೆ ಸಾಕು.'' ಎಂದು ಸಾರಿದೆ.

ಪರಬ್ರಹ್ಮವನ್ನು ತಿಳಿದುಕೊಳ್ಳಲು ಇಲ್ಲಿ ಸೂಚಿಸಿರುವ ವಿಧಾನ ವಿಶಿಷ್ಟವಾದದ್ದು. ಓಂಕಾರದಲ್ಲಿ ಭೂತ, ವರ್ತಮಾನ, ಭವಿಷ್ಯತ್ತುಗಳು ಅಡಗಿವೆ. ಎಲ್ಲ ಜೀವಿಗಳಿಗೂ ಜಾಗ್ರತ್, ಸ್ವಪ್ನ, ಸುಷುಪ್ತಿ ಎಂಬ ಮೂರು ಅವಸ್ಥೆಗಳು ಅನಿವಾರ್ಯ. ಈ ಮೂರು ಅವಸ್ಥೆಗಳಿಗೆ ಸಾಕ್ಷಿಯಾಗಿ ತುರೀಯಾವಸ್ಥೆ ಇದೆ. ಇದೇ ಪರಮ ಸತ್ಯ. ಪ್ರಣವದಿಂದ –ಅಂದರೆ ಓಂಕಾರದ ಉಪಾಸನೆಯಿಂದ– ಈ ಸತ್ಯವನ್ನು ಅರಿಯಬಹುದು ಎಂದು ಈ ಉಪನಿಷತ್ತಿನಲ್ಲಿ ವಿವರಿಸಲಾಗಿದೆ. ವಿವರಣೆಗಳು ಬಹು ಸಂಕ್ಷಿಪ್ತವಾಗಿರುವುದರಿಂದ ಅವನ್ನು ಅರ್ಥ ಮಾಡಿಕೊಳ್ಳುವುದು ಕಷ್ಟ. ಶಂಕರಾಚಾರ್ಯರ ಪರಮ ಗುರು ಗೌಡಪಾದರು ಬರೆದಿರುವ ವ್ಯಾಖ್ಯಾನ ರೂಪವಾದ ಕಾರಿಕೆಗಳು ಈ ಉಪನಿಷತ್ತನ್ನು ಅರ್ಥಮಾಡಿಕೊಳ್ಳಲು ಸಹಾಯಕವಾಗಿವೆ.

ನೋಡಿ : ಓಂ

ಮಾರ್ಕೊ ಪೋಲೊ

ನೋಡಿ : ಸಂಪುಟ ೧

ಮಾರ್ಟಿಮರ್ ವೀಲರ್

1944ರಿಂದ 1948ರ ವರೆಗೆ ಭಾರತದ ಪುರಾತತ್ತ್ವ ಸರ್ವೆಯ ಡೈರೆಕ್ಟರ್ ಜನರಲ್ ಆಗಿದ್ದವರು ಮಾರ್ಟಿಮರ್ ವೀಲರ್. ಭಾರತದ ಪುರಾತನ ಸಂಸ್ಕೃತಿಯ ನಿವೇಶನಗಳಲ್ಲಿ ಒಂದಾದ ಹರಪ್ಪಾದಲ್ಲಿ ಗಮನಾರ್ಹ ಶೋಧಗಳು ಅವರ ಅಧಿಕಾರಾವಧಿಯಲ್ಲಿ ನಡೆದುವು.

ಎರಡನೆಯ ಮಹಾಯುದ್ಧದ ಕೊನೆಯ ಹಂತದ ಕಾಲ. ಭಾರತದಲ್ಲಿ ರಾಜಕೀಯ ಆಂದೋಲನ ಭರದಿಂದ ಸಾಗಿತ್ತು. ಈ ಸಂಧಿಕಾಲದಲ್ಲಿ ವೀಲರ್‌ರ ನೇತೃತ್ವದಲ್ಲಿ ಹರಪ್ಪಾ ಶೋಧಗಳು ನಡೆದುವು.

ಹರಪ್ಪಾ ಸಮಾಧಿ ಸ್ಥಳದ ಶೋಧ ವೀಲರರ ಒಂದು ಮುಖ್ಯ ಸಾಧನೆ. ಹರಪ್ಪಾದ ಮೇಲೆ ಆರ್ಯರು ಪ್ರಾಬಲ್ಯ ಸ್ಥಾಪಿಸಿದರು ಎಂದು ವೀಲರ್ ಅಭಿಪ್ರಾಯಪಟ್ಟಿದ್ದಾರೆ.

ರಾಬರ್ಟ್ ಎರಿಕ್ ಮಾರ್ಟಿಮರ್ ವೀಲರ್ 1890ರಲ್ಲಿ ಇಂಗ್ಲೆಂಡಿನಲ್ಲಿ ಜನಿಸಿದರು. ರೋಮ್‌ನ ಪುರಾತತ್ತ್ವ ಶೋಧನೆಯಲ್ಲಿ ಪರಿಣತರಾದರು. 'ಸಿಂಧೂ ಸಂಸ್ಕೃತಿ' , 'ಹಿಂದಿನ ಭಾರತ ಮತ್ತು ಪಾಕಿಸ್ತಾನ' —ಇವು ಅವರ ಪ್ರಮುಖ ಕೃತಿಗಳಲ್ಲಿ ಎರಡು.

ನೋಡಿ : ಹರಪ್ಪಾ

' ಮಾಡು ಇಲ್ಲವೆ ಮಡಿ

1942ರ ಆಗಸ್ಟ್ 8ರಂದು ಮುಂಬಯಿಯಲ್ಲಿ ಅಖಿಲ ಭಾರತ ಕಾಂಗ್ರೆಸ್ ಸಮಿತಿ ಅಧಿವೇಶನದಲ್ಲಿ ಗಾಂಧೀಜೀ 'ಚಲೇ ಜಾವ್' ಚಳುವಳಿಗೆ ಕರೆನೀಡುವ

ಚಾರಿತ್ರಿಕ ಭಾಷಣ ಮಾಡಿದರು. ಯಾವುದೇ ಬಗೆಯ ಸಂಧಾನಗಳಿಗೆ ಒಪ್ಪುವುದಿಲ್ಲ ಎಂದು ಹೇಳಿ, ಗಾಂಧೀಜಿಯವರು, "ಈಗ ನಾನೊಂದು ಚಿಕ್ಕ ಮಂತ್ರವನ್ನು ನಿಮಗೆ ಹೇಳಿಕೊಡುವೆ. ಇದು ನಿಮ್ಮ ಹೃದಯಗಳಲ್ಲಿ ಬೇರೂರಲಿ. ನಿಮ್ಮ ಪ್ರತಿ ಉಸಿರೂ ಇದನ್ನು ಸ್ಪಷ್ಟಪಡಿಸಲಿ. ಇದೇ ಆ ಮಂತ್ರ: 'ಮಾಡು ಇಲ್ಲವೆ ಮಡಿ!'"— ಎಂಬ ಸಂದೇಶ ನೀಡಿದರು. ದೇಶದ ಎಲ್ಲೆಡೆಗೂ ಅಂತಿಮ ಹೋರಾಟದ ಈ ಸಂದೇಶ ತಲುಪಿತು.

ಈ ಭಾಷಣ ಮಾಡಿದ ಮರುದಿನವೇ ಗಾಂಧೀಜಿಯನ್ನು ಬ್ರಿಟಿಷ್‌ಸರಕಾರ ಬಂಧಿಸಿ ಯೆರವಾಡ ಸೆರೆಮನೆಗೆ ಕಳುಹಿಸಿತು. ಸೆರೆಮನೆ ಸೇರುವ ಮೊದಲು ಅವರು ಮತ್ತೊಮ್ಮೆ 'ಮಾಡು ಇಲ್ಲವೆ ಮಡಿ!' ಸಂದೇಶವನ್ನು ನೀಡಿದರು.

ನೋಡಿ : 'ಚಲೇಜಾವ್'

ಮಾಣಿಕ್ಯವಾಚಕರ್

ಮಾಣಿಕ್ಯವಾಚಕರ್ ಅಂದರೆ 'ಮಾಣಿಕ್ಯದಂಥ ಮಾತನ್ನಾಡುವವರು'. ಇವರು ತಮಿಳುನಾಡಿನ ಸಂತಕವಿ. ಶೈವಮತ ಪುನರುದ್ಧಾರ ಮಾಡಿದರು. ಬೌದ್ಧ ಪಂಡಿತರನ್ನು ವಾದದಲ್ಲಿ ಸೋಲಿಸಿದರು. ತಮಿಳು ಸಾಹಿತ್ಯದ ಆದಿ ಘಟ್ಟದಲ್ಲಿ ಉದಯಿಸಿದ ಇವರು ಅತ್ಯಂತ ಭಾವನಾತ್ಮಕ ಹಾಗೂ ಮನ ಕರಗಿಸುವ ಕವಿತೆಗಳನ್ನು ರಚಿಸಿದರು.



ಮಾಣಿಕ್ಯದಂಥ ಮಾತು

"ನಿನ್ನ ಪಾದಗಳು ದೊರೆತರೆ ನನಗೆ ಇಂದ್ರಭೋಗಗಳು ಕೂಡ ಬೇಡ"—ಎಂದಿದ್ದಾರೆ ಮಾಣಿಕ್ಯ ವಾಚಕರ್ ತಮ್ಮ 'ತಿರುವಾಚಕಮ್' ನಲ್ಲಿ. ತಿರುವಾಚಕಮ್ ಎಂದರೆ 'ಶ್ರೇಷ್ಠ ನುಡಿಗಳು'. ಇದರಲ್ಲಿ 51 ಭಕ್ತಿಪ್ರಧಾನ ಪದ್ಯಗಳಿವೆ. ಇದಲ್ಲದೆ ಅವರ ಇನ್ನೂ ಅನೇಕ ಕೃತಿಗಳಿವೆ.

ಮದುರೈ ಬಳಿ ವೈಗೈ ನದಿಯ ದಂಡೆಯಲ್ಲಿರುವ ವಾಡವೂರಿನಲ್ಲಿ, 9ನೆಯ ಶತಮಾನದಲ್ಲಿ ಮಾಣಿಕ್ಯ ವಾಚಕರ್ ಹುಟ್ಟಿದರು. ಪಾಂಡ್ಯ ರಾಜಾಸ್ಥಾನದಲ್ಲಿ ಇವರ ಮನೆತನದ ವೃತ್ತಿ. ಅವುಡೈಯಾರ್ ಕೋಯಿಲ್ ಎಂಬ ರೇವು ಪಟ್ಟಣಕ್ಕೆ ಹೋದಾಗ ಅಲ್ಲಿ ಮಾಣಿಕ್ಯವಾಚಕರ್ ಅವರಿಗೆ ಜ್ಞಾನೋದಯವಾಯಿತು. ಚೋಳ ದೇಶದ ಚಿದಂಬರಂನಲ್ಲಿ ನಟರಾಜನನ್ನು ಸಂದರ್ಶಿಸಿದರು. ಶಂಕರರ ಪ್ರತಿಪಾದನೆಯ ತತ್ತ್ವದ ಹಿರಿಮೆಯನ್ನು ಎತ್ತಿ ಹಿಡಿದರು. ಅವರ ರಚನೆಗಳಲ್ಲಿ ಪ್ರಧಾನ ವಾಗಿರುವುದು ಅರ್ಪಣಭಾವ.

ಮಾತಾ ತಪಸ್ವಿನಿ

ಸ್ವಾತಂತ್ರ್ಯಪೂರ್ವ ಸಮಯ. ಕೆಚ್ಚೆದೆಯ ಮಹಿಳೆಯೊಬ್ಬಳು ಶಸ್ತ್ರಾಸ್ತ್ರ ಕಾರಖಾನೆಯ ಪೂರಾ ವಿವರಗಳನ್ನು ಪಡೆದಿದ್ದಳು. ಜರ್ಮನಿಯ ಕ್ರುಪ್ಸ್ ಸಂಸ್ಥೆಯ ನೆರವಿನಿಂದ ನೇಪಾಳದಲ್ಲಿ ಕಾರಖಾನೆಯನ್ನು ತೆರೆಯ... ದೆಂದೂ ನೋಡಲು ಅದು ಹೆಂಚಿನ ಕಾರಖಾನೆಯಾಗಿರಬೇಕೆಂದು... ನಿರ್ಧಾರವಾಯಿತು.

ಮುಂಬಯಿ ಪೋಲೀಸರಿಗೆ ಇದು ತಿಳಿದುದರಿಂದ ಕೆಲಸ ನಡೆಯಲಿಲ್ಲ... ಆದರೆ ಆ ಕಾರಖಾನೆಯ ವಿವರ ತಯಾರಿಸಿದವರು ಯಾರು ಎಂಬುದ... ಪೋಲೀಸರಿಗೆ ಗೊತ್ತಾಗಲಿಲ್ಲ.

ಆಕೆಯೇ ಭಾರತದ ಮಹಿಳಾ ಕ್ರಾಂತಿಕಾರರಲ್ಲಿ ಒಬ್ಬರಾದ ಮಾತಾ ತಪಸ್ವಿನಿ.

ಆಕೆಯ ತಂದೆ ನಾರಾಯಣರಾವ್, ಅತ ಪಾಳೆಯಗಾರ. ಆಕೆಯ ಜನ್ಮ ಸ್ಥಳ ಉತ್ತರ ಪ್ರದೇಶ ರೇ ಬರೇಲಿ ಎಂದೂ ವೆಲ್ಲೂರಿನ ರೈ ಬೇಲೂರ್ ಎಂದೂ ಭಿನ್ನಾಭಿಪ್ರಾಯಗಳಿವೆ. ಪ್ರಾರಂಭದಲ್ಲಿ ಆಕೆಯನ್ನು ಗಂಗಾಬಾಯಿ ಎಂದು ಕರೆಯುತ್ತಿದ್ದರು. ಬಾಲಿಕೆ ಸಂಸ್ಕೃತವನ್ನು ಎಳೆಯ ವಯಸ್ಸಿನ... ಕಲಿತಳೆಂದು ಪ್ರತೀತಿ. ಎಳೆವಯಸ್ಸಿನಲ್ಲಿ ಆಕೆ ವಿಧವೆಯಾದರು. ಅವರು ದೇಹದಾರ್ಢ್ಯಕ್ಕೆ ಗಮನಕೊಡುತ್ತಿದ್ದರಲ್ಲದೆ, ಯುದ್ಧಸಂಬಂಧ ಕಲೆಗಳಲ್ಲಿ ನಿಷ್ಣಾತರಾಗಿದ್ದರು.

ತಂದೆಯ ಮರಣಾನಂತರ ಪುಟ್ಟ ಸಂಸ್ಥಾನದ ಆಡಳಿತವನ್ನು ಸಮರ್ಪ... ಗೊಳಿಸಿದರು. ಶಸ್ತ್ರಾಗಾರದ ದುರಸ್ತಿಯಲ್ಲಿ ತೊಡಗಿದ್ದ ಆಕೆಯನ್ನು ತಿರುಚಿರಪಳ್ಳಿಯಲ್ಲಿ ಬ್ರಿಟಿಷರು ನಿರ್ಬಂಧದಲ್ಲಿಟ್ಟರು. ಬಿಡುಗಡೆ ಯಾದ ಮೇಲೆ ನೈಮಿಷಾರಣ್ಯದಲ್ಲಿ ಗೌರೀಶಂಕರರ ಶಿಷ್ಯೆಯಾಗಿದ್ದರು. ಆಗ ಆಕೆಯ ಹೆಸರು ಮಾತಾ ಮಹಾರಾಣಿ ತಪಸ್ವಿನಿ ಎಂದಾಯಿತು.



ಕ್ರಾಂತಿ ತಪಸ್ಸು

ಝಾನ್ಸಿ ಲಕ್ಷ್ಮೀ ಬಾಯಿಯ ಬಂಧುವಾದ ಈಕೆ 1857ರ ದಂಗೆಯಲ್ಲಿ ಭಾಗವಹಿಸಿದ್ದರು. ದಂಗೆ ವಿಫಲವಾದಾಗ ನೇಪಾಳಕ್ಕೆ ಪರಾರಿಯಾದರು. ಆಗ ಅವರ ಜೊತೆಗಿದ್ದ ವ್ಯಕ್ತಿ ನಾನಾಸಾಹೇಬ. ನೇಪಾಳಿಗಳಲ್ಲಿ ರಾಷ್ಟ್ರೀಯ ಭಾವನೆಯನ್ನು ಈಕೆ ಜಾಗೃತಗೊಳಿಸಿದರು.

1901ರಲ್ಲಿ ಕಲ್ಕತ್ತೆಯಲ್ಲಿ ಬಾಲಗಂಗಾಧರ ತಿಲಕರ ಭೇಟಿ ಆಯಿ... ನೇಪಾಳದ ಅರಸನೊಡನೆ ತಿಲಕರು ಸಹಕರಿಸಬೇಕೆಂದು ಆಕೆ ಸ... ನೀಡಿದರು. ಮಹಿಳೆಯರಿಗೆ ಭಾರತೀಯ ವಿದ್ಯಾಭ್ಯಾಸ ಕೊಡಬೇಕೆ... ಉದ್ದೇಶದಿಂದ ಮಹಾಕಾಳಿ ಪಾಠಶಾಲಾ ಎಂಬ ಶಾಲೆಯನ್ನು ಕಲ್ಕತ್ತೆಯ... ಆಕೆ ನಡೆಸುತ್ತಿದ್ದರು.

ಮಾತಾ ತಪಸ್ವಿನಿ 1907ರಲ್ಲಿ ಕಲ್ಕತ್ತೆಯಲ್ಲಿ ನಿಧನರಾದರು.

ಮಾನಸ ಸರೋವರ

'ಸುವರ್ಣ ಪಕ್ಷಿಗಳ ಆವಾಸ ಮತ್ತು ಸುವರ್ಣ ಕಮಲಗಳ ನಿವಾಸ' —ಈ ರೀತಿ ವರ್ಣಿತವಾಗಿದೆ, ಹಿಮಾಲಯ ಪರ್ವತಶ್ರೇಣಿಯಲ್ಲಿದೆ ಮಾನಸ ಸರೋವರ. ಇದೊಂದು ಶಕ್ತಿಪೀಠ.

ಮಾನಸ ಸರೋವರ ಇರುವುದು ಟಿಬೆಟಿನಲ್ಲಿ. 14,950 ಅಡಿ ಎತ್ತರದಲ್ಲಿರುವ ಈ ಸರೋವರ ಜಗತ್ತಿನಲ್ಲೇ ಅತ್ಯಂತ ಎತ್ತರದಲ್ಲಿರುವ ಸಿಹಿ ನೀರಿನ ಕೆರೆ. ಇದರ ಉದ್ದ 12 ಮೈಲು. ಅಗಲ 11 ಮೈಲು. ಇದು ಕೈಲಾಸ ಶಿಖರ ಹಾಗೂ ಗುರ್ಲಾ ಮಾಂಧಾತಗಳ ನಡುವೆ ಇದೆ. ಸರೋವರದ ನೀರು ತಿಳಿಯಾಗಿ, ನೀಲಿ ಬಣ್ಣದ್ದಾಗಿ ತೋರುತ್ತದೆ. ಇದು ಬ್ರಹ್ಮನ ಚಿತ್ತದಿಂದ ಸೃಷ್ಟಿಯಾದದ್ದು ಎಂದು ಹೇಳುತ್ತಾರೆ.

ಇದನ್ನು ಚೋ ಮಾಪನ್ ಎಂದೂ ಕರೆಯುತ್ತಾರೆ. ಮಾನಸ ಸರೋವರದ ಪಶ್ಚಿಮಕ್ಕೆ 'ರಾಕ್ಷಸ ತಾಲ್' ಸರೋವರವಿದೆ. ಶಿವನ ಪ್ರೀತ್ಯರ್ಥವಾಗಿ ರಾವಣ ಇಲ್ಲಿ ನಿಂತು ತಪಸ್ಸು ಮಾಡಿದನೆಂದು ದಂತಕಥೆ.

ಶ್ರಮಸಾಧ್ಯವಾದ ಮಾನಸ ಸರೋವರ ಯಾತ್ರೆ ಪುಣ್ಯಪ್ರದವಾದದ್ದೆಂದು ನಂಬಿಕೆ.

ನೋಡಿ : ಶಕ್ತಿ

ಮಾನ್ಯಖೇಟ

ರಾಷ್ಟ್ರಕೂಟರ ಅಮೋಘವರ್ಷ 814ರಲ್ಲಿ ಮಾನ್ಯಖೇಟವನ್ನು ನಿರ್ಮಿಸಿ, ಅದನ್ನು ರಾಜಧಾನಿಯಾಗಿ ಮಾಡಿದ. ಇದನ್ನು ಮಳಖೇಡ ಎಂದೂ ಕರೆಯುತ್ತಾರೆ.

ಮಾನ್ಯಖೇಟ ಮುಖ್ಯ ಸ್ಥಳವೆನಿಸಿ, ವಿಶಾಲ ಪಟ್ಟಣವಾಗಿ ಬೆಳೆಯಿತು. ಅರಬ್ ಬರೆವಗಾರರು ಮಾನ್ಯಖೇಟದ ವೈಭವವನ್ನು ವರ್ಣಿಸಿದ್ದಾರೆ: ಮಾನ್ಯಖೇಟದ ಅರಸ ಜಗದ ಚಕ್ರವರ್ತಿ. ಬಾಗ್ದಾದಿನ ಖಲೀಫ್ ಮತ್ತು ಕಾನ್‌ಸ್ಟಾಂಟಿನೋಪಲ್‌ನ ಚಕ್ರವರ್ತಿಯರೊಂದಿಗೆ ಜಗತ್ತಿನ ನಾಲ್ಕು ಮಹಾ ಆಡಳಿತಗಾರರಲ್ಲೊಬ್ಬ—ಎಂದಿದ್ದಾರೆ.

ಅಮೋಘವರ್ಷನ ಅರಮನೆ ಇಂದಿನ ಮಳಖೇಡ ಗ್ರಾಮದಲ್ಲಿ ಇದ್ದಿತೆಂದು ಹೇಳುತ್ತಾರೆ.

ಮಾಸ್ತಿಕಲ್ಲು

ನೋಡಿ : ಸಂಪುಟ ೧

ಮಾಳ್ವ

ಪ್ರಾಚೀನ ಭಾರತಕ್ಕೆ ಬಂದು ನೆಲೆಸಿದ ಒಂದು ಜನಾಂಗದ ಹೆಸರು ಮಾಳ್ವ. ಮುಂದೆ ಅವರು ನೆಲೆನಿಂತ ಪ್ರದೇಶದ ಹೆಸರೂ ಮಾಳ್ವ.

ಅಲೆಗ್ಸಾಂಡರ್ ಭಾರತದ ಮೇಲೆ ದಂಡೆತ್ತಿಬಂದಾಗ ಇವರು ವಾಯುವ್ಯದಲ್ಲಿ ರಾವಿ-ಬಿಯಸ್ ನದಿಗಳ ಸಂಗಮ ಪ್ರದೇಶದಲ್ಲಿ ಇದ್ದರು.

ಅಲೆಗ್ಸಾಂಡರನ ಸೇನೆಯನ್ನು ಇದಿರಿಸಿ ಧೈರ್ಯದಿಂದ ಹೋರಾಡಿದರು. ಈ ಯುದ್ಧದಲ್ಲಿ ಅಲೆಗ್ಸಾಂಡರನಿಗೆ ಬಲವಾದ ಗಾಯವಾಯಿತಾದರೂ ಅವನ ಸೇನೆ ಗೆಲುವು ಗಳಿಸಿತು. ಮಾಳ್ವರು ಸೋತರು.

ಮಾಳ್ವರು ತಮ್ಮ [illegible] ಪ್ರಾಚೀನ [illegible] ಬಂದ [illegible].

ವಾಯುವ್ಯದ ಗಿರಿಜನರು ಇವರ ನೆಲೆಯನ್ನು ಆಕ್ರಮಿಸಲು ಆರಂಭಿಸಿದಾಗ ಅವರು ಇಂದಿನ ರಾಜಪುತಾನಕ್ಕೆ ಬಂದು ನೆಲೆಸಿದರು. ಇವರು ಇದ್ದ ಸ್ಥಳಕ್ಕೆ ಮಾಳ್ವ ನಗರವೆಂದು ಹೆಸರಾಯಿತು. ಅನಂತರ ಮಾಳ್ವರು



ಸಾಂಚಿ ಸ್ತೂಪದ ಮಹಾದ್ವಾರ

ಕ್ರಿ.ಪೂ. ಒಂದನೆಯ ಶತಮಾನದಲ್ಲಿ ಉಜ್ಜಯಿನಿ ಪ್ರದೇಶವನ್ನು ಗೆದ್ದುಕೊಂಡರು.

ಮಾಳ್ವರು ತಮ್ಮದೇ ಶಕೆಯನ್ನು ಕ್ರಿ. ಪೂ. 58ರಿಂದ ಆರಂಭಿಸಿದರು. ಮಾಳ್ವರು ಉಪಯೋಗಿಸಲು ಆರಂಭಿಸಿದ ಮೇಲೆ ಇದಕ್ಕೆ 'ಕೃತ' ಎಂಬ ಹೆಸರು ಬಂದಿತು.

ಹೆಚ್ಚು ಕಡಿಮೆ ಇಂದಿನ ಅವಂತಿ ಪ್ರದೇಶ ಮಾಳ್ವ ದೇಶವೆಂದು ಹೆಸರಾಯಿತು. ಸತ್ರಪರ ಪ್ರಮುಖ ದೊರೆ ರುದ್ರದಾಮನ ಈ ದೇಶವನ್ನು 2ನೆಯ ಶತಮಾನದಲ್ಲಿ ಆಳಿದ. ಮುಂದೆ ಗುಪ್ತ ಸಾಮ್ರಾಜ್ಯಕ್ಕೆ ಮಾಳ್ವ ಸೇರಿತು. ಅನಂತರ ಹರ್ಷವರ್ಧನ ತನ್ನ ಸಾಮ್ರಾಜ್ಯಕ್ಕೆ ಸೇರಿಸಿಕೊಂಡ. ಹರ್ಷನ ಮರಣಾನಂತರ ಗುರ್ಜರ ಪ್ರತಿಹಾರರೂ ರಾಷ್ಟ್ರಕೂಟರೂ ಮಾಳ್ವದ ಭಾಗಗಳನ್ನು ಆಕ್ರಮಿಸಿಕೊಂಡರು. ನರ್ಮದಾ ನದಿ ಇವರ ನಡುವಿನ ಮೇರೆಯಾಯಿತು. ಆಮೇಲೆ ಪರಮಾರರೆಂಬ ರಜಪೂತ ಅರಸರು ಮಾಳ್ವ ದೇಶವನ್ನು ನಾಲ್ಕು ಶತಮಾನ ಕಾಲ ಆಳಿದರು. ಉಜ್ಜಯಿನಿ ಇವರ ರಾಜಧಾನಿಯಾಗಿತ್ತು.

1235ರಲ್ಲಿ ಮಹಮ್ಮದೀಯರು ಮಾಳ್ವ ದೇಶದ ಮೇಲೆ ಮುತ್ತಿಗೆ ಹಾಕಿದರು. 1401ರಲ್ಲಿ ದಿಲಾವರ್ ಖಾನ್ ಘೋರಿ ಇಲ್ಲಿ ತನ್ನ ಸ್ವತಂತ್ರ

ಮಾಳ್ವದ ಸ್ತೂಪ



[illegible] 1000ರಲ್ಲಿ [illegible] [illegible] ಶತಮಾನದಲ್ಲಿ ಇದು ಮರಾಠರಿಗೆ ಸೇರಿತು.

ವಿಂಧ್ಯಪರ್ವತದ ಉತ್ತರಭಾಗದಿಂದ ನರ್ಮದಾ ನದೀ ಕಣಿವೆಯ [illegible] ದಲ್ಲಿ 25 ರಾಜ್ಯಗಳಿದ್ದುವು. ಇವೆಲ್ಲ 1950ರಲ್ಲಿ ಸ್ವತಂತ್ರ ಭಾರತದ [illegible] ರಾಜ್ಯದಲ್ಲಿ ಸೇರಿದುವು.

ಶಕರ ಆಳ್ವಿಕೆಯ ಕಾಲದಲ್ಲಿ ಉಜ್ಜಯಿನಿ ಪ್ರಬಲ ವ್ಯಾಪಾರ ಕೇಂದ್ರವಾಗಿತ್ತು. ಭೃಗುಕಚ್ಛದ ಮೂಲಕ ಇಲ್ಲಿಂದ ವಿದೇಶೀ ವ್ಯಾಪಾರ ಬೆಳೆದಿತ್ತು. ಇತ್ತ ಒಳನಾಡಿನಲ್ಲಿ ಪಾಟಲಿಪುರದ ವರೆಗೆ ಇಲ್ಲಿಂದ ವ್ಯಾಪಾರ ನಡೆಯುತ್ತಿತ್ತು.

ಮಾಳ್ವ ಫಲವತ್ತಾದ ಪ್ರದೇಶ. ಅನೇಕ ನದಿಗಳು ಹರಿಯುತ್ತವೆ. ಧಾನ್ಯಗಳು, ಹತ್ತಿ ಹಾಗೂ ಅಫೀಮು ಮುಖ್ಯ ಬೆಳೆಗಳು.


ನೋಡಿ : ಉಜ್ಜಯಿನಿ

ಮ್ಯಾಕ್ಸ್ ಮೂಲರ್

'ಋಗ್ವೇದ', 'ಪ್ರಾಚ್ಯದ ಪವಿತ್ರ ಗ್ರಂಥಗಳು' ಎಂಬ ಉದ್ಗ್ರಂಥಗಳನ್ನು ಇಂಗ್ಲಿಷಿನಲ್ಲಿ ಸಂಪಾದಿಸಿದವನು ಜರ್ಮನಿಯ ಮ್ಯಾಕ್ಸ್ ಮೂಲರ್. ಸಂಸ್ಕೃತ ಅಧ್ಯಯನಕ್ಕೆ ಈತನ ಗ್ರಂಥಗಳು ಮಹತ್ವದ ಕೊಡುಗೆ.

ಫ್ರೆಡರಿಕ್ ಮ್ಯಾಕ್ಸ್ ಮೂಲರ್ (1823–1900) ಜರ್ಮನಿಯವನು. 1841ರಲ್ಲಿ ಲೀಪ್ಸಿಗ್ ವಿಶ್ವವಿದ್ಯಾನಿಲಯದಲ್ಲಿ ಓದುತ್ತಿದ್ದಾಗಲೇ ಹರ್ಮನ್ ಬ್ರಾಕ್‌ಹೌಸ್ ಸಂಸ್ಕೃತ ತೆಗೆದುಕೊಳ್ಳುವಂತೆ ಮ್ಯಾಕ್ಸ್‌ಮೂಲರನನ್ನು ಪ್ರಚೋದಿಸಿದ. ಪ್ಯಾರಿಸಿನ ಯೂಜೀನ್ ಬರ್ನಾಫ್ ಧರ್ಮಗಳ ತುಲನಾತ್ಮಕ ಅಧ್ಯಯನದ ಬಗೆಗೆ ಅವನಲ್ಲಿ ಆಸಕ್ತಿಯನ್ನು ಬೆಳೆಸಿದ. ಋಗ್ವೇದವನ್ನು ಇಂಗ್ಲಿಷಿಗೆ ತರ್ಜುಮೆ ಮಾಡುವಂತೆ ಪ್ರೇರೇಪಿಸಿದ. ಈಸ್ಟ್ ಇಂಡಿಯಾ ಕಂಪನಿ ಇದರ ಪ್ರಕಟಣೆಯ ಭಾರ ಹೊತ್ತಿತು. ಇದರ ಫಲ 1848ರಲ್ಲಿ ಇವನು ಸಂಪಾದಿಸಿದ ಋಗ್ವೇದದ ಪ್ರಕಟಣೆ.

1859ರಲ್ಲಿ [illegible] ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದಲ್ಲಿ ಸಂಸ್ಕೃತ ಪ್ರಾಧ್ಯಾಪಕ [illegible] ನಿರಾಶೆಯಾಯಿತು. ಮುಂದೆ 1868ರಲ್ಲಿ ಹೊಸದಾಗಿ ಸ್ಥಾಪಿತವಾದ ತುಲನಾತ್ಮಕ ಭಾಷಾಶಾಸ್ತ್ರ ಇಲಾಖೆಗೆ ಈತನನ್ನು ಪ್ರಾಧ್ಯಾಪಕನಾಗಿ ನಿಯಮಿಸಿದರು.



'ಮೋಕ್ಷ ಮೂಲರ ಭಟ್ಟ'

ಮೂಲರ್ ಬರೆದ, ಸಂಪಾದಿಸಿದ ಹಲವಾರು ಗ್ರಂಥಗಳಲ್ಲಿ ಮುಖ್ಯವಾದವು: 'ಸಾಯಣನ ಭಾಷ್ಯದಿಂದೊಡಗೂಡಿದ ಋಗ್ವೇದ' (6 ಸಂಪುಟ), 'ಪ್ರಾಚ್ಯ ಪವಿತ್ರ ಗ್ರಂಥಗಳು' (51 ಸಂಪುಟ), 'ಬೌದ್ಧ ಗ್ರಂಥಗಳು' (4 ಸಂಪುಟ), 'ಪ್ರಾಚೀನ ಸಂಸ್ಕೃತ ಸಾಹಿತ್ಯ ಚರಿತ್ರೆ' ಹಾಗೂ 'ಸಂಸ್ಕೃತ ವ್ಯಾಕರಣ'. ಸಂಸ್ಕೃತ ಹಾಗೂ [illegible] ಬರೆಹಗಳು [illegible] ಪ್ರೌಢ ಕೃತಿಗಳು ಬಹು ಕಾಲ ಉಳಿಯುವಂಥವು.

ಭಾರತೀಯ ಸಂಸ್ಕೃತಿ ಮ್ಯಾಕ್ಸ್ ಮೂಲರನಿಗೆ ರಕ್ತಗತವಾಗಿ [illegible] 'ಮೋಕ್ಷ ಮೂಲರ ಭಟ್ಟ' ಎಂದು ಕರೆದುಕೊಂಡಿದ್ದು ಇದಕ್ಕೆ ಸಾಕ್ಷಿ.

ಭಾರತದ [illegible] ಬಗೆಗೆ [illegible] ರಲ್ಲಿ ಮ್ಯಾಕ್ಸ್ ಮೂಲರ್ ಪ್ರಮುಖ.

ಮ್ಯಾನ್ಯುಅಲ್ ಆರನ್

ನೋಡಿ : ಸಂಪುಟ ೬

ಮಿರ್ಜಾ ಇಸ್ಮಾಯಿಲ್

ಬೆಂಗಳೂರು - ಮೈಸೂರುಗಳ [illegible] ಕನ್ನಂಬಾಡಿ ಕಟ್ಟೆ ಮಗ್ಗುಲಲ್ಲಿ ಬೃಂದಾವನ ಉದ್ಯಾನ —ಇವೆಲ್ಲ ಮೈಸೂರಿನ ದಿವಾನರಾ ಸರ್ ಮಹಮದ್ ಇಸ್ಮಾಯಿಲ್ ಮಿರ್ಜಾರ ಕೈವಾಡ. ಸೌಂದ ಪ್ರಜ್ಞೆಗೆ ಹೆಸರಾಗಿದ್ದ ಖ್ಯಾತ ಆಡಳಿತಗಾರ ಇವರು.

ಮೈಸೂರು ಸಂಸ್ಥಾನದಲ್ಲಿ ಆದ ಅನೇಕ ಮಾರ್ಪಾಟುಗಳು ಮಿರ್ಜಾ 'ಮಾಯಾದಂಡ' ದಿಂದ ಆದುವು —ಎಂದು ಹೇಳುತ್ತಿದ್ದುದುಂಟು.

ದಕ್ಷ ಆಡಳಿತಗಾರ, ದಿಟ್ಟ ವಿಚಾರಿ ಮಿರ್ಜಾ. ಸಾಮಾನ್ಯ ಜನರೊಡನೆ ಅವರು ಸಂಪರ್ಕ ಇಟ್ಟುಕೊಳ್ಳುತ್ತಿದ್ದರು. ತಮ್ಮನ್ನು ಕಾಣಲು ಬಂದ [illegible] ಬೇಡಿಕೆ ದೂರುಗಳನ್ನು ಮನಗೊಟ್ಟು ಕೇಳುತ್ತಿದ್ದರು. ಆಗಬೇ ಕೆಲಸಗಳನ್ನು ಸಕಾಲದಲ್ಲಿ ಮಾಡಿಸುವುದು ಅವರ ಕಾರ್ಯ [illegible] ವಾಗಿತ್ತು.

ಮಿರ್ಜಾ ಅವರು ಹುಟ್ಟಿದ್ದು 1883 ಅಕ್ಟೋಬರ್ 23ರಂದು. [illegible] ಹಿರಿಯರು ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಮೈಸೂ ರಾಜಮನೆತನಕ್ಕೆ ನಿಷ್ಠೆಯಿಂದ ಸೇವೆ ಸಲ್ಲಿಸಿದರು. ಮೈಸೂರು ಎಂ [illegible] ಮೈಸೂರಿನ [illegible] ಎಂದು ಕರೆದರು.

1905ರಲ್ಲಿ ಮೈಸೂರು ಸಂಸ್ಥಾನ ಸರಕಾರದ ಸೇವೆಗೆ ಸೇರಿದ ಮಿರ್ಜಾ ಅವರು, ಹಲವಾರು ಹುದ್ದೆಗಳಲ್ಲಿ ಕೆಲಸಮಾಡಿದ ಅನಂತರ, 1926 ಮೇ ತಿಂಗಳು, ಮೈಸೂರಿನ ದಿವಾನರಾಗಿ ನೇಮಕಗೊಂಡರು. ಆಗ ಮೈಸೂರು ಅರಸರಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರಿಗೆ ಇವರಲ್ಲಿ ಅಪಾರ ವಿಶ್ವಾಸ. ತಾವು ದಿವಾನರಾಗಿದ್ದ ಅವಧಿಯಲ್ಲಿ



'ಮಾದರಿ' : ಮಿರ್ಜಾ

ಲಂಡನಿನ ದುಂಡುಮೇಜಿನ ಪರಿಷತ್ತಿನಲ್ಲಿ ಮಿರ್ಜಾ ಭಾಗವಹಿಸಿದರು. 1941 ಮೇ ತಿಂಗಳಿನಲ್ಲಿ ಮೈಸೂರಿನ ದಿವಾನ ಪದವಿಯಿಂದ ನಿವೃತ್ತರಾದರು.

ಮೈಸೂರು ಸಂಸ್ಥಾನಕ್ಕೆ ಇವರು ಸಲ್ಲಿಸಿದ ಸೇವೆಗಾಗಿ ಬ್ರಿಟಿಷ್ ಸರಕಾರ ಇವರಿಗೆ ಸಿ.ಐ.ಇ., ಒ.ಬಿ.ಇ. ಮತ್ತು ಸರ್ ಪ್ರಶಸ್ತಿಗಳನ್ನು ಕೊಟ್ಟು ಗೌರವಿಸಿತು.

1942 ಜೂನ್‌ನಲ್ಲಿ ಜಯಪುರದ ಮುಖ್ಯಮಂತ್ರಿ ಆದರು. ಅಲ್ಲಿ ಇವರು [illegible] ರಜಪುತಾನ ವಿಶ್ವವಿದ್ಯಾಲಯಕ್ಕೆ ತಳಹದಿ ಹಾಕಿದರು.

[illegible] ಜಿನ್ನಾ ನಿಜಾಮರಿಗೆ ಎಚ್ಚರಿಕೆ ಸಹ ಕೊಟ್ಟರು.

[illegible]

1959 ಜನವರಿ 5ರಂದು ಅವರು ನಿಧನರಾದರು.

ಮಿಜೊರಾಮ್

[illegible] ಮಿಜೊಗಳು. ಮಿಜೊಗಳ ನಾಡು ಮಿಜೊರಾಮ್.

[illegible] ಭಾರತದ ಕೇಂದ್ರಾಡಳಿತ ಪ್ರದೇಶವಾಯಿತು.

[illegible]

ಬಹುಕಾಲದ ವರೆಗೆ ಹೊರಗಿನವರಿಗೆ ಮಿಜೊ ಗುಡ್ಡಗಳು ಲುಷೈ ಗುಡ್ಡಗಳೆಂದೂ ಮಿಜೊ ಜನರು ಲುಷೈ ಜನರೆಂದೂ ಪರಿಚಿತರಾಗಿದ್ದರು. ಮಿಜೊ ಗುಡ್ಡಗಳಲ್ಲಿ 7.000 ಅಡಿ ಎತ್ತರದವೂ ಇವೆ. ಇಲ್ಲಿ ದಟ್ಟನೆಯ ಕಾಡುಗಳಿವೆ. ಆನೆ, ಚಿತ್ತಮೃಗ, ಹುಲಿ, ಕರಡಿ, ಜಿಂಕೆ, ಕಾಡುಮೇಕೆ- ಯಂತಹ ಪ್ರಾಣಿಗಳಿವೆ. ಕಾಡುಕೋಳಿ, ಪಾರಿವಾಳಗಳಿವೆ.

ಮಿಜೊರಾಮಿನ ಸ್ವಲ್ಪ ಭಾಗ ಮಾತ್ರ ಬಯಲು. ಇಂಥ ಬಯಲು [illegible]


ಮಿಜೊ ಜನರು 'ಝುಮ್' (ಆವರ್ತನ) ಬೇಸಾಯ ಪದ್ಧತಿಯನ್ನು [illegible] ಕೋಕೊ, ರಬ್ಬರ್, ಏಲಕ್ಕಿ ಹಾಗೂ ಗೋಡಂಬಿಗಳು ಮುಖ್ಯ ವಾಣಿಜ್ಯ [illegible]

ಈ ಜನ ಸಾಮಾನ್ಯವಾಗಿ ಗುಡ್ಡದ ಮೇಲಿರುವ ಹಳ್ಳಿಗಳಲ್ಲಿ ವಾಸಿಸುತ್ತಾರೆ.

ಮಿಜೊಗಳು ಮುಖ್ಯಸ್ಥರ ನೇತೃತ್ವದಲ್ಲಿ ಗುಂಪುಗುಂಪಾಗಿ ವಾಸಿಸುತ್ತಿದ್ದರು. [illegible] ಅನೇಕರು ಕ್ರೈಸ್ತ ಧರ್ಮಕ್ಕೆ ಮತಾಂತರ ಹೊಂದಿದವರು.

[illegible] ನೆಲೆಸಿದರು. ಮಿಜೊ ಗುಡ್ಡಗಳೆಡೆಗೆ ಇವರು ಬಂದದ್ದು 18ನೆಯ [illegible]

ಮಿಜೊರಾಮ್ ಹುಡುಗಿಯರ ಬೊಂಬು ನೃತ್ಯ





ಮೊದಲಿಗೆ ಲುಷೈ(ಮಿಜೊ) ಗುಡ್ಡಗಳನ್ನು ಆಡಳಿತಾನುಕೂಲಕ್ಕೋಸ್ಕರ ಎರಡು ಭಾಗಗಳಾಗಿ ಮಾಡಲಾಗಿತ್ತು. ಬಂಗಾಳ ಹಾಗೂ ಅಸ್ಸಾಂ [illegible] ಸೇರಿದ್ದುವು. 1898ರಲ್ಲಿ [illegible] [illegible] [illegible] ಅಸ್ಸಾಂ ಸರಕಾರದ ಆಡಳಿತಕ್ಕೆ ಒಪ್ಪಿಸಲಾಯಿತು.

ಮಿಜೊ ಜನ ಒಳ್ಳೆಯ ಯೋಧರು ಹಾಗೂ ಕ್ರೀಡಾಪ್ರಿಯರು. ಹಾಕಿ ಅವರ ಮೆಚ್ಚಿನ ಆಟ.

ಮಿತಾಕ್ಷರ ಸಂಹಿತೆ

ಧರ್ಮವನ್ನು ವಿವರಿಸುವ ಗ್ರಂಥಗಳು ಧರ್ಮಶಾಸ್ತ್ರಗಳು ಅಥವಾ ಸ್ಮೃತಿಗಳು. ಇವುಗಳಲ್ಲಿ ಪ್ರಸಿದ್ಧವಾದುವು ಎರಡು: ಒಂದು ಮನುವಿನಿಂದ ರಚಿತವಾದದ್ದು; ಇನ್ನೊಂದು ಯಾಜ್ಞವಲ್ಕ್ಯ ರೂಪಿಸಿದ್ದು.

ಯಾಜ್ಞವಲ್ಕ್ಯನ ಸ್ಮೃತಿಯ ಮೇಲಿನ ವ್ಯಾಖ್ಯೆ 'ಮಿತಾಕ್ಷರಾ' ಅಥವಾ 'ಮಿತಾಕ್ಷರ ಸಂಹಿತಾ'. ಇದನ್ನು ಬರೆದವನು ವಿಜ್ಞಾನೇಶ್ವರ. ಈತ ಕರ್ನಾಟಕದವನು. ಚಾಲುಕ್ಯ ಚಕ್ರವರ್ತಿ ಆರನೆಯ ವಿಕ್ರಮಾದಿತ್ಯನ ಆಸ್ಥಾನದಲ್ಲಿ ಇದ್ದವನು. ಸುಮಾರು 1120ರಲ್ಲಿ ಈತ 'ಮಿತಾಕ್ಷರ ಸಂಹಿತೆ'ಯನ್ನು ಬರೆದ.

ಬಿಹಾರ್–ಉತ್ತರ ಪ್ರದೇಶಗಳಲ್ಲಿ ಪಂಜಾಬ್, ಮಹಾರಾಷ್ಟ್ರ, ತಮಿಳುನಾಡು, ಕರ್ನಾಟಕ ಪ್ರದೇಶಗಳಲ್ಲಿ ಬಹುಮಂದಿ ಹಿಂದುಗಳಿಗೆ ಅನ್ವಯಿಸುವ ಕಾನೂನುಗಳಿಗೆ 'ಮಿತಾಕ್ಷರ' ಆಧಾರ.

ಮಿಥಿಕ್ ಸೊಸೈಟಿ

"ನಮ್ಮ ಪರಂಪರೆಯನ್ನು ಪುನಃ ಪ್ರಕಾಶಪಡಿಸುವಲ್ಲಿ ಮತ್ತು ಪರಡುವಲ್ಲಿ ಮಿಥಿಕ್ ಸೊಸೈಟಿ ಬಹಳಷ್ಟು ಕೆಲಸ ಮಾಡಿದೆ."

—ಇದು ಮಿಥಿಕ್ ಸೊಸೈಟಿಯನ್ನು ಕುರಿತು ಸರ್ವಪಲ್ಲಿ ರಾಧಾಕೃಷ್ಣನ್ ಆಡಿರುವ ಮಾತು.

ಬೆಂಗಳೂರಿನಲ್ಲಿ ಮಿಥಿಕ್ ಸೊಸೈಟಿ ಆರಂಭವಾದದ್ದು 1909ರಲ್ಲಿ, ಖ್ಯಾತ ವಿದ್ವಾಂಸ ಎ. ಎಂ. ಟಬರ್ಡ್‌ರ ಮನೆಯಲ್ಲಿ. ತಾತಾ ವಿಜ್ಞಾನ ಮಂದಿರದ ಪ್ರಥಮ ಡೈರೆಕ್ಟರ್ ಆಗಿದ್ದ ಮಾರಿಸ್ ಟ್ರೆವರ್ಸ್ ಮೊದಲನೆಯ ಅಧ್ಯಕ್ಷರು. ಆಗಿನ ಮೈಸೂರಿನ ದಿವಾನ ಮೋಕ್ಷಗುಂಡಂ ವಿಶ್ವೇಶ್ವರಯ್ಯನವರು ಸೊಸೈಟಿಗಾಗಿ ವಿಶಾಲ ನಿವೇಶನವನ್ನು ಸರಕಾರದಿಂದ ಕೊಡಿಸಿದರು. 1917ರಲ್ಲಿ ಡೇಲಿ ಮೆಮೋರಿಯಲ್ ಹಾಲ್ ಸಿದ್ಧವಾಗಿ, ಮಿಥಿಕ್ ಸೊಸೈಟಿ ಅಲ್ಲಿ ಕಾರ್ಯಾರಂಭ ಮಾಡಿತು.

ಭಾರತಾಧ್ಯಯನ, ಮಾನವಕುಲ ವಿಜ್ಞಾನ, ಶಾಸನಶಾಸ್ತ್ರಗಳ ಅಧ್ಯಯನವೂ ಅಲ್ಲದೆ ಚರಿತ್ರೆ, ಪುರಾತತ್ತ್ವ ಶೋಧನೆ, ತತ್ತ್ವಶಾಸ್ತ್ರಗಳ ಅಧ್ಯಯನ ಇಲ್ಲಿ ನಡೆಯುವ ಪ್ರಮುಖ ಕೆಲಸ. ಮಿರ್ಜಾ ಇಸ್ಮಾಯಿಲ್, ಬ್ರಜೇಂದ್ರನಾಥ ಸೀಲ್, ಆರ್. ಶ್ಯಾಮಶಾಸ್ತ್ರೀ, ಆರ್. ನರಸಿಂಹಾಚಾರ್, ಜಾನ್ ಮಾರ್ಷಲ್, ಎಸ್. ಕೃಷ್ಣಸ್ವಾಮಿ ಅಯ್ಯಂಗಾರ್, ಸಿ. ವಿ. ರಾಮನ್, ಎ. ಆರ್. ವಾಡಿಯಾ, ಬಿ. ಎಂ. ಶ್ರೀಕಂಠಯ್ಯ ಈ ಮೇಧಾವಿಗಳು ಸೊಸೈಟಿಯ ಅಭಿವೃದ್ಧಿಗೆ ನೆರವಾದರು; ಸಂಸ್ಥೆಗೆ ಕೀರ್ತಿ ತಂದರು.

ಸಂಸ್ಥೆ ತ್ರೈಮಾಸಿಕ ಪತ್ರಿಕೆ ಹೊರಡಿಸುತ್ತದೆ. ಸಂಸ್ಥೆಯಲ್ಲಿ 10,000 ಪುಸ್ತಕಗಳಿರುವ ಉತ್ತಮ ಗ್ರಂಥ ಭಂಡಾರವಿದೆ.

1973 ಸೆಪ್ಟೆಂಬರಿನಲ್ಲಿ ಮಿಥಿಕ್ ಸೊಸೈಟಿ ವಜ್ರ ಮಹೋತ್ಸವ ಆಚರಿಸಿತು.

ವಜ್ರಮಹೋತ್ಸವ : ಮಿಥಿಕ್ ಸೊಸೈಟಿ



ಮಿಥಿಲಾ

ಇಕ್ಷ್ವಾಕು ವಂಶದ ಅರಸು ನಿಮಿ. ಆತ ಭಾರೀ ಯಾಗವನ್ನು ಮಾಡಬೇಕೆಂದು ಯೋಚಿಸಿದ. ಮುಖ್ಯ ಪುರೋಹಿತನಾಗೆಂದು ವಸಿಷ್ಠನನ್ನು ಕೇಳಿದ. ಆಗ ಇಂದ್ರನ ಕೆಲಸದಲ್ಲಿ ಮಗ್ನನಾಗಿದ್ದ ವಸಿಷ್ಠ ತಾನು ಬರುವವರೆಗೆ ಕಾದಿರು ಎಂದ. ಆದರೆ ನಿಮಿ ಗೌತಮನ ಮುಖಂಡತ್ವದಲ್ಲಿ ಯಾಗ ಪ್ರಾರಂಭಿಸಿದ. ಹಿಂದಿರುಗಿ ಬಂದ ವಸಿಷ್ಠ ಯಾಗ ನಡೆಯುತ್ತಿರುವುದನ್ನು ಕಂಡು, ಕೋಪದಿಂದ, "ನಿಮಿ ಮರಣ ಹೊಂದಲಿ. ಆತ ವಿದೇಹಿ (ಎಂದರೆ ದೇಹವಿಲ್ಲದವನು) ಆಗಲಿ," ಎಂದು ಶಾಪವಿತ್ತ. ನಿಮಿ ಅಸುನೀಗಿದ. ಅಪೂರ್ಣವಾಗಿದ್ದ ಯಾಗವನ್ನು ಪೂರೈಸಲು ಋಷಿಗಳು ನಿಮಿಯ ದೇಹವನ್ನು ಮಥಿಸಿ(ಕಡೆದು) ಒಬ್ಬ ಮಗನನ್ನು ಪಡೆದರು. ಅವನ ಹೆಸರು ಮಿಥಿ. ಮಿಥಿ ಆಳಿದ ರಾಜ್ಯ ಮತ್ತು ರಾಜಧಾನಿಗೆ ಮಿಥಿಲಾ ಎಂದು ಹೆಸರು ಬಂದಿತು.

—ಇದು ಮಿಥಿಲೆಯನ್ನು ಕುರಿತ ಪುರಾಣ ಕಥೆ.

ಮಿಥಿಲಾದಲ್ಲಿ ವಿದೇಹ ವಂಶದ ಅರಸರು ಆಳಿದರು. ಜನಕ ಮಹಾರಾಜ ಈ ವಂಶದವನು. ಉಪನಿಷತ್ತು ಮತ್ತು ರಾಮಾಯಣದ ಕಾಲದಲ್ಲಿ ಈ ರಾಜ್ಯ ಬಹಳ ಉನ್ನತ ಸ್ಥಿತಿಯಲ್ಲಿತ್ತು. ಕ್ರಿ. ಪೂ. 6ನೆಯ ಶತಮಾನದ ವೇಳೆಗೆ ಅದು ಶ್ರೀಮಂತ ಗಣರಾಜ್ಯವಾಗಿತ್ತು. ಮಗಧದ ದೊರೆ ಅಜಾತಶತ್ರು ಸುಮಾರು ಕ್ರಿ. ಪೂ. 480ರಲ್ಲಿ ಮಿಥಿಲೆಯನ್ನು ಸ್ವಾಧೀನಪಡಿಸಿಕೊಂಡ.

ಹಿಂದಿನ ನಗರ ಹಾಳಾಗಿ ಕ್ರಮೇಣ ಮಹಾವಿದೇಹ ಅಥವಾ ತಿರಭುಕ್ತಿ ಎಂದು ಹೆಸರಾಯಿತು. ತಿರಭುಕ್ತಿಯೇ ಅಧುನಿಕ ತಿರಹುತ್. ಇಲ್ಲಿ ಕಪಿಲೇಶ್ವರ, ಕೂಪೇಶ್ವರ, ಮಿಥಿಲೇಶ್ವರ ಮೊದಲಾದ ಶೈವ ದೇವಾಲಯಗಳಿವೆ. ವಿಶ್ವಾಮಿತ್ರ, ಯಾಜ್ಞವಲ್ಕ್ಯ ಮುಂತಾದ ಮುನಿಗಳ ಆಶ್ರಮಗಳು ಈ ಪ್ರದೇಶದಲ್ಲಿದ್ದುವೆಂದು ನಂಬಿಕೆ. ಜಾನಕಿ, ರಾಮ, ದಶರಥರ ಮಂದಿರಗಳನ್ನು ಇಲ್ಲಿ ಕಟ್ಟಿಸಿದ್ದಾರೆ.

ಸಂಸ್ಕೃತ ವಿದ್ಯಾಪೀಠ ಮಿಥಿಲೆಯಲ್ಲಿತ್ತು. ವಿಕ್ರಮ ಶಿಲಾ ವಿಶ್ವವಿದ್ಯಾಲಯ ನಾಶವಾದ ಮೇಲೆ ಮಿಥಿಲಾ ವಿಶ್ವವಿದ್ಯಾನಿಲಯ ಪ್ರಖ್ಯಾತವಾಯಿತು. 12ರಿಂದ 16ನೆಯ ಶತಮಾನದ ವರೆಗೆ ಉಚ್ಚ್ರಾಯಸ್ಥಿತಿಯಲ್ಲಿದ್ದಿತು.

ಭಾರತೀಯ ಶಿಕ್ಷಣದ ಕೇಂದ್ರವಾಗಿತ್ತು. ನವದ್ವೀಪದ (ನದಿಯ) ವಿಶ್ವವಿದ್ಯಾನಿಲಯ ಪ್ರಾಬಲ್ಯಕ್ಕೆ ಬಂದಮೇಲೆ ಇದು ಅವನತಿ ಹೊಂದಿತು.

ಮಿನಾಂದರ್

ಮಿಲಿಂದ ರಾಜ ಅಥವಾ ಮಿನಾಂದರ್ ಇಂಡೋ ಗ್ರೀಕ್ ಪೀಳಿಗೆಯ ರಾಜರಲ್ಲಿ ಹೆಸರಾದವನು. ಆಳ್ವಿಕೆಯ ಕಾಲ ಕ್ರಿ. ಪೂ. 155–130. ಅವನ ಆಶ್ರಯದಲ್ಲಿದ್ದ ನಾಗಸೇನ ಎಂಬ ಬೌದ್ಧ ತತ್ತ್ವಜ್ಞಾನಿಗೂ ಮಿನಾಂದರನಿಗೂ ನಡೆದ ಸಂವಾದ ಲಿಖಿತರೂಪವೇ 'ಮಿಲಿಂದ ಪ್ರಶ್ನೆಗಳು' ಅಥವಾ 'ಮಿಲಿಂದ ಪನ್ಹ'. ಈ ಚರ್ಚೆಯ ಅನಂತರ ಮಿನಾಂದರ್ ಬೌದ್ಧ ಧರ್ಮಕ್ಕೆ ಸೇರಿದ. ಅದರ ಪೋಷಕನಾದ.

ಮಿಲಿಂದ ಪ್ರಶ್ನೆಗಳಿಂದ ಮಿನಾಂದರನು ಅಲಸಂದ ದ್ವೀಪದ ಕಲಸಿ ಗ್ರಾಮದಲ್ಲಿ ಹುಟ್ಟಿದವನೆಂದು ತಿಳಿಯುತ್ತದೆ. ಅವನು ಅತಿ ಪರಾಕ್ರಮಶಾಲಿ, ದೊಡ್ಡ ಪಂಡಿತ. ಪ್ರಾಚೀನ ಭಾರತದ ವಾಯುವ್ಯದ ಸ್ವಾಟ್ ಕಣಿವೆ. ಹಜಾರಾ ಜಿಲ್ಲೆ ಮತ್ತು ರಾವಿ ನದಿಯವರೆಗಿನ ಪಂಜಾಬ್ ಪ್ರದೇಶ ಮಿನಾಂದರನ ಆಳ್ವಿಕೆಯಲ್ಲಿದ್ದುವು. ಗಂಗಾ ನದೀ ಕಣಿವೆಯವರೆಗೂ ತನ್ನ ರಾಜ್ಯ ವಿಸ್ತರಿಸಲು ಇವನು ಪ್ರಯತ್ನಿಸಿ ವಿಫಲನಾದ. ಶಾಕಲ (ಈಗಿನ ಸಿಯಾಲ್‌ಕೋಟ್) ಇವನ ರಾಜಧಾನಿಯಾಗಿತ್ತು. ಇವನ ನಾಣ್ಯಗಳು ಕಾಬೂಲ್ ಹಾಗೂ ಮಥುರಾಗಳ ಬಳಿ ದೊರೆತಿವೆ.



ಬೌದ್ಧ ಧರ್ಮ ಸ್ವೀಕರಿಸಿದ ಮೇಲೆ ಮಿನಾಂದರ್ ತನ್ನ ಮಗನಿಗೆ ರಾಜ್ಯಾಡಳಿತವನ್ನು ಒಪ್ಪಿಸಿದ. ವಿರಾಗಿಯಾಗಿ 'ಅರ್ಹತ್' ಪದವಿಗೇರಿದ.

ಮಿನಾಂದರ್ ನ್ಯಾಯಪರನೂ ಪಂಡಿತನೂ ಬೌದ್ಧಮತಕ್ಕೆ ಆಶ್ರಯದಾತನೂ ಆದ ದೊರೆಯಾಗಿದ್ದ. ಪ್ರಜೆಗಳ ಪ್ರೀತಿಗೆ ಪಾತ್ರನಾಗಿದ್ದ. ಭಾರತೀಯತೆಗೆ ಮಾರುಹೋದ ವಿದೇಶೀ ರಾಜರಲ್ಲಿ ಈತನೂ ಒಬ್ಬ. ಬೌದ್ಧ ಧರ್ಮದ ದಂತ ಕಥೆಗಳಲ್ಲಿ ಈತನ ಪ್ರಸ್ತಾಪ ಬರುತ್ತದೆ. ಬೌದ್ಧ ಸಂಪ್ರದಾಯದಲ್ಲಿ ಇತರ ಯವನ ದೊರೆಗಳಿಗಿಂತ ಮಿನಾಂದರನಿಗೆ ಹೆಚ್ಚಿನ ಸ್ಥಾನವಿದೆ.

ನೋಡಿ : ಮಿಲಿಂದ ಪ್ರಶ್ನೆ

ಮಿನೂ ಮಸಾನಿ

ಅರ್ಥಶಾಸ್ತ್ರಜ್ಞ, ರಾಯಭಾರಿ ಮತ್ತು ರಾಜಕಾರಣಿಯಾಗಿ ಪ್ರಸಿದ್ಧಿ ಪಡೆದಿರುವವರು ಮಿನೂ ಮಸಾನಿ.



ಮಿನೂ ಮಸಾನಿ

ಈ ಶತಮಾನದ ಮೂರನೆಯ ದಶಕದಲ್ಲಿ ಜಯಪ್ರಕಾಶ ನಾರಾಯಣ ಮತ್ತಿತರರೊಂದಿಗೆ ಕಾಂಗ್ರೆಸ್ ಸೋಷಲಿಸ್ಟ್ ಪಕ್ಷದ ಸ್ಥಾಪಕರಾಗಿದ್ದರು. ಸ್ವಾತಂತ್ರ್ಯ ಸಮರದಲ್ಲಿ ಮುಖಂಡರಾಗಿ ದುಡಿದರು. ಹತ್ತಾರು ವರ್ಷ ಲೋಕಸಭಾ ಸದಸ್ಯರಾಗಿದ್ದರು. ಆರ್ಥಿಕ ಸ್ಥಿತಿಯ ವಿಶ್ಲೇಷಣೆಯಲ್ಲಿ ಪ್ರಸಿದ್ಧರು. ಸ್ವತಂತ್ರ ಪಕ್ಷದ ಕಾರ್ಯದರ್ಶಿಯಾಗಿಯೂ ಅಧ್ಯಕ್ಷರಾಗಿಯೂ ಇದ್ದರು.

ಮಿನೋಚೆರ್ ರುಸ್ತುಂ ಮಸಾನಿ ಅವರ ಜನನ 1905 ನವೆಂಬರ್ 20ರಂದು ಮುಂಬಯಿಯಲ್ಲಿ. ಮುಂಬಯಿ ಮತ್ತು ಲಂಡನ್‌ಗಳಲ್ಲಿ ಕಾಯಿದೆ ಮತ್ತು ಅರ್ಥಶಾಸ್ತ್ರಗಳ ಅಭ್ಯಾಸ ನಡೆಯಿತು. ಮುಂದೆ ಮುಂಬಯಿಯ ಮೇಯರ್ ಆಗಿ, ಬ್ರೆಜಿಲ್‌ನಲ್ಲಿ ಭಾರತದ ರಾಯಭಾರಿಯಾಗಿ ಕಾರ್ಯ ನಿರ್ವಹಿಸಿದರು.

ಅರ್ಥಶಾಸ್ತ್ರ, ಸಮಾಜವಾದ ಮತ್ತು ರಾಜಕಾರಣಗಳ ಮೇಲೆ ಮಸಾನಿಯವರು ಗ್ರಂಥಗಳನ್ನು ಪ್ರಕಟಿಸಿದ್ದಾರೆ. ಇವರು ಭಾರತ ಸರಕಾರದ ಆರ್ಥಿಕ ಯೋಜನೆ ಮತ್ತು ವಿದೇಶ ನೀತಿಗಳನ್ನು ಕಟುವಾಗಿ ಟೀಕಿಸಿದ್ದಾರೆ.

'ನಮ್ಮ ಹಿಂದೂಸ್ಥಾನ' ಮಿನೂ ಮಸಾನಿಯವರ ಶ್ರೇಷ್ಠ ಕೃತಿ.

ಮಿಲ್ಖಾಸಿಂಗ್

ನೋಡಿ : ಸಂಪುಟ ೬

ಮಿಲಿಂದ ಪ್ರಶ್ನೆ

ಗ್ರೀಕರ ದೊರೆ ಅಲೆಗ್ಝಾಂಡರ್ ಭಾರತದ ಮೇಲೆ ಕ್ರಿ. ಪೂ. ನಾಲ್ಕನೆಯ ಶತಮಾನದಲ್ಲಿ ದಂಡೆತ್ತಿ ಬಂದ. ಭರತಖಂಡದ ವಾಯುವ್ಯ ಭಾಗವನ್ನು ಗೆದ್ದು ಅಲ್ಲಿ ತನ್ನ ಪ್ರತಿನಿಧಿಯನ್ನು ಬಿಟ್ಟುಹೋದ. ಕಾಲಕ್ರಮೇಣ ಅಂಥ ಪ್ರತಿನಿಧಿ ಒಬ್ಬ ತನ್ನದೇ ಆದ ಸಾಮ್ರಾಜ್ಯವನ್ನು ಅಲ್ಲಿ ಸ್ಥಾಪಿಸಿದ. ಅವನ ಸಂತತಿಯವನು ಮಿಲಿಂದ (ಆಳ್ವಿಕೆಯ ಕಾಲ : ಕ್ರಿ. ಪೂ. 155-130).

ಮಿಲಿಂದ ಎಷ್ಟು ಪರಾಕ್ರಮಶಾಲಿಯೋ ಅಷ್ಟೇ ದೊಡ್ಡ ಪಂಡಿತ, ವಾದದಲ್ಲಿ ನಿಪುಣ. ವಾದದಲ್ಲಿ ತನ್ನನ್ನು ಎದುರಿಸುವಂತೆ ಸವಾಲು ಹಾಕಿದ. ಭರತಖಂಡದ ಅನೇಕ ಪಂಡಿತರು ಅವನಲ್ಲಿ ವಾದಮಾಡಿ ಸೋತರು. ತನಗೆ ಸಮಾನರಾದ ಪರಾಕ್ರಮಿಗಳೂ ಪಂಡಿತರೂ [illegible] ಭಾರತದಲ್ಲಿಯೇ [illegible] "ಈ [illegible] ಹೊಟ್ಟು. ಈ ಜಂಬೂದ್ವೀಪ ಬರಿ ಹೊಟ್ಟು. ನನ್ನ ಸಂಶಯವನ್ನು ಪರಿಹರಿಸಬಲ್ಲ ಗುರು ಈ ದೇಶದಲ್ಲಿ ಯಾರೂ ಇಲ್ಲ," ಎಂದು ಸಾರಿದ.

ಆ ಕಾಲದಲ್ಲಿ ನಾಗಸೇನ ಎಂಬ ಒಬ್ಬ ಬೌದ್ಧ ಭಿಕ್ಷು ಇದ್ದ. ಅದ್ಭುತ ಧೀಶಕ್ತಿಯ ಆ ಭಿಕ್ಷು, ಒಮ್ಮೆ ಮಿಲಿಂದನ ರಾಜಧಾನಿಯಾದ ಶಾಕಲದಲ್ಲಿ ಭಿಕ್ಷೆಗಾಗಿ ಹೋಗುತ್ತಿದ್ದ. ರಾಜ ಮಿಲಿಂದ ಅವನನ್ನು ನೋಡಿದ. ಭಿಕ್ಷುವಿನ ಭವ್ಯ ವ್ಯಕ್ತಿತ್ವ ರಾಜನಿಗೆ ಹಿಡಿಸಿತು. ಆತ ತನ್ನ ಸಂಶಯವನ್ನು [illegible] ತನ್ನ ಸಂಶಯವನ್ನು ಬಗೆಹರಿಸಬೇಕೆಂದು ಕೇಳಿಕೊಂಡ.

ಮಿಲಿಂದ ರಾಜ ತನ್ನ ರಾಜತ್ವವನ್ನು ಮರೆತು ಕೇವಲ ಪಂಡಿತನಂತೆ [illegible] ರಾಜ ಒಪ್ಪಿಕೊಂಡ. ವಾದ ರಾಜನ ಆಸ್ಥಾನದಲ್ಲಿ ನಡೆಯಬೇಕೆಂದು ಗೊತ್ತಾಯಿತು. ಮಿಲಿಂದನ ಆಸ್ಥಾನದಲ್ಲಿ ರಾಜ ಮಿಲಿಂದನಿಗೂ ಭಿಕ್ಷು ನಾಗಸೇನನಿಗೂ ವಾದ ನಡೆಯಿತು.

[illegible] ಜನ್ಮದಿಂದ ಇನ್ನೊಂದು ಜನ್ಮ ಹೇಗಾಗುತ್ತದೆ? ಬುದ್ಧನ ಕಾಲದಲ್ಲಿ ಆತನ ಬೋಧೆಯನ್ನು ಚೆನ್ನಾಗಿ ಅರ್ಥಮಾಡಿಕೊಂಡವರಿಗೆ ಇಂಥ ಸಂದೇಹ [illegible] ಮಿಲಿಂದನ ಪ್ರಶ್ನೆಗಳಿಗೆ ಉತ್ತರ ಹೇಳಿ ಈ ಸಂಶಯವನ್ನು ಪರಿಹರಿಸಿದ.

ಗ್ರಂಥರೂಪ ತಾಳಿದ ಮಿಲಿಂದ–ನಾಗಸೇನರ ಸಂವಾದವೇ 'ಮಿಲಿಂದ ಪ್ರಶ್ನೆ' ('ಮಿಲಿಂದ ಪನ್ಹ'). ಇದು ಪಾಳಿ ಭಾಷೆಯಲ್ಲಿದೆ; ಪಾಳಿಯಲ್ಲಿ ಗದ್ಯ ರೂಪದಲ್ಲಿ ಅಂದಿನ ಕಾಲದಲ್ಲಿ ಗ್ರಂಥಗಳು ಇರಲಿಲ್ಲ. ಅದು ಪಾಳಿ ಗದ್ಯಶೈಲಿಗೆ ಒಂದು ಮಾದರಿಯಾಯಿತು. ಅದರಲ್ಲಿನ ಶೈಲಿ ಸುಂದರ; ವಿಷಯ ಗಹನ.

ಮಿಹಿರಗುಲ

ಬೌದ್ಧಮತ ದ್ವೇಷಿಯಾದ ಹೂಣ ದೊರೆ, ಮಿಹಿರಗುಲ. ಈತನ ಆಳ್ವಿಕೆಯ ಆರಂಭ ಸುಮಾರು 520ರಲ್ಲಿ.

ಈತ ಮಾರಿ ದೇವತೆಯ ಆರಾಧಕ. ಬೌದ್ಧ ಸನ್ಯಾಸಿಗಳನ್ನು ಸಿಕ್ಕ ಸಿಕ್ಕಲ್ಲಿ ಕೊಲೆ ಮಾಡಿಸುತ್ತಿದ್ದ. ಬೌದ್ಧ ದೇವಾಲಯಗಳನ್ನು ನೆಲಸಮ ಮಾಡುತ್ತಿದ್ದ. ಮಿಹಿರಗುಲನ ಕ್ರೂರಸ್ವಭಾವದಿಂದ ಪ್ರಜೆಗಳಲ್ಲಿ ತೀವ್ರ ಅಸಮಾಧಾನ ತಲೆದೋರಿತು.

ಮಿಹಿರಗುಲನ ರಾಜ್ಯಕ್ಕೆ ಬಂದ ಚೀನೀ ಯಾತ್ರಿಕ ಸುಂಗ್‌ಯುನ್ ಈತನ ಕ್ರೂರ ಕೃತ್ಯಗಳನ್ನು ವಿವರಿಸಿದ್ದಾನೆ. ಆನೆಗಳನ್ನು ಪರ್ವತಶಿಖರಗಳಿಂದ ಕೆಳಕ್ಕುರುಳಿಸಿ ಅವು ಯಾತನೆಪಡುತ್ತ ಜೀವ ಬಿಡುವುದನ್ನು ನೋಡುವುದು ಇವನ ಹವ್ಯಾಸವಾಗಿದ್ದಿತಂತೆ. ಯುದ್ಧವೆಂದರೆ ಇವನಿಗೆ ಬಹಳ ಇಷ್ಟ.

ಗುಪ್ತ ಸಂತತಿಯ ನರಸಿಂಹ ಗುಪ್ತ ಮತ್ತು ಇತರ ಅರಸರು ಸೇರಿ ಮಿಹಿರಗುಲನನ್ನು ಕಾಶ್ಮೀರಕ್ಕೆ ಓಡಿಸಿದರು. ಅಲ್ಲೇ ಸುಮಾರು 542ರಲ್ಲಿ ಈತನ ಅಂತ್ಯವಾಯಿತು. ಭಾರತದಲ್ಲಿ ಹೂಣ ಸಾಮ್ರಾಜ್ಯದ ಪತನಕ್ಕೆ ಅವನು ಕಾರಣನಾದ.

ಮಿಹಿರ್‌ಸೇನ್

ನೋಡಿ : ಸಂಪುಟ ೬

ಮೀನಾಕ್ಷಿಸುಂದರಂ ಪಿಳ್ಳೈ

ನೋಡಿ : ಸಂಪುಟ ೫

ಮೀಮಾಂಸಾ ದರ್ಶನ

[illegible] ದರ್ಶನಗಳಲ್ಲಿ ಎರಡನ್ನು ಮೀಮಾಂಸಾ ಎಂದು ವ್ಯವಹರಿಸುತ್ತಾರೆ. ಇವುಗಳಲ್ಲಿ ಒಂದು ಪೂರ್ವ ಮೀಮಾಂಸಾ, ಇನ್ನೊಂದು ಉತ್ತರ [illegible] ವುದು ವಾಡಿಕೆ.

ಬಾದರಾಯಣನ ಶಿಷ್ಯನಾದ ಜೈಮಿನಿ, ಪೂರ್ವ ಮೀಮಾಂಸಾ ದರ್ಶನದ ಪ್ರತಿಪಾದಕ. ಈತನು ಮೀಮಾಂಸಾ ಸೂತ್ರಗಳ ಕರ್ತೃ. ಇದು ರಚಿತ [illegible] ಕ್ರಿ. ಶ. 200 [illegible] ಎಂಬ ಅಭಿಪ್ರಾಯವಿದೆ.

5ನೆಯ ಶತಮಾನದ ಶಬರಸ್ವಾಮಿ, ಅವನ ಅನಂತರ ಪ್ರಭಾಕರ (ಸು. 600). ಕುಮಾರಿಲ (ಸು. 700) ಜೈಮಿನಿಯ ಮೀಮಾಂಸಾ ಸೂತ್ರಗಳಿಗೆ ಭಾಷ್ಯಗಳನ್ನು ಬರೆದಿದ್ದಾರೆ. ವೇದಗಳ ಮೊದಲ ಭಾಗಗಳ –ಮುಖ್ಯವಾಗಿ ಬ್ರಾಹ್ಮಣಗಳ– ಆಧಾರದ ಮೇಲೆ ಈ ದರ್ಶನ ಬೆಳೆದಿರುವುದರಿಂದ ಇದಕ್ಕೆ 'ಪೂರ್ವ ಮೀಮಾಂಸಾ' ಎಂಬ ಹೆಸರು. ವೇದಗಳಲ್ಲಿ ಹೇಳಿರುವ ಕರ್ಮಗಳನ್ನು ಅನುಸರಿಸದೆ ಮುಕ್ತಿ ಸಿಗುವುದಿಲ್ಲ; ಈ ಕರ್ಮಗಳನ್ನು ಅನುಸರಿಸುವುದೇ ಧರ್ಮ—ಎಂದು ಪೂರ್ವ ಮೀಮಾಂಸಕರು ಹೇಳುತ್ತಾರೆ. ಎಂದೇ ಈ ದರ್ಶನಕ್ಕೆ ಕರ್ಮ ಮೀಮಾಂಸಾ ಎಂಬ ಹೆಸರೂ ಉಂಟು.

ವೇದವನ್ನು ಸರಿಯಾದ ರೀತಿಯಲ್ಲಿ ಅಭ್ಯಸಿಸಲು ಮೀಮಾಂಸಕರು ಹಲವಾರು ನಿಯಮಗಳನ್ನೇ ರೂಪಿಸಿದರು. ವೇದಗಳನ್ನು ಸರಿಯಾಗಿ ಅರ್ಥಮಾಡುವ ಬಗೆಗೆ ಹಾಗೂ ವೇದಗಳಲ್ಲಿ ಬರಬಹುದಾದ ಸಂದೇಹಗಳ ನಿವಾರಣೆಯ ಬಗೆಗೆ ದೀರ್ಘ ಪ್ರಯತ್ನ ಈ ದರ್ಶನದ ಮೂಲಕ ನಡೆದದ್ದರಿಂದ ಈ ದರ್ಶನಕ್ಕೆ 'ವಾಕ್ಯಶಾಸ್ತ್ರ' ಎಂಬ ಹೆಸರೂ ಬಂತು.

ಜ್ಞಾನವೊಂದೇ ಮುಕ್ತಿಗೆ ದಾರಿ ತೋರಿಸಲಾರದು. ಅದಕ್ಕೆ ಧಾರ್ಮಿಕ ಕರ್ಮಗಳೂ ಶುದ್ಧ ಆಚರಣೆಗಳೂ ಬೇಕು. ಇದಿಲ್ಲದೆ ಜ್ಞಾನ ವ್ಯರ್ಥ; ಮೋಕ್ಷ ಅಸಾಧ್ಯ ಎಂಬುದು ಮೀಮಾಂಸಕರ ಅಭಿಪ್ರಾಯ. ಕರ್ಮಗಳನ್ನು ಯಾವ ರೀತಿ ಮಾಡಬೇಕು ಎನ್ನುವುದು ವಿಧಿ; ಯಾವುದನ್ನು ಮಾಡಬಾರದು ಎನ್ನುವುದು ನಿಷಿದ್ಧ. ಈ ವಿಚಾರಗಳನ್ನು ಕುರಿತು ಈ ದರ್ಶನದಲ್ಲಿ ಹೇಳಲಾಗಿದೆ. ಇದನ್ನು 'ಧಾರ್ಮಿಕ ಕರ್ಮಗಳ ವ್ಯವಹಾರ ಶಾಸ್ತ್ರ' ಎನ್ನುವುದಿದೆ.

ನೋಡಿ : ವೇದಾಂತದರ್ಶನ

ಮೀರಾಬಾಯಿ

" ಮೇರೇ ತೋ ಗಿರಿಧರ್ ಗೋಪಾಲ್ -ದೂಸರೋ ನ ಕೋಯಿ "

--ಇದು ಮೀರಾಬಾಯಿಯ ಒಂದು ಭಜನೆಯ ಪಲ್ಲವಿ.

ರಸ್ತೆಯಲ್ಲಿ ಒಂದು ಮದುವೆಯ ಮೆರವಣಿಗೆ ಹೋಗುತ್ತಿತ್ತು. ಮನೆಯ ಮಹಡಿಯಲ್ಲಿ ನಿಂತು ಇದನ್ನು ಕುತೂಹಲದಿಂದ ನೋಡುತ್ತಿದ್ದ ಪುಟ್ಟ ಹುಡುಗಿ, "ಅಮ್ಮಾ, ನನ್ನ ಮದುಮಗ ಎಲ್ಲಿದ್ದಾನೆ?" ಎಂದು ತಾಯಿಯನ್ನು ಕೇಳಿದಳು. "ನಿನ್ನ ಕೈಯಲ್ಲಿ ಇರುವ ಶ್ರೀಕೃಷ್ಣನ ಮೂರ್ತಿಯೇ ನಿನ್ನ ಮದುಮಗ", ಎಂದು ತಾಯಿ ನಗುತ್ತ ಉತ್ತರಿಸಿದಳು. ಐದು [illegible] ಸ್ಥಾಪಿಸಿದಳು. ಅವನ ಹಂಬಲದಲ್ಲೇ ಜೀವನವನ್ನು ಕಳೆದಳು.



" ದೂಸರೋ ನ ಕೋಯೀ "

ಜೋಧಪುರದ ರಾಜಮನೆತನ. [illegible] ದಲ್ಲಿ, ಮೀರಾಬಾಯಿಯ ಜನನ. ಚಿಕ್ಕಂದಿನಲ್ಲೇ ತಂದೆ ತಾಯಿಯನ್ನು ಕಳೆದು ಕೊಂಡು ಇವಳು ಅಜ್ಜನ ಆರೈಕೆಯಲ್ಲಿ ಬೆಳೆದಳು.

[illegible] ಮನೆಯಲ್ಲಿ ಒತ್ತಾಯಿಸಿದರು. "ಕೃಷ್ಣನಲ್ಲದೆ ಬೇರಾವ ದೇವರನ್ನೂ ನಾನು ಪೂಜಿಸಲಾರೆ," ಎಂದು ಮೀರಾ ಹೇಳಿದಳು.

[illegible] ಲಯಗಳಲ್ಲೇ ಕಳೆಯತೊಡಗಿದಳು. ಮನೆಯವರಿಗೆ ಅದು ಸಹ್ಯವಾಗಲಿಲ್ಲ. [illegible]

[illegible] ತ್ತದೆ. ಹಿಂದಿ, ರಾಜಸ್ಥಾನೀ ಮತ್ತು ಗುಜರಾತೀ ಭಾಷೆಗಳಲ್ಲೂ ಇವಳು [illegible] ವಯಸ್ಸಿನಲ್ಲಿ ಕೊನೆಯ ಉಸಿರೆಳೆದಳು.

ಮೀರಾಬೆನ್

ಮೆಡಲೀನ್ ಸ್ಲೇಡ್. ಬ್ರಿಟಿಷ್ ನೌಕಾಬಲಾಧಿಪತಿಯ ಮಗಳು. ಭಾರತಕ್ಕೆ ಬಂದು ಮಹಾತ್ಮಗಾಂಧಿಯವರ ನಿಕಟ ಅನುಯಾಯಿಯಾದರು. 'ಮೀರಾಬೆನ್' ಎಂದು ಕರೆಯಲ್ಪಟ್ಟರು.

[illegible]

ಅಮೇರಿಕ, ಇಂಗ್ಲೆಂಡುಗಳಲ್ಲಿ 1934ರಲ್ಲಿ ಉಪನ್ಯಾಸ ಪ್ರವಾಸ ಕೈಗೊಂಡು ಭಾರತದ ಸ್ವಾತಂತ್ರ್ಯ ಆಂದೋಲನಕ್ಕೆ ಅಲ್ಲಿನ ಜನರ ಸಹಾನುಭೂತಿ ಗಳಿಸಲು ಪ್ರಯತ್ನಿಸಿದರು. ಹಿಂದಿರುಗಿ, ಸಾಬರಮತಿ ಆಶ್ರಮದಲ್ಲಿ ನೆಲೆಸಿದರು. 1932-33 ಹಾಗೂ 1942-44 ಅವಧಿಯಲ್ಲಿ ಕಾನೂನು ಭಂಗ ಚಳುವಳಿಯಲ್ಲಿ ಭಾಗವಹಿಸಿ ಸೆರೆಮನೆವಾಸ ಅನುಭವಿಸಿದರು.

ಮೀರಾಬೆನ್ ಅವರು 1947ರಲ್ಲಿ ಹೃಷೀಕೇಶದಲ್ಲಿ ಒಂದು ಆಶ್ರಮ ಸ್ಥಾಪಿಸಿದರು. ಅಲ್ಲಿನ ಅರಣ್ಯ ಪ್ರದೇಶದಲ್ಲಿ ಒಂದು ಪಶು ಅಭಿವೃದ್ಧಿ ಕೇಂದ್ರವನ್ನೂ ಸ್ಥಾಪಿಸಿದರು.

ಮುಂಡಕೋಪನಿಷತ್

ಯಾವಾಗಲೂ ಜೊತೆಯಲ್ಲಿರುವ ಗೆಳೆಯ ಹಕ್ಕಿಗಳೆರಡು ಒಂದೇ ಮರವನ್ನು ಆಶ್ರಯಿಸಿವೆ. ಅವೆರಡರಲ್ಲಿ ಒಂದು ಸವಿಯಾದ ಹಣ್ಣನ್ನು ತಿನ್ನುತ್ತದೆ; ಇನ್ನೊಂದು ತಿನ್ನದೆ ನೋಡುತ್ತದೆ.

[illegible] ಎಂಬ ಮಂತ್ರದ ಭಾವಾನುವಾದ ಇದು.

ದೇಹ ಎಂಬ ಒಂದು ಮರವನ್ನು ಜೀವಾತ್ಮ, ಪರಮಾತ್ಮ ಆಶ್ರಯಿಸಿವೆ. [illegible] ಹೇಳಿದೆ.

ಮುಂಡಕೋಪನಿಷತ್ ಅಥರ್ವವೇದಕ್ಕೆ ಸೇರಿದ್ದು. ಮುಂಡನ (ಕ್ಷೌರ) [illegible] ತ್ತದೆ ಎಂಬ ಅರ್ಥದಲ್ಲಿ, ಅಥವಾ ಮುಂಡನ ಮಾಡಿಸಿಕೊಂಡಿರುವ [illegible]

[illegible]

ಬ್ರಹ್ಮ ತನ್ನ ಮಗ ಅಥರ್ವನಿಗೆ, ಅಥರ್ವ ಅಂಗೀರಸನಿಗೆ,–ಹೀಗೆ ಪರಂಪರೆ [illegible] ನಿಷತ್ ರೂಪಿತವಾಗಿದೆ.

ಓಂಕಾರವೇ ಧನುಸ್ಸು, ಆತ್ಮವೇ ಬಾಣ; ಬ್ರಹ್ಮವೇ ಗುರಿ. ಎಚ್ಚರಿಕೆ ತಪ್ಪದೆ ಗುರಿಯನ್ನು ಸಾಧಿಸಬೇಕು –ಎಂಬುದು ಮುಂಡಕೋಪನಿಷತ್ತಿನ ಉಪದೇಶ.

ಮುಂಡರಗಿ ಭೀಮರಾಯ

[illegible]

ಅವನ ಮಗ ರಾಮರಾಯ ಹಿತ್ತಲಮನಿ ಬಳಿ ಗ್ರಾಮಾಧಿಕಾರಿಯಾಗಿದ್ದ. ಅವನ ಪುತ್ರನೇ ಮುಂಡರಗಿ ಭೀಮರಾಯ. ಇಂಗ್ಲಿಷ್ ಚೆನ್ನಾಗಿ ಅಭ್ಯಾಸ ಮಾಡಿದ್ದ ಭೀಮರಾಯ ಆರಂಭದಲ್ಲಿ ಬಳ್ಳಾರಿ ಮತ್ತು ಧಾರವಾಡ ಜಿಲ್ಲೆಗಳಲ್ಲಿ ಮಾಮಲೇದಾರನೆಂದು ಕಾರ್ಯ ನಿರ್ವಹಿಸಿದ. ಅವನ ಸ್ವಾಭಿಮಾನ ಸ್ವತಂತ್ರ ಮನೋವೃತ್ತಿಗೆ ಸರಕಾರಿ ಸೇವೆ ಸರಿಬರಲಿಲ್ಲ. 1854ರಲ್ಲಿ ಆ ಹುದ್ದೆಯನ್ನು ತ್ಯಜಿಸಿ ಬೆಣ್ಣೆಹಳ್ಳಿಯಲ್ಲಿ ಇರತೊಡಗಿದ.

ಭೀಮರಾಯನ ಮೊದಲ ಹೆಂಡತಿ ಜೀವೂಬಾಯಿ ಕುಂದಗೋಳದ ನಾಡಗೌಡರ ಮನೆತನದವಳು. ಎರಡನೆಯವಳು ವೆಂಕೂಬಾಯಿ ಕುಕನೂರಿನ ಮಾದನಗೌಡ ಪಾಟೀಲರ ಮಗಳು.

ಭೀಮರಾಯನಿಗೆ ದೇಶ ಹಾಳುಗೆಡವುತ್ತಿರುವ ಬ್ರಿಟಿಷರ ನೀತಿ ಸರಿಬರಲಿಲ್ಲ. 1857ರಲ್ಲಿ ಉತ್ತರ ಭಾರತದಲ್ಲಿ ನಡೆದ ಸಿಪಾಯಿ ಬಂಡಾಯದಿಂದ ಸ್ಫೂರ್ತಿಗೊಂಡು ಭೀಮರಾಯ ಕ್ರಾಂತಿಗೆ ಅಣಿಯಾದ. ನರಗುಂದ ಬಾಬಾಸಾಹೇಬನೊಡನೆ ಸಂಚು ನಡೆಸಿದ. ಅವರಂತೆ ಸುರಪುರದ ಜೊತೆಯೂ ಸಂಚು ಇತ್ತು.

ಹಮ್ಮಿಗಿ, ಸೊರಟೂರು, ಗೋವನಕೊಪ್ಪದ ದೇಸಾಯರು ಭೀಮರಾಯನ ಒಳಸಂಚಿನಲ್ಲಿ ಪ್ರತ್ಯಕ್ಷ ಸೇರಿದರು. ಹೆಬ್ಬಳ್ಳಿ ಜಾಗೀರದಾರರು, ಶಿರಹಟ್ಟಿ ದೇಸಾಯರು, ಸವಣೂರ ನವಾಬರು ಅಪ್ರತ್ಯಕ್ಷ ಬೆಂಬಲವನ್ನಿತ್ತರು. 1858 ಮೇ 27ನೆಯ ದಿನ ಬಂಡಾಯ ಪ್ರಾರಂಭಿಸಬೇಕೆಂದು ಬಾಬಾಸಾಹೇಬ ಮತ್ತು ಭೀಮರಾಯ ಮೊದಲೇ ನಿರ್ಧರಿಸಿದ್ದರು. ಕ್ರಾಂತಿಯ ಸುಳಿವು ದಟ್ಟವಾಗಿ ಹಬ್ಬಿದಂತೆ ಧಾರವಾಡದ ಕಲೆಕ್ಟರನು ಭೀಮರಾಯನನ್ನು ಧಾರವಾಡಕ್ಕೆ ಆಹ್ವಾನಿಸಿದ. ಆಗ ಆತ ನಾಪತ್ತೆಯಾದ. ಭೀಮರಾಯನ ಗೆಳೆಯ ಹಮ್ಮಿಗಿ ಕೆಂಚನಗೌಡನನ್ನು ಸ್ಥಾನಬದ್ಧತೆಯಲ್ಲಿ ಇಡಬೇಕೆಂದು ಕೊಲ್ಹಾಪುರದಿಂದ ಬ್ರಿಟಿಷ್ ಅಧಿಕಾರಿ ಆಜ್ಞೆ ಕಳುಹಿಸಿದ. ಕೆಂಚನಗೌಡನೂ ಸಿಗಲಿಲ್ಲ.

ಹಮ್ಮಿಗಿ ಕೋಟೆಯಲ್ಲಿ ಭೀಮರಾಯನ ಸಂಗಡದವರು ಸಾಕಷ್ಟು ಮದ್ದುಗುಂಡುಗಳನ್ನು ಸಂಗ್ರಹಿಸಿದ್ದರು. ಭೀಮರಾಯನ ನೌಕರಿ ಬಿಟ್ಟು ಹೋದ ಮುಸಲ್ಮಾನನೊಬ್ಬ ಈ ಸಂಗತಿಯನ್ನು ಡಂಬಳದ ಫೌಜದಾರನಿಗೆ ತಿಳಿಸಿದ. ಧಾರವಾಡದ ಪೋಲೀಸ್ ಮುಖ್ಯಸ್ಥನ ಅಪ್ಪಣೆಯಂತೆ ಮೇ 23ರಂದು ಹಮ್ಮಿಗಿ ಕೋಟೆಯ ತನಿಖೆ ನಡೆಯಿತು. ಶೋಧದಲ್ಲಿ ಅಕ್ರಮ ಶಸ್ತ್ರಾಸ್ತ್ರ ದೊರೆತಾಗ ಫೌಜದಾರ ಆ ಸಂಗ್ರಹಕ್ಕೆ ಬೀಗಮುದ್ರೆ ಹಾಕಿ ಕಾವಲಿನ್ನಿರಿಸಿ ಧಾರವಾಡಕ್ಕೆ ವರದಿ ಕಳುಹಿಸಿದ. ಸಂಗತಿ ತಿಳಿದ ಕೆಂಚನಗೌಡ ಬೆಣ್ಣೆಹಳ್ಳಿಗೆ ಓಡಿಬಂದ.

ಇನ್ನು ವಿಳಂಬ ಮಾಡುವುದರಲ್ಲಿ ಅರ್ಥವಿಲ್ಲವೆಂದು ಭೀಮರಾಯ ಹಲವು ಬೇಡರನ್ನೂ ಇತರ ಅನುಯಾಯಿಗಳನ್ನೂ ಕೂಡಿಕೊಂಡು ಮೇ 24ರಂದು ಪೋಲೀಸ್ ಪಡೆಗಿಂತ ಮೊದಲೇ ಹಮ್ಮಿಗಿಗೆ ಬಂದ. ಪೋಲೀಸರಿಗೆ ಸಮಾಚಾರ ನೀಡಿದವನು ಮೊದಲು ಆಹುತಿಯಾದ. ಭೀಮರಾಯನ ಜನರು ಕೋಟೆಯ ಬೀಗಮುರಿದು ಆಯುಧ ಪಡೆದು ಡಂಬಳಕ್ಕೆ ನಡೆದರು. ದಾರಿಯಲ್ಲಿ ಫೌಜದಾರ ವೆಂಕಟರಾಯನನ್ನು ಸೆರೆಹಿಡಿದರು. ಭೀಮರಾಯನ ಸಂಗಡಿಗರು ಪೋಲೀಸರಿಂದ ಕೆಲವು ಬಂದೂಕುಗಳನ್ನು ಕಸಿದರು. 25ರಂದು ಗದುಗಿನ ಅಂಚೆ-ತಂತಿ ಕಚೇರಿಯನ್ನು ನಾಶಗೊಳಿಸಿ ಕವಲೂರಿನಲ್ಲಿ ವಸತಿ ಮಾಡಿದರು.

ಭೀಮರಾಯ ಬಂಡಾಯ ಹೂಡಿದ ಸಮಾಚಾರ ತಿಳಿದ ಕೊಪ್ಪಳದ ಅಧಿಕಾರಿ ಹೆರಿಗೆಗೆಂದು ಕುನೂರಿಗೆ ಬಂದ ಭೀಮರಾಯನ ಎರಡನೆಯ ಹೆಂಡತಿ ವೆಂಕೂಬಾಯಿಯನ್ನೂ ಆಕೆಯ ಒಂದು ತಿಂಗಳ ಮಗುವನ್ನೂ ಸೆರೆಹಿಡಿದು ಕೊಪ್ಪಳದಲ್ಲಿ ಬಂಧಿಸಿಟ್ಟ. ಈ ಸಮಾಚಾರ ತಿಳಿದ ಭೀ ರಾಯ ಸಂತಪ್ತನಾಗಿ ಕೊಪ್ಪಳದ ದಾರಿ ಹಿಡಿದ. ದಾರಿಯಲ್ಲಿ ಅ ಗುಡ್ಡಗಾಡು ಜನರು ಭೀಮರಾಯನ ಪಕ್ಷ ಸೇರಿದರು.

ಮೇ 30ರಂದು ಕೊಪ್ಪಳ ಕೋಟೆಯನ್ನು ಭೀಮರಾಯ ಸುಲಭ ಆಕ್ರಮಿಸಿದ. ಬಳ್ಳಾರಿಯಿಂದ ಬ್ರಿಟಿಷ್ ಸೈನ್ಯವು ಬಂದು ಕೋಟೆಯ ಮುತ್ತಿತು. ಲಿಂಗಸುಗೂರ್, ಕರ್ನೂಲಿನಿಂದಲೂ ಪಡೆಗಳು ಬಂದ

ಜೂನ್ 1ನೆಯ ದಿನಾಂಕ ದಾಳಿಯ ಸಿದ್ಧತೆ ನಡೆಯಿತು. ಭೀಮರಾ ಹತ್ತಿರ ಸುಮಾರು 400 ಜನರಿದ್ದರು. ನಾಗರಿಕರಿಗೆ ಕೋ ತ್ಯಜಿಸುವಂತೆ ಮೂರು ಗಂಟೆಯ ಅವಧಿಕೊಟ್ಟು ಮೇಜರ್ ಹ ದಾಳಿಗೆ ಆಜ್ಞೆಯಿತ್ತ. ಮಧ್ಯಾಹ್ನ ಮೂರು ಗಂಟೆಯ ಸುಮಾರಿಗೆ ಭೀ ರಾಯ ಮತ್ತು ಕೆಂಚನಗೌಡ ಹೋರಾಡುತ್ತ ಮಡಿದರು.

ಭೀಮರಾಯ ಯಾವ ರಾಜಮನೆತನದವನೂ ಆಗಿರಲಿಲ್ಲ. ದೇ ಸ್ವಾತಂತ್ರ್ಯಕ್ಕಾಗಿ ವಿದೇಶೀಯರೊಡನೆ ಹೋರಾಡಿ ವೀರಗತಿ ಪ ಶ್ರೀಸಾಮಾನ್ಯ ಆತ.

ನೋಡಿ : ನರಗುಂದ ಬಾಬಾ ಸಾಹೇಬ್ : ಸುರಪುರ ವೆಂಕಟಪ್ಪನಾಯಕ

ಮುಂಬಯಿ

ಮುಂಬಯಿಯ ಜನಸಂಖ್ಯೆ 59,70,575

ನೋಡಿ : ಸಂಪುಟ ೧

ಮುಖ್ಯಮಂತ್ರಿ

ಪ್ರತಿ ರಾಜ್ಯದಲ್ಲೂ ವಿಧಾನಸಭೆ ಮತ್ತು ವಿಧಾನ ಪರಿಷತ್ತಿಗೆ ಜ ತಮ್ಮ ಪ್ರತಿನಿಧಿಗಳನ್ನು ಆರಿಸುತ್ತಾರೆ. ವಿಧಾನಸಭೆಯಲ್ಲಿ ಬಹುಮ ಉಳ್ಳ ಪಕ್ಷದ ನಾಯಕ ಮುಖ್ಯಮಂತ್ರಿಯಾಗುತ್ತಾನೆ. ರಾಜ್ಯಪಾ ಮುಖ್ಯಮಂತ್ರಿಯ ಸಲಹೆ ಪಡೆದು ಇತರ ಮಂತ್ರಿಗಳನ್ನು ನೇಮಿಸುತ್ತಾ

ಪ್ರತಿಜ್ಞಾವಿಧಿಯ ಬಳಿಕ ಮುಖ್ಯಮಂತ್ರಿಯ ಅಧಿಕಾರ ಸ್ವೀಕಾ ಮುಖ್ಯಮಂತ್ರಿ ಮತ್ತು ಇತರ ಮಂತ್ರಿಗಳು ರಾಜ್ಯಾಡಳಿತ ನಿರ್ವಹ ಹೊಣೆಗಾರರು. ರಾಜ್ಯ ಮಂತ್ರಿಮಂಡಲದ ಸಭೆಗಳು ಮುಖ್ಯಮಂತ್ರಿ ಅಧ್ಯಕ್ಷತೆಯಲ್ಲಿ ಜರಗುತ್ತವೆ.

ಮುಖ್ಯಮಂತ್ರಿಯಾಗುವ ವ್ಯಕ್ತಿ ವಿಧಾನಸಭೆಯ ಸದಸ್ಯನಾಗಿರಬೇ ಹಾಗೆ ಸದಸ್ಯನಾಗಿರದ ವ್ಯಕ್ತಿ ಮುಖ್ಯಮಂತ್ರಿಯಾಗಿ ಆಯ್ಕೆಗೊಂ ವಿಧಾನ ಮಂಡಲದ ಸದಸ್ಯನಾಗದೆ 6 ತಿಂಗಳಿಗೂ ಹೆಚ್ಚು ಕಾಲ ಅಧಿಕಾರ ಇರುವಂತಿಲ್ಲ.

ಮುತ್ತುಲಕ್ಷ್ಮಿ ರೆಡ್ಡಿ

ಆಧುನಿಕ ಭಾರತ ನಿರ್ಮಾಪಕರಲ್ಲಿ ಒಬ್ಬರು. ತಮಿಳುನಾಡಿನ ಎ ಮುತ್ತುಲಕ್ಷ್ಮಿ ರೆಡ್ಡಿ. ಪುದುಕೋಟೆ ಸಂಸ್ಥಾನದಲ್ಲಿ 1886ರಲ್ಲಿ ಇ ಜನನ. ತಂದೆ ನಾರಾಯಣಸ್ವಾಮಿ ಶಿಕ್ಷಕರಾಗಿದ್ದರು. ಮುತ್ತುಲಕ್ಷ್ಮಿ ಪ್ರಾರಂಭದಲ್ಲಿ ತಂದೆಯೇ ಶಿಕ್ಷಕರು, 1912ರಲ್ಲಿ ಮದರಾಸು ಮೆಡಿಕ ಕಾಲೇಜಿನ ಪದವೀಧರೆಯಾದರು. ಡಾ. ಟಿ. ಸುಂದರರೆಡ್ಡಿ ಅವರೊ 1913ರಲ್ಲಿ ವಿವಾಹವಾಯಿತು. ಸ್ನಾತಕೋತ್ತರ ವ್ಯಾಸಂಗ ಇಂಗ್ಲೆಂಡಿಗೆ ತೆರಳಿದರು.



ಬೆಸೆಂಟ್ ಪ್ರಭಾವ : ಮುತ್ತುಲಕ್ಷ್ಮಿ ರೆಡ್ಡಿ

ಅಲ್ಲಿಂದ ಬಂದ ಮೇಲೆ ಸ್ತ್ರೀಯರು ಮತ್ತು ಮಕ್ಕಳ ರೋಗಗಳ ಪರಿಣತ ವೈದ್ಯರಾಗಿ ವೃತ್ತಿಜೀವನ ಆರಂಭಿಸಿದರು.

ಆನಿ ಬೆಸೆಂಟರ ಪ್ರಭಾವಕ್ಕೆ ಒಳಗಾಗಿ 1917ರಲ್ಲಿ ಮುತ್ತುಲಕ್ಷ್ಮಿ ಭಾರತೀಯ ಮಹಿಳಾ ಸಂಘದ ಸದಸ್ಯರಾದರು. ದೇವದಾಸಿಯರ ಸಮಸ್ಯೆ, ಮಕ್ಕಳ ಏಳಿಗೆ ಮುಂತಾದ ಕ್ಷೇತ್ರಗಳಲ್ಲಿ ದುಡಿದರು, ಮಹಿಳೆಯರ ಉದ್ಧಾರಕ್ಕಾಗಿ ಪ್ರಚಾರ ಕಾರ್ಯಕ್ರಮದಲ್ಲಿ ಭಾಗವಹಿಸಿದರು. 1926ರಲ್ಲಿ ಮದರಾಸು ಪ್ರಾಂತ್ಯದ ವಿಧಾನ ಪರಿಷತ್ತಿಗೆ ಆಯ್ಕೆಯಾದ ಮುತ್ತುಲಕ್ಷ್ಮಿ ಅವರ ಪ್ರಥಮ ಮಹಿಳಾ ಸದಸ್ಯೆ. ಪರಿಷತ್ತಿನ ಕಾರ್ಯಕ್ರಮಗಳಲ್ಲಿ ಪ್ರಮುಖ ಪಾತ್ರ ವಹಿಸಿದರು. ಮಕ್ಕಳ, ಹೆಂಗಸರ ಕಲ್ಯಾಣಕಾರಕ ಸುಧಾರಣೆಗಳಿಗಾಗಿ ಆಗ್ರಹ ಮಾಡಿದರು.

1931ರಲ್ಲಿ ಲಾಹೋರಿನಲ್ಲಿ ನಡೆದ ಅಖಿಲ ಭಾರತ ಮಹಿಳಾ ಅಧಿವೇಶನದ ಅಧ್ಯಕ್ಷೆಯಾಗಿದ್ದರು. 1933ರಲ್ಲಿ ಅಮೆರಿಕದ ಷಿಕಾಗೊದಲ್ಲಿ ನಡೆದ ಅಂತರರಾಷ್ಟ್ರೀಯ ಮಹಿಳಾ ಸಮ್ಮೇಳನದಲ್ಲಿ ಭಾಗವಹಿಸಿದರು. ಆನಿ ಬೆಸೆಂಟರ ತರುವಾಯ ಭಾರತೀಯ ಮಹಿಳಾ ಸಂಘದ ಅಧ್ಯಕ್ಷತೆ ವಹಿಸಿದ್ದರು. 1933ರಲ್ಲಿ ಭಾರತೀಯ ಮಹಿಳೆಯರ ಹಕ್ಕಿನ ಚರ್ಚೆಗಾಗಿ ಇಂಗ್ಲೆಂಡಿಗೆ ಹೋಗಲು ಮುತ್ತುಲಕ್ಷ್ಮಿಯವರನ್ನು ಒಳಗೊಂಡು ಮೂವರು ಮಹಿಳಾ ಪ್ರತಿನಿಧಿಗಳ ಆಯ್ಕೆಯಾಯಿತು,

ರಾಜಕೀಯ ಚಳುವಳಿಯಲ್ಲೂ ಮುತ್ತುಲಕ್ಷ್ಮಿ ರೆಡ್ಡಿ ಭಾಗವಹಿಸಿದರು. ಖಾದಿ ಪ್ರಚಾರ ಕೈಗೊಂಡರು.

ವೈದ್ಯವೃತ್ತಿ ಹಾಗೂ ಸಾಮಾಜಿಕ ಸೇವೆ ಇವರ ಪಾಲಿಗೆ ಒಂದೇ ಕಾಯಕದ ಎರಡು ಅಂಗಗಳಾಗಿದ್ದುವು. ಜನಸಾಮಾನ್ಯರಿಗೆ ವೈದ್ಯಕೀಯ ನೆರವು ದೊರೆಯುವಂತೆ ಮಾಡಲು ಇವರು ದುಡಿದರು. ಅವ್ವೈ ಅನಾಥಾಲಯ ಎಂಬ ಸಂಸ್ಥೆ ಸ್ಥಾಪಿಸಿದರು. ಅಡಯಾರಿನ ಕ್ಯಾನ್ಸರ್ ಸಂಶೋಧನಾ ಸಂಸ್ಥೆಯ ಆಡಳಿತ ಮಂಡಳಿಯ ಸದಸ್ಯೆಯಾದರು.

1956ರಲ್ಲಿ ಭಾರತ ಸರಕಾರ ಇವರಿಗೆ ಪದ್ಮಭೂಷಣ ಪುರಸ್ಕಾರ ನೀಡಿ ಗೌರವಿಸಿತು.

ಮುತ್ತುಸ್ವಾಮಿ ದೀಕ್ಷಿತ

ನೋಡಿ : ಸಂಪುಟ ೯.

ಮುಮ್ಮಡಿ ಕೃಷ್ಣರಾಜ

ನೋಡಿ : ಸಂಪುಟ ೯.

ಮುರಾರಜೀ ದೇಸಾಯಿ

ಸ್ವತಂತ್ರ ಭಾರತದ [illegible] ಮುರಾರಜೀ ರಣಛೋಡಜೀ ದೇಸಾಯಿ.

ಅವರು ಗುಜರಾತಿನ ಬುಲ್ ಸಾರ್‌ನವರು. 1896 ಫೆಬ್ರವರಿ 29ರಂದು ಹುಟ್ಟಿದರು. ಹುಟ್ಟೂರಿನಲ್ಲಿ ಮೊದಲ ಶಿಕ್ಷಣ; ಅನಂತರ ಮುಂಬಯಿಯ ವಿಲ್ಸನ್ ಕಾಲೇಜಿನಲ್ಲಿ. 1918ರಲ್ಲಿ ಮುಂಬಯಿ ಪ್ರಾಂತೀಯ ಸಿವಿಲ್ ಸರ್ವಿಸ್‌ಗೆ ಪ್ರವೇಶ. ಗಾಂಧೀಜಿಯ ಸತ್ಯಾಗ್ರಹ ಚಳುವಳಿಯಲ್ಲಿ ಭಾಗವಹಿಸಲೆಂದು 1930ರಲ್ಲಿ ಸರಕಾರೀ ಹುದ್ದೆಗೆ ರಾಜೀನಾಮೆ ಇತ್ತರು. 1930–34ರ ವರೆಗೆ ಜೈಲುವಾಸ. 1931–37 ಮತ್ತು 1939–46 ಅವಧಿಯಲ್ಲಿ ಗುಜರಾತ್ ಪ್ರಾಂತೀಯ ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿ.

1937ರಲ್ಲಿ ಪ್ರಾಂತಗಳಲ್ಲಿ ಭಾರತ ರಾಷ್ಟ್ರೀಯ ಕಾಂಗ್ರೆಸ್ ಅಧಿಕಾರ ಸ್ವೀಕರಿಸಿದಾಗ ಮುಂಬಯಿ ಪ್ರಾಂತದಲ್ಲಿ ಬಾಲಗಂಗಾಧರ ಖೇರರ ನೇತೃತ್ವದಲ್ಲಿ ರಚಿತವಾದ ಸರಕಾರದಲ್ಲಿ ಮುರಾರಜೀ ದೇಸಾಯಿ ಕಂದಾಯ ಮಂತ್ರಿ. ಮತ್ತೆ 1946 ರಿಂದ 52ರ ವರೆಗೆ ಆ ರಾಜ್ಯದ ಗೃಹ ಹಾಗೂ ಕಂದಾಯಮಂತ್ರಿ. 1952–56ರ ವರೆಗೆ ಮುಂಬಯಿ ಪ್ರಾಂತದ ಮುಖ್ಯ ಮಂತ್ರಿ.

ಕೇಂದ್ರ ಸರಕಾರದ ವಾಣಿಜ್ಯ ಮತ್ತು ಕೈಗಾರಿಕಾ ಖಾತೆಯ ಮಂತ್ರಿಯಾಗಿ 1956 ರಿಂದ 58ರ ವರೆಗೆ ಕಾರ್ಯ ನಿರ್ವಹಿಸಿದರು. 1963ರ ವರೆಗೆ ಕೇಂದ್ರ ಸರಕಾರದ ಅರ್ಥಸಚಿವರಾಗಿದ್ದರು. ಕಾಮರಾಜ್ ಯೋಜನೆಯ ಪ್ರಕಾರ 1963 ಆಗಸ್ಟ್ ತಿಂಗಳಲ್ಲಿ ಸಚಿವ ಪದವಿ ತ್ಯಜಿಸಿದ್ದರು. 1966ರಲ್ಲಿ [illegible] ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷರಾದರು. 1967ರಿಂದ 69ರ ವರೆಗೆ ಇಂದಿರಾ ಗಾಂಧೀ ಅವರ ಸಂಪುಟದಲ್ಲಿ ಉಪಪ್ರಧಾನ ಮಂತ್ರಿ ಹಾಗೂ ಅರ್ಥಸಚಿವರಾದರು.



ದಕ್ಷ ಆಡಳಿತಗಾರ : ಮುರಾರಜಿ

ಗಾಂಧೀ ತತ್ತ್ವಗಳ ಕಟ್ಟಾ ಅನುಯಾಯಿ ಎಂದೆನಿಸಿರುವ ದೇಸಾಯಿ ಗಾಂಧೀಜಿ ಸ್ಥಾಪಿಸಿದ ಗುಜರಾತ್ ವಿದ್ಯಾಪೀಠದ ಕುಲಪತಿ ಆಗಿದ್ದರು. ನವಜೀವನ ಟ್ರಸ್ಟಿನ ಅಧ್ಯಕ್ಷರು. ಗಾಂಧೀ ಸ್ಮಾರಕ ನಿಧಿ, ಗಾಂಧೀ ಶಾಂತಿ ಪ್ರತಿಷ್ಠಾನ ಮತ್ತು ಕಸ್ತೂರಬಾ ಟ್ರಸ್ಟಿನ ಧರ್ಮದರ್ಶಿಗಳಲ್ಲಿ ಒಬ್ಬರು. 1969ರಲ್ಲಿ ಭಾರತ ರಾಷ್ಟ್ರೀಯ ಕಾಂಗ್ರೆಸ್ ಇಬ್ಭಾಗವಾಗುವ ಮುನ್ನ ಕೇಂದ್ರ ಅರ್ಥಸಚಿವ ಖಾತೆ ಅವರ ಕೈತಪ್ಪಿತು. ಅನಂತರ ಅವರು ರಾಜೀನಾಮೆ ಇತ್ತರು. 1971ರಲ್ಲಿ ನಡೆದ ಲೋಕಸಭೆ ಮಧ್ಯಂತರ ಚುನಾವಣೆಯಲ್ಲಿ ಸೂರತ್‌ನಿಂದ ಸಂಸ್ಥಾ ಕಾಂಗ್ರೆಸ್ ಅಭ್ಯರ್ಥಿಯಾಗಿ ಗೆದ್ದುಬಂದರು. ಮುರಾರಜೀ ಅವರು ಪಾನನಿರೋಧ ತತ್ತ್ವದ ಅಚಲ ಪ್ರತಿಪಾದಕರು. ಕೇಂದ್ರ ಅರ್ಥಮಂತ್ರಿಯಾಗಿ ಅವರು ತಂದ ಚಿನ್ನ ನಿಯಂತ್ರಣ ಕ್ರಮ ಚರಿತ್ರಾರ್ಹ.

ಮುಸ್ಲಿಂ ಲೀಗ

ಭಾರತದಲ್ಲಿ ಮಹಮ್ಮದೀಯರ ಸಂಘಟನೆ – 'ಮುಸ್ಲಿಂ ಲೀಗ್'— 1906ರಲ್ಲಿ ಆರಂಭವಾಯಿತು.

[illegible] ಮುಖಂಡರಿಂದಾಗಿ ಮುಸಲ್ಮಾನರಲ್ಲಿ ಜಾಗೃತಿ ಉಂಟಾಯಿತು.

[illegible] ಪ್ರಯತ್ನಿಸಿದರು.

1906ರಲ್ಲಿ ಅಖಿಲ ಭಾರತ ಮುಸಲ್ಮಾನರ ಒಕ್ಕೂಟವನ್ನು ಸ್ಥಾಪಿಸ ಬೇಕೆಂದು ಪ್ರತಿಷ್ಠಿತ ಮುಂದಾಳುಗಳು ಅಭಿಪ್ರಾಯಪಟ್ಟರು. ಇದಕ್ಕಾಗಿ ಢಾಕ್ಕಾದಲ್ಲಿ ಒಂದು ಸಮ್ಮೇಳನವೂ ನಡೆಯಿತು. ಈ ಸಮ್ಮೇಳನ ಬಂಗಾಳದ ವಿಭಜನೆಯನ್ನು ಸಮರ್ಥಿಸಿತು ; ವಿದೇಶೀ ವಸ್ತುಗಳ ಬಹಿಷ್ಕಾರವನ್ನು ವಿರೋಧಿಸಿತು. ಹೀಗೆ ಸಂಘಟಿತವಾದ ಲೀಗಿಗೆ ಲಂಡನಿನ 'ಟೈಮ್ಸ್' ಪತ್ರಿಕೆ ಸುಸ್ವಾಗತ ಬಯಸಿತು.

1940ರಲ್ಲಿ ಮುಸ್ಲಿಂ ಲೀಗ್ ಲಾಹೋರಿನಲ್ಲಿ ಸಭೆ ಸೇರಿದಾಗ ಪ್ರತ್ಯೇಕ ಪಾಕಿಸ್ತಾನದ ರಚನೆಗಾಗಿ ನಿರ್ಣಯ ಕೈಗೊಂಡಿತು. ಇದು ಭಾರತದ ವಿಭಜನೆಗೆ ನಾಂದಿಯಾಯಿತು.

ಸ್ವಾತಂತ್ರ್ಯಾನಂತರವೂ ಭಾರತದಲ್ಲಿ ಮುಸ್ಲಿಂ ಲೀಗ್ ರಾಜಕೀಯ ಪಕ್ಷವಾಗಿ ಚಟುವಟಿಕೆ ಮುಂದುವರಿಸಿದೆ.

ಮುಸ್ಸೋರಿ

[illegible] ಗಿರಿಧಾಮವಾಗಿ. ಇದು ಮುಸ್ಸೋರಿಯ ಕಥೆ.

[illegible] ಆಲೂಗೆಡ್ಡೆ ಬೆಳೆಯಲು ಆದರ್ಶ ಜಾಗ ಹುಡುಕುತ್ತಿದ್ದ. ಒಳ್ಳೆ ತಳಿಯ ಗೆಡ್ಡೆಗಳು ದೊರೆತಿದ್ದುವು. ಸ್ಥಳೀಯ ಜನರು ಈ ತರಕಾರಿಯನ್ನು ಇನ್ನೂ ಎತ್ತರದಲ್ಲಿ, ಗುಡ್ಡಗಳ ಮೇಲೆ, ಚೆನ್ನಾಗಿ ಬೆಳೆಸಬಹುದೆಂದು ಸಲಹೆ ಇತ್ತರು.

ಯಂಗ್ ಹಾಗೂ ಆತನ ಗೆಳೆಯ ಮತ್ತೂ ಮೇಲಕ್ಕೆ– ಆರು ಸಾವಿರ ಅಡಿಗೂ ಹೆಚ್ಚು ಏರಿದರು. ಅಲ್ಲಿ ದೇವದಾರು ಮರಗಳು ಬೆಳೆದಿದ್ದುವು. ಹವೆ ತಂಪಾಗಿ ಹಿತಕರವಾಗಿದ್ದಿತು. ಹತ್ತಿ ಬಂದವರಿಗೆ ತಾವು ಬಂದ ಕೆಲಸ ಅಷ್ಟು ಮುಖ್ಯವಾಗಿ ಕಾಣಲಿಲ್ಲ. ಬದಲಾಗಿ ಅಲ್ಲಿ ಒಂದು ಸಣ್ಣ ವಸತಿ ಕಟ್ಟಿಕೊಂಡರು ; ಮುಸ್ಸೋರಿ ಗಿರಿಧಾಮದ ಅಸ್ತಿವಾರ ಹಾಕಿದರು.

ಆ ಜಾಗದಲ್ಲಿ ವಿಶೇಷವಾಗಿ ಬಿಡುವ 'ಮನ್ಸೂರಿ' ಎಂಬ ಹಣ್ಣಿನಿಂದ ಬಂದದ್ದು– 'ಮುಸ್ಸೋರಿ' ಹೆಸರು. (ಈ ಹಣ್ಣನ್ನು ತಿನ್ನಲು ಆಗುವುದಿಲ್ಲ). ಮುಸ್ಸೋರಿ ಹಾಗೂ ಲಾಂಡೋರ್‌ಗಳಲ್ಲಿ ಯಂಗ್ ಎರಡು ಮನೆಗಳನ್ನು ಕಟ್ಟಿಸಿದ. 1830ರ ವೇಳೆಗೆ ಇವೆರಡೂ ಗಿರಿಧಾಮಗಳಾದುವು.

ಹಿಮಾಲಯದ ತಗ್ಗಿನ ಶ್ರೇಣಿಗಳಲ್ಲಿರುವ ಮುಸ್ಸೋರಿ ಸಮುದ್ರ ಮಟ್ಟದಿಂದ 6,932 ಅಡಿ ಎತ್ತರದಲ್ಲಿ ಉತ್ತರ ಪ್ರದೇಶ ರಾಜ್ಯದ ಡೆಹ್ರ ಡೂನ್ ಜಿಲ್ಲೆಯಲ್ಲಿದೆ. ಡೂನಿನಿಂದ ಇಲ್ಲಿಗೆ 22 ಮೈಲು ದೂರ. [illegible] ಪಾಯಿತು. ಸಸ್ಯ ಅಧ್ಯಯನಕ್ಕಾಗಿ ಇಲ್ಲೊಂದು ಸಸ್ಯೋದ್ಯಾನವಿದೆ. ಇಲ್ಲಿಯ ಜನಸಂಖ್ಯೆ 18,038.

ಮೂರ್ತಿ

[illegible] ಮುಂದಿನ ದಾರಿ ಸ್ಪಷ್ಟವಾಗಿತ್ತು. ವ್ಯಂಗ್ಯಚಿತ್ರ ಬರೆಯುವುದು ಅವರ ಜೀವನ ವೃತ್ತಿಯಾಯಿತು.



ಮೂರ್ತಿ–ಸ್ವಚಿತ್ರ

'ಮೂರ್ತಿ' ಭಾರತದ ಪ್ರಮುಖ ವ್ಯಂಗ್ಯ ಚಿತ್ರಕಾರರಲ್ಲಿ ಒಬ್ಬರು. 'ಡೆಕ್ಕನ್ ಹೆರಾಲ್ಡ್' ಮತ್ತು 'ಪ್ರಜಾವಾಣಿ' ವೃತ್ತಪತ್ರಿಕೆಗಳಲ್ಲೂ 'ಸುಧಾ' ವಾರಪತ್ರಿಕೆಯಲ್ಲೂ ಕ್ರಮ ತಪ್ಪದೆ ಇವರ ವ್ಯಂಗ್ಯಚಿತ್ರಗಳು ಪ್ರಕಟವಾಗುತ್ತವೆ. 'ಹೆರಾಲ್ಡ್'ನ 'ಮಿ. ಸಿಟಿಜನ್' (ಶ್ರೀ ಸಾಮಾನ್ಯ) ಮೊದಲಿಗೆ ಕಾಣಿಸಿಕೊಂಡದ್ದು 1957ರಲ್ಲಿ. ವ್ಯಂಗ್ಯಚಿತ್ರಗಳಲ್ಲಿ ಸಾಮಾನ್ಯ ವ್ಯಕ್ತಿಯೊಬ್ಬನನ್ನು [illegible] ಭಾರತದಲ್ಲಿ ಆರಂಭಿಸಿದ ಪ್ರಥಮ ಚಿತ್ರಕಾರ [illegible] ಪ್ರಜಾಭಿಪ್ರಾಯವನ್ನು ಪ್ರತಿಬಿಂಬಿಸುತ್ತವೆ. ಕೆಲವೇ ರೇಖೆಗಳಿಂದ ಚಿತ್ರ ಅರ್ಥಪೂರ್ಣವಾಗುವಂತೆ ಮಾಡುವ ಕಲೆ ಇವರಿಗೆ ಕರಗತವಾಗಿದೆ.



[illegible] ಹೊಟ್ಟೆಗಿಲ್ಲ, ಅಷ್ಟೆ

ಮೂರ್ತಿಯವರ ಜನನ 1933ರಲ್ಲಿ, ಬೆಂಗಳೂರಿನಲ್ಲಿ. ವಿದ್ಯಾಭ್ಯಾಸ ನಡೆದದ್ದು ಸೇಂಟ್ ಜೋಸೆಫ್ಸ್ ಕಾಲೇಜಿನಲ್ಲಿ. ರೇಖಾಚಿತ್ರಗಳನ್ನು ಬರೆಯುವ ಕಲೆ ಸಿದ್ಧಿಯಾದದ್ದು ಸ್ವಪ್ರಯತ್ನದಿಂದ. 1955ರಲ್ಲಿ 'ಡೆಕ್ಕನ್ ಹೆರಾಲ್ಡ್' ಪತ್ರಿಕೆಯನ್ನು ಸೇರಿದಾಗ ಮೂರ್ತಿಯವರನ್ನು ಪತ್ರಿಕೆಯ ಸಂಪಾದಕ ಪೋತನ್ ಜೋಸೆಫ್ ಪ್ರೋತ್ಸಾಹಿಸಿದರು.

[illegible] ಮೂರ್ತಿ ಆಸಕ್ತರು.

ಮೃಣಾಲಿನಿ ಸಾರಾಭಾಯಿ

ಭಾರತೀಯ ಸಾಂಪ್ರದಾಯಿಕ ನೃತ್ಯದ ಮೂಲ ಸತ್ವಕ್ಕಾಗಲೀ ಭಾವ [illegible]

[illegible] 1939 [illegible] ರಾಮನ್ ಪಿಳ್ಳೆ, ಚೊಕ್ಕಲಿಂಗಮ್ ಪಿಳ್ಳೆ, ಮೀನಾಕ್ಷಿಸುಂದರಮ್ ಪಿಳ್ಳೆ [illegible] ನಾಥ ಠಾಕೂರರ ನಿಕಟ ಪರಿಚಯ. ಅವರ ನೃತ್ಯ ನಾಟಕಗಳಲ್ಲಿ ಇವರದು ಪ್ರಮುಖ ಪಾತ್ರ.

ನೃತ್ಯ, ನಾಟಕ, ಸಂಗೀತ, ಸೂತ್ರದ ಗೊಂಬೆಯಾಟಗಳ ತರಬೇತಿ [illegible] 1948 [illegible] ಪ್ರವಾಸ ಮಾಡಿಬಂದರು.

[illegible] ನ್ಯೂಯಾರ್ಕ್‌ನಲ್ಲಿರುವ ಅಮೆರಿಕನ್ ಅಕಾಡೆಮಿ ಆಫ್ ಡ್ರಮಾಟಿಕ್ ಆರ್ಟ್ ಸಂಸ್ಥೆಯಲ್ಲಿ ಅಭಿನಯ ಕಲೆ, ರಂಗತಂತ್ರಗಳನ್ನು ಅಭ್ಯಸಿಸಿದರು.



[illegible]

1963ರಲ್ಲಿ, 'ಸ್ವಪ್ನವಾಸವದತ್ತಾ' ಸಂಸ್ಕೃತ ನಾಟಕಕ್ಕೆ ನಿರ್ದೇಶನ ನೀಡಲು ಅವರು ಅಮೆರಿಕಕ್ಕೆ ಆಹ್ವಾನಿತರಾದರು. ಅದು ಕೇವಲ ಅಮೆರಿಕದ ಕಲಾವಿದರೇ ಇದ್ದ ತಂಡ. ಸಂಸ್ಕೃತ ನಾಟಕ ತಂತ್ರವನ್ನು ಅನುಸರಿಸಿ ಅದು ಅಭಿನಯಿಸಲ್ಪಟ್ಟಿತು. 'ಶಿಲಪ್ಪದಿಗಾರಂ', 'ಸೃಷ್ಟಿಯ ಹಾಡು', 'ಗಾಂಧಿಗೆ ಶ್ರದ್ಧಾಂಜಲಿ' ಇವರ [illegible] ನೃತ್ಯಸಂಯೋಜನೆಗಳು. ನಾಟಕಗಳು, ಕಾದಂಬರಿಗಳು, ನೃತ್ಯ [illegible] ಭಾರತದ ಪ್ರಮುಖ ವಿಜ್ಞಾನಿ ದಿವಂಗತ ವಿಕ್ರಮ್ ಸಾರಾಭಾಯಿ ಮೃಣಾಲಿನಿಯವರ ಪತಿ. ಮೃಣಾಲಿನಿ ಮೂಲತಃ ಕೇರಳದವರು. ಅಮ್ಮು ಸ್ವಾಮಿನಾಥನ್ ಇವರ ತಾಯಿ. ಆಜಾದ್ ಹಿಂದ್ ಫೌಜ್ ಖ್ಯಾತಿಯ ಕ್ಯಾಪ್ಟನ್ ಲಕ್ಷ್ಮಿ ಇವರ [illegible]

[illegible] 1965ರಲ್ಲಿ ಪದ್ಮಶ್ರೀ ದೊರೆಯಿತು. 1969ರಲ್ಲಿ ಗುಜರಾತ್ ರಾಜ್ಯದ ನೃತ್ಯಪ್ರಶಸ್ತಿ ಲಭಿಸಿತು.

ನೋಡಿ : ಅಮ್ಮು ಸ್ವಾಮಿನಾಥನ್ ; ಕ್ಯಾಪ್ಟನ್ ಲಕ್ಷ್ಮಿ.

ಮೆಕಾಲೆ

ಬಾಬಿಂಗ್ಟನ್ ಥಾಮಸ್ ಮೆಕಾಲೆ (ಭಾಷಾ ಉಚ್ಚಾರ–ಮಕಾಲಿ) ಆಂಗ್ಲ ಇತಿಹಾಸಕಾರ, ಪ್ರಬಂಧಕಾರ ಹಾಗೂ ರಾಜಕಾರಣಿ. ಭಾರತದಲ್ಲಿ ಇಂಗ್ಲಿಷ್ ಶಿಕ್ಷಣ ಜಾರಿಗೆ ಬರಲು ಅವನು ಮುಖ್ಯ ಕಾರಣ.

ಮೆಕಾಲೆ ಹುಟ್ಟಿದ್ದು 1800ರಲ್ಲಿ. ಗವರ್ನರ್ ಜನರಲ್‌ರ ಸಲಹಾ ಮಂಡಲಿಯ ಸದಸ್ಯನಾಗಿ 1834ರಲ್ಲಿ ಭಾರತಕ್ಕೆ ಬಂದ. ವಿಲಿಯಂ ಬೆಂಟಿಂಕ್ ಆಗ ಭಾರತದ ಗವರ್ನರ್ ಜನರಲ್. ಶಿಕ್ಷಣ ಮಂಡಲಿಯ ಅಧ್ಯಕ್ಷನಾಗಿ ನೇಮಕಗೊಂಡ ಮೆಕಾಲೆ ಭಾರತದಲ್ಲಿ ಪಾಶ್ಚಾತ್ಯ ಶಿಕ್ಷಣ [illegible] ಗಳಲ್ಲೂ ಇಂಗ್ಲಿಷ್ ಬಳಕೆಗೆ ಬಂತು.

[illegible] ತೀರಿಕೊಂಡ.

ಮೆಗಾಸ್ತನೀಸ್

"[illegible] ಕೇಳಿದ ; ಮುಂದೆ ಹೋಗುವ ಯೋಚನೆ ಬಿಟ್ಟ......ಭಾರತದಲ್ಲಿ ಎಲ್ಲವೂ [illegible] ನಾನಾ ತರಹೆ ವ್ಯಂಜನಗಳು."

—ಇದು ಮೆಗಾಸ್ತನೀಸ್ ಮಾಡಿರುವ ಬಣ್ಣನೆ.

ಚಂದ್ರಗುಪ್ತ ಮೌರ್ಯನ ಆಸ್ಥಾನಕ್ಕೆ ಪ್ರಾಯಶಃ ಹಲವಾರು ಸಲ ಬಂದಿದ್ದ ಮೆಗಾಸ್ತನೀಸ್ ಪರ್ಷಿಯದ ದೊರೆ ಒಂದನೆಯ ಸೆಲ್ಯೂಕಸ್‌ನ ರಾಯಭಾರಿ.

ಬಿಗಿಯಾದ ಆಡಳಿತ ವ್ಯವಸ್ಥೆ. ರಾಜ ಪ್ರಜಾಪ್ರೇಮಿ. ತಲೆಬಾಚಿಕೊಳ್ಳುವಾಗ, ಉಡುಗೆ ಧರಿಸುತ್ತಿರುವಾಗ ಸಹ ಪ್ರಜೆಗಳ ಅಹವಾಲುಗಳಿಗೆ ಲಕ್ಷ್ಯ........

ಕೈಗಾರಿಕಾಭಿವೃದ್ಧಿ, ಪ್ರವಾಸಿಗಳ ಯೋಗಕ್ಷೇಮ. ಜನನ – ಮರಣ ದಾಖಲೆ, ವ್ಯಾಪಾರೋದ್ಯಮ, ಉತ್ಪಾದನೆ ಮತ್ತು ಸುಂಕ –ಈ ವಿಭಾಗಗಳ ಮೇಲ್ವಿಚಾರಣೆಗೆ ಆರು ಸರಕಾರಿ ವಿಭಾಗಗಳು.....ಸೈನ್ಯದ ಉಸ್ತುವಾರಿಗೆ ಪ್ರತ್ಯೇಕ ಆಡಳಿತ ಮಂಡಳಿ...ವ್ಯಾಪಕ ಗೂಢಚಾರ ಪಡೆ.

"[illegible] ಗಳು, ಸೈನಿಕರು, ಸುದ್ದಿಗಾರರು ಮತ್ತು ಅಧಿಕಾರಿಗಳು ಎಂದು ಏಳು [illegible] ವರ್ಗಕ್ಕೆ ಅದೇ ವೃತ್ತಿ ಉಳಿಯಬೇಕು......"

ಬೃಹದಾಕಾರದ ಆಲದ ಮರ...ಮೆಗಾಸ್ತನೀಸ್ ಬಣ್ಣನೆ



—ಇವೆಲ್ಲ ಮೆಗಾಸ್ತನೀಸನ 'ಇಂಡಿಕಾ'ದಿಂದ ಉಲ್ಲೇಖಗಳು. ಇದು ನಾಲ್ಕು ಸಂಪುಟಗಳ ಕೃತಿ. ಕಾಬೂಲ್, ಪಂಜಾಬ್ ಮಾರ್ಗವಾಗಿ ಪಾಟಲಿಪುತ್ರಕ್ಕೆ ಬಂದ ಅವನು ದಾರಿಯಲ್ಲಿ ತಾನು ಕಂಡುದನ್ನೆಲ್ಲ ವರ್ಣಿಸಿದ್ದಾನೆ.

"[illegible]. ಪರಸ್ಪರ ನಂಬಿಕೆಯ ಮೇಲೆ ವ್ಯವಹಾರ. ...... ಅಭಿಮಾನದ ವರ್ತನೆ ಇವರ ವಿಶೇಷ ಗುಣ. ಸ್ತ್ರೀಯರು [illegible]...... ಸ್ತ್ರೀಯರಲ್ಲಿ ತತ್ತ್ವಜ್ಞಾನಿಗಳು ಇದ್ದಾರೆ......"

ಮೆಗಾಸ್ತನೀಸ್ ಭಾರತದಲ್ಲಿ ತಾನು ಕೇಳಿದ ಮರಗಳ, ರಾಕ್ಷಸರ, ಪಿಶಾಚಿ ವರ್ಣನೆಯನ್ನು ಬರೆದಿದ್ದಾನೆ. ಭೂಮಿ ಗುಂಡಾಗಿದೆ ಎಂದು ಭಾರತೀಯರಿಗೆ ತಿಳಿದಿದೆ ಎನ್ನುತ್ತಾನೆ.

ಭಾರತದ ಬಗೆಗೆ ನಿಖರವಾಗಿ ಮತ್ತು ವ್ಯಾಪಕವಾಗಿ ಹೇಳಿದ ವಿದೇಶೀಯರಲ್ಲಿ ಅವನೇ ಮೊದಲಿಗ.

ಮೆಹರ್‌ಚಂದ್ ಮಹಾಜನ್

ರಾಷ್ಟ್ರದ ಒಬ್ಬ ಶ್ರೇಷ್ಠ ನ್ಯಾಯವೇತ್ತರಾಗಿದ್ದವರು ಮೆಹರ್‌ಚಂದ್ ಮಹಾಜನ್.

ಅವರು ಪಂಜಾಬ್ ವಿಶ್ವವಿದ್ಯಾಲಯದ ವಿದ್ಯಾರ್ಥಿ. ವಕೀಲರಾಗಿ ವೃತ್ತಿಜೀವನ ಆರಂಭಿಸಿದರು. ಮುಂದೆ ಪಂಜಾಬ್ ಉಚ್ಚನ್ಯಾಯಾಲಯದಲ್ಲಿ ಮತ್ತು ಭಾರತದ ವರಿಷ್ಠ ನ್ಯಾಯಾಲಯದಲ್ಲಿ ನ್ಯಾಯಾಧೀಶರಾದರು.

1946ರಲ್ಲಿ ನಾವಿಕರ ಬಂಡಾಯ ವಿಚಾರಣಾ ಸಮಿತಿಯಲ್ಲಿ ಮಹಾಜನ್ ಸದಸ್ಯರಾಗಿದ್ದರು. 1946–47ರ ಅವಧಿಯಲ್ಲಿ ಜಮ್ಮು ಮತ್ತು ಕಾಶ್ಮೀರಗಳ ಮುಖ್ಯಮಂತ್ರಿಯಾಗಿ ಸೇವೆ ಸಲ್ಲಿಸಿದರು.

1947ರಲ್ಲಿ ಭಾರತ ಇಬ್ಭಾಗವಾದಾಗ ಪಂಜಾಬಿನ ಗಡಿ ನಿರ್ಣಯ ಸಮಿತಿಯ ಸದಸ್ಯರಾಗಿದ್ದರು. ಬೀಕಾನೇರ್ ಮಹಾರಾಜರಿಗೆ ರಾಜ್ಯಾಂಗ ವಿಚಾರದಲ್ಲಿ ಇವರು ಸಲಹೆ ನೀಡುತ್ತಿದ್ದರು. ಬ್ಯಾಂಕಿಂಗ್ ಮತ್ತು ವಿದ್ಯಾಕ್ಷೇತ್ರಗಳಲ್ಲೂ ಮಹಾಜನ್ ಪರಿಣತರಾಗಿದ್ದರು.


ಮೈಸೂರು–ಮಹಾರಾಷ್ಟ್ರ ಗಡಿವಿವಾದ ಇತ್ಯರ್ಥಕ್ಕೆಂದು ಯೋಜಿಸಲ್ಪಟ್ಟ ಏಕಸದಸ್ಯ ಆಯೋಗಕ್ಕೆ ಮಹಾಜನ್ ನೇಮಕಗೊಂಡರು. ಅವರ ವರದಿ ಮಹಾಜನ್ ವರದಿ ಎಂದೇ ಪ್ರಖ್ಯಾತವಾಗಿದೆ.

ಮಹಾಜನ್ 1967ರಲ್ಲಿ, ತಮ್ಮ 78ನೆಯ ವಯಸ್ಸಿನಲ್ಲಿ ನಿಧನರಾದರು.

ಮೇಘಾಲಯ

ಮೋಡಗಳ ನೆಲೆ – ಮೇಘಾಲಯ. ಬೆಟ್ಟಗುಡ್ಡಗಳ ಆಳವಾದ ಕಣಿವೆ ಕಂದರಗಳ ನಾಡು ಇದು. ಅಸ್ಸಾಮಿನ ಖಾಸಿ, ಜೈಂತಿಯಾ ಗುಡ್ಡಗಳ ಪ್ರದೇಶ ಹಾಗೂ ಗಾರೊ ಗುಡ್ಡಗಳ ಪ್ರದೇಶ ಈ ರಾಜ್ಯದಲ್ಲಿ ಸೇರಿವೆ. ಈ ಗುಡ್ಡ ಶಿಖರಗಳು ಮೋಡಗಳಿಂದ ಮುಚ್ಚಿರುತ್ತವೆ. 1972 ಜನವರಿ 21ರಂದು ಭಾರತದ 19ನೆಯ ರಾಜ್ಯವಾಗಿ ಮೇಘಾಲಯ ಅಸ್ತಿತ್ವಕ್ಕೆ ಬಂದಿತು.

ಮೇಘಾಲಯದ ಗಡಿಗಳು: ಬಾಂಗ್ಲಾದೇಶ, ಬ್ರಹ್ಮಪುತ್ರ ಕಣಿವೆ, ಉತ್ತರ ಕಛಾರ್, ಮಿಕಿರ್ ಗುಡ್ಡಗಳು. ಪ್ರಪಂಚದ ಅತ್ಯಧಿಕ ಮಳೆ ಬೀಳುವುದು ಇಲ್ಲಿನ ಖಾಸಿಗುಡ್ಡದಲ್ಲಿ. ಚಿರಾಪುಂಜಿ ಖಾಸಿಗುಡ್ಡಗಳ ಬಳಿ



ಇದೆ. ಬಹುಪಾಲು ಗಿರಿಜನರು ಇರುವ ಮೇಘಾಲಯದ ಮುಖ್ಯ [illegible] ಕಟ್ಟುಗಳು ಗಾರೊ ಹಾಗೂ ಖಾಸಿ. ಇವರವರಲ್ಲಿ ಕ್ರೈಸ್ತರ ಸಂಖ್ಯೆ ಹೆ[illegible]

ಗಾರೊ ಜನರಿಗೆ ಆನೆ ಮಾಂಸವೆಂದರೆ ಬಹಳ ಇಷ್ಟ. ಬಿದಿರಿನ ಭ[illegible]ಯಿಂದ ಇವರು ಮೀನು ಹಿಡಿಯುತ್ತಾರೆ. ಇವರದು ಮಾತೃಪ್ರಧಾನ ಸಮಾಜ. ಗಾರೊ ಜನರು ಹಳೆಯ ಪದ್ಧತಿಯ 'ಝುಮ್' ವಿಧಾನ[illegible] ವ್ಯವಸಾಯ ಮಾಡುತ್ತಾರೆ. ಖಾಸಿ ಜನ ವ್ಯವಸಾಯದಲ್ಲಿ ಮುಂದುವ[illegible]ದ್ದಾರೆ. ಸಾಕಷ್ಟು ಸಮತಟ್ಟಾಗಿರುವ ಕಣಿವೆ ಪ್ರದೇಶದಲ್ಲಿ ಹಂತ ಹ[illegible]ವಾಗಿ ಗದ್ದೆಗಳನ್ನು ಮಾಡಿ ಬೆಳೆ ಬೆಳೆಯುತ್ತಾರೆ. ಭತ್ತ, ಆಲೂಗೆ[illegible] ಮೆಣಸಿನಕಾಯಿ, ನವಣೆ, ಹಣ್ಣುಗಳು ಖಾಸಿ ಹಾಗೂ ಜೈಂತಿಯಾ ಗುಡ್ಡಗಳಲ್ಲಿ ಬೆಳೆಯುತ್ತವೆ. ಗಾರೊ ಗುಡ್ಡಗಳಲ್ಲಿ ಹತ್ತಿ ಬೆಳೆಸುತ್ತಾರೆ.



ಮುಖ್ಯಮಂತ್ರಿ : ವಿಲಿಯಮ್‌ಸ[illegible]

ಮೇಘಾಲಯದಲ್ಲಿ ಹಲವಾರು ಖನಿಜಗಳು ದೊರೆಯುತ್ತವೆ. ಕಲ್ಲಿದ್ದಲು, ಸಿಲಿಮನೈಟ್, ಸುಣ್ಣದ ಕಲ್ಲು, ಬಿಳಿಜೇಡಿ, ಕುರುಂದಕಲ್ಲು ಇಲ್ಲಿನ ಖನಿಜ ಉತ್ಪನ್ನಗಳು. ಭಾರತದಲ್ಲಿ ದೊರೆಯುವ ಸಿಲಿಮನೈಟ್‌ನಲ್ಲಿ ಶೇಕಡಾ 95 ಭಾಗ ಮೇಘಾಲಯ ಪ್ರದೇಶದ್ದು.

ರಾಜ್ಯದ ಮುಖ್ಯ ನಿಸರ್ಗ ಉತ್ಪನ್ನಗಳು ಕಾಡುಗಳಿಂದ ದೊರೆಯುತ್ತವೆ. ಓಕ್, ಪೈನ್ ಮೊದಲಾದ ಮರಗಳು ಇಲ್ಲಿವೆ.

ಭೀಮ, ಅರ್ಜುನರು ಮೇಘಾಲಯ ಪ್ರದೇಶದ ಕನ್ಯೆಯರನ್ನು ಮದುವೆಯಾದ ಪ್ರಸ್ತಾಪ 'ಮಹಾಭಾರತ'ದಲ್ಲಿದೆ. ಬ್ರಿಟಿಷರ ಕಾಲದಲ್ಲಿ ಇಲ್ಲಿನ ಗಿರಿಜನರೊಡನೆ ಅಷ್ಟಾ[illegible] ವ್ಯವಹಾರವಿರಲಿಲ್ಲ. ಭಾರತಕ್ಕೆ ಬಂದಿದ್ದ ವೆಲ್ಷ್ ಜನರು ಈ ಗಿರಿ[illegible]ರೊಡನೆ ಸಂಪರ್ಕ ಇಟ್ಟುಕೊಂಡಿದ್ದರು. ಮೇಘಾಲಯದ ಖಾಸಿ ಜನ[illegible] ಕೆಲವರು ವೆಲ್ಷ್ ಹಾಡುಗಳನ್ನು ಇಂದಿಗೂ ಇಂಪಾಗಿ ಹಾಡುತ್ತಾರೆ.

ಅಸ್ಸಾಂ–ಮೇಘಾಲಯಗಳೆರಡಕ್ಕೂ ಒಬ್ಬರೇ ರಾಜ್ಯಪಾಲರು. ಒಂ[illegible] ಉಚ್ಚನ್ಯಾಯಾಲಯ. ಒಂದೇ ಸಾರ್ವಜನಿಕ ಸೇವಾ ಆಯೋಗ. ಒಂ[illegible] ವಿದ್ಯುನ್ಮಂಡಲಿ. ಸ್ವಯಮಾಧಿಕಾರವುಳ್ಳ ಎರಡು ರಾಜ್ಯಗಳು ಬೆ[illegible]ಬೆರೆತಿರುವ ರಾಜಕೀಯ ಪ್ರಯೋಗ ಭಾರತದಲ್ಲಿ ಮೊದಲನೆಯದು.

ಮೇರುಪರ್ವತ

ದಿವ್ಯ ಪ್ರದೇಶ ಇಳಾವೃತ್ತವು ಹಿಮಾಲಯದ ಉತ್ತರಕ್ಕಿದೆ; ದಿವ್ಯ ಪ್ರದೇಶದ ಕೇಂದ್ರ ಭಾಗದಲ್ಲಿ ಮೇರು ಪರ್ವತವಿದೆ ಎಂದು ಪುರಾಣಗಳ ಹೇಳಿಕೆ.

[illegible] ಅಮರಪರ್ವತ, ದೇವಪರ್ವತ, ಸುಮೇರು —ಇವೆಲ್ಲ ಮೇರುವಿನ ಇತರ ಹೆಸರುಗಳಿವೆ. ಪುರಾಣಗಳ ಪ್ರಕಾರ, ಮೇರುವಿನ ಪಶ್ಚಿಮದ ಸುಪಾರ್ಶ್ವ ವೆಂಬ ಪರ್ವತದಲ್ಲಿರುವ ವೈಭ್ರಾಜವೆಂಬ ದಿವ್ಯತೋಪಿನಲ್ಲಿ ದೇವತೆಗಳು ವಿಹರಿಸುತ್ತಾರೆ: ಮೇರುವಿನ ಇನ್ನೊಂದು ಅಂಗವಾದ ಮಂದರ ಪರ್ವತ ಸಮುದ್ರ ಮಥನದ ಕಾಲದಲ್ಲಿ ಕಡಗೋಲಾಯಿತು.

ಮೇರುಪರ್ವತದ ವರ್ಣನೆಗಳು ಹೀಗಿವೆ:

ಅಪರಂಜಿಯಿಂದ ಕೂಡಿದ ಮೇರುಪರ್ವತದ ಎತ್ತರ 1.60,000 ಯೋಜನಗಳು. ಇದರ ಸುತ್ತ ಖಗೋಳಕಾಯಗಳು ತಿರುಗುತ್ತವೆ. ಈ ಪರ್ವತದ ಮೇಲೆ ಬೆಳೆದಿರುವ ಬೃಹದಾಕಾರದ ಜಂಬೂ ಮರದ ನೆರಳು ಪೃಥ್ವಿ (ಭೂಮಿ) ಎಂಬ ದ್ವೀಪದ ಮೇಲೆ ಬಿದ್ದಿದೆ. ಇದರಿಂದ ಭೂಮಿಗೆ ಜಂಬೂ ದ್ವೀಪವೆಂದು ಹೆಸರು. ಈ ಮರದಿಂದ [illegible] ಗಾತ್ರದ ಹಣ್ಣುಗಳಿಂದ ಹರಿದ ರಸ ಜಂಬೂ ನದಿಯಾಗಿ ಹರಿಯುತ್ತದೆ. ಇದು ಅಮರತ್ವ ನೀಡುವ ನದಿ.

ಹಿಮಾಲಯದಲ್ಲಿಯ [illegible] ಮೇರು ಪರ್ವತದ [illegible] ಇದೆಯೆಂದು ವಾದಿಸುವವರೂ ಇದ್ದಾರೆ. ಅದ್ಭುತ [illegible] ಎಂದು ಕಾಳಿದಾಸನ ಬರೆಹದಲ್ಲಿ ಮೇರುಪರ್ವತದ ಬಣ್ಣಿಸಲ್ಪಟ್ಟಿದೆ.



[illegible]

ಮೇಲುಕೋಟೆ

ಒಮ್ಮೆ ದೆಹಲಿಯ ಸುಲ್ತಾನ ದಕ್ಷಿಣಕ್ಕೆ ದಂಡೆತ್ತಿ ಬಂದಿದ್ದಾಗ ಪುರಾಣ ಪ್ರಸಿದ್ಧ ಮೇಲುಕೋಟೆಯ ದೇವಾಲಯದ ಉತ್ಸವ ಮೂರ್ತಿಯನ್ನು ಅಪಹರಿಸಿಕೊಂಡು ಹೋದ. ತನ್ನ ಮಗಳಿಗೆ ಕೊಟ್ಟ. ಅವಳಿಗೆ ಅದು ಮೆಚ್ಚಿನ, ಪ್ರೀತಿಯ ಗೊಂಬೆಯಾಯಿತು. ಒಂದು ಕ್ಷಣವೂ ಅದನ್ನು ಬಿಟ್ಟಿರುತ್ತಿರಲಿಲ್ಲ. ಆಗ ಮೇಲುಕೋಟೆಯಲ್ಲಿದ್ದ (12ನೆಯ ಶತಮಾನ) ವಿಶಿಷ್ಟಾದ್ವೈತ ಮತ ಸ್ಥಾಪಕ ರಾಮಾನುಜಾಚಾರ್ಯರು ದೆಹಲಿಗೆ ಪ್ರಯಾಣ ಮಾಡಿದರು. ಸುಲ್ತಾನನ ಅರಮನೆಯಲ್ಲಿ ನಿಂತು ಕೇವಲ ತಮ್ಮ ಸ್ತೋತ್ರದ ಮಹಿಮೆಯಿಂದ ಮೂರ್ತಿ ತಮ್ಮ ಕೈ ಸೇರುವಂತೆ ಪವಾಡ ನಡೆಸಿದರು. ಮತ್ತೆ ಮೇಲುಕೋಟೆಗೆ ಬಂದು ಮೂರ್ತಿಯ ಪ್ರತಿಷ್ಠಾಪನೆ ಮಾಡಿದರು. ಮೂರ್ತಿಯನ್ನು ಬಿಟ್ಟಿರಲಾರದ ಸುಲ್ತಾನನ ಮಗಳು ಮೇಲುಕೋಟೆಗೆ ಬಂದಳು: ಅಲ್ಲಿ ಅವಳ ಆತ್ಮ ಮೂರ್ತಿಯಲ್ಲಿ ಐಕ್ಯವಾಯಿತಂ.

—ಇದೊಂದು ಪ್ರಚಲಿತ ಕಥೆ.

ಈಗಲೂ ಮೇಲುಕೋಟೆಯ ಚೆಲುವರಾಯಸ್ವಾಮಿಯ ಪ್ರತಿಮೆಯ ಪಾದದಲ್ಲಿ ಯವನ ಬಾಲಿಕೆಯ ವಿಗ್ರಹವಿದೆ. ಬೀಬಿ ನಾಚ್ಚಿಯಾರ್ ಎಂದು ಈ ವಿಗ್ರಹವನ್ನು ಕರೆಯುತ್ತಾರೆ.

ಮೇಲುಕೋಟೆ ಶ್ರೀರಂಗಪಟ್ಟಣ [illegible] 30 ಮೈಲು ದೂರದಲ್ಲಿದೆ. ಮೇಲುಕೋಟೆ ಎಂದರೆ ಶ್ರೇಷ್ಠ ಕೋಟೆ. [illegible] ಕೋಟೆಗಿಂತ [illegible] ದೇವಾಲಯವೇ ಈಗ ಪ್ರಸಿದ್ಧ. [illegible] ಕ್ಷೇತ್ರಗಳಲ್ಲಿ ಇದು [illegible]. ಇದಕ್ಕೆ ನಾರಾಯಣಾದ್ರಿ, ಯಾದವಗಿರಿ ಎಂಬ ಹೆಸರುಗಳೂ ಉಂಟು.

[illegible] ನಾರಾಯಣಕ್ಷೇತ್ರ ಹಾಗೂ [illegible] ಬೀಬಿ ನಾಚ್ಚಿಯಾರಳ ಕಥೆ ನಾರಾಯಣಕ್ಷೇತ್ರಕ್ಕೆ ಸಂಬಂಧಪಟ್ಟಿದೆ. [illegible] ದೇವಾಲಯಗಳಲ್ಲಿ ಮೇಲುಕೋಟೆಯ [illegible]. ಫಾಲ್ಗುಣ [illegible]. [illegible] (ಮಾರ್ಚ್–ಏಪ್ರಿಲ್) ಉತ್ಸವ ನಡೆಯುತ್ತದೆ.

ಮೇಲುಕೋಟೆಯ [illegible] 'ವೈರಮುಡಿ'.

ಮೇಲುಕೋಟೆಯಲ್ಲಿ [illegible] 'ರಾಮಾನುಜ' [illegible] 'ಆರಾಮುದ' [illegible].

[illegible] ಮೇಲುಕೋಟೆಯ ಪರಿಧ್ಯಾನಶಿಲೆಯ ಹತ್ತಿರ, ದತ್ತಾತ್ರೇಯರು ಸನ್ಯಾಸ ಸ್ವೀಕರಿಸಿದರೆಂದು ಪ್ರತೀತಿ.

ಮೇವಾಡ

ಚಿತ್ತೋಡಗಢ ಹಾಗೂ ಉದಯಪುರಗಳ ಸುತ್ತಮುತ್ತಲ ಪ್ರದೇಶ [illegible] ಮೇವಾಡ ರಜಪೂತ ಪರಂಪರೆಯ ಜ್ವಲಂತ ವ್ಯಕ್ತಿಗಳು.

[illegible] ಮೇವಾಡವಾಯಿತು.

[illegible]
[illegible]
[illegible]
ಪಾಗಿತ್ತು. ಮುಂದೆ ಚಿತ್ತೋಡಗಡ ರಾಜಧಾನಿಯಾಯಿತು.

[illegible]
[illegible]
[illegible]
[illegible]
[illegible]
ಮಗ ಮೋಕಲ ಪಟ್ಟಕ್ಕೆ ಬಂದ.

[illegible]
[illegible]
[illegible]
[illegible]
[illegible] ಮೇವಾಡದ 84
[illegible]
[illegible]
'ಕೀರ್ತಿಸ್ತಂಭ'ವೂ ಆತ ಕಟ್ಟಿಸಿದ್ದು.

[illegible] 'ಸಂಗಾ'
ಎಂದು ಜನಪ್ರಿಯನಾದ. ಪಟ್ಟಕ್ಕೆ ಬಂದದ್ದು 1509ರಲ್ಲಿ. ಇವನು
ಕಲಿ, ಕೆಚ್ಚೆದೆಯವನು. 100 ಸಮರಗಳನ್ನು ಕಂಡಿದ್ದ. ಇವನ
ಮೈಮೇಲೆ 80 ಗಾಯಗಳಿದ್ದುವಂತೆ. ದೆಹಲಿಯ ಸುಲ್ತಾನರ ಆಳ್ವಿಕೆ
[illegible] 1527ರಲ್ಲಿ [illegible]
ಸಂಗಾ ಸೋತುಹೋದ.

[illegible]
ಸಾವಿರಾರು ರಜಪೂತ ಮಹಿಳೆಯರು 'ಜೋಹರ್' ಆಚರಿಸಿದರು.
[illegible]
[illegible] 1616ರಲ್ಲಿ
ಜಹಾಂಗೀರನಿಗೆ ಮೇವಾಡದ ರಾಣಾ ಅಧೀನನಾಗಬೇಕಾಯಿತು.

ಹೀಗೆ ಮೇವಾಡ ಸಂಸ್ಥಾನ ಕ್ಷಯಿಸಿಹೋಯಿತು.

ಮೈಕೆಲ್ ಮಧುಸೂದನ ದತ್ತ

[illegible]
[illegible]
ಮಾಡಿದಳು. ಈ ವಸ್ತುವಿನ 'ಮೇಘನಾದ ವಧಾ' ಎಂಬ ಅತ್ಯಂತ
ಮನೋಹರ ಸ್ವಾರಸ್ಯಪೂರ್ಣ ಕಾವ್ಯ ರಚಿಸಿ, ಭಾರತದಲ್ಲಷ್ಟೇ ಅಲ್ಲದೆ
ವಿದೇಶಗಳಲ್ಲೂ ಖ್ಯಾತಿ ಗಳಿಸಿದ ಬಂಗಾಳೀ ಕವಿ, ಮಧುಸೂದನದತ್ತ.

[illegible]
[illegible]
ನಲ್ಲಿ ವಿದ್ಯಾಭ್ಯಾಸ. 1843ರಲ್ಲಿ ಮಧುಸೂದನರು ಕ್ರೈಸ್ತಮತವನ್ನು
[illegible]
[illegible]
[illegible]
[illegible]
[illegible]
[illegible]
ಭಾರತಕ್ಕೆ ಹಿಂದಿರುಗಿದ ಮೈಕೆಲ್, ವೃತ್ತಿಯಲ್ಲಿ ಯಶಸ್ಸು ಗಳಿಸದೆ, ಬಡ[illegible]
[illegible] 1873 [illegible]

[illegible]
[illegible]
[illegible]
[illegible]
ನಾಟಕಗಳನ್ನು ಅತ್ಯಂತ ಪ್ರಭಾವಯುತವಾಗಿ ರಚಿಸಿದರು.

[illegible]
[illegible]
[illegible]
[illegible]
[illegible]
[illegible]
[illegible]
ಭಾರತದ ಶ್ರೇಷ್ಠ ಕವಿ-ನಾಟಕಕಾರರಲ್ಲಿ ಒಬ್ಬರಾಗಿಸಿವೆ.

[illegible]
ಮಧುಸೂದನ ದತ್ತ.

ಮೈತ್ರಾಯಣೀಯೋಪನಿಷತ್

[illegible]
ಹಾಗೂ ಸೂರ್ಯವಂಶಗಳ ರಾಜರ ಬಗೆಗೆ ಪ್ರತ್ಯೇಕ ಪ್ರತ್ಯೇಕ ಹೇಳಿ[illegible]
[illegible]
ಬಣ್ಣನೆ, ಅಭಿನಯ, ಚಿತ್ರಕಲೆಗಳನ್ನು ಕುರಿತ ಹೇಳಿಕೆಗಳು ಮೈತ್ರಾಯ[illegible]
[illegible]
[illegible]
ಇದರಲ್ಲಿ ಹೇಳಿದೆ.

ಕೃಷ್ಣಯಜುರ್ವೇದಕ್ಕೆ ಸೇರಿದ ಈ ಉಪನಿಷತ್ತು ಮೈತ್ರೀಋ[illegible]
[illegible] 1900[illegible]
ರಚಿತವಾಗಿರಬಹುದೆಂದು ವಿದ್ವಾಂಸರ ಅಭಿಪ್ರಾಯ.

[illegible]
[illegible]
ಒಂದು ವಿಶೇಷ.

ಮೈತ್ರೇಯಿ

[illegible]
[illegible]
ಪತ್ನಿಯರಲ್ಲೊಬ್ಬಳು ಆತನನ್ನು ಪ್ರಶ್ನಿಸಿದಳು.

[illegible]

[illegible]
[illegible]

[illegible] ಬ್ರಹ್ಮಜ್ಞಾನವನ್ನು ಉಪದೇಶಿಸಿದರು.

[illegible] ಅತ್ಯಂತ ಸಾರಭೂತ ಭಾಗಗಳಲ್ಲೊಂದು.

ಮೈಥಿಲೀ ಭಾಷೆ, ಸಾಹಿತ್ಯ

ಮಿಥಿಲಾದೇಶದ ಭಾಷೆ ಮೈಥಿಲೀ. ಪುರಾಣ–ಕಾವ್ಯಗಳಲ್ಲಿ ಈ ದೇಶದ [illegible] ನಾಡುತ್ತಾರೆ.

[illegible] ಸಿದ್ದರು.

ಮೈಥಿಲೀ ಸಾಹಿತ್ಯವನ್ನು ಆದಿಕಾಲ (1300–1600) ಮಧ್ಯಕಾಲ (1600–1860) ಮತ್ತು [illegible] ಸ್ಥೂಲವಾಗಿ ಗುರುತಿಸಬಹುದು.

[illegible] ಮೊದಲನೆಯದು ಎನ್ನಲಾಗಿದೆ. ಇದು ಆಗಿನ ಜನಜೀವನವನ್ನು ಪ್ರತಿಬಿಂಬಿಸುವ ಕೃತಿ.

ಈ ಯುಗದ ಮಹೋನ್ನತ ಕವಿ ವಿದ್ಯಾಪತಿ (1360 ಜನನ), [illegible]

[illegible] ವಾದದ್ದು. ಈ ಕಾಲದ ಸಾಹಿತ್ಯ ಸೃಷ್ಟಿ ಪ್ರಮುಖವಾಗಿ ನಡೆದದ್ದು, ಈಗಿನ [illegible] ನಾಟಕಗಳಲ್ಲಿ ಕಾಣಬಹುದು.

[illegible]

ಕೇಂದ್ರ ಸಾಹಿತ್ಯ ಅಕಾದೆಮಿ ಪ್ರಶಸ್ತಿ ವಿಜೇತರಾದ ಯಶೋಧರ ಝಾ [illegible] ಮಿಶ್ರಾ (1968), ಕಾಶೀಕಾಂತ್ ಮಿಶ್ರ (1970) ಮತ್ತು ಸುರೇಂದ್ರ ಝಾ 'ಸುಮನ್' (1971) ಮೈಥಿಲೀ ಸಾಹಿತ್ಯಕ್ಕೆ ರಾಷ್ಟ್ರೀಯ ಮನ್ನಣೆ ದೊರಕಿಸಿ ಕೊಟ್ಟಿದ್ದಾರೆ. ಮಣೀಂದ್ರ ರಾಜ್‌ಕಮಲ್ ಚೌಧರಿ ಪ್ರಮುಖ ನವ ಕವಿ.

[illegible] ಗ್ರಹಣ'), ಹರಿನಾಥ ಠಾಕೂರ್ ('ಮಾಧವೀ ಮಾಧವ'), ಮಾಯಾನಂದ, [illegible] ಪುನರ್ಜನ್ಮ') ಈಶನಾಥ ಝಾ, 'ನಚಿಕೇತ' ಮೊದಲಾದವರು ಪ್ರಮುಖರು.

[illegible] ಸಂಪದ್ಭರಿತವನ್ನಾಗಿ ಮಾಡಿದೆ. 'ಮಿಥಿಲಾ ಮಿಹಿರ', 'ಮೈಥಿಲೀ [illegible]

ಮೈಸೂರು

ಕಾಲಾಳುಗಳು, ಕುದುರೆಸವಾರರು, ಸಂಗೀತ ಮೇಳದವರು, ಅಂಗ [illegible]

ದೇವಸ್ಥಾನವಿರುವ ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿ ಮೈಸೂರು. [illegible] ಮೇಲೆ ಚಾಮುಂಡೇಶ್ವರಿ ದೇವಾಲಯವಿದೆ.

[illegible] ಕೆಳಗೆ ಹರಡಿದಂತೆ ಎನಿಸುತ್ತದೆ. ಬೆಟ್ಟದ ಮೇಲಿರುವ ಬೃಹತ್ ಗಾತ್ರದ [illegible]



ಮೈಸೂರು ಅರಮನೆ

ಭವನದಲ್ಲಿಡುತ್ತಿದ್ದ ದಂತ ಹಾಗೂ ಚಿನ್ನದ ಸಿಂಹಾಸನ, ಉನ್ನತ ಅಲಂಕೃತ ಕಂಬಗಳು, ಗೊಂಬೆತೊಟ್ಟಿ, ಆಯುಧಶಾಲೆ ಇವು ಅರಮನೆಯ ಬೆಡಗಿನ ವಿಭಾಗಗಳಲ್ಲಿ ಕೆಲವು.

ಕರ್ಜನ್ ಪಾರ್ಕ್, ನಿಷತ್ ಬಾಗ್, ಥಂಡೀ ಸಡಕ್ ಆಹ್ಲಾದಕರ ಉದ್ಯಾನಗಳು. ಲಲಿತ ಮಹಲ್ ಅರಮನೆಗೆ ಹೋಗುವ ದಾರಿಯಲ್ಲಿ ವಿಶಾಲವಾದ, ಉದ್ಯಾನವುಳ್ಳಮೃಗಾಲಯವಿದೆ.

ಜಯಲಕ್ಷ್ಮೀವಿಲಾಸ (ಈಗ ಮಾನಸ ಗಂಗೋತ್ರಿಯ ಒಂದು ಭಾಗ), ಚೆಲುವಾಂಬಾ ಅರಮನೆ (ಈಗ ಕೇಂದ್ರ ಆಹಾರ ಸಂಶೋಧನಾಲಯ) ಹಾಗೂ ಜಗನ್ಮೋಹನ ಬಂಗಲೆಗಳು ಆಕರ್ಷಕ ಕಟ್ಟಡಗಳು. ಜಗನ್ಮೋಹನ ಬಂಗಲೆಯಲ್ಲಿ ಸುಂದರ ಕಲಾಕೃತಿಗಳ, ಹಳೆಯ ಕುಶಲ ಕಲಾವಸ್ತುಗಳ ಸಂಗ್ರಹಗಳಿವೆ.

ಅರಮನೆಯ ಉತ್ತರ ದ್ವಾರದ ಎದುರು ಚಾಮರಾಜ ಒಡೆಯರ, ಊರಿನಾಚೆ ಬನ್ನಿ ಮಂಟಪವಿದೆ. ಪ್ರಾಚ್ಯ ಸಂಶೋಧನಾಲಯ, ವಿಶ್ವ ವಾಯುವ್ಯ ಮೂಲೆಯಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ ಪ್ರತಿಮೆಗಳಿವೆ. ವಿದ್ಯಾನಿಲಯದ ಕಾರ್ಯಾಲಯವಿರುವ ಕ್ರಾಫರ್ಡ್ ಹಾಲ್, ಮಹಾರಾಜಾ ಕಾಲೇಜು –ಕೆಲವು ಗಮನಾರ್ಹ ಕಟ್ಟಡಗಳು. ಮೈಸೂರು ವಿಶ್ವವಿದ್ಯಾನಿಲಯದ ಕೇಂದ್ರ ಮೈಸೂರಿನಲ್ಲಿದೆ. ಈ ವಿಶ್ವವಿದ್ಯಾನಿಲಯ 1916ರಲ್ಲಿ ಆರಂಭವಾಯಿತು.

ಚಾಮರಾಜೇಂದ್ರ ಟೆಕ್ನಿಕಲ್ ಇನ್ಸ್‌ಟಿಟ್ಯೂಟಿನಲ್ಲಿ ವಿವಿಧ ಕುಶಲ ಕಲಾವಸ್ತುಗಳು ದೊರೆಯುತ್ತವೆ. ವಿದ್ಯಾರ್ಥಿಗಳಿಗೆ ಇಲ್ಲಿ ತರಬೇತಿಯೂ ಸಿಗುತ್ತದೆ.

ಬೃಂದಾವನ, ನಂಜನಗೂಡು, ಶ್ರೀರಂಗಪಟ್ಟಣ, ರಂಗನತಿಟ್ಟು –ಇವು ಮೈಸೂರಿನ ಸಮೀಪದ ಪ್ರೇಕ್ಷಣೀಯ ಸ್ಥಳಗಳು.



ಕೋಟೆ ಗೋಡೆಯುಳ್ಳ ಸುಂದರ ಅರಮನೆ-ಆಧುನಿಕ ಶೈಲಿಯ ಚೆಲುವಿನ ನಿರ್ಮಾಣ. ವಿಶಾಲವಾದ ಈ ಅರಮನೆಗೆ ಅಂತಸ್ತುಗಳಿವೆ. ದರ್ಬಾರು

ಮೈಸೂರು

ನೋಡಿ : ಕರ್ನಾಟಕ





ದಂತ, ಶ್ರೀಗಂಧ, ಶಿಲೆ, ಲೋಹಗಳ ಚೆಲುವಾದ ಕುಶಲ ಕಲಾವಸ್ತುಗಳು: ತೇಗ, ಕರಿಮರ, ಚಿತ್ರಗಳ ಪೀಠೋಪಕರಣಗಳು, ಮೈಸೂರು ರೇಷ್ಮೆ ಹಾಗೂ ಶ್ರೀಗಂಧದ ಎಣ್ಣೆ ವಿಶ್ವವಿಖ್ಯಾತ ವಸ್ತುಗಳು. ದಸ್ತ್ರೋದ್ಯಮ, ಛತ್ರದ ಗಿರಣಿ, ಎಣ್ಣೆ ತಯಾರಿ, ರಾಸಾಯನಿಕಗಳು, ತೊಗಲು ಸಂಸ್ಕರಣೆ ಮುಂತಾದ ಕೈಗಾರಿಕೆಗಳಿವೆ. ಕಾಫಿ ಸಂಸ್ಕರಣೆ, ಹತ್ತಿ ವಸ್ತ್ರ ನೆಯ್ಗೆ, ಬೀಡಿ ಕಟ್ಟುವುದು ಮುಂತಾದ ಗೃಹಕೈಗಾರಿಕೆಗಳಿವೆ.

ಮೈಸೂರಿನ ಸುತ್ತಮುತ್ತ ಬೃಂದಾವನ, ನಂಜನಗೂಡು, ಮೇಲುಕೋಟೆ, ಸೋಮನಾಥಪುರ, ಬಂಡೀಪುರ, ಶ್ರೀರಂಗಪಟ್ಟಣ, ರಂಗನತಿಟ್ಟು, ಬಿಳಿಗಿರಿರಂಗನ ಬೆಟ್ಟ ಮೊದಲಾದ ಪ್ರೇಕ್ಷಣೀಯ ಜಾಗಗಳಿವೆ. ಮೈಸೂರಿನಿಂದ ಬೆಂಗಳೂರಿಗೆ 86 ಮೈಲು ದೂರ. ಮೈಸೂರಿನ ಜನಸಂಖ್ಯೆ 3,55,685.

ಹಿಂದೆ ದುಷ್ಟರಾಕ್ಷಸ —ಮಹಿಷಾಸುರ— ಇಲ್ಲಿ ಆಳುತ್ತಿದ್ದನೆಂದೂ ಅವನ ಉಪಟಳದಿಂದ ಬೆಂದ ಜನರು ಚಾಮುಂಡೇಶ್ವರಿಯ ಮೊರೆ ಹೊಕ್ಕರೆಂದೂ ಆಕೆ ಸಿಂಹವನ್ನೇರಿ ಬಂದು ಈ ದುಷ್ಟನನ್ನು ಸಂಹರಿಸಿದಳೆಂದೂ ಕಥೆಯಿದೆ. ಮಹಿಷಾಸುರನ ಊರು ಎನಿಸಿ, ಮಹಿಷೂರು ಆಗಿ, ಮೈಸೂರು ಆಯಿತು —ಎಂದು ನಂಬಿಕೆ.

ಶಾತವಾಹನರು (1–3 ಶತಮಾನ), ಕದಂಬರು (4–5 ಶತಮಾನ), ಬಾದಾಮಿಯ ಚಾಲುಕ್ಯರು (6–8 ಶತಮಾನ), ರಾಷ್ಟ್ರಕೂಟರು (8–9 ಶತಮಾನ), ಚೋಳರು ಹಾಗೂ ಹೊಯ್ಸಳರು (11–14 ಶತಮಾನ), ವಿಜಯನಗರದ ರಾಜರು (14–16 ಶತಮಾನ), ಹಾಗೂ ಒಡೆಯರು (16ನೆಯ ಶತಮಾನದಿಂದ 1956ರ ತನಕ) ಮೈಸೂರನ್ನು ಆಳಿದರು. ಒಡೆಯರ ಅವಧಿಯಲ್ಲಿ ಹೈದರಾಲಿ ಮತ್ತು ಟಿಪ್ಪುಸುಲ್ತಾನರೂ ರಾಜ್ಯಭಾರ ಮಾಡಿದ್ದರು.

ಮೈಸೂರು ಒಡೆಯರು

ಕನ್ನಡನಾಡಿನ ಇತಿಹಾಸದಲ್ಲಿ, ಸಾಮಾಜಿಕ, ಆರ್ಥಿಕ, ರಾಜಕೀಯ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಅಪಾರ ಸೇವೆ ಸಲ್ಲಿಸಿದ ರಾಜಮನೆತನ ಒಡೆಯರದು. ಸುಮಾರು 500 ವರ್ಷಗಳ ಕಾಲ ಮೈಸೂರು ಸಂಸ್ಥಾನವನ್ನು ಆಳಿ ಜನರ ಪ್ರೀತಿ ಗೌರವಗಳಿಗೆ ಈ ಅರಸರು ಪಾತ್ರರಾದರು.

ಒಡೆಯರ ವಂಶದ ಮೂಲಪುರುಷರು ವಿಜಯ, ಮತ್ತು ಕೃಷ್ಣ ಎಂಬ ಸೋದರರು. 1398–99ರಲ್ಲಿ ಇವರು ಮೈಸೂರಿನ ಪ್ರದೇಶಕ್ಕೆ ಬಂದರು. ವಿಜಯ ಪಾಳೆಗಾರನೊಬ್ಬನ ಮಗಳನ್ನು ಮದುವೆಯಾಗಿ 'ಯದುರಾಯ' ಎಂದು ಪ್ರಸಿದ್ಧನಾಗಿ ಈ ಪ್ರದೇಶಕ್ಕೆ ಅವನೇ 'ಒಡೆಯ'ನೂ ಆದ. ಅಲ್ಲಿಂದ ಒಡೆಯರ ವಂಶ ಮೈಸೂರನ್ನು ಆಳತೊಡಗಿತು.

ಯದುರಾಯರಿಂದ ಜಯಚಾಮರಾಜ ಒಡೆಯರ ವರೆಗೆ ಸುಮಾರು 25 ಮಂದಿ ರಾಜರು ಬಂದುಹೋದರು. ಇವರಲ್ಲಿ ಪ್ರಮುಖರಾದವರು ರಾಜ ಒಡೆಯರು (1578—1617), ಕಂಠೀರವ ನರಸರಾಜ ಒಡೆಯರು (1638—1659), ಚಿಕದೇವರಾಜ ಒಡೆಯರು (1673—1704), ಮುಮ್ಮಡಿ ಕೃಷ್ಣರಾಜ ಒಡೆಯರು (1799—1831) ಮತ್ತು ನಾಲ್ವಡಿ ಕೃಷ್ಣರಾಜ ಒಡೆಯರು (1895—1940).

1578ರ ವರೆಗೆ ವಿಜಯನಗರದ ರಾಜರಿಗೆ ಮೈಸೂರು ಒಡೆಯರು ಸಾಮಂತ ರಾಜರಾಗಿದ್ದು ಅನಂತರ 1761ರ ವರೆಗೆ ಸ್ವತಂತ್ರರಾಗಿ ರಾಜ್ಯ ಮಾಡಿದರು. ಅನಂತರ ಹೈದರಾಲಿ ಟಿಪ್ಪುಸುಲ್ತಾನರ ರಾಜ್ಯಭಾರ. ಮುಂದೆ 50 ವರ್ಷಗಳ ಬ್ರಿಟಿಷರ ವಶಕ್ಕೆ. ಮರಳಿ ಒಡೆಯರ ಆಳ್ವಿಕೆ.

1947ರಲ್ಲಿ ಮೈಸೂರು ಭಾರತ ಗಣರಾಜ್ಯದಲ್ಲಿ ಸೇರಿಕೊಂಡಿತು. 1971ರಲ್ಲಿ ಭಾರತ ಸರಕಾರ ರಾಜ ಮಹಾರಾಜರ ಹಕ್ಕು ಸವಲತ್ತುಗಳನ್ನು ರದ್ದುಗೊಳಿಸಿದಾಗ, ಒಡೆಯರು ರಾಜಪದವಿ ಕಳೆದುಕೊಂಡರು.

ಒಡೆಯರ ರಾಜವಂಶದ ಸಾಧನೆಗಳು ಅನೇಕ. ಪ್ರಜಾಪ್ರತಿನಿಧಿ ಸಭೆ ಎಂಬ ಶಾಸಕಾಂಗವನ್ನು ರಚಿಸಿ ಆಡಳಿತ ವ್ಯವಸ್ಥೆಯಲ್ಲಿ ಪ್ರಜಾಪ್ರಭುತ್ವವನ್ನು ಆಚರಣೆಗೆ ತಂದರು. 1913ರ ವೇಳೆಗಾಗಲೇ ವಿದ್ಯಾಭ್ಯಾಸ ಉಚಿತವಾಯಿತು. ಮೈಸೂರಿನಲ್ಲಿ ಒಂದು ಭವ್ಯ ವಿಶ್ವವಿದ್ಯಾನಿಲಯ ಕಟ್ಟಿಸಿದರು: ಏಷ್ಯದಲ್ಲೇ ಪ್ರಥಮ ಎನಿಸುವ ಕಾವೇರಿ ವಿದ್ಯುತ್ ಯೋಜನೆ ಕೈಗೊಂಡರು. ಬಹಳ ಹಿಂದೆಯೇ ಅಂಚೆ ವ್ಯವಸ್ಥೆಯನ್ನೂ ತಂದು ಸಂಪರ್ಕ ವ್ಯವಸ್ಥೆಗೆ ಅಡಿಪಾಯ ಹಾಕಿದರು.

ಒಡೆಯರ ವಂಶದಲ್ಲಿ ಅನೇಕರು ಸ್ವತಃ ವಿದ್ವಾಂಸ-ಕವಿಗಳಾಗಿದ್ದರು. ಸಂಗೀತ, ಚಿತ್ರಕಲೆ, ಸಾಹಿತ್ಯಗಳಿಗೆ ಪರಮಾವಧಿ ಪ್ರೋತ್ಸಾಹ ಇವರ ಕಾಲದಲ್ಲಿ ದೊರೆಯಿತು. ಮೈಸೂರಿನ ದಸರಾ ವಿಶ್ವಖ್ಯಾತಿ ಪಡೆಯಿತು. ಮೈಸೂರು 'ಮಾದರಿ ಸಂಸ್ಥಾನ' ಎಂದು ಹೆಸರು ಗಳಿಸಿತು.

ಮೈಸೂರು ಕಬ್ಬಿಣ ಮತ್ತು ಉಕ್ಕಿನ ಕಾರಖಾನೆ

ಮೈಸೂರು ಕಬ್ಬಿಣ ಮತ್ತು ಉಕ್ಕು ಲಿಮಿಟೆಡ್—ಎಂ.ಐ.ಎಸ್.ಎಲ್. ಕಾರಖಾನೆ—ಕರ್ನಾಟಕದ ಭದ್ರಾವತಿಯಲ್ಲಿದೆ. ದಕ್ಷಿಣ ಭಾರತದಲ್ಲಿ ಈ ಪ್ರಮಾಣದ ಕಬ್ಬಿಣ ಮತ್ತು ಉಕ್ಕಿನ ಕಾರಖಾನೆ ಬೇರೊಂದಿಲ್ಲ.

ಭದ್ರಾವತಿಯ ಈ ಕಾರಖಾನ ಎಂ. ವಿಶ್ವೇಶ್ವರಯ್ಯನವರ ದಿಟ್ಟ ಪ್ರಯತ್ನದ ಫಲ. 1923 ಜನವರಿ 18ರಂದು ಆಗಿನ ಮೈಸೂರು ದಿವಾನರಾಗಿದ್ದ ಎ.ಆರ್. ಬ್ಯಾನರ್ಜಿ ಊದುಕುಲುಮೆಯ ಉರಿಯನ್ನು ಹೊತ್ತಿಸಿ ಕಾರಖಾನೆಯನ್ನು ಆರಂಭಿಸಿದರು. ಮೊದಲಿಗೆ ಮೈಸೂರ್ ಸ್ಟೇಟ್ ಅಯರ್ನ್ ವರ್ಕ್ಸ್ ಎಂದಿದ್ದುದು 1962ರಲ್ಲಿ ಲಿಮಿಟೆಡ್ ಕಂಪೆನಿಯಾಗಿ ಮಾರ್ಪಾಡಾಯಿತು. ಮಧ್ಯೆ ಸ್ವಲ್ಪ ಕಾಲ ಕಾರಖಾನೆ ನಷ್ಟಕ್ಕೆ ಗುರಿಯಾಯಿತು. ಆದರೆ ವಿಶ್ವೇಶ್ವರಯ್ಯನವರ ಜಾಣಾಕ್ಷತನದಿಂದ ಬೇಗ ಚೇತರಿಸಿಕೊಂಡಿತು. ತಾನು ಉತ್ಪಾದಿಸಿದ ಪಾಳವನ್ನು ಅಮೆರಿಕದ ಸಂಯುಕ್ತ ಸಂಸ್ಥಾನಕ್ಕೆ ಆಗ ಕಾರಖಾನೆ ಮಾರುತ್ತಿತ್ತು.

ಕಬ್ಬಿಣ ಉಕ್ಕುಗಳಷ್ಟೇ ಅಲ್ಲದೆ ಎಂಜಿನಿಯರಿಂಗ್ ಸಾಮಾನುಗಳೂ ಈ ಕಾರಖಾನೆಯಲ್ಲಿ ತಯಾರಾಗುತ್ತಿವೆ. ಮಿಶ್ರಲೋಹ ಹಾಗೂ ವಿಶೇಷ ಉಕ್ಕು, ಬೀಡುಕಬ್ಬಿಣ, ಲೋಹಪಾಳ, ಸರಳು, ಅಗಲ ಸರಳು, ಸಿಮೆಂಟ್, ಫೆರೊಸಿಲಿಕಾನ್, ಫೆರೊಮ್ಯಾಂಗನೀಸ್, ಫೆರೊಕ್ರೋಮ್, ಸಿಲಿಕೊ-ಮ್ಯಾಂಗನೀಸ್, ಎರಕ ಹುಯ್ದ ಬಗೆಬಗೆಯ ಕಬ್ಬಿಣ ಕೊಳವೆ, ಹಳಿ, ಎರಕ ಉಕ್ಕು-ಇವೆಲ್ಲ ಇಲ್ಲಿನ ಉತ್ಪಾದನೆಗಳು.

ಕಾರಖಾನೆಯಲ್ಲಿ ವಿಸ್ತರಣಾ ಯೋಜನೆಗಳನ್ನು ಕೈಗೊಳ್ಳಲಾಗಿದೆ. ವಿದ್ಯುತ್ ಕುಲುಮೆಗಳನ್ನು



ಕಬ್ಬಿಣ, ಉಕ್ಕು
ಭದ್ರಾವತಿ ಕಾರಖಾನೆ

ಸ್ಥಾಪಿಸಲಾಗಿದೆ. ಕಾರಖಾನೆಗೆ ಪಶ್ಚಿಮ ಜರ್ಮನಿಯ ಆರ್ಥಿಕ ನೆರವು ದೊರೆತಿದೆ.

ಮೈಸೂರು ರೇಷ್ಮೆ

ಕರ್ನಾಟಕದ ಎರಡು ಹೆಮ್ಮೆಯ ವಸ್ತುಗಳು: ಮೈಸೂರು ರೇಷ್ಮೆ ಮತ್ತು ಶ್ರೀಗಂಧ.

ಬಹಳ ಕಾಲದ ವರೆಗೆ ಮೈಸೂರು ರೇಷ್ಮೆ ಗೃಹಕೈಗಾರಿಕೆಯಾಗಿ ಇದ್ದಿತು. 1914ರಲ್ಲಿ ಇದಕ್ಕೆ ಸರಕಾರದ ಆಶ್ರಯ ದೊರೆಯಿತು. 1932–38ರ ಅವಧಿಯಲ್ಲಿ ಆರ್ಥಿಕ ಮುಗ್ಗಟ್ಟಿನ ಕಾಲವನ್ನು ಬಿಟ್ಟರೆ ಈ ಕೈಗಾರಿಕೆ ಒಂದೇ ಸಮನಾಗಿ ಪ್ರಗತಿಯತ್ತ ನಡೆದಿದೆ.

ದೇಶದ ಮುಕ್ಕಾಲು ಭಾಗ ರೇಷ್ಮೆಯ ಉತ್ಪಾದನೆಯಾಗುವುದು ಕರ್ನಾಟಕದಲ್ಲಿ. ವಿಶೇಷವಾಗಿ ಮೈಸೂರು, ಬೆಂಗಳೂರು, ಮಂಡ್ಯ, ತುಮಕೂರು ಹಾಗೂ ಕೋಲಾರ ಜಿಲ್ಲೆಗಳಲ್ಲಿ ರೇಷ್ಮೆಯ ಉತ್ಪಾದನೆ ಹೆಚ್ಚು. ಮೈಸೂರು ರೇಷ್ಮೆಯ ಎಳೆಗಳನ್ನು ತರಿಸಿಕೊಂಡು ಬಳಸುವ ಕೇಂದ್ರಗಳು ತಮಿಳುನಾಡು ಹಾಗೂ ವಾರಾಣಸಿಗಳಲ್ಲಿ ಇವೆ. ಇತರ ಪ್ರದೇಶಗಳಿಗೂ ರೇಷ್ಮೆ ಪೂರೈಸುವುದು ಸಾಧ್ಯವಾಗಬೇಕೆಂದು ಕರ್ನಾಟಕ ರಾಜ್ಯ ಸರಕಾರಕ್ಕೆ ಕೇಂದ್ರ ಸರಕಾರ ರೇಷ್ಮೆ ಕೈಗಾರಿಕೆ ಅಭಿವೃದ್ಧಿ ಹೊಂದಬೇಕೆಂದು ಧನಸಹಾಯ ನೀಡುತ್ತದೆ.

ರೇಷ್ಮೆ ಕೈಗಾರಿಕೆಯಲ್ಲಿ ಸಂಶೋಧನೆ ಹಾಗೂ ತರಬೇತಿ ಕಾರ್ಯಕ್ರಮಗಳು ರಾಜ್ಯದ ಹಲವೆಡೆ ನಡೆಯುತ್ತವೆ. ರೇಷ್ಮೆಯನ್ನು ತೆಗೆದ ಮೇಲೆ ಉಳಿಯುವ ವ್ಯರ್ಥ ಪದಾರ್ಥವನ್ನು ಉಪಯೋಗಿಸಿ ಉಪಯುಕ್ತ ಪದಾರ್ಥ ತಯಾರಿಸುವ ಕಾರ್ಖಾನೆಗಳು ಚನ್ನಪಟ್ಟಣ ಮುಂತಾದೆಡೆಗಳಲ್ಲಿ ಇವೆ. ಬಿಳಿಗಿರಿರಂಗನ ಬೆಟ್ಟದ ಬಳಿ ರೇಷ್ಮೆಯ ದೇಶೀಯ ತಳಿ ಮತ್ತು ವಿದೇಶೀ ತಳಿಗಳ ಹೆಚ್ಚಿನ ಉತ್ಪಾದನೆಗಾಗಿ ಸಂಶೋಧನೆ ನಡೆಸುವ ರಾಷ್ಟ್ರಮಟ್ಟದ ಕೇಂದ್ರವಿದೆ.

ಮೈಸೂರು ನಗರದಲ್ಲಿ ಸರಕಾರದ ವತಿಯಿಂದ ನಡೆಯುವ ರೇಷ್ಮೆ ಬಟ್ಟೆ ಕೈಗಾರಿಕೆಯಿದೆ. ಇದಕ್ಕೆ ಮೈಸೂರ್ ಗವರ್ನಮೆಂಟ್ ಸಿಲ್ಕ್ ವೀವಿಂಗ್ ಫ್ಯಾಕ್ಟರಿ ಎಂದು ಹೆಸರು. ಇಲ್ಲಿ ನೂರಕ್ಕೆ ನೂರು ಶುದ್ಧವಾದ ರೇಷ್ಮೆ ಎಳೆಗಳಿಂದ ನೆಯ್ದ ವಸ್ತ್ರಗಳು ತಯಾರಾಗುತ್ತವೆ. 'ಕ್ರೇಪ್' ಇದರಲ್ಲಿ ಹೆಸರಾದದ್ದು. ಜಾರ್ಜೆಟ್, ಸ್ಯಾಟಿನ್ ಮುಂತಾದ ನಮೂನೆಯ ವಸ್ತ್ರಗಳೂ ಇಲ್ಲಿ ತಯಾರಾಗುತ್ತವೆ.

ರೇಷ್ಮೆ : ನೆಯ್ಗೆಗೆ ಸಿದ್ಧತೆ



ಮೈಸೂರು ವಾಸುದೇವಾಚಾರ್ಯ


ನೋಡಿ : ಸಂಪುಟ ೫

ಮೊಘಲರು

ಅಕ್ಬರನಂಥ ಶ್ರೇಷ್ಠ ರಾಜನಿಂದಲೂ ತಾಜಮಹಲ್‌ನಂಥ ಸುಂ ಕಟ್ಟಡದಿಂದಲೂ ಮೊಘಲರು ಭಾರತದ ಇತಿಹಾಸದಲ್ಲಿ ಭದ್ರಸ್ ಪಡೆದಿದ್ದಾರೆ. 1526ರಲ್ಲಿ ಇಬ್ರಾಹಿಂ ಲೋದಿಯನ್ನು ಪದಚ್ಯುತಗೊ ಬಾಬರ್ ದೆಹಲಿಯಲ್ಲಿ ಮೊಘಲರ ಆಳ್ವಿಕೆ ಆರಂಭಿಸಿದ. 153 ಪಟ್ಟವೇರಿದ ಈತನ ಮಗ ಹುಮಾಯೂನ್ 1540ರಲ್ಲಿ ಶೇರ್ ಷಾ ಪದಚ್ಯುತನಾದರೂ ಮತ್ತೆ 1555ರಲ್ಲಿ ರಾಜ್ಯ ಗಳಿಸಿದ.

ಇವನ ಮಗ ಅಕ್ಬರನ ಕಾಲದಲ್ಲಿ ಸಾಮ್ರಾಜ್ಯ ವಿಸ್ತಾರಗೊಂ ಈತ ಮೊಘಲರ ಶ್ರೇಷ್ಠ ದೊರೆ.

ಇವನ ಮಗ ಜಹಾಂಗೀರ್ ಅಹಮದ್‌ನಗರ, ಕಾಂಗ್ರಾಗಳನ್ನು ರಾಜ್ಯಕ್ಕೆ ಸೇರಿಸಿಕೊಂಡ. ಈತನ ಸತಿ ನೂರ್‌ಜಹಾನ್ ಅಸಾಧಾ ಸುಂದರಿಯೂ ಒಳ್ಳೆಯ ಆಡಳಿತಗಾರ್ತಿಯೂ ಆಗಿದ್ದಳು.



ಔರಂಗಜೇಬನ ನಾಣ್ಯ

ಷಾ ಜಹಾನ್ (1628–58) ತಾಜಮಹಲ್, ಆಗ್ರಾದ ಮೋತಿಮಸಿ ದೆಹಲಿಯ ಕೆಂಪು ಕೋಟೆಯ ದಿವಾನ್–ಇ–ಆಂ ಮತ್ತು ದಿವಾನ್- ಖಾಸ್ ಮುಂತಾದ ಭವ್ಯ ಕಟ್ಟಡಗಳ ನಿರ್ಮಾಪಕನೆಂದು ಪ್ರಸಿದ್ಧ.

ಇವನ ಮಗ ಔರಂಗಜೇಬನ ಕಾಲದಲ್ಲಿ ಮೊಘಲ್ ಸಾಮ ದಕ್ಷಿಣದಲ್ಲಿ ಆರ್ಕಾಟಿನವರೆಗೆ ವಿಸ್ತರಿಸಿತು. ಆ ದೂರದರ್ಶಿಯಾಗಿರಲಿಲ್ಲ, ಮತಾಂಧನಾಗಿದ್ದ. ಕಾಲದಲ್ಲಿ ಮರಾಠರು, ಸಿಕ್ಖರು ಜಾಟರೇ ಮು ದವರು ದಂಗೆ ಎದ್ದು ಸಾಮ್ರಾಜ್ಯದ ಬಲ ಕುಂದಿಸಿದರು. ಔರಂಗಜೇಬನ ಮರಣಾನಂತರ ಮನೆತನದ ಅಂತಃಕಲಹ ಮತ್ತು ಸಾಮ್ರಾಜ್ಯದ ವ ಲಿಕರ ಬಂಡಾಯದಿಂದ ಸಾಮ್ರಾಜ್ಯ ಕ್ಷೀ ಆರ್ಕಾಟು, ಹೈದರಾಬಾದ್, ಅಯೋಧ್ಯೆ, ಬ ಮುಂತಾದ ಸ್ವತಂತ್ರ ನವಾಬರ ರಾಜ್ಯಗಳು ಕೊಂಡುವು. ಮೊಘಲ್ ದೊರೆಗಳು ದೆಹಲಿಯ ಸು ಕೆಲವು ಪ್ರದೇಶಗಳಿಗಷ್ಟೇ 'ಸಮ್ರಾಟ'ರೆನಿಸಿಕೊ ಕಾಲ ಬಂತು. ಆಂಗ್ಲರ ಮತ್ತು ಮರಾಠರ ಪ್



ಫತೇಪುರ್ ಸಿಕ್ರಿಯಲ್ಲಿ ಬುಲಂದ್ ದರ್ವಾಜಾ

ದಿಂದಾಗಿ ಹಾಗೂ ಅಫ್ಘನರು ವಾಯುವ್ಯ ಗಡಿಗಳಿಂದ ನಡೆಸಿದ ದಾಳಿಗಳಿಂದಾಗಿ ಮೊಘಲ್ ಆಡಳಿತ ನಾಮಾವಶೇಷವಾಯಿತು. ಸಾಮ್ರಾಜ್ಯವನ್ನು ಕಳೆದುಕೊಂಡು ಹೆಸರಿಗೆ ಮಾತ್ರ ಸಮ್ರಾಟನಾಗಿದ್ದ ಬಹದ್ದೂರ್ ಷಾ 1857ರ ಸಿಪಾಯಿ ದಂಗೆಯಲ್ಲಿ ಭಾಗವಹಿಸಿ, ಬ್ರಿಟಿಷರ ಸೆರೆಯಾಗಿ ಗಡೀಪಾರಾದ. 1862ರಲ್ಲಿ ಮಾಂಡಲೆಯಲ್ಲಿ ಮೃತನಾದ. ಇಲ್ಲಿಗೆ ಮೊಘಲ್ ರಾಜವಂಶ ಮುಕ್ತಾಯವಾಯಿತು.



" ಆಲಿ ದೂಲಾ... "

ಮೊಘಲರ ಆಡಳಿತ ಕಾಲವು ಹಲವಾರು ಸಾಂಸ್ಕೃತಿಕ ಚಟುವಟಿಕೆಗಳ ಕಾಲ. ಸೂರದಾಸ್, ತುಲಸೀದಾಸ್ ಇದೇ ಕಾಲದಲ್ಲಿದ್ದ ಸಂತಕವಿಗಳು. ಹಿಂದೂಸ್ಥಾನೀ ಸಂಗೀತದ ಕ್ಷೇತ್ರದಲ್ಲಿ ತಾನಸೇನರಂಥ ಗಾಯಕರೂ ಪುಂಡರೀಕ ವಿಠಲನಂಥ ವಿದ್ವಾಂಸರೂ ಇದ್ದುದು ಈ ಕಾಲದಲ್ಲೇ. ವಾಸ್ತುಶಿಲ್ಪದ ಕ್ಷೇತ್ರದಲ್ಲಿ ಶ್ರೇಷ್ಠ ಹಿಂದೂಮುಸಲ್ಮಾನ ಶೈಲಿಯ ಕಟ್ಟಡಗಳು ರಚನೆಯಾದುವು.

ಮೊಹರಂ

ಮಹಮ್ಮದೀಯರಲ್ಲಿ ಷಿಯಾ ಪಂಗಡದವರು ಮೊಹರಂ ಆಚರಿಸುತ್ತಾರೆ.

"ಆಲಿ ದೂಲಾ..............." ಎಂಬ ಕೂಗಿನೊಂದಿಗೆ ಬರುತ್ತದೆ ಮೊಹರಂ ಮೆರವಣಿಗೆ. ಮೆರವಣಿಗೆಯಲ್ಲಿ ಹುಲಿಯಂತೆ ಕಪ್ಪು ಹಳದಿ ಬಣ್ಣದ ಪಟ್ಟೆಗಳನ್ನು ಮೈಗೆ ಬಳಿದುಕೊಂಡು, ಕಣ್ಣಿಗೆ ತಂಪು ಕನ್ನಡಕ ಹಾಕಿರುವ ಹುಡುಗರು ಕುಣಿಯುತ್ತ ಇರುತ್ತಾರೆ.


ಮಹಮ್ಮದೀಯ ವರ್ಷದ ಮೊದಲ ತಿಂಗಳು ಮೊಹರಂ. ತಿಂಗಳ ಮೊದಲಿನ 10 ದಿನಗಳನ್ನೂ ಮೊಹರಂ ಎನ್ನುತ್ತಾರೆ. ಮೊಹರಂ ಆಚರಣೆಗೆ ಕಾರಣ, ಪ್ರವಾದಿ ಮಹಮ್ಮದರ ಮೊಮ್ಮಗ ಹಜರತ್ ಇಮಾಮ್ ಹುಸೇನರ ವೀರಮರಣ.

ಹುಸೇನ್ ಇದ್ದುದು ಮೆಕ್ಕಾದಲ್ಲಿ. ಆಗ ಅರಬ್ ರಾಜ್ಯವನ್ನು ಆಳುತ್ತಿದ್ದ ಯಜೀದ್ ಕುಡುಕ ಹಾಗೂ ವ್ಯಭಿಚಾರಿ. ಅವರ ಆಡಳಿತದಿಂದ ಬೇಸತ್ತ ಕುಫಾದ ಜನ ಯಜೀದನನ್ನು ಪದಚ್ಯುತಗೊಳಿಸಬೇಕೆಂದು ಹುಸೇನರನ್ನು ಕರೆದರಲ್ಲದೆ ಬೇಕಾದ ಸಹಾಯ ನೀಡಲು ಸಿದ್ಧರೆಂದ ಹೇಳಿದರು. ಮನೆಯವರು, ನೂರು ಜನ ಸೈನಿಕರು ಹಾಗೂ ಕೆಲವು ಕುದುರೆ ಸವಾರರೊಡನೆ ಹುಸೇನ್ ಹೊರಟರು. ಕರ್ಬಲಾದ ಬಳಿ ಯಜೀದನ ಸೈನಿಕರಿಂದ ಎಲ್ಲರೂ ಹತರಾದರು. ಹುಸೇನ್ ಮಡಿದದ್ದು ಮೊಹರಂನ ಹತ್ತನೆಯ ದಿವಸ.

ಭಾರತದ ವಿವಿಧ ಭಾಗಗಳಲ್ಲಿ ಮೊಹರಂ ಆಚರಣೆಯಲ್ಲಿ ವೈವಿಧ್ಯವಿದೆ.



ಲಖನೌನ ಹುಸೇನಾಬಾದ್ ಇಮಾಂಬಾರಾ—ಮೊಹರಂ ಸಮಾವೇಶಕ್ಕೆ



ನಗರದಲ್ಲಿ ಚರಂಡಿ ವ್ಯವಸ್

ಮೊಹೆಂಜೊ ದಾರೊ

ಸಿಂಧೂನದಿಯ ಬಲದಂಡೆಯ ಮೇಲೆ ಮೆರೆದ ಭಾರತದ ಪ್ರಾಚೀನ ಸಂಸ್ಕೃತಿಗಳಲ್ಲಿ ಒಂದು, ಮೊಹೆಂಜೊ ದಾರೊ (ಸ್ಥಳೀಯ ಉಚ್ಚಾರ: ಮೊಹೆಂಜೊ ದರೊ). ಇದು ಹರಪ್ಪಾ ನಿವೇಶನದಿಂದ 400 ಮೈಲು ದೂರದಲ್ಲಿದೆ. 1947ರ ಅನಂತರ ಹರಪ್ಪಾ ಇರುವುದು ಪಾಕಿಸ್ತಾನದಲ್ಲಿ.

ಮೊಹೆಂಜೊ ದಾರೊ ಎಂದರೆ 'ಸತ್ತವರ ದಿಬ್ಬ'. ಪುರಾತತ್ತ್ವ ಶೋಧನೆ ಆರಂಭವಾದಾಗ ಅಲ್ಲಿನ ಜನ ಆ ಸ್ಥಳಕ್ಕೆ ಇಟ್ಟ ಹೆಸರು ಇದು.

ಸಿಂಧೂ ನದಿಯಲ್ಲಿ ಪ್ರವಾಹ ಬಂದಾಗಲೆಲ್ಲ ಹೊಸ ಮಣ್ಣು ಪದರಗಳು ಉಂಟಾಗಿರಬೇಕು. ಇದುವರೆಗೆ ಒಂದರ ಕೆಳಗೆ ಒಂದರಂತೆ ಹೀಗೆ ಮುಚ್ಚಿಹೋದ ಏಳು ಸ್ತರಗಳನ್ನು ಅಗೆದು ಪರಿಶೀಲಿಸಲಾಗಿದೆ. ಇನ್ನೂ ಕೆಳಗೆ ಅಗೆಯುವುದು ನದಿಯ ದೆಸೆಯಿಂದ ಸಾಧ್ಯವಾಗಿಲ್ಲ. ಈ ಸ್ತರಗಳ ಅವಧಿ ನೂರಾರು ವರ್ಷ ಕಾಲ ಆದರೂ, ಮೊಹೆಂಜೊ ದಾರೊ ನಗರದ ರಸ್ತೆಗಳು, ಪ್ರತಿಯೊಂದು ಸ್ತರದಲ್ಲೂ ಒಂದೇ ವಿಧವಾಗಿರುವುದು ಗಮನಾರ್ಹ. ಮುಖ್ಯ ಬೀದಿ 33 ಅಡಿ ವಿಶಾಲ. ಈ ಬೀದಿಯಲ್ಲಿ ಬಳಸಲು ಗಾಲಿಯುಳ್ಳ ಗಾಡಿಗಳಿದ್ದುವು. ಮೊಹೆಂಜೊ ದಾರೊದ ಮುಖ್ಯ ಕಟ್ಟಡ ಅಲ್ಲಿನ ಸ್ನಾನಗೃಹ. ಇಟ್ಟಿಗೆ ಕೆಲಸ ಮನೋಹರವಾಗಿದೆ. ನೀರು ಹೊರ ಹರಿಯದಂತೆ ಗೋಡೆಗೆ ಡಾಮರಿನಂಥ ಪದಾರ್ಥ ಲೇಪಿಸಿದ್ದಾರೆ.

ಗಡ್ಡದ ಮನುಷ್ಯನ ಮೂರ್ತಿ —ಅವಶೇಷಗಳಿಂದ



ಮೊಹೆಂಜೊ ದಾರೊ– ಅವಶೇಷಗಳ ಆಧಾರದ ಮೇಲೆ ಕಲ್ಪನಾ ಚಿತ್ರ





ಆ ಕಾಲದ ದೋಣಿ : ಪ್ರಾಚೀ



ಮೊಹೆಂಜೊ ದಾರೊ ಮುದ್ರಿಕೆಗಳಲ್ಲಿ ಕಲ್ಪಿತ ಪ್ರಾಣಿಗಳು

ಒಳಕ್ಕೆ ನೀರು ಹರಿಸಲು, ಹೊರಕ್ಕೆ ಬಿಡಲು ಪ್ರತ್ಯೇಕ ವ್ಯವಸ್ಥೆ ಇದ್ದಿತು. ಸ್ನಾನಗೃಹದ ಸುತ್ತ ಸನ್ಯಾಸಿಮಠದ ಕೋಣೆಗಳಿದ್ದುವು, ಮೊಹೆಂಜೊ ದಾರೊದಲ್ಲಿ ಕಂಡು ಬಂದ ಒಂದು ದೊಡ್ಡ ಕಟ್ಟಡ ಅರಮನೆಯಾಗಿದ್ದಿರಬಹುದೆಂಬ ಊಹೆಯಿದೆ.

ಎತ್ತರದಲ್ಲಿ ಕೋಟೆಯಂಥ ರಚನೆ. ಅದಕ್ಕಿಂತ ತಗ್ಗಾದ ಪ್ರದೇಶದಲ್ಲಿ ಊರು. ಇವು ಮೊಹೆಂಜೊ ದಾರೊದ ಪ್ರಧಾನ ವಿಭಾಗಗಳು. ಅಂಗಳ, ಸುತ್ತಲೂ ಕೋಣೆಗಳು – ಇದು ಮನೆಯ ಸಾಮಾನ್ಯ ಸ್ವರೂಪ. ಒಳ ಚರಂಡಿ ವ್ಯವಸ್ಥೆ ಇದ್ದಿತು. ಇದಕ್ಕೆ ಅಲ್ಲಲ್ಲಿ ಪರೀಕ್ಷಾ ಸ್ಥಾನಗಳಿದ್ದುವು. ಇಟ್ಟಿಗೆ ಪ್ರಧಾನ ಕಟ್ಟಡ ಸಾಮಗ್ರಿ. ಮುಖ್ಯ ಬೀದಿಯುದ್ದಕ್ಕೂ ಅಂಗಡಿಗಳು ಕಂಡುಬಂದಿವೆ.

ಮೊಹೆಂಜೊ ದಾರೊದಲ್ಲಿ ಹುಗಿಯಲ್ಪಟ್ಟ ಶವಗಳ ಅಸ್ಥಿ ಪಂಜರಗಳು ದೊರೆತಿಲ್ಲ. ಇಲ್ಲಿ ಸತ್ತವರನ್ನು ಸುಡುವ ಪದ್ಧತಿ ಇದ್ದಿರಬೇಕು. ಚಿನ್ನದ ಮಣಿಗಳು, ಸೊಗಸಾದ ಆಭರಣಗಳು, ಕಂಚಿನ ಸಾಧನಗಳು ಇಲ್ಲಿ ದೊರೆತಿವೆ. ಕಂಚಿನ ನರ್ತಕಿ ಪ್ರತಿಮೆ ಹೆಸರಾದದ್ದು. ಗೋಧಿ, ಬಾರ್ಲಿ ಮುಂತಾದ ಧಾನ್ಯಗಳನ್ನು ಬೆಳೆಯಲು ಜನ ತಿಳಿದಿದ್ದರು. [illegible] ಸಾಕ್ಷ್ಯಗಳು ದೊರೆತಿವೆ. ಹರಪ್ಪದಂತೆ ಇಲ್ಲಿಯೂ ಅನೇಕ ಮುದ್ರಿಕೆಗಳು ಬಳಕೆಯಲ್ಲಿದ್ದುವು. ಇದರಲ್ಲಿ ಶಿವನ ಮುದ್ರಿಕೆಯೂ ಇದೆ.

ಮೊಹೆಂಜೊ ದಾರೊ ನಗರ ಆಗಾಗ್ಗೆ ಪ್ರವಾಹದ ದಾಳಿಗೆ ತುತ್ತಾಗುತ್ತಿದ್ದಿತು.

ಮೊಹೆಂಜೊ ದಾರೊದ ಕಾಲ ಸುಮಾರು ಕ್ರಿ. ಪೂ. 2500ರಿಂದ ಕ್ರಿ. ಪೂ. 1500.

ನೋಡಿ : ಹರಪ್ಪಾ

ಮೋಕ್ಷಗುಂಡಂ ವಿಶ್ವೇಶ್ವರಯ

ನೋಡಿ : ವಿಶ್ವೇಶ್ವರಯ್ಯ–ಸಂಪುಟ ೧ – ೪

ಮೋತೀಲಾಲ ಘೋಷ್

ಮೂವತ್ತೆರಡು ರೂಪಾಯಿಗಳಿಗೆ ಮೂವರು ಸೋದರರು ಮರದ ಮುದ್ರಣ ಯಂತ್ರವೊಂದನ್ನು ಕೊಂಡರು. ಬಂಗಾಳದ (ಈಗಿನ ಬಾಂಗ್ಲಾ ದೇಶದ) ಜೆಸ್ಸೂರು ಜಿಲ್ಲೆಯ ಅಮೃತಬಜಾರ್ ಎಂಬ ಹಳ್ಳಿಯಿಂದ ಒಂದು ವಾರಪತ್ರಿಕೆ ಹೊರಡಿಸಿದರು.

1868ರ ಮಾರ್ಚ್ ತಿಂಗಳಲ್ಲಿ ಆರಂಭವಾದ 'ಅಮೃತ ಬಜಾರ್ ಪತ್ರಿಕಾ' ಮೊದಲು ಬಂಗಾಳೀ ಭಾಷೆಯ ವಾರಪತ್ರಿಕೆಯಾಗಿತ್ತು. ಕ್ರಮೇಣ ಬಂಗಾಳೀ ಮತ್ತು ಇಂಗ್ಲಿಷ್ ಭಾಷೆಯ ಬರೆಹಗಳು ಇದರಲ್ಲಿ ಪ್ರಕಟವಾಗ ತೊಡಗಿದುವು.

ಸರಕಾರದ ಕೆಲವು ನೀತಿಗಳನ್ನು ಖಂಡಿಸುವ ಲೇಖನಗಳು ಪ್ರಕಟವಾಗುತ್ತಿದ್ದುದರಿಂದ, ಹೇಗಾದರೂ ಪತ್ರಿಕೆಯನ್ನು ನಿಲ್ಲಿಸಬೇಕು ಎಂದು ಬ್ರಿಟಿಷ್ ಸರಕಾರ ನಿರ್ಧರಿಸಿತು. ದೇಶಭಾಷಾ ಪತ್ರಿಕೆಗಳನ್ನು ವಿರೋಧಿಸುವ ಕಾನೂನು ಜಾರಿಗೆ ಬಂದ ಮರುದಿನವೇ, 1838 ಮಾರ್ಚ್ 21ರಿಂದ, ಸಂಪೂರ್ಣ ಇಂಗ್ಲಿಷ್ ಪತ್ರಿಕೆಯಾಗಿ 'ಅಮೃತ ಬಜಾರ್ ಪತ್ರಿಕಾ' ಪ್ರಕಟವಾಯಿತು. ಜನಾಭಿಪ್ರಾಯವನ್ನು ಪ್ರತಿಬಿಂಬಿಸಲು ಸುಲಭವಾಗುವಂತೆ 1891ರಲ್ಲಿ 'ಪತ್ರಿಕಾ' ದಿನಪತ್ರಿಕೆಯಾಯಿತು.

ಈ ಪತ್ರಿಕೆಯ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರ ವಹಿಸಿ ಪತ್ರಿಕೆಯ ಸಂಪಾದಕರಾಗಿ ಇದಕ್ಕೆ ಹೊಸ ರೂಪುಕೊಟ್ಟವರು ಮೋತೀಲಾಲ ಘೋಷ್. ಮೂವರು ಘೋಷ್ ಸೋದರರಲ್ಲಿ ಇವರು ಕಿರಿಯರು.

ಮೋತೀಲಾಲ ಘೋಷರ ನೇತೃತ್ವದಲ್ಲಿ 'ಪತ್ರಿಕಾ', ಸ್ವಾತಂತ್ರ್ಯ ಸಂಗ್ರಾಮದ ಪ್ರಬಲ ಅಸ್ತ್ರವಾಯಿತು. ಲಾರ್ಡ್ ಕರ್ಜನ್ ಮತ್ತಿತರ ಸರಕಾರೀ ಅಧಿಕಾರಿಗಳೊಡನೆ ಉತ್ತಮ ಸಂಬಂಧವಿಟ್ಟುಕೊಂಡರೂ ಸರಕಾರದ ಅನ್ಯಾಯಗಳನ್ನು ಬಯಲಿಗೆಳೆಯಲು ಘೋಷ್ ಹಿಂದೆ ಮುಂದೆ ನೋಡುತ್ತಿರಲಿಲ್ಲ. ಒಮ್ಮೆ ಘೋಷರ ಮೇಲೆ ನ್ಯಾಯಾಲಯ ನಿಂದನೆಯ ಆಪಾದನೆಯನ್ನು ಹೊರಿಸಲಾಗಿತ್ತು. ಆದರೆ ನ್ಯಾಯಾಲಯದಲ್ಲಿ ಇವರು ಧೈರ್ಯದಿಂದ ವಾದಿಸಿ, ಮೊಕದ್ದಮೆ ವಜಾ ಆಗುವಂತೆ ಮಾಡಿದರು.

ಮೋತೀಲಾಲ ಘೋಷ್ ಪ್ರಭಾವಶಾಲೀ ಲೇಖಕರು. ಅಪ್ರತಿಮ ದೇಶಭಕ್ತರು. [illegible] ಮೊಕದ್ದಮೆಗಳಿಗಾಗಲೀ ಹೆದರದೆ, ತಮಗೆ ಸತ್ಯವೆಂದು ನ್ಯಾಯವೆಂದು ತೋರಿದ್ದನ್ನು [illegible] ಹೇಳುತ್ತಿದ್ದ [illegible] ಸರಕಾರದ [illegible]

[illegible] ಸಂದಿರುವ ಸೇವೆ ಅಮೂಲ್ಯವಾದದ್ದು.

ಮೋತೀಲಾಲ ಘೋಷರ ಸಂಪಾದಕತ್ವದಲ್ಲಿ ಆರಂಭವಾದ 'ಅಮೃತ್ ಬಜಾರ್' ಪತ್ರಿಕಾ' ಶತಮಾನೋತ್ಸವವನ್ನು ಮುಗಿಸಿ ಮುಂದುವರಿದಿದೆ.

ಮೋತೀಲಾಲ ನೆಹರೂ

ಪ್ರತಿಭಾಶಾಲಿಯಾದ ರಾಜ್ ಕೌಲ್ ಎಂಬ ಪಂಡಿತ ಮೊಘಲ್ ಚಕ್ರವರ್ತಿ ಫರಖ್‌ಸಿಯರನ ಕಾಲದಲ್ಲಿ ಕಾಶ್ಮೀರದಿಂದ ದೆಹಲಿಗೆ ಬಂದು ಸಿರಿವಂತನಾಗಿದ್ದ. ನಾಲೆಯ (ನೆಹರೂ) ಬಳಿಯಲ್ಲಿ ಅವರ ಮನೆಯಿದ್ದುದರಿಂದ ನೆಹರೂ ಎಂಬ ಹೆಸರು ಆ ಮನೆತನಕ್ಕೆ ಬಂತು. ಸಿಪಾಯಿದಂಗೆಯ ಕಾಲದಲ್ಲಿ ಈ ಮನೆತನದ ಗಂಗಾಧರ ನೆಹರೂ ದಿಲ್ಲಿಯಲ್ಲಿ ಕೊತ್ವಾಲನಾಗಿದ್ದ. ಆತ ಆಗ್ರಾಕ್ಕೆ ಹೋಗಿ ನೆಲೆನಿಂತ. ಗಂಗಾಧರ ನೆಹರೂ ಪತ್ನಿ ಜೀವರಾಣಿ. ಈ ದಂಪತಿಯ ಐದನೆಯ ಮಗನೇ ಮೋತೀಲಾಲ ನೆಹರೂ.

ಮೋತೀಲಾಲರ ಜನನ 1861ನೆಯ ಮೇ 6ರಂದು, ಆಗ್ರಾದಲ್ಲಿ. ಅವರಿಗಿಬ್ಬರು ಅಣ್ಣಂದಿರು: ಬನ್ಸಿಧರ ನೆಹರೂ ಮತ್ತು ನಂದಲಾಲ ನೆಹರೂ; ಇಬ್ಬರು ಅಕ್ಕಂದಿರು –ಪತ್ರಾಣಿ, ಮಹಾರಾಣಿ. ನಂದಲಾಲರಿಗೆ ವಯಸ್ಸಿನಲ್ಲಿ ಬಹಳ ಚಿಕ್ಕವನಾದ ಸ್ಫುರದ್ರೂಪಿ ಮೋತೀಲಾಲನಲ್ಲಿ ಮಮತೆ. ನಂದಲಾಲರು ಮೊದಲು ಖೇತ್ರಿ ಸಂಸ್ಥಾನದಲ್ಲಿ ದಿವಾನರಾಗಿದ್ದು, ಆ ಮೇಲೆ ಆಗ್ರಾದಲ್ಲಿ ವಕೀಲರಾದರು. ಆಗ್ರಾದಲ್ಲಿದ್ದ ಹೈಕೋರ್ಟನ್ನು ಅಲಹಾಬಾದಿಗೆ ವರ್ಗಾಯಿಸಿದಾಗ ನಂದಲಾಲರ ಕುಟುಂಬವೂ ಅಲಹಾಬಾದಿಗೆ ಬಂದು ನೆಲೆಸಿತು.

ಮೋತೀಲಾಲರ ಶಾಲಾ ಕಾಲೇಜು ಶಿಕ್ಷಣ ಕಾನ್ಪುರ ಮತ್ತು ಅಲಹಾಬಾದ್‌ಗಳಲ್ಲಿ ಆಯಿತು. ಮೊದಲು ಪಾರಸೀ; ಅರಬೀ ಭಾಷೆಗಳನ್ನು ಕಲಿತರು. ಬಳಿಕ ಇಂಗ್ಲಿಷ್ ಭಾಷೆ ಕಲಿತರು. ಪಾಶ್ಚಾತ್ಯ ಉಡುಪು ಧರಿಸುತ್ತಿದ್ದರು. ಕ್ರೀಡೆ–ಕಸರತ್ತುಗಳಲ್ಲಿ ಅಧಿಕ ಆಸಕ್ತಿ. ವಕೀಲಿ ಪರೀಕ್ಷೆಗೆ ಓದಿ ಪ್ರಥಮ ಶ್ರೇಣಿಯಲ್ಲಿ ತೇರ್ಗಡೆಹೊಂದಿದರು. ತಮ್ಮ ಕಾರ್ಯದಕ್ಷತೆಯಿಂದ ಪ್ರಥಮ ದರ್ಜೆಯ ವಕೀಲರಾದರು.

ಮೋತೀಲಾಲರಿಗೆ ಇಪ್ಪತ್ತು ವರ್ಷ ತುಂಬುವುದರೊಳಗೆ ಮದುವೆಯಾಯಿತು. ಬಾಣಂತಿಯಾದ ಕೆಲವೇ ದಿನಗಳಲ್ಲಿ ಅವರ ಪತ್ನಿ ನಿಧನರಾದರು. ಹುಟ್ಟಿದ ಗಂಡು ಮಗುವೂ ತಾಯಿಯ ದಾರಿ ಹಿಡಿಯಿತು. ಮುಂದೆ 1883ರಲ್ಲಿ ಮೋತೀಲಾಲರಿಗೆ ಸ್ವರೂಪರಾಣಿಯೊಂದಿಗೆ ವಿವಾಹವಾಯಿತು. ಸ್ವರೂಪರಾಣಿ ಹೆತ್ತ ಚೊಚ್ಚಲ ಮಗು ತೀರಿಕೊಂಡಿತು. ಮುಂದೆ ಕೆಲ ವರ್ಷಗಳಲ್ಲಿ ಮತ್ತೊಂದು ಗಂಡುಮಗುವನ್ನು ಹೆತ್ತರು. ಆ ಮಗುವಿಗೆ ಜವಾಹರಲಾಲನೆಂದು ಹೆಸರಿಟ್ಟರು. ಅನಂತರ ಅವರಿಗೆ ಇಬ್ಬರು ಹೆಣ್ಣು ಮಕ್ಕಳಾದರು. ಹಿರಿಯ ಮಗಳು ವಿಜಯಲಕ್ಷ್ಮಿ, ಕಿರಿಯವಳು ಕೃಷ್ಣಾ.



ಸಿರಿವಂತಿಕೆ, ತ್ಯಾಗ :
ಮೋತೀಲಾಲ ನೆಹರೂ

ಸಮರ್ಥರೂ ಕಾರ್ಯದಕ್ಷರೂ ಆಗಿದ್ದ ಮೋತೀಲಾಲರು ವಕೀಲ ವೃತ್ತಿಯಲ್ಲಿ ಅಗ್ರಸ್ಥಾನದಲ್ಲಿದ್ದು ಅಪಾರ ಹಣ ಗಳಿಸಿದರು. ಮೊದಲು ಮಂದಗಾಮಿಯಾಗಿದ್ದ ಮೋತೀಲಾಲರು ಮಗ ಜವಾಹರನ ಮೇಲಿನ ಮಮತೆಯಿಂದ, ಮಗ ತಮ್ಮ ಮೇಲೆ ಬೀರಿದ ಪ್ರಭಾವದಿಂದ, ಪರಿಸ್ಥಿತಿಗೆ ತಕ್ಕಂತೆ ಮುನ್ನಡೆವ ಗುಣದಿಂದ, ಕೊನೆಯಲ್ಲಿ ಉಗ್ರಗಾಮಿ ದೇಶಭಕ್ತರಾದರು.

ಮೋತೀಲಾಲರು 1907ರಲ್ಲಿ ಅಲಹಾಬಾದಿನಲ್ಲಿ ಜರಗಿದ ಪ್ರಾಂತೀಯ ಸಮ್ಮೇಳನದ ಅಧ್ಯಕ್ಷರಾದರು. 1909ರ ಹೊಸ ರಾಜಕೀಯ ಸುಧಾರಣೆಯ ಫಲವಾಗಿ ರೂಪುಗೊಂಡ ಸಂಯುಕ್ತ ಪ್ರಾಂತದ ಶಾಸನಸಭೆಯ ಸದಸ್ಯರಾದರು. ಮುಂದೆ 1917ರಲ್ಲಿ ಲಖನೌ ನಗರದಲ್ಲಿ ಸೇರಿದ ಪ್ರಾಂತೀಯ ಕಾಂಗ್ರೆಸ್ ಅಧಿವೇಶನಕ್ಕೂ 1919ರಲ್ಲಿ ಅಮೃತಸರದಲ್ಲಿ ಜರಗಿದ ಕಾಂಗ್ರೆಸ್ ಅಧಿವೇಶನಕ್ಕೂ ಅಧ್ಯಕ್ಷರಾದರು. ಅಂದಿನಿಂದ ರಾಷ್ಟ್ರನಾಯಕರಾಗಿ ಸುಪ್ರಸಿದ್ಧರಾದರು.

1922ರಲ್ಲಿ ಕಾಂಗ್ರೆಸ್ಸಿನ ಚೌಕಟ್ಟಿನೊಳಗೆ ಸ್ವರಾಜ್ಯ ಪಕ್ಷ ಸ್ಥಾಪಿತವಾದಾಗ ಮೋತೀಲಾಲರು ಅದರ ಕಾರ್ಯದರ್ಶಿಯಾದರು. 1923ರ, ಚುನಾವಣೆಯಲ್ಲಿ ಭಾಗವಹಿಸಿದ ಸ್ವರಾಜ್ಯ ಪಕ್ಷದ ಪ್ರಾಂತೀಯ ಮತ್ತು ಕೇಂದ್ರೀಯ ಶಾಸನಸಭೆಗಳಲ್ಲಿ ಬಹುಮತದ ಜಯಗಳಿಸಿತು. ಮೋತೀಲಾಲ ನೆಹರೂ ಕೇಂದ್ರಶಾಸನ ಸಭೆಗೆ ಚುನಾಯಿತರಾಗಿ, ವಿರೋಧಪಕ್ಷದ ನಾಯಕರಾದರು. ಮುಂದೆ ಸಿ. ಆರ್. ದಾಸ್ ಅವರ ಮರಣಾನಂತರ ಸ್ವರಾಜ್ಯ ಪಕ್ಷದ ಅಧ್ಯಕ್ಷರಾದರು.

1927ರಲ್ಲಿ ಮೋತೀಲಾಲರು ಯೂರೋಪಿಗೆ ಹೋದರು. ರಷ್ಯದ ಆಮಂತ್ರಣದಂತೆ, ಕ್ರಾಂತಿಯ ಹತ್ತನೆಯ ವಾರ್ಷಿಕೋತ್ಸವಕ್ಕಾಗಿ, ಜವಾಹರಲಾಲರೊಂದಿಗೆ ಮಾಸ್ಕೋಗೆ ಭೇಟಿಯಿತ್ತರು.

ವಿದೇಶ ಪ್ರವಾಸಾನಂತರ ಸರ್ವಪಕ್ಷ ಸಮ್ಮೇಳನ ಜರಗಿ, ಮೋತೀಲಾಲರ ಅಧ್ಯಕ್ಷತೆಯಲ್ಲಿ ರಾಜ್ಯಾಂಗ ರಚನಾಸಮಿತಿ ನೇಮಕವಾಯಿತು. ಅವರು ಎರಡೇ ವಾರಗಳಲ್ಲಿ ಒಂದು ರಾಜ್ಯಾಂಗವನ್ನು ರಚಿಸಿದರು. ಅದು 'ನೆಹರೂ ವರದಿ' ಎಂದು ಪ್ರಸಿದ್ಧವಾಗಿದೆ. ಬ್ರಿಟಿಷ್ ಆಧಿಪತ್ಯದ ಅಧೀನದಲ್ಲಿ ಜವಾಬ್ದಾರಿ ಸರಕಾರ ಸ್ಥಾಪಿಸುವುದೇ ನೆಹರೂ ವರದಿಯ ಸಾರ.

1928ರಲ್ಲಿ ಕಲ್ಕತ್ತೆಯಲ್ಲಿ ಕಾಂಗ್ರೆಸ್ ಅಧಿವೇಶನ ಜರಗಿದಾಗ ಮೋತೀಲಾಲರು ಅಧ್ಯಕ್ಷರಾಗಿ ಆಯ್ಕೆಗೊಂಡರು. ನೆಹರೂ ವರದಿಯ ಮುಖ್ಯಾಂಶವೇ ಪ್ರಧಾನ ರಾಜಕೀಯ ನಿರ್ಣಯವಾಗಿ ಬಂದಾಗ, ಜವಾಹರಲಾಲ ನೆಹರೂ ಮತ್ತು ಸುಭಾಷ ಚಂದ್ರ ಬೋಸರು ಅದನ್ನು ತೀವ್ರವಾಗಿ ವಿರೋಧಿಸಿದರು. ಮರುವರ್ಷ 1929 ಡಿಸೆಂಬರ್‌ನಲ್ಲಿ ಕಾಂಗ್ರೆಸ್ ಮಹಾಧಿವೇಶನ ಜವಾಹರಲಾಲ ನೆಹರೂರ ಅಧ್ಯಕ್ಷತೆಯಲ್ಲಿ ಜರಗಿ, ಪೂರ್ಣ ಸ್ವರಾಜ್ಯದ ನಿರ್ಣಯವನ್ನು ಅಂಗೀಕರಿಸಿತು. ತಂದೆ ಮೋತೀಲಾಲರು ಜವಾಹರಲಾಲರಿಗೆ ಕಾಂಗ್ರೆಸ್ ಅಧ್ಯಕ್ಷತೆಯನ್ನು ಬಿಟ್ಟುಕೊಟ್ಟ ದೃಶ್ಯ ಹೃದಯಸ್ಪರ್ಶಿಯಾಗಿತ್ತು; ಮೋತೀಲಾಲರು ತಮ್ಮ ಲಕ್ಷಾಂತರ ರೂಪಾಯಿ ಬೆಲೆಯ ಆನಂದ ಭವನವನ್ನು ರಾಷ್ಟ್ರಕ್ಕೆ ದಾನವಿತ್ತರು. ಕಾಂಗ್ರೆಸ್ ಅಧ್ಯಕ್ಷ ಜವಾಹರಲಾಲರು ಅದನ್ನು ಸ್ವೀಕರಿಸಿ ಅದಕ್ಕೆ ಸ್ವರಾಜ್ಯ ಭವನ ಎಂದು ಹೆಸರಿಟ್ಟರು.

ಉಪ್ಪಿನ ಸತ್ಯಾಗ್ರಹದಲ್ಲಿ ಜವಾಹರಲಾಲ—ಮೋತೀಲಾಲ ಇಬ್ಬರೂ ಬಂಧಿತರಾದರೂ ತೀವ್ರ ಅಸ್ವಾಸ್ಥ್ಯದ ಕಾರಣ ಮೋತೀಲಾಲರ ಬಿಡುಗಡೆಯಾಯಿತು. ಚಿಕಿತ್ಸೆ ಫಲಕಾರಿಯಾಗಲಿಲ್ಲ. 1931 ಫೆಬ್ರವರಿ 6ರಂದು ಮೋತೀಲಾಲ ನೆಹರೂ ತಮ್ಮ 70ನೆಯ ವಯಸ್ಸಿನಲ್ಲಿ ಕಾಲವಾದರು.

ಮೋದಿ

'ನೇತ್ರದಾನಿ' ಎಂದು ಪ್ರಖ್ಯಾತರಾದ ಡಾಕ್ಟರ್ ಎಂ. ಸಿ. ಮೋದಿ. 1973ರ ವರೆಗೆ ಅವರು ನಡೆಸಿದ ನೇತ್ರ ಶಸ್ತ್ರಚಿಕಿತ್ಸೆಗಳ ಸಂಖ್ಯೆ 3 ಲಕ್ಷ. ಪರೀಕ್ಷೆ ಮಾಡಿದ ನೇತ್ರರೋಗಿಗಳ ಸಂಖ್ಯೆ 35 ಲಕ್ಷಕ್ಕಿಂತ ಹೆಚ್ಚು.

ಮುರಗಪ್ಪ ಚೆನ್ನವೀರಪ್ಪ ಮೋದಿ ಬಿಜಾಪುರದ ಬೀಳಗಿಯಲ್ಲಿ 1916 ಅಕ್ಟೋಬರ್ 4ರಂದು ಜನಿಸಿದರು. 1941ರಲ್ಲಿ ವೈದ್ಯವೃತ್ತಿ ಕೈಗೊಂಡರು. ಮುಂಬಯಿಯ ನೇತ್ರ ಚಿಕಿತ್ಸಾಲಯಗಳಲ್ಲಿ ನೇತ್ರವೈದ್ಯ ವಿಜ್ಞಾನದಲ್ಲಿ ಹೆಚ್ಚಿನ ಶಿಕ್ಷಣ ಪಡೆದರು. ಅಮೆರಿಕದ ನ್ಯೂಯಾರ್ಕ್ ಹಾಗೂ ಕೊಲಂಬಿಯ ವಿಶ್ವವಿದ್ಯಾನಿಲಯಗಳ ಪ್ರೌಢ ನೇತ್ರ ವೈದ್ಯವಿಜ್ಞಾನ ಕ್ರಮಗಳನ್ನೂ ಇವರು ಅಭ್ಯಸಿಸಿದರು.



'ನೇತ್ರದಾನಿ' : ಮೋದಿ

1942, ಸ್ವಾತಂತ್ರ್ಯ ಚಳುವಳಿಯ ಚಲೇಜಾವ್ ಆಂದೋಲನದ ಸಮಯ. ಇದರಿಂದ ಮೋದಿ ಪ್ರಭಾವಿತರಾದರು. ಜನಸೇವೆಗೆ ಜೀವನವನ್ನು ಮೀಸಲಿಟ್ಟರು. ಪ್ರಪಂಚದಲ್ಲೇ ಮೊತ್ತಮೊದಲನೆಯದೆನ್ನಿಸಿದ 'ಉಚಿತ ಚರ ನೇತ್ರ ಚಿಕಿತ್ಸಾಲಯ'ವನ್ನು ಆರಂಭಿಸಿದರು. "ಭಾರತದ ಬಡಜನ ನನ್ನಲ್ಲಿಗೆ ಬರುವುದು ಸಾಧ್ಯವಿಲ್ಲ, ಆದ್ದರಿಂದ ನಾನೇ ಅವರ ಬಳಿಗೆ ಹೋಗುತ್ತೇನೆ," ಎಂದರು. ಅವರ ಚಿಕಿತ್ಸಾ ಶಿಬಿರದಲ್ಲಿ ರೋಗಿಗಳಿಗೆ ಶಸ್ತ್ರಚಿಕಿತ್ಸೆ, ವಸತಿ, ಊಟ–ಇವೆಲ್ಲ ಉಚಿತ. ಮೆಳ್ಳೆಗಣ್ಣು, ಕಣ್ಣಿನಪರೆ ಮುಂತಾದ ಹಲವು ದೋಷಗಳಿಗೆ ಇವರು ಶಸ್ತ್ರಚಿಕಿತ್ಸೆ ನಡೆಸಿದ್ದಾರೆ. ಒಂದು ದಿನದಲ್ಲಿ ಇವರು ನಡೆಸಿರುವ ಪರಮಾವಧಿ ಶಸ್ತ್ರಚಿಕಿತ್ಸೆ 833ರಷ್ಟು ಆದದ್ದೂ ಉಂಟು. ಇಂಥ ಚಳಕಕ್ಕಾಗಿ ಇವರು ಜಗದ್ವಿಖ್ಯಾತರು.

ಡಾ. ಮೋದಿ 1974ರ ವರೆಗೆ ಹದಿನೆಂಟು ಬಾರಿ ಪ್ರಪಂಚ ಪರ್ಯಟನ ಮಾಡಿದ್ದಾರೆ. ತಮ್ಮ ನೇತ್ರ ಶಸ್ತ್ರಚಿಕಿತ್ಸಾ ವಿಧಾನ ಪ್ರದರ್ಶನಗಳನ್ನು ನಡೆಸಿದ್ದಾರೆ. ಮೈಸೂರು ಹಾಗೂ ಕರ್ನಾಟಕ ವಿಶ್ವವಿದ್ಯಾನಿಲಯಗಳು ಅವರಿಗೆ ಗೌರವ ಡಾಕ್ಟರೇಟ್ ಪದವಿ ಇತ್ತು ಗೌರವಿಸಿವೆ. 1965ರಲ್ಲಿ ಪದ್ಮಶ್ರೀ ಹಾಗೂ 1968ರಲ್ಲಿ ಪದ್ಮಭೂಷಣ ಪ್ರಶಸ್ತಿಗಳನ್ನು ಭಾರತ ಸರಕಾರ ನೀಡಿದೆ. ರಾಷ್ಟ್ರಪತಿಗಳಿಗೆ ಮೋದಿ ಗೌರವ ನೇತ್ರ ವೈದ್ಯರಾಗಿದ್ದಾರೆ.

ಮೋಹಿನಿ ಆಟ್ಟಂ

ಭಸ್ಮಾಸುರನ ನಾಶಕ್ಕಾಗಿ ವಿಷ್ಣು ಮೋಹಿನಿಯಾಗಿ ನಾಟ್ಯವಾಡಿದನೆಂಬ ಪುರಾಣ ಕಥೆಯೇ ಮೋಹಿನಿ ಆಟ್ಟಂಗೆ ಪ್ರೇರಣೆ. ಈ ನಾಟ್ಯಪ್ರಕಾರ ಕೇರಳದ ನಾಟ್ಯ ಸಂಪ್ರದಾಯದ ಒಂದು ವಿಶಿಷ್ಟ ಅಂಗ. ಇದು ಸ್ತ್ರೀಯರಿಗೇ ಮೀಸಲಾದದ್ದು.

ಈ ನಾಟ್ಯ ಪ್ರಕಾರದಲ್ಲಿ ಲಾಸ್ಯ ಮತ್ತು ತಾಂಡವ ನೃತ್ಯವಿಭಾಗಗಳ ಸುಂದರ ಸಾಮರಸ್ಯವನ್ನು ಕಾಣಬಹುದು. ಈ ನಾಟ್ಯದ ತಂತ್ರ ಕಥಕಳಿಯ ತಂತ್ರವನ್ನೇ ಅವಲಂಬಿಸಿದೆ: [illegible] ಕಾಣುತ್ತದೆ. ಆರಂಭದಲ್ಲಿ ನೃತ್ಯದ ಗತಿ [illegible] ಹೆಚ್ಚುತ್ತ [illegible] ಮುಟ್ಟುತ್ತದೆ.

[illegible] ಭಾವಭಂಗಿಗಳಿಗೆ, [illegible] ಮೋಹಿನಿ ಆಟ್ಟಂನಲ್ಲಿ [illegible] ಆರಿಸಿದ ಕಥಾನಕಗಳು ಮೋಹಿನಿ ಆಟ್ಟಂ ವಸ್ತು. ನೋಟಕರ ಮೇಲೆ ಮೋಡಿ ಬೀರುವ ಮೋಹಿನಿ ಆಟ್ಟಂ ತಾಳಗತಿ ನಾಟಕೀಯತೆಗೆ ಹೊಂದಿಕೊಳ್ಳುತ್ತದೆ. ಆಂಗಿಕಾಭಿನಯದ ಮೂಲಕ ಕಥಾವಸ್ತು ಅಭಿವ್ಯಕ್ತಗೊಳ್ಳುತ್ತದೆ.

ಮೌಂಟ್‌ಬ್ಯಾಟನ್

"ನೀವು ಇಲ್ಲಿಗೆ ಗೌರವಾನ್ವಿತ ವ್ಯಕ್ತಿಯಾಗಿ ಬಂದಿರಿ. ಇಲ್ಲಿ ಅತಿ ಕಷ್ಟದ ಹಾಗೂ ಬಿಕ್ಕಟ್ಟಿನ ದಿನಗಳಲ್ಲಿ ನೀವು ಇದ್ದಿರಿ. ಆದರೂ ನಿಮ್ಮ ಗೌರವಕ್ಕೆ ಎಳ್ಳಷ್ಟೂ ಕುಂದು ಬರಲಿಲ್ಲ. ಇದೊಂದು ಅಪೂರ್ವ ಸಾಧನೆ."

ಲಾರ್ಡ್ ಮೌಂಟ್‌ಬ್ಯಾಟನ್ ಅವರಿಗೆ ವಿದಾಯ ಕೋರುವ ಸಮಾರಂಭದಲ್ಲಿ ಜವಾಹರಲಾಲ ನೆಹರೂ ಆಡಿದ ಮಾತು ಇದು. ಸ್ವತಂತ್ರ ಭಾರತದ ಕನಸು ನನಸಾಗಲಿದ್ದ ವೇಳೆಯಲ್ಲಿ ರಾಜಪ್ರತಿನಿಧಿಯಾಗಿ ಬಂದ ಇವರು ಅಪೂರ್ವ ಜನಪ್ರಿಯತೆ ಗಳಿಸಿದರು. ಸ್ವಾತಂತ್ರ್ಯ ಬಂದ ಮೇಲೂ ಇವರನ್ನೇ ಗವರ್ನರ್ ಜನರಲರಾಗಿ ಸ್ವಲ್ಪ ಕಾಲ ಉಳಿಸಿಕೊಂಡದ್ದು ಇವರಲ್ಲಿ ಭಾರತೀಯರಿಗಿದ್ದ ನಂಬಿಕೆಗೆ ಕುರುಹು.

ವಿಂಡ್ಸರ್‌ನಲ್ಲಿ 1900 ಜೂನ್ 25ರಂದು ಬ್ಯಾಟನ್‌ಬರ್ಗ್‌ನ ಪ್ರಿನ್ಸ್ ಲೂಯಿಸ್ ಅವರ ಕಿರಿಯ ಮಗನಾಗಿ ಮೌಂಟ್‌ಬ್ಯಾಟನ್ ಜನಿಸಿದರು. 1913ರಲ್ಲಿ ನೌಕಾಪಡೆ ಸೇರಿದರು. ದ್ವಿತೀಯ ಮಹಾಯುದ್ಧದ ಸಮಯದಲ್ಲಿ ಸೈನ್ಯದ ಉನ್ನತ ಸ್ಥಾನಕ್ಕೇರಿದರು.

1947–48ರಲ್ಲಿ ಇವರು ಭಾರತದ ವೈಸ್‌ರಾಯ್ ಹಾಗೂ ಗವರ್ನರ್ ಜನರಲ್ ಆಗಿ ಸೇವೆ ಸಲ್ಲಿಸಿದರು.

ಭಾರತಕ್ಕೆ ಬಂದಾಗಿನಿಂದ ಗಾಂಧೀಜಿಯ ವ್ಯಕ್ತಿತ್ವಕ್ಕೆ ಮಹತ್ವ ಕೊಟ್ಟ ಮೌಂಟ್‌ಬ್ಯಾಟನ್, ಅವರೊಡನೆ ಅನೇಕ ಬಾರಿ ಮಾತುಕತೆ ನಡೆಸಿದರು.

ಭಾರತಕ್ಕೆ ಅಧಿಕಾರವನ್ನು ವಹಿಸಿಕೊಡುವುದು, ವೈಸ್‌ರಾಯ್ ಮೌಂಟ್ ಬ್ಯಾಟನ್ ಅವರಿಗೆ ಬ್ರಿಟಿಷ್ ಸರಕಾರ ವಹಿಸಿದ್ದ ಮಹತ್ವದ ಕಾರ್ಯ. ಇದಕ್ಕೆ 1948 ಜೂನ್ ಅಂತಿಮ ಗಡುವಾಗಿತ್ತು.

ಆದರೆ ಭಾರತದೊಳಗಿನ ವಿದ್ಯಮಾನಗಳನ್ನು ಗಮನಿಸಿ [illegible] ಕೈಗೊಳ್ಳುತ್ತಿದ್ದ ಮೌಂಟ್‌ಬ್ಯಾಟನ್ 1947 ಆಗಸ್ಟಿನಲ್ಲಿ ಭಾರತ ಸ್ವತಂತ್ರವಾಗಲು ಕಾರಣರಾದರು. ತಮಗೆ



ಗೌರವಾನ್ವಿತ ವ್ಯಕ್ತಿ : ಮೌಂಟ್‌ಬ್ಯಾಟನ್



ಕೊನೆಯ ಮಾತುಕತೆ – ವೈಸ್‌ರಾಯರೊಂದಿಗೆ ಗಾಂಧೀಜಿ

ವಹಿಸಿದ್ದ ಕಾರ್ಯವನ್ನು ಅತ್ಯಂತ ಯಶಸ್ವಿಯಾಗಿ ನಿರ್ವಹಿಸಿದರು. ಮೌಂಟ್‌ಬ್ಯಾಟನ್ ಭಾರತದ ಹಿರಿಯ ರಾಜಕೀಯ ನಾಯಕರ ಜೊತೆ ಮೈತ್ರಿ ಬೆಳೆಸಿ, ಇಂಗ್ಲೆಂಡಿಗೆ ಹಿಂತಿರುಗಿದ ಮೇಲೂ ತಮ್ಮ ನೆನಪು ಸಿಹಿಯಾಗಿಯೇ ಉಳಿಯುವಂತೆ ಮಾಡಿದರು.

ಇವರಿಗೆ 1946ರಲ್ಲಿ ವೈಕೌಂಟ್ ಪದವಿಯೂ 1947ರಲ್ಲಿ ಅರ್ಲ್ ಪದವಿಯೂ ದೊರೆತುವು. ಇಂಗ್ಲೆಂಡಿಗೆ ಹಿಂತಿರುಗಿದ ಅನಂತರ 1952-54ರ ವರೆಗೆ ಇವರು ಹಿರಿಯ ನೌಕಾಧಿಕಾರಿಯ ಸ್ಥಾನ ವಹಿಸಿಕೊಂಡಿದ್ದರು.

ಮೌಖರಿಯರು

ಇಂದಿನ ಉತ್ತರ ಪ್ರದೇಶದಲ್ಲಿ ಆಳುತ್ತಿದ್ದ ಮೌಖರಿಯರು ಆರಂಭದಲ್ಲಿ ಗುಪ್ತರ ಮಾಂಡಲಿಕರಾಗಿದ್ದರು. ಕ್ರಿ.ಶ. 550ರ ಸುಮಾರಿಗೆ ಈ ವಂಶದ ಈಶಾನವರ್ಮ ಸ್ವತಂತ್ರ ರಾಜನಾದ. ಇವನೂ ಮುಂದೆ ಆಳಿದ ಇವನ ಮಗ ಶರ್ವವರ್ಮನೂ ಗುಪ್ತರ ರಾಜ್ಯದ ಪತನಕ್ಕೆ ಕಾರಣರಾದ ಹೂಣರ ವಿರುದ್ಧ ಬಲವಾದ ಹೋರಾಟ ನಡೆಸಿದರು.

ಅವಂತಿವರ್ಮನ ಕಾಲದಲ್ಲಿ (ಸುಮಾರು 580–600)ನ ಕನ್ನೋಜ್ ಮೌಖರಿ ವಂಶದ ರಾಜಧಾನಿಯಾಯಿತು. ಮಗಧದ ಭಾಗಗಳು ಇವನ ರಾಜ್ಯದಲ್ಲಿ ಸೇರಿದ್ದುವು. ಈ ವಂಶದ ಗ್ರಹವರ್ಮನು ಹರ್ಷವರ್ಧನನ ಸೋದರಿ ರಾಜ್ಯಶ್ರೀಯನ್ನು ವರಿಸಿದ್ದ. ಮಾಳ್ವದ ದೊರೆ ದೇವಗುಪ್ತನು ಗ್ರಹವರ್ಮನನ್ನು ಕೊಂದು ಕನ್ನೋಜನ್ನು ಗೆದ್ದುಕೊಂಡ. ಇಲ್ಲಿಗೆ ಮೌಖರಿಯರ ಆಳ್ವಿಕೆ ಮುಕ್ತಾಯವಾಯಿತು.

ಮುಂದೆ ಹರ್ಷನು ಕನ್ನೋಜನ್ನು ಗೆದ್ದು ಅದನ್ನು ತನ್ನ ರಾಜಧಾನಿಯಾಗಿ ಮಾಡಿಕೊಂಡ.

ಮೌರ್ಯ

ಮಗಧದ ಪಾಟಲಿಪುತ್ರದಿಂದ ಆಳಿದ ಮೌರ್ಯರು ಉತ್ತರ ಭಾರತದ ಬಹುಭಾಗದ ಮೇಲೂ ದಕ್ಷಿಣದಲ್ಲಿ ಇಂದಿನ ಚಿತ್ರದುರ್ಗದ ವರೆಗಿನ ಪ್ರದೇಶದ ಮೇಲೂ ಪ್ರಭುತ್ವ ಸ್ಥಾಪಿಸಿದರು.

ಮುರಾದೇವಿಯ ಮಗನಾದ ಚಂದ್ರಗುಪ್ತ ಮೌರ್ಯವಂಶದ ಸ್ಥಾಪಕ. ಕ್ರಿ. ಪೂ. 324ರಲ್ಲಿ ಈತ ಮಗಧವನ್ನು ಗೆದ್ದುಕೊಂಡ. ಚಾಣಕ್ಯ ಆತನ ಮಂತ್ರಿಯಾಗಿದ್ದ ಎಂದು ನಂಬಿಕೆ. ಅವನು ತನ್ನ ವಿಶಾಲ ರಾಜ್ಯವನ್ನು ಮಂಡಲಗಳೆಂಬ ಪ್ರಾಂತಗಳಾಗಿ ವಿಂಗಡಿಸಿ, ಮಂಡಲಾಧಿಕಾರಿಗಳನ್ನು ನೇಮಿಸಿ ಉತ್ತಮ ಹಾಗೂ ದಕ್ಷ ಆಡಳಿತವನ್ನು ಸ್ಥಾಪಿಸಿದ. ವಾಯುವ್ಯ ಭಾರತದಲ್ಲಿ ಆಳುತ್ತಿದ್ದ ಗ್ರೀಕರನ್ನು ಸೋಲಿಸಿ ಹೊರಕ್ಕೆ ಅಟ್ಟಿದ.



ಮೌರ್ಯ ನಾಣ್ಯ

ಚಂದ್ರಗುಪ್ತನ ಅನಂತರ ಬಿಂದುಸಾರ ಹಾಗೂ ಅಶೋಕ ಆಳಿದರು. ಅಶೋಕ ಜಗತ್ತಿನ ಇತಿಹಾಸದಲ್ಲೇ ಗಣ್ಯ ಸ್ಥಾನ ಪಡೆದಿರುವ ದೊರೆ. ಅಶೋಕನ ಬಳಿಕ ಮೌರ್ಯ ರಾಜ್ಯ ದೀರ್ಘಕಾಲ ಉಳಿಯಲಿಲ್ಲ.

ನೋಡಿ : ಅಶೋಕ ; ಚಂದ್ರಗುಪ್ತ ಮೌರ್ಯ

ಯಕ್ಷಗಾನ ಬಯಲಾಟ

ಕನ್ನಡನಾಡಿನ ಒಂದು ಜಾನಪದ ಕಲೆ, —ಯಕ್ಷಗಾನ ಬಯಲಾಟ. ಬೇಸಾಯ ಮುಗಿದಾಗ ಬಯಲುಗಳಲ್ಲಿ ಮನೋರಂಜನೆಗಾಗಿ ಯಕ್ಷಗಾನ ಬಯಲಾಟಗಳನ್ನೇರ್ಪಡಿಸುತ್ತಾರೆ. ಭಗವಂತನ ಹತ್ತು ಅವತಾರಗಳ ಕಥೆಯನ್ನು ಪ್ರದರ್ಶಿಸುವ ಈ ಕಲೆಗೆ 'ದಶಾವತಾರದ ಆಟ' ಎಂದೂ ಹೆಸರಿದೆ.

ನಾಲ್ಕು ಕಂಬಗಳ ನಡುವೆ ಸುಮಾರು 15 ಅಡಿ ಚಚ್ಚೌಕದ ರಂಗಸ್ಥಳ. ಹಿಂಭಾಗದಿಂದ ಭಾಗವತ ಜಾಗಟೆ (ಕಂಚಿನ ತಾಳ) ಹಿಡಿದು, ಕಥಾಪದ್ಯವನ್ನು ಹಾಡುತ್ತಾನೆ. ಪಕ್ಕವಾದ್ಯಗಳಾಗಿ ಚಂಡೆ, ಮದ್ದಳೆ ಮತ್ತು ಹಾರ್ಮೋನಿಯಂ ಇರುತ್ತವೆ. ಮೊದಲ ರಂಗಪ್ರವೇಶ ಕೋಡಂಗಿಯದು. ಬಳಿಕ ಬಾಲ ಗೋಪಾಲರು ಮತ್ತು ಸ್ತ್ರೀವೇಷ. ಇದು ಪೂರ್ವ ಸಿದ್ಧತೆ.

ಕಥಾಭಿನಯ ಆಯಾಯ ಕಥೆಗೆ ಅನುಸಾರವಾಗಿ, ಒಡ್ಡೋಲಗದಿಂದ ಆರಂಭವಾಗುತ್ತದೆ.



ಕರ್ನಾಟಕದ ಜಾನಪದ ಕಲೆ

ಹಾಡಿನ ರೂಪದಲ್ಲಿ ಭಾಗವತ ಹೇಳಿದ ಕಥಾಭಾಗವನ್ನು ಆಧರಿಸಿ ಪಾತ್ರಧಾರಿಗಳು ಸಂಭಾಷಿಸುತ್ತಾರೆ. ತಾಳ ಲಯ ಬದ್ಧವಾದ ಹೆಮ್ಮೇಳದೊಂದಿಗೆ ಕುಣಿದು, ತಮ್ಮ ಪಾತ್ರದ ವೈಶಿಷ್ಟ್ಯವನ್ನು ತೋರಿಸುತ್ತಾರೆ.

ಸುತ್ತಲೂ ಕತ್ತಲೆ ತುಂಬಿರುವಾಗ ದೀವಟಿಗೆಯ ಬೆಳಕಿನಲ್ಲಿ, ಗಂಭೀರ ವೇಷ ಭೂಷಣಗಳಿಂದ ಅಲಂಕರಿಸಲ್ಪಟ್ಟ ಪಾತ್ರಧಾರಿಗಳನ್ನು ರಂಗಸ್ಥಳದಲ್ಲಿ ಕಂಡಾಗ ದೇವ, ದಾನವ, ಗಂಧರ್ವಲೋಕದ ಕಲ್ಪನೆ ಬರುತ್ತದೆ. ರಾತ್ರಿ ಬೆಳಗಾಗುವ ವರೆಗೆ ನಡೆಯುವ ಯಕ್ಷಗಾನ ಬಯಲಾಟ ನಾಟಕಾಂಶವನ್ನು ಹೊಂದಿರುವ ಗಾಯನ, ವಾದನ, ನರ್ತನಗಳ ಒಂದು ಸಮ್ಮಿಶ್ರಕಲೆ. ಇದರಲ್ಲಿ 'ತೆಂಕುತಿಟ್ಟು', 'ಬಡಗುತಿಟ್ಟು' ಗಳೆಂಬ ಎರಡು ಪ್ರಭೇದಗಳಿವೆ.

ಸುಸಜ್ಜಿತ ರಂಗಮಂಟಪಗಳಲ್ಲೂ ಅತ್ಯಾಧುನಿಕ ರೀತಿಯಲ್ಲಿ ಯಕ್ಷಗಾನ ಪ್ರದರ್ಶನಗಳು ನಡೆಯುತ್ತವೆ. ಡಾ. ಶಿವರಾಮ ಕಾರಂತರು ಯಕ್ಷಗಾನದಲ್ಲಿ ಹೊಸ ಪ್ರಯೋಗಗಳನ್ನು ಮಾಡಿದ್ದಾರೆ.

ನೋಡಿ : ಯಕ್ಷಗಾನ –ಸಂಪುಟ ೫

ಯಕ್ಷಪ್ರಶ್ನೆ

ಸಮರ್ಪಕ ಉತ್ತರ ಹೇಳಲು ಕಷ್ಟವಾದ, ತಬ್ಬಿಬ್ಬುಗೊಳಿಸುವಂಥ ಪ್ರಶ್ನೆ ಬಂದಾಗ, ಅದನ್ನು 'ಯಕ್ಷಪ್ರಶ್ನೆ' ಎನ್ನುವುದು ವಾಡಿಕೆ.

ಯಕ್ಷರು ಕುಬೇರನ ಸೇವಕ ವರ್ಗದವರು. ಯಮನು ಯಕ್ಷರೂಪದಲ್ಲಿ ಬಂದು ಪಾಂಡವರಿಗೆ ಕಠಿಣ ಪ್ರಶ್ನೆಗಳನ್ನು ಕೇಳಿದ ಪ್ರಸಂಗ 'ಮಹಾಭಾರತ'ದಲ್ಲಿ ಬರುತ್ತದೆ.

ಜಿಂಕೆಯೊಂದನ್ನು ಬೆನ್ನಟ್ಟುತ್ತ ನಿಬಿಡ ಅರಣ್ಯವನ್ನು ಸೇರಿದ ಪಾಂಡವರಿಗೆ ತುಂಬ ಬಾಯಾರಿಕೆಯಾಯಿತು. ಕುಡಿಯಲು ನೀರು ಸಿಗಲಿಲ್ಲ. ಆಗ ನಕುಲ ಮರವೇರಿ ಸುತ್ತಲೂ ನೋಡಿದ. ದೂರದಲ್ಲಿ ಜಲಸಸ್ಯಗಳನ್ನು ಕಂಡು, ಅಲ್ಲಿ ನೀರು ಇರಬೇಕು ಅಂದುಕೊಂಡ. ನೀರನ್ನು ತರಲು ಆ ಕಡೆಗೆ ಹೊರಟ.

ಒಮ್ಮೆಲೆ ಶುಭ್ರವಾದ ನೀರಿನ ಕೊಳ. ಇನ್ನೇನು ನೀರನ್ನು ಬೊಗಸೆಯಲ್ಲಿ ಎತ್ತಿಕೊಂಡು ಕುಡಿಯಬೇಕು. ಅಷ್ಟರಲ್ಲಿ ಒಂದು ಅಶರೀರವಾಣಿ ಕೇಳಿಸಿತು :

"ದುಡುಕಬೇಡ. ಈ ಕೊಳ ನನ್ನದು. ನಾನು ಕೇಳಿದ ಪ್ರಶ್ನೆಗಳಿಗೆ ಸಮರ್ಪಕ ಉತ್ತರ ಹೇಳಿದ ಮೇಲೆ ನೀರು ಕುಡಿ..."

ಮಾತುಗಳನ್ನು ಪೂರ್ತಿಯಾಗಿ ಕೇಳಿಸಿಕೊಳ್ಳುವಷ್ಟು ವ್ಯವಧಾನ ನಕುಲನಿಗಿರಲಿಲ್ಲ. ಬೇಗಬೇಗನೆ ನೀರು ಕುಡಿದ. ಅನಂತರ ಒಂದೆ ಕ್ಷಣ. ಕಣ್ಣುಕತ್ತಲೆ ಬಂದಂತಾಗಿ ಅಲ್ಲೇ ಉರುಳಿದ.

ಎಷ್ಟು ಹೊತ್ತು ಕಳೆದರೂ ಹಿಂದಿರುಗದೆ ಇದ್ದದ್ದನ್ನು ಕಂಡು, ಯುಧಿಷ್ಠಿರ ಸಹದೇವನನ್ನು ಕಳುಹಿಸಿದ. ಕೊಳದ ತೀರದಲ್ಲಿ ಸಹೋದರ ಮಲಗಿದ್ದುದನ್ನು ಸಹದೇವ ಕಂಡ. ಆದರೆ ಮೊದಲು ತನ್ನ ತೃಷೆಯನ್ನು ಹಿಂಗಿಸಿಕೊಂಡು ಅನಂತರ ಇವನನ್ನು ಎಬ್ಬಿಸೋಣ ಎಂದುಕೊಂಡು ಸಹದೇವ ನೀರನ್ನು ಮುಟ್ಟಿದ. ಮತ್ತೆ ಅದೇ ಧ್ವನಿ. ಸಹದೇವ ಅದಕ್ಕೆ ಗಮನ ಕೊಡಲಿಲ್ಲ. ಅವನಿಗೂ ನಕುಲನ ಗತಿಯೇ ಆಯಿತು. ಕ್ರಮವಾಗಿ ಅರ್ಜುನ, ಭೀಮ ಕೊಳದ ಬಳಿಗೆ ಬಂದು ನಿಷಿದ್ಧವಾದ ನೀರನ್ನು ಕುಡಿದು ಪ್ರಜ್ಞಾಹೀನರಾದರು. ಕೊನೆಗೆ ಬಂದವನು ಯುಧಿಷ್ಠಿರ. "ಮೊದಲು ನನ್ನ ಪ್ರಶ್ನೆಗಳಿಗೆ ಉತ್ತರ ಕೊಡು. ಇಲ್ಲವಾದರೆ ನಿನ್ನ ತಮ್ಮಂದಿರ ಗತಿಯೇ ನಿನಗೂ ಬರಗೂಡುದು" ಎಂಬ ಧ್ವನಿ ಕೇಳಿಸಿತು. ಯುಧಿಷ್ಠಿರನಿಗೆ ಇದು ಯಕ್ಷನ ಧ್ವನಿ ಎಂದು ತಿಳಿಯಿತು. "ಸರಿ, ಪ್ರಶ್ನೆಗಳನ್ನು ಕೇಳು," ಎಂದ ಯುಧಿಷ್ಠಿರ.

"ಆಪತ್ತಿನಲ್ಲಿ ಮನುಷ್ಯನ ಬಂಧು ಯಾರು?"—ಯಕ್ಷ ಕೇಳಿದ.

"ಧೈರ್ಯ," ಎಂದ ಯುಧಿಷ್ಠಿರ.

"ವಾಯುವಿಗಿಂತ ವೇಗದ್ದು ಯಾವುದು?"

"ಮನಸ್ಸು."

"ಕೊನೆಗಾಲದಲ್ಲಿ ಯಾರು ಜೊತೆ?"

"ಧರ್ಮ."

ಇಂಥ ಅನೇಕ ಪ್ರಶ್ನೆಗಳಿಗೆ ಯುಧಿಷ್ಠಿರ ಸರಿಯಾದ ಸಮಾಧಾನ ಹೇಳಿದ. ಯಕ್ಷ ಸಂತುಷ್ಟನಾಗಿ, "ರಾಜನೇ, ನಿನ್ನ ಮೃತ ಸಹೋದರರಲ್ಲಿ ಒಬ್ಬನನ್ನು ಮತ್ತೆ ಬದುಕಿಸುತ್ತೇನೆ. ಯಾರಿಗೆ ಜೀವಕೊಡಲಿ?" ಎಂದು ಕೇಳಿದ. ಅದಕ್ಕೆ ಯುಧಿಷ್ಠಿರ, "ಕುಂತಿ, ಮಾದ್ರಿ ನನ್ನ ತಂದೆಯ ಇಬ್ಬರು ಪತ್ನಿಯರು. ಕುಂತಿಯ ಮಕ್ಕಳಲ್ಲಿ ನಾನು ಬದುಕಿದ್ದೇನೆ. ಮಾದ್ರಿಯ ಮಕ್ಕಳಲ್ಲಿ ಒಬ್ಬನಾದ ನಕುಲ ಬದುಕುವಂತೆ ಮಾಡು" ಎಂದು ಕೇಳಿಕೊಂಡ. ಯುಧಿಷ್ಠಿರನ ನಿಷ್ಪಕ್ಷಪಾತ ಬುದ್ಧಿಯಿಂದ ಸಂತೋಷಗೊಂಡ ಯಕ್ಷ ಅವನ ಎಲ್ಲ ಸಹೋದರರನ್ನೂ ಬದುಕಿಸಿದ.



ನಾಚಿಯಾ ಯಕ್ಷ :
ಕ್ರಿ. ಪೂ. 1ನೆಯ ಶತಮಾನದ [illegible]

ಯಜುರ್ವೇದ

ವೇದವನ್ನು ನಾಲ್ಕಾಗಿ ವಿಂಗಡಿಸಿದಾಗ (ವ್ಯಾಸರು ಈ ವಿಂಗಡಣೆ ಮಾಡಿದರೆಂದು ನಂಬಿಕೆ), ಋಗ್ವೇದ ಸಂಹಿತೆಯನ್ನು ಮೂಲಾಧಾರವಾಗಿ ಇಟ್ಟುಕೊಂಡು, ಯಾಗದಲ್ಲಿ ಅಧ್ವರ್ಯುವು ಬಳಸಬೇಕಾದ ಮಂತ್ರಗಳನ್ನೆಲ್ಲ ಕೂಡಿಸಿ ಯಜುರ್ವೇದವನ್ನು ರೂಪಿಸಲಾಯಿತು ಎಂದು ಹೇಳುತ್ತಾರೆ.

ಯಜುರ್ವೇದ ಎರಡು ರೂಪಗಳಲ್ಲಿದೆ: ಕೃಷ್ಣ ಯಜುರ್ವೇದ ಹಾಗೂ ಶುಕ್ಲ ಯಜುರ್ವೇದ. ಕೃಷ್ಣ ಯಜುರ್ವೇದ ಬ್ರಹ್ಮ ಸಂಪ್ರದಾಯಕ್ಕೆ ಸೇರಿದ್ದು, ಹೆಚ್ಚು ಪ್ರಾಚೀನವಾದದ್ದು. ಮಂತ್ರಗಳನ್ನಷ್ಟೇ ಅಲ್ಲದೆ ಬ್ರಾಹ್ಮಣಗಳನ್ನೂ ಇದು ಒಳಗೊಂಡಿದೆ. ಶುಕ್ಲ ಯಜುರ್ವೇದ ಆದಿತ್ಯ ಸಂಪ್ರದಾಯದ್ದು. ಇದರಲ್ಲಿ ಯಾಗಕ್ಕೆ ಅಗತ್ಯವಾದ ಬರೇ ಮಂತ್ರಗಳಿದ್ದು, ಬ್ರಾಹ್ಮಣ ಭಾಗಗಳಿಲ್ಲ. ಕೃಷ್ಣ ಯಜುರ್ವೇದವನ್ನು ತೈತ್ತಿರೀಯ ಸಂಹಿತೆ ಎಂದೂ ಶುಕ್ಲ ಯಜುರ್ವೇದವನ್ನು ವಾಜಸನೇಯಿ ಸಂಹಿತೆ ಎಂದೂ ಕರೆಯುತ್ತಾರೆ. ಯಾಜ್ಞವಲ್ಕ್ಯ ಇದನ್ನು ಸೂರ್ಯನಿಂದ ಕಲಿತ ಎಂದು ನಂಬಿಕೆ.

ಶುಕ್ಲ ಯಜುರ್ವೇದದಲ್ಲಿ ಅಶ್ವಮೇಧಯಾಗ, ರಾಜಸೂಯಯಾಗ, ಸೋಮಯಾಗ, ಮೊದಲಾದುವುಗಳ ವರ್ಣನೆ ಬರುತ್ತದೆ. ಇದರಲ್ಲಿ 18 ಶಾಖೆಗಳಿವೆ. ಕಾಣ್ವ ಮತ್ತು ಮಾಧ್ಯಂದಿನ ಮುಖ್ಯ ಶಾಖೆಗಳು.

ಕೃಷ್ಣ ಯಜುರ್ವೇದ 85 ಶಾಖೆಗಳನ್ನು ಒಳಗೊಂಡಿದೆ. ಈಗ ಲಭ್ಯವಿರುವ 4 ಶಾಖೆಗಳು : ತೈತ್ತಿರೀಯ ಶಾಖೆ. ಮೈತ್ರಾಯಣೀಯ ಶಾಖೆ, ಕಠಶಾಖೆ ಮತ್ತು ಕಪಿಸ್ಥಲ ಶಾಖೆ. ಇವುಗಳಲ್ಲಿ ಪ್ರಧಾನವಾಗಿರುವುದು ತೈತ್ತಿರೀಯ ಶಾಖೆ. ಯಾಗ ಮಾಡುವ ಕ್ರಮದ ವಿವರ. ಯಾಗ ಸ್ತುತಿ, ದೇವರ ಮಹಿಮೆಗಳ ವರ್ಣನೆ ಇದರಲ್ಲಿವೆ.

ಯಜುರ್ವೇದ ರಚನೆಯ ಕಾಲ ಕ್ರಿ.ಪೂ. 700ರಿಂದ 300 ಇರಬಹುದೆಂದು ಒಂದು ಊಹೆ. ಗಂಗಾ–ಯಮುನಾ ಬಯಲಿನಲ್ಲಿ ಪುರಾತನ ಬಣಗಳು ಹೊಸ ಸಾಮಾಜಿಕ ಮತ್ತು ಧಾರ್ಮಿಕ ಕಟ್ಟಳೆಗಳನ್ನು ಬೆಳೆಸಿಕೊಂಡುದಕ್ಕೆ ಯಜುರ್ವೇದ ಸೂಚಕವಾಗಿದೆ.

ಯಜುರ್ವೇದಕ್ಕೆ ಸಾಯಣ ಭಾಷ್ಯ ಬರೆದಿದ್ದಾನೆ.

ನೋಡಿ : ಅಥರ್ವವೇದ ; ಈಶಾವಾಸ್ಯೋಪನಿಷತ್ ; ಋಗ್ವೇದ ; ತೈತ್ತಿರೀಯೋಪನಿಷತ್ ; ಯಾಜ್ಞವಲ್ಕ್ಯ ; ಸಾಮವೇದ

ಯಮುನಾ



ಗಂಗೆಯಷ್ಟೇ ಪವಿತ್ರವೆಂದು ಪರಿಗಣಿಸಲ್ಪಟ್ಟಿರುವ ನದಿ– ಯಮುನಾ. ಯಮ ಮತ್ತು ಯಮುನಾ ಸೂರ್ಯನ ಅವಳಿ ಮಕ್ಕಳೆಂದು ಪುರಾಣಕಥೆ. ಯಮುನೆಯನ್ನು ಯಮಿ ಎಂದೂ ಕರೆಯುತ್ತಾರೆ. ಉತ್ತರ ಭಾರತದಲ್ಲಿ ಜಮುನಾ ಎಂದೇ ಇದು ಪ್ರಸಿದ್ಧ.

ಯಮುನಾನದಿ. ಹಿಮಾಲಯದ ಬಂದರ್‌ಪೂಂಚ್ ಶಿಖರದಿಂದ ಹತ್ತು ಕಿ. ಮೀ. ಪಶ್ಚಿಮಕ್ಕಿರುವ ಯಮುನೋತ್ರಿ ಎಂಬ ಹಿಮರಾಶಿಯಲ್ಲಿ ಹುಟ್ಟುತ್ತದೆ. ಈ ಹಿಮರಾಶಿಯನ್ನು ಕಾಲಿಂದ ಪರ್ವತ ಎಂದೂ ಯಮುನಾ ನದಿಯನ್ನು ಕಾಲಿಂದ ಕನ್ಯಾ ಎಂದೂ ಕರೆಯುವುದುಂಟು. ಇದು ಯಾತ್ರಾಸ್ಥಳ. ಇಲ್ಲಿಯ ಹಿಮಶೀತಲ ನೀರಿನಲ್ಲಿ ಸ್ನಾನ ಮಾಡುವುದು ಸಾಧ್ಯವಿಲ್ಲ. ಆದರೆ ನದೀ ಪಾತ್ರದಲ್ಲೇ ಬಹಳ ಬಿಸಿಯಾದ ನೀರಿನ ಚಿಲುಮೆಗಳಿವೆ. ಇವುಗಳ ಸುತ್ತ ಕಲ್ಲು ಕಟ್ಟಿ ಕುಂಡಗಳನ್ನು ನಿರ್ಮಿಸಿದ್ದಾರೆ. ನದಿಯ ತಣ್ಣೀರು ಬಿಸಿನೀರಿನೊಡನೆ ಸೇರಿದಾಗ ಸ್ನಾನಕ್ಕೆ ಹದವಾದ ನೀರು ದೊರೆಯುತ್ತದೆ. ಯಮುನೋತ್ರಿಯ ಆಲಯದಲ್ಲಿ ಆಮೆಯ ಮೇಲೆ ನಿಂತಿರುವ ಯಮುನೆಯ ವಿಗ್ರಹವಿದೆ.

ಹಿಮಾಲಯದ ಕಾಡುಗಳಲ್ಲೂ ಶಿವಾಲಿಕ್ ಗುಡ್ಡಗಳಲ್ಲೂ ಹರಿಯುವಾಗ ಹೊಳೆಗಳು ಇದಕ್ಕೆ ಸೇರುತ್ತವೆ. ಪೌಂತ ಎಂಬಲ್ಲಿ ಯಮುನಾ ಬಯಲು ಪ್ರದೇಶವನ್ನು ಸೇರುತ್ತದೆ. ಮುಂದೆ ಫೈಜಾಬಾದ್‌ಗೆ ಬಂದ ಮೇಲೆ, ಈ ನದಿಯ ನೀರಿನ ಉಪಯೋಗ ಆರಂಭವಾಗುತ್ತದೆ. ನದಿಯ ಪೂರ್ವ ಪಶ್ಚಿಮ ದಡಗಳಿಂದ ಹೊರಟ ಕಾಲುವೆಗಳಿಂದ ವಿಸ್ತಾರ ಪ್ರದೇಶಕ್ಕೆ ನೀರು ಹಾಯುತ್ತದೆ.

ಯಮುನಾ ನದಿಯು ಹಿಮಾಲಯದಲ್ಲೇ ಹುಟ್ಟುವ ಗಂಗಾನದಿಗೆ ಸುಮಾರು 800 ಕಿ. ಮೀ. ಗಳಷ್ಟು ದೂರ ಸಮಾನಾಂತರವಾಗಿ ಹರಿದು, ಅಲಹಾಬಾದ್ (ಪ್ರಯಾಗ) ಹತ್ತಿರ ಅದನ್ನು ಸೇರುತ್ತದೆ. ಗಂಗಾ ಯಮುನಾ ನದಿಯ ನಡುವಣ ಪ್ರದೇಶ ಆರ್ಯರ ನೆಲೆಗಳಲ್ಲೊಂದಾಗಿತ್ತು. ಆಗ ಅದು ಬ್ರಹ್ಮಾವರ್ತವೆಂದು ಪ್ರಖ್ಯಾತವಾಗಿತ್ತು.

ಯಮುನಾ ನದಿಯ ತಟದಲ್ಲಿ ಶ್ರೀ ಕೃಷ್ಣನ ಲೀಲೆಗಳಿಗೆ ಸಂಬಂಧಿಸಿದ ಮಥುರಾ, ಬೃಂದಾವನಗಳಿವೆ; ಕಲೆ, ರಾಜಕೀಯ ಸಾಧನೆಗಳಿಗೆ ಸಂಬಂಧಿಸಿದ ಆಗ್ರಾ, ದೆಹಲಿ ಮುಂತಾದ ಪ್ರಸಿದ್ಧ ಸ್ಥಳಗಳಿವೆ. ಯಮುನೆಯ ದಡದಲ್ಲಿರುವ ಪೌಂತದಲ್ಲಿ ಗುರು ಗೋವಿಂದಸಿಂಗರು ಸ್ಥಾಪಿಸಿದ ಗುರುದ್ವಾರ ಸಿಕ್ಖರ ಯಾತ್ರಾಸ್ಥಳ.

ಯಯಾತಿ

ತನ್ನ ವೃದ್ಧಾಪ್ಯವನ್ನು ಮಗನ ಯೌವನಕ್ಕೆ ವಿನಿಮಯಮಾಡಿಕೊಂಡ ಅರಸು, ಯಯಾತಿ.

ಯಯಾತಿ ಚಂದ್ರವಂಶದ ಅರಸ ನಹುಷನ ಮಗ. ತನ್ನ ವೃದ್ಧಾಪ್ಯವನ್ನು ತೆಗೆದುಕೊಂಡು ಅವರ ಯೌವನವನ್ನು ಕೊಡಬೇಕೆಂದು ಮಕ್ಕಳಾದ ಯದು, ತುರ್ವಸು, ಅನು, ದ್ರುಹ್ಯ ಮತ್ತು ಪುರು ಅವರನ್ನು ಯಯಾತಿ ಕೇಳುತ್ತಾನೆ. ನಾಲ್ವರು ಒಪ್ಪದಿರಲು, ಶಾಪ ಕೊಡುತ್ತಾನೆ. ಕಿರಿಯ ಮಗ ಪುರು ತಂದೆಯ ಮಾತಿಗೆ ಸಮ್ಮತಿಸಲು, ಅವನಿಗೆ ರಾಜ್ಯವನ್ನು ಕೊಡುತ್ತಾನೆ; ವರವನ್ನೂ ನೀಡುತ್ತಾನೆ. ಅನೇಕ ವರ್ಷಗಳ ಬಳಿಕ ಯಯಾತಿಗೆ ವೈರಾಗ್ಯ ಉಂಟಾಗುತ್ತದೆ. ತನ್ನ ವೃದ್ಧಾಪ್ಯವನ್ನು ಪುರುವಿನಿಂದ ಮರಳಿ ಪಡೆದು ಅವನಿಗೆ ಯೌವನವನ್ನು ಕೊಟ್ಟು, ತಾನು ತಪಸ್ಸಿಗೆ ಹೋಗುತ್ತಾನೆ. ಉಪವಾಸಮಾಡಿ ಸ್ವ ಇಚ್ಛೆಯಿಂದ ಮರಣಹೊಂದಿದ ಯಯಾತಿ ಸ್ವರ್ಗಕ್ಕೆ ಹೋಗುತ್ತಾನೆ.

—ಇದು ಯಯಾತಿಯನ್ನು ಕುರಿತ ಪುರಾಣಕಥೆ.

ಯಶೋದಾ

ವಸುದೇವ, ದೇವಕಿಯರ ಮಗ ಕೃಷ್ಣ. ಅವನು ಹುಟ್ಟಿದೊಡನೆಯೇ ವಸುದೇವ ಅವನನ್ನು ಗೋಕುಲಕ್ಕೆ ತೆಗೆದುಕೊಂಡು ಹೋಗಿ, ತನ್ನ ಮಿತ್ರ ನಂದಗೋಪನ ಮನೆಯಲ್ಲಿ ಬಿಟ್ಟ. ನಂದಗೋಪನ ಹೆಂಡತಿ ಯಶೋದೆ ಅವನನ್ನು ಅಕ್ಕರೆಯಿಂದ ಸಾಕಿ ಬೆಳೆಸಿದವಳು. ಅವನ ಬಾಲಲೀಲೆಗಳನ್ನು ಕಂಡು ಹರ್ಷಿಸಿದಳು. ಅವನು ಪರಮಾತ್ಮನ ಅವತಾರವೆಂಬುದನ್ನು ಮನಗಂಡು ವಾತ್ಸಲ್ಯಭಾವದಿಂದ ಅವನನ್ನು ಆರಾಧಿಸಿದಳು. ಅವನನ್ನು ಯಾರು ಎಷ್ಟು ಪೂಜಿಸಿದರೂ ಅವನು ಅವಳಿಗೆ ಮೆಚ್ಚು, ಹೆತ್ತ ತಾಯಿಗಿಂತ ಮಿಗಿಲಾದ ಸಾಕುತಾಯಿ, ಯಶೋದೆ.



ಬಾಲಕೃಷ್ಣ, ತಾಯಿ ಯಶೋದೆ

ಯಶೋಧರಾ ದಾಸಪ್ಪ



ಸೇವಾ ಜೀವನ

ಯಶೋಧರಾ ದಾಸಪ್ಪನವರು ಅನಿರೀಕ್ಷಿತವಾಗಿ ಮಂತ್ರಿಯಾದರು. ರಾಜ್ಯ ಸರಕಾರ ಪಾನನಿರೋಧ ರದ್ದುಗೊಳಿಸಿದಾಗ ಪ್ರತಿಭಟಿಸಿ ಮಂತ್ರಿಪದವಿಗೆ ರಾಜೀನಾಮೆ ನೀಡಿದರು. ರಾಜಕಾರಣದಲ್ಲಿದ್ದರೂ ಮೊದಲಿನಿಂದಲೂ ಸಮಾಜ ಸೇವೆಯನ್ನೇ ತಮ್ಮ ಬದುಕಿನ ಪ್ರಧಾನ ಚಟುವಟಿಕೆಯನ್ನಾಗಿ ಮಾಡಿಕೊಂಡಿರುವ ಅವರಿಗೆ ಪಾನನಿರೋಧ, ಸಮಾಜಕ್ಕೆ ಅದರಲ್ಲೂ ದಲಿತ ವರ್ಗಕ್ಕೆ ವರವೆನ್ನುವ ನಂಬಿಕೆ. ಯಶೋಧರಾ ದಾಸಪ್ಪನವರ ಸಾರ್ವಜನಿಕ ಸೇವಾ ಕಾರ್ಯದ ಆರಂಭವೇ ಸಮಾಜಸೇವೆ ಮತ್ತು ರಚನಾತ್ಮಕ ಕಾರ್ಯಗಳಿಂದ. ಅವರ ತಂದೆ ಕೆ. ಎಚ್. ರಾಮಯ್ಯನವರು ಪ್ರಮುಖ ಸಮಾಜಸೇವಾ ಕಾರ್ಯಕರ್ತರಾಗಿದ್ದುದರಿಂದ ತವರಿನ ವಾತಾವರಣವೇ ಯಶೋಧರಾ ಅವರನ್ನು ಅತ್ತ ಸೆಳೆದಿತ್ತು. ಸಮಾಜಸೇವೆಗೆ ಅವರ ಸ್ಫೂರ್ತಿಯ ಮತ್ತೊಂದು ಮೂಲ ಬೆಂಗಳೂರಿನ ಲಂಡನ್ ಮಿಷನ್ ಹೈಸ್ಕೂಲಿನಲ್ಲಿ ಅವರು ಕಲಿಯುತ್ತಿದ್ದಾಗ ಅದರ ಪ್ರಿನ್ಸಿಪಾಲ್ ಆಗಿದ್ದ ಮಿಸ್ ಎಂ. ಎಲ್. ಬಟ್ಲರ್. ಯಶೋಧರಾರ ವಿವಾಹವಾದದ್ದು ಖ್ಯಾತ ರಾಜಕಾರಣಿ ಹಾಗೂ ವಿಧಾಯಕ ಕಾರ್ಯಕರ್ತ ಎಚ್. ಸಿ. ದಾಸಪ್ಪನವರೊಂದಿಗೆ. ಮದುವೆಯಾದ ಮೇಲೆ ಸಮಾಜ ಸೇವಾಕಾರ್ಯವನ್ನು ಮುಂದುವರಿಸಲು ಪತಿ ಸ್ವಾತಂತ್ರ್ಯ ನೀಡಿದರು.

1905 ಮೇ 28ರಂದು ಜನಿಸಿದ ಯಶೋಧರಾರವರು ಬೆಂಗಳೂರಿನಲ್ಲಿ ಪ್ರೌಢಶಾಲೆ ಶಿಕ್ಷಣದ ಅನಂತರ ಮದರಾಸಿನಲ್ಲಿ ಕಾಲೇಜ್ ಶಿಕ್ಷಣ ಪಡೆದರು.

ಆಗ ಮುಖ್ಯವಾಗಿ ಹಿಂದೀ ಪ್ರಚಾರ ಕಾರ್ಯವನ್ನು ಕೈಗೊಂಡಿದ್ದ ಅವರಿಗೆ ಆ ಸಂಬಂಧದಲ್ಲಿಯೇ ಮದರಾಸಿನಲ್ಲಿ ಮಹಾತ್ಮ ಗಾಂಧಿಯವರ ಭೇಟಿಯಾಯಿತು.

"ಗಾಂಧೀಜೀ ಒಬ್ಬ ಅವತಾರ ಪುರುಷ" ಎಂಬ ಅಚಲ ವಿಶ್ವಾಸವನ್ನು ಅವರು ಸತ್ತ ಕಾಲುಶತಮಾನದ ಅನಂತರವೂ ಯಶೋಧರಾ ದಾಸಪ್ಪ ಹೊಂದಿದ್ದಾರೆ. ಅವರ ಜೀವನ ದುದ್ದಕ್ಕೂ ಗಾಂಧೀತತ್ತ್ವಗಳೇ ದೀವಟಿಗೆ.

1938 ಶಿವಪುರ ಕಾಂಗ್ರೆಸ್ ಸತ್ಯಾಗ್ರಹದಲ್ಲಿ ಭಾಗವಹಿಸಿ ಯಶೋಧರಾ ದಾಸಪ್ಪನವರು ರಾಜಕೀಯ ಚಟುವಟಿಕೆ ಆರಂಭಿಸಿದರು. 1962ರಲ್ಲಿ ಮಂತ್ರಿಯಾಗಿ ಮುಂದೆ ರಾಜಿನಾಮೆ ನೀಡಿದ ಮೇಲೆ ಅವರ ಸಮಯ [illegible] ಸಮಾಜ ಸೇವೆಗೆ ರಚನಾತ್ಮಕ ಕಾರ್ಯಕ್ಕೆ ಮೀಸಲಾಯಿತು.

ಶಾಸಕರಾಗಿ, ಸಚಿವರಾಗಿ ಸೇವೆ ಸಲ್ಲಿಸುವುದರ ಜೊತೆಗೆ [illegible]ರಲ್ಲಿ ಯಶೋಧರಾ ದಾಸಪ್ಪನವರು ಅಖಿಲ ಮೈಸೂರು ಕಾಂಗ್ರೆಸ್ ಅಧ್ಯಕ್ಷರೂ ಆಗಿದ್ದರು.

ಅವರ ಆಸಕ್ತಿಯಿಂದ ಸ್ಥಾಪನೆಗೊಂಡು ಬೆಳೆದ ಸಂಘ ಸಂಸ್ಥೆಗಳು ಹಲವಾರು. ಗಾಂಧೀಸ್ಮಾರಕ ನಿಧಿ, ಕಸ್ತೂರ ಬಾ ಟ್ರಸ್ಟ್, ಗ್ರಾಮಿಕಾ ಮಹಿಳಾ ಸಂಘ. ಹರಿಜನ ಸೇವಕ ಸಂಘ ಅವರ ಪ್ರಮುಖ ಸೇವಾ ಸಾಧನಗಳು.

"ಇಂದಲ್ಲ, ನಾಳೆ ಗಾಂಧೀಜಿಯ ತತ್ವಕ್ಕೆ ಶರಣಾಗಬೇಕಾಗುತ್ತದೆ" ಎನ್ನುತ್ತಾರೆ. ಭಗವಂತನ ಅನಂತರ ಗಾಂಧೀಜಿಗೆ ಮಾತ್ರ ಅವರ ನಿಷ್ಠೆ.

ನೋಡಿ : ಎಚ್. ಸಿ. ದಾಸಪ್ಪ

ಯಶೋಧರಾ

ಒಬ್ಬ ಮಹಿಳೆ ಮತ್ತು ಮಗುವಿನಿಂದ ಬುದ್ಧ ಭಿಕ್ಷೆ ತೆಗೆದುಕೊಳ್ಳುತ್ತಿರುವುದರ ನಿರೂಪಣೆ ಒಂದು ಅಜಂತಾ ಭಿತ್ತಿಚಿತ್ರದಲ್ಲಿದೆ. ಆ ಮಹಿಳೆ. ಬುದ್ಧನ ಪತ್ನಿ ಯಶೋಧರಾ.

ಯಶೋಧರಾ ದಂಡಪಾಣಿಯ ಮಗಳು. ಲಾವಣ್ಯಮಯಿ. ರಾಜ ಶುದ್ಧೋದನನ ಮಗ ಸಿದ್ಧಾರ್ಥನೊಡನೆ ಆಕೆಯ ವಿವಾಹವಾಯಿತು. ರಾಹುಲ ಅವರ ಮಗ. ಜೀವನದ ಸತ್ಯವನ್ನರಿಯಲು ಸಿದ್ಧಾರ್ಥ ಪತ್ನಿಯನ್ನು ತೊರೆದು ಹೊರಟುಹೋಗುತ್ತಾನೆ.

ಸತ್ಯದರ್ಶನವಾದ ಬಳಿಕ ಸಿದ್ಧಾರ್ಥ ಬುದ್ಧನಾದ. ತಾನು ಕಂಡ ಸತ್ಯವನ್ನು ಹರಡಲು ಸಂಚಾರ ಕೈಗೊಂಡ. ಬುದ್ಧ ಕಪಿಲವಸ್ತುವಿಗೆ ಬಂದಾಗ, ಯಶೋಧರಾ ಬೌದ್ಧಧರ್ಮ ಸ್ವೀಕರಿಸಿದಳು.

ನೋಡಿ : ಸಿದ್ಧಾರ್ಥ

ಯಶೋವರ್ಮ

ಕನ್ನೌಜ್‌ನ ದೊರೆ ಯಶೋವರ್ಮ ಖ್ಯಾತನಾಗಿದ್ದುದು ಅಸಾಮಾನ್ಯ ಯುದ್ಧ ಕೌಶಲಕ್ಕೆ. ಅವನ ಕಾಲ 8ನೆಯ ಶತಮಾನದ ಮೊದಲ ಭಾಗ.

ಚಂದ್ರವಂಶಸ್ಥನೆಂದು ಹೇಳಿಕೊಂಡ ಯಶೋವರ್ಮ ಚಕ್ರಾಧಿಪತ್ಯವನ್ನೇ ಸ್ಥಾಪಿಸಿದ. ಗೌಡದೇಶದ ಮೇಲೆ ಯುದ್ಧ ಹೂಡಿ ಅಲ್ಲಿಯ ಅರಸನನ್ನು ಕೊಂದ. ಮಗಧವನ್ನು ಗೆದ್ದ. ಪೂರ್ವ ಮತ್ತು ಮಧ್ಯ ಬಂಗಾಳದ ವಂಗರನ್ನು ಸೋಲಿಸಿ ರಾಜ್ಯವನ್ನು ವಿಸ್ತರಿಸಿದ.

ಕಾಶ್ಮೀರದ ಅರಸ ಲಲಿತಾದಿತ್ಯನೊಡನೆ ಯಶೋವರ್ಮ ನಡೆಸಿದ ಯುದ್ಧವೇ ಕೊನೆಯದು. ಅದರಲ್ಲಿ ಆತ ಮೃತನಾದ.

ಯಶೋವರ್ಮ ಕವಿಗಳ ಆಶ್ರಯದಾತನಾಗಿದ್ದ. ಹೆಸರಾಂತ ಸಂಸ್ಕೃತ ನಾಟಕಕಾರ ಭವಭೂತಿ ಇದ್ದುದು ಈತನ ಆಸ್ಥಾನದಲ್ಲಿ. ಯಶೋವರ್ಮನ ಗೌಡದೇಶ ವಿಜಯವನ್ನು ಕುರಿತು ವಾಕ್ಪತಿ ರಾಜ ಎಂಬ ಆಸ್ಥಾನ ಕವಿ ಪ್ರಾಕೃತದಲ್ಲಿ 'ಗೌಡವಾಹೊ' ಎಂಬ ಕಾವ್ಯ ಬರೆದಿದ್ದಾನೆ.

ಯಾಗ

'ಸ್ವರ್ಗಕಾಮೋ ಯಜೇತಾ— ಸ್ವರ್ಗವನ್ನು ಬಯಸುವವನು ಯಜ್ಞ ಮಾಡಬೇಕು – ಎಂಬ ಅರ್ಥವುಳ್ಳ ಮಾತು ವೇದದಲ್ಲಿದೆ. ದೇವತೆಗಳೂ ಯಾಗಮಾಡಿದ ಉಲ್ಲೇಖಗಳಿವೆ.

ಮಹಾ ಪ್ರಳಯವಾದ ತರುವಾಯ ವೈವಸ್ವತ ಮನು ಯಾಗ ಮಾಡಿದ; ಮಾನವ ಮಾಡಿದ ಪ್ರಥಮ ಯಾಗ ಇದು —ಎಂದು ನಂಬಿಕೆ.

ಯಾಗದಲ್ಲಿ ಅರ್ಪಿಸುವ ಹವಿಸ್ಸನ್ನು ಸೇವಿಸಿ ದೇವತೆಗಳು ಶಕ್ತಿಯುತರಾಗುತ್ತಾರೆ. ಮನುಷ್ಯನನ್ನು ಅನುಗ್ರಹಿಸುತ್ತಾರೆ —ಎಂಬ ಭಾವನೆಯಿದೆ. ಯಾಗ ವೈದಿಕ ಜೀವನದ ಅವಿಭಾಜ್ಯ ಅಂಗ. ಯಾಗಗಳ ಸಂಖ್ಯೆ ಅನೇಕ. ವಿವಿಧ ಸಂದರ್ಭ, ಆಕಾಂಕ್ಷೆಗಳಿಗೆ ಸಂಬಂಧಿಸಿದಂತೆ ಬೇರೆ ಬೇರೆ ಯಾಗಗಳಿವೆ.

ರಾಜರು ತಮ್ಮ ರಾಜ್ಯವನ್ನು ವಿಸ್ತರಿಸಲು, ಪ್ರಭಾವ ಹೆಚ್ಚಿಸಿಕೊಳ್ಳಲು ಯಾಗ ಕೈಗೊಳ್ಳುತ್ತಿದ್ದರು. ಪಾಪ ಪರಿಹಾರಾರ್ಥವಾಗಿ, ಶತ್ರುವನ್ನು ನಾಶಪಡಿಸುವುದಕ್ಕಾಗಿ, ತಮ್ಮ ಅಧಿಕಾರವನ್ನು ಸ್ಥಿರಗೊಳಿಸುವುದಕ್ಕಾಗಿ ಹೀಗೆ ಅನೇಕ ಉದ್ದೇಶಗಳಿಗೆ ಯಜ್ಞ ಮಾಡಿದ್ದುಂಟು.

ಯಾಗಗಳಲ್ಲಿ ಒಂದೇ ದಿನದಲ್ಲಿ ಮಾಡಿ ಮುಗಿಸುವಂಥವು ಕೆಲವು. ತಿಂಗಳುಗಟ್ಟಲೆ ನಡೆಯುವಂಥವು ಕೆಲವು. ಕೆಲವನ್ನು ಯಾರು ಬೇಕಾದರೂ ನಡೆಸಬಹುದು ; ಕೆಲವನ್ನು ರಾಜರು, ಚಕ್ರವರ್ತಿಗಳು —ಹೀಗೆ ನಿರ್ದಿಷ್ಟ ವ್ಯಕ್ತಿಗಳೇ ಮಾಡಬೇಕು ; ರಾಜಸೂಯ, ಅಶ್ವಮೇಧ ಇಂಥ ಯಜ್ಞಗಳು.

ಯಾಜ್ಞವಲ್ಕ್ಯ

ತನ್ನ ಅಪಾರ ಜ್ಞಾನದಿಂದ ಗುರು ಉದ್ದಾಲಕರನ್ನೂ, ಗಾರ್ಗಿ, ಶಾಲಕರನ್ನೂ ಗೆದ್ದವನು ಯಾಜ್ಞವಲ್ಕ್ಯ.

ಬ್ರಹ್ಮರ್ಷಿ ಯಾಜ್ಞವಲ್ಕ್ಯ ಬ್ರಹ್ಮರಾತ ಮಹರ್ಷಿಯ ಪುತ್ರ. ವೈಶಂಪಾಯನನ ಬಳಿ ವೇದಗಳನ್ನು ಕಲಿಯುತ್ತಿದ್ದ. ಒಮ್ಮೆ ಗುರು–ಶಿಷ್ಯರಿಗೆ ಮನಸ್ತಾಪ ಉಂಟಾದಾಗ, ತಾನು ಕಲಿಸಿದುದನ್ನೆಲ್ಲ ಹಿಂದಿರುಗಿಸಬೇಕೆಂದು ವೈಶಂಪಾಯನ ಕೇಳಿದ. ಯಾಜ್ಞವಲ್ಕ್ಯ ಎಲ್ಲವನ್ನೂ ವಮನ ಮಾಡಿದ. ಯಾಜ್ಞವಲ್ಕ್ಯ ತಪಸ್ಸುಮಾಡಿ. ಸೂರ್ಯನಿಂದಲೇ ಮತ್ತೆ ಯಜುರ್ವೇದವನ್ನು ಕಲಿತ. ಇದೇ ಶುಕ್ಲಯಜುರ್ವೇದ —ಎಂದು ನಂಬಿಕೆ.

ಬಹುದಕ್ಷಿಣ ಎಂಬ ಯಜ್ಞಮಾಡಿದ ಜನಕರಾಜ 1,000 ಗೋವುಗಳಿಗೆ ಚಿನ್ನದ ಕೊಂಬು ತೊಡಿಸಿ, 10 ಚಿನ್ನದ ನಾಣ್ಯ ಕಟ್ಟಿಸಿ, "ಬ್ರಹ್ಮಿಷ್ಠನಾದವನು ಈ ಗೋವುಗಳನ್ನು ಕರೆದೊಯ್ಯಬಹುದು,"– ಎಂದ. ಯಾಜ್ಞವಲ್ಕ್ಯನ ಸಂಜ್ಞೆಯಂತೆ ಅವನ ಶಿಷ್ಯ ಅವನ್ನು ಕರೆದುಕೊಂಡು ಹೊರಟಾಗ, ಇತರ ಮುನಿಗಳು ಯಾಜ್ಞವಲ್ಕ್ಯನೊಡನೆ ವಾದಕ್ಕೆ ನಿಂತು ಸೋತರು. ಬ್ರಹ್ಮಜ್ಞಾನದ ಬಗೆಗೆ ಗಾರ್ಗಿ ಕೇಳಿದ ಪ್ರಶ್ನೆಗಳಿಗೂ ಯಾಜ್ಞವಲ್ಕ್ಯ ಉತ್ತರಿಸಿದ.

ತನ್ನ ಪತ್ನಿ ಮೈತ್ರೇಯಿಗೆ ಮೋಕ್ಷ ಸಾಧಕವಾದ ಉತ್ತಮ ವಿದ್ಯೆಯನ್ನು ಯಾಜ್ಞವಲ್ಕ್ಯ ಉಪದೇಶಿಸಿದ.

ನೋಡಿ : ಗಾರ್ಗಿ : ತೈತ್ತಿರೀಯೋಪನಿಷತ್

ಯು. ಎನ್. ಢೇಬರ್

ಯು. ಎನ್. ಢೇಬರ್ ದೇಶಭಕ್ತ, ಗಾಂಧೀ ಭಕ್ತ.

ಉಚ್ಚರಂಗರಾಯ್ ನವಲ್ ಶಂಕರ್ ಢೇಬರ್ ಗುಜರಾತಿನ ಜಾಮನಗರ ಜಿಲ್ಲೆಯಲ್ಲಿ 1905 ಸೆಪ್ಟೆಂಬರ್ 21ರಂದು ಜನಿಸಿದರು. ರಾಜಕೋಟೆ ಮತ್ತು ಮುಂಬಯಿಯಲ್ಲಿ ಇವರ ವಿದ್ಯಾಭ್ಯಾಸ. 1936ರಲ್ಲಿ ವಕೀಲವೃತ್ತಿ ಕೈಗೊಂಡ ಸ್ವಲ್ಪ ಸಮಯದಲ್ಲೇ ಢೇಬರ್ ಪೂರ್ಣಾವಧಿ



ಗಾಂಧೀ ನಿಷ್ಠ :
ಢೇಬರ್

ಕಾಂಗ್ರೆಸ್ ಕಾರ್ಯಕರ್ತರಾದರು. ಕಾಠೇವಾಡ ರಾಜಕೀಯ ಸಮ್ಮೇಳನದ ಕಾರ್ಯದರ್ಶಿಯಾಗಿ (1937–48), ಗುಜರಾತ್ ಪ್ರದೇಶ ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿಯಾಗಿ (1945–47), ಕೆಲಸ ಮಾಡಿದರು. ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ್ದಕ್ಕಾಗಿ ಇವರಿಗೆ ಹಲವು ಬಾರಿ ಸೆರೆಮನೆವಾಸ ಲಭಿಸಿತು.

1948ರಿಂದ 1954ರ ವರೆಗೆ ಇವರು ಸೌರಾಷ್ಟ್ರದ ಮುಖ್ಯಮಂತ್ರಿಯಾಗಿದ್ದರು. ಮುಂದೆ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸದಸ್ಯರಾಗಿ, ಅದರ ಅಧ್ಯಕ್ಷರಾಗಿ (1955–1959) ಢೇಬರ್ ದುಡಿದರು. ಢೇಬರ್ ಪರಿಶಿಷ್ಟ ವರ್ಗಗಳ ಆಯೋಗದಲ್ಲಿ ಹಲವು ವರ್ಷ ಕೆಲಸ ಮಾಡಿದರು. 1963–73ರ ಅವಧಿಯಲ್ಲಿ ಖಾದಿ ಮತ್ತು ಗ್ರಾಮೋದ್ಯೋಗ ಆಯೋಗದ ಅಧ್ಯಕ್ಷರಾಗಿದ್ದರು.

ಭಾರತ ಸರಕಾರ ಢೇಬರರಿಗೆ ಪದ್ಮಭೂಷಣ ಪ್ರಶಸ್ತಿ ನೀಡಿದೆ.

ಯುಗಾದಿ

ನೂತನ ವರ್ಷದ ಮೊದಲ ದಿನ ಯುಗಾದಿ ಹಬ್ಬ. ವಿಶೇಷವಾಗಿ ದಕ್ಷಿಣ ಭಾರತದ ಹಬ್ಬ ಇದು.

ಯುಗ ಎಂದರೆ ವರ್ಷ. ಆದಿ ಎಂದರೆ ಪ್ರಾರಂಭ. ಹೊಸ ಚಿಗುರನ್ನು ಹೊತ್ತು ಮರಗಳು ಶೋಭಿಸುತ್ತವೆ. ಕೋಗಿಲೆ ಇಂಪಾದ ದನಿಯಲ್ಲಿ ಹಾಡುತ್ತದೆ. ಜನ ಎಣ್ಣೆ ನೀರು ಹಾಕಿಕೊಂಡು, ಹೊಸಬಟ್ಟೆ ಉಟ್ಟು ಉತ್ಸಾಹ, ಸಂಭ್ರಮಗಳಿಂದ ನೂತನ ವರ್ಷವನ್ನು ಇದಿರುಗೊಳ್ಳುತ್ತಾರೆ.

ಕರ್ನಾಟಕ, ಆಂಧ್ರ ಪ್ರದೇಶಗಳಲ್ಲಿ ಚಾಂದ್ರಮಾನದಂತೆ ಸಂವತ್ಸರದ ಲೆಕ್ಕಾಚಾರ. ಫಾಲ್ಗುಣ ಮಾಸದ ಅಮಾವಾಸ್ಯೆಯ ಮರುದಿನ ಚೈತ್ರ ಮಾಸದ ಪಾಡ್ಯದ ದಿವಸ ಯುಗಾದಿ ಹಬ್ಬ. ತಮಿಳುನಾಡಿನಲ್ಲಿ ಸೌರಮಾನ ಲೆಕ್ಕದಲ್ಲಿ ಇವರ ಆಚರಣೆ. ಆ ದಿನ ಬಾಗಿಲಿಗೆ ಮಾವಿನ ಎಲೆಯ ತೋರಣ, ಬೇವಿನ ಚಿಗುರುಗಳ ಅಲಂಕಾರ ಮಾಡುತ್ತಾರೆ; ದೇವರ ಪೂಜೆಯಾದ ಅನಂತರ ಬೇವುಬೆಲ್ಲ ತೆಗೆದು ಕೊಳ್ಳುತ್ತಾರೆ. ಜೀವನದಲ್ಲಿ ಬರುವ ಕಷ್ಟ–ಸುಖಗಳೆರಡನ್ನೂ ಸಮಾನ ರೀತಿಯಲ್ಲಿ ಅನುಭವಿಸಬೇಕೆಂಬ ತತ್ತ್ವವನ್ನು ಈ ಸಂಪ್ರದಾಯ ಸಾರುತ್ತದೆ.

ಸಾಯಂಕಾಲ ಪಂಚಾಂಗ ಶ್ರವಣ. ಪುರೋಹಿತರು ಅಥವಾ ಮನೆಯ ಹಿರಿಯರೊಬ್ಬರು ಪಂಚಾಂಗವನ್ನು ಓದುತ್ತಾರೆ.

ಮಹಾರಾಷ್ಟ್ರ, ಗುಜರಾತ್‌ಗಳಲ್ಲಿ ಮನೆಯ ಮೇಲೆ 'ಗುಡಿ' (ಬಾವುಟ) ಹಾರಿಸುತ್ತಾರೆ. ಕೆಲವು ಕಡೆ ಎತ್ತಿನ ಬಂಡಿ ಪಂದ್ಯ, ಕೋಣಗಳ ಬಂಡಿಗಳ ಪಂದ್ಯ ನಡೆಸುವುದೂ ಉಂಟು.

ಪುರಾಣಗಳ ಪ್ರಕಾರ, ಹಿಂದೆ ವೈಶಾಖಮಾಸ, ಅಶ್ವಯುಜಮಾಸ, ಹೇಮಂತ ಋತು ಮುಂತಾದ ಕಾಲಗಳಲ್ಲಿ ಯುಗಾದಿಯನ್ನು ಆಚರಿಸುತ್ತಿದ್ದಂತೆ ತೋರುತ್ತದೆ.

ಯುಗಾದಿಯ ದಿನ ನೆಂಟರು ಮಿತ್ರರಿಗೆ ಅಂಚೆಯ ಮೂಲಕ ಶುಭಾಶಯ ತಿಳಿಸುವ, ಹತ್ತಿರವಿದ್ದರೆ ಮನೆಗೆ ಹೋಗಿ ಶುಭಕೋರುವ ಪದ್ಧತಿಯೂ ಇದೆ.

ಯುಸಿಬಿಯಸ್ ಪಂಫಿಲಿ

ಭಾರತಕ್ಕೆ ಹೋದ ಮತ ಪ್ರವರ್ತಕರಿಂದ ಪೂರ್ವದೇಶಗಳಲ್ಲಿ ಕ್ರೈಸ್ತ ಧರ್ಮ ತತ್ತ್ವಗಳ ಪ್ರಸಾರಕ್ಕೆ ಅನುಕೂಲ ಆಯಿತು —ಎಂದು 'ಕ್ರೈಸ್ತ ಧರ್ಮ ಚರಿತ್ರೆಯ [illegible] ಉಲ್ಲೇಖಿಸಿದ್ದಾನೆ.

[illegible] (ಕ್ರಿ.ಶ. 260ರಿಂದ 340ರ [illegible]) ಧರ್ಮ ಗುರು ಮತ್ತು [illegible]

ರೋಮ್ ದೊರೆ ಕಾನ್‌ಸ್ಟಂಟೈನ್‌ಗೆ ಇಂಡಿಯಾದಿಂದ ಬಂದ ರಾಯಭಾರಿಗಳು ಕಾಣಿಕೆ ಸಲ್ಲಿಸಿದುದನ್ನು [illegible] ಪ್ರಸ್ತಾಪಿಸಿದ್ದಾನೆ. ಇಂಡಿಯಾ ದೇಶದ ಸಮಸ್ತ ಪ್ರಭುಗಳಿಗೆ ಅವನ ಚಕ್ರಾಧಿಪತ್ಯ [illegible] ಗೌರವಕ್ಕೆ ಸಂಕೇತವಾಗಿ ಆ ಕಾಣಿಕೆಗಳು ಎಂದು ರಾಯಭಾರಿಗಳು ತಿಳಿಸಿದರು–ಎಂದಿದ್ದಾನೆ.

ಯೂಸುಫ್ ಮೆಹರಲ್ಲೀ

ಪ್ರಸಿದ್ಧ ಸಮಾಜವಾದೀ ನಾಯಕರು, ಮುಂಬಯಿ ಕಾರ್ಪೊರೇಷನ್ ಮೇಯರ್, ನುರಿತ ಲೇಖಕರು, ಕುಶಲ ಸಂಪಾದಕರು, ರಾಷ್ಟ್ರಸೇವಕರು ಮತ್ತು ಜನಪ್ರಿಯ ಭಾಷಣಕಾರರು ಎಂದೆನಿಸಿದವರು ಯೂಸುಫ್ ಮೆಹರಲ್ಲೀ.

ಮೆಹರಲ್ಲೀ 1906 ಸೆಪ್ಟೆಂಬರ್ 23ರಂದು ಜನಿಸಿದರು, ನ್ಯಾಯ ಶಾಸ್ತ್ರದಲ್ಲಿ ಪದವೀಧರರಾದರು.

ಇವರು 1928ರಲ್ಲಿ ಯೂತ್ ಲೀಗ್ ಮತ್ತು 1930ರಲ್ಲಿ ಇಂಡಿಯನ್ ನ್ಯಾಷನಲ್ ಮಿಲಿಷಿಯಾ ಸಂಸ್ಥೆಗಳಲ್ಲಿ ಪ್ರಶಂಸನೀಯ ಕೆಲಸ ಮಾಡಿದರು. 1934ರಲ್ಲಿ ಭಾರತೀಯ ಸಮಾಜವಾದೀ ಪಕ್ಷದ ಸ್ಥಾಪನೆಯಲ್ಲಿ ಭಾಗವಹಿಸಿ, ದೇಶದ ರಾಜನೀತಿಯಲ್ಲಿ ಹೊಸ ಅಧ್ಯಾಯ ತೆರೆಯಲು ದುಡಿದರು.

1938ರಲ್ಲಿ ನ್ಯೂಯಾರ್ಕಿನಲ್ಲಿ ನಡೆದ ವಿಶ್ವ ತರುಣ ಸಂಘದ ಸಮ್ಮೇಳನದಲ್ಲಿ ಭಾರತೀಯ ಪ್ರತಿನಿಧಿಯಾಗಿ ಭಾಗವಹಿಸಿದರು. ಅಮೆರಿಕ, ಮೆಕ್ಸಿಕೋಗಳಲ್ಲಿ ವ್ಯಾಪಕ ಪ್ರವಾಸ ಕೈಗೊಂಡರು.

1941ರಲ್ಲಿ ಮುಂಬಯಿ ನಗರದ ಮೇಯರ್ ಆಗಿ ಚುನಾಯಿತರಾದರು. ಅದೇ ವರ್ಷ ಅಖಿಲ ಭಾರತೀಯ ವಿದ್ಯಾರ್ಥಿ ಸಮ್ಮೇಳನದ ಅಧ್ಯಕ್ಷರಾದರು. ಮುಂಬಯಿಯ 'ವಾನ್‌ಗಾರ್ಡ್' ಪತ್ರಿಕೆಯ ಸಂಪಾದಕರೂ ಆಗಿದ್ದರು.

ಸ್ವಾತಂತ್ರ್ಯ ಚಳುವಳಿಯಲ್ಲಿ ಅನೇಕ ಬಾರಿ ಸೆರೆಮನೆವಾಸ ಅನುಭವಿಸಿದರು. ಕೊನೆಯ ತನಕ ದೇಶಸೇವೆಯಲ್ಲಿ ನಿರತರಾಗಿದ್ದರು. ಮುಂಬಯಿ ರಾಜ್ಯದ ಶಾಸನ ಸಭೆಯ ಸದಸ್ಯರಾಗಿ ಖ್ಯಾತಿಪಡೆದರು.

'ಲೀಡರ್ ಆಫ್ ಇಂಡಿಯಾ', 'ಎ ಟ್ರಿಪ್ ಟು ಪಾಕಿಸ್ತಾನ್' ಅವರ ಹೆಸರಾಂತ ಪುಸ್ತಕಗಳು.

1950ರಲ್ಲಿ ಮೆಹರಲ್ಲೀ ನಿಧನ ಹೊಂದಿದರು.

ಯೆಲವರ್ತಿ ನಾಯುಡಮ್ಮ

ಭಾರತದ ಪ್ರಮುಖ ಸಂಸ್ಥೆಗಳಲ್ಲಿ ಒಂದಾದ ವೈಜ್ಞಾನಿಕ ಮತ್ತು ಔದ್ಯೋಗಿಕ ಸಂಶೋಧನಾ ಮಂಡಳಿಯ ಮಹಾ ನಿರ್ದೇಶಕರು (ಡೈರೆಕ್ಟರ್ ಜನರಲ್), ಡಾ. ವೈ. ನಾಯುಡಮ್ಮ.

1922 ಸೆಪ್ಟೆಂಬರ್ 10ರಂದು ಆಂಧ್ರ ಪ್ರದೇಶದ ಇಪುರ್ಲಂಕಾದಲ್ಲಿ ಜನನ. ತಂದೆಯ ಹೆಸರು ಆಂಜಯ್ಯ. ಬನಾರಸ್ ವಿಶ್ವವಿದ್ಯಾನಿಲಯದಲ್ಲಿ ಬಿ.ಎಸ್‌ಸಿ. ಪದವೀಧರರಾದರು. ಅನಂತರ ಅಮೆರಿಕ ಸಂಯುಕ್ತ ಸಂಸ್ಥಾನದ ಲೀಹೈ ವಿಶ್ವವಿದ್ಯಾನಿಲಯದಲ್ಲಿ [illegible] ಪಡೆದರು.



ವಿಜ್ಞಾನ, ಆಡಳಿತ : ನಾಯುಡಮ್ಮ

ಇಂಗ್ಲೆಂಡಿನ ನಾರ್ಥಾಂಪ್ಟನ್‌ದಲ್ಲಿರುವ ತೊಗಲು ತಾಂತ್ರಿಕ ಪ್ರೌಢ ಶಾಲೆಯೊಡನೆ ಅವರಿಗೆ ವಿಶೇಷ ಸಂಪರ್ಕವಿತ್ತು. ವೈಜ್ಞಾನಿಕ ಮತ್ತು ಔದ್ಯೋಗಿಕ ಸಂಶೋಧನಾ ಮಂಡಲಿಯ ಆಶ್ರಯದಲ್ಲಿರುವ ಮದರಾಸಿನ ಕೇಂದ್ರ ತೊಗಲು ಸಂಶೋಧನಾಲಯದಲ್ಲಿ 1952ರಿಂದ ಕೆಲಸ ಮಾಡಿದರು; ಅನಂತರ 1971ರ ವರೆಗೆ ಅದರ ನಿರ್ದೇಶಕ (ಡೈರೆಕ್ಟರ್) ರಾಗಿದ್ದರು. ಹಲವು ಪ್ರಯೋಗಾಲಯಗಳ ಯೋಜನೆ, ರೂಪಣ ಹಾಗೂ ಸ್ಥಾಪನೆಗಳಲ್ಲಿ ದುಡಿದವರು ನಾಯುಡಮ್ಮ. ಮಾದರಿ ತೊಗಲು ಸಂಸ್ಕರಣಾ ವಿಭಾಗಗಳನ್ನು ರೂಪಿಸುವುದರಲ್ಲಿಯೂ ಅವರು ತೊಡಗಿದ್ದರು.

ಭಾರತೀಯ ಮಾನಕ ಸಂಸ್ಥೆ, ರಸಾಯನ ವಿಜ್ಞಾನಿಗಳ ಸಂಸ್ಥೆ, ಇಂಡಿಯನ್ ಅಕಾಡೆಮಿ ಆಫ್ ಸೈನ್ಸಸ್, ಅಮೆರಿಕದ ತೊಗಲು ರಸಾಯನ ವಿಜ್ಞಾನಿಗಳ ಸಂಘ, ಅಮೆರಿಕದ ರಸಾಯನ ವಿಜ್ಞಾನಿಗಳ ಸಂಘ, ತೊಗಲು ರಾಸಾಯನಿಕ ತಜ್ಞರ ಅಂತರರಾಷ್ಟ್ರೀಯ ಒಕ್ಕೂಟ ಈ ಎಲ್ಲ ಸಂಸ್ಥೆಗಳ ಸದಸ್ಯರಾಗಿದ್ದಾರೆ, ನಾಯುಡಮ್ಮ. ವಿಶ್ವಸಂಸ್ಥೆಯ ಅಂಗಸಂಸ್ಥೆ ಎಫ್.ಎ. ಓ. (ಆಹಾರ ಮತ್ತು ಕೃಷಿ ಸಂಸ್ಥೆ)ಗೆ ಇವರು ಸಲಹೆಗಾರರು.

ಬರೋಡಾ ವಿಶ್ವವಿದ್ಯಾನಿಲಯವು 1965ರ ಕೆ. ಜಿ. ನಾಯರ್ ಪದಕವನ್ನು ಇವರಿಗೆ ನೀಡಿ ಗೌರವಿಸಿದೆ. ಆವಿಷ್ಕಾರ ಅಭಿವೃದ್ಧಿ ಮಂಡಲಿಯ ಪ್ರಶಸ್ತಿಯೂ ಇವರಿಗೆ ಲಭಿಸಿದೆ.

ತಾಂತ್ರಿಕತೆಯು ನಮ್ಮ ದೇಶದ ಅಭಿವೃದ್ಧಿಗೆ ನೆರವಾಗಬೇಕು, ಪ್ರಾದೇಶಿಕ ಭಿನ್ನತೆಗಳು ಮಾಯವಾಗಬೇಕು ಎಂಬುದು ಅವರ ಮತ.

ಯೋಗದರ್ಶನ

"ಯೋಗಃ ಚಿತ್ತವೃತ್ತಿ ನಿರೋಧಃ" –ಎಲ್ಲ ವಿಧದ ಮಾನಸಿಕ ಕ್ರಿಯೆಗಳನ್ನು ನಿಲ್ಲಿಸುವುದೇ ಯೋಗ.

ಹೀಗೆಂದು ಪತಂಜಲಿ 'ಯೋಗಸೂತ್ರ'ದಲ್ಲಿ ಹೇಳಿದ್ದಾನೆ. ಪ್ರಾಪಂಚಿಕ ವ್ಯವಹಾರಗಳಿಗೆ ಒಳಗಾದ ಮನಸ್ಸನ್ನು ಅತ್ಯಂತ ಕಠಿಣ ವಿಧಾನದಿಂದಲಾದರೂ ಬೇರ್ಪಡಿಸಿ, ಪರಿಶುದ್ಧ ಜ್ಞಾನ ಪಡೆಯುವುದೇ ಯೋಗ ದರ್ಶನದ ಗುರಿ.

ಯೋಗ ದರ್ಶನ ಭಾರತದ ಆರು ಆಸ್ತಿಕ ದರ್ಶನಗಳಲ್ಲಿ ಒಂದು.

ಯೋಗ ಶಬ್ದ ಯುಜ್ ಎಂಬ ಧಾತುವಿನಿಂದ ಹುಟ್ಟಿದ್ದು. ಯುಜ್ ಎಂದರೆ ಸೇರಿಸುವುದು. ಜೀವಾತ್ಮವನ್ನು ಪರಮಾತ್ಮನೊಂದಿಗೆ ಸೇರಿಸುವ ಮಾರ್ಗದ ಬೋಧನೆಯೇ ಯೋಗದರ್ಶನದ ಸಾರ.

ಯೋಗದ ಅಭ್ಯಾಸ ಸಿಂಧೂ ಕಣಿವೆ ನಾಗರಿಕತೆಯ ಕಾಲದಲ್ಲೇ ಇತ್ತೆಂದು ಕೆಲವರ ಅಭಿಪ್ರಾಯ.

ಯೋಗದರ್ಶನದ ಮೂಲಪುರುಷ ಯಾಜ್ಞವಲ್ಕ್ಯ. ಅದಕ್ಕೆ ರೂಪು ಕೊಟ್ಟು ಯೋಗಸೂತ್ರವನ್ನು ರಚಿಸಿದವನು ಪತಂಜಲಿ.

ಮನಸ್ಸನ್ನು ದೇಹದ ಮಿತಿಯಿಂದ ಬೇರ್ಪಡಿಸುವುದರಿಂದ ಅದನ್ನು ಎಲ್ಲ ರೀತಿಯ ಪ್ರಾಪಂಚಿಕ ಅಧೀನತೆಯಿಂದ ಬಿಡಿಸಿ ಶುದ್ಧಪಡಿಸಿದಂತಾಗುತ್ತದೆ. ಇದರಿಂದ ಮನಸ್ಸಿಗೆ ಇಂದ್ರಿಯಾತೀತವಾದ ಶಕ್ತಿ ಸಾಮರ್ಥ್ಯ ಲಭ್ಯವಾಗುತ್ತವೆ. ಇದನ್ನು ತಲಪುವುದೇ ಯೋಗದ ಗುರಿ.

ನೋಡಿ : ದರ್ಶನಗಳು ; ಪತಂಜಲಿ ; ಯಜ್ಞವಲ್ಕ್ಯ

ಯೋಜನಾ ಆಯೋಗ

ದೇಶದ ಎಲ್ಲ ಬಗೆಯ ಸಂಪನ್ಮೂಲಗಳನ್ನು ಸರಿಯಾಗಿ ಉಪಯೋ ದೇಶದ ಆರ್ಥಿಕ ಪ್ರಗತಿಯನ್ನೂ ಸಾಮಾಜಿಕ ಅಭಿವೃದ್ಧಿಯನ್ನೂ ಕ್ರಮ ವಾಗಿ ಸಾಧಿಸಲು ನೆರವಾಗುವುದು 'ಯೋಜನೆ'ಗಳ ಉದ್ದೇಶ. ಯೋಜನೆಗಳನ್ನು ರೂಪಿಸುವ ಕಾರ್ಯ ಯೋಜನಾ ಆಯೋಗದ್ದು.

1938ರಲ್ಲಿ ಭಾರತ ರಾಷ್ಟ್ರೀಯ ಕಾಂಗ್ರೆಸ್ ಯೋಜಿತ ಆ ಬೆಳವಣಿಗೆಯ ವಿವರಗಳನ್ನು ತಯಾರಿಸಲು ರಾಷ್ಟ್ರೀಯ ಯೋಜನಾ ಸ ಯನ್ನು ರಚಿಸಿತು. ಅದಕ್ಕೂ ಹಿಂದೆ, ಖ್ಯಾತ ಇಂಜಿನಿಯರ್–ರಾಜನೀ ಸರ್ ಎಂ. ವಿಶ್ವೇಶ್ವರಯ್ಯನವರು ತಮ್ಮ 'ಪ್ಲಾನ್ಡ್ ಇಕಾನಮಿ ಇಂಡಿಯಾ' ಎಂಬ ಪುಸ್ತಕದಲ್ಲಿ ಭಾರತದ ಅಭಿವೃದ್ಧಿಗೆ ಯೋ ಅವಶ್ಯ ಎಂದು ಪ್ರತಿಪಾದಿಸಿದರು. ಸ್ವಾತಂತ್ರ್ಯ ಬಂದಮೇಲೆ, 1950 ಭಾರತ ಸರಕಾರ ಯೋಜನಾ ಆಯೋಗವನ್ನು ರಚಿಸಿತು.

ಆಯೋಗದ ಅಧ್ಯಕ್ಷರು ಪ್ರಧಾನಮಂತ್ರಿ; ಕೇಂದ್ರದ ಅರ್ಥಸಚಿ ಒಬ್ಬ ಸದಸ್ಯ; ಇನ್ನು ಐವರು ಪೂರ್ಣಾವಧಿ ಸದಸ್ಯರು. ಇವ ಒಬ್ಬರು ಆಯೋಗದ ಉಪಾಧ್ಯಕ್ಷರು. ಉಳಿದ ನಾಲ್ಕು ಜನ ಪ್ರತಿಯೊಬ್ಬರೂ ನಿರ್ದಿಷ್ಟ ವಿಷಯಗಳ ಜವಾಬ್ದಾರಿ ವಹಿಸುತ್ತಾರೆ.

ಯೋಜನಾ ಆಯೋಗದ ಕಾರ್ಯಗಳಲ್ಲಿ ಮುಖ್ಯವಾಗಿ ಮಾನವ ಹಾ ವಸ್ತು ಸಂಪನ್ಮೂಲಗಳ ಪರಿಶೀಲನೆ; ಇವುಗಳ ಪರಿಣಾಮಕ ವಿನಿಯೋಗ; ಯೋಜನೆ ನಡೆಯಬೇಕಾದ ಹಂತಗಳು: ಪ್ರಾಶಸ್ತ್ಯ ನಿಧಾ ಕಾಲಕಾಲಕ್ಕೆ ಯೋಜನೆಯ ಪ್ರಗತಿ; ರಾಷ್ಟ್ರೀಯ ಅಭಿವೃದ್ಧಿಯ ಸಾರ್ವಜನಿಕ ಸಹಕಾರ; ಮುನ್ನೋಟ ಯೋಜನೆ ಸೇರಿವೆ.

ಯೋಜನಾ ಆಯೋಗಕ್ಕೆ ನೆರವು ನೀಡಲು ಸಲಹಾ ಸಮಿತಿಗಳಿವೆ.

ನೋಡಿ : ಡಿ. ಆರ್. ಗಾಡಗೀಳ ; ಪಂಚವಾರ್ಷಿಕ ಯೋಜನೆ

ರಂಗಾಚಾರ್ಲು

ಮೈಸೂರು ಅರಸು ಮನೆತನದಿಂದ ಕಸಿದುಕೊಂಡಿದ್ದ ಆಡಳಿತವ ಬ್ರಿಟಿಷರು 1881ರಲ್ಲಿ ಮತ್ತೆ ರಾಜರ ವಶಕ್ಕೆ ಒಪ್ಪಿಸಿದರು. ರಾಜ್ಯಾಧಿ ವಹಿಸಿಕೊಂಡವರು, ಹತ್ತನೆಯ ಚಾಮರಾಜ ಒಡೆಯರು. ಆಗ ದಿ ರಾಗಿ ನಿಯಮಿತರಾದವರು ಚೆಟ್ಟಿಪ್ಪಣ್ಯಂ ವೀರವಲ್ಲಿ ರಂಗಾಚಾ ಅದಕ್ಕೆ ಹದಿಮೂರು ವರ್ಷ ಮೊದಲೇ, ಅಂದರೆ 1868ರಲ್ಲಿ ಅವರು, ಮೈಸೂರು ಸಂಸ್ಥಾನದ ಸೇವೆಗೆ ಬಂದಿದ್ದರು.

ರಂಗಾಚಾರ್ಲು ಹುಟ್ಟಿದ್ದು ಮದರಾಸಿನಲ್ಲಿ, 1831ರಲ್ಲಿ. 1850ರಲ್ಲಿ ಮದರಾಸು ಸರಕಾರದ ಸೇವೆಗೆ ಸೇರಿದರು. ಮದರಾಸ್ ಪ್ರಾಂತದಲ್ಲಿ ಡೆಪ್ಯೂಟಿ ಕಲೆಕ್ಟರ್ ಆಗಿ ಸೇವೆ ಸಲ್ಲಿಸಿ, ಅನಂತರ ಮೈಸೂರಿಗೆ ಬಂದರು. ವ್ಯವಹಾರ ಜ್ಞಾನ, ಆಡಳಿತ ಸಾಮರ್ಥ್ಯ



ಸಂಸ್ಥಾನದ ಸೇವೆ : ರಂಗಾಚಾರ್ಲು

ಉದಾರ ದೃಷ್ಟಿ ಈ ಗುಣಗಳಿಗೆ ಹೆಸರಾಗಿದ್ದರು. ದಿವಾನರಾದ ಮೇಲೆ ಅವರು ಮೈಸೂರು ಸಂಸ್ಥಾನದಲ್ಲಿ ಪ್ರಜಾಪ್ರತಿನಿಧಿ ಸಭೆಯನ್ನು ರೂಪಿಸಿದರು. ಅದರಲ್ಲಿ 144 ಮಂದಿ ಸದಸ್ಯರಿದ್ದರು. ಅನುಭವಿಗಳು, ಜನರ ಗೌರವಕ್ಕೆ ಪಾತ್ರರು, ಭೂಮಾಲೀಕರು, ವ್ಯಾಪಾರಸ್ಥರು ಮುಂತಾದವರನ್ನು ಈ ಸಭೆಗೆ ಸದಸ್ಯರಾಗಿ ನಿಯಮಿಸುತ್ತಿದ್ದರು. ಈ ಸಭೆಯಲ್ಲಿ ಚುನಾಯಿತ ಪ್ರತಿನಿಧಿಗಳು ಇರಲಿಲ್ಲ. ಆದರೂ ಪ್ರಜಾಪ್ರಭುತ್ವ ಸಾಧನೆಯ ಮಾರ್ಗದಲ್ಲಿ ಇದು ಪ್ರಥಮ ಹೆಜ್ಜೆಯಾಗಿತ್ತು. ಮೈಸೂರಿನಲ್ಲಿ ಈ ಸಭೆ ಸ್ಥಾಪಿತವಾದಾಗ ಭಾರತದ ಇನ್ನಾವ ಭಾಗದಲ್ಲೂ ಇಂಥ ವ್ಯವಸ್ಥೆ ಇರಲಿಲ್ಲ. ಸಭೆಯ ಪ್ರಥಮ ಅಧಿವೇಶನ 1881ರಲ್ಲಿ ದಸರಾ ಮಹೋತ್ಸವದ ತರುವಾಯ ಮೈಸೂರಿನಲ್ಲಿ ನಡೆಯಿತು. ಹಿಂದಿನ ವರ್ಷದ ಆಯವ್ಯಯ, ಆಡಳಿತದ ಸಾಧನೆಗಳು, ಮುಂದಿನ ವರ್ಷದ ಆದಾಯ ವೆಚ್ಚಗಳ ಅಂದಾಜುಪಟ್ಟಿ ಮುಂತಾದುವನ್ನು ದಿವಾನರು ಸದಸ್ಯರಿಗೆ ವಿವರಿಸುತ್ತಿದ್ದರು. ಆರಂಭಕಾಲದಲ್ಲಿ ಸಭೆ ವರ್ಷಕ್ಕೆ ಒಂದು ಬಾರಿ ಮಾತ್ರ ಸೇರುತ್ತಿತ್ತು. ಈ ಸಭೆಯ ಕಾರ್ಯಕಲಾಪಗಳಿಂದ ಸಂಸ್ಥಾನದ ಜನರಿಗೆ ಸರಕಾರದ ಆಡಳಿತ ನೀತಿಯ ಪರಿಚಯವಾಗುತ್ತಿತ್ತು; ಮತ್ತು ಸದಸ್ಯರು ಜನರ ಪರವಾಗಿ ಅವರ ಕುಂದುಕೊರತೆಗಳನ್ನೂ ಬೇಡಿಕೆಗಳನ್ನೂ ಸರಕಾರದ ಮುಂದಿಡಲು ಸಾಧ್ಯವಾಗುತ್ತಿತ್ತು.

ರಂಗಾಚಾರ್ಲು ದಿವಾನರಾಗಿ ಅಧಿಕಾರ ವಹಿಸಿಕೊಂಡಾಗ, ರಾಜ್ಯದಲ್ಲಿ ಅನಾವೃಷ್ಟಿಯಿಂದಾಗಿ ಆರ್ಥಿಕ ಪರಿಸ್ಥಿತಿ ಅಸ್ತವ್ಯಸ್ತವಾಗಿತ್ತು. 1882ರಲ್ಲಿ ಬೆಂಗಳೂರು–ಮೈಸೂರುಗಳ ನಡುವೆ ರೈಲು ಸಂಪರ್ಕ ಏರ್ಪಡಿಸುವ ಕೆಲಸ ಆರಂಭವಾಯಿತು. ಅದೇ ವರ್ಷ ಬೆಂಗಳೂರಿನಿಂದ ತಿಪಟೂರು ರೈಲು ಮಾರ್ಗವನ್ನು ಹಾಕುವ ಉದ್ದೇಶದಿಂದ ಸಾಲವನ್ನು ಎತ್ತಿದರು. ಆ ಸಾಲಕ್ಕೆ ಪ್ರಜೆಗಳು ಸಂತೋಷದಿಂದ ವಂತಿಗೆ ನೀಡಿದರು.

ರಂಗಾಚಾರ್ಲು ದಿವಾನರಾಗಿದ್ದದ್ದು 2 ವರ್ಷಗಳಿಗೂ ಕಡಮೆ. ಆದರೂ ಆ ಅವಧಿಯಲ್ಲಿ ಅವರು ಸಂಸ್ಥಾನಕ್ಕೆ ಸಲ್ಲಿಸಿದ ಸೇವೆ ಸ್ಮರಣೀಯ. 1883 ಜನವರಿ 20ರಂದು ಮದರಾಸಿನಲ್ಲಿ ಅವರು ನಿಧನರಾದರು.

ಬ್ರಿಟಿಷರು ಐವತ್ತು ವರ್ಷಕಾಲ ಮೈಸೂರು ರಾಜ್ಯದಲ್ಲಿ ನಡೆಸಿದ ಆಡಳಿತವನ್ನು ಕುರಿತು ಇವರು ಒಂದು ಗ್ರಂಥವನ್ನು ಬರೆದಿದ್ದಾರೆ.

ರಂಜಾಳ ಗೋಪಾಲ ಶೆಣೈ

ಶಿಲ್ಪಕಲಾ ಕೌಶಲವನ್ನು ಸ್ವಯಂ ಪ್ರತಿಭೆಯಿಂದಲೇ ಬೆಳೆಸಿಕೊಂಡು, ಕಲ್ಲಿನಲ್ಲಿ ಕುಸುರಿ ಕೆಲಸವನ್ನು ಹೇಗೋ ಹಾಗೆ ಮಹಾಗಾತ್ರದ ಗೊಮ್ಮಟೇಶ್ವರನನ್ನೂ ಕಡೆದ ಕುಶಲ ಶಿಲ್ಪಿ, ರಂಜಾಳ ಗೋಪಾಲ ಶೆಣೈ.

ದಕ್ಷಿಣ ಕನ್ನಡದ ಕಾರ್ಕಳದ ಹತ್ತಿರ ಒಂದು ಊರು, ರಂಜಾಳ. ಅಲ್ಲಿ 1901ರಲ್ಲಿ ಗೋಪಾಲ ಶೆಣೈಯವರ ಜನನ. ವಂಶಪಾರಂಪರ್ಯವಾಗಿ ಇದ್ದದ್ದು ವ್ಯಾಪಾರ ವೃತ್ತಿ. ಆದರೆ ತಂದೆ ರಂಜಾಳ ಲಕ್ಷ್ಮೀನಾರಾಯಣ ಶೆಣೈ ಅವರಿಗೆ ಕುಲದ ಮಠಾಧೀಶರು ಶಿಲ್ಪ ವೃತ್ತಿಯನ್ನು ಅನುಗ್ರಹಿಸಿದರು ಎಂದು ಹೇಳಿಕೆ. ಬಾಲ್ಯದಲ್ಲಿ ದೇವತಾಮೂರ್ತಿಯನ್ನೋ ನಾಗಶಿಲೆಯನ್ನೋ ತಂದೆಯವರು ಕೆತ್ತುತ್ತಿದ್ದಾಗ ಗೋಪಾಲಶೆಣೈಯವರು ಚಾಣ ಹಿಡಿದು ಸಹಕರಿಸಿದ್ದುಂಟು. ಮುಂದೆ, ಜೀವನಾಧಾರಕ್ಕೆ ಈ ವೃತ್ತಿಯೊಂದೇ ಸಾಲದೆಂದು ತಂದೆಯ ಸೂಚನೆಯಂತೆ, ಶಾಲಾ ವಿದ್ಯಾಭ್ಯಾಸದ ಅನಂತರ ಕಾರ್ಕಳದ ಒಂದು ಶಾಲೆಯಲ್ಲಿ ಚಿತ್ರಕಲೆಯ ಅಧ್ಯಾಪಕರಾದರು.



ಶಿಲ್ಪಿ ರಂಜಾಳ

ರಂಗದೇಯ ಮುಖವಾಡಗಳ ಶೈಲಿ, ಶಿಲ್ಪ ಶಾಸ್ತ್ರಗ್ರಂಥಗಳನ್ನು ಅಭ್ಯಾಸ ಮಾಡಿದರು. ಗೋಪಾಲ ಶೆಣೈ ತಮ್ಮ ನೈಪುಣ್ಯ ಬೆಳೆಸಿಕೊಂಡರು. ರಂಜಾಳರು ತಮಗಾಗಿ ನಿರ್ಮಿಸಿದ ದೇವಿ ವಿಗ್ರಹದ ಕೈಬಳೆಗಳನ್ನು ಕಂಡ ಪ್ರತೀಕರಿಸ ಸ್ವಾಮಿ ಶಿವಾನಂದರು ಮೆಚ್ಚಿ ಹರಸಿದರು. ಶೆಣೈಯವರು ಇದರಿಂದ ಉತ್ತೇಜಿತರಾದರು. ಕಾರ್ಕಳ ವೆಂಕಟರಮಣ ದೇವಾಲಯದ ಗರುಡ ಮಂಟಪದಲ್ಲಿನ ನಾಲ್ಕು ಕಂಬಗಳ ಕೆತ್ತನೆಯಲ್ಲಿ ಅವರ ಶಿಲ್ಪ ಕೆಲಸದ ಕುಶಲತೆ ವ್ಯಕ್ತವಾಯಿತು. ಕಂಬವನ್ನು ಸುತ್ತಿ ಬೆಳೆದ ಬಳ್ಳಿ, ಹೂ, ಅಲ್ಲಿನ ದುಂಬಿ, ಹಕ್ಕಿಗಳು, ಕಂಬದ ಮೇಲೆ ಹರಿಯುವಂತೆ ತೋರುವ ಇರುವೆ, ನೊಣ, ಹಲ್ಲಿ, ಜಿರಲೆ – ಇವನ್ನು ನೈಜವೆಂದು ತೋರುವಂತೆ ಕೆತ್ತಿದರು. ಮುರಳೀಧರ, ಕವೆಗೋಲು ಕೃಷ್ಣ, ರಾಮ, ಲಕ್ಷ್ಮಣ, ಸೀತೆ ಇತ್ಯಾದಿ ಮೂರ್ತಿಗಳು ಅವರ ಮಹತ್ವದ ಕೃತಿಗಳು.

ಒಂದು ಗೊಮ್ಮಟೇಶ್ವರ ಮೂರ್ತಿಯ ನಿರ್ಮಾಣ ಕಾರ್ಯವನ್ನು ರಂಜಾಳರಿಗೆ ಧರ್ಮಸ್ಥಳದ ರತ್ನವರ್ಮ ಹೆಗ್ಗಡೆ ಒಪ್ಪಿಸಿದರು. 1967ರ ವಿಜಯದಶಮಿ ದಿನ ಕೆಲಸ ಪ್ರಾರಂಭವಾಯಿತು. ಸುಮಾರು ಐದು ವರ್ಷಗಳಲ್ಲಿ ಕಾರ್ಕಳದ ಬಳಿ ಮಂಗಳಪಾದೆಯಲ್ಲಿ ದೊರೆತ ದೊಡ್ಡ ಶಿಲೆಯಲ್ಲಿ ನೆಲದಡಿ ಹುಗಿಯುವ ಭಾಗ ಸೇರಿ ಸುಮಾರು 52 ಅಡಿ ಎತ್ತರದ ಭವ್ಯ ಶಿಲ್ಪ ರಚಿತವಾಯಿತು. ಗೊಮ್ಮಟೇಶ್ವರಮೂರ್ತಿ ನೆಲ ಮಟ್ಟದಿಂದ 39.5 ಅಡಿ ಎತ್ತರವಿದೆ. ಒಟ್ಟು ತೂಕ ಸುಮಾರು 180 ಟನ್.

ಆ ಬಳಿಕ ಫಿರೋಜಾಬಾದಿನ ಒಂದು ಧರ್ಮನಿಧಿ ಸಂಸ್ಥೆ ಇನ್ನೊಂದು ಗೊಮ್ಮಟೇಶ್ವರ ವಿಗ್ರಹ ನಿರ್ಮಾಣಕಾರ್ಯವನ್ನು ಶೆಣೈಯವರಿಗೆ ಒಪ್ಪಿಸಿತು. ಆ ಕೆಲಸ ಕಾರ್ಕಳದ ಮಂಗಳಪಾದೆಯಲ್ಲಿ 1973 ಸೆಪ್ಟೆಂಬರ್ 12ರಂದು ಪ್ರಾರಂಭವಾಯಿತು.

ಗೋಪಾಲ ಶೆಣೈಯವರ ಕಲಾಕೌಶಲಕ್ಕೆ ರಾಜ್ಯ ಮತ್ತು ಕೇಂದ್ರ ಸರಕಾರಗಳು ಪ್ರಶಸ್ತಿ ನೀಡಿ ಗೌರವಿಸಿವೆ.

ರಕ್ಕಸತಂಗಡಿ

ದಕ್ಷಿಣ ಭಾರತದ ವೈಭವಯುತ ಸಾಮ್ರಾಜ್ಯಗಳಲ್ಲಿ ಪ್ರಸಿದ್ಧವಾದದ್ದು ವಿಜಯನಗರ. ಅದರ ವಿನಾಶಕ್ಕೆ ಕಾರಣವಾದ ಯುದ್ಧ ನಡೆದದ್ದು ರಕ್ಕಸತಂಗಡಿ ಪ್ರದೇಶದಲ್ಲಿ. ಇದನ್ನು ತಾಳಿಕೋಟೆ ಯುದ್ಧವೆಂದೂ ಕರೆದಿದ್ದಾರೆ.

ಬಿಜಾಪುರದ ಅಲಿ ಆದಿಲ್ ಷಾ, ಅಹಮ್ಮದ್ ನಗರದ ಹುಸೇನ್ ನಿಜಾಮ್ ಷಾ, ಗೋಲ್ಕೊಂಡದ ಇಬ್ರಾಹಿಂ ಕುತುಬ್ ಷಾ, ಬೀದರಿನ ಅಲಿ ಬರೀದ್ ಷಾ ಇವರಲ್ಲಿ ಕಲಹಗಳಾಗುತ್ತಿದ್ದುವು. ಇದರಿಂದ ತಾನು ಲಾಭ ಪಡೆಯಬೇಕೆಂದು ವಿಜಯನಗರದ ರಾಮರಾಯ ಒಬ್ಬೊಬ್ಬ ಒಬ್ಬೊಬ್ಬನ ಪಕ್ಷ ವಹಿಸತೊಡಗಿದ. ಸುಲ್ತಾನರಿಗೆ ರಾಮರಾಯನಲ್ಲಿ ಅಪನಂಬಿಕೆ ಉಂಟಾಯಿತು. ಅವರೆಲ್ಲ ಒಂದಾಗಿ ಅವನನ್ನು ಎದುರಿಸಲು ನಿರ್ಧರಿಸಿದರು. ಬೃಹತ್ ಸೈನ್ಯವನ್ನು ಕೂಡಿಕೊಂಡು ಕೃಷ್ಣಾನದಿಯ ಉತ್ತರದಲ್ಲಿ ತಾಳೀಕೋಟೆಯ ಬಳಿ ಬೀಡುಬಿಟ್ಟರು.

ಇದರ ವ್ಯವಹಾರವನ್ನೆಲ್ಲ ತಿಳಿದಿದ್ದ ರಾಮರಾಯ ಸಾಮಂತರಾಜರ ಜೊತೆಗೂಡಿ ಸೈನ್ಯ ಸಮೇತ ಕೃಷ್ಣಾನದಿಯ ಸಮೀಪದಲ್ಲಿರುವ ರಕ್ಕಸಗಿ ಮತ್ತು ತಂಗಡಿಗಿ ಹಳ್ಳಿಗಳ ಬಳಿ ಬಂದಿಳಿದ.

1564ರ ಡಿಸೆಂಬರ್ 25ರಂದು ರಕ್ಕಸಗಿ ಮತ್ತು ತಂಗಡಿಗಿ ಹಳ್ಳಿಗಳ ಪ್ರದೇಶದಲ್ಲಿ ಯುದ್ಧ ಆರಂಭವಾಯಿತು. ರಾಮರಾಯನ ತಮ್ಮಂದಿರಾದ ವೆಂಕಟಾದ್ರಿ ಮತ್ತು ತಿರುಮಲರಾಯರ ದಕ್ಷ ಸೇನಾಪತಿತ್ವದಲ್ಲಿ ಮೊದಲಿಗೆ ವಿಜಯನಗರ ಸೇನೆಯದೇ ಮೇಲುಗೈ ಆಗಿತ್ತು. ರಾಮರಾಯನ ಸೈನ್ಯದಲ್ಲಿದ್ದ ಮುಸಲ್ಮಾನ ಅಧಿಕಾರಿಗಳಲ್ಲಿ ಇಬ್ಬರು ಗದ್ದಲದ ನಡುವೆ ಓಡಿ ಹೋಗುವವರಂತೆ ನಟಿಸುತ್ತ, ತಮ್ಮ ಅಧೀನದಲ್ಲಿದ್ದ ಸೈನ್ಯದೊಡನೆ ಸುಲ್ತಾನರ ಪಕ್ಷಕ್ಕೆ ಸೇರಿಬಿಟ್ಟರು. ಗಾಯಗೊಂಡ ರಾಮರಾಯ ಕುದುರೆಯಿಂದಿಳಿದು ಮೇನೆ ಹತ್ತಿದ. ಆಗ ಶತ್ರುಪಕ್ಷದ ಆನೆಯೊಂದು ನುಗ್ಗಿ ಬಂದು ಆತನನ್ನು ಸೊಂಡಿಲಿನಲ್ಲಿ ಎತ್ತಿಕೊಂಡಿತು. ಶತ್ರುಗಳು ರಾಮರಾಯನನ್ನು ಆನೆಯಿಂದ ಬಿಡಿಸಿದರು. ಆವನ ತಲೆ ಕತ್ತರಿಸಿದರು. ಕಡಿದ ತಲೆ ಕಂಡ ವಿಜಯನಗರದ ಸೈನಿಕರು ಪಲಾಯನ ಮಾಡತೊಡಗಿದರು.

ವಿಜಯನಗರ ಸಾಮ್ರಾಜ್ಯದ ಅಧೋಗತಿಗೆ ರಕ್ಕಸತಂಗಡಿ ಯುದ್ಧ ಕಾರಣವಾಯಿತು.

ರಕ್ಷಣಾ ದಳಗಳು

ಸ್ವತಂತ್ರ ಭಾರತಕ್ಕೆ ಸುಮಾರು 3.535 ಮೈಲು ಉದ್ದದ ಕರಾವಳಿ ಇದೆ: 9.425 ಮೈಲು ಉದ್ದದ ಗಡಿ ಪ್ರದೇಶವಿದೆ. ಗಡಿ ಉಲ್ಲಂಘನೆ



ಭಾರತೀಯ ವಿಮಾನ ನಿರೋಧಕ ಫಿರಂಗಿ ; ಯೋಧರು

ಯಾಗದಂತೆ ನೋಡಿಕೊಳ್ಳುವುದು. ವಿದೇಶೀಯರ ಆಕ್ರಮಣವನ್ನು ತಡೆಗಟ್ಟುವುದು ರಕ್ಷಣಾದಳಗಳ ಕರ್ತವ್ಯ.

ಭಾರತ ವಿಭಜನೆಯಾದಾಗ ರಕ್ಷಣಾ ಪಡೆಗಳು, ನೆಲೆಗಳು, ತರಬೇತಿ ಕೇಂದ್ರಗಳಲ್ಲೂ ಪಾಲು ಆಯಿತು.

ರಕ್ಷಣಾ ಪಡೆಗಳ ಕಾರ್ಯನೀತಿಗೆ ಸಂಬಂಧಪಟ್ಟ ನಿರ್ಧಾರಗಳನ್ನು ತೆಗೆದುಕೊಳ್ಳುವ ಹೊಣೆ ರಕ್ಷಣಾ ಸಚಿವ ಶಾಖೆಯದು. ದೇಶದ ರಕ್ಷಣೆಗೆ ತಗಲುವ ಖರ್ಚು ಹಾಗೂ ರಕ್ಷಣಾ ಪಡೆಗಳಿಗೆ ಬೇಕಾಗುವ ಹಣಕಾಸನ್ನು ಪಡೆಯುವುದೂ ಇದರ ಹೊಣೆ. ಸಚಿವ ಶಾಖೆ ತನ್ನ ಕಾರ್ಯನಿರ್ವಹಣೆಯನ್ನು ರಕ್ಷಣಾಪಡೆಗಳ ಮುಖ್ಯ ಕಾರ್ಯಸ್ಥಾನದ ಮೂಲಕ ನೆರವೇರಿಸುತ್ತದೆ. ಇದರಲ್ಲಿ ಸೇನೆ, ವಾಯುದಳ ಹಾಗೂ ನೌಕಾದಳಗಳ ಕೇಂದ್ರ ಕಾರ್ಯಾಲಯಗಳಿರುತ್ತವೆ. ಆಯುಧ ಕಾರಖಾನೆ, ರಕ್ಷಣಾ ವಿಜ್ಞಾನ ಸಂಸ್ಥೆ, ನ್ಯಾಷನಲ್ ಕ್ಯಾಡೆಟ್ ಕೋರ್, ಚಾರಿತ್ರಿಕ ವಿಭಾಗ ಮತ್ತು ರಕ್ಷಣಾ ಪಡೆಗಳ ಪಾರ್ತಾ ಕಚೇರಿ ಮುಂತಾದ ಅಂತರ ಸೇವಾಸಂಸ್ಥೆಗಳ ಆಡಳಿತ ನಡೆಸುವ ಜವಾಬ್ದಾರಿಯೂ ರಕ್ಷಣಾ ಸಚಿವ ಶಾಖೆಗೆ ಸೇರಿದೆ.

ಭಾರತೀಯ ಗಣರಾಜ್ಯ ಸಂವಿಧಾನದಲ್ಲಿ ರಕ್ಷಣಾ ಪಡೆಗಳ ಮಹಾದಂಡನಾಯಕರು ರಾಷ್ಟ್ರಪತಿ.

ಸೇನೆ : ಭಾರತದ ಸೈನಿಕ ಪರಂಪರೆ ದೀರ್ಘವಾದದ್ದು. ಆಧುನಿಕ ಭಾರತದ ಸೇನೆಯ ಚರಿತ್ರೆ ಈಸ್ಟ್ ಇಂಡಿಯಾ ಕಂಪೆನಿಯಿಂದ ಆರಂಭವಾಗುತ್ತದೆ. ಕಂಪೆನಿ ತೆರೆದ ವ್ಯಾಪಾರೀ ಕೇಂದ್ರಗಳ ಕಾಪುದಳಗಳಂತೆ ಭಾರತೀಯ ಸೇನೆಗಳ ಉಗಮವಾಯಿತು. ಇವು ಮುಂದೆ ಮುಂಬಯಿ, ಬಂಗಾಳ ಹಾಗೂ ಮದರಾಸುಗಳೆಂಬ ಮೂರು ಆಧಿಪತ್ಯ ಸೇನೆಗಳಾದುವು. 1902ರಲ್ಲಿ ಏಕೀಕೃತಗೊಂಡ ಈ ಸೇನೆಯನ್ನು ಉತ್ತರ, ಪಶ್ಚಿಮ ಹಾಗೂ ಪೂರ್ವ ಸಮಾದೇಶಗಳೆಂದು ವಿಭಾಗಿಸಲಾಯಿತು. ಮೊದಲನೆಯ ಹಾಗೂ ಎರಡನೆಯ ಮಹಾಯುದ್ಧಗಳಲ್ಲಿ ಭಾರತೀಯ ಪಡೆಗಳು ಪ್ರಶಂಸನೀಯ ರೀತಿಯಲ್ಲಿ ಭಾಗವಹಿಸಿದುವು.

ಸೇನೆಯಲ್ಲಿ ಭಾರತೀಯ ಅಧಿಕಾರಿಗಳ ನೇಮಕ ಆರಂಭವಾದದ್ದು 1918ರಲ್ಲಿ.

ಭಾರತದ ಸೇನೆಯಲ್ಲಿ ಈಗ ಪಶ್ಚಿಮ, ಪೂರ್ವ, ದಕ್ಷಿಣ ಹಾಗೂ ಕೇಂದ್ರ ಸಮಾದೇಶಗಳಿವೆ. ಸಮಾದೇಶಗಳನ್ನು ಕ್ಷೇತ್ರಗಳಾಗಿಯೂ ಉಪಕ್ಷೇತ್ರಗಳಾಗಿಯೂ ವಿಭಾಗಿಸಿದ್ದಾರೆ. ಮುಖ್ಯ ಕಾರ್ಯಸ್ಥಾನ ದೆಹಲಿಯಲ್ಲಿದೆ. ಸೇನೆಯ ಮುಖ್ಯಸ್ಥರು ಸೇನಾಬಲಾಧಿಪತಿ.

ದೇಶದ ಹಲವು ಕಡೆ ಹಲವು ಬಗೆಯ ಸೇನಾ ತರಬೇತಿ ಕೇಂದ್ರಗಳಿವೆ. ಇವುಗಳಲ್ಲಿ ಮುಖ್ಯವಾದದ್ದು ಡೆಹ್ರ ಡೂನಿನಲ್ಲಿರುವ ಇಂಡಿಯನ್ ಮಿಲಿಟರಿ ಅಕಾಡೆಮಿ. ಪರ್ವತ ಪ್ರದೇಶಗಳಿಗಾಗಿ ವಿಶೇಷ ಸೇನಾ ವಿಭಾಗಗಳನ್ನು ಸಂಘಟಿಸಲಾಗಿದೆ.

ನೌಕಾದಳ : ಭಾರತದ ನೌಕಾ ಇತಿಹಾಸ ದೀರ್ಘವಾದದ್ದು. ಇದರ ಆಧುನಿಕ ಇತಿಹಾಸ ಆರಂಭವಾಗುವುದು ಮಾತ್ರ ಈಸ್ಟ್ ಇಂಡಿಯಾ ಕಂಪೆನಿ ಸಶಸ್ತ್ರ ನೌಕಾಪಡೆಯನ್ನು ಹೊಂದಿದ್ದ ಕಾಲದಿಂದ. 1829ರಲ್ಲಿ ಭಾರತೀಯ ನೌಕಾದಳವನ್ನು ಅದು ಸಂಘಟಿಸಿತು. 1857ರ ಸ್ವಾತಂತ್ರ್ಯ ಸಂಗ್ರಾಮವಾದ ಮೇಲೆ ಈ ದಳವನ್ನು ರದ್ದುಪಡಿಸಿತು. 1892ರಲ್ಲಿ ರಾಯಲ್ ಇಂಡಿಯನ್ ಮೆರೀನ್ಸ್ ಎಂದೂ 1929ರಲ್ಲಿ ಕಾದುವ ದಳವಾಗಿಯೂ 1934ರಲ್ಲಿ ' ರಾಯಲ್ ಇಂಡಿಯನ್ ನೇವಿ ' ಎಂಬ ಹೆಸರಿನಿಂದಲೂ ಭಾರತೀಯ ನೌಕಾದಳ ವಿವಿಧ ಘಟ್ಟಗಳನ್ನು ದಾಟಿತು.

ಎರಡನೆಯ ಮಹಾಯುದ್ಧದಲ್ಲಿ 'ರಾಯಲ್ ಇಂಡಿಯನ್ ನೇವಿ' ಉತ್ತರ ಅಟ್ಲಾಂಟಿಕ್ ಮತ್ತು ಹಿಂದೂ ಮಹಾಸಾಗರಗಳಲ್ಲಿ ರಕ್ಷಣಾಕಾರ್ಯ ಮಾಡಿತು. ರಾಷ್ಟ್ರ ವಿಭಜನೆಯಾದ ಮೇಲೆ ಸ್ವತಂತ್ರ ಭಾರತದ ನೌಕಾದಳದಲ್ಲಿ 32 ಹಡಗುಗಳೂ ಮುಂಬಯಿಯ ಹಡಗುಕಟ್ಟೆಯೂ ಉಳಿದುಕೊಂಡುವು. ಸ್ವಾತಂತ್ರ್ಯಾನಂತರ ಯುದ್ಧ ಹಡಗುಗಳು ಉತ್ಪಾದನೆ, ಶಸ್ತ್ರಗಳ ಸುಧಾರಣೆ ಮುಂತಾದ ಕಾರ್ಯಗಳನ್ನು ಕೈಗೊಳ್ಳಲಾಯಿತು.



ವಿಮಾನ ವಾಹಕ ಐಎನ್‌ಎಸ್ 'ವಿಕ್ರಾಂತ್'



ರಕ್ಷಣೆಗೆ ಕ್ಷಿಪಣಿ

ವಿಮಾನವಾಹಕ ಹಡಗು ಐಎನ್‌ಎಸ್ 'ವಿಕ್ರಾಂತ್' 1961ರಲ್ಲಿ ಕಾರ್ಯ ಮಾಡಲಾರಂಭಿಸಿತು. ಎರಡು ಜಲಾಂತರ್ಗಾಮಿಗಳು, ಆರು ನಾಶಕ ನೌಕೆ



ಭೂ ಸೇನೆ, ನೌಕಾದಳ, ವಾಯುಪಡೆ

(ಡಿಸ್ಟ್ರಾಯರ್)ಗಳು, ಮೂರು ವಿಮಾನನಾಶಕ ಯುದ್ಧ ಹಡಗುಗಳು, ಐದು ಜಲಾಂತರ್ಗಾಮಿ ನಾಶಕ ಹಡಗುಗಳು, ಸ್ಫೋಟಕ ನಿವಾರಕ ಹಡಗುಗಳು (ಮೈನ್‌ಸ್ವೀಪರ್), ಸರ್ವೆ ನೌಕೆಗಳು, ಸಹಕರ ನೌಕೆಗಳು ಮೊದಲಾದ ಹಲವು ಬಗೆಯ ಹಡಗುಗಳಿಂದ ಭಾರತೀಯ ನೌಕಾದಳ ಸಜ್ಜಾಗಿದೆ.

ನೌಕಾದಳದ ಮುಖ್ಯಸ್ಥರು, ನೌಕಾಬಲಾಧಿಪತಿ.

ಕೊಚ್ಚಿಯಲ್ಲಿರುವ ಐಎನ್‌ಎಸ್ 'ವೆಂದುರುತಿ' ಮುಖ್ಯ ತರಬೇತಿ ಕೇಂದ್ರ. ಇದಲ್ಲದೆ ನೌಕಾದಳದ ಹಲವು ಕ್ಷೇತ್ರಗಳಿಗೆ ಬೇಕಾದ ತರಬೇತಿಗಳಿಗೆ ಬೇರೆ ಬೇರೆ ತರಬೇತಿ ಕೇಂದ್ರಗಳಿವೆ. ನೌಕಾದಳದ ಮುಖ್ಯ ಕಾರ್ಯಾಲಯ ದೆಹಲಿಯಲ್ಲಿದೆ.

ವಾಯುದಳ : ಬಹಳ ಕಾಲದ ವರೆಗೆ ಬ್ರಿಟನಿನ ರಾಯಲ್ ಏರ್‌ಫೋರ್ಸ್ ಭಾರತದ ವಾಯುದಳದ ಹೊಣೆಯನ್ನೂ ತನ್ನಲ್ಲಿಯೇ ಇಟ್ಟುಕೊಂಡಿದ್ದಿತು. 1913ರಲ್ಲಿ ಮಿಲಿಟರಿ ವಿಮಾನ ಹಾರಾಟ ಶಾಲೆಯೊಂದನ್ನು ಉತ್ತರ ಪ್ರದೇಶದ ಸೀತಾಪುರದಲ್ಲಿ ತೆರೆದರು. 1939ರಲ್ಲಿ ಎರಡನೆಯ ಮಹಾಯುದ್ಧ ಆರಂಭವಾಗಲಿದ್ದಾಗ, ಒಂದೇ ಒಂದು ತಂಡದ ಭಾರತೀಯ ವಾಯುದಳವನ್ನು ರೂಪಿಸಲಾಯಿತು. ಜಪಾನೀಯರು ಬರ್ಮವನ್ನು ಆಕ್ರಮಿಸಿ ಭಾರತದ ಪೂರ್ವ ಗಡಿಗಳಿಗೆ ಧಕ್ಕೆಯ ಪರಿಸ್ಥಿತಿ ಉಂಟಾದಾಗ ಭಾರತೀಯ ವಾಯುದಳ ಕ್ಷಿಪ್ರವಾಗಿ ವಿಸ್ತರಿಸಲ್ಪಟ್ಟಿತು. ಅಂಬಾಲಾ, ಪೆಷಾವರ್‌ಗಳಲ್ಲಿ ವಾಯುದಳ ಶಾಲೆಗಳು ತೆರೆಯಲ್ಪಟ್ಟುವು.

ಭಾರತ ವಿಭಜನೆಯಾದಾಗ ವಾಯುದಳದ ವಿಮಾನ ಸಂಖ್ಯೆ ಮತ್ತು ಪಡೆಯ ಸಂಖ್ಯೆ ಕುಗ್ಗಿತು. 1949ರಿಂದ ಅಭಿವೃದ್ಧಿ ಕಾರ್ಯಕ್ರಮಗಳು ಒಂದೇ ಸಮನೆ ನಡೆದುವು. ನ್ಯಾಟ್ ವಿಮಾನಗಳು ಭಾರತೀಯ ವಾಯುದಳದ ಕೀರ್ತಿಯನ್ನು ಎತ್ತಿಹಿಡಿದಿವೆ.

ವಾಯುದಳದ ಮುಖ್ಯಸ್ಥರು ವಾಯುಬಲಾಧಿಪತಿ. ಮುಖ್ಯ ಕಾರ್ಯಸ್ಥಾನ ದೆಹಲಿಯಲ್ಲಿದೆ. ದೇಶದಲ್ಲಿ ಹಲವು ತರಬೇತಿ ಕೇಂದ್ರಗಳಿವೆ.

ಭಾರತೀಯ ನೌಕಾಪಡೆಯ ಜಲಾಂತರ್ಗಾಮಿ



1949ರಲ್ಲಿ ಆರಂಭವಾದ ಪ್ರಾದೇಶಿಕ ಸೇನಾ ಚಟುವಟಿಕೆಯಿಂದ ದೇಶದ ಯುವಕರಿಗೆ ಅವರ ಬಿಡುವಿನ ವೇಳೆಯಲ್ಲಿ ಸೈನಿಕ ತರಬೇತಿ ದೊರೆಯುವ ಸೌಲಭ್ಯ ಏರ್ಪಟ್ಟಿದೆ. ತುರ್ತು ಪರಿಸ್ಥಿತಿಯಲ್ಲಿ ಇಂಥ ತರಬೇತಿ ಪಡೆದ ದಳಗಳು ಉಪಯುಕ್ತವಾಗುತ್ತವೆ.

ರಕ್ಷಣಾ ಪಡೆಗಳಿಗೆ ಸಂಬಂಧಪಟ್ಟ ಸಂಶೋಧನೆ, ಅಭಿವೃದ್ಧಿಗಳನ್ನು ರಕ್ಷಣಾ ವಿಜ್ಞಾನ ಸಂಸ್ಥೆ ಕೈಗೊಳ್ಳುತ್ತದೆ. ಹೊಸ ಶಸ್ತ್ರಗಳು, ರೀತಿ ನೀತಿಗಳು ಇಲ್ಲಿ ರೂಪುಗೊಳ್ಳುತ್ತವೆ.

ಕೊರಿಯ, ವಿಯೆಟ್‌ನಾಮ್, ಈಜಿಪ್ಟ್, ಸೈಪ್ರಸ್ ಮುಂತಾದೆಡೆಗಳಲ್ಲಿ ನಡೆದ ಯುದ್ಧಗಳಲ್ಲಿ ಶಾಂತಿ ರಕ್ಷಣೆಯ ಕಾರ್ಯವನ್ನು ಭಾರತ ರಕ್ಷಣಾಪಡೆ ನಿರ್ವಹಿಸಿದೆ.

ನೋಡಿ : ಕನ್ಹೋಜಿ ಆಂಗ್ರೆ ; ಕುಂಞಾಲಿ ಮರಕ್ಕಾರ್
ನೌಕಾದಳ ; ರಕ್ಷಣಾದಳ ; ವಾಯುದಳ ; ಸೇನೆ —ಸಂಪುಟ ೧

ರಘುವೀರ

ಖ್ಯಾತ ಭಾಷಾ ಪಂಡಿತ–ಸಂಶೋಧಕರಾಗಿದ್ದವರು, ಡಾ. ರಘುವೀರ. ಜನನ 1902ರಲ್ಲಿ, ಇಂದು ಪಾಕಿಸ್ತಾನದಲ್ಲಿರುವ ರಾವಲ್ಪಿಂಡಿಯಲ್ಲಿ. ತಮ್ಮ 19ನೆಯ ವಯಸ್ಸಿನಲ್ಲೇ ಉರ್ದು, ಪಾರಸೀ, ಬಂಗಾಳೀ, ಹಿಂದೀ, ಸಂಸ್ಕೃತ ಮತ್ತು ಮಾತೃಭಾಷೆ ಪಂಜಾಬಿಗಳಲ್ಲಿ ನಿರರ್ಗಳವಾಗಿ ಮಾತನಾಡಲು ಸಮರ್ಥರಾಗಿದ್ದರು.

ಉಚ್ಚ ಶಿಕ್ಷಣವನ್ನು ಲಾಹೋರ್ ವಿಶ್ವವಿದ್ಯಾನಿಲಯದಲ್ಲಿ ಪಡೆದರು. ಅನಂತರ ಲಂಡನ್ ವಿಶ್ವವಿದ್ಯಾನಿಲಯದಿಂದ ಪಿಎಚ್. ಡಿ. ಹಾಗೂ ಹಾಲೆಂಡ್ ವಿಶ್ವವಿದ್ಯಾನಿಲಯದಿಂದ ಡಿ. ಲಿಟ್ ಪದವಿಗಳನ್ನು ಸಂಪಾದಿಸಿದರು.

1934ರಲ್ಲಿ ಲಾಹೋರಿನಲ್ಲಿ 'ಭಾರತೀಯ ಸಂಸ್ಕೃತಿಯ ಅಂತರರಾಷ್ಟ್ರೀಯ ಅಧ್ಯಯನ ಕೇಂದ್ರ' ಸ್ಥಾಪಿಸಿದರು.

ವಿವಿಧ ದೇಶಗಳಿಂದ ಬಂದ ಆಮಂತ್ರಣಗಳನ್ನು ಮನ್ನಿಸಿ, 1934 ರಿಂದ ರಷ್ಯ ಮತ್ತಿತರ ಐರೋಪ್ಯ ರಾಷ್ಟ್ರಗಳನ್ನು ಅವರು ಸಂದರ್ಶಿಸಿದರು. ವಿವಿಧ ಭಾಷಾತಜ್ಞರೊಡನೆ ಸಂಪರ್ಕ ಬೆಳೆಸಿ, ಭಾರತವಿಡೀ ಸುತ್ತಾಡಿದರು. 1951ರಲ್ಲಿ ವಿಶೇಷ ಆಹ್ವಾನದ ಮೇರೆಗೆ ಬರ್ಮ, ಥೈಲೆಂಡ್, ಕಾಂಬೋಡಿಯ, ಇಂಡೊನೇಷ್ಯ ಮತ್ತು ಸಿಂಹಳ (ಶ್ರೀಲಂಕಾ) ಗಳನ್ನು ಸಂದರ್ಶಿಸಿದರು. ಅಲ್ಲಿಯ ಇತಿಹಾಸ, ಸಂಸ್ಕೃತಿ ಹಾಗೂ ಅವುಗಳೊಡನೆ ಭಾರತ ಸಂಬಂಧದ ಬಗೆಗೆ ವಿಶೇಷ ಸಂಶೋಧನೆ ನಡೆಸಿದರು. ಅನಂತರವೂ ಹಲವು ಬಾರಿ ಅಲ್ಲಿಗೆ ಭೇಟಿ ನೀಡಿದರು.

1947ರಲ್ಲಿ ಭಾರತದ ವಿಭಜನೆಯಾದಾಗ ಇವರು ಲಾಹೋರ್ ಬಿಟ್ಟು, ಮಧ್ಯಪ್ರದೇಶ ಸರಕಾರದ ಆಮಂತ್ರಣದಂತೆ ನಾಗಪುರಕ್ಕೆ ಆಗಮಿಸಿದರು. ಅವರ ಅಧ್ಯಯನ ಕೇಂದ್ರವೂ ಅಲ್ಲಿಗೆ ಸ್ಥಳಾಂತರಗೊಂಡಿತು; ಅನಂತರ ದೆಹಲಿಗೆ ವರ್ಗಾಯಿಸಲ್ಪಟ್ಟಿತು.

1947ರಲ್ಲಿ ರಘುವೀರರು ವೈಜ್ಞಾನಿಕ ಶಿಕ್ಷಣಕ್ಕೆ ಅಗತ್ಯವಿರುವ ಪಾರಿಭಾಷಿಕ ಶಬ್ದಗಳನ್ನೊಳಗೊಂಡ ಬೃಹತ್ ಕೋಶವನ್ನು ರಚಿಸಿದರು. ಒಂದು ಲಕ್ಷ 60 ಸಾವಿರ ಶಬ್ದಗಳನ್ನೊಳಗೊಂಡ ಹಿಂದಿ ಇಂಗ್ಲಿಷ್ ನಿಘಂಟನ್ನು ಇವರೊಬ್ಬರೇ ರಚಿಸಿದರು.

1955ರಲ್ಲಿ ಚೀನ ಆಮಂತ್ರಣದ ಮೇರೆಗೆ ಮಧ್ಯ ಏಷ್ಯ, ಮಂಗೋಲಿಯ, ಸೈಬೀರಿಯ, ಚೀನ ಮೊದಲಾದ ದೇಶಗಳಲ್ಲಿ ಪ್ರವಾಸ ಮಾಡಿದರು. ಅದೇ ವರ್ಷ ಮಂಗೋಲ ಭಾಷಾ ಸಮ್ಮೇಳನದಲ್ಲಿ ಭಾರತದ ಪ್ರತಿನಿಧಿಯಾಗಿ ಭಾಗವಹಿಸಿದರು.



ಭಾಷಾ ಪಾಂಡಿತ್ಯ, ಸಂಶೋಧನೆ : ರಘು…

ರಘುವೀರರು ಭಾಷೆ, ಸಾಹಿತ್ಯಗಳಿಗೆ ಸಂಬಂಧಿಸಿ 100ಕ್ಕೂ ಹೆಚ್ಚು ಗ್ರಂಥಗಳನ್ನು ರಚಿಸಿದ್ದಾರೆ.

ರಾಜಕೀಯ ಕ್ಷೇತ್ರದಲ್ಲೂ ರಘುವೀರರು ಚಟುವಟಿಕೆ ತೋರಿದರು. 1956–62ರ ಅವಧಿಯಲ್ಲಿ ರಾಜ್ಯಸಭಾ ಸದಸ್ಯರಾಗಿದ್ದರು. 1962ರಲ್ಲಿ ಜನಸಂಘದ ಅಧ್ಯಕ್ಷರಾದರು.

ಚುನಾವಣಾ ಪ್ರಚಾರ ಕಾರ್ಯದಲ್ಲಿದ್ದಾಗ ರಘುವೀರರು ಆಕಸ್ಮಿಕ… ಒಳಗಾಗಿ, 1963 ಮೇ 14ರಂದು ನಿಧನರಾದರು.

ರಜಪೂತರು

ಶೌರ್ಯ ಪರಾಕ್ರಮಗಳಿಗೆ, ಸಾಹಸೀ ಸಂಪ್ರದಾಯಕ್ಕೆ ಹೆಸರಾದವರು ರಜಪೂತರು. ರಜಪೂತರು ಉತ್ತರ ಹಿಂದೂಸ್ತಾನದಲ್ಲಿ ಪ್ರಾಬಲ್ಯಕ್ಕೆ ಬಂದ ಐದು ಶತಮಾನ ಕಾಲ, ಭಾರತೀಯ ಇತಿಹಾಸದ ಒಂದು ಉಜ್ವಲ ಅಧ್ಯಾಯ.

ಸುಮಾರು 8ರಿಂದ 12ನೆಯ ಶತಮಾನದ ವರೆಗೆ ರಜಪೂತ ರಾಜ್ಯಗಳು ಉಚ್ಛ್ರಾಯಸ್ಥಿತಿಯಲ್ಲಿದ್ದುವು. ಭಾರತದಲ್ಲಿ ಮಹಮ್ಮದೀಯ ಆಳ್ವಿಕೆಯನ್ನು ಅವರು ವಿರೋಧಿಸಿದರು. ಅಸ್ತಿತ್ವದಲ್ಲಿದ್ದ ಚಿಕ್ಕ ಚಿಕ್ಕ ರಜಪೂತ ಸಂಸ್ಥಾನಗಳು ಮೊಘಲರ ಸಂಪೂರ್ಣ ಪ್ರಾಬಲ್ಯಕ್ಕೆ ಒಳಗಾಗದೆ ಉಳಿದುವು.

ಬ್ರಿಟಿಷರ ಕಾಲಕ್ಕೆ ಭಾರತದ ವಾಯುವ್ಯ ಪ್ರದೇಶದಲ್ಲಿದ್ದ ರಜಪೂತ 23 ರಾಜ್ಯಗಳು ಸೇರಿ 'ರಜಪುತಾನ' ಎನಿಸಿಕೊಂಡಿತು. ಇಲ್ಲಿನ ರಾಜರುಗಳಲ್ಲಿ ಬಹುಪಾಲು ರಜಪೂತರೇ ಆಗಿದ್ದುದರಿಂದ ರಜಪುತಾನ ಎಂಬ ಹೆಸರು ಬಂತು. ಸ್ವತಂತ್ರ ಭಾರತದಲ್ಲಿನ ರಾಜಸ್ಥಾನ, ರಜಪೂತರು ಅಧಿಕವಾಗಿರುವ ಪ್ರದೇಶ.

'ರಜಪೂತ' ಶಬ್ದ 'ರಾಜಪುತ್ರ' ಎಂಬುದರಿಂದ ಬಂದಿದೆ. ರಜಪೂತರ ಮೂಲದ ಬಗೆಗಿನ್ನೂ ಏನೂ ಅಷ್ಟು ಖಚಿತವಾಗಿ ತಿಳಿದಿಲ್ಲ. ಅವರು ಮಧ್ಯ ಏಷ್ಯದವರು ಎಂದು ಒಂದು ಅಭಿಪ್ರಾಯ… ಮೌರ್ಯರು. ಅವರ ಅನಂತರ ನಮ್ಮ ದೇಶಕ್ಕೆ ಬಂದ ಶಕರು, ಪಾರ್ಥಿಯನರು, ಬ್ಯಾಕ್ಟ್ರಿಯನರು, ಹೂಣರು ಮುಂತಾದ ವಿದೇಶೀಯರು ಭಾರತಕ್ಕೆ ಬಂದು ನೆಲೆಸಿದವರು. ಇವರು ಇಲ್ಲಿನ ಸಂಸ್ಕೃತಿಗೆ ಹೊಂದಿಕೊಂಡರು. ಹೀಗೆ ಬೆಳೆದ ಒಂದು ಗುಂಪು ರಜಪೂತರೆಂದು [illegible]. ರಜಪೂತರ ಬಗೆಗಿನ ಒಂದು ಕಥೆ ಹೀಗಿದೆ: ಪರಶುರಾಮ ಕ್ಷತ್ರಿಯರನ್ನು ನಿರ್ಮೂಲ ಮಾಡಿದಾಗ ದೇವತೆಗಳು ಅಬು ಪರ್ವತದ ಮೇಲೆ ಅಗ್ನಿಕುಂಡದಿಂದ ರಜಪೂತರನ್ನು ಸೃಷ್ಟಿಸಿದರಂತೆ. ಇವರು ಅಗ್ನಿಕುಲ ಕ್ಷತ್ರಿಯರೆಂದು ಹೆಸರಾದರು. ಸೂರ್ಯವಂಶ, ಚಂದ್ರವಂಶ, ಅಗ್ನಿಕುಲ – ಇವು ರಜಪೂತರಲ್ಲಿನ ಮುಖ್ಯ ಪಂಗಡಗಳು. ಅಗ್ನಿಕು…

ವಲ್ಲೇ ಪವಾರ, ಪರಿಹಾರ, ಚೌಹಾಣ್ ಮತ್ತು ಸೋಲಂಕಿಗಳೆಂದು ನಾಲ್ಕು ಪ್ರಭೇದಗಳಿವೆ. ಭಾರತದ ಇತಿಹಾಸದಲ್ಲಿ ಪ್ರಮುಖ ಪಾತ್ರವಹಿಸಿದ ರಜಪೂತ ವಂಶಗಳೆಂದರೆ ಗುರ್ಜರದ ಪ್ರತಿಹಾರರು, ಬುಂದೇಲಖಂಡದ ಚಂದೆಲ್ಲರು, ಮಾಳ್ವದ ಪರಮಾರರು, ಅಜ್ಮೀರಿನ ಚೌಹಾಣರು ಮತ್ತು ಪೂರ್ವ ಭಾರತದ ಪಾಲರು.

ರಜಪೂತರು ನಿರ್ಮಿಸಿದ ಸುಂದರ ಕಟ್ಟಡಗಳು, ಅಭೇದ್ಯ ಕೋಟೆಗಳು, ಚಿತೋಡ, ರಣಥಂಬೋರ್, ಮಂಡು, ಗ್ವಾಲಿಯರ್, ಜೋಧಪುರ, ಜಯಪುರಗಳಲ್ಲಿವೆ.

ರಜಿಯಾ ಬೇಗಂ

ದೆಹಲಿ ಸಿಂಹಾಸನದ ಮೇಲೆ ಮಂಡಿಸಿದ ಏಕೈಕ ಮಹಿಳೆ ಎಂಬ ಯಶಸ್ಸಿಗೆ ಪಾತ್ರಳಾದವಳು, ರಜಿಯಾ ಬೇಗಂ.

ಗುಲಾಮ ಸಂತತಿಯ ಅರಸ ಇಲ್ತುತ್‌ಮಿಷ್ ಮಗಳು, ರಜಿಯಾ. ಇಲ್ತುತ್‌ಮಿಷ್ 1236ರಲ್ಲಿ ಮರಣಹೊಂದಿದ. ರಜಿಯಾ ಉತ್ತರಾಧಿಕಾರಿ ಆಗಬೇಕೆಂದು ಅವನು ತನ್ನ ಮರಣಪೂರ್ವ ಬಯಕೆಯನ್ನು ತಿಳಿಸಿದ್ದರೂ ಅವನ ಆಸ್ಥಾನದಲ್ಲಿದ್ದ ತುರ್ಕಿ ಶ್ರೀಮಂತರು ಇಲ್ತುತ್‌ಮಿಷನ ಮಗ ರುಕ್ನುದ್ದೀನ್ ಫಿರೋಜ್ ಷಾನನ್ನು ಪಟ್ಟಕ್ಕೆ ತಂದರು. ಆತ ಸುಖಾಭಿಲಾಷಿಯಾಗಿ ಆಡಳಿತವನ್ನು ಕಡೆಗಣಿಸಿದ. ಈ ಕಾರಣದಿಂದ ರಜಿಯಾ ಬೇಗಂಳನ್ನು 1236ರಲ್ಲಿ ದೆಹಲಿಯ ಸಿಂಹಾಸನಕ್ಕೆ ಏರಿಸಿದರು.

ರಜಿಯಾ ದಕ್ಷ ಆಡಳಿತಗಾರ್ತಿ. ದೊಡ್ಡ ಸಾಮ್ರಾಜ್ಯವನ್ನು ಬುದ್ಧಿವಂತಿಕೆಯಿಂದ ಆಳಿದಳು. ಶ್ರೀಮಂತರು ದಂಗೆ ಎದ್ದಾಗ, ಯುದ್ಧಮಾಡಿ ಅವರನ್ನು ಸೋಲಿಸಿದಳು. ತನ್ನನ್ನು ವಿರೋಧಿಸುತ್ತಿದ್ದ ಶ್ರೀಮಂತರ ಪ್ರಾಬಲ್ಯವನ್ನು ಕುಂಠಿತಗೊಳಿಸಲು, ಅಬಿಸೀನಿಯದ ಗುಲಾಮ ಯಾಕೂತನನ್ನು ಅಶ್ವಶಾಲೆಯ ಮುಖ್ಯಸ್ಥನನ್ನಾಗಿ ಆಕೆ ನೇಮಿಸಿದಳು. ಇದರಿಂದ ಇವಳ ಪರವಾಗಿದ್ದ ಶ್ರೀಮಂತರೂ ವಿರೋಧಿಗಳಾದರು. ಇಖ್ತಿಯಾರುದ್ದೀನ್ ಅಲ್ತೂನಿಯಾ ಎಂಬಾತ ದಂಗೆ ಎದ್ದ. ದಂಗೆಕೋರರು ಯಾಕೂತನನ್ನು ಕೊಂದರು. ರಜಿಯಾ ಸೆರೆ ಸಿಕ್ಕಿದಳು. ರಜಿಯಾಳ ಸೋದರ ಬಹ್ರಾಂನನ್ನು ಸುಲ್ತಾನನೆಂದು ಘೋಷಿಸಿದರು.

ರಜಿಯಾ ಅಲ್ತೂನಿಯಾನನ್ನು ಮದುವೆಯಾದಳು. ದೆಹಲಿಯ ಸಿಂಹಾಸನ ಪಡೆಯಲು ಯುದ್ಧಮಾಡಿದಳು. 1240ರ ಅಕ್ಟೋಬರ್ 13ರಂದು ಬಹ್ರಾಂ ಇವರನ್ನು ಸೋಲಿಸಿದ. ಮರುದಿನ ಆತ ರಜಿಯಾ ಮತ್ತು ಅಲ್ತೂನಿ ಇಬ್ಬರನ್ನೂ ಕೊಲ್ಲಿಸಿದ.

'ಅರಸರಿಗೆ ಅಗತ್ಯವಾದ ಎಲ್ಲ ಗುಣವಿಶೇಷಗಳೂ ಆಕೆಯಲ್ಲಿದ್ದುವು' ಎಂದು ಒಬ್ಬ ಸಮಕಾಲೀನ ಚರಿತ್ರಕಾರ ರಜಿಯಾ ಬಗೆಗೆ ಹೇಳಿದ್ದಾನೆ.

ರಣಜಿತ್‌ಸಿಂಗ್

'ಪಂಜಾಬಿನ ಸಿಂಹ' ಎಂದು ಪ್ರಸಿದ್ಧನಾಗಿದ್ದ ಅರಸ – ರಣಜಿತ್‌ಸಿಂಗ್.

ಸುಕರ್‌ಚಕಿಯಾ ಕುಲದ ಮುಖ್ಯಸ್ಥ ಸರ್ದಾರ್ ಮಹಾಸಿಂಗನ ಮಗನಾಗಿ 1780ರ ನವೆಂಬರ್ 13ರಂದು ರಣಜಿತ್‌ಸಿಂಗ್ ಜನಿಸಿದ. ಸಿಡುಬಿ[illegible] 12 ನೆಯ ವರ್ಷಕ್ಕೆ ಸಿಕ್ಖ್ ಒಕ್ಕೂಟದ ಸುಕರ್‌ಚಕಿಯಾ ಶಾಖೆಯ ಮುಖ್ಯಸ್ಥನಾದ.

'ಪಂಜಾಬಿನ ಸಿಂಹ'

ಕಾಬೂಲಿನ ಜಮಾನ್ ಷಾ ಭಾರತದ ಮೇಲೆ ದಾಳಿ ಮಾಡಿದಾಗ, ಇವನು ಕೊಟ್ಟ ನೆರವಿಗಾಗಿ ಅವನಿಂದ 1798ರಲ್ಲಿ ಲಾಹೋರಿನ ಆಡಳಿತಾಧಿಕಾರವನ್ನು ಪಡೆದು, 'ರಾಜ'ನೆನಿಸಿಕೊಂಡ; ಅನಂತರ ಸ್ವತಂತ್ರನಾದ. 1802ರಲ್ಲಿ ಅಮೃತಸರವನ್ನು ಗೆದ್ದುಕೊಂಡ.

1806ರಲ್ಲಿ ಲುಧಿಯಾನಾವನ್ನು ಜಯಿಸಿದ ಬಳಿಕ ಬ್ರಿಟಿಷರೊಡನೆ ಘರ್ಷಣೆಯಾಯಿತು. ಬ್ರಿಟಿಷರು ಸಟ್ಲೆಜ್ ನದಿವರೆಗಿನ ಭೂಮಿಯನ್ನೆಲ್ಲ ಸ್ವಾಧೀನಪಡಿಸಿಕೊಂಡರು. 1808ರಲ್ಲಿ ವಿವಾದದ ಇತ್ಯರ್ಥಕ್ಕಾಗಿ ಮೆಟ್‌ಕಾಫ್ ನಿಯೋಗ ಬಂದಿತು. ಅಮೃತಸರದಲ್ಲಿ ಒಪ್ಪಂದ (1809) ಏರ್ಪಟ್ಟಿತು.

ಅನಂತರ ರಣಜಿತ್‌ಸಿಂಗ್ ತನ್ನ ಗಮನವನ್ನು ಉತ್ತರದತ್ತ ಹರಿಸಿದ. ಮುಲ್ತಾನ್, ಕಾಶ್ಮೀರ ಅವನ ರಾಜ್ಯಕ್ಕೆ ಸೇರಿದುವು. 1824ರ ವೇಳೆಗೆ ಸಟ್ಲೆಜ್ ಮತ್ತು ಸಿಂಧುನದಿಗಳ ನಡುವಣ ಪ್ರದೇಶ ಅವನ ಆಡಳಿತಕ್ಕೆ ಒಳಪಟ್ಟಿತು. 1834ರಲ್ಲಿ ಲಡಖ್ ಮತ್ತು ಪೆಷಾವರ್‌ಗಳನ್ನು ವಶಪಡಿಸಿಕೊಂಡ. ಅಫ್ಘನರು 1837ರಲ್ಲಿ ಪೆಷಾವರವನ್ನು ಪಡೆಯಲು ಮರು ಆಕ್ರಮಣ ಮಾಡಿದರೂ ಸಫಲರಾಗಲಿಲ್ಲ. 1838ರಲ್ಲಿ ಲಾರ್ಡ್ ಆಕ್ಲೆಂಡ್ ಮತ್ತು ಅಫ್ಘಾನಿಸ್ತಾನದ ಷಾ ಶೂಜರೊಡನೆ ತ್ರಿಪಕ್ಷ ಒಪ್ಪಂದ ಮಾಡಿಕೊಂಡ.

ಯೂರೋಪಿನ ಅಧಿಕಾರಿಗಳಿಂದ ತನ್ನ ಸೈನಿಕರಿಗೆ ರಣಜಿತ್ ಸಿಂಗ್ ತರಬೇತಿ ಕೊಡಿಸುತ್ತಿದ್ದ; ಅವನ ಸೈನ್ಯ ಏಷ್ಯದಲ್ಲೇ ಪ್ರಬಲ ಎಂದು ಹೆಸರಾಗಿತ್ತು.

ರಣಜಿತ್‌ಸಿಂಗ್ 1839 ಜೂನ್ 27ರಂದು ಲಾಹೋರಿನಲ್ಲಿ ನಿಧನನಾದ.

ರಣಜಿತ್‌ಸಿಂಹ್‌ಜಿ

ನೋಡಿ : ಸಂಪುಟ ೬

[illegible]

ತಿರಂಚಿರಪಳ್ಳಿಯ ಒಬ್ಬ ಜಟ್ಟಿ ಎಲ್ಲರನ್ನೂ ದ್ವಂದ್ವಯುದ್ಧಕ್ಕೆ ಕರೆದು ಸೋಲಿಸುತ್ತಿದ್ದ. ಮೈಸೂರಿನ ಒಬ್ಬ ರಾಜಕುಮಾರ ಮಾರುವೇಷದಲ್ಲಿ [illegible] ಕೊಂದ. ಈ ಅನಾಮಿಕನ ಧೈರ್ಯ, ಸಾಹಸ ಮೆಚ್ಚಿದ ರಾಜ ಬಹುಮಾನ ಕೊಡಬೇಕೆಂದಿದ್ದ. ಆದರೆ ಆತ ಯಾರಿಗೂ ಗೊತ್ತಾಗದಂತೆ ಹೊರಟೇ ಬಿಟ್ಟ.

ಆ ವ್ಯಕ್ತಿಯೇ [illegible] ಒಡೆಯರು.



ರಣಧೀರ . . .

ಅವರು ಬೆಟ್ಟದ ಚಾಮರಾಜ ಒಡೆಯರ ಪುತ್ರ. ದಳವಾಯಿ ವಿಕ್ರಮರಾಯ ಇಮ್ಮಡಿ ರಾಜ ಒಡೆಯರನ್ನು ವಿಷ ಕೊಟ್ಟು ಕೊಲ್ಲಿಸಿದಮೇಲೆ ದಳವಾಯಿಯನ್ನು ನಿಗ್ರಹಿಸಿ ಪಟ್ಟಕ್ಕೆ ಬಂದರು. ಇವರ ಆಳ್ವಿಕೆ ಕಾಲ 1638ರಿಂದ 1659.

ವಿಜಯನಗರ ಅವನತಿಯ ಹಾದಿ ಹಿಡಿದಿದ್ದ ಕಾಲ ಅದು. ಆಗ ಕನ್ನಡ ನಾಡನ್ನು ವಶಪಡಿಸಿಕೊಳ್ಳಲು ಬಿಜಾಪುರದ ಸುಲ್ತಾನ ಪ್ರಯತ್ನಿಸಿದ. ರಣದುಲ್ಲಾ ಖಾನನನ್ನು ಸೇನೆಯೊಡನೆ ಶ್ರೀರಂಗ ಪಟ್ಟಣ ಮುತ್ತಲು ಕಳುಹಿಸಿದ. ಶೌರ್ಯ, ದಿಟ್ಟತನದಿಂದ ಹೋರಾಡಿ ಒಡೆಯರು ಆತನನ್ನು ಸೋಲಿಸಿದರು.

ರಾಜ್ಯ ವಿಸ್ತರಣೆಯತ್ತ ಗಮನಹರಿಸಿ ಸತ್ಯಮಂಗಲ, ಡಣ್ಣಾಯಕನ ಕೋಟೆಯನ್ನು ವಶಪಡಿಸಿಕೊಂಡರು. ಪಿರಿಯಾಪಟ್ಟಣ, ಇಕ್ಕೇರಿಯ ಪಾಳೆಯಗಾರರು ಪರಾಜಿತರಾದರು. ನಾಗಮಂಗಲದಲ್ಲಿ ಅಧಿಕಾರಿಯಾಗಿದ್ದ ದೊಡ್ಡಯ್ಯನನ್ನು ತಮ್ಮ ವಿರುದ್ಧ ಒಳಸಂಚು ನಡೆಸಿದ್ದಕ್ಕಾಗಿ ಶಿಕ್ಷಿಸಿದರು. ಯಲಹಂಕದ ಬಳಿ ಮಾಗಡಿ ಕೆಂಪೇಗೌಡನನ್ನು ಸೋಲಿಸಿ, ಕಪ್ಪ ತೆಗೆದುಕೊಂಡರು. ವಿಜಯನಗರದ ಅರಸರೊಂದಿಗೆ ಮೈತ್ರಿಯಿಂದಿದ್ದ ಒಡೆಯರು ಶ್ರೀರಂಗರಾಯನಿಗೆ ಬೇಲೂರಿನಲ್ಲಿ ರಕ್ಷಣೆ ನೀಡಿದರು.

ಮುಂದೆ ಒಡೆಯರು ತಾವು ಸ್ವತಂತ್ರರೆಂದು ಘೋಷಿಸಿ, ಶ್ರೀರಂಗ ಪಟ್ಟಣದಲ್ಲಿ ಟಂಕಸಾಲೆ ಆರಂಭಿಸಿ, ತಮ್ಮ ಹೆಸರಿನಲ್ಲಿ ನಾಣ್ಯಗಳನ್ನು ಅಚ್ಚು ಮಾಡಿಸಿದರು. ಇವನ್ನು ಕಂಠೀರಾಯ ಹಣ ಎನ್ನುತ್ತಾರೆ.

ಕಾಲಕಾಲಕ್ಕೆ ಸರಿಯಾಗಿ ತೆರಿಗೆ ವಸೂಲುಮಾಡಿ ಬೊಕ್ಕಸವನ್ನು ವೃದ್ಧಿಪಡಿಸಿಕೊಂಡ ಒಡೆಯರು ಶ್ರೀರಂಗಪಟ್ಟಣದ ಕೋಟೆಯನ್ನು ವಿಸ್ತರಿಸಿ ಭದ್ರಗೊಳಿಸಿದರು. ನರಸಿಂಹದೇವಾಲಯ ಕಟ್ಟಿಸಿದರು. ಅಲ್ಲಿ ಕಂಠೀರವ ನರಸರಾಜ ಒಡೆಯರ ಪ್ರತಿಮೆ ಇದೆ. ಇವರು ಅಗ್ರಹಾರಗಳನ್ನು ಕಟ್ಟಿಸಿ ದಾನಕೊಟ್ಟರು.

ಕವಿ. ವಿದ್ವಾಂಸರಿಗೆ ಅವರು ಪೋಷಕರಾಗಿದ್ದರು. ಭಾಸ್ಕರನ 'ಬೇಹಾರ ಗಣಿತ.' ಗೋವಿಂದ ವೈದ್ಯ ವಿರಚಿತ 'ನರಸರಾಜ ವಿಜಯ.' ತಿಮ್ಮರಸಕವಿ ಬರೆದ 'ಮಾರ್ಕಂಡೇಯ ರಾಮಾಯಣ' ಅವರ ಕಾಲದಲ್ಲಿ ರಚಿತವಾದುವು.

1659ರಲ್ಲಿ ಒಡೆಯರು ನಿಧನರಾದರು. ಅವರಿಗೆ ಮಕ್ಕಳಿರಲಿಲ್ಲ.

ರತಿ

ದಕ್ಷಬ್ರಹ್ಮನ ಮಗಳಾದ ರತಿ ಮನ್ಮಥನ ಪತ್ನಿ. ಕಾಮಪ್ರಿಯಾ, ಕಾಮಿ. ಕಾಮಪತ್ನಿ, ಮಾಯಾವತಿ, ರೇವಾ, ರಾಗಲತಾ, ಶುಭಾಂಗಿ ಮೊದಲಾದ ಹೆಸರುಗಳೂ ಈಕೆಗೆ ಇವೆ.

ನೋಡಿ : ಮನ್ಮಥ

ರನ್ನ

ನೋಡಿ : ಸಂಪುಟ ೫

ರಮಣ ಮಹರ್ಷಿ

"ಆತ್ಮದಿಂದ ಬೇರೆಯಾಗಿ ದೇವರನ್ನು ಕಂಡೆ ಎಂದು ಹೇಳುವು ಮನಸ್ಸಿನ ಭ್ರಮೆ. ಯಾರು ಅಹಂಕಾರವನ್ನು ನಾಶಮಾಡಿ ಕಳೆ ಕೊಂಡು, ತನ್ನ ಆತ್ಮವನ್ನು ಕಂಡುಕೊಳ್ಳುತ್ತಾನೋ ಅಂಥವ ದೇವರನ್ನು ಕಂಡಿದ್ದಾನೆ ಎನ್ನಬಹುದು. ಯಾಕೆಂದರೆ, ದೇವರು ಆ ವಲ್ಲದೆ ಬೇರೆ ಅಲ್ಲ".

ತಾವು ಅನುಭವದಿಂದ ಕಂಡ ಸತ್ಯವನ್ನು ಸರಳ ಮಾತುಗಳ ಭಕ್ತರಿಗೆ ವಿವರಿಸಿದವರು ರಮಣ ಮಹರ್ಷಿ.



ಮೌನಸ್ವಾಮಿ ; ರಮಣ ಮಹ

ರಾಮನಾಡ್ ಜಿಲ್ಲೆಯ ತಿರುಚುಳಿ ಗ್ರಾಮದಲ್ಲಿ ರಮಣರು 1879 ಡಿಸೆಂಬರ್ 30ರಂದು ಜನಿಸಿದರು. ಹೆತ್ತವರು ಇಟ್ಟ ಹೆಸರು ವೆಂಕಟರಮಣ. ಅಮೆರಿಕನ್ ಮಿಷನ್ ಶಾಲೆಯಲ್ಲಿ ವಿದ್ಯಾಭ್ಯಾಸ.

ಎಳೆವಯಸ್ಸಿನಲ್ಲೇ ರಮಣರಿಗೆ ತನ್ಮಯತೆ ಉಂಟಾಗುತ್ತಿತ್ತು. ಜೊತೆ ವಯಸ್ಸಿನ ಹುಡುಗರು ಕೀಟಲೆ ಮಾಡಿ ಅವರನ್ನು ಎಳೆದೊಯ್ದು ಚೆನ್ನಾಗಿ ಹೊಡೆಯುತ್ತಿದ್ದರು. ಎಚ್ಚರವಾದ ಮೇಲೂ ಅವರಿಗೆ ನಡೆದ ಸಂಗತಿಯ ಅರಿವು ಇರುತ್ತಿರಲಿಲ್ಲ.

ಅರುಣಾಚಲದ ಶಿವನನ್ನು ಕಾಣಬೇಕೆಂಬ ತವಕದಿಂದ ಅವರು 1896 ಸೆಪ್ಟೆಂಬರ್ 1ರಂದು ಮನೆಬಿ ಅರುಣಾಚಲಕ್ಕೆ (ತಿರುವಣ್ಣಾಮಲೈ) ಹೋದರು. ಬೆಟ್ಟದ ಮೇ ಗುಹೆಯಲ್ಲಿ ಧ್ಯಾನ ಯೋಗಗಳಲ್ಲಿ ನಿರತರಾದರು. ಹಲವು ವರ್ಷಗ ಬಳಿಕ, 28ನೆಯ ವಯಸ್ಸಿಗೆ ಸಿದ್ಧಿ ಪಡೆದುಕೊಂಡರು. ಅಲ್ಲೇ ಆಶ್ರ ಸ್ಥಾಪಿಸಿ ನೆಲೆಸಿದರು. ದೇಶದ ಎಲ್ಲೆಡೆಗಳಿಂದ ಜಿಜ್ಞಾಸುಗಳು ಅಲ್ಲಿ ಬರತೊಡಗಿದರು. ಹಲವರು ರಮಣಮಹರ್ಷಿ ಅವರ ಅಚ್ಚುಮೆಚ್ಚಿ ಭಕ್ತರಾದರು.

ಅವರ ಆಶ್ರಮ ಅರುಣಾಚಲ ಬೆಟ್ಟದ ತಪ್ಪಲಿನಲ್ಲಿದೆ. ಮು ಪ್ರಾಂಗಣದ ಸುತ್ತ ಚಿಕ್ಕ ಪುಟ್ಟ ಗುಡಿಸಲುಗಳು.

ಅವರು ಮಾತಾಡುತ್ತಿದ್ದುದು ಅಪರೂಪ. ಆದ್ದರಿಂದ ಮೌನಸ್ವಾ ಎನ್ನುತ್ತಿದ್ದರು. ಸಾಧಕರು, ಜಿಜ್ಞಾಸುಗಳಿಗೆ ಅವರ ಬಳಿ ಕುಳಿ ಕೊಂಡರೇ ಸಾಕಾಗುತ್ತಿತ್ತು. ತಮ್ಮ ಅನುಮಾನಗಳಿಗೆಲ್ಲ ಸ ಉತ್ತರಗಳು ದೊರೆತಂತೆ ಅನಿಸುತ್ತಿತ್ತು.

ನಾನು ಎಂಬ ಮಮಕಾರ ತ್ಯಜಿಸಬೇಕು ಮತ್ತು ಸಾವಿನ ಬಗೆಗೆ ಭ ಹಚ್ಚಿಕೊಳ್ಳದೆ ಆತ್ಮಜ್ಞಾನ ಪಡೆಯಲು ಯತ್ನಿಸಬೇಕು ಎಂಬುದು ಅ ಮುಖ್ಯ ಉಪದೇಶ. ಅವರ ಭಕ್ತ ಸಮೂಹದಲ್ಲಿ ಅನೇಕ ಪಾಶ್ಚಾತ್ಯ ಇದ್ದರು. ಪಾಲ್ ಬರ್ಟನ್ ಎಂಬವರು 'ಎ ಸರ್ಚ್ ಫಾರ್ ಸೀಕ್ರೆ ಇಂಡಿಯಾ' ಮತ್ತು 'ದಿ ಮೆಸೇಜ್ ಆಫ್ ಅರುಣಾಚಲ' ಎಂಬ ಪುಸ

[illegible] ಈ ಕೃತಿಗಳ [illegible] ರಮಣ ಮಹರ್ಷಿಗಳ ಪರಿಚಯುವಾಯಿತು.

1950ರಲ್ಲಿ ಅವರು ನಿಧನರಾದರು.

ರಮಾನಂದ ಚಟರ್ಜಿ

[illegible] ಆಸಕ್ತಿಗಳಿಗೆ ಸ್ಥಾನಕೊಟ್ಟು ತಮ್ಮ ಪತ್ರಿಕೆ ಜನತೆಯ ಶಿಕ್ಷಣ ಸಾಧನವಾಗುವಂತೆ ಮಾಡಿದ ಸಂಪಾದಕ, ರಮಾನಂದ ಚಟರ್ಜಿ. ಅವರ ಪತ್ರಿಕೆಗಳು ಭಾರತದ —ಮುಖ್ಯವಾಗಿ ಬಂಗಾಳದ— ಜನತೆಯಲ್ಲಿ ನವಜಾಗೃತಿ ಉಂಟುಮಾಡಲು ಕಾರಣವಾದುವು.

"[illegible]" ಈ ಪತ್ರಿಕಾ ಸಂಪಾದಕನನ್ನು [illegible] ಸರಕಾರ 1910ರಲ್ಲಿ ಬಂಗಾಳದ ಪ್ರಾಂತೀಯ ಸರಕಾರಕ್ಕೆ ಸೂಚನೆ ನೀಡಿತು,

1866ರಲ್ಲಿ [illegible] ಅನಂತರ ಶಾಲಾ ಶಿಕ್ಷಕರಾದರು. [illegible] ತತ್ತ್ವನಿಷ್ಠರಾಗಿದ್ದ ಅವರು ಭಿನ್ನಾಭಿಪ್ರಾಯದ ಕಾರಣ ಆ ಹುದ್ದೆಗೆ ರಾಜಿನಾಮೆ ನೀಡಿದರು.



[illegible] : ರಮಾನಂದ...

ಕಳೆದ ಶತಮಾನದ ಕೊನೆಯ ದಶಕದಲ್ಲಿ'ದೇಶೀ'. 'ಪ್ರದೀಪ್', 'ಕಾಯಸ್ಥ ಸಮಾಚಾರ್' ಪತ್ರಿಕೆಗಳನ್ನು ಸ್ಥಾಪಿಸಿ ಪತ್ರಿಕಾ ವೃತ್ತಿ ಪ್ರಾರಂಭಿಸಿದರು. 'ಇಂಡಿಯನ್ ಮೆಸೆಂಜರ್' ಮತ್ತು ಮಕ್ಕಳ ಪತ್ರಿಕೆ 'ಮುಕುಲ್'ಗಳಲ್ಲಿ ಅವರು ಬರೆಯುತ್ತಿದ್ದರು.

1907ರಲ್ಲಿ 'ಮಾಡರ್ನ್ ರಿವ್ಯೂ' ಇಂಗ್ಲಿಷ್ ಮಾಸ ಪತ್ರಿಕೆಯನ್ನು ಪ್ರಾರಂಭಿಸಿದರು. ಆದರ ಬರೆಹಗಾರ ಬಳಗದಲ್ಲಿ [illegible] ಲಾಲಾ [illegible] ವರು ಇದ್ದರು. 1910ರಲ್ಲಿ ಬಂಗಾಳಿಯಲ್ಲಿ 'ಪ್ರವಾಸಿ' ಮಾಸಪತ್ರಿಕೆಯನ್ನು ಪ್ರಕಟಿಸತೊಡಗಿದರು.

[illegible] ಸ್ವದೇಶೀ ಪ್ರತಿಭೆಯನ್ನು ಪ್ರತಿಬಿಂಬಿಸುತ್ತಿದ್ದುವು.

[illegible] ವಾಗಿಯೂ ರಂಜನೀಯವಾಗಿಯೂ ಇರುತ್ತಿದ್ದುವು. ಮೊದಲು [illegible] ನಾಥ ಠಾಕೂರರು ತಮ್ಮ ಹಲವಾರು ಕವನಗಳನ್ನು ತಾವೇ ಇಂಗ್ಲಿಷಿಗೆ ಭಾಷಾಂತರಿಸಲು ರಮಾನಂದರ ಒತ್ತಾಯವೇ ಕಾರಣ. ಅವು 'ಮಾಡರ್ನ್ ರಿವ್ಯೂ'ನಲ್ಲಿ ಪ್ರಕಟವಾಗಿ ವಿದೇಶಗಳಲ್ಲೂ ಪ್ರಸಿದ್ಧಿ ಪಡೆದುವು.

1943 ಸೆಪ್ಟೆಂಬರ್ 30ರಂದು, 78ನೆಯ ವಯಸ್ಸಿನಲ್ಲಿ ನಿಧನರಾದರು. [illegible] ಸಂದಿತು.

ರಮೇಶಚಂದ್ರ ದತ್

ಬ್ರಿಟಿಷ್ ಸರಕಾರದ ಉದ್ಯೋಗದಲ್ಲಿ ಇದ್ದುಕೊಂಡೇ ಎಷ್ಟರಮಟ್ಟಿಗೆ [illegible] ನಡೆದದ್ದು ಕಲ್ಕತ್ತೆಯಲ್ಲಿ. ಇಂಗ್ಲೆಂಡಿಗೆ ತೆರಳಿ ಐ.ಸಿ.ಎಸ್. ಪರೀಕ್ಷೆಯಲ್ಲಿ [illegible] ಇವರ ಪ್ರವಾಸ ಸಾಹಿತ್ಯ.

1871ರಲ್ಲಿ ಭಾರತಕ್ಕೆ ಮರಳಿ ಬಂಗಾಳ ಸರಕಾರದಲ್ಲಿ ಉದ್ಯೋಗ ಕೈಗೊಂಡ ಆರ್.ಸಿ. ದತ್ ಸಮರ್ಥ ಅಧಿಕಾರಿ ಎಂಬ ಹೆಸರು ಗಳಿಸಿದರು. ಗಂಗಾನದಿಯ ಮುಖಜಭೂಮಿಯಲ್ಲಿರುವ ದ್ವೀಪ ದಕ್ಷಿಣ ಸಹಾಬಾಜಪುರದಲ್ಲಿ ನೆರೆಯಿಂದ ಸುಮಾರು ಒಂದು ಲಕ್ಷ ಜನರು ತೀರಿಕೊಂಡಾಗ ದತ್ತರು ಪರಿಹಾರ ಕಾರ್ಯಕ್ರಮ ಕೈಗೊಂಡರು. ಇನ್ನೂ ಹಲವು ವರ್ಷ ಉದ್ಯೋಗದಲ್ಲಿರುವ ಅವಕಾಶ ಇದ್ದರೂ, 1897ರಲ್ಲಿ ರಾಜಿನಾಮೆ ಕೊಟ್ಟು ಸಾಹಿತ್ಯ ಸೇವೆ, ಸಮಾಜ ಸುಧಾರಣೆಯ ಕಾರ್ಯದಲ್ಲಿ ನಿರತರಾದರು.

ಸ್ವದೇಶೀ ಚಳುವಳಿಯನ್ನು ಅವರು ಹುಮ್ಮಸ್ಸಿನಿಂದ ಮುಂದುವರಿಸಿದರು. ಜನಪ್ರಿಯ ಮುಖಂಡರಾದ ದತ್ 1899ರ ಲಖನೌ ಕಾಂಗ್ರೆಸ್ ಅಧಿವೇಶನಕ್ಕೆ ಅಧ್ಯಕ್ಷರೂ ಆದರು.

ದತ್ ಅವರು [illegible] (ಹಲವು ಜಿಲ್ಲೆಗಳು [illegible] ಪ್ರದೇಶ) [illegible] ಸರಕಾರದ ಧೋರಣೆಗಳ ಮೇಲೆ ಪ್ರಭಾವ ಬೀರಿ ಸಾರ್ವಜನಿಕರ ಹಿತಾಸಕ್ತಿಯನ್ನು ಸಾಧಿಸಿದರು.

ರಮೇಶಚಂದ್ರ ದತ್ ಅವರು ಬಂಗಾಳಿಯಲ್ಲಿ ಬರೆದ [illegible] ಭಾಷಾಂತರಗೊಂಡಿವೆ.

ಋಗ್ವೇದವನ್ನು ಸಂಸ್ಕೃತದಿಂದ ಬಂಗಾಳಿಗೆ [illegible] ಯುಗದಲ್ಲಿ ಭಾರತ' [illegible] ಇಂಗ್ಲಿಷ್ ಭಾಷೆಯ



ದೇಶ ಸೇವೆ : ರಮೇಶಚಂದ್ರ ದತ

ಗ್ರಂಥಗಳು. ಎರಡು ಸಂಪುಟಗಳ 'ಭಾರತದ ಆರ್ಥಿಕ ಚರಿತ್ರೆ' ಇಂಗ್ಲಿಷಿನಲ್ಲಿರುವ ಇವರ ಇನ್ನೊಂದು ಪ್ರಮುಖ ಕೃತಿ. ದತ್ತರು 'ರಾಮಾಯಣ', 'ಮಹಾಭಾರತ'ಗಳನ್ನು ಇಂಗ್ಲಿಷಿಗೆ ಅನುವಾದ ಮಾಡಿದರು.

ಲಂಡನ್ ವಿಶ್ವವಿದ್ಯಾಲಯದ ಆಹ್ವಾನದ ಮೇರೆ ರಮೇಶಚಂದ್ರ ದತ್ ಚರಿತ್ರೆಯ ಪ್ರಾಧ್ಯಾಪಕರಾಗಿ ಇಂಗ್ಲೆಂಡಿನಲ್ಲಿ ಕೆಲವು ವರ್ಷ ಇದ್ದರು. ಬರೋಡ ಸಂಸ್ಥಾನದ ಅರಸರಾಗಿದ್ದ ಸಯಾಜಿರಾವ್ ಗಾಯಕ್‌ವಾಡರು ದತ್ತರನ್ನು ತಮ್ಮಲ್ಲಿ ಕಂದಾಯ ಮಂತ್ರಿಯಾಗಿ ಬರುವಂತೆ ಆಹ್ವಾನಿಸಿದರು. ಮುಂದೆ ರಮೇಶಚಂದ್ರ ದತ್ ಅಲ್ಲಿಯ ದಿವಾನರಾದರು. ಆ ಸ್ಥಾನದಲ್ಲಿದ್ದಾಗಲೇ, 1908 ನವೆಂಬರ್ 30ರಂದು, ತೀರಿಕೊಂಡರು.

ರವಿಶಂಕರ್

ಭಾರತೀಯ ಶಾಸ್ತ್ರೀಯ ಸಂಗೀತ ಮಾಧುರ್ಯಕ್ಕೆ ಪರದೇಶದವರೂ ಮಾರುಹೋಗುವಂತೆ ಮಾಡಿದ ಸಿತಾರ್‌ವಾದಕ ರವಿಶಂಕರ್. ವಿದೇಶೀ ಚಲಚ್ಚಿತ್ರಕ್ಕೆ ಸಂಗೀತ ರಚನೆ ನೀಡಿದ ಭಾರತೀಯರಲ್ಲಿ ಇವರು ಮೊದಲಿಗರು.

1920 ಏಪ್ರಿಲ್ 7ರಂದು ವಾರಾಣಸಿಯಲ್ಲಿ ಜನನ. ರವಿಶಂಕರ್ ಸಂಗೀತ, ನೃತ್ಯಗಳನ್ನು ಅಭ್ಯಾಸ ಮಾಡಿದರು. ಅಣ್ಣ ಉದಯಶಂಕರರ ಕಂಪೆನಿಯನ್ನು ಸೇರಿ ಬ್ಯಾಲೆಗಳಲ್ಲಿ ಭಾಗವಹಿಸಿದರು. 1936ರಲ್ಲಿ ಯುರೋಪಿನಲ್ಲಿ ನೃತ್ಯ ಪ್ರದರ್ಶನಗಳನ್ನು ನೀಡಿದರು. ಭಾರತ ಮತ್ತು ವಿದೇಶಗಳಲ್ಲಿ ವ್ಯಾಪಕವಾಗಿ ಸಂಚರಿಸಿದರು.

ಹದಿನೆಂಟರ ಹರೆಯದ ವರೆಗೂ ಸಿತಾರ್ ಸಂಗೀತ ರವಿಶಂಕರರಿಗೆ ಅಪರಿಚಿತವಾಗಿತ್ತು. ಉಸ್ತಾದ್ ಅಲ್ಲಾವುದ್ದೀನ್‌ಖಾನರ ಸಿತಾರ್‌ವಾದನ ಇವರನ್ನು ಸೆರೆಹಿಡಿಯಿತು. ಅವರ ಬಳಿ 1938-44ರ ಅವಧಿಯಲ್ಲಿ ಶಿಷ್ಯವೃತ್ತಿ ಕೈಗೊಂಡರು. ಅನಂತರ ಅನೇಕ ಬ್ಯಾಲೆ ನೃತ್ಯಗಳಿಗೆ ಸಂಗೀತ ರಚನೆ ಮಾಡಿದರು. 1948ರಲ್ಲಿ ನೆಹರೂ ಅವರ 'ಡಿಸ್ಕವರಿ ಅಫ್ ಇಂಡಿಯಾ' ಕೃತಿಯ ಬ್ಯಾಲೆಗೆ ಸಂಗೀತ ಅಳವಡಿಸಿದರು. ಅನಂತರ ಆಕಾಶವಾಣಿಯ ವಾದ್ಯವೃಂದದ ನೇತೃತ್ವದಲ್ಲಿದ್ದರು.

ಪ್ಯಾರಿಸಿನಲ್ಲಿ ನಡೆದ 1958ರ ಯುನೆಸ್ಕೊ ಸಂಗೀತೋತ್ಸವದಲ್ಲಿ ವಿಖ್ಯಾತ ಯೆಹೂದಿ ಮೆನುಹಿನ್, ಮತ್ತು ಡೇವಿಡ್ ಆಯ್‌ಸ್ಟ್ರಾರ್ಕ್‌ರ ಒಡಗೂಡಿ ಸಂಗೀತ ಕಾರ್ಯಕ್ರಮ ನಡೆಸಿದರು. ಸಿತಾರ್‌ವಾದನ, ವಾದ್ಯ ಸಂಗೀತಕ್ಕಾಗಿ ಸಂಗೀತ ರಚನೆಗಳನ್ನು ಅಳವಡಿಸುವುದು, ಚಲಚ್ಚಿತ್ರ ಸಂಗೀತರಚನೆ, ವೃಂದ ಗಾನವನ್ನು ಪರಿಣಾಮಕಾರಿಯಾಗಿ ಬಳಸುವುದು — ಈ ಕ್ಷೇತ್ರಗಳಲ್ಲಿ ರವಿಶಂಕರ್ ಪರಿಣತರು.

ಸಿತಾರಿಗೆ ವಿಶ್ವ ಮಾನ್ಯತೆ : ರವಿಶಂಕರ್

ರವಿಶಂಕರ್ ಅಮೆರಿಕ ಮುಂತಾದ ದೇಶಗಳಲ್ಲಿ ಹಲವು ಬಾರಿ ಸಂಗೀತ ಪ್ರವಾಸ ಕೈಗೊಂಡಿದ್ದಾರೆ. 1967ರಲ್ಲಿ ಅಮೆರಿಕದ ಲಾಸ್ ಏಂಜೆಲ್ಸ್‌ನಲ್ಲಿ 'ಕಿನ್ನರ ಶಾಲೆ'ಯನ್ನು ಸ್ಥಾಪಿಸಿದರು. 1970ರ 'ಕ್ಯಾಲಿಫೋರ್ನಿಯ ಕಲಾ ಸಂಸ್ಥೆ'ಯಲ್ಲಿ ಭಾರತೀಯ ಸಂಗೀತ ವಿಭಾಗದ ಮುಖ್ಯಸ್ಥರಾದರು. ಸಂಗೀತನಾಟಕ ಅಕಾಡೆಮಿಯ ಫೆಲೊ ಪದವಿ, ಕ್ಯಾಲಿಫೋರ್ನಿಯ ರೀಜೆಂಟ್ಸ್ ವಿಶ್ವವಿದ್ಯಾನಿಲಯದ ಲಲಿತಕಲೆಗಳ ಗೌರವ ಪದವಿ ಇವರಿಗೆ ದೊರೆತಿವೆ. ನ್ಯೂಯಾರ್ಕಿನ ಸಿಟಿ ಕಾಲೇಜಿನಲ್ಲಿ ರವಿಶಂಕರ್ ಸಂದರ್ಶಕ ಪ್ರಾಧ್ಯಾಪಕರು.

ಇವರ ಸಂಗೀತಕ್ಕೆ ಅಂತರರಾಷ್ಟ್ರೀಯ ಪ್ರಶಸ್ತಿ 'ಸಿಲ್ವರ್ ಬೇರ್' ಲಭಿಸಿದೆ. 'ಸಂಗೀತ ಸ್ಮರಣೆಯ ಹೊತ್ತಗೆ' 'ನನ್ನ ಸಂಗೀತ, ನನ್ನ ಜೀವನ' —ಇವು ಇಂಗ್ಲಿಷಿನಲ್ಲಿ ರವಿಶಂಕರ್ ಬರೆದಿರುವ ಎರಡು ಪುಸ್ತಕಗಳು. 1968ರಲ್ಲಿ ಭಾರತ ಸರಕಾರ ಅವರಿಗೆ ಪದ್ಮಭೂಷಣ ಪ್ರಶಸ್ತಿ ನೀಡಿತು.

ರವೀಂದ್ರನಾಥ ಠಾಕೂರ



ಠಾಕೂರರೊಂದಿಗೆ ಬಾಪು, ಬಾ

ನೋಡಿ : ಸಂಪುಟ ೫

ರಹೀಮ್

ಜನಪ್ರಿಯ ಹಿಂದೀ ಹಾಡುಗಳನ್ನು ರಚಿಸಿದ ಕವಿ ಅಬ್ದುರ್ ರಹೀಮ್ ಖಾನ್ –ಇ –ಖಾನಾನ್ ಅಕ್ಬರ್ ಚಕ್ರವರ್ತಿಯ ಮಲಸಹೋದರ. ಅವನಿಗೆ ಪ್ರಿಯನಾಗಿದ್ದವ. ಈತ ತುರ್ಕಿ, ಪಾರಸೀ, ಅರಬ್ಬಿ, ಸಂಸ್ಕೃತ ಭಾಷೆಗಳಲ್ಲಿ ಪಂಡಿತ.

[illegible] ಕಾಲದ ಜೀವನಕ್ಕೆ ಕೈಪಿಡಿ ಇವನ ಹಾಡುಗಳು. 'ಬರ್‌ವಾಯ್ ನಾಯಿಕಾ [illegible]' ಮುಂತಾದುವು ಇವನ ಕೆಲವು ಕವನ ಸಂಗ್ರಹಗಳು.

ರಹೀಮ್ 1625ರಲ್ಲಿ ಕಾಲವಾದ.

ರಾಂಚಿ

ದಕ್ಷಿಣ ಬಿಹಾರದ ಛೋಟಾ ನಾಗಪುರ ಪ್ರಸ್ಥಭೂಮಿಯಲ್ಲಿರುವ ಕೈಗಾರಿಕಾ ಪಟ್ಟಣ ರಾಂಚಿ. ಇದು ಕಲ್ಲಿದ್ದಲು ಮತ್ತು ಕಬ್ಬಿಣ ನಿಕ್ಷೇಪ ವಲಯಗಳ ನಡುವೆ ಇದೆ.

ರಾಂಚಿಯ ಹೆವಿ ಎಂಜಿನಿಯರಿಂಗ್ ಕಾರ್ಪೊರೇಷನ್ ಲಿಮಿಟೆಡ್ 1958ರಲ್ಲಿ ಆರಂಭವಾಯಿತು. ಬೃಹತ್‌ಯಂತ್ರ ತಯಾರಿಕಾ ಕಾರಖಾನೆ, [illegible] ಸಹಾಯದಿಂದಲೂ ಉಳಿದೆರಡು ಜೆಕ್ ನೆರವಿನಿಂದಲೂ ಸ್ಥಾಪಿಸಲ್ಪಟ್ಟುವು.

ರಾಂಚಿ ನಗರ ಸಮುದ್ರಮಟ್ಟದಿಂದ 2,200 ಅಡಿ ಎತ್ತರದಲ್ಲಿದೆ. ರಾಂಚಿ ವಿಶ್ವವಿದ್ಯಾನಿಲಯ ಕೇಂದ್ರ ಇಲ್ಲಿದೆ. ಮನೋರೋಗಿಗಳಿಗಾಗಿ ಎರಡು ದೊಡ್ಡ ಆಸ್ಪತ್ರೆಗಳು, ಅನೇಕ ವಿದ್ಯಾಸಂಸ್ಥೆಗಳು ನಗರದಲ್ಲಿವೆ. ಇಲ್ಲಿನ ಜನಸಂಖ್ಯೆ 1,75,934.

ಇಲ್ಲಿನ ಸಾಹಿಬ್‌ಬಂಧ್ ಕೊಳದ ನಿವೇಶನ ಮನೋಹರವಾಗಿದೆ. ರಾಂಚಿಗುಡ್ಡ ಎಂಬಲ್ಲಿಂದ 11 ಮೈಲು ದೂರದಲ್ಲಿ ಖ್ಯಾತ ಪುರಿ ಜಗನ್ನಾಥ ದೇವಾಲಯದ ಪ್ರತಿರೂಪದಂತಿರುವ ಒಂದು ದೇವಾಲಯವಿದೆ. ರಾಂಚಿಯಿಂದ ಸುಮಾರು 27 ಮೈಲು ದೂರದಲ್ಲಿ ರಮಣೀಯ ಹುಂದ್ರು ಜಲಪಾತವಿದೆ. ರಾಂಚಿ ಒಂದು ಚಳಿಗಾಲ ಧಾಮವೂ ಹೌದು.

ರಾಘವೇಂದ್ರಸ್ವಾಮಿ

ನೋಡಿ : ಮಂತ್ರಾಲಯ

ರಾಜ್‌ಸಿಂಗ್

ಮೊಘಲ್ ಚಕ್ರವರ್ತಿ ಔರಂಗಜೇಬನ ಆಕ್ರಮಣವನ್ನು ಅತಿ ಚಾತುರ್ಯದಿಂದ ಎದುರಿಸಿದ ರಜಪೂತ ದೊರೆ ರಾಣಾ ರಾಜ್‌ಸಿಂಗ್.

ಔರಂಗಜೇಬನ ಆಕ್ರಮಣಶೀಲ ನೀತಿ ಮತ್ತು ಇದ್ದಕ್ಕಿದ್ದಂತೆ ರಜಪೂತ ರಾಜ್ಯಗಳಲ್ಲಿ ಆತ ವಿಧಿಸಿದ ಜೆಜಿಯಾ ತೆರಿಗೆ ಯುದ್ಧಕ್ಕೆ ಕಾರಣವಾದುವು. ಮಾರವಾಡದ ಮೇಲೆ ಮೊಘಲ್ ಸೈನ್ಯ ದಂಡೆತ್ತಿಹೋಯಿತು. ಮಾರವಾಡದ ದೊರೆ ಅಜಿತ್‌ಸಿಂಗನೂ ಮೇವಾಡದ ದೊರೆ ರಾಣಾ ರಾಜ್‌ಸಿಂಗನೂ ನೆಂಟರು. ಮಾರವಾಡದ ಅನಂತರ ಮೇವಾಡಕ್ಕೂ [illegible] ಮೇವಾಡಗಳೆರಡೂ ಕೂಡಿ ಯುದ್ಧದಲ್ಲಿ ತೊಡಗಿದುವು.

ಮೇವಾಡವನ್ನು ಔರಂಗಜೇಬ್ ಮುತ್ತಿದಾಗ ನೇರವಾಗಿ ಎದುರಿ[illegible] ಗಳಾಗಲೀ ಮೊಘಲರಿಗೆ ದೊರೆಯಲಿಲ್ಲ.

[illegible] ತಾತ್ಕಾಲಿಕವಾಗಿತ್ತು. ಅವನ ಮಗ ರಾಣಾ ಜಯಸಿಂಗನ ಕಾಲದಲ್ಲಿ 1681ರಲ್ಲಿ ಮೊಘಲರೊಡನೆ ಒಪ್ಪಂದ ಅನಿವಾರ್ಯವಾಯಿತು.

ರಾಜಗುರು

ಕ್ರಾಂತಿಕಾರಿಯಾಗಿ ಜೀವ ಅರ್ಪಿಸಿದವರು ಶಿವರಾಮ್ ರಾಜಗುರು.

ಜನಿಸಿದ್ದು ಉತ್ತರ ಪ್ರದೇಶದ ವಾರಾಣಸಿಯಲ್ಲಿ. ಅವರು ಕ್ರಾಂತಿಕಾರಿ ಪಕ್ಷದ ಸದಸ್ಯರಾಗಿ, ಸ್ವಾತಂತ್ರ್ಯ ಚಳುವಳಿಯಲ್ಲಿ ಉತ್ಸಾಹದಿಂದ ಭಾಗವಹಿಸಿದರು.

[illegible] ಇವರನ್ನು ಪುಣೆಯಲ್ಲಿ 1929 ಸೆಪ್ಟೆಂಬರ್ 30ರಂದು ಬಂಧಿಸಲಾಯಿತು. ವಿಚಾರಣೆಯಲ್ಲಿ ಭಗತ್ ಸಿಂಗ್, ರಾಜಗುರು, ಸುಖದೇವ್ ಮೂವರಿಗೂ ಗಲ್ಲಿನ ಶಿಕ್ಷೆಯಾಯಿತು.

ಭಗತ್ ಸಿಂಗ್, ಸುಖದೇವರೊಡನೆ 1931 ಮಾರ್ಚ್ 23ರಂದು ರಾಜಗುರು ಗಲ್ಲುಕಂಬವನ್ನೇರಿದರು.

ಗಲ್ಲುಕಂಬ : ರಾಜಗುರು

ನೋಡಿ : ಭಗತ್‌ಸಿಂಗ್ ; ಸುಖದೇವ್

ರಾಜಘಾಟ್

1948 ಜನವರಿ 30ರಂದು ನಿಧನರಾದ ಗಾಂಧೀಜಿಯ ಶವಸಂಸ್ಕಾರ ದೆಹಲಿಯ ಸಮೀಪ ಯಮುನಾ ನದಿಯ ತೀರದಲ್ಲಿ ನಡೆಯಿತು. ಆ ಜಾಗ–ರಾಜಘಾಟ್. ಅಂದಿನಿಂದ ಅದು ರಾಷ್ಟ್ರೀಯ ಯಾತ್ರಾಸ್ಥಳ.

ಗಾಂಧೀಜಿಯ ಜನ್ಮದಿನ ಮತ್ತು ಪುಣ್ಯತಿಥಿಗಳ ದಿನಗಳಲ್ಲಿ ಇಲ್ಲಿ [illegible] ಬರುವ ಪ್ರತಿಷ್ಠಿತರು ರಾಜಘಾಟಿಗೆ ಹೋಗಿ ಪುಷ್ಪಗುಚ್ಛ ಅರ್ಪಿಸಿ ಭಾರತದ ರಾಷ್ಟ್ರಪಿತನಿಗೆ ಗೌರವ ಸಲ್ಲಿಸುತ್ತಾರೆ.

[illegible]

ನೆಹರೂ ಸ್ಮಾರಕ ಇರುವ ಶಾಂತಿವನ ಮತ್ತು ಲಾಲ್ ಬಹದ್ದೂರ್ ಶಾಸ್ತ್ರೀ ಸ್ಮಾರಕ ಇರುವ ವಿಜಯಘಾಟ್ ಇವೆ.

'ರಾಜತರಂಗಿಣಿ'

ಭಾರತದ ಪ್ರಮುಖ ಇತಿಹಾಸ ಗ್ರಂಥ 'ರಾಜತರಂಗಿಣಿ' ಸಂಸ್ಕೃತ ಭಾಷೆಯಲ್ಲಿದೆ. ಇದು ಕಾಶ್ಮೀರದ ಇತಿಹಾಸಕ್ಕೆ ಮಾತ್ರ ಸಂಬಂಧಪಟ್ಟಿದೆ. ಇದರ ಕರ್ತೃ ಕಲ್ಹಣ.

ಅಶೋಕನಿಂದ 12ನೆಯ ಶತಮಾನದ ಮಧ್ಯಭಾಗದ ವರೆಗೆ ಇದರಲ್ಲಿ ವಿವರಗಳು ದೊರೆಯುತ್ತವೆ.

'ರಾಜತರಂಗಿಣಿ'ಯಲ್ಲಿ 12 ಅಧ್ಯಾಯಗಳೂ 8000 ಶ್ಲೋಕಗಳೂ ಇವೆ. ಆಹಾರವಸ್ತುಗಳ ಬೆಲೆ, ತೆರಿಗೆ, ಕ್ಷಾಮ, ಸಮಾಜದಲ್ಲಿದ್ದ ಮೋಸ–ದುರಾಸೆಗಳು, ದಿಷ್ಟಾ ರಾಣಿಯ ಆಡಳಿತದಲ್ಲಿ ರಾಜ್ಯ ಬಳಲಿದ್ದು ಮುಂತಾದ ಚಾರಿತ್ರಿಕ ವಿಷಯಗಳು ಇದರಲ್ಲಿವೆ. ಉತ್ಪ್ರೇಕ್ಷೆಯ ಕೆಲವಂಶಗಳೂ ಇವೆ. ತನಗಿಂತ ಮೊದಲಿನ ಬರೆಹಗಳನ್ನೂ ಶಿಲಾಲೇಖಗಳನ್ನೂ ಅಭ್ಯಸಿಸಿ ಕಲ್ಹಣ 'ರಾಜತರಂಗಿಣಿ'ಯನ್ನು ರಚಿಸಿದ.

15ನೆಯ ಶತಮಾನದ ಆದಿಭಾಗದಲ್ಲಿ ಇದು ಪಾರಸೀ ಭಾಷೆಗೆ ಅನುವಾದಿಸಲ್ಪಟ್ಟಿತು. 1898 ಹಾಗೂ 1900ರಲ್ಲಿ ಇದರ ಇಂಗ್ಲಿಷ್ ರೂಪಗಳು ಪ್ರಕಟಗೊಂಡುವು.

ನೋಡಿ : ಕಲ್ಹಣ

ರಾಜರಾಜ ಚೋಳ

'ಮಹಾಶಯ ರಾಜರಾಜ' ಎಂದು ಕರೆಯಲ್ಪಟ್ಟ ರಾಜರಾಜ ಚೋಳ ಒಬ್ಬ ಶ್ರೇಷ್ಠ ದೊರೆ. ಅವನು ಆಳಿದ್ದು 985ರಿಂದ 1014ರ ವರೆಗೆ.

ಪಟ್ಟಕ್ಕೆ ಬಂದ ಮೊದಲ ಹತ್ತು ವರ್ಷಗಳನ್ನು ರಾಜ್ಯದ ವ್ಯವಸ್ಥೆಗಳನ್ನು ಸುಭದ್ರಮಾಡಿಕೊಳ್ಳುವುದರಲ್ಲಿ ರಾಜರಾಜ ಕಳೆದ. ಆಡಳಿತವನ್ನು ಸುಧಾರಿಸಿದ; ಭಂಡಾರ ಭದ್ರಪಡಿಸಿದ; ಸೈನ್ಯವನ್ನು ಹೆಚ್ಚಿಸಿದ. ಕೇರಳ, ಸಿಂಹಳ ಹಾಗೂ ಪಾಂಡ್ಯರ ಮಿತ್ರತ್ವಕ್ಕೆ ಪೆಟ್ಟುಹಾಕಿದ. ಚೋಳ ರಾಜ್ಯದ ಸಾಗರೋತ್ತರ ವ್ಯಾಪಾರ ಅರಬರೊಡನೆ ಚೆನ್ನಾಗಿ ಕುದುರಿತು. ರಾಜರಾಜನ ಸೈನ್ಯ ಮಾಲ್ದೀವ್ ದ್ವೀಪ, ಲಕ್ಷದ್ವೀಪಗಳನ್ನು ಆಕ್ರಮಿಸಿತು. ಚೇರ, ಪಾಂಡ್ಯ, ವೆಂಗಿ, ಕಳಿಂಗಗಳ ಮೇಲೂ ರಾಜರಾಜ ದಿಗ್ವಿಜಯ ಮಾಡಿ ಮರಳಿದ.

ರಾಜರಾಜ ಕಲೆಗಳನ್ನು ಪೋಷಿಸಿದ. ದೇವಾಲಯಗಳಿಗೆ ಹೆಚ್ಚಿನ ಪ್ರಾಮುಖ್ಯವಿತ್ತು. ತಂಜಾವೂರಿನ ಬೃಹದೀಶ್ವರ ದೇವಾಲಯ ಇವನ ಕಾಲದ ರಚನೆ. ಈ ರಾಜರಾಜನ ದಿಗ್ವಿಜಯಗಳು ಶಿಲ್ಪದಲ್ಲಿ ಮೂಡಿಸಲ್ಪಟ್ಟಿವೆ.

ರಾಜರಾಜನ ರಾಜ್ಯದಲ್ಲಿ ಕೇರಳ, ಮತ್ತು ಕೊಂಕಣ ಸೇರಿದ್ದುವು. ಉತ್ತರದಲ್ಲಿ ತುಂಗಭದ್ರಾ ನದಿಯ ವರೆಗೆ, ಪೂರ್ವದಲ್ಲಿ ಒರಿಸ್ಸಾದವರೆಗೆ ಅವನ ರಾಜ್ಯ ಹಬ್ಬಿತ್ತು.


ರಾಜಶೇಖರ

ನೋಡಿ : ಸಂಪುಟ ೨.

ರಾಜಸ್ಥಾನ

ಶೌರ್ಯ, ಸಾಹಸಗಳಿಗೆ ಹೆಸರಾದ ರಜಪೂತರ ನಾಡು ರಾಜಸ್ಥಾನ. ರಾಜಸ್ಥಾನದ ಕೋಟೆ, ಕೊತ್ತಳ, ಅರಮನೆಗಳ ಅವಶೇಷಗಳು ಚಾರಿತ್ರಿಕ ಘಟನೆಗಳಿಗೆ ಸಾಕ್ಷಿಯಾಗಿವೆ.

ರಾಷ್ಟ್ರದ ಅತಿ ದೊಡ್ಡ ರಾಜ್ಯಗಳಲ್ಲಿ ಎರಡನೆಯದು ರಾಜಸ್ಥಾನ. ಈ ರಾಜ್ಯದ ಸರಿ ಸುಮಾರು ಮಧ್ಯದಲ್ಲಿ ಅರಾವಳಿ ಬೆಟ್ಟ ಶ್ರೇಣಿಯಿದೆ. ಇದರ ಉತ್ತರ ಮತ್ತು ಪಶ್ಚಿಮ ಪ್ರದೇಶ ಬಹುಮಟ್ಟಿಗೆ ಮರಳುಗಾಡು. ಈ ಪ್ರದೇಶದ ಅಂತ್ಯದಲ್ಲಿರುವುದು ಥಾರ್ ಮರುಭೂಮಿ. ಅರಾವಳಿಯ ಪೂರ್ವ ಹಾಗೂ ದಕ್ಷಿಣ ಭಾಗದ ನಾಡು ಸಾಕಷ್ಟು ಫಲವತ್ತಾಗಿದೆ.



ಚಂಬಲ್, ಮಾಹಿ, ಬಾನಾಸ್ ರಾಜಸ್ಥಾನದಲ್ಲಿ ಹರಿಯುವ ಮುಖ್ಯ ನದಿಗಳು. ಮರಳುಭೂಮಿಯಲ್ಲಿ ನೀರಿನ ಕೊರತೆ ಬಹಳ. ಇದಕ್ಕಾಗಿ ಅನೇಕ ಸರೋವರಗಳನ್ನು ಹಿಂದಿನವರು ಕಟ್ಟಿಸಿದರು. ಹಳ್ಳಿಗಳಲ್ಲಿ ಮಳೆ ನೀರನ್ನು ದೊಡ್ಡ ಗಡಿಗೆಗಳಲ್ಲಿ ಸಂಗ್ರಹಿಸಿಟ್ಟು ಉಪಯೋಗಿಸುವುದೂ ಇದೆ. ಒಂಟೆ ಇಲ್ಲಿನ ಉಪಯುಕ್ತ ಪ್ರಾಣಿ. ಈಗಲೂ ಭಾರತದ ಸೇನೆಯಲ್ಲಿ 'ಬೀಕಾನೇರ್ ಒಂಟೆ ದಳ' ಇದೆ. ಜಯಸಾಲ್ಮೀರ್ ಮತ್ತು ಬೀಕಾನೇರ್ ಮರಳುಗಾಡು ಪ್ರದೇಶದ ಎರಡು ಮುಖ್ಯ ಪಟ್ಟಣಗಳು.

ಅರಾವಳಿಯಿಂದ ದಕ್ಷಿಣಕ್ಕೆ ಗುಡ್ಡಗಳ ಚಿಕ್ಕ ಕಣಿವೆ ಬಯಲುಗಳಲ್ಲಿ ವ್ಯವಸಾಯ ಮಾಡುತ್ತಾರೆ. ಕೆಲವು ಕಡೆ ದಟ್ಟ ಕಾಡುಗಳೂ ಇವೆ. ಗೋಧಿ, ಬಾರ್ಲಿ, ಜೋಳ, ಸಜ್ಜೆ, ದ್ವಿದಳ ಧಾನ್ಯಗಳು —ಕೃಷಿ ಉತ್ಪನ್ನಗಳು. ಸ್ವಲ್ಪಮಟ್ಟಿಗೆ ಹತ್ತಿ, ಎಳ್ಳು, ಕಡಲೆಕಾಯಿ, ನಾರಗಸೆಬೀಜ. ಸಾಸಿವೆ, ಕಬ್ಬು, ಆಲೂಗೆಡ್ಡೆ, ಭತ್ತ ಹಾಗೂ ತಂಬಾಕುಗಳೂ ಬೆಳೆಯುತ್ತವೆ. ಬಹುಪಾಲು ಜನರ ಉದ್ಯಮ ಕೃಷಿ.

ಶ್ರೇಷ್ಠ ಸುಣ್ಣಕಲ್ಲು ಹಾಗೂ ಜಿಪ್ಸಮ್ ಖನಿಜಗಳು ರಾಜಸ್ಥಾನದಲ್ಲಿ ಹೇರಳವಾಗಿ ದೊರೆಯುತ್ತವೆ. ಅಭ್ರಕ ಇಲ್ಲಿನ ಮುಖ್ಯ ಖನಿಜ. ಪಚ್ಚೆ ಸಲ್ಫೇಟ್ ಲವಣ, ಲಿಗ್ನೈಟ್ ಹಾಗೂ ಅಮೃತಶಿಲೆಗಳೂ ಇಲ್ಲಿ ಸಿಗುತ್ತವೆ. ಸೀಸ ಮತ್ತು ಫಾಸ್ಫೇಟ್, ಕಲ್ನಾರು, ಬಿಳಿಯ ಜೇಡಿಮಣ್ಣುಗಳು. ಮರಕತ. ಪರಮಾಣು ಶಕ್ತಿಯ ಉತ್ಪಾದನೆಗೆ ಬೇಕಾದ ಯುರೇನಿಯಂ, ಲೋಹ ನಿಕ್ಷೇಪ ರಾಜ್ಯದಲ್ಲಿ ಲಭ್ಯ. ಸಾಂಭರ್ ಸರೋವರ ಹಾಗೂ ಮರಳುಗಾಡಿನ ಇತರ ಪ್ರದೇಶಗಳಲ್ಲಿ ಉಪ್ಪು ತಯಾರಿಸುತ್ತಾರೆ.

ಭಾಕ್ರಾನಂಗಲ್, ಚಂಬಲ್, ಬಿಯಸ್, ಜವಾಯ್ ಮತ್ತು ರಾಜಸ್ಥಾನ ಕಾಲುವೆ ಯೋಜನೆಗಳಿಂದ ನೀರಾವರಿ ಅನುಕೂಲತೆಗಳು ಒದಗಿವೆ.



ಸೂರ್ಯದೇವ—ಗ್ವಾಲಿಯರ್‌ನಲ್ಲಿ ಶಿಲ್ಪ

ಜವಾಹರ್ ಸಾಗರಕಟ್ಟೆ (ಕೋಟಾ ಕಟ್ಟೆ) ಮತ್ತು ಚಂಬಲ್ ಯೋಜನೆ ಮುಖ್ಯ ವಿದ್ಯುತ್ ಉತ್ಪಾದನಾ ಯೋಜನೆಗಳು.

ರಾಜ್ಯದಲ್ಲಿ ನವುರಾದ ಮಸ್ಲಿನ್ ಬಟ್ಟೆ, 'ಟೈ ಅಂಡ್ ಡೈ' ವಸ್ತ್ರಗಳು, ವಸ್ತ್ರಗಳಿಗೆ ರಂಗು ಹಾಕುವುದು ಮತ್ತು ಪ್ರಿಂಟ್ ಮಾಡುವುದು, ಸಕ್ಕರೆ, ಸಿಮೆಂಟ್, ಗಾಜು, ಬಾಲ್‌ಬೇರಿಂಗ್ ಮುತ್ತಿತರ ಕೈಗಾರಿಕೆಗಳಿವೆ. ನೆಲಹಾಸು, ಕಂಬಳಿ, ಉಣ್ಣೆ ವಸ್ತ್ರಗಳು, ಎನಾಮಲ್ ಮಾಡುವುದು, ಕುಂಭ ಪದಾರ್ಥಗಳು, ಬೆಳ್ಳಿ ಹಾಗೂ ಜರತಾರಿ ಲೇಸ್, ಅರಗು, ಮರದ ಆಟಿಗೆ, ಕೋರಿ ಕಾಗದ, ಪೇಪಿಯರ್‌ಮಾಷೆ ಆಟಿಗೆ, ಕಸೂತಿ ಕೆಲಸವಿರುವ ಪಾದರಕ್ಷೆ, ತೊಗಲು ಕೈಚೀಲ, ಕೈಮಗ್ಗ ನೆಯ್ಗೆ, ಪ್ರಶಸ್ತಶಿಲೆಗಳನ್ನು ಕತ್ತರಿಸಿ ಸಾಣೆ ಹಿಡಿಯುವುದು—ಈ ಕೈಗಾರಿಕೆಗಳಿಗೆ ರಾಜಸ್ಥಾನ ಹೆಸರಾಗಿದೆ. ಉದಯಪುರದಲ್ಲಿ ನೂಲುವ ಗಿರಣಿ, ಕೋಟಾದ ನೈಲಾನ್ ಕಾರಖಾನೆ—ಹೊಸ ಕೈಗಾರಿಕೆಗಳು.



ಜಯಪುರದ ಹವಾಮಹಲ್

ರಾಜಸ್ಥಾನದಲ್ಲಿ 26 ಜಿಲ್ಲೆಗಳಿವೆ.

ಮೌರ್ಯ ಚಕ್ರಾಧಿಪತ್ಯದ ಕಾಲದಲ್ಲಿ ರಾಜಸ್ಥಾನ ಅದಕ್ಕೆ ಸೇರಿತ್ತು. ಅನಂತರ ಹರ್ಷನ ಸಾಮ್ರಾಜ್ಯದ ಭಾಗವಾಯಿತು. ಮುಂದೆ ಗುರ್ಜರ-ಪ್ರತಿಹಾರರು ರಾಜಸ್ಥಾನವನ್ನು ಆಳಿದರು. ಮಹಮದ್ ಘೋರಿ ದಂಡೆತ್ತಿಬಂದ ಕಾಲಕ್ಕೆ ಉತ್ತರದ ಬಯಲು ಪ್ರದೇಶಗಳಲ್ಲಿದ್ದ ರಜಪೂತರು ಈಗಿನ ರಾಜಸ್ಥಾನ ಪ್ರದೇಶಕ್ಕೆ ಸರಿದರು. ಅಲ್ಲಿ ತಮ್ಮ ರಾಜ್ಯಗಳನ್ನು ಭದ್ರಪಡಿಸಿಕೊಂಡರು. ಕನ್ನೌಜಿನ ರಾಥೋಡರು, ಅಜ್ಮೀರಿನ ಚೌಹಾನರು, ಅನ್ಹಿಲವಾಡದ ಸೋಲಂಕಿಗಳು, ಮೇವಾರದ ಸಿಸೋದಿಯಾ ಮನೆತನದವರು ರಾಜಸ್ಥಾನದ ವಿವಿಧ ಪ್ರದೇಶಗಳನ್ನು ಆಳುತ್ತಿದ್ದ ಪ್ರಬಲ ಅರಸು ಮನೆತನಗಳು. ಬಾಬರ್ ದೆಹಲಿಯನ್ನು ವಶಪಡಿಸಿಕೊಳ್ಳಲು ಬಂದಾಗ ಅವನನ್ನು 1527ರಲ್ಲಿ ರಾಣಾ ಸಂಗ ಎದುರಿಸಿ ಸೋತ. ಅಕ್ಬರ್ ಚಕ್ರವರ್ತಿ ರಾಜಸ್ಥಾನದ ಬಹುಭಾಗವನ್ನು ಗೆದ್ದ. 18ನೆಯ ಶತಮಾನದಲ್ಲಿ ಮರಾಠರನ್ನೂ ಪಿಂಡಾರಿಯರನ್ನೂ ರಜಪೂತರು ಎದುರಿಸಬೇಕಾಯಿತು. 1818ರ ವೇಳೆಗೆ ರಾಜಸ್ಥಾನದ ವಿವಿಧ ಸಂಸ್ಥಾನಗಳು ಬ್ರಿಟಿಷರಿಗೆ ಸೇರಿದುವು. ಸ್ವತಂತ್ರ ಭಾರತದಲ್ಲಿ 1949ರ ವೇಳೆಗೆ ಈ ಸಂಸ್ಥಾನಗಳನ್ನೆಲ್ಲ ಒಂದು ಪ್ರಾಂತ್ಯದಲ್ಲಿ ಸೇರಿಸಲಾಯಿತು. 1956ರ ರಾಜ್ಯ ಪುನರ್ರಚನೆಯಲ್ಲಿ ಈಗಿನ ರಾಜಸ್ಥಾನ ರಾಜ್ಯ ಅಸ್ತಿತ್ವಕ್ಕೆ ಬಂದಿತು.

ರಾಜಾಸ್ಥಾನೀ ದಾಸಯ್ಯ



ರಾಜಸ್ಥಾನದ ರೈತ ಮಹಿಳೆ



ಗುಪ್ತರ ಕಾಲದ ಸ್ಮಾರಕಗಳು, ಅನಂತರ ಮಧ್ಯಕಾಲದ ಅರಮನೆಗಳು, ಕೋಟೆಕೊತ್ತಲಗಳಲ್ಲಿ ರಾಜಸ್ಥಾನದ ವಾಸ್ತುಶಿಲ್ಪ ಸಿರಿಯನ್ನು ಕಾಣಬಹುದು. ಜಯಪುರ, ಅಜ್ಮೀರ್, ಪುಷ್ಕರ, ಚಿತ್ತೋಡಗಢ, ಉದಯಪುರ, ಜೋಧಪುರ, ಭರತಪುರ, ಜಯಸಾಲ್ಮೇರ—ಇತರ ಪ್ರೇಕ್ಷಣೀಯ ಜಾಗಗಳು.



ರಾಜಸ್ಥಾನ ಪರಮಾಣು ಕೇಂದ್ರ

ಆಬೂಪರ್ವತ ಇಲ್ಲಿನ ಮುಖ್ಯ ಗಿರಿಧಾಮ. ರಾಜ್ಯದಲ್ಲಿ ಮೂರು ವಿಶ್ವವಿದ್ಯಾನಿಲಯಗಳಿವೆ – ರಾಜಸ್ಥಾನ (ಜಯಪುರ), ಜೋಧಪುರ, ಮತ್ತು ಉದಯಪುರ.

ರಾಜಸ್ಥಾನದ ಮಾರವಾಡಿಗಳು ಭಾರತದ ಅಗ್ರಗಾಮಿ ಉದ್ಯಮಿಗಳು. ಮರದ ಸೂತ್ರದ ಬೊಂಬೆಗಳಿಂದ ನಡೆಸುವ 'ಕಠ್‌ಪುತ್ಲಿ' ಪ್ರದರ್ಶನದಲ್ಲಿ ರಜಪೂತರ ಶೌರ್ಯಕ್ಕೆ ಸಂಬಂಧಪಟ್ಟ ಕಥೆಗಳು ನಿರೂಪಿತವಾಗುತ್ತವೆ.

ರಾಜಸ್ಥಾನದ ಮೇರೆಗಳು ಪಾಕಿಸ್ತಾನ, ಪಂಜಾಬ್, ಹರ್ಯಾಣ ಉತ್ತರಪ್ರದೇಶ, ಮಧ್ಯಪ್ರದೇಶ ಹಾಗೂ ಗುಜರಾತ್.

ನೋಡಿ : ಅಜ್ಮೀರ್ ; ಉದಯಪುರ ; ಗ್ವಾಲಿಯರ್ ; ಗಾಯಕರು ; ಚಿತ್ತೋಡಗಢ ; ಜಯಪುರ ; ಜೋಧಪುರ ; ಮೇವಾಡ ; ರಜಪೂತರು

ರಾಜಸ್ಥಾನೀ ಭಾಷೆ, ಸಾಹಿತ್ಯ

ರಾಜಸ್ಥಾನ ರಾಜ್ಯದ ಪ್ರಮುಖ ಭಾಷೆ ರಾಜಸ್ಥಾನೀ. ಈ ಭಾಷೆಗೆ ಸಮೃದ್ಧ ಸಾಹಿತ್ಯರಾಶಿ ಇರುವುದರಿಂದ ಕೇಂದ್ರ ಸಾಹಿತ್ಯ ಅಕಾದೆಮಿ ಮನ್ನಣೆ ಇತ್ತಿದೆ. ಭಾರತದ ಸಂವಿಧಾನದ ಪಟ್ಟಿಯಲ್ಲಿ ಮಾತ್ರ ಈ ಭಾಷೆ ಇನ್ನೂ ಸೇರಿಲ್ಲ.

ರಾಜಸ್ಥಾನೀಯ ಪ್ರಾಚೀನ ಸಾಹಿತ್ಯ ಚಾರಣ ಕವಿಗಳ ಸಾಮ್ರಾಜ್ಯ. [illegible] 'ಪೃಥ್ವೀರಾಜ ರಾಸೊ' ಅತ್ಯಂತ ಪ್ರಾಚೀನ ಕೃತಿಗಳಲ್ಲೊಂದು. [illegible] ಸೋದರನ ಮೇಲೆ ರಾವ್ ಜೈತಾಸಿ [illegible] ಗದ್ಯ ಸಂದರ್ಭವನ್ನು ವರ್ಣಿಸುವ [illegible] 'ರಾವ್ ಜೈತಾಸಿರಾವ್ ಛಂದ' ಪ್ರಾಚೀನ ಕೃತಿಗಳಲ್ಲಿ ಗಮನ ಸೆಳೆಯುವಂಥದು. ಶಕ್ತಿಪೂರ್ಣಭಾಷೆ ಇದರ ವೈಶಿಷ್ಟ್ಯ.

ಭರತ ಈಸರದಾಸನ 'ಹರಿರಸ' ರಾಜಸ್ಥಾನಿಗಳ ಭಗವದ್ಗೀತೆ ಎನ್ನಬಹುದು. [illegible] ಕವಿಗಳಲ್ಲಿ ಅತ್ಯಂತ ಪ್ರಮುಖ. [illegible] 'ವೇಲಿ ಕೃಷ್ಣ ರುಕ್ಮಿಣಿ' ಇವನ ಪ್ರಮುಖ ಕಾವ್ಯ. ಸೂರ್ಯ ಮಲ್ಲನ 'ವಮಸ್ ಭಾಸ್ಕರ್' ಗಮನಾರ್ಹ ಕೃತಿಗಳಲ್ಲೊಂದು. [illegible] ಕೃತಿಗಳಲ್ಲಿ [illegible] ಮತ್ತು ರತನೋ ಮುಖ್ಯರು.

[illegible] ಕವಿಗಳನ್ನು [illegible] ಕವಯಿತ್ರಿ. ಮೀರಾಬಾಯಿ. [illegible] ಗುಜರಾತಿ ಜನತೆ ಹೇಳಿಕೊಳ್ಳುತ್ತಿರುವುದು ಈಕೆಯ ಜನಪ್ರಿಯತೆಗೆ ಸಾಕ್ಷಿ.

[illegible] ರಾಜಸ್ಥಾನೀ ಭಾಷೆ [illegible]

ಗದ್ಯದ ದೃಷ್ಟಿಯಿಂದ ನೈಸ್ಸಿಯ 'ಖ್ಯಾಟ' ಅತ್ಯಂತ ಸುಂದರ ದಿನಚರಿ ಎನ್ನಬಹುದು.

ಬ್ರಿಟಿಷರು ಭಾರತಕ್ಕೆ ಆಗಮಿಸಿದ ಅನಂತರ ಭಾರತದ ಬಹುತೇಕ ಸಾಹಿತ್ಯಗಳಲ್ಲಿ ವಸ್ತುವಿನ ಗಮನಾರ್ಹ ಬದಲಾವಣೆ ಕಂಡುಬಂದಂತೆ ರಾಜಸ್ಥಾನೀ ಸಾಹಿತ್ಯವೂ ಹೊಸ ವಸ್ತು ರೂಪವನ್ನು ರೂಢಿಸಿತು. ಬ್ರಿಟಿಷ್ ಸರಕಾರದ ವಿರುದ್ಧ ಬಂಡೆದ್ದ ಕವಿಗಳಲ್ಲಿ ಭರತ್ ಕೇಸರಿ ಪ್ರಮುಖ. ರಾಷ್ಟ್ರೀಯ ಮನೋಭಾವವನ್ನು ವ್ಯಕ್ತಪಡಿಸಿ ಕಾವ್ಯ ರಚಿಸಿದ ಅನಂತರದ ಕವಿಗಳಲ್ಲಿ ಉದಯ್‌ರಾಜ್ ಉಜಲ್ ('ಧುರಸರ') ಮತ್ತು ನಾಥುದಾನ್ ಮನಿಯಾರಿಯ ಗಮನಾರ್ಹರು.

ವಿಡಂಬನಾತ್ಮಕ ಕವಿಗಳಲ್ಲಿ 'ಮೆಹಾಯ್ ಮಹೀನ' ಕೃತಿಯ ಕರ್ತೃ ಹಿಂಗಲಜದನ್ ಪ್ರಮುಖರು. ಗಣೇಶಿಲಾಲ್ ಉಸ್ತಾದ್ ದೊರೆಗಳ ಆಳ್ವಿಕೆ ಬಗೆಗೆ ವಿಡಂಬನೆಯಿಂದ ಕೂಡಿದ ಸೊಗಸಾದ ಕೃತಿಗಳನ್ನು ರಚಿಸಿದರು. ಇವರನ್ನು 'ಜನತಾ ಕವಿ' ಎನ್ನುವುದುಂಟು. ಸತ್ಯ ಪ್ರಕಾಶ್ ಜೋಷಿ, ಜಾನಪದದಿಂದ ಸ್ಫೂರ್ತಿ ಪಡೆದ ಗಮನಾರ್ಹ ಕವಿ. ಹಾಗೆಯೇ ಪ್ರೇಮ, ಸತ್ಯ, ಅರ್ಪಣಾಭಾವಗಳ ಬಗ್ಗೆ ಕಾವ್ಯ ರಚಿಸಿದ ರಮ್ಯ ಕವಿಗಳಲ್ಲಿ ಠಾಕೂರ್ ರಾಮ್‌ಸಿಂಗ್ ಅತ್ಯಂತ ಜನಪ್ರಿಯ ಕವಿ. ಆಧುನಿಕ ಹಾಡು ಕವಿಗಳಲ್ಲಿ 'ಪತಲಾ ಔರ್ ಪತಲ್' ರಚಿಸಿದ ಕನ್ಹಯಾಲಾಲ್ ಸೇಥಿಯ ಪ್ರಮುಖರು. ನಿಸರ್ಗ ಕವಿಗಳಲ್ಲಿ ನಾನೂರಾಮ್. ಚಂದ್ರಸಿಂಗ್ ಮೊದಲಾದವರು ಒಳ್ಳೆಯ ಕೃತಿಗಳನ್ನು ರಚಿಸಿದ್ದಾರೆ. ಆಧುನಿಕರಲ್ಲಿ ಮಣಿ ಮಧುಕರ್. ತೇಜ್‌ಸಿಂಗ್ ಗೋಧ ಮೊದಲಾದವರು ಪ್ರಮುಖರು.

ನಾಟಕ ಪ್ರಕಾರವೂ ಆಧುನಿಕತೆಯ ಪ್ರಭಾವವನ್ನು ಅರಗಿಸಿಕೊಂಡು ಬೆಳೆಯುತ್ತಿದೆ. ಆಧುನಿಕ ನಾಟಕಕಾರರಲ್ಲಿ ಶಿವಚಂದ್ರ ಭಾರತೀಯ, ಭಗವತಿ ಪ್ರಸಾದ್ ದಾರುಕ ಹೆಸರು ಗಳಿಸಿದ್ದಾರೆ. ಶಿವಚಂದ್ರ ಭಾರತೀಯ, ಶ್ರೀಲಾಲ್ ಜೋಷಿ, ಬದರಿ ಪ್ರಸಾದ್ ಸಂಕರಿಯ ಜನಪ್ರಿಯ ಕಾದಂಬರಿಗಳನ್ನು ರಚಿಸಿದ್ದಾರೆ. ರಾಜಸ್ಥಾನೀ ಕಾದಂಬರಿ ಕ್ಷೇತ್ರ ಅಷ್ಟು ಸಮೃದ್ಧವಾಗಿಲ್ಲವಾದರೂ ಗದ್ಯ ಸಾಹಿತ್ಯದ ದೃಷ್ಟಿಯಿಂದ ಮುನ್ನಾಲಾಲ್ ಪುರೋಹಿತ್, ಅಗರ್‌ಚಂದ್ ನಹ್ತ ಮೊದಲಾದವರ ಕಾದಂಬರಿಗಳು ಗಮನಾರ್ಹ. ಸಣ್ಣ ಕಥೆಗಾರರಲ್ಲಿ ಮುರಳೀಧರ್ ವ್ಯಾಸ್ ಅತ್ಯಂತ ಜನಪ್ರಿಯರು.

ರಾಜಸ್ಥಾನೀ ಜಾನಪದ ಸಾಹಿತ್ಯವನ್ನು ಸಂಗ್ರಹಿಸಿದ ಮೊದಲಿಗರಲ್ಲಿ ಜಗದೀಶ್ ಸಿಂಗ್ ಗಲ್ಹೋತ್ ಪ್ರಮುಖರು. ರಾಮ್‌ಸಿಂಗ್ ಮತ್ತು ಇತರರು ಸಂಪಾದಿಸಿದ 'ರಾಜಸ್ಥಾನ್ ಕೆ ಲೋಕ್ ಗೀತ್' ಜಾನಪದ ಹಾಡುಗಳ ಉತ್ತಮ ಸಂಕಲನ. ವಿಜೈದಾನ್ ದೇತಾ ಜಾನಪದ ಸಾಹಿತ್ಯಕ್ಕೆ ಹೊಸ ಅರ್ಥಕೊಟ್ಟ ಲೇಖಕ.

ರಾಜಸ್ಥಾನೀ ಪ್ರಾಚೀನ ಸಾಹಿತ್ಯವನ್ನು ಬೆಳಕಿಗೆ ತರಲು ಪ್ರಮುಖರಾದವರಲ್ಲಿ ಠಾಕೂರ್ ರಾಮ್‌ಸಿಂಗ್, ಸೂರ್ಯ ಕರಣ್ ಪಾರೀಕ್, ರಾಮ್‌ಕರಣ್ ಅಸೋಪ ಪ್ರಮುಖರು. ಅಸೋಪ 1896ರಲ್ಲಿ ರಚಿಸಿದ ವ್ಯಾಕರಣ ರಾಜಸ್ಥಾನೀ ಭಾಷೆಯಲ್ಲೇ ಮೊದಲನೆಯದು. ಕನ್ನಡಕ್ಕೆ ಕಿಟ್ಟೆಲ್. ರೈಸ್ ಇದ್ದಂತೆ ರಾಜಸ್ಥಾನಿಯನ್ನು ಅಭ್ಯಸಿಸಿದ ಯುರೋಪ್ಯ ವಿದ್ವಾಂಸ ಡಾ. ಎಲ್. ಪಿ. ಟೆಸ್ಸಿಟೊರಿ ಈ ಸಾಹಿತ್ಯಕ್ಕೆ ಅಮೂಲ್ಯ ಸೇವೆ ಸಲ್ಲಿಸಿದ್ದಾರೆ. ರಾಜಸ್ಥಾನೀ–ಹಿಂದೀ ನಿಘಂಟಿನ ಮೂಲ ಪುರುಷ ಸೀತಾರಾಮ್ ಲಾಳಸ್.

ರಾಜಸ್ಥಾನೀ ಭಾಷೆ, ಸಾಹಿತ್ಯಗಳ ಅಭಿವೃದ್ಧಿಗೆ ಶ್ರಮಿಸುತ್ತಿರುವ [illegible] ಕಾರಿಗಳೆಂದರೆ '[illegible] ರಾಜಸ್ಥಾನೀ' 'ಶೋಧ ಪತ್ರಿಕೆ' 'ರಾಜಸ್ಥಾನ [illegible]

ಭಾರತಿ' ಮೊದಲಾದುವು. ಈ ನಿಯತಕಾಲಿಕಗಳು ಈ ಸಾಹಿತ್ಯದ ಬೆಳವಣಿಗೆಗೆ ನೆರವಾಗುತ್ತವೆ.

ರಾಜ್ಯಪಾಲ

ನಮ್ಮ ದೇಶದಲ್ಲಿ ಒಂದು ರಾಜ್ಯದ ಆಡಳಿತದ ಮುಖ್ಯಸ್ಥ–ರಾಜ್ಯಪಾಲ.

ಪ್ರಧಾನಮಂತ್ರಿಯೊಡನೆ ಸಮಾಲೋಚಿಸಿ ರಾಷ್ಟ್ರಪತಿ ರಾಜ್ಯಪಾಲರನ್ನು ನೇಮಕ ಮಾಡುತ್ತಾರೆ. ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರ ಮುಂದೆ ಪ್ರಮಾಣ ವಚನ ಸ್ವೀಕರಿಸಿದ ಮೇಲೆ ರಾಜ್ಯಪಾಲರು ಅಧಿಕಾರ ವಹಿಸಿಕೊಳ್ಳುತ್ತಾರೆ.

ರಾಜ್ಯಪಾಲರ ಅಧಿಕಾರಾವಧಿ ಸಾಮಾನ್ಯವಾಗಿ 5 ವರ್ಷ. ಅವರ ವಯಸ್ಸು 35 ವರ್ಷಕ್ಕೆ ಮೇಲ್ಪಟ್ಟಿರಬೇಕು. ಯಾವುದೇ ವಿಧಾನ ಮಂಡಲದ ಸದಸ್ಯತ್ವ ಹೊಂದಿರಬಾರದು. ವೇತನ ಅಥವಾ ಗಳಿಕೆ ಇರುವಂಥ ಇನ್ನಾವ ಅಧಿಕಾರ ಸ್ಥಾನಗಳಲ್ಲಿ ಅವರು ಇರಬಾರದು. ರಾಜಪಾಲರಿಗೆ ಅಧಿಕೃತ ನಿವಾಸ ಹಾಗೂ ಭತ್ಯಗಳ ಸೌಲಭ್ಯವಿದೆ.

ರಾಜ್ಯಪಾಲರು ಸಮಗ್ರ ರಾಜ್ಯದ ಹಿತಚಿಂತನೆಗೆ ಗಮನ ಕೊಡಬೇಕು. ರಾಜಕೀಯ ಪಕ್ಷ ಅಥವಾ ಒಂದು ವರ್ಗದ ಶ್ರೇಯಸ್ಸಿಗೆ ಶ್ರಮಿಸುವಂತಿಲ್ಲ.

ರಾಜ್ಯದ ಮಂತ್ರಿಮಂಡಲದೊಡನೆ ಸಹಕರಿಸಿ ಆಡಳಿತದಲ್ಲಿ ನೆರವಾಗುವುದಲ್ಲದೆ, ರಾಜ್ಯದಲ್ಲಿ ರಾಜ್ಯಾಂಗ ಬಿಕ್ಕಟ್ಟು ಉಂಟಾದ ಸಂದರ್ಭಗಳಲ್ಲಿ ಆ ಬಗೆಗೆ ರಾಷ್ಟ್ರಪತಿಗಳಿಗೆ ವರದಿ ಮಾಡುವುದೂ ಅವರ ಕರ್ತವ್ಯ. ಹಾಗೆಯೇ ಮಂತ್ರಿಮಂಡಲ ವಿಸರ್ಜಿಸಲ್ಪಟ್ಟ ಸಂದರ್ಭಗಳಲ್ಲಿ ಅವರು ರಾಷ್ಟ್ರಪತಿಗಳ ಪರವಾಗಿ ರಾಜ್ಯದ ಆಡಳಿತವನ್ನೂ ನಿರ್ವಹಿಸುತ್ತಾರೆ.

ವಿಧಾನಸಭೆಯಲ್ಲಿ ಬಹುಮತ ಪಕ್ಷದ ನಾಯಕನನ್ನು ಮುಖ್ಯಮಂತ್ರಿ ಆಗುವಂತೆ ರಾಜ್ಯಪಾಲರು ಆಹ್ವಾನಿಸುತ್ತಾರೆ. ಮುಖ್ಯಮಂತ್ರಿಯೊಡನೆ ಪರ್ಯಾಲೋಚಿಸಿ ಮಂತ್ರಿಮಂಡಲದ ಇತರರನ್ನು ನೇಮಿಸುತ್ತಾರೆ. ರಾಜ್ಯದ ಲೋಕಸೇವಾ ಆಯೋಗದ ಅಧ್ಯಕ್ಷ ಹಾಗೂ ಸದಸ್ಯರ ನೇಮಕ ರಾಜ್ಯಪಾಲರಿಗೆ ಸೇರಿದ್ದು. ವಿಧಾನಸಭೆಯ ಅಧಿವೇಶನ ಕರೆಯುವ ಮತ್ತು ಅದನ್ನು ಮುಂದಕ್ಕೆ ಹಾಕುವ ಅಧಿಕಾರ ಇವರಿಗಿದೆ. ರಾಜ್ಯಪಾಲರ ಸಮ್ಮತಿ ಇಲ್ಲದೆ ಮಸೂದೆ ಶಾಸನವಾಗುವುದಿಲ್ಲ. ರಾಜ್ಯಪಾಲರು ಆ ರಾಜ್ಯದ ವಿಶ್ವವಿದ್ಯಾಲಯಗಳ ಛಾನ್ಸಲರೂ ಆಗಿರುತ್ತಾರೆ.

ನೋಡಿ : ವಿಧಾನಪರಿಷತ್ತು ; ವಿಧಾನಸಭೆ

ರಾಜ್ಯ ಪುನರ್ವಿಂಗಡಣಾ ಆಯೋಗ

ಭಾಷಾವಾರು ಆಧಾರದ ಮೇಲೆ ರಾಜ್ಯಗಳನ್ನು ಪುನರ್ವಿಂಗಡಿಸಬೇಕೆಂಬ ಬೇಡಿಕೆಯನ್ನು ಪರಿಶೀಲಿಸಿ ವರದಿ ನೀಡಲು 1953 ಡಿಸೆಂಬರಿನಲ್ಲಿ ರಾಜ್ಯ ಪುನರ್ವಿಂಗಡಣಾ ಆಯೋಗ ರಚಿತವಾಯಿತು. ಆಯೋಗದ ಅಧ್ಯಕ್ಷ ಫಜಲ್ ಅಲಿ. ಎಚ್. ಎನ್. ಕುಂಜ್ರು ಮತ್ತು ಕೆ. ಎಂ. ಪಣಿಕ್ಕರ್ ಅದರ ಇತರ ಸದಸ್ಯರು.

ಆಯೋಗದವರು ದೇಶದಲ್ಲೆಲ್ಲ ಸುತ್ತಿದರು. ಸಾವಿರಾರು ವ್ಯಕ್ತಿಗಳ ಭೇಟಿ ನೀಡಿದರು. ಅನೇಕರನ್ನು ಭೇಟಿ ಮಾಡಿದರು. ಅವರಿಗೆ ವ್ಯಕ್ತಿಗಳು ಮತ್ತು ಸಂಘಗಳಿಂದ ಒಟ್ಟಿಗೆ 1,52,250 ಮನವಿಗಳು ಬಂದುವು.

1955 ಸೆಪ್ಟೆಂಬರಿನಲ್ಲಿ ಆಯೋಗ ತನ್ನ ವರದಿಯನ್ನು ಸಲ್ಲಿಸಿತು. ದೇಶದ ಭದ್ರತೆಯನ್ನೂ ಐಕ್ಯವನ್ನೂ ಲಕ್ಷಿಸಿಕೊಂಡು, ಭಾಷಾ ಮತ್ತು ಸಾಂಸ್ಕೃತಿಕ ಸಾಮ್ಯಗಳನ್ನು ಗಮನದಲ್ಲಿಟ್ಟು ರಾಜ್ಯಗಳ ಪುನರ್ವಿಂಗಡಣೆಯನ್ನು ಸೂಚಿಸಿ ವರದಿ ತಯಾರಿಸಿದರು.

ಈ ವರದಿಯ ಆಧಾರದ ಮೇಲೆ ಆಗ 14 ರಾಜ್ಯಗಳು ಮತ್ತು ಆರು ಕೇಂದ್ರಾಡಳಿತ ಪ್ರದೇಶಗಳು ರೂಪಿತವಾದುವು.

ಆಂಧ್ರದ ಪೊಟ್ಟಿ ಶ್ರೀರಾಮುಲು : ಭಾಷಾ ರಾಜ್ಯರಚನೆಗೆ [illegible]

ರಾಜ್ಯಸಭೆ

ಭಾರತ ಸಂಸತ್ತಿನ ಮೇಲ್ಮನೆ ರಾಜ್ಯಸಭೆ. ಒಂದು ಮಸೂದೆ ಶಾಸನವಾಗಬೇಕಾದರೆ ಲೋಕಸಭೆಯಂತೆ ರಾಜ್ಯಸಭೆಯೂ ಒಪ್ಪಿಗೆ ನೀಡಬೇಕು.

ಮೂವತ್ತು ವರ್ಷಕ್ಕೆ ಮೇಲ್ಪಟ್ಟ ಭಾರತದ ಪ್ರಜೆ ರಾಜ್ಯಸಭೆಯ ಸದಸ್ಯನಾಗಬಹುದು. ವಿಜ್ಞಾನ, ಕಲೆ, ಸಾಹಿತ್ಯ, ಸಮಾಜಸೇವೆ ಕ್ಷೇತ್ರಗಳಲ್ಲಿ ಪರಿಣತರಾದ 12 ಜನರನ್ನು ರಾಷ್ಟ್ರಪತಿ ನಾಮಕರಣ ಮಾಡುತ್ತಾರೆ. ರಾಜ್ಯಗಳ ವಿಧಾನಸಭಾ ಸದಸ್ಯರಿಂದ ಚುನಾಯಿಸಲ್ಪಟ್ಟವರೂ ಕೇಂದ್ರಾಡಳಿತ ಪ್ರದೇಶಗಳಿಂದ ಆರಿಸಲ್ಪಟ್ಟವರೂ [illegible] ಸದಸ್ಯರ ಸಂಖ್ಯೆಯು ಗರಿಷ್ಠ ಮಿತಿ 250.

ರಾಜ್ಯಸಭೆಯ ಸದಸ್ಯತ್ವದ ಅವಧಿ ಆರು ವರ್ಷ. ಎರಡು ವರ್ಷಗಳಿಗೆ ಒಂದು ಸಲ ⅓ ಭಾಗ ಸದಸ್ಯರು ನಿವೃತ್ತರಾಗುತ್ತಾರೆ; ಆ ಸ್ಥಳಗಳಿಗೆ ಪುನಃ ಚುನಾವಣೆ ಅಥವಾ ನಾಮಕರಣ ನಡೆಯುತ್ತದೆ. ಉಪರಾಷ್ಟ್ರಪತಿ ರಾಜ್ಯಸಭೆಯ ಸಭಾಪತಿ. ರಾಜ್ಯಸಭೆ ಒಂದು ಶಾಶ್ವತ ಸದನ; ಇದನ್ನು ವಿಸರ್ಜಿಸುವಂತಿಲ್ಲ.

ರಾಜ್ಯಸಭೆಯಲ್ಲಿ ಒಂದು ಮಸೂದೆ ಅಂಗೀಕಾರವಾಗಬೇಕಾದರೆ ಅದನ್ನು ಮೂರು ಸಲ ಓದಬೇಕು. ಮೊದಲಿಗೆ ಮಸೂದೆಯನ್ನು ನಿಯಮಾನುಸಾರ ಮಂಡಿಸುತ್ತಾರೆ. ಆ ಸಮಯದಲ್ಲಿ ಚರ್ಚೆ [illegible]. ಎರಡನೆಯ ಸಲ ಓದುವಾಗ ಮಸೂದೆಯ ತತ್ವ ಹಾಗೂ ಮುಖ್ಯ ಉದ್ದೇಶಗಳ ಮೇಲೆ ಚರ್ಚೆ ನಡೆಯುತ್ತದೆ. [illegible] ಮುಂದಿಡಬೇಕಾದರೆ ಹಾಗೆ ಮಾಡಬಹುದು. ಬಹುಜನ ಸದಸ್ಯರು ಮಸೂದೆಯನ್ನು ವಿರೋಧಿಸಿದರೆ ಅದು ಬಿದ್ದುಹೋಗುತ್ತದೆ. ಮಸೂದೆಯ ಒಂದೊಂದು ಖಂಡವನ್ನೂ ರಾಜ್ಯಸಭೆಯಲ್ಲಿ ಪರಿಶೀಲಿಸುತ್ತಾರೆ. ಆಗ ಸದಸ್ಯರು ಖಂಡಕ್ಕೆ ತಿದ್ದುಪಡಿ ಸೂಚಿಸಲು ಅವಕಾಶವಿದೆ. [illegible] ಮಸೂದೆಯನ್ನು ಮತಕ್ಕೆ ಹಾಕುತ್ತಾರೆ. [illegible] ಮಸೂದೆ [illegible].

ರಾಜ್ಯಸರಕಾರ

ಭಾರತ ಗಣರಾಜ್ಯದಲ್ಲಿ 21 ರಾಜ್ಯಗಳಿವೆ (1974 ಮಾರ್ಚ್ ತಿಂಗಳಲ್ಲಿ). ರಾಜ್ಯಪಾಲರು, ಮುಖ್ಯಮಂತ್ರಿ ಮತ್ತು ಮಂತ್ರಿಮಂಡಲ, [illegible]

[illegible] ನಡುವೆ ತಿಕ್ಕಾಟ ಹುಟ್ಟದಿರುವ ರೀತಿಯಲ್ಲಿ ಭಾರತದ ರಾಜ್ಯಾಂಗವನ್ನು

ತಾಯಿಸಲಾಗಿದೆ. ಇದಕ್ಕಾಗಿ ಕೇಂದ್ರ ಸರಕಾರದ ಅಡಳಿತ ವ್ಯಾಪ್ತಿಗೆ ಒಳಪಟ್ಟ ವಿಷಯಗಳು, ರಾಜ್ಯ ಸರಕಾರಕ್ಕೆ ಒಳಪಟ್ಟ ವಿಷಯಗಳು, ಎರಡಕ್ಕೂ ಸಮಾನವಾಗಿರುವ ವಿಷಯಗಳು ಎಂದು ಮೂರು ಪಟ್ಟಿಗಳನ್ನು ಸಂವಿಧಾನ ತಯಾರಿಸಿದೆ.

ರಾಜ್ಯದ ಪಟ್ಟಿಯಲ್ಲಿ 66 ವಿಷಯಗಳಿವೆ. ಇವುಗಳಲ್ಲಿ ಪೋಲೀಸ್, ನ್ಯಾಯಾಡಳಿತ, ಶಿಕ್ಷಣ, ಆರೋಗ್ಯ, ಕಾರಾಗಾರ, ಸ್ಥಳೀಯ ಆಡಳಿತ, ಸಾರ್ವಜನಿಕ ನೈರ್ಮಲ್ಯ, ರಸ್ತೆ ಮತ್ತು ಕೃಷಿ ಭೂಕಂದಾಯ ಮುಂತಾದ ವಿಷಯಗಳು ಸೇರಿವೆ.

ವಿಧಾನಸಭೆಯಲ್ಲಿ ಬಹುಮತವಿರುವ ಪಕ್ಷದ ನಾಯಕನನ್ನು ರಾಜ್ಯಪಾಲರು ರಾಜ್ಯದ ಮುಖ್ಯಮಂತ್ರಿಯಾಗಿ ನಿಯಮಿಸುತ್ತಾರೆ. ಇವರು ರಾಜ್ಯದ ಮಂತ್ರಿ ಮಂಡಲವನ್ನು ರಚಿಸುತ್ತಾರೆ. ವಿಧಾನ ಸಭೆಗೆ ಜವಾಬುದಾರಿ ಹೊತ್ತು ಈ ಮಂತ್ರಿಮಂಡಲ ಕೆಲಸ ಮಾಡುತ್ತದೆ. ವಿಧಾನ ಸಭೆಯಲ್ಲಿ ಬಹುಮತವನ್ನು ಕಳೆದುಕೊಂಡ ಮಂತ್ರಿಮಂಡಲ ರಾಜೀನಾಮೆ ಕೊಡಬೇಕಾಗುತ್ತದೆ.

ರಾಜ್ಯಪಾಲರು, ರಾಜ್ಯ ಸರಕಾರದ ಮುಖ್ಯಸ್ಥರಾಗಿ, ರಾಷ್ಟ್ರಪತಿಗೆ ಬದ್ಧರಾಗಿ ಕಾರ್ಯನಿರ್ವಹಿಸುತ್ತಾರೆ. ರಾಜ್ಯಪಾಲರನ್ನು ನಿಯಮಿಸುವವರು ಕೂಡ ರಾಷ್ಟ್ರಪತಿಗಳೇ. ರಾಜ್ಯದಲ್ಲಿ ಮಂತ್ರಿಮಂಡಲದ ಮೂಲಕ ಸಂವಿಧಾನವನ್ನು ಆಡಳಿತ ಸಾಧ್ಯವಿಲ್ಲದ ಸಂದರ್ಭದಲ್ಲಿ ರಾಷ್ಟ್ರಪತಿಯ ಆಜ್ಞೆಯನ್ನು ಅನುಸರಿಸಿ ರಾಜ್ಯಪಾಲರು ರಾಜ್ಯದ ಆಡಳಿತ ನಡೆಸುತ್ತಾರೆ. ಇಂಥ ಸಂದರ್ಭದಲ್ಲಿ ರಾಜ್ಯದ ಆಯವ್ಯಯ ಪಟ್ಟಿಯನ್ನು ಅನುಮೋದಿಸುವ ಹಾಗೂ ರಾಜ್ಯಕ್ಕೆ ಸಂಬಂಧಿಸಿದ ಶಾಸನಗಳನ್ನು ಮಾಡುವ ಅಧಿಕಾರ ಸಂಸತ್ತಿಗೆ ಇರುತ್ತದೆ.

ನೋಡಿ : ಕೇಂದ್ರ ಸರಕಾರ; ಮುಖ್ಯಮಂತ್ರಿ; ವಿಧಾನಸಭೆ; ವಿಧಾನಪರಿಷತ್

ರಾಜಾಜಿ

ನೋಡಿ : ಚಕ್ರವರ್ತಿ ರಾಜಗೋಪಾಲಾಚಾರಿ

ರಾಜಾ ಮಹೇಂದ್ರ ಪ್ರತಾಪ್

ಬ್ರಿಟಿಷರನ್ನು ಎದುರಿಸಲು ತಮ್ಮದೇ ಹಾದಿ ಹಿಡಿದು, ವಿದೇಶಗಳಲ್ಲಿ ಭಾರತ ಸ್ವಾತಂತ್ರ್ಯದ ಬಗೆಗೆ ತಿಳಿವಳಿಕೆ ನೀಡಲು ಪ್ರಯತ್ನಿಸಿದವರು ರಾಜಾ ಮಹೇಂದ್ರ ಪ್ರತಾಪ್

ಅಲಿಘರ್‌ನಲ್ಲಿ ಪದವೀಧರರಾದ ಪ್ರತಾಪ್, 1907ರಲ್ಲಿ ವಿಶ್ವ ಪರ್ಯಟನೆ ಕೈಗೊಂಡರು.

1915ರಲ್ಲಿ ಅವರು ಹಂಗಾಮಿ ಹಿಂದ್ ಸರಕಾರ ಸ್ಥಾಪಿಸಿದರು. ಬ್ರಿಟಿಷರ ವಿರುದ್ಧ ನಿಂತುದಕ್ಕಾಗಿ ಅವರು ಗಡೀಪಾರು ಶಿಕ್ಷೆಗೆ ಒಳಪಡಬೇಕಾಯಿತು. 31 ವರ್ಷಗಳ ಈ ಅವಧಿಯನ್ನು ಅವರು ವಿವಿಧ ದೇಶಗಳಲ್ಲಿ ಕಳೆದರು. ಅಲ್ಲಿನ ಜನತೆಗೆ ಸ್ವರಾಜ್ಯ ಚಳುವಳಿಯ ನೈಜ ಸ್ವರೂಪದ ಪರಿಚಯ ಮಾಡಿಕೊಟ್ಟರು. 1946ರಲ್ಲಿ ಭಾರತಕ್ಕೆ ಹಿಂದಿರುಗಿ ತಮ್ಮ ಚಟುವಟಿಕೆಗಳನ್ನು ಮುಂದುವರಿಸಿದರು.



'ಪೀಟರ್', ಪೀರ್ ಪ್ರತಾಪ್'

1952–1957 ಅವಧಿಯಲ್ಲಿ ಲೋಕಸಭೆಯ ಸದಸ್ಯರಾಗಿದ್ದರು. ಸದಸ್ಯರು ಇವರನ್ನು 'ಪೀಟರ್ ಪೀರ್ ಪ್ರತಾಪ್' ಎಂದು ಕರೆಯುತ್ತಿದ್ದರು. ಮೂರು ಮತಗಳ ಕೂಟ ಎಂಬರ್ಥದಲ್ಲಿ ಅವರಿಗೆ ಈ ಅಡ್ಡ ಹೆಸರು. ಅವರ ಆಶಯ, ಭಾರತ-ಪಾಕಿಸ್ತಾನಗಳ ಒಕ್ಕೂಟ; ಅವರದು ಏಕ ಜಗತ್ತಿನ ಕಲ್ಪನೆ.

ತಮ್ಮ ಜಮೀನುದಾರಿಗೆ ಸೇರಿದ್ದ ಐದು ಹಳ್ಳಿಗಳು ಮತ್ತು ಒಂದು ಮನೆಯನ್ನು 1909ರಲ್ಲಿ ಬಿಟ್ಟುಕೊಟ್ಟು, ಪ್ರೇಮ್ ಮಹಾವಿದ್ಯಾಲಯ ಎಂಬ ಔದ್ಯೋಗಿಕ ತರಬೇತಿ ಶಾಲೆಯ ಸ್ಥಾಪನೆಗೆ ಕಾರಣರಾದರು.

ರಾಜಾ ರವಿವರ್ಮ

ನೋಡಿ : ಸಂಪುಟ ೫

ರಾಜಾ ರಾಮಣ್ಣ

ಸುಪ್ರಸಿದ್ಧ ಭಾರತೀಯ ಪರಮಾಣುವಿಜ್ಞಾನಿ, ರಾಜಾ ರಾಮಣ್ಣ.

ಇವರು ಮೈಸೂರಿನಲ್ಲಿ 1925 ಜನವರಿ 28ರಂದು ಜನಿಸಿದರು. ತಂದೆ ರಾಮಣ್ಣ. ತಾಯಿ ರುಕ್ಮಿಣಿ. ಬೆಂಗಳೂರಿನ ಬಿಷಪ್ ಕಾಟನ್ ಸ್ಕೂಲಿನಲ್ಲಿ ಪ್ರಾಥಮಿಕ ವಿದ್ಯಾಭ್ಯಾಸ ಆಯಿತು. 1945ರಲ್ಲಿ ಮದರಾಸಿನ ಕ್ರಿಶ್ಚಿಯನ್ ಕಾಲೇಜಿನಿಂದ ಪದವೀಧರರಾದರು. ಅನಂತರ ಲಂಡನಿನಲ್ಲಿ ನ್ಯೂಕ್ಲಿಯರ್ ಭೌತವಿಜ್ಞಾನದಲ್ಲಿ ವಿಶೇಷ ಅಧ್ಯಯನ ನಡೆಸಿ, 1948ರಲ್ಲಿ ಪಿಎಚ್.ಡಿ ಪದವಿ ಪಡೆದರು.

ಭಾರತಕ್ಕೆ ಹಿಂದಿರುಗಿದ ಮೇಲೆ 1949ರಲ್ಲಿ ಮುಂಬಯಿಯ ಟಾಟಾ ಮೂಲಭೂತ ಸಂಶೋಧನಾ ಸಂಸ್ಥೆಯನ್ನು ಸೇರಿದರು. 1953ರಲ್ಲಿ ಭಾಭಾ ಪರಮಾಣು ಸಂಶೋಧನಾ ಕೇಂದ್ರಕ್ಕೆ ನ್ಯೂಕ್ಲಿಯರ್ ಭೌತವಿಜ್ಞಾನ ವಿಭಾಗದ ಮುಖ್ಯಸ್ಥರಾಗಿ ವರ್ಗವಾಯಿತು. 1962 ಡಿಸೆಂಬರ್‌ನಲ್ಲಿ ಭೌತವಿಜ್ಞಾನ ವಿಭಾಗದ ನಿರ್ದೇಶಕರಾದರು.



ಪರಮಾಣುವಿಜ್ಞಾನಿ : ರಾಜಾ ರಾಮಣ್ಣ

ಭಾರತದ ಪ್ರಥಮ ಪರಮಾಣು ರಿಯಾಕ್ಟರ್ 'ಅಪ್ಸರಾ'ದ ರಚನೆಯಲ್ಲಿ ಸಹಕರಿಸಿದರು. 'ಅಪ್ಸರಾ', 'ಸೈರಸ್', 'ಪೂರ್ಣಿಮಾ' ಪ್ರಾಯೋಗಿಕ ರಿಯಾಕ್ಟರುಗಳ ಮೇಲ್ವಿಚಾರಣೆ ನಡೆಸಿದರು.

ಜಿನೀವಾದಲ್ಲಿ ಪರಮಾಣುಶಕ್ತಿಯ ಶಾಂತಿಯುತ ಬಳಕೆಗಾಗಿ ನಡೆದ ಎಲ್ಲ ನಾಲ್ಕು ಸಮ್ಮೇಳನಗಳಲ್ಲೂ ಇವರು ಭಾಗವಹಿಸಿದ್ದಾರೆ. ಭಾರತೀಯ ವಿಜ್ಞಾನ ಕಾಂಗ್ರೆಸ್ಸಿನ ಚಿನ್ನದ ಹಬ್ಬದಲ್ಲಿ ಭೌತ ವಿಭಾಗದ ಅಧ್ಯಕ್ಷರಾಗಿದ್ದರು.



[illegible]
[illegible]
ಹಾಗೂ ಅಂತರರಾಷ್ಟ್ರೀಯ ಪತ್ರಿಕೆಗಳಲ್ಲಿ ಪ್ರಕಟಿಸಿದ್ದಾರೆ.

[illegible]
ಬೀಜ ಸಂರಚನೆಯ ಜ್ಯಾಮಿತೀಯ ಸಿದ್ಧಾಂತದ ಬಗೆಗೆ ನಡೆಸಿರುವ ಸಂಶೋಧನೆಗಾಗಿಯೂ ರಾಜಾ ರಾಮಣ್ಣ ಪ್ರಖ್ಯಾತರು.

ಭೌತಿಕ ವಿಜ್ಞಾನಗಳಿಗಾಗಿ ಇರುವ ಶಾಂತಿ ಸ್ವರೂಪ ಭಟ್ನಾಗರ್ ಸ್ಮಾರಕ ಪ್ರಶಸ್ತಿ ಇವರಿಗೆ 1963ರಲ್ಲಿ ದೊರೆಯಿತು. ಪರಮಾಣು ವಿಜ್ಞಾನದಲ್ಲಿ ಇವರು ಮಾಡಿದ ಕಾರ್ಯಗಳನ್ನು ಪರಿಗಣಿಸಿ ಭಾರತ ಸರಕಾರ 1968ರಲ್ಲಿ ಪದ್ಮಶ್ರೀಯನ್ನೂ 1973ರಲ್ಲಿ ಪದ್ಮಭೂಷಣ ಪ್ರಶಸ್ತಿಯನ್ನೂ ನೀಡಿತು.

1972ರಲ್ಲಿ ಮುಂಬಯಿಯ ಭಾಭಾ ಪರಮಾಣು ಸಂಶೋಧನಾ ಕೇಂದ್ರದ ನಿರ್ದೇಶಕರಾದರು. ಅವರು ಭಾರತೀಯ ಪರಮಾಣುಶಕ್ತಿ ಆಯೋಗದ ಸಂಶೋಧನೆ ಮತ್ತು ಅಭಿವೃದ್ಧಿ ಶಾಖೆಯ ಸದಸ್ಯರು ಕೂಡಾ.

1973ರಲ್ಲಿ ಬೆಂಗಳೂರಿನಲ್ಲಿರುವ ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್‌ನ ಅಧ್ಯಕ್ಷರಾಗಿ ಡಾ. ರಾಜಾ ರಾಮಣ್ಣ ಅಧಿಕಾರ ವಹಿಸಿಕೊಂಡರು. 1974ರಲ್ಲಿ ಮೈಸೂರು ವಿಶ್ವವಿದ್ಯಾಲಯ ರಾಜಾ ರಾಮಣ್ಣರಿಗೆ ಗೌರವ ಡಾಕ್ಟರೇಟ್ ಪ್ರಶಸ್ತಿ ನೀಡಿತು.

ಸಂಗೀತದಲ್ಲಿ ಇವರಿಗೆ ಆಸಕ್ತಿಯಿದೆ.

ರಾಜಾ ರಾಮಮೋಹನ ರಾಯ್

18ನೆಯ ಶತಮಾನದ ಕೊನೆಯ ಭಾಗದ ಭಾರತದಲ್ಲಿ, ಧಾರ್ಮಿಕ ಸಾಮಾಜಿಕ ಹಾಗೂ ರಾಜಕೀಯ ಕ್ಷೇತ್ರಗಳಲ್ಲಿ ಮುಸುಕಿದ್ದ ಅಜ್ಞಾನದ ಅಂಧಕಾರವನ್ನು ತೊಲಗಿಸಿದವರು ರಾಜಾ ರಾಮಮೋಹನ ರಾಯ್. ಅವರು 'ಭಾರತದ ನವೋದಯ ಪಿತಾಮಹ'.

ಬಂಗಾಳದ ಬರ್ದ್ವಾನ್ ಜಿಲ್ಲೆಯ ಹಳ್ಳಿಯೊಂದರಲ್ಲಿ 1772 ಮೇ 22ರಂದು ರಾಮಮೋಹನ ರಾಯ್ ಜನಿಸಿದರು. ಮೂವತ್ತು ವರ್ಷ ಆಗುವುದರೊಳಗೆ ಅನೇಕ ಕಡೆಗಳಿಗೆ ಪ್ರವಾಸ ಹೋಗಿಬಂದು ಜ್ಞಾನ, ಅನುಭವಗಳನ್ನು ಹೆಚ್ಚಿಸಿಕೊಂಡರು. ಮಾತೃಭಾಷೆಯಾದ ಬಂಗಾಳಿ ಯಲ್ಲಷ್ಟೇ ಅಲ್ಲದೆ ಸಂಸ್ಕೃತ, ಅರಬೀ, ಪಾರಸೀ, ಹೀಬ್ರೂ, ಗ್ರೀಕ್, ಇಂಗ್ಲಿಷ್‌ಗಳಲ್ಲಿ ಅಗಾಧ ಪಾಂಡಿತ್ಯ ಗಳಿಸಿದರು.

ಈಸ್ಟ್ ಇಂಡಿಯಾ ಕಂಪೆನಿಯ ಆಶ್ರಯದಲ್ಲಿ 1803ರಲ್ಲಿ ಕೆಲಸಕ್ಕೆ ಸೇರಿದರು. 1815ರ ವರೆಗೂ ವಿವಿಧ ಕೆಲಸಗಳಲ್ಲಿದ್ದು, ಅನಂತರ ನಿವೃತ್ತಿ ಪಡೆದರು. ಆಮೇಲೆ ಕಲ್ಕತೆಯಲ್ಲಿ ನೆಲೆಸಿದರು.

1815ರಿಂದ 19ರ ವರೆಗೆ ರಾಜಾ ರಾಮಮೋಹನ ರಾಯರು [illegible]
[illegible]
[illegible]
[illegible]
[illegible]
[illegible] ಧಾರ್ಮಿಕ [illegible]
'ಬ್ರಹ್ಮಸಮಾಜ'ವನ್ನೂ ಸ್ಥಾಪಿಸಿದರು.

[illegible]
[illegible]
[illegible]
[illegible]

1823ರಲ್ಲಿ ಪತ್ರಿಕಾ ಸ್ವಾತಂತ್ರ್ಯಕ್ಕಾಗಿ ಹೋರಾಟ ನಡೆಸಿದರು. [illegible]
[illegible]
ರಾಜಕೀಯ ಚಿಂತನೆಗೆ ಎಡೆಕೊಟ್ಟುವು. ಈ ಚಿಂತನೆಯ ಹಿನ್ನೆಲೆಯಲ್ಲಿ ಮುಂದೆ 1885ರಲ್ಲಿ ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ಸಿನ (ಭಾರತ ರಾಷ್ಟ್ರೀಯ ಕಾಂಗ್ರೆಸ್) ಸ್ಥಾಪನೆಯಾಯಿತು.



ವಿಶ್ವವಲಯದ ಸದಸ್ಯ

ಬಂಗಾಳೀ ಗದ್ಯ ಸಾಹಿತ್ಯದ ಸೃಷ್ಟಿ ಕರ್ತರಲ್ಲೊಬ್ಬರಾದ ಇವರು, ಸಾಹಿತ್ಯ ಜನಪ್ರಿಯ ಹಾಗೂ ವೈಚಾರಿಕವಾಗು ವಂತೆ ಮಾಡಿದರು.

ಇಂಗ್ಲೆಂಡಿನಲ್ಲಿ ಇವರಿಗೆ ಅಪಾರ ಮಿತ್ರರೂ ಅಭಿಮಾನಿಗಳೂ ಇದ್ದರು. ಇವರು ಒಮ್ಮೆ ಅಲ್ಲಿಗೆ ಹೋದಾಗ ಬ್ರಿಸ್ಟಲಿನಲ್ಲಿ 1833, ಸೆಪ್ಟೆಂಬರ್ 27ರಂದು ನಿಧನರಾದರು. ಅಲ್ಲಿ ಇವರ ಸಮಾಧಿ ಇದೆ.

ಜರ್ಮನಿಯ ಭಾರತಾಭ್ಯಾಸಿ ಮ್ಯಾಕ್ಸ್‌ಮೂಲರ್ ಹೇಳಿರುವಂತೆ, "ಪೂರ್ವದಿಂದ ಪಶ್ಚಿಮಕ್ಕೆ ಹೋಗಿ ವಿಶ್ವವಲಯದಲ್ಲಿ ಸೇರಿದವರಲ್ಲಿ ರಾಜಾ ರಾಮಮೋಹನ ರಾಯ್ [illegible]".

ರಾಜೇಂದ್ರ ಚೋಳ

ಚೋಳವಂಶದ ಒಬ್ಬ ಪ್ರಸಿದ್ಧ ದೊರೆ, ರಾಜೇಂದ್ರ ಚೋಳ.

ರಾಜೇಂದ್ರ ಚೋಳ ತನ್ನ ತಂದೆ ರಾಜರಾಜ ಚೋಳನೊಂದಿಗೆ [illegible] ವರ್ಷ ಕಾಲ ಕೂಡಿಯೇ ರಾಜ್ಯಭಾರ ಮಾಡಿದ. [illegible] 1014ರಲ್ಲಿ ಪಟ್ಟಕ್ಕೆ ಬಂದ. 1044ರ ವರೆಗೆ ಆಳಿದ.

ತನ್ನ ತಂದೆ ಕಟ್ಟಿದ ಸೈನ್ಯ, ನೌಕಾಪಡೆಗಳನ್ನು ರಾಜೇಂದ್ರ ಚೋಳ ಬಲ ಪಡಿಸಿದ. [illegible] ಬಂಗಾಳ ಪ್ರದೇಶಗಳ ರಾಜರನ್ನು ಜಯಿಸಿದ. ತನ್ನ ಹೊಸ ರಾಜಧಾನಿ ಚೋಳಪುರವನ್ನು ಪವಿತ್ರಗೊಳಿಸಲೆಂದು ಗಂಗೆ ಯಿಂದ ನೀರು ತಂದ. ಇದರಿಂದ ಇವನಿಗೆ ಬಂದ ಹೆಸರು 'ಗಂಗೈಕೊಂಡ ಚೋಳ'.

ಚಾಲುಕ್ಯರ ಅಧೀನದ ಕೆಲವು ಪ್ರದೇಶಗಳನ್ನು ಇವನು ಗೆದ್ದ. ಸಿಂಹಳ, [illegible]
[illegible]
[illegible]
[illegible]
[illegible]
[illegible]

ಕೆರೆ, ಕಾಲುವೆ, ಅಣೆಕಟ್ಟೆಗಳನ್ನು ಕಟ್ಟಿಸಿ [illegible]
[illegible]

[illegible]

ರಾಜೇಂದ್ರ ಪ್ರಸಾದ

ಗಾಂಧೀಜಿಯ ನಿಷ್ಠಾವಂತ ಅನುಯಾಯಿ. ರಾಷ್ಟ್ರ ನಾಯಕ. ಸ್ವತಂತ್ರ ಭಾರತದ ಪ್ರಥಮ ರಾಷ್ಟ್ರಪತಿ —ಬಾಬು ರಾಜೇಂದ್ರ ಪ್ರಸಾದ್.

ಜನನ 1884 ಡಿಸೆಂಬರ್ 3ರಂದು. ಬಿಹಾರ ಪ್ರಾಂತದ ಸಾರನ್ ಜಿಲ್ಲೆಯ ಜೀರಾದೇಯಿ ಗ್ರಾಮದಲ್ಲಿ. ತಂದೆ ಮಹಾದೇವ ಸಹಾಯ್. ಇವರ ಪೂರ್ವಜರು ಸಂಯುಕ್ತ ಪ್ರಾಂತದ ಅಮೋರಾದಿಂದ ಜೀರಾದೇಯಿಗೆ ಬಂದವರು.



ಪ್ರಥಮ ರಾಷ್ಟ್ರಪತಿ

ಪ್ರಾಥಮಿಕ ಶಿಕ್ಷಣ ಒಬ್ಬ ಮುಸಲ್ಮಾನ ಗುರುವಿನ ಕೈಕೆಳಗೆ ನಡೆಯಿತು. ಮಾಧ್ಯಮಿಕ ಶಿಕ್ಷಣ ಛಪ್ರಾಪಟ್ಟಣದಲ್ಲಿ. ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ಪ್ರಥಮ ಸ್ಥಾನ ಪಡೆದರು. ಮುಂದೆ ಕಲ್ಕತ್ತೆಯ ಕಾಲೇಜಿನಲ್ಲಿ ಕಲಿತು 1904ರಲ್ಲಿ ಬಿ. ಎ., ಪರೀಕ್ಷೆಯಲ್ಲಿ ವಿಶ್ವವಿದ್ಯಾನಿಲಯಕ್ಕೆ ಪ್ರಥಮ ಉತ್ತೀರ್ಣರಾದರು. ಆಮೇಲೆ ಎಂ. ಎ., ಪದವಿ ಪಡೆದರು. ಮುಜಫರ್‌ಪುರ್ ಕಾಲೇಜಿನಲ್ಲಿ ಸ್ವಲ್ಪಕಾಲ ಪ್ರಾಧ್ಯಾಪಕರಾಗಿದ್ದರು. ಅನಂತರ ವಕೀಲಿ ಪರೀಕ್ಷೆಮಾಡಿಕೊಂಡು ಪಟ್ನಾ ನಗರದಲ್ಲಿ ವಕೀಲವೃತ್ತಿ ಆರಂಭಿಸಿದರು. ಇವರ ಉತ್ಪನ್ನದ ಅಧಿಕಾಂಶ ಸಾರ್ವಜನಿಕ ಕಾರ್ಯಗಳಿಗೆ ಮೀಸಲು.

ಚಂಪಾರಣ್ಯದಲ್ಲಿ ನೀಲಿ ತೋಟದ ರೈತರಿಗೂ ತೋಟದೊಡೆಯರಿಗೂ ಇದ್ದ ವಿವಾದವನ್ನರಿತು ಕಾರ್ಮಿಕರ ಸಂಕಷ್ಟ ನಿವಾರಿಸಲು ಗಾಂಧೀಜೀ ಬಂದಾಗ ಪ್ರಸಾದ್ ಅವರನ್ನು ಭೇಟಿಯಾದರು. ಪ್ರಸಾದರು ಗಾಂಧೀಜಿಗೆ ನೆರವಾದರು 7,000 ಸಾಕ್ಷ್ಯಗಳನ್ನೊದಗಿಸಿದರು.

ಪ್ರಸಾದರು 1920ರಲ್ಲಿ ಅಸಹಕಾರ ಚಳುವಳಿ ಸೇರಿ, ಹೆಚ್ಚಿನ ಉತ್ಪನ್ನದ ವಕೀಲವೃತ್ತಿ ತ್ಯಜಿಸಿದರಲ್ಲದೆ ಚಳುವಳಿಯಲ್ಲಿ ಪ್ರಮುಖ ಪಾತ್ರ ವಹಿಸಿದರು. ಸೆರೆವಾಸ ಅನುಭವಿಸಿದರು. ಶಾಲಾ ಕಾಲೇಜುಗಳಿಂದ ಹೊರಬಂದ ವಿದ್ಯಾರ್ಥಿಗಳಿಗಾಗಿ ಬಿಹಾರ ವಿದ್ಯಾಪೀಠವೆಂಬ ಶಿಕ್ಷಣ ಸಂಸ್ಥೆ ಸ್ಥಾಪಿಸಿದರು. ಇದರ ಆಶ್ರಯದಲ್ಲಿ 650 ವಿವಿಧ ವಿದ್ಯಾಲಯಗಳಿದ್ದು, 62 ಸಾವಿರ ಮಂದಿ ವಿದ್ಯಾರ್ಥಿಗಳು ಕಲಿಯುತ್ತಿದ್ದರು.

ರಾಜೇಂದ್ರ ಪ್ರಸಾದರು 1906ರಲ್ಲಿ ಕಲ್ಕತ್ತೆಯಲ್ಲಿ ಸೇರಿದ 22ನೆಯ ಕಾಂಗ್ರೆಸ್ ಅಧಿವೇಶನದಲ್ಲಿ ಕಾಂಗ್ರೆಸ್ ಸ್ವಯಂ ಸೇವಕರಾಗಿದ್ದರು, ಮುಂಬಯಿಯಲ್ಲಿ 1934ರಲ್ಲಿ ಜರಗಿದ ಕಾಂಗ್ರೆಸ್ ಮಹಾಧಿವೇಶನದ ಅಧ್ಯಕ್ಷತೆ ವಹಿಸಿದರು. 1939ರಲ್ಲಿ ಸುಭಾಷ ಚಂದ್ರ ಬೋಸರು ಕಾಂಗ್ರೆಸ್ ಅಧ್ಯಕ್ಷತೆಗೆ ರಾಜೀನಾಮೆ ಇತ್ತಾಗ ಪ್ರಸಾದರು ಮತ್ತೊಮ್ಮೆ ಅಧ್ಯಕ್ಷರಾದರು.

1934ರಲ್ಲಿ ಬಿಹಾರಿನಲ್ಲಿ ಭೂಕಂಪ ಸಂಭವಿಸಿದಾಗ. 1935 ಕ್ವೆಟ್ಟಾದಲ್ಲಿ ಭೂಕಂಪವಾದಾಗ, ರಾಜೇಂದ್ರ ಪ್ರಸಾದರು ಸಲ್ಲಿಸಿದ ಸೇವೆ ಅಪಾರ. ಸಂತ್ರಸ್ತರ ಸಂಕಷ್ಟ ನಿವಾರಣೆಗಾಗಿ 29 ಲಕ್ಷ ರೂಪಾಯಿ ಕೂಡಿಸಿ, ಸುವ್ಯವಸ್ಥಿತವಾಗಿ ಖರ್ಚಾಗುವಂತೆ ಮಾಡಿದರು. 1937ರಲ್ಲಿ ಪ್ರಾಂತಗಳಲ್ಲಿ ಕಾಂಗ್ರೆಸ್ ಮಂತ್ರಿಮಂಡಲ ರಚಿಸಿದಾಗ ರಾಜೇಂದ್ರ ಪ್ರಸಾದರು ಮಂತ್ರಿಯಾಗಲು ನಿರಾಕರಿಸಿದರು. 1942ರಲ್ಲಿ 'ಚಲೇಜಾವ್' ಚಳುವಳಿಯ ವೇಳೆಯಲ್ಲಿ ಮತ್ತೆ ಬಂಧಿತರಾದರು. ಮುಂದೆ 1947ರಲ್ಲಿ ಸ್ವಾತಂತ್ರ್ಯ ದೊರೆತಾಗ ಕೇಂದ್ರ ಮಂತ್ರಿಮಂಡಲದಲ್ಲಿ ಆಹಾರ ಮಂತ್ರಿಯಾದರು. ಮುಂದೆ ರಾಜ್ಯಾಂಗ ರಚನಾಸಭೆಯ ಅಧ್ಯಕ್ಷರಾಗಿ 1950 ಜನವರಿ 26ರಂದು ಭಾರತ ಸಾರ್ವಭೌಮ ಪ್ರಜಾಪ್ರಭುತ್ವ ಗಣರಾಜ್ಯ ಎನಿಸಿದಾಗ, ಪ್ರಥಮ ರಾಷ್ಟ್ರಪತಿಯಾದರು.

ಅವರು 1950ರಿಂದ 62ರ ವರೆಗೆ ರಾಷ್ಟ್ರಪತಿಯಾಗಿದ್ದು ನಿವೃತ್ತರಾದರು.

ರಾಜೇಂದ್ರ ಪ್ರಸಾದರು ಅನೇಕ ಭಾಷೆಗಳನ್ನು ಅರಿತಿದ್ದರು. ಅವರು ಅಖಿಲ ಭಾರತ ಹಿಂದೀ ಸಾಹಿತ್ಯ ಸಮ್ಮೇಳನ ಅಧ್ಯಕ್ಷತೆಯನ್ನು ಒಮ್ಮೆ ವಹಿಸಿದ್ದರು. 'ಚಂಪಾರಣ್ಯ ಸತ್ಯಾಗ್ರಹದ ಕಥೆ', 'ಒಡೆದ ಭಾರತ' ಅವರ ಕೃತಿಗಳು. ತಮ್ಮ ಆತ್ಮಚರಿತ್ರೆಯನ್ನೂ ಅವರು ಬರೆದರು. 'ಅಜಾತಶತ್ರು' ಎಂಬ ಪ್ರಶಂಸೆಗೆ ಪಾತ್ರರಾದ ವಿನಯಸಂಪನ್ನರು ಬಾಬು ರಾಜೇಂದ್ರ ಪ್ರಸಾದ್. 1963 ಫೆಬ್ರವರಿ 28ರಂದು ತಮ್ಮ ಹುಟ್ಟೂರಿನಲ್ಲಿ ತಾವು ಸ್ಥಾಪಿಸಿದ ಆಶ್ರಮದಲ್ಲಿ ಕಾಲವಾದರು.

ರಾಣಾ ಪ್ರತಾಪಸಿಂಹ

ಅಕ್ಬರನ ಕಾಲದಲ್ಲಿ ಮೊಘಲ ಸಾಮ್ರಾಜ್ಯ ಕಾಶ್ಮೀರದಿಂದ ಗೋದಾವರಿ ನದಿಯ ವರೆಗೆ, ಬಂಗಾಳದಿಂದ ಕಾಬೂಲಿನ ವರೆಗೆ ಹರಡಿತು. ಪರಮ ವೀರರೆನಿಸಿದ ರಜಪೂತ ಅರಸರೂ ಒಬ್ಬೊಬ್ಬರಾಗಿ ಅಕ್ಬರನಿಂದ ಪರಾಜಿತರಾದರು.



ವೀರ ನಿಷ್ಠೆ

ಆದರೆ ಮೇವಾಡದ ರಾಣಾ ಪ್ರತಾಪಸಿಂಹ ಮಾತ್ರ ಮೊಘಲ ವೈರಿಗಳನ್ನು ಕೊನೆಯ ವರೆಗೂ ಎದುರಿಸುವ ಶಪಥ ತೊಟ್ಟ. ತನ್ನ ರಾಜಧಾನಿ ವೈರಿಗಳ ವಶವಾದರೂ ವೀರರಾದ ದೇಶಪ್ರೇಮಿಗಳ ಚಿಕ್ಕ ಗುಂಪಿನ ಸಹಾಯದಿಂದ ಅಗಾಧ ಶಕ್ತಿಯ ಮೊಘಲ ಸೇನೆಯೊಡನೆ ಕಾದಾಡಿದ. ಕಾಡು ಮರಗಳ ಹಣ್ಣುಗಳನ್ನು ಸೇವಿಸುತ್ತ, ಕಲ್ಲು ಬಂಡೆಗಳ ಮೇಲೆ ವಿಶ್ರಾಂತಿ ಪಡೆಯುತ್ತ, ಗುಡ್ಡ ಕಾಡುಗಳಲ್ಲಿ ಓಡಾಡಿದ. ಅನಿರೀಕ್ಷಿತವಾಗಿ ವೈರಿಗಳ ಮೇಲೆ ದಾಳಿ ಮಾಡಿ ಅವರು ಕಕ್ಕಾಬಿಕ್ಕಿಯಾಗುವಂತೆ ಮಾಡಿದ. ಇಪ್ಪತ್ತೈದು ವರ್ಷಗಳ ಕಾಲ ಕಳೆದರೂ ಅಕ್ಬರನಿಗೆ ಶರಣಾಗಲಿಲ್ಲ. ಪ್ರತಾಪಸಿಂಹ ಸಿಂಹಾಸನವೇರಿದ್ದು 1572ರಲ್ಲಿ. ಮರುವರ್ಷ ಅಕ್ಬರ್ ಇವನೆಡೆಗೆ ಸ್ನೇಹ ಹಸ್ತವನ್ನು ಚಾಚಿದ

[illegible]
ಒಪ್ಪಿಕೊಳ್ಳಲಿಲ್ಲ. ರಾಣಾನ ನೆರೆಹೊರೆಯ ಅರಸರು, ಕೊನೆಗೆ ಆತನ [illegible] [illegible] 1597ರಲ್ಲಿ [illegible] ವಯಸ್ಸಿನಲ್ಲಿ "ಈ ರಾಜ್ಯವನ್ನು ತುರುಕರಿಗೆ ಬಿಟ್ಟುಕೊಡುವುದಿಲ್ಲ" ಎಂಬ [illegible] ದಿಂದ ರಾಣಾ ಕೊನೆಯುಸಿರೆಳೆದ.

ರಾಣಿ ದುರ್ಗಾವತಿ

"ಕಳಂಕ ಹೊತ್ತು ಜೀವಿಸಿರುವುದಕ್ಕಿಂತ ಗೌರವದಿಂದ ಸಾಯುವುದು [illegible]" ಎಂದು ಹೇಳಿದವಳು ರಾಣಿ ದುರ್ಗಾವತಿ.

ಗರಹ್‌ಕಟಂಗ 16ನೆಯ ಶತಮಾನದಲ್ಲಿ ಗೊಂಡವಾನ ಪ್ರದೇಶದ ಒಂದು ರಾಜ್ಯ. [illegible]

[illegible] ಅಪ್ರಾಪ್ತವಯಸ್ಕನಾಗಿದ್ದುದರಿಂದ ಅವನ ತಾಯಿ ರಾಣಿ ದುರ್ಗಾವತಿ [illegible] ರಾಜ್ಯಭಾರ ನಡೆಸುತ್ತಿದ್ದಳು. ಆಕೆ ಮಹೋಬಾದ ಚಂದೆಲ್ಲ ಮುಖಂಡನ ಮಗಳು, [illegible] ಸೋಲಿಸಿದಳು.

[illegible] ಅಕ್ಬರ್ 1564ರಲ್ಲಿ ಅಸಫ್‌ಖಾನ್ [illegible] ರಾಣಿ ದುರ್ಗಾವತಿ ಬಾಣ ಬಿಡುವುದರಲ್ಲಿ, ಬಂದೂಕು ಹಾರಿಸುವುದರಲ್ಲಿ ಚತುರಳಾಗಿದ್ದಳು. [illegible] ಒಪ್ಪಲಿಲ್ಲ.

ಮರುದಿನ ಯುದ್ಧದಲ್ಲಿ ವೀರನಾರಾಯಣ ಗಾಯಗೊಂಡ. ಇದನ್ನು [illegible] ಕೇವಲ 300 [illegible] ಎರಡು ಬಾಣಗಳು ಬಂದು ತಗಲಿ, ರಾಣಿ ಅಸಹಾಯಳಾದಳು.

[illegible] ದಂತಾಗಲಿ" ಎಂದಳು. ತಾನೇ ಕಠಾರಿಯಿಂದ ತಿವಿದುಕೊಂಡು ಆತ್ಮಹತ್ಯೆ ಮಾಡಿಕೊಂಡಳು.

ರಾಣಿಗಂಜ್

ಭಾರತದಲ್ಲಿ ಮೊತ್ತಮೊದಲ ಕಲ್ಲಿದ್ದಲು ಗಣಿಯನ್ನು ತೋಡಿದ್ದು [illegible] 1814ರಲ್ಲಿ ಇಲ್ಲಿ ಕಲ್ಲಿದ್ದಲು ತೆಗೆಯುವ ಕೆಲಸ ಆರಂಭವಾಯಿತು.

[illegible] ದಾಯಕ್ಕೆ ಸೇರಿದೆ.

[illegible] ಇಲ್ಲಿಗೆ ಸುಮಾರು 115 ಮೈಲು ದೂರ.

1972ರ [illegible] ಪ್ರಮಾಣ 75 ಕೋಟಿ ಟನ್. ಇನ್ನೂ ಇಲ್ಲಿ ಎರಡು ಸಾವಿರ ಅಡಿ ಆಳದ ವರೆಗೆ ನಿಕ್ಷೇಪ ತೆಗೆಯಬಹುದೆಂದೂ ಅಲ್ಲಿಯ ವರೆಗೆ ಸುಮಾರು ಎರಡುಕೋಟಿ ಟನ್ ಕಲ್ಲಿದ್ದಲು ಸಿಗುತ್ತದೆಂದೂ ಅಂದಾಜು ಮಾಡಲಾಗಿದೆ.

ರಾಧಾನಾಥ್ ಸಿಕ್‌ದರ್

"...[illegible] ಸ್ಪರ್ಧಿಸಬಲ್ಲ ದೇಶೀಯನಾಗಲೀ, ಐರೋಪ್ಯನಾಗಲೀ ಇಲ್ಲ. [illegible]..."

ಹಿಮಾಲಯದಲ್ಲಿ ಅತ್ಯುನ್ನತ ಶಿಖರದ ಎತ್ತರವನ್ನು ನಿರ್ಧರಿಸಿದ [illegible] ದಲ್ಲಿದ್ದರು. ಅಂತಿಮ ಲೆಕ್ಕಾಚಾರ ಮಾಡಿ, ಮುಂದೆ 'ಎವರೆಸ್ಟ್ ಶಿಖರ' [illegible] 1813–70.

[illegible] ಗಳನ್ನು ಸೂಕ್ತವಾಗಿ ಸರ್ಣಿಗೆ ಅನ್ವಯಿಸುವುದರಲ್ಲಿ ಇವರು ಚತುರರಾಗಿದ್ದರು.

[illegible] 1864ರಲ್ಲಿ [illegible] ಒಂದು ಖ್ಯಾತ ಸಂಸ್ಥೆ. ರಾಧಾನಾಥರಿಗೆ ದೊರೆತ ಈ ಸದಸ್ಯತ್ವ [illegible] ಪ್ರಕಟಿಸಿದರು.

ರಾನಡೆ

ನೋಡಿ : ಎಂ.ಜಿ. ರಾನಡೆ

ರಾಬರ್ಟ್ ಕ್ಲೈವ್

ನೋಡಿ : ಕ್ಲೈವ್–ಸಂಪುಟ ೧

ರಾಮ

ಭಾರತದ ಆದಿಕಾವ್ಯವೆಂದು ಪ್ರಸಿದ್ಧವಾದ 'ವಾಲ್ಮೀಕಿ ರಾಮಾಯಣ'ದ ಮಹಾನಾಯಕ ರಾಮ. ಇವನು ವಿಷ್ಣುವಿನ ಏಳನೆಯ ಅವತಾರ ಎಂದು



ದಕ್ಷಿಣ ಭಾರತದ ರಾಮ ಶಿಲ್ಪ

ನಂಬಿಕೆ. ದಶರಥನು ನಡೆಸಿದ ಪುತ್ರಕಾಮೇಷ್ಟಿಯಾಗದ ಫಲವಾಗಿ, ಅ[...] ಹಿರಿಯ ರಾಣಿ ಕೌಸಲ್ಯೆಯಲ್ಲಿ ಜನಿಸಿದ. ಮಾನವನಾಗಿ ಹುಟ್ಟಿದ ರಾ[...] ತನ್ನ ಶೌರ್ಯ, ಶೀಲಗಳಿಂದ ದೇವತ್ವದ ಪಟ್ಟ ಪಡೆದ. ಹಿಂದೂಗ[...] ರಾಮನನ್ನು ಪೂಜಿಸದವರು ಗೌರವಿಸದವರು ಇಲ್ಲವೇ ಇಲ್ಲ ಎನ್ನು[...] ಮಟ್ಟಿಗೆ ಇವನ ಪ್ರಭಾವ.

ವಾಲ್ಮೀಕಿ ಇವನನ್ನು 'ಸತ್ಯಪರಾಕ್ರಮ' ಎಂದು ಹೊಗಳಿದ್ದಾ[...] ತಾನು ಸತ್ಯವೆಂದು, ನ್ಯಾಯವೆಂದು ಭಾವಿಸಿದ್ದನ್ನು ತಪ್ಪದೆ ಆಚರಿ[...] ಕೀರ್ತಿ ಇವನದು. ಅವನು ಆದರ್ಶಪುತ್ರ. ತಂದೆಯ ಮಾತ[...] ಗೌರವಿಸಿ, ರಾಜ್ಯವನ್ನು ತೊರೆದು ವನವಾಸಕ್ಕೆ ಹೋದ. ಏಕಪ[...] ವ್ರತಸ್ಥ. ತನ್ನ ಪತ್ನಿ ಸೀತಾದೇವಿಯ ಮೇಲಿನ ಪ್ರೇಮದಿಂದ ಎಂ[...] ವಿಚಲಿತನಾಗಲಿಲ್ಲ. ಅವನು ಆದರ್ಶ ಪ್ರಭು. ಪತ್ನಿಯ ಶೀಲದ ಬ[...] ತನ್ನ ಪ್ರಜೆಯೊಬ್ಬ ಸಂದೇಹಪಟ್ಟನೆಂದು ತಿಳಿದಾಗ ರಾಜನಾದವ[...] ಪ್ರಜೆಗಳ ಅಭಿಪ್ರಾಯಕ್ಕೆ ಮನ್ನಣೆ ಕೊಡಬೇಕು ಎಂದು, ತ[...] ಯಾವ ಸಂದೇಹವೂ ಇಲ್ಲದಿದ್ದರೂ ಸೀತೆಯನ್ನು ತ್ಯಜಿಸಿದ. ದು[...] ತೊಂದರೆಗೊಳಗಾಗಿದ್ದವರನ್ನು ರಕ್ಷಿಸುವುದರಲ್ಲಿ ಅವನು ಎತ್ತಿದ ಕೈ. ಅ[...] ಭ್ರಾತೃಪ್ರೇಮ ಕೂಡ ಅಸದೃಶವಾದದ್ದು.

ರಾಮನ ಆದರ್ಶ ವ್ಯಕ್ತಿತ್ವ ನಮ್ಮ ರಾಷ್ಟ್ರದ ವಿವಿಧ ಭಾಷೆಗಳ ಕವಿಗ[...] ಒಂದು ಪ್ರಬಲ ಸ್ಫೂರ್ತಿಯ ನೆಲೆಯಾಗಿದೆ. ನಾನಾ ಕಾಲಗಳಲ್ಲಿ ನಾ[...] ಭಾಷೆಯ ಕವಿಗಳು ರಾಮನ ಕಥೆಯನ್ನು ಕುರಿತು ಉತ್ತಮ ಕಾವ್ಯಗಳ[...] ಬರೆದಿದ್ದಾರೆ. ಒಳ್ಳೆಯ ನಡವಳಿಕೆಯುಳ್ಳವನನ್ನು 'ರಾಮಸಂಭವ[...] ಎನ್ನುತ್ತಾರೆ. ರಾಮನ ಸದ್ಗುಣಶೀಲ ಚಿತ್ರ ನಮ್ಮ ಜನರ ಹೃದಯ[...] ಬೇರೂರಿದೆ.

ನೋಡಿ : 'ರಾಮರಾಜ್ಯ'; ಸೀತಾ
'ರಾಮಾಯಣ'—ಸಂಪುಟ ೫

ರಾಮಕೃಷ್ಣ ದಾಲ್ಮಿಯಾ

ಭಾರತದಲ್ಲಿ ಬೃಹತ್ ಕೈಗಾರಿಕಾ ಸರಣಿಯನ್ನು ಸ್ಥಾಪಿಸಿದ ಪ್ರಮ[...] ಉದ್ಯಮಿಗಳಲ್ಲಿ ಸೇಠ್ ರಾಮಕೃಷ್ಣ ದಾಲ್ಮಿಯಾ ಒಬ್ಬರು.

ಕೇವಲ 12ನೆಯ ವಯಸ್ಸಿಗೆ 10 ರೂಪಾಯಿ ಸಂಬಳದ ಕೆಲ[...] ಸೇರಿದವರು, ದಾಲ್ಮಿಯಾ. ಇಂದು ಅವರ ಕೈಗಾರಿಕೆಗಳನ್ನು ಆಧರಿಸಿ[...] ಪಟ್ಟಣಗಳೇ ಇವೆ. ಬಿಹಾರದ ದಾಲ್ಮಿಯಾ ನಗರ, ದಕ್ಷಿಣ ಭಾರ[...] ದಾಲ್ಮಿಯಾಪುರ. ಹರ್ಯಾಣದ ದಾಲ್ಮಿಯಾ–ದಾದ್ರಿ, ರಾಜಸ್ಥಾನದ ರಾ[...] ಕೃಷ್ಣ[...]ಕ್ ಮತ್ತು ಸವಾಯಿ ಮಾಧೋಪುರ. ಈಗ ಪಾಕಿಸ್[...] ದಲ್ಲಿರುವ ಕರಾಚಿಯ ಶಾಂತಿನಗರ ಇತ್ಯಾದಿ ಇಂಥ ಪಟ್ಟಣಗ[...] ಅವರಿಂದ ಸಹಾಯ, ಪೋಷಣೆ ಪಡೆದು ಬೆಳೆದಿರುವ ಸಂಸ್ಥೆಗಳು ಅನೇ[...]

ದಾಲ್ಮಿಯಾ ಅತ್ಯಂತ ಧಾರ್ಮಿಕ ಮನೋಭಾವದವರು.

ಇಂಡೋನೇಶ್ಯ ಶಿಲ್ಪ : ವಾಲಿ–ಸುಗ್ರೀವ ಕಾಳಗ ; ವಾಲಿ ವಧೆ ; ಸುಗ್ರೀವನ ಪಟ್ಟಾಭಿಷೇಕ





ಶ್ರೀರಂಗಂ ಶಿಲ್ಪ



ಬೇಲೂರು ಮಠ

ನವರಾತ್ರಿ



ದೀಪಾವಳಿ





ದಾನಶೀಲತೆ : ದಾಲ್ಮಿಯಾ

ರಾಮಕೃಷ್ಣ ದಾಲ್ಮಿಯಾ 1893 ಏಪ್ರಿಲ್ 17ರಂದು ಈಗಿನ ಹರ್ಯಾಣದ ದಾಲ್ಮ ಎಂಬ ಹಳ್ಳಿಯಲ್ಲಿ ಜನಿಸಿದರು. ಚಿಕ್ಕಂದಿನಲ್ಲೇ ಕೆಲಸಕ್ಕೆ ಸೇರಿದ್ದರಿಂದ, ತಮ್ಮ ಬಿಡುವಿನ ವೇಳೆಯಲ್ಲಿ ಮಾತ್ರ ತಮಗೆ ಆಸಕ್ತಿಯಿದ್ದ ವಿಷಯ ಪುಸ್ತಕಗಳನ್ನು ಓದತೊಡಗಿದರು. ಹಿಂದೀ, ಬಂಗಾಳೀ, ಗುಜರಾತೀ ಹಾಗೂ ಆಂಗ್ಲ ಭಾಷೆಗಳಲ್ಲಿ ಸಾಕಷ್ಟು ಪರಿಣತಿ ಪಡೆದರು. ಅನಂತರ ದಾಲ್ಮಿಯಾ – ಜೈನ್ ಗುಂಪಿನ ಕೈಗಾರಿಕೋದ್ಯಮದ ಸ್ಥಾಪಕರಾದರು. ಇದರಲ್ಲಿ ಬ್ಯಾಂಕುಗಳು, ಜೀವವಿಮೆ, ಬಂಡವಾಳ ತೊಡಗಿಸುವ ಕಂಪೆನಿಗಳು, ಅನೇಕ ಸಿಮೆಂಟ್, ರಾಸಾಯನಿಕ ಮತ್ತು ಸಕ್ಕರೆ ಕಾರಖಾನೆಗಳು, ಬಿಸ್ಕತ್ ಕಾರಖಾನೆಗಳು, ಕಲ್ಲಿದ್ದಲು ಗಣಿಗಳು, ಪ್ರಕಾಶನ ಮಂದಿರಗಳು, ವಾರ್ತಾ ಪತ್ರಿಕೆಗಳು ಮುಂತಾದ ಉದ್ಯಮಗಳಿವೆ.

ಜೀವನದಲ್ಲಿ ಬಹಳಷ್ಟು ಎಡರುತೊಡರುಗಳನ್ನು ದಾಲ್ಮಿಯಾ ಎದುರಿಸಬೇಕಾಯಿತು. ಆದರೆ ಅವರ ಮನೋದಾರ್ಢ್ಯ [illegible] ಮಾದದ್ದು. ಗೋವಧೆ ನಿಲ್ಲುವವರೆಗೆ ಧಾನ್ಯಗಳನ್ನು ಮುಟ್ಟುವುದಿಲ್ಲವೆಂದು ಅವರ ಶಪಥ. ಧಾರ್ಮಿಕ, ಸಾಮಾಜಿಕ ಮುಂದಾಳುಗಳು ಇವರ ಸ್ನೇಹಾಕಾಂಕ್ಷಿಗಳು. 'ನೇಪಾಳದ ರಾಜಾ ಮಹೇಂದ್ರರ ರಾಜಕೀಯ ಸಿದ್ಧಾಂತ' ಎಂಬುದು ಇವರ ಬರೆಹಗಳಲ್ಲಿ ಒಂದು.

ಶಾಲೆ, ಆಸ್ಪತ್ರೆ, ವಿಧವೆಯರು ಹಾಗೂ ಬಡವರ ಉದ್ಧಾರಕ್ಕಾಗಿ ಸಂಸ್ಥೆ, ಧಾರ್ಮಿಕ ಸಂಸ್ಥೆಗಳು —ದಾಲ್ಮಿಯಾರಿಂದ ಸಹಾಯ ಪಡೆದ ಈ ಬಗೆಯ ಸಂಸ್ಥೆಗಳಿಗೆ ಲೆಕ್ಕವಿಲ್ಲ.

ರಾಮಕೃಷ್ಣ ಪರಮಹಂಸ

ನೋಡಿ : ಸಂಪುಟ ೧

ರಾಮಕೃಷ್ಣ ಮಠ

ಸಮುದ್ರದ ಅಲೆಗಳ ಹಿನ್ನೆಲೆಯಲ್ಲಿ ತಾವರೆ ಅರಳಿನಿಂತಿದೆ. ದಿಗಂತದಲ್ಲಿ ಬೆಳಗುತ್ತಿರುವ ಸೂರ್ಯನ ಇದಿರಿನಲ್ಲಿ ಒಂದು ಹಂಸ. ಇವನ್ನು ಹೆಡೆತೆರೆದ ಸರ್ಪ ಸುತ್ತುವರಿದಿದೆ –ಇದು ರಾಮಕೃಷ್ಣ ಮಠದ ಲಾಂಛನ; ಸರ್ಪ ಕುಂಡಲಿನೀ ಶಕ್ತಿಯನ್ನು ಇದು ಸೂಚಿಸುತ್ತದೆ. ಸೂರ್ಯ–ಜ್ಞಾನ, ಅಲೆ –ಕರ್ಮ, ತಾವರೆ –ಭಕ್ತಿ ಮತ್ತು ಹಂಸ –ಪರಮಾತ್ಮನ ಸಂಕೇತ.

19ನೆಯ ಶತಮಾನದ ಅಪೂರ್ವ ಅಧ್ಯಾತ್ಮಿಕ ಸಾಧಕರೆಂದು ಖ್ಯಾತರಾದ ರಾಮಕೃಷ್ಣ ಪರಮಹಂಸರು ಸಮಾಧಿಸ್ಥರಾದ ಮೇಲೆ ಅವರ ಮುಖ್ಯ ಶಿಷ್ಯ ಸ್ವಾಮಿ ವಿವೇಕಾನಂದರೂ ಇನ್ನೂ ಕೆಲವು ಶಿಷ್ಯರೂ ಸನ್ಯಾಸ ಸ್ವೀಕಾರ ಮಾಡಿದರು. ಅನಂತರ 1887ರ ಮೇ ತಿಂಗಳಿನಲ್ಲಿ ವಿವೇಕಾನಂದರು ರಾಮಕೃಷ್ಣ ಮಠವನ್ನು ಸ್ಥಾಪಿಸಿದರು. ಕಲ್ಕತ್ತೆಯ ಬಳಿ ಹೂಗ್ಲಿ (ಗಂಗಾ) ನದಿಯ ದಡದಲ್ಲಿರುವ 'ಬೇಲೂರು ಮಠ' ಈ ಸಂಸ್ಥೆಯ ಪ್ರಧಾನ ಕೇಂದ್ರ. ಜನವರಿ 1899ರಲ್ಲಿ ಸ್ವಾಮಿ ವಿವೇಕಾನಂದರು ಶ್ರೀ ರಾಮಕೃಷ್ಣರ ಅವರ [illegible] ಈ ಮಠಕ್ಕೆ ಸ್ಥಳಾಂತರ ಮಾಡಿದರು. ಸ್ವಾಮಿ ವಿವೇಕಾನಂದರು ತಮ್ಮ ಕೊನೆಗಾಲದಲ್ಲಿ ವಾಸಿಸಿದ್ದೂ ಸಮಾಧಿಸ್ಥರಾದದ್ದೂ ಈ ಮಠದಲ್ಲೇ.

ವ್ಯಕ್ತಿಗಳ ಆತ್ಮೋದ್ಧಾರ, ಸಾಮಾಜಿಕ ಸೇವೆ ಹಾಗೂ ಆಧ್ಯಾತ್ಮಿಕ [illegible] ರಾಮಕೃಷ್ಣ ಮಠ [illegible] ವಿರಕ್ತರ ಕಾರ್ಯಕ್ಷೇತ್ರವಾಗಿತ್ತು. ಈಗ ಜಗತ್ತಿನ ಎಲ್ಲ ಭಾಗಗಳಿಗೂ ಹಬ್ಬಿದೆ. [illegible] ರಾಮಕೃಷ್ಣ [illegible] ಶಾಲೆ ಕಾಲೇಜು ಹಾಸ್ಟೆಲ್‌ಗಳನ್ನೂ ಎಳೆಯರು ಭಜನೆ ಮಾಡಲು, ಸಂತರ ಜೀವನ ಪರಿಚಯ ಪಡೆಯಲು, ವ್ಯಾಯಾಮ ಆಟಗಳನ್ನು ಕಲಿಯಲು ಅವಕಾಶ ಮಾಡಿಕೊಡುವ ಬಾಲ ಮಂಡಲಿಗಳನ್ನೂ ಕೆಲವು ಮಠಗಳು ನಡೆಸುತ್ತಿವೆ.

1894ರಲ್ಲಿ ವಿವೇಕಾನಂದರು ನ್ಯೂಯಾರ್ಕಿನಲ್ಲಿಯೂ 1900ರಲ್ಲಿ ಸಾನ್ ಫ್ರಾನ್ಸಿಸ್ಕೊದಲ್ಲಿಯೂ ತಮ್ಮ ಮಠದ ಕೇಂದ್ರಗಳನ್ನು ಆರಂಭಿಸಿದರು. ಇಂಗ್ಲೆಂಡ್ ಮತ್ತಿತರ ದೇಶಗಳಲ್ಲಿ ಭಾಷಣ ಪ್ರವಾಸ ಕೈಗೊಂಡು ಅನೇಕ ಕಡೆ ರಾಮಕೃಷ್ಣ ಮಠಗಳನ್ನು ಸ್ಥಾಪಿಸಿ ಭಾರತದ ವೇದಾಂತ ಪ್ರಸಾರಕ್ಕೆ ಮಾರ್ಗ ಮಾಡಿಕೊಟ್ಟರು.

ಮಹಿಳೆಯರಿಗಾಗಿ 1954ರಲ್ಲಿ ಕಲ್ಕತ್ತೆಯಲ್ಲಿ ಶ್ರೀ ರಾಮಕೃಷ್ಣ–ಶಾರದಾ ಮಠ ಸ್ಥಾಪಿತವಾಯಿತು. ನವದೆಹಲಿ, ಮದರಾಸು, ತ್ರಿಚೂರುಗಳಲ್ಲಿ ಶಾರದಾ ಮಠಗಳಿವೆ. ಶಾಲೆ, ಕಾಲೇಜು, ಆಸ್ಪತ್ರೆಗಳನ್ನು ಕಲ್ಕತ್ತೆಯ ಶಾರದಾ ಮಠದವರು ನಡೆಸುತ್ತಿದ್ದಾರೆ.

ಶ್ರೀ ರಾಮಕೃಷ್ಣಮಠ ಮತ್ತು ರಾಮಕೃಷ್ಣ ಮಿಷನ್ ಇವೆರಡೂ ಪ್ರತ್ಯೇಕ ಸಂಸ್ಥೆಗಳಾದರೂ ಒಂದಕ್ಕೊಂದು ನಿಕಟ ಸಂಬಂಧವಿದೆ. ಪ್ರಧಾನವಾಗಿ ಅಧ್ಯಾತ್ಮ ವಿಚಾರಗಳಿಗೆ ಮಠ ಹೆಚ್ಚು ಗಮನ ಕೊಡುತ್ತದೆ. ಸಮಾಜ ಸೇವೆಗೆ ಮಿಷನ್ ಆದ್ಯತೆ ಕೊಡುತ್ತದೆ. ಅನೇಕ ಸ್ಥಳಗಳಲ್ಲಿ ವೈದ್ಯಾಲಯಗಳು, ವಿದ್ಯಾಲಯಗಳು, ವಿದ್ಯಾರ್ಥಿನಿಲಯಗಳನ್ನು ಇದು ನಡೆಸುತ್ತಿದೆ. ಜನಸಮುದಾಯದ ಸರ್ವತೋಮುಖ ಉನ್ನತಿಗಾಗಿ ರಾಮಕೃಷ್ಣ ಮಠ ಕೆಲಸ ಮಾಡುತ್ತಿದೆ.

ರಾಮಕೃಷ್ಣ ಪರಮಹಂಸರ ಹೆಸರು ಹೊತ್ತ ಮಠ



ರಾಮಧಾರಿ ಸಿನ್ಹ 'ದಿನಕರ್'

ಊರ್ವಶಿ–ಪುರೂರವರ ಅಲೌಕಿಕ ಪ್ರೇಮ ಅನೇಕ ಸಾಹಿತ್ಯ ಕೃತಿಗಳಿಗೆ ಸ್ಫೂರ್ತಿ ನೀಡಿರುವ ಕಥೆ. ಈ ಪೌರಾಣಿಕ ಪ್ರಸಂಗಕ್ಕೆ ಹೊಸ ತಿರುವು ಕೊಟ್ಟು 'ಊರ್ವಶಿ' ಕಾವ್ಯನಾಟಕವನ್ನು ಬರೆದವರು ರಾಮಧಾರಿ ಸಿನ್ಹ 'ದಿನಕರ್'.



'ದಿನಕರ್' : 'ಊರ್ವಶಿ'

ಜನನ 1908 ಸೆಪ್ಟೆಂಬರ್ 23ರಂದು, ಬಿಹಾರಿನ ಮಾಂಘೀರ್ ಜಿಲ್ಲೆಯಲ್ಲಿ. ಚರಿತ್ರೆಯಲ್ಲಿ ಪದವೀಧರರಾದ 'ದಿನಕರ್' ಉಪಾಧ್ಯಾಯ ವೃತ್ತಿ ಕೈಗೊಂಡರು. ಸ್ವಾತಂತ್ರ್ಯಸಮರ ಕಾಲದಲ್ಲಿ ಸಾಹಿತ್ಯರಂಗ ಪ್ರವೇಶಿಸಿದರು. ದೇಶಭಕ್ತಿಪೂರಿತ ಕವನಗಳನ್ನು ಬರೆದರು. 50ಕ್ಕೂ ಹೆಚ್ಚು ಪದ್ಯ ಮತ್ತು ಗದ್ಯ ಗ್ರಂಥಗಳನ್ನು ಇವರು ರೂಪಿಸಿದ್ದಾರೆ.

ಇವರ 'ಕುರುಕ್ಷೇತ್ರ' ಹಿಂದೀ ಸಾಹಿತ್ಯದಲ್ಲಿ ಒಂದು ಮೈಲುಗಲ್ಲು. ಚೀನ ಆಕ್ರಮಣ ಸಮಯದಲ್ಲಿ 'ಪರಶುರಾಮ್ ಕೀ ಪ್ರತೀಕ್ಷಾ' ಮೂಲಕ ರಣಕಹಳೆ ಮೊಳಗಿಸಿದರು. ಸಾಹಿತ್ಯ ಅಕಾದೆಮಿ ಪ್ರಶಸ್ತಿ ಗಳಿಸಿದ ಕೃತಿ 'ಸಂಸ್ಕೃತಿ ಕೇ ಚಾರ್ ಅಧ್ಯಾಯ್'. ಜ್ಞಾನಪೀಠ ಪಾರಿತೋಷಿಕ ಗಳಿಸಿದ್ದು 'ಊರ್ವಶಿ' ಕಾವ್ಯನಾಟಕ. ಎರಡು ಬಾರಿ ದ್ವಿವೇದೀ ಚಿನ್ನದ ಪದಕ ದೊರೆತಿದೆ. ರತ್ನಾಕರ ಪುರಸ್ಕಾರ, ನಾಗರೀ ಪ್ರಚಾರಿಣಿ ಸಭಾದ 'ಬಲದೇವ ದಾಸ್ ಪದಕ'ಗಳನ್ನು ಪಡೆದಿದ್ದಾರೆ.

ಬಿಹಾರ್ ರಾಜ್ಯದ ಉಪ ಸಂಪರ್ಕಾಧಿಕಾರಿ, ಭಾಗಲ್ಪುರ ವಿಶ್ವವಿದ್ಯಾನಿಲಯದ ವೈಸ್‌ಛಾನ್ಸಲರ್ ಆಗಿದ್ದರು. ರಾಜ್ಯಸಭಾ ಸದಸ್ಯ. ಬಿಹಾರ್ ವಿಶ್ವವಿದ್ಯಾಲಯದ ಕಾಲೇಜಿನಲ್ಲಿ ಹಿಂದೀ ವಿಭಾಗದ ಪ್ರೊಫೆಸರ್ ಮತ್ತು ಮುಖ್ಯಸ್ಥರಾಗಿದ್ದಾರೆ.

ರಾಮನ್ ಸಂಶೋಧನಾ ಮಂದಿರ

ಪ್ರಾಚೀನಕಾಲದ ಭಾರತದ ನಮ್ಮ ದೇಶದ ಯೋಗ್ಯತೆಗೆ ತಕ್ಕ ವೈಜ್ಞಾನಿಕ ಸಂಶೋಧನಾ ಕೇಂದ್ರವನ್ನು ಸ್ಥಾಪಿಸಬೇಕು; ಅಲ್ಲಿ ನಾಡಿನ ಕುಶಾಗ್ರಮತಿಗಳು ನಿಸರ್ಗದ ರಹಸ್ಯಗಳನ್ನು ಭೇದಿಸಬೇಕು–ಎಂಬ ತಮ್ಮ ಆಕಾಂಕ್ಷೆಯನ್ನು ಪೂರೈಸಲು ಸಿ.ವಿ. ರಾಮನ್ ಸ್ಥಾಪಿಸಿದ ಸಂಸ್ಥೆ –ರಾಮನ್ ಸಂಶೋಧನಾ ಮಂದಿರ (ರಾಮನ್ ರಿಸರ್ಚ್ ಇನ್‌ಸ್ಟಿಟ್ಯೂಟ್).

ವೈಜ್ಞಾನಿಕ ಸಂಶೋಧನೆಯನ್ನು ಪ್ರೋತ್ಸಾಹಿಸಲು 1934ರಲ್ಲಿ ರಾಮನ್ ಅವರು 'ಇಂಡಿಯನ್ ಅಕಾಡೆಮಿ ಆಫ್ ಸೈನ್ಸಸ್' ಎಂಬ ಸಂಸ್ಥೆಯನ್ನು ಪ್ರಾರಂಭಿಸಿದರು. ಅಂದಿನ ಮೈಸೂರು ಸರಕಾರ ಬೆಂಗಳೂರಿನ ಹೊರವಲಯದ ಹೆಬ್ಬಾಳದಲ್ಲಿ ಅಕಾಡೆಮಿಗೆ 24 ಎಕರೆ ಜಾಗ ಕೊಟ್ಟಿತು. ಆ ನಿವೇಶನದಲ್ಲಿ ರಾಮನ್ ತಮ್ಮ ಸ್ವಂತ ಹಣದಿಂದ ಒಂದು ಸಂಶೋಧನಾ ಮಂದಿರವನ್ನು ಕಟ್ಟಿದರು.

1948ರಿಂದ ತಮ್ಮ ನಿಧನದ (1970 ನವೆಂಬರ್ 20)ವರೆಗೆ ಸಿ. ವಿ. ರಾಮನ್ ಅವರೇ ಈ ಸಂಸ್ಥೆಯ ನಿರ್ದೇಶಕರಾಗಿದ್ದರು. ರಾಮನ್ ಸಂಗ್ರಹಿಸಿದ ಅಪರೂಪದ ಸ್ಫಟಿಕ–ಖನಿಜ ಮಾದರಿ, ಚಿಪ್ಪುಗಳ ಸಂಗ್ರಹ ಇಲ್ಲಿದೆ.

ಇಲ್ಲಿ ಸುಸಜ್ಜಿತ ಪ್ರಯೋಗಾಲಯ, ಪುಸ್ತಕ ಭಂಡಾರಗಳಿವೆ. ಖಗೋಳ ವೀಕ್ಷಣಾಲಯವಿದೆ. ಡಾ.ಎಸ್. ಚಂದ್ರಶೇಖರ್ ಅವರ ನಾಯಕತ್ವದಲ್ಲಿ ದ್ರವಸ್ಫಟಿಕ ಸಂಶೋಧನೆ ನಡೆದಿದೆ. ರಾಮನ್ ನಿಧನದ ಅನಂತರ, ಅವರ ಪುತ್ರ ಡಾ. ವಿ. ರಾಧಾಕೃಷ್ಣನ್ ಈ ಸಂಸ್ಥೆಯ ನಿರ್ದೇಶಕರಾಗಿದ್ದಾರೆ. ಇವರು ಖಭೌತವಿಜ್ಞಾನ ಪರಿಣತರು.

ನೋಡಿ : ರಾಮನ್—ಸಂಪುಟ ೩

ರಾಮನವಮಿ

ಸೂರ್ಯವಂಶದ ದೊರೆ, ದಶರಥ. ಮಕ್ಕಳಿಲ್ಲದ ಈತ ವಸಿಷ್ಠರ ಸಲಹೆಯಂತೆ ಪುತ್ರಕಾಮೇಷ್ಟಿಯಾಗ ನೆರವೇರಿಸಿದ. ಹಿರಿಯ ರಾಣಿ ಕೌಸಲ್ಯೆಯ ಮಗನಾಗಿ ರಾಮ ಚೈತ್ರ ಮಾಸ (ಮಾರ್ಚ್–ಏಪ್ರಿಲ್) ಶುದ್ಧ ನವಮಿಯ ದಿನ ಜನಿಸಿದ.

ರಾಮನ ಜನ್ಮದಿನವನ್ನು ಭಕ್ತರು ಹಬ್ಬದಂತೆ ಆಚರಿಸುತ್ತಾರೆ. ಇದು ಶ್ರೀರಾಮನವಮಿ. ಅಂದು ಪೂಜೆ, ಪಾರಾಯಣ ನಡೆಯುತ್ತವೆ. ಆ ದಿನ ಉಪವಾಸ ಮಾಡಿ ವ್ರತ ಕಥೆಯನ್ನು ಕೇಳುತ್ತಾರೆ.

ಸಾರ್ವಜನಿಕವಾಗಿ ರಾಮ ಮಂದಿರಗಳಲ್ಲಿ ಉತ್ಸವ ನಡೆಯುತ್ತದೆ. ಹರಿಕಥೆ, ಸಂಗೀತ, ಉಪನ್ಯಾಸವೇ ಮೊದಲಾದ ಕಾರ್ಯಕ್ರಮಗಳು ನಡೆದು ಪಟ್ಟಾಭಿಷೇಕ, ಹನುಮಂತೋತ್ಸವ ಮಾಡುತ್ತಾರೆ. ಹನುಮಂತೋತ್ಸವದ ದಿನ ಮೆರವಣಿಗೆ ಇರುತ್ತದೆ.

ನೋಡಿ : 'ರಾಮರಾಜ್ಯ'

ರಾಮ ಮನೋಹರ ಲೋಹಿಯಾ

20ನೆಯ ಶತಮಾನದ ಮೂರನೆಯ ದಶಕ ಕೊನೆಯುತ್ತ ಬಂದ ಸಮಯ. ಜಿನೀವಾ ನಗರದಲ್ಲಿ 'ಲೀಗ್ ಆಫ್ ನೇಷನ್ಸ್' (ಆಗಿನ ಪ್ರಪಂಚ ರಾಷ್ಟ್ರ ಸಂಸ್ಥೆ) ಸಭೆ. ಸುಮಾರು ಇಪ್ಪತ್ತು ವರ್ಷ ವಯಸ್ಸಿನ ಗಿಡ್ಡ, ಕನ್ನಡಕಧಾರಿ ಹುಡುಗ ಒಂದು ವಿಚಿತ್ರ ರೀತಿಯ ಪ್ರತಿಭಟನೆ ತೋರಿದ. ಭಾರತದ ಪ್ರತಿನಿಧಿ ಎಂದು ಒಬ್ಬ ಮಹಾರಾಜ ಮಾತನಾಡಲೆದ್ದಾಗ, ಸಾರ್ವಜನಿಕ ಗ್ಯಾಲರಿಯಲ್ಲಿ ಕುಳಿತಿದ್ದ ಈ ತರುಣ ಒಂದೇ ಸಮನೆ ಸಿಳ್ಳು ಹೊಡೆಯತೊಡಗಿದ. ಆತನನ್ನು ಸಭೆಯಿಂದ ಹೊರನೂಕಿದರು. ಆ ವ್ಯಕ್ತಿ–ಆಧುನಿಕ ಭಾರತೀಯ ರಾಜಕಾರಣದ ಸಿಡಿಲಮರಿ ಎಂದು ಪ್ರಖ್ಯಾತರಾದ ಡಾಕ್ಟರ್ ರಾಮಮನೋಹರ ಲೋಹಿಯಾ.

1910ರಲ್ಲಿ ಹುಟ್ಟಿದ ರಾಮಮನೋಹರರಿಗೆ ಒಂಬತ್ತು ವರ್ಷ ವಯಸ್ಸಾಗಿದ್ದಾಗ ಗಾಂಧೀಜಿಯ ದರ್ಶನ ಆಯಿತು. ತಂದೆ ಹೀರಾಲಾಲ ಉತ್ತರ ಪ್ರದೇಶದ ಫೈಜಾಬಾದ್ ಜಿಲ್ಲೆಯ ವ್ಯಾಪಾರಿ; ಮಹಾತ್ಮರ ನಿಷ್ಠಾವಂತ ಅನುಯಾಯಿ. ಹದಿಮೂರು ವರ್ಷದ ಬಾಲಕನಾಗಿದ್ದಾಗ ಗಯಾ ಕಾಂಗ್ರೆಸ್ ಅಧಿವೇಶನದಲ್ಲಿ ಲೋಹಿಯಾ ಭಾಗವಹಿಸಿದರು. ಮುಂಬಯಿ, ಕಾಶಿ ಹಾಗೂ ಕಲ್ಕತ್ತೆಗಳಲ್ಲಿ ವಿದ್ಯಾಭ್ಯಾಸ. ವಿದ್ಯಾರ್ಥಿದೆಸೆಯಲ್ಲೇ ರಾಜಕೀಯ ಆಂದೋಲನದಲ್ಲಿ ಭಾಗವಹಿಸಿದರು. ಹಿಟ್ಲರ್ ಉಚ್ಛ್ರಾಯಸ್ಥಿತಿಗೆ ಬರುತ್ತಿದ್ದ ಕಾಲದ ಜರ್ಮನಿಯಲ್ಲಿ ಉನ್ನತ ವ್ಯಾಸಂಗ

ಬರ್ಲಿನ್ ವಿಶ್ವವಿದ್ಯಾಲಯದಲ್ಲಿ ಉಪ್ಪಿನ ಸತ್ಯಾಗ್ರಹವನ್ನು ಕುರಿತು ನಿಬಂಧ ಬರೆದರು. ರಾಜ್ಯಶಾಸ್ತ್ರ ಹಾಗೂ ಅರ್ಥಶಾಸ್ತ್ರದ ಡಾಕ್ಟರೇಟ್ ಪದವಿ ಪಡೆದರು.

ಜರ್ಮನಿಯಿಂದ ಭಾರತಕ್ಕೆ ಬಂದೊಡನೆ ಕಾಂಗ್ರೆಸ್ ಸೋಷಲಿಸ್ಟ್ ಪಕ್ಷದ ಸ್ಥಾಪಕರಲ್ಲಿ ಒಬ್ಬರಾದರು ಲೋಹಿಯಾ. 'ಕಾಂಗ್ರೆಸ್ ಸೋಷಲಿಸ್ಟ್' ಪತ್ರಿಕೆಯ ಸಂಪಾದಕರಾಗಿ 1939ರ ವರೆಗೆ ಕಾರ್ಯನಿರ್ವಹಿಸಿದರು. ಜವಾಹರಲಾಲ ನೆಹರೂ ಅವರ ಆಮಂತ್ರಣದ ಮೇಲೆ ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ವಿದೇಶಾಂಗ ವಿಭಾಗವನ್ನು ಸಂಘಟಿಸಿದರು. ಬೇರೆ ಬೇರೆ ಐರೋಪ್ಯ ರಾಷ್ಟ್ರಗಳ ಪ್ರಗತಿಪರರೊಡನೆ ಕಾಂಗ್ರೆಸ್ಸಿನ ಸಂಬಂಧ ಕಲ್ಪಿಸಿದರು. ವಿದೇಶಗಳಲ್ಲಿರುವ ಭಾರತೀಯರ ಹಿತರಕ್ಷಣೆಗೆ ಪ್ರತ್ಯೇಕ ಶಾಖೆ ನಿರ್ಮಿಸಿದರು.



'ಅನ್ಯಾಯದ ವಿರುದ್ಧ ...': ಲೋಹಿಯಾ

1936ರಲ್ಲಿ ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಸದಸ್ಯರಾಗಿ ಆಯ್ಕೆ ಹೊಂದಿದರು. 1938ರಲ್ಲಿ ರಾಜದ್ರೋಹದ ಅಪಾದನೆಗೆ ಗುರಿಯಾಗಿ ಕಲ್ಕತ್ತೆಯಲ್ಲಿ ಬಂಧಿಸಲ್ಪಟ್ಟರು. 1940ರಲ್ಲಿ ಯುದ್ಧ ವಿರೋಧೀ ಭಾಷಣಗಳಿಗಾಗಿ ಸೆರೆ ಹಿಡಿಯಲ್ಪಟ್ಟರು ; 1942 'ಚಲೇಜಾವ್' ಚಳುವಳಿಯಲ್ಲಿ ಅಗ್ರಪಾತ್ರ ವಹಿಸಿದರು. ಗುಪ್ತ ಆಕಾಶವಾಣೀ ಕೇಂದ್ರ ನಡೆಸಿದರು; ಜಯಪ್ರಕಾಶ ನಾರಾಯಣರೊಡಗೂಡಿ ಭೂಗತ ಚಳುವಳಿ ಸಂಘಟಿಸಿದರು. 1944ರಲ್ಲಿ ಅವರು ಬಂಧಿತರಾದರು. 1946ರಲ್ಲಿ ಗೋವಾದ ವಿಮೋಚನಾ ಚಳುವಳಿ ಪ್ರಾರಂಭಿಸಿ ಪೋರ್ಚುಗೀಸರ ಕೈದಿ ಆದರು. ಮಹಾತ್ಮಾ ಗಾಂಧೀ ಅವರ ಕೋರಿಕೆಯಂತೆ ವೈಸರಾಯರ ಮಧ್ಯಪ್ರವೇಶದಿಂದ ಬಿಡುಗಡೆ ಹೊಂದಿದರು. ನೇಪಾಳದಲ್ಲಿ ರಾಣಾ ಶಾಹಿಯ ಅಂತ್ಯಕ್ಕಾಗಿ ನಡೆದ ಚಳುವಳಿಗೆ ಡಾ. ಲೋಹಿಯಾ ಸ್ಫೂರ್ತಿ ಪುರುಷರು.

1948ರಲ್ಲಿ ಗಾಂಧೀಜಿಯ ಹತ್ಯೆಯ ಅನಂತರ ಕಾಂಗ್ರೆಸ್ಸಿನ ಸಂಬಂಧ ಕಡಿದರು. ಸೋಷಲಿಸ್ಟ್ ಪಾರ್ಟಿಯ ಪ್ರಧಾನ ನಾಯಕರಲ್ಲಿ ಒಬ್ಬರಾದ ಲೋಹಿಯಾ ದೇಶದ ಅನೇಕ ಕಾರ್ಮಿಕ, ರೈತ ಹೋರಾಟಗಳಲ್ಲಿ ಸಹಾ ಮುಂದಾಳಾಗಿದ್ದರು. 1951ರಲ್ಲಿ ಕರ್ನಾಟಕದ ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನ ಸುಪ್ರಸಿದ್ಧ ಕಾಗೋಡು ರೈತರ ಹೋರಾಟದಲ್ಲಿ ಭಾಗವಹಿಸಿ ಬಂಧಿಸಲ್ಪಟ್ಟರು. ಸ್ವಾತಂತ್ರ್ಯ ಬಂದಮೇಲೆ ಒಟ್ಟು ಹನ್ನೆರಡು ಬಾರಿ ಕಾರಾಗೃಹವಾಸ ಅನುಭವಿಸಿದರು.

1955ರಲ್ಲಿ ಪ್ರಜಾ ಸೋಷಲಿಸ್ಟ್ ಪಕ್ಷದ (ಪಿ.ಎಸ್.ಪಿ.) ಪ್ರಧಾನ ಕಾರ್ಯದರ್ಶಿಯಾಗಿ. ತಿರುವಾಂಕೂರು–ಕೊಚ್ಚಿನ್ ಆಡಳಿತದಲ್ಲಿದ್ದ ಪಿ.ಎಸ್.ಪಿ. ಸರ್ಕಾರ ಗೋಲಿಬಾರ್ ನಡೆಸಿದಾಗ ಅದು [illegible] ಒತ್ತಾಯಿಸಿದರು. ಅನಂತರ ಆ ಪಕ್ಷದ [illegible] ಸೋಷಲಿಸ್ಟ್ ಪಕ್ಷವನ್ನು ಸ್ಥಾಪಿಸಿದರು. [illegible] ಡಾ. ರಾಮಮನೋಹರ ಲೋಹಿಯಾ ಅವರ ನಾಯಕತ್ವದ ಈ ಪಕ್ಷವನ್ನು ಸೇರಿದರು.

1962ರಲ್ಲಿ ಲೋಕಸಭಾ ಚುನಾವಣೆಯಲ್ಲಿ ನೆಹರೂ ವಿರುದ್ಧ ಸ್ಪರ್ಧಿಸಿ ಲೋಹಿಯಾ ಸೋತಿದ್ದರು. 1963ರ ಮೇ ತಿಂಗಳು ಫರೂಕಾಬಾದ್‌ನಿಂದ ನಡೆದ ಉಪಚುನಾವಣೆಯಲ್ಲಿ ಡಾ. ಲೋಹಿಯಾ ಲೋಕಸಭೆಯನ್ನು ಪ್ರವೇಶಿಸಿದರು. ದೇಶದ ಜನರಲ್ಲಿ 27 ಕೋಟಿ ಜನ ದಿನಕ್ಕೆ ಮೂರು ಆಣೆಯ ಆದಾಯ ಪಡೆದು ಬದುಕಿದ್ದಾರೆ —ಎಂದು ಅವರು ಮಾಡಿದ ಭಾಷಣ ಸಭೆಯನ್ನು ದಿಗ್ಭ್ರಮೆಗೆ ಈಡುಮಾಡಿತು. ಪ್ರಧಾನ ಮಂತ್ರಿಗಾಗಿ ಒಂದು ದಿನಕ್ಕೆ ಬೊಕ್ಕಸದಿಂದ 25 ಸಾವಿರ ರೂಪಾಯಿ ವೆಚ್ಚ ಆಗುತ್ತಿದೆ ಎಂಬುದು ಅವರ ಮತ್ತೊಂದು ಆಶ್ಚರ್ಯಕರ ಪ್ರಕಟಣೆ.

ಇಂಗ್ಲಿಷ್ ಭಾಷೆಯ ಉಚ್ಚಾಟನೆ, ಜಾತಿವಿನಾಶ, ನಾರೀ ವಿಮೋಚನೆ—ಇವೆಲ್ಲ ಲೋಹಿಯಾ ಪ್ರತಿಪಾದಿಸಿದ ಕೆಲವು ಕಾರ್ಯಕ್ರಮಗಳು. 'ಅಧಿಕಾರಕ್ಕಾಗಿ ಏಳು ವರ್ಷದ ಸನ್ನಾಹ, ಅನ್ಯಾಯದ ವಿರುದ್ಧ ನೂರು ವರ್ಷದ ಸಮರ'—ಲೋಹಿಯಾರ ಮತ್ತೊಂದು ಘೋಷವಾಕ್ಯ. ಅಹಿಂಸೆ, ವಿಕೇಂದ್ರೀಕರಣದ ಪ್ರಬಲ ಪ್ರತಿಪಾದಕರಾದ ಅವರು ಸತ್ಯಾಗ್ರಹವನ್ನು ಅಂತರರಾಷ್ಟ್ರೀಯ ಮಟ್ಟಕ್ಕೆ ಏರಿಸಿದರು. ಅಮೆರಿಕದಲ್ಲಿ ವರ್ಣದ್ವೇಷದ ವಿರುದ್ಧ ಬಂಡಾಯದ ಬಾವುಟ ಎತ್ತಿ ಬಂಧನಕ್ಕೆ ಒಳಗಾದರು.

ಉತ್ತಮ ಭಾಷಣಕಾರ, ಹರಿತವಾದ ಬರೆಹಗಾರ ; ಅವರ ಹಲವಾರು ಕೃತಿಗಳು ಜಗತ್ತಿನಾದ್ಯಂತ ವಿಚಾರವಂತರ ಗಮನ ಸೆಳೆದಿವೆ. 'ಮಾರ್ಕ್ಸ್, ಗಾಂಧೀ ಮತ್ತು ಸಮಾಜವಾದ', 'ಭಾರತದ ವಿಭಜನೆಯ ಅಪರಾಧಿಗಳು' 'ಇತಿಹಾಸಚಕ್ರ'—ಇವು ಅವರ ಕೆಲ ಪುಸ್ತಕಗಳು. 'ಮ್ಯಾನ್ ಕೈಂಡ್' ಮತ್ತು 'ಜನ' ಎಂಬ ಮಾಸಪತ್ರಿಕೆಗಳನ್ನು ಪ್ರಾರಂಭಿಸಿ ನಡೆಸಿದರು.

1967ರಲ್ಲಿ ಮತ್ತೆ ಲೋಕಸಭೆಗೆ ಆಯ್ಕೆಯಾದರು. ಅದೇ ವರ್ಷದ ಅಕ್ಟೋಬರ್ 12ರಂದು ನಿಧನಹೊಂದಿದರು.

'ರಾಮರಾಜ್ಯ'

ಶ್ರೀರಾಮನು ಆಳಿದ ರಾಜ್ಯ ಸುಭಿಕ್ಷ. ಶಾಂತಿಗಳಿಗೆ ಹೆಸರಾಗಿದ್ದಿತು. ನ್ಯಾಯ ಹಾಗೂ ನೆಮ್ಮದಿಯ ಈ ರಾಜ್ಯಭಾರ ಇಂದಿಗೂ ಭಾರತೀಯರ ಮಾತಿನಲ್ಲಿ ನಾಣ್ಣುಡಿಯಾಗಿ ಉಳಿದಿದೆ. 'ರಾಮರಾಜ್ಯ'—ಆದರ್ಶ ಸರಕಾರದ ಕಲ್ಪನೆಯನ್ನು ಸೂಚಿಸುತ್ತದೆ.

ರಾಮನು ಆಳಿದ ಕೋಸಲ ದೇಶದಲ್ಲಿ ಜನ ಕುಡಿಯುತ್ತಿದ್ದ ನೀರು ಕಬ್ಬಿನ ರಸದಷ್ಟು ಸಿಹಿಯಾಗಿದ್ದಿತು. ಸೇವಿಸುತ್ತಿದ್ದ ಆಹಾರ ಅತಿ ಶುದ್ಧವಾಗಿದ್ದಿತು. ಅಲ್ಲಿ ಕೃಷಿಕರು [illegible] [illegible] ಧರ್ಮವನ್ನು ಕಾಪಾಡಲೋಸುಗ ಶ್ರೀರಾಮ ಪತ್ನಿಯನ್ನೂ ತ್ಯಜಿಸಿದ.

—ಇದು ರಾಮನ ರಾಜ್ಯದ ಬಣ್ಣನೆ.

ಗಾಂಧೀಜಿ [illegible]

ವನ್ನು ಉಳಿಸಿಕೊಳ್ಳುವುದು ಇಂಥ ರಾಜ್ಯದಲ್ಲಿ ಮಾತ್ರ ಸಾಧ್ಯ—ಎಂದು ಅರ್ಥ ವಿವರಣೆ ನೀಡಿದರು.

ರಾಮಲಿಂಗಸ್ವಾಮಿ

"ಅನಕ್ಷರಸ್ಥರಿಗೂ ಅಕ್ಷರಸ್ಥರಿಗೂ ಆನಂದವೀಯುವ ಅನಂದ ನೀನು ; ನೋಡಬಲ್ಲವರಿಗೂ ನೋಡಲಾರದವರಿಗೂ ದೃಷ್ಟಿ ನೀಡುವ ಕಣ್ಣು ನೀನು ; ನೀನು ದಕ್ಷರಿಗೂ ಅದಕ್ಷರಿಗೂ ವರ ಕರುಣಿಸುವ ವರ ; ನಿನ್ನನ್ನು ಗೌರವಿಸದವರಿಗೂ ಗೌರವಿಸುವವರಿಗೂ ಅರ್ಥಮಾಡಿಕೊಳ್ಳುವ ಸಾಮರ್ಥ್ಯ ನೀಡಬಲ್ಲ ಬುದ್ಧಿಶಕ್ತಿ ನೀನು ; ಒಳ್ಳೆಯದು ಮತ್ತು ಕೆಟ್ಟದರ ನಡುವೆ ನಿಂತಿರುವ ಮಧ್ಯ ನೀನು ; ಮಾನವರು ಮತ್ತು ದೇವತೆಗಳಿಗೆ ಒಳ್ಳೆಯದನ್ನು ವರ್ಷಿಸುವ ಒಳಿತು ನೀನು ; ಓ ಶಿವ, ಎಲ್ಲರಿಗೂ ಸೇರಿದವನಾಗಿ ಎಲ್ಲೆಡೆ ಸುತ್ತುತ್ತಿರುವೆ ; ಓ ದೊರೆ ; ನನ್ನ ಈ ಹಾಡನ್ನು ಮಾಲಿಕೆಯಾಗಿ ಹಾಕಿಕೊ."

—ತಮಿಳುನಾಡಿನ ಸಂತಶ್ರೇಷ್ಠ ರಾಮಲಿಂಗಸ್ವಾಮಿ ಇಷ್ಟದೇವತೆಯನ್ನು ಕುರಿತು ರಚಿಸಿದ ಗೀತೆ ಇದು.

ಚಿದಂಬರಂ ಗೆ ಸಮೀಪವಿರುವ ಮರುದೂರಿನಲ್ಲಿ 1823ರಲ್ಲಿ ರಾಮಲಿಂಗಸ್ವಾಮಿ ಜನಿಸಿದರು. ಇವರು ಅನೇಕ ಪವಾಡಗಳನ್ನು ಮೆರೆದರು. ಚಿದಂಬರಂನ ಬಳಿ ಇರುವ ವಡಲೂರಿನಲ್ಲಿ ಇವರು ಕಟ್ಟಿಸಿರುವ ಪೂಜಾಂಗಣವಿದೆ. 1874ರಲ್ಲಿ ಕರುನ್‌ಕುಜಿ ಎಂಬಲ್ಲಿ ಕೊಠಡಿಯೊಂದನ್ನು ಹೊಕ್ಕು ಅದರ ಬಾಗಿಲು ಮುಚ್ಚಿಕೊಂಡರು.

ರಾಮಲಿಂಗಸ್ವಾಮಿ ಇನ್ನೂ ಬದುಕಿದ್ದಾರೆ —ಎಂದು ಅವರ ಕೆಲ ಅನುಯಾಯಿಗಳ ನಂಬಿಕೆ.

ಅವರು ರಚಿಸಿದ ಅದ್ವೈತಾತ್ಮಕ ಗೀತೆಗಳ ಸಂಗ್ರಹ 'ಅರುತ್–ಪಾ' (ದೈವಿಕ ಅನುಗ್ರಹದ ಪದ್ಯಗಳು).

ರಾಮಲೀಲಾ

ದಸರೆಯ ಮೊದಲಿನಿಂದ ಆರಂಭವಾಗಿ ದಶಮಿಯ ದಿವಸ ಮುಕ್ತಾಯವಾಗುವ ಉತ್ಸವ —ರಾಮಲೀಲಾ. ದೆಹಲಿಯಲ್ಲಿ ಇದು ವಿಜೃಂಭಣೆಯಿಂದ ಆಚರಿಸಲ್ಪಡುತ್ತದೆ.

ದೆಹಲಿಯ ಎಲ್ಲ ಬಡಾವಣೆಗಳಲ್ಲೂ 20 ದಿನ ಮುಂಚಿತವಾಗಿ 'ರಾಮಾಯಣ'ದ ನೃತ್ಯರೂಪಕ ನಡೆಯುತ್ತದೆ. ಇದು ರಾತ್ರೆಯಿಂದ ಬೆಳಗಿನವರೆಗೂ ಜರಗುತ್ತದೆ. ಪ್ರದರ್ಶನದ ಪ್ರಮುಖ ಸ್ಥಳ—ರಾಮಲೀಲಾ ಮೈದಾನ.

ಹತ್ತು ತಲೆಯುಳ್ಳ ರಾವಣ, ಕುಂಭಕರ್ಣ, ಮೇಘನಾದರ 100 ಅಡಿಗೂ ಎತ್ತರದ ಮೂರ್ತಿಗಳನ್ನು ರಾಮಲೀಲಾ ಮೈದಾನದಲ್ಲಿ ನವಮಿಯಂದೇ ಸಿದ್ಧಪಡಿಸಿರುತ್ತಾರೆ. ಹಳೆಯ ಕಾಗದ, ಬಿದಿರು, ಹಳೆಯ ಬಟ್ಟೆಗಳಿಂದ ಮಾಡಿ, ಒಳಗಿನ ಟೊಳ್ಳು ಭಾಗಕ್ಕೆ ಸಾವಿರಾರು ರೂಪಾಯಿ ಬೆಲೆಯ ಪಟಾಕಿ, ಬಾಣ ಬಿರುಸುಗಳನ್ನು ತುಂಬಿಸಿರುತ್ತಾರೆ.

ದಶಮಿ ದಿವಸ ನೃತ್ಯರೂಪಕ ಮುಗಿಯುತ್ತದೆ. ರಾವಣವಧೆಯೂ ಅಂದೇ. ರಾಮ, ಲಕ್ಷ್ಮಣ, ಆಂಜನೇಯ ಪಾತ್ರಧಾರಿಗಳು ರಥದಲ್ಲಿ ಮೆರವಣಿಗೆ ಹೊರಟು, ಮೈದಾನಕ್ಕೆ ಬರುತ್ತಾರೆ. ಪೂಜೆ ಮುಗಿದ ಅನಂತರ



ದೆಹಲಿಯಲ್ಲಿ ರಾಮಲೀಲಾ


ರಾಷ್ಟ್ರಪತಿ ಮೊದಲ ಬಾಣ ಬಿಡುತ್ತಾರೆ. ಅನಂತರ ರಾಮ ಬಿಟ್ಟ ಬೆಂಕಿಯ ಬಾಣ ಮೂರ್ತಿಗಳನ್ನು ಸೀಳಿಕೊಂಡು ಹೋದ ಕೂಡಲೇ ಕಣ್ಣು ಕೋರೈಸುವಂತೆ ಬೆಳಕು, ಚಟಪಟ ಸದ್ದು. ರಾವಣವಧೆಯೊಂದಿಗೆ ಉತ್ಸವ ಮು[illegible]ಯುತ್ತದೆ.

ರಾಮಾನಂದ

ದೇವರು ಒಬ್ಬನೇ ; ಎಲ್ಲ ಧರ್ಮಗಳೂ ಸಮಾನವಾದವು : ಮನುಷ್ಯನಿಗೆ ಮನ್ನಣೆ ಸಲ್ಲಬೇಕಾದದ್ದು ಅವನ ನಡತೆ, ಆಚರಣೆಗಳಿಗಾಗಿ, ಹುಟ್ಟಿಗಲ್ಲ —ಎಂಬ ಭಾವನೆಯನ್ನು ಪ್ರಚಾರ ಮಾಡಿದವರಲ್ಲಿ ರಾಮಾನಂದರು ಗಣ್ಯರು.

ಅವರು 14–15ನೆಯ ಶತಮಾನಗಳಲ್ಲಿ ಜೀವಿಸಿದ್ದು, ಧರ್ಮ ಬೋಧೆ ಮಾಡಿದರು. ಜಾತಿಮತ, ಸ್ತ್ರೀ ಪುರುಷರೆಂಬ ಭೇದವಿಲ್ಲದೆ ಎಲ್ಲರನ್ನೂ ತಮ್ಮ ಶಿಷ್ಯರನ್ನಾಗಿ ಅಂಗೀಕರಿಸಿದರು.

ರಾಮಾನಂದರು ಹುಟ್ಟಿದ್ದು ಅಲಹಾಬಾದಿನಲ್ಲಿ, ರಾಮಾನುಜ ಪಂಥದ ಮನೆತನದಲ್ಲಿ. ಅವರು ಸನ್ಯಾಸವನ್ನು ಸ್ವೀಕರಿಸಿ, ಉತ್ತರದ ಬಹುಭಾಗಗಳಲ್ಲಿ ಸಂಚರಿಸಿದರು. ಅವರು ಶ್ರೀ ರಾಮನ ಭಕ್ತರು. ರಾಮಭಕ್ತಿಯನ್ನು ಬೋಧಿಸಿದರು. ರಾಮಾನಂದರ ಅನುಯಾಯಿಗಳು



ರಾಮಾನಂದ

ರಾಮಾನಂದಿಗಳು. ಅವರ ಶಿಷ್ಯವರ್ಗದಲ್ಲಿ ಕಬೀರ್, ರಾಮದಾಸ್ ಮುಂತಾದ ಪ್ರಭಾವಶಾಲಿಗಳಿದ್ದರು, ಇವರೆಲ್ಲರಿಗೂ ದೇವರ ಸಾಕ್ಷಾತ್ಕಾರವಾಗಿತ್ತೆಂಬುದನ್ನು ಸೂಚಿಸುವ ಹಲವಾರು ದಂತಕಥೆಗಳು ಪ್ರಚಾರದಲ್ಲಿವೆ.

ರಾಮಾನಂದರೂ ಅವರ ಶಿಷ್ಯರೂ ಜನರ ಭಾಷೆಯಾದ ಹಿಂದಿಯಲ್ಲಿ ಜನರಿಗೆ ಬೋಧಿಸಿದರು. ರಾಮಾನಂದರ ಗೀತೆಯೊಂದನ್ನು ಸಿಕ್ಖರ 'ಗ್ರಂಥ್ ಸಾಹೇಬ್'ನಲ್ಲಿ ಸೇರಿಸಿಕೊಳ್ಳಲಾಗಿದೆ.

ಸುಪ್ರಸಿದ್ಧ ಭಕ್ತೆ ಮೀರಾಬಾಯಿ, ಸಂತ ತುಲಸೀದಾಸ ಮುಂತಾದವರು ರಾಮಾನಂದರ ಶಿಷ್ಯ ಪರಂಪರೆಗೆ ಸೇರಿದವರು.

ನೋಡಿ ; ಕಬೀರ ; ತುಲಸೀದಾಸ ; ರಾಯಿದಾಸ

ರಾಮಾನುಜಾಚಾರ್ಯ

ನೋಡಿ : ಸಂಪುಟ ೧

'ರಾಮಾಯಣ'

ನೋಡಿ : ಸಂಪುಟ ೫

ರಾಮೇಶ್ವರ

ರಾಮ-ರಾವಣ ಯುದ್ಧದಲ್ಲಿ ರಾವಣನ ಸಂಹಾರವಾಯಿತು. ತಾನು ಸಂಹರಿಸಿದ ರಾವಣ ಪುಲಸ್ತ್ಯ ಋಷಿಯ ವಂಶದವನಾದ್ದರಿಂದ ರಾಮ ಅವನ ಹತ್ಯೆಯ ಪಾಪ ನಿವಾರಣೆಗಾಗಿ ಶಿವಲಿಂಗ ಪ್ರತಿಷ್ಠಾಪಿಸಬೇಕಾಯಿತು; ಅದಕ್ಕಾಗಿ ನಿರ್ದಿಷ್ಟ ಮುಹೂರ್ತದೊಳಗಾಗಿ ಕಾಶಿಯಿಂದ ಒಂದು ಲಿಂಗವನ್ನು ತರುವಂತೆ ಅವನು ಹನುಮಂತನನ್ನು ಕಳುಹಿಸಿದ. ಪ್ರತಿಷ್ಠಾಪನಾ ಮುಹೂರ್ತದ ಹೊತ್ತಿಗೆ ಹನುಮಂತ ಹಿಂದಿರುಗಿ ಬರಲಿಲ್ಲ. ಆಗ ಸೀತೆ ಮರಳಿನಿಂದ ಮಾಡಿದ ಲಿಂಗವನ್ನೇ ರಾಮ ಪ್ರತಿಷ್ಠಾಪಿಸಿದ. ಇದೇ ರಾಮೇಶ್ವರದಲ್ಲಿ ರಾಮ ಪ್ರತಿಷ್ಠಾಪಿಸಿದ ರಾಮೇಶ್ವರ ಲಿಂಗ.

ಮುಹೂರ್ತ ಕಳೆದಮೇಲೆ ಹನುಮಂತ ಶಿವಲಿಂಗವನ್ನು ತಂದ. ತನಗೋಸ್ಕರ ಕಾಯದೆ ಬೇರೆ ಲಿಂಗ ಪ್ರತಿಷ್ಠಾಪಿಸಿದರೆಂದು ಅವನಿಗೆ ಸಿಟ್ಟು ಬಂತು. ಆ ಲಿಂಗವನ್ನು ಕಿತ್ತುಹಾಕಲು ಪ್ರಯತ್ನಿಸಿದ. ಆದರೆ ಅದು ಅಲುಗಾಡಲೇ ಇಲ್ಲ. ಕೊನೆಗೆ ರಾಮನ ಸೂಚನೆಯಂತೆ ಹನುಮಂತ ತಾನು ತಂದ ಲಿಂಗವನ್ನು ರಾಮೇಶ್ವರನ ಪಕ್ಕದಲ್ಲೇ ಸ್ಥಾಪನೆ ಮಾಡಿದ. ರಾಮೇಶ್ವರನನ್ನು ಪೂಜಿಸುವ ಮೊದಲು ಇದನ್ನು ಪೂಜಿಸಬೇಕು –ಎಂದು ರಾಮ ವಿಧಿಸಿ. ಅದಕ್ಕೆ ವಿಶ್ವನಾಥ ಎಂದು ಹೆಸರಿಟ್ಟ.

– ಇದು ರಾಮೇಶ್ವರವನ್ನು ಕುರಿತ ಕಥೆ. ರಾಮೇಶ್ವರಲಿಂಗ ಭಾರತದಲ್ಲಿರುವ 12 ಜ್ಯೋತಿರ್ಲಿಂಗಗಳಲ್ಲಿ ಒಂದು.

ತಮಿಳುನಾಡಿನ ರಾಮನಾಡ್ ಜಿಲ್ಲೆಗೆ ಸೇರಿರುವ ರಾಮೇಶ್ವರ ದ್ವೀಪ ಪಾಕ್ ಜಲಸಂಧಿಯಲ್ಲಿದೆ. ಇದು ಸುಮಾರು 31 ಮೈಲು ಉದ್ದ, 7 ಮೈಲು ಅಗಲ. ದ್ವೀಪದ ಉತ್ತರಭಾಗದಲ್ಲಿ ಸುಮಾರು ಆರೂವರೆ ಲಕ್ಷ ಚದರ ಅಡಿಯಷ್ಟು ವಿಸ್ತಾರವಾದ ಆವರಣದಲ್ಲಿ ದೇವಸ್ಥಾನ ಇದೆ. ಪೂರ್ವ ಪಶ್ಚಿಮ ಮಹಾದ್ವಾರದಲ್ಲಿ 78 ಅಡಿ ಎತ್ತರದ ಭವ್ಯ ಗೋಪುರವಿದೆ.

ಪ್ರಧಾನ ದೇವಾಲಯ ಮತ್ತು ತೀರ್ಥಗಳು ಮೂರನೆಯ ಆವರಣದಲ್ಲಿವೆ. ನೆಲಮಟ್ಟದಿಂದ ಸುಮಾರು ಐದು ಅಡಿ ಎತ್ತರದಲ್ಲಿರುವ ಪ್ರಧಾನ ದೇವಾಲಯದ ಸುತ್ತ ಸುಮಾರು 17 ಅಡಿ ಅಗಲದ ಪ್ರದಕ್ಷಿಣ ಪಥವಿದೆ. ಸುಮಾರು 3,000 ಕಲ್ಲು ಕಂಬಗಳುಳ್ಳ ಕಂಬಸಾಲುಗಳು ಈ



ರಾಮೇಶ್ವರ ತೀರ್ಥ ಸ್ನಾನ



ರಾಮೇಶ್ವರ ದೇವಾಲಯದ ಒಳಗೋಡೆ–ಪ್ರದಕ್ಷಿಣ ಪಥ

ದೇವಾಲಯದ ವೈಶಿಷ್ಟ್ಯ. ದ್ರಾವಿಡ ಶೈಲಿಯಲ್ಲಿ ರಚಿತವಾದ ದೇವಾಲಯಗಳಲ್ಲಿ ಇದು ಗಮನಾರ್ಹವಾದದ್ದು.

ರಾಮೇಶ್ವರ ಪವಿತ್ರ ಯಾತ್ರಾಸ್ಥಳ. ರಾಮೇಶ್ವರ ದ್ವೀಪ [illegible] ತಂದ [illegible] ಎನ್ನುತ್ತಾರೆ. ಯಾತ್ರಿಕರು ಕಾಶಿಯಿಂದ ಗಂಗೆಯನ್ನು ತಂದು ರಾಮೇಶ್ವರನಿಗೆ ಅಭಿಷೇಕ ಮಾಡಿಸುತ್ತಾರೆ.

[illegible] (ಈಗ ಶ್ರೀಲಂಕಾ) ಕ್ಯಾಂಡಿಯ ರಾಜ ಪರರಾಜಶೇಖರನ ಸಹಾಯದಿಂದ ಈ ದೇವಾಲಯದ ಪ್ರಧಾನ ಭಾಗವನ್ನು 1414ರಲ್ಲಿ ಕಟ್ಟಿಸಿದ ಎಂದು ಹೇಳುತ್ತಾರೆ. ಆದರೆ ದೇವಸ್ಥಾನದ ಕೆಲಸ ಪೂರ್ಣ ಮುಗಿಯಲು ಸುಮಾರು 350 ವರ್ಷ ಬೇಕಾಯಿತು.

ರಾಮೇಶ್ವರದ ಜನಸಂಖ್ಯೆ 16,755.

ರಾಯಿದಾಸ

[illegible]

[illegible]



ಸಂತ ಶ್ರೇಷ್ಠ : ರಾಯಿದಾಸ

ಮಾರ್ಗದಲ್ಲಿ ನಡೆದ. ಸುಂದರ ಹಾಡುಗಳನ್ನು ರಚಿಸಿದ. ಈತ ಮೀರಾಬಾಯಿಯ ಗುರು. ಇವನ ಭಕ್ತಿ ಗೀತೆಗಳನ್ನು ಆಕೆ ಹಾಡುತ್ತಿದ್ದಳು. ಸಿಕ್ಖ ಮತೀಯರಿಗೆ ಪವಿತ್ರವೆನಿಸಿರುವ ಆದಿ ಗ್ರಂಥದಲ್ಲೂ ಇವನ ಹಾಡುಗಳಿವೆ.

ರಾಯಿದಾಸನು ತಾತ್ತ್ವಿಕ ಪ್ರಶ್ನೆಗಳನ್ನಾಗಲೀ ಇತರ ಗಹನ ವಿಚಾರಗಳನ್ನಾಗಲೀ ಚರ್ಚಿಸಿಲ್ಲ. ಹೊಸ ಧಾರ್ಮಿಕ ಸಂಘಕ್ಕೆ ಆಧಾರವಾಗಬಹುದಾದ ಗೀತೆಗಳನ್ನು ರಾಯಿದಾಸ ಬರೆಯಲಿಲ್ಲ. ಅದ್ದರಿಂದ ಇವನ ಹಾಡುಗಳು ಎಲ್ಲ ಪಂಥದವರಿಗೂ ಆಕರ್ಷಕ.

ರಾಯಿದಾಸ ರಾಮಾನಂದರ ಶಿಷ್ಯ. 15ನೆಯ ಶತಮಾನದ ಮಧ್ಯಭಾಗದಲ್ಲಿ ರಾಯಿದಾಸ ಪ್ರಖ್ಯಾತನಾಗಿದ್ದ.

ರಾವಿ

ಪಂಜಾಬ್ ಎಂದು ಹೆಸರು ಬರಲು ಕಾರಣವಾದ ಪಂಚನದಿಗಳಲ್ಲಿ ರಾವಿ ಒಂದು. ಪ್ರಾಚೀನ ಸಂಸ್ಕೃತ ಸಾಹಿತ್ಯದಲ್ಲಿ ಪ್ರಸ್ತಾಪಿತವಾದ ಐರಾವತಿ ನದಿಯೇ ಇದು ಎಂಬ ನಂಬಿಕೆ. ಇದಕ್ಕೆ ಪುರೂಷ್ಣಿ ಎಂಬ ಹೆಸರೂ ಇದೆ.

ಹಿಮಾಲಯದ ಕುಲುಪ್ರದೇಶ ರಾವಿಯ ಜನ್ಮಸ್ಥಳ. ಚಿನಾಚಲ ಪ್ರದೇಶ ಮತ್ತು ಪಂಜಾಬ್ ಮೂಲಕ ಹಾದುಹೋಗುವ ರಾವಿ ಸುಮಾರು 100 ಮೈಲುಗಳಷ್ಟು ದೂರ ಭಾರತ–ಪಾಕಿಸ್ತಾನಗಳ ನೈಸರ್ಗಿಕ ಮೇರೆ.

ಲಾಹೋರಿನ ಸಮೀಪದಲ್ಲಿ ರಾವಿ ಪಾಕಿಸ್ತಾನವನ್ನು ಪ್ರವೇಶಿಸುತ್ತದೆ. ಪಾಕಿಸ್ತಾನದ ಅಹಮದ್‌ಪುರಕ್ಕೆ 10 ಮೈಲು ದೂರದಲ್ಲಿ ಚೀನಾಬ್ ಮತ್ತು ಝೀಲಂಗಳ ಕೂಡುವಿಕೆಯಿಂದ ಆದ ನದಿಯನ್ನು ಇದು ಸೇರುತ್ತದೆ. ರಾವಿಯ ಉದ್ದ ಸುಮಾರು 450 ಮೈಲು.

ಹೆಚ್ಚಿನ ಸ್ಥಳಗಳಲ್ಲಿ ಅಂಕುಡೊಂಕಾಗಿ ರಾವಿ ನಿಧಾನವಾಗಿ ಹರಿಯುತ್ತದೆ. ಕಾಡುಗಳಲ್ಲಿ ಕಡಿದ ಮರದ ದಿಮ್ಮಿಗಳನ್ನು ಸಾಗಿಸಲು ಇದು ಒಳ್ಳೆಯ ಮಾರ್ಗ. ಸಟ್ಲೆಜ್ ಮತ್ತು ರಾವಿ ನದಿಗಳ ಮಧ್ಯೆ ಇರುವ ಬಡೀ ದೋಆಬ್ ಪ್ರದೇಶದ ನೀರಾವರಿಗಾಗಿ ಕಾಲುವೆ ವ್ಯವಸ್ಥೆ ಇದೆ. ಇದರ ನಿಯಂತ್ರಣ ಕೇಂದ್ರ ಇರುವುದು ಮಾಧೋಪುರದಲ್ಲಿ. ಅಮೃತಸರದ ಸುತ್ತ ಹಲವು ಸಾವಿರ ಎಕರೆ ಭೂಮಿಗೆ ಇಲ್ಲಿಂದ ನೀರು ಒದಗುತ್ತದೆ.

ರಾಷ್ಟ್ರಕೂಟರು

ರಾಷ್ಟ್ರಕೂಟರ ಅನೇಕ ಶಾಖೆಗಳು ಭಾರತದ ಬೇರೆಬೇರೆ ಕಡೆಗಳಿಂದ ಆಳುತ್ತಿದ್ದರು.

ಮಾನಪುರ ಮತ್ತು ಕನ್ನೋಜಗಳಿಂದ ರಾಷ್ಟ್ರಕೂಟ ವಂಶಗಳು ಆಳುತ್ತಿದ್ದುವು. ಕರ್ನಾಟಕದ ಮಳಖೇಡದಿಂದ ಆಳಿದ ಗರುಡಲಾಂಛನರಾದ ರಾಷ್ಟ್ರಕೂಟರು ಅಖಿಲ ಭಾರತ ಖ್ಯಾತಿ ಪಡೆದರು. ಬಾದಾಮಿಯ ಚಾಲುಕ್ಯ ದೊರೆ ಕೀರ್ತಿವರ್ಮನನ್ನು ಕ್ರಿ. ಶ. 753ರ ಸುಮಾರಿಗೆ ಹಿಮ್ಮೆಟ್ಟಿಸಿದ ದಂತಿದುರ್ಗ ಈ ವಂಶದ ಮೊದಲ ದೊರೆ.

ಕಾಂಚೀಪುರದ ಪಲ್ಲವರ ವರೆಗಿನ ವಿಶಾಲ ಸಾಮ್ರಾಜ್ಯವನ್ನು ಆಳಿದ ಈ ವಂಶದ ಎರಡನೆಯ ದೊರೆ ಕೃಷ್ಣ (768–772) ಎಲ್ಲೋರದ ಕೈಲಾಸನಾಥ ದೇವಾಲಯವನ್ನು ರಚಿಸಿ ಖ್ಯಾತನಾದ. ಈ ವಂಶದ ಧ್ರುವ (780 - 93) ಅಂದು ಭಾರತದ ಪರಮಾಧಿಕಾರದ ಉತ್ತರಾಧಿಕಾರಿ ಎಂದು ನಂಬಲಾದ ಕನ್ನೌಜದ ದೊರೆಯನ್ನೇ ಸೋಲಿಸಿದ.

'ನೃಪತುಂಗ' ಎಂಬ ಬಿರುದನ್ನು ತಳೆದ ಖ್ಯಾತ ದೊರೆ ಅಮೋಘವರ್ಷ (814-77) ಖ್ಯಾತ ವಿದ್ವಾಂಸನೂ ಶಾಂತಿಪ್ರಿಯನೂ ಆಗಿದ್ದ. ರಾಜಧಾನಿ ಮಳಖೇಡವನ್ನು ಇವನು ಕಟ್ಟಿಸಿದ. ಇವನ ರಾಜ್ಯಕ್ಕೆ ಭೇಟಿ ನೀಡಿದ ಅರಬ್ ಲೇಖಕ ಸುಲೇಮಾನ್ ರಾಷ್ಟ್ರಕೂಟ ರಾಜ್ಯವು ಜಗತ್ತಿನ ನಾಲ್ಕು ಘನ ಸಾಮ್ರಾಜ್ಯಗಳಲ್ಲಿ ಒಂದೆಂದು ಹೇಳಿದ್ದಾನೆ. (ಪ್ರಾಚೀನ ರೋಮನ್, ಅರಬ್ ಮತ್ತು ಚೀನಿ ಸಾಮ್ರಾಜ್ಯಗಳು ಉಳಿದ ಮೂರು ರಾಜ್ಯಗಳು.) ಕನ್ನಡ 'ಕವಿರಾಜಮಾರ್ಗ'ದ ಕರ್ತೃ ಎನ್ನಲಾಗಿರುವ ವಿಜಯ, ಖ್ಯಾತ ಗಣಿತಕಾರ ಮಹಾವೀರಾಚಾರ್ಯ, ಸಂಸ್ಕೃತ ವ್ಯಾಕರಣಕಾರ ಶಾಕಟಾಯನ, ಜೈನವಿದ್ವಾಂಸರಾದ ಜಿನಸೇನ, ಗುಣಭದ್ರ ಇವನ ಆಶ್ರಿತರು.

ಮುಂದೆ ಮೂರನೆಯ ಕೃಷ್ಣ (939 - 68) ಚೋಳರನ್ನು ಪೂರ್ತಿಯಾಗಿ ಸೋಲಿಸಿ ಅವರ ರಾಜಧಾನಿಯನ್ನು ವಶಪಡಿಸಿಕೊಂಡು ಇಡೀ ದಕ್ಷಿಣ ಭಾರತದ ಅಧಿಪತಿಯಾದ. ರಾಮೇಶ್ವರದಲ್ಲಿ ಕೃಷ್ಣೇಶ್ವರ ಮಂದಿರ ಕಟ್ಟಿಸಿದ.

ಕ್ರಿ. ಶ. 973ರಲ್ಲಿ ಕಲ್ಯಾಣದ ಚಾಲುಕ್ಯರು ಈ ವಂಶದ ಆಳ್ವಿಕೆಯನ್ನು ಕೊನೆಗಾಣಿಸಿದರು. ಚಾಲುಕ್ಯರ ಮಾಂಡಲಿಕರಾಗಿ ರಾಷ್ಟ್ರಕೂಟ ವಂಶದ ರಟ್ಟರು ಬೆಳಗಾವಿ ('ವೇಣುಗ್ರಾಮ') ಸೌಂದತ್ತಿಗಳಿಂದ ಮುಂದೆ ಆಳಿದರು.

ಪಂಪ, ಪೊನ್ನರಂಥ ಕನ್ನಡ ಕವಿಗಳೂ ವೀರಸೇನ, ಜಿನಸೇನ, ಗುಣಭದ್ರ, ಕುಮುದೇಂದು, ಸೋಮದೇವ ಮುಂತಾದ ಸಂಸ್ಕೃತ ಕವಿಗಳೂ ಇವರ ಕಾಲದಲ್ಲಿ ಇದ್ದವರು. ಎಲ್ಲೋರದ ಕೈಲಾಸನಾಥ, ಎಲಿಫೆಂಟದ ಗುಹೆಗಳು ಇವರ ಕಾಲದ ಶಿಲ್ಪಗಳು. ಕರ್ನಾಟಕದ ಒಂದು ರಾಜವಂಶ ಅಖಿಲ ಭಾರತ ಖ್ಯಾತಿ, ಪ್ರಾಬಲ್ಯ ಪಡೆದದ್ದು ರಾಷ್ಟ್ರಕೂಟರ ಕಾಲದಲ್ಲಿ.

ನೋಡಿ : ಮಾನ್ಯಖೇಟ

ರಾಷ್ಟ್ರಗೀತೆ

ನೋಡಿ : ಜನಗಣಮನ

ರಾಷ್ಟ್ರಧ್ವಜ

"ನನ್ನ ರಾಷ್ಟ್ರಧ್ವಜಕ್ಕೆ ಮತ್ತು ಅದು ಪ್ರತಿನಿಧಿಸುವ ಸಾರ್ವಭೌಮ ಪ್ರಜಾಪ್ರಭುತ್ವ ಗಣರಾಜ್ಯಕ್ಕೆ ನಿಷ್ಠನಾಗಿರುತ್ತೇನೆಂದು ನಾನು ಪ್ರತಿಜ್ಞೆ ಮಾಡುತ್ತೇನೆ".

—ಇದು ನಮ್ಮ ರಾಷ್ಟ್ರಧ್ವಜ ಹಾರಿಸುವಾಗ ಶಾಲೆಗಳಲ್ಲಿ ವಿದ್ಯಾರ್ಥಿಗಳು ಸ್ವೀಕರಿಸುವ ಪ್ರತಿಜ್ಞೆ.

ಭಾರತದ ತ್ರಿವರ್ಣರಂಜಿತ ರಾಷ್ಟ್ರಧ್ವಜವನ್ನು 1947 ಜುಲೈ 22 ರಂದು ರಾಜ್ಯಾಂಗ ರಚನಾಸಭೆ ಅಂಗೀಕರಿಸಿತು. ಇದರ ಬಣ್ಣಗಳು ಕೇಸರಿ ಬಿಳಿ ಹಾಗೂ ಹಸಿರು. ಬಿಳಿಪಟ್ಟಿಯ ನಡುವೆ ಕಡುನೀಲಿ ಬಣ್ಣದಲ್ಲಿ ಅಶೋಕ ಚಕ್ರವಿದೆ.

ರಾಷ್ಟ್ರಧ್ವಜಕ್ಕೆ ಉಪಯೋಗಿಸುವ ವಸ್ತ್ರ ಹತ್ತಿಯ ಖಾದಿ ಅಥವಾ ಕೈಯಿಂದ ನೆಯ್ದ ಉಣ್ಣೆ, ರೇಷ್ಮೆ ಬಟ್ಟೆಯಾದಾಗಿರಬೇಕು. ಧ್ವಜದ ಅಗಲ ಹಾಗೂ ಉದ್ದಗಳ ಪ್ರಮಾಣ 2 : 3. ಧ್ವಜ ಹಾರಿಸುವಾಗ ಕೇಸರಿಯು ಯಾವಾಗಲೂ ಮೇಲಿರಬೇಕು. ಗಣರಾಜ್ಯ ದಿನ, ಸ್ವಾತಂತ್ರ್ಯ ದಿನ, ಗಾಂಧೀ ಜಯಂತಿ ಮುಂತಾದ ರಾಷ್ಟ್ರೀಯ ದಿನಗಳಂದು ಎಲ್ಲೆಡೆಗಳಲ್ಲಿ ರಾಷ್ಟ್ರಧ್ವಜ ಹಾರಿಸಲ್ಪಡುತ್ತದೆ.



"ನಮ್ಮ ರಾಷ್ಟ್ರಧ್ವಜಕ್ಕೆ . . . ನಿಷ್ಠರಾಗಿರುತ್ತೇವೆಂದು . . ."

ವಂಗಭಂಗದ ಮರುವರ್ಷ, 1906 ಆಗಸ್ಟ್ 7ರಂದು ಕಲ್ಕತ್ತೆಯ ಗ್ರೀನ್ ಪಾರ್ಕ್(ಪಾರ್ಸಿಬಗನ್ ಚೌಕ)ದಲ್ಲಿ ಸ್ವಾತಂತ್ರ್ಯಪೂರ್ವ ಭಾರತದ ಮೊತ್ತ ಮೊದಲಿನ ರಾಷ್ಟ್ರಧ್ವಜ ಹಾರಿಸಲ್ಪಟ್ಟಿತು. ಇದಕ್ಕೆ ಅನುಕ್ರಮವಾಗಿ ಕೆಂಪು ಹಳದಿ, ಹಸಿರು ಬಣ್ಣಗಳ ಪಟ್ಟಿಗಳಿದ್ದು, ಕೆಂಪಿನ ಮೇಲೆ ಬಿಳಿಯ ಕಮಲದ ಹೂಗಳು, ಹಳದಿಯ ಮೇಲೆ ವಂದೇಮಾತರಂ ಎಂಬ ಗಾಢ ನೀಲ ವರ್ಣದ ಅಕ್ಷರಗಳು, ದೇವನಾಗರಿ ಲಿಪಿಯಲ್ಲಿ, ಹಸಿರಿನ ಮೇಲೆ ಒಂದು ಕಡೆಗೆ ಸೂರ್ಯ ಮತ್ತೊಂದು ಕಡೆಗೆ ಬಾಲಚಂದ್ರ ಹಾಗೂ ನಕ್ಷತ್ರ ಚಿತ್ರಿಸಲ್ಪಟ್ಟಿದ್ದುವು. ಅದೇ ವರ್ಷ ಎರಡನೆಯ ರಾಷ್ಟ್ರಧ್ವಜವನ್ನು ಮದಾಮ್ ಕಾಮಾ ಮುಂತಾದವರು ಪ್ಯಾರಿಸಿನಲ್ಲಿ ಹಾರಿಸಿದರು. ಇದು ಬಹುಮಟ್ಟಿಗೆ ಮೊದಲನೆಯದನ್ನು ಹೋಲುತ್ತಿತ್ತು. ಆನಿ ಬೆಸೆಂಟ್ ಹಾಗೂ ತಿಲಕರು ಹೋಂ ರೂಲ್ ಚಳುವಳಿಯ ಸಮಯದಲ್ಲಿ –1917ರಲ್ಲಿ– ಸಪ್ತರ್ಷಿ ಮಂಡಲದ ನಕ್ಷತ್ರ ವಿನ್ಯಾಸವೂ ಬ್ರಿಟಿಷರ ಧ್ವಜ ಚಿಹ್ನೆಯೂ ಚಂದ್ರ, ನಕ್ಷತ್ರ ಗಳೂ ಇರುವ ಕೆಂಪು ಹಸಿರು ಪಟ್ಟಿಗಳ ಧ್ವಜ ಹಾರಿಸಿದರು.

1921–1931ರ ವರೆಗೆ ಗಾಂಧೀಜೀ ಅನುಮೋದಿಸಿದ ಬಿಳಿ, ಹಸಿರು ಮತ್ತು ಕೆಂಪು ಪಟ್ಟಿಗಳ, ಚರಖಾ ಚಿಹ್ನೆ ಹೊತ್ತ ಧ್ವಜ ಕಾಂಗ್ರೆಸ್ ಅಧಿವೇಶನ ಹಾಗೂ ಇತರ ಸಂದರ್ಭಗಳಲ್ಲಿ ಹಾರಿಸಲ್ಪಡುತ್ತಿತ್ತು. 1931ರ ಕರಾಚಿ ಕಾಂಗ್ರೆಸ್ ಅಧಿವೇಶನದಲ್ಲಿ ಕೇಸರಿ, ಬಿಳಿ ಹಾಗೂ ಹಸಿರು ಬಣ್ಣವುಳ್ಳ, ಚರಖಾಚಿಹ್ನೆಯಿರುವ ಧ್ವಜವನ್ನು ಅಧಿಕೃತವಾಗಿ ಅಂಗೀಕರಿಸಿದರು. ಕೇಸರಿ ಸ್ಥೈರ್ಯ ತ್ಯಾಗಗಳನ್ನೂ ಬಿಳಿ ಸತ್ಯ ಶಾಂತಿಗಳನ್ನೂ ಹಸಿರು ಭರವಸೆ ಶೌರ್ಯಗಳನ್ನೂ ಪ್ರತಿನಿಧಿಸುವುದೆಂದು ವಿವರಿಸಲಾಯಿತು. ಭಾರತ ಸ್ವತಂತ್ರವಾದಮೇಲೆ ಚರಖಾ ಬದಲಾಗಿ ಕಡುನೀಲ ಬಣ್ಣದ ಅಶೋಕನ ಧರ್ಮಚಕ್ರವನ್ನು ಬಿಳಿಪಟ್ಟಿಯಲ್ಲಿ ಬರುವಂತೆ ಅಳವಡಿಸಿದರು.

ರಾಷ್ಟ್ರಧ್ವಜವನ್ನು ಏರಿಸುವ, ಇಳಿಸುವ ಹಾಗೂ ಬಳಸುವ ಕ್ರಮಗಳನ್ನು ಧ್ವಜ ನಿಯಮಾವಳಿಯಲ್ಲಿ ನಮೂದಿಸಿದ್ದಾರೆ.

ನೋಡಿ : ಅಶೋಕ ಚಕ್ರ

ಬಾವುಟ—ಸಂಪುಟ ೧

ರಾಷ್ಟ್ರಪಕ್ಷಿ

ಹಸಿರು ಹಾಗೂ [illegible] ಗರಿಗಳು —[illegible]. [illegible] ಕಣ್ಣು [illegible] —[illegible]. ಈ ಸುಂದರ [illegible] ಗರಿಗಳನ್ನು ಕೆದರಿ [illegible]ರುವ ನವಿಲು. ನೀಳವಾದ ಹಸಿರು ಗರಿಯ ತುದಿಯಲ್ಲಿ ಕಣ್ಣಿನಂತೆ ಕಾಣಿಸುತ್ತದೆ ನೀಲಿ - ಹಸಿರು ಬಣ್ಣದ 'ಕಣ್ಣು'.

ಹೆಚ್ಚಾಗಿ ಭಾರತ, ಶ್ರೀಲಂಕಾಗಳಲ್ಲಿ ಕಾಣಬರುವ ನವಿಲು ತನ್ನ ಸೌಂದರ್ಯದಿಂದ ಕವಿ, ಕಲಾವಿದರಿಗೆ ಸ್ಫೂರ್ತಿ ನೀಡಿದೆ. ಹಸಿರು ಬೆನ್ನು, ನೀಲ ಬಣ್ಣದ ತಲೆ ಹಾಗೂ ಕತ್ತು, ಕೆಂಪು ಮತ್ತು ಹಳದಿಯ ಮಿಶ್ರ ವರ್ಣದ ರೆಕ್ಕೆ, ತಲೆಯ ಮೇಲೆ ತುರಾಯಿಯಂತಿರುವ ಗರಿ. ಗಂಡು ನವಿಲಿಗೆ ನೀಳವಾದ ಗರಿಗಳಿರುತ್ತವೆ ; ಹೆಣ್ಣು ನವಿಲಿಗೆ ಹೀಗಿರುವುದಿಲ್ಲ. ಈ ಸುಂದರ ಪಕ್ಷಿಯನ್ನು ಹಿಡಿದು ತಂದು ಪಳಗಿಸುವುದು ಕೂಡ ಸುಲಭ.

ಇಂಥ ಆಕರ್ಷಕವೂ ಮನೋಹರವೂ ಆದ ನವಿಲು ಭಾರತದ ರಾಷ್ಟ್ರಪಕ್ಷಿ.

ನೋಡಿ : ನವಿಲು —ಸಂಪುಟ ೨



ರಾಷ್ಟ್ರ ಪಕ್ಷಿ

ರಾಷ್ಟ್ರಪತಿ

ಭಾರತ ರಾಷ್ಟ್ರದ ಶ್ರೇಷ್ಠತಮ ಅಧಿಕಾರಿ —ರಾಷ್ಟ್ರಪತಿ. ಸರಕಾರದ ಆಡಳಿತ ನಡೆಯುವುದು ಇವರ ಹೆಸರಿನಲ್ಲಿ.

ರಾಷ್ಟ್ರಪತಿ ಸ್ಥಾನಕ್ಕೆ ಸ್ಪರ್ಧಿಸುವವರು 35 ವರ್ಷಕ್ಕೆ ಮೇಲ್ಪಟ್ಟವರಾಗಿದ್ದು ಲೋಕಸಭೆಯ ಸದಸ್ಯತ್ವಕ್ಕೆ ಅರ್ಹರಾಗಿರಬೇಕು. ಸಂಸತ್ ಅಥವಾ ರಾಜ್ಯ ವಿಧಾನಮಂಡಲದ ಸದಸ್ಯರಾಗಿರುವ ವ್ಯಕ್ತಿ ರಾಷ್ಟ್ರಪತಿಯಾದರೆ ಸದಸ್ಯತ್ವಕ್ಕೆ ರಾಜೀನಾಮೆ ಕೊಡಬೇಕಾಗುತ್ತದೆ. ಸರಕಾರೀ ಹುದ್ದೆಯಲ್ಲಿರುವವರು ಸ್ಪರ್ಧಿಸುವಂತಿಲ್ಲ.

ರಾಷ್ಟ್ರಪತಿಯ ಅಧಿಕಾರಾವಧಿ ೫ ವರ್ಷ. ಕೇಂದ್ರದ ಲೋಕಸಭೆ ಹಾಗೂ ರಾಜ್ಯಸಭಾ ಸದಸ್ಯರು ಮತ್ತು ರಾಜ್ಯಗಳ ವಿಧಾನಮಂಡಲದ ಸದಸ್ಯರು ರಾಷ್ಟ್ರಪತಿಯ ಚುನಾವಣೆಯಲ್ಲಿ ಮತದಾನ ಮಾಡುತ್ತಾರೆ.

ಸಂವಿಧಾನಕ್ಕೆ ಬದ್ಧರಾಗಿ ರಾಷ್ಟ್ರಪತಿ ನಡೆದುಕೊಳ್ಳದಿದ್ದರೆ ಲೋಕಸಭೆ ವಿಚಾರಣೆ ನಡೆಸಿ ಅಧಿಕಾರದಿಂದ ತೆಗೆಯಬಹುದು. ಲೋಕಸಭೆಯಲ್ಲಿ ⅔ ಬಹುಮತದಿಂದ ರಾಷ್ಟ್ರಪತಿ ತಪ್ಪಿತಸ್ಥರೆಂದು ತೀರ್ಮಾನವಾದರೆ, ಅವರು ಅಧಿಕಾರ ಬಿಡಬೇಕಾಗುತ್ತದೆ.

ರಾಷ್ಟ್ರಪತಿ ಭವನ ಅವರ ಅಧಿಕೃತ ನಿವಾಸ.

ರಾಷ್ಟ್ರದ ರಕ್ಷಣಾಬಲಗಳ ಪ್ರಧಾನ ದಂಡನಾಯಕ ರಾಷ್ಟ್ರಪತಿ. ಪ್ರಧಾನಮಂತ್ರಿ ಹಾಗೂ ಕೇಂದ್ರ ಮಂತ್ರಿಮಂಡಲದ ಸದಸ್ಯರ ನೇಮಕ, [illegible]

[illegible]

[illegible]

ಮಸೂದೆಗೆ ಒಪ್ಪಿಗೆ ಕೊಟ್ಟು ಅದು ಶಾಸನವಾಗುವಂತೆ ಮಾಡುವುದು. ಸುಗ್ರೀವಾಜ್ಞೆ ಹೊರಡಿಸುವುದು ಮೊದಲಾದುವು ಅವರ ಶಾಸನಾಧಿಕಾರಗಳು. ರಾಜ್ಯಗಳಲ್ಲಿ ಮಂತ್ರಿಮಂಡಲ ಕೆಲಸ ಮಾಡಲು ಆಗದಂಥ ಪರಿಸ್ಥಿತಿಯಲ್ಲಿ ರಾಷ್ಟ್ರಪತಿ ಆಡಳಿತವನ್ನು ತಮ್ಮ ಹೆಸರಿನಲ್ಲಿ ನಡೆಸುವುದು. ತುರ್ತುಪರಿಸ್ಥಿತಿ ಘೋಷಣೆ ಮುಂತಾದುವು ಅವರ ವಿಶೇಷಾಧಿಕಾರಗಳು.

ಭಾರತದ ಪ್ರಥಮ ರಾಷ್ಟ್ರಪತಿ ರಾಜೇಂದ್ರ ಪ್ರಸಾದ್ 1950ರಿಂದ 1962ರ ವರೆಗೆ ಅಧಿಕಾರದಲ್ಲಿದ್ದರು. ಸರ್ವಪಲ್ಲಿ ರಾಧಾಕೃಷ್ಣನ್ ಮತ್ತು ಜಾಕೀರ್ ಹುಸೇನ್ ಅನಂತರದ ರಾಷ್ಟ್ರಪತಿಗಳು. 1970ರಲ್ಲಿ ವಿ.ವಿ. ಗಿರಿ ರಾಷ್ಟ್ರಪತಿಯಾದರು.

ನೋಡಿ : ಜಾಕೀರ್ ಹುಸೇನ್ ; ರಾಜೇಂದ್ರ ಪ್ರಸಾದ್ ; ವಿ. ವಿ. ಗಿರಿ ;
ಸರ್ವಪಲ್ಲಿ ರಾಧಾಕೃಷ್ಣನ್

ರಾಷ್ಟ್ರಪ್ರಶಸ್ತಿ

"ಮುಳುಗುತ್ತಿದ್ದ ಹುಡುಗನೊಂದನ್ನು ರಕ್ಷಿಸುವ ಯತ್ನದಲ್ಲಿ ಸಾವನ್ನಪ್ಪಿದ ಎಂ. ಕೆ. ಕುಟ್ಟಿಪ್ಪನ್ ಎಂಬ ಕೇರಳದ ಬಾಲಕನಿಗೆ ಮರಣೋತ್ತರ ಪ್ರಶಸ್ತಿ,

" ಚಲಚ್ಚಿತ್ರ ನಟಿ ಶಾರದಾಗೆ ಊರ್ವಶಿ ಪ್ರಶಸ್ತಿ "—

ಮೊದಲಾದ ಸುದ್ದಿಗಳನ್ನು ಪತ್ರಿಕೆಗಳಲ್ಲಿ ಓದಿದ್ದೇವೆ.

ಶ್ರೇಷ್ಠ ಕಲಾವಿದ, ಸಾಹಿತಿ, ಕ್ರೀಡಾಪಟು, ವಿಶ್ರಾಂತ ಉಪಾಧ್ಯಾಯ–ಹೀಗೆ ವಿವಿಧ ರಂಗಗಳಲ್ಲಿ ರಾಷ್ಟ್ರಕ್ಕೆ ಅಮೂಲ್ಯ ಸೇವೆ ಸಲ್ಲಿಸಿರುವವರಿಗೆ ಗೌರವ ಸೂಚಿಸಲು ಪ್ರಶಸ್ತಿ ನೀಡುವ ಸಂಪ್ರದಾಯವನ್ನು ಭಾರತ ಸರಕಾರ ಬೆಳೆಸಿಕೊಂಡು ಬಂದಿದೆ.

ಪ್ರತಿ ವರ್ಷ ಗಣರಾಜ್ಯ ದಿನೋತ್ಸವದ ಸಂದರ್ಭದಲ್ಲಿ ಭಾರತರತ್ನ, ಪದ್ಮ ವಿಭೂಷಣ, ಪದ್ಮ ಭೂಷಣ, ಪದ್ಮಶ್ರೀ ಪ್ರಶಸ್ತಿಗಳನ್ನು ರಾಷ್ಟ್ರಸೇವೆ ಸಮಾಜಸೇವೆ, ಕಲೆ, ಸಾಹಿತ್ಯ, ವಿಜ್ಞಾನ ಮುಂತಾದ ಕ್ಷೇತ್ರಗಳಲ್ಲಿ ಶ್ರೇಷ್ಠರಾದವರಿಗೆ ನೀಡಲಾಗುತ್ತದೆ.

ರಕ್ಷಣಾ ಪಡೆಗಳಲ್ಲಿ ಧೈರ್ಯ, ಸಾಹಸ ಪ್ರಕಟಿಸಿದವರಿಗೆ ಪರಮವೀರ ಚಕ್ರ, ಮಹಾವೀರಚಕ್ರ, ವೀರಚಕ್ರ, ಅಶೋಕಚಕ್ರ, ಕೀರ್ತಿಚಕ್ರ, ಶೌರ್ಯ ಚಕ್ರಗಳನ್ನು ಕೊಟ್ಟು ಪುರಸ್ಕರಿಸುತ್ತಾರೆ. ಅಲ್ಲದೆ ವಿಶಿಷ್ಟ ಸೇವಾ ಪದಕ ಜೀವನ ರಕ್ಷಾ ಪದಕ, ಮೆರಿಟೋರಿಯಸ್ ಸರ್ವಿಸ್ ಮೆಡಲ್ ಈ ಪುರಸ್ಕಾರಗಳೂ ಉಂಟು.

' ಊರ್ವಶಿ ಪ್ರಶಸ್ತಿ ' ನೀಡಿಕೆ ನರ್ಗಿಸ್ ದತ್ತರಿಗೆ — ರಾಷ್ಟ್ರಪತಿಯವರಿಂದ



ಸಾಹಿತ್ಯ, ಕಲೆ, ಸಂಗೀತ, ಕ್ಷೇತ್ರಗಳಲ್ಲಿ ವಿಶಿಷ್ಟ ಸೇವೆ ಸಲ್ಲಿಸಿರುವವರಿಗೆ ಗೌರವ ಸೂಚಿಸಲು ರಾಷ್ಟ್ರೀಯ ಲಲಿತಕಲಾ ಅಕಾದೆಮಿ, ಸಾಹಿತ್ಯ ಅಕಾದೆಮಿ, ಮತ್ತು ಸಂಗೀತ ನಾಟಕ ಅಕಾದೆಮಿಗಳು ಪ್ರತಿ ವರ್ಷ ಪ್ರಶಸ್ತಿಗಳನ್ನು ನೀಡುತ್ತವೆ.

ಕ್ರೀಡಾ ಕ್ಷೇತ್ರದಲ್ಲಿ ಅತ್ಯುತ್ತಮ ಸಾಧನೆ ಕೈಗೂಡಿಸಿಕೊಂಡಿರುವ ಪಟುಗಳಿಗೆ ಅರ್ಜುನ ಪ್ರಶಸ್ತಿ ಕೊಡುತ್ತಾರೆ.

ಶ್ರೇಷ್ಠ ಚಲಚ್ಚಿತ್ರ ನಟಿಗೆ ಊರ್ವಶಿ ಪ್ರಶಸ್ತಿ, ಶ್ರೇಷ್ಠ ನಟನಿಗೆ ಭರತ ಪ್ರಶಸ್ತಿ.

ಅತ್ಯುತ್ತಮ ಚಲಚ್ಚಿತ್ರ ನಿರ್ಮಿಸಿದ ನಿರ್ದೇಶಕ, ಶ್ರೇಷ್ಠ ಸಂಗೀತ ನಿರ್ದೇಶಕ, ಶ್ರೇಷ್ಠ ಬಾಲ ನಟ, ಶ್ರೇಷ್ಠ ಹಿನ್ನೆಲೆಗಾಯಕ, ಮೊದಲಾದವರಿಗೆ ಕೊಡುವ ಪ್ರಶಸ್ತಿಗಳೂ ಇವೆ.

ಶಿಕ್ಷಕರ ದಿನವಾದ ಸೆಪ್ಟೆಂಬರ್ 5ರಂದು ಉತ್ತಮ ಶಿಕ್ಷಕರಿಗೆ ರಾಷ್ಟ್ರೀಯ ಪ್ರಶಸ್ತಿ ಕೊಡುತ್ತಾರೆ.

ಭಾರತೀಯ ಭಾಷೆ ಯಾವುದಾದರೊಂದರಲ್ಲಿ ಉತ್ತುಂಗ ಸಾಹಿತ್ಯ ಕೃತಿ ರಚಿಸಿದವರಿಗೆ ಭಾರತೀಯ ಜ್ಞಾನಪೀಠ ಪ್ರಶಸ್ತಿ ದೊರೆಯುತ್ತದೆ.

ಹೆಸರೇ ಸೂಚಿಸುವಂತೆ ಕೃಷಿ ಪಂಡಿತ, ಪ್ರಶಸ್ತಿ ಆ ಕ್ಷೇತ್ರದ ಶ್ರೇಷ್ಠರಿಗೆ ನೀಡಲ್ಪಡುತ್ತದೆ.

ವಿಶ್ರಾಂತ ಮಹೋಪಾಧ್ಯಾಯ, ರಾಷ್ಟ್ರೀಯ ಪ್ರಾಧ್ಯಾಪಕ ಗೌರವವನ್ನು ವಿದ್ಯಾವಿಚಕ್ಷಣರಿಗೆ ತೋರುತ್ತಾರೆ.

ಅಪಾಯದಲ್ಲಿ ಸಿಕ್ಕಿದವರನ್ನು ಉಳಿಸಿದ ಸಾಹಸಿ ಮಕ್ಕಳಿಗೂ ಪ್ರಶಸ್ತಿ ಕೊಡುತ್ತಾರೆ.

ಕೈಗಾರಿಕಾ ಕ್ಷೇತ್ರದಲ್ಲಿ ದೀರ್ಘ ಅಪಘಾತರಹಿತ ಅವಧಿಯುಳ್ಳ ಕಾರ್ಖಾನೆಗಳಿಗೆ ಅಪಘಾತ ಸಂಖ್ಯೆ ಬಹು ಕಡಮೆ ಇರುವ ಕಾರಖಾನೆಗಳಿಗೆ ರಾಷ್ಟ್ರೀಯ ಕ್ಷೇಮ ಪ್ರಶಸ್ತಿ ಸಿಗುತ್ತದೆ.

ಉತ್ಪಾದನೆಯನ್ನು ಉತ್ತಮಗೊಳಿಸುವ ಬಗೆಗೆ ಕೆಲಸಗಾರರು ನೀಡುವ ಉಪಯುಕ್ತ ಸಲಹೆಗಳಿಗಾಗಿ ಶ್ರಮವೀರ ಪ್ರಶಸ್ತಿ ನೀಡುತ್ತಾರೆ.

ಪುಸ್ತಕಗಳು, ಪತ್ರಿಕೆಗಳು ಮೊದಲಾದುವುಗಳಲ್ಲಿ ಉತ್ತಮ ಮುದ್ರಣ ಮತ್ತು ವಿನ್ಯಾಸಗಳಿಗಾಗಿ ಪ್ರಶಸ್ತಿಗಳು ದೊರೆಯುತ್ತವೆ.

ನೋಡಿ : ಭಾರತ ರತ್ನ ; ಶಿಕ್ಷಕರ ದಿನ
ಅರ್ಜುನ ಪ್ರಶಸ್ತಿ—ಸಂಪುಟ ೬

ರಾಷ್ಟ್ರಪ್ರಾಣಿ

ಭಾರತಕ್ಕೆ ಸ್ವಾತಂತ್ರ್ಯ ಬಂದ ಮೇಲೆ 1969ರಲ್ಲಿ ಸಿಂಹ ರಾಷ್ಟ್ರ ಪ್ರಾಣಿಯೆಂದು ಅಂಗೀಕರಿಸಲ್ಪಟ್ಟಿತು. 1972 ಜೂಲೈ 9ರಂದು ಈ ನಿರ್ಣಯವನ್ನು ಬದಲಾಯಿಸಿ ಹುಲಿಯನ್ನು ರಾಷ್ಟ್ರ ಪ್ರಾಣಿಯೆಂದು ಘೋಷಿಸಲಾಯಿತು.

ಹಳದಿಯ ಮೇಲೆ ಕಪ್ಪು ಪಟ್ಟೆಯುಳ್ಳ ಹುಲಿ ನೋಟಕ್ಕೆ ಆಕರ್ಷಕ. ಅದರ ಮೈಕಟ್ಟು ಬಲಿಷ್ಠ. ಪುಷ್ಟವಾಗಿ ಬೆಳೆದ ಗಂಡು ಹುಲಿ ಸುಮಾರು ಐದು ಅಡಿ ಎತ್ತರವಿದ್ದು ಹದಿನಾಲ್ಕು ಅಡಿ ಉದ್ದವಿರುತ್ತದೆ. ತೂಕ ಸುಮಾರು 500 ಪೌಂಡ್.



ರಾಷ್ಟ್ರಪ್ರಾಣಿ

ಹಿಂದೆ ನಮ್ಮ ರಾಷ್ಟ್ರದಲ್ಲಿ ಅನೇಕ ಸಾವಿರ ಹುಲಿಗಳಿದ್ದುವು. 1972ಕ್ಕೆ ಅವುಗಳ ಸಂಖ್ಯೆ ಎರಡು ಸಾವಿರಕ್ಕಿಂತ ಕಡಮೆಯಾಗಿದೆ. ವಿವೇಚನೆಯಿಲ್ಲದೆ ಹುಲಿಗಳನ್ನು ಕೊಲ್ಲುವುದು, ಕಾಡುಗಳನ್ನು ಕತ್ತರಿಸಿ ಅವುಗಳ ವಾಸಸ್ಥಾನವನ್ನು ಹಾಳುಮಾಡುವುದು ಇದಕ್ಕೆ ಮುಖ್ಯ ಕಾರಣ.

ಪ್ರಕೃತಿಯ ಅತ್ಯಂತ ಸುಂದರ ಪ್ರಾಣಿಗಳಲ್ಲೊಂದಾದ ಹುಲಿಯ ವಂಶ ನಾಶವಾಗದಂತೆ, ಅದನ್ನು ರಕ್ಷಿಸಲು ಮತ್ತು ಅದರ ಸಂತಾನವನ್ನು ಬೆಳೆಸಲು ದೇಶದಲ್ಲಿ ಯೋಜನೆಯನ್ನು ರೂಪಿಸಲಾಗಿದೆ.

ರಾಷ್ಟ್ರ ಭಾಷೆ

ಭಾರತ ಅನೇಕ ಭಾಷೆಗಳ ದೇಶ. 1961ರ ಜನಗಣತಿಯ ಮೇರೆಗೆ ದೇಶದಲ್ಲಿ 872 ಭಾಷೆಗಳೂ ಆಡುನುಡಿಗಳೂ ಇವೆ.

ಆದರೆ ಇವುಗಳಲ್ಲಿ ಹದಿನೈದು ಮಾತ್ರ ರಾಷ್ಟ್ರಭಾಷೆಗಳು : ಅಸ್ಸಾಮಿ, ಉರ್ದು, ಒಡಿಯಾ, ಕನ್ನಡ, ಕಾಶ್ಮೀರಿ, ಗುಜರಾತೀ, ತಮಿಳು, ತೆಲುಗು, ಪಂಜಾಬೀ, ಬಂಗಾಳೀ, ಮಲಯಾಳಂ, ಮರಾಠೀ, ಸಂಸ್ಕೃತ, ಸಿಂಧೀ ಹಾಗೂ ಹಿಂದೀ.

ಬ್ರಿಟಿಷರ ರಾಜ್ಯಭಾರದಲ್ಲಿ ಇಂಗ್ಲಿಷ್ ಅಧಿಕೃತ ಭಾಷೆಯಾಗಿದ್ದಿತು. ಭಾರತೀಯ ಭಾಷೆಯೊಂದು ರಾಷ್ಟ್ರಭಾಷೆಯಾಗಬೇಕು ಎಂದು ಅನೇಕ ಜನ ಮನಗಂಡಿದ್ದರು. ಹಿಂದೀ ಭಾರತ ಒಕ್ಕೂಟದ ಅಧಿಕೃತ ಭಾಷೆಯಾಗಿ 1965 ಜನವರಿ 16ರಂದು ಅಂಗೀಕೃತವಾಯಿತು. ಕೇಂದ್ರಾಡಳಿತ ಪ್ರದೇಶ ಹಾಗೂ ಹಿಂದೀ ಆಡುಭಾಷೆಯಾಗಿರುವ ಪ್ರದೇಶಗಳಲ್ಲಿ ಹಿಂದೀ ಅಂದಿನಿಂದ ಅಧಿಕೃತ ಭಾಷೆಯಾಗಿ ರೂಢಿಗೆಬಂದಿತು. ಆದರೆ ಹಿಂದೀ ಬಳಕೆಯಲ್ಲಿಲ್ಲದ ರಾಜ್ಯ ಹಾಗೂ ಹಿಂದೀ ಬಳಕೆಯ ರಾಜ್ಯಗಳ ಮತ್ತು ಕೇಂದ್ರ ಸರಕಾರದ ನಡುವೆ ಇಂಗ್ಲಿಷ್ ವ್ಯಾವಹಾರಿಕ ಭಾಷೆಯಾಗಿ ಮುಂದುವರಿಯಿತು.

ಇಂಗ್ಲಿಷನ್ನು 1965 ಜನವರಿ 26ರ ವರೆಗೆ ಮಾತ್ರ ಬಳಸಬೇಕೆಂದು 1950ರಲ್ಲಿ ವಿಧಿಸಲಾಗಿತ್ತು. ಆದರೆ ಕೇವಲ ಹಿಂದೀಯನ್ನು

ಬಳಸಲು ಇನ್ನೂ ಸಾಧ್ಯವಾಗದುದರಿಂದ ಇಂಗ್ಲಿಷ್ 1965ರ ಅನಂತರವೂ ಮುಂದುವರಿಯಿತು.

ಭಾರತದ ಪ್ರಾಚೀನ ಭಾಷೆ ಸಂಸ್ಕೃತ. ಸುಮಾರು ಕ್ರಿ.ಪೂ. 10ನೆಯ ಶತಮಾನದ ವರೆಗೂ ಇದು ದೇಶದ ಪ್ರಮುಖ ಭಾಷೆಯಾಗಿದ್ದಿತು.

ಪ್ರಪಂಚದಲ್ಲಿ ಅತ್ಯಧಿಕ ಜನರು ಮಾತನಾಡುವ ಭಾಷೆಗಳ ದೃಷ್ಟಿಯಿಂದ ಹಿಂದಿಗೆ ನಾಲ್ಕನೆಯ ಸ್ಥಾನ. 181 ಕೋಟಿ ಜನ ಈ ಭಾಷೆ ಮಾತನಾಡುತ್ತಾರೆ.

ನೋಡಿ : ಅಸ್ಸಾಮಿ ಭಾಷೆ, ಸಾಹಿತ್ಯ ; ಉರ್ದು ಭಾಷೆ, ಸಾಹಿತ್ಯ ; ಒಡಿಯಾ ಭಾಷೆ, ಸಾಹಿತ್ಯ ; ಕಾಶ್ಮೀರೀ ಭಾಷೆ, ಸಾಹಿತ್ಯ ; ಗುಜರಾತೀ ಭಾಷೆ, ಸಾಹಿತ್ಯ ; ತಮಿಳು ಭಾಷೆ, ಸಾಹಿತ್ಯ ; ತೆಲುಗು ಭಾಷೆ, ಸಾಹಿತ್ಯ ; ಪಂಜಾಬೀ ಭಾಷೆ, ಸಾಹಿತ್ಯ ; ಬಂಗಾಳೀ ಭಾಷೆ, ಸಾಹಿತ್ಯ ; ಮರಾಠೀ ಭಾಷೆ, ಸಾಹಿತ್ಯ ; ಮಲಯಾಳಂ ಭಾಷೆ, ಸಾಹಿತ್ಯ ; ಸಂಸ್ಕೃತ ಭಾಷೆ, ಸಾಹಿತ್ಯ ; ಸಿಂಧೀ ಭಾಷೆ, ಸಾಹಿತ್ಯ ; ಹಿಂದೀ ಭಾಷೆ, ಸಾಹಿತ್ಯ
ಕನ್ನಡ ಸಾಹಿತ್ಯ—ಸಂಪುಟ ೫.

ರಾಷ್ಟ್ರ ಲಾಂಛನ

ನೋಡಿ : ಅಶೋಕ ಚಕ್ರ

ರಾಷ್ಟ್ರಸ್ತವ

ನೋಡಿ : ವಂದೇ ಮಾತರಂ

ರಾಷ್ಟ್ರೀಯ ಖನಿಜ ಅಭಿವೃದ್ಧಿ ಸಂಸ್ಥೆ

ಸಾರ್ವಜನಿಕ ವಲಯದಲ್ಲಿ ಖನಿಜಗಳನ್ನು ತೆಗೆಯುವ ಉದ್ದೇಶದಿಂದ 1958ರಲ್ಲಿ ಸ್ಥಾಪಿತವಾದ ಸಂಸ್ಥೆ—ರಾಷ್ಟ್ರೀಯ ಖನಿಜ ಅಭಿವೃದ್ಧಿ ಸಂಸ್ಥೆ.

ತೈಲ, ನೈಸರ್ಗಿಕ ಅನಿಲ ಮತ್ತು ಕಲ್ಲಿದ್ದಲು —ಇವುಗಳ ಹೊರತಾದ ಖನಿಜಗಳೆಲ್ಲ ಈ ಸಂಸ್ಥೆಯ ವ್ಯಾಪ್ತಿಗೆ ಬರುತ್ತವೆ. ಅಗತ್ಯ ಬಿದ್ದರೆ ಗಣಿಯನ್ನು ಕೊಂಡುಕೊಳ್ಳಲು, ಗುತ್ತಿಗೆಗೆ ಪಡೆಯಲು ಅಥವಾ ಬೇರೆ ವಿಧವಾಗಿಯಾದರೂ ಸ್ವಾಧೀನಕ್ಕೆ ತೆಗೆದುಕೊಳ್ಳಲು ಸಂಸ್ಥೆಗೆ ಅಧಿಕಾರವಿದೆ. ಹೀಗೆ ಮಾಡಿದಮೇಲೆ ಖನಿಜ ಪಡೆಯಲು ಅಗತ್ಯವಿರುವ ಕೆಲಸಗಳನ್ನು ಅಲ್ಲಿ ಸಂಸ್ಥೆ ಆರಂಭಿಸುತ್ತದೆ.

ಬಿಹಾರ್ ಒರಿಸ್ಸಾ ಗಣಿಯಲ್ಲಿರುವ ಕಬ್ಬಿಣ, ಮಧ್ಯಪ್ರದೇಶದ ಬೈಲಾಡಿಲಾ, ಮಹಾರಾಷ್ಟ್ರದ ರೇವಾ —ಈ ಕಬ್ಬಿಣದ ಅದಿರು ಯೋಜನೆಗಳನ್ನು ಸಂಸ್ಥೆಗೆ ವಹಿಸಿಕೊಡಲಾಗಿದೆ. ರಾಜಸ್ಥಾನದ ಖೇತ್ರಿ ತಾಮ್ರ ಯೋಜನೆ, ಮಧ್ಯಪ್ರದೇಶದ ಪನ್ನಾ ವಜ್ರದ ಗಣಿ ಯೋಜನೆ, ರಾಜಸ್ಥಾನದ ದರಿಬಾ ತಾಮ್ರ ಯೋಜನೆ ಮತ್ತು ಜಾವರ್ ಸೀಸ ಅದಿರು ಯೋಜನೆಗಳು ಮೊದಲಾದುವು ವ್ಯಾಪ್ತಿಯಲ್ಲಿವೆ.

ಕರ್ನಾಟಕದಲ್ಲಿ ದೋಣಿಮಲೈ ಹಾಗೂ ಕುದುರೆಮುಖಗಳ ಕಬ್ಬಿಣ ಅದಿರಿನ ಉತ್ಪಾದನಾ ಯೋಜನೆಗಳೂ ಸಂಸ್ಥೆಯ ವ್ಯಾಪ್ತಿಯಲ್ಲಿವೆ.

ರಾಷ್ಟ್ರೀಯ ಗ್ರಂಥಾಲಯ

ಭಾರತದ ರಾಷ್ಟ್ರೀಯ ಗ್ರಂಥಾಲಯ ಕಲ್ಕತ್ತೆಯಲ್ಲಿದೆ.

1902ರಲ್ಲಿ 'ಇಂಪೀರಿಯಲ್ ಲೈಬ್ರರಿ' (ಸಾರ್ವಭೌಮ ಗ್ರಂಥಾಲಯ) ಎಂಬ ಹೆಸರಿನ ಗ್ರಂಥಾಲಯವನ್ನು ಸ್ಥಾಪಿಸಲಾಯಿತು. ಅದಕ್ಕೆ 'ರಾಷ್ಟ್ರೀಯ ಗ್ರಂಥಾಲಯ' ಎಂಬ ಹೆಸರು ಬಂದದ್ದು 1948ರಲ್ಲಿ.



ರಾಷ್ಟ್ರೀಯ ಗ್ರಂಥಾಲಯದಲ್ಲಿ

ಆಕರ ಸಾಹಿತ್ಯಕ್ಕೆ ಸಂಬಂಧಿಸಿ ಈ ಗ್ರಂಥಾಲಯದಿಂದ ಸಹಾಯ ಸಿಗುತ್ತದೆ. ಗ್ರಂಥಸೂಚಿ ರಚನೆ ಇಲ್ಲಿ ನಡೆಯುತ್ತದೆ. ಈವರೆಗೆ 88 ಗ್ರಂಥಸೂಚಿಗಳನ್ನು ಈ ಸಂಸ್ಥೆ ತಯಾರಿಸಿದೆ.

ಆಸಕ್ತಿಯುಳ್ಳವರು ಗ್ರಂಥಾಲಯ ವಿಷಯವಾಗಿ ತಾಂತ್ರಿಕ ನೆರವನ್ನು ಸಹ ಈ ಸಂಸ್ಥೆಯಿಂದ ಪಡೆಯಬಹುದು. 1960 ಜೂಲೈಯಿಂದ ಮಕ್ಕಳ ವಿಭಾಗವನ್ನು ತೆರೆಯಲಾಗಿದೆ. ದೇಶದಲ್ಲಿ ಹಾಗೂ ಹೊರದೇಶಗಳಿಗೆ ಪುಸ್ತಕಗಳನ್ನು ಎರವಲು ಕೊಡುವ ಅಂತರಗ್ರಂಥಾಲಯ ಕೇಂದ್ರದಂತೆಯೂ ಸಂಸ್ಥೆ ಕೆಲಸಮಾಡುತ್ತದೆ.

ಭಾರತದ ಗ್ರಂಥಾಲಯಗಳಲ್ಲಿ ದೊಡ್ಡದು ರಾಷ್ಟ್ರೀಯ ಗ್ರಂಥಾಲಯ. ಇದರ ಪ್ರಮುಖ ನಿರ್ದೇಶಕರಾಗಿದ್ದವರು ಬಿ. ಎಸ್. ಕೇಶವನ್.

ನೋಡಿ : ಬಿ. ಎಸ್. ಕೇಶವನ್

ರಾಷ್ಟ್ರೀಯ ಪಂಚಾಂಗ

ಭಾರತದಾದ್ಯಂತ ಅನೇಕ ರೀತಿಯ ಪಂಚಾಂಗಗಳು ಬಳಕೆಯಲ್ಲಿವೆ. ಇವುಗಳಿಗೆ ಸಂಬಂಧಿಸಿದ ಲೆಕ್ಕಾಚಾರಗಳು ಸಿದ್ಧಾಂತಗಳು ಬೇರೆ ಬೇರೆ—ಸೌರಮಾನ, ಚಾಂದ್ರಮಾನ, ಆರ್ಯಭಟೀಯ, ಸೂರ್ಯ ಸಿದ್ಧಾಂತ. ಲೌಕಿಕ ವ್ಯವಹಾರದ ಸಂಬಂಧದಲ್ಲಿ ಇಡೀ ರಾಷ್ಟ್ರಕ್ಕೆ ಅನ್ವಯಿಸುವ ಏಕ ರೂಪದ ಪಂಚಾಂಗ ಇರಬೇಕೆಂದು ಭಾರತ ಸರಕಾರ ನಿರ್ಧರಿಸಿ, 1957 ಮಾರ್ಚ್ 22ರಲ್ಲಿ 'ರಾಷ್ಟ್ರೀಯ ಪಂಚಾಂಗ'ವನ್ನು ಆಚರಣೆಗೆ ತಂದಿತು.

ಈ ಪಂಚಾಂಗವನ್ನು ಸಿದ್ಧಗೊಳಿಸುವುದರಲ್ಲಿ ಖ್ಯಾತ ವಿಜ್ಞಾನಿ ದಿವಂಗತ ಮೇಘನಾದ ಸಹಾ ಅವರು ಪ್ರಮುಖ ಪಾತ್ರ ವಹಿಸಿದ್ದರು.

ರಾಷ್ಟ್ರೀಯ ಪಂಚಾಂಗ ಶಕವರ್ಷವನ್ನು ಅವಲಂಬಿಸಿದೆ. 1879ನೆಯ ಶಕವರ್ಷ ಚೈತ್ರಮಾಸದ ಮೊದಲನೆಯ ದಿನ ಕ್ರಿಸ್ತಶಕದ 1957ರ ಮಾರ್ಚ್ 22ನೆಯ ತಾರೀಖಿಗೆ ಸರಿಹೋಗುತ್ತದೆ. ಶಕ ಸಂವತ್ಸರ ಕ್ರೈಸ್ತ ಸಂವತ್ಸರಕ್ಕಿಂತ 78 ವರ್ಷ ಹಿಂದಿದೆ.

ರಾಷ್ಟ್ರೀಯ ಪಂಚಾಂಗದಲ್ಲಿ ವರ್ಷದ ಮೊದಲ ತಿಂಗಳು ಚೈತ್ರಮಾಸ. ಸಾಮಾನ್ಯವಾಗಿ ಈ ತಿಂಗಳಲ್ಲಿ 30 ದಿನಗಳೂ ವರ್ಷಕ್ಕೆ 366 ದಿನಗಳಿರುವ ಅಧಿಕ ದಿನದ ವರ್ಷದಲ್ಲಿ ಮಾತ್ರ 31 ದಿವಸಗಳೂ ಇರುತ್ತವೆ. ಅಲ್ಲಿಂದ ಮುಂದಿನ ಐದು ತಿಂಗಳುಗಳಲ್ಲಿ ತಿಂಗಳಿಗೆ 31 ದಿವಸಗಳಿದ್ದು, ಕೊನೆಯ ಆರು ತಿಂಗಳುಗಳಲ್ಲಿ ತಿಂಗಳಿಗೆ 30 ದಿವಸಗಳು ಇರುತ್ತವೆ. ರಾಷ್ಟ್ರೀಯ ಪಂಚಾಂಗದ ವರ್ಷಾರಂಭ ಸಾಮಾನ್ಯವಾಗಿ ಮಾರ್ಚ್ 22ಕ್ಕೂ ಅಧಿಕ ವರ್ಷದಲ್ಲಿ ಮಾರ್ಚ್ 21ಕ್ಕೂ ಬೀಳುತ್ತದೆ.


ನೋಡಿ : ಪಂಚಾಂಗ—ಸಂಪುಟ ೧
ಕ್ಯಾಲೆಂಡರ್—ಸಂಪುಟ ೩



ಶಕ 1895 ಅಗ್ರಹಾಯನ—ಪೌಷ = ಕ್ರಿ.ಶ. 1973 ಡಿಸೆಂಬರ್

ರಾಷ್ಟ್ರೀಯ ಪತ್ರಾಗಾರ

ಭಾರತ ಸರಕಾರದ ಕಾಗದ ಪತ್ರಗಳ ಭಂಡಾರ ರಾಷ್ಟ್ರೀಯ ಪತ್ರಾಗಾರ. ಇದು ನವದೆಹಲಿಯಲ್ಲಿದೆ.



ರಾಷ್ಟ್ರೀಯ ಪತ್ರಾಗಾರದಲ್ಲಿ

ಈಸ್ಟ್ ಇಂಡಿಯಾ ಕಂಪೆನಿಯ ಆರಂಭಕಾಲದಿಂದೀಚೆಗಿನ ದಾಖಲೆಗಳು ಇಲ್ಲಿ ಸಂರಕ್ಷಿಸಲ್ಪಟ್ಟಿವೆ. ಸಚಿವ ಶಾಖೆಗಳು ಪರಾಮರ್ಶೆಗೆ ಬೇಕೆನ್ನುವ ಕಾಗದ ಪತ್ರಗಳನ್ನು ಒದಗಿಸುವ ಹೊಣೆಯೂ ಇದರದ್ದು. ದಾಖಲೆಗಳ ಮೈಕ್ರೊಫಿಲ್ಮ್ ತಯಾರಿಸುವ ಮತ್ತು ಛಾಯಾಚಿತ್ರಣದ ಮೂಲಕ ನಕಲು ತೆಗೆಯುವ ಕಾರ್ಯಗಳೂ ಇಲ್ಲಿ ನಡೆಯುತ್ತವೆ. ಪ್ರಚಲಿತವಿಲ್ಲದ ಕಾಗದಪತ್ರಗಳನ್ನು ಸಚಿವ ಶಾಖೆಗಳು ವರ್ಷಕ್ಕೊಮ್ಮೆ ಇಲ್ಲಿಗೆ ಕಳುಹಿಸಿ ಕೊಡುತ್ತವೆ.

ಪತ್ರಗಳನ್ನು ಕಾಪಿಡುವ ವಿಧಾನ. ಈ ಬಗೆಗೆ ಸಂಶೋಧನೆ. ಆಕರಗಳಿಗೆ ಸಂಬಂಧಿಸಿದ ಮಾಹಿತಿ ಒದಗಿಸುವುದು ಹಾಗೂ ಪ್ರಕಟಣೆ – ಇವುಗಳ ಬಗೆಗೆ ರಾಷ್ಟ್ರೀಯ ಪತ್ರಾಗಾರದಲ್ಲಿ ತರಬೇತಿ ಸೌಲಭ್ಯವೂ ಇದೆ. ದೇಶದಲ್ಲಿ ಈ ತೆರನಾದ ಪತ್ರಾಗಾರ ಇದೊಂದೇ.

ರಾಷ್ಟ್ರೀಯ ಭೌತಿಕ ಪ್ರಯೋಗಾಲಯ

ವೈಜ್ಞಾನಿಕ ಮತ್ತು ಔದ್ಯೋಗಿಕ ಸಂಶೋಧನಾ ಮಂಡಲಿ ಸ್ಥಾಪಿಸಿದ ಪ್ರಮುಖ ಸಂಶೋಧನಾ ಸಂಸ್ಥೆಗಳಲ್ಲಿ ಒಂದು —ರಾಷ್ಟ್ರೀಯ ಭೌತಿಕ ಪ್ರಯೋಗಾಲಯ. ಇದು ನವದೆಹಲಿಯಲ್ಲಿ 1950ರಲ್ಲಿ ಆರಂಭವಾಯಿತು.



ರಾಷ್ಟ್ರೀಯ ಭೌತವಿಜ್ಞಾನ ಪ್ರಯೋಗಾಲಯ

ದ್ರವ್ಯರಾಶಿ. ಕಾಲ. ಉಷ್ಣತೆಗಳನ್ನು ಅಳೆಯುವ ಮೂಲಭೂತ ಮಾನಕಗಳನ್ನು ಸಂಸ್ಥೆ ಯುಕ್ತವಾಗಿ ನಿರ್ಧರಿಸಿದೆ. ತಾನು ನಿರ್ಧರಿಸಿರುವ ನಿಖರ ಶಿಷ್ಟಕಾಲವನ್ನು ಸಂಕೇತ ರೂಪದಲ್ಲಿ ಪ್ರಸಾರ ಮಾಡುತ್ತದೆ. ಇದಕ್ಕೆ ಪ್ರಸಾರಕೇಂದ್ರವಿದೆ. ರಾಷ್ಟ್ರೀಯ ಅಂತೆ. ಲೋಕ ಮಾನ್ಯತೆಯ ಮಾನಕಗಳ ಮೂಲರೂಪಗಳು ಈ ಸಂಸ್ಥೆಯಲ್ಲಿ ರಕ್ಷಿಸಲ್ಪಟ್ಟಿವೆ.

ಮೂಲಭೂತ ಸಂಶೋಧನೆಯಷ್ಟೇ ಅಲ್ಲದೆ ಅನ್ವಯ ಸಂಶೋಧನೆಯನ್ನೂ ಕೈಗೊಂಡು ಅದಕ್ಕೆ ಸಂಬಂಧಪಟ್ಟ ತಾಂತ್ರಿಕ ವಿವರಗಳನ್ನು ಕೈಗಾರಿಕೆಗಳಿಗೆ ಒದಗಿಸುವುದು ಸಂಸ್ಥೆಯ ಉದ್ದೇಶಗಳಲ್ಲಿ ಒಂದು. ಕೈಗಾರಿಕಾ ಉತ್ಪನ್ನಗಳನ್ನು ಪರೀಕ್ಷಿಸಿ ಉದ್ಯಮಗಳು ತಮ್ಮಲ್ಲೇ ಮಾದರಿ ಪರೀಕ್ಷಣೆ ನಡೆಸುವುದಕ್ಕೆ ನೆರವಾಗಿದೆ.

ಮೈಕ್ರೊಫಿಲ್ಮ್ ವ್ಯವಸ್ಥೆ



ಪುಸ್ತಕ 'ಕೀಟ'ಗಳ ಪತ್ತೆಗೆ ವಿಜ್ಞಾನದ ನೆರವು



ರೇಡಿಯೊ ಹಾಗೂ ಎಲೆಕ್ಟ್ರಾನಿಕ್ ಉಪಕರಣಗಳಲ್ಲಿ ಉಪಯೋಗಿಸಬಹುದಾದ ಹೊಸ ವಸ್ತುಗಳು, ಅಳವಡಿಸಿಕೊಳ್ಳಬಹುದಾದ ಹೊಸ ವಿಧಾನಗಳನ್ನೂ ಸಂಸ್ಥೆ ರೂಪಿಸಿದೆ.

ಘನಪದಾರ್ಥಗಳ ಕಾಂತೀಯ ಗುಣ, ಅತಿಶೈತ್ಯ ರೇಡಿಯೊ ತರಂಗ ಪ್ರಸರಣ, ಉಷ್ಣ ಅಯಾನು ಉತ್ಸರ್ಜನೆ, ಶ್ರವಣಾತೀತ ವಿಜ್ಞಾನ, ಸ್ಫಟಿಕಗಳಲ್ಲಿ ಅಪೂರ್ಣತೆ ಮುಂತಾದ ಕ್ಷೇತ್ರಗಳಲ್ಲಿ ಮೂಲಭೂತ ಸಂಶೋಧನೆಗಳು ನಡೆದಿವೆ.

ರಾಷ್ಟ್ರೀಯ ರಾಸಾಯನಿಕ ಪ್ರಯೋಗಾಲಯ

ರಾಷ್ಟ್ರೀಯ ರಾಸಾಯನಿಕ ಪ್ರಯೋಗ ಮಂದಿರ (ನ್ಯಾಷನಲ್ ಕೆಮಿಕಲ್ ಲ್ಯಾಬೊರೇಟರಿ) 1950ರ ಜನವರಿ ತಿಂಗಳಿನಲ್ಲಿ ಸ್ಥಾಪಿತವಾಯಿತು. ಇದು ಕೇಂದ್ರ ವೈಜ್ಞಾನಿಕ ಹಾಗೂ ಔದ್ಯೋಗಿಕ ಸಂಶೋಧನಾ ಮಂಡಲಿ ಸ್ಥಾಪಿಸಿದ ಮೊತ್ತಮೊದಲ ಸಂಶೋಧನಾಲಯ. ಇದು ಪುಣೆಯಲ್ಲಿದೆ. ಸಂಶೋಧನೆಗಳನ್ನು ನಡೆಸಿ ಭಾರತದ ರಾಸಾಯನಿಕ ಕೈಗಾರಿಕೆಗೆ ಅವಶ್ಯವಾದ ನೆರವು ನೀಡುವುದು ಈ ಸಂಸ್ಥೆಯ ಉದ್ದೇಶ.

ಮೂಲಭೂತ ಸಂಶೋಧನೆಗಳೂ ಇಲ್ಲಿ ನಡೆಯುತ್ತವೆ. ಜೀವ ರಸಾಯನವಿಜ್ಞಾನ, ರಾಸಾಯನಿಕ ಎಂಜಿನಿಯರಿಂಗ್, ನಿರವಯವ ರಸಾಯನವಿಜ್ಞಾನ, ಸಾವಯವ ರಸಾಯನವಿಜ್ಞಾನ, ಭೌತ ರಸಾಯನ ವಿಜ್ಞಾನ ಮೊದಲಾದ ಹಲವು ಮುಖ್ಯ ಕ್ಷೇತ್ರಗಳು ಇದರ ವ್ಯಾಪ್ತಿಯಲ್ಲಿವೆ.

ರಾಷ್ಟ್ರೀಯ ಔದ್ಯೋಗಿಕ ಸೂಕ್ಷ್ಮಜೀವಿ ಸಂಗ್ರಹಣ ಕಾರ್ಯ ಈ ಸಂಸ್ಥೆಯಲ್ಲಿ ನಡೆಯುತ್ತದೆ. ಇಲ್ಲಿಂದ ಕೈಗಾರಿಕೆ ಹಾಗೂ ಸಂಶೋಧನಾ ಮಂದಿರಗಳಿಗೆ ಬೇಕಾದ ಸೂಕ್ಷ್ಮಜೀವಿ ಶುದ್ಧ ತಳಿಗಳು ಸರಬರಾಜಾಗುತ್ತವೆ.

ನೈಸರ್ಗಿಕ ಸಾವಯವ ಪದಾರ್ಥಗಳ ಸೈದ್ಧಾಂತಿಕ ಹಾಗೂ ಪ್ರಾಯೋಗಿಕ ಸಂಶೋಧನೆ ಸಂಸ್ಥೆಯ ಒಂದು ಮುಖ್ಯ ಕಾರ್ಯವಿಭಾಗ. ವಿಕಿರಣ ರಸಾಯನವಿಜ್ಞಾನ, ಪಾಲಿಮರ್ (ಬೃಹತ್ ಅಣು) ರಸಾಯನವಿಜ್ಞಾನಗಳ ಬಗೆಗೂ ಪರಿಶೀಲನೆಗಳು ನಡೆಯುತ್ತವೆ.

ರಾಷ್ಟ್ರೀಯ ವಸ್ತುಸಂಗ್ರಹಾಲಯ

ದೆಹಲಿಯಲ್ಲಿ ಇರುವ ರಾಷ್ಟ್ರೀಯ ವಸ್ತುಸಂಗ್ರಹಾಲಯದಲ್ಲಿ ಭಾರತ ಕಲಾವಸ್ತುಗಳನ್ನೂ ಪುರಾತನ ಅವಶೇಷಗಳನ್ನೂ ಪ್ರದರ್ಶನಕ್ಕೆ ಇಡಲಾಗಿದೆ.

1949ರಲ್ಲಿ ಇದು ಆರಂಭವಾದಾಗ ರಾಷ್ಟ್ರಪತಿ ಭವನದ ಕೆಲವು ಕೋಣೆಗಳಲ್ಲಿ ವಸ್ತುಗಳನ್ನು ಇಡಲಾಗಿತ್ತು. ಅನಂತರ ರಾಜಧಾನಿಯ ರಾಜಪಥ, ಜನಪಥಗಳು ಕೂಡುವೆಡೆಯಲ್ಲಿ ಇದರ ಕಟ್ಟಡದ ನಿರ್ಮಾಣವಾಯಿತು.

ದೆಹಲಿಯ ಶಾಲೆಗಳಿಗೆ ತೋರಿಸುವುದಕ್ಕಾಗಿ ಇದು ಚಿತ್ರಪ್ರದರ್ಶನವನ್ನು ಏರ್ಪಡಿಸುತ್ತದೆ. ಭಾರತೀಯ ಕಲೆ, ಪುರಾತತ್ತ್ವ, ಮಾನವವಿಜ್ಞಾನಗಳ ಬಗೆಗೆ ಉದಾಹರಣೆಗಳ ಸಹಿತ ಭಾಷಣಗಳ ವ್ಯವಸ್ಥೆ ಮಾಡುತ್ತದೆ. ಸಂಬಂಧಪಟ್ಟ ಪುಸ್ತಕ ಭಂಡಾರ, ಸಂಶೋಧನೆ ಹಾಗೂ ಆಕರಗ್ರಂಥ ಸೇವಾ ಕಾರ್ಯಗಳನ್ನೂ ಸಂಗ್ರಹಾಲಯ ನಿರ್ವಹಿಸುತ್ತದೆ.

ಹರಪ್ಪಾ, ಮೊಹೆಂಜೊದಾರೊ ಹಾಗೂ ಅವುಗಳ ನಿಕಟವರ್ತಿ ಸಂಸ್ಕೃತಿಗಳ ನಿವೇಶನದಲ್ಲಿ ಅಗೆದು ತೆಗೆದ ಪುರಾತನ ವಸ್ತುಗಳ ಸೊಗಸಾದ ಸಂಗ್ರಹ ಇಲ್ಲಿದೆ. ಮೌರ್ಯ, ವೈದಿಕ, ಬೌದ್ಧ ಹಾಗೂ ಜೈನಧರ್ಮಗಳ ಅವಧಿಗೆ ಸೇರಿದ ಶಿಲ್ಪಗಳಿವೆ. ಭಾರತದ ಎಲ್ಲ ಶೈಲಿಗಳ ಕಿರುವರ್ಣಚಿತ್ರಗಳ ಒಳ್ಳೆಯ ಸಂಗ್ರಹವಿದೆ. ಕಲಾ ಸಾಮಾನುಗಳು, ಅಲಂಕಾರದ ವಸ್ತ್ರಗಳು, ಇತರ ಪುರಾತನ ಅವಶೇಷಗಳು, ಚಿತ್ರಗಳು, ಅಲಂಕೃತ ಹಸ್ತಪ್ರತಿಗಳು ಇಲ್ಲಿವೆ. 211ರಿಂದ 651 ತನಕ ಪಾರಸೀ ಸಾಮ್ರಾಜ್ಯವನ್ನಾಳಿದ ಸಸೇನಿಯನರ ನಾಣ್ಯಗಳೂ ತಕ್ಷಶಿಲೆಯಲ್ಲಿ ದೊರೆತ ಆಭರಣಗಳೂ ಇಲ್ಲಿವೆ.

ರಾಷ್ಟ್ರೀಯ ವಾಯುಯಾನ ವಿಜ್ಞಾನ ಪ್ರಯೋಗಾಲಯ

ವಿಮಾನಗಳ ಸುಧಾರಿತ ರಚನೆ, ನಿರ್ಮಾಣ ಹಾಗೂ ಸುರಕ್ಷಿತ ಚಾಲನೆಗೋಸ್ಕರ ಅದಕ್ಕೆ ಸಂಬಂಧಪಟ್ಟ ಸಮಸ್ಯೆಗಳನ್ನು ಪರಿಶೀಲಿಸುವುದು ಬೆಂಗಳೂರಿನಲ್ಲಿರುವ ನ್ಯಾಷನಲ್ ಏರೊನಾಟಿಕಲ್ ಲ್ಯಾಬೊರೇಟರಿ (ರಾಷ್ಟ್ರೀಯ ವಾಯುಯಾನ ವಿಜ್ಞಾನ—ಎನ್.ಎ.ಎಲ್.) ಸಂಸ್ಥೆಯ ಮುಖ್ಯ ಕಾರ್ಯಕ್ರಮ.

ವಾಯುಬಲವಿಜ್ಞಾನ, ವಿವಿಧ ವಿಮಾನಗಳ ರಚನೆ, ಅವುಗಳಿಗೆ ಬಳಸುವ ಸಾಮಗ್ರಿ, ಅವು ಚಲಿಸಲು ಬೇಕಾದ ನೂಕುಬಲ ಈ ಎಲ್ಲ ಕ್ಷೇತ್ರಗಳಲ್ಲಿ ಸಂಸ್ಥೆಯು ಸಂಶೋಧನಾ ಕಾರ್ಯಗಳನ್ನು ಕೈಗೊಳ್ಳುತ್ತಿದೆ. ಗಣಿತ ಸಂಬಂಧ ವಿಜ್ಞಾನ ಸಂಶೋಧನೆಗಳೂ ಇಲ್ಲಿ ನಡೆಯುತ್ತವೆ. ವೈಜ್ಞಾನಿಕ ಮತ್ತು ಔದ್ಯೋಗಿಕ ಸಂಶೋಧನಾ ಮಂಡಲಿಯ ರಾಷ್ಟ್ರೀಯ ಪ್ರಯೋಗಾಲಯಗಳಲ್ಲಿ ಇದೂ ಒಂದು. ಇದು 1959ರಲ್ಲಿ ಸ್ಥಾಪಿತವಾಯಿತು.

ವೇಗವಾಗಿ ಚಲಿಸುವ ವಿಮಾನಗಳು ಹೇಗಿರಬೇಕು ಎಂಬುದನ್ನು ಪ್ರಯೋಗಗಳಿಂದ ನಿರ್ಧರಿಸುವುದು ಈ ಸಂಸ್ಥೆಯ ಒಂದು ಪ್ರಧಾನ ಸಂಶೋಧನಾಕಾರ್ಯ. ಇಂಥ ವೇಗದಲ್ಲಿ ವಿಮಾನಕ್ಕೆ ಬಳಸಿದ ಸಾಮಗ್ರಿ ಯಾವ ರೀತಿ ತನ್ನ ಮೇಲಿನ ಒತ್ತಡ, ಪೀಡನೆಗಳನ್ನು ತಡೆದುಕೊಳ್ಳುತ್ತದೆ ಎಂಬುದು ಇನ್ನೊಂದು ಗಮನಾರ್ಹ ಕ್ಷೇತ್ರ. ವಾಯುನೌಕೆಗಳ ವಿವಿಧ ನಿಯಂತ್ರಣ ವ್ಯವಸ್ಥೆಗಳನ್ನು ಅಭಿವೃದ್ಧಿಗೊಳಿಸುವುದು ಮತ್ತೊಂದು ಮುಖ್ಯ ವಿಷಯ.

ಧ್ವನ್ಯತೀತ ತರಲಬಲವಿಜ್ಞಾನ, ಆಘಾತ ರಚನೆಗಳು, ಕಕ್ಷಾಬಲ ವಿಜ್ಞಾನಗಳಲ್ಲಿ ಸಂಶೋಧನಾ ಕಾರ್ಯಗಳು ಜರಗುತ್ತಿವೆ.

ವಿಮಾನ ಕೈಗಾರಿಕೆ, ವಾಯುಯಾನ ಅಭಿವೃದ್ಧಿಯಲ್ಲಿ ನಿರತವಾಗಿರುವ ಸಾರ್ವಜನಿಕ ಹಾಗೂ ರಕ್ಷಣಾಪಡೆಯ ಸಂಸ್ಥೆಗಳೊಡನೆ ನ್ಯಾಷನಲ್ ಏರೊನಾಟಿಕಲ್ ಲ್ಯಾಬೊರೇಟರಿ ನಿಕಟ ಸಂಪರ್ಕಹೊಂದಿದೆ.

ರಾಷ್ಟ್ರೀಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಮಂಡಲಿ

ಶಿಕ್ಷಣ ಸಂಶೋಧನಾ ಕಾರ್ಯಕ್ರಮ ಕೈಗೊಳ್ಳುವುದು, ಅದರ ಅಭಿವೃದ್ಧಿ, ಸಮನ್ವಯ ಕೆಲಸಗಳನ್ನು ಕಾರ್ಯರೂಪಕ್ಕೆ ತರುವುದು: ಶಿಕ್ಷಣ ಸಾಮಗ್ರಿಗಳ ಅಭಿವೃದ್ಧಿ: ಅಧ್ಯಾಪಕವೃತ್ತಿ ಸೇರುವ ಮೊದಲು ಮತ್ತು ವೃತ್ತಿ ನಡೆಸುವ ಕಾಲದ ತರಬೇತಿ ಕಾರ್ಯಕ್ರಮ: ಅತಿ ನೂತನ ಶಿಕ್ಷಣ ವಿಧಾನ ಮಾಹಿತಿಯ ಪ್ರಚಾರ: ಮಾದರಿ ಶಿಕ್ಷಣ ಸಾಹಿತ್ಯದ ಪ್ರಕಟಣೆ —ಈ ಎಲ್ಲ ಧ್ಯೇಯಗಳ ಹೊಣೆ ಹೊತ್ತಿರುವ ಅಖಿಲ ಭಾರತ ಮಟ್ಟದ ಸಂಸ್ಥೆ ರಾಷ್ಟ್ರೀಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಮಂಡಲಿ. ಇದೇ ಎನ್.ಸಿ.ಇ.ಆರ್.ಟಿ. ಅಥವಾ ನ್ಯಾಷನಲ್ ಕೌನ್ಸಿಲ್ ಆಫ್ ಎಜುಕೇಷನಲ್ ರಿಸರ್ಚ್ ಅಂಡ್ ಟ್ರೈನಿಂಗ್. ಸ್ಥಾಪನೆ 1961ರಲ್ಲಿ.

ಶಿಕ್ಷಣ ವಿಷಯ ಸರ್ವೆ ಏರ್ಪಡಿಸುವುದೂ ಈ ಸಂಸ್ಥೆಯ ಒಂದು ಕಾರ್ಯಕ್ರಮ. ಶೈಕ್ಷಣಿಕ ಕ್ಷೇತ್ರದಲ್ಲಿ ಹೊಸ ಬೆಳವಣಿಗೆಗಳ ಮಾಹಿತಿ ಸಂಗ್ರಹಣೆಗಾಗಿ ಇದು ಅಂತರರಾಷ್ಟ್ರೀಯ ಸಂಪರ್ಕ ಹೊಂದಿದೆ.

ರಾಷ್ಟ್ರೀಯ ಶಿಕ್ಷಣ ಸಂಸ್ಥೆ (ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಎಜುಕೇಷನ್). ಕೇಂದ್ರ ಶಿಕ್ಷಣ ಸಂಸ್ಥೆ (ಸೆಂಟ್ರಲ್ ಇನ್‌ಸ್ಟಿಟ್ಯೂಟ್ ಆಫ್ ಎಜುಕೇಷನ್) ಮತ್ತು ನಾಲ್ಕು ಪ್ರಾದೇಶಿಕ ಕಾಲೇಜುಗಳು ಎನ್.ಸಿ.ಇ. ಆರ್.ಟಿ. ಆಶ್ರಯದಲ್ಲಿ ನಡೆಯುತ್ತಿವೆ. ಕರ್ನಾಟಕದ ಮೈಸೂರಿನಲ್ಲಿ ಇಂಥ ಒಂದು ಪ್ರಾದೇಶಿಕ ಕಾಲೇಜು ಇದೆ.

ಬೇಸಿಗೆ ಶಿಕ್ಷಣ ಕ್ರಮಗಳನ್ನು ನಡೆಸುವುದು, ಎಳೆಯರಲ್ಲಿ ವಿಜ್ಞಾನ ಪ್ರತಿಭೆಯನ್ನು ಪತ್ತೆಹಚ್ಚಿ ಅವರಿಗೆ ಸೂಕ್ತ ಉತ್ತೇಜನ ನೀಡುವುದು. ಈಗಿನ ವಿದ್ಯಾಭ್ಯಾಸ ಕ್ರಮದ ಸುಧಾರಣೆಗಾಗಿ ಸೂಕ್ತ ಕೆಲಸ ಕೈಗೊಳ್ಳುವುದು —ಎನ್.ಸಿ.ಇ.ಆರ್.ಟಿ.ಯ ವಿಶೇಷ ಕಾರ್ಯಕ್ರಮಗಳು.

ರಾಷ್ಟ್ರೀಯ ಸಸ್ಯೋದ್ಯಾನ

ಲಖನೌದಲ್ಲಿ ಸಿಕಂದರ್‌ಬಾಗ್ ಎಂಬ ಉದ್ಯಾನವನ್ನು ಭಾರತದ ವೈಜ್ಞಾನಿಕ ಮತ್ತು ಔದ್ಯೋಗಿಕ ಸಂಶೋಧನಾ ಮಂಡಲಿ 1953ರಲ್ಲಿ ಪಡೆಯಿತು. ಬಳಿಕ ಇದನ್ನು ರಾಷ್ಟ್ರೀಯ ಸಸ್ಯೋದ್ಯಾನವಾಗಿ ವಿಕಾಸಗೊಳಿಸಿದರು. ಅಲಂಕಾರಿಕ ಸಸ್ಯಗಳನ್ನು ಸಂಗ್ರಹಿಸಿ, ಹೊಸದಾಗಿ ಬೆಳೆಸಿ ಪ್ರಚಾರಗೊಳಿಸುವುದು ; ಆರ್ಥಿಕ ರೀತ್ಯಾ ಉಪಯುಕ್ತ ಸಸ್ಯಗಳ ಬಗೆಗೆ ಸಂಶೋಧನೆ : ದೇಶದಲ್ಲಿ ಸಸ್ಯೋದ್ಯಾನಗಳ ನಿರ್ಮಾಣ : ಸಸ್ಯಾಗಾರ ಹಾಗೂ ಸಸ್ಯ ಸಂಗ್ರಹಾಲಯಗಳ ಸ್ಥಾಪನೆ : ಸಸ್ಯಗಳ ವಿನಿಮಯ ಒದಗಣೆ —ಇವೆಲ್ಲ, ಈ ಸಂಸ್ಥೆಯ ಮುಖ್ಯ ಉದ್ದೇಶಗಳು.

ಗೋಂದು, ಎಣ್ಣೆ ಮತ್ತು ನಾರು ಉದ್ಯಮಗಳಿಗೆ ಬೇಕಾದ ಮತ್ತು ದೇಶೀಯ ವೈದ್ಯದಲ್ಲಿ ಉಪಯುಕ್ತವಾದ ಸಸ್ಯಗಳ ಬಗೆಗೆ ವೈಜ್ಞಾನಿಕ ಅಧ್ಯಯನ ಇಲ್ಲಿ ನಡೆದಿದೆ.

60 ಎಕರೆಗಳ ಈ ರಾಷ್ಟ್ರೀಯ ಸಸ್ಯೋದ್ಯಾನದಲ್ಲಿ ದೇಶೀಯ ಹಾಗೂ ವಿದೇಶೀಯ ಸಸ್ಯಗಳಿವೆ. ಕೆಲವು ಅತಿ ಅಪರೂಪದ ಸಸ್ಯಗಳಿವೆ. ರೋಜಾ, ತಾಳೆ, ಕಳ್ಳಿ, ಕ್ಯಾನಾ, ಫರ್ನ್ ಮೊದಲಾದ ಸಸ್ಯಗಳಿಗಾಗಿ ಪ್ರತ್ಯೇಕ ಸಸ್ಯಾಗಾರಗಳಿವೆ. ಸಾವಿರಾರು ನಿರ್ಜೀವ ಸಸ್ಯ ಜಾತಿಗಳ ಸಂಗ್ರಹವಿರುವ ಸಸ್ಯಾಗಾರವಿದೆ.

ರಾಷ್ಟ್ರೀಯ ಸಾಗರಾಧ್ಯಯನ ಸಂಸ್ಥೆ

ರಾಷ್ಟ್ರೀಯ ಸಾಗರಾಧ್ಯಯನ ಸಂಸ್ಥೆ 1966ರಲ್ಲಿ ನವದೆಹಲಿಯಲ್ಲಿ ಆರಂಭವಾಯಿತು. ಮುಂದೆ ಇದು ಗೋವೆಯ ಪಣಜಿಗೆ ಸ್ಥಳಾಂತರಿಸಲ್ಪಟ್ಟಿತು.

ಹಿಂದೂ ಮಹಾಸಾಗರದ ಸಂಪನ್ಮೂಲ ಹಾಗೂ ಇತರ ವಿವರಗಳ ಬಗೆಗೆ ಮಾಹಿತಿ ಒದಗಿಸುವ ಕೇಂದ್ರ ಸಂಸ್ಥೆಯಾಗಿ ಕೆಲಸ ಮಾಡುವುದು ಇದರ ಪ್ರಮುಖ ಧ್ಯೇಯಗಳಲ್ಲಿ ಒಂದು. ಸಾಗರದ ಭೌತವೈಜ್ಞಾನಿಕ, ಜೀವವೈಜ್ಞಾನಿಕ, ಭೂ ವೈಜ್ಞಾನಿಕ ಹಾಗೂ ರಸಾಯನ ವೈಜ್ಞಾನಿಕ ಸಂಶೋಧನೆಗಳನ್ನು ಇದು ನಡೆಸುತ್ತದೆ. ಮೀನುಗಾರಿಕೆ, ಸಾಗರ ಮೂಲದ ಕಚ್ಚಾ ಸಾಮಗ್ರಿ, ಸಾಗರ ಸಾರಿಗೆ ವ್ಯವಸ್ಥೆ, ಭಾರತೀಯ ಕರಾವಳಿ ಪ್ರದೇಶಗಳಲ್ಲಿ ಹೂಳು ಸಂಗ್ರಹಣೆ ಹಾಗೂ ಭೂಸವೆತ, ಸಾಗರಕ್ಕೆ ಕಲ್ಮಶ ಹಾಗೂ ವಿಕಿರಣಶೀಲ ವ್ಯರ್ಥಪದಾರ್ಥಗಳ ಸಾಗಾಣಿಕೆ ಮುಂತಾದ ರಂಗಗಳಲ್ಲಿ ಸಂಸ್ಥೆಯ ಕೆಲಸ ನಡೆಯುತ್ತಿದೆ. ಸಾಗರ ವಿವರಗಳನ್ನು ಸಂಗ್ರಹಿಸಿ ಇತರ ಅಂತರರಾಷ್ಟ್ರೀಯ ಕೇಂದ್ರಗಳಿಗೆ ಈ ಸಂಸ್ಥೆ ಕಳುಹಿಸಿಕೊಡುತ್ತದೆ.

ಅಂಟಾರ್ಕ್ಟಿಕ ಹಾಗೂ ಭಾರತದ ಸುತ್ತಲಿನ ಸಮುದ್ರ ಪ್ರದೇಶಗಳ ಸಂಶೋಧನಾ ಯಾತ್ರೆಗಳು (ಎಕ್ಸ್‌ಪೆಡಿಷನ್) ಇಲ್ಲಿಂದಲೇ ವ್ಯವಸ್ಥೆಯಾಗಿವೆ. ಸಂಶೋಧನೆಗಾಗಿ ಎರಡು ಹಡಗುಗಳು ಈ ಸಂಸ್ಥೆಯ ಉಪಯೋಗಕ್ಕಿವೆ. ಸಾಗರ ಜೀವ ಹಾಗೂ ಪ್ರಾಣಿ ಸಂಪತ್ತಿನ ಸರ್ವೆ ನಡೆಸಿ ಸೂಕ್ತ ನಕ್ಷೆಗಳನ್ನು ತಯಾರಿಸುವುದು ಈ ಕೇಂದ್ರದ ಪ್ರಮುಖ ಕರ್ತವ್ಯ.

ರಾಷ್ಟ್ರೀಯ ಸಾಗರಾಧ್ಯಯನ ಸಂಸ್ಥೆ ಸಿ.ಎಸ್.ಐ.ಆರ್.ನ ಅಧೀನ ಸಂಸ್ಥೆ.

ರಾಸ್ ಬಿಹಾರಿ ಬೋಸ್

1912ರ ಡಿಸೆಂಬರ್ 23ರಂದು ದೆಹಲಿಯ ಚಾಂದನಿ ಚೌಕದಲ್ಲಿ ಮೆರವಣಿಗೆಯಲ್ಲಿ ಸಾಗುತ್ತಿದ್ದ ವೈಸ್‌ರಾಯ್ ಲಾರ್ಡ್ ಹಾರ್ಡಿಂಜ್, ಒಂದು ಬಾಂಬಿನ ಸ್ಫೋಟದಿಂದ ಸ್ವಲ್ಪದರಲ್ಲಿ ತಪ್ಪಿಸಿಕೊಂಡ. ವೈಸ್‌ರಾಯ್‌ರ ಆನೆಯ ಮಾವುತ ಸತ್ತ. ಪೊಲೀಸರು ಸಂಶಯದ ಮೇಲೆ ಹಲವರನ್ನು ಬಂಧಿಸಿದರು. ಬಾಂಬ್ ಎಸೆದವನು ಮಾತ್ರ ಮಾಯವಾಗಿದ್ದ.


ಕ್ರಾಂತಿಕಾರಿ, ಸ್ವಾತಂತ್ರ್ಯ ಹೋರಾಟಗಾರ ರಾಸ್‌ಬಿಹಾರಿ ಬೋಸ್ ಈ ರೀತಿ ಬ್ರಿಟಿಷ್ ಅಧಿಕಾರಿಗಳ ಕಣ್ಣಿನಿಂದ ಪಾರಾದದ್ದು ಜೀವನದಲ್ಲಿ ಹಲವಾರು ಸಲ.

1915 ಫೆಬ್ರವರಿಯಲ್ಲಿ ಸಶಸ್ತ್ರ ಬಂಡಾಯ ನಡೆಸಲು ರಾಸ್ ಬಿಹಾರಿಯವರು ಯೋಜಿಸಿದ್ದನ್ನು ಹೇಗೋ ತಿಳಿದು, ಅವರನ್ನು ಬಂಧಿಸಲು ಲಾಹೋರಿನಲ್ಲಿ ದೊಡ್ಡ ಪೋಲೀಸ್ ಪಡೆ ಅಣಿಯಾಯಿತು. ಆಗ ಅವರು ವೇಷ ಮರೆಸಿಕೊಂಡು, ರೈಲ್ವೆ ಡಬ್ಬಿಯಲ್ಲಿ ಹಿರಿಯ ಪೋಲೀಸ್ ಅಧಿಕಾರಿಗಳ ಜೊತೆಯಲ್ಲೇ ಪ್ರಯಾಣಮಾಡಿ ತಪ್ಪಿಸಿಕೊಂಡರು.

1886 ಮೇ 25ರಂದು ಬಂಗಾಳದ ಹೂಗ್ಲಿ ಜಿಲ್ಲೆಯ ಒಂದು ಹಳ್ಳಿಯಲ್ಲಿ ರಾಸ್ ಬಿಹಾರಿಯವರ ಜನನ. ತಂದೆ ವಿನೋದ್ ಬಿಹಾರಿ ಬೋಸ್, ಸರಕಾರೀ ಅಧಿಕಾರಿ. ರಾಸ್ ಬಿಹಾರಿಗೆ ಬಾಲ್ಯದಿಂದಲೇ ಹೋರಾಟದತ್ತ ಒಲವು. ಸೈನ್ಯಕ್ಕೆ ಸೇರಲು ಯತ್ನಿಸಿದ್ದೂ ಉಂಟು. ಉದ್ಯೋಗ ಪ್ರಾರಂಭಿಸಿದ್ದು ಡೆಹ್ರಡೂನ್‌ನ ಅರಣ್ಯ ಸಂಶೋಧನಾ ಸಂಸ್ಥೆಯಲ್ಲಿ. ಗುಪ್ತವಾಗಿ ಕ್ರಾಂತಿಕಾರಿಗಳನ್ನು ಸಂಘಟಿಸಿ ಬ್ರಿಟಿಷರ ವಿರುದ್ಧ ಅನೇಕ ಸಾಹಸ ಕೃತ್ಯ ನಡೆಸಿದರು.

ಭಾರತಕ್ಕೆ ಸ್ವಾತಂತ್ರ್ಯ ದೊರಕಿಸಲು ಪ್ರಬಲ ವಿದೇಶೀ ನೆರವು ಅಗತ್ಯ ಎಂದು ಅವರು ಭಾವಿಸಿದರು. ಜಪಾನು ಅದಕ್ಕೆ ಅನುಕೂಲವೆನಿಸಿತು. ಆ ಸಮಯದಲ್ಲಿ ನೊಬೆಲ್ ಪ್ರಶಸ್ತಿ ವಿಜೇತ ಕವಿ ರವೀಂದ್ರನಾಥ ಠಾಕೂರರ ಜಪಾನ್ ಪ್ರವಾಸ ನಿಶ್ಚಿತವಾಗಿತ್ತು. 'ರಾಜಾ ಪಿ.ಎನ್. ಠಾಕೂರ್' ಎಂಬ ಹೆಸರಿನಲ್ಲಿ ರವೀಂದ್ರರ ಜೊತೆ ಜಪಾನಿಗೆ ಹೋಗಲು ಅನುಮತಿ ಸಿಕ್ಕಿತು. ಹಾಗೆ ಹೆಸರು ಬದಲಾಯಿಸಿಕೊಂಡು 1915 ಮೇ 12ರಂದು ಜಪಾನಿಗೆ ಹಡಗು ಹತ್ತಿ ಹೋದವರು, ರಾಸ್ ಬಿಹಾರಿ ಬೋಸ್.

ಆ ಮೊದಲೇ ಅಲ್ಲಿಗೆ ಹೋಗಿದ್ದ ಲಾಲಾ ಲಜಪತರಾಯರ ಸಹಕಾರದಿಂದ



ಚಿತ್ರ ಸಮರ :
ರಾಸ್ ಬಿಹಾರಿ

ರಾಸ್ ಬಿಹಾರಿ ಬೋಸ್ 1915 ನವೆಂಬರ್ 27ರಂದು ಟೋಕಿಯೋ ನಗರದಲ್ಲಿ ಒಂದು ಸಾರ್ವಜನಿಕ ಸಭೆ ಜರುಗಿತು. ಬ್ರಿಟಿಷ್ ಸಾಮ್ರಾಜ್ಯವಾದವನ್ನು ಖಂಡಿಸಿದರು. ಆಗ ಟೋಕಿಯೋದಲ್ಲಿದ್ದ ಬ್ರಿಟಿಷ್ ರಾಯಭಾರ ಕಚೇರಿ ಈ 'ರಾಜಾ ಪಿ. ಎನ್. ಠಾಕೂರ್'ರ ಮೂಲವನ್ನು ಪತ್ತೆಹಚ್ಚಿತು. ಅವರನ್ನು ದೇಶದಿಂದ ಹೊರಹಾಕುವಂತೆ ಜಪಾನ್ ಸರಕಾರವನ್ನು ಒತ್ತಾಯಿಸಿತು. ಭಾರತದ ಕ್ರಾಂತಿಗೆಂದು ರಾಸ್ ಬಿಹಾರಿಯವರು ಜಪಾನಿನಿಂದ ಕಳುಹಿಸಲು ವ್ಯವಸ್ಥೆ ಮಾಡಿದ್ದ ಶಸ್ತ್ರಾಸ್ತ್ರಗಳನ್ನು ಮುಟ್ಟುಗೋಲು ಹಾಕಿತು. ಅವರನ್ನು ಜೀವಂತವಾಗಿಯಾಗಲೀ ಮೃತಾವಸ್ಥೆಯಲ್ಲಾಗಲೀ ಒಪ್ಪಿಸಬೇಕೆಂದು ಬ್ರಿಟಿಷ್ ಸರಕಾರ ಆಜ್ಞೆ ಹೊರಡಿಸಿತು.

ಜಪಾನಿನ ಪ್ರಭಾವೀ ಧುರೀಣ ಮಿತ್ಸುರೋ ಟೋಯಾಮರ ಸ್ನೇಹದಿಂದಾಗಿ ರಾಸ್ ಬಿಹಾರಿ ಬೋಸ್ ಅಡಗಿಕೊಂಡಿರಲು ಸಾಧ್ಯವಾಯಿತು. ಮಿತ್ಸುರೋ ಟೋಯಾಮರ ಸಲಹೆಯಂತೆ ತಮ್ಮ ಆಶ್ರಯದಾತನ ಮಗಳು ತೋಶಿಕೋರನ್ನು 1917ರಲ್ಲಿ ವಿವಾಹವಾದರು. ಟೋಯಾಮರ ಪ್ರಭಾವದಿಂದ 1916ರ ಏಪ್ರಿಲ್‌ನಲ್ಲಿ ಜಪಾನೀ ಸರಕಾರದ ಆಜ್ಞೆ ರದ್ದಾಯಿತಾದರೂ ಮುಂದೆ 1923ರಲ್ಲಿ ಜಪಾನೀ ಪೌರತ್ವ ಪಡೆಯುವ ತನಕ, ಬ್ರಿಟಿಷರಿಂದ ತಪ್ಪಿಸಿಕೊಳ್ಳಲು ಅವರು ಗುಪ್ತವಾಗಿಯೇ ಇದ್ದರು.

1924ರಲ್ಲಿ 'ಇಂಡಿಯನ್ ಇಂಡಿಪೆಂಡೆನ್ಸ್ ಲೀಗ್', 1926ರಲ್ಲಿ 'ಪಾನ್ ಏಷ್ಯನ್ ಅಸೋಸಿಯೇಷನ್' ಸಂಸ್ಥೆಗಳನ್ನೂ ಸ್ಥಾಪಿಸಿದರು. 'ನ್ಯೂ ಏಷ್ಯ' ಮತ್ತು 'ಏಷ್ಯನ್ ರೆವ್ಯೂ' ಅವರು ನಡೆಸುತ್ತಿದ್ದ ಪತ್ರಿಕೆಗಳು. ಪ್ರಮುಖ ಜಪಾನೀ ದೈನಿಕಗಳಲ್ಲಿ ಲೇಖನಗಳನ್ನು ಬರೆದರು. 1929ರಿಂದ 1944ರ ಅವಧಿಯಲ್ಲಿ 'ಏಷ್ಯಕ್ರಾಂತಿಯ ಸ್ಥೂಲ ನೋಟ' ಮುಂತಾದ ವಿಶೇಷವಾಗಿ ಭಾರತಕ್ಕೆ ಸಂಬಂಧಪಟ್ಟ ಅನೇಕ ಕೃತಿಗಳನ್ನು ಬರೆದರು. ಜಪಾನಿನಲ್ಲಿ ತಾವು ಗಳಿಸಿದ ಜನಪ್ರಿಯತೆಯನ್ನು ಭಾರತದ ಪರವಾದ ಪ್ರಚಾರಕ್ಕಾಗಿ ಪೂರ್ಣವಾಗಿ ಉಪಯೋಗಿಸಿದರು. ಇಡೀ ಆಗ್ನೇಯ ಏಷ್ಯದಲ್ಲಿ ಸಂಚರಿಸಿ, 'ಇಂಡಿಯನ್ ಇಂಡಿಪೆಂಡೆನ್ಸ್ ಲೀಗ್'ನ ಶಾಖೆಗಳನ್ನು ತೆರೆದರು.

1941ರಲ್ಲಿ ಭಾರತದಿಂದ ಕಣ್ಮರೆಯಾಗಿ ಜರ್ಮನಿಗೆ ತೆರಳಿದ್ದ ನೇತಾಜಿ ಸುಭಾಷಚಂದ್ರ ಬೋಸರು ಜಪಾನಿಗೆ ಆಗಮಿಸಿ ಭಾರತ ಸ್ವಾತಂತ್ರ್ಯಕ್ಕಾಗಿ ರಾಸ್ ಬಿಹಾರಿಯವರ ಆದೇಶದಂತೆ ಕೆಲಸ ಮಾಡಲು ಇಚ್ಛಿಸಿದ್ದರು. 1943ರ ಜುಲೈ 4ರಂದು ಸಿಂಗಪುರದಲ್ಲಿ ಈ ಇಬ್ಬರು ನಾಯಕರ ಭೇಟಿ ನಡೆಯಿತು. ಅಲ್ಲಿನ ಭಾರತೀಯರ ಸಭೆಯಲ್ಲಿ ರಾಸ್ ಬಿಹಾರಿಯವರು ತಮ್ಮ ಲೀಗಿನ ನಾಯಕತ್ವವನ್ನು 'ತರುಣ ದೇಶ ಸೇವಕ ಸುಭಾಷ ಚಂದ್ರರಿಗೆ' ವಹಿಸಿಕೊಡುವುದಾಗಿ ಸಾರಿ, ತಾವು ನಿವೃತ್ತರಾದರು.

ರಾಸ್‌ಬಿಹಾರಿ ಬೋಸ್ ಅನಾರೋಗ್ಯ ಪೀಡಿತರಾಗಿ, 1945 ಜನವರಿ 21ರಂದು, ತಮ್ಮ 60ನೆಯ ವಯಸ್ಸಿನಲ್ಲಿ ನಿಧನರಾದರು.

ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ

'ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ' 1935ರಲ್ಲಿ ಸ್ಥಾಪಿತವಾಯಿತು. 1949ರಲ್ಲಿ, ಭಾರತ ಸ್ವಾತಂತ್ರ್ಯದ ನಂತರ ಇದರ ರಾಷ್ಟ್ರೀಕರಣವಾಯಿತು. ಷೇರುಗಳಿದ್ದ ಸದಸ್ಯರಿಗೆ ಮುಖಬೆಲೆ ಕೊಟ್ಟು ಅವುಗಳನ್ನು ಸರಕಾರ ತೆಗೆದುಕೊಂಡಿತು; ಐದು ಕೋಟಿ ರೂಪಾಯಿ ಬಂಡವಾಳವನ್ನು ಒದಗಿಸಿತು.

ದೇಶದಲ್ಲಿ ನೋಟುಗಳನ್ನು ಚಲಾವಣೆಗೆ ಬಿಡುಗಡೆ ಮಾಡುವ ಏಕೈಕ ಸಂಸ್ಥೆ ಇದು. ಒಂದು ರೂಪಾಯಿ ನೋಟುಗಳನ್ನು ಮಾತ್ರ ಅರ್ಥಸಚಿವಾಲಯ ಹೊರ ತರುತ್ತದೆ. ದೇಶದ ಹಣಕಾಸು ವ್ಯವಸ್ಥೆಯ ನಿಯಂತ್ರಣ ರಿಸರ್ವ್ ಬ್ಯಾಂಕಿನ ಮುಖ್ಯ ಹೊಣೆ. ಸಾಲ ನಿಯಂತ್ರಣ, ಉದ್ಯೋಗಿ ಮತ್ತು ಗ್ರಾಮೀಣ ಆರ್ಥಿಕ ವ್ಯವಸ್ಥೆಯ ವಿಸ್ತರಣೆ ಇವಕ್ಕೆ ಸೇರಿವೆ.

ರಿಸರ್ವ್ ಬ್ಯಾಂಕ್ ಸರಕಾರಕ್ಕೂ ಉಳಿದ ಬ್ಯಾಂಕುಗಳಿಗೂ ಬ್ಯಾಂಕರ್ ಎಂದರೆ, ಅವುಗಳೆಲ್ಲದರ ಬ್ಯಾಂಕಿನಂತೆ ಇದು ವರ್ತಿಸುತ್ತದೆ. ರೂಪಾಯಿಯ ವಿದೇಶೀ ಮೌಲ್ಯವನ್ನು ಉಳಿಸಿಕೊಂಡು ಆರ್ಥಿಕ ಏರುಪೇರುಗಳಿಲ್ಲದಂತೆ ನೋಡಿಕೊಳ್ಳುವುದು ಇದರ ಜವಾಬ್ದಾರಿ.

ಸರಕಾರದಿಂದ ನಾಮಕರಣಗೊಂಡ ಸದಸ್ಯರಿರುವ ನಿರ್ದೇಶಕರ ಮಂಡಳಿ ಬ್ಯಾಂಕಿನ ಆಡಳಿತ ನೋಡಿಕೊಳ್ಳುತ್ತದೆ. ಇದರಲ್ಲಿ ಅರ್ಥ ಖಾತೆಯ ಅಧಿಕಾರಿಯೊಬ್ಬರು ಇರುತ್ತಾರೆ. ಬ್ಯಾಂಕಿನ ಗವರ್ನರ್ ಮುಖ್ಯಾಧಿಕಾರಿ. ಒಬ್ಬ ಡೆಪ್ಯುಟಿ ಗವರ್ನರ್ ಇರುತ್ತಾರೆ. ಬ್ಯಾಂಕಿನ ಕಾರ್ಯನೀತಿ, ಅದರ ಕಾರ್ಯ ನಿಯಮಗಳನ್ನು ರೂಪಿಸುವುದರ ಅಧಿಕಾರ ಸರಕಾರಕ್ಕೆ ಸೇರಿದ್ದು.

ಕೇಂದ್ರ, ರಾಜ್ಯ ಸರಕಾರಗಳ ಬ್ಯಾಂಕ್ ವ್ಯವಹಾರ ಮತ್ತು ಆರ್ಥಿಕ ನಿರ್ವಹಣೆಯನ್ನು ರಿಸರ್ವ್ ಬ್ಯಾಂಕ್ ನಡೆಸುತ್ತದೆ. ಸಾರ್ವಜನಿಕ ಸಾಲ ಮತ್ತು ದೇಶದ ಅಂತರರಾಷ್ಟ್ರೀಯ ವಿನಿಮಯ ಹಣದ ಕಾರ್ಯನಿರ್ವಹಣೆಯನ್ನೂ ನೋಡಿಕೊಳ್ಳುತ್ತದೆ. ಆರ್ಥಿಕ ಹಾಗೂ ಹಣಕಾಸಿನ ವಿಷಯಗಳಲ್ಲಿ ಸರಕಾರಕ್ಕೆ ಸಲಹೆ ನೀಡುತ್ತದೆ.

ಹೊಸ ಬ್ಯಾಂಕಿಗೆ ಲೈಸೆನ್ಸ್ ಕೊಡುವುದು ರಿಸರ್ವ್ ಬ್ಯಾಂಕ್. ಅದು ಆಗಿಂದಾಗ್ಗೆ ಇತರ ಬ್ಯಾಂಕುಗಳ ಕಾರ್ಯಕಲಾಪಗಳನ್ನು ಪರಿಶೀಲಿಸುತ್ತದೆ. ಕೇಂದ್ರ ಸರಕಾರದ ನಿಯಮವನ್ನು ಅನುಸರಿಸಿ ವಿದೇಶೀ ನಾಣ್ಯ ವಿನಿಮಯವನ್ನು ರಿಸರ್ವ್ ಬ್ಯಾಂಕ್ ನಡೆಸುತ್ತದೆ.

1964ರಲ್ಲಿ ಸ್ಥಾಪಿತವಾದ ಇಂಡಸ್ಟ್ರಿಯಲ್ ಬ್ಯಾಂಕ್ ಆಫ್ ಇಂಡಿಯಾ ರಿಸರ್ವ್ ಬ್ಯಾಂಕಿನ ಅಧೀನದಲ್ಲಿರುವ ಸಂಸ್ಥೆ.

ರುಕ್ಮಿಣಿ ದೇವಿ ಅರುಂಡೇಲ್

ಭಾರತದ ಶಾಸ್ತ್ರೀಯ ನೃತ್ಯ ಪ್ರಕಾರವನ್ನು ಪುನರುಜ್ಜೀವನಗೊಳಿಸಿದವರಲ್ಲಿ ಪ್ರಮುಖರು ರುಕ್ಮಿಣಿದೇವಿ ಅರುಂಡೇಲ್.

ಮಧುರೈ ಪಟ್ಟಣದಲ್ಲಿ 1904 ಫೆಬ್ರವರಿ 29ರಂದು ರುಕ್ಮಿಣಿ ದೇವಿ ಹುಟ್ಟಿದರು. ಭಾರತದಲ್ಲಿ ಬಂದು ನೆಲೆಸಿದ ಆಂಗ್ಲ ಜಾರ್ಜ್ ಎಸ್. ಅರುಂಡೇಲರನ್ನು 1920ರಲ್ಲಿ ಅವರು ವಿವಾಹವಾದರು. ಪಾಶ್ಚಾತ್ಯ ಬ್ಯಾಲೆ ನೃತ್ಯಗಾತಿ ಪಾವ್ಲೋವಾರ ನೃತ್ಯದಿಂದ ಸ್ಫೂರ್ತಿ ಪಡೆದು, ನೃತ್ಯದಲ್ಲಿ ಆಸಕ್ತಿ ತಳೆದರು.

1936ರಲ್ಲಿ ಕಲಾಕ್ಷೇತ್ರ ಸ್ಥಾಪಿಸಿದರು. ಡಾ. ಮಾಂಟೆಸ್ಸೋರಿ ಅವರನ್ನು ಭಾರತಕ್ಕೆ ಆಹ್ವಾನಿಸಿ, ಉಪಾಧ್ಯಾಯರಿಗೆ ತರಬೇತಿ ಕೊಡಿಸಿದರು. ಬೆಸೆಂಟ್ ಥಿಯಸಾಫಿಕಲ್ ಹೈಸ್ಕೂಲು ಆರಂಭವಾದಾಗಿನಿಂದ ಅದರ ಆಡಳಿತ ಮಂಡಲಿಯಲ್ಲಿ ಅವರದು ಪ್ರಮುಖ ಪಾತ್ರ.

ಪ್ರಾಣಿಗಳ ಯೋಗಕ್ಷೇಮ ಮಂಡಲಿ, ಪ್ರಾಣಿ ಸಂರಕ್ಷಣಾ ಸಂಸ್ಥೆ, ಲಂಡನ್ ಅಂತರರಾಷ್ಟ್ರೀಯ ಶಾಕಾಹಾರಿಗಳ ಒಕ್ಕೂಟ ಮುಂತಾದ ಸಂಘ ಸಮಿತಿಗಳಿಗೆ ಅವರು ಸದಸ್ಯರು. ಅಮೆರಿಕದ ವೇನ್ ರಾಜ್ಯ ವಿಶ್ವವಿದ್ಯಾನಿಲಯ ಹಾಗೂ ಕಲ್ಕತ್ತೆಯ ರವೀಂದ್ರ ಭಾರತಿ ವಿಶ್ವವಿದ್ಯಾನಿಲಯಗಳು ಅವರಿಗೆ ಗೌರವಪದವಿಗಳನ್ನಿತ್ತು ಸನ್ಮಾನಿಸಿವೆ.



ಶಾಸ್ತ್ರೀಯ ನೃತ್ಯ : ರುಕ್ಮಿಣಿದೇವಿ

ತಮಿಳುನಾಡಿನ ಮತ್ತು ರಾಷ್ಟ್ರದ ಹಲವು ಸಮಿತಿಗಳ ಸದಸ್ಯರಾಗಿ ರುಕ್ಮಿಣಿದೇವಿ ಸೇವೆ ಸಲ್ಲಿಸಿದ್ದಾರೆ. ಅವರು ಮದರಾಸಿನ ಕಲಾಕ್ಷೇತ್ರದ ಡೈರೆಕ್ಟರರೂ ಆಗಿದ್ದಾರೆ. 1956ರಲ್ಲಿ ಪದ್ಮಭೂಷಣ ಪ್ರಶಸ್ತಿಯೂ 1957ರಲ್ಲಿ ಭಾರತದ ಅಗ್ರಗಾಮಿ ನರ್ತಕಿಯೆಂದು ಸಂಗೀತನಾಟಕ ಅಕಾಡೆಮಿ ಪ್ರಶಸ್ತಿಯೂ ಅವರಿಗೆ ದೊರೆತುವು.

ರುದ್ರಮ್ಮದೇವಿ

ಕಾಕತೀಯ ರಾಜ ಗಣಪತಿದೇವನ ಹಿರಿಮಗಳು ರುದ್ರಮ್ಮದೇವಿ.

ಗಣಪತಿ ದೇವನಿಗೆ ಗಂಡು ಮಕ್ಕಳಿರಲಿಲ್ಲ. ರುದ್ರಮ್ಮದೇವಿ ಅಥವಾ ರುದ್ರಾಂಬ ಮತ್ತು ಗಣಪಾಂಬ ಎಂಬ ಇಬ್ಬರು ಹೆಣ್ಣುಮಕ್ಕಳಿದ್ದರು. ಇಬ್ಬರೂ ಬಹಳ ಬುದ್ಧಿವಂತರು ಹಾಗೂ ಸಾಮರ್ಥ್ಯಶಾಲಿಗಳು. ತಮ್ಮ ಮನೆತನಕ್ಕೇ ಸಾಮ್ರಾಟ ಪದವಿ ಉಳಿಯಬೇಕೆಂಬ ಉದ್ದೇಶದಿಂದ ಗಣಪತಿ ದೇವ ರುದ್ರಮ್ಮದೇವಿಯನ್ನು ಉತ್ತರಾಧಿಕಾರಿಯಾಗಿ ಮಾಡಿಕೊಳ್ಳಲು ನಿರ್ಧರಿಸಿದ. ಆಕೆಯನ್ನು ರುದ್ರದೇವ ಮಹಾರಾಜ ಎಂದು ಕರೆಯಲಾಯಿತು. ಆಕೆಯ ವಿದ್ಯಾಭ್ಯಾಸ ವಿಷಯದಲ್ಲಿ ಆಸಕ್ತಿ ವಹಿಸಿದ. ಆಡಳಿತದಲ್ಲಿ ತರಬೇತಿ ಪಡೆಯಲು ಅವಕಾಶಮಾಡಿಕೊಟ್ಟ.

ತಂದೆಯ ನಿಧನಾನಂತರ 1262ರಲ್ಲಿ ಆಕೆ ಸಿಂಹಾಸನವೇರಿದಳು. ಆಗ ದಕ್ಷಿಣ ಆಂಧ್ರದ ಅನೇಕ ಜಮೀನುದಾರರು ದಂಗೆ ಎದ್ದರು. ದೇವಗಿರಿಯ ಅರಸ ಮಹಾದೇವ ಪಶ್ಚಿಮದಿಂದ ರಾಜ್ಯಕ್ಕೆ ಮುತ್ತಿಗೆ ಹಾಕಿದ. ಆದರೆ ಆಕೆ ಇವೆಲ್ಲವನ್ನೂ ಯಶಸ್ವಿಯಾಗಿ ಎದುರಿಸಿದಳು. ಆಕೆ ಆಳಿದಷ್ಟು ಕಾಲ ರಾಜ್ಯದಲ್ಲಿ ಶಾಂತಿ, ಸುವ್ಯವಸ್ಥೆ ನೆಲೆಸಿದ್ದುವು.

ಪ್ರಜೆಗಳ ಹಿತ ಆಕೆಯ ಮೂಲಮಂತ್ರ. ರೈತರ ಅನುಕೂಲಕ್ಕಾಗಿ ಕೆರೆ, ಕಾಲುವೆ, ಬಾವಿ ತೋಡಿಸಿದಳು. ವರ್ತಕರಿಗೆ ರಿಯಾಯಿತಿ ತೋರಿಸಿ ವ್ಯಾಪಾರ ಕೈಗಾರಿಕೆಗಳ ವೃದ್ಧಿಗೆ ನೆರವಾದಳು. ಮೂವತ್ತು ವರ್ಷಗಳಿಗೂ ಮಿಕ್ಕಿ ಈಕೆ ರಾಜ್ಯಭಾರ ಮಾಡಿದಳು.

ಚಾಲುಕ್ಯ ವಂಶದ ರಾಜಕುಮಾರ ವೀರಭದ್ರನೊಡನೆ ಆಕೆಯ ವಿವಾಹವಾಯಿತು. ಅವಳ ಇಬ್ಬರು ಹೆಣ್ಣುಮಕ್ಕಳು—ಮುಮ್ಮಾದಮ್ಮ ಮತ್ತು ರುಯ್ಯಮ್ಮ. ಮುಮ್ಮಾದಮ್ಮನ ಮಗ ಪ್ರತಾಪರುದ್ರನನ್ನು ರುದ್ರಮ್ಮದೇವಿ ದತ್ತು ತೆಗೆದುಕೊಂಡಳು. ಕೊನೆಗಾಲವನ್ನು ಆಕೆ ಧ್ಯಾನದಲ್ಲಿ ಕಳೆದಳು.

ಪಾಶ್ಚಾತ್ಯ ಪ್ರವಾಸಿ ಮಾರ್ಕೊ ಪೋಲೋ (1254-1324) ಆಕೆಯ ಬಗೆಗೆ ಪ್ರಶಂಸೆಯ ಮಾತನ್ನಾಡಿದ್ದಾನೆ.

ರೂರ್ಕೆಲಾ ಉಕ್ಕಿನ ಕಾರಖಾನೆ

ಭಾರತ ಸರಕಾರ ಸ್ಥಾಪಿಸಿರುವ ಪ್ರಮುಖ ಉಕ್ಕು ಉತ್ಪಾದನಾ ಕಾರಖಾನೆಗಳಲ್ಲಿ ಮೊತ್ತಮೊದಲು ಆರಂಭವಾದದ್ದು ಒಡಿಸ್ಸಾದಲ್ಲಿರುವ ರೂರ್ಕೆಲಾ ಉಕ್ಕಿನ ಕಾರಖಾನೆ.

ಇದು ಹಿಂದೂಸ್ಥಾನ್ ಸ್ಟೀಲ್ ಲಿಮಿಟೆಡ್‌ನ ಆಶ್ರಯದಲ್ಲಿದೆ. 1955ರಲ್ಲಿ ರೂರ್ಕೆಲಾದ ಉಕ್ಕಿನ ಕಾರಖಾನೆಗೆಂದು ಭಾರತ ಸರಕಾರ ಜರ್ಮನಿಯ ಎರಡು ಕಂಪೆನಿಗಳೊಂದಿಗೆ ಕರಾರು ಮಾಡಿಕೊಂಡಿತು. 1956ರಲ್ಲಿ ಈ ಉದ್ಯಮದ ನಿರ್ಮಾಣವು ನಡೆದು ಮುಂದುವರಿಯಿತು. 1959 ಫೆಬ್ರವರಿ 3ರಂದು ರಾಷ್ಟ್ರಪತಿ ರೂರ್ಕೆಲಾದ ಪ್ರಥಮ ಊದು ಕುಲುಮೆಯನ್ನು ಉದ್ಘಾಟಿಸಿದರು.

ಕಾರಖಾನೆಗೆ ಬೇಕಾದ ಕಚ್ಚಾ ಸಾಮಗ್ರಿಗಳು ಸುತ್ತಮುತ್ತಲಿನ ಪ್ರದೇಶಗಳಿಂದಲೇ ದೊರೆಯುತ್ತವೆ. ಮೊತ್ತಮೊದಲು ಉಕ್ಕಿನ ಹಾಳೆ 1959 ಏಪ್ರಿಲ್‌ನಲ್ಲಿ ಉತ್ಪಾದನೆಯಾಯಿತು. ಈಗ ರೂರ್ಕೆಲಾ ಉಕ್ಕಿನ ಕಾರಖಾನೆಯಲ್ಲಿ ವಿವಿಧ ಆಕೃತಿಯ ಉಕ್ಕಿನ ಫಲಕ, ಪಟ್ಟಿ, ಕೊಳವೆ (ಪೈಪುಗಳು) ತಯಾರಾಗುತ್ತವೆ. ಬೆನ್ಜಾಲ್, ಟಲುವೀನ್, ಕ್ಸೈಲೀನ್, ಕ್ರಿಯೋಸೋಟ್ ತೈಲ, ನ್ಯಾಫ್ತಲೀನ್ ಇತ್ಯಾದಿ ಇಲ್ಲಿನ ಉಪ ಉತ್ಪನ್ನಗಳು.

ರೂರ್ಕೆಲಾದಲ್ಲಿ ಒಂದು ರಸಗೊಬ್ಬರ ಕಾರಖಾನೆ 1962ರಲ್ಲಿ ಆರಂಭವಾಯಿತು. ಇದು ಉಕ್ಕಿನ ಕಾರಖಾನೆಯ ಪಕ್ಕದಲ್ಲಿಯೇ ಇದೆ.

ಉಕ್ಕಿನ ಕಾರಖಾನೆ : ರೂರ್ಕೆಲಾ



ರೋಹಿಲರು

ಮೊಘಲ್ ಸಾಮ್ರಾಜ್ಯದ ದೌರ್ಬಲ್ಯದ ಲಾಭ ಪಡೆದು ಕೆಲವು ಅಫ್ಘಾನ್ ಸಾಹಸಿಗಳು ಅಲಿ ಮುಹಮ್ಮದ್ ರೋಹಿಲ(ರುಹೆಲ) ಎಂಬವನ ನೇತೃತ್ವದಲ್ಲಿ ಹಿಮಾಲಯದ ಬುಡದಲ್ಲಿ ಗಂಗೆಯ ಮೇಲು ಕಣಿವೆಯ ಪ್ರದೇಶವಾದ ಅಹಿಕ್ಷೇತ್ರದಲ್ಲಿ ರೋಹಿಲಖಂಡವೆಂಬ ರಾಜ್ಯಗಳ ಒಕ್ಕೂಟ ಸ್ಥಾಪಿಸಿದರು. 18ನೆಯ ಶತಮಾನದ ಪೂರ್ವಾರ್ಧದಲ್ಲಿ ಸ್ಥಾಪಿತವಾದ ಇದು ಆ ಶತಕದಲ್ಲಿ ಉತ್ತರ ಭಾರತದ ರಾಜಕೀಯದಲ್ಲಿ ಗಣ್ಯಪಾತ್ರ ವಹಿಸಿತು.

ಮುಂದೆ ರೋಹಿಲರು ಮರಾಠರ ಕಿರುಕುಳ ತಾಳಲಾರದೆ 1772ರಲ್ಲಿ ಅಯೋಧ್ಯೆ (ಔಧ್)ಯ ನವಾಬನ ಜೊತೆ ಇಂಗ್ಲಿಷರ ಮಧ್ಯಸ್ಥಿಕೆಯಲ್ಲಿ ಒಂದು ಒಪ್ಪಂದ ಮಾಡಿಕೊಂಡರು. 1773ರಲ್ಲಿ ಮರಾಠರು ರೋಹಿಲ ಖಂಡದ ಮೇಲೆ ದಾಳಿ ಮಾಡಿದಾಗ ಅಯೋಧ್ಯೆಯ ಸೇನೆಯ ನೆರವಿನಿಂದ ರೋಹಿಲರು ಅವರನ್ನು ಹಿಂದಕ್ಕೆ ಅಟ್ಟಿದರು. ಹಿಂದೆ ಆದ ಒಪ್ಪಂದ ವಂತೆ ಈ ಸಹಾಯಕ್ಕಾಗಿ ಅಯೋಧ್ಯೆಗೆ ನೀಡಬೇಕಾದ 40 ಲಕ್ಷರೂಪಾಯಿ ಗಳನ್ನು ರೋಹಿಲ ನಾಯಕ ಹಾಫೀಜ್ ರಹಮತ್‌ಖಾನ್ ನೀಡಲಿಲ್ಲ, ಅಯೋಧ್ಯೆಯ ನವಾಬ ಬ್ರಿಟಿಷರ ನೆರವಿನಿಂದ 1774ರಲ್ಲಿ ರೋಹಿಲರನ್ನು ಸೋಲಿಸಿ, ಅವರ ರಾಜ್ಯದ ಬಹುಭಾಗವನ್ನು ತಾನು ಪಡೆದುಕೊಂಡ. ಅಲಿ ಮುಹಮ್ಮದನ ಮಗ ಫೈಜುಲ್ಲಖಾನನಿಗೆ ರಾಮಪುರವನ್ನೊಳಗೊಂಡ ಒಂದು ಚಿಕ್ಕ ರೋಹಿಲ ರಾಜ್ಯವನ್ನು ನೀಡಲಾಯಿತು. 1801ರಲ್ಲಿ ಅಯೋಧ್ಯೆಯ ನವಾಬನ ಜೊತೆ ಆದ ಒಪ್ಪಂದದಂತೆ ಅವನ ವಶವಿದ್ದ ರೋಹಿಲಖಂಡದ ಎಲ್ಲ ಭಾಗಗಳೂ ಬ್ರಿಟಿಷರಿಗೆ ಬಂದುವು.

ಲಕ್ಷದ್ವೀಪ

ನಿಸರ್ಗ ಸೌಂದರ್ಯಕ್ಕೆ ಹೆಸರಾದದ್ದು ಲಕ್ಷದ್ವೀಪ. ಮಿನಿಕಾಯ್ ಮತ್ತು ಅಮಿನ್‌ದೀವಿ ದ್ವೀಪ ಸಮೂಹವನ್ನು ಲಕ್ಷದ್ವೀಪ ಒಳಗೊಂಡಿದೆ. ಇವು ಅರಬಿ ಸಮುದ್ರದಲ್ಲಿ ಭಾರತದ ದಕ್ಷಿಣ ತೀರದಿಂದ 100ರಿಂದ 250 ಮೈಲು ದೂರದಲ್ಲಿವೆ.

ಈ ದ್ವೀಪಸಮೂಹದಲ್ಲಿ 20 ಮುಖ್ಯ ದ್ವೀಪಗಳಿವೆ. ಅವುಗಳಲ್ಲಿ ಸುಮಾರು ಅರ್ಧ ಸಂಖ್ಯೆಯ ದ್ವೀಪಗಳಲ್ಲಿ ಮಾತ್ರ ಜನವಸತಿ. ಇವುಗಳಲ್ಲೆಲ್ಲ ದೊಡ್ಡದು ಮಿನಿಕಾಯ್. ಇದು ದಕ್ಷಿಣ ಭಾಗದಲ್ಲಿದೆ. ಅಮಿನ್‌ದೀವಿ ದ್ವೀಪಗಳು ಉತ್ತರದಲ್ಲಿವೆ. ಎಷ್ಟೋ ದ್ವೀಪಗಳು ನೀಲ ಸಮುದ್ರದಲ್ಲಿ ಬರಿಯ ಚುಕ್ಕೆಗಳಂತೆ ಹರಡಿವೆ.

ಲಕ್ಷದ್ವೀಪದ ಎಳೆಯರು



ಈ ದ್ವೀಪಗಳ ನೆಲ ಸಮುದ್ರ ಮಟ್ಟದಿಂದ ಹತ್ತು-ಹದಿನೈದು ಅಡಿ ಎತ್ತರದಲ್ಲಿವೆ. ಬೆಟ್ಟಗಳಾಗಲೀ ಹೊಳೆಗಳಾಗಲೀ ಇಲ್ಲ. ಮೇಲ್ಮೈಯಲ್ಲಿ ಒಂದು-ಒಂದೂವರೆ ಅಡಿ ಯಷ್ಟು ಹವಳಸ್ತರವಿದೆ.



ಮಿನಿಕಾಯ್ ದ್ವೀಪದ ಹು

ಕೇರಳದ ಚೇರಮಾನ್ ಪೆರು ಮಾಳ್ ಇಸ್ಲಾಂ ಧರ್ಮಕ್ಕೆ ಸೇರಿ ಮಕ್ಕ ಯಾತ್ರೆಗೆ ಹೋದಾಗ, ಅವನನ್ನು ಹುಡುಕಿಕೊಂಡು ಹೋದ ತಂಡವೊಂದು ಹಡಗು ಅಪಘಾತಕ್ಕೆ ಸಿಲುಕಿ ಒಂದು ದ್ವೀಪ ದಲ್ಲಿ ನೆಲೆಸಿತು – ಎಂಬುದು ಪ್ರಚಲಿತ ಕತೆ. ಕಣ್ಣಾನೂರಿನ ಅಲಿರಾಜ, ಟಿಪ್ಪುಸುಲ್ತಾನ್ ಮೊದ ಲಾದವರ ಆಳ್ವಿಕೆಯ ಬಳಿಕ ಈ ದ್ವೀಪಗಳು ಬ್ರಿಟಿಷರ ವಶವಾದವು. 1956 ನವೆಂಬರ್‌ನಲ್ಲಿ ಸ್ವತಂತ್ರ ಭಾರತದಲ್ಲಿ ಇವು ಕೇಂದ್ರಾಡಳಿತ ಪ್ರದೇಶವಾದುವು. ಈ ದ್ವೀಪ ಸಮುದಾಯಕ್ಕೆ 1973ರಲ್ಲಿ ಲಕ್ಷ ದ್ವೀಪ ಎಂದು ಹೆಸರಿಡಲಾಯಿತು.

ಲಕ್ಷದ್ವೀಪಗಳಲ್ಲಿ ಹೆಚ್ಚಿನ ಜನರು ಮುಸಲ್ಮಾನರು. ಮುಂಬ ಮುಲ್ಯಾಕ ಎಂಬ ಅರಬ್ ಉಪದೇಶಕನಿಂದ ಅಲ್ಲಿಯ ಜನ ಇಸ್ಲಾಂಧವ ಸ್ವೀಕರಿಸಿದರು ಎಂದು ಪ್ರತೀತಿ. ಆಂದ್ರೋಕ್ ದ್ವೀಪದಲ್ಲಿ ಈ ಉಪದೇಶ ಸಮಾಧಿ ಇದೆ.

ಲಕ್ಷದ್ವೀಪ ಜನರ ಭಾಷೆ ಮಲಯಾಳಂ. ಮಿನಿಕಾಯ್ ದ್ವೀಪನಿವ ಗಳು ಮ್ಹಾಳ್ ಭಾಷೆ ಆಡುತ್ತಾರೆ.

ಮಿನಿಕಾಯ್ ದ್ವೀಪದ ಹೊರತು ಇತರ ದ್ವೀಪಗಳಲ್ಲಿಯ ಜನಜೀ ಬಹುಮಟ್ಟಿಗೆ ಮಲಬಾರ್ ಕರಾವಳಿ ಮುಸಲ್ಮಾನರ ಜೀವನದಂತೆ ಇದೆ. ಮಿನಿಕಾಯ್ ಜನರದು ಆದಿವಾಸಿ ಜೀವನ ವಿಧಾನ.

ಈ ದ್ವೀಪಗಳ ಜನರ ಬದುಕಿನ ಮುಖ್ಯಾಧಾರ ತೆಂಗು. ಆಹಾ ಧಾನ್ಯಗಳ ಬೆಳೆ ಕಡಮೆ. ತೆಂಗಿನ ನಾರನ್ನು ಹೊಸೆಯುವುದು, ಮೀನುಗಾ ಜನರ ಉದ್ಯಮ.

ದ್ವೀಪಗಳಲ್ಲಿ ಒಟ್ಟು ಸುಮಾರು 39 ಶಾಲೆಗಳಿವೆ. ಇವುಗಳೆಲ್ಲ ಸರಕಾ ಹತೋಟಿಯಲ್ಲಿವೆ. ಎಲ್ಲ ಹಂತಗಳಲ್ಲೂ ಶಿಕ್ಷಣ ಉಚಿತ.

ವಿಸ್ತೀರ್ಣ :	32 ಚ. ಕಿ.ಮೀ.
ಜನಸಂಖ್ಯೆ :	31,810
ರಾಜಧಾನಿ :	ಕಾವರಟ್ಟಿ ದ್ವೀಪ

[illegible]
[illegible]
ಮಾಡುತ್ತಾರೆ. ಹಡಗು ಸಾರಿಗೆಯೂ ಇದೆ.

ಈ ಪ್ರದೇಶದ [illegible]
[illegible] ಕೇಂದ್ರ [illegible]
[illegible] ಇಲ್ಲಿದೆ [illegible]
ಲೋಕಸಭೆಗೆ ಇಲ್ಲಿಂದ ಒಬ್ಬ ಸದಸ್ಯ ಆಯ್ಕೆಯಾಗುತ್ತಾನೆ.

ಲಕ್ಷ್ಮಿ

ನೋಡಿ : ಶ್ರೀ

ಲಖನೌ

ಉತ್ತರ ಪ್ರದೇಶದ ರಾಜಧಾನಿ, ಲಖನೌ.

ರಾಮನ ಸಹೋದರ ಲಕ್ಷ್ಮಣನಿಂದ ಇದು ಸ್ಥಾಪಿತವಾಯಿತು ಎಂದು ಪ್ರತೀತಿ. ಇದೇ ಅದರ ಹೆಸರಿಗೆ ಮೂಲವಿರಬಹುದು. ಈ ಪಟ್ಟಣ ಅಭಿವೃದ್ಧಿಗೊಂಡದ್ದು ಮಾತ್ರ 16ನೆಯ ಶತಮಾನದ ಉತ್ತರಾರ್ಧದಿಂದ.

1528ರಲ್ಲಿ ಬಾಬರ್ ಲಖನೌ ನಗರವನ್ನು ವಶಪಡಿಸಿಕೊಂಡ. ಅಕ್ಬರನ ಕಾಲದಲ್ಲಿ ಇದು ಔಧ್ ಪ್ರಾಂತ್ಯಕ್ಕೆ ಸೇರಿಸಲ್ಪಟ್ಟಿತು. ಅನಂತರ ನವಾಬರ ಆಳ್ವಿಕೆಗೆ ಒಳಗಾಯಿತು. ಇವರ ಕಾಲದಲ್ಲಿ ಲಖನೌ ನಗರ ಉಚ್ಛ್ರಾಯ ಸ್ಥಿತಿ ತಲಪಿತು. ಇಂದಿಗೂ ಪ್ರಸಿದ್ಧವಾಗಿರುವ ಪ್ರೇಕ್ಷಣೀಯ ಕಟ್ಟಡಗಳು ಇವರ ಕಾಲದ ನಿರ್ಮಾಣ. 1732ರಿಂದ 1847ರ ವರೆಗೆ ನವಾಬರ ಅಧೀನದಲ್ಲಿದ್ದ ಲಖನೌ ಮುಂದೆ ಬ್ರಿಟಿಷರ ವಶಕ್ಕೆ ಬಂತು.

ಲಖನೌದಲ್ಲಿ ಹಿಂದೂ ಮುಸಲ್ಮಾನ ಸಂಸ್ಕೃತಿಗಳೆರಡೂ ಇವೆ. ಭಾರತದಲ್ಲಿ ಷಿಯಾಪಂಥದ ಮುಹಮ್ಮದೀಯರಿಗೆ ಇದು ಕೇಂದ್ರ ಸ್ಥಾನ. ದೊಡ್ಡ 'ಇಮಾಂಬಾರಾ' (ಮೊಹರಂ ಕಾಲದಲ್ಲಿ ಮುಸಲ್ಮಾನರು ಸೇರುವ ಕಟ್ಟಡ) 1784ರಲ್ಲಿ ನಿರ್ಮಿಸಲ್ಪಟ್ಟಿತು. ಇಲ್ಲಿನ ಹೆಸರಾದ ವಾಸ್ತುಶಿಲ್ಪರಚನೆ. ರೂಮಿ ದರ್ವಾಜಾ. ಹುಸೇನಾಬಾದಿನ ಇಮಾಂಬಾರಾ, ನವಾಬ ಘಾಜಿಯುದ್ದೀನ್ ಹೈದರನ ಸಮಾಧಿ ಸ್ಥಳ. ಗುಮ್ಮಟದಲ್ಲಿ ಹೊಂಬಣ್ಣದ ಛತ್ರಿಯಿರುವ [illegible]
[illegible]
ಇಲ್ಲಿನ ರೈಲ್ವೆ ನಿಲ್ದಾಣ ಭಾರತದ ಅತ್ಯಂತ ಸೊಗಸಾದ ನಿಲ್ದಾಣಗಳಲ್ಲಿ ಒಂದು. [illegible]
[illegible]
[illegible]
ತಾಣಗಳು.

ಲಖನೌ ವಿಶ್ವವಿದ್ಯಾನಿಲಯ ಕೇಂದ್ರ ಇಲ್ಲಿದೆ. ಭಾರತೀಯ ಸಂಗೀತ ವಿಶ್ವವಿದ್ಯಾನಿಲಯವಿದೆ. ಮುಹಮ್ಮದೀಯ ಮತಧರ್ಮಶಾಸ್ತ್ರ ಅಧ್ಯಯನ ಸಂಸ್ಥೆಯಿದೆ. ಪ್ರಾಕ್ ಸಸ್ಯವಿಜ್ಞಾನ ಅಧ್ಯಯನಕ್ಕೆ ವಿಶಾಸಲಾದ ಬೀರಬಲ್ ಸಾಹ್ನಿ ಸಂಸ್ಥೆ. ಔಷಧ ಸಂಶೋಧನೆಯ ರಾಷ್ಟ್ರೀಯ ವಿಜ್ಞಾನಸಂಸ್ಥೆ —ಈ ಸಂಸ್ಥೆಗಳು ಇಲ್ಲಿವೆ.

'ಚಿಕನ್' ಕೆಲಸ ಎಂದು ಹೆಸರಾದ ನೂಲು ಕಸೂತಿ ಕೆಲಸ, ಬೆಳ್ಳಿ ಹಾಗೂ ಚಿನ್ನದ ಸರಿಗೆಗಳನ್ನು ಹಾಕಿ ಮಾಡುವ ಕಸೂತಿ. [illegible] ಬಟ್ಟೆ, ಪರಿಮಳದ್ರವ್ಯ, [illegible] ಪದಾರ್ಥಗಳು ಮುಂತಾದ [illegible] ಕುಶಲ ಕೆಲಸಗಳ ಕೇಂದ್ರ, ಲಖನೌ.

ಲಖನೌದ ಜನಸಂಖ್ಯೆ 7,49,239.

ಲಲ್ಲಾ ದೇವಿ


ಉನ್ನತ ಧಾರ್ಮಿಕ ಭಾವನೆಗಳಿಂದ ಪ್ರೇರಿತವಾದ ಕವಿತೆಗಳನ್ನು ರಚಿಸಿದ ಕಾಶ್ಮೀರೀ ಕವಯಿತ್ರಿ, ಲಲ್ಲಾದೇವಿ. ಈಕೆಯ ಕಾಲ 14ನೆಯ ಶತಮಾನದ ಕೊನೆಯ ಭಾಗ ಎಂದು ಅಂದಾಜು.

ಪಂಡಿತರ ಸಹಾಯ ಪಡೆದು ಜಾರ್ಜ್ ಗ್ರಿಯರ್‌ಸನ್ ಎಂಬಾತ ಆಕೆಯ ಮುಖ್ಯ ಕವನಗಳನ್ನು ಸಂಗ್ರಹಿಸಿ, ಕೈಬರಹ ಪ್ರತಿಗಳೊಡನೆ ಸಂಸ್ಕೃತ ಅನುವಾದಗಳನ್ನು ಹೋಲಿಸಿ ಸಿದ್ಧಗೊಳಿಸಿದ. [illegible] ರಾಯಲ್ ಏಷ್ಯಾಟಿಕ್ ಸೊಸೈಟಿ 1920ರಲ್ಲಿ ಸಂಕಲನವನ್ನು ಪ್ರಕಟಿಸಿತು.

ಕಾಶ್ಮೀರ ಬಹುಕಾಲದಿಂದ ಶೈವಧರ್ಮದ ಕ್ಷೇತ್ರವಾಗಿತ್ತು. ಲಲ್ಲಾ ಶೈವ ಸಂತರೊಬ್ಬರನ್ನು ತನ್ನ ಆಧ್ಯಾತ್ಮಿಕ ಮಾರ್ಗದರ್ಶಿಯಾಗಿ ಮಾಡಿಕೊಂಡಳು. ಮುಂದೆ ಆಕೆ ಯೋಗಿನಿ ಆದಳು. ಮೂರ್ತಿಪೂಜೆ ಮುಂತಾದ ಆಚರಣೆಗಳಲ್ಲಿ ಆಕೆಗೆ ವಿಶ್ವಾಸ ಇರಲಿಲ್ಲ. ಕರ್ತವ್ಯ ಎನ್ನುವ ದೃಷ್ಟಿಯಿಂದ ದುಡಿಯಬೇಕು ಎಂದು ಒತ್ತಿ ಹೇಳುತ್ತಿದ್ದಳು. ಸನ್ಯಾಸಿಯಾದವನು ಮಾನವರ ಸೇವಕನಾಗುತ್ತಾನೆ ಎಂದು ಅವಳು ನಂಬಿದ್ದಳು. ಸಮಕಾಲೀನರ ಮೇಲೆ ಆಕೆ ಅಪಾರ ಪ್ರಭಾವ ಬೀರಿದಳು.

ನೋಡಿ : ಕಾಶ್ಮೀರೀ ಭಾಷೆ, ಸಾಹಿತ್ಯ

ಇಮಾಂಬಾರಾ



ಲಲಿತಾದಿತ್ಯ

ಕಾಶ್ಮೀರವನ್ನು ಆಳಿದ ಕಾರ್ಕೋಟ ರಾಜಮನೆತನದಲ್ಲಿ ಲಲಿತಾದಿತ್ಯ ಬಹಳ ಕೀರ್ತಿವಂತ. ಈತನ ಇನ್ನೊಂದು ಹೆಸರು ಮುಕ್ತಾಪೀಡ. ಇವನು ಕಾರ್ಕೋಟ ವಂಶದ ಮೂಲಪುರುಷ ದುರ್ಲಭ ವರ್ಧನನ ಮೊಮ್ಮಗ. ಕಾಶ್ಮೀರ ಇತಿಹಾಸಕಾರ ಕಲ್ಹಣ ತನ್ನ 'ರಾಜತರಂಗಿಣಿ'ಯಲ್ಲಿ ಲಲಿತಾದಿತ್ಯನ ಬಗೆಗೆ ವಿವರವಾಗಿ ತಿಳಿಸಿದ್ದಾನೆ.

ಲಲಿತಾದಿತ್ಯ ಅನೇಕ ಯುದ್ಧಗಳನ್ನು ಮಾಡಿದ. ಅವನು ಪಂಜಾಬ್, ಕನ್ನೌಜ್, ಬಿಹಾರ, ಬಂಗಾಳಗಳನ್ನು ಗೆದ್ದ. ಒಡಿಸ್ಸಾ ಪ್ರದೇಶವನ್ನು ಆಕ್ರಮಿಸಿದ. ರಾಷ್ಟ್ರಕೂಟರ ರಾಜ್ಯದ ವರೆಗೆ ದಕ್ಷಿಣದಲ್ಲಿ ದಾಳಿ ಮಾಡಿದ. ಕರ್ನಾಟಕದ ರಾಣಿ ರಟ್ಟ ಇವನಿಗೆ ಶರಣಾಗತಳಾದಳು; ಕಾವೇರಿ ನದೀ ದ್ವೀಪಗಳಲ್ಲಿ ಕೆಲವನ್ನು ಇವನು ವಶಪಡಿಸಿಕೊಂಡ. ಕೊಂಕಣಿ ಪ್ರದೇಶದಲ್ಲೂ ಲಲಿತಾದಿತ್ಯ ದಾಳಿ ನಡೆಸಿದ. ಟಿಬೆಟಿನ ಲಡಖ್ ಸಹ ಇವನ ಅಧೀನವಾಯಿತು. ಚೀನದ ಚಕ್ರವರ್ತಿ ಈತನಿಗೆ ರಾಜ ಎಂಬ ಮನ್ನಣೆ ಕೊಟ್ಟ –ಎನ್ನುತ್ತಾರೆ. ಅಲ್ಲದೆ ಈತ ದಾರ್ದರರನ್ನೂ ಕಾಂಭೋಜರನ್ನೂ ತುರ್ಕಿಯರನ್ನೂ ಸೋಲಿಸಿದ.

ಇವನ ಕಾಲದಲ್ಲಿ ಕಾಶ್ಮೀರದಲ್ಲಿ ವಿಹಾರಗಳು, ದೇವಾಲಯಗಳು ಸುಂದರ ನಗರಗಳು, ನಿರ್ಮಿಸಲ್ಪಟ್ಟುವು. ಮಾರ್ತಾಂಡದಲ್ಲಿ ಲಲಿತಾದಿತ್ಯ ಭವ್ಯ ಸೂರ್ಯ ದೇವಾಲಯವನ್ನು ಕಟ್ಟಿಸಿದ. ಲಲಿತಾದಿತ್ಯನ ಕಾಲವನ್ನು ಕಾಶ್ಮೀರದ ಸುವರ್ಣ ಯುಗ ಎನ್ನಬಹುದು.

ಲಲಿತಾದಿತ್ಯನ ಆಳ್ವಿಕೆಯ ಕಾಲ ಎಂಟನೆಯ ಶತಮಾನ.

ಲವ–ಕುಶ

ಬಿಳಿದಾದ ಯಜ್ಞಾಶ್ವವನ್ನು ಕಂಡು ಮಾರುಹೋದ ಬಾಲಕ ಅದನ್ನು ಕಟ್ಟಿಹಾಕಿದ. ಕುದುರೆಯೊಡನೆ ಬಂದಿದ್ದ ಶತ್ರುಘ್ನನೊಡನೆ ಯುದ್ಧ ಮಾಡಿ ಅವನು ಮೂರ್ಛೆಹೊಂದಿದ. ಶತ್ರುಘ್ನ ಅವನನ್ನು ಕರೆದುಕೊಂಡು ಹೊರಟಿದ್ದ. ತಮ್ಮನನ್ನು ಬಿಡಿಸಿಕೊಂಡು ಹೋಗಲು ಇನ್ನೊಬ್ಬ ಬಾಲಕ ಬಂದ. ಅವನ ಪರಾಕ್ರಮದೆದುರು ಶತ್ರುಘ್ನ ಮಣಿದ. ಸಹಾಯಕ್ಕೆ ಬಂದ ಲಕ್ಷ್ಮಣ, ಭರತರು ಜ್ಞಾನತಪ್ಪಿ ಬಿದ್ದರು. ಕೊನೆಗೆ ಬಾಲಯೋಧರೊಡನೆ ಕಾದಾಡಲು ರಾಮನೇ ಬಂದ. ಆತನೂ ಮೂರ್ಛೆ ಹೋದ.



ಯಜ್ಞಾಶ್ವವನ್ನು ತಡೆಹಿಡಿದ ಕುಶ ಲವ

—ಆ ಬಾಲಕರೇ ಸೀತೆಯ ಅವಳಿ ಮಕ್ಕಳು ಕುಶ, ಲವ.

ಲೋಕಾಪವಾದಕ್ಕೆ ಹೆದರಿ ಸೀತೆಯನ್ನು ರಾಮ ಕಾಡಿಗೆ ಕಳುಹಿಸಿದ್ದ ವಾಲ್ಮೀಕಿ ಆಶ್ರಮದಲ್ಲಿ ಆಕೆಗೆ ಆಶ್ರಯ ದೊರೆಯಿತು. ಆಗ ಸೀ[...] ಗರ್ಭಿಣಿ. ಅವಳಿಗೆ ಅವಳಿ ಮಕ್ಕಳು ಜನಿಸಿದರು. ಮಕ್ಕಳಿಗೆ ಕುಶ, ಲ[...] ಎಂದು ವಾಲ್ಮೀಕಿಯೇ ನಾಮಕರಣ ಮಾಡಿದರು. ಮಕ್ಕಳ ವಿದ್ಯಾಭ್ಯಾಸ[...] ಹೊಣೆಯೂ ಅವರದೇ. ತಾವು ರಚಿಸಿದ 'ರಾಮಾಯಣ'ವನ್ನು ಹಾಡಲ[...] ಮಕ್ಕಳಿಗೆ ಕಲಿಸಿದರು.

ವರುಣಲೋಕಕ್ಕೆ ಹೋಗಿದ್ದ ವಾಲ್ಮೀಕಿಗೆ ಯುದ್ಧದ ವಿಚಾರ ತಿ[...] ಯಿತು. ಧಾವಿಸಿಬಂದು ರಾಮ, ಲಕ್ಷ್ಮಣ, ಭರತ, ಶತ್ರುಘ್ನರು ಚೇತರಿ[...] ಕೊಳ್ಳುವಂತೆ ಮಾಡಿ, ಲವ–ಕುಶರು ರಾಮನ ಮಕ್ಕಳೆಂದು ತಿಳಿಸಿದರ[...] ಸೀತೆಯನ್ನೂ ಮಕ್ಕಳನ್ನೂ ಕರೆದುಕೊಂಡು ರಾಮ ಅಯೋಧ್ಯೆ[...] ಮರಳಿದ.

ಮಕ್ಕಳಲ್ಲಿ ಮೊದಲಿನವನು ಕುಶ. ರಾಮ ಕುಶನಿಗೆ ಪಟ್ಟ ಕಟ್ಟಿ ದಕ್ಷಿ[...] ಕೋಸಲದ ಅಧಿಪತಿಯಾಗಿ ಮಾಡಿದ. ಇವನ ರಾಜಧಾನಿ ಕುಶಾವತಿ[...] ಲವನ ರಾಜಧಾನಿ ಶ್ರಾವಸ್ತಿ. ಆತ ಉತ್ತರ ಕೋಸಲದ ಅಧಿಪತಿಯಾದ[...]

ನೋಡಿ : ರಾಮ ; ಸೀತಾ

ಲಾಲ್ ಬಹದ್ದೂರ್ ಶಾಸ್ತ್ರೀ

1966 ಜನವರಿ 10ನೆಯ ತಾರೀಖಿನ ಮಧ್ಯರಾತ್ರಿ. ಸೋವಿಯೆ[...] ಮಧ್ಯಏಷ್ಯದ ಉಜ್‌ಬೆಕ್‌ಸ್ತಾನದ ರಾಜಧಾನಿಯಾದ ತಾಷ್ಕೆಂಟಿನಲ್ಲಿ ಶಾಂತಿಯ ಮಾತುಕತೆಗೆಂದು ಹೋಗಿದ್ದ ಭಾರತದ ಪ್ರಧಾನಿ ಲಾಲ್ ಬಹದ್ದೂರ್ ಶಾಸ್ತ್ರೀ ಹೃದಯಾಘಾತದಿಂದ ಅಸುನೀಗಿದರು. ಅ[...] ಪ್ರಾಮಾಣಿಕ, ಸರಳ ಹಾಗೂ ನಿಷ್ಠ ರಾಷ್ಟ್ರನಾಯಕನನ್ನು ಭಾರತ ಕಳೆದು ಕೊಂಡಿತು.

ಲಾಲ್ ಬಹದ್ದೂರ್ ಶಾಸ್ತ್ರೀ ಸಾಮಾನ್ಯವರ್ಗದ ಮನೆತನದಲ್ಲಿ 190[...] ಅಕ್ಟೋಬರ್ 2ರಂದು ಜನಿಸಿದರು. ಹುಟ್ಟೂರು ವಾರಾಣಸಿಯ ಬಳಿಯ ಮೊಘಲ್‌ಸರಾಯ್. ಮ್ಯಾಟ್ರಿಕ್ ವರೆಗೆ ಕಲಿತು 1921ರ ಅಸಹಕಾ[...] ಚಳುವಳಿಯಲ್ಲಿ ಭಾಗವಹಿಸಿದರು, ಬಂಧಿಸಲ್ಪಟ್ಟರು. ಅನಂತರ ಕಾಶಿ ವಿದ್ಯಾಪೀಠದಲ್ಲಿ ವ್ಯಾಸಂಗ ಮಾಡಿದರು. ಅಲ್ಲಿ 'ಶಾಸ್ತ್ರೀ' ಪದವಿ ದೊರಕಿತ[...] 'ಸರ್ವೆಂಟ್ಸ್ ಆಫ್ ದಿ ಪೀಪಲ್ ಸೊಸೈಟಿ' ಸಂಸ್ಥೆಯನ್ನು ಸೇರಿ ಅವರ[...] ಮಾಡಿದ ಸೇವೆ ಗಮನಾರ್ಹವಾದದ್ದು. ಉತ್ತರ ಪ್ರದೇಶದ ಜನ ಅವ[...] ಪ್ರಾಮಾಣಿಕ ಕೆಲಸವನ್ನು ಮೆಚ್ಚಿದರು. ಉತ್ತರಪ್ರದೇಶ ಕಾಂಗ್ರೆಸ್ ಸಮಿತಿಗೆ ಶಾಸ್ತ್ರಿಯವರು ಎರಡು ಬಾರಿ ಕಾರ್ಯದರ್ಶಿಯಾಗಿ ಆಯ್ಕೆ ಗೊಂಡು, 1937ರಲ್ಲಿ ಸಂಯುಕ್ತ ಪ್ರಾಂತದ ಶಾಸನಸಭೆಗೆ ಚುನಾಯಿ[...] ರಾದರು.

ಸ್ವತಂತ್ರ ಭಾರತದಲ್ಲಿ 1947ರಲ್ಲಿ ಗೃಹ ಹಾಗೂ ಸಾರಿಗೆ ಸಚಿವರಾದರು; 1951ರಲ್ಲಿ ಭಾರತದ ರಾಷ್ಟ್ರೀಯ ಕಾಂಗ್ರೆಸಿನ ಪ್ರಧಾನ ಕಾರ್ಯದರ್ಶಿ[...] 1952ರಲ್ಲಿ ರಾಜ್ಯಸಭೆಗೆ ಆಯ್ಕೆ; ಅನಂತರ ರೈಲು ಮಂತ್ರಿ ಪದವಿ[...] ರೈಲು ಮಂತ್ರಿಯಾಗಿದ್ದಾಗ ಒಂದು ರೈಲ್ವೆ ಅಪಘಾತ ನಡೆಯಿತು. ಇದ[...] ಸಂವಿಧಾನಾತ್ಮಕವಾಗಿ ತಮ್ಮದೇ ಹೊಣೆ ಎಂದು ಹೇಳಿ ಮಂತ್ರಿಪದವಿ[...] ರಾಜಿನಾಮೆ ಕೊಟ್ಟರು; ಮುಂದೆ ಗೃಹಸಚಿವರಾದರು. ಪಕ್ಷ[...]



'ಜೈ ಜವಾನ್' : ಲಾಲ್ ಬಹದ್ದೂರ್

ಕಾರ್ಯಕ್ಕಾಗಿ ಆ ಸ್ಥಾನವನ್ನು ಬಿಟ್ಟುಕೊಟ್ಟರು. ನೆಹರೂ ಅಸ್ವಸ್ಥರಾದಾಗ ಖಾತೆರಹಿತ ಸಚಿವರಾಗಿ ನೇಮಕಗೊಂಡರು. 1964 ಮೇ ತಿಂಗಳಲ್ಲಿ ನೆಹರೂ ನಿಧನರಾದಾಗ ಶಾಸ್ತ್ರಿಯವರು ಪ್ರಧಾನಿಯಾದರು.

1965ರ ಭಾರತ–ಪಾಕಿಸ್ತಾನದ ಯುದ್ಧದಲ್ಲಿ ಸ್ವರಕ್ಷಣೆಗಾಗಿ ರಕ್ಷಣಾ ಪಡೆಗಳು ಗಡಿ ದಾಟುವುದಕ್ಕೆ ಅನುಮತಿ ಕೊಟ್ಟರು. ಆದರೆ ಯುದ್ಧಾನಂತರ ಶಾಂತಿ ಸ್ಥಾಪನೆಗಾಗಿ ಆಕ್ರಮಿತ ಪ್ರದೇಶಗಳನ್ನು ಬಿಟ್ಟು ಹಿಂದೆ ಬರುವುದಕ್ಕೂ ಒಪ್ಪಿದರು. ಸಮರ ಕಾಲದಲ್ಲಿ ಅವರು ದೇಶಕ್ಕೆ ನೀಡಿದ ಘೋಷಣೆ : 'ಜೈ ಜವಾನ್ ! ಜೈ ಕಿಸಾನ್!'

ಭಾರತ ಅವರಿಗೆ ಮರಣೋತ್ತರ 'ಭಾರತ ರತ್ನ' ಪ್ರಶಸ್ತಿ ನೀಡಿ ಗೌರವಿಸಿತು.

ನೋಡಿ : ತಾಷ್ಕೆಂಟ್ ಒಪ್ಪಂದ

ಲಾಲಾ ಲಜಪತರಾಯ್

"ಭಾರತ ದಿಗಂತದಲ್ಲಿ ಸೂರ್ಯನು ಪ್ರಕಾಶಿಸುವವರೆಗೆ ಲಾಲಾ ಲಜಪತರಾಯ್ ಅವರಂಥ ಮಹಾಪುರುಷರು ಅಮರರು."

—ದೇಶಕ್ಕಾಗಿ ಸಮರ್ಪಣ ಭಾವದಿಂದ ದುಡಿದ ಲಾಲಾ ಲಜಪತರಾಯರ ಬಗೆಗೆ ಗಾಂಧೀಜೀ ಹೇಳಿದ ಮಾತಿದು.

ಲಜಪತರಾಯ್ ಹುಟ್ಟಿದ್ದು 1865 ಜನವರಿ 28ರಂದು, ಪಂಜಾಬಿನ ಲೂಧಿಯಾನ ಜಿಲ್ಲೆಯ ಒಂದು ಸಣ್ಣ ಗ್ರಾಮದಲ್ಲಿ. ವಿದ್ಯಾರ್ಥಿ ದೆಸೆಯಲ್ಲೇ ಅಧ್ಯಯನದಲ್ಲೂ ಭಾಷಣ ಮಾಡುವುದರಲ್ಲೂ ಉತ್ಸಾಹ ತೋರಿದರು. 1895ರಲ್ಲಿ ನ್ಯಾಯವಾದಿಯಾಗಿ ಖ್ಯಾತಿ ಗಳಿಸಿದರು. ಆ ಕಾಲದ ಗಣ್ಯ ವ್ಯಕ್ತಿಗಳಲ್ಲಿ ಮೊದಲಿಗರೆನಿಸಿದರು.

ಆ ವೇಳೆಗೆ 'ಆರ್ಯಸಮಾಜ' ಅವರನ್ನು ಆಕರ್ಷಿಸಿತು. ದಿನದ ಬಹುಭಾಗವನ್ನು 'ಆರ್ಯಸಮಾಜ'ಕ್ಕಾಗಿ —ಅದರ ಸಮಾಜ ಸುಧಾರಣಾ ಚಟುವಟಿಕೆಗಳಿಗಾಗಿ— ವಿನಿಯೋಗಿಸತೊಡಗಿದರು.

ರಾಷ್ಟ್ರದ ಸಮಗ್ರ ಅಭಿವೃದ್ಧಿಗೆ ರಾಜಕೀಯ ಸುಧಾರಣೆ ಅವಶ್ಯವೆಂದು ಲಜಪತರಾಯರಿಗೆ ಅನಿಸಿತು. ಭಾರತ ರಾಷ್ಟ್ರೀಯ ಕಾಂಗ್ರೆಸ್ಸನ್ನು ಸೇರಿದರು. ಅತ್ಯಲ್ಪ ಅವಧಿಯಲ್ಲೇ ಲಜಪತರಾಯ್ ಭಾರತದ ಪ್ರಮುಖ ರಾಜಕೀಯ ಮುಂದಾಳು ಆದರು. ಕಾಂಗ್ರೆಸ್ [illegible] 1905ರಲ್ಲಿ ಭಾರತದ ಸ್ಥಿತಿಗತಿಗಳ ಬಗೆಗೆ ಇತರ ದೇಶಗಳಿಗೆ [illegible] ಲಜಪತರಾಯರ ಮತ್ತು ಗೋಪಾಲಕೃಷ್ಣ ಗೋಖಲೆ ಆಯ್ಕೆಯಾದರು. ಲಜಪತರಾಯರು ಇಂಗ್ಲೆಂಡಿನಲ್ಲಿ ಉಪನ್ಯಾಸ ಪ್ರವಾಸ ಕೈಗೊಂಡರು. 1907ರಲ್ಲಿ ಅವರನ್ನು ನಿರ್ಬಂಧಿಸಿ, ಬರ್ಮದ ಮಾಂಡಲೆ ನಗರಕ್ಕೆ ಗಡೀಪಾರು ಮಾಡಲಾಯಿತು.

ಮಾಂಡಲೆ ನಗರದಿಂದ ಮರಳಿದ ಬಳಿಕ 1914ರಲ್ಲಿ ಲಜಪತರಾಯರು ಪಶ್ಚಿಮ ದೇಶಗಳಿಗೆ ತೆರಳಿದರು. ಅಮೆರಿಕದಲ್ಲಿ 6 ವರ್ಷಗಳ ಕಾಲ ಇದ್ದರು. 1920ರಲ್ಲಿ ಭಾರತಕ್ಕೆ ಹಿಂದಿರುಗಿ, ಕಲ್ಕತ್ತಾ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷತೆ ವಹಿಸಿದರು.



ಅಮರತ್ವ : ಲಜಪತರಾಯ್

1928ರ ವೇಳೆಗೆ ದೇಶದಲ್ಲಿ ಇದ್ದಕ್ಕಿದ್ದಂತೆ ರಾಜಕೀಯ ಚಳುವಳಿ ತೀವ್ರಗೊಂಡಿತು. ದೇಶದ ಮೂಲೆ ಮೂಲೆಗಳಿಂದ 'ಸೈಮನ್ ಸಮಿತಿಗೆ ಬಹಿಷ್ಕಾರ' ಘೋಷಣೆ ಕೇಳಿಬಂತು. ಸಮಿತಿ ಸದಸ್ಯರು ಲಾಹೋರಿಗೆ ಬಂದಾಗ ಆ ದಿನ ಅಲ್ಲಿ [illegible] ಹರತಾಳ. ಸಮಿತಿಯ ವಿರುದ್ಧ ಭಾರೀ ಮೆರವಣಿಗೆಯ ಪ್ರದರ್ಶನ. ಪೋಲೀಸರು ಲಾಠಿ ಪ್ರಹಾರ ಮಾಡಿದರು. ನಾಯಕ ಲಾಲಾ ಲಜಪತರಾಯರ [illegible]. ಎದೆಯ ಮೇಲೆ ಬಾರಿಸಿದರು. ಏಟಿಗೆ ತುತ್ತಾದ ಲಜಪತರಾಯ್ 1928 ನವೆಂಬರ್‌ನಲ್ಲಿ ಮರಣ ಹೊಂದಿದರು.

ಜನ ಸಂಕಷ್ಟಕ್ಕೆ ಸಿಲುಕಿದಾಗ ಲಜಪತರಾಯ್ ಅವರ ಸೇವೆಗೆ ಟೊಂಕ ಕಟ್ಟಿ ನಿಲ್ಲುತ್ತಿದ್ದರು. 'ಪಂಜಾಬಿನ ಕೇಸರಿ' ಎಂದು ಅವರು ಜನಾದರಣೀಯರಾದರು.

ಲಜಪತರಾಯರು ಅನೇಕ ಪುಸ್ತಕಗಳನ್ನು ಬರೆದರು. ಅವರು ಮಾಂಡಲೆಯಲ್ಲಿದ್ದಾಗ ಬರೆದ 'ನನ್ನ ಗಡೀಪಾರಿನ ಕಥೆ', 'ದಿ ಆರ್ಯ ಸಮಾಜ್', 'ಯಂಗ್ ಇಂಡಿಯಾ' ಎಂಬುವು ಪ್ರಸಿದ್ಧವಾದುವು.

ಲಾಲಾ ಶ್ರೀರಾಮ್

ಒಂದು ಉದ್ಯಮವನ್ನು ಸ್ಥಾಪಿಸುವವನು ಜನತಾ ನಿಧಿಯ ನಿರ್ವಾಹಕನಂತೆ ಹೊಣೆ ಹೊರಬೇಕು. ಉದ್ಯಮದ ನೌಕರರಿಗೆ, ಪದಾರ್ಥ ಕೊಳ್ಳುವ ಗ್ರಾಹಕರಿಗೆ, ಉದ್ಯಮಕ್ಕಾಗಿ ಬಂಡವಾಳ ತೊಡಗಿಸಿದವರಿಗೆ ಮತ್ತು ರಾಷ್ಟ್ರಕ್ಕೆ ಅವನು ಸಂಪೂರ್ಣ ಹೊಣೆಗಾರನಾಗಿರಬೇಕು.

ಇಂಥ ಉದಾತ್ತ ವಿಚಾರಧಾರೆ ಬೆಳೆಸಿಕೊಂಡಿದ್ದ ಭಾರತದ ಹಿರಿಯ ಉದ್ಯಮಿ ಲಾಲಾ ಶ್ರೀರಾಮ್.

ಆಧುನಿಕ ಭಾರತೀಯ ಉದ್ಯಮ ಪ್ರವರ್ತಕರು ಪ್ರಶಂಸೆಗೆ ಲಾಲಾ ಶ್ರೀರಾಮ್ ಪಾತ್ರರಾಗಿದ್ದಾರೆ. ಇವರು ಭಾರತದ ಕೈಗಾರಿಕಾ [illegible] ಸ್ವತಂತ್ರ ಭಾರತದ [illegible] ಸಾರ್ವಜನಿಕ ಉದ್ಯಮವಾದ '[illegible]



ಹೊಣೆಗಾರಿಕೆ :

ಶ್ರೀರಾಮ್ ಅವರು ಸ್ಥಾಪಿಸಿದ ಉದ್ಯಮಗಳು ಹಲವು ಬಗೆಯವು. ವಸ್ತ್ರೋದ್ಯಮ. ಆಲ್ಕೊಹಾಲ್. ಹೊಲಿಗೆಯಂತ್ರ, ವನಸ್ಪತಿ, ಭಾರೀ ಪ್ರಮಾಣದಲ್ಲಿ ರಾಸಾಯನಿಕಗಳ ತಯಾರಿಕೆ, ಕುಂಭೋದ್ಯಮ. ವಿದ್ಯುತ್ ಫ್ಯಾನ್‌ಗಳು, ಮೋಟರುಗಳು ಇತ್ಯಾದಿ.

1884ರಲ್ಲಿ ಲಾಲಾ ಶ್ರೀರಾಮ್‌ರ ಜನನ. ತಂದೆ ಮದನಮೋಹನಲಾಲ್ ದೆಹಲಿ ಕ್ಲಾತ್ ಮಿಲ್ಸ್‌ನಲ್ಲಿ ಗುಮಾಸ್ತರಾಗಿದ್ದರು. 'ನಾನು ಮೂರನೆಯ ತರಗತಿಯಲ್ಲಿ ಮ್ಯಾಟ್ರಿಕ್ ಪಾಸು ಮಾಡಿದವನು ಪರವಾಗಿಲ್ಲ, ಅಲ್ಲವೆ ?' ಎಂದು, ಹಿರಿಯ ಉದ್ಯಮಿಯಾಗಿದ್ದಾಗ ತಮ್ಮ ಬಗೆಗೆ ಶ್ರೀರಾಮ್ ಹೇಳಿಕೊಳ್ಳುತ್ತಿದ್ದುದುಂಟು. ಕಾಲೇಜು ಮೆಟ್ಟಿಲು ಹತ್ತಿದರೂ ಕಾರಣಾಂತರದಿಂದ ವ್ಯಾಸಂಗ ಮುಂದುವರಿಸಲಾಗಲಿಲ್ಲ. 25 ರೂ. ವೇತನದ ಮೇಲೆ ಒಂದು ಅಂಗಡಿಯಲ್ಲಿ ಚಿಕ್ಕ ಕೆಲಸಕ್ಕೆ ಸೇರಿದರು. ಅನಂತರ ಒಬ್ಬ ಗೆಳೆಯನೊಡನೆ ಕೂಡಿ ಇಬ್ಬರ ಉಳಿತಾಯವನ್ನೂ ಸೇರಿಸಿ, ಅಂಗಡಿ ಆರಂಭಿಸಿದರು. ಆದರೆ ಇದು ಕುದುರಲಿಲ್ಲ. ತಮ್ಮ 25ನೆಯ ವಯಸ್ಸಿನಲ್ಲಿ ದೆಹಲಿ ಕ್ಲಾತ್ ಮಿಲ್ಸ್‌ನಲ್ಲಿ (ಡಿ.ಸಿ.ಎಂ.) ವೇತನರಹಿತ ಕೆಲಸಕ್ಕೆ ಶ್ರೀರಾಮ್ ಸೇರಿದರು. ಅವರ ಉದ್ಯಮ ಜೀವನಕ್ಕೆ ಇದೇ ನಾಂದಿಯಾಯಿತು. ಮುಂದೆ ಅವರು ಡಿ.ಸಿ.ಎಂ.ನ ಆಡಳಿತ ನಿರ್ವಾಹಕ ಮಂಡಲಿಯ ಅಧ್ಯಕ್ಷರಾದರು.

ಕೈಗಾರಿಕೋದ್ಯಮ ಕ್ಷೇತ್ರದಲ್ಲಿ ಯಶಸ್ಸು ಗಳಿಸಿದ ಶ್ರೀರಾಮ್ ಅನೇಕ ಶಾಲೆ ಕಾಲೇಜುಗಳು, ಕೈಗಾರಿಕಾ ಸಂಸ್ಥೆಗಳು ಮತ್ತು ಸಂಶೋಧನಾ ಸಂಸ್ಥೆಗಳ ಸ್ಥಾಪನೆಗೆ ನೆರವಾದರು.

1963 ಜನವರಿ 11ರಂದು ಅವರು ನಿಧನಹೊಂದಿದರು. ಅವರು ಬಿಟ್ಟುಹೋದ ಕೈಗಾರಿಕೋದ್ಯಮಗಳ ಮೌಲ್ಯ 58 ಕೋಟಿ ರೂಪಾಯಿ.

ಲಾಲಾ ಹರದಯಾಳ್

1913ರಲ್ಲಿ ಅಮೆರಿಕದಲ್ಲಿ ಗದರ್ ಪಕ್ಷವನ್ನು ಸ್ಥಾಪಿಸಿ, ಬ್ರಿಟಿಷ್ ಪ್ರಭುತ್ವದ ವಿರುದ್ಧ ಕ್ರಾಂತಿಯ ಕಿಡಿ ಹಬ್ಬಿಸಿದವರು ಲಾಲಾ ಹರದಯಾಳ್. ಆ ಪಕ್ಷದ ಉದ್ದೇಶ ಸಾಧನೆಗಾಗಿ 'ಗದರ್' ಪತ್ರಿಕೆಯನ್ನೂ ಅವರು ಪ್ರಾರಂಭಿಸಿದರು.

ಹರದಯಾಳ್ ಹುಟ್ಟಿದ್ದು 1884ರಲ್ಲಿ, ದೆಹಲಿಯಲ್ಲಿ. 1904ರಲ್ಲಿ ಪಂಜಾಬ್ ವಿಶ್ವವಿದ್ಯಾನಿಲಯದಲ್ಲಿ ಉಚ್ಚ ಶಿಕ್ಷಣ ಮುಗಿಸಿ, ಹೆಚ್ಚಿನ ಓದಿಗಾಗಿ ಆಕ್ಸ್‌ಫರ್ಡ್‌ಗೆ ಹೋದರು. ಅಲ್ಲಿ ಇವರಿಗೆ ವಿನಾಯಕ ದಾಮೋದರ್ ಸಾವರ್‌ಕರರ ಸ್ನೇಹವಾಯಿತು.

'ಗದರ್' ಚಟುವಟಿಕೆ : ಹರದಯಾಳ್



ಕ್ರಾಂತಿಕಾರರಾಗಿ 1908ರಲ್ಲಿ ಭಾರತಕ್ಕೆ ಹಿಂದಿರುಗಿದರು. ಬ್ರಿಟಿಷ್ ಸರಕಾರ ಇವರನ್ನು ಬಂಧಿಸಲು ಯತ್ನಿಸಿತು. ಇವರು ಇಲ್ಲಿಂದ ತಪ್ಪಿಸಿಕೊಂಡು ಅಮೆರಿಕ ಸೇರಿದರು. ಅಲ್ಲಿ ಮೊದಲು ಬರ್ಕ್ಲೀ, ಬಳಿಕ ಸ್ಟ್ಯಾನ್‌ಫರ್ಡ್ ವಿಶ್ವವಿದ್ಯಾನಿಲಯಗಳಲ್ಲಿ ಪ್ರಾಧ್ಯಾಪಕರಾದರು. ವಿದ್ಯೆಯ ವಿಕ್ರಯ ಸಲ್ಲದೆಂದು ವೇತನ ಪಡೆಯುತ್ತಿರಲಿಲ್ಲ. ಒಳ್ಳೆಯ ವಾಗ್ಮಿ, ಬರೆಹಗಾರರೆಂದು ಕೀರ್ತಿ ಗಳಿಸಿದರು. ಅನಂತರ ಗದರ್ ಪಕ್ಷದ ಸ್ಥಾಪನೆ ಮತ್ತಿತರ ಕ್ರಾಂತಿಕಾರೀ ಚಟುವಟಿಕೆಗಳಲ್ಲಿ ನಿರತರಾದರು.

1938ರಲ್ಲಿ ಭಾರತಕ್ಕೆ ಮರಳಲು ಬ್ರಿಟಿಷ್ ಸರಕಾರ ಅವರಿಗೆ ಅನುಮತಿ ನೀಡಿತು. ಭಾರತಕ್ಕೆ ಬಂದರೂ, ಪುನಃ ಅಮೆರಿಕಕ್ಕೆ ಹಿಂದಿರುಗಿದರು. 1939 ಮಾರ್ಚ್ 4ರಂದು ಅಲ್ಲಿ ನಿಧನರಾದರು.

ನೋಡಿ : ಗದರ್ ಪಕ್ಷ

ಲಿಚ್ಛವಿಗಳು

ಭಾರತದ ಈಶಾನ್ಯ ಭಾಗದಲ್ಲಿದ್ದ ಒಂದು ಪ್ರಾಚೀನ ಬುಡಕಟ್ಟಿನ ಜನರು ಲಿಚ್ಛವಿಗಳು. ಈಗಿನ ನಾಗ ಜನರಿಗೆ ಮೂಲ ಇವರೇ ಇರಬಹುದೆಂಬ ತರ್ಕವಿದೆ. ಇವರು ಸರ್ಪವನ್ನು ಆರಾಧಿಸುತ್ತಿದ್ದರು. ಇವರ ರಾಜಧಾನಿಯ ಅಧಿದೇವತೆ ನಾಗ.

ಕ್ರಿ.ಪೂ. 5ನೆಯ ಶತಮಾನದ ವರೆಗೆ ಪ್ರಾಬಲ್ಯದಲ್ಲಿದ್ದ ಲಿಚ್ಛವಿಗಳ ರಾಜ್ಯವನ್ನು ಬಿಂಬಿಸಾರನ ಮಗ ಅಜಾತಶತ್ರು ಗೆದ್ದುಕೊಂಡ. ಅವರ ರಾಜಧಾನಿ ವೈಶಾಲಿಯೂ ಅವನ ವಶವಾಯಿತು. ಆದರೂ ಲಿಚ್ಛವಿ ಬುಡಕಟ್ಟು ತನ್ನ ವೈಶಿಷ್ಟ್ಯವನ್ನು ಉಳಿಸಿಕೊಂಡು ಕ್ರಿಸ್ತ ಶಕ ನಾಲ್ಕನೆಯ ಶತಮಾನದಲ್ಲಿ, ಮಗಧ ಸಾಮ್ರಾಜ್ಯದಲ್ಲಿ ಮತ್ತೆ ಒಂದು ಪ್ರಭಾವಶಾಲಿ ಘಟಕವಾಯಿತು.

320ರಲ್ಲಿ ಗುಪ್ತ ಸಮ್ರಾಟ ಮೊದಲನೆಯ ಚಂದ್ರಗುಪ್ತ ಲಿಚ್ಛವಿ ರಾಜಕುಮಾರಿ ಕುಮಾರದೇವಿಯನ್ನು ವರಿಸಿದ. ಅನಂತರದ ಗುಪ್ತವಂಶದ ದೊರೆಗಳ ಕಾಲದಲ್ಲಿ ಲಿಚ್ಛವಿಗಳು ಕ್ಷೀಣಿಸಿದರು.

ಕ್ರಿಸ್ತ ಪೂರ್ವದಲ್ಲಿ ಲಿಚ್ಛವಿ, ಭಾರತದ ಷೋಡಶ ಮಹಾಜನಪದಗಳಲ್ಲಿ ಒಂದಾದ ವೃಜಿಯ ಪ್ರಮುಖ ಅಂಗವಾಗಿತ್ತು.

ಜಗತ್ತಿನ ಎರಡು ಮಹಾ ಧರ್ಮಗಳ ಸ್ಥಾಪಕರಾದ ಗೌತಮ ಬುದ್ಧ ಹಾಗೂ ವರ್ಧಮಾನ ಮಹಾವೀರರ ತಾಯಂದಿರು –ಮಾಯಾ ಹಾಗೂ ತ್ರಿಶಲಾ– ಲಿಚ್ಛವಿ ಬುಡಕಟ್ಟಿನವರು. ಲಿಚ್ಛವಿ ರಾಜಕುಮಾರಿಯರು ಅನನ್ಯ ಸುಂದರಿಯರೆಂದೂ ವಿದ್ಯಾವತಿಯರೆಂದೂ ಪ್ರಸಿದ್ಧರಾಗಿದ್ದರು. ಆಗಿನ ಪೂರ್ವ ಭಾರತದ ರಾಜಕುವರರು ಲಿಚ್ಛವಿ ಕನ್ಯೆಯರನ್ನು ಮದುವೆಯಾಗಲು ಬಯಸುತ್ತಿದ್ದರು. ಟಿಬೆಟ್, ನೇಪಾಳಗಳೊಡನೆ ಲಿಚ್ಛವಿಗಳ ನಿಕಟ ಸಂಪರ್ಕವಿದ್ದಿತು; 350ರಿಂದ 880ರ ವರೆಗೆ ಲಿಚ್ಛವಿ ಮನೆತನ ನೇಪಾಳವನ್ನು ಕೂಡ ಆಳಿತು.

ಲಿಚ್ಛವಿ ಗಣರಾಜ್ಯ ಸುಮಾರು ಒಂದು ಸಾವಿರ ವರ್ಷಕಾಲ ಅಸ್ತಿತ್ವದಲ್ಲಿದ್ದು, ಉಳಿದೆಲ್ಲ ಪ್ರಾಚೀನ ಭಾರತೀಯ ಗಣರಾಜ್ಯಗಳಿಗಿಂತ ದೀರ್ಘ ಕಾಲ ಬಾಳಿತು.

'ಲೀಲಾವತೀ'

12ನೆಯ ಶತಮಾನದ ಪ್ರತಿಭಾವಂತ ಗಣಿತಜ್ಞ ಭಾಸ್ಕರಾಚಾರ್ಯನ ಮಗಳು ಲೀಲಾವತೀ. ಆಕೆಗೆ ಚಿಕ್ಕವಯಸ್ಸಿನಲ್ಲೇ ವೈಧವ್ಯ ಪ್ರಾಪ್ತಿಯಾದಾಗ ಅವಳ ದುಃಖ ಮರೆಸಲು ಭಾಸ್ಕರಾಚಾರ್ಯ ನಿರೂಪಿಸಿದ್ದು 'ಲೀಲಾವತೀ ಗಣಿತ' ಎಂಬುದು ಪರಂಪರಾಗತ ನಂಬಿಕೆ.

ಇದು 'ಲೀಲಾವತೀ–ಗಣಿತ' ಅಥವಾ 'ಲೀಲಾವತೀ' ಗ್ರಂಥವನ್ನು ಕುರಿತ ಕಥೆ. ಭಾಸ್ಕರಾಚಾರ್ಯನಿಂದ ಸಂಸ್ಕೃತದಲ್ಲಿ ಬರೆಯಲ್ಪಟ್ಟ

'ಸಿದ್ಧಾಂತ ಶಿರೋಮಣಿ' ಎಂಬ ಬೃಹತ್‌ಗ್ರಂಥದ ಒಂದು ಭಾಗ ಇದು. ಸಾಹಿತ್ಯ ಗಣಿತಗಳೆರಡೂ ಇದರಲ್ಲಿ ಒಂದಾಗಿ ಬೆರೆತಿವೆ. ಲೀಲಾವತಿಯನ್ನು "ಬಾಲೇಬಾಲ ಕುರಂಗ ಲೋಲ ನಯನೇ", "ಮೃಗಾಕ್ಷಿ" ಎಂದು ಮುಂತಾಗಿ ಭಾಸ್ಕರಾಚಾರ್ಯ ಕರೆದಿದ್ದಾನೆ. ವಿನೋದಕ್ಕಾಗಿ ಲೀಲಾವತಿ ಎಂಬ ಕಾಲ್ಪನಿಕ ಪಾತ್ರವನ್ನು ಅವನು ಸೃಷ್ಟಿಸಿರಬಹುದೆಂಬ ಶಂಕೆಯೂ ಇದೆ.

'ಲೀಲಾವತೀ'ಯಲ್ಲಿ ಅಂಕಗಣಿತ ಮತ್ತು ರೇಖಾಗಣಿತ ವಿಷಯವಾಗಿ 13 ಅಧ್ಯಾಯಗಳಿವೆ. ಗಣೇಶ ಸ್ತುತಿಯಿಂದ ಆರಂಭವಾಗಿ ಸಂಕಲನ, ವ್ಯವಕಲನ, ಗುಣಾಕಾರ, ಭಾಗಾಕಾರ, ವರ್ಗ, ಘನ, ಭಿನ್ನರಾಶಿ, ಬಡ್ಡಿ, ಶ್ರೇಢಿ ಇತ್ಯಾದಿ ವಿಷಯಗಳು ಗ್ರಂಥದಲ್ಲಿವೆ. ಸೊನ್ನೆಯನ್ನು ಕುರಿತಾದ ಗಣಿತಕ್ರಿಯೆಗಳ ಬಗೆಗೆ ವಿವರವಾಗಿ ಚರ್ಚಿಸಲಾಗಿದೆ. ಸೊಗಸಾದ ಉದಾಹರಣೆಗಳನ್ನು ಒಳಗೊಂಡ 'ಲೀಲಾವತೀ'ಯಲ್ಲಿ ಅಂಕಗಣಿತ ನಿಯಮ ಪ್ರತಿಪಾದನೆ ಹೆಚ್ಚು ಸ್ಪಷ್ಟ.

"ವರ್ಗಮೂಲ ಸಮೀಪಿಸಿದ್ದರಿಂದ ಒಂದು ಕೊಳದಲ್ಲಿದ್ದ ಹಂಸಗಳಲ್ಲಿ ಅವುಗಳ ಒಟ್ಟು ಸಂಖ್ಯೆಯ ವರ್ಗಮೂಲದ ಹತ್ತರಷ್ಟು ಮಾನಸ ಸರೋವರಕ್ಕೆ ಹೋದುವು; ⅛ಭಾಗದಷ್ಟು ಪದ್ಮಿನೀ ವನಕ್ಕೆ ಹೋದುವು. ಉಳಿದ ಮೂರು ಜೊತೆ ಹಂಸಗಳು ಜಲಕ್ರೀಡೆಯಲ್ಲಿ ನಿರತವಾಗಿ ಕೊಳದಲ್ಲಿಯೇ ಇದ್ದುವು. ಹಂಸಗಳ ಒಟ್ಟು ಸಂಖ್ಯೆ ಎಷ್ಟು?" (ಉತ್ತರ: 144).

"ಒಂಬತ್ತು ಮೊಳ ಕಂಬದ ಮೇಲೆ ಒಂದು ನವಿಲು ಕುಳಿತಿದೆ. ಆ ಕಂಬದ ಬುಡದಲ್ಲಿರುವ ಹುತ್ತದೆಡೆಗೆ 27 ಮೊಳ ದೂರದಿಂದ ಒಂದು ಹಾವು ಹರಿದುಬರುತ್ತಿದೆ. ಇದನ್ನು ಕಂಡ ನವಿಲು, ನೇರವಾಗಿ ಬಂದು ಹಾವನ್ನು ಹಿಡಿದುಬಿಡುತ್ತದೆ. ನವಿಲಿನ ವೇಗ, ಹಾವಿನ ವೇಗ ಒಂದೇ ಆದರೆ, ಹುತ್ತದಿಂದ ಎಷ್ಟು ದೂರದಲ್ಲಿ ಹಾವು ಸಿಕ್ಕಿಬೀಳುತ್ತದೆ?" (ಉತ್ತರ: 12 ಮೊಳ).

ಶ್ಲೋಕರೂಪದ ಇಂಥ 277 ಮನೋಜ್ಞ ಲೆಕ್ಕಗಳು 'ಲೀಲಾವತೀ'ಯಲ್ಲಿವೆ.

ಈ ಗ್ರಂಥವನ್ನು ಅಕ್ಬರನ ಆಸ್ಥಾನದಲ್ಲಿದ್ದ ಅಬುಲ್ ಫಜಲ್ ಫೈಜಿ 1587ರಲ್ಲಿ ಪರ್ಷಿಯನ್ ಭಾಷೆಗೆ ಅನುವಾದಿಸಿದ.

ನೋಡಿ : ಭಾಸ್ಕರಾಚಾರ್ಯ —ಸಂಪುಟ ೩

ಲೂಯಿ ರೈಸ್



'ಮೊದಲಿಗ' : ರೈಸ್

ಕನ್ನಡ ಶಾಸನ, ಸಾಹಿತ್ಯ ಹಾಗೂ ಕನ್ನಡ ನಾಡಿನ ಇತಿಹಾಸ ರಂಗಗಳಿಗೆ ಅಪೂರ್ವ ಸೇವೆ ಸಲ್ಲಿಸಿದ ಘನ ವಿದ್ವಾಂಸ ಬೆಂಜಮಿನ್ ಲೂಯಿ ರೈಸ್.

ಇವರು ಭಾರತಕ್ಕೆ ಬಂದದ್ದು ಕ್ರೈಸ್ತ ಪಾದ್ರಿಯಾಗಿ. ಇವರ ಕಾರ್ಯಕ್ಷೇತ್ರ ಹಿಂದಿನ ಮೈಸೂರು ಸಂಸ್ಥಾನ ಮತ್ತು ಕೊಡಗು. ಇವರು 1860 ರಲ್ಲಿ ಬೆಂಗಳೂರಿಗೆ ಬಂದ ನಂತರ. ಬಂದೊಡನೆ ಕನ್ನಡವನ್ನು ಕಲಿತರು. ತಮಿಳು, ಸಂಸ್ಕೃತ ಭಾಷೆಗಳನ್ನು ಕಲಿತರು. ಕ್ರೈಸ್ತಮತ ಪ್ರಚಾರಕ್ಕಾಗಿ ಅನೇಕ ಪುಸ್ತಕಗಳನ್ನು ಬರೆದರು. ಮತ ಪ್ರಚಾರದಷ್ಟೇ ಶಿಕ್ಷಣ ರಂಗದಲ್ಲೂ ಇವರಿಗೆ ವಿಶೇಷ ಆಸಕ್ತಿ ಇತ್ತು. ಶಾಲೆಗಳ ಉಪಯೋಗಕ್ಕಾಗಿ ಕನ್ನಡದಲ್ಲಿ ಪಠ್ಯಪುಸ್ತಕಗಳನ್ನೂ ರಚಿಸಿದರು. ಇದಲ್ಲದೆ ಜನರ ತಿಳಿವಳಿಕೆಯನ್ನು ಅಭಿವೃದ್ಧಿಪಡಿಸುವ ಉದ್ದೇಶದಿಂದ 1862ರಲ್ಲಿ 'ಅರುಣೋದಯ' ಎಂಬ ಪತ್ರಿಕೆಯನ್ನು ಸ್ಥಾಪಿಸಿ ನಡೆಸಿಕೊಂಡು ಬಂದರು.

ಶಿಕ್ಷಣ ಮತ್ತು ಸಂಶೋಧನೆಯ ರಂಗದಲ್ಲಿ ರೈಸ್ ಅವರಿಗೆ ಇದ್ದ ಆಸಕ್ತಿಯನ್ನು ಗಮನಿಸಿ ಅಂದಿನ ಸರಕಾರದವರು ಅವರನ್ನು ಮೈಸೂರು ಮತ್ತು ಕೊಡಗಿನ ಶಿಕ್ಷಣ ಮತ್ತು ಪುರಾತತ್ತ್ವ ಶೋಧನೆ ಶಾಖೆಯ ನಿರ್ದೇಶಕರನ್ನಾಗಿ ನಿಯಮಿಸಿದರು. ಈ ಅಧಿಕಾರಾವಧಿಯಲ್ಲಿ ಲೂಯಿ ರೈಸ್ ಅವರು ಮೈಸೂರಿನ ಮತ್ತು ಕೊಡಗಿನ ವಿವಿಧ ಭಾಗಗಳಲ್ಲಿ ಸಂಚರಿಸಿದರು. ಪ್ರಾಚೀನ ಶಿಲಾಶಾಸನಗಳನ್ನು ಹುಡುಕಿ, ಓದಿ, ಸಂಶೋಧಿಸಿ ಅವನ್ನು ಪ್ರಕಟಿಸಿದರು. 'ಮೈಸೂರು ಗಜೆಟಿಯರ್' ರಚಿಸಿದರು. 'ಪಂಪಭಾರತ', 'ಅಮರಕೋಶ' ಮುಂತಾದ ಪ್ರಾಚೀನ ಕನ್ನಡ ಸಂಸ್ಕೃತ ಗ್ರಂಥಗಳನ್ನು ಸಂಶೋಧಿಸಿ ಪ್ರಕಟಿಸಿದರು. ಮುಂದೆ ಸಂಶೋಧನ ರಂಗದಲ್ಲಿ ಖ್ಯಾತರಾದ ಆರ್. ನರಸಿಂಹಾಚಾರ್ಯರ ವಿದ್ವತ್ತನ್ನು ಗಮನಿಸಿ, ಅವರನ್ನು ತಮ್ಮ ಸಹಾಯಾಧಿಕಾರಿಯಾಗಿ ನಿಯಮಿಸಿಕೊಂಡು ಸಂಶೋಧನೆಯ ಬಗೆಗೆ ಅವರಿಗೆ ಪ್ರೋತ್ಸಾಹ, ಮಾರ್ಗದರ್ಶನ ಕೊಟ್ಟರು. ಅವರು ತಮ್ಮ ಅಧಿಕಾರದಿಂದ ನಿವೃತ್ತರಾದಮೇಲೂ ಕನ್ನಡ ಸಾಹಿತ್ಯ, ಸಂಶೋಧನೆಗಳಲ್ಲಿ ಆಸಕ್ತಿ ಉಳಿಸಿಕೊಂಡು ಬಂದು ಈ ಕ್ಷೇತ್ರಗಳಲ್ಲಿ ಕೆಲಸ ಮಾಡುತ್ತಿದ್ದವರಿಗೆ ಅಮೂಲ್ಯ ಸಲಹೆ, ಸೂಚನೆಗಳನ್ನು ಕೊಡುತ್ತಿದ್ದರು.

7ನೆಯ ಶತಮಾನಕ್ಕೂ ಹಿಂದಿನ ಕನ್ನಡ ಸಾಹಿತ್ಯದ ಬಗೆಗೆ ಹೇಳುತ್ತ "ಆ ಕಾಲಕ್ಕೆ ಕನ್ನಡದಲ್ಲಿ ವಿಪುಲವಾದ ಸಾಹಿತ್ಯವೂ ಸಮೃದ್ಧ ಭಾಷಾ ಕೃಷಿಯೂ ನಡೆಯದೆ ಹೋಗಿದ್ದರೆ, ಅಂಥ ಉದ್ಗ್ರಂಥಗಳ ರಚನೆ ಶಕ್ಯವೂ ಇರಲಿಲ್ಲ, ಅವಶ್ಯವೂ ಇರಲಿಲ್ಲ" ಎಂಬ ಅಭಿಪ್ರಾಯವನ್ನು ರೈಸ್ ವ್ಯಕ್ತಪಡಿಸಿದ್ದಾರೆ. ಕನ್ನಡದಲ್ಲಿ ಉತ್ಕೃಷ್ಟ ಸಾಹಿತ್ಯ ಕೃತಿಗಳನ್ನು ಸಿದ್ಧಮಾಡಿದವರಲ್ಲಿ ಮೊದಲಿಗ ಎಂಬ ಕೀರ್ತಿ ರೈಸ್‌ರಿಗೆ ಸಲ್ಲುತ್ತದೆ.

ಲೊಥಲ್

ಪ್ರಾಚೀನ ಹರಪ್ಪಾ ಸಂಸ್ಕೃತಿಯ ಸಮಕಾಲೀನ ನಗರ ಲೊಥಲ್. ಇದರ ನಿವೇಶನ ಗುಜರಾತ್ ರಾಜ್ಯದಲ್ಲಿ ಅಹಮದಾಬಾದಿನಿಂದ 80 ಕಿ.ಮೀ. ದೂರದಲ್ಲಿದೆ.

1955–62 ಅವಧಿಯಲ್ಲಿ ಇಲ್ಲಿ ಪುರಾತತ್ತ್ವ ಶೋಧನೆ ನಡೆಯಿತು. ಆಗ ಬೆಳಕಿಗೆ ಬಂದಿರುವ ಹಡಗುಕಟ್ಟೆ, ಉಗ್ರಾಣ, ನಗರ ವ್ಯವಸ್ಥೆ ವಿಸ್ಮಯಕರವಾದದ್ದು.

ಕ್ರಿ.ಪೂ. 2450ರಿಂದ 2350ರ ವರೆಗೆ ಲೊಥಲ್ ರೇವು ಬಳಿ ಚಿಕ್ಕ ದೋಣಿಗಳು ಮಾತ್ರ ಲಂಗರು ಹಾಕುವ ಸೌಲಭ್ಯವಿತ್ತು. ಕ್ರಿ.ಪೂ. 2350ರಲ್ಲಿ ಮಹಾಪೂರದಿಂದ ಪಟ್ಟಣ ನಾಶವಾಯಿತು. ಅದನ್ನು ಪುನರ್ರಚಿಸಿದಾಗ ದೊಡ್ಡ ದೊಡ್ಡ ಹಡಗುಗಳು ಬಂದು ನಿಲ್ಲಲು ವ್ಯವಸ್ಥೆ ಮಾಡಲಾಯಿತು. ನದಿಯ ಮುಖ್ಯ ಪ್ರವಾಹದಿಂದಾಚೆ ಹಡಗು ಅಂಗಳವನ್ನು ಕಟ್ಟಿದರು. ಇದರಿಂದ, ಬಿರುಗಾಳಿಯ ಸಮಯದಲ್ಲೂ ಹಡಗು ಬಂದು



ಪ್ರಾಚೀನ ಹಡಗು ಕಟ್ಟೆ : ಲೊಥಲ್

ನಿಲ್ಲುವುದು ಸಾಧ್ಯವಾಯಿತು. 20–25 ಮೀಟರ್ ಉದ್ದದ ಹಡಗುಗಳು ಇಲ್ಲಿ ಪ್ರವೇಶಿಸಬಹುದಿತ್ತು. ಒಟ್ಟಿಗೆ 30 ಹಡಗುಗಳು ನಿಲ್ಲಲು ಅವಕಾಶವಿದ್ದಿತು. ಇಲ್ಲಿ ಉಪಯೋಗಿಸಿದ ಇಟ್ಟಿಗೆಗಳು ಶ್ರೇಷ್ಠ ದರ್ಜೆಯವು. ಹಡಗಿನಿಂದ ಸಾಮಾನು ಇಳಿಸಲು, ಅದಕ್ಕೆ ಭರ್ತಿ ಮಾಡಲು ಪ್ರತ್ಯೇಕ ಹಡಗುಕಟ್ಟೆ ಇದ್ದಿತು. ಹೂಳು ತೆಗೆಯಲು ಉತ್ತಮ ವ್ಯವಸ್ಥೆ ಇತ್ತು.

ಲೊಥಲ್‌ನಲ್ಲಿ ಕೆಳಪಟ್ಟಣ ಮತ್ತು ಮೇಲುಪಟ್ಟಣ ಎಂದು ಎರಡು ವಿಭಾಗಗಳಿದ್ದುವು. ಮೇಲುಪಟ್ಟಣದಲ್ಲಿ ಆಳುವವರು ಇರುತ್ತಿದ್ದರು. ಕೆಳಪಟ್ಟಣದಲ್ಲಿ ಧನಿಕ ವಣಿಕರು, ಕುಶಲ ಕರ್ಮಿಗಳು ಮತ್ತು ಜನಸಾಮಾನ್ಯರು ಇರುತ್ತಿದ್ದರು. ನೆರೆ ಹಾವಳಿಯಿಂದ ತಪ್ಪಿಸಿಕೊಳ್ಳಲು 1ರಿಂದ 4 ಮೀಟರ್ ಎತ್ತರದಲ್ಲಿ ಮನೆಗಳನ್ನು ಕಟ್ಟುತ್ತಿದ್ದರು.

ಕೃಷಿ ಉತ್ಪನ್ನ, ಕಾಡು ಉತ್ಪನ್ನ ಹಾಗೂ ಸಾಗರೋತ್ಪನ್ನಗಳಿಂದ ಜನ ಸಮೃದ್ಧಿಯ ಜೀವನ ನಡೆಸುತ್ತಿದ್ದರು. ಅವರ ಸಂಪತ್ತಿಗೆ ಇನ್ನೊಂದು ಮುಖ್ಯ ಕಾರಣ ಸಾಗರೋತ್ತರ ವಾಣಿಜ್ಯ. ಅರೆಪ್ರಶಸ್ತ ಶಿಲೆಗಳನ್ನು ಮಣಿಗಳಾಗಿ ಮಾಡುವ ಉದ್ಯಮವಿತ್ತು. ಮಣಿಗಳನ್ನು ದಕ್ಷಿಣ ಅರೇಬಿಯ ಹಾಗೂ ಸುಮೇರಿಯಗಳಿಗೆ ರಫ್ತು ಮಾಡುತ್ತಿದ್ದರು. ದಂತವೂ ಇಲ್ಲಿಂದ ರಫ್ತಾಗುತ್ತಿತ್ತು. ಹತ್ತಿ ಪದಾರ್ಥ ಮತ್ತು ಮರ ಇಲ್ಲಿಂದ ಭಾರೀ ಪ್ರಮಾಣದಲ್ಲಿ ವಿದೇಶಗಳಿಗೆ ಹೋಗುತ್ತಿದ್ದುವು. ಕೆಲವು ಲೋಹಗಳು, ಉಣ್ಣೆ, ಅಂಗರಾಗಗಳು —ಇಲ್ಲಿಗೆ ಆಮದಾಗುತ್ತಿದ್ದ ಪದಾರ್ಥಗಳು.

ಕ್ರಿ.ಪೂ. 2350 ರಿಂದ 2000ರ ವರೆಗೆ 350 ವರ್ಷ ಕಾಲ, ಲೊಥಲ್ ಹಡಗು ಅಂಗಳ ಅತ್ಯುತ್ತಮ ಸ್ಥಿತಿಯಲ್ಲಿತ್ತು. ಆದರೆ ಕ್ರಿ.ಪೂ. 2000ದಲ್ಲಿ ಅದು ನಾಶವಾಯಿತು. ಮಹಾಪೂರ ಬಂದು, ನದಿ ಹಠಾತ್ತನೆ ತನ್ನ ಪಾತ್ರ ಬದಲಿಸಿ ಪೂರ್ವಾಭಿಮುಖವಾಗಿ ಹರಿಯಲಾರಂಭಿಸಿತು. ಇದರಿಂದಾಗಿ ಲೊಥಲ್ ಬಳಿ ದೊಡ್ಡ ಹಡಗುಗಳು ಬರುವುದು ಅಸಾಧ್ಯವಾಯಿತು.

ಅಲ್ಲಿಂದ 2 ಮೈಲು ದೂರದಲ್ಲಿದ್ದ ನದೀಮುಖಜ ಪ್ರದೇಶದಲ್ಲಿ ಹಡಗುಗಳು ತಂಗತೊಡಗಿದುವು. ಲೊಥಲ್‌ಗೆ ಚಿಕ್ಕ ದೋಣಿಗಳಲ್ಲಿ ಸಾಮಾನುಗಳನ್ನು ಸಾಗಿಸಲಾರಂಭಿಸಿದರು. ಲೊಥಲ್ ಅವನತಿಯ ದಾರಿ ಹಿಡಿಯಿತು. ಕ್ರಿ.ಪೂ. 1900ರಲ್ಲಿ ಇನ್ನೊಂದು ದೊಡ್ಡ ಮಹಾಪೂರದಿಂದ ಲೊಥಲ್ ಸಂಪೂರ್ಣವಾಗಿ ನಾಶವಾಯಿತು. ಪಟ್ಟಣ ಚಿಕ್ಕದಾಯಿತು. ಕ್ರಿ. ಪೂ. 1600ರ ಅನಂತರ ಇದರ ಹೆಸರೇ ಇಲ್ಲವಾಯಿತು.

1957ರಲ್ಲಿ ಪ್ರಾಚೀನ ಲೊಥಲ್ ಬೆಳಕಿಗೆ ಬಂತು. ಆ ತನಕ ಅಲ್ಲಿನ ಉಗ್ರಾಣ ಮುಚ್ಚಲ್ಪಟ್ಟಿದ್ದ ದಿಬ್ಬ ನಾವಿಕರಿಗೆ ಪವಿತ್ರ ಸ್ಥಳವಾಗಿತ್ತು. ಇದು ಸಮುದ್ರ ದೇವತೆಯ ತಾಣವೆಂದು ಅವರು ನಂಬಿದ್ದರು.

ಲೋಕಸಭೆ

'ಧರ್ಮಚಕ್ರ ಪ್ರವರ್ತನಾಯ'

('ಧರ್ಮದ ಚಕ್ರವನ್ನು ನಡೆಸಿಕೊಂಡು ಹೋಗುವುದಕ್ಕಾಗಿ')

—ಭಾರತ ಸಂಸತ್ತಿನ ಎರಡು ಸಭೆಗಳಲ್ಲಿ ಒಂದಾದ ಲೋಕಸಭೆಯ ಧ್ಯೇಯವಚನ ಇದು.

ಭಾರತಕ್ಕೆ ಸ್ವಾತಂತ್ರ್ಯ ಬಂದಮೇಲೆ 1951–52ರಲ್ಲಿ ಮೊದಲನೆಯ ಸಾರ್ವತ್ರಿಕ ಮತದಾನ ನಡೆಯಿತು. ಪ್ರಥಮ ಸಂಸತ್ತು 1952ರಲ್ಲಿ ಕೂಡಿತು.

ಮಸೂದೆಯನ್ನು ರೂಪಿಸಿ, ಚರ್ಚಿಸಿ, ಕಾನೂನಾಗಿ ಅಧಿಕೃತಗೊಳಿಸುವಲ್ಲಿ ಸಂಸತ್ತು ವಹಿಸುವ ಪಾತ್ರ ಬಹು ಮುಖ್ಯ. ಯಾವುದೇ ವಿಷಯಕ್ಕೆ ಸಂಬಂಧಿಸಿದ ಮಸೂದೆಯನ್ನು ಲೋಕಸಭೆ ಅಥವಾ ರಾಜ್ಯಸಭೆಯಲ್ಲಿ ಮಂಡಿಸಬಹುದು. ಆರ್ಥಿಕ ಹಾಗೂ ಹಣಕಾಸಿಗೆ ಸಂಬಂಧಪಟ್ಟ ಮಸೂದೆಯನ್ನು ಲೋಕಸಭೆ ಮಾತ್ರ ಮೊದಲು ವಿವೇಚನೆಗೆ ತೆಗೆದುಕೊಳ್ಳುತ್ತದೆ. ಇಲ್ಲಿ ಅಂಗೀಕೃತವಾದ ಮಸೂದೆ ರಾಜ್ಯಸಭೆಯಲ್ಲಿ ಚರ್ಚಿಸಲ್ಪಡುತ್ತದೆ; ಎರಡೂ ಸಭೆಗಳಲ್ಲಿ ಸ್ವೀಕೃತವಾದ ಮಸೂದೆಯನ್ನು ರಾಷ್ಟ್ರಪತಿ ಒಪ್ಪಿದಾಗ, ಅದು ಕಾನೂನಾಗುತ್ತದೆ.

ಏಳೂವರೆ ಲಕ್ಷ ಮತದಾರರಿಗೆ ಒಬ್ಬ ಪ್ರತಿನಿಧಿ ಎಂಬ ಲೆಕ್ಕದಂತೆ ಪ್ರತಿ ರಾಜ್ಯದಿಂದಲೂ ಇಷ್ಟು ಮಂದಿ ಪ್ರತಿನಿಧಿಗಳು ಇರಬೇಕೆಂದು ನಿಗದಿಯಾಗಿರುತ್ತದೆ. ಈ ವ್ಯವಸ್ಥೆಯಂತೆ 1972ರಲ್ಲಿ 521 ಮಂದಿ ಸದಸ್ಯರು ಲೋಕಸಭೆಗೆ ಚುನಾಯಿತರಾಗಿದ್ದರು. ಮೂರು ಮಂದಿಯನ್ನು ರಾಷ್ಟ್ರಪತಿಗಳು ನಾಮಕರಣ ಮಾಡಿದರು.

'ಧರ್ಮಚಕ್ರಪ್ರವರ್ತನಾಯ' : ಲೋಕಸಭಾ ಭವನ



21 ವರ್ಷ ಮತ್ತು ಅದಕ್ಕೆ ಮೇಲ್ಪಟ್ಟವರೆಲ್ಲ ತಮ್ಮ ಪ್ರತಿನಿಧಿಯ ಚುನಾವಣೆಯಲ್ಲಿ ಮತನೀಡಬಹುದು. ಲೋಕಸಭೆಗೆ ಉಮೇದುವಾರರಾಗುವವರು ಭಾರತದ ಪ್ರಜೆಯಾಗಿರಬೇಕು; ವಯಸ್ಸು 25ಕ್ಕೆ ಮೇಲ್ಪಟ್ಟಿರಬೇಕು.

ಸಂಸತ್ತಿನಲ್ಲಿ ಲೋಕಸಭೆಯ ಅಧಿಕಾರಾವಧಿ ಸಾಮಾನ್ಯವಾಗಿ ಐದು ವರ್ಷ. ಸಭೆಯ ಮೊದಲ ಅಧಿವೇಶನ ಆರಂಭವಾಗಲು ಗೊತ್ತಾದ ದಿನದಿಂದ ಈ ಅವಧಿಯನ್ನು ಲೆಕ್ಕ ಹಾಕುತ್ತಾರೆ. ವಿಶೇಷ ಸಂದರ್ಭಗಳಲ್ಲಿ ಈ ಅವಧಿಗೆ ಮುನ್ನವೇ ಲೋಕಸಭೆಯನ್ನು ವಿಸರ್ಜಿಸಬಹುದು. ಹಾಗೆಯೇ ತುರ್ತು ಪರಿಸ್ಥಿತಿಗಳಲ್ಲಿ ಅದರ ಅವಧಿಯನ್ನು ಒಂದು ಬಾರಿಗೆ ಒಂದು ವರ್ಷಕ್ಕೆ ಮೀರದಂತೆ ಮುಂದುವರಿಸಬಹುದು. ಆದರೆ ತುರ್ತುಪರಿಸ್ಥಿತಿಯ ಮುಕ್ತಾಯವನ್ನು ಘೋಷಿಸಿದ ಮೇಲೆ ಆರು ತಿಂಗಳಿಗಿಂತ ಹೆಚ್ಚಾಗಿ ಈ ಅವಧಿಯನ್ನು ಮುಂದುವರಿಸುವಂತಿಲ್ಲ. ಬಹುಮತ ಪಕ್ಷ ತನ್ನ ನಾಯಕನನ್ನು ಆರಿಸುತ್ತದೆ. ಹೀಗೆ ಆರಿಸಲ್ಪಟ್ಟವರು ಪ್ರಧಾನಿಯಾಗುತ್ತಾರೆ.

ಸಂವಿಧಾನದ ಪ್ರಕಾರ ವರ್ಷಕ್ಕೆ ಎರಡು ಲೋಕಸಭಾಧಿವೇಶನಗಳಾದರೂ ನಡೆಯಬೇಕು. ಅವುಗಳ ನಡುವೆ 6 ತಿಂಗಳಿಗಿಂತ ಹೆಚ್ಚು ಅಂತರ ಇರಬಾರದು. ಪ್ರಮುಖ ಅಧಿವೇಶನಗಳು ರಾಷ್ಟ್ರಪತಿಯ ಭಾಷಣದಿಂದ ಪ್ರಾರಂಭ. ಅಧಿವೇಶನದ ವರೆಗೆ ಸರಕಾರ ಮಾಡಿರುವ ಕೆಲಸಗಳು, ಸರಕಾರದ ನೀತಿ, ಮುಂದೆ ಮಾಡಲು ಉದ್ದೇಶಿಸಿರುವ ಕಾರ್ಯಗಳು, ಈ ಅಧಿವೇಶನದಲ್ಲಿ ಸರಕಾರ ಮಂಡಿಸಲಿರುವ ಮಸೂದೆಗಳು ಇವೆಲ್ಲವನ್ನು ಭಾಷಣ ಪ್ರಸ್ತಾಪಿಸುತ್ತದೆ.

ಲೋಕಸಭೆಯ ಅಧ್ಯಕ್ಷರನ್ನು ಸದಸ್ಯರೇ ಆರಿಸುತ್ತಾರೆ. ಅಧಿವೇಶನದ ನಿರ್ವಹಣೆ, ಕಾರ್ಯಕಲಾಪಗಳನ್ನು ಸುಗಮವಾಗಿ ನಡೆಸುವುದು, ಆತನ ಹೊಣೆ. ಉಪಾಧ್ಯಕ್ಷ ಮತ್ತು ಕಾರ್ಯದರ್ಶಿ ಆತನ ಸಹಾಯಕರು.

ಲೋಕಸಭೆಯಲ್ಲಿ ಸದಸ್ಯರಿಗೆ ಪೂರ್ಣ ವಾಕ್ ಸ್ವಾತಂತ್ರ್ಯ ಇರುತ್ತದೆ, ಆಡಳಿತದ ಯಾವುದೇ ಕೆಲಸದ ಮೇಲೆ ಅವರು ಟೀಕೆ ಮಾಡಬಹುದು; ಪ್ರಶ್ನೆ ಕೇಳಬಹುದು.

ವಿರೋಧ ಪಕ್ಷಗಳಲ್ಲಿ ಹೆಚ್ಚು ಸದಸ್ಯರಿರುವ ಪಕ್ಷದ ಮುಖಂಡ ವಿರೋಧ ಪಕ್ಷದ ಅಥವಾ ಪ್ರತಿ ಪಕ್ಷದ ನಾಯಕ. ಸರಕಾರದ ಕೆಲಸಕಾರ್ಯಗಳನ್ನು ಗಮನಿಸುತ್ತಿರುವುದು, ಅದರ ಕಾರ್ಯ ನೀತಿಯನ್ನು ಟೀಕಿಸುವುದು. ವಿರೋಧಪಕ್ಷದ ಮುಖ್ಯ ಕೆಲಸ.

ದಿನದ ಚರ್ಚಾ ವಿಷಯಗಳನ್ನು ಮೊದಲೇ ನಿರ್ಧರಿಸಿರುತ್ತಾರೆ. ಅನಿರೀಕ್ಷಿತವಾದ ಹಾಗೂ ವಿಶೇಷ ಸಾರ್ವಜನಿಕ ಮಹತ್ವದ ಸಂಗತಿಯನ್ನು ಚರ್ಚಿಸಬೇಕಾಗಿ ಬಂದರೆ, ಅದನ್ನು ಒಡನೆಯೇ ಚರ್ಚೆಗೆ ತೆಗೆದುಕೊಳ್ಳಲು ಸದಸ್ಯರು ಕೇಳಬಹುದು. ಲೋಕಸಭೆ ಒಪ್ಪಿಗೆ ಇತ್ತರೆ, ನಿರ್ಧರಿಸಿದ್ದ ಕಾರ್ಯಕ್ರಮವನ್ನು ಮೊಟಕುಗೊಳಿಸಿ ಈ ವಿಷಯವನ್ನು ಚರ್ಚೆಗೆ ಎತ್ತಿಕೊಳ್ಳಬಹುದು.

ಲೋಕಸಭೆಗೆ ಬಂದಾಗ ಸದಸ್ಯರು ಹಾಜರಿ ಪುಸ್ತಕದಲ್ಲಿ ಸಹಿ ಹಾಕಬೇಕು. ಅವರ ಬಳಿ ಗುರುತಿನ ಕಾರ್ಡ್ ಇಟ್ಟುಕೊಂಡಿರಬೇಕು. ಸಭಾಧ್ಯಕ್ಷರು ಭವನದೊಳಗೆ ಬಂದಾಗ ಸದಸ್ಯರು ಎದ್ದು ನಿಲ್ಲಬೇಕು. ಸಭೆ ನಡೆಯುತ್ತಿರುವಾಗ ಪ್ರವೇಶಿಸುವ ಅಥವಾ ಹೊರಹೋಗುವ ಮೊದಲು ಸದಸ್ಯರು ತಮ್ಮ ತಮ್ಮೊಳಗೆ ಗಟ್ಟಿಯಾಗಿ ಮಾತಾಡಬಾರದು. ಸದಸ್ಯರು 60 ದಿನಕ್ಕಿಂತಲೂ ಹೆಚ್ಚು ಕಾಲ ಸಭೆಗೆ ಬಾರದೆ ಇರಲು ಸಭಾಧ್ಯಕ್ಷರ ಅನುಮತಿ ಪಡೆದಿರಬೇಕು.

ತನಗೆ ಸೂಕ್ತವೆಂದು ತೋರಿದಾಗ ರಾಷ್ಟ್ರಪತಿ ಲೋಕಸಭೆಯ ಹಾಗೂ ರಾಜ್ಯ ಸಭೆಯ ಅಧಿವೇಶನ ಕರೆಯಬಹುದು.

ಲೋಕಸಭೆಯ ಕಾರ್ಯವ್ಯಾಪ್ತಿ ವಿಶಾಲವಾದದ್ದು. ಅದ್ದರಿಂದ ವಿವಿಧ ಕಾರ್ಯ ನಿರ್ವಹಣೆಗಾಗಿ ಸಭೆಯು ಕೆಲವು ಸದಸ್ಯರನ್ನೊಳಗೊಂಡ ಸಮಿತಿಗಳನ್ನು ರಚಿಸುತ್ತಾರೆ. ಸಮಿತಿ ತನಗೆ ಸಂಬಂಧಿಸಿದ ವಿಷಯವನ್ನು ಕೂಲಂಕಷವಾಗಿ ಪರಿಶೀಲಿಸಿ, ಸಭೆಗೆ ವರದಿ ಸಲ್ಲಿಸುತ್ತದೆ.

ನೋಡಿ : ರಾಜ್ಯಸಭೆ

ಲೋಕ ಸೇವಾ ಆಯೋಗ

ಪ್ರಮುಖ ವ್ಯವಸ್ಥಿತ ಸೇವಾವರ್ಗ ಹಾಗೂ ಕೇಂದ್ರ ಸರಕಾರದ ಹುದ್ದೆಗಳಿಗೆ ನೇಮಿಸಿಕೊಳ್ಳಲು ಸ್ಪರ್ಧಾತ್ಮಕ ಪರೀಕ್ಷೆಗಳನ್ನು ನಡೆಸುವ ಸಂಸ್ಥೆ ಲೋಕ ಸೇವಾ ಆಯೋಗ —ಪಬ್ಲಿಕ್ ಸರ್ವಿಸ್ ಕಮಿಷನ್.

ಭಾರತದಲ್ಲಿ ಲೋಕ ಸೇವಾ ಆಯೋಗ ರೂಪಿಸುವ ಬಗೆಗೆ 1918ರಲ್ಲೇ ಚರ್ಚೆ ನಡೆಯಿತು. 1919ರಲ್ಲಿ ಶಾಸನ ಸಿದ್ಧವಾಯಿತು. 1926ರಲ್ಲಿ ಆಯೋಗ ಸ್ಥಾಪಿತವಾಯಿತು. 1935ರ ಭಾರತ ಸರಕಾರದ ಶಾಸನದ ಅನ್ವಯ ಇದರ ಹೆಸರನ್ನು ಫೆಡರಲ್ ಪಬ್ಲಿಕ್ ಸರ್ವಿಸ್ ಕಮಿಷನ್ ಎಂದು ಬದಲಾಯಿಸಲಾಯಿತು. ಭಾರತಕ್ಕೆ ಸ್ವಾತಂತ್ರ್ಯ ದೊರೆತ ಮೇಲೆ ಇದು ಕೇಂದ್ರ ಲೋಕ ಸೇವಾ ಆಯೋಗ ಎನಿಸಿಕೊಂಡಿತು.

ಆಯೋಗದ ಒಬ್ಬ ಅಧ್ಯಕ್ಷ ಮತ್ತು 7 ಮಂದಿ ಸದಸ್ಯರನ್ನು ರಾಷ್ಟ್ರಪತಿ ನೇಮಿಸುತ್ತಾರೆ. ಇವರ ಅಧಿಕಾರದ ಅವಧಿ ಆರು ವರ್ಷ.

ಕಮಿಷನ್ ನಡೆಸುವ ಪರೀಕ್ಷೆಗಳ ಬಗೆಗೆ ಗೆಜೆಟ್ ಆಫ್ ಇಂಡಿಯಾ ಮತ್ತು ದೇಶದ ಪ್ರಮುಖ ಪತ್ರಿಕೆಗಳಲ್ಲಿ ಜಾಹೀರಾತು ಪ್ರಕಟವಾಗುತ್ತದೆ.

ಐ.ಎ.ಎಸ್., ಐ.ಪಿ.ಎಸ್., ಇಂಡಿಯನ್ ಆಡಿಟ್ ಅಂಡ್ ಅಕೌಂಟ್ಸ್ ಸರ್ವಿಸ್, ಇಂಡಿಯನ್ ನೇವಿ ಎಗ್ಸಾಮಿನೇಷನ್, ಇಂಡಿಯನ್ ಫಾರೆಸ್ಟ್ ಸರ್ವಿಸ್ ಎಗ್ಸಾಮಿನೇಷನ್, ಇಂಡಿಯನ್ ರೈಲ್ವೆ ಸರ್ವಿಸ್ ಮೊದಲಾದ ಪರೀಕ್ಷೆಗಳನ್ನು ಕಮಿಷನ್ ನಡೆಸುತ್ತದೆ. ಇದಲ್ಲದೆ ಇತರ ರೀತಿಗಳಲ್ಲೂ ಸೇವಾ ಸಿಬ್ಬಂದಿಯನ್ನು ಆರಿಸುತ್ತದೆ. ಅವರ ಸೇವೆಗೆ ಸಂಬಂಧಿಸಿದ ವಿಚಾರಗಳಲ್ಲೂ ಪರಿಶೀಲನೆ ಮಾಡುತ್ತದೆ.

ಪ್ರತಿ ರಾಜ್ಯದಲ್ಲೂ ಆಯಾ ರಾಜ್ಯಕ್ಕೆ ಸಂಬಂಧಿಸಿದಂತೆ ಪಬ್ಲಿಕ್ ಸರ್ವಿಸ್ ಕಮಿಷನ್ ಇದೆ. ಇವು ರಾಜ್ಯ ಸರಕಾರದ ಹುದ್ದೆಗಳಿಗಾಗಿ ಅಭ್ಯರ್ಥಿಗಳನ್ನು ಆರಿಸುತ್ತವೆ.

ಲೋದಿಯರು

ದೆಹಲಿಯ ಸುಲ್ತಾನರೆಂದು ಪರಿಚಿತವಾದ ಕೊನೆಯ ರಾಜವಂಶವಾದ ಲೋದಿಯರ ಆಳ್ವಿಕೆ 1451ರಿಂದ 1526ರ ವರೆಗೆ ನಡೆಯಿತು. ಸಯ್ಯಿದರ ವಂಶದ ಅಲ್ಲಾವುದ್ದೀನ್ ಆಲಂ ಷಾನಿಂದ ರಾಜ್ಯವನ್ನು ಪಡೆದ (1451) ಆಫ್ಘಾನ್ ಮೂಲದ ಬಹ್ಲೂಲ್ ಲೋದಿ ಸಮರ್ಥ ದಂಡನಾಯಕನಾಗಿದ್ದ. ಕುಗ್ಗಿದ್ದ ದೆಹಲಿ ರಾಜ್ಯವನ್ನು ನಾಲ್ಕೆಡೆಗಳಲ್ಲೂ ವಿಸ್ತರಿಸಿ, ಅದರ ಗೌರವ, ಪ್ರತಿಷ್ಠೆ ಹೆಚ್ಚಿಸಿದ. ಬಂಡೆದ್ದ ಸ್ವತಂತ್ರರಾದ ಅನೇಕ ಮಾಂಡಲಿಕರನ್ನು ಬಗ್ಗಿಸಿದ. ಜೌನ್‌ಪುರದ ಮಹಮ್ಮದೀಯ ರಾಜ್ಯವನ್ನು ನಾಶಗೊಳಿಸಿ ಅದನ್ನು ಸಾಮ್ರಾಜ್ಯಕ್ಕೆ ಸೇರಿಸಿಕೊಂಡ.

ಇವನ ವಿಶಾಲ ಸಾಮ್ರಾಜ್ಯಕ್ಕೆ ಉತ್ತರಾಧಿಕಾರಿಯಾಗಿ ಬಂದ ಇವನ ಎರಡನೆಯ ಮಗ ಮುಬಾರಕ್(1489—1517) ಈ ವಂಶದ ಅತ್ಯಂತ

ಸಮರ್ಥ ದೊರೆಯಾಗಿದ್ದ. ಬಂಗಾಳದ ಗಡಿಯ ವರೆಗೂ ತನ್ನ ರಾಜ್ಯವನ್ನು ವಿಸ್ತರಿಸಿದ. ಇಟಾವಾ, ಬಿಯಾನಾ, ಕೊಯಲ್, ಗ್ವಾಲಿಯರ್, ಧೋಲಪೂರ್ ಮುಂತಾದ ರಾಜ್ಯಗಳ ಮೇಲೆ ತನ್ನ ಅಧಿಕಾರ ಸ್ಥಾಪಿಸಿದ. ಇಂದಿನ ಆಗ್ರಾ ನಗರದ ಅಸ್ತಿಭಾರ ಹಾಕಿದ.

ಇವನ ಅನಂತರ ಪಟ್ಟಕ್ಕೇರಿದ ಇಬ್ರಾಹಿಂ(1517—26) ತನ್ನ ಸಂಬಂಧಿಕರೊಡನೆ ಜಗಳವಾಡಿದ. ಫರ್ಮೂಲಿ ಮತ್ತು ಲೋದಿ ಪಂಗಡಗಳನ್ನು ಹತೋಟಿಯಲ್ಲಿಡಲೆಂದು ದಬ್ಬಾಳಿಕೆ ನಡೆಸಿದ. ಇದು ವಿಪರೀತಕ್ಕೆ, ಅಸಮಾಧಾನರಾದ ಇವನ ಕೆಲವು ಸಂಬಂಧಿಕರು ಕಾಬೂಲ್‌ನಲ್ಲಿ ಆಳುತ್ತಿದ್ದ ತೈಮೂರನ ವಂಶಸ್ಥ ಬಾಬರನನ್ನು ಭಾರತದ ಮೇಲೆ ದಂಡೆತ್ತಿಬರಲು ಆಮಂತ್ರಿಸಿದರು. 1526ರಲ್ಲಿ ಮೊದಲ ಪಾಣಿಪತ್ ಕದನದಲ್ಲಿ ಇಬ್ರಾಹಿಂ ಸೋತ. ದೆಹಲಿ ಬಾಬರನ ವಶವಾಗಿ, ಲೋದಿ ವಂಶದ ಆಳ್ವಿಕೆ ಕೊನೆಗಂಡಿತು. ಮೊಘಲರ ರಾಜ್ಯಭಾರ ಆರಂಭವಾಯಿತು.

ಲೋಪಾಮುದ್ರಾ

ಲೋಪಾ ಮುದ್ರೆಯನ್ನು ಕುರಿತ ಪುರಾಣ ಕಥೆ ಹೀಗಿದೆ:

ಅಗಸ್ತ್ಯ ಬ್ರಹ್ಮಚರ್ಯ ಮತ್ತು ಬಡತನ ವ್ರತವನ್ನು ಕೈಗೊಂಡಿದ್ದ. ಮಕ್ಕಳಿಲ್ಲದವರು ಹೋಗುವ ಕೆಳಲೋಕಕ್ಕೆ ಪಿತೃಗಳು ಬೀಳುತ್ತಿದ್ದುದನ್ನು ಕಂಡಂತೆಯೂ ತಾನು ಬ್ರಹ್ಮಚರ್ಯ ತ್ಯಜಿಸಿ ವಂಶ ಮುಂದುವರಿಸಿಕೊಂಡು ಹೋಗುವಂತೆ ಅವರು ಹೇಳಿದಂತೆಯೂ ಅಗಸ್ತ್ಯನಿಗೆ ಭಾಸವಾಯಿತು.

ತನಗೆ ತಕ್ಕ ಪತ್ನಿ ಬೇಕೆಂದು, ಬಲು ಸುಂದರ ಹೆಣ್ಣುಮಗುವನ್ನು ಸೃಷ್ಟಿಸಿದ. ಮಕ್ಕಳಿಲ್ಲದ ವಿದರ್ಭರಾಜನಿಗೆ ಈ ಮಗುವನ್ನು ಸಾಕಲು ಕೊಟ್ಟ. ಅಲ್ಲಿ ಮಗುವಿಗೆ ಲೋಪಾಮುದ್ರಾ ಎಂದು ಹೆಸರಿಟ್ಟರು.

ಲೋಪಾಮುದ್ರಾ ಮದುವೆಗೆ ತಕ್ಕವಳಾದಳು. ಅಗಸ್ತ್ಯ ಅವಳನ್ನು ಮದುವೆಯಾಗಲು ಮುಂದೆ ಬಂದ. ವಿದರ್ಭರಾಜನಿಗೂ ರಾಣಿಗೂ ಆ ಸಂಬಂಧ ಇಷ್ಟವಾಗಲಿಲ್ಲ. ಅವರ ದುಗುಡವನ್ನು ಕಡಮೆ ಮಾಡಿ, ಲೋಪಾಮುದ್ರಾ ಅಗಸ್ತ್ಯನನ್ನು ಮದುವೆಯಾದಳು. ವಿವಾಹಾನಂತರ ಮರದತೊಗಟೆ, ಜಿಂಕೆಚರ್ಮದ ಉಡುಪುತೊಟ್ಟು ಪತಿಯೊಡನೆ ಕಾಡಿಗೆ ನಡೆದಳು. ಮನೆಗೆಲಸಗಳನ್ನು ತಾನೇ ಮಾಡಿಕೊಂಡು, ಪತಿಗೆ ಅನುಕೂಲೆಯಾಗಿ ನಡೆದುಕೊಂಡಳು; ಒಮ್ಮೆಯೂ ತಂದೆ ಮನೆಯ ವೈಭವವನ್ನು ನೆನೆಸಿಕೊಳ್ಳಲಿಲ್ಲ.

ಅಗಸ್ತ್ಯ ಸಂತಾನದ ಅಪೇಕ್ಷೆ ವ್ಯಕ್ತಪಡಿಸಿದ. "ತಂದೆ ಮನೆಯಲ್ಲಿದ್ದಂಥ ವೈಭವವಿದ್ದರೆ ಆಗಬಹುದು" ಎಂದಳು ಲೋಪಾಮುದ್ರಾ. ಅವಳ ಆಸೆ ಪೂರೈಸಲು ಅಗತ್ಯವಾದ ಹಣ ದೊರಕಿಸಲು ಅಗಸ್ತ್ಯ ಹೊರಟ.

ಮೂವರು ರಾಜರ ಬಳಿ ಹೋಗಿ, "ಸಾಲ ಮಾಡದೆ, ಯಾರಲ್ಲೂ ಬೇಡದೆ ನಿಮ್ಮ ಸಾಧ್ಯವಾದಷ್ಟು ಹಣ ಕೊಡಿರಿ"—ಎಂದು ಕೇಳಿದ. ಆದರೆ ಅವರ ಆದಾಯ ಮತ್ತು ವ್ಯಯ ಸಮವಾಗಿದ್ದುವು. ಆದ್ದರಿಂದ ಅವರಿಂದ ಯಾವ ಸಹಾಯವೂ ದೊರೆಯಲಿಲ್ಲ: ಕೊನೆಗೆ ರಾಕ್ಷಸರ ರಾಜ ಇಲ್ವಲ ಅಗಸ್ತ್ಯನಿಗೆ ಹಣಕೊಟ್ಟ. ಲೋಪಾಮುದ್ರಾ ದೃಢಸ್ಯು ಎಂಬ ಮಗನಿಗೆ ಜನ್ಮವಿತ್ತಳು. ಋಗ್ವೇದದ ಕೆಲ ಮಂತ್ರಗಳ ಹಾಡನ್ನು ರಚಿಸಿದಳು.

ನೋಡಿ: ಅಗಸ್ತ್ಯ; ಕಾವೇರಿ

ವಂಗಭಂಗ

ಲಾರ್ಡ್ ಕರ್ಜನ್ ಭಾರತದ ವೈಸ್‌ರಾಯ್ ಆಗಿದ್ದ ಅವ (1899-1905) ಆಧುನಿಕ ಭಾರತದ ಬ್ರಿಟಿಷ್ ಆಡಳಿತದ ಇತಿಹಾಸದಲ್ಲಿ ಭಾರತ ಸ್ವಾತಂತ್ರ್ಯ ಚಳುವಳಿಯ ಇತಿಹಾಸದಲ್ಲೂ ಗಮನಾರ್ಹ ಕಾಲ ಭಾರತೀಯರ ಸ್ವಾತಂತ್ರ್ಯ ಚಳುವಳಿಯ ಬಗೆಗೆ ದುರಭಿಪ್ರಾಯವನ್ನಿಟ್ಟು ಕೊಂಡಿದ್ದ ಕರ್ಜನನ ಬಿಚಾರವಾಗಿ ಭಾರತೀಯರಿಗೆ ಅಸಮಾಧಾನವಿತ್ತು ಇದು ತೀವ್ರವಾಗಿ ವ್ಯಕ್ತವಾದದ್ದು ಕರ್ಜನ್ ಬಂಗಾಳ ಪ್ರಾಂತದ ವಿಭಜ ಯನ್ನು ಘೋಷಿಸಿದಾಗ. ಇದನ್ನು 'ವಂಗಭಂಗ' ಎಂದು ಬಂಗಾಳದ ಜ ಕರೆದರು.

ಆ ಕಾಲಕ್ಕೆ ಬಂಗಾಳ ಅಧಿಪತ್ಯದ ವಿಸ್ತಾರ ಸುಮಾರು 1,89,000 ಚದ ಮೈಲು. ಜನಸಂಖ್ಯೆ ಏಳು ಕೋಟಿ ಎಂಬತ್ತು ಲಕ್ಷ. ಬಂಗಾಳದ ಪೂವ ಭಾಗ ಅಸ್ಸಾಂಗಳನ್ನು ಸೇರಿಸಿ ಒಂದು ಪ್ರಾಂತವನ್ನಾಗಿಯೂ ಪಶ್ಚಿಮ ಬಂಗಾಳ ಪ್ರದೇಶ ಒರಿಸ್ಸಾಗಳನ್ನು ಕೂಡಿಸಿ ಇನ್ನೊಂದು ಪ್ರಾಂತವನ ಗಿಯೂ ಮಾಡಬೇಕೆಂಬುದು ಕರ್ಜನನ ಘೋಷಣೆಯ ಸಾರಾಂಶ. ಬಂಗಾ ಪ್ರಾಂತವನ್ನು ಹೀಗೆ ವಿಭಜಿಸಿ ಎರಡು ಪ್ರಾಂತಗಳನ್ನಾಗಿ ಮಾಡುವುದರಿಂ ಆಡಳಿತಕ್ಕೆ ಅನುಕೂಲವಾಗುವುದೆಂಬುದು ಸರಕಾರದ ವಾದವಾಗಿತ್ತು.

ಆದರೆ ಭಾರತೀಯರ ಪ್ರತಿಕ್ರಿಯೆಯೇ ಬೇರೆಯಾಗಿತ್ತು. ದಿನದಿಂ ದಿನಕ್ಕೆ ಬಲಗೊಳ್ಳುತ್ತಿದ್ದ ಸ್ವಾತಂತ್ರ್ಯ ಚಳುವಳಿಯನ್ನು ಮುರಿಯುವುದ ಮತ್ತು ಹಿಂದೂ ಮುಸಲ್ಮಾನರ ನಡುವೆ ಒಡಕು ಹುಟ್ಟಿಸುವುದು ಇದ ಉದ್ದೇಶವೆಂದು ಅವರು ಭಾವಿಸಿದರು. ವಿಭಜನೆಯಿಂದ ಮುಸಲ್ಮಾನರಿ ಲಾಭ ಉಂಟೆಂದು ಬ್ರಿಟಿಷ್ ಅಧಿಕಾರಿಗಳು ಒಳಗೊಳಗೇ ಪ್ರಚಾ ನಡೆಸಿದ್ದು ಈ ಭಾವನೆಗೆ ಪುಷ್ಟಿಕೊಟ್ಟಿತು. ಇದರಿಂದಾಗಿ ಭಾರತೀಯರು ವಂಗ ವಿಭಜನೆಯನ್ನು ತೀವ್ರವಾಗಿ ಪ್ರತಿಭಟಿಸಿದರು.

1905 ಅಕ್ಟೋಬರ್ 16ರಂದು ಬಂಗಾಳದ ವಿಭಜನೆಯ ಘೋಷ ಆದೊಡನೆಯೇ, ಬಂಗಾಳದಾದ್ಯಂತ ಆ ದಿನವನ್ನು 'ಶೋಕ ದಿ ವನ್ನಾಗಿ ಆಚರಿಸಲಾಯಿತು. ಬೆಳಕು ಹರಿಯುತ್ತಿದ್ದಂತೆ ಜನರು ಗುಂ ಗುಂಪಾಗಿ ಸೇರಿ 'ವಂದೇಮಾತರಂ' ಗೀತೆಯನ್ನು ಹಾಡುತ್ತ ಮೆರವಣ ನಡೆಸಿದರು. ಬಂಗಾಳಿಗಳು ಐಕ್ಯ ಸೂಚಕವಾಗಿ ರಕ್ಷಾಬಂಧನ ಧರಿಸಿದರು ಉಪವಾಸ ಮಾಡಿದರು: ಸ್ವದೇಶೀ ಚಳುವಳಿಯನ್ನು ಆರಂಭಿಸಿದರ ಸರಕಾರ 'ವಂದೇಮಾತರಂ' ಹಾಡುವುದನ್ನೂ ಸಭೆಗಳನ್ನು ನಡೆ ವುದನ್ನೂ ನಿಷೇಧಿಸಿತು. ಜನರು ಈ ಆಜ್ಞೆಗಳನ್ನು ಮುರಿದರ ಈ ಚಳುವಳಿಯನ್ನು ಹತ್ತಿಕ್ಕಲು ಪೋಲೀಸರು ಸಭೆಗಳ ಮೇಲೆ ಲಾ ಪ್ರಯೋಗ ನಡೆಸಿದರು; ಗುಂಡು ಹಾರಿಸಿದರು. ಆದರೂ ಚಳುವ ನಿಲ್ಲಲಿಲ್ಲ. ವಿದ್ಯಾರ್ಥಿಗಳೂ ಚಳುವಳಿಯಲ್ಲಿ ಸೇರಿದರು. ಜನರು ಧ ಸಂಗ್ರಹಮಾಡಿ ರಾಷ್ಟ್ರೀಯ ವಿದ್ಯಾಲಯಗಳನ್ನು ಸ್ಥಾಪಿಸಿದರು. ಕಾರ್ಯಕ್ರಮ ಸ್ವದೇಶೀ ಚಳುವಳಿಯ ಒಂದು ಅಂಗವಾಯಿ ಭಯೋತ್ಪಾದಕ ಚಳುವಳಿಯೂ ರೂಪುಗೊಂಡಿತು. ಬ್ರಿಟಿಷ್ ಅಧಿಕ ಗಳ ಕೊಲೆ ನಡೆಯಿತು.

ವಂಗವಿಭಜನೆಗೆ ವಿರೋಧವಾಗಿ ನಡೆದ ಚಳುವಳಿಯ ಕಾವು ಸರಕಾ ತಟ್ಟಿತು. ಬಂಗಾಳದ ವಿಭಜನೆಯನ್ನು ರದ್ದುಗೊಳಿಸದೆ ಇದ್ದರೆ ರಾಷ್ಟ್ರ ಶಾಂತ ಪರಿಸ್ಥಿತಿ ಏರ್ಪಡುವುದಿಲ್ಲವೆಂಬುದು ಅದಕ್ಕೆ ಮನದಟ್ಟಾಯಿ 1911 ಡಿಸೆಂಬರ್ 12ನೆಯ ತಾರೀಖಿನಂದು ದೆಹಲಿಯಲ್ಲಿ ನಡ

ಬ್ರಿಟಿಷ್ ಚಕ್ರವರ್ತಿಗಳ ದರ್ಬಾರಿನಲ್ಲಿ. ಬಂಗಭಂಗವನ್ನು ರದ್ದುಗೊಳಿಸಿದ ಘೋಷಣೆಯನ್ನು ಮಾಡಲಾಯಿತು. ಇಬ್ಭಾಗವಾಗಿದ್ದ ಬಂಗಾಳ ಮತ್ತೆ ಒಂದಾಯಿತು.

ನೋಡಿ : ಕರ್ಜನ್ ; ಸ್ವದೇಶೀ ಚಳುವಳಿ

ವಂದೇ ಮಾತರಂ

ವಂದೇ ಮಾತರಂ
ಸುಜಲಾಂ ಸುಫಲಾಂ ಮಲಯಜ ಶೀತಲಾಂ
ಸಸ್ಯಶ್ಯಾಮಲಾಂ ಮಾತರಂ
ಶುಭ್ರಜ್ಯೋತ್ಸ್ನಾ ಪುಲಕಿತ ಯಾಮಿನೀಂ
ಫುಲ್ಲ ಕುಸುಮಿತ ದ್ರುಮದಲ ಶೋಭಿನೀಂ
ಸುಹಾಸಿನೀಂ, ಸುಮಧುರ ಭಾಷಿಣೀಂ
ಸುಖದಾಂ, ವರದಾಂ, ಮಾತರಂ

ಭಾರತೀಯ ಸ್ವಾತಂತ್ರ್ಯ ಹೋರಾಟದಲ್ಲಿ ದೇಶಭಕ್ತರನ್ನು ರೋಮಾಂಚನಕ್ಕೆ ಗುರಿಮಾಡಿದ ಮಂತ್ರ, ಗಲ್ಲಿಗೇರಿದ ಕ್ರಾಂತಿಕಾರರ ಕೊನೆಯುಸಿರಿನ ಘೋಷಣೆ — 'ವಂದೇ ಮಾತರಂ'.

ಗವರ್ನರ್ ವಾರನ್ ಹೇಸ್ಟಿಂಗ್ಸನ ಆಳ್ವಿಕೆಯಲ್ಲಿ ಬಂಗಾಳದಲ್ಲಿ ನಡೆದ 'ಸನ್ಯಾಸಿ ಬಂಡಾಯ'ವನ್ನು ಸ್ವಲ್ಪಮಟ್ಟಿಗೆ ಆಧರಿಸಿ ಬಂಕಿಮಚಂದ್ರ ಚಟ್ಟೋಪಾಧ್ಯಾಯರು ಬರೆದ ಕಾದಂಬರಿ 'ಆನಂದ ಮಠ'. 1883ರಲ್ಲಿ ಅದು ಪ್ರಕಟವಾಯಿತು. ಇದರಲ್ಲಿ ಬರುವ ಗೀತೆ 'ವಂದೇ ಮಾತರಂ'.

ರಾಷ್ಟ್ರಕ್ಕೆ ಮಾತೃರೂಪ ಕೊಟ್ಟ ಭಾರತಮಾತೆ ಎಂಬ ಕಲ್ಪನೆ ಆಗಿನ್ನೂ ಹೊಸದು. ಬಂಕಿಮಚಂದ್ರರು ಭಾರತವನ್ನು ಸುಜಲೆ, ಸುಫಲೆ, ಸಸ್ಯಶ್ಯಾಮಲೆ, ಬಹುಬಲ ಧಾರಿಣಿ, ಶಕ್ತಿಮಯಿ ಎಂದು ಆ ಗೀತೆಯಲ್ಲಿ ವರ್ಣಿಸಿದರು.

1886ರಲ್ಲಿ ಕಲ್ಕತ್ತೆಯಲ್ಲಿ ಎರಡನೆಯ ಕಾಂಗ್ರೆಸ್ ಅಧಿವೇಶನ ಜರಗಿದಾಗ ಅಲ್ಲಿ ತರುಣ ರವೀಂದ್ರನಾಥ ಠಾಕೂರರು ಸುಶ್ರಾವ್ಯವಾಗಿ 'ವಂದೇ ಮಾತರಂ' ಹಾಡಿದರು. ಅನಂತರ ಪ್ರತಿಯೊಂದು ಕಾಂಗ್ರೆಸ್ ಅಧಿವೇಶನದಲ್ಲೂ ಪ್ರಾರಂಭದಲ್ಲಿ ಈ ಗೀತೆಯನ್ನು ಹಾಡುವ ಸಂಪ್ರದಾಯ ಬೆಳೆಯಿತು.

1905ರಲ್ಲಿ ಬಂಗಾಳವನ್ನು ವಿಭಜಿಸುವ ಸೂಚನೆಯ ವಿರುದ್ಧ ಚಳುವಳಿ ತೀವ್ರವಾದಾಗ ಕಲ್ಕತ್ತೆಯ ಬೀದಿ, ಬೀದಿಗಳಲ್ಲಿ 'ವಂದೇ ಮಾತರಂ' ಘೋಷ ಮೊಳಗಿತು; ಬಂಗಾಳದ ಹಳ್ಳಿ ಹಳ್ಳಿಗಳಲ್ಲಿ ಅದು ಪ್ರತಿಧ್ವನಿತವಾಯಿತು. ಕಲ್ಕತ್ತೆಯಲ್ಲಿ 'ವಂದೇ ಮಾತರಂ ಭಿಕ್ಷು ಸಂಪ್ರದಾಯ' ಸ್ಥಾಪಿಸಲ್ಪಟ್ಟು ಪ್ರತಿ ಭಾನುವಾರ ಬೀದಿಗಳಲ್ಲಿ 'ವಂದೇ ಮಾತರಂ' ಹಾಡುತ್ತ ಮೆರವಣಿಗೆ ನಡೆಸಿ, ಚಳುವಳಿಗೆ ಸ್ವಯಂಪ್ರೇರಿತ ಕಾಣಿಕೆಗಳ ಸಂಗ್ರಹ ಆಗುತ್ತಿತ್ತು.

ಬಿಪಿನ್ ಚಂದ್ರ ಪಾಲ್, 1906ರಲ್ಲಿ ಸ್ಥಾಪಿಸಿದ ಪ್ರಭಾವಶಾಲಿ ದಿನಪತ್ರಿಕೆಯ ಹೆಸರು 'ಬಂದೇ ಮಾತರಂ'. ಅದೇ ವರ್ಷ ಕಲ್ಕತ್ತೆಯಲ್ಲಿ ರಾಷ್ಟ್ರಧ್ವಜವೆಂದು ಮಂಡಿಸಲ್ಪಟ್ಟ ಪ್ರಪ್ರಥಮ ಬಾವುಟದಲ್ಲಿ, ಮಧ್ಯದಲ್ಲಿ ಹಳದಿ ಬಣ್ಣದ ಮೇಲೆ ಕಡು ನೀಲಿ ಬಣ್ಣದಲ್ಲಿ 'ವಂದೇ ಮಾತರಂ' ಎಂದು ಬರೆದಿದ್ದರು. ಮುಂದಿನ ವರ್ಷ ಜರ್ಮನಿಯ ಸ್ಟುಟ್‌ಗಾರ್ಟ್‌ನಲ್ಲಿ ಜರಗಿದ ಅಂತರರಾಷ್ಟ್ರೀಯ ಸಮಾಜವಾದೀ ಸಮ್ಮೇಳನದಲ್ಲಿ ಭಾರತೀಯ ಮಾಡಲಾಯಿತು. ಅದರ ನಡುವಿನ [illegible] 'ವಂದೇ ಮಾತರಂ' ಬರಹ ಇತ್ತು.

ದೇಶ ಸ್ವತಂತ್ರವಾದ ಬಳಿಕ ರಾಜ್ಯಾಂಗ ರಚನಾಸಭೆಯು ಸ್ವಾತಂತ್ರ್ಯ ಹೋರಾಟದಲ್ಲಿ 'ವಂದೇ ಮಾತರಂ' ನೀಡಿದ ಪ್ರೇರಣೆಯನ್ನು ಸ್ಮರಿಸಿತು. ಸಂವಿಧಾನದಲ್ಲಿ 'ವಂದೇ ಮಾತರಂ' ಗೀತೆಗೆ ರಾಷ್ಟ್ರಗೀತೆಯ ಸಮಾನ ಗೌರವ ದೊರಕಿತು.

'ವಂದೇ ಮಾತರಂ' ಗೀತೆಯ ಜನಪ್ರಿಯ ಮಟ್ಟನ್ನು ರಚಿಸಿದವರು ಖ್ಯಾತ ಸಂಗೀತಜ್ಞ ವಿಷ್ಣು ದಿಗಂಬರ ಪಲೂಸ್ಕರರು.

ಸಮಾರಂಭಗಳ ಪ್ರಾರಂಭದಲ್ಲಿ 'ವಂದೇ ಮಾತರಂ' ಪ್ರಾರ್ಥನೆಯನ್ನು ಹಾಡುವುದುಂಟು.

ನೋಡಿ : ಜನಗಣಮನ; ರಾಷ್ಟ್ರಧ್ವಜ
ರಾಷ್ಟ್ರಗೀತೆ—ಸಂಪುಟ ೫

ವಡ್ಡಾರಾಧನೆ

ನೋಡಿ : ಸಂಪುಟ ೫

ವರ್ಣಗಳು

ಪ್ರಾಚೀನ ಹಿಂದೂಧರ್ಮದ ಸಾಮಾಜಿಕ ವ್ಯವಸ್ಥೆಯಲ್ಲಿ ಮುಖ್ಯವಾದ ಅಂಶ ವರ್ಣಗಳು. ಇವು ಮೂಲತಃ ರೂಪುಗೊಂಡದ್ದು ಸಾಮಾಜಿಕ ವ್ಯವಹಾರ ಸುವ್ಯವಸ್ಥಿತವಾಗಿ ನಡೆಯಬೇಕೆಂಬ ಉದ್ದೇಶದಿಂದ.

ಋಗ್ವೇದದ ಪುರುಷಸೂಕ್ತದಲ್ಲಿ "ವಿರಾಟ್‌ಪುರುಷನ ಮಹಾ ಶರೀರದಲ್ಲಿ, ಬ್ರಾಹ್ಮಣರು ಮುಖದಿಂದಲೂ ಕ್ಷತ್ರಿಯರು ಬಾಹುಗಳಿಂದಲೂ ವೈಶ್ಯರು ತೊಡೆಗಳಿಂದಲೂ ಶೂದ್ರರು ಪಾದಗಳಿಂದಲೂ ಉತ್ಪತ್ತಿಯಾದರು", ಎಂದು ಹೇಳಿದೆ. ಈ ಆಧಾರದ ಮೇಲೆಯೇ ಚತುರ್ವರ್ಣಗಳನ್ನು ತಲೆ, ಬಾಹು, ತೊಡೆ, ಪಾದಗಳಿಗೆ ಹೋಲಿಸಿದರು. ಚಿಂತನೆಗೆ ತಲೆ, ರಕ್ಷಣೆಗೆ ಬಾಹು, ಭದ್ರವಾಗಿ ನಿಲ್ಲಲು ತೊಡೆ, ಇಡೀ ದೇಹದ ಭಾರವನ್ನು ಹೊತ್ತ ಪಾದಗಳು — ಇವು ಒಂದನ್ನು ಬಿಟ್ಟು ಮತ್ತೊಂದು ಸ್ವತಂತ್ರವಾಗಿ ಜೀವಿಸಲಾರವು; ಒಂದು ಅಂಗಕ್ಕಿಂತ ಮತ್ತೊಂದು ಮೇಲಲ್ಲ, ಕೀಳಲ್ಲ. ಹಾಗೆಯೇ ಚತುರ್ವರ್ಣಗಳು ಪರಸ್ಪರ ಪೂರಕವಾಗಿ ದುಡಿದಾಗಲೇ ಸಮಾಜದ ಏಳಿಗೆ ಸಾಧ್ಯ—ಎಂಬುದು ಹಿಂದಿನ ತಿಳುವಳಿಕೆಯಾಗಿತ್ತು.

ಹಿಂದೂ ಸಮಾಜದಲ್ಲಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ, ಎಂದು ನಾಲ್ಕು ವರ್ಣಗಳು ಅಥವಾ ಗುಂಪುಗಳನ್ನು ಅಂಗೀಕರಿಸಲಾಗಿತ್ತು. ಜ್ಞಾನೋಪಾಸನೆ, ಧಾರ್ಮಿಕ ಚಿಂತನೆ, ಧ್ಯಾನ ಮೊದಲಾದ ಸಾತ್ವಿಕ ವಿಷಯಗಳಲ್ಲಿ ನಿರತರಾಗಿದ್ದು, ವೇದಕರ್ಮ, ಗುರುಕುಲಗಳಲ್ಲಿ ಆಚಾರ್ಯರಾಗಿರುವವರು 'ಬ್ರಾಹ್ಮಣರು', 'ಕ್ಷತ್ರಿಯರು' ಲೋಕಪಾಲಕರು, ಆಡಳಿತಗಾರರು, ರಾಷ್ಟ್ರ ಸಂರಕ್ಷಣೆಯಲ್ಲಿ ನಿರತರಾದವರು, ಶತ್ರುಗಳಿಂದ ರಾಷ್ಟ್ರವನ್ನು ರಕ್ಷಿಸುವವರು. 'ವೈಶ್ಯ'ರು ಕೃಷಿ, ವ್ಯಾಪಾರಗಳಲ್ಲಿ ನಿರತರು, ರಾಷ್ಟ್ರದ ಆರ್ಥಿಕಾಭಿವೃದ್ಧಿಗೆ ಕಾರಣರು. 'ಶೂದ್ರ'ರು ದೈಹಿಕಶ್ರಮದಲ್ಲಿ ತೊಡಗಿದವರು. ಧರ್ಮಶಾಸ್ತ್ರಗಳು ವ್ಯಾವಹಾರಿಕ ಜೀವನ ನಡೆಸುವ ರೀತಿಯನ್ನು ಗುಣ—
—ಎಂದು ಪ್ರಾಚೀನ ವರ್ಣವ್ಯವಸ್ಥೆ.

ಇವು ಆಯಾ ಗುಂಪಿನವರ ಪ್ರಧಾನ ಕಾರ್ಯವಾದರೂ, ಒಂದು ವರ್ಗದವರು ಇನ್ನೊಂದು ವರ್ಗದವರ ಉದ್ಯಮದಲ್ಲಿ ತೊಡಗಿದ್ದುಂಟು.

ವ್ಯಕ್ತಿಯ ಗುಣ, ಅವನು ಅನುಸರಿಸುವ ವೃತ್ತಿ ಇವುಗಳನ್ನು ಆಧರಿಸಿ ವರ್ಣಗಳನ್ನು ರೂಪಿಸಲಾಗಿದೆ ಎನ್ನುವ ಮಾತು ಭಗವದ್ಗೀತೆಯಲ್ಲಿ ಬರುತ್ತದೆ.

ಆದರೆ ಕ್ರಮೇಣ ಈ ವ್ಯವಸ್ಥೆ ಮೂಲ ಅರ್ಥವನ್ನು ಕಳೆದುಕೊಂಡಿತು. ವೃತ್ತಿಯಿಂದ ವರ್ಣವನ್ನು ಗುರುತಿಸುವ ಬದಲು, ಹುಟ್ಟಿನಿಂದ ಅದನ್ನು ನಿರ್ಣಯಿಸುವ ಸಂಪ್ರದಾಯ ಬೆಳೆದು, ಜಾತಿ ಪದ್ಧತಿಗೆ ಅದು ದಾರಿಮಾಡಿ ಕೊಟ್ಟಿತು.



ಪಾವಾಪುರಿ ಕ್ಷೇತ್ರ–ಬಿಹಾರ್ ರಾಜ್ಯದಲ್ಲಿ

ವರ್ಧಮಾನ ಮಹಾವೀರ

ಜೈನ ಧರ್ಮದ ಪರಂಪರೆಯು ಇಪ್ಪತ್ತನಾಲ್ಕು ಜನ ತೀರ್ಥಂಕರರನ್ನು ಮನ್ನಿಸುತ್ತದೆ. ಅಂಥವರಲ್ಲಿ ಕೊನೆಯವನು ಭಗವಾನ್ ಮಹಾವೀರ.

ಇವನು ಬಿಹಾರ ರಾಜ್ಯದಲ್ಲಿರುವ ಈಗಿನ ಬಸಾಢ ಎಂಬ ನಗರದಲ್ಲಿ ಸುಮಾರು ಕ್ರಿ.ಪೂ. 597ರಲ್ಲಿ ಜನಿಸಿದ. ಈ ಬಸಾಢ ಪಟ್ಟಣಕ್ಕೆ ಆಗಿನ ಹೆಸರು ವೈಶಾಲೀ ನಗರ. ಇದು ಗಂಡಕ್ ನದಿಯ ತೀರದಲ್ಲಿದೆ. ಅಂದು ಈ ನಗರ ಲಿಚ್ಛವಿಯರ ರಾಜಧಾನಿ. ಲಿಚ್ಛವಿಯರ ರಾಜ್ಯಪದ್ಧತಿ ಗಣಸತ್ತಾತ್ಮಕವಾದದ್ದು. ಇಂಥ 'ಗಣ' ಒಂದರ ಪ್ರತಿನಿಧಿ ಎನಿಸುತ್ತಿದ್ದವನು ಸಿದ್ಧಾರ್ಥ ರಾಜ. ಅವನ ಹೆಂಡತಿ ತ್ರಿಶಲಾದೇವಿ ಅಥವಾ ಪ್ರಿಯಕಾರಿಣೀ. ಇವರಿಬ್ಬರ ಪುತ್ರನಾಗಿ ವರ್ಧಮಾನನು ಚೈತ್ರ ಮಾಸದ ಶುಕ್ಲಪಕ್ಷದ ತ್ರಯೋದಶಿಯ ದಿನ ಜನ್ಮವೆತ್ತಿದ. ಅವನು ಹುಟ್ಟಿದ ಸ್ಥಳ ವೈಶಾಲೀನಗರದ ಒಂದು ಉಪನಗರವಾದ ಕುಂಡಲಪುರ.

ಸಿದ್ಧಾರ್ಥ–ತ್ರಿಶಲಾದೇವಿಯರು ಇಪ್ಪತ್ತಮೂರನೆಯ ತೀರ್ಥಂಕರನಾದ ಪಾರ್ಶ್ವನಾಥನ ಶ್ರಮಣ ಪರಂಪರೆಯ ಅನುಯಾಯಿಗಳು. ಮಹಾವೀರನು ಜನಿಸಿದಂದಿನಿಂದ ಆ ಮನೆತನದ ಸಿರಿ ಸಂಪತ್ತು ಹೆಚ್ಚಿದುದರಿಂದ, ಅವನಿಗೆ 'ವರ್ಧಮಾನ' ಎಂದು ಹೆಸರಾಯಿತು. ಅವನ ಬುದ್ಧಿಮತ್ತೆಯನ್ನು ಕಂಡು ಗುರುಗಳು ಅವನನ್ನು ಸನ್ಮತಿ ಎಂದೂ ಕರೆಯತೊಡಗಿದರು.

ವರ್ಧಮಾನನು ಬಾಲ್ಯದಿಂದಲೇ ವಿರಕ್ತಸ್ವಭಾವದವನು. ರಾಜಮನೆತನದಲ್ಲಿ ಬೆಳೆದವನಾದರೂ ಸುಖದಲ್ಲಿ ಮಗ್ನನಾಗಿರಲಿಲ್ಲ. ಅವನಿಗೆ ತ್ಯಾಗಿಗಳ ಸಂಪರ್ಕ ಉಂಟಾಯಿತು; ವೈರಾಗ್ಯದತ್ತ ಮನಸ್ಸು ಒಲಿಯಿತು. ತಾರುಣ್ಯದಲ್ಲಿ ಮದುವೆಗೆ ಒಪ್ಪಲಿಲ್ಲ. ಜೈನ ಶ್ವೇತಾಂಬರ ಪರಂಪರೆಯು ಮೂವತ್ತನೆಯ ವರ್ಷದಲ್ಲಿ ಭಗವಾನ್ ಮಹಾವೀರನಿಗೆ ಮದುವೆಯಾಯಿತೆಂದೂ ಹೇಳುತ್ತದೆ.

ಶಿಶು ಮಹಾವೀರನೊಡನೆ ತಾಯಿ ತ್ರಿಶಲಾದೇವಿ



'ದೀಕ್ಷೆ'ಯನ್ನು ಸ್ವೀಕರಿಸಿದ ಬಳಿಕ ವರ್ಧಮಾನ ಮನೆಬಿಟ್ಟು ಕಾಡಿಗೆ ಹೋದ. ಮೈಮೇಲೆ ಒಂದು ಅಂಗುಲ ಬಟ್ಟೆ ಸಹ ಇಲ್ಲದೆ ಬತ್ತಲೆಯಾಗಿ —ನಿರ್ಗ್ರಂಥ ಅವಸ್ಥೆ ಅಥವಾ ದಿಗಂಬರತ್ವದಲ್ಲಿ—ಬಹುದಿನಗಳವರೆಗೆ ತಪಸ್ಸು ಮಾಡಿದ. ತಲೆಗೂದಲು, ಗಡ್ಡ ಮೀಸೆಗಳು ಬೆಳೆದಾಗ ತನ್ನ ಕೈಯಿಂದಲೇ ಅವನ್ನು ಕಿತ್ತುಕೊಂಡ; ಶ್ರಮಣನಾದ. ಹನ್ನೆರಡು ವರ್ಷ ದೀರ್ಘ ತಪಸ್ಸು ಮಾಡಿದ ಮೇಲೆ ಇವನಿಗೆ ಕೇವಲಜ್ಞಾನವಾಯಿತು. ಅಂದರೆ, ಎಲ್ಲ ಚರಾಚರ ವಸ್ತುಗಳ ಜ್ಞಾನ ಅವನಿಗೆ ಪ್ರಾಪ್ತವಾಯಿತು.



ಬೋಧಕ

ಆಮೇಲೆ ಮಹಾವೀರನು ತೀರ್ಥಂಕರ ಎನಿಸಿದ. ರಾಜಗೃಹ ನಗರಕ್ಕೆ ಬಂದು, ಅಲ್ಲಿ ಮೊದಲ ಸಲ ತನ್ನ ಧರ್ಮಬೋಧೆಯನ್ನು ಮಾಡಿದ. ಅಹಿಂಸೆಯೇ ಪರಮಧರ್ಮವೆಂದು ಸಾರಿದ. ಮನುಷ್ಯನು ಅಹಿಂಸೆಯನ್ನು ಸಂಪೂರ್ಣವಾಗಿ ಆಚರಿಸಬೇಕಾದರೆ ಅವನು ಸಂಯಮಿಯಾಗಿರಬೇಕೆಂದು ಬೋಧಿಸಿದ. ಆದರಿಂದ ಅಹಿಂಸಾ, ಸಂಯಮ, ತಪಗಳೇ ಉತ್ಕೃಷ್ಟ ಧರ್ಮವೆಂದು ಜನರಿಗೆ ತಿಳಿಸಿ ಹೇಳಿದ. ಎಲ್ಲ ಪ್ರಾಣಿಮಾತ್ರಗಳ ಹಿತದ ಮಾರ್ಗವನ್ನು ತೋರಿಸಿದ. ಹೀಗೆ ಮೂವತ್ತು ವರ್ಷಗಳ ವರೆಗೆ ಧರ್ಮೋಪದೇಶ ಮಾಡುತ್ತ ದೇಶದಲ್ಲೆಲ್ಲ ಸಂಚರಿಸಿದ. ಜನ ಸಾಮಾನ್ಯರು ಮಾತನಾಡುವ ಪ್ರಾಕೃತ ಭಾಷೆಯಲ್ಲಿಯೇ ಅವನು ಉಪದೇಶವಿತ್ತ.

ಮಹಾವೀರನು ತನ್ನ ಎಪ್ಪತ್ತೆರಡನೆಯ ವಯಸ್ಸಿನಲ್ಲಿ ಪಾವಾಪುರಿ ಎಂಬಲ್ಲಿ ನಿರ್ವಾಣಹೊಂದಿದ. ಬಿಹಾರ ರಾಜ್ಯದಲ್ಲಿರುವ ಪಾವಾಪುರಿ ನಗರ ಮಹಾವೀರನ ಕ್ಷೇತ್ರವಾದದ್ದೆಂದು ಜೈನರಿಗೆ ಪವಿತ್ರ ಯಾತ್ರಾಸ್ಥಳವಾಗಿದೆ.

ವರ್ಧಾ ಶಿಕ್ಷಣ ಪದ್ಧತಿ

ಬ್ರಿಟಿಷರು ಭಾರತದಲ್ಲಿ ತಮ್ಮ ಆಡಳಿತವನ್ನು ಸ್ಥಾಪಿಸಿದ ಮೇಲೆ, ತಾವು ರೂಪಿಸಿದ ಶಿಕ್ಷಣ ಪದ್ಧತಿಯನ್ನು ಆಚರಣೆಗೆ ತಂದರು. ಭಾರತೀಯರಲ್ಲಿ ಅವರ ಸಂಸ್ಕೃತಿಯ ಬಗೆಗೆ ಆಸಕ್ತಿ ಬೆಳೆಸುವುದರಲ್ಲೂ ಭಾರತದ ಯುವಜನರನ್ನು ಉತ್ತಮ ಪೌರರನ್ನಾಗಿ ರೂಪಿಸುವುದರಲ್ಲೂ ಈ ಪದ್ಧತಿ ಅಷ್ಟೇನೂ ಸಹಕಾರಿಯಲ್ಲವೆಂದು ಗಾಂಧೀಜಿಗೆ ಅನಿಸಿತು. ಆದ್ದರಿಂದ ಇಡೀ ರಾಷ್ಟ್ರಕ್ಕೆ ಅನ್ವಯಿಸುವಂತೆ ಹೊಸ ಶಿಕ್ಷಣ ಪದ್ಧತಿಯನ್ನು ರೂಪಿಸುವುದು ಅಗತ್ಯ ಎಂದು ಅವರು ಭಾವಿಸಿದರು.

ಈ ಅಭಿಪ್ರಾಯಕ್ಕೆ ರೂಪು ಕೊಡುವ ಉದ್ದೇಶದಿಂದ 1937ರಲ್ಲಿ ವರ್ಧಾದಲ್ಲಿ ಮಹಾತ್ಮಾ ಗಾಂಧೀಜಿಯ ಅಧ್ಯಕ್ಷತೆಯಲ್ಲಿ ಒಂದು ಸಮ್ಮೇಳನ ನಡೆಯಿತು. ಈ ಸಮ್ಮೇಳನದಲ್ಲಿ ಮೂಲ ಶಿಕ್ಷಣ ಪಾಠಕ್ರಮವನ್ನು ನಿರ್ಧರಿಸಲಾಯಿತು. ಹಾಗೆಯೇ ಈ ಪಾಠಕ್ರಮದ ಬಗೆಗೆ ವರದಿ ಸಿದ್ಧಗೊಳಿಸಲು ಡಾ. ಜಾಕೀರ್ ಹುಸೇನರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ನಿಯಮಿಸಲಾಯಿತು. ಮಾರನೆಯ ವರ್ಷ ಈ ಸಮಿತಿ ತನ್ನ ವರದಿ ಒಪ್ಪಿಸಿತು.

ವಿದ್ಯಾರ್ಥಿಗಳು ಯಾವುದಾದರೊಂದು ಕಸಬನ್ನು ಕಲಿಯಬೇಕು. ಸ್ವಾವಲಂಬನೆಯ ದೃಷ್ಟಿಯನ್ನು ಬೆಳಸಿಕೊಳ್ಳಬೇಕು. ಶಿಕ್ಷಣ, ವಿದ್ಯಾರ್ಥಿಯ ಜೀವನಕ್ಕೆ ಉಪಯುಕ್ತವಾದ ರೀತಿಯಲ್ಲಿರಬೇಕು ಎಂಬುದು ಈ ಯೋಜನೆಯ ಮುಖ್ಯ ಉದ್ದೇಶ.

ಶಿಕ್ಷಣ ಮಾತೃಭಾಷೆಯಲ್ಲಿ; ವಿದ್ಯಾರ್ಥಿಗೆ ಉಪಯುಕ್ತವಾದ ಯಾವುದಾದರೊಂದು ಕಲೆ ಅಥವಾ ಉದ್ಯೋಗದಲ್ಲಿ ತರಬೇತಿ, ನೂಲುವುದು, ನೇಯುವುದು, ಮರಗೆಲಸ, ವ್ಯವಸಾಯ, ಚರ್ಮದ ಕೆಲಸ, ತೋಟಗಾರಿಕೆ ಮೊದಲಾದ ವೃತ್ತಿಗಳಲ್ಲಿ ಯಾವುದಾದರೂ ಒಂದರ ಆಯ್ಕೆ: ಜೊತೆಗೆ ಮಾತೃಭಾಷೆ, ಹಿಂದೀ, ಸಾಮಾನ್ಯವಿಜ್ಞಾನ, ಗಣಿತ, ಸಮಾಜವಿಜ್ಞಾನ, ಆರೋಗ್ಯ, ವ್ಯಾಯಾಮಗಳ ತರಗತಿಗಳು; ಕಡ್ಡಾಯ ದೈಹಿಕಶ್ರಮ –ಇವು ಈ ಶಿಕ್ಷಣ ಪದ್ಧತಿಯ ಪ್ರಧಾನಾಂಶಗಳು.

1939ರಲ್ಲಿ ಮಹಾರಾಷ್ಟ್ರ, ಗುಜರಾತ್, ಕರ್ನಾಟಕಗಳಲ್ಲಿ ಈ ಶಿಕ್ಷಣ ಪದ್ಧತಿಯನ್ನು ಕೆಲಮಟ್ಟಿಗೆ ಆಚರಣೆಗೆ ತರಲಾಯಿತು.

ಅಲ್ಲಿಂದಾಚೆಗೆ ಈ ಯೋಜನೆಯಲ್ಲಿ ಹಲವಾರು ಮಾರ್ಪಾಟುಗಳನ್ನು ಮಾಡಲಾಗಿದೆ. ಮೂಲಶಿಕ್ಷಣ- ನಯಿ ತಾಲೀಂ -ಎಂದು ಕರೆಯಲ್ಪಡುವ ಈ ಶಿಕ್ಷಣ ವ್ಯವಸ್ಥೆಯನ್ನು ಅಲ್ಲಲ್ಲಿ ಆಚರಣೆಗೆ ತರಲಾಗಿದೆಯಾದರೂ ಇದು ಇನ್ನೂ ಸಾರ್ವತ್ರಿಕವಾಗಿ ಪ್ರಚಾರದಲ್ಲಿ ಬಂದಿಲ್ಲ.

ವನಮಹೋತ್ಸವ

ನೋಡಿ : ಸಂಪುಟ ೨

ವಯಸ್ಕರ ಶಿಕ್ಷಣ

ನೋಡಿ : ಸಂಪುಟ ೮

ವರದಾಚಾರ್

ನೋಡಿ : ಸಂಪುಟ ೫

ವರಾಹಮಿಹಿರ

"ದೀಪವಿಲ್ಲದ ಇರುಳಿನಂತೆ, ಸೂರ್ಯನಿಲ್ಲದ ಆಗಸದಂತೆ ಜ್ಯೋತಿಷಿಗಳಿಲ್ಲದ ರಾಜ"- ಎಂದು ಜ್ಯೋತಿಷ್ಯದ ಮಹತ್ವವನ್ನು ವರ್ಣಿಸಿದ್ದಾನೆ ವರಾಹಮಿಹಿರ. ಈತ ಪ್ರಾಚೀನ ಭಾರತದ ಖಗೋಳವಿಜ್ಞಾನಿ, ಗಣಿತಜ್ಞ ಹಾಗೂ ತತ್ವಜ್ಞಾನಿ.

ವಿಕ್ರಮಾದಿತ್ಯನ ಆಸ್ಥಾನದಲ್ಲಿದ್ದ 'ನವರತ್ನ'ಗಳಲ್ಲಿ ಈತನೂ ಒಬ್ಬ. 'ಪಂಚಸಿದ್ಧಾಂತಿಕಾ', 'ಬೃಹತ್‌ಸಂಹಿತಾ', 'ವಿವಾಹಪಟಲ', 'ಬೃಹಜ್ಜಾತಕ', 'ಲಘುಜಾತಕ', 'ಯೋಗತಂತ್ರ' ಮೊದಲಾದುವು ಇವನ ಕೃತಿಗಳು.

ವರಾಹಮಿಹಿರ ಉಜ್ಜಯಿನಿಯಲ್ಲಿ ಜನಿಸಿದ. ತಂದೆ ಆದಿತ್ಯದಾಸ. ಇವನ ಕಾಲ 505-587. ಸೂರ್ಯದೇವನ ವರ ಪಡೆದು ತಂದೆಯಿಂದ ಜ್ಯೋತಿಷ್ಯ ಕಲಿತನೆಂದು ಪ್ರತೀತಿ.

'ಪಂಚಸಿದ್ಧಾಂತಿಕಾ'ದಲ್ಲಿ ವರಾಹಮಿಹಿರನ ಕಾಲದವರೆಗಿನ ಭಾರತೀಯ ಜ್ಯೋತಿಷ್ಯ ವಿಷಯಗಳು ಸಂಗ್ರಹಿಸಲ್ಪಟ್ಟಿವೆ. ಇದರಲ್ಲಿ ರೋಮನರ ಖಗೋಲವಿಜ್ಞಾನಕ್ಕೆ ಸಂಬಂಧಿಸಿದ ರೋಮಕ ಸಿದ್ಧಾಂತ ಹಾಗೂ ಅಲೆಗ್ಸಾಂಡ್ರಿಯದಲ್ಲಿದ್ದ ಪಾಲ್ ರೂಪಿಸಿದ ಪೌಲಿಶ ಸಿದ್ಧಾಂತಗಳ ಪ್ರಸ್ತಾಪ ಬರುತ್ತದೆ. ರೋಮಕದಲ್ಲಿ ಗ್ರೀಕ್ ರೀತಿಯ ಕಾಲಗಣನೆ ಇದೆ. ಪೌಲಿಶ ಸಿದ್ಧಾಂತವು ಪಾಲನ ಖಗೋಲ ವಿಜ್ಞಾನ ವಿಷಯಗಳನ್ನು ಆಧರಿಸಿದೆ. 'ಬೃಹತ್‌ಸಂಹಿತಾ' ವರಾಹಮಿಹಿರನ ಸ್ವತಂತ್ರ ಕೃತಿ. ಪ್ರಕೃತಿಯಲ್ಲಿ ವಾಸ್ತವವಾಗಿ ನಡೆದ ಸಂಗತಿಗಳು, ಆಕಾಶಕಾಯಗಳ ವಿಷಯ, ಮನುಷ್ಯರು –ಪಶುಪಕ್ಷಿಗಳ ಬಗೆಗೆ ವಿವರಗಳು, ವಿವಾಹ, ಕಾಮಶಾಸ್ತ್ರ, ಅರ್ಥಶಾಸ್ತ್ರ – ಇವನ್ನು ಇದು ಒಳಗೊಂಡಿದೆ.

ವರಿಷ್ಠ ನ್ಯಾಯಾಲಯ

ಭಾರತ ಗಣರಾಜ್ಯದ ಒಂದು ಮುಖ್ಯ ಘಟಕ, ನ್ಯಾಯಾಂಗದ ಶಿಖರ– ವರಿಷ್ಠ ನ್ಯಾಯಾಲಯ ಅಥವಾ ಸರ್ವೋಚ್ಚ ನ್ಯಾಯಾಲಯ. ಇದು 1950 ಜನವರಿ 26ರಂದು ಅಸ್ತಿತ್ವಕ್ಕೆ ಬಂದಿತು.

ಕನಿಷ್ಠ 5 ವರ್ಷ ಕಾಲ ಉಚ್ಚ ನ್ಯಾಯಾಲಯದ ನ್ಯಾಯಾಧೀಶನಾಗಿದ್ದ (ಅಥವಾ ಒಂದು ಉಚ್ಚ ನ್ಯಾಯಾಲಯದಲ್ಲಿ 10 ವರ್ಷವಾದರೂ ನ್ಯಾಯವಾದಿಯಾಗಿದ್ದ) ಶಾಸನ ಪಾರಂಗತನನ್ನು ರಾಷ್ಟ್ರಪತಿ ವರಿಷ್ಠ ನ್ಯಾಯಾಲಯದ ನ್ಯಾಯಾಧೀಶನನ್ನಾಗಿ ನೇಮಿಸಬಹುದು.

ವರಿಷ್ಠ ನ್ಯಾಯಾಲಯದ ನ್ಯಾಯಾಧೀಶರಲ್ಲಿ ಒಬ್ಬರು ಶ್ರೇಷ್ಠ ನ್ಯಾಯಾಧೀಶರಾಗಿ ನೇಮಕಗೊಳ್ಳುತ್ತಾರೆ.

ನ್ಯಾಯಾಧೀಶರ ನಿವೃತ್ತಿ ವಯಸ್ಸು 65.

ರಾಷ್ಟ್ರಪತಿಗೆ ಪತ್ರ ಬರೆದು ನ್ಯಾಯಾಧೀಶರು ಪದತ್ಯಾಗ ಮಾಡಬಹುದು. ಸಂಸತ್ತಿನ ಒಪ್ಪಿಗೆ ಪಡೆದು ರಾಷ್ಟ್ರಪತಿ ಅವರನ್ನು ಪದಚ್ಯುತರನ್ನಾಗಿ ಮಾಡಬಹುದು.

ರಾಷ್ಟ್ರಪತಿ ಅಥವಾ ಅವರ ಪ್ರತಿನಿಧಿಯ ಸಮ್ಮುಖದಲ್ಲಿ ನ್ಯಾಯಾಧೀಶರು ಪ್ರಮಾಣವಚನ ಸ್ವೀಕರಿಸಿ ಅಧಿಕಾರ ವಹಿಸಿಕೊಳ್ಳುತ್ತಾರೆ. ಆ ಹುದ್ದೆಯಲ್ಲಿರುವಾಗ ಅವರು ಯಾವ ನ್ಯಾಯಾಲಯದಲ್ಲಿಯೂ ವಾದಿಸುವಂತಿಲ್ಲ.

ವರಿಷ್ಠ ನ್ಯಾಯಾಲಯ ಇರುವುದು ದೆಹಲಿಯಲ್ಲಿ. ರಾಷ್ಟ್ರಪತಿಯ ಒಪ್ಪಿಗೆ ಪಡೆದು ಬೇರೆ ಸ್ಥಳಗಳಲ್ಲೂ ಶ್ರೇಷ್ಠ ನ್ಯಾಯಾಧೀಶರು ವಿಚಾರಣೆ ನಡೆಸಬಹುದು.

ವರಿಷ್ಠ ನ್ಯಾಯಾಲಯದ ಅಧಿಕಾರಕ್ಷೇತ್ರ ಮೂರು ಬಗೆಯವು: ಕೇಂದ್ರ ಸರಕಾರ ಮತ್ತು ರಾಜ್ಯ ಸರಕಾರಗಳ ನಡುವಣ ವಿವಾದಗಳನ್ನು ಒಳಗೊಂಡ ಮೂಲ ಕ್ಷೇತ್ರಾಧಿಕಾರ; ಸಿವಿಲ್ ಕ್ರಿಮಿನಲ್ ಮೊದಲಾದ ಮೊಕದ್ದಮೆಗಳಲ್ಲಿ ಉಚ್ಚ ನ್ಯಾಯಾಲಯದ ತೀರ್ಪಿನ ವಿರುದ್ಧ ಮಾಡುವ ಅಪೀಲುಗಳ ಕ್ಷೇತ್ರಾಧಿಕಾರ; ಮತ್ತು ಸಾರ್ವಜನಿಕ ಮಹತ್ವವುಳ್ಳ ಯಾವುದಾದರೂ ವಿಧಿ ಅಥವಾ ವಿಚಾರದಲ್ಲಿ ರಾಷ್ಟ್ರಪತಿ ವರಿಷ್ಠ ನ್ಯಾಯಾಲಯದ ಸಲಹೆ ಕೇಳುವ ಸಲಹಾ ಕ್ಷೇತ್ರಾಧಿಕಾರ.

ಪ್ರಜೆಗಳ ಮೂಲಭೂತ ಹಕ್ಕುಗಳ ರಕ್ಷಣೆ ವರಿಷ್ಠ ನ್ಯಾಯಾಲಯ ಹೊಣೆ. ಸಂವಿಧಾನಕ್ಕೆ ವಿರೋಧವಾಗದಂತೆ, ನ್ಯಾಯಾಲಯದ ಕಾರ್ಯನಿರ್ವಹಣೆಗೆ ತೊಂದರೆಯಾಗದಂತೆ ಇದರ ಅಧಿಕಾರ ವ್ಯಾಪ್ತಿ ಹೆಚ್ಚಿಸಲು ಸಂಸತ್ತಿಗೆ ಅಧಿಕಾರವುಂಟು.

ವಲಭಿ

ಸೌರಾಷ್ಟ್ರವನ್ನು 450ರಿಂದ 775ರ ವರೆಗೆ ಆಳಿದ ಮೈತ್ರಕ ಮನೆತನದ ಅರಸರ ರಾಜಧಾನಿ. ವಲಭಿ. ಇವರ ಪ್ರಥಮ ದೊರೆ ಭಟಾರ್ಕ ಸುಮಾರು 450ರಲ್ಲಿ ವಲಭಿಯನ್ನು ರಾಜಧಾನಿಯಾಗಿ ಮಾಡಿಕೊಂಡ.

ಪುರಾತನ ಪಟ್ಟಣ ವಲಭಿ ಬಹುಕಾಲ ಬೌದ್ಧ ಧರ್ಮಕೇಂದ್ರವಾಗಿದ್ದಿತು. ಮೈತ್ರಕರಾಜ್ಯದ ರಾಜಧಾನಿಯಾಗಿ, ಜೈನ, ಬೌದ್ಧ ವಿದ್ವತ್ ಕೇಂದ್ರವಾಗಿ ಸುಮಾರು ನಾಲ್ಕುನೂರು ವರ್ಷಕಾಲ ಪ್ರವರ್ಧಮಾನ ಸ್ಥಿತಿಯಲ್ಲಿದ್ದಿತು. ಜೈನ ಧಾರ್ಮಿಕ ಸಾಹಿತ್ಯದ ಸಂಗೋಪನೆಗಾಗಿ ಇಲ್ಲಿ ಜೈನ ವಿದ್ವತ್ಸಭೆಗಳು ನಡೆದುವು.

ಮೈತ್ರಕ ದೊರೆಗಳು ಎಲ್ಲ ಮತಗಳಿಗೂ ಪ್ರೋತ್ಸಾಹ ನೀಡಿದರು. ಇ–ತ್ಸಿಂಗ್ ಹಾಗೂ ಹ್ಯೂಯೆನ್ ತ್ಸಾಂಗರು ವಲಭಿಯ ಶ್ರೇಷ್ಠತೆಯನ್ನೂ ಅದರ ಭವ್ಯ ವಿದ್ಯಾಕೇಂದ್ರವನ್ನೂ ಬಣ್ಣಿಸಿ ಬರೆದಿದ್ದಾರೆ.

775ರಲ್ಲಿ ಒಬ್ಬ ಹಿಂದೂ ವಣಿಕ ವಲಭಿಯ ಸುಭದ್ರಕೋಟೆಯನ್ನು ವಶಪಡಿಸಿಕೊಳ್ಳುವ ರೀತಿಯನ್ನು ಅರಬರಿಗೆ ಹೇಳಿಕೊಟ್ಟನೆಂದೂ ಮುಸಲ್ಮಾನ ನೌಕಾಪಡೆಯೊಂದು ವಲಭಿಯ ಮೇಲೆ ದಾಳಿಮಾಡಿ ಅದನ್ನು ನಾಶಮಾಡಿತೆಂದೂ ಹೇಳಲಾಗಿದೆ. ಆಗ ವಲಭಿ ರೇವು ಪಟ್ಟಣವಾಗಿದ್ದಿತು. ಒಂದು ವಾಣಿಜ್ಯ ಕೇಂದ್ರವೂ ಆಗಿತ್ತು.

ಮೈತ್ರಕರ ಮೂಲದೊರೆ ಭಟಾರ್ಕನ ಮೊಮ್ಮಗಳು ದುದ್ದಾ ಒಂದು ಬೌದ್ಧವಿಹಾರವನ್ನು ವಲಭಿಯಲ್ಲಿ ಸ್ಥಾಪಿಸಿದಳು. ವಲಭಿಯ ವಿಶ್ವ ವಿದ್ಯಾನಿಲಯದಲ್ಲಿ ಶಬ್ದ, ನ್ಯಾಯ, ಅಭಿದಮ್ಮ, ಚಿಕಿತ್ಸಾ, ಶಿಲ್ಪ ಮುಂತಾದ ವಿಷಯಗಳನ್ನು ಹೇಳಿ ಕೊಡಲಾಗುತ್ತಿತ್ತು. ವೇದ, ಉಪನಿಷತ್ತು, ಸಾಂಖ್ಯಗಳೂ ಪಾಠ ವಿಷಯಗಳಾಗಿದ್ದುವು. ಇಲ್ಲಿ ಒಂದು ನೂರು ವಿಹಾರಗಳೂ 6000 ಬೌದ್ಧಭಿಕ್ಕುಗಳೂ ಇದ್ದರು.

ಈ ಎಲ್ಲ ವಿಷಯಗಳೂ ಹ್ಯೂಯೆನ್ ತ್ಸಾಂಗನ ಬರೆಹದಿಂದ ತಿಳಿದು ಬರುತ್ತವೆ.


ಈಗ ವಲಭಿ ವಿದ್ಯಾಕೇಂದ್ರದ ಕುರುಹೂ ಉಳಿದಿಲ್ಲ.

ನೋಡಿ : ಇ–ತ್ಸಿಂಗ್ ; ಹ್ಯೂಯೆನ್ ತ್ಸಾಂಗ್

ವಲ್ಲತ್ತೋಳ್

ನೋಡಿ : ಸಂಪುಟ ೫

ವಲ್ಲಭಭಾಯಿ ಪಟೇಲ್



ಸರದಾರ : ರಾಷ್ಟ್ರ ನಾಯಕ

"ಹಿಮ ಮುಚ್ಚಿದ ಜ್ವಾಲಾಮುಖಿ" ಎಂದು ಕವಯತ್ರಿ ಸರೋಜಿನಿ ನಾಯ್ಡು ಬಣ್ಣಿಸಿದ ರಾಷ್ಟ್ರ ನಾಯಕ, ಸರದಾರ ವಲ್ಲಭಭಾಯಿ ಪಟೇಲ್.

ವಲ್ಲಭಭಾಯಿ ಪಟೇಲರು 1875 ಅಕ್ಟೋಬರ್ 13 ರಂದು ಗುಜರಾತ್ ಪ್ರಾಂತದ ಖೇಡಾ ಜಿಲ್ಲೆಯ ನಡಿಯಾಡ್ ಗ್ರಾಮದಲ್ಲಿ ಜನಿಸಿದರು. ತಂದೆ ಝವೇರಭಾಯಿ ; ಇವ ಐವರು ಮಕ್ಕಳಲ್ಲಿ ಮೂರನೆಯವರು ವಿಠ್ಠಲಭಾಯಿ ; ನಾಲ್ಕನೆಯವರು ವಲ್ಲಭಭಾಯಿ. ತಂದೆ ನೇಗಿಲಯೋಗಿ. ಮಗನಲ್ಲಿ ಅದೇ ಮಣ್ಣಿನ ಪ್ರೇಮ ಮೂಡಿತು. ದೇಶದ ರೈತವರ್ಗದ ಕಷ್ಟಕಾರ್ಪಣ್ಯಗಳ ಅರಿವು ಬಾಲ್ಯದಲ್ಲಿಯೇ ಅವರಿಗೆ ಉಂಟಾಯಿತು.

ಪ್ರಾರಂಭಿಕ ಶಿಕ್ಷಣ ಬಡೋದೆಯಲ್ಲಿ ನಡೆಯಿತು. ಇಂಗ್ಲೆಂಡಿನಲ್ಲಿ ಬ್ಯಾರಿಸ್ಟರ್ ಪದವಿ ಪಡೆದು ಬಂದು ವಕೀಲಿ ಕೈಗೊಂಡರು. ಅಲ್ಪಾವಧಿಯಲ್ಲೇ ಪ್ರಮುಖ ಬ್ಯಾರಿಸ್ಟರ್ ಆದರು. ಆ ವೇಳೆಯಲ್ಲೇ ಲೋಕಮಾನ್ಯ ತಿಲಕರ ಪ್ರಭಾವ ಇವರ ಮೇಲೆ ಬಿದ್ದಿತು.

ಮುಂದೆ ವಲ್ಲಭಭಾಯಿ ಪಟೇಲರು ಗಾಂಧೀಜಿಯ ಪ್ರಭಾವಕ್ಕೆ ಒಳಗಾದರು. ಗಾಂಧೀಜಿಯ ನೇತೃತ್ವದಲ್ಲಿ ಅಹಮದಾಬಾದಿನ ಗಿರಣಿ ಕಾರ್ಮಿಕರ ಮತ್ತು ಖೇಡಾದ ರೈತರ ಚಳುವಳಿಯಲ್ಲೂ ಅಸಹಕಾರ ಆಂದೋಲನದಲ್ಲೂ ಪ್ರಮುಖ ಪಾತ್ರವಹಿಸಿದರು. 1936ರಲ್ಲಿ ಗುಜರಾತಿನಲ್ಲಿ ಪ್ರವಾಹ, 1935ರಲ್ಲಿ ಬಿಹಾರದ ಭೂಕಂಪ ಸಂಭವಿಸಿದ ಸಂಕಟ ಸಮಯಗಳಲ್ಲಿ ಅವರು ಗಾಂಧೀಜಿಯ ಜೊತೆ ಸೇರಿ ಜನಸೇವೆ ಮಾಡಿದರು. ಮುಂದೆ ಗಾಂಧೀಜಿಯ ಮುಖ್ಯ ಸೇನಾನಿಗಳಲ್ಲಿ ಒಬ್ಬರಾದರು.

1928ರ ಬಾರ್ದೋಲಿ ಸತ್ಯಾಗ್ರಹದಿಂದ ಅವರಿಗೆ ಅಖಿಲ ಭಾರತ ಖ್ಯಾತಿ ಲಭಿಸಿತು. ಆಗ 80,000 ರೈತ ಹೋರಾಟಗಾರರ ಮುಖಂಡತ್ವವನ್ನು ವಲ್ಲಭಭಾಯಿ ವಹಿಸಿದರು. ಆಗಲೇ ಇವರಿಗೆ 'ಸರದಾರ' ಎಂಬ ಬಿರುದು ಬಂದದ್ದು. ಗುಜರಾತ್ ಪ್ರಾಂತದ ವಲ್ಲಭಭಾಯಿ, ಭಾರತದ ಸರದಾರರಾದರು.

ಗಾಂಧೀಜಿಯೊಂದಿಗೆ 1932ರ ಜನವರಿಯಿಂದ ಹದಿನಾರು ತಿಂಗಳು ಯೆರವಾಡ ಸೆರೆಮನೆಯಲ್ಲಿ ಕೈದಿಯಾದರು. ಆ ಸಮಯದಲ್ಲಿ ಚಹಾ ಮತ್ತು ಧೂಮಪಾನ ತ್ಯಜಿಸಿದರು.

ಸರದಾರರು 1931ರಲ್ಲಿ ಕರಾಚಿ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷರಾದರು. ಕಾಂಗ್ರೆಸ್ ಸಂಸ್ಥೆಯನ್ನು ಬಲಪಡಿಸುವುದರಲ್ಲಿ ಯಶಸ್ಸು ಗಳಿಸಿದರು.

ಸ್ವಾತಂತ್ರ್ಯಾನಂತರ ಸಂಸ್ಥಾನಗಳ ಪ್ರಶ್ನೆ ರಾಷ್ಟ್ರದ ಪ್ರಮುಖ ವಿಷಯವಾಗಿತ್ತು. ಭಾರತದ ಗೃಹಮಂತ್ರಿಯಾಗಿದ್ದ ಸರದಾರರ

ಸಂಸ್ಥಾನಗಳ ಸೇರ್ಪಡೆಗಾಗಿ ನಡೆಸಿದ ಪ್ರಯತ್ನ ಸ್ಮರಣೀಯ. ಸುಮಾರು 500ಕ್ಕಿಂತಲೂ ಅಧಿಕ ಸಂಸ್ಥಾನಗಳ ಭವಿಷ್ಯವನ್ನು ಅಲ್ಪಾವಧಿಯಲ್ಲಿ ನಿರ್ಧರಿಸಿದರು. ಹೈದರಾಬಾದನ್ನು ಬಲಪ್ರಯೋಗದಿಂದ ಒಕ್ಕೂಟಕ್ಕೆ ಒಳಪಡಿಸಿದರು. ಇತರ ಸಂಸ್ಥಾನಗಳನ್ನು ವಿವೇಕ ಹೇಳಿ ವಿಲೀನಗೊಳಿಸಿದರು. ಈ ಕಾರ್ಯದಲ್ಲಿ ಇವರು ತೋರಿದ ಕುಶಲತೆ, ಸ್ಥೈರ್ಯ ಕಂಡು ಎಲ್ಲರೂ ಬೆರಗಾದರು. ಭಾರತದ 'ಬಿಸ್ಮಾರ್ಕ್' ಎನಿಸಿಕೊಂಡರು (ಜರ್ಮನಿಯನ್ನು ಒಂದಾಗಿ ಹೊಸೆದ ರಾಜಕಾರಣಿ ಬಿಸ್ಮಾರ್ಕ್). 'ಉಕ್ಕಿನ ಮನುಷ್ಯ' ಎಂಬ ಖ್ಯಾತಿಯೂ ಇವರದಾಯಿತು.

ಸರದಾರರು ನಿಷ್ಠುರ ವ್ಯಕ್ತಿ ಎನಿಸಿಕೊಂಡಿದ್ದರೂ ಅವರ ಮಾನವೀಯ ದೃಷ್ಟಿ ಮತ್ತು ಹಾಸ್ಯ ಪ್ರವೃತ್ತಿ ಸಹವರ್ತಿಗಳ ಮೆಚ್ಚುಗೆ ಗಳಿಸಿದ್ದುವು.

ಸಮರ್ಪಣಭಾವದಿಂದ ಅರ್ಧ ಶತಮಾನ ಕಾಲ ದೇಶಸೇವೆ ಸಲ್ಲಿಸಿದ ಸರದಾರರು 1950 ಡಿಸೆಂಬರ್ 15ರಂದು ನಿಧನರಾದರು.

ವಲ್ಲಭಾಚಾರ್ಯ

ಕೇವಲ ಏಳು ವರ್ಷ ಹುಡುಗನಾಗಿದ್ದಾಗಲೇ ನಾಲ್ಕು ವೇದ, ಆರು ದರ್ಶನಗಳು, ಹದಿನೆಂಟು ಪುರಾಣಗಳನ್ನು ಕಲಿತ ಅದ್ಭುತ ಬುದ್ಧಿಶಾಲಿ ವಲ್ಲಭಾಚಾರ್ಯ. ಇವರು ಭಾರತದ ಭಕ್ತಿಪಂಥದ ಪ್ರಮುಖರಲ್ಲೊಬ್ಬರು.

ವಲ್ಲಭ 1473ರಲ್ಲಿ ಜನಿಸಿದರು. ಇವರು ಆಂಧ್ರ ಬ್ರಾಹ್ಮಣರು. ತತ್ತ್ವಜ್ಞಾನದಲ್ಲಿ ಅಪಾರ ಪ್ರತಿಭೆ ವ್ಯಕ್ತಪಡಿಸಿ ವಿಜಯನಗರದ ಆಸ್ಥಾನದಲ್ಲಿ 'ಆಚಾರ್ಯ' ಪ್ರಶಸ್ತಿ ಗಳಿಸಿದರು. ಭಾರತವನ್ನು ಹಲವಾರು ಬಾರಿ ಸುತ್ತಿದರು. ಕೊನೆಗೆ ವಾರಾಣಸಿಯಲ್ಲಿ ನೆಲೆಸಿ, ಬರವಣಿಗೆ—ಅಧ್ಯಯನಗಳಲ್ಲಿ ಬಹುಕಾಲ ಕಳೆದರು.

ವೇದ, ಉಪನಿಷತ್ತು, ಬ್ರಹ್ಮಸೂತ್ರ, ಭಗವದ್ಗೀತೆಗಳು ನಮ್ಮ ತತ್ತ್ವಜ್ಞಾನದ ಮೂಲ ಆಧಾರಗಳು. ಇವುಗಳಲ್ಲಿ ಅದ್ವೈತ ಪ್ರತಿಪಾದಿತವಾಗಿದ್ದರೂ ಶಂಕರರು ಹೇಳಿರುವ 'ಮಾಯೆ'ಯ ಬಗೆಗೆ ಪ್ರಸ್ತಾಪವಿಲ್ಲ –ಎಂದು ಅವರು ಹೇಳಿದ್ದರು. ಶಂಕರಾಚಾರ್ಯರ ಅದ್ವೈತವನ್ನು 'ಕೇವಲ ಅದ್ವೈತ' ಎಂದು ಕರೆದು ತಮ್ಮ 'ಶುದ್ಧ ಅದ್ವೈತ' ತತ್ತ್ವವನ್ನು ಪ್ರತಿಪಾದಿಸಿದರು.



ಭಕ್ತಿಪಂಥ :
ವಲ್ಲಭಾಚಾರ್ಯ

ಅವರು ತಮ್ಮ ಸಿದ್ಧಾಂತವನ್ನು ನಾಲ್ಕು ಪ್ರಮಾಣಗ್ರಂಥಗಳ ಆಧಾರದ ಮೇಲೆ ಪ್ರತಿಪಾದಿಸಿದ್ದಾರೆ.

ಪರಬ್ರಹ್ಮ ಸತ್, ಚಿತ್, ಆನಂದ ಮತ್ತು ರಸಸ್ವರೂಪನು. ಜಗತ್ತು ಅವನ ಅಂಶದ ಸ್ವರೂಪವು; ಅವನ ಲೀಲೆಗಾಗಿ ಅವನಿಂದಲೇ ಸೃಷ್ಟಿಯಾಯಿತು; ಅದರಲ್ಲಿ ಕಾಣುವ ವೈವಿಧ್ಯವೂ ಅವನ ಲೀಲೆಯೇ; ಅಹಂಕಾರ, ಮಮಕಾರಗಳಿಂದ ಜೀವಿಗಳಿಗೆ ಸಂಸಾರಬಂಧನ ಏರ್ಪಡುತ್ತದೆ; ಜ್ಞಾನ, ಭಕ್ತಿ ಮುಂತಾದುವುಗಳಿಂದ ಈ ಬಂಧನವನ್ನು ಕಳೆದುಕೊಳ್ಳಬೇಕು ಎಂದರು ವಲ್ಲಭಾಚಾರ್ಯರು.

ವೇದಗಳಲ್ಲಿ ಹೇಳಿರುವ ಕರ್ಮ ಮತ್ತು ಜ್ಞಾನಮಾರ್ಗಗಳಿಂದ ಮೋಕ್ಷ ಪಡೆಯುವುದು ಎಲ್ಲರಿಗೂ ಸಾಧ್ಯವಿಲ್ಲವೆಂದು ಸುಲಭವಾದ ಪುಷ್ಟಿ ಮಾರ್ಗವನ್ನು ಪ್ರತಿಪಾದಿಸಿದರು. ಪರಮಾತ್ಮನಲ್ಲಿ ಭಕ್ತಿ, ಶರಣಾಗತಿ ಈ ಮಾರ್ಗದ ರೀತಿ. ಕೃಷ್ಣನೇ ಪರಮಾತ್ಮ ಸ್ವರೂಪ. ಅವನನ್ನು ಪೂರ್ಣವಾಗಿ ಪ್ರೀತಿಸಬೇಕು. ಅವನ ಕೃಪೆಯಿಂದ ಜೀವಿಗೆ ಸಾಯುಜ್ಯ ಮುಕ್ತಿ ದೊರೆಯುತ್ತದೆ ಎಂಬುದು ಈ ಮಾರ್ಗದ ಸಾರಾಂಶ.

ವಲ್ಲಭಾಚಾರ್ಯ 1531ರಲ್ಲಿ ನಿಧನಹೊಂದಿದರು. ಗಂಗಾ ನದಿಯ ತೀರದಲ್ಲಿ ನಿಂತು ಮಿಂಚಿನಂತೆ ಮಾಯವಾದರು ಎಂದು ಪ್ರತೀತಿ. ಇವರ ಭಕ್ತಿಪಂಥ ಪಶ್ಚಿಮ ಭಾರತದಲ್ಲಿ ಇಂದಿಗೂ ಉಳಿದಿದೆ.

ವಸಂತೋತ್ಸವ

ಹಳತಿನಿಂದ ಹೊಸತಿಗೆ ಕಾಲಿಟ್ಟಂತೆ ವಸಂತದ ಆಗಮನ. ಒಣಗಿದ ಎಲೆಗಳನ್ನು ಕಳಚಿ ಗಿಡಗಳು ಹೊಸ ಚಿಗುರು, ಮೊಗ್ಗುಗಳನ್ನು ತಳೆಯುತ್ತವೆ. ಆಗ ಜನಕ್ಕೂ ಬೇಸರವನ್ನು ಕಳೆದು ನಲಿಯುವ ಮನಸ್ಸಾಗುತ್ತದೆ. ವಸಂತೋತ್ಸವ ಆರಂಭವಾದದ್ದು ಹೀಗೆ. ಹೋಳಿ, ಕಾಮದಹನ ಮುಂತಾದ ಅನೇಕ ಪದ್ಧತಿಗಳು ಇದರ ರೂಪಗಳು.

ಹಿಂದಿನಿಂದಲೂ ವಸಂತಮಾಸ(ಚೈತ್ರ)ದಲ್ಲಿ ಈ ಉತ್ಸವದ ಆಚರಣೆ. ಕೌಮುದೀ ಮಹೋತ್ಸವ ಆಚರಿಸಿ, ರತಿ ಮನ್ಮಥರನ್ನು ಪೂಜೆ ಮಾಡುತ್ತಿದ್ದರು. ಸಂಗೀತ, ನೃತ್ಯಗಳು ರಾತ್ರಿಯ ವೇಳೆ ನಡೆಯುತ್ತಿದ್ದುವು. ಕನಕದಾಸರ ಮೋಹನ ತರಂಗಿಣಿಯಲ್ಲಿ ವಸಂತೋತ್ಸವದ ವರ್ಣನೆಯಿದೆ.

ಆಧುನಿಕವಾಗಿ ವಸಂತೋತ್ಸವದ ಪದ್ಧತಿ ವಿಶ್ವಕವಿ ರವೀಂದ್ರನಾಥ ಠಾಕೂರರು ಸ್ಥಾಪಿಸಿದ ಶಾಂತಿನಿಕೇತನದಲ್ಲಿ 1907ರಲ್ಲಿ ಆರಂಭವಾಯಿತು. ಆ ವರ್ಷದ ಫೆಬ್ರುವರಿ 17ರಂದು ಶ್ರೀ ಪಂಚಮಿ(ವಸಂತ ಪಂಚಮಿ) ದಿನವನ್ನು ಆಚರಿಸಿದರು.

ಈಗ ಶಾಂತಿನಿಕೇತನದಲ್ಲಿ ಪ್ರತಿವರ್ಷವೂ ಫಾಲ್ಗುಣ ಪೂರ್ಣಿಮೆಯಂದು (ಹೋಳಿ ಹಬ್ಬದ ದಿನ) ವಸಂತೋತ್ಸವ ನಡೆಯುತ್ತದೆ. ಬೆಳಗ್ಗೆ ಬೇಗನೆ ಎದ್ದು ಜನರೆಲ್ಲ ಶಾಂತಿನಿಕೇತನದ ಮಾವಿನ ತೋಪುಗಳಲ್ಲಿ ನೆರೆಯುತ್ತಾರೆ. ಹುಡುಗ ಹುಡುಗಿಯರು ನಿಂಬೆ ಹಳದಿ ಬಣ್ಣದ ವಸ್ತ್ರ ಧರಿಸಿ, ಕೈಯಲ್ಲಿ ಸಂಗೀತ ವಾದ್ಯ ಹಿಡಿದಿರುತ್ತಾರೆ. ಸ್ತೋತ್ರ ಪದಗಳು, ಹಾಡುಗಳೊಡನೆ ವಸಂತನಿಗೆ ಸುಖಾಗಮನ ಕೋರುತ್ತಾರೆ. ಅನಂತರ ಪ್ರೇಕ್ಷಕರು, ಕಾರ್ಯಕ್ರಮದಲ್ಲಿ ಭಾಗವಹಿಸಿದವರು, ಬಾಂಧವರು, ಗೆಳೆಯರು ಪರಸ್ಪರರಿಗೆ 'ಅಬಿರ್' ಕೆಂಪು, ಊದಾ ಹಾಗೂ ಹಸಿರು ರಂಗಿನ ಪುಡಿಗಳನ್ನು ಬಳಿಯುತ್ತಾರೆ. ಆಶ್ರಮದ ವಾಸಿಗಳೂ ಹೊರಗಿ

ಸಿಂದ ಬಂದವರೂ ಗುಂಪು ಗುಂಪಾಗಿ ಹಾಡುಗಳನ್ನು ಹಾಡುತ್ತಾರೆ. ಮಧ್ಯಾಹ್ನ ಎಲ್ಲರೂ ಸ್ವಲ್ಪ ವಿರಾಮಕ್ಕಾಗಿ ಮನೆಗೆ ಹಿಂದಿರುಗುತ್ತಾರೆ. ಗೋಧೂಲಿ ಸಮಯದಲ್ಲಿ ಠಾಕೂರವಿರಚಿತ ನಾಟಕ ಆಶ್ರಮದ ವರಿಂದ ನಡೆಸಲ್ಪಡುತ್ತದೆ.

ರಾಷ್ಟ್ರದ ಇತರ ಎಡೆಗಳಲ್ಲೂ ವಸಂತೋತ್ಸವದ ಆಚರಣೆ ಇದೆ.

ನೋಡಿ : ಕಾಮನಹಬ್ಬ ; ಹೋಳಿ

ವಸಿಷ್ಠ

ಶಾಪಗ್ರಸ್ತನಾದ ಸೌದಾಸ ರಾಕ್ಷಸ ರೂಪದಲ್ಲಿದ್ದಾಗ ವಸಿಷ್ಠನ ನೂರು ಮಕ್ಕಳನ್ನೂ ಕೊಂದ. ವಸಿಷ್ಠನಿಗೆ ಜೀವನ ಬೇಸರವಾಯಿತು. ಪ್ರಾಣ ಕಳೆದುಕೊಳ್ಳಲು ಯತ್ನಿಸಿದ. ಆದರೆ, ಪರ್ವತದ ಮೇಲಿಂದ ಬಿದ್ದಾಗ, ಕಲ್ಲುಬಂಡೆಗಳೆಲ್ಲ ಹೂವಿನ ಹಾಸಿಗೆಗಳಾದುವು. ಶತದ್ರು (ಸಟ್ಲೆಜ್) ನದಿಯಲ್ಲಿ ಮುಳುಗಲು ಪ್ರಯತ್ನಿಸಿದರೆ ನದಿಯೇ ನೂರಾರು ಪ್ರವಾಹ ಗಳಾಗಿ ಹರಿದು ಇವನಿಗೆ ಯಾವ ಅಪಾಯವೂ ಆಗಲಿಲ್ಲ. ಕಾಳ್ಗಿಚ್ಚಿನಲ್ಲಿ ನಡೆದಾಗ ಬೆಂಕಿ ಇವನನ್ನು ಸುಡಲಿಲ್ಲ.

—ಮಹಾತಪಸ್ವಿ ವಸಿಷ್ಠನ ಬಗೆಗಿನ ಕಥೆ ಇದು.

ಋಗ್ವೇದದಿಂದ ಹಿಡಿದು, ಮಹಾಭಾರತ, ರಾಮಾಯಣ, ಪುರಾಣಗಳ ವರೆಗೆ ಅನೇಕ ಕಡೆ ವಸಿಷ್ಠನ ಉಲ್ಲೇಖಗಳಿವೆ. ಋಗ್ವೇದದ ಏಳನೆಯ ಮಂಡಲದ ಹಾಗೂ ಅದೇ ಸಂಹಿತೆಯ ಅನೇಕ ಶ್ಲೋಕಗಳ ಕರ್ತೃ ಇವನೇ ಎಂದು ನಂಬಿಕೆ.

ವಸಿಷ್ಠ—ವಿಶ್ವಾಮಿತ್ರರು ದೀರ್ಘಕಾಲದ 'ವೈರಿ'ಗಳಾಗಿದ್ದರು. ವಸಿಷ್ಠನ ಬಳಿ ಇದ್ದ ಕಾಮಧೇನುವಿಗೆ ವಿಶ್ವಾಮಿತ್ರ ಆಸೆಪಟ್ಟಾಗಿನಿಂದ ಹಿಡಿದು, ತ್ರಿಶಂಕು ದೊರೆಯನ್ನು ವಿಶ್ವಾಮಿತ್ರ ಸ್ವರ್ಗಕ್ಕೆ ಕಳುಹಿಸಲು ಪ್ರಯತ್ನ ಪಡುವ ಘಟನೆಗಳ ವರೆಗೆ ಇವರಿಬ್ಬರ ನಡುವೆ ಒಂದಲ್ಲ ಒಂದು ಕಿತ್ತಾಟ ಇತ್ತು. ಆದರೆ ಕೊನೆಗೆ ವಸಿಷ್ಠ ವಿಶ್ವಾಮಿತ್ರನ ತಪಸ್ಸು ಸಾಧನೆಗಳನ್ನು ಮೆಚ್ಚಿ ಅವನ 'ಬ್ರಾಹ್ಮಣತ್ವ'ವನ್ನು ಒಪ್ಪಿಕೊಂಡ.

ಊರ್ಜಾ ಮತ್ತು ಅರುಂಧತಿ ವಸಿಷ್ಠನ ಪತ್ನಿಯರು.

ನೋಡಿ : ವಿಶ್ವಾಮಿತ್ರ

ವಸುದೇವ

ವಿಷ್ಣುವಿನ ಹತ್ತು ಅವತಾರಗಳಲ್ಲಿ ಒಂದು ಕೃಷ್ಣಾವತಾರ. ಕೃಷ್ಣನ ತಂದೆ ವಸುದೇವ ; ಯದುಕುಲದ ಅರಸ ಶೂರನ ಮಗ. ಈತ ಜನಿಸಿ ದಾಗ ದೇವತೆಗಳು ತಮಟೆ(ಆನಕ), ನಗಾರಿ (ದುಂದುಭಿ) ಬಾರಿಸಿದ್ದರಿಂದ ಆನಕ ದುಂದುಭಿ ಎಂಬ ಹೆಸರೂ ಇದೆ.

ವಸುದೇವನಿಗೆ 18 ಮಂದಿ ಮಡದಿಯರು. ಇವರಲ್ಲಿ ಬಲರಾಮನ ತಾಯಿ ರೋಹಿಣಿ ಹಿರಿಯವಳು. ಕೃಷ್ಣನ ತಾಯಿ ದೇವಕಿ ಇನ್ನೊಬ್ಬ ಪತ್ನಿ. ಕುಂತಿ ಈತನ ಸಹೋದರಿ.

ಕೃಷ್ಣನಂಥ ಮಗನನ್ನು ಪಡೆದರೂ ಅವನ ಬಾಲಲೀಲೆಗಳನ್ನು ಕಂಡು ಆನಂದಿಸುವ ಭಾಗ್ಯ ಇವನಿಗಿರಲಿಲ್ಲ. ಮಗುವನ್ನು ಕಂಸ ಕೊಲ್ಲಬಹುದೆಂಬ ಭೀತಿಯಿಂದ ಸ್ನೇಹಿತ ನಂದನ ವಶಕ್ಕೆ ಒಪ್ಪಿಸಿ ಬಂದ. ಕಂಸ ವಧೆಯಾದ ಬಳಿಕ ವಸುದೇವ ಸೆರೆಮನೆಯಿಂದ ಬಿಡುಗಡೆ ಹೊಂದಿದ.

ಪರಶುರಾಮ ನಿರ್ಮಿತ ಸಮಂತ ಪಂಚಕ ಸರೋವರಕ್ಕೆ ವಸುದೇವ ಬಂಧುಗಳೊಡನೆ ಸ್ನಾನಕ್ಕೆ ಹೋದ. ಅಲ್ಲಿ ನಾರದ ಮತ್ತಿತರರು ಯಜ್ಞ ಮಾಡಬೇಕೆಂದು ಸಲಹೆ ಮಾಡಿದರು, ವಸುದೇವ ಹಾಗೆಯೇ ಮಾ[illegible] ಋಷಿಗಳನ್ನು ಸಂತೃಪ್ತಿಗೊಳಿಸಿದ. ಕೃಷ್ಣ ಮೃತನಾದ ಸುದ್ದಿ ಕೇ[illegible] ದೇಹತ್ಯಾಗ ಮಾಡಿದ.

ನೋಡಿ : ಕೃಷ್ಣ

ವಾಕಾಟಕರು

ಶಾತವಾಹನರ ಪತನ ಮತ್ತು ಬಾದಾಮಿಯ ಚಾಲುಕ್ಯರ ಉದಯ[illegible] ನಡುವೆ ಉತ್ತರ ದಕ್ಷಿಣ ಮತ್ತು ಮಧ್ಯ ಭಾರತದ ಕೆಲ ಭಾಗಗಳ[illegible] ಆಳಿದ ವಾಕಾಟಕರದು ಒಂದು ಖ್ಯಾತ ರಾಜವಂಶ. ವಿಂಧ್ಯಶಕ್ತಿ ಈ ವಂಶ[illegible] ಮೊದಲ ದೊರೆ. ಇವನ ಅನಂತರ ಪ್ರವೀರ ಅಥವಾ ಪ್ರವರ ಸೇ[illegible] ರಾಜ್ಯವಾಳಿದ. ಇವನು ಅಶ್ವಮೇಧ ಆಚರಿಸಿದ್ದ. ಭಾರಶಿವ ವಂಶ[illegible] ಭವನಾಗನ ಕುಮಾರಿಯನ್ನು ತನ್ನ ಸೊಸೆಯಾಗಿ ಮಾಡಿಕೊಂಡು, ಆ ವಂಶ[illegible] ರಾಜರ ನೆರವನ್ನೂ ತನ್ನ ರಾಜ್ಯಕ್ಕೆ ಈತ ಪಡೆದ. ಉತ್ತರದಲ್ಲಿ ಬುಂದೇಲ[illegible] ಖಂಡದಿಂದ ದಕ್ಷಿಣದಲ್ಲಿ ಇಂದಿನ ಹೈದರಾಬಾದ್ ವರೆಗೆ ಇವ[illegible] ರಾಜ್ಯ ವಿಸ್ತರಿಸಿತ್ತು. ಈತ 4ನೆಯ ಶತಮಾನದ ಪೂರ್ವಾರ್ಧದಲ್ಲಿ ಆಳುತ್ತಿದ್ದ.

ಇವನ ಅನಂತರ ವಾಕಾಟಕರಲ್ಲಿ ಎರಡು ಶಾಖೆಗಳಾದುವು. ಪ್ರವ[illegible] ಸೇನನ ಒಬ್ಬ ಮಗ ಗೌತಮೀಪುತ್ರ ನಾಗಪುರಕ್ಕೆ ಸಮೀಪದ ತವ[illegible] ಮೂ[illegible] ರಾಜಧಾನಿಯಿಂದ ಆಳುತ್ತಿದ್ದ. ಇನ್ನೊಬ್ಬ ಮಗ ಸರ್ವಸೇನ ವತ್ಸಗುಲ್ಮ (ಈಗಿನ ವಾಶಿಂ) ದಿಂದ ಆಳತೊಡಗಿದ.

ಮೂಲಶಾಖೆಯಲ್ಲಿ ಗೌತಮೀಪುತ್ರನ ಬಳಿಕ ಆಳಿದ ರುದ್ರಸೇನನ[illegible] ಮೊಮ್ಮಗ ಎರಡನೆಯ ರುದ್ರಸೇನ, ಎರಡನೆಯ ಚಂದ್ರಗುಪ್ತನ ಮಗಳ[illegible] ಪ್ರಭಾವತಿಯನ್ನು ವರಿಸಿದ್ದ. ಈ ರಾಣಿಯು ತನ್ನ ಮಕ್ಕಳ ಕಾಲದಲ್ಲಿ ದೀರ್ಘಕಾಲ ರಾಜರಕ್ಷಕಿಯಾಗಿ ರಾಜ್ಯವಾಳಿದಳು. ಇವಳ ಕಿರಿಮಗ[illegible] ಪ್ರವರಸೇನನು ಪವನಪುರ(ಇಂದಿನ ಪವನಾರ್) ರಾಜಧಾನಿಯನ್ನು ಕಟ್ಟಿಸಿದನಲ್ಲದೆ, ಸಂಸ್ಕೃತ 'ಸೇತುಬಂಧ ಕಾವ್ಯ' ವನ್ನು ರಚಿಸಿದ.

ಇವನ ಮಗ ನರೇಂದ್ರಸೇನನು ಕುಂತಲದ (ಬನವಾಸಿ ಕದಂಬರ) ರಾಜಕುಮಾರಿ ಅಜಿತ ಭಟ್ಟಾರಿಕೆಯನ್ನು ವರಿಸಿದ. ಈತನ ಪುತ್ರ ಎರಡನೆಯ ಪೃಥ್ವೀಸೇನ ಈ ಶಾಖೆಯ ಕೊನೆಯ ದೊರೆ.

ವತ್ಸಗುಲ್ಮ ಶಾಖೆಯ ರಾಜ್ಯವು ದಕ್ಷಿಣ ವಿದರ್ಭ ಮತ್ತು ಉತ್ತರ[illegible] ಆಂಧ್ರಗಳನ್ನು ಒಳಗೊಂಡಿತ್ತು. ಎರಡನೆಯ ವಿಂಧ್ಯಶಕ್ತಿ ಎರಡನೆಯ ಪ್ರವರಸೇನ ಈ ಶಾಖೆಯ ಆರಂಭಕಾಲದ ರಾಜರು. ಆರನೆಯ ಶತ[illegible] ಮಾನದ ಆರಂಭದಲ್ಲಿ ಮೂಲಶಾಖೆಯೊಡನೆ ವತ್ಸಗುಲ್ಮ ಶಾಖೆಯೂ ಕಣ್ಮರೆ ಯಾಯಿತು. ಈ ಶಾಖೆಯ ಸರ್ವಸೇನ 'ಹರವಿಜಯ' ಎಂಬ ಸಂಸ್ಕೃತ ಕಾವ್ಯ ಬರೆದ. ವಾಕಾಟಕರು ಸಂಸ್ಕೃತ ಸಾಹಿತ್ಯದ ಪೋಷಕರಾಗಿದ್ದು ಆ[illegible] ಭಾಷೆಯ ವೈದರ್ಭಿ ಶೈಲಿ ಇವರ ಕಾಲದಲ್ಲಿ ರೂಪುಗೊಂಡಿತು. ಅಜಂತಾದ[illegible] ಕೆಲವು ವರ್ಣರಂಜಿತ ಗುಹೆಗಳು ಇವರ ಕಾಲದ ರಚನೆಗಳು.

ವಾಗ್ಭಟ

ಆಯುರ್ವೇದ ವೈದ್ಯ ಪದ್ಧತಿಯಲ್ಲಿ ವಿಶಿಷ್ಟ ಸ್ಥಾನಗಳಿಸಿದವನು. ವಾಗ್ಭಟ. ಇವನ ಕಾಲ 7ನೆಯ ಶತಮಾನ ಎಂದು ನಂಬಿಕೆ.

ವಾಗ್ಭಟ ಸಿಂಧು ಪ್ರದೇಶದಲ್ಲಿ ಜನಿಸಿದ. ವಾಗ್ಭಟನ ತಾತ ಖ್ಯಾತ[illegible] ವೈದ್ಯ. ವಿದ್ಯಾಭ್ಯಾಸ ಪಡೆದದ್ದು ಒಬ್ಬ ಬೌದ್ಧ ಗುರುವಿನ ಬಳಿ.

ಆಯುರ್ವೇದದ ಮೂಲತತ್ತ್ವಗಳ ವಿಚಾರದಲ್ಲಿ ಅವನ ಕೀರ್ತಿಕೆ ಅಪ್ರತಿಮವಾದದ್ದೆಂಬ ಖ್ಯಾತಿಯಿದೆ.

ಈತನ ಕೃತಿ ಪದ್ಯರೂಪದಲ್ಲಿರುವ 'ಅಷ್ಟಾಂಗ ಸಂಗ್ರಹ'. ತನ್ನ ಕಾಲಕ್ಕೆ ಲಭ್ಯವಿದ್ದ ವಿಷಯಗಳನ್ನೆಲ್ಲ ಸಂಗ್ರಹಿಸಿ ಚರಕ, ಸುಶ್ರುತ ಮೊದಲಾದವರ ಗ್ರಂಥಗಳನ್ನು ಆಧಾರವಾಗಿಟ್ಟುಕೊಂಡು ವಾಗ್ಭಟ 'ಅಷ್ಟಾಂಗ ಸಂಗ್ರಹ' ಬರೆದಿದ್ದಾನೆ. ಪರ್ಷಿಯದಲ್ಲಿ ಬೆಳೆಸಿದ್ದ ಗ್ರೀಸಿನ ಔಷಧೀಯ ಸಸ್ಯಗಳ ಪ್ರಸ್ತಾಪ ಇವನ ಗ್ರಂಥದಲ್ಲಿದೆ.

ವಾಗ್ಭಟನ ಅನಂತರ, 8ನೆಯ ಶತಮಾನದಲ್ಲಿದ್ದ ಇನ್ನೊಬ್ಬ ವಾಗ್ಭಟನ ಉಲ್ಲೇಖವೂ ಇದೆ. ಇವನು ರಚಿಸಿರುವ ಗ್ರಂಥದ ಹೆಸರು 'ಅಷ್ಟಾಂಗ ಹೃದಯ ಸಂಗ್ರಹ'.

ಈ ಇಬ್ಬರು ವಾಗ್ಭಟರ ಗ್ರಂಥಗಳೂ ಪಾರಸೀ ಭಾಷೆಗೆ ಪರಿವರ್ತಿತವಾಗಿವೆ.

ವಾತ್ಸ್ಯಾಯನ

'ಭಾರತದ ಪ್ಲೇಟೋ' ಎಂಬ ಹೆಗ್ಗಳಿಕೆಗೆ ಪಾತ್ರನಾಗಿರುವ ವಾತ್ಸ್ಯಾಯನ ಪ್ರಾಚೀನ ಭಾರತದ ಅತ್ಯಂತ ಪ್ರಮುಖ ತತ್ತ್ವಜ್ಞಾನಿಗಳಲ್ಲೊಬ್ಬ. ತರ್ಕಶಾಸ್ತ್ರದಲ್ಲೂ ಇವನು ಅಪ್ರತಿಮ ವಿದ್ವಾಂಸನಾಗಿದ್ದ.

ವಾತ್ಸ್ಯಾಯನನ ಕಾಲ ಸುಮಾರು 450 ಎಂದು ಊಹೆ. ಇವನ ಗ್ರಂಥ 'ಕಾಮಸೂತ್ರ'ದಲ್ಲಿ ದಕ್ಷಿಣ ಭಾರತದ ಶಾತವಾಹನ ಅರಸುಗಳ ಬಗೆಗೆ ಉಲ್ಲೇಖವಿರುವುದರಿಂದ ಇವನೂ ದಕ್ಷಿಣ ಭಾರತದವನೇ ಎನ್ನಬಹುದು. ವಾರಾಣಸಿಯಲ್ಲಿ ಇವನು ಧಾರ್ಮಿಕ ಅಧ್ಯಯನದಲ್ಲಿ ತೊಡಗಿದ್ದಾಗ 'ಕಾಮಸೂತ್ರ'ವನ್ನು ಬರೆದ.

ಲೈಂಗಿಕ ಜೀವನದ ಬಗೆಗೆ ಪ್ರಾಚೀನ ಭಾರತದಲ್ಲಿ ರಚಿತವಾದ ಗ್ರಂಥಗಳಲ್ಲಿ ವಾತ್ಸ್ಯಾಯನನ 'ಕಾಮಸೂತ್ರ' ಅತ್ಯಂತ ಪ್ರಮುಖವಾದದ್ದು. ಜೀವನದಲ್ಲಿ ಕಾಮಜೀವನಕ್ಕೆ ಇರುವ ಸ್ಥಾನವನ್ನು ಅತ್ಯಂತ ಸಮನ್ವಯ ದೃಷ್ಟಿಯಿಂದ ತನ್ನ ಗ್ರಂಥದಲ್ಲಿ ವಾತ್ಸ್ಯಾಯನ ವಿಶ್ಲೇಷಿಸಿದ್ದಾನೆ. ಇವನ ಅನಂತರ ಈ ವಿಚಾರವಾಗಿ ಗ್ರಂಥಗಳನ್ನು ಬರೆದ ಅನೇಕರು ವಾತ್ಸ್ಯಾಯನನ 'ಕಾಮಸೂತ್ರ'ವನ್ನೇ ಅನುಸರಿಸಿದ್ದಾರೆ. ಈ ಕೃತಿ ಹಲವಾರು ದೇಶೀ ಹಾಗೂ ವಿದೇಶೀ ಭಾಷೆಗಳಿಗೆ ಅನುವಾದಗೊಂಡಿದೆ.

ಭಾರತದ ಪ್ರಮುಖ ತರ್ಕಶಾಸ್ತ್ರಜ್ಞರಲ್ಲೊಬ್ಬನಾದ ಗೌತಮನ 'ನ್ಯಾಯ ಸೂತ್ರ'ದ ಮೇಲೆ ವಾತ್ಸ್ಯಾಯನ ತುಂಬ ಅಧಿಕಾರಯುತ ವ್ಯಾಖ್ಯಾನ ಬರೆದಿದ್ದಾನೆ. ದೇವರಲ್ಲಿ ವಿಶ್ವಾಸವಿದ್ದರೂ, ವೇದಗಳು ದೇವಸೃಷ್ಟಿ ಎನ್ನದೆ, ಮಹರ್ಷಿಗಳೇ ವೇದಗಳನ್ನು ರಚಿಸಿದರು—ಎಂದು ಅಭಿಪ್ರಾಯಪಟ್ಟಿದ್ದಾನೆ.

ವಾರಂಗಲ್

ತೆಲಂಗಾಣವನ್ನು ಆಳಿದ ಕಾಕತೀಯರ ರಾಜಧಾನಿಯಾಗಿ ಮೆರೆದ ಪಟ್ಟಣ –ವಾರಂಗಲ್. ಮದರಾಸು–ಕಾಜೀಪೇಟ್–ದೆಹಲಿ ರೈಲುಮಾರ್ಗ ಇಲ್ಲಿ ಹಾದುಹೋಗುತ್ತದೆ. ಇದಕ್ಕೆ ಓರುಗಲ್ಲು, ಓರುಕಲ್‌ಗಳೆಂಬ ಹೆಸರುಗಳಿವೆ. 'ಒಂಟಿ ಬಂಡೆ' ಎಂದು ಇವುಗಳ ಅರ್ಥ.

ವಾರಂಗಲ್ ನಗರವನ್ನು ಕಟ್ಟಿಸಿದವನು ಕಾಕತೀಯ ದೊರೆ ರುದ್ರದೇವ. 1198–1261 ಅವಧಿಯಲ್ಲಿ ಆಳಿದ ಗಣಪತಿದೇವ ರಾಜಧಾನಿಯನ್ನು ಹನುಮಕೊಂಡದಿಂದ ವಾರಂಗಲ್ಲಿಗೆ ಸ್ಥಳಾಂತರಿಸಿದ. ಪಟ್ಟಣದ ಸುತ್ತಲೂ ಎರಡು ಗೋಡೆಗಳ ಕೋಟೆ ಕಟ್ಟಿಸಿದ. ವಾರಂಗಲ್ ರಾಜಧಾನಿಯಾದ ಆ ಕಾಲದಲ್ಲಿ ಕಾಕತೀಯ ರಾಜ್ಯದ ಪ್ರಾಶಸ್ತ್ಯ ಹೆಚ್ಚಿತು.

ವಾರಂಗಲ್ಲಿನ ದೇವಾಲಯ ವೈಶಿಷ್ಟ್ಯಪೂರ್ಣವಾಗಿದೆ. ಅದರ ನಾಲ್ಕು ಕಡೆ ತೋರಣ (ಅಲಂಕಾರ) ದ್ವಾರಗಳಿವೆ. ದೇವಾಲಯದ ನೆಲ ಹೊಳೆಯುವ ಹಾಸಿದೆ. ಕಾಕತೀಯ ವಾಸ್ತುಶಿಲ್ಪದ ಅಲಂಕರಣ ಕೆಲಸ ಇಲ್ಲಿ ಅತ್ಯುತ್ತಮವಾಗಿ ಮೂಡಿದೆ. ವಾರಂಗಲ್ ಪಟ್ಟಣಕ್ಕೆ ಸಮೀಪದಲ್ಲಿ ಕಾಕತೀಯರ ಇನ್ನೂ ಹಲವಾರು ಉತ್ತಮ ದೇವಾಲಯಗಳಿವೆ.

ಹನುಮಕೊಂಡ ಮತ್ತು ವಾರಂಗಲ್‌ಗಳನ್ನು ಸಂದರ್ಶಿಸಿದ ಪೋರ್ಚುಗೀಸ್ ಪ್ರವಾಸಿ ಮಾರ್ಕೊ ಪೋಲೋ ಇಲ್ಲಿ ತಯಾರಾಗುತ್ತಿದ್ದ ರೇಷ್ಮೆಯಷ್ಟು ನಯವಾದ ಹತ್ತಿವಸ್ತ್ರವನ್ನು ಕಂಡು ಆನಂದಿಸಿದನಂತೆ.

14ನೆಯ ಶತಮಾನದ ಪ್ರಥಮಾರ್ಧದಲ್ಲಿ ದೆಹಲಿಯ ಸುಲ್ತಾನರು ವಾರಂಗಲ್ಲನ್ನು ವಶಪಡಿಸಿಕೊಂಡರು.

ಆಧುನಿಕ ವಾರಂಗಲ್‌ನಲ್ಲಿ ಹಲವಾರು ಪ್ರೌಢ ಶಿಕ್ಷಣ ಸಂಸ್ಥೆಗಳಿವೆ. ಹತ್ತಿ ಗಿರಣಿ, ಸುಂದರ ಜಮಖಾನೆಗಳು, ಹಾಸಿಗೆಯ ಮೇಲುಹಾಸು, ರೇಷ್ಮೆ, ತೊಗಲು ಹಾಗೂ ಕೃತಕ ರೇಷ್ಮೆ ಕೈಗಾರಿಕೆಗಳು ಇಲ್ಲಿವೆ. ಸಮೀಪದಲ್ಲೇ ಇರುವ ರಾಮಪ್ಪ ಕೆರೆ ಹಾಗೂ 25 ಮೈಲು ದೂರದಲ್ಲಿರುವ ಪಖಾಲ್ ಕೆರೆಗಳು ಪ್ರೇಕ್ಷಣೀಯ ತಾಣಗಳು.

ವಾರಂಗಲ್ಲಿನ ಜನಸಂಖ್ಯೆ 2,07,520.

ವಾರನ್ ಹೇಸ್ಟಿಂಗ್ಸ್

ಸುಸಂಸ್ಕೃತ, ವಿದ್ವಾಂಸ, ಕಲಾಪ್ರೇಮಿ, ಶಾಂತಿಪ್ರಿಯ ಗವರ್ನರ್ ಜನರಲ್ ವಾರನ್ ಹೇಸ್ಟಿಂಗ್ಸ್.

ಇಂಗ್ಲೆಂಡಿನ ಚರ್ಚಿಲ್ ಎಂಬ ಊರಲ್ಲಿ 1732ರಲ್ಲಿ ಹುಟ್ಟಿದ ಹೇಸ್ಟಿಂಗ್ಸ್ ಚಿಕ್ಕಂದಿನಲ್ಲೇ ತಂದೆತಾಯಿಯರನ್ನೂ ಅನಂತರ ಸಾಕುತ್ತಿದ್ದ ಚಿಕ್ಕಪ್ಪನನ್ನೂ ಕಳೆದುಕೊಂಡ. 17ನೆಯ ವರ್ಷದಲ್ಲಿ ಈಸ್ಟ್ ಇಂಡಿಯಾ ಕಂಪೆನಿಯಲ್ಲಿ ಕೆಲಸಕ್ಕೆ ಸೇರಿ, ಕ್ಲೈವ್‌ನ ಸೇನಾಧಿಪತ್ಯದಲ್ಲಿ ಹಲವು ಕಾಳಗಗಳಲ್ಲಿ ಭಾಗವಹಿಸಿದ. ಕ್ರಮೇಣ ಉನ್ನತ ಸ್ಥಾನಗಳಿಸಿ ಕೊನೆಗೆ 1772ರಲ್ಲಿ ಬಂಗಾಳದ ಗವರ್ನರ್ ಆದ.

ಹೇಸ್ಟಿಂಗ್ಸ್ ಆಳಿದ ಕಾಲ ಬಹಳ ಕಷ್ಟದ್ದು. ಅವನು ತನ್ನ ಅಪೂರ್ವ ಸಂಘಟನಾಶಕ್ತಿಯಿಂದ ಭಾರತದ ಆಡಳಿತದ ವ್ಯವಸ್ಥೆಗೆ ಒಂದು ರೂಪ ಕೊಟ್ಟ.

ಇವನು ಪ್ರೋತ್ಸಾಹಿಸಿದ ಪ್ರಖ್ಯಾತ ವಿದ್ವಾಂಸರು ಮೂವರು: ವಿಲಿಯಂ ಜೋನ್ಸ್, ಚಾರ್ಲ್ಸ್ ವಿಲ್ಕಿನ್ಸ್ ಮತ್ತು ಹೆನ್ರಿ ಕೋಲ್‌ಬ್ರೂಕ್. ಇವರು ಕ್ರಮವಾಗಿ 'ಶಾಕುಂತಲ', 'ಭಗವದ್ಗೀತೆ' ಮತ್ತು ಹಿಂದೂ ಕಾನೂನುಗಳನ್ನು ಇಂಗ್ಲಿಷಿಗೆ ಅನುವಾದ ಮಾಡಿದರು.

ಈಸ್ಟ್ ಇಂಡಿಯಾ ಕಂಪೆನಿಯ ಒಂದು ಶಾಸನದ ಪ್ರಕಾರ ಹೇಸ್ಟಿಂಗ್ಸ್ ತಾನು ಯಾವುದೇ ಕ್ರಮಕೈಗೊಳ್ಳುವ ಮೊದಲು ನಾಲ್ವರು ಸಲಹೆಗಾರರ ಅಭಿಪ್ರಾಯ ಪಡೆಯಬೇಕಿತ್ತು. ಈ ನಾಲ್ವರಲ್ಲಿ ಮೂವರು ಇವನ ವೈಯಕ್ತಿಕ ಶತ್ರುಗಳಾಗಿದ್ದರು. ಹಿ ೯ ಗಾ ೧.



ಸುಸಂಸ್ಕೃತ ದೊರೆ; ಹೇಸ್ಟಿಂಗ್ಸ್

1785ರಲ್ಲಿ 13 ವರ್ಷಗಳ ಅಧಿಕಾರದ ಬಳಿಕ ಹೇಸ್ಟಿಂಗ್ಸ್ ನಿವೃತ್ತನಾದ ವೇಳೆಗೆ. ಅವನ ಮೇಲೆ ಹಲವಾರು ಆರೋಪಗಳು ಹೊರಿಸಲ್ಪಟ್ಟಿದ್ದವು.

ಈ ಆರೋಪಗಳ ವಿಚಾರಣೆ ಇಂಗ್ಲೆಂಡಿನಲ್ಲಿ 7 ವರ್ಷ ನಡೆದು ಹೇಸ್ಟಿಂಗ್ಸ್ ಹಣ್ಣಾದ. ಕೊನೆಗೆ ಹೇಸ್ಟಿಂಗ್ಸ್ ನಿರ್ದೋಷಿ ಎಂದು ಸಾರಲಾಯಿತು. ಆ ವೇಳೆಗೆ ಸರಕಾರ ನಿವೃತ್ತಿ ವೇತನ ಕೊಡಲೊಪ್ಪಿತು. ರಾಜಕೀಯ ಕ್ಷೇತ್ರವನ್ನೇ ಬಿಟ್ಟ ಹೇಸ್ಟಿಂಗ್ಸ್ 86 ವರ್ಷದ ಮುದುಕನಾಗುವ ವರೆಗೆ ನೆಮ್ಮದಿಯ ಜೀವನ ನಡೆಸಿ, 1818ರಲ್ಲಿ ಮೃತನಾದ.

ವಾರಾಣಸಿ



ಬನಾರಸ್ ಹಿಂದೂ ವಿಶ್ವವಿದ್ಯಾನಿಲಯ

ನಗರದ ಜನಸಂಖ್ಯೆ 5,60,296.

ನೋಡಿ : ಕಾಶಿ

ವಾಲ್‌ಚಂದ್ ಹೀರಾಚಂದ್

ಭಾರತದ ಒಬ್ಬ ಉದ್ದಿಮೆದಾರ ಸೇಟ್ ವಾಲ್‌ಚಂದ್ ಹೀರಾಚಂದ್.

ವಾಲ್‌ಚಂದ್ ಕುಟುಂಬದವರು ಮೂಲತಃ ಗುಜರಾತದವರು. ಒಂದೂವರೆ ಶತಮಾನಗಳ ಹಿಂದೆಯೇ ಇವರ ಮುತ್ತಜ್ಜ ಮಹಾರಾಷ್ಟ್ರಕ್ಕೆ ಬಂದು ಸೊಲ್ಲಾಪುರದಲ್ಲಿ ನೆಲೆಸಿ ವ್ಯಾಪಾರನಿರತರಾದರು.

1882ರಲ್ಲಿ ಸೊಲ್ಲಾಪುರದಲ್ಲಿ ವಾಲ್‌ಚಂದ್ ಹುಟ್ಟಿದರು. ಅಲ್ಲಿಯೇ ಮರಾಠೀ ಭಾಷೆಯಲ್ಲಿ ಶಿಕ್ಷಣ, ಇಂಗ್ಲಿಷು ವಿದ್ಯಾಭ್ಯಾಸ, ಮುಂಬಯಿ ಸೇಂಟ್ ಝೇವಿಯರ್ ಕಾಲೇಜಿನಲ್ಲಿ ಬಿ. ಎ. ವರೆಗೆ ಶಿಕ್ಷಣ. ಮುಂದೆ ತಂದೆ ಮತ್ತು ಚಿಕ್ಕಪ್ಪನ ಮನ ಒಲಿಸಿ, ಸ್ವಲ್ಪ ಬಂಡವಾಳ ದೊರಕಿಸಿಕೊಂಡರು. ಏಳು ಮೈಲುಗಳ ರೈಲು ಕೂಡಿಸುವ 80 ಸಾವಿರ ರೂಪಾಯಿಯ ಕೆಲಸ ಕೈಗೊಂಡರು. ಹಿಡಿದ ಕೆಲಸವನ್ನು ಚೊಕ್ಕವಾಗಿ ಮಾಡುವುದು ವಾಲ್‌ಚಂದರ ರೀತಿ. ಹೆಚ್ಚು ಹೆಚ್ಚು ಕೆಲಸಗಳು ಇವರೆಡೆಗೆ ತಾವಾಗಿಯೇ ಬರತೊಡಗಿದುವು.

ಮುಂಬಯಿ – ಪುಣೆ ಮಧ್ಯ ರೈಲು ದಾರಿಯಲ್ಲಿ ಗುಡ್ಡವನ್ನು ಕೊರೆದು ಗವಿ ಮಾರ್ಗವನ್ನು ಮಾಡುವ ಕಾರ್ಯ ಬಹಳ ಬಿಕ್ಕಟ್ಟಿನದಾಗಿತ್ತು. ಧೈರ್ಯದಿಂದಲೇ ಈ ಕಾರ್ಯವನ್ನು ವಾಲ್‌ಚಂದರು ಯಶಸ್ವಿಗೊಳಿಸಿದರು.

ವಾಲ್‌ಚಂದರು ಕಾರ್ಯಪ್ರಿಯರಿದ್ದಂತೆ ಪ್ರವಾಸಪ್ರಿಯರೂ ಆಗಿದ್ದರು. ಭಾರತೀಯ ಸಮುದ್ರಯಾನದಲ್ಲಿ ಆಸಕ್ತಿ ವಹಿಸಿ ಹಡಗು ನಿರ್ಮಾಣಕ್ಕೆ ಇಳಿದರು. ಇದು ವಿಶಾಖಪಟ್ಟಣದ ಹಡಗು ನಿರ್ಮಾಣ ಕಂಪೆನಿಯ ಸ್ಥಾಪನೆಗೆ ಕಾರಣವಾಯಿತು. ರಾವಳಗಾವ ಸಕ್ಕರೆ ಕಾರಖಾನೆ ಆರಂಭಿಸಿದರು. ಅನಂತರ ಸಕ್ಕರೆ ತಯಾರಿಸುವ ಯಂತ್ರಗಳನ್ನೇ ಭಾರತದಲ್ಲಿ ನಿರ್ಮಿಸುವ ಯೋಜನೆ ರೂಪಿಸಿ ಸಫಲರಾದರು.



ಸ್ವಾವಲಂಬನ ಶಿಲ್ಪಿ : ವಾಲ್‌ಚಂದ್

ಬೆಂಗಳೂರು ಹಿಂದೂಸ್ಥಾನ್ ಏರ್‌ಕ್ರಾಫ್ಟ್ ಸಂಸ್ಥೆ ವಾಲ್‌ಚಂದರ ಕನಸು. ಇದು ಇಂದು ಏಷ್ಯದಲ್ಲಿಯೇ ದೊಡ್ಡ ಕಾರಖಾನೆ.

ಮೋಟರು ತಯಾರಿಕೆಯ ಬಗೆಗೆ ವಿಶ್ವೇಶ್ವರಯ್ಯನವರು ಹಿಂದಿನಿಂದಲೇ ಯೋಚಿಸುತ್ತಿದ್ದುದನ್ನು ಅವರ ಸಹಾಯದಿಂದಲೇ ಕಾರ್ಯರೂಪಕ್ಕೆ ತಂದವರು ವಾಲ್‌ಚಂದರು. ಪ್ರೀಮಿಯರ್ ಆಟೊಮೊಬಾಯ್ಲ್ಸ್ ನಿರ್ಮಾಣವಾದದ್ದು ಹೀಗೆ.

71 ವರ್ಷ ಬದುಕಿದ ವಾಲ್‌ಚಂದರು 1953ರಲ್ಲಿ ನಿಧನರಾದರು.

ನೋಡಿ : ಪ್ರೀಮಿಯರ್ ಆಟೊಮೊಬಾಯ್ಲ್ಸ್

ವಾಲ್ಮೀಕಿ

ನೋಡಿ : ಸಂಪುಟ ೫

ವಾಸುದೇವ ಬಲವಂತ ಫಡ್ಕೆ

19ನೆಯ ಶತಮಾನದ ಎಂಟನೆಯ ದಶಕದಲ್ಲಿ ಭಾರತದಲ್ಲಿ ಇಂಗ್ಲಿಷರ ವಿರುದ್ಧ ಸಶಸ್ತ್ರ ಕ್ರಾಂತಿಯನ್ನು ರೂಪಿಸಿದವರು ವಾಸುದೇವ ಬಲವಂತ ಫಡ್ಕೆ.

ಫಡ್ಕೆ ಮಹಾರಾಷ್ಟ್ರದ ಕೊಲಾಬಾ ಜಿಲ್ಲೆಯಲ್ಲಿ 1845 ನವೆಂಬರ್ 4ರಂದು ಜನಿಸಿದರು. ಮುಂಬಯಿ ಸಂಸ್ಥಾನದ ರಾಮೋಶಿ ಜನರನ್ನು ಒಂದುಗೂಡಿಸಿ ಬಲಪಾದ ಸಶಸ್ತ್ರ ಪಡೆಯೊಂದನ್ನು ಇವರು ಕಟ್ಟಿದರು.

ಸಶಸ್ತ್ರಕ್ರಾಂತಿ : ಫಡ್ಕೆ



ಸರಕಾರೀ ಖಜಾನೆಗಳಿಂದ ಹಣ ದೋಚಿದ್ದಾರೆ ಮತ್ತು ಸಂಪರ್ಕ ವ್ಯವಸ್ಥೆಯನ್ನು ಹಾಳುಗೆಡವಿದ್ದಾರೆ ಎಂಬ ಆಪಾದನೆಯ ಮೇಲೆ, 1879ರಲ್ಲಿ ಫಡ್ಕೆ ಬಂಧಿತರಾದರು. ಗಡೀಪಾರು ಶಿಕ್ಷೆಗೆ ಗುರಿಯಾಗಿ ಏಡನ್‌ಗೆ ಕಳುಹಿಸಲ್ಪಟ್ಟರು. ಕಾರಾಗೃಹದಲ್ಲಿ ದುಸ್ಸಹನೀಯ

ವಾದ ಪರಿಸ್ಥಿತಿಯನ್ನು ಎದುರಿಸಿದರು. ಅನ್ನ ಸತ್ಯಾಗ್ರಹ ಕೈಗೊಂಡರು. 1883 ಫೆಬ್ರುವರಿ 17ರಂದು ಫಡ್ಕೆ ನಿಧನರಾದರು.

ವಾಸ್ಕೊ ದ ಗಾಮ

ನೋಡಿ : ಸಂಪುಟ ೧

ವ್ಯಾಸ

ನೋಡಿ : ಸಂಪುಟ ೫

ವ್ಯಾಸತೀರ್ಥ

ಬ್ರಹ್ಮಣ್ಯತೀರ್ಥರ ಗುರುಕುಲ. ಶಿಷ್ಯರಲ್ಲಿ ಪ್ರತಿಭಾಸಂಪನ್ನನಾಗಿದ್ದ ಒಬ್ಬ ಬಾಲಕನಿಗೆ ಸನ್ಯಾಸವಿತ್ತು ತಮ್ಮ ಉತ್ತರಾಧಿಕಾರಿಯಾಗಿ ಮಾಡಿಕೊಳ್ಳಬೇಕೆಂದು ಅವರು ಅಪೇಕ್ಷಿಪಟ್ಟರು. ಬಾಲಕನ ತಂದೆಗೆ ತಿಳಿಸಿದ್ದಾಯಿತು. ಆದರೆ ಬಾಲಕನಿಗೆ ಅಷ್ಟು ಬೇಗ ಸನ್ಯಾಸ ಸ್ವೀಕರಿಸುವುದು ಇಷ್ಟವಿರಲಿಲ್ಲ. ಯಾರಿಗೂ ತಿಳಿಸದೆ ಗುರುಕುಲದಿಂದ ಹೊರಟುಹೋದ. ಆಲದ ಮರದ ಕೆಳಗೆ ಮಲಗಿದ್ದಾಗ, ಕನಸಿನಲ್ಲಿ, ಸನ್ಯಾಸ ಸ್ವೀಕರಿಸಲು ದೇವರ ಅಣತಿಯಾದಂತೆ ಅನಿಸಿತು: ಮುಂದೆ ಆತನಿಂದ ಆಗಬೇಕಾದ ಕಾರ್ಯಗಳನ್ನು ತಿಳಿಸಿದಂತೆ ಭಾಸವಾಯಿತು. ಗುರುಕುಲಕ್ಕೆ ಹಿಂದಿರುಗಿ ಬಾಲಕ ಸನ್ಯಾಸ ಸ್ವೀಕರಿಸಿದ. ಆ ಬಾಲಕನೇ ಮಧ್ವ ಸಿದ್ಧಾಂತ ಪ್ರತಿಪಾದಕರಲ್ಲಿ ಶ್ರೇಷ್ಠರೆಂದು ಗಣಿಸಲ್ಪಟ್ಟಿರುವ ವ್ಯಾಸತೀರ್ಥರು.

ಬಲ್ಲಣ-ಸುಮತಿಯರ ಮಗ ವ್ಯಾಸತೀರ್ಥರು. 11 ವರ್ಷಕ್ಕೆ ಗುರುಕುಲ ಸೇರಿ ಕಾವ್ಯ, ನಾಟಕ, ಅಲಂಕಾರಗಳನ್ನು ಕಲಿತರು.

ಸನ್ಯಾಸ ದೊರಕಿದ ಮೇಲೆ, ಸುಮಾರು 1467ರಲ್ಲಿ, ಅವರು ಉತ್ತರ ಭಾರತ ಯಾತ್ರೆಗೆ ಹೊರಟರು. ಪಂಡಿತರು, ಸಂತರನ್ನು ಕಂಡರು : ಯಾತ್ರೆ ಮುಗಿಸಿ ಕಂಚಿಯಲ್ಲಿ ಕೆಲ ಕಾಲ ತಂಗಿದರು. ಮುಳಬಾಗಲಿನಲ್ಲಿ ಶ್ರೀಪಾದರಾಯಸ್ವಾಮಿ ದರ್ಶನ ಮಾಡಿದರು. ಅವರ ಆದೇಶದಂತೆ ವ್ಯಾಸತೀರ್ಥರು ವಿಜಯನಗರಕ್ಕೆ ಹೊರಟರು. ಆ ರಾಜಧಾನಿಯಲ್ಲಿ ಪಂಡಿತರು, ಧರ್ಮಜಿಜ್ಞಾಸುಗಳು, ತಾರ್ಕಿಕರನ್ನು ವಾದದಲ್ಲಿ ಎದುರಿಸಿದರು. ಕಳಿಂಗದ ಪಂಡಿತ ಬಸವಭಟ್ಟನನ್ನು ವಾದದಲ್ಲಿ ಸೋಲಿಸಿದಾಗ, ಆತನಿಂದ ಬಹುಮಾನವಾಗಿ ಶಿವಲಿಂಗ ದೊರಕಿತು (ಕರ್ನಾಟಕದ ಸೋಸಲೆ ಮಠದಲ್ಲಿ ಆ ಲಿಂಗಕ್ಕೆ ಮಹಾಶಿವರಾತ್ರಿಯ ದಿನ ಪೂಜೆ ನಡೆಯುತ್ತದೆ).

ವ್ಯಾಸತೀರ್ಥ ವೈಷ್ಣವ ಪಂಥದವರು. ಅವರು ವಿಜಯನಗರದ ರಾಜಗುರು ಆದರು. ಅನೇಕ ವೈಷ್ಣವ ದೇವಾಲಯಗಳನ್ನು ಕಟ್ಟಿಸಿದರು. ರಾಜ್ಯದ ಸರಸ್ವತೀ ಪೀಠದ ಪ್ರಧಾನಾಚಾರ್ಯರಾಗಿದ್ದರು. 'ತಾತ್ಪರ್ಯ ಚಂದ್ರಿಕೆ', 'ತರ್ಕತಾಂಡವ', 'ವಾಕ್ಯಾಮೃತ' ಮುಂತಾದ ಗ್ರಂಥಗಳನ್ನು ರಚಿಸಿದರು.

ವಿಜಯನಗರದ ಸಾಳುವ ನರಸಿಂಹ, ತಿಮ್ಮರಾಯ, ಕೃಷ್ಣದೇವರಾಯ, ಅಚ್ಯುತರಾಯರು ಅವರನ್ನು ಬಹಳ ಗೌರವಿಸಿದರು. ರಾಜರು ನೀಡಿದ ಹಣವನ್ನು ವ್ಯಾಸತೀರ್ಥರು ವಿದ್ಯಾಪ್ರಸಾರ ಮತ್ತು ಧರ್ಮ ರಕ್ಷಣೆಗೆ ಉಪಯೋಗಿಸಿದರು.

ಬಿಜಾಪುರದ ಸುಲ್ತಾನ ಆದಿಲ್ ಷಾ ಹಸಿರು ಪತಾಕೆಯನ್ನಿತ್ತು ಅವರಿಗೆ ತನಗಿದ್ದ ಅಭಿಮಾನವನ್ನು ವ್ಯಕ್ತಗೊಳಿಸಿದ. ವೈಷ್ಣವ ಸಿದ್ಧಾಂತ [illegible]ಗಾಗಿ ಇವರಿಗೆ 'ಕಾಲಮೇಘ' ಎಂಬ ಬಿರುದು ದೊರಕಿತು.

ಭಕ್ತಿಯೇ ಮೂರ್ತಿವೆತ್ತಂತಿದ್ದ ವ್ಯಾಸತೀರ್ಥರಿಗೆ ಪುರಂದರದಾಸರು, ಕನಕದಾಸರು ಮತ್ತು ವಾದಿರಾಜರು ಶಿಷ್ಯರಾಗಿದ್ದರು. "ಪ್ರಪಂಚ ಬರಿ ಮಾಯೆಯಲ್ಲ, ಇದನ್ನು ಅರ್ಥಮಾಡಿಕೊಳ್ಳಲಾಗದಿದ್ದರೆ ದೇಶ ಬೇರೆಯವರ ಕಾಲ್ತುಳಿತಕ್ಕೆ ಸಿಕ್ಕಿ ವಿನಾಶ ಹೊಂದುತ್ತದೆ" ಎಂದು ಅವರು ಸಾರಿದರು.

"ವ್ಯಾಸರಾಯರ ಚರಣಕಮಲ ದರುಶನವೆನಗೆ ಏಸು ಜನ್ಮದ ಸುಕೃತವೊ ದೊರಕಿತು. ಎನ್ನ ಸಾಸಿರ ಕುಲಕೋಟಿ ಪಾವನವಾಯಿತು"— ಎಂದು ಪುರಂದರದಾಸರು ಹಾಡಿದ್ದಾರೆ.

ವಿಂಧ್ಯ

ಭಾರತದ ಮಧ್ಯಭಾಗದಲ್ಲಿರುವ ಪರ್ವತಾವಳಿ, ವಿಂಧ್ಯ. ವಿಂಧ್ಯದ ಉತ್ತರಕ್ಕೆ ಇರುವ ಭಾರತದ ಭಾಗ ಉತ್ತರ ಭಾರತ; ದಕ್ಷಿಣಕ್ಕೆ ಇರುವುದು ದಕ್ಷಿಣ ಭಾರತ.

ವಿಂಧ್ಯ ಮಲೆನಾಡುಗಳಲ್ಲಿ ದಟ್ಟವಾದ ಕಾಡುಗಳಿಂದ ಕೂಡಿದೆ.

ವಿಂಧ್ಯಶ್ರೇಣಿಯ ಪರ್ವತಗಳು ಸಾಮಾನ್ಯವಾಗಿ 1,500ರಿಂದ 2,000 ಅಡಿ ಎತ್ತರವಾದ್ದು. ಅತ್ಯುನ್ನತ ಶಿಖರದ ಎತ್ತರ 3,650 ಅಡಿ ಮಾತ್ರ. ಇದು ದಖ್ಖನ ಪ್ರಸ್ಥಭೂಮಿಯ ದಕ್ಷಿಣಕ್ಕೆ ನರ್ಮದಾ ನದಿಯ ಉತ್ತರಕ್ಕೆ ಹೆಚ್ಚು ಕಡಿಮೆ ಒಂದೇ ಸಾಲಿನಲ್ಲಿದೆ. ಪರ್ವತಾವಳಿಯ ಉದ್ದ ಸುಮಾರು 700 ಕಿಮೀ. ಇದರ ಪಶ್ಚಿಮದ ತುದಿ ಗುಜರಾತಿನಲ್ಲಿದೆ. ಪೂರ್ವದ ತುದಿಯಲ್ಲಿ ಇರುವುದು ಕೈಮೂರ್ ಗುಡ್ಡಶ್ರೇಣಿ.

ಯಮುನೆಯ ಹಲವು ಉಪನದಿಗಳು ಹುಟ್ಟುವುದು ವಿಂಧ್ಯ ಪರ್ವತಗಳಲ್ಲಿ. ವಿಂಧ್ಯ ಪರ್ವತಶ್ರೇಣಿ ಉತ್ತರದ ಕಡೆಗೆ ಇಳಿಜಾರಾಗಿದೆ.

ವಿಂಧ್ಯದ ಮರಳುಗಲ್ಲು ಉತ್ತಮ ಕಟ್ಟಡ ಸಾಮಗ್ರಿ. ಕಬ್ಬಿಣ, ಮ್ಯಾಂಗನೀಸ್ ನಿಕ್ಷೇಪಗಳೂ ಇಲ್ಲಿ ಸಿಕ್ಕಿವೆ. ಇದಕ್ಕೆ ಸೇರಿರುವ ಪನ್ನಾ ಪ್ರದೇಶ ವಜ್ರಗಳಿಗೆ ಪ್ರಖ್ಯಾತ.

ಉತ್ತರ ಪ್ರದೇಶದ ಮಿರ್ಜಾಪುರದ ಸಮೀಪದಲ್ಲಿ ವಿಂಧ್ಯಾಚಲ ಎಂಬ ಗಿರಿಧಾಮವಿದೆ. ವಿಂಧ್ಯವಾಸಿನಿ ದೇವಿಯ ಪ್ರಖ್ಯಾತ ದೇವಸ್ಥಾನ ಇರುವುದು ಇಲ್ಲಿ.

ವಿ. ಎನ್. ಶಿರೋಡ್‌ಕರ್

ಅಂತರರಾಷ್ಟ್ರೀಯ ಖ್ಯಾತಿಯ ಸ್ತ್ರೀರೋಗ ವಿಜ್ಞಾನಿ ಮತ್ತು ಪ್ರಸೂತಿ ವಿಜ್ಞಾನಿ, ಡಾ. ವಿ. ಎನ್. ಶಿರೋಡ್‌ಕರ್.

ಶಿರೋಡ್‌ಕರರ ಜನನ 1899ರಲ್ಲಿ.

ಮತ್ತೆ ಮತ್ತೆ ಗರ್ಭಪಾತವಾಗುವುದನ್ನು ತಡೆಯಲು ಇವರು ನಡೆಸಿದ ಶಸ್ತ್ರಕ್ರಿಯೆ ಮತ್ತು ಸ್ತ್ರೀರೋಗ ಶಸ್ತ್ರಕ್ರಿಯಾ ವಿಧಾನದಲ್ಲಿ ಇವರು ಪ್ರಯೋಗಿಸಿದ ಹೊಸ ತಂತ್ರಗಳು ಅಂತರರಾಷ್ಟ್ರೀಯ ಖ್ಯಾತಿ ಗಳಿಸಿವೆ. ಇವರು ಟ್ಯೂಬೊಪ್ಲಾಸ್ಟಿ ಕ್ಷೇತ್ರದ ಅಗ್ರಗಣ್ಯರಾಗಿದ್ದರು.

ತಮ್ಮ ಸಂಶೋಧನೆಗಳ ಮೇಲೆ ಉಪನ್ಯಾಸಗಳನ್ನು



ಸ್ತ್ರೀರೋಗ ಶಸ್ತ್ರಕ್ರಿಯೆ : ಶಿರೋಡ್‌ಕರ್

ಮಾಡಿದರು. ಶಿರೋಡ್ಕರ್ ಹಲವು ಬಾರಿ ವಿದೇಶ ಪ್ರವಾಸ ಮಾಡಿದರು. ಇವರು ಇಂಗ್ಲೆಂಡಿನ ಹಲವು ವೈದ್ಯಕೀಯ ಕಾಲೇಜುಗಳ ಫೆಲೋ ಆಗಿದ್ದರು.

1960ರಲ್ಲಿ ಶಿರೋಡ್ಕರ್ ಅವರಿಗೆ ಪದ್ಮಭೂಷಣ ಪ್ರಶಸ್ತಿ ಲಭಿಸಿತು. 1971ರಲ್ಲಿ ಇವರಿಗೆ ಪದ್ಮವಿಭೂಷಣ ಪ್ರಶಸ್ತಿ ನೀಡಲಾಯಿತು. ಅದೇ ವರ್ಷ ಅವರು ನಿಧನರಾದರು.

ಅವರಿಗೆ ಭಾರತೀಯ ಶಾಸ್ತ್ರೀಯ ಸಂಗೀತದ ಜ್ಞಾನವಿತ್ತು. ಉತ್ತಮ ವರ್ಣಚಿತ್ರಗಳನ್ನೂ ಅವರು ಬರೆದಿದ್ದರು. ಶಿರೋಡ್ಕರ್ ಅವರದು ಬಹುಮುಖ ಪ್ರತಿಭೆ.

ವಿ. ಎಸ್. ಶ್ರೀನಿವಾಸ ಶಾಸ್ತ್ರೀ

ಉಪಾಧ್ಯಾಯ ವೃತ್ತಿಯಿಂದ ಬದುಕು ಆರಂಭಿಸಿ ರಾಷ್ಟ್ರವ್ಯಾಪ್ತಿಯ ಕೀರ್ತಿ ಗಳಿಸಿದವರು ವಿ. ಎಸ್. ಶ್ರೀನಿವಾಸಶಾಸ್ತ್ರೀ. 'ರೈಟ್ ಆನರಬ್‌ಲ್' ಇವರ ಪ್ರತಿಭೆಗೆ ಆಂಗ್ಲ ಸರಕಾರದಿಂದ ದೊರೆತ ಪುರಸ್ಕಾರ.

ಶ್ರೀನಿವಾಸಶಾಸ್ತ್ರಿಯವರು ಹುಟ್ಟಿದ್ದು ಮದರಾಸಿನ ಕುಂಭಕೋಣಂ ಸಮೀಪದಲ್ಲಿರುವ ವಲಂಗಿಮನ್‌ನಲ್ಲಿ. 1869 ಸೆಪ್ಟೆಂಬರ್ 22ರಂದು. ತಂದೆ. ಶಂಕರನಾರಾಯಣಶಾಸ್ತ್ರೀ, ತಾಯಿ. ಬಾಲಾಂಬಾಳ್. ಉನ್ನತ ದರ್ಜೆಯಲ್ಲಿ ಬಿ. ಎ. ಪದವಿ ಹೊಂದಿದ ಅನಂತರ ಇವರು ಶಾಲಾ ಅಧ್ಯಾಪಕರಾದರು.

ಅಧ್ಯಾಪನಕ್ಕಷ್ಟೇ ಅವರ ಕೆಲಸ ಸೀಮಿತಗೊಂಡಿರಲಿಲ್ಲ. ದೇಶದ ಹಾಗೂ ಸಮಾಜದ ಆಗಿನ ಸಮಸ್ಯೆಗಳನ್ನು ವಿಶ್ಲೇಷಿಸಿ. ತಮ್ಮ ಅನುಭವದ ಮೂಸೆಯಲ್ಲಿ ಮೂಡಿಬಂದ ಪರಿಹಾರ ಮಾರ್ಗಗಳನ್ನು ಅವರು ಸೂಚಿಸುತ್ತಿದ್ದರು.

ಗಾಂಧೀಜಿಯ ಹಲವು ಧೋರಣೆಗಳು ಇವರಿಗೆ ಒಪ್ಪಿಗೆಯಾಗಿರಲಿಲ್ಲ. ಆದರೂ "ಕೇವಲ ಗಾಂಧೀಜೀ ಅವರನ್ನು ಪೂಜಿಸಿದರೆ. ಹೊಗಳಿದರೆ ಏನು ಪ್ರಯೋಜನ ? ನಾವು ಸತ್ಯ-ಅಹಿಂಸೆಗಳನ್ನು ಆರಾಧಿಸಬೇಕು" ಎಂದು ನುಡಿದರು. ಶ್ರೀನಿವಾಸಶಾಸ್ತ್ರಿಯವರು ಗೋಪಾಲಕೃಷ್ಣ ಗೋಖಲೆ ಅವರ ಆಪ್ತಶಿಷ್ಯರಾಗಿದ್ದರು.

1907ರಲ್ಲಿ ಇವರು 'ಭಾರತ ಸೇವಕ ಸಂಸ್ಥೆ' (ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿ) ಸೇರಿದರು. 1915ರಲ್ಲಿ ಗೋಖಲೆಯವರ ಅನಂತರ ಅಧ್ಯಕ್ಷರಾದರು. ಆ ಸಂಸ್ಥೆಯ ಆದರ್ಶಗಳನ್ನು ಪಾಲಿಸಿದರು. ಮದರಾಸು ಪ್ರಾಂತೀಯ ಶಾಸನಸಭೆಯ ಸದಸ್ಯರಾಗಿ. ಕೇಂದ್ರ ಶಾಸನಸಭೆಯ ಸದಸ್ಯರಾಗಿ ಇವರು ಸಲ್ಲಿಸಿದ ಸೇವೆ ಗಮನಾರ್ಹವಾದದ್ದು. ಶಾಸನ ಸುಧಾರಣೆಯಲ್ಲಿ ಬಹು ಮುಖ್ಯ ಪಾತ್ರವಹಿಸಿದರು. ರಾಜಕೀಯಶಾಸ್ತ್ರ. ಸಂವಿಧಾನಗಳ ಇತಿಹಾಸ ದಲ್ಲಿ ಪ್ರಕಾಂಡ ಪಂಡಿತರೂ ಅನುಭವಿಗಳೂ ಆಗಿದ್ದ ಇವರು ಭಾರತದ ರಾಜಕೀಯ ವಿಕಾಸಕ್ಕಾಗಿ ಶ್ರಮಿಸಿದರು.

ಶ್ರೀನಿವಾಸಶಾಸ್ತ್ರಿಯವರು ಶ್ರೇಷ್ಠ ವಾಗ್ಮಿ. ಅವರು 1921ರಲ್ಲಿ ಭಾರತದ ಪ್ರತಿನಿಧಿಯಾಗಿ ಸಾಮ್ರಾಜ್ಯ ಸಮ್ಮೇಳನದಲ್ಲಿ ಭಾಗವಹಿಸಿದಾಗ ಭಾರತದ ಅವಶ್ಯಕತೆಗಳನ್ನು ಕುರಿತು ಆಡಿದ ಮಾತು. ಮಂಡಿಸಿದ ವಾದಗಳು ಎಲ್ಲರ ಗಮನ ಸೆಳೆದುವು. ಹಾಗೆಯೇ ಲೀಗ್ ಆಫ್ ನೇಷನ್ಸ್‌ನಲ್ಲಿ. ವಾಷಿಂಗ್ಟನ್‌ನಲ್ಲಿ ನಡೆದ ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ ಅವರ ಭಾಷಣಗಳು ಭಾರತದ ಗುರಿ. ಭಾರತೀಯ ಸಂಸ್ಕೃತಿಯ ಹಲವು ಮುಖಗಳನ್ನು ಮನದಟ್ಟು ಮಾಡಿಕೊಟ್ಟುವು.

1926ರಲ್ಲಿ ಅವರು ದಕ್ಷಿಣ ಆಫ್ರಿಕಕ್ಕೆ ಭಾರತ ಸರಕಾರದ ಏಜೆಂಟ್ ಜನರಲ್ ಆದರು. ಅಲ್ಲಿದ್ದ ಭಾರತೀಯರ ಸ್ಥಿತಿಯನ್ನು ಉತ್ತಮಗೊಳಿಸಲು ವಿಶೇಷವಾಗಿ ಶ್ರಮಿಸಿದರು. 1930–31ರಲ್ಲಿ ದುಂಡು ಮೇಜಿನ ಪರಿಷತ್ತಿಗೆ ಪ್ರತಿನಿಧಿಯಾಗಿ ಹೋಗಿದ್ದರು.



ಪ್ರತಿಭೆ : 'ರೈಟ್ ಆನರಬ್‌ಲ್'

1935–40ರ ವರೆಗೆ ಮದರಾಸಿನ ಅಣ್ಣಾಮಲೈ ವಿಶ್ವವಿದ್ಯಾನಿಲಯದ ವೈಸ್ ಛಾನ್ಸ್‌ಲರ್ ಆಗಿದ್ದರು. ಆಗಿನ ವಿದ್ಯಾಭ್ಯಾಸ ಕ್ರಮದಲ್ಲಿ ಅನೇಕ ಸುಧಾರಣೆಗಳನ್ನೂ ಅವರು ಮಾಡಿದರು.

ಶ್ರೀನಿವಾಸಶಾಸ್ತ್ರಿಗಳದು ನಿಯಮಬದ್ಧ ಜೀವನ: ವಿಕಾಸಗೊಂಡ ಸಮಗ್ರ ವ್ಯಕ್ತಿತ್ವ. ನುಡಿಯಲ್ಲಿ ಹೇಗೋ ಹಾಗೆಯೇ ಉಡುಗೆ-ತೊಡುಗೆಯಲ್ಲೂ ಸರಳತೆ. ಸ್ವಚ್ಛತೆ. ತುಂಬು ಜೀವನವನ್ನು ಬಾಳಿದ ಶಾಸ್ತ್ರಿಯವರು 1946 ಏಪ್ರಿಲ್ 17ರಂದು ನಿಧನರಾದರು.

ಪ್ರತಿಯೊಬ್ಬ ನಾಗರಿಕನೂ ತನ್ನ ಹಕ್ಕುಬಾಧ್ಯತೆಗಳನ್ನು ಅರಿತು ನಡೆಯಬೇಕು. ಪೌರತ್ವದ ಪವಿತ್ರ ಹೊಣೆಯನ್ನು ಮರೆಯದೆ ನಿರ್ವಹಿಸಬೇಕು ಎಂದು ಶಾಸ್ತ್ರಿಯವರು ಆಗಾಗ್ಗೆ ಹೇಳುತ್ತಿದ್ದರು. ಮಾನವೀಯ ಗುಣಕ್ಕೆ ಅವರು ಮಹತ್ವದ ಸ್ಥಾನ ನೀಡಿದ್ದರು.

ವಿಕ್ರಮ ಶಕ

ಉಜ್ಜಯಿನಿಯನ್ನು ಆಳುತ್ತಿದ್ದ ಶಕರನ್ನು ವಿಕ್ರಮಾದಿತ್ಯ ಸೋಲಿಸಿದ ವಿಜಯದ ಸ್ಮಾರಕವಾಗಿ ವಿಕ್ರಮ ಶಕ ಆರಂಭವಾಯಿತೆಂಬುದು ಪರಂಪರಾಗತ ಹೇಳಿಕೆ. ಉಜ್ಜಯಿನಿಯಿಂದ ಶಕರನ್ನು ಓಡಿಸಿದವನು ವಿಕ್ರಮಾದಿತ್ಯ ಬಿರುದಿನ ಎರಡನೆಯ ಚಂದ್ರಗುಪ್ತ. ಇವನು ವಿಕ್ರಮ ಶಕೆ ಆರಂಭವಾದ 400 ವರ್ಷಗಳ ಅನಂತರ ಬಾಳಿದ[illegible]. ಆದ್ದರಿಂದ ಈ ಹೇಳಿಕೆಗೆ ಆಧಾರವಿಲ್ಲ.

ಕ್ರಿ. ಪೂ. 57ರಲ್ಲಿ ಮಾಳ್ವರು ಆರಂಭಿಸಿದ [illegible]ಗೆ ಕೆಲ ಕಾಲಾನಂತರ ವಿಕ್ರಮ ಶಕ ಎಂಬ ಹೆಸರು ಬಂತೆನ್ನುವ ಅಭಿಪ್ರಾಯ ಇದೆ. [illegible] ಅನೇಕ ಶಾಸನಗಳಲ್ಲಿ ಇದು 'ಮಾಳ್ವ ಕುಲದವರಿಂ[illegible] ಬಂದ ಶಕ' ಎಂ[illegible] ಉಲ್ಲೇಖವಿದೆ.

ಬಂಗಾಳ ಬಿಟ್ಟು ಉತ್ತರ ಭಾರತದಲ್ಲಿ ಈ ಶಕ ಬಳಕೆಯ[illegible]ದೆ. ವಿಕ್ರಮ ಶಕದಲ್ಲಿ ಮೊದಲ ಮಾಸ ಚೈತ್ರ. ಹುಣ್ಣಿಮೆಯಿಂದ ಹುಣ್ಣಿಮೆ ವರೆಗೆ ತಿಂಗಳುಗಳ ಲೆಕ್ಕ.

ಕ್ರಿಸ್ತಶಕೆಗೆ 58ನ್ನು ಸೇರಿಸಿದರೆ ವಿಕ್ರಮ ಶಕ ವರ್ಷ ಬರುತ್ತದೆ. 1974ನೆಯ ಇಸವಿಯಲ್ಲಿ ವಿಕ್ರಮ ಶಕ 2032ರ ಆರಂಭ.

ನೋಡಿ : ರಾಷ್ಟ್ರೀಯ ಪಂಚಾಂಗ; ಶಕವರ್ಷ

ವಿಕ್ರಮಶೀಲ

ಅತೀಸ ದೀಪಂಕರ ಘನ ವಿದ್ವಾಂಸ. ಆತ ತಮ್ಮ ನಾಡಿಗೆ ಬಂದು ಬೌದ್ಧ ಧರ್ಮ ಬೋಧಿಸಲೆಂದು ಟಿಬೆಟ್ಟಿನ ಅರಸನ ಅಭಿಲಾಷೆ: ಅತೀಸನನ್ನು ಕರೆತರಲು ಭಿಕ್ಷು ನಾಗ್-ಶೊ ಲೋಟ್ಸವ ಟಿಬೆಟ್ಟಿನಿಂದ ಬಂದ. ಅತೀಸ ಟಿಬೆಟ್ಟಿಗೆ ತೆರಳಿ ಅನೇಕ ಸಂಸ್ಕೃತ ಗ್ರಂಥಗಳನ್ನು ಟಿಬೆಟ್ ಭಾಷೆಗೆ ಅನುವಾದ ಮಾಡಿದ; ಟಿಬೆಟ್ಟಿನ ಬೌದ್ಧ ಸಂಪ್ರದಾಯದ ಪ್ರವರ್ತಕನಾದ.

ಗೌಡರಾಜ ವಂಶದಲ್ಲಿ ಹುಟ್ಟಿದ ಅತೀಸ (980—1054) ಪ್ರಾಧ್ಯಾಪಕನಾಗಿದ್ದುದು, ವಿಕ್ರಮಶೀಲ ವಿಶ್ವವಿದ್ಯಾನಿಲಯದಲ್ಲಿ.

ಪಾಲವಂಶದ ಸುಪ್ರಸಿದ್ಧ ದೊರೆ ಧರ್ಮಪಾಲ 810ರಲ್ಲಿ ವಿಕ್ರಮಶೀಲ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಿದ. ಇದು ಮಗಧಕ್ಕೆ ಪೂರ್ವ ದಿಕ್ಕಿನಲ್ಲಿ ಗಂಗಾನದೀ ತೀರದ ಒಂದು ಗುಡ್ಡದ ಮೇಲಿತ್ತು ಎಂಬ ಉಲ್ಲೇಖವಿದೆ.

ಇಲ್ಲಿ ಆಡಳಿತ ನಿರ್ವಹಿಸುತ್ತಿದ್ದ ಮಂಡಳಿ ನಾಲಂದಾ ವಿಶ್ವವಿದ್ಯಾನಿಲಯದ ಆಡಳಿತವನ್ನೂ ನೋಡಿಕೊಳ್ಳುತ್ತಿತ್ತು. ಒಂದು ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರು ಇನ್ನೊಂದು ವಿಶ್ವವಿದ್ಯಾನಿಲಯಕ್ಕೆ ಹೋಗಿ ಕೆಲಸ ಮಾಡುತ್ತಿದ್ದರು.

ಈ ವಿಶ್ವವಿದ್ಯಾನಿಲಯದಲ್ಲಿ ಆರು ಮಹಾ ವಿದ್ಯಾಲಯಗಳಿದ್ದುವು. ಪ್ರತಿಯೊಂದರಲ್ಲೂ 108 ಮಂದಿ ಪ್ರಾಧ್ಯಾಪಕರು. ಮಧ್ಯದ ಸಭಾಭವನಕ್ಕೆ 6 ಬಾಗಿಲು. ಒಂದೊಂದಕ್ಕೂ ಒಬ್ಬೊಬ್ಬ ದ್ವಾರ ಪಂಡಿತ. ಮುಖ್ಯ ದ್ವಾರದ ಇಕ್ಕೆಲಗಳಲ್ಲಿ ನಾಗಾರ್ಜುನ ಮತ್ತು ಅತೀಸ ಇವರ ಚಿತ್ರಗಳಿದ್ದುವು.

ಇಲ್ಲಿನ ಉಚ್ಚ ಪದವಿ ಎಂದರೆ ಪಂಡಿತ ಪ್ರಶಸ್ತಿ. ಘನ ಪಂಡಿತರಾದವರಿಗೆ ಪೋಷಕರಾಗಿದ್ದ ರಾಜರೇ ಪ್ರಶಸ್ತಿ ಕೊಡುತ್ತಿದ್ದರು. ವ್ಯಾಕರಣ, ತರ್ಕ, ತಂತ್ರ, ಶಾಸ್ತ್ರಾದಿಗಳನ್ನೂ ಇಲ್ಲಿ ಕಲಿಸುತ್ತಿದ್ದರು.

ಸುಮಾರು 1198ರಲ್ಲಿ ಇಖ್ತಿಯಾರ್ ಖಿಲ್ಜಿ ವಿಕ್ರಮಶೀಲ ವಿಶ್ವವಿದ್ಯಾನಿಲಯವನ್ನು ನಾಶಪಡಿಸಿ, ಅಸ್ತಿವಾರದ ಕಲ್ಲುಗಳನ್ನು ಗಂಗಾನದಿಗೆ ಎಸೆದು ಬಿಟ್ಟ. ಇದರಿಂದಾಗಿ ಈ ವಿಶ್ವವಿದ್ಯಾನಿಲಯವಿದ್ದ ನಿವೇಶನವನ್ನು ಪತ್ತೆಹಚ್ಚುವುದು ಕೂಡ ಸಾಧ್ಯವಿಲ್ಲವಾಗಿದೆ.

ವಿಕ್ರಮ್ ಸಾರಾಭಾಯಿ

ನೋಡಿ : ಸಾರಾಭಾಯಿ–ಸಂಪುಟ ೩

ವಿ.ಕೆ.ಆರ್.ವಿ. ರಾವ್

ರಾಷ್ಟ್ರದ ಪ್ರಮುಖ ಅರ್ಥಶಾಸ್ತ್ರಜ್ಞರಲ್ಲಿ ಒಬ್ಬರು ಡಾಕ್ಟರ್ ವಿ.ಕೆ.ಆರ್.ವಿ. ರಾವ್. ಇವರು 'ಡೆಲ್ಲಿ ಸ್ಕೂಲ್ ಆಫ್ ಇಕನಾಮಿಕ್ಸ್'ನ ಸ್ಥಾಪಕರು. ದೆಹಲಿ ವಿಶ್ವವಿದ್ಯಾನಿಲಯದ ವೈಸ್ ಛಾನ್ಸಲರ್ ಆಗಿಯೂ ಕೆಲಸ ಮಾಡಿದರು. ರಾಜಕೀಯ ರಂಗಕ್ಕೆ ಇಳಿದು ಕೇಂದ್ರ ಸಚಿವಸಂಪುಟದಲ್ಲಿ ಸಾರಿಗೆ ಮಂತ್ರಿ, ವಿದ್ಯಾಮಂತ್ರಿಯಾದರು.

ಕನ್ನಡಿಗ ವಿಜಯೇಂದ್ರ ಕಸ್ತೂರಿ ರಂಗ ವರದರಾಜ ರಾವ್ ಹುಟ್ಟಿದ್ದು ಕಾಂಚೀಪುರದಲ್ಲಿ, 1908 ಜುಲೈ 8ರಂದು. ಮುಂಬಯಿನಲ್ಲಿ ಸ್ನಾತಕೋತ್ತರ ಶಿಕ್ಷಣದ ಬಳಿಕ ಕೇಂಬ್ರಿಜ್ ವಿಶ್ವವಿದ್ಯಾನಿಲಯದ ಡಾಕ್ಟರೇಟ್ ಪ್ರಶಸ್ತಿ ಪಡೆದರು. ಅಹಮದಾಬಾದ್ ಮತ್ತು ದೆಹಲಿ ವಿಶ್ವವಿದ್ಯಾಲಯಗಳಲ್ಲಿ ಪ್ರಾಧ್ಯಾಪಕರಾಗಿ ಕೆಲಸಮಾಡಿದ ಮೇಲೆ ಕೇಂದ್ರ ಸರಕಾರದ ಆಹಾರ ಖಾತೆಯಲ್ಲಿ ಅಂಕಿ ಅಂಶ ವಿಭಾಗದ ನಿರ್ದೇಶಕರೂ ಯೋಜನಾ ಸಲಹೆಗಾರರೂ ಆಗಿದ್ದರು. ಅನಂತರ ವಾಷಿಂಗ್‌ಟನ್‌ನಲ್ಲಿನ ಭಾರತದ ರಾಯಭಾರ ಕಚೇರಿಯಲ್ಲಿ ಸಲಹೆಗಾರರಾದರು. 1947-50ರ ಅವಧಿಯಲ್ಲಿ ವಿಶ್ವಸಂಸ್ಥೆಯಲ್ಲಿ ಆರ್ಥಿಕ ಮುನ್ನಡೆಗೆ ಸಂಬಂಧಿಸಿದ ಉಪ ಸಮಿತಿಯ ಅಧ್ಯಕ್ಷರಾಗಿದ್ದರು. ಕೇಂದ್ರ ಯೋಜನಾ ಆಯೋಗದ ಸದಸ್ಯರಾಗಿ ಇದ್ದೂ ಅನೇಕ ರಾಷ್ಟ್ರೀಯ, ಅಂತರರಾಷ್ಟ್ರೀಯ ಸಮಿತಿಗಳಲ್ಲಿ ಬೇರೆ ಬೇರೆ ಅಧಿಕಾರಗಳಲ್ಲಿ ಸೇವೆಸಲ್ಲಿಸಿದ್ದಾರೆ.




ಪದ್ಮವಿಭೂಷಣ ಡಾ. ರಾವ್

ಡಾ. ರಾವ್ ಅರ್ಥಶಾಸ್ತ್ರವನ್ನು ಕುರಿತ ಅನೇಕ ಗ್ರಂಥಗಳ ಕರ್ತೃ. ಇವರು ಲೋಕಸಭೆಯ ಸದಸ್ಯರು. 1972ರಲ್ಲಿ ಬೆಂಗಳೂರಿನಲ್ಲಿ ಆರ್ಥಿಕ ಮತ್ತು ಸಾಮಾಜಿಕ ಪರಿವರ್ತನಾ ಸಂಸ್ಥೆ (ಇನ್‌ಸ್ಟಿಟ್ಯೂಟ್ ಫಾರ್ ಸೋಷಿಯಲ್ ಅಂಡ್ ಇಕನಾಮಿಕ್ ಚೇಂಜ್)ಯನ್ನು ಸ್ಥಾಪಿಸಿ ಅದರ ನಿರ್ದೇಶಕರಾದರು. ಭಾರತದ ರಾಷ್ಟ್ರೀಯ ವರಮಾನದ ಸರ್ವೆ ನಡೆಸಿದ ಮೊದಲಿಗರಲ್ಲಿ ಇವರೊಬ್ಬರು.

1974ರಲ್ಲಿ ಇವರಿಗೆ ಪದ್ಮವಿಭೂಷಣ ಪ್ರಶಸ್ತಿ ಲಭಿಸಿತು.

ವಿ.ಕೆ. ಕೃಷ್ಣಮೆನನ್

1962ರಲ್ಲಿ ಚೀನ ಭಾರತದ ಮೇಲೆ ದಾಳಿ ಮಾಡಿದಾಗ ಭಾರತದ ರಕ್ಷಣಾ ಮಂತ್ರಿಯಾಗಿದ್ದ ಕೃಷ್ಣಮೆನನ್ ಕಮ್ಯೂನಿಸ್ಟರ ಬಗೆಗೆ ಸಹಾನುಭೂತಿ ಉಳ್ಳವರೆಂಬ ಟೀಕೆಗೆ ಒಳಗಾಗಿ, ಮಂತ್ರಿ ಪದವಿ ಬಿಡಬೇಕಾಯಿತು.



ತೀಕ್ಷ್ಣ ನಾಲಗೆ, ಲೇಖನಿ : ಕೃಷ್ಣಮೆನನ್

ಹಲವು ವರ್ಷ ಕಾಲ ಇಂಗ್ಲೆಂಡಿನಲ್ಲಿದ್ದು ಭಾರತದ ಸ್ವಾತಂತ್ರ್ಯ ಸಮರದ ಬಗೆಗೆ ಆಂಗ್ಲರಲ್ಲಿ ಸದಭಿಪ್ರಾಯ ರೂಪಿಸಲು ಕಾರಣರಾದವರು. ಕೃಷ್ಣ ಮೆನನ್. ಇಂಗ್ಲೆಂಡಿನಲ್ಲಿ 'ಭಾರತದ ರಾಯಭಾರಿ' ಎಂಬ ಹೆಸರು ಪಡೆದವರು. 1935–39ರ ಅವಧಿಯಲ್ಲಿ ವಿಶ್ವಶಾಂತಿ ಚಳುವಳಿಯಲ್ಲಿ ಭಾರತ ರಾಷ್ಟ್ರೀಯ ಕಾಂಗ್ರೆಸ್ಸಿನ ಪ್ರತಿನಿಧಿಯಾಗಿದ್ದರು.

ಅವರು ಜವಾಹರಲಾಲರ ಆಪ್ತಮಿತ್ರರಾಗಿದ್ದರು. ನೆಹರೂ ಅವರ ವೈಯಕ್ತಿಕ ಪ್ರತಿನಿಧಿಯಾಗಿ ಮತ್ತು ಭಾರತ ರಾಷ್ಟ್ರೀಯ ಕಾಂಗ್ರೆಸ್ಸಿನ ಪ್ರತಿನಿಧಿಯಾಗಿ ಹಲವು ಅಂತರರಾಷ್ಟ್ರೀಯ ಸಮ್ಮೇಳನಗಳಲ್ಲಿ ಭಾಗವಹಿಸಿದರು.

ವೆಂಗಾಲಿಲ ಕೃಷ್ಣನ್ ಕೃಷ್ಣಮೆನನ್ ಅವರು ಹುಟ್ಟಿದ್ದು ಕೇರಳದ ಕಲ್ಲಿಕೋಟೆಯಲ್ಲಿ. 1896 ಮೇ 3ರಂದು. [illegible]

ಮತ್ತು ಲಂಡನ್‌ನಲ್ಲಿ. ಇಂಗ್ಲೆಂಡಿನಲ್ಲಿ 'ಇಂಡಿಯಾ ಲೀಗ್'ನ್ನು ಸ್ಥಾಪಿಸಿದರು. ಭಾರತ ಸ್ವಾತಂತ್ರ್ಯ ಪಡೆದ ಮೇಲೆ 1947–52 ಅವಧಿ ಯಲ್ಲಿ ಇಂಗ್ಲೆಂಡಿನಲ್ಲಿ ಹೈಕಮಿಷನರ್ ಆಗಿ, ಹಾಗೂ 1949–52ರ ವರೆಗೆ ಐರ್‌ಲೆಂಡಿನಲ್ಲಿ ಭಾರತದ ರಾಯಭಾರಿಯೂ ಆಗಿ ದುಡಿದರು. ಹಲವು ಬಾರಿ ವಿಶ್ವಸಂಸ್ಥೆಗೆ ಭಾರತದ ನಿಯೋಗಗಳ ಮುಖ್ಯಸ್ಥರಾಗಿದ್ದರು. 1956–62ರ ವರೆಗೆ ಇವರು ನೆಹರೂ ಸಚಿವ ಸಂಪುಟದಲ್ಲಿದ್ದರು.

ಹಲವು ವಿಶ್ವವಿದ್ಯಾಲಯಗಳು ವಿ. ಕೆ. ಕೃಷ್ಣಮೆನನ್ ಅವರಿಗೆ ಗೌರವ ಡಾಕ್ಟರೇಟ್ ಪ್ರಶಸ್ತಿಗಳನ್ನು ಕೊಟ್ಟಿವೆ. 1954ರಲ್ಲಿ ಕೇಂದ್ರ ಸರಕಾರ ಇವರಿಗೆ ಪದ್ಮವಿಭೂಷಣ ಪ್ರಶಸ್ತಿ ನೀಡಿತು.

1969ರ ಮರು ಚುನಾವಣೆಯಲ್ಲಿ ಪಶ್ಚಿಮ ಬಂಗಾಲದಿಂದ ಲೋಕ ಸಭೆಗೆ ಸ್ವತಂತ್ರವಾಗಿ ಆಯ್ಕೆಯಾದರು. 1971ರ ಲೋಕಸಭಾ ಚುನಾ ವಣೆಯಲ್ಲಿ ಕೇರಳದ ತಿರುವನಂತಪುರದಿಂದ ಸ್ವತಂತ್ರ ಸದಸ್ಯರಾಗಿ ಚುನಾ ಯಿತರಾದರು.

ಮೆನನ್ ಅವರು ಒಳ್ಳೆ ವಾಗ್ಮಿ, ಲೇಖಕರು. ಅವರು ಇಂಗ್ಲೆಂಡಿನಲ್ಲಿದ್ದಾಗ ಪೆಲಿಕನ್ ಗ್ರಂಥಮಾಲೆಯ ಪ್ರಥಮ ಸಂಪಾದಕರಾಗಿ ಕೆಲಸ ಮಾಡಿದರು.

ವಿಜಯ

ಭಾರತದ ಗಡಿ ಬಿಟ್ಟು ಹೋಗಿ, ಹೊರಗಿನ ನೆಲವನ್ನು ಗೆದ್ದವರಲ್ಲಿ ಮೊದಲಿಗ ವಿಜಯ –ಎನ್ನುತ್ತಾರೆ. ಇವನು ಆಕ್ರಮಿಸಿಕೊಂಡ ದೇಶ ಸಿಂಹಳ, ಈಗಿನ ಶ್ರೀಲಂಕಾ.



ಲಂಕೆಯ ದಂಡೆ ಸಮೀಪಿಸುತ್ತಿರುವ ವಿಜಯ

ಸಿಂಹಳದ 'ಮಹಾವಂಶ' ಎಂಬ ಗ್ರಂಥದಲ್ಲಿ ಹೇಳಿರುವಂತೆ ಸಿಂಹಬಾಹು ಎಂಬ ಅರಸನ ಮಗ ವಿಜಯ. ಯಾವುದೋ ತಪ್ಪು ಮಾಡಿದ್ದಕ್ಕಾಗಿ ಅರಸು ತನ್ನ ಮಗನನ್ನು ದೇಶಭ್ರಷ್ಟನನ್ನಾಗಿ ಮಾಡಿದ. ವಿಜಯ ತನ್ನ ಏಳು ನೂರು ಮಂದಿ ಸಂಗಡಿಗರೊಡನೆ ಬಂಗಾಳ ಪ್ರದೇಶದ ದಕ್ಷಿಣಕ್ಕೆ ಬಂದ. ಬುದ್ಧನು ನಿರ್ವಾಣ ಹೊಂದಿದ ಸ್ವಲ್ಪ ಕಾಲದ ಅನಂತರ ತಾಮ್ರಲಿಪ್ತಿ ರೇವಿನಿಂದ ಹೊರಟು ಬುದ್ಧ ನಿರ್ವಾಣ ಹೊಂದಿದಂದು ತನ್ನ ಸಂಗಡಿಗರೊಡನೆ ಸಿಂಹಳ ಉತ್ತರ ಭಾಗಕ್ಕೆ ಬಂದು ಇಳಿದ. ಸಮುದ್ರದಾಚೆಯಿಂದ ಸಾವಿ ಸಂಸಾರಗಳನ್ನು ಕರೆಸಿಕೊಂಡ. ಇವನ ಜೊತೆಗಾರರು ಆ ಸಂಸಾರಗ ಕನ್ಯೆಯರನ್ನು ಮದುವೆಯಾದರು. ಪಾಂಡ್ಯರಾಜ ಪುತ್ರಿಯೊಬ್ಬಳನ ವಿಜಯ ಮದುವೆಯಾದ. ಇವರ ಸಂತತಿ ಬೆಳೆಯಿತು. ವಿಜಯ ತನ ತಂದೆಯ ಹೆಸರಿನ ಮೇಲೆ, ತಾನು ಆಕ್ರಮಿಸಿಕೊಂಡ ದ್ವೀಪಕ್ಕೆ ಸಿಂಹ ಎಂದು ಹೆಸರಿಟ್ಟ. ಎಲ್ಲರ ಅಭಿಮತದಂತೆ ರಾಜನಾದ.

ಅವನಿಗೆ ಮಕ್ಕಳಾಗಲಿಲ್ಲ. ಆಗ ತನ್ನ ಸಹೋದರನ ಮಗ ಪಾಂಡ ವಾಸುದೇವನನ್ನು ಕರೆಸಿಕೊಂಡ. ವಿಜಯನ ಅನಂತರ ಅವನು ಸಿಂಹ ವನ್ನು ಆಳಿದ.

ವಿಜಯನಗರ ಅರಸರು

ದಕ್ಷಿಣ ಭಾರತ ಮಹಮ್ಮದೀಯರ ಆಕ್ರಮಣಕ್ಕೆ ಒಳಗಾಗಿ, ದಕ್ಷಿ ಭಾರತದ ಖ್ಯಾತ ರಾಜವಂಶಗಳಾದ ಸೇವುಣರು, ಕಾಕತೀಯರ ಹೊಯ್ಸಳರು, ಪಾಂಡ್ಯರು ನಾಮಶೇಷರಾದಾಗ ಈ ಪ್ರದೇಶದಲ್ಲಿ ಹಿಂದ ಧರ್ಮ, ಸಂಸ್ಕೃತಿ, ಪರಂಪರೆಗಳನ್ನು ಉಳಿಸಿದ ಕೀರ್ತಿ ವಿಜಯನಗರ ಅರಸರಿಗೆ ಸಲ್ಲುತ್ತದೆ. ಸಂಗಮ ವಂಶದ ಹಕ್ಕ, ಬುಕ್ಕರೆಂಬ ಸೋದರರ 1336ರಲ್ಲಿ ಈ ಸಾಮ್ರಾಜ್ಯವನ್ನು ಸ್ಥಾಪಿಸಿದರು. ತುಂಗಭದ್ರೆಯ ದಕ್ಷಿಣ ಇಡೀ ದಕ್ಷಿಣ ಭಾರತ ಈ ವಂಶದವರ ಆಡಳಿತಕ್ಕೆ ಒಳಗಾಯಿತು.

ಈ ವಂಶದ ಬುಕ್ಕರಾಯ ಮತ್ತು ಇಮ್ಮಡಿ ಹರಿಹರ ತಮ್ಮ ಕಾಲದ ಸಾಯಣ ಮತ್ತು ಮಾಧವ(ವಿದ್ಯಾರಣ್ಯ)ರೆಂಬ ಸೋದರರಿಂದ ವೇದಗಳ ಭಾಷ್ಯ ಬರಯಿಸಿದರು.

ಇಮ್ಮಡಿ ದೇವರಾಯ (1424–46) ಈ ವಂಶದ ಶ್ರೇಷ್ಠ ದೊರೆ ಈತ ಹಜಾರ ರಾಮಸ್ವಾಮಿ ದೇವಾಲಯ ಕಟ್ಟಿಸಿದ. ಖ್ಯಾತ ವೀರಶೈ ಕವಿಗಳಾದ ಲಕ್ಕಣ್ಣ, ಚಾಮರಸ ಇವನ ಸಮಕಾಲೀನರು.

ತಮ್ಮ ರಾಜ್ಯದ ಉತ್ತರಕ್ಕೆ ಕಲ್ಬುರ್ಗಿಯಲ್ಲಿ 1347ರಲ್ಲಿ ಸ್ಥಾಪಿತವಾ ಬಹಮನಿ ಮುಸಲ್ಮಾನ ರಾಜ್ಯದ ಆಕ್ರಮಣವನ್ನು ಎದುರಿಸುವುದರಲ್ಲಿ ವಿಜಯನಗರದ ಶಕ್ತಿ ವ್ಯಯವಾಯಿತು. ಸಂಗಮ ವಂಶದ ಕೊನೆಯ ದೊರೆಗಳು ದುರ್ಬಲರಾದಾಗ ರಾಜ್ಯದ ಸಾಳುವ ನರಸಿಂಹನೆಂಬ ಸೇನಾ 1485ರಲ್ಲಿ ಸಂಗಮ ವಂಶವನ್ನು ಬದಿಗೊತ್ತಿ ತಾನೇ ರಾಜನಾದ ಸಾಮ್ರಾಜ್ಯದ ಪ್ರತಿಷ್ಠೆ, ಗೌರವಗಳನ್ನು ರಕ್ಷಿಸಿದ. ಇವನ ಮಗನ ಕಾ ದಲ್ಲಿ ನರಸಿಂಹನ ಸೇನಾನಿ ತುಳುವ ನರಸನಾಯಕ ತಾನೇ ಸಮ್ರಾಟನಾದ ನರಸನ ಮಕ್ಕಳಾದ ವೀರಸಿಂಹ(1503–09), ಕೃಷ್ಣದೇವರಾ (1509–29), ಮತ್ತು ಅಚ್ಯುತರು (1529–42) ಅನುಕ್ರಮವಾ ಆಳಿದರು.

ಕೃಷ್ಣದೇವರಾಯ ವಿಜಯನಗರದ ದೊರೆಗಳಲ್ಲಷ್ಟೇ ಅಲ್ಲ, ಭಾರತದ ಆಳಿದ ಶ್ರೇಷ್ಠ ರಾಜರುಗಳಲ್ಲಿ ಒಬ್ಬ. ವೀರನೂ ವಿದ್ವಾಂಸನ ಉತ್ತಮ ಆಡಳಿತಗಾರನೂ ಆದ ಇವನು ಮಡಿದ ತರ ಅಚ್ಯುತನ ಅನಂತರ ಆಳಿದ ಸದಾಶಿವನ ಕಾಲದಲ್ಲಿ (1542–70) ಆಡಳಿತ ಕೃ ದೇವನ ಜಾಮಾತನಾದ ಅರವೀಡು ವಂಶದ 'ಅಳಿಯ' ರಾಮರಾಯ ಕ್ಕೆ ಸೇರಿತು. ಇದೇ ಕಾಲದಲ್ಲಿ ಬಹಮನಿ ರಾಜ್ಯ ಒಡೆ ರೂಪುಗೊಂಡ ಐದು ಷಾಹಿರಾಜ್ಯಗಳು ಒಂದಾಗಿ ವಿಜಯನಗರದ ಮೇ ನಡೆಸಿದುವು: ರಕ್ಕಸಗಿ–ತಂಗಡಗಿ (ರಕ್ಕಸ ತಂಗಡಿ) ಎಂಬಲ್ಲಿ 15



ವಿಜಯನಗರ ಅರಸರ ಲಾಂಛನ



ವಿಜಯನಗರ ನಾಣ್ಯಗಳು

ರಲ್ಲಿ ನಡೆದ ಯುದ್ಧದಲ್ಲಿ ವಿಜಯನಗರದ ಸೇನೆಗಳನ್ನು ಸೋಲಿಸಿ, ರಾಮರಾಯನನ್ನು ಕೊಂದು ರಾಜಧಾನಿಯನ್ನು ಧ್ವಂಸಗೊಳಿಸಿದುವು. ರಾಮರಾಯನ ಸೋದರ ತಿರುಮಲ ಸಮ್ರಾಟ ಸದಾಶಿವನ ಜೊತೆ ಪೆನುಕೊಂಡೆಗೆ ಹೋಗಿ ಅಲ್ಲಿಂದ ಸಾಮ್ರಾಜ್ಯದ ದಕ್ಷಿಣ ಪ್ರದೇಶಗಳನ್ನು ಆಳಲಾರಂಭಿಸಿದ. 1570ರಲ್ಲಿ ನಾಮಮಾತ್ರ ದೊರೆ ಸದಾಶಿವ ತೀರಿಕೊಂಡ. ತಿರುಮಲನಿಂದ ಆರಂಭವಾದ [illegible] ವಂಶವು ಪೆನುಕೊಂಡೆ. ಚಂದ್ರಗಿರಿ. ವೆಲ್ಲೂರು ಮುಂತಾದ ರಾಜಧಾನಿಗಳಿಂದ 1646ರ ವರೆಗೆ ಆಳಿತು. ಕೊನೆಗೆ ವಿಜಾಪುರ ಮತ್ತು ಗೋಲ್ಕೊಂಡದವರು ಈತನನ್ನು ಪೂರ್ತಿಯಾಗಿ ಸೋಲಿಸಿದರು. ಮೈಸೂರು. ಕೆಳದಿ. ಮಧುರೈ. ಜಿಂಜಿ. ತಂಜಾವೂರು ಅರಸರು ವಿಜಯನಗರದ ದಕ್ಷಿಣ ಭಾಗಗಳನ್ನು ತಮ್ಮಲ್ಲಿ ಹಂಚಿಕೊಂಡರು.

ನಶಿಸುತ್ತಿದ್ದ ಹಿಂದೂಸಂಸ್ಕೃತಿಯನ್ನು ದಕ್ಷಿಣ ಭಾರತದಲ್ಲಿ ರಕ್ಷಿಸಿ ಪೋಷಿಸಿದ ಗೌರವ ವಿಜಯನಗರಕ್ಕೆ ಸಲ್ಲುತ್ತದೆ. [illegible] ಗಳಲ್ಲಿ ವೇದಗಳ ಬಗೆಗಿನ 'ವೇದಾರ್ಥ ಪ್ರಕಾಶ' ಎಂಬ ಟೀಕೆಯನ್ನು ಸಮ್ರಾಟರು ಬರೆಸಿದರು. ಜೈನ. ಮಾಧ್ವ. [illegible]. ಸ್ಮಾರ್ತ ಸಂಪ್ರದಾಯಗಳಿಗೆಲ್ಲ ಅಪಾರ [illegible]. ಪ್ರೋತ್ಸಾಹ ನೀಡಿದರು. ದಕ್ಷಿಣ ಭಾರತದಲ್ಲಿ [illegible] ದೇವಾಲಯಗಳಿಗೆ ಭಾರಿ ಗೋಪುರಗಳನ್ನೂ ವಿಶಾಲ ಕಲ್ಯಾಣಮಂಟಪ. ವಸಂತಮಂಟಪಗಳನ್ನೂ ಅವರು ಕಟ್ಟಿಸಿಕೊಟ್ಟರು. ಈ ರಚನೆಗಳು ವಿಜಯನಗರ ಶೈಲಿಯ [illegible]. ಹಂಪೆಯ ಕೃಷ್ಣಸ್ವಾಮಿ. ವಿಜಯ ವಿಠಲಸ್ವಾಮಿ ಮತ್ತು ರಾಮಸ್ವಾಮಿ ದೇವಾಲಯಗಳು. ತಾಡಪತ್ರಿ. ಲೇಪಾಕ್ಷಿಗಳ ಮಂದಿರಗಳು. ಕಂಚಿಯ ಕಾಮಾಕ್ಷಿ ದೇವಾಲಯ ಇವರ ರಚನೆಗಳು. ತಮಿಳು. ತೆಲುಗು. ಕನ್ನಡ. ಸಂಸ್ಕೃತ ಸಾಹಿತ್ಯಗಳಿಗೂ ಅವರು ಪ್ರೋತ್ಸಾಹ ನೀಡಿದರು. [illegible] ತೆಲುಗು ಕವಿಗಳಾದ ಅಲ್ಲಸಾನಿ ಪೆದ್ದನ. ತೆನ್ನಾಲಿ ರಾಮಕೃಷ್ಣ. ಧೂರ್ಜಟಿ. ಶ್ರೀನಾಥ. ಪೋತನ ಮತ್ತು ಕನ್ನಡ ಕವಿಗಳಾದ ಕುಮಾರವ್ಯಾಸ. ಚಾಮರಸ. ರತ್ನಾಕರ ವರ್ಣಿ. ತಮಿಳು [illegible] ಪುರಂದರದಾಸ. ಕನಕದಾಸ [illegible] ಇವರೆಲ್ಲ ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ ಇದ್ದವರು. ಪಾಶ್ಚಾತ್ಯ ದೇಶಗಳಿಂದ ಬಂದ [illegible] ಪ್ರವಾಸಿಗರು ಈ ಸಾಮ್ರಾಜ್ಯದ ವೈಭವ. ಘನತೆ. [illegible]ಗಳನ್ನು ಬಣ್ಣಿಸಿದ್ದಾರೆ.

ನೋಡಿ : ಇಮ್ಮಡಿ ದೇವರಾಯ : ಕೃಷ್ಣದೇವರಾಯ : [illegible] : ಹಕ್ಕ. ಬುಕ್ಕ

ವಿಜಯನಗರ ಉಕ್ಕು ಕಾರಖಾನೆ

ವಿಜಯನಗರ ಉಕ್ಕು ಕಾರಖಾನೆಯ [illegible]. 1971 ಅಕ್ಟೋಬರ್ 14ರಂದು. [illegible] ಜಿಲ್ಲೆಯ [illegible] ನಗರದಲ್ಲಿ. ಈ ಪ್ರದೇಶದಲ್ಲಿ ಸುಮಾರು 130 ಕೋಟಿ ಟನ್ ಕಬ್ಬಿಣದ ಅದಿರು. ದೊರೆಯುತ್ತದೆಂದು ಅಂದಾಜು. 20 ಲಕ್ಷ ಟನ್ ವಾರ್ಷಿಕ ಉತ್ಪಾದನಾ ಸಾಮರ್ಥ್ಯದ ಈ ಕಾರಖಾನೆಯ ಅಂದಾಜು ವೆಚ್ಚ 300 ಕೋಟಿ ರೂ. ಈ ಕೈಗಾರಿಕೆಯ ಪರಿಣಾಮವಾಗಿ, ಸುಮಾರು ಒಂದು ಲಕ್ಷ ಜನರಿಗೆ ಲಾಭದಾಯಕ ಉದ್ಯೋಗ ಒದಗಿಸಬಲ್ಲ ಇತರ ಕೈಗಾರಿಕೆಗಳ ಸ್ಥಾಪನೆಗೂ ಅವಕಾಶವಿದೆ.

ವಿಜಯ ಮರ್ಚೆಂಟ್

ನೋಡಿ : ಸಂಪುಟ ೬.

ವಿಜಯರಾಘವಾಚಾರಿ


"ಭಾರತವರ್ಷವು [illegible] [illegible] ಈ [illegible] ಇಲ್ಲಿ ಹುಟ್ಟಿದ [illegible] [illegible] [illegible] [illegible] [illegible] [illegible] [illegible] [illegible] [illegible] [illegible] ಅಲ್ಲ".

—ಬ್ರಿಟಿಷ್ ಸರಕಾರ ಜಾರಿ ಮಾಡಿದ ಶಾಶ್ವತ ಭೂಕಂದಾಯವನ್ನು ಪ್ರತಿಭಟಿಸಿ 1900ರ ಭಾರತ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನದಲ್ಲಿ ಹೀಗೆ ಸಾರಿದವರು ಸಿ. ವಿಜಯರಾಘವಾಚಾರಿ. ಇವರು ಕಾಂಗ್ರೆಸ್ಸಿನ ಸಂಸ್ಥಾಪಕ ಸದಸ್ಯರು. ಕಾಂಗ್ರೆಸ್ ಸಂವಿಧಾನ ರಚನಾ ಸಮಿತಿಯ [illegible] ಸದಸ್ಯರಲ್ಲಿ ಒಬ್ಬರು. ಕಾಂಗ್ರೆಸ್ಸಿಗೆ [illegible] ಕ್ರಿಂತಲೂ ಹೆಚ್ಚು ಕಾಲ ಸೇವೆ ಸಲ್ಲಿಸಿದರು.

1852ರಲ್ಲಿ ಚಂಗಲ್‌ಪಟ್ ಜಿಲ್ಲೆಯಲ್ಲಿ ವಿಜಯರಾಘವಾಚಾರಿ ಅವರ ಜನನ. ಮದರಾಸಿನಲ್ಲಿ ವಿದ್ಯಾಭ್ಯಾಸ ಪಡೆದ ಮೇಲೆ ಮಂಗಳೂರು ಸರಕಾರಿ ಕಾಲೇಜಿನಲ್ಲಿ ಅಧ್ಯಾಪಕರಾದರು. [illegible] [illegible] ತೀರ್ಮಾನದ ನಡತೆ ಸರಿಯಿಲ್ಲದೆ. ಆ ಕೆಲಸಕ್ಕೆ ರಾಜೀನಾಮೆ ಕೊಟ್ಟರು. ಸ್ವತಂತ್ರವಾಗಿ [illegible]. [illegible] ವಕೀಲರಾದರು. ಅವರು ರಾಷ್ಟ್ರೀಯ [illegible] 1882ರಲ್ಲಿ. ಆ ವರ್ಷ ಸರಕಾರ ತಮ್ಮ [illegible] [illegible] ಪ್ರತಿಭಟಿಸಿ [illegible] ಗೆದ್ದ ಅವರಿಗೆ. '[illegible]' ಎಂಬ ಹೆಸರು ಬಂತು.

1885ರಲ್ಲಿ ಕಾಂಗ್ರೆಸ್ಸಿನ [illegible] ಸಭೆಯಲ್ಲಿ ಅವರು ಭಾಗವಹಿಸಿದರು. ಆಗಿನ ಮದರಾಸು ಪ್ರಾಂತದ [illegible] [illegible] [illegible] ಅದೇ ವರ್ಷ [illegible] [illegible] ಸದಸ್ಯರಾದರು. 1[illegible] ವರ್ಷ ಸೇವೆ ಸಲ್ಲಿಸಿದರು. 1900ರಲ್ಲಿ ಕಲ್ಲಿಕೋಟೆಯಲ್ಲಿ ಮದರಾಸು ಪ್ರಾಂತ ರಾಜಕೀಯ ಸಮ್ಮೇಳನದ ಅಧ್ಯಕ್ಷತೆ ವಹಿಸಿದರು. ಇಂಗ್ಲೆಂಡಿನಲ್ಲಿ ಭಾರತದ [illegible] ಪ್ರಚಾರಕ್ಕೋಸ್ಕರ ಸ್ಥಾಪಿತವಾಗಿದ್ದ 'ಇಂಡಿಯಾ' ಪತ್ರಿಕೆಗೆ ಆರ್ಥಿಕ ಸಮಸ್ಯೆ ಉಂಟಾದಾಗ. ಅದಕ್ಕೆ ಮದರಾಸು ಪ್ರಾಂತದಲ್ಲಿ ವಂತಿಗೆ ಸಂಗ್ರಹಿಸಿದರು.

1920ರಲ್ಲಿ 68 ವಯಸ್ಸಿನ ಹಿರಿಯ ವಿಜಯರಾಘವಾಚಾರಿ ಅವರು ನಾಗಪುರ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷತೆ ವಹಿಸಿದರು. [illegible] [illegible] [illegible] [illegible]



‘ ಸೇಲಂ ವೀರ ’

ವಯಸ್ಸು 90ರ ಗಡಿ ದಾಟಿದಾಗಲೂ ವಿಜಯರಾಘವಾಚಾರಿ ಅವರು ರಾಷ್ಟ್ರೀಯ ಚಳುವಳಿಗೆ ಸಲಹೆ ನೀಡುತ್ತಿದ್ದರು: ಮಾರ್ಗದರ್ಶನ ಮಾಡುತ್ತಿದ್ದರು. 1943ರಲ್ಲಿ 91ನೆಯ ವಯಸ್ಸಿನಲ್ಲಿ ಅವರು ನಿಧನರಾದರು.

ಅಸಹಕಾರ ಕ್ರಮ ವಿಧಿಬದ್ಧವಾದದ್ದಲ್ಲ ಎಂದು ವೈಸ್‌ರಾಯ್ ಒಮ್ಮೆ ಟೀಕಿಸಿದಾಗ. "ಬ್ರಿಟಿಷ್ ಸರಕಾರ ದೇಶೀಯರ ಮೇಲೆ ಪ್ರಭುತ್ವ ನಡೆಸಿರುವುದೇ ಹಿಂಸೆ ಮತ್ತು ಅಸಹಕಾರದ ಆಧಾರದ ಮೇಲೆ: ಆದರೆ ನಮ್ಮದು ಅಹಿಂಸಾತ್ಮಕ ಕ್ರಮ", ಎಂದು ವಿಜಯರಾಘವಾಚಾರಿ ಉತ್ತರ ನೀಡಿದರು.

ವಿಜಯಲಕ್ಷ್ಮಿ ಪಂಡಿತ್

1945ರಲ್ಲಿ ವಿಶ್ವಸಂಸ್ಥೆಯ ಸ್ಥಾಪನೆಗಾಗಿ ಸಾನ್‌ಫ್ರಾನ್ಸಿಸ್ಕೋದಲ್ಲಿ ವಿವಿಧ ರಾಷ್ಟ್ರಗಳ ಸಮ್ಮೇಳನ ಸೇರಿತ್ತು. ಬ್ರಿಟಿಷರು ನೇಮಿಸಿದ್ದ ಭಾರತೀಯ ನಿಯೋಗ ಈ ಸಮ್ಮೇಳನದಲ್ಲಿ ಭಾರತದ ಬಗೆಗೆ ಮಾತಾಡಲು ಏನು ಹಕ್ಕಿದೆ ಎಂದು ಸವಾಲು ಹಾಕಿ. ಸಭಾ ಮಂದಿರದ ಹೊರಗೆ. ಭಾರತಕ್ಕೆ ಸ್ವಾತಂತ್ರ್ಯ ದೊರೆಯುವುದು ಅವಶ್ಯವೆಂದು ಭಾಷಣ ಮಾಡಿದ ವೀರ ಮಹಿಳೆ –ಜವಾಹರಲಾಲ ನೆಹರೂ ಅವರ ಸಹೋದರಿ –ವಿಜಯಲಕ್ಷ್ಮಿ ಪಂಡಿತ್.

ಜನನ 1900 ಆಗಸ್ಟ್ 18ರಂದು. ತಂದೆ ಮೋತೀಲಾಲ್ ನೆಹರೂ ಮಗಳಿಗೆ ಮನೆಯಲ್ಲಿಯೇ ಶಿಕ್ಷಣ ಕೊಡಿಸಿದರು. ಚಿಕ್ಕಂದಿನಿಂದಲೂ ರಾಜಕೀಯ ಪ್ರಭಾವಕ್ಕೆ ಒಳಗಾಗಿ ವಿಜಯಲಕ್ಷ್ಮಿ ಕಾಂಗ್ರೆಸ್ ಚಟುವಟಿಕೆಗಳಲ್ಲಿ ಭಾಗವಹಿಸಿ. ಮೂರು ಬಾರಿ ಸೆರೆಮನೆ ಸೇರಿದರು. ರಾಜಕೀಯದಲ್ಲಿ ಆಸಕ್ತಿಯಿದ್ದ ದೇಶಪ್ರೇಮಿ. ವಿದ್ವಾಂಸ ರಣಜಿತ್ ಸೀತಾರಾಮ್ ಪಂಡಿತ್ ವಿಜಯಲಕ್ಷ್ಮಿ ಅವರ ಪತಿ.

ಸ್ವಾತಂತ್ರ್ಯಕ್ಕೆ ಪೂರ್ವದಲ್ಲಿ. ಕಾಂಗ್ರೆಸ್ 1937ರಲ್ಲಿ ಮೊದಲ ಬಾರಿಗೆ ಪ್ರಾಂತಗಳಲ್ಲಿ ಮಂತ್ರಿಮಂಡಲಗಳನ್ನು ರಚಿಸಿದಾಗ ವಿಜಯಲಕ್ಷ್ಮಿ ಪಂಡಿತ್ ಸಂಯುಕ್ತ ಪ್ರಾಂತದ ಸಾರ್ವಜನಿಕ ಆರೋಗ್ಯ ಮತ್ತು ಸ್ಥಳೀಯ ಸ್ವಯಮಾಡಳಿತ ಖಾತೆಯ ಮಂತ್ರಿಯಾಗಿದ್ದರು. ಮಂತ್ರಿ ಪದವಿಗೇರಿದ ಪ್ರಥಮ ಭಾರತೀಯ ಮಹಿಳೆ ಈಕೆ. ಅಮೆರಿಕದಲ್ಲಿ ನಡೆದ ಶಾಂತಸಾಗರ ಪ್ರದೇಶ ಸಂಬಂಧಗಳ ಸಮ್ಮೇಳನಕ್ಕೆ ಭಾರತೀಯ ನಿಯೋಗದ ನಾಯಕರಾಗಿ ತೆರಳಿದ್ದರು. ವಿಶ್ವಸಂಸ್ಥೆಯಲ್ಲಿ ಅನೇಕ ವರ್ಷಗಳ ಕಾಲ ಭಾರತದ ಪ್ರತಿನಿಧಿಯಾಗಿದ್ದರು. 1953-54ರಲ್ಲಿ ವಿಶ್ವಸಂಸ್ಥೆಯ ಮಹಾ ಸಭೆಯ ಅಧ್ಯಕ್ಷರಾಗಿದ್ದರು.



ವಿಶ್ವ ಖ್ಯಾತಿ : ವಿಜಯಲಕ್ಷ್ಮಿ

1947 ರಿಂದ 49ರ ವರೆಗೆ ರಷ್ಯದಲ್ಲಿ ಭಾರತದ ರಾಯಭಾರಿಯಾ... ಮುಂದೆ ಮೂರು ವರ್ಷ ಅಮೆರಿಕದಲ್ಲಿ ರಾಯಭಾರಿಯಾಗಿ. ಅಧಿಕಾ... ನಿರ್ವಹಿಸಿದರು. 1952–63ರಲ್ಲಿ ಲೋಕಸಭಾ ಸದಸ್ಯರಾಗಿದ್ದರು. 1962-64 ಅವಧಿಯಲ್ಲಿ ಮಹಾರಾಷ್ಟ್ರದ ರಾಜ್ಯಪಾಲರಾಗಿದ್ದರು.

ಸಾಮಾಜಿಕ ವಿಚಾರಗಳಲ್ಲೂ ವಿಜಯಲಕ್ಷ್ಮಿ ಅವರಿಗೆ ತುಂಬ ಆಸಕ್ತಿ. ಅಖಿಲ ಭಾರತ ಮಹಿಳಾ ಸಮ್ಮೇಳನದ ಅಧ್ಯಕ್ಷೆಯಾಗಿ. ಶಾಂತಿ ಮತ್ತು ಸ್ವಾತಂತ್ರ್ಯ ಸಾಧನೆಯ ಉದ್ದೇಶದಿಂದ ಸ್ಥಾಪಿತವಾದ ಅಂತರರಾಷ್ಟ್ರೀಯ ಶಾಂತಿ ಹಾಗೂ ಸ್ವಾತಂತ್ರ್ಯ ಮಹಿಳಾ ಸಂಘದ ಉಪಾಧ್ಯಕ್ಷೆಯಾಗಿ ಇವರು ಸೇವೆ ಸಲ್ಲಿಸಿದ್ದಾರೆ.

ಭಾರತ ಮತ್ತು ವಿದೇಶಗಳ 21 ವಿಶ್ವವಿದ್ಯಾನಿಲಯಗಳು ಇವರಿಗೆ ಗೌರವ ಡಾಕ್ಟರೇಟ್ ನೀಡಿ ಸನ್ಮಾನಿಸಿವೆ.

ವಿಜಯಲಕ್ಷ್ಮಿ ಪಂಡಿತ್ ಅವರು 'ನಾನು ಮಂತ್ರಿಯಾದೆ' ಎಂಬ ಗ್ರಂಥವನ್ನು ಬರೆದಿದ್ದಾರೆ. ಮಂತ್ರಿಯಾಗಿ ಅವರ ಅನುಭವಗಳು ಈ ಗ್ರಂಥದಲ್ಲಿ ಸುಂದರವಾಗಿ ಚಿತ್ರಿತವಾಗಿವೆ.

ವಿಜಯಾಂತ

ಭಾರತೀಯ ಸೇನೆಯ ಹೆಮ್ಮೆಯ ಟ್ಯಾಂಕು 'ವಿಜಯಾಂತ'.




ನಮ್ಮ ಹೆಮ್ಮೆಯ ಟ್ಯಾಂಕು

ವಿಜಯಾಂತ ಮಧ್ಯಮ ಗಾತ್ರದ ಟ್ಯಾಂಕು. ಇದರ ತಯಾರಿಕೆ ತಮಿಳುನಾಡಿನ ಆವಡಿಯಲ್ಲಿ. ಇಲ್ಲಿಯ ಕಾರಖಾನೆಯಿಂದ ಮೊತ್ತ ಮೊದಲ ವಿಜಯಾಂತ ಹೊರಬಂದದ್ದು 1965 ಡಿಸೆಂಬರ್‌ನಲ್ಲಿ.

ಭಾರತ-ಪಾಕ್ ಯುದ್ಧದಲ್ಲಿ ವಿಜಯಾಂತದ ಕಾರ್ಯ ಸಾಮರ್ಥ್ಯ ಯಶಸ್ವಿಯಾಗಿ ಒರೆಗೆ ಹಚ್ಚಲ್ಪಟ್ಟಿತು.

ವಿಠ್ಠಲಭಾಯಿ ಪಟೇಲ್

ಮುಖ್ಯೋಪಾಧ್ಯಾಯರು ಬಾಲಕನಿಗೆ ಒಂದು ಪಾಠ ಓದಲು ಹೇಳಿದರು. ಅನಂತರ ಆ ಪುಸ್ತಕವನ್ನು ಮುಚ್ಚಿಟ್ಟು ಓದಿದ ಪಾಠವನ್ನು



ದಕ್ಷ, ನಿರ್ಭೀತ, ನಿಷ್ಪಕ್ಷಪಾತಿ ವಿಠ್ಠಲ ಭಾಯಿ

ಬರೆಯಲು ತಿಳಿಸಿದರು. ಬಾಲಕ ತಾನು ಓದಿದ್ದ ಆ ಪಾಠವನ್ನು ಸ್ವಲ್ಪವೂ ತಪ್ಪದೆ ಬರೆದ. ಹುಡುಗನ ಅದ್ಭುತ ಸ್ಮರಣಶಕ್ತಿಯನ್ನು ಕಂಡು ಮುಖ್ಯೋಪಾಧ್ಯಾಯರು ಬೆರಗಾದರು.

ಆ ಬಾಲಕನೇ ವಿಠ್ಠಲಭಾಯಿ ಪಟೇಲ್.

ಹುಟ್ಟಿದ್ದು 1871ರಲ್ಲಿ. ಗುಜರಾತ್ ಪ್ರಾಂತದ ಕರಮಸದ್ ಎಂಬ ಗ್ರಾಮದಲ್ಲಿ. ತಂದೆ ಝವೇರಭಾಯಿ; ಇವರ ಇಬ್ಬರು ಪುತ್ರರಲ್ಲಿ ಮೊದಲನೆಯವರು ವಿಠ್ಠಲಭಾಯಿ; ಎರಡನೆಯವರು ಸರದಾರ್ ಎಂದು ಮುಂದೆ ಪ್ರಖ್ಯಾತರಾದ ವಲ್ಲಭಭಾಯಿ.

ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ಉತ್ತಮವರ್ಗದಲ್ಲಿ ಉತ್ತೀರ್ಣರಾದ ಮೇಲೆ ವಿಠ್ಠಲಭಾಯಿ 1895ರಲ್ಲಿ ವಕೀಲಿ ಪರೀಕ್ಷೆಗೆ ಕುಳಿತು ಮೊದಲನೆಯ ಸ್ಥಾನ ಗಳಿಸಿದರು. ಗೋಧ್ರಾದಲ್ಲಿ ವಕೀಲಿ ಆರಂಭಿಸಿದರು. ಖಚಿತವಾದ ಕಾಯಿದೆ ತಿಳಿವಳಿಕೆ, ಅಗಾಧ ಸ್ಮರಣಶಕ್ತಿ, ವಾಕ್ಪಟುತ್ವಗಳಿಂದ ಉತ್ತಮ ವಕೀಲರೆಂದು ಖ್ಯಾತರಾದರು. ಹೈಕೋರ್ಟ್ ವಕೀಲರಾಗುವ ಉದ್ದೇಶದಿಂದ ಲಂಡನಿಗೆ ಹೋಗಿ 'ಬ್ಯಾರಿಸ್ಟರ್' ಪರೀಕ್ಷೆಯಲ್ಲಿ ತೇರ್ಗಡೆಹೊಂದಿದರು; 1908ರಲ್ಲಿ ಭಾರತಕ್ಕೆ ಹಿಂದಿರುಗಿ, ಮುಂಬಯಿ ಹೈಕೋರ್ಟಿನಲ್ಲಿ ವಕೀಲರಾದರು.

ವಿಠ್ಠಲಭಾಯಿ ಅವರಿಗೆ ಚಿಕ್ಕವಯಸ್ಸಿನಲ್ಲೇ ಮದುವೆ ಆಗಿತ್ತು. ಅವರು ಇನ್ನೂ ತರುಣರಾಗಿದ್ದಾಗಲೇ ಹೆಂಡತಿಯೂ ಇದ್ದ ಒಬ್ಬ ಚಿಕ್ಕ ಮಗನೂ ತೀರಿಕೊಂಡರು. ಅವರು ಮತ್ತೆ ಮದುವೆ ಮಾಡಿಕೊಳ್ಳಲಿಲ್ಲ.

ವಿಠ್ಠಲಭಾಯಿ ಅವರಿಗೆ ಮೊದಲಿನಿಂದಲೂ ಸಮಾಜ ಸುಧಾರಣೆಯಲ್ಲಿ, ರಾಷ್ಟ್ರಸೇವೆಯಲ್ಲಿ ಆಸಕ್ತಿ ಇತ್ತು.

ಮುಂಬಯಿ ನಗರಸಭೆಯ ಸದಸ್ಯರಾಗಿ, ಅಧ್ಯಕ್ಷರಾಗಿ ಅವರು ಸೇವೆ ಸಲ್ಲಿಸಿದರು. ಮುಂಬಯಿ ಅಧಿಪತ್ಯ ಕೌನ್ಸಿಲಿಗೆ ಆರಿಸಿಬಂದರು. ನಿರ್ಭೀತ ಸಾರ್ವಜನಿಕ ಸೇವಕರೆಂದು ಹೆಸರು ಗಳಿಸಿದರು. ಕಾಂಗ್ರೆಸ್ ಪಕ್ಷದ ಪ್ರತಿನಿಧಿಯಾಗಿ ಭಾರತದ ರಾಜಕೀಯ ಸುಧಾರಣೆಗಳ ಬಗೆಗೆ ಮಾತನಾಡಲು ಇಂಗ್ಲೆಂಡಿಗೆ ಹೋಗಿ, ಯಶಸ್ವಿಯಾಗಿ ಕಾರ್ಯ ನಿರ್ವಹಿಸಿದರು. ಅನಂತರ ಬಾರ್ಡೋಲಿ ಸತ್ಯಾಗ್ರಹದಲ್ಲಿ ಭಾಗವಹಿಸಿದರು.

ಪಟೇಲರು ಕೇಂದ್ರ ಶಾಸನಸಭೆಯನ್ನು ಪ್ರವೇಶಿಸಿ ವಿರೋಧ ಪಕ್ಷದ ಉಪನಾಯಕರಾದರು. ಮೂರು ಬಾರಿ ಆ ಸಭೆಯ ಅಧ್ಯಕ್ಷರಾದರು; ದಕ್ಷ, ನಿರ್ಭೀತ, ನಿಷ್ಪಕ್ಷಪಾತಿ ಅಧ್ಯಕ್ಷರೆಂದು ಖ್ಯಾತಿ ಗಳಿಸಿದರು. ಬ್ರಿಟಿಷ್ ಸರಕಾರ ಪ್ರಬಲವಾಗಿದ್ದ ಆ ಕಾಲದಲ್ಲಿ ಕೂಡ ತಮಗೆ ಸರಿಯೆಂದು ಕಂಡಾಗ ಸರಕಾರದ ರೀತಿನೀತಿಗಳನ್ನು ಅವರು ಧೈರ್ಯವಾಗಿ ಟೀಕಿಸುತ್ತಿದ್ದರು. ಶಾಸನ ಸಭಾಧ್ಯಕ್ಷರಾಗಿ ಅವರು ಕೊಟ್ಟಿರುವ ತೀರ್ಪುಗಳು ಇಂದಿಗೂ ಪ್ರಾಮಾಣಿಕವೆಂದು ಅಂಗೀಕರಿಸಲ್ಪಡುತ್ತವೆ. ಉಪ್ಪಿನ ಸತ್ಯಾಗ್ರಹದ ವೇಳೆಯಲ್ಲಿ ಬ್ರಿಟಿಷ್ ಸರಕಾರದ ದಬ್ಬಾಳಿಕೆಯನ್ನು ವಿರೋಧಿಸಿ ಪಟೇಲರು ಅಧ್ಯಕ್ಷ ಪದಕ್ಕೆ ರಾಜೀನಾಮೆ ಸಲ್ಲಿಸಿದರು. ಈ ಸಮಯದಲ್ಲಿ ಸರಕಾರದ ಆಜ್ಞೆಯನ್ನು ಉಲ್ಲಂಘಿಸಿದರೆಂದು ಅವರಿಗೆ ಆರು ತಿಂಗಳ ಸೆರೆಮನೆವಾಸ ವಿಧಿಸಲಾಯಿತು. ಆ ಅವಧಿಯಲ್ಲಿ ಅವರ ಆರೋಗ್ಯ ಕೆಟ್ಟಿತು. ಬಿಡುಗಡೆಯಾದ ನಂತರ [illegible] ಚಿಕಿತ್ಸೆಗಾಗಿ ವಿಯೆನ್ನಾಕ್ಕೆ ಹೋದರು. ಚಿಕಿತ್ಸೆಯಿಂದ ಅವರ ಆರೋಗ್ಯ ಬಹಳ ಸುಧಾರಿಸಲಿಲ್ಲ. ಭಾರತಕ್ಕೆ ಹಿಂದಿರುಗಿದರು. ಮತ್ತೆ ಅವರ ಬಂಧನವಾಯಿತು. ಅನಾರೋಗ್ಯ [illegible] ಅವರನ್ನು ಬಿಡುಗಡೆ ಮಾಡಲಾಯಿತು. ಎರಡನೆಯ ಬಾರಿ ಅವರು ಮತ್ತೆ ವಿಯೆನ್ನಾಕ್ಕೆ ಹೋದರು. ಸ್ವಲ್ಪ ಕಾಲ ವಿಶ್ರಾಂತಿ ಪಡೆದರು. ತಮ್ಮ ಆರೋಗ್ಯ ಕೆಡುತ್ತಿದ್ದರೂ ಇಂಗ್ಲೆಂಡ್, ಅಮೆರಿಕಗಳಲ್ಲಿ ಪ್ರವಾಸಮಾಡಿ ಭಾರತಕ್ಕೆ ಸ್ವಾತಂತ್ರ್ಯ ಬೇಕೆಂದು ಪ್ರತಿಪಾದಿಸಿ ಭಾಷಣಗಳನ್ನು ಮಾಡಿದರು. ತಿರುಗಿ ವಿಯೆನ್ನಾಕ್ಕೆ ಬಂದರು. 1933 ಅಕ್ಟೋಬರ್ 13ರಂದು ಅಲ್ಲಿ ನಿಧನರಾದರು.

ಸಾಯುವ ಮೊದಲು ತಮ್ಮ ದೇಹ ಸಂಸ್ಕಾರವನ್ನು ಮುಂಬಯಿಯಲ್ಲಿ ನಡೆಸಬೇಕೆಂಬ ಅಪೇಕ್ಷೆ ವ್ಯಕ್ತಪಡಿಸಿದ್ದರು; ಕೊನೆಗಾಲದಲ್ಲಿ ಅವರ ಶುಶ್ರೂಷೆ ಮಾಡುತ್ತಿದ್ದ ಸುಭಾಷ ಚಂದ್ರ ಬೋಸರು ವಿಠ್ಠಲಭಾಯಿ ಅವರ ಕಳೇಬರವನ್ನು ಮುಂಬಯಿಗೆ ಸಾಗಿಸುವ ವ್ಯವಸ್ಥೆ ಮಾಡಿದರು. ಅಲ್ಲಿ ಶವಸಂಸ್ಕಾರ ನಡೆಯಿತು. 'ವಿಠ್ಠಲಭಾಯಿ ಅವರ ಕೊನೆಯ ದಿನಗಳು' ಎಂಬ ಪುಸ್ತಕವನ್ನು ಬೋಸರು ಬರೆದರು.

ವಿಠ್ಠಲಭಾಯಿ ಅವರು ಉದಾರಿಗಳು, ತ್ಯಾಗಿಗಳು. ಕೇಂದ್ರ ಶಾಸನ ಸಭಾಧ್ಯಕ್ಷರಾಗಿದ್ದಾಗ, ತಮ್ಮ ಸಂಬಳದ ಬಹುಭಾಗವನ್ನು ರಾಷ್ಟ್ರೀಯ ಕಾರ್ಯಕ್ಕೆಂದು ಗಾಂಧೀಜಿಯವರಿಗೆ ಕಳುಹಿಸುತ್ತಿದ್ದರು; ಮರಣಾನಂತರ ತಮ್ಮ ಆಸ್ತಿಯನ್ನೆಲ್ಲ ರಾಷ್ಟ್ರಹಿತಕ್ಕಾಗಿ ವೆಚ್ಚ ಮಾಡಲು ಸುಭಾಷರಿಗೆ [illegible] ಬೋಸರಿಗೆ ವಹಿಸಿಕೊಟ್ಟರು.

ನೋಡಿ: ವಲ್ಲಭಭಾಯಿ ಪಟೇಲ್, [illegible] ಬೋಸ್

ವಿ.ಡಿ. ಸಾವರ್‌ಕರ್

1909ರಲ್ಲಿ ಭಾರತದಲ್ಲಿ [illegible] 1910ರಲ್ಲಿ ಲಂಡನ್‌ನಲ್ಲಿ ಭಾರತೀಯ ಕ್ರಾಂತಿಕಾರಿ ಯುವಕನೊಬ್ಬನನ್ನು [illegible] 'ಮೋರಿಯಾ' ಹಡಗು [illegible] ಭಾರತದ ಕಡೆ ಹೊರಟಿತು. [illegible] ಯುವಕ ಹಡಗಿನ [illegible] ಸಮುದ್ರಕ್ಕೆ ಹಾರಿ [illegible] ಫ್ರಾನ್ಸ್ ದೇಶದ [illegible] ವಿರುದ್ಧವಾಗಿ ಅವನನ್ನು ಬಂಧಿಸಿದರು.

[illegible] ಸಾವರ್‌ಕರ್.

[illegible] 1883ರಲ್ಲಿ. [illegible]

1906ರಲ್ಲಿ [illegible]

[illegible]



ಕ್ರಾಂತಿ ವೀರ : ವಿನಾಯಕ ದಾಮೋದರ

ಹೋದರು. ಅಲ್ಲಿಂದ ಅವರನ್ನು ಭಾರತಕ್ಕೆ ಕರೆತಂದ ಅನಂತರ, ಬ್ರಿಟಿಷ್ ಸರಕಾರ ಅವರ ಮೇಲೆ ಎರಡು ಮೊಕದ್ದಮೆ ಗಳನ್ನು ಹೂಡಿ. ಕರಿನೀರಿನ ಶಿಕ್ಷೆ ವಿಧಿಸಿತು; ಅಂಡಮಾನಿಗೆ ಕರೆದೊಯ್ದು ಕಾರಾಗೃಹದಲ್ಲಿಟ್ಟಿತು. ಆ ವೇಳೆಗಾಗಲೇ ಅವರ ಅಣ್ಣ ಗಣೇಶಸಾವರ್‌ಕರರೂ ಕರಿನೀರಿನ ಶಿಕ್ಷೆ ಅನುಭವಿಸುತ್ತಿದ್ದರು. ಸಾವರ್‌ಕರ್ ಮನೆತನದ ಆಸ್ತಿಪಾಸ್ತಿಗಳಿಗೆ ಸರಕಾರ ಮುಟ್ಟುಗೋಲು ಹಾಕಿತು.

ಸಾವರ್‌ಕರರು 13 ವರ್ಷ ಸೆರೆಮನೆವಾಸ ಅನುಭವಿಸಿ. 12 ವರ್ಷ ನಿರ್ಬಂಧ ಜೀವನ ನಡೆಸಿ. 1937ರಲ್ಲಿ ಬಿಡುಗಡೆ ಹೊಂದಿದರು. ಬಿಡುಗಡೆಯ ಅನಂತರ ಹಿಂದೂಮಹಾಸಭೆಯ ಅಧ್ಯಕ್ಷರಾದರು.

ಇವರು ಲಂಡನಿನಲ್ಲಿದ್ದಾಗಲೇ '1857ರ ಸ್ವಾತಂತ್ರ್ಯಯುದ್ಧ' ಗ್ರಂಥವನ್ನು ರಚಿಸಿದ್ದರು. ಅವರು ಸೆರೆಮನೆಯಲ್ಲಿ ಬರೆದ ದೀರ್ಘಕಾವ್ಯ 'ಗೋಮಾಂತಕ್'. 1938ರಲ್ಲಿ ಮುಂಬಯಿಯಲ್ಲಿ ನಡೆದ ಮರಾಠೀ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ವಹಿಸಿದರು.

ಸಾವರ್‌ಕರರು 1966 ಫೆಬ್ರುವರಿ 26ರಂದು ನಿಧನರಾದರು.

ವಿದ್ಯಾಪತಿ

ನೋಡಿ : ಸಂಪುಟ ೫

ವಿದ್ಯಾರಣ್ಯ

ತುಂಗಭದ್ರಾ ನದೀ ತೀರದ ಅರಣ್ಯದಲ್ಲಿ ಒಂದು ದಿನ ಒಬ್ಬ ಯುವಕ ತಪಸ್ವಿಯೊಬ್ಬನನ್ನು ಕಂಡ. ಒಂದು ಸಾಮ್ರಾಜ್ಯ ಸ್ಥಾಪಿಸುವಂತೆ ತಪಸ್ವಿ ಆ ಯುವಕನಿಗೆ ಹೇಳಿದ.

ಆ ಯುವಕ ಮುಂದೆ ವಿಜಯನಗರವನ್ನು ಕಟ್ಟಿದ ಹಕ್ಕ - ಬುಕ್ಕರ. ಆ ತಪಸ್ವಿ ವಿಜಯನಗರ ಸಾಮ್ರಾಜ್ಯ ಸ್ಥಾಪನೆಗೆ ಬೆಂಬಲವಾಗಿ ನಿಂತ. ವಿದ್ಯಾರಣ್ಯರೆಂದು ಪ್ರಸಿದ್ಧರಾದ ಮಾಧವ.

ಹಂಪೆಯ ಬಳಿಯ ಅಗ್ರಹಾರದಲ್ಲಿದ್ದ ಮಾಯಣಶರ್ಮ ಮತ್ತು ಆತನ ಪತ್ನಿ ಶ್ರೀಮತಿ - ಇವರ ಪುತ್ರನೇ ಮಾಧವ. ಮಾಧವನಿಗೆ ಸಾಯಣ. ಭೋಗನಾಥ ಎಂಬ ಇಬ್ಬರು ಸೋದರರು.

ಮೂವರು ಸೋದರರೂ ಶಂಕರಾನಂದ ಎಂಬ ಪಂಡಿತರ ಬಳಿ ವಿದ್ಯೆ ಕಲಿತರು. ಮುಂದೆ ಸಾಯಣ ಮಾಧವರು ಶೃಂಗೇರಿಯ ವಿದ್ಯಾಶಂಕರ ತೀರ್ಥರೆಂಬವರ ಬಳಿ ವ್ಯಾಸಂಗ ಮಾಡಿದರು. ಮಾಧವರು ಅವರಿಂದ ಸನ್ಯಾಸ ದೀಕ್ಷೆ ಪಡೆದರು. ಶೃಂಗೇರಿಯ ಭಾರತೀಕೃಷ್ಣತೀರ್ಥರ ಅನಂತರ 1380ರಲ್ಲಿ 'ವಿದ್ಯಾರಣ್ಯ'ರಾಗಿ ಪೀಠಾಧಿಕಾರಿಯಾದರು.

14ನೆಯ ಶತಮಾನದ ಮೊದಲ ಭಾಗದಲ್ಲಿ ಮುಸಲ್ಮಾನರ ಆಡಳಿ ದಕ್ಷಿಣ ಭಾರತಕ್ಕೆ ಹಬ್ಬಿತು. ಜನರ ಧಾರ್ಮಿಕ. ಸಾಂಸ್ಕೃತಿಕ ಜೀವ ಅಸ್ತವ್ಯಸ್ತವಾಗಿತ್ತು. ಆಗ ಹಂಪೆಗೆ ಬಂದ ವಿದ್ಯಾರಣ್ಯರಲ್ಲಿ ಹಿಂದು ಸಂಸ್ಕೃತಿಯ ರಕ್ಷಣೆಗೆ ಸಾಮ್ರಾಜ್ಯ ಸ್ಥಾಪನೆಯಾಗಬೇಕೆಂಬ ಆಸೆ ಬಲವಾಯಿತು. ಅವರಿಗೆ ಹಕ್ಕ ಮತ್ತು ಅವನ ಸೋದರರಾದ ಬುಕ್ಕ. ಹಾಗ. ಕಂಪಿಲ. ಮಾರಪ್ಪ. ಮುದ್ದಪ್ಪ ಮೊದಲಾದ ಕ್ಷತ್ರಿಯ ರಾಜಕುಮಾರ ಬೆಂಬಲವೂ ಸಿಕ್ಕಿತು.

ಹಕ್ಕ-ಬುಕ್ಕರ ಅತ್ಯುತ್ಸಾಹ.ಧೈರ್ಯ. ಪರಾಕ್ರಮ. ವಿದ್ಯಾರಣ್ಯರ ತಪೋ ಬಲ. ಸಾಂಸ್ಕೃತಿಕ. ಧಾರ್ಮಿಕ ಸಂಘಟನೆ -ಇವುಗಳ ಫಲವಾಗಿ 1336ರಲ್ಲಿ 'ವಿಜಯನಗರ' ಸಾಮ್ರಾಜ್ಯ ಸ್ಥಾಪನೆಯಾಯಿತೆಂದು ಪ್ರತೀತಿ. ವಿಜಯ ನಗರಕ್ಕೆ ವಿದ್ಯಾರಣ್ಯರ ನೆನಪಿಗಾಗಿ 'ವಿದ್ಯಾನಗರ' ಎಂಬ ಹೆಸರಿಡಬೇಕೆಂದು ಹಕ್ಕ ಹೇಳಿದಾಗ ವಿದ್ಯಾರಣ್ಯರು ಒಪ್ಪಿರಲಿಲ್ಲ.

ಹಿಂದೂಧರ್ಮ. ನೀತಿಶಾಸ್ತ್ರಗಳನ್ನು ಪ್ರತಿಪಾದಿಸುವ 'ಪರಾಶರ ಮಾಧವೀಯ' ಗ್ರಂಥವನ್ನು 1354ರ ವೇಳೆಗೆ ವಿದ್ಯಾರಣ್ಯರು ರಚಿಸಿದರು. 'ಜೀವನ್ಮುಕ್ತಿ ವಿವೇಕ'. 'ಪಂಚದಶಿ.' 'ಜೈಮಿನೀಯ ನ್ಯಾಯಮಾಲಾ' ಇವರ ಇತರ ಕೃತಿಗಳು.

ವಿದ್ಯಾರಣ್ಯರ ನಿಧನಾನಂತರ ಹಂಪೆಯಲ್ಲಿ ಅವರ ಸ್ಮಾರಕವನ್ನು ನಿರ್ಮಿಸಲಾಯಿತು.

ನೋಡಿ : ವಿಜಯನಗರ ಅರಸರು ; ಹಂಪೆ

ವಿದುರ ನೀತಿ

ವಿದುರ 'ಮಹಾಭಾರತ'ದಲ್ಲಿ ಒಬ್ಬ ಶ್ರೇಷ್ಠ ವ್ಯಕ್ತಿ. ಇವನ ತಂದೆ ವ್ಯಾಸ; ತಾಯಿ ಅರಮನೆಯ ದಾಸಿ. ಪಾಂಡು. ಧೃತರಾಷ್ಟ್ರರೊಡನೆ ಬೆಳೆದ ಇವನ ಧರ್ಮನಿಷ್ಠೆ ದೃಢವಾದದ್ದು. ಕೌರವರ ಆಶ್ರಯದಲ್ಲಿದ್ದರೂ ಅವರು ತಪ್ಪು ಮಾಡಿದಾಗಲೆಲ್ಲ ಅದನ್ನು ಎತ್ತಿಹೇಳುತ್ತಿದ್ದ. ಧರ್ಮ ಮಾರ್ಗದಲ್ಲಿ ನಡೆಯುತ್ತಿದ್ದ ಪಾಂಡವರಿಗೆ ಅನ್ಯಾಯ ಮಾಡಬಾರದೆಂದ ಸಮಯ ಒದಗಿದಾಗಲೆಲ್ಲ ವಾದಿಸುತ್ತಿದ್ದ.

ವಿದುರ ನೀತಿಪರನಾಗಿದ್ದಂತೆ ಶ್ರೇಷ್ಠ ಭಕ್ತನೂ ಆಗಿದ್ದ.

ಜ್ಞಾನಾರ್ಜನೆ. ಕೈಗೊಂಡ ಕೆಲಸದಲ್ಲಿ ಶ್ರದ್ಧೆ. ಸ್ವಾರ್ಥಕ್ಕೆ ಮನಗೊಡದಿರುವುದು. ಶಾಸ್ತ್ರ ಮತ್ತು ಗುರುವಿನ ಉಪದೇಶದಲ್ಲಿ ನಂಬುಗೆ. ಲೋಕಹಿತಾರ್ಥವಾದ ನಿಷ್ಕಾಮಕರ್ಮ. ಪೂರ್ವಾಗ್ರಹ ಪಕ್ಷಪಾತಗಳಿಲ್ಲದ ನಿರ್ಣಯವನ್ನು. ಕ್ಷಮೆ ಮತ್ತು ತಾಳ್ಮೆ - ಇವು ವ್ಯಕ್ತಿಯ ಅಮೂಲ್ಯ ಐಶ್ವರ್ಯಗಳು : ಎಲ್ಲ ಜೀವಿಗಳಲ್ಲೂ ದಯೆ. ಅನುಕಂಪ. ಸತ್ಯಸಂಧತೆ ಮತ್ತು ತನ್ನನ್ನು ತಾನು ಅಂಕೆಯಲ್ಲಿಟ್ಟುಕೊಳ್ಳುವುದು—ಉತ್ತಮ ಗುಣಗಳು ಎಂಬುದು ವಿದುರನ ನೀತಿಬೋಧೆಯ ಸಾರ.

ವಿದುರನು ಧರ್ಮಾಧಿದೇವತೆಯಾದ ಯಮನ ಅಂಶದಿಂದ ಹುಟ್ಟಿದ ಎಂಬ ನಂಬಿಕೆಯಿದೆ.

ವಿಧಾನ ಪರಿಷತ್ತು

ಭಾರತದ ಎಲ್ಲ ರಾಜ್ಯಗಳಲ್ಲೂ ವಿಧಾನ ಸಭೆಗಳು ಇವೆ. ಆದರೆ ವಿಧಾನ ಪರಿಷತ್ತುಗಳು ಆಂಧ್ರ ಪ್ರದೇಶ. ಉತ್ತರ ಪ್ರದೇಶ. ಬಿಹಾರ. ಮಹಾರಾಷ್ಟ್ರ

[illegible] ಜಮ್ಮು ಮತ್ತು ಕಾಶ್ಮೀರ [illegible] ಇವೆ.

ವಿಧಾನ ಪರಿಷತ್ತಿನ ಸದಸ್ಯರ ಸಂಖ್ಯೆ ಆಯಾ ರಾಜ್ಯದ ವಿಧಾನ ಸಭಾ ಸದಸ್ಯರ ಸಂಖ್ಯೆಯ ಮೂರನೆಯ ಒಂದು ಭಾಗಕ್ಕಿಂತ ಹೆಚ್ಚಾಗಿರಬಾರದು, 40ಕ್ಕಿಂತ ಕಡಮೆಯೂ ಆಗಿರಬಾರದು – [illegible] ಜಮ್ಮು ಮತ್ತು ಕಾಶ್ಮೀರ ರಾಜ್ಯದ ವಿಧಾನ ಪರಿಷತ್ತಿನಲ್ಲಿ 36 ಸದಸ್ಯರು ಮಾತ್ರ ಇದ್ದಾರೆ. ವಿಧಾನ ಸಭೆಯಂತೆ ವಿಧಾನ ಪರಿಷತ್ತನ್ನು [illegible] ವಿಸರ್ಜಿಸುವುದಿಲ್ಲ. ಎರಡು ವರ್ಷಕ್ಕೊಮ್ಮೆ ⅓ ಭಾಗ ಸದಸ್ಯರು ನಿವೃತ್ತರಾಗುತ್ತಾರೆ. ಅವರ ಸ್ಥಾನಗಳಿಗೆ ಮಾತ್ರ ಆಯ್ಕೆ ನಡೆಯುತ್ತದೆ.

ಪರಿಷತ್ತಿನ ಸದಸ್ಯರಲ್ಲಿ ಸುಮಾರು ⅓ ಭಾಗದಷ್ಟು ಸಂಖ್ಯೆಯ ಪ್ರತಿನಿಧಿಗಳನ್ನು ವಿಧಾನ ಸಭೆ ಆರಿಸುತ್ತದೆ. ಈ ಚುನಾವಣೆಯಲ್ಲಿ ವಿಧಾನ ಸಭೆಯ ಸದಸ್ಯರು ಉಮೇದುವಾರರಾಗುವಂತಿಲ್ಲ. ನಗರಸಭೆ ಮುಂತಾದ ಸ್ಥಳೀಯ ಸಂಸ್ಥೆಗಳು ⅓ ಭಾಗ ಸದಸ್ಯರನ್ನು ಆರಿಸುತ್ತವೆ. ಮೂರು ವರ್ಷಗಳಿಗಿಂತ ಹೆಚ್ಚು ಕಾಲ ವಿಶ್ವವಿದ್ಯಾನಿಲಯಗಳ ರೆಜಿಸ್ಟರ್ಡ್ ಪದವೀಧರರಾಗಿದ್ದು ರಾಜ್ಯದಲ್ಲಿ ವಾಸಿಸುತ್ತಿರುವವರು 1/12 ಭಾಗ ಸದಸ್ಯರನ್ನು ಆರಿಸುತ್ತಾರೆ. ಸೆಕೆಂಡರಿ ಶಾಲೆಗೆ ಕಡಮೆ ದರ್ಜೆ ಇಲ್ಲದ ಶಾಲೆಗಳ ರೆಜಿಸ್ಟರ್ಡ್ ಶಿಕ್ಷಕರು ಇನ್ನು 1/12 ಭಾಗ ಸದಸ್ಯರನ್ನು ಚುನಾಯಿಸುತ್ತಾರೆ. ಉಳಿದ ಸದಸ್ಯರಾಗಿ ಸಮಾಜಸೇವೆ, ಸಹಕಾರ ಚಳುವಳಿ, ಕಲೆ, ಸಾಹಿತ್ಯ, ವಿಜ್ಞಾನಕ್ಷೇತ್ರಗಳಲ್ಲಿ ಅನುಭವಿಗಳಾದವರನ್ನು ರಾಜ್ಯಪಾಲರು ನಾಮಕರಣ ಮಾಡುತ್ತಾರೆ.

ಪರಿಷತ್ತು ತನ್ನ ಅಧ್ಯಕ್ಷರು, ಉಪಾಧ್ಯಕ್ಷರನ್ನು ಆರಿಸುತ್ತದೆ.

ಅಸ್ತಿತ್ವದಲ್ಲಿರುವ ವಿಧಾನ ಪರಿಷತ್ತನ್ನು ರದ್ದುಪಡಿಸುವ ಅಥವಾ ಹೊಸದಾಗಿ ಜಾರಿಗೆ ತರುವ ಅಧಿಕಾರ ಸಂಸತ್ತಿಗೆ ಇದೆ. ಈ ಅಧಿಕಾರದ ಅನ್ವಯ ಸಂಸತ್ತು 1969 ಆಗಸ್ಟ್ 1ರಿಂದ ಪಶ್ಚಿಮ ಬಂಗಾಳದ ವಿಧಾನ ಪರಿಷತ್ತನ್ನೂ 1970 ಜನವರಿ 7ರಿಂದ ಪಂಜಾಬಿನ ವಿಧಾನ ಪರಿಷತ್ತನ್ನೂ ರದ್ದುಗೊಳಿಸಿತು.

ರಚನಾತ್ಮಕ ಟೀಕೆ ಮಾಡುವುದು, ಮಸೂದೆಗಳನ್ನು ಚರ್ಚಿಸಿ ಅನುಮೋದಿಸುವುದು ಇದರ ಕೆಲಸ. ವಿಧಾನಸಭೆಗೆ ಇರುವಷ್ಟು ಅಧಿಕಾರ ಪರಿಷತ್ತಿಗಿಲ್ಲ. ಮಂತ್ರಿಗಳು, ಈ ಸಭೆಯ ಸದಸ್ಯರಾಗಿರಲಿ ಇಲ್ಲದಿರಲಿ, ಅವರು ಸಭೆಯ ಕಾರ್ಯಕಲಾಪಗಳಲ್ಲಿ ಭಾಗವಹಿಸಬಹುದು.

ವಿಧಾನ ಸಭೆ

ಭಾರತ ಗಣರಾಜ್ಯದ ಎಲ್ಲ ರಾಜ್ಯಗಳಲ್ಲೂ ವಿಧಾನ ಸಭೆಗಳಿವೆ.

ರಾಜ್ಯದ ಜನಸಂಖ್ಯೆಯನ್ನು ಅನುಸರಿಸಿ ವಿಧಾನ ಸಭೆಯ ಸದಸ್ಯ ಸಂಖ್ಯೆ ಸಾಮಾನ್ಯವಾಗಿ 60ಕ್ಕಿಂತ ಕಡಮೆಯಿಲ್ಲದೆ 500ಕ್ಕಿಂತ ಹೆಚ್ಚಾಗದಂತೆ ಇರಬಹುದು.

ಉತ್ತರ ಪ್ರದೇಶದ ವಿಧಾನ ಸಭೆಯಲ್ಲಿ 425 ಮಂದಿ ಸದಸ್ಯರು. ಹೆಚ್ಚು ಸದಸ್ಯತ್ವವಿರುವ ರಾಜ್ಯ ಇದು. ಕರ್ನಾಟಕ ರಾಜ್ಯದ ವಿಧಾನಸಭಾ ಸದಸ್ಯರ ಸಂಖ್ಯೆ 216. ಗೋವ–ದಮಾನ್–ದೀವ್, ಮಿಜೋರಾಮ್, ಪಾಂಡಿಚೆರಿಗಳಂಥ ಚಿಕ್ಕ ಪ್ರದೇಶಗಳ ವಿಧಾನ ಸಭೆಗಳಲ್ಲಿ ಮೂವತ್ತೇ ಮಂದಿ ಸದಸ್ಯರಿರುವರು.

[illegible] ಕ್ಷೇತ್ರಗಳಿಂದ ಆರಿಸುತ್ತಾರೆ. ಮಧ್ಯಾವಧಿಯಲ್ಲಿ ವಿಸರ್ಜಿಸಲ್ಪಡದೆ [illegible] ಉಪಾಧ್ಯಕ್ಷರನ್ನು ಆರಿಸುತ್ತದೆ.

[illegible] ಮಸೂದೆಗಳನ್ನು ಚರ್ಚಿಸಿ ಅಂಗೀಕರಿಸಬಹುದು.

[illegible]

[illegible] ಹಿರಿದಾದದ್ದು.

ವಿನೋಬ ಭಾವೆ

ನೋಡಿ : ಸಂಪುಟ ೧

ವಿ. ಪಿ. ಮೆನನ್

ಭಾರತದಲ್ಲಿ ಬ್ರಿಟಿಷ್ ಸರಕಾರದ ಗೃಹ ಖಾತೆಯಲ್ಲಿ ಗುಮಾಸ್ತೆಯಾಗಿ ಸೇರಿ ತಮ್ಮ ಬುದ್ಧಿವಂತಿಕೆ, ಪರಿಶ್ರಮಗಳಿಂದ ಗವರ್ನರ್ ಜನರಲರ ರಾಜ್ಯಾಂಗ ಸಲಹೆಗಾರ ಸ್ಥಾನಕ್ಕೆ ಏರಿದವರು, ವಿ.ಪಿ. ಮೆನನ್.

ಇವರು ಸ್ವತಂತ್ರ ಭಾರತದಲ್ಲಿ ಹೊಸದಾಗಿ ರಚಿತವಾದ ಸಂಸ್ಥಾನಗಳ ಮಂತ್ರಿಶಾಖೆಯಲ್ಲಿ ಕಾರ್ಯದರ್ಶಿಯಾದರು. ಸಂಸ್ಥಾನಗಳ ವಿಲೀನೀಕರಣದಲ್ಲಿ ಸರ್ದಾರ್ ವಲ್ಲಭ

ಪಾದಯಾತ್ರೆ : ವಿನೋಬ





ಕಾರ್ಯ ಚತುರ : ಪಂಗುಣ್ಣಿ ಮೆನನ್

ಭಾಯಿ ಪಟೇಲರ ಸಹಾಯಕರಾಗಿ ಇವರು ಸಲ್ಲಿಸಿದ ಸೇವೆ ಅಮೂಲ್ಯವಾದದ್ದು.

ವಾಪಾಲ ಪಂಗುಣ್ಣಿ ಮೆನನ್ 1894ರಲ್ಲಿ ಜನಿಸಿದರು. ಇವರು 20ನೆಯ ವಯಸ್ಸಿನಲ್ಲಿ ಸರಕಾರೀ ನೌಕರಿಗೆ ಸೇರಿಕೊಂಡರು. ಅಂದಿನಿಂದ 1951ರಲ್ಲಿ ಇವರು ಸರಕಾರೀ ಉದ್ಯೋಗದಿಂದ ನಿವೃತ್ತರಾಗುವವರೆಗೆ ರಾಜ್ಯಾಂಗ ಕುರಿತು ಸಂಪಾದಿಸಿದ ಅನುಭವ ಅಪಾರವಾದದ್ದು. ಭಾರತದಲ್ಲಿ ಅಧಿಕಾರದ ವರ್ಗಾವಣೆ ಮತ್ತು ಸಂಸ್ಥಾನಗಳ ವಿಲೀನೀಕರಣ ಕುರಿತು ಇವರು ಗ್ರಂಥಗಳನ್ನು ರಚಿಸಿದ್ದಾರೆ.

ವಿ.ಪಿ. ಮೆನನ್ ಸ್ವಲ್ಪ ಕಾಲ ಒಡಿಸ್ಸಾದ ರಾಜ್ಯಪಾಲರಾಗಿದ್ದರು. 1966ರಲ್ಲಿ 72ನೆಯ ವಯಸ್ಸಿನಲ್ಲಿ ಮೆನನ್ ನಿಧನರಾದರು.

ವಿಭೀಷಣ

ವಿಭೀಷಣ ಏಳು ಜನ ಚಿರಂಜೀವಿಗಳಲ್ಲಿ ಒಬ್ಬ (ಉಳಿದವರು ಅಶ್ವತ್ಥಾಮ. ಬಲಿ. ವ್ಯಾಸ. ಹನುಮಂತ. ಕೃಪ. ಪರಶುರಾಮ). ಬ್ರಹ್ಮನನ್ನು ಕುರಿತು ಗೋಕರ್ಣದಲ್ಲಿ ತಪಸ್ಸುಮಾಡಿದ. ಏನೇ ಎಡರುತೊಡರು ಬಂದರೂ ಧರ್ಮಮಾರ್ಗ ಬಿಟ್ಟು ಹೋಗದಂತೆ. ಮಂತ್ರಾಭ್ಯಾಸ ಇಲ್ಲದಿದ್ದರೂ ಬ್ರಹ್ಮಾಸ್ತ್ರ ಸ್ವಾಧೀನವಾಗುವಂತೆ ಮತ್ತು ಧರ್ಮಪರಿಪಾಲನೆಯಲ್ಲಿ ಶ್ರದ್ಧೆ ಇರುವಂತೆ ವರ ಪಡೆದ. ಬ್ರಹ್ಮ ತಾನಾಗಿ ಇವನಿಗೆ ಅನುಗ್ರಹಿಸಿದ್ದು ಚಿರಂಜೀವಿತ್ವ.

—ಇದು ವಿಭೀಷಣನ ಬಗೆಗಿನ ಕಥೆ.

ಪುಲಸ್ತ್ಯ ಮಹರ್ಷಿಯ ಮಗ ವಿಶ್ರವಸು ಮತ್ತು ಕೈಕಸೆಯರ ಮಕ್ಕಳು ರಾವಣ. ಕುಂಭಕರ್ಣ. ಶೂರ್ಪನಖಿ ಮತ್ತು ವಿಭೀಷಣ. ಇವರಲ್ಲಿ ವಿಭೀಷಣ ಕಿರಿಯುವನು.

ವಿಭೀಷಣನ ಧರ್ಮನಿಷ್ಠೆ ಖ್ಯಾತವಾದದ್ದು. ಶ್ರೀರಾಮನ ದೂತನಾಗಿ ಬಂದಿದ್ದ ಹನುಮಂತನನ್ನು ಬಂಧಿಸಲು ಸಿದ್ಧನಾದ ರಾವಣನನ್ನು ತಡೆದವನು ವಿಭೀಷಣ. ದೂತನನ್ನು ಬಂಧಿಸುವುದು ಅಧರ್ಮವೆಂದು ಅವನ ವಾದ. ರಾಮನೊಡನೆ ಯುದ್ಧ ಘಟಿಸಿದಾಗ ರಾವಣನಿಗೆ ಬುದ್ಧಿ ಹೇಳಿದ: ಸೀತೆಯನ್ನು ರಾಮನಿಗೆ ಒಪ್ಪಿಸುವಂತೆ ಸೂಚಿಸಿದ. ರಾವಣ ಒಪ್ಪದಿರಲು ವಿಭೀಷಣ ರಾಮನ ಆಶ್ರಯ ಕೋರಿದ. ರಾವಣನ ಮರಣಾನಂತರ ವಿಭೀಷಣನಿಗೆ ಲಂಕೆಯ ಪಟ್ಟ ಲಭಿಸಿತು.

ರಾಮನ ಪಟ್ಟಾಭಿಷೇಕವನ್ನು ಕಣ್ತುಂಬ ಕಾಣುವ ಆಸೆಯನ್ನು ವಿಭೀಷಣ ವ್ಯಕ್ತಪಡಿಸಿದ. ಅಯೋಧ್ಯೆಗೆ ತೆರಳಿ. ರಾಮನ ಪಟ್ಟಾಭಿಷೇಕ ಮಹೋತ್ಸವದಲ್ಲಿ ಭಾಗವಹಿಸಿ. ಲಂಕೆಗೆ ಹಿಂದಿರುಗಿದ.

'ಮಹಾಭಾರತ'ದಲ್ಲೂ ವಿಭೀಷಣನ ಪ್ರಸ್ತಾಪವಿದೆ. ರಾಜಸೂಯ ಯಾಗ ಮಾಡಲು ಹೊರಟ ಯುಧಿಷ್ಠಿರ ವಿಭೀಷಣನಿಂದ ಕಪ್ಪ ತರುವ ಕೆಲಸವನ್ನು ಸಹದೇವನಿಗೆ ವಹಿಸಿದ. ಹಾಗೆ ಸಹದೇವ ಬಂದಾಗ. ವಿಭೀಷಣ ಕಪ್ಪ ಕೊಟ್ಟು ಕಳುಹಿಸಿದ.

ಸರಮೆ ವಿಭೀಷಣನ ಪತ್ನಿ.

ವಿಲ್ಸನ್ ಜೋನ್ಸ್

ನೋಡಿ : ಸಂಪುಟ ೬

ವಿಲಿಯಂ ಜೋನ್ಸ್

ಮಹಾಕವಿ ಕಾಳಿದಾಸನ 'ಶಾಕುಂತಲ'ವನ್ನು ಇಂಗ್ಲಿಷ್ ಓದುಗರಿಗೆ ಪರಿಚಯ ಮಾಡಿಕೊಟ್ಟ ವ್ಯಕ್ತಿ. ವಿಲಿಯಂ ಜೋನ್ಸ್. ಹುಟ್ಟಿದ್ದು 1746 ಸೆಪ್ಟೆಂಬರ್ 28ರಂದು. ಲಂಡನಿನಲ್ಲಿ.


ಕಲ್ಕತ್ತೆಯಲ್ಲಿದ್ದ ಸುಪ್ರೀಂ ಕೋರ್ಟಿನ ನ್ಯಾಯಾಧೀಶನಾಗಿ ಜೋನ್ಸ್ 1783ರಲ್ಲಿ ಭಾರತಕ್ಕೆ ಬಂದ. ಈ ವೇಳೆಗೆ ಆತ ಯೂರೋಪಿನ ಅನೇಕ ಭಾಷೆಗಳನ್ನೂ. ಹೀಬ್ರೂ. ಅರಬೀ. ಪಾರಸೀ. ತುರ್ಕಿ ಭಾಷೆಗಳನ್ನೂ ಕಲಿತಿದ್ದ. ಭಾರತಕ್ಕೆ ಬಂದ ಮೇಲೆ ಚಾರ್ಲ್ಸ್ ವಿಲ್ಕಿನ್ಸ್ ಮತ್ತು ಕೆಲವು ಬಂಗಾಳೀ ಪಂಡಿತರ ನೆರವಿನಿಂದ ಜೋನ್ಸ್ ಸಂಸ್ಕೃತ ಭಾಷೆ ಕಲಿತ. ಭಗವದ್ಗೀತೆಯನ್ನು ಇಂಗ್ಲಿಷಿಗೆ ಭಾಷಾಂತರ ಮಾಡಿದ. 1789ರಲ್ಲಿ 'ಶಾಕುಂತಲ'ವನ್ನು ಇಂಗ್ಲಿಷಿಗೆ ಅನುವಾದ ಮಾಡಿದ. ಇಪ್ಪತ್ತು ವರ್ಷಗಳ ಅವಧಿಯಲ್ಲಿ ಇದು ಐದು ಆವೃತ್ತಿಗಳನ್ನು ಕಂಡಿತು. ಈ ಭಾಷಾಂತರವನ್ನು ಆಧರಿಸಿ 'ಶಾಕುಂತಲ'ದ ಜರ್ಮನ್. ಫ್ರೆಂಚ್. ಇಟಾಲಿಯನ್ ಅನುವಾದಗಳು ಹೊರಬಂದುವು. ಇದರಿಂದಾಗಿ ಯೂರೋಪಿನ ಬೌದ್ಧಿಕ ಪ್ರಪಂಚದಲ್ಲಿ ಕೋಲಾಹಲವೇ ಉಂಟಾಯಿತು. 1792ರಲ್ಲಿ ಜೋನ್ಸ್ 'ಗೀತಗೋವಿಂದ'ವನ್ನು ಇಂಗ್ಲಿಷಿಗೆ ಅನುವಾದಿಸಿದ. 'ಮನುಧರ್ಮಶಾಸ್ತ್ರ'ದ ಅನುವಾದ ಜೋನ್ಸನ ಮರಣಾನಂತರ 1794ರಲ್ಲಿ ಪ್ರಕಟವಾಯಿತು.

ಜೋನ್ಸನ ಉತ್ಸಾಹ ಪ್ರಯತ್ನಗಳಿಂದ ಬಂಗಾಳದಲ್ಲಿ 'ಏಷ್ಯಾಟಿಕ್ ಸೊಸೈಟಿ' 1784ರ ಜನವರಿ ಒಂದನೆಯ ತಾರೀಖು ಸ್ಥಾಪಿತವಾಯಿತು. ಅದರ ಮೊದಲನೆಯ ಅಧ್ಯಕ್ಷನೂ ಅವನೇ. ಈ ಸಂಸ್ಥೆಯ ಪತ್ರಿಕೆ 'ಏಷ್ಯಾಟಿಕ್ ರಿಸರ್ಚಸ್'–ಭಾರತದ ಸಂಸ್ಕೃತಿ ಪರಂಪರೆ ಶೋಧನೆಗೆ ಮೀಸಲಾದದ್ದು. ಇದರಲ್ಲಿ ಜೋನ್ಸನ ಹಲವು ಅನುವಾದ ಬರೆಹಗಳು ಬಂದುವು. 1786ರಲ್ಲಿ ಈ ಸಂಸ್ಥೆಯ ಅಧ್ಯಕ್ಷ ಭಾಷಣ ಮಾಡುವಾಗ ಸಂಸ್ಕೃತ ಹಾಗೂ ಗ್ರೀಕ್ ಭಾಷೆಗಳ ಮೂಲ ಒಂದೇ ಎಂಬ ಅಭಿಪ್ರಾಯ ಮಂಡಿಸಿ. ತುಲನಾತ್ಮಕ ಭಾಷಾಶಾಸ್ತ್ರಾಧ್ಯಯನಕ್ಕೆ ಜೋನ್ಸ್ ಅಡಿಕೆ ಹಾಕಿದ.

ಅವನ ವಿದ್ವತ್ತು ಪರಿಶ್ರಮಗಳನ್ನು ಗಮನಿಸಿ ಬ್ರಿಟಿಷ್ ಸರಕಾರ ಜೋನ್ಸ್‌ಗೆ 1783ರಲ್ಲಿ 'ಸರ್' ಪ್ರಶಸ್ತಿ ಕೊಟ್ಟು ಗೌರವಿಸಿತು. ಜೋನ್ಸ್ 1794 ಏಪ್ರಿಲ್ 27ರಂದು ಕಲ್ಕತ್ತೆಯಲ್ಲಿ ನಿಧನನಾದ.

ವಿಲಿಯಂ ಬೆಂಟಿಂಕ್

"ಭಾರತದ ಸುಖ-ಸಂತೋಷಗಳ ಮೇಲೆ ಬ್ರಿಟನಿನ ಹೆಗ್ಗಳಿಕೆ ನಿಲ್ಲಬೇಕು"—ಎಂಬ ಉದ್ದೇಶದಿಂದ ಭಾರತಕ್ಕೆ ಬಂದು. ಅನೇಕ ಸಾಮಾಜಿಕ,



ಸಿದ್ಧಾಂತವಲ್ಲ, ಕಾರ್ಯಶೀಲತೆ : ಬೆಂಟಿಂಕ್

ರಾಜಕೀಯ ಸುಧಾರಣೆಗಳಿಗೆ ಕಾರಣನಾದವನು ಲಾರ್ಡ್ ವಿಲಿಯಂ ಬೆಂಟಿಂಕ್.

ಬೆಂಟಿಂಕ್ ಪೋರ್ಟ್ಲ್ಯಾಂಡಿನ ಮೂರನೆಯ ಡ್ಯೂಕನ ಮಗ. 1774ರ ಸೆಪ್ಟೆಂಬರ್ 14ರಂದು ಜನಿಸಿದ. ಚಿಕ್ಕಂದಿನಲ್ಲೇ ಓದುವುದಕ್ಕಿಂತ ಕೆಲಸ ಮಾಡುವುದರಲ್ಲಿ ಹೆಚ್ಚು ಆಸಕ್ತಿ. ಇದೇ ಮನೋಭಾವ ಬೆಳೆದು ಅತ ಮುಂದೆ ಸಿದ್ಧಾಂತಗಳಿಗಿಂತ ಕಾರ್ಯಶೀಲತೆಯ ಕಡೆಗೆ ಹೆಚ್ಚು ಗಮನ ಕೊಡುವ ಅಧಿಕಾರಿಯಾದ.

1803ರಲ್ಲಿ ಮದರಾಸು ಅಧಿಪತ್ಯದ ಗವರ್ನರ್ ಜನರಲ್ ಆಗಿ ಬೆಂಟಿಂಕ್ ಭಾರತಕ್ಕೆ ಬಂದ. ಆದರೆ 1806ರ ವೆಲ್ಲೂರು ದಂಗೆಗೆ ಇವನೇ ಹೊಣೆ ಎಂದು. ಮೂರು ವರ್ಷ ಇಂಗ್ಲೆಂಡಿಗೆ ವಾಪಸು ಕರೆಸಿಕೊಳ್ಳಲಾಯಿತು. ಮತ್ತೆ 1828ರಲ್ಲಿ ಬಂಗಾಳದ ಗವರ್ನರ್ ಜನರಲ್ ಆಗಿ ಭಾರತಕ್ಕೆ ಹಿಂದಿರುಗಿದ.

ಭಾರತದಲ್ಲಿ ಸಂಪ್ರದಾಯವಾದಿಗಳ ಕಟು ಟೀಕೆ ವಿರೋಧಗಳನ್ನು ಎದುರಿಸಿ. 1829ರಲ್ಲಿ. ಬೆಂಟಿಂಕ್ 'ಸತಿ' ಪದ್ಧತಿಯನ್ನು ಶಾಸನ ಬಾಹಿರಗೊಳಿಸಿದ. ಕಾಳಿ ಆರಾಧಕರು ಮನುಷ್ಯ ಬಲಿ ಕೊಡುವ ಪದ್ಧತಿಯನ್ನೂ ಬೆಂಟಿಂಕ್ ನಿಷೇಧಿಸಿದ.

ಬೆಂಟಿಂಕ್ ನ್ಯಾಯಾಂಗ ಕ್ಷೇತ್ರದಲ್ಲಿ ಭಾರತೀಯರಿಗೆ ಅಧಿಕಾರ ಸಿಗುವಂತೆ ಮಾಡಿದ ವ್ಯವಸ್ಥೆ ಮಹತ್ವದ್ದು. ಇವನ್ನು ಸಾಧಿಸಲು ಪಾಶ್ಚಾತ್ಯ ವಿಜ್ಞಾನ ಸಾಹಿತ್ಯಗಳ ಅಧ್ಯಯನ ಭಾರತೀಯರಿಗೆ ಅಗತ್ಯ ಎಂದು ತಿಳಿದ ಬೆಂಟಿಂಕ್. ಭಾರತದಲ್ಲಿ ಇಂಗ್ಲಿಷ್ ಪ್ರಚಾರಕ್ಕೆ ಬಲವಾದ ಅಡಿಪಾಯ ಹಾಕಿದ. ಇದಕ್ಕೆ ಮೆಕಾಲೆ. ರಾಜಾ ರಾಮಮೋಹನ ರಾಯ್ ಅಂಥವರ ಬೆಂಬಲವೂ ಆತನಿಗಿತ್ತು.

1835ರಲ್ಲಿ ಬೆಂಟಿಂಕ್ ನಿವೃತ್ತನಾದ. ಈ ವೇಳೆಗೆ ಅವನ ಹೆಚ್ಚಿನ ಉದ್ದೇಶಗಳು ಈಡೇರಿದವು. 1839 ಜೂನ್ 17ರಂದು ಪ್ಯಾರಿಸಿನಲ್ಲಿ ನಿಧನನಾದ. ಬ್ರಿಟಿಷ್ ಅಧಿಕಾರಿಯಾಗಿ ಭಾರತವನ್ನು ಆಳಲು ಬಂದ ಬೆಂಟಿಂಕ್ ಭಾರತದ ಹಿತದೃಷ್ಟಿಯಿಂದ ಅಪಾರ ಸೇವೆ ಸಲ್ಲಿಸಿ ಕೀರ್ತಿ ಪಡೆದ.

ನೋಡಿ : ರಾಜಾ ರಾಮಮೋಹನರಾಯ್

ವಿ. ವಿ. ಗಿರಿ

ಭಾರತದ ನಾಲ್ಕನೆಯ ರಾಷ್ಟ್ರಪತಿ. ವರಾಹ ವೆಂಕಟ ಗಿರಿ.

1894 ಆಗಸ್ಟ್ 10ರಂದು ಬರ್ಹಾಂಪುರದಲ್ಲಿ ಜನಿಸಿದರು. ವಿದ್ಯಾಭ್ಯಾಸಕ್ಕಾಗಿ ಇಂಗ್ಲೆಂಡಿಗೆ ಹೋದರು. ಐರ್ಲೆಂಡಿನಲ್ಲಿ ಬಾರ್-ಅಟ್-ಲಾ ಪದವಿ ಪಡೆದರು. ಇಂಗ್ಲೆಂಡಿನಲ್ಲಿದ್ದಾಗಲೇ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗಿಯಾದರು. ಬ್ರಿಟಿಷ್ ಸರಕಾರ 1916ರಲ್ಲಿ ಅವರನ್ನು ಐರ್ಲೆಂಡಿನಿಂದ ಹೊರಹಾಕಿತು.



ರಾಷ್ಟ್ರಪತಿ : ವರಾಹ ವೆಂಕಟ ಗಿರಿ

ಭಾರತಕ್ಕೆ ಹಿಂದಿರುಗಿ ಸ್ವಲ್ಪ ಕಾಲ ವಕೀಲರಾಗಿದ್ದರು. ಕಾರ್ಮಿಕ ಆಂದೋಲನದಲ್ಲಿ ಮಹತ್ವದ ಪಾತ್ರ ವಹಿಸಿದರು. ಅಖಿಲ ಭಾರತೀಯ ಕಾರ್ಮಿಕ ಸಂಘಕ್ಕೆ ಎರಡು ಬಾರಿ ಅಧ್ಯಕ್ಷರಾಗಿದ್ದರು. ಮದರಾಸು ಮತ್ತು ಕೇಂದ್ರ ಸರಕಾರದ ಕಾರ್ಮಿಕ ಮಂತ್ರಿಯಾದರು. 1927ರಲ್ಲಿ ಜಿನೀವಾದಲ್ಲಿ ನಡೆದ ಅಂತರರಾಷ್ಟ್ರೀಯ ಕಾರ್ಮಿಕ ಸಮ್ಮೇಳನದಲ್ಲಿ ಭಾರತೀಯ ಕಾರ್ಮಿಕರ ಪ್ರತಿನಿಧಿಯಾಗಿದ್ದರು.

ಸಿಂಹಳದಲ್ಲಿ ಭಾರತದ ಹೈಕಮಿಷನರ್, ಲೋಕಸಭಾಸದಸ್ಯ, ಉದ್ಯೋಗ ಮತ್ತು ಸಹಕಾರ ಮಂತ್ರಿ ಮೊದಲಾದ ಸ್ಥಾನಗಳಲ್ಲಿ ಕೆಲಸ ಮಾಡಿದರು. ಕೇರಳ, ಉತ್ತರ ಪ್ರದೇಶ, ಮೈಸೂರು (ಈಗ ಕರ್ನಾಟಕ) ರಾಜ್ಯಗಳ ರಾಜ್ಯಪಾಲರಾಗಿದ್ದರು.

1967-69 ಅವಧಿಯಲ್ಲಿ ಅವರು ಉಪರಾಷ್ಟ್ರಪತಿಯಾಗಿದ್ದರು. ರಾಷ್ಟ್ರಪತಿ ಡಾ. ಜಾಕಿರ್ ಹುಸೇನರ ನಿಧನಾನಂತರ. 1969ರಲ್ಲಿ ಕೆಲವು ತಿಂಗಳು ಹಂಗಾಮಿ ರಾಷ್ಟ್ರಪತಿಯಾಗಿದ್ದು. 1969 ಆಗಸ್ಟ್ 24ರಂದು ರಾಷ್ಟ್ರಪತಿಯಾದರು.

ಗಿರಿಯವರು ಮೈಸೂರು ರಾಜ್ಯದ ರಾಜ್ಯಪಾಲರಾಗಿದ್ದಾಗ (1965–67) ಬೆಂಗಳೂರು ನಗರದ ನಿರ್ಮಲೀಕರಣವನ್ನು ಆರಂಭಿಸಿದರು. ಸ್ವತಃ ಪೊರಕೆ ಹಿಡಿದು ಗುಡಿಸಿ ಮೇಲ್ಪಂಕ್ತಿ ಹಾಕಿಕೊಟ್ಟರು.

'ಇಂಡಸ್ಟ್ರಿಯಲ್ ರಿಲೇಷನ್ಸ್' (ಕೈಗಾರಿಕಾ ಸಂಬಂಧಗಳು), 'ಲೇಬರ್ ಪ್ರಾಬ್ಲಮ್ಸ್ ಇನ್ ಇಂಡಿಯನ್ ಇಂಡಸ್ಟ್ರಿ' (ಭಾರತೀಯ ಕೈಗಾರಿಕೋದ್ಯಮದಲ್ಲಿ ಕಾರ್ಮಿಕ ಸಮಸ್ಯೆಗಳು) ಮೊದಲಾದ ಪುಸ್ತಕಗಳನ್ನು ಇವರು ಬರೆದಿದ್ದಾರೆ.

ವಿವೇಕಾನಂದ

ಕೋಣೆಯಲ್ಲಿ ಕೆಲವು ಬಾಲಕರು ಧ್ಯಾನಮಾಡಲೆಂದು ಕುಳಿತರು. ಅಲ್ಲಿ ನಾಗರಹಾವು ಕಾಣಿಸಿಕೊಂಡಿತು. ಧ್ಯಾನಸ್ಥರಾಗಿದ್ದ ಹುಡುಗರೆಲ್ಲ ಕಿರಿಚಾಡುತ್ತ ಹೊರಗೋಡಿದರು. ಗಲಾಟೆ ಮಧ್ಯದಲ್ಲೂ ಒಬ್ಬ ಬಾಲಕನ ಧ್ಯಾನ ಭಗ್ನವಾಗಿರಲಿಲ್ಲ. ಅವನೇ ನರೇಂದ್ರನಾಥ ದತ್ತ — ಸ್ವಾಮಿ ವಿವೇಕಾನಂದರೆಂದು ಆಚಂದ್ರಾರ್ಕ ಕೀರ್ತಿ ಗಳಿಸಿದ ವಿಭೂತಿ ಪುರುಷ.

ಬಾಲಕ ನರೇಂದ್ರನ ಕೈನೋಡಿದ ಒಬ್ಬ ಈತ ಸನ್ಯಾಸಿಯಾಗುವನೆಂದು ಭವಿಷ್ಯ ನುಡಿದ. ನರೇಂದ್ರ [illegible] ಮಗ್ನನಾಗಿರುತ್ತಿದ್ದ [illegible] ಹರಿಯಿತು.

ನರೇಂದ್ರ ಕಾಲೇಜು ವಿದ್ಯಾರ್ಥಿಯಾಗಿದ್ದಾಗ ಕೇಶವ ಚಂದ್ರ ಸೇನರ ಪ್ರಭಾವ ವಿಶೇಷವಾಗಿತ್ತು. ನರೇಂದ್ರನೂ ಬ್ರಹ್ಮ



[illegible]
ವಿವೇಕಾನಂದ ಶಿಲೆ

ಸಮಾಜಕ್ಕೆ ಹೋಗತೊಡಗಿದ. ಕುತೂಹಲಭರಿತವಾದ ಅವನ ಮನಸ್ಸಿಗೆ ತೃಪ್ತಿ ದೊರಕಿರಲಿಲ್ಲ. "ದೇವರಿರುವನೆ ?" ಎಂಬ ಅವನ ಮನ ಕೊರೆಯುತ್ತಿದ್ದ ಪ್ರಶ್ನೆಗೆ ಸಮಾಧಾನಕರ ಉತ್ತರ ಕೊಡುವವರಾರೂ ಇರಲಿಲ್ಲ. ದಕ್ಷಿಣೇಶ್ವರದಲ್ಲಿದ್ದ ರಾಮಕೃಷ್ಣ ಪರಮಹಂಸರಲ್ಲಿ ತನ್ನ ಸಂದೇಹವನ್ನು ಪರಿಹರಿಸಿಕೊಳ್ಳಲು ಹೋದ. ಅವರ ಅಚ್ಚುಮೆಚ್ಚಿನ ಶಿಷ್ಯನಾದ. ಅವರಿಬ್ಬರದು ಪ್ರಪಂಚದಲ್ಲೇ ಅಪೂರ್ವವಾದ ಗುರುಶಿಷ್ಯ ಜೋಡಿ. ಶಿಷ್ಯನನ್ನು ಗುರು ಪರೀಕ್ಷಿಸಿದಂತೆ ಶಿಷ್ಯ ಗುರುವನ್ನೂ ಪರೀಕ್ಷಿಸಿದ. ಧ್ಯಾನ ಸಿದ್ಧನಾಗಿದ್ದ ನರೇಂದ್ರನಿಗೆ ರಾಮಕೃಷ್ಣರು ಉಪದೇಶಗಳನ್ನಿತ್ತರು.

1886ರಲ್ಲಿ ರಾಮಕೃಷ್ಣರು ನಿರ್ವಾಣ ಹೊಂದಿದಾಗ, ತಂದೆಯನ್ನು ಕಳೆದುಕೊಂಡಿದ್ದ ನರೇಂದ್ರ ಮನೆಯವರ ಯೋಗಕ್ಷೇಮ ಭಾರವನ್ನು ಜಗನ್ಮಾತೆಗೆ ಒಪ್ಪಿಸಿದ: ತಾನು ಸನ್ಯಾಸ ಸ್ವೀಕರಿಸಿದ. ಹೀಗೆ ನರೇಂದ್ರರು ವಿವೇಕಾನಂದರಾದರು. ತಮ್ಮ ಸಹಸನ್ಯಾಸಿಗಳೊಡಗೂಡಿ ರಾಮಕೃಷ್ಣ ಮಠವನ್ನು ಸ್ಥಾಪಿಸಿದರು.

ಅವರು ತೀರ್ಥಯಾತ್ರೆ ಕೈಗೊಂಡರು. ಆಗ ಮೈಸೂರಿಗೂ ಭೇಟಿ ಇತ್ತಿದ್ದರು. ಇಲ್ಲಿಂದ ಕನ್ಯಾಕುಮಾರಿ ವರೆಗೂ ಅವರು ಸಂಚಾರ ಮುಂದುವರಿಸಿದರು. ಸಮುದ್ರವನ್ನು ಈಜಿಕೊಂಡು ಹೋಗಿ ಕನ್ಯಾಕುಮಾರಿಯಲ್ಲಿ ಬಂಡೆಯೊಂದರ ಮೇಲೆ ಕುಳಿತು. ತಾಯ್ನಾಡಿನ ದುರ್ದೆಶೆ ಬಗೆಗೆ ಚಿಂತಿಸಿದರು.

ಮುಂದೆ ಆ ಬಂಡೆಗೆ 'ವಿವೇಕಾನಂದ ಬಂಡೆ' ಎಂದು ಹೆಸರು ಬಂತು.

ಷಿಕಾಗೋ ವಿಶ್ವಧರ್ಮ ಸಮ್ಮೇಳನಕ್ಕೆ ಹೋಗಬೇಕೆಂದು ವಿವೇಕಾನಂದರು 1893 ಮೇ 31ರಂದು ಭಾರತದಿಂದ ಹೊರಟರು. ಬೃಹತ್ ಸಭೆಯಲ್ಲಿ ಗುರುದೇವನನ್ನು ಸ್ಮರಿಸಿ ಭಾರತದ ಭವ್ಯ ಧರ್ಮ ಪರಂಪರೆಯ ಇತಿಹಾಸವನ್ನು ಚಿತ್ರಿಸಿದರು. ಒಂದೇ ದಿನದಲ್ಲಿ ವಿವೇಕಾನಂದರು ಜಗದ್ವಂದ್ಯ ವ್ಯಕ್ತಿಯಾದರು. ಅಮೆರಿಕ, ಇಂಗ್ಲೆಂಡುಗಳಲ್ಲಿ ಸುಮಾರು 4 ವರ್ಷ ಕಾಲ ಸಂಚರಿಸಿ ಭಾರತದ ಸನಾತನ ಧರ್ಮಪತಾಕೆಯನ್ನು ಎತ್ತಿಹಿಡಿದರು. ಕೆಲವು ಕಡೆ ರಾಮಕೃಷ್ಣ ಮಠಗಳನ್ನು ಸ್ಥಾಪಿಸಿದ್ದಲ್ಲದೆ, ಗುರುವಿನ ಸಂದೇಶವನ್ನು ಅಲ್ಲಿ ಹರಡಲು ಅನುಕೂಲವಾಗುವಂತೆ ಕೆಲವರಿಗೆ ತರಬೇತಿಯನ್ನೂ ಕೊಟ್ಟರು.

1897 ಜನವರಿ 15ರಂದು ವಿವೇಕಾನಂದರು ಭಾರತಕ್ಕೆ ಹಿಂದಿರುಗಿದಾಗ ಭವ್ಯ ಸ್ವಾಗತ ದೊರಕಿತು. ಅಲ್ಲಲ್ಲಿ ರಾಮಕೃಷ್ಣ ಸಂಘಗಳನ್ನು ಸ್ಥಾಪಿಸಿದರು. ಸ್ತ್ರೀ ವಿದ್ಯಾಭ್ಯಾಸ. ಆತ್ಮಶ್ರೀ ಬೆಳೆಸಿಕೊಳ್ಳುವುದು. ಪರದೇಶಗಳೊಡನೆ ಸಂಪರ್ಕ ಬೆಳೆಸುವುದು. ಸಹಕಾರೀ ಮನೋಭಾವ ಇರಿಸಿಕೊಳ್ಳುವುದು. ರಾಷ್ಟ್ರದ ಆರ್ಥಿಕ ಸಂಪತ್ತು ಹೆಚ್ಚಿಸಿಕೊಳ್ಳುವುದು—ಇವುಗಳತ್ತ ಗಮನ ನೀಡಬೇಕೆಂದು ವಿವೇಕಾನಂದರು ಜನತೆಗೆ ಕರೆ ಕೊಟ್ಟರು.

ತತ್ತ್ವಜ್ಞಾನಿ. ಭಗವದ್ಭಕ್ತ. ಧ್ಯಾನಸಿದ್ಧ. ಕರ್ಮಯೋಗಿ ಹಾಗೂ ದೇಶಭಕ್ತ ವಿವೇಕಾನಂದರು 1902 ಜುಲೈ 4ರಂದು ಧ್ಯಾನಮಗ್ನರಾಗಿದ್ದಾಗಲೇ ಮರಣಹೊಂದಿದರು.

ನೋಡಿ : ರಾಮಕೃಷ್ಣಮಠ ; ಶಾರದಾಮಣಿದೇವಿ
ರಾಮಕೃಷ್ಣ ಪರಮಹಂಸ : ವಿವೇಕಾನಂದ—ಸಂಪುಟ ೧

ವಿಶ್ವಕರ್ಮ

ಪುರಾಣವ್ಯಕ್ತಿ, ವಿಶ್ವಕರ್ಮ.

ಸುಂದ, ಉಪಸುಂದ —ರಾಕ್ಷಸ ಸಹೋದರರು. ಬ್ರಹ್ಮನನ್ನು ತಪಸ್ಸಿನಿಂದ ಮೆಚ್ಚಿಸಿ ತಮ್ಮೊಂದಲ್ಲದೆ ಬೇರೆ ಯಾರಿಂದಲೂ ಮರಣ ಉಂಟಾಗದಂತೆ ವರ ಪಡೆದರು. ಇಬ್ಬರೂ ಮತ್ತರಾಗಿ ದೇವತೆಗಳನ್ನು ಹಿಂಸಿಸಲಾರಂಭಿಸಿದರು.

ಇವರ ಹತ್ಯೆಗಾಗಿ ಸುಂದರಿ ತಿಲೋತ್ತಮೆಯ ಸೃಷ್ಟಿಯಾಯಿತು. ಇಬ್ಬರಿಗೂ ತಿಲೋತ್ತಮೆಯನ್ನು ಪಡೆಯುವ ತವಕ. ಇಬ್ಬರಲ್ಲಿ ಹೆಚ್ಚು ಶೂರನಾದವನನ್ನು ಮದುವೆಯಾಗಲು ಆಕೆ ಸಮ್ಮತಿಸಿದಳು. ಅಣ್ಣ ತಮ್ಮಂದಿರು ಹೊಡೆದಾಡಿ ಮೃತರಾದರು. ಕಂಟಕ ನಿವೃತ್ತಿಯಾಯಿತು.

ತಿಲೋತ್ತಮೆಯನ್ನು ಸೃಷ್ಟಿಸಿದವನು ವಿಶ್ವಕರ್ಮ.

ವಿಶ್ವಕರ್ಮ ಪ್ರಭಾಸ ಎಂಬ ವಸುವಿನ (ಒಬ್ಬ ದೇವತೆ) ಮಗ. ಈತನ ಇನ್ನೊಂದು ಹೆಸರು ತ್ವಷ್ಟೃ. ಋಗ್ವೇದದಲ್ಲಿ ವಿಶ್ವಕರ್ಮ ಎಂದರೆ ಎಲ್ಲವನ್ನೂ ಸೃಷ್ಟಿಸುವ ಶಕ್ತಿಯ ಮೂರ್ತಸ್ವರೂಪ ಎಂದಿದೆ. ಆತನೇ ವಿಶ್ವದ ವಾಸ್ತುಶಿಲ್ಪಿ : ದೇವತೆಗಳ ಬಡಗಿ ; ಅವರ ಆಯುಧಗಳ ಕುಶಲಕರ್ಮಿ ; ಸಕಲ ಕಲೆಗಳಲ್ಲಿ ನಿಷ್ಣಾತ: ದಿವ್ಯರಥ. ದಿವ್ಯ ಆಭರಣಗಳ ನಿರ್ಮಾತೃ.

ಜಗನ್ನಾಥನ ವಿಗ್ರಹ ನಿರ್ಮಿಸಿದ. ತ್ರಿಪುರಾಸುರರನ್ನು ಸಂಹಾರ ಮಾಡಲು ಹೊರಟ ಶಿವನಿಗೆ ಉತ್ತಮ ರಥ ನಿರ್ಮಿಸಿಕೊಟ್ಟ. ಲಂಕಾದ್ವೀಪಕ್ಕೆ ಆಕಾರವಿತ್ತ. ಪಾಂಡವರು ಇಂದ್ರಪ್ರಸ್ಥವನ್ನು ರಾಜಧಾನಿ ಮಾಡಿಕೊಂಡಾಗ ಅದನ್ನು ರಚಿಸಿಕೊಟ್ಟ.

ವಿರೋಚನಾ. ರಚನಾ. ವಿಶ್ವಕರ್ಮನ ಪತ್ನಿಯರು. ಈತನ ಮಗಳು ಸಂಜ್ಞಾದೇವಿ ಸೂರ್ಯನ ಮಡದಿ.

ವಿಧಾತೃ. ಕಾರು. ತಕ್ಷಕ ಮತ್ತು ಸುಧನ್ವ —ವಿಶ್ವಕರ್ಮನ ಇತರ ಹೆಸರುಗಳು.

ವಿಶ್ವನಾಥ ಸತ್ಯನಾರಾಯಣ

ಹನ್ನೆರಡನೆಯ ವಯಸ್ಸಿಗೇ ಪದ್ಯ ರಚನೆಗೆ ತೊಡಗಿ ಕಾವ್ಯ, ಕಾದಂಬರಿ. ಕಥೆ, ನಾಟಕ. ವಿಮರ್ಶೆ ಮೊದಲಾದ ವೈವಿಧ್ಯಮಯ ಸಾಹಿತ್ಯ ಸೃಷ್ಟಿಸಿದವರು ವಿಶ್ವನಾಥ ಸತ್ಯನಾರಾಯಣ. ವಿಪುಲವಾಗಿ ಹೊರಬಂದಿರುವ ಇವರ ಕೃತಿಗಳು ಗುಣ, ಗಾತ್ರಗಳೆರಡರಲ್ಲೂ ಮಾನ್ಯ.



ಕವಿ ಸಮ್ರಾಟ :
ವಿಶ್ವನಾಥ ಸತ್ಯನಾರಾಯಣ

ಜನನ 1895 ಅಕ್ಟೋಬರ್ 6ರಲ್ಲಿ. ಕೃಷ್ಣಾ ಜಿಲ್ಲೆಯ ನಂದಮೂರು ಗ್ರಾಮದಲ್ಲಿ. ತಂದೆ ಶೋಭನಾದ್ರಿ. ತಾಯಿ ಶೇಷಮಾಂಬ. ಮಾಧ್ಯಮಿಕ ವಿದ್ಯಾಭ್ಯಾಸ ಮುಗಿಯುವ ವೇಳೆಗೆ ಮಹಾಕವಿ ಚೆಲ್ಲಪಿಳ್ಳ ವೆಂಕಟ

ಶಾಸ್ತ್ರಿಯವರ ಶಿಷ್ಯರಾಗುವ ಸದವಕಾಶ ಇವರಿಗೆ ದೊರೆಯಿತು. ಶಾಸ್ತ್ರಿಯವರಿಂದ ಪ್ರಭಾವಿತರಾದರೂ ಕಲ್ಪನೆ, ಪ್ರತಿಭೆ, ರಚನಾ ಕೌಶಲಗಳನ್ನು ಸ್ವಂತವಾಗಿ ಬೆಳೆಸಿಕೊಂಡರು. 1929ರಲ್ಲಿ ಎಂ. ಎ. ಪದವಿ ಪಡೆದು ವಿವಿಧ ಕಾಲೇಜುಗಳಲ್ಲಿ ಅಧ್ಯಾಪಕರಾಗಿ ಕೆಲಸಮಾಡಿ, ಅನಂತರ ಕರೀಂ ನಗರದ ಕಾಲೇಜಿನ ಪ್ರಿನ್ಸಿಪಾಲರಾದರು.

'ವೇಯಿ ಪಡಗಲು' (ಸಾವಿರ ಹೆಡೆಗಳು) ಕಾದಂಬರಿಗೆ ಆಂಧ್ರ ವಿಶ್ವವಿದ್ಯಾನಿಲಯದ ಪುರಸ್ಕಾರ ದೊರೆಯಿತು. 'ವಿಶ್ವನಾಥ ಮಧ್ಯಾಕ್ಕರಲು' ಎಂಬ ಶತಕ ಸಂಕಲನಕ್ಕೆ 1962ರಲ್ಲಿ ಸಾಹಿತ್ಯ ಅಕಾದೆಮಿ ಪ್ರಶಸ್ತಿ ಲಭಿಸಿತು. 'ರಾಮಾಯಣ ಕಲ್ಪವೃಕ್ಷಮು' ಮಹಾಕಾವ್ಯ 1970ರಲ್ಲಿ ಭಾರತೀಯ ಜ್ಞಾನಪೀಠ ಪಾರಿತೋಷಿಕ ಪಡೆಯಿತು.

ಇವರು ಸಂಸ್ಕೃತದಲ್ಲೂ ಕಾವ್ಯ ರಚನೆ ಮಾಡಿದ್ದಾರೆ.

ವಿಶ್ವನಾಥ ಸತ್ಯನಾರಾಯಣ ಅವರಿಗೆ ಆಂಧ್ರ ವಿಶ್ವವಿದ್ಯಾನಿಲಯದ 'ಕಲಾಪ್ರಪೂರ್ಣ' ಪ್ರಶಸ್ತಿ, ಕೇಂದ್ರ ಸರಕಾರದ ಪದ್ಮಭೂಷಣ ಪ್ರಶಸ್ತಿ ದೊರೆತಿವೆ. ಆಂಧ್ರ ಪ್ರದೇಶ ಸರಕಾರ ಇವರನ್ನು 'ರಾಷ್ಟ್ರಕವಿ' ಎಂದು ಗೌರವಿಸಿದೆ. ಇವರು 'ಕವಿ ಸಮ್ರಾಟ' ಎಂದು ಖ್ಯಾತರಾಗಿದ್ದಾರೆ.

ವಿಶ್ವನಾಥ ಸತ್ಯನಾರಾಯಣ ಅವರು ಆಂಧ್ರ ಮತ್ತು ಕೇಂದ್ರ ಸಾಹಿತ್ಯ ಅಕಾದೆಮಿಗಳ ಸದಸ್ಯರು.

ವಿಶ್ವಭಾರತಿ

ಭಾರತದ ವಿವಿಧ ಭಾಗಗಳಿಂದಲೂ ವಿದೇಶಗಳಿಂದಲೂ ವಿದ್ಯಾರ್ಥಿಗಳನ್ನು ಆಕರ್ಷಿಸುತ್ತಿರುವ ವಿಶ್ವವಿದ್ಯಾನಿಲಯ, ವಿಶ್ವಭಾರತಿ. ಪಶ್ಚಿಮ ಬಂಗಾಳದ ಬೀರಭೂಮಿ ಜಿಲ್ಲೆಯ ಶಾಂತಿನಿಕೇತನದಲ್ಲಿದೆ. ಇದನ್ನು 1921ರಲ್ಲಿ ರವೀಂದ್ರನಾಥ ಠಾಕೂರ್ ಸ್ಥಾಪಿಸಿದರು.

ಇದು ಏಕಘಟಕವಾಗಿರುವ ವಸತಿ ವಿದ್ಯಾಕೇಂದ್ರ. ಪಾಠಭವನ, ಶಿಕ್ಷಾ ಭವನ, ವಿದ್ಯಾಭವನ, ವಿನಯಭವನ, ಕಲಾಭವನ, ಸಂಗೀತಭವನ, ರವೀಂದ್ರ ಭವನ, ಗ್ರಾಮೀಣ ಶಿಕ್ಷಾ ಸದನಗಳಲ್ಲಿ ಶಾಲೆಯ ಹಂತದಿಂದ ಸ್ನಾತಕೋತ್ತರ ಹಂತದ ವರೆಗೆ ಶಿಕ್ಷಣ ದೊರೆಯುತ್ತದೆ. ಚೀನಾಭವನ, ಭಾರತ-ಟಿಬೆಟ್ ಸಂಸ್ಥೆ, ಹಿಂದೀ ಭವನಗಳಲ್ಲಿ ಆಯಾ ಭಾಷೆಯಲ್ಲಿ ಶಿಕ್ಷಣ ಹಾಗೂ ಸಂಶೋಧನೆಗೆ ವ್ಯವಸ್ಥೆ ಇದೆ.

ಗ್ರಾಮೀಣ ಪುನರ್ರಚನೆ ಮತ್ತು ಪುಸ್ತಕ ಪ್ರಕಾಶನ ವಿಭಾಗಗಳಿವೆ. ಸಂಸ್ಕೃತ, ಬಂಗಾಳೀ, ಹಿಂದೀ, ಒಡಿಯಾ, ಚೀನೀ, ಜಪಾನೀ, ಟಿಬೆಟ್, ಫ್ರೆಂಚ್, ಜರ್ಮನ್ ಮತ್ತು ಇಂಗ್ಲಿಷ್ ಭಾಷಾ ಶಿಕ್ಷಣ ವ್ಯವಸ್ಥೆಯಿದೆ. ಶಿಲ್ಪ ಸದನದಲ್ಲಿ ನೆಯ್ಗೆ, ಮರಗೆಲಸಗಳಂಥ ಗೃಹಕೈಗಾರಿಕೆಯಲ್ಲಿ ತರಬೇತಿ ಕೊಡುತ್ತಾರೆ. ಮೂಲಶಿಕ್ಷಣದ ಉಪಾಧ್ಯಾಯರಿಗೆ ಪಶ್ಚಿಮ ಬಂಗಾಳ ಸರಕಾರದ ವತಿಯಿಂದ ಒಂದು ವರ್ಷದ ಅವಧಿಯ ತರಬೇತಿ ಕೊಡುವ ವ್ಯವಸ್ಥೆ ಇದೆ. ಗ್ರಾಮ ಸೇವಿಕೆಯರಿಗೆ ಒಂದು ವರ್ಷದ ಗೃಹವಿಜ್ಞಾನ ತರಬೇತಿ ಕೊಡುವ ಕೇಂದ್ರವಿದೆ. ಸಮಾಜಕಲ್ಯಾಣ ಮಂಡಲಿಯ ವತಿಯಿಂದ ಕುಟುಂಬ ಮತ್ತು ಮಕ್ಕಳ ಕಲ್ಯಾಣದ ತರಬೇತಿ ಕೇಂದ್ರ ನಡೆಯುತ್ತದೆ. ಕೃಷಿ ಅರ್ಥಶಾಸ್ತ್ರದಲ್ಲೂ ಸಂಶೋಧನೆ ಆಗುತ್ತದೆ.

ವಿಶ್ವವಿದ್ಯಾನಿಲಯ

ಸ್ವತಂತ್ರ ಭಾರತದಲ್ಲಿ 70ಕ್ಕೂ ಹೆಚ್ಚು ವಿಶ್ವವಿದ್ಯಾನಿಲಯಗಳಿವೆ. ಉತ್ತರ ಪ್ರದೇಶದಲ್ಲೇ 12 ವಿಶ್ವವಿದ್ಯಾನಿಲಯಗಳಿವೆ. ಈ ಎಲ್ಲ ವಿಶ್ವವಿದ್ಯಾನಿಲಯಗಳಿಗೆ ಸೇರಿದಂತೆ [illegible] ಸುಮಾರು 20 ಲಕ್ಷ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ.

[illegible] ಗಳನ್ನು [illegible] ವಲ್ಲಿ ಪ್ರಾಚೀನ ಭಾರತದಲ್ಲಿ ತಕ್ಷಶಿಲೆ, ನಾಲಂದಾ, ವಲಭಿ, ವಿಕ್ರಮಶಿಲಾ ಮುಂತಾದವು ಪ್ರಮುಖ ವಿಶ್ವವಿದ್ಯಾನಿಲಯಗಳಾಗಿದ್ದುವು. ದೇಶದ ಬೇರೆ ಬೇರೆ ಕಡೆಗಳಲ್ಲಿ [illegible] (ನವದ್ವೀಪ), ಕಂಚಿ ಹಾಗೂ ಕರ್ನಾಟಕದ [illegible] ಬಳ್ಳಿಗಾವೆ, ಕೋಟೇಶ್ವರ, [illegible] ವಿದ್ಯಾಕೇಂದ್ರಗಳಾಗಿ ಮೆರೆದುವು. ಮಹಮ್ಮದೀಯರ ಕಾಲದಲ್ಲಿ ಸ್ಥಾಪಿಸಲ್ಪಟ್ಟ ಮದರಸಾಗಳಲ್ಲಿ ಉನ್ನತ ಶಿಕ್ಷಣ ದೊರೆಯುತ್ತಿದ್ದಿತು. ಇವು ಮುಸಲ್ಮಾನ ಶಿಕ್ಷಣ ಕೇಂದ್ರಗಳಾಗಿ ಬೆಳೆದುವು. ಆಗ್ರಾ, ದೆಹಲಿ, ಜೌನ್‌ಪುರ, ಬೀದರ್‌ಗಳಲ್ಲಿ ಪ್ರಮುಖ ಮುಸಲ್ಮಾನ ವಿದ್ಯಾಕೇಂದ್ರಗಳಿದ್ದುವು. ಬೀದರಿನಲ್ಲಿ ಮಹಮ್ಮದ್ ಗವಾನ್ ಸ್ಥಾಪಿಸಿದ ಮದರಸಾ ಸುಪ್ರಸಿದ್ಧ ಸಂಸ್ಥೆಯಾಗಿತ್ತು.

18ನೆಯ ಶತಮಾನದ ಉತ್ತರಾರ್ಧದಲ್ಲಿ ಆಧುನಿಕ ಕಾಲೇಜುಗಳನ್ನು ಹೋಲುವ ಸಂಸ್ಥೆಗಳು ಭಾರತದಲ್ಲಿ ತಲೆಯೆತ್ತಿದುವು. ವಾರಾಣಸಿಯ ಸಂಸ್ಕೃತ ಕಾಲೇಜು ಆರಂಭವಾದದ್ದೂ ಇದೇ ಕಾಲದಲ್ಲಿ. 1857ರಲ್ಲಿ ಕಲ್ಕತ್ತಾ, ಮುಂಬಯಿ ಹಾಗೂ ಮದರಾಸುಗಳಲ್ಲಿ ವಿಶ್ವವಿದ್ಯಾನಿಲಯಗಳ ಸ್ಥಾಪನೆಯಾಯಿತು. ಪ್ರೌಢ ತರಗತಿ ಪರೀಕ್ಷೆ ನಡೆಸುವ ಜವಾಬ್ದಾರಿಯನ್ನು ಅವುಗಳಿಗೆ ವಹಿಸಲಾಯಿತು. ಅನಂತರ ಅಸ್ತಿತ್ವಕ್ಕೆ ಬಂದ ವಿಶ್ವವಿದ್ಯಾನಿಲಯಗಳು ಪಂಜಾಬ್ ಹಾಗೂ ಅಲಹಾಬಾದಿನವು. ಶಿಕ್ಷಣ ಸುಧಾರಣೆಗಾಗಿ 1902ರಲ್ಲಿ ಭಾರತೀಯ ವಿಶ್ವವಿದ್ಯಾನಿಲಯಗಳ ಆಯೋಗವನ್ನು ಲಾರ್ಡ್ ಕರ್ಜನ್ ನೇಮಿಸಿದ. ಇದರ ಶಿಫಾರಸುಗಳಿಂದಾಗಿ 1904ರಲ್ಲಿ ಭಾರತೀಯ ವಿಶ್ವವಿದ್ಯಾನಿಲಯಗಳ ಶಾಸನ ಜಾರಿಗೆ ಬಂದಿತು. ಸಹಾಯಧನ ವ್ಯವಸ್ಥೆಯೂ ಆರಂಭವಾಯಿತು.

1905ರಲ್ಲಿ ಬಂಗಾಳದ ವಿಭಜನೆಯಾದ ಮೇಲೆ ಸ್ವದೇಶೀ ಚಳವಳಿ ಶಿಕ್ಷಣದ ಮೇಲೂ ಪ್ರಭಾವ ಬೀರಿತು. ಕಲ್ಕತ್ತಾ ರಾಷ್ಟ್ರೀಯ ಕಾಲೇಜು ಪ್ರಾರಂಭವಾದದ್ದು ಹೀಗೆ.

ಮುಂದೆ 1916ರಲ್ಲಿ ಬನಾರಸ್ ಹಿಂದೂ ವಿಶ್ವವಿದ್ಯಾಲಯ ಮತ್ತು ಮೈಸೂರು ವಿಶ್ವವಿದ್ಯಾನಿಲಯ ಸ್ಥಾಪಿತವಾದುವು. 'ಇಂಟರ್ ಯೂನಿವರ್ಸಿಟಿ ಬೋರ್ಡ್' ಮಂಡಲಿಯ ರಚನೆಯಾದಮೇಲೆ ದೆಹಲಿ, ನಾಗಪುರ, ಆಂಧ್ರ, ಆಗ್ರಾ ಮತ್ತು ಅಣ್ಣಾಮಲೈ ವಿಶ್ವವಿದ್ಯಾನಿಲಯಗಳು ರೂಪುಗೊಂಡುವು. ವಿಶ್ವವಿದ್ಯಾನಿಲಯಗಳ ಸಂಖ್ಯೆ ಕ್ರಮೇಣ ಬೆಳೆಯಿತು.

ಸರ್ವಪಲ್ಲಿ ರಾಧಾಕೃಷ್ಣನ್ ಅವರ ನೇತೃತ್ವದಲ್ಲಿ ರಚಿತವಾದ ವಿಶ್ವವಿದ್ಯಾನಿಲಯ ಶಿಕ್ಷಣ ಆಯೋಗ ಸಲ್ಲಿಸಿದ ವರದಿಯ ಮೇರೆಗೆ 1953ರಲ್ಲಿ ವಿಶ್ವವಿದ್ಯಾನಿಲಯ ಸಹಾಯಧನ ಆಯೋಗ (ಯೂನಿವರ್ಸಿಟಿ ಗ್ರ್ಯಾಂಟ್ಸ್ ಕಮಿಷನ್–ಯು.ಜಿ.ಸಿ.) ರಚಿತವಾಯಿತು. ಇದು ಭಾರತದ ವಿಶ್ವವಿದ್ಯಾನಿಲಯಗಳ ಯೋಗಕ್ಷೇಮವನ್ನು ನೋಡಿಕೊಳ್ಳುವ ಸಂಸ್ಥೆ.

ಭಾರತದಲ್ಲಿ ಏಳನೆಯದಾಗಿ ಹುಟ್ಟಿದ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಆಗಿನ ಅಳರಸರ ಉತ್ತೇಜನ ಅಪಾರವಾಗಿ ದೊರೆಯಿತು. ಇದರ ಕ್ಷೇತ್ರ ಮೈಸೂರು ರಾಜ್ಯಕ್ಕೆ ಸೀಮಿತವಾಗಿತ್ತು. [illegible]

ವಿಶ್ವಕೋಶದ ರಚನೆ ಮತ್ತಿತರ ಯೋಜನೆಗಳನ್ನು ಇದು ಕೈಗೊಂಡಿದೆ. ಶ್ರೇಷ್ಠ ಮಟ್ಟದ ಜಾನಪದ ವಸ್ತುಸಂಗ್ರಹಾಲಯ ಮೈಸೂರು ವಿಶ್ವವಿದ್ಯಾನಿಲಯದ ವಿಶಿಷ್ಟ ಸಾಧನೆ.

ಕರ್ನಾಟಕದ ಇತರ ವಿಶ್ವವಿದ್ಯಾನಿಲಯಗಳು : ಕರ್ನಾಟಕ ವಿಶ್ವವಿದ್ಯಾಲಯ, ಕೃಷಿ ವಿಶ್ವವಿದ್ಯಾಲಯ ಮತ್ತು ಬೆಂಗಳೂರು ವಿಶ್ವವಿದ್ಯಾನಿಲಯ.

ನೋಡಿ : ವಿಶ್ವವಿದ್ಯಾನಿಲಯ–ಸಂಪುಟ ೧

ವಿಶಾಖಪಟ್ಟಣ

ಭಾರತದ ಪೂರ್ವ ಕರಾವಳಿಯಲ್ಲಿರುವ ನೈಸರ್ಗಿಕ ಬಂದರು ವಿಶಾಖಪಟ್ಟಣ. ಇದು ಆಂಧ್ರ ಪ್ರದೇಶದಲ್ಲಿದೆ.

ವೆಂಗಿರಾಜರು, ಗಂಗರು, ಚಾಲುಕ್ಯರು ಹಾಗೂ ಗೋಲ್ಕೊಂಡದ ಷಾಹಿ ರಾಜರು ಇದನ್ನು ಹಿಂದೆ ಆಳಿದ್ದರು.

ದೇಶದ ಪ್ರಮುಖ ಹಡಗುಕಟ್ಟುವ ಅಂಗಳ –ಹಿಂದೂಸ್ಥಾನ್ ಷಿಪ್‌ಯಾರ್ಡ್– ವಿಶಾಖಪಟ್ಟಣದಲ್ಲಿದೆ. ವಿಶಾಖಪಟ್ಟಣ ನಗರವನ್ನೂ 'ಡಾಲ್ಫಿನ್ ಮೂಗು' ಎಂದು ಕರೆಯಲ್ಪಡುವ (ಡಾಲ್ಫಿನ್‌ನ ಮೂಗಿನ ಆಕಾರ ಇರುವುದರಿಂದ ಈ ಹೆಸರು) ಭೂಮಿಯ ಚಾಚು ಭಾಗವನ್ನೂ ಒಂದು ನದಿ ಬೇರ್ಪಡಿಸುತ್ತದೆ. ಡಾಲ್ಫಿನ್ ಮೂಗು ಗುಡ್ಡದ ಮೇಲೆ ದೀಪಸ್ತಂಭ ಇದೆ.

ಮ್ಯಾಂಗನೀಸ್ ಅದಿರು, ಕಡಲೆಕಾಯಿ, ಸಕ್ಕರೆ ವಿಶಾಖಪಟ್ಟಣದಿಂದ ರಫ್ತಾಗುತ್ತವೆ. ಭಾರತದ ಪೂರ್ವ ರೈಲ್ವೆ ದಾರಿಯಲ್ಲಿ ಇರುವ ಈ ಬಂದರು ಕಲ್ಕತ್ತಾ ಮದರಾಸುಗಳ ಮಧ್ಯಭಾಗದಲ್ಲಿ, ಬಂಗಾಳ ಕೊಲ್ಲಿಯಲ್ಲಿದೆ. ಇಲ್ಲಿಗೆ ವಿಮಾನ ಸಾರಿಗೆಯೂ ಇದೆ. ಇದರ ಉಪನಗರ ವಾಲ್ಟೇರ್ ಒಂದು ಒಳ್ಳೆಯ ಸಮುದ್ರ ತೀರಧಾಮ. ಇಲ್ಲಿ ಆಂಧ್ರ ವಿಶ್ವವಿದ್ಯಾನಿಲಯ ಕೇಂದ್ರವಿದೆ. ವಿಶಾಖಪಟ್ಟಣದಲ್ಲಿ ಒಂದು ತೈಲ ಶುದ್ಧೀಕರಣಾಗಾರವಿದೆ.

ವಿಶಾಖಪಟ್ಟಣದ ಜನಸಂಖ್ಯೆ 3,55,045.

ನೋಡಿ : ಹಿಂದೂಸ್ಥಾನ್ ಷಿಪ್‌ಯಾರ್ಡ್

ವಿಶ್ವಾಮಿತ್ರ

ಕೇಳಿದ್ದನ್ನು ಕೊಡುವ ಕಾಮಧೇನು (ನಂದಿನಿ) ತನಗೆ ಬೇಕೆಂದು ವಸಿಷ್ಠನನ್ನು ವಿಶ್ವಾಮಿತ್ರ (ಕೌಶಿಕ) ಕೇಳಿದ. ''ಶಕ್ತಿ ಇದ್ದರೆ ತೆಗೆದುಕೊಂಡು ಹೋಗು'' ಎಂದ ವಸಿಷ್ಠ. ವಸಿಷ್ಠನ ಬ್ರಹ್ಮ ತೇಜಸ್ಸಿನ ಮುಂದೆ ಕ್ಷತ್ರಿಯ ರಾಜನಾಗಿದ್ದ ವಿಶ್ವಾಮಿತ್ರನ ಕ್ಷಾತ್ರ ತೇಜಸ್ಸು ಸೋತಿತು. ಕೋಪಗೊಂಡ ವಿಶ್ವಾಮಿತ್ರ ಕ್ಷತ್ರಿಯ ಲಕ್ಷಣವಾದ ಛಲದಿಂದ ಬ್ರಾಹ್ಮಣನಾಗಲು ಹೊರಟ. ಕೊನೆಗೆ ಇವನ ಮಹಾವಿದ್ವತ್ತು, ಪೌರುಷ ಶಕ್ತಿ ಮತ್ತು ಕಲ್ಪನೆಗೆ ಮೀರಿದ ಸಂಸ್ಕಾರಗಳನ್ನು ಮನಗಂಡು ಬದ್ಧದ್ವೇಷಿ ವಸಿಷ್ಠನೂ ಇವನನ್ನು 'ಬ್ರಾಹ್ಮಣ' ಎಂದು ಒಪ್ಪಿಕೊಂಡ.

ಕಾನ್ಯಕುಬ್ಜದ ದೊರೆ ಗಾಧಿಯ ಮಗ, ವಿಶ್ವಾಮಿತ್ರ. ಗಾಯತ್ರಿ ಮಂತ್ರವನ್ನೊಳಗೊಂಡ ಋಗ್ವೇದದ ಮೂರನೆಯ ಮಂಡಲದ ಕರ್ತೃ ವಿಶ್ವಾಮಿತ್ರನೇ ಎಂದು ನಂಬಿಕೆ.

ವಿಶ್ವಾಮಿತ್ರನ ಬಗೆಗೆ 'ಮಹಾಭಾರತ', 'ರಾಮಾಯಣ 'ಗಳಲ್ಲಿ ಉಲ್ಲೇಖ ವಿದೆ. ಇವನು ದಶರಥನ ಸಮಾಲೋಚಕ, ಶ್ರೀರಾಮನ ಗುರು ಆಗಿದ್ದ. ಹರಿಶ್ಚಂದ್ರನ ಸತ್ವ ಪರೀಕ್ಷೆ ಮಾಡಿದವನೂ ವಿಶ್ವಾಮಿತ್ರನೇ.

ತ್ರಿಶಂಕು ದೊರೆ ವಸಿಷ್ಠನ ಶಾಪದಿಂದಾಗಿ ಸ್ವರ್ಗಕ್ಕೆ ಹೋಗುವಂತಿರಲಿಲ್ಲ. ಅವನು ವಿಶ್ವಾಮಿತ್ರನ ಮೊರೆಹೊಕ್ಕ. ಹಿಂದೊಮ್ಮೆ ತನ್ನ ಕುಟುಂಬಕ್ಕೆ ತ್ರಿಶಂಕು ನೆರವು ನೀಡಿದ್ದನ್ನು ನೆನಸಿಕೊಂಡು ವಿಶ್ವಾಮಿತ್ರ ಅವನನ್ನು ತನ್ನ ತಪೋಬಲದಿಂದ ಸದೇಹಿಯಾಗಿ ಸ್ವರ್ಗಕ್ಕೆ ಹೋಗುವಂತೆ ಮಾಡಿದ.

ಆದರೆ ಸ್ವರ್ಗ ಅವನನ್ನು ತಿರಸ್ಕರಿಸಿತು. ಮೇಲಿನಿಂದ ತಲೆಕೆಳಗಾಗಿ ಬೀಳುವ ತ್ರಿಶಂಕುವಿಗೆ ಪ್ರತ್ಯೇಕ ಸ್ವರ್ಗವನ್ನೇ ಸೃಷ್ಟಿಸುವುದಾಗಿ ವಿಶ್ವಾಮಿತ್ರ ಗುಡುಗಿದಾಗ, ದೇವತೆಗಳು ಸಂಧಾನ ನಡೆಸಿ ತ್ರಿಶಂಕುವನ್ನು ಅಮರನನ್ನಾಗಿ ಮಾಡಿದರು.

ಬ್ರಾಹ್ಮಣ್ಯ ಪಡೆಯಲು ವಿಶ್ವಾಮಿತ್ರ ಪ್ರಚಂಡ ತಪಸ್ಸನ್ನು ಮಾಡುತ್ತಿದ್ದಾಗ ಅದನ್ನು ಕೆಡಿಸಲು ಇಂದ್ರ ಮೇನಕೆಯನ್ನು ಕಳುಹಿಸಿದ. ಮೇನಕೆಗೆ ಮನ ಸೋತ. ವಿಶ್ವಾಮಿತ್ರನಿಗೆ ಅವಳಲ್ಲಿ ಶಕುಂತಲೆ ಹುಟ್ಟುತ್ತಾಳೆ. ಆದರೆ ವಿಶ್ವಾಮಿತ್ರ ಮತ್ತೆ ತಪಸ್ಸು ಪ್ರಾರಂಭಿಸಿದಾಗ ಊರ್ವಶಿಗೂ ಅವನ ತಪೋಭಂಗ ಮಾಡಲಾಗಲಿಲ್ಲ. ಕೊನೆಗೆ ದೇವತೆಗಳು, ಮಹರ್ಷಿಗಳೆಲ್ಲ ಇವನ ಬ್ರಾಹ್ಮಣ್ಯವನ್ನು ಒಪ್ಪಿಕೊಂಡರು.

ಕ್ಷಾತ್ರ ತೇಜಸ್ಸು, ಬ್ರಹ್ಮತೇಜಸ್ಸು ಇವೆರಡರ ಸಂಗಮ ವಿಶ್ವಾಮಿತ್ರನ ವ್ಯಕ್ತಿತ್ವ.

ನೋಡಿ : ವಸಿಷ್ಠ; ಹರಿಶ್ಚಂದ್ರ



ನೀರಿನೆಡೆಗೆ ಹೊಸ ಹಡಗು

ವಿಶ್ವೇಶ್ವರಯ್ಯ ಔದ್ಯೋಗಿಕ ಮತ್ತು ತಾಂತ್ರಿಕ ವಸ್ತುಸಂಗ್ರಹಾಲಯ

ಬೆಂಗಳೂರಿನ ಕಸ್ತೂರಬಾ ರಸ್ತೆಯಲ್ಲಿ ಭವ್ಯ ಕಟ್ಟಡವಿದೆ. ಖ್ಯಾತ ಎಂಜಿನಿಯರ್, ರಾಜತಂತ್ರಜ್ಞ ಸರ್ ಎಂ. ವಿಶ್ವೇಶ್ವರಯ್ಯ ಅವರ ಹೆಸರು ಹೊತ್ತಿರುವ ಔದ್ಯೋಗಿಕ ಮತ್ತು ತಾಂತ್ರಿಕ ವಸ್ತುಸಂಗ್ರಹಾಲಯ.

ಕಲ್ಕತ್ತೆಯಲ್ಲಿರುವ ಬಿರ್ಲಾ ಔದ್ಯೋಗಿಕ ತಾಂತ್ರಿಕ ಮತ್ತು ವಸ್ತುಸಂಗ್ರಹಾಲಯವನ್ನು ಅನುಕರಿಸಿ ಈ ವಸ್ತುಸಂಗ್ರಹಾಲಯವನ್ನು ರಚಿಸಲಾಯಿತು. 1962ರಲ್ಲಿ ಇದನ್ನು ವೈಜ್ಞಾನಿಕ ಹಾಗೂ ಔದ್ಯೋಗಿಕ ಸಂಶೋಧನಾ ಮಂಡಲಿ ವಹಿಸಿಕೊಂಡಿತು.

ಜನರಲ್ಲಿ, ವಿಶೇಷವಾಗಿ ಮಕ್ಕಳಲ್ಲಿ ವಿಜ್ಞಾನ, ವಿದ್ಯಾಭ್ಯಾಸಗಳಲ್ಲಿ ಆಸಕ್ತಿ ಹುಟ್ಟಿಸುವುದು; ಉದ್ಯಮ ಹಾಗೂ ಮಾನವ ಕಲ್ಯಾಣಗಳಿಗಾಗಿ ತಾಂತ್ರಿಕತೆಯ ಅನ್ವಯ; ಕಿರಿಯರಲ್ಲಿರುವ ರಚನಾತ್ಮಕ ಗುಣಕ್ಕೆ ಪ್ರೋತ್ಸಾಹ, ಭಾರತೀಯ ವಿಜ್ಞಾನ ಹಾಗೂ ತಾಂತ್ರಿಕತೆಯ ಇತಿಹಾಸ; ವಿಜ್ಞಾನ, ತಾಂತ್ರಿಕತೆಗಳ ಪ್ರಚಾರ, ಪ್ರದರ್ಶನ ಸಲಕರಣೆಗಳಲ್ಲಿ ಸುಧಾರಣೆ —ಇವು ವಿಶ್ವೇಶ್ವರಯ್ಯ ಔದ್ಯೋಗಿಕ ಮತ್ತು ತಾಂತ್ರಿಕ ವಸ್ತುಸಂಗ್ರಹಾಲಯದ ಉದ್ದೇಶಗಳು.

ವಿದ್ಯುತ್ತು, ಕಾಂತತೆ, ಟೆಲಿಫೋನ್, ಸಂಪರ್ಕ ವಿಧಾನ, ಕೈಗಾರಿಕೆಯಲ್ಲಿ ಎಲೆಕ್ಟ್ರಾನಿಕ್ಸ್‌ನ ಅನ್ವಯ —ಇವು ಎಲೆಕ್ಟ್ರೊಟೆಕ್ನಿಕ್ ವಿಭಾಗದ ಪ್ರದರ್ಶನ ವಿಷಯಗಳು. ಪ್ರಾಣಿ, ಪವನ, ಜಲ, ಉಗಿ ಮುಂತಾದ ಶಕ್ತಿಗಳ ಉಗಮ ಒಂದು ವಿಭಾಗದಲ್ಲಿದ್ದರೆ ಇನ್ನೊಂದರಲ್ಲಿ ಬಗೆಬಗೆಯ ಅಂತರ್ದಹನ ಎಂಜಿನುಗಳಿವೆ. ಜನಪ್ರಿಯ ವಿಜ್ಞಾನ ವಿಭಾಗವೂ ಇದೆ.

ಊರಿಂದೂರಿಗೆ ತೆರಳುವ ಚರ ವಸ್ತುಪ್ರದರ್ಶನವನ್ನು ಈ ವಸ್ತುಸಂಗ್ರಹಾಲಯ ಏರ್ಪಡಿಸಿದೆ.


ಮಾದರಿಗಳನ್ನು ತಯಾರಿಸಲು ಸಂಸ್ಥೆಯಲ್ಲೇ ಸೌಲಭ್ಯಗಳಿವೆ. ಸೂಕ್ತ ಕರ್ಮಾಗಾರಗಳೂ ಇವೆ.

ನೋಡಿ : ಬಿರ್ಲಾ ಔದ್ಯೋಗಿಕ ಮತ್ತು ತಾಂತ್ರಿಕ ವಸ್ತು ಸಂಗ್ರಹಾಲಯ

ವಿಷ್ಣುದಾಸ್ ಶಿರಾಳಿ

ಭಾರತೀಯ ಸಾಂಪ್ರದಾಯಿಕ ಸಂಗೀತದಲ್ಲಿ ನೈಪುಣ್ಯ; ಪಾಶ್ಚಾತ್ಯ ಸಂಗೀತದ ಆಳ ಅಧ್ಯಯನ —ಇವೆರಡನ್ನೂ ಸಾಧಿಸಿದ್ದಾರೆ ಪಂಡಿತ ವಿಷ್ಣುದಾಸ್ ಶಿರಾಳಿ. ವಿದೇಶಗಳಲ್ಲಿ ವ್ಯಾಪಕವಾಗಿ ಪ್ರವಾಸ ಮಾಡಿ ತಮ್ಮ ಮನೋಜ್ಞ ಸಂಗೀತ ರಚನೆಗಳಿಂದ ಅಲ್ಲಿನ ಶ್ರೋತೃಗಳನ್ನು ತಣಿಸಿದ್ದಾರೆ.

ವಿಷ್ಣುದಾಸ್ ಶಿರಾಳಿಯವರು ಹುಟ್ಟಿದ್ದು ಹುಬ್ಬಳ್ಳಿಯಲ್ಲಿ 1907 ಮೇ 16ರಂದು. ಉಸ್ತಾದುಗಳಾದ ಫಯಾಜ್ ಸಾಹೇಬ್ ಹಾಗೂ ಅಲ್ಲಾವುದ್ದೀನ್ ಖಾನ್ ಮತ್ತು ವಿಷ್ಣು ದಿಗಂಬರ ಪಲೂಸ್ಕರ್ ಅವರಲ್ಲಿ ಶಿಷ್ಯವೃತ್ತಿ. ಹಾನ್ಸ್ ಓಪನ್‌ಹೀಮ್ ಎಂಬವರಲ್ಲಿ ಪಾಶ್ಚಾತ್ಯ ಸಂಗೀತ ಅಧ್ಯಯನ. ಶಿರಾಳಿಯವರು 1927ರಲ್ಲಿ ಲಾಹೋರಿನ ಗಂಧರ್ವ ಮಹಾವಿದ್ಯಾಲಯದ ಪ್ರಿನ್ಸಿಪಾಲರಾದರು.




ಪ್ರಾಚ್ಯಪ್ರತೀಚ್ಯ ಸಂಗೀತ : ಶಿರಾಳಿ

ಭಾರತೀಯ ಸಂಗೀತದ ಶಾಲೆ ತೆರೆಯಲು 1929ರಲ್ಲಿ ಅವರು ಲಂಡನಿಗೆ ತೆರಳಿದರು. ಮುಂದೆ ಖ್ಯಾತ ನರ್ತಕ ಉದಯಶಂಕರ ಅವರನ್ನು ಪ್ಯಾರಿಸಿನಲ್ಲಿ ಭೇಟಿಯಾಗುವ ವರೆಗೆ ಈ ಶಾಲೆ ನಡೆಸಿದರು. ಆ ಭೇಟಿಯ ಬಳಿಕ ಉದಯಶಂಕರರ ನೃತ್ಯ ಮಂಡಲಿಯ ಸಂಗೀತ ನಿರ್ದೇಶಕರಾಗಿ ಯೂರೋಪ್, ಏಷ್ಯ, ಕೆನಡ, ಅಮೆರಿಕದ ಸಂಯುಕ್ತ ಸಂಸ್ಥಾನಗಳಲ್ಲಿ ಪ್ರವಾಸ ಮಾಡಿದರು. ಆಲ್ಮೋರದಲ್ಲಿ ಉದಯಶಂಕರ್ ಸ್ಥಾಪಿಸಿದ ಭಾರತ ಸಂಸ್ಕೃತಿ ಕೇಂದ್ರದ ಸಂಗೀತ ನಿರ್ದೇಶಕ ಮತ್ತು ಆಡಳಿತಗಾರರಾಗಿ 1939–44 ಅವಧಿಯಲ್ಲಿ ಕೆಲಸ ಮಾಡಿದರು. 1949ರಲ್ಲಿ ಭಾರತ ಸರಕಾರದ ಚಲಚ್ಚಿತ್ರ ವಿಭಾಗದ ಸಂಗೀತ ನಿರ್ದೇಶಕರಾಗಿ ನೇಮಕಗೊಂಡು 1962ರಲ್ಲಿ ನಿವೃತ್ತರಾದರು. ರಷ್ಯದ ಸಂಗೀತ ರಚನಕಾರರ ಸಂಘದಿಂದ

ವಿಶ್ವೇಶ್ವರಯ್ಯ ವಸ್ತುಸಂಗ್ರಹಾಲಯ.

ಯೋಚಿಸುವ ಯಂತ್ರ ಸರಳ ಕಂಪ್ಯೂಟರ್ ದೂರದರ್ಶಕ



ಆಹ್ವಾನಿತರಾಗಿ 1968ರಲ್ಲಿ ಸಂಗೀತ ರಚನೆಕಾರರ ಗೋಷ್ಠಿಯಲ್ಲಿ ಇವರೂ ಭಾಗವಹಿಸಿದರು. ದೇಶವಿದೇಶಗಳಲ್ಲಿ ವ್ಯಾಪಕವಾಗಿ ಪ್ರವಾಸ ನಡೆಸಿರುವ 'ಲಿಟ್ಲ್ ಬ್ಯಾಲೆ' ತಂಡದಲ್ಲಿ ಈಗ ವಿಷ್ಣುದಾಸರು ಆಸಕ್ತಿ ವಹಿಸಿದ್ದಾರೆ.

'ಜೀವನದ ಲಯ', 'ಮಾತ ಮತ್ತು ಯಂತ್ರ', 'ಅಮರ [illegible]', 'ಕಿರಾತಾರ್ಜುನೀಯ', 'ಸ್ವಪ್ನ[illegible]', 'ಡಿಸ್ಕವರಿ ಆಫ್ ಇಂಡಿಯಾ' ಮೊದಲಾದ ಬ್ಯಾಲೆ ನೃತ್ಯಗಳಿಗೆ ಅವರು ಅಳವಡಿಸಿರುವ ಸಂಗೀತ ರಚನೆ ಅವಿಸ್ಮರಣೀಯ. 'ಜೀವನದ ಸಂಗೀತ', 'ಋತು ಸಂಗೀತ', 'ಮಹಾತ್ಮ', 'ವಿಷ್ಣುದಿಗಂಬರ ಪಲೂಸ್ಕರ್' ಸಾಕ್ಷಿಚಿತ್ರಗಳಿಗೆ ಇವರು ಕೊಟ್ಟಿರುವ ಸಂಗೀತ ಹೃದ್ಯವಾಗಿದೆ. ಈ ಚಿತ್ರಗಳು ರಾಷ್ಟ್ರೀಯ ಹಾಗೂ ಅಂತರ ರಾಷ್ಟ್ರೀಯ ಪ್ರಶಸ್ತಿ ಗಳಿಸಿವೆ.

ಭಾರತೀಯ ಸಂಗೀತವನ್ನು ಕುರಿತು ಶಿರಾಳಿಯವರು ಗ್ರಂಥಗಳನ್ನು ರಚಿಸಿದ್ದಾರೆ:

ಸಂಗೀತ ನಾಟಕ ಅಕಾದೆಮಿ 1973ರ ರಾಷ್ಟ್ರೀಯ ಪ್ರಶಸ್ತಿಯನ್ನು ವಿಷ್ಣುದಾಸ ಶಿರಾಳಿ ಅವರಿಗಿತ್ತು ಗೌರವಿಸಿದೆ.

ವಿಷ್ಣುದಿಗಂಬರ ಪಲೂಸ್ಕರ್

ನೋಡಿ : ಸಂಪುಟ ೫

ವಿಷ್ಣುವರ್ಧನ


'ಸಾಹಸ ಭೀಮ', 'ಕದನ ಪ್ರಚಂಡ', 'ಕದಂಬಯೋಧ ತುಹಿನಾಗ್ನಿ' —ಈ ಬಗೆಯ ಹೊಗಳಿಕೆಗೆ ಪಾತ್ರನಾಗಿದ್ದವನು ವಿಷ್ಣುವರ್ಧನ. ಈತ ಹೊಯ್ಸಳ ವಂಶದ ಪ್ರಖ್ಯಾತ ಸಮ್ರಾಟ. ಆಗ ಹೊಯ್ಸಳರು ಚಾಲುಕ್ಯರ ಅಧೀನದಲ್ಲಿದ್ದರು.

ಒಂದನೆಯ ಬಲ್ಲಾಳ ನಿಧನನಾದಾಗ ಆತನ ತಮ್ಮ ಬಿಟ್ಟಿದೇವ ಸಿಂಹಾಸನಾರೂಢನಾದ. ಮುಂದೆ ವಿಷ್ಣುವರ್ಧನ ಎಂದು ಈತ ಹೆಸರಾದ. ಈತನ ಆಳ್ವಿಕೆಯ ಕಾಲ ಸುಮಾರು 1108–52.

ಜೈನ ಮತಾವಲಂಬಿಯಾಗಿದ್ದ ವಿಷ್ಣುವರ್ಧನ ವೈಷ್ಣವ ಮತಕ್ಕೆ ಸೇರಿದ. ರಾಜಧಾನಿಯನ್ನು ಬೇಲೂರಿನಿಂದ ದ್ವಾರಸಮುದ್ರಕ್ಕೆ ಸ್ಥಳಾಂತರಿಸಿದ.

ಚೋಳರು ಮತ್ತು ಚಾಲುಕ್ಯರ ನಡುವೆ ದಕ್ಷಿಣ ಪ್ರದೇಶಗಳ ಪ್ರಾಬಲ್ಯಕ್ಕಾಗಿ ಆಗ ಹೋರಾಟಗಳಾಗುತ್ತಿದ್ದುವು. ಗಂಗರಾಜ್ಯವನ್ನು ನಾಶಮಾಡಿ ಚೋಳರು ತಲಕಾಡನ್ನು ವಶಪಡಿಸಿಕೊಂಡರು. ವಿಷ್ಣುವರ್ಧನನ ದಂಡನಾಯಕ ಗಂಗರಾಜ ಸೈನ್ಯದೊಡನೆ ಹೋಗಿ ತಲಕಾಡನ್ನು ಗೆದ್ದುಕೊಂಡ. ಚೋಳ ಸಾಮಂತರನೇಕರನ್ನು ಸೋಲಿಸಿದ. ವಿಷ್ಣುವರ್ಧನ ಮುಂದುವರಿದು ಚಾಲುಕ್ಯ ಸೇನೆಯನ್ನೆದುರಿಸಿದ; ಹಾಸನದ ಸಮೀಪವಿರುವ ಕಣ್ಣೇಗಾಲದಲ್ಲಿ ಯುದ್ಧ ನಡೆದು ಚಾಲುಕ್ಯರು ಸೋತುಹೋದರು. 1200ರಲ್ಲಿ ಚಾಲುಕ್ಯರಾಜ್ಯ ಕೊನೆಗಂಡಿತು. ಅನಂತರ ವಿಷ್ಣುವರ್ಧನ ತಾನು ಸ್ವತಂತ್ರ ರಾಜ ಎಂದು ಸಾರಿದ; ಚಾಲುಕ್ಯರ ದಕ್ಷಿಣ ಪ್ರಾಂತಗಳನ್ನು ವಶಪಡಿಸಿಕೊಂಡ.

ಆಸ್ಥಾನದಲ್ಲಿ ವಿಷ್ಣುವರ್ಧನ –ಬೇಲೂರು ಚೆನ್ನಕೇಶವ ದೇವಾಲಯ ಶಿಲ್ಪ



ಪೂರ್ವಕ್ಕೆ ಕೋಲಾರದ ಪೂರ್ವಭಾಗ, ಪಶ್ಚಿಮಕ್ಕೆ ಬಾರಕೂರು–ಸವಿಮಲೆ, ದಕ್ಷಿಣದಲ್ಲಿ ಸೇಲಂ–ಕೊಯಮುತ್ತೂರು ಹೊಯ್ಸಳ ರಾಜ್ಯದ ಮೇರೆಗಳಾದುವು.

1116 ರಿಂದ 39ರ ವರೆಗೆ ವಿಷ್ಣುವರ್ಧನ ಯುದ್ಧದಲ್ಲಿ ನಿರತನಾಗಿದ್ದ. ಮಂತ್ರಿಮಂಡಲದಲ್ಲಿ ಪಂಚಪ್ರಧಾನರಿದ್ದರು. ದಂಡನಾಯಕರು, ಸೇನಾಧಿಪತಿಗಳು ದಕ್ಷರಾಗಿದ್ದರು. ವಿಷ್ಣುವರ್ಧನ ಆಗಾಗ್ಗೆ ದೇಶದಲ್ಲಿ ಸಂಚರಿಸುತ್ತ ಪ್ರಜೆಗಳ ಹಿತವನ್ನು ಗಮನಿಸುತ್ತಿದ್ದ. ದೇಶ ಸಮೃದ್ಧವಾಗಿತ್ತು, ಶಾಂತಿ ನೆಲೆಸಿತ್ತು.

ನೃತ್ಯರಾಣಿ ಶಾಂತಲಾ ವಿಷ್ಣುವರ್ಧನನ ಪಟ್ಟಮಹಿಷಿ.

ವೀಣೆ ಶೇಷಣ್ಣ

ನೋಡಿ : ಸಂಪುಟ ೫

ವೀರಗಲ್ಲು

ನೋಡಿ : ಸಂಪುಟ ೧

ವೀರಪಾಂಡ್ಯ ಕಟ್ಟಬೊಮ್ಮನ್

"ಪರದೇಶದಿಂದ ಬಂದ ಈ ಭಿಕ್ಷುಕರಿಗೆ ನನ್ನಿಂದ ಒಂದು ಬಿಡಿಕಾಸೂ ಸಿಗಲಾರದು!"

—ಈಸ್ಟ್ ಇಂಡಿಯಾ ಕಂಪೆನಿಯ ಅಧಿಕಾರಿಗಳು ದಕ್ಷಿಣದ ರಾಜರುಗಳ ಬಳಿ ತೆರಿಗೆ ಕಪ್ಪಗಳನ್ನು ಸಂಗ್ರಹಿಸುತ್ತಿದ್ದಾಗ, ಹೀಗೆ ಹೇಳಿ ಅವರನ್ನು ದಿಗ್ಭ್ರಮೆಗೊಳಿಸಿದ ವ್ಯಕ್ತಿ, ವೀರಪಾಂಡ್ಯ ಕಟ್ಟಬೊಮ್ಮನ್. ಇವನು ಬ್ರಿಟಿಷರ ವಿರುದ್ಧ ಬಂಡೆದ್ದ ಭಾರತದ ಮೊದಲ ಹೋರಾಟಗಾರರಲ್ಲಿ ಒಬ್ಬ.

ಆಂಧ್ರದ ಬೊಮ್ಮು ನಾಯಕರ ವಂಶದವನಾದ ಕಟ್ಟಬೊಮ್ಮ ಹುಟ್ಟಿದ್ದು 1760ರಲ್ಲಿ. ಖ್ಯಾತ ತಮಿಳು ದೊರೆ ಪಾಂಡ್ಯ ಮನೆತನದ ಜಗವೀರನ ಬಳಿ ಸೇರಿ ಕಟ್ಟಬೊಮ್ಮನ್ ನಿಷ್ಠೆಯಿಂದ ಸೇವೆ ಸಲ್ಲಿಸಿದ. ಜಗವೀರ ತನ್ನ ಕೊನೆಗಾಲದಲ್ಲಿ ಕಟ್ಟಬೊಮ್ಮನನ್ನು ಕರೆದು ತನ್ನ ರಾಜ್ಯವನ್ನು ಒಪ್ಪಿಸಿದ. ಜಗವೀರನ ಸಂಪೂರ್ಣ ನಂಬಿಕೆಗೆ ಒಳಗಾಗಿದ್ದ ಕಟ್ಟಬೊಮ್ಮನ್ 1790ರಲ್ಲಿ ದೊರೆಯಾದ.

ಬ್ರಿಟಿಷ್ ಅಧಿಕಾರಿಗಳಿಗೆ ತೆರಿಗೆ ಸಲ್ಲಿಸಲು ಕಟ್ಟಬೊಮ್ಮನ್ ನಿರಾಕರಿಸಿದ. ಆಗ ಜಾಕ್‌ಸನ್ ಎಂಬ ಅಧಿಕಾರಿ ಕಟ್ಟಬೊಮ್ಮನನ್ನು ಭೇಟಿಯಾಗಲು ಆಶಿಸಿದ. ಅವನ ಆಶಯದ ಮೇರೆಗೆ ಏಕಾಂಗಿಯಾಗಿ ಹೋದ ಕಟ್ಟಬೊಮ್ಮನನ್ನು ಸೆರೆಹಿಡಿಯುವ ಯತ್ನ ನಡೆಯಿತು. ಆದರೆ ಆ ಯತ್ನ ಫಲಕಾರಿಯಾಗಲಿಲ್ಲ.



ವೀರಪಾಂಡ್ಯ ಕಟ್ಟಬೊಮ್ಮನ್

ಮುಂದೆ ಹೊಸ ಅಧಿಕಾರಿ, ಮದರಾಸಿನಲ್ಲಿದ್ದ ಎಡ್ವರ್ಡ್ ಕ್ಲೈವನಿಗೆ ಪತ್ರ ಬರೆದು ಕಟ್ಟಬೊಮ್ಮನ್ ವಿರುದ್ಧ ಹೋರಾಡಲು ಸೈನ್ಯ ತರಿಸಿಕೊಂಡ. ಸೈನ್ಯ ಕಟ್ಟಬೊಮ್ಮನ ರಾಜಧಾನಿಯನ್ನು ಮುತ್ತುವ ವೇಳೆಗೆ ಅವನು ತಪ್ಪಿಸಿಕೊಂಡಿದ್ದ.

ತಾನು ನಂಬಿದ ಮುತ್ತುವೈರವ ಎಂಬ ಪಾಳೆಯಗಾರನ ನಿವಾಸದಲ್ಲಿ ಕಟ್ಟಬೊಮ್ಮನ್ ಇದ್ದಾಗ, ಪಾಳೆಯಗಾರನ ಸಂಚಿನಿಂದ ಬ್ರಿಟಿಷ್ ಅಧಿಕಾರಿಗಳು ಕಟ್ಟಬೊಮ್ಮನನ್ನು ಸೆರೆಹಿಡಿದರು. ಕ್ಷಮೆ ಕೇಳಿದರೆ ಬಿಡುತ್ತೇವೆ ಎಂದರು. ಕಟ್ಟಬೊಮ್ಮನ್ ಜಗ್ಗಲಿಲ್ಲ. [illegible] ಅವಮಾನ. ಸ್ವಾತಂತ್ರ್ಯವನ್ನು ಕುರಿತು ಚಿಂತನೆಮಾಡುತ್ತ ಗಲ್ಲುಕಂಬವನ್ನೇರಿದ; ಸಾವನ್ನಪ್ಪಿ. ಅಮರನಾದ.

ವೀರೇಂದ್ರನಾಥ ಚಟ್ಟೋಪಾಧ್ಯಾಯ

ಭಾರತದ ಸ್ವಾತಂತ್ರ್ಯಕ್ಕಾಗಿ ವಿದೇಶಗಳಲ್ಲಿ ಪ್ರಯತ್ನ ನಡೆಸುತ್ತಿದ್ದ ಭಾರತೀಯ ಕ್ರಾಂತಿಕಾರಿಗಳು ಸ್ಥಾಪಿಸಿದ 'ಗದರ್ ಪಕ್ಷ'ದ ಐರೋಪ್ಯ ಶಾಖೆಯ ಒಬ್ಬರು ಮುಖಂಡರು ವೀರೇಂದ್ರನಾಥ ಚಟ್ಟೋಪಾಧ್ಯಾಯ. ಇವರು ಭಾಷಾಶಾಸ್ತ್ರಜ್ಞರು: ಮಾರುವೇಷಗಳನ್ನು ಧರಿಸುವುದರಲ್ಲಿ ತಜ್ಞರು. ತಮ್ಮ ವೇಷಭೂಷಣ ಮತ್ತು ಧ್ವನಿ ಬದಲಾಯಿಸಲು ಇವರಿಗೆ ಬೇಕಾಗುತ್ತಿದ್ದುದು ಕೆಲವೇ ಕ್ಷಣಗಳು.

ಸರೋಜಿನಿ ನಾಯುಡು ಮತ್ತು ಹರೀಂದ್ರನಾಥ ಚಟ್ಟೋಪಾಧ್ಯಾಯ ಅವರ ಸಹೋದರರ. ವೀರೇಂದ್ರನಾಥ ಈ ಶತಮಾನದ ಎರಡನೆಯ ದಶಕದಲ್ಲಿ ಪ್ಯಾರಿಸಿನಲ್ಲಿದ್ದರು. ಮುಂದೆ ರಷ್ಯದ ಲೆನಿನ್‌ಗ್ರಾಡ್ ವಿಶ್ವವಿದ್ಯಾಲಯದ ಪ್ರಾಚ್ಯ ಅಧ್ಯಯನ ವಿಭಾಗದ ಮುಖ್ಯಸ್ಥರಾದರು. ಬ್ರಿಟಿಷ್ ಸರಕಾರ ಇವರನ್ನು ಬಂಧಿಸುವ ಪ್ರಯತ್ನ ನಡೆಸಿತು. ಹಿಡಿದು ಕೊಟ್ಟವರಿಗೆ 10,000 ಪೌಂಡು ಬಹುಮಾನ ಎಂದು ಸಾರಿತು.

ರಷ್ಯದಲ್ಲಿ ವೀರೇಂದ್ರ ಚಟ್ಟೋಪಾಧ್ಯಾಯರು ಕಣ್ಮರೆಯಾದರು.

ನೋಡಿ ಗದರ್ ಪಕ್ಷ

ವೀರೇಶಲಿಂಗಂ ಪಂತುಲು



'ದಕ್ಷಿಣ ಭಾರತದ ಪ್ರಥಮ ಆಧುನಿಕ ಪುರುಷ'

'ದಕ್ಷಿಣ ಭಾರತದ ಪ್ರಥಮ ಆಧುನಿಕ ಪುರುಷ' ಎನಿಸಿಕೊಂಡಿರುವ ಕಂಡಕೂರಿ ವೀರೇಶಲಿಂಗಂ ಪಂತುಲು (1848–1919) ಆಂಧ್ರ ಪ್ರದೇಶದ ಪ್ರಮುಖ ಸಮಾಜ ಸುಧಾರಕರು.

ವಿಧವಾ ವಿವಾಹಕ್ಕೆ ಪ್ರಬಲ ಪ್ರತಿಭಟನೆಯಿದ್ದ ಕಾಲದಲ್ಲಿ ಇವರು ಸ್ವತಃ ಇಂಥ ಮದುವೆಗಳನ್ನು ಮಾಡಿಸಿದರು. ಸಾಹಿತಿಯಾಗಿ, ಶಿಕ್ಷಣ ತಜ್ಞರಾಗಿ, ದೇಶಾಭಿಮಾನಿಯಾಗಿ ಇವರು ಜನಪ್ರಿಯರಾದರು.

ಅವರ ಕಾರ್ಯಕ್ಷೇತ್ರ ಆಂಧ್ರ ಪ್ರದೇಶಕ್ಕೆ ಸೀಮಿತವಾಗಿರಲಿಲ್ಲ. ಬೆಂಗಳೂರು, ಬಳ್ಳಾರಿಗಳಲ್ಲಿ ಇವರು ವಿಧವಾ ವಿವಾಹಗಳನ್ನು ಮಾಡಿಸಿದ್ದರು. ತಮ್ಮ ಕೊನೆಯ ವರ್ಷಗಳಲ್ಲಿ ಸೆಕೆಗಾಲದಲ್ಲಿ ಇವರು ಬೆಂಗಳೂರಿನಲ್ಲಿ ವಾಸಿಸುತ್ತಿದ್ದರು.

ವೆಂಕಟಪ್ಪ

ನೋಡಿ : ಸಂಪುಟ ೫

ವೆಂಕಟರಮಣಿ

ನೋಡಿ : ಸಂಪುಟ ೯

ವೆಡರ್‌ಬರ್ನ್

"ಭಾರತ ಸರಕಾರದ ಆಯವ್ಯಯ ಪತ್ರ ಕೋಟ್ಯಂತರ ಭಾರತೀಯ ಪ್ರಜೆಗಳ ಬದುಕಿಗೆ ಸಂಬಂಧಿಸಿದ ಪ್ರಶ್ನೆ: ಸಂಬಂಧಪಡದ ಅನ್ಯರು ಅದನ್ನು ತಮಗಿಷ್ಟಬಂದಂತೆ ನಿರ್ಧರಿಸುವುದೆಂದರೇನು ?"

—ಹೀಗೆ ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ಸವಾಲು ಹಾಕಿದವರು ಸದಸ್ಯ ವೆಡರ್‌ಬರ್ನ್.

ಅದಕ್ಕೆ ಮೊದಲು ಅವರು ಭಾರತದಲ್ಲಿದ್ದರು.

ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸಿನ 1889ರ ಅಧಿವೇಶನದ ಅಧ್ಯಕ್ಷತೆ ವಹಿಸಿದ ಅವರು, "ಕಾಲು ಶತಮಾನ ಭಾರತದಲ್ಲಿ ಅಧಿಕಾರ ನಿರ್ವಹಿಸಿ, ಭಾರತದ ಉಪ್ಪು ತಿಂದಿದ್ದೇನೆ; ನನ್ನ ಶೇಷಾಯುಷ್ಯ ಭಾರತದ ಸೇವೆಗೆ ಮೀಸಲು" ಎಂದು ಸಾರಿದರು.



ಭಾರತ ಪ್ರೇಮಿ : ವೆಡರ್‌ಬರ್ನ್

1838ರಲ್ಲಿ ಇಂಗ್ಲೆಂಡಿನ ಗ್ಲಾಸ್ಟರ್‌ಷೈರ್‌ನಲ್ಲಿ ಜನಿಸಿದ ವಿಲಿಯಂ ವೆಡರ್‌ಬರ್ನ್ (ಮುಂದೆ ಸರ್ ವಿಲಿಯಂ ವೆಡರ್‌ಬರ್ನ್) ಎಡಿನ್‌ಬರೋ ವಿಶ್ವವಿದ್ಯಾಲಯದ ಶಿಕ್ಷಣದ ಅನಂತರ 1860ರಲ್ಲಿ ಭಾರತದ ಸಿವಿಲ್ ಅಧಿಕಾರಿಯಾಗಿ (ಐ.ಸಿ.ಎಸ್.) ಮುಂಬಯಿ ಆಧಿಪತ್ಯಕ್ಕೆ ಬಂದರು.

1887ರಲ್ಲಿ ಸೇವೆಯಿಂದ ನಿವೃತ್ತರಾಗುವ ಮೊದಲು ಹೈಕೋರ್ಟ್ ನ್ಯಾಯಾಧೀಶ, ಗವರ್ನರರ ಕಾರ್ಯಕಾರಿ ಮಂಡಲಿ ಸದಸ್ಯ ಮತ್ತು ಪ್ರಾಂತ್ಯ ಸರಕಾರದ ರಾಜಕೀಯ ಕಾರ್ಯದರ್ಶಿ ಹುದ್ದೆಗಳನ್ನು ನಿರ್ವಹಿಸಿದ್ದರು. ಅನಂತರ 80ನೆಯ ವಯಸ್ಸಿನಲ್ಲಿ (1918) ನಿಧನರಾಗುವ ವರೆಗೆ ಅವರು ತಮ್ಮ ಸಮಯವನ್ನೂ ನಿವೃತ್ತಿ ವೇತನದ ಬಹುಭಾಗವನ್ನೂ ಭಾರತದ ಪರವಾದ ಕೆಲಸಗಳಿಗಾಗಿ ವ್ಯಯಿಸಿದರು.

ಸಾಮಾನ್ಯ ರೈತರನ್ನು ಸಾಲದ ಮುಷ್ಟಿಯಿಂದ ಬಿಡಿಸುವಂತೆ ಸರಕಾರ ಸಹಾಯಮಾಡಬೇಕೆಂಬ ಯೋಜನೆಯೊಂದನ್ನು, ವೆಡರ್‌ಬರ್ನ್ ಅಧಿಕಾರಿಯಾಗಿದ್ದಾಗ, ರೂಪಿಸಿದ್ದರು. ಅದನ್ನು ಸರಕಾರ ತಳ್ಳಿಹಾಕಿತು.

ಭಾರತದಲ್ಲಿ ಅಗತ್ಯವಿದ್ದ ಪಂಚಾಯಿತಿ ವ್ಯವಸ್ಥೆ, ಕೃಷಿ ಅಭಿವೃದ್ಧಿ ಬ್ಯಾಂಕ್, ಭಾರತೀಯ ದಂಡ ನೀತಿ ಮೊದಲಾದುವನ್ನು ಸೂಚಿಸಿ

ಉಪಯುಕ್ತ ಟೀಕೆಗಳನ್ನು ವೆಡರ್‌ಬರ್ನ್ ಒಪ್ಪಗೊಳಿಸಿದರು. ಕಾಂಗ್ರೆಸ್ ಸಂಸ್ಥಾಪಕರಲ್ಲೊಬ್ಬರಾದ ಎ.ಒ.ಹ್ಯೂಮರ ಜೀವನ ಚರಿತ್ರೆಯನ್ನು ಅವರು ಬರೆದರು.

1893ರಲ್ಲಿ ಇಂಗ್ಲೆಂಡಿನಲ್ಲಿ ಬ್ರಿಟಿಷ್ ಪಾರ್ಲಿಮೆಂಟಿಗೆ ಆಯ್ಕೆಯಾದ ವೆಡರ್‌ಬರ್ನ್ ದಾದಾಭಾಯಿ ನವರೋಜಿಯವರ ಜೊತೆಗೂಡಿ ಭಾರತದ ಪರವಾಗಿ ವಾದಿಸತೊಡಗಿದರು.

ಇಂಗ್ಲೆಂಡಿನಲ್ಲಿ ಕಾಂಗ್ರೆಸ್ ಪರ ಪ್ರಚಾರದ್ದು ವೆಡರ್‌ಬರ್ನರ ಅತ್ಯಂತ ಮಹತ್ವದ ಸೇವೆ. ಅಲ್ಲಿ ಪ್ರಾರಂಭಿಸಲ್ಪಟ್ಟ ಕಾಂಗ್ರೆಸ್ ಅಂಗಸಂಸ್ಥೆ 'ಬ್ರಿಟಿಷ್ ಕಾಂಗ್ರೆಸ್ ಕಮಿಟಿ'ಯ ಉದ್ದೇಶ ಸಾಧನೆಗಾಗಿ ಅವರು ಶ್ರಮಿಸಿದರು.

ಬ್ರಿಟಿಷ್ ಧೋರಣೆಯಿಂದಾಗಿ ಹುಟ್ಟಿದ ವೈಷಮ್ಯ ಚಿಗುರೊಡೆದು ಕಾಂಗ್ರೆಸ್ಸಿನಲ್ಲಿ ಬಿಕ್ಕಟ್ಟು ಉಂಟಾದಾಗ, 1910ರಲ್ಲಿ, 72ರ ವೃದ್ಧ ವೆಡರ್‌ಬರ್ನ್ ಇಂಗ್ಲೆಂಡಿನಿಂದ ಬಂದು, ಎರಡನೆಯ ಸಲ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷತೆ ವಹಿಸಿದರು. ಗುಂಪುಗಳ ನಡುವೆ ಒಮ್ಮತ ಮೂಡಿಸಿದರು.

ವೆರಿಯರ್ ಎಲ್ವಿನ್

ಪರದೇಶದಿಂದ ಬಂದು, ಭಾರತದ ಗಿರಿಜನರ ಸೇವೆಗೆ, ಅವರನ್ನು ಕುರಿತ ಅಧ್ಯಯನಕ್ಕೆ ತನ್ನ ಜೀವನವನ್ನೇ ಮುಡುಪಾಗಿಟ್ಟ ವ್ಯಕ್ತಿ, ಎಲ್ವಿನ್ ವೆರಿಯರ್.

1902ರಲ್ಲಿ ಇಂಗ್ಲೆಂಡಿನಲ್ಲಿ ವೆರಿಯರ್ ಎಲ್ವಿನ್ ಜನಿಸಿದರು. ತಂದೆ ಬಿಷಪ್ ಎಲ್ವಿನ್. ಆಕ್ಸ್‌ಫರ್ಡ್‌ನಲ್ಲಿ ವಿದ್ಯಾಭ್ಯಾಸ. 1927ರಲ್ಲಿ 'ಕ್ರೈಸ್ತ ಸೇವಾ ಸಂಘದ'ದ ವತಿಯಿಂದ ಕ್ರೈಸ್ತರಿಗೂ ಹಿಂದುಗಳಿಗೂ ಸೌಹಾರ್ದ ಯುತ ಸಂಬಂಧ ಕುದುರಿಸಲೆಂದು ಪಾದ್ರಿ ಎಲ್ವಿನ್ ಭಾರತಕ್ಕೆ ಆಗಮಿಸಿದರು. ಇಲ್ಲಿ ಗಾಂಧೀಜಿಯ ಪ್ರಭಾವಕ್ಕೆ ಒಳಗಾದರು. ಸಾಬರಮತಿ ಆಶ್ರಮವಾಸಿಯಾದರು.



ಗಿರಿಜನ ಸೇವೆ :
ವೆರಿಯರ್ ಎಲ್ವಿನ್

'ನೇಫಾದ (ಈಶಾನ್ಯ ಗಡಿ ಪ್ರದೇಶ) —ಈಗಿನ ಅರುಣಾಚಲ ಪ್ರದೇಶದ —ಪರಿಸ್ಥಿತಿಯನ್ನು ಕಂಡು ಬರಲು ಗಾಂಧೀಜೀ ಇವರನ್ನು ಕಳುಹಿಸಿದರು. ಆದರೆ ಬ್ರಿಟಿಷ್ ಸರಕಾರ ಎಲ್ವಿನರನ್ನು ಬಂಧಿಸಿ, ಆ ಪ್ರಾಂತ್ಯದಿಂದ ಅವರನ್ನು ಹೊರಗೆ ಹಾಕಿತು. ಅನಂತರ ಮಧ್ಯಪ್ರದೇಶದಲ್ಲಿನ ಗೊಂಡ ಮತ್ತು ಬೈಗಾ ಗಿರಿಜನರ ಸೇವೆಗಾಗಿ ಗಾಂಧೀಜೀ ಎಲ್ವಿನರನ್ನು ಕಳುಹಿಸಿದರು. ಆಗಿನಿಂದ ತಮ್ಮ ಕೊನೆಗಾಲದವರೆಗೆ 32 ವರ್ಷ ಕಾಲ ಎಲ್ವಿನ್ ಭಾರತೀಯ ಗಿರಿಜನರ ಸೇವೆಗಾಗಿ ಅವಿರತ ದುಡಿದರು.

ಭಾರತದಲ್ಲಿ ಮಾನವವಿಜ್ಞಾನ ಸಂಸ್ಥೆಯ ನಿರ್ದೇಶಕರಾಗಿ, ಗಿರಿಜನರ ಕಲ್ಯಾಣ ಸಲಹಾ ಸಂಘದ ಸದಸ್ಯರಾಗಿ, ನೇಫಾ ಸರಕಾರದ ಗಿರಿಜನ ಸಲಹೆಗಾರರಾಗಿ ಅಪ್ರತಿಮ ಸೇವೆ ಸಲ್ಲಿಸಿದರು ಎಲ್ವಿನ್. ನೇಫಾದಲ್ಲಿ 3,200 ಕಿಲೊಮಿಟರ್ ದೂರ ಕಾಲು ನಡಿಗೆಯಲ್ಲಿ ಸಾಗಿ ಅಲ್ಲಿಯ ಗಿರಿಜನರ ಪುರಾಣ, ಇತಿಹಾಸ, ಆಚಾರ ವಿಚಾರಗಳ ವಿವರ ಸಂಗ್ರಹಿಸಿ, ಎರಡು ಕೃತಿಗಳನ್ನು ಬರೆದರು. ಅಸ್ಸಾಮಿನ ಟ್ರೈಬಲ್ ರಿಸರ್ಚ್ ಇನ್‌ಸ್ಟಿಟ್ಯೂಟ್ ಸ್ಥಾಪನೆಯಲ್ಲಿ ಇವರದೇ ಮುಖ್ಯ ಪಾತ್ರ. ಗಿರಿಜನ ಸೇವಾ ಮಾನವ ವಿಜ್ಞಾನ ಸಂಸ್ಥೆ, ಏಷ್ಯಾಟಿಕ್ ಸೊಸೈಟಿ ಆಫ್ ಬೆಂಗಾಲ್, ಬಾಂಬೆ ಏಷ್ಯಾಟಿಕ್ ಸೊಸೈಟಿ —ಈ ಸಂಸ್ಥೆಗಳು ಎಲ್ವಿನರಿಗೆ ಸುವರ್ಣ ಪದಕವಿತ್ತು ಗೌರವಿಸಿದುವು. 1961ರ ದಾದಾಭಾಯಿ ನವರೋಜಿ ಸುವರ್ಣ ಪದಕ ಇವರಿಗೆ ದೊರೆಯಿತು. ಅದೇ ವರ್ಷ ಪದ್ಮಭೂಷಣ ಪ್ರಶಸ್ತಿಯನ್ನೂ ಎಲ್ವಿನರಿಗೆ ನೀಡಲಾಯಿತು.

'ಬೈಗಾ ಜಾತಿ', 'ಟ್ರೈಬಲ್ ಆರ್ಟ್ ಇನ್ ಮಿಡ್ಲ್ ಇಂಡಿಯಾ', 'ಮಹಾಕೋಸಲ ಜಾನಪದ ಗಾಥಾ', 'ಟ್ರೈಬಲ್ ಮಿಥ್ಸ್ ಆಫ್ ಒಡಿಸ್ಸಾ'—ಇವು ಎಲ್ವಿನರ ಅಮೂಲ್ಯ ಗ್ರಂಥಗಳಲ್ಲಿ ಕೆಲವು.

1935ರಲ್ಲಿ ಎಲ್ವಿನ್ ಕ್ರೈಸ್ತ ಧರ್ಮಾಧಿಕಾರಿಗಳ ವ್ಯವಸ್ಥೆಯಲ್ಲಿ ತಮ್ಮ ಸ್ಥಾನವನ್ನು ಬಿಟ್ಟುಕೊಟ್ಟರು. 1954ರಲ್ಲಿ ಗೊಂಡ ಬುಡಕಟ್ಟಿನ ಸ್ತ್ರೀಯನ್ನು ವಿವಾಹವಾದರು. ಭಾರತದ ಪೌರತ್ವವನ್ನು ಪಡೆದರು.

1964 ಫೆಬ್ರುವರಿ 22ರಂದು ತಮ್ಮ ನೇಫಾ ಸಂಸ್ಥೆಯ ಕೆಲಸಕ್ಕೆ ಸಂಬಂಧಿಸಿ ವೆರಿಯರ್ ಎಲ್ವಿನ್ ದೆಹಲಿಗೆ ಬಂದಿದ್ದಾಗ, ಕಾಲವಾದರು. ಅವರ ಆತ್ಮ ಚರಿತ್ರೆಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಮರಣೋತ್ತರ ಪ್ರಶಸ್ತಿ ನೀಡಿತು.

ವೇದಾಂತದರ್ಶನ

ವೇದಾಂತ ಎಂದರೆ ವೇದಗಳ ಅಂತಿಮ ಭಾಗಗಳು ಎಂದು ಅರ್ಥ. ಈ ಭಾಗಗಳು ಉಪನಿಷತ್ ಎಂದು ಪ್ರಖ್ಯಾತವಾಗಿವೆ. ಇದನ್ನು ಉತ್ತರ ಮೀಮಾಂಸಾ ; ಬ್ರಹ್ಮ ಮೀಮಾಂಸಾ ಎಂದೂ ಕರೆಯುತ್ತಾರೆ. ಪರಮಾತ್ಮನ ಸ್ವರೂಪವನ್ನು ತಿಳಿಸುವ ವೇದಾಂತ ದರ್ಶನ ಆರು ವೈದಿಕ ದರ್ಶನಗಳಲ್ಲಿ ಒಂದು.

ಬಾದರಾಯಣರ 'ಬ್ರಹ್ಮಸೂತ್ರಗಳು' ವೇದಾಂತ ದರ್ಶನದ ಅಧಿಕೃತ ಗ್ರಂಥ. ಇದಕ್ಕೆ ಶಂಕರಾಚಾರ್ಯ, ಮಧ್ವಾಚಾರ್ಯ, ರಾಮಾನುಜಾಚಾರ್ಯ, ವಲ್ಲಭಾಚಾರ್ಯ ವ್ಯಾಖ್ಯಾನಗಳನ್ನು ಬರೆದರು ; ವಿವಿಧ ಮತಗಳ ಮೂಲಕ ಈ ದರ್ಶನ ಜನಜೀವನದಲ್ಲಿ ಬೆರೆಯುವಂತೆ ಮಾಡಿದರು.

ಈ ದರ್ಶನದ ಪ್ರಕಾರ ವಿಶ್ವದ ಅಂತಿಮ ಸತ್ಯ ಒಂದೇ : ಅದು ಬ್ರಹ್ಮ. ಈ ಬ್ರಹ್ಮವನ್ನು ಕುರಿತ ವಿಚಾರ, ಜಿಜ್ಞಾಸೆಗಳು ವೇದಾಂತದಲ್ಲಿವೆ.

ಅಂತಿಮ ಸತ್ಯ ಅಥವಾ ನಿರಪೇಕ್ಷ ಸತ್ಯವಾಗಿರುವ ಬ್ರಹ್ಮ ಮತ್ತು ಆತ್ಮಗಳೆರಡೂ ಒಂದೇ —ಎಂಬ ಅದ್ವೈತ ಸಿದ್ಧಾಂತವನ್ನು ಶಂಕರಾಚಾರ್ಯರು ತಮ್ಮ ಅಪ್ರತಿಮ ಪ್ರತಿಭೆ ಪಾಂಡಿತ್ಯಗಳಿಂದ ಈ ದರ್ಶನದ ಭಾಷ್ಯದಲ್ಲಿ ಅತ್ಯಂತ ಪರಿಣಾಮಕಾರಿಯಾಗಿ ಪ್ರತಿಪಾದಿಸಿದ್ದಾರೆ. ಇತರ ಆಚಾರ್ಯರೂ ಇದೇ ರೀತಿ ತಮ್ಮ ಅಭಿಪ್ರಾಯಗಳನ್ನು ತಾವು ಬರೆದ ಭಾಷ್ಯಗಳಲ್ಲಿ ಪ್ರತಿಪಾದಿಸಿದ್ದಾರೆ.

ವೇದಾಂತ ದರ್ಶನದ ಈ ಬ್ರಹ್ಮಜಿಜ್ಞಾಸೆ ಭಾರತೀಯ ತತ್ತ್ವಜ್ಞಾನವನ್ನೆಲ್ಲ ಆವರಿಸಿದೆ.

ನೋಡಿ : ದರ್ಶನಗಳು : ಬಾದರಾಯಣ : ಮೀಮಾಂಸಾದರ್ಶನ : ವಲ್ಲಭಾಚಾರ್ಯ
ಮಧ್ವಾಚಾರ್ಯ : ರಾಮಾನುಜಾಚಾರ್ಯ : ಶಂಕರಾಚಾರ್ಯ
—ಸಂಪುಟ ೧

ವೇಮನ

ನೋಡಿ : ಸಂಪುಟ ೫

ವೈಜ್ಞಾನಿಕ ಮತ್ತು ಔದ್ಯೋಗಿಕ ಸಂಶೋಧನಾ ಮಂಡಲಿ

ವೈಜ್ಞಾನಿಕ ಮತ್ತು ಔದ್ಯೋಗಿಕ ಸಂಶೋಧನಾ ಮಂಡಲಿ —ಕೌನ್ಸಿಲ್ ಆಫ್ ಸೈಂಟಿಫಿಕ್ ಅಂಡ್ ಇಂಡಸ್ಟ್ರಿಯಲ್ ರಿಸರ್ಚ್. ಇದರ ಹ್ರಸ್ವರೂಪ ಸಿ.ಎಸ್.ಐ.ಆರ್. ಭಾರತದಲ್ಲಿ ವೈಜ್ಞಾನಿಕ ಸಂಶೋಧನೆ ಸರಕಾರದ ವತಿಯಿಂದ ನಡೆಯುವುದು ಈ ಸಂಸ್ಥೆಯ ಮೂಲಕ.

1942ರಲ್ಲಿ ಇದು ಸ್ವಯಮಾಡಳಿತ ಸಂಸ್ಥೆಯಾಗಿ ಅಸ್ತಿತ್ವಕ್ಕೆ ಬಂದಿತು. ಈಗ ಇದು ಮೂವತ್ತಕ್ಕೂ ಹೆಚ್ಚು ಸಂಶೋಧನಾ ಸಂಸ್ಥೆಗಳನ್ನು ನಡೆಸುತ್ತಿದೆ. ರಾಷ್ಟ್ರೀಯ ಪ್ರಯೋಗಮಂದಿರಗಳೂ ಪ್ರಾದೇಶಿಕ ಪ್ರಯೋಗ ಮಂದಿರಗಳೂ ಇದರಲ್ಲಿ ಸೇರಿವೆ. ಎರಡು ವಿಜ್ಞಾನ ವಸ್ತುಸಂಗ್ರಹಾಲಯಗಳಿವೆ. ನವದೆಹಲಿಯಲ್ಲಿರುವ ಸಿ.ಎಸ್.ಐ.ಆರ್. ಮುಖ್ಯ ಕಾರ್ಯಾಲಯದ ನ್ಯಾಷನಲ್ ರಜಿಸ್ಟರ್ ಒಂದು ಗಮನಾರ್ಹ ದಾಖಲೆ ವಿಭಾಗ. ದೇಶದಲ್ಲಿ ಎಷ್ಟು ಜನ ವಿಜ್ಞಾನಿಗಳಿದ್ದಾರೆ. ಅವರ ವಿದ್ಯಾ ಅರ್ಹತೆ ಏನು. ಅವರ ವಿತರಣೆ ಹೇಗೆ ಮುಂತಾದ ವಿವರವನ್ನು ಇಲ್ಲಿ ಇಟ್ಟಿರುತ್ತಾರೆ.

ಸಿ.ಎಸ್.ಐ.ಆರ್. ಸಂಸ್ಥೆಯ ಕಾರ್ಯೋದ್ದೇಶಗಳು : ವೈಜ್ಞಾನಿಕ. ಔದ್ಯೋಗಿಕ ಸಂಶೋಧನೆಗಳ ಅಭಿವೃದ್ಧಿ : ಅವುಗಳಿಗೆ ಬೇಕಾದ ಸಹಕಾರ ಹಾಗೂ ಮಾರ್ಗದರ್ಶನ ನೀಡುವುದು : [illegible] ಕೈಗಾರಿಕಾ ಸಮಸ್ಯೆಗಳನ್ನು ಪರಿಶೀಲಿಸುವುದು : ಸಂಶೋಧನೆಗಾಗಿ ವಿಶೇಷ ವಿದ್ಯಾರ್ಥಿವೇತನ ಸೌಲಭ್ಯ ಒದಗಿಸುವುದು : ತನ್ನ ಸಂಶೋಧನಾ ಸಂಸ್ಥೆಗಳಲ್ಲಿ ದೊರೆತ ಕಾರ್ಯೋಪಯುಕ್ತ ಫಲಿತಾಂಶಗಳನ್ನು ದೇಶದ ಕೈಗಾರಿಕಾ ಬೆಳವಣಿಗೆಗೋಸ್ಕರ ಅಳವಡಿಸುವುದು : ಪ್ರಯೋಗ ಮಂದಿರಗಳ ಸ್ಥಾಪನೆ : ಸಂಶೋಧನೆ ಹಾಗೂ ಕೈಗಾರಿಕೆಗಳ ಬಗೆಗೆ ವಿಷಯ ಸಂಗ್ರಹ ಮತ್ತು ಪ್ರಸಾರ ಕಾರ್ಯ : ಸಂಶೋಧನಾ ಪ್ರಬಂಧಗಳ ಪ್ರಕಟಣೆ. ಕೈಗಾರಿಕಾ ಸಂಶೋಧನೆ ಮತ್ತು ಅಭಿವೃದ್ಧಿಯ ಬಗೆಗಿನ ನಿಯತಕಾಲಿಕದ ನಿರ್ವಹಣೆ. ರಾಷ್ಟ್ರ ಮಟ್ಟದ ವೈಜ್ಞಾನಿಕ ವಿಷಯ ಸಂಗ್ರಹಣೆ ನವದೆಹಲಿಯಲ್ಲಿರುವ ಇನ್ಸ್‌ಡಾಕ್‌ನಲ್ಲಿ (ಇಂಡಿಯನ್ ನ್ಯಾಷನಲ್ ಡಾಕ್ಯುಮೆಂಟೇಷನ್‌ಸೆಂಟರ್) ನಡೆಯುತ್ತದೆ.

ರಾಷ್ಟ್ರೀಯ ಭೌತಿಕ ಪ್ರಯೋಗಶಾಲೆ. ರಾಷ್ಟ್ರೀಯ ರಾಸಾಯನಿಕ ಪ್ರಯೋಗಶಾಲೆ. ಕೇಂದ್ರ ಆಹಾರ ಸಂಶೋಧನಾಲಯ. ವಿಶ್ವೇಶ್ವರಯ್ಯ ಇಂಡಸ್ಟ್ರಿಯಲ್ ಅಂಡ್ ಟೆಕ್ನಾಲಜಿಕಲ್ ಮ್ಯೂಸಿಯಂ. ರಾಷ್ಟ್ರೀಯ [illegible] ಪ್ರಯೋಗಾಲಯ. ಕೇಂದ್ರ [illegible] ಸಂಶೋಧನಾಲಯ —ಇವು ಸಿ.ಎಸ್.ಐ.ಆರ್. ಅಧೀನದಲ್ಲಿ ನಡೆಯುವ ಕೆಲವು ಪ್ರಮುಖ ಸಂಶೋಧನಾ ಸಂಸ್ಥೆಗಳು.

1971ರಲ್ಲಿ ಡಾ. ಯೆಲವರ್ತಿ ನಾಯುಡಮ್ಮ ಮಂಡಲಿಯ ಮಹಾನಿರ್ದೇಶಕರಾದರು.

ನೋಡಿ : ಯೆಲವರ್ತಿ ನಾಯುಡಮ

ವೈ. ಬಿ. ಚವ್ಹಾಣ್

ಮಹಾರಾಷ್ಟ್ರದ ಮುಖ್ಯಮಂತ್ರಿಯಾಗಿದ್ದ ವೈ. ಬಿ. ಚವ್ಹಾಣ್ ಕೇಂದ್ರ ಮಂತ್ರಿಮಂಡಲವನ್ನು ಸೇರಿದ್ದು ರಕ್ಷಣಾಮಂತ್ರಿಯಾಗಿ. ಅನಂತರ ಗೃಹ ಸಚಿವ. ಮತ್ತು ಅರ್ಥಸಚಿವರಾದರು.

ಯಶವಂತರಾವ್ ಬಲವಂತರಾವ್ ಚವ್ಹಾಣ್ ಹುಟ್ಟಿದ್ದು ಸಾಂಗ್ಲಿ ಜಿಲ್ಲೆಯಲ್ಲಿ. 1913 ಮಾರ್ಚ್ 12ರಂದು. ವಿದ್ಯಾಭ್ಯಾಸ ಕೊಲ್ಹಾಪುರ ಮತ್ತು ಪುಣೆಗಳಲ್ಲಿ. ಪ್ರತಿಭಾವಂತ ವಿದ್ಯಾರ್ಥಿ ಎಂದು ಹೆಸರು ಗಳಿಸಿದ ಚವ್ಹಾಣ್ ತಮ್ಮ 18ನೆಯ ವಯಸ್ಸಿನಲ್ಲೇ ಅಸಹಕಾರ ಚಳವಳಿಗೆ ಧುಮುಕಿದರು. ಒಂದೂವರೆ ವರ್ಷ ಕಾರಾಗೃಹವಾಸ ಅನುಭವಿಸಿದರು.



1946ರಲ್ಲಿ ಇವರು ಮುಂಬಯಿ ನ್ಯಾಯ ವಿಧಾಯಕ ಸಭೆಯ ಸದಸ್ಯರಾಗಿ ಆರಿಸಿ ಬಂದರು.

ಮಹಾರಾಷ್ಟ್ರದ ರಾಜಕೀಯ ರಂಗದಲ್ಲಿ ಚವ್ಹಾಣ್ ಕ್ಷಿಪ್ರಗತಿಯಿಂದ ಮುನ್ನಡೆದರು. 1952ರಲ್ಲಿ ಇವರು ಮಹಾರಾಷ್ಟ್ರದ ಅತ್ಯಂತ ಕಿರಿಯ ಮಂತ್ರಿಯಾದರು. ನಾಲ್ಕು ವರ್ಷಗಳ ಅನಂತರ ಮುಖ್ಯಮಂತ್ರಿಯಾದರು. ಚೀನ–ಭಾರತ ಯುದ್ಧ ಸಂದರ್ಭದಲ್ಲಿ ವಿ. ಕೆ. ಕೃಷ್ಣಮೆನನ್ ರಕ್ಷಣಾ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದಾಗ. 1962ರಲ್ಲಿ ಕೇಂದ್ರ ಸಂಪುಟಕ್ಕೆ ಆಹ್ವಾನಿತರಾದರು.

ಕಾಂಗ್ರೆಸ್ [illegible] ಇವರು ಇಂದಿರಾ ಗಾಂಧಿಯವರಿಗೆ [illegible] ನೀಡಿದರು.

ವೈಶಾಲಿ

ವೈಶಾಲಿ ಮಹಾವೀರನ ಜನ್ಮಸ್ಥಳ. ಈ ಪ್ರದೇಶ ಉತ್ತರ ಬಿಹಾರಿನ ಮುಜಫರ್‌ಪುರ ಜಿಲ್ಲೆಯಲ್ಲಿದೆ.

ಪ್ರಾಚೀನ ಭಾರತದಲ್ಲಿ ವಿಶಾಲ ಎಂಬ ರಾಜನಿದ್ದ. ಆತನ ರಾಜಧಾನಿ ವೈಶಾಲಿ.

[illegible] ದಾಗ. ಅದು ವೈಭವದ ಶಿಖರವನ್ನು ತಲುಪಿತ್ತು.

ಬುದ್ಧ ಇಲ್ಲಿಗೆ ಹಲವು ಬಾರಿ ಭೇಟಿ ಕೊಟ್ಟಿದ್ದ. ಮುಂದೆ ವೈಶಾಲಿ ಮೌರ್ಯ ಸಾಮ್ರಾಜ್ಯಕ್ಕೆ ಸೇರಿತು. ಅಶೋಕ ಇಲ್ಲಿ ಸಿಂಹಸ್ತಂಭ ಇರುವ ಸ್ತೂಪ ಕಟ್ಟಿಸಿದ್ದಾನೆ. ಇಲ್ಲಿಂದ ಬುದ್ಧನ ಭಿಕ್ಷಾಪಾತ್ರೆಯನ್ನು ಕನಿಷ್ಕ ಗಾಂಧಾರಕ್ಕೆ ಕೊಂಡೊಯ್ದ.

4ನೆಯ ಶತಮಾನದಲ್ಲಿ ಫಾಹಿಯಾನ್ ಮತ್ತು ಸುಮಾರು 635ರಲ್ಲಿ ಹ್ಯೂಯೆನ್ ತ್ಸಾಂಗ್ ಇಲ್ಲಿಗೆ ಬಂದಿದ್ದರು.

ವೈಶೇಷಿಕ ದರ್ಶನ

ಪ್ರಪಂಚದ ಅಸಂಖ್ಯ ವಸ್ತುಗಳೆಲ್ಲ ಪರಮಾಣುಗಳಿಂದ ಆದುವು. ವಸ್ತುಗಳ ರೂಪ ಬದಲಾಗಬಹುದು. ಆದರೆ ಪರಮಾಣುಗಳು ಬದಲಾಗವು. ನಾಶವಾಗದೆ ಉಳಿಯುತ್ತವೆ. ಪ್ರತಿಯೊಂದು ಪರಮಾಣುವಿಗೂ ತನ್ನದೇ ಆದ 'ವಿಶೇಷ' ಗುಣವಿರುತ್ತದೆ.

—ಇದು ವೈಶೇಷಿಕ ದರ್ಶನದ ಸಿದ್ಧಾಂತ. ಈ ದರ್ಶನ ಆರು ಆಸ್ತಿಕ ದರ್ಶನಗಳಲ್ಲೊಂದು.

ವೈಶೇಷಿಕ ದರ್ಶನದ ಮೂಲಕರ್ತೃ ಕಣಾದ ಎಂದು ನಂಬಿಕೆ.

ನ್ಯಾಯ ದರ್ಶನಕ್ಕಿಂತಲೂ ಹಿಂದಿನಿಂದಲೇ ಇತ್ತೆಂದು ನಂಬಲಾದ ವೈಶೇಷಿಕ ದರ್ಶನವನ್ನು ಕ್ರಮೇಣ ನ್ಯಾಯದರ್ಶನದೊಂದಿಗೆ ಜೋಡಿಸಿ ಒಟ್ಟಿಗೆ ಅಭ್ಯಸಿಸಲಾಯಿತು.

ಭೌತಿಕ ವಿಷಯಗಳಾದ ಕಾಲ, ದೇಶ, ದಿಕ್ಕು, ದ್ರವ್ಯ ಮೊದಲಾದುವನ್ನು ವಿಶ್ಲೇಷಣೆಯಿಂದ ಅರ್ಥಮಾಡಿಕೊಳ್ಳಲು ವೈಶೇಷಿಕ ದರ್ಶನ ಪ್ರಯತ್ನಿಸಿದೆ.

ಹೀಗೆ ಅರ್ಥಮಾಡಿಕೊಳ್ಳುವ ಮೊದಲ ಹಂತವಾಗಿ ಅದು ವಿಶ್ವದ ವಸ್ತು–ವಿದ್ಯಮಾನಗಳನ್ನು ಆರು ಗುಂಪುಗಳನ್ನಾಗಿ ವಿಂಗಡಿಸಿದೆ: 1 ದ್ರವ್ಯ: ಇದು ಪೃಥ್ವಿ (ಭೂಮಿ), ಆಪ್ (ನೀರು), ತೇಜಸ್ (ಬೆಂಕಿ), ವಾಯು (ಗಾಳಿ), ಆಕಾಶ, ಕಾಲ, ದಿಕ್, ಆತ್ಮ, ಮನಸ್ಸುಗಳಿಂದ ಆದದ್ದು. 2 ಗುಣ. 3 ಕರ್ಮ (ಕ್ರಿಯೆ ಅಥವಾ ಚಲನೆ). 4 ಸಾಮಾನ್ಯ (ಸಮಾನ ತತ್ತ್ವಗಳು). 5 ವಿಶೇಷ (ವಿಶಿಷ್ಟ ತತ್ತ್ವಗಳು). 6 ಸಮವಾಯ (ಸಂಬಂಧ ಅಥವಾ ಸಂಯೋಗ). ಅನಂತರದ ವ್ಯಾಖ್ಯಾನಕಾರರು 'ಅಭಾವ' (ಅಥವಾ 'ಅಸ್ತಿತ್ವದಲ್ಲಿಲ್ಲದ್ದು') ಎಂಬ ಏಳನೆಯ ಗುಂಪನ್ನು ಸೇರಿಸಿದರು. ವಸ್ತುಗಳ ಈ ನಿಜಸ್ವರೂಪವನ್ನು ತಿಳಿಯುವುದರಿಂದ ಮಾನವ ಸಾವು–ನೋವುಗಳ ವಿಷಚಕ್ರದಿಂದ ಪಾರಾಗಬಲ್ಲ ಎಂದು ಈ ದರ್ಶನ ಹೇಳಿದೆ.

ಪರಮಾಣುಗಳು ಯಾವುದೇ ದೇವತೆಯ ಇಚ್ಛೆಯಂತೆ ಚಲಿಸವು. ಕರ್ತೃರಹಿತ ಶಕ್ತಿ ಅಥವಾ ನಿಯಮ ('ಅದೃಷ್ಟ') ದಿಂದಾಗಿ ಚಲಿಸುತ್ತವೆ ಎಂದು ವೈಶೇಷಿಕರು ಪ್ರತಿಪಾದಿಸಿದರು. ಇದನ್ನೇ 'ಪರಮಾತ್ಮ' ಅಥವಾ ದೇವರು ಎಂದು ಪ್ರಸ್ತಾಪಿಸಿದರು.

ಪ್ರಾರಂಭದಲ್ಲಿ ನಾಸ್ತಿಕತೆಯ ಕಡೆ ವಾಲಿದ್ದ ಈ ದರ್ಶನ ಕ್ರಮೇಣ ಆಸ್ತಿಕ ದರ್ಶನವಾಯಿತು ಎಂಬ ಅಭಿಪ್ರಾಯವೂ ಉಂಟು.

ಕಣಾದನ 'ವೈಶೇಷಿಕ ಸೂತ್ರ' ಕ್ರಿ.ಪೂ. 6ನೆಯ ಶತಮಾನದಲ್ಲಿ ರೂಪುಗೊಂಡಿತು ಎನ್ನುತ್ತಾರೆ. ಪ್ರಶಸ್ತಪಾದನ 'ಪದಾರ್ಥ ಧರ್ಮ ಸಂಗ್ರಹ', ಶಿವಾದಿತ್ಯನ 'ಸಪ್ತಪದಾರ್ಥೀ' ಈ ದರ್ಶನದ ಪ್ರಖ್ಯಾತ ಕೃತಿಗಳು.

ನೋಡಿ : ಕಣಾದ ; ದರ್ಶನಗಳು ; ನ್ಯಾಯದರ್ಶನ

ವ್ಯೋಮ ಆಯೋಗ

ಭಾರತದಲ್ಲಿ ವ್ಯೋಮವಿಜ್ಞಾನವನ್ನೂ ತಾಂತ್ರಿಕತೆಯನ್ನೂ ತ್ವರಿತ ಗ ಯಲ್ಲಿ ಬೆಳೆಸುವ ಉದ್ದೇಶದಿಂದ ಸ್ಥಾಪಿತವಾದ ಸಂಸ್ಥೆ 'ವ್ಯೋಮ ಆಯೋಗ'. 1972 ಜೂನ್ 2ರಂದು ಇದು ಅಸ್ತಿತ್ವಕ್ಕೆ ಬಂದಿತು. ಇದ ಪ್ರಥಮ ಅಧ್ಯಕ್ಷರು ಬೆಂಗಳೂರಿನಲ್ಲಿರುವ ಭಾರತೀಯ ವಿಜ್ಞಾನ ಮಂದಿರ ನಿರ್ದೇಶಕರಾದ ಸತೀಶ್ ಧಾವನ್ ಅವರು. ಪರಮಾಣುಶಕ್ತಿ ಆಯೋಗ ಎಲೆಕ್ಟ್ರಾನಿಕ್ಸ್ ಆಯೋಗಗಳ ಮಾದರಿಯಲ್ಲೇ ವ್ಯೋಮ ಆಯೋಗವನ್ನು ರಚಿಸಲಾಗಿದೆ. ಬಾಹ್ಯಾಕಾಶದ ಬಗೆಗೆ ಅಧ್ಯಯನ, ಸಂಶೋಧನೆಗಳನ್ನು ಈ ಆಯೋಗ ಕೈಗೊಳ್ಳುತ್ತದೆ.

ವ್ಯೋಮ ಆಯೋಗ ಹಾಗೂ ವ್ಯೋಮ ಸಂಶೋಧನಾ ಇಲಾಖೆಗಳ ಸೇರಿ ತುಂಬಾದಲ್ಲಿರುವ ವಿಕ್ರಮ್ ಸಾರಾಭಾಯಿ ಭೂಮಧ್ಯ ರಾಕೆಟ್ ಉಡ್ಡಯನ ನಿಲ್ದಾಣ, ವ್ಯೋಮವಿಜ್ಞಾನ ಮತ್ತು ತಾಂತ್ರಿಕತೆಯ ಕೇಂದ್ರ ಅಹಮದಾಬಾದಿನ ಪ್ರಾಯೋಗಿಕ ಸಂಪರ್ಕ ಉಪಗ್ರಹ ಭೂನಿಲ್ದಾಣ ಶ್ರೀಹರಿಕೋಟ ರಾಕೆಟ್ ನಿಲ್ದಾಣ ಮುಂತಾದುವುಗಳ ಹೊಣೆ ನಿರ್ವಹಿ ಸುತ್ತವೆ. ಬೆಂಗಳೂರಿನ ಬಳಿಯ ಪೀಣ್ಯದಲ್ಲೂ ಸಂಶೋಧನಾ ಚಟುವಟಿ ಗಳು ನಡೆಯುತ್ತವೆ.

ಶಂಕರ್

'ಶಂಕರ್ಸ್ ವೀಕ್ಲಿ', 'ಚಿಲ್ಡ್ರನ್ಸ್ ವರ್ಲ್ಡ್' ಪತ್ರಿಕೆಗಳಿಂದ ಹಿರಿಯ ಕಿರಿಯರ ಜಗತ್ತಿಗೆ ಚಿರಪರಿಚಿತರು ಶಂಕರ್—ಕೆ. ಶಂಕರ ಪಿಳ್ಳೆ.



ಶಂಕರ್

ಕೇಶವ ಶಂಕರ ಪಿಳ್ಳೆ ಅವರ ಜನನ 1902 ಜುಲೈ 31. ಹುಟ್ಟಿದ್ದು ಕೇರಳದ ಕಾಯಂಕುಳಂನ ಶ್ರೀಮಂತ ಕುಟುಂಬದಲ್ಲಿ. ಆದರೆ ಚಿಕ್ಕಂದಿನಲ್ಲೇ ಹೆತ್ತವರನ್ನು ಕಳೆದುಕೊಂಡ ಶಂಕರ್ ಅಜ್ಜನ ಆಶ್ರಯದಲ್ಲಿ ಬೆಳೆದರು. ತಿರುವನಂತಪುರದಲ್ಲಿ ಕಾಲೇಜನ್ನು ಸೇರಿ ಭೌತವಿಜ್ಞಾನದ ಅಧ್ಯಯನ ಮಾಡಿದರು. ಅನಂತರ ಮುಂಬಯಿಯಲ್ಲಿ ಕಾಯಿದೆ ಅಭ್ಯಾಸ ಮಾಡಿದರು.



" ನಮಗೆ ಸಹಾಯ ಮಾಡು, ನಮಗೆ ಸಹಾಯ ಮಾಡು, ದಯವಿಟ್ಟು "
—'ಶಂಕರ್ಸ್ ವೀಕ್ಲಿ'ಯಿಂದ

ವ್ಯಂಗ್ಯಚಿತ್ರ ರಚನೆ. ಬಾಲ್ಯದಿಂದಲೇ ಅಭಿರುಚಿಯಿದ್ದ ಕಲೆ. ಅದನ್ನು ರೂರ್ಜಿತಗೊಳಿಸಿಕೊಂಡರು. 14 ವರ್ಷ ಕಾಲ 'ಹಿಂದೂಸ್ಥಾನ್ ಟೈಮ್ಸ್'ನಲ್ಲಿ ಒಳ್ಳೆಯ ವ್ಯಂಗ್ಯ ಚಿತ್ರಕಾರರೆಂದು ಹೆಸರು ಪಡೆದ ಶಂಕರ್ 1948ರಲ್ಲಿ 'ಶಂಕರ್ಸ್ ವೀಕ್ಲಿ' ಪ್ರಾರಂಭಿಸಿದರು. ವಿಡಂಬನಾತ್ಮಕ ಹಾಸ್ಯ ಇದರ ವೈಶಿಷ್ಟ್ಯ. ವಿಶ್ವದ ಮಕ್ಕಳೆಲ್ಲ ಒಂದು ಎಂಬ ಧ್ಯೇಯ ಇರಿಸಿಕೊಂಡು 1968ರಲ್ಲಿ 'ಚಿಲ್ಡ್ರನ್ಸ್ ವರ್ಲ್ಡ್' ಪತ್ರಿಕೆ ಹೊರಡಿಸಿದರು. ಮಕ್ಕಳಿಗಾಗಿ ಮಕ್ಕಳು ಬರೆದ ಕಥೆ, ಪದ್ಯ, ಲೇಖನ ಇದರಲ್ಲಿರುತ್ತವೆ. ಮಕ್ಕಳಿಗೆ ಉತ್ತಮ ಸಾಹಿತ್ಯ ಒದಗಿಸುವ ಆಕಾಂಕ್ಷೆಯಿಂದ 'ಚಿಲ್ಡ್ರನ್ಸ್ ಬುಕ್ ಟ್ರಸ್ಟ್' ಆರಂಭವಾಯಿತು. ಈ ಸಂಸ್ಥೆಯ ವತಿಯಿಂದ ಹೆಚ್ಚು ಚಿತ್ರಗಳಿರುವ ಕಡಮೆ ಬೆಲೆಯ ಮಕ್ಕಳ ಪುಸ್ತಕಗಳು ಪ್ರಕಟವಾಗುತ್ತಿವೆ.

ಶಂಕರರ ಇನ್ನೊಂದು ಮಹತ್ಸಾಧನೆ ಅಂತರರಾಷ್ಟ್ರೀಯ ಚಿತ್ರಕಲಾ ಸ್ಪರ್ಧೆ. ಪ್ರತಿ ವರ್ಷ ಇದರಲ್ಲಿ ವಿವಿಧ ರಾಷ್ಟ್ರಗಳ ಲಕ್ಷಗಟ್ಟಲೆ ಬಾಲ ಕಲಾವಿದರು ಭಾಗವಹಿಸುತ್ತಾರೆ.

ಮಕ್ಕಳ ನಡುವೆ ಓಡಾಡುವುದನ್ನು ಇಷ್ಟಪಡುವ ಶಂಕರ್ ದೆಹಲಿಯ ನೆಹರೂ ಭವನದಲ್ಲಿ ಅಂತರರಾಷ್ಟ್ರೀಯ ಬೊಂಬೆಗಳ ಸಂಗ್ರಹಾಲಯ ರೂಪಿಸಿದ್ದಾರೆ. ಈ ಮಾದರಿಯ ಸಂಗ್ರಹಾಲಯ ಪ್ರಪಂಚದಲ್ಲಿ ಇದೊಂದೇ.


ಶಂಕರದಯಾಳ್ ಶರ್ಮಾ

ಅಧ್ಯಾಪಕ ವೃತ್ತಿಯಿಂದ ಪ್ರಾರಂಭಿಸಿ, 1972ರಲ್ಲಿ ಭಾರತ ರಾಷ್ಟ್ರೀಯ ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾದವರು, ಶಂಕರದಯಾಳ್ ಶರ್ಮಾ.

ಜನನ ಮಧ್ಯಪ್ರದೇಶದ ಭೋಪಾಲ್‌ನಲ್ಲಿ, 1918ರಲ್ಲಿ. ಇವರು ಎಂ.ಎ., ಎಲ್‌ಎಲ್.ಎಂ., ಪಿ.ಎಚ್‌ಡಿ., ಬಾರ್-ಎಟ್-ಲಾ ಪದವಿಗಳನ್ನು ಗಳಿಸಿದ್ದಾರೆ.

ರಾಜಕೀಯ ಪ್ರವೇಶಿಸುವ ಮುನ್ನ ಲಖನೌ ವಿಶ್ವವಿದ್ಯಾನಿಲಯದಲ್ಲಿ ರೀಡರ್ ಆಗಿದ್ದರು. ಕೇಂಬ್ರಿಜ್ ವಿಶ್ವವಿದ್ಯಾನಿಲಯದಲ್ಲಿ ಕಾನೂನು ಅಧ್ಯಾಪಕರಾಗಿದ್ದರು.

ಶರ್ಮರು ಭೋಪಾಲ್ ಸಂಸ್ಥಾನದ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದರು. ಮುಂದೆ 1956–57ರಲ್ಲಿ ಆ ರಾಜ್ಯದ ಮುಖ್ಯಮಂತ್ರಿ ಆದರು. ರಾಜ್ಯ ಪುನರ್ವಿಂಗಡಣೆಯಾದ ಅನಂತರ, ಶಂಕರದಯಾಳ್ ಶರ್ಮಾ ಮಧ್ಯ ಪ್ರದೇಶದ ಮಂತ್ರಿಯಾಗಿ ಕೆಲಸ ನಿರ್ವಹಿಸಿದರು. ಆ ರಾಜ್ಯದ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರೂ ಆಗಿದ್ದರು.



ಕಾಂಗ್ರೆಸ್ ಅಧ್ಯಕ್ಷತೆ : ಶಂಕರದಯಾಳ್ ಶರ್ಮಾ

ಡಾ. ಶರ್ಮಾ [illegible] ವ್ವರು: 1968–72 ರವರೆಗೆ [illegible] ಪ್ರಧಾನ ಕಾರ್ಯದರ್ಶಿ ಆಗಿದ್ದರು.

ಕಾಂಗ್ರೆಸ್ ಇಬ್ಭಾಗವಾದಾಗ, ಶರ್ಮರು ಇಂದಿರಾ ಗಾಂಧಿ ನಾಯಕತ್ವದ ಕಾಂಗ್ರೆಸ್ಸನ್ನು ಸೇರಿದರು.

ವಿಕ್ರಮ ವಿಶ್ವವಿದ್ಯಾನಿಲಯ ಡಾಕ್ಟರೇಟ್ ಪದವಿ ನೀಡಿ ಇವರನ್ನು ಗೌರವಿಸಿದೆ.

ಶಂಕರ ದೇವ್

ಮಹಾರಾಷ್ಟ್ರದ ಸಂತಕವಿ ರಾಮದಾಸರ ಜೀವನ ವಿಷಯವಾಗಿ ಆಳವಾಗಿ ಸಂಶೋಧನೆ ನಡೆಸಿದವರು, ಶಂಕರ ದೇವ್. ಅವರ ಅಧ್ಯಯನದ ಮೂಲ ಉದ್ದೇಶ ರಾಮದಾಸರ ಬೋಧನೆಗಳನ್ನು, [illegible] ಜನತೆಯಲ್ಲಿ ದೇಶಾಭಿಮಾನ ಮೂಡಿಸುವುದು. ಆ ಮೂಲಕ ಭಾರತದ ವಿಮೋಚನೆಗೆ ಜನರನ್ನು ಪ್ರಚೋದಿಸುವುದು.

ಖಾಂದೇಶದ ಧೂಲಿಯಾ ಬಳಿ 1871ರಲ್ಲಿ ಶಂಕರ ದೇವ್ ಜನಿಸಿದರು. ಪುಣೆಯಲ್ಲಿ ಬಿ.ಎ. ಮತ್ತು ಎಲ್‌ಎಲ್.ಬಿ. ಪದವಿಗಳನ್ನು ಪಡೆದರು. ಧೂಲಿಯಾದಲ್ಲಿ ವಕೀಲಿ ಕೈಗೊಂಡರು. ಆಗಿನ ರಾಜಕೀಯ ಚಳುವಳಿಯ ಮುಖಂಡರಿಂದ ಪ್ರಭಾವಿತರಾದರು. 1898ರಿಂದ 1920ರ ವರೆಗೆ ತಿಲಕರ ಪಂಥವನ್ನೂ 1920ರಿಂದ 28ರ ವರೆಗೆ ಗಾಂಧೀಜಿಯ ಪಂಥವನ್ನೂ ಅನುಸರಿಸಿದರು. ಮುಂದೆ ತಮ್ಮ ಕೊನೆಗಾಲದ ವರೆಗೆ (1958) ಸಂಪೂರ್ಣವಾಗಿ ರಾಮದಾಸ ವಿಷಯಕ ಸಂಶೋಧನೆಯಲ್ಲಿ ತೊಡಗಿದರು. ಕೊನೆಯ 25 ವರ್ಷ ಶಂಕರ ದೇವ್ ಸನ್ಯಾಸಿಯಂತೆ ಬಾಳಿದರು.

ಅವರ ಸಾಧನೆಗಳು ಹಲವಾರು. 1893ರಲ್ಲಿ '[illegible] ಸಭಾ' ಆರಂಭಿಸಿದರು. ಯುವಕರಿಗೆ ದೇಶಸೇವೆಯಲ್ಲಿ ತರಬೇತಿ ಕೊಡುವುದು ಇವರ ಉದ್ದೇಶವಾಗಿತ್ತು. ಭೂಕಂದಾಯ ಹೆಚ್ಚಿಸಿದುದರ ವಿರುದ್ಧ 1896ರಲ್ಲಿ [illegible] ರೈತರೊಡನೆ 1919ರಲ್ಲಿ [illegible] ಭಾಗವಹಿಸಿದರು. ತಿಲಕರ ಹೋಂ ರೂಲ್ [illegible] ಪ್ರವಾಸ ಮಾಡಿದರು. ರಾಮದಾಸರ ವಿಷಯ ಸಂಶೋಧನೆಯ ಪ್ರವಾಸ ಕೈಗೊಂಡು 3,000 ಹಸ್ತಪ್ರತಿಗಳನ್ನೂ 3,000 ಪತ್ರ ಮತ್ತಿತರ ದಾಖಲೆಗಳನ್ನೂ ಸಂಗ್ರಹಿಸಿದರು. ತಮ್ಮದೇ ನಿಯತಕಾಲಿಕ 'ರಾಮದಾಸ್ ಆನಿ ರಾಮದಾಸಿ'. ಸ್ಥಾಪಿಸಿದರು. ಒಂದು ಅಚ್ಚುಕೂಟವನ್ನು ಅಣಿಗೊಳಿಸಿದರು. 'ಶ್ರೀ ಸಮರ್ಥ ಮಂದಿರ' ಎಂಬ ದೇವಾಲಯ ಕಟ್ಟಿಸಿದರು.

ಅವರ ಬರೆಹಗಳು 54. ಇವರಲ್ಲಿ 'ದಾಸಬೋಧ್' ಮುಖ್ಯವಾದದ್ದು.

ಶಂಕರನ್ ನಾಯರ್

"ಬ್ರಿಟಿಷ್ ಆಳ್ವಿಕೆಯಿಂದ ಭಾರತಕ್ಕೆ ಪ್ರಯೋಜನಗಳಾಗಿರಬಹುದು ; ಅವರಿಲ್ಲದಿದ್ದರೆ ಬೇರೆ ದೇಶಗಳು ದಂಡೆತ್ತಿ ಬರಬಹುದು. ಆದರೆ, ಹಾಗೆಂದುಕೊಂಡು ನಾವು ಸ್ವತಂತ್ರರಾಗದಿದ್ದರೆ ಹೇಗೆ ? "

—ಇದು 1897ರಲ್ಲಿ ರಾಷ್ಟ್ರೀಯ ಕಾಂಗ್ರೆಸ್ಸಿನ ಅಮರಾವತಿ ಅಧಿವೇಶನದಲ್ಲಿ ಅಧ್ಯಕ್ಷರ ಸವಾಲು.

"ಭೇಷ್. ಇದೀಗ ಗಂಡಸುತನದ ಮಾತು"—ಹಿರಿಯ ಧುರೀಣ ಸುರೇಂದ್ರನಾಥ ಬ್ಯಾನರ್ಜಿಯವರಿಂದ ಅಧ್ಯಕ್ಷರ ಮಾತಿನ ಪ್ರಶಂಸೆ.



ಮಹಾವ್ಯಕ್ತಿ : ಶಂಕರನ್ ನಾಯರ್

ಈ ಅಧ್ಯಕ್ಷ. ಶಂಕರನ್ ನಾಯರ್. ಆಗ ಅವರಿಗೆ ಐವತ್ತು ವರ್ಷ ವಯಸ್ಸು. ಆ ವರೆಗೆ ಕಾಂಗ್ರೆಸ್ ಅಧ್ಯಕ್ಷರಾಗಿದ್ದವರಲ್ಲಿ ಅವರು ಅತ್ಯಂತ ಕಿರಿಯ ವ್ಯಕ್ತಿ.

1857ರಲ್ಲಿ ಜನಿಸಿದ ಶಂಕರನ್ ನಾಯರ್ 19 ವರ್ಷ ವಯಸ್ಸಿಗೆ ಮದರಾಸು ಪ್ರೆಸಿಡೆನ್ಸಿ ಕಾಲೇಜಿನಿಂದ ಬಿ. ಎ. ಪದವೀಧರರಾದರು. ಕಾನೂನು ಅಭ್ಯಾಸಮಾಡಿ ಬಿ. ಎಲ್. ಪರೀಕ್ಷೆಯಲ್ಲಿ ಮದರಾಸು ಪ್ರಾಂತ್ಯದಲ್ಲೇ ಪ್ರಥಮ ಸ್ಥಾನ ಪಡೆದು ತೇರ್ಗಡೆಯಾದರು. 1880ರಲ್ಲಿ ಮದರಾಸು ಹೈಕೋರ್ಟಿನಲ್ಲಿ ವಕಾಲತ್ತು ಪ್ರಾರಂಭಿಸಿದರು. ದಕ್ಷ ವಕೀಲರಾಗಿ ಸಂಪತ್ತು. ಪ್ರಸಿದ್ಧಿ ಗಳಿಸಿದರು. ಸಾರ್ವಜನಿಕ ರಾಜಕೀಯ ಚಟುವಟಿಕೆಗಳಲ್ಲಿ ಭಾಗ ವಹಿಸಿದರು. 1889ರಲ್ಲಿ ಮದರಾಸು ವಿಶ್ವವಿದ್ಯಾಲಯದ ಫೆಲೋ ಆಗಿ ನೇಮಕಗೊಂಡರು. ಮದರಾಸ್ ಶಾಸನ ಮಂಡಲಿಗೆ ಆಯ್ಕೆಯಾದರು : ಅಲ್ಲಿ ಸಾರ್ವಜನಿಕರ ಅಹವಾಲುಗಳನ್ನು ಪರಿಣಾಮಕಾರಿಯಾಗಿ ಪ್ರತಿಪಾದಿಸಿದರು.

1907ರಲ್ಲಿ ಶಂಕರನ್ ನಾಯರರು ಅಡ್ವೊಕೇಟ್ ಜನರಲ್ ಆಗಿ ನೇಮಕಗೊಂಡರು. ಆ ಹುದ್ದೆಗೆ ಬಂದ ಪ್ರಥಮ ಭಾರತೀಯ ಅವರು. ಮರುವರ್ಷ ಮದರಾಸು ಹೈಕೋರ್ಟಿನ ನ್ಯಾಯಾಧೀಶರಾದರು.

1915ರಲ್ಲಿ ವೈಸ್‌ರಾಯರ ಮಂತ್ರಿಮಂಡಲದ ಸದಸ್ಯರಾಗಿ ಅವರ ನೇಮಕವಾಯಿತು. ಅವರು ರಾಜೀನಾಮೆಯನ್ನು ನೀಡಿದ ತೀರಾ ಪ್ರಮುಖ ಘಟನೆ 1919ರಲ್ಲಿ ಪಂಜಾಬಿನ ಜಲಿಯನ್‌ವಾಲಾ ಬಾಗ್ ಹತ್ಯಾಕಾಂಡವನ್ನು ಪ್ರತಿಭಟಿಸಿದರು : ರಾಜೀನಾಮೆ ಸಲ್ಲಿಸಿದರು. ಹತ್ಯಾಕಾಂಡದ ಬಗೆಗೆ ಇಂಗ್ಲೆಂಡಿನಲ್ಲಿ ಪ್ರಚಾರವಾಗುವಂತೆ ಕಾಂಗ್ರೆಸ್ ಸಂಸ್ಥೆ ಅವರನ್ನು ಕೇಳಿಕೊಂಡಿತು.

ಗಾಂಧೀಜಿಯ ಅಸಹಕಾರ ತತ್ತ್ವ ಶಂಕರನ್ ನಾಯರರಿಗೆ ಒಪ್ಪಿಗೆಯಾಗಲಿಲ್ಲ. ಅದನ್ನು ಟೀಕಿಸಿ 'ಗಾಂಧೀ ಮತ್ತು ಅರಾಜಕತೆ' ಎಂಬ ಪುಸ್ತಕವನ್ನು ಅವರು ಬರೆದರು. ಸರಕಾರವೂ ಆ ಪುಸ್ತಕವನ್ನು ಇಂಗ್ಲೆಂಡಿನಲ್ಲಿ ಕಂಡಿತು : ಅದರಲ್ಲಿ ಪಂಜಾಬ್ ಗವರ್ನರ್ ಒಡ್ವಯರನ ಅತ್ಯಾಚಾರವನ್ನು ಟೀಕಿಸಿದ್ದಕ್ಕಾಗಿ ಮಾನನಷ್ಟ ಮೊಕದ್ದಮೆ ನಡೆಯಿತು. ಮೂರು ಲಕ್ಷ ರೂ. ದಂಡ ತೆರಬೇಕಾಯಿತು.

ಮುಂದೆ ಭಿನ್ನಾಭಿಪ್ರಾಯಗಳಿಂದಾಗಿ ಶಂಕರನ್ ನಾಯರ್ ಕಾಂಗ್ರೆಸ್ಸಿನಿಂದ ದೂರವಾದರು. ಬ್ರಿಟಿಷ್ ಸರಕಾರ ಎಂಬ ನಿಂದೆಗೆ ಗುರಿಯಾದರು. 1934ರಲ್ಲಿ ಮಹಾವ್ಯಕ್ತಿಯಂತೆಯೇ ಶಂಕರನ್ ನಾಯರ್ ನಿಧನರಾದರು.

ಶಂಕರಾಚಾರ್ಯ

ನೋಡಿ : ಸಂಪುಟ ೧

ಶಂಬು ಮಹಾರಾಜ್

ನೋಡಿ : ಸಂಪುಟ ೫

ಶಕರು

ಈಗ ಸಿಂಧೂ ನದಿ ಪ್ರದೇಶದಲ್ಲಿರುವ ಶಕಸ್ತಾನ (ಸೀಸ್ತಾನ್ ಇರಾನ್) ದಲ್ಲಿ ನೆಲೆಸಿದ್ದ ಶಕರು ಕ್ರಿ. ಶ. 1ನೆಯ ಶತಕದಲ್ಲಿ ಭಾರತದ ಮೇಲೆ ದಂಡೆತ್ತಿಬಂದು ವಾಯುವ್ಯ ಭಾರತದಲ್ಲಿ ರಾಜ್ಯವನ್ನು ಸ್ಥಾಪಿಸಿದರು. ಇವರ ರಾಜ್ಯದ ಬಹುಭಾಗ ಕುಶಾನರ ವಶವಾದಾಗ. ಸೌರಾಷ್ಟ್ರ, ಗುಜರಾತ್, ಮಾಳ್ವ, ರಾಜಸ್ಥಾನಗಳೆಡೆ ಇವರು ವಿಸ್ತರಿಸಿದರು.

ಭೂಮಕನೆಂಬ ಇವರ ರಾಜನು ಕನಿಷ್ಕನ ಸಮಕಾಲೀನ. ಇವನ ಅನಂತರ ನಹಪಾನನು ಆಳಿದ. ಇವರಿಬ್ಬರೂ ಶಕರ ಕ್ಷಹರಾತ ಕುಲಕ್ಕೆ ಸೇರಿದವರು. 2ನೆಯ ಶತಮಾನದ ಆರಂಭದಲ್ಲಿ ಆಳಿದ ನಹಪಾನ ತನ್ನನ್ನು 'ಮಹಾಕ್ಷತ್ರಪ' ನೆಂದು ಕರೆದುಕೊಂಡಿದ್ದಾನೆ. ಈತನ ಮಗಳಾದ ದಕ್ಷಮಿತ್ರೆಯ ಪತಿ ಉಷವದತ್ತನೆಂಬ ಶಕನು ಹಿಂದೂವಾಗಿದ್ದು ನಹಪಾನನ ಮಾಂಡಲಿಕನಾಗಿ ಉತ್ತರ ಮಹಾರಾಷ್ಟ್ರದಲ್ಲಿ ಆಳುತ್ತಿದ್ದ. ಗೌತಮೀ ಪುತ್ರ ಶಾತಕರ್ಣಿಯು ಕ್ರಿ. ಶ. 125ರ ಸುಮಾರಿಗೆ ನಹಪಾನನನ್ನು ಸೋಲಿಸಿ ಕೊಂದ.

ಮುಂದೆ ಶಕರ ಕಾರ್ದಮಕ ಕುಲದವರು ಕ್ಷಹರಾತರ ರಾಜ್ಯವನ್ನು ಆಳಿದರು. ಚಷ್ಟನನು ಈ ವಂಶದ ಮೊದಲ ರಾಜ. ಈತನ ಬಳಿಕ ಇವನ ಮಗನಾದ ಜಯದಾಮನ್. ಮೊಮ್ಮಗ ರುದ್ರದಾಮನ್ ಆಳಿದರು. ಇವರು ಶಾತವಾಹನರನ್ನು ಸೋಲಿಸಿ ಶಕರಾಜ್ಯದ ಕಳೆದುಕೊಂಡ ಪ್ರದೇಶಗಳನ್ನು ಮತ್ತೆ ಗೆದ್ದರು. ರುದ್ರದಾಮನನ ಮಗಳನ್ನು ಗೌತಮೀ ಪುತ್ರ ಶಾತಕರ್ಣಿಯ ಮಗ ಪುಲುಮಾವಿ ವರಿಸಿದ. ರುದ್ರದಾಮನು ಉತ್ತಮ ಆಡಳಿತಗಾರನೂ ಸಂಸ್ಕೃತ ವಿದ್ವಾಂಸನೂ ಆಗಿದ್ದ. ಇವನ ಕಾಲದಲ್ಲಿ ಶಕರ ಭಾರತೀಕರಣ ಭರದಿಂದ ನಡೆಯಿತು. ಇವನ ವಂಶಜರು ಮುಂದೆ ಒಂದೂವರೆ ಶತಮಾನಗಳ ಕಾಲ ಸೌರಾಷ್ಟ್ರ. ಮಾಳ್ವಗಳಲ್ಲಿ ಆಳಿದರು. 4ನೆಯ ಶತಕದ ಕೊನೆಗೆ ಗುಪ್ತವಂಶದ 2ನೆಯ ಚಂದ್ರಗುಪ್ತನು ಈ ಪಶ್ಚಿಮ ಕ್ಷತ್ರಪರನ್ನು ಪೂರ್ತಿಯಾಗಿ ಸೋಲಿಸಿ 'ಶಕಾರಿ' ಬಿರುದು ತಳೆದ. ಇಲ್ಲಿಗೆ ಶಕರ ಆಳ್ವಿಕೆ ಮುಕ್ತಾಯಗೊಂಡಿತು.

ಶಕ ವರ್ಷ

ಶಾಲಿವಾಹನ ಶಕ ಅಥವಾ ಶಕ ವರ್ಷ ಭಾರತದಲ್ಲಿ ಕಾಲಗಣನೆಗಾಗಿ ಉಪಯೋಗಿಸುತ್ತಿರುವ ಒಂದು ಪದ್ಧತಿ. ಗೋದಾವರೀ ತೀರದ ಪ್ರತಿಷ್ಠಾನಪುರದ ಅರಸನಾಗಿದ್ದು ಉಜ್ಜಯಿನಿಯ ವಿಕ್ರಮಾದಿತ್ಯನನ್ನು ಸೋಲಿಸಿದ ಶಾಲಿವಾಹನ ಇದನ್ನು ಆರಂಭಿಸಿದನೆಂದು ಹೇಳಿಕೆ. ದೊರೆ ಕನಿಷ್ಕ ಹಾಗೂ ಕ್ಷತ್ರಪ ಇವರಲ್ಲಿ ಯಾರಾದರೊಬ್ಬ ಇದರ ಪ್ರವರ್ತಕನಿರಬೇಕೆಂಬ ಅಭಿಪ್ರಾಯವೂ ಇದೆ.

ಭಾರತದ ಅನೇಕ ಶಾಸನಗಳಲ್ಲಿ ಶಕ ವರ್ಷವನ್ನು ಉಪಯೋಗಿಸಿರುವುದು ಕಂಡುಬರುತ್ತದೆ. ಹಾಗೆಯೇ. ಇಂಡೋನೇಷ್ಯ ಮತ್ತು ಇಂಡೋಚೀನಗಳಲ್ಲಿ ದೊರೆತಿರುವ ಸಂಸ್ಕೃತ ಶಾಸನಗಳಲ್ಲೂ ಇದು ಉಪಯೋಗಿಸಲ್ಪಟ್ಟಿದೆ. 2ನೆಯ ಶತಮಾನದಲ್ಲಿ ಗುಜರಾತ್. ಮಾಳ್ವ. ಕಾಥೇವಾ[ಡ] ಗಳನ್ನಾಳಿದ ಸತ್ರಪರು ಶಕವರ್ಷವನ್ನು ಬಳಸುತ್ತಿದ್ದರು. ಅಲ್ಲಿಂ[ದ] ಇದು ದಕ್ಷಿಣ ಭಾರತಕ್ಕೂ ಆಗ್ನೇಯ ಏಷ್ಯಕ್ಕೂ ಪಸರಿಸಿತು ಎನ್ನುತ್ತಾ[ರೆ]. ಇದು ಈಗಲೂ ದಕ್ಷಿಣ ಭಾರತದಲ್ಲಿ ವ್ಯಾಪಕವಾಗಿ ಉಪಯೋಗದಲ್ಲಿ[ದೆ].

ದೇಶಕ್ಕೆಲ್ಲ ಏಕರೂಪ ಪಂಚಾಂಗ ಬೇಕೆಂದು ಭಾರತ ಸರಕಾರದವರು 1957ರಲ್ಲಿ ರಾಷ್ಟ್ರೀಯ ಪಂಚಾಂಗ ಹೊರತಂದರು. ಇದರಲ್ಲಿ ಅವರು ಶ[ಕ] ವರ್ಷವನ್ನೇ ಅನುಸರಿಸಿದ್ದಾರೆ. ಕ್ರಿಸ್ತ ಶಕ ಆರಂಭವಾದ 78 ವರ್ಷ[ಗಳ] ಅನಂತರ ಈ ಶಕ ಮೊದಲಾಯಿತು. ಕ್ರಿಸ್ತ ಶಕದಿಂದ 78 ವರ್ಷಗಳ[ನ್ನು]

ಕಳೆದರೆ ಶಾಲಿವಾಹನ ಶಕ ಬರುತ್ತದೆ. 1974 ಮಾರ್ಚ್ 22ರಂದು 1869ನೆಯ ಶಕ ವರ್ಷದ ಆರಂಭ.

ನೋಡಿ : ರಾಷ್ಟ್ರೀಯ ಪಂಚಾಂಗ

ಶಕ್ತಿ

ಭಾರತೀಯ ಧಾರ್ಮಿಕ ಚಿಂತನೆಯಲ್ಲಿ 'ಶಕ್ತಿ'ಗೆ ವಿಶಿಷ್ಟ ಸ್ಥಾನವಿದೆ. ಈ ಜಗತ್ತಿನ ಹುಟ್ಟು, ಇರುವು, ಅಂತ್ಯಗಳಿಗೆ ಕಾರಣವಾದ ದೈವೀಶಕ್ತಿ ಯೊಂದಿದೆ ಎಂಬ ಭಾವನೆಯ ಆಧಾರದ ಮೇಲೆ, 'ಶಕ್ತಿ'ಯನ್ನು ಕುರಿತ ನಾನಾ ಭಾವನೆಗಳು ಬೆಳೆದುಬಂದಿವೆ. ದೈವೀಶಕ್ತಿ ಹೆಣ್ಣುರೂಪದ್ದು ಎಂದೂ, ಹೆಣ್ಣು ಗಂಡು ಇವೆರಡೂ ಕೂಡಿದ್ದು ಎಂದೂ ಎರಡು ನಂಬಿಕೆ ಗಳಿವೆ.

ಶಕ್ತಿಯನ್ನು ಸ್ತ್ರೀರೂಪದಲ್ಲಿ ಆರಾಧಿಸುವುದು ತುಂಬ ಪ್ರಚಾರದಲ್ಲಿದೆ. ಆದ್ದರಿಂದ ಶಕ್ತಿ ಎಂದರೆ ಸ್ತ್ರೀರೂಪ ಎಂಬ ಭಾವನೆ ಬೆಳೆದಿದೆ; ಈ ರೂಪದ ಆರಾಧನೆಯ ಸಂಬಂಧದಲ್ಲಿ ಶಾಕ್ತಾಗಮಗಳು ಹುಟ್ಟಿವೆ.

ಶಕ್ತಿಯನ್ನು ತಾಯಿಯಾಗಿ, ಪ್ರೇಯಸಿಯಾಗಿ, ಜಗತ್ತಿನ ರಕ್ಷಕಿಯಾಗಿ, ಅದನ್ನು ನಾಶಮಾಡುವ ಕರಾಳರೂಪಿಣಿಯಾಗಿ —ಹೀಗೆ ಹಲವಾರು ರೂಪಗಳಲ್ಲಿ ಪೂಜಿಸುತ್ತಾರೆ. ಸ್ತ್ರೀ ಪುರುಷ ಅಂಶಗಳೆರಡೂ ಸೇರಿರುವ ದೇವತೆಗಳಲ್ಲೂ ಸ್ತ್ರೀ ಅಂಶವೇ ಪ್ರಧಾನವಾದದ್ದು; ಎಲ್ಲ ದೇವತೆಗಳೂ ಶಕ್ತರಾಗುವುದು ಶಕ್ತಿ ಅಂಶ ಅವರಲ್ಲಿ ಸೇರಿದಾಗಲೇ—ಎಂಬ ನಂಬಿಕೆಯಿದೆ.

ಶಕುಂತಲಾದೇವಿ

ಪಶ್ಚಿಮ ಜರ್ಮನಿಯಲ್ಲಿ ಮರ್ಸಿಡಿಸ್ ಬೆಂಜ್ ಸಂಸ್ಥೆಗೆ ಆಕೆ ಭೇಟಿ ಕೊಟ್ಟ ಸಮಯ. ಕಂಪ್ಯೂಟರ್ ಒಳಗೆ ಬಂದಾಗ. ಯಂತ್ರದೊಂದಿಗೆ ಸ್ಪರ್ಧಿಸಿ ಗೆಲ್ಲುವುದಾದರೆ ಕಾರನ್ನು ಬಹುಮಾನ ಕೊಡುವುದಾಗಿ ಮ್ಯಾನೇಜರ್ ಆಕೆಗೆ ಹೇಳಿದರು. ಆಕೆ ಸಮ್ಮತಿಸಿದರು. ಮೊದಲನೆಯದಾಗಿ. ಕಂಪ್ಯೂಟರಿಗೆ ಕೊಟ್ಟ ಸಮಸ್ಯೆಯಲ್ಲೇ ತಪ್ಪಿದೆ ಎಂದು ತೋರಿಸಿಕೊಟ್ಟರು. ತಾವು ಅದಕ್ಕಿಂತಲೂ ವೇಗವಾಗಿ ಮಾಡಬಲ್ಲೆನೆಂದೂ ಸಾಧಿಸಿದರು. ಮರ್ಸಿಡಿಸ್ ಕಾರನ್ನು ಗೆದ್ದುಕೊಂಡರು.

ಆಕೆಯೇ ಮಾನವ ಗಣಕಯಂತ್ರ ಎಂದು ಖ್ಯಾತರಾದ ಶಕುಂತಲಾದೇವಿ.

1936 ನವೆಂಬರ್ 4ರಂದು ಶಕುಂತಲಾದೇವಿ ಬೆಂಗಳೂರಿನಲ್ಲಿ ಜನಿಸಿ ದರು. ಚಿಕ್ಕವಯಸ್ಸಿಗೇ ಸಂಖ್ಯೆಗಳೆಂದರೆ ಪ್ರಬಲ ಆಕರ್ಷಣೆ. 5ನೆಯ ವಯಸ್ಸಿನಲ್ಲಿ ತೊಡಕಾದ ಗಣಿತ ಸಮಸ್ಯೆಗಳನ್ನು ಕ್ಷಣಗಳಲ್ಲಿ ಬಿಡಿಸ ತೊಡಗಿದರು.

ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಪ್ರಥಮ ಸಾರ್ವಜನಿಕ ಪ್ರದರ್ಶನ ಕೊಟ್ಟಾಗ ಆಕೆಗೆ ಇನ್ನೂ 6 ವರ್ಷ. ಪ್ರಾಧ್ಯಾಪಕರು, ವಿದ್ಯಾರ್ಥಿಗಳು ತುಂಬಿದ್ದ ಸಭೆಯಲ್ಲಿ 2 ಗಂಟೆಗೂ ಹೆಚ್ಚುಕಾಲ ಗಣಿತ ಸಮಸ್ಯೆಗಳಿಗೆ ಉತ್ತರ ನೀಡಿ ಎಲ್ಲರನ್ನೂ ದಂಗುಬಡಿಸಿದರು.

ಭಾರತದ ಆದ್ಯಂತ ಪ್ರದರ್ಶನಗಳಾದುವು. 1950ರ ಆಗಸ್ಟ್‌ನಲ್ಲಿ ವಿದೇಶ ಪ್ರವಾಸ ಕೈಗೊಂಡರು. ರೇಡಿಯೋ, ಟೆಲಿವಿಷನ್ ಸಂದರ್ಶನ ಗಳನ್ನು ನೀಡಿದರು.

ಅವರು ಕ್ಷಣಮಾತ್ರದಲ್ಲಿ 13ರಿಂದ 15 ಸಂಖ್ಯೆಗಳನ್ನು ಗುಣಿಸುತ್ತಾರೆ. ಸಂಖ್ಯೆಗಳಿಗೆ 4, 5 ಮತ್ತು 6ನೆಯ ಘಾತಮೂಲ ಕಂಡುಹಿಡಿಯುತ್ತಾರೆ. 42 ಅಂಕಿಗಳುಳ್ಳ ಸಂಖ್ಯೆಗೆ 20ನೆಯ ಘಾತಮೂಲ ಹೇಳುತ್ತಾರೆ.

ಐವತ್ತು ವರ್ಷ ಹಿಂದಿನ ಯಾವುದಾದರೂ ತಾರೀಖು ಹೇಳಿದರೆ. ವಾರ ಯಾವುದೆಂದು ತಿಳಿಸುತ್ತಾರೆ. ಹಾಗೆಯೇ ಮುಂದಿನ ವರ್ಷಗಳಿಗೂ ಸೂಚಿಸುತ್ತಾರೆ.

ಶಕುಂತಲಾ ಶಾಲೆಗೆ ಹೋಗಿ ಕಲಿತವರಲ್ಲ. ಪ್ರದರ್ಶನದ ದಿವಸ ಆಕೆ ಸ್ವಲ್ಪ ಕಾಲ ಧ್ಯಾನಮಾಡುವ ಅಭ್ಯಾಸ ಇರಿಸಿಕೊಂಡಿದ್ದಾರೆ.

ಐ.ಎ.ಎಸ್. ಅಧಿಕಾರಿ ಪರಿತೋಷ ಸಿ. ಬ್ಯಾನರ್ಜಿ ಇವರ ಪತಿ.

"ಉತ್ತರ ಮನಸ್ಸಿಗೆ ಸ್ಫುರಿಸುತ್ತವೆ. ಹೇಗೆ ಎಂದು ಗೊತ್ತಿಲ್ಲ". ಎನ್ನುತ್ತಾರೆ ಆಕೆ.



ಮಾನವ ಗಣಕಯಂತ್ರ : ಶಕುಂತಲಾದೇವಿ

ಶಕುನಿ

ಕುಟಿಲತನಕ್ಕೆ ಹೆಸರಾದವನು ಶಕುನಿ. ಈತ ಗಾಂಧಾರ ದೇಶದ ರಾಜ ಸುಬಲನ ಮಗ. ಸೌಬಲ್ಯ ಎಂಬ ಹೆಸರೂ ಈತನಿಗಿದೆ.

ಗಾಂಧಾರಿಯ ಸೋದರ ಶಕುನಿ, ಪಗಡೆ ಆಟದಲ್ಲಿ ಅಪ್ರತಿಮ. ದುರ್ಯೋಧನನಿಗೆ ಸೋದರಮಾವ ಶಕುನಿ ಬಲು ಆಪ್ತ. ಆತನಿಗೆ ದುಷ್ಟ ನೀತಿಗಳನ್ನು ಬೋಧಿಸುತ್ತಿದ್ದವನೇ ಶಕುನಿ.

ಶಕುನಿಗೆ ಪಾಂಡವರ ಶಕ್ತಿ, ಸಾಮರ್ಥ್ಯಗಳ ಅಸೂಯೆ. ಜೂಜಿಗೆ ಆಹ್ವಾನಿಸಿ ಕುತಂತ್ರದಿಂದ ಮಾತ್ರ ಅವರನ್ನು ಸೋಲಿಸಬೇಕೆಂದು ದುರ್ಯೋಧನನಿಗೆ ತಿಳಿಯಹೇಳಿದ. ಹೀಗೆ ಧರ್ಮರಾಯ ಜೂಜಿನಲ್ಲಿ ಸೋಲುವಂತೆ ಮಾಡಿದ. ಪಾಂಡವರನ್ನು ರಾಜ್ಯಭ್ರಷ್ಟರನ್ನಾಗಿ ಮಾಡು ವುದರಲ್ಲಿ ಯಶಸ್ವಿಯಾದ.

ಕಾಡಿನಲ್ಲಿ ಬಡತನದಿಂದ ಜೀವಿಸುತ್ತಿದ್ದ ಪಾಂಡವರ ಎದುರು ತನ್ನ ರಾಜವೈಭವವನ್ನು ಮೆರೆಸಬೇಕೆಂದು ದುರ್ಯೋಧನನನ್ನು ಕಾಡಿಗೆ ಕರೆದು ಕೊಂಡು ಹೋದವನು ಶಕುನಿ.

ಶಕುನಿಯ ಕುಟಿಲ ಸಲಹೆ



[illegible] ಪತನವಾದ.

ಶತ್ರುಂಜಯ

ಜೈನರಿಗೆ ಪವಿತ್ರ ಯಾತ್ರಾಸ್ಥಳ, ಶತ್ರುಂಜಯ. ಇದು ಗುಜರಾತಿನ ಸೂರತ್‌ನಿಂದ 70 ಮೈಲು ದೂರದಲ್ಲಿದೆ.

ಸಮುದ್ರ ಮಟ್ಟದಿಂದ 1977 ಅಡಿ ಎತ್ತರದಲ್ಲಿರುವ ಶತ್ರುಂಜಯ ಪರ್ವತದ ಅಗ್ರಭಾಗ ಎರಡು ಶ್ರೇಣಿಗಳಾಗಿ ಒಡೆದು, ನಡುವೆ ಒಂದು ಕಣಿವೆ ಇದೆ. ಇಲ್ಲಿ 860ಕ್ಕೂ ಹೆಚ್ಚು ದೇವಾಲಯಗಳಿವೆ. ಸುಮಾರು 11,000 ವಿಗ್ರಹಗಳೂ 900 ಪಾದುಕೆಗಳೂ ಇವೆ. ಇದನ್ನು ಬ್ರಹ್ಮಗಿರಿ, ಸಿದ್ಧಾಚಲ ಎಂತಲೂ ಕರೆಯುತ್ತಾರೆ.

ಚೌಲುಕ್ಯರ ಆಳ್ವಿಕೆಯಲ್ಲಿ ಗುಜರಾತಿನಲ್ಲಿ ಜೈನಮತ ಪ್ರಬಲವಾಗಿದ್ದು ಶತ್ರುಂಜಯದ ಪ್ರಾಮುಖ್ಯ ಹೆಚ್ಚಿತು. ಮೊದಲನೆಯ ಭೀಮದೇವನ ಮಂತ್ರಿ ವಿಮಲನ ಹೆಸರಿನಲ್ಲಿ ಒಂದು ದೇವಾಲಯವಿದೆ. ಚೌಮುಖ ದೇವಾಲಯ ದೊಡ್ಡದು. ಅಶೋಕನ ಮೊಮ್ಮಗ ಸಂಪ್ರತಿರಾಜನೂ ಒಂದು ದೇವಾಲಯವನ್ನು ಕಟ್ಟಿಸಿದನೆಂದು ಹೇಳುತ್ತಾರೆ. 24 ತೀರ್ಥಂಕರರಲ್ಲಿ ಮೊದಲನೆಯವನಾದ ಆದಿನಾಥ ದೇವಾಲಯ, ಕುಮಾರಪಾಲ ದೇವಾಲಯ, ವಿಮಲಷಾ ದೇವಾಲಯ ಮುಖ್ಯವಾದುವು.

ಇಲ್ಲಿನ ದೇವಾಲಯಗಳಲ್ಲಿ ಕೆಲವು 11ನೆಯ ಶತಮಾನದಷ್ಟು ಹಿಂದಿನವು. 14 ಮತ್ತು 15ನೆಯ ಶತಮಾನದಲ್ಲಿ ಮುಸಲ್ಮಾನರ ದಾಳಿಗೆ ತುತ್ತಾಗಿ ಅನೇಕ ದೇವಾಲಯಗಳು ನಾಶವಾದುವು. ಈಗಿರುವ ದೇವಾಲಯಗಳಲ್ಲಿ ಹೆಚ್ಚಿನವು 15 ಮತ್ತು 16ನೆಯ ಶತಮಾನಗಳ ನಿರ್ಮಾಣ.

ಶಬರ ಸ್ವಾಮಿನ್

ಧರ್ಮ ಯಾವುದು ? ಅಧರ್ಮ ಯಾವುದು ?—ಎಂಬುದನ್ನು ವೇದಗಳು ತಿಳಿಸುತ್ತವೆ. ವೇದಗಳ ಅರ್ಥವನ್ನು ವಿವರಿಸಿ ಜೈಮಿನಿ 'ಮೀಮಾಂಸಾ ಸೂತ್ರ' ಬರೆದ. ಆ 'ಮೀಮಾಂಸಾ ಸೂತ್ರ'ಕ್ಕೆ ಭಾಷ್ಯ ಬರೆದವನು, ಶಬರ ಸ್ವಾಮಿನ್.

ಶಬರನ ಕಾಲ ಸುಮಾರು 450. ಇವನ ಗುರು ಉಪವರ್ಷ. ಅಮೋಘ ಭಾಷ್ಯಕಾರನೆಂದು ಶಬರ ಖ್ಯಾತಿ ಗಳಿಸಿದ. ಅವನ ಗ್ರಂಥದ ಹೆಸರು 'ಶಬರ ಭಾಷ್ಯ'.

ಶಬರ ಭಾಷ್ಯದ ಮೇಲೆ ಕುಮಾರಿಲಭಟ್ಟ ವಿವರಣಾತ್ಮಕ ಗ್ರಂಥ ರಚಿಸಿದ್ದಾನೆ.

[illegible] ಅಪ್ರಕೃತ—[illegible] ಅಭಿಪ್ರಾಯ.

ನೋಡಿ : ಕುಮಾರಿಲ ಭಟ್ಟ

ಶಬರಿ

[illegible]

[illegible] ದೂರಕ್ಕೆ ದೃಷ್ಟಿ ಬೀರಿ ನೋಡುತ್ತಿದ್ದಾಳೆ. ನಿರೀಕ್ಷಿಸುತ್ತಿದ್ದಾಳೆ.

ರಾಮನ ಬರವಿಗಾಗಿ ಕಾಯುತ್ತಿದ್ದ ಶಬರಿಯ ಚಿತ್ರ ಇದು.

ಶಬರಿ ಬೇಡರವಳು. ಮತಂಗ ಮುನಿಯ ಶಿಷ್ಯರು ಅವಳ ಒಡೆಯರು. ರಾಮ ಅವಳ ಗುಡಿಸಲಿಗೆ ಬರುತ್ತಾನೆಂದೂ ಆನಂತರ ಅವಳು ಹಿಂದಿರುಗಿ ಬಾರದಂಥ ಲೋಕವನ್ನು ಸೇರುವಳೆಂದೂ ಶಿಷ್ಯರು ಶಬರಿಗೆ ಭರವಸೆ ಕೊಟ್ಟಿದ್ದರು.

ಅಲ್ಲಿಂದ ಶಬರಿಯ ಕಾಯುವಿಕೆ ಆರಂಭ. ಕಾಡಿನಲ್ಲಿ ತಿರುಗಿ ಒಳ್ಳೆಯ ಹಣ್ಣುಗಳನ್ನು ಅವನಿಗಾಗಿ ಆರಿಸಿ ತರುತ್ತಿದ್ದಳು. ತಾನೇ ರುಚಿನೋಡಿ, ರಾಮನಿಗೆ ಅರ್ಪಿಸಲು ಚೆನ್ನಾಗಿವೆಯೇ ಎಂದು ನಿರ್ಧರಿಸುತ್ತಿದ್ದಳು.



ಅತಿಥಿ ಸತ್ಕಾರ : ಶಬರಿ

ಅಂತೂ ಕೊನೆಗೆ ರಾಮ ಬಂದಾಗ ಶಬರಿ ಅವನ ಕಾಲಿಗೆರಗಿದಳು. ತಂದಿರಿಸಿದ್ದ ಹಣ್ಣುಗಳನ್ನು ಕೊಟ್ಟು ಆದರಿಸಿದಳು. ಅವಳ ಸರಳಭಕ್ತಿಯಿಂದ ರಾಮ ಸುಪ್ರೀತನಾದ.

ರಾಮನ ಬರವಿನಿಂದ ತನ್ನ ತಪಸ್ಸು ಪರಾಕಾಷ್ಠೆ ತಲಪಿತೆಂದು ಶಬರಿ [illegible]. ಆಕೆಯ ಆಸೆ ಪೂರ್ಣಗೊಂಡಿತು. ತಾನು [illegible] ಲೋಕಕ್ಕೆ ಸೇರುವೆನೆಂದೂ [illegible]. ರಾಮ ನೋಡುತ್ತಿದ್ದಂತೆಯೇ ಅಗ್ನಿಪ್ರವೇಶ ಮಾಡಿದಳು. ಸರಳತೆ, ಭಕ್ತಿ, [illegible] ಜ್ಞಾನ ಹಾಗೂ ಆತ್ಮಸಂಯಮ ಆಕೆ ತನ್ನ ಗುರಿಮುಟ್ಟುವಂತೆ ಈ ಗುಣಗಳು ಮಾಡಿದುವು.

ಶಬರಿಮಲೈ

[illegible] ದೇವಾಲಯವಿದೆ. [illegible] ಕರೆಯುತ್ತಾರೆ.

[illegible] ಮಗುವಿನ ಕೊರಳಿಗೆ ಮಣಿಸರ ಹಾಕಿ ಕಾಡಿನಲ್ಲಿ ಬಿಟ್ಟುಹೋದರು. [illegible] 'ಮಣಿಕಂಠ' ಎಂದು ಹೆಸರಿಟ್ಟ. [illegible]



ಶಬರಿಮಲೈ ಅಯ್ಯಪ್ಪನ್

ಕಟ್ಟಿಸಬೇಕು. ಪೂರ್ವ ದಿಕ್ಕಿನಿಂದ 8 ಮೆಟ್ಟಿಲು ಇಡಿಸಬೇಕು —ಎಂದು ಮಣಿಕಂಠ ರಾಜನಿಗೆ ಹೇಳಿ ಮಾಯವಾದ. ಅದರಂತೆ ದೇವಾಲಯವನ್ನೂ ಮೆಟ್ಟಿಲುಗಳನ್ನೂ ಶಬರಿಮಲೈ ಬೆಟ್ಟದಲ್ಲಿ ರಾಜ ಕಟ್ಟಿಸಿದ.

—ಇದು ಅಯ್ಯಪ್ಪನ ದೇವಾಲಯದ ಬಗೆಗೆ ಇರುವ ಕಥೆ.

[illegible] ನಿಯಮವಿದೆ. ಮುದುಕಿಯರು ಈ ನಿಯಮಕ್ಕೆ ಅಪವಾದ.

[illegible] ಉತ್ಸವ ನಡೆಸುತ್ತಾರೆ.

[illegible]

[illegible] ಪಾಲಿಸುತ್ತಾರೆ. ಮದ್ಯಪಾನ ಮಾಡುವುದಿಲ್ಲ. ಅಯ್ಯಪ್ಪನ ಹಾಡುಗಳನ್ನು ಹೇಳುತ್ತಾರೆ. ಯಾತ್ರೆ ಹೊರಡುವ ಹಿಂದಿನ ದಿನ ಪೂಜೆ ಮಾಡುತ್ತಾರೆ. ಅನಂತರ ಇರುಮುಡಿ —ಎಂದರೆ, ಯಾತ್ರಾ ಸಮಯಕ್ಕೆ ಬೇಕಾಗುವ ಆಹಾರ ಪದಾರ್ಥಗಳ ಒಂದು ಗಂಟು ಮತ್ತು ದೇವರಿಗೆ ಅರ್ಪಿಸಲು ತುಪ್ಪ, ತೆಂಗಿನಕಾಯಿ, ಕರ್ಪೂರ ಒಳಗೊಂಡ ಇನ್ನೊಂದು ಗಂಟು —ಕಟ್ಟಿಕೊಳ್ಳುತ್ತಾರೆ.

ಮಾರ್ಗವಾದ ದಾರಿ. ಎರುಮೇಲಿ ಕಾಡಿನ ತನಕ ಬಸ್ಸಿನಲ್ಲಿ ಹೋಗಬಹುದು. ಕಾಡನ್ನು ದಾಟಿದಮೇಲೆ ಬೆಟ್ಟ ಸಿಗುತ್ತದೆ. 18 ಮೆಟ್ಟಿಲು ಹತ್ತುವಾಗ ತೆಂಗಿನಕಾಯಿ ಒಡೆಯಬೇಕು. ಮುಂದೆ ಕ್ಷೇತ್ರದ ಅಂಗಳ. ಅಲ್ಲಿನ ಬಲಿಕುಂಡದಲ್ಲಿ ಕರ್ಪೂರ ಕೊಡಬೇಕು.

ಈ ಕ್ಷೇತ್ರವನ್ನು ಪರಶುರಾಮ ಸ್ಥಾಪಿಸಿದ ಎಂದು ಹೇಳುತ್ತಾರೆ. 'ಶ್ರೀರಾಮಪಾದ' ಎಂಬ ಜಾಗ ಅಹಲ್ಯೆಗೆ ಶಾಪ ವಿಮೋಚನೆಯಾದ ಸ್ಥಳ ಎಂಬ ನಂಬಿಕೆ ಇದೆ.

ಶರಣರು

ಶರಣರು ಎಂದರೆ ದೇವರ ಮೊರೆ ಹೊಕ್ಕವರು ಎಂದು ಅರ್ಥ.

ಹನ್ನೆರಡನೆಯ ಶತಮಾನದಲ್ಲಿ ಕನ್ನಡನಾಡಿನಲ್ಲಿ ಪ್ರಬಲ ಧಾರ್ಮಿಕ, ಸಾಮಾಜಿಕ ಕ್ರಾಂತಿಯುಂಟಾಯಿತು. ಬಸವೇಶ್ವರರ ಮುಂದಾಳುತನದಲ್ಲಿ ಇದು ನಡೆಯಿತು. ಈ ಕ್ರಾಂತಿಯಲ್ಲಿ ಭಾಗವಹಿಸಿದ ಭಕ್ತಶ್ರೇಷ್ಠರನ್ನು ಶರಣರೆಂದು ಕರೆಯುವುದು ವಾಡಿಕೆ.

ಶರಣರು ಆಧ್ಯಾತ್ಮಿಕ ಜೀವನದಲ್ಲಿ ಆಸಕ್ತರಾದರೂ ಅವರು ಲೌಕಿಕ ಜೀವನದಿಂದ ದೂರವಾಗಲಿಲ್ಲ. ಏನಾದರೊಂದು ಉದ್ಯೋಗದಿಂದ ತಮ್ಮ ಜೀವನವನ್ನು ನಡೆಸಬೇಕು. ಸೋಮಾರಿಗಳಾಗಿರಬಾರದು— ಎಂಬುದು ಶರಣರ ನಿಲುವು.

ಸಮಾಜದಲ್ಲಿ ಬೆಳೆದುಬಂದಿದ್ದ ಮೂಢನಂಬಿಕೆಗಳನ್ನೂ ಜಾತಿಭೇದಗಳನ್ನೂ ಶರಣರು ವಿರೋಧಿಸಿದರು. ನೈತಿಕ ಜೀವನಕ್ಕೆ ಮಹತ್ತ್ವ ಕೊಟ್ಟರು: ಭಕ್ತರೆಲ್ಲರೂ ಒಂದೇ, ಅವರಲ್ಲಿ ಭೇದ ಮಾಡಲಾಗದು ಎಂದರು: ಅದರಂತೆ ನಡೆದರು.

ತಮ್ಮ ಆಧ್ಯಾತ್ಮಿಕ ಅನುಭವಗಳನ್ನು ಸರಳವಾದ ಕನ್ನಡದಲ್ಲಿ ಸ್ಪಷ್ಟವಾಗಿ ವಿವರಿಸಿದರು: ತಮ್ಮ ತಿಳಿವನ್ನು ಜನರಿಗೆ ಹಂಚಿ ಅವರ ಉದ್ಧಾರಕ್ಕೆ ಕಾರಣರಾದರು.

[illegible]

[illegible] ಶರಣೆಯರು.

[illegible] ಶರಣರು.

ಶರಚ್ಚಂದ್ರ ಚಟ್ಟೋಪಾಧ್ಯಾಯ

ನೋಡಿ : ಸಂಪುಟ ೫

ಶರಾವತಿ ಜಲವಿದ್ಯುತ್ ಯೋಜನೆ

ಕೇವಲ 82 ಮೈಲು ಉದ್ದದ ಶರಾವತಿ ಪೂರ್ಣವಾಗಿ ಕರ್ನಾಟಕ ರಾಜ್ಯದಲ್ಲಿ ಹರಿಯುವ ನದಿ. ಇದು ಜಲವಿದ್ಯುತ್ ಉತ್ಪಾದನೆಗೆ ತುಂಬ ಉಪಯುಕ್ತವಾಗಿದೆ.

ಇದಕ್ಕಾಗಿ ಈ ನದಿಯನ್ನು ಉಪಯೋಗಿಸುವ ಬಗೆಗೆ ಸರ್. ಎಂ. ವಿಶ್ವೇಶ್ವರಯ್ಯನವರು ಮೈಸೂರಿನ ದಿವಾನರಾಗಿದ್ದಾಗಲೇ ಪರಿಶೀಲನೆ ನಡೆದಿತ್ತು. ಆದರೆ ಇಲ್ಲಿ ವಿದ್ಯುತ್ ಉತ್ಪಾದನೆ ಆರಂಭವಾದದ್ದು 1952 ರಲ್ಲಿ, ಮಹಾತ್ಮ ಗಾಂಧಿ ಜಲವಿದ್ಯುತ್ ಉತ್ಪಾದನಾ ಕೇಂದ್ರದಲ್ಲಿ. ಹಿರೇಭಾಸ್ಕರ ಬಳಿಯಲ್ಲಿ ಶರಾವತಿಗೆ ಅಡ್ಡವಾಗಿ ಕಟ್ಟಿದ ಅಣೆಕಟ್ಟಿನಿಂದ ಈ ಕೇಂದ್ರಕ್ಕೆ ನೀರು ಸರಬರಾಜು ಆಗುತ್ತಿತ್ತು.

ಶರಾವತಿ ಪ್ರದೇಶದಲ್ಲಿ ಹೆಚ್ಚು ವಿದ್ಯುತ್ ಉತ್ಪಾದನೆ ಮಾಡಲು ಒಂದು ಸಮಗ್ರ ಯೋಜನೆ 1954ರಲ್ಲಿ ರೂಪಿತವಾಯಿತು. ಈ ಯೋಜನೆಗೆ ಬೇಕಾದ ಹಣದ ಬಹುಭಾಗವನ್ನು ಅಮೆರಿಕದ ಮೂಲಗಳಿಂದ ಒದಗಿಸಿ ಕೊಂಡ ಮೇಲೆ 1958ರಲ್ಲಿ ಕೆಲಸ ಆರಂಭವಾಯಿತು.

ಈ ಯೋಜನೆಯ ಅಂಗವಾಗಿ ಲಿಂಗನಮಕ್ಕಿ ಬಳಿ ಒಂದು ದೊಡ್ಡ ಜಲಾಶಯ ನಿರ್ಮಿತವಾಯಿತು. ಇದು ಕೃಷ್ಣರಾಜಸಾಗರದ ಮೂರೂ ವರೆಯಷ್ಟಿದೆ. ಒಂದೂವರೆ ಲಕ್ಷ ಮಿಲಿಯ ಘನ ಅಡಿ ನೀರು ಈ ಕಟ್ಟೆಯಲ್ಲಿ ನಿಲ್ಲುತ್ತದೆ. ಲಿಂಗನಮಕ್ಕಿ ಜಲಾಶಯದ ಉದ್ದ ಒಂದೂವರೆ ಮೈಲು; ನದೀ ಪಾತ್ರದಿಂದ ಎತ್ತರ 181 ಅಡಿ.



ಶರಾವತಿ : ವಿದ್ಯುತ್ ಉತ್ಪಾದನಾ ಕೇಂದ್ರ

ಲಿಂಗನಮಕ್ಕಿ ಜಲಾಶಯದಿಂದ ಬರುವ ನೀರಿನಿಂದ ಆನೆಬೈಲು ಎಂಬ ಸ್ಥಳದಲ್ಲಿ ವಿದ್ಯುತ್ ಉತ್ಪಾದನೆ ನಡೆಯುತ್ತದೆ. ಯೋಜನೆಯ ಮೊದಲನೆಯ ಹಂತದಲ್ಲಿ ಪ್ರತಿಯೊಂದೂ 89.100 ಕಿಲೋವಾಟ್ ಉತ್ಪಾದಿಸುವ ಎರಡು ಘಟಕಗಳನ್ನು ಸ್ಥಾಪಿಸಲಾಯಿತು. 1973ರ ಹೊತ್ತಿಗೆ ಒಟ್ಟು ಎಂಟು ಘಟಕಗಳು ಉತ್ಪಾದನೆಯಲ್ಲಿ ತೊಡಗಿದ್ದುವು.

ಶರಾವತಿ ಯೋಜನೆಯಲ್ಲಿ ಉತ್ಪಾದಿಸುವ ವಿದ್ಯುತ್ತನ್ನು ಅಲ್ಲಿಂದ 68 ಮೈಲು ದೂರದಲ್ಲಿರುವ ಶಿವಮೊಗ್ಗಕ್ಕೆ, 95 ಮೈಲು ದೂರದಲ್ಲಿರುವ ಹುಬ್ಬಳ್ಳಿಗೆ 175 ಮೈಲು ದೂರದಲ್ಲಿರುವ ಬೆಂಗಳೂರಿಗೆ ಸಾಗಿಸುತ್ತಾರೆ. ಇಲ್ಲಿ ಗ್ರಾಹಕ ಕೇಂದ್ರಗಳಿವೆ.

ಶ್ರದ್ಧಾನಂದ

ನೋಡಿ : ಸ್ವಾಮಿ ಶ್ರದ್ಧಾನಂದ

ಶ್ರವಣಬೆಳಗೊಳ

ನೋಡಿ : ಸಂಪುಟ ೧

ಶಾಂತಾರಾವ್

ಪಂದನಲ್ಲೂರು ಮೀನಾಕ್ಷಿಸುಂದರಂ ಪಿಳ್ಳೆಯವರಲ್ಲಿ ಭರತನಾಟ್ಯದ ಶಿಕ್ಷಣ : ರಾಮುಣ್ಣಿ ಮೆನನರಿಂದ ಕಥಕಳಿ ಕಲಿಕೆ : ಕೃಷ್ಣ ಪಣಿಕ್ಕರ್ ಅವರ ಬಳಿ ಮೋಹಿನಿ ಆಟ್ಟಂ ಅಭ್ಯಾಸ : ಸಿಂಹಳಕ್ಕೆ ತೆರಳಿ ಅಲ್ಲಿನ ಕ್ಯಾಂಡೀ ನೃತ್ಯಾಭ್ಯಾಸ : ವೆಂಕಟಾಚಲಪತಿ ಶಾಸ್ತ್ರಿ ಅವರಲ್ಲಿ ಭಾಮಾ ಸೂತ್ರಂ ಶಿಕ್ಷಣ. ಹೀಗೆ ಭಾರತದ ಅನೇಕ ನೃತ್ಯಪ್ರಕಾರಗಳನ್ನು ಶಾಸ್ತ್ರೀಯವಾಗಿ ಅಭ್ಯಾಸ ಮಾಡಿ ಅವುಗಳಲ್ಲಿ ಹೊಸ ಕಳೆಯನ್ನು ತುಂಬಿದವರು, ಶಾಂತಾರಾವ್. ಇವರ ನರ್ತನವನ್ನು ಕಂಡ ಪಂಡಿತ ಜವಾಹರಲಾಲ ನೆಹರೂ "ಭಾರತೀಯ ನೃತ್ಯ ಇಷ್ಟು ಸುಂದರವಾಗಿರುತ್ತದೆ ಎಂದು ಗೊತ್ತೇ ಇರಲಿಲ್ಲ." ಎಂದು ಉದ್ಗರಿಸಿದರು,

ಜನನ ಮೂರನೆಯ ದಶಕದಲ್ಲಿ : ಬಾಲ್ಯ ಮುಂಬಯಿಯಲ್ಲಿ : ಚಿಕ್ಕಂದಿನಿಂದಲೂ ನಾಟ್ಯದಲ್ಲಿ ಆಸಕ್ತಿ. ಸುಮಾರು ಹದಿನಾಲ್ಕು-ಹದಿನೈದು ವಯಸ್ಸಿನವರಾಗಿರುವಾಗಲೇ ಕೇರಳಕ್ಕೆ ಪ್ರಯಾಣ. ಕೇರಳ ಕಲಾಮಂಡಲಂನಲ್ಲಿ ಕಥಕಳಿ ಅಭ್ಯಾಸ. ಅನಂತರ ಇತರ ನೃತ್ಯ ಪ್ರಕಾರಗಳಲ್ಲಿ ಶಿಕ್ಷಣ. ಶಾಂತಾರಾವ್ ಅವರ ನೃತ್ಯ ಸಂಪೂರ್ಣ ಶಾಸ್ತ್ರೀಯ ರೀತಿಯದು. ಆದರೂ ಇದರಲ್ಲಿ ಈಕೆಯ ವೈಯಕ್ತಿಕ ಪ್ರತಿಭೆಯ ಹೊಳಹನ್ನು ಕಾಣಬಹುದು. ಶಾಂತಾರಾವ್ ರೂಪಿಸಿರುವ ಭಾಮಾ ನೃತ್ಯದಲ್ಲಿ ಇದು ಎದ್ದು ಕಾಣುತ್ತದೆ,

ಶಾಂತಾರಾವ್ ನಮ್ಮ ರಾಷ್ಟ್ರದ ವಿವಿಧ ಭಾಗಗಲ್ಲಿ ಅನೇಕ ನೃತ್ಯ ಪ್ರದರ್ಶನ ನಡೆಸಿದ್ದಾರೆ : ಕಲಾಪ್ರೇಮಿಯ ಮೆಚ್ಚುಗೆಗೆ ಪಾತ್ರರಾಗಿದ್ದಾರೆ. ಅಲ್ಲದೆ ಪಶ್ಚಿಮ ಏಷ್ಯ. ಚೀನ, ಸಿಂಹಳ. ಅಮೆರಿಕ, ಯೂರೋಪ್ . ಇಸ್ರೇಲ್ ಮುಂತಾದ ಕಡೆಗಳಲ್ಲೂ ತಮ್ಮ ನೃತ್ಯ ಪ್ರದರ್ಶನದಿಂದ ಜನರನ್ನು ಆಕರ್ಷಿಸಿದ್ದಾರೆ.

ಶಾಂತಾರಾವ್ ನೃತ್ಯವೊಂದರಲ್ಲೇ ಅಲ್ಲದೆ ಗಾಯನ, ಚಿತ್ರಕಲೆ, ಬರೆವಣಿಗೆಗಳಲ್ಲೂ ಪರಿಣತಿ



ಮೋಹಿನಿ ಆಟ್ಟಂ : ಶಾಂತಾರಾವ್

ಪಡೆದಿದ್ದಾರೆ. ಮೈಸೂರು ರಾಜ್ಯ ಸಂಗೀತ ನಾಟಕ ಅಕಾಡೆಮಿ. ಇವರಿಗೆ ಪ್ರಶಸ್ತಿ ಕೊಟ್ಟು ಗೌರವಿಸಿದೆ. ಇವರು ಬೆಂಗಳೂರು ನಗರದ ನಿವಾಸಿ.

ಶಾಂತಿ ಘೋಷ್

9ನೆಯ ತರಗತಿಯ ಇಬ್ಬರು ವಿದ್ಯಾರ್ಥಿನಿಯರು ಬ್ರಿಟಿಷ್ ಸರ್ಕಾರದ ಉನ್ನತ ಅಧಿಕಾರಿಯೊಬ್ಬನನ್ನು ಕೊಂದು ಹಠಾತ್ತನೆ ಅಖಿಲ ಭಾರತ ಪ್ರಖ್ಯಾತಿ ಪಡೆದರು. ಅವರು : ಶಾಂತಿ ಘೋಷ್ ಮತ್ತು ಸುನೀತಿ ಚೌಧುರಿ.



ಕ್ರಾಂತಿ : ಶಾಂತಿ

ಶಾಂತಿ ಘೋಷ್ ಜನಿಸಿದ್ದು 1916ರಲ್ಲಿ. ತಂದೆ ಕೊಮಿಲದಲ್ಲಿ (ಈಗ ಬರ್ಮದಲ್ಲಿದೆ) ಪ್ರಾಧ್ಯಾಪಕರಾಗಿದ್ದರು. ಆಕೆ ಫೈಜುನ್ನೀಸಾ ಬಾಲಕಿಯರ ಶಾಲೆಯಲ್ಲಿ ಓದುತ್ತಿದ್ದರು. ಕ್ರಾಂತಿ ಪಕ್ಷವನ್ನು ಸೇರಿಕೊಂಡರು. ಶಾಂತಿ ಹಾಗೂ ಸುನೀತಿ ಛತ್ರಿ ಸಂಘ ಪ್ರಾರಂಭಿಸಿದರು. ಕಠಾರಿ ಹಿಡಿಯುವುದು ಪಿಸ್ತೂಲು ಹಾರಿಸಲು ಅಭ್ಯಾಸ ಮಾಡಿದರು.

ಗಾರ್ಲಿಕ್ ಮತ್ತು ಸಿಂಪ್ಸನ್ ಎಂಬವರ ರಾಜಕೀಯ ಕೊಲೆ ಮತ್ತು ಚಿತ್ತಗಾಂಗ್ ದಾಳಿ ಇವುಗಳಿಂದ ಪ್ರೇರಿತರಾದ ಈ ಬಾಲಕಿಯರು ತಾವೂ ಇಂಥ ಸಾಹಸ ನಡೆಸುವುದಾಗಿ ಮುಂದಾಳುಗಳಿಗೆ ತಿಳಿಸಿ, ಅವರನ್ನೊಪ್ಪಿಸಿದರು. ಇವರಿಬ್ಬರಿಗೆ ಪ್ರಥಮ ಮಹಿಳಾ ರಾಜಕೀಯ ಕೊಲೆಗಾರರಾದ ಖ್ಯಾತಿ ಸಲ್ಲುತ್ತದೆ.

ಸ್ಟೀವನ್ಸ್ ಪ್ರಖ್ಯಾತ ಅಧಿಕಾರಿ. ಆತನನ್ನು ಕೊಂದ ಆಪಾದನೆ ಸ್ಥಿರವಾಗಿ ಇವರಿಗೆ ಜೀವಾವಧಿ ಶಿಕ್ಷೆ ಆಯಿತು. ಈಕೆ 'ಬಿ' ವರ್ಗದ ಕೈದಿ ಆಗಿದ್ದರು. 1939ರಲ್ಲಿ ಬಿಡುಗಡೆಯಾದ ಮೇಲೆ ಶಾಂತಿ ಘೋಷರ ಒಲವು ಕಾಂಗ್ರೆಸ್‌ನತ್ತ ಹರಿಯಿತು. ಸ್ವಲ್ಪಕಾಲ ಬಂಗಾಳದ ವಿಧಾನಸಭಾ ಸದಸ್ಯೆ ಆಗಿದ್ದರು.

ನೋಡಿ : ಸುನೀತಿ ಚೌಧುರಿ

ಶಾಂತಿನಿಕೇತನ

ನೋಡಿ : ವಿಶ್ವಭಾರತಿ

ಶಾಂತಿ ಸ್ವರೂಪ ಭಟ್ನಾಗರ್

ನೋಡಿ : ಭಟ್ನಾಗರ್—ಸಂಪುಟ ೩

ಶಾಕುಂತಲಾ

ನೋಡಿ : ಸಂಪುಟ ೫

ಶಾರ್ಙ್ಗದೇವ

ನೋಡಿ : ಸಂಪುಟ ೫

ಶಾತವಾಹನರು

ಮೌರ್ಯವಂಶದ ಪತನದ ಅನಂತರ ದಕ್ಷಿಣ ಪೀಠಭೂಮಿ ಪ್ರದೇಶದಲ್ಲಿ ಸುಮಾರು 4 ಶತಮಾನಗಳ ಕಾಲ (ಕ್ರಿ. ಪೂ. 2ನೆಯ ಶತಕದಿಂದ ಕ್ರಿ. ಶ. 2ನೆಯ ಶತಕದ ವರೆಗೆ) ಆಳಿದವರು ಶಾತವಾಹನರು. ಇವರಿಗೆ ಶಾತಕರ್ಣಿಗಳು, 'ಆಂಧ್ರಭೃತ್ಯ'ರೆಂದೂ ಹೆಸರು ಇದ್ದಿತು.

ಪ್ರತಿಷ್ಠಾನ (ಈಗ ಮಹಾರಾಷ್ಟ್ರದಲ್ಲಿರುವ ಪೈಠಣ) ಅವರ ರಾಜಧಾನಿ. ಈ ಬ್ರಾಹ್ಮಣ ದೊರೆಗಳು ಬೌದ್ಧಧರ್ಮಕ್ಕೂ ಉದಾರ ಆಶ್ರಯ ನೀಡಿದರು. ಸಿಮುಕ (ಶ್ರೀಮುಖ), ಕನ್ಹ (ಕೃಷ್ಣ) ಮುಂತಾದವರು ಈ ವಂಶದ ಮೊದಲ ರಾಜರು.



ಶಾತವಾಹನ ನಾಣ್ಯ

ಶಾತಕರ್ಣಿ ಎಂಬ ದೊರೆ ಅಶ್ವಮೇಧ ಯಾಗ ಮಾಡಿ 'ದಕ್ಷಿಣಾಪಥಾಧೀಶ್ವರ' ಎಂಬ ಬಿರುದು ತಳೆದ. ಗೌತಮೀಪುತ್ರ ಶಾತಕರ್ಣಿ ಎಂಬ ದೊರೆ ಶಕ, ಯವನ (ಗ್ರೀಕ್) ರಂಥ ಪರಕೀಯರನ್ನು ಸೋಲಿಸಿದನೆಂದು ಹೇಳಿಕೆ ಇದೆ.

ಕ್ರಿ. ಶ. 3ನೆಯ ಶತಮಾನದ ವೇಳೆಗೆ ಇವರು ದುರ್ಬಲರಾದಾಗ, ಬನವಾಸಿಯಲ್ಲಿ ಶಾತಕರ್ಣಿಯರೂ ಆಂಧ್ರದಲ್ಲಿ ಇಕ್ಷ್ವಾಕುಗಳೂ ಪ್ರಬಲರಾದರು. ಇಂದಿನ ಮಹಾರಾಷ್ಟ್ರ, ಆಂಧ್ರ, ಕರ್ನಾಟಕ ಪ್ರದೇಶಗಳಲ್ಲಿ ಆಳುತ್ತಿದ್ದ ಶಾತವಾಹನರು ಕಾರ್ಲೆ, ಕನ್ಹೇರಿ, ನಾಸಿಕ, ಅಜಂತಾಗಳಲ್ಲಿನ ಖ್ಯಾತ ಗುಹಾಲಯ ರಚನೆಗಾಗಿ ಪ್ರಸಿದ್ಧರು. ಅಜಂತಾದ ಗುಹೆಯಲ್ಲಿ ಇವರ ಕಾಲದ ವರ್ಣಚಿತ್ರಗಳಿವೆ. ಇವರ ಕಾಲದಲ್ಲಿ ಹಾಲ ಎಂಬಾತ 'ಸತ್ತಸಈ' (ಸಪ್ತಶತಿ) ಮತ್ತು ಗುಣಾಢ್ಯ ಎಂಬಾತ 'ಬೃಹತ್ಕಥಾ' (ಬೃಹತ್ ಕಥಾ) ಎಂಬ ಸಾಹಿತ್ಯ ಕೃತಿಗಳನ್ನು ರಚಿಸಿದರು.

ಶಾಮಶಾಸ್ತ್ರಿ

ನೋಡಿ : ಸಂಪುಟ ೫

ಶಾರದಾನಂದ

ನೋಡಿ : ಸ್ವಾಮಿ ಶಾರದಾನಂದ

ಶಾರದಾಮಣಿದೇವಿ

ಕಾಡಿನ ಮಾರ್ಗದಲ್ಲಿ ಬರುತ್ತಿರುವಾಗ ಆಕೆ ಒಬ್ಬ ದರೋಡೆಕಾರನ ಕೈಗೆ ಸಿಕ್ಕಿಬಿದ್ದರು. ಅವನನ್ನು ಪ್ರೀತಿಯಿಂದ "ಅಪ್ಪ" ಎಂದು ಸಂಬೋಧಿಸಿ, ತನ್ನನ್ನು ದಕ್ಷಿಣೇಶ್ವರಕ್ಕೆ ಕರೆದುಕೊಂಡು ಹೋಗಬೇಕೆಂದು ಕೇಳಿಕೊಂಡರು. ಅವನ ಹೆಂಡತಿಗೆ "ಅಮ್ಮ, ನಾನು ನಿಮ್ಮ ಮಗಳು" ಎಂದು ಹೇಳಿ, ಅವಳ ಪ್ರೀತಿ ಸಂಪಾದಿಸಿ, ಬಂದಿದ್ದ ಗಂಡಾಂತರದಿಂದ ಪಾರಾದರು. ಹೀಗೆ ತಮ



ಶ್ರೀಮಾತೆ

ನಿಷ್ಕಲ್ಮಶ ವಾತ್ಸಲ್ಯದಿಂದ ನರೇಂದ್ರ ಗಾರನನ್ನು ಸೌಮ್ಯಗೊಳಿಸಿದವರು ರಾಮಕೃಷ್ಣಪರಮಹಂಸರ ಪತ್ನಿ ಶಾರದಾಮಣಿದೇವಿ.

ಶಾರದಾಮಣಿದೇವಿ ಜಯ ರಾಮವಟಿಯಲ್ಲಿ 1853 ಡಿಸೆಂಬರ್ 22 ರಂದು ಜನಿಸಿದರು. ತಂದೆ ರಾಮಚಂದ್ರ ಮುಖ್ಯೋಪಾಧ್ಯಾಯ. ದೈವಭಕ್ತ; ತಾಯಿ ಶ್ಯಾಮಸುಂದರಿದೇವಿ ಕರುಣಾಳು. ಸುಸಂಸ್ಕೃತ ವಾತಾವರಣದಲ್ಲಿ ಶಾರದಾಮಣಿದೇವಿ ಬೆಳೆದರು. ಆಕೆಗೆ 5ನೆಯ ವಯಸ್ಸಿನಲ್ಲಿ 23 ವರ್ಷದ ರಾಮಕೃಷ್ಣರೊಡನೆ ವಿವಾಹವಾಯಿತು. ಎರವಲು ತಂದಿದ್ದ ಒಡವೆಗಳಿಂದ ಅತ್ತೆ ಆಕೆಯನ್ನು ಶೃಂಗರಿಸಿದ್ದರು. ಆ ಒಡವೆಗಳನ್ನು ಕಂಡು ಆಕೆ ಹಿಗ್ಗಿದ್ದಳು. ಆದರೆ ಒಡವೆಗಳನ್ನು ಹಿಂದಿರುಗಿಸಬೇಕಾಗಿದ್ದುದರಿಂದ, ನಿದ್ರಿಸುತ್ತಿದ್ದ ಬಾಲಕಿಯ ಮೇಲಿದ್ದ ಒಡವೆಗಳನ್ನು ರಾಮಕೃಷ್ಣರು ತೆಗೆದುಬಿಟ್ಟರು. ಎಚ್ಚರವಾದಮೇಲೆ ಆಕೆ ಅತ್ತಾಗ, ಮುಂದೆ ತನ್ನ ಮಗ ಅವನ್ನು ಮಾಡಿಸಿಕೊಡುವನೆಂದು ಅತ್ತೆ ಸಮಾಧಾನಪಡಿಸಿದರು. ರಾಮಕೃಷ್ಣರು ಈ ಮಾತನ್ನು ನೆನಪಿಟ್ಟುಕೊಂಡು ಚಿನ್ನದ ಬಳೆ ಮಾಡಿಸಿಕೊಟ್ಟಾಗ, ಆಕೆ ಸಂತೋಷದಿಂದ ಅದನ್ನು ಧರಿಸಿದರು.

ಶಾರದಾಮಣಿದೇವಿ ಗಂಡನೊಡನೆ ಇರಲು ಬಂದಾಗ ಅವರಿಗೆ ಹದಿನಾರು ವರ್ಷ ವಯಸ್ಸು. ಸಂಸಾರ ಜೀವನ ಅಥವಾ ಬ್ರಹ್ಮಚರ್ಯ ಮತ್ತು ಭಗವಂತನ ಚಿಂತನೆ ಇವುಗಳಲ್ಲಿ ಆಕೆ ಯಾವುದನ್ನು ಬಯಸಿದರೂ ಅದರಂತೆ ನಡೆಯುವುದಾಗಿ ರಾಮಕೃಷ್ಣರು ತಿಳಿಸಿದರು. ಆಕೆ ವೈರಾಗ್ಯ ಜೀವನವನ್ನೇ ಆರಿಸಿಕೊಂಡರು. ರಾಮಕೃಷ್ಣರು ಆಕೆಯನ್ನು ಗೌರವಾದರಗಳಿಂದ ಕಾಣುತ್ತ ಆಧ್ಯಾತ್ಮಿಕ ಜೀವನದ ಹಾದಿಯಲ್ಲೇ ನಡೆದರು.

ಶಾರದಾಮಣಿದೇವಿ ಸುಮಾರು ಹದಿಮೂರು ವರ್ಷಕಾಲ ಪತಿಯೊಡನಿದ್ದರು. ಶ್ರದ್ಧೆಯಿಂದ ಪತಿಸೇವೆ ಮಾಡಿದರು; ಅವರ ಭಕ್ತವೃಂದವನ್ನು ತಾಯಿಯಂತೆ ವಾತ್ಸಲ್ಯಭಾವದಲ್ಲಿ ನೋಡಿದರು; ಅವರ ಊಟೋಪಚಾರಗಳಿಗೆ ಗಮನಕೊಟ್ಟರು. ರಾಮಕೃಷ್ಣರು ಸಮಾಧಿಸ್ಥರಾದ ಮೇಲೆ ದಕ್ಷಿಣೇಶ್ವರದಿಂದ ಕಾಮಾರಪುಕುರಕ್ಕೆ (ಕಮ್ಮಾರಕೊಳ—ರಾಮಕೃಷ್ಣರ ಊರು) ಹೋದರು. ಅಲ್ಲಿ ನಡೆಸಿದ್ದು ಉಪ್ಪುಕೊಳ್ಳಲೂ ಕಾಸಿಲ್ಲದ ಬಡತನದ ಬದುಕು. ಸ್ವಲ್ಪಕಾಲಾನಂತರ ಅವರ ಭಕ್ತರು ಆಕೆಯನ್ನು ದಕ್ಷಿಣೇಶ್ವರಕ್ಕೇ ಬರಮಾಡಿಕೊಂಡರು.

ಶಾರದಾಮಣಿ ದೇವಿಯಲ್ಲಿ ಯಾವ ಕಾಲಕ್ಕೂ ಇದ್ದುದು ಎಣೆಯಿಲ್ಲದ ಪ್ರೀತಿ. ವಿಶ್ವಾಸ. ಅನುಕಂಪ. ಭಕ್ತಿ. ತಾಳ್ಮೆ ಮತ್ತು ಆಧ್ಯಾತ್ಮಜ್ಞಾನ. ಆಕೆಗೆ ಅಹಂಕಾರವಿರಲಿಲ್ಲ. ಜಾತಿಭೇದ ಎಣಿಸುತ್ತಿರಲಿಲ್ಲ. ಅನೇಕರಿಗೆ ಉಪದೇಶವಿತ್ತು ಆಧ್ಯಾತ್ಮಮಾರ್ಗದಲ್ಲಿ ನಡೆಸಿದರು. ರಾಮಕೃಷ್ಣರ ಭಕ್ತರು ಆಕೆಯನ್ನು 'ಶ್ರೀಮಾತೆ' ಎಂದು ಗೌರವಿಸುತ್ತಿದ್ದರು. ಹಲವೆಡೆ ಆಕೆ ತೀರ್ಥಯಾತ್ರೆ ಮಾಡಿದರು. 1911ರಲ್ಲಿ ರಾಮೇಶ್ವರ ಯಾತ್ರೆಯಲ್ಲಿ ತೊಡಗಿದ್ದಾಗ ಬೆಂಗಳೂರಿಗೆ ಬಂದಿದ್ದರು. ಅವರು ಇಲ್ಲಿದ್ದಾಗ ಕುಳಿತು ಧ್ಯಾನ ಮಾಡುತ್ತಿದ್ದ ಬಂಡೆ 'ಶ್ರೀಮಾತೆ ಬಂಡೆ' ಎಂದು ಹೆಸರು ಪಡೆದಿದೆ. ಇದು ಬೆಂಗಳೂರು ರಾಮಕೃಷ್ಣಾಶ್ರಮದ ಆವರಣದಲ್ಲಿದೆ.

1920ರಲ್ಲಿ ಶಾರದಾಮಣಿ ಸಮಾಧಿಸ್ಥರಾದರು.

ಶ್ಯಾಮ್‌ಜಿ ಕೃಷ್ಣವರ್ಮ

ಕಾಥೇವಾರದ ಲಕ್ಷಾಧೀಶ ಕ್ರಾಂತಿಕಾರಿ, ಶ್ಯಾಮ್‌ಜಿ ಕೃಷ್ಣವರ್ಮ.

ಕೃಷ್ಣವರ್ಮರ ಜನನ 1857 ಅಕ್ಟೋಬರ್ 4ರಂದು. ಊರು ಕಚ್ ಸಂಸ್ಥಾನದ ಮಾಂಡವಿ ಗ್ರಾಮ. ಇವರು ಆರ್ಯ ಸಮಾಜಕ್ಕೆ ಸೇರಿದವರು. ಸಂಸ್ಕೃತ ಪಂಡಿತರಾದ ಇವರು ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದಲ್ಲೂ ವಿದ್ಯಾಭ್ಯಾಸ ಪಡೆದರು. ಭಾರತಕ್ಕೆ ಮರಳಿದ ಮೇಲೆ, ಕ್ರಾಂತಿಕಾರಿ ಚಟುವಟಿಕೆಗಳಲ್ಲಿ ಹೆಚ್ಚು ಹೆಚ್ಚಾಗಿ ಭಾಗವಹಿಸ ತೊಡಗಿದರು.



ಲಕ್ಷಾಧೀಶ ಕ್ರಾಂತಿಕಾರಿ : ಶ್ಯಾಮ್‌ಜಿ

ಹತ್ತೊಂಬತ್ತನೆಯ ಶತಮಾನದ ಕೊನೆಯ ಹೊತ್ತಿಗೆ ಇಂಗ್ಲೆಂಡಿಗೆ ಪ್ರಯಾಣ ಬೆಳೆಸಿದರು. ಲಂಡನಿನಲ್ಲಿ ಇವರು ಮನೆಮಾಡಿದರು. ಮನೆಯ ಹೆಸರು 'ಇಂಡಿಯಾ ಹೌಸ್'. ವಿದೇಶಗಳಲ್ಲಿ ಭೂಗತರಾಗಿದ್ದ ಭಾರತೀಯ ಕ್ರಾಂತಿಕಾರಿಗಳಿಗೆ ಇದು ಆಶ್ರಯಸ್ಥಾನವಾಯಿತು. ಭಾರತೀಯ ಸ್ವಾತಂತ್ರ್ಯವಾದಿಗಳಿಗೆ ಇದು ಕೇಂದ್ರವಾಯಿತು.

ಫ್ರಾನ್ಸಿನಲ್ಲೂ ಭಾರತೀಯ ಸ್ವಾತಂತ್ರ್ಯವಾದಿಗಳು ಒಂದಾಗುವಂತೆ ಇವರು ಪ್ರಯತ್ನಿಸಿದರು. 'ಇಂಡಿಯನ್ ಸೋಷಿಯಾಲಜಿಸ್ಟ್' ಇವರು ಹೊರಡಿಸುತ್ತಿದ್ದ ಪತ್ರಿಕೆ.

ವಿದ್ಯಾಭ್ಯಾಸಕ್ಕಾಗಿ ಭಾರತದಿಂದ ವಿದೇಶಗಳಿಗೆ ಹೋಗುತ್ತಿದ್ದ ವಿದ್ಯಾರ್ಥಿಗಳಿಗೆ ಇವರು ವಿದ್ಯಾರ್ಥಿವೇತನ ನೀಡುತ್ತಿದ್ದರು. ಈ ತರುಣರಿಗೆ ರಾಜಕೀಯ ಕೆಲಸಗಳಲ್ಲೂ ವರ್ಮ ತರಬೇತಿ ನೀಡುತ್ತಿದ್ದರು. 1906ರಲ್ಲಿ ಇಂಗ್ಲೆಂಡಿಗೆ ಬಂದ ತರುಣ ವಿ. ಡಿ. ಸಾವರ್‌ಕರ್ ಅವರಿಗೂ ಕೃಷ್ಣವರ್ಮ ವಿದ್ಯಾರ್ಥಿವೇತನ ನೀಡಿದ್ದರು.

ಶ್ಯಾಮಪ್ರಸಾದ ಮುಖರ್ಜಿ

ರಾಷ್ಟ್ರದ ಪ್ರಭಾವಶಾಲಿ ಮುಖಂಡರಲ್ಲೊಬ್ಬರಾಗಿದ್ದ ಶ್ಯಾಮಪ್ರಸಾದ ಮುಖರ್ಜಿ ಭಾರತೀಯ ಜನಸಂಘದ ಸಂಸ್ಥಾಪಕರು.

ಖ್ಯಾತ ವಿದ್ವಾಂಸ ಸರ್ ಅಶುತೋಷ್ ಮುಖರ್ಜಿ ಅವರ ಪುತ್ರ ಶ್ಯಾಮಪ್ರಸಾದರು 1901. ಜುಲೈ 6ರಂದು ಕಲ್ಕತ್ತೆಯ ಭವಾನಿಪುರದಲ್ಲಿ ಜನಿಸಿದರು.

ಇವರ ಪ್ರಾರಂಭಿಕ ಶಿಕ್ಷಣ. ಭವಾನಿಪುರದಲ್ಲಿ. ಕಲ್ಕತ್ತೆಯ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಪದವೀಧರರಾದರು. ಕಲ್ಕತ್ತಾ ವಿಶ್ವವಿದ್ಯಾನಿಲಯದಲ್ಲಿ ಎಂ.ಎ. ಮತ್ತು ಎಲ್.ಎಲ್.ಬಿ. ಪದವಿ ಪಡೆದು ಬಂಗಾಳಿಗೆ ತೆರಳಿದರು.

ಅಲ್ಲಿ ಉತ್ತಮ ದರ್ಜೆಯಲ್ಲಿ ಬಾರ್–ಎಟ್–ಲಾ ಪರೀಕ್ಷೆ ಮುಗಿಸಿದರು. ಗೌರವ ಡಿ.ಲಿಟ್ ಪದವಿಯೂ ಇವರಿಗೆ ದೊರಕಿತು.

1927ರಲ್ಲಿ ಭಾರತಕ್ಕೆ ಬಂದೊಡನೆಯೇ ಕಲ್ಕತ್ತಾ ಹೈಕೋರ್ಟಿನ ವಕೀಲರಾಗಿ ಖ್ಯಾತಿ ಗಳಿಸಿದರು. ಅವರ ಸಾರ್ವಜನಿಕ ಜೀವನವೂ ಆಗಲೇ ಪ್ರಾರಂಭವಾಯಿತು. 1929ರಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಬಂಗಾಳ ಶಾಸನ ಸಭೆಗೆ ಚುನಾಯಿತರಾದರು. ಆದರೆ ಸರಕಾರದೊಡನೆ ವಿರಸ ಉಂಟಾಗಿ, ಶಾಸನ ಸಭೆಯ ಸದಸ್ಯತ್ವಕ್ಕೆ ರಾಜಿನಾಮೆ ಕೊಟ್ಟರು. ಚುನಾವಣೆಯಲ್ಲಿ 1931ರಲ್ಲಿ ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧಿಸಿ ಆಯ್ಕೆಗೊಂಡರು. 1937ರಲ್ಲಿ ಬಂಗಾಳ ವಿಧಾನಸಭೆಗೆ ಗೆದ್ದುಬಂದರು. ವಿಧಾನ ಪರಿಷತ್–ಸಭೆಗಳಲ್ಲಿ ಪ್ರತಿಭಾನ್ವಿತ ವಾಗ್ಮಿ ಎಂದು ಕೀರ್ತಿ ಪಡೆದರು.



ಪ್ರಭಾವಶಾಲೀ ಮುಖಂಡ

1934ರಿಂದ 38ರ ವರೆಗೆ ಕಲ್ಕತ್ತಾ ವಿಶ್ವವಿದ್ಯಾನಿಲಯದ ವೈಸ್‌ಛಾನ್ಸಲರ್ ಆದರು.

1939ರಲ್ಲಿ ಇವರು ಹಿಂದೂ ಮಹಾಸಭೆಗೆ ಸೇರಿ ಅದರ ಪ್ರಮುಖ ನಾಯಕರಲ್ಲಿ ಒಬ್ಬರಾದರು. 1941ರಲ್ಲಿ ಫಜಲುಲ್ ಹಕ್ ಸಮ್ಮಿಶ್ರ ಮಂತ್ರಿ ಮಂಡಲದಲ್ಲಿ ಅರ್ಥಮಂತ್ರಿ ಆದರು. 1943 ಮತ್ತು 1944ರಲ್ಲಿ ಹಿಂದೂ ಮಹಾ ಸಭೆಯ ಅಧ್ಯಕ್ಷರಾದರು. 1943–44 ಅವಧಿಯಲ್ಲಿ ರಾಯಲ್ ಏಷ್ಯಾಟಿಕ್ ಸೊಸೈಟಿಯ ಅಧ್ಯಕ್ಷರಾಗಿ ದುಡಿದರು.

ಭಾರತದ ವಿಭಜನೆಗೆ ಅವರ ಉಗ್ರ ವಿರೋಧವಿತ್ತು. ಸ್ವಾತಂತ್ರ್ಯ ಪ್ರಾಪ್ತಿಯ ಅನಂತರ ಸಂಸತ್ತಿಗೆ ಆರಿಸಿಬಂದರು. ಹಿಂದೂ ಮಹಾ ಸಭೆಯ ಮುಖಂಡರಾಗಿದ್ದುಕೊಂಡೇ ಸ್ವತಂತ್ರ ಭಾರತದ ಪ್ರಥಮ ಕೇಂದ್ರ ಮಂತ್ರಿಮಂಡಲದಲ್ಲಿ ಕೈಗಾರಿಕೆ ಮತ್ತು ನಾಗರಿಕ ಪೂರೈಕೆ ಮಂತ್ರಿ ಆದರು.

1948ರಲ್ಲಿ ಹಿಂದೂ ಮಹಾಸಭೆಯ ಸದಸ್ಯತ್ವಕ್ಕೆ ರಾಜಿನಾಮೆ ಕೊಟ್ಟರು. 1950ರಲ್ಲಿ ನೆಹರೂ–ಲಿಯಾಖತ್ ಒಪ್ಪಂದದ ಪ್ರಶ್ನೆ ಬಂದಾಗ ಸಚಿವ ಪದವಿಗೆ ರಾಜಿನಾಮೆ ಇತ್ತರು.

ಅಷ್ಟರ ವರೆಗೆ ಪ್ರಾಂತೀಯ ವ್ಯಾಪ್ತಿಯಲ್ಲಿದ್ದ ಜನಸಂಘದ ಘಟಕಗಳನ್ನು ಒಂದುಗೂಡಿಸಿ 1951 ಅಕ್ಟೋಬರ್ 21ರಂದು ಅಖಿಲ ಭಾರತೀಯ ಜನಸಂಘದ ಸಂಸ್ಥಾಪಕ ಅಧ್ಯಕ್ಷರಾದರು.

1952ರಲ್ಲಿ ನಡೆದ ಸಾರ್ವತ್ರಿಕ ಚುನಾವಣೆಯಲ್ಲಿ ಬಂಗಾಳದಿಂದ ಸಂಸತ್ತಿಗೆ ಜನಸಂಘದ ಉಮೇದುವಾರರಾಗಿ ಆರಿಸಿಬಂದರು.

1953ರಲ್ಲಿ ಜಮ್ಮು ಪ್ರದೇಶವನ್ನು ಅಕ್ರಮವಾಗಿ ಪ್ರವೇಶಿಸಿದರೆಂದು ಅಬ್ದುಲ್ಲ ಸರಕಾರ ಅವರನ್ನು ಬಂಧಿಸಿ, ಶ್ರೀನಗರದಲ್ಲಿ ಸ್ಥಾನಬದ್ಧತೆಯಲ್ಲಿಟ್ಟಿತು. ಸೆರೆಮನೆಯಲ್ಲಿದ್ದಾಗಲೇ ಅವರ ಆರೋಗ್ಯ ಕೆಟ್ಟು, ಅದೇ ವರ್ಷ ಜೂನ್ 23ರಂದು ನಿಧನರಾದರು.

ಶಿಕ್ಷಕರ ದಿನ

ಭಾರತದ ರಾಷ್ಟ್ರಪತಿಯಾಗಿದ್ದ ಸರ್ವಪಲ್ಲಿ ರಾಧಾಕೃಷ್ಣನ್‌ರ ಜನ್ಮದಿನ ಸೆಪ್ಟೆಂಬರ್ 5. ಆ ದಿನವನ್ನು ಶಿಕ್ಷಕರ ದಿನವಾಗಿ ಆಚರಿಸುತ್ತಾರೆ.

ಆದರ್ಶ ಶಿಕ್ಷಕರೆನಿಸಿದ್ದ ರಾಧಾಕೃಷ್ಣನ್‌ರ ಬಗೆಗೆ ಶಿಕ್ಷಕ ವೃತ್ತಿಯ ಹಿರಿಮೆಯನ್ನು ಕುರಿತು ಭಾಷಣಗಳಾಗುತ್ತವೆ. ಅಖಿಲ ಭಾರತ ಮಟ್ಟದಲ್ಲಿ ವಿದ್ಯಾರ್ಥಿಗಳಿಂದ ವಂತಿಗೆ ಪಡೆದು ಶಿಕ್ಷಕರ ನಿಧಿಯೊಂದನ್ನು ರೂಪಿಸಿದ್ದಾರೆ. ವೃತ್ತಿಯಲ್ಲಿರುವಾಗಲೇ ಶಿಕ್ಷಕರೊಬ್ಬರು ಮರಣ ಹೊಂದಿದರೆ, ಅವರ ಸಂಸಾರಕ್ಕೆ ಈ ನಿಧಿಯಿಂದ ಧನಸಹಾಯ ಕೊಡುತ್ತಾರೆ. ಅಪಘಾತಕ್ಕೆ ಈಡಾದ ಶಿಕ್ಷಕರಿಗೂ ಈ ನಿಧಿಯಿಂದ ಸಹಾಯ ನೀಡುವ ವ್ಯವಸ್ಥೆ ಇದೆ.

ಶಿಲಪ್ಪದಿಗಾರಂ

ಶಿಲಪ್ಪದಿಗಾರಂ ತಮಿಳು ಸಾಹಿತ್ಯದ ಶ್ರೇಷ್ಠಕೃತಿಗಳಲ್ಲಿ ಒಂದು. ಕನ್ನಗಿ ಎಂಬವಳ ಕರುಣಾಜನಕ ಕಥೆ ಇದರ ವಸ್ತು.

ಕಾವೇರಿಪಟ್ಟಿಣದ ಕೋವಲನ್ ಧನಿಕ ವರ್ತಕ. ಕನ್ನಗಿ ಆತನ ಧರ್ಮಪತ್ನಿ. ಮಾಧವಿ ಎಂಬ ವಾರಾಂಗನೆಗೆ ತನ್ನದೆಲ್ಲವನ್ನೂ ಕಳೆದು



ಕನ್ನಗಿಯ ಕಾಲಂದಿಗೆ

ಕೊಂಡು ಕೋವಲನ್ ಬರಿಗೈಯಲ್ಲಿ ಮರಳುತ್ತಾನೆ. ಪತಿಭಕ್ತಿ ಪರಾಯಣೆಯಾದ ಕನ್ನಗಿ ಗಂಡನ ಮೇಲೆ ಸ್ವಲ್ಪವೂ ಕೋಪಗೊಳ್ಳುವುದಿಲ್ಲ. ಇಬ್ಬರೂ ಮದುರೈಗೆ ಹೋಗಿ ಹೊಸ ಬಾಳು ಆರಂಭಿಸುವ ನಿರ್ಧಾರ ಮಾಡುತ್ತಾರೆ. ಇದಕ್ಕಾಗಿ ಕನ್ನಗಿ ತನ್ನ ರತ್ನಖಚಿತ ಕಾಲಂದಿಗೆಯೊಂದನ್ನು



ಮಾಧವಿಯ ಮನೆಯಲ್ಲಿ ಕೋವಲನ್ —ಕೆ. ಕೆ. ಹೆಬ್ಬಾರ್ ರಚನೆ

ತೆಗೆದುಕೊಡುತ್ತಾಳೆ. ಅಂಗಡಿಯಲ್ಲಿ ಅದನ್ನು ಮಾರುತ್ತಿದ್ದಾಗ, ಆ ಊರಿನ ಪಾಂಡ್ಯರಾಜ ನೆಡುಂಚೆಳಿಯನನ ರಾಣಿ ಕಳೆದುಕೊಂಡ ಕಾಲಂದಿಗೆಯೇ ಅದು ಎಂದು ಅಪವಾದದ ಮೇಲೆ ಕೋವಲನ್ ಬಂಧಿಸಲ್ಪಡುತ್ತಾನೆ, ಕೊಲ್ಲಲ್ಪಡುತ್ತಾನೆ. ಕಣ್ಣಗಿಯ ದುಃಖ, ಕೋಪ ಉಕ್ಕುತ್ತವೆ: ತನ್ನ ಇನ್ನೊಂದು ಕಾಲಂದಿಗೆಯನ್ನು ಹಿಡಿದು, ಕೋವಲನು ನಿರ್ದೋಷಿ ಎಂದು ಸಭೆಯಲ್ಲಿ ಸಾರುತ್ತ, ರಾಜನ ಬಗೆಗೆ ರೋಷಗೊಳ್ಳುತ್ತಾಳೆ. ನಿರಪರಾಧಿ ಗಂಡನನ್ನು ಕೊಲ್ಲಿಸಿದವರಿಗೆ ಶಾಪಕೊಡುತ್ತಾಳೆ. ಅವಳ ಶಾಪದ ಫಲವಾಗಿ ರಾಜರಾಣಿಯರು ನಾಶವಾಗುತ್ತಾರೆ; ಮಧುರೈ ಪಟ್ಟಣವನ್ನು ಬೆಂಕಿ ಆವರಿಸುತ್ತದೆ. ಕಡೆಗೆ ಪಟ್ಟಣದ ಅಧಿದೇವತೆಯು ಹೇಳಿದಂತೆ ಕಣ್ಣಗಿ ತನ್ನ ಶಾಪವನ್ನು ಹಿಂದಕ್ಕೆ ತೆಗೆದುಕೊಂಡು, ಪತಿಯ ಶರೀರದೊಡನೆ ಸಹಗಮನ ಮಾಡುತ್ತಾಳೆ. ಸ್ವರ್ಗದಲ್ಲಿ ಅವರಿಬ್ಬರ ಸಮಾಗಮವಾಗುತ್ತದೆ.

—ಇದು ಶಿಲಪ್ಪದಿಗಾರಂನ ಕಥೆ. ಇದು ಭಾರತದ ಅತ್ಯುತ್ತಮ ಸಾಹಿತ್ಯ ಕೃತಿಗಳಲ್ಲಿ ಒಂದೆಂದು ಪರಿಗಣಿಸಲ್ಪಟ್ಟಿದೆ.

ಈ ಕೃತಿಯಲ್ಲಿ ಆಗಿನ ಕಾಲದ ತಮಿಳರ ಜೀವನ, ಕಲಾಸೃಷ್ಟಿ ಮುಂತಾಗಿ ಹಲವು ಅಂಶಗಳನ್ನು ಕುರಿತು ಸ್ವಾರಸ್ಯ ವಿವರಗಳು ದೊರೆಯುತ್ತವೆ.

ಇಳಂಗೊ ಅಡಿಗಳ್ ಇದರ ಗ್ರಂಥಕರ್ತೃ ಎಂದು ಸಾಂಪ್ರದಾಯಿಕ ನಂಬಿಕೆ. ಈತ 2ನೆಯ ಶತಮಾನದವನು. ಕೆಲವು ಹೊಸ ಸಂಶೋಧನೆಗಳ ಆಧಾರದಿಂದ ಈತ 8ನೆಯ ಶತಮಾನದವನಿರಬಹುದೆಂಬ ಊಹೆಯೂ ಇದೆ. ಶಿಲ್ಪದಿಗಾರಂನ ಮುಂದಿನ ಕಥೆ 'ಮಣಿ ಮೇಗಲೈ'. ಇದನ್ನು ಬರೆದವನು ಸಾತ್ತನ್. ಕೋವಲನ ಮಗಳು ಮಣಿಮೇಖಲೆ ಇದರ ಕಥಾನಾಯಕಿ.

ನೋಡಿ : ತಮಿಳು ಭಾಷೆ, ಸಾಹಿತ್ಯ

ಶಿವಪ್ಪನಾಯಕ

ಸರಕಾರದ ಖರ್ಚಿನಲ್ಲಿ ಭೂಮಿಯನ್ನು ಕೃಷಿ ಮಾಡಿಸಿ ರಾಜ್ಯದಾಯ ಹೆಚ್ಚಿಸಿಕೊಂಡ. ಭೂಮಿಯನ್ನು ಶ್ರೇಷ್ಠ, ಮಧ್ಯಮ ಮುಂತಾಗಿ ಐದು ಭಾಗಗಳಾಗಿ ವಿಂಗಡಿಸಿ, ಬೆಳೆಯ ಮೌಲ್ಯವನ್ನು ಸರಾಸರಿ ಪ್ರಮಾಣದ ಆಧಾರದ ಮೇಲೆ ನಿಗದಿ ಮಾಡಿದ. ಅವರವರ ಭೂಮಿಯ ಉತ್ಪತ್ತಿಯನ್ನು ಆಧಾರವಾಗಿ ಇಟ್ಟುಕೊಂಡು ರೈತರು ಕೊಡಬೇಕಾದ ಕಂದಾಯವನ್ನು ಗೊತ್ತುಪಡಿಸಿದ. ಹೀಗೆ ಕರ್ನಾಟಕದಲ್ಲಿ ಭೂಕಂದಾಯ ನಿಗದಿ ಮಾಡಿದ ಮೊದಲಿಗ ಎಂಬ ಕೀರ್ತಿಗೆ ಪಾತ್ರನಾದವನು ಕೆಳದಿಯ ಶಿವಪ್ಪನಾಯಕ. 'ಶಿವಪ್ಪನಾಯಕನ ಶಿಸ್ತು' ಎಂದು ಅವನ ಕಂದಾಯ ವ್ಯವಸ್ಥೆ ಪ್ರಖ್ಯಾತವಾಯಿತು.



'ಶಿಸ್ತು' : ಶಿವಪ್ಪನಾಯಕ

ಪುತ್ರ ಸಂತತಿಯಿಲ್ಲದ ವೀರಭದ್ರಪ್ಪ 1645ರಲ್ಲಿ ನಿಧನನಾದ. ಆಗ ಯುದ್ಧತಂತ್ರವಿಶಾರದನೂ ರಾಜಕಾರ್ಯ ಧುರಂಧರನೂ ಆಗಿದ್ದ ಬಂಧು ಶಿವಪ್ಪನಾಯಕ ಪಟ್ಟಕ್ಕೆ ಬಂದ. ಕೆಳದಿಯ ಅರಸರಲ್ಲಿ ಈತನ ಕಾಲ ಸ್ವರ್ಣಯುಗ ಎಂಬ ಪ್ರಶಂಸೆಗೆ ಪಾತ್ರವಾಗಿದೆ.

ವ್ಯಾಪಾರಕ್ಕೆಂದು ಬಂದು ಕರಾವಳಿ ರಾಜ್ಯಗಳಲ್ಲಿ ಉಪಟಳ ಕೊಡಲಾರಂಭಿಸಿದ್ದ ಡಚ್ಚರು, ಇಂಗ್ಲಿಷರು ಮತ್ತು ಪೋರ್ಚುಗೀಸರನ್ನು ಶಿವಪ್ಪ ದಮನ ಮಾಡಿದ.

ಸಾಮ್ರಾಜ್ಯವಾಗಿ ಮೆರೆದ ವಿಜಯನಗರ ಈ ವೇಳೆಗೆ ಅವನತಿ ಹೊಂದಿ ಶತ್ರುಗಳ ದಾಳಿಗೆ ಈಡಾಗಿತ್ತು. ಗೋಲ್ಕೊಂಡದ ನವಾಬನಿಂದ ಪರಾಜಿತನಾದ ವಿಜಯನಗರದ ಶ್ರೀರಂಗರಾಜ ಶತ್ರುಗಳಿಂದ ಪಾರಾಗಲು 1646ರಲ್ಲಿ ಶಿವಪ್ಪನಾಯಕನ ಆಶ್ರಯ ಪಡೆದ. ಶ್ರೀರಂಗರಾಜನಿಗೋಸ್ಕರವಾಗಿ ಶಿವಪ್ಪನಾಯಕ ಶ್ರೀರಂಗಪಟ್ಟಣವನ್ನು ಆಕ್ರಮಿಸಿ, ಜಯಗಳಿಸಿದ. 'ಇಕ್ಕೇರಿಯ ಹಿಂಡ', 'ಮೈಸೂರು ಮಿಂಡ' ಎಂಬ ಪ್ರಶಸ್ತಿಗಳನ್ನು ಪಡೆದ.

ಇವನ ರಾಜ್ಯ ಪೂರ್ವಕ್ಕೆ ಚಿತ್ರದುರ್ಗದ ವರೆಗೆ ಪಶ್ಚಿಮಕ್ಕೆ ಅರಬಿ ಸಮುದ್ರ ತೀರದ ವರೆಗೆ, ಉತ್ತರಕ್ಕೆ ಬಿಜಾಪುರ ಮತ್ತು ಮರಾಠಿ ಪ್ರಾಂತಗಳ ವರೆಗ ಮತ್ತು ದಕ್ಷಿಣದಲ್ಲಿ ಶ್ರೀರಂಗಪಟ್ಟಣದ ವರೆಗೆ ಹಬ್ಬಿತ್ತು.

ನಾಯಕನಿಗೆ ಧರ್ಮದಲ್ಲಿ ಶ್ರದ್ಧೆ. ಶಿವರಾಜಪುರ ಅಗ್ರಹಾರ ನಿರ್ಮಿಸಿ ಪಂಡಿತರಿಗೆ ಉಂಬಳಿಕೊಟ್ಟ. ಪ್ರಜೆಗಳ ಹಿತಚಿಂತನೆ ಈತನಿಗೆ ಎಲ್ಲಕ್ಕಿಂತ ಮುಖ್ಯವಾಗಿತ್ತು. ಸುಮಾರು 1660ರಲ್ಲಿ ತನ್ನ ತಮ್ಮ ವೆಂಕಟಪ್ಪನಿಗೆ ರಾಜ್ಯಭಾರ ವಹಿಸಿಕೊಟ್ಟು ವಿರಾಗಿಯಾದ.

ಶಿವಾಜಿ

ಮರಾಠರು ಶಿವಾಜಿಯ ನಾಯಕತ್ವದಲ್ಲಿ ಮೊಘಲರ ವಿರುದ್ಧ ಹೂಡಿದ ಹೋರಾಟಗಳಲ್ಲಿ ಒಂದು, ಕಲ್ಯಾಣದ ಮೇಲೆ ಅವರು ನಡೆಸಿದ ಮುತ್ತಿಗೆ. ಇದರಲ್ಲಿ ಅವರು ಜಯವನ್ನೂ ಗಳಿಸಿದರು. ಕಲ್ಯಾಣದ ಮೊಘಲ ಪ್ರತಿನಿಧಿಯ ಸಂಸಾರದವರನ್ನು ಸೆರೆಹಿಡಿದರು. ಹೀಗೆ ಸೆರೆಸಿಕ್ಕಿದವರಲ್ಲಿ ಮೊಘಲ ಪ್ರತಿನಿಧಿಯ ಸೊಸೆಯೂ ಒಬ್ಬಳು. ಆಕೆ ಅತ್ಯಂತ ರೂಪವತಿ. ಸೇನಾಪತಿಯ ದೃಷ್ಟಿಯಲ್ಲಿ ಆಕೆ ಶಿವಾಜಿಗೆ ಸಲ್ಲಬೇಕಾದ ಕಾಣಿಕೆ. ಅವಳನ್ನು ಶಿವಾಜಿಯ ಮುಂದೆ ಕರೆತಂದಾಗ, ಅವನು ಆಕೆಗೆ ತಲೆಬಾಗಿ ನಮಿಸಿದ. "ಸಾಧ್ಯವಿದ್ದರೆ ನಿಮ್ಮ ಮಗನಾಗಿ ಹುಟ್ಟಲು ಆಶಿಸುವೆ" ಎಂದ. ಪರಸ್ತ್ರೀಯರ ಬಗೆಗೆ ಶಿವಾಜಿ ತೋರುತ್ತಿದ್ದ ಗೌರವ ಅಂಥದು. ತನ್ನ ಸೈನಿಕರನ್ನು ಎಂದೂ ಮಸೀದಿಗಳನ್ನು ಹಾಳುಮಾಡಕೂಡದು; ಕೊರಾನನ್ನು ನಾಶಮಾಡಬಾರದು; ಪರಸ್ತ್ರೀಯರನ್ನು ಗೌರವದಿಂದ ಕಾಣಬೇಕು—ಎಂದು ಆಜ್ಞೆ ಮಾಡಿದ್ದ.

ಶಿವಾಜಿಯ ಜನನ ಪುಣೆಯ ಬಳಿ ಇರುವ ಶಿವನೇರಿ ಕೋಟೆಯಲ್ಲಿ, 1627 ಏಪ್ರಿಲ್ 6ರಂದು. ತಂದೆ ಷಹಾಜಿ ಬಿಜಾಪುರದ ಸುಲ್ತಾನ ಆದಿಲ್ ಷಾನ ಸೇನಾಪತಿಯಾಗಿದ್ದ. ಇದರಿಂದಾಗಿ ಅವನು ಪದೇ ಪದೇ ತನ್ನ ಸಂಸಾರದಿಂದ ದೂರ ಇರಬೇಕಾಗುತ್ತಿತ್ತು. ಶಿವಾಜಿಯ ತಾಯಿ ಜೀಜಾಬಾಯಿ ದೈವಭಕ್ತೆ, ಸ್ವಾತಂತ್ರ್ಯಪ್ರೇಮಿ. ತಾಯಿ ಮತ್ತು ರಕ್ಷಕ ದಾದಾಜಿ ಕೊಂಡದೇವ ಇವರ ನೇತೃತ್ವದಲ್ಲಿ ಶಿವಾಜಿ ದೈವಭಕ್ತನಾಗಿ, ಸ್ವಾತಂತ್ರ್ಯಪ್ರೇಮಿಯಾಗಿ, ವೀರನಾಗಿ ರೂಪುಗೊಂಡ. ಹಿಂದೂ ಧರ್ಮರಕ್ಷಣೆ ಅವನ ಧ್ಯೇಯವಾಯಿತು. ಅದಕ್ಕಾಗಿ ಮರಾಠರ ಶಕ್ತಿಯನ್ನು ಬೆಳೆಸಿ, ಮರಾಠಾ ಸಾಮ್ರಾಜ್ಯ ಸ್ಥಾಪನೆಗೆ ಅಸ್ತಿವಾರಹಾಕಿದ.



ಛತ್ರಪತಿ ಶಿವಾಜಿ

16 ವರ್ಷದ ಶಿವಾಜಿ ಸಹ್ಯಾದ್ರಿ ಪ್ರದೇಶದ ವಾಸಿಗಳಾದ ತರುಣರನ್ನು ಸೇರಿಸಿಕೊಂಡು ಆದಿಲ್ ಖಾನ ಅಧಿಪತ್ಯಕ್ಕೊಳಪಟ್ಟಿದ್ದ ತೋರಣ ಕೋಟೆಯನ್ನು ವಶಪಡಿಸಿಕೊಂಡ. ಮುಂದೆ ಬಿಜಾಪುರದ ಅನೇಕ ಕೋಟೆಗಳನ್ನು ಆಕ್ರಮಿಸಿದ.

ಹೀಗೆ ಬಲಗೊಳ್ಳುತ್ತಿದ್ದ ಶಿವಾಜಿಯ ಶಕ್ತಿಯನ್ನು ಮುರಿಯಲು ಬಿಜಾಪುರದ ಸುಲ್ತಾನ 1659ರಲ್ಲಿ ತನ್ನ ಸೇನಾಪತಿ ಅಫ್ಜಲ್‌ಖಾನನನ್ನು ಕಳುಹಿಸಿದ: "ಆ ದಂಗೆಕೋರನನ್ನು ಜೀವಂತವಾಗಿಯಾಗಲೀ ಮೃತಾವಸ್ಥೆಯಲ್ಲಾಗಲೀ ಹಿಡಿದು ತರಬೇಕು," ಎಂದು ಸುಲ್ತಾನ ಆಜ್ಞಾಪಿಸಿದ್ದ. ಅಫ್ಜಲ್‌ಖಾನ್ ಒಪ್ಪಂದದ ಮಾತುಗಳನ್ನಾಡಲು ಶಿವಾಜಿಯನ್ನು ಬರಹೇಳಿ, ಮೋಸದಿಂದ ಅವನನ್ನು ಕೊಲ್ಲಲೆತ್ನಿಸಿದ. ಆದರೆ ಶಿವಾಜಿಯದೇ ಮೇಲುಗೈ ಆಗಿ ಅಫ್ಜಲ್‌ಖಾನ್ ಮೃತನಾದ.

ಔರಂಗಜೇಬ್ ದೆಹಲಿಯಲ್ಲಿ ಸಾಮ್ರಾಟನಾಗಿದ್ದ. ಷಯಿಸ್ತಾಖಾನ್ ದಖ್ಖನ್ ಪ್ರದೇಶದಲ್ಲಿ ಅವನ ಅಧಿಕಾರಿಯಾಗಿದ್ದ. 1663ರಲ್ಲಿ ಔರಂಗಜೇಬ್ ಅವನನ್ನು ಶಿವಾಜಿಯನ್ನು ನಿಗ್ರಹಿಸಲು ಕಳುಹಿಸಿಕೊಟ್ಟ. ಶಿವಾಜಿ ಷಯಿಸ್ತಾಖಾನನನ್ನು ಸೋಲಿಸಿದ. ಸೂರತ್ ಉತ್ತಮ ಬಂದರಾಗಿತ್ತು. 1664ರಲ್ಲಿ ಶಿವಾಜಿ ಸೂರತನ್ನು ಮುತ್ತಿ ಅಪಾರ ಧನವನ್ನು ವಶಪಡಿಸಿಕೊಂಡ. ಕುಪಿತನಾದ ಔರಂಗಜೇಬ್ ಹೇಗಾದರೂ ಶಿವಾಜಿಯ ಪ್ರಾಬಲ್ಯ ಮುರಿಯಬೇಕೆಂದು ಅಂಬೇರದ ರಾಜ ಜಯಸಿಂಹನನ್ನು ಕಳುಹಿಸಿದ. 1665ರಲ್ಲಿ ಯುದ್ಧವಾಗಿ ಶಿವಾಜಿ ಸೋತು ತನ್ನ ಹಲವು ಕೋಟೆಗಳನ್ನು ಮೊಘಲರಿಗೆ ಒಪ್ಪಿಸಬೇಕಾಗಿ ಬಂದಿತು. ಸ್ನೇಹ ಮಾಡಿಕೊಳ್ಳಲು ಶಿವಾಜಿಯನ್ನು ದೆಹಲಿಗೆ ಬರಮಾಡಿಕೊಂಡು ಔರಂಗಜೇಬ್ ಅವನನ್ನು ಬಂಧನದಲ್ಲಿರಿಸಿದ. ಶಿವಾಜಿ ಸೆರೆಯಿಂದ ತಪ್ಪಿಸಿಕೊಂಡು ಬಂದು ತಾನು ಮೊಘಲರಿಗೆ ಒಪ್ಪಿಸಿದ್ದ ಕೋಟೆಗಳನ್ನು ಪುನಃ ಗೆದ್ದ.

1670ರಲ್ಲಿ ಮತ್ತೆ ಸೂರತ್ ಮೇಲೆ ದಾಳಿ ಮಾಡಿ ಬಹಳ ಧನ ಸಂಗ್ರಹಿಸಿದ.

1674ರಲ್ಲಿ ತಾನೇ ನಿರ್ಮಿಸಿದ ರಾಯಗಡದಲ್ಲಿ ಶಿವಾಜಿಯ ಪಟ್ಟಾಭಿಷೇಕ ಆಯಿತು. ಅವನು 'ಛತ್ರಪತಿ' ಆದ. ದಕ್ಷಿಣದ [illegible] ಮೊದಲಾದ ಆಯಕಟ್ಟಿನ ಕೋಟೆಗಳನ್ನು ಜಯಿಸಿದ.

1680 ಏಪ್ರಿಲ್ 14ರಂದು ಶಿವಾಜಿಯು ದೇಹಾಂತವಾಯಿತು.

ಶಿವಾಜಿ ದಕ್ಷ ಸೇನಾಪತಿ ಆಗಿದ್ದಂತೆ ಸಮರ್ಥ ಆಡಳಿತಗಾರನೂ ಆಗಿದ್ದ. ಎಂಟು ಜನ ಮಂತ್ರಿಗಳು ಆಡಳಿತದಲ್ಲಿ ಆತನಿಗೆ ಸಹಾಯಕರಾಗಿದ್ದರು. ಅವನು ಹಿಂದೂಧರ್ಮದ ರಕ್ಷಣೆ, ಅಭಿವೃದ್ಧಿಗಳಲ್ಲಿ ತೀವ್ರ ಆಸಕ್ತಿ ಉಳ್ಳವನಾಗಿದ್ದರೂ ಇತರ ಧರ್ಮಗಳ ಬಗೆಗೆ ಗೌರವದಿಂದ ನಡೆದುಕೊಳ್ಳುತ್ತಿದ್ದ. ಮೊಘಲರು ಮತ್ತು ದಕ್ಷಿಣದ ಸುಲ್ತಾನರೊಡನೆ ಹೋರಾಡಿ, ಮಹಾರಾಷ್ಟ್ರ ಮತ್ತು ಅದರ ಸುತ್ತಮುತ್ತಲಿನ ಪ್ರದೇಶದಲ್ಲಿ ಹಿಂದೂ ಸಾಮ್ರಾಜ್ಯವನ್ನು ಕಟ್ಟಿ, ಹಿಂದೂಧರ್ಮಕ್ಕೆ ಪ್ರೋತ್ಸಾಹ ಕೊಟ್ಟ ಕೀರ್ತಿ ಶಿವಾಜಿಯದು. ಅವನ ಈ ಸಾಧನೆಗಳಿಗೆ ಪ್ರೇರಕ ಶಕ್ತಿಗಳಾಗಿದ್ದವರಲ್ಲಿ ಸಮರ್ಥ ರಾಮದಾಸರು ಗಣನೀಯರು.

ನೋಡಿ : ಜೀಜಾಬಾಯಿ ; ಮರಾಠರು ; ಸಮರ್ಥ ರಾಮದಾಸ

ಶಿಶುನಾಗರು

ನಂದರಿಗಿಂತ ಮೊದಲು ಮಗಧದಲ್ಲಿ ಈ ವಂಶದ ಇಬ್ಬರು ರಾಜರು ಕ್ರಿ.ಪೂ. 430ರಿಂದ 364ರ ವರೆಗೆ ಆಳಿದರು. ಮೊದಲು ಹರ್ಯಂಕರ ಮಂತ್ರಿಯಾಗಿದ್ದು ಮುಂದೆ ಗಿರಿವ್ರಜದಿಂದ ಆಳುತ್ತಿದ್ದ ಶಿಶುನಾಗನು ಅವಂತಿ (ಉಜ್ಜಯನಿ)ಯ ಪ್ರದ್ಯೋತರನ್ನು ಸೋಲಿಸಿ, ಅವರ ರಾಜ್ಯವನ್ನು ಮಗಧಕ್ಕೆ ಸೇರಿಸಿದ. ಇವನ ಮಗ ಕಾಳಾಶೋಕನು ಪಾಟಲಿಪುರವನ್ನು ರಾಜಧಾನಿಯಾಗಿ ಮಾಡಿದ. ಇವನ ಕಾಲದಲ್ಲಿ ಬೌದ್ಧರ ಎರಡನೆಯ ಮಹಾಪರಿಷತ್ತು ಸೇರಿತು. ಇವನ ಅನಂತರ ನಂದರ ಆಡಳಿತ ಆರಂಭವಾಯಿತು. ಕಾಳಾಶೋಕನನ್ನು ನಂದವಂಶದ ಮೊದಲ ದೊರೆ ಕೊಲೆಮಾಡಿದ.

ಶ್ರೀ

ಋಗ್ವೇದದ ಶ್ರೀ ಸೂಕ್ತದಲ್ಲಿ ಶ್ರೀ ಅಥವಾ ಲಕ್ಷ್ಮಿಯನ್ನು 'ಪದ್ಮಾ, ಪದ್ಮಮಾಲಿನೀ, [illegible]' ಎಂದು ವರ್ಣಿಸಿದ್ದಾರೆ.

ಸಂಪತ್ತು ಹಾಗೂ ಸೌಂದರ್ಯದ ಅಧಿದೇವತೆ ಶ್ರೀ. ಗುಪ್ತರ ಕಾಲದಲ್ಲಿ [illegible] ಶ್ರೀಯನ್ನು ಪೂಜಿಸುತ್ತಿದ್ದರು. [illegible] ಈ ದೇವಿಯ ಸ್ತುತಿ ಇದೆ. [illegible] ಧರ್ಮಗ್ರಂಥಗಳಲ್ಲಿ ಶ್ರೀ ಪೂಜೆಯ ಪ್ರಸ್ತಾಪವಿದೆ. ಕೆಲವು ಬೌದ್ಧ ಕೆತ್ತನೆಗಳಲ್ಲಿ ಶ್ರೀ ಚಿತ್ರವಿದೆ.

ಪ್ರಜಾಪತಿಯ [illegible] ಕಥೆಗಳಿವೆ.

[illegible]

ವಿಷ್ಣುವಿನ [illegible] ದ್ದಾಳೆ. ರಾಮಾವತಾರದಲ್ಲಿ ಸೀತೆ, ಪರಶುರಾಮ ಅವತಾರದಲ್ಲಿ ಧರಣಿ, ಕೃಷ್ಣಾವತಾರದಲ್ಲಿ ರುಕ್ಮಿಣಿಯಾಗಿ [illegible]

ದೇಶದ ಕೆಲವು ಭಾಗಗಳಲ್ಲಿ ಶರತ್ಕಾಲದ ಹುಣ್ಣಿಮೆಯ ದಿನ ಶ್ರೀ ಪೂಜೆ ನಡೆಸುತ್ತಾರೆ.

[illegible] ಮೊದಲಾದುವು ಲಕ್ಷ್ಮಿಯ ಇತರ ಹೆಸರುಗಳು.

ಶ್ರೀಧರಾಚಾರ್ಯ

ಅಂಕಗಣಿತ ಕ್ಷೇತ್ರದಲ್ಲಿ ವಿಸ್ತೃತವಾದ ಗ್ರಂಥಗಳನ್ನು ರಚಿಸಿರುವವನು ಶ್ರೀಧರಾಚಾರ್ಯ. ಕಾಲ ಸುಮಾರು ಹತ್ತನೆಯ ಶತಮಾನದ ಕೊನೆಯ ಭಾಗ.

'ಪಾಟೀಗಣಿತ' ಮತ್ತು 'ತ್ರಿಶತಿಕಾ'—ಅಂಕಗಣಿತದ ಮೇಲಿನ ಅವನ ಕೃತಿಗಳು. ಬೀಜಗಣಿತವನ್ನು ಕುರಿತ ಇವನ ಇನ್ನೊಂದು ಕೃತಿ ದೊರೆತಿಲ್ಲ. ಎರಡನೆಯ ಭಾಸ್ಕರ ಆ ಕೃತಿಯಿಂದ ಉದಹರಿಸಿದ್ದಾನೆ.

ಅಪವರ್ತನ ರೀತಿಯಿಂದ ಭಾಗಾಕಾರ ಮಾಡುವುದನ್ನು ಈತ ಕಂಡುಕೊಂಡ. ಗುಣಾಕಾರವನ್ನು ಪ್ರತ್ಯುತ್ಪನ್ನ ಎಂದು ಕರೆದಿದ್ದಾನೆ. ಅರಬರ ಕೃತಿಗಳ ಮುಖಾಂತರ ಪಾಶ್ಚಾತ್ಯ ಪ್ರಪಂಚವನ್ನು ತಲುಪಿದ 'ಕಪಾಟ ಸಂಧಿ' ಪದ್ಧತಿಯನ್ನು ಚರ್ಚಿಸಿದ್ದಾನೆ. ಅನಂತರ ಬಂದ ಭಾರತೀಯ ಗಣಿತ ಶಾಸ್ತ್ರಜ್ಞರಿಗೂ ಈ ಪದ್ಧತಿ ಮೆಚ್ಚುಗೆಯಾಗಿತ್ತು. [illegible] ಗುಣಾಂಕದ ನಾಲ್ಕರಷ್ಟರಿಂದ ಗುಣಿಸುವುದರಿಂದ ವರ್ಗ ಸಮೀಕರಣದ ಮೂಲಗಳನ್ನು ಕಂಡುಹಿಡಿಯುವ ಹೊಸ ವಿಧಾನವನ್ನು ಇವನು ರೂಪಿಸಿದ.

ಶ್ರೀಧರ ಕೇತ್‌ಕರ್

ಮರಾಠ ಜನರಿಗೆ ಈ ಶತಮಾನದ ಮೂರನೆಯ ದಶಕದಲ್ಲಿ ವಿಶ್ವಕೋಶ ರಚಿಸಿ ಮಹಾನ್ ಕೊಡುಗೆ ಇತ್ತವರು. ಶ್ರೀಧರ್ ಕೇತ್‌ಕರ್.

ಅವರಿಗೆ ಯಾರದೇ ಪ್ರೋತ್ಸಾಹವಾಗಲೀ ಧನಸಹಾಯವಾಗಲೀ ಇರಲಿಲ್ಲ. ಸ್ವಂತ ಹಣವೂ ಇರಲಿಲ್ಲ. ಆದರೂ ಅವರು ಎದೆಗುಂದಲಿಲ್ಲ. ಮೊದಲಿನಿಂದ ಕೊನೆಯ ವರೆಗೆ ಬಡತನದಲ್ಲಿ ಬಳಲಿದರೂ ಕೇವಲ 12 ವರ್ಷಗಳ ಅವಧಿಯಲ್ಲಿ 23 ಭಾಗಗಳಲ್ಲಿ ಮರಾಠೀ ವಿಶ್ವಕೋಶವನ್ನು ಸಿದ್ಧಪಡಿಸಿದರು. ಇದರಲ್ಲಿ ಭಾರತೀಯ ವಿಚಾರಗಳಿಗೆ ಹೆಚ್ಚು ಪ್ರಾಧಾನ್ಯ ಇತ್ತರು.

ಶ್ರೀಧರ್ ಕೇತ್‌ಕರ್ ಅವರು 1884 ಫೆಬ್ರವರಿ 2ರಂದು ಮಧ್ಯಪ್ರದೇಶದ ರಾಯಪುರದಲ್ಲಿ ಜನಿಸಿದರು. ವಿವಿಧ ವಿಷಯಗಳ ಬಗೆಗೆ ಓದುವುದರಲ್ಲಿ ಅವರಿಗೆ ಚಿಕ್ಕಂದಿನಿಂದಲೂ ಆಸಕ್ತಿ. ಮುಂಬಯಿಯಲ್ಲಿ ಕಾಲೇಜು ವಿದ್ಯಾಭ್ಯಾಸ. ಅನಂತರ ಅಮೆರಿಕಕ್ಕೆ ತೆರಳಿದರು. ಅಲ್ಲಿಯೂ ತಮ್ಮ ಜ್ಞಾನ ಸಂಗ್ರಹಣ ಕಾರ್ಯವನ್ನು ಅವಿರತವಾಗಿ ಸಾಗಿಸಿದರು. ಪಿಎಚ್.ಡಿ. ಪಡೆದು ಇಂಗ್ಲೆಂಡ್-ಫ್ರಾನ್ಸ್‌ಗಳ ದಾರಿಯಾಗಿ ಭಾರತಕ್ಕೆ ಮರಳಿದರು. ಪ್ಯಾರಿಸಿನಲ್ಲಿ ಡಿಡೆರೋ ಸಂಪಾದಿಸಿದ್ದ ವಿಶ್ವಕೋಶವನ್ನು ಕೇತ್‌ಕರ್ ಬಹುವಾಗಿ ಮೆಚ್ಚಿಕೊಂಡರು.

ಭಾರತದಲ್ಲಿ ಸ್ವಲ್ಪಕಾಲ ಶಿಕ್ಷಕ ವೃತ್ತಿ ನಡೆಸಿದರು. ಅನಂತರ ಊರೂರು ಸಂಚರಿಸಿದರು. ಮರಾಠಿಯಲ್ಲಿ ವಿಶ್ವಕೋಶ ರಚಿಸಬೇಕೆಂದು 1915ರಲ್ಲಿ ಒಂದು ಕಂಪೆನಿ ಆರಂಭಿಸಿದರು.. ಷೇರುಗಳನ್ನು ಮಾರಿ ಹಣಕೂಡಿಸಿದರು. ವಿದೇಶದಲ್ಲಿ ಪರಿಚಯವಾಗಿದ್ದ ಎಡಿತ್ ಕೊಹೆನ್ ಎಂಬ ಯೆಹೂದ್ಯ ಮಹಿಳೆಯನ್ನು ಭಾರತದಲ್ಲಿ ಮದುವೆಯಾದರು. ಶೀಲವತಿ ಎಂದು ಆಕೆಗೆ ಹೆಸರಿಟ್ಟರು. ವಿಶ್ವಕೋಶ ರಚನೆಯಾಗುವಾಗ ಆರ್ಥಿಕ ಮುಗ್ಗಟ್ಟು, ಕೆಲವು ಲೇಖಕರಿಂದ ಲೇಖನಗಳು ಒದಗದಿದ್ದುದು, ಮುದ್ರಣಕಾರ್ಯದಲ್ಲಿ ವಿಘ್ನ–ಹೀಗೆ ಎಲ್ಲ ಬಗೆಯ ಎಡರುತೊಡರು ಒದಗಿದುವು. ಅವೆಲ್ಲವನ್ನೂ ಜಯಿಸಿ ಕೇತ್‌ಕರರು ವಿಶ್ವಕೋಶ ರಚಿಸಿದರು, ಮುದ್ರಿಸಿದರು, ಪ್ರಕಟಿಸಿದರು. ಅವನ್ನು ಸೈಕಲಿನ ಹಿಂದೆ ಕಟ್ಟಿಕೊಂಡು ಒಯ್ದು ಮಾರುವ ಕೆಲಸವನ್ನೂ ತಾವೇ ಮಾಡಿದರು.



ವಿಶ್ವಕೋಶ : ಕೇತ್‌ಕರ್

ಕೇತ್‌ಕರರು ಇತಿಹಾಸ, ಸಮಾಜಶಾಸ್ತ್ರ, ಅರ್ಥಶಾಸ್ತ್ರಗಳ ಮೇಲೆ 20ಕ್ಕೂ ಹೆಚ್ಚು ಇತರ ಗ್ರಂಥಗಳನ್ನೂ ಬರೆದಿದ್ದಾರೆ. ಕಾದಂಬರಿಗಳೂ ಇವೆ. 'ನನ್ನ ಹನ್ನೆರಡು ವರ್ಷಗಳ ಕೆಲಸ' ಅವರ ಆತ್ಮಚರಿತ್ರೆ.

ಶ್ರೀನಗರ

ಜಮ್ಮು ಹಾಗೂ ಕಾಶ್ಮೀರ ರಾಜ್ಯದ ರಾಜಧಾನಿ —ಶ್ರೀನಗರ.

'ಸೂರ್ಯನ ಪಟ್ಟಣ' ಇದು ಶ್ರೀನಗರದ ಅರ್ಥ. ಕ್ರಿ.ಪೂ.ದಲ್ಲಿ ಅಶೋಕನ ಕಾಲದ ಶ್ರೀನಗರ ಈಗಿನ ನಗರಕ್ಕೆ ಆರು ಕಿ. ಮೀ. ದೂರದಲ್ಲಿತ್ತು. ಅದಕ್ಕೆ ಈಗ ಪಂಡರೇಥನ್ ಎಂದು ಹೆಸರು. ಕಾಶ್ಮೀರವನ್ನು 79ರಿಂದ 130ರ ವರೆಗೆ ಆಳಿದ ಎರಡನೆಯ ಪ್ರವರಸೇನ ದೊರೆ ಈಗಿನ ಶ್ರೀನಗರದ ಸ್ಥಾಪಕ. ಪ್ರಪಂಚದ ವಿಖ್ಯಾತ ಪ್ರವಾಸಿ ಕೇಂದ್ರಗಳಲ್ಲಿ ಶ್ರೀನಗರ ಒಂದು. ಸಮುದ್ರ ಮಟ್ಟದಿಂದ 5,200 ಅಡಿ ಎತ್ತರದಲ್ಲಿದೆ.

ಶ್ರೀನಗರದ ಮಧ್ಯೆ ವಿಶಾಲ, ಗಂಭೀರ ನದಿ ಝೀಲಂ ಹರಿಯುತ್ತದೆ. ನಗರದ ವಿವಿಧ ಭಾಗಗಳನ್ನು ಸಂಬಂಧಿಸುವ ಒಂಬತ್ತು ಸೇತುವೆಗಳಿವೆ. ಏರುತಗ್ಗುಗಳಲ್ಲಿ ಮನೆಗಳು. ನಗರದ ಎರಡು ಕಡೆಗೆ ಶಂಕರಾಚಾರ್ಯ ಹಾಗೂ ಹರಿ ಪರ್ವತವೆಂಬ ಬೆಟ್ಟಗಳು —ಹಿನ್ನೆಲೆಗೆ ಹಿಮಾಲಯ. ಹೀಗೆ ಶ್ರೀನಗರದ ನೋಟವೇ ಸೊಗಸು.

ಹಲವು ಹೆಸರಾಂತ ಮಸೀದಿಗಳು ಇಲ್ಲಿವೆ. ಪೈಗಂಬರನ ಪವಿತ್ರ ಕೇಶವಿರುವ ಮರದಲ್ಲೇ ಕಟ್ಟಿರುವ ಹಜರತ್‌ಬಾಲ್ ಮಸೀದಿ ಇವುಗಳಲ್ಲೊಂದು. ಒಂದು ವಸ್ತುಸಂಗ್ರಹಾಲಯವಿದೆ. ಬೆಟ್ಟದ ಮೇಲಿರುವ ಶಿವದೇವಾಲಯವನ್ನು ಅಶೋಕನ ಮಗ (ಕ್ರಿ.ಪೂ. 200) ಜಲೌಕ ಕಟ್ಟಿಸಿದ. ಇದನ್ನು ಕಾಶ್ಮೀರದ ರಾಜ ಲಲಿತಾದಿತ್ಯ (8ನೆಯ ಶತಮಾನ) ಜೀರ್ಣೋದ್ಧಾರ ಮಾಡಿದ. ನಗರದಿಂದ ನಾಲ್ಕು ಮೈಲು ದೂರದ ಪರಿಹಾಸಪುರದಲ್ಲಿ ಎಂಟನೆಯ ಶತಮಾನದ ಬೌದ್ಧ ವಾಸ್ತುಶಿಲ್ಪದ ಅನೇಕ ಅವಶೇಷಗಳಿವೆ.

ದಲ್ ಸರೋವರ ಶ್ರೀನಗರದ ಹೊರವಲಯದಲ್ಲಿದೆ. ಶ್ರೀನಗರದ ಚಷ್ಮಾಶಾಹಿ (ಕಾರಂಜಿಗಳ ರಾಜ). ನಿಷತ್ (ಆಹ್ಲಾದಕರ ಉದ್ಯಾನ). ಷಾಲಿಮಾರ್ ಉದ್ಯಾನಗಳಿವೆ. ಅಂತಸ್ತುಗಳು. ಮಧ್ಯೆ ನೀರಿನ ಕಾಲುವೆ.

ನಾಗಿನ್ ಸರೋವರ : ವಿಶ್ರಾಂತಿ ಧಾಮ



ಆದರ ಎರಡೂ ಕಡೆಗೆ ನೀಳವಾದ ಸೈಪ್ರೆಸ್ ಮರಗಳು, ಎಲ್ಲೆಲ್ಲೂ ಕಾರಂಜಿಗಳು —ಮೊಘಲರು ನಿರ್ಮಿಸಿದ ಈ ಉದ್ಯಾನಗಳ ವೈಶಿಷ್ಟ್ಯ. ನೆಹರೂ ಪಾರ್ಕ್ ಇತ್ತೀಚಿನ ಆಕರ್ಷಣೆ.

ದಾಚಿಗಾಮ್ ಶ್ರೀನಗರದಿಂದ 13 ಮೈಲು ದೂರದಲ್ಲಿರುವ ಅಭಯಾರಣ್ಯ. ನಾಗಿನ್, ಅಂಚಾರ್, ಮಾನಸಬಾಲ್, ವೂಲಾರ್, ನೀಲನಾಗ್ ಮುಂತಾದ ಅನೇಕ ಸರೋವರಗಳು ಪಟ್ಟಣದಿಂದ ಸ್ವಲ್ಪ ದೂರದಲ್ಲಿವೆ.

ನೆಲಹಾಸು ನೇಯುವುದು, ಮರಕೆತ್ತನೆ, ಚಿನ್ನ ಬೆಳ್ಳಿ ತಾಮ್ರದ ನಾಜೂಕು ಪದಾರ್ಥಗಳು ಇಲ್ಲಿನ ಕೈಗಾರಿಕೆಗಳು. ಶ್ರೀನಗರದ ಶಾಲುಗಳು ಬಹಳ ಪ್ರಸಿದ್ಧ.

ಪ್ರಪಂಚದ ಎಲ್ಲೆಡೆಯಿಂದ ಪ್ರವಾಸಿಗಳು ಆಕರ್ಷಿತರಾಗುವ ಶ್ರೀನಗರಕ್ಕೆ ರಸ್ತೆ ಹಾಗೂ ವಿಮಾನ ಸಂಪರ್ಕಗಳಿವೆ.

ಶ್ರೀನಗರದ ಜನಸಂಖ್ಯೆ 4,15,271.

ಶ್ರೀನಿವಾಸ ರಾಮಾನುಜನ್

ನೋಡಿ : ಸಂಪುಟ ೩.

ಶ್ರೀಪ್ರಕಾಶ

ಪಾಂಡಿತ್ಯ, ಸಂಸ್ಕೃತಿಗಳ ವಾತಾವರಣದಲ್ಲಿ ಹುಟ್ಟಿ ಬೆಳೆದು, ದೇಶಕ್ಕೆ ಉಪಯುಕ್ತ ಸೇವೆ ಸಲ್ಲಿಸಿ, ಸಾರ್ವಜನಿಕ ಜೀವನದಲ್ಲಿ ಪ್ರಾಮಾಣಿಕತೆ, ಸದಾಚಾರಗಳ ಪ್ರತೀಕರೆನಿಸಿದ ವ್ಯಕ್ತಿ, ಶ್ರೀಪ್ರಕಾಶ.

ಮಹಾ ವಿದ್ವಾಂಸರೆಂದೂ ಆಚಾರ್ಯಪುರುಷರೆಂದೂ ಪ್ರಸಿದ್ಧರಾದ ದೇಶಾಭಿಮಾನಿ ಭಗವಾನ್ ದಾಸರ ಪುತ್ರ ಶ್ರೀಪ್ರಕಾಶ ಜನಿಸಿದ್ದು 1890 ಆಗಸ್ಟ್ 3 ರಂದು, ವಾರಾಣಸಿಯಲ್ಲಿ. ಅಲಹಾಬಾದ್ ವಿಶ್ವವಿದ್ಯಾನಿಲಯದಲ್ಲಿ ಬಿ. ಎ., ಎಲ್ ಎಲ್. ಬಿ., ಪದವಿ ಪಡೆದರು. ಮುಂದೆ ಬಾರ್-ಎಟ್–ಲಾ ತೇರ್ಗಡೆಯಾದರು. 1914ರಿಂದ ವಕೀಲಿ ನಡೆಸಿದರು. ರಾಷ್ಟ್ರೀಯ ಸ್ವಾತಂತ್ರ್ಯ ಚಳುವಳಿಯಲ್ಲಿ ಪಾಲ್ಗೊಂಡರು.

ಅಖಿಲ ಭಾರತ ಕಾಂಗ್ರೆಸ್ ಸಮಿತಿ (ಎ.ಐ.ಸಿ.ಸಿ.)ಗೆ 1918ರಿಂದ 27 ವರ್ಷ ಸದಸ್ಯರಾಗಿ ಸೇವೆ ಸಲ್ಲಿಸಿದ ಶ್ರೀಪ್ರಕಾಶರು 1929–31 ಅವಧಿಯಲ್ಲಿ ಪ್ರಧಾನ ಕಾರ್ಯದರ್ಶಿಯೂ ಆಗಿದ್ದರು. 1928ರಿಂದ 34ರ ತನಕ ಸಂಯುಕ್ತ ಪ್ರಾಂತ (ಈಗ ಉತ್ತರ ಪ್ರದೇಶ) ಪ್ರದೇಶ ಕಾಂಗ್ರೆಸ್ ಸಮಿತಿಯ ಪ್ರಧಾನ ಕಾರ್ಯದರ್ಶಿಯಾಗಿ. ಅನಂತರ ಒಂದು ವರ್ಷ ಅದರ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದರು.

ಸ್ವಾತಂತ್ರ್ಯ ಚಳುವಳಿಯಲ್ಲಿ ಸೇರಿದುದಕ್ಕಾಗಿ ಶ್ರೀಪ್ರಕಾಶರಿಗೆ ಅನೇಕ ಸಲ ಕಾರಾಗೃಹ ಶಿಕ್ಷೆ ಆಯಿತು. 1934 ಮತ್ತು 1945ರಲ್ಲಿ ಕೇಂದ್ರ ಶಾಸನ ಸಭೆಗೆ ಸದಸ್ಯರಾಗಿ ಚುನಾಯಿತರಾಗಿದ್ದರು. 1946ರಲ್ಲಿ ರೂಪಿಸಲ್ಪಟ್ಟ ರಾಜ್ಯಾಂಗ ರಚನಾ ಸಭೆಯ ಸದಸ್ಯರಾದರು.



ಸಾರ್ವಜನಿಕ ಜೀವನದಲ್ಲಿ ಸದಾಚಾರ : ಶ್ರೀಪ್ರಕಾಶ

ಸ್ವಾತಂತ್ರ್ಯಾನಂತರ 1949ರ ತನಕ ಪಾಕಿಸ್ತಾನದಲ್ಲಿ ಭಾರತದ ಹೈಕಮಿಷನರ್ ಆಗಿ ಅನಂತರ ಅಸ್ಸಾಂನ ರಾಜ್ಯಪಾಲರಾಗಿ ಸೇವೆ ಸಲ್ಲಿಸಿದರು. 1950–52 ಅವಧಿಯಲ್ಲಿ ಕೇಂದ್ರ ವಾಣಿಜ್ಯ ಸಚಿವರಾದರು. ಅನಂತರ, ನೈಸರ್ಗಿಕ ಸಂಪನ್ಮೂಲ ಮತ್ತು ವೈಜ್ಞಾನಿಕ ಸಂಶೋಧನಾ ಖಾತೆಗಳ ಸಚಿವರಾದರು. 1952ರಿಂದ 56ರತನಕ ಮದರಾಸು (ಈಗ ತಮಿಳುನಾಡು), ಅನಂತರ 1962ರ ತನಕ ಮುಂಬಯಿ (ಈಗ ಮಹಾರಾಷ್ಟ್ರ) ರಾಜ್ಯಗಳ ರಾಜ್ಯಪಾಲರಾಗಿದ್ದರು.

ಶ್ರೀಪ್ರಕಾಶರು ಹಿಂದಿಯುಲ್ಲಿ ಅನೇಕ ಪುಸ್ತಕಗಳನ್ನು ಬರೆದಿದ್ದಾರೆ. ಆನಿ ಬೆಸೆಂಟರ ಮತ್ತು ತಮ್ಮ ತಂದೆ ಭಗವಾನ ದಾಸರ ಜೀವನ ಚರಿತ್ರೆಯನ್ನು ಇಂಗ್ಲಿಷಿನಲ್ಲಿ ಬರೆದಿದ್ದಾರೆ. ಅವರ ಪ್ರಸಿದ್ಧ ಕೃತಿ 'ಪಾಕಿಸ್ತಾನದ ಜನನ ಮತ್ತು ಬಾಲ್ಯ'. ಇಂಗ್ಲಿಷ್ ಮತ್ತು ಹಿಂದೀ ಭಾಷೆಗಳೆರಡರಲ್ಲೂ ಇವೆ. ತಮ್ಮ 72 ವಯಸ್ಸಿನಲ್ಲಿ ಸುದೀರ್ಘ ಸಾರ್ವಜನಿಕ ಜೀವನದಿಂದ ನಿವೃತ್ತರಾದ ಬಳಿಕ. ಅವರು ರಾಷ್ಟ್ರ ಜೀವನಕ್ಕೆ ಮಾರ್ಗದರ್ಶನ ನೀಡುವಂಥ ಲೇಖನಗಳನ್ನು ಬರೆಯುತ್ತಿದ್ದರು. 1971 ಜೂನ್ 23ರಂದು ಅವರು ನಿಧನರಾದರು.

ಶ್ರೀರಂಗಂ

ಕಾವೇರಿ ನದಿ ಸಮುದ್ರ ಸೇರುವುದಕ್ಕೆ ಮೊದಲು ತನ್ನ ಮಾರ್ಗದಲ್ಲಿ ಮೂರು ದ್ವೀಪಗಳನ್ನು ಉಂಟುಮಾಡಿದೆ. ಮೊದಲನೆಯದು ಆದಿರಂಗ–ಶ್ರೀರಂಗಪಟ್ಟಣ. ಎರಡನೆಯದು ಮಧ್ಯರಂಗ –ಶಿವಸಮುದ್ರ. ಕೊನೆಯದು ಅಂತ್ಯರಂಗ –ಇದೇ ಶ್ರೀರಂಗಂ. ಇದು ಮದರಾಸಿನ ತಿರುಚಿರಪ್ಪಳ್ಳಿಯ ಉತ್ತರಕ್ಕೆ ಎರಡು ಮೈಲು ದೂರದಲ್ಲಿದೆ. ಕಾಶಿ, ರಾಮೇಶ್ವರಗಳಂತೆ ಇದೂ ಇಂದು ಪುರಾತನ ಪವಿತ್ರ ಕ್ಷೇತ್ರ.

ಹನ್ನೆರಡನೆಯ ಶತಮಾನದಲ್ಲಿ ಬಾಳಿದ ರಾಮಾನುಜಾಚಾರ್ಯರ ಕಾಲಕ್ಕಿಂತಲೂ ಹಿಂದಿನಿಂದಲೇ ಈ ಕ್ಷೇತ್ರ ಪ್ರಸಿದ್ಧವಾಗಿತ್ತು. ರಾಮಾನುಜಾ

ಶ್ರೀರಂಗಂ ತೀರ್ಥಸ್ನಾನ



ಚಾರ್ಯರು ಇದನ್ನು ತಮ್ಮ ಧರ್ಮಬೋಧೆಯ ಕೇಂದ್ರವನ್ನಾಗಿ ಮಾಡಿಕೊಂಡಮೇಲೆ ಇದರ ಪ್ರಖ್ಯಾತಿ ಹೆಚ್ಚಿತು.

ಇಲ್ಲಿರುವ ರಂಗನಾಥಸ್ವಾಮಿಯ ದೇವಾಲಯ ಪ್ರಸಿದ್ಧವಾದದ್ದು. ಹಲವಾರು ಮಂದಿ ಆಳ್ವಾರರು ಈ ದೇವರನ್ನು ಸ್ತುತಿಸಿದ್ದಾರೆ.

ರಂಗನಾಥಸ್ವಾಮಿಯ ದೇವಾಲಯ ಈಗಿರುವ ರೂಪವನ್ನು ಪಡೆದದ್ದು 17ನೆಯ ಶತಮಾನದಲ್ಲಿ. ಇದಕ್ಕೆ ಏಳು ಪ್ರಾಕಾರಗಳಿವೆ. ಮೊದಲನೆಯ ಪ್ರಾಕಾರದ ಸುತ್ತಳತೆ ಸುಮಾರು 2 ಮೈಲು. ನಾಲ್ಕನೆಯ ಪ್ರಾಕಾರದಲ್ಲಿರುವ ಸಾವಿರ ಕಂಬಗಳ ಮಂಟಪ ಭವ್ಯವಾದದ್ದು.

ಪ್ರತಿವರ್ಷ ವೈಕುಂಠ ಏಕಾದಶಿಯ ದಿನ ಇಲ್ಲಿ ನಡೆಯುವ ದೊಡ್ಡ ಉತ್ಸವಕ್ಕೆ ಅನೇಕ ಸಹಸ್ರ ಮಂದಿ ಭಕ್ತರು ಬರುತ್ತಾರೆ. ಭಾರತದ ಶ್ರೀವೈಷ್ಣವ ಕ್ಷೇತ್ರಗಳಲ್ಲಿ ಶ್ರೀರಂಗಂ ಪ್ರಮುಖವಾದದ್ದು.

ಇಲ್ಲಿನ ಜನಸಂಖ್ಯೆ 51,068.

ಶ್ರೀರಂಗಪಟ್ಟಣ


ಕಾವೇರಿ ನದಿ ಕವಲೊಡೆದು ಮತ್ತೆ ಒಂದಾಗಿ ಮುಂದುವರಿಯುವಾಗ ಉಂಟಾದ ದ್ವೀಪದ ಮೇಲೆ ಶ್ರೀರಂಗಪಟ್ಟಣ ಬೆಳೆದಿದೆ.

894ರಲ್ಲಿ ಗಂಗರ ಆಶ್ರಯದಲ್ಲಿ ಪಾಳೆಯಗಾರ ತಿರುಮಲಯ್ಯ ಶ್ರೀರಂಗನಾಥನ ಒಂದು ದೇವಾಲಯವನ್ನು ಕಟ್ಟಿಸಿ, ಆ ದ್ವೀಪದಲ್ಲಿ ಆ ಜಾಗಕ್ಕೆ ಶ್ರೀರಂಗಪಟ್ಟಣ ಎಂದು ಹೆಸರಿಟ್ಟ. ವಿಜಯನಗರದ ಅರಸರು ಪಟ್ಟಣವನ್ನು ತಮ್ಮದಾಗಿ ಮಾಡಿಕೊಂಡರು. ಈ ದ್ವೀಪನಗರಕ್ಕೆ ನೈಸರ್ಗಿಕ ರಕ್ಷಣೆ ಇದ್ದರೂ ಸುತ್ತಲೂ ಬಲವಾದ ಕೋಟೆ ಕಟ್ಟಿಸಿದರು. ಮೈಸೂರು ಅರಸು ವಂಶದ ರಾಜ ಒಡೆಯರ್ ಶ್ರೀರಂಗಪಟ್ಟಣವನ್ನು ರಾಜಧಾನಿಯಾಗಿ ಮಾಡಿಕೊಂಡರು. ಮರಾಠರು ಇದನ್ನು ಒಮ್ಮೆ ಆಕ್ರಮಿಸಿದ್ದರು. ಬಿಜಾಪುರದ ಸುಲ್ತಾನನೂ ಇದರ ಮೇಲೆ ಕಣ್ಣಿಟ್ಟಿದ್ದ. ಟಿಪ್ಪುವಿನ ಕಾಲದಲ್ಲಿ ಶ್ರೀರಂಗಪಟ್ಟಣ ಆಂಗ್ಲರ ಆಕ್ರಮಣಕ್ಕೊಳಗಾದಾಗ ಪತನಗೊಂಡಿತು.

ಪಟ್ಟಣದ ಅಧಿದೈವ ರಂಗನಾಥನ ಮೂರ್ತಿ. ಗಾತ್ರದಲ್ಲೂ ಸೌಂದರ್ಯದಲ್ಲೂ ಹಿರಿದಾದದ್ದು. ತನ್ನ ಏಳು ಹೆಡೆಗಳನ್ನು ಬಿಚ್ಚಿ ಹಿಡಿದಿರುವ ಆದಿಶೇಷನೇ ಇವನಿಗೆ ಶಯ್ಯೆ. ಟಿಪ್ಪುವಿನ ಅರಮನೆ ಇದ್ದದ್ದು ದೇವಾಲಯದ ಎದುರುಗಡೆ. ಸುಲ್ತಾನ ಪ್ರತಿ ದಿನ ತನ್ನ ಅರಮನೆಯ ಮಹಡಿಯ ಮೇಲೆ ಒಂದು ಶ್ರೀರಂಗನಿಗೆ ನಮಸ್ಕಾರ ಮಾಡುತ್ತಿದ್ದ


ರಂಗನಾಥ ದೇವಾಲಯ





ಹೈದರ್-ಟಿಪ್ಪು ಸಮಾಧಿ ಭವನ

ಎನ್ನುತ್ತಾರೆ. ಈ ಅರಮನೆ ನೆಲಸಮವಾಗಿದೆ. ಪ್ರತಿ ವರ್ಷ ವೈಶಾಖ [illegible] ದಿನ ಸಾವಿರಾರು ಭಕ್ತರು ರಂಗನಾಥನ ದರ್ಶನಕ್ಕೆ ಇಲ್ಲಿ ಸೇರುತ್ತಾರೆ. ಕೋಟೆಯೊಳಗೆ ಒಂದು ಪ್ರಸಿದ್ಧ ಮಸೀದಿಯೂ ಇದೆ.



[illegible]

ಕೋಟೆಯಿಂದ ಹೊರಗೆ, ಕೆಲವು ಫರ್ಲಾಂಗ್ ದೂರದಲ್ಲಿ ದರಿಯಾ ದೌಲತ್ –'ಸಂಪತ್ತಿನ ನದಿ' – ಇದೆ. ಇದು ಕಾವೇರಿಯ ದಡದಲ್ಲಿ ಪ್ರಕೃತಿ ರಮ್ಯ ಪ್ರದೇಶದಲ್ಲಿ ಟಿಪ್ಪು ಕಟ್ಟಿಸಿದ ವಿಶ್ರಾಂತಿಧಾಮ. ಇಲ್ಲಿನ ಗೋಡೆಗಳು ವರ್ಣರಂಜಿತ ಚಿತ್ರಕೃತಿಗಳಿಂದ ತುಂಬಿವೆ. ಕೆಲವೆಡೆಗಳಲ್ಲಿ ಚಿತ್ರದ ರಚನೆಗೆ ಚಿನ್ನದಂತೆ ಹೊಳೆಯುವ ಮುಲಾಮು ಉಪಯೋಗಿಸಿದ್ದಾರೆ.

ಇಲ್ಲಿಂದ ಸುಮಾರು ಒಂದು ಮೈಲು ದೂರದಲ್ಲಿ ಹೈದರ್ ಮತ್ತು ಟಿಪ್ಪು ಇವರ ಸಮಾಧಿ ಭವನವಿದೆ. ಇಲ್ಲಿರುವ ಕ್ರೈಸ್ತ ದೇವಾಲಯ ದಕ್ಷಿಣ ಭಾರತದ ಅತಿ ಹಳೆಯ ಇಗರ್ಜಿಗಳಲ್ಲಿ ಒಂದು.

ರಂಗನತಿಟ್ಟು ಪಕ್ಷಿಧಾಮ ಶ್ರೀರಂಗಪಟ್ಟಣದಿಂದ ಒಂದೂವರೆ ಮೈಲು ದೂರದಲ್ಲಿದೆ. [illegible]

ಗಳು ಪಕ್ಷಿಗಳಿಗೆ ಆವಾಸ. ಜೂನಿನಿಂದ ಅಕ್ಟೋಬರ್ ವರೆಗೆ —ಮೊಟ್ಟೆಯಿಡುವ ಕಾಲಕ್ಕೆ– ದೂರದೂರದಿಂದ ಪಕ್ಷಿಗಳು ಇಲ್ಲಿಗೆ ವಲಸೆ ಬರುತ್ತವೆ.

ಶ್ರೀಲಂಕಾ

ಶ್ರೀರಾಮ ಸೇತು ಬಂಧನ ಮಾಡಿ ಸಮುದ್ರ ದಾಟಿ ತಲಪಿದ ದೇಶ ಲಂಕಾ ಎಂದು ನಂಬಿಕೆ. ಲಂಕಾ ಪ್ರಾಚೀನ ಹೆಸರು. ಅನಂತರ ಇದು ಸಿಂಹಳ ಎನಿಸಿಕೊಂಡಿತು. ಇಂಗ್ಲಿಷಿನಲ್ಲಿ 'ಸಿಲೋನ್' ಆಯಿತು. ಈಗ 'ಶ್ರೀಲಂಕಾ' ಎಂದು ನಾಮಕರಣವಾಗಿದೆ.

ಇಂದಿಗೂ 'ರಾಮನ ಸೇತುವೆ' ಎಂದು ನಿರ್ದೇಶಿಸಲ್ಪಡುವ ಪುಟ್ಟ ಬಂಡೆ ದ್ವೀಪಗಳ ಭಾಗ ಶ್ರೀಲಂಕಾದ ಉತ್ತರಕ್ಕಿದೆ.

ಸುಮಾರು ಕ್ರಿ. ಪೂ. ಐದನೆಯ ಶತಮಾನದಲ್ಲಿ ಉತ್ತರ ಭಾರತದ ವಿಜಯ ಎಂಬವನು ತನ್ನ ನೂರಾರು ಅನುಚರರೊಂದಿಗೆ ಸಮುದ್ರ ದಾಟಿ, ಲಂಕೆಯ ಆದಿವಾಸಿಗಳನ್ನೂ ವೆಡ್ಡರನ್ನೂ ಗೆದ್ದು ತನ್ನ ರಾಜ್ಯ ಸ್ಥಾಪಿಸಿದ. ವಿಜಯನೂ ಅವನ ಅನುಚರರೂ ಆರ್ಯರು; ತನ್ನ ತಂದೆ ಸಿಂಹಬಾಹುವಿನ ಸ್ಮರಣಾರ್ಥ ಲಂಕೆಯನ್ನು ಸಿಂಹಳ ಎಂದು ವಿಜಯ ಕರೆದ. ಇದನ್ನು ಕಥಾವಸ್ತುವಾಗಿ ಉಳ್ಳ ಸಿಂಹಳದ ಮಹಾಕಾವ್ಯ 'ಮಹಾವಂಶ'; ಇದು ಪಾಳಿ ಭಾಷೆಯಲ್ಲಿದೆ. ವಿಜಯನ ಜನರೂ ಭಾರತದ ದಕ್ಷಿಣದಲ್ಲಿದ್ದ ತಮಿಳರೂ ಸಿಂಹಳದಲ್ಲಿ ಬೆರೆತರು.

ಅಲ್ಲಿಂದಾಚೆ ಸಿಂಹಳದ ಚರಿತ್ರೆಯ ಪ್ರಮುಖ ಘಟ್ಟ ಬೌದ್ಧಮತದ ಪ್ರವೇಶ –ಕ್ರಿ. ಪೂ. 307ರಲ್ಲಿ. ಈಗಲೂ ಬೌದ್ಧಮತ ಇಲ್ಲಿನ ಮುಖ್ಯ ಧರ್ಮಗಳಲ್ಲಿ ಒಂದು. ಮತ್ತೊಂದು ಹಿಂದೂಧರ್ಮ. ಮುಂದೆ ಕೆಲ ಕಾಲ ದಕ್ಷಿಣ ಭಾರತದ ದ್ರಾವಿಡರು ಇಲ್ಲಿ ಪ್ರಾಬಲ್ಯಕ್ಕೆ ಬಂದರು. ಸ್ವಲ್ಪ ಕಾಲ ಪುನಃ ಸಿಂಹಳೀಯ ದೊರೆಗಳ ಆಳ್ವಿಕೆಯಲ್ಲಿ ದೇಶ ಉಚ್ಛ್ರಾಯ ಸ್ಥಿತಿ ತಲಪಿತು. ಅನಂತರ ಗ್ರೀಕರು, ಅರಬರು ವ್ಯಾಪಾರಕ್ಕಾಗಿ ಇಲ್ಲಿಗೆ ಬಂದರು.

ಸಿಂಹಳದ ಸುವರ್ಣಯುಗ, 12ನೆಯ ಶತಮಾನ. ಇದಾದ ಮೇಲೆ ಮಾರ್ಕೊ ಪೋಲೋ ಸಂದರ್ಶಿಸಿ ಈ ದೇಶವನ್ನು ವರ್ಣಿಸಿದ್ದಾನೆ. ಪೋರ್ಚುಗೀಸರು 16ನೆಯ ಶತಮಾನದಲ್ಲಿ ಕ್ಯಾಂಡಿ ರಾಜ್ಯ ಸ್ಥಾಪಿಸಿದರು. ಅವರ ಅನಂತರ ಡಚ್ಚರು ದಕ್ಷತೆಯಿಂದ ಆಳಿದರು. 1798ರಲ್ಲಿ ಸಿಂಹಳ ಬ್ರಿಟಿಷರ ವಶವಾಯಿತು. 1948 ಫೆಬ್ರುವರಿಯ ವರೆಗೆ ಅವರ ಅಧೀನದಲ್ಲಿ ಇದ್ದಿತು. ಅನಂತರ ಶ್ರೀಲಂಕಾ ಸ್ವತಂತ್ರವಾಯಿತು. ಈಗ ಅಲ್ಲಿ ಪ್ರಜಾಪ್ರಭುತ್ವವಿದೆ. ರಾಜಧಾನಿ ಕೊಲೊಂಬೊ. ಮುಖ್ಯ ಭಾಷೆ, ಸಿಂಹಳೀ.

ಸಂಸ್ಕೃತಿ, ಕಲೆ, ವಾಸ್ತುಶಿಲ್ಪ, [illegible] ವಿಷಯಗಳಲ್ಲಿ ಭಾರತ, ಶ್ರೀಲಂಕಾಗಳಲ್ಲಿ ಸಾಮ್ಯವಿದೆ.

[illegible] ದೇವಾಲಯಗಳು ಭಾರತದ ದೇವಾಲಯಗಳನ್ನು ಹೋಲುತ್ತವೆ.

[illegible] ಭೂಮಿಯ ವಿಸ್ತೃತ ಭಾಗ ಶ್ರೀಲಂಕಾ.



ನೆರೆಹೊರೆಯ ಪ್ರಧಾನಿಯರು : ಇಂದಿರಾ, ಸಿರಿಮಾವೊ

ಶ್ರೀಲಂಕಾ ಪ್ರಧಾನಿ ಸಿರಿಮಾವೊ ಬಂಡಾರನಾಯಿಕೆ ಪ್ರಪಂಚದ ಮೊತ್ತಮೊದಲ ಮಹಿಳಾ ಪ್ರಧಾನಿ. 1973ರಲ್ಲಿ ಸಿಂಹಳದ ಹೆಸರನ್ನು ಶ್ರೀಲಂಕಾ ಎಂದು ಬದಲಿಸಲಾಯಿತು.

ಶ್ರೀಶೈಲ

ಚಂದ್ರಗುಪ್ತಪುರದ ಅರಸನ ಮಗಳು ಚಂದ್ರಾವತಿ. ವಯಸ್ಸಿಗೆ ಬಂದ ಮಗಳನ್ನೇ ತಂದೆ ಮೋಹಿಸಿದ. ತಂದೆಯ ದುರುದ್ದೇಶ ತಿಳಿದ ಚಂದ್ರಾ[illegible] ಯಲ್ಲಿ ಮುಳುಗಿಕೊಂಡ. ಚಂದ್ರಾವತಿಯ ಹಸುಗಳಲ್ಲಿ ಒಂದು ಹಾಲನ್ನೆ [illegible] ರುವುದನ್ನು ಆಕೆ ಕನಸಿನಲ್ಲಿ ಕಂಡಳು. ಲಿಂಗಕ್ಕೆ ದೇವಾಲಯ ಕಟ್ಟಿಸಿದಳು.

[illegible]

[illegible] ಯನ್ನು ವಿವಾಹವಾದ ದಂತಕಥೆ ಅವರಲ್ಲಿ ಚಿತ್ರಿತವಾಗಿದೆ.



ಶ್ರೀಶೈಲ ಮಲ್ಲಿಕಾರ್ಜುನ ದೇವಾಲಯ

ಶ್ರೀಶೈಲ ಅಥವಾ ಶ್ರೀಪರ್ವತ ಕೃಷ್ಣಾನದಿಯ ದಡದ ಮೇಲಿದೆ. ಇಲ್ಲಿ ನದಿಯನ್ನು ಪಾತಾಳಗಂಗೆ ಎನ್ನುತ್ತಾರೆ. ಕರ್ನೂಲ್ ಜಿಲ್ಲೆಯ ನಂದಿ ಕೊಟ್ಟೂರ್ ತಾಲ್ಲೂಕಿಗೆ ಇದು ಸೇರಿದೆ. ಕ್ಷೇತ್ರವನ್ನು ದಕ್ಷಿಣದ ಕೈಲಾಸ ಎನ್ನುತ್ತಾರೆ.

ನದಿಯಿಂದ ದೇವಾಲಯಕ್ಕೆ ಸುಮಾರು 2 ಮೈಲು. 11ನೆಯ ಶತಮಾನದಲ್ಲಿ ವೇಮರೆಡ್ಡಿ ಮೆಟ್ಟಿಲುಗಳನ್ನು ಕಟ್ಟಿಸಿದ. ಇಲ್ಲಿರುವ ಶಿವಲಿಂಗ ಜ್ಯೋತಿರ್ಲಿಂಗಗಳಲ್ಲಿ ಒಂದು. ಇಲ್ಲಿ ಲೋಹದ ನಟರಾಜ ವಿಗ್ರಹವಿದೆ.

ಈ ದೇವಾಲಯದ ಪಶ್ಚಿಮಕ್ಕೆ ಭ್ರಮರಾಂಬಾ ದೇವಾಲಯವಿದೆ. ಶಿವ-ಶಕ್ತಿಯರ ಉತ್ಸವ ಫೆಬ್ರವರಿಯಿಂದ ಮೇ ವರೆಗೆ ನಡೆಯುತ್ತದೆ. ಶಿವರಾತ್ರಿಯಲ್ಲಿ ಶಿವನ ಉತ್ಸವ. ಶಿವ-ಪಾರ್ವತಿಗೆ ಕಲ್ಯಾಣೋತ್ಸವ ನಡೆಸುತ್ತಾರೆ. ಇದರ ತರುವಾಯ ಶಕ್ತಿ ಉತ್ಸವ. ಈ ಅವಧಿಯಲ್ಲೇ ಯಾತ್ರಿಕರು ಅಧಿಕ ಸಂಖ್ಯೆಯಲ್ಲಿ ಬರುತ್ತಾರೆ.

ಪೂರ್ವ ಬಾಗಿಲಿನಿಂದ ಉತ್ತರಕ್ಕೆ ಮತ್ತೊಂದು ಶಿವಾಲಯವಿದೆ. ಅದು ಹಳೆಯ ಮಲ್ಲಿಕಾರ್ಜುನ ದೇವಾಲಯ. ಇಲ್ಲಿಂದ ಮುಂದೆ ಒಂದೇ ಲಿಂಗದ ಮೇಲೆ ಸಹಸ್ರಲಿಂಗಗಳನ್ನು ಕೆತ್ತಿರುವ ಸಹಸ್ರಲಿಂಗ ದೇವಸ್ಥಾನ. ಲಿಂಗವನ್ನು ಮೂರು ಹೆಡೆಯ ಶಿಲಾ ಸರ್ಪ ಸುತ್ತಿಕೊಂಡಿದೆ.

ವೀರಶೈವರ ಮುಖ್ಯಕ್ಷೇತ್ರ ಶ್ರೀಶೈಲ. ವೀರಶೈವರ ಪಂಚಪೀಠಗಳಲ್ಲಿ ಒಂದು ಇಲ್ಲಿದೆ. ಅಕ್ಕಮಹಾದೇವಿ ಇಲ್ಲಿ ಶಿವೈಕ್ಯಳಾದಳು ಎನ್ನುತ್ತಾರೆ.

ಶ್ರೀಶೈಲ ಬೌದ್ಧರಿಗೂ ಯಾತ್ರಾಸ್ಥಳ. ಬೌದ್ಧರ ಮುನಿ ನಾಗಾರ್ಜುನ ಇಲ್ಲಿದ್ದನೆಂದು ಹೇಳುತ್ತಾರೆ.

ನೋಡಿ : ನಾಗಾರ್ಜುನ

ಶುಂಗರು

ಕಾಳಿದಾಸನ ನಾಟಕ 'ಮಾಲವಿಕಾಗ್ನಿಮಿತ್ರ'ದ ನಾಯಕನಾದ ಅಗ್ನಿಮಿತ್ರ ಶುಂಗವಂಶದ ರಾಜಕುಮಾರ. ಮೌರ್ಯವಂಶದ ದೊರೆಯಾದ ಬೃಹದ್ರಥನನ್ನು ಅವನ ಸೇನಾನಿಯಾದ ಪುಷ್ಯಮಿತ್ರನು ಕೊಲೆಮಾಡಿ ಪಾಟಲಿಪುರದಲ್ಲಿ ರಾಜ್ಯವಾಳಲು ಆರಂಭಿಸಿದ (ಕ್ರಿ. ಪೂ. 187). ಇವನೇ ಶುಂಗವಂಶ ಸ್ಥಾಪಕ.

ಇವನ ಆಸ್ಥಾನದಲ್ಲಿ ಪತಂಜಲಿ ಎಂಬ ಖ್ಯಾತ ಸಂಸ್ಕೃತ ವಿದ್ವಾಂಸನಿದ್ದ. ಪುಷ್ಯಮಿತ್ರನ ರಾಜ್ಯ ನರ್ಮದೆಯ ವರೆಗೆ ಸೀಮಿತವಾಗಿತ್ತು. ವಾಯುವ್ಯ ಭಾರತದಲ್ಲಿ ಅವನು ಗ್ರೀಕರ ದಂಡಯಾತ್ರೆಯನ್ನು ಎದುರಿಸಬೇಕಾಯಿತು. ಇವನ ಮಗನಾದ ಅಗ್ನಿಮಿತ್ರ ಕ್ರಿ. ಪೂ. 151ರಲ್ಲಿ ಪಟ್ಟವೇರಿದ.

ಇವನ ಅನಂತರ ಸುಜ್ಯೇಷ್ಠ, ವಸುಮಿತ್ರ ಮುಂತಾದ ದೊರೆಗಳು ಆಳಿದರು. ಈ ವಂಶದ ಹತ್ತನೆಯ ದೊರೆಯಾದ ದೇವಭೂಮಿ ದಾಸಿಯೊಬ್ಬಳಿಂದ ಕೊಲೆಯಾದ (ಕ್ರಿ. ಪೂ. 75). ಇಲ್ಲಿಗೆ ಶುಂಗರ ಆಳ್ವಿಕೆ ಮುಗಿಯಿತು.

ಬ್ರಾಹ್ಮಣರಾದ ಶುಂಗರು ಬೌದ್ಧಧರ್ಮದ ಪ್ರಾಬಲ್ಯದ ಕಾಲದ ಬಳಿಕ ವೈದಿಕ ಧರ್ಮವನ್ನು ಪುನರುಜ್ಜೀವಿಸಿ ಅಶ್ವಮೇಧ ಮುಂತಾದ ಯಜ್ಞಗಳನ್ನು ಮಾಡಿದರು. ಇವರ ಕಾಲದಲ್ಲಿ ಭಾಗವತ ಸಂಪ್ರದಾಯ ಬೆಳೆಯಿತು. ಭಾರ್ಹುತ್ ಸ್ತೂಪದ ಸುಂದರ ಪ್ರವೇಶ ದ್ವಾರಗಳು ಇವರ ಕಾಲದ ರಚನೆಗಳು.

ನೋಡಿ : ಪತಂಜಲಿ

ಶುಕ್ರನೀತಿಸಾರ

ಒಬ್ಬ ಚಕ್ರವರ್ತಿಯ ವಾರ್ಷಿಕ ಆದಾಯ 50 ಕೋಟಿ ಕರ್ಷ (ಆಗಿನ ಕಾಲದ ನಾಣ್ಯ) ಎನ್ನಬಹುದು. ಈ ಆದಾಯದ ಆರನೆಯ ಒಂದು ಭಾಗವನ್ನು ಭಂಡಾರದಲ್ಲಿ ಕೂಡಿಡುವುದು ಒಳ್ಳೆಯದು. ಆದಾಯದ ಅರ್ಧದಷ್ಟು ರಕ್ಷಣಾ ವೆಚ್ಚಕ್ಕೆ ಮೀಸಲಿಡಬೇಕು. ರಾಜನ ಸ್ವಂತ ಖರ್ಚು, ದಾನಗಳು, ನೌಕರರ ವೇತನ, ಮಂತ್ರಿವರ್ಗದ ವೇತನ –ಈ ಪ್ರತಿಯೊಂದಕ್ಕೂ ಆದಾಯದ ಹನ್ನೆರಡನೆಯ ಒಂದು ಭಾಗ ಖರ್ಚು ಮಾಡಬೇಕು.

'ನೀತಿಸಾರ'ದಲ್ಲಿ ಶುಕ್ರಾಚಾರ್ಯ ರಾಜನಿಗೆ ಈ ಸಲಹೆ ಕೊಟ್ಟಿದ್ದಾರೆ.

ಅರ್ಥಶಾಸ್ತ್ರ, ಧರ್ಮಶಾಸ್ತ್ರಗಳ ಸಾರವನ್ನೊಳಗೊಂಡ 'ಶುಕ್ರನೀತಿಸಾರ'ದಲ್ಲಿ ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ವಿಷಯಗಳು ಅಡಕವಾಗಿವೆ.

ರಾಜಕುಮಾರರ ಕರ್ತವ್ಯ, ಯುವರಾಜ ಮತ್ತು ರಾಜ್ಯಾಧಿಕಾರಿಗಳ ಹೊಣೆ, ರಾಜ ಮತ್ತು ಪ್ರಜೆಗಳು ಅನುಸರಿಸಬೇಕಾದ ರೀತಿ, ಅವರ ನಡವಳಿಕೆ, ರಾಜನ ಬೊಕ್ಕಸ, ಕಲೆ ಮತ್ತು ವಿಜ್ಞಾನ, ಪದ್ಧತಿ ಹಾಗೂ ಸಂಪ್ರದಾಯ, ರಾಜನ ಕರ್ತವ್ಯ, ಕೋಟೆ ಕೊತ್ತಲ ಮತ್ತು ಸೈನ್ಯಗಳ ವಿಚಾರಗಳನ್ನು ಈ ಗ್ರಂಥದಲ್ಲಿ ವಿವರಿಸಲಾಗಿದೆ.

ಶುಕ್ರಾಚಾರ್ಯ

ಪುಲೋಮೆ-ಭೃಗು ಮಹರ್ಷಿಯರ ಮಗ ಶುಕ್ರಾಚಾರ್ಯ. ಶಿವನನ್ನು ಕುರಿತು ತಪಸ್ಸುಮಾಡಿ ಮೃತ್ಯು ಸಂಜೀವಿನೀ ವಿದ್ಯೆ—ಮೃತರಾದವರನ್ನು ಬದುಕಿಸುವ ವಿದ್ಯೆ—ಪಡೆಯುತ್ತಾನೆ.

ಶುಕ್ರಾಚಾರ್ಯ ರಾಕ್ಷಸರ ಗುರು ಮತ್ತು ವೈದ್ಯ. ದೇವತೆಗಳ ಮೇಲೆ ಜಯಗಳಿಸುವ ಸಲುವಾಗಿ ಶುಕ್ರಾಚಾರ್ಯ 1000 ವರ್ಷಕಾಲ ತಲೆಕೆಳಗಾಗಿ ನಿಂತು ಹುಲ್ಲಿನ ಹೊಗೆ ಸೇವಿಸುವ ತಪಸ್ಸು ಮಾಡಿದ. ಈತ ಇಲ್ಲದಿದ್ದಾಗ ದೇವತೆಗಳು ಆಕ್ರಮಣ ಮಾಡಿ ಅನೇಕ ರಾಕ್ಷಸರನ್ನು ಕೊಂದರು. ಈ ಸಂದರ್ಭದಲ್ಲಿ ವಿಷ್ಣು ಶುಕ್ರಾಚಾರ್ಯನ ತಾಯಿಯನ್ನು ಕೊಂದ. ವಿಷ್ಣು ಅನೇಕ ಬಾರಿ ಭೂಲೋಕದಲ್ಲಿ ಜನಿಸುವಂತೆ ಶುಕ್ರಾಚಾರ್ಯ ಶಾಪಕೊಟ್ಟ. ತನ್ನ ತಾಯಿಗೆ ಜೀವ ಬರಿಸಿದ.

ಶುಕ್ರಾಚಾರ್ಯರ ತಪಸ್ಸಿನ ಉದ್ದೇಶ ಪೂರ್ಣವಾದರೆ ಮುಂದೇನು ಗತಿ ಎಂದು ಚಿಂತೆಗೀಡಾದ ಇಂದ್ರ, ತನ್ನ ಮಗಳು ಜಯಂತಿಯನ್ನು ಆತನ ತಪೋಭಂಗ ಮಾಡಲು ಕಳುಹಿಸುತ್ತಾನೆ. ಆದರೆ ಶುಕ್ರಾಚಾರ್ಯ ವಿಚಲಿತನಾಗುವುದಿಲ್ಲ. ತಪಸ್ಸು ಮುಗಿಸಿದ ಮೇಲೆ ಆಕೆಯನ್ನು ಮದುವೆಯಾದ. ದೇವತೆಗಳಿಂದ ಹತರಾಗಿದ್ದ ರಾಕ್ಷಸರಿಗೆಲ್ಲ ಜೀವ ಬರುವಂತೆ ಮಾಡಿದ.

ಶತಪರ್ವಾ, ಊರ್ಜಸ್ವತಿ ಇವನ ಇತರ ಪತ್ನಿಯರು.

ಶುಚೀಂದ್ರ


ಗೌತಮ ಮುನಿಯ ಪತ್ನಿ, ಅಹಲ್ಯೆ. ಗೌತಮನಿಲ್ಲದಿದ್ದಾಗ ಇಂದ್ರ ಅಹಲ್ಯೆಯನ್ನು ಮೋಸಗೊಳಿಸಿದ. ಗೌತಮನಿತ್ತ ಶಾಪದಿಂದ ವಿಮೋಚನೆ ಪಡೆಯಲು ಇಂದ್ರ ಜ್ಞಾನವನದಲ್ಲಿ ತಪಸ್ಸು ಮಾಡಿದ. ಕುದಿಯುವ ತುಪ್ಪದಲ್ಲಿ ಸ್ನಾನ ಮಾಡಿ ಶುಚಿರ್ಭೂತನಾದ. ಹೀಗೆ ಇಂದ್ರ ಶುಚಿಯಾದ ಸ್ಥಳಕ್ಕೆ ಶುಚೀಂದ್ರ ಎಂಬ ಹೆಸರು ಬಂತು. ಇಂದ್ರ ತ್ರಿಮೂರ್ತಿಗಳ ಪ್ರತೀಕವನ್ನು ಪ್ರತಿಷ್ಠಾಪಿಸಿದ. ಇದೇ ಸ್ಥಾಣುನಾಥಸ್ವಾಮಿ ದೇವಾಲಯ. ರಾತ್ರಿ ವೇಳೆ ಇಂದ್ರನೇ ಬಂದು ಪೂಜೆ ಮಾಡುತ್ತಾನೆ—ಎಂದು ನಂಬಿಕೆ. ಶುಚೀಂದ್ರದ ಮುಖ್ಯ ದೇವಾಲಯ ಇದು.

ಕನ್ಯಾಕುಮಾರಿಯಿಂದ ವಾಯುವ್ಯಕ್ಕೆ 8 ಮೈಲು ದೂರದಲ್ಲಿ ಶುಚೀಂದ್ರ ಕ್ಷೇತ್ರವಿದೆ. 30ಕ್ಕೂ ಹೆಚ್ಚು ದೇವಾಲಯಗಳಿವೆ. ಅದರಲ್ಲಿ ಮುಖ್ಯವಾದದ್ದು ಸ್ಥಾಣುನಾಥ ಸ್ವಾಮಿ. ಲಿಂಗ 2½ ಅಡಿ ಎತ್ತರವಿದೆ.

ಈ ದೇವಾಲಯದ ಗೋಪುರ 134 ಅಡಿ ಎತ್ತರವಿದ್ದು ಸುಂದರ ಕೆತ್ತನೆಗಳಿಂದ ಕೂಡಿದೆ. ಶ್ವೇತಮಂಟಪ, ಚಿತ್ರಸಭಾ ಮಂಟಪ, ಉದಯ ಮಾರ್ತಾಂಡ ಮಂಟಪ ಮೊದಲಾದ ಮಂಟಪಗಳಿವೆ. ಮಂಟಪದ ಕಂಬ, ಗೋಡೆಗಳ ಮೇಲೆ ವೈಷ್ಣವ ಮತ್ತು ಶೈವ ಸಂಪ್ರದಾಯಗಳ ಅನೇಕ ದೇವರನ್ನು ಕೆತ್ತಿದ್ದಾರೆ.

ಮುಖ್ಯ ದೇವಾಲಯದೆದುರಿಗೆ ಕೊನ್ರೈಯಾದಿನಾಥ ದೇವಾಲಯವಿದೆ. ಇಲ್ಲಿರುವ ಲಿಂಗ ತ್ರಿಮೂರ್ತಿಗಳನ್ನು ಪ್ರತಿನಿಧಿಸುತ್ತದೆ. ದೇವಾಲಯದ ಹಿಂದುಗಡೆ ಪವಿತ್ರವೆನಿಸಿದ ಕೊನ್ರೈ ವೃಕ್ಷವಿದೆ.

ಮುಖ್ಯ ದೇವಾಲಯದಲ್ಲಿ ವರ್ಷಕ್ಕೆ ಮೂರು ಪ್ರಮುಖ ಉತ್ಸವ ನಡೆಯುತ್ತವೆ: ಮಾರ್ಗಶಿರ ಉತ್ಸವ (ಡಿಸೆಂಬರ್-ಜನವರಿ), ಚಿತ್ರೈ ಉತ್ಸವ (ಏಪ್ರಿಲ್-ಮೇ) ಮತ್ತು ಆವಣಿ ಉತ್ಸವ (ಸೆಪ್ಟೆಂಬರ್-



ಸ್ಥಾಣುನಾಥಸ್ವಾಮಿ ದೇವಾಲಯ

ಅಕ್ಟೋಬರ್). ದೇವಾಲಯಗಳಲ್ಲಿರುವ ವಿವಿಧ ರಾಜವಂಶಗಳು ಬರೆಸಿದ ಶಾಸನಗಳು ಉತ್ತಮ ಚಾರಿತ್ರಿಕ ದಾಖಲೆಗಳು.

ಶುಲ್ವಸೂತ್ರ

ಅಳೆ ಎಂಬ ಅರ್ಥ ಬರುವ ಶುಲ್ವ್ ಧಾತುವಿನಿಂದ ಶುಲ್ವ ಪದ ಬಂದಿದೆ. ಇದಕ್ಕೆ ಹಗ್ಗ ಅಥವಾ ರಜ್ಜು ಎಂಬ ಅರ್ಥವೂ ಇದೆ. ಅಗ್ನಿ ವೇದಿಕೆಗಳ ರಚನೆಗಾಗಿ ಅವುಗಳ ಆಕಾರ ಗಾತ್ರಗಳನ್ನು ಈ ಸೂತ್ರಗಳು ತಿಳಿಸುತ್ತವೆ. ಪ್ರಾಚೀನ ಭಾರತದಲ್ಲಿ ಪ್ರಸಾರದಲ್ಲಿದ್ದ ರೇಖಾಗಣಿತ ಜ್ಞಾನವನ್ನು ಇವು ಸೂಚಿಸುತ್ತವೆ.

ಆಯತದ ಕರ್ಣಗಳು ಪರಸ್ಪರ ಸಮವಾಗಿ ಛೇದಿಸುವುದು, ಪೈಥಾಗೊರಸ್‌ನ ಹೆಸರಿನಲ್ಲಿ ಪ್ರಸಿದ್ಧವಾಗಿರುವ ರೇಖಾಗಣಿತ ಸಿದ್ಧಾಂತ ಮೊದಲಾದ ಹಲವು ಗಣಿತ ವಿಷಯಗಳು ಶುಲ್ವ ಸೂತ್ರಗಳಲ್ಲಿವೆ.

ನಿರ್ದಿಷ್ಟ ವಿಸ್ತೀರ್ಣದ ಚೌಕ, ತ್ರಿಕೋನ ಮೊದಲಾದ ಆಕೃತಿಗಳ ರಚನೆ, ವಿಸ್ತೀರ್ಣದಲ್ಲಿ ನಿಶ್ಚಿತ ಅಂತರವಿರುವ ವೇದಿಕೆಗಳ ರಚನೆ ಶುಲ್ವಸೂತ್ರಗಳಲ್ಲಿ ನಿರೂಪಿಸಲ್ಪಟ್ಟಿವೆ.

2, 3 ಮೊದಲಾದ ಸಂಖ್ಯೆಗಳ ವರ್ಗಮೂಲಗಳ ಸ್ಥೂಲಿತ ಬೆಲೆಯನ್ನು ಕಂಡುಹಿಡಿಯುವ ವಿಧಾನ ಶುಲ್ವಸೂತ್ರಗಳಲ್ಲಿದೆ. ಇವುಗಳ ಕಾಲ ಕ್ರಿ.ಪೂ. 800ರಿಂದ ಕ್ರಿ.ಪೂ. 500ರ ನಡುವೆ ಇರಬಹುದೆಂಬ ಊಹೆಯಿದೆ.


ಶೃಂಗೇರಿ

ಶೃಂಗೇರಿ ಚಿಕ್ಕಮಗಳೂರು ಜಿಲ್ಲೆಯಲ್ಲಿ ತುಂಗಾನದಿಯ ಎಡತೀರದ ಮೇಲೆ ಇದೆ.

ಶೃಂಗಗಿರಿಯ ಸಮೀಪ ಇರುವ ಪಟ್ಟಣ, ಶೃಂಗೇರಿ. ಋಷ್ಯಶೃಂಗ ಎಂಬ ಮಹಾಮುನಿಯ ಜನ್ಮಸ್ಥಳ ಶೃಂಗಗಿರಿ ಎಂದು 'ರಾಮಾಯಣ'ದಲ್ಲಿದೆ. ಎಂಟನೆಯ ಶತಮಾನದಲ್ಲಿ ಶಂಕರಾಚಾರ್ಯರು ಶಾರದಾಂಬೆಯ ದೇವಾಲಯ ಮತ್ತು ಶ್ರೀಮಠವನ್ನು ಸ್ಥಾಪಿಸಿದ ಮೇಲೆ ಅದು ಪವಿತ್ರ ಯಾತ್ರಾಸ್ಥಳವಾಯಿತು.

ಶೃಂಗೇರಿಯ ಬಗೆಗಿನ ಕಥೆ ಹೀಗಿದೆ:

ಮಧ್ಯಾಹ್ನದ ಉರಿಬಿಸಿಲಲ್ಲಿ ಶಂಕರಾಚಾರ್ಯರು ಶೃಂಗೇರಿಯ ಹತ್ತಿರ ಬಂದಾಗ ಒಂದು ಅಪೂರ್ವ ನೋಟವನ್ನು ಕಂಡರು—ತಾಯಿಯಾಗಲಿದ್ದ ಕಪ್ಪೆಗೆ ನಾಗರಹಾವು ಹೆಡೆಯನ್ನು ಬಿಚ್ಚಿ ಛತ್ರಿಯಂತೆ ಹಿಡಿದಿತ್ತು. ಹಾವು-ಕಪ್ಪೆ ಸ್ವಾಭಾವಿಕ ವೈರವನ್ನು ಮರೆತ ಸ್ಥಳದ ಯೋಗ್ಯತೆ ಕಂಡು ಅಲ್ಲಿಯೇ ಶಂಕರಾಚಾರ್ಯರು ದೇವಾಲಯ ಕಟ್ಟಿಸಿದರು.



ಶೃಂಗೇರಿಯ ವಿದ್ಯಾಶಂಕರ ದೇವಾಲಯ

ಶಂಕರಾಚಾರ್ಯರು ಶಾರದಾಂಬೆಯ ಗಂಧದಮರದ ವಿಗ್ರಹ ಹಾಗೂ ಶ್ರೀಚಕ್ರ ಪೀಠವನ್ನು ಸ್ಥಾಪಿಸಿದರು. ಶೃಂಗೇರಿ ಮಠಕ್ಕೆ ಸುರೇಶ್ವರಾಚಾರ್ಯನೆಂಬ ಶಿಷ್ಯನನ್ನು ಮಠಾಧಿಪತಿಯಾಗಿ ನೇಮಿಸಿದರು.

14ನೆಯ ಶತಮಾನದಲ್ಲಿ ವಿದ್ಯಾಶಂಕರ ಎಂಬವರು ಮಠಾಧಿಪತಿಯಾಗಿದ್ದರು. ವಿಜಯನಗರ ಸಾಮ್ರಾಜ್ಯ ಸ್ಥಾಪಕ ವಿದ್ಯಾರಣ್ಯರು 1336ರಲ್ಲಿ ಮಠಾಧಿಪತಿಯಾಗಿದ್ದಾಗ ವಿದ್ಯಾಶಂಕರರ ಸ್ಮರಣಾರ್ಥ ವಿದ್ಯಾಶಂಕರ ದೇವಸ್ಥಾನ ಕಟ್ಟಿಸಿದರು. ಗಂಧದಮರದ ಶಾರದಾಂಬೆಯ ವಿಗ್ರಹದ ಬದಲು ಸ್ವರ್ಣಮೂರ್ತಿಯನ್ನು ಮಾಡಿಸಿದರು.

ಶೃಂಗೇರಿಗೆ ಅನೇಕ ದತ್ತಿಗಳಿವೆ. ಇಲ್ಲಿ ವಿಜಯನಗರ ಕಾಲದ ಸುಮಾರು 20 ಶಾಸನಗಳಿವೆ. ಮೈಸೂರನ್ನು ಆಳಿದ ಹೈದರಾಲಿ ಮತ್ತು ಟಿಪ್ಪು ಸುಲ್ತಾನರೂ ಶೃಂಗೇರಿಯ ವಿಷಯದಲ್ಲಿ ಗೌರವದಿಂದ ನಡೆದುಕೊಂಡರು.

ಶೇಖ್ ಅಬ್ದುಲ್ಲ

ಒಂದು ಕಾಲದಲ್ಲಿ 'ಕಾಶ್ಮೀರದ ಸಿಂಹ' ಎಂದು ಕರೆಸಿಕೊಂಡವರು ಶೇಖ್ ಅಬ್ದುಲ್ಲ.

"ಈ ಉಪಖಂಡದ ಹಾಗೂ ಜಗತ್ತಿನ ಲಕ್ಷಾಂತರ ಜನರಿಗೆ ನಾನೊಂದು ವಿರೋಧಾಭಾಸ" —ಎಂದು 1960 ಆಗಸ್ಟ್ 8ರಂದು ಅವರು ನ್ಯಾಯಾಲಯದಲ್ಲಿ ಕೊಟ್ಟ ಹೇಳಿಕೆ.



'ಕಾಶ್ಮೀರದ ಸಿಂಹ' : ಶೇಖ್

ಹಿಂದೆ ರಾಷ್ಟ್ರದ ವಿಭಜನೆಯನ್ನು ಅವರು ವಿರೋಧಿಸಿದ್ದರು. ಕಾಶ್ಮೀರ ಭಾರತಕ್ಕೆ ಸೇರಲು ದುಡಿದರು. ಆದರೆ ಮುಂದೆ ಭಾರತದೊಳಗೆ ಕಾಶ್ಮೀರಕ್ಕೆ ದೊರೆತ ಸ್ಥಾನಮಾನಗಳಿಂದ ಅವರಿಗೆ ಸಮಾಧಾನವಾಗಲಿಲ್ಲ.

1905 ಡಿಸೆಂಬರ್ 5ರಂದು ಸಾಮಾನ್ಯ ಕುಟುಂಬದಲ್ಲಿ ಇವರ ಜನನ. ಉಣ್ಣೆಯ ವಸ್ತ್ರ ಹಾಗೂ ಶಾಲು ವ್ಯಾಪಾರ ಮನೆಯ ಕಸುಬು. ಶ್ರೀನಗರ, ಜಮ್ಮು, ಲಾಹೋರುಗಳಲ್ಲಿ ಕ್ರಮವಾಗಿ ಇವರ ವಿದ್ಯಾಭ್ಯಾಸ ನಡೆಯಿತು. 1930ರಲ್ಲಿ ಅಲೀಗಡ ವಿಶ್ವವಿದ್ಯಾನಿಲಯದ ಎಂ. ಎಸ್‌ಸಿ. ಪದವಿ ಪಡೆದರು. 1932ರಲ್ಲಿ ವಿವಾಹವಾಯಿತು.

ಒಂದಲ್ಲ ಒಂದು ಕಾರಣಕ್ಕಾಗಿ ಶೇಖ್ ಅಬ್ದುಲ್ಲ ಸೆರೆಮನೆ ಕಂಡಿದ್ದಾರೆ. ಅವರ ಒಟ್ಟು ಸೆರೆಮನೆವಾಸ 15 ವರ್ಷ, 7 ತಿಂಗಳು, 5 ದಿನ.

ಉಪಾಧ್ಯಾಯರಾಗಿ ಕೆಲ ಕಾಲ ದುಡಿದರು. ಆದರೆ ಆ ವೃತ್ತಿಗಿಂತಲೂ ರಾಷ್ಟ್ರೀಯ ಚಳುವಳಿ ಅವರಿಗೆ ಹೆಚ್ಚು ಪ್ರಿಯವಾಯಿತು. 1948ರಲ್ಲಿ ಜಮ್ಮು ಮತ್ತು ಕಾಶ್ಮೀರ ರಾಜ್ಯದ ಪ್ರಧಾನಮಂತ್ರಿಯಾದರು.

ಶೇಖ್ ಅಬ್ದುಲ್ಲ ಹೊರಗಿನ ಸಹಾಯ ಪಡೆದು ಕಾಶ್ಮೀರವನ್ನು ಭಾರತದಿಂದ ಬೇರ್ಪಡಿಸಲು ಪ್ರಯತ್ನಿಸುತ್ತಿದ್ದಾರೆಂದು ಅನುಮಾನ ಬಂದಿತು. 1953ರಲ್ಲಿ ಅವರು ಮಂತ್ರಿ ಪದವಿಯಿಂದ ತೆಗೆದು ಹಾಕಲ್ಪಟ್ಟರು, ಬಂಧಿತರಾದರು. ಬಿಡುಗಡೆಯಾದಮೇಲೆ ಅವರು ಆಡಿದ ಮಾತುಗಳಿಂದ ಭಾರತ ಸರಕಾರ ಆತಂಕಗೊಂಡಿತು.

ತಮ್ಮ ನಿಲುವನ್ನು ಬದಲಾಯಿಸಿ ಕಾಶ್ಮೀರ ಪ್ರಶ್ನೆ ಜಟಿಲಗೊಳ್ಳಲು ಕಾರಣರಾದ ವ್ಯಕ್ತಿ, ಶೇಖ್ ಅಬ್ದುಲ್ಲ.

1973ರಲ್ಲಿ ಶೇಖ್ ಅಬ್ದುಲ್ಲ ಭಾರತ ವಿರೋಧಿ ನೀತಿಯನ್ನು ಬಿಟ್ಟುಕೊಟ್ಟು ಸ್ನೇಹಭಾವದ ಧೋರಣೆ ತಳೆದರು.

ಶೇರ್ ಷಾ ಸೂರಿ

"ಯಾವುದೇ ಸರಕಾರ, ಬ್ರಿಟಿಷ್ ಸರಕಾರ ಸಹ, ಈ ಪಠಾಣನ ಬುದ್ಧಿವಂತಿಕೆಯನ್ನು ತೋರಿಸಿಲ್ಲ." ಎಂಬ ಹೊಗಳಿಕೆಗೆ ಪಾತ್ರನಾದ ಶೇರ್ ಷಾ ಸೂರಿ ಭಾರತದಲ್ಲಿ ಉತ್ತಮ ಆಡಳಿತ ಪದ್ಧತಿಯನ್ನು ರೂಪಿಸಿದ.

ಐದೇ ವರ್ಷ ಕಾಲ (1540–45) ಅವನು ಸಾರ್ವಭೌಮನಾಗಿದ್ದ. ಆದರೆ ಈ ಅಲ್ಪಾವಧಿಯಲ್ಲಿ ಅವನು ಸಾಧಿಸಿದ್ದು ಅಪಾರ. ಅವನು ಆಚರಣೆಗೆ ತಂದ ಅನೇಕ ಪದ್ಧತಿಗಳು ಮೂರು ನಾಲ್ಕು ಶತಮಾನ ಕಾಲ ಉಳಿದುವು.

ಶೇರ್ ಷಾ ತನ್ನ ಸಾಮ್ರಾಜ್ಯವನ್ನು 47 ಸರಕಾರಗಳಾಗಿ ವಿಭಾಗಿಸಿದ. ಇವನ್ನು ಪರಗಣೆಗಳಾಗಿ ವಿಂಗಡಿಸಿದ. ಪ್ರತಿ ಪರಗಣೆಯಲ್ಲಿ ಒಬ್ಬ ಹಿಂದೂ ಲೆಕ್ಕಣಿಕೆಗಾರ, ಒಬ್ಬ ಪಾರಸೀ ಲೆಕ್ಕಣಿಕೆಗಾರ, ಬೊಕ್ಕಸದವ, ಶೇಕ್‌ದಾರ, ಅಮೀನ ಇರುತ್ತಿದ್ದರು. ಸರಕಾರದ ಮುಖ್ಯ ಅಧಿಕಾರಿ ಮುನ್ಸೀಫ್. ಅಧಿಕಾರಿಗಳಿಗೆ ವರ್ಗಗಳಾಗುತ್ತಿದ್ದುವು. ಶೇರ್ ಷಾ ಸ್ವಂತವಾಗಿ ಪ್ರತಿ ಇಲಾಖೆಯ ಮೇಲ್ವಿಚಾರಣೆ ನಡೆಸುತ್ತಿದ್ದ.

ಭೂಕಂದಾಯ ಸುಧಾರಣೆ ಈ ಚಕ್ರವರ್ತಿಯ ಅಪ್ರತಿಮ ಸಾಧನೆ. ಪ್ರತಿ ರೈತನ ಜಮೀನು ಅಳೆದು, ಸೂಕ್ತ ತೆರಿಗೆ ವಿಧಿಸಲಾಗುತ್ತಿತ್ತು. ಬೆಳೆ ಬೆಳೆಯದಿದ್ದಾಗ ವಿನಾಯಿತಿ ತೋರುವುದು ತೆರಿಗೆ, ಹಾಕುವಾಗ ಆಸ್ತಿಯ ಅಂದಾಜಿನಲ್ಲಿ ಉದಾರವಾಗಿರುವುದು, ಆದರೆ ವಿಧಿಸಿದ ತೆರಿಗೆಯನ್ನು ಯಾವುದೇ ರಿಯಾಯಿತಿ ಇಲ್ಲದೆ ವಸೂಲು ಮಾಡುವುದು ಶೇರ್ ಷಾನ ನೀತಿಯಾಗಿತ್ತು.

ಬಂಗಾಳದಿಂದ ಪೆಷಾವರದ ವರೆಗಿನ ಆಧುನಿಕ ಹೆದ್ದಾರಿಯ ಮೂಲ, ಆತನ ಕಾಲದ್ದು. ಜನರು ಹೆದ್ದಾರಿಗಳಲ್ಲಿ ಭಯಪಡದೆ ಪ್ರವಾಸ ಮಾಡಬಹುದಾದ ಒಳ್ಳೆಯ ರಕ್ಷಣಾ ವ್ಯವಸ್ಥೆ ಇತ್ತು. ಶೇರ್ ಷಾ ಸೂರಿ ಪರಮತಸಹಿಷ್ಣುವಾಗಿದ್ದ. ಈತನ ಆಡಳಿತದಲ್ಲಿ ಹಿಂದುಗಳಿಗೂ ಉನ್ನತ ಅಧಿಕಾರದ ಅವಕಾಶ ಇದ್ದಿತು. ಅಕ್ಬರನ ಕೈಕೆಳಗಿದ್ದ ಚಾಣಾಕ್ಷ ಅಧಿಕಾರಿ ತೋಡರಮಲ್ ಶೇರ್ ಷಾನ ಬಳಿ ಅಧಿಕಾರದಲ್ಲಿದ್ದ.



ಅಲ್ಪಾವಧಿಯಲ್ಲಿ ಅಪಾರ ಸಾಧನೆ :
ಶೇರ್ ಷಾ ಸೂರಿ

ಶೇರ್ ಷಾ ಹುಟ್ಟಿದ್ದು ಸೂರ್ ಬುಡಕಟ್ಟಿನ ಸಾಮಾನ್ಯ ಮನೆತನದಲ್ಲಿ, 1486ರಲ್ಲಿ. ಇವನ ತಾತ ಬಿಹಾರದ ಸಸರಾಮ್‌ನಲ್ಲಿ ನೆಲೆಸಿದ. ಇವನ ತಂದೆ ಅಲ್ಲಿ ಕಾಲಕ್ರಮೇಣ ಜಹಗೀರುದಾರನಾದ. ಶೇರ್ ಷಾನ ಹುಟ್ಟುಹೆಸರು ಫರೀದ್. ಮಲತಾಯಿಯ ದೆಸೆಯಿಂದ ಇವನು 22ರ ವರೆಯದಲ್ಲಿ ಮನೆಬಿಟ್ಟ. ಸ್ವಲ್ಪಕಾಲ ಅಧ್ಯಯನದಲ್ಲಿ ತೊಡಗಿದ. ಪಾರಸೀ ಭಾಷೆ, [illegible] ಬಂಗಾಳವನ್ನು ಗೆದ್ದುಕೊಂಡ.

ಹೀಗೆ ಕ್ರಮೇಣ ಪ್ರಾಬಲ್ಯಕ್ಕೆ ಬರುತ್ತಿದ್ದ ಶೇರ್ ಷಾನ ಮೇಲೆ ಮೊಘಲ್ ಚಕ್ರವರ್ತಿ ಹುಮಾಯೂನ್ ಯುದ್ಧ ಸಾರಿದ. ಹುಮಾಯೂನ್ ಸೋಲು ಅನುಭವಿಸಿದ. 1539ರಲ್ಲಿ ಶೇರ್ ಷಾ ದೆಹಲಿಯನ್ನು ವಶಪಡಿಸಿಕೊಂಡ. ಕನ್ನೌಜ್‌ನಿಂದ ಅಸ್ಸಾಂ ವರೆಗೆ ಚಿತ್ತಗಾಂಗ್‌ನಿಂದ ಝೀಲಮ್ ಖಂಡದ ವರೆಗೆ ಇದ್ದ ಸಾಮ್ರಾಜ್ಯದ ಅಧಿಪತಿಯಾದ. ಶೇರ್ ಷಾ ಎಂಬ ಹೆಸರಿನಿಂದ ಆಳತೊಡಗಿದ. ಈ ಸಾಮ್ರಾಜ್ಯದ ಅಭ್ಯುದಯಕ್ಕಾಗಿ ಅವಿರತವಾಗಿ ಕೆಲಸ ಮಾಡಿದ.

1545 ಮೇ 22ರಂದು ಒಂದು ಮುತ್ತಿಗೆಯಲ್ಲಿ ಆದ ಆಕಸ್ಮಿಕ ಮದ್ದು ಸ್ಫೋಟದಿಂದ ಶೇರ್ ಷಾ ಕೊನೆಯುಸಿರೆಳೆದ.

ಸಸರಾಮ್‌ನಲ್ಲಿ ಶೇರ್ ಷಾನ ಸಮಾಧಿಯಿದೆ.

ಶ್ವೇತಾಂಬರರು

ಬಿಳಿಯ ಬಟ್ಟೆಗಳನ್ನು ಧರಿಸಿ ತಪಸ್ಸು ಮಾಡುವ ಜೈನ ಸಾಧುಗಳು ಶ್ವೇತಾಂಬರರು. ಭಗವಾನ್ ಮಹಾವೀರನು ನಗ್ನನಾಗಿ ತಪಸ್ಸುಮಾಡಿದ. ಅವನ ತರುವಾಯ ನೂರಾರು ವರ್ಷಗಳ ವರೆಗೆ ಈ ಕಠೋರ ನಿಯಮಗಳನ್ನು ಎಷ್ಟೋ ಜೈನ ಸಾಧುಗಳು ಪಾಲಿಸಿದರು. ಕೆಲವರು ಶೀತಾದಿ ಬಾಧೆಗಳನ್ನು ಸಹಿಸಲಾಗದೆ ವಸ್ತ್ರಗಳನ್ನು ಉಪಯೋಗಿಸಿದರು. ಮುಂದೆ ಕೆಲ ಸಾಧುಗಳು ಬಿಳಿಯ ಬಟ್ಟೆಯಲ್ಲಿಯೇ ತಪಸ್ಸಿಗೆ ತೊಡಗಿದರು. ಅವರು ಶ್ವೇತಾಂಬರ ಸಾಧುಗಳೆನಿಸಿದರು.

[illegible] ಭೇದಗಳು ಸ್ಥಿರಗೊಂಡ ಮೇಲೆ ಸಾಧುಗಳು ತಮ್ಮ ತಮ್ಮ ಮತಗಳನ್ನು ಸ್ಪಷ್ಟಗೊಳಿಸುವಂಥ ಗ್ರಂಥ ನಿರ್ಮಾಣವನ್ನು ಮಾಡಿದರು. ಅಷ್ಟೇ ಅಲ್ಲ, ಬಟ್ಟೆಗಳನ್ನು ಧರಿಸಿದ ಅಲಂಕಾರಯುಕ್ತ ಜಿನಮೂರ್ತಿಗಳನ್ನು ಮಂದಿರಗಳಲ್ಲಿ ಇಟ್ಟು ಪೂಜಿಸತೊಡಗಿದರು. ಆದರಿಂದ ನಾಡಿನಲ್ಲೆಲ್ಲ ದಿಗಂಬರರ ಜಿನಮಂದಿರ, ಶ್ವೇತಾಂಬರರ ಜಿನಮಂದಿರಗಳು ಬೇರೆ ಬೇರೆಯಾದುವು.

ಶ್ವೇತಾಂಬರ ಸಾಧುಗಳು ತಮ್ಮೊಡನೆ ಹದಿನಾಲ್ಕು ವಸ್ತುಗಳನ್ನು ಇಟ್ಟುಕೊಳ್ಳುತ್ತಾರೆ. ಪಾತ್ರೆಯಲ್ಲಿ ಊಟ ಮಾಡುತ್ತಾರೆ. ಈ ಪಂಥದಲ್ಲಿ ಬಿಳಿಯ ಬಟ್ಟೆ ಧರಿಸಿ ತಪಸ್ಸು ಮಾಡುವುದರಿಂದ ಸ್ತ್ರೀಯರಿಗೂ ಮುಕ್ತಿಯಿದೆ. ದಿಗಂಬರರಲ್ಲಿ ಬೆತ್ತಲೆಯಾಗಿ ಸ್ತ್ರೀಯು ತಪಸ್ಸುಮಾಡುವುದು ಸಾಧ್ಯವಿಲ್ಲದುದರಿಂದ ಸ್ತ್ರೀಯರಿಗೆ ಆ ಜನ್ಮದಲ್ಲಿ ಮುಕ್ತಿಯಿಲ್ಲ; ಅವರು ಮುಂದಿನ ಜನ್ಮದಲ್ಲಿ ಪುರುಷರಾಗಿ ತಪಸ್ಸುಮಾಡಿದಾಗಲೇ ಮುಕ್ತಿಗೆ ಅರ್ಹರು ಎಂದು ಅಭಿಮತ. ಈ ಅಭಿಪ್ರಾಯಗಳಿಗೆ ತಕ್ಕಂತೆ ಶಾಸ್ತ್ರ ನಿಯಮಗಳೂ ರಚಿಸಲ್ಪಟ್ಟುವು.

[illegible] 'ಗಚ್ಛ' ಗಳೆಂದು ಹೆಸರು. ಶ್ವೇತಾಂಬರ ಸಂಪ್ರದಾಯದ ಸಮಾಜದವರು ಪಶ್ಚಿಮ ಮತ್ತು ಉತ್ತರ ಭಾರತದಲ್ಲಿ ಬಹುಸಂಖ್ಯೆಯಲ್ಲಿದ್ದಾರೆ.

ಶ್ವೇತಾಶ್ವತರೋಪನಿಷತ್

"ಯಾವನು ತನ್ನ ಸತ್ಯನಿಷ್ಠೆ ತಪಸ್ಸುಗಳಿಂದ ಎಳ್ಳಿನಲ್ಲಿರುವ ಎಣ್ಣೆಯಂತೆ, ಮೊಸರಿನಲ್ಲಿರುವ ತುಪ್ಪದಂತೆ, ಒಣಗಿರುವ ನದೀಪಾತ್ರದ ಕೆಳಗಿರುವ ನೀರಿನಂತೆ, ಅರಣಿಯಲ್ಲಿರುವ ಅಗ್ನಿಯಂತೆ–ಎಲ್ಲದರಲ್ಲೂ ಅಂತರ್ಗತನಾಗಿರುವ ಆತ್ಮವನ್ನು ಪದೇಪದೇ ನೋಡಲು ಶಕ್ತನಾಗುತ್ತಾನೋ ಅವನು ಆ ಆತ್ಮದಲ್ಲಿ ಸೇರಿಹೋಗುತ್ತಾನೆ."

—ಇದು ಶ್ವೇತಾಶ್ವತರೋಪನಿಷತ್ತಿನ ಒಂದು ಶ್ಲೋಕದ ಭಾವ.

ಕಾವ್ಯಮಯವಾದ ಹಲವಾರು ಶ್ಲೋಕಗಳನ್ನುಳ್ಳ ಈ ಉಪನಿಷತ್ ಕೃಷ್ಣಯಜುರ್ವೇದದಲ್ಲಿ ಬರುತ್ತದೆ. ಇದರಲ್ಲಿ ಆರು ಅಧ್ಯಾಯಗಳೂ 113 ಮಂತ್ರಗಳೂ ಇವೆ. ಪರಬ್ರಹ್ಮವನ್ನು ಅರಿತುಕೊಂಡು ಶ್ವೇತಾಶ್ವತರ ಋಷಿ ವಿರಾಗಿಗಳಿಗೆ ಇದನ್ನು ಉಪದೇಶಿಸಿದ್ದರಿಂದ, ಇದಕ್ಕೆ ಶ್ವೇತಾಶ್ವತರೋಪನಿಷತ್ ಎಂದು ಹೆಸರಾಯಿತು.

ಉಳಿದ ಉಪನಿಷತ್ತುಗಳಲ್ಲಿ ಭಕ್ತಿಯ ಬಗೆಗೆ ಪ್ರಸ್ತಾಪ ಮಾತ್ರ ಇದ್ದು ಇದರಲ್ಲಿ ಅದು ಪ್ರಮುಖವಾಗಿದೆ; ಬ್ರಹ್ಮಸಾಕ್ಷಾತ್ಕಾರಕ್ಕೆ ಭಗವದ್ಭಕ್ತಿ ಹಾಗೂ ಗುರುಭಕ್ತಿ ಮುಖ್ಯವೆಂಬ ಅಂಶ ಪ್ರತಿಪಾದಿತವಾಗಿದೆ. ಇದರಲ್ಲಿ ಪರಮಾತ್ಮನನ್ನು ದೇವ, ಹರ, ರುದ್ರ, ಶಿವ, ಭಗವಂತ ಎಂದು ಕರೆಯಲಾಗಿದೆ.

ಪ್ರಪಂಚವನ್ನು ಸೃಷ್ಟಿಸಿದವರು ಯಾರು ? ನಾವು ಬಂದಿರುವುದು [illegible]

ಷಣ್ಮತ

ಭಾರತೀಯರ ತಾತ್ತ್ವಿಕ ಚಿಂತನೆಯಿಂದ ದರ್ಶನಗಳು ಹುಟ್ಟಿದಂತೆ, ವಿಶಿಷ್ಟ ದೈವವೊಂದರ ಆರಾಧನೆ ಮತ್ತು ಆ ಆರಾಧನೆಯ ಸುತ್ತ ಹಬ್ಬಿದ ಆಚರಣೆಗಳಿಂದ ಪಂಥ ಅಥವಾ ಮತ ಹುಟ್ಟಿದುವು. ಪ್ರತಿಯೊಬ್ಬ ಒಂದುವಿಧ ಜೀವಕ್ಕೆ ನಿಯಮವಾದುದನ್ನು ತಿಳಿಸಿದ. ಅವನ ದೈನಂದಿನ ಜೀವನವನ್ನು ಹೇಗೆ ಕಳೆಯಬೇಕೆಂದು ಹೇಳುವುದು ಇವು ಮುಖ್ಯ ಪಡೆದುವು. ಇವುಗಳಲ್ಲಿ ಆರು ಮತಗಳು ಪ್ರಮುಖವಾದುವು. ಇವೇ ಷಣ್ಮತಗಳು.

ಗಾಣಪತ್ಯ, ಸೌರ, ಶೈವ, ವೈಷ್ಣವ, ಶಾಕ್ತ ಮತ್ತು ಕೌಮಾರ—ಇವು ಆರು ಮುಖ್ಯ ಮತಗಳು. ಇವುಗಳ ಹೆಸರೇ ಸೂಚಿಸುವಂತೆ ಒಂದೊಂದು ಮತಕ್ಕೂ ಒಬ್ಬೊಬ್ಬ ದೇವತೆ ಆರಾಧ್ಯದೈವ. ಗಾಣಪತ್ಯ ಪಂಥ ಅಥವಾ ಮತಕ್ಕೆ ಗಣಪತಿಯೇ ಪರಮಾತ್ಮ; ಸೌರ ಪಂಥಕ್ಕೆ ಸೂರ್ಯ; ಶೈವಕ್ಕೆ ಶಿವ; ವೈಷ್ಣವಕ್ಕೆ ವಿಷ್ಣು; ಶಾಕ್ತಕ್ಕೆ ಶಕ್ತಿ ಅಥವಾ ಅಂಬಿಕೆ (ಪಾರ್ವತಿ); ಕೌಮಾರಕ್ಕೆ ಕುಮಾರ ಅಥವಾ ಸ್ಕಂದ. ಈ ಆರು ಮತಗಳವರೂ ದೇವರು ಒಬ್ಬನೇ ನಾಮ ಹಲವು ಎಂದು ನಂಬಿದರೂ ತಮ್ಮ ವಿಶಿಷ್ಟ ಆರಾಧ್ಯದೇವತೆಯೇ ಸರ್ವಸ್ವ ಎಂದು ಭಾವಿಸುತ್ತಾರೆ.

ಒಂದೊಂದು ಮತದವರಿಗೂ ಸಾಮಾನ್ಯವಾಗಿ ಒಂದೊಂದು ಚಿಹ್ನೆ ಇರುತ್ತದೆ. ಶೈವರು ಭಸ್ಮಧಾರಣೆ ಮಾಡುತ್ತಾರೆ. ವೈಷ್ಣವರು ಗಂಧ ಚಂದನಗಳನ್ನು ಹಚ್ಚಿಕೊಳ್ಳುತ್ತಾರೆ. ಶಾಕ್ತ ಪಂಥದವರು ಕುಂಕುಮ ತಿಲಕ ಹಚ್ಚುತ್ತಾರೆ. ಶಿವಪಂಥೀಯರಿಗೆ ಶಿವರಾತ್ರಿ ಪವಿತ್ರದಿನ, ವೈಷ್ಣವರಿಗೆ ಕೃಷ್ಣಜನ್ಮಾಷ್ಟಮಿ ಪವಿತ್ರ. ಶೈವರಿಗೆ ಕಾಶಿ, ಕೇದಾರನಾಥ, ರಾಮೇಶ್ವರಗಳು ಪವಿತ್ರ ಸ್ಥಳಗಳಾದರೆ, ವೈಷ್ಣವರಿಗೆ ಉಡುಪಿ, ಪುರಿ, ದ್ವಾರಕಾ ಮೊದಲಾದುವು, ಶಾಕ್ತರಿಗೆ ಕಾಮಾಕ್ಷಿ (ಕಂಚಿ), ಶೃಂಗೇರಿ, ಪ್ರಯಾಗ, ವಾರಾಣಸಿ, ಮೈಸೂರಿನ ಚಾಮುಂಡಿ ದೇವಾಲಯಗಳು ಪವಿತ್ರ.

ವಿವಿಧ ಮತ ಆಚರಣೆಗೆ ತಕ್ಕಂತೆ, ಸ್ತೋತ್ರ, ಜಪ, ಪುರಾಣಗಳೂ ಬೇರೆ ಬೇರೆಯಾಗಿವೆ. ಪ್ರತಿ ಮತದ ಆರಾಧ್ಯದೇವತೆಯ ಬಗೆಗೂ ಒಂದೊಂದು ಪುರಾಣವಿದೆ. ಹಾಗೆಯೇ ಇವರ ಜಪತಪಗಳಲ್ಲೂ ಪೂಜಾವಿಧಾನದಲ್ಲೂ ವೈವಿಧ್ಯವಿದೆ.

ಈ ಆರು ಮತಗಳಲ್ಲಿ ಶೈವ, ವೈಷ್ಣವ ಹಾಗೂ ಶಾಕ್ತ ಪಂಥಗಳು ಬಹು ಪ್ರಭಾವಶಾಲಿಗಳಾಗಿ ಉಳಿದುಬಂದಿವೆ. ಕ್ರಮೇಣ ಅವುಗಳೊಳಗೆ ವಿವಿಧ ವೈಶಿಷ್ಟ್ಯಗಳುಳ್ಳ ವಿಭಾಗಗಳನ್ನು ಗುರುತಿಸುವುದು ಸಾಧ್ಯವಾಗಿದೆ. ಉದಾಹರಣೆಗೆ ಶೈವರಲ್ಲಿ ಕಾಶ್ಮೀರದ ಶೈವರು, ತಮಿಳುನಾಡಿನ ಶೈವರು, ಕರ್ನಾಟಕದ ಶೈವರು (ವೀರಶೈವರು)–ಹೀಗೆ ಪ್ರಾದೇಶಿಕ ವೈಶಿಷ್ಟ್ಯ ಕಾಣಬಹುದು. ವೈಷ್ಣವರಲ್ಲಿ ರಾಮಾನುಜಾಚಾರ್ಯರ ಅನುಯಾಯಿಗಳು ಶ್ರೀವೈಷ್ಣವರೆಂದು ಕರೆಸಿಕೊಂಡರೆ, ಮಧ್ವಾಚಾರ್ಯರ ಅನುಯಾಯಿಗಳು ಸದ್ವೈಷ್ಣವ(ಮಾಧ್ವ)ರಾದರು. ಇದು ಮತಪ್ರಚಾರಕರಿಂದ ಹುಟ್ಟಿದ ವಿಭಾಗಗಳು.

ಪ್ರತಿಯೊಂದು ಮತವೂ ತನ್ನ ಅನುಯಾಯಿಗೆ ಕಟ್ಟುಪಾಡು-ನಿಯಮಗಳನ್ನು ಹಾಕಿದ್ದು, ಈ ನಿಯಮಗಳೇ ಅನೇಕ ವೇಳೆ ಸಾಮಾಜಿಕ ಕಟ್ಟುಪಾಡುಗಳಾಗಿರುವುದೂ ಉಂಟು.

ಷಾ ಜಹಾನ್

ಆಧುನಿಕ ಜಗತ್ತಿನ ಮಹಾ ಅದ್ಭುತಗಳಲ್ಲಿ ಒಂದು ಎಂದು ಪರಿಗಣಿತವಾಗಿರುವ ತಾಜ್‌ಮಹಲ್‌ನ ನಿರ್ಮಾಪಕನೆಂದು ಹೆಸರಾದವನು, ಷಾ ಜಹಾನ್.

ಷಾ ಜಹಾನ್ 1592 ಜನವರಿ 5ರಂದು ಲಾಹೋರಿನಲ್ಲಿ ಜನಿಸಿದ. ಈತ ಜಹಾಂಗೀರನ 3ನೆಯ ಮಗ. ಹೆತ್ತವರು ಇಟ್ಟ ಹೆಸರು ಖುರ್ರಂ. ಸಿಂಹಾಸನಕ್ಕಾಗಿ ಹಂಬಲಿಸುತ್ತಿದ್ದ ಖುರ್ರಂ 1622ರಲ್ಲಿ ದಂಗೆ ಎದ್ದು ವಿಫಲನಾದ. 1627ರಲ್ಲಿ ಜಹಾಂಗೀರ್ ನಿಧನಹೊಂದಿದ. ಅಸಫ್‌ಖಾನನ ನೆರವಿನಿಂದ ಖುರ್ರಂ ಮರು ವರ್ಷ ಆಗ್ರಾದಲ್ಲಿ ತಾನು ಷಾ ಜಹಾನ್ ಚಕ್ರವರ್ತಿ ಎಂದು ಘೋಷಿಸಿಕೊಂಡ.



ತಾಜಮಹಲ್ ನಿರ್ಮಾಣ : ಷಾ ಜಹಾನ್

1636ರಲ್ಲಿ ದಕ್ಷಿಣದ ಸಂಸ್ಥಾನಗಳನ್ನು ಗೆದ್ದದ್ದು ಈತನ ಆಡಳಿತದ ಒಂದು ಪ್ರಮುಖ ಹೆಜ್ಜೆ. 1638ರಲ್ಲಿ ಕಂದಾಹಾರ್ ಪ್ರಾಂತವನ್ನು ವಶಪಡಿಸಿಕೊಂಡ.

ರಾಣಿ ಮುಮ್ತಾಜ್ ಬೇಗಂಳ ಗೋರಿಯಾಗಿ ತಾಜಮಹಲನ್ನು ನಿರ್ಮಿಸಲು 30 ವರ್ಷಕ್ಕೂ ಹೆಚ್ಚು ಕಾಲ ಹಿಡಿಯಿತು. ದೆಹಲಿಯ ಕೆಂಪುಕೋಟೆಯನ್ನೂ ಜುಮ್ಮಾ ಮಸೀದಿಯನ್ನೂ ಷಾ ಜಹಾನ್ ಕಟ್ಟಿಸಿದ. ಆಗ್ರಾದ ಮೋತಿ ಮಸೀದಿ, ಆಗ್ರಾದ ಅರಮನೆ ವಾಸ್ತುಶಿಲ್ಪದ ಆಶ್ಚರ್ಯಕರ ನಿರ್ಮಾಣಗಳು.

ಒಂದು ಕೋಟಿ ರೂಪಾಯಿಗಳಿಗೂ ಮೀರಿದ ವೆಚ್ಚದಲ್ಲಿ ಸುಂದರ ಮಯೂರ ಸಿಂಹಾಸನವನ್ನು ರಚಿಸಿದ.

ಕೊನೆಯ ವರ್ಷಗಳಲ್ಲಿ ಷಾ ಜಹಾನನಿಗೆ ನೆಮ್ಮದಿ ಇರಲಿಲ್ಲ. ನಾಲ್ಕು ಮಕ್ಕಳೂ ಸಿಂಹಾಸನಕ್ಕಾಗಿ ಹೋರಾಟ ನಡೆಸಿದರು. ಗೆದ್ದವನು

ಷಾ ಜಹಾನ್ ನಾಣ್ಯ





ತಾಜಮಹಲ್ : ಮುಮ್ತಾಜ್

3ನೆಯ ಮಗ ಔರಂಗಜೇಬ್. ಇವನು ಷಾ ಜಹಾನನನ್ನು ಸೆರೆಮನೆಯಲ್ಲಿಟ್ಟು, 1658ರಲ್ಲಿ ಚಕ್ರವರ್ತಿಯಾದ.

ಷಾ ಜಹಾನ್ ಆಗ್ರಾದ ಕೋಟೆಯಲ್ಲಿ ಬಂದಿಯಾಗಿದ್ದು 1666ರ ಜನವರಿ 22ರಂದು ನಿಧನಹೊಂದಿದ.

ನೋಡಿ : ಮಯೂರ ಸಿಂಹಾಸನ
ತಾಜಮಹಲ್—
ಸಂಪುಟ ೧, ೫

ಷಿಲ್ಲಾಂಗ್

ಮೇಘಾಲಯ ರಾಜ್ಯದ ರಾಜಧಾನಿ ಷಿಲ್ಲಾಂಗ್ ಭಾರತದ ಅತ್ಯಂತ ಆಕರ್ಷಕ ಗಿರಿಧಾಮಗಳಲ್ಲಿ ಒಂದು. 1897 ಜೂನ್ 12ರಂದು ಭೂಕಂಪದಿಂದಾಗಿ ಇಡೀ ನಗರ ಅಲ್ಲೋಲಕಲ್ಲೋಲವಾಯಿತು. ಅನಂತರ ನೀಳ ಪೈನ್ ಮರಗಳ ನಡುವೆ ಪುನರ್ನಿರ್ಮಾಣಗೊಂಡಿತು.

ಷಿಲ್ಲಾಂಗ್ ಅದೇ ಹೆಸರಿನ ಉನ್ನತ ಪ್ರಸ್ಥಭೂಮಿಯ ಮೇಲಿದೆ. ಸಮುದ್ರ ಮಟ್ಟದಿಂದ ಇದು ಸುಮಾರು 1500 ಮೀಟರ್ ಎತ್ತರದಲ್ಲಿದೆ. ಈ ನಗರದಿಂದ 1500 ಅಡಿ ಎತ್ತರದಲ್ಲಿ ಷಿಲ್ಲಾಂಗ್ ಪೀಕ್ ಶಿಖರವಿದೆ. ಅಸ್ಸಾಮಿನ ಹೆಬ್ಬಾಗಿಲು ಎಂದು ಕರೆಯಲ್ಪಡುವ ಗೌಹಾತಿಯಿಂದ ಷಿಲ್ಲಾಂಗಿಗೆ 63 ಮೈಲಿ ದೂರ. ವರ್ಷದ ಎಲ್ಲ ಕಾಲದಲ್ಲೂ ಷಿಲ್ಲಾಂಗಿನ ಹವೆ ಹಿತಕರ. ಆದರೆ ಮಾರ್ಚ್‌ನಿಂದ ಜೂನ್ ವರೆಗೆ ಹಾಗೂ ದಸರೆಯ ಕಾಲದಲ್ಲಿ ಅತ್ಯಂತ ಹಿತಕರ. ನಗರದಲ್ಲಿ ವಾರ್ಡ್ ಸರೋವರವಿದೆ. ಎಂಟು ದಿನಗಳಿಗೊಂದು ಬಾರಿ ನಡೆಯುವ ಬಡಾ ಬಜಾರ್, ಷಿಲ್ಲಾಂಗ್ ಶಿಖರ, ಷಿಲ್ಲಾಂಗ್ ಗಾಲ್ಫ್ ಆಟ ಮೈದಾನ, ಅದರ ಬಳಿಯ ಕುದುರೆ ಪಂದ್ಯದ ಮೈದಾನ ಇತ್ಯಾದಿ —ಇಲ್ಲಿನ ಪ್ರೇಕ್ಷಣೀಯ ತಾಣಗಳು. ಪಾಶ್ಚರ್ ಸಂಶೋಧನಾ ಸಂಸ್ಥೆ, ಹೈನು ಕೇಂದ್ರ, ರಾಜಭವನ, ಕಾಲೇಜುಗಳು, ಜಂಬೀರ ಫಲ ಮತ್ತು ರೇಷ್ಮೆ ವ್ಯವಸಾಯ ಸಂಶೋಧನಾ ಕೇಂದ್ರಗಳು ಷಿಲ್ಲಾಂಗಿನಲ್ಲಿವೆ.

1864ರಲ್ಲಿ ಖಾಸಿ, ಜೈಂತಿಯ ಗುಡ್ಡಗಳ ಆಡಳಿತ ಕೇಂದ್ರವಾಗಿ ಷಿಲ್ಲಾಂಗ್ ಪ್ರಾಮುಖ್ಯ ಪಡೆಯಿತು ; ಅನಂತರ ಬ್ರಿಟಿಷರಿಂದ ಅಸ್ಸಾಂ ಪ್ರಾಂತ್ಯದ ಆಡಳಿತ ಕೇಂದ್ರವಾಯಿತು. ಎರಡನೆಯ ಜಾಗತಿಕ ಯುದ್ಧದಲ್ಲಿ ಇದೊಂದು ಮುಖ್ಯ ಸಂಪರ್ಕಕೇಂದ್ರವಾಗಿತ್ತು.

ಸ್ವತಂತ್ರ ಭಾರತದ ಅಸ್ಸಾಮಿನ ರಾಜಧಾನಿಯಾಗಿದ್ದ ಷಿಲ್ಲಾಂಗ್, ಸ್ವಲ್ಪ ಕಾಲ ನೇಫಾ ಗಡಿಪ್ರದೇಶದ ಆಡಳಿತ ಕೇಂದ್ರವಾಗಿಯೂ ಇತ್ತು. ಈಗ ಮೇಘಾಲಯದ ರಾಜಧಾನಿಯಾಗಿದೆ.

ಷಿಲ್ಲಾಂಗ್‌ನ ಜನಸಂಖ್ಯೆ 87,659.

ಶ್ಲೇಗೆಲ್ ಸಹೋದರರು

ಜರ್ಮನಿಯಲ್ಲಿ ಸಂಸ್ಕೃತ ಅಧ್ಯಯನವನ್ನು ಪ್ರಾರಂಭಿಸಿ [illegible]ದವರಲ್ಲಿ ಶ್ಲೇಗೆಲ್ ಸಹೋದರರು ಅಗ್ರಗಣ್ಯರು.

1767ರಲ್ಲಿ ಹುಟ್ಟಿದ ಆಗಸ್ಟ್ ವಿಲ್ಹೆಲ್ಮ್ ಶ್ಲೇಗೆಲ್ ಈ ಸಹೋದರರಲ್ಲಿ ಹಿರಿಯ ; ಇವನಿಗಿಂತ ಐದು ವರ್ಷ ಚಿಕ್ಕವನು, ಫ್ರೆಡರಿಕ್.



ಆಗಸ್ಟ್ ಶ್ಲೇಗೆಲ್ : ಜರ್ಮನಿಯಲ್ಲಿ ಸಂಸ್ಕೃತ

ಇವರಿಬ್ಬರೂ ಸಾಹಿತ್ಯ, ಕಲೆ, ತತ್ತ್ವಜ್ಞಾನಗಳನ್ನು ಆಳವಾಗಿ ಅಭ್ಯಾಸ ಮಾಡಿದ್ದರು ; ಖ್ಯಾತ ಲೇಖಕರೂ ಭಾಷಣಕಾರರೂ ಆಗಿದ್ದರು.

ಭಾರತೀಯ ಗ್ರಂಥಗಳನ್ನು ಕುರಿತು ಆಗಸ್ಟ್ ಪ್ರಕಟಿಸಿದ ಮೂರು ಸಂಪುಟಗಳ ಗ್ರಂಥ ಅಮೂಲ್ಯವಾದದ್ದು.

ಆಗಸ್ಟ್ ತಾನೇ ಒಂದು ಸಂಸ್ಕೃತ ಮುದ್ರಣಾಲಯವನ್ನು ಸ್ಥಾಪಿಸಿ ಲ್ಯಾಟಿನ್ ಭಾಷಾಂತರ ಸಹಿತವಾದ ಭಗವದ್ಗೀತೆಯನ್ನು 1823ರಲ್ಲಿ ಪ್ರಕಟಿಸಿದ ; 1829-46 ಅವಧಿಯಲ್ಲಿ 'ರಾಮಾಯಣವನ್ನು' ಪ್ರಕಟಿಸಿದ. ಜರ್ಮನಿಯಲ್ಲಿ ಸಂಸ್ಕೃತ ಅಭ್ಯಾಸಕ್ಕೆ ಉತ್ತೇಜನವಿತ್ತ.

ಇವನ ತಮ್ಮ ಫ್ರೆಡರಿಕ್ ಶ್ಲೇಗೆಲ್ ಕೂಡ ಹೆಸರಾಂತ ವಿದ್ವಾಂಸ, ಸಾಹಿತಿ, ವಿಮರ್ಶಕ, ಸೌಂದರ್ಯಮೀಮಾಂಸಕ. ಇವನು ಪ್ಯಾರಿಸ್‌ನಲ್ಲಿ ಸಂಸ್ಕೃತಾಭ್ಯಾಸ ಮಾಡಿ, ಭಾರತ-ಜರ್ಮನ್ ಭಾಷೆಗಳ ತೌಲನಿಕ ಅಧ್ಯಯನ ನಡೆಸಿ, ಆ ಬಗೆಗೆ ಒಂದು ಗ್ರಂಥವನ್ನು ಬರೆದ. ಹೀಗೆ ಭಾರತದ ಭಾಷೆಗಳ ಮತ್ತು ತೌಲನಿಕ ಭಾಷಾಶಾಸ್ತ್ರದ ಅಧ್ಯಯನಕ್ಕೆ ಮಾರ್ಗಮಾಡಿಕೊಟ್ಟ.

ಆಗಸ್ಟ್ ಶ್ಲೇಗೆಲ್ 1845ರಲ್ಲೂ ಫ್ರೆಡರಿಕ್ ಶ್ಲೇಗೆಲ್ ಅದಕ್ಕಿಂತ 16 ವರ್ಷ ಮುಂಚೆ 1829ರಲ್ಲೂ ತೀರಿಕೊಂಡರು.

ಷೋಡಶ ಮಹಾ ಜನಪದಗಳು

ಕ್ರಿ.ಪೂ. 7ನೆಯ ಶತಮಾನದಲ್ಲಿ ಉತ್ತರ ಭಾರತದಲ್ಲಿ 16 ಗಣ ರಾಜ್ಯಗಳಿದ್ದುವು. ಈ ರಾಜ್ಯಗಳನ್ನು ಮಹಾ ಜನಪದಗಳು ಎಂದು ಕರೆಯುತ್ತಿದ್ದರು.

ಈಗಿನ ಭಾರತದ ಪ್ರಾಂತ್ಯಗಳಿಗೆ ಹೋಲಿಸಿದರೆ ಈ ಜನಪದ ಪ್ರದೇಶಗಳು ಹೀಗಿವೆ : ಅಂಗ (ಪೂರ್ವ ಬಿಹಾರ್), ಮಗಧ (ದಕ್ಷಿಣ ಬಿಹಾರ್), ಕಾಶಿ (ವಾರಾಣಸಿ), ಕೋಸಲ (ಔಧ್), ವೃಜಿ (ಉತ್ತರ ಬಿಹಾರ್), ಮಲ್ಲ (ಗೋರಖಪುರ ಜಿಲ್ಲೆ), ಚೇದಿ (ಯಮುನಾ, ನರ್ಮದಾ ನದಿಗಳ ನಡುವೆ), ವತ್ಸ (ಅಲಹಾಬಾದ್ ಪ್ರದೇಶ), ಕುರು (ಥಾನೇಶ್ವರ, ದೆಹಲಿ, ಮೀರತ್ ಜಿಲ್ಲೆಗಳು), ಪಾಂಚಾಲ (ಬರೇಲಿ, ಬದೌನ್ ಮತ್ತು ಫರೂಕಾಬಾದ್ ಜಿಲ್ಲೆಗಳು), ಮತ್ಸ್ಯ (ಜಯಪುರ), ಶೂರಸೇನ (ಮಥುರಾ), ಅಸ್ಮಕ (ಗೋದಾವರಿ ದಂಡೆಯಲ್ಲಿ), ಅವಂತಿ (ಮಾಳ್ವ), ಗಾಂಧಾರ (ಪೇಷಾವರ್ ಮತ್ತು ರಾವಲ್ಪಿಂಡಿ ಜಿಲ್ಲೆಗಳು) ಮತ್ತು ಕಾಂಭೋಜ (ನೈಋತ್ಯ ಕಾಶ್ಮೀರ ಮತ್ತು ಕಾಫಿರಿಸ್ತಾನದ ಸ್ವಲ್ಪ ಭಾಗ).

ಈ ಜನಪದಗಳ ಪ್ರತಿನಿಧಿಗಳು ರಾಜಧಾನಿಯಲ್ಲಿ ಸೇರುತ್ತಿದ್ದರು. ಅವರಲ್ಲಿ ಒಬ್ಬ ರಾಜನಾಗಿ ಆರಿಸಲ್ಪಡುತ್ತಿದ್ದ. ಇವನೇ ಸಭೆಯ ಅಧ್ಯಕ್ಷ. ರಾಜತ್ವ ವಂಶಪಾರಂಪರ್ಯವಾಗಿರಲಿಲ್ಲ. ಬಹುಮತದ [illegible] ಲಾಗುತ್ತಿತ್ತು.

[illegible] ವೀರರು ಪ್ರವರ್ಧಮಾನರಾದುದು.

[illegible] ಕಟ್ಟುಗಳ ರಾಜ್ಯವಾಗಿತ್ತು. ಸುಮಾರು ನಾಲ್ಕನೆಯ ಶತಮಾನದವರೆಗೆ ಇವುಗಳಲ್ಲಿ ಅಲ್ಲೊಂದು ಇಲ್ಲೊಂದು ಅಸ್ತಿತ್ವದಲ್ಲಿದ್ದುವು.

ನೋಡಿ : ಕಾಂಭೋಜ ; ವೈಶಾಲಿ

ಸಂಕ್ರಾಂತಿ

[illegible] ಹಣವ ಚೀಲ ಅಪನದಾಗುತ್ತದೆ.

ಇದು ಸಂಕ್ರಾಂತಿ ಹಬ್ಬದಲ್ಲಿ [illegible] ಆಚರಿಸುವ ವಿನೋದಗಳಲ್ಲೊಂದು.

ಸಂಕ್ರಾಂತಿ ಸಾಮಾನ್ಯವಾಗಿ ಜನವರಿ 14ರಂದು-ಒಮ್ಮೊಮ್ಮೆ 15ರಂದು- ಬರುವ ಹಬ್ಬ. ಆ ದಿನ ಪವಿತ್ರ ತೀರ್ಥಗಳಲ್ಲಿ ಸ್ನಾನಮಾಡುವುದು ಪುಣ್ಯ ಪ್ರದವೆಂದು ನಂಬಿಕೆ. ದೇವರಿಗೆ ಎಳ್ಳು ನೈವೇದ್ಯಮಾಡಿ ಬಾಳೆಹಣ್ಣು, ಕಬ್ಬು [illegible] ಉಂಟು.

[illegible] ಆಂಧ್ರಗಳಲ್ಲಿ ಇದನ್ನು ಪೊಂಗಲ್ [illegible] ಮೂರು ದಿನಗಳ ಕಾಲ ಆಚರಿಸುತ್ತಾರೆ. ಮೊದಲ ದಿನ ಭೋಗಿಹಬ್ಬ. ಅದು ಕುಟುಂಬದವರು ಮಾಡಿಕೊಳ್ಳುವ ಹಬ್ಬ. ಎರಡನೆಯ ದಿನ ಸೂರ್ಯಪೊಂಗಲ್, ಸೂರ್ಯನ ಪೂಜೆಗೆ ಪ್ರಾಶಸ್ತ್ಯ. ಪೊಂಗಲ್ ತಯಾರಿಸಿ ಸೂರ್ಯನಿಗೆ ನಿವೇದನೆ ಮಾಡುತ್ತಾರೆ. ಮೂರನೆಯ ದಿನ ಪಶುಪೂಜೆ. ಎತ್ತಿನ ಕೋಡಿಗೆ ಬಣ್ಣ ಹಚ್ಚಿ ಹೂ ಮುಡಿಸಿ ಅಲಂಕಾರ ಮಾಡುತ್ತಾರೆ. ಕೆಲವು ಕಡೆ ಎತ್ತು ಕಾಳಗ, ಕೋಣ ಕಾಳಗ ನಡೆಸುತ್ತಾರೆ. ಸಂಕ್ರಾತಿಯ ಮರುದಿನ ಅರಸಿನ ಕುಂಕುಮ ಹಾಕಿದ ಪೊಂಗಲಿನ ಉಂಡೆ ಗಳನ್ನು ಹಕ್ಕಿಗಳಿಗಾಗಿ ಬಯಲಿನಲ್ಲಿ ಇಡುತ್ತಾರೆ.

ಸಂಕ್ರಾಂತಿ ಸುಗ್ಗಿಕಾಲದ ಹಬ್ಬ. ಹೊಸ ಅಕ್ಕಿಯನ್ನು ಉಪಯೋಗಿಸಿ ಅಡುಗೆ ಮಾಡುತ್ತಾರೆ.

ಸೂರ್ಯ ಮಕರರಾಶಿಯನ್ನು ಪ್ರವೇಶಿಸುವ ದಿನವಾದ್ದರಿಂದ ಆ ದಿನವನ್ನು ಮಕರ ಸಂಕ್ರಾಂತಿ ಎಂದೂ ಕರೆಯುತ್ತಾರೆ.

ಸಂಗ್ರಾಮ ಸಿಂಹ

ಭಾರತ ವಿದೇಶೀಯರ ದುರಾಕ್ರಮಣಕ್ಕೆ ತುತ್ತಾಗುವುದನ್ನು ಸಹಿಸದೆ, ಎದುರಿಸಿದ ರಜಪೂತರಲ್ಲಿ ಮೇವಾಡದ ರಾಜರು ಅಗ್ರಪಂಗ್ತಿಯವರು. ಇವರಲ್ಲಿ ಮೇವಾಡದ ಸಿಸೋದಿಯ ಸಂತತಿಯ ಸಂಗ್ರಾಮ ಸಿಂಹ ತಿಲಕ ಪ್ರಾಯ. ರಾಣಾ ಸಂಗ ಎಂದು ಈತ ಪ್ರಸಿದ್ಧ.

1508ರಲ್ಲಿ ಸಂಗನ ತಂದೆ ನಿಧನನಾದ. ಪೃಥ್ವೀರಾಜ್ ಮತ್ತು ಜಯ ಮಲ್ಲ ರಾಣಾನ ಸಹೋದರರು. ಸಿಂಹಾಸನಕ್ಕೆ ಕಾದಾಟ ಬೇಡವೆಂದು [illegible] ಬೇಕಾಯಿತು. ಜಯಮಲ್ಲ ಮೊದಲು ಆಳಿದಾತ. ಅದೂ ಸ್ವಲ್ಪ ಕಾಲ. [illegible] 1509 [illegible] 19 ವರ್ಷ ಕಾಲ ಆಳಿದ.

ರಾಣಾ ಆಡಳಿತ ಸುಧಾರಣೆಯತ್ತ ಮೊದಲು ಗಮನವಿತ್ತ. ಸೈನಿಕರಿಗೆ ಉತ್ತಮ ತರಬೇತಿ ಕೊಡಿಸಿ ಬಲವಾದ ಸೈನ್ಯ ಕಟ್ಟಿದ. ಭಾರತದಲ್ಲಿ ಚಕ್ರಾಧಿಪತ್ಯ ಸ್ಥಾಪಿಸಲು ಹವಣಿಸುತ್ತಿದ್ದ ಮೊಘಲರೊಡನೆ ಯುದ್ಧ ಅನಿವಾರ್ಯವಾಗಿತ್ತು. ದೆಹಲಿ ಮತ್ತು ಮಾಳ್ವದ ಅರಸರೊಡನೆ 18 ಯುದ್ಧ [illegible] 1527ರ [illegible] 16ರಂದು [illegible] ಕೊನೆಯ ಯುದ್ಧವಾಯಿತು. 1528ರಲ್ಲಿ ರಾಣಾ ಮೃತನಾದ.

[illegible] ಗಾಯಗಳಿಗಂತೂ ಲೆಕ್ಕವಿಲ್ಲ. ರಾಜಸ್ಥಾನದ ಹಾಡುಗಳು ರಾಣಾನನ್ನು [illegible]

ಸಂಗೊಳ್ಳಿ ರಾಯಣ್ಣ

[illegible]

ರಾಯಣ್ಣ ತನ್ನ ಗ್ರಾಮದ ಓಲೆಕಾರ. 1824ರ ಕಿತ್ತೂರ ಯುದ್ಧದಲ್ಲಿ [illegible] ಸೇರಿದ್ದ. ಅನಂತರ ಬಿಡು ಗಡೆ ಹೊಂದಿ ಸಂಗೊಳ್ಳಿಗೆ ಮರಳಿದ. ತನ್ನ ಚಾಕರಿ ಹೊಲದ ಮೇಲೆ ಅಧಿಕ ಕಂದಾಯ ಹೇರಿದಾಗ ಸಹಿಸದೆ, ಊರ ಕುಲ ಕರ್ಣಿಯ ಜೊತೆ ಜಗಳ ಕಾಯ್ದು, ಸ್ವಗ್ರಾಮ ತ್ಯಜಿ ಸಿದ. ಕಿತ್ತೂರ ದುರಂತ ದಿಂದ ಸಂತಪ್ತನಾದ ರಾಯಣ್ಣನಿಗೆ ಈ ಘಟನೆ ಯಿಂದ ಬ್ರಿಟಿಷರ ಮೇಲೆ ದ್ವೇಷ ಹೆಚ್ಚಿತು.

ರಾಯಣ್ಣ ಬ್ರಿಟಿಷರ ವಿರುದ್ಧ ಬಂಡು ಹೂಡಲು ವೀರರನ್ನು ಸೇರಿಸ ತೊಡ ಗಿದ. ಗಾದಿಯ ಮೇಲೆ ಕಿತ್ತೂರ ಚೆನ್ನಮ್ಮನ ದತ್ತು ಪುತ್ರ ಶಿವಲಿಂಗಸರ್ಜನನ್ನು ಕುಳ್ಳಿರಿಸಬೇಕೆಂದು ಆತನ



ಕ್ರಾಂತಿಯ ಓಲೆಕಾರ : ರಾಯಣ್ಣ

ಪ್ರಯತ್ನ. ಅದಕ್ಕೆ ಸೆರೆವಾಸದಲ್ಲಿದ್ದ ಚೆನ್ನಮ್ಮನ ಬೆಂಬಲವೂ ಇತ್ತು. ಅದಕ್ಕಾಗಿ 1829ರಲ್ಲಿ ಬ್ರಿಟಿಷರ ವಿರುದ್ಧ ರಾಯಣ್ಣ ಬಂಡಾಯ ಹೂಡಿದ. ಆಗ ರಾಯಣ್ಣನ ತಂಡದಲ್ಲಿ ಸಾವಿರ ಜನ ಶೂರರಿದ್ದರು. ಮೊದಲು ರಾಯಣ್ಣ ಬೀಡಿ ತಾಲ್ಲೂಕ್ ಕಚೇರಿಗೆ ಬೆಂಕಿ ಇಟ್ಟ. ಖಾನಾಪುರ ಸರಕಾರೀ ಖಜಾನೆಯನ್ನು ಕೊಳ್ಳೆಹೊಡೆದ. ಸ್ವಾರ್ಥಕ್ಕಾಗಿ ಬ್ರಿಟಿಷರ [illegible] ಸ್ವಪ್ನನಾದ.

[illegible] ರಾಯಣ್ಣನನ್ನು [illegible] ಗಾಂವಿ ಕಚೇರಿಯನ್ನು ಮತ್ತು ಕೃಷ್ಣರಾಯನ ಮನೆಯನ್ನು ಸುಟ್ಟು ಹಾಕಿದ. ರಾಯಣ್ಣ ಬರುವ ಸುದ್ದಿ ತಿಳಿದ ಅಧಿಕಾರಿಗಳು ಕಂದಾಯ ಹಣವನ್ನೂ ಶಸ್ತ್ರಗಳನ್ನೂ ಒಂದು ಮಸೀದಿಯ ಮಾಳಿಗೆಯ ಮೇಲೆ ಬಚ್ಚಿಟ್ಟಿದ್ದರು. ಧಾವಿಸಿಬಂದ ಕೃಷ್ಣರಾಯ ಸಂಪಗಾಂವಿ ಕೆರೆಯ ಹತ್ತಿರ ರಾಯಣ್ಣನನ್ನು ಎದುರಿಸಿ ಕಾದಾಡಿದ. ರಾಯಣ್ಣ ಅತನ ಕೈಗೆ ಸಿಕ್ಕಲಿಲ್ಲ.

ಆ ವರ್ಷ ಮಕರ ಸಂಕ್ರಮಣದ ದಿನ ಮುಂಜಾನೆ ರಾಯಣ್ಣ 500 ಜನ ಬಿಚ್ಚುಗತ್ತಿ ಹಿಡಿದ ಸ್ವಾತಂತ್ರ್ಯ ಯೋಧರ ಜೊತೆ ಕಿತ್ತೂರಿಗೆ ಬಂದು ಗುರುಸಿದ್ಧೇಶ್ವರರ ಗದ್ದುಗೆಗೆ ಕಾಯಿ ಒಡೆಸಿಕೊಂಡು ಹೋದ.

ರಾಯಣ್ಣನನ್ನು ಬಲೆಗೆ ಹಾಕದ ಹೊರತು ಈ ಬಂಡಾಯ ನಿಲ್ಲದೆಂದು ಕೃಷ್ಣರಾಯ ಈ ಕಾರ್ಯಕ್ಕೆ ಖುದಾನಪುರದ ಲಿಂಗನ ಗೌಡನನ್ನು ಆರಿಸಿದ. ಕಿತ್ತೂರ ದೇಸಾಯರು ತನ್ನ ಮಗನನ್ನು ದತ್ತು ಸ್ವೀಕರಿಸಲು ನಿರಾಕರಿಸಿದ್ದ ಕಾರಣ, ಲಿಂಗನ ಗೌಡ ಕಿತ್ತೂರಿನಮೇಲೆ ಸಿಟ್ಟಾಗಿದ್ದ. ಮಾಸ್ತಮರಡಿ ಶಿವಲಿಂಗನ ಪಕ್ಷವಹಿಸಿ ರಾಯಣ್ಣ ಹೋರಾಡುತ್ತಿರುವುದು ಆತನಿಗೆ ಸರಿಬಂದಿರಲಿಲ್ಲ. ಲಿಂಗನ ಗೌಡನಿಗೆ ಸಹಾಯಕನಾಗಿ ನೇಗಿಲಹಾಳ ವೆಂಕನಗೌಡ ಸೇರಿಕೊಂಡ. ಇಬ್ಬರೂ ವಿಶ್ವಾಸ ತೋರಿ ರಾಯಣ್ಣನ ಪಕ್ಷ ಸೇರುವಂತೆ ನಟಿಸಿದರು. ಹದಿನೈದು ದಿನ ರಾಯಣ್ಣನ ದಾಳಿಗಳಲ್ಲಿ ಭಾಗವಹಿಸಿದರು.

[illegible] 1830 ಏಪ್ರಿಲ್ 8ರಂದು ರಾಯಣ್ಣ ಸೆರೆಮನೆ ಸೇರಿದ.

ಮುಂದೆ ರಾಯಣ್ಣನಿಗೆ [illegible] ತೋರಿದ್ದ ಒಂದು ಸ್ಥಳದಲ್ಲಿ ಆತನ ಸಮಾಧಿಯಾಯಿತು. ಆ ಸ್ಥಳದಲ್ಲಿ [illegible] ಗುಡಿ ಕಟ್ಟಿದ್ದಾರೆ.

[illegible] ಉಜ್ವಲ ಅಧ್ಯಾಯವಾದ.

ಸಂಜೀವ ರೆಡ್ಡಿ

ನೋಡಿ : ನೀಲಂ ಸಂಜೀವ ರೆಡ್ಡಿ

ಸಂತ ಥಾಮಸ್

[illegible] ತ್ತಿದ್ದರು.

[illegible] ಅಬ್ಬಾನೀಸನು ಥಾಮಸನನ್ನು (ಭಾಷಾ ಉಚ್ಚಾರ : ತಾಮಸ್) ಜೆರೂಸಲೇಮಿನಲ್ಲಿ ಭೇಟಿಯಾಗಿ ಭಾರತಕ್ಕೆ ಕರೆತಂದ. ರಾಜನು ಅರಮನೆ ಕಟ್ಟಲು ಕೊಟ್ಟ ಹಣವನ್ನು ಥಾಮಸನು ಬಡವರ ಸೇವೆಗಾಗಿ ಉಪಯೋಗಿಸಿದ.



ಭಾರತದ ಆದಿ ಸಂತ : ಥಾಮಸ್

"ಅರಮನೆಯೆಲ್ಲಿ?" ಎಂದು ರಾಜನು ಥಾಮಸನನ್ನು ಕೇಳಿದಾಗ ಥಾಮಸನು, "ಮಹಾಪ್ರಭುವೇ, ನಿನಗಾಗಿ ಸುಂದರ ಅರಮನೆ ಪರಲೋಕದಲ್ಲಿ ಕಟ್ಟಲ್ಪಟ್ಟಿದೆ" ಎಂದನಂತೆ. ಸಿಟ್ಟಿಗೆದ್ದ ರಾಜನು ಥಾಮಸನನ್ನು ಸೆರೆಮನೆಯಲ್ಲಿ ಇರಿಸಿದ. ಕೆಲ ದಿನಗಳ ಅನಂತರ ರಾಜನಿಗೆ ಕನಸಿನಲ್ಲಿ ತನಗಾಗಿ ಸ್ವರ್ಗದಲ್ಲಿ [illegible]

[illegible] ದೇವಾಲಯವೆಂದು ಇಂದಿಗೂ ಪ್ರತೀತಿ ಇದೆ. ಈ ಪ್ರದೇಶದ [illegible] ಎನ್ನುತ್ತಾರೆ.

[illegible] ನಾಡಿಗೆ ಬಂದ. ಥಾಮಸನ ಸುವಾರ್ತಾ ಪ್ರಸಾರ ಇಲ್ಲಿಯ ಜನರಿಗೆ ಹಿಡಿಸ[illegible] ಅವನನ್ನು ಹಿಂಸಿಸುತ್ತಿದ್ದವರು ಅಲ್ಲಿಗೆ ಬಂದು ಅವನನ್ನು ಕೊಲ್ಲಲು

ಯತ್ನಿಸಿದರು. ಥಾಮಸನು ಅಲ್ಲಿಂದ ಹತ್ತಿರದಲ್ಲಿಯೇ ಇದ್ದ ದೊಡ್ಡ ಬೆಟ್ಟಕ್ಕೆ ಓಡಿಹೋದ. ಇಲ್ಲಿ ಆತನ ಹಿಂಸಕರು ಅವನನ್ನು ಭರ್ಜಿಯಿಂದ ತಿವಿದು ಕೊಂದರು.

ಥಾಮಸನ ಅವಶೇಷಗಳು ಮದರಾಸಿನ ಸಾನ್ ಥೋಮ್ ಆರಾಧನಾ ಮಂದಿರದ ಗೋರಿಯಲ್ಲಿವೆ.

ಸಂತ ಥಾಮಸನು ಹುತಾತ್ಮನಾದ 19ನೆಯ ಶತಮಾನೋತ್ಸವ 1972 ರಲ್ಲಿ ಮದರಾಸಿನಲ್ಲಿ ವಿಜೃಂಭಣೆಯಿಂದ ನಡೆಯಿತು. ಲಕ್ಷಾಂತರ ಯಾತ್ರಿಕರು ನೆರೆದಿದ್ದರು. ಪೋಪರ ರಾಯಭಾರಿಯಾಗಿ ಬಂದಿದ್ದ ಬಗ್‌ಲೆಂಡಿನ ಕಾರ್ಡಿನಲ್ ವಿಲಿಯಂ ಕಾನ್‌ವೇ ಪೋಪರ ಪರವಾಗಿ ಥಾಮಸನನ್ನು 'ಭಾರತದ ಆದಿ ಸಂತ' ಎಂದು ಸಾರಿದರು.

ಸಂತ ಫ್ರಾನ್ಸಿಸ್ ಝೇವಿಯರ್

'ಪೂರ್ವದ ರೋಮ್' ಎನಿಸಿಕೊಳ್ಳುವ ಪವಿತ್ರ ಕ್ರೈಸ್ತ ಕ್ಷೇತ್ರ ಗೋವ ಪ್ರದೇಶ. ಶ್ರೇಷ್ಠ ಕ್ರೈಸ್ತ ಧರ್ಮೋಪದೇಶಕನೆಂದು ಹೆಸರು ಪಡೆದಿರುವ ಸಂತ ಝೇವಿಯರನ ಸಂರಕ್ಷಿತ ಶರೀರ ಗೋವೆಯ ಬಾಮ್ ಜೀಸಸ್ ಕ್ರೈಸ್ತ ಆರಾಧನಾಮಂದಿರದಲ್ಲಿರುವುದು ಇದಕ್ಕೆ ಕಾರಣ. ಹನ್ನೆರಡು ವರ್ಷಕ್ಕೊಂದು ಬಾರಿ ಇದನ್ನು ಸಾರ್ವಜನಿಕ ದರ್ಶನಕ್ಕೆ ಇಡುವ ಪದ್ಧತಿ ಇದೆ. ಇದನ್ನು ನೋಡಲು ಜನ ಸಹಸ್ರೋಪಸಹಸ್ರ ಸಂಖ್ಯೆಯಲ್ಲಿ ಗೋವೆಯಲ್ಲಿ ನೆರೆಯುತ್ತಾರೆ.

ಝೇವಿಯರ್, 1542 ಮೇ 6ರಂದು, ಆಗ ಪೋರ್ಚುಗೀಸರ ಅಧೀನದಲ್ಲಿದ್ದ ಗೋವೆಯಲ್ಲಿ ಬಂದಿಳಿದ. ಅಲ್ಲಿನ ಪೋರ್ಚುಗೀಸರ ಮತ್ತು ಅವರ ನೌಕರವರ್ಗದವರ ಕಲ್ಯಾಣಕ್ಕಾಗಿ ಐದು ತಿಂಗಳಕಾಲ ಅವಿರತವಾಗಿ ದುಡಿದ. ಆಸ್ಪತ್ರೆ, ಸೆರೆಮನೆಗಳಿಗೆ ಭೇಟಿ ಕೊಡುತ್ತಿದ್ದ. ಮಕ್ಕಳನ್ನು, ಕೆಲಸಗಾರರನ್ನು 'ಗುಲಾಮ'ರನ್ನು ಕಲೆಹಾಕಿ, ಕ್ರೈಸ್ತ ಧರ್ಮದಲ್ಲಿ ಅವರಿಗೆ ಶ್ರದ್ಧೆ ಮೂಡುವಂತೆ ಉಪದೇಶಿಸುತ್ತಿದ್ದ.

ಕನ್ಯಾಕುಮಾರಿಯ ಬಳಿಯ ಕರಾವಳಿಯಲ್ಲಿ 'ಪರವ'ರೆಂಬ ಬೆಸ್ತರ ಮಧ್ಯೆ ಎರಡು ವರ್ಷ ಜೀವನ ನಡೆಸಿ, ಅಲ್ಲಿ ಸಾವಿರಾರು ಜನರಿಗೆ ಕ್ರೈಸ್ತ ಧರ್ಮ ದೀಕ್ಷೆ ಕೊಟ್ಟ. ರೋಗಿಗಳ ಶುಶ್ರೂಷೆ, ಹಳ್ಳಿಯವರ ಜಗಳಗಳ ಪರಿಹಾರ –ಹೀಗೆ ಝೇವಿಯರ್ ಜನರ ಏಳಿಗೆಗೆ ದುಡಿದ. 1544ರ ವರೆಗೆ ಈ ಕರಾವಳಿ ಪ್ರದೇಶದಲ್ಲಿದ್ದು, ಅನಂತರ ಕೊಚ್ಚಿಗೆ ತೆರಳಿದ. ಅಲ್ಲಿಂದ ಮದರಾಸಿನ ಸಂತ ಥಾಮಸ್ ಕ್ಷೇತ್ರವನ್ನು (ಸಾನ್ ಥೋಮ್) ಸಂದರ್ಶಿಸಿದ.

ಚೀನದಲ್ಲಿ ಕ್ರೈಸ್ತಧರ್ಮ ಪ್ರಚಾರ ಕೈಗೊಳ್ಳಬೇಕೆಂದು ಹೋಗುತ್ತಿದ್ದಾಗ 1552 ಡಿಸೆಂಬರ್ 3ರಂದು ದಾರಿಯಲ್ಲಿ ಝೇವಿಯರ್ ಕಾಲವಾದ. ಅವನ ದೇಹವನ್ನು ಮಲಕ್ಕಾ ಸಮಾಧಿಯಿಂದ ಗೋವೆಗೆ ಕಳುಹಿಸಲಾಯಿತು.

ಇಲ್ಲಿ ಪ್ರತಿ ಡಿಸೆಂಬರ್ 3ರಂದು ಅವನ ಹೆಸರಿನಲ್ಲಿ ಹಬ್ಬವನ್ನು ಆಚರಿಸುತ್ತಾರೆ.

ಗೋವೆಯಲ್ಲಿರುವ ಬಾಮ್ ಜೀಸಸ್ ಆರಾಧನಾ ಮಂದಿರವನ್ನು, ರೋಮಿನ ಪೋಪರು ಒಂದು ಚಿಕ್ಕ ಬ್ಯಾಸಿಲಿಕ –ರೋಮಿನ ಕ್ರೈಸ್ತ ಆರಾಧನಾ ಮಂದಿರಗಳನ್ನು ಹೋಲುವ ಚಿಕ್ಕ ಆರಾಧನಾ ಮಂದಿರ– ಎಂದು ಸಾರಿದ್ದಾರೆ. ಇಲ್ಲಿನ ಝೇವಿಯರ್‌ನ ಸಮಾಧಿ ಅತಿ ಮನೋಹರ ಕೆತ್ತನೆ ಕೆಲಸದಿಂದ ಕೂಡಿದೆ.

ಸಂಸ್ಕೃತ ಭಾಷೆ, ಸಾಹಿತ್ಯ

ಭಾರತ ದೇಶದ ಸಂಸ್ಕೃತಿಯ ಹಿರಿಮೆಯನ್ನು ಪ್ರಪಂಚದಾದ್ಯಂತ ಬಿತ್ತರಿಸಿದ ಮುಖ್ಯ ಭಾಷೆ, ಸಂಸ್ಕೃತ. ನಾಲ್ಕು ಸಾವಿರ ವರ್ಷಗಳಷ್ಟು ಪ್ರಾಚೀನವಾದ ಋಗ್ವೇದದಲ್ಲಿ ಈ ಭಾಷೆಯ ಸಹಜ ಸೌಂದರ್ಯವನ್ನು ವಿಪುಲ ಸಂಪತ್ತನ್ನು ಕಾಣಬಹುದು. ಯುರೋಪಿನ ಗ್ರೀಕ್, ಲ್ಯಾಟಿನ್ ಮುಂತಾದ ಭಾಷೆಗಳೊಡನೆ ಈ ಭಾಷೆಗೆ ನಿಕಟವಾದ ಸಂಬಂಧವಿದೆ. ಆದ್ದರಿಂದ ಇದನ್ನು 'ಭಾರತ ಯುರೋಪ್ಯ' ವರ್ಗದ ಭಾಷೆ ಎಂದು ಪರಿಗಣಿಸುತ್ತಾರೆ.

ಭಾರತೀಯ ನಾಗರಿಕತೆಯ ಶ್ರೇಷ್ಠ ಕುರುಹು ಎನ್ನಬಹುದಾದ ಎಲ್ಲವೂ ಸಂಸ್ಕೃತ ಸಾಹಿತ್ಯದಲ್ಲಿದೆ. ಕ್ರಿ. ಪೂ. ಎರಡು ಸಾವಿರದಿಂದ 5ನೆಯ ಶತಮಾನದವರೆಗಿನ ಅವಧಿಯಲ್ಲಿ ಬೆಳೆದು ಉಳಿದಿರುವ ವೈದಿಕ ಸಾಹಿತ್ಯ ಪ್ರಾಚೀನ ಕಾಲದ ಭಾರತೀಯ ಜನಜೀವನ ಮತ್ತು ಸಂಸ್ಕೃತಿಯ ತಿಳಿವಿಗೆ ಮೂಲ ಆಕರ. ಅಪಾರವಾಗಿ ಬೆಳೆದ ವೈದಿಕ ಸಾಹಿತ್ಯವನ್ನು ನೆನಪಿನಲ್ಲಿಟ್ಟುಕೊಳ್ಳುವ ಸಾಧನವಾಗಿ ಸೂತ್ರರೂಪ ಸಾಹಿತ್ಯದ ಉದಯವಾಯಿತು. ಇಂಥ ಸೂತ್ರರೂಪದ ಸಾಹಿತ್ಯವು ಮತ್ತಾವ ಭಾಷೆಯಲ್ಲಿಯೂ ಕಾಣಸಿಗುವುದಿಲ್ಲ. ಇದು ಸಂಸ್ಕೃತ ಭಾಷೆಗೆ ಮಾತ್ರ ಸೀಮಿತವಾಗಿರುವ ವೈಶಿಷ್ಟ್ಯ. ಪಾಣಿನಿ ವಿರಚಿತ ವ್ಯಾಕರಣ ಗ್ರಂಥ ಈ ಸೂತ್ರ ಸಾಹಿತ್ಯದ ರೂಪರೇಷೆಗೆ ಶ್ರೇಷ್ಠ ದೃಷ್ಟಾಂತ.

ಸಂಸ್ಕೃತ ಕಾವ್ಯ ಸಾಹಿತ್ಯದಲ್ಲಿ ದೃಶ್ಯ ಕಾವ್ಯ ಮತ್ತು ಶ್ರವ್ಯ ಕಾವ್ಯ ಎಂದು ಎರಡು ವಿಧ :

ಕಣ್ಣಿನಿಂದ ನೋಡಿಯೂ ಅನುಭವಿಸಬಹುದಾದ ದೃಶ್ಯ ಕಾವ್ಯ ಸಾಧಾರಣವಾಗಿ 'ನಾಟಕ' ಎಂದು ಕರೆಯಲ್ಪಟ್ಟಿದೆ. ಕಿವಿಯಲ್ಲಿ ಕೇಳಿ ಅರಿಯುವಂತಹ ಶ್ರವ್ಯ ಕಾವ್ಯದಲ್ಲಿ ಪದ್ಯ, ಗದ್ಯ ಮತ್ತು ಪದ್ಯಗದ್ಯ ಮಿಶ್ರಣರೂಪದ ಚಂಪೂ ಎಂಬ ಮೂರು ವಿಧಗಳಿವೆ. ಮಹಾ ಕಾವ್ಯ, ಖಂಡಕಾವ್ಯ ಮತ್ತು ಪದ್ಯಕಾವ್ಯದ ಪ್ರಭೇದಗಳು.

ವಾಲ್ಮೀಕಿ ವಿರಚಿತ 'ರಾಮಾಯಣ' ಮತ್ತು ವ್ಯಾಸ ವಿರಚಿತ 'ಮಹಾಭಾರತ' ಸಂಸ್ಕೃತದ ಪ್ರಾಚೀನ ಕೃತಿಗಳು. 'ರಾಮಾಯಣ'ವು ಆದಿಕಾವ್ಯವೆಂದು ಪರಿಗಣಿಸಲ್ಪಟ್ಟಿದೆ. ಸುಪ್ರಸಿದ್ಧ ಮಹಾಕವಿ ಕಾಳಿದಾಸ (ಕಾಳಿದಾಸ)ನ ಕಾಲದಲ್ಲಿ ಭಾಸ, ಕವಿಪುತ್ರ ಮತ್ತು ಸೌಮಿಲ್ಲ ಎಂಬ ಹೆಸರಿನ ಕವಿಗಳು ಹೆಸರಾಂತ ನಾಟಕಕಾರರಾಗಿ ಸನ್ಮಾನಿತರಾಗಿದ್ದರು. ಈ ಕವಿಗಳು ಕಾಲಿದಾಸನಿಗಿಂತ ಹಿಂದಿನವರೆಂಬುದು ಖಚಿತ. ಆದರೆ ಕಾಲಿದಾಸನ ಕಾಲದ ವಿಷಯವಾಗಿ ವಾದವಿವಾದಗಳಿರುವುದರಿಂದ ಇವನಿಗಿಂತ ಹಿಂದಿನ ಕವಿಗಳ ಕಾಲದ ವಿಷಯವೂ ಚರ್ಚಾಸ್ಪದ ವಸ್ತುವಾಗಿದೆ. ಕಾಳಿದಾಸನ ಕಾಲದ ಗರಿಷ್ಠ ಮಿತಿ ಕ್ರಿ. ಪೂ. 1ನೆಯ ಶತಮಾನವಾದ್ದರಿಂದ ಭಾಸನು ಈ ಕಾಲಕ್ಕಿಂತ ಪೂರ್ವದವನೆಂದು ತಿಳಿಯಬಹುದು. ಭಾಸನ ಪಾತ್ರಗಳಲ್ಲಿ ಮಾನವೀಯ ಗುಣಗಳನ್ನು ಕಾಣುತ್ತೇವೆ. ಸಹಜರೀತಿಯಿಂದಲೇ ಹಾಸ್ಯವನ್ನು ಮೂಡಿಸುವ ವಿಧಾನ ಇವನಿಗೆ 'ಭಾಸೋಹಾಸಃ' ಎಂಬ ಪ್ರಶಂಸೆಯನ್ನು ತಂದುಕೊಟ್ಟಿದೆ. ನಾಟಕಕಾರನಾಗಿ ಭಾಸ ಕವಿ ಅಮರನಾಗಿದ್ದಾನೆ.

ಭಾರತದ ಕವಿಗಳಲ್ಲಿ ಅಗ್ರೇಸರ ಕಾಳಿದಾಸ. 'ಮಹಾಕವಿ, ಕವಿಕುಲ ಗುರು' ಎಂಬ ಪ್ರಶಂಸೆಗೆ ಪಾತ್ರನಾಗಿದ್ದಾನೆ. 'ಅಭಿಜ್ಞಾನ ಶಾಕುಂತಲ' ಈತನ ಮೇರುಕೃತಿ.

'ಬುದ್ಧಚರಿತೆ' ಮತ್ತು 'ಸೌಂದರನಂದ' ಎಂಬುವು ಅಶ್ವಘೋಷನ ಎರಡು ಮಹಾ ಕಾವ್ಯಗಳು. ಅಶ್ವಘೋಷ ಉತ್ತಮ ನಾಟಕಕಾರನೂ ಆಗಿದ್ದ.

[illegible] ಚಿತ್ರಣವಿರುವ ಕೃತಿ ಇದು.

[illegible] ಈ ನಾಟಕವನ್ನು 'ಗಂಡು ನಾಟಕ' ಎಂದು ಕರೆಯುವುದು ರೂಢಿ.

ಸಮ್ರಾಟ ಹರ್ಷ 'ಪ್ರಿಯದರ್ಶಿಕಾ', 'ರತ್ನಾವಳೀ' ಮತ್ತು 'ನಾಗಾನಂದ' [illegible] ರಚಿಸಿದ್ದಾನೆ.

[illegible] ಕೊಟ್ಟ ಯಶಸ್ಸು ಬಾಣನದು. ಇವನ ಗದ್ಯ ಶೈಲಿಯ ಹಿರಿಮೆಯಿಂದಾಗಿ [illegible] 'ಸುರೆಯ ಮಾದಕತೆ ಈ ಕೃತಿಯಲ್ಲಿದೆ'—ಎಂಬ ಅರ್ಥವೂ ಈ ಉಕ್ತಿಗಿದೆ. ಇವನ ಗದ್ಯಶೈಲಿಯು ಇವನ ಮುಂದಿನ ಕವಿಗಳಿಗೆ ಮಾದರಿಯಾಯಿತು.

'ಶೃಂಗಾರ ಶತಕ', 'ನೀತಿಶತಕ' ಮತ್ತು 'ವೈರಾಗ್ಯಶತಕ' ಕೃತಿಗಳ ಕರ್ತೃ ಭರ್ತೃಹರಿ. ಮನುಷ್ಯನ ಜೀವನದಲ್ಲಿ ಶೃಂಗಾರದ ಪ್ರಭಾವ, ನೀತಿಯ ಅವಶ್ಯತೆ ಮತ್ತು ವೈರಾಗ್ಯದ ಪ್ರಯೋಜನಗಳನ್ನು ಕಾವ್ಯ [illegible] ಅಚ್ಚುಮೆಚ್ಚಾಗಿವೆ.

[illegible] ದ್ದಾರೆ.

[illegible] 'ಮಹಾವೀರ ಚರಿತೆ' ಮತ್ತು 'ಉತ್ತರರಾಮ ಚರಿತೆ.' ಇವುಗಳಲ್ಲಿ 'ಉತ್ತರ [illegible] ಅಭಿಮತ.

ಸಂಸ್ಕೃತ ಕವಿಗಳ ಅಗ್ರಪಂಕ್ತಿಯಲ್ಲಿ ಸ್ಥಾನ ಪಡೆದ ಕನ್ನಡ ನಾಡಿನ [illegible] ಬಹುದು. ವೈರಾಗ್ಯಭಾವವನ್ನೂ ಸರಾಗವಾಗಿ ಹೃದಯಸ್ಪರ್ಶಿಯಾಗಿ ಚಿತ್ರೀಕರಿಸುವುದು ಈ ಕವಿಯ ವೈಶಿಷ್ಟ್ಯ.

ಈಗ ದೊರೆತಿರುವ ಚಂಪೂ ಕೃತಿಗಳು 9ನೆಯ ಶತಮಾನದಿಂದ ಇತ್ತೀಚಿನವು. [illegible] ಪ್ರಸಿದ್ಧವಿದ್ದುವೆಂದು ಖಚಿತವಾಗಿ ಹೇಳಲು ಆಧಾರವಿದೆ. ಸೋಮದೇವ [illegible] ಕೃತಿಗಳು.

ಕಾವ್ಯ ಸಾಹಿತ್ಯವಲ್ಲದೆ ಸಂಸ್ಕೃತದಲ್ಲಿ ಆಧ್ಯಾತ್ಮಿಕ ಹಾಗೂ ಲೌಕಿಕ [illegible] ಗಳು ಪ್ರಸಿದ್ಧವಿವೆ. ಲೌಕಿಕ ವಿಷಯದಲ್ಲಿ ರಾಜನೀತಿ, ಕಾವ್ಯಲಕ್ಷಣ, ವೈದ್ಯ, [illegible] ಹೇರಳವಾಗಿ ದೊರೆಯುತ್ತವೆ.

[illegible]

ನೋಡಿ: ಅಥರ್ವವೇದ ; [illegible] ; ಸಾಮವೇದ
ಅಶ್ವಘೋಷ ; ಆನಂದವರ್ಧನ ; ಕಾಳಿದಾಸ ; ಬಾಣ ; ಭವಭೂತಿ ; ಭಾಸ ; 'ಮಹಾಭಾರತ' ; 'ರಾಮಾಯಣ' ; ವಾಲ್ಮೀಕಿ ; ವ್ಯಾಸ ; 'ಶಾಕುಂತಲ' —ಸಂಪುಟ ೫

ಸಕ್ಲತ್‌ವಾಲಾ

[illegible] ಕೊಂಡಿಯಂತಿದ್ದವರು ಷಾಪುರ್‌ಜಿ ಸಕ್ಲತ್‌ವಾಲಾ.

[illegible] 1874 ಮಾರ್ಚ್ 28. [illegible] ಸೇವಾಸಕ್ತರು. ಕಳೆದ ಶತಮಾನದ ಕೊನೆಯ ದಶಕದಲ್ಲಿ ಪ್ಲೇಗ್ [illegible] ಮಾಡಿದರು.

[illegible] ಕಬ್ಬಿಣದ ಅದಿರು ನಿಕ್ಷೇಪಗಳ ಸರ್ವೆ ನಡೆಸಲು ಭಾರತದ ಅದ್ಯಂತ ಸುತ್ತಾಡಿದರು.

[illegible]

ಶಾತಾ ಸಂಸ್ಥೆಯವರು ಇವರನ್ನು 1905ರಲ್ಲಿ ಇಂಗ್ಲೆಂಡಿಗೆ ಕಳುಹಿಸಿದ್ದರಿಂದ. ಭಾರತವನ್ನು ಬಿಟ್ಟು ಇರಬೇಕಾಯಿತು.

[illegible] 19..ರಲ್ಲಿ ಕಾರ್ಮಿಕವರ್ಗದ ರಾಜಕೀಯದಲ್ಲಿ ಭಾಗವಹಿಸಿದರು. 1917ರಲ್ಲಿ ಜರಗಿದ ರಷ್ಯದ ಮಹಾಕ್ರಾಂತಿಯಿಂದ ಸಕ್ಲತ್‌ವಾಲಾ ಪ್ರಭಾವಿತರಾದರು. [illegible] ಮೆಂಟಿಗೆ ಚುನಾಯಿತರಾದರು. ಕಾರ್ಮಿಕರ ಹಿತಕ್ಕಾಗಿ ಹೋರಾಡಿದರು; ಭಾರತದ ಸ್ವಾತಂತ್ರ್ಯ ಹೋರಾಟಗಾರರ ಬೇಡಿಕೆಗಳನ್ನು ಅಲ್ಲಿನ ಪಾರ್ಲಿಮೆಂಟ್ ಮುಂದಿರಿಸಿ ವಾದಿಸಿದರು,

[illegible] ಅಭೂತಪೂರ್ವ ಸ್ವಾಗತ ನೀಡಿತು. ಕಾರ್ಮಿಕರಲ್ಲಿ ಒಗ್ಗಟ್ಟು, ಸ್ವಾತಂತ್ರ್ಯ [illegible] ದಂತೆ ಬ್ರಿಟಿಷ್ ಸರಕಾರ ಅದನ್ನು ರದ್ದುಗೊಳಿಸಿತು.

[illegible] 1936 [illegible] 16ರಂದು ಇಂಗ್ಲೆಂಡಿನಲ್ಲಿ ಅವರು ನಿಧನರಾದರು.

"[illegible] ಕೊಡಬಲ್ಲುದು" ಎಂಬುದು ಅವರ ಚರಮವಾಕ್ಯವಾಗಿತ್ತು.

ಸಚ್ಚಿದಾನಂದ ಸಿನ್ಹ

'[illegible] ಮನಸ್ಸು. ಎಲ್ಲಕ್ಕಿಂತ ಹಿರಿದು ಇವರ ಹೃದಯ.'

—[illegible] ಸಿನ್ಹ ತಮ್ಮ ಕ್ಷೇತ್ರದ ಕಿರಿಯರಿಗೆ ದಾರಿದೀಪವಾಗಿದ್ದರು.

[illegible] ಕೌನ್ಸಿಲಿನ ಸದಸ್ಯರೂ ಡೆಪ್ಯುಟಿ ಸ್ಪೀಕರರೂ ಆಗಿದ್ದರು. ಅನಂತರ ಬಿಹಾರ್ ರಾಜ್ಯದ ಗವರ್ನರರ ಕಾರ್ಯ ಸಮಿತಿಯ ಸದಸ್ಯರಾದರು. ಅವರು ಅಂಥ ಸ್ಥಾನಕ್ಕೆ ನಿಯೋಜಿತರಾದ ಪ್ರಥಮ ಭಾರತೀಯ. ಪಟ್ನಾ ವಿಶ್ವವಿದ್ಯಾಲಯದ ವೈಸ್‌ಛಾನ್ಸಲರ್ ಆಗಿಯೂ ಸೇವೆ ಸಲ್ಲಿಸಿದರು.



ಸ್ವತಂತ್ರ ಪ್ರವೃತ್ತಿ : ಸಿನ್ಹ

ಕಾಲು ಶತಮಾನದಷ್ಟು ಕಾಲ ವಕೀಲರಾಗಿ, ಸ್ವಾತಂತ್ರ್ಯ ಪೂರ್ವ ಕಾಂಗ್ರೆಸ್ಸಿನ ಸದಸ್ಯರಾಗಿ ಕೆಲಸ ಮಾಡಿದರೂ ಇವರ ಪ್ರಥಮ ಒಲವು ಪತ್ರಿಕೋದ್ಯಮದ ಕಡೆಗೆ. 1899ರಲ್ಲಿ 'ಕಾಯಸ್ಥ ಸಮಾಚಾರ್' ಪತ್ರಿಕೆಯನ್ನು [illegible] ಅನಂತರ ಇದು 'ಲೀಡರ್' ಪತ್ರಿಕೆಯಲ್ಲಿ ಸೇರ್ಪಡೆಯಾಯಿತು.

ಸಚ್ಚಿದಾನಂದರ ಲೇಖನಗಳು ಘನ ಗಂಭೀರ; ಭಾಷಣಗಳು ಲಘು [illegible] ಇವರು ಸ್ವತಂತ್ರರಾದರು.

ಸಜ್ಜಾದ್‌ಜಾಹೀರ್

"[illegible]"

[illegible] ಫೈಜ್ ಅಹ್ಮದ್ 'ಫೈಜ್'.


[illegible] ನಾಲ್ಕನೆಯ ದಶಕದಲ್ಲಿ ಇಂಗ್ಲೆಂಡಿನಲ್ಲಿ ವಿದ್ಯಾರ್ಥಿಯಾಗಿದ್ದಾಗ ಇವರು [illegible] ಪ್ರಗತಿಶೀಲ ಲೇಖಕರ ಸಂಘವನ್ನು ಸ್ಥಾಪಿಸಲು ದುಡಿದರು. ಈ ಕಾರ್ಯ[illegible] ಪಡೆದರು.

ಅವರ ಸಂಪಾದಕತ್ವದಲ್ಲಿ ಪ್ರಕಟವಾದ 'ಅಂಗಾರೆ' ಎಂಬ ಸಣ್ಣಕತೆಗಳ ಸಂಕಲನವು ಬ್ರಿಟಿಷ್ ಸರಕಾರದಿಂದ ನಿಷೇಧಿಸಲ್ಪಟ್ಟಿತು.

[illegible] ತೆರಳಿ ಅಲ್ಲಿ ಕಮ್ಯೂನಿಸ್ಟ್ ಪಕ್ಷದ ನೇತೃತ್ವ ವಹಿಸಿದರು. ಸರಕಾರವನ್ನು ಉರುಳಿಸಲು [illegible] ಭಾರತಕ್ಕೆ ಮರಳಿ ಸಾಹಿತ್ಯ ಚಟುವಟಿಕೆಗಳಲ್ಲಿ ತೊಡಗಿದರು.

[illegible] ರಾಜಧಾನಿಯಾದ ಅಲ್ಮ ಅತಾಕ್ಕೆ ತೆರಳಿದ್ದಾಗ ಅಲ್ಲಿ 1973 ಸೆಪ್ಟೆಂಬರ್ 13ರಂದು ಹೃದಯಸ್ತಂಭನದಿಂದ ನಿಧನರಾದರು.

ಕನ್ನಡದ ಪ್ರಗತಿಶೀಲ ಲೇಖಕರ ಸಂಘಟನೆಯೊಡನೆ ಜಾಹೀರರಿಗೆ ಸಂಬಂಧವಿದ್ದಿತು. 1944ರಲ್ಲಿ ರಬಕವಿ ಸಾಹಿತ್ಯ ಸಮ್ಮೇಳನಕ್ಕೆ ಮುನ್ನ ಧಾರವಾಡದಲ್ಲಿ ಜರಗಿದ ಕನ್ನಡ ಪ್ರಗತಿಶೀಲ ಲೇಖಕರ



ಪ್ರಗತಿಶೀಲತೆ : ಜಾಹೀರ್

ಸಮ್ಮೇಳನಕ್ಕೆ ಕಳುಹಿಸಿದ ದೀರ್ಘ ಸಂದೇಶದಲ್ಲಿ, "ಪ್ರಗತಿಶೀಲ ಲೇಖಕರ ಚಳುವಳಿಯು ಸಂಕುಚಿತ ದೃಷ್ಟಿ ತಳೆಯಬಾರದು ; ನೂರರಲ್ಲಿ ತೊಂಬತ್ತರಷ್ಟು ಬರೆಹಗಾರರನ್ನು ಪ್ರಗತಿಶೀಲ ಲೇಖಕರ ಸಂಘ ಒಳಗೊಳ್ಳಬೇಕು." ಎಂದು ಆಶಯ ವ್ಯಕ್ತಪಡಿಸಿದರು.

ಕಿರುಕಾದಂಬರಿ, ಸಣ್ಣಕಥೆ, ಪ್ರಬಂಧ, ಉರ್ದು ಪ್ರಗತಿಶೀಲ ಲೇಖಕರ ಚಳುವಳಿಯ ಚರಿತ್ರೆ ಮುಂತಾದುವನ್ನು ಸಜ್ಜಾದ್ ಜಾಹೀರ್ ರಚಿಸಿ [illegible] ಕವಯಿತ್ರಿ.

ಸಟ್ಲೆಜ್

ಪಂಜಾಬಿನ ಪಂಚನದಿಗಳಲ್ಲಿ ಸಟ್ಲೆಜ್ ಒಂದು. ವೇದಕಾಲದಲ್ಲಿ ಇದನ್ನು 'ಸುತುದ್ರಿ' ಎಂದು ಕರೆಯುತ್ತಿದ್ದರು. ಋಗ್ವೇದದ 'ನದೀಸ್ತುತಿ'ಯಲ್ಲಿ ಇದರ ಹೆಸರು ಬರುತ್ತದೆ. ಪುರಾಣಗಳಲ್ಲಿ ಈ ನದಿಯನ್ನು 'ಶತದ್ರು' ಎಂದು ಹೆಸರಿಸಿದೆ. 'ಶತದ್ರು' ಎಂದರೆ ನೂರು ಕವಲುಗಳು. ಈ ಬಗೆಗಿನ ಮಹಾಭಾರತದಲ್ಲಿ ಬರುವ ಕಥೆ ಹೀಗಿದೆ :

ಹೈಮವತಿ ಎಂಬುದು ಒಂದು ಪ್ರಾಚೀನ ನದಿ. ಪುತ್ರಶೋಕದಿಂದ ವಸಿಷ್ಠ ಆತ್ಮಹತ್ಯೆ ಮಾಡಿಕೊಳ್ಳಲು ಈ ನದಿಯಲ್ಲಿ ಧುಮುಕಿದಾಗ, ಬ್ರಹ್ಮಹತ್ಯಾ ಪಾಪದ ಭಯದಿಂದ ನದಿ ನೂರಾರು ಭಾಗಗಳಾಯಿತು ; ಅಂದಿನಿಂದ ಹೈಮವತಿ, ಶತದ್ರು ಆಯಿತು.

ಹಿಮಾಲಯದ ಮಾನಸ ಸರೋವರದ ಪಶ್ಚಿಮಕ್ಕೆ ಸುಮಾರು 15,200 ಅಡಿಗಳಷ್ಟು ಎತ್ತರ ಪ್ರದೇಶದಲ್ಲಿ ಸಟ್ಲೆಜ್ ನದಿಯ ಉಗಮ. ಇಲ್ಲಿಂದ ವಾಯುವ್ಯ ದಿಕ್ಕಿಗೆ ಹರಿದು ಕೈಲಾಸ ಪರ್ವತದ ದಕ್ಷಿಣದ ಇಳಿಜಾರಿನಲ್ಲಿ [illegible] ಪ್ರದೇಶದ ಮೂಲಕ ಭಾರತವನ್ನು ಹೊಕ್ಕು ಅನಂತರ ಪಂಜಾಬಿನಲ್ಲಿ ಬಿಯಾಸ್ ನದಿಯನ್ನು ಕೂಡುತ್ತದೆ. ಬಳಿಕ ಪಾಕಿಸ್ತಾನದಲ್ಲಿ [illegible] ಲೀನವಾಗುತ್ತದೆ. ಸುಮಾರು 900 ಮೈಲು ಉದ್ದವಿರುವ ಈ ನದಿ 65 ಮೈಲುಗಳಷ್ಟು ದೂರ ಭಾರತ ಮತ್ತು ಪಾಕಿಸ್ತಾನಗಳ ಗಡಿಯಾಗಿದೆ.

[illegible] ಯನ್ನು ಕಲ್ಪಿಸಲು ಭಾಕ್ರಾ ನಂಗಲ್ ಯೋಜನೆಯನ್ನು ರೂಪಿಸಲಾಯಿತು.

ನೋಡಿ : ಭಾಕ್ರಾ ನಂಗಲ್ ; ಸಿಂಧು

ಸತ್ಯಜಿತ್ ರೇ

ಭಾರತೀಯ ಚಲಚ್ಚಿತ್ರ ನಿರ್ದೇಶನದಲ್ಲಿ ಹೊಸ ಹಾದಿ ತುಳಿದವರು ಸತ್ಯಜಿತ್ ರೇ.

ಸತ್ಯಜಿತ್ ರೇ ಜನನ 1921 ಮೇ 2ರಂದು. ಕಲ್ಕತ್ತಾ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಪದವೀಧರರಾದರು. ಅನಂತರ ಶಾಂತಿನಿಕೇತನದ 'ಕಲಾಭವನ'ದಲ್ಲಿ ನಂದಲಾಲ್ ಬಸು ಅವರ ವಿದ್ಯಾರ್ಥಿಯಾಗಿದ್ದರು. [illegible] ಸೇರಿಕೊಂಡರು.



ಹೊಸಹಾದಿ : ಸತ್ಯಜಿತ್ ರೇ

1952ರಲ್ಲಿ ತಮ್ಮ ಮೊದಲ ಚಿತ್ರ 'ಪಥೇರ್ ಪಾಂಚಾಲಿ' ('ಹಾದಿಯ ಹಾಡು') ತಯಾರಿಸಲು ರೇ ಆರಂಭಿಸಿದರು. ಅದು ಮುಗಿದದ್ದು 1955ರಲ್ಲಿ. ಅನಂತರ ಅವರು ತಯಾರಿಸಿರುವ ಚಿತ್ರಗಳು 'ಅಪರಾ [illegible] 'ಪರಸ್ ಪಥರ್', 'ಜಲ್ ಸಾಗರ್', 'ದೇವಿ', 'ತೀನ್ ಕನ್ಯಾ', 'ಕಾಂಚನ ಜಂಗಾ', 'ಮಹಾ ನಗರ್', 'ಚಾರುಲತಾ', 'ಕಾ ಪುರುಷ್ ಮಹಾ ಪುರುಷ್', 'ನಾಯಕ್', 'ಚಿರಿಯಾಖಾನಾ', 'ಅರಣ್ಯೇರ್ ದಿನ ರಾತ್ರಿ', 'ಸೀಮಾಬದ್ಧ', 'ಪ್ರತಿದ್ವಂದಿ', 'ಅಸಾನಿ ಸಂಕೇತ್' ಇತ್ಯಾದಿ. ಅವರ ಚಿತ್ರವೆಂದರೆ ಒಂದು ಗೀತೆಯಂತೆ. ಚೊಕ್ಕ ಶೈಲಿ ಹಾಗು ನಿರೂಪಣೆ. ಮನಮುಟ್ಟುವಂಥ ಸಹಜ ಸನ್ನಿವೇಶಗಳು. ತಮ್ಮ ಚಲಚ್ಚಿತ್ರಗಳಿಗೆ ರೇ ತಾವೇ ಸಂಗೀತ ಒದಗಿಸುತ್ತಾರೆ.

ಸತ್ಯಜಿತ್ ರೇ ಅವರ ಚಿತ್ರಗಳಿಗೆ ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಪ್ರಶಸ್ತಿಗಳು ಸಂದಿವೆ. ಅನೇಕ ಬಾರಿ ರಾಷ್ಟ್ರಾಧ್ಯಕ್ಷರ ಚಿನ್ನದ ಪದಕ ದೊರೆತಿದೆ. 1959ರಲ್ಲಿ ಸಂಗೀತ ನಾಟಕ ಅಕಾದೆಮಿ ಅವರನ್ನು ಆ ವರ್ಷದ ಅತ್ಯುತ್ತಮ ನಿರ್ದೇಶಕ ಎಂದು ಹೆಸರಿಸಿತು. 1958ರಲ್ಲಿ ಪದ್ಮಶ್ರೀ ಹಾಗೂ 1965ರಲ್ಲಿ ಪದ್ಮಭೂಷಣ ಪ್ರಶಸ್ತಿಗಳನ್ನಿತ್ತು ಭಾರತ ಸರಕಾರ ಅವರನ್ನು ಗೌರವಿಸಿತು. ಅವರ ಮೊತ್ತಮೊದಲ ಚಿತ್ರ 'ಪಥೇರ್ [illegible] 'ಅಪರಾಜಿತೊ' ವೆನಿಸ್ ಚಲಚ್ಚಿತ್ರೋತ್ಸವದಲ್ಲಿ ಚಿನ್ನದ ಪ್ರಶಸ್ತಿ ಗಳಿಸಿತು. ಅಂತರರಾಷ್ಟ್ರೀಯ ತಿಳಿವಳಿಕೆ ಹೆಚ್ಚಿಸುವ ಅಮೆರಿಕೇತರ [illegible] ಅವರ ಚಿತ್ರಕ್ಕೆ ಸಂದಿತು. 1965ರ ಬರ್ಲಿನ್ ಚಲಚ್ಚಿತ್ರೋತ್ಸವದಲ್ಲಿ 'ಚಾರುಲತಾ' ಚಿತ್ರದ ಉತ್ತಮ ನಿರ್ದೇಶನಕ್ಕೆ ಪ್ರಥಮ ಬಹುಮಾನ ದೊರೆಯಿತು. ಮರುವರ್ಷ ಬರ್ಲಿನಿನಲ್ಲಿ ಜರಗಿದ ಅಂತರರಾಷ್ಟ್ರೀಯ [illegible] ಮ್ಯಾಗ್‌ಸೇಸೇ ಪ್ರಶಸ್ತಿ ದೊರೆಯಿತು.

ಸತ್ಯಜಿತ್ ರೇ ಅವರು ಜಗತ್ತಿನ ಪ್ರಮುಖ ಚಲಚ್ಚಿತ್ರ ನಿರ್ದೇಶಕರಲ್ಲಿ ಒಬ್ಬರೆಂದು ಪರಿಗಣಿಸಲ್ಪಟ್ಟಿದ್ದಾರೆ.

ಸತ್ಯಾಗ್ರಹ

ಸತ್ಯಕ್ಕಾಗಿ ಆಗ್ರಹ ತೊಡುವುದು —ಸತ್ಯಾಗ್ರಹ. ಇದು ಭಾರತೀಯ ಸ್ವಾತಂತ್ರ್ಯ ಸಂಗ್ರಾಮದ ಮಹಾನ್ ಅಸ್ತ್ರ. ರಾಜಕೀಯ ಚಳುವಳಿಯಲ್ಲಿ ಈ ರೀತಿಯ ಅಸ್ತ್ರ ಉಪಯೋಗಿಸಲ್ಪಟ್ಟು, ಒಂದು ದೇಶದ ದಾಸ್ಯ ಶೃಂಖಲೆಗಳು ಮುರಿದ ನಿದರ್ಶನ ಬೇರೊಂದಿಲ್ಲ.

ದಕ್ಷಿಣ ಆಫ್ರಿಕದಲ್ಲಿ ಭಾರತೀಯರ ದುಃಸ್ಥಿತಿಯನ್ನು ನಿವಾರಿಸಲು [illegible] ಘಟನೆ' ಎಂದು ಮೊದಲು ಹೆಸರಿಟ್ಟಾಗ ಈ ಆಂದೋಲನದ ನಿಜವಾದ

ಅರ್ಥ ಆ ಪದದಲ್ಲಿ ಅಭಿವ್ಯಕ್ತಗೊಳ್ಳುವುದಿಲ್ಲ ಎಂದು ಅವರಿಗೆ ಅನಿಸಿತು. ಆಗ ಹೊಸ ಪದಕ್ಕಾಗಿ 'ಇಂಡಿಯನ್ ಒಪೀನಿಯನ್' (ಭಾರತೀಯ ಅಭಿಪ್ರಾಯ) ಪತ್ರಿಕೆಯಲ್ಲಿ ಬಹುಮಾನ ಘೋಷಿಸಿದರು. ಓದುಗರು ಹಲವು ಹೆಸರು ಸೂಚಿಸಿದರೆ ಅದಕ್ಕೆ ಬಹುಮಾನ ಕೊಡುವುದಾಗಿ ಪ್ರಕಟಿಸಿದರು. ಆಗ ಮಗನ್‌ಲಾಲ್ ಗಾಂಧಿ 'ಸದಾಗ್ರಹ' ಎಂಬ ಪದ ಸೂಚಿಸಿದರು. ಇದನ್ನೇ ಸ್ವಲ್ಪ ಮಾರ್ಪಡಿಸಿ ಗಾಂಧೀಜಿಯವರು ಸತ್ಯಾಗ್ರಹ ಎಂಬ ಪದ ಚಲಾಯಿಸಿದರು.

'ಸತ್ಯಾಗ್ರಹ' ಎಂದರೆ ಧರ್ಮ ಯುದ್ಧ ರೀತಿ ಎಂದು ಗಾಂಧೀಜಿ ಹೇಳಿದ್ದಾರೆ. ಇಲ್ಲಿ ಯಾವುದೇ ಬಗೆಯ ರಹಸ್ಯವಿಲ್ಲ; ಯಾವುದೇ ಕುತಂತ್ರಗಳಿಗೆ, ಅಸತ್ಯಕ್ಕೆ ಅವಕಾಶವಿಲ್ಲ.

ಗಾಂಧೀಜಿ 1915ರಲ್ಲಿ ಭಾರತಕ್ಕೆ ಬಂದಾಗ ದೇಶ ದಾಸ್ಯದಿಂದ ಬೇಸತ್ತಿತ್ತು. ಅವರು ಭಾರತೀಯ ಸ್ವಾತಂತ್ರ್ಯ ಸಂಗ್ರಾಮದ ನಾಯಕತ್ವ ವಹಿಸಿದಮೇಲೆ 1915–19 ಅವಧಿಯಲ್ಲಿ ಐದು ಸತ್ಯಾಗ್ರಹಗಳು ನಡೆದುವು. ಅನಂತರ ಮತ್ತೆ 1920-29ರ ವರೆಗೆ ಅಹಿಂಸಾತ್ಮಕ ಅಸಹಕಾರದ ರೂಪದಲ್ಲಿ ಸತ್ಯಾಗ್ರಹ ನಡೆಯಿತು. ವೈಯಕ್ತಿಕ ಸತ್ಯಾಗ್ರಹ ಹಾಗೂ 'ಕ್ವಿಟ್ ಇಂಡಿಯಾ' ('ಚಲೇಜಾವ್') ಚಳುವಳಿಗಳು 1941-46 ಅವಧಿಯಲ್ಲಿ ಜರಗಿದುವು.

ಸತ್ಯಾಗ್ರಹ ಕಲ್ಪನೆ ಟಾಲ್‌ಸ್ಟಾಯ್ ಅವರ ಸಾತ್ವಿಕ ಪ್ರತಿಭಟನೆಯ ತತ್ತ್ವದಿಂದ ಸ್ಫೂರ್ತಿಗೊಂಡದ್ದು. ಇದನ್ನೇ ಸತ್ಯ, ಪ್ರೇಮ ಅಥವಾ ಅಹಿಂಸೆಗಳಿಂದ ಹುಟ್ಟಿದ ಬಲ ಎಂದು ಗಾಂಧೀಜೀ ವಿವರಿಸಿದ್ದರು. ಇದು ಆತ್ಮಬಲ ಎಂದರು.

ನೋಡಿ : ಅಸಹಕಾರ ಚಳುವಳಿ; ಗಾಂಧೀಜಿ; ದಂಡಿಯಾತ್ರೆ; 'ಚಲೇಜಾವ್'; ಸ್ವಾತಂತ್ರ್ಯ ಸಂಗ್ರಾಮ

ಸತ್ಯೇಂದ್ರನಾಥ ಬೋಸ್

ಭಾರತದ ಅಗ್ರಗಣ್ಯ ಸೈದ್ಧಾಂತಿಕ ಭೌತವಿಜ್ಞಾನಿ, ಕ್ವಾಂಟಮ್ ಸಂಖ್ಯಾ ವಿಜ್ಞಾನದ ಮೂಲಕರ್ತೃ–ಸತ್ಯೇಂದ್ರನಾಥ ಬೋಸ್.

1894 ಜನವರಿ 1ರಂದು ಕಲ್ಕತ್ತೆಯಲ್ಲಿ ಜನನ. ಮೇಧಾವಿ ವಿದ್ಯಾರ್ಥಿಯೆಂಬ ಖ್ಯಾತಿ. ಆಗ ಗಣಿತ ಸಮಸ್ಯೆಗಳಿಗೆ ಹಲವು ವಿಧಾನಗಳಿಂದ ಉತ್ತರ ಬರೆದು 100ರಲ್ಲಿ 110 ಅಂಕಗಳನ್ನು ಪಡೆದ ವಿಕ್ರಮ. ಸ್ನಾತಕೋತ್ತರ ಪದವಿಯ ಬಳಿಕ ಕಲ್ಕತ್ತಾ ವಿಶ್ವವಿದ್ಯಾಲಯದಲ್ಲಿ ಅಧ್ಯಾಪಕವೃತ್ತಿ (1913–1924) ; ಮುಂದೆ ಢಾಕ್ಕಾ ವಿಶ್ವವಿದ್ಯಾಲಯದಲ್ಲಿ ರೀಡರ್.

ಮೂವತ್ತರ ಯುವಕ ಸತ್ಯೆನ್ 'ಪ್ಲಾಂಕ್ ನಿಯಮ ಮತ್ತು ಬೆಳಕಿನ ಕ್ವಾಂಟಮ್ ಸಿದ್ಧಾಂತ' ಎಂಬ ನಾಲ್ಕೇ ನಾಲ್ಕು ಪುಟಗಳ ಸಂಶೋಧನ ಲೇಖನ ಬರೆದಾಗ ವಿಶ್ವವಿಖ್ಯಾತರಾದರು. ಸ್ವತಃ ಐನ್‌ಸ್ಟೈನರಿಂದಲೇ ಜರ್ಮನ್ ಭಾಷೆಗೆ ಅದರ ಭಾಷಾಂತರ. ಬೋಸರ ಲೆಕ್ಕಕ್ಕೆ ಒಳಗಾದ ಕಣಗಳಿಗೆ ಬೋಸಾನುಗಳೆಂಬ ಅನ್ವರ್ಥನಾಮ. ಜರ್ಮನ್‌ನಿಂದ ಇಂಗ್ಲಿಷಿಗೆ ಬೋಸ್‌ರಿಂದ ಐನ್‌ಸ್ಟೈನ್ ಸಾಹಚರ್ಯದ ಲೇಖನದ ಅನುವಾದ.

ಎರಡು ವರ್ಷ (1924–26) ಯೂರೋಪಿನಲ್ಲಿದ್ದು ಮೇಡಂ ಕ್ಯೂರಿ ಮತ್ತಿತರರೊಡನೆ ಸಹಕಾರ್ಯ. ಡಾಕ್ಟರೇಟ್ ಇಲ್ಲದಿರುವ ಕಾರಣದಿಂದ ಕಲ್ಕತ್ತಾ ವಿಶ್ವವಿದ್ಯಾಲಯವು ಬೋಸರಿಗೆ ಪ್ರಾಧ್ಯಾಪಕತ್ವ ನೀಡಲು ಹಿಂಜರಿದಾಗ ಐನ್‌ಸ್ಟೈನರ ಒತ್ತಾಸೆ. ಅನಂತರ ಮುಂದೆ ಅಲ್ಲೇ ಪ್ರಾಧ್ಯಾಪಕರಾದರು (1945–56) : ವಿಶ್ವಭಾರತಿಯ ವೈಸ್ ಛಾನ್ಸಲರ್ ಆದರು (1956–58) ; ಲಂಡನ್ ರಾಯಲ್ ಸೊಸೈಟಿಯ ಫೆಲೊ (1958) ; ಇಂಡಿಯನ್ ಸೈನ್ಸ್ ಕಾಂಗ್ರೆಸ್ಸಿನ ಅಧ್ಯಕ್ಷತೆ (1944) : ರಾಷ್ಟ್ರೀಯ ಪ್ರಾಧ್ಯಾಪಕತ್ವ (1960)- ಅವರಿಗೆ ಲಭಿಸಿದವು. ರಾಜ್ಯಸಭೆಯ ನಾಮಕರಣ ಸದಸ್ಯರಾಗಿದ್ದರು. ಭಾರತೀಯ ಸಂಖ್ಯಾ ವೈಜ್ಞಾನಿಕ ಸಂಸ್ಥೆ ಮತ್ತು ರಾಷ್ಟ್ರೀಯ ಭೌತ ಪ್ರಯೋಗಾಲಯಗಳ ಅಧ್ಯಕ್ಷರಾಗಿದ್ದರು.

ತತ್ತ್ವಜ್ಞಾನ, ಸಾಹಿತ್ಯ ಮತ್ತು ಲಲಿತ ಕಲೆಗಳಲ್ಲೂ ಅವರಿಗೆ ವಿಶೇಷ ಆಸಕ್ತಿ. ಬಂಗೀಯ ಜ್ಞಾನ ಪರಿಷತ್ತನ್ನು ಅವರು ಕಟ್ಟಿದರು. ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಬಂಗಾಳಿಯಲ್ಲಿ ಭೌತವಿಜ್ಞಾನ ಪಾಠ ಹೇಳಿದರು. 'ಜ್ಞಾನ್–ಓ ವಿಜ್ಞಾನ್ ' ಎಂಬ ಪತ್ರಿಕೆ ಪ್ರಾರಂಭಿಸಿದರು.

1974 ಜನವರಿ 10ರಂದು ಬೋಸ್ ಸಂಖ್ಯಾಸಿದ್ಧಾಂತದ ಸುವರ್ಣೋತ್ಸವ. ಜಗತ್ತಿನ ಹಲವು ವಿಜ್ಞಾನಿಗಳು ಸೇರಿ ಅವರ ಕರ್ತೃತ್ವಕ್ಕೆ ಗೌರವ ಸೂಚಿಸಿದರು. ಅಸ್ವಾಸ್ಥ್ಯಕ್ಕೆ ಒಳಗಾಗುವ ತನಕವೂ ಸತ್ಯೆನ್ ಬೋಸ್ ಸಂಶೋಧಕ–ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿದರು. 1974 ಫೆಬ್ರುವರಿ 4ರಂದು ನಿಧನರಾದರು.

ನೋಡಿ : ಬೋಸ್, ಸತ್ಯೇಂದ್ರನಾಥ –ಸಂಪುಟ ೩

ಸದಾಶಿವ ನಾಯಕ

ಕೆಳದಿಯ ಅರಸರು ವಿಜಯನಗರದ ಚಕ್ರವರ್ತಿಯ ಸಾಮಂತರು. ಇವರಲ್ಲಿ ಚಕ್ರವರ್ತಿಗೆ ನಿಷ್ಠೆಯಿಂದ ನಡೆದುಕೊಂಡು ಸಾಮ್ರಾಜ್ಯಕ್ಕೆ ವಿಶಿಷ್ಟ ಸೇವೆ ಸಲ್ಲಿಸಿದವನು ಸದಾಶಿವ ನಾಯಕ.

ಚೌಡಪ್ಪ ನಾಯಕ ಕೆಳದಿ ಪಾಳೆಯಪಟ್ಟಿನ ನಿರ್ಮಾಪಕ. ಈತನ ಮಗ ಸದಾಶಿವ ನಾಯಕ. 1514ರಲ್ಲಿ ಚೌಡಪ್ಪನಾಯಕ ನಿಧನಹೊಂದಿದ ಮೇಲೆ ವಿಜಯನಗರದ ಚಕ್ರವರ್ತಿಯ ಅಪ್ಪಣೆಪಡೆದು ಈತ ಸಿಂಹಾಸನಾರೋಹಣ ಮಾಡಿದ. ದಕ್ಷ ದಂಡನಾಯಕ, ನ್ಯಾಯಪರ ಹಾಗೂ ವಿದ್ಯೆಗೆ ಪ್ರೋತ್ಸಾಹ ನೀಡಿದವ ಎಂದು ಸದಾಶಿವ ನಾಯಕ ಹೆಸರಾಗಿದ್ದ. ಸದಾಶಿವಪುರ ಎಂಬ ಅಗ್ರಹಾರ ಮತ್ತು ಸದಾಶಿವ ಲಿಂಗೇಶ್ವರ ದೇವಾಲಯಗಳನ್ನು ಈತ ಕಟ್ಟಿಸಿದ.

ಸದಾಶಿವ ನಾಯಕನ ಕಾಲದಲ್ಲಿ ರಾಮರಾಯ ವಿಜಯನಗರದ ಸಮ್ರಾಟ. ಸಾಮ್ರಾಜ್ಯಕ್ಕೆ ವೈರಿಗಳಾಗಿದ್ದ ಬಿಜಾಪುರದ ಸುಲ್ತಾನರು, ಬೀದರ್—ಅಹಮದ್‌ನಗರದ ಸುಲ್ತಾನರು, ತರೀಕೆರೆಯ ಸಾಳುವ ತಿಮ್ಮ, ಚಂದ್ರಗುತ್ತಿಯ ಬೋರನಾಯಕರನ್ನು ಯುದ್ಧಗಳಲ್ಲಿ ಸೋಲಿಸಿ, ಸೆರೆ ಹಿಡಿದು ತಂದ ಸಾಹಸಿ ಸದಾಶಿವ ನಾಯಕ. ವಿಜಯನಗರಕ್ಕೆ ತಲೆಬಾಗದೆ ನಿಂತಿದ್ದ ತುಳುವ ಮತ್ತು ಕೇರಳ ಪ್ರಾಂತದ ಅರಸರನ್ನು ಪದಾಕ್ರಾಂತರನ್ನಾಗಿ ಮಾಡಿದ. ಈ ರಾಜ್ಯಗಳ ಕೇಂದ್ರಸ್ಥಳದಲ್ಲಿ ಜಯಸ್ತಂಭವನ್ನು ನೆಡಿಸಿದ. ವಿಜಯನಗರದ ವೈರಿಗಳಾಗಿದ್ದ ಹಾವಿನಹಾಳ ಕಲ್ಲಪ್ಪ ಮತ್ತು ಮುಂಡಾಡಿ ಎಂಬ ಅರಸರನ್ನು ಪರಾಜಯಗೊಳಿಸಿದ. ಬಂಕಾಪುರದ ಮಾದರಸನನ್ನು ಸೋಲಿಸಿದ.

ವೀರಮ್ಮಾಜಿ, ಭದ್ರಮ್ಮಾಜಿ ನಾಯಕನ ರಾಣಿಯರು. ದೊಡ್ಡ ಸಂಕಣ್ಣ ನಾಯಕ ಮತ್ತು ಚಿಕ್ಕ ಸಂಕಣ್ಣನಾಯಕ ಮಕ್ಕಳು. ನಾಯಕ ವೃದ್ಧನಾದಾಗ ಮಕ್ಕಳನ್ನು ಕರೆದು, ತಮ್ಮ ಭದ್ರಪ್ಪ ಒಡೆಯನಿಂದ ಮರಣದ ಅನಂತರ ಅವನಿಗೆ ಸದಾಶಿವ ನಾಯಕನೆಂದು ನಾಮಕರಣ ಮಾಡಿ, ಪಟ್ಟ ಕಟ್ಟಿ ತಾನು ವಿರಕ್ತನಾದ.

ಸದಾಶಿವ ನಾಯಕ 1545ರಲ್ಲಿ ತೀರಿಕೊಂಡ.



" ಸಮರ್ಥ "

ನೋಡಿ : ತೇಜ ಬಹದ್ದೂರ್ ಸಪ್ರು

ಸಮರ್ಥ ರಾಮದಾಸ್

ಔರಂಗಾಬಾದ್‌ನ ಹತ್ತಿರದ ಹಳ್ಳಿ ಝಾಂಬ್‌ನಲ್ಲಿದ್ದ ಧರ್ಮನಿಷ್ಠ ದಂಪತಿಗೆ 1608ರಲ್ಲಿ ನಾರಾಯಣನೆಂಬ ಮಗ ಹುಟ್ಟಿದ. ಹಿಂದೂ ಪಂಚಾಂಗದ ಪ್ರಕಾರ ಇವನು ಹುಟ್ಟಿದ್ದು ಶ್ರೀರಾಮ ಜನಿಸಿದ ಮುಹೂರ್ತದಲ್ಲೇ. ಈತನಿಗೆ ಹುಟ್ಟಿನಿಂದಲೇ ಆಟ-ಓಟಗಳಿಗಿಂತ ಧ್ಯಾನ-ಧರ್ಮಗಳಲ್ಲೇ ಹೆಚ್ಚು ಆಸಕ್ತಿ. ಹುಡುಗನಿಗೆ ಹನ್ನೆರಡು ವರ್ಷ ಪ್ರಾಯವಾದಾಗ ತಂದೆ–ತಾಯಿ ಒತ್ತಾಯ ಮಾಡಿ ಮದುವೆ ಏರ್ಪಾಟು ಮಾಡಿದರು. ನಾರಾಯಣ ಮನೆಬಿಟ್ಟು ಓಡಿಹೋಗಿ ಪಂಚವಟಿ ಸೇರಿದ. ಹನ್ನೆರಡು ವರ್ಷ ರಾಮಧ್ಯಾನದಲ್ಲಿ ಮುಳುಗಿದ. ತಪಸ್ಸಿನಿಂದ ಎದ್ದದ್ದು ನಾರಾಯಣನಲ್ಲ, ಸಂತ ರಾಮದಾಸ್.

ಸರ್ವಸಮರ್ಥ ರಾಮನ ಭಕ್ತ 'ಸಮರ್ಥ' ರಾಮದಾಸರು ಹಿಮಾಲಯದಿಂದ ಕನ್ಯಾಕುಮಾರಿಯ ವರೆಗೆ ತೀರ್ಥಯಾತ್ರೆ ಕೈಗೊಂಡರು. ಹಲವೆಡೆಗಳಲ್ಲಿ ತಾವೇ ರಾಮನ ದೇವಾಲಯಗಳನ್ನು ಸ್ಥಾಪಿಸಿದರು. ರಾಮನಾಮದ ಮಹತ್ವವನ್ನು ಜನಸಾಮಾನ್ಯರಿಗೆ ಉಪದೇಶಿಸಿದರು.

ಸಂತ ರಾಮದಾಸರ ಭಕ್ತಿಪಂಥದಿಂದ ಆಕರ್ಷಿತರಾದವರಲ್ಲಿ ಛತ್ರಪತಿ ಶಿವಾಜಿ ಒಬ್ಬ. ರಾಮದಾಸರು ಶಿವಾಜಿಯಲ್ಲಿಗೆ ಬಂದು ತಮ್ಮ ಭಿಕ್ಷಾಪಾತ್ರೆಯನ್ನು ಚಾಚಿದಾಗ ಮರಾಠರ ದೊರೆ ತನ್ನ ರಾಜ್ಯವನ್ನೇ ಅವರಿಗೆ ಒಪ್ಪಿಸಿಬಿಟ್ಟ. ಸಮರ್ಥರು ಇದನ್ನು ಸ್ವೀಕರಿಸಿ, ಮತ್ತೆ ಶಿವಾಜಿಗೆ ಹಿಂದಿರುಗಿಸಿದರು. "ನನ್ನ ಪರವಾಗಿ ನೀನು ರಾಜ್ಯವಾಳು", ಎಂದು ಅಜ್ಞಾಪಿಸಿದರು. ಅಧ್ಯಾತ್ಮದ ವಿಚಾರದಲ್ಲೂ ರಾಜಕಾರಣದಲ್ಲೂ ಇವರು ಶಿವಾಜಿಗೆ ಗುರುವಾದರು. ಮಹಾರಾಷ್ಟ್ರದಲ್ಲಿ ಅವರ ಪ್ರೇರಣೆಯಿಂದ ಸುಮಾರು 1,200 ಗರಡಿಮನೆಗಳು ಸ್ಥಾಪಿಸಲ್ಪಟ್ಟುವು.

"ಈ ಜಗತ್ತಿನಲ್ಲಿ ಇದ್ದೂ ಇಲ್ಲದಂತಿರಬೇಕು. ಮನಸ್ಸು ದೈವಚಿಂತನೆಯಲ್ಲಿದ್ದರೂ ದೇಹ ಪ್ರಪಂಚದ ಜನರೊಡನೆ ಬೆರೆಯಬೇಕು. ದೇವರ ಹೆಸರನ್ನು ಜನರಿಗೆ ಹಂಚಬೇಕಾದರೆ ಹೀಗೆ ಇರುವುದು ಅಗತ್ಯ," ಎಂದು ರಾಮದಾಸರು ಶಿವಾಜಿಗೆ ಉಪದೇಶಿಸಿದರು. ದೇಹವನ್ನು ಆಭರಣಗಳಿಂದ ಅಲಂಕರಿಸುವುದರ ಬದಲು ಜ್ಞಾನದ ಬಟ್ಟೆಯನ್ನು ಧರಿಸು –ಎಂದು ಹೇಳಿದರು.

ರಾಮದಾಸರ ಬೋಧನೆಗಳು 'ದಾಸ್ ಬೋಧ್' ಎಂಬ ಮಹಾಗ್ರಂಥದಲ್ಲಿ ಅಡಕವಾಗಿವೆ. 'ಆನಂದವನ ಭುವನ' ಎಂಬುದು ಇವರು ಮರಾಠೀ ಭಾಷೆಯಲ್ಲಿ ಬರೆದಿರುವ ಇನ್ನೊಂದು ಗ್ರಂಥ.

ರಾಜಭೋಗಗಳೆಲ್ಲ ಸುಲಭವಾಗಿ ಸಿಗುವಂತಿದ್ದರೂ ರಾಮದಾಸರು ಯೋಗಿಯ ಬದುಕನ್ನು ಬಾಳಿದರು. ಶಿವಾಜಿಯ ಮರಣಾನಂತರ ಇವರು ಸಜ್ಜನಗಡಕ್ಕೆ ತೆರಳಿ ತಮ್ಮ ಕೊನೆಯ ದಿನಗಳನ್ನು ದೈವಚಿಂತನೆಯಲ್ಲಿ ಕಳೆದರು. 1681ರಲ್ಲಿ ಇವರ ದೇಹಾಂತವಾಯಿತು.

ನೋಡಿ : ಶಿವಾಜಿ

ಸಮಾಜವಾದೀ ಪಕ್ಷ

1934ರಲ್ಲಿ ಭಾರತ ರಾಷ್ಟ್ರೀಯ ಕಾಂಗ್ರೆಸ್ಸಿನ ಒಳಗುಂಪಾಗಿ ಸೋಷಲಿಸ್ಟ್ ಪಾರ್ಟಿ–ಸಮಾಜವಾದೀ ಪಕ್ಷ-ಹುಟ್ಟಿತು.

ಗಾಂಧೀಜೀ ಮುಂದಣ ನಾಯಕ ಎಂದು ಭಾವಿಸಿದ ತರುಣ ಕಾಂಗ್ರೆಸ್ ಸದಸ್ಯರು ಈ ಪಕ್ಷದ ಸ್ಥಾಪಕರು. ಇವರಲ್ಲಿ ಮುಖ್ಯರಾಗಿದ್ದವರು ಜಯಪ್ರಕಾಶ ನಾರಾಯಣ್, ಅಶೋಕ ಮೆಹತಾ, ಅಚ್ಯುತ ಪಟವರ್ಧನ್ ಮತ್ತು ಇ. ಎಂ. ಎಸ್. ನಂಬೂದಿರಿಪಾದ್.

ಆರಂಭವಾದಾಗ ಸೋಷಲಿಸ್ಟ್ ಪಕ್ಷಕ್ಕೆ ಕಾಂಗ್ರೆಸ್ ಮಾತೃ ಸಂಸ್ಥೆಯಾಗಿತ್ತು. ಕಾಂಗ್ರೆಸ್ ಸದಸ್ಯರಷ್ಟೇ ಇದರ ಸದಸ್ಯರಾಗುವುದು ಸಾಧ್ಯವಿತ್ತು. ಕಾಂಗ್ರೆಸ್ಸಿನ ಒಳ ವ್ಯವಹಾರಗಳಲ್ಲಿ ಸಮಾಜವಾದೀ ಪಕ್ಷಕ್ಕೆ ಭಿನ್ನಾಭಿಪ್ರಾಯವಿತ್ತು; ಆದರೆ ರಾಷ್ಟ್ರೀಯ ಮಹತ್ವದ ವಿಚಾರಗಳಲ್ಲಿ ಮಾತೃ ಸಂಸ್ಥೆಯೊಡನೆ ಸಂಪೂರ್ಣವಾಗಿ ಸಹಕರಿಸುತ್ತಿತ್ತು. 'ಚಲೇಜಾವ್' ಚಳುವಳಿಯ ಕಾಲದಲ್ಲಿ ಸೋಷಲಿಸ್ಟ್ ಪಕ್ಷ ಪೂರ್ಣ ಸಹಕಾರ ನೀಡಿತು. ಮುಂದೆ ಮಾತೃಸಂಸ್ಥೆಯಿಂದ ಸಮಾಜವಾದೀ ಪಕ್ಷ ಬೇರೆಯಾಯಿತು. ಕಾಂಗ್ರೆಸ್ ಸದಸ್ಯರಲ್ಲದವರೂ ಇದನ್ನು ಸೇರಿಕೊಳ್ಳಲಾರಂಭಿಸಿದರು.

ಅನಂತರ ಸಮಾಜವಾದೀ ಪಕ್ಷ ಹಾಗೂ ಕಿಸಾನ್ ಮಜದೂರ್ ಪಕ್ಷಗಳು ಸೇರಿ ಪ್ರಜಾ ಸಮಾಜವಾದೀ ಪಕ್ಷದ (ಪಿ.ಎಸ್.ಪಿ.) ಸ್ಥಾಪನೆ ಆಯಿತು.



ಸಮಾಜವಾದ : ಎಚ್. ವಿ. ಕಾಮತ್



ಪ್ರಜಾ ಸಮಾಜವಾದ : ನಾಥ್ ಪೈ

ಸಮಾಜವಾದಿ ಎಸ್. ಜಿ. ಗೋರೆ



ಭಿನ್ನ ಮುಖಂಡತ್ವ : ರಾಜ ನಾರಾಯಣ್



ರಾಮಮನೋಹರ ಲೋಹಿಯಾ ನೇತೃತ್ವದಲ್ಲಿದ್ದ ಸೋಷಲಿಸ್ಟ್ ಪಕ್ಷ ಹಾಗೂ ಪಿ.ಎಸ್.ಪಿ. ಒಂದಾಗಿ 1964 ಜೂನ್ನಲ್ಲಿ ಸಂಯುಕ್ತ ಸೋಷಲಿಸ್ಟ್ ಪಕ್ಷ (ಎಸ್. ಎಸ್. ಪಿ.) ಹುಟ್ಟಿತು. ಇದಾದ ಕೆಲವು ತಿಂಗಳ ಅನಂತರ ಕೆಲವರು ಎಸ್.ಎಸ್.ಪಿ.ಯಿಂದ ತಮ್ಮ ಸದಸ್ಯತ್ವವನ್ನು ಹಿಂತೆಗೆದುಕೊಂಡು ಮತ್ತೆ ಪಿ.ಎಸ್.ಪಿ.ಯ ಪುನರುಜ್ಜೀವನ ಕಾರ್ಯದಲ್ಲಿ ತೊಡಗಿದರು.

ರಾಮಮನೋಹರ ಲೋಹಿಯಾರ ನಿಧನದ ಅನಂತರದ ಅವಧಿಯಲ್ಲಿ ಸೋಷಲಿಸ್ಟ್ ಪಕ್ಷದಲ್ಲಿ ಮತ್ತೆ ಒಡಕು ಹುಟ್ಟಿತು. ಬಹುಸಂಖ್ಯಾಕ ಭಾಗಕ್ಕೆ ಜಾರ್ಜ್ ಫರ್ನಾಂಡೀಸ್ ಅಧ್ಯಕ್ಷರು : ಇನ್ನೊಂದು ಭಾಗಕ್ಕೆ ರಾಜನಾರಾಯಣ್ ಅಧ್ಯಕ್ಷರು.

ನೋಡಿ : ಅಚ್ಯುತ ಪಟವರ್ಧನ್ : ಅಶೋಕ ಮೆಹತಾ ; ಇ.ಎಂ.ಎಸ್. ನಂಬೂದಿರಿಪಾದ್ : ಎಸ್. ಎಂ. ಜೋಶಿ : ಜಯ ಪ್ರಕಾಶ ನಾರಾಯಣ್ : ಜಾರ್ಜ್ ಫರ್ನಾಂಡೀಸ್ : ನರೇಂದ್ರ ದೇವ್ : ಮಧು ಲಿಮಯೆ : ರಾಮಮನೋಹರ ಲೋಹಿಯಾ

ಸಮುದ್ರ ಗುಪ್ತ

ಗುಪ್ತ ರಾಜವಂಶದ ಮೂಲಪುರುಷ ಚಂದ್ರ ಗುಪ್ತ ಮತ್ತು ಲಿಚ್ಛವಿ ರಾಜಕನ್ಯೆ ಕುಮಾರ ದೇವಿಯರ ಮಗ, ಸಮುದ್ರ ಗುಪ್ತ.

ಚಂದ್ರ ಗುಪ್ತ ತನ್ನ ಅವಸಾನಕ್ಕೆ ಮೊದಲು ತನ್ನ ಮನೆತನದವರ ಮತ್ತು ಮಂತ್ರಾಲೋಚಕರ ಸಭೆ ಸೇರಿಸಿ, ಸಮುದ್ರ ಗುಪ್ತನನ್ನು ತನ್ನ ಉತ್ತರಾಧಿಕಾರಿಯಾಗಿ ನಿಯಮಿಸಿದ. ಸುಮಾರು 335ರಲ್ಲಿ ಸಮುದ್ರ ಗುಪ್ತ ತನ್ನ ತಂದೆಯ ರಾಜ್ಯಾಧಿಪತ್ಯವನ್ನು ವಹಿಸಿಕೊಂಡ.

ಅನಂತರ. ತನ್ನ ರಾಜ್ಯದ ವಿಸ್ತರಣೆಗೆ ಮನಸ್ಸು ಕೊಟ್ಟ. ಅಲಹಾಬಾದಿನ ಸ್ತಂಭಶಾಸನ. ಮಧ್ಯಪ್ರದೇಶದ ಏರಣ್‌ನಲ್ಲಿರುವ ಶಾಸನಗಳಲ್ಲಿ ಸಮುದ್ರ ಗುಪ್ತನ ವಿಜಯಗಳ ವಿವರಗಳು ದೊರೆಯುತ್ತವೆ.

ತನ್ನ ನೆರೆಯ ರಾಜ್ಯವಾಗಿದ್ದ ಅಹಿಚ್ಛತ್ರ (ರೋಹಿಲ್‌ಖಂಡ)ದ ಅರಸನನ್ನು ಸೋಲಿಸಿದ ಮೇಲೆ ಸಮುದ್ರ ಗುಪ್ತ ಆರ್ಯಾವರ್ತ ಪ್ರದೇಶದ ಅನೇಕ ಅರಸರನ್ನು ಗೆದ್ದ. ಅವರ ರಾಜ್ಯಗಳನ್ನು ವಶಪಡಿಸಿಕೊಂಡ. ಇತ್ತ ಪೂರ್ವ ದಿಕ್ಕಿನಲ್ಲಿ ಬಂಗಾಳದ ಕೆಲವು ಪ್ರದೇಶಗಳನ್ನೂ ಆಕ್ರಮಿಸಿದ : ವಿಂಧ್ಯದ ವನಪ್ರದೇಶವನ್ನೂ ತನ್ನ ವಶಕ್ಕೆ ತೆಗೆದುಕೊಂಡ. ಅನಂತರ ಅವನು ದಕ್ಷಿಣ ಭಾರತದ ಮೇಲೆ ದಂಡಯಾತ್ರೆ ನಡೆಸಿದ. ಆದರೆ ಆ ರಾಜ್ಯಗಳನ್ನು ನೇರವಾಗಿ ತನ್ನ ಆಳ್ವಿಕೆಯಲ್ಲಿ ಇಟ್ಟುಕೊಳ್ಳದೆ ಮೊದಲಿನ ಅರಸರಿಗೇ ಬಿಟ್ಟುಕೊಟ್ಟ. ಅವರ ಸ್ನೇಹ ಗಳಿಸಿದ.

ಪ್ರತಾಪಶಾಲಿಯಾದ ಸಮುದ್ರ ಗುಪ್ತನ ರಾಜ್ಯದ ಗಡಿ ಪ್ರದೇಶದ ಅನೇಕ ರಾಜರು ಕಪ್ಪ ಕಾಣಿಕೆ ಕೊಟ್ಟು ಅವನನ್ನು ಸಮ್ರಾಟನೆಂದು ಒಪ್ಪಿಕೊಂಡರು.

ಸಮುದ್ರ ಗುಪ್ತನ ನಾಣ್ಯ



ಸಮುದ್ರ ಗುಪ್ತ ತನ್ನ ಮಹಾ ವಿಜಯದ ಚಿಹ್ನೆಯಾಗಿ ಅಶ್ವಮೇಧ ಯಾಗ ನಡೆಸಿದ. ಅಶ್ವಮೇಧ ಸಂಕೇತ ಹೊತ್ತ ನಾಣ್ಯಗಳನ್ನು ಹೊರಡಿಸಿದ. ಯುದ್ಧದಲ್ಲಿ ಅಪಾರ ಚಿನ್ನ ಬೆಳ್ಳಿ ಗಳಿಸಿದ.

ಇವನು ಚಿನ್ನದಿಂದ ನಾಣ್ಯಗಳನ್ನು ಟಂಕಿಸಿದ; ಬೆಳ್ಳಿಯನ್ನು ಜನಹಿತ ಕಾರ್ಯಗಳಿಗೆ ವಿನಿಯೋಗಿಸಿದ.

ಆತ ಕವಿ ಮತ್ತು ನುರಿತ ಸಂಗೀತಗಾರನಾಗಿದ್ದ.

ಸಮುದ್ರ ಗುಪ್ತ ಮಹಾಪರಾಕ್ರಮಿಯಾಗಿದ್ದಂತೆ ಉದಾರಿಯೂ ಆಗಿದ್ದ. ಸ್ವತಃ ವಿದ್ವಾಂಸನಾಗಿದ್ದ, ಕವಿಯಾಗಿದ್ದ. ಸಂಗೀತಜ್ಞನಾಗಿದ್ದ. ಅವನ ನಾಣ್ಯವೊಂದರಲ್ಲಿ ಅವನು ವೀಣೆಯಂಥ ಸಂಗೀತವಾದ್ಯವನ್ನು ಬಾರಿಸುತ್ತಿರುವ ಚಿತ್ರವಿದೆ. ಇದು ಅವನ ಸಂಗೀತ ಪ್ರೇಮಕ್ಕೆ ಸಾಕ್ಷಿ.

ತನ್ನ ಬಾಹುಬಲದಿಂದ ಉತ್ತರ ಭಾರತದ ಬಹುಭಾಗವನ್ನು ತನ್ನ ಆಡಳಿತಕ್ಕೆ ಒಳಪಡಿಸಿಕೊಂಡ ಸಮುದ್ರ ಗುಪ್ತ ಆ ಪ್ರದೇಶದ ರಾಜಕೀಯ ಐಕ್ಯವನ್ನು ಸಾಧಿಸಿದ. ಭಾರತೀಯ ಸಂಸ್ಕೃತಿಯ ವಿವಿಧಾಂಶಗಳ- ಧರ್ಮ, ಸಾಹಿತ್ಯ. ಕಲೆಗಳ— ವಿಕಾಸಕ್ಕೆ ಪ್ರೇರಕನಾದ. ಈ ವಿಕಾಸ ಇವನ ಮಗನಾದ ಎರಡನೆಯ ಚಂದ್ರ ಗುಪ್ತ ವಿಕ್ರಮಾದಿತ್ಯನ ಕಾಲದಲ್ಲೂ ಮುಂದುವರಿಯಿತು.

ನೋಡಿ : ಚಂದ್ರ ಗುಪ್ತ ವಿಕ್ರಮಾದಿತ್ಯ

ಸಮ್ಮೇದಗಿರಿ

ಬಿಹಾರ ರಾಜ್ಯದ ಹಜಾರಿಬಾಗ್ ಜಿಲ್ಲೆಯಲ್ಲಿರುವ ಒಂದು ಪರ್ವತ ಸಮ್ಮೇದಗಿರಿ ಅಥವಾ ಸಮ್ಮೇದಶಿಖರ.

ಇಲ್ಲಿ ಇಪ್ಪತ್ತು ಜನ ತೀರ್ಥಂಕರರು ತಪಸ್ಸು ಮಾಡಿ ಮುಕ್ತಿಗೆ ಹೋಗಿದ್ದಾರೆ, ಸಿದ್ಧಿಯನ್ನು ಪಡೆದಿದ್ದಾರೆ. ಅದಕ್ಕಾಗಿ ಇದಕ್ಕೆ ಸಿದ್ಧಕ್ಷೇತ್ರವೆಂಬ ಹೆಸರೂ ಇದೆ. ಇಲ್ಲಿ ನಿರ್ವಾಣಹೊಂದಿದ ತೀರ್ಥಂಕರರಲ್ಲಿ ಭಗವಾನ್ ಪಾರ್ಶ್ವನಾಥ ಕೊನೆಯವನು. ಆದ್ದರಿಂದಲೇ ಸಮ್ಮೇದಗಿರಿಗೆ 'ಪಾರ್ಶ್ವನಾಥ ಪರ್ವತ' ಎಂಬ ಹೆಸರೂ ಇದೆ.

ಈ ಜೈನ ಸಾಂಸ್ಕೃತಿಕ ಸ್ಥಳದ ವಿಷಯದಲ್ಲಿ ಪ್ರಿವಿ ಕೌನ್ಸಿಲ್ 1933ನೆಯ ನಂಬರ್ 121ರ ನಿರ್ಣಯದಲ್ಲಿ ಹೀಗೆ ಹೇಳಿದೆ : "ಪಾರಸನಾಥ ಪರ್ವತದ ಮೇಲಿರುವ ಮಂದಿರಗಳು ತೀರ ಪ್ರಾಚೀನ ಕಾಲದವು. ಇದರಲ್ಲಿ ಯಾವ ಸಂಶಯವೂ ಇಲ್ಲ. ಅವುಗಳ ಇತಿಹಾಸ. ಕಾಲ, ಆ ಪರ್ವತದ ಪಾವಿತ್ರ್ಯ, ಆರಂಭವಾದ ಸಂದರ್ಭಗಳ ಬಗೆಗೆ ಸ್ಪಷ್ಟ ತಿಳುವಳಿಕೆ ಇಲ್ಲ. ಪರ್ವತದ ವಿಸ್ತಾರ ಇಪ್ಪತ್ತೈದು ಚದರ ಮೈಲು. ಸಮುದ್ರ ಮಟ್ಟದಿಂದ 4,500 ಅಡಿ ಎತ್ತರದಲ್ಲಿದೆ."

ಸಮ್ಮೇದಗಿರಿಯಲ್ಲಿ ಮುಕ್ತಾತ್ಮರ ಚರಣ ಚಿಹ್ನೆಗಳನ್ನು ಪೂಜಿಸುತ್ತಾರೆ. ಇದು ಮೂರ್ತಿಪೂಜೆ ಪರಿಪಾಠದಲ್ಲಿ ಬರುವುದಕ್ಕಿಂತ ಮುಂಚಿನ ರೀತಿಯಾಗಿರಬೇಕು. ಇಪ್ಪತ್ತು ಜನ ತೀರ್ಥಂಕರರಲ್ಲದೆ ಹಲವು ಜನ ಮುನಿಗಳು ರಾಗ-ದ್ವೇಷಗಳನ್ನು ಬಿಟ್ಟು ಇಲ್ಲಿ ತಪಸ್ಸನ್ನಾಚರಿಸಿ, ಮುಕ್ತಿಗೆ ಸಂದಿದ್ದಾರೆ. ಆದ್ದರಿಂದ ಜೈನರಿಗೆ ಇದೊಂದು ಪವಿತ್ರ ತೀರ್ಥಸ್ಥಳವಾಗಿದೆ; ಸಾಧಕರಿಗೆ ಪ್ರಗತಿ ಸ್ಥಾನವಾಗಿದೆ.

ಈ ಪರ್ವತದ ಅಡಿಯಲ್ಲಿ ವಿಶಾಲವಾದ ಧರ್ಮಶಾಲೆಗಳೂ ಅನೇಕ ಜಿನಮಂದಿರಗಳೂ ಇವೆ. ಯಾತ್ರಿಕರು ಇಲ್ಲಿ ಇಳಿದುಕೊಂಡು, ಸ್ನಾನ ಮಾಡಿ ಪರ್ವತದ ಮೇಲಿರುವ ಪವಿತ್ರ ಪಾದುಕೆಗಳ ದರ್ಶನಕ್ಕೆ ತೆರಳುತ್ತಾರೆ.

ಒಂದೊಂದು [illegible] ತೀರ್ಥಂಕರರ [illegible] ಚಿಹ್ನೆಗಳಿವೆ. ಅವುಗಳನ್ನೆಲ್ಲ ದರ್ಶನಮಾಡಿ [illegible] ನಡೆಯಬೇಕಾಗುತ್ತದೆ. [illegible] ಡೋಲಿಯಲ್ಲಿ ಕುಳಿತುಕೊಂಡು ಬೆಟ್ಟ ಹತ್ತುವುದಕ್ಕೆ ಸೌಕರ್ಯವಿದೆ.

ಕುಂದಕುಂದಾಚಾರ್ಯರು ತಮ್ಮ 'ನಿರ್ವಾಣಭಕ್ತಿ'ಯಲ್ಲಿ "ದೇವ, ಮಾನವರಿಂದ ವಂದನೀಯರಾದ, ಕರ್ಮ ಕ್ಲೇಶವಿಲ್ಲದ ಇಪ್ಪತ್ತು ಜನ ಜಿನರು ಸಮ್ಮೇದಶಿಖರದಲ್ಲಿ ನಿರ್ವಾಣ ಹೊಂದಿದರು. ಅವರಿಗೆಲ್ಲ ನಮಸ್ಕಾರಗಳು", ಎಂದಿದ್ದಾರೆ.

ಸಯ್ಯದ್ ಅಹಮದ್ ಖಾನ್

ಮುಸಲ್ಮಾನರ ಏಳಿಗೆ ಹಿಂದು–ಮುಸಲ್ಮಾನ ಸಹಕಾರ, ಒಗ್ಗಟ್ಟುಗಳಿಂದ ಮಾತ್ರ ಸಾಧ್ಯವೆಂದು ಕಂಡುಕೊಂಡು ದುಡಿದವರು ಸಯ್ಯದ್ ಅಹಮದ್ ಖಾನ್.

"ನಾವಿಬ್ಬರೂ ಭಾರತದ ಗಾಳಿಯನ್ನು ಆಧರಿಸಿ ಜೀವಿಸಿದ್ದೇವೆ. ಪವಿತ್ರ ಗಂಗಾ, ಯಮುನಾ ನದಿಗಳ ನೀರನ್ನು ಕುಡಿಯುತ್ತೇವೆ. ಭಾರತದ ನೆಲದಲ್ಲಿ ಬೆಳೆದುದನ್ನು ಇಬ್ಬರೂ ಉಣ್ಣುತ್ತೇವೆ. ಜೀವನ, ಸಾವುಗಳಲ್ಲಿ ಒಟ್ಟಾಗಿಯೇ ಇದ್ದೇವೆ......ಒಂದೇ ದೇಶಕ್ಕೆ ಸೇರಿರುವ ನಾವು, ಒಂದೇ ರಾಷ್ಟ್ರದವರು. ಈ ದೇಶದ ಏಳಿಗೆ ಮತ್ತು ಅಭ್ಯುದಯ ನಮ್ಮಿಬ್ಬರ ಒಗ್ಗಟ್ಟನ್ನೂ ಪರಸ್ಪರ ಸಹಾನುಭೂತಿಯನ್ನೂ ಅವಲಂಬಿಸಿದೆ. ಆದರೆ, ಪರಸ್ಪರ ಅಸಮ್ಮತಿ, ಹಟ, ವಿರೋಧ, ಮನಸ್ತಾಪಗಳು ಮಾತ್ರ ನಮ್ಮನ್ನು ನಾಶಗೊಳಿಸುತ್ತವೆ."

—ಇವು ಅಹಮದ್ ಖಾನ್ ಒಮ್ಮೆ ತಮ್ಮ ಭಾಷಣದಲ್ಲಿ ಆಡಿದ ಮಾತುಗಳು.

ಸಯ್ಯದ್ ಅಹಮದ್ ಖಾನ್ 1817 ಏಪ್ರಿಲ್ 17ರಂದು ಹುಟ್ಟಿದರು. 22ನೆಯ ವಯಸ್ಸಿಗೆ ತಂದೆಯನ್ನು ಕಳೆದುಕೊಂಡಾಗ ಜೀವನ ನಿರ್ವಹಣೆಯ ಭಾರ ಅಹಮದ್ ಖಾನ್ ಅವರ ಮೇಲೆ ಬಿದ್ದಿತು. ನ್ಯಾಯ ವಿಷಯಕ್ಕೆ ಸಂಬಂಧಿಸಿದ ಕೆಲಸ ಕಲಿಯಲಾರಂಭಿಸಿದರು. ಗುಮಾಸ್ತೆಯ ಉದ್ಯೋಗ ಅವಲಂಬಿಸಿದರು. 1857ರ ವೇಳೆಗೆ ಗಣ್ಯ ಪದವಿಗೆ ಏರಿದರು.

'ಗೋವಧೆ ನಿಲ್ಲಿಸುವುದರಿಂದ ಹಿಂದು–ಮುಸಲ್ಮಾನ ಮೈತ್ರಿ ಸ್ಥಾಪಿಸಬಹುದಾದರೆ ದಯವಿಟ್ಟು ಗೋವಧೆ ಮಾಡಬೇಡಿ"—ಹೀಗೆಂದು ತಮ್ಮ ಭ್ರಾತೃಗಳಿಗೆ ಕರೆಕೊಟ್ಟ ಅಹಮದ್ ಖಾನ್ ಸ್ವಧರ್ಮೀಯರ ಕೋಪಕ್ಕೆ ಗುರಿಯಾದರು. ತಮ್ಮವರು ಪ್ರಗತಿಶೀಲರಾಗಬೇಕು; ಪಾಶ್ಚಾತ್ಯ ವಿದ್ಯಾಶಿಕ್ಷಣ ಪಡೆಯಬೇಕು — ಎಂಬುದು ಅಹಮದ್ ಖಾನ್‌ರ ಗುರಿಯಾಗಿತ್ತು. 1874ರಲ್ಲಿ ಅಲೀಗಡದ ಮಹಮ್ಮದೀಯ ಆಂಗ್ಲೊ–ಪ್ರಾಚ್ಯಶಾಲೆ ಆರಂಭವಾಗಿ 1878ರಲ್ಲಿ ಅದು ಕಾಲೇಜಿನ ಮಟ್ಟ ಪಡೆಯಲು ಕಾರಣರಾದರು.



40*
ಹಿಂದೂ ಮುಸಲ್ಮಾನ ಐಕ್ಯ :
ಅಹಮದ್ ಖಾನ್

ಜನತೆಗೆ ಆಡಳಿತದಲ್ಲಿ ಪ್ರಾತಿನಿಧ್ಯ ಕೊಡಲು ಬ್ರಿಟಿಷರು ಅಸಡ್ಡೆ ಮಾಡಿರುವುದು ತಪ್ಪು ಎಂದು ಸೂಚಿಸಿದರು. ಆದರೆ ಕಾಂಗ್ರೆಸ್ ಸಂಘಟನೆ [illegible] ಅವರಿಗೆ ಇಷ್ಟವಾಗಲಿಲ್ಲ. [illegible] ಆದರೆ [illegible] ಸಾಂಸ್ಕೃತಿಕ ಮಹಮ್ಮದೀಯರಿಗೆ [illegible] ಅವರ ಧ್ಯೇಯವಾಗಿತ್ತು.

1898ರಲ್ಲಿ ಸಯ್ಯದ್ ಅಹಮದ್ ಖಾನ್ ಕಾಲವಾದರು.

ಸಯ್ಯದ್ ರಹ್ಮತ್ ಅಲಿ ಷಾ

ಭಾರತದ ಸ್ವಾತಂತ್ರ್ಯಕ್ಕಾಗಿ ಹೋರಾಡಲು ಅಮೆರಿಕ, ಫ್ರಾನ್ಸ್‌ಗಳಲ್ಲಿ ಕ್ರಾಂತಿಕಾರರ ಗುಪ್ತ ದಳವನ್ನು ಸಂಘಟಿಸಿದ ಕ್ರಾಂತಿಕಾರಿ ನಾಯಕ ಸಯ್ಯದ್ ರಹ್ಮತ್ ಅಲಿ ಷಾ.

ತಮ್ಮ ಮಿತ್ರರೊಂದಿಗೆ ಜಪಾನಿ ಹಡಗನ್ನೇರಿ ಭಾರತಕ್ಕೆ ಬಂದರು. 1915ರಲ್ಲಿ ಭಾರತದಲ್ಲಿದ್ದ ಬ್ರಿಟಿಷ್ ಸರಕಾರದ ವಿರುದ್ಧ ಬಂಡೆದ್ದವರಲ್ಲಿ ಇವರೂ ಒಬ್ಬರು. ಬ್ರಿಟಿಷ್ ಸರಕಾರ ಈ ಕ್ರಾಂತಿಯನ್ನು ಮೊಳಕೆಯಲ್ಲೇ ಹತ್ತಿಕ್ಕಿತು. ಕ್ರಾಂತಿಕಾರಿ ನಾಯಕರನ್ನು ಒಬ್ಬೊಬ್ಬರನ್ನಾಗಿ ಗಲ್ಲಿಗೇರಿಸಿತು. ಈ ರೀತಿ ರಾಷ್ಟ್ರದ ಸ್ವಾತಂತ್ರ್ಯಕ್ಕಾಗಿ ಜೀವ ತೆತ್ತು ರಹ್ಮತ್ ಅಲಿ ಷಾ ಹುತಾತ್ಮರಾದರು.



ಹುತಾತ್ಮ : ರಹ್ಮತ್ ಅಲಿ ಷಾ

ಸಯೀದರು

ತುಘಲಕರ ಅನಂತರ ಕ್ರಿ. ಶ. 1414–51ರ ಅವಧಿಯಲ್ಲಿ ದೆಹಲಿಯಿಂದ ಆಳಿದ ಸುಲ್ತಾನರು ಸಯೀದರು. ಇವರಿಗೆ 'ಸಯ್ಯದರು' ಎಂಬ ಹೆಸರೂ ಇದೆ.

ಮಹಮ್ಮದ್ ತುಘಲಕನು 1413ರಲ್ಲಿ ತೀರಿಕೊಂಡಾಗ ದೆಹಲಿ ಆಸ್ಥಾನದ ಶ್ರೀಮಂತರು ದೌಲತ್‌ಖಾನ್ ಲೋದಿ ಎಂಬವನನ್ನು ಪಟ್ಟಕ್ಕೆ ಏರಿಸಿದರು. ಆದರೆ ವಾಯುವ್ಯ ಭಾರತದ ಮುಲ್ತಾನ್‌ನಲ್ಲಿ ತೈಮೂರನ ಮಾಂಡಲಿಕನಾಗಿದ್ದ ಖಿಜರ್‌ಖಾನ್ ದೆಹಲಿಯ ಮೇಲೆ ದಂಡೆತ್ತಿ ಬಂದು, ಅದನ್ನು ಗೆದ್ದು, ತೈಮೂರನ ಮಗನಾಗಿದ್ದ ಆಗಿನ ಅಫ್‌ಘಾನಿಸ್ತಾನದ ದೊರೆ ಷಾ ರುಖ್‌ನ ಪ್ರತಿನಿಧಿ ತಾನು ಎಂದು ದೆಹಲಿಯಿಂದ ಆಳಲಾರಂಭಿಸಿದ. ವಾಸ್ತವವಾಗಿ ಆತ ಸ್ವತಂತ್ರ ರಾಜನೇ ಆಗಿದ್ದ. ಕೆಲವು ಇತಿಹಾಸಕಾರರು ಈತನನ್ನು ಪ್ರವಾದಿ ಮಹಮ್ಮದನ ವಂಶಸ್ಥನೆಂದು ಕರೆದು ಈ ವಂಶಕ್ಕೆ 'ಸಯೀದ್' ಎಂಬ ಹೆಸರು ನೀಡಿದ್ದಾರೆ.

ದೆಹಲಿಯ ಸುತ್ತಲ ಕೆಲವೇ ಜಿಲ್ಲೆಗಳಿಗೆ ಸೀಮಿತವಾದ ರಾಜ್ಯವನ್ನು ಹೊಂದಿದ್ದ ಈತ 1421ರಲ್ಲಿ ತೀರಿಕೊಂಡಾಗ ಇವನ ಮಗ ಮುಬಾರಕ ಷಾ ಪಟ್ಟವೇರಿದ. 1434ರಲ್ಲಿ ಈತನ ಕೊಲೆಯಾದಾಗ ಖಿಜರ್ ಖಾನನ ಒಬ್ಬ ಮೊಮ್ಮಗ ಮುಹಮ್ಮದ್ ಷಾ ಪಟ್ಟವೇರಿದ. ಮುಂದೆ 1445ರಲ್ಲಿ ಈತನ ಮಗ ಅಲ್ಲಾವುದ್ದೀನ್ ಆಲಂ ಷಾ ಸುಲ್ತಾನನಾದ. ಈ ಕಾಲದಲ್ಲಿ ಅವರ ರಾಜ್ಯ ದೆಹಲಿ ಮತ್ತು ಸುತ್ತಲ ಕೆಲ ಗ್ರಾಮಗಳಿಗಷ್ಟೆ

ಸೀಮಿತವಾಗಿತ್ತು. 1451ರಲ್ಲಿ ಈತ ಪಟ್ಟವನ್ನು ಬಹ್ಲೂಲ್ ಲೋದಿಗೆ ಒಪ್ಪಿಸಿ ನಿವೃತ್ತನಾದ.

ಯಾವೊಂದು ಉಲ್ಲೇಖನೀಯ ಸಾಧನೆಯನ್ನೂ ಮಾಡದ ಸಯಿದರ ಆಳ್ವಿಕೆ ಈ ರೀತಿ ಕೊನೆಗಂಡಿತು.

ಸರಯೂ

"ನನ್ನ ತಂದೆ–ತಾಯಿಯನ್ನು ಇನ್ನು ಯಾವಾಗ ನೋಡುತ್ತೇನೋ, ಸರಯೂ ತೀರದಲ್ಲಿರುವ ಸುಂದರ ಕಾಡಿನಲ್ಲಿ ಬೇಟೆಯಾಡುವ ಕಾಲ ಇನ್ನು ಯಾವಾಗ ಬರುತ್ತದೋ ......"

—ಅರಣ್ಯವಾಸದಲ್ಲಿ ಶ್ರೀರಾಮ ಈ ಬಗೆಯಾಗಿ ಮರುಗಿದ ಬಣ್ಣನೆ 'ರಾಮಾಯಣ'ದಲ್ಲಿದೆ.

ಅಯೋಧ್ಯಾ ನಗರದ ಪಕ್ಕದಲ್ಲಿ ಹರಿಯುವ ನದಿ ಸರಯೂ. ಈ ನದಿಯುದ್ದಕ್ಕೂ ಕಂಡುಬರುವ ದೃಶ್ಯಗಳ ವರ್ಣನೆ ವೇದಗಳಲ್ಲೂ ಮಹಾಕಾವ್ಯಗಳಲ್ಲೂ ಇದೆ. 'ರಾಮಾಯಣ' ಕಥೆಯ ಪ್ರಕಾರ ಗುಹ ದೋಣಿ ನಡೆಸಿ ರಾಮ, ಲಕ್ಷ್ಮಣ, ಹಾಗೂ ಸೀತೆಯರನ್ನು ಈ ನದಿಯ ಆಚೆಯ ದಡಕ್ಕೆ ಕೊಂಡೊಯ್ದ.

ಗಂಗಾನದಿಯ ಉಪನದಿ ಗೋಗ್ರಾ. ಈ ನದಿಯೇ ಸರಯೂ. ಮಾನಸ ಸರೋವರದ ಸಮೀಪದ ಕುಮಾವೊ ಬೆಟ್ಟದಲ್ಲಿ ಹುಟ್ಟಿ ಇದು ಕೆಳಕ್ಕೆ ಹರಿಯುತ್ತದೆ. ವಿಷ್ಣುವಿನ ಎಡ ಹೆಬ್ಬೆರಳು ಸರಯೂ ನದಿಯ ಮೂಲ ಎಂದು ನಂಬಿಕೆ. ಅತಿ ಪವಿತ್ರವೆನಿಸಿದ ನದಿ ಇದು.

ಸರೋವರದಿಂದ ಹುಟ್ಟುವುದರಿಂದ ಇದಕ್ಕೆ 'ಸರಯೂ' ಎಂಬ ಹೆಸರು ಬಂದಿತು.

ಸರಸ್ವತಿ

ವಿದ್ಯಾ ದೇವತೆ ಸರಸ್ವತಿ. ಇವಳನ್ನು ವಾಣಿ, ಶಾರದೆ ಎಂದೂ ಕರೆಯುತ್ತಾರೆ.

ನವರಾತ್ರಿಯ ಹಬ್ಬದಲ್ಲಿ ಈಕೆಯ ಪೂಜೆಗಾಗಿಯೇ ಒಂದು ದಿನ ಮೀಸಲಾಗಿದೆ.

ಸರಸ್ವತಿ ವಾಕ್(ಮಾತು) ಸ್ವರೂಪಳು. ವೇದಗಳ ತಾಯಿ. ಅವಳನ್ನು ಸ್ತುತಿಸುವ ಸೂಕ್ತವೊಂದು ಋಗ್ವೇದದಲ್ಲಿದೆ. ಸರಸ್ವತಿಯನ್ನು ವಾಗ್ದೇವಿ ಎಂದೂ ಕರೆಯುತ್ತಾರೆ.

ಸರಸ್ವತಿಯ ಬಣ್ಣ ಬಿಳುಪು; ತೊಟ್ಟಿರುವ ಬಟ್ಟೆ ಬಿಳಿಯದು; ಆಕೆಯ ಪರಿಶುದ್ಧತೆಗೆ ಹೊಂದಿಕೊಂಡು ಆಕೆಗೆ ಸಂಬಂಧಪಟ್ಟುದೆಲ್ಲ ಬಿಳುಪೇ. ಆಕೆಯ ವಾಹನ ಕೂಡ ಬಿಳಿಯ ಹಂಸ. ವೀಣೆ ಅವಳ ವಾದ್ಯ. ಅವಳು ಸಂಗೀತದ ಅಧಿದೇವತೆ.

ಬೌದ್ಧ ಹಾಗೂ ಜೈನ ಧರ್ಮಗಳಲ್ಲಿ ಈಕೆಯ ಸ್ಥಾನ ಪ್ರಮುಖ.

ವಿದ್ಯಾಭಿಮಾನಿ ದೇವತೆಗಾಗಿ ಭಾರತದಲ್ಲೇ ಅಲ್ಲದೆ ನೆರೆರಾಷ್ಟ್ರಗಳಾದ ಜಾವಾ, ಟಿಬೆಟ್ ಮತ್ತು ಜಪಾನುಗಳಲ್ಲೂ ಸರಸ್ವತಿ ಆರಾಧ್ಯಳು. ಅಲ್ಲೆಲ್ಲ ಸರಸ್ವತಿಯ ಕಲ್ಲಿನ ವಿಗ್ರಹಗಳು ದೊರೆತಿವೆ.

ಸರಸ್ವತಿ

"ಸರಸ್ವತಿ ಕೇವಲ ನದಿಯಲ್ಲ; ವಾಗ್ದೇವಿಯೂ ಹೌದು."

—ಎನ್ನುತ್ತದೆ ಋಗ್ವೇದ.

ನದಿ ಸರಸ್ವತಿ ವೇದ ಕಾಲದಲ್ಲಿ ಬಹಳ ಗೌರವಕ್ಕೆ ಪಾತ್ರವಾದ ದೊಡ್ಡ ನದಿ. ಸರಸ್ವತಿ ಎಂಬ ಪದಕ್ಕೆ 'ನೀರು ತುಂಬಿದ್ದು' ಅಥವಾ 'ಅನೇಕ ಸರೋವರಗಳು' ಎಂಬ ಅರ್ಥಗಳಿವೆ.



ಸರಸ್ವತಿ : 13ನೆಯ ಶತಮಾನದ ಕೃತಿ

ಹಿಮಾಲಯ ಪರ್ವತದ ಸಿರ್ಮುರ್ ಬೆಟ್ಟಗಳಲ್ಲಿರುವ ಒಂದು ಅತ್ತಿಯ ಮರದ ಸಮೀಪದಲ್ಲಿ ಸರಸ್ವತಿ ನದಿ ಹುಟ್ಟುತ್ತದೆ ಎಂಬ ಹೇಳಿಕೆ ಇದೆ. ಈ ನದಿಯ ಆರಂಭ ಬ್ರಹ್ಮಸರ ಅಥವಾ ಬದರಿಕಾಶ್ರಮ ಆಗಿರಬಹುದು ಎಂಬ ಅಭಿಪ್ರಾಯವನ್ನೂ ಕೆಲವರು ವ್ಯಕ್ತಪಡಿಸಿದ್ದಾರೆ.

ಈ ನದೀ ಪ್ರವಾಹ ಚಲೌರ್ ಎಂಬಲ್ಲಿ ಮರಳಿನಲ್ಲಿ ಅದೃಶ್ಯವಾಗಿ, ಮತ್ತೆ ಭವಾನಿಪುರದಲ್ಲಿ ಕಾಣಿಸಿಕೊಳ್ಳುತ್ತದೆ. ಪುನಃ ಬಲ್ಚಪ್ಪಾರ್‌ನಲ್ಲಿ ಕಣ್ಮರೆಯಾಗಿ ಬಾರಖೇಡ್‌ದಲ್ಲಿ ಕಾಣಿಸಿಕೊಳ್ಳುತ್ತದೆ; ಅನಂತರ ಇದು ಮರುಭೂಮಿಯಲ್ಲಿ ಇಂಗಿಹೋಗುತ್ತದೆ.

ವಡವಾನಲವನ್ನು ಪಶ್ಚಿಮ ಸಮುದ್ರಕ್ಕೆ ಒಯ್ಯಲು ಬ್ರಹ್ಮನಿಂದ ನಿಯೋಜಿಸಲ್ಪಟ್ಟ ಸರಸ್ವತಿ, ಭೂಮಿಯಲ್ಲಿ ಪಾತಕಿಗಳು ತನ್ನನ್ನು ಸ್ಪರ್ಶಿಸಬಹುದೆಂದು ಹೆದರಿದಾಗ ಗುಪ್ತಗಾಮಿನಿಯಾಗಲು ಬ್ರಹ್ಮ ಆಕೆಗೆ ಅನುಮತಿ ನೀಡಿದ –ಎಂದು ಒಂದು ದಂತಕಥೆ ಇದೆ. ಬ್ರಹ್ಮಹತ್ಯಾ ಪಾಪವನ್ನು ತೊಳೆಯಲು ಶಿವ ಬಂದಾಗ ಈ ನದಿ ಅದೃಶ್ಯವಾಯಿತೆಂಬುದು ಇನ್ನೊಂದು ಕಥೆ.

ಪದ್ಮಪುರಾಣ, ಸ್ಕಾಂದಪುರಾಣ, ಮಹಾಭಾರತದ ವನಪರ್ವಗಳಲ್ಲಿ ಈ ನದಿಯ ಪ್ರಸ್ತಾಪವಿದೆ. ಅಲಹಾಬಾದಿನ ಸಮೀಪದಲ್ಲಿ ಗಂಗಾ ಯಮುನಾ ನದಿಗಳ ಸಂಗಮ ಸ್ಥಾನದಲ್ಲಿ ಸರಸ್ವತಿಯೂ ಗುಪ್ತಗಾಮಿನಿಯಾಗಿ ಬಂದು ಸೇರುತ್ತದೆ ಎಂಬ ನಂಬಿಕೆ ಇದೆ. ಆದ್ದರಿಂದಲೇ ಈ ಸ್ಥಾನಕ್ಕೆ ತ್ರಿವೇಣೀ ಸಂಗಮ ಎಂಬ ಹೆಸರು.

ಪರಮ ಪವಿತ್ರವೆಂದು ಭಾವಿಸಲಾಗಿರುವ ಭಾರತದ ಏಳು ನದಿಗಳಲ್ಲಿ ಸರಸ್ವತಿ ಒಂದು.

ಸರಸ್ವತಿ ಬಾಯಿ

ಮಾಲ್‌ಖೆಡಿ ಮಧ್ಯಪ್ರದೇಶದ ಒಂದು ಪುಟ್ಟ ಹಳ್ಳಿ. ಹಳ್ಳಿಯ ಪಕ್ಕದಲ್ಲೇ ನರ್ಮದಾ ನದಿ ಹರಿಯುತ್ತದೆ.



ಧೀರೆ : ಸರಸ್ವತಿ ಬಾಯಿ

1973ರ ಆಗಸ್ಟ್ 30ರ ರಾತ್ರಿ ನರ್ಮದಾದಲ್ಲಿ ಮಹಾಪೂರ ಬಂದು ಹಳ್ಳಿಯ ಬಹುಭಾಗ ಮುಳುಗಿತು. ಹಲವು ಜನ ನೆರೆಯಲ್ಲಿ ಸಿಕ್ಕಿಕೊಂಡು ಸುರಕ್ಷಿತ ಸ್ಥಳಕ್ಕೆ ಹೋಗುವ ದಾರಿ ಕಾಣದೆ ಹತಾಶರಾಗಿದ್ದರು. ವೃತ್ತಿಯಲ್ಲಿ ಮೀನುಗಾರರಾಗಿದ್ದು ದೋಣಿ ನಡೆಸುವುದರಲ್ಲಿ ನಿಪುಣತರಾಗಿದ್ದವರೂ ನೀರಿಗಿಳಿಯಲು ಹಿಂದೆಗೆದರು. ಆಗ ಹದಿನಾರು ವರ್ಷದ ಹುಡುಗಿ ಸರಸ್ವತಿ ಬಾಯಿ, ತಾನೊಬ್ಬಳೇ ಜನರನ್ನು ಅಪಾಯದಿಂದ ಪಾರುಮಾಡುತ್ತೇನೆ ಎಂದು ಒಂದು ದೋಣಿಯಲ್ಲಿ ಹೊರಟಳು. ನೀರಿಗೆ ಇಳಿಯುವುದು ಆತ್ಮಹತ್ಯೆ ಮಾಡಿಕೊಂಡಂತೆ –ಎಂದು ಜನರು ಎಚ್ಚರಿಕೆ ಕೊಟ್ಟರೂ, ಈಕೆ ಅದನ್ನು ಕಿವಿಯ ಮೇಲೆ ಹಾಕಿಕೊಳ್ಳಲಿಲ್ಲ. ನೀರಿನಲ್ಲಿ ಇಪ್ಪತ್ತನಾಲ್ಕು ಬಾರಿ ದೋಣಿ ನಡೆಸಿಕೊಂಡು ಹೋಗಿ, ಅಪಾಯದಲ್ಲಿದ್ದವರನ್ನು ರಕ್ಷಿಸಿದಳು. ಇಪ್ಪತ್ತನಾಲ್ಕು ಗಂಟೆಗಳ ಕಾಲ ಮೃತ್ಯುವಿನೊಡನೆ ಹೋರಾಡಿದಳು. ನೆರೆಯಲ್ಲಿ ಸಿಲುಕಿದ ಪ್ರತಿಯೊಬ್ಬರನ್ನೂ ಸುರಕ್ಷಿತ ಜಾಗಕ್ಕೆ ತಲಪಿಸಿದ ಮೇಲಷ್ಟೇ ಈಕೆ ವಿಶ್ರಾಂತಿ ಪಡೆದದಳು.

ಪವಾಡ ಎನಿಸುವಂಥ ಈ ಘಟನೆಯಿಂದ ಸರಸ್ವತಿ ಬಾಯಿಯ ಹೆಸರು ಭಾರತದಲ್ಲೆಲ್ಲ ಮನೆಮಾತಾಯಿತು. ಈಕೆ ಮಾಲ್‌ಖೆಡಿಯ ಕಾಶೀರಾಮ್ ಎಂಬ ಬಡ ಮೀನುಗಾರನ ಮಗಳು. ಚಿಕ್ಕಂದಿನಲ್ಲೇ ಇವಳು ತಾಯಿಯನ್ನು ಕಳೆದುಕೊಂಡಿದ್ದಳು. "ಕುಟುಂಬಕ್ಕೆ ಜೀವನಾಧಾರವಾದ ನದಿಯೇ ನಿನ್ನ ತಾಯಿ" ಎಂದು ಕಾಶೀರಾಮ್ ಸರಸ್ವತಿ ಬಾಯಿ ಅವರನ್ನು ಕುರಿತು ಹೇಳುವುದಿತ್ತು.

ಅಸಾಧಾರಣ ಧೈರ್ಯ, ಸಾಹಸಗಳಿಗಾಗಿ ಸರಸ್ವತಿ ಬಾಯಿಗೆ ವಿವಿಧ ಪಾರಿತೋಷಿಕಗಳು ದೊರೆತುವು.

ಸರಳಾದೇವಿ ಚೌಧುರಿ

ಅರವಿಂದ ಘೋಷರು ಬಂಗಾಳದ ಕ್ರಾಂತಿ ಚಟುವಟಿಕೆಗೆ ಪದಾರ್ಪಣ ಮಾಡಿಸಿದ ಮಹಾನ್ ಚೇತನ, ಸರಳಾದೇವಿ ಚೌಧುರಿ.

ಈಕೆ ರವೀಂದ್ರನಾಥ ಠಾಕೂರರ ಅಕ್ಕ ಸ್ವರ್ಣಕುಮಾರಿ ದೇವಿ ಮತ್ತು ಜಾನಕೀನಾಥ ಘೋಷಾಲರ ಮಗಳು. ಜನನ 1872. 1890ರಲ್ಲಿ ಪದವೀಧರೆಯಾದರು. ಲಾಹೋರ್ ಮುಖ್ಯ ನ್ಯಾಯಾಲಯದಲ್ಲಿ ನ್ಯಾಯವಾದಿ ಆಗಿದ್ದ ರಾಮಭುಜದತ್ತ ಚೌಧುರಿಯೊಡನೆ 1905ರಲ್ಲಿ ವಿವಾಹವಾಯಿತು. ಅವರ ಪತಿ ಪ್ರಮುಖ ಕಾಂಗ್ರೆಸ್ಸಿಗರು. ಅವರಿಗೆ ಆಜೀವ ಗಡೀಪಾರು ಶಿಕ್ಷೆಯಾಯಿತು.



ರಾಷ್ಟ್ರಸೇವೆ : ಸರಳಾದೇವಿ

1902ರಲ್ಲಿ ಅರವಿಂದರು ಜತೀಂದ್ರನಾಥ ಬ್ಯಾನರ್ಜಿಯವರನ್ನು ಪರಿಚಯ ಪತ್ರದೊಡನೆ ಈಕೆಯ ಬಳಿ ಕಳುಹಿಸಿ, ಕ್ರಾಂತಿ ಚಟುವಟಿಕೆಗೆ ಪ್ರೇರೇಪಿಸಿದರು. ಮೈಮೆನ್‌ಸಿಂಗ್‌ನ ಸುಹೃದ್ ಸಮಿತಿಯಲ್ಲಿ ಈಕೆ ಅಪಾರ ಆಸಕ್ತಿ ವಹಿಸಿದರು. ಅದರ ಸದಸ್ಯರು ಕುಸ್ತಿ, ಮುಷ್ಟಿಯುದ್ಧ, ಕಠಾರಿ ಮತ್ತು ಕತ್ತಿವರಸೆಗಳಲ್ಲಿ ಪರಿಣತಿ ಪಡೆಯುತ್ತಿದ್ದರು.

ಉರ್ದು ಪತ್ರಿಕೆ 'ಹಿಂದೂಸ್ಥಾನ್'ದ ಸಂಪಾದಕರಾಗಿರಲು ಲಾಹೋರ್ ಮುಖ್ಯ ನ್ಯಾಯಾಲಯ ಚೌಧುರಿಗೆ ಅನುಮತಿ ನೀಡದಿದ್ದಾಗ, ಸಂಪಾದಕಿಯಾಗಲು ಸರಳಾದೇವಿ ಮುಂದೆ ಬಂದರು. ಕೆಲವು ಕಾಲಾನಂತರ ಆ ಪತ್ರಿಕೆಯ ಇಂಗ್ಲಿಷ್ ಆವೃತ್ತಿ 'ಭಾರತಿ'ಯನ್ನು ಹೊರಡಿಸಲು ಆರಂಭಿಸಿದರು. ಯುವಜನರ ಮೇಲೆ ಪ್ರಭಾವ ಬೀರುವ ಭಾಷಣಗಳನ್ನು ಮಾಡಿದರು. ಇವು ಅಚ್ಚಾಗಿ ಅನೇಕ ಕಡೆ ಹಂಚಲ್ಪಟ್ಟವು ಕೂಡ.

ಜಲಿಯನ್‌ವಾಲಾ ಬಾಗ್ ದುರಂತ ನಡೆದ ಬಳಿಕ ಗಾಂಧೀಜೀ ಪಂಜಾಬಿಗೆ ಬಂದಿದ್ದಾಗ ಇವರಲ್ಲೇ ಇಳಿದುಕೊಂಡಿದ್ದರು. ಕ್ರಮೇಣ ಈಕೆಯೂ ಗಾಂಧೀವಾದದತ್ತ ತಿರುಗಿದರು. 1919ಂದ 45ರಲ್ಲಿ ತಮ್ಮ ಕೊನೆಗಾಲದವರೆಗೆ ಇವರು ನಿಷ್ಠಾವಂತ ಕಾಂಗ್ರೆಸ್ಸಿಗರಾಗಿದ್ದರು.

ಸರೋಜಿನಿ ನಾಯುಡು

'ಭಾರತದ ಕೋಗಿಲೆ' ಎಂದು ಪ್ರಖ್ಯಾತರಾದವರು ಸರೋಜಿನಿ ನಾಯುಡು.

ಸರೋಜಿನಿ ಹುಟ್ಟಿದ್ದು 1879 ಫೆಬ್ರವರಿ 13ರಂದು, ಹೈದರಾಬಾದಿನಲ್ಲಿ. ತಂದೆ ಅಘೋರನಾಥ ಚಟ್ಟೋಪಾಧ್ಯಾಯ, ತಾಯಿ ವರದ ಸುಂದರಿದೇವಿ. ತಂದೆ ವಿಜ್ಞಾನಿ, ತಾಯಿ ಕವಯಿತ್ರಿ. ಬಂಗಾಳದಿಂದ ಬಂದು ನಿಜಾಮ ರಾಜ್ಯದಲ್ಲಿ ನೆಲೆಸಿದ್ದರು. ಸರೋಜಿನಿಗೆ ಮೊದಲಿನಿಂದಲೂ ಓದಿನಲ್ಲಿ ವಿಶೇಷ ಆಸಕ್ತಿ. ಹನ್ನೆರಡು ವರ್ಷ ವಯಸ್ಸಿಗೆ ಮ್ಯಾಟ್ರಿಕ್ ಮುಗಿಸಿದ್ದಳು. 13ನೆಯ ವಯಸ್ಸಿಗೇ 1,400 ಸಾಲುಗಳ 'ಸರೋವರದ ಸುಕನ್ಯೆ' ಎಂಬ ಆಂಗ್ಲ ಕವನವೊಂದನ್ನು ಬರೆದು ಮುಗಿಸಿದ್ದಳು. ಸುಮಾರು 2,000 ಸಾಲುಗಳ ನಾಟಕ ಬರೆದದ್ದೂ ಆಗಲೇ. ಅಷ್ಟು ಹೊತ್ತಿಗಾಗಲೇ ಆಕೆಗೆ ಆಂಗ್ಲ ಸಾಹಿತ್ಯದ ಪೂರ್ಣ ಪರಿಚಯವಾಗಿತ್ತು.

1895ರಲ್ಲಿ ಕೇಂಬ್ರಿಜ್ ಸೇರಲು ಕುಮಾರಿ ಸರೋಜಿನಿ ಇಂಗ್ಲೆಂಡಿಗೆ ಹೊರಟರು. ಆದರೆ ಆರೋಗ್ಯ ಕೆಟ್ಟ ಕಾರಣ ಇಟಲಿ, ಸ್ವಿಟ್ಜರ್‌ಲೆಂಡ್‌ಗಳಲ್ಲಿ ಸುತ್ತಾಡಿ, ಭಾರತಕ್ಕೆ ಮರಳಿದರು.

ಡಾ. ನಾಯುಡು ಅವರನ್ನು ಸರೋಜಿನಿ ವಿವಾಹವಾದರು. ಪದ್ಮಜಾ, ಲೀಲಾಮಣಿ, ಜಯಸೂರ್ಯ, ರಣಧೀರ ಇವರ ನಾಲ್ವರು ಮಕ್ಕಳು.

ಭಾರತದ ಜನಜೀವನ, ಪ್ರಕೃತಿ ಇವುಗಳು ಸರೋಜಿನಿಯವರ ಕಾವ್ಯವಸ್ತು. 'ಚಿನ್ನದ ಹೊಸ್ತಿಲು', 'ಕಾಲದ ಪಕ್ಷಿ', 'ಮುರಿದ ರೆಕ್ಕೆ'



ಸರೋಜಿನಿ ನಾಯುಡು –ಗಾಂಧೀಜೀ ಜೊತೆ

ಈಕೆಯ ಕವನ ಸಂಗ್ರಹಗಳು. 'ಪಲ್ಲಕ್ಕಿ ಹೊರುವವರು'. 'ಭಾರತದ ನೇಯ್ಗೆಯವರು'. 'ಕೋರಮಂಡಲದ ಬೆಸ್ತರು' 'ಪದ್ಮಾಸನ ಬುದ್ಧ', 'ಬೃಂದಾವನದ ವೇಣುಲೋಲ'. ಈ ಕವನಗಳು ಭಾರತದಲ್ಲಷ್ಟೇ ಅಲ್ಲದೆ ಆಂಗ್ಲ ಸಾಹಿತಿಗಳ ಮೆಚ್ಚುಗೆಯನ್ನೂ ಪಡೆದಿವೆ.

"ರಾತ್ರಿಯೆಲ್ಲ ಅತ್ತ ಮಗುವಿನಂತೆ ಗಾಳಿ ಬೆಳಗಿನ ಮಡಿಲಲ್ಲಿ ಮಲಗಿದೆ"–ಇಂಥ ಸೊಗಸಾದ ಉಪಮಾನಗಳಿಗೆ ಹೆಸರಾದವರು ಸರೋಜಿನಿ.

ಸರೋಜಿನಿಯ ಆಂಗ್ಲ ಕಾವ್ಯ ಸಂಪತ್ತನ್ನು ಮೆಚ್ಚಿ ಲಂಡನಿನ ರಾಯಲ್ ಸೊಸೈಟಿ ಆಫ್ ಲಿಟರೇಚರ್ ಆಕೆಯನ್ನು ತನ್ನ ಗೌರವ ಸದಸ್ಯೆಯನ್ನಾಗಿ ಸೇರಿಸಿಕೊಂಡಿತು. 1941ರಲ್ಲಿ ಸರೋಜಿನಿ ಭಾರತೀಯ ಪಿ.ಇ.ಎನ್. (ಕವಿಗಳು, ನಿಬಂಧಕಾರರು. ಕಾದಂಬರಿಕಾರರು) ಸಂಸ್ಥೆಯ ಅಧ್ಯಕ್ಷೆಯಾದರು.

ಕಾವ್ಯ ರಚನೆಯಷ್ಟೇ ಸರೋಜಿನಿಯವರಿಗೆ ಪ್ರಿಯವಾಗಿದ್ದುದು ಸ್ವಾತಂತ್ರ್ಯ ಹೋರಾಟ. ದೇಶದ ಸ್ವಾತಂತ್ರ್ಯ ಸಮರದಲ್ಲಿ ಪಾಲ್ಗೊಂಡ ಧೀರ ಮಹಿಳೆಯರ ಅಗ್ರಪಂಕ್ತಿಯಲ್ಲಿ ಸರೋಜಿನಿಗೆ ಪ್ರಮುಖ ಸ್ಥಾನ. ಆಕೆ ಗಾಂಧೀಜಿಯ ಆಪ್ತ ಅನುಯಾಯಿಯಾಗಿದ್ದರು. ಗಾಂಧೀಜಿಯೊಡನೆ ಸಲಿಗೆಯ ಮಾತುಗಳನ್ನಾಡುವ ಸಲಿಗೆಯೂ ಆಕೆಗಿತ್ತು.

ಕಾಂಗ್ರೆಸ್ ಅಧಿವೇಶನಕ್ಕೆ ಅಧ್ಯಕ್ಷಿಣಿಯಾದ ಪ್ರಥಮ ಮಹಿಳೆ. ಸರೋಜಿನಿ.

ಭಾರತ ಸ್ವತಂತ್ರವಾದ ಮೇಲೆ ಉತ್ತರ ಪ್ರದೇಶದ ರಾಜ್ಯಪಾಲರಾಗಿ ಅತ್ಯಂತ ದಕ್ಷತೆಯಿಂದ ಅಧಿಕಾರ ನಿರ್ವಹಿಸಿದ ಸರೋಜಿನಿ 1949 ಮಾರ್ಚ್ 2ರಂದು ನಿಧನರಾದರು.

ನೋಡಿ: ಸಂಪುಟ ೧



ಶಿಕ್ಷಕ ಸರ್ವಪಲ್ಲಿ

ಸವಾಯಿ ಜಯಸಿಂಹ

ವೈಜ್ಞಾನಿಕ ವಿಷಯ ಸಂಗ್ರಹ ಮತ್ತು ಹಿಂದೂ, ಅರಬೀ ಹಾಗೂ ಪಾರಸೀ ವಿದ್ವಾಂಸರ ವಿಚಾರಧಾರೆಗಳು 16ನೆಯ ಶತಮಾನದಲ್ಲಿ ಪರಸ್ಪರ ಬೆರೆತುವು. ಇದರ ಅತ್ಯುನ್ನತ ಮಟ್ಟವೇ ಜಯಪುರದ ಮಹಾರಾಜನಾಗಿದ್ದ ಸವಾಯಿ ಜಯಸಿಂಹನ ಖಗೋಲವಿಜ್ಞಾನ ವಿಷಯ ಸಂಗ್ರಹಣೆ, ಪ್ರತಿಪಾದನೆ ಹಾಗೂ ವೀಕ್ಷಣಾಲಯಗಳ ರಚನೆ. ಶ್ರೇಷ್ಠ ಪಂಡಿತರನ್ನು ಒಟ್ಟುಗೂಡಿಸಿ ಭಾರತದ ಆಧುನಿಕ ವಿಜ್ಞಾನಕ್ಕೆ ಒಳ್ಳೆಯ ತಳಹದಿ ಹಾಕಿದ ರಾಜ, ಜಯಪುರದ ಸವಾಯಿ ಜಯಸಿಂಹ.

ಜಯಸಿಂಹ 1686ರಲ್ಲಿ ಜನಿಸಿದ. ಚಿಕ್ಕಂದಿನಿಂದಲೇ ಖಗೋಲವಿಜ್ಞಾನದಲ್ಲಿ ಅವನಿಗೆ ಒಲವು. ಬಹಳ ಶ್ರದ್ಧೆಯಿಂದ ಹಿಂದೂ ಖಗೋಲವಿಜ್ಞಾನ ವಿಷಯಗಳಲ್ಲಿ ಪರಿಶ್ರಮ ಪಡೆದ. ಅರಬೀ ಭಾಷಾಂತರದ ನೆರವಿನಿಂದ ಪ್ರಾಚೀನ ಗ್ರೀಕ್ ಗಣಿತಜ್ಞರಾದ ಟಾಲೆಮಿಯ 'ಅಲ್ಮಜೆಸ್ಟ್' ಹಾಗೂ ಯೂಕ್ಲಿಡನ 'ಸುಲಭ ಪಾಠಗಳು' ಈ ಬರೆಹಗಳ ಪರಿಚಯವನ್ನೂ ಜಯಸಿಂಹ ಮಾಡಿಕೊಂಡಿದ್ದ. ಖಗೋಲ ವಿಷಯವಾಗಿ ಅರಬರು ಬರೆದವನ್ನು ಓದಿಕೊಂಡಿದ್ದ.

ಆಗಿನ ಖಗೋಲವಿಜ್ಞಾನದ ಉಪಕರಣಗಳು ಜಯಸಿಂಹನಿಗೆ ದೋಷಪೂರ್ಣವಾಗಿ ಕಂಡುವು. ಅವುಗಳಲ್ಲಿ ಸಾಕಷ್ಟು ಸೂಕ್ಷ್ಮ ವಿಭಾಗಗಳಿರಲಿಲ್ಲ; ಸವೆತದಿಂದ ಕಾರ್ಯದಕ್ಷತೆ ಕಡಮೆಯಾಗುತ್ತಿತ್ತು. ಜಯಸಿಂಹ ಬೃಹತ್ ಉಪಕರಣಗಳನ್ನು ನಿರ್ಮಿಸಲು ಯೋಚಿಸಿದ. ಇವು ಕಲ್ಲು ಗಾರೆ ಇಟ್ಟಿಗೆಗಳಿಂದ ಕೂಡಿದಂಥವು. ಜಯಸಿಂಹನ ಈ ಪ್ರಯತ್ನದ ಫಲವೇ ಜಂತರ್‌ಮಂತರ್ ವೀಕ್ಷಣಾಲಯಗಳು. ಒಟ್ಟು ಐದು ಖಗೋಲ ವೀಕ್ಷಣಾಲಯಗಳನ್ನು ಅವನು ಕಟ್ಟಿಸಿದ. ಅವು ಜಯಪುರ, ದೆಹಲಿ, ಉಜ್ಜಯಿನಿ, ವಾರಾಣಸಿ ಹಾಗೂ ಮಥುರಾಗಳಲ್ಲಿವೆ. ಅವುಗಳಲ್ಲಿ 'ಜಂತರ್' ಅಥವಾ ಯಂತ್ರಗಳೇ ಉಪಕರಣಗಳು.

ಈ ವೀಕ್ಷಣಾಲಯಗಳಲ್ಲಿ ಅವಲೋಕಿಸಿ ದೊರೆತ ಅಂಶಗಳಿಂದ ನಿಖರ ಖಗೋಲ ಪಂಚಾಂಗಗಳನ್ನು ತಯಾರಿಸುವುದು ಅವನ ಉದ್ದೇಶವಾಗಿತ್ತು. ಜಯಸಿಂಹನ ಈ ಎಲ್ಲ ಪ್ರಯತ್ನಗಳಲ್ಲಿ ಅವನ ನೆರವಿಗೆ ಬಂದವನು ಖಗೋಲವಿಜ್ಞಾನಿ ಜಗನ್ನಾಥ ಪಂಡಿತ.

ಜಗನ್ನಾಥನ ಬರಹದಿಂದ ಜಯಸಿಂಹ ಖಗೋಲವಿಜ್ಞಾನ ಉಪಕರಣಗಳ ಬಳಕೆಯಲ್ಲಿ ಚತುರನಾಗಿದ್ದನೆಂದೂ ಹೊಸ ವಿಧಾನಗಳಲ್ಲಿ ಉತ್ಸುಕನಾಗಿದ್ದನೆಂದೂ ತಿಳಿದುಬರುತ್ತದೆ. ರಾಜನ ಆದೇಶದ ಮೇರೆಗೆ ಜಗನ್ನಾಥನು ಯೂಕ್ಲಿಡನ 'ಸುಲಭಪಾಠಗಳು' ಕೃತಿಯನ್ನು 'ರೇಖಾಗಣಿತ' ಎಂಬ ಶೀರ್ಷಿಕೆಯಲ್ಲಿ ಸಂಸ್ಕೃತಕ್ಕೆ ಭಾಷಾಂತರಿಸಿದ. ಟಾಲೆಮಿಯ 'ಅಲ್ಮಜೆಸ್ಟ್' ಕೃತಿ 'ಸಮ್ರಾಟ ಸಿದ್ಧಾಂತ' ಎಂಬ ಶೀರ್ಷಿಕೆಯಲ್ಲಿ ಭಾಷಾಂತರಿಸಲ್ಪಟ್ಟಿತು. ಜಯಸಿಂಹನ ಆಳ್ವಿಕೆಯಲ್ಲಿ ಇನ್ನೂ ಹಲವಾರು ವಿದೇಶೀ ಗಣಿತ ಬರೆಹಗಳು ಅನುವಾದಗೊಂಡುವು.

ಹೊಸ ವಿಧಾನಗಳು, ಹೊಸ ವಿಚಾರಗಳು, ಎಲ್ಲಿದ್ದರೂ ಅವನ್ನು ಸಂಗ್ರಹಿಸಬೇಕು. ಆಗ ಮಾತ್ರ ವಿಜ್ಞಾನದಲ್ಲಿ ಮುಂದುವರಿಯಬಹುದು– ಎನ್ನುವಷ್ಟು ಆಧುನಿಕ ವಿಚಾರಧಾರೆ ಸವಾಯಿ ಜಯಸಿಂಹನದು. ಐರೋಪ್ಯ ಖಗೋಲವಿಜ್ಞಾನ ಸಾಹಿತ್ಯ ಮತ್ತು ವಿಚಾರಗಳನ್ನು ಸಂಗ್ರಹಿಸುವುದಕ್ಕಾಗಿ

ಫಿಗರೆಡೊ ಎಂಬ ಕ್ರೈಸ್ತ ಸನ್ಯಾಸಿಯನ್ನು 1728 ಅಥವಾ 1729ರಲ್ಲಿ ಯುರೋಪಿಗೆ ಕಳುಹಿಸಿದ. ಫ್ರೆಂಚ್ ಖಗೋಳಜ್ಞನಾಗಿದ್ದ ಬೋಡೇರ್ ಎಂಬ ಕ್ರೈಸ್ತ ಪಾದ್ರಿಯನ್ನು ತನ್ನಲ್ಲಿಗೆ ಆಹ್ವಾನಿಸಿದ.

ಸವಾಯಿ ಜಯಸಿಂಹ ಚತುರ ಖಗೋಳಜ್ಞನಷ್ಟೇ ಅಲ್ಲದೆ ದಕ್ಷ ಆಡಳಿತಗಾರನೂ ಆಗಿದ್ದ.

1743ರಲ್ಲಿ ಅಕಾಲಮರಣಕ್ಕೆ ಈತ ತುತ್ತಾದಾಗ. ಈ ಎಲ್ಲ ಕೆಲಸಗಳು ಸ್ಥಗಿತವಾದುವು.

ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿ

ಭಾರತದ ಜನತೆಯ ಹಿತವನ್ನು ಎಲ್ಲ ಬಗೆಯ ಸಂವಿಧಾನಾತ್ಮಕ ನೆರವಿನಿಂದ ಸಾಧಿಸಲು. ಇದಕ್ಕಾಗಿ ರಾಷ್ಟ್ರೀಯ ಕಾರ್ಯಕರ್ತರನ್ನು ಸಂಘಟಿಸಿ, ತರಬೇತಿ ಕೊಡಲು. 1905ರಲ್ಲಿ ಗೋಪಾಲಕೃಷ್ಣ ಗೋಖಲೆಯವರು ಸ್ಥಾಪಿಸಿದ ಸಂಸ್ಥೆ 'ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿ'. ಇವರ ಅನಂತರ ವಿ.ಎಸ್. ಶ್ರೀನಿವಾಸಶಾಸ್ತ್ರೀ ಸಂಸ್ಥೆಯ ಅಧ್ಯಕ್ಷರಾದರು.

ಜನರಲ್ಲಿ ತಾಯ್ನಾಡನ್ನು ಕುರಿತ ಆಳವಾದ ಪ್ರೇಮಭಾವ ಮೂಡಿಸುವುದು : ಅದರ ಸಫಲತೆಗಾಗಿ ಸೇವೆ ಹಾಗೂ ತ್ಯಾಗಭಾವ, ರಾಜಕೀಯ ವಿದ್ಯಾಭ್ಯಾಸ ಹಾಗೂ ಚಳುವಳಿಯ ಸಂಘಟನೆ : ಬೇರೆ ಬೇರೆ ಮತಗಳ ನಡುವೆ ಸೌಹಾರ್ದ, ಸಹಕಾರ ಏರ್ಪಡಿಸುವುದು, ವಿದ್ಯಾಭ್ಯಾಸ ಆಂದೋಲನ. ಸ್ತ್ರೀಯರಿಗೆ. ಹಿಂದುಳಿದವರಿಗೆ ಹಾಗೂ ಕೈಗಾರಿಕಾ ಮತ್ತು ವೈಜ್ಞಾನಿಕ ಶಿಕ್ಷಣ ಆಂದೋಲನಗಳಿಗೆ ನೆರವು ನೀಡುವುದು : ನಿಮ್ನ ವರ್ಗದವರ ಏಳಿಗೆಗಾಗಿ ಶ್ರಮಿಸುವುದು – ಈ ದಿಸೆಯಲ್ಲಿ ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿಯ ಸದಸ್ಯರ ದುಡಿಮೆ.

ಸಂಸ್ಥೆಯ ಮುಖ್ಯ ಕಾರ್ಯಾಲಯ ಪುಣೆಯಲ್ಲಿದೆ. ಅಲ್ಲಿ ಸದಸ್ಯರಿಗಾಗಿ ವಸತಿ ಸೌಕರ್ಯವೂ ಇದೆ. ಒಳ್ಳೆಯ ಪುಸ್ತಕಭಂಡಾರವಿದೆ.

ಎಚ್.ಎನ್. ಕುಂಜ್ರು. ದಿನಕರ ದೇಸಾಯಿ–ಸೊಸೈಟಿಯ ಖ್ಯಾತ ಸದಸ್ಯರು. ಪಿ. ಕೋದಂಡರಾಯರು ಹಲವು ವರ್ಷ ಸೊಸೈಟಿಯ ಪ್ರಮುಖ ಸದಸ್ಯರಾಗಿದ್ದರು.

ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ ಅನೇಕ ಪ್ರಮುಖರು ಈ ಸಂಸ್ಥೆಯ ಸದಸ್ಯರು.

ನೋಡಿ : ಎಚ್. ಎನ್. ಕುಂಜ್ರು ; ಗೋಪಾಲಕೃಷ್ಣ ಗೋಖಲೆ ; ವಿ. ಎಸ್. ಶ್ರೀನಿವಾಸಶಾಸ್ತ್ರಿ

ಸರ್ವೋದಯ

ನೋಡಿ : ಸಂಪುಟ ೧

ಸಹಗಮನ

ಒಂದು ಚಿತೆ. ಮದುವಣಗಿತ್ತಿಯಂತೆ ಸಕಲ ಅಲಂಕಾರಗಳಿಂದ ಶೋಭಿಸುವ ಒಬ್ಬ ಸ್ತ್ರೀ ಆ ಚಿತೆಯನ್ನು ಸಮೀಪಿಸಿ ತನ್ನ ಆಭರಣಗಳೆಲ್ಲವನ್ನೂ ತೆಗೆದು ಬಂಧು ಬಾಂಧವರಿಗೆಲ್ಲ ಹಂಚುತ್ತಾಳೆ. ನಗುಮುಖದಿಂದ ಎಲ್ಲರನ್ನೂ ಬೀಳ್ಕೊಡುತ್ತಾಳೆ. ಸುತ್ತಲ ಜನರು "ಉಘೇ" ಎಂಬ ಜಯಕಾರ ಮಾಡುತ್ತಾರೆ. ಆಕೆ ಚಿತೆಯ ಮೇಲೆ ಮಲಗಿಸಿರುವ ಒಂದು ಪುರುಷ ದೇಹದ ಪಕ್ಕದಲ್ಲಿ ತಾನೂ ಮಲಗುತ್ತಾಳೆ. ಆ ಚಿತೆಗೆ ಬೆಂಕಿ ಹೊತ್ತಿಸುತ್ತಾರೆ. ಉರಿಯುವ ಚಿತೆಯಲ್ಲಿ ತಾನೂ ಉರಿದು ಬೂದಿಯಾಗುತ್ತಾಳೆ. ಚಿತೆಯ ಮೇಲಿದ್ದ ಪುರುಷದೇಹ ಆ ಸ್ತ್ರೀಯ ಪತಿಯದು. ಸ್ತ್ರೀ ಅವನ ಹೆಂಡತಿ.

ಹೀಗೆ ಹೆಂಡತಿ ತನ್ನ ಗಂಡನೊಡನೆ ಪ್ರಾಣ ಬಿಡುವುದಕ್ಕೆ ಸಹಗಮನ ಅಥವಾ 'ಸತಿ' ಪದ್ಧತಿ ಎಂದು ಹೆಸರು. ಸಹಗಮನ ಎಂಬ ಮಾತಿನ ಅರ್ಥ ' ಜೊತೆಯಲ್ಲಿ ಹೋಗುವುದು ' ಎಂದು.

ಋಗ್ವೇದದಲ್ಲಿ ಕಂಡುಬರುವ ಸಹಗಮನದ ಪ್ರಸ್ತಾಪ ಕೇವಲ ಸಾಂಕೇತ ರೂಪದ್ದು. ಸತ್ತವನ ಮಡದಿಯನ್ನು ಅವನ ದೇಹದ ಪಕ್ಕದಲ್ಲಿ ಮಲಗಿಸುತ್ತಿದ್ದರು. ಅವನ ಬಿಲ್ಲನ್ನು ಶವದ ಕೈಯಲ್ಲಿರಿಸಿ ಮತ್ತೆ ಹಿಂದಕ್ಕೆ ತೆಗೆದುಕೊಳ್ಳುತ್ತಿದ್ದರು. ಜೀವನಕ್ಕೆ ಹಿಂದಿರುಗುವಂತೆ ಸತ್ತವನ ಪತ್ನಿಯನ್ನು ಕರೆಯುತ್ತಿದ್ದರು.

ಭಾರತದಲ್ಲಿ ಸಹಗಮನ ಸರ್ವಸಾಮಾನ್ಯ ಪದ್ಧತಿಯೇನೂ ಆಗಿರಲಿಲ್ಲ. ಅಲೆಗ್ಸಾಂಡರನ ದಾಳಿಯನ್ನು ಕುರಿತ ಲೇಖನಗಳಲ್ಲಿ ಸಹಗಮನದ ಉಲ್ಲೇಖ ಬರುತ್ತದೆ.

ಮಧ್ಯ ಪ್ರದೇಶದ ಸಾಗರದ ಬಳಿ 510ರಲ್ಲಿ ಸ್ಥಾಪಿಸಿದ ಮಾಸ್ತಿಕಲ್ಲು ನಮಗೆ ದೊರೆತಿರುವ ಅತಿ ಹಳೆಯ ಸತಿ ಸ್ಮಾರಕ. ಅನಂತರ ಇಂಥ ಮಾಸ್ತಿಕಲ್ಲುಗಳು ನಮ್ಮ ದೇಶದ ಅನೇಕ ಪ್ರದೇಶಗಳಲ್ಲಿ ಕಾಣಬರುತ್ತವೆ. ಮಾಸ್ತಿಕಲ್ಲು ಎಂದರೆ ಮಹಾಸತಿಯೊಬ್ಬಳು ಸಹಗಮನ ಮಾಡಿದ್ದನ್ನು ಸೂಚಿಸುವ ಸ್ಮಾರಕಶಿಲೆ.

ರಜಪೂತರಲ್ಲಿ ಸಹಗಮನ ಒಂದು ವಿಶಿಷ್ಟ ರೀತಿಯಲ್ಲಿ ನಡೆಯುತ್ತಿತ್ತು. ಒಂದು ರಜಪೂತ ಕೋಟೆ ಶತ್ರುವಿನ ವಶವಾಗುವ ಸೂಚನೆ ಸಿಕ್ಕರೆ, ಅಲ್ಲಿನ ಯೋಧರೆಲ್ಲರೂ ಕಡೆಯುಸಿರಿರುವವರೆಗೂ ಅದರ ರಕ್ಷಣೆಗೋಸ್ಕರ ಹೋರಾಡಿ ಸಾಯುತ್ತಿದ್ದರು. ಅವರ ಹೆಂಡತಿಯರು ಕೋಟೆಯೊಳಗೆ ಒಂದು ದೊಡ್ಡ ಅಗ್ನಿಕುಂಡವನ್ನು ರಚಿಸಿ. ಅದರಲ್ಲಿ ಬಿದ್ದು ಪ್ರಾಣಬಿಡುತ್ತಿದ್ದರು. ಇದು ಜೋಹರ್. ಇಂಥ ಜೋಹರ್‌ಗಳು ನಡೆದ ಬಗೆಗೆ ಚಾರಿತ್ರಿಕ ಉಲ್ಲೇಖಗಳಿವೆ. ವೈರಿಯ ಕೈಗೆ ಸಿಕ್ಕಿ ಅಪಮಾನಹೊಂದಬಾರದೆಂಬುದು ಇದಕ್ಕೆ ಪ್ರಧಾನ ಪ್ರೇರಣೆ.

'ಮಹಾಭಾರತ'ದಲ್ಲಿ ಬರುವ ಉಲ್ಲೇಖಗಳನ್ನು ನೋಡಿದರೆ ಸಹಗಮನದ ಬಗೆಗೆ ಒತ್ತಾಯವಿರಲಿಲ್ಲವೆಂಬುದು ಸ್ಪಷ್ಟವಾಗುತ್ತದೆ. ಸ್ವಂತ ಅಪೇಕ್ಷೆಯಿಂದ ಸಹಗಮನ ಮಾಡಲು ಅವಕಾಶವಿತ್ತು.

ಭಾರತದ ಗವರ್ನರ್ ಜನರಲ್ ಆಗಿದ್ದ ವಿಲಿಯಂ ಬೆಂಟಿಂಕ್ 1828ರಲ್ಲಿ ಸಹಗಮನ ಪದ್ಧತಿಯನ್ನು ಕಾನೂನಿನ ಮೂಲಕ ವಿರೋಧಿಸಿದ. ಬಂಗಾಳದ ರಾಜಾ ರಾಮಮೋಹನ ರಾಯರ ನೇತೃತ್ವದಲ್ಲಿ ಅನೇಕ ಹಿಂದುಗಳು ಇದಕ್ಕೆ ಬೆಂಬಲಕೊಟ್ಟರು. ಈ ಕಾನೂನು ಆಚರಣೆಗೆ ಬಂದ ಮೇಲೆ ಸಹಗಮನ ನಿಂತುಹೋಯಿತು.

ನೋಡಿ : ರಾಜಾ ರಾಮಮೋಹನ ರಾಯ್ ; ವಿಲಿಯಂ ಬೆಂಟಿಂಕ್
ಮಾಸ್ತಿಕಲ್ಲು—ಸಂಪುಟ ೮

ಸಹಾ ಬೀಜ ಭೌತವಿಜ್ಞಾನ ಸಂಸ್ಥೆ

ಭಾರತದಲ್ಲಿ ಬೀಜ ಭೌತ ವಿಜ್ಞಾನದ ಅಧ್ಯಯನ–ಸಂಶೋಧನೆಗಳಿಗೆ ಮೀಸಲಾದ ಒಂದು ಪ್ರಮುಖ ಸಂಸ್ಥೆ—ಕಲ್ಕತ್ತೆಯಲ್ಲಿರುವ ಸಹಾ ಬೀಜ ಭೌತ ವಿಜ್ಞಾನ ಸಂಸ್ಥೆ.

ಬೀಜಭೌತ ವಿಜ್ಞಾನ ಕ್ಷೇತ್ರದಲ್ಲಿ ವಿಶೇಷವಾಗಿ ದುಡಿದ ಮೇಘನಾದ ಸಹಾ (ಜನನ : ಅಕ್ಟೋಬರ್ 6, 1893 ; ನಿಧನ : ಫೆಬ್ರವರಿ 16, 1956)

ಸೈಕ್ಲೋಟ್ರಾನ್, ಎಲೆಕ್ಟ್ರಾನ್ ಸೂಕ್ಷ್ಮದರ್ಶಕ ಮೊದಲಾದ ಆಧುನಿಕ ಸಾಧನಗಳನ್ನು ಸ್ಥಾಪಿಸಿ ಕಲ್ಕತ್ತೆಯಲ್ಲಿ ಬೀಜ ಭೌತವಿಜ್ಞಾನದ ಅಧ್ಯಯನಕ್ಕೆ ತೆಟ್ಟಿನ ಸೌಲಭ್ಯ ಒದಗಿಸಿದರು.

1948ರಲ್ಲಿ ಅನೌಪಚಾರಿಕವಾಗಿ ಕಲ್ಕತ್ತಾ ವಿಶ್ವವಿದ್ಯಾಲಯದ ಆವರಣ ದಲ್ಲಿ ಬೀಜ ಭೌತವಿಜ್ಞಾನ ಸಂಸ್ಥೆ ಆರಂಭವಾಯಿತು. ಸಹಾ ಬೀಜ ಭೌತವಿಜ್ಞಾನ ಸಂಸ್ಥೆ ಎಂದು 1950ರಲ್ಲಿ ಅಧಿಕೃತವಾಗಿ ಕರೆಯಲ್ಪಟ್ಟಿತು.

ಇಲ್ಲಿನ ಸಂಶೋಧನಾ ಕ್ಷೇತ್ರಗಳು : ಎಲೆಕ್ಟ್ರಾನ್ ಸೂಕ್ಷ್ಮದರ್ಶಕ ವ್ಯವಸ್ಥೆ ವಿವಿಧ ಜೀವಿಯ ರೋಗಾಣುಗಳ ಅಧ್ಯಯನ ; ಬೀಜ ಪ್ರತಿಕ್ರಿಯೆಗಳು : ಅಣು ಜೀವವಿಜ್ಞಾನ : ರೇಡಿಯೋ ರಸಾಯನವಿಜ್ಞಾನ : ಘನಸ್ಥಿತಿ ಭೌತ ವಿಜ್ಞಾನ ; ಸ್ಫಟಿಕ ರಚನೆ : ತಾಂತ್ರಿಕ ಭೌತವಿಜ್ಞಾನ : ಸೈದ್ಧಾಂತಿಕ ಬೀಜೀಯ ಭೌತವಿಜ್ಞಾನ ಇತ್ಯಾದಿ,

ನೋಡಿ : ಸಹಾ, ಮೇಘನಾದ –ಸಂಪುಟ ೩

ಸಹ್ಯಾದ್ರಿ

ನೋಡಿ : ಪಶ್ಚಿಮ ಘಟ್ಟಗಳು

ಸ್ವತಂತ್ರ ಪಕ್ಷ

1959 ಆಗಸ್ಟ್ ತಿಂಗಳಲ್ಲಿ ಸ್ವತಂತ್ರ ಪಕ್ಷ ರೂಪುಗೊಂಡಿತು. ಜಾತಿ, ಮತ, ವ್ಯಕ್ತಿ, ರಾಜಕೀಯ ಆಸಕ್ತಿಗಳೆಂಬ ಭೇದಭಾವವಿಲ್ಲದೆ ಎಲ್ಲ ಜನರಿಗೂ ಸಮಾನ ಅವಕಾಶ ಹಾಗೂ ಸಾಮಾಜಿಕ ನ್ಯಾಯ ದೊರೆಯು ವಂತೆ ಮಾಡುವುದು ತನ್ನ ಧ್ಯೇಯ ಎಂದು ಆ ಪಕ್ಷ ಸಾರಿತು. ಪ್ರಜಾ ಸತ್ತೆಗೆ ಅನುಗುಣವಾದ ವಿಧಾನಗಳಿಂದ ಈ ಧ್ಯೇಯವನ್ನು ಸಾಧಿಸುವುದು ಪಕ್ಷದ ಕಾರ್ಯವಿಧಾನ.

ಕೃಷಿಗೆ ಅಧಿಕ ಮಹತ್ವ ನೀಡುವುದು, ಚಿಕ್ಕ ಮತ್ತು ಮಧ್ಯಪ್ರಮಾಣ ಕೈಗಾರಿಕೆಗಳಿಗೆ ಪ್ರಾಶಸ್ತ್ಯ, ರಾಷ್ಟ್ರ ರಕ್ಷಣೆ, ವಿದ್ಯಾಭ್ಯಾಸ, ಧಾರ್ಮಿಕ ಸ್ವಾತಂತ್ರ್ಯ, ಪತ್ರಿಕಾ ಸ್ವಾತಂತ್ರ್ಯ ಮುಂತಾದುವುಗಳ ಸುಧಾರಣೆ ಪಕ್ಷದ ಉದ್ದೇಶಗಳು.

ಭಾರತದ ಪ್ರಜೆ –ಅವನು ಕೃಷಿಕ, ಕುಶಲಕರ್ಮಿ, ಸಣ್ಣ ವ್ಯಾಪಾರಗಾರ, ಯಾರೇ ಆಗಿರಲಿ– ಯಾವ ನಿರಂಕುಶ ಹಿಡಿತಕ್ಕೂ ಒಳಗಾಗದೆ ತನ್ನ ವೃತ್ತಿಯನ್ನು ನಡೆಸುತ್ತ ಅಭಿವೃದ್ಧಿ ಹೊಂದುವ ರೀತಿಯಲ್ಲಿ, ಪ್ರಜಾಸತ್ತೆ ಕೆಲಸಮಾಡಬೇಕು ; ಸಾಮಾನ್ಯ ಜನರೆಲ್ಲರಿಗೂ ಲಾಭಕರವಾದ ಉದ್ಯೋಗವನ್ನು ಒದಗಿಸುವುದರ ಮೂಲಕ, ಅವರು ಉತ್ತಮ ಜೀವನ ಸೌಕರ್ಯಗಳನ್ನು ಸಾಧಿಸಿಕೊಳ್ಳುವಂತೆ ಮಾಡುವುದು ಸರಕಾರದ ಪ್ರಧಾನ ಲಕ್ಷ್ಯವಾಗಿರಬೇಕು —ಎಂಬುದು ಸ್ವತಂತ್ರ ಪಕ್ಷದ ಖಚಿತ ಅಭಿಪ್ರಾಯ.

ಚಕ್ರವರ್ತಿ ಸಿ. ರಾಜಗೋಪಾಲಾಚಾರಿ ಅವರು ಸ್ವತಂತ್ರ ಪಕ್ಷದ ಸ್ಥಾಪಕರಲ್ಲಿ ಒಬ್ಬರು. ಎನ್. ಜಿ. ರಂಗ, ಕೆ. ಎಂ. ಮುನ್ಷಿ ಮತ್ತು ಮಿನೂ ಮಸಾನಿ ಇತರ ಸ್ಥಾಪಕ ಸದಸ್ಯರು. ಗಾಯತ್ರೀದೇವಿ, ಪಿಲೂ ಮೋದಿ, ಆರ್. ಎನ್. ಸಿಂಗ್ ದೇವ್, ಎನ್. ದಾಂಡೇಕರ್ ಮೊದಲಾ ದವರು ಈ ಪಕ್ಷದ ಮುಂದಾಳುಗಳು.

[illegible] ಚುನಾವಣೆಯಲ್ಲಿ ಭಾರತದ [illegible] ರಾಜ್ಯ ವಿಧಾನ ಮಂಡಲ [illegible] ಸ್ಥಾನಗಳನ್ನು ಗಳಿಸಿಕೊಂಡಿದೆ. 1967ರ ಸಾರ್ವತ್ರಿಕ ಚುನಾವಣೆಯ ಅನಂತರ ಸ್ವತಂತ್ರ ಪಕ್ಷ ಒಡಿಸ್ಸಾ ರಾಜ್ಯದಲ್ಲಿ ಮಂತ್ರಿಮಂಡಲ ರಚಿಸಿತು.

ನೋಡಿ : ಎನ್.ಜಿ. ರಂಗ ; ಕೆ.ಎಂ. ಮುನ್ಷಿ ; ಪಿಲೂ ಮೋದಿ ; ಮಿನೂ ಮಸಾನಿ ; ಸಿ. ರಾಜಗೋಪಾಲಾಚಾರಿ

ಸ್ವದೇಶೀ ಚಳುವಳಿ

1905ರಲ್ಲಿ ಬಂಗಾಳದ ವಿಭಜನೆಯಾದಾಗ ಭಾರತದ ಸ್ವಾತಂತ್ರ್ಯ ಹೋರಾಟಕ್ಕೆ ಒಂದು ಹೊಸ ಹುರುಪು ಮೂಡಿತು. ಈ ಸಮಯಕ್ಕೆ ಆರಂಭವಾದ ವಂಗಭಂಗ ವಿರೋಧಿ ಚಳುವಳಿಯ ಅಂಗ, ಸ್ವದೇಶೀ ಚಳುವಳಿ. ಇದು ಸ್ವಾವಲಂಬನೆಯ ಮಾರ್ಗ ತೋರಿಸಿತು.

ಬ್ರಿಟಿಷ್ ಸರಕಾರ ವಂಗ ವಿಭಜನೆ ಮಾಡಲು ನಿಶ್ಚಯಿಸಿದಾಗ, ಕಾಂಗ್ರೆಸ್ಸಿನಲ್ಲಿದ್ದ ಉಗ್ರ ಹಾಗೂ ಸೌಮ್ಯವಾದಿಗಳಿಬ್ಬರೂ ವಿರೋಧಿಸಿದರು. ದಾದಾಭಾಯಿ ನವರೋಜಿ, ಗೋಪಾಲಕೃಷ್ಣ ಗೋಖಲೆ, ಲೋಕಮಾನ್ಯ ತಿಲಕ್, ಲಾಲಾ ಲಜಪತರಾಯ್, ಬಿಪಿನ ಚಂದ್ರ ಪಾಲ್ ಇವರೆಲ್ಲ ಇದರ ಮುಂದಾಳುಗಳು. ಬ್ರಿಟಿಷರಿಂದ ತಯಾರಿಸಲ್ಪಟ್ಟ ಪದಾರ್ಥಗಳನ್ನು ಬಹಿಷ್ಕಾರ ಮಾಡುವ ನಿರ್ಧಾರ ಕೈಗೊಂಡರು. ಬಂಗಾಳದ ಜನಪ್ರಿಯ ನಾಯಕ ಕೃಷ್ಣಕುಮಾರ ಮಿತ್ರ "ಸ್ವದೇಶೀ ಪದಾರ್ಥಗಳು ದೊರೆಯುವಾಗ ಎಷ್ಟೇ ಅನಾನುಕೂಲತೆಗಳಿದ್ದರೂ ಎಂದಿಗೂ ವಿದೇಶೀ ಪದಾರ್ಥ ಗಳನ್ನು ಬಳಸೆವು ಎಂದು, 'ತಾಯಿನಾಡಿನ ಹೆಸರಿನಲ್ಲಿ, ಆಕೆಯ ಒಳಿತಿ ಗಾಗಿ, ಹೀಗೆ ಪ್ರತಿಜ್ಞೆ ಕೈಗೊಳ್ಳೋಣ" ಎಂದು ಕರೆ ಇತ್ತರು.

ಆದರೆ ಬ್ರಿಟಿಷ್ ಸರಕಾರ ಈ ಬೆದರಿಕೆಗೆ ಮಣಿಯದೆ, ಬಂಗಾಳವನ್ನು ವಿಭಜಿಸಿತು. ಇದರಿಂದ ಸ್ವಾತಂತ್ರ್ಯ ಚಳುವಳಿ ಹಬ್ಬಿತು, ಸ್ವದೇಶೀ ಕಲ್ಪನೆ ಜನರ ಮನಸ್ಸಿನಲ್ಲಿ ನಾಟಿತು.

ಅಲ್ಲಲ್ಲಿ ಬೆಂಕಿ ಉರಿಸಿ ಜನ ವಿದೇಶೀ ಬಟ್ಟೆಗಳನ್ನು ಸುಟ್ಟರು. ವಿದೇಶೀ ಸಾಮಾನುಗಳನ್ನು ಮಾರುವ ಅಂಗಡಿಗಳು ಮಾರಾಟ ನಡೆಸದಂತೆ ತಡೆ ಕಾವಲು ಹಾಕಿದರು. ಪಾಶ್ಚಾತ್ಯ ವಿದ್ಯಾಸಂಸ್ಥೆಗಳನ್ನು ಬಹಿಷ್ಕರಿಸಿದರು. ಕೈಮಗ್ಗ ಉದ್ಯಮ ಮತ್ತೆ ಚಿಗುರಿತು. ಕಾಲೇಜು ವಿದ್ಯಾರ್ಥಿಗಳು ಬ್ರಿಟನಿನಲ್ಲಿ ತಯಾರಾದ ಕಾಗದದ ಮೇಲೆ ಬರೆಯಲು ನಿರಾಕರಿಸಿದರು.

ಸ್ವದೇಶೀ ಚಳುವಳಿಯಿಂದ ಭಾರತದ ದೇಶೀ ಉದ್ಯಮಕ್ಕೆ ಪುಟ ಕೊಟ್ಟಂತಾಯಿತು. ಅದರಲ್ಲಿಯೂ ಬಂಗಾಳದಲ್ಲಿ ಅನೇಕ ದೇಶೀ ಕೈಗಾರಿಕೆಗಳು ತಲೆಯೆತ್ತಿದುವು.

ನೋಡಿ : ವಂಗಭಂಗ
ಸ್ವದೇಶೀ, ವಿದೇಶೀ –ಸಂಪುಟ ೧

ಸ್ವಯಂವರ

ಮದುವೆಯಾಗಲಿರುವ ಹೆಣ್ಣು ತನ್ನ ಗಂಡನನ್ನು ತಾನೇ ಆರಿಸುವುದು— ಸ್ವಯಂವರ. ರಾಮಾಯಣ ಮಹಾಭಾರತಗಳಲ್ಲೂ ರಘುವಂಶ ಮುಂತಾದ ಕಾವ್ಯಗಳಲ್ಲೂ ಸ್ವಯಂವರದ ವರ್ಣನೆಗಳಿವೆ. ಈ ಪದ್ಧತಿ ಕ್ಷತ್ರಿಯರಲ್ಲಿ ಬಹು ಹಿಂದಿನಿಂದಲೂ ಆಚರಣೆಯಲ್ಲಿತ್ತು ; ಹನ್ನೆರಡನೆಯ ಶತಮಾನದ ವರೆಗೂ ನಡೆದುಬಂತು.

ಪ್ರಾಪ್ತವಯಸ್ಕಳಾದ ವಧುವಿನ ತಂದೆ, ತನ್ನ ಸ್ಥಾನಮಾನಗಳಿಗೆ ತಕ್ಕಂಥವರನ್ನು ತನ್ನ ಮಗಳ ಸ್ವಯಂವರಕ್ಕಾಗಿ ಆಹ್ವಾನಿಸುತ್ತಿದ್ದ. ಆ ಆಹ್ವಾನವನ್ನು ಮನ್ನಿಸಿ ಬಂದವರೆಲ್ಲರನ್ನೂ ಸ್ವಯಂವರ ಮಂಟಪದ

ಕೂಡಿಸುತ್ತಿದ್ದ. ವಧುವಿಗೆ ಬಂದಿರುವ ರಾಜಕುಮಾರರ ಒಬ್ಬೊಬ್ಬನ ವಂಶ, ಪರಾಕ್ರಮಗಳನ್ನು ಹೇಳುತ್ತಿದ್ದರು. ವಧು ತನಗೆ ಮೆಚ್ಚಿಗೆ ಯಾದವನ ಕೊರಳಿಗೆ ಮಾಲೆ ಹಾಕುತ್ತಿದ್ದಳು. ಅನಂತರ ಅವರ ವಿವಾಹ ನಡೆಯುತ್ತಿತ್ತು. ಇದು ಸಾಮಾನ್ಯವಾಗಿ ಸ್ವಯಂವರದ ವಿಧಾನ.

ಕೆಲವು ಸಂದರ್ಭಗಳಲ್ಲಿ ಸ್ವಯಂವರಕ್ಕೆ ಬಂದಿದ್ದವರು ತಮ್ಮ ಶೌರ್ಯ, ಸಾಹಸಗಳನ್ನು ಪ್ರದರ್ಶಿಸಿ ವೀರಪರೀಕ್ಷೆಯಲ್ಲಿ ಗೆಲ್ಲಬೇಕಾಗುತ್ತಿತ್ತು. ಹಾಗೆ ಗೆದ್ದವನನ್ನು ವಧು ವರಿಸುತ್ತಿದ್ದಳು. ರಾಮ ಶಿವಧನುಸ್ಸನ್ನು ಮುರಿದು ಸೀತೆಯನ್ನು ಪಡೆದ. ಅರ್ಜುನ ಮತ್ಸ್ಯಯಂತ್ರವನ್ನು ಭೇದಿಸಿ ದ್ರೌಪದಿಯನ್ನು ವಿವಾಹವಾದ.

ಇತಿಹಾಸ ಕಾಲದಲ್ಲಿ ಕನೌಜದ ರಾಜಪುತ್ರಿ ಸಂಯುಕ್ತೆಯ ಸ್ವಯಂವರ ಪ್ರಸಿದ್ಧವಾದದ್ದು. ಅವಳು ತನ್ನ ತಂದೆಯ ವೈರಿಯಾಗಿದ್ದ ಪೃಥ್ವೀರಾಜನನ್ನು ಮೆಚ್ಚಿಕೊಂಡಿದ್ದಳು. ತಂದೆ ಜಯಚಂದನು ಪೃಥ್ವೀರಾಜನನ್ನು ಸ್ವಯಂವರಕ್ಕೆ ಕರೆಯಲಿಲ್ಲ. ಅವಮಾನಗೊಳಿಸಲೆಂದು, ಅವನ ಪ್ರತಿಮೆಯೊಂದನ್ನು ಮಾಡಿಸಿ ಬಾಗಿಲುಕಾಯುವವನ ಸ್ಥಾನದಲ್ಲಿರಿಸಿದ್ದ. ಸ್ವಯಂವರಕ್ಕೆ ಬಂದ ಸಂಯುಕ್ತೆ ಪೃಥ್ವೀರಾಜನ ವಿಗ್ರಹಕ್ಕೆ ಮಾಲೆ ಹಾಕಿದಳು. ಹತ್ತಿರದಲ್ಲೇ ಅಡಗಿಕೊಂಡಿದ್ದ ಪೃಥ್ವೀರಾಜ ಒಡನೆಯೇ ಅವಳನ್ನು ಎತ್ತಿ ತನ್ನ ಕುದುರೆಯ ಮೇಲೆ ಹಾಕಿದ. ಅನಂತರ ತನ್ನ ರಾಜಧಾನಿಯಲ್ಲಿ ಅವಳನ್ನು ಮದುವೆಯಾದ. ಇದು ನಡೆದದ್ದು ಹನ್ನೆರಡನೆಯ ಶತಮಾನದ ಕೊನೆಯ ಭಾಗದಲ್ಲಿ.


ನೋಡಿ : ಪೃಥ್ವೀರಾಜ್ ಚೌಹಾಣ್

ಸ್ವರಣ್ ಸಿಂಗ್

ಭಾರತ ಸರಕಾರದ ವಿವಿಧ ಖಾತೆಗಳ ಮಂತ್ರಿಯಾಗಿ ದೀರ್ಘ ಕಾಲ ರಾಷ್ಟ್ರಕ್ಕೆ ನಾನಾ ಮುಖಗಳಲ್ಲಿ ಸೇವೆಸಲ್ಲಿಸಿರುವವರು ಸರದಾರ್ ಸ್ವರಣ್ ಸಿಂಗ್.

ಸ್ವರಣ್ ಸಿಂಗ್ ಹುಟ್ಟಿದ್ದು 1907 ಆಗಸ್ಟ್ 19ರಂದು. ಲಾಹೋರಿನಲ್ಲಿ ಪ್ರೌಢವಿದ್ಯಾಭ್ಯಾಸ ಪಡೆದರು, ಎಂ.ಎಸ್‌ಸಿ. ಪರೀಕ್ಷೆಯಲ್ಲಿ ಉತ್ತೀರ್ಣರಾದರು. ನ್ಯಾಯಶಾಸ್ತ್ರ ಅಭ್ಯಸಿಸಿ ಎಲ್‌ಎಲ್.ಬಿ. ಪರೀಕ್ಷೆಯಲ್ಲಿ ತೇರ್ಗಡೆಯಾದರು.

ಮೊದಲಿನಿಂದಲೂ ರಾಜಕೀಯ ವಿಚಾರಗಳಲ್ಲಿ ಆಸಕ್ತಿಯಿದ್ದ ಸ್ವರಣ್ ಸಿಂಗ್ 1946ರಲ್ಲಿ ನಡೆದ ಚುನಾವಣೆಯಲ್ಲಿ ಪಂಜಾಬಿನ ಶಾಸನಸಭಾ ಸದಸ್ಯರಾಗಿ ಚುನಾಯಿತರಾದರು. ಮಂತ್ರಿಮಂಡಲವನ್ನು ಸೇರಿದರು.



ಸ್ವರಣ್ ಸಿಂಗ್

1946–47ರಲ್ಲಿ ಪಾಕಿಸ್ತಾನ ರೂಪುಗೊಳ್ಳುವ ಸಿದ್ಧತೆಗಳು ನಡೆದು, ಪಂಜಾಬು ಇಬ್ಭಾಗವಾದ ಸನ್ನಿವೇಶ. ಪಂಜಾಬಿನ ವಿಭಜನೆಯ ಪರಿಣಾಮವಾಗಿ ಉಂಟಾದ ಅಶಾಂತ ಪರಿಸ್ಥಿತಿಯಲ್ಲಿ ಶಾಂತಿ, ವ್ಯವಸ್ಥೆಯ ಸಾಧನೆಯ ಬಗೆಗೆ ಪಂಜಾಬ್ ಸರಕಾರಕ್ಕೆ ದಿನದಿನವೂ ಸಲಹೆ ಸೂಚನೆಗಳನ್ನು ಕೊಡುವ ಸಮಿತಿಯ ಸದಸ್ಯರಾಗಿ ಸ್ವರಣ್ ಸಿಂಗ್ ಕೆಲಸ ಮಾಡಿದರು. ಅಲ್ಲದೆ ಪಂಜಾಬಿನ ಆಸ್ತಿಪಾಸ್ತಿಗಳನ್ನು ವಿಭಜಿಸುವ ಕಾರ್ಯಗಳಿಗೆ ಸಂಬಂಧಿಸಿದ ಸಮಿತಿಯ ಸದಸ್ಯರಾಗಿ ಸೇವೆ ಸಲ್ಲಿಸಿದರು.

ಪಂಜಾಬ್ ರಾಜ್ಯದಲ್ಲಿ ಕೆಲ ಕಾಲ ಮಂತ್ರಿಯಾಗಿದ್ದು, ಮುಂದೆ ಲೋಕಸಭೆಗೆ ಚುನಾಯಿತರಾದರು. ಕೇಂದ್ರ ಸರಕಾರದ ಮಂತ್ರಿ ಮಂಡಲವನ್ನು ಸೇರಿದರು.

1954ರಲ್ಲಿ ವಿಶ್ವಸಂಸ್ಥೆಯ ಆರ್ಥಿಕ ಮತ್ತು ಸಾಮಾಜಿಕ ಮಂಡಲಿಯ ಸಭೆಗೆ ಭಾರತದ ಪ್ರತಿನಿಧಿಯಾಗಿ, 1955ರಲ್ಲಿ ರಷ್ಯಕ್ಕೆ ಭೇಟಿಕೊಟ್ಟ ಭಾರತ ನಿಯೋಗದ ನಾಯಕರಾಗಿ, 1964ರಲ್ಲಿ ನಡೆದ ಅಲಿಪ್ತರಾಷ್ಟ್ರಗಳ ವಿದೇಶಾಂಗ ಮಂತ್ರಿಗಳ ಸಮ್ಮೇಳನದಲ್ಲಿ, ಅದೇ ವರ್ಷ ನಡೆದ ವಿಶ್ವಸಂಸ್ಥೆಯ ಮಹಾ ಸಭೆಯಲ್ಲಿ ಭಾರತದ ಪ್ರತಿನಿಧಿಯಾಗಿ ಸ್ವರಣ್ ಸಿಂಗ್ ಸೇವೆಸಲ್ಲಿಸಿದ್ದಾರೆ.

1971ರಲ್ಲಿ ಅಧಿಕಾರ ಸ್ವೀಕರಿಸಿದ ಕೇಂದ್ರ ಮಂತ್ರಿಮಂಡಲದಲ್ಲಿ ಸ್ವರಣ್ ಸಿಂಗ್ ಭಾರತದ ವಿದೇಶಾಂಗ ಮಂತ್ರಿಯಾದರು.

ಸ್ವರಾಜ್ಯ

ಸ್ವರಾಜ್ಯ ಎಂದರೆ ಸ್ವಯಮಾಡಳಿತ ವ್ಯವಸ್ಥೆ. ಇದನ್ನು ಸಾಧಿಸುವುದು ಭಾರತೀಯ ಸ್ವಾತಂತ್ರ್ಯ ಸಂಗ್ರಾಮದ ಧ್ಯೇಯವಾಗಿತ್ತು.

ದಾದಾಭಾಯಿ ನವರೋಜಿ ಅವರು 'ಸ್ವರಾಜ್ಯ' ಜಯಮಂತ್ರವನ್ನು 1906ರ ಕಾಂಗ್ರೆಸ್ ಅಧಿವೇಶನದಲ್ಲಿ ಬಿತ್ತಿದರು. ಭಾರತದಲ್ಲಿ ಆರಂಭವಾಗಿದ್ದ ಮಹಾನ್ ಆಂದೋಲನವನ್ನು ಪ್ರಸ್ತಾಪಿಸಿ ಭಾರತೀಯರಿಗೆ ಸುರಾಜ್ಯವಲ್ಲ, ಸ್ವರಾಜ್ಯ ಬೇಕು —ಎಂದು ಕರೆಯಿತ್ತರು. ಆಡಳಿತದ ಎಲ್ಲ ವ್ಯವಹಾರಗಳೂ ಭಾರತೀಯರ ಕೈಯಲ್ಲಿ ಇರಬೇಕು ಎನ್ನುವುದು ಸ್ವರಾಜ್ಯವನ್ನು ಕುರಿತ ಅವರ ವ್ಯಾಖ್ಯೆ. ಜಾಗೃತ ಭಾರತಕ್ಕೆ ನವರೋಜಿಯವರು ನೀಡಿದ ಆ ಸಂದೇಶ ಆದೇಶವಾಯಿತು.

ಇದನ್ನೇ ಮುಂದೆ ಗಾಂಧೀಜೀ ತಮ್ಮ 'ಹಿಂದ್ ಸ್ವರಾಜ್ಯ' ಎಂಬ ಪುಸ್ತಕದಲ್ಲಿ (1908) 'ಸ್ವರಾಜ್ಯ ಎಂದರೇನು ?' ಎಂಬ ಅಧ್ಯಾಯದಲ್ಲಿ ಪ್ರಸ್ತಾಪಿಸಿದರು. ಬ್ರಿಟಿಷ್ ಸರಕಾರದ ಆಡಳಿತದಲ್ಲಿ ದಿನೇ ದಿನೇ ಭಾರತದ ಸಂಪತ್ತು ಕ್ಷೀಣಗೊಳ್ಳುತ್ತಿದೆ. ಉತ್ತಮ ಅಧಿಕಾರಸ್ಥಾನಗಳೆಲ್ಲ ಅವರಿಗೇ ಮೀಸಲು; ನಾವು ಗುಲಾಮರಂತೆ ಇದ್ದೇವೆ; ನಮ್ಮ ಸಂಪ್ರದಾಯ ಭಾವನೆಗಳ ಬಗೆಗೆ ಅವರು ಅನಾದರ ತೋರುತ್ತಾರೆ: ಇವುಗಳಿಂದ ಮುಕ್ತಿ ಪಡೆಯಬೇಕಾದರೆ ಸ್ವರಾಜ್ಯ ನಮ್ಮದಾಗಬೇಕು — ಎಂದು ಗಾಂಧೀಜೀ ವಿವರಿಸಿದರು.

'ಸ್ವರಾಜ್ಯ ನನ್ನ ಜನ್ಮಸಿದ್ಧ ಹಕ್ಕು ; ಅದನ್ನು ನಾನು ಪಡೆದೇ ತೀರುವೆ' ಎಂದು ಗರ್ಜಿಸಿದವರು ಬಾಲಗಂಗಾಧರ ತಿಲಕರು. 1918ನೆಯ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷರಾಗಿ ಇವರು, ಸ್ವರಾಜ್ಯ ಗೊತ್ತುವಳಿ ಅಂಗೀಕೃತವಾಗುವಂತೆ ಮಾಡಿದರು. 1920ರಲ್ಲಿ ನಡೆದ ವಿಶೇಷ ಅಧಿವೇಶನದಲ್ಲಿ ನ್ಯಾಯ ಹಾಗೂ ಶಾಂತಿಯುತ ವಿಧಾನಗಳಿಂದ 'ಸ್ವರಾಜ್ಯ'ವನ್ನು ಪಡೆಯುವುದೇ ತನ್ನ ಗುರಿ ಎಂದು ಕಾಂಗ್ರೆಸ್ ಸಾರಿತು. "ಸಾಧ್ಯವಿದ್ದರೆ ಬ್ರಿಟಿಷ್ ಸಾಮ್ರಾಜ್ಯದಲ್ಲೇ ಸ್ವಯಂ ಆಡಳಿತ ; ಅವಶ್ಯವಿದ್ದರೆ ಅದರಿಂದ ಹೊರಗೆ" ಹೀಗೆಂದು ಸ್ವರಾಜ್ಯದ ಅರ್ಥ ವಿವರಣೆಯನ್ನು ಮಾಡಲಾಯಿತು.

ಜವಾಹರಲಾಲ ನೆಹರೂ ಅವರು ಅಧ್ಯಕ್ಷರಾಗಿದ್ದ 1929ರ ಕಾಂಗ್ರೆಸ್ ಅಧಿವೇಶನದಲ್ಲಿ ಸಂಪೂರ್ಣ ಸ್ವಾತಂತ್ರ್ಯ ಅಥವಾ ಸ್ವರಾಜ್ಯ ತನ್ನ ಗುರಿ ಎಂದು ಕಾಂಗ್ರೆಸ್ ಸ್ಪಷ್ಟಪಡಿಸಿತು.

ಹೀಗೆ ಸುಮಾರು ನೂರು ವರ್ಷ ಕಾಲ ಸ್ವರಾಜ್ಯಕ್ಕಾಗಿ ನಡೆದ ಚಳುವಳಿಯ ಪ್ರತಿಫಲ, ಭಾರತದ ಸಂಪೂರ್ಣ ಸ್ವಾತಂತ್ರ್ಯ.

ನೋಡಿ : ಸ್ವಾತಂತ್ರ್ಯ ಹೋರಾಟ

ಸ್ವರಾಜ್ಯ ಪಕ್ಷ

ಕಾಂಗ್ರೆಸ್ಸಿನ ಅಂಗಸಂಸ್ಥೆಯಾಗಿ ಹುಟ್ಟಿದ್ದು, ಸ್ವರಾಜ್ಯ ಪಕ್ಷ. 1920ರ ದಶಕದ ಕೆಲವು ವರ್ಷ ಕಾಲ ಇದು ಅತ್ಯಂತ ಪ್ರಭಾವೀ ಪಕ್ಷವಾಗಿದ್ದಿತು.

ಅಸಹಕಾರ ಚಳವಳಿಯ ಬಿರುಸು ತಗ್ಗಿ, ಗಾಂಧೀಜೀ ಆಶ್ರಮ ಜೀವನಕ್ಕೆ ಗಮನ ಕೊಡುತ್ತಿದ್ದಾಗ, ರಾಷ್ಟ್ರೀಯತಾ ಆಂದೋಲನ ಸ್ವಲ್ಪ ಕಳೆಗುಂದಿದಾಗ, ವಿದೇಶೀ ಆಳ್ವಿಕೆಯನ್ನು ಸ್ವರಾಜ್ಯ ಪಕ್ಷ ಹುರುಪಿನಿಂದ ಪ್ರತಿಭಟಿಸಿತು. ಆಗಿನ ಕಾಂಗ್ರೆಸ್ಸು ಶಾಸನಸಭೆಯ ಮೆಟ್ಟಿಲು ಹತ್ತಿದ್ದು ಸ್ವರಾಜ್ಯಪಕ್ಷದಿಂದಾಗಿ.

ಸ್ವರಾಜ್ಯ ಪಕ್ಷ ಸ್ಥಾಪಕರಲ್ಲಿ ಪ್ರಮುಖರು ಚಿತ್ತರಂಜನ ದಾಸ್ ಮತ್ತು ಮೋತೀಲಾಲ ನೆಹರೂ. 1922ರ ಕಾಂಗ್ರೆಸ್ ಅಧಿವೇಶನದ ಅನಂತರ ಇದು ರೂಪುಗೊಂಡಿತು. ಅಧ್ಯಕ್ಷರಾಗಿ ದಾಸ್ ಆಯ್ಕೆಯಾದರು. ಕಾರ್ಯದರ್ಶಿಗಳಲ್ಲಿ ಒಬ್ಬರು ಮೋತೀಲಾಲ ನೆಹರೂ. ಸ್ವರಾಜ್ಯ ಪಕ್ಷ ಅಸಹಕಾರ ಚಳುವಳಿಯಲ್ಲಿ ಕಾಂಗ್ರೆಸಿನ ಜಾಡನ್ನು ತುಳಿಯಿತು. ಆದರೆ ಕೌನ್ಸಿಲ್ (ಪ್ರಾದೇಶಿಕ ಸರಕಾರೀ ಆಡಳಿತ ಸಂಸ್ಥೆ) ಪ್ರವೇಶದಲ್ಲಿ ಮಾತ್ರ ತನ್ನದೇ ಸ್ವತಂತ್ರ ದಾರಿ ಹಿಡಿಯಿತು. 1923ರ ಚುನಾವಣೆಗಳಲ್ಲಿ ಹೋರಾಡಿ ಸ್ವರಾಜ್ಯಪಕ್ಷ ದೊಡ್ಡ ಬಹುಮತ ಗಳಿಸಿತು. ಹೀಗೆ, ಸ್ವರಾಜ್ಯಪಕ್ಷ ಕೌನ್ಸಿಲ್‌ಗಳನ್ನು ಹೊಕ್ಕು, ಸರಕಾರದೊಡನೆ ಹೋರಾಡತೊಡಗಿತು. ದಾಸ್, ಮೋತೀಲಾಲರಂಥ ವ್ಯಕ್ತಿಗಳು ಈ ಕೌನ್ಸಿಲುಗಳಲ್ಲಿ ಹೂಡುತ್ತಿದ್ದ ವಾದಗಳು, ಮಾಡಿದ ಅಮೋಘ ಭಾಷಣಗಳು, ಇತಿಹಾಸ ಪ್ರಸಿದ್ಧವಾದುವು.

ಸ್ವಲ್ಪ ಕಾಲದ ಬಳಿಕ ಸ್ವರಾಜ್ಯ ಪಕ್ಷ ಮತ್ತು ಮಾತೃಸಂಸ್ಥೆ ಕಾಂಗ್ರೆಸ್ ನಡುವೆ ಭಿನ್ನಾಭಿಪ್ರಾಯಗಳು ತಲೆದೋರಿದುವು. ಕಾಂಗ್ರೆಸ್ ಇನ್ನೇನು ಒಡೆಯಬಹುದು ಎನ್ನುವ ಪರಿಸ್ಥಿತಿ ಬಂದಾಗ, ಗಾಂಧೀಜೀ ಅದನ್ನು ನಿವಾರಿಸಿದರು ; 1925ರಲ್ಲಿ ಸ್ವರಾಜ್ಯ ಪಕ್ಷದ ಹೆಚ್ಚು ಪ್ರಮುಖರನ್ನು ಕಾಂಗ್ರೆಸಿನ ಕಾರ್ಯಕಾರಿ ಸಮಿತಿಗೆ ತೆಗೆದುಕೊಂಡರು. ಆ ವರ್ಷ ಚುನಾವಣೆಯಲ್ಲಿ ಸ್ವರಾಜ್ಯಪಕ್ಷ ಮತ್ತೆ ಎಲ್ಲ ಕಡೆಗಳಲ್ಲೂ ಹೆಚ್ಚು ಸಂಖ್ಯೆಯಲ್ಲಿ ಜಯ ಗಳಿಸಿತು. ಆದರೆ ಬಹುಮತ ದೊರೆಯಲಿಲ್ಲ.

ಮುಂದೆ ಕಾಂಗ್ರೆಸ್ ನಡೆಸುತ್ತಿದ್ದ ಸ್ವಾತಂತ್ರ್ಯ ಸಮರ ಪ್ರಖರವಾದಂತೆ ಸ್ವರಾಜ್ಯ ಪಕ್ಷ ಬಲಹೀನವಾಯಿತು.


ನೋಡಿ : ಚಿತ್ತರಂಜನದಾಸ್ ; ಮೋತೀಲಾಲ ನೆಹರೂ

ಸ್ವಸ್ತಿಕ

ಸ್ವಸ್ತಿಕ—ಶುಭ ಚಿಹ್ನೆ. ಸು, ಅಸ್ತಿ, ಕ ಸೇರಿ ಈ ಪದ ಆಗಿದೆ. 'ಒಳ್ಳೆಯದಾಗಿರುವುದು' ಎಂಬ ಅರ್ಥ.

ಪರಸ್ಪರ ಛೇದಿಸುವ, ಬಾಗಿಸಿದ ಬಾಹುಗಳ ಆಕಾರದಲ್ಲಿ ಸ್ವಸ್ತಿಕ ಚಿಹ್ನೆಯಿದೆ.

ಹಿಂದೂಧರ್ಮದಲ್ಲಿ ಸ್ವಸ್ತಿಕಕ್ಕೆ ಎರಡು ಮೂಲಗಳಿವೆ ಎನ್ನುತ್ತಾರೆ. ಚಕ್ರದ ಅರಗಳ ಸಂಕೇತವಾಗಿ 4 ಅಂಗಗಳನ್ನು ಸಮಕೋನದಲ್ಲಿ ಇಟ್ಟಿರುವುದು ಒಂದನೆಯದು. ನಾಗದ ಹಾಗಾಗ್ಗಿಗಳಲ್ಲಿ ಎರಡು ಸರ್ಪಗಳನ್ನು ಒಂದನ್ನೊಂದು ಛೇದಿಸುವಂತೆ ಇಟ್ಟಿರುವುದು



ಎರಡನೆಯದು. ನಾಗರಹಾವಿನ ಹೆಡೆಯಲ್ಲಿ ಸ್ವಸ್ತಿಕ ಚಿಹ್ನೆ ಇದೆ ಎನ್ನುತ್ತಾರೆ.

ನಾಗ ಜನ, ನಾಗಪೂಜಕರು. ಅವರ ಸಂಸ್ಕೃತಿಯೊಂದಿಗೆ ಸ್ವಸ್ತಿಕದ ಸಂಬಂಧವಿದೆ.

ಭಾರತದಲ್ಲಿ ಎರಡು ಬಗೆ ಸ್ವಸ್ತಿಕಗಳನ್ನು ಗುರುತಿಸುತ್ತಾರೆ. ಮೊದಲನೆಯದು ವಸಂತದ ಸೂರ್ಯನನ್ನು ಪ್ರತಿನಿಧಿಸುವ ಬಲಗೈ ಅಥವಾ ಪುರುಷ ಸ್ವಸ್ತಿಕ. ಇದರ ಅಡ್ಡಗೆರೆಯ ಬಲ ಕೊನೆಯ ಬಾಹು ಕೆಳಗೆ ಬಾಗಿದ್ದು, ಉಳಿದ ಮೂರು ಬಾಹುಗಳೂ ಅದೇ ದಿಕ್ಕಿನಲ್ಲಿ ಬಾಗಿರುತ್ತವೆ : ಪ್ರದಕ್ಷಿಣಾಕಾರದಲ್ಲಿರುತ್ತವೆ. ಎಡಗೈ ಅಥವಾ ಸ್ತ್ರೀ ಸ್ವಸ್ತಿಕ ಶರತ್ಕಾಲದ ಸೂರ್ಯನನ್ನು ಪ್ರತಿನಿಧಿಸುತ್ತದೆ. ಅಪ್ರದಕ್ಷಿಣವಾಗಿರುವ ಇದು ಅಶುಭ ಎಂದು ಎಣಿಸುತ್ತಾರೆ. ಮಹಾರಾಷ್ಟ್ರದಲ್ಲಿ ಮಳೆಗಾಲದಲ್ಲಿ ಮಹಿಳೆಯರು ಸ್ವಸ್ತಿಕವನ್ನು ಬರೆದು ಪೂಜಿಸುತ್ತಾರೆ.

ಆರ್ಯರ ಸೂರ್ಯ ಉಪಾಸನೆಯಲ್ಲಿ ಇದು ಅನಿವಾರ್ಯ ಅಂಶ. ಸೂರ್ಯನ ಪ್ರತಿನಿಧಿಯಾಗಿ ಈ ಚಿಹ್ನೆಯ ಬಳಕೆ ಎಂದು ನಂಬಿಕೆ.

ಹಿಟ್ಲರನ ನೇತೃತ್ವದಲ್ಲಿ ಜರ್ಮನಿಯಲ್ಲಿ ತಿರುಗುಮುರುಗಾದ ಸ್ವಸ್ತಿಕ ರಾಷ್ಟ್ರೀಯ ಸಂಕೇತವಾಯಿತು.

ಸಾಂಕೃತ್ಯಾಯನ

ಬಾಲ್ಯದ ಹೆಸರು ಕೇದಾರನಾಥ್ ಪಾಂಡೆ ; ಜನನ 1893 ಏಪ್ರಿಲ್ 9. ಅರಬೀ, ಪಾರಸೀ, ಸಂಸ್ಕೃತಾಭ್ಯಾಸ. 19–20ರ ವಯಸ್ಸಿನಲ್ಲಿ ಒಂದು ವರ್ಷಕಾಲ ಒಂದು ಮಠದ ಉತ್ತರಾಧಿಕಾರಿಯಾಗಿದ್ದರು. ಆಗ ಅವರ ಹೆಸರು ರಾಮೋದಾರಸಾಧು. ಮುಂದೆ ರಾಹುಲ ಎಂದು ಹೆಸರಿಟ್ಟುಕೊಂಡರು. 44ನೆಯ ವಯಸ್ಸಿನಲ್ಲಿ ಸೋವಿಯೆತ್ ದೇಶದಲ್ಲಿ ರಷ್ಯನ್ ಮಹಿಳೆಯನ್ನು ಮದುವೆಯಾದರು. ಅವರ ಮಗ ಇಗೋರ್ ರಾಹುಲೋವಿಚ್. ಭಾರತಕ್ಕೆ ಮರಳಿದ ರಾಹುಲರು 57ನೇ ವಯಸ್ಸಿನಲ್ಲಿ ಕಮಲಾರನ್ನು ವಿವಾಹವಾದರು. ಇವರಿಗೆ ಇಬ್ಬರು ಮಕ್ಕಳು : ಮಗಳು ಜಯಾ : ಮಗ ಜೇತಂ.

ಅವರು ರಚಿಸಿದ ಕೃತಿಗಳು 150. 1959–61ರಲ್ಲಿ ಸಿಂಹಳದಲ್ಲಿ (ಈಗ ಶ್ರೀಲಂಕಾ) ದರ್ಶನ ಶಾಸ್ತ್ರದ ಮಹಾಚಾರ್ಯರಾಗಿದ್ದರು, 1961ರಲ್ಲಿ ಸ್ಮೃತಿಲೋಪದ ಆಘಾತಕ್ಕೆ ಗುರಿಯಾದರು. 1963 ಏಪ್ರಿಲ್ 14 ರಂದು ನಿಧನರಾದರು.

ಅವರನ್ನು ಹುಡುಕಿ ಬಂದ ಬಿರುದುಗಳು ಹಲವು : 'ವಿದ್ಯಾಲಂಕಾರ ಪರಿಷೇಣ', 'ಮಹಾಪಂಡಿತ', 'ಸಾಹಿತ್ಯ ಚಕ್ರವರ್ತಿ', 'ಡಿ.ಲಿಟ್'. ಸ್ಮೃತಿಲೋಪವಾದಮೇಲೆ 'ಪದ್ಮಭೂಷಣ' ಬಂತು.

ಅವರು ಹಿಂದೀ, ಉರ್ದು, ಪಾಳಿ, ಸಂಸ್ಕೃತ, ಅರಬೀ, ಪಾರಸೀ, ತಮಿಳು, ಕನ್ನಡ, ಇಂಗ್ಲಿಷ್, ಫ್ರೆಂಚ್, ರಷ್ಯನ್, ತಿಬತಿ ಭಾಷೆಗಳನ್ನು ಅರಿತಿದ್ದರು.

ನೋಡಿ : ರಾಹುಲ ಸಾಂಕೃತ್ಯಾಯನ –ಸಂಪುಟ ೫

ಸಾಂಖ್ಯ ದರ್ಶನ

ಮಹರ್ಷಿ ಕಪಿಲ ಸಾಂಖ್ಯದರ್ಶನದ ಪ್ರವರ್ತಕ. ಸುಮಾರು ಕ್ರಿ. ಪೂ. ೮೦೦ರಲ್ಲೇ ಈ ದರ್ಶನ ಪ್ರಚಲಿತವಿದ್ದಿತು. ಬುದ್ಧ ಈ ದರ್ಶನದಿಂದ ಪ್ರಭಾವಿತನಾಗಿದ್ದ ಎಂಬ ಅಭಿಪ್ರಾಯವಿದೆ.

ಪ್ರಕೃತಿ ಮತ್ತು ಪುರುಷಗಳ ಭಿನ್ನತೆಯೇ ಸಾಂಖ್ಯದರ್ಶನದ ಸಾರ.

ವಿಶ್ವದ ವಿಕಾಸಕ್ಕೆ ಕಾರಣವಾಗಿರುವ ಭೌತಿಕ ಮೂಲತತ್ತ್ವ, ಪ್ರಕೃತಿ. ಪ್ರಕೃತಿಯಿಂದ ಬೇರೆಯಾದದ್ದು ಪುರುಷ. ಪ್ರಕೃತಿ ಅಚೇತನ; ಪುರುಷ ಚೇತನಾತ್ಮಕ.

ಪ್ರಕೃತಿ–ಪುರುಷರ ಸಂಬಂಧವನ್ನು ಸ್ಪಷ್ಟವಾಗಿ ಅರ್ಥಮಾಡಿಕೊಳ್ಳುವುದರಿಂದ ಮಾನವ ದುಃಖಿಯಾತನೆಗಳಿಂದ ಬಿಡುಗಡೆ ಪಡೆಯಬಲ್ಲ—ಎಂದು ಸಾಂಖ್ಯದರ್ಶನ ಸಾರುತ್ತದೆ.

ಜಗತ್ತನ್ನು ತತ್ತ್ವಗಳನ್ನಾಗಿ ವಿಂಗಡಿಸಿ ಅಭ್ಯಸಿಸಿದುದರಿಂದ, ಈ ದರ್ಶನಕ್ಕೆ 'ಸಾಂಖ್ಯ' ಎಂಬ ಹೆಸರು ಬಂತೆಂದು ಪ್ರತೀತಿ. ಆದರೆ ಸಾಂಖ್ಯ ಎಂಬುದಕ್ಕೆ 'ಜ್ಞಾನ,' 'ವಿಚಾರ' ಎಂಬ ಅರ್ಥಗಳೂ ಇವೆ.

ಭಾರತೀಯ ತತ್ತ್ವಜ್ಞಾನದ ಮೇಲೆ ಸಾಂಖ್ಯದರ್ಶನದ ಪ್ರಭಾವ ಅಪಾರವಾದದ್ದು. 'ಮಹಾಭಾರತ', ಪುರಾಣಗಳು, ಇನ್ನೂ ಅನೇಕ ಭಾರತೀಯ ಸಾಹಿತ್ಯಗಳಲ್ಲಿ ಇದರ ಪ್ರಭಾವವನ್ನು ಕಾಣಬಹುದು.

ಸಾಂಖ್ಯದರ್ಶನದ ವ್ಯಾಖ್ಯಾನಕಾರರಲ್ಲಿ ಐದನೆಯ ಶತಮಾನದ ಈಶ್ವರ ಕೃಷ್ಣ ಪ್ರಮುಖ.

ನೋಡಿ : ಕಪಿಲ : ದರ್ಶನಗಳು

ಸಾಂಚಿ

ಪಾಳಿಭಾಷೆಯ ಶಾಂತಿ ಎಂಬ ಪದದ ಅಪಭ್ರಂಶ ಸಾಂಚಿ. ಜನಸಂಗುಳಿಯಿಂದ ದೂರವಾಗಿ, ಲೋಕಕಲ್ಯಾಣ ಮತ್ತು ಶಾಂತಿಗಳಿಗಾಗಿ ಬೌದ್ಧ ಭಿಕ್ಷುಗಳು ತಾವು ಧ್ಯಾನಮಾಡಲು ಪ್ರಶಾಂತ ಜಾಗವನ್ನು ಅರಸುತ್ತಿದ್ದರು. ಅಲ್ಲಿ ಚೈತ್ಯ, ವಿಹಾರಗಳನ್ನು ಕಟ್ಟಿಕೊಳ್ಳುತ್ತಿದ್ದರು.

ಇಂಥ ಶಾಂತ ವಾತಾವರಣದಲ್ಲಿ ಸಾಂಚಿಸ್ತೂಪವಿದೆ. ಮಧ್ಯಪ್ರದೇಶದ ಭೋಪಾಲ್‌ನಿಂದ ಅಲ್ಲಿಗೆ 28 ಮೈಲು ದೂರ. ಸಾಂಚಿ ರೈಲು ನಿಲ್ದಾಣದಿಂದ ಸ್ತೂಪಕ್ಕೆ ಒಂದು ಮೈಲು.

ಭಾರತದ ಅತ್ಯಂತ ಪುರಾತನ ವಾಸ್ತುಶಿಲ್ಪ ರಚನೆಗಳಲ್ಲಿ ಸಾಂಚಿಯ ಬೃಹತ್ ಸ್ತೂಪವೂ ಒಂದು. ಇದರ ಎತ್ತರ ಸುಮಾರು 54 ಅಡಿ. ವ್ಯಾಸ ಸುಮಾರು 120 ಅಡಿ. ಮೊದಲಿಗೆ ಅಶೋಕ ಕ್ರಿ. ಪೂ. 3ನೆಯ ಶತಮಾನದಲ್ಲಿ ಇಟ್ಟಿಗೆಯಿಂದ ಇದನ್ನು ಕಟ್ಟಿಸಿದ. ಮೇಲಿನ ಕಲ್ಲು ಹಾಗೂ ಸುತ್ತಲ ಕಟಾಂಜನ ಮತ್ತು ಪ್ರವೇಶ ದ್ವಾರಗಳು ಅನಂತರ ಸೇರಿಸಲ್ಪಟ್ಟುವೆಂದು ಅಭಿಪ್ರಾಯ.

ಸ್ತೂಪದ ನೋಟ ಹೀಗಿದೆ: ಒಂದು ಎತ್ತರಿಸಿದ ವೇದಿಕೆಯ ಮೇಲೆ ದೊಡ್ಡ ಗುಮ್ಮಟ. ಇದರ ಮೇಲ್ಭಾಗದಲ್ಲಿ ಕಟಾಂಜನವಿರುವ 'ಹರ್ಮಿಕ'. ಹರ್ಮಿಕದ ಮಧ್ಯೆ ಕಂಬದಂಥ ಭಾಗ 'ದಂಡ'. ಇದರ ತುದಿಗೆ ಬಿಡಿಸಿದ ಕೊಡೆಯಂತೆ ಕಾಣುವ 'ಛತ್ರ'. ಇದು ಧರ್ಮದ ಒಡೆತನದ ಸಂಕೇತ. ವೇದಿಕೆಯ ಮೇಲೆ, ಗುಮ್ಮಟದ ಸುತ್ತಲೂ ಪ್ರದಕ್ಷಿಣೆ ಬರಲು ದಾರಿಯಿದೆ. ವೇದಿಕೆ ಹತ್ತಲು ಮೆಟ್ಟಿಲುಗಳಿವೆ. ಸ್ತೂಪದ ಸುತ್ತ ಕಲ್ಲಿನ ಕಟಾಂಜನವಿದೆ. ಇದರಿಂದಾಚೆ ನಾಲ್ಕು ಕಡೆಗೆ 'ತೋರಣ' ಅಥವಾ ಪ್ರವೇಶದ್ವಾರಗಳು. ದ್ವಾರದ ಮೇಲಿನ ಪಟ್ಟಿಗಳು. [illegible] ಅರಣ್ಯ. [illegible] ಆನೆಗಳು. [illegible] ದೃಶ್ಯ. ಅತ್ಯಂತ ಅಲಂಕಾರಿಕ ಪುಷ್ಪ ವಿನ್ಯಾಸಗಳು ತೋರಣದಲ್ಲಿ ರೂಪಿಸಲ್ಪಟ್ಟಿವೆ. ಈ ಶಿಲ್ಪಕೃತಿ ಆಗಿನ ಸಂಸ್ಕೃತಿಗೆ ಕನ್ನಡಿ ಹಿಡಿಯುತ್ತದೆ. ಬೌದ್ಧ [illegible] ವ್ಯಕ್ತಿತ್ವಗಳ ಶ್ರದ್ಧೆ. [illegible] ಉತ್ಸಾಹ —ಇವೆಲ್ಲ ಶಿಲ್ಪಕೃತಿಯಲ್ಲಿ ಅಡಕವಾಗಿವೆ.



ಸಾಂಚಿಯ ಅಶೋಕ ಸ್ತೂಪ

ಬುದ್ಧನ ಶಿಷ್ಯರಾದ ಸಾರಿಪುತ್ರ, ಮೌದ್ಗಲ್ಯಾಯನರ ಅವಶೇಷಗಳು ಸಾಂಚಿಯಲ್ಲಿ ದೊರೆತುವು. ಬ್ರಿಟಿಷರು ತಮ್ಮ ದೇಶಕ್ಕೆ ತೆಗೆದುಕೊಂಡು ಹೋಗಿ ಲಂಡನ್ ಮ್ಯೂಸಿಯಮಿನಲ್ಲಿಟ್ಟಿದ್ದ ಈ ಅವಶೇಷಗಳನ್ನು 1952ರಲ್ಲಿ ಹಿಂದಕ್ಕೆ ಪಡೆದು, ಪುನಃ ಸಾಂಚಿಯ ಮಹಾಸ್ತೂಪದ ಬಳಿ ಸಮಾಧಿ ಮಾಡಲಾಯಿತು.

ಸಾಂಚಿಯ ಬಳಿ ಈ ದೊಡ್ಡ ಸ್ತೂಪವಲ್ಲದೆ, ಇನ್ನೂ ಎರಡು ಸ್ತೂಪಗಳಿವೆ. ಮಹಾಸ್ತೂಪದ ದಕ್ಷಿಣ ದ್ವಾರದ ಬಳಿ ಅಶೋಕಸ್ತಂಭವಿದೆ. ಇದರ ಎತ್ತರ 42 ಅಡಿ. ಈ ಸ್ತಂಭದಲ್ಲಿ ಸಿಂಹಗಳ ಕೆಳಗೆ ಧರ್ಮ ಚಕ್ರವಿಲ್ಲ.

ಸಾತ್ಪುರ ಬೆಟ್ಟ

ನರ್ಮದಾ ಹಾಗೂ ತಪತಿ ನದಿಗಳ ನಡುವೆ ಸುಮಾರು [illegible] ಮೈಲು ದೂರ ಹಬ್ಬಿರುವ ಗಿರಿಶ್ರೇಣಿ ಸಾತ್ಪುರ.

ಇದರ ಬಹು ಭಾಗ ಮಧ್ಯಪ್ರದೇಶದ ನಿಮಾರ್ ಜಿಲ್ಲೆಯಲ್ಲಿದೆ. ಪಶ್ಚಿಮದ ರಾಜಪಿಪ್ಲಾ ಬೆಟ್ಟದಿಂದ ಪೂರ್ವದ ಮೈಕಲದ ವರೆಗೆ ಇದರ ವ್ಯಾಪ್ತಿ. ಮಹಾದೇವ ಬೆಟ್ಟಗಳು, ಛೋಟಾನಾಗಪುರ ಪ್ರಸ್ಥಭೂಮಿಗಳನ್ನು ಇದು ಒಳಗೊಂಡಿದೆ. ಪಚಮಾರಿ, ಅಮರಕಂಟಕ, ಧೂಪಧರ್ ಇದರ ಕೆಲವು ಉನ್ನತ ಶಿಖರಗಳು. ಧೂಪಧರ್ ಎಲ್ಲಕ್ಕಿಂತ ಉನ್ನತ. ಇದರ ಎತ್ತರ 4454 ಅಡಿ. ಸಾತ್ಪುರ ಶ್ರೇಣಿ ಪ್ರಧಾನವಾಗಿ ಮರಳುಗಲ್ಲು ಶಿಲೆಗಳಿಂದ ಕೂಡಿದೆ.

ಸಾತ್ಪುರದ ಸಮಾನಾಂತರ ಬೆಟ್ಟ ಶ್ರೇಣಿಗಳ ನಡುವೆ, [illegible] ಉತ್ತರ ದಕ್ಷಿಣ [illegible]. ಸಾತ್ಪುರ ಶ್ರೇಣಿಗಳಲ್ಲಿ ಸಾಕಷ್ಟು ಕಾಡುಗಳಿವೆ.

[illegible] ಗಂಗಾ ಬಯಲಿಗೆ ಹೋಗುವ ದಾರಿ, [illegible] ಶ್ರೇಣಿಯನ್ನು ಹಾದುಹೋಗುತ್ತದೆ.



ಬಡವರ ಸೇವೆ : ವಾಸ್ವಾನಿ

ಸಾಧು ವಾಸ್ವಾನಿ

"ಪ್ರೀತಿಯಿಂದ ಬಡವರ ಸೇವೆ ಮಾಡುವವರು ನಿಜವಾಗಿಯೂ ಭಾಗ್ಯಶಾಲಿಗಳು. ಏಕೆಂದರೆ ಭಗವಂತನೇ ಅವರ ಹೃದಯದಲ್ಲಿ ಹಾಡಲು ಬರುತ್ತಾನೆ."

—ಈ ಶತಮಾನದ ಮೊದಲ ದಶಕದಲ್ಲಿ ಬರ್ಲಿನ್‌ನಲ್ಲಿ ನಡೆದ ವಿಶ್ವ ಧರ್ಮ ಸಮ್ಮೇಳನಕ್ಕೆ ಭಾರತದ ಪ್ರತಿನಿಧಿಯಾಗಿ ಹೋಗಿದ್ದ ಸಾಧು ವಾಸ್ವಾನಿ ಆಡಿದ ಮಾತುಗಳಿವು. ಆಗ ಅವರಿಗೆ 30 ವರ್ಷ ಪ್ರಾಯ.

ಸಮ್ಮೇಳನದಲ್ಲಿ ಅವರು ನೀಡಿದ ಉಪನ್ಯಾಸಗಳಿಂದ ಹಾಗೂ ಅನಂತರ ಯೂರೋಪಿನ ಇತರ ನಗರಗಳಲ್ಲಿ ಅವರು ಮಾಡಿದ ಪ್ರಭಾವಪೂರ್ಣ ಭಾಷಣಗಳಿಂದ ಭಾರತೀಯ ಚಿಂತನೆ ಹಾಗೂ ಮೌಲ್ಯಗಳ ಬಗೆಗೆ ಪಾಶ್ಚಾತ್ಯರಲ್ಲಿ ಆಸಕ್ತಿ ಕೆರಳುವಂತಾಯಿತು. ಪ್ರಪಂಚದ ಎಲ್ಲ ಭಾಗಗಳಲ್ಲೂ ಅವರಿಗೆ ಅನುಯಾಯಿಗಳು ದೊರೆತರು. ಅವರಿಗೆಲ್ಲ ವಾಸ್ವಾನಿ ಪ್ರಿಯ 'ದಾದಾ' ಆದರು.

ಗಾಂಧೀಜೀ ಸ್ವಾತಂತ್ರ್ಯ ಚಳುವಳಿ ಆರಂಭಿಸಿದಾಗ ವಾಸ್ವಾನಿ ಅವರ ನಿಕಟವರ್ತಿಯಾದರು.

ವಾಸ್ವಾನಿ ಶಿಕ್ಷಣವೇತ್ತರೂ ಆಗಿದ್ದರು. ವ್ಯಕ್ತಿತ್ವದ ಪೋಷಣೆಯೇ ರಾಷ್ಟ್ರದ ನಿರ್ಮಾಣ ಎಂಬುದು ಅವರ ನಂಬಿಕೆ. ರಾಜಪುರದಲ್ಲಿ 'ಶಕ್ತಿ ಆಶ್ರಮ' ತೆರೆದರು. ದೇಶದ ವಿವಿಧ ಭಾಗಗಳಲ್ಲಿ ಯುವಕ ಕೇಂದ್ರಗಳನ್ನು ಸ್ಥಾಪಿಸಿದರು.

1933ರಲ್ಲಿ ಸಾಧು ವಾಸ್ವಾನಿಯವರು 'ಮೀರಾ ಶಿಕ್ಷಣ ಚಳುವಳಿ' ಪ್ರಾರಂಭಿಸಿದರು. ಆತ್ಮದ ಬೆಳವಣಿಗೆಗೆ ಇದರಲ್ಲಿ ಪ್ರಾಶಸ್ತ್ಯ. ದೇಶ ಮತ್ತು ಜನತೆಯ ಸೇವೆ ಜ್ಞಾನದ ಗುರಿ ಎಂಬುದನ್ನು ಅವರು ವಿದ್ಯಾರ್ಥಿಗಳಿಗೆ ಮನದಟ್ಟು ಮಾಡಿಕೊಡುತ್ತಿದ್ದರು.

ಸಮಾಜ ಕಲ್ಯಾಣ ಸಂಸ್ಥೆಗಳು, ಉಚಿತ ಔಷಧಾಲಯಗಳು ಇವರ ಪ್ರಯತ್ನದಿಂದ ಆರಂಭವಾದುವು. ವಿದ್ಯೆ ಕಲಿಸುವುದಲ್ಲದೆ, ಬಟ್ಟೆ ಮತ್ತು ಕೆಲವೊಮ್ಮೆ ಆಹಾರವನ್ನೂ ಕೊಡಲು ಏರ್ಪಾಟು ಇದ್ದ ಶಾಲೆ ಕಾಲೇಜುಗಳನ್ನು ತೆರೆದರು. ಪ್ರಾಣಿ ಪಕ್ಷಿಗಳ ಸೇವೆಗೆ ಮೀಸಲಾದ ಸಂಸ್ಥೆ ನಡೆಸಿದರು. ಪ್ರಕಟಣ ಶಾಖೆಯ ಮುಖಾಂತರ ಶಾಂತಿ ಮತ್ತು ಪ್ರಪಂಚದ ಎಲ್ಲ ಜಾತಿ ಮತಗಳ ಭ್ರಾತೃತ್ವದ ಸಂದೇಶವನ್ನು ಹರಡಿದರು.

ವಾಸ್ವಾನಿ ಇಂಗ್ಲಿಷಿನಲ್ಲಿ 100, ಸಿಂಧೀ ಭಾಷೆಯಲ್ಲಿ 300ರಷ್ಟು ಪುಸ್ತಕಗಳನ್ನು ಬರೆದಿದ್ದಾರೆ.

1966 ಜನವರಿ 16ರಂದು ವಾಸ್ವಾನಿ ತಮ್ಮ 87ನೆಯ ವಯಸ್ಸಿನಲ್ಲಿ ನಿಧನರಾದರು. ಪೂನೆಯಲ್ಲಿ ಅವರ ಕಾರ್ಯಕ್ಷೇತ್ರದಲ್ಲಿ ಸುಂದರ ಮಂದಿರ ಕಟ್ಟಿದ್ದಾರೆ. ಹತ್ತು ಅಡಿ ಎತ್ತರದ ಅವರ ಪ್ರತಿಮೆ ಪೂನೆಯ ಪ್ರವೇಶ ದ್ವಾರದಲ್ಲಿ ಸ್ಥಾಪಿಸಲ್ಪಟ್ಟಿದೆ.

"ಮಹಾನ್ ದೇವರು ಬಡವರ ಮುರುಕು ಗುಡಿಸಲುಗಳಲ್ಲಿದ್ದಾನೆ. ವಿಧವೆಯರ ಅನಾಥರ ಕಣ್ಣೀರನ್ನು ತೊಡೆಯುತ್ತ, ನಮ್ಮಿಂದ ತನ್ನ ನವ ಗೀತೆಯನ್ನು ಹಾಡುತ್ತಿದ್ದಾನೆ" ಎನ್ನುತ್ತಿದ್ದರು ವಾಸ್ವಾನಿ. ಬಡವರ "ಸೇವೆ ಭಗವಂತನ ಪೂಜೆ" ಎಂದು ನಂಬಿದ್ದ ಅವರು ಬದುಕಿನುದ್ದಕ್ಕೂ ಆ ನಂಬಿಕೆಯಂತೆಯೇ ನಡೆದರು.

ಸಾಧು ಸುಂದರ್‌ಸಿಂಗ್

ಪಂಜಾಬಿನ ಸಿಕ್ಖ್ ಜಮೀನ್ದಾರ ಮನೆತನದಲ್ಲಿ ಹುಟ್ಟಿ, ಸನ್ಯಾಸಿಯಂತೆ ಅಲೆದು, ಕ್ರೈಸ್ತಮತ ಪ್ರಸಾರಕ್ಕಾಗಿ ದುಡಿದವರು ಸಾಧು ಸುಂದರ್‌ಸಿಂಗ್. ಹೋದಲ್ಲೆಲ್ಲ ಜನರು ಸುಂದರ್‌ಸಿಂಗರಿಂದ ಆಕರ್ಷಿತರಾಗುತ್ತಿದ್ದರು.

ಸಿಂಗ್ ಅವರ ಜನನ 1889ರಲ್ಲಿ. ಚಿಕ್ಕಂದಿನಲ್ಲೇ ಇವರು ಧರ್ಮ-ಅಧ್ಯಾತ್ಮಗಳತ್ತ ಆಕರ್ಷಿತರಾದರು. ಹದಿನಾರನೆಯ ವಯಸ್ಸಿನಲ್ಲಿ ಏಸುವನ್ನು ಕಂಡಂತೆ ಇವರಿಗೆ ಕನಸುಬಿತ್ತು. 1905ರಲ್ಲಿ ಇವರು ಕ್ರೈಸ್ತರಾಗಿ ಮತಾಂತರಗೊಂಡರು.

ಎಸ್. ಇ. ಸ್ಟೋಕ್ಸ್ ಎಂಬ ಅಮೆರಿಕನನ ಒಡಗೂಡಿ ಸಿಂಗ್ ಭ್ರಾತೃ ಸೇವಾಸಂಘವನ್ನು ಸ್ಥಾಪಿಸಿದರು. ಇಂಗ್ಲೆಂಡ್, ಅಮೆರಿಕಾಗಳನ್ನು ಸಂದರ್ಶಿಸಿದರು.

ಮುಂದೆ ಪಂಜಾಬ್‌ನಲ್ಲೂ ಹಿಮಾಲಯ ಪ್ರದೇಶದಲ್ಲೂ ಇವರು ಸುತ್ತಾಡಿದರು. 1926ರಲ್ಲಿ ಟಿಬೆಟ್ಟನ್ನು ಹೊಕ್ಕರು. ಆ ಬಳಿಕ ಸುಂದರ್ ಸಿಂಗ್‌ರ ಬಗೆಗೆ ಯಾವ ಸುದ್ದಿಯೂ ದೊರೆಯಲಿಲ್ಲ.

'ಭಾರತದ ಸಂತ ಪಾಲ್' ಎಂದು ಇವರು ಪ್ರಖ್ಯಾತರು. ಅವರು ಮಾಡಿದ ಭಾಷಣಗಳು ಮತ್ತು ಉಪದೇಶಗಳನ್ನು 'ದೃಷ್ಟಾಂತದರ್ಪಣ' ಎಂಬ ಹೆಸರಿನಲ್ಲಿ ಕನ್ನಡದಲ್ಲಿ ದಿವಂಗತ ಚೆನ್ನಪ್ಪ ಉತ್ತಂಗಿಯವರು ಪ್ರಕಟಿಸಿದರು.

ಸಾಬರಮತಿ ಆಶ್ರಮ

ತಮ್ಮ ಧ್ಯೇಯಗಳಿಗೆ ಅನುಗುಣವಾಗಿ ಜೀವನ ನಡೆಸುವ ಮತ್ತು ಜನ ಸೇವೆ ಮಾಡುವ ಉದ್ದೇಶದಿಂದ ಗಾಂಧೀಜೀ ಸಾಬರಮತಿ ಆಶ್ರಮ ಸ್ಥಾಪಿಸಿದರು.

ದಕ್ಷಿಣ ಆಫ್ರಿಕದಿಂದ ಭಾರತಕ್ಕೆ ಹಿಂದಿರುಗಿದ ಮೇಲೆ ಅವರು 1915 ಮೇ 25ನೆಯ ತಾರೀಖು ಅಹಮದಾಬಾದಿನ ಸಮೀಪದ ಕೊಚ್‌ರಾಬ್ ಎಂಬ ಹಳ್ಳಿಯಲ್ಲಿದ್ದ ಜೀವನಲಾಲ್ ದೇಸಾಯಿಯವರ ಬಂಗಲೆಯಲ್ಲಿ 'ಸತ್ಯಾಗ್ರಹ ಆಶ್ರಮ' ಸ್ಥಾಪಿಸಿದರು. 25 ಮಂದಿ ಸ್ತ್ರೀ ಪುರುಷರು ಆಶ್ರಮವಾಸಿಗಳಾಗಿದ್ದರು.

ಸ್ವಲ್ಪ ಕಾಲಾನಂತರ ಕೊಚ್‌ರಾಬ್‌ನಲ್ಲಿ ಪ್ಲೇಗ್ ತಲೆದೋರಿದಾಗ ಆಶ್ರಮವನ್ನು ಅಲ್ಲಿಂದ ಬೇರೆಯೆಡೆಗೆ ಬದಲಾಯಿಸುವ ಆಲೋಚನೆ ಗಾಂಧೀಜಿಗೆ ಬಂತು ; ಯಾವುದೇ ಹಳ್ಳಿ ಅಥವಾ ನಗರದ ಭಾಗವಾಗಿರದೆ ಅವುಗಳಿಗೆ ಸಮೀಪವಾಗಿರುವ ಪ್ರತ್ಯೇಕ ಸ್ಥಳದಲ್ಲಿ ಆಶ್ರಮವನ್ನು ಸ್ಥಾಪಿಸುವ ನಿರ್ಧಾರಮಾಡಿದರು. ಸಾಬರಮತಿ ಸೆರೆಮನೆಗೆ ಸಮೀಪವಾಗಿ ಸಾಬರಮತಿ ನದಿಯ ಸಮೀಪದಲ್ಲಿ ಒಂದು ಪ್ರದೇಶವನ್ನು ಆರಿಸಿದರು. ಅದು ಬಂಜರು ಭೂಮಿ. ಹಾವುಗಳ ಕಾಟ. ಅವರೂ ಆಶ್ರಮವಾಸಿಗಳು ಅಲ್ಲಿಗೆ ಬಂದು ನೆಲೆಸಿದರು. ಅಹಿಂಸೆಯ ಆರಾಧಕರಾದ ಗಾಂಧೀಜೀ ಆಶ್ರಮ ಪ್ರದೇಶದಲ್ಲಿ ಹಾವುಗಳನ್ನು ಕೊಲ್ಲಬಾರದೆಂದು ಕಟ್ಟಪ್ಪಣೆ ಮಾಡಿದರು. ಹಾವುಗಳ ಹಾವಳಿ ಬಲವಾಗಿದ್ದರೂ ಯಾರೂ ದುರ್ಮರಣಕ್ಕೆ ಒಳಗಾಗದಿದ್ದದ್ದು ದೈವಕೃಪೆ ಎಂದು ಗಾಂಧೀಜೀ ಭಾವಿಸಿದರು.

ಆಶ್ರಮವಾಸಿಗಳು ಸತ್ಯ, ಅಹಿಂಸೆ, ಸ್ವದೇಶಿ, ಸ್ವಾವಲಂಬನೆ ಮುಂತಾದ ಹನ್ನೊಂದು ನಿಯಮಗಳನ್ನು ಕಟ್ಟುನಿಟ್ಟಾಗಿ ಆಚರಿಸಬೇಕಾಗಿತ್ತು. ಅಲ್ಲಿ ಜಾತಿಭೇದಕ್ಕೆ ಅವಕಾಶವಿರಲಿಲ್ಲ, ಎಲ್ಲರೂ ಕಷ್ಟಪಟ್ಟು ದುಡಿಯಬೇಕಾ

ಗಿತ್ತು, ಎಲ್ಲ ಆಶ್ರಮವಾಸಿಗಳಿಗಾಗಿ ಒಂದೇ ಒಂದು ಅಡುಗೆ ಮನೆ ಇತ್ತು. ಆಶ್ರಮದಲ್ಲಿ ಅಸ್ಪೃಶ್ಯತೆಗೆ ಅವಕಾಶವಿರಲಿಲ್ಲ. ಪ್ರಾರ್ಥನೆ ಆಶ್ರಮ ಜೀವನದ ಒಂದು ಅಂಗವಾಗಿತ್ತು.

ಗಾಂಧೀಜೀ ಹೀಗೆ ಬಂದು ನೆಲೆಸಿದ ಮೇಲೆ ಅದು ಭಾರತದ ಸ್ವಾತಂತ್ರ್ಯ ಚಳುವಳಿಯ ಕೇಂದ್ರವಾಯಿತು. ಅನೇಕ ಮಂದಿ ರಾಷ್ಟ್ರ ನಾಯಕರು ಅಲ್ಲಿಗೆ ಬಂದು ಗಾಂಧೀಜಿಯ ಮಾರ್ಗದರ್ಶನ ಪಡೆಯುತ್ತಿದ್ದರು.

1930ರಲ್ಲಿ ಗಾಂಧೀಜೀ ಉಪ್ಪಿನ ಸತ್ಯಾಗ್ರಹ ನಡೆಸಲು ದಂಡಿಗೆ ಹೊರಟದ್ದು ಈ ಆಶ್ರಮದಿಂದಲೇ. ಹಲವಾರು ಮಂದಿ ಆಶ್ರಮವಾಸಿಗಳೂ ಅವರ ದಂಡೀಯಾತ್ರೆಯಲ್ಲಿ ಭಾಗವಹಿಸಿದರು.

ಗಾಂಧೀಜೀ ಎರಡನೆಯ ದುಂಡುಮೇಜಿನ ಪರಿಷತ್ತಿನಿಂದ ಹಿಂದಿರುಗಿದ ಮೇಲೆ, 1933 ಕಾನೂನುಭಂಗ ಚಳುವಳಿಯಲ್ಲಿ ಆಶ್ರಮವಾಸಿಗಳೆಲ್ಲರೂ ಭಾಗವಹಿಸಿದರು. ಅನಂತರ ಗಾಂಧೀಜೀ ಮತ್ತೆ ಆಶ್ರಮಕ್ಕೆ ಹಿಂದಿರುಗಲಿಲ್ಲ. ಅಲ್ಲಿ ಉದ್ಯೋಗ ಮಂದಿರ, ಹರಿಜನ ಆಶ್ರಮಗಳು ಕೆಲಸ ಮಾಡಲಾರಂಭಿಸಿದುವು.

1963ರಲ್ಲಿ, ಆಗ ಪ್ರಧಾನಿಯಾಗಿದ್ದ ಜವಾಹರಲಾಲರು ಸಾಬರಮತಿ ಆಶ್ರಮದಲ್ಲಿ ಗಾಂಧೀ ಸ್ಮಾರಕ ವಸ್ತು ಸಂಗ್ರಹಾಲಯವನ್ನು ಉದ್ಘಾಟಿಸಿದರು,

ಸಾಮವೇದ

ವೇದಗಳಲ್ಲಿ ಮೂರನೆಯದು. ಸಾಮವೇದ 'ಸಾ' ಪದದ ಅರ್ಥ ಋಕ್ಕುಗಳು; ಅಮ ಅಂದರೆ ವಿವಿಧ ಸ್ವರಗಳು. ಹೀಗೆ ಋಕ್ಕುಗಳು ಮತ್ತು ಸ್ವರಸಹಿತವಾದ ಗಾಯನದ ಸಮ್ಮಿಲನ ಸಾಮವೇದ.

ಯಾಗದಲ್ಲಿ ಸಾಮವೇದ ಹಾಡುವ ಋತ್ವಿಕ್ಕು, ಉದ್ಗಾತೃ, ಈತನಿಗೆ ಅನುಕೂಲವಾಗಿ ಸಾಮವೇದದ ಸಂಕಲನ. ಆದ್ದರಿಂದ ಸಾಮವೇದವನ್ನು ಉದ್ಗಾತೃವೇದವೆಂದೂ ಕರೆಯುತ್ತಾರೆ. ಋಗ್ವೇದದ ಮಂತ್ರಗಳನ್ನು ವಿಧವಿಧ ಸ್ವರದಲ್ಲಿ ಹಾಡುವುದು ಸಾಮ. ಋಗ್ವೇದದ ಯಾವ ಋಕ್ಕುಗಳನ್ನು ಸಾಮದಲ್ಲಿ ಹಾಡುತ್ತಿದ್ದರೋ ಅವರ ಸಂಕಲನ ಸಾಮವೇದ ಆಯಿತು.

ಭಾರತೀಯ ಸಂಗೀತಶಾಸ್ತ್ರಕ್ಕೆ ಮೂಲ, ಸಾಮವೇದ.

ಗಾನಮಂತ್ರಗಳು ನಾಲ್ಕು ಬಗೆ: ಗ್ರಾಮಗೇಯ ಗಾನ, ಆರಣ್ಯಕ ಗಾನ, ಊಹಗಾನ, ಊಹ್ಯಗಾನ ಅಥವಾ ರಹಸ್ಯ ಗಾನ. ಗ್ರಾಮಗೇಯ ಗಾನವನ್ನು ಪ್ರಕೃತಿ ಗಾನ, ವೇಯಗಾನ ಎಂದೂ ಕರೆಯುವುದುಂಟು. ಇದರಲ್ಲಿ ಇಂದ್ರ, ಸೋಮ, ಅಗ್ನಿಗಳ ಸ್ತುತಿ ಇದೆ.

ವೇದದ ಋಕ್ಕುಗಳನ್ನು ಹಾಡುವುದು ಕಷ್ಟಕರ. ಕೆಲವು ಅಕ್ಷರಗಳನ್ನು ದೀರ್ಘವಾಗಿ ಹೇಳಿದರೆ, ಕೆಲವನ್ನು ಪುನರುಚ್ಚರಿಸಬೇಕು.
ಉದ್ಗೀಥ, ಪ್ರತಿಹಾರ, ಉಪದ್ರವ ಮತ್ತು ನಿಧನ.

ಸಾಮವೇದದ ಎಲ್ಲ ಮಂತ್ರಗಳನ್ನೂ ಹಾಡಬೇಕೆಂದಿಲ್ಲ.

ಸುಮಾರು ಕ್ರಿ.ಪೂ. 700—300ರ ಅವಧಿಯಲ್ಲಿ ಸಾಮವೇದ ರಚಿಸಲ್ಪಟ್ಟಿತು ಎಂಬ ಊಹೆಯಿದೆ.

ನೋಡಿ : ಅಥರ್ವವೇದ ; ಋಗ್ವೇದ ; ಯಜುರ್ವೇದ


ಸಾಯಣ

ನೋಡಿ : ವಿದ್ಯಾರಣ್ಯ

ಸಾರನಾಥ

ಸಿದ್ಧಾರ್ಥನು ಬುದ್ಧನಾದ ಮೇಲೆ ಮೊತ್ತಮೊದಲು ತನ್ನ ಧರ್ಮೋಪದೇಶ ಮಾಡಿದ್ದು ಸಾರನಾಥದಲ್ಲಿ. ಬುದ್ಧನ ಜೀವನಕ್ಕೆ ಸಂಬಂಧಿಸಿದ ನಾಲ್ಕು ಮುಖ್ಯ ಸ್ಥಳಗಳಲ್ಲಿ ಇದೂ ಒಂದು. ಕಾಶಿಯಿಂದ ಸುಮಾರು ನಾಲ್ಕು ಮೈಲಿ ದೂರದಲ್ಲಿದೆ – ಸಾರನಾಥ. ಇಲ್ಲಿ ಅನೇಕ ಸ್ತೂಪಗಳೂ ಬೌದ್ಧ ವಿಹಾರಗಳೂ [illegible] ಇದ್ದವೆ. ಈ ಶತಮಾನದಲ್ಲಿ ಇಲ್ಲಿ ಒಂದು ಬೌದ್ಧ ಆಲಯವನ್ನು ಕಟ್ಟಲಾಗಿದೆ.

ಸಾರನಾಥದಲ್ಲಿ ದೊರೆತ ಅಶೋಕಸ್ತಂಭದ ಸಿಂಹ ಶೀರ್ಷದ ಶಿಲ್ಪ ಚಿತ್ರವನ್ನು ಭಾರತದ ರಾಷ್ಟ್ರೀಯ ಲಾಂಛನವಾಗಿ ಅಳವಡಿಸಿಕೊಳ್ಳಲಾಗಿದೆ. ಅಶೋಕ ಚಕ್ರವರ್ತಿ ಕ್ರಿ.ಪೂ. 3ನೆಯ ಶತಮಾನದಲ್ಲಿ ಈ ಸ್ತಂಭವನ್ನು ಸ್ಥಾಪಿಸಿದ. ಇದರ ಐತಿಹಾಸಿಕ ಹಾಗೂ ಆಧ್ಯಾತ್ಮಿಕ ಮಹತ್ವಗಳನ್ನು ಗುರುತಿಸಿ ಭಾರತ ಸರಕಾರ ಈ ಲಾಂಛನವನ್ನು ಅಳವಡಿಸಿಕೊಂಡಿತು.



ಸಾರನಾಥದ ಸ್ತೂಪ

ಸಾರನಾಥದಲ್ಲಿ ಮೌರ್ಯರು, ಕುಶಾನರು ಹಾಗೂ ಗುಪ್ತರ ಕಾಲದ ಸ್ತೂಪಗಳಿವೆ, ಬೌದ್ಧಮತ ಪ್ರಚಾರಕ್ಕೆ ಒಂದು ಮುಖ್ಯ ಕೇಂದ್ರ ಇದು. ರಿಷಿಪಟ್ಟಣ, ಇಸಿ ಪಟ್ಟಣ, ಮೃಗದಾವ ಮುಂತಾದ ಹಲವು ಹೆಸರುಗಳು ಸಾರನಾಥಕ್ಕೆ ಅನ್ವಯಿಸುತ್ತವೆ. ಸಾರನಾಥದಲ್ಲಿರುವ ಸ್ತೂಪ ಅಗ್ರಸಾಂಚಿ, ಅಮರಾವತಿ ಸ್ತೂಪಗಳಂತೆ ಗುಮ್ಮಟ ಆಕಾರದಲ್ಲಿರದೆ ಸ್ತಂಭರೂಪದಲ್ಲಿದೆ. ಇದು ಇಟ್ಟಿಗೆ ಕಟ್ಟಡ. ಈಗ ಇದು ಬಹುಮಟ್ಟಿಗೆ ಜೀರ್ಣವಾಗಿದೆ.

ಸಾರನಾಥದಲ್ಲಿರುವ ಬುದ್ಧ ಪ್ರತಿಮೆಗಳಲ್ಲಿ ಗುಪ್ತರ ಕಾಲದ ಕೃತಿಗಳು ಅತ್ಯಂತ ಖ್ಯಾತವಾದುವು. ಇವುಗಳಲ್ಲೊಂದಾದ 'ಧರ್ಮಚಕ್ರ ಪರಿವರ್ತನ' (ಅಂದರೆ, ಬುದ್ಧ ತನ್ನ ಮೊದಲ ಉಪದೇಶ ಮಾಡುತ್ತಿರುವ) ಬುದ್ಧ ಪ್ರತಿಮೆಯಲ್ಲಿ ಬುದ್ಧನ ಸಂದೇಶದ ಭಾವ ಬಹಳ ಪರಿಣಾಮಕಾರಿಯಾಗಿ ಮೂಡಿದೆ. ಭಗವಾನ್ ಬುದ್ಧದೇವನ ಭಂಗಿ, ಅವನ ಕರಗಳು ಧರ್ಮಚಕ್ರ ಪರಿವರ್ತನದ ಮುದ್ರೆಯನ್ನು ತಳೆದಿರುವ ರೀತಿ, ಸರಳ ರೂಪುರೇಷೆಗಳಲ್ಲಿ ಅವನ ಕಾಯವನ್ನು ಶಿಲ್ಪಿ ಕಡೆದಿರುವ ಬಗೆ, ಮುಖದ ಮಂದಹಾಸ, ಅರೆತೆರೆದ ಕಣ್ಣು ಇವೆಲ್ಲ ಗಂಭೀರತೆಯನ್ನು ಸೂಚಿಸುತ್ತವೆ. ಬೌದ್ಧ ಧರ್ಮದ ಅಂತರಂಗವನ್ನು ಬುದ್ಧ ತಿಳಿಯಹೇಳುತ್ತಿರುವಂತೆ ತೋರುತ್ತದೆ. ಪ್ರಪಂಚದಲ್ಲಿ ದುಃಖ, ಸಾವು, ನಾಶ ತುಂಬಿದ್ದರೂ ಇವುಗಳನ್ನು ಮೀರಿದವನಿಗೆ ವೃದ್ಧಾಪ್ಯವೂ ಇಲ್ಲ, ಮರಣವೂ ಇಲ್ಲ; ಅವನಿಗೆ ಆನಂದದ ಅನುಭವವಾಗುತ್ತದೆ — ಎಂಬ ಭಾವವನ್ನು ಈ ಪ್ರತಿಮೆ ಪ್ರಚೋದಿಸುತ್ತಿದೆ.

ಚೀನೀ ಯಾತ್ರಿಕರಾದ ಫಾಹಿಯಾನ್ ಮತ್ತು ಹ್ಯೂಯೆನ್ ತ್ಸಾಂಗ್ ಸಾರನಾಥಕ್ಕೆ ಬಂದಿದ್ದರು. ಅದರ ಬಗೆಗೆ ಸಾಕಷ್ಟು ವಿವರವಾಗಿ ಅವರು ಬರೆದಿಟ್ಟಿದ್ದಾರೆ. ಸಾರನಾಥದಲ್ಲಿ ದೊರೆತಿರುವ ಅವಶೇಷಗಳಲ್ಲಿ ಅತಿ ಪುರಾತನವಾದುದೆಂದರೆ ಮೌರ್ಯರ ಕಾಲದ್ದು. ಮೊದಲಿಗೆ ಬೌದ್ಧ ವಾಸ್ತುಶಿಲ್ಪ ಶೈಲಿಯೇ ಹೆಚ್ಚು ಪ್ರಚಾರದಲ್ಲಿದ್ದು, ಕಾಲಕ್ರಮೇಣ ಹಿಂದೂ ವಾಸ್ತುಶಿಲ್ಪ ಕೃತಿಗಳೂ ಇಲ್ಲಿ ರೂಪುಗೊಂಡುವು.

1194ರಲ್ಲಿ ಕುತುಬುದ್ದೀನನು ನಾಶಮಾಡಿದ ಅನೇಕ ಪವಿತ್ರ ಸ್ಥಳಗಳಲ್ಲಿ ಸಾರನಾಥವೂ ಒಂದು. ಕಳೆದ ಶತಕದಿಂದ ಸಾರನಾಥದಲ್ಲಿ ಪುರಾತತ್ತ್ವ ಶೋಧನೆ ಆರಂಭವಾಯಿತು : 1815ರಲ್ಲಿ ಬುದ್ಧನ ಪ್ರತಿಮೆಗಳು ದೊರೆತುವು. ಅಳಿದುಳಿದಿರುವ ಶಿಲ್ಪಗಳಿಂದ ಸಾರನಾಥದ ಭವ್ಯತೆಯನ್ನು ಊಹಿಸ ಬಹುದು.

ಸಾವರ್‌ಕರ್

ನೋಡಿ : ವಿ.ಡಿ. ಸಾವರ್‌ಕರ್

ಸಾವಿತ್ರಿ

ಮದ್ರದೇಶದ ರಾಜ ಅಶ್ವಪತಿ. ಸಂತಾನಪ್ರಾಪ್ತಿಗಾಗಿ ಅವನು ಯಾಗಗಳನ್ನು ಕೈಗೊಂಡ. ಒಮ್ಮೆ ಸಾವಿತ್ರೀದೇವಿಯ ಸ್ತೋತ್ರಗಳನ್ನು ಹೇಳುತ್ತಿದ್ದಾಗ ಯಾಗದ ಅಗ್ನಿಯಿಂದ ದೇವತೆ ಎದ್ದಳು. ಉದಾತ್ತ ಚರಿತಳಾದ ಮಗಳು ಜನಿಸುವಳೆಂದು ಆಶೀರ್ವದಿಸಿದಳು. ಈ ದೇವತೆಯ ಅನುಗ್ರಹದಿಂದ ಜನಿಸಿದ ಮಗಳಿಗೆ, ಸಾವಿತ್ರಿ ಎಂದು ಅಶ್ವಪತಿ ಹೆಸರಿಟ್ಟ.

—ಇದು ಸಾವಿತ್ರಿಯ ಜನನವನ್ನು ಕುರಿತ ಕಥೆ.

ಸಾವಿತ್ರಿ ರೂಪವತಿ, ಬುದ್ಧಿವಂತೆ, ಮೃದುಸ್ವಭಾವ, ಧೈರ್ಯಗಳಿಗೂ ಆಕೆ ಖ್ಯಾತಳಾಗಿದ್ದಳು. ಅವಳ ಶಾಂತ, ಗಂಭೀರ ಸ್ವಭಾವದ ವಿಚಾರ ತಿಳಿದಿದ್ದ ರಾಜಕುಮಾರರು ಆಕೆಯನ್ನು ವಿವಾಹ ಮಾಡಿಕೊಳ್ಳಲು ಮುಂದೆ ಬರಲಿಲ್ಲ.

ಅನುರೂಪನಾದ ಪತಿಯನ್ನು ಹುಡುಕಿಕೊಂಡು ಬರಲು ಅಶ್ವಪತಿ ಮಗಳನ್ನೇ ಕಳುಹಿಸಿದ. ರಾಜ್ಯಗಳಿಗೆ ಹೋಗುವ ಬದಲು ಸಾವಿತ್ರಿ ಕಾಡಿಗೆ ಹೋದಳು. ರಾಜರ್ಷಿಗಳನ್ನು ಕಂಡಳು. ಒಂದು ದಿನ ಕೈಯಲ್ಲಿ ಸೌದೆ ಹೊರೆ ಹಿಡಿದು, ಹೆಗಲ ಮೇಲೆ ಕೊಡಲಿ ಇಟ್ಟುಕೊಂಡು ಹೋಗುತ್ತಿದ್ದ ತರುಣ ಕಣ್ಣಿಗೆ ಬಿದ್ದ. ಅವನು ರಾಜ್ಯ ಕಳೆದುಕೊಂಡು ಕುರುಡನಾಗಿದ್ದ ಸಾಳ್ವ ಅರಸು ದ್ಯುಮತ್ಸೇನನ ಮಗ, ಸತ್ಯವಂತ. ಅವನೇ ತನಗೆ ಸರಿಯಾದ ಪತಿ ಎಂದು ನಿರ್ಧರಿಸಿ, ಸಾವಿತ್ರಿ ಅರಮನೆಗೆ ಹಿಂದಿರುಗಿದಳು.

ಆಕೆ ಮದ್ರದೇಶಕ್ಕೆ ಹಿಂದಿರುಗಿದಾಗ ಅಲ್ಲಿಗೆ ನಾರದ ಬಂದಿದ್ದ. ಸತ್ಯವಂತನಿಗೆ ಇನ್ನು ಒಂದೇ ವರ್ಷ ಆಯುಸ್ಸಿರುವುದರಿಂದ ಈ ಸಂಬಂಧ ಬೇಡ ಎಂದ ನಾರದ. ಬೇರೆ ವರನನ್ನು ಆರಿಸಲು ಅಶ್ವಪತಿ ಸೂಚಿಸಿದ. ತಾನು ಸತ್ಯವಂತನನ್ನಲ್ಲದೆ ಬೇರೆ ಯಾರನ್ನೂ ಮದುವೆಯಾಗಲಾರೆನೆಂದು ಸಾವಿತ್ರಿ ಹೇಳಿದಾಗ, ಬೇರೆ ದಾರಿಯಿಲ್ಲದೆ ಕಾಡಿಗೇ ಹೋಗಿ ಅಶ್ವಪತಿ ಮಗಳ ಮದುವೆ ಮಾಡಿಕೊಟ್ಟ.

ಋಷಿಯ ಸೊಸೆಗೆ ತಕ್ಕುದಾದ ಸಾಧಾರಣ ಉಡುಪು ತೊಟ್ಟು ಸಾವಿತ್ರಿ ಮನೆಗೆಲಸ ಮಾಡತೊಡಗಿದಳು. ನಾರದ ಹೇಳಿದ್ದ ಮಾತು ಆಕೆಯ ನೆನಪಿನಲ್ಲಿತ್ತು. ನಾಲ್ಕು ದಿನ ಮೊದಲೇ ತ್ರಿರಾತ್ರವ್ರತ ಆರಂಭಿಸಿದಳು. ಉಪವಾಸ, ಜಾಗರಣೆ, ಎಡೆಬಿಡದೆ ಪ್ರಾರ್ಥನೆ. ಮೂರು ದಿನ ಕಳೆದುವು. ಕೊನೆಯ ದಿನ ಸತ್ಯವಂತ ಸೌದೆ ತರಲು ಕಾಡಿಗೆ ಹೊರಟಾಗ ಸಾವಿತ್ರಿಯೂ ಹಿಂಬಾಲಿಸಿದಳು. ಸ್ವಲ್ಪಹೊತ್ತು ಸೌದೆ ಕಡಿದ ಸತ್ಯವಂತ ಆಯಾಸದಿಂದ ಮಲಗಿದ. ಭಯಭೀತಳಾದ ಸಾವಿತ್ರಿ ಅವನ ತಲೆಯನ್ನು ತನ್ನ ತೊಡೆಯ ಮೇಲೆ ಇರಿಸಿಕೊಂಡಳು. ಆಕೆ ನೋಡುತ್ತಿದ್ದಂತೆಯೇ ಸತ್ಯವಂತನ ಪ್ರಾಣವನ್ನು ಯಮ ಒಯ್ಯಲಾರಂಭಿಸಿದ. ಸಾವಿತ್ರಿ ಯಮನನ್ನು ಹಿಂಬಾಲಿಸುತ್ತ ಗಂಡನ ಜೀವವನ್ನು ಬಿಟ್ಟುಕೊಡುವಂತೆ ಬೇಡತೊಡಗಿದಳು. "ನಿನ್ನ ಪ್ರಯತ್ನ ನಿರರ್ಥಕ" ಎಂದು ಯಮ ಎಷ್ಟು ಹೇಳಿದರೂ ಸಾವಿತ್ರಿ ಕೇಳಲಿಲ್ಲ. ಕೊನೆಗೆ ಅವಳ ಮಾವನ ಅಂಧತ್ವ ಹೋಗುವ, ಕಳೆದುಹೋದ ರಾಜ್ಯ ಮರಳಿಸಿಗುವ ಹಾಗೂ ಸಾವಿತ್ರಿ ಪುತ್ರವತಿಯಾಗುವ ವರ ಕೊಟ್ಟ. ತಾನು ಪುತ್ರವತಿಯಾಗಬೇಕಾದರೆ ಸತ್ಯವಂತನನ್ನು ಬಿಡಬೇಕೆಂದು ಸಾವಿತ್ರಿ ಮತ್ತೆ ಬೇಡಿದಳು. ಆಕೆಯ ಶ್ರದ್ಧೆ, ಪತಿವಾತ್ಸಲ್ಯಗಳಿಗೆ ಮೆಚ್ಚಿದ ಯಮ ಸತ್ಯವಂತನನ್ನು ಬಿಟ್ಟು ಹೋದ.

ಪತಿವ್ರತೆಯರಲ್ಲಿ ಅಗ್ರಗಣ್ಯೆಯಾದ ಸಾವಿತ್ರಿಯ ಕಥೆ 'ಮಹಾಭಾರತ'ದಲ್ಲಿ ಬರುತ್ತದೆ.

ಸಾಹಿತ್ಯ ದರ್ಪಣ

"ವಾಕ್ಯಂ ರಸಾತ್ಮಕಂ ಕಾವ್ಯಂ-ದೋಷಾಸ್ತಸ್ಯಾಪಕರ್ಷಕಾಃ ।
ಉತ್ಕರ್ಷ ಹೇತವಃ ಪ್ರೋಕ್ತಾ ಗುಣಾಲಂಕಾರರೀತಯಃ ॥"



ಸಾವಿತ್ರಿ, ಸತ್ಯವಾನ

ರಸವುಳ್ಳ ವಾಕ್ಯ ಕಾವ್ಯ ಎನಿಸುತ್ತದೆ. ಮಧ್ಯೆ ಏನಾದರೊಂದು ನೀರಸ ಪದ ಸೇರಿದ ಮಾತ್ರಕ್ಕೇ ದೋಷವುಂಟಾಗುವುದಿಲ್ಲ. ಇಡೀ ಪದ್ಯದ ರಸದಿಂದ ನೀರಸ ಪದಕ್ಕೂ ರಸಪುಷ್ಟಿ ದೊರಕುತ್ತದೆ.

ಕಾವ್ಯದ ಬಗೆಗೆ ಈ ಮಾತು 'ಸಾಹಿತ್ಯ ದರ್ಪಣ' ಎಂಬ ಸಂಸ್ಕೃತ ಗ್ರಂಥದಲ್ಲಿ ಬರುತ್ತದೆ. ಕರ್ತೃ ವಿಶ್ವನಾಥ. ಇವನ ಕಾಲ 14ನೆಯ ಶತಮಾನ.

ಕಾವ್ಯ ಮತ್ತು ನಾಟಕದ ಲಕ್ಷಣಗಳನ್ನು ಈ ಗ್ರಂಥದಲ್ಲಿ ಆತ ವಿವರಿಸಿದ್ದಾನೆ. ಅಲಂಕಾರ ಶಾಸ್ತ್ರಕ್ಕೆ ಅಗತ್ಯವಾದ ಎಲ್ಲ ವಿಷಯಗಳನ್ನೂ ವಿಶದೀಕರಿಸಿರುವುದು ಗ್ರಂಥದ ಉಪಯುಕ್ತತೆಯನ್ನು ಹೆಚ್ಚಿಸಿದೆ. 'ರಸ' ಶಬ್ದವನ್ನು ಕಾವ್ಯಲಕ್ಷಣದಲ್ಲಿ ಸೇರಿಸಿದ ಕೀರ್ತಿಗೆ ವಿಶ್ವನಾಥ ಪಾತ್ರನಾದ.

"ರಸ, ಭಾವ, ಭಾವಾಭಾಸ, ಭಾವೋದಯ, ಭಾವಸಂಧಿ ಮೊದಲಾದ ಮನೋಧರ್ಮಗಳು ಕಾವ್ಯ-ನಾಟಕಗಳಲ್ಲಿ ಅಭಿವ್ಯಕ್ತಿಗೊಂಡು ಎಲ್ಲರಿಗೂ ರಸಾಸ್ವಾದನೆ, ಮಾಡಿಸುತ್ತವೆ" ಎಂದೂ 'ಸಾಹಿತ್ಯ ದರ್ಪಣ'ದ ಕರ್ತೃ ನುಡಿದಿದ್ದಾನೆ.

ಸಂಸ್ಕೃತ ಸಾಹಿತ್ಯಾಭ್ಯಾಸಿಗಳಿಗೆ ಇದು ಉಪಯುಕ್ತ ಗ್ರಂಥ.

ನೋಡಿ : ಸಂಸ್ಕೃತ ಭಾಷೆ, ಸಾಹಿತ್ಯ

ಸ್ಟ್ಯಾಂಡರ್ಡ್ ಮೋಟರ್ಸ್

ಭಾರತದಲ್ಲಿ ಕಾರುಗಳನ್ನು ತಯಾರಿಸುವ ಮೂರು ಸಂಸ್ಥೆಗಳಲ್ಲಿ ಒಂದು ಮದರಾಸಿನಲ್ಲಿರುವ ಸ್ಟ್ಯಾಂಡರ್ಡ್ ಮೋಟರ್ಸ್ ಪ್ರಾಡಕ್ಟ್ಸ್ ಲಿಮಿಟೆಡ್.

ಇದು 1955ರ ವೇಳೆಗೆ ಆರಂಭವಾಯಿತು.

ಮೊದಲಿಗೆ 'ಸ್ಟ್ಯಾಂಡರ್ಡ್ 10' ಮಾಡಲ್ ಕಾರುಗಳು ಇಲ್ಲಿ ತಯಾರಾಗುತ್ತಿದ್ದುವು. ಈಗ 'ಸ್ಟ್ಯಾಂಡರ್ಡ್ ಗಜೆಲ್' ಕಾರುಗಳು ತಯಾರಾಗುತ್ತಿವೆ.

ಮೊದಲಿಗೆ ಅನೇಕ ಬಿಡಿಭಾಗಗಳು ವಿದೇಶದಿಂದ ಆಮದಾಗುತ್ತಿದ್ದುವು. ಈಗ ಹೆಚ್ಚಿನ ಭಾಗಗಳು ದೇಶದಲ್ಲೇ ತಯಾರಾಗುತ್ತವೆ.

ಸ್ಟ್ಯಾಫರ್ಡ್ ಕ್ರಿಪ್ಸ್

ಭಾರತಕ್ಕೆ ಎರಡನೆಯ ಮಹಾಯುದ್ಧದ ಅನಂತರ ಪೂರ್ಣ ಸ್ವಯಂ ಆಡಳಿತ ಕೊಡುವುದಾಗಿ ಬ್ರಿಟನ್ ವಾಗ್ದಾನ ಮಾಡಿತ್ತು. ಅದಕ್ಕಾಗಿ ಸಂಧಾನ ನಡೆಸಲು ಬಂದ ನಿಯೋಗದ ನಾಯಕ, ಬ್ರಿಟನಿನ ಶ್ರೇಷ್ಠ ರಾಜನೀತಿಜ್ಞ ಮತ್ತು ಅರ್ಥಶಾಸ್ತ್ರಜ್ಞರಾಗಿದ್ದ ಸ್ಟ್ಯಾಫರ್ಡ್ ಕ್ರಿಪ್ಸ್.

ಜನನ 1889ರಲ್ಲಿ. ಕ್ರಿಪ್ಸ್ ಮೇಧಾವಿ ಹಾಗೂ ಖ್ಯಾತ ನ್ಯಾಯವಾದಿ. 1913ರಲ್ಲಿ ವೃತ್ತಿ ಆರಂಭಿಸಿ ಪ್ರಸಿದ್ಧಿಗಳಿಸಿದರು. ಮೊದಲನೆಯ ಮಹಾಯುದ್ಧದ ಕಾಲದಲ್ಲಿ ಯುದ್ಧೋಪಕರಣ ಖಾತೆಯಲ್ಲಿ ಕೆಲಸ ಮಾಡಿದರು.

ಅವರು ಲೇಬರ್ ಪಕ್ಷ ಸೇರಿದ್ದು 1929ರಲ್ಲಿ. ರ್‍ಯಾಮ್‌ಸೇ ಮೆಕ್ಡೊನಾಲ್ಡರ ಲೇಬರ್ ಪಕ್ಷದ ಮಂತ್ರಿ ಮಂಡಲದಲ್ಲಿ ಸಾಲಿಸಿಟರ್ ಜನರಲ್ ಆದರು. ಸ್ಟ್ಯಾಫರ್ಡ್ ಕ್ರಿಪ್ಸರು ಸಮರ್ಥ ಪಾರ್ಲಿಮೆಂಟ್ ಸದಸ್ಯರಾಗಿದ್ದರು. ಅವರು ಎರಡು ವರ್ಷ ಕಾಲ ರಷ್ಯದಲ್ಲಿ ರಾಯಭಾರಿಯಾಗಿ ಕೆಲಸ ಮಾಡಿದರು.

ಭಾರತಕ್ಕೆ ಸ್ವಾತಂತ್ರ್ಯ ನೀಡುವುದು ಅನಿವಾರ್ಯವಾಯಿತಾಗ. ಭಾರತೀಯ ನಾಯಕರೊಡನೆ ಸಂಧಾನ ನಡೆಸುವ ಗುರುತರ ಹೊಣೆ ಕ್ರಿಪ್ಸರದಾಯಿತು. ಭಾರತೀಯ ಸ್ವಾತಂತ್ರ್ಯ ಹೋರಾಟದ ವಿಷಯದಲ್ಲಿ ಅವರಿಗೆ ಸಹಾನುಭೂತಿ ಇದ್ದಿತು.



ಸ್ಟ್ಯಾಫರ್ಡ್ ಕ್ರಿಪ್ಸ್, ಗಾಂಧೀಜೀ —ನಿಯೋಗದೊಡನೆ ಮಾತುಕತೆಯ ಸಂದರ್ಭ

ಬ್ರಿಟನಿನಲ್ಲಿ ಲೇಬರ್ ಪಕ್ಷ ಅಧಿಕಾರದಲ್ಲಿದ್ದ ಅವಧಿಯಲ್ಲಿ ಕ್ರಿಪ್ಸ್ ವಿವಿಧ ಹುದ್ದೆಗಳಲ್ಲಿದ್ದು ಸಮರ್ಥ ಆಡಳಿತಗಾರ ಎನಿಸಿದರು. ಅನಾರೋಗ್ಯ ನಿಮಿತ್ತ 1950ರಲ್ಲಿ ಮಂತ್ರಿ ಪದವಿಗೆ ರಾಜೀನಾಮೆ ಕೊಟ್ಟರು.

1952ರ ಏಪ್ರಿಲ್ 21ರಂದು ನಿಧನರಾದರು.

ಸ್ಟ್ರಾಬೊ

"ಅಲೆಗ್ಸಾಂಡರ್ ನೊಡನೆ ಹೋದವರು ಭಾರತದ ಬಗೆಗೆ ಹೇಳುವುದರಲ್ಲಿ ವ್ಯತ್ಯಾಸ ಇದೆ. ಕಂಡುದನ್ನು ಹೇಳುವುದರಲ್ಲೇ ಈ ವ್ಯತ್ಯಾಸ. ಇನ್ನು ಕಾಣದೆ, ಕೇಳಿದುದನ್ನು ಹೇಳಿರುವುದರಲ್ಲಿ ಹೇಗಿರಬಹುದು ?"

—ತನ್ನ ಹಿಂದಿನವರು ಭಾರತದ ಬಗೆಗೆ ಹೇಳಿರುವುದರಲ್ಲಿ ಬಹುಭಾಗ ಸುಳ್ಳು ಎಂದು ಟೀಕಿಸಿದವನು ಗ್ರೀಕ್ ಪ್ರವಾಸಿ ಸ್ಟ್ರಾಬೋ.

43 ಸಂಪುಟಗಳ ಚರಿತ್ರೆಯನ್ನೂ 17 ಸಂಪುಟಗಳ ಭೂಗೋಳವನ್ನೂ ರಚಿಸಿದ ಪಂಡಿತ ಸ್ಟ್ರಾಬೋ. ಪ್ರಾಯಶಃ ಕ್ರಿ. ಪೂ. 64ರಲ್ಲಿ ಈಗಿನ ಟರ್ಕಿಯಲ್ಲಿರುವ ಅಮೇಸಿಯಾದಲ್ಲಿ ಅಥವಾ ಮನೆತನದಲ್ಲಿ ಜನನ. ಹಿಂದೆ ಭಾರತಕ್ಕೆ ಸಮುದ್ರಯಾನ, ವ್ಯಾಪಾರ ಇರಲಿಲ್ಲ. ತನ್ನ ಕಾಲದಲ್ಲಿ ನೇರ ಸಂಪರ್ಕವಿತ್ತು : ವಿಷಯಗಳನ್ನು ತಿಳಿಯಲು ಹೆಚ್ಚಿನ ಅವಕಾಶ ಉಂಟಾಯಿತು —ಎಂದಿದ್ದಾನೆ.

ಸ್ಟ್ರಾಬೋ ಸ್ವತಃ ಭಾರತಕ್ಕೆ ಬಂದವನಲ್ಲ. ಬೇರೆಯವರಿಂದ ಸಂಗ್ರಹಿಸಿದ ವಿಷಯವನ್ನು ಬರೆದಿರಿಸಿದ .

"ಇಂಡಿಯಾದಲ್ಲಿ ಹಲವಾರು ನದಿಗಳಿವೆ...ಇಂಡಸ್ (ಸಿಂಧು) ಮತ್ತು ಗ್ಯಾಂಜಿಸ್ (ಗಂಗಾ) ಪ್ರಮುಖ ನದಿಗಳು..."

"ಅಲ್ಲಿ ನೀರಾನೆ ಹೊರತು, ಉಳಿದೆಲ್ಲ ಪ್ರಾಣಿಗಳಿವೆ. ಪರ್ವತ ಪ್ರದೇಶಗಳಲ್ಲಿ ಚಿನ್ನ, ಬೆಳ್ಳಿ ನಿಕ್ಷೇಪಗಳಿವೆ.... ಆದರೆ ಅವನ್ನು ಹೆಚ್ಚಾಗಿ ಉಪಯೋಗಿಸುವುದಿಲ್ಲ —ಜನರಿಗೆ ತಮ್ಮ ಐಶ್ವರ್ಯ ಎಷ್ಟೆಂದೇ ತಿಳಿಯದು..."

"ಇಂಡಿಯಾದಲ್ಲಿ ಅನೇಕ ರೀತಿಯ ಸುಗಂಧದ್ರವ್ಯಗಳು ದೊರಕುತ್ತವೆ. [illegible] [illegible] [illegible] ಅವರಿಗೆ [illegible]

"ವಿಜ್ಞಾನದ ಅತಿರೇಕ ಅಧ್ಯಯನ ಸಲ್ಲದು. ಅದು ಕ್ರೌರ್ಯ ಎಂಬ ಭಾವನೆ ಇದೆ. ವೈದ್ಯಕೀಯ ವಿಜ್ಞಾನವನ್ನು ಮಾತ್ರ ಭಾರತೀಯರು ಅಭ್ಯಸಿಸುತ್ತಾರೆ.

"ಕಥಾಯಿ(ಕ್ಷತ್ರಿಯ) ನಾಡಿನಲ್ಲಿ ಸೌಂದರ್ಯಕ್ಕೆ ಪ್ರಥಮ ಸ್ಥಾನ. ಅತ್ಯಂತ ಅಂಗಸೌಷ್ಠವ ಇರುವವನೇ ರಾಜ...ಜನರು ಗಡ್ಡಕ್ಕೆ ಬಗೆ ಬಗೆಯ ಬಣ್ಣ ಹಚ್ಚಿಕೊಳ್ಳುತ್ತಾರೆ...ಗಂಡ ಸತ್ತರೆ, ಹೆಂಡತಿ ಅವನೊಡನೆ ಚಿತೆಯೇರಬೇಕೆಂಬ ಕ್ರಮ...ಹೆಂಡತಿ ಗಂಡನಿಗೆ ವಿಷ ಹಾಕಿ ಸಾಯಿಸುವುದನ್ನು ತಪ್ಪಿಸಲು ಈ ಪದ್ಧತಿ......

"ತಕ್ಷಿಲ (ತಕ್ಷಶಿಲಾ) ಪ್ರದೇಶ ಫಲವತ್ತಾದದ್ದು ಮತ್ತು ಜನಸಾಂದ್ರತೆ ಉಳ್ಳದ್ದು. ನ್ಯಾಯನೀತಿಗಳುಳ್ಳ ಆಡಳಿತ ಇದೆ...ಒಂಟಿಕಾಲಿನಲ್ಲಿ ಎಷ್ಟೋ ಹೊತ್ತು ನಿಲ್ಲಬಲ್ಲ ಅಥವಾ ಬಿಸಿಲು, ಮಳೆ ಲೆಕ್ಕಿಸದೆ ಅಂಗಾತನೆ ಮಲಗಿರಬಲ್ಲ ಸನ್ಯಾಸಿಗಳನ್ನು ಅಲೆಗ್ಸಾಂಡರ್ ತಕ್ಷಿಲದ ಬಳಿ ನೋಡಿದ..."

ಸ್ಟ್ರಾಬೋ ಪ್ರಾದೇಶಿಕ ವ್ಯತ್ಯಾಸ ವೈವಿಧ್ಯಗಳನ್ನು ವರ್ಣಿಸಿದ್ದಾನೆ.

ಸ್ವಾತಂತ್ರ್ಯ ದಿನ

"ಮಧ್ಯರಾತ್ರಿಯ ಗಂಟೆ ಬಾರಿಸುತ್ತಲೇ ಜಗತ್ತು ನಿದ್ರಿಸುತ್ತಿರುವ ವೇಳೆಯಲ್ಲಿ, ಭಾರತ ಎಚ್ಚೆತ್ತು ಜೀವ ತಳೆಯುವುದು, ಸ್ವತಂತ್ರವಾಗುವುದು. ಇತಿಹಾಸದಲ್ಲಿ ಎಂದಾದರೊಮ್ಮೆ ಬರುವ ಮಹತ್ವದ ಘಳಿಗೆಯೊಂದುಂಟು. ಅಂಥ ಘಳಿಗೆಯಲ್ಲಿ, ಹಳತಿನಿಂದ ಹೊಸತಿಗೆ ನಾವು ಪದಾರ್ಪಣ ಮಾಡುತ್ತೇವೆ. ಒಂದು ಯುಗ ಮುಕ್ತಾಯವಾಗುತ್ತದೆ. ದೀರ್ಘಕಾಲದಿಂದ ಅದುಮಿ ಹಿಡಿಯಲ್ಪಟ್ಟ ರಾಷ್ಟ್ರವೊಂದರ ಆತ್ಮ ನುಡಿಯತೊಡಗುತ್ತದೆ."

–1947 ಆಗಸ್ಟ್ 14ರ ಮಧ್ಯರಾತ್ರಿಗೆ ತುಸು ಮುಂಚೆ ಜವಾಹರಲಾಲ ನೆಹರೂ ಅವರು ಭಾರತೀಯ ರಾಜ್ಯಾಂಗ ರಚನಾ ಸಭೆಯನ್ನು ಕುರಿತು ಹೇಳಿದ ಮಾತುಗಳು ಇವು. ಆ ಮಹತ್ವದ ಘಳಿಗೆಯಲ್ಲಿ ನಡುವಿರುಳು ಕಳೆದು ಆಗಸ್ಟ್ 15 ಆರಂಭವಾದಂತೆ, ತನ್ನ ಬಂಧನದ ಸಂಕೋಲೆಗಳನ್ನು ಕಳಚಿಕೊಂಡು ಭಾರತ ಸ್ವತಂತ್ರವಾಯಿತು.

ಪ್ರತಿ ವರ್ಷ ಆಗಸ್ಟ್ 15ರಂದು ನಮ್ಮ ರಾಷ್ಟ್ರದಲ್ಲಿ ಸ್ವಾತಂತ್ರ್ಯ ದಿನಾಚರಣೆ ನಡೆಯುತ್ತದೆ. ದೆಹಲಿ ಕೆಂಪುಕೋಟೆಯಲ್ಲಿ ವಿಶೇಷ ಸಮಾರಂಭ ಏರ್ಪಡುತ್ತದೆ. ಸ್ವಾತಂತ್ರ್ಯ ಘೋಷಿಸಲ್ಪಟ್ಟಾಗ ಭಾರತದ ತ್ರಿವರ್ಣಧ್ವಜ ಹಾರಿದ್ದು ಇಲ್ಲೇ. ಪ್ರತಿವರ್ಷ ಆಗಸ್ಟ್ 15ರಂದು ಬೆಳಗ್ಗೆ ಪ್ರಧಾನ ಮಂತ್ರಿ ಕೆಂಪುಕೋಟೆಯ ಮೇಲೆ ಧ್ವಜಾರೋಹಣ ಮಾಡುತ್ತಾರೆ. ಅಲ್ಲಿ ಕೋಟೆಯ ಮುಂದಿನ ವಿಶಾಲ ಬಯಲಿನಲ್ಲಿ ಜನಸ್ತೋಮವನ್ನು ಉದ್ದೇಶಿಸಿ ಮಾತನಾಡುತ್ತಾರೆ.

ಇದು ದೇಶದಾದ್ಯಂತ ನಡೆಯುವ ಉತ್ಸವ; ಎಲ್ಲೆಲ್ಲೂ ರಾಷ್ಟ್ರಧ್ವಜದ ಆರೋಹಣ, ಧ್ವಜವಂದನೆ ನಡೆಯುತ್ತವೆ. ಕ್ರೀಡಾಪಂದ್ಯಗಳನ್ನೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನೂ ಆ ದಿನ ನಡೆಸುತ್ತಾರೆ.

ವಿದೇಶಗಳಲ್ಲಿರುವ ಭಾರತೀಯ ರಾಯಭಾರಿ ಕಚೇರಿಗಳಲ್ಲೂ ಸ್ವಾತಂತ್ರ್ಯ ದಿನಾಚರಣೆ ನಡೆಯುತ್ತದೆ.

ಸ್ವಾತಂತ್ರ್ಯ ಹೋರಾಟ

ಬ್ರಿಟಿಷರ ಹಿಡಿತದಿಂದ ಬಿಡಿಸಿಕೊಂಡು ಭಾರತ ಸ್ವತಂತ್ರ ರಾಷ್ಟ್ರವಾದದ್ದು 1947ರ ಆಗಸ್ಟ್ 15ರಂದು. ಇದನ್ನು ಸಾಧಿಸಲು ಭಾರತೀಯರು ಸುಮಾರು ಒಂದು ಶತಮಾನಕಾಲ ಹೋರಾಡಬೇಕಾಯಿತು.

1857ರಲ್ಲಿ ನಡೆದ ಸಿಪಾಯಿ ದಂಗೆಯನ್ನು 'ಭಾರತದ ಮೊದಲನೆಯ ಸ್ವಾತಂತ್ರ್ಯಸಂಗ್ರಾಮ' ಎಂದು ಕರೆಯುವುದು ವಾಡಿಕೆ. ಇದಕ್ಕೆ ಒಂದು ಶತಮಾನದ ಹಿಂದೆ ನಡೆದ ಪ್ಲಾಸೀ ಕದನದಲ್ಲಿ ಬ್ರಿಟಿಷರಿಗೆ ದೊರೆತ ವಿಜಯ ಭಾರತದಲ್ಲಿ ಅವರು ತಮ್ಮ ಸಾಮ್ರಾಜ್ಯವನ್ನು ಸ್ಥಾಪಿಸಲು ಅನುವುಮಾಡಿಕೊಟ್ಟಿತು. ಈ ವಿಜಯದಿಂದ ಬಂಗಾಳದಲ್ಲಿ ಬೇರುಬಿಟ್ಟ ಬ್ರಿಟಿಷರು ಕ್ರಮಕ್ರಮವಾಗಿ ಭಾರತದ ವಿವಿಧ ಭಾಗಗಳ ಮೇಲೆ ತಮ್ಮ ಹಿಡಿತವನ್ನು ಬಲಪಡಿಸಿಕೊಂಡು ಆಳುವ ಅರಸರಾದರು. ಸ್ವಲಾಭಕ್ಕಾಗಿ ಭಾರತೀಯರನ್ನು ನಾನಾ ರೀತಿಗಳಲ್ಲಿ ಶೋಷಿಸತೊಡಗಿದರು, ಭಾರತೀಯರ ಬಗೆಗೆ ಅವರು ತೋರುತ್ತಿದ್ದ ನಿಷ್ಠುರ ವರ್ತನೆ. ಏನಾದರೂ ಕಾರಣವನ್ನು ಮುಂದೆ ಮಾಡಿ ಅವರು ದೇಶೀಯ ಸಂಸ್ಥಾನಗಳನ್ನು ಕಬಳಿಸುತ್ತಿದ್ದ ನೀತಿ ಇವೆಲ್ಲ ಬ್ರಿಟಿಷ್ ಆಡಳಿತದ ಬಗೆಗೆ ಭಾರತೀಯರಲ್ಲಿ ಅಸಮಾಧಾನ ಉಂಟುಮಾಡಿದುವು. ಅವರ ರಾಜ್ಯ ವಿಸ್ತರಣವನ್ನು ವಿರೋಧಿಸುವ ಪ್ರಯತ್ನ ಹೈದರಾಲಿ, ಟಿಪ್ಪು ಮುಂತಾದವರಿಂದ ನಡೆಯಿತು.

ಒಳಗೊಳಗೇ ಹೊಗೆಯಾಡುತ್ತಿದ್ದ ಈ ಅಸಂತೃಪ್ತಿ, ಅಸಮಾಧಾನ ಸ್ಫೋಟಗೊಂಡದ್ದು 1857ರಲ್ಲಿ. ಬ್ರಿಟಿಷರನ್ನು ಭಾರತದಿಂದ ಹೊರದೂಡಲು ಕೆಲವಂದಿ ಅರಸರೂ ಬ್ರಿಟಿಷರ ಸೇವೆಯಲ್ಲಿದ್ದ ಭಾರತೀಯ ಸಿಪಾಯಿಗಳೂ ಹೋರಾಟ ನಡೆಸಿದರು. ಈ ಪ್ರಯತ್ನ ಯಶಸ್ವಿಯಾಗಲಿಲ್ಲ. ಆದರೆ ಭಾರತೀಯರಿಗೆ ತಮ್ಮ ಮೇಲೆ ತೀವ್ರ ಅವಿಶ್ವಾಸವಿದೆ ಎಂಬುದು ಬ್ರಿಟಿಷರಿಗೆ ಸ್ಪಷ್ಟವಾಯಿತು. ಈ ಪರಿಸ್ಥಿತಿಯನ್ನು ಸುಧಾರಿಸಲು ಅವರು ಪ್ರಯತ್ನಗಳನ್ನು ನಡೆಸಿದರು.

ಆಗಸ್ಟ್ 15ರಂದು ಕೆಂಪುಕೋಟೆಯಿಂದ ಪ್ರಧಾನಿ...



ಜಲಿಯನ್‌ವಾಲಾ ಬಾಗ್ ಹಂತಕನ ಹತ್ಯೆ–ಉಧಾಮುಸಿಂಗ್‌ನಿಂದ





1857ರ ಸ್ವಾತಂತ್ರ್ಯ ಸಮರದಲ್ಲಿ ಗಲ್ಲು ಶಿಕ್ಷೆ

ಈ ಸನ್ನಿವೇಶದಲ್ಲಿ ಭಾರತೀಯರ ಜೀವನದ ಮೇಲೆ ಕೆಲವು ಹೊಸ ಪ್ರಭಾವಗಳು ಬಿದ್ದುವು. ಇವುಗಳಲ್ಲಿ ಇಂಗ್ಲಿಷ್ ವಿದ್ಯಾಭ್ಯಾಸ ಪ್ರಸಾರ ಒಂದು; ಭಾರತೀಯರ ಜೀವನದಲ್ಲಿ ನುಸುಳಿಕೊಂಡಿದ್ದ ದೋಷಗಳನ್ನು ನಿವಾರಿಸಲು ಪ್ರಯತ್ನಿಸಿದ ಧಾರ್ಮಿಕ, ಸಾಮಾಜಿಕ ಸುಧಾರಣೆಗಳ ಪ್ರಭಾವ ಇನ್ನೊಂದು. ಈ ದಿಸೆಯಲ್ಲಿ ರಾಜಾ ರಾಮಮೋಹನ ರಾಯ್, ಸ್ವಾಮಿ ವಿವೇಕಾನಂದ, ಸ್ವಾಮಿ ದಯಾನಂದ ಸರಸ್ವತಿ ಮುಂತಾದವರ ಪ್ರಯತ್ನಗಳು ಗಮನಾರ್ಹವಾದುವು.

ಇವೆರಡು ಶಕ್ತಿಗಳ ಪರಿಣಾಮವಾಗಿ, ಭಾರತೀಯರು ಆಧುನಿಕ ಪಾಶ್ಚಾತ್ಯ ರಾಷ್ಟ್ರಗಳ ಸ್ವಾತಂತ್ರ್ಯಶೀಲತೆಯನ್ನೂ ತಮ್ಮ ಸಂಸ್ಕೃತಿಯ ಹಿರಿಮೆಯನ್ನೂ ತಮಗೆ ಅಂಟಿದ್ದ ಲೋಪದೋಷಗಳನ್ನೂ ಮನಗಂಡರು; ತಮ್ಮ ಉನ್ನತಿಯನ್ನು ಸಾಧಿಸಲು ಪ್ರಯತ್ನಿಸಿದರು.

ಈ ಪ್ರಯತ್ನದ ಪರಿಣಾಮ, 1885 ಡಿಸೆಂಬರ್ 28ರಂದು ರೂಪುಗೊಂಡ ಭಾರತ ರಾಷ್ಟ್ರೀಯ ಕಾಂಗ್ರೆಸ್. ಭಾರತೀಯರಿಗೆ ಹೆಚ್ಚು ಹೆಚ್ಚು ಸೌಕರ್ಯಗಳನ್ನು ಒದಗಿಸಲು, ಭಾರತದ ಆಡಳಿತ ವ್ಯವಸ್ಥೆಯಲ್ಲಿ ಭಾರತೀಯರಿಗೆ ಗಣ್ಯಸ್ಥಾನ ಕೊಡಲು ಸರಕಾರವನ್ನು ಕೇಳಿಕೊಳ್ಳಬೇಕು —ಎಂಬುದು ಅಂದಿನ ಅವರ ಬೇಡಿಕೆಗಳ ತಿರುಳು. ಆದರೆ ಈ ಬೇಡಿಕೆಗಳಿಗೆ, ಭಾರತೀಯರು ನಿರೀಕ್ಷಿಸಿದಷ್ಟು ಅನುಕೂಲ ಪ್ರತಿಕ್ರಿಯೆ ದೊರೆಯಲಿಲ್ಲ. ಕಾಂಗ್ರೆಸ್ಸಿನಲ್ಲಿ ತೀವ್ರಗಾಮಿಗಳ ಗುಂಪು ಹುಟ್ಟಿಕೊಂಡಿತು. ಬ್ರಿಟಿಷರನ್ನು ಬೇಡಿಕೊಳ್ಳುವುದನ್ನು ಬಿಟ್ಟು, ತಮ್ಮ ಹಕ್ಕಿಗಾಗಿ ಹೋರಾಡಬೇಕೆಂಬ ಮನೋವೃತ್ತಿ ಬೆಳೆಯಿತು. ಬಾಲಗಂಗಾಧರ ತಿಲಕ್ ಈ ಗುಂಪಿನ ಅಗ್ರನಾಯಕರಾದರು. ಈ ಬೆಳವಣಿಗೆ ಬ್ರಿಟಿಷರಿಗೆ ಅಪ್ರಿಯವಾಯಿತು. ಅವರು ದಬ್ಬಾಳಿಕೆಯ ಮಾರ್ಗವನ್ನು ಅನುಸರಿಸಿದರು.


ಪ್ರಜಾಭಿಪ್ರಾಯಕ್ಕೆ ವಿರುದ್ಧವಾಗಿ ಬ್ರಿಟಿಷ್ ಸರಕಾರ 1905 ಅಕ್ಟೋಬರ್ 16ರಂದು ಬಂಗಾಳ ಪ್ರಾಂತವನ್ನು ಎರಡು ಭಾಗ ಮಾಡಿತು. ಇದು ಬ್ರಿಟಿಷರ ಆಳ್ವಿಕೆಯ ಬಗೆಗೆ ತೀವ್ರ ವಿರೋಧ ಭಾವವನ್ನು ಪ್ರಚೋದಿಸಿತು.

ಈ ವಿರೋಧವನ್ನು ಹತ್ತಿಕ್ಕಲು ಸರಕಾರ ಕೈಗೊಂಡ ಉಗ್ರ ಕ್ರಮಗಳು ಜನರನ್ನು ಇನ್ನಷ್ಟು ಕೆರಳಿಸಿದುವು.

ಪರಿಣಾಮವಾಗಿ ಭಯೋತ್ಪಾದಕರ ಚಳುವಳಿ ರೂಪುಗೊಂಡಿತು. ಬ್ರಿಟಿಷರ ವಿರುದ್ಧ ಸಶಸ್ತ್ರಕ್ರಾಂತಿ, ಬ್ರಿಟಿಷ್ ಅಧಿಕಾರಿಗಳ ಕೊಲೆ —ಇಂಥ ಕಾರ್ಯಕ್ರಮಗಳಿಂದ ಬ್ರಿಟಿಷರ ಆಡಳಿತವನ್ನು ಕೊನೆಗಾಣಿಸಿ, ಭಾರತವನ್ನು ಪರಕೀಯ ದಾಸ್ಯದಿಂದ ಮುಕ್ತಗೊಳಿಸಬೇಕೆಂಬುದು ಈ ಚಳುವಳಿಕಾರರ ಉದ್ದೇಶ. ಈ ದೃಷ್ಟಿಯ ದೇಶಭಕ್ತರು ತಮ್ಮ ಧ್ಯೇಯಸಾಧನೆಗಾಗಿ ಭಾರತದ ಒಳಗೂ ಹೊರಗೂ ಸಂಘಗಳನ್ನು ಕಟ್ಟಿದರು. ಇವರ ಪ್ರಯತ್ನ ಕೂಡ 1857ರ ಸಶಸ್ತ್ರ ಹೋರಾಟದಂತೆ ವಿಫಲವಾಯಿತು. ಬಂಗಾಳದ ವಿಭಜನೆಯನ್ನು ರದ್ದುಗೊಳಿಸದೆ ಇದ್ದರೆ, ಭಾರತದಲ್ಲಿ ಶಾಂತಿ ಏರ್ಪಡುವುದು ದುಸ್ತರವೆಂಬುದನ್ನು ಬ್ರಿಟಿಷರು ಮನಗಂಡರು. ಜನಮನವನ್ನು ಒಲಿಸುವುದಕ್ಕಾಗಿ 1912ರಲ್ಲಿ ಬಂಗಾಳದ ವಿಭಜನೆಯನ್ನು ರದ್ದುಗೊಳಿಸಿದರು. ಬ್ರಿಟಿಷ್ ಸರಕಾರ ಜನಾಭಿಪ್ರಾಯಕ್ಕೆ ತಲೆಬಾಗಿದ ಪ್ರಥಮ ಪ್ರಸಂಗ ಇದು. ಹೀಗೆ ಬ್ರಿಟಿಷರು ರಾಷ್ಟ್ರೀಯ ಜನಾಭಿಪ್ರಾಯಕ್ಕೆ ಮಣಿದರಾದರೂ, ಭಾರತೀಯರಿಗೆ ಸ್ವಾತಂತ್ರ್ಯವನ್ನು ಕೊಡುವ ಮನಸ್ಸು ಅವರಿಗೆ ಇರಲಿಲ್ಲ. 1909ರಲ್ಲಿ ರಾಜಕೀಯ ಸುಧಾರಣೆಗಳನ್ನು ಆಚರಣೆಗೆ ತರುವ ಸೋಗಿನಲ್ಲಿ [illegible] [illegible] ಪದ್ಧತಿಯನ್ನು [illegible]. [illegible] ಈ ಸುಧಾರಣೆಗಳು ಜನಪ್ರಿಯವಾಗಲಿಲ್ಲ. ಬ್ರಿಟಿಷರು ತಮ್ಮ ದಬ್ಬಾಳಿಕೆಯನ್ನು ಮುಂದುವರಿಸಿದರು.

ಸೂತಕತೆ : ಪೇವಲರ ನಿವಾಸದಿಂದ [illegible], ನೆಹರು





1947 ಆಗಸ್ಟ್ 14–15ರ ನಡು ಇರುಳಿನಲ್ಲಿ ರಾಜ್ಯಾಂಗ ಸಭೆಯಲ್ಲಿ ಜವಾಹರಲಾಲರ ಭಾಷಣ

1914ರಲ್ಲಿ ಮೊದಲನೆಯ ಮಹಾಯುದ್ಧ ಆರಂಭವಾದ ಮೇಲೆ. ತಮ್ಮ ಯುದ್ಧ ಪ್ರಯತ್ನದಲ್ಲಿ ಭಾರತೀಯರ ಸಹಕಾರವನ್ನು ಬ್ರಿಟಿಷರು ಬಯಸಿದರು. ಭಾರತೀಯರಿಂದ ತಕ್ಕಮಟ್ಟಿನ ಸಹಕಾರವೂ ದೊರೆಯಿತು. ಯುದ್ಧ ಮುಗಿದ ಮೇಲೆ ಭಾರತದಲ್ಲಿ ರಾಜಕೀಯ ಸುಧಾರಣೆ ಕೈಗೊಳ್ಳುವ ಘೋಷಣೆ ಮಾಡಿದರು. ಇದನ್ನನುಸರಿಸಿ 1919ರಲ್ಲಿ ಹೊಸ ಸುಧಾರಣೆಗಳ ಕಾಯಿದೆಯನ್ನು ಬ್ರಿಟಿಷ್ ಪಾರ್ಲಿಮೆಂಟ್ ಅಂಗೀಕರಿಸಿತು. ಅದು 1921ರಲ್ಲಿ ಆಚರಣೆಗೆ ಬಂದಿತು. ಇದರಿಂದ ಪ್ರಾಂತಿಕ ಸರಕಾರಗಳ ಕೆಲವು ಕ್ಷೇತ್ರಗಳು ಪ್ರಜಾಪ್ರತಿನಿಧಿಗಳ ಆಡಳಿತಕ್ಕೆ ಒಳಪಟ್ಟುವು. ಪ್ರಾಂತ್ಯ ಶಾಸನ ಸಭೆಗೆ ಜವಾಬುದಾರಿ ಹೊತ್ತ ಮಂತ್ರಿಮಂಡಲಗಳು ಈ ಕ್ಷೇತ್ರಗಳ ಆಡಳಿತವನ್ನು ನೋಡಿಕೊಳ್ಳುವಂತಾಯಿತು. ಆದರೆ ಇತರ ಆಡಳಿತ ವಿಚಾರಗಳಲ್ಲಿ ಪ್ರಾಂತದ ಗವರ್ನರ್ ಅವರದ್ದೇ ಪರಮಾಧಿಕಾರ. ಕೇಂದ್ರ ಸರಕಾರದ ಆಡಳಿತದಲ್ಲಿ ಭಾರತೀಯ ಪ್ರಜಾಪ್ರತಿನಿಧಿಗಳಿಗೆ ಯಾವ ಸ್ಥಾನವೂ ಸಿಗಲಿಲ್ಲ.

ಈ ರಾಜಕೀಯ ಸುಧಾರಣೆಗಳು ಭಾರತೀಯರ ಸ್ವಾತಂತ್ರ್ಯಾಪೇಕ್ಷೆಯನ್ನು ಯಾವ ರೀತಿಯಲ್ಲಿಯೂ ತಣಿಸಲಿಲ್ಲ. ಆಗ ಕಾಂಗ್ರೆಸ್, ನಾಯಕತ್ವದಲ್ಲಿ ಅಸಹಕಾರ ಚಳುವಳಿ ಆರಂಭಿಸಿತು. ಸ್ವರಾಜ್ಯ ಸಾಧನೆಯೇ ತನ್ನ ಗುರಿಯೆಂದು ಘೋಷಿಸಿತು. ಕಾಂಗ್ರೆಸಿನ ಈ ನಿಲುವಿಗೆ ಜನಸಮುದಾಯದ ಬೆಂಬಲ ದೊರೆಯಿತು. ಸ್ವಾತಂತ್ರ್ಯ ಚಳುವಳಿ ಜನತೆಯಲ್ಲಿ ಬೇರು ಬಿಟ್ಟು ಆಂದೋಲನವಾಯಿತು. ಸತ್ಯಾಗ್ರಹ ಅಸಹಕಾರಗಳ ಯುಗ ಆರಂಭವಾಯಿತು. ಹೊರಗೆ ಈ ಚಳುವಳಿಗಳು ನಡೆಯುತ್ತಿದ್ದಾಗ.ಕಾಂಗ್ರೆಸ್ಸಿಗರು

ನಡು ಇರುಳು ಅಧಿವೇಶನವನ್ನು ಉದ್ದೇಶಿಸಿ ರಾಜೇಂದ್ರ ಪ್ರಸಾದ



ಶಾಸನಸಭೆಗಳ ಸದಸ್ಯರಾಗಿ ಆಯ್ಕೆಹೊಂದಿ ಸರಕಾರದ ಸುಗಮ ಸಂಚಾಲನೆಗೆ ಅಡ್ಡಿ ಒಡ್ಡಲಾರಂಭಿಸಿದರು.

ಈ ಸನ್ನಿವೇಶದಲ್ಲಿ ಕಾಂಗ್ರೆಸಿಗೆ ವಿರುದ್ಧವಾಗಿ ಮುಸ್ಲಿಂ ಲೀಗ್ ರಾಜಕೀಯ ರಂಗಕ್ಕೆ ಇಳಿಯಿತು. 1909ರ ಮಾರ್ಲೆ—ಮಿಂಟೊ ಸುಧಾರಣೆಗಳು ಹಿಂದೂ ಮುಸಲ್ಮಾನ ವೈಮನಸ್ಯದ ಬೀಜ ಬಿತ್ತಿದ್ದುವು. ಮೊದಲನೆಯ ಮಹಾಯುದ್ಧಾನಂತರದ ಖಿಲಾಫತ್ ಚಳುವಳಿಯ ಕಾಲದಲ್ಲಿ ತಕ್ಕಮಟ್ಟಿಗೆ ನಿವಾರಣೆಯಾಗುವ ಲಕ್ಷಣಗಳು ಕಂಡುಬಂದುವಾದರೂ ವೈಮನಸ್ಯ ಕೊನೆಗಾಣಲಿಲ್ಲ. ಬ್ರಿಟಿಷ್ ಸರಕಾರ ಮುಸ್ಲಿಂ ಲೀಗನ್ನು ಕಾಂಗ್ರೆಸ್ ಸಂಸ್ಥೆಗೆ ವಿರುದ್ಧವಾಗಿ ನಿಲ್ಲಲು ಪ್ರೇರೇಪಿಸಿತು. ಆದರೂ ಸ್ವಾತಂತ್ರ್ಯ ಚಳುವಳಿಯನ್ನು ಕಾಂಗ್ರೆಸ್ ದೃಢವಾಗಿ ಮುಂದುವರಿಸಿಕೊಂಡು ಬಂತು. 1929 ಡಿಸೆಂಬರ್ 31ರ ಒಳಗಾಗಿ ಭಾರತಕ್ಕೆ ಡೊಮಿನಿಯನ್ ಸ್ಟೇಟಸ್(ಬ್ರಿಟಿಷ್ ಸಾಮ್ರಾಜ್ಯದಲ್ಲಿ ಸ್ವತಂತ್ರ ರಾಷ್ಟ್ರವಾಗಿರುವುದು) ಕೊಡದಿದ್ದಲ್ಲಿ. ತಾನು ಭಾರತದ ಸಂಪೂರ್ಣ ಸ್ವಾತಂತ್ರ್ಯಕ್ಕಾಗಿ ಅಸಹಕಾರ, ಕರನಿರಾಕರಣೆ. ಚಳುವಳಿಯನ್ನಾರಂಭಿಸುವನೆಂದು ಕಾಂಗ್ರೆಸ್ಸು ಸಾರಿತು.

ಸ್ವಾತಂತ್ರ್ಯ ಚಳುವಳಿಯ ಕಾವು ಏರುತ್ತಿದ್ದುದನ್ನು ಗಮನಿಸಿದ ಬ್ರಿಟಿಷ್ ಸರಕಾರ. ಭಾರತಕ್ಕೆ 'ಡೊಮಿನಿಯನ್ ಸ್ಟೇಟಸ್' ಕೊಡುವುದೇ ರಾಜಕೀಯ ಸುಧಾರಣೆಗಳ ಗುರಿ ಎಂದು ಘೋಷಿತು. ಈ ವಿಚಾರವಾಗಿ ಪರಿಶೀಲನೆ ನಡೆಸಲು, ಭಾರತದ ಎಲ್ಲ ರಾಜಕೀಯ ಪಕ್ಷಗಳ ದುಂಡುಮೇಜಿನ ಪರಿಷತ್ತನ್ನು ಲಂಡನಿನಲ್ಲಿ ನಡೆಸುವುದಾಗಿಯೂ ಪ್ರಕಟಿಸಿತು. ಕಾಂಗ್ರೆಸ್ ಅದರಲ್ಲಿ ಭಾಗವಹಿಸಲು ನಿರಾಕರಿಸಿ, ತನ್ನ ಹಿಂದಿನ ನಿರ್ಣಯದಂತೆ 1929 ಡಿಸೆಂಬರ್ 31ರ ಮಧ್ಯರಾತ್ರೆ, ಭಾರತಕ್ಕೆ ಸಂಪೂರ್ಣ ಸ್ವಾತಂತ್ರ್ಯ ದೊರೆಯಬೇಕು ಎಂದು ಘೋಷಿಸಿತು. ತನ್ನ ಹೋರಾಟವನ್ನು ಮುಂದುವರಿಸಿತು. 1930 ಮಾರ್ಚ್ 12ರಂದು ಗಾಂಧೀಜೀ ತಮ್ಮ ಸುಪ್ರಸಿದ್ಧ ದಂಡೀಯಾತ್ರೆಯನ್ನು ಆರಂಭಿಸಿದರು. ಎಲ್ಲೆಲ್ಲೂ ಅಸಹಕಾರ ಚಳುವಳಿ ಹಬ್ಬಿತು. ಸರಕಾರದ ದಬ್ಬಾಳಿಕೆ ಈ ಹೋರಾಟವನ್ನು ಭಂಗಗೊಳಿಸಲಿಲ್ಲ. ಸಂಧಾನಾನಂತರ. ಗಾಂಧೀಜೀ ದುಂಡುಮೇಜಿನ ಪರಿಷತ್ತಿನಲ್ಲಿ ಭಾಗವಹಿಸಲು ಹೋದರು. ಆದರೆ ಈ ಗೋಷ್ಠಿ ವಿಫಲವಾಯಿತು. ಸ್ವಾತಂತ್ರ್ಯ ಚಳುವಳಿ ಮುಂದುವರಿಯಿತು. ತೀವ್ರವಾದ ಹೋರಾಟದಿಂದಲ್ಲದೆ, ಭಾರತಕ್ಕೆ ಸ್ವಾತಂತ್ರ್ಯ ಲಭಿಸುವುದಿಲ್ಲ ಎಂಬುದನ್ನು ರಾಷ್ಟ್ರ ನಾಯಕರು ಮನಗಂಡರು,

ಬ್ರಿಟಿಷ್ ಸರಕಾರ, ತನ್ನ ರಾಜಕೀಯ ಸುಧಾರಣೆಗಳ ನೀತಿಯನ್ನು ಮುಂದುವರಿಸಿ, ಹೊಸದೊಂದು 1935ರಲ್ಲಿ ಕಾನೂನನ್ನು ಮಾಡಿತು. ಇದರಂತೆ, ಪ್ರಾಂತಗಳಲ್ಲಿ ಪ್ರಜಾಪ್ರತಿನಿಧಿಗಳ ಸರಕಾರಕ್ಕೆ ಅವಕಾಶ ಕಲ್ಪಿಸಲಾಯಿತು. ಕೇಂದ್ರಾಡಳಿತದಲ್ಲೂ ಪ್ರಜಾಪ್ರತಿನಿಧಿಗಳಿಗೆ ಸ್ವಲ್ಪ ಮಟ್ಟಿನ ಅಧಿಕಾರ ದೊರೆಯಿತು.

ಈ ವ್ಯವಸ್ಥೆಗೆ ಅನುಸಾರವಾಗಿ 1937ರಲ್ಲಿ ನಡೆದ ಚುನಾವಣೆಗಳಲ್ಲಿ ಭಾಗವಹಿಸಿ ಕಾಂಗ್ರೆಸ್ ಅಪಾರ ಬಹುಮತ ಗಳಿಸಿತು. ಪ್ರಾಂತಗಳಲ್ಲಿ ಮಂತ್ರಿಮಂಡಲಗಳನ್ನು ರಚಿಸುವ ಮಾತು ಬಂದಾಗ. ಮುಸ್ಲಿಂ ಲೀಗ್ ಮುಂತಾದ ಕಾಂಗ್ರೆಸ್ಸೇತರ ರಾಜಕೀಯ ಪಕ್ಷಗಳನ್ನು ಸೇರಿಸಿಕೊಂಡು ಮಿಶ್ರ ಮಂತ್ರಿಮಂಡಲಗಳನ್ನು ರಚಿಸಲು ಕಾಂಗ್ರೆಸ್ ನಿರಾಕರಿಸಿತು. ತನ್ನ ಪಕ್ಷದ ಸದಸ್ಯರೇ ಉಳ್ಳ ಮಂತ್ರಿಮಂಡಲಗಳನ್ನು ರಚಿಸಿತು. ಮಹಮ್ಮದೀಯರೂ ಹಿಂದುಗಳೂ ಬೇರೆ ಬೇರೆ ಜನಾಂಗಗಳೆಂದು

ಮಹಮ್ಮದೀಯರಿಗೆ ಪ್ರತ್ಯೇಕ ರಾಷ್ಟ್ರ ಬೇಕೆಂದೂ ಮುಸ್ಲಿಂ ಲೀಗ್ ವಾದಿಸಲಾರಂಭಿಸಿತು.

ಭಾರತದ ಹನ್ನೊಂದು ಪ್ರಾಂತಗಳಲ್ಲಿ ಏಳರಲ್ಲಿ ತನ್ನ ಪಕ್ಷದ ಮಂತ್ರಿಮಂಡಲಗಳನ್ನು ರಚಿಸಿದ್ದ ಕಾಂಗ್ರೆಸ್ ದಕ್ಷತೆಯಿಂದ ಆಡಳಿತ ನಡೆಸಿ, ಭಾರತೀಯರು ಸ್ವಾತಂತ್ರ್ಯಕ್ಕೆ ಅರ್ಹರೆಂಬುದನ್ನು ಸಿದ್ಧಮಾಡಿ ತೋರಿಸಿತು. ಆದರೆ 1939ರಲ್ಲಿ ಎರಡನೆಯ ಮಹಾಯುದ್ಧ ಆರಂಭವಾದಾಗ ಬ್ರಿಟಿಷ್ ಸರಕಾರ, ಭಾರತೀಯ ಮುಖಂಡರ ಅಭಿಪ್ರಾಯ ಕೂಡ ಕೇಳದೆ, ಭಾರತವನ್ನು ಯುದ್ಧದಲ್ಲಿ ತೊಡಗಿಸಿತು. ಆ ಸರ್ವಾಧಿಕಾರ ವರ್ತನೆಯನ್ನು ಕಾಂಗ್ರೆಸ್ ಖಂಡಿಸಿತು ; ಕಾಂಗ್ರೆಸ್ ಮಂತ್ರಿಮಂಡಲಗಳು ರಾಜಿನಾಮೆ ಕೊಟ್ಟುವು. ಕೇಂದ್ರ ಸರಕಾರದ ಆಡಳಿತದಲ್ಲಿ ಪ್ರಜಾಪ್ರತಿನಿಧಿಗಳಿಗೆ ಸೂಕ್ತ ಸ್ಥಾನ ಕೊಟ್ಟರೆ, ತಾವು ಬ್ರಿಟಿಷರ ಯುದ್ಧ ಪ್ರಯತ್ನದಲ್ಲಿ ಸಹಕರಿಸುವುದಾಗಿ ಹೇಳಿದರೂ ಬ್ರಿಟಿಷ್ ಸರಕಾರ ಇದಕ್ಕೆ ಒಪ್ಪಲಿಲ್ಲ. ಕಾಂಗ್ರೆಸ್ 1940ರಲ್ಲಿ ವೈಯಕ್ತಿಕ ಅಸಹಕಾರ ಚಳುವಳಿ ಆರಂಭಿಸಿತು ; ಸರಕಾರದ ದಬ್ಬಾಳಿಕೆ ನಡೆಯಿತು ; ಚಳುವಳಿಯೂ ಬೆಳೆಯಿತು; ಯುದ್ಧದ ಕಾವೂ ಏರಿತು. ಜಪಾನ್ ಮಿತ್ರರಾಷ್ಟ್ರಗಳಿಗಿದಿರಾಗಿ [illegible] ಮಲಯ, ಬರ್ಮಗಳನ್ನು ವಶಪಡಿಸಿಕೊಂಡಿತು.

ಈ ಸ್ಥಿತಿಯಲ್ಲಿ, 1942ರಲ್ಲಿ, ಭಾರತೀಯ ರಾಜಕೀಯ ಪಕ್ಷಗಳೊಡನೆ ಸಂಧಾನ ನಡೆಸಲು ತನ್ನ ಮಂತ್ರಿಮಂಡಲದ ಕ್ರಿಪ್ಸ್ ಅವರನ್ನು ಬ್ರಿಟಿಷ್ ಸರಕಾರ ಭಾರತಕ್ಕೆ ಕಳುಹಿಸಿತು. ಕಾಂಗ್ರೆಸ್-ಮುಸ್ಲಿಂ ಲೀಗ್ ಎರಡೂ ಬೇರೆ ಬೇರೆ ಕಾರಣಗಳಿಗಾಗಿ ಕ್ರಿಪ್ಸ್ ಸೂಚನೆಗಳನ್ನು ನಿರಾಕರಿಸಿದ್ದರಿಂದ ಸಂಧಾನ ಮುರಿದುಬಿತ್ತು. ಮಹಮ್ಮದೀಯರಿಗೆ ಪ್ರತ್ಯೇಕ ರಾಷ್ಟ್ರ ಬೇಕೆಂಬ ಬಗೆಗೆ ತನ್ನ ಬೇಡಿಕೆಯನ್ನು ಲೀಗು ಇನ್ನಷ್ಟು ಬಲಪಡಿಸಿತು.

1942 ಆಗಸ್ಟ್ 8ರಂದು ಕಾಂಗ್ರೆಸ್ ತೀವ್ರ ಅಸಹಕಾರ ಚಳುವಳಿ ಹೂಡುವ ನಿರ್ಧಾರ ಮಾಡಿತು. ಇದೇ 'ಚಲೇಜಾವ್'–'ಭಾರತದಿಂದ ತೊಲಗಿ'–(ಕ್ವಿಟ್ ಇಂಡಿಯಾ) ಆಂದೋಲನ. ಇದು ರಾಷ್ಟ್ರವ್ಯಾಪಿ ಹರಡಿತು ; ಉಗ್ರಸ್ವರೂಪವನ್ನು ತಾಳಿತು. ಈ ಚಳುವಳಿಯನ್ನು ಭಂಗಗೊಳಿಸಲು ಸರಕಾರ ನಡೆಸಿದ ಕ್ರೂರ ದಬ್ಬಾಳಿಕೆ [illegible] ವಾದವು.

ಈ ಮಧ್ಯೆ 1941ರಲ್ಲಿ ಭಾರತದಿಂದ ಗುಪ್ತವಾಗಿ ತಪ್ಪಿಸಿಕೊಂಡು ಪರದೇಶಕ್ಕೆ ಹೋಗಿದ್ದ ಸುಭಾಷಚಂದ್ರಬೋಸರು, ಜರ್ಮನಿ, ಜಪಾನುಗಳೊಡನೆ ಸಂಬಂಧ ಬೆಳೆಸಿಕೊಂಡು, ಆಜಾದ್ ಹಿಂದ್ ಫೌಜಿನ ನಾಯಕರಾಗಿ, ಬ್ರಿಟಿಷರ ಮೇಲೆ ಯುದ್ಧ ಘೋಷಿಸಿದರು. ಈ ಸೇನೆಯ ಯೋಧರು ಜಪಾನಿನ ಸಹಾಯದಿಂದ 1943ರಲ್ಲಿ ಬರ್ಮವನ್ನು ದಾಟಿ ಬಂದು, ಭಾರತದ ಗಡಿಯ ಮೇಲೆ ದಾಳಿಯಿಟ್ಟರು. 1500 ಚದರ ಮೈಲುಗಳಷ್ಟು ಭಾರತ ಭೂಪ್ರದೇಶವನ್ನು ವಶಪಡಿಸಿಕೊಂಡರು. ಈ ಘಟನೆ ಸ್ವಾತಂತ್ರ್ಯ ಚಳುವಳಿಗೆ ಪೋಷಕವಾಯಿತು.

ಎರಡನೆಯ ಮಹಾಯುದ್ಧ ಕೊನೆಯ ಹಂತವನ್ನು ಮುಟ್ಟುತ್ತಿದ್ದಂತೆ, 1945ರ ಆದಿಭಾಗದಲ್ಲಿ ಭಾರತೀಯರ ಮಂತ್ರಿಮಂಡಲವನ್ನು ರಚಿಸುವ ಪ್ರಯತ್ನ ನಡೆಯಿತು. ಆದರೆ ಈ ಮಂತ್ರಿಮಂಡಲದಲ್ಲಿ ವಿವಿಧ ಪಕ್ಷ ಪಂಗಡಗಳ ಸಂಖ್ಯಾಬಲ ಎಷ್ಟಿರಬೇಕೆಂಬ ಬಗೆಗೆ ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ್‌ಗಳ ನಡುವೆ ಒಮ್ಮತವೇರ್ಪಡಲಿಲ್ಲ. ಆದಕಾರಣ ಈ ಪ್ರಯತ್ನ ಫಲಿಸಲಿಲ್ಲ.




ಭಾರತದ ಪ್ರಥಮ ರಾಷ್ಟ್ರಪತಿ ರಾಜೇಂದ್ರ ಪ್ರಸಾದರೊಡನೆ ಕೊನೆಯ ಗವರ್ನರ್ ಜನರಲ್ ರಾಜಾಜಿ

ಯುದ್ಧಾನಂತರ ಬ್ರಿಟನಿನಲ್ಲಿ ಲೇಬರ್ ಪಕ್ಷ ಅಧಿಕಾರಕ್ಕೆ ಬಂತು. ಅದು ಭಾರತದ ರಾಜಕೀಯ ಮುಗ್ಗಟ್ಟನ್ನು ನಿವಾರಿಸಲು ಪ್ರಯತ್ನಿಸಿತು; 1946ರಲ್ಲಿ ಕೇಂದ್ರ ಮತ್ತು ಪ್ರಾಂತ ಶಾಸನಸಭೆಗಳಿಗೆ ಸಾರ್ವತ್ರಿಕ ಚುನಾವಣೆಗಳು ನಡೆದುವು. ಮುಸ್ಲಿಂ ಕ್ಷೇತ್ರಗಳಲ್ಲಿ ಮುಸ್ಲಿಂ ಲೀಗ್ ಮತ್ತು ಇತರ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಬಹುಮತ ಗಳಿಸಿದುವು. ಚುನಾವಣೆಗಳ ಅನಂತರ ಭಾರತಕ್ಕೆ ಬಂದ ಬ್ರಿಟಿಷ್ ಮಂತ್ರಿಮಂಡಲದ ನಿಯೋಗ, ಭಾರತದ ರಾಜಕೀಯ ಮುಖಂಡರೊಡನೆ ಸಮಾಲೋಚನೆ ನಡೆಸಿ, ಭಾರತದ ರಾಜ್ಯಾಂಗ ಸ್ವರೂಪದ ಬಗೆಗೆ ತನ್ನ ಅಭಿಪ್ರಾಯಗಳನ್ನು ಸೂಚಿಸಿತು. ವಿವಿಧ ರಾಜಕೀಯ ಪಕ್ಷಗಳ ಪ್ರತಿನಿಧಿಗಳನ್ನೊಳಗೊಂಡ ತಾತ್ಕಾಲಿಕ ರಾಷ್ಟ್ರೀಯ ಸರಕಾರವನ್ನು ಸ್ಥಾಪಿಸಬೇಕೆಂದೂ [illegible]. ಈ ಸೂಚನೆಯನ್ನು [illegible]. ಮುಸ್ಲಿಂ ಲೀಗ್ [illegible]. ವೈಸ್‌ರಾಯರು [illegible] ಕಾಂಗ್ರೆಸ್ [illegible] ಮಂತ್ರಿಮಂಡಲವನ್ನು [illegible]. ಮುಸ್ಲಿಂ ಲೀಗ್ ವಿರೋಧ ಚಳುವಳಿಯನ್ನಾರಂಭಿಸಿತು. ಇದು ದೌರ್ಜನ್ಯದ ರೂಪ ತಾಳಿತು. ಹಿಂದುಗಳ ಕೊಲೆ, ಸುಲಿಗೆಗಳು ನಡೆದುವು.

ಕಾಂಗ್ರೆಸ್ ಮಂತ್ರಿಮಂಡಲ ಸ್ವತಂತ್ರವಾಗಿ ವರ್ತಿಸುತ್ತಿದ್ದುದರಿಂದ ತನ್ನ ಅಧಿಕಾರಕ್ಕೆ ಚ್ಯುತಿ ಬಂದಿತೆಂದು ಭಾವಿಸಿದ ವೈಸ್‌ರಾಯ್ ವೇವೆಲ್

ಸ್ವತಂತ್ರ ಭಾರತದ ಮುನ್ನಡೆ





ಮಂತ್ರಿ ಮಂಡಲದಲ್ಲಿ ಕಾಂಗ್ರೆಸ್ಸಿನ ಪ್ರಭಾವ ತಗ್ಗಿಸಲು ಮುಸ್ಲಿಂ ಲೀಗ್ ನ ಸದಸ್ಯರನ್ನು ಅದಕ್ಕೆ ಸೇರಿಸಿದರು. ಇದರಿಂದ ಮಂತ್ರಿ ಮಂಡಲದ ಐಕ್ಯ ಮುರಿಯಿತು.

ಈ ಪರಿಸ್ಥಿತಿಯಲ್ಲಿ, ಬ್ರಿಟಿಷ್ ಸರಕಾರ, 1947 ಫೆಬ್ರವರಿ 20ರಂದು ಒಂದು ಘೋಷಣೆ ಹೊರಡಿಸಿ, 1948 ಜೂನ್ ತಿಂಗಳಲ್ಲಿ ಭಾರತದಲ್ಲಿ ತಮ್ಮ ಆಡಳಿತವನ್ನು ಮುಕ್ತಾಯಗೊಳಿಸುವುದಾಗಿಯೂ ಭಾರತೀಯರು ಆ ಆಡಳಿತವನ್ನು ವಹಿಸಿಕೊಳ್ಳಲು ವ್ಯವಸ್ಥೆಯಾಗಬೇಕೆಂದೂ ಘೋಷಿಸಿತು. ಮುಸ್ಲಿಂ ಲೀಗ್ ಕೈಗೊಂಡ ವಿರೋಧ ಚಳವಳಿ ಮತ್ತು ಹತ್ಯಾಕಾಂಡಗಳು ಮತ್ತೆ ಆರಂಭವಾದುವು.

1947 ಮಾರ್ಚಿನಲ್ಲಿ ವೈಸ್‌ರಾಯ್ ಆಗಿ ಅಧಿಕಾರ ವಹಿಸಿಕೊಂಡ ಲಾರ್ಡ್ ಮೌಂಟ್‌ಬ್ಯಾಟನ್ ಅವರು, ಸಂಧಾನ ನಡೆಸಿದ ಮೇಲೆ, ಭಾರತವನ್ನು ಇಬ್ಭಾಗ ಮಾಡಿ, ಭಾರತ, ಪಾಕಿಸ್ತಾನಗಳೆರಡಕ್ಕೂ ಸ್ವಾತಂತ್ರ್ಯ ಕೊಡುವ ನಿರ್ಣಯವಾಯಿತು. 1947 ಆಗಸ್ಟ್ 14–15ನೆಯ ಮಧ್ಯರಾತ್ರಿ ಭಾರತ ಸ್ವತಂತ್ರವಾಯಿತು.

ನೋಡಿ : ಅಸಹಕಾರ ಆಂದೋಲನ; ಆಜಾದ್ ಹಿಂದ್ ಫೌಜ್ ; 'ಚಲೇ ಜಾವ್' ; ಜಲಿಯನ್‌ವಾಲಾ ಬಾಗ್ ; ದಂಡೀಯಾತ್ರೆ : ಭಾರತ ರಾಷ್ಟ್ರೀಯ ಕಾಂಗ್ರೆಸ್ ; ಸಿಪಾಯಿ ದಂಗೆ

ಸ್ವಾತಿ ತಿರುನಾಳ್

ನೋಡಿ : ಸಂಪುಟ 4

ಸ್ವಾಮಿ ದಯಾನಂದ ಸರಸ್ವತಿ

ಶಿವರಾತ್ರಿಯಂದು ಶಿವಾಲಯದಲ್ಲಿ ಜಾಗರಣೆ ಮಾಡಬೇಕು, ಉಪವಾಸವಿರಬೇಕು ಎಂದು ಹದಿನಾಲ್ಕು ವರ್ಷದ ಮೂಲಶಂಕರನಿಗೆ ಅವನ ತಂದೆ ಹೇಳಿದರು. ಆದರೆ ಆ ರಾತ್ರಿ ಕಳೆಯುತ್ತಿದ್ದಂತೆ ಅವನ ತಂದೆ ತೂಕಡಿಸಲಾರಂಭಿಸಿದರು. ಮೂಲಶಂಕರ ಅದನ್ನು ಗಮನಿಸದೆ ಶಿವನ ವಿಗ್ರಹವನ್ನೇ ನೋಡುತ್ತಿದ್ದ. ಮಧ್ಯರಾತ್ರಿ ಕಳೆದ ಮೇಲೆ, ದೇವಾಲಯದ ಬಿಲಗಳಿಂದ ಇಲಿಗಳು ಬಂದು ಶಿವನಿಗೆ ನೈವೇದ್ಯಮಾಡಿದ್ದ ಪದಾರ್ಥಗಳನ್ನು ತಿನ್ನಲು ಆರಂಭಿಸಿದುವು. ಅದನ್ನು ಕಂಡು ಅವನ ಮನಸ್ಸಿನಲ್ಲಿ ಆ ವಿಗ್ರಹ ನಿಜವಾಗಿಯೂ ಸರ್ವಶಕ್ತ ದೇವನನ್ನು ಪ್ರತಿನಿಧಿಸುತ್ತದೆಯೇ? ಎಂಬ ಪ್ರಶ್ನೆ ಉದ್ಭವಿಸಿತು. ಉತ್ತರ ಸಿಗಲಿಲ್ಲ. ಮಲಗಿದ್ದ ತಂದೆಯನ್ನು ಎಬ್ಬಿಸಿ ಆ ಪ್ರಶ್ನೆ ಕೇಳಿದ. ತಂದೆ ಕೊಟ್ಟ ಉತ್ತರದಿಂದ ಅವನಿಗೆ ಸಮಾಧಾನವಾಗಲಿಲ್ಲ. ವಿಗ್ರಹಾರಾಧನೆಯ ಬಗೆಗೆ ಅವನಲ್ಲಿ ವಿರೋಧ ಬೆಳೆಯಿತು. ಅವನ ಪ್ರೀತಿ ಪಾತ್ರಳಾಗಿದ್ದ ಸೋದರಿಯ ಮತ್ತು ಚಿಕ್ಕಪ್ಪನ ಅಕಾಲಮರಣ ಜೀವನ, ಸಾವು, ಸಾವಿನ ಅನಂತರದ ಸ್ಥಿತಿ ಮುಂತಾದುವುಗಳ ಕಡೆಗೆ ಅವನ ಆಲೋಚನೆಯನ್ನು ತಿರುಗಿಸಿದುವು. ಅವನು ಅಂತರ್ಮುಖಿಯಾದ. ಇದನ್ನು ಕಂಡ ತಂದೆತಾಯಿ ಮದುವೆ ಮಾಡಿಸಲು ಪ್ರಯತ್ನಪಟ್ಟಾಗ, ಮೂಲಶಂಕರ ಮನೆಬಿಟ್ಟು ಹೊರಟುಹೋದ.



ಮಹಾನ್ ಸುಧಾರಕ :
ದಯಾನಂದ ಸರಸ್ವತಿ

ಈತನೇ ಮುಂದೆ ದಯಾನಂದ ಸರಸ್ವತಿ ಎಂದು ಪ್ರಖ್ಯಾತನಾದ ಮಹಾ ವ್ಯಕ್ತಿ.

ಮೂಲಶಂಕರ ಜನಿಸಿದ್ದು 1824ರಲ್ಲಿ, ಕಾಥೇವಾಡದಲ್ಲಿ. ಬಾಲ್ಯದಲ್ಲಿ ಆತನಿಗೆ ಸಂಸ್ಕೃತ ಅಭ್ಯಾಸ ಆಯಿತು. ಮನೆಯನ್ನು ಬಿಟ್ಟು ಹೊರಟ ಮೇಲೆ ಆತ ಉತ್ತರ ಭಾರತ, ಹಿಮಾಲಯಗಳ ಪ್ರದೇಶಗಳಲ್ಲಿ ಓಡಾಡಿ ವೈದಿಕ ಹಾಗೂ ಸಂಸ್ಕೃತದ ಉನ್ನತಾಭ್ಯಾಸ ಮಾಡಿದರು; ಇವರಿಗೆ ಮಥುರಾದಲ್ಲಿ ಸಿಕ್ಕಿದ ಕುರುಡ ಸನ್ಯಾಸಿ ಸ್ವಾಮಿ ವಿರಜಾನಂದರು ವೇದಗಳನ್ನು ಕುರಿತು ಪಾಠಹೇಳಿ, ಅವುಗಳ ಬಗೆಗೆ ಅಪಾರ ಗೌರವ ಉಂಟಾಗುವಂತೆ ಮಾಡಿದರು. ಮೂಲಶಂಕರ ಸನ್ಯಾಸವನ್ನು ಕೈಗೊಂಡು ದಯಾನಂದ ಸರಸ್ವತಿ ಎಂಬ ದೀಕ್ಷಾನಾಮ ವಹಿಸಿದರು.

ಬಾಲ್ಯವಿವಾಹ, ಅಸ್ಪೃಶ್ಯತೆ, ಜಾತಿಪದ್ಧತಿ, ಮೂರ್ತಿಪೂಜೆಗಳನ್ನು ವೇದಗಳು ಪುರಸ್ಕರಿಸುವುದಿಲ್ಲ ಎಂಬುದನ್ನು ತಮ್ಮ ಆಳವಾದ ಅಭ್ಯಾಸದಿಂದ ತಿಳಿದುಕೊಂಡ ದಯಾನಂದರು ಇವುಗಳ ವಿರುದ್ಧ ಅತ್ಯಂತ ತೀವ್ರವಾಗಿ ಹೋರಾಡಲಾರಂಭಿಸಿದರು. ಭಾರತದ ನಾನಾ ಕಡೆ ಸಂಚರಿಸಿ ಉಪನ್ಯಾಸಗಳನ್ನಿತ್ತು, ವಾದಗಳಲ್ಲಿ ಭಾಗವಹಿಸಿ ತಮ್ಮ ಅಪ್ರತಿಮ ತರ್ಕದಿಂದ ತಮ್ಮ ನಿಲುವನ್ನು ಸಮರ್ಥಿಸಿಕೊಂಡರು. ವೇದಗಳ ಆಧಾರವಿಲ್ಲದ ಅಂಧಾಚರಣೆಗಳ ಬಗೆಗೆ ಅವರಿಗೆ ಎಷ್ಟು ತಿರಸ್ಕಾರವಿತ್ತೋ, ವೇದಗಳ ಬಗೆಗೆ ಅಷ್ಟೇ ಗೌರವ ಭಕ್ತಿ ಇವರಿಗಿದ್ದುವು. ಇದರಿಂದ ಅವರು ವೇದಗಳಿಗೆ ಹೊಸ ಅರ್ಥ ಕೊಡುವ ಸಫಲ ಪ್ರಯತ್ನಮಾಡಿದರು: 'ಸತ್ಯಾರ್ಥ ಪ್ರಕಾಶ' ಎಂಬ ಗ್ರಂಥವನ್ನೂ ಬರೆದರು.

ತಮ್ಮ ಆದರ್ಶಗಳನ್ನು ಕಾರ್ಯರೂಪಕ್ಕೆ ತರಲು ದಯಾನಂದರು 1875ರಲ್ಲಿ 'ಆರ್ಯಸಮಾಜ'ವನ್ನು ಸ್ಥಾಪಿಸಿದರು. ಉತ್ತಮ ರೀತಿಯ ಸಂಘಟನೆಯಾದ 'ಆರ್ಯ ಸಮಾಜ' ಭಾರತದ ಸಾಮಾಜಿಕ ಜೀವನದ ಮೇಲೆ ಅತ್ಯಂತ ಪ್ರಭಾವ ಬೀರಿದ ಸಂಸ್ಥೆಗಳಲ್ಲೊಂದು.

ದಯಾನಂದರ ಕಟುಟೀಕೆಗಳನ್ನು ಸಹಿಸಲು ಆಗದ ಕೆಲವರು ಇವರ ಜೀವನವನ್ನು ಕೊನೆಗಾಣಿಸಲು ಪ್ರಯತ್ನಿಸಿದ್ದುಂಟು. ರಾಜಕುಮಾರನೊಬ್ಬನ ಸ್ವಚ್ಛಂದ ಜೀವನವನ್ನು ಇವರು ಟೀಕಿಸಿದಾಗ, ಆ ರಾಜಕುಮಾರನ ಕಡೆಯ ಹೆಂಗಸರು, ಇವರು ಗಾಜಿನ ಚೂರು ಬೆರೆಸಿದ ಹಾಲು ಕುಡಿಯುವಂತೆ ಮಾಡಿ, ಇವರ ಮರಣಕ್ಕೆ ಕಾರಣರಾದರು—ಎಂಬ ಹೇಳಿಕೆ ಇದೆ. ದಯಾನಂದ ಸರಸ್ವತಿಯವರು 1883ರಲ್ಲಿ ನಿಧನರಾದರು.

ಕಳೆದ ಶತಮಾನದ ಹಿಂದೂ ಸಮಾಜ ಸುಧಾರಕರಲ್ಲಿ ವೇದಗಳ ಬೋಧನೆಯ ಆಧಾರದ ಮೇಲೆ ಹಿಂದೂ ಧರ್ಮವನ್ನು ಉಜ್ವಲಗೊಳಿಸಲು ಪ್ರಯತ್ನಿಸಿದವರಲ್ಲಿ ಸ್ವಾಮಿ ದಯಾನಂದ ಸರಸ್ವತಿ ಮೊದಲ ಸಾಲಿಗೆ ಸೇರಿದವರು.

ನೋಡಿ : ಆರ್ಯಸಮಾಜ

ಸ್ವಾಮಿ ರಾಮತೀರ್ಥ

ವಿದೇಶಗಳಲ್ಲಿ ತಮ್ಮ ಪ್ರವಚನಗಳಿಂದ ಭಾರತದ ಬಗೆಗೆ ಗೌರವದ ಭಾವನೆ ಮೂಡುವಂತೆ ಮಾಡಿದವರು ಸ್ವಾಮಿ ರಾಮತೀರ್ಥರು. ಇವರ

ಪೂರ್ವಾಶ್ರಮದ ಹೆಸರು ತೀರ್ಥರಾಮ ಗೋಸ್ವಾಮಿ. ಜನನ 1873 ಅಕ್ಟೋಬರ್ 22ರಂದು, ಪಂಜಾಬಿನ ಮುರಲೀವಾಲಾ ಎಂಬಲ್ಲಿ. ಇವರು ಸಂತ ಶ್ರೇಷ್ಠಕವಿ ತುಲಸೀದಾಸನ ವಂಶಜರು. ಚಿಕ್ಕಂದಿನಿಂದಲೂ ಕಥೆಗಳನ್ನು ಕೇಳುವುದು, ಹೇಳುವುದು ಇಷ್ಟ. ಬಡತನವಿದ್ದರೂ ಕಷ್ಟಪಟ್ಟು ವ್ಯಾಸಂಗಮಾಡಿ ಬಿ.ಎ. ಪಡೆದ ತೀರ್ಥರಾಮ, ಲಾಹೋರಿಗೆ ತೆರಳಿ ಸ್ನಾತಕೋತ್ತರ ಪದವಿಯನ್ನು ಪಡೆದರು. ಜೀವನ ನಿರ್ವಹಣೆಗಾಗಿ ಕೆಲ ಕಾಲ ಅಧ್ಯಾಪಕರಾಗಿದ್ದರು.

ಒಮ್ಮೆ ದ್ವಾರಕಾಪೀಠದ ಶಂಕರಾಚಾರ್ಯರ ಪ್ರವಚನಗಳನ್ನು ಕೇಳಿ ತೀರ್ಥರಾಮ ಪ್ರಭಾವಿತರಾದರು. ಸ್ವಾಮಿ ವಿವೇಕಾನಂದರಿಂದಲೂ ಸ್ಫೂರ್ತಿ ಪಡೆದರು. ಉಪನಿಷತ್ತು, ಬ್ರಹ್ಮಸೂತ್ರಗಳನ್ನು ಅಧ್ಯಯನ ಮಾಡಿದರು. ಹರ್ದ್ವಾರ, ಹೃಷೀಕೇಶಗಳಿಗೆ ಹೋಗಿ ಏಕಾಂತವಾಸದಲ್ಲಿದ್ದರು. ಪರ್ವತಗಳಲ್ಲಿ ಕಠಿಣಸಾಧನೆ ಮಾಡಿದರು. ಪ್ರಪಂಚದ ಸರ್ವ ಸಂಪತ್ತಿನಿಂದ ಬೇರೆಯಾದರು.

1901ರಲ್ಲಿ ಇವರು ಸನ್ಯಾಸ ಸ್ವೀಕರಿಸಿದರು —ಸ್ವಾಮಿ ರಾಮತೀರ್ಥ ಆದರು. ಕೇದಾರ, ಬದರೀನಾಥಗಳ ಗುಹೆಗಳಲ್ಲಿ ತಪಸ್ಸು ಮಾಡಿದರು. ಇವರ ಪ್ರತಿಭೆಯನ್ನು ಮನಗಂಡು ತೆಹರಿ ಮಹಾರಾಜ ವಿಶ್ವಧರ್ಮ ಸಮ್ಮೇಳನದಲ್ಲಿ ಭಾಗವಹಿಸಲು ಜಪಾನಿಗೆ ಇವರನ್ನು ಕಳುಹಿಸಿಕೊಟ್ಟರು.

ಅಲ್ಲಿ ಇವರ ಪ್ರವಚನಗಳಿಗೆ ವಿದ್ಯಾರ್ಥಿಗಳೂ ವಿದ್ವಾಂಸರೂ ತಲೆದೂಗಿದರು. ಅನಂತರ ಇವರು ಅಮೆರಿಕಕ್ಕೆ ಹೋಗಿ, ಅಲ್ಲಿ ಎರಡು ವರ್ಷ ಕಾಲ ಸಂಚರಿಸಿದರು. ಅಮೆರಿಕದಿಂದ ಈಜಿಪ್ಟಿಗೆ ಬಂದರು. ಅಲ್ಲಿ ಪಾರಸೀ ಭಾಷೆಯಲ್ಲಿ ಉಪನ್ಯಾಸ ಮಾಡಿದರು. ಕ್ರೈಸ್ತ, ಮಹಮ್ಮದೀಯ ಮುಂತಾಗಿ ಎಲ್ಲರೂ ಇವರನ್ನು ಸ್ವಾಗತಿಸಿ, ಗೌರವಿಸಿದರು.

ಇವರ ರಾಷ್ಟ್ರಪ್ರೇಮ ವಿಶ್ವ ಪ್ರೇಮದಷ್ಟೇ ಪ್ರಬಲವಾಗಿತ್ತು. ಈ ತತ್ತ್ವವನ್ನೇ ಭಾಷಣ,-ಕಥೆಗಳ ಮೂಲಕ ಹೇಳುತ್ತಿದ್ದರು.

ರಾಮತೀರ್ಥರು ಸಂಚಾರದಿಂದ ಹಿಂದಿರುಗಿದ ಬಳಿಕ ಹಿಮಾಲಯಕ್ಕೆ ತೆರಳಿದರು. ಒಮ್ಮೆ ಗಂಗಾನದಿಯಲ್ಲಿ ಸ್ನಾನ ಮಾಡುತ್ತಿದ್ದಾಗ ಜಲಸಮಾಧಿ ಹೊಂದಿದರು. ಆಗ ಅವರಿಗೆ 33 ವರ್ಷ.

ಸ್ವಾಮಿ ವಿವೇಕಾನಂದ

ನೋಡಿ : ವಿವೇಕಾನಂದ

ಸ್ವಾಮಿ ಶ್ರದ್ಧಾನಂದ



[illegible] ಪ್ರತಿಕೃತಿ : ಶ್ರದ್ಧಾನಂದ

ರೌಲೆಟ್ ಕಾಯಿದೆಯನ್ನು ವಿರೋಧಿಸುವ ಚಳುವಳಿಯ ಅಂಗವಾಗಿ 1919ರಲ್ಲಿ ದೆಹಲಿಯಲ್ಲಿ ಮೆರವಣಿಗೆ ಹೊರಟಿತ್ತು. ಅದನ್ನು ತಡೆಗಟ್ಟಲು ಸಿದ್ಧರಾಗಿ ಸೈನಿಕರು ಸಂಗೀನು ಚಾಚಿ ನಿಂತಿದ್ದರು. ಆ ಮೆರವಣಿಗೆಯ ನಾಯಕ ಅದನ್ನು ಅಲಕ್ಷಿಸಿ ಮೆರವಣಿಗೆ ಮುಂದುವರಿಸಿದರು. ಆ ಧೈರ್ಯಶಾಲಿಯೇ ಸ್ವಾಮಿ ಶ್ರದ್ಧಾನಂದರು. ಅವರು ಉಜ್ವಲ ದೇಶಾಭಿಮಾನಿ. ಸಮಾಜ ಸುಧಾರಕ, ಶಿಕ್ಷಣವೇತ್ತರಾಗಿದ್ದರು.

ಶ್ರದ್ಧಾನಂದರ ಪೂರ್ವಾಶ್ರಮದ ಹೆಸರು ಲಾಲಾ ಮುನ್ಷೀರಾಮ್.

ಜನನ ಜಲಂಧರ್‌ನ ತಲವಾನ್‌ನಲ್ಲಿ, 1857ರಲ್ಲಿ. ವಿದ್ಯಾಭ್ಯಾಸಾನಂತರ ಇವರು ವಕೀಲ ವೃತ್ತಿಯನ್ನವಲಂಬಿಸಿ ಖ್ಯಾತಿಯನ್ನೂ ಹಣವನ್ನೂ ಗಳಿಸಿದರು.

ಆರ್ಯ ಸಮಾಜದವರ ಗುರುಕುಲ ಯೋಜನೆ ಹಣದ ಅಭಾವದಿಂದಾಗಿ ಕಾರ್ಯಗತವಾಗದೆ ಇದ್ದುದನ್ನು ತಿಳಿದಾಗ ಮುನ್ಷೀರಾಮ್ ವಕೀಲ ವೃತ್ತಿ ತೊರೆದು, ಗುರುಕುಲಕ್ಕಾಗಿ ಹಣ ಸಂಗ್ರಹಿಸಲು ಹೊರಟರು. ಅಲ್ಪ ಕಾಲದಲ್ಲಿ 30,000 ರೂಪಾಯಿಗಳನ್ನು ಸಂಗ್ರಹಿಸಿದರು. ಹರ್ದ್ವಾರದ ಬಳಿ ಗುರುಕುಲ ಆರಂಭಿಸಿಯೇ ಬಿಟ್ಟರು. ತಮ್ಮ ಇಬ್ಬರು ಮಕ್ಕಳನ್ನು ಗುರುಕುಲಕ್ಕೆ ಸೇರಿಸಿದರು. ತಮ್ಮ ಎಲ್ಲ ಸಂಪತ್ತನ್ನು ಗುರುಕುಲಕ್ಕೆ ಬಿಟ್ಟುಕೊಟ್ಟರು. 1917ರಲ್ಲಿ ಸನ್ಯಾಸ ಸ್ವೀಕರಿಸಿದರು.

ಯಾವ ಕೆಲಸವನ್ನೇ ಆಗಲಿ ಶ್ರದ್ಧೆ, ನಿಷ್ಠೆಯಿಂದ ಮಾಡುವುದು ಅವರ ಸ್ವಭಾವ. ಅವರು ವಕೀಲರಾಗಿದ್ದಾಗ ಸತ್ಯಾಗ್ರಹದಲ್ಲಿ ಭಾಗವಹಿಸಿದರು. 1918ರಲ್ಲಿ ಘರ್‌ವಾಲ್‌ನಲ್ಲಿ ಕ್ಷಾಮ ತಲೆದೋರಿತು. ಕ್ಷಾಮ ಪರಿಹಾರ ಕಾರ್ಯದಲ್ಲಿ ದುಡಿದರು. ಜಲಿಯನ್‌ವಾಲಾ ಬಾಗ್ ಹತ್ಯಾಕಾಂಡದಲ್ಲಿ ನೊಂದವರನ್ನು ಸಂತೈಸಲು ಅಮೃತಸರಕ್ಕೆ ಹೋಗಿ ಬಂದರು. ಅಮೃತಸರದಲ್ಲಿ ಆ ವರ್ಷ ನಡೆದ ಭಾರತ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನದ ಸ್ವಾಗತ ಸಮಿತಿಯ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದರು. 1922ರ ಗುರುಕಾ ಬಾಗ್ ಸತ್ಯಾಗ್ರಹದಲ್ಲಿ ಪಾಲ್ಗೊಂಡು ಸೆರೆಮನೆವಾಸವನ್ನು ಅನುಭವಿಸಿದರು. ಗಾಂಧೀಜೀ 1922ರ ಚೌರಿ-ಚೌರಾ ಪ್ರಸಂಗದಿಂದಾಗಿ ಸತ್ಯಾಗ್ರಹ ನಿಲ್ಲಿಸಿದಾಗ ಶ್ರದ್ಧಾನಂದರು ಕಾಂಗ್ರೆಸ್ಸಿನಿಂದ ಹೊರಬಂದರು.

ದಲಿತ ಉದ್ಧಾರ ಸಭೆ, ಭಾರತ ಶುದ್ಧಿ ಸಭೆಗಳನ್ನು ಪ್ರಾರಂಭಿಸಿದರು. ಶುದ್ಧಿ ಚಳುವಳಿ ಮತ್ತು ಹಿಂದೂ ಸಂಘಟನೆಯ ಪ್ರಚಾರಕ್ಕಾಗಿ 'ತೇಜ್' ಪತ್ರಿಕೆಯನ್ನು ಸ್ಥಾಪಿಸಿದರು. 1926ರಲ್ಲಿ ಅವರು 'ಶುದ್ಧಿ' ಚಳುವಳಿಯಲ್ಲಿ ತೊಡಗಿದ್ದಾಗ ಅಬ್ದುಲ್ ರಷೀದ್ ಎಂಬಾತ ಅವರನ್ನು ಕೊಲೆ ಮಾಡಿದ. ಹೀಗೆ ಬಹುಮುಖ ಪ್ರತಿಭೆಯ ವ್ಯಕ್ತಿಯ ಅವಸಾನವಾಯಿತು.

ಸ್ವಾಮಿ ಶಾರದಾನಂದ

ರಾಮಕೃಷ್ಣ ಮಠದ ಮತ್ತು ಮಿಷನಿನ ಕಾರ್ಯದರ್ಶಿಯಾಗಿದ್ದವರು, ಸ್ವಾಮಿ ಶಾರದಾನಂದರು.

1865 ಡಿಸೆಂಬರ್ 23ರಂದು ಕಲ್ಕತ್ತೆಯಲ್ಲಿ ಜನನ. ಹೆಸರು ಶರತ್‌ಚಂದ್ರ ಚಕ್ರವರ್ತಿ. ಅನುಕೂಲವಂತ ಮನೆತನ. ಒಳ್ಳೇ ದೇಹದಾರ್ಢ್ಯವಿತ್ತು. ಓದಿನಲ್ಲಿ ಮುಂದು. ದೇವರಪೂಜೆ ಆತನ ಮೆಚ್ಚುಗೆಯ ಆಟ. ಮುಂದೆ ಕೇಶವಚಂದ್ರಸೇನರ ಪ್ರಭಾವಕ್ಕೆ ಒಳಗಾಗಿ ಬ್ರಹ್ಮಸಮಾಜವನ್ನು [illegible].

1883ರ ಅಕ್ಟೋಬರ್‌ನಲ್ಲಿ ದಕ್ಷಿಣೇಶ್ವರಕ್ಕೆ ಹೋಗಿ ರಾಮಕೃಷ್ಣರನ್ನು ಮತ್ತೆ ಮತ್ತೆ ಕಾಣುತ್ತ ಬಂದರು. [illegible] ಗುರುತಿಸಿದ ರಾಮಕೃಷ್ಣರು ಅವರ ಮಾರ್ಗದರ್ಶಕರಾದರು. ರಾಮಕೃಷ್ಣರು ಕಾಯಿಲೆ ಬಿದ್ದಾಗ, ಶರತ್‌ಚಂದ್ರರು ಕಾಲೇಜು ಬಿಟ್ಟು ಅವರ ಸೇವೆಗೆ ನಿಂತರು. ಅವರ ದೇಹತ್ಯಾಗದ ಅನಂತರ ವಿವೇಕಾನಂದರೊಡನೆ [illegible] ಸನ್ಯಾಸ ಸ್ವೀಕರಿಸಿದರು. ಸನ್ಯಾಸಾಶ್ರಮದ ಹೆಸರು —ಶಾರದಾನಂದ.

ಕೆಲವು ಕಾಲ [illegible] 1891ರಲ್ಲಿ ಬಾರಾನಗೂರಿನ ಆಶ್ರಮಕ್ಕೆ ಹಿಂತಿರುಗಿದರು. ವಿವೇಕಾನಂದರ ಕರೆಯ ಮೇರೆಗೆ

1896ರ [illegible] ಪ್ರಚಾರ ಮಾಡಿದರು. [illegible] ಭಾಗವಹಿಸಿ 1898ರ ಫೆಬ್ರವರಿಯಲ್ಲಿ ಭಾರತಕ್ಕೆ ಮರಳಿದರು.

ರಾಮಕೃಷ್ಣರ [illegible] ಪಠತೆಯಲ್ಲಿ "ಇವನು ಎಷ್ಟು ಭಾರ ತಡೆಯಬಲ್ಲ ಎಂದು ನೋಡುತ್ತೇನೆ" ಎಂದಿದ್ದರು. 1899ರಲ್ಲಿ ರಾಮಕೃಷ್ಣ ಮಿಷನಿನ ಕಾರ್ಯದರ್ಶಿಯಾಗಿ ಅವರು ಅಮಿತ ಹೊರೆ ಹೊತ್ತರು. ಇದರ ಜೊತೆಗೆ 'ಉದ್ಬೋಧನ' ಎಂಬ ಬಂಗಾಳಿ ಮಾಸ ಪತ್ರಿಕೆಯನ್ನೂ ನಡೆಸಿದರು. [illegible] ಕಲ್ಕತ್ತೆಗೆ [illegible].

ಸಾಲ ತೀರಿಸುವ ಸಲುವಾಗಿ ಬಂಗಾಳಿಯಲ್ಲಿ 'ಶ್ರೀ ರಾಮಕೃಷ್ಣ ಲೀಲಾ ಪ್ರಸಂಗ' ಎಂಬ ಗ್ರಂಥ ರಚಿಸಿದರು. ಗುರುವಿನ ಬಗೆಗೆ ವಿಷಯಗಳನ್ನು ಸಂಗ್ರಹಿಸಿ, ಕೂಲಂಕಷವಾಗಿ ಪರಿಶೀಲಿಸಿ ಬರೆದರು. ಐದು ಭಾಗಗಳಲ್ಲಿ ಪ್ರಕಟವಾದ ಪುಸ್ತಕ ಅಪೂರ್ಣವಾದರೂ ರಾಮಕೃಷ್ಣರನ್ನು ಕುರಿತ ಒಂದು ಮೇರುಕೃತಿ ಇದು.

ಶಾರದಾದೇವಿಯವರ ನಿಧನದ ಬಳಿಕ ಶಾರದಾನಂದರು ಕ್ರಮೇಣ ದಿನದ ಬಹು ಭಾಗವನ್ನು ಧ್ಯಾನದಲ್ಲಿ ಕಳೆಯತೊಡಗಿದರು. ಶಾರದಾ ದೇವಿಯ ಜ್ಞಾಪಕಾರ್ಥವಾಗಿ ಜಯರಾಮವಟಿಯಲ್ಲಿ ದೇವಾಲಯ ಕಟ್ಟಿಸಿದರು. 1926ರಲ್ಲಿ ರಾಮಕೃಷ್ಣ ಮಿಷನಿನ ಪರಿಷತ್ತನ್ನು ಬೇಲೂರು ಮಠದಲ್ಲಿ [illegible] ಬರಮಾಡಿಕೊಂಡು ವಿಚಾರ ವಿನಿಮಯ ನಡೆಸಿದರು.

1927ರ ಆಗಸ್ಟ್ 19ರಂದು ಶಾರದಾನಂದರು [illegible].

ಅವರು ಧೀರ, ಶಾಂತಸ್ವಭಾವದವರು. [illegible] ಎಂದಿದ್ದರು.

"[illegible] ಅಥವಾ [illegible]"
—ಎನ್ನುತ್ತಿದ್ದರು ಶಾರದಾನಂದರು.

ಸಿಂಧೀ ಭಾಷೆ, ಸಾಹಿತ್ಯ

[illegible] ಗಳಲ್ಲೊಂದು.

ಈಗ [illegible] ಸಿಂಧೀ ಜನರು ಮಾತನಾಡುತ್ತಾರೆ. ಆದರೂ ಈ ಭಾಷೆಯನ್ನಾಡುವ ಬಹುಸಂಖ್ಯಾತ ಮಹಮ್ಮದೀಯರು ಪಾಕಿಸ್ತಾನದ ಸಿಂಧ್ ಪ್ರದೇಶದಲ್ಲಿ ಇದ್ದಾರೆ. ಭಾರತದಲ್ಲಿ ಈ ಭಾಷೆಯ ಲಿಪಿ ಪಾರಸೀ–ಅರಬೀ ಲಿಪಿಗಳ ಆಧಾರದ ಮೇಲೆ ರೂಪಿತವಾದ ಉರ್ದುವಿನಂಥ ಒಂದು ಲಿಪಿ. ಈಚೆಗೆ ಭಾರತದಲ್ಲಿ ದೇವನಾಗರಿ ಲಿಪಿಯನ್ನು ಬಳಸುವ ರೂಢಿಯಿದೆ.

ಸಿಂಧೀ ಭಾಷೆಯ ಇತಿಹಾಸವನ್ನು ಮೂರು ಹಂತಗಳನ್ನಾಗಿ ವಿಂಗಡಿಸಬಹುದು.

ಪೂರ್ವ ಕಾಲ ಕ್ರಿ.ಶ. 800–1500 : (ಸಾಹಸ ಹಾಗೂ ರಮ್ಯ ಕಥೆಗಳ ಕಾಲ) : ಮಧ್ಯಕಾಲ (1500–1853 : ಭಕ್ತಿಗೀತೆಗಳ ಕಾಲ) : ಆಧುನಿಕ ಕಾಲ (1853ರಿಂದೀಚೆಗೆ : ಗದ್ಯಸಾಹಿತ್ಯದ ಕಾಲ).

ಬರ್ಕ್‌ಮಾರಿಸ್ ದೊರೆಯ ಸಚಿವನಾಗಿದ್ದ ಸಿಪರ್ ಎಂಬವನು ರಚಿಸಿದ ಭಾರತ ಇತಿಹಾಸಕ್ಕೆ ಸಂಬಂಧಿಸಿದ ಗ್ರಂಥವೇ ಸಿಂಧೀ ಭಾಷೆಯ ಅತ್ಯಂತ ಪ್ರಾಚೀನ ಕೃತಿ ಎನ್ನಲಾಗಿದೆ. 'ಮಹಾಭಾರತ'ಕ್ಕೆ ಮುಂಚಿನ ಸಿಂಧ್ ಹಾಗೂ ಅದರ ಚರಿತ್ರೆ, 'ಮಹಾಭಾರತ'ದ ಕೆಲವು ಘಟನೆಗಳು ಮತ್ತು ಪಾಂಡವರ ಅನಂತರ ಆಳಿದ ಕೆಲವು ರಾಜರ ಬಗೆಗೆ ಈ ಕೃತಿಯಲ್ಲಿ ಉಲ್ಲೇಖವಿದೆ. ಇದನ್ನು 'ಅದಬ್–ಉಲ್-ಮುಲೂಕ್' (ರಾಜರಿಗೆ ನೀತಿ ಪಾಠಗಳು) ಎಂಬ ಹೆಸರಿನಲ್ಲಿ ಅಬು ಸಾಲಿಹ್ ಎಂಬವನು ಅರಬೀ ಭಾಷೆಗೆ ಭಾಷಾಂತರಿಸಿದ. ಮೂಲ ಕೃತಿ ಸಿಂಧಿಯಲ್ಲಿದ್ದು ಅದು ಕ್ರಿ.ಶ. 800 ರಿಂದ 1000ದ ಒಳಗೆ ರಚಿತವಾಗಿರಬಹುದು ಎಂದು ಹೇಳಲಾಗಿದೆ.

ಪೂರ್ವಕಾಲದ ಸಿಂಧೀ ಸಾಹಿತ್ಯದಲ್ಲಿ ಸುಮ್ರಾ ದೊರೆಗಳ ಧೈರ್ಯ–ಪೌರುಷವನ್ನೂ ಸಮ್ಮಾ ದೊರೆಗಳ ಉದಾರತೆಯನ್ನೂ ವಿವರಿಸುವ ರಮ್ಯ ಕಥೆ ಲಾವಣಿಗಳೇ ಹೆಚ್ಚು. ದೋದೋ–ಚನೇರ್, ಸಸು ಈ ಪುನ್ನೂ, ಉಮರ–ಮಾರು, ಲೀಲಾ–ಚನೇಸರ್, ಮೂಮಲ್–ರಾಣೋ, ನೂರಿ–ಜಾಮ್ ತಮಾಚಿ, ಸೋರಠ್–ರಾಇ ದಿಯಾಚ ಮೊದಲಾದವು ಈ ಕಾಲದ ಪ್ರಮುಖ ದಂತಕಥೆಗಳು. ಮಹಮ್ಮದೀಯ ದೊರೆಯ ದೌರ್ಜನ್ಯದಿಂದ ಹಿಂದುಗಳನ್ನು ರಕ್ಷಿಸಿದ ವರುಣದೇವನ ಕಥೆಯಾದ 'ಉದೇರೊ ಲಾಲ್' ಹಿಂದುಗಳಿಗೆ ಸಂಬಂಧಿಸಿದ ಏಕೈಕ ಕಥೆ. ಸಿಂಧೀ ಸಾಹಿತ್ಯವು ಕಳೆದ ಶತಮಾನದವರೆಗೆ ಬಾಯಿಂದ ಬಾಯಿಗೆ ಬಂದ ಕಥೆಗಳಾಗಿದ್ದು, ಕಳೆದ ಶತಮಾನದಲ್ಲಷ್ಟೆ ಅವನ್ನು ಸಂಪಾದಿಸಿ ಲಿಖಿತರೂಪಕ್ಕೆ ತರುವ ಕಾರ್ಯ ನಡೆಯಿತು.

ಮಧ್ಯಕಾಲದ ಸಾಹಿತ್ಯದಲ್ಲಿ ಸೂಫೀ ಮತ್ತು ಆಧ್ಯಾತ್ಮಿಕ ಸಂತ ಕವಿಗಳ ಭಕ್ತಿ ಗೀತೆಗಳೇ ಹೆಚ್ಚು. ಈ ಕಾಲದಲ್ಲಿ ವೇದಾಂತ ದರ್ಶನದಿಂದ ಪ್ರಭಾವಿತವಾದ ಕಾವ್ಯ ರಚಿಸಿದ ಸಾಮಿ(1743–1850) ಮತ್ತು ದಲ್‌ಪತ್‌ರಂಥ ಸಂತ ಕವಿಗಳೂ ಇದ್ದರು. ಆದರೂ ಸೂಫೀಧರ್ಮದಿಂದ ಪ್ರೇರಿತವಾದ ಕಾವ್ಯಗಳೇ ಈ ಕಾಲದ ಪ್ರಮುಖ ಕೃತಿಗಳು. ಕಾಜಿ ಕಾದನ್ (ಮರಣ 1551), ಶಾಹ ಅಬ್ದುಲ್ ಕರೀಮ್ (1537–622), ಶಾಹ ಅಬ್ದುಲ್ ಲತೀಫ್ ಭಟಾಯಿ (1689–1752), ಸಚಲು (1739–1829)ಮೊದಲಾದವರು ಈ ಮಧ್ಯ ಕಾಲದ ಪ್ರಮುಖ ಕವಿಗಳು. ಇವರಲ್ಲಿ ಶಾಹ ಅಬ್ದುಲ್ ಲತೀಫ್ ಭಟಾಯಿ ಸಿಂಧೀ ಸಾಹಿತ್ಯದಲ್ಲಿ ಮಾತ್ರವಲ್ಲದೆ, ವಿಶ್ವದಲ್ಲೇ ಅತ್ಯುತ್ತಮ ಕವಿಗಳಲ್ಲೊಬ್ಬ ಎಂದು ಪರಿಗಣಿಸಲ್ಪಟ್ಟಿದ್ದಾನೆ. ಇವನ 'ಶಾಹ ಜೊ ರಿಸಾಲೋ' ಸಿಂಧೀ ಸಾಹಿತ್ಯ [illegible] ಮಹತ್ವಪೂರ್ಣವಾದುದು. ಸಿಂಧೀ ಸಾಹಿತ್ಯದಲ್ಲಿ ಶಾಹ, ಸಚಲು, ಸಾಮಿ — ಈ ಮೂವರು ಗಮನಾರ್ಹರು.

1843ರಲ್ಲಿ ಬ್ರಿಟಿಷರು ಸಿಂಧ್ ಪ್ರದೇಶವನ್ನು ವಶಪಡಿಸಿಕೊಂಡ ಹತ್ತು ವರ್ಷಗಳ ಅನಂತರ ಸಿಂಧೀ ಸಾಹಿತ್ಯದ ಆಧುನಿಕ ಕಾಲ ಪ್ರಾರಂಭ ವಾಯಿತು. ಬ್ರಿಟಿಷ್ ಸರಕಾರ 1853ರಲ್ಲಿ ಪಾರಸೀ–ಅರಬೀ ರೂಪದ ಸಿಂಧೀ ಲಿಪಿಯನ್ನು ಒಪ್ಪಿಕೊಂಡಾಗ ಸಿಂಧೀ ಸಾಹಿತ್ಯದ ಮುದ್ರಣಕ್ಕೆ ಉತ್ತಮ ಮಾರ್ಗದರ್ಶನವೂ, ಪ್ರೋತ್ಸಾಹವೂ ದೊರೆತುವು. ಇಂಗ್ಲಿಷ್ ಸಾಹಿತ್ಯದ ಅಧ್ಯಯನ ಸಿಂಧಿಗಳ ಜ್ಞಾನವನ್ನು ವಿಶಾಲಗೊಳಿಸಿತು. ಸಿಂಧೀ ಕಾವ್ಯ ಬಹುಮುಖವಾಗಿ ಬೆಳೆಯಿತು. ಆಧುನಿಕ ಯುಗದಲ್ಲಿ ಸಿಂಧೀ [illegible]

ಮೊದಲ ಹಂತ : 1853–1914. ಈ ಕಾಲದ ಸಿಂಧೀ ಪ್ರಬಂಧ ಸಾಹಿತ್ಯದ ಮತ್ತು ಪತ್ರಿಕೋದ್ಯಮದ ಮೇಲೆ ಆಗಿನ ಸಾಮಾಜಿಕ ರಾಜಕೀಯ ಪರಿಸ್ಥಿತಿಗಳು ಗಮನಾರ್ಹ ಪ್ರಭಾವ ಬೀರಿದುವು. ಆಗಿನ [illegible] ಕೌರೊಮಲು ಚಂದನಮಲ್ ಖಿಲ್‌ನಾಣೀ (1844–1916) ಮಿರ್ಜಾ ಕಲೀಚ್ ಬೇಗ್ (1853–1929), ದಯಾರಾಮ್ ಗಿದೂಮಲ್ ಶಹಾಣೀ (1857–1927) ಮತ್ತು ಪರಮಾನಂದ್ ಮೇವಾರಾಮ್ ರಾಮ್‌ಚಂದಾಣೀ (1865–1938) —ಇವರು ಮೊದಲ ಸಿಂಧೀ ಗದ್ಯ ಸಾಹಿತ್ಯದ ನಾಲ್ಕು ಕಂಬಗಳಿದ್ದಂತೆ. ಇವರಲ್ಲಿ ಮಿರ್ಜಾ ಕಲೀಚ್ ಬೇಗ್ ಖ್ಯಾತ ಕವಿ ಕೂಡ. ಈ ಕವಿ ಸಿಂಧೀ ಸಾಹಿತ್ಯದ ಎಲ್ಲ ಪ್ರಕಾರಗಳಿಗೂ ಉತ್ತಮ ಕೊಡುಗೆಗಳನ್ನು ಕೊಟ್ಟಿದ್ದಾರೆ. ಈ ಕಾಲದ ಸಿಂಧೀ ಕಾವ್ಯದ ಪ್ರಮುಖ ಗುಣ—ಕಾವ್ಯದ ರೂಪ ವಸ್ತುಗಳೆರಡರ ಮೇಲೂ [illegible] ಮತ್ತು ಮೀರ್ ಅಬ್ದುಲ್ ಹುಸೇನ್ ಖಾನ್ 'ಸಾಂಗೀ' (1851–1924) —ಇಂಥ ಕಾವ್ಯದ ಉತ್ತಮ ಪ್ರತಿನಿಧಿಗಳು.

ಎರಡನೆಯ ಹಂತ : 1914–1947. [illegible] ಸಂಕ್ರಮಣ [illegible] ಮುಸಲ್ಮಾನರ ಗಲಭೆ, ರಾಷ್ಟ್ರದ ವಿಭಜನೆ ಆ ಕಾಲದ ಘಟನೆಗಳು. ರಾಷ್ಟ್ರೀಯತೆ, ಹಿಂದು–ಮುಸಲ್ಮಾನರ ಐಕ್ಯ, ಅಸ್ಪೃಶ್ಯತಾ ನಿವಾರಣೆ, ಭಾರತೀಯ ಇತಿಹಾಸ, ನಾಗರಿಕತೆ, ಸಂಸ್ಕೃತಿಗಳ ಬಗ್ಗೆಗಿನ ಅಭಿಮಾನ ಗಳನ್ನು ಆಗಿನ ಸಿಂಧೀ ಗದ್ಯಸಾಹಿತ್ಯ ಪ್ರತಿಧ್ವನಿಸಿತು. ವಾಸ್ತವಿಕತೆಯ ಕಡೆಗೆ ಗಮನ. ಪಾತ್ರಗಳ ಆಳವಾದ ಮನೋವಿಶ್ಲೇಷಣೆಗಳನ್ನು ಆಗಿನ ಕೃತಿಗಳಲ್ಲಿ ಕಾಣಬಹುದು. ಲಾಲ್‌ಚಂದ್ ಅಮರ್—ದಿನೋಮಲ್ ಜಗತ್ಯಾಣೀ(1885–1954), ಭೆರೂಮಲ್ ಮಹರ್‌ಚಂದ್ ಅಡ್ವಾಣೀ (1876–1950), ಜೆಠ್‌ಮಲ್ ಪರಸರಾಮ್ ಗುಲ್‌ರಾಜಾಣೀ (1886–1948), ಹೋತ್‌ಚಂದ್ ಮೂಲ್‌ಚಂದ್ ಗುರುಬಕ್ಷಾಣಿ (1884–1947) ಮೊದಲಾದವರು ಈ ಕಾಲದ ಪ್ರಮುಖ ಗದ್ಯ ಲೇಖಕರು. ಸಿಂಧೀ ಕಾವ್ಯಕ್ಕೆ ಹೊಸ ರೂಪ, ಹೊಸ ಸತ್ವ ಕೊಟ್ಟವರು ಕಿಶಿನ್‌ಚಂದ್ ತೀರ್ಥದಾಸ್ ಖತ್ರಿ 'ಬೇವಸ್' (1885–1947). 1942ರ ವೇಳೆಗೆ ಸೋಷಲಿಸಂ, ಕಮ್ಯೂನಿಸಂ ತತ್ತ್ವಗಳಿಂದ ಪ್ರೇರಿತರಾದ ಕೆಲವು ತರುಣ ಲೇಖಕರು ಕಥೆ, ಕಾದಂಬರಿ, ಕವನಗಳಲ್ಲಿ ತಮ್ಮ ಆದರ್ಶ ಗಳನ್ನು ಅಭಿವ್ಯಕ್ತಗೊಳಿಸಿದರು.

ಮೂರನೆಯ ಹಂತ: ಸ್ವಾತಂತ್ರ್ಯಾನಂತರ, 1947ರಲ್ಲಿ ಭಾರತ ಇಬ್ಭಾಗ ವಾದ ಬಳಿಕ ಸಿಂಧೀ ಸಾಹಿತ್ಯ ಕ್ಷೇತ್ರದಲ್ಲಿ ತರುಣ ಜನಾಂಗ ಪ್ರಮುಖ ಪಾತ್ರ ವಹಿಸಿತು. ಕಮ್ಯೂನಿಸಂ, ಸೋಷಲಿಸಂ ಪ್ರಭಾವಗಳ ಜೊತೆ, ಫ್ರಾಯ್ಡ್, ಯೂಂಗರ ಮನೋವೈಜ್ಞಾನಿಕ ತತ್ತ್ವಗಳ ಪ್ರಭಾವ, ಪಾಶ್ಚಾತ್ಯ ಆಧುನಿಕತೆಯ ಆದರ್ಶ. ಕಟು ವಾಸ್ತವಿಕತೆಗಳ ಪ್ರಭಾವಗಳನ್ನು ಇಲ್ಲಿ ಕಾಣಬಹುದು. ಸಿಂಧ್ ಪ್ರದೇಶ ಹಾಗೂ ಸಿಂಧೀ ಸಂಸ್ಕೃತಿಯ ಬಗೆಗೆ ಹೆಚ್ಚಿನ ಅಭಿಮಾನ ಇಲ್ಲಿ ಮೂಡಿಬಂದಿದೆ. ಲಾಲ್‌ಸಿಂಗ್ ಹಜಾರೀಸಿಂಗ್ ಅಜ್‌ವಾಣೀ, ತೀರ್ಥ ವಡೋಮಲ್ ಬಸಂತ್, ರಾಮ್ ಪರತಾಬ್‌ರಾಯ್ ಪಂಜ್‌ವಾಣೀ. ಮಂಘಾರಾಮ್ ಉಧಾರಾಮ್ ಮಲ್ಕಾಣೀ. ಕಲ್ಯಾಣ [illegible] ಗೋವರ್ಧನ್ 'ಭಾರತೀ', ಹೂಂದ್ರಾಜ್ 'ದುಖಾಯಲ್', ಹರೂಮಲ್ ಸದಾರಂಗಾಣೀ ಮೊದಲಾದವರು ಈ ಕಾಲದ ಪ್ರಮುಖ ಕವಿಗಳು. ಪ್ರಗತಿಪರ ಲೇಖಕರಲ್ಲಿ ಗೋವಿಂದ್ ಮಾಲ್ಹೀ, ಉತ್ತಮ್, ಕೀರತ್ [illegible] ಸಿಂಧೀ ಕವಿಗಳಲ್ಲಿ ಶೇಕ್ ಅಯಾಜ್ ಪ್ರಮುಖರು.

ಸ್ವಾತಂತ್ರ್ಯಾನಂತರ ಭಾರತ–ಪಾಕಿಸ್ತಾನಗಳಲ್ಲಿ ಸಿಂಧೀ ಸಾಹಿತ್ಯದ ಬೆಳವಣಿಗೆ ಪ್ರಶಂಸನೀಯ.

ಸಿಂಧು

ಸಂಸ್ಕೃತದಲ್ಲಿ 'ಸಿಂಧು' ಎಂದರೆ ಸಮುದ್ರ ಮಹಾಪೂರ ಬಂದಾಗ ಕಣ್ಣು ಹಾಯಿಸಿದಲ್ಲೆಲ್ಲ ನೀರೇ ಕಾಣಿಸುವಂಥ ಭಾರೀ ನದಿಗೆ 'ಸಿಂಧು' ಎಂಬ ಹೆಸರು ಬಂತು.

[illegible] ಸಿಂಧು [illegible] ಪಾಕಿಸ್ತಾನ ದಲ್ಲಿದೆ.

ಸಿಂಧು ಹುಟ್ಟುವುದು ಸುಮಾರು 17,000 ಅಡಿ ಎತ್ತರದಲ್ಲಿ ಟಿಬೆಟ್ಟಿನ [illegible] ಹೀಗೆ ಸುಮಾರು 600 ಮೈಲು ಹರಿದು, ಇದ್ದಕ್ಕಿದ್ದಂತೆ ಸಿಂಧು ನದಿ ದಕ್ಷಿಣಕ್ಕೆ ತಿರುಗುತ್ತದೆ,



ಪಾಕಿಸ್ತಾನವನ್ನು ಪ್ರವೇಶಿಸಿ ಅಲ್ಲಿನ ಪಂಜಾಬ್ ಪ್ರದೇಶದಲ್ಲಿ ಹರಿಯುವಾಗ ಸಿಂಧೂ ವೇಗ ಕುಗ್ಗಿದರೂ ಇದರ ಪಾತ್ರ ವಿಶಾಲವಾಗುತ್ತದೆ. ಸಟ್ಲೆಜ್ ಅಥವಾ ಉಪನದಿಗಳು ಇದನ್ನು ಕೂಡಿಕೊಳ್ಳುತ್ತವೆ. ಮುಂದೆ ಇದು ಹರಿಯುವ ಸಿಂಧ್ ಪ್ರದೇಶ ಬಹಳ ಮಟ್ಟಿಗೆ ಬೆಂಗಾಡು; ಆದರೆ ನೀರಾವರಿ ಯೋಜನೆಗಳಿಂದ ಫಲವತ್ತಾದ ಭೂಮಿಯಾಗಿದೆ. ಪ್ರಪಂಚದಲ್ಲಿ ಅತಿ ದೊಡ್ಡ ಅಣೆಕಟ್ಟುಗಳಲ್ಲಿ ಒಂದಾದ ಸುಕ್ಕೂರ್ ಇಲ್ಲಿದೆ. ಸುಮಾರು ಎರಡು ಕೋಟಿ ಎಕರೆ ಭೂಮಿಯ ಕೃಷಿಗೆ ಸಿಂಧು ನದಿಯ ನೀರೇ ಆಧಾರ. ಸಿಂಧೂ ಅರಬಿ ಸಮುದ್ರವನ್ನು ಸೇರುವ ಮೊದಲು ದೊಡ್ಡ ನದೀ ಮುಖಭೂಮಿಯನ್ನು ನಿರ್ಮಿಸುತ್ತದೆ. ಇದರ ಒಟ್ಟು ಉದ್ದ ಸುಮಾರು 2,800 ಮೈಲು.

ಮಹಾಪೂರದಿಂದ ಸಿಂಧೂ ಹೊಸ ದಾರಿಯನ್ನು ಹಿಡಿದು ಹರಿಯುವುದೂ ಉಂಟು. ಅಲೆಗ್ಸಾಂಡರ್ ಚಕ್ರವರ್ತಿ ದಂಡಯಾತ್ರೆಗೆ ಬಂದಾಗ ಅವನೊಡನೆ ಬಂದ ಗ್ರೀಕ್ ಚರಿತ್ರಕಾರನೊಬ್ಬ ಸಿಂಧೂ ನದಿಯ ಹಾದಿ ಬದಲಾವಣೆಯಿಂದ ಒಂದು ಸಾವಿರ ಪಟ್ಟಣಗಳನ್ನು ನಿವಾಸಿಗಳು ತ್ಯಜಿಸಬೇಕಾಯಿತು —ಎಂದು ಬರೆದಿದ್ದಾನೆ.

ಅತಿ ಹಳೆಯ ನಾಗರಿಕತೆಗಳಾದ ಹರಪ್ಪಾ, ಮೊಹೆಂಜೊ ದಾರೊ ಬೆಳಗಿದ್ದು ಸಿಂಧೂ ನದೀ ಕಣಿವೆಯಲ್ಲಿ.

ನೋಡಿ : ಮೊಹೆಂಜೊ ದಾರೊ ; ಹರಪ್ಪಾ

ಸಿಂಹಾಚಲ

ಪ್ರಹ್ಲಾದ ವಿಷ್ಣುಭಕ್ತ. ತಂದೆ ಹಿರಣ್ಯಕಶಿಪು ಮಗನ ಹರಿಭಕ್ತಿಯನ್ನು ಬಿಡಿಸಲು ಬಹಳ ಹಿಂಸೆ ಕೊಟ್ಟ. ಕೊನೆಗೆ ಪ್ರಹ್ಲಾದನನ್ನು ಸಮುದ್ರಕ್ಕೆ ತಳ್ಳಿ ಬೆಟ್ಟವನ್ನು ತಲೆಯ ಮೇಲೆ ಹೊರಿಸಿದ. ಹರಿ ಬೆಟ್ಟವನ್ನು ಸರಿಸಿದ. ಪ್ರಹ್ಲಾದ ಹೊರಗೆ ಬರಲು ಸಾಧ್ಯವಾಯಿತು. ಆ ಬೆಟ್ಟವೇ ಸಿಂಹಾಚಲ ಅಥವಾ ಸಿಂಹಗಿರಿ. ಬೆಟ್ಟದ ಮೇಲೆ ನರಸಿಂಹ ಗುಡಿಯನ್ನು ಪ್ರಹ್ಲಾದ ಕಟ್ಟಿಸಿದ.

ಬೆಟ್ಟದ ಮೇಲಿನ ನರಸಿಂಹ ಗುಡಿಯ ಗೋಪುರ



—ಇದು ಸಿಂಹಾಚಲ ಕ್ಷೇತ್ರದ ಬಗೆಗೆ ಇರುವ ಸ್ಥಳ ಪುರಾಣ.

ಇದು ಆಂಧ್ರಪ್ರದೇಶದಲ್ಲಿ ವಿಶಾಖಪಟ್ಟಣದಿಂದ ಉತ್ತರಕ್ಕೆ 10 ಮೈಲು ದೂರದಲ್ಲಿದೆ. ಸಮುದ್ರಮಟ್ಟದಿಂದ ಬೆಟ್ಟ 800 ಅಡಿ ಎತ್ತರದಲ್ಲಿದ್ದು ಹತ್ತಲು ಮೆಟ್ಟಲುಗಳಿವೆ.

ದೇವಾಲಯದಲ್ಲಿ ಚೌಕಾಕಾರದ ದೇವಮಂದಿರವಿದೆ. ದೇವಾಲಯದಿಂದ ಉತ್ತರಕ್ಕೆ ಕಲ್ಯಾಣಮಂಟಪ, ಅದ್ಭುತ ಕೆತ್ತನೆಗಳಿಂದ ಕೂಡಿದ 96 ಕಂಬಗಳು ಇವೆ.

ಬೆಟ್ಟದ ಮೇಲೆ ಗಂಗಾಧರ ಎಂಬ ಅಂತರ್ಜಲ ಚಿಲುಮೆ ಉಂಟು. ಇದರಲ್ಲಿ ಔಷಧೀಯ ಗುಣಗಳಿವೆ ಎಂದು ಹೇಳುತ್ತಾರೆ.

ಹಿರಣ್ಯಕಶಿಪುವಿನ ವಧೆಯಾದ ಅನಂತರ ದೇವರನ್ನು ಶಾಂತಗೊಳಿಸಲು ತಂಪಾದ ಶ್ರೀಗಂಧ ಲೇಪಿಸಲಾಯಿತೆಂದು ನಂಬಿಕೆ. ಸಿಂಹಾಚಲದ ನರಸಿಂಹಮೂರ್ತಿಗೂ ಶ್ರೀಗಂಧದ ದಪ್ಪ ಲೇಪನವಿರುತ್ತದೆ. ಅದನ್ನು ತೆಗೆಯುವುದು ವರ್ಷಕ್ಕೊಮ್ಮೆ. ಅಂದು ಚಂದನ ಯಾತ್ರಾ ಉತ್ಸವ. ವರ್ಷಕ್ಕೊಮ್ಮೆ ಅಕ್ಷಯ ತೃತೀಯ ದಿವಸದಂದು (ಮೇ ತಿಂಗಳಿನಲ್ಲಿ) ಇದು ಜರಗುತ್ತದೆ.

ದೇವರಿಗೆ ಚಿನ್ನ ಹಾಗೂ ರತ್ನಖಚಿತ ಆಭರಣಗಳಿವೆ. ಇವುಗಳಲ್ಲಿ ಮುಖ್ಯವಾದದ್ದು ಚಿನ್ನದ ಕವಚ. ವಿಜಯನಗರದ ಸಮ್ರಾಟ ಕೃಷ್ಣದೇವರಾಯ ಕಳಿಂಗ ದೊರೆಯ ಮೇಲೆ ಸಾಧಿಸಿದ ವಿಜಯದ ನೆನಪಿಗಾಗಿ ಕೊಟ್ಟಿರುವ ರತ್ನ ಖಚಿತ ಪಚ್ಚೆಯ ಪದಕವಿದೆ.

ದೇವಾಲಯದ ಗೋಡೆ, ಕಂಬಗಳ ಮೇಲೆ ಅನೇಕ ಶಾಸನಗಳನ್ನು ಕೆತ್ತಿದ್ದಾರೆ.

ವಿಜಯನಗರದ ರಾಜರು ವಂಶಪಾರಂಪರ್ಯವಾಗಿ ದೇವಾಲಯದಲ್ಲಿ ಧರ್ಮದರ್ಶಿಗಳಾಗಿದ್ದರು,

ದೇವಾಲಯದ ವತಿಯಿಂದ ಆಗಮ ಪಾಠಶಾಲೆ, ಆಸ್ಪತ್ರೆ, ಬಡವರ ಗೃಹಗಳು ನಡೆಸಲ್ಪಡುತ್ತಿವೆ.

ಸಿ. ಆರ್.ದಾಸ್

ನೋಡಿ : ಚಿತ್ತರಂಜನ್ ದಾಸ್

ಸಿ. ಆರ್. ರೆಡ್ಡಿ

ಖ್ಯಾತ ವಿದ್ವಾಂಸ, ವಾಗ್ಮಿ ಮತ್ತು ಲೇಖಕರಾಗಿದ್ದ ಕಟ್ಟಮಂಚಿ ರಾಮಲಿಂಗರೆಡ್ಡಿ 20ನೆಯ ಶತಮಾನದ ಪೂರ್ವಾರ್ಧದಲ್ಲಿ ಭಾರತದ ಶಿಕ್ಷಣ ಮತ್ತು ರಾಜಕೀಯ ಕ್ಷೇತ್ರಗಳಲ್ಲಿ ಪ್ರಮುಖರು.

ಜನನ 1880ರಲ್ಲಿ, ಚಿತ್ತೂರು ಜಿಲ್ಲೆಯಲ್ಲಿ. ವಿದ್ಯಾಭ್ಯಾಸ ಮದರಾಸು ಮತ್ತು ಕೇಂಬ್ರಿಜ್‌ಗಳಲ್ಲಿ. ಸಿ. ಆರ್. ರೆಡ್ಡಿ ಕೇಂಬ್ರಿಜ್ ಯೂನಿಯನಿನ ಪ್ರಥಮ ಭಾರತೀಯ ಉಪಾಧ್ಯಕ್ಷರಾಗಿದ್ದರು.

ಭಾರತಕ್ಕೆ ಮರಳಿದ ಮೇಲೆ ಬರೋಡದ ಮಹಾರಾಜ ಕಾಲೇಜಿನಲ್ಲಿ ಹುದ್ದೆ ದೊರಕಿತು. ಮೈಸೂರು ಸಂಸ್ಥಾನದಲ್ಲಿ ಇವರು ಇನ್ಸ್‌ಪೆಕ್ಟರ್ ಜನರಲ್ ಆಫ್ ಎಜುಕೇಶನ್ ಹುದ್ದೆಯಲ್ಲಿದ್ದರು. 1920ರಲ್ಲಿ ಜಸ್ಟಿಸ್ ಪಾರ್ಟಿ ಸೇರಿ ಸಕ್ರಿಯ ರಾಜಕಾರಣಕ್ಕೆ ಇಳಿದರು. ಮದರಾಸಿನ ನ್ಯಾಯ ವಿಧಾಯಕ ಸಭೆಯ ಸದಸ್ಯರಾದರು, 1926ರಲ್ಲಿ ಆಂಧ್ರ ವಿಶ್ವವಿದ್ಯಾಲಯದ ವೈಸ್ ಛಾನ್ಸಲರ್ ಆದರು. 1931ರಲ್ಲಿ ಬ್ರಿಟಿಷ್ ಸರಕಾರದ ಧೋರಣೆಗಳನ್ನು ಪ್ರತಿಭಟಿಸಿ ಈ ಸ್ಥಾನಕ್ಕೆ ರಾಜಿನಾಮೆ ಇತ್ತರು.



ಶಿಕ್ಷಣ, ರಾಜಕಾರಣ : ಸಿ. ಆರ್. ರೆಡ್ಡಿ

ತೆಲುಗು ಭಾಷೆಯಲ್ಲಿ ಕವಿ ಮತ್ತು ವಿಮರ್ಶಕರಾಗಿದ್ದ ರೆಡ್ಡಿ ಅನೇಕ ವಿಮರ್ಶಾತ್ಮಕ ಪ್ರಬಂಧಗಳನ್ನು ಬರೆದಿದ್ದಾರೆ. ತೆಲುಗು ಸಾಹಿತ್ಯಕ್ಕೆ ಇವರ ಕೊಡುಗೆಗಾಗಿ ಇವರಿಗೆ 'ಕಲಾಪ್ರಪೂರ್ಣ' ಎಂಬ ಬಿರುದು ದೊರೆಯಿತು.

1949ರಿಂದ ರೆಡ್ಡಿ ಅವರು ನಿಧನರಾಗುವ ವರೆಗೆ (1951) ಮೈಸೂರು ವಿಶ್ವವಿದ್ಯಾನಿಲಯದ ಪ್ರೊ-ಛಾನ್ಸೆಲರ್ ಆಗಿ ಕೆಲಸ ನಿರ್ವಹಿಸಿದರು.

ಸಿ. ಎಂ. ಪೂಣಚ್ಚ

ಕೊಡಗಿನ ಮುಖ್ಯಮಂತ್ರಿಯಾಗಿ, ಕೊಡಗು ಮೈಸೂರು ರಾಜ್ಯದಲ್ಲಿ ವಿಲೀನವಾದ ಮೇಲೆ ಮೈಸೂರು ಸರಕಾರದಲ್ಲೂ ಮುಂದೆ ಕೇಂದ್ರ ಸರಕಾರದಲ್ಲೂ ಉನ್ನತ ಹುದ್ದೆಗಳನ್ನು ನಿರ್ವಹಿಸಿದವರು ಚೆಪ್ಪುದಿರ ಮುತ್ತಣ್ಣ ಪೂಣಚ್ಚ.

ಅವರ ಜನನ 1910ರಲ್ಲಿ. ಮಡಿಕೇರಿ, ವಿರಾಜಪೇಟೆಗಳಲ್ಲಿ ಶಾಲಾಶಿಕ್ಷಣ, ಮಂಗಳೂರಿನಲ್ಲಿ ಕಾಲೇಜು ವಿದ್ಯಾಭ್ಯಾಸ. ಓದು ಮುಗಿಯುವ ಮೊದಲೇ ಸ್ವಾತಂತ್ರ್ಯಹೋರಾಟ ಕಣಕ್ಕಿಳಿದರು. 1932, 1933ರಲ್ಲಿ ಎರಡು ಬಾರಿ ಜೈಲುವಾಸ ಅನುಭವಿಸಿದರು, ಮತ್ತೆ ವೈಯಕ್ತಿಕ ಸತ್ಯಾಗ್ರಹ ಹೂಡಿದಾಗ 1940–41ರಲ್ಲಿ ಬಂಧಿಸಲ್ಪಟ್ಟರು. ಸ್ವಾತಂತ್ರ್ಯಪೂರ್ವದಲ್ಲಿ ಕೊಡಗು ಕಾಂಗ್ರೆಸ್ ಸಮಿತಿಯ ಸದಸ್ಯರೂ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಸದಸ್ಯರೂ ಆಗಿದ್ದರು. ಕೊಡಗು ಶಾಸನ ಸಭೆಗೆ ಆಯ್ಕೆಯಾಗಿದ್ದರು.

1947–51ರಲ್ಲಿ ರಾಜ್ಯಾಂಗರಚನಾ ಸಭೆ ಹಾಗೂ ತಾತ್ಕಾಲಿಕ ಸಂಸತ್ತಿನ ಸದಸ್ಯರಾಗಿದ್ದರು. 1952ರಿಂದ ನಾಲ್ಕು ವರ್ಷ ಕಾಲ ಕೊಡಗಿನ ಮುಖ್ಯಮಂತ್ರಿಯಾದರು.

ಮೈಸೂರು ರಾಜ್ಯ ಪುನರ್ರಚನೆಯಾದ ಮೇಲೆ ರಾಜ್ಯದ ಕೈಗಾರಿಕೆ, ವಾಣಿಜ್ಯ ಮಂತ್ರಿಯಾದರು. ಮುಂದೆ ಐದು ವರ್ಷ ಕಾಲ ಪೂಣಚ್ಚ ಅವರು ಗೃಹ ಮಂತ್ರಿಯಾದರು.

1964–70ರ ವರೆಗೆ ಪೂಣಚ್ಚ ಲೋಕಸಭೆಯ ಸದಸ್ಯರಾಗಿದ್ದರು. ಸಾರಿಗೆ, ವಿಮಾನಸಾರಿಗೆ, ನೌಕಾಸಾರಿಗೆ ಹಾಗೂ ಪ್ರವಾಸ ಸಚಿವರಾಗಿ 2 ವರ್ಷ, ರೈಲ್ವೆ ಸಚಿವರಾಗಿ 2 ವರ್ಷ, ಉಕ್ಕು–ಭಾರಿ ಎಂಜಿನಿಯರಿಂಗ್ ಉದ್ಯಮಕ್ಕೆ ಸಚಿವರಾಗಿ 10 ತಿಂಗಳ ಕಾಲ ಕೇಂದ್ರ ಸಚಿವ ಸಂಪುಟದಲ್ಲಿದ್ದರು.



ಕೇಂದ್ರ ಮಂತ್ರಿತ್ವ : ಪೂಣಚ್ಚ

ಸಿ. ಎಫ್. ಆಂಡ್ರೂಸ್

"ಅಪರೂಪಕ್ಕೆ ಕೆಲವರಂತೆ ಅವರು ಬಾಳುವ ರೀತಿಯೇ ಒಂದು ಉಪದೇಶ. ಹೀಗೆ ಅವರು ಬೋಧಿಸುವುದು ನಿಷ್ಕಳಂಕ ಪ್ರೇಮವನ್ನು."

ಭಾರತ ಮಿತ್ರ ಎಂದು ಜನಪ್ರಿಯರಾದ ಸಿ. ಎಫ್. ಆಂಡ್ರೂಸರ ಬಗೆಗೆ ಗಾಂಧೀಜೀ ಹೇಳಿದ ಮಾತುಗಳಿವು.

1871 ಫೆಬ್ರುವರಿ 12ರಂದು ಆಂಡ್ರೂಸ್ ಇಂಗ್ಲೆಂಡಿನಲ್ಲಿ ಜನಿಸಿದರು. ತಂದೆ ಕ್ರೈಸ್ತ ಪಾದ್ರಿ. ವಿದ್ಯಾಭ್ಯಾಸ ಕೇಂಬ್ರಿಜ್‌ನಲ್ಲಿ. ಪ್ರಾಚೀನ ಗ್ರೀಕ್ ಮತ್ತು ಲ್ಯಾಟಿನ್ ಕಲಿತು ಉಚ್ಚ ವರ್ಗದಲ್ಲಿ ತೇರ್ಗಡೆಯಾದರು. ಮುಂದೆ ಮತಧರ್ಮಶಾಸ್ತ್ರ ಓದಿದರು, ಪಾದ್ರಿಯಾದರು. ಲಂಡನಿನ ಈಸ್ಟ್ ಎಂಡ್‌ನಲ್ಲಿ ಸಮಾಜಸೇವೆಯಲ್ಲಿ ತೊಡಗಿದರು. ದೆಹಲಿಯಲ್ಲಿದ್ದ ಪಾದ್ರಿ ಬೇಸಿಲ್ ವೆಸ್ಟ್‌ಕಾಟ್ ತೀರಿಕೊಂಡಾಗ ಅವರ ಸ್ಥಾನಕ್ಕೆ ಆಂಡ್ರೂಸರ ನೇಮಕವಾಯಿತು. ಹೀಗೆ 1904ರ ಮಾರ್ಚ್ 20ರಂದು ಆಂಡ್ರೂಸ್ ಭಾರತವನ್ನು ತಲಪಿದರು.

ಭಾರತದಿಂದ ಹೊರಗೆ ಫಿಜೀ ದ್ವೀಪಗಳು, ದಕ್ಷಿಣ ಆಫ್ರಿಕ, ಬ್ರಿಟಿಷ್ ಗಯಾನಾಗಳಲ್ಲಿ ನರಳುತ್ತಿದ್ದ ಭಾರತೀಯ ಕೂಲಿಗಾರರ ರಕ್ಷಣೆಗಾಗಿ ಆಂಡ್ರೂಸ್ ಸಂಚರಿಸಿದರು. ಅವರ ಮೇಲೆ ನಡೆಸುತ್ತಿದ್ದ ದಬ್ಬಾಳಿಕೆಯನ್ನು ವಿರೋಧಿಸಿ ಹೋರಾಡಿದರು.

ಆಂಡ್ರೂಸರ ಮೇಲೆ ವಿಶೇಷ ಪ್ರಭಾವ ಬೀರಿದ ವ್ಯಕ್ತಿಗಳು— ಗೋಖಲೆ, ಗಾಂಧೀಜೀ ಮತ್ತು ರವೀಂದ್ರನಾಥ ಠಾಕೂರ್.

'ದೀನಬಂಧು' ಆಂಡ್ರೂಸ್ ಬಿಹಾರಿನ ಭೂಕಂಪ ಮತ್ತು ಕ್ಷಾಮ ನಿವಾರಣೆಗೆ ಮನಃಪೂರ್ವಕವಾಗಿ ದುಡಿದರು. 1920ರಿಂದ ಕಾಂಗ್ರೆಸ್ ಮುಂದಾಳುಗಳೊಡನೆ ಸೇರಿ ಕೆಲಸ ಮಾಡಿದರು. ಗಾಂಧೀಜಿಯ ಧ್ಯೇಯಗಳನ್ನು ಬ್ರಿಟಿಷ್ ಸರಕಾರಕ್ಕೆ ತಿಳಿಸಿ ಹೇಳಲು ಪ್ರಯತ್ನಿಸಿದರು. 1925 ಮತ್ತು 1927ರಲ್ಲಿ ಟ್ರೇಡ್ ಯೂನಿಯನ್ ಕಾಂಗ್ರೆಸ್ಸಿನ (ಕಾರ್ಮಿಕರ ಸಂಘಟನೆ) ಅಧ್ಯಕ್ಷರಾಗಿ ಚುನಾಯಿತರಾದರು.



'ದೀನಬಂಧು' : ಆಂಡ್ರೂಸ್

ಆಂಡ್ರೂಸ್ ಅಸ್ಪೃಶ್ಯತಾ ನಿವಾರಣೆಗಾಗಿ ಶ್ರಮಿಸಿದರು. "ಲಕ್ಷಾಂತರ ಅಸ್ಪೃಶ್ಯರು ಪರಾಧೀನರಾಗಿರುವ ವರೆಗೂ ಸ್ವಾತಂತ್ರ್ಯ ಗಳಿಸುವುದು ಸಾಧ್ಯವೇ ಇಲ್ಲ" ಎಂಬುದು ಅವರ ಅಭಿಪ್ರಾಯವಾಗಿತ್ತು. 1925ರ ಸತ್ಯಾಗ್ರಹದಲ್ಲಿ ಭಾಗವಹಿಸಿದರು; ಅಂಬೇಡ್ಕರರ ಜೊತೆಗೂಡಿ ಕೆಲಸಮಾಡಿದರು. "ನಾನು ಹೀಗಿರುವುದಕ್ಕಾಗಿ ಭಾರತಕ್ಕೆ ನಾನೇ ಕೃತಜ್ಞನಾಗಿರಬೇಕು" ಎಂದು ಒಮ್ಮೆ ಆಂಡ್ರೂಸ್ ನುಡಿದರು.

ಭಾರತಕ್ಕೆ ಬಂದದ್ದು ತಮಗೆ ಎರಡನೆಯ ಜನ್ಮದಂತೆ ಎಂದ ಆಂಡ್ರೂಸ್ ಬ್ರಿಟಿಷ್ ಸರಕಾರದ ರೋಷಕ್ಕೆ ಗುರಿಯಾಗಿ, ಸೆರೆಮನೆವಾಸವನ್ನೂ ಅನುಭವಿಸಿದರು.

1935ರ ತರುವಾಯ ಆಂಡ್ರೂಸರು ಕ್ರೈಸ್ತಧರ್ಮ ಕೆಲಸದ ಕಡೆಗೆ ಗಮನ ಕೊಡತೊಡಗಿದರು. ಕೆಲವು ಕಾಲ ಭಾರತದಲ್ಲೂ ಕೆಲವು ಕಾಲ ಇಂಗ್ಲೆಂಡಿನಲ್ಲೂ ಇರುತ್ತಿದ್ದರು.

1940 ಏಪ್ರಿಲ್ 5ರಂದು ಆಂಡ್ರೂಸರು ಕಲ್ಕತ್ತೆಯಲ್ಲಿ ನಿಧನರಾದರು.

"ನಾವು ದಕ್ಷಿಣ ಆಫ್ರಿಕದಲ್ಲಿ ಭೇಟಿಯಾದದ್ದು ಕೇವಲ ಸಹೋದರರಂತೆ. ಕೊನೆಯ ವರೆಗೂ ಹಾಗೆಯೇ ಇದ್ದೆವು. ಅದು ಒಬ್ಬ ಆಂಗ್ಲನ ಹಾಗೂ ಒಬ್ಬ ಭಾರತೀಯನ ನಡುವಣ ಸ್ನೇಹವಾಗಿರಲಿಲ್ಲ. ಇಬ್ಬರು ಅನ್ವೇಷಕರು ಮತ್ತು ಕಿಂಕರರ ಮಧ್ಯೆ ಇರುವ ಬಿಡಿಸಲಾಗದ ನಂಟಾಗಿತ್ತು" ಎಂದರು ಗಾಂಧೀಜೀ.

ಸಿ. ಎಸ್. ಐ. ಆರ್.

ನೋಡಿ : ವೈಜ್ಞಾನಿಕ ಮತ್ತು ಔದ್ಯೋಗಿಕ ಸಂಶೋಧನಾ ಮಂಡಲಿ

ಸಿಕ್ಖರು

ಗುರುನಾನಕನ (1469–1539) ಅನುಯಾಯಿಗಳಾದ ಸಿಕ್ಖರು ಆರಂಭದಲ್ಲಿ ಭಕ್ತಿಪಂಥದವರಾಗಿದ್ದರು. ಮೊಘಲರ ದಬ್ಬಾಳಿಕೆ ಮತ್ತು ಹಿಂಸೆಗಳ ಪರಿಣಾಮವಾಗಿ ಒಂದು ಯೋಧ ಸಂಪ್ರದಾಯವಾಗಿಯೂ ರಾಜಸತ್ತೆಯಾಗಿಯೂ ಮಾರ್ಪಟ್ಟರು.

ಐದನೆಯ ಗುರು ಅರ್ಜನ್ ದೇವ್ (ಗುರುಪಟ್ಟ : 1581–1606) ಮತ್ತು ಒಂಭತ್ತನೆಯ ಗುರು ತೇಜ್ ಬಹದ್ದೂರ್‌ರನ್ನು ಮೊಘಲರು ಕೊಲ್ಲಿಸಿದರು. ಹತ್ತನೆಯ ಗುರುವಾದ ಗೋವಿಂದಸಿಂಗ್ ತನ್ನ ಅನುಯಾಯಿಗಳನ್ನು ಖಾಲ್ಸಾ (ಶುದ್ಧ) ಎಂಬ ಒಂದು ದೀಕ್ಷೆಗೆ ಒಳಪಡಿಸಿ ಸಿಕ್ಖ (ಶಿಷ್ಯ) ರನ್ನಾಗಿ ಪರಿವರ್ತಿಸಿ ಯೋಧಯೋಗ್ಯ ಸೇನಾ ಸ್ವರೂಪದ ಸಮಾಜವನ್ನು ಕಟ್ಟಿದ.

ಮೊಘಲರ ವಿರುದ್ಧ ನಡೆದ ಯುದ್ಧದಲ್ಲಿ ಗೋವಿಂದ ಸಿಂಗನ ಇಬ್ಬರು ಮಕ್ಕಳು ಸತ್ತರು. ಇಬ್ಬರು ಪುತ್ರರನ್ನು ಗೋಡೆಗಳೊಳಗೆ ಕೊಲೆ ಮಾಡಿದರು. ಗುರುಗೋವಿಂದ ಸಿಕ್ಖರ ಕೊನೆಯ ಗುರು. ಆತನ ಕೊಲೆಯಾದ ಅನಂತರ (1708) ಬಂದಾ ಸಿಕ್ಖರ ನಾಯಕನಾದ. 1716 ರಲ್ಲಿ ಮೊಘಲರು ಆತನನ್ನು ವಧೆ ಮಾಡಿದರು. ಆದರೆ ಮೊಘಲರ ದೌರ್ಬಲ್ಯದ ಲಾಭ ಪಡೆದು ಪಂಜಾಬಿನಲ್ಲಿ ಸಿಕ್ಖರ ಅನೇಕ ಸಣ್ಣ ಪುಟ್ಟ ರಾಜ್ಯಗಳು ಉದಿಸಿದುವು.

18ನೆಯ ಶತಮಾನದ ಕೊನೆಗೆ ರಣಜಿತ್‌ಸಿಂಗ್ (ಆಳ್ವಿಕೆ : 1798–1839) ರಾಜ್ಯಗಳನ್ನು ಸಂಘಟಿಸಿ, ಒಂದು ಪ್ರಬಲ ಸಿಕ್ಖ್ ರಾಜ್ಯವನ್ನು ಕಟ್ಟಿದ. ಇವನು ಅತ್ಯಂತ ಸಮರ್ಥ ಹಾಗೂ ಶೂರ. ಈತನ ಅನಂತರ ಸಮರ್ಥ ನಾಯಕನಿಲ್ಲದೆ ಸಿಕ್ಖರು ಬ್ರಿಟಿಷರಿಗೆ ಶರಣಾಗಬೇಕಾಯಿತು. ಭಾರಿ ರಕ್ತಪಾತ ಹಾಗೂ ಪ್ರಬಲ ಪ್ರತಿಭಟನೆಯ ಎರಡು ಯುದ್ಧಗಳ ಅನಂತರ ಸಿಕ್ಖ್ ಸತ್ತೆ ಕೊನೆಗಂಡು ಪಂಜಾಬ್ ಬ್ರಿಟಿಷರ ವಶವಾಯಿತು.

ನೋಡಿ : ಗುರು ಗೋವಿಂದ ಸಿಂಗ್ ; ರಣಜಿತ್ ಸಿಂಗ್

ಸಿಕ್ಕಿಂ

ಭಾರತದ ಆಶ್ರಯದಲ್ಲಿರುವ ಪುಟ್ಟ ದೇಶ ಸಿಕ್ಕಿಂ ಕಣಿವೆ ಹಾಗೂ ಶ್ರೇಣಿ ಗಳಿಂದ ತುಂಬಿರುವ ನಾಡು. ಹಿಮಾಲಯ ಶ್ರೇಣಿಯಲ್ಲಿದೆ. ರಾಜಧಾನಿ, ಗ್ಯಾಂಗ್‌ಟಾಕ್.



ಸಿಕ್ಕಿಂ ನ ಚೋಗ್ಯಾಲ್ ಮತ್ತು ರಾಣಿ

ಭಾರತ ಮತ್ತು ಸಿಕ್ಕಿಂ ನಡುವೆ 1817ರಲ್ಲೇ ರಾಜಕೀಯ ಸಂಬಂಧ ಆರಂಭವಾಯಿತು. 1950ರಲ್ಲಿ ಸಿಕ್ಕಿಂನೊಡನೆ ಸ್ವತಂತ್ರ ಭಾರತ ಒಂದು ಒಪ್ಪಂದ ಮಾಡಿಕೊಂಡಿತು. ಇದರಂತೆ ಸಿಕ್ಕಿಂ ಭದ್ರತೆ, ಭೂರಕ್ಷಣೆ, ಆರ್ಥಿಕ ವ್ಯವಸ್ಥೆ, ಸಂಪರ್ಕ, ವಿದೇಶೀ ಸಂಬಂಧಗಳಲ್ಲಿ ಭಾರತ ವಿಶೇಷ ಹೊಣೆ ಹೊತ್ತಿದೆ. ಸಿಕ್ಕಿಂ ಆಡಳಿತ ವ್ಯವಸ್ಥೆಯಲ್ಲಿ ಭಾರತದ ಒಬ್ಬ ಪ್ರತಿನಿಧಿಗೆ ಪ್ರಾಶಸ್ತ್ಯದ ಸ್ಥಾನವಿದೆ. 1973 ಏಪ್ರಿಲ್‌ನಲ್ಲಿ ಸಿಕ್ಕಿಂನ ಚೋಗ್ಯಾಲ್ ವಿರುದ್ಧ, ಹೆಚ್ಚಿನ ಪ್ರಾತಿನಿಧಿಕ ಸರಕಾರಕ್ಕಾಗಿ ಗಲಭೆ ನಡೆಯಿತು. ಆಗ ಆಡಳಿತ ಪ್ರಮುಖನನ್ನು ನೇಮಿಸಿ ಭಾರತ ಅದನ್ನು ನಿವಾರಿಸಿತು. ದೂರೆ ಜನತೆಯ ಕೇಳಿಕೆಯನ್ನು ಮನ್ನಿಸಿದರು.

ಸಿಕ್ಕಿಂನ ಮೇರೆಗಳು ಭಾರತ, ನೇಪಾಳ, ಟಿಬೆಟ್ ಹಾಗೂ ಭೂತಾನ. ಕಾಡುಗಳು ದೇಶದ ಒಂದು ಪ್ರಧಾನ ಸಂಪನ್ಮೂಲ. ಅಪೂರ್ವ ಆರ್ಕಿಡ್ ಪುಷ್ಪಗಳಿಗೆ ಸಿಕ್ಕಿಂ ಪ್ರಖ್ಯಾತ. ಜಂಬೀರ ಫಲ ಹಣ್ಣು ಬೆಳೆಸುತ್ತಾರೆ. ಪ್ರಪಂಚದಲ್ಲಿ ಅತಿ ಹೆಚ್ಚು ಏಲಕ್ಕಿ ಬೆಳೆಯುವ ನಾಡು ಇದು. ಭತ್ತ, ಜೋಳ, ಇತರ ಧಾನ್ಯಗಳು, ಕಿತ್ತಳೆ, ಸೇಬು, ಅನಾನಸ್, ಆಲೂಗಡ್ಡೆ ಬೆಳೆಯುತ್ತವೆ. ಉಣ್ಣೆ ವಸ್ತ್ರಗಳು ತಯಾರಾಗುತ್ತವೆ. ಕೈಮಗ್ಗದಲ್ಲಿ ಹತ್ತಿವಸ್ತ್ರ ನೇಯುವುದು ಪ್ರಧಾನ ಗೃಹ ಕೈಗಾರಿಕೆ. ಬಹುಮಟ್ಟಿಗೆ ವಾಣಿಜ್ಯ ಭಾರತದೊಡನೆ ನಡೆಯುತ್ತದೆ.

ಪ್ರಪಂಚದ ಮೂರನೆಯ ಅತ್ಯುನ್ನತ ಶಿಖರ ಕಾಂಚನಗಂಗಾ ಸಿಕ್ಕಿಂ ನೇಪಾಳಗಳ ನಡುವೆ ಇದೆ.

ನೋಡಿ : ಸಿಕ್ಕಿಂ–ಸಂಪುಟ ೧

ಸಿ. ಕೆ. ನಾಯ್ಡು

ನೋಡಿ : ಸಂಪುಟ ೬

ಸಿ.ಡಿ.ದೇಶಮುಖ್

ಖ್ಯಾತ ಶಿಕ್ಷಣವೇತ್ತ, ಘನ ವಿದ್ವಾಂಸ, ಅರ್ಥಶಾಸ್ತ್ರಜ್ಞ ಚಿಂತಾಮಣಿ ದ್ವಾರಕಾನಾಥ್ ದೇಶಮುಖ್ ಹಲವು ಪ್ರಮುಖ ಕಾರ್ಯನಿರ್ವಾಹಕ ಹುದ್ದೆಗಳಲ್ಲಿ ಕೆಲಸ ಮಾಡಿದರು.

ಜನನ 1896 ಜನವರಿ 14ರಂದು. ವಿದ್ಯಾಭ್ಯಾಸ ಮುಂಬಯಿ ವಿಶ್ವವಿದ್ಯಾ ನಿಲಯ ಹಾಗೂ ಕೇಂಬ್ರಿಜ್‌ಗಳಲ್ಲಿ. ಐ. ಸಿ. ಎಸ್. ಸ್ಪರ್ಧಾ ಪರೀಕ್ಷೆಯಲ್ಲಿ



ಸಿ. ಡಿ. ದೇಶಮುಖ್ [illegible]

ಉತ್ತೀರ್ಣರಾದ ದೇಶಮುಖ್ ಸರಕಾರದ ಉನ್ನತ ಹುದ್ದೆಗಳಲ್ಲಿದ್ದರು. ದಕ್ಷ ಅಧಿಕಾರಿ ಎಂದು ಹೆಸರು ಗಳಿಸಿದರು. ಅರ್ಥಶಾಸ್ತ್ರದಲ್ಲಿ ಪರಿಣತರೆನಿಸಿದರು.

ಅವರು 1943ರಿಂದ 1949ರ ವರೆಗೆ ರಿಸರ್ವ್ ಬ್ಯಾಂಕ್‌ನ ಗವರ್ನರ್ ಆಗಿದ್ದರು; ಅಂತರ ರಾಷ್ಟ್ರೀಯ ಹಣಕಾಸು ನಿಧಿ, ಅಂತರರಾಷ್ಟ್ರೀಯ ಆರ್ಥಿಕ ಪುನರ್ರಚನೆ ಮತ್ತು ಅಭಿವೃದ್ಧಿ ಬ್ಯಾಂಕ್‌ಗಳಲ್ಲಿ ಭಾರತ ವಿಭಾಗದ ಗವರ್ನರ್ ಆಗಿದ್ದರು: [illegible] ಆಯೋಗದ ಸದಸ್ಯರಾಗಿದ್ದರು.

ದೇಶಮುಖರು 1950ರಿಂದ 1956ರ ವರೆಗೆ ಕೇಂದ್ರ ಸರಕಾರದ ಅರ್ಥ ಮಂತ್ರಿಯಾಗಿ ಸೇವೆ ಸಲ್ಲಿಸಿದರು. ದೆಹಲಿ ವಿಶ್ವವಿದ್ಯಾನಿಲಯದ ವೈಸ್ ಛಾನ್ಸಲರ್ ಆಗಿದ್ದರು. ವಿಶ್ವವಿದ್ಯಾನಿಲಯ ಧನಸಹಾಯ ಆಯೋಗ, ನ್ಯಾಷನಲ್ ಬುಕ್ ಟ್ರಸ್ಟ್, ಕೇಂದ್ರ ಸಂಸ್ಕೃತ ಮಂಡಳಿ—ಇವುಗಳ ಅಧ್ಯಕ್ಷರಾಗಿದ್ದರು. ಇವರು ಭಾರತೀಯ ಅಂತರರಾಷ್ಟ್ರೀಯ ಕೇಂದ್ರದ ಸ್ಥಾಪಕ ಅಧ್ಯಕ್ಷರು ಕೂಡ.

ಖ್ಯಾತ ಸಮಾಜ ಸೇವಿಕೆ ದುರ್ಗಾಬಾಯಿ ಇವರ ಪತ್ನಿ.

ವಿವಿಧ ಭಾರತೀಯ ಮತ್ತು ವಿದೇಶೀ ವಿಶ್ವವಿದ್ಯಾನಿಲಯಗಳು ಗೌರವ ಡಾಕ್ಟರೇಟ್ ಪದವಿ ನೀಡಿ ದೇಶಮುಖರನ್ನು ಗೌರವಿಸಿವೆ.

ಸಿದ್ದಪ್ಪ ಕಂಬಳಿ

ಹಳೆಯ ಮುಂಬಯಿ ರಾಜ್ಯಕ್ಕೆ–ವಿಶೇಷವಾಗಿ ಕರ್ನಾಟಕದ ಭಾಗಗಳಿಗೆ–ಶಿಕ್ಷಣರಂಗದಲ್ಲಿ ಅಪೂರ್ವ ಸೇವೆ ಸಲ್ಲಿಸಿದವರು, ಸರ್ ಸಿದ್ದಪ್ಪ ಕಂಬಳಿ.

ಅವರು ಮುಂಬಯಿ ರಾಜ್ಯದ ಶಿಕ್ಷಣ ಮಂತ್ರಿಯಾಗಿ ಸೇವೆ ಸಲ್ಲಿಸುತ್ತಿದ್ದಾಗ ಬೆಳಗಾಂವಿ ಲಿಂಗರಾಜ ಕಾಲೇಜಿಗೆ ಮುಂಬಯಿ ವಿಶ್ವವಿದ್ಯಾಲಯದ ಮನ್ನಣೆ ದೊರಕಿಸಿಕೊಟ್ಟರು; ಧಾರವಾಡದ ಕರ್ನಾಟಕ ಕಾಲೇಜಿನ ದರ್ಜೆಯನ್ನು ಹೆಚ್ಚಿಸಿದರು. ಪ್ರಾದೇಶಿಕ ವಿಶ್ವವಿದ್ಯಾಲಯಗಳ ಸ್ಥಾಪನೆಯ ಅಗತ್ಯವನ್ನು ಸರಕಾರೀ ದಾಖಲೆಗಳಲ್ಲಿ ಉಲ್ಲೇಖಿಸಿ ಕರ್ನಾಟಕ ವಿಶ್ವ ವಿದ್ಯಾಲಯ ಸ್ಥಾಪನೆಗೆ ನಾಂದಿಹಾಡಿದರು. ಹರಿಜನರ ಉನ್ನತಿಗಾಗಿಯೂ ಪರಿಶ್ರಮಪಟ್ಟರು. ಮುಂಬಯಿ ಕಾಯಿದೆ ಕಾಲೇಜಿಗೆ ಡಾ. ಬಿ. ಆರ್. ಅಂಬೇಡ್ಕರ್ ಅವರನ್ನು ಉಪನ್ಯಾಸಕರನ್ನಾಗಿ —ತುಂಬ ವಿರೋಧವಿದ್ದರೂ ಲೆಕ್ಕಿಸದೆ —ನೇಮಕಮಾಡಿದರು.

1924ರಲ್ಲಿ ಬೆಳಗಾಂವಿಯಲ್ಲಿ ಕಾಂಗ್ರೆಸ್ ಅಧಿವೇಶನ ಸೇರಿದ ಸಂದರ್ಭದಲ್ಲಿಯೇ ಇವರ ಅಧ್ಯಕ್ಷತೆಯಲ್ಲಿ ಕರ್ನಾಟಕ ಏಕೀಕರಣ ಸಭೆ ನಡೆದು, ಕರ್ನಾಟಕ ಏಕೀಕರಣ ಸಂಘದ ಸ್ಥಾಪನೆಯಾಯಿತು. 1926ರಲ್ಲಿ ಬಳ್ಳಾರಿಯಲ್ಲಿ ಮತ್ತೆ ಈ ಸಮ್ಮೇಲನವನ್ನು ಅವರು ಸಂಘಟಿಸಿದರು. 1921ರಲ್ಲಿ ಹುಬ್ಬಳ್ಳಿಯಲ್ಲಿ ಪ್ರಥಮ ಬ್ರಾಹ್ಮಣೇತರ ಪರಿಷತ್ತನ್ನು ಕರೆದಿದ್ದರು. ಅದೇ ವರ್ಷ ಅವರು ಮುಂಬಯಿ ವಿಧಾನಸಭೆಗೆ ಆರಿಸಿ ಬಂದರು. 1924ರಲ್ಲಿ ಬ್ರಾಹ್ಮಣೇತರ ಪಕ್ಷದ ಉಪಧುರೀಣರಾಗಿ, ಮುಂದೆ ಆರು ವರ್ಷಗಳ ಅನಂತರ ಈ ಪಕ್ಷದ ಧುರೀಣರಾಗಿ, ಆಯ್ಕೆ ಗೊಂಡರು. ಅವರು ಹಲವಾರು ವರ್ಷ ಮುಂಬಯಿ ರಾಜ್ಯದಲ್ಲಿ ಮಂತ್ರಿಯಾಗಿದ್ದರು. 1946ರಲ್ಲಿ ಕಾಂಗ್ರೆಸ್ ಮಂತ್ರಿಮಂಡಲ ಅಧಿಕಾರ [illegible] ಯೋಗಿ, ಕಾನೂನು ಮತ್ತು ಶಿಕ್ಷಣ ಶಾಖೆಗಳನ್ನು ಇವರು ಸಮರ್ಥ [illegible] ಭಾಗವಹಿಸಿದ 69 ಪ್ರತಿನಿಧಿಗಳಲ್ಲಿ ಇವರೂ ಒಬ್ಬರಾಗಿದ್ದರು. 1937ರಲ್ಲಿ [illegible] ಆರಿಸಿಬಂದರು.

ಸಿದ್ದಪ್ಪ ಕಂಬಳಿ [illegible] ಓದಿದರು. ಎರಡನೆಯ ಎಲ್‌ಎಲ್.ಬಿ. ಪರೀಕ್ಷೆಯಲ್ಲಿ ಮುಂಬಯಿ ವಿಶ್ವವಿದ್ಯಾಲಯಕ್ಕೆ ಮೊದಲಿಗರಾಗಿ ಉತ್ತೀರ್ಣರಾದರು. 1906ರಲ್ಲಿ ಹುಬ್ಬಳ್ಳಿಯಲ್ಲಿ [illegible] ಜಿಲ್ಲಾ ಬಾರ್ ಕೌನ್ಸಿಲಿನ ಅಧ್ಯಕ್ಷರಾದರು. 1921ರಲ್ಲಿ ಹುಬ್ಬಳ್ಳಿ ನಗರ ಸಭೆಯ ಪ್ರಥಮ ಸರಕಾರೇತರ ಅಧ್ಯಕ್ಷರಾಗಿ ಆಯ್ಕೆಗೊಂಡರು. ಧಾರವಾಡ ಜಿಲ್ಲಾ ಲೋಕಲ್ ಬೋರ್ಡ್ ಸದಸ್ಯರೂ ಆದರು. 1926ರಿಂದ ಮೂರು ವರ್ಷ ಅದರ ಅಧ್ಯಕ್ಷರಾದರು. ಧಾರವಾಡ–ಹುಬ್ಬಳ್ಳಿ [illegible] ಡಾಮರು ರಸ್ತೆ ನಿರ್ಮಿಸಿದವರು ಇವರು.

ಬ್ರಿಟಿಷ್ ಸರಕಾರ 1926ರಲ್ಲಿ [illegible] 1937ರಲ್ಲಿ [illegible] ನೀಡಿ ಗೌರವಿಸಿತು.

ಸಿದ್ದಪ್ಪ ಕಂಬಳಿ [illegible] ವರ್ಷ ಕಾಲ ಪಾರ್ಶ್ವವಾಯುವಿನಿಂದ ಬಳಲಿ, 1959 ಏಪ್ರಿಲ್‌ನಲ್ಲಿ ಮರಣ ಹೊಂದಿದರು.

ಸಿದ್ದಪ್ಪ ಹೊಸಮನಿ

ಕರ್ನಾಟಕದಲ್ಲಿ ಕಾಂಗ್ರೆಸ್ ಸಂಸ್ಥೆಯನ್ನು ವಿಶಾಲ ತಳಹದಿಯ ಮೇಲೆ ಕಟ್ಟುವ ಕಾರ್ಯದಲ್ಲಿ ಅತ್ಯಂತ ಮಹತ್ವದ ಪಾತ್ರ ನಿರ್ವಹಿಸಿದವರು, ಸಿದ್ದಪ್ಪ ಹೊಸಮನಿ. ಪ್ರಾರಂಭದಿಂದಲೂ ಅವರದು ರಾಷ್ಟ್ರೀಯ ಪ್ರವೃತ್ತಿ.

1930ರಲ್ಲಿ ಇವರ ಅಧ್ಯಕ್ಷತೆಯಲ್ಲಿ ಸೇರಿದ ಬ್ರಾಹ್ಮಣೇತರ ಪರಿಷತ್ತು, ಇಡೀ ಸಮಾಜದ ಬೆಂಬಲವನ್ನು ಪಡೆದು ಕಾಂಗ್ರೆಸಿನಲ್ಲಿ ಸೇರಬೇಕೆಂದು ನಿರ್ಧರಿಸಿತು. ಆಗ ಬಹುಸಂಖ್ಯಾಕರು ಕಾಂಗ್ರೆಸ್ಸಿನಲ್ಲಿ ಸೇರಿದರಲ್ಲದೆ, ಅನೇಕ ತರುಣರು –ಪದವೀಧರರು– ಸತ್ಯಾಗ್ರಹ ನಡೆಸಿ ಸೆರೆಮನೆ ವಾಸ ಅನುಭವಿಸಿದರು. ಸಿದ್ದಪ್ಪನವರು ನಿಷ್ಠಾವಂತ ಕಾರ್ಯಕರ್ತರಾಗಿದ್ದರು.



ಅಪೂರ್ವ ಸೇವೆ :



ಹೋರಾಟ, ಪ್ರಗತಿ : ಹೊಸಮನಿ

ಕಪಿಸತ್ಯಕ್ಕೆ ಸಿಹಿಗುಳಿಗೆಯ ಲೇಪನ ಮಾಡಲು ಅವರೆಂದೂ ಸಿದ್ಧರಿರಲಿಲ್ಲ. ಕರ್ನಾಟಕ ಪ್ರದೇಶ ಕಾಂಗ್ರೆಸ್ ಅಧ್ಯಕ್ಷರಾಗಿದ್ದಾಗ ತಮ್ಮ ಈ ನಿಷ್ಠುರತೆಯಿಂದಾಗಿ ಪಂಡಿತ ನೆಹರೂ ಅವರನ್ನು ಎದುರುಹಾಕಿಕೊಳ್ಳಬೇಕಾಯಿತು. 4-5 ವರ್ಷ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿದ್ದು, ರಾಷ್ಟ್ರೀಯ ಹೋರಾಟದ ವಿವಿಧ ಚಟುವಟಿಕೆಗಳಿಗೆ ಅವರು ಮಾರ್ಗದರ್ಶನ ನೀಡಿದರು.

1880 ಡಿಸೆಂಬರ್ 13ರಂದು ಜನ್ಮತಾಳಿದ ಸಿದ್ದಪ್ಪನವರು ಧಾರವಾಡದಲ್ಲಿ ಹೈಸ್ಕೂಲ್ ಶಿಕ್ಷಣ ಪಡೆದರು. ಪುಣೆ ಡೆಕ್ಕನ್ ಕಾಲೇಜಿನಿಂದ ಪದವೀಧರರಾದರು. ಅನಂತರ ಎರಡು ವರ್ಷ ಅವರು ಬಿಜಾಪುರದಲ್ಲಿ ರೆವಿನ್ಯೂ ಇನ್ಸ್‌ಪೆಕ್ಟರಾಗಿದ್ದರು. ಆದರೆ ರಾಷ್ಟ್ರೀಯ ಚಳವಳಿಗೆ ಮೇಲುಗೈ ಆಗಿ, ಉದ್ಯೋಗಕ್ಕೆ ರಾಜೀನಾಮೆ ನೀಡಿದರು. ಪುಣೆಯಲ್ಲಿ ಕಾನೂನು ಓದಿದರು. ದಿನಾಲೂ ಅವರು ಕರಜಗಿಯಿಂದ ಹಾವೇರಿಗೆ ಬಂದು ವಕೀಲಿ ನಡೆಸುತ್ತಿದ್ದರು.

ಸುಮಾರು 15–20 ವರ್ಷ ಹಾವೇರಿ ನಗರಸಭೆಯ ಅಧ್ಯಕ್ಷರಾಗಿದ್ದರು. ಆ ಸಂದರ್ಭದಲ್ಲಿ ಸಹಕಾರೀ ಆಂದೋಲನದಲ್ಲಿ ಭಾಗವಹಿಸಿದ್ದಲ್ಲದೆ, ಅಸ್ಪೃಶ್ಯತಾ ನಿವಾರಣೆಗಾಗಿ ಹೆಣಗಿದರು. 1937ರಲ್ಲಿ ಮುಂಬಯಿ ವಿಧಾನಸಭಾ ಸದಸ್ಯರಾಗಿ ಆರಿಸಿಬಂದರು. ಮುಂದೆ ಕೇಂದ್ರ ಶಾಸನ ಸಭಾ ಸದಸ್ಯರಾಗಿ ಆಯ್ಕೆಗೊಂಡು, 1945ರ ವರೆಗೆ ಆ ಹೊಣೆಯನ್ನು ನಿರ್ವಹಿಸಿದರು.

ಅನಂತರ ಫಾರ್ವರ್ಡ್ ಬ್ಲಾಕ್ ಸೇರಿದರು. ಅದರ ಕರ್ನಾಟಕ ಶಾಖೆಯ ಅಧ್ಯಕ್ಷರಾಗಿದ್ದರು. ಈ ಮೊದಲು ಕೆಲ ಕಾಲ ಜಿಲ್ಲಾ ಸ್ಕೂಲ್ ಬೋರ್ಡ್ ಅಧ್ಯಕ್ಷರಾಗಿ ಶಿಕ್ಷಣ ರಂಗದಲ್ಲಿ ಸೇವೆ ಸಲ್ಲಿಸಿದ್ದರು. ಹಾವೇರಿ ಹೈಸ್ಕೂಲಿನ ಸ್ಥಾಪನೆಯಲ್ಲಿ ಅವರ ಪಾತ್ರ ಮಹತ್ವದ್ದು. 1959 ಫೆಬ್ರವರಿ 14ರಂದು ತಮ್ಮ 79ನೆಯ ವಯಸ್ಸಿನಲ್ಲಿ ಮರಣಹೊಂದಿದರು.

ಸಿದ್ಧಲಿಂಗಸ್ವಾಮಿ

ನೋಡಿ : ಸಂಪುಟ ೫

ಸಿದ್ಧವನಹಳ್ಳಿ ನಿಜಲಿಂಗಪ್ಪ

ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕಂದಿನಿಂದ, ಇಡೀ ರಾಷ್ಟ್ರದ ಏಕೈಕ ಪಕ್ಷ ಎನ್ನುವಷ್ಟರಮಟ್ಟಿಗೆ ಅಧಿಕೃತವಾಗಿದ್ದ ಕಾಂಗ್ರೆಸ್ ಪಕ್ಷ 1969ರ ಉತ್ತರಾರ್ಧದಲ್ಲಿ ಭಾರೀ ಬಿಕ್ಕಟ್ಟನ್ನೆದುರಿಸಿ ಇಬ್ಭಾಗವಾಯಿತು. ಈ ಬಿಕ್ಕಟ್ಟಿನ ಸಮಯದಲ್ಲಿ ಅಖಿಲ ಭಾರತ ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾಗಿದ್ದವರು ಸಿದ್ಧವನಹಳ್ಳಿ ನಿಜಲಿಂಗಪ್ಪ ಅವರು.

ಬಳ್ಳಾರಿ ಜಿಲ್ಲೆಯ ಹಲುವಾಗಲು ಎಂಬಲ್ಲಿ 1902 ಡಿಸೆಂಬರ್ 10ರಂದು ಜನಿಸಿದರು. [illegible] [illegible] ಕ್ರಮವಾಗಿ ಬಿ.ಎ.,ಎಲ್‌ಎಲ್‌ಬಿ. ಪದವಿಗಳನ್ನು ಪಡೆದು ಮೈಸೂರು ಹೈಕೋರ್ಟಿನ ಅಡ್ವೊಕೇಟ್ ಆದರು. 1924ರಲ್ಲಿ ಕಾಂಗ್ರೆಸ್ ಸೇರಿ ಸ್ವಾತಂತ್ರ್ಯ ಕದನಕ್ಕೆ ಇಳಿದು ಹಲವಾರು ಬಾರಿ ಜೈಲುವಾಸ ಅನುಭವಿಸಿದರು.

ನಿಜಲಿಂಗಪ್ಪನವರು 1945-46ರಲ್ಲಿ ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದರು. 1948ರಲ್ಲಿ ಕರ್ನಾಟಕ ಪ್ರದೇಶದ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರೂ ಆದರು. ಇವರ ಕಾಲದಲ್ಲಿ ಕರ್ನಾಟಕ ಪ್ರಾಂತ ರಚನೆಗಾಗಿ ಚಳುವಳಿ ತೀವ್ರಗೊಂಡಿತು. 1956ರಲ್ಲಿ ನೂತನ ಮೈಸೂರು ರಾಜ್ಯದ ಸ್ಥಾಪನೆಯಾಯಿತು. ಶಾಸಕರಾಗಿ, 1956-58ರಲ್ಲಿ ನೂತನ ಮೈಸೂರು ರಾಜ್ಯದ ಮುಖ್ಯಮಂತ್ರಿಯಾದರು. ಬಿ. ಡಿ. ಜತ್ತಿ ಮುಖ್ಯಮಂತ್ರಿಯಾಗಿದ್ದಾಗ ನಿಜಲಿಂಗಪ್ಪನವರು 1962ರ ವರೆಗೆ ಇಂಡಿಯನ್ ಆಯಿಲ್ ಕಂಪೆನಿ ಅಧ್ಯಕ್ಷರಾಗಿದ್ದರು. ಮತ್ತೆ 1962ರಿಂದ 68ರ ವರೆಗೆ ಮುಖ್ಯಮಂತ್ರಿಯಾಗಿದ್ದರು. 1967ರಲ್ಲಿ ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದರು.



ನಿರ್ಣಾಯಕ ಅಧ್ಯಕ್ಷತೆ : ನಿಜಲಿಂಗಪ್ಪ

ಪಕ್ಷದ ಶಿಸ್ತಿನ ಕಡೆಗೆ ನಿಜಲಿಂಗಪ್ಪನವರು ಹೆಚ್ಚಿನ ಗಮನವಿತ್ತರು. ಪ್ರಧಾನಮಂತ್ರಿ ಇಂದಿರಾ ಗಾಂಧೀ ಮತ್ತು ನಿಜಲಿಂಗಪ್ಪ ಹಾಗೂ ಮಿತ್ರರ ನಡುವೆ ಘರ್ಷಣೆ ತಲೆದೋರಿತು.

1971ರ ವರೆಗೆ ಸಂಸ್ಥಾ ಕಾಂಗ್ರೆಸ್ಸಿನ ಅಧ್ಯಕ್ಷರಾಗಿದ್ದ ನಿಜಲಿಂಗಪ್ಪನವರು ಅನಂತರ ಅದರ ಖಜಾಂಚಿಯಾದರು.

ಕರ್ನಾಟಕ ವಿಶ್ವವಿದ್ಯಾನಿಲಯ ಇವರಿಗೆ ಗೌರವ ಎಲ್‌ಎಲ್.ಡಿ. ಪ್ರಶಸ್ತಿ ನೀಡಿದೆ.

ಸಿದ್ಧಾರ್ಥ

ಪಟ್ಟಣವೆಲ್ಲ ಶೃಂಗಾರಗೊಂಡಿತ್ತು. ರಾಜಕುಮಾರ ಅಂದು ಪಟ್ಟಣ ನೋಡಲು ಬರುವವನಿದ್ದ. ಅವನು ತನ್ನ ಸುತ್ತಾಟದಲ್ಲಿ ಒಬ್ಬ ಮುದುಕನನ್ನೂ ಒಬ್ಬ ರೋಗಿಯನ್ನೂ ಒಂದು ಹೆಣವನ್ನೂ ಕಂಡ. ದುಃಖ, ಕಷ್ಟಗಳೆಂದರೆ ಏನೆಂಬುದೇ ತಿಳಿಯದೆ ಬೆಳೆದ ರಾಜಕುಮಾರ ಇವನ್ನು ನೋಡಿ ಚಿಂತಾಕ್ರಾಂತನಾದ. ಜೀವನದ ದುಃಖ ನಿವಾರಣೆಗೆ ಪರಿಹಾರ ಕಂಡು ಹಿಡಿಯಬೇಕು ಎಂದು ನಿರ್ಧರಿಸಿದ. ಒಂದು ರಾತ್ರಿ ತನ್ನ ಮಡದಿಯನ್ನೂ ಹಸುಳೆಯನ್ನೂ ಬಿಟ್ಟು ಆಪ್ತ ಸೇವಕ ಚಂಡಕ (ಚೆನ್ನ) ನೊಡನೆ ಅರಮನೆಯಿಂದ ಹೊರ ನಡೆದ. ದಾರಿಯಲ್ಲಿ ತನ್ನ ಒಡವೆಗಳನ್ನು ಚಂಡಕನಿಗಿತ್ತು, ಅವನ ಬಟ್ಟೆಗಳನ್ನು ತಾನು ಧರಿಸಿ ಕಾಡಿಗೆ ಹೊರಟು ಹೋದ.

ಆ ರಾಜಕುಮಾರನೇ ಸಿದ್ಧಾರ್ಥ.

ಸಿದ್ಧಾರ್ಥನ ತಂದೆ ಶುದ್ಧೋದನ ಕಪಿಲವಸ್ತುವಿನ ದೊರೆ. ತಾಯಿ ಮಹಾಮಾಯಾ. ಸಿದ್ಧಾರ್ಥನ ಜನನ ಸುಮಾರು 2500 ವರ್ಷಗಳ ಹಿಂದೆ. ವೈಶಾಖ ಪೂರ್ಣಿಮೆಯ ದಿನ. ಜನನದ ಏಳನೆಯ ದಿನ ತಾಯಿ ತೀರಿಕೊಂಡಳು. ಮಹಾಮಾಯೆಯ ತಂಗಿ ಗೌತಮಿ ಮಗುವನ್ನು ಸಾಕಿದಳು. ಜಾತಕ ಬರೆದವರು ಮಗು ಮುಂದೆ ಸಿದ್ಧನಾಗುತ್ತಾನೆ ಎಂದರು. ಹೊರಗಿನ ಪ್ರಪಂಚದ ಮುಖ ಗೊತ್ತಾಗದ ರೀತಿಯಲ್ಲಿ ಶುದ್ಧೋದನ ತನ್ನ ಮಗನನ್ನು ಬೆಳೆಸಿದ. ಎಣೆಯಿಲ್ಲದ ಸುಂದರಿ ಯುವತಿ ಯಶೋಧರೆಯೊಡನೆ ವಿವಾಹ ನಡೆಸಿದ. ಸಿದ್ಧಾರ್ಥನಿಗೆ ರಾಹುಲನೆಂಬ ಮಗ ಹುಟ್ಟಿದ. ಇದಾದ ಮೇಲೆಯೇ ಸಿದ್ಧಾರ್ಥ ಪಟ್ಟಣ ನೋಡುವ ಕುತೂಹಲದಿಂದ ಹೊರಟದ್ದು. ಮನಕರಗಿಸುವ ದೃಶ್ಯಗಳು ಅವನ ಕಣ್ಣಿಗೆ ಬಿದ್ದದ್ದು.

ದೀರ್ಘ ಕಾಲ ತಪಸ್ಸು ಮಾಡಿದ ಮೇಲೆ ಸಿದ್ಧಾರ್ಥನಿಗೆ ಸತ್ಯದರ್ಶನವಾಯಿತು. ಸಿದ್ಧಾರ್ಥ ಬುದ್ಧನಾದ. ಅವನ ಬೋಧನೆ ಭಾರತದಲ್ಲಲ್ಲದೆ ಸಿಂಹಳ, ಟಿಬೆಟ್, ಚೀನ, ಜಪಾನ್, ಥೈಲೆಂಡ್‌ಗಳಿಗೂ ಹರಡಿತು.

ನೋಡಿ : ಗೌತಮಿ ; ಬೌದ್ಧಧರ್ಮ
ಬುದ್ಧ—ಸಂಪುಟ ೧

‘ಸಿಪಾಯಿ ದಂಗೆ’

1850ರ ಮೇ 10ನೆಯ ದಿನಾಂಕ ಸಂಜೆ. ಮೀರತ್‌ನ ಸೈನಿಕ ನೆಲೆಯನ್ನು ಭಾರತೀಯ ಸೈನಿಕರು ಹಠಾತ್ತನೆ ಆಕ್ರಮಿಸಿದರು. ಅಲ್ಲಿನ ಬಂದೀಖಾನೆಯನ್ನು ಭಂಗಗೊಳಿಸಿ, ತಮ್ಮ ಗೆಳೆಯರನ್ನು ಬಿಡಿಸಿಕೊಂಡರು. ಅನೇಕ ಬ್ರಿಟಿಷ್ ಸೇನಾಧಿಕಾರಿಗಳನ್ನು ಕೊಂದರು. ಅವರ ಬಂಗಲೆಗಳಿಗೆ ಬೆಂಕಿ ಹಚ್ಚಿದರು. ಮೀರತ್ ನಗರ ಗೊಂದಲಮಯವಾಯಿತು. ಇದು ಬ್ರಿಟಿಷರ ವಿರುದ್ಧ 1857ರ ಕ್ರಾಂತಿಯ ಆಸ್ಫೋಟನೆ. ಅನಂತರ ಅದು ರಾಷ್ಟ್ರದ ವಿವಿಧ ಭಾಗಗಳಿಗೆ ಹರಡಿತು. ಆಂಗ್ಲರು ‘ಸಿಪಾಯಿ ದಂಗೆ’ ಎಂದು ಕರೆದ ಈ ಘಟನೆ ಭಾರತದ ‘ಪ್ರಥಮ ಸ್ವಾತಂತ್ರ್ಯ ಸಂಗ್ರಾಮ’, ‘1857ರ ಕ್ರಾಂತಿ’ ಎಂಬ ಹೆಸರಿನಿಂದಲೂ ಇದು ಪ್ರಖ್ಯಾತವಾಗಿದೆ. ವಿದೇಶೀಯರ ಆಡಳಿತದ ವಿರುದ್ಧ ಆ ದಂಗೆ ಭಾರತದ ಮೊದಲನೆಯ ಬೃಹತ್ ಪ್ರಮಾಣದ ಪ್ರತಿಭಟನೆ. ಇದಕ್ಕೆ ಹಿಂದೆ ಬ್ರಿಟಿಷರ ವಿರುದ್ಧ ನಲವತ್ತಕ್ಕೂ ಹೆಚ್ಚು ಸಣ್ಣಪುಟ್ಟ ಬಂಡಾಯಗಳು ನಡೆದಿದ್ದುವು. ಕರ್ನಾಟಕದ ಧೋಂಡಿಯ ವಾಘ್, ಕಿತ್ತೂರ ಚೆನ್ನಮ್ಮ, ಸಂಗೊಳ್ಳಿ ರಾಯಣ್ಣ ಮತ್ತಿತರರು ಇಂಥ ಬಂಡಾಯಗಳನ್ನು ಹೂಡಿದ್ದರು.

1857ರ ಕ್ರಾಂತಿಗೆ ಪ್ರೇರಕವಾದ ಕಾರಣಗಳು ಹಲವು: ದೇಶೀಯ ಅರಸರ ದತ್ತುಪುತ್ರರು ರಾಜ್ಯದ ಉತ್ತರಾಧಿಕಾರಿಗಳಲ್ಲ ಎಂಬ ಕಾಯಿದೆಯ ನೆಪದಿಂದ ಕೆಲ ದೇಶೀಯ ರಾಜರ ಮೇಲೆ ಹೋರಾಟ ನಡೆಸಿ ಅವರ ರಾಜ್ಯಗಳನ್ನು ಬ್ರಿಟಿಷರು ಸ್ವಾಧೀನಪಡಿಸಿಕೊಂಡಿದ್ದರು. ಬ್ರಿಟಿಷರ ಆಡಳಿತ ವ್ಯವಸ್ಥೆ ಭಾರತಕ್ಕೆ ಅಪರಿಚಿತ. ಭಾರತದ ಸಾಮಾಜಿಕ —ಆರ್ಥಿಕ ವ್ಯವಸ್ಥೆಗೆ— ಪೆಟ್ಟು ಕೊಟ್ಟಿದ್ದರು. ಭೂಕಂದಾಯ ಹೆಚ್ಚಿಸಿ ರೈತರ ಮತ್ತು ಜಮೀನುದಾರರನ್ನು ಸುಲಿಗೆ ಮಾಡಿದ್ದರು.

ಸತಿಪದ್ಧತಿ ನಿಷೇಧ. ವಿಧವೆಯರ ಪುನರ್ವಿವಾಹ ಮುಂತಾದ ಕಾನೂನುಗಳು. ಜನರಲ್ಲಿ ಕ್ರೈಸ್ತಧರ್ಮ ಪ್ರಚಾರ —ಇವುಗಳಿಂದಾಗಿ ತಾವು ಜಾತಿಭ್ರಷ್ಟರಾಗುವೆವೆಂಬ ಭೀತಿ ಜನರಲ್ಲಿ ಮನೆಮಾಡಿತ್ತು. ಭಾರತೀಯರಿಗೆ ಅಲ್ಪತರ ಅಧಿಕಾರ. ಅತ್ಯಲ್ಪ ಸಂಬಳ. ಬ್ರಿಟಿಷ್ ನೌಕರರು ಮತ್ತು ಅಧಿಕಾರಿಗಳೊಡನೆ ಸಮಾನತೆ ಇಲ್ಲ. ಭಾರತೀಯರಲ್ಲಿ ಅಸಮಾಧಾನ ಮೂಡಿಸಿತ್ತು.

ಭಾರತೀಯ ಸಿಪಾಯಿಗಳ ಮೇಲೆ ಹಲವು ಬಗೆಯ ನಿರ್ಬಂಧಗಳಿದ್ದುವು. ಇದರಿಂದ ಅವರು ಅತೃಪ್ತರಾಗಿದ್ದರು.

1857ರಲ್ಲಿ ದನ ಹಾಗೂ ಹಂದಿ ಕೊಬ್ಬನ್ನು ಸವರಿದ ತೋಟಾಗಳನ್ನು ಸೈನ್ಯದಲ್ಲಿ ಉಪಯೋಗಕ್ಕೆ ತಂದಾಗ, ಅದು ಭಾರತೀಯ ಸೈನಿಕರನ್ನು ಉದ್ರಿಕ್ತಗೊಳಿಸಿತು.

ಭಾರತೀಯ ಸಿಪಾಯಿಗಳು ಕೊಬ್ಬು ಸವರಿದ ತೋಟಾಗಳನ್ನು ಉಪಯೋಗಿಸಲು ನಿರಾಕರಿಸಿದರು. ಫೆಬ್ರುವರಿ 26ರಂದು ಬಹರ್ಮಪ್‌ಪುರದ ಸೈನಿಕದಳ ಸಿಡಿದೆದ್ದಿತು. ಆ ತಿಂಗಳ 29ರಂದು ಮಂಗಲ ಪಾಂಡೆ ಎಂಬಾತ ಬ್ಯಾರಕ್‌ಪುರದಲ್ಲಿ ಒಬ್ಬ ಅಧಿಕಾರಿಯನ್ನು ಕೊಂದ. ಅವನನ್ನು ಗಲ್ಲಿಗೇರಿಸಲಾಯಿತು.

ಏಪ್ರಿಲ್ 24 ಮೀರತ್‌ನಲ್ಲಿ ಗಲಭೆ ಆರಂಭವಾಯಿತು. ಅಂದು ಅಲ್ಲಿನ 90 ಸೈನಿಕರು ತೋಟಾಗಳನ್ನು ಬಂದೂಕಿಗೆ ತುಂಬಲು ನಿರಾಕರಿಸಿದರು. ಅವರನ್ನು ಸೆರೆಮನೆಗೆ ಹಾಕಲಾಯಿತು. ಮೇ 9 ರಂದು ಹಲವು ಸೈನಿಕರನ್ನು ಸೆರೆಮನೆಗೆ ಕಳುಹಿಸಲಾಯಿತು. ಮರುದಿನ ದಂಗೆಯೆದ್ದ ಭಾರತೀಯ ಸೈನಿಕರು ಅವರನ್ನೆಲ್ಲ ಬಿಡಿಸಿಕೊಂಡರು.

‘ಪ್ರಥಮ ಸ್ವಾತಂತ್ರ್ಯ ಸಮರ’ : ಮೀರತ್‌ನಲ್ಲಿ ಸೈನಿಕರ ಬಂಡಾಯ





ಗಲ್ಲು ಶಿಕ್ಷೆಗೆ ಗುರಿಯಾದ ಜ್ವಾಲಾ ಪ್ರಸಾದ್
-ನಾನಾಸಾಹೇಬನ ದಳಪತಿ

[illegible] ಹೊರಟ ಭಾರತೀಯ ಸೈನಿಕರಿಗೆ ಮುಂದಾಳಾಗಲು ದೆಹಲಿಯ ಮೊಘಲ್ ಚಕ್ರವರ್ತಿ ಬಹದ್ದೂರ್ ಷಾ ಒಪ್ಪಿಕೊಂಡ. ಹೀಗೆ, ಕೇವಲ ಸಿಪಾಯಿದಂಗೆಯಾಗಿದ್ದ ಚಳುವಳಿಗೆ ರಾಜಕೀಯ ಬಣ್ಣ ಬಂದಿತು. ಸಿಪಾಯಿಗಳು ತಮ್ಮ ಚಕ್ರವರ್ತಿಯ ಪರವಾಗಿ ಹೋರಾಡಲು ಆರಂಭಿಸಿದರು.

ಹೋರಾಟಗಾರರು ದೆಹಲಿಯನ್ನು ವಶಪಡಿಸಿಕೊಂಡರು. ವಾಯುವ್ಯ ಪ್ರಾಂತ್ಯ, ಔಧ್, ಮಧ್ಯಭಾರತ, ಪಶ್ಚಿಮ ಬಿಹಾರಗಳಿಗೆ ಈ ಕ್ರಾಂತಿ ಹರಡಿತು. ಕಾನ್ಪುರ, ಲಖನೌ, ದೆಹಲಿ, ಝಾನ್ಸಿ ಕ್ರಾಂತಿಯ ಕೇಂದ್ರಗಳಾದುವು.

ಕಾನ್ಪುರದಲ್ಲಿ ನಾನಾ ಸಾಹೇಬ, ತಾತ್ಯಾ ಟೋಪೆ, ಜ್ವಾಲಾಪ್ರಸಾದ್ ಮತ್ತಿತರರು, ಝಾನ್ಸಿಯಲ್ಲಿ ಲಕ್ಷ್ಮೀಬಾಯಿ, ಔಧ್‌ನಲ್ಲಿ ಬೇಗಮ್ ಹಜರತ್ ಮಹಲ್, ಅಲಹಾಬಾದಿನಲ್ಲಿ ಮೌಲ್ವಿ ಲಿಯಾಖತ್ ಅಲಿ, ಮಂಡಿಸೋರದಲ್ಲಿ ಫಿರೋಜ್ ಷಾ ಮುಂತಾದವರು ತಾವು ಸ್ವತಂತ್ರರೆಂದು ಸಾರಿ ರಾಜ್ಯಭಾರ ಆರಂಭಿಸಿದರು. ಕ್ರಾಂತಿ ಕಾಳ್ಗಿಚ್ಚಿನಂತೆ ಹಬ್ಬಿತು.

ಬ್ರಿಟಿಷರು ಈ ಪ್ರತಿಭಟನೆಯನ್ನು ಹತ್ತಿಕ್ಕಲು ಆರಂಭಿಸಿದರು. ದೆಹಲಿ, ಲಖನೌ, ಕಾನ್ಪುರ ಮುಂತಾದ ಕೇಂದ್ರಗಳನ್ನು ಗೆದ್ದುಕೊಂಡರು. ಝಾನ್ಸಿ ಲಕ್ಷ್ಮೀಬಾಯಿ ಕಾದುತ್ತ ಪ್ರಾಣನೀಗಿದಳು. ತಾತ್ಯಾ ಟೋಪೆಯನ್ನು ಬ್ರಿಟಿಷರು ಗಲ್ಲಿಗೇರಿಸಿದರು. ಹೋರಾಡುತ್ತ ಹೋರಾಡುತ್ತ ನಾನಾಸಾಹೇಬ ಅಡವಿಯಲ್ಲಿ ತಪ್ಪಿಸಿಕೊಂಡ. ದೆಹಲಿಯ ಚಕ್ರವರ್ತಿ ಬಹದ್ದೂರ್ ಷಾ ಸೆರೆಯಾಳಾಗಿ ದೇಶಾಂತರ ಕಳುಹಿಸಲ್ಪಟ್ಟ. 1858 ಜೂನ್ ವೇಳೆಗೆ ಕ್ರಾಂತಿ ಸಂಪೂರ್ಣ ಅಡಗಿಸಲ್ಪಟ್ಟಿತು.

[illegible] ಕ್ರಾಂತಿ ವಿಫಲವಾಯಿತು.

ಆಂಗ್ಲರಲ್ಲಿದ್ದಂಥ ಸುಧಾರಿತ ಶಸ್ತ್ರಾಸ್ತ್ರಗಳು, ಸಂಪರ್ಕಸಾಧನಗಳು ಕ್ರಾಂತಿಕಾರರಲ್ಲಿ ಇರಲಿಲ್ಲ. ಗೂರ್ಖರು ಮತ್ತು ಕೆಲವು ಆಳರಸರು ಬ್ರಿಟಿಷರಿಗೆ ನಿಷ್ಠೆ ತೋರಿ ಕ್ರಾಂತಿಕಾರರಿಗೆ ಬೆಂಬಲಕೊಡಲಿಲ್ಲ. ಕ್ರಾಂತಿಕಾರರಲ್ಲಿ ಸಾಕಷ್ಟು ಸಂಘಟನೆ ಇರಲಿಲ್ಲ. ಈಯೆಲ್ಲ ಕಾರಣಗಳಿಂದ 1859ರ ಕ್ರಾಂತಿ ಮುಗಿದುಹೋಯಿತು.

[illegible] 1857ರ [illegible] ಪ್ರಾಂತದಲ್ಲಿ ನಡೆದ ಈ ಸಶಸ್ತ್ರ ಪ್ರತಿಭಟನೆ, ಭಾರತೀಯರಲ್ಲಿ ಸ್ವಾತಂತ್ರ್ಯಾಪೇಕ್ಷೆ ತೀವ್ರಗೊಳ್ಳುತ್ತಿದ್ದುದನ್ನು ಸ್ಪಷ್ಟಪಡಿಸಿತು.

ಸಿ.ಪಿ. ರಾಮಸ್ವಾಮಿ ಅಯ್ಯರ್

ಸಮರ್ಥ ಆಡಳಿತಗಾರ ಸಿ. ಪಿ. ರಾಮಸ್ವಾಮಿ ಅಯ್ಯರ್ ದೇಶಕ್ಕೆ ಬಹು ಮುಖ ಸೇವೆ ಸಲ್ಲಿಸಿದರು. ತಂದೆ ಚೆಟ್‌ಪಟ್ ಪಟ್ಟಾಭಿರಾಮ ಅಯ್ಯರ್ ಖ್ಯಾತ ವಕೀಲರಾಗಿದ್ದರು.

1878ರಲ್ಲಿ ರಾಮಸ್ವಾಮಿಯವರ ಜನನ. ವಿದ್ಯಾಭ್ಯಾಸಾನಂತರ ಅವರು ವಕೀಲರಾಗಿ ಸ್ವಲ್ಪ ಕಾಲದಲ್ಲೇ ಪ್ರಸಿದ್ಧರಾದರು. ರಾಜಕೀಯದಲ್ಲಿ ಆಸಕ್ತಿ ವಹಿಸಿದರು. ಅನಿ ಬೆಸೆಂಟ್ ಆರಂಭಿಸಿದ ಹೋಂ ರೂಲ್ ಚಳುವಳಿಯನ್ನು ಸೇರಿದರು. ಭಾರತ ರಾಷ್ಟ್ರೀಯ ಕಾಂಗ್ರೆಸಿನ ಕಾರ್ಯದರ್ಶಿಯಾಗಿ ಕೆಲಸ ಮಾಡಿದರು. 1926–27ರಲ್ಲಿ 'ಲೀಗ್ ಆಫ್ ನೇಷನ್ಸ್'ಗೆ ಪ್ರತಿನಿಧಿಯಾಗಿ ಆಯ್ಕೆಯಾಗಿದ್ದರು. ದುಂಡುಮೇಜು ಪರಿಷತ್ತಿಗೆ ಹೋಗಿ ಬಂದರು. ಅವರು ಶ್ರೇಷ್ಠ ವಾಗ್ಮಿಯಾಗಿದ್ದರು. ಮದರಾಸು ಪ್ರಾಂತ್ಯದ, ಕೇಂದ್ರ ಸರಕಾರದ ಆಡಳಿತ ಮಂಡಲಿಗಳ ಸದಸ್ಯರಾಗಿ ಕೆಲಸ ಮಾಡಿದರು.



ಸಮರ್ಥ ಆಡಳಿತ : ಸರ್ ಸಿ.

ಬ್ರಿಟಿಷ್ ಸರಕಾರ ರಾಮಸ್ವಾಮಿ ಅಯ್ಯರ್ ಅವರಿಗೆ ಸರ್ ಪದವಿ ಇತ್ತು ಗೌರವಿಸಿತು.

11 ವರ್ಷಕಾಲ ತಿರುವಾಂಕೂರು ಸಂಸ್ಥಾನದ ದಿವಾನರಾಗಿ ದರ್ಪದಿಂದ ಆಳಿದರು. ಅವರ ಕಾಲದಲ್ಲಿ ಹಿಂದೂ ದೇವಾಲಯಗಳನ್ನು ಪ್ರವೇಶಿಸುವ ಹಕ್ಕು ಹರಿಜನರಿಗೆ ದೊರೆಯಿತು. ತಿರುವಾಂಕೂರು ಹಾಗೂ ಬನಾರಸ್ ಹಿಂದೂ ವಿಶ್ವವಿದ್ಯಾನಿಲಯಗಳ ವೈಸ್ ಛಾನ್ಸಲರ್ ಆಗಿಯೂ ಇವರು ಸೇವೆ ಸಲ್ಲಿಸಿದರು.

ಹಿಂದೂ ದೇವಾಲಯಗಳ ಸುಧಾರಣೆಯನ್ನು ಕುರಿತು ವರದಿ ತಯಾರಿಸಿದ ಸಮಿತಿಗೆ ಸಿ. ಪಿ. ರಾಮಸ್ವಾಮಿ ಅಯ್ಯರ್ ಅಧ್ಯಕ್ಷರಾಗಿದ್ದರು.

ರಾಮಸ್ವಾಮಿ ಅಯ್ಯರ್ ಉತ್ತಮ ಪಂಡಿತರೂ ಅಧ್ಯಯನಶೀಲರೂ ಕಲಾಪ್ರೇಮಿಯೂ ಆಗಿದ್ದರು. ಭಾರತೀಯ ಧರ್ಮ, ಸಾಹಿತ್ಯ, ಕಲೆ, ಸಂಸ್ಕೃತಿಯನ್ನು ಕುರಿತು ಹಲವಾರು ದೇಶಗಳಲ್ಲಿ ಪರಿಣಾಮಕಾರಿಯಾದ ಪ್ರಚಾರ ನಡೆಸಿದರು.

ಸಿ. ಪಿ. ರಾಮಸ್ವಾಮಿ ಅಯ್ಯರ್ 1966ರಲ್ಲಿ ನಿಧನರಾದರು.

ಸಿಮ್ಲಾ

ಹಿಮಾಚಲ ಪ್ರದೇಶದ ರಾಜಧಾನಿ ಸಿಮ್ಲಾ ಆಧುನಿಕ ಸೌಲಭ್ಯಗಳನ್ನು ಒಳಗೊಂಡಿರುವ ಗಿರಿಧಾಮವೂ ಹೌದು. ಸ್ಕೇಟಿಂಗ್, ಹೈಕಿಂಗ್ [illegible] ಇಲ್ಲಿನ ಮುಖ್ಯ ಆಕರ್ಷಣೆಗಳು. ([illegible] ಸಿಮ್ಲಾ.)



ರಾಷ್ಟ್ರಪತಿ ನಿವಾಸ - ಸಿಮ್ಲಾದಲ್ಲಿ

[illegible] 1939ರ ವರೆಗೆ ಈ [illegible] ಭಾರತದ [illegible] ರಾಜಧಾನಿಯಾಗಿತ್ತು. ಸಿಮ್ಲಾದಲ್ಲಿ ಕಟ್ಟಲ್ಪಟ್ಟ ಮೊದಲ ಕಟ್ಟಡದ ಹೆಸರು 'ಕೆನಡಿ ಹೌಸ್'. 1828ರಲ್ಲಿ ಮೇಜರ್ ಕೆನಡಿ ಇದನ್ನು ಕಟ್ಟಿಸಿದ.

ಹಿಮಾಲಯದ [illegible] ಪರ್ವತ ಶ್ರೇಣಿಯ [illegible] ಸಿಮ್ಲಾ [illegible]. ಸಮುದ್ರ ಮಟ್ಟದಿಂದ [illegible] 7,156 ಅಡಿಗಳ ಎತ್ತರದಲ್ಲಿದೆ. ಇದೇ ಶ್ರೇಣಿ ಮುಂದುವರಿದು ಪೂರ್ವಕ್ಕೆ ಜಾಕ್ಕೊ ಎಂಬ [illegible]. [illegible] ಎತ್ತರ 8,053 ಅಡಿಗಳು. ಸಿಮ್ಲಾದ ಬಳಿಯ ಪ್ರೇಕ್ಷಣೀಯ ನೋಟಗಳಲ್ಲಿ ಜಾಕ್ಕೊ ಸಹ ಒಂದು. ಸಿಮ್ಲಾದ ಎರಡು ಕಡೆಗೂ ಕಡಿದಾದ ಕಣಿವೆಗಳಿವೆ. [illegible] ಇಲ್ಲಿಂದ ಉತ್ತರಕ್ಕೆ ಹಾಗೆ [illegible] ಹಿಮಾಲಯದ ಪರ್ವತಾವಳಿಗಳು ಒಂದಕ್ಕಿಂತ ಒಂದು ಎತ್ತರವಾಗಿ ತೋರುತ್ತವೆ. ಕಡೆಗೆ ಮಂಜಿನಿಂದ ಆವೃತವಾದ ಶ್ರೇಣಿಗಳು ಕಂಡುಬರುತ್ತವೆ.

ವರ್ಷವಿಡೀ ಸಿಮ್ಲಾದ ಪರಿಸರ, ನೋಟ ಆಹ್ಲಾದಕರ. 1814–16ರಲ್ಲಿ ಬ್ರಿಟಿಷರಿಗೂ ಗೂರ್ಖ ಜನರಿಗೂ ನಡೆದ ಯುದ್ಧದ ಅನಂತರ ವಿಶ್ರಾಮ ಪಡೆಯಲೆಂದು ಬ್ರಿಟಿಷ್ ದಳಗಳು ಸಿಮ್ಲಾದಲ್ಲಿ ತಂಗಿದ್ದುವು. 1827ರ ಅನಂತರ ಆರೋಗ್ಯಧಾಮವೆಂದು, ಗಿರಿಧಾಮವೆಂದು ಇದರ ಪ್ರಾಶಸ್ತ್ಯ ಹೆಚ್ಚಿತು.

ಸಿಮ್ಲಾದ ಜನಸಂಖ್ಯೆ 55,368.

ಮಾಲ್–ಸಿಮ್ಲಾದ ಮುಖ್ಯ ಬೀದಿ



ಸಿಮ್ಲಾ ಒಪ್ಪಂದ

1971ರ ಭಾರತ–ಪಾಕ್ ಯುದ್ಧದ ಅನಂತರ ಭಾರತದ ಪ್ರಧಾನಿ ಇಂದಿರಾ ಗಾಂಧೀ ಮತ್ತು ಪಾಕಿಸ್ತಾನದ ಅಧ್ಯಕ್ಷ ಭುಟ್ಟೋರ ನಡುವೆ ಸಿಮ್ಲಾದಲ್ಲಿ ಮಾತುಕತೆ ನಡೆದು ಒಪ್ಪಂದ ಏರ್ಪಟ್ಟಿತು. ಅದನ್ನು ಸಿಮ್ಲಾ ಒಪ್ಪಂದ ಎನ್ನುತ್ತಾರೆ. ಇದಕ್ಕೆ 1972 ಜೂಲೈ 3ರಂದು ಇಬ್ಬರೂ ಸಹಿ ಹಾಕಿದರು.

ಬಲಪ್ರಯೋಗ ನಿಲ್ಲಿಸುವುದು; ಶಾಂತಿಯುತ ಸಹಬಾಳ್ವೆ; ಪರಸ್ಪರ ಪ್ರಾದೇಶಿಕ ಸಮಗ್ರತೆಯ ಬಗೆಗೆ ಗೌರವ; ಒಬ್ಬರು ಮತ್ತೊಬ್ಬರ ಆಂತರಿಕ ವಿಷಯಗಳಲ್ಲಿ ಹಸ್ತಕ್ಷೇಪ ಮಾಡದಿರುವುದು; ಸಮಾನತೆ ಮತ್ತು ಪರಸ್ಪರ [illegible] ಒಪ್ಪುವುದು —ಈ ಒಪ್ಪಂದದ ಮುಖ್ಯ ನಿಯಮಗಳು.

1971 ಡಿಸೆಂಬರ್ 17ರಂದು ಕದನವಿರಾಮದ ಫಲವಾಗಿ ನಿರ್ಧಾರವಾದ ಗಡಿರೇಖೆಯನ್ನು ಎರಡು ದೇಶಗಳವರೂ ಗೌರವಿಸಬೇಕೆಂದು [illegible].

[illegible] 1972ರ [illegible] ಸ್ಥಿರೀಕರಿಸಿದರು.

ಉಭಯ ದೇಶಗಳ [illegible] 1972 [illegible] 10ರಂದು ಸುಚೇತ್‌ಗಡದಲ್ಲಿ ಸೈನ್ಯವನ್ನು ಹಿಂದಕ್ಕೆ ಕರೆಸಿಕೊಳ್ಳುವ ಕ್ರಮವನ್ನು ಕುರಿತು ಚರ್ಚಿಸಿದರು.

1973 ಸೆಪ್ಟೆಂಬರ್ ತಿಂಗಳಲ್ಲಿ [illegible] ಆರಂಭವಾಯಿತು.

ಸಿ. ರಾಜಗೋಪಾಲಾಚಾರಿ

ನೋಡಿ : ಚಕ್ರವರ್ತಿ ರಾಜಗೋಪಾಲಾಚಾರಿ

ಸಿರಾಜುದ್ದೌಲ

ಮೊಘಲ್ ಆಡಳಿತವಿನ್ನೂ ಇದ್ದಾಗ ಪ್ಲಾಸಿಯಲ್ಲಿ ಇಂಗ್ಲಿಷರನ್ನು ಎದುರಿಸಿದ ಬಂಗಾಳದ ಅರಸು, ಸಿರಾಜುದ್ದೌಲ.

ಅಲಿವರ್ದಿ ಖಾನ್ 1740ರಿಂದ ಬಂಗಾಳದ ದೊರೆಯಾಗಿದ್ದ. ಈತನ ಮೊಮ್ಮಗ ಮಿರ್ಜಾ ಮಹಮದ್—ಮುಂದೆ ಸಿರಾಜುದ್ದೌಲ— 1756ರಲ್ಲಿ ಪಟ್ಟಕ್ಕೆ ಬಂದ. ಕಲ್ಕತ್ತೆಯಲ್ಲಿ ವ್ಯಾಪಾರಕ್ಕೆಂದು ತಳವೂರಿದ್ದ ಬ್ರಿಟಿಷರು ಫ್ರೆಂಚರಿಂದ ರಕ್ಷಣೆ ಪಡೆಯಲು ಕಲ್ಕತ್ತೆಯಲ್ಲಿ ಕೋಟೆ ಕಟ್ಟಿದ್ದು ಆತನಿಗೆ ಸರಿಕಾಣಲಿಲ್ಲ. ಅವನ ಒಡೆಯಬೇಕೆಂದು ಹೇಳಿ ಕಳುಹಿಸಿದ. ಗವರ್ನರ್ ಡ್ರೇಕ್ ಸಿರಾಜುದ್ದೌಲನ ಬೇಳಿಕೆಯನ



ಆಂಗ್ಲ ವಿರೋಧಿ ಸಿರಾಜುದ್ದೌಲ

ವಶಪಡಿಸಿದ್ದ. ಸಿರಾಜುದ್ದೌಲ [illegible] ಕಲ್ಕತ್ತೆಯ ಮೇಲೆ ದಾಳಿ ಮಾಡಿ 1756 ಜೂನ್ 20ರಂದು ನಗರವನ್ನು ವಶಪಡಿಸಿಕೊಂಡ.

ಅಲಿವರ್ದಿಯ ಒಬ್ಬ ಮಗಳು ಘಸಿತಿ ಬೇಗಂ. ಇನ್ನೊಬ್ಬ ಮಗಳ ಮಗ ಶೌಕತ್ ಜಂಗ್ ಸಿರಾಜುದ್ದೌಲನ ಮೇಲೆ ಅಸಮಾಧಾನ ತಾಳಿದ್ದರು. ಸಿರಾಜುದ್ದೌಲ ಉಪಾಯವಾಗಿ ಘಸಿತಿ ಬೇಗಂಳನ್ನು ತನ್ನ ಅರಮನೆಗೆ ಕರೆತಂದ. ಪೂರ್ಣಿಯಾದಲ್ಲಿ ರಾಜ್ಯಪಾಲನಾಗಿದ್ದ ಶೌಕತ್ ಜಂಗ್‌ನನ್ನು ಯುದ್ಧದಲ್ಲಿ ಸಂಹರಿಸಿದ. ಹೀಗೆ, ಪಟ್ಟಕ್ಕೆ ಬಂದ ಕೆಲ ತಿಂಗಳುಗಳಲ್ಲೇ ಸಿರಾಜುದ್ದೌಲ ಸಾಹಸದಿಂದ ಮೂವರು ಶತ್ರುಗಳನ್ನು ದಮನ ಮಾಡಿದ.

ಮೀರ್ ಜಾಫರ್ ಮೊದಲಾದವರು ಬ್ರಿಟಿಷರ ಪಕ್ಷ ಸೇರಿ ಮಾಡಿದ ಮೋಸದಿಂದ ಪ್ಲಾಸಿ ಕದನದಲ್ಲಿ ಸಿರಾಜುದ್ದೌಲ ಪರಾಜಿತನಾದ. ಬ್ರಿಟಿಷರು ಅವನನ್ನು ಸೆರೆಹಿಡಿದು. 1757 ಜುಲೈ 2ರಂದು ಫಾಸಿಗೆ ಹಾಕಿದರು.

ನೋಡಿ : ಪ್ಲಾಸಿ

ಸಿಲೋನ್

ನೋಡಿ : ಶ್ರೀಲಂಕಾ

ಸಿ. ವಿ. ರಾಮನ್

ನೋಡಿ : ಸಂಪುಟ ೩

ಸಿ. ವೈ. ಚಿಂತಾಮಣಿ

'ಭಾರತೀಯ ಪತ್ರಿಕೋದ್ಯಮದ ಪೋಪ್'—ಎಂದು ವಿ. ಎಸ್. ಶ್ರೀನಿವಾಸ ಶಾಸ್ತ್ರಿಯವರಿಂದ ಕರೆಯಲ್ಪಟ್ಟ ಖ್ಯಾತ ಪತ್ರಿಕೋದ್ಯಮಿ. ರಾಜಕಾರಣಿ ಮತ್ತು ಲೇಖಕ ಸಿ. ವೈ. ಚಿಂತಾಮಣಿ.

ಜನನ 1880 ಏಪ್ರಿಲ್ 11ರಂದು, ವಿಶಾಖಪಟ್ಟಣದಲ್ಲಿ. ಚಿಂತಾಮಣಿ ಪದವೀಧರರಾಗಲಿಲ್ಲ. ವಿದ್ಯಾಭ್ಯಾಸವನ್ನು ನಿಲ್ಲಿಸಿ. ರಾಜಕೀಯ ರಂಗಕ್ಕೆ ಇಳಿದರು.

18ನೆಯ ವಯಸ್ಸಿಗೇ ಪತ್ರಿಕೋದ್ಯಮ ಕ್ಷೇತ್ರ ಪ್ರವೇಶ. 29 ವರ್ಷ ಕಾಲ 'ದಿ ಲೀಡರ್' ಪತ್ರಿಕೆಯ ಸಂಪಾದಕರಾಗಿದ್ದರು. ಅಲ್ಲದೆ 'ಇಂಡಿಯನ್ ಪೀಪಲ್' ಮತ್ತು 'ಹಿಂದೂಸ್ಥಾನ್ ರೆವ್ಯೂ' ಪತ್ರಿಕೆಗಳ ಸಂಪಾದಕರಾಗಿಯೂ ಕೆಲಸ ಮಾಡಿದರು. ಯಂತ್ರ ವಿಭಾಗವನ್ನೂ ಒಳಗೊಂಡು ಪತ್ರಿಕೋದ್ಯಮದ ಎಲ್ಲ ಅಂಗಗಳಲ್ಲೂ ಅವರು ಅನುಭವ ಗಳಿಸಿದ್ದರು.

'ಪೋಪ್' : ಚಿಂತಾಮಣಿ



ಸೌಮ್ಯವಾದಿ ಪಕ್ಷದ ಮುಂದಾಳುಗಳಲ್ಲಿ ಅವರು ಒಬ್ಬರಾದರು. ಸಂಯುಕ್ತ ಪ್ರಾಂತದ (ಈಗಿನ ಉತ್ತರ ಪ್ರದೇಶದ) ಶಾಸನ ಸಭೆಯ ಸದಸ್ಯರಾಗಿದ್ದರು. ಅವರು 1921ರಿಂದ 1923ರ ವರೆಗೆ ಆ ಪ್ರಾಂತದ ಶಿಕ್ಷಣ ಮತ್ತು ಕೈಗಾರಿಕಾ ಮಂತ್ರಿಯಾಗಿದ್ದರು. 'ನ್ಯಾಷನಲ್ ಲಿಬರಲ್ ಫೆಡರೇಷನ್ ಆಫ್ ಇಂಡಿಯಾ'ದ ಪ್ರಧಾನ ಕಾರ್ಯದರ್ಶಿಯಾಗಿದ್ದರು.

ಸೌಮ್ಯವಾದಿ ಪಕ್ಷದ ಪ್ರತಿನಿಧಿಯಾಗಿ ಇಂಗ್ಲೆಂಡಿಗೆ ಹೋಗಿದ್ದರು. 10 ವರ್ಷ ತರುವಾಯ ದುಂಡುಮೇಜು ಪರಿಷತ್ತಿಗೆ ಹೋಗಿಬಂದರು.

ಬನಾರಸ್ ಹಿಂದೂ ವಿಶ್ವವಿದ್ಯಾನಿಲಯ ಮತ್ತು ಅಲಹಾಬಾದ್ ವಿಶ್ವವಿದ್ಯಾನಿಲಯ ಅವರಿಗೆ ಗೌರವ ಡಾಕ್ಟರೇಟ್ ಪದವಿ ನೀಡಿ ಗೌರವಿಸಿದುವು.

ಪತ್ರಿಕೋದ್ಯಮಿ ಚಿಂತಾಮಣಿ ದಿನದ ಕೆಲಸದ ಬಳಿಕ ಪ್ರತಿ ಸಂಜೆ ಚಲಚ್ಚಿತ್ರ ನೋಡುತ್ತಿದ್ದರು.

'ಇಂಡಿಯನ್ ಪಾಲಿಟಿಕ್ಸ್ ಸಿನ್ಸ್ ಮ್ಯೂಟಿನಿ' ಎಂಬುದು ಅವರು ಬರೆದ ಪುಸ್ತಕ.

ದೇಶಸೇವೆಗೆ ಪತ್ರಿಕೋದ್ಯಮ ಒಂದು ಉತ್ತಮ ಮಾಧ್ಯಮ ಎಂಬುದು ಅವರ ಭಾವನೆಯಾಗಿತ್ತು. ಚಿಂತಾಮಣಿ 1941ರಲ್ಲಿ ನಿಧನರಾದರು.

ಸೀತಾ

ಕುಶಧ್ವಜ ಮುನಿಯ ಮಗಳು ವೇದವತಿ. ತಂದೆಗೆ ಮಗಳ ಮದುವೆಯನ್ನು ವಿಷ್ಣುವಿನೊಂದಿಗೆ ಮಾಡಬೇಕೆಂದು ಆಸೆ. ವಿಷ್ಣುವಿಗೆ ತಕ್ಕ ಪತ್ನಿಯಾಗಬೇಕು ಎಂದು, ವೇದವತಿ ತಪಸ್ಸು ಮಾಡಲು ಆರಂಭಿಸಿದಳು. ಚಿಕ್ಕ ವಯಸ್ಸಿಗೇ ತಪಸ್ಸು ಮಾಡುತ್ತ ಇದ್ದ ವೇದವತಿ ರಾವಣನ ಕಣ್ಣಿಗೆ ಬಿದ್ದಳು. ತಾನು ನಾರಾಯಣನನ್ನೇ ವರಿಸುವುದಾಗಿ ವೇದವತಿ ಹೇಳಿದರೂ ರಾವಣ ಆಕೆಯ ಕೂದಲನ್ನು ಹಿಡಿದುಕೊಂಡ. ಕೈಯನ್ನೇ ಕತ್ತಿಯಂತೆ ಉಪಯೋಗಿಸಿ ಕೂದಲು ಕತ್ತರಿಸಿಕೊಂಡಳು ವೇದವತಿ. ತಾನಿನ್ನು ಬದುಕಿ ಉಳಿಯುವುದಿಲ್ಲವೆಂದೂ ಇನ್ನೊಂದು ಜನ್ಮ ತಾಳಿ ಅವನ ನಾಶಕ್ಕೆ ಕಾರಣಳಾಗುವೆನೆಂದೂ ಹೇಳಿ ಬೆಂಕಿಗೆ ಹಾರಿದಳು. ಆ ವೇದವತಿ ಮುಂದೆ ಸೀತೆಯಾಗಿ ಜನ್ಮತಾಳಿದಳು. ವಿಷ್ಣು ರಾಮನಾಗಿ ಅವತರಿಸಿದ.

ಸಂತಾನಪ್ರಾಪ್ತಿಗಾಗಿ ಯಾಗಕಾಲದಲ್ಲಿ ಜನಕರಾಜ ಉಳುತ್ತಿದ್ದಾಗ ನೇಗಿಲ ಸಾಲಿನಲ್ಲಿ ದೊರೆತವಳು, ಸೀತಾ. ಆಕೆ ಅಯೋನಿಜೆ; ಭೂಮಿಯ ಮಗಳು. ಕ್ಷಮಾಶೀಲೆ, ಪತಿವ್ರತೆ. ಸಚ್ಚಾರಿತ್ರ್ಯದ ಅವತಾರ ಎಂದು ಆಕೆ ವಂದ್ಯಳು. ರಾಮಾಯಣದಲ್ಲಿ ಆಕೆಯದು ನಾಯಿಕೆ ಪಾತ್ರ.

ಸೀತೆ ವಿಧೇಯಳಾದ ಪತ್ನಿ. ವನವಾಸಕ್ಕೆ ರಾಮನೊಂದಿಗೆ ತೆರಳಿದಳು. ರಾವಣನ ನಿರ್ಬಂಧದಲ್ಲಿ ಅಶೋಕವನದಲ್ಲಿದ್ದಾಗ ರಾಮನನ್ನು ಕುರಿತೇ ಅವಳ ಚಿಂತನೆ. ಪತಿಯ ಸಂಶಯ ನಿವಾರಣೆಗಾಗಿ ಅಗ್ನಿಪ್ರವೇಶ ಮಾಡಿದರೂ ತನ್ನ ಪಾವಿತ್ರ್ಯದಿಂದಾಗಿ ಉರಿಯದೆ ಉಳಿದಳು.

ತುಂಬಿದ ಗರ್ಭಿಣಿಯಾಗಿದ್ದಾಗ ಮತ್ತೊಮ್ಮೆ ಸೀತೆ ಕಾಡಿಗೆ ಅಟ್ಟಲ್ಪಟ್ಟಳು. ವಾಲ್ಮೀಕಿಯ ಆಶ್ರಮದಲ್ಲಿ ಆಶ್ರಯ ಪಡೆದಳು. ಮರಳಿ ರಾಮ ಅಯೋಧ್ಯೆಗೆ ಬರಮಾಡಿಕೊಂಡ ಮೇಲೆ, ಭೂತಾಯಿಯನ್ನು ಪ್ರಾರ್ಥಿಸಿ, ಅವಳ ಗರ್ಭದಲ್ಲಿ ಸೇರಿಕೊಂಡಳು.

ಸುಂಗ್‌ಯುನ್, ಹ್ವುಯಿಸಾಗ್

"ಪುಣ್ಯಕ್ಷೇತ್ರಗಳನ್ನು ನೋಡಿದ ನಾವು, ತಥಾಗತನು ತನ್ನ ಶರೀರವನ್ನು ಹುಲಿಗೆ ಬಲಿದಾನ ಮಾಡಿದ ಪ್ರದೇಶದಲ್ಲಿ ಒಂದು ಸ್ತೂಪ ಸ್ಥಾಪಿಸಿ, ನಮ್ಮನ್ನು ಕಳುಹಿಸಿದ ಚಕ್ರವರ್ತಿನಿಯ ವಂಶಾವಳಿಯನ್ನು ಕಲ್ಲಿನ ಮೇಲೆ ಕೆತ್ತಿಸಿದೆವು..."

518ರಲ್ಲಿ ಚೀನದಿಂದ ಭಾರತಕ್ಕೆ ಬಂದ ಸುಂಗ್‌ಯುನ್ ಮತ್ತು ಅವನ ಜೊತೆಗಾರ ಹ್ವುಯಿಸಾಗ್ ಬಂಧನು ತನ್ನ ಬಟ್ಟೆಗಳನ್ನು

ಒಣಗಿಸಿದ ಸ್ಥಳ, ಅವನು ಕಾಲಿಟ್ಟ ಗುರುತಿರುವ ಬಂಡೆ, ಕುಳಿತ–ನಿಂತ ಸ್ಥಳಗಳನ್ನು ತಮ್ಮ ಯಾತ್ರಾ ಕಥನದಲ್ಲಿ ವರ್ಣಿಸಿದ್ದಾರೆ.

ಸುಂಗ್ ಯೂನ್‌ನನ್ನು ಇನ್ನೊಬ್ಬ ಭಿಕ್ಕು ಹ್ಯುಯಿಶಾಂಗ್‌ನನ್ನೂ ಪ್ಯ ಸಂತತಿಯ ಚಕ್ರವರ್ತಿನಿ ಭಾರತಕ್ಕೆ ಕಳುಹಿಸಿದಳು. ಭಾರತದ ಪಶ್ಚಿಮ ಪ್ರಾಂತಗಳಿಂದ ಬೌದ್ಧ ಗ್ರಂಥಗಳನ್ನು ಸಂಗ್ರಹಿಸಬೇಕು ಎಂದು ಆವಳು ಆದೇಶ ನೀಡಿದ್ದಳು. ಬೋಟಾನ್ (ಈಗಿನ ಸಿಂಕಿಯಾಂಗ್) ನಿಂದ ಗಾಂಧಾರದ ಮಾರ್ಗವಾಗಿ ಇವರು ಭಾರತಕ್ಕೆ ಬಂದರು. ಅವರ ಯಾತ್ರಾ ಕಥನದಲ್ಲಿ ಇಲ್ಲಿನ ಜನಜೀವನ, ರೀತಿಗಳ ಬಗೆಗೂ ಪ್ರಸ್ತಾಪ ಇದೆ.

ಉದ್ಯಾನದ ರಾಜನ ಬಗೆಗೆ ಬರೆಯುತ್ತ, "ಅವನು ಸಸ್ಯಾಹಾರಿ; ಬೆಳಗ್ಗೆ, ಸಂಜೆ ಬುದ್ಧನ ಅರ್ಚನೆ ಮಾಡುತ್ತಾನೆ. ಉಳಿದ ವೇಳೆಯನ್ನು ಆಡಳಿತಕ್ಕೆ ವಿನಿಯೋಗಿಸುತ್ತಾನೆ." ಎಂದಿದ್ದಾರೆ.

"ಈ ದೇಶದಲ್ಲಿ ಆರೋಪಿಯು ಅಪರಾಧಿಯೆ ಎಂಬುದನ್ನು ನಿರ್ಧರಿಸಲು ಔಷಧಿ ಪ್ರಯೋಗ ನಡೆಸುತ್ತಾರೆ ; ಅಣೆಕಟ್ಟು ರಚಿಸಿ, ನದಿನೀರನ್ನು ಉಪಯೋಗಿಸಿ ವಿವಿಧ ದವಸ, ಧಾನ್ಯ ಬೆಳೆಯುತ್ತಾರೆ. ಊರು ಸಸ್ಯಗಳಿಂದ ಸಮೃದ್ಧವಾಗಿದೆ," ಎಂದು ಹೇಳಿದ್ದಾರೆ.

ಸುಂದರ ಸ್ಥಳಗಳನ್ನು ನೋಡುತ್ತ ಹುಟ್ಟೂರಿನ ನೆನಪಾಗಿ, ಕಾಯಿಲೆ ಬಂದಾಗ ಬ್ರಾಹ್ಮಣರ ಮಂತ್ರಪ್ರಯೋಗದಿಂದ ಒಂದು ತಿಂಗಳಲ್ಲಿ ಗುಣ ಹೊಂದಿ, ಗಾಂಧಾರ ಮಾರ್ಗವಾಗಿ ಹಿಂದಿರಂಗಿದುದಾಗಿ ಬರೆದಿದ್ದಾರೆ. "ಮರು ಪ್ರಯಾಣದಲ್ಲಿ ನಾವು ಭೇಟಿಯಾದ ಗಾಂಧಾರದ ರಾಜ ಬಹಳ ಅನಾಗರಿಕ ; ಬುದ್ಧನನ್ನು ಪೂಜಿಸುತ್ತಿರಲಿಲ್ಲ. ನಾವು ಭೇಟಿ ಮಾಡಿ ವಂದಿಸಿದಾಗ, ಪ್ರತಿ ನಮಸ್ಕಾರವನ್ನು ಮಾಡಲಿಲ್ಲ." ಎಂದಿದ್ದಾನೆ ಸುಂಗ್ ಯುನ್. ಮಹಾಯಾನಕ್ಕೆ ಸಂಬಂಧಿಸಿದ 170 ಗ್ರಂಥಗಳೊಂದಿಗೆ 521ರಲ್ಲಿ ಇವರು ಚೀನಕ್ಕೆ ಹಿಂದಿರಂಗಿದರು.

ಸುಖದೇವ್



ಹುತಾತ್ಮ : ಸುಖದೇವ್

ಹುತಾತ್ಮ ಸುಖದೇವ್ ಖ್ಯಾತ ಕ್ರಾಂತಿವೀರ. ಭಗತ್‌ಸಿಂಗರ ಜೊತೆ ಫಾಸಿ ಶಿಕ್ಷೆಗೆ ಒಳಗಾದರು.

ಲೈಲಾಪುರ (ಈಗ ಪಶ್ಚಿಮ ಪಾಕಿಸ್ತಾನದಲ್ಲಿದೆ) ಇವರ ಜನ್ಮಸ್ಥಳ. 1928 ಡಿಸೆಂಬರ್ 17ರಂದು ನಡೆದ ಲಾಹೋರಿನ ಅಸಿಸ್ಟೆಂಟ್ ಪೋಲೀಸ್ ಸೂಪರಿಂಟೆಂಡೆಂಟ್ ಆಗಿದ್ದ ಸ್ಯಾಂಡರ್ಸನ ಕೊಲೆಯಲ್ಲಿ ಸುಖದೇವರದು ಪ್ರಮುಖ ಪಾತ್ರ. ದೆಹಲಿಯ ಕೇಂದ್ರ ಶಾಸನಸಭಾ ಹಾಲ್‌ನಲ್ಲಿ ಬಾಂಬ್ ಸ್ಫೋಟ ನಡೆದುದರಲ್ಲೂ ಸುಖದೇವ್ ಭಾಗಿಯಾಗಿದ್ದರು. ವಿಚಾರಣೆ ನಡೆದು 1931 ಮಾರ್ಚ್ 23ರಂದು ಲಾಹೋರ್ ಸೆರೆಮನೆಯಲ್ಲಿ ಭಗತ್‌ಸಿಂಗ್ ಮತ್ತು ರಾಜಗುರು ಅವರೊಂದಿಗೆ ಸುಖದೇವರಿಗೂ ಗಲ್ಲುಶಿಕ್ಷೆ ಆಯಿತು.

ನೋಡಿ : ಭಗತ್‌ಸಿಂಗ್ ; ರಾಜಗುರು

ಸುಚೇತಾ ಕೃಪಲಾನಿ

ಭಾರತದ ರಾಷ್ಟ್ರ [illegible] ಮಹಿಳೆ. ಸುಚೇತಾ ಕೃಪಲಾನಿ. ಇವರು ಸುಮಾರು 1940ರಿಂದ ರಾಷ್ಟ್ರದ ರಾಜಕೀಯ ರಂಗದಲ್ಲಿ ಪ್ರಮುಖ ಸ್ಥಾನ ಹೊಂದಿದ್ದಾರೆ.



ದುಡಿಮೆ, ಅಧಿಕಾರ : ಸುಚೇತಾ

ಸುಚೇತಾ 1908 ಜೂನ್ ತಿಂಗಳಲ್ಲಿ ಅಂಬಾಲಾದಲ್ಲಿ ಹುಟ್ಟಿದರು. ಲಾಹೋರ್ ಮತ್ತು ದೆಹಲಿಗಳಲ್ಲಿ ಇವರ ವಿದ್ಯಾಭ್ಯಾಸವಾಯಿತು. ಎಂ.ಎ. ಪದವಿ ಪಡೆದ ಬಳಿಕ 1931ರಲ್ಲಿ ಇವರು ಬನಾರಸ್ ಹಿಂದೂ ವಿಶ್ವವಿದ್ಯಾಲಯದಲ್ಲಿ ಅಧ್ಯಾಪಕಿಯಾದರು.

ಮೊದಲಿನಿಂದಲೇ ಕಾಂಗ್ರೆಸ್ಸಿಗಾಗಿ ಕೆಲಸ ಮಾಡುತ್ತಿದ್ದ ಸುಚೇತಾ 1939ರಲ್ಲಿ ಪೂರ್ಣಾವಧಿ ಕಾಂಗ್ರೆಸ್ ಕಾರ್ಯಕರ್ತೆಯಾದರು. ಎ.ಐ.ಸಿ.ಸಿ.ಯ ವಿದೇಶ ವ್ಯವಹಾರ ಖಾತೆ, ಮಹಿಳೆಯರ ಶಾಖೆಗಳಿಗೆ ಇವರು ಕಾರ್ಯದರ್ಶಿಯಾಗಿದ್ದರು. 1940-41 ಮತ್ತು 1943-45ರ ಅವಧಿಗಳಲ್ಲಿ ಇವರು ತಮ್ಮ ರಾಜಕೀಯ ಚಟುವಟಿಕೆಗಳಿಗಾಗಿ ಕಾರಾಗೃಹವಾಸ ಅನುಭವಿಸಿದರು.

1946ರಲ್ಲಿ ಸುಚೇತಾ ಕೃಪಲಾನಿ ರಾಜ್ಯಾಂಗ ರಚನಾಸಭೆಯ ಸದಸ್ಯರಾದರು. 1948ರಲ್ಲಿ ಕಾಂಗ್ರೆಸ್ ಕಾರ್ಯಕಾರಿ ಸಮಿತಿಗೆ ಆಯ್ಕೆಯಾದರು. ಅದೇ ವರ್ಷ ವಿಶ್ವಸಂಸ್ಥೆಯ ಮಹಾಸಭೆಗೆ ಭಾರತದ ಪ್ರತಿನಿಧಿಯಾದರು.

1959ರಲ್ಲಿ ಕಾಂಗ್ರೆಸ್ಸಿನಿಂದ ಹೊರಬಂದ ಸುಚೇತಾ ಕೃಪಲಾನಿ ಮೊದಲಿಗೆ ಕಿಸಾನ್ ಮಜದೂರ್ ಪ್ರಜಾಪಕ್ಷ, ಅನಂತರ ಪ್ರಜಾ ಸೋಷಲಿಸ್ಟ್ ಪಕ್ಷಗಳ ಸದಸ್ಯರಾಗಿದ್ದರು. 1957ರಲ್ಲಿ ಇವರು ಮತ್ತೆ ಕಾಂಗ್ರೆಸ್ ಸೇರಿದರು.

1948-50 ಮತ್ತು 1960-67ರ ಅವಧಿಗಳಲ್ಲಿ ಉತ್ತರ ಪ್ರದೇಶ ವಿಧಾನಸಭೆಗೆ ಹಾಗೂ 1952-60 ಮತ್ತು 1967-70ರ ಅವಧಿಗಳಲ್ಲಿ ಲೋಕಸಭೆಗೆ ಸುಚೇತಾ ಕೃಪಲಾನಿ ಸದಸ್ಯರಾಗಿದ್ದರು. ತುರ್ಕಿಗೆ ಹೋದ ಲೋಕಸಭಾ ಸದಸ್ಯರ ನಿಯೋಗಕ್ಕೆ ನಾಯಕಿಯಾಗಿದ್ದರು. ಕೇಂದ್ರ ಸರಕಾರದಲ್ಲಿ ಕಾರ್ಮಿಕ ಮತ್ತು ಸಣ್ಣ ಪ್ರಮಾಣದ ಕೈಗಾರಿಕೆಗಳ ಮಂತ್ರಿಯಾಗಿದ್ದರು. 1963ರಿಂದ 1967ರ ವರೆಗೆ ಉತ್ತರ ಪ್ರದೇಶದ ಮುಖ್ಯಮಂತ್ರಿಯಾಗಿದ್ದರು.

ಸುಚೇತಾ ಕೃಪಲಾನಿ ರಾಷ್ಟ್ರೀಯ ಗಾಂಧೀ ಸ್ಮಾರಕ ನಿಧಿಗೆ ಉಪಾಧ್ಯಕ್ಷರು.

ಕಾಂಗ್ರೆಸ್ ಇಬ್ಭಾಗವಾದಾಗ, ಸುಚೇತಾ ಸಂಸ್ಥಾ ಕಾಂಗ್ರೆಸ್ಸಿನಲ್ಲಿ ಉಳಿದರು.

ಖ್ಯಾತ ರಾಜಕಾರಣಿ ಆಚಾರ್ಯ ಜೆ. ಬಿ. ಕೃಪಲಾನಿ ಇವರ ಪತಿ.

ನೋಡಿ : ಜೆ. ಬಿ. ಕೃಪಲಾನಿ

ಸುನೀತಿ ಕುಮಾರ ಚಟರ್ಜಿ

ಆರ್ಯರ ಭಾಷೆಯ ಮೂಲ : ಭಾರತೀಯ ಸಂಸ್ಕೃತಿಯ ಮೇಲೆ ಆರ್ಯರ ಪ್ರಭಾವ : ಸಂಸ್ಕೃತ, ಬಂಗಾಳಿ, ಹಿಂದಿ ಮತ್ತು ದ್ರಾವಿಡ ಭಾಷಾಶಾಸ್ತ್ರ —ಈ ಎಲ್ಲ ಕ್ಷೇತ್ರಗಳಲ್ಲಿ ಗಮನಾರ್ಹ ಕೆಲಸ ಮಾಡಿದವರು. ಡಾ. ಸುನೀತಿ ಕುಮಾರ ಚಟರ್ಜಿ.



ಸಾಹಿತ್ಯ ಅಕಾದೆಮಿ : ಚಟರ್ಜಿ

1890ರಲ್ಲಿ ಕಲ್ಕತ್ತೆಯ ಶಿವಪುರದಲ್ಲಿ ಅವರ ಜನನ. 1913ರಲ್ಲಿ ಸ್ನಾತಕೋತ್ತರ ಶಿಕ್ಷಣ ಮುಗಿಸಿದರು ; ಹಳೆಯ ಹಾಗೂ ಮಧ್ಯಕಾಲೀನ ಟ್ಯೂಟೋನಿಕ್ ಇಂಗ್ಲಿಷ್ ಮತ್ತು ಭಾಷಾಶಾಸ್ತ್ರಗಳು ಅವರ ವಿಶೇಷ ವಿಷಯಗಳಾಗಿದ್ದುವು. ಅನಂತರ ಲಂಡನ್ ವಿಶ್ವವಿದ್ಯಾನಿಲಯದಲ್ಲಿ 'ಭಾರತಾರ್ಯ ಭಾಷಾಶಾಸ್ತ್ರ ಹಾಗೂ ಬಂಗಾಳೀ ಭಾಷೆಯ ಉಗಮ ಮತ್ತು ಬೆಳವಣಿಗೆ' ಎಂಬ ವಿಷಯವಾಗಿ ಪ್ರೌಢ ಪ್ರಬಂಧ ಬರೆದು ಡಿ. ಲಿಟ್ ಪದವಿಗಳಿಸಿದರು. 1922ರಲ್ಲಿ ಭಾರತಕ್ಕೆ ಮರಳಿದ ಮೇಲೆ ಕಲ್ಕತ್ತಾ ವಿಶ್ವವಿದ್ಯಾನಿಲಯದಲ್ಲಿ ಶಿಕ್ಷಕ ವೃತ್ತಿ ಕೈಗೊಂಡರು.

ಹಲವು ವಿದೇಶೀ ಭಾಷೆಗಳು ಚಟರ್ಜಿಯವರಿಗೆ ಕರತಲಾಮಲಕ. ವಿವಿಧ ಭಾಷೆಗಳಿಂದ ಕೃತಿಗಳನ್ನು ಭಾಷಾಂತರಿಸಿದ್ದಾರೆ. ಅವರ ಅತ್ಯಧಿಕ ಸಾಹಿತ್ಯ ಸೃಷ್ಟಿಯಾಗಿರುವುದು ಹಿಂದೂ ದರ್ಶನ, ಕಲೆ ಹಾಗೂ ಸಂಸ್ಕೃತಿಗಳ ವಿಷಯವಾಗಿ. ವೈದಿಕ ಪ್ರಪಂಚ, ಮಧ್ಯಕಾಲೀನ ಭಾರತದ ಭಾಷಾವಾರು ಪ್ರದೇಶಗಳು ಮತ್ತು ಇಸ್ಲಾಂ ಸಂಸ್ಕೃತಿ —ಇವು ಭಾರತೀಯ ಭಾಷೆಗಳು ರೂಪುಗೊಳ್ಳುವುದರಲ್ಲಿ ಮುಖ್ಯ ಪಾತ್ರ ವಹಿಸಿವೆ ಎಂದು ಅವರು ಅಭಿಪ್ರಾಯಪಡುತ್ತಾರೆ. 10ನೆಯ ಶತಮಾನಕ್ಕೂ ಹಿಂದಿನ ಸಿಂಧೀ ಭಾಷೆ, ಸಿಂಧ್ ಪ್ರದೇಶದಲ್ಲಿ 8ನೆಯ ಶತಮಾನಕ್ಕೂ ಹಿಂದೆ ಅರಬರ ಆಳ್ವಿಕೆ, ಹಳೆಯ ಸಿಂಧೀ ಭಾಷೆಯಲ್ಲಿ 'ಮಹಾಭಾರತ'ದ ಭಾಷಾಂತರ ಮುಂತಾದ ಅಂಶಗಳನ್ನು ಚಟರ್ಜಿಯವರು ಸಂಶೋಧಿಸಿದ್ದಾರೆ.

ಹಲವು ಅಂತರರಾಷ್ಟ್ರೀಯ ಭಾಷಾಶಾಸ್ತ್ರ ಸಂಸ್ಥೆಗಳು ತಮ್ಮ ಸದಸ್ಯತ್ವ ನೀಡಿ ಚಟರ್ಜಿಯವರನ್ನು ಗೌರವಿಸಿವೆ. ಇವರು ಲಂಡನಿನಲ್ಲಿರುವ ಅಂತರರಾಷ್ಟ್ರೀಯ ಭಾಷಾಧ್ವನಿಶಾಸ್ತ್ರ ಸಂಸ್ಥೆ ಮತ್ತು ಕಲ್ಕತ್ತೆಯಲ್ಲಿರುವ ಏಷ್ಯಾಟಿಕ್ ಸೊಸೈಟಿಯ ಅಧ್ಯಕ್ಷರು. 1963ರಲ್ಲಿ ಭಾರತ ಸರಕಾರ ಪದ್ಮವಿಭೂಷಣ ಪ್ರಶಸ್ತಿ ನೀಡಿ ಇವರನ್ನು ಪುರಸ್ಕರಿಸಿತು. ಅವರೀಗ ಭಾರತದಲ್ಲಿ ಮಾನವಿಕ ವಿಜ್ಞಾನದ ರಾಷ್ಟ್ರೀಯ ಪ್ರಾಧ್ಯಾಪಕರು, ಕೇಂದ್ರ ಸಾಹಿತ್ಯ ಅಕಾದೆಮಿಯ ಅಧ್ಯಕ್ಷರು.

ಅವರು ಅಧ್ಯಯನಶೀಲ ವ್ಯಕ್ತಿ. ನಿರಂತರ ಪ್ರವಾಸದಲ್ಲೇ ಇರುವ ಚಟರ್ಜಿಯವರ ಬಳಿ ಬಹಳ ಪುಸ್ತಕಗಳು ಇದ್ದೇ ಇರುತ್ತವೆ. ಹಿಂದಿನ ಕಾಲದಂತೆ ಪಾಂಡಿತ್ಯವಿದ್ದರೂ ಅವರು ನಿರಾಡಂಬರರು.

ಸುನೀತಿ ಚೌಧುರಿ

1931 ಡಿಸೆಂಬರ್ 14. ಇಬ್ಬರು ಬಾಲಕಿಯರು ಗಾಡಿಯಲ್ಲಿ ಕುಳಿತು ಕಲೆಕ್ಟರರ ಬಂಗಲೆಗೆ ಬಂದರು. ಸಂದರ್ಶನ ಅಪೇಕ್ಷಿಸಿ ಕೇಳಿದಾಗ, ಆಗುವುದಿಲ್ಲ ಎಂಬ ಉತ್ತರ ಬಂದಿತು. ಮತ್ತೆ ಪ್ರಯತ್ನಿಸಿದರು. ಕಲೆಕ್ಟರ್ ಸ್ಟೀವನ್ಸ್ ಹೊರಗೆ ಬಂದರು. ಕಲೆಕ್ಟರ್ ಒಬ್ಬ ಬಾಲಕಿಯೊಂದಿಗೆ ಮಾತಾಡುತ್ತಿದ್ದಾಗ ಎರಡನೆಯವಳು ಬಟ್ಟೆಯ ಮರೆಯಿಂದ ಬಂದೂಕು ತೆಗೆದು ಅವರತ್ತ ಹಾರಿಸಿದಳು. ಗುಂಡಿನ ಶಬ್ದ ಕೇಳಿ ಧಾವಿಸಿ ಬಂದ ಸಿಬ್ಬಂದಿಯವರು ಹುಡುಗಿಯರನ್ನು ಹಿಡಿದು ಚೆನ್ನಾಗಿ ಥಳಿಸಿದರು.

ಸ್ಟೀವನ್ಸರತ್ತ ಗುಂಡು ಹಾರಿಸಿದ ಹುಡುಗಿ, ಸುನೀತಿ ಚೌಧುರಿ : ಇನ್ನೊಬ್ಬಾಕೆ ಶಾಂತಿ ಘೋಷ್.

ಸುನೀತಿ ಜನಿಸಿದ್ದು 1917ರಲ್ಲಿ. ಕೊಮಿಲ್ಲದ ಫೈಜುನ್ನೀಸ ಬಾಲಕಿಯರ ಶಾಲೆಯಲ್ಲಿ ಓದುತ್ತಿದ್ದರು. ಚಿಕ್ಕ ವಯಸ್ಸಿಗೇ ಕ್ರಾಂತಿದಳ ಸೇರಿದರು. ಕಠಾರಿ ಚಲಾಯಿಸುವುದನ್ನೂ ಬಂದೂಕು ಉಪಯೋಗಿಸುವುದನ್ನೂ ಸುನೀತಿ ಚೌಧುರಿ ಅಭ್ಯಸಿಸಿದರು.



ಬಂದೂಕು ಕನ್ಯೆ : ಸುನೀತಿ

ಸ್ಟೀವನ್ಸರ ಕೊಲೆಯ ಅನಂತರ ವಿಚಾರಣೆ ನಡೆದು, ಆಕೆಗೆ ಜೀವಾವಧಿ ಶಿಕ್ಷೆ ಆಯಿತು. ಸೆರೆಮನೆಯಲ್ಲಿ ಅಪರಾಧಿಗಳಿಗೆ ತೋರಿಸುವ ಕಠಿಣತರ ವರ್ತನೆಯನ್ನೇ ಇವರ ಬಗೆಗೂ ತೋರಿಸಿದ್ದರು.

ಸಾರ್ವಜನಿಕರ ಒತ್ತಾಯದಿಂದಲೂ ಗಾಂಧೀಜಿ, ರವೀಂದ್ರನಾಥ ಠಾಕೂರರ ಯತ್ನದಿಂದಲೂ 1939ರಲ್ಲಿ ಈಕೆಯ ಬಿಡುಗಡೆಯಾಯಿತು. ಅನಂತರ ಸುನೀತಿ ಚೌಧುರಿ ಶಿಕ್ಷಣ ಮುಂದುವರಿಸಿ ವೈದ್ಯರಾದರು.

ನೋಡಿ : ಶಾಂತಿಘೋಷ್

ಸುಪ್ರೀಂ ಕೋರ್ಟ್

ನೋಡಿ : ವರಿಷ್ಠ ನ್ಯಾಯಾಲಯ

ಸುಬ್ರಹ್ಮಣ್ಯ ಭಾರತಿ

ನೋಡಿ : ಸಂಪುಟ ೫

ಸುಭಾಷಚಂದ್ರ ಬೋಸ್

ಭಾರತ ಸ್ವಾತಂತ್ರ್ಯಕ್ಕಾಗಿ ನಿರಂತರ ಹೋರಾಟ, ತ್ಯಾಗ ಇವು ಸುಭಾಷರ ಜೀವನದ ಉಸಿರು. ಕಾಂಗ್ರೆಸ್ಸಿನ ಅನುಯಾಯಿಗಳಾಗಿದ್ದರೂ ಭಾರತ ಸ್ವಾತಂತ್ರ್ಯ ಸಾಧನೆಯ ಬಗೆಗೆ ಅವರ ದೃಷ್ಟಿ ಉಳಿದೆಲ್ಲ ಕಾಂಗ್ರೆಸ್ ನಾಯಕರಿಗಿಂತ ಭಿನ್ನವಾಗಿತ್ತು. ಗಾಂಧೀಜಿ ಪ್ರತಿಪಾದಿಸಿದ್ದ ಅಹಿಂಸಾತ್ಮಕ

ಹೋರಾಟ ಮಾರ್ಗ ಅವರಿಗೆ ಒಪ್ಪಿಗೆಯಾಗಿರಲಿಲ್ಲ. ಬ್ರಿಟಿಷ್ ವಿರೋಧಿ ರಾಷ್ಟ್ರಗಳಿಂದ ಅದಷ್ಟು ನೆರವು ಪಡೆದು ಬ್ರಿಟಿಷರ ಮೇಲೆ ಯುದ್ಧ ಹೂಡಿ ಭಾರತ ಸ್ವಾತಂತ್ರ್ಯವನ್ನು ಕೈಗೂಡಿಸಿಕೊಳ್ಳಬೇಕೆಂಬುದು ಅವರ ದೃಷ್ಟಿ. ಈ ನಿಲುವು ರಾಷ್ಟ್ರಹಿತಕಾರಿಯಲ್ಲ ಎಂದು ಬಗೆದು, ಸುಭಾಷರ ದೃಷ್ಟಿಯನ್ನು ಬದಲಾಯಿಸಲು ಉಳಿದವರು ಪ್ರಯತ್ನಿಸಿದರು; ಅವರನ್ನು 1938ರ ಹರಿಪುರ ಕಾಂಗ್ರೆಸ್ ಅಧಿವೇಶನಕ್ಕೆ ಅಧ್ಯಕ್ಷರನ್ನಾಗಿ ಮಾಡಿದರು. ಆದರೆ ಸುಭಾಷರು ತಮ್ಮ ನಿಲುವನ್ನು ಬದಲಿಸಲಿಲ್ಲ. ಅವರ ಮತ್ತು ಇತರ ಕಾಂಗ್ರೆಸ್ ನಾಯಕರ ನಡುವೆ ಭಿನ್ನಾಭಿಪ್ರಾಯಗಳು ಬೆಳೆದುವು.

1939ರ ತ್ರಿಪುರ ಕಾಂಗ್ರೆಸ್ ಅಧಿವೇಶನಕ್ಕೆ ಗಾಂಧೀಜೀ ಪಟ್ಟಾಭಿ ಸೀತಾರಾಮಯ್ಯನವರನ್ನು ಸೂಚಿಸಿದರು. ಸುಭಾಷರೂ ಸ್ಪರ್ಧಿಸಿದರು. ಕಾಂಗ್ರೆಸ್ ಅವರಿಗೆ ಮರಳಿ ಪಟ್ಟಕಟ್ಟಿತು. ತುಂಬಾ ಅನಾರೋಗ್ಯ ಸ್ಥಿತಿಯಲ್ಲಿದ್ದರೂ ಅಧ್ಯಕ್ಷತೆ ವಹಿಸಿದರು. ಆದರೆ 1939ರ ಏಪ್ರಿಲ್‌ನಲ್ಲಿ ಸುಭಾಷರು ತಮ್ಮ ಕಾಂಗ್ರೆಸ್ ಅಧ್ಯಕ್ಷತೆಗೆ ರಾಜಿನಾಮೆ ಕೊಡಬೇಕಾಯಿತು. ಅನಂತರ ಅವರು ಕಾಂಗ್ರೆಸ್ಸಿನಲ್ಲಿದ್ದ ವಾಮಪಕ್ಷೀಯರನ್ನು ಒಟ್ಟುಗೂಡಿಸುವ ಉದ್ದೇಶದಿಂದ 'ಫಾರ್ವರ್ಡ್ ಬ್ಲಾಕ್' ಎಂಬ ರಾಜಕೀಯ ಪಕ್ಷವನ್ನು ಸ್ಥಾಪಿಸಿದರು. ಕಾಂಗ್ರೆಸ್ ಅನುಸರಿಸುತ್ತಿದ್ದ ಗಾಂಧೀಜೀಯ ತತ್ತ್ವ, ಕಾರ್ಯಕ್ರಮಗಳನ್ನು ಈ ಪಕ್ಷ ವಿರೋಧಿಸಿತು.

ಕೆಲವು ತಿಂಗಳಲ್ಲೇ ಅವರನ್ನು ಸರಕಾರ ಬಂಧಿಸಿತು. ಅವರು ಉಪವಾಸ ಸತ್ಯಾಗ್ರಹವನ್ನು ಕೈಗೊಂಡಾಗ, ಸೆರೆಮನೆಯಿಂದ ಬಿಡುಗಡೆ ಮಾಡಿ ಕಲ್ಕತ್ತೆಯಲ್ಲಿದ್ದ ಅವರ ಮನೆಯಲ್ಲಿಯೇ ಗೃಹಬಂಧನದಲ್ಲಿಟ್ಟಿತು. ಹೀಗೆ ಬಂಧನದಲ್ಲಿದ್ದಾಗ ಸುಭಾಷರು 1941 ಜನವರಿಯಲ್ಲಿ ಬಂಧನದಿಂದ ತಪ್ಪಿಸಿಕೊಂಡು ಗುಪ್ತವಾಗಿ ಭಾರತದ ಗಡಿಯನ್ನು ದಾಟಿ ಅಫ್ಘಾನಿಸ್ತಾನ ಸೇರಿ ಜರ್ಮನಿಗೆ ಹೋದರು. ಜರ್ಮನಿ, ಜಪಾನುಗಳ ಸಹಾಯ ಪಡೆದು ಸಿಂಗಪುರಕ್ಕೆ ಬಂದು ಆಜಾದ್ ಹಿಂದ್ ಫೌಜ್ ಸ್ಥಾಪಿಸಿದರು. ಆ ಸೇನೆ ಭಾರತದ ಪೂರ್ವಗಡಿಯ ಮೇಲೆ ದಾಳಿ ಮಾಡಿತು. 1945ರಲ್ಲಿ ಸುಭಾಷ್ ವಿಮಾನಾಪಘಾತವೊಂದರಲ್ಲಿ ಮರಣ ಹೊಂದಿದ ವಾರ್ತೆ ಬಂತು. ಈ ಅಪಘಾತದಲ್ಲಿ ಅವರು ಸತ್ತರೇ, ಇಲ್ಲವೇ ಎಂಬ ಬಗೆಗೆ ಇನ್ನೂ ಭಿನ್ನಾಭಿಪ್ರಾಯಗಳಿವೆ.

ಸಮರ್ಪಣ : ಸುಭಾಷ ಚಂದ್ರ





ಸುಭಾಷರ ಮಗಳು ಅನಿತಾ ಬೋಸ್ ಮತ್ತು ಸುಭಾಷರ ಪತ್ನಿ

ಸುಭಾಷಿತ

ನೋಡಿ : ಸಂಪುಟ ೫

ಸುಮತಿ ಬೆನ್ ಮುರಾರಜೀ

ಭಾರತದ ಹಡಗು ಸಂಸ್ಥೆಗಳಲ್ಲಿ ಪ್ರಥಮ ಸ್ಥಾನ ಹೊಂದಿದ ಸಿಂಧಿಯಾ ಸ್ಟೀಮ್ ನೇವಿಗೇಷನ್ ಕಂಪೆನಿಯ ಕಾರ್ಯನಿರ್ದೇಶಕರಾದವರು ಸುಮತಿ ಬೆನ್ ಮುರಾರಜೀ. ರಾಜಕೀಯದಲ್ಲೂ ಇವರು ಪ್ರಮುಖ ವ್ಯಕ್ತಿ.

ಜನನ ಮುಂಬಯಿಯಲ್ಲಿ, 1909 ಮಾರ್ಚ್ 13ರಂದು. ಶಾಂತಿ ಕುಮಾರ್ ಅವರನ್ನು ವಿವಾಹವಾದರು. 1942ರಲ್ಲಿ ಈಕೆ 'ಚಲೇಜಾವ್' ಚಳುವಳಿಯಲ್ಲಿ ಭಾಗವಹಿಸಿದರು.

ಸಿಂಧಿಯಾ ಮಾತ್ರವಲ್ಲದೆ ಇತರ ಕೆಲವು ಹಡಗು ಸಂಸ್ಥೆಗಳ ಕಾರ್ಯನಿರ್ದೇಶನ ಸಂಸ್ಥೆಗಳಲ್ಲೂ ಸುಮತಿ ಬೆನ್ ಮುರಾರಜೀ ಸದಸ್ಯೆಯಾದರು. ಭಾರತ ಮತ್ತು ಯೂರೋಪಿನಲ್ಲಿರುವ ಹೆಚ್ಚು ಕಡಮೆ ಎಲ್ಲ ಪ್ರಮುಖ ಬಂದರುಗಳನ್ನೂ ಸಂದರ್ಶಿಸಿದರು. ಹಡಗುಸಾರಿಗೆಯ ಸಂಬಂಧದಲ್ಲಿ ಅಂತರರಾಷ್ಟ್ರೀಯ ಸಮ್ಮೇಳನಗಳಲ್ಲಿ ಭಾಗವಹಿಸಲು ಹಲವು ಬಾರಿ ವಿದೇಶಗಳಿಗೆ ಹೋಗಿ ಬಂದಿದ್ದಾರೆ. ಇವರು ಭಾರತದ ರಾಷ್ಟ್ರೀಯ ಉಗಿ ಹಡಗು ಮಾಲಿಕರ ಸಂಘದ ಅಧ್ಯಕ್ಷರಾಗಿ ಐದು ಬಾರಿ ಆಯ್ಕೆಯಾದರು. ದೆಹಲಿಯಲ್ಲಿ ಎರಡು ಬಾರಿ ಹಡಗು ಸಾರಿಗೆ ಮತ್ತು ನಿರ್ಮಾಣ ಕುರಿತ ವಸ್ತು ಪ್ರದರ್ಶನಗಳು ಇವರ ಮೇಲ್ವಿಚಾರಣೆಯಲ್ಲಿ ಏರ್ಪಾಡಾದುವು.



ರಾಷ್ಟ್ರೀಯ ಹಡಗುಸಾರಿಗೆ ಮಂಡಲಿ, ರಫ್ತು ಅಭಿವೃದ್ಧಿ ಮಂಡಲಿ, ಪ್ರವಾಸ ಅಭಿವೃದ್ಧಿ ಸಮಿತಿ, ಅಖಿಲ ಭಾರತ ಕುಶಲಕಲಾ ಮಂಡಲಿ ಮುಂತಾದ

ಕಾರ್ಯ ನಿರ್ದೇಶನ :
ಸುಮತಿ ಮುರಾರಜೀ

ಅನೇಕ ಸಂಘ-ಸಂಸ್ಥೆಗಳಿಗೆ ಸುಮತಿ ಬೆನ್ ಮುರಾರಜೀ ಸದಸ್ಯರು. [illegible] ಉಪಾಧ್ಯಕ್ಷರೂ ಆಗಿದ್ದಾರೆ.

[illegible] ಗ್ರಂಥಗಳನ್ನೂ ಭಾರತದ ಪುರಾತನ ವಸ್ತುಗಳನ್ನೂ ಸಂಗ್ರಹಿಸುವುದು ಇವರ ಹವ್ಯಾಸ.

1971ರಲ್ಲಿ ಭಾರತ ಸರಕಾರ ಸುಮತಿ ಬೆನ್ ಮುರಾರಜೀ ಅವರನ್ನು ಪದ್ಮವಿಭೂಷಣ ಪ್ರಶಸ್ತಿಯಿತ್ತು ಗೌರವಿಸಿತು.

ಸುಮಿತ್ರಾನಂದನ ಪಂತ್

ಹಿಂದೀ ಕಾವ್ಯದಲ್ಲಿ ಛಾಯಾವಾದ(ಪ್ರತಿಮಾವಾದ)ವನ್ನು ಆರಂಭಿಸಿದವರು, ಸುಮಿತ್ರಾನಂದನ ಪಂತ್.



ಛಾಯಾವಾದ : ಸುಮಿತ್ರಾನಂದನ

'ಪಲ್ಲವ', 'ಗುಂಜನ್', 'ಯುಗವಾಣಿ', 'ಗ್ರಾಮ್ಯ', 'ಯುಗಾಂತ್' 'ಲೋಕಯಾತನ್' ಇವರ ಕವನ ಸಂಗ್ರಹಗಳು. 'ಜ್ಯೋತ್ಸ್ನಾ' ಎಂಬ ನಾಟಕ, 'ಹಾರ' ಎಂಬ ಕಾದಂಬರಿ ಮತ್ತು ಹಲವು ಸಣ್ಣ ಕಥೆಗಳನ್ನೂ ಬರೆದಿದ್ದಾರೆ. ವಿಮರ್ಶಾತ್ಮಕ ಪ್ರಬಂಧಗಳ ಎರಡು ಹೊತ್ತಗೆಗಳು ಪ್ರಕಟವಾಗಿವೆ.

ಜನನ ಉತ್ತರ ಪ್ರದೇಶದ ಕೌಸಾನಿಯಲ್ಲಿ, 1900 ಮೇ 20ರಂದು. ಅಲಹಾಬಾದ್ ವಿಶ್ವವಿದ್ಯಾನಿಲಯದಲ್ಲಿ ಪ್ರೌಢ ವಿದ್ಯಾಭ್ಯಾಸ. ಅಸಹಕಾರ ಚಳುವಳಿ ನಡೆದಿದ್ದಾಗ ವಿದ್ಯಾಭ್ಯಾಸ ನಿಲ್ಲಿಸಿಬಿಟ್ಟರು.

14 ವರ್ಷಕ್ಕೇ ಕವನ ರಚನೆಗೆ ತೊಡಗಿದ ಸುಮಿತ್ರಾನಂದನ ಪಂತರ ಮೊದಲ ಪುಸ್ತಕ ಅವರ 22ನೆಯ ವರ್ಷದಲ್ಲೇ ಪ್ರಕಟವಾಯಿತು.

1961ರಲ್ಲಿ ಅವರಿಗೆ ಸಾಹಿತ್ಯ ಅಕಾದೆಮಿ ಪ್ರಶಸ್ತಿ ಬಂತು. 1962ರಲ್ಲಿ ಪದ್ಮವಿಭೂಷಣ ಪ್ರಶಸ್ತಿ ದೊರೆಯಿತು. ಹಿಂದೀ ಸಾಹಿತ್ಯ ಸಮ್ಮೇಳನದಲ್ಲಿ 'ಸಾಹಿತ್ಯ ವಾಚಸ್ಪತಿ' ಬಿರುದು ಲಭಿಸಿದೆ. ನಾಗರಿಪ್ರಚಾರಿಣೀ ಸಭೆ ಮತ್ತು ಉತ್ತರ ಪ್ರದೇಶ ಸರಕಾರದ ಪ್ರಶಸ್ತಿಗಳೂ ಬಂದಿವೆ. 'ಸೋವಿಯೆತ್ ಲ್ಯಾಂಡ್'ನ ನೆಹರೂ ಪ್ರಶಸ್ತಿಯೂ ಸಂದಿದೆ.

ಆಕಾಶವಾಣಿಯ ಹಿಂದೀ ವಿಭಾಗದ ಸಲಹೆಗಾರರಾಗಿದ್ದಾರೆ. ವಿಕ್ರಮ ಮತ್ತು ಗೋರಖ್‌ಪುರ ವಿಶ್ವವಿದ್ಯಾನಿಲಯಗಳು ಇವರಿಗೆ ಡಿ.ಲಿಟ್. ಪ್ರಶಸ್ತಿ ನೀಡಿವೆ.

ಪಂತ್ ಅವರು 1969ರಲ್ಲಿ 'ಚಿದಂಬರ' ಕೃತಿಗಾಗಿ ಜ್ಞಾನಪೀಠ ಪಾರಿತೋಷಿಕ ಪಡೆದರು.

ಸುರಪುರ ವೆಂಕಟಪ್ಪನಾಯಕ

ಗುಲ್ಬರ್ಗ ಜಿಲ್ಲೆಯಲ್ಲಿ ಇರುವ ಸುರಪುರ, ತಾಲ್ಲೂಕಿನ ಮುಖ್ಯ ಸ್ಥಳ. ಅದರ ಮೊದಲಿನ ಹೆಸರು ಶೋರಪುರ. ಅದು ಬೇಡ ಅರಸರ ರಾಜಧಾನಿಯಾಗಿತ್ತು. ವೆಂಕಟಪ್ಪನಾಯಕನ ಪೂರ್ವಜರು ಮೂಲತಃ ಮೈಸೂರು ಸಂಸ್ಥಾನದವರು. ಸುರಪುರದ ಬೇಡರು ಶೂರರೂ ಸ್ವಾತಂ ಪ್ರಿಯರೂ ಸ್ವಾಭಿಮಾನಿಗಳೂ ಆಗಿದ್ದರು.

ನಾಯಕವಂಶದ ಕೃಷ್ಣಪ್ಪನಾಯಕ 1841ರಲ್ಲಿ ತೀರಿಕೊಂಡಾಗ. ಅ ಮಗ ವೆಂಕಟಪ್ಪನಾಯಕ ಏಳು ವರ್ಷದ ಬಾಲಕ. ಆ ಸಮಯ ಆಂಗ್ ಮತ್ತು ನಿಜಾಮನ ಸುಲಿಗೆಯಿಂದ ರಾಜ್ಯದ ಬೊಕ್ಕಸ ಬರಿದಾಗಿತ್ತು ವೆಂಕಟಪ್ಪನಾಯಕನ ತಾಯಿ ಈಶ್ವರಮ್ಮ ಇದೇ ಕಾರಣಕ್ಕೆ ಆಂಗ್ಲರ ಮ ಕುಪಿತಳಾಗಿದ್ದಳು.

ಇಂಗ್ಲಿಷರು ವೆಂಕಟಪ್ಪನಾಯಕನ ಚಿಕ್ಕಪ್ಪ ಪೆದ್ದನಾಯಕನ ಪಕ್ಷವ ರಾಜ್ಯಸೂತ್ರವನ್ನು ಕೀಳಬೇಕೆನ್ನುವ ಹವಣಿಕೆಯಲ್ಲಿದ್ದಾಗ, ಮೆಡೋ ಟೇಲರ್ ಎಂಬ ಚಾಣಾಕ್ಷ ಹಾಗೂ ಸಹೃದಯಿ ಆಂಗ್ಲ ಅಧಿಕಾರಿ ಸ ಪುರಕ್ಕೆ ಬಂದು, ರಾಜಕುಮಾರ ವೆಂಕಟಪ್ಪನಾಯಕನ ಪಾಲಕತ್ವ ವಹಿಸಿ ಟೇಲರನು ಚಿಕ್ಕ ದೊರೆಯ ವಿದ್ಯಾಭ್ಯಾಸದ ಹೊಣೆ ಹೊತ್ತ. ಪೆ ನಾಯಕನನ್ನು ಮೇಲಿನ ಆಜ್ಞೆಯಂತೆ ದಿವಾನನೆಂದು ನೇಮಕ ಮಾಡಿ

ಟೇಲರನಿಗೂ ವೆಂಕಟಪ್ಪನಾಯಕನಿಗೂ ಆತ್ಮೀಯತೆ ಬೆಳೆದು, ತ ಮಗನ ಸಂಬಂಧವಂತೆ ಆ ಬಾಂಧವ್ಯ ರೂಪುಗೊಂಡಿತು. 1853ರ ವೆಂಕಟಪ್ಪನಾಯಕ ವಯಸ್ಕನಾದಾಗ ಕಂಪನಿ ಸರಕಾರದ ಆಜ್ಞೆಯಂ ಟೇಲರ್ ವೆಂಕಟಪ್ಪನಿಗೆ ಎಲ್ಲ ಆಡಳಿತ ಸೂತ್ರ ವಹಿಸಿಕೊಟ್ಟು ಹೃದ ಬಾದಿಗೆ ತೆರಳಿದ.

ಇನ್ನೂ ಕೆಲ ವರ್ಷಗಳ ವರೆಗೆ ಬ್ರಿಟಿಷ್ ರಾಜಕೀಯ ಸಲಹೆಗಾರನ ನಿಯಮಿಸಿಕೊಳ್ಳಬೇಕೆಂದು ವೆಂಕಟಪ್ಪನಾಯಕನಿಗೆ ಗವರ್ನರ್ ಜನರ ಡಾಲ್‌ಹೌಸಿಯ ಆಜ್ಞಾಪತ್ರ ಬಂದಿತು. ಇದರಿಂದ ವರ್ಷಕ್ಕೆ 20,000ರ ಹೆಚ್ಚಿಗೆ ವೆಚ್ಚವಾಗುತ್ತಿತ್ತು. ಅಷ್ಟು ಮೊತ್ತದ ವಾರ್ಷಿಕ ವೆಚ್ಚವು ತನ್ನಿಂ ಅಸಾಧ್ಯ ಎಂದು ವೆಂಕಟಪ್ಪನಾಯಕ ಸ್ಪಷ್ಟವಾಗಿ ತಿಳಿಸಿದ.

1857ರಲ್ಲಿ ಉತ್ತರ ಭಾರತದಲ್ಲಿ ಹೊತ್ತಿದ ಕ್ರಾಂತಿಯ ಕಿಡಿ ಕರ್ನಾಟಕಕ ಸಿಡಿಯಿತು. ಆಗ ವೆಂಕಟಪ್ಪನಾಯಕ 23 ವಯಸ್ಸಿನ ಬಿಸಿರಕ್ತದ ತರು ಮೊದಲಿನಿಂದಲೂ ಬ್ರಿಟಿಷರ ಮೇಲೆ ಕೆಂಡ ಕಾರುತ್ತಿದ್ದ ಆತ ಅವ ಕಪಿಮುಷ್ಟಿಯಿಂದಲೂ ನಿಜಾಮನಿಂದಲೂ ಪಾರಾಗಲು ಸಿದ್ಧನಾ ಅರಬ ಮತ್ತು ರೋಹಿಲ ಸೈನ್ಯವನ್ನು ಅಣಿಗೊಳಿಸತೊಡಗಿದ. ಬಂ ಯದ ಬಗೆಗೆ ಶಂಕೆಯುಂಟಾಗಿ ವಸ್ತುಸ್ಥಿತಿ ತಿಳಿಯಲು ಡಿಸೆಂಬರ್ 1857ರ ಹೈದರಾಬಾದಿನಿಂದ ಕ್ಯಾಪ್ಟನ್ ಕ್ಯಾಂಪ್‌ಬೆಲ್ ಸುರಪುರಕ್ಕೆ ಬಂದ. ಆ ವೆಂಕಟಪ್ಪನ ವಿರೋಧವಾಗಿ ಯಾವ ಪುರಾವೆಯೂ ದೊರೆಯಲಿ ಆದರೂ ಕ್ಯಾಂಪ್‌ಬೆಲ್ ಲಿಂಗಸುಗೂರಿನಿಂದ ಸುರಪುರಕ್ಕೆ ತನ್ನ ಸೈನ ತರಿಸುವ ವ್ಯವಸ್ಥೆ ಮಾಡಿದ.

ಈಗಾಗಲೇ ವೆಂಕಟಪ್ಪನಾಯಕನಿಗೆ ನರಗುಂದ ಬಾಬಾಸಾಹೇ ಮುಂಡರಗಿ ಭೀಮರಾಯರಿಂದ ಕ್ರಾಂತಿಗೆ ಅಣಿಯಾಗುವಂತೆ ಪತ್ರಗಳ ಬಂದಿದ್ದುವು. ಪುಣೆ, ಸತಾರಾ, ಕೊಲ್ಲಾಪುರದವರೂ ಅದೇ ರೀ ತಿಳಿಸಿದ್ದರು. ಲಿಂಗಸುಗೂರು, ಕಲಾದಗಿ, ಕರ್ನೂಲಿನಿಂದ ಬ್ರಿಟಿ ಪಡೆಗಳು ಸುರಪುರದ ಮೇಲೆ ಏರಿಬಂದವು. ಆಗ ಬಾಗನಗೇರಿ ಭೀಮ ರಾಯನೆಂಬುವನು ಮೋಸದಿಂದ ಕೋಟೆಯ ಬಾಗಿಲು ತೆರೆದ. ತಾನ ವೆಂಕಟಪ್ಪನಾಯಕನ ಹತ್ತಿರ ಹೋಗಿ, ತಪ್ಪಿಸಿಕೊಂಡು ಪಾರಾಗುವಂ ಸಲಹೆ ನೀಡಿದ. ವೆಂಕಟಪ್ಪ ಆತನನ್ನು ನಂಬಿ, ಭೀಮರಾಯನ ಜ ಇನ್ನೂ ಕೆಲವರನ್ನು ಸೇರಿಸಿಕೊಂಡು ಪಾರಾಗಿ ಹೋದ. ನಾಯ ಭೀಮರಾಯ ವೆಂಕಟಪ್ಪನ ರತ್ನಾಭರಣಗಳನ್ನು ತೆಗೆದುಕೊಂಡು ಮಾ

ವಾದ. ವೆಂಕಟಪ್ಪನ ಚಿಕ್ಕ ವಯಸ್ಸಿನ ಹೆಂಡತಿ ರಂಗಮ್ಮ ಕೆಲ ಸ್ತ್ರೀಯರೊಂದಿಗೆ ಇನ್ನೊಂದು ಕಡೆಗೆ ಮರೆಯಾದಳು.

ಹೈದರಾಬಾದಿಗೆ ಹೋಗಿ ವೆಂಕಟಪ್ಪನಾಯಕ ಸೈನ್ಯ ಕೂಡಿಸಲು ಯತ್ನಿಸಿದ. ಆಗ ಅಲ್ಲಿ ಸಾಲಾರ್‌ಜಂಗನ ಕೈಗೆ ಸಿಕ್ಕಿ ಬ್ರಿಟಿಷರ ವಶವಾದ. ಈ ಸಂಗತಿ ತಿಳಿದ ಆತನ ಹಿತಚಿಂತಕ ಮೆಡೋಸ್ ಟೇಲರ್ ಮಧ್ಯಸ್ಥಿಕೆ ವಹಿಸಿದ. ಒಳಸಂಚಿನ ವಿವರ ತಿಳಿಯಲು ಬ್ರಿಟಿಷ್ ಅಧಿಕಾರಿಗಳು ಬಹಳ ಪ್ರಯತ್ನಪಟ್ಟರು. "ನಾನು ಜೀವ ಯಾಚನೆ ಮಾಡಲಾರೆ. ನನ್ನನ್ನು ಗಲ್ಲಿಗೆ ಹಾಕದೆ ಬಂಡುಗಾರನಂತೆ ತೋಫಿನ ಬಾಯಿಗೆ ಕೊಡಿರಿ," ಎಂದು ವೆಂಕಟಪ್ಪ ದಿಟ್ಟತನದಿಂದ ಹೇಳಿದ. ವೆಂಕಟಪ್ಪನಾಯಕನ ಮರಣ ದಂಡನೆಯ ಶಿಕ್ಷೆ ನಾಲ್ಕು ವರ್ಷಕ್ಕೆ ಇಳಿಯಿತು. ವೆಂಕಟಪ್ಪನಾಯಕನನ್ನು ಮದರಾಸಿನ ಬಳಿ ಚಿಂಗಲ್ಪೇಟೆಯ ಕೋಟೆಯಲ್ಲಿ ಆತನ ರಾಣಿಯರ ಜೊತೆ ಇಡಬೇಕೆಂದು ಸರಕಾರ ನಿರ್ಧರಿಸಿತು. ನಡುದಾರಿಯಲ್ಲಿ ಸ್ವಾಭಿಮಾನಿಯಾದ ವೆಂಕಟಪ್ಪ, ತನ್ನನ್ನು ಕರೆದೊಯ್ಯುತ್ತಿದ್ದ ಅಧಿಕಾರಿಯ ಪಿಸ್ತೂಲನ್ನು ಕಣ್ಣುತಪ್ಪಿಸಿ ತೆಗೆದುಕೊಂಡು, ಆತ್ಮಹತ್ಯೆ ಮಾಡಿಕೊಂಡ. ಆಗ ವೆಂಕಟಪ್ಪನಾಯಕನಿಗೆ 24 ವರ್ಷ ವಯಸ್ಸು.

ಸುರೇಂದ್ರನಾಥ ಬ್ಯಾನರ್ಜಿ

1883ರಲ್ಲಿ ಕಲ್ಕತ್ತೆಯಲ್ಲಿ 'ಬಂಗಾಳೀ' ಪತ್ರಿಕಾ ಸಂಪಾದಕರಿಗೆ ಎರಡು ತಿಂಗಳ ಸಾದಾ ಶಿಕ್ಷೆಯಾದದ್ದನ್ನು ಪ್ರತಿಭಟಿಸಲು ನ್ಯಾಯಾಲಯಕ್ಕೆ ಅಪಾರ ಜನಸಂಖ್ಯೆಯ ಮೆರವಣಿಗೆ ಬಂದಿತು. ಮುಂದೆ ಪ್ರಮುಖ ಸ್ವಾತಂತ್ರ್ಯ ಹೋರಾಟಗಾರರೆನಿಸಿದ ಅಶುತೋಷ್ ಮುಖರ್ಜಿ, ಚಿತ್ತರಂಜನ ದಾಸ ಮೊದಲಾದವರು, ಆ ಮೆರವಣಿಗೆಯಲ್ಲಿದ್ದ ಬಿಸಿ ರಕ್ತದ ಹುಡುಗರಲ್ಲಿ ಕೆಲವರು. ಬ್ರಿಟಿಷ್ ನ್ಯಾಯಾಧೀಶರೊಬ್ಬರನ್ನು ಟೀಕಿಸಿದ್ದಕ್ಕಾಗಿ ಶಿಕ್ಷೆಗೊಳಗಾದ ಆ ಸಂಪಾದಕರು, ಸುರೇಂದ್ರನಾಥ ಬ್ಯಾನರ್ಜಿ. ಮುಂದೆ 1910ರಲ್ಲಿ ಅಂತರರಾಷ್ಟ್ರೀಯ ಪತ್ರಿಕಾ ಸಮ್ಮೇಳನದಲ್ಲಿ ಭಾರತದ ಪ್ರತಿನಿಧಿಯಾಗಿ ಭಾಗವಹಿಸಿದಾಗ, ಅವರಿಗೆ ಬ್ರಿಟಿಷ್ ಸಂಪಾದಕರೊಬ್ಬರು ಕೊಟ್ಟ ಹೆಸರು, 'ಸರೆಂಡರ್—ನಾಟ್ (ಮಣಿಯದ) ಬ್ಯಾನರ್ಜಿ'.

1848ರ ನವೆಂಬರ್ 10ರಂದು ಸುರೇಂದ್ರನಾಥರ ಜನನ. ತಂದೆ ದುರ್ಗಾಚರಣ ಬ್ಯಾನರ್ಜಿ ಕಲ್ಕತ್ತೆಯ ಪ್ರಸಿದ್ಧ ಡಾಕ್ಟರು. 20ನೆಯ ವಯಸ್ಸಿನಲ್ಲಿ ಬಿ.ಎ. ಪದವೀಧರರಾದ ಅನಂತರ ಐ.ಸಿ.ಎಸ್. (ಇಂಡಿಯನ್ ಸಿವಿಲ್ ಸರ್ವಿಸ್) ಪರೀಕ್ಷೆಯಲ್ಲಿ ಭಾಗವಹಿಸಲು ಸುರೇಂದ್ರನಾಥರು ಇಂಗ್ಲೆಂಡಿಗೆ ತೆರಳಿದರು. ಜನ್ಮದಿನ ದಾಖಲೆ ಸರಿಯಾಗಿಲ್ಲ ಎಂದು, ಪರೀಕ್ಷಾರ್ಥಿಯಾಗಲು ಅವಕಾಶ ದೊರೆಯಲಿಲ್ಲ. ಅದರ ವಿರುದ್ಧ ದೂರುಕೊಟ್ಟು, ನ್ಯಾಯಾಲಯದಲ್ಲಿ ಗೆದ್ದು, ಪರೀಕ್ಷೆಯಲ್ಲಿ (1869) ಉತ್ತೀರ್ಣರಾದರು.

ಮುಂದೆ ಅಧಿಕಾರ ನಿರ್ವಹಣೆ ಸರಿಯಾಗಿಲ್ಲವೆಂಬ ಆರೋಪ ಬಂತು. [illegible] ಸರಕಾರಕ್ಕೆ [illegible] ಹಾಕಿದರು. [illegible] 1874ರಲ್ಲಿ ಅವರು ಅಧಿಕಾರದಿಂದ ವಜಾ ಮಾಡಲ್ಪಟ್ಟರು.

ಅನಂತರ ಸುರೇಂದ್ರನಾಥರು ಕಲ್ಕತ್ತೆಯ [illegible] ಅಧ್ಯಾಪಕರಾದರು. [illegible] ಬ್ಯಾನರ್ಜಿಯವರ ಸಹಕಾರದಿಂದ ನಡೆಯುತ್ತಿದ್ದ 'ಬಂಗಾಳೀ' ಸಾಪ್ತಾಹಿಕವನ್ನು ವಹಿಸಿಕೊಂಡು, ಉತ್ತಮ ದಿನಪತ್ರಿಕೆಯಾಗಿ ಮಾರ್ಪಡಿಸಿದರು.



ಮಣಿಯದ ಬ್ಯಾನರ್ಜಿ

ಭಾರತೀಯರಲ್ಲಿ ಜನಜಾಗೃತಿ ಸಾಧಿಸಲು ಸುರೇಂದ್ರನಾಥ ಬ್ಯಾನರ್ಜಿ 1876ರಲ್ಲಿ 'ಇಂಡಿಯನ್ ಅಸೋಸಿಯೇಷನ್' ಸ್ಥಾಪಿಸಿದರು.

ಕಲ್ಕತ್ತೆಯ ಸುಪ್ರಸಿದ್ಧ ರಿಪನ್ ಕಾಲೇಜಿನ ಸ್ಥಾಪನೆಗೆ ಸುರೇಂದ್ರನಾಥರು ಪ್ರೇರಕರಾದರು.

1883ರಲ್ಲಿ ನಿರ್ಭೀತ ಬರವಣಿಗೆಗಾಗಿ ಕಾರಾಗೃಹ ಶಿಕ್ಷೆ ಅನುಭವಿಸಿ ಹೊರಬಂದ ಸುರೇಂದ್ರನಾಥರನ್ನು ಸಮರವೀರನಂತೆ ಜನ ಗೌರವಿಸಿದರು. ಉತ್ತರ ಭಾರತದಾದ್ಯಂತ ಅವರು ಕೈಗೊಂಡ ಸಂಚಾರ ಭಾಷಣ ಕಾರ್ಯಕ್ರಮವನ್ನು ಮುಂದೆ ಕಾಂಗ್ರೆಸ್ ಅಧ್ಯಕ್ಷರಾದ ಆಂಗ್ಲ ಹೆನ್ರಿ ಕಾಟನ್ (1845-1915) 'ವಿಜಯ ಯಾತ್ರೆ' ಎಂದು ವರ್ಣಿಸಿದರು. ವರ್ಷದ ಕೊನೆಯಲ್ಲಿ ಸುರೇಂದ್ರನಾಥರು ಏರ್ಪಡಿಸಿದ 'ರಾಷ್ಟ್ರೀಯ ಪರಿಷತ್ತು' ಅಖಿಲ ಭಾರತ ಮಟ್ಟದ ಪ್ರಥಮ ರಾಜಕೀಯ ಸಮ್ಮೇಳನ. ಮುಂದೆ ರಾಷ್ಟ್ರೀಯ ಕಾಂಗ್ರೆಸ್ಸಿನ ಎರಡನೆಯ ಅಧಿವೇಶನದ ವೇಳೆಗೆ ಕಾಂಗ್ರೆಸ್ಸಿನಲ್ಲಿ ಲೀನವಾಯಿತು.

ಸುರೇಂದ್ರನಾಥರು 1895 ಮತ್ತು 1902ರಲ್ಲಿ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷತೆ ವಹಿಸಿದ್ದರು. 1905ರಲ್ಲಿ 'ವಂಗಭಂಗ ಚಳುವಳಿ'ಯಲ್ಲಿ ಸುರೇಂದ್ರನಾಥರೇ ಪ್ರಮುಖ ಧುರೀಣರು. ಆಗ ರೂಪಿಸಲ್ಪಟ್ಟ ವಿದೇಶಿ ವಸ್ತುಗಳ ಬಹಿಷ್ಕಾರ ಚಳುವಳಿ ದೇಶದ ಸ್ವಾತಂತ್ರ್ಯ ಹೋರಾಟಕ್ಕೆ ಸುರೇಂದ್ರನಾಥರ ಕಾಣಿಕೆ ಮುಂದಿನ ಚಳುವಳಿಗಳಲ್ಲಿ ಅದು ಪ್ರಮುಖ ಅಸ್ತ್ರವಾಯಿತು.

ಸುರೇಂದ್ರನಾಥರು ಬ್ರಿಟಿಷ್ ಅಚ್ಚುಕಟ್ಟುತನದ ಅಭಿಮಾನಿಯಾಗಿದ್ದರು. ಬ್ರಿಟಿಷ್ ಸರಕಾರೀ ವ್ಯವಸ್ಥೆಯ ಚೌಕಟ್ಟಿನಲ್ಲೇ ಸ್ವದೇಶೀ ಆಡಳಿತ ದೊರಕಿಸಬೇಕೆಂದು ಅವರ ನಿಲುವು. ಕಾಂಗ್ರೆಸ್ಸಿನಲ್ಲಿ ಪೂರ್ಣ ಸ್ವರಾಜ್ಯ ಆದರ್ಶದ ಪ್ರತಿಪಾದಕರ ಸಂಖ್ಯೆ ಹೆಚ್ಚಿದಾಗ, ಬ್ರಿಟಿಷ್ ಬೆಂಬಲಿಗರೆಂಬ ಟೀಕೆಗೆ ಸುರೇಂದ್ರನಾಥರು ಒಳಗಾದರು. 1918ರಲ್ಲಿ ಅವರು ಕಾಂಗ್ರೆಸ್ಸನ್ನು ತ್ಯಜಿಸಿ 'ನ್ಯಾಷನಲ್ ಲಿಬರಲ್ ಫೆಡರೇಷನ್' ಸ್ಥಾಪಿಸಿದರು. ಮರುವರ್ಷ ಮುಂಬಯಿಯಲ್ಲಿ ಸೌಮ್ಯವಾದಿಗಳ ಸಮ್ಮೇಳನ ಜರಗಿಸಿದರು. 1921ರಲ್ಲಿ ಬಂಗಾಳದ ಗವರ್ನರರ ಮಂಡಳಿಯಲ್ಲಿ ಸ್ಥಳೀಯ ಸಂಸ್ಥೆ, ಸಾರ್ವಜನಿಕ ಆರೋಗ್ಯ ಖಾತೆಗಳ ಮಂತ್ರಿಯಾಗಿ ನೇಮಿಸಲ್ಪಟ್ಟರು. ಅದೇ ವರ್ಷ 'ನೈಟ್' ಪದವಿ ದೊರಕಿತು.

ಸರ್ ಸುರೇಂದ್ರನಾಥ ಬ್ಯಾನರ್ಜಿ 1923ರ [illegible] [illegible] ಕೈಯಲ್ಲಿ ಸೋತರು. 1925ರಲ್ಲಿ ಅವರು ಬರೆದ 'ಎ ನೇಷನ್ ಇನ್ ದಿ ಮೇಕಿಂಗ್' [illegible] [illegible] ವರ್ಷ ಆಗಸ್ಟ್ 6ರಂದು. ಅವರು ನಿಧನರಾದರು.

ಸುರೇಂದ್ರ ಮೋಹನ ಕುಮಾರಮಂಗಲಂ

ಕೇಂದ್ರ ಸಚಿವ ಸಂಪುಟದಲ್ಲಿ ಉಕ್ಕು ಹಾಗೂ ಗಣಿಗಳ ಸಚಿವರಾಗಿದ್ದ ಸುರೇಂದ್ರ ಮೋಹನ ಕುಮಾರಮಂಗಲಂ ಕುಶಲ ರಾಜಕೀಯ ತಜ್ಞ, ಶ್ರೇಷ್ಠ ವಕೀಲ.

ಜನನ ಲಂಡನಿನಲ್ಲಿ, 1916 ನವೆಂಬರ್ ಮೊದಲ ತಾರೀಖಿನಂದು. ತಂದೆ ತಮಿಳುನಾಡಿನ ಡಾ. ಪಿ. ಸುಬ್ಬರಾಯನ್, ತಾಯಿ ಮಂಗಳೂರಿನ ರಾಧಾಬಾಯಿ. ವಿದ್ಯಾಭ್ಯಾಸ ಕೇಂಬ್ರಿಜ್‌ನ ಈಟನ್ ಹಾಗೂ ಕಿಂಗ್ಸ್ ಕಾಲೇಜುಗಳಲ್ಲಿ. ಅನಂತರ ಬಾರ್–ಎಟ್–ಲಾ ಪದವಿ ಪಡೆದರು.

ಇಂಗ್ಲೆಂಡಿನಲ್ಲಿ ಕಮ್ಯೂನಿಸ್ಟ್ ಪಕ್ಷ ಸೇರಿದರು. 1937ರಲ್ಲಿ ಸ್ಪೇನಿನಲ್ಲಿ ಅಂತರ್ಯುದ್ಧ ವೀಕ್ಷಿಸಲು ಹೋಗಿದ್ದ ಅಂತರರಾಷ್ಟ್ರೀಯ ವಿದ್ಯಾರ್ಥಿ ನಿಯೋಗದ ಸದಸ್ಯರಾಗಿದ್ದರು. 1938ರಲ್ಲಿ ಕೇಂಬ್ರಿಜ್ ವಿದ್ಯಾರ್ಥಿ ಒಕ್ಕೂಟದ ಕಾರ್ಯದರ್ಶಿಯಾಗಿದ್ದರು. ಯೂರೋಪಿನ ಭಾರತೀಯ ವಿದ್ಯಾರ್ಥಿ ಸಂಘಗಳ ಒಕ್ಕೂಟದ ಪ್ರಥಮ ಕಾರ್ಯದರ್ಶಿಯಾಗಿದ್ದರು. ಸ್ವದೇಶಕ್ಕೆ ಮರಳಿದ ಅನಂತರ ಮದರಾಸ್ ಉಚ್ಚ ನ್ಯಾಯಾಲಯದಲ್ಲಿ ವಕೀಲಿ ಆರಂಭಿಸಿದರು.

ರಾಜಕೀಯ ರಂಗದಲ್ಲಿ ಆಸಕ್ತಿ ತಳೆದ ಕುಮಾರಮಂಗಲಂ ಸ್ವಲ್ಪ ಕಾಲ ಭೂಗತವಾಗಿ ಇದ್ದರು. ಬಂಧಿತರಾದಾಗ ಬ್ರಿಟಿಷ್ ಸರಕಾರವನ್ನು ಬುಡ ಮೇಲು ಮಾಡುವ ಒಳಸಂಚಿನಲ್ಲಿ ಪಾಲುಗೊಂಡರೆಂಬ ಆರೋಪಕ್ಕೆ ಗುರಿಯಾಗಿ. ಮೂರೂವರೆ ವರ್ಷ ಸೆರೆಮನೆವಾಸ ಅನುಭವಿಸಿದರು. ಸ್ವಲ್ಪ ಕಾಲದ ಅನಂತರ ಅವರಿಗೆ ಬಿಡುಗಡೆಯಾಯಿತು.

1942ರಲ್ಲಿ ಮುಂಬಯಿಯಿಂದ ಹೊರಡುತ್ತಿದ್ದ ಕಮ್ಯೂನಿಸ್ಟ್ ಮುಖ ಪತ್ರ 'ಪೀಪಲ್ಸ್ ವಾರ್'ನ ಸಂಪಾದಕರಾಗಿದ್ದರು. ಮತ್ತೆ ಭೂಗತರಾದರು, ಬಂಧಿಸಲ್ಪಟ್ಟರು.

1952ರಲ್ಲಿ ಮದರಾಸಿನಲ್ಲಿ ವಕೀಲವೃತ್ತಿಯನ್ನು ಪುನಃ ಕೈಗೊಂಡರು. 1966ರಲ್ಲಿ ಮದರಾಸಿನ ಅಡ್ವೊಕೆಟ್ ಜನರಲ್ ಆದರು. ಆಗ 20 ವರ್ಷ ಕಾಲದಿಂದ ತಾವು ಸದಸ್ಯರಾಗಿದ್ದ ಕಮ್ಯೂನಿಸ್ಟ್ ಪಕ್ಷಕ್ಕೆ ರಾಜಿನಾಮೆ ಇತ್ತರು. ಮದರಾಸಿನಲ್ಲಿ ಡಿ. ಎಂ. ಕೆ ಪಕ್ಷದ ಮಂತ್ರಿ ಮಂಡಲ ಬಂದಾಗ ಅಡ್ವೊಕೆಟ್ ಜನರಲ್ ಪದವಿಗೆ ರಾಜಿನಾಮೆ ಕೊಟ್ಟರು.

ಕುಮಾರಮಂಗಲಂ ಇಂಡಿಯನ್ ಏರ್‌ಲೈನ್ಸ್ ಸಂಸ್ಥೆಯ ಅಧ್ಯಕ್ಷರಾಗಿದ್ದರು. 1971ರಲ್ಲಿ ನಡೆದ ಚುನಾವಣೆಯಲ್ಲಿ ಪಾಂಡಿಚೆರಿಯಿಂದ ಲೋಕಸಭೆಗೆ ಆರಿಸಲ್ಪಟ್ಟರು. ಕೇಂದ್ರ ಮಂತ್ರಿ ಮಂಡಲಕ್ಕೆ ಸೇರಿದರು.

1973ರಲ್ಲಿ ವರಿಷ್ಠ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರ ನೇಮಕದ ಸಮಯದಲ್ಲಿ ಸೇವಾ ಹಿರಿತನದ ಪಕ್ಕನ್ನು ಕಡೆಗಣಿಸಲು ಪ್ರಮುಖ ಕಾರಣರಾದರೆಂದು ಕುಮಾರಮಂಗಲಂ ಟೀಕೆಗೆ ಗುರಿಯಾದರು.

ಕುಮಾರಮಂಗಲಂ ಅನೇಕ ಕಾರ್ಮಿಕ ಸಂಘಗಳಲ್ಲಿ ಅಧ್ಯಕ್ಷರಾಗಿದ್ದರು. ಅವರು ಪರಿಣಾಮಕಾರೀ ಲೇಖಕರೂ ಭಾಷಣಕಾರರೂ ಆಗಿದ್ದರು. 1973 ಮೇ 30ರಂದು ಮದರಾಸಿನಿಂದ ದಿಲ್ಲಿಗೆ ಪ್ರಯಾಣ ಮಾಡುತ್ತಿದ್ದಾಗ ವಿಮಾನ ಅಪಘಾತಕ್ಕೊಳಗಾಗಿ ಸುರೇಂದ್ರಮೋಹನ ಕುಮಾರಮಂಗಲಂ ಮಡಿದರು.

ಇವರು ಜನರಲ್ ಪಿ.ಪಿ. ಕುಮಾರಮಂಗಲಂ ಅವರ ತಮ್ಮ. ಇವರ ಪತ್ನಿ ಕಲ್ಯಾಣಿ, ಬಂಗಾಳದವರು. ಪತಿಯೊಡನೆ ಆಕೆಯೂ ಸೆರೆಮನೆವಾಸ ಅನುಭವಿಸಿದವರು.



ನ್ಯಾಯ ಪ್ರತಿಪಾದನೆ :
ಮೋಹನ ಕುಮಾರಮಂಗಲಂ

ಸುಲೇಮಾನ್

"ಕಿವಿ ಚುಚ್ಚಿಸಿಕೊಳ್ಳುವವರ ದೇಶದ (ಇಂಡಿಯಾದ) ಸಾರ್ವಭೌಮ ಬಲ್ಹರಾ (ವಲ್ಲಭ) ರಾಜನು ಅರಬರಿಗೆ ಉದಾರ ಬಹುಮಾನಗಳನ್ನು ಕೊಟ್ಟಿದ್ದಾನೆ. ಬಲ್ಹರಾ ರಾಜ, ಚೀನದ ರಾಜ, ಅರಬರ ರಾಜ (ಖಲೀಫ್) ಮತ್ತು ರೂಂ (ಗ್ರೀಕ್) ರಾಜರೇ ಜಗತ್ತಿನಲ್ಲೆಲ್ಲ ನಾಲ್ವರು ಮಹಾ ಸಮ್ರಾಟರೆಂಬ ಬಗೆಗೆ ಚೀನದವರಿಗೂ ಇಂಡಿಯಾದವರಿಗೂ ಭಿನ್ನಾಭಿಪ್ರಾಯವಿಲ್ಲ......" ಎಂದು ಅರಬಿ ಪ್ರವಾಸಿ ಸುಲೇಮಾನ್ ಬರೆದಿದ್ದಾನೆ.

ಸುಲೇಮಾನ್ 9ನೆಯ ಶತಮಾನದ ಮಧ್ಯಕಾಲದಲ್ಲಿ ಭಾರತ, ಚೀನಗಳಿಗೆ ಭೇಟಿಕೊಟ್ಟ. "ಚೀನೀಯರು ಸುಖಾಸಕ್ತರು, ಭಾರತದವರು ಆ ಮನೋಧರ್ಮವನ್ನು ಖಂಡಿಸುತ್ತಾರೆ" ಎಂದು ಈ ಎರಡು ದೇಶಗಳ ಜನಜೀವನ ರೀತಿಗಳನ್ನು ಆತ ಹೋಲಿಸಿದ್ದಾನೆ.

ಚೀನದಲ್ಲಿ ಮರಗಳಿಂದಲೂ, ಇಂಡಿಯಾದಲ್ಲಿ ಕಲ್ಲು, ಇಟ್ಟಿಗೆ, ಗಾರೆ, ಮಣ್ಣುಗಳಿಂದಲೂ ಮನೆ ಕಟ್ಟುತ್ತಾರೆ -ಎಂದಿದ್ದಾನೆ.

ಚೀನಕ್ಕೆ ಮತ ತತ್ತ್ವಗಳೂ ವಿಗ್ರಹಗಳೂ ಇಂಡಿಯಾದಿಂದ ಹೋದುವು ಎಂದು ಉಲ್ಲೇಖಿಸಿದ್ದಾನೆ. ಎರಡೂ ದೇಶಗಳಲ್ಲಿ ಮಳೆಯಿಂದ ಸಮೃದ್ಧವಾಗಿ ತುಂಬಿ ಹರಿಯುವ ನದಿಗಳು, ನಾನಾ ವಿಧದ ಹಣ್ಣು ಹಂಪಲುಗಳಿವೆ –ಎಂದು ವರ್ಣಿಸಿದ್ದಾನೆ.

ಸುಶ್ರುತ

ನೋಡಿ : ಸಂಪುಟ ೨

' ಸುಶ್ರುತ ಸಂಹಿತೆ '

ಭಾರತೀಯ ಶಸ್ತ್ರಚಿಕಿತ್ಸೆಯ ಮೇರು ಕೃತಿ, ಸುಶ್ರುತ ಸಂಹಿತೆ.

ಚರಕ ಸಂಹಿತೆಯಲ್ಲಿ ಕಾಯ ಚಿಕಿತ್ಸೆ ಪ್ರಧಾನವಾದರೆ, ಸುಶ್ರುತ ಸಂಹಿತೆಯಲ್ಲಿ ಶಸ್ತ್ರಚಿಕಿತ್ಸೆ ಪ್ರಧಾನವಾಗಿದೆ. ಶಸ್ತ್ರಚಿಕಿತ್ಸೆಗೆ ಬೇಕಾದ ಶಸ್ತ್ರಗಳು, ಉಪಕರಣಗಳು, ಚಿಕಿತ್ಸೆ ನಡೆಸುವ ರೀತಿ, ಅನಂತರ ವಹಿಸಬೇಕಾದ ಜಾಗರೂಕತೆ, ಈ ವಿವರಗಳಿಂದ ಕೂಡಿರುವ ಸುಶ್ರುತ ಸಂಹಿತೆ ಅಸಾಧಾರಣ ಗ್ರಂಥ.

ಶಸ್ತ್ರ ಉಪಯೋಗಿಸಿ ನಡೆಸುವ ಹೆರಿಗೆಗಳು, ಹರಿದ ಮೂಗು, ಕಿವಿಗಳನ್ನು ಸರಿಪಡಿಸುವುದು, ಕಣ್ಣು, ಗಂಟಲು ಮೊದಲಿನ ಶಸ್ತ್ರಚಿಕಿತ್ಸೆಗಳ ವಿವರ ಈ ಗ್ರಂಥದಲ್ಲಿದೆ. ಶಸ್ತ್ರಗಳು ಯಾವ ರೀತಿ ಇರಬೇಕು, ಅವುಗಳನ್ನು ಶುದ್ಧಿ ಮಾಡುವುದು ಹರಿತಗೊಳಿಸುವುದು ಹೇಗೆ ಎಂಬ ವಿವರಗಳಿವೆ.

ಚಿನ್ನ, ಬೆಳ್ಳಿ, ತಾಮ್ರ, ಸೀಸ ಮತ್ತು ಪಿತ್ತಾಳೆಗಳಿಂದ ಶಸ್ತ್ರಗಳನ್ನು ತಯಾರಿಸುವುದು, ಶಸ್ತ್ರಚಿಕಿತ್ಸೆಯಲ್ಲಿ ಪರಿಶ್ರಮ ಪಡೆಯಲು ಕುಂಬಳ, ಸೋರೆ, ಚರ್ಮದ ಚೀಲ ಮುಂತಾದುವುಗಳಿಂದ ಮಾಡಿದ ಮಾದರಿಗಳ



ಪ್ರಾಚೀನ ಶಸ್ತ್ರಚಿಕಿತ್ಸೆ : ಸುಶ್ರುತ

ಮೇಲೆ ಪ್ರಯೋಗ ನಡೆಸುವುದು – ಈ ಎಲ್ಲ ವಿಚಾರಗಳನ್ನೂ 'ಸುಶ್ರುತ ಸಂಹಿತೆ' ಒಳಗೊಂಡಿದೆ. ಸಾವಿರಾರು ರೋಗಗಳ ಬಗೆಗೂ ಮಾಹಿತಿ ಇದೆ. ಸುಶ್ರುತ ಸಂಹಿತೆಗೆ ಹಲವಾರು ವ್ಯಾಖ್ಯಾನಗಳಿವೆ.

ಸುಹಾಸಿನಿ ದೇವಿ

[illegible] ಕಲ್ಕತ್ತೆಯಲ್ಲಿ ಆಶ್ರಯ ಪಡೆಯಬೇಕೆಂದಿದ್ದ ಚಿತ್ತಗಾಂಗ್ ಗುಂಪಿನ ಕೆಲವು ಕ್ರಾಂತಿಕಾರಿಗಳಿಗೆ ಮನೆ ಅಗತ್ಯವಾಗಿ ಬೇಕಾಗಿತ್ತು. ಇದಕ್ಕಾಗಿ ಶಶಿಧರ [illegible] ಪತ್ನಿಯಂತೆ ವರ್ತಿಸಬೇಕಾದ ವಿಷಮ ಪರಿಸ್ಥಿತಿಯನ್ನು ಎದುರಿಸಿದಾಕೆ ಸುಹಾಸಿನಿದೇವಿ.



ಕ್ರಾಂತಿ : ಸುಹಾಸಿನಿ

ಕ್ರಾಂತಿಕಾರಿಗಳ ಆಶ್ರಯ ಸ್ಥಾನವನ್ನು 1930 ಸೆಪ್ಟೆಂಬರ್ 1ರಂದು ಪೋಲೀಸರು ಮುತ್ತಿದರು. ಗುಂಡಿನ ಕಾಳಗ ನಡೆಯಿತು. ಪೋಲೀಸರ ಮುಖಂಡ ಚಾರ್ಲ್ಸ್ ಟೆಗಾರ್ಟ್ ಆಕೆಯ ಕೆನ್ನೆಗೆ ಹೊಡೆದ. ಸುಹಾಸಿನಿ ಮತ್ತು ಶಶಿಧರ ಪೋಲೀಸ್ ದೌರ್ಜನ್ಯಕ್ಕೆ ತುತ್ತಾದರು. ಆದರೆ ಅವರು ತಪ್ಪೊಪ್ಪಿಗೆ ಕೊಡಲಿಲ್ಲ. ಅವರಿಬ್ಬರ ವಿರುದ್ಧ [illegible] ಆಗಲಿಲ್ಲ. [illegible]

[illegible]

1938ರಲ್ಲಿ ಈಕೆಗೆ ಬಿಡುಗಡೆಯಾಯಿತು. ಬಿಡುಗಡೆಯ ಅನಂತರ ಈಕೆ [illegible] 194[illegible]ರಲ್ಲಿ [illegible]

ಪ್ರತುದಿ ಎಂದು ಸುಹಾಸಿನಿ ಪರಿಚಿತರು.

ಸೂತ್ರದ ಗೊಂಬೆ ಆಟ

ನೋಡಿ : ಸಂಪುಟ ೫

ಸೂಫಿ ಪಂಥ

ಮುಹಮ್ಮದನ ಶ್ರದ್ಧಾವಂತ ಅನುಯಾಯಿಗಳಲ್ಲಿ ಕೆಲವರು ತುಂಬ ಬಡವರಾಗಿದ್ದರು. ಇವರಿಗೆ ಮನೆಮಠಗಳಿರಲಿಲ್ಲ, ಮುಹಮ್ಮದರು ಕಟ್ಟಿಸಿದ ಮಸೀದಿಯಲ್ಲೇ ವಾಸಿಸುತ್ತಿದ್ದರು. ಅದರ ಸುಪ್ಪದ—ಎಂದರೆ ಮಾಳಿಗೆಯ ಮೇಲೆ ಇವರು ಮಲಗುತ್ತಿದ್ದುದರಿಂದ, ಜನ ಇವರನ್ನು ಸೂಫಿಗಳೆಂದು ಕರೆದರು. ಖುರಾನ್ ಓದುವುದು, ಇಸ್ಲಾಂ ಧರ್ಮವನ್ನು ಬೋಧಿಸುವುದು ಇವರ ಮುಖ್ಯ ಕೆಲಸ. [illegible] ಇವರನ್ನು ಜನ ತುಂಬ ಗೌರವಿಸುತ್ತಿದ್ದರು.

ಮುಹಮ್ಮದರ ಅನಂತರ ಸೂಫಿಗಳು ಆತನ ಅಳಿಯ ಅಲಿಯನ್ನು ತಮ್ಮ ಪಂಥದ ಆದಿಗುರುವನ್ನಾಗಿ ಅಂಗೀಕರಿಸಿದರು. ಗುರುಭಕ್ತಿ, ಗುರುಸೇವೆಗೆ ಸೂಫಿಗಳು ಮಹತ್ವದ ಸ್ಥಾನ ಕೊಡುತ್ತಾರೆ.

ಕಾಲಕ್ರಮದಲ್ಲಿ ಸೂಫಿ ಪಂಥ ಇರಾನ್. [illegible] ಹರಡಿತು : ಸೂಫಿ ಪಂಥದ [illegible] ಇಸ್ಲಾಂ ಧರ್ಮದಲ್ಲಿ [illegible]. ಅದರ ಮೇಲೆ ಕ್ರೈಸ್ತ, ಬೌದ್ಧ ಮತ್ತು [illegible] ಪ್ರಭಾವವೂ ಬಿತ್ತು.

ಭಾರತದಲ್ಲಿ ಅನೇಕ ಮಂದಿ ಸೂಫಿಗಳು ಇದ್ದಾರೆ. ಭಾರತದಲ್ಲಿ ಸೂಫಿ ಮತವನ್ನು ಪ್ರಚಾರಮಾಡಿದವರಲ್ಲಿ 12–13ನೆಯ ಶತಮಾನದಲ್ಲಿದ್ದ ಮೊಯಿನುದ್ದೀನ್ ಚಿಷ್ತಿ ಒಬ್ಬ. ಸೂಫಿಗಳಲ್ಲಿರುವ ಹತ್ತು ಸಂಪ್ರದಾಯಗಳಲ್ಲಿ ಇವನು ಸ್ಥಾಪಿಸಿದ ಚಿಷ್ತಿ ಸಂಪ್ರದಾಯವೂ ಒಂದು.

ಆತ್ಮಾರ್ಪಣೆ, ನಿಷ್ಕಪಟ ಭಕ್ತಿ, ಪಶ್ಚಾತ್ತಾಪ, ದೈವಭಕ್ತಿ, ತ್ಯಾಗ, ಜಪ, ಧ್ಯಾನ, ಉಪವಾಸ ಮುಂತಾದುವು ಸೂಫಿ ಧಾರ್ಮಿಕ ಜೀವನದ ಅಂಗಗಳು.

ನೋಡಿ : ಚಿಷ್ತಿ

ಸೂರ್ಯ ಸಿದ್ಧಾಂತ

ಭಾರತೀಯ ಜ್ಯೋತಿಷ್ಯದಲ್ಲಿ ಮಹತ್ವದ್ದು ಸೂರ್ಯ ಸಿದ್ಧಾಂತ. ಸುಮಾರು ಕ್ರಿ. ಶ. 280ರಲ್ಲಿ ಸಂಗ್ರಹಿಸಿದ ಖಗೋಲ ವಿವರಗಳು ಇದಕ್ಕೆ ಆಧಾರವೆಂದು ಊಹಿಸಲಾಗಿದೆ. ಇದು ಆಗಾಗ್ಗೆ ಪರಿಷ್ಕರಣಗೊಂಡಿದೆ.

[illegible] ಆರ್ಯಭಟ, ಮೊದಲನೆಯ ಭಾಸ್ಕರ, ಬ್ರಹ್ಮಗುಪ್ತ, ಮುಂಜುಳಾಚಾರ್ಯ ಮುಂತಾದವರಿಂದ ಪರಿಷ್ಕರಿಸಲ್ಪಟ್ಟಿತು.

[illegible] 14 [illegible] ಗಳಿವೆ.

ಉಳಿದೆಲ್ಲ ಭಾರತೀಯ ಖಗೋಲ ಸಿದ್ಧಾಂತಗಳಂತೆಯೇ ಸೂರ್ಯ ಸಿದ್ಧಾಂತಕ್ಕೂ ಮಹಾಯುಗ ಕಲ್ಪನೆ ಮುಖ್ಯವಾಗಿದೆ. ಇದು ಯುಗಗಳ ಆವರ್ತನೆಗೆ ಸಂಬಂಧಿಸಿವೆ. ಇವರಲ್ಲಿ ಕಲಿಯುಗದ ಆರಂಭಕ್ಕೆ ಮಹತ್ವ ಇದೆ. ಏಕೆಂದರೆ ಎಲ್ಲ ಸೂರ್ಯಸಿದ್ಧಾಂತಗಳಲ್ಲಿಯೂ ಈ ಆರಂಭವನ್ನು ಲೆಕ್ಕಾಚಾರದ ತಳಹದಿಯಾಗಿ ಇಟ್ಟುಕೊಳ್ಳಲಾಗಿದೆ. ಇದು ಗ್ರಹಗಳ ಸಂಯೋಗಕ್ಕೆ ಸಂಬಂಧಪಟ್ಟಿದೆ.

ಸೂರ್ಯಸಿದ್ಧಾಂತದಲ್ಲಿ ರೇಖಾಂತರಗಳನ್ನು ಉಜ್ಜಯಿನಿಯಿಂದ ಲೆಕ್ಕಹಾಕಬೇಕೆಂದು ಸೂಚಿಸಲಾಗಿದೆ.

ಸೂರ್ಯ ಸೇನ್

1930ರ ಏಪ್ರಿಲ್ 18. ರಾತ್ರಿ ಒಂಬತ್ತೂವರೆಯಿಂದ ಹತ್ತೂವರೆ ವರೆಗಿನ ಸಮಯ : ದೇಶಭಕ್ತರಾದ ಐವತ್ತೊಂದು ತರುಣರ ಒಂದು ಗುಂಪು ಚಿತ್ತಗಾಂಗಿನಲ್ಲಿದ್ದ (ಈಗ ಬಾಂಗ್ಲಾದೇಶದಲ್ಲಿದೆ) ಬ್ರಿಟಿಷರ ಶಸ್ತ್ರಾಗಾರಕ್ಕೆ ಬಲವಾದ ಮುತ್ತಿಗೆ ಹಾಕಿತು. ಟೆಲಿಫೋನು ಸಂಪರ್ಕ ಕಿತ್ತು ಹಾಕಿ, ರೈಲು ಹಳಿ ಸಡಿಲಿಸಿ, ಈ ಗುಂಪು ಶಸ್ತ್ರಾಸ್ತ್ರಗಳನ್ನು ಲೂಟಿ ಮಾಡಿತು. ಇದರಲ್ಲಿ ಪ್ರಮುಖ ಪಾತ್ರವಹಿಸಿದವರು ಸೂರ್ಯ ಸೇನ್.



ಕ್ರಾಂತಿನಾಯಕ : ಸೂರ್ಯಸೇನ್

ಚಿತ್ತಗಾಂಗಿನ ಗೋಪಾಪಾರದಲ್ಲಿ 1893ರಲ್ಲಿ ಜನನ. ಸ್ವಾತಂತ್ರ್ಯ ಆಂದೋಲನದಲ್ಲಿ ಮೊದಲಿನಿಂದಲೂ ಆಸಕ್ತಿ. ಹಿಂದೂಸ್ಥಾನ್ ಸೋಷಲಿಸ್ಟ್ ರಿಪಬ್ಲಿಕನ್ ಆರ್ಮಿಯಲ್ಲಿ ಸಕ್ರಿಯ ಪಾತ್ರವಹಿಸಿದರು. ಚಿತ್ತಗಾಂಗ್ ಪ್ರಕರಣವಲ್ಲದೆ 1923 ಡಿಸೆಂಬರ್ 23ರಂದು ಪಹರ್‌ಲಿಯ ರೈಲ್ವೆ ನಿಲ್ದಾಣ ಕಛೇರಿಯ ಮೇಲೆ ನಡೆದ ದಾಳಿಯಲ್ಲಿ, ಅಸ್ಸಾಮಿನ ಚಹ ತೋಟಗಳಲ್ಲಿ ಅಲ್ಲಲ್ಲಿ ಕ್ರಾಂತಿಕಾರಿಗಳ ಕೇಂದ್ರಗಳನ್ನು ಸ್ಥಾಪಿಸುವುದರಲ್ಲಿ, 1930 ಏಪ್ರಿಲ್ 22ರಂದು ಜಲಾಲಾಬಾದ್ ಗುಡ್ಡದಮೇಲೆ ಬ್ರಿಟಿಷ್ ಸೈನಿಕರ ವಿರುದ್ಧ ನಡೆದ ಹೋರಾಟದಲ್ಲಿ ಸೂರ್ಯ ಸೇನರು ಮುಖ್ಯ ಪಾತ್ರ ವಹಿಸಿದ್ದರು.

ಕೊನೆಗೆ ಬ್ರಿಟಿಷ್ ಸರಕಾರ ಇವರನ್ನು ಬಂಧಿಸಿತು. ವಿಚಾರಣೆ ನಡೆದು ಮರಣದಂಡನೆ ವಿಧಿಸಿತು.

1931 ಜನವರಿ 11ರಂದು ಸೂರ್ಯ ಸೇನರು ಚಿತ್ತಗಾಂಗ್ ಜೈಲಿನಲ್ಲಿ ಗಲ್ಲಿಗೇರಿಸಲ್ಪಟ್ಟರು.

ಚಿತ್ತಗಾಂಗ್ ಪ್ರಕರಣದಲ್ಲಿ ಸೂರ್ಯ ಸೇನರ ಅನುಯಾಯಿಗಳಾಗಿ ಅನೇಕರು ತ್ಯಾಗ ಮಾಡಿದರು.

ನೋಡಿ : ಹಿಂದೂಸ್ಥಾನ್ ಸೋಷಲಿಸ್ಟ್ ರಿಪಬ್ಲಿಕನ್ ಆರ್ಮಿ

ಸೂರತ್

ಸೂರು ಪೂರ್ವಕಾಲದ ಮೊಘಲರ ಸಾಮ್ರಾಜ್ಯದಲ್ಲಿ ಮುಖ್ಯ ಬಂದರಾಗಿದ್ದ ನಗರ ಸೂರತ್. ಗುಜರಾತಿನ ಕರಾವಳಿಯಲ್ಲಿದೆ. ಮುಂಬಯಿಯಿಂದ ಇಲ್ಲಿಗೆ 150 ಮೈಲು ದೂರ.

ಸೂರತ್‌ನ ಒಂದು ಗಮನಾರ್ಹ ಪ್ರದೇಶ, 'ಗೋಪಿ' ಕೊಳ. ಇದು ಈಗ ಬತ್ತಿಹೋಗಿದೆ. ಗೋಪಿ ಎಂಬ ಬ್ರಾಹ್ಮಣ ಈ ಕೊಳವನ್ನು 1516ರಲ್ಲಿ ಕಟ್ಟಿಸಿದನೆಂದೂ ಸುತ್ತಲ ಪ್ರದೇಶಕ್ಕೆ ಸೂರ್ಯಪುರ ಅಥವಾ ಸೂರಜ್‌ಪುರ ಎಂದು ಹೆಸರಿಟ್ಟನೆಂದೂ ಸುಮಾರು 1520ರಲ್ಲಿ 'ಸೂರತ್' ಹೆಸರು ಬಂತೆಂದೂ ಪ್ರತೀತಿ.

ಈಸ್ಟ್ ಇಂಡಿಯಾ ಕಂಪೆನಿ ತನ್ನ ಮೊತ್ತಮೊದಲ ನೆಲೆಯನ್ನು ಭಾರತದಲ್ಲಿ ಸ್ಥಾಪಿಸಿದ್ದು ಸೂರತ್‌ನಲ್ಲಿ, 1612ರಲ್ಲಿ. ಅನಂತರ 1616ರಲ್ಲಿ ಡಚ್ಚರೂ 1668ರಲ್ಲಿ ಫ್ರೆಂಚರೂ ತಮ್ಮ ನೆಲೆಗಳನ್ನು ಸೂರತ್‌ನಲ್ಲಿ ಸ್ಥಾಪಿಸಿದರು. ಹಿಂದೆ ಹಲವು ಆಡಳಿತಗಳಿಗೆ ಒಳಪಟ್ಟ ಈ ನಗರದಲ್ಲಿ ಹಿಂದೂ, ಜೈನ, ಪಾರಸೀ ದೇವಾಲಯಗಳಿವೆ; ಮಸೀದಿಗಳಿವೆ; ಆಂಗ್ಲ ಹಾಗೂ ಡಚ್ ಸಮಾಧಿಗಳಿವೆ.

ಸೂರತ್ ಇದಕ್ಕೂ ಹಿಂದೆಯೇ ದೊಡ್ಡ ಊರಾಗಿತ್ತು. ಕುತುಬುದ್ದೀನ್ 1194ರಲ್ಲಿ ಆ ಊರಿನ ಮೇಲೆ ದಾಳಿಮಾಡಿದ. 1347ರಲ್ಲಿ ಮುಹಮ್ಮದ್ ತುಘಲಕ್ ಇದನ್ನು ಕೊಳ್ಳೆಹೊಡೆದ. 1514ರಲ್ಲಿ ಫಿರೋಜ್ ಷಾ ಇಲ್ಲಿ ಕೋಟೆ ಕಟ್ಟಿಸಿದ. ಈ ವೇಳೆಗೆ ಸೂರತ್ ಒಂದು ಪ್ರಮುಖ ಬಂದರಾಗಿತ್ತು. ಅಕ್ಬರ್ 1573ರಲ್ಲಿ ಇದನ್ನು ವಶಪಡಿಸಿಕೊಂಡು ಮೊಘಲರ ಮುಖ್ಯ ಬಂದರಾಗಿ ಅಭಿವೃದ್ಧಿಗೊಳಿಸಿದ. ಆಗ ಅದು ಯಮನ್, ಇರಾಕ್, ಸುಮಾತ್ರಾಗಳೊಡನೆ ರೇಷ್ಮೆ, ಮಸ್ಲಿನ್, ಜರಿ ಮತ್ತು ಚಿನ್ನಗಳ ವ್ಯಾಪಾರ ನಡೆಸುವ ಕೇಂದ್ರವಾಗಿದ್ದಿತು. ಇಲ್ಲಿ ಹಡಗು ನಿರ್ಮಾಣ ಕಾರ್ಯವೂ ನಡೆಯುತ್ತಿತ್ತು; ವಸ್ತ್ರೋದ್ಯಮ ಕೈಗಾರಿಕೆ ಇದ್ದಿತು.

ಮುಂಬಯಿಯ ಬೆಳವಣಿಗೆಯಿಂದಾಗಿ ಸೂರತ್ ಕ್ರಮೇಣ ಅವನತಿ ಹೊಂದಿತು. ಈಸ್ಟ್ ಇಂಡಿಯಾ ಕಂಪೆನಿಯ ಕೇಂದ್ರವೂ ಇಲ್ಲಿಂದ 1687ರಲ್ಲಿ ಮುಂಬಯಿಗೆ ವರ್ಗಾಯಿಸಲ್ಪಟ್ಟಿತು. ವ್ಯಾಪಾರವೂ ತಗ್ಗಿತು. 1759ರಲ್ಲಿ ಸೂರತ್‌ನ ನವಾಬ ಬ್ರಿಟಿಷರೊಂದಿಗೆ ಒಪ್ಪಂದಕ್ಕೆ ಬಂದ. 1800ರಲ್ಲಿ ಸಂಪೂರ್ಣವಾಗಿ ಸೂರತ್ ಬ್ರಿಟಿಷರದಾಯಿತು.

ರೈಲುದಾರಿ ಬಂದ ಮೇಲೆ ಸೂರತ್ ಸ್ವಲ್ಪಮಟ್ಟಿಗೆ ಮತ್ತೆ ಪುನರುಜ್ಜೀವನಗೊಂಡಿತು. ಸೂರತ್‌ನ ಜನಸಂಖ್ಯೆ 4,71,656.

ಸೂರದಾಸ

"ಚರಣ ಕಮಲ ಬಂದೌ ಹರಿ-ರಾಇ ......"

"ಶ್ರೀ ಹರಿಯ ಪಾದಪದ್ಮಗಳಿಗೆ ನಾನು ನಮಸ್ಕರಿಸುತ್ತೇನೆ. ಯಾರ ಅನುಗ್ರಹದಿಂದ ಪರ್ವತವನ್ನು ಕುಂಟ ದಾಟಬಲ್ಲನೋ ಯಾರ ದಯೆಯಿಂದ ಕುರುಡ ಎಲ್ಲವನ್ನೂ ನೋಡಲು ಆಗುತ್ತದೋ ಯಾರ ಕರುಣೆಯಿಂದ ಕಿವುಡನಿಗೆ ಕೇಳಲು ಸಾಧ್ಯವೋ ಮತ್ತು ಮೂಕ ಮಾತಾಡಲು ಆಗುವುದೋ ಯಾರ ಕೃಪೆಯಿಂದ ಬಡವನೂ ರಾಜನಂತೆ ತಲೆಯ ಮೇಲೆ ಛತ್ರವನ್ನು ಹಿಡಿದುಕೊಂಡು ನಡೆಯಬಲ್ಲನೋ ಆ ದಯಾಸಾಗರ ಕೃಷ್ಣನ ಶ್ರೀ ಚರಣಗಳಿಗೆ ನಾನು ಮತ್ತೆ ಮತ್ತೆ ವಂದಿಸುತ್ತೇನೆ."



"ಚರಣಕಮಲ ಬಂದೌ ಹರಿ-ರಾಇ . . ."

ಇದು ಉತ್ತರ ಭಾರತದ [illegible] ಕವಿ ಭಕ್ತ. [illegible] ಭಿನ್ನಾಭಿಪ್ರಾಯವಿದೆ. ಆತ ಹುಟ್ಟು ಕುರುಡ ಎಂದು ಒಂದು ಹೇಳಿಕೆ. ಯುವಕನಾಗಿದ್ದಾಗ ಒಬ್ಬ ತರುಣಿಯಲ್ಲಿ ಆಸಕ್ತಿ ತೋರಿ, ಪಶ್ಚಾತ್ತಾಪಪಟ್ಟು, ಆಕೆ [illegible] —ಎಂದು ಇನ್ನೊಂದು ಹೇಳಿಕೆ. [illegible] ಕಾಲ 16ನೆಯ ಶತಮಾನ.

[illegible] ಸೂರದಾಸ ಕೃಷ್ಣಭಕ್ತ. [illegible] ಮತ್ತು ಸಖ್ಯಭಾವ ತೋರಿದ.

ಸೂರದಾಸನ ಕೃತಿಗಳು 'ಸೂರ ಸಾಗರ', 'ಸಾಹಿತ್ಯ ಲಹರಿ' ಮತ್ತು 'ಸೂರ ಸಾರಾವಳಿ'. 'ಸೂರ ಸಾಗರ'ದಲ್ಲಿ [illegible] ಹಾಡುಗಳಿದ್ದುವು ಎನ್ನುತ್ತಾರೆ. ಈಗ ದೊರೆತಿರುವುದು ಕೆಲವು ಸಾವಿರ ರಚನೆಗಳು ಮಾತ್ರ. [illegible] ರೂಪಕ-ನಾಣ್ಣುಡಿಗಳನ್ನು ಹಿತಮಿತವಾಗಿ ಬಳಸಿದ್ದಾನೆ. ಪ್ರತಿ ಹಾಡೂ ಪ್ರತ್ಯೇಕ ಕವಿತೆಯಂತಿದೆ.

ಆಗ್ರಾ-ಮಥುರಾಗಳ ಮಧ್ಯದಲ್ಲಿರುವ ಗವೂಘಾಟ್ ಸೂರದಾಸನ ಸ್ಥಳ. [illegible] ರಾಜರು ಆತನ ದರ್ಶನಕ್ಕೆ ಗವೂಘಾಟಿಗೇ ಬರುತ್ತಿದ್ದರು. ಹೀಗೆ ಬರುತ್ತಿದ್ದವರಲ್ಲಿ ಅಕ್ಬರ್, ತಾನ್‌ಸೇನ್ ಸಹಾ ಇದ್ದರು.

[illegible] ಸೂರದಾಸ ಆ ಭಾಷೆಯ ಗೇಯಕಾವ್ಯ ಪ್ರವರ್ತಕ.

ನೋಡಿ : ವಲ್ಲಭಾಚಾರ್ಯ

ಸೂತ್ರ

ನೋಡಿ : ಸಂಪುಟ ೫

ಸೆಂಟ್ರಲ್ ಮೆಷೀನ್ ಟೂಲ್ಸ್ ಇನ್ಸ್‌ಟಿಟ್ಯೂಟ್

[illegible] ನಡೆಸುವ ಭಾರತ ಸರಕಾರದ ಸಂಸ್ಥೆ. ಸೆಂಟ್ರಲ್ ಮೆಷೀನ್ ಟೂಲ್ಸ್ ಇನ್ಸ್‌ಟಿಟ್ಯೂಟ್ (ಸಿ.ಎಂ.ಟಿ.ಐ.). ಇದು ಬೆಂಗಳೂರಿನಲ್ಲಿದೆ. ದೇಶದ [illegible] ರಚನೆ, ಯಂತ್ರಗಳ ಬಳಕೆ ಹಾಗೂ ತಾಂತ್ರಿಕತೆಯ ಬಗೆಗೆ ಸಂಶೋಧನೆ, ಮಾನಕ ನಿರ್ಧಾರ, ಎಲೆಕ್ಟ್ರಾನಿಕ್ ಪ್ರಯೋಗಾಲಯ, ಮಾಹಿತಿ ಸಂಗ್ರಹಣೆ —ಈ ಕ್ಷೇತ್ರಗಳಲ್ಲಿ ಸಂಸ್ಥೆ ಕಾರ್ಯ ನಡೆಸುತ್ತದೆ.

ಸೆವಿರಸ್ ಸೆಬೋಖ್ತ್

"ಭಾರತೀಯರ ಜ್ಞಾನದ ಬಗೆಗೆ, ವಿಜ್ಞಾನದಲ್ಲಿ ಅವರ ಸಾಧನೆಗಳ [illegible] ಗ್ರೀಕರಷ್ಟೇ ಅಲ್ಲ, ಬೇರೆ ಜನರೂ ಅಷ್ಟೇ ತಿಳಿದವರೆಂದು ಮನಗಾಣಬಹುದು".

[illegible] 662ರಲ್ಲಿ ಬರೆದ.

[illegible] ಪ್ರಶಂಸೆಯ ಮಾತನ್ನಾಡಿದ್ದಾನೆ.

ಸೇನ್‌ಗುಪ್ತ

[illegible] ಗುಪ್ತ.

ಹುಟ್ಟಿದ್ದು ಈಗಿನ ಬಾಂಗ್ಲದೇಶಕ್ಕೆ ಸೇರಿರುವ ಚಿತ್ತಗಾಂಗ್ ಜಿಲ್ಲೆಯ [illegible] ವಿದ್ಯಾಭ್ಯಾಸ ಮುಗಿಸಿದ ಅನಂತರ ಇಂಗ್ಲೆಂಡಿಗೆ ಹೋಗಿ ಬಾರ್-ಎಟ್-ಲಾ ಪರೀಕ್ಷೆಯಲ್ಲಿ ಉತ್ತೀರ್ಣರಾದರು. ಅಲ್ಲಿದ್ದಾಗಲೇ ಗ್ರೇ ಎಂಬ ಭಾರತಾಭಿಮಾನಿಯ ಮಗಳು ನೆಲಿಯವರನ್ನು ಮದುವೆಯಾದರು. ಭಾರತಕ್ಕೆ ಹಿಂದಿರುಗಿ ವಕೀಲವೃತ್ತಿಯನ್ನು ಅವಲಂಬಿಸಿದರೂ ಅವರ ಒಲವು ರಾಜಕೀಯದ ಕಡೆಗೇ ಇತ್ತು. ಅಸಹಕಾರದ ಕರೆಗೆ ಓಗೊಟ್ಟು 1921ರಲ್ಲಿ ವೃತ್ತಿಯನ್ನು ಬಿಟ್ಟರು. ಸತ್ಯಾಗ್ರಹದಲ್ಲಿ ಭಾಗವಹಿಸಿದರು.

[illegible] ರಲ್ಲಿ ಬಂಗಾಳದ ಶಾಸನಸಭೆಯ ಸದಸ್ಯರಾದರು.

ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗಿಯಾದ ಸೇನ್‌ಗುಪ್ತರು ರಾಷ್ಟ್ರವ್ಯಾಪಿ ಸಂಚರಿಸಿ ಭಾಷಣ ಮಾಡಿದರು. ಜಲಿಯನ್‌ವಾಲಾ ಬಾಗ್‌ನಲ್ಲಿ ಮಾಡಿದ ಭಾಷಣಕ್ಕಾಗಿ ಅವರನ್ನು ಬಂಧಿಸಲಾಯಿತು. 1930ರ ಕಾನೂನು ಚಳುವಳಿಯಲ್ಲಿ ಭಾಗವಹಿಸಿದ್ದಕ್ಕಾಗಿ ಅವರು ಸೆರಮನೆ ಸೇರಬೇಕಾಯಿತು. ಸೆರೆಮನೆವಾಸದಲ್ಲಿ ಅವರ ಆರೋಗ್ಯ ಕೆಟ್ಟಿತು. 1931ರಲ್ಲಿ ವಿಶ್ರಾಂತಿಗಾಗಿ ಅವರು ತಮ್ಮ ಪತ್ನಿಯೊಡನೆ ಇಂಗ್ಲೆಂಡಿಗೆ ಹೋದರು. ಅಲ್ಲಿದ್ದಾಗ ಭಾರತ ಸ್ವಾತಂತ್ರ್ಯ ಹೋರಾಟದ ಬಗೆಗೆ ಭಾಷಣಗಳನ್ನು ಮಾಡಿದರು. ಪರಿಣಾಮವಾಗಿ, 1932ನೆಯ ಜನವರಿಯಲ್ಲಿ ಅವರು ಭಾರತಕ್ಕೆ ಹಿಂದಿರುಗುತ್ತಿದ್ದಾಗ, ಹಡಗು ಮುಂಬಯಿಯ ಸಮೀಪಕ್ಕೆ ಬರುತ್ತಿದ್ದಂತೆ ಹಡಗಿನಲ್ಲಿಯೇ ಬಂಧಿತರಾದರು. ಅವರನ್ನು ಎರವಾಡ ಸೆರೆಮನೆಗೆ ಸಾಗಿಸಲಾಯಿತು. ಅವರ ಆರೋಗ್ಯ ಮತ್ತೆ ಕೆಟ್ಟಿತು. ಅವರನ್ನು ಎರವಾಡ ಸೆರೆಮನೆಯಿಂದ ರಾಂಚಿಗೆ ಒಯ್ದು ಅಲ್ಲಿ ಅವರನ್ನು ಸ್ಥಾನಬದ್ಧತೆಯಲ್ಲಿ ಇಡಲಾಯಿತು. ಸ್ಥಾನಬದ್ಧತೆಯಲ್ಲಿದ್ದಾಗಲೇ 1933 ಜೂಲೈ 22ರಂದು ಅವರು ಹೃದ್ರೋಗದಿಂದ ಮರಣ ಹೊಂದಿದರು.

ನೋಡಿ : ನೆಲಿ ಸೇನ್‌ಗುಪ್ತ

ಸೇನರು

ಬಂಗಾಳದಲ್ಲಿ ಆಳಿದ ಸೇನವಂಶದ ಮೂಲಪುರುಷ ಸಾಮಂತಸೇನ. ತಾನು ಕರ್ನಾಟಕ ಮೂಲದವನೆಂದು ಹೇಳಿಕೊಂಡಿದ್ದಾನೆ. ಇವನ ಮೊಮ್ಮಗ ವಿಜಯಸೇನ ಸ್ವತಂತ್ರ ರಾಜ್ಯ ಸ್ಥಾಪಿಸಿದ. ರಾಜಧಾನಿ ವಿಜಯಪುರವನ್ನು ಇವನು ಕಟ್ಟಿಸಿದ. ಹನ್ನೆರಡನೆಯ ಶತಕದ ಮೂರನೆಯ ಪಾದದಲ್ಲಿ ಆಳಿದ ವಿಜಯಸೇನನ ಮಗ ಬಲ್ಲಾಳಸೇನ ಬಂಗಾಳದ ಖ್ಯಾತ ದೊರೆಯಾಗಿದ್ದ; ಪ್ರಸಿದ್ಧ ಲೇಖಕನೂ ಆಗಿದ್ದ.


ಇವನ ಮಗ ಲಕ್ಷ್ಮಣಸೇನನು ಧೀರ ಸೇನಾನಿಯಾಗಿದ್ದು, ಕಾಮರೂಪ (ಅಸ್ಸಾಂ)ವನ್ನು ಗೆದ್ದು, ಪಶ್ಚಿಮದಲ್ಲಿ ಕನ್ನೌಜದ ದೊರೆಯನ್ನು ಸೋಲಿಸಿದ. 'ಗೀತಗೋವಿಂದ'ದ ಕರ್ತೃ ಜಯದೇವ ಮತ್ತು 'ಪವನದೂತ'ದ ಕರ್ತೃ ಧೋಯಿ ಮುಂತಾದ ಸಂಸ್ಕೃತ ಕವಿಗಳು ಇವನ ಆಶ್ರಿತರು.

ಮುಂದೆ 13ನೇಯ ಶತಕದಲ್ಲಿ ಮಹಮ್ಮದೀಯರ ಆಕ್ರಮಣದಿಂದಾಗಿ ಸೇನರ ರಾಜ್ಯ ನಾಮಾವಶೇಷವಾಯಿತು.

1260ರಲ್ಲಿ ಆಳುತ್ತಿದ್ದವನು ಈ ವಂಶದ ಕೊನೆಯ ದೊರೆ ಕೇಶವಸೇನ. ಬಂಗಾಳದ ಇತಿಹಾಸದಲ್ಲಿ ಪಾಲರ ಅನಂತರ ಅಲ್ಲಿನ ಜನ ಜೀವನ, ಸಂಸ್ಕೃತಿಗಳನ್ನು ಶ್ರೀಮಂತಗೊಳಿಸಿದ ರಾಜವಂಶ ಸೇನರದ್ದು.

ಸೇವಾಗ್ರಾಮ

ಸೇವೆಮಾಡುವ ಗ್ರಾಮ — ಈ ಕಾರ್ಯಕ್ಕೆ ಅನುಗುಣವಾಗಿ 'ಸೇವಾ ಗ್ರಾಮ' ಎಂಬ ಹೆಸರು. ಮಹಾರಾಷ್ಟ್ರದ ವರ್ಧಾದಿಂದ ಸುಮಾರು



ಗಾಂಧೀಜಿಯ ಕೊಠಡಿ

ಐದು ಮೈಲು ದೂರದಲ್ಲಿರುವ ಇದನ್ನು ಒಂದು ಮಾದರಿ ಗ್ರಾಮದಂತೆ ರೂಪಿಸಿದವರು ರಾಷ್ಟ್ರಪಿತ ಗಾಂಧೀಜೀ.

ಭಾರತದ ಸ್ವಾತಂತ್ರ್ಯ ದೊರೆಯುವ ವರೆಗೆ ಇಲ್ಲಿಗೆ ಹಿಂದಿರುಗುವುದಿಲ್ಲ ಎಂಬ ಪ್ರತಿಜ್ಞೆ ಮಾಡಿ ಸಾಬರಮತಿ ನದೀ ದಂಡೆಯ ಮೇಲಿನ ತಮ್ಮ

ಸೇವಾಗ್ರಾಮದ ಮೊದಲ ವರ್ಷ ಗಾಂಧೀಜೀ ಉಳಿದುಕೊಂಡ ಗುಡಿಸಲು



ಸೇವಾಗ್ರಾಮ ವಾಸದ ಕೊನೆಯ ಹಂತದಲ್ಲಿ ಬಳಸಿದ ಕುಟೀರ



ಆಶ್ರಮವನ್ನು 1936ರಲ್ಲಿ ಗಾಂಧೀಜೀ ತೊರೆದರು. ಅನಂತರ ಸೇಗಾಂವಿಗೆ ಹೋಗಿ ನೆಲೆಸಿದರು. ಅಲ್ಲಿಂದಲೇ ಸ್ವಾತಂತ್ರ್ಯ ಚಳವಳಿಯ ಕಾರ್ಯಕ್ರಮಗಳನ್ನು ನಿರ್ದೇಶಿಸಿದರು. ಅಲ್ಲಿ ತಮ್ಮ ಆಶ್ರಮ ಸ್ಥಾಪಿಸಿದರು. 1940ರಲ್ಲಿ ಸೇಗಾಂವ್ ಹಳ್ಳಿಯ ಹೆಸರು ಸೇವಾಗ್ರಾಮವಾಯಿತು. 1948ರಲ್ಲಿ ಗಾಂಧೀಜಿಯ ಹತ್ಯೆಯಾಗುವವರೆಗೆ ಸೇವಾಗ್ರಾಮ ಅವರ ಎಲ್ಲ ಚಟುವಟಿಕೆಗಳ ಕೇಂದ್ರಸ್ಥಾನವಾಗಿದ್ದಿತು.

ಈಗಲೂ ಸೇವಾಗ್ರಾಮದಲ್ಲಿ ಹಲವು ರಾಷ್ಟ್ರೀಯ ಸಂಸ್ಥೆಗಳು ಕೆಲಸ ನಡೆಸುತ್ತಿವೆ.

ಗಾಂಧೀಜೀ ಉಪಯೋಗಿಸುತ್ತಿದ್ದ ನಡೆಗೋಲು, ಗಡಿಯಾರ, ಪೆನ್, ಪುಸ್ತಕ ಇಡುವ ಸ್ಟ್ಯಾಂಡ್ ಮುಂತಾದುವನ್ನು ಸೇವಾಗ್ರಾಮದಲ್ಲಿ ಅವರು ವಾಸಿಸುತ್ತಿದ್ದ ಕುಟೀರದಲ್ಲಿ ಸಂರಕ್ಷಿಸಿ ಇಡಲಾಗಿದೆ.

ನೋಡಿ : ವರ್ಧಾ ಶಿಕ್ಷಣ ಯೋಜನೆ ; ಸಾಬರಮತಿ ಆಶ್ರಮ

ಸೇವಾದಳ

ನೋಡಿ : ಸಂಪುಟ ೧

ಸೇವುಣರು

ರಾಷ್ಟ್ರಕೂಟರ ಮತ್ತು ಕಲ್ಯಾಣದ ಚಾಲುಕ್ಯರ ಮಾಂಡಲಿಕರಾಗಿದ್ದು, ಮುಂದೆ ಚಾಲುಕ್ಯರ ಪತನದ ಅನಂತರ ಪರಮಾಧಿಕಾರಿಗಳಾಗಿ ಆಳಿದವರು ಸೇವುಣರು (ಯಾದವರು). ಮೂಲತಃ ಸಿಂಧಿನೇರ್(ಸಿನ್ನರ್)ನಿಂದ ಆಳುತ್ತಿದ್ದ ಇವರು ಮುಂದೆ ದೇವಗಿರಿಯನ್ನು (ದೌಲತಾಬಾದ್) ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡರು.

ದ್ವಾರಕೆಯ ಯಾದವರ ಸಂತತಿಯವರೆಂದು ಹೇಳಿಕೊಂಡಿರುವ ಈ ಸಂತತಿಯ ಮೊದಲ ಖ್ಯಾತ ವ್ಯಕ್ತಿ ದೃಢಪ್ರಹಾರ. ಸುಮಾರು [illegible] ಯುಗ. ದೃಢಪ್ರಹಾರನ ಮಗನಾದ ಸೇವುಣಚಂದ್ರನ ಕಾಲದಲ್ಲಿ ಇವರ ಚಿಕ್ಕ ರಾಜ್ಯಕ್ಕೆ ಸೇವುಣದೇಶ ಎಂಬ ಹೆಸರು ಬಂತು. ಇವರೆಲ್ಲರೂ ಒಂಬತ್ತನೆಯ ಶತಮಾನದಲ್ಲಿ ಆಳಿದವರು.

12ನೆಯ ಶತಮಾನದಲ್ಲಿ ಕಲ್ಯಾಣದ ಚಾಲುಕ್ಯರು ಅವನತಿಗೊಂಡಾಗ ಸೇವುಣರು ಪರಮಾಧಿಕಾರ ಉಳ್ಳ ದೊರೆಗಳಾದರು. ಆಗ ಇವರು ಹೊಯ್ಸಳರ ಜೊತೆ ಸತತವಾಗಿ ಸೆಣಸಲಾರಂಭಿಸಿದರು. ಜೈತುಗಿ ಎರಡನೆಯ ಸಿಂಘಣ ಈ ಸಂತತಿಯ ಖ್ಯಾತ ದೊರೆಗಳು. ರಾಮಚಂದ್ರನ ಕಾಲದಲ್ಲಿ (1271–1312) ದೆಹಲಿಯ ಸೇನಾನಿ [illegible] ಈ ಸಾಮ್ರಾಜ್ಯವನ್ನು ಗೆದ್ದುಕೊಂಡ. ಮುಂದೆ ಹರಪಾಲದೇವ (1316–18), ಮಲ್ಲುಗಿ (1334) ಮುಂತಾದ ದೊರೆಗಳು [illegible] ಸೇವುಣರ ರಾಜ್ಯ ಅಲ್ಲಿಗೆ ಮುಕ್ತಾಯವಾಯಿತು.

'ಚಾತುರ್ವರ್ಗ ಚಿಂತಾಮಣಿ' ಎಂಬ ಸಂಸ್ಕೃತ 'ವಿಶ್ವಕೋಶ'ವನ್ನು ಬರೆದ ಹೇಮಾದ್ರಿ ಎಂಬ ವಿದ್ವಾಂಸ ಇವರಲ್ಲಿ ಮಂತ್ರಿಯಾಗಿದ್ದ. ಮಹಾನುಭಾವ ಪಂಥ ಎಂಬ ಧಾರ್ಮಿಕ ಸಂಪ್ರದಾಯದ ಸ್ಥಾಪಕ ಚಕ್ರಧರ ಸ್ವಾಮಿ ಸೇವುಣ ಅರಸರಿಂದ [illegible]. [illegible] ಮರಾಠೀ ಗ್ರಂಥ 'ಜ್ಞಾನೇಶ್ವರಿ'ಯನ್ನು ಬರೆದ [illegible] ರಾಮಚಂದ್ರನ ಸಮಕಾಲೀನ. ಕರ್ನಾಟಕದ ಉತ್ತರ ಭಾಗ, ಮಹಾರಾಷ್ಟ್ರ ಹಾಗೂ ಮಧ್ಯಭಾರತದ ಪ್ರದೇಶದ ಮೇಲೆ [illegible] ರಾಜ್ಯವಿತ್ತು.

ಸೈಫುದ್ದೀನ್ ಕಿಚ್ಲು

1919 ಏಪ್ರಿಲ್ 10ರ ಪ್ರಭಾತಕಾಲ. [illegible] ಯಾವುದೋ ಒಂದು ಸೆರೆಮನೆಗೆ ಗುಪ್ತವಾಗಿ ಸಾಗಿಸಲಾಯಿತು. ತಮ್ಮ ಮುಖಂಡರು [illegible] ಚಳುವಳಿ ಆರಂಭಿಸಿದರು. ಮೆರವಣಿಗೆ ಹೊರಟಿದ್ದ ಜನರ ಮೇಲೆ ಪೋಲೀಸರು ಗುಂಡು ಹಾರಿಸಿದರು ; ಚಳುವಳಿಗಾರರಲ್ಲಿ ಒಬ್ಬಿಬ್ಬರು ಮೃತರಾದರು.



ಸ್ವಾತಂತ್ರ್ಯ ಸಮರ : ಕಿಚ್ಲು

1919ರಲ್ಲಿ ಪಂಜಾಬಿನಲ್ಲಿ ಜಾರಿಗೆ ತಂದ ಮಾರ್ಷಲ್ ಲಾ ವಿರೋಧಿಸಿದ ಚಳುವಳಿಗೆ ಸೈಫುದ್ದೀನ್ ಕಿಚ್ಲು ನಾಯಕರಾಗಿದ್ದರು.

1886ರಲ್ಲಿ ಕಿಚ್ಲು ಅವರ ಜನನ. ಅವರು ಗಾಂಧೀಜಿಯ ಆಪ್ತ ಕಾರ್ಯಕರ್ತರಲ್ಲಿ ಒಬ್ಬರು ; ಪ್ರಮುಖ ಸ್ವಾತಂತ್ರ್ಯ ಹೋರಾಟಗಾರರು. ಹಿರಿಯ ವಕೀಲರಾಗಿದ್ದ ಕಿಚ್ಲು ದೆಹಲಿ ಮತ್ತು ಮೀರತ್ ಒಳಸಂಚಿನ ಮೊಕದ್ದಮೆಯಲ್ಲಿ ಆಪಾದಿತರ ಪರವಾಗಿ ವಾದಿಸಿದರು. ಖಿಲಾಫತ್ ಚಳುವಳಿಯಲ್ಲೂ ಇವರು ಮಹತ್ವದ ಪಾತ್ರ ವಹಿಸಿದರು. ಡಾ. ಸೈಫುದ್ದೀನ್ ಕಿಚ್ಲು ಅಖಿಲ ಭಾರತ ಶಾಂತಿ ಪರಿಷತ್ತಿನ ಸಂಸ್ಥಾಪಕ-ಅಧ್ಯಕ್ಷರಾಗಿದ್ದರು ; ಇವರು ವಿಶ್ವ ಶಾಂತಿ ಪರಿಷತ್ತಿನ ಉಪಾಧ್ಯಕ್ಷರಲ್ಲಿ ಒಬ್ಬರಾಗಿದ್ದರು.

ಕಿಚ್ಲು ಅವರಿಗೆ ಅಂತರರಾಷ್ಟ್ರೀಯ ಲೆನಿನ್ ಪಾರಿತೋಷಕವನ್ನು ನೀಡಲಾಯಿತು.

1963ರಲ್ಲಿ ಕಿಚ್ಲು ನಿಧನರಾದರು.

ಸೈರಸ್

[illegible] 'ಸೈರಸ್ ಮಹಾಶಯ', 'ರಾಜಾಧಿರಾಜ' ಎಂಬ ಬಿರುದುಗಳು ಇದ್ದುವು.

ಪ್ರಾಚೀನ ಗ್ರೀಕರಿಗೂ ಅವನೊಬ್ಬ ಆದರ್ಶ ದೊರೆಯಾಗಿದ್ದ. [illegible] ಕಟ್ಟಿದ.

[illegible] ದಂಡಯಾತ್ರೆ ಬಂದದ್ದರಿಂದ ಅವನಿಗೆ [illegible]

ಹಾಯಿತು. ಗಾಂಧಾರವೂ ಸೇರಿ ಭಾರತದ ವಾಯವ್ಯ ಗಡಿ ಪ್ರದೇಶಗಳು ಇವನ ವಶವಾದುವು. ಕಾಬೂಲ್ ಹಾಗೂ ಸಿಂಧೂ ನದಿಯ ನಡುವೆ ಇದ್ದ ರಾಜರು ಇವನಿಗೆ ಕಪ್ಪ ಕಾಣಿಕೆಗಳನ್ನು ನೀಡುತ್ತಿದ್ದರು. ಭಾರತದ ಮೇಲೆ ದಾಳಿ ನಡೆಸುತ್ತಿದ್ದಾಗ ಗಾಯಗೊಂಡು [illegible] ಮೃತನಾದ.

ಸೊಲ್ಲಾಪುರ

ಹೈದರಾಬಾದ್ [illegible] ಮಹಾರಾಷ್ಟ್ರದಲ್ಲಿರುವ ಸೊಲ್ಲಾಪುರ ವ್ಯಾಪಾರ, ಸರಕುಗಳ ಸಂಗ್ರಹಣೆ, ವಿತರಣೆಗಳಿಗೆ ಅನುಕೂಲವಾದ ಕೇಂದ್ರ. ಮುಂಬಯಿಯಿಂದ ಇಲ್ಲಿಗೆ 280 ಮೈಲು.



[illegible]

ಸೊಲ್ಲಾಪುರ ಕನ್ನಡದ ಪ್ರಸಿದ್ಧ ವಚನಕಾರ ಸಿದ್ಧರಾಮರ ಕಾರ್ಯಕ್ಷೇತ್ರವಾಗಿತ್ತು. ಆಗ ಇದರ ಹೆಸರು ಸೊನ್ನಲಿಗೆ. ಸಮುದ್ರ ಮಟ್ಟದಿಂದ 1,800 ಅಡಿ ಎತ್ತರದ ಬಯಲು ಪ್ರದೇಶದಲ್ಲಿದೆ. ಹತ್ತಿ ಉದ್ಯಮ ಇಲ್ಲಿನ ಪ್ರಮುಖ ಕೈಗಾರಿಕೆ. ಗಿರಣಿಗಳಲ್ಲಿ ಹಾಗೂ ಕೈ ಮಗ್ಗಗಳಲ್ಲಿ ನೂಲಿನ ವಸ್ತ್ರಗಳು ತಯಾರಾಗುತ್ತವೆ. ನಗರದಲ್ಲಿ ಹಲವು ವಿದ್ಯಾಸಂಸ್ಥೆಗಳಿವೆ.

ಸೊಲ್ಲಾಪುರದ ಬಳಿಯಿರುವ ಸಿದ್ಧೇಶ್ವರ ಸರೋವರದ ಮಧ್ಯದಲ್ಲಿ ದೇವಾಲಯವಿದೆ. ಇದರ ಬಳಿ ವಿಹಾರಯೋಗ್ಯವಾದ ಸುಂದರ ಉದ್ಯಾನವಿದೆ. ಕೋಟೆ, ಉಸ್ಮಾನಾಬಾದ್ ರಸ್ತೆಯ ಬದಿಯಲ್ಲಿರುವ ಏಕನಾಥ ಸರೋವರ ಅಥವಾ ಸಿದ್ಧಗರ್ ಸರೋವರ, [illegible] -ಇವು ಪ್ರೇಕ್ಷಣೀಯ ಸ್ಥಳಗಳು. ಸೊಲ್ಲಾಪುರದಿಂದ 13 ಮೈಲು ದೂರದಲ್ಲಿರುವ ಉಸ್ಮಾನಾಬಾದಿನಲ್ಲಿ ಜೈನ ಹಾಗೂ ವೈಷ್ಣವ ಗುಹೆಗಳಿವೆ. 28 ಮೈಲು ದೂರದಲ್ಲಿರುವ ತುಳಜಾಪುರದಲ್ಲಿ ತುಳಜಾಭವಾನಿ ಅಥವಾ ದುರ್ಗಾ ದೇವಾಲಯವಿದೆ. ಹೆಸರಾದ ಪಂಢರಪುರ ಇಲ್ಲಿಂದ 38 ಮೈಲು ದೂರದಲ್ಲಿದೆ.

ಸೊಲ್ಲಾಪುರದ ಜನಸಂಖ್ಯೆ 3,98,361.


ಸೋನ್

ಗಂಗಾನದಿಯ ಪ್ರಮುಖ ಉಪನದಿ, ಸೋನ್.

ಸೋನ್(ಶೋಣಾ) ನದಿಯ [illegible] ಬಂಗಾರದ ಬಣ್ಣದ ಮರಳು [illegible]. ಅದಕ್ಕಾಗಿಯೇ ನದಿಗೆ ಈ ಹೆಸರು ([illegible]). ಸೋನ್ ನದಿಯಿಂದ [illegible] ಫಲವತ್ತಾಗಿದೆ. ಸೋನ್ ಮತ್ತು ಅದರ ಉಪನದಿಗಳಿಗೆ ಕಟ್ಟಿದ ಅಣೆಕಟ್ಟುಗಳಿಂದ ಒದಗುವ ನೀರು ಸಾವಿರಾರು ಎಕರೆ ಭೂಮಿಯನ್ನು ಹಸಿರುಗೊಳಿಸಿದೆ.

ಸೋನ್ ಹುಟ್ಟುವುದು ಗೊಂಡ್ವಾನ ಪ್ರದೇಶ ಅಮರಕಂಟಕದ ಎತ್ತರ ಭೂಮಿಯಲ್ಲಿ. ಮೊದಲು ಇದು ಉತ್ತರದಿಕ್ಕಿನಲ್ಲಿ ಹರಿದು ಅನಂತರ ಪೂರ್ವಕ್ಕೆ ತಿರುಗಿ ಮುಂದೆ ಈಶಾನ್ಯಕ್ಕೆ ಹರಿಯುತ್ತದೆ. ಪಟ್ನಾ ನಗರದ ಹತ್ತಿರ ಇದು ಗಂಗಾನದಿಯನ್ನು ಸೇರುತ್ತದೆ. ಇದು ಗಂಗಾನದಿಯ ಮುಖ್ಯ ಉಪನದಿ. ಸೋನ್‌ನ ಉದ್ದ 487 ಮೈಲು.

ಬೇಸಿಗೆಯಲ್ಲಿ ಸೋನ್ ಬರಿಯ ಒಂದು ತೊರೆ. ಹಲವೆಡೆ ಇದನ್ನು ನಡೆದೇ ದಾಟಬಹುದು. ಆದರೆ ಮಳೆಗಾಲದಲ್ಲಿ ಸೋನ್ ಉಕ್ಕಿ ಹರಿಯುತ್ತದೆ. ಛೋಟಾ ನಾಗಪುರ ಎತ್ತರಭೂಮಿಯಲ್ಲಿ ಮತ್ತು ಕೈಮೂರ್ ಪರ್ವತ ಶ್ರೇಣಿ ಪ್ರದೇಶಗಳಲ್ಲಿ ಮಳೆಯಾದಾಗ, ಈ ನದಿಯಲ್ಲಿ ಇದ್ದಕ್ಕಿದ್ದಂತೆ ನೀರು ತುಂಬುತ್ತದೆ. ಮಹಾಪೂರ ಇಳಿದ ಮೇಲೆ ಫಲವತ್ತಾದ ಮಣ್ಣು ದಡದಲ್ಲಿ ಉಳಿಯುತ್ತದೆ.



ಸೋನ್ ನದಿಯಿಂದ ನೀರಾವರಿ


ಸೋನ್ ನದಿಗೆ ರಿಹಾಂಡ್ ಎಂಬಲ್ಲಿ ಕಟ್ಟಿದ ಅಣೆಕಟ್ಟಿನಿಂದ ಉತ್ತರ ಪ್ರದೇಶ, ಬಿಹಾರ್ ಮತ್ತು ಮಧ್ಯ ಪ್ರದೇಶಗಳ ವಿಶಾಲ ಭಾಗಕ್ಕೆ ನೀರಾವರಿ ಸಾಧ್ಯವಾಗಿದೆ; ದೊಡ್ಡ ಪ್ರಮಾಣದಲ್ಲಿ ವಿದ್ಯುಚ್ಛಕ್ತಿಯೂ ಲಭ್ಯವಾಗಿದೆ.

ಸೋಫಿಯ ವಾಡಿಯ

ಪ್ಯಾರಿಸಿನಲ್ಲಿ ಹುಟ್ಟಿ ನ್ಯೂಯಾರ್ಕಿನ ಕೊಲಂಬಿಯಾ ವಿಶ್ವವಿದ್ಯಾಲಯ, ಲಂಡನಿನ ಪ್ರಾಚ್ಯ ಅಧ್ಯಯನ ಸಂಸ್ಥೆಗಳಲ್ಲಿ ವ್ಯಾಸಂಗಮಾಡಿ, ಭಾರತದಲ್ಲಿ ನೆಲೆಸಿದವರು ಸೋಫಿಯ ವಾಡಿಯ. ಭಾರತೀಯ ಸಂಸ್ಕೃತಿಯಲ್ಲಿ ಇವರಿಗೆ ಹೆಚ್ಚು ಆಸಕ್ತಿ.

1901 ಸೆಪ್ಟೆಂಬರ್ 13 ಇವರ ಜನನ. ವ್ಯಾಸಂಗ ಮುಗಿದ ಮೇಲೆ ಹಲವು ಚಟುವಟಿಕೆಗಳಲ್ಲಿ ಭಾಗವಹಿಸಿದರು. ಯುನೈಟೆಡ್

ಲಾಡ್ ಆಫ್ ಥಿಯಾಸಫಿಸ್ಟ್ಸ್ ಸಂಸ್ಥೆಯ ಸದಸ್ಯರಾದರು. ಅಖಿಲ ಭಾರತ 'ಪೆನ್' ಸಂಸ್ಥೆಯನ್ನು (ಕವಿ–ಸಂಪಾದಕ–ಕಾದಂಬರಿಕಾರರ ಸಂಸ್ಥೆ) ಸಂಘಟಿಸಿದರು. [illegible] ವಿಶ್ವ ಸಂಸ್ಕೃತಿಯ ಭಾರತೀಯ ಸಂಸ್ಥೆಯ (ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್) ಸ್ಥಾಪಕರಲ್ಲಿ ಇವರೂ ಒಬ್ಬರು. 1958ರಲ್ಲಿ ಅದರ ಅಧ್ಯಕ್ಷರಾದರು. ಮಹಿಳೆಯರ ಶಿಕ್ಷಣ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಚಳುವಳಿಗಳಲ್ಲಿ ಇವರದು ಸಕ್ರಿಯ ಪಾತ್ರ.



ಪಿ.ಇ.ಎನ್. : ಸೋಫಿಯ ವಾಡಿಯ

'ಧರ್ಮಗಳ ಭ್ರಾತೃತ್ವ', 'ಪೌರತ್ವಕ್ಕೆ ಸಿದ್ಧತೆಗಳು' ಇವರ ಕೃತಿಗಳು. ಕೆಲ ಕಾಲ 'ಆರ್ಯನ್ ಪಾತ್' ಹಾಗೂ 'ಇಂಡಿಯನ್ ಪಿ.ಇ.ಎನ್.' ಸಂಪಾದಕರಾಗಿದ್ದರು.

1961ರಲ್ಲಿ ಸೋಫಿಯ ವಾಡಿಯ ಅವರಿಗೆ ಭಾರತ ಸರಕಾರ ಪದ್ಮಶ್ರೀ ಪ್ರಶಸ್ತಿ ನೀಡಿತು.

ನೋಡಿ : ಪಿ.ಇ.ಎನ್. —ಸಂಪುಟ ೫

ಸೋಮದೇವ ಸೂರಿ

'ನೀತಿವಾಕ್ಯಾಮೃತ' ಎಂಬ ಸರಳ ಸಂಸ್ಕೃತ ಕೃತಿಯನ್ನು ಬರೆದವನು ಸೋಮದೇವ ಸೂರಿ. ಈತ ದಿಗಂಬರ ಜೈನ ಬರಹಗಾರ. ಇವನ ಕಾಲ 959.

ಇದರಲ್ಲಿ ನೈತಿಕತೆಗೆ ಪ್ರಾಶಸ್ತ್ಯ ಹೆಚ್ಚು. ಯುಕ್ತಿಗಿಂತ ವಿವೇಕ ಲೇಸು ; ಹಿಂಸೆಗಿಂತ ಕಠಿನ ಪರೀಕ್ಷೆ ಉತ್ತಮ —ಎಂದು ಸೋಮದೇವ ತಿಳಿಸುತ್ತಾನೆ. ಹುಟ್ಟಿನಿಂದ ಕೆಳದರ್ಜೆಗೆ ಸೇರಿದರೂ ಗುಣಸಂಪನ್ನನಾದವನಿಗೆ ಸೋಮದೇವ ಹಿರಿಯ ಸ್ಥಾನ ನೀಡಿದ್ದಾನೆ.

ನೀತಿವಾಕ್ಯಾಮೃತವು ಬಹುಪಾಲು ಕೌಟಿಲ್ಯನ ಅರ್ಥಶಾಸ್ತ್ರವನ್ನು ಆಧರಿಸಿದೆ. ಆಡಳಿತ ಹಾಗೂ ಸೈನಿಕ ವಿಷಯಗಳಿಗೆ ಪ್ರಾಶಸ್ತ್ಯ ಕಡಮೆ. ರಾಜ ತನ್ನ ಪ್ರಜೆಯೊಡನೆ ಹೇಗೆ ವರ್ತಿಸಬೇಕು ಎಂಬುದನ್ನು ತಿಳಿಸಲು ಸೋಮದೇವನಿಗೆ ಆಸಕ್ತಿ ಹೆಚ್ಚು. ರಾಜರು ಹೆಚ್ಚು ಪ್ರಾಪಂಚಿಕರಾಗಿರಬೇಕು —ಎಂದು ಅವನ ಅಭಿಮತ.

ಸೋಮದೇವ 'ಯಶಸ್ತಿಲಕ' ಎಂಬ [illegible] ಕೃತಿಯನ್ನೂ ಬರೆದಿದ್ದಾನೆ.

ಸೋಮನಾಥಪುರ

ಹೊಯ್ಸಳ ಶೈಲಿಯ ಉತ್ತಮ ದೇವಾಲಯಗಳಲ್ಲೊಂದು ಸೋಮನಾಥಪುರದ ಚೆನ್ನಕೇಶವನ ಗುಡಿ. ಅದರ ಕುಸುರಿ ಕೆಲಸ ಅತ್ಯಂತ ಮನೋಹರ. ಇದು ಮೈಸೂರಿನಿಂದ ಸುಮಾರು 30 ಮೈಲಿ ದೂರದಲ್ಲಿದೆ ; ತಿರುಮಕೂಡಲು ನರಸೀಪುರದಿಂದ ಇಲ್ಲಿಗೆ 4 ಮೈಲಿ.

[illegible] ಈ ದೇವಾಲಯದ [illegible] ನಕ್ಷತ್ರಾಕಾರದಲ್ಲಿದೆ. [illegible] ಗೋಡೆಗಳ ಮೇಲೆ [illegible]



ಸೋಮ ದಂಡನಾಯಕ ಕಟ್ಟಿಸಿದ ಚನ್ನಕೇಶವ ಗುಡಿ

ಮೇಲೆ ಪೌರಾಣಿಕ ವ್ಯಕ್ತಿ ಪ್ರತಿಮೆಗಳೂ ಇವೆ. ಇಂಥ ಒಂದು ಚಿತ್ರ ಫಲಕದ ಮೇಲೆ ಸಾಲುಸಾಲಾಗಿರುವ ಹಂಸಗಳು ಬಹಳ ಸುಂದರವಾಗಿವೆ.

ಮೃದುವಾದ ಬಳಪದ ಕಲ್ಲಿನಲ್ಲಿ ಮಾಡಲಾಗಿರುವ ದೇವಾಲಯದ ಶಿಲ್ಪಕೃತಿಗಳು ಜೀವಕಳೆಯಿಂದ ತುಂಬಿವೆ ; ಗರ್ಭಗುಡಿಯಲ್ಲಿರುವ ವೇಣುಗೋಪಾಲ, ಜನಾರ್ದನ ಹಾಗೂ [illegible] ಶ್ರೇಷ್ಠ ಶಿಲ್ಪಗಳು.

ಹೊಯ್ಸಳರ [illegible] ಸೋಮ ದಂಡ 1268ರಲ್ಲಿ ಈ ದೇವಾಲಯವನ್ನು [illegible] ಶಾಸನ ತಿಳಿಸುತ್ತದೆ.

ನೋಡಿ : ಬೇಲೂರು ಹಳೇಬೀಡು —ಸಂಪುಟ ೫

ಸೋಲಂಕಿಗಳು

ನೋಡಿ : ಚಾಲುಕ್ಯರು

ಸೋವಿಯೆತ್ ಒಕ್ಕೂಟ

[illegible]

1971ರ ಆಗಸ್ಟ್ 9 ಭಾರತ–ರಷ್ಯಗಳ ಸಂಬಂಧದಲ್ಲಿ ಒಂದು ಚರಿತ್ರಾರ್ಹ ದಿನ. ಅಂದು ಈ ಎರಡು ದೇಶಗಳ ನಡುವೆ 20 ವರ್ಷಗಳ ಶಾಂತಿ, ಮೈತ್ರಿ, ಸಹಕಾರಗಳ ಒಪ್ಪಂದ ಏರ್ಪಟ್ಟಿತು. ಈ ಎರಡು ದೇಶಗಳ [illegible] 1973ರಲ್ಲಿ [illegible]



ಭಾರತಕ್ಕೆ ಬ್ರೆಝ್ನೇವ್ ಭೇಟಿ, ಮಾತುಕತೆ –1973

ಲಿಯೊನೇಡ್ ಬ್ರೆಝ್ನೇವ್ ಭಾರತಕ್ಕೆ ಭೇಟಿ ಇತ್ತರು. ಆ ಸಂದರ್ಭದಲ್ಲಿ 15 ವರ್ಷಗಳ ರಷ್ಯ–ಭಾರತ ಆರ್ಥಿಕ ಸಹಕಾರಕ್ಕೆ ಸಂಬಂಧಿಸಿ ಒಪ್ಪಂದ ಏರ್ಪಟ್ಟಿತು.

ರಷ್ಯದಲ್ಲಿ 1917 ಕ್ರಾಂತಿಯ ಪರಿಣಾಮವಾಗಿ ಸೋವಿಯೆತ್ ಒಕ್ಕೂಟ ರಚನೆಯಾಯಿತು. ದೀರ್ಘಕಾಲದ ಅಂತರ್ಯುದ್ಧ, ಅಪಾರ ಕಷ್ಟನಷ್ಟಗಳ ಬಳಿಕ ಸೋವಿಯೆತ್ ಒಕ್ಕೂಟದ ತಳಹದಿ ಭದ್ರಗೊಂಡಿತು. ಭಾರತ ಸ್ವತಂತ್ರವಾದ ಬಳಿಕ ಸೋವಿಯೆತ್ ರಷ್ಯ ಮತ್ತು ಅದರ ನಡುವೆ ಸ್ನೇಹ ಸಂಬಂಧ ಬೆಳೆಯಿತು.

1955ರಲ್ಲಿ ಸೋವಿಯೆತ್ ಒಕ್ಕೂಟದ ಪ್ರತಿನಿಧಿಗಳು ಭಾರತ ಪ್ರವಾಸ ಕೈಗೊಂಡರು. ಅದೇ ವರ್ಷ ಜೂನ್ ತಿಂಗಳಲ್ಲಿ ಪ್ರಧಾನಿ ನೆಹರೂ ಅವರಿಗೆ ರಷ್ಯದಲ್ಲಿ ಅಭೂತಪೂರ್ವ ಸ್ವಾಗತ ದೊರೆಯಿತು. ನವೆಂಬರ್‌ನಲ್ಲಿ ಅಲ್ಲಿನ ಕ್ರುಶ್ಚಾಫ್ ಮತ್ತು ಬುಲ್ಗಾನಿನ್ ಭಾರತವನ್ನು ಸಂದರ್ಶಿಸಿದರು. ಹೀಗೆ ಭಾರತ ರಷ್ಯಗಳ ಸಂಬಂಧ ಬಲಿಯಿತು. ರಷ್ಯ ಭಾರತಕ್ಕೆ ಸಾಕಷ್ಟು ಕೈಗಾರಿಕಾ ನೆರವು ನೀಡಿದೆ. ತಾಂತ್ರಿಕ ವಿಷಯ ತಜ್ಞರನ್ನು ಒದಗಿಸಿದೆ. ಚೀನ ಭಾರತದ ಗಡಿಯನ್ನು ಆಕ್ರಮಿಸಿಕೊಂಡಾಗ ಭಾರತದ ಪರ ಸೋವಿಯೆತ್ ರಷ್ಯ ವಾದಿಸಿತು. ಪಾಕಿಸ್ತಾನ ಭಾರತದ ಮೇಲೆ ಕದನ ಹೂಡಿದಾಗ ಮಿಗ್ ವಿಮಾನಗಳನ್ನು ಒದಗಿಸಿತು.

ರಷ್ಯ ಪ್ರಪಂಚದಲ್ಲೇ ಅತ್ಯಂತ ದೊಡ್ಡ ರಾಷ್ಟ್ರ. ಯೂರೋಪಿನ ಹಲವು ದೇಶಗಳು, ಏಷ್ಯದ ಹಲವು ದೇಶಗಳು ಇದರ ನೆರೆಗಳು. ಚಳಿಯದ್ದು ಕರಾವಳಿ. ಇಲ್ಲಿನ ಪ್ರಾಣಿಪಕ್ಷಿಗಳು ಹಾಗೂ ಸಸ್ಯಗಳ ವೈವಿಧ್ಯ ಅಪಾರ. ವಿಪುಲ ಖನಿಜಸಂಪತ್ತು ಇದೆ. ಸೈಬೀರಿಯ ಮರುಭೂಮಿ ಈ ದೇಶದ ಪ್ರಧಾನ ಭಾಗ.

ರಷ್ಯ ಕೃಷಿಯಲ್ಲಿ ಕ್ರಾಂತಿಕಾರಿ ಬದಲಾವಣೆಗಳನ್ನು ಸಾಧಿಸಿದೆ. ಎಲ್ಲ ಬಗೆಯ ಸಾರಿಗೆ ಸಂಪರ್ಕಗಳನ್ನು ಅಭಿವೃದ್ಧಿಗೊಳಿಸಿದೆ. ಗಗನಯಾತ್ರೆಯಲ್ಲಿಯೂ ವಿಕ್ರಮಗಳನ್ನು ಸಾಧಿಸಿದೆ. ಪ್ರಪಂಚದ ಪ್ರಥಮ ಮಹಿಳಾ ಗಗನಯಾನಿ ವಾಲೆಂಟಿನಾ ತೆರೆಷ್ಕೋವ ಸೋವಿಯೆತ್ ಪ್ರಜೆ.

ದೇಶದ ರಾಜಧಾನಿ ಮಾಸ್ಕೊ.

ನೋಡಿ : ಸೋವಿಯೆತ್ ಒಕ್ಕೂಟ–ಸಂಪುಟ ೧

ಹಂಪೆ

ಕಡಲೆಕಾಳು ಗಣೇಶ ಹದಿನಾರು ಅಡಿ ಎತ್ತರ; ಸಾಸಿವೆಕಾಳು ಗಣೇಶ ಎಂಟು ಅಡಿ ಎತ್ತರ. ಈ ಎರಡೂ ಏಕಶಿಲಾ ವಿಗ್ರಹಗಳು. ಇವು ಭಾರತದಲ್ಲೇ ಅತಿ ದೊಡ್ಡದಾದ ಗಣೇಶ ವಿಗ್ರಹಗಳು. ಇವು ಇರುವುದು ಈಗ ಹಾಳುಬಿದ್ದಿರುವ ಹಂಪೆಯಲ್ಲಿ.

ಹಂಪೆ ಹಿಂದೆ ವಿಜಯನಗರವೆಂಬ ಹೆಸರಿನಿಂದ ಪ್ರಖ್ಯಾತವಾಗಿತ್ತು; ವಿಜಯನಗರ ಸಾಮ್ರಾಜ್ಯದ ರಾಜಧಾನಿಯಾಗಿತ್ತು.

ಹಂಪೆಯ ಹತ್ತಿರ ಹರಿಯುವ ತುಂಗಭದ್ರಾ ನದಿಯ ಭಾಗವನ್ನು ಹಿಂದೆ ಪಂಪಾನದಿ ಎನ್ನುತ್ತಿದ್ದರು. ಈ ನದೀ ದಂಡೆಯ ಪ್ರದೇಶವೇ ಪಂಪಾಕ್ಷೇತ್ರ. 'ಪಂಪಾ' ಹಂಪೆ ಆಗಿರಬೇಕು.

ಹಂಪೆಯನ್ನು 'ಭಾರತದ ಪಾಂಪೆ' (ಪ್ರಾಚೀನ ರೋಮನ್ ಸಾಮ್ರಾಜ್ಯದ ನಶಿಸಿಹೋದ ಮಹಾನ್ ನಗರ) ಎಂದು ಕರೆದಿದ್ದಾರೆ.

ಶಿಲ್ಪಕಲೆಗೆ ಹೆಸರಾದ ಈ ನಗರದ ಪೂರ್ವವೈಭವವನ್ನು ಸಾರುವ ಭಗ್ನಾವಶೇಷಗಳು ಸುಮಾರು 9 ಚದರ ಮೈಲು ಪ್ರದೇಶದಲ್ಲಿ ಹರಡಿವೆ. ಸಂಗಮ, ಸಾಳುವ, ತುಳುವ ಮತ್ತು ಅರವೀಡು ಸಂತತಿಯವರು ಇಲ್ಲಿಂದ ತಮ್ಮ ಸಾಮ್ರಾಜ್ಯವನ್ನು ಆಳಿದರು.

ಬಳ್ಳಾರಿ ಜಿಲ್ಲೆಯಲ್ಲಿರುವ ಹಂಪೆ ಬೆಂಗಳೂರಿನಿಂದ ಸುಮಾರು 230 ಮೈಲು ದೂರದಲ್ಲಿ ತುಂಗಭದ್ರಾ ನದಿಯ ದಂಡೆಯ ಮೇಲಿದೆ.

ಹಂಪೆಯಲ್ಲಿ ಅನೇಕ ಸುಂದರ ದೇವಾಲಯಗಳಿವೆ. ವಿಜಯನಗರ ರಾಜಮನೆತನದ ದೇವರು ವಿರೂಪಾಕ್ಷ ಅಥವಾ ಪಂಪಾಪತಿಯ ದೇವಾಲಯ ವಿಜಯನಗರದ ನಿರ್ಮಾಣಕ್ಕೆ ಮೊದಲೇ ಪ್ರಖ್ಯಾತವಾಗಿತ್ತು. ಮುಂಭಾಗದಲ್ಲಿ 11 ಅಂತಸ್ತುಗಳುಳ್ಳ 170 ಅಡಿ ಎತ್ತರದ ಗೋಪುರವಿದೆ. ಭಾರತದ ದೊಡ್ಡ ಗೋಪುರಗಳಲ್ಲಿ ಇದೂ ಒಂದು. ಒಳಗೆ ಟೊಳ್ಳಾಗಿರುವುದು ಇದರ

ರಷ್ಯದಲ್ಲಿ 'ರಾಮಾಯಣ' ಬ್ಯಾಲೆ



ವಿರೂಪಾಕ್ಷ ದೇವಾಲಯ





ವಿಜಯನಾರಸಿಂಹ ವಿಗ್ರಹ

ವೈಶಿಷ್ಟ್ಯ. ಚಕ್ರತೀರ್ಥದ ದಡದ ಮೇಲಿರುವ ಕೋದಂಡ ರಾಮ ಗುಡಿಯಲ್ಲಿ ಆಳೆತ್ತರದ ರಾಮ, ಸೀತೆ, ಲಕ್ಷ್ಮಣ ಮತ್ತು ಸುಗ್ರೀವರ ಮೂರ್ತಿಗಳನ್ನು ಬಂಡೆಯ ಮೇಲೆ ಕೆತ್ತಿದ್ದಾರೆ. ಅಚ್ಯುತನ ಗುಡಿಯಲ್ಲಿ ಕೃಷ್ಣ ಲೀಲೆಗಳು ನಿರೂಪಿತವಾಗಿವೆ. ವಿಠಲ ದೇವಾಲಯದ ಮುಂದೆ ಒಂದೇ ಶಿಲೆಯಲ್ಲಿ ಕೊರೆದಿರುವ 26 ಅಡಿ ಎತ್ತರದ ರಥವಿದೆ. ಎರಡು ಆನೆಗಳು ರಥವನ್ನು ಎಳೆಯುತ್ತಿರುವಂತೆ ಶಿಲ್ಪದಲ್ಲಿ ಕೆತ್ತಲಾಗಿದೆ. ಚಕ್ರಗಳೂ ಕಲ್ಲಿನವು. ಕೃಷ್ಣದೇವರಾಯ ಕಟ್ಟಿಸಿದ ಕೃಷ್ಣದೇವಾಲಯದ ಬಳಿ ಅಖಂಡ ಶಿಲೆಯ ಬೃಹತ್ ಲಕ್ಷ್ಮೀನರಸಿಂಹ ವಿಗ್ರಹವಿದೆ. ಹಜಾರ ರಾಮನ ಗುಡಿಯಲ್ಲಿ ಕೆತ್ತನೆ ಕೆಲಸ ಮನೋಹರವಾಗಿದೆ. ವಿಜಯನಗರದ ಸಾಮ್ರಾಜ್ಯದ [illegible] ಗೋಡೆಯ ಮೇಲೆ ಕೆತ್ತಿದ್ದಾರೆ.

ತುಂಗಭದ್ರಾ ನದಿಯ ಮಧ್ಯದಲ್ಲಿರುವ ನಡುಗಡ್ಡೆಯಲ್ಲಿ ವ್ಯಾಸ ರಾಯರು ಮತ್ತು ಇತರ ಯತಿಗಳ ವೃಂದಾವನ ಇದೆ. ಪುರಾಣಕಾಲದಲ್ಲಿ ಮತಂಗ ಋಷಿ ತಪಸ್ಸು ಮಾಡುತ್ತಿದ್ದನೆಂದು ಆ ಹೆಸರು ತಳೆದ ಮತಂಗ ಪರ್ವತದಲ್ಲಿ ಸುಗ್ರೀವ, ಹನುಮಂತ ಮೊದಲಾದವರು ವಾಲಿಗೆ ಅಂಜಿ ನೆಲೆಸಿದ್ದರು —ಎನ್ನುತ್ತಾರೆ.

ಗುಹಾಲಯ, ಮಹಾನವಮಿ ದಿಬ್ಬ, ಕಮಲ ಮಹಲ್, ರಾಣಿ [illegible] ಹೀಗೆ ಪ್ರವಾಸಿಗರನ್ನು ಆಕರ್ಷಿಸುವ [illegible] ಇನ್ನೂ ಕೆಲವು. ಹಾಳು ಹಂಪೆಯನ್ನು ಕಂಡವರಿಗೆ ವಿಜಯನಗರದ ಗತವೈಭವ ಕಣ್ಣಿಗೆ ಕಟ್ಟಿದಂತಾಗುತ್ತದೆ.

ನೋಡಿ : ವಿಜಯನಗರ ಅರಸರು

ಹಕ್ಕ-ಬುಕ್ಕ

14ನೆಯ ಶತಮಾನದಲ್ಲಿ ವಿಜಯನಗರ ರಾಜ್ಯದ ಸ್ಥಾಪನೆಯ ಶ್ರೇಯಸ್ಸು ಪಡೆದವರು ಶೂರರೂ ಸಾಹಸಿಗರೂ ಆದ ಐದು ಜನರು-ಹರಿಹರ, ಬುಕ್ಕ, ಕಂಪಣ, ಮಾರಪ್ಪ, ಮುದ್ದಪ್ಪ. ಇವರಲ್ಲಿ ಮೊದಲಿನ ಇಬ್ಬರು ವಿಜಯನಗರದ ಸಂಸ್ಥಾಪಕರೆಂಬ ಕೀರ್ತಿಗೆ ಪಾತ್ರರಾದವರು. ಇವರೆಲ್ಲ ಸಂಗಮ ವಂಶದವರು.

ಹಕ್ಕ ಮತ್ತು ಬುಕ್ಕ (ಹರಿಹರ, ಬುಕ್ಕರಾಯ) ಹೊಯ್ಸಳ ರಾಜ ವೀರಬಲ್ಲಾಳನ ಸೈನ್ಯದಲ್ಲಿ ಮಂಡಲಾಧಿಕಾರಿಗಳಾಗಿದ್ದರು.

ಇವರು ತುಂಗಭದ್ರೆಯ ತೀರದಲ್ಲಿ ವಿಜಯನಗರವನ್ನು ಸ್ಥಾಪಿಸಿದರು. ಅವಿಧೇಯ ಶಕ್ತಿಗಳನ್ನು ದಮನಗೊಳಿಸಿ, ಸಾಮ್ರಾಜ್ಯವನ್ನು ಬಲಪಡಿಸಿದರು. ಮುಸಲ್ಮಾನರ ಆಕ್ರಮಣವನ್ನು ತುಂಗಭದ್ರೆಯಿಂದ ಆಚೆ ದಕ್ಷಿಣಕ್ಕೆ ಹರಡದಂತೆ ತಡೆಹಿಡಿದರು. ಇವರಿಗೆ ವಿದ್ಯಾರಣ್ಯರ ಆಶೀರ್ವಾದವಿತ್ತು.

ಹರಿಹರ ರಾಜ್ಯವಾಳಿದ್ದು 1336ರಿಂದ 56ರ ವರೆಗೆ. ಇವನ ಅನಂತರ ಸೋದರ ಬುಕ್ಕ ಆಳಿದ. ಇವನು 1356ರಿಂದ 1377ರ ವರೆಗೆ ರಾಜ್ಯಭಾರ ಮಾಡಿದ. ಇವರ ಆಳ್ವಿಕೆಯಲ್ಲಿ ವಿಜಯನಗರ ಸಾಮ್ರಾಜ್ಯ ಕೃಷ್ಣಾ ನದಿಯಿಂದ ರಾಮೇಶ್ವರದವರೆಗೆ ಹಬ್ಬಿತ್ತು. ಇವರ ರಾಜಧಾನಿ ವಿಜಯನಗರ (ಈಗಿನ ಹಂಪೆ).

ಇವರ ಕಾಲದಲ್ಲಿ ರಾಜ್ಯದಲ್ಲಿ ಸುವ್ಯವಸ್ಥಿತ ಆಡಳಿತವಿತ್ತು. ಪ್ರಜೆಗಳಿಗೆ ಶತ್ರುಗಳ ಆಕ್ರಮಣ ಭೀತಿಯಿರಲಿಲ್ಲ. ಅವರು ಸುಖ, ಸಮೃದ್ಧಿ, ಶಾಂತಿಯಿಂದ ಬಾಳಿದರು. ಕವಿಗಳಿಗೂ ಕಲಾವಿದರಿಗೂ ಆಶ್ರಯ ದೊರೆಯಿತು. ಎಲ್ಲ ಧರ್ಮಗಳ ಉನ್ನತಿ, ಶ್ರೇಯಸ್ಸುಗಳಿಗೆ ಹಕ್ಕ-ಬುಕ್ಕರು ಸಹಾಯ ಮಾಡಿದರು.

ಹಜರತ್ ಮಹಲ್

"ನನ್ನ ಮೇಲೆ ಬೇಗಂ ಶಾಶ್ವತ ಯುದ್ಧ ಘೋಷಣೆ ಮಾಡಿದ್ದಾಳೆ."

"ಆಕೆ ಔಧ್‌ನ ಎಲ್ಲ ಜನರನ್ನೂ ತನ್ನ ಮಗನ ಪರವಾಗಿ ಪ್ರಚೋದಿಸಿದ್ದಾಳೆ. ಆಕೆಗೆ ನಿಷ್ಠೆಯುಳ್ಳವರು ಮುಖ್ಯಸ್ಥರು ಪ್ರಮಾಣವಚನ [illegible]ದ್ದಾರೆ"—ಹೀಗೆಂದು ವಿಲ್ಯಂ. ಎಚ್. ರಸೆಲ್ ಎಂಬ ಆಂಗ್ಲ 'ನನ್ನ ಭಾರತದ ದಿನಚರಿ'ಯಲ್ಲಿ ಬರೆದಿದ್ದಾನೆ. ಆಕೆ ಬೇಗಂ ಹಜರತ್ ಮಹಲ್. ಔಧ್ (ಅಯೋಧ್ಯೆ) ನವಾಬ ವಜೀದ್ ಅಲಿಯ ರಾಣಿ.

1857ರ ಸ್ವಾತಂತ್ರ್ಯ ಸಂಗ್ರಾಮಕ್ಕೆ ರಾಷ್ಟ್ರೀಯ ರೂಪಬಂದದ್ದು ಔಧ್‌ನಲ್ಲಿ ನಡೆದ ಕ್ರಾಂತಿಯಿಂದ ಎಂದು ಕೆಲವು ಇತಿಹಾಸಕಾರರು ಅಭಿಪ್ರಾಯ ಪಡುತ್ತಾರೆ. ಬೇಗಂ ಹಜರತ್ ಮಹಲ್ ಈ ಕ್ರಾಂತಿಯ ಮುಂದಾಳು.

ಈಕೆಯ ಗಂಡ ನವಾಬ ವಜೀದ್ ಅಲಿ ಶಾನು [illegible] ಪರಮ ಮಿತ್ರನಾಗಿದ್ದ. ಆದರೆ ಇವನ ಕಾಲದಲ್ಲಿ ಆಡಳಿತ ಪತನದ ದಾರಿ ಹಿಡಿಯಿತು. ಈ ಕಾರಣಕ್ಕಾಗಿ [illegible] 1856ರಲ್ಲಿ ಔಧ್ ಸಂಸ್ಥಾನವನ್ನು ತಮ್ಮ [illegible] ಇದಕ್ಕೆ ಒಪ್ಪದ ನವಾಬ ಕಲ್ಕತೆಯಲ್ಲಿ ಸೆರೆಯಾದ.

ಇದರ ಪರಿಣಾಮವಾಗಿ ಔಧ್‌ನಲ್ಲಿ ಅಸಮಾಧಾನದ ಹೊಗೆಯಾಡಿತು. 1857 ಜೂನ್ 4ರಿಂದ 14ರ ವರೆಗೆ ಇಲ್ಲಿ ಬ್ರಿಟಿಷ್ ಆಳ್ವಿಕೆಗೆ ಬಲವಾದ



ದಿಟ್ಟ ಘೋಷಣೆ : ಹಜರತ್ ಮಹಲ್

ಪೆಟ್ಟು ಬಿತ್ತು. ಹೀಗೆ ಜನರೂ ಸಿಪಾಯಿಗಳೂ ಸೇರಿ ಬ್ರಿಟಿಷರ ವಿರುದ್ಧ ಯಶಸ್ವಿಯಾಗಿ ಸಮರ ನಡೆಸುತ್ತಿದ್ದಂತೆ, ನವಾಬನ ಮಗ, ಕಿರಿವಯಸ್ಸಿನ ವಲಿಯನ್ನು ಆಗಸ್ಟ್ 6ರಂದು ಅರಸನೆಂದು ಘೋಷಿಸಲಾಯಿತು. ಕಿರೀಟಧಾರಣೆಯೂ ನಡೆಯಿತು. ಇವನ ಪರವಾಗಿ ತಾಯಿ ಹಜರತ್ ಮಹಲ್ ಎಲ್ಲ ಅಧಿಕಾರಗಳನ್ನೂ ವಹಿಸಿಕೊಂಡಳು. ಸ್ವತಃ ತಾನೇ ಯುದ್ಧರಂಗಕ್ಕೆ ಹೋಗಿ ಸೈನಿಕರನ್ನು ಹುರಿದುಂಬಿಸಿದಳು. ಆದರೆ ಸಿಖರ ಸಹಾಯದಿಂದ ಬ್ರಿಟಿಷರ ಜಯವಾಯಿತು. ಹಜರತ್ ಮಹಲ್ ಕೆಲವು ಮುಖಂಡರೊಡನೆ ತಪ್ಪಿಸಿಕೊಂಡಳು. ಅನಂತರ ಅವಳು ನಾನಾ ಸಾಹೇಬನೊಡನೆ ಸಹಕರಿಸಿ ಕ್ರಾಂತಿಯಲ್ಲಿ ಭಾಗವಹಿಸಿದಳು. ನೇಪಾಳ ಪ್ರದೇಶದಲ್ಲಿ ಆಶ್ರಯ ಪಡೆದು ನೆಲೆಸಿದಳು. ಯಾವ ಭರವಸೆ ಕೊಟ್ಟರೂ ಭಾರತಕ್ಕೆ ಮರಳಲು ಒಪ್ಪಲಿಲ್ಲ. ಬ್ರಿಟಿಷರು ಕೊಡಲು ಬಂದ ಮಾಸಾಶನವನ್ನೂ ತಿರಸ್ಕರಿಸಿದಳು.

ಸಿಪಾಯಿ ದಂಗೆಯ ಅನಂತರ ಇಂಗ್ಲೆಂಡಿನ ರಾಣಿ ವಿಕ್ಟೋರಿಯ ಹೊರಡಿಸಿದ ಘೋಷಣೆಗೆ ಉತ್ತರರೂಪವಾಗಿ ಮತ್ತೊಂದು ಘೋಷಣೆ ಹೊರಡಿಸಿದ ಧೀರಮಹಿಳೆ, ಬೇಗಂ ಹಜರತ್ ಮಹಲ್.


"ನಮ್ಮ ಜನತೆ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರೂ ಇಂಗ್ಲೆಂಡಿನ ರಾಣಿ ನಮ್ಮ ದೇಶವನ್ನು ಬಿಟ್ಟುಕೊಡಲಿಲ್ಲವೇಕೆ? ...ಇಂಗ್ಲಿಷಿನವರು (ದೇಶೀಯರ) ಒಂದು ತಪ್ಪನ್ನು ಮನ್ನಿಸಿದುದನ್ನೂ ಕನಸಿನಲ್ಲಿ ಸಹ ಯಾರೂ ಕಾಣಲಿಲ್ಲ ...ಕಾಲುವೆ ತೋಡಿಸುವುದು. ರಸ್ತೆ ಮಾಡಿಸುವುದನ್ನು ಬಿಟ್ಟರೆ ಹಿಂದೂಸ್ಥಾನಿಗಳಿಗೆ ಬೇರೆ ಉತ್ತಮ ಕೆಲಸ ಕೊಡುವ ಯಾವ ಭರವಸೆಯನ್ನೂ (ಇಂಗ್ಲಿಷರು) ಕೊಟ್ಟಿಲ್ಲ. ಇದನ್ನು ಜನ ಸ್ಪಷ್ಟವಾಗಿ ಅರ್ಥ ಮಾಡಿಕೊಳ್ಳದಿದ್ದರೆ ಏನೂ ಮಾಡಲಾಗುವುದಿಲ್ಲ. ಯಾವ ಪ್ರಜೆಯೂ ವಿಕ್ಟೋರಿಯ ರಾಣಿಯ ಈ ಘೋಷಣೆಯಿಂದ ಮೋಸ ಹೋಗದಿರಲಿ!"

ಇವು ರಾಜಕುಮಾರನ ಹೆಸರಿನಲ್ಲಿ ಬೇಗಂ ಹಜರತ್ ಮಹಲ್ ಹೊರಡಿಸಿದ ಘೋಷಣೆಯ ಮುಖ್ಯಾಂಶಗಳು.

ಹರ್ಡೇಕರ್ ಮಂಜಪ್ಪ

ಪತ್ರಿಕೋದ್ಯಮ, ಲೇಖನ, ಶಿಕ್ಷಣ, ಸಂಘಟನೆ—ಹೀಗೆ ವಿವಿಧ ರಂಗಗಳಲ್ಲಿ ಸೇವೆ ಸಲ್ಲಿಸಿದವರು, ಹರ್ಡೇಕರ್ ಮಂಜಪ್ಪ.

ಅವರ ಈ ಎಲ್ಲ ಕಾರ್ಯಗಳಿಗೂ ರಾಷ್ಟ್ರೀಯತೆಯೇ ಪ್ರೇರಕಶಕ್ತಿಯಾಗಿತ್ತು. ಮಂಜಪ್ಪನವರು ಹುಟ್ಟಿದ್ದು ಬನವಾಸಿಯಲ್ಲಿ; ಬೆಳೆದದ್ದು ಸಿರಸಿಯಲ್ಲಿ. ಅವರ ಕಾರ್ಯರಂಗ ವ್ಯಾಪಿಸಿದ್ದು ದಾವಣಗೆರೆಯಿಂದ ಬಿಜಾಪುರ ಜಿಲ್ಲೆಯ ಆಲಮಟ್ಟಿಯ ವರೆಗೆ. ರಾಷ್ಟ್ರೀಯ ದೃಷ್ಟಿಯನ್ನು ಪ್ರಚುರಪಡಿಸುವುದು ಅವರ ಈ ಎಲ್ಲ ಚಟುವಟಿಕೆಗಳ, ಕಾರ್ಯದ ಕೇಂದ್ರಬಿಂದುವಾಗಿತ್ತು.



ಬರೆಹ, ಶಿಕ್ಷಣ, ಸಂಘಟನೆ : ಹರ್ಡೇಕರ್

ಅವರು ತಮ್ಮ ಪತ್ರಿಕೆಯಲ್ಲಿ ರಾಷ್ಟ್ರೀಯ ವಿಚಾರಗಳನ್ನು ಪ್ರತಿಪಾದಿಸುತ್ತಿದ್ದರು. ಕನ್ನಡದ ಪ್ರಥಮ ರಾಷ್ಟ್ರೀಯ ಪತ್ರಿಕೋದ್ಯಮಿ ಎನಿಸಿದರು. ತ್ಯಾಗಜೀವಿಗಳ ಜೀವನ ಚರಿತ್ರೆಯನ್ನು ಬರೆದರು. ಮಕ್ಕಳಿಗಾಗಿ ಸಾಹಿತ್ಯ ನಿರ್ಮಿಸುವಲ್ಲಿ ಮುಂದಾದರು. ವಿದ್ಯಾರ್ಥಿಗಳ ಮನಸ್ಸನ್ನು ತಿದ್ದುವುದೇ ಅವರ ಏಕಮೇವ ಉದ್ದೇಶವೆನಿಸಿತ್ತು. ಅವರು ಬರೆದ ಆತ್ಮಚರಿತ್ರೆಯಲ್ಲಿ ಅವರ ಜೀವನದ ಮಹೋನ್ನತಿಯ ವಿವೇಚನೆ ಇದೆ. ಅವರು ಬರೆದ 'ಖಾದಿ ಶಾಸ್ತ್ರ'ವನ್ನು ಶ್ರೇಷ್ಠ ಗ್ರಂಥವೆಂದು ಆಲೂರು ವೆಂಕಟರಾಯರು ಮೆಚ್ಚಿಕೊಂಡರು.

1886 ಫೆಬ್ರವರಿ 18ರಂದು ಜನನ. 17ನೆಯ ವರ್ಷದಲ್ಲಿ ಮುಲ್ಕಿ ಪರೀಕ್ಷೆ ಪೂರೈಸಿದರು. ಬಡತನದಿಂದಾಗಿ ಹೆಚ್ಚಿನ ಶಿಕ್ಷಣ ಸಾಧ್ಯವಿಲ್ಲದ್ದರಿಂದ ಸಿರಸಿಯ ಕನ್ನಡ ಶಾಲೆಯಲ್ಲಿ ಶಿಕ್ಷಕರಾದರು. ಕೆಲವೇ ವರ್ಷಗಳಲ್ಲಿ ಆ ವೃತ್ತಿಯನ್ನು ಬಿಟ್ಟುಕೊಟ್ಟು ರಾಷ್ಟ್ರೀಯ ಜೀವನದಲ್ಲಿ ನಿರತರಾದರು.

ಅವರು 'ಧನುರ್ಧಾರಿ', 'ಖಾದೀ ವಿಜಯ', 'ಉದ್ಯೋಗ' ಮತ್ತು 'ಶರಣಸಂದೇಶ' ಪತ್ರಿಕೆಗಳನ್ನು ನಡೆಸಿದರು. 'ಸ್ವಕರ್ತವ್ಯ ಸಿದ್ಧಾಂತ', 'ಬುದ್ಧಿಯ ಮಾತು', 'ಮಹಾತ್ಮಾ ಗಾಂಧಿಯವರ ಜೀವನ ಚರಿತ್ರೆ', 'ಭಾರತೀಯರ ದೇಶ ಭಕ್ತಿ', 'ಶ್ರೀ ಸ್ವಾಮಿ ರಾಮತೀರ್ಥರ ಜೀವನ ಚರಿತ್ರೆ ಮತ್ತು ಉಪನ್ಯಾಸ', 'ಸತ್ಯಾಗ್ರಹಿ ಬಸವೇಶ್ವರ', 'ಶ್ರೀ ಬಸವ ಚರಿತ್ರೆ', 'ಶುದ್ಧಿ ಸಂಘಟನೆ', 'ವಚನಕಾರರ ಸಮಾಜ ರಚನೆ', 'ಸುಬೋಧ ಸಾರ', 'ಎಚ್ಚೆತ್ತ ಹಿಂದೂಸ್ಥಾನ' ಗ್ರಂಥಗಳನ್ನು ಬರೆದುದಲ್ಲದೆ 'ಕಳೆದ ಮೂವತ್ತು ವರ್ಷಗಳ ನನ್ನ ಕಾಣಿಕೆ' ಎಂಬ ಆತ್ಮಚರಿತ್ರೆಯನ್ನೂ ಬರೆದರು. ಸ್ವಪ್ರಯತ್ನದಿಂದ ಪ್ರತಿಭೆಯನ್ನು ಬೆಳೆಸಿಕೊಂಡು ಅನೇಕ ಎಡರು–ತೊಡರುಗಳನ್ನು ಎದುರಿಸಿ ಯುವಕರಿಗೆ ಆದರ್ಶ ಜೀವನವನ್ನು ತೋರಿದ ಮಂಜಪ್ಪನವರು 1947 ಜನವರಿಯಲ್ಲಿ ಮರಣಹೊಂದಿದರು.

ಹರ್ದ್ವಾರ

ಹರ್ದ್ವಾರ ಪುಣ್ಯಕ್ಷೇತ್ರ. ಇದನ್ನು ಹರಿದ್ವಾರ, ಹರದ್ವಾರ ಎಂದು ಎರಡೂ ರೀತಿ ಉಚ್ಚರಿಸುತ್ತಾರೆ.

ಹಿಮಾಲಯದ ಪರ್ವತ ಪ್ರಾಂತದಲ್ಲಿ ಹರಿದು ಬಂದ ಗಂಗಾನದಿ ಬಯಲು ಪ್ರದೇಶವನ್ನು ಪ್ರವೇಶಿಸುವುದು, ಹರ್ದ್ವಾರದ ಸಮೀಪದಲ್ಲಿ. ಆದ್ದರಿಂದ ಹರ್ದ್ವಾರವನ್ನು ಗಂಗಾದ್ವಾರವೆಂದೂ ಕರೆಯುತ್ತಾರೆ. ಮಾಯಾಪುರಿ ಎಂಬ ಹೆಸರೂ ಇದೆ. 7ನೆಯ ಶತಮಾನದಲ್ಲಿ ಇಲ್ಲಿಗೆ ಬಂದಿದ್ದ ಚೀನೀ ಯಾತ್ರಿಕ ಹ್ಯೂಯೆನ್ ತ್ಸಾಂಗ್ ಇದನ್ನು ಮೊ–ಯೂ–ಲೋ ಎಂದು ಕರೆದ. ಆದ್ದರಿಂದ ಆ ಕಾಲದಲ್ಲಿ ಈ ಕ್ಷೇತ್ರಕ್ಕೆ ಮಾಯಾ ಅಥವಾ ಮಾಯಾಪುರಿ ಎಂಬ ಹೆಸರೇ ಪ್ರಖ್ಯಾತವಾಗಿತ್ತೆಂದು ತೋರುತ್ತದೆ.

ಪರ್ವತ ಪ್ರದೇಶದಿಂದ ಹರಿದು ಬರುವ ಗಂಗಾನದಿಯ ನೀರು ಹರ್ದ್ವಾರದ ಸಮೀಪದಲ್ಲಿ ಅತ್ಯಂತ ಶುದ್ಧವೂ ತಿಳಿಯೂ ಆಗಿರುತ್ತದೆ. ನದಿಯ ಪಾತ್ರದ ಮರಳು ಕೂಡ ಕಾಣುವಷ್ಟು ಸ್ವಚ್ಛವಾಗಿರುತ್ತದೆ. ಆದ್ದರಿಂದ ಯಾತ್ರಿಕರು ತಮ್ಮೊಡನೆ ತೆಗೆದುಕೊಂಡು ಹೋಗಲು ಗಂಗಾಜಲವನ್ನು ಇಲ್ಲಿ ಸಂಗ್ರಹಿಸುತ್ತಾರೆ.

ಹರ್ದ್ವಾರದಲ್ಲಿರುವ ಗಂಗಾನದಿಯ ಘಟ್ಟಕ್ಕೆ ಹರ್–ಕಿ–ಪೈರಿ ಎಂದು ಹೆಸರು. ಯಾತ್ರಾರ್ಥಿಗಳು ಇಲ್ಲಿ ಸ್ನಾನ ಮಾಡಿ ಧಾರ್ಮಿಕ ಕಾರ್ಯಗಳನ್ನು ನಡೆಸುತ್ತಾರೆ. ಗಂಗಾದ್ವಾರ ದೇವಾಲಯವಿರುವುದು ಇಲ್ಲೇ. ಇಲ್ಲಿ ಸಂಜೆಯ



ಹರ್ದ್ವಾರ ಸ್ನಾನಘಟ್ಟ



ಪಾರ್ವತಿಯಿಂದ ಹರನ ಧ್ಯಾನಭಂಗ — ಮನ್ಮಥನ ನೆರವಿನಿಂದ

[illegible] ಯಾತ್ರಿಕರು [illegible] ಎಲೆಗಳಲ್ಲಿ ದೀಪಗಳನ್ನು ಹೊತ್ತಿಸಿಟ್ಟು ನದಿಯ ಮೇಲೆ ತೇಲಿಬಿಡುವ ಸಂಪ್ರದಾಯವಿದೆ. ಇಂಥ ಸಾವಿರಾರು ದೀಪಗಳು ಮಿಣುಗುಟ್ಟುತ್ತಾ ನದಿಯಮೇಲೆ ತೇಲುವ ದೃಶ್ಯ ರಮ್ಯವಾದದ್ದು. ಹನ್ನೆರಡು ವರ್ಷಕ್ಕೊಮ್ಮೆ ಹರ್ದ್ವಾರದಲ್ಲಿ ಕುಂಭಮೇಳ ನಡೆಯುತ್ತದೆ.

ಹಿಮಾಲಯ ಪರ್ವತ ಮತ್ತು ಅದರ ತಪ್ಪಲಿನ ಅರಣ್ಯಗಳ ಹಿನ್ನೆಲೆಯುಳ್ಳ ಹರ್ದ್ವಾರದ ಪರಿಸರ ಮೋಹಕವಾದದ್ದು. ಹರ್ದ್ವಾರದ ಸಮೀಪದಲ್ಲಿ ಸುಪ್ರಸಿದ್ಧ ಕಾಂಗ್ರಿ ಗುರುಕುಲವಿದೆ. 'ಹೆವಿ ಎಲೆಕ್ಟ್ರಿಕಲ್ಸ್ ಆಫ್ ಇಂಡಿಯಾ ಲಿಮಿಟೆಡ್' ನ ಒಂದು ಸ್ಥಾವರ ಇಲ್ಲಿದೆ.

ನೋಡಿ : ಕುಂಭಮೇಳ ; ಗಂಗಾ ; ಹೆವಿ ಎಲೆಕ್ಟ್ರಿಕಲ್ಸ್ ಲಿಮಿಟೆಡ್

ಹನುಮಂತ

ನೋಡಿ : ಸಂಪುಟ ೬

ಹರ

ದೇವತೆಗಳು–ದಾನವರು ಕ್ಷೀರಸಮುದ್ರವನ್ನು ಮಥಿಸಿದಾಗ ಮೊದಲು ಹುಟ್ಟಿದ್ದು ಹಾಲಾಹಲ. ಲೋಕ ಕಲ್ಯಾಣಕ್ಕಾಗಿ ಹಾಲಾಹಲವನ್ನು ಕುಡಿದು, ಅದನ್ನು ಗಂಟಲಿನಲ್ಲಿಯೇ ಇಟ್ಟುಕೊಂಡವನು ಶಿವ. ಹರ, ನೀಲಕಂಠ, ಶಂಭು, ರುದ್ರ, ಮಹಾದೇವ, ಮಹಾಯೋಗಿ ಮೊದಲಾದ ಹೆಸರುಗಳುಳ್ಳ ಹರ, ತ್ರಿಮೂರ್ತಿಗಳಲ್ಲೊಬ್ಬ.

ಹರ ಜನಿಸಿದ್ದು ಬ್ರಹ್ಮನ ಹಣೆಯಿಂದ ಎಂದು ನಂಬಿಕೆ. ಬ್ರಹ್ಮ ಸೃಷ್ಟಿಗೆ ಕರ್ತೃವಾದಂತೆ ಹರ ಲಯಕ್ಕೆ ಕಾರಣನಾದ. ಸನ್ಯಾಸತ್ವದ ಅಧಿಪತ್ಯವೂ ಈತನದು. ಜಗತ್ತಿನ ಎಲ್ಲ ವಿಚ್ಛಿನ್ನ ಶಕ್ತಿಗಳ ಪ್ರತೀಕ ಶಿವ. ಲಿಂಗದ ರೂಪದಲ್ಲಿ ಅವನನ್ನು ಆರಾಧಿಸುತ್ತಾರೆ.

ಶಿವ ದಿಗಂಬರ. ಜಟೆಗಟ್ಟಿದ ಕೂದಲು. ಮೈಗೆಲ್ಲ ಭಸ್ಮಲೇಪನ; ಕೊರಳಲ್ಲಿ ರುಂಡಮಾಲೆ, ಕಿವಿಯಲ್ಲಿ ನಾಗಕುಂಡಲ, ಧ್ಯಾನದಲ್ಲಿ ಮಗ್ನನಾಗಿ [illegible] ಚಿತ್ರಿಸುತ್ತಾರೆ.

ಹಣೆಯಲ್ಲಿ ಚಂದ್ರ, ಕತ್ತು, ಕೈಗಳಿಗೆ ಸುತ್ತಿಕೊಂಡಿರುವ ಹಾವು, [illegible] ಗಂಗೆ, [illegible] ಓಗೂ ಹರನನ್ನು ಚಿತ್ರಿಸುವುದುಂಟು.

ಶಿವನಿಗೆ ಮೂರನೆಯ ಕಣ್ಣು ಹಣೆಯಲ್ಲಿ. ಅದು ವಿನಾಶದ ಸಾಧನ. [illegible] ಕೈಲಾಸ. ಅವನ ವಾಹನ ನಂದಿ.

ಶಿವನ ಪತ್ನಿ ಪಾರ್ವತಿ. ಗಣೇಶ, ಕಾರ್ತಿಕೇಯ (ಸುಬ್ರಹ್ಮಣ್ಯ) ಮಕ್ಕಳು.

ಶಿವನಿಗೆ 1,008 ಹೆಸರುಗಳಿವೆ ಎಂದು ಪ್ರತೀತಿ. ಆದಿನಾಥ, ಅರ್ಧ ನಾರೀಶ್ವರ, ಭೈರವ, ಚಂದ್ರಚೂಡ, ಗಂಗಾಧರ, ಯೋಗೇಶ್ವರ, ನಂದೀಶ, ಪಶುಪತಿ, ವಿರೂಪಾಕ್ಷ ಮೊದಲಾದುವು ಅವನ ಕೆಲವು ಹೆಸರುಗಳು.



[illegible]

ಹರಗೋವಿಂದ ಖೊರಾನಾ

ನೋಡಿ : ಖೊರಾನಾ–ಸಂಪುಟ ೨

ಹರಪ್ಪಾ

ಹರಪ್ಪಾ, ಮೊಹೆಂಜೊ ದಾರೊ—ಇವು ಪ್ರಾಚೀನ ಭಾರತ ಸಂಸ್ಕೃತಿ ಕ್ಷೇತ್ರಗಳು. ಹರಪ್ಪಾ ಈಗ ಪಾಕಿಸ್ತಾನಕ್ಕೆ ಸೇರಿದೆ ; ಇದು ರಾವಿ ನದಿಯ ಎಡದಂಡೆಯಲ್ಲಿದೆ.

[illegible] ಅವನ ಸಂಗಡಿಗರು ಹರಪ್ಪಾ ಸಂಸ್ಕೃತಿಯನ್ನು ಕಂಡುಹಿಡಿದರು. ಹಲವು ವರ್ಷ ಕಾಲ ಇದಕ್ಕಾಗಿ ಕ್ರಮಬದ್ಧ ಭೂಶೋಧನೆ ನಡೆಯಿತು. [illegible] ಮಹತ್ವದ ಶೋಧೆಗಳಾದುವು.



ಹರಪ್ಪಾ ಅವಶೇಷಗಳು

ಹರಪ್ಪಾದ ಅವಶೇಷಗಳಿಂದ ಅದು ಒಂದು ನಗರ ಸಂಸ್ಕೃತಿಯಾಗಿದ್ದಿತೆಂದು ತಿಳಿದುಬಂದಿದೆ. ಎತ್ತರವಾದ ಕೋಟೆಯಿತ್ತು. ಕೋಟೆಯ ಒಂದು ಬದಿಗೆ, ಅದಕ್ಕಿಂತ ತಗ್ಗಾದ ಪ್ರದೇಶದಲ್ಲಿ, ವಸತಿಗೃಹಗಳು ಇದ್ದುವು. ಎರಡು ಅಥವಾ ಮೂರಂತಸ್ತಿನ ಮನೆಗಳ ಸಾಲು. ಎಲ್ಲ ಮನೆಗಳಿಗೂ ಒಂದೇ ವಿಧವಾದ ರಚನೆ. ಬೀದಿಯ ಕಡೆಗೆ ಕಿಟಕಿಗಳಿಲ್ಲ. ಮನೆಯ ಸ್ನಾನಗೃಹದಿಂದ ಹರಿದ ನೀರು ಬೀದಿಯ ಒಳಚರಂಡಿಗೆ ಸೇರಿ ಹೀರು ಹೊಂಡಕ್ಕೆ ಸಾಗುತ್ತಿತ್ತು. ಮೊಹೆಂಜೊ ದಾರೊ, ಹರಪ್ಪಾಗಳಲ್ಲಿದ್ದ ಇಂಥ ಅಚ್ಚುಕಟ್ಟಾದ ಒಳಚರಂಡಿ ವ್ಯವಸ್ಥೆ ಇನ್ನಾವ ಸಮಕಾಲೀನ ಪ್ರಾಚೀನ ಸಂಸ್ಕೃತಿಯಲ್ಲೂ ಕಂಡುಬಂದಿಲ್ಲ.

ಇನ್ನೊಂದು ವೈಶಿಷ್ಟ್ಯ—ಚೆನ್ನಾಗಿ ಸುಟ್ಟ ಇಟ್ಟಿಗೆಗಳ ಉಪಯೋಗ. ಒಂದೇ ಸಮನಾದ ಇಟ್ಟಿಗೆಗಳು. ಒಂದೇ ಸಮನಾದ ತೂಕ ಅಳತೆ ಮುಂತಾದುವು ಈ ಸಂಸ್ಕೃತಿಯಲ್ಲಿ ಕೇಂದ್ರ ನಿಯಂತ್ರಣ ಇದ್ದುದನ್ನು ಸೂಚಿಸುತ್ತವೆ. ಪ್ರಪಂಚದಲ್ಲಿ ಹತ್ತಿಯು ಬಳಕೆ ಮೊತ್ತಮೊದಲು ಕಂಡು ಬರುವುದು ಇಲ್ಲೇ. ಗೋಧಿ, ಬಾರ್ಲಿ, ಬಟಾಣಿ, ಎಳ್ಳು ಮೊದಲಾದುವನ್ನು ಬೆಳೆಯುತ್ತಿದ್ದರು. ಹರಪ್ಪಾದಲ್ಲಿ ಕಂಡುಬಂದಿರುವ ಬೃಹತ್ ಉಗ್ರಾಣ ಗಮನಾರ್ಹವಾದದ್ದು. ಇದು ಎತ್ತರದ ವೇದಿಕೆಯ ಮೇಲೆ ಕಟ್ಟಲ್ಪಟ್ಟಿದೆ. ಪ್ರವಾಹದಿಂದ ರಕ್ಷಣೆಗಾಗಿ ಈ ವ್ಯವಸ್ಥೆ. ಇಲ್ಲಿ ಹೆಚ್ಚಿನ ಧಾನ್ಯಗಳನ್ನು ದಾಸ್ತಾನು ಮಾಡುತ್ತಿದ್ದರು. ಬೇಸಾಯದಲ್ಲಿ ಹರಪ್ಪಾ ಜನರು ಅಗ್ರಗಾಮಿಗಳಾಗಿದ್ದರು. ಪರ್ಷಿಯದ ಕೊಲ್ಲಿ ತೀರ ಮತ್ತು ಮೆಸೊಪೊಟೇಮಿಯದವರೊಡನೆ ಈ ಜನರ ವಾಣಿಜ್ಯ ಸಂಪರ್ಕವಿದ್ದಿತು.

ಹರಪ್ಪಾದಲ್ಲಿ ಸತ್ತವರನ್ನು ಹೂಳುತ್ತಿದ್ದರು. ಇಲ್ಲಿ ದೊರೆತಿರುವ ಕಲಾತ್ಮಕ ವಸ್ತುಗಳೆಂದರೆ ಚಿಕ್ಕ ಮೊಹರುಗಳು, ಮಾನವ ಪ್ರತಿಮೆಗಳು, ಅತ್ಯಂತ ನೈಜವಾಗಿರುವ ಪ್ರಾಣಿ ವಿಗ್ರಹಗಳು, ಮಣಿಗಳು. ತಾಮ್ರ ಹಾಗೂ ಕಂಚಿನ ಉಪಯೋಗ ಇವರಿಗೆ ತಿಳಿದಿತ್ತು. ಚೌಕ ಅಥವಾ ಆಯತಾಕಾರದ ಇವರ ಮೊಹರುಗಳು ಬಳಪದ ಕಲ್ಲಿನಂಥ ಮೆದು ಕಲ್ಲಿನಿಂದ ಮಾಡಲ್ಪಟ್ಟಿವೆ. ಇವುಗಳ ಮೇಲೆ ಬಸವ, ಎಮ್ಮೆ, ಮೇಕೆ, ಆನೆ ಮುಂತಾದ ಪ್ರಾಣಿಗಳ ಚಿತ್ರಣಗಳಿವೆ. ಈ ಮೊಹರುಗಳ ಮೇಲಿರುವ ಚಿತ್ರಲಿಪಿಯನ್ನು ಓದಲು ಈವರೆಗೆ ಸಾಧ್ಯವಾಗಿಲ್ಲ. ಹರಪ್ಪಾದ ಜನರು ಶಿವನನ್ನೂ ಆದಿಶಕ್ತಿಯನ್ನೂ ಪೂಜಿಸುತ್ತಿದ್ದರು.



ಹರಪ್ಪಾದಲ್ಲಿ ಸಮಾಧಿ

ಹರಪ್ಪಾ ಜನ ಸುಖಸಂಪತ್ತುಗಳಿಂದ ಬಾಳಿದರು ಎನ್ನಬಹುದು.

ಮೊಹೆಂಜೊ ದಾರೊ ಹರಪ್ಪಾಗಳ ಕಾಲವನ್ನು ಸುಮಾರು ಕ್ರಿ.ಪೂ. 2500ರಿಂದ ಕ್ರಿ.ಪೂ. 1500ರ ಅವಧಿ ಎಂದು ಗುರುತಿಸಲಾಗಿದೆ.

ನೋಡಿ : ಮೊಹೆಂಜೊ ದಾರೊ ; ಲೊಥಲ್

ಹರ್ಯಂಕರು


ಮಗಧರಾಜ್ಯದಲ್ಲಿ ಆಳಿದ ಒಂದು ಶ್ರೇಷ್ಠ ರಾಜವಂಶ, ಹರ್ಯಂಕರದು. ಈ ವಂಶದ ಮೊದಲ ಖ್ಯಾತ ದೊರೆ ಬಿಂಬಸಾರ. ಸುಮಾರು ಕ್ರಿ.ಪೂ. 545ರಲ್ಲಿ ಪಟ್ಟವೇರಿದ. ಅಂಗ ಅಥವಾ ಪೂರ್ವ ಬಿಹಾರವನ್ನು ತನ್ನ ರಾಜ್ಯಕ್ಕೆ ಸೇರಿಸಿದ ಇವನು ಗಿರಿವ್ರಜದ ಬಳಿ ರಾಜಗೃಹ ಎಂಬ ಹೊಸ ರಾಜಧಾನಿಯನ್ನು ಕಟ್ಟಿಸಿದ. ಮಗಧದಲ್ಲಿ ಉತ್ತಮ ಆಡಳಿತ ವ್ಯವಸ್ಥೆಯನ್ನು ಇವನು ರೂಪಿಸಿದ. ಈತನು ಗೌತಮಬುದ್ಧನ ಸಮಕಾಲೀನ ಮತ್ತು ಅನುಯಾಯಿ.

ಇವನ ಮಗ ಅಜಾತಶತ್ರು ತಂದೆಯನ್ನು ಕೊಲೆಮಾಡಿ ಪಟ್ಟವೇರಿದ (ಕ್ರಿ. ಪೂ. 493). ಇವನ ಆಡಳಿತದ ಆರಂಭದಲ್ಲಿ ಬುದ್ಧನೂ ಮಹಾವೀರನೂ ಕಣ್ಮರೆಯಾದರು. ಈತನು ಬೌದ್ಧರಿಗೂ ಜೈನರಿಗೂ ಸಮಾನವಾಗಿ ಆಶ್ರಯ ನೀಡಿದ. ಪಾಟಲಿಪುತ್ರದ ಕೋಟೆಯನ್ನು ಈತ ಕಟ್ಟಿಸಿದ. ವೃಜಿಗಳ ಪ್ರದೇಶವನ್ನು ಈತ ಗೆದ್ದುಕೊಂಡ. ಈತನ ಅನಂತರ ನಾಲ್ವರು ಹರ್ಯಂಕ ರಾಜರು ಕ್ರಿ.ಪೂ. 430ರ ವರೆಗೆ ಆಳಿದರು. ಮುಂದೆ ಈ ವಂಶದ ಮಂತ್ರಿ ಶಿಶುನಾಗನಿಗೆ ಪಟ್ಟ ಕಟ್ಟಲಾಯಿತು. ಮಗಧದಲ್ಲಿ ಒಂದು ಪ್ರಬಲ ಸಾಮ್ರಾಜ್ಯ ಸ್ಥಾಪಿಸಿದ ಕೀರ್ತಿ ಹರ್ಯಂಕ ವಂಶಕ್ಕೆ ಸಲ್ಲುತ್ತದೆ.

ಹರ್ಯಾಣ

ಭಾಷಾವಾರು ರಾಜ್ಯ ಪುನರ್ರಚನೆಯ ಆಧಾರದ ಮೇಲೆ ಪಶ್ಚಿಮ ಪಂಜಾಬು ವಿಭಜನೆಗೊಂಡು, 1966 ನವೆಂಬರ್ 1ರಂದು, ಹಿಂದೀ ಪ್ರಧಾನ ಭಾಷೆಯಾದ ಹರ್ಯಾಣ ರಾಜ್ಯ ಉದಯಿಸಿತು.

ಇದು ಸಿಂಧೂ-ಗಂಗಾ ನದೀ ಬಯಲಿನಲ್ಲಿ ಯಮುನಾ ಸಟ್ಲೆಜ್‍ಗಳ ನಡುವೆ ಇದೆ. ರಾಜ್ಯದ ಒಂದು ಭಾಗ ಥಾರ್ ಮರುಭೂಮಿಯ ಅಂಚಿನಲ್ಲಿದೆ. ಇಲ್ಲಿಗೆ ನದೀನೀರನ್ನು ಹಾಯಿಸಿ ನೀರಾವರಿ ವ್ಯವಸ್ಥೆ ಮಾಡಿದ್ದಾರೆ. ಕೇಂದ್ರಾಡಳಿತ ಪ್ರದೇಶವಾದ ದೆಹಲಿಯ ಬಹುಪಾಲು ಗಡಿ ಹರ್ಯಾಣದಲ್ಲೇ ಇದೆ. ಹರ್ಯಾಣದ ಮೇರೆಗಳು ಪಂಜಾಬ್, ಹಿಮಾಚಲ ಪ್ರದೇಶ, ರಾಜಸ್ಥಾನ ಹಾಗೂ ಉತ್ತರ ಪ್ರದೇಶ. ರಾಜ್ಯದಲ್ಲಿ ಬೇಸಾಯ ಪ್ರಧಾನ ಕಸಬು. ಗೋಧಿ, ಸಜ್ಜೆ, ಕಬ್ಬು ಮತ್ತು ಕಾಳುಗಳು ಮುಖ್ಯ





ಹರ್ಯಾಣದ ಸೂರಜ್ ಕುಂಡ

ಬೆಳೆಗಳು. ಭತ್ತ, ಸಾಸಿವೆಗಳ ಕೃಷಿಯೂ ಇದೆ. ಕಬ್ಬಿಣ ಅದಿರು, ಸುಣ್ಣಕಲ್ಲು ಹಾಗೂ ಸ್ಲೇಟುಕಲ್ಲು ಸಿಗುತ್ತವೆ. ಹರ್ಯಾಣದ ಕಲ್ಲಂಗಡಿ, ಕರ್ಬೂಜ ಹಣ್ಣುಗಳು ಬಹಳ ರುಚಿಕರ. ಹರ್ಯಾಣ ಕ್ಷೀರಕ್ಷೇತ್ರ ಎನ್ನ ಬಹುದು. ಮೊಸರು, ತುಪ್ಪ ಧಾರಾಳವಾಗಿ ದೊರೆಯುತ್ತವೆ, ನೀರಡಿಕೆ ಹಿಂಗಿಸಲು ನೀರಿಗೆ ಬದಲಾಗಿ ಮಜ್ಜಿಗೆ ಕೊಡುವುದು ಇಲ್ಲಿನ ವಾಡಿಕೆ. ರೊಹಟಾಕ್ ಎಮ್ಮೆ ಹಾಗೂ ಹಿಸ್ಸಾರ್ ತಳಿ ಹಸು ಪ್ರಖ್ಯಾತವಾದುವು.

ರಾಜ್ಯದಲ್ಲಿ 7 ಜಿಲ್ಲೆಗಳಿವೆ. ಎರಡು ವಿಶ್ವವಿದ್ಯಾನಿಲಯಗಳಿವೆ : ಚಂಡೀಗಡದಲ್ಲಿರುವ ಪಂಜಾಬ್ ವಿಶ್ವವಿದ್ಯಾನಿಲಯ ಹಾಗೂ ಕುರುಕ್ಷೇತ್ರದಲ್ಲಿರುವ ಕುರುಕ್ಷೇತ್ರ ವಿಶ್ವವಿದ್ಯಾನಿಲಯ.

ಕೈಗಾರಿಕೆಯ ದೃಷ್ಟಿಯಿಂದ ಹರ್ಯಾಣ ಬಹು ಕಾಲ ಹಿಂದುಳಿದಿತ್ತು. ಈಗ ಕಾಗದ ತಯಾರಿಕೆ, ಹತ್ತಿ ಗಿರಣಿ, ಸಕ್ಕರೆ ಕಾರಖಾನೆ, ಸಿಮೆಂಟ್ ಕಾರಖಾನೆ. ಸೈಕಲ್ ಕಾರಖಾನೆ, ಬಾಟಾ ಷೂ ಕಾರಖಾನೆಗಳು ರಾಜ್ಯದಲ್ಲಿವೆ. 2,000 ಮಧ್ಯಮ ಹಾಗೂ ಸಣ್ಣ ಕೈಗಾರಿಕೆಗಳಿವೆ. ಇವುಗಳಲ್ಲಿ ಕೃಷಿ ಉಪಕರಣಗಳು, ಯಂತ್ರಹತಾರಗಳು, ವಿದ್ಯುದೀಯ ಹಾಗೂ ಗಾಜಿನ ಪದಾರ್ಥಗಳು ಉತ್ಪಾದಿಸಲ್ಪಡುತ್ತವೆ. ಯಮುನೆಯಿಂದ ಮುಖ್ಯ ನೀರಾವರೀ ವ್ಯವಸ್ಥೆ ಇದೆ. ಫರೀದಾಬಾದಿನಲ್ಲಿ ರಾಜ್ಯದ ಪ್ರಧಾನ ವಿದ್ಯುದ್ಯೋಜನೆಯಿದೆ. ಭಾರತೀಯ ಇತಿಹಾಸದ ಹಲವು ಪ್ರಮುಖ ಯುದ್ಧಗಳು ನಡೆದದ್ದು ಈಗಿನ ಹರ್ಯಾಣ ರಾಜ್ಯ ಪ್ರದೇಶದಲ್ಲಿ. ಇಂಥ ನಿರ್ಣಾಯಕ ಯುದ್ಧಗಳಲ್ಲಿ ಅತಿ ಪ್ರಾಚೀನವಾದದ್ದು ಕುರುಕ್ಷೇತ್ರ ಯುದ್ಧ. ಇದಕ್ಕೂ ಮೊದಲು ಕುರು ಕ್ಷೇತ್ರದ ಆರ್ಯರ ವೈದಿಕ ಶ್ಲೋಕಗಳನ್ನು ಪಠಿಸುತ್ತಿದ್ದ ಕ್ಷೇತ್ರವಾಗಿದ್ದಿತು. ಮಧ್ಯಕಾಲದ ಹೆಸರಾಂತ ಯುದ್ಧಭೂಮಿ ಪಾಣಿಪತ್ ಹರ್ಯಾಣದಲ್ಲಿದೆ. ಈಗ ಪಾಣಿಪತ್ ಕೈಮಗ್ಗ ಉದ್ಯಮಕ್ಕೆ ಹೆಸರಾಗಿದೆ.

ಹರ್ಯಾಣ ಜಾನಪದ ನೃತ್ಯ





ಮುಖ್ಯಮಂತ್ರಿತ್ವ : ಬನ್ಸಿಲಾಲ್

1803ರಲ್ಲಿ ಈಗಿನ ಹರ್ಯಾಣದ ಬಹುಭಾಗ ಈಸ್ಟ್ ಇಂಡಿಯಾ ಕಂಪೆನಿಯ ವಶವಾಯಿತು. ಕಂಪೆನಿ ಅದನ್ನು 1832ರಲ್ಲಿ ವಾಯುವ್ಯ ಗಡಿ ಪ್ರಾಂತ್ಯದಲ್ಲಿ ಸೇರಿಸಿತು. ಹರ್ಯಾಣ ಪ್ರದೇಶ 1858ರಿಂದ 1966ರ ವರೆಗೆ ಪಂಜಾಬಿನ ಅಂಗವಾಗಿತ್ತು.

ಕುರುಕ್ಷೇತ್ರದ ಬಳಿ ಆರು ಮೈಲು ತ್ರಿಜ್ಯದೊಳಗೆ ಸುಮಾರು 365 ತೀರ್ಥಗಳಿವೆ.

ಹರ್ಯಾಣದಲ್ಲಿ ಸೇನೆಗೆ ಸೇರುವುದು ಒಂದು ಜನಪ್ರಿಯ ವೃತ್ತಿ. ಇಲ್ಲಿನ ಜಾಟ್ ಜನರು ದೃಢಕಾಯರು. ಭಾರತೀಯ ಸೇನೆಯಲ್ಲಿ ಜಾಟ್ ತುಕಡಿ ಸಾಹಸಕ್ಕೆ ಹೆಸರಾದದ್ದು. ರಾಜ್ಯದಲ್ಲಿ ಜಾತ್ರೆ, ಉತ್ಸವಗಳ ದೀರ್ಘ ಸಂಪ್ರದಾಯವಿದೆ. ಹೋಳಿ ಒಂದು ಮುಖ್ಯ ಹಬ್ಬ.

ನೋಡಿ : ಕುರುಕ್ಷೇತ್ರ ; ಚಂಡೀಗಡ ; ಪಾಣಿಪತ್

ಹರಿ

ತ್ರಿಮೂರ್ತಿಗಳಲ್ಲಿ ಒಬ್ಬನಾದ ಹರಿಯನ್ನು ವಿಷ್ಣು, ನಾರಾಯಣ, ಅನಂತಶಯನ, ವಾಸುದೇವ, ಮಧುಸೂದನ, ಮುಕುಂದ, ಶ್ರೀನಿವಾಸ, ಪೆರುಮಾಳ್, ವಿಠೋಬ ಮೊದಲಾದ ಹೆಸರುಗಳಿಂದ ಕರೆಯುತ್ತಾರೆ.

ಹರಿ ಜಗತ್ತಿನ ಪಾಲಕ. ಆದಿಶೇಷನ ಮೇಲೆ ಮಲಗಿರುವಂತೆ ಆತನನ್ನು ಚಿತ್ರಿಸುತ್ತಾರೆ. ಹರಿಯ ಕಾಲಿನ ಹೆಬ್ಬೆರಳಿನಿಂದ ಗಂಗೆ ಹರಿಯುತ್ತದೆ. ಈತನ ನಾಭಿಯಿಂದ ಹೊರಟ ಕಮಲದಲ್ಲಿ ಬ್ರಹ್ಮ ಮೂಡಿಸಿದ್ದಾನೆ.

ಪ್ರಬಲ ದೇವತೆಗಳಲ್ಲಿ ಹರಿ ವಿನೀತ, ಸತ್ವಪ್ರಧಾನನಾದವನು. ಹರಿಯದು ಗಾಢವರ್ಣ. ನಾಲ್ಕು ಕೈಗಳಲ್ಲಿ ಪದ್ಮ, ಗದೆ, ಶಂಖ, ಚಕ್ರ. ಶಾರ್ಙ್ಗ ಹರಿಯ ಧನುಸ್ಸು. ಆತನ ಶಂಖ ಪಾಂಚಜನ್ಯ. ನಿವಾಸ ವೈಕುಂಠದಲ್ಲಿ. ಅವನ ಪತ್ನಿ ಲಕ್ಷ್ಮಿ. ಆತ ಗರುಡವಾಹನ.

ಪುರಾಣಗಳಲ್ಲಿ ಹರಿಯ ಕುರಿತಾಗಿ ಅನೇಕ ಕಥೆಗಳಿವೆ. ದುಷ್ಟದಮನಕ್ಕಾಗಿ ಸಜ್ಜನರ ಪಾಲನೆಗಾಗಿ ಹರಿಯ ಹತ್ತು ಅವತಾರಗಳು : ಮತ್ಸ್ಯ, ಕೂರ್ಮ, ವರಾಹ, ನರಸಿಂಹ, ವಾಮನ, ಪರಶುರಾಮ, ರಾಮ, ಕೃಷ್ಣ, ಬುದ್ಧ ಮತ್ತು ಕಲ್ಕಿ. ಕಲಿಯುಗದ ಕೊನೆಗೆ ಬಿಳಿ ಕುದುರೆಯ ಮೇಲೆ ಕಲ್ಕಿಯಾಗಿ ವಿಷ್ಣು ಕಾಣಿಸುವನೆಂದು ನಂಬಿಕೆ.

ಹರಿನಾರಾಯಣ ಆಸ್

ನೋಡಿ : ಸಂಪುಟ ೪

ಹರಿಶ್ಚಂದ್ರ

ಸತ್ಯಕ್ಕೆ ಅನ್ವರ್ಥವಾದ ಹೆಸರಾಗಿರುವ ಹರಿಶ್ಚಂದ್ರನನ್ನು ಕುರಿತ ಪುರಾಣ ಕಥೆ ಹೀಗಿದೆ :

ಸೂರ್ಯವಂಶದ ಹರಿಶ್ಚಂದ್ರ ಅಯೋಧ್ಯೆಯ ರಾಜನಾಗಿದ್ದ. ಧರ್ಮಕೀರ್ತಿಗೆ ಹೆಸರಾಗಿದ್ದ ಅವನ ಸತ್ಯ ವ್ರತನಿಷ್ಠೆಯನ್ನು ಪರೀಕ್ಷಿಸಲು ದೇವತೆಗಳು ಅವನ ಬಳಿಗೆ ವಿಶ್ವಾಮಿತ್ರನನ್ನು ಕಳುಹಿಸಿದರು.

ತಾನು ಮಾಡಲಿರುವ ಒಂದು ಯಜ್ಞಕ್ಕಾಗಿ ಹತ್ತು ಕೋಟಿ ನಾಣ್ಯಗಳ ಧನ ಸಹಾಯ ಬೇಕೆಂದು ವಿಶ್ವಾಮಿತ್ರ ಕೇಳಿದ. ಹರಿಶ್ಚಂದ್ರ ಕೊಡಲು ಸಂತೋಷದಿಂದ ಒಪ್ಪಿದ. ಮತ್ತೆ ಬಂದು ಹಣ ಒಯ್ಯುವುದಾಗಿ ಹೇಳಿ ವಿಶ್ವಾಮಿತ್ರ ಹೊರಟುಹೋದ. ಹರಿಶ್ಚಂದ್ರ ಒಮ್ಮೆ ಬೇಟೆಗೆ ತೆರಳಿದ್ದಾಗ ಅಲ್ಲಿ ಇಬ್ಬರು ಚಂಡಾಲ ನೃತ್ಯಗಾತಿಯರನ್ನು ಕಂಡ. ಅವರ ನೃತ್ಯಕ್ಕೆ ಮೆಚ್ಚಿ, ನಿಮಗೇನು ಬೇಕು ಕೇಳಿ ಎಂದಾಗ, ಅವರು "ನಮ್ಮನ್ನು ಮದುವೆಯಾಗು" ಎಂದರು. ಏಕಪತ್ನೀವ್ರತಸ್ಥನಾದ ಅರಸು ಹರಿಶ್ಚಂದ್ರ ಅದಕ್ಕೆ ಒಪ್ಪಲಿಲ್ಲ. ಆ ವೇಳೆಗೆ ವಿಶ್ವಾಮಿತ್ರ ಅಲ್ಲಿಗೆ ಬಂದ. ನೃತ್ಯಗಾತಿಯರು ತನ್ನ ಮಕ್ಕಳೆಂದು ಹೇಳಿ, ಮದುವೆ ಯಾಗುವಂತೆ ಒತ್ತಾಯಮಾಡಿದ. "ನನ್ನ ರಾಜ್ಯವನ್ನಾದರೂ ಕೊಟ್ಟೇನು. ಮದುವೆಯಾಗುವುದು ಮಾತ್ರ ಅಸಾಧ್ಯ" ಎಂದು ಹರಿಶ್ಚಂದ್ರ ಹೇಳಿದಾಗ, ಅದನ್ನೇ ಪಟ್ಟಾಗಿ ಹಿಡಿದು ವಿಶ್ವಾಮಿತ್ರ ರಾಜ್ಯ ಕಿತ್ತುಕೊಂಡ. ಅನಂತರ ಎಲ್ಲವನ್ನೂ ಕಳೆದುಕೊಂಡ ಹರಿಶ್ಚಂದ್ರನಿಂದ, ತಾನು ಹಿಂದೆ ಕೇಳಿದ್ದ ಹತ್ತು ಕೋಟಿ ನಾಣ್ಯಗಳನ್ನು ಬಯಸಿದ. ಹರಿಶ್ಚಂದ್ರನಿಂದ ಆ ಹಣ ಪಡೆದು ಬರಲು ನಕ್ಷತ್ರಕನೆಂಬ ತನ್ನ ಶಿಷ್ಯನನ್ನು ಕಳುಹಿಸಿದ.

ಕಾಶಿಗೆ ಬಂದ ಹರಿಶ್ಚಂದ್ರ ಬೇರೆ ದಿಕ್ಕಿಲ್ಲದೆ ತನ್ನ ಹೆಂಡತಿ ಮಕ್ಕಳನ್ನು ಮಾರಿ ಹಣ ಕೊಟ್ಟನು. ಆದರೆ ನಕ್ಷತ್ರಿಕ ಅಷ್ಟು ದಿನ ತಾನು ಬಂದು ಓಡಾಡಿದ್ದಕ್ಕೆ ಇನ್ನಷ್ಟು ಹಣ ಕೇಳಿದಾಗ ಹರಿಶ್ಚಂದ್ರ ಸ್ಮಶಾನದ ಒಡೆಯನಿಗೆ ತನ್ನನ್ನೇ ಮಾರಿಕೊಂಡು ನಕ್ಷತ್ರಕನ ಋಣ ತೀರಿಸಿದ.

ದಾಸಿಯಾಗಿ ಹರಿಶ್ಚಂದ್ರನ ಹೆಂಡತಿ ಚಂದ್ರಮತಿ ಮತ್ತು ಮಗ ಲೋಹಿ ತಾಶ್ವ ಅನೇಕ ಕಷ್ಟಗಳನ್ನು ಅನುಭವಿಸಿದರು.

ಹರಿಶ್ಚಂದ್ರ ಸ್ಮಶಾನವನ್ನು ಕಾಯುತ್ತಿದ್ದ. ಲೋಹಿತಾಶ್ವನಿಗೆ ಹಾವು ಕಚ್ಚಿ ಸತ್ತಾಗ, ಚಂದ್ರಮತಿ ಅನಾಥ ಮಗುವಿನ ಶವವನ್ನು ಸುಡಲು ಸ್ಮಶಾನಕ್ಕೆ ಬಂದಳು. ಹೆಣ ಸುಡುವ ಶುಲ್ಕ ತೆರಲು ಅವಳ ಬಳಿ ಹಣ ಇರಲಿಲ್ಲ. ಹೀಗಾಗಿ ಹರಿಶ್ಚಂದ್ರ ಹೆಣ ಸುಡಲು ನಿರಾಕರಿಸಿದ. ತನ್ನ ತಲೆ ಕಡಿದು ಹಣವಾಗಿ ಅದನ್ನು ತೆಗೆದುಕೊಂಡು ಲೋಹಿತಾಶ್ವನನ್ನು ಸುಡುವಂತೆ ಅವಳು ಸೂಚಿಸಿದಳು. ಹರಿಶ್ಚಂದ್ರ ಒಪ್ಪಿ ಕಾರ್ಯೋನ್ಮುಖನಾಗುತ್ತಿದ್ದಂತೆ, ದೇವತೆಗಳು ಪ್ರತ್ಯಕ್ಷರಾದರು. ಹರಿಶ್ಚಂದ್ರನ ಸತ್ಯವನ್ನು ಹರಸಿದರು.

ಹೀಗೆ ದೇವತೆಗಳ ಪರೀಕ್ಷೆಯಲ್ಲಿ ಅತ್ಯಂತ ಯಶಸ್ವಿಯಾಗಿ, ಪುಟವಿಟ್ಟ ಚಿನ್ನದಂತೆ ಪ್ರಜ್ವಲಿಸಿದ ಪುರಾಣ ವ್ಯಕ್ತಿ, ಹರಿಶ್ಚಂದ್ರ.

ಹರಿಹರ

ದೇವತೆಗಳು ಮತ್ತು ರಾಕ್ಷಸರು ಅಮೃತಕ್ಕಾಗಿ ಸಮುದ್ರ ಮಥನ ಮಾಡಿದಾಗ ಅಮೃತ ದೊರೆಯಿತು. ಅಮೃತವನ್ನು ಹಂಚಲು ಆಗಿ ದೇವತೆಗಳಿಗೂ ರಾಕ್ಷಸರಿಗೂ ಪೈಪೋಟಿ ಉಂಟಾಯಿತು. ವಿಷ್ಣು ಮೋಹಿನಿಯ ರೂಪತಾಳಿ ಬಂದ. ಅಮೃತ ಹಂಚುವ ಕೆಲಸವನ್ನು ಆಕೆಗೆ ವಹಿಸಿದರು. ಮೋಹಿನಿ ದೇವತೆಗಳಿಗೆ ಮಾತ್ರ ಅಮೃತವನ್ನು ಹಂಚಿ ಮಾಯವಾದಳು.

ಮೋಹಿನಿಯ ಸುಂದರರೂಪ ಶಿವನ ಮನಸ್ಸನ್ನು ಸೆರೆಹಿಡಿದಿತ್ತು. ಮತ್ತೊಮ್ಮೆ ಮೋಹಿನಿಯಾಗಿ ಬರಬೇಕೆಂದು ಶಿವ ವಿಷ್ಣುವನ್ನು ಕೇಳಿಕೊಂಡ. ಶಿವ ಮೋಹಿನಿಯನ್ನು ಪ್ರೀತಿಸಿದ. ಶಿವ–ಮೋಹಿನಿಯರ ಮಗುವನ್ನು, ಇಬ್ಬರ ಹೆಸರುಗಳನ್ನು ಸೇರಿಸಿ, ಹರಿಹರ ಎಂದು ಕರೆದರು.

ದಕ್ಷಿಣ ಭಾರತದಲ್ಲಿ ಪೂಜಿಸುವ ಅಯ್ಯನಾರ್, ಆರ್ಯರಿಗಿಂತಲೂ ಹಿಂದಿನಿಂದ ಇರುವ ದ್ರಾವಿಡ ದೇವರು. ಹರಿಹರ ಮತ್ತು ಈ ದೇವರು ಒಂದೇ ಎನ್ನುತ್ತಾರೆ.

ಹರೀಂದ್ರನಾಥ ಚಟ್ಟೋಪಾಧ್ಯಾಯ

ಪ್ರತಿಭಾಶಾಲಿ ಕವಿ, ನಾಟಕಕಾರ — ಹರೀಂದ್ರನಾಥ ಚಟ್ಟೋಪಾಧ್ಯಾಯ.

ಇವರ ಗಮನಾರ್ಹ ಕೃತಿಗಳು : 'ಹರೆಯದ ಹಬ್ಬ', 'ಶಿವಪೆಟ್ಟಿಗೆ', 'ಕನ್ಯೆಯರು ಮತ್ತು ದ್ರಾಕ್ಷಿತೋಟಗಳು', 'ಸತ್ಯ', 'ಜೀವನ ಮತ್ತು ನಾನು' (ಆತ್ಮಕಥೆ), 'ಮುಖವಾಡಗಳು ಮತ್ತು ಬೀಳ್ಕೊಡುಗೆಗಳು', 'ಪೃಥ್ವಿಯ ಸುವಾಸನೆ', 'ಮುಕ್ತಿಯ ವೃಕ್ಷ' ಇತ್ಯಾದಿ. ಮಕ್ಕಳಿಗಾಗಿ 'ಗುಳ್ಳೆಗಳು ಮತ್ತು ಗೊಂಬೆಗಳು', 'ನನ್ನ ಪಾಠ ಪುಸ್ತಕ' ಮೊದಲಾದ ಅನೇಕ ಕೃತಿಗಳನ್ನು ರಚಿಸಿದ್ದಾರೆ.

ಸಾವಿರಗಟ್ಟಲೆ ಪದ್ಯಗಳನ್ನು ರಚಿಸಿರುವ ಹರೀಂದ್ರನಾಥರು ನಾಟಕಗಳನ್ನು ಬರೆದಿದ್ದಾರೆ. ಇವುಗಳಲ್ಲಿ ಗದ್ಯ ಪದ್ಯ ಎರಡು ಪ್ರಕಾರಗಳೂ ಇವೆ. ಪ್ರಬಂಧಗಳನ್ನು ಬರೆದಿದ್ದಾರೆ. ಅವರು ರಂಗಭೂಮಿ, ಚಲಚ್ಚಿತ್ರ ಕಲಾವಿದರೂ ಹೌದು. 'ಆಜಾದ್' ಚಿತ್ರ ನಿರ್ಮಿಸಿದರು. 'ಗೌತಮ ಬುದ್ಧ' ಚಿತ್ರಕಥೆ ಬರೆದರು. ಚೆನ್ನಾಗಿ ಹಾಡುತ್ತಾರೆ ಮತ್ತು ಒಳ್ಳೆಯ ವಾಗ್ಮಿ.

1898 ಏಪ್ರಿಲ್ 2ರಂದು ಹೈದರಾಬಾದಿನಲ್ಲಿ ಹರೀಂದ್ರನಾಥರು ಜನಿಸಿದರು. ತಂದೆ ಅಘೋರನಾಥ. ತಾಯಿ ವರದಾಸುಂದರಿ. ಸರೋಜಿನಿ ನಾಯುಡು ಇವರ ಸಹೋದರಿ. ಕಮಲಾದೇವಿ ಚಟ್ಟೋಪಾಧ್ಯಾಯ ಇವರ ಪತ್ನಿಯಾಗಿದ್ದವರು. ವ್ಯಾಪಕವಾಗಿ ಪ್ರವಾಸ ಮಾಡಿದರು ; ಹರೀಂದ್ರನಾಥರು ಇಂಗ್ಲೆಂಡ್, ಜರ್ಮನಿ, ಅಮೆರಿಕ, ರಷ್ಯಗಳಲ್ಲಿ ಶಿಕ್ಷಣ–ತರಬೇತಿ ಪಡೆದರು.

ಅವರ ಕವನಗಳು ಭಾವಪೂರ್ಣವಾದುವು ; ಸಹಜಸ್ಫೂರ್ತಿಯಿಂದ ಮೂಡಿಬಂದುವು ; ಅತಿ ಮಧುರ ಶಬ್ದಗಳಿಂದ ಕೂಡಿದಂಥವು. 1967ರ ವಿಶ್ವಕವಿ ಸಮ್ಮೇಳನಕ್ಕೆ ಇವರು ಆಹ್ವಾನಿತರಾಗಿದ್ದರು.

1952ರಲ್ಲಿ ಹರೀಂದ್ರನಾಥ ಚಟ್ಟೋಪಾಧ್ಯಾಯ ಲೋಕಸಭೆಯ ಸದಸ್ಯರಾದರು.

ಹರೀಶ್ ಚಂದ್ರ

ಅಲಹಾಬಾದ್ ವಿಶ್ವವಿದ್ಯಾಲಯದ ಎಂ. ಎಸ್‌ಸಿ. ಪರೀಕ್ಷೆ. ಸಿ. ವಿ. ರಾಮನ್ ತಯಾರಿಸಿದ್ದ ಪ್ರಶ್ನೆಪತ್ರಿಕೆ. ಅದರಲ್ಲಿ ಮೃದಂಗದಲ್ಲಿ ಉಂಟಾಗುವ ಕಂಪನಗಳನ್ನು ವಿಶ್ಲೇಷಿಸುವ ಬಗೆಗೆ ಒಂದು ಪ್ರಶ್ನೆ ಇತ್ತು. ಅದನ್ನು ಉತ್ತರಿಸಲು ಪ್ರಯತ್ನಿಸಿದವನು ಒಬ್ಬನೇ ವಿದ್ಯಾರ್ಥಿ. ಪರೀಕ್ಷೆಯ ಅನಂ

[illegible] ಸಿ. ವಿ. ರಾಮನ್ ಅಭಿನಂದಿಸಿದರು.

[illegible] ಇವರ ಕೊಡುಗೆ ಅಮೂಲ್ಯ.

[illegible] ಡಿರಾಕ್‌ರ ಸಂಪರ್ಕ ಲಭಿಸಿತು.

ಮುಂದೆ ಅವರು ಅಮೆರಿಕದ ಪ್ರಿನ್ಸ್‌ಟನ್‌ಗೆ ಹೋದರು. ಅವರ ಆಸಕ್ತಿ [illegible] ಪಾಲಿ ಗಣಿತ ಲೋಕದಲ್ಲಿ ಹೊಸ ಮಹತ್ ಸಾಧನೆ. ಕಳೆದ ಮೂರು [illegible] ಕಾರ್ಯಶೀಲರು.

ಪರೀಶಚಂದ್ರರು 1952–62 ಅವಧಿಯಲ್ಲಿ ಕೊಲಂಬಿಯಾ ವಿಶ್ವವಿದ್ಯಾ[illegible] 1962ರಿಂದ [illegible] ಯಲ್ಲಿದ್ದಾರೆ. ಹಿಂದೆ ಭಾರತೀಯ ವಿಜ್ಞಾನ ಮಂದಿರದಲ್ಲಿ ಗ್ರಂಥ ಭಂಡಾರಿಯಾಗಿದ್ದ ಡಾ. ಕಾಳೆಯವರ ಮಗಳು ಲಲಿತಾ ಇವರ ಪತ್ನಿ ; ಮಕ್ಕಳು– ಪ್ರೇಮಲಾ ಮತ್ತು ದೇವಕಿ.

ಹರ್ಷವರ್ಧನ

ನೋಡಿ : ಸಂಪುಟ [illegible]

ಹಸನ್‌ಗಂಗು ಬಹಮನಿ

[illegible] ಜ್ಯೋತಿಷ್ಯ ತಿಳಿದಿದ್ದ ಗಂಗು, "ನಿನಗೆ ಉತ್ತಮ ಭವಿಷ್ಯ ಇದೆ ; ನೀನು ಅರಸನಾಗುತ್ತೀ," ಎಂದ.

[illegible] ಪ್ರಖ್ಯಾತನಾದ.

[illegible] (ದೇವಗಿರಿ) ಅಧಿಕಾರರು ಅವನ ವಿರುದ್ಧ ದಂಗೆ ಎದ್ದರು. ದೌಲತಾಬಾದನ್ನು [illegible] 1347 ಆಗಸ್ಟ್ 3ರಂದು ಅಲ್ಲಾವುದ್ದೀನ್ ಹಸನ್ ಬಹಮನ್ ಷಾ ಎಂಬ [illegible] ಬಹಮನ್ ಎಂಬ ಮಾತನ್ನು ತನ್ನ ಹೆಸರಿಗೆ ಸೇರಿಸಿಕೊಂಡನೆಂದು ಅವರ ವಾದ.

[illegible] ಅಪಾರ ಐಶ್ವರ್ಯವೂ ಅವನ ಕೈಸೇರಿತು.

[illegible] ಯಿಂದ ರಾಜ್ಯಭಾರ ನಡೆಸಿದ. ಅವನು ಧರ್ಮನಿಷ್ಠನೂ ಪ್ರಜಾವತ್ಸಲನೂ ಆಗಿದ್ದ.

ನೋಡಿ : [illegible] ; ನಿಜಾಮ್‌ಷಾಹಿ ; ಬರೀದ್‌ಷಾಹಿ

ಹಸ್ತಿನಾಪುರ

ದುಷ್ಯಂತನ ಮಗ ಭರತ. ಅವನ ವಂಶದವನು ಹಸ್ತಿ. ಹಸ್ತಿ ನಿರ್ಮಿಸಿದ ನಗರ ಹಸ್ತಿನಾಪುರ. ಹಾಸ್ತಿನಾಪುರ, ನಾಗಸಾಹ್ವಯ, ಗಜಸಾಹ್ವಯ ಅಥವಾ ವಾರಣಾಹ್ವಯ ಎಂದೂ ಇದನ್ನು ಕರೆಯುತ್ತಾರೆ.

ಹಸ್ತಿನಾಪುರ ಕೌರವರ –ಅನಂತರ ಪಾಂಡವರ– ರಾಜಧಾನಿಯಾಗಿತ್ತು ; ಐಶ್ವರ್ಯ, ವೈಭವಗಳಿಂದ ಕೂಡಿ ಜನಸಮೃದ್ಧವಾಗಿತ್ತು.

[illegible] ದೆಂದು ಸರ್ಪಯಾಗ ನೆರವೇರಿಸಿದ.

ಜನಮೇಜಯನ ಅನಂತರದ ಅರಸು ಅಧಿಸೀಮ ಕೃಷ್ಣ. ಈತನ ಮಗ [illegible] ವರ್ಗಾಯಿಸಿದ.

1950-1952ರ ಅವಧಿಯಲ್ಲಿ ಈಗಿನ ಹಸ್ತಿನಾಪುರದ ಹಳ್ಳಿಯ ಬಳಿ ಭೂಶೋಧನೆ ನಡೆಯಿತು. ಆ ಸ್ಥಳದಲ್ಲಿ ಐದು ಸ್ತರಗಳು ಸಿಕ್ಕಿದುವು. ಇವು ಕ್ರಿ. ಪೂ. 1200ಕ್ಕಿಂತಲೂ ಹಿಂದಿನವೆಂದು ನಿರ್ಧರಿಸಲಾಗಿದೆ. ಪ್ರವಾಹದ ಹಾವಳಿಯ ಗುರುತುಗಳಿವೆ; ಮಹಾಪೂರದ ಅನಂತರ ಮತ್ತೆ ಜನವಸತಿ ಇತ್ತೆಂದು ಸೂಚಿಸುವ ಸಾಮಗ್ರಿಗಳು ದೊರೆತಿವೆ. ಬೆಂಕಿ ಅನಾಹುತ ಹಸ್ತಿನಾಪುರವನ್ನು ಪುನಃ ನಿರ್ಜನಗೊಳಿಸಿದ ಕುರುಹುಗಳಿವೆ. 1100ರಿಂದ 1501ರ ವರೆಗೆ ಇಲ್ಲಿ ನಗರವಿತ್ತೆಂದು ಅತಿ ಮೇಲಿನ ಸ್ತರ ತೋರಿಸುತ್ತದೆ.

16, 17 ಮತ್ತು 18ನೆಯ ಜೈನ ತೀರ್ಥಂಕರರ ಜನ್ಮಸ್ಥಳ ಹಸ್ತಿನಾಪುರ. ಇದು ಜೈನರಿಗೆ ಪವಿತ್ರ ಯಾತ್ರಾಸ್ಥಳ.

ಹಸ್ತಿನಾಪುರದ ನಿವೇಶನ ಇರುವುದು ಈಗಿನ ಮೀರತ್ ಜಿಲ್ಲೆಯಲ್ಲಿ, ದೆಹಲಿಯಿಂದ ಈಶಾನ್ಯಕ್ಕೆ 57 ಮೈಲು ದೂರದಲ್ಲಿ. ಹಿಂದೆ ಅದು ಗಂಗಾನದಿಯ ದಡದ ಮೇಲಿತ್ತು. ಹಸ್ತಿನಾಪುರವನ್ನು ನಾಶಗೊಳಿಸಿದ ಮಹಾಪೂರದ ಅನಂತರ ಗಂಗಾನದಿ ಹರಿಯುವ ದಿಕ್ಕೇ ವ್ಯತ್ಯಾಸ ಹೊಂದಿತು.

ಪ್ರಾಚೀನ ಷೋಡಶ ಮಹಾಜನಪದಗಳಲ್ಲಿ ಒಂದಾದ ಕುರು ಜನಪದದ ಮುಖ್ಯ ಪಟ್ಟಣವಾಗಿತ್ತು, ಹಸ್ತಿನಾಪುರ.

ಹಾಫ್‌ಕಿನ್ ಸಂಸ್ಥೆ

ಗಾಜಿನ ಜೋನಿನಲ್ಲಿ ಹಾವು. ಜೋನಿನ ಬಾಗಿಲು ತೆರೆದು ಹಾವನ್ನು ಕೆಣಕುತ್ತಾರೆ. ಸಿಟ್ಟಿಗೆದ್ದ ಹಾವು ಹೆಡೆ ಎತ್ತಿ ಕಚ್ಚಲು ಬರುತ್ತದೆ. ಅದರ ಬಾಯಿಗೆ ತಕ್ಷಣ ರಬ್ಬರ್ ಮುಚ್ಚಳವಿರುವ ಗಾಜಿನ ಸೀಸೆ ಹಿಡಿಯುತ್ತಾರೆ. ಮುಚ್ಚಳವನ್ನು ಹಾವು ಕಚ್ಚಿದಾಗ, ಮುಚ್ಚಳದಲ್ಲಿರುವ ಕೊಳವೆಯ ಮೂಲಕ ವಿಷ ಸೀಸೆಯಲ್ಲಿ ಸಂಗ್ರಹಗೊಳ್ಳುತ್ತದೆ.

—ಹೀಗೆ ಮುಂಬಯಿಯಲ್ಲಿರುವ ಹಾಫ್‌ಕಿನ್ ಸಂಸ್ಥೆಯಲ್ಲಿ ಲಸಿಕೆಗಾಗಿ ವಿಷ ಸಂಗ್ರಹಿಸುವ ಒಂದು ಕ್ರಮ ಇದು.

1896ರಲ್ಲಿ ಆರಂಭವಾದ ಹಾಫ್‌ಕಿನ್ ಸಂಸ್ಥೆ ಬ್ಯಾಕ್ಟೀರಿಯಾ ನಿರೋಧಕ ಲಸಿಕೆ ತಯಾರಿಕೆಯಲ್ಲಿ ವಿಶ್ವದಲ್ಲೇ ಬೃಹತ್ ಸಂಸ್ಥೆಯಾಗಿ ಬೆಳೆದಿದೆ. ಮಹಾರಾಷ್ಟ್ರ ಸರಕಾರ ಇದನ್ನು ನಡೆಸುತ್ತಿದೆ. ಕೆಲವು ರಾಷ್ಟ್ರೀಯ ಹಾಗೂ ಅಂತರ ರಾಷ್ಟ್ರೀಯ ಸಂಸ್ಥೆಗಳ ಸಹಕಾರದೊಡನೆ ವಿಶೇಷ ಕಾರ್ಯಗಳನ್ನು ನಿರ್ವಹಿಸುತ್ತದೆ. ವೈದ್ಯಕೀಯ ಸಂಶೋಧನೆ, ಸಂಶೋಧಕ ಕೆಲಸದ ತರಬೇತಿ, ವೈದ್ಯರಿಗೆ ರೋಗ ನಿದಾನದ ಸಾಧನಗಳ ಪೂರೈಕೆ –ಸಂಸ್ಥೆಯ ಪ್ರಮುಖ ಕೆಲಸಗಳು.

ಲಸಿಕೆ, ಸರ್ಪವಿಷಹಾರಿ, ವಿಷಹಾರಿ, ರಕ್ತಾಂಶಗಳು, ಸಲ್ಪಾ ಔಷಧ ಮೊದಲಾದವುಗಳೂ ಇಲ್ಲಿ ತಯಾರಾಗುತ್ತವೆ, ಔಷಧಗಳ ಪರೀಕ್ಷೆ ನಡೆಸುತ್ತಾರೆ.



ಸಂಸ್ಥೆಯ ಸ್ಥಾಪನೆ : ಹಾಫ್‌ಕಿನ್

ವಾಲ್ಡಿಮಾರ್ ಮೊಡಿಕಾಯ್ ಹಾಫ್‌ಕಿನ್ ಮೂಲತಃ ರಷ್ಯನ್ ಪ್ರಜೆ. ಇವರು ಡಾ. ಮೆಚ್ನಿಕಾಫ್ ಮತ್ತು ಲೂಯಿ ಪಾಶ್ಚರರ ಶಿಷ್ಯ. ಕಾಲರಾ ನಿರೋಧಕ ವ್ಯಾಕ್ಸಿನನ್ನು ಕಂಡುಹಿಡಿದ ಹಾಫ್‌ಕಿನ್ ಅದನ್ನು ಪ್ರಯೋಗಿಸಿ ನೋಡಲು ಕಾಲರಾ ಅಂಟುಜಾಡ್ಯವಿದ್ದ ಭಾರತಕ್ಕೆ 1893ರಲ್ಲಿ ಬಂದರು.

ಪ್ಲೇಗ್ ಹಬ್ಬಿದಾಗ ಅದರ ವಿರುದ್ಧ ವ್ಯಾಕ್ಸಿನ್ ತಯಾರಿಸಲು 1899ರಲ್ಲಿ ಮುಂಬಯಿಯಲ್ಲಿ ಪುಟ್ಟ ಪ್ರಯೋಗಾಲಯ ಸ್ಥಾಪಿಸಿದರು. ಅದೇ ಮುಂದೆ ವಿಶ್ವಖ್ಯಾತಿ ಗಳಿಸಿದ ಹಾಫ್‌ಕಿನ್ ಇನ್‌ಸ್ಟಿಟ್ಯೂಟ್.

ಗಾಂಧೀಜೀ ಹಾಫ್‌ಕಿನ್ ಇನ್‌ಸ್ಟಿಟ್ಯೂಟನ್ನು 1933ರಲ್ಲಿ ಸಂದರ್ಶಿಸಿದರು.

1974ರಲ್ಲಿ ಈ ಸಂಶೋಧನಾಲಯ ತನ್ನ 75ನೆಯ ವರ್ಷಂತಿಯನ್ನು ಆಚರಿಸಿತು.

ಇಲ್ಲಿ ಸ್ನಾತಕೋತ್ತರ ಪದವಿ, ಡಾಕ್ಟರೇಟ್ ಪದವಿ ಪಡೆಯಲು ಸೌಲಭ್ಯವಿದೆ.

ಹ್ಯಾವೆಲ್

ನೋಡಿ : ಇ.ಬಿ. ಹ್ಯಾವೆಲ್

ಹಿಂದ್ ಮಜ್ದೂರ್ ಸಭಾ

1948ರಲ್ಲಿ ಸ್ಥಾಪಿಸಲ್ಪಟ್ಟ ಭಾರತ ಸೋಷಲಿಸ್ಟ್ ಪಕ್ಷ ತನ್ನದೇ ಆದ ಸ್ವಂತ ಸಂಘವೊಂದನ್ನು ಕಟ್ಟಲು ನಿರ್ಧರಿಸಿತು. ಇದರ ಫಲ : ಹಿಂದ್ ಮಜ್ದೂರ್ ಪಂಚಾಯತ್. ಆದರೆ ಇದು ಪ್ರಬಲವಾಗಲಿಲ್ಲ. ಈ ವೇಳೆಗೆ ಭಾರತೀಯ ಕಾರ್ಮಿಕ ಒಕ್ಕೂಟ (ಇಂಡಿಯನ್ ಫೆಡರೇಷನ್ ಆಫ್ ಲೇಬರ್)ದಲ್ಲಿ ಹಿಂದ್ ಮಜ್ದೂರ್ ಪಂಚಾಯತ್ ವಿಲೀನಗೊಂಡು ಹಿಂದ್ ಮಜ್ದೂರ್ ಸಭಾ ಸ್ಥಾಪಿಸಲ್ಪಟ್ಟಿತು.

ಮುಂದೆ ಈ ಕಾರ್ಮಿಕ ಸಂಘದಲ್ಲಿ ಬಿಕ್ಕಟ್ಟು ಉಂಟಾಯಿತು. 1964ರಲ್ಲಿ ಸಮಾಜವಾದೀ ನಾಯಕ ಫರ್ನಾಂಡೀಸರ ಗುಂಪು ಈ ಕಾರ್ಮಿಕ ಸಂಘದಿಂದ ಹೊರಬಂದು, ಹಿಂದ್ ಮಜ್ದೂರ್ ಪಂಚಾಯತ್ ಎಂಬ ಹೊಸ ಕಾರ್ಮಿಕ ಒಕ್ಕೂಟ ಸ್ಥಾಪಿಸಿತು.

ಹಿಂದೀ ಭಾಷೆ, ಸಾಹಿತ್ಯ

ಹಿಂದೀ. ಭಾರತ ಐರೋಪ್ಯ ಪರಿವಾರಕ್ಕೆ ಸೇರಿದ ಒಂದು ಪ್ರಮುಖ ಭಾಷೆ. 'ಹಿಂದೀ' ಶಬ್ದವನ್ನು 'ಹಿಂದೂಸ್ಥಾನದ ನಿವಾಸಿ' ಹಾಗೂ 'ಹಿಂದೀ ಭಾಷೆ' ಎಂಬ ಎರಡು ಅರ್ಥಗಳಲ್ಲಿ ಬಳಸುತ್ತಾರೆ. ಹಿಂದೀ ಭಾಷೆಯ ವಿಸ್ತೃತ ಅರ್ಥವು 'ಹಿಂದೂಸ್ಥಾನದ ಭಾಷೆ' ಎಂದು.

ಇದು ಉತ್ತರ ಪ್ರದೇಶದ ಪ್ರಮುಖ ಭಾಷೆ. ಬಿಹಾರ, ಮಧ್ಯಪ್ರದೇಶ, ರಾಜಸ್ಥಾನ, ಪಂಜಾಬು, ಹರ್ಯಾಣ ಮತ್ತು ಹಿಮಾಚಲ ಪ್ರದೇಶ ರಾಜ್ಯಗಳಲ್ಲೂ ಇದನ್ನು ಬಳಸುತ್ತಾರೆ.

ಭಾರತೀಯ ಆರ್ಯಭಾಷೆಗಳ ಮಧ್ಯಯುಗ 10ನೆಯ ಶತಮಾನದ ಹತ್ತಿರ ಕೊನೆಗಾಣುತ್ತದೆ. ಇಲ್ಲಿಂದಲೇ ಆಧುನಿಕ ಆರ್ಯಭಾಷೆಗಳ ಯುಗದ ಪ್ರಾರಂಭ. ಇಲ್ಲಿಂದ ಮೊದಲಿನ 2–3 ನೂರು ವರ್ಷಗಳ ಅವಧಿ 'ಸಂಕ್ರಮಣ' ಕಾಲ ಅಥವಾ 'ಸಂಧಿಕಾಲ'.

ಹಿಂದೀ ಭಾಷೆಯ ವಿಕಾಸದ ಕಾಲವನ್ನು ಈ ಮೂರು ಭಾಗಗಳಾಗಿ ವಿಂಗಡಿಸಬಹುದು.

1 ಆದಿಕಾಲ (1000—1500)

2 ಮಧ್ಯಕಾಲ (1600—1800)

3 ಆಧುನಿಕಕಾಲ (1900ರಿಂದ ಈಚಿನದು)

ಆದಿಕಾಲದ ಭಾಷೆಗಳಲ್ಲಿ ಅಪಭ್ರಂಶಾಭಾಸದ ರೂಪ ಮತ್ತು ಡಿಂಗಲ್‌ರೂಪಗಳನ್ನು ಕಾಣಬಹುದು. ಈ ಕಾಲದಲ್ಲಿ 'ಪುರಾನಿ ಹಿಂದೀ' ಅಥವಾ 'ಹಿಂದವೀ' ರೂಪ ಕಾಣಿಸಿಕೊಳ್ಳುತ್ತದೆ. ಮತ್ತು ಇದು ಪ್ರಾಚೀನ ಮೈಥಿಲೀ ಉಪಭಾಷೆಯ ರಚನೆಗಳಲ್ಲಿ ಸಿಗುತ್ತದೆ. ಈ ಕಾಲ ಹಿಂದೀ ಭಾಷೆಯ ಆರಂಭದ ಕಾಲ. ಅದರಿಂದ ಅದರ ಬೇರೆ ಬೇರೆ ಉಪಭಾಷೆಗಳಲ್ಲಿ ಸ್ಪಷ್ಟವಾಗಿ ಭಿನ್ನತೆ ಕಂಡುಬರುತ್ತದೆ. ಈ ಕಾಲದ ಪ್ರಮುಖ ಸಾಹಿತ್ಯಕ ಕೃತಿಗಳಲ್ಲಿ ಕವಿ ಚಂದ್ ಬರದಾಯಿ ಬರೆದ 'ಪೃಥ್ವೀರಾಜ ರಾಸೊ' ನರಪತಿ ನಾಲ್ಹನ 'ಬೀಸಲದೇವ ರಾಸೊ'. ಮತ್ತು ಜಗನಿಕ ಕವಿ ಬರೆದ 'ಆಲ್ಹಖಂಡ'ಗಳಿವೆ. ಗೋರಖನಾಥ ಮತ್ತು ಇತರ ಸಿದ್ಧ ಮತ್ತು ನಾಥ ಪಂಥಿಗಳ ರಚನೆಗಳನ್ನು. ಕವಿಕೋಕಿಲ ವಿದ್ಯಾಪತಿ ಮೈಥಿಲೀ ಉಪಭಾಷೆಯಲ್ಲಿ ಬರೆದ ಸುಲಲಿತ ಕವಿತೆಗಳನ್ನು. ಖ್ವಾಜಾ ಬಂದಾನಿವಾಜ, ಖ್ವಾಜಾ ಮಸಊದ, ಖುಸರೊ ಮುಂತಾದ ಮುಸಲ್ಮಾನ ಕವಿಗಳ ಕೃತಿಗಳನ್ನು ಇಲ್ಲಿ ಸ್ಮರಿಸಬಹುದು.

ಹಿಂದೀ ಭಾಷೆಯ ಮಧ್ಯಕಾಲ ಮೊಘಲರ ಆಳಿಕೆಯ ಕಾಲವಾಗಿತ್ತು. ಈ ಕಾಲದಲ್ಲಿ ಹಿಂದೀ ಭಾಷೆಯ ಮುಖ್ಯ ಉಪಭಾಷೆಗಳಾದ 'ಬ್ರಜಭಾಷೆ' ಮತ್ತು 'ಅವಧಿ' ಭಾಷೆಗಳು ವಿಕಸಿತವಾದುವು. ಹಿಂದೀ ಭಾಷೆಯ ಮಧ್ಯಕಾಲದ ಸರ್ವಶ್ರೇಷ್ಠ ಕವಿಗಳಲ್ಲಿ ಜಾಯಸಿ. ಕುತುಬನ್. ಮಂಝನ್ ತುಲಸೀದಾಸ. ಕಬೀರ. ಸೂರದಾಸ ಮತ್ತು ಮೀರಾಬಾಯಿ ಮುಂತಾದವರಿದ್ದಾರೆ. ಮಧ್ಯಕಾಲದ ಉತ್ತರಾರ್ಧ 'ರೀತಿ ಸಾಹಿತ್ಯ'ದ ಕಾಲವಾಗಿದೆ. ಕೇಶವ ಬಿಹಾರಿ. ಭೂಷಣ. ಮತಿರಾಮ. ದೇವ ಮುಂತಾದವರು ಈ ಕಾಲದ ಕವಿಗಳು.

ಹಿಂದೀ ಭಾಷೆಯ ಆಧುನಿಕ ಕಾಲ ಬ್ರಿಟಿಷರ ಆಡಳಿತ ಕಾಲದಲ್ಲಿ ವಿಕಸಿತಗೊಂಡಿತು. ಕಲ್ಕತ್ತೆಯಲ್ಲಿ ಇಂಗ್ಲಿಷರು ಫೋರ್ಟ್ ವಿಲಿಯಂ ಕಾಲೇಜನ್ನು ಸ್ಥಾಪಿಸಿ ಅಲ್ಲಿ ಹಿಂದೀ ಮತ್ತು ಉರ್ದು ಭಾಷೆಗಳ ವಿಕಾಸದ ಕ್ರಮವನ್ನು ಆರಂಭಿಸಿದರು. ನೌಕರರಿಗೆ ಹಿಂದೀ ಭಾಷೆ ಕಲಿಸಲು ಮತ್ತು ತಮ್ಮ ಧರ್ಮಪ್ರಚಾರ ಮಾಡಲು ಇವರು ಗದ್ಯದ ಆಶ್ರಯಪಡೆದರು. ಬ್ರಜಭಾಷೆಗಿಂತ 'ಖಡಿಬೋಲಿ'ಯನ್ನು ಹೆಚ್ಚಾಗಿ ಬಳಸಿ ಇದರ ವಿಕಾಸಕ್ಕೆ ಸಹಾಯಕರಾದರು. ಆಧುನಿಕ ಕಾಲದ ಪೂರ್ವಾರ್ಧದಲ್ಲಿ ಗದ್ಯದ 'ಖಡಿ ಬೋಲಿ' ಭಾಷೆ ಮತ್ತು ಪದ್ಯದ 'ಬ್ರಜಭಾಷೆ' ಅಭಿವೃದ್ಧಿ ಹೊಂದಿದುವು; ಉತ್ತರಾರ್ಧದಲ್ಲಿ 'ಖಡಿಬೋಲಿ' ಪದ್ಯದ ಭಾಷೆಯಾಯಿತು.

ಇಂದು ಖಡಿಬೋಲಿ ಭಾಷೆಯ ಮೇಲೆ ಆಧಾರಿತ 'ಸಾಧು ಹಿಂದೀ' ಸಂಪೂರ್ಣವಾಗಿ ಸಾಹಿತ್ಯದ ಮಾಧ್ಯಮವಾಗಿದೆ. ಹಾಗೆಯೇ ಹಿಂದೀ ರಾಜ್ಯಗಳ ಶಿಕ್ಷಣ, ಆಡಳಿತ ಹಾಗೂ ಸುಶಿಕ್ಷಿತ ಜನರ ಸಂಭಾಷಣೆಯ ಮಾಧ್ಯಮವೂ ಆಗಿದೆ. ಈ 'ಸಾಧು ಭಾಷೆ'ಯ ಜೊತೆಗೆ ಅದರ ಸಹ ಭಾಷೆಗಳೂ ಅವುಗಳ ಉಪಭಾಷೆಗಳೂ ಬೆಳೆದಿವೆ. ಈ ಕಾಲದ ಭಾಷೆಗಳಲ್ಲಿ ತತ್ಸಮ ಶಬ್ದಗಳು ಹೆಚ್ಚಾಗಿ ಉಪಯೋಗಿಸಲ್ಪಡುತ್ತವೆ. ಹಿಂದೀ ಭಾಷೆಯು ಆರ್ಯ ಭಾಷೆಗಳಿಂದ ಮತ್ತು ದ್ರಾವಿಡ ಭಾಷೆಗಳಿಂದ [illegible] ಶಬ್ದಗಳನ್ನು ಧಾರಾಳವಾಗಿ ಸ್ವೀಕರಿಸಿದೆ. ಇಂಗ್ಲಿಷ್ ಭಾಷೆಯ ಅನೇಕ ಶಬ್ದಗಳು ಹಿಂದೀ ಭಾಷೆಯ ಸ್ವತ್ತಾಗಿವೆ.

ಈ ಕಾಲದ ಲೇಖಕರಲ್ಲಿ ಭಾರತೇಂದು ಹರಿಶ್ಚಂದ್ರ. ಮಹಾವೀರ ಪ್ರಸಾದ ದ್ವಿವೇದಿ. ರಾಮಚಂದ್ರ ಶುಕ್ಲ. ಪ್ರೇಮಚಂದ್. ಜಯಶಂಕರ ಪ್ರಸಾದ್, ಸುಮಿತ್ರಾನಂದನ ಪಂತ್, ಸೂರ್ಯಕಾಂತ ತ್ರಿಪಾಠಿ 'ನಿರಾಲಾ'. ಮಹಾದೇವಿ ವರ್ಮಾ ಮುಂತಾದವರು ಪ್ರಮುಖ ರಾಗಿದ್ದಾರೆ.

ಹಿಂದೀ ಸಾಹಿತ್ಯವನ್ನು ಸಾಮಾನ್ಯ ಪ್ರವೃತ್ತಿಗಳ ಆಧಾರದ ಮೇಲೆ ಹೀಗೆ ವಿಭಜಿಸಲಾಗಿದೆ.

ಹಿಂದೀ ಭಾಷೆಯ ಆದಿಕಾಲ 993ರ ಸುಮಾರಿಗೆ ಪ್ರಾರಂಭವಾಗುತ್ತದೆ. ಆದರೆ ಕೆಲವು ವಿದ್ವಾಂಸರು, ಕವಿ ಕೃತಿಗಳ ಆಧಾರದ ಮೇಲೆ ಭೋಜ ರಾಜನ ಪೂರ್ವಜನಾದ ರಾಜಾ ಮಾನಭೋಜನ ಆಸ್ಥಾನದ ಕವಿ ಪುಷ್ಯನಿಂದ 713ರಿಂದ ಹಿಂದೀ ಸಾಹಿತ್ಯದ ಆದಿಕಾಲದ ಆರಂಭವನ್ನು ಗುರುತಿಸಿದ್ದಾರೆ. ಇವನು ಬರೆದ ಗ್ರಂಥ ಅಲಂಕಾರಶಾಸ್ತ್ರಕ್ಕೆ ಸಂಬಂಧಿಸಿದ್ದೆಂದು ಅಭಿಪ್ರಾಯಪಡಲಾಗಿದೆ. ಆದರೆ ಇದು ಕಣ್ಣಿಗೆ ಬಿದ್ದಿಲ್ಲ.

ಸಿದ್ಧ ಸಾಹಿತ್ಯದಿಂದ ಆದಿಕಾಲದ ಆರಂಭವಾಗಿದೆ ಎಂದು ಕೆಲವು ಪಂಡಿತರ ಊಹೆ.

ಜೈನ ಆಚಾರ್ಯರು ತಮ್ಮ ವಿಪುಲ ಸಾಹಿತ್ಯವನ್ನು ಅಪಭ್ರಂಶದಲ್ಲಿ ಬರೆದಿದ್ದಾರೆ. ಈ ಸಾಹಿತ್ಯದಲ್ಲಿ ಹಿಂದೀ ಭಾಷೆಯ ಪೂರ್ವರೂಪ ಸಿಗುತ್ತದೆ. 'ಶಾರ್ಙ್ಗಧರ ಪದ್ಧತಿ' ಎಂಬ ಸಂಗ್ರಹ ಗ್ರಂಥವನ್ನು ರಚಿಸಿದ ಶಾರ್ಙ್ಗಧರರು ದೇಶಭಾಷೆಯ ವಿಕಾಸದಲ್ಲಿ ಸಹಾಯಕರಾದರು. ಅನೇಕ ಲೇಖಕರು ಕವಿಗಳೂ ಕಲಿಗಳೂ ಆಗಿದ್ದರು. ಆಶ್ರಿತ ಕವಿಗಳು ರಾಜ ಪ್ರಶಂಸೆಯಲ್ಲಿ ಮಗ್ನರಾಗುತ್ತಿದ್ದರು. ವೀರರಸಕ್ಕೆ ಅನುಗುಣವಾಗಿ ಗಂಡು ಭಾಷೆಯಾದ 'ಡಿಂಗಲ್' ಕಾವ್ಯಭಾಷೆಯಾಯಿತು.

ಈ ಕಾಲದ ಪ್ರಮುಖ ಕಾವ್ಯ—ಚಂದ್ ಬರದಾಯಿ ಕೃತ 'ಪೃಥ್ವೀರಾಜ ರಾಸೊ'. ಇದು ಹಿಂದೀ ಸಾಹಿತ್ಯದ ಆದಿಕಾಲದ ಮಹಾಕಾವ್ಯ. ಈ ಕಾಲದಲ್ಲಿಯೇ ಖುಸರೋ. ವಿದ್ಯಾಪತಿ ಮುಂತಾದವರು ಸುಲಲಿತ ಕಾವ್ಯಗಳನ್ನು ರಚಿಸಿ ಹಿಂದೀ ಸಾಹಿತ್ಯದ ವಿಕಾಸಕ್ಕೆ ಕಾರಣರಾದರು.

ಭಕ್ತಿಕಾಲವು ಹಿಂದೀ ಸಾಹಿತ್ಯದ ಸುವರ್ಣಯುಗವೆಂದು ಪ್ರಸಿದ್ಧಿ ಗಳಿಸಿದೆ.

ಕಬೀರದಾಸ. ಮಲಿಕ್ ಮಹಮ್ಮದ್ ಜಾಯಸಿ. ತುಲಸೀದಾಸ. ಸೂರದಾಸ. ಮೀರಾಬಾಯಿ ಇವರೆಲ್ಲ ಭಕ್ತಿಕಾಲದ ಪ್ರಮುಖ ಕವಿಗಳು.

ರೀತಿಕಾಲವು ಲಕ್ಷಣ ಗ್ರಂಥಗಳ ಕಾಲ; ರಸ. ಅಲಂಕಾರ. ಲಕ್ಷಣಾ. ವ್ಯಂಜನ ಮುಂತಾದುವುಗಳ ವಿವೇಚನೆ ಈ ಕಾಲದಲ್ಲಿ ಸಾಹಿತ್ಯದ ಮುಖ್ಯ ಲಕ್ಷಣ. ಶೃಂಗಾರ. ವೀರರಸ ಪ್ರಧಾನವಾಗಿ ಮುಕ್ತಕ ಛಂದಸ್ಸಿನಲ್ಲಿ ಬರೆದ 'ದೋಹಾ'. 'ಕವಿತ್ತ'. 'ಸವಯ್ಯಾ'ಗಳು ಪ್ರಸಿದ್ಧವಾದುವು. [illegible] 'ಚಿಂತಾಮಣಿ' ಈ ಕಾಲದ ಶ್ರೇಷ್ಠಕೃತಿ.

19ನೆಯ ಶತಮಾನದ ಉತ್ತರಾರ್ಧದಲ್ಲಿ ಮುನ್ಷಿ ಸದಾಸುಖಲಾಲ. ಮುನ್ಷಿ ಇಂಶಾ ಅಲ್ಲಾಖಾನ್. [illegible] ಮಿಶ್ರ. [illegible] ಇವರು ಹಿಂದೀ ಗದ್ಯ ಸಾಹಿತ್ಯದ ವಿಕಾಸವನ್ನು ಸಾಧಿಸಿದ ಪ್ರಮುಖರು. ಇದೇ ಸಮಯದಲ್ಲಿ ಕ್ರೈಸ್ತ ಪಾದ್ರಿಗಳೂ ತಮ್ಮ ಧರ್ಮ ಪ್ರಚಾರಕ್ಕೆ ಹಿಂದೀ ಭಾಷೆಯ ಮಾಧ್ಯಮವನ್ನು ಆರಿಸಿಕೊಂಡರು. ಸ್ವಾಮಿ ದಯಾನಂದ ಮತ್ತು ರಾಜಾ ರಾಮಮೋಹನ ರಾಯ್ ಇವರೂ ಹಿಂದಿ ಭಾಷೆಯ [illegible] ರಾಜಾ [illegible] ಭಾಷೆಗಳ ಶಬ್ದಗಳನ್ನು ಬಳಸಿದರು.

ಹಿಂದೀ ಭಾಷೆಗೆ ಒಂದು ಯೋಗ್ಯ ನಿರ್ದೇಶನವನ್ನು ಕೊಟ್ಟವರಲ್ಲಿ ಭಾರತೇಂದು ಹರಿಶ್ಚಂದ್ರ (1850-1885) ಪ್ರಮುಖರು. ಇವರ ಕಾಲ ಹರಿಶ್ಚಂದ್ರಯುಗ ಎಂದೇ ಪ್ರಖ್ಯಾತವಾಗಿದೆ.

ಭಾರತೇಂದು ಹರಿಶ್ಚಂದ್ರರ ಅನಂತರ ಆಚಾರ್ಯ ಮಹಾವೀರ ಪ್ರಸಾದ್ ದ್ವಿವೇದಿ (1864-1938), ಪಂಡಿತ ಮಾಧವಪ್ರಸಾದ ಮಿಶ್ರ (1871-1907), ಚಂದ್ರಧರ ಶರ್ಮಾ ಗುಲೇರಿ, ಅಧ್ಯಾಪಕ ಪೂರ್ಣಸಿಂಹ ಬಹಳ ಪ್ರಸಿದ್ಧಿ ಪಡೆದ ಲೇಖಕರು. ಆಚಾರ್ಯ ರಾಮಚಂದ್ರ ಶುಕ್ಲರು ಈ ಸಮಯದ ಅತ್ಯಂತ ಶ್ರೇಷ್ಠ ನಿಬಂಧಕಾರರು, ವಿಮರ್ಶಕರು. ಆಚಾರ್ಯ ನಂದದುಲಾರೆ ವಾಜಪೇಯಿ, ಡಾ. ಹಜಾರಿ ಪ್ರಸಾದ ದ್ವಿವೇದಿ, ಮಹಾದೇವಿ ವರ್ಮಾ, ಜೈನೇಂದ್ರ ಕುಮಾರ ಮುಂತಾದವರು ಈ ಕಾಲದಲ್ಲಿ ಶ್ರೇಷ್ಠ ಶೈಲಿಯ ಉತ್ತಮ ಪ್ರಬಂಧಗಳನ್ನು ಬರೆದು ಹಿಂದೀ ಪ್ರಬಂಧ ಸಾಹಿತ್ಯದ ವಿಕಾಸಕ್ಕೆ ನಾಂದಿ ಹಾಡಿದರು.

ಜಯಶಂಕರ 'ಪ್ರಸಾದ'ರ ಸಾಹಿತ್ಯ ಸೃಷ್ಟಿ ಅಮೂಲ್ಯವಾಗಿದೆ. ಅವರು 'ಅಜಾತಶತ್ರು', 'ಸ್ಕಂದಗುಪ್ತ', 'ಚಂದ್ರಗುಪ್ತ' ಮುಂತಾದ ಉಚ್ಚ ಮಟ್ಟದ ನಾಟಕಗಳನ್ನು ಬರೆದು ಹಿಂದೀ ನಾಟಕಸಾಹಿತ್ಯಕ್ಕೆ ಅಪಾರ ಕಾಣಿಕೆ ಸಲ್ಲಿಸಿದ್ದಾರೆ. ಆಧುನಿಕ ನಾಟಕಕಾರರಲ್ಲಿ ಪಂಡಿತ ಲಕ್ಷ್ಮೀನಾರಾಯಣ ಮಿಶ್ರರು ಬರೆದ ಸಮಸ್ಯಾತ್ಮಕ ಹಾಗೂ ಮನೋವೈಜ್ಞಾನಿಕ ನಾಟಕಗಳಲ್ಲಿ 'ಸಿಂಧೂರ್ ಕೀ ಹೋಲಿ', 'ರಾಕ್ಷಸ್ ಕಾ ಮಂದಿರ್' ಮುಂತಾದುವು ಬಹಳ ಖ್ಯಾತಿಯನ್ನು ಪಡೆದುವು. ಐತಿಹಾಸಿಕ ನಾಟಕಗಳನ್ನು ಬರೆಯುವವರಲ್ಲಿ ಸೇಠ್ ಗೋವಿಂದದಾಸ್, ಡಾ. ರಾಮಕುಮಾರ ವರ್ಮಾ ಸಿದ್ಧಹಸ್ತರು. ಸುದರ್ಶನ, ಉದಯಶಂಕರಭಟ್ಟ, ಜಗದೀಶಚಂದ್ರ ಮಾಥುರ್, ಉಪೇಂದ್ರನಾಥ 'ಅಶ್ಕ್', ಮೋಹನ್ ರಾಕೇಶ್ ಅವರನ್ನು ಇಲ್ಲಿ ಹೆಸರಿಸಬಹುದು. ವಿಷ್ಣು ಪ್ರಭಾಕರರ ರೇಡಿಯೋ ನಾಟಕಗಳು ಪ್ರಖ್ಯಾತವಾಗಿವೆ.

ಕಥಾಸಾಹಿತ್ಯ ಮತ್ತು ಕಾದಂಬರಿಗಳ ನಿರ್ಮಾಣದಲ್ಲಿ ಹೆಸರು ಪಡೆದಿರುವವರಲ್ಲಿ ಪ್ರೇಮಚಂದ, ಜಯಶಂಕರ 'ಪ್ರಸಾದ್', ವಿಶ್ವಂಭರನಾಥ ಶರ್ಮಾ 'ಕೌಶಿಕ್', ವೃಂದಾವನಲಾಲ ವರ್ಮಾ, ಭಗವತೀ ಚರಣ ವರ್ಮಾ, ಚತುರ ಸೇನಶಾಸ್ತ್ರಿ, ಅಜ್ಞೇಯ, ಭಗವತೀ ಪ್ರಸಾದ ವಾಜಪೇಯಿ, ಉಷಾದೇವಿ ಮಿತ್ರಾ ಮುಖ್ಯರಾದವರು.

ಆಧುನಿಕ ಕಾಲದ ಕವಿಗಳಲ್ಲಿ ಭಾರತೇಂದು ಹರಿಶ್ಚಂದ್ರ, ಜಗನ್ನಾಥದಾಸ 'ರತ್ನಾಕರ', ಆಚಾರ್ಯ ಮಹಾವೀರ ಪ್ರಸಾದ ದ್ವಿವೇದಿ, ಶ್ರೀಧರ ಪಾಠಕ, 'ಹರಿಔಧ' ಮೈಥಿಲಿ ಶರಣಗುಪ್ತ, ಮಾಖನಲಾಲ ಚತುರ್ವೇದಿ, ಬಾಲಕೃಷ್ಣ ಶರ್ಮಾ 'ನವೀನ', ಬ್ರಜಭಾಷೆ ಹಾಗೂ ಖಡಿ ಬೋಲಿಯಲ್ಲಿ ಕವಿತಾರಚನೆ ಮಾಡಿದ್ದಾರೆ. ಇದೇ ಸಮಯದಲ್ಲಿ ಛಾಯಾವಾದಿ ಕಾವ್ಯ ಉದಿಸಿತು. ಸ್ವದೇಶಪ್ರೇಮದಿಂದ ಕೂಡಿದ ಹೊಸ ಶೈಲಿಯ ಕವಿತೆಗಳು ಬರತೊಡಗಿದುವು. 'ಛಾಯಾವಾದ', 'ರಹಸ್ಯವಾದ' ಕವಿಗಳಲ್ಲಿ 'ಪ್ರಸಾದ', 'ನಿರಾಲಾ', ಮಹಾದೇವಿ ವರ್ಮಾ, ಸುಮಿತ್ರಾನಂದನ ಪಂತ ಇವರು ಶ್ರೇಷ್ಠರು. 'ಪ್ರಸಾದ'ರವರ 'ಕಾಮಾಯನಿ' ಈ ಕಾಲದ ಮೇರುಕೃತಿ. ಅದೊಂದು ರೂಪಕಾತ್ಮಕ ಮಹಾಕಾವ್ಯ. ರಾಮಧಾರಿ ಸಿನ್ಹ 'ದಿನಕರ'ರವರು ರಾಷ್ಟ್ರಪ್ರೇಮದಿಂದ ಕೂಡಿದ ಕವಿತೆಗಳನ್ನು ಬರೆದರು. 'ಕುರುಕ್ಷೇತ್ರ', 'ಊರ್ವಶಿ' ಇವರ ಪ್ರಮುಖ ಕಾವ್ಯಗಳು. ಹರಿವಂಶರಾಯ್ 'ಬಚ್ಚನ್' ಇನ್ನೊಬ್ಬ ಹೆಸರಾಂತ ಕವಿ.

'ಪ್ರಗತಿವಾದ'ವು ಮಾರ್ಕ್ಸ್‌ವಾದದ ಸಾಹಿತ್ಯಕ ರೂಪಾಂತರ ಎಂದು ಅಭಿಪ್ರಾಯ. ಇಂಥ ಕವಿತೆಗಳನ್ನು ಬರೆಯುವವರಲ್ಲಿ ಡಾ. ಶಿವಮಂಗಲ ಸಿಂಹ 'ಸುಮನ್', ನರೇಂದ್ರ ಶರ್ಮಾ, 'ನಾಗಾರ್ಜುನ್', ಕೇದಾರನಾಥ ಅಗರವಾಲ ಮುಂತಾದವರು ಅಗ್ರಗಣ್ಯರು. ಅತ್ಯಾಧುನಿಕ ನವ್ಯಕವಿಗಳಲ್ಲಿ 'ಅಜ್ಞೇಯ', ಗಜಾನನ ಮಾಧವ ಮುಕ್ತಿ ಬೋಧ, ಕುಂವರ ನಾರಾಯಣ, ಸರ್ವೇಶ್ವರ ದಯಾಲ ಸಕ್ಸೇನಾ, ಗಿರಿಜಾಕುಮಾರ್ ಮಾಥುರ್, ನೇಮಿಚಂದ್ರ ಜೈನ್, ಧರ್ಮವೀರ ಭಾರತಿ, ಲಕ್ಷ್ಮೀಕಾಂತ ವರ್ಮಾ, ಭವಾನಿ ಪ್ರಸಾದ ಮಿಶ್ರ, ವಿಜಯದೇವ ನಾರಾಯಣ ಸಾಹೀ, ಜಗದೀಶ ಗುಪ್ತ, ಕೇದಾರನಾಥ ಸಿಂಹ, ಶಮಶೇರ್ ಬಹದ್ದೂರ್ ಸಿಂಹ ಮುಂತಾದವರು ಖ್ಯಾತಿ ಪಡೆದಿದ್ದಾರೆ.

ಡಾ. ಹಜಾರಿ ಪ್ರಸಾದ ದ್ವಿವೇದಿ, ಡಾ. ನಗೇಂದ್ರ ಮುಂತಾದ ಶ್ರೇಷ್ಠ ವಿಮರ್ಶಕರು ವಿವಿಧ ಸಾಹಿತ್ಯ ಗ್ರಂಥಗಳನ್ನು ಆಳವಾಗಿ ಅಧ್ಯಯನ ಮಾಡಿ ವಿಮರ್ಶಾತ್ಮಕ ಕೃತಿಗಳನ್ನು ರಚಿಸಿದ್ದಾರೆ.

ನೋಡಿ : ಕಬೀರದಾಸ ; ತುಲಸೀದಾಸ ; ಭಾರತೇಂದು ಹರಿಶ್ಚಂದ್ರ ;
ಮೀರಾಬಾಯಿ ; ರಾಮಧಾರಿ ಸಿನ್ಹ 'ದಿನಕರ್' ; ಸಾಂಕೃತ್ಯಾಯನ ;
ಸುಮಿತ್ರಾ ನಂದನಪಂತ್ ; ಸೂರದಾಸ
ಪ್ರೇಮ್‌ಚ್‌ಂದ್; ರಾಹುಲ ಸಾಂಕೃತ್ಯಾಯನ—ಸಂಪುಟ ೫

ಹಿಂದೂಧರ್ಮ

ಭಾರತದ ಜನಸಂಖ್ಯೆಯಲ್ಲಿ ನೂರಕ್ಕೆ ಸುಮಾರು 83 ಮಂದಿ ಹಿಂದುಗಳು. ಈ ಜನರ ಮತೀಯ ನಂಬಿಕೆಗಳು, ಧಾರ್ಮಿಕ ಮತ್ತು ಸಾಮಾಜಿಕ ಆಚರಣೆಗಳನ್ನು ಹಿಂದೂಧರ್ಮ ಎನ್ನುತ್ತೇವೆ.

ಇದು ಯಾವನೇ ಒಬ್ಬನಿಂದ ಪ್ರತಿಪಾದಿಸಲ್ಪಟ್ಟ ಮತವಲ್ಲ; ದೀರ್ಘ ಕಾಲದ ಚಿಂತನೆ, ಅನುಭವಗಳಿಂದ ರೂಪುಗೊಂಡ ಜೀವನ ದರ್ಶನ.

ಹಿಂದೂಧರ್ಮದ ಪ್ರಧಾನ ತಳಹದಿ ವೇದ, ಉಪನಿಷತ್, ಭಗವದ್ಗೀತೆಗಳನ್ನು ಅವಲಂಬಿಸಿದೆ. ಇತರ ಧಾರ್ಮಿಕ ಪಂಥಗಳ ಚಿಂತನೆಗಳು ಕೂಡ ಇದರ ಮೇಲೆ ತಮ್ಮ ಪ್ರಭಾವವನ್ನು ಬೀರಿವೆ.

ಸಹಿಷ್ಣುತೆ, ಸ್ವಾತಂತ್ರ್ಯ, ಸತ್ಯಪ್ರಿಯತೆ, ಸಮನ್ವಯ — ಹಿಂದೂ ಜೀವನ ದರ್ಶನದ ಲಕ್ಷಣಗಳು.

ವೇದಗಳ ಬಗೆಗೆ ಗೌರವ, ದೇವರಲ್ಲಿ ನಂಬುಗೆ, ಜಾತಿ ಪದ್ಧತಿ, ಧಾರ್ಮಿಕ ನಿತ್ಯವಿಧಿಗಳಲ್ಲಿ ನಿಷ್ಠೆ, ಗುರುವಿನಲ್ಲಿ ಶ್ರದ್ಧೆ, ಪುನರ್ಜನ್ಮದಲ್ಲಿ ವಿಶ್ವಾಸ, ಮುಕ್ತಿಗಾಗಿ ಕರ್ಮ, ಜ್ಞಾನ, ಭಕ್ತಿ ಮಾರ್ಗಗಳ ಅನುಸರಣೆ, ಎಲ್ಲ ಜೀವಗಳ ಸಮಾನತೆ, ಅನೇಕ ದೇವತೆಗಳನ್ನು ಆರಾಧಿಸಿದರೂ ಅವೆಲ್ಲರೂ ಒಂದೇ ದೈವೀಶಕ್ತಿಯ ರೂಪ ಎಂಬ ನಂಬಿಕೆ – ಇವು ಹಿಂದೂಧರ್ಮದ ಕೆಲವು ವಿಶಿಷ್ಟ ಅಂಶಗಳು.

ಹಿಂದೂಧರ್ಮ ಮತ್ತಿನ್ನಾವ ಮತ-ಧರ್ಮವನ್ನೂ ಅಸತ್ಯವೆಂದು ನಿರಾಕರಿಸುವುದಿಲ್ಲ.

ಶಂಕರಾಚಾರ್ಯ, ರಾಮಾನುಜಾಚಾರ್ಯ, ಮಧ್ವಾಚಾರ್ಯರಂಥ ಧರ್ಮೋದ್ಧಾರಕರು ಕಾಲಕಾಲಕ್ಕೆ ಹಿಂದೂಧರ್ಮಕ್ಕೆ ಹೊಸ ಚೈತನ್ಯವನ್ನು ಒದಗಿಸಿದರು. ಸ್ವಾಮಿ ವಿವೇಕಾನಂದರು ಷಿಕಾಗೋದಲ್ಲಿ ನಡೆದ ವಿಶ್ವಧರ್ಮ ಸಮ್ಮೇಳನದಲ್ಲಿ ಜಗತ್ತಿಗೆ ಹಿಂದೂಧರ್ಮದ ವಿಶಾಲತೆಯ ಪರಿಚಯ ಮಾಡಿಕೊಟ್ಟರು.

ಹಿಂದೂಧಾರ್ಮಿಕ ಪ್ರಭಾವವನ್ನು ಭಾರತೀಯ ಸಂಗೀತ, ಸಾಹಿತ್ಯ, ಚಿತ್ರಕಲೆ, ಶಿಲ್ಪಗಳಲ್ಲಿ ಸ್ಪಷ್ಟವಾಗಿ ಕಾಣಬಹುದು.

ನೋಡಿ : ದರ್ಶನ ; ವರ್ಣ ; ಪಣ್ಣತ

ಹಿಂದೂ ಮಹಾಸಭಾ

ಹಿಂದೂರಾಷ್ಟ್ರ ಸಂಘಟನೆ ಮತ್ತು ಅದರ ಅಭ್ಯುದಯ ಸಾಧನೆ– ಹಿಂದೂ ಮಹಾಸಭೆಯ ಧ್ಯೇಯ. ಭಾರತ ದೇಶದ ಸಂಸ್ಕೃತಿ. ಸಂಪ್ರದಾಯಗಳನ್ನು ಆಧರಿಸಿದ ಪ್ರಜಾಪ್ರಭುತ್ವ ರಾಜ್ಯ ಕಟ್ಟುವುದು ಇದರ ಉದ್ದೇಶ.

ಹಿಂದೂ ಮಹಾಸಭೆ 1906ರಲ್ಲಿ ಸ್ಥಾಪಿಸಲ್ಪಟ್ಟಿತು.

ಹಿಂದೂ ಮಹಾಸಭೆಯನ್ನು ಸಂಘಟಿಸಲೇಬೇಕೆಂದು ಅಭಿಪ್ರಾಯ ಪಟ್ಟವರಲ್ಲಿ ಲಾಲಾ ಲಜಪತರಾಯ್, ಪಂಡಿತ ಮದನಮೋಹನ ಮಾಳವೀಯ, ಸಿ. ವೈ. ಚಿಂತಾಮಣಿ ಮೊದಲಾದ ಪ್ರಮುಖರಿದ್ದರು. ಅಲ್ಪಸಂಖ್ಯಾಕರೆಂಬ ಕಾರಣಕ್ಕಾಗಿ ಜಾತೀಯತಾ ಚುನಾವಣಾಕ್ಷೇತ್ರ ತಪ್ಪು ಎಂದು ಅವರು ಹೇಳಿದರು.

ವಿ. ಡಿ. ಸಾವರ್‌ಕರ್ ಮತ್ತು ಡಾ. ಶ್ಯಾಮಪ್ರಸಾದ ಮುಖರ್ಜಿ ಹಿಂದೂ ಮಹಾಸಭೆಯ ಖ್ಯಾತ ನಾಯಕರಾಗಿದ್ದರು.

ಮುಸ್ಲಿಂ ಲೀಗ್ ಆರಂಭವಾದ ಕಾಲದಲ್ಲೇ ಹಿಂದೂ ಮಹಾಸಭೆಯೂ ಆರಂಭವಾಯಿತು.

ಹಿಂದೂ ಮಹಾಸಾಗರ

ಭಾರತದ ದಕ್ಷಿಣದಿಂದ ಅಂಟಾರ್ಟಿಕ ಅಥವಾ ದಕ್ಷಿಣ ಧ್ರುವ ಪ್ರದೇಶದ ವರೆಗೆ ಹರಡಿದೆ 'ಹಿಂದೂ ಮಹಾಸಾಗರ'. ಇದರ ಇತರ ಮೇರೆಗಳು ಪಾಕಿಸ್ತಾನ, ಇರಾನ್, ಅರೇಬಿಯಾ, ಆಫ್ರಿಕ, ಮಲಯಾ, ಸಂಡಾ ದ್ವೀಪಗಳು, ಆಸ್ಟ್ರೇಲಿಯ.

ಪ್ರಾಚೀನ ಭಾರತದ ನೌಕಾಯಾನದ ಕ್ಷೇತ್ರ ಹಿಂದೂ ಮಹಾಸಾಗರ. ಸಿಂಧೂಕಣಿವೆ ನಾಗರಿಕತೆಯ ಕಾಲದಲ್ಲಿ, ಅಲ್ಲಿನ ಜನ ಸಮುದ್ರಯಾನದಲ್ಲಿ ತೊಡಗಿದ್ದರೆಂಬುದಕ್ಕೆ ಆಧಾರಗಳು ದೊರೆತಿವೆ. ಅನಂತರದ ಕಾಲದಲ್ಲಿ ವಾಣಿಜ್ಯ ಸಾಂಸ್ಕೃತಿಕ ವಿಸ್ತರಣೆಗಾಗಿ ಈ ಸಾಗರ ಪ್ರದೇಶದಲ್ಲಿ ನಮ್ಮವರು ನೌಕಾಸಂಚಾರ ಮಾಡುತ್ತಿದ್ದರು.

19ನೆಯ ಶತಮಾನದಲ್ಲಿ ಹಿಂದೂ ಮಹಾಸಾಗರದ ಮೇಲೆ ನಿಯಂತ್ರಣ ಸ್ಥಾಪಿಸಿದ ಬ್ರಿಟಿಷರು ಇಡೀ ಭಾರತವನ್ನು ಯಾವ ಅಡೆತಡೆಗಳೂ ಇಲ್ಲದೆ ಆಳುವುದು ಸಾಧ್ಯವಾಯಿತು.

ಈ ಶತಮಾನದಲ್ಲಿ ಬ್ರಿಟಿಷ್ ನೌಕಾಪಡೆಯ ನಿರ್ಗಮನದ ಬಳಿಕ ಹಿಂದೂ ಮಹಾಸಾಗರ 'ತಬ್ಬಲಿ' ಯಾಗಿದೆ ಎಂದು ಹೇಳುವುದುಂಟು. ಹಿಂದೂ ಮಹಾಸಾಗರದಲ್ಲಿ ತಮ್ಮ ನೌಕಾಪಡೆಗಳನ್ನಿಡಲು ಬಲಿಷ್ಠ ರಾಷ್ಟ್ರಗಳು ಬಯಸುತ್ತವೆ. ಪಾಶ್ಚಾತ್ಯ ದೇಶಗಳು ಹಿಂದೂ ಮಹಾಸಾಗರದ ಮೇಲೆ ಆಧಿಪತ್ಯ ನಡೆಸಲು ಯತ್ನಿಸುವುದು ಸರಿಯಲ್ಲ ಎಂಬುದು ಭಾರತದ ನಿಲುವು. ಅರಬಿ ಸಮುದ್ರ ಮತ್ತು ಬಂಗಾಳ ಕೊಲ್ಲಿ ಹಿಂದೂ ಮಹಾ ಸಾಗರದ ಭಾಗಗಳು. ಭಾರತದ ಎಲ್ಲ ಬಂದರುಗಳೂ ಇವುಗಳ ಕರಾವಳಿ ಪ್ರದೇಶದಲ್ಲಿವೆ. ಒಂದು ಜಲಾಂತರ್ಗತ ಏಣುಪ್ರದೇಶ ಭಾರತದಿಂದ ಅಂಟಾರ್ಟಿಕ್‌ವರೆಗೆ ಹಬ್ಬಿದೆ. ಭೂಖಂಡ ಸಾಗರಗಳ ರಚನೆಯ ವಿಜ್ಞಾನ ದಲ್ಲಿ ಈ ಏಣು ಪ್ರದೇಶಕ್ಕೆ ಮಹತ್ವವಿದೆ.

ಹಿಂದೂ ಮಹಾಸಾಗರದ ಮೇಲಿಂದ ಬೀಸಿಬರುವ ನೈಋತ್ಯ ಮಾರುತ ಗಳು ಪಶ್ಚಿಮಘಟ್ಟ ಹಾಗೂ ಹಿಮಾಲಯಗಳನ್ನು ತಾಗಿ, ಬಿರುಸಾದ ಮಳೆ ಸುರಿಸುತ್ತವೆ. ಈ ಹವೆಯ ಪರಿಣಾಮಗಳನ್ನು ಇನ್ನೂ ಆಳವಾಗಿ ಅಭ್ಯಸಿಸುವುದಕ್ಕಾಗಿ 1963ರಲ್ಲಿ ಅಂತರರಾಷ್ಟ್ರೀಯ ಹಿಂದೂ ಮಹಾಸಾಗರ ಯಾನಗಳ ಒಂದು ಕಾರ್ಯಕ್ರಮ ಆರಂಭವಾಯಿತು.

ನೋಡಿ : ಹಿಂದೂ ಮಹಾಸಾಗರ–ಸಂಪುಟ ೧

ಹಿಂದೂಸ್ತಾನೀ ಸಂಗೀತ

ನೋಡಿ : ಸಂಪುಟ ೪

ಹಿಂದೂಸ್ಥಾನ್ ಆಂಟಿಬಯೊಟಿಕ್ಸ್

ಮಹಾರಾಷ್ಟ್ರದ ಪಿಂಪ್ರಿಯಲ್ಲಿರುವ ಹಿಂದೂಸ್ಥಾನ್ ಆಂಟಿಬಯೊಟಿಕ್ಸ್ ಲಿಮಿಟೆಡ್ ಸಂಸ್ಥೆ ಪೆನಿಸಿಲಿನ್ ಉತ್ಪಾದನೆಗಾಗಿ ಸ್ಥಾಪಿಸಲ್ಪಟ್ಟಿತು. ಮುಂದೆ [illegible] ಅಷ್ಟೇ ಅಲ್ಲದೆ [illegible] ವಿಟಮಿನ್ 'ಸಿ' ಮೊದಲಾದುವನ್ನೂ ತಯಾರಿಸತೊಡಗಿತು. ಬಹುಷ್ಟು ನಿರೋಧಕ ಆಂಟಿಬಯೊಟಿಕ್, ಪ್ರಾಣಿ ಮತ್ತು ಸಸ್ಯರೋಗ ನಿವಾರಣೆಯಲ್ಲಿ ಉಪಯುಕ್ತವಾದ ಹೊಸ ಹೊಸ ಜೀವನಿರೋಧಕಗಳು ಪಿಂಪ್ರಿಯ ಪ್ರಯೋಗಶಾಲೆಯಲ್ಲಿ ಕಂಡುಹಿಡಿಯಲ್ಪಟ್ಟಿವೆ.

1951ರಲ್ಲಿ ಭಾರತ ಸರಕಾರದ ಒಂದು ಇಲಾಖೆಯಂತೆ ಪಿಂಪ್ರಿಯ ಈ ಕಾರಖಾನೆ ಆರಂಭವಾಯಿತು. ವಿಶ್ವ ಆರೋಗ್ಯ ಸಂಸ್ಥೆ ಮತ್ತು ಯೂನಿಸೆಫ್ (ವಿಶ್ವಸಂಸ್ಥೆಯ ಅಂತರರಾಷ್ಟ್ರೀಯ ಮಕ್ಕಳ ತುರ್ತು ನಿಧಿ) ಗಳಿಂದ ಧನ ಸಹಾಯ ಮತ್ತು ತಾಂತ್ರಿಕ ನೆರವು ಎಂತು ಇದಕ್ಕೆ ಒದಗಿತು. 1954ರಲ್ಲಿ ಇದು ಸರಕಾರೀ ಕಂಪೆನಿಯಾಯಿತು; ಹಿಂದೂಸ್ಥಾನ್ ಆಂಟಿಬಯೊಟಿಕ್ಸ್ ಲಿಮಿಟೆಡ್ ಎಂದು ಹೆಸರು ಪಡೆಯಿತು. ಕಂಪೆನಿಯ ಉತ್ಪಾದನೆ ಆರಂಭವಾದದ್ದು 1955ರಲ್ಲಿ. ಇದರ ಅಧಿಕೃತ ಬಂಡವಾಳ 4 ಕೋಟಿ ರೂಪಾಯಿ.

ಪಿಂಪ್ರಿ ಪೆನಿಸಿಲಿನ್ ಕಾರಖಾನೆಗೆ ಭಾರತದ ಪ್ರಧಾನಿ ಭೇಟಿ



ಹಿಂದೂಸ್ಥಾನ್ ಏರೊನಾಟಿಕ್ಸ್ ಲಿಮಿಟೆಡ್




ಭಾರತೀಯ ವಾಯುದಳದ ವಿಮಾನ—' ಮಾರುತ್ '

ಹಿಂದೂಸ್ಥಾನ್ ಏರ್ ಕ್ರಾಫ್ಟ್ ಲಿಮಿಟೆಡ್ ಹಾಗೂ ಏರೊನಾಟಿಕ್ಸ್ ಇಂಡಿಯಾ ಲಿಮಿಟೆಡ್ ಇವೆರಡೂ ಸೇರಿ 1964ರಲ್ಲಿ ಹಿಂದೂಸ್ಥಾನ್ ಏರೊನಾಟಿಕ್ಸ್ ಲಿಮಿಟೆಡ್ ಸಂಸ್ಥೆ ಸಂಘಟಿತವಾಯಿತು. ರಕ್ಷಣಾ ಉತ್ಪಾದನಾ ಖಾತೆಯ ಅತಿ ದೊಡ್ಡ ಸಾರ್ವಜನಿಕ ವಲಯ ಸಂಸ್ಥೆ ಇದು.

ಹಿಂದೂಸ್ಥಾನ್ ಏರ್‌ಕ್ರಾಫ್ಟ್ ಲಿಮಿಟೆಡ್ 1940 ಡಿಸೆಂಬರ್ 23ರಂದು ಬೆಂಗಳೂರಿನಲ್ಲಿ ಆರಂಭವಾಯಿತು. ಆಮದಾದ ವಿಮಾನ ಭಾಗಗಳನ್ನು

ಎಚ್.ಎ.ಎಲ್. ಕಾರಖಾನೆಯಲ್ಲಿ




ಎಚ್.ಎ.ಎಲ್. ನಿರ್ಮಿತ ಮೊದಲ ವಿಮಾನದ ಹಾರಾಟ



ವಿಮಾನ ಕಾರಖಾನೆಯ ಒಳಗಡೆ



ಜೋಡಿಸಿ 1941ರಲ್ಲಿ ಮೊತ್ತ ಮೊದಲ ವಿಮಾನವನ್ನು ಈ ಸಂಸ್ಥೆ ತಯಾರಿಸಿತು. 1942ರಲ್ಲಿ ಇದು ಸಾರ್ವಜನಿಕ ವಲಯ ಸಂಸ್ಥೆಯಾಯಿತು. ಅದು ಯುದ್ಧಕಾಲ. ಆಗ ಇಲ್ಲಿ ವಿಮಾನಗಳ ದೋಷಗಳನ್ನು ಪತ್ತೆಹಚ್ಚುವ, ದುರಸ್ತಿಮಾಡುವ ಕಾರ್ಯವನ್ನು ಕೈಗೊಳ್ಳಲಾಯಿತು. ಈ ಕಂಪೆನಿಗೆ ಸ್ವಲ್ಪಕಾಲ ಅಮೆರಿಕದ ವಾಯುದಳದವರು ಸಲಹೆಗಾರರಾಗಿದ್ದರು. 1947ರಲ್ಲಿ ರೈಲು ಗಾಡಿಗಳನ್ನೂ 1956ರಲ್ಲಿ ಸಮಗ್ರ ಗಾಡಿಗಳನ್ನೂ ಇಲ್ಲಿ ತಯಾರಿಸಿದರು. 1963ರಲ್ಲಿ ಮಣ್ಣೆತ್ತುವ ಹಾಗೂ ಗಣಿತೋಡುವ ಉಪಕರಣಗಳನ್ನು ತಯಾರಿಸಲು ನಿರ್ಧರಿಸಲಾಯಿತು. ಮುಂದೆ ಈ ಕೆಲಸಕ್ಕೆಂದೇ



'ಕೃಷಕ್' : ಕ್ರಿಮಿನಾಶಕ ಸಿಂಪಡಿಸಲು

ಪ್ರತ್ಯೇಕ ಸಂಸ್ಥೆ—ಭಾರತ್ ಅರ್ತ್‌ಮೂವರ್ಸ್ ಲಿಮಿಟೆಡ್—ಸ್ಥಾಪಿತವಾಯಿತು.

ಏರೊನಾಟಿಕ್ಸ್ ಇಂಡಿಯಾ ಲಿಮಿಟೆಡ್ ಆರಂಭವಾದದ್ದು 1963ರಲ್ಲಿ. ಹಿಂದೂಸ್ಥಾನ್ ಏರೋನಾಟಿಕ್ಸ್‌ನಲ್ಲಿ ತರಬೇತಿ ಪಡೆಯುವವರಿಗಾಗಿ ಎಚ್ ಟಿ 2 ವಿಮಾನ, ಎಚ್‌ಜೆಟಿ–16 ಜೆಟ್ ವಿಮಾನ(ಕಿರಣ್)ಗಳು ತಯಾರಾಗುತ್ತವೆ. ಇದಲ್ಲದೆ ಧ್ವನ್ಯತೀತ ಕಾದಾಟ ವಿಮಾನ ಎಚ್ ಎಫ್–24, ಎಂ. ಐ. ಜಿ.-21, ವ್ಯಾಂಪೈರ್ ಜೆಟ್ ವಿಮಾನ, ನಾಟ್, ಹಗುರ 'ಕೃಷಕ್' ವಿಮಾನಗಳು, ಅತಿ ಹಗುರ 'ಪುಷ್ಪಕ್', ಸಾರಿಗೆಗಾಗಿ ಎಚ್ ಎಸ್–748 ವಿಮಾನಗಳು ತಯಾರಾಗುತ್ತವೆ. ಕ್ಷಿಪಣಿ, ಹೆಲಿಕಾಪ್ಟರುಗಳೂ ಇಲ್ಲಿ ತಯಾರಿಸಲ್ಪಟ್ಟಿವೆ. ಸಂಸ್ಥೆಯ ನಾಲ್ಕು ಅಂಗಗಳು: ಬೆಂಗಳೂರು ವಿಭಾಗ; ನಾಸಿಕ್, ಕಾನ್ಪುರ, ಕೋರಪುಟ್ ಮತ್ತು ಹೈದರಾಬಾದುಗಳಲ್ಲಿರುವ ಎಂ. ಐ. ಜಿ. ಮಿಗ್ ವಿಮಾನ ತಯಾರಿಕಾ ಸ್ಥಾವರ; ಕಾನ್ಪುರ ವಿಭಾಗ ಮತ್ತು ಲಖನೌ ವಿಭಾಗ.

ಹಿಂದೂಸ್ಥಾನ್ ನೌಕಾ ನಿರ್ಮಾಣ ಕೇಂದ್ರ

1952ರಲ್ಲಿ ಹಿಂದೂಸ್ಥಾನ್ ನೌಕಾ ನಿರ್ಮಾಣ ಕೇಂದ್ರ ಸ್ಥಾಪಿತವಾಯಿತು.

1941ರಲ್ಲಿ ಸಿಂದಿಯ ಸ್ಟೀಮ್ ನೇವಿಗೇಷನ್ ಕಂಪೆನಿಯ ವತಿಯಿಂದ ವಾಲ್‌ಚಂದ್ ಹೀರಾಚಂದ್ ವಿಶಾಖ ಪಟ್ಟಣದಲ್ಲಿ ಹಡಗು ನಿರ್ಮಾಣ ಕೇಂದ್ರ ಆರಂಭಿಸಿದ್ದರು. ಇಲ್ಲಿ ಸ್ವಲ್ಪ ಕಾಲ ಭಾರತದ ಮೊದಲ ಚಿಕ್ಕ ಹಡಗುಗಳನ್ನು ಕಟ್ಟುತ್ತಿದ್ದರು. ಇಲ್ಲಿ ನಿರ್ಮಿತವಾದ ಆಧುನಿಕ ನೌಕೆ ಎಸ್ ಎಸ್ 'ಜಲಉಷಾ' 1948 ಮಾರ್ಚ್ 14ರಂದು ಸಾಗರವನ್ನು ಪ್ರವೇಶಮಾಡಿತು. ಅದೇ ವರ್ಷ 'ಜಲಪ್ರಭಾ' ನೌಕೆಯು ನಿರ್ಮಾಣವಾಯಿತು. ಹೀಗೆ 1952ರ ವೇಳೆಗೆ ಎಂಟು ನೌಕೆಗಳು ಸಿದ್ಧವಾದುವು.

ವಿಶಾಖಪಟ್ಟಣದಲ್ಲಿ ನೌಕಾಂಗಣ



ಆರ್ಥಿಕ ಬಿಕ್ಕಟ್ಟಿಗೆ ಒಳಗಾದ ಸಿಂದಿಯ ಕಂಪೆನಿಯ ನಿರ್ವಹಣೆಯನ್ನು 1952ರಲ್ಲಿ ಸರಕಾರ ಕೈಗೊಂಡಿತು. ಕೇಂದ್ರಕ್ಕೆ ಹಿಂದೂಸ್ಥಾನ್ ನೌಕಾ ನಿರ್ಮಾಣ ಕೇಂದ್ರ ಎಂದು ಹೆಸರಿಡಲಾಯಿತು.

1973ರ ವರೆಗೆ ಈ ಸಂಸ್ಥೆ 55 ಹಡಗುಗಳನ್ನು ಕಟ್ಟಿದೆ. ಇದರಲ್ಲಿ 47 ಸರಕು ಹೊರುವ ಹಡಗುಗಳು, ನೌಕಾ ಪಡೆಗೆ ಬೇಕಾದ ಎರಡು ಅತ್ಯಾಧುನಿಕ ಹಡಗುಗಳು, ಒಂದು ತರಬೇತಿ ಹಡಗು ಮತ್ತು ಪ್ರಯಾಣಿಕ ಹಡಗುಗಳು ಇವುಗಳಲ್ಲಿ ಸೇರಿವೆ. ವಿಶಾಖಪಟ್ಟಣದ ಈ ಹಡಗು ನಿರ್ಮಾಣ ಕೇಂದ್ರದಲ್ಲಿ ದುರಸ್ತಿ ಕಾರ್ಯವೂ ನಡೆಯುತ್ತದೆ.

ಹಿಂದೂಸ್ಥಾನ್ ಮೆಷೀನ್ ಟೂಲ್ಸ್ ಲಿಮಿಟೆಡ್

'ಎಚ್. ಎಂ. ಟಿ.' ಎಂದು ಹ್ರಸ್ವವಾಗಿ ಕರೆಯಲ್ಪಡುವ ಸಾರ್ವಜನಿಕ ವಲಯ ಉದ್ಯಮ ಹಿಂದೂಸ್ಥಾನ್ ಮೆಷೀನ್ ಟೂಲ್ಸ್ ಲಿಮಿಟೆಡ್.



ಎಚ್.ಎಂ.ಟಿ. ಕಾರಖಾನೆಯ ಒಳಾಂಗಣ

ಸ್ವಿಟ್ಜರ್‌ಲೆಂಡಿನ ಎರಡು ಕಂಪೆನಿಗಳೊಡನೆ ಭಾರತ ಸರಕಾರ ಮಾಡಿಕೊಂಡ ಒಪ್ಪಂದವನ್ನು ಆಧರಿಸಿ ಇದು 1953 ಫೆಬ್ರವರಿ 7ರಂದು ಸ್ಥಾಪಿತವಾಯಿತು. ಚಿಕ್ಕ ಹತಾರಗಳನ್ನು ತಯಾರಿಸುವ ಯಂತ್ರ ಹತಾರಗಳ ತಯಾರಿಕೆ ಎಚ್.ಎಂ.ಟಿ.ಯಲ್ಲಿ ನಡೆಯುತ್ತದೆ. ಲೇತ್, ಮಿಲ್ಲಿಂಗ್ ಯಂತ್ರ, ವಿಶಿಷ್ಟ ಡ್ರಿಲ್, ಅರೆಯುವ ಯಂತ್ರ, ಮುದ್ರಣ ಯಂತ್ರ —ಇವೇ ಮೊದಲಾದುವು ಇಲ್ಲಿ ತಯಾರಾಗುತ್ತವೆ.

ಮೊದಲು ಎಚ್.ಎಂ.ಟಿ. ಕಾರಖಾನೆ ಬೆಂಗಳೂರಿನಲ್ಲಿ 1955ರಲ್ಲಿ ಆರಂಭವಾಯಿತು. ಇದರ ಐದು ಕಾರಖಾನೆಗಳಲ್ಲಿ ಎರಡು ಬೆಂಗಳೂರಿನಲ್ಲೂ ಉಳಿದ ಮೂರು ಚಂಡೀಗಡ ಬಳಿಯ ಪಿಂಜೋರ್, ಎರ್ನಾಕುಲಮ್ ಬಳಿಯ ಕಲಮಸ್ಸೇರಿ, ಹೈದರಾಬಾದಿನ ಕುಕ್ಕಟಪಲ್ಲಿಗಳಲ್ಲೂ ಇವೆ.

ಎಚ್.ಎಂ.ಟಿ. ಕೈ ಗಡಿಯಾರ ಕಾರಖಾನೆ ಬೆಂಗಳೂರಿನಲ್ಲಿದೆ. ಸಿಟಿಜನ್, ಜನತಾ, ಸುಜಾತಾ, ಸೋನಾ, ತರುಣ್, ಪೈಲಟ್, ಜಾಲೀಟ್, ಜವಾಹರ್ ಹೆಸರಿನ ಕೈ ಗಡಿಯಾರಗಳು ಇಲ್ಲಿನವು. ಶ್ರೀನಗರದಲ್ಲೂ ಕೈ ಗಡಿಯಾರ ಕಾರಖಾನೆಯೊಂದನ್ನು ಸ್ಥಾಪಿಸಲಾಗಿದೆ. ಎಚ್. ಎಂ. ಟಿ. ಗಡಿಯಾರಗಳು ವಿದೇಶಗಳಿಗೂ ರಫ್ತಾಗುತ್ತವೆ. ಎಚ್.ಎಂ.ಟಿ. ತಯಾರಿತ ಯಂತ್ರಗಳು

ನಿರ್ಯಾತವಾಗುತ್ತವೆ. ನ್ಯೂಯಾರ್ಕ್, ಫ್ರಾಂಕ್‌ಫರ್ಟ್, ಮಿಲ್ [illegible] ನಾರಾಟ ಹಾಗೂ ಸರಬರಾಜು ಕೇಂದ್ರಗಳಿವೆ.

ಹಿಂದೂಸ್ಥಾನ್ ಮೋಟರ್ಸ್

ಭಾರತದಲ್ಲಿ ಕಾರು ತಯಾರಿಸುವ ಸಂಸ್ಥೆಗಳಲ್ಲಿ ಒಂದು ಹಿಂದೂಸ್ಥಾನ್ ಮೋಟರ್ಸ್. ಭಾರತದಲ್ಲಿ ಕಾರು ತಯಾರಿಸುವ ಯಂತ್ರಸ್ಥಾವರ ಮೊತ್ತ ಮೊದಲು ಸ್ಥಾಪಿತವಾದದ್ದು ಈ ಕಂಪೆನಿಯಿಂದಲೇ. 1942ರಲ್ಲಿ ಕಲ್ಕತ್ತೆಯಲ್ಲಿ ಹಿಂದೂಸ್ಥಾನ್ ಮೋಟರ್ಸ್ ಆರಂಭವಾಯಿತು.

ಶೇಕಡಾ 99ರಷ್ಟು ದೇಶದಲ್ಲಿ ತಯಾರಾದ ಭಾಗಗಳಿಂದಲೇ ಈ ಕಂಪೆನಿಯ ವಾಹನಗಳ ನಿರ್ಮಾಣವಾಗುತ್ತದೆ. 1971–72ರಲ್ಲಿ ಇದು 27,355 ವಾಹನಗಳನ್ನು ತಯಾರಿಸಿತು. ಕ್ರೇನುಗಳು, ಒತ್ತುಯಂತ್ರಗಳು (ಪ್ರೆಸಸ್), ತೋಡು ಯಂತ್ರಗಳು (ಎಕ್ಸ್‌ಕವೇಟರ್ಸ್), ಗುಡ್ಡೆಹಾಕುವ ಯಂತ್ರಗಳು (ಡಂಪರ್ಸ್) ಮತ್ತು ಇತರ ಮಣ್ಣೆತ್ತುವ ಸಲಕರಣೆಗಳನ್ನೂ ಕಂಪೆನಿ ತಯಾರಿಸುತ್ತದೆ.

ಶ್ರೀಲಂಕಾ, ಬಾಂಗ್ಲಾದೇಶ, ಸಿಂಗಪುರ, ಈಜಿಪ್ಟ್, ನ್ಯೂಜಿಲೆಂಡ್— ದೇಶಗಳಿಗೆ ಈ ಕಂಪೆನಿಯಲ್ಲಿ ತಯಾರಾದ ವಾಹನಗಳು ರಫ್ತಾಗುತ್ತವೆ.

ಹಿಂದೂಸ್ಥಾನ್ ಸ್ಟೀಲ್ ಲಿಮಿಟೆಡ್

ಭಾರತದಲ್ಲಿ ಸಾರ್ವಜನಿಕ ವಲಯದಲ್ಲಿರುವ ರೂರ್‌ಕೆಲಾ, ಭಿಲಾಯ್, ದುರ್ಗಾಪುರ ಕಬ್ಬಿಣ ಮತ್ತು ಉಕ್ಕಿನ ಕಾರಖಾನೆಗಳ ಆಡಳಿತದ ಸಂಸ್ಥೆ, ಹಿಂದೂಸ್ಥಾನ್ ಸ್ಟೀಲ್ ಲಿಮಿಟೆಡ್. 1953ರಲ್ಲಿ ಇದು ಸ್ಥಾಪಿಸಲ್ಪಟ್ಟಿತು. ಸರಕಾರದಿಂದ ಪಡೆದ ಸಾಲವೂ ಸೇರಿ ಒಟ್ಟು (1972 ಮಾರ್ಚ್ ವರೆಗೆ) 1,011 ಕೋಟಿ, ರೂಪಾಯಿಗಳನ್ನು ಈ ಸಂಸ್ಥೆಯಲ್ಲಿ ಹೂಡಲಾಗಿದೆ. ಖಾಸಗೀ ವಲಯದಲ್ಲಾಗಲೀ ಸಾರ್ವಜನಿಕ ವಲಯದಲ್ಲಾಗಲೀ ಇಷ್ಟು ದೊಡ್ಡ ಸಂಸ್ಥೆ ಭಾರತದಲ್ಲಿ ಬೇರೆ ಇಲ್ಲ.

ಹಿಂದೂಸ್ಥಾನ್ ಸೋಷಲಿಸ್ಟ್ ರಿಪಬ್ಲಿಕನ್ ಆರ್ಮಿ

ಚೌರಿಚೌರಾ ಘಟನೆ ನಡೆದ ಹಿಂಸಾತ್ಮಕ ಪ್ರಕರಣದಿಂದಾಗಿ ಅಸಹಕಾರ ಆಂದೋಲನವನ್ನು ಗಾಂಧೀಜೀ ಇದ್ದಕ್ಕಿದ್ದಂತೆ ನಿಲ್ಲಿಸಿಬಿಟ್ಟರು. ಇದು 1922ರ ಸಂಗತಿ. ಈ ವೇಳೆಗೆ ದೇಶದ ಹಲವೆಡೆ ಕ್ರಾಂತಿಕಾರಿ ದಳಗಳು ತಲೆಯೆತ್ತಲಾರಂಭಿಸಿದ್ದುವು. ಇಂಥ ಒಂದು ಪ್ರಮುಖ ಸಂಸ್ಥೆ ಹಿಂದೂಸ್ಥಾನ್ ಸೋಷಲಿಸ್ಟ್ ರಿಪಬ್ಲಿಕನ್ ಅಸೋಸಿಯೇಷನ್.

[illegible] ಹಿಂದೂಸ್ಥಾನ್ ಸೋಷ [illegible] ಹುಟ್ಟಿತು. ಇದು ನಡೆಸಿದ ಒಂದು ಪ್ರಸಿದ್ಧ ದಾಳಿ 'ಕಾಕೋರಿ [illegible]'. 1925 [illegible] ಕಾಕೋರಿ [illegible] ಸ್ಫೋಟನೆಯಾಯಿತು. ಓಡುತ್ತಿರುವ ರೈಲುಗಾಡಿಯ ಮೇಲೆ ದಾಳಿ [illegible] ಕೆಲವರಿಗೆ ದೀರ್ಘಾವಧಿ ಶಿಕ್ಷೆ, ಕೆಲವರಿಗೆ ಮರಣ ದಂಡನೆಗಳಾದುವು.

ಚಂದ್ರಶೇಖರ ಆಜಾದ್, ಭಗತ್‌ಸಿಂಗ್ ಮುಂತಾದ ಸಾಹಸೀ ಯುವಕರು ಹಿಂದೂಸ್ಥಾನ್ ಸೋಷಲಿಸ್ಟ್ ರಿಪಬ್ಲಿಕನ್ ಆರ್ಮಿಯಲ್ಲಿ ಇದ್ದರು. ದೇಶದ ಪ್ರತಿ ಭಾಗದಲ್ಲಿ ಇಂಥ ದಳದ ಸಂಘಟನೆ, ಬಾಂಬು ತಯಾರಿಸುವ ಕಾರಖಾನೆಗಳ ಸ್ಥಾಪನೆ, ಮುಂತಾದ ಕಾರ್ಯಕ್ರಮಗಳನ್ನು ಸಂಸ್ಥೆ ರೂಪಿಸಿಕೊಂಡಿತ್ತು.

ನೋಡಿ : ಚಂದ್ರಶೇಖರ್ ಆಜಾದ್; ಭಗತ್ ಸಿಂಗ್

ಹಿತೋಪದೇಶ

ಕಾಡಿನಲ್ಲಿ ಒಂದು ಸಿಂಹ ಇತ್ತು. ಅದರ ಹೆಸರು ಮದೋತ್ಕಟ. ಕಾಗೆ, ಹುಲಿ ಮತ್ತು ನರಿ ಅದರ ಸೇವಕರು. ಒಂದು ದಿನ ಈ ಮೂರು ಪ್ರಾಣಿಗಳು ಹೊರಗೆ ಹೋಗಿದ್ದಾಗ ಒಂಟೆಯೊಂದನ್ನು ಕಂಡುವು. ಒಂಟೆಯ ಕಥೆ ಕೇಳಿ ಅದನ್ನು ಸಿಂಹದ ಬಳಿಗೆ ಕರೆತಂದುವು. ಸಿಂಹ ಒಂಟೆಗೆ ರಕ್ಷಣೆ ಕೊಡಲು ಒಪ್ಪಿತು. ಸಿಂಹಕ್ಕೆ ಕಾಯಿಲೆಯಾಯಿತು. ಅಲ್ಲದೆ ಭಾರೀ ಮಳೆ ಬೇರೆ. ಆಹಾರ ಸಿಕ್ಕುವುದೇ ಕಷ್ಟವಾಗಿ ಸಿಂಹ ಕೃಶವಾಗುತ್ತ ಬಂತು. ನಿರುಪಯೋಗಿಯಾದ ಒಂಟೆಯನ್ನು ತಮ್ಮ ಒಡೆಯ ಏಕೆ ತಿನ್ನಬಾರದೆಂಬ ಯೋಚನೆ ಮೂವರು ಸೇವಕರಿಗೂ ಬಂದಿತು. ಅವು ಸಿಂಹವನ್ನು ಕೇಳಿದುವು. ಸಿಂಹ ಒಪ್ಪಲಿಲ್ಲ. ಸಿಂಹಕ್ಕೆ ಆಹಾರವಾಗುವೆನೆಂದು ಒಂಟೆ ತಾನಾಗಿಯೇ ಹೇಳುವಂತೆ ಮಾಡಬೇಕೆಂದು ಅವು ತೀರ್ಮಾನಿಸಿದುವು. ಆಹಾರ ದೊರಕದೇ ಇರುವುದರಿಂದ ತನ್ನನ್ನು ತಿನ್ನಬೇಕೆಂದು ಸಿಂಹವನ್ನು ಕಾಗೆ ಬೇಡಿತು ; ಸಿಂಹ ನಿರಾಕರಿಸಿತು. ಹೀಗೆಯೇ ಹುಲಿ, ನರಿಗಳೂ ಕೇಳಿ ಇಲ್ಲವೆನಿಸಿಕೊಂಡುವು. ಧೈರ್ಯದಿಂದ ಒಂಟೆಯೂ ಕೇಳಿತು. ತಕ್ಷಣ ಸಿಂಹ ಅದರ ಮೇಲೆ ಹಾರಿತು. ಎಲ್ಲವೂ ಅದನ್ನು ತಿಂದು ಬಿಟ್ಟುವು. ಕೆಡುಗರ ಮಾತಿನಿಂದ ಒಳ್ಳೆಯವರ ಮನಸ್ಸೂ ಡೋಲಾಯಮಾನವಾಗುತ್ತದೆ.

—ಇದು 'ಹಿತೋಪದೇಶ'ದಲ್ಲಿ ಬರುವ ಕಥೆಗಳಲ್ಲಿ ಒಂದು.

'ಹಿತೋಪದೇಶ', ಕಥೆಗಳ ಸಂಗ್ರಹ. 'ಪಂಚತಂತ್ರ' ಮತ್ತಿತರ ಕಥೆಗಳಿಂದ ಆಯ್ದ ಕಥೆಗಳಲ್ಲದೆ ಹೊಸ ಕಥೆಗಳೂ ಇದರಲ್ಲಿ ಸೇರಿವೆ. ಸೂತ್ರಾತ್ಮಕ ಪದ್ಯಗಳನ್ನು ಅಲ್ಲಲ್ಲಿ ಸೇರಿಸಿ ಆಕರ್ಷಕವಾಗಿ ಹೇಳಿರುವ ರೀತಿ ಮನೋಜ್ಞ.


ಬಹುಜನಪ್ರಿಯವಾದ ಈ ಕೃತಿಯ ಲೇಖಕ ನಾರಾಯಣ. ಕಾಲ ಸುಮಾರು 1360.

ಹಿಮಾಚಲ ಪ್ರದೇಶ

ಫಲವತ್ತಾದ ಕಣಿವೆ ಪ್ರದೇಶ; ಉತ್ತರಕ್ಕೆ ಸರಿದಂತೆ ಮೊದಲು ಸ್ವಲ್ಪವೇ ಎತ್ತರದ ಗುಡ್ಡಗಳು. ಅನಂತರ ಅದಕ್ಕಿಂತಲೂ ಉನ್ನತ ಪರ್ವತಗಳು. ಕಾಡಿನಿಂದ ತುಂಬಿದ ಭಾಗ. ಮುಂದೆ ಇನ್ನೂ ಉನ್ನತ ಪರ್ವತಗಳು. ಅಲ್ಲಿಂದಾಚೆ ವರ್ಷವಿಡೀ ಕೇವಲ ಹಿಮತುಂಬಿರುವ, [illegible] ಭಾಗ. ದಕ್ಷಿಣದಿಂದ ಉತ್ತರಕ್ಕೆ ಹೋದಂತೆ ಹಿಮಾಚಲ ಪ್ರದೇಶದ ನೋಟ ಇದು.

ಜಮ್ಮು ಮತ್ತು ಕಾಶ್ಮೀರ, ಚೀನ, ಉತ್ತರ ಪ್ರದೇಶ, ಹರ್ಯಾಣ ಮತ್ತು ಪಂಜಾಬ್ ಇದರ ಮೇರೆಗಳು.

ಹಿಮಾಲಯದ ಮಡಿಲಲ್ಲಿರುವ ಈ ರಾಜ್ಯದ ಆರ್ಥಿಕತೆಯಲ್ಲಿ ಅದರ ಕಾಡುಗಳು ಮುಖ್ಯ ಪಾತ್ರ ವಹಿಸಿವೆ. ಇಲ್ಲಿನ ವೃಕ್ಷಗಳು ರಾಜ್ಯದ ಮುಖ್ಯ



ತದಾಯ ಮೂಲ. ಕರಡಿ, ಹಿಮಚಿರತೆ. ಪಲವು ಬಗೆಯ ಜಿಂಕೆಗಳು ಈ ಕಾಡಿನಲ್ಲಿ ಜೀವಿಸುತ್ತವೆ. ಚಂದ್ರಾ ಗಾ, ರಾ ವಿ, ಬಿಯಸ್, ಸಟ್ಲೆಜ್ ಮತ್ತು ಯಮುನಾ ಈ ರಾಜ್ಯದ ಮುಖ್ಯ ನದಿಗಳು.

ಬಹುಪಾಲು ಜನರ ಕಸಬು ಬೇಸಾಯ. ಗೋಧಿ, ಜೋಳ, ಭತ್ತ ಮುಖ್ಯ ಆಹಾರ ಬೆಳೆಗಳು. ಹಣ್ಣಿನ ಬೆಳೆಗೆ ಇದು ಒಳ್ಳೆಯ ಸ್ಥಳ. 'ಸೇಬಿನ ರಾಜ್ಯ' ಎಂದು ಹೆಸರು ಪಡೆದಿದೆ. ದ್ರಾಕ್ಷಿ, ಪೀಚ್, ಪ್ಲಮ್, ಸಕ್ಕರೆ ಬಾದಾಮಿಯಂಥ ಫಲಗಳೂ ಇಲ್ಲಿ ಬೆಳೆಯುತ್ತವೆ.

ಕಬ್ಬಿಣ, ಗಂಧಕಗಳ ಅದಿರು ಹಾಗೂ ಸುಣ್ಣಕಲ್ಲುಗಳ ಸಿಧಿಯನ್ನು ಈಗ ಪತ್ತೆ ಹಚ್ಚಲಾಗಿದೆ. ಇಲ್ಲಿನ ಗೃಹ ಕೈಗಾರಿಕೆಯಲ್ಲಿ ಪಲವು ಬಗೆಯ ಸುಂದರ ಪದಾರ್ಥಗಳು ತಯಾರಾಗುತ್ತವೆ. ಚಂಬಾ ರುಮಾಲ್ ಎಂಬ ಹೆಸರಿನ ಶಾಲು ಒಂದು ವಿಶೇಷ ತಯಾರಿಕೆ. ಇದರ ಮೇಲೆ ಪೌರಾಣಿಕ ವಿಷಯ ಇಲ್ಲವೆ ರಾಗ, ರಾಗಿಣಿ ಅಥವಾ ಪಹಾಡಿ ಕಿರುಚಿತ್ರಗಳ ವಿನ್ಯಾಸದ ಕಸೂತಿ ಮಾಡಿರುತ್ತಾರೆ. ಬುಟ್ಟಿ, ಕುಂಭ ಪದಾರ್ಥಗಳ ತಯಾರಿಕೆ –ಇತರ ಕೈಗಾರಿಕೆಗಳು,

ಕಾಂಗ್ರಾಶೈಲಿಯ ಚಿತ್ರಗಳಿಗೆ ಹಿಮಾಚಲ ಪ್ರದೇಶ ಪ್ರಸಿದ್ಧ. ಗುಲರ್ ಒಂದು ಕಲಾಕೇಂದ್ರ. ಇಲ್ಲಿ ಮೊಘಲ್ ಕಲೆಯ ಪ್ರಭಾವ ಹೆಚ್ಚು. ಜಾನಪದ ನೃತ್ಯ, ಗೀತೆಗಳು ರಾಜ್ಯದ ಎಲ್ಲೆಡೆಯೂ ಬಳಕೆಯಲ್ಲಿವೆ. ಕರಿಯಾಲ ಎಂಬುದು ಇಲ್ಲಿನ ಜಾನಪದ ನಾಟಕ. ರಾಜ್ಯದ ಮಂಡಿ ಎಂಬಲ್ಲಿ ಶಿವರಾತ್ರಿ ವಿಜೃಂಭಣೆಯಿಂದ ನಡೆಯುತ್ತದೆ. ಕೋಣಗಳ ಕಾಳಗ, 'ಗಾಡ್ಡಿ' ಜನರ ನೃತ್ಯ ಪ್ರಸಿದ್ಧವಾದುವು. ಕುಲು ಕಣಿವೆಯಲ್ಲಿ ದಸರಾ ಹಬ್ಬವನ್ನು ವಿಶಿಷ್ಟವಾಗಿ ಆಚರಿಸುತ್ತಾರೆ.

ಪ್ರವಾಸಿಗಳಿಗೆ ಆಕರ್ಷಕ ಜಾಗಗಳೆಂದರೆ ಡಾಲ್‌ಹೌಸಿ, ಧರ್ಮಶಾಲ, ಕುಲು, ಮನಾಲಿ ಗಿರಿಧಾಮಗಳು. ಡಾಲ್‌ಹೌಸಿಯ ಚಿಲುಮೆಗಳು, ರಾಜ್ಯದ ಜಲಪಾತಗಳು ಮನೋಹರ ತಾಣಗಳು. ಖಜಿಯಾರ್ ಎಂಬಲ್ಲಿನ ಸರೋವರವೂ ಚೆಲುವಾದ ಪರಿಸರದಲ್ಲಿದೆ. ಇಲ್ಲಿ ವಿಹಾರ ತಾಣಗಳು ಹಲವಾರು ಇವೆ. ಪ್ರಸಿದ್ಧ ಕಾಂಗ್ರಾಕೋಟೆ ಧರ್ಮಶಾಲದಲ್ಲಿದೆ.

ರೇವಾಲಸರ್‌ಮಂಡಿ ಜಿಲ್ಲೆಯ ಸರೋವರ ಆಕರ್ಷಕವಾಗಿದೆ. ಟಿಬೆಟಿನಲ್ಲಿ ಬೌದ್ಧಧರ್ಮ ಆರಂಭಿಸಿದ ಬೋಧಿಸತ್ತ್ವ ಮಂಡಿರಾಜನ ಮಗಳಿಗೆ ಗುರುವಾದನಂತೆ. ರಾಜನಿಗೆ ಕೋಪ ಬಂದು ಅವನನ್ನು ಕೊಲ್ಲಬೇಕೆಂದು ಆಜ್ಞೆಮಾಡಿದ. ಅವನಿಗಾಗಿ ಸಜ್ಜಾದ ಚಿತೆಗೆ ಎಣ್ಣೆ



ಹಿಮಾಚಲ ಪ್ರದೇಶದ [illegible] ನೃತ್ಯ



ಗ್ರಾಮಾಂತರ ಪ್ರದೇಶದ ಮನೆ

ಹಿಮಾಲಯ ತಪ್ಪಲಿನಲ್ಲಿ [illegible]





ಹಿಮಾವೃತ ರಸ್ತೆಯಲ್ಲಿ ನಡಿಗೆ

ಹಾಕಿ ಹತ್ತಿಸಿದಾಗ, ಅದು ನೀರಾಗಿ, ಅದರಲ್ಲಿ ತೇಲಿಬಂದ ಕಮಲದಲ್ಲಿ ಪದ್ಮಸಂಭವನಾಗಿ ಕಾಣಿಸಿಕೊಂಡನಂತೆ. ಇನ್ನೊಂದು ಸರೋವರ 'ರೇಣುಕ' ಸಿರ್‌ಮುರ್ ಜಿಲ್ಲೆಯಲ್ಲಿದೆ. ಜಮದಗ್ನಿ ಋಷಿಯ ಹೆಂಡತಿ ರೇಣುಕ ತನ್ನ ಪತಿಯನ್ನು ಕೊಂದ ಕ್ಷತ್ರಿಯನಿಂದ ತಪ್ಪಿಸಿಕೊಳ್ಳಲು ಓಡಿಬಂದು ಈ ಸರೋವರದಲ್ಲಿ ಧುಮುಕಿದಳು ಎಂಬ ಕಥೆಯಿದೆ. ಇದರಿಂದ ಖತಿಗೊಂಡು ಮಗ ಪರಶುರಾಮ ಕ್ಷತ್ರಿಯರನ್ನು ನಿರ್ಮೂಲಮಾಡಲು ಹೊರಟದ್ದು ಪುರಾಣ ಪ್ರಸಿದ್ಧ ವಿಷಯ.

ಈ ರಾಜ್ಯದಲ್ಲಿ ಹತ್ತು ಜಿಲ್ಲೆಗಳಿವೆ. ಬಹಳ ಕಾಲದಿಂದ ಇದು ಗಿರಿಧಾಮವಾಗಿದೆ. ಇಲ್ಲಿ ಅನೇಕ ಒಳನುಡಿಗಳಿವೆ. ಆಡುಭಾಷೆಗಳು ಹಲವಾರು.

'ದಾಸ'ರು ಹಿಮಾಚಲ ಪ್ರದೇಶದ ಅತಿ ಪ್ರಾಚೀನ ನಿವಾಸಿಗಳು. ಇವರ ಪ್ರಸ್ತಾಪ ವೇದದಲ್ಲಿ ಬರುತ್ತದೆ. ಇವರು ಯುದ್ಧನಿಪುಣರು; ಆರ್ಯರು ಬಂದಾಗ ಕ್ರಮೇಣ ದಾಸರೂ ಅವರೊಡನೆ ಬೆರೆತರು. ಅನಂತರ 'ಜನಪದ'ಗಳೆಂಬ ವಿಭಾಗಗಳಾದಾಗ ಸಣ್ಣ ಗ್ರಾಮಗಳ ಗುಂಪುಗಳು ಹುಟ್ಟಿಕೊಂಡುವು.

ಕಾಲಕಾಲಕ್ಕೆ ಮೌರ್ಯರು, ಕುಶಾನರು, ಗುಪ್ತರು ಮುಂದೆ ಕನ್ನೌಜ್ ಆಳರಸರ ಅಧೀನಕ್ಕೆ ಹಿಮಾಚಲ ಪ್ರದೇಶದ ರಾಜ್ಯಗಳು ಒಳಪಟ್ಟುವು. 12ನೆಯ ಶತಮಾನದಲ್ಲಿ ದೆಹಲಿಗೆ ತುರ್ಕಿಗಳು ಬಂದಾಗ ಇಲ್ಲಿನ ಗಿರಿರಾಜ್ಯದ ರಾಜರು ಅವರಿಗೆ ಮಣಿಯಲಿಲ್ಲ. ಔರಂಗಜೇಬನ ಕಾಲದಲ್ಲಿ ಗುರು ಗೋವಿಂದಸಿಂಗ್ ತನ್ನ ಮುಖ್ಯ ನೆಲೆಗಳನ್ನು ಹಿಮಾಚಲದ ಗಿರಿ ಪ್ರದೇಶದಲ್ಲಿ ಕಟ್ಟಿಕೊಂಡ. ಪೌಂತ, ಆನಂದಪುರ, ಚಮಕೌರ್‌ಗಳಲ್ಲಿ ಅವನು ಕಟ್ಟಿದ ನೆಲೆಗಳಿಂದಾಗಿ, ಈಗಲೂ ಅವು ಸಿಕ್ಖರ ಪವಿತ್ರ ಕ್ಷೇತ್ರಗಳಾಗಿವೆ.



ಮುಖ್ಯಮಂತ್ರಿತ್ವ : ವೈ. ಎಸ್. ಪರಮ

19ನೆಯ ಶತಮಾನದ ಮೊದಲಲ್ಲಿ ರಣಜಿತ್‌ಸಿಂಗ್ ಹಿಮಾಚಲದ ಕೆಲವು ಗಿರಿರಾಜ್ಯಗಳನ್ನು ವಶಪಡಿಸಿಕೊಂಡ. ಸಂಸಾರಚಂದ್ ಎಂಬ ರಾಜ ಈ ಶತಮಾನದಲ್ಲಿ ಪ್ರಮುಖನಾಗಿದ್ದ ಕಾಂಗ್ರಾ ದೊರೆ. ಅವನ ದಿಗ್ವಿಜಯಗಳು, ಮುಂದಾಳುತನ, ದಯಾಪರತೆ, ಕಲಾಪ್ರೋತ್ಸಾಹ ಹೆಸರಾಗಿವೆ. ಇಂದು ಅಲ್ಲಿನ ಅನೇಕ ಜಾನಪದ ಗೀತೆಗಳಲ್ಲಿ, ದಂತಕಥೆಗಳಲ್ಲಿ, ಅವನು ಕೇಂದ್ರ ವ್ಯಕ್ತಿಯಾಗಿದ್ದಾನೆ.

ಗೂರ್ಖರನ್ನು ಸೋಲಿಸುವುದಕ್ಕಾಗಿ ಬಂದ ಬ್ರಿಟಿಷರು ಹಿಮಾಚಲದ ಹಲವು ಪೂರ್ವ ರಾಜ್ಯಗಳನ್ನು ಗೆದ್ದುಕೊಂಡರು. ಅಲ್ಲಿನ ರಾಜರು ಕೆಲವರೊಡನೆ ಕರಾರು ಮಾಡಿಕೊಂಡರು. ಸ್ವಾತಂತ್ರ್ಯಾನಂತರ ಮೂವತ್ತು ಚಿಲ್ಲರೆ ರಾಜ್ಯಗಳನ್ನು ಕೂಡಿಸಿ 1948ರಲ್ಲಿ 'ಹಿಮಾಚಲ ಪ್ರದೇಶ'ವನ್ನು ರೂಪಿಸಲಾಯಿತು. 1956ರಲ್ಲಿ ಇದು ಕೇಂದ್ರಾಡಳಿತಕ್ಕೆ ಒಳಪಟ್ಟಿತು. 1966ರಲ್ಲಿ ಪಂಜಾಬು ಹರ್‍ಯಾಣಗಳ ಪುನರ್‌ರಚನೆಯಾದಾಗ ಹಿಮಾಚಲಕ್ಕೆ ಕೆಲವು ಹೊಸ ಭಾಗಗಳು ಸೇರಿದುವು. 1970ರಲ್ಲಿ ಇದು ಭಾರತದ 18ನೆಯ ರಾಜ್ಯವಾಯಿತು.

ನೋಡಿ : ಸಿಮ್ಲಾ

ಹಿಮಾಲಯ

ಸಮಾನಾಂತರವಾಗಿರುವ ಹಲವು ಹಿಮಾಚ್ಛಾದಿತ ಪರ್ವತಶ್ರೇಣಿಗಳಿಗೆ ಇರುವ ಹೆಸರು, ಹಿಮಾಲಯ. ಪಶ್ಚಿಮದಲ್ಲಿ ಸಿಂಧು ನದಿಯಿಂದ ಪೂರ್ವದಲ್ಲಿ ಬ್ರಹ್ಮಪುತ್ರ ನದಿಯ ವರೆಗೆ ಇದು ಹರಡಿದೆ. ಒಟ್ಟು ಉದ್ದ ಸುಮಾರು 1,500 ಮೈಲು. ಅಗಲ 100ರಿಂದ 250 ಮೈಲು.

ಭಾರೀ ಶಿಖರಗಳೂ ಕಣಿವೆಗಳೂ ಈ ಪ್ರದೇಶದಲ್ಲಿವೆ. ವಿಸ್ತಾರವಾದ ಪೀಠಭೂಮಿಗಳೂ ಇವೆ. ದಕ್ಷಿಣದ ಸ್ವಲ್ಪಭಾಗ ಭಾರತ–ಪಾಕಿಸ್ತಾನಗಳಿಗೆ ಸೇರಿದ್ದು. ಹಿಮಾಲಯದ ಉತ್ತರ ಭಾಗ ಚೀನದ ಸಿಂಕಿಯಾಂಗ್ ಮತ್ತು ಟಿಬೆಟಿಗೆ ಸೇರಿದೆ. ನೇಪಾಳ ಮತ್ತು ಭೂತಾನ ಹಿಮಾಲಯ ಪ್ರದೇಶದಲ್ಲಿವೆ. ಪಂಜಾಬ್ ಹಿಮಾಲಯ, ಕುಮಾವೊ ಹಿಮಾಲಯ, ನೇಪಾಳ ಹಿಮಾಲಯ ಮತ್ತು ಅಸ್ಸಾಂ ಹಿಮಾಲಯ–ಹೀಗೆ ಹಿಮಾಲಯದ ಉದ್ದವನ್ನು ನಾಲ್ಕು ಭಾಗಗಳಾಗಿ ವಿಂಗಡಿಸುವುದೂ ಉಂಟು.



ಕೇದಾರನಾಥ ದಾರಿಯಲ್ಲಿ ಹಿಮಾಲಯ ಶ್ರೇಣಿ



ಕಿರೀಟ : ಕಾಶ್ಮೀರ

ಅಧಿಕಾರಪೀಠ : ವಿಧಾನಸೌಧ

ಪದತಲ : ಕನ್ಯಾಕುಮಾರಿ







ಹಿಮಾಲಯದಿಂದ ಬಯಲಿಗೆ –ನದಿ

ಹಿಮಾಲಯಕ್ಕೆ ಮುಕುಟದಂತಿರುವುದು ಎವರೆಸ್ಟ್ ಶಿಖರ. ಜಗತ್ತಿನಲ್ಲೇ ಅತ್ಯುನ್ನತ ಶಿಖರ ಇದು (ಎತ್ತರ 29,028 ಅಡಿ). ಭಾರತದ ಅತ್ಯುನ್ನತ ಶಿಖರ ಗಾಡ್ವಿನ್–ಆಸ್ಟೆನ್ ಅಥವಾ ಕೆ 2 (28,250 ಅಡಿ). ಕಾಂಚನ ಗಂಗಾ (28,146 ಅಡಿ), ಧವಳಗಿರಿ (26,810) ಹಿಮಾಲಯದ ಇತರ ಕೆಲವು ಉನ್ನತ ಶಿಖರಗಳು. ಭಾರತದ ಉತ್ತರ ಭಾಗದಲ್ಲಿ ಗಂಗಾನದಿಯ ಬಯಲಲ್ಲಿ ಭಾರೀ ಮಳೆಯಾಗುವ ಕಾಲದಲ್ಲಿ, ಹಿಮಾಲಯದಲ್ಲಿ ಬೀಳುವುದು ಹಿಮ ಮಾತ್ರ. ಇಲ್ಲಿ ಹುಟ್ಟಿದ ನದಿಗಳು ಹಿಮ ಕರಗಿದಾಗ ತುಂಬಿಕೊಳ್ಳುತ್ತವೆ. ಗಂಗಾ, ಯಮುನಾ, ಗಂಡಕ್, ಕೋಸಿ, ಬ್ರಹ್ಮ ಪುತ್ರ ಮತ್ತು ಪಂಜಾಬಿನ ಐದು ನದಿಗಳ ಜನ್ಮಸ್ಥಳ ಇದು. ಬರ್ಮಾದ ಇರಾವದಿ, ಚೀನಾದ ಯಾಂಗ್‌ತ್ಸೆ ನದಿಗಳ ಉಗಮವೂ ಇಲ್ಲೇ.

ಹಿಮಾಲಯದ 6,000—7,000 ಅಡಿಗಳ ಎತ್ತರದಲ್ಲಿಯೂ ಭೂಮಿ ಕೃಷಿಯೋಗ್ಯವಾಗಿದೆ. ಸಾಕಷ್ಟು ಮಳೆಯೂ ಇದೆ. ಜನರು ಚಹ, ಧಾನ್ಯ ಮುಂತಾದ ಸಸ್ಯ ಬೆಳೆಸುತ್ತಾರೆ. ಇಂಥ ಸ್ಥಳಗಳಲ್ಲಿರುವ ಸಿಮ್ಲಾ, ಡಾರ್ಜಿಲಿಂಗ್, ಮಸ್ಸೂರಿ, ನೈನಿತಾಲ್ ಮುಂತಾದುವು ಪ್ರಸಿದ್ಧ ಧಾಮಗಳು.

ಮಧ್ಯ ಏಷ್ಯದ ಶೀತಮಾರುತಗಳಿಂದ ಹಿಮಾಲಯ ಭಾರತಕ್ಕೆ ರಕ್ಷಣೆ ನೀಡಿದೆ. ವಿದೇಶೀಯರ ಸುಲಭ ದಾಳಿಗೂ ತಡೆಯಾಗಿದೆ. ಬದರೀನಾಥ, ಕೇದಾರನಾಥ, ಗಂಗೋತ್ರಿ, ಯಮುನೋತ್ರಿ ಮುಂತಾದ ಸ್ಥಳಗಳಿಗೆ [illegible] ಯಾತ್ರಿಕರಾಗಿ ಹೋಗುತ್ತಾರೆ. ಕೈಲಾಸ ಪರ್ವತವೂ ಹಿಮಾಲಯದಲ್ಲಿದೆ.

ಇಂದಿಗೆ 70 ಲಕ್ಷ ವರ್ಷಗಳಿಂದ 2½ ಕೋಟಿ ವರ್ಷಗಳ ಹಿಂದಿನ ಮಿಯೊಸೀನ್ ಎಂಬ ಭೂ ಅವಧಿಯಲ್ಲಿ ಹಿಮಾಲಯ ರೂಪುಗೊಂಡಿತು.

ನೋಡಿ : ಹಿಮಾಲಯ-ಸಂಪುಟ ೮

ಹಿರಾಕುಡ್ ಅಣೆಕಟ್ಟು

4,801.2 ಮೀಟರ್ ಉದ್ದದ ಭಾರತದ ಹಿರಾಕುಡ್ ಅಣೆಕಟ್ಟು ಪ್ರಪಂಚದಲ್ಲೇ ಅತಿ ಉದ್ದವಾದದ್ದು. ಸಂಪೂರ್ಣವಾಗಿ ಭಾರತೀಯ ಎಂಜಿನಿಯರರ ನೇತೃತ್ವದಲ್ಲಿ ಕಟ್ಟಲ್ಪಟ್ಟಿತು. ಇದು ಒಡಿಸ್ಸಾದ ಮಹಾ ನದಿಗೆ ಅಡ್ಡವಾಗಿ, ಸಂಬಲ್ಪುರದಿಂದ ಆರು ಮೈಲು ದೂರದಲ್ಲಿದೆ.



ಅತ್ಯಂತ ಉದ್ದ : ಹಿರಾಕುಡ್ ಅಣೆಕಟ್ಟು

ಮಹಾನದಿಯ ಪ್ರವಾಹ ಹಾವಳಿಗೆ ಪರಿಹಾರವಾಗಿ ಕೈಗೊಂಡ ಹಿರಾಕುಡ್ ಯೋಜನೆ ವಿವಿಧೋದ್ದೇಶದ್ದು. ಇದು ಒಟ್ಟು 22 ಲಕ್ಷ ಎಕರೆಗಳಿಗೆ ನೀರು ಒದಗಿಸುತ್ತದೆ. 123.2 ಮೆಗಾವಾಟ್ ವಿದ್ಯುಚ್ಛಕ್ತಿ ಉತ್ಪಾದನೆಯಾಗುತ್ತದೆ. ಕುಡಿಯುವ ನೀರೂ ಪೂರೈಕೆಯಾಗುತ್ತದೆ. ಉಕ್ಕು, ಅಲ್ಯೂಮಿನಿಯಂ, ಬಟ್ಟೆ, ಕಾಗದ ಮುಂತಾದ ಕೈಗಾರಿಕೆಗಳು ಈ ಯೋಜನೆಯಿಂದ ಸಾಧ್ಯವಾಗಿದೆ. ಮೀನುಗಾರಿಕೆಯೂ ಇಲ್ಲಿ ನಡೆಯುತ್ತದೆ. ಇಲ್ಲಿನ ಸರೋವರದ ಉದ್ದ 100 ಮೈಲು.

ಹಿರಾಕುಡ್ ಅಣೆಕಟ್ಟನ್ನು ದಿವಂಗತ ಪ್ರಧಾನಿ ಜವಾಹರಲಾಲ್ ನೆಹರೂ ಅವರು 1957ರಲ್ಲಿ ಉದ್ಘಾಟಿಸಿದರು. ಇಲ್ಲಿಯ [illegible] ಗೋಪುರಗಳಿವೆ. ದೋಣಿ ವಿಹಾರಕ್ಕೂ ಈ ಜಲಾಶಯ ದಲ್ಲಿ ಅವಕಾಶವಿದೆ.

ಹಿರಾಡಟಸ್

[illegible] ಅಮೂಲ್ಯ ವಸ್ತುಗಳು ದೊರೆಯುವುದರಲ್ಲಿ ಏನೋ ವಿಶೇಷ ಇದೆ……

[illegible] ಹೆಚ್ಚು......”

—ಹೀಗೆ ಬರೆದವನು 'ಇತಿಹಾಸದ ಜನಕ' ಎನಿಸಿರುವ ಪ್ರಾಚೀನ ಗ್ರೀಸಿನ ಹಿರಾಡಟಸ್.

ಈತನ ಒಂಬತ್ತು ಸಂಪುಟಗಳ ಇತಿಹಾಸಗ್ರಂಥದಲ್ಲಿ. ಪ್ರಾಯಶಃ ಕ್ರಿ.ಪೂ. 440ರಲ್ಲಿ ರಚಿತವಾದ 'ಹಿಸ್ಟರೀಸ್' ಭಾರತಕ್ಕೆ ಬಂದವನಲ್ಲ. ಅವನ 'ಇತಿಹಾಸ' (ಹಿಸ್ಟರಿ) ಗ್ರಂಥದಲ್ಲಿ ಅತಿ ಹಿಂದಿನ ಕೆಲವು ವಿಷಯಗಳು ಸೇರಿವೆ.

ಪರ್ಷಿಯನ್ ದೊರೆಯಾದ 'ಇಂಡಿಯಾ' ಪ್ರಾಚ್ಯ ಪರ್ಷಿಯದ ರಾಜ ಡೇರಿಯಸ್ ಗೆದ್ದ ಸಿಂಧೂನದಿಯ ಸ್ವಲ್ಪ ಭಾಗದ ಬಗೆಗೆ. ಡೇರಿಯಸನ ಸಾಮ್ರಾಜ್ಯದ ಆಡಳಿತ ವಿಭಾಗಗಳಾದ 20 ಕ್ಷತ್ರಪಗಳಲ್ಲಿ 'ಇಂಡಿಯಾ' ಸಹ ಒಂದು. ಅತಿ ದೊಡ್ಡ ಜನಸಂಖ್ಯೆ ಇದ್ದ ಕ್ಷತ್ರಪದ ಜನರು ರಾಜನಿಗೆ ವರ್ಷಕ್ಕೆ 360 ಟ್ಯಾಲೆಂಟು (ಟ್ಯಾಲೆಂಟ್ : ಗ್ರೀಕ್ ಹಣ) ಮೌಲ್ಯದ ಚಿನ್ನದ ಧೂಳನ್ನು ಕರ ಸಲ್ಲಿಸುತ್ತಿದ್ದರೆಂದು ಹಿರಾಡಟಸ್ ಬರೆದಿದ್ದಾನೆ.

“ಇಂಡಿಯಾದ ಬಹುಭಾಗ ಮರಳು ಪ್ರದೇಶ...ಅನೇಕ ಜನಾಂಗಗಳು... ಒಂದೊಂದು ಜನಾಂಗಕ್ಕೆ ಒಂದೊಂದು ಭಾಷೆ...ಕೆಲವು ಅಲೆಮಾರಿ ಜನಾಂಗಗಳು : ಮತ್ತು ಕೆಲವರು ಖಾಯಂ ನೆಲೆಸುವವರು. ಕೆಲವರು ನದೀ ತೀರದಲ್ಲಿ ವಾಸಿಸಿ, ಮೀನು ಹಿಡಿದು ತಂದು ಹಸಿಯಾಗಿ ತಿನ್ನುವ ಜನರು.

“ಪೂರ್ವ ಭಾಗದಲ್ಲಿ ಹಸಿಮಾಂಸವನ್ನು ತಿನ್ನುವ 'ಪಡೀಯ'ರು ತಮ್ಮಲ್ಲಿ ಕಾಯಿಲೆಯಿಂದ ನರಳುವ ಸಂಬಂಧಿಗಳನ್ನೇ ಕೊಂದು ತಿನ್ನುವರು. ಮತ್ತೆ ಕೆಲವರು ಯಾವ ಪ್ರಾಣಿಗಳನ್ನೂ ಕೊಲ್ಲದೆ ಕೇವಲ ಗೆಡ್ಡೆಗೆಣಸುಗಳನ್ನು ತಿಂದು ಜೀವಿಸುವರು”.

“ಉತ್ತರಭಾಗದ ಜನ ಹೆಚ್ಚು ಸಮರೋತ್ಸಾಹಿಗಳು. ಮರಳುಗಾಡಿನಲ್ಲಿ ಇರುವೆಗಳೊಂದಿಗೆ ಬೆರೆತಿರುವ ಚಿನ್ನವನ್ನು ಒಂಟೆಯ ಮೇಲೆ ಹೇರಿಕೊಂಡು ಬರುವವರು. ಇವರು ನರಿಗಿಂತ ದೊಡ್ಡ ಗಾತ್ರದ ಇರುವೆಗಳಿಂದ ಉಪಾಯವಾಗಿ ಅಲ್ಲಿಂದ ತಪ್ಪಿಸಿಕೊಂಡು ಚಿನ್ನ ತರುತ್ತಾರೆ. ಗಣಿಗಳಿಂದಲೂ ಚಿನ್ನ ತೆಗೆಯುತ್ತಾರೆ. ನದೀ ಪಾತ್ರಗಳಿಂದಲೂ ಶೇಖರಿಸುತ್ತಾರೆ.”

“ಕೆಲವು ಮರಗಳು ಹಣ್ಣುಗಳ ಬದಲು ಉಣ್ಣೆಯನ್ನು ಕೊಡುತ್ತವೆ. ಈ ಉಣ್ಣೆ (ಹತ್ತಿ)ಯು ಬಟ್ಟೆಯುನ್ನು ಜನ ಧರಿಸುತ್ತಾರೆ.”

ಇಂಥ ವಿವರಗಳೂ ದಂತಕಥೆಗಳೂ ಸ್ವಾರಸ್ಯಕರ ವರ್ಣನೆಗಳೂ ಅವನ ಬರೆಹದಲ್ಲಿ ಸೇರಿವೆ.

ನೋಡಿ : ಹಿರಾಡಟಸ್–ಸಂಪುಟ ೧

ಹಿರಿಯಣ್ಣ

ಹಿರಿಯಣ್ಣನವರ ಮುಂದೆ ಇದ್ದರೆ ಶಾಂತವಾದ ಸಾಗರದೆದುರು ನಿಂತಂತೆ ಅನಿಸುತ್ತಿತ್ತು. ಅಷ್ಟು ಆಳವಾದ ಜ್ಞಾನ, ಅಪಾರ ತಿಳಿವಳಿಕೆ ಅವರದು. ತತ್ತ್ವಜ್ಞಾನ ಅದರಲ್ಲಿಯೂ ಭಾರತೀಯ ತತ್ತ್ವಜ್ಞಾನ ಅವರ ಮೆಚ್ಚಿನ ಕ್ಷೇತ್ರ.



ಮೈಸೂರು ಹಿರಿಯಣ್ಣ ಎಂಬುದು ಅವರ ಪೂರ್ಣ ಹೆಸರು. ಮೈಸೂರಿನಲ್ಲೇ ಹುಟ್ಟಿ, ಮೈಸೂರಿನಲ್ಲೇ ಆಯುಸ್ಸಿನ ಹೆಚ್ಚಿನ ಕಾಲ ಕಳೆದು. ಅಲ್ಲಿಯೇ ಕಾಲವಾದರು. ಆದರೆ ಅವರ ಹೆಸರು ಮಾತ್ರ ಲೋಕಸಂಚಾರವಾಗಿತ್ತು. ದೇಶದಗಲದಿಂದ ಅವರನ್ನು ಕಾಣಲು ಜನ ಮೈಸೂರಿಗೆ ಬರುತ್ತಿದ್ದರು.

ಎಂ. ಹಿರಿಯಣ್ಣ

1871 ಮೇ 7ರಂದು ಹಿರಿಯಣ್ಣನವರ ಜನನ. ತಂದೆ, ನಂಜುಂಡಯ್ಯ. ಮೊದಲಿಗೆ ಸಂಸ್ಕೃತ ವಿದ್ಯಾಭ್ಯಾಸ; ಜೊತೆಗೆ ಇಂಗ್ಲಿಷ್ ವಿದ್ಯಾಭ್ಯಾಸ. ಬಿ.ಎ. ಪದವಿಧರರಾದ ಮೇಲೆ ಮೈಸೂರಿನ ಪ್ರಾಚ್ಯ ಸಂಶೋಧನಾ ಸಂಸ್ಥೆಯಲ್ಲಿ ಕೆಲಸ ದೊರೆಯಿತು. ಅನಂತರ ಬೆಂಗಳೂರಿನಲ್ಲಿ ಶಿಕ್ಷಣ ಕಮೀಷನರರ ಕಚೇರಿಯಲ್ಲಿ ನೌಕರಿ. ಶಿಕ್ಷಣವೃತ್ತಿಯ ಕಡೆಗೆ ಅವರ ಒಲವು. ಬಳಿಕ ಮದರಾಸಿನ ಶಿಕ್ಷಕ ಕಾಲೇಜಿನಲ್ಲಿ ವ್ಯಾಸಂಗ ಮಾಡಿದರು. ಹಿಂದಿರುಗಿ ಬಂದು, ಮೈಸೂರಿನ ನಾರ್ಮಲ್ ಸ್ಕೂಲಿನ ಉಪಾಧ್ಯಾಯರೂ ಮುಂದೆ ಮುಖ್ಯೋಪಾಧ್ಯಾಯರೂ ಆದರು. ಅನಂತರ ಮೈಸೂರಿನ ಮಹಾರಾಜಾ ಕಾಲೇಜಿನ ಸಂಸ್ಕೃತ ವಿಭಾಗದಲ್ಲಿ ಅಧ್ಯಾಪಕರಾಗಿ ಸೇರಿದರು. ಇದು 1912ರ ಸಂಗತಿ. 1927ರಲ್ಲಿ ಹಿರಿಯಣ್ಣನವರು ನಿವೃತ್ತರಾದರು.

ಅವರು ಇದ್ದ ಕಡೆಗಳಲ್ಲೆಲ್ಲ ತಮ್ಮ ಕೆಲಸದಲ್ಲಿ ತೋರಿದ ಶ್ರದ್ಧೆ, ದಕ್ಷತೆ, ಶಾಂತತೆ ಅನುಕರಣೀಯ. 1935ರಲ್ಲಿ ಅಖಿಲ ಭಾರತ ಪ್ರಾಚ್ಯ ಸಮ್ಮೇಳನ ಮೈಸೂರಿನಲ್ಲಿ ನಡೆದಾಗ ಭಾರತೀಯ ತತ್ತ್ವಶಾಸ್ತ್ರ ವಿಭಾಗಕ್ಕೆ ಹಿರಿಯಣ್ಣ ಅಧ್ಯಕ್ಷರಾಗಿದ್ದರು.

ಇಂಗ್ಲಿಷಿನಲ್ಲಿ ಅವರು ಭಾರತೀಯ ತತ್ತ್ವಶಾಸ್ತ್ರದ ಬಗೆಗೆ 'ಔಟ್‌ಲೈನ್ಸ್ ಆಫ್ ಇಂಡಿಯನ್ ಫಿಲಾಸಫಿ', 'ಎಸೆನ್ಷಿಯಲ್ಸ್ ಆಫ್ ಇಂಡಿಯನ್ ಫಿಲಾಸಫಿ' ಎಂಬ ಎರಡು ಶ್ರೇಷ್ಠ ಗ್ರಂಥಗಳನ್ನು ಬರೆದರು. ಅವರದು ಅತಿ ಖಚಿತವಾದ ಬರವಣಿಗೆ, ಸುಲಭ ನಿರೂಪಣೆ, ಸುಂದರ ಶೈಲಿ.

ಹಿರಿಯಣ್ಣನವರದು ಆಡಂಬರವಿಲ್ಲದ ಜೀವನ. ಅತಿ ಗಹನ ವಿಚಾರಧಾರ. 1950 ಸೆಪ್ಟೆಂಬರ್ 19ರಂದು ಅವರು ಮೃತರಾದರು.

1972ರಲ್ಲಿ ಹಿರಿಯಣ್ಣನವರ ಶತಾಬ್ದಿಯನ್ನು ಆಚರಿಸಲಾಯಿತು.

ಹೀನಯಾನ

ನೋಡಿ : ಥೇರಾವಾದ

ಹುಕಮ್‌ಸಿಂಗ್

ಹುಕಮ್‌ಸಿಂಗ್ 1962–67ರ ವರೆಗೆ ಲೋಕಸಭೆಯ ಅಧ್ಯಕ್ಷರು ಅನಂತರ ರಾಜಸ್ಥಾನದ ರಾಜ್ಯಪಾಲರಾದರು. ಒಂದು ಕಾಲಕ್ಕೆ ಅವರು ಶಿರೋಮಣಿ ಅಕಾಲಿದಳದ ಪ್ರಮುಖ ವ್ಯಕ್ತಿಯಾಗಿದ್ದರು.

ಜನನ (ಈಗ ಪಾಕಿಸ್ತಾನದಲ್ಲಿರುವ) ಮಾಂಟ್‌ಗೊಮರಿಯಲ್ಲಿ, 1895 ಆಗಸ್ಟ್ 30ರಂದು. ಅಮೃತಸರ, ಲಾಹೋರ್‌ಗಳಲ್ಲಿ ವಿದ್ಯಾಭ್ಯಾಸ. ನ್ಯಾಯಶಾಸ್ತ್ರ ಕಲಿತ ಅವರು 1947–48ರಲ್ಲಿ ಕಪುರ್‌ತಲಾ ಉಚ್ಚ ನ್ಯಾಯಾಲಯದಲ್ಲಿ ವಕೀಲರಾಗಿದ್ದರು. ಅನಂತರ ರಾಜ್ಯಾಂಗ ರಚನಾ ಸಭೆ ಮತ್ತು ಹಂಗಾಮಿ ಸಂಸತ್ತಿನ ಸದಸ್ಯರಾದರು.



ಹತ್ತು ವರ್ಷ (1952–62) ಲೋಕಸಭಾ ಸದಸ್ಯರಾಗಿದ್ದರು. ಹಲವು ಪ್ರಮುಖ ಸಂಘ ಸಂಸ್ಥೆಗಳಲ್ಲಿ ಉನ್ನತ ಅಧಿಕಾರ ವಹಿಸಿದರು. ಭಾರ

ಲೋಕಸಭಾ ಸಭಾಧ್ಯಕ್ಷ, ರಾಜ್ಯಪಾಲ ಹುಕಮ್‌ಸಿಂಗ್

ತೀಯ ಸಂಸದೀಯ ಮಂಡಲಿಯ ಅಧ್ಯಕ್ಷರಾಗಿದ್ದರು. ದೆಹಲಿ, ಆಸ್ಟ್ರೇಲಿಯ, ಲಂಡನ್‌ಗಳಲ್ಲಿ ನಡೆದ ಕಾಮನ್‌ವೆಲ್ತ್ ಸಂಸದೀಯ ಅಧಿವೇಶನಗಳಲ್ಲಿ ಭಾಗವಹಿಸಿದರು. ರಷ್ಯ, ಮಂಗೋಲಿಯಗಳಿಗೆ ಹೋದ ಸಂಸದೀಯ ಆಯೋಗಗಳ ನಾಯಕರಾಗಿದ್ದರು.

'ಸ್ಪೋಕ್ಸ್‌ಮನ್' ಎಂಬ ಇಂಗ್ಲಿಷ್ ಸಾಪ್ತಾಹಿಕವನ್ನು ಹುಕಮ್‌ಸಿಂಗ್ ಸ್ಥಾಪಿಸಿದರು. 'ಸಿಕ್ಖರ ಸಮಸ್ಯೆ', 'ರಷ್ಯ ನಾ ಕಂಡಂತೆ', ಮೊದಲಾದುವು ಅವರ ಬರೆಹಗಳು.

ಹುತ್ತರಿ ಹಬ್ಬ



ಹುತ್ತರಿ ಕುಣಿತ —'ಕೋಲ್‌ಮಂದ್' ಕ್ರೀಡಾಂಗಣದಲ್ಲಿ

ಕೊಡಗಿನ ಜನರಿಗೆ ಅವರದೇ ಆದ ಕೆಲವು ಹಬ್ಬಗಳಿವೆ. ಅವುಗಳಲ್ಲಿ 'ಹುತ್ತರಿ' ಅವರ ಅತ್ಯಂತ ದೊಡ್ಡ ಹಬ್ಬ. ಕೊಡವ ನುಡಿಯ 'ಪುತ್ತರಿ' — ಪುದಿಯ ಅರಿ (ಹೊಸ ಅಕ್ಕಿ)— ಎಂಬ ಪದ ಕನ್ನಡದಲ್ಲಿ ಹುತ್ತರಿ ಎಂದಾಗಿದೆ. ಭತ್ತದ ಬೇಸಾಯವೇ ಕೊಡಗಿನ ಜನತೆಯ ಜೀವಾಳ. ಅಕ್ಕಿಯೇ ಅವರ ಅನ್ನ ದೇವತೆ. ಈ ಧಾನ್ಯ ದೇವತೆಯನ್ನು ಭಕ್ತಿಯಿಂದ ಪೂಜಿಸಿ ಆಕೆಯನ್ನು ವಿಧಿಯುಕ್ತವಾಗಿ ಕರೆತಂದು ಮನೆ ತುಂಬಿಸಿಕೊಳ್ಳುವುದೇ ಹುತ್ತರಿ ಹಬ್ಬದ ವೈಶಿಷ್ಟ್ಯ. ವರ್ಷಂಪ್ರತಿ ನವೆಂಬರ್ ಅಥವಾ ಡಿಸೆಂಬರ್ ತಿಂಗಳಲ್ಲಿ ನಡೆಯುವ ಇದು ಕೊಡಗಿನ ಸುಗ್ಗಿಯ ಹಬ್ಬ, ಭತ್ತದ ಕುಯ್ಲಿನ ಆರಂಭೋತ್ಸವ. ಮೂರು ದಿನಗಳಿಂದ ಹಿಡಿದು ಒಂದು ವಾರದ ವರೆಗೂ ನಡೆಯುತ್ತದೆ.

ಹಬ್ಬಕ್ಕೆ ಪೂರ್ವಭಾವಿಯಾಗಿ ಪ್ರತಿಯೊಂದು ಮನೆಯೂ ಸುಣ್ಣಬಣ್ಣಗಳಿಂದ ಅಲಂಕೃತವಾಗುತ್ತದೆ. ಮನೆಯ ಮಂದಿಗೆಲ್ಲ ಹೊಸ ಬಟ್ಟೆ ಬರೆಗಳು ಸರಬರಾಜಾಗುತ್ತವೆ. ಹಬ್ಬದ ದಿನ ಮನೆಗೆ ತಳಿರುತೋರಣಗಳನ್ನು ಕಟ್ಟುತ್ತಾರೆ. ಮನೆಯ ಜನರೆಲ್ಲ ಹೊಸ ಉಡುಗೆಗಳನ್ನು ತೊಟ್ಟುಕೊಳ್ಳುತ್ತಾರೆ. ಅಕ್ಕಿಯ ಹುಡಿಯನ್ನು ನೀರಿನಲ್ಲಿ ಕಲಸಿ ತಯಾರಿಸಿದ ಬಿಳಿಯ ಮಿಶ್ರಣದಿಂದ ಮನೆಯ ಬಾಗಿಲು, ಕಿಟಕಿ, ಕುರ್ಚಿ, ಮೇಜು ಮುಂತಾದುವುಗಳ ಮೇಲೆ ನಕ್ಷತ್ರಾಕಾರದ ಮುದ್ರೆಗಳನ್ನೊತ್ತುತ್ತಾರೆ. ಮನೆಯ ಮಕ್ಕಳು ಪಟಾಕಿ ಹಾರಿಸುವ, ಬಾಣಬಿರುಸು ಸುಡುವ ವಿನೋದಗಳಲ್ಲಿ ತೊಡಗುತ್ತಾರೆ.

ಪ್ರಾರಂಭದಲ್ಲಿ ಕುಟುಂಬದ ಹಿರಿಯ ಇಷ್ಟದೇವತೆಗಳನ್ನು ಪ್ರಾರ್ಥಿಸಿ, ಮಾವು ಮತ್ತು ಅರಳಿ(ಅಶ್ವತ್ಥ) ಮರಗಳ ಎಲೆಗಳನ್ನು ಜೋಡಿಸಿ, ಒಂದು ನಿರ್ದಿಷ್ಟ ಜಾತಿಯ ಮರದ ನಾರಿನಿಂದ ಅವನ್ನು ಕಟ್ಟುತ್ತಾನೆ. ಇದಕ್ಕೆ 'ನೆರೆಕಟ್ಟುವುದು' ಎನ್ನುತ್ತಾರೆ. ಇದಾದ ಬಳಿಕ ಎಲ್ಲರೂ ಮನೆಯ 'ನೆಲ್ಲಕ್ಕಿ ಬಾಡೆ' ಎಂಬ ಪ್ರಾರ್ಥನಾಂಗಣದಲ್ಲಿ ಸೇರಿ ತಮ್ಮ ಕುಲದೇವರನ್ನು ಆರಾಧಿಸಿ, ಒಟ್ಟಾಗಿ ಭತ್ತದ ಗದ್ದೆಗೆ ತೆರಳುತ್ತಾರೆ. ಮೊದಲೇ ತಳಿರು ತೋರಣಗಳನ್ನು ಕಟ್ಟಿ ನಿರ್ದಿಷ್ಟಪಡಿಸಿದ ಗದ್ದೆಯನ್ನು ತಲುಪಿದ ಅನಂತರ, ಕುಟುಂಬದ ಹಿರಿಯ ಭತ್ತದ ಪೈರನ್ನು ಪೂಜಿಸಿ, ಅದಕ್ಕೆ ಹಣ್ಣುಕಾಯಿ, ಹಾಲುಜೇನು ಸಮರ್ಪಿಸುತ್ತಾನೆ. ಇದಾದ ಮೇಲೆ ಶಾಸ್ತ್ರೋಕ್ತವಾಗಿ ಕೆಲವು ಭತ್ತದ ತೆನೆಗಳನ್ನು ಕತ್ತರಿಸಿ, ಅಲ್ಲಿ ನೆರೆದಿರುವವರೆಲ್ಲರಿಗೂ ಹಂಚುತ್ತಾನೆ.

ಆ ಸುಮುಹೂರ್ತಕ್ಕೆ ಸರಿಯಾಗಿ ಬಂದೂಕಿನಿಂದ ಆಕಾಶದತ್ತ ಒಂದು ಗುಂಡು ಹಾರಿಸಲಾಗುತ್ತದೆ (ಇದು ವ್ಯವಸಾಯಗಾರರ [illegible]). ಆ ಗುಂಡಿನ ಶಬ್ದದೊಂದಿಗೆ ಎಲ್ಲರೂ ಏಕಕಂಠದಿಂದ "ಪೊಲಿ ಪೊಲಿ ದೇವಾ" ಎಂದು ಹರ್ಷದ ಧ್ವನಿಯಲ್ಲಿ ಕೂಗುತ್ತಾರೆ. "ಅನ್ನದೇವತೆಯೇ ಅಕ್ಷಯವಾಗು, ಅಕ್ಷಯವಾಗು" ಎಂಬುದೇ ಇದರ ಅರ್ಥ. ವಾದ್ಯಘೋಷಗಳೊಂದಿಗೆ ಎಲ್ಲರೂ ಭತ್ತದ ತೆನೆಗಳ ಸಮೇತ ಹಾಡುತ್ತಾ "ಪೊಲಿ ಪೊಲಿ ದೇವಾ" ಎಂದು ಕೂಗುತ್ತ ಮನೆಗೆ ಮರಳುತ್ತಾರೆ. ಈ ಕಾರ್ಯಕ್ರಮ ಕೊಡಗಿನ ಕೆಲವೆಡೆ ಹಗಲು ಹೊತ್ತೂ ಕೆಲವು ಕಡೆ ರಾತ್ರಿ ಹೊತ್ತೂ ನಡೆಯುತ್ತದೆ.

ಎಲ್ಲರೂ ತಾವು ತಂದ ಭತ್ತದ ತೆನೆಗಳನ್ನು 'ನೆಲ್ಲಕ್ಕಿ ಬಾಡೆ'ಯಲ್ಲಿ ತೂಗು ದೀಪದ ಕೆಳಗೆ ಇಟ್ಟು ನಮಸ್ಕರಿಸುತ್ತಾರೆ. ಆ ಪೈಕಿ ಕೆಲವು ತೆನೆಗಳನ್ನು ಮಾವು ಮತ್ತು ಅರಳಿ ಎಲೆಗಳೊಡನೆ ಪೋಣಿಸಿ, ಮನೆಯ ಬಾಗಿಲು, ಕಿಟಕಿ, ಕಣಜ, ಉಗ್ರಾಣ – ಇತ್ಯಾದಿಗಳಿಗೆ ಕಟ್ಟುತ್ತಾರೆ. ಅನಂತರ ವಿಶೇಷ ತಿಂಡಿತಿನಿಸುಗಳಿಂದ ಕೂಡಿದ ಹಬ್ಬದೂಟವಾಗುತ್ತದೆ.

ಹಬ್ಬದ ಮುಂದಿನ ಕಾರ್ಯಕ್ರಮ - ಸಾಮೂಹಿಕ ಜಾನಪದ ನೃತ್ಯ, ಕುಣಿತ, ಹಾಡುಗಾರಿಕೆ ಇತ್ಯಾದಿ. ಸುತ್ತಮುತ್ತಲಿನ ಗ್ರಾಮಗಳ ಜನರು 'ಕೋಲ್ ಮಂದ್' ಎಂಬ ಊರಿನ ಕ್ರೀಡಾಂಗಣದಲ್ಲಿ ಕಲೆತು, ಸ್ಥಳೀಯ ಡೋಲು, ಕೊಂಬು, ಕಹಳೆ ಇತ್ಯಾದಿ ವಾದ್ಯಗಳ ತಾಳಕ್ಕೆ ತಕ್ಕಂತೆ ಕುಣಿಯುತ್ತಾರೆ.

ಎರಡೂ ಕೈಗಳಲ್ಲಿ ಬೆತ್ತದ ಬಾರುಕೋಲುಗಳನ್ನು ಹಿಡಿದು, ಅವುಗಳನ್ನು ವಿವಿಧ ಭಂಗಿಗಳಲ್ಲಿ ಕ್ರಮಬದ್ಧವಾಗಿ ಬೀಸುತ್ತ ಕುಣಿಯುವ ಕೋಲಾಟ ಅತ್ಯಂತ ಜನಪ್ರಿಯವಾದದ್ದು. ಕೆಲವು ಕಡೆ 'ಪರೆಯ' ಎಂಬ ಒಂದು ಬಗೆಯ ಯುದ್ಧನಾಟ್ಯ ಅಥವಾ ಕವಾಯತನ್ನು ಕಾಣಬಹುದು. ಇದರಲ್ಲಿ ಭಾಗವಹಿಸುವವರು ಬೆತ್ತದ ಕೋಲು ಮತ್ತು ಗುರಾಣಿಗಳನ್ನು ಹಿಡಿದು ಪರಸ್ಪರ ಕಾದಾಡುವಂತೆ ಕುಣಿಯುತ್ತಾರೆ. ಕೋಲಾಟ ಆಡುವವರು ಹಬ್ಬಕ್ಕೆ ಸಂಬಂಧಿಸಿದ ಜಾನಪದ ಹಾಡುಗಳನ್ನು ಹಾಡುತ್ತಾರೆ. ಈ ಆಟಗಳ ಅನಂತರ ಗ್ರಾಮಸ್ಥರು ಊರಿನ ಪ್ರತಿಯೊಂದು ಮನೆಗೂ ಹೋಗಿ, ಮನೆಯ ಹಿರಿಯರನ್ನು ಹಾಡಿ ಹೊಗಳಿ, ಅವರಿಂದ ಕಾಣಿಕೆಗಳನ್ನು ಪಡೆಯುವ ಪದ್ಧತಿ ಕೆಲವೆಡೆ ಇದೆ.

ಈ ನೃತ್ಯ, ಕುಣಿತಗಳಲ್ಲಿ ಪಾಲುಗೊಳ್ಳುವ ಕೊಡವ ಜನರು ತಮ್ಮದೇ ಆದ ವಿಶಿಷ್ಟ ದೇಶೀಯ ಸಮವುಡುಪು ಧರಿಸುತ್ತಾರೆ. ಮಿರುಗಿನ [illegible]

ರಂಗಕ್ಕೆ ಹೊರಟ ಯೋಧರಂತೆ ಕಾಣುತ್ತಾರೆ. ಕೊಡವ ಸ್ತ್ರೀಯರು ತಮ್ಮ ಸಂಪ್ರದಾಯದಂತೆ ಹಿಂಭಾಗಕ್ಕೆ ಸೆರಗೆ ಬಿಟ್ಟು ನೆರಿಯುಟ್ಟು, ವಿಶಾಲವಾದ ಶಿರವಸ್ತ್ರವನ್ನು ಧರಿಸುತ್ತಾರೆ.

ಹೀಗೆ ಕೊಡಗಿನ ಜನತೆಯ ನಡೆ-ನುಡಿ, ಆಚಾರ-ವಿಚಾರಗಳನ್ನು ಹುತ್ತರಿ ಹಬ್ಬ ಪ್ರತಿಬಿಂಬಿಸುತ್ತದೆ.

ಹುಬ್ಬಳ್ಳಿ–ಧಾರವಾಡ

ಹುಬ್ಬಳ್ಳಿ ವ್ಯಾಪಾರಕೇಂದ್ರ. ಧಾರವಾಡ ವಿದ್ಯಾಕೇಂದ್ರ. ಹನ್ನೆರಡು ಮೈಲುಗಳ ಅಂತರದಲ್ಲಿರುವ ಹುಬ್ಬಳ್ಳಿ-ಧಾರವಾಡ ನಗರಗಳು 1961ರಿಂದ ಒಂದೇ ನಗರಸಭೆಯ ಆಡಳಿತಕ್ಕೆ ಒಳಪಟ್ಟಿವೆ.

ಹುಬ್ಬಳ್ಳಿ ಅಥವಾ ಪುಬ್ಬಳ್ಳಿ ಎಂದರೆ 'ಹಳೆಯ ಹಳ್ಳಿ' ಎಂದು ಅರ್ಥ. 11ನೆಯ ಶತಮಾನದ ಅಹರಗೆ ಶಂಕರ ದೇವಾಲಯದ ಸುತ್ತ ಹುಬ್ಬಳ್ಳಿ ಬೆಳೆಯಿತು. ಆಧುನಿಕ ಹುಬ್ಬಳ್ಳಿ ಸ್ಥಾಪಿತವಾದದ್ದು 1727ರಲ್ಲಿ.

ಭವಾನಿಶಂಕರ ದೇವಾಲಯ, ಮಹಾದಿ ಮಸೀದಿ ಪ್ರರಥವನಗಳು ಪ್ರೇಕ್ಷಣೀಯ ಕಟ್ಟಡಗಳಲ್ಲಿ ಕೆಲವು. ಕರ್ನಾಟಕ ಮೆಡಿಕಲ್ ಕಾಲೇಜು, ಹುಬ್ಬಳ್ಳಿಯಲ್ಲಿದೆ. ಇಲ್ಲಿ ಹತ್ತಿ ಕೈಗಾರಿಕೆಯೇ ಪ್ರಧಾನ. ಭತ್ತದ ಗಿರಣಿಗಳಿವೆ. ರಾಸಾಯನಿಕಗಳು, ಸಿಗರೇಟ್, ಬಿತ್ತಾಳೆ ತಾಮ್ರ, ಹಾಗೂ ಕಬ್ಬಿಣ ಪದಾರ್ಥಗಳೂ ತಯಾರಾಗುತ್ತವೆ.

ಧಾರವಾಡ ಎಂದರೆ ದ್ವಾರನಗರ ಎಂದರ್ಥ. ಇದಕ್ಕೆ ಬಿಜಾಪುರದ ಆದಿಲ್ ಷಾ 16ನೆಯ ಶತಮಾನದಲ್ಲಿ ಕೋಟೆ ಕಟ್ಟಿಸಿದ. ಈಗಿನ ಧಾರವಾಡ ಜಿಲ್ಲೆಯ ಮಲಪ್ರಭಾ ನದೀಪಾತ್ರದಲ್ಲಿ ಶಿಲಾಯುಗದ ಆಯುಧಗಳು ದೊರೆತಿವೆ. ಈ ಪ್ರದೇಶವನ್ನು ಕದಂಬರು, ಚಾಲುಕ್ಯರು, ರಾಷ್ಟ್ರಕೂಟರು, ವಿಜಯನಗರದ ರಾಜರು ಮತ್ತು ಬಿಜಾಪುರದ ಸುಲ್ತಾನರು ಆಳಿದ್ದಾರೆ. ಬೌದ್ಧ ಹಾಗೂ ಜೈನಧರ್ಮದ ಅವಶೇಷಗಳು ದೊರೆತಿವೆ. ಮೈಸೂರಿಗೆ ಸೇರಿದ್ದ ಧಾರವಾಡ ಹುಬ್ಬಳ್ಳಿ ನಗರಗಳು ಟಿಪ್ಪುವಿನ ಪತನದ ಅನಂತರ ಮರಾಠರಿಗೆ ಕೊಡಲ್ಪಟ್ಟುವು. 1817ರಲ್ಲಿ ಪೇಶ್ವೆಗಳಿಂದ ಈಸ್ಟ್ ಇಂಡಿಯಾ ಕಂಪೆನಿ ಇವನ್ನು ತನ್ನ ವಶಕ್ಕೆ ತೆಗೆದುಕೊಂಡಿತು.

ಹುಬ್ಬಳ್ಳಿ ದುರ್ಗದ ಬೈಲು



ಕರ್ಣಾಟಕ ವಿಶ್ವವಿದ್ಯಾಲಯದ ಕೇಂದ್ರ, ಧಾರವಾಡ. ಇಲ್ಲಿ ಆಕಾಶವಾಣಿ ಕೇಂದ್ರವಿದೆ. ಕೃಷಿ ಕಾಲೇಜು, ಕಲಾಶಾಲೆಗಳಿವೆ. ಬಾಲಾಪರಾಧಿಗಳಿಗೆ ಶಿಕ್ಷಣ ನೀಡುವ ಬಾರ್ಸ್ಟಲ್ ಶಾಲೆಯಿದೆ. ಹತ್ತಿ, ಭತ್ತದ ಗಿರಣಿಗಳು, ಎಣ್ಣೆ ಬೀಜದ ಕೈಗಾರಿಕೆಗಳೂ ಇಲ್ಲಿವೆ.

ಹುಬ್ಬಳ್ಳಿ-ಧಾರವಾಡ ಜನಸಂಖ್ಯೆ 3,79,166.

ಹುಸೇನ್

ನೋಡಿ : ಎಂ. ಎಫ್. ಹುಸೇನ್

ಹೂಣರು

ಮಧ್ಯ ಏಷ್ಯದ ವಿಧ್ವಂಸಕ ದಾಳಿಕೋರರಾದ ಹೂಣರು ಪಶ್ಚಿಮದಲ್ಲಿ ರೋಮನ್ ಸಾಮ್ರಾಜ್ಯದ ಮೇಲೆ ದಂಡೆತ್ತಿ ಹೋಗಿ ಅದನ್ನು ನಾಶಮಾಡಿದಾಗಲೇ ಭಾರತದ ಮೇಲೂ ಹರಿಹಾಯ್ದರು. ಕ್ರಿ.ಶ. 5ನೆಯ ಶತಮಾನದಲ್ಲಿ ನಡೆದ ಇವರ ದಾಳಿಯ ಫಲವಾಗಿ ಗುಪ್ತ ಸಾಮ್ರಾಜ್ಯ ತೀರಾ ದುರ್ಬಲವಾಯಿತು. 6ನೆಯ ಶತಮಾನದ ಆರಂಭದಲ್ಲಿ ತೋರಮಾನನೆಂಬ ಈ ಪಂಗಡದ ಪ್ರಮುಖ ಪಂಜಾಬಿನಿಂದ ಮುಂದುವರಿದು ಮಧ್ಯಪ್ರದೇಶದ ಸಾಗರ ಜಿಲ್ಲೆಯ ವರೆಗೆ ತನ್ನ ರಾಜ್ಯವನ್ನು ವಿಸ್ತರಿಸಿದ. ಗುಪ್ತರು ಇವನನ್ನು ಹಿಂದಕ್ಕಟ್ಟಿದರು.

ಇವನ ಮಗ ಮಿಹಿರಕುಲ(ಮಿಹಿರಗುಲ) ಕ್ರಿ.ಶ. 515ರ ಸುಮಾರಿಗೆ ಪಟ್ಟವೇರಿದ. ಈತ ಬಹಳ ಕ್ರೂರಿ, ಇವನು ಗ್ವಾಲಿಯರ್‌ವರೆಗೆ ತನ್ನ ರಾಜ್ಯವನ್ನು ವಿಸ್ತರಿಸಿದ್ದ. ಗುಪ್ತರಾಜನಾದ ನರಸಿಂಹ ಗುಪ್ತನೂ ಮಾಳ್ವದ ದೊರೆ ಯಶೋವರ್ಮನೂ ಈತನನ್ನು ಸೋಲಿಸಿ ಹಿಮ್ಮೆಟ್ಟಿಸಿದರು. ಅವನು ಗಾಂಧಾರ ಮತ್ತು ಕಾಶ್ಮೀರಗಳಲ್ಲಿ ಮಾತ್ರ ಆಳುವಂತಾಯಿತು. ಮುಂದೆ ಆತ ತೀರಿಕೊಂಡಾಗ ಹೂಣರ ಸತ್ತೆ ಪೂರ್ತಿ ದುರ್ಬಲವಾಗಿ ಭಾರತದಿಂದ ಕಣ್ಮರೆಯಾಯಿತು.

ನೋಡಿ : ಮಿಹಿರಗುಲ

ಹ್ಯೂಮ್

ನೋಡಿ : ಎ. ಒ. ಹ್ಯೂಮ್

ಹ್ಯೂಯೆನ್ ತ್ಸಾಂಗ್

'ಜ್ಞಾನ ಸೂರ್ಯ' ಎಂದು ಸಮ್ರಾಟ ಹರ್ಷವರ್ಧನನಿಂದ ಗೌರವಿಸಲ್ಪಟ್ಟ ಚೀನೀ ಯಾತ್ರಿಕ, ಹ್ಯೂಯೆನ್ ತ್ಸಾಂಗ್.

ಭಾರತಕ್ಕೆ ಬಂದು ನಾಲಂದಾ ವಿಶ್ವವಿದ್ಯಾನಿಲಯದಲ್ಲಿ ಅಧ್ಯಯನ ಅಧ್ಯಾಪನಗಳಲ್ಲಿ ಅವನು ಐದು ವರ್ಷ ಕಳೆದ. ಹಿಂದಿರುಗಿದ ಅನಂತರ ಚೀನೀ ಚಕ್ರವರ್ತಿಯ ಕೋರಿಕೆಯಂತೆ ಆತ ರಚಿಸಿದ ಪ್ರವಾಸ ಕಥನ 'ಸಿ ಯು ತಿ' ಅಂದರೆ 'ಪಾಶ್ಚಾತ್ಯ ದೇಶದ ದಾಖಲೆ'. ಚೀನೀಯರ ಪಾಲಿಗೆ ಭಾರತ ಪಾಶ್ಚಾತ್ಯ ದೇಶ.

ಭಾರತದ ಅನೇಕ ಭಾಗಗಳಲ್ಲಿ ಸಂಚರಿಸಿ ತಾನು ಕಂಡ, ಕೇಳಿದ ವಿಷಯಗಳನ್ನು ಚೀನೀ ನಾಗರಿಕತೆಯ ಮನೋಧರ್ಮದಲ್ಲಿ ಅವಲೋಕಿಸಿ ಬರೆದೆ —ಎಂದಿದ್ದಾನೆ ಆತ.

ಜನ ಲಘು ಮನಸ್ಸಿನವರು, ನೀತಿವಂತರು...ಮತ್ತೊಬ್ಬರ ವಸ್ತುಗಳಿಗೆ ಆಸೆಪಡದೆ, ತಾವು ಕೊಡಬೇಕಾದುದಕ್ಕಿಂತ ಹೆಚ್ಚು ಕೊಡುತ್ತಾರೆ...ಪಾತಕಿ



ಗೋಷ್ಠಿ ಅಧ್ಯಕ್ಷತೆ : ಹ್ಯೂಯೆನ್ ತ್ಸಾಂಗ್

ಗಳು ಕಡಮೆ. ಮರಣದಂಡನೆ ಬದಲು. ಜೀವಾವಧಿಶಿಕ್ಷೆ ಮಾತ್ರ ಇವೆ...ಗರಿಷ್ಠಾರು ಮಾ ದು ವುದು ಇನ್ನೊಂದು ಉಗ್ರಶಿಕ್ಷೆ –ಎಂದಿದ್ದಾನೆ.

ಏಳನೆಯ ವರ್ಷದಿಂದ ಪ್ರಾರಂಭವಾಗಿ 30 ವರ್ಷಕ್ಕೆ ಗೃಹಸ್ಥನಾಗುವ ತನಕ ಕಲಿಯ ಬೇಕಾದ ವ್ಯಾಕರಣ, ವಾಸ್ತು, ಚಿಕಿತ್ಸೆ, ಹೇತು, ಅಧ್ಯಾತ್ಮ ವಿದ್ಯೆಗಳ ಶಿಕ್ಷಣ ಕ್ರಮವನ್ನು ಅವನು ವಿವರಿಸಿದ್ದಾನೆ. "ಸತ್ಯಾನ್ವೇಷಣೆಯೇ ಗೌರವ : ಭಿಕಾರಿತನ ಅವಮಾನವಲ್ಲ. ಸಂಸಾರ ತ್ಯಜಿಸಿ. ಕಷ್ಟಪಟ್ಟು ಜ್ಞಾನ ಗಳಿಸುವವರಿಗೆ ಗೌರವವಿದೆ"–ಎಂದು ತಿಳಿಸಿದ್ದಾನೆ. ಹರ್ಷವರ್ಧನನ ಧಾರ್ಮಿಕ ಕಾರ್ಯಗಳ ಬಗೆಗೆ ವಿವರವಾಗಿ ಹೇಳಿದ್ದಾನೆ. ಅವನಿಗೆ ಶಿಲಾದಿತ್ಯ ಎಂಬ ಹೆಸರು ಇದ್ದುದನ್ನು ಪ್ರಸ್ತಾಪಿಸಿದ್ದಾನೆ.

ಶಿಲಾದಿತ್ಯನು ಕಾನ್ಯಕುಬ್ಜ(ಕನ್ನೌಜ್)ದಲ್ಲಿ ಏರ್ಪಡಿಸಿದ ಬೃಹತ್ ಬೌದ್ಧ ವಿದ್ವತ್ ಗೋಷ್ಠಿಯ ಅಧ್ಯಕ್ಷತೆಯನ್ನು ಹ್ಯೂಯೆನ್ ತ್ಸಾಂಗ್ ವಹಿಸಿದ.

ಹ್ಯೂಯೆನ್ ತ್ಸಾಂಗ್ ಮಧ್ಯಚೀನದಲ್ಲಿ ಕ್ರಿ.ಶ. 600ರಲ್ಲಿ ಜನಿಸಿದ. ಚೀನೀ ಭಾಷೆಯಲ್ಲಿದ್ದ ಬೌದ್ಧಗ್ರಂಥಗಳು ಅಪೂರ್ಣವೆಂದು ಭಾವಿಸಿ ತತ್ತ್ವಗಳನ್ನು ಮೂಲದಲ್ಲಿ ಅರಿಯಲು ಭಾರತಕ್ಕೆ ಬಂದ. ಚಿಕ್ಕಂದಿನಲ್ಲಿಯೇ ಬೌದ್ಧಮತದಲ್ಲಿ ಆಸಕ್ತಿಯಿಂದ ಅಧ್ಯಯನ ಪ್ರಾರಂಭಿಸಿ ವಿದ್ವಾಂಸನೂ ವಾಗ್ಮಿಯೂ ಆದ ಭಿಕ್ಷು ಎನಿಸಿದ. ಭಾರತಯಾತ್ರೆ ಕೈಗೊಳ್ಳಲು ನಿರ್ಧರಿಸಿದ್ದು 29ನೆಯ ವಯಸ್ಸಿನಲ್ಲಿ. ಆದರೆ ರಾಜನಿಗೆ ಈ ತರುಣ ಪಂಡಿತನ 'ಪಾಶ್ಚಾತ್ಯ (ಭಾರತ) ವ್ಯಾಮೋಹ' ಸರಿಕಾಣದೆ ಪ್ರಯಾಣಕ್ಕೆ ಅನುಮತಿ ನಿರಾಕರಿಸಿದ. ರಾಜನಿಗೆ ಗೊತ್ತಾಗದ ರೀತಿಯಲ್ಲಿ ಹ್ಯೂಯೆನ್ ತ್ಸಾಂಗ್ ಹೊರಟ. ಕಾಲ್ನಡೆಯಲ್ಲಿ ಮರಳುಗಾಡು, ಪರ್ವತ ಪ್ರದೇಶಗಳ ಮೂಲಕ ಈ ಪ್ರಯಾಣ : ಹಿಂದೂಕುಷ್ ದಾಟಿ ಉತ್ತರ ಭಾರತ ತಲಪಿದ್ದು 628ರಲ್ಲಿ. 646ರಲ್ಲಿ ಅವನು ಮರಳಿ ಹೊರಡುವ ಮೊದಲು ಹರ್ಷವರ್ಧನ ದೊರೆ ಏರ್ಪಡಿಸಿದ ಮಹಾಮೋಕ್ಷ ಪರಿಷತ್ತಿನಲ್ಲಿ ಭಾಗವಹಿಸಿದ್ದ. 657 ಸಂಸ್ಕೃತ ಗ್ರಂಥಗಳು ಬುದ್ಧ ಮತ್ತು ಅವನ ಶಿಷ್ಯರ ಹಲವು ಸ್ಮಾರಕಗಳು ಹಾಗೂ ವಿಗ್ರಹಗಳೊಡನೆ 648ರಲ್ಲಿ ಅವನು ಚೀನಕ್ಕೆ ಹಿಂದಿರುಗಿದ.

ಚೀನದಲ್ಲಿ ರಾಜನಿಂದ ಅವನಿಗೆ ಬೇರೆ ಯಾವ ಬೌದ್ಧಭಿಕ್ಷುವಿಗೂ ದೊರೆಯದಿದ್ದ ವೈಭವದ ಸ್ವಾಗತ ಸಿಕ್ಕಿತು. ಅವನು ತಂದ ವಸ್ತುಗಳನ್ನೂ ಗ್ರಂಥಗಳನ್ನೂ ಇಪ್ಪತ್ತು ಕುದುರೆಗಳ ಮೇಲಿಟ್ಟು ಮೆರವಣಿಗೆ ಮಾಡಿದರು.

ಮುಂದೆ ಭಾಷಾಂತರ, ಪ್ರವಚನಗಳಲ್ಲಿ ಹ್ಯೂಯೆನ್ ತ್ಸಾಂಗ್ ಮಗ್ನನಾದ. 652ರಲ್ಲಿ 180 ಅಡಿ ಎತ್ತರದ ಒಂದು ಚೈತ್ಯ ಕಟ್ಟಿಸಿ ಅದರಲ್ಲಿ ತಾನು ತಂದಿದ್ದ ವಿಗ್ರಹ, ಗ್ರಂಥಗಳನ್ನು ಇರಿಸಿದ. ಆಗಾಗ ನಿಯೋಗಿಗಳ ಮೂಲಕ ಭಾರತದ ಪಂಡಿತರೊಡನೆ ಪತ್ರವ್ಯವಹಾರ ನಡೆಸಿದ.

ಕ್ರಿ.ಶ. 661ರಲ್ಲಿ ಹ್ಯೂಯೆನ್ ತ್ಸಾಂಗ್‌ನ ಭಾಷಾಂತರ ಕಾರ್ಯ ಮುಗಿಯಿತು. ಅವನ [illegible] ಗೌರವಿಸಲ್ಪಟ್ಟನು. ಕ್ರಿ.ಶ. [illegible] ಅವನು ಕಾಲವಾದ. [illegible] ಕಾಲದಲ್ಲಿಯೂ ಅನಂತರವೂ ಅವನ ಬಗೆಗೆ ಚೀನದಲ್ಲಿ ಅಪಾರ ಗೌರವ. ಕೆಲವು ಬೌದ್ಧ ದೇವಾಲಯಗಳಲ್ಲಿ ಅವನ ಆರಾಧನೆಯೂ ನಡೆಯಿತು.

ಹೃಷೀಕೇಶ

ಹಿಮಾಚ್ಛಾದಿತ ಹಿಮಾಲಯ ಶ್ರೇಣಿ ತಪ್ಪಲಿನಲ್ಲಿರುವ ಪವಿತ್ರ ಕ್ಷೇತ್ರ, ಹೃಷೀಕೇಶ. ಇದು ಹರ್ದ್ವಾರದಿಂದ 24 ಕಿ.ಮೀ. ದೂರದಲ್ಲಿ ಗಂಗಾನದಿಯ ದಡದಲ್ಲಿದೆ. ಇದು ಉತ್ತರ ಭಾರತದ ಪ್ರಮುಖ ಯಾತ್ರಾಸ್ಥಳಗಳಲ್ಲಿ ಒಂದು.

ಇದು ತಪಸ್ವಿಗಳಿಗೆ ಅನುಕೂಲವಾದ ಶಾಂತಸ್ಥಳವಾಗಿರುವುದರಿಂದ ಇಲ್ಲಿ ಅನೇಕ ಸಾಧುಗಳು ಆಶ್ರಮ ಮಾಡಿಕೊಂಡಿದ್ದಾರೆ.

ಸ್ವಾಮಿ ಶಿವಾನಂದ ಸರಸ್ವತಿಯವರ ಆಶ್ರಮ ಇಲ್ಲಿನ ಪ್ರಮುಖ ಆಕರ್ಷಣೆ. ಸ್ವರ್ಗಾಶ್ರಮ, ಕೈಲಾಸ ಆಶ್ರಮ, ರಾಮಾಶ್ರಮಗಳು ಇಲ್ಲಿವೆ. ಗೀತಾಭವನದ ಗೋಡೆಗಳ ಮೇಲೆ ಭಗವದ್ಗೀತೆಯ ಶ್ಲೋಕಗಳನ್ನು ಬರೆದಿದ್ದಾರೆ.

ಇಲ್ಲಿರುವ ಭರತ್‌ಜಿ ಮಂದಿರ ಶಂಕರಾಚಾರ್ಯರು ಕಟ್ಟಿಸಿದ್ದು ಎನ್ನುತ್ತಾರೆ. ರಾಮ ಮಂದಿರ, ವರಾಹ ಮಂದಿರ, ವೀರ ರಾಘವ ಮಂದಿರ, ಚಂದ್ರಶೇಖರ ಮಂದಿರ, ಇವುಗಳಂಥ ಹಲವಾರು ಮಂದಿರಗಳಿವೆ.

'ಲಕ್ಷ್ಮಣ ಝೂಲಾ'–ಕಬ್ಬಿಣದ ಸೇತುವೆ. ಹಿಂದೆ ಇದು ಹಗ್ಗದ ಸೇತುವೆಯಾಗಿತ್ತೆಂದೂ ಲಕ್ಷ್ಮಣ ಕಟ್ಟಿಸಿದ್ದೆಂದೂ ಹೇಳುತ್ತಾರೆ. ಹೃಷೀಕೇಶದಲ್ಲಿ ಲಕ್ಷ್ಮಣನ ದೇವಾಲಯವಿದೆ. ಇಂದ್ರಜಿತು ಸಂಹಾರದ ಪಾಪ ಪರಿಹರಿಸಿಕೊಳ್ಳಲು ಲಕ್ಷ್ಮಣ ಇಲ್ಲಿ ತಪಸ್ಸು ಮಾಡಿ ಈಶ್ವರನನ್ನು ಮೆಚ್ಚಿಸಿದನೆಂದು ದಂತ ಕಥೆ. ರಷ್ಯದ ಸಹಕಾರದೊಡನೆ ಭಾರತ ಸರಕಾರ ಸ್ಥಾಪಿಸಿರುವ

ಔಷಧ ಕಾರಖಾನೆ–ಹೃಷೀಕೇಶದಲ್ಲಿ



ದಿ ಇಂಡಿಯನ್ ಡ್ರಗ್ಸ್ ಅಂಡ್ ಫಾರ್ಮಸ್ಯೂಟಿಕಲ್ಸ್ ಲಿಮಿಟೆಡ್ ಎಂಬ ಔಷಧ ಕಾರಖಾನೆ ಹೃಷೀಕೇಶದಲ್ಲಿದೆ. ಇದು ಜೀವಾಣು ನಾಶಕ (ಆಂಟಿಬಯೋಟಿಕ್) ಔಷಧಿಗಳನ್ನು ತಯಾರಿಸುತ್ತದೆ. ಹೃಷೀಕೇಶ ಪದ ರೂಪುಗೊಂಡಿರುವುದು ಹೃಷೀಕ (ಇಂದ್ರಿಯಗಳು) ಮತ್ತು ಈಶ (ಒಡೆಯ) ಪದಗಳಿಂದ. ಋಷಿಕೇಶ ಎಂಬ ಹೆಸರೂ ರೂಢಿಯಲ್ಲಿದೆ.

ಹೃಷೀಕೇಶದ ಜನಸಂಖ್ಯೆ 17,646.

ಹೆಡಗೆವಾರ್

ರಾಷ್ಟ್ರದ ದಾಸ್ಯ ವಿಮೋಚನೆ, ಅದರ ಅಭ್ಯುದಯಗಳಿಗಾಗಿ ತಮ್ಮ ಬಾಳನ್ನು ಮುಡಿಪಾಗಿಟ್ಟವರು ಡಾ. ಕೇಶವರಾವ್ ಬಲಿರಾಮ ಹೆಡಗೆವಾರ್. ಅವರು ಸ್ಥಾಪಿಸಿದ ಸಂಸ್ಥೆ ರಾಷ್ಟ್ರೀಯ ಸ್ವಯಂ ಸೇವಕ ಸಂಘ. ಹಿಂದೂರಾಷ್ಟ್ರ ಸಂಘಟನೆ ಇದರ ಉದ್ದೇಶ.

1889 ಏಪ್ರಿಲ್ 1ರಂದು ನಾಗಪುರದಲ್ಲಿ ಹೆಡಗೆವಾರರ ಜನನ. ತಂದೆ ಬಲಿರಾಮಪಂತ ಹೆಡಗೆವಾರ್. ತಾಯಿ ರೇವತಿಬಾಯಿ. ಹೆಡಗೆವಾರ್ ರದು ಪಂಡಿತ ಮನೆತನ. ವೈದಿಕ ಪಾಠ ಹಾಗೂ ಅಂಗಸಾಧನೆ, ಕೇಶವರಾವ್ ಹೆಡಗೆವಾರರ ಪ್ರಥಮ ವಿದ್ಯಾಭ್ಯಾಸ. ಚಿಕ್ಕಂದಿನಿಂದಲೇ ಜನಸೇವೆಗೆ ಯಾವಾಗಲೂ ಮುಂದು. ಕಲ್ಕತ್ತೆಯಲ್ಲಿ ವೈದ್ಯಕೀಯ ಶಿಕ್ಷಣ ಪಡೆದರು. 1915ರಲ್ಲಿ ನಾಗಪುರಕ್ಕೆ ಮರಳಿ, ರಾಷ್ಟ್ರಸೇವೆಯ ಸಂಕಲ್ಪ ಕೈಗೊಂಡರು. ಹಲವು ಬಾರಿ ಸೆರೆಮನೆವಾಸ ಅನುಭವಿಸಿದರು.



ಆರ್. ಎಸ್. ಎಸ್ : ಹೆಡಗೆವಾರ

ಕೆಲ ಕಾಲ ಕಾಂಗ್ರೆಸ್ಸಿಗಾಗಿಯೂ ಹೆಡಗೆವಾರ್ ಶ್ರಮಿಸಿದರು. ಆಗಲೇ ಕಾಂಗ್ರೆಸ್ಸಿನ ಅಂಗವಾಗಿ ಒಂದು ಸ್ವಯಂಸೇವಕ ಸಂಘ ಕಟ್ಟುವ ವಿಚಾರ ಅವರಿಗಿದ್ದಿತು. ಕಡೆಗೆ ಒಂದು ಸ್ವತಂತ್ರ ಸಂಘ ಕಟ್ಟಲು ನಿರ್ಧರಿಸಿದರು. 1925ರಲ್ಲಿ ರಾಷ್ಟ್ರೀಯ ಸ್ವಯಂ ಸೇವಕ ಸಂಘವನ್ನು ಸ್ಥಾಪಿಸಿದರು. ಹೆಡಗೆವಾರ್ ಕೊನೆಯವರೆಗೆ ಅವಿವಾಹಿತರಾಗಿ ಉಳಿದರು. ಅವರ ಜೀವಿತಕಾಲದಲ್ಲೇ ಆರ್. ಎಸ್. ಎಸ್. -ರಾಷ್ಟ್ರೀಯ ಸ್ವಯಂ ಸೇವಕ ಸಂಘ- ದೇಶದ ಎಲ್ಲ ಪ್ರಾಂತ್ಯಗಳಲ್ಲೂ ಹರಡಿತು. ಹೆಡಗೆವಾರರು ಇದರ 'ಸರ ಸಂಘಚಾಲಕ'ರಾಗಿದ್ದರು.

193[illegible]ರಲ್ಲಿ ಹೆಡಗೆವಾರರ ದೇಹಸ್ಥಿತಿ ಕೆಟ್ಟಿತು. 1940 ಜೂನ್ 21 ರಂದು ಅವರು ನಿಧನರಾದರು.

ಹೆಬ್ಬಾರ್

ನೋಡಿ : ಕೆ. ಕೆ. ಹೆಬ್ಬಾರ್

ಹೆವಿ ಎಲೆಕ್ಟ್ರಿಕಲ್ಸ್ ಲಿಮಿಟೆಡ್

ಹೆವಿ ಎಲೆಕ್ಟ್ರಿಕಲ್ಸ್ ದೊಡ್ಡ ವಿದ್ಯುದ್ದಾಯಿ ಯಂತ್ರ ಉಪಕರಣಗಳನ್ನು ಉತ್ಪಾದಿಸುವ ಸಾರ್ವಜನಿಕ ವಲಯದ ಉದ್ಯಮ.

1956ರ ಆಗಸ್ಟ್ ತಿಂಗಳಲ್ಲಿ ಭೋಪಾಲದಲ್ಲಿ ಹೆವಿ ಎಲೆಕ್ಟ್ರಿಕಲ್ಸ್ ಲಿಮಿಟೆಡ್ ಆರಂಭವಾಯಿತು. 1964ರಿಂದ ತಿರುಚಿರಪಳ್ಳಿ, ಹರ್ದ್ವಾರ, ಹೈದರಾಬಾದ್‌ನಲ್ಲಿರುವ ವಿಭಾಗಗಳು ಇದರಿಂದ ಬೇರ್ಪಟ್ಟು 'ಭಾರತ್ ಹೆವಿ ಎಲೆಕ್ಟ್ರಿಕಲ್ಸ್ ಲಿಮಿಟೆಡ್' ಎಂಬ ಹೊಸ ಕಂಪೆನಿಯ ಆಡಳಿತಾಧಿಕಾರಕ್ಕೆ ಸೇರಿದುವು. 1973 ಡಿಸೆಂಬರ್‌ನಲ್ಲಿ ಹೆವಿ ಎಲೆಕ್ಟ್ರಿಕಲ್ಸ್ ಲಿಮಿಟೆಡ್ ಮತ್ತು ಭಾರತ್ ಹೆವಿ ಎಲೆಕ್ಟ್ರಿಕಲ್ಸ್ ಲಿಮಿಟೆಡ್ ಎರಡನ್ನೂ ಸೇರಿಸಿ 'ಹೆವಿ ಎಲೆಕ್ಟ್ರಿಕಲ್ಸ್ ಲಿಮಿಟೆಡ್' ಎಂದು ಕರೆಯಲಾಯಿತು.

ಭೋಪಾಲದಲ್ಲಿ ಉಗಿ ಟರ್ಬೈನ್, ವಿದ್ಯುಜ್ಜನಕ ಹಾಗೂ ವಿದ್ಯುತ್ ಸಂಚಯಕಗಳು ತಯಾರಾಗುತ್ತವೆ. ಉಷ್ಣ ವಿದ್ಯುದಾಗಾರ ಮತ್ತು ಜಲ ವಿದ್ಯುದಾಗಾರಗಳಿಗೆ ಬೇಕಾದ ಅನೇಕ ಉಪಕರಣಗಳು, ಸಾಮಾನು ಹಾಗೂ ಪ್ರಯಾಣಿಕ ರೈಲುಗಾಡಿಗಳಿಗೆ ಬೇಕಾದ ವಿದ್ಯುತ್ ಸಾಧನಗಳು, ಸಿಮೆಂಟ್



ಭೋಪಾಲ್ ಕಾರಖಾನೆಯಲ್ಲಿ ಉಪಕರಣ ಜೋಡಣೆ

ಕಾರಖಾನೆಯಲ್ಲಿ ಅವಶ್ಯವಿರುವ ದೊಡ್ಡ ಎ.ಸಿ. ಹಾಗೂ ಡಿ.ಸಿ. ಮೋಟರುಗಳು, ಉರುಳೆಯಂತ್ರಗಳು ಮುಂತಾದುವು ಇಲ್ಲಿ ತಯಾರಾಗುತ್ತವೆ.

ಉತ್ತರ ಪ್ರದೇಶದ ಹರ್ದ್ವಾರದಲ್ಲಿರುವ ರಾಣೀಪುರ ಕೇಂದ್ರದಲ್ಲಿ ಉಗಿ ಮತ್ತು ಜಲ ಟರ್ಬೈನ್, ಜನರೇಟರ್, ಟರ್ಬೋ ಆಲ್ಟರ್‌ನೇಟರ್ ಮತ್ತು ಮೋಟರುಗಳನ್ನು ತಯಾರಿಸುತ್ತಾರೆ. ಆಂಧ್ರದ ರಾಮಚಂದ್ರಪುರಂ (ಹೈದರಾಬಾದ್) ಕಾರಖಾನೆಯಲ್ಲಿ ಉಗಿ ಟರ್ಬೈನು, ಟರ್ಬೋ ಆಲ್ಟರ್‌ನೇಟರ್, ಟರ್ಬೋ ಬ್ಲೋವರ್, ಟರ್ಬೋ ಕಂಪ್ರೆಸರ್‌ಗಳು, ಸ್ವಿಚ್‌ಗೇರುಗಳು ಹಾಗೂ ವಿವಿಧ ಬಗೆಯ ಮೋಟರುಗಳ ಉತ್ಪಾದನೆಯಾಗುತ್ತವೆ. ತಮಿಳುನಾಡಿನ ತಿರುಚಿರಪಳ್ಳಿಯಲ್ಲಿರುವ ಕಾರಖಾನೆ ಅಧಿಕ ಒತ್ತಡದ ಬಾಯ್ಲರ್ ಮತ್ತು ಬಾಯ್ಲರ್ ಕೊಳವೆ ಸಲಕರಣೆಗಳ ತಯಾರಿಕೆಗೆ ಮೀಸಲು.



ತಿರುಚಿರಪಳ್ಳಿಯಲ್ಲಿ ಅಧಿಕ ಒತ್ತಡ ಬಾಯ್ಲರ್ ಕಾರಖಾನೆ ಪ್ರದೇಶ

ಈ ಕಾರಖಾನೆಗಳಿಗೆ ಬೇಕಾದ ಯಂತ್ರೋಪಕರಣಗಳು ರಾಣೀಪುರದ ಕೇಂದ್ರ ಫೌಂಡ್ರಿ ಫೋರ್ಜಿನಲ್ಲಿ ತಯಾರಾಗುತ್ತವೆ.

ಹೇಮೂ ಕಲಾನಿ

1943 ಜನವರಿ 21ರಂದು ಸುಕ್ಕೂರ್ (ಸಿಂಧ್ ಪ್ರಾಂತದ ನಗರ ಈಗ ಪಶ್ಚಿಮ ಪಾಕಿಸ್ತಾನದಲ್ಲಿದೆ) ಸೆಂಟ್ರಲ್ ಜೈಲಿನಲ್ಲಿ ಗಲ್ಲುಗಂಬವೇರಿದ ಹದಿನೆಂಟರ ತರುಣ, ಹೇಮೂ ಕಲಾನಿ. ಮೂಲ ಹೆಸರು ಹೇಮನ್ ಕಲಾನಿ.

ಹೇಮೂ ಜನಿಸಿದ್ದು, ಸುಕ್ಕೂರ್‌ನಲ್ಲಿ, 1924ರಲ್ಲಿ. ವಿದ್ಯಾರ್ಥಿಯಾಗಿದ್ದಾಗ ಕ್ರೀಡಾಪಟುವಾಗಿದ್ದರು. ಕಬಡ್ಡಿ, ಕುಸ್ತಿ, ಈಜುಗಳಲ್ಲಿ ಅನೇಕ ಪುರಸ್ಕಾರಗಳನ್ನು ಪಡೆದಿದ್ದರು. ಮುಂದೆ ಸ್ವಾತಂತ್ರ್ಯ ಹೋರಾಟಗಾರರಾದರು.

'ಸ್ವರಾಜ್ಯ ಮಂಡಲ' ಎಂಬ ಗುಪ್ತ ಸಂಸ್ಥೆ ಸ್ವರಾಜ್ಯ ಸಾಧನೆಗಾಗಿ ಶ್ರಮಿಸುತ್ತಿತ್ತು. ಈ ಮಂಡಲಕ್ಕೆ ಒಂದು ವಿದ್ಯಾರ್ಥಿ ಶಾಖೆ ಇತ್ತು. ಅದನ್ನು ಸ್ವರಾಜ್ಯ ಸೇನೆ ಎಂದು ಕರೆಯುತ್ತಿದ್ದರು. ಹೇಮೂ ಅದರ ಮುಖಂಡತ್ವ ವಹಿಸಿದರು. ಸರದಾರ್ ಭಗತ್‌ಸಿಂಗ್ ಇವರ ಆದರ್ಶ ಪುರುಷ. "ದೇಶದ ಸಲುವಾಗಿ ಗಲ್ಲುಗಂಬವನ್ನೇರಬೇಕೆಂಬುದು ನನ್ನ ಉತ್ಕಟ ಅಭಿಲಾಷೆ "' ಎಂದು ಹೇಮೂ ಹೇಳುತ್ತಿದ್ದರು.

1942ರ ಅಕ್ಟೋಬರ್ ಕೊನೆಯಲ್ಲಿ 'ಚಲೇಜಾವ್' ಚಳುವಳಿ ಸರ್ವತ್ರ ವ್ಯಾಪಿಸಿತು. ಬ್ರಿಟಿಷ್ ಸರಕಾರದ ಕ್ರೂರ ದಬ್ಬಾಳಿಕೆ ಪ್ರಾರಂಭವಾಯಿತು. ಚಳುವಳಿಯನ್ನು ದಮನಮಾಡಲು ಸರಕಾರ ಸರ್ವ ಪ್ರಯತ್ನ ಮಾಡಿತು.

ಶಸ್ತ್ರಗಳನ್ನು ತೆಗೆದುಕೊಂಡು ಒಂದು ಸೈನಿಕ ರೈಲುಗಾಡಿ ಸುಕ್ಕೂರ್ ನಗರಕ್ಕೆ ಬರಲಿದೆ ಎಂದು ಹೇಮೂಗೆ ತಿಳಿಯಿತು. ತಮ್ಮ ಮಿತ್ರರೊಂದಿಗೆ ರೈಲ್ವೆ ಹಳಿಗಳನ್ನು ಕಿತ್ತೊಗೆಯಲು ಪ್ರಾರಂಭಿಸಿದರು. ಫಿಷ್ ಪ್ಲೇಟುಗಳನ್ನು ಕೀಳುತ್ತಿದ್ದ ಇವರನ್ನು ಪೋಲೀಸರು ಬಂಧಿಸಿದರು.

ನ್ಯಾಯಾಲಯ ಹೇಮೂಗೆ ಮರಣದಂಡನೆ ವಿಧಿಸಿತು. 1943ರಲ್ಲಿ ಹೇಮೂ ಗಲ್ಲಿಗೇರಿಸಲ್ಪಟ್ಟರು.

ಹೈಕೋರ್ಟ್

ನೋಡಿ : ಉಚ್ಚನ್ಯಾಯಾಲಯ

ಹೈದರಾಬಾದ್

ಜನಸಂಖ್ಯೆ : 16,07,396



ಚಾರ್‌ಮಿನಾರ್

ನೋಡಿ : ಸಂಪುಟ ೫

ಹೈದರಾಲಿ

ಹೈದರ್ ಮಹಾಯೋಧ. ಅವನು ಜೀವನವನ್ನು ಆರಂಭಿಸಿದ್ದು ಯೋಧನಾಗಿ ; ತನ್ನ ಶೌರ್ಯ ಪರಾಕ್ರಮಗಳಿಂದ ಪ್ರಸಿದ್ಧಿಗೆ ಬಂದವ




ಯುದ್ಧ : ಹೈದರಾಲಿ

ಯುದ್ಧರಂಗದಲ್ಲಿ; ಜೀವನದ ಗಣನೀಯ ಭಾಗವನ್ನು ಕಳೆದದ್ದು ಯುದ್ಧೋದ್ಯಮದಲ್ಲಿ; ಮರಣ ಹೊಂದಿದ್ದೂ ಯುದ್ಧಕಾರ್ಯದಲ್ಲಿದ್ದಾಗಲೇ.

ಹೈದರನ ಪೂರ್ವಜರು ಪಂಜಾಬಿನವರು. ಅವನ ಮುತ್ತಾತ ಗುಲ್ಬರ್ಗಕ್ಕೆ ಬಂದು ಧರ್ಮಗುರುವಾಗಿ ನೆಲೆಸಿದ. ಅನಂತರ ಈ ವಂಶದವರು ಕೋಲಾರಕ್ಕೆ ಬಂದರು: ಯೋಧ ಜೀವನ ಅವಲಂಬಿಸಿದರು. ಹೈದರನ ತಂದೆ ಫತ್ತೆ ಮಹಮ್ಮದ್ ಬೂದಿಕೋಟೆಯ ಜಹಗೀರುದಾರನಾದ. ಹೈದರ್ ಹುಟ್ಟಿದ್ದು ಇಲ್ಲೇ, 1722ರಲ್ಲಿ.

ಮೈಸೂರಿನ ಸೇನೆ 1749ರಲ್ಲಿ ದೇವನಹಳ್ಳಿಯ ಮೇಲೆ ದಾಳಿಮಾಡಿದಾಗ, ಆ ಸೇನೆಯಲ್ಲಿ ಸವಾರನಾಗಿದ್ದ ಹೈದರ್ ತನ್ನ ಸ್ಥೈರ್ಯ ಮತ್ತು ಹೋರಾಟದ ಚಾಕಚಕ್ಯದಿಂದ ಮೈಸೂರಿನ ದಳವಾಯಿ ನಂಜರಾಜನ ಗಮನಕ್ಕೆ ಬಂದ. ಅವನಿಗೆ ತನ್ನ ಸೈನಿಕ ಸಂಖ್ಯೆಯನ್ನು ಬೆಳೆಸಿಕೊಳ್ಳಲು ಅನುಮತಿ ಸಿಕ್ಕಿತು. ಹಲವಾರು ಯುದ್ಧಗಳಲ್ಲಿ ಭಾಗವಹಿಸಿ ಸೇನಾಬಲವನ್ನೂ ಐಶ್ವರ್ಯವನ್ನೂ ಬೆಳೆಸಿಕೊಂಡ. ದಿನದಿಂದ ದಿನಕ್ಕೆ ಪ್ರಬಲನಾಗಿ ದಳವಾಯಿಯನ್ನು ಮೂಲೆಗೊತ್ತಿ, ತಾನೇ ಮೈಸೂರು ರಾಜ್ಯದ ಸರ್ವಾಧಿಕಾರಿಯಾದ. ಅರಸರನ್ನು ಹೆಸರಿಗೆ ಮಾತ್ರ ಅರಸರನ್ನಾಗಿ ಮಾಡಿದ.



ಹೈದರನ ನಾಣ್ಯ

ಹೈದರ್ ಅಪ್ರತಿಮ ಯೋಧನಾಗಿದ್ದಂತೆ ದಕ್ಷ ಆಡಳಿತಗಾರನೂ ಆಗಿದ್ದ. ಅವನಿಗೆ ಓದು ಬರಹ ಬರುತ್ತಿರಲಿಲ್ಲವಾದರೂ. ಕನ್ನಡ, ಫಾರಸಿ, ತೆಲುಗು, ಮರಾಠಿ, ಹಿಂದಿ, ಉರ್ದು ಭಾಷೆಗಳನ್ನು ಚೆನ್ನಾಗಿ ಬಲ್ಲವನಾಗಿದ್ದ. ಆಡಳಿತದ ಎಲ್ಲ ವಿವರಗಳಿಗೂ ತಾನೇ ಲಕ್ಷ್ಯ ಕೊಡುತ್ತಿದ್ದ.

ಹೈದರನ ಜೀವನ ಮಾರ್ಗ ಸುಗಮವಾದದ್ದೇನೂ ಆಗಿರಲಿಲ್ಲ. ಅವನು ರಾಜ್ಯದ ಒಳಗಿನ ಹಾಗೂ ಹೊರಗಿನ ವೈರಿಗಳನ್ನು ಇದಿರಿಸಿ ಹೋರಾಡಬೇಕಾಯಿತು. ರಾಜ್ಯದಲ್ಲಿ ತನ್ನ ಸರ್ವಾಧಿಕಾರವನ್ನು ಸುರಕ್ಷಿತಗೊಳಿಸಿ ಹೊರಗಿನವರನ್ನು ಶಸ್ತ್ರಬಲದಿಂದ ಇದಿರಿಸಿದ. ಮೈಸೂರು ರಾಜ್ಯವನ್ನು ಬಹು ದಿಕ್ಕುಗಳಲ್ಲೂ ವಿಸ್ತರಿಸಿದ. ಮೈಸೂರಿನ ಮೇಲೆ ದಾಳಿಯಿಡುತ್ತಿದ್ದ ಮರಾಠರನ್ನು ನಿಜಾಮನನ್ನು ಸಂಧಾನದಿಂದ, ಯುದ್ಧತಂತ್ರದಿಂದ ಹತೋಟಿಯಲ್ಲಿಟ್ಟ. ಆ ಕಾಲಕ್ಕೆ ದೇಶೀಯ ಸಂಸ್ಥಾನಗಳ ವ್ಯವಹಾರದಲ್ಲಿ ಕೈಹಾಕಿ ತಮ್ಮ ರಾಜ್ಯವಿಸ್ತಾರವನ್ನೂ ಪ್ರಾಬಲ್ಯವನ್ನೂ ಬೆಳೆಸಿಕೊಳ್ಳುತ್ತಿದ್ದ ಬ್ರಿಟಿಷರು ಹೈದರನ ಮೇಲೆ ಕೆಂಗಣ್ಣು ಹಾಯಿಸುತ್ತಿದ್ದರು. ಫ್ರೆಂಚರು ಮತ್ತು ಡಚ್ಚರ ಸಹಾಯ ಪಡೆದು ಹೈದರ್ ತನ್ನ ಸೇನೆಯನ್ನು ಆಧುನಿಕ ರೀತಿಯಲ್ಲಿ ಸಜ್ಜುಗೊಳಿಸಿ ಅವರನ್ನು ಇದಿರಿಸಿ ಹೋರಾಡಿದ. ತನ್ನ ಬಲವನ್ನು ಅವರಿಗೆ ತೋರಿಸಿದ.

1767ರಿಂದ ಸುಮಾರು ಎರಡು ವರ್ಷಕಾಲ ನಡೆದ ಯುದ್ಧದಲ್ಲಿ (ಇದನ್ನು ಮೊದಲನೆಯ ಮೈಸೂರು ಯುದ್ಧ ಎನ್ನುತ್ತಾರೆ) ಅವನು ಬ್ರಿಟಿಷರ ಹತೋಟಿಯಲ್ಲಿದ್ದ ಅನೇಕ ಪ್ರದೇಶಗಳನ್ನು ಗೆದ್ದುಕೊಂಡದ್ದಲ್ಲದೆ, ಮದರಾಸಿನ ಕೋಟೆಯ ವರೆಗೆ ಹೋಗಿ ಬ್ರಿಟಿಷರು ತನ್ನೊಡನೆ ಒಪ್ಪಂದಕ್ಕೆ ಬರುವಂತೆ ಮಾಡಿದ; ನಿಜಾಮ ಮತ್ತು ಮರಾಠರು ತನ್ನ ರಾಜ್ಯದ ಮೇಲೇರಿಬರುವ ಸಂಭವವನ್ನು ಅವನು ಮನಗಂಡಿದ್ದ. ಆತ್ಮರಕ್ಷಣೆಗಾಗಿ ಹೋರಾಡಬೇಕಾಗಿ ಬಂದಾಗ ಬ್ರಿಟಿಷರು ತನ್ನ ನೆರವಿಗೆ ಬರಬೇಕೆಂದು ಬ್ರಿಟಿಷರೊಡನೆ ಒಪ್ಪಂದದಲ್ಲಿ ಶರತ್ತು ಹಾಕಿದ. ಆದರೆ ಮರಾಠರೂ ನಿಜಾಮನೂ ಮೈಸೂರಿನ ಮೇಲೆ ದಾಳಿಮಾಡಿದಾಗ ಬ್ರಿಟಿಷರು ಹೈದರನ ನೆರವಿಗೆ ಬರಲಿಲ್ಲ. ಆ ಯುದ್ಧ ಮುಗಿದ ಮೇಲೆ ಹೈದರ್ ಪೂರ್ವಸಿದ್ಧತೆಗಳನ್ನು ಮಾಡಿಕೊಂಡು 1780ರಲ್ಲಿ ಬ್ರಿಟಿಷರೊಡನೆ ಮತ್ತೆ ಹೋರಾಟವನ್ನಾರಂಭಿಸಿದ. ಈ ಹೋರಾಟ ನಡೆಯುತ್ತಿದ್ದಾಗ ಬ್ರಿಟಿಷರು ಫ್ರೆಂಚರ ಅಧೀನದಲ್ಲಿದ್ದ ಮಾಹೆ ರೇವನ್ನು ವಶಪಡಿಸಿಕೊಂಡದ್ದರಿಂದ, ಆ ರೇವಿನ ಮೂಲಕ ಸರಬರಾಜು ಆಗುತ್ತಿದ್ದ ಶಸ್ತ್ರಗಳು ಹೈದರನಿಗೆ ಬರುವುದು ನಿಂತುಹೋಯಿತು. ಇದು ದೊಡ್ಡ ಹೊಡೆತವೇ ಆಯಿತಾದರೂ ಹೈದರ್ ದಿಟ್ಟತನದಿಂದ ಹೋರಾಟವನ್ನು ಮುಂದುವರಿಸಿದ. ಆದರೆ ಅವನು ಚಿತ್ತೂರಿನ ಸಮೀಪದ ನರಸಿಂಗರಾಯನ ಪೇಟೆಯಲ್ಲಿ 1782 ಡಿಸೆಂಬರ್ 7ರಂದು ಬೆನ್ನುಫಣೆ ರೋಗದಿಂದ ನಿಧನಹೊಂದಿದ.

ನೋಡಿ : ಟಿಪ್ಪುಸುಲ್ತಾನ್

ಹೊಯ್ಸಳರು

ಮೂಡಿಗೆರೆ ತಾಲೂಕಿನ ಸೊಸೆವೂರಿ(ಅಂಗಡಿ)ಯಿಂದ ಆಳುತ್ತಿದ್ದ ಮಲೆಯ ದೊರೆಗಳಾದ ಹೊಯ್ಸಳರು ಮಲೆಯ ಅನೇಕ ತುಂಡರಸರನ್ನು ಸೋಲಿಸಿ 'ಮಲೆಪರೊಳ್ ಗಂಡ'ರೆನಿಸಿ, ಕಲ್ಯಾಣದ ಚಾಲುಕ್ಯರ ಮಹಾಮಂಡಲೇಶ್ವರರಾಗಿ, ದ್ವಾರಸಮುದ್ರದಿಂದ ಆಳಲಾರಂಭಿಸಿದರು.

ಸಳನೆಂಬ ಜೈನಬಾಲಕ ತನ್ನ ಗುರುವಿನ ಆಜ್ಞೆಯಂತೆ ಹುಲಿಯೊಂದನ್ನು 'ಹೊಯ್' (ಹೊಡೆ)ದುದರಿಂದ 'ಹೊಯ್ಸಳ' ಎಂಬ ವಂಶನಾಮ ಬಂತೆಂದು ಪ್ರತೀತಿ.

ಎರೆಯಂಗದೇವ (ಆಳ್ವಿಕೆ : 1098–1102) ಎಂಬ ದೊರೆಯ ಮಕ್ಕಳಾದ ಬಲ್ಲಾಳ (ಆಳ್ವಿಕೆ : 1102–08) ಮತ್ತು ಬಿಟ್ಟಿದೇವ (ವಿಷ್ಣುವರ್ಧನ. 1108–52) ಇವರ ಕಾಲದಲ್ಲಿ ಈ ವಂಶ ಖ್ಯಾತಿಗೆ ಬಂತು. ಒಂದು ಶತಮಾನ ಕಾಲ ಗಂಗವಾಡಿಯನ್ನು ಆಕ್ರಮಿಸಿದ್ದ ಚೋಳರನ್ನು ಅಲ್ಲಿಂದ ಹೊರದೂಡಿ ಬಿಟ್ಟಿದೇವನು 'ತಲಕಾಡುಗೊಂಡ' ಎಂಬ ಬಿರುದು ಧರಿಸಿದ. ಆಚಾರ್ಯ ರಾಮಾನುಜರ ಪ್ರಭಾವಕ್ಕೆ ಒಳಗಾಗಿ ಈತನು ವೈಷ್ಣವನಾದ : ಬೇಲೂರಿನ ಚೆನ್ನಕೇಶವ ದೇವಾಲಯವನ್ನು ಕಟ್ಟಿಸಿದ.



"ಹೊಯ್", ಸಳ"

ಈತನ ಮೊಮ್ಮಗ ಎರಡನೆಯ ಬಲ್ಲಾಳ (ಆಳ್ವಿಕೆ : 1173—1220) ಅಸಾಧಾರಣ ಶೂರ. ಇವನ ಕಾಲದಲ್ಲಿ ಹೊಯ್ಸಳರು ಕಲ್ಯಾಣದ ಚಾಲುಕ್ಯರ ಸ್ವಾಮ್ಯದಿಂದ ಬಿಡುಗಡೆಹೊಂದಿ ಪರಮಾಧಿಕಾರವುಳ್ಳ ದೊರೆಗಳಾದರು. ಸೇವುಣರನ್ನು ಸೊರದೂರಲ್ಲಿ ಸೋಲಿಸಿ ಈತ ಖ್ಯಾತಿ ಪಡೆದ.

ಮೂರನೆಯ ಬಲ್ಲಾಳ (ಆಳ್ವಿಕೆ : 1291–1343) ಈ ವಂಶದ ಕೊನೆಯ ದೊರೆ. ಇವನ ಕಾಲದಲ್ಲಿ ರಾಜ್ಯವು ದೆಹಲಿಯ ಸಮ್ರಾಟ ಸೇನಾನಿ ಮಲ್ಲಿಕ್ ಕಾಫರನ ದಂಡಯಾತ್ರೆಗೆ ಬಲಿಯಾಗಿ ತತ್ತರಿಸಿತು. ಮದುರೆಯಲ್ಲಿ ಸ್ಥಾಪಿಸಲಾದ ಮಹಮ್ಮದೀಯ ರಾಜ್ಯವೊಂದರ ವಿರುದ್ಧ ಹೋರಾಡುತ್ತ ಬಲ್ಲಾಳ ಅಸುನೀಗಿದ. ಹೊಯ್ಸಳರ ರಾಜ್ಯ ಕೊನೆಗಂಡಿತು.

ಖ್ಯಾತ ಕನ್ನಡ ಕವಿಗಳಾದ ರುದ್ರಭಟ್ಟ, ರಾಘವಾಂಕ, ಹರಿಹರ, ಜನ್ನ ಇವರೆಲ್ಲರೂ ಹೊಯ್ಸಳರ ಕಾಲದಲ್ಲಿ ಇದ್ದವರು. ಹೊಯ್ಸಳರು ತಮ್ಮ ಅಪೂರ್ವವಾದ ದೇವಾಲಯ ಮತ್ತು ಶಿಲ್ಪಗಳಿಗಾಗಿ ಖ್ಯಾತರಾಗಿದ್ದಾರೆ. ಬೇಲೂರು, ಹಳೇಬೀಡು, ಸೋಮನಾಥಪುರ, ಬೆಳ್ಳಿಗಾವೆ ಮುಂತಾದ ಸ್ಥಳಗಳಲ್ಲಿರುವ ಇವರ ವಿಪುಲ ಸುಂದರ ಕೆತ್ತನೆಯ ಶಿಲಾರಚನೆಗಳು ವಿಶ್ವವಿಖ್ಯಾತವಾಗಿವೆ.

ನೋಡಿ : ವಿಷ್ಣುವರ್ಧನ

ಹೊಯ್ಸಳ ಶಿಲ್ಪ, ವಾಸ್ತುಶಿಲ್ಪ

ನೋಡಿ : ಸಂಪುಟ ೫

ಹೋಂ ರೂಲ್ ಚಳುವಳಿ

ಭಾರತಕ್ಕೆ ಸ್ವಯಮಾಡಳಿತ ಬೇಕು —ಇದು ಹೋಂ ರೂಲ್ ಚಳವಳಿ ನೀಡಿದ ಕರೆ. ಈ ಚಳವಳಿ 1916ರಲ್ಲಿ ದೇಶದಾದ್ಯಂತ ವ್ಯಾಪಕವಾಗಿತ್ತು. ಆ ವರ್ಷದ ಏಪ್ರಿಲ್ ತಿಂಗಳಿನಲ್ಲಿ ತಿಲಕರು ಒಂದು ಹೋಂ ರೂಲ್ ಲೀಗ್ ಆರಂಭಿಸಿದರು. ಐದು ತಿಂಗಳ ಅನಂತರ ಅನಿ ಬೆಸೆಂಟರು ಮತ್ತೊಂದು ಲೀಗನ್ನು ಆರಂಭಿಸಿದರು. ಆಮೇಲೆ ಎರಡೂ ಒಂದಾದುವು.

ಕಾಮನ್‌ವೆಲ್ತ್ ಮಿತ್ರರಾಷ್ಟ್ರಗಳಂತೆ ಭಾರತವೂ ಒಂದು ಸ್ವತಂತ್ರ ರಾಷ್ಟ್ರದ ಸ್ಥಾನ ಪಡೆಯಬೇಕು ಎಂಬುದು ಹೋಂ ರೂಲ್ ಲೀಗ್ [illegible] ಕೊಂಡ ಧ್ಯೇಯ. 1916ರಲ್ಲಿ ಹೋಂ ರೂಲ್ ಲೀಗ್ [illegible] ವಾಯಿತು. ದೇಶದ ಅನೇಕ ಕಡೆಗಳಲ್ಲಿ ಹೋಂ ರೂಲ್ ಲೀಗಿನ ಶಾಖೆಗಳು ರಚಿತವಾದುವು. [illegible] ರನ್ನು [illegible] ವಾಯಿತು. [illegible] ಪ್ರತಿಭಟನೆ ವ್ಯಕ್ತಪಡಿಸಿದರು. ಅನಿ ಬೆಸೆಂಟರ ಬಿಡುಗಡೆಗಾಗಿ ಭಾರತೀಯ ಕಾಂಗ್ರೆಸ್ ಸತ್ಯಾಗ್ರಹದ ಯೋಚನೆ ನಡೆಸಿತು. 1917ರಲ್ಲಿ ಮಾಂಟೆಗ್ಯೂ--ಚೆಲ್ಮ್ಸ್‌ಫರ್ಡ್ ಸುಧಾರಣೆಗಳನ್ನು ಬ್ರಿಟಿಷ್ ಸರಕಾರ ಘೋಷಿಸಿತು. ಅನಿ ಬೆಸೆಂಟರ ಬಿಡುಗಡೆಯೂ ಆಯಿತು.

ಅನಿ ಬೆಸೆಂಟರು ನಡೆಸುತ್ತಿದ್ದ 'ನ್ಯೂ ಇಂಡಿಯಾ' ಪತ್ರಿಕೆಯು ಈ ಚಳುವಳಿಯ ಪರ ಪ್ರಚಾರ ಮಾಡಿತು. ಪ್ರತಿಷ್ಠಿತ ವಕೀಲರು, ರಾಜಕಾರಣಿಗಳು, ವಿದ್ಯಾರ್ಥಿಗಳು, ಅನೇಕ ಮಹಿಳೆಯರು ಈ ಚಳುವಳಿಯಲ್ಲಿ ಸಕ್ರಿಯ ಪಾತ್ರವಹಿಸಿದ್ದರು.



ವಿಜ್ಞಾನ : ಭಾಭಾ

ಹೋಮಿ ಜೆ. ಭಾಭಾ

ನೋಡಿ : ಭಾಭಾ—ಸಂಪುಟ ೧

ಹೋಳಿ

ವಸಂತನಿಗೆ ಸುಖಾಗಮನ ಬಯಸುವ ಹಬ್ಬ, ಹೋಳಿ.

ಜೀವನದ ಕಹಿಯನ್ನು ಮರೆತು, ಹಾಸ್ಯ, ವಿನೋದಗಳಿಂದ ಜನ ಹೋಳಿ ಆಚರಿಸುತ್ತಾರೆ.

ಫಾಲ್ಗುಣ ಮಾಸದ (ಫೆಬ್ರವರಿ–ಮಾರ್ಚ್) ಹುಣ್ಣಿಮೆಯಂದು ಬಯಲು ಜಾಗದಲ್ಲಿ ದೊಡ್ಡ ಬೆಂಕಿಯನ್ನು ಉರಿಸುತ್ತಾರೆ. ಅನಂತರ ಮೂರು ದಿನ ಹೋಳಿ ಹಬ್ಬದ ವಿನೋದಗಳಿಗೆ ಮೀಸಲು.

ದಕ್ಷಿಣ ಭಾರತದ ಕಾಮನಹಬ್ಬವೇ ಉತ್ತರ ಭಾರತದ ಹೋಳಿ.

ಪಿಚಕಾರಿಗಳಲ್ಲಿ ಬಣ್ಣದ ನೀರನ್ನು ತುಂಬಿಕೊಂಡು ಎರಚುವುದರಿಂದ ಬೀದಿಯಲ್ಲಿ ಅಡ್ಡಾಡಿದವರಿಗೆಲ್ಲ ಬಣ್ಣದ ಹಚ್ಚೆ ಬೀಳುತ್ತದೆ. ಯಾರೂ ಬೇಡವೆನ್ನುವಂತಿಲ್ಲ. ಬೇಡವೆಂದರೂ ಕೇಳುವವರಿಲ್ಲ. ಬಣ್ಣದ ಒಣಪುಡಿಯನ್ನು ಮುಖ ತಲೆ ಕೈಗಳಿಗೆಲ್ಲ ಬಳೆಯುತ್ತಾರೆ. ಇದು ಉತ್ತರದಲ್ಲಿ ನಡೆಯುವ ಹೋಳಿ ಹಬ್ಬದ ವೈಖರಿ.

ಬಹಳ ಕಡೆಗಳಲ್ಲಿ ಹೋಳಿ ಹಬ್ಬದ ಮುಖ್ಯ ವ್ಯಕ್ತಿ– ಶ್ರೀಕೃಷ್ಣ. [illegible] ಅವನು ರಾಧೆ ಹಾಗೂ ಗೋಪಿಯರೊಂದಿಗೆ ಬೃಂದಾವನದಲ್ಲಿ [illegible] ನೆನಪಿಗಾಗಿ ಈ ಹಬ್ಬ ಎನ್ನುತ್ತಾರೆ.

ಉತ್ತರ ಪ್ರದೇಶದ ಕೆಲವೆಡೆ [illegible]

ಬಂಗಾಳದಲ್ಲಿ ಇದನ್ನು ಡೋಲ್‌ಯಾತ್ರಾ ಎಂದು ಕರೆಯುತ್ತಾರೆ. [illegible] ಆಚರಿಸುತ್ತಾರೆ.

[illegible]



ವಸಂತೋತ್ಸವ : ಹೋಳಿ

ಭಾರತದ ಕೆಲವು ಗುಡ್ಡಗಾಡಿನವರು ಐದು ದಿನ ಪಾಂಡವ ನೃತ್ಯ ಆಡುತ್ತಾರೆ. ಒಬ್ಬಳು 'ದ್ರೌಪದಿ'. ಐವರು 'ಪಾಂಡವರು'. ಕೊನೆಯಲ್ಲಿ ಎಣ್ಣೆಯಲ್ಲಿ ಕರಿಯುತ್ತಿರುವ ತಿಂಡಿಯನ್ನು ದ್ರೌಪದಿ ಕೈಯಿಟ್ಟು ತೆಗೆದು ತಿನ್ನುತ್ತಾಳೆ; 'ಭೀಮ'ನಾದವನು ಮಣಗಟ್ಟಲೆ ಹಸಿ ತರಕಾರಿಗಳನ್ನೇ ಕಬಳಿಸುತ್ತಾನೆ.

ಮಣಿಪುರದಲ್ಲಿ ಯುವಕ ಯುವತಿಯರು 'ಥಾಬಲಾಚೊಂಬ್' ಎಂಬ ಹೋಳಿ ನೃತ್ಯ ಮಾಡುತ್ತಾರೆ. ಭಿಲ್ ಜನರ ಹಬ್ಬದಲ್ಲಿ ಬಣ್ಣ ಮುಖದ ಮೇಲೆ ಬೀಳದಂತೆ ತಪ್ಪಿಸಿಕೊಳ್ಳುವವರೇ ಸಾಹಸಿಗಳು. ಬರ್ಮದಲ್ಲಿ ಪನ್ನೀರು ಎರಚುವುದರಿಂದಲೂ ಜಪಾನಿನಲ್ಲಿ ಮಧುಪಾನ, ಸಂಗೀತ, ನೃತ್ಯಾದಿಗಳಿಂದಲೂ ಹೋಳಿ ಹಬ್ಬದ ರೀತಿಯಲ್ಲಿ ವಸಂತಾಗಮನವನ್ನು ಆಚರಿಸುತ್ತಾರೆ. ಬಣ್ಣಗಳನ್ನು ಎರಚುವ ಹೋಳಿ ಭಾರತಕ್ಕೆ ವಿಶಿಷ್ಟವಾದದ್ದು. ಭಾರತದಲ್ಲಿ ಬಡವ ಬಲ್ಲಿದರೆಂಬ ಭೇದವನ್ನೆಲ್ಲ ಮರೆಸುವ, ಜನರನ್ನೆಲ್ಲ ಒಂದುಗೂಡಿಸುವ ಹಬ್ಬ, ಹೋಳಿ.

ನೋಡಿ : ಕಾಮನಹುಣ್ಣಿಮೆ ; ವಸಂತೋತ್ಸವ

ಸಂದರ್ಭ ಸೂಚಿ

ಬೆಂಗಳೂರು :
ಸರಕಾರೀ ಮುದ್ರಣಾಲಯದ ಡೈರೆಕ್ಟರವರಿಂದ ಮುದ್ರಿಸಲ್ಪಟ್ಟಿತು
1974




सत्यमेव जयते